REGISTERED
M. 30

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು-ಸನ್ ೧೯೧೬ ನೇ ಇಸವಿ ಜನವರಿ ತಾರೀಖು ೬ ನೇ ಗುರುವಾರ. ಸಂಚಿಕೆ ೩೨

ವ್ಯವಹಾರ ನಿರ್ಣಯ.

ಕ್ರಯ ಖಾನ ಭೋಗ್ಯ ವೊದಲಾದ ಎಲ್ಲಾ ತರದ ಲೇವಿನ ಕ್ರಮಗಳನ್ನೂ, [illegible] ರಿವಾಜನ್ನು ವ್ಯವಹಾರಗಳ ರೀತಿಯನ್ನು ತಿಳಿಸುವ 615 ಪೇಜು [illegible] ಗ್ರಂಥ. ಪಿ. ಪಿ. [illegible] ಗ್ಲೇಜ್ ಪ್ರತಿಗೆ ರೂ. 2-8-0; [illegible] (1-12-0) [168-20]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ನೋಟೀಸ್.

[illegible] ಸನ್ನ ಸ್ವದೇಶೀ ಮಿಲ್ಲು ಕಂಪೆನಿಯಲ್ಲಿ [illegible] ಪಂಚೆಗಳು, ಚಕ್ಕು, ಟ್ವಿಲ್, ಹತ್ತಿಯ [illegible] ನೂಲು [illegible] ನಮ್ಮನ್ನು [illegible] ಈ [illegible] ಡಿಸ್ಕೌಂಟು ಕಡ ದೊರೆಯುತ್ತೆ. [172-10]

ಕಮಿಷನ್ ಮತ್ತು ಜನರಲ್ ಏಜನ್ಸಿ—

144, ದೊಡ್ಡಪೇಟೆ, ಬೆಂಗಳೂರು ಸಿಟಿ.	ಕೊಲ್ಲಾರಯ್ಯನ ಬೀದಿ, ಶಿವಮೊಗ್ಗ.

ಟೋಪಿಗಳು: ಟೋಪಿಗಳು.

[illegible] ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

[illegible] ಉಣ್ಣೆ ದಾರದಿಂದ [illegible]

Men's socks, vests and various knitted articles.

ಮ್ಯಾನೇಜರ್, ಗರ್ಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply :—MANAGER, WOOL WORKS,

[188-16] GIRLS' INDUSTRIAL SCHOOL, HASSAN.

ಹೊಸ ಪುಸ್ತಕಗಳು.

[illegible] (1) [illegible] 12 ಆಣೆ. (2) [illegible] 6 ಆಣೆ. (3) [illegible] (4) [illegible] 1 ಆಣೆ. [illegible] (1) ಎಂ. [illegible] ರಾವ್ ಬುಕ್ ಸೆಲರ್, (2) [illegible] ಎಂಡ್ ಕೋ; ಮೈಸೂರಿನಲ್ಲಿ (3) ಜನರಲ್ ಏಜನ್ಸಿ. [135-13]

Pure Woollen Rugs.

ಬೆಂಗಳೂರು ಬಿನ್ನಿ ಮಿಲ್ ರಗ್ಗುಗಳು.

[illegible] ಬಹಳ ಸುಲಭ ಕ್ರಯ [illegible] ದೊರೆಯುತ್ತವೆ. ಈಗಿನ ಬೆಲೆ ಮುಂದಕ್ಕೆ [illegible]

[illegible] ನೋಡಿ. ಸಮಯ ಕಳೆದ ನಂತರ [illegible] ಉಪಯೋಗ ಹೊಂದಬೇಕು.

ಸೈಜು 64 × 100	(ಅಂಗುಲ)	ರೂ.	10-8-0
,, 60 × 90	,,	,,	7-0-0

[illegible] ಪ್ರತ್ಯೇಕ. ಒಂದೇ [illegible] 6 ರಗ್ಗುಗಳಿಗಿಂತಲೂ ಹೆಚ್ಚಾಗಿ ತೆಗೆದುಕೊಂಡವ[illegible] ಬೀಳುವದಿಲ್ಲ. ಇದಲ್ಲದೆ ಇಂಗ್ಲೀಷ್ [illegible] ರಗ್ಗುಗಳು, [illegible] ನಮ್ಮಲ್ಲಿ ದೊರೆಯುತ್ತವೆ.

M. JEWANMULL & Co.,
Chickpet, Bangalore City.

[illegible] ಎಚ್. ಜವಾರಮಲ್ ಕಂಪೆನಿ,
[8-1] ಚಿಕ್ಕಪೇಟೆ, ಬೆಂಗಳೂರು ಸಿಟಿ.

ನವೀನ ಕಾದಂಬರಿಗಳು.

[illegible] ಯಾತ್ರೆ—[illegible] ಮಲೆಯಾಳ ದೇಶದ ಕಥೆ	1-0-0
ಮಾಧವಚಂದ್ರ—[illegible] ನಾವೆಲ್.	0-6-0
[illegible]—ಮನೋಹರವಾದ ಕಾದಂಬರಿ	0-8-0
ರಾಧಾಮಾಧವ—[illegible] ಕಥೆ.	0-8-0

[illegible] ಕಾದಂಬರಿಗಳು—ಪ್ರತಿ 1 ಕ್ಕೆ 8 ಆಣೆ. [illegible] 6 ಆಣೆ [illegible] 4 ಆಣೆ. [illegible] ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

[277-4] ವಿಳಾಸ:—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ [illegible] ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳಿಗೆ ಸೇರಿದ ಗ್ರಾಮಗಳಲ್ಲಿರುವ [illegible] ಅಭಿವೃದ್ಧಿ [illegible] ಮೈಸೂರು ಗವರ್ನ್‌ಮೆಂಟಿಗೆ ಸೇರಿದ [illegible] ಮತ್ತು [illegible] ಬೆಂಗಳೂರು [illegible] ಮತ್ತು ಮೈಸೂರು ಗವರ್ನ್‌ಮೆಂಟ್ ಹೌಸಿಗೆ [illegible] [275-3]

[illegible] ಮೈಸೂರು ಗವರ್ನ್‌ಮೆಂಟ್ ಸ್ಟೇಬಲ್ [illegible]

ತಾ. 24 ನೆ ಆಗಸ್ಟ್ 1915. ಎ. ವೆಂಕಟರಾವ್.

ಅಫಿಷಿಯೇಟಿಂಗ್ ಅಸಿಸ್ಟೆಂಟ್, [illegible] ಸೆಕ್ರಟರೀಸ್ ಆಫೀಸ್.

ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಛಾಯಾಚಿತ್ರಗಳ ಸಮೇತ ೧೯೧೬ ನೆಯ ಇಸ್ವಿ

ಪಾಕೆಟ್ ಡೈರಿ

ನಂ. ೧ [illegible] ಡೈರಿ ೦-೪-೦

,, ೨ [illegible] ಕವರ್ ೦-೬-೦

,, ೧ ದೊಡ್ಡ ಸೈಜಿನ ಸಾದಾ ಡೈರಿ ೦-೬-೦

,, ೨ ,, [illegible] ಕವರಿನ ೦-೮-೦

೧೦ ಡೈರಿಗಳನ್ನು ಒಟ್ಟಾಗಿ ತರಿಸಿಕೊಂಡಲ್ಲಿ ೧ ಹೆಚ್ಚಾಗಿ ದೊರೆಯುತ್ತದೆ.

[8-52] ವಿಳಾಸ:—ಜನರಲ್ ಏಜನ್ಸಿ, ಮೈಸೂರು.

ಓರಿಯಂಟಲ್ ಗೌ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು	ರೂ. 4,45,00,000
ಕಂಪನಿಯಿಂದ ಪಾವತಿ ಆಗಿರುವದು	,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ವರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ—ಮಿ|| ಎಂ. ಎಸ್. [illegible], ಚೀಫ್ ಏಜೆಂಟ್, ಬೆಂಗಳೂರು; ಮಿ|| ಎಂ. ಎಸ್. [illegible] ಅಥವಾ ಮಿ|| ವೆಂಕಟರಮಣಯ್ಯನವರು, [illegible], ಮೈಸೂರು; ಅಥವಾ

[122-12] ಬ್ರಾಂಚ್ ಸೆಕ್ರೆಟರಿ, ಮದರಾಸ್.

SHORTLY COMING!

ಬರುವರು! ಇಷ್ಟರಲ್ಲೇ! ಬರುವರು!

PROFESSOR RAMAMURTI

The Indian Hercules

ಇಂಥಾ ಅಪರೂಪವಾದ ಸಮಯವನ್ನು ಕಳೆಯಬೇಡಿ.

ಕಲಿಯುಗದ ಭೀಮನೆಂಬ

ಪ್ರೊಫೆಸರ್ ರಾಮಮೂರ್ತಿಯವರು

ಮೈಸೂರಿಗೆ ಬರುವದು ಇದೇ ಮೊದಲು, ಇದೇ ಕೊನೆ.

ಅವರು ಇಂಗ್ಲೆಂಡ್, ಯೂರೋಪ್, ಪೂರ್ವದಿಗ್ರಾಜ್ಯಗಳಿಗೆಲ್ಲಾ ಹೋಗಿ ಹಿಂದೂಸ್ಥಾನಕ್ಕೆ ಶಾಶ್ವತವಾದ ಕೀರ್ತಿ ತಂದಿದ್ದಾರೆ. ಅವರ ಟ್ರೂಪಿನಲ್ಲಿ ರಷ್ಯನ್, ಜಪಾನೀಸ್, ಛಲಿಪೈನ್, ದೇಶೀಯ ಪೈಲ್ವಾನರುಗಳೂ, ಸ್ಟಾರ್ ಆರ್ಟಿಸ್ಟುಗಳೂ ಇದ್ದು ಅನೇಕ ನವೀನವೂ ಮತ್ತು ವಿಸ್ಮಯವೂ ಆದ ಕಸರತ್ತುಗಳನ್ನು ಮಾಡುವವರಾಗಿದ್ದಾರೆ. [8-1]

ಪ್ರೊಫೆಸರ್ ರಾಮಮೂರ್ತಿಯವರ ಅತ್ಯದ್ಭುತವಾದ ಶರೀರದ ಬಲವು ವಿಸ್ಮಯಕರವಾದದ್ದು.

ಈ ಪ್ರದರ್ಶನ ಯಾವಾಗ ಎಂದು ವಿಚಾರಿಸುತ್ತಿರಿ.

ಪ್ರದರ್ಶನದ ವಿವರಣೆಯುಳ್ಳ ನೋಟೀಸುಗಳನ್ನು ಓದಿ ನೋಡಿ.

S. U. N. & Co.,

BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಪೇಟ, ಮುಗುಟ, ರುಮಾಲು, ಕಣಗಳು, ಕೋಟು ಸಿಲ್ಕುಥಾನುಗಳು ಪವೇರಿ ಚದರ್, ಕಾಶ್ಮೀರ್ ಸಾಧಾ ಜರಿ ಶಾಲುಗಳು, ಕೊನ್ನಾರು ರುದ್ರಾಕ್ಷಿ ಶೀರೆ ಮೊದಲಾದ ಎಲ್ಲಾ ತರವ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು. ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ. ಬೇಗ ಬರೆದು ತರಿಸಿಕೊಳ್ಳಿ [119-26]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಟ್ಟಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು. 16 ಮೊಳ. ಬಾಳಿಕೆ ಬರುವದು.

ಗೋವರ್‌ಜಾರ್ ಬಳ್ಳಿ ಶೀರೆ

ರೂ. 2-8-0.

ಈ ಹೊಸ ನಮೂನೆ ಶೀರೆಗಳು ಬಹು ಸಾಣ್ಯವಾದ ಬಿಳೀ ಮಲ್ಲಿನಲ್ಲಿ ಗೋವರ್‌ಜಾರ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ

ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವದಕ್ಕೆ ಹೊಸ ನಮೂನೆ ಆಗಿಯೂ ಇವೆ. ಬಣ್ಣ ಹೋಗದು. ಇಂಥಾ ಭಾರಿ ಕ್ರಯದ ಶೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ.—ರಾಸ್ ವಾಚ್ ಅಂಡ್ ಕಂಪೆನಿ,

[252-8] 3, ಇರುಳಪ್ಪನ ಬೀದಿ, ಮದರಾಸು.



ಅನಾಹುತಗಳು ಸಂಭವಿಸುವವು !

ಕೆಲಸಮಾಡುವ ಯಾವ ಮನುಷ್ಯನಾದರೂ, ಕೆಲಸಮಾಡದ ಅನೇಕ ಮನುಷ್ಯರಲ್ಲಾದರೂ ಅನಾಹುತಗಳು ಆಗುತ್ತವೆ. ಪ್ರತಿದಿನವೂ ಯಾರಿಗಾದರೂ ಸಂಭವಿಸುತ್ತೆ. ಎಂದಾದರೂ ಒಂದು ದಿನ ಅದು ನಿಮಗೂ ಆದೀತು.

ಇಲಿನಾಯ್ಸಿನ ಕಿಪ್ಪುಡಿಮಲ್ಲಿರುವ ಮಿ॥ ಓ. ಎಫ್. ಸ್ಟುವರ್ಟ್ ಹೇಳುವದು :—"ಮಹಡಿಯಿಂದ ಇಳಿಯುತ್ತಿದ್ದಾಗ ನನ್ನ ಹೆಂಡತಿಯು ನಿಂತುಕೊಳ್ಳಲಾರದಷ್ಟು ಕಠಿಣವಾದ ರೀತಿಯಲ್ಲಿ ಆಕೆಯ ಮೊಣಕಾಲು ಉಳುಕಿತು. ಕೀಲು ಪೆಡಸಾಗಿ ಬಹಳ ಊದಿಕೊಂಡು, ಮುಟ್ಟಿದರೆ ನೋವು ಸಹಿಸಕೂಡದದಷ್ಟು ಮಟ್ಟಿಗೆ ಇತ್ತು. ಆಕೆ ಅನೇಕವಾದ ಔಷಧಿಗಳನ್ನೆಲ್ಲಾ ಉಪಯೋಗಿಸಿ, ಆ ತತ್ಕಾಲಕ್ಕೆ ಸ್ವಲ್ಪ ಮೇಲನ್ನು ಹೊಂದಿದಂತೆ ಕಂಡಳು.

ಸ್ಲೋನ್ಸ್ ಓರಿಯಂಟಲ್ ಬಾಂ ಎಂಬದನ್ನು ಕುರಿತು ಕೇಳಿ, ಅದನ್ನು ಉಪಯೋಗಿಸಬೇಕೆಂದು ನಿಶ್ಚಯಿಸಿಕೊಂಡಳು. ಅದನ್ನು 3 ದಿನಗಳು ಉಪಯೋಗಿಸಿದನಂತರ ಮನೆಯಲ್ಲಿ ತಿರುಗಾಡುವಷ್ಟು ಶಕ್ತಳಾದಳು."

ಸೀಸೆ 1ಕ್ಕೆ 1 ರೂ. ಮೇಲಿಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ. [81-36]

ಜನವರಿ ಮಹೋತ್ಸವದ ಕೈ ಗಡಿಯಾರ.



ಅರ್ಧ ಕ್ರಯ ರೂ. 1-14-0.

ಆದೇ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ. 1-14-0 ಆನೆಗೆ ಕೊಡಲ್ಪಡುತ್ತೆ. [111-31]

ವಿಳಾಸ—ವಿ. ಕೆ. ಕಂಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಡೈರಿ ಬಹುಮಾನ.

ಒಂದು ತಿಂಗಳು ಮಾತ್ರ! ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ಪೈಕಿ 2 ರೂ. ಗಳ ನಿಮ್ಮ ಆರ್ಡರಿಗೆ 1 ಸುಂದರವಾದ 1916 ನೇ ವರ್ಷದ ಪಾಕೆಟ್ ಡೈರಿಯನ್ನು ಬಹುಮಾನವಾಗಿ ಕಳುಹಿಸುತ್ತೇವೆ. ಕಪಾಲಕುಂಡಲೆ-ಬಂಗಾಳಿ ನಾವಿಲ್ 12 ಆ. ಕಲಾನಾಥ, ಶ್ರೀ 8 ಆ. ಸುಭದ್ರೆ ಹೊಸ ಕಾದಂಬರಿ 5 ಆ. ಮೈತ್ರೇಯಿ 5 ಆ. ವಾಲ್ಮೀಕಿಯ ಮಹಿಮೆ 6 ಆ. ಅಧ್ಯಾತ್ಮವಿಚಾರ-ಉತ್ತರ, ಪ್ರತ್ಯಗಾತ್ಮನ ಪಠ ಸಹಿತ 2 ರೂ. ಸಂಗೀತ ಸಮಯಸಾರ-ಹೊಸ ಪುಸ್ತಕ 1-4-0. ಪ್ರತಿ ವರ್ಷವೂ ಉಪಯೋಗಿಸಬಹುದಾದ (S.T.A. Perpetual Calendar) ಪರ್ಪೆಚ್ಯುಯಲ್ ಕ್ಯಾಲೆಂಡರ್ 10 ಆ. S.T.A. ಮಹಾರಾಣಿ ಹೇರ್ ಆಯಿಲ್ 12 ಆಣೆ. ಪುಸ್ತಕದ ಪಟ್ಟಿ ಉಚಿತ. [281-4]

ವಿಳಾಸ.—ಎಂ. ಎಸ್. ರಾವ್ ಕಂಪನಿ, ಅವಿನ್ಯು ರೋಡ್ ಬೆಂಗಳೂರು ಸಿಟಿ.

ಸುಲೋಚನಗಳು.

ಎಲ್ಲರಿಗೂ ಬೇಕಾದದ್ದು. ಎಲ್ಲರ ನೇತ್ರದೃಷ್ಟಿಯನ್ನೂ ಚೆನ್ನಾಗಿ ಪರೀಕ್ಷಿಸಿ ಉತ್ತಮ ತರಹೆ ಸುಲೋಚನಗಳನ್ನೇ ಕೊಡಲಾಗುವದು. ನಮ್ಮ ಚಂದ್ರಕಾಂತಿ ಮತ್ತು ಇತರ ತರಹೆ ಸುಲೋಚನಗಳು ಈಗಾಗಲೇ ಬಹು ಜನರ ಉಪಯೋಗದಲ್ಲಿವೆ. ನಮ್ಮ ಖಾತರಿ ಖಂಡಿತ. ಸುಲೋಚನಗಳು ದಿಗಂತ ಪ್ರಖ್ಯಾತವಾದವು ಬೆಲೆ ಸುಲಭ.

ನಮ್ಮ ವಿಳಾಸ :—ಎಸ್. ಎನ್. ರಾಮರಾವ್ ಸನ್ಸ್,

[249-9] ಕೋಟೆ ಬಾಗಲು, ಬೆಂಗಳೂರು ಸಿಟಿ.

ಕರ್ಣಿಕ ಎಗ್ಯುಮಿಕ್ಸ್ಚರ

ಎಲ್ಲಾ ಜ್ವರಗಳಿಗೂ ಸಂಚಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವದರಲ್ಲೇ ಜ್ವರಗಳನ್ನು ನಿಲ್ಲಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-13]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,

ಎಗ್ಯು ಮಿಕ್ಸ್ಚರ್ ಡಿಪೋ, ಬೊಂಬಾಯಿ, 4.

KARNIK Bros., BOMBAY, 4.

ಕ್ರಿಸ್ಮಸ್ ಹಬ್ಬದ ವಿಶೇಷ ಮಾರಾಟ! 1916 ನೇ ಜನವರಿ 25 ರ ವರೆಗೆ ಮಾತ್ರ. ತಬಲಾ ಮತ್ತು ಬಾಯಾ ಬಿಟ್ಟಿ.

ಮೂರು ವರ್ಷದ  ಜಾಮಿನ್ ಕೊಡುತ್ತೆ.

ನಮ್ಮ ಪ್ರಖ್ಯಾತವಾದ ಫ್ಲೂಟ್ ಹಾರ್ಮೋನಿಯಂ ಬಹಳ ಉತ್ತಮವಾದದ್ದು, ಬಹಳ ಇಂಪಾದ ನಾದವುಳ್ಳದ್ದು. ಯಾವ ಋತುವಿನಲ್ಲೂ ಕೆಡುವದಿಲ್ಲ. ಎಲ್ಲಾ ತರದ ಸಂಗೀತಗಳಿಗೂ ಹಿತವಾದದ್ದು. ಒಂದು ವಾರದೊಳಗೆ ಸಮ್ಮತವಾಗದಿದ್ದರೆ ಹಣ ವಾಪಸ್ ಕೊಡುವೆವು. ಇದು ಬೇಸ್ ಮತ್ತು ತೇಗದಿಂದ ತಯಾರು ಮಾಡಲ್ಪಟ್ಟು ಉತ್ತಮವಾದ ರೀಡ್ ಉಳ್ಳದ್ದಾಗಿದೆ. ಒಂದು ರೀಡಿನದ್ದು ಕ್ರಯ ರೂ. 38, 45, 60; ಈಗಿನ ಕ್ರಯ ರೂ. 19, 22-8-0, 25; ಇದರ ಕೂಡ 5 ರೂ. ವಾಚು ಬಿಟ್ಟಿ ಕೊಡುತ್ತೇವೆ. ಜೋಡಿ ರೀಡ್ ಹಾರ್ಮೋನಿಯಂ ಕ್ರಯ ರೂ. 65, 70, 80, 90; ಈಗಿನ ಕ್ರಯ ರೂ. 32-8-0, 35, 40, 45; ಇದರ ಕೂಡ ರೂ. 6-12-0 ಕ್ರಯದ ಒಂದು ಜೋಡಿ ತಬಲ ಮತ್ತು ಬಾಯಾವನ್ನು ಬಿಟ್ಟಿ ಕೊಡುವೆವು. ಉತ್ತಮೋತ್ತಮವಾದ ಮಡಿಸುವ ಹಾರ್ಮೋನಿಯಂ (ಕೈಯಿಂದಲೂ ಕಾಲಿನಿಂದಲೂ ನಡಿಸಬಹುದು) ಕ್ರಯ ರೂ. 130; ಈಗ ಇದನ್ನು ರೂ. 65 ಕ್ಕೆ ಕೊಡುತ್ತೇವೆ. ಕ್ರಯದಲ್ಲಿ ಕಾಲುಪಾಲು ಅಡ್ವಾನ್ಸು ಕಳಿಸಿ, ಹತ್ತಿರದ ರೈಲ್ವೆ ಸ್ಟೇಷನ್ ತಿಳಿಸಿದರೆ ಬಾಕಿ ಹಣಕ್ಕೆ ವಿ. ಪಿ. ಮಾಡುತ್ತೆ.

ವಿಳಾಸ—The National Harmonium Co.,

[270-4] SIMLA T.S.O., (E) CALCUTTA.

"ಹನುಮಾರ್ಕ"

ಬೋರಾಕ್ಸ್ ಸಾಬೂನು.

ಹನುಮಾರ್ಕ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಗಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚೆಲ್ಲಿ ಸಂಬಂಧವಾದ ಹುಣ್ಣು, ಬಿಜ್ಜಿ, ತುರಿ ಮೊದಲಾದ ವ್ಯಾಧಿಗಳು ಹನುಮಾರ್ಕ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ರೋಗಗಳಿಗೆ ನುಣುಪು ಮತ್ತು ಕಳೆಯನ್ನು ಕೊಡುವುದರಲ್ಲಿ ಹನುಮಾರ್ಕ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾರ್ಕ ಸಾಬೂನಿನಿಂದ ಬೆಳಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂಧರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟು ಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಬೇರೆ ಸಾಬೂನೂ ಇಲ್ಲ.—ಮುದುಕರು, ಹುಡುಗರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಎಂದೆಂದಿಗೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ಕ ಸಾಬೂನನ್ನು ಉಪಯೋಗಿಸಿದ ಜನರು ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ನಿಶ್ಚಯವಾಗಿ ಹೇಳಬಲ್ಲೆವು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ನಗರಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಪೆಟ್ಟಿಗೆಯ ಮೇಲೆ ಹನುಮಾರ್ಕ ಗುರ್ತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ತಾ. ಕ :—ಎಲ್ಲರೂ ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆಯಬೇಕು. ಬೆಂಗಳೂರು ಸಿಟಿ ಮ. ಎಚ್. ದಾಸಪ್ಪನವರ ಅ. ಬಳಿಗಾಗಿ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-12] ತಿರುಸಿಂಗ್ ಬಜಾರ್ ರೋಡ್, ಮದರಾಸು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಶೌಚಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಅವಕಾಶವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [36-49]

46 ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ $4\frac{1}{2}$ ಆಣೆ	560 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
85 ,, ,, ,, 4 ,,	200 ,, ಟಿನ್ ,, 9 ,,	80 ,, ,, ,, 4 ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. **ವಿಳಾಸಗಳು.—**

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ಪ್ರಥಮ ಚಾನ್ಸ್. ಪಿಂಪಿನ ಸೀರೆ ಅಪ್ರೂವಲ್ ರಹಿಂ ರೂ. 3-0-0

ಈ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಘನತೆಯಾಗಿಯೂ ನೋಟಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ. ಸುಂದರವಾದ ಕೆಂಪು. ಒಂದನ್ನು ತರಿಸಿ ನೋಡಿ. ವಿಳಾಸ—

ವಿ. ಕೆ. ಕಂಪಾಗ್ನಿಸು

[111-31] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಬೆಲೆ ಬಹುಸುಲಭ ಬೆಲೆ ಬಹುಸುಲಭ

ಸೊಗಸಾದ ಗೆಜ್ಜೆಕಟ್ಟಿದ ಭಂಗಾರು ಗಿಲೀಟಿನ ಡಾಬುಗಳು.

ಅನೇಕರು ಕಳುಹಿಸಿರುವ ಡಾಬುಗಳಂತೆ ಇರುವದಿಲ್ಲ. ಭಂಗಾರು ಗಿಲೀಟಿನ ಪ್ರಖ್ಯಾತಿಹೊಂದಿದ ತಂಜಾವೂರ್ ದೇಶದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ.



ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳುವದಕ್ಕೆ ಚಿಕ್ಕವಾದ ಗುಂಡುಗಳು ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕೊಣಿಕೆ ಇಟ್ಟು ಸಾಧಾರಣ ಡಾಬುಗಳಂತೆ ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟವಿರುವದಿಲ್ಲ. ನೋಟಕ್ಕೆ ಒಂದೇ ತುಂಡಾಗಿಯೇ ಇರುವದು. ಈ ಕೆಲಸದ ನಾಜೂಕು ಬರವಣಿಗೆಯಿಂದ ಉಪಯೋಗವಿಲ್ಲ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ಒಬ್ಬರು ತರಿಸಿದರೆ ಮತ್ತೊಬ್ಬರಿಗೆ ತಾವಾಗಿಯೇ ಶಿಫಾರಸು ಮಾಡುವರು.

ಭಂಗಾರದ ಗಿಲೀಟಿನ ಗೆಜ್ಜೆ ಕಟ್ಟಿದ ಡಾಬುಗಳು 1 ಕ್ಕೆ ರೂ. 2-12-0. ಗೆಜ್ಜೆ ಇಲ್ಲದ ಡಾಬುಗಳು ರೂ. 1-12-0.

ಮ್ಯಾನೇಜರ್, ಪ್ರೇಮಲಕ್ಷ್ಮಿ ಅಂಡ್ ಕಂಪನಿ,

[32-8] ನಂ. 3, ಅರುಣಪ್ಪನ ಬೀದಿ, ಮದರಾಸು.

ನಾಳಕ ಮಹಾಶಯರೇ ! ಈ ಕೆಳಗೆ ಕಂಡ ಆಭರಣಗಳನ್ನು ಅಸ್ಸಲಿ ಜರ್ಮನ ಬೆಳ್ಳಿ ಕಂಬಿಯಿಂದ ತಯಾರಿಸಿರುತ್ತೆ. ಇದರ ರಂಗು ಎಷ್ಟು ವರುಷ ವಾದರೂ ಕೆಡುವದಿಲ್ಲ. ಇವು ಸರ್ವರಿಗೂ ಧರಿಸಿಕೊಳ್ಳುವದಕ್ಕೆ ಲಾಯಖಾದವು. ಈ ಕೆಳಗೆ ಕಂಡ ನಗಗಳನ್ನು ನಾವೇ ಸ್ವಂತವಾಗಿ ತಯಾರಿಸಿರುವುದರಿಂದ ಅಷ್ಟುಮಟ್ಟಿಗೆ ನಮ್ಮ ಬೆಲೆ ಕಡಿಮೆಯಾಗಿರುವದು.

ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-8-0	1-3-0	0-14-0	0-10-0.

ಸುಂದರವಾದ ಪ್ರಮಾಣಿ ರೀತಿ (ಕಾಲು ಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ
1-14-0	1-10-0	1-6-0

ಭಂಗಾರದ ಗಿಲೀಟಿನ ಕೈಗೊಲಸು.

ಸ್ತ್ರೀಯರು ಕೈಯಲ್ಲಿ ಹಾಕಿಕೊಳ್ಳುವದಕ್ಕೆ ಬಹು ಸೊಗಸಾಗಿ ಇರುವವು



ದೊಡ್ಡವರಿಗೆ	ಚಿಕ್ಕವರಿಗೆ
1-6-0	1-0-0

ಇವರಲ್ಲಿ ಬೇಕಾದ ಆಭರಣಗಳನ್ನು ತಾವು ನಮಗೆ ಬರೆಯುವಾಗ್ಗೆ ದೊಡ್ಡವರಿಗೆ ಚಿಕ್ಕವರಿಗೆ ಎಂಬುದು ನ್ಯಾಯ ಸರಿಯಾಗಿ ತಿಳಿಸಬೇಕು.

ವಿಳಾಸ:—ಮದರಾಸು ಟ್ರೇಡಿಂಗ್ ಕಂಪನಿ,

[32-8] 16, ತಿರುಪಳ್ಳಿ ಬೀದಿ, ಮದರಾಸು.

ಯೂರೋಪು ದೇಶದ ಮಹಾಯುದ್ಧದ ಚರಿತ್ರೆಯು.

ಮದರಾಸಿನಲ್ಲಿ ಪ್ರಕಟಿಸುತ್ತಲಿರುವ ಪೀರಿಕೇಸರಿಯು ಪ್ರತಿಯೊಂದು ಸಂಚಿಕೆಯಲ್ಲಿಯೂ ಈಗಿನ ಯುದ್ಧ ಪಟಗಳನ್ನು ಹಾಕಿ ಓದುವವರಿಗೆ ಅತ್ಯಾಶ್ಚರ್ಯ ಉಂಟಾಗುವ ಹಾಗೆ ಪ್ರಕಟಿಸುತ್ತಿದೆ. ಇದರ ವಾರ್ಷಿಕ ಚಂದಾ ರೂ 1-0-0 ಕೊಡುವ ಪೈಕಿ ಅಕ್ಟೋಬರ್ ಒಳಗಾಗಿ ಚಂದಾದಾರರಾಗುವವರಿಗೆ ಈ ಕೆಳಕಂಡ ಮಹಾಯುದ್ಧ ಚರಿತ್ರೆಯನ್ನು ಉಚಿತವಾಗಿ ಕೊಡುತ್ತೇವೆ.

ಈಗ ಯೂರೋಪು ದೇಶದಲ್ಲಿ ನಡೆಯುತ್ತಲಿರುವ ಮಹಾ ಯುದ್ಧದ ಚರಿತ್ರೆ ಕ್ರಯ ರೂ 1-0-0 ಇದು ಕನ್ನಡ ಭಾಷೆಯಲ್ಲಿ 14 ಅಧ್ಯಾಯಗಳಾಗಿ ಭಾಗಿಸಿ 30 ಚಿತ್ರಪಟಗಳೊಡನೆ ಪ್ರಕಟಿಸಲ್ಪಟ್ಟಿರುತ್ತೆ.

ಇದರಲ್ಲಿ ಎಲ್ಲಾ ರಾಜ್ಯಗಳ ಚರಿತ್ರೆಗಳೂ, ಯುದ್ಧಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳೂ, ಪ್ರತಿಯೊಂದು ರಾಜ್ಯದ ಸೇನಾ ಬಲವೂ ಮತ್ತು ವಿಮಾನ ಬಲವೂ, ಅವುಗಳ ಪಠಗಳೂ, ರಾಜರುಗಳ ಸೇನಾಧ್ಯಕ್ಷರುಗಳು, ಆಯಾ ದೇಶದ ದೊರೆಗಳು, ಮಂತ್ರಿಗಳು ಮೊದಲಾದವರುಗಳ ಭಾವಚಿತ್ರಗಳೂ, ಯುದ್ಧಸಂಬಂಧವಾದ ವಿಷಯಗಳೂ, ಅವುಗಳೆಲ್ಲವೂ ಸವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. ಯುದ್ಧಾರಂಭ ಕಾಲದಿಂದ ರಣರಂಗದಿಂದ ಬಂದ ಯುದ್ಧದ ಸಮಾಚಾರಗಳು ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ. ಇಂಥಾ ಯುದ್ಧದ ಚರಿತ್ರೆಯನ್ನು ಇದುವರೆಗೆ ಯಾರೂ ಕನ್ನಡ ಭಾಷೆಯಲ್ಲಿ ತಯಾರಿಸಲಿಲ್ಲ. ಈ ಯುದ್ಧದ ಚರಿತ್ರೆಯನ್ನು ಓದುವಾಗ ಪ್ರತ್ಯಕ್ಷವಾಗಿ ರಣರಂಗವನ್ನೇ ನೋಡುತ್ತಿರುವ ಹಾಗೆ ತೋರುವುದು. ಇದನ್ನು ಓದಲೇಬೇಕಾದದ್ದು. ಮದರಾಸಿನಲ್ಲಿ ಎಮ್ಡನ್ ಹಡಗಿನಿಂದ ಹೊಡೆಯಲ್ಪಟ್ಟ ವರ್ತಮಾನವನ್ನು ವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. [219-5]

ವಿಳಾಸ—ವೀರಕೇಸರಿ, ಪೊಮ್ಮಲ್ಲೈಯರ್ ಬೀದಿ, ಮದರಾಸ್.

To

P. D. Bhargova, Esqr:
Manager, General Assurance Society Ltd., Ajmer.

Re Policy No:-2196 C. I. (Deceased)
Mr. P. Srinivasamoortha Char.

Dear sir,

I have this day received your Mdras Bank cheque No:-Co54170 for Rs 973/1/- from the Branch Secretary of Bangalore, in settlement of claim under the above policy No. 2196, Further I desire you and your agents my deep appreciation for the prompt manner in which you settled my claim of Rs. 1,000/- of the above policy on my husband's life. Indeed, your Insurance Office is very honest and settles the claim very early, earlier than the other Insurance Companies, I think. Further I thank Mr. S. P. Ramanna, son of Sowley Purnachar, your Mysore Agent, for the trouble he took in getting my husband's life Insurance.

Yours Faithfully,
Mark of RAMABAEE
Wife of Srinivasamoortha Char.

[142-24]

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಆರೋಗ್ಯ ಪ್ರಭಾಕರ. (ಟಾನಿಕ್ ಪಿಲ್ಸ್)—ಪಿತ್ತಕೋಶ, ಶ್ವಾಸಕೋಶಗಳನ್ನು ಸರಿಪಡಿಸಿ, ರಕ್ತವೃದ್ಧಿಮಾಡಿ, ನರಗಳಿಗೆ ಬಲಕೊಡುತ್ತೆ. ಅಜೀರ್ಣ, ಪಿತ್ತಪಾಂಡು, ಕ್ಷಯ, ಬಾಣಂತಿಯರ ಕ್ಷಯ, ಮುಟ್ಟುಕಟ್ಟು, ಪಾರ್ಶ್ವವಾಯುಗಳನ್ನು ನಿವಾರಿಸುವದರಲ್ಲಿ ಅಸಮಾನವಾದುದು. 48 ಮಾತ್ರೆಗೆ 1 ರೂ, 6 ಸೀಸೆಗೆ 5 ರೂ.

2. ರೋಗನಾಶಿನಿ.—ಪ್ಲೇಗುಸೋಂಕು ಆಜೂಬಾಜು ಗ್ರಾಮಗಳಲ್ಲಿರುವಾಗಲೇ ಪ್ರತಿ ಒಬ್ಬರೂ ದಿನವಹಿ 3-4 ಸಲ 1-2 ಮಾತ್ರೆಯಂತೆ ಸೇವಿಸುವದರಿಂದ ಪ್ರಾಣವನ್ನು ಉಳಿಸಿಕೊಳ್ಳಬಹುದು. ಜನೋಪಕಾರಕ್ಕೇನೆ ಬೆಲೆ ಸುಲಭವಿಟ್ಟಿದೆ. ಇದರ ಗುಣಕ್ಕೆ ನಮಗೆ ಅನೇಕ ಬಹುಮಾನಗಳು ಬಂದಿವೆ. 40 ಮಾತ್ರೆಗೆ 4 ಆ, 6 ಸೀಸೆಗೆ 1 ರೂ, 12 ಕ್ಕೆ 2½ ರೂ.

[126-18] ನಮ್ಮ ವಿಳಾಸ.—ಪಂಡಿತ್ ಎಸ್. ಗಣಪತಿ, ಮೈಸೂರು.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ಓಟೋವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಓಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಓಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಲೆಂಜ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳಕೊಂಡ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಓಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಗವಾಲೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾರುವಂಥಾದ್ದು ಓಟೋ ಮೋಹಿನಿಯೇ.

¼ ಔನ್ಸ್ ಗಾಜಿನ ಬುರುಡೆಯುಳ್ಳ ಸೀಸೆಗೆ	ರೂ 2—0—0	⅛ ,, ,,	...	0—8—0
1 ಡ್ರಾಮ್ ಸೀಸೆಗೆ ...	,, 0—12—0	ಶಾಂಪಲ್ ಡಜನ್‌ಗೆ	...	0—12—0

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಾಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳಸುವಂಥಾದ್ದು. ಕಣ್ಣು ಮತ್ತು ಮೆದುಳಿಗೆ ತಂಪನ್ನು ಕೊಡತಕ್ಕದ್ದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಎಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇವೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಕಾಗಿದೆ [282-3]

ಕ್ರಯ 1 ಬಾಟ್ಲಿಗೆ ರೂ. 1-0-0.
,, 3 ,, ,, 2-10-0.

ಸೋಲ್ ಏಜಂಟರು—ಸಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,
177, ಬ್ರಾಡ್‌ವೇ ಬಜಾರ್ ರೋಡ್, ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಜಪಾನ್, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಪಾಪು ಮಕ್ಕಳಿಗೂ ವೈದ್ಯರ ಸಹಾಯವನ್ನು ಕಾದು ತೊರೆಯಬೇಕಾದುದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಹೊಟ್ಟೆನೋವು, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರೆಜಿಸ್ಟರಾದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೆ ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 360 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆರೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಲ್. ಎಂ., ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಲ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ. ಇವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಿನ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ" (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ."

[189-17] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲೆ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡುಬಾಚಿಕೊಳ್ಳುತ್ತಾ ಬಂದರೆ ಬೆಳೆಯದ ಇರುವ ಕೂದಲು ಬೆಳೆಯುವದು ಒರಟಾಗಿರುವ ಕೂದಲು ಮೃದುವಾಗುವದು. ನೀಲಿಕಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮದದನ್ನು ಸರಿಮಾಡುವದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರಜಿ ಪಾಚ್ಚಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರೆಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಮಾತ್ರೆ 22, ಕೊಂಡೆ ಗಿಣಿಗಳು 6, ಹಾರೊಸೋಪ್ ಬ್ರಷ್ 1, ಜಡೆಕುಪ್ಪು 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಸ್. ಎಮ್. ಸ್ವಾಮಿ ಅಂಡ್ ಕಂಪನಿ,

[260-6] ನಂ. 44, ನಂಬುಳಯ್ಯರ ಬೀದಿ, ಮದರಾಸು.

ಅಮೃತ್ಸರದ ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪೆನಿ.

ಈಗ ವೈಂಡಪ್ ಆಗಿರುವ ಮೇಲ್ಕಂಡ ಕಂಪನಿಯಲ್ಲಿ ಷೇರುಗಳನ್ನು ತೆಗೆದುಕೊಂಡಿರುವವರು ತಮ್ಮ ಷೇರುಗಳ ಸಂಖ್ಯೆಯನ್ನೂ, ತಾವು ತೆರಬೇಕಾಗಿರುವ ಮೊಬಲಗನ್ನೂ ಒಂದು ರಿಜಿಸ್ಟರ್ಡ್ ಕಾರ್ಡಿನ ಮೂಲಕ ತಿಳಿಸಬೇಕೆಂದು ಎರಡು ವಾರಗಳಿಂದಲೂ ಈ ಪತ್ರಿಕೆಯಲ್ಲಿ ಪ್ರಕಟಿಸಿದಾಗ್ಯೂ ಮಂಡ್ಯದಲ್ಲಿರುವ ಕೆಲವರು ಕೂಡ ಸಮಾಚಾರ ತಿಳಿಸಿಲ್ಲವೆಂದು ವಿಷಾದಪಡುತ್ತೇನೆ. ಈಗಲೂ ತೆರಬೇಕಾದ ದಂಡವನ್ನು ತಪ್ಪಿಸಿಕೊಳ್ಳಲಿಕ್ಕೆ ಪ್ರಯತ್ನವಾಗುವುದು ನಮ್ಮ ಕರ್ತವ್ಯವೆಂದು ತಿಳಿದು ಷೇರುದಾರರುಗಳೆಲ್ಲರೂ ನನ್ನ ಪ್ರಾರ್ಥನೆಯಂತೆ ಒಂದು ವಾರದೊಳಗಾಗಿ ತಿಳಿಸಿದರೆ ಮೀಟಿಂಗ್ ನಡೆಸಲು ಶೀಘ್ರದಲ್ಲಿಯೇ ನಡವಳಿಕೆ ನಡೆಸಲ್ಪಡುವುದು; ಇಲ್ಲವಾದರೆ ಪ್ರಯತ್ನವು ಅವರ ಸಂಬಂಧಪಟ್ಟವರಿಗೆ ಇಷ್ಟವಿಲ್ಲವೆಂದು ನಿಲ್ಲಿಸಲ್ಪಡುವುದು.

[287-3] ಕೆ. ಆರ್ ಚಕ್ರವರ್ತಿ,

ಏಜಂಟ್, ಮೈಸೂರು ಸ್ಟೀಂ ಸ್ಟ್ಯಾಂಪ್ ಕಂಪೆನಿ, ಬೆಂಗಳೂರು ಸಿಟಿ.

ಧರ್ಮಸಮಾಜವಯು, ಕಲ್ಕತ್ತಾ.

ಏರ್ಪಟ್ಟ ಮೂಲಧನ—ರೂ. 30,00,00,000.

ಈ ಕಂಪನಿಯು 1882 ನೇ ಇಸವಿ 7 ನೇ ಇಂಡಿಯಾ ಕಂಪನಿ ಆಕ್ಟಿನಂತೆ 1910 ನೇ ಇಸವಿ ಮಾರ್ಚ್ 3 ನೇ ತಾರೀಖು ರಿಜಿಸ್ಟರಾಗಿರುತ್ತೆ. ಪ್ರತಿ ಒಂದು ಷೇರಿನ ಐದು ರೂಪಾಯಿಗಳು. 1914 ನೇ ಇಸವಿ ತನಕ ಪ್ರತಿ ವರುಷವೂ ಶೇಕಡಾ 26 ರ ಮೇರೆ ಲಾಭವನ್ನು ಷೇರುದಾರರಿಗೆ ಹಂಚಲಾಗಿದೆ. ಮತ್ತು ಮೂಲಧನಕ್ಕೆ ವಿಶೇಷ ಲಾಭ ಉತ್ಪತ್ತಿಯಾಗುವಂತೆ ಏರ್ಪಾಡುಗಳ ಅಭಿವೃದ್ಧಿಯಾಗಿ ಮನೆಗಳ ಮೇಲೂ, ವ್ಯಾಪಾರಕ್ಕೂ, ಲೇವಾದೇವಿಗೂ ಸಾಲ ಕೊಡಲಾಗಿದೆ.

ಪ್ರಸ್ತುತದ ಬಾಂಡ್ ದಾರರುಗಳಿಗೆ ಷೇರುದಾರರಾಗಲಿಕ್ಕೆ ಮತ್ತು ಬಹಳ ಜನಗಳಿಗೆ ಮ್ಯಾನೇಜಿಂಗ್ ಕಮಿಟಿಯವರು 10 ವರುಷಗಳ ತನಕ ಆರು ತಿಂಗಳಿಗೊಮ್ಮೆ ಬಾಂಡ್ ಷೇರುಗಳಿಗೆ ಶೇಕಡಾ 12½ ಮತ್ತು 3½ ರಂತೆ ಬಡ್ಡಿಯನ್ನು ಕೊಡಲು ಒಪ್ಪಿಕೊಂಡಿರುತ್ತಾರೆ.

ಸಮಾಜದ ಡಿಬೆಂಚರ್ ಮತ್ತು ಬಾಂಡ್‌ಗಳನ್ನು ಬಹಳ ಅನುಕೂಲವಾದ ರೀತಿಯಲ್ಲಿ ವಿತರಣೆ ಮಾಡಲಾಗಿದೆ. ಹಣ ಗಳಿಸಲು ವಿಶೇಷ ಫಲಕಾರಿಯಾದದ್ದು. ಫಾರಂಗಳಿಗೂ ಮತ್ತು ವಿಷಯಗಳಿಗೂ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟಾಂಪು ಸಹಿತ ಬರೆದು ಕೇಳಿ.

ನಂಬಿಗಸ್ಥರಾದ ಏಜಂಟರು ಬೇಕಾಗಿದ್ದಾರೆ. ಒಳ್ಳೇ ಕಮಿಷನ್ ಉಂಟು.

ವಿಳಾಸ.—ಕೃಷ್ಣಾ ಜೆರಾಪ್ ಶ್ರೀನಿವಾಸರಾವ್ ಕಂಪನಿ,

ಬೊಂಬಾಯಿ ಪ್ರಾಂತದ ಮ್ಯಾನೇಜರು ಮತ್ತು ಕರ್ನಾಟಕದ

[270-5] ದೇಶದ ಜೆನರಲ್ ಏಜಂಟರು, ದಾವಣಗೆರೆ.

ವೃತ್ತಾಂತ ಪತ್ರಿಕೆ.

—:o:—

ಶಕೆ ೧೯೧೬ ನೇ ಇಸವಿ ಜನವರಿ ೬ ನೇ ಗುರುವಾರ

ಹೊಸ ವರುಷವು.

ಈ 1916 ನೇ ವರುಷವು ಯುದ್ಧ ನಡೆಯುತ್ತಿರುವ ಮಧ್ಯೆ ಪ್ರಾರಂಭವಾಗಿದೆ. ಯುದ್ಧವು ಬೇಗನೆ ಮುಕ್ತಾಯವಾಗುವ ಸೂಚನೆಗಳು ಇನ್ನೂ ಸ್ಪಷ್ಟವಾಗಿ ಕಾಣುತ್ತಾ ಇಲ್ಲ. ಪ್ರಪಂಚದ ಬಹು ಭಾಗವೆಲ್ಲಾ ಯುದ್ಧದಲ್ಲಿ ಸಿಕ್ಕಿಕೊಂಡಿರುವುದು. ಕಷ್ಟ ನಷ್ಟ ಸಂಕಟಗಳು ಅಷ್ಟಿಷ್ಟೆಂದು ಹೇಳಲಸಾಧ್ಯವಾಗಿದೆ. ಯೋಚನೆ ಮಾಡಲಿಕ್ಕೆ ವಿಶೇಷ ಕಾರಣಗಳಿದ್ದಾಗ್ಯೂ ಆಶ್ಚರ್ಯಪಡಲು ಸಹಜವಾದ ನಿಮಿತ್ತಗಳೇನೂ ಇರುವುದಿಲ್ಲ. ಯುದ್ಧವು ಇನ್ನೂ ತಿಂಗಳುಗಟ್ಟಲೆ ನಡೆದರೂ ನಡೆಯಬಹುದು; ಇಲ್ಲವೇ ಕೆಲವು ತಿಂಗಳೊಳಗಾಗಿ ನಿಂತು ಹೋಗಲೂ ಬಹುದು. ಹ್ಯಾಗಾದರೂ ಗಾಬರಿ ಪಡುವುದಕ್ಕಾಗಲಿ ಕಳವಳ ಪಡುವುದಕ್ಕಾಗಲಿ ನಿಮಿತ್ತವೇನೂ ಇರುವುದಿಲ್ಲ. ಮಿತ್ರಮಂಡಲಿಯವರಲ್ಲಿ ಪರಸ್ಪರಾನುರಾಗವು ಮೊದಲಿಗಿಂತ ವಿಶೇಷವಾಗಿರುತ್ತದೆ. ಸಮಯ ಒದಗಿದ ಕೂಡಲೇ ಶತ್ರುವಿನ ಸೊಕ್ಕು ಮುರಿದು ಜಯಪ್ರದ ಹೊಂದುವುದಕ್ಕೆ ಬಹಳ ಜಾಗರೂಕತೆಯಿಂದ ಸನ್ನಾಹಗಳನ್ನೂ ಏರ್ಪಾಟುಗಳನ್ನೂ ಮಾಡಿಕೊಳ್ಳುತ್ತಿದ್ದಾರೆ. ಇದಲ್ಲದೆ ಜಯಪ್ರದವಾಗುವ ತನಕ ಯುದ್ಧವನ್ನು ನಿಲ್ಲಿಸುವುದೇ ಇಲ್ಲವೆಂದು ಮಿತ್ರಮಂಡಲಿಯವರು ಖಚಿತವಾದ ಸಂಕಲ್ಪ ಮಾಡಿಕೊಂಡಿದ್ದಾರೆ.

ಯುದ್ಧದ ಕಷ್ಟ ನಷ್ಟ ಸಂಕಟಗಳನ್ನು ಅನುಭವಿಸಿ ದಣಿದು ಹೋಗಿರುವುದರ ಚಿಹ್ನೆಗಳು ಜರ್ಮನಿ, ಆಸ್ಟ್ರಿಯಾ, ಟರ್ಕಿ ರಾಜ್ಯಗಳಲ್ಲಿ ಕಂಡು ಬರದೆ ಇಲ್ಲ. ಅವರುಗಳಿಗೆ ಯಥಾರ್ಥವಾದ ಜಯಪ್ರದಗಳೇನೂ ಲಭ್ಯವಾಗುತ್ತಾ ಇಲ್ಲ. ಅವರಿಗೆ ಸಮುದ್ರದ ಬಾಗಿಲುಗಳು ಮುಚ್ಚಲ್ಪಟ್ಟಿವೆ. ಹೊರಗಡೆಯಿಂದ ಅವರಿಗೆ ಯಾವ ಪದಾರ್ಥಗಳಾಗಲಿ ಹೋಗದಂತೆ ತಡೆಯಾಗಿರುವುದು. ಅವರುಗಳ ಅಸಂಖ್ಯಾತವಾದ ಸೈನ್ಯಗಳು ಕೊಲೆಯಾದವು, ಗಾಯಪಟ್ಟವು, ಕೈಸೆರೆ ಹಿಡಿಯಲ್ಪಟ್ಟವು. ಈ ರೀತಿ ಕಷ್ಟನಷ್ಟಗಳನ್ನು ಆ ಶತ್ರುರಾಜ್ಯಗಳವರು ಇನ್ನೂ ಎಷ್ಟು ದಿನ ತಾನೇ ಅನುಭವಿಸ್ಯಾರು? ಜಗತ್ಪ್ರಾಣ ಕರ್ತನಾದ ಪರಮೇಶ್ವರನೇ ಇನ್ನೂ ಲೋಕಗಳನ್ನೆಲ್ಲಾ ಪರಿಪಾಲನೆ ಮಾಡುತ್ತಿರೋಣದರಿಂದ ಆತನಿಗೆ ಸೂಕ್ತ ತೋರಿದ ಕಾಲದಲ್ಲಿ ಈ ಘೋರ ಕದನವನ್ನು—ಪ್ರಪಂಚವೇ ಇದುವರೆಗೆ ನೋಡಿ ಅರಿಯದ ಪ್ರಾಣನಷ್ಟವನ್ನು—ಕೊನೆಗಾಣಿಸಿ ಸಮಾಧಾನವನ್ನೂ ನೆಮ್ಮದಿಯನ್ನೂ ನೆಲೆಗೊಳಿಸುತ್ತಾನೆ. ಅಂಥಾ ಆನಂದ ಮಯವಾದ ಸಮಯವು ಬೇಗನೆ ಲಭ್ಯವಾಗಲೆಂದು ನಾವುಗಳೆಲ್ಲಾ ಆತನಿಗೆ ಮೊರೆಯಿಡುತ್ತಾ ಬರೋಣ.

ಹಿಂದುಸ್ಥಾನದಲ್ಲಾದರೋ ಬ್ರಿಟಿಷ್ ಜಹಜುಗಳ ಬೆಂಬಲವಿರೋಣದರಿಂದ ಯಾವುದೊಂದು ಅತಿಬಾಧೆಯೂ ಉಂಟಾಗಿರುವುದಿಲ್ಲ. ಸಮಸ್ತ ವಿಚಾರಗಳೂ ಎಂದಿನಂತೆ ಸರಾಗವಾಗಿ ಜರುಗುತ್ತಲಿವೆ. ಕಳೆದ ವಾರವೆಲ್ಲಾ ಹಿಂದುಸ್ಥಾನದ ನಾನಾ ಭಾಗಗಳಲ್ಲಿ ಒಗಬಗೆಯ ವಾರ್ಷಿಕ ಕೂಟಗಳೂ ಸಭೆಗಳೂ ನಡೆದಿರುತ್ತವೆ. ಸಾರ್ವಜನಿಕ ಸಭೆ, ಸಂಘಪರಿಷ್ಕರಣಾ ಸಮಾಜ, ಮುಸಲ್ಮಾನರ ಮಹಾ ಸಮಾಜ, ಇವೇ ಮೊದಲಾದ ಕೂಟಗಳು ಬೊಂಬಾಯಿ ನಗರದಲ್ಲಿ ಜರುಗಿದವು. ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಸಾವಿರಾರು ವಿದ್ಯಾವಂತರೂ ಗಣ್ಯರೂ ಆದ ದೊಡ್ಡ ಮನುಷ್ಯರು ಹೋಗಿ ಸೇರಿದ್ದರು. ಕ್ರೈಸ್ತರ ಸಭೆಗಳೂ, ಜೈನ ಮಹಾ ಜನಗಳ ಕೂಟಗಳೂ, ಮದ್ಯ ವಿಸರ್ಜನೆಯ ಸಭೆಯೂ, ಇತರ ಸಭೆಗಳೂ ಬೇರೆ ಬೇರೆ ಪಟ್ಟಣಗಳಲ್ಲಿ ಸರಾಗವಾಗಿ ನಡೆದವು. ವಿದ್ಯಾವಂತರು ಈ ಸಭೆಗಳಲ್ಲಿ ಅತ್ಯಂತ ಬೋಧಪ್ರದವೂ ಅಸಂಖ್ಯಾತವೂ ಆದ ಭಾಷಣಗಳನ್ನು ಮಾಡಿದರು. ಉದ್ದೇಶಪಟ್ಟ ನಾನಾ ವಿಚಾರಗಳನ್ನು ಕುರಿತು ಬರಿಯ ಉಪನ್ಯಾಸಗಳನ್ನು ಮಾಡೋಣದರಿಂದ ಫಲವೇನೂ ಆಗಲಾರದೆಂದೂ, ಸಭೆಗಳಲ್ಲಿ ನಡೆದ ನಿರ್ಧಾರಗಳನ್ನು ಮಾತ್ರ ಪ್ರಕಟಮಾಡುವಂತಾದರೆ ಸಾಕೆಂದೂ ನಾವು ಅನೇಕ ಸಲ ಸೂಚಿಸಿರುತ್ತೇವೆ. ಗಂಟೆಗಳ ಪ್ರಕಾರ ನಾವು ಎಷ್ಟು ಬೇಕಾದರೂ ಮಾತನಾಡಬಲ್ಲೆವು; ಆದರೆ ನಮ್ಮ ಕಾರ್ಯಗಳು ನಿಮಿಷದಷ್ಟೂ ನಡೆಯಲಾರವು. ಮನಸ್ಸಿಲ್ಲದವರನ್ನು ಒಪ್ಪಿಸುವುದಕ್ಕೆ ಮಾತನಾಡಬೇಕಾದದ್ದೇನೋ ಅವಶ್ಯವೇ. ಆದರೆ ಯಾವುದಾದರೊಂದು ವಿಚಾರವು ಸಹಜವೂ ಆವಶ್ಯಕವೂ ಆದದ್ದೆಂದು ಸರ್ವರೂ ಒಪ್ಪಿಕೊಂಡ ಮೇಲೆ ಪುನಃ ಅದರ ಮೇಲೂ ವಾಚಾಳಕತ್ವವನ್ನು ಪ್ರಕಾಶಪಡಿಸುವುದರಿಂದ ಪ್ರಯೋಜನವೇನು? ಎಲ್ಲರೂ ಒಪ್ಪಿ ತೀರ್ಮಾನ ಮಾಡಿರುವ ಭಾಗವನ್ನು ಕಾರ್ಯತಃ ಆಚರಣೆಯಲ್ಲಿ ತರುವುದಕ್ಕೆ ಉದ್ಯುಕ್ತರಾಗಬೇಕು. ಈ ಭಾಗದಲ್ಲೇ ನಮ್ಮೊಳಗೆ ದೊಡ್ಡ ಕೊರತೆಯುಂಟು; ನಡೆಯುವುದರಲ್ಲಿ ಮಾತ್ರ ನಾವು ಹಿಂದೆ ಬೀಳುವೆವು.

ಈ ಸಲ ನಡೆದ ನಾನಾ ಸಮಾಜಗಳಲ್ಲೂ ಒಂದು ಸಂತೋಷಪ್ರದವಾದ ವಿಷಯ ಕಂಡುಬಂದಿದೆ. ಎಲ್ಲರೂ ಏಕೀಭವಿಸಿ ಪರಸ್ಪರ ಸಹಾಯಕರಾಗಿ ನಿಂತು ಕೆಲಸಗಳನ್ನು ಮಾಡಬೇಕೆಂದೂ, ಜಾತಿ ಕುಲ ಗೋತ್ರಗಳ ವ್ಯತ್ಯಾಸ ತಾರತಮ್ಯಗಳನ್ನು ತ್ಯಜಿಸಿಬಿಡಬೇಕೆಂದೂ ಕುತೂಹಲಪಡಲಾರಂಭವಾಗಿದೆ. ಇದೊಂದು ಮಹಾ ವಿಶೇಷವಾದ ಶುಭಸಮಾಚಾರ. ಹಿಂದುಗಳೂ ಮಹಮ್ಮದೀಯರೂ ಪರಸ್ಪರ ಕಲೆತರು. ಇವೆರಡು ಸಂಗಡದವರೂ ಸಮಸ್ತ ವಿಸ್ತಾರವಾದ ರಾಷ್ಟ್ರದ ಏಳಿಗೆಗಾಗಿ ಏಕೀಭವಿಸಿ ಕೆಲಸಕಾರ್ಯಗಳನ್ನು ನಡೆಸುತ್ತಾ ಬರುವ ಪಕ್ಷದಲ್ಲಿ ಅನೇಕವಾದ ಅಭಿವೃದ್ಧಿ ಕೆಲಸಗಳು ಬೇಗನೆ ಲಭ್ಯವಾಗುತ್ತವೆಂದು ಧಾರಾಳವಾಗಿ ಹೇಳಬಹುದು. ಜಾತಿ ಕುಲಗಳ ತಾರತಮ್ಯಗಳನ್ನೂ ಕಟ್ಟು ಪಾಡುಗಳನ್ನೂ ಮುರಿದು ಬಿಡಬೇಕೆಂಬ ಅಭಿಲಾಷೆಯು ಹುಟ್ಟಿ ಬೆಳೆಯುತ್ತಲಿದೆ. ಇನ್ನು ಮುಂದೆ ಒಳ್ಳೇದಾದ ಸ್ಥಿತಿ ಗತಿಯುಂಟಾಗುವಂತೆ ಎಲ್ಲರೂ ಒಗ್ಗಟ್ಟಾಗಿ ಕಾರ್ಯಗಳನ್ನು ನಡೆಸಬೇಕೆಂದು ಕುತೂಹಲ ಪಡಲಾರಂಭಿಸಿದ್ದಾರೆ. ಅಂಥಾ ಸಂಧ್ಯೆಯು ಯುಕ್ತವಾದ ಕಾಲವು ಒದಗಿದ ಪಕ್ಷದಲ್ಲಿ ಸಮಸ್ತ ರಾಷ್ಟ್ರದ ಶ್ರೇಯಸ್ಸು ಖಂಡಿತವಾಗಿಯೂ ನೆಲೆಗೊಳ್ಳುತ್ತೆನ್ನುವುದಕ್ಕೆ ಸಂಶಯವಿಲ್ಲ. ಪ್ರತಿಯೊಂದು ಕಾರ್ಯವೂ ಈ 1916 ನೇ ವರುಷದಲ್ಲಿ ವೃದ್ಧಿ ಹೊಂದುವುದೆಂದೂ, ಅಂಥಾ ಕಾರ್ಯಕ್ಕೆ ನಮ್ಮ ವಾಚಕರಲ್ಲಿ ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ಧಾರಾಳವಾಗಿ ನೀಡಿ ಸಹಾಯ ಮಾಡುವರೆಂದೂ ನಂಬಿ ನಿರೀಕ್ಷಿಸುತ್ತೇವೆ. ಈ 1916 ನೇ ವರುಷವು ನಮ್ಮ ವಾಚಕರಿಗೆಲ್ಲಾ ಆಯುರಾರೋಗ್ಯಗಳನ್ನೂ ಸುಖ ಸಂಪತ್ತುಗಳನ್ನೂ ಕೊಡುವಂಥಾದ್ದಾಗಲಿ.

ಕಾಲವೂ ಅದಕ್ಕೆ ನಿಯಾಮಿತವಾದ ಕೆಲಸವೂ.

ಕಳೆದ ಡಿಸೆಂಬರ್ ತಿಂಗಳ ಮೂವತ್ತೊಂದನೇ ತಾರೀಖಿಗೆ 1915 ನೇ ಇಸವಿಯು ಮುಕ್ತಾಯವಾಯಿತು. ನಾವು ಇಹಲೋಕದಲ್ಲಿ ಎಷ್ಟು ವರುಷಗಳು ಬದುಕಿರಬೇಕೆಂದು ನಿಯಾಮಕವಾಗಿದೆಯೋ ಯಾರಿಗೂ ಗೊತ್ತಿಲ್ಲ. ಆದರೆ ಒಂದು ವಿಷಯವು ಮಾತ್ರ ಅನುಮಾನವಿಲ್ಲದೆ ನಮ್ಮೆಲ್ಲರಿಗೆ ಗೊತ್ತಾಗಿದೆ. ಏನಂದರೆ ನಮ್ಮ ಆಯುಷ್ಕಾಲದಲ್ಲಿ ಮತ್ತೊಂದು ಮುನ್ನೂರು ಅರವತ್ತೈದು ಹಗಲು ರಾತ್ರಿಗಳು ಗತಿಸಿಹೋದವು. ವರುಷಗಳು ಒಂದರ ತರುವಾಯ ಮತ್ತೊಂದು ಹೀಗೆ ಮುಗಿದು ಹೋಗುತ್ತಿರಲು ಕಟ್ಟಕಡೆಗೆ ಆಯುಷ್ಯವೇ ಮುಗಿದು ಮೃತ್ಯು ಸಮೀಪನಾಗುತ್ತಾನೆ. ನಾನು ಬದುಕಬೇಕೆಂದು ನಿಯಾಮಕವಾಗಿದ್ದ ಆಯುಷ್ಯವು 1915 ನೇ ಜನವರಿಯಲ್ಲಿ ಇದ್ದದ್ದಕ್ಕಿಂತ 1916 ನೇ ಜನವರಿಯಲ್ಲಿ ಒಂದು ವರುಷವು ಕಡಿಮೆಯಾಗಿದೆ. ಇದು ಯಾರಿಗೆ ತಾನೇ ತಿಳಿಯದು? ಆದರೆ ಯಾರು ಇದರ ಮುಖ್ಯತ್ವವನ್ನು ಸ್ಮರಣೆ ಮಾಡುತ್ತಾರೆ? ಇದರ ಲುಕ್ಸಾನು ಯಾರನ್ನು ಬಾಧಿಸುತ್ತದೆ? ಇದರ ಆದಾಯವು ಯಾರಿಗೆ ಸಂತೋಷವನ್ನುಂಟುಮಾಡಿದೆ?

ಆದರೆ ಆಯುಷ್ಯದ ವರುಷಗಳು ಗತಿಸಿಹೋಗದೆ ಯಾರಿಗೆ ತಾನೇ ಹಾಗೆಯೇ ಇರುತ್ತವೆ? ಕಾಲ ಪ್ರಯಾಣದೇ ಆಗುತ್ತದೆ. ಇದರಲ್ಲಿ ಲುಕ್ಸಾನು ಎಂಥಾದ್ದು? ಆದಾಯವೆಂದರೇನು? ಲೋಕದಲ್ಲಿ ಜನಿಸಿದ ಸಕಲರಿಗೂ ಆಯುಷ್ಯವು ಆರಂಭವಾಗಿ ಮುಗಿದು ಹೋಗುತ್ತಾ ಇರುತ್ತದೆಯಲ್ಲವೇ? ನನ್ನ ಆಯುಷ್ಯವನ್ನು ಕಡಿಮೆಯಾಗದೆ ಹಾಗೆಯೇ ಭದ್ರಪಡಿಸುತ್ತೇನೆಂದು ಸಂಕಲ್ಪ ಮಾಡಿ ಅದನ್ನು ಪೆಟ್ಟಿಗೆ ಮಾಡಿದರೆ ಇರುತ್ತೇನೋ? ಇಲ್ಲವಷ್ಟೆ. ಹಾಗಾದರೆ ಹ್ಯಾಗೂ ಗತಿಸಿಯೇ ಹೋಗುವ ಆಯುಷ್ಯದಲ್ಲಿ ಲುಕ್ಸಾನು ಅಂದರೇನು? ಲಾಭವೆಂದರೇನು?

ನಮ್ಮ ದೇಶದಲ್ಲಿ ಬಾಲ ಬಾಲಕಿಯರು ತರುಣ ತರುಣಿಯರು ಲೋವರ್ ಸೆಕೆಂಡರಿ, ಮೆಟ್ರಿಕ್ಯುಲೇಷನ್ ಮುಂತಾದ ಸರಕಾರೀ ಪರೀಕ್ಷೆಗಳಿಗೆ ಸೇರಿ ಆ ಪರೀಕ್ಷೆಗಳು ನಡೆಯುವ ಕಾಲದಲ್ಲಿ ನಿಯಾಮಕವಾದ ಸ್ಥಳಕ್ಕೆ ನಿಯಾಮಕವಾದ ಕಾಲದಲ್ಲಿ ಬಂದು ತಮಗೆ ಕೊಡೋಣವಾದ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯುತ್ತಾರಲ್ಲವೇ? ಒಂದು ಪ್ರಶ್ನೆ ಪತ್ರಿಕೆಗೆ ಉತ್ತರಗಳನ್ನು ಬರೆಯುವದಕ್ಕೆ ಉಮೇದುವಾರನಿಗೆ ಎರಡು ಗಂಟೆಗಳ ಕಾಲವೋ ಅಥವಾ ಮೂರು ಗಂಟೆಗಳ ಕಾಲವೋ ನಿಗದಿಯಾಗಿರುತ್ತದೆ. ತೇರ್ಗಡೆ ಹೊಂದಬೇಕೆಂದಿರುವ ವಿದ್ಯಾರ್ಥಿಯು ಅಷ್ಟು ಕಾಲದಲ್ಲಿ ಆ ಪ್ರಶ್ನೆಗಳನ್ನು ಓದಿ ಅವುಗಳ ಅರ್ಥವನ್ನು ತಿಳಿದು ಅವುಗಳಿಗೆ ಪ್ರತ್ಯುತ್ತರಗಳನ್ನು ಆಸಕ್ತಿಯಿಂದ ಕಾಲಹರಣ ಮಾಡದೆ ಬಿರುಸಾಗಿ ಬರೆಯುತ್ತಾನೆ. ಅವನು ಆ ಕಾಲಕ್ಕಾಗಿ ವರುಷವೆಲ್ಲಾ ಸಿದ್ಧಪಡಿಸಿಕೊಳ್ಳುತ್ತಲಿದ್ದನು. ಈಗ ಅವನು ಶ್ರಮಪಟ್ಟು ಆರ್ಜಿಸಿದ ವಿದ್ಯವನ್ನು ಪರೀಕ್ಷಕರಿಗೆ ಪ್ರಕಟಿಸಿ ಅವರಿಂದ ಬಿರುದನ್ನೂ ಬಹುಮಾನವನ್ನೂ ಯೋಗ್ಯತಾ ಪತ್ರವನ್ನೂ ಪಡೆಯುತ್ತಾನೆ. ಇದು ಅವನಿಗೆ ಆದಾಯ, ಲಾಭ. ಇನ್ನೊಬ್ಬನು ಅವನ ಸಮೀಪದಲ್ಲೇ ಕೂತಿದ್ದಾನೆ. ಅವನು ಉಮೇದುವಾರನೇ ಸರಿ. ಹಣ ಸರಕಾರಕ್ಕೆ ತೆತ್ತನು. ಪ್ರಶ್ನೆ ಪತ್ರಿಕೆಯು ಅವನಿಗೂ ಕೊಡಲ್ಪಟ್ಟಿತು. ಕೈಯಲ್ಲಿ ಲೇಖನಿಯನ್ನು ಹಿಡಿದಿದ್ದಾನೆ. ಆದರೆ ತಕ್ಕ ಉತ್ತರಗಳು ನೆನಪಿಗೆ ಬರುವದಿಲ್ಲ. ಅವನು ವರುಷವೆಲ್ಲಾ ಆಟವಾಡುತ್ತ ನಿದ್ದೆಮಾಡುತ್ತ ಸ್ನೇಹಿತರ ಕೂಡ ನಿಶ್ಚಿಂತನಾಗಿ ತಿರುಗುತ್ತಲಿದ್ದನು. ಪರೀಕ್ಷಾ ಸಮಯದಲ್ಲಿ ಕೂತು ಇರುವಾಗ ಆಟದ ಮೇಲೆಯೂ ನಿದ್ದೆಯ ಮೇಲೆಯೂ ವಿಹಾರದ ಮೇಲೆಯೂ ಅವನಿಗೆ ಲಕ್ಷ್ಯವಿದೆ. ಅವನು ಏನೂ ಬರೆಯುವದಕ್ಕಾಗಲಿಲ್ಲ. ಒಂದೆರಡು ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದರೂ ಅವೆಲ್ಲಾ ತಪ್ಪು. ಮತ್ತು ನಿಯಾಮಕ ಕಾಲದಲ್ಲಿ ಆಲಸ್ಯ ತೂಕಡಿಕೆ ಬೇಸರದಿಂದ ಮೈಮುರಿಯುತ್ತಾನೆ. ಇಷ್ಟರಲ್ಲಿ ನಿಯಾಮಕ ಕಾಲವು ಮುಗಿಯಿತು. ಗಂಟೆ ಬಾರಿಸಿದರು. ಅಗೋ! ಮೇಲ್ವಿಚಾರಕನು ಬಂದು ಅವನ ಕೈಯಲ್ಲಿನ ಕಾಗದಗಳನ್ನು ತೆಗೆದುಕೊಂಡು ಪರೀಕ್ಷಕನಿಗೆ ಕಳುಹಿಸುತ್ತಾನೆ. ಆದರೆ ಅದರಲ್ಲಿ ಏನೂ ಪ್ರಯೋಜನವಿಲ್ಲ. ಉತ್ತರಗಳು ಇಲ್ಲ. ಇರುವ ಉತ್ತರಗಳು ತಪ್ಪು. ಆ ವಿದ್ಯಾರ್ಥಿಯು ಮನಸ್ಸಂತೋಷವುಳ್ಳವನಾಗಿಲ್ಲ. ಅವನು ಕೆಲಸ ಮಾಡಲಿಲ್ಲ. ಕಾರ್ಯವು ನೆರವೇರಲಿಲ್ಲ. ವ್ಯರ್ಥ ಕಾಲಹರಣವಾಯಿತು. ಅವನಿಗೆ ಸೋತವನು ಎಂದು ಹೆಸರು. ಅವನಿಗೆ ಆ ವರುಷವು ಲುಕ್ಸಾನಾಯಿತು. ಅವನ ಮುಖದಲ್ಲಿ ಗೆಲುವೂ ಕಳೆಯೂ ಇಲ್ಲ. ಬಾಡಿ ಕಂದಿಹೋಗಿದೆ.

ಆದರೆ ಇದು ವಿದ್ಯಾರ್ಥಿಗಳನ್ನು ಕುರಿತದ್ದು. ಬಾಕಿ ಪುರುಷ ಸ್ತ್ರೀಯರಿಗೆ ಇದರ ಗೋಜೇನು? ವರುಷವು ಆರಂಭವಾಗುತ್ತದೆ. ಕೆಲವು ಕಾಲದ ಮೇಲೆ ಅದು ಸಮಾಪ್ತಿಯಾಗುತ್ತದೆ. ಅಷ್ಟರಲ್ಲಿ ಲೋಕದ ಮಂದಿಯು ಯಾವದೋ ಕೆಲಸಮಾಡಿ, ದುಡಿದು ಹೊಟ್ಟೆ ಬಟ್ಟೆ ಕಳೆಯುತ್ತಾರೆ. ನಿದ್ದೆ ವ್ಯಾಯಾಮ, ವಿನೋದ, ವ್ಯಾಪಾರಗಳನ್ನು ಮಾಡಿ ಆಯಿತು. ಬದುಕಿರುವ ವರೆಗೆ ಹೀಗೆ ವರುಷಗಳನ್ನು ಮುಗಿಸುತ್ತ ಯೌವನವು ಹೋಗಿ ವಯೋವೃದ್ಧರಾಗಿ ಕಡೆಕಡೆಗೆ ಮೃತ್ಯುವಿನ ವಶನಾಗುತ್ತಾರೆ. ಅಷ್ಟೇ! ಅಲ್ಲವೇ? ಇದರೊಳಗೆ ಲಾಭವೇನು? ಲುಕ್ಸಾನು ಯಾವದು? ಹೆಚ್ಚು ಸಂಪಾದನೆ ಮಾಡಿದವನು ಕಟ್ಟಿಕೊಂಡು ಹೋಗುವದಿಲ್ಲ. ಏನೂ ಗಳಿಸದವನು ಬರಿಗೈಯಲ್ಲಿ ಹೋಗುವಂತೆ ಶ್ರೀಮಂತನೂ ಹೋಗುತ್ತಾನೆ.

ಆದರೆ ಈ ತೆರನಾಗಿ ಯೋಚಿಸಿ ತೃಪ್ತಿಪಟ್ಟು ನೆಮ್ಮದಿಯಾಗಿರುವದು ಪಶುಗಳಿಗೆ ನ್ಯಾಯವಾಗಿದೆ. ನಾವು ಮನುಷ್ಯರು. ದೇವರು ನಮ್ಮನ್ನು ಊಟ, ನಿದ್ದೆ, ವ್ಯಾಯಾಮ, ವ್ಯಾಪಾರ, ವ್ಯವಸಾಯ ಮಾಡಿ ಹೊಟ್ಟೆ ಹೊರೆಯುವದಕ್ಕೆ ಮಾತ್ರ ಈ ಲೋಕಕ್ಕೆ ಕಳುಹಿಸಿದ್ದರೆ ಬುದ್ಧಿ, ಚಿತ್ತ, ಮನಸ್ಸು, ಆಲೋಚನೆ, ಜ್ಞಾಪಕ, ಧರ್ಮ, ಅಧರ್ಮ, ವ್ಯಸನ, ಸಂತೋಷಗಳನ್ನು ಅನುಭವಿಸುವದಕ್ಕೆ ಆಧಾರವನ್ನಾಗಿ ಉಂಟುಮಾಡುತ್ತಿರಲಿಲ್ಲ. ಮೃಗಗಳಿಗೆ ಹಸಿವು, ತೃಷೆ, ನಿದ್ದೆಗಳು ಇವೆ. ನಮಗೆ ಇವುಗಳಲ್ಲದೆ ಒಂದು ಪರೀಕ್ಷೆಯು ಇದೆ. ಎಲ್ಲರೂ ಆ ಪರೀಕ್ಷೆಗೆ ಉಮೇದುವಾರರಾಗಿದ್ದಾರೆ. ವಾಚಕನೇ, ನೀನು ಕೂಡ ಈ ಪರೀಕ್ಷೆಗೆ ಉಮೇದುವಾರನಾಗಿದ್ದೀ. ಆ ಪರೀಕ್ಷೆಗೆ ಕಾಲವು ನಿಯಾಮಕವಾಗಿದೆ. ನಿನಗೆ ನಿಯಾಮಕವಾದ ಕಾಲವೆಷ್ಟೋ ನಿನಗೆ ತಿಳಿಯದು. ನನಗೂ ತಿಳಿಯದು. ಆದರೆ ಅದಕ್ಕೊಂದು ಅವಧಿಯುಂಟು. ಅದೇನಂದರೆ ಮೃತ್ಯುವೇಳೆಗೆ. ಅದು ನಿನಗೆ ಪ್ರಾಪ್ತವಾದಾಗ ನಿನ್ನ ಅನಾಥಯು ಮುಗಿಯಿತು. ನಿನಗೆ ಅದು ಪ್ರಾಪ್ತವಾಗುವಾಗ ನಿನ್ನ ಕ್ಲುಪ್ತಕಾಲವು ಮುಗಿಯಿತು.

ಆದರೆ ನಾವು ಯಾವ ವಿಷಯದಲ್ಲಿ ಪರೀಕ್ಷೆಯನ್ನು ಕೊಡಬೇಕು? ಇದಕ್ಕೆ ಯಾರು ಯಾರು ಯಾವ ಯಾವ ಉತ್ತರಗಳನ್ನು ಹೇಳುವರೋ ಗೊತ್ತಿಲ್ಲ. ಆದರೆ ನಾವು ಹೇಳುವ ಉತ್ತರಕ್ಕೆ ಆಸ್ತಿಕರಾದ ಸಮಸ್ತರೂ ಒಪ್ಪುವರೆಂದು ನಿಸ್ಸಂದೇಹವಾಗಿ ಬಲ್ಲೆವು. ಆ ಉತ್ತರವು ಏನೆಂದರೆ—ಸಮಸ್ತ ಮಾತಿನ ಒಟ್ಟರ್ಥವನ್ನು ಕೇಳು, ದೇವರಿಗೆ ಭಯಪಡು, ಆತನ ಆಜ್ಞೆಗಳನ್ನು ಕೈಕೊ. ಯಾಕೆಂದರೆ ಇದೇ ಮನುಷ್ಯರೆಲ್ಲರ ಮೇಲೆ ಬಿದ್ದ ಭಾರ, ಕರ್ತವ್ಯ. ಯಾಕೆಂದರೆ ಒಳ್ಳೇದಾಗಲಿ ಕೆಟ್ಟದ್ದಾಗಲಿ ಅಂತರಂಗವಾದ ಎಲ್ಲವನ್ನು ಕುರಿತು ನಡೆಯುವ ನ್ಯಾಯತೀರ್ಪಿಕೆಯಲ್ಲಿ ದೇವರು ನಿನ್ನನ್ನು ವಿಚಾರಿಸುವನು. ನಿನ್ನ ಯೌವನದ ದಿವಸಗಳಲ್ಲಿ ಕೇಡಿನ ದಿವಸಗಳು ಪ್ರಾಪ್ತಿಸುವದಕ್ಕೆ ಮುಂಚೆ, ನಿನಗೆ ಮರಣ ಸಮೀಪಿಸುವದಕ್ಕಿಂತ ಮುಂಚೆ ನಿನ್ನ ಸೃಷ್ಟಿಕರ್ತನನ್ನು ಜ್ಞಾಪಕಮಾಡಿಕೊಳ್ಳುವದಕ್ಕೆ ನಿನ್ನನ್ನು ಸಿದ್ಧಮಾಡಿಕೋ ಎನ್ನುವದೇ.

ಮರಣವು ನಮಗೆ ಯಾವಾಗ ಹೇಗೆ ಎಲ್ಲಿ ಪ್ರಾಪ್ತಿಸುವದೋ ತಿಳಿಯದು. ಆದರೆ ದೇವರ ಆಜ್ಞೆಯನ್ನು ಕೈಕೊಳ್ಳುತ್ತಿರುವದೇ ಆತನನ್ನು ಎದುರುಗೊಳ್ಳುವದಕ್ಕೆ ನಮ್ಮನ್ನು ಸಿದ್ಧಮಾಡುವದು. ಯಾಕೆಂದರೆ ಆತನ ಆಜ್ಞೆಗಳನ್ನು ಕೈಕೊಳ್ಳುವದರಿಂದ ಮಾತ್ರ ನಾವು ಆತನ ಸಂಗಡ ಪರಲೋಕ, ಸಾಮೀಪ್ಯ, ಸಾಯುಜ್ಯ ಪದವಿಗೆ ಸಿದ್ಧರಾಗುತ್ತೇವೆ. ಆತನ ಆಜ್ಞೆಗಳು ಯಾವವೆಂದು ತಿಳಿಯುವದಕ್ಕೆ ವಾಚಕರು ಅಭಿಲಾಷೆಪಡುವರೋ? ಅಂಥವರಿಗೆ ಆತನ ಆಜ್ಞೆಗಳನ್ನು ಹೃದಯಂಗಮವಾಗಿ ತಿಳಿಸುವ ಬೈಬಲೆಂಬ ಸತ್ಯವೇದವನ್ನು ಧೈರ್ಯದಿಂದ ನಾವು ಶಿಫಾರಸು ಮಾಡುತ್ತೇವೆ. ವಾಚಕರೇ, ಈ ವರುಷಾರಂಭದಲ್ಲಿ ಆ ದಿವ್ಯ ಗ್ರಂಥವನ್ನು ಬೆಲೆಕೊಟ್ಟುಕೊಂಡು ಓದಿ.

ಯುದ್ಧದ ಸಮಾಚಾರಗಳು.

ಕದನಗಳು ನಡೆಯದ ವಾರ.

ಯುದ್ಧಭೂಮಿಯಿಂದ ಕಳೆದ ವಾರ ಹಿಂದುಸ್ಥಾನಕ್ಕೆ ಅನೇಕ ತಂತಿ ವರ್ತಮಾನಗಳು ಬಂದಿವೆಯಾದರೂ ಯುದ್ಧಕಾರ್ಯಗಳಲ್ಲಿ ಉಲ್ಲೇಖಿಸತಕ್ಕ ಮಹಾ ಯಾವ ಪಕ್ಷದವರಿಗೂ ಯಾವ ರಾಜ್ಯದೊಳಗೂ ವಿಶೇಷ ಗಣ್ಯವಾದ ಪ್ರಯೋಜನವೇನೂ ಆಗಿರುವ ಸುದ್ದಿಯೊಂದೂ ಕಂಡುಬರುವುದಿಲ್ಲ.

ಪಶ್ಚಿಮ ರಣರಂಗದಲ್ಲಿ.

ಫ್ರಾನ್ಸಿನಲ್ಲಿ ಕದನಕಾರ್ಯಗಳು ಫಿರಂಗಿ ಗುಂಡುಗಳ ಹಾರಾಟದಲ್ಲೂ, ಸುರಂಗಗಳು ಒಡೆಯುವುದರಲ್ಲೂ, ಅಂತರಿಕ್ಷದಲ್ಲಿ ವಿಮಾನಗಳ ಹೋರಾಟಗಳಲ್ಲೂ ಮುಕ್ತಾಯವಾಗಿವೆ. ಅಲ್ಸೇಸಿನಲ್ಲಿರುವ ಗುಡ್ಡಗಳ ಮೇಲೆ ಮುಖ್ಯವಾದ ಕದನಕಾರ್ಯಗಳು ನಡೆದಿರುವುವು. ಆ ಪ್ರದೇಶಗಳಲ್ಲೇ ಶತ್ರುಗಳು ಸಂಧಿಸಿ ಕೆಲವು ದಿನಗಳ ವರೆಗೆ ಕಾದಾಡಿದರು. ಫ್ರೆಂಚರು 1 688 ಸೈನಿಕರನ್ನು ಕೈಸೆರೆ ಹಿಡಿದು ತಂದದ್ದಲ್ಲದೆ ಶತ್ರುವಿನ ಅನೇಕ ಕಂದಕಗಳನ್ನೂ ಆಕ್ರಮಿಸಿಕೊಂಡರು.

ಫ್ರಾನ್ಸಿನ ಯುದ್ಧದ ಇಲಾಖಾ ಮಂತ್ರಿಯವರು ಹದಿನೆಂಟು ತಿಂಗಳ ಹಿಂದೆ ಫ್ರೆಂಚರು ನೆಮ್ಮದಿ ಸಮಾಧಾನಗಳನ್ನು ಕೋರುತ್ತಿದ್ದರೆಂದೂ, ಈಗಲಾದರೋ ಫ್ರೆಂಚ್ ಜನಾಂಗವೆಲ್ಲಾ ವಿಶೇಷವಾದ ಶೌರ್ಯದಿಂದ ಯುದ್ಧಾಪೇಕ್ಷೆಯುಳ್ಳವರಾಗಿದ್ದಾರೆಂದೂ, "ಶರಣು" ಎಂಬ ಮಾತನ್ನು ಉಚ್ಚರಿಸುವವನನ್ನು ದುಷ್ಟಪ್ರಜೆಯೆಂದು ಭಾವಿಸುತ್ತಾರೆಂದೂ ಹೇಳಿದರು.

ಫ್ರೆಂಚ್ ಪ್ರಜಾ ಪ್ರಭುತ್ವದ ಪ್ರೆಸಿಡೆಂಟರು ಹೊಸ ವರುಷದ ಶುಭವಾದವನ್ನು ತಮ್ಮ ಸೈನಿಕರಿಗೆ ಬರೆದು ಕಳುಹಿಸಿದ ಕಾಗದದಲ್ಲಿ ಜಯಪ್ರದವಾಗುವ ತನಕ ಯುದ್ಧವನ್ನು ನಡೆಸುತ್ತಾ ಬರಬೇಕೆಂದು ದೇಶಕ್ಕೆ ದೇಶವೇ ಒಗ್ಗಟ್ಟಾಗಿ ಹೋರುತ್ತಿದೆ ಎಂದು ತಿಳಿಸಿದರು. ಯಾವ ರೀತಿಯಲ್ಲೂ ಶತ್ರುವಿಗೆ ಶರಣಾಗುವುದು ಸಾಧ್ಯವಲ್ಲ. ಖಂಡಿತವಲ್ಲದೆ ಸ್ವಾರ್ಥಪರತ್ವದಿಂದ ಅಂಥಾ ಕರಾರು ಮಾಡಿಕೊಂಡ ಪಕ್ಷದಲ್ಲಿ ಅದರಿಂದ ಅವಕೀರ್ತಿಯೂ, ವಿನಾಶವೂ, ಗುಲಾಮಗಿರಿಯೂ ಅನುಭವಿಸಬೇಕಾದೀತು. ಈಗೇನಾದರೂ ಸ್ವಲ್ಪದರಲ್ಲಿ ತಾವು ಸಮಾಧಿಪಟ್ಟರೆ ಇದುವರೆಗೆ ರಾಜ್ಯಕ್ಕಾಗಿ ತಮ್ಮ ದೇಹವನ್ನೇ ತ್ಯಾಗಮಾಡಿರುವ ಪರಾಕ್ರಮಶಾಲಿಗಳ ವಿಷಯದಲ್ಲಿ ನಾವು ಕೃತಘ್ನರಾಗಿಯೂ, ನಮ್ಮ ಮುಂದಿನ ಜನಾಂಗದವರಿಗೆ ದ್ರೋಹಿಗಳಾಗಿಯೂ ಪರಿಣಮಿಸುತ್ತೇವೆ. ಮೊದಲು ಯಾವ ಪಕ್ಷದವರು ದಣಿದು ಸೋಲುವರೋ ಅವರು ಸೋಲುವುದು ಖಂಡಿತ; ಆದರೆ ಫ್ರಾನ್ಸ್ ದೇಶಕ್ಕೆ ದಣಿವು ಉಂಟಾಗುವುದಿಲ್ಲ. ಈಗಿನಷ್ಟು ಹುಮ್ಮಸ್ಸಾದ ಮತ್ತು ಪರಾಕ್ರಮವುಳ್ಳ ಸೈನ್ಯಗಳನ್ನು ನಾವು ಹಿಂದೆ ಯಾವ ಕಾಲದಲ್ಲೂ ಪಡೆದಿರಲಿಲ್ಲ. ಶೀಘ್ರ ಜಯಪ್ರದವನ್ನೇ ಹೊಂದುವಿರಿ. ಈಗತಾನೇ ಪ್ರಾರಂಭವಾಗಿರುವ ಹೊಸ ವರುಷವು ಶತ್ರುವಿನ ಸೋಲನ್ನು ಸಂಪೂರ್ಣವಾಗಿ, ನಿಮಗೆ ಜಯಪ್ರದದ ಸನ್ಮಾನವನ್ನು ತರುತ್ತದೆ ಎಂಬದಾಗಿ ತಿಳಿಸಿದರು.

ಸೋಮ		೬	೧೩	೨೦	೨೭		೩	೧೦	೧೭	೨೪
ಮಂಗಳ		೭	೧೪	೨೧	೨೮		೪	೧೧	೧೮	೨೫
ಬುಧವಾರ	೧	೮	೧೫	೨೨	೨೯		೫	೧೨	೧೯	೨೬
ಗುರುವಾರ	೨	೯	೧೬	೨೩	೩೦		೬	೧೩	೨೦	೨೭
ಶುಕ್ರವಾರ	೩	೧೦	೧೭	೨೪	೩೧		೭	೧೪	೨೧	೨೮
ಶನಿವಾರ	೪	೧೧	೧೮	೨೫		೧	೮	೧೫	೨೨	೨೯

	ಮೇ					ಜೂನ್				
ಆದಿತ್ಯವಾರ		೭	೧೪	೨೧	೨೮		೪	೧೧	೧೮	೨೫
ಸೋಮ	೧	೮	೧೫	೨೨	೨೯		೫	೧೨	೧೯	೨೬
ಮಂಗಳ	೨	೯	೧೬	೨೩	೩೦		೬	೧೩	೨೦	೨೭
ಬುಧವಾರ	೩	೧೦	೧೭	೨೪	೩೧		೭	೧೪	೨೧	೨೮
ಗುರುವಾರ	೪	೧೧	೧೮	೨೫		೧	೮	೧೫	೨೨	೨೯
ಶುಕ್ರವಾರ	೫	೧೨	೧೯	೨೬		೨	೯	೧೬	೨೩	೩೦
ಶನಿವಾರ	೬	೧೩	೨೦	೨೭		೩	೧೦	೧೭	೨೪	



ನಮ್ಮ ಜಾರ್ಜ್ ಸಾರ್ವಭೌಮರವರು ಬ್ರಿಟನ್ ದೊರೆಯವರೂ, ಹಿಂದುಸ್ಥಾನ್ ಚಕ್ರವರ್ತಿಯವರೂ.

ಆದಿತ್ಯವಾರ		೩	೧೦	೧೭	೨೪	೧	೮	೧೫	೨೨	೨೯
ಸೋಮ		೪	೧೧	೧೮	೨೫	೨	೯	೧೬	೨೩	೩೦
ಮಂಗಳ		೫	೧೨	೧೯	೨೬	೩	೧೦	೧೭	೨೪	೩೧
ಗುರುವಾರ		೭	೧೪	೨೧	೨೮	೫	೧೨	೧೯	೨೬	
ಶುಕ್ರವಾರ	೧	೮	೧೫	೨೨	೨೯	೬	೧೩	೨೦	೨೭	
ಶನಿವಾರ	೨	೯	೧೬	೨೩	೩೦	೭	೧೪	೨೧	೨೮	

	ನೋವೆಂಬರ್					ಡಿಸೆಂಬರ್					
ಆದಿತ್ಯವಾರ		೫	೧೨	೧೯	೨೬		೩	೧೦	೧೭	೨೪	೩೧
ಸೋಮ		೬	೧೩	೨೦	೨೭		೪	೧೧	೧೮	೨೫	
ಮಂಗಳ		೭	೧೪	೨೧	೨೮		೫	೧೨	೧೯	೨೬	
ಬುಧವಾರ	೧	೮	೧೫	೨೨	೨೯		೬	೧೩	೨೦	೨೭	
ಗುರುವಾರ	೨	೯	೧೬	೨೩	೩೦		೭	೧೪	೨೧	೨೮	
ಶುಕ್ರವಾರ	೩	೧೦	೧೭	೨೪		೧	೮	೧೫	೨೨	೨೯	
ಶನಿವಾರ	೪	೧೧	೧೮	೨೫		೨	೯	೧೬	೨೩	೩೦	

ಪರಲೋಕವಾಸಿನಿ ಮಿಸ್ ಕವೆಲ್ ರವರು.

ವಿಶೇಷ ದಿನಗಳು.

ಜನವರಿ.—1 ಹೊಸ ವರುಷದ ಆರಂಭ, 6 ಆಮಿ ಚವ ಮೊರಂಬ, 14 ಉತ್ತರಾಯಣ ಪುಣ್ಯಕಾಲ. 18 ಮಹಮ್ಮದನ ಜನ್ಮದಿನ.

ಫೆಬ್ರವರಿ.—10 ರಥಸಪ್ತಮಿ, ಶ್ರೀಮುತ್ ಮಹಾರಾಜರವರ ಪಟ್ಟಾಭಿಷೇಕ ದಿನ. 12 [illegible] 19 [illegible]

ಮಾರ್ಚಿ.—2 ಶಿವರಾತ್ರಿ. 8 [illegible], 19 ಹೋಳಿಹಬ್ಬ.

ಏಪ್ರಿಲ್.—3 ಚಾಂದ್ರಮಾನಯುಗಾದಿ, 11 ಶ್ರೀರಾಮನವಮಿ, 13 ಸೌರಮಾನಯುಗಾದಿ, 21 25 ಈಸ್ಟರ್ ರಜಾ, 21 ಗುಡ್ ಫ್ರೈಡೇ

ಮೇ.—6 ರಾಮಾನುಜಾಚಾರ್ಯರ ತಿರುನಕ್ಷತ್ರ, ಶ್ರೀಶಂಕರಾಚಾರ್ಯರ ಜಯಂತಿ, 14 ಶ್ರೀಶಂಕರಾಚಾರ್ಯರ ಆರಾಧನ, 17 ವಾ ಸಪ್ತೋತ್ಸವ. 27 ಶ್ರೀಯುವ[illegible]ರವರ ವರ್ಧಂತಿ.

ಜೂನ್.—1 ವಿವಾಹೋತ್ಸವ ದಿನ; 3 ಚಕ್ರವರ್ತಿಯವರ ಜನ್ಮದಿನ, 12 ಶ್ರೀಮುತ್ ಮಹಾರಾಜರವರ ವರ್ಧಂತಿ, 15 16 ಮಹ್-ಎ-ಬರಾತ್, 23 ಪ್ರಿನ್ಸ್ ಆಫ್ ವೇಲ್ಸ್‌ರವರ ಜನ್ಮದಿನ.

ಜುಲೈ.—15 ವಾಸಪ್ತೋತ್ಸವ, ದಕ್ಷಿಣಾಯನ ಪುಣ್ಯಕಾಲ, 19 ಟೀಕಾಚಾರ್ಯರ ಪುಣ್ಯದಿನ, 29 ಭೀಮನ ಅಮಾವಾಸ್ಯೆ.

ಆಗಸ್ಟ್.—1 ರಂಜಾನ್-ಎ-[illegible], 4 ಗರುಡಪಂಚಮಿ, 11 ವರಮಹಾಲಕ್ಷ್ಮೀ ವ್ರತ, 13 ಋಗ್ಯಜುರುಪಾಕರ್ಮ, [illegible], 21 ಶ್ರೀಕೃಷ್ಣಜನ್ಮಾಷ್ಟಮಿ, 22 ಶ್ರೀಕೃಷ್ಣಜಯಂತಿ, 31 ಸಾಮವೇದೋಪಾಕರ್ಮ, ಗೌರಿ.

ಸೆಪ್ಟೆಂಬರ್.—[illegible], 10 ಅನಂತಚತುರ್ದಶಿ, 15 ಮಹಾಲಯಾರಂಭ, 19 ಮಧ್ಯಾಷ್ಟಮಿ, 26 ಮಹಾಲಯ ಅಮಾವಾಸ್ಯೆ, 28 ನವರಾತ್ರಿ ಪ್ರಾರಂಭ.

ಆಕ್ಟೋಬರ್.—3 ಸರಸ್ವತಿ ಆವಾಹನ, 4 ದುರ್ಗಾಷ್ಟಮಿ, 5 ಮಹಾನವಮಿ, 6 ವಿಜಯದಶಮಿ, 3-14 ದಸರಾ ರಜಾ ದಿನಗಳು, 7 ಬಕ್ರೀದ್, 21 ನರಕಚತುರ್ದಶಿ, 25 ದೀಪಾವಳಿ, 27 ಬಲಿಪಾಡ್ಯಮಿ.

ನೋವೆಂಬರ್.—1-6 ಮೊಹರಂ ರಜಾ ದಿನಗಳು, 7 ಮೊಹರಂ ಕಡೇ ದಿನ, 9 ವಾಸಪ್ತೋತ್ಸವ.

ಡಿಸೆಂಬರ್.—12 ಡರ್ಬಾರ್ ಡೇ, 20 ಆಮಿ ಚವರ್ ಮೊರಂಬ, 24—31 ಕ್ರಿಸ್ಮಸ್ ರಜಾ ದಿನಗಳು.

ನೋಟ್.—(1) ಗರುಡಪಂಚಮಿ, ವರಮಹಾಲಕ್ಷ್ಮಿ ಹಬ್ಬಗಳಲ್ಲಿ ಕಚೇರಿಗಳು ಬೆಳಗ್ಗೆ ಮಾಡತಕ್ಕದ್ದು. (2) ಅಮಾವಾಸ್ಯೆ ದಿನ ಅವಶ್ಯವಿದ್ದವರಿಗೆ ಮಧ್ಯಾಹ್ನ 1 ಗಂಟೆಗೆ ಕಚೇರಿ ಬಿಡುವಂತೆ ಅವಕಾಶ ಕೊಡಬಹುದು (3) ಸುಪ್ತನವಮಿ, ಹೋಳಿಹಬ್ಬ, ಶ್ರೀರಾಮನವಮಿ, ಸೌರಮಾನ ಯುಗಾದಿ, ರಾಮಾನುಜಾಚಾರ್ಯರ ತಿರುನಕ್ಷತ್ರ, ಶ್ರೀಶಂಕರಾಚಾರ್ಯರ ಜಯಂತಿ, ಟೀಕಾಚಾರ್ಯರ ಪುಣ್ಯದಿನ, ಗೌರಿ, ಅನಂತಚತುರ್ದಶಿಗಳಿಗೂ ಮತ್ತು ಮಹಮದಿಯರ, ಕ್ರೈಸ್ತರ ಹಬ್ಬಗಳಿಗೂ ಆಯಾ ಪಂಗಡದವರು ಮತಸ್ಥರಿಗೆ ಮಾತ್ರ ರಜಾ ಕೊಡಬಹುದು. (4) ವಿದ್ಯಾ ಇಲಾಖೆಯಲ್ಲಿ ಪಂಗಡದ ರಜವನ್ನು ಅದೇ ದಿನದ ರಜದಂತೆ ಭಾವಿಸತಕ್ಕದ್ದು; ಮತ್ತು ಹಾಜರಾತಿಯ ಕಾಲವನ್ನು ಮುಖ್ಯಾಧಿಕಾರಿಯು ನಿರ್ಣಯಿಸತಕ್ಕದ್ದು. (5) ಡರ್ಬಾರ್ ಡೇ ಡಿಸೆಂಬರ್ ತಾ. 12 ನೇ ಮಂಗಳವಾರ ವಿದ್ಯಾಶಾಲೆಗಳಿಗೆಲ್ಲಾ ರಜಾ.

ಮಿ|| ಲ್ಲಾಯಿಡ್ ಜಾರ್ಜ್ ರವರು.

Printed at the Wesleyan Mission Press, Mysore.

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರವೂ ಮೈಸೂರು ಪಟ್ಟಣದಲ್ಲಿ ಪ್ರಕಟವಾಗುವುದು. ಈ ಸಂಸ್ಥಾನದಲ್ಲೆಲ್ಲಾ ಅತ್ಯಂತ ವಿಶೇಷವಾಗಿ ಪ್ರಚಾರವಾಗುತ್ತದೆ.

1916

ಚಂದಾ ವಿವರ:—೧೨ ತಿಂಗಳಿಗೆ (ಮುಂಗಡ) ರೂ. ೧–೦–೦
,, ,, ಪೋಸ್ಟೇಜು ಸೇರಿ ,, ೧–೧೪–೦
ಬಿಡಿ ಪತ್ರಿಕೆ ೧ಕ್ಕೆ ೪ ಕಾಸು.

ಮಂತ್ರಿಶ್ರೇಷ್ಠರು ಮಿ|| ಎಚ್. ಎಚ್. ಆಸ್ಕ್ವಿತ್ ರವರು.

ಟಪ್ಪಾಲ್ ಹಾಸಲು.

		ಆ. ಪೈ.
ಕವರ್ :	ಒಂದು ತೊಲಾ ಒಳಗಿದ್ದರೆ	೦–೬
,,	೧ ತೊಲಾ ಮೇಲೆ ೧೦ ತೊಲಾ ಒಳಗೆ	೧–೦
,,	ಅಲ್ಲಿಂದ ಪ್ರತಿ ೧೦ ತೊಲಾ ಅಥವಾ ಅದರ ಭಿನ್ನಾಂಶಕ್ಕೆ	೧–೦
ಭಾಂಗಿ :	ಪ್ರತಿ ೪೦ ತೊಲಾವರೆಗೂ	೩–೦
,,	ಅಲ್ಲಿಂದ ಪ್ರತಿ ೪೦ ತೊಲಾ ಅಥವಾ ಅದರ ಭಿನ್ನಾಂಶಕ್ಕೆ	೩–೦

ಮಣಿಯಾರ್ಡರ್ ಮತ್ತು ವ್ಯಾಲ್ಯೂಪೇಬಲ್ :

ಬೆಲೆಬಾಳುವ ೫ ರೂಪಾಯಿಗೆ ಮೀರದಿದ್ದರೆ ೧ ಆಣೆ
,, ೧೦ ,, ,, ೨ ,,
,, ೧೫ ,, ,, ೩ ,,
,, ೨೫ ವರೆಗೆ ,, ,, ೪ ,,

ಮುಖ್ಯವಾದ ಹಬ್ಬ ಹರಿದಿನಗಳು.

ಜನವರಿ–1 ಸೋಮವಾರ, 14 ಉತ್ತರಾಯಣ ಪುಣ್ಯಕಾಲ. ಮಾರ್ಚಿ.—2 ಮಹಾಶಿವರಾತ್ರಿ. ಏಪ್ರಿಲ್.–3 ಚಾಂದ್ರಮಾನ ಯುಗಾದಿ (ನಳ ಸಂವತ್ಸರಾರಂಭ), 21 ಗುಡ್ ಫ್ರೈಡೇ. ಜೂನ್—3 ... 12 ಶ್ರೀ... ಅಗಸ್ಟ್—13 ... ಸೆಪ್ಟೆಂಬರ್.—1 ಗಣೇಶ, 26 ಮಹಾಲಯ, 2? ... ಅಕ್ಟೋಬರ್.—3-11 ನವರಾತ್ರಿ ..., 25 ... 27 ... ನವೆಂಬರ್—? ... ಡಿಸೆಂಬರ್.—24-31 ಕ್ರಿಸ್ಮಸ್ ರಜಾ. ... ರಜಾ—ಏಪ್ರಿಲ್ ... 4 ರಿಂದ ... 13ರ ವರೆಗೆ. ... ರಜಾ—ಏಪ್ರಿಲ್ ... 1 ರಿಂದ ಜೂನ್ ... 30 ರ ವರೆಗೆ.

ಯುದ್ಧದ ಸೆಕ್ರೆಟರಿ ಅರಲ್ ಕಿಚ್ನರ್ ರವರು.

ಜನವರಿ	ಫೆಬ್ರವರಿ
ಆದಿತ್ಯವಾರ	
ಸೋಮ	
ಮಂಗಳ	
ಬುಧವಾರ	

ಜೂಲೈ	ಆಗಸ್ಟ್
ಆದಿತ್ಯವಾರ	
ಸೋಮ	
ಮಂಗಳ	
ಬುಧವಾರ	

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದ ಅಗಾಧವಾದ ಯುದ್ಧಸಾಲಿನ ಪೈಕಿ ಅನೇಕ ಭಾಗ್ಯಗಳಲ್ಲಿ ... ನಡೆಯದೆ ಶಾಂತವಾಗಿದೆ. ಆದರೂ ಕೆಲವು ... ಸಣ್ಣ ಸಣ್ಣ ಕದನಗಳಾಗಿ ರಷ್ಯಾದವರಿಗೆ ಅನುಕೂಲವಾಗಿರುತ್ತದೆ. ಈ ಯುದ್ಧಸಾಲಿನ ದಕ್ಷಿಣ ಕಡೆಯಲ್ಲಿ ಅಂದರೆ ಗೆಲೀಷಿಯಾ ... ರೊಮೇನಿಯಾ ರಾಜ್ಯದ ಸಮೀಪದಲ್ಲಿ ಕಠಿಣವಾದ ಕೆಲವು ಕದನ ... ನಡೆಯುತ್ತಿವೆ. ಆದರೆ ಈ ಕದನಗಳ ವಿವರಗಳು ಇನ್ನೂ ಪ್ರಕಟವಾಗ ... ರಷ್ಯಾದವರು ನುಗ್ಗಿ ಬಂದು ಯುದ್ಧ ಮಾಡಿದರೆಂದೂ, ಅವರನ್ನೆಲ್ಲಾ ... ಹಿಮ್ಮೆಟ್ಟಿಸಿದೆವೆಂದೂ ಆಸ್ಟ್ರಿಯಾದವರು ಹೇಳುತ್ತಾರೆ. ರೊಮೇನಿಯಾ ... ನುಗ್ಗಿ ಸರ್ಬಿಯಾವಿಗೆ ಹೋಗಬೇಕೆಂಬ ಉದ್ದೇಶದಿಂದಲೇ ರಷ್ಯಾದವರು ... ಈ ಬೀಯಲ್ಲಿ ಯುದ್ಧ ಮಾಡುತ್ತಿದ್ದಾರೆಂದು ಕಾಣುತ್ತದೆ. ರಷ್ಯಾದವ ... ರೊಮೇನಿಯಾದವರಿಗೂ ನಾನಾ ತರವಾಗಿ ಸಂಧಾನಗಳು ನಡೆಯುತ್ತಲಿವೆ. ... ರೊಮೇನಿಯಾ ರಾಜ್ಯವು ಮಿತ್ರಮಂಡಲಿಯವರ ಪಕ್ಷವನ್ನು ವಹಿಸುತ್ತ ... ಹೇಳುವರು. ಇದು ಬಹಳ ... ವರ್ತಮಾನವಾಗಿರಬಹುದು.

ಯುದ್ಧಸಾಲಿನ ದಕ್ಷಿಣ ಕೊನೆಯಲ್ಲಿ ಯುದ್ಧಗಳು ಬಹು ಕಠಿಣವಾಗಿ ನಡೆ ... ಯುತ್ತಿವೆ. ರಷ್ಯಾದವರು ಸೈನ್ಯಗಳನ್ನು ಜೋಡಿಸಿಕೊಂಡು ನುಗ್ಗಿ ... ಆಸ್ಟ್ರಿಯಾದವರ ಮೇಲೆ ಕದನಮಾಡುತ್ತಿದ್ದಾರೆ. ಆಗಲೇ ರಷ್ಯಾದವರಿಗೆ ಕೆಲವು ... ಸ್ಥಳಗಳು ಸ್ವಾಧೀನವಾದವು. ಇದಲ್ಲದೆ ಅವರು 370 ಸೈನಿಕರನ್ನು ಸೆರೆ ... ಹಿಡಿದಿದ್ದಾರೆ.

ಇಟಲಿ.

ಇಟಲಿಯಿಂದ ಬಂದಿರುವ ಸಮಾಚಾರಗಳು ಬಹಳ ಕೊಂಚ. ಚಟುವಟಿಕೆ ... ಕದನ ಕಾರ್ಯಗಳು ನಡೆಯುತ್ತಲಿವೆ ಎಂದೂ, ಇಟಲಿಯವರು ತಮ್ಮ ... ಕೋಟೆಕೊತ್ತಲಗಳನ್ನು ಕಟ್ಟಿ ಬಲಪಡಿಸಿಕೊಳ್ಳುತ್ತಿದ್ದಾರೆಂದೂ ... ವರ್ತಮಾನಗಳು ಕೇಳುವವು. ಇವನ್ನು ನೋಡಿದರೆ ಇಟಲಿಯವರು ಇನ್ನಾವ ... ಆಸ್ಟ್ರಿಯಾದವರ ಮೇಲೆ ಯುದ್ಧಕ್ಕೆ ಹೊರಡುವಂತೆ ಕಾಣುತ್ತದೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಬಾಲ್ಕನ್ ಸಂಸ್ಥಾನಗಳ ವಿದ್ಯಮಾನಗಳು ಇನ್ನೇನೂ ಬದಲಾವಣೆಯಾ ... ಮಿತ್ರಮಂಡಲಿಯವರು ಬಲ್ಗೇರಿಯಾದವರು ಸರ್ಬಿಯಾದವರನ್ನು ಹಿಂದಕ್ಕೆ ... ಓಡಿಸುತ್ತಲೇ ಇದ್ದಾರೆ. ಉಳಿದ ಕಡೆಗಳಲ್ಲಿ ಬದಲಾವಣೆ ಏನೂ ನಡೆ ... ಮಿತ್ರಮಂಡಲಿಯವರು ಸೆಲೋನಿಕಾದಲ್ಲಿ ತಮ್ಮ ಸ್ಥಾನಗಳನ್ನು ಬಲಪಡಿಸ ... ದ್ದಾರೆ. ಆದರೆ ಇದುವರೆಗೂ ಶತ್ರುವು ಗ್ರೀಸಿನೊಳಕ್ಕೆ ಪ್ರವೇಶವಾದ ... ಗ್ರೀಸ್ ರಾಜ್ಯವು ತಟಸ್ಥವಾಗಿಯೇ ಇದೆ.

ಮಾಂಟಿನಿಗ್ರೊ ರಾಜನು ಆ ತಮ್ಮ ದೇಶವನ್ನೇ ತ್ಯಜಿಸಿ ತಮ್ಮ ... ವನ್ನು ಫ್ರಾನ್ಸ್ ರಾಜ್ಯದ ರಾಜಧಾನಿಯಾದ ಪ್ಯಾರಿಸ್ ನಗರಕ್ಕೆ ಸಾಗಿ ... ಆದಾಗ್ಯೂ ಸರ್ಬಿಯಾದವರು ಶತ್ರುವಿನ ವಶವರ್ತಿಗಳಾಗಿ ... ವಲ್ಲ ... ಸುಸ್ಥಿತಿಯಲ್ಲಿದ್ದಾರೆ. ಅವರು 1,00,000 ಸೈನ್ಯವನ್ನು ಇಟ್ಟು ... ಕೊಂಡು ಮಿತ್ರಮಂಡಲಿಯವರಿಗೆ ಜೊತೆಯಾಗಿ ನಿಂತು ಶತ್ರು ... ವನ್ನು ಹೋರಾಡುವ ಪ್ರಯತ್ನ ಮಾಡುವರು.

... ಅಲ್ಬೇನಿಯಾ ಸೀಮೆಗೆ ಸೈನ್ಯಗಳನ್ನು ಕಳುಹಿಸಿದರು. ... ಎಲ್ಲಿ ಇಟ್ಟಿದ್ದಾರೆ ತಿಳಿಯಬರಲಿಲ್ಲ.

... ಪಕ್ಷದ ವಿಮಾನಯಂತ್ರಗಳು ಅಂತರಿಕ್ಷದಲ್ಲಿ ಸೆಲೋನಿಕಾ ನಗರದ ... ಹಾರಾಡಿ ಗ್ರೀಕ್ ಸೈನಿಕರು ಇದ್ದ ಠಾಣ್ಯದ ಮೇಲೆ ಗುಂಡುಗಳನ್ನು ... ಫ್ರೆಂಚ್ ದಳಪತಿಯು ಜರ್ಮನ್, ಆಸ್ಟ್ರಿಯಾ, ಟರ್ಕಿ, ಬಲ್ಗೇರಿಯಾ ... ರಾಜ್ಯಗಳ ರಾಯಭಾರಿಗಳನ್ನು ಹಿಡಿದು ಗಡೀಪಾರು ಮಾಡಿರುತ್ತಾರೆ.

ಆಡ್ರಿಯಾಟಿಕ್‌ನಲ್ಲಿ ಇಟಲಿಗೂ ಬಾಲ್ಕನ್ ಅರ್ಧದ್ವೀಪಕ್ಕೂ ಮಧ್ಯೆ ... ಸಮುದ್ರದ ಮೇಲೆ ಕದನವಾಯಿತು. ಆಸ್ಟ್ರಿಯಾದವರ ಎರಡು ಡಿಸ್ಟ್ರಾಯರ್ ... ಹಡಗುಗಳು ಮುಳುಗಿಸಲ್ಪಟ್ಟವು. ಫ್ರೆಂಚರು ಒಂದು ಸಬ್‌ಮೆರೀನು ಮುಳುಗಿ ... ಅದರಲ್ಲಿದ್ದ ಬಹು ಮಂದಿಯನ್ನು ಬದುಕಿಸಿದರು. ಫ್ರೆಂಚರ ಒಂದು ... ಶತ್ರುವಿನ ಸೈನ್ಯ ಸಾಗುವ ಹಡಗನ್ನು ಮುಳುಗಿಸಿದೆ.

... ಕರಾವಳಿಯಲ್ಲಿ ರಷ್ಯಾದವರು ಮತ್ತು ವಾರ್ನ ಎಂಬ ಕೋಟೆಪಟ್ಟಣಕ್ಕೆ ... ಹಾಕಿದ್ದ ಬಲ್ಗೇರಿಯಾದವರ ಒಂದು ಸಬ್‌ಮೆರೀನನ್ನೂ, ... ಎರಡು ಹಡಗುಗಳನ್ನೂ ಮುಳುಗಿಸಿರುತ್ತಾರೆ.

ಆಸ್ಟ್ರಿಯಾದವರು ಮಾಂಟಿನಿಗ್ರೋದವರ ಮೇಲೆ ನುಗ್ಗಿ ಕದನಮಾಡಿದರು. ... ಗಂಟೆ ಹೊತ್ತಿನಲ್ಲಿ 2,000 ಗುಂಡುಗಳನ್ನು ಸುರಿಸಿದಾಗ್ಯೂ ಮಾಂಟಿ ... ಅವರ ಕಡೆ ... ಮಾತ್ರ ಕೊಡಲಿಲ್ಲವಾದರೂ; ಇಷ್ಟು ಮಾತ್ರವಲ್ಲದೆ ಗಾಯಗ ... ಡಿಸೆಂಬರ್ ತಾ 23 ರಲ್ಲಿ ಅವರು ಮಾಂಟಿನೀಗ್ರೋದವರ ಮೇಲೆ ... ಯುದ್ಧಮಾಡಿದರು. 2,000 ಆಸ್ಟ್ರಿಯಾ ಸೈನ್ಯ ನಷ್ಟವಾಯಿತು.

ಗ್ರೀಸ್ ಸೇರಿದ ಒಂದು ದ್ವೀಪಕ್ಕೆ ಫ್ರೆಂಚರು ಕೆಲವು ಸೈನ್ಯಗಳನ್ನು ಕಳು ... ಆ ಸೈನ್ಯ ಅಲ್ಲಿ ಹೋಗಿ ಇಳಿಯಿತು. ಗ್ರೀಸ್ ರಾಜ್ಯದವರು ... ಫ್ರಾನ್ಸಿನವರ ಮೇಲೆ ಆಕ್ಷೇಪಣೆ ಮಾಡಿದರು. ಫ್ರೆಂಚರು ... ಇಟ್ಟುಕೊಳ್ಳುವುದು ಕೆಲವು ಕಾಲದವರೆಗೆ ಮಾತ್ರ ಎಂದು ಜವಾಬು ಕೊಟ್ಟರಾರೆ.

ಟರ್ಕಿಯಲ್ಲಿ.

... ಬ್ರಿಟಿಷ್ ಸೈನ್ಯಗಳಲ್ಲಿ ಬಹು ಭಾಗವನ್ನು ಹಿಂದಕ್ಕೆ ಕರಸಿಕೊಂ ... 85,000 ಟರ್ಕಿ ಸೈನ್ಯಗಳು 20,000 ಗಜಗಳ ಉದ್ದಕ್ಕೆ ನಿಂತಿ ... ಬ್ರಿಟಿಷ್ ಸೈನಿಕರಿದ್ದ ಠಾಣ್ಯಗಳು ... 500 ಗಜ ... ಇವೆಲ್ಲವೂ ಅವರಿಗೆ ಗೊತ್ತೇ ಆಗದಂತೆ ಬ್ರಿಟಿಷ್ ಸೈನ್ಯ ... ಹಿಂದಕ್ಕೆ ಸಾಗಿಸಿರುತ್ತಾರೆ. ಬ್ರಿಟಿಷರು ತಮ್ಮ ... ಮದ್ದುಗುಂಡನ್ನೂ ಹಿಂದೆ ಬಿಡದೆ ಸಾಗಿಸಿಕೊಂಡರು; ಕೆಲವನ್ನು ... ಶತ್ರುಗಳೂ ಪ್ರಯೋಜನಪಡದಂತೆ ಹಾಳುಮಾಡಿ ಬಂದರು. ತೀರ ... ಶತ್ರುವ ಪ್ರದೇಶಗಳನ್ನೆಲ್ಲಾ ಬ್ರಿಟಿಷ್ ಹಡಗುಗಳು ಗುಂಡುಗಳನ್ನು ... ನಾಶಪಡಿಸಿದವು. ಇಷ್ಟೆಲ್ಲಾ ಆದ ಮೇಲೆ ಟರ್ಕಿಯವರಿಗೆ ಗೊತ್ತಾ ... ಅಷ್ಟು ಹೊತ್ತಿಗೆ ಬ್ರಿಟಿಷ್ ಸೈನ್ಯಗಳು ಅಲ್ಲಿಂದ ಬಂದುಬಿಟ್ಟಿದ್ದವು. ... ದಾರಿಗಳು, ನಾಲ್ಕಾರು ಸಿಪಾಯಿಗಳಿಗೂ ಗಾಯಗಳಾದವು.

... ಯಲ್ಲಿ ಸ್ವಲ್ಪ ಬಿರುಸಾದ ಕಾರ್ಯಗಳು ನಡೆದಿರುವಂತೆ ವರ್ತ ... ವಿವರ ಇನ್ನೂ ತಿಳಿದಿಲ್ಲ. ಜಲಮಾರ್ಗದ ಆಸ್ಟ್ರಾ ತೀರದ ಮೇಲೆ ಫ್ರೆಂಚ್ ... ಹಡಗು ಗುಂಡುಗಳನ್ನು ಹಾಕಿ ಅಲ್ಲಿದ್ದ ಶತ್ರುವಿನ ಶಿಬಿರಗಳನ್ನೂ ... ಗಳನ್ನೂ ನಾಶಮಾಡಿರುತ್ತವೆ.

ಮೆಸೊಪೊಟೇಮಿಯಾದಲ್ಲಿ ಟರ್ಕಿಯವರು ಡಿಸೆಂಬರ್ ತಾ. 27, 28, 29, ... ಬ್ರಿಟಿಷರ ಮೇಲೆ ನುಗ್ಗಿ ಮುತ್ತಿಗೆಹಾಕಿಕೊಂಡರು. ತಾ. 29 ರಲ್ಲಿ ... ತಮ್ಮ ಕಡೆಯ ಸೈನಿಕರ ಹೆಣಗಳನ್ನು ಹೂಳುವುದಕ್ಕೂ, ಗಾಯ ... ಸಾಗಿಸುವುದಕ್ಕೂ ಯುದ್ಧವನ್ನು ಸ್ವಲ್ಪ ನಿಲ್ಲಿಸಬೇಕೆಂದು ಬ್ರಿಟಿಷ ... ಕೈದಿಯಾಗಿ ಸಿಕ್ಕಿರುವ ಒಬ್ಬ ಸೈನಿಕನು ಟರ್ಕಿಯವರ ಕಡೆ ... 10,500 ಸೈನಿಕರು ನಷ್ಟವಾದರೆಂದು ತಿಳಿಸಿರುತ್ತಾನೆ.

ಈಜಿಪ್ಟಿನಲ್ಲಿ.

ಈಜಿಪ್ಟಿನ ಪಶ್ಚಿಮದಿಕ್ಕಿನಲ್ಲಿ ಡಿಸೆಂಬರ್ ತಾ. 14 ರಿಂದ 26 ರ ವರೆಗೆ ... ಕದನಗಳು ನಡೆದವು. ಮೆಡಿಟರೇನಿಯನ್ ಕಡಲಿನಲ್ಲಿರುವ ಬ್ರಿಟಿಷ್ ಜಹ ... ಸಹಾಯಮಾಡಿದವು. ಅರಬ್ಬಿಯವರ ಕಡೆ 3,000 ಯುದ್ಧಭಟರಿದ್ದರು. ... ತಾ 25 ರಲ್ಲಿ ಅವರೆಲ್ಲಾ ಸೋತುಹೋದರು. ಯುದ್ಧಭೂಮಿ ... ಶತ್ರುವಿನ ಕಡೆ 200 ಹೆಣಗಳು ಬಿದ್ದಿದ್ದವು. ಅಲ್ಲಿಂದೀಚೆಗೆ ಶತ್ರುಪಕ್ಷದಲ್ಲಿ ... 80 ಮಂದಿ ನಷ್ಟವಾದರು.

ಪರ್ಷಿಯಾದಲ್ಲಿ.

ಪರ್ಷಿಯಾ ರಾಜ್ಯದಲ್ಲಿ ದಂಗೆಯೆದ್ದಿರುವ ಸೈನಿಕರನ್ನು ರಷ್ಯಾದವರು ಓಡಿಸಿಕೊಂಡುಹೋಗಿ ಸೋಲಿಸುತ್ತಲಿದ್ದಾರೆ. ಈಗ ಕಾಷಾನ್ ಎಂಬ ನಗರವನ್ನು ರಷ್ಯಾದವರು ಆಕ್ರಮಿಸಿಕೊಂಡು, ಇಸ್ಫಹಾನ್ ಎಂಬ ಪಟ್ಟಣದ ಮೇಲೆ ನುಗ್ಗಿ ಹೋಗುತ್ತಿದ್ದಾರೆ. ಕೋಮ್ ಎಂಬ ರಾಜ್ಯದಲ್ಲಿ ರಷ್ಯಾದವರಿಗೆ 16,000 ಬಂದೂಕುಗಳೂ, ಫಿರಂಗಿಗಳಿಗೆ ಹಾಕುವಂಥಾ 300 ಗುಂಡುಗಳೂ ಸಿಕ್ಕಿವೆ.

ಇತರ ವಿಷಯಗಳು.

ಲಂಡನ್ ಪಟ್ಟಣದಿಂದ ಬೊಂಬಾಯಿಗೆ ಬರುತ್ತಿದ್ದ ಒಂದು ಮೆಯಿಲ್ ಹಡಗನ್ನು ಶತ್ರುವು ಮುಳುಗಿಸಿದ್ದಾರೆ. ಇದೇ ಇಂಥಾ ಕೃತ್ಯಕ್ಕೆ ಮೊದಲು. ಕ್ರೀಟ್ ಎಂಬ ದ್ವೀಪದ ಬಳಿ ಡಿಸೆಂಬರ್ ತಾ. 30 ರಲ್ಲಿ ಈ ಕ್ರೂರ ಕೃತ್ಯವು ಶತ್ರುವಿನಿಂದ ನಡೆಯಲಾಯಿತು. ಪರ್ಷಿಯಾ ಎಂಬುವದೇ ಆ ಜಹಜಿನ ಹೆಸರು. ಅದಕ್ಕೆ ಟಾರ್ಪಿಡೋ ಬಡಿದು ಮುಳುಗಿತು. ನಾಲ್ಕು ದೋಣಿಗಳಷ್ಟು ಪ್ರಯಾಣಿಕರು ಮಾತ್ರ ಬದುಕಿ ಬಂದರು. ಆ ಜಹಜಿನೊಳಗೆ 231 ಮಂದಿ ಪ್ರಯಾಣಿಕರಿದ್ದರು. ಇವರಲ್ಲಿ 87 ಮಂದಿ ಹೆಂಗಸರು, ಮಕ್ಕಳು 25 ಮಂದಿ. ಹಿಂದು ಸ್ಥಾನಕ್ಕೆ ಬರಬೇಕಾಗಿದ್ದ ಅಂಚೆ ಬಕ್ಸುಗಳೆಲ್ಲಾ ಸಮುದ್ರದ ಪಾಲಾದವು.

ಪರ್ಷಿಯಾ ಎಂಬ ಮೆಯಿಲ್ ಜಹಜಿಗೆ ಮೊದಲೇ ಎಚ್ಚರಿಕೆ ಕೊಡದೇನೇ ಶತ್ರುವು ಮುಳುಗಿಸಿ ಬಿಟ್ಟರು. ಅದು ಟಾರ್ಪಿಡೋ ಬಂದು ಬಡಿದ ಐದು ನಿಮಿಷಗಳಲ್ಲೇ ಮುಳುಗಿಹೋಯಿತು. ಸುಮಾರು 158 ಜನಗಳು ಬದುಕಿಕೊಂಡ ರೆಂದೂ, 250 ಜನಗಳು ಮುಳುಗಿ ಸತ್ತರೆಂದೂ ಹೇಳಲಾಗಿದೆ. ಪರ್ಷಿ ಎಂಬ ಪಟ್ಟಕ್ಕೆ ಬರುತ್ತಿದ್ದ ಅಮೇರಿಕದ ರಾಯಭಾರಿಯೂ ಮೃತಪಟ್ಟನು. ಈ ರೀತಿ ಪ್ರಯಾಣಿಕರಿದ್ದ ಜಹಜನ್ನು ಮುಳುಗಿಸಿದ್ದಕ್ಕಾಗಿ ಅಮೇರಿಕದವರು ಆಸ್ಟ್ರಿಯಾದವರ ಮೇಲೆ ಅಸಮಾಧಾನಪಟ್ಟವರಾಗಿದ್ದಾರೆ.

ಆಸ್ಟ್ರಿಯಾದವರ ಒಂದು ಸಬ್‌ಮೆರೀನು ಫ್ರೆಂಚರ ಪ್ರಯಾಣಿಕರ ಜಹಜನ್ನು ಮುಳುಗಿಸಿತು. ಅದರಲ್ಲಿ ಸಿಲೋನ್ (ಲಂಕಾ) ದ್ವೀಪದವರು 14 ಮಂದಿ ಪ್ರಯಾಣಮಾಡುತ್ತಿದ್ದರು. ಇವರೊಬ್ಬರೂ ಸಿಕ್ಕಿ ಇಲ್ಲ. ಆ ಸಬ್‌ಮೆರೀನು ದೋಣಿಗಳನ್ನೆಲ್ಲಾ ಬಳಸಿಕೊಂಡು ಬಂದು, ಅವುಗಳಲ್ಲಿ ಕುಳಿತಿದ್ದವರನ್ನು ನೋಡಿ ಪರಿಹಾಸ್ಯ ಮಾಡಿತಂತೆ.

ಉತ್ತರ ಕಡಲಿನಲ್ಲಿ ನೊರ್ವೇಯವರ ಒಂದು ಜಹಜೂ, ಬೇರೆ ಕಡೆ ಬ್ರಿಟಿಷರ ಎರಡು ಜಹಜುಗಳೂ ಮುಳುಗಿಸಲ್ಪಟ್ಟವು.

ಜರ್ಮನಿಯ ಕೈಸರ್ ಚಕ್ರವರ್ತಿಯವರಿಗೆ ಕುತ್ತಿಗೆಯ ಮೇಲೆ ಒಂದು ಬೊಬ್ಬೆಯೋ ಹುಣ್ಣೋ ಎದ್ದಿದೆ ಎಂದೂ, ಅವರು ಕೋಟೆ ಬಿಟ್ಟು ಬರುವಂತಿಲ್ಲವೆಂದೂ ತಿಳಿದುಬಂದಿದೆ. ಈ ವಿಚಾರವಾದ ಖಚಿತ ವರ್ತಮಾನಗಳು ಸ್ಪಷ್ಟವಾಗಿಲ್ಲ.

ನಟಾಲ್ ಎಂಬ ಬ್ರಿಟಿಷ್ ಯುದ್ಧದ ಜಹಜು ನಿಂತಿದ್ದ ಕಡೆಯಲ್ಲೇ ಒಂದು ಯಂತ್ರವೋ ಏನೋ ಒಡೆದು ಮುಳುಗಿಹೋಯಿತು. ಅದರೊಳಗಿದ್ದ 700 ಮಂದಿಯ ಪೈಕಿ 14 ಮಂದಿ ಹುದ್ದೇದಾರರೂ, 373 ಮಂದಿ ಸೈನಿಕರೂ ಬದುಕಿ ಬಂದರು.

ಒಂದು ವಿಮಾನವು ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದ ಮೇಲೆ ಹಾರಿಹೋಗಿ ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಟರ್ಕಿಯವರು ಮದ್ದು ತಯಾರಿಸುತ್ತಿದ್ದ ಒಂದು ಕಾರ್ಖಾನೆಯು ಪತ್ತಿಕೊಂಡು ಹಾಳಾಯಿತು. 500 ಜನಗಳು ಮೃತಪಟ್ಟರೆಂದು ಹೇಳಲಾಗಿದೆ.

ಜಾರ್ಜ್ ಸಾರ್ವಭೌಮರವರು ಕ್ರಿಸ್ಮಸ್ ಹಬ್ಬವನ್ನು ತೀರಿಸಿಕೊಂಡು ಸ್ಯಾಂಡ್ರಿಂಗ್‌ಹಾಂ ರಾಜಭವನದಿಂದ ಲಂಡನ್ ಪಟ್ಟಣಕ್ಕೆ ವಾಪಸು ಚಿತ್ತೈಸಿದರು.

ಬ್ರಿಟನ್‌ನಲ್ಲಿ ಸೈನ್ಯಕ್ಕೆ ಜನಗಳನ್ನು ಬಲಾತ್ಕರಿಸಿ ಸೇರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ. ಇದುವರೆಗೆ ಬಲಾತ್ಕಾರದ ಪ್ರಸ್ತಾಪವೇ ಇರಲಿಲ್ಲ. ಜನಗಳು ತಾವಾಗಿಯೇ ಬಂದು ಹೆಸರು ಬರಸಿ ಸೈನ್ಯಕ್ಕೆ ಸೇರಿಕೊಳ್ಳುತ್ತಿದ್ದರು. ಹೀಗೆ ಇದುವರೆಗೆ 50,00,000 ಜನಗಳು ಸೇರಿಕೊಂಡರೆಂದು ತಿಳಿಯುವುದು. ಈ ಪೈಕಿ ಅನೇಕ ಜನಗಳು ಯುದ್ಧಕಾರ್ಯಗಳಿಗೆ ಅವಶ್ಯವಾದಷ್ಟು ಶರೀರಶಕ್ತಿ ಮುಂತಾದ್ದನ್ನು ಪಡೆದಿರಲಿಲ್ಲ. ಯುದ್ಧಭೂಮಿಯಲ್ಲಿ ಕೊಲೆಯಾದವರಿಗೂ, ಗಾಯಪಟ್ಟವರಿಗೂ ಕಾಯಿಲೆಬೀಳುವವರಿಗೂ ಪ್ರತಿಯಾಗಿ ಹೊಸ ಸೈನಿಕರನ್ನು ಕವಾಯತು ಮಾಡಿ ಕ್ರಮವಾಗಿ ಪ್ರತಿ ವಾರವೂ ಒದಗಿಸುತ್ತಾ ಬರಬೇಕಾಗುವುದು. ಇದಕ್ಕೋಸ್ಕರ ಬ್ರಿಟಿಷ್ ಗವರ್ನ್‌ಮೆಂಟಿನವರು ಇಂಗ್ಲಿಷ್ ಪ್ರಜೆಗಳಲ್ಲಿ 19 ರಿಂದ 24 ವಯಸ್ಸಿನ ತನಕ ಇರುವಂಥಾ ಮದುವೆಮಾಡಿಕೊಳ್ಳದ ಪ್ರಾಯಸ್ಥರನ್ನು ಮೊದಲು ಬಲಾತ್ಕರಿಸಿ ಸೈನ್ಯಕ್ಕೆ ಸೇರಿಸಿಕೊಳ್ಳುತ್ತಾರೆ. ಈ ಪೈಕಿ ಕೆಲವರನ್ನು ಇಂಗ್ಲೆಂಡಿನೊಳಗೇ ಕೆಲಸಗಳಿಗೆ ಅಂದರೆ ಮದ್ದು ಗುಂಡು ತಯಾರಾಗುವ ಕಾರ್ಖಾನೆಗಳಲ್ಲೂ ಇತರ ಕಡೆಗಳಲ್ಲೂ ನೇಮಕ ಮಾಡಿಕೊಳ್ಳುವರು. ಉಳಿದವರನ್ನೆಲ್ಲಾ ಸೈನ್ಯಕ್ಕೆ ಸೇರಿಸಿಕೊಂಡು ತರಪೇತು ಮಾಡುತ್ತಾರೆ.

ಸ್ವದೇಶದ ವೃತ್ತಾಂತಗಳು.

ಹೊಸ ವರುಷದ ಸುಂದರವಾದ "ವೃತ್ತಾಂತ ಪತ್ರಿಕೆ" ಕ್ಯಾಲೆಂಡರನ್ನು ನಮ್ಮ ಚಂದಾದಾರರಿಗೆಲ್ಲಾ ಈ ಸಂಚಿಕೆಯ ಕೂಡ ಕಳುಹಿಸಿದೇವೆ. ಈಗ ಚಂದಾ ಕಟ್ಟಿದವರಿಗೂ, ಕಟ್ಟುವವರಿಗೂ ಒಂದು ಕ್ಯಾಲೆಂಡರನ್ನು ಬಿಟ್ಟಿ ಕೊಡುವೆವು. ಇತರರಿಗೆ ಕ್ರಯ 6 ಪೈ.

ಸೀನಿಯರ್ ಕೌನ್ಸಿಲರವರು ಕ್ರಿಸ್ಮಸ್ ರಜಾ ಕಾಲದಲ್ಲಿ ಬೊಂಬಾಯಿಗೆ ಹೋಗಿದ್ದು ವಾಪಸು ಬಂದರು. ಎರಡನೇ ಕೌನ್ಸಿಲರವರು ರಾಜಧಾನಿಗೆ ಬಂದಿದ್ದು ಮತ್ತೆ ಸೋಮವಾರ ಮಧ್ಯಾಹ್ನ ಬೆಂಗಳೂರಿಗೆ ತೆರಳಿದರು.

ರಾಜಧಾನಿಯ ಹುಜೂರ್ ಸೆಕ್ರೆಟರಿ ಆಫೀಸಿನಲ್ಲಿ ಕಳವಾಗಿದ್ದ ಹಣ ವೆಲ್ಲಾ ಸಿಕ್ಕಿತು. ಕಳವು ಮಾಡಿದ ರಂಗನೆಂಬವನ ನೋಟೂ, ಅವನಿಂದ ಕಳವು ಮಾಲನ್ನು ಪಡೆದ ಪುಟ್ಟ, ಮುನಿಸ್ವಾಮಿ, ವೆಂಕಟದಾಸಿ ಎಂಬೀ ಮೂರು ಮಂದಿಯ ಮೇಲೂ ಸಿಟಿ ಮ್ಯಾಜಿಸ್ಟ್ರೇಟರು ಛಾರ್ಜು ಮಾಡಿ ವಿಚಾರಣೆಗೆ ಇಟ್ಟುಕೊಂಡಿದ್ದಾರೆ.

ಕಳೆದ ಭಾನುವಾರ ಸಾಯಂಕಾಲ 4½ ಗಂಟೆಗೆ ಶ್ರೀಮನ್ ಮಹಾರಾಜರವರು ರಾಜಧಾನಿಯಿಂದ ಮೋಟರಿನಲ್ಲಿ ಬೆಂಗಳೂರಿಗೆ ತೆರಳಿದರು. ಅವರೂ ಯುವರಾಜರವರೂ ಅರಮನೆಯ ಲಾಣಿವಾಸದವರ ಸಮೇತ ಈ ತಿಂಗಳು 21 ನೇ ತಾರೀಖಿನ ವರೆಗೆ ಬೆಂಗಳೂರಿನಲ್ಲಿದ್ದು, ಎಲ್ಲರೂ ಬೊಂಬಾಯಿಗೆ ಪ್ರಯಾಣ ಮಾಡುವರು. ವಾಪಸು ಬರಲು ಸುಮಾರು 8-9 ವಾರಗಳಾಗಬಹುದು.

ದೊಡ್ಡಬಳ್ಳಾಪುರದ ಬಳಿ ಇರುವ ಘಾಟಿ ಸುಬ್ರಹ್ಮಣ್ಯದಲ್ಲಿ ಇವತ್ತಿನಿಂದ 13 ನೇ ತಾ ವರೆಗೆ ರಥೋತ್ಸವದ ಜಾತ್ರೆ ಉತ್ಸವಗಳೂ, ತಾ. 10 ರಿಂದ 21 ರ ವರೆಗೆ ಭಾರಿ ಎತ್ತಿನ ಪರಿಷೆಯೂ, ತಾ. 14 ನೇ ಶುಕ್ರವಾರ ದನಗಳ ಪ್ರದರ್ಶನವೂ ನಡೆಯುವವೆಂದೂ, ಉತ್ತಮವಾದ ರಾಸುಗಳಿಗೆ ಬಹುಮಾನಗಳು ಸರ್ಕಾರದಿಂದ ಕೊಡಲ್ಪಡುವವೆಂದೂ ತಾಲೂಕ್ ಅಮಲ್ದಾರ್ರು ಸಾ.ಗೆ ಆಹ್ವಾನ ಪತ್ರಿಕೆಯನ್ನು ಕಳುಹಿಸಿಕೊಟ್ಟಿದ್ದಾರೆ.

ಬೆಂಗಳೂರಿನಲ್ಲಿ ನಮ್ಮ ಸರ್ಕಾರದ ಕನ್ನಡ ಭಾಷಾಂತರಕಾರರಾಗಿದ್ದ ಮ॥ ಕೆ. ಲಕ್ಷ್ಮೀನಾರಣಪ್ಪನವರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಚಿಕ್ಕ ವಯಸ್ಸಿನಿಂದಲೂ ಕನ್ನಡದಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಕರ್ನಾಟಕ ಸೀಮೆಯಲ್ಲೆಲ್ಲಾ ತುಂಬಾ ಕೀರ್ತಿಪಡೆದಿದ್ದರು. ಮತ್ತು ಭಾಷಾಂತರ ಮಾಡುವುದರಲ್ಲಿ ಇವರಂಥಾ ಸಮರ್ಥರು ಸಿಕ್ಕುವುದು ದುರ್ಲಭ. ಇವಲ್ಲದೆ ಸಂಸ್ಕೃತ ವಿದ್ಯೆಯ ಸದಭ್ಯಾಸಗಳು ಅವರಲ್ಲಿ ವಿಶೇಷವಾಗಿ ಮೆರೆಯುತ್ತಿದ್ದವು.

ವಿದ್ಯಾಭಿಮಾನಿ ಎಂಬ ಬಾತ್ಮಿದಾರರು ಬರೆಯುವುದು.—"ಹರಿಹರಪುರದಲ್ಲಿ ಸ್ಕೂಲು ಏನಾಯಿತು? 5-6 ವರುಷಗಳಿಂದಲೂ ಪ್ರತಿ ವರುಷವೂ ಲೋ. ಸೆ. ವ್ಯಾನಾಕ್ಯುಲರ್ ಸ್ಕೂಲ್ ಅಭಿವೃದ್ಧಿಯಾಗಿತ್ತು. ಅಕಸ್ಮಾತ್ತು ಮಾಸ್ಟರಿಗೆ ಕಾಯಿಲೆ ಬಂದು ಹೆಡ್ ಮಾಸ್ಟರೇ ಇಲ್ಲ. ಪೋಸ್ಟು ಬೇರೇ ಆಯಿತು. ಇದರ ಅಸಿಸ್ಟೆಂಟ್ ಸೆಕಂಡ್ ಮಾಸ್ಟರು ಊರಲ್ಲೇ ಇರುತ್ತಿದ್ದರು. ದಸರಾ ಲಾಗಾಯ್ತು ಲೋ. ಸೆ. ವಿದ್ಯಾರ್ಥಿಗಳಿಗೆ ಪಾಠಗಳಿಲ್ಲ. ಇಲಾಖೆಗೆ ಕೊಟ್ಟ ಟೆಲಿಗ್ರಾಂಗಳೂ, ಬರಕೊಂಡ ಅರ್ಜಿಗಳೂ ವ್ಯರ್ಥವಾದವು. ತಮ್ಮ ಪತ್ರಿಕಾ ಮುಖೇನವಾದರೂ ಅಧಿಕಾರಿಗಳಿಗೆ ಗೋಚರವಾಗಿ ಈ ಸ್ಕೂಲಿಗೆ ಉಪಾಧ್ಯಾಯರು ನೇಮಕರಾದಾರೆಂದು ಕಾದಿರುವೆವು."

ಬೆಂಗಳೂರು ಶ್ರೀನಿವಾಸಮಂದಿರದಲ್ಲಿ ಸ್ತ್ರೀಸಮಾಜದವರು ಮೈಸೂರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರುಗಳ ಯುದ್ಧದ ಫಂಡಿಗೆ ಚಂದಾಹಣಗಳನ್ನು ವಸೂಲ್ಮಾಡಿರುತ್ತಾರೆ. ಮತ್ತು ಪದಾರ್ಥಗಳನ್ನು ಅಂಗಡಿ ಇಟ್ಟು ಬಿಕರೀ ಮಾಡಿರುತ್ತಾರೆ. ಇವುಗಳಲ್ಲಿ ಉತ್ಪತ್ತಿಯಾಗಿರುವ ಹಣಗಳು ಒಟ್ಟು ರೂ. 286-14-6 ಪೈ. ಇದರಲ್ಲಿ ಖರ್ಚಾದ ರೂ 91-4-9ಪೈ ಹೋತಾ ರೂ. 195-1-9 ಖಾಸ್ತ್ಯವಾಗಿಯೂ, ರೂ 33-6-0 ಪದಾರ್ಥಗಳಾಗಿಯೂ ಉಳಿದಿದೆ. ಈ ಹಣವನ್ನು ಕೊಡಿಸುವುದಕ್ಕೆ ಸಹಾಯಮಾಡಿದ ಸಮಸ್ತ ಸ್ತ್ರೀಯರನ್ನೂ ಅಂಗಡಿಯವರನ್ನೂ ಸೆಕ್ರೆಟರಿಯವರು ವಂದಿಸುತ್ತಾರೆ.

ಬೆಂಗಳೂರು ಸಿಟಿ ಮಹಿಳಾ ಸೇವಾ ಸಮಾಜದ ಪರವಾಗಿ ಸಮಾಜದ ಅಧ್ಯಕ್ಷರವರಾದ ಶ್ರೀಮತಿ ಪಾರ್ವತಮ್ಮನವರು (ಮ॥ ಚಂದ್ರಶೇಖರ ಅಯ್ಯರವರ ಪತ್ನಿಯವರು) ಬೆಂಗಳೂರು ಥಿಯೋಸೊಫಿಕಲ್ ಸೊಸೈಟಿಯ ಕಟ್ಟಡದಲ್ಲಿ ತಾ 12, 13, 14 ನೇ ಬುಧವಾರ ಗುರುವಾರ, ಶುಕ್ರವಾರ, ಸಾಯಂಕಾಲ ಉಪನ್ಯಾಸಗಳನ್ನು ಕೊಡುವರು. ಉಪನ್ಯಾಸ ವಿಷಯಗಳು—(1) ಪೂನಾ, ಬೊಂಬಾಯಿ ಪಟ್ಟಣಗಳಿಂದ ತಿಳಿಯುವ ಅಂಶಗಳು; (2) ಪೂನಾ, ಬೊಂಬಾಯಿ ಪಟ್ಟಣಗಳಲ್ಲಿ ಸೇವಾಸದನ ಸಂಘವು ಮಾಡುತ್ತಿರುವ ಕಾರ್ಯಗಳು; (3) ಮಹಿಳೆಯರು ನೆರವೇರಿಸತಕ್ಕ ದೇಶಸೇವೆ. ಸ್ತ್ರೀಯರೆಲ್ಲರೂ ಈ ಉಪನ್ಯಾಸಗಳಿಗೆ ಬರಬೇಕೆಂದು ಕಾರ್ಯದರ್ಶಿ ರಂಗಮ್ಮಾಳ್ ಯವರು ಕೋರುತ್ತಾರೆ.

ಕಳೆದ ಸುಮಾರು ಒಂಭತ್ತು ವರುಷಗಳಿಂದಲೂ ನಮ್ಮ ಪ್ರೆಸ್ಸಿನಲ್ಲಿ ಮೊಳೆ ಜೋಡಿಸುವ ನೌಕರಿ ಮಾಡುತ್ತಿದ್ದ ಮ॥ ಮಧುರನಾಯಗಂ ಎಂಬಾತನು ಕಳೆದ ವಾರ ಆಕಸ್ಮಿಕವಾಗಿ ಕಾಲವಾದದ್ದು ವಿಷಾದಕರವಾಗಿದೆ. ಈತನು ಸದ್ಗುಣಿಯಾಗಿಯೂ, ಸಭ್ಯನಾಗಿಯೂ, ಕೆಲಸದಲ್ಲಿ ಬುದ್ಧಿಶಾಲಿಯಾಗಿಯೂ ಇದ್ದನು. ಮಧ್ಯಾಹ್ನ 12 ಗಂಟೆ ತನಕ ಕೆಲಸಮಾಡಿ ಊಟಕ್ಕೆಂದು ಮನೆಗೆ ಹೋದಾಗ ಆತನಿಗೆ ಆಕಸ್ಮಿಕವಾದ ಮರಣ ಪ್ರಾಪ್ತವಾಯಿತು.—ಕೃಷ್ಣರಾಯನೆಂಬ ಸುಮಾರು 32 ವಯಸ್ಸಿನ ಮಾಧ್ವ ಬ್ರಾಹ್ಮಣನು ಮೊನ್ನೆ ಮಂಗಳವಾರ ಮಧ್ಯಾಹ್ನ ಕೋಟೆಯಲ್ಲಿ ಅರಮನೆಯ ಎಕ್ಸ್‌ಚೆಕ್ ಹೌಸಿನ ಬಳಿ ಎದೆ ನೋವೆಂದು ಕುಳಿತು ಹಾಗೇ ಪ್ರಾಣಬಿಟ್ಟನು. ಮಹಜರು ಮುಂತಾದದ್ದು ಪೂರೈಸುವುದಕ್ಕೆ ಇವೆರಡು ಸಂದರ್ಭಗಳಲ್ಲೂ ದಿನವೆಲ್ಲಾ ಹಿಡಿಯಿತು. ಈ ಭಾಗವನ್ನು ಸರ್ಕಾರದವರು ಮೊಟಕು ಮಾಡಿದರೆ ಶವಗಳು ಬೇಗ ಸಾಗುವುದಕ್ಕೂ, ಸತ್ತವರ ಸಂಬಂಧಿಗಳಿಗೂ ಎಷ್ಟೋ ಉಪಕಾರವಾದೀತು.

ಇಂಡಿಯಾ ದೇಶದ ಹರ್ಕ್ಯುಲೀಸ್ ಎಂಬ ಹೆಸರು ಪಡೆದ ಪ್ರೊಫೆಸರ್ ರಾಮಮೂರ್ತಿಯವರು.

ಪ್ರೊಫೆಸರ್ ರಾಮಮೂರ್ತಿಯು ಮದರಾಸ್ ಆಧಿಪತ್ಯದ ವಿಜಯನಗರಕ್ಕೆ ಬಹು ಸಮೀಪದಲ್ಲಿರುವ ವೀರಘಟ್ಟ ಎಂಬ ಒಂದು ಸಣ್ಣ ಹಳ್ಳಿಯಲ್ಲಿ 1883 ನೇ ಇಸವಿಯಲ್ಲಿ ಜನಿಸಿದನು. ಈತನ ತಂದೆಯಾದ ರಾವ್ ಬಹದ್ದೂರ್ ಕೆ. ನಾರಾಯಣಸ್ವಾಮಿ ನಾಯುಡುಯವರು ಪೋಲೀಸ್ ಇನ್‌ಸ್ಪೆಕ್ಟರ್ ಕೆಲಸದಲ್ಲಿದ್ದು 1908 ರಲ್ಲಿ ಗತಿಸಿಹೋದರು. ಬಾಲ್ಯದಲ್ಲಿ ರಾಮಮೂರ್ತಿಗೆ ವಿದ್ಯೆ ಕಲಿಯುವುದರಲ್ಲಿ ಅಭಿರುಚಿ ಇಲ್ಲದೆ ಯಾವಾಗಲೂ ಕಸರತ್ತು ಮಾಡುವುದರಲ್ಲಿಯೇ ಆಸಕ್ತಿ ಇದ್ದಿತು. ಅದೇ ಮೇರೆಗೆ ಚಿಕ್ಕಂದಿನಲ್ಲಿಯೇ ಈತನು ದೇಶೀಯ ಕಸರತ್ತುಗಳನ್ನು ಅಭ್ಯಾಸ ಮಾಡಲು ಉಪಕ್ರಮಿಸಿದನು. ಸ್ವಲ್ಪ ವಯಸ್ಸಾದ ಮೇಲೆ ಅನ್ಯದೇಶೀಯ ವ್ಯಾಯಾಮಗಳನ್ನು ಅಭ್ಯಾಸ ಮಾಡಿದನು. 1896 ನೇ ಇಸವಿಯಲ್ಲಿ ಈತನು ವಿಜಯನಗರದ ಹೈ ಸ್ಕೂಲಿನಲ್ಲಿ ಬಾಲಕರಿಗೆ ಅಂಗಸಾಧನೆಯನ್ನು ಕಲಿಸುವ ಉಪಾಧ್ಯಾಯ ಕೆಲಸಕ್ಕೆ ಸೇರಿದನು. ಆತನಿಗೆ ಅಲ್ಲಿ ಸಂಬಳ ವೇನೂ ಕೊಡುತ್ತಲಿಲ್ಲವಾದರೂ ಅನೇಕ ವಿಧವಾದ ವ್ಯಾಯಾಮವನ್ನು ಅಭ್ಯಾಸ ಮಾಡಿ ತನ ಕಾಯಪುಷ್ಟಿಯನ್ನು ವೃದ್ಧಿಪಡಿಸಿಕೊಳ್ಳುವುದಕ್ಕೆ ಅವಕಾಶವಾಯಿತು. ಹೀಗೆ ಮೂರು ವರುಷಗಳ ನಂತರ ಈತನು ಮದರಾಸಿನ ಸೈದಾಪೇಟೆ ಫಿಸಿಕಲ್ ಟ್ರೈನಿಂಗ್ ಕಾಲೇಜಿಗೆ ಸೇರಿಕೊಂಡು ಸರಿಯಾದ ಕ್ರಮಗಳನ್ನು ಅನುಸರಿಸಿ ಒಂದು ವರುಷ ಅಂಗಸಾಧನೆಯನ್ನು ಕಲಿತು ಅತ್ಯಂತ ಶ್ಲಾಘ್ಯವಾಗಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಪುನಃ ತಾನು ಮೊದಲು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಹೊರಟುಹೋದನು. ಇಷ್ಟು ದಿವಸಗಳಿಗೆ ಆತನಿಗೆ ಅನ್ಯದೇಶೀಯ ಕಸರತ್ತುಗಳಿಂದ ದೇಹದ ಮಾಂಸಖಂಡಗಳು ದಪ್ಪವಾಗಿ ಮೈಗೆ ಚೆಲುವಿಕೆಯನ್ನು ಕೊಡುತ್ತದೆಯೋ ವಿನಹ ಅದಕ್ಕೆ ತಕ್ಕ ಹಾಗೆ ಶರೀರ ಶಕ್ತಿಯನ್ನು ಕೊಡಲಾರದೆಂದು ಕಂಡುಬಂದಿತು. ಆದುದರಿಂದ ಆತನು ದಂಡೆ ಬಸ್ಕಿ ಮುಂತಾದ ನೆಲದಲಾದ ದೇಶೀಯ ಕರ್ನಾಟಕ ಕಸರತ್ತು ಸಾಧನೆಗಳನ್ನು ಮಾಡುವುದಕ್ಕೆ ಆರಂಭಿಸಿದನು. ಬೆಳಗಿನ ಝಾವದ 3 ಗಂಟೆಗೆ ಎದ್ದು ಹನ್ನೆರಡು ಮೈಲಿ ದೂರ ಎಲ್ಲಿಯೂ ನಿಂತುಕೊಳ್ಳದೆ ಓಡುವುದು, ನಂತರ ಒಂದು ಘಂಟೆ ಈಜುವುದು, 9 ಘಂಟೆಯ ವರೆಗೂ ಕುಸ್ತಿ ಆಡುವುದು. ಇವೇ ಆತನ ಮುಖ್ಯವಾದ ಸಾಧನೆಗಳಾಗಿದ್ದವು. ಹೆಸರುವಾಸಿಯಾದ ಕಸರತ್ತುಗಾರನೆಂದೆನಿಸಿಕೊಳ್ಳಬೇಕೆಂಬ ಕುತೂಹಲವು ಆತನನ್ನು ಬಹುವಾಗಿ ಬಾಧಿಸುತ್ತಿತ್ತು.

ಮೊಟ್ಟಮೊದಲು ಎಂದರೆ 1902 ನೇ ಇಸವಿಯಲ್ಲಿ ರಾಜಾ ಆಫ್ ಟ್ರ್ಯಾನ್ಸ್ ಸರ್ಕಸ್ ಎಂಬ ಕಂಪನಿಯ ಯಜಮಾನನು ಈತನನ್ನು ಮೊದಲು ಪಾಲುದಾರನೆಂದು ಸೇರಿಸಿಕೊಂಡು ಈತನ ಶಕ್ತಿ ಸಾಹಸಗಳನ್ನು ನೋಡಿದ ತಕ್ಷಣವೇ ಈತನಿಗೆ ಆ ಕಂಪನಿಯ ಮ್ಯಾನೇಜರ್ ಕೆಲಸವನ್ನು ವಹಿಸಿದನು. ಒಂದೆರಡು ವರುಷಗಳೊಳಗಾಗಿ ಈತನಿಗೆ ಅನೇಕ ಮೆಡಲುಗಳು ದೊರಕಿದವು. ಇದರಿಂದ ಆತನ ಹೆಸರು ಇನ್ನೂ ಪ್ರಸಿದ್ಧಿಗೆ ಬಂದಿತು. ಆದರೆ ಆ ಕಂಪನಿಯು 1904 ರಲ್ಲಿ ಹಾಳಾಗಿ ಹೋಗಲು ಈತನು ತಾನೇ ತನ್ನ ಶಕ್ತಿ ಸಾಹಸವನ್ನು ಪ್ರದರ್ಶನಮಾಡಿ 1905 ನೆಯ ಸಂವತ್ಸರದಲ್ಲಿ ಒಂದೆರಡು ಪದಕಗಳನ್ನು ಸಂಪಾದಿಸಿಕೊಂಡನು. ಬಳಿಕ 1906 ನೇ ವರುಷದ ಜನವರಿ ತಿಂಗಳಲ್ಲಿ ಈತನು ತನ್ನ ಸಾಹಸ ಕಾರ್ಯಗಳನ್ನು ಪ್ರದರ್ಶಿಸಿ ಪ್ರಿನ್ಸ್ ಆಫ್ ವೇಲ್ಸ್ ಮತ್ತು ಪ್ರಿನ್ಸೆಸ್ ಆಫ್ ವೇಲ್ಸ್ ರವರುಗಳಿಂದ ಮದರಾಸಿನಲ್ಲಿ ಒಂದು ಚಿನ್ನದ ಪದಕವನ್ನು ಪಡೆದನು. ಅನಂತರ ರಾಮಮೂರ್ತಿಯು ತಾನೇ ಒಂದು ಕಂಪೆನಿಯನ್ನು ಮಾಡಿಕೊಂಡು ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುತ್ತಾ ಅಲ್ಲಲ್ಲಿ ತನ್ನ ಸಾಹಸ ಕಾರ್ಯಗಳನ್ನು ಜನರಿಗೆ ತೋರಿಸಿ ಇನ್ನೂ ಹೆಸರುವಾಸಿಗೆ ಬಂದನು. ಹೀಗೆ ಅನೇಕ ದೇಶಗಳನ್ನು ಸುತ್ತಿ ಕಡೆಗೆ 1910 ನೇ ಇಸವಿಯಲ್ಲಿ ಈತನು ಇಂಗ್ಲೆಂಡಿಗೆ ಹೋಗಿ ಅಲ್ಲಿ ತನ್ನ ಸಾಮರ್ಥ್ಯ ಕಾರ್ಯಗಳನ್ನು ಪ್ರದರ್ಶಿಸಿದನು.

ಪ್ರೊಫೆಸರ್ ರಾಮಮೂರ್ತಿಯು ತನ್ನ ದೇಶದವರ ಕ್ಷೇಮಚಿಂತನೆಯಲ್ಲೇ ಯಾವಾಗಲೂ ಮಗ್ನನಾಗಿರುತ್ತಾನೆ. ಏಕೆಂದರೆ ನಮ್ಮ ದೇಶದಲ್ಲಿ ಆಚಾರಣೆಯಲ್ಲಿರತಕ್ಕ ಬಾಲ್ಯ ವಿವಾಹದಿಂದ ಆಗುತ್ತಿರುವ ತೊಂದರೆಗಳೂ, ಅಕಾಲ ಮರಣಗಳೂ ಇವೆಲ್ಲವೂ ಆತನ ಮನಸ್ಸಿಗೆ ಖೇದವನ್ನುಂಟುಮಾಡಿವೆ. ಹಿಂದುಸ್ಥಾನದ ಯಾವುದಾದರೊಂದು ಮುಖ್ಯಪಟ್ಟಣದಲ್ಲಿ ಒಂದು ಅಂಗಸಾಧನೆಯ ಶಾಲೆಯನ್ನು ಸ್ಥಾಪಿಸಬೇಕೆಂಬುವುದು ಆತನ ಮುಖ್ಯೋದ್ದೇಶವಾಗಿದೆ. ಇದಕ್ಕಾಗಿ ಈತನು ತನ್ನ ಸಂಪಾದನೆಯಲ್ಲಿ ಒಂದು ಭಾಗವನ್ನು ಒಂದು ಕಡೆ ಕೂಡಿಡುತ್ತಾ ಬಂದಿರುವನು. ಆತನ ಮನೋರಥವು ಜಾಗ್ರತೆ ಫಲಿಸಲೆಂದು ಹಾರೈಸುತ್ತೇವೆ.

ಬಿ. ಕೆ. ಎನ್.

ಒಂದು ಕೋಆಪರೇಟಿವ್ ಸೊಸೈಟಿ ಜನರಲ್ ಮೀಟಿಂಗು.

ಬೆಲಗೂರು ಶ್ರೀಪ್ರಸನ್ನ ರಾಮೇಶ್ವರ ಕೋಆಪರೇಟಿವ್ ಸೊಸೈಟಿ ಎಂಬ ಸಂಘದ 1914-15 ನೇ ಸಾಲ್ ಜನರಲ್ ಮೀಟಿಂಗು ಮ|| ಕೆ. ಎಸ್. ಭೀಮಸೇನರಾಯರ ಅಧ್ಯಕ್ಷತೆಯಲ್ಲಿ ಎ ವಿ. ಸ್ಕೂಲ್ ಕಟ್ಟಡದಲ್ಲಿ ನಡೆಸಲ್ಪಟ್ಟಿತು. ಈ ಸಂಘವು ತಾ. 12-7-13 ರಲ್ಲಿ ಶುರು ಆಗಿ 1915 ನೇ ಜೂನ್ ಆಖೈರ್ ವರೆಗೆ 2 ವರುಷವಾಯಿತು. ಈ ಸಂಘವು 180 ಜನ ಮೆಂಬರುಗಳು ಸೇರಿ ಪರಸ್ಪರ ಅನುರಾಗಪೂರ್ವಕವಾಗಿ ಇದರಲ್ಲಿ ಜಮಾ ರೂ. 32,099-1-10 ಪೈ; ಖರ್ಚು ರೂ 32,032-9-2 ಪೈ. ಜೂನ್ ತಾ. 3 ರ ವರೆಗೆ ಶಿಲ್ಕು ರೂ. 66-8-8 ಪೈ. ಈ ರೀತಿ ಜಮಾ ಖರ್ಚು ನಡೆದು ರೂ. 1,327-12-10 ಪೈ ಲಾಭ ಬಂದು, ಈ ಪೈಕಿ ರಿಜರ್ವ್ ಫಂಡಿಗೆ ರೂ. 239-15-2 ಪೈ ಮಜಾ ಜಾತಾ ನಿಂತ ರೂ. 710-13-6 ರ ಪೈಕಿ 200 ರೂಪಾಯಿಗಳು ಈ ಜನರಲ್ ಮೀಟಿಂಗಿಗೆ ಸೇರಿದ ಎಲ್ಲಾ ದೊಡ್ಡ ಮನುಷ್ಯರುಗಳೂ ಏಕಭಾವದಿಂದ ತಮಗೆ ಬರತಕ್ಕ ಲಾಭಾಂಶದಲ್ಲಿ ಕಟ್ಟಡ ಕಟ್ಟಿಸತಕ್ಕ ಬಗ್ಗೆ ತೆಗೆದಿಡಲು ಸರ್ವರೂ ಅನುಮೋದಿಸಿದರು. ಇನ್ನು ಮುಂದೆ ಈ ಸೊಸೈಟಿ ಕಾರ್ಯಗಳನ್ನು ನಡೆಸತಕ್ಕ ಬಗ್ಗೆ ಹೊಸ ಮೆಂಬರುಗಳ ಚುನಾವಣೆ ನಡೆಯಿತು. ಇನ್ನು ಮುಂದೆ ಈ ಮಹನೀಯರುಗಳು ಈ ಸಂಘದ ವಿಶಿಷ್ಟ ಕಾರ್ಯಭಾಗವನ್ನೂ ಮುತುವರ್ಜಿ ವಹಿಸಿ ನಡಿಸಿಕೊಂಡು ಮುಂದೆ ಇನ್ನೂ ಅಭಿವೃದ್ಧಿಗೆ ತರುತ್ತಾರಾಗಿ ನಂಬಿರುತ್ತೇವೆ.

ಒಬ್ಬ ಮೆಂಬರು.

ಒಂದು ಸಂತೋಷ ಕೂಟವು.

ಕಳೆದ ಸೋಮವಾರ ಸಾಯಂಕಾಲ ನರಸಿಂಹರಾಜಪುರದ ರೀಡಿಂಗ್ ರೂಂನಲ್ಲಿ ಸದರೀ ರೀಡಿಂಗ್ ರೂಂ ಸೆಕ್ರಿಟರಿಯಾಗಿದ್ದು ಇಲ್ಲಿಂದಾ ಕೊಪ್ಪ ಆಂಗ್ಲೊ ವರ್ನಾಕ್ಯುಲರ್ ಸ್ಕೂಲ್ ಹೆಡ್ ಮಾಸ್ಟರಾಗಿ ವರ್ಗಾಯಿಸಲ್ಪಟ್ಟು ಪ್ರಯಾಣ ಬೆಳೆಯಿಸುವರಾಗಿದ್ದ ಬ್ರಹ್ಮಶ್ರೀ ವೈ. ಯನ್. ನಾಗೇಶಶಾಸ್ತ್ರಿಗಳವರಿಗೆ ಸದರಿ ರೀಡಿಂಗ್ ರೂಂ ಮೆಂಬರುಗಳೆಲ್ಲರೂ ವಂದನೆಗಳನ್ನು ಸಮರ್ಪಿಸಿದರು. ಈ ಸಮಾರಂಭದಲ್ಲಿ ಸದರೀ ಕಟ್ಟಡವು ಶೋಭಾಯಮಾನವಾಗಿ ಅಲಂಕರಿಸಲ್ಪಟ್ಟಿತ್ತು. ನೆರೆದಿದ್ದ ಸಭೆಯು ಸ್ಥಳೀಯ ಅಧಿಕಾರಿಗಳಿಂದಲೂ, ಉದ್ಯೋಗಸ್ಥರಿಂದಲೂ, ವಕೀಲರುಗಳೇ ಮೊದಲಾದ ಅನೇಕ ಮಂದಿ ಸ್ಥಳೀಯ ಲೌಕಿಕ, ವೈದಿಕ ದೊಡ್ಡ ಮನುಷ್ಯರಿಂದಲೂ ರಂಜಿತವಾಗಿದ್ದಿತು. ಭಾರತದ ಪದ್ಯಗಳು ಗ್ರಾಮಾಫೋನ್ ಯಂತ್ರದ ಮೂಲಕ ಗಾನ ರೂಪದಲ್ಲಿ ನುಡಿಯಿಸಲ್ಪಟ್ಟು ಸಭಿಕರ ಮನಸ್ಸನ್ನು ತಟ್ಟಿಹಾಕಿದವು. ಅನಂತರ ಕೇವಲ ಪ್ರೌಢಿಮೆಯಿಂದ ರಚಿತವಾಗಿದ್ದ ಸಾಧುವರ್ತನ ದಿಗ್ದರ್ಶನವಾಗಿದ್ದ ಪಂಚರತ್ನವೆಂಬ 5 ಕಂದ ಪದ್ಯಗಳು ಸೆಕ್ರಿಟರಿಯವರ ಗುಣಕಥನ ಪ್ರಶಂಸೆ ಗರ್ಭಿತವಾಗಿ ಓದಲ್ಪಟ್ಟವು. ನಂತರ ಎ. ವಿ. ಸ್ಕೂಲ್ ಅ|| ಮಾಸ್ಟರ್ ಮ|| ಮಲ್ಲಪ್ಪಯ್ಯನವರು ಅದನ್ನೇ ಪೋಷಿಸಿ ಸ್ವಲ್ಪ ಹೊತ್ತು ಉಪನ್ಯಾಸಮಾಡಿದರು. ತದನಂತರ ರೀಡಿಂಗ್ ರೂಂ ಸೆಕ್ರಿಟರಿ ವೈ. ಯನ್. ನಾಗೇಶಶಾಸ್ತ್ರಿಗಳು ಸಮಯೋಚಿತ ಭಾಷಣವನ್ನು ಮಾಡಿ ಸಭಿಕರನ್ನು ವಂದನೆ ಮಾಡಿದರು. ಬಳಿಕ ರೀಡಿಂಗ್ ರೂಂ ಪರವಾಗಿ ಜಾಯಿಂಟು ಸೆಕ್ರೆಟರಿ ಮ|| ಗೋವಿಂದರಾಯರು ಫಲ ತಾಂಬೂಲಾದಿಗಳನ್ನು ಹಿಡಿದು ವೈದಿಕ ಮಂಡಲಿಯವರ ಕಡೆಗೆ ಬಂದು ಕೊಡಲು ಗರ್ಲ್‌ಸ್ಕೂಲ್ ರಿಟೈರ್ಡು ಹೆಡ್ಮಾಸ್ಟರ್ ಬ್ರಹ್ಮಶ್ರೀ ಭವಾನಿ ಶಾಸ್ತ್ರಿಗಳವರೇ ಮೊದಲಾದವರು ಆಶೀರ್ವಚನ ಮಾಡಿಕೊಡುವುದಕ್ಕೆ ಕೈನೀಡಲು ಸೆಕ್ರಿಟರಿಯವರು ಎದ್ದು ಬಂದು ಸರ್ವರನ್ನೂ ವಂದಿಸಿ ಫಲ ತಾಂಬೂಲವನ್ನು ಸ್ವೀಕರಿಸಲು ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ

ಒಂದು ಗ್ರಾಮದಲ್ಲಿ ನಡೆದ ಸಂತೋಷ ಸಭೆ.

ಚನ್ನಗಿರಿ ತಾಲ್ಲೂಕು ತ್ಯಾವಣಿಗಿ ಗ್ರಾಮಕ್ಕೆ ಸರ್ಕಾರಿ ಸ್ಕೂಲು ಸ್ಥಾಪಿತವಾಗಿ ಸುಮಾರು 30-40 ವರ್ಷಗಳಾದಾಗ್ಯೂ ಸರಿಯಾದ ಉಚ್ಛ್ರಾಯಸ್ಥಿತಿಗೆ ಬಾರದೆ ಇದ್ದದ್ದು ಗ್ರಾಮಸ್ಥರಲ್ಲನೇಕರ ಮೌಢ್ಯವೇ ಮುಖ್ಯ ಕಾರಣ. ಆದರೆ ಈಚೆಗೆ ಸುಮಾರು 1½ ವರುಷದ ಕೆಳಗೆ ಈ ಗ್ರಾಮಕ್ಕೆ ವರ್ಗವಾಗಿ ಬಂದ ಮ|| ಎಸ್. ಹನುಮಂತಾಚಾರ್ಯರು ಗ್ರಾಮದ ಪ್ರತಿ ಒಬ್ಬರಲ್ಲಿಯೂ ಅನುರಾಗವನ್ನು ಬೆಳೆಸಿ ವಿದ್ಯೆಯಿಂದುಂಟಾಗುವ ಪ್ರಯೋಜನವನ್ನು ಪದೇ ಪದೇ ಜನಗಳಿಗೆ ಬೋಧಿಸಿ ಸ್ಕೂಲನ್ನು ಬಹಳ ಅಭಿವೃದ್ಧಿಗೆ ತಂದಿರುತ್ತಾರೆ. ಹಾಲಿ ಸ್ಕೂಲಿನಲ್ಲಿ ಒಂದು ನೂರು ಜನ ಬಾಲಕರಿದ್ದಾರೆ. ಇನ್ನೂ ಹೆಚ್ಚಾಗಿ ಸೇರುತ್ತಲೂ ಇದ್ದಾರೆ. ಈಚೆಗೆ ಸರ್ಕಾರದವರು ಇವರಿಗೆ ಒಬ್ಬ ಸಹಾಯೋಪಾಧ್ಯಾಯರನ್ನು ಕಳುಹಿಸಿದರು. ಇಬ್ಬರಿಂದಲೂ ಕೆಲಸ ಜರುಗುವುದು ಕಷ್ಟವಾಗಿದೆ ಎಂದು ಪ್ರಾರ್ಥಿಸಿಕೊಂಡದಕ್ಕೆ ಇನ್ನೊಬ್ಬ ಸಹಾಯೋಪಾಧ್ಯಾಯರನ್ನು ಕೊಡುವಂತೆ ಶಿಫಾರಸು ಮಾಡಿದ್ದಾರೆ. ನಮ್ಮ ಹೆಡ್ ಮಾಸ್ಟರವರ ಪ್ರಾರ್ಥನೆಯಂತೆ ಅಕ್ಕಪಕ್ಕದ ಗ್ರಾಮದ ಉಪಾಧ್ಯಾಯರುಗಳೂ ವಿದ್ಯಾಭಿಮಾನಿಗಳೂ, ನಮ್ಮ ಗ್ರಾಮದ ಮೆಂಬರುಗಳೂ, ಮುಖಂಡರೂ ಸಹ ಚಪ್ಪರ ಹಾಕಿ ತೋರಣಗಳಿಂದಲೂ ತಮ್ಮ ಕನ್ನಡಿ ಮೊಲ್ಕಟ್ಟುಗಳಿಂದಲೂ ರಾಜಭವನದಂತೆ ಅಲಂಕರಿಸಲ್ಪಟ್ಟಿದ್ದ ಸ್ಕೂಲು ಕಟ್ಟಡಕ್ಕೆ ದಯಮಾಡಿಸಿದರು. ಬಾಲಕ ಬಾಲಕಿಯರಿಂದ ದೇವರ ಪ್ರಾರ್ಥನೆಗಳು ನಡಿಸಲ್ಪಟ್ಟವು. ಹೆಡ್ ಮಾಸ್ಟರು ಗ್ರಾಮಾಭಿವೃದ್ಧಿ ಮತ್ತು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಇವುಗಳ ವಿಷಯದಲ್ಲಿ ಉಪನ್ಯಾಸವನ್ನು ಬಹು ಸ್ವಾರಸ್ಯವಾಗಿ ಮಾಡಿದರು. ನಂತರ ಅ. ಅ|| ಮಾಸ್ಟರ್ ಟಿ ಶಂಕರಪ್ಪನವರು ಉಪಾಧ್ಯಾಯರ ಮುಖ್ಯ ಕರ್ತವ್ಯ ಎಂಬ ವಿಷಯದಲ್ಲಿಯೂ ಮ|| ಪಟೇಲ್ ಮಹದೇವಪ್ಪನವರೇ ಮೊದಲಾದವರು ಸ್ಕೂಲಿನ ಅಭಿವೃದ್ಧಿ ಮತ್ತು ಸ್ಕೂಲಿಗೆ ಬೇಕಾದ ಅನುಕೂಲಗಳು, ಸ್ಕೂಲಿನ ಪೂರ್ವಸ್ಥಿತಿಗೂ ಈಗಿನ ಸ್ಥಿತಿಗೂ ಇರುವ ತಾರತಮ್ಯ ಇವುಗಳನ್ನು ಕುರಿತು ಉಪನ್ಯಾಸಮಾಡಿದರು. ಮ|| ಮುದಕದಡಿ ಗುರುಸಿದ್ದಯ್ಯನವರು ಉಪನ್ಯಾಸಗಳನ್ನು ಉಪಸಂಹಾರಮಾಡಿ ಮುಕ್ತಾಯಗೊಳಿಸಿದರು. ಮ|| ನಾಗಪ್ಪನವರೇ ಮೊದಲಾದ ದೇಶಾಭಿಮಾನಿಗಳಿಂದ ಕೊಡಿಸಿದ ಫಲಾಹಾರವನ್ನು ಸರ್ವರೂ ಸ್ವೀಕರಿಸಿದರು. ಸಭಿಕರು ಆನಂದಗೊಳ್ಳುವಂತೆ ಸಂಗೀತವು ನಡೆಯಿತು. ಸಾಯಂಕಾಲ ಬಾಲಕರ ಪಂದ್ಯಗಳು ನಡೆದು ಬಹುಮಾನಗಳು ಹಂಚಲ್ಪಟ್ಟವು. ಬಳಿಕ ಸಭಿಕರೂ ವಿದ್ಯಾರ್ಥಿಗಳೂ ಏಕಕಂಠದಿಂದ ಶ್ರೀಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆ ಮಾಡಿದರು. ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳನ್ನೂ, ಬಾಲಕ ಬಾಲಕಿಯರಿಗೆ ಮಿಠಾಯಿಯನ್ನೂ ವಿನಿಯೋಗಿಸಿದ ತರುವಾಯ ಸರ್ವರೂ ತೆರಳಿದರು. ಈ ಗ್ರಾಮಸ್ಥರೆಲ್ಲರೂ ಈ ಹಿಂದೆ ಯಾವಾಗಲೂ ನಡೆಯದೆ ಇದ್ದ ಇಂಥಾ ಸಂತೋಷ ಕೂಟವನ್ನು ಹಬ್ಬದಂತೆ ಭಾವಿಸಿ ಅತ್ಯಾನಂದಪಟ್ಟರು.

ಪ್ರತ್ಯಕ್ಷದರ್ಶಿ.

ಶ್ರೀರಂಗಪಟ್ಟಣದಲ್ಲಿ ಒಂದು ಔತಣ.

ಶ್ರೀರಂಗಪಟ್ಟಣದ ಎ. ವಿ. ಸ್ಕೂಲು ಹೆಡ್ ಮಾಸ್ಟರು ಮ|| ಸೀತಾರಾಮಶಾಸ್ತ್ರಿಗಳವರಿಗೆ ಒಂದು ಸತ್ಕಾರಸಭೆಯು ನಡೆಯಿತು. ಹಾಸನದ ಹೈ ಸ್ಕೂಲಿಗೆ ವರ್ಗವಾಗಿ ಹೋಗಿದ್ದ ಮ|| ಬಿ. ಎನ್. ಸೀತಾರಾಮಶಾಸ್ತ್ರಿಗಳವರನ್ನು ಶ್ರೀರಂಗಪಟ್ಟಣಕ್ಕೆ ಅವರ ಸುಶಿಕ್ಷಣೆಯಿಂದ ಉತ್ತೀರ್ಣರಾಗಿ ಮಯಿಸೂರು ಮತ್ತು ಮದರಾಸು ಪಟ್ಟಣಗಳ ಹೈ ಸ್ಕೂಲು ಮತ್ತು ಕಾಲೇಜುಗಳಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳು ಬರಮಾಡಿಕೊಂಡು ಒಂದು ಸನ್ಮಾನಕೂಟವನ್ನು ಕಳೆದ ತಾ. 30 ನೇ ಗುರುವಾರ ಕನ್ನಡ ಸ್ಕೂಲಿನಲ್ಲಿ ನಡಸಿ ಅವರ ಕೃತಜ್ಞತೆಯನ್ನು ತೋರ್ಪಡಿಸಿದರು. ಈ ಸಂತೋಷಕೂಟಕ್ಕೆ ಸ್ಥಳದ ಅಧಿಕಾರಿಗಳು, ಲಾಯರುಗಳು, ವರ್ತಕರು, ಸಾಹುಕಾರರುಗಳು, ಉಪಾಧ್ಯಾಯರು, ವಿದ್ಯಾರ್ಥಿಗಳು ಮತ್ತು ಇತರ ದೊಡ್ಡಮನುಷ್ಯರು ಆಹ್ವಾನಿಸಲ್ಪಟ್ಟಿದ್ದರು. ಸತ್ಕಾರಸಭೆಯ ವಿದ್ಯಾರ್ಥಿಗಳೂ ಶಾಲೆಯ ಪ್ರಕೃತ ವಿದ್ಯಾರ್ಥಿಗಳೂ ಹೆಡ್ ಮಾಸ್ಟರನ್ನು ಬಿಡಾರದಿಂದ ವಾದ್ಯದೊಡನೆ ತಳಿರು ತೋರಣಗಳಿಂದಲಂಕರಿಸಲ್ಪಟ್ಟಿದ್ದ ಕನ್ನಡ ಸ್ಕೂಲಿಗೆ ಕರೆದುಕೊಂಡು ಬಂದರು. ಕೂಡಲೇ ಸರ್ವರಿಗೂ ಅಲ್ಪಾಹಾರ ಮತ್ತು ಟೀ ಸಹಾ ಕೊಡಲ್ಪಟ್ಟಿತು. ನಂತರ ಎಲ್ಲರೂ ಸಭಾಮಂದಿರದಲ್ಲಿ ಆಸನಗಳನ್ನಲಂಕರಿಸಿದರು. ವೀಣಾಗಾನವೂ, "ಫ್ಲೂಟ್" ಎಂಬ ವಾದ್ಯವೂ ಸಭಿಕರಿಗೆ ಕರ್ಣಾನಂದವನ್ನುಂಟುಮಾಡಿದವು. ಪ್ರಕೃತ ಪಾಠಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಹೆಡ್ ಮಾಸ್ಟರ ಜತೆಯಲ್ಲಿ ಕುಳಿತು ಭಾವಚಿತ್ರವನ್ನು ತೆಗಿಸಿಕೊಂಡರು. ಕನ್ನಡ ಮತ್ತು ಸಂಸ್ಕೃತ ಶ್ಲೋಕಗಳು ಹೇಳಲ್ಪಟ್ಟವು. ವಿಜ್ಞಾಪನಾ ಪತ್ರಿಕೆಯು ಓದಿ ಒಪ್ಪಿಸಲ್ಪಟ್ಟಿತು .... "ತಾವು, ಚರಿತ್ರಾರ್ಹವಾದ ಈ ಪಟ್ಟಣದಲ್ಲಿ ಬಾಲಕರುಗಳ ಶ್ರೇಯೋಭಿವೃದ್ಧಿಗಾಗಿ ಸ್ಥಾಪಿತವಾಗಿರುವ ಆಂಗ್ಲೇಯ ಮತ್ತು ಕನ್ನಡ ಪಾಠಶಾಲೆಗಳ ಮುಖ್ಯ ಬೋಧಕರಾಗಿ ದಯಮಾಡಿಸಿ ಐದು ಸಂವತ್ಸರಗಳಾದವು. ತಮಾರಭ್ಯ, ಕಾರಾಗೃಹದೋಪಾಧಿಯಲ್ಲಿದ್ದ ಪಾಠಶಾಲೆಯು ವಿನೋದ ಶಾಲೆಯಂತೆಯೂ ಕಾಲಕ್ಷೇಪಾದಿಯಲ್ಲಿದ್ದ ಉಪಾಧ್ಯಾಯರು ಸಹಾಧ್ಯಾಯಿಗಳಂತೆಯೂ ಪರಿಣಮಿಸಿದುದರಿಂದ ವಿದ್ಯಾರ್ಥಿಗಳು ಶಾಲೆಗೆ ಕ್ರಮವಾಗಿ ಬಂದು ಉತ್ಸಾಹದಿಂದ ವ್ಯಾಸಂಗಮಾಡಿ ಪ್ರಥಮ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಉತ್ತಮ ತರಗತಿಯಲ್ಲಿ ಹೊಂದಲೂ, ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾಗಲೂ ಅವಕಾಶವಾಯಿತು. ತಾವು ವಿದ್ಯಾರ್ಥಿಗಳಿಗೆ ಓದು, ಬರಹ, ಲೆಕ್ಕಗಳನ್ನು ಕಲಿಸುತ್ತಿದ್ದುದು ಮಾತ್ರವಲ್ಲದೆ ಅವರ ಮನೋಶಕ್ತಿಗಳನ್ನು ವೃದ್ಧಿಸಿ ವಿಕಾಸಗೊಳಿಸಲೂ ನಡತೆಗಳನ್ನು ತಿದ್ದಲೂ ದೈವಭಕ್ತಿ, ರಾಜಭಕ್ತಿ, ಗುರುಭಕ್ತಿ ಇವುಗಳಂಕುರಿಸಲೂ ದೃಢಕಾಯರಾಗಲೂ ಯೋಗ್ಯರೀತಿಯಿಂದ ವರ್ತಿಸಿ ಲೋಕೋಪಕಾರಿಗಳಾಗಿ ಮುಂದೆ ಪ್ರಭುಗಳ ಸತ್ಪ್ರಜೆಗಳಾಗಲೂ ಸರ್ವತೋಮುಖವಾಗಿ ಶ್ರಮವನ್ನು ತೆಗೆದುಕೊಂಡಿರುತ್ತೀರಿ ...." ಮ|| ಸೀತಾರಾಮಶಾಸ್ತ್ರಿಗಳವರು ಎದ್ದು ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಪರಸ್ಪರ ಸೌಹಾರ್ದ್ಯ ಉಂಟಾಗಬೇಕಾದರೆ ಇರಬೇಕಾದ ಗುಣ ನಡತೆಗಳನ್ನು ಕುರಿತು ಶಾಸ್ತ್ರೋಕ್ತವಾದ ಉದಾಹರಣ ಪೂರ್ವಕವಾಗಿ ಹೇಳಿದ್ದಲ್ಲದೆ ತಮ್ಮ ಶಿಷ್ಯರು ತಮಗೆ ಮಾಡಿದ ಸತ್ಕಾರಕ್ಕೆ ಅವರನ್ನು ವಂದನಾಪೂರ್ವಕವಾಗಿ ಆಶೀರ್ವದಿಸಿದರು. ಹೆಡ್ ಮಾಸ್ಟರವರಿಗೆ ಹಾರ ತುರಾಯಿಗಳನ್ನು ಹಾಕಿದನಂತರ ಸಭಿಕರಿಗೆಲ್ಲಾ ಗಂಧ, ಪುಷ್ಪ, ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟವು. ಸಾರ್ವಭೌಮರವರಿಗೂ, ಶ್ರೀಮನ್ ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ, ರಾಜವರ್ಗದವರಿಗೂ ಶ್ರೇಯಃ ಪ್ರಾರ್ಥನೆಗಳು ನಡೆಸಲ್ಪಟ್ಟು ಸಭೆಯು ಬರಖಾಸ್ತಾಯಿತು.

ಯುದ್ಧಭೂಮಿಯಲ್ಲಿ ಮೈಸೂರು ಸೈನಿಕರ ಪರಾಕ್ರಮವು.

ಯುದ್ಧಭೂಮಿಯ ಒಂದು ಭಾಗದಲ್ಲಿ ಮೈಸೂರು ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಎಂಬ ಸವಾರ್ ಸೈನಿಕರು ಬಹಳ ಕಷ್ಟಗಳಲ್ಲಿದ್ದರೂ ಶತ್ರುವನ್ನು ಸಂಧಿಸಿ ಹೋರಾಡಿದ ವೃತ್ತಾಂತವು ತಿಳಿಸಲ್ಪಟ್ಟಿದೆ. ನಮ್ಮ ಸಂಸ್ಥಾನದ ಪ್ರಜೆಗಳ ತಿಳುವಳಿಕೆಗೋಸ್ಕರ ಆಗ ನಡೆದ ಸಂಗತಿಗಳನ್ನು ಮಿಲಿಟರಿ ಇಲಾಖೆಯವರು ಪ್ರಕಟಮಾಡಿರುತ್ತಾರೆ. ಅದರ ವಿವರಗಳೇನೆಂದರೆ—

ಯುದ್ಧ ಸಂಭವಿಸುವುದಕ್ಕೆ ಎರಡು ದಿನ ಮುಂಚೆ ನಮ್ಮ ಸೈನಿಕರು ತಮ್ಮ ಠಾಣ್ಯಗಳಿಂದ ಹೊರಟು 30 ಮೈಲಿ ದೂರ ಸುತ್ತಲೂ ಹೋಗಿ ಶತ್ರುವನ್ನು ಹುಡುಕಾಡಿ ಬಂದರು. ಇದರಲ್ಲಿ ಅವರ ಕುದುರೆಗಳು ಬಹಳವಾಗಿ ದಣಿದು ಹೋಗಿದ್ದವು. ಯಾಕೆಂದರೆ ಸುತ್ತಿದ ಪ್ರದೇಶವು ಮರಳುಗಾಡಾಗಿದೆ; ಮರಳು ಗುಡ್ಡಗಳನ್ನು ಹತ್ತಿ ಇಳಿಯಬೇಕು. ಸಾಲದ್ದಕ್ಕೆ ಕುದುರೆಗಳು ಬಹಳ ಭಾರವಾದ ಹೊರೆಗಳನ್ನು ಹೊತ್ತುಕೊಂಡು ಹೋಗಿ ಬರಬೇಕಾಯಿತು. ಮಾರುದಿನ ಬೆಳಗ್ಗೆ ಅಂದರೆ ನೊವೆಂಬರ್ ತಾ. 23 ರಲ್ಲಿ 8 ಗಂಟೆ ಸಮಯದಲ್ಲಿ ನಮ್ಮ ಸವಾರರು ಶತ್ರುವನ್ನು ಕಂಡರು. ಟರ್ಕಿ ಹುದ್ದೇದಾರನ ಕೈಕೆಳಗೆ ಸುಮಾರು 50 ಮಂದಿ ಸೈನಿಕರಿದ್ದರು. ಇವರು ನಮ್ಮ ಸವಾರರ ಮೇಲೆ ತಕ್ಷಣವೇ ಗುಂಡುಗಳನ್ನು ಸುರಿಸಲಾರಂಭಿಸಿದರು. ನಮ್ಮ ಸವಾರರು ಇಟ್ಟುಕೊಂಡಿದ್ದ ಮೆಷೀನ್ ಬಿರಂಗಿಯಿಂದ ಜವಾಬಾಗಿ ಶತ್ರುವಿನ ಮೇಲೆ ಗುಂಡುಗಳನ್ನು ಹೊಡೆದರು. ಶತ್ರು ಸೈನಿಕರು ಆಗ ತಮ್ಮ ಒಂಟೆಗಳ ಮೇಲೆ ಹತ್ತಿಕೊಂಡು ಚದರಿ ಹೋಗುತ್ತಾ ನಮ್ಮ ಸೈನ್ಯದ ಮೇಲೆ ಗುಂಡು ಹೊಡೆಯುತ್ತಾ ಬಂದರು. ನಮ್ಮ ಸೈನಿಕರಲ್ಲಿ ಇಬ್ಬರು ಶತ್ರುವನ್ನು ಮುಂದೆ ನುಗ್ಗಿ ಓಡಿಸಿಕೊಂಡು ಹೋದರು. ಅದುವರೆಗೆ ನಮ್ಮ ಕಡೆಯವರ ಕುದುರೆಗಳು ಇನ್ನೂ 30 ಮೈಲಿ ದೂರ ಓಡಾಡಿ ಪೂರಾ ಕಟ್ಟಿದ್ದವು. ಆದಾಗ್ಯೂ ನಮ್ಮ ಸೈನಿಕರು ಅಧೈರ್ಯಪಡದೆ ಬಹು ಪರಾಕ್ರಮದಿಂದ ತಮ್ಮ ಬಳಿಯಲ್ಲೇ ತಲೆ, ಎದೆ, ಕೈಕಾಲುಗಳ ಸಮೀಪದಲ್ಲೇ ಶತ್ರುವಿನ ಗುಂಡುಗಳು ಗರ್ರನೆ ಬರುತ್ತಿದ್ದಾಗ್ಯೂ ಲಕ್ಷ್ಯಮಾಡದೆ ತಮ್ಮ ಶೌರ್ಯವನ್ನು ತೋರಿಸಿ ಶತ್ರು ಸೈನ್ಯದಲ್ಲಿ 12 ಜನರನ್ನೂ ಬಂದೂಕು ಮೊದಲಾದ ಆಯುಧಗಳನ್ನೂ ರಿಕೇಪುಗಳ ಸಮೇತ ಒಂಟೆಗಳನ್ನೂ ಮದ್ದುಗುಂಡನ್ನೂ ಕೈಸೆರೆ ಹಿಡಿದುಕೊಂಡರು. ಇದಲ್ಲದೆ ನಮ್ಮವರು ಶತ್ರುಗಳಲ್ಲಿ 10 ಜನರನ್ನು ಕೊಂದುಹಾಕಿದರು. ಇವರಲ್ಲಿ ಟರ್ಕಿ ಹುದ್ದೇದಾರರು ಇಬ್ಬರು ಕೊಲೆಯಾದರು. ಈ ಪೈಕಿ ಒಬ್ಬ ಹುದ್ದೇದಾರನು ಸೂಯೆಜ್ ಕಡಲು ಕಾಲುವೆಯ ಪ್ರಾಂತ್ಯದಲ್ಲಿ ತುಂಬ ಕೆಟ್ಟವನು. ಇವನನ್ನು ಮೈಸೂರು ಲ್ಯಾನ್ಸರುಗಳ ಜಮದಾರ್ ಲಿಂಗರಾಜೆ ಅರಸಿನವರು ನುಗ್ಗಿ ಕಡಿದು ಕೊಂದು ಹಾಕಿರುತ್ತಾರೆ. ಆ ಟರ್ಕಿ ಹುದ್ದೇದಾರನು ಒಂಟೆಯ ಮೇಲೆ ಕುಳಿತು ತಪ್ಪಿಸಿಕೊಂಡು ಓಡಿಹೋಗುತ್ತಿದ್ದಾಗ ನಮ್ಮ ಜಮಾದಾರ್ ಲಿಂಗರಾಜೆ ಅರಸಿನವರು ಸವಾರರಿಬ್ಬರ ಕೂಡ ಅವನನ್ನು ಓಡಿಸಿಕೊಂಡು ಹೋದರು. ಕೂಡಲೇ ಟರ್ಕಿ ಹುದ್ದೇದಾರನು ಮರಳುಗುಡ್ಡದ ಕೆಳಭಾಗದಲ್ಲಿ ಒಂಟೆಯಿಂದಿಳಿದು ನಮ್ಮ ಜಮಾದಾರರ ಮೇಲೆ ಗುಂಡು ಹೊಡೆದನು. ಮೂರು ಗುಂಡುಗಳು ಜಮಾದಾರರಿಗೆ ಬಡಿಯದೆ ತಪ್ಪಿಹೋದವು. ನಾಲ್ಕನೇ ಗೋಲಿಯು ಜಮಾದಾರರು ಹತ್ತಿಕೊಂಡಿದ್ದ ಕುದುರೆ ಕಾಲಿಗೆ ಬಡಿಯಿತು. ಕುದುರೆಯು ಕೆಳಗೆ ಬಿದ್ದುಬಿಟ್ಟಿತು. ಒಡನೇ ಒಬ್ಬ ಸವಾರನು ಶತ್ರುವಿನ ಮೇಲೆ ನುಗ್ಗಿಹೋದನು. ಶತ್ರುವು ಗುರಿಯಿಟ್ಟುಕೊಂಡು ಹೊಡೆದದ್ದರಿಂದ ಗೋಲಿ ಬಡಿದು ಸವಾರನು ಬಿದ್ದು ಸತ್ತುಹೋದನು. ಕೂಡಲೆ ಶತ್ರುವು ಓಡಲಾರಂಭಿಸಿದನು. ಅವನು ನಮ್ಮ ಜಮಾದಾರರಿಗೆ ಗುಂಡು ಹೊಡೆಯಬೇಕೆಂದು ಸಿದ್ಧಪಡಿಸುವಷ್ಟರೊಳಗಾಗಿ ಜಮಾದಾರ್ ಲಿಂಗರಾಜೆ ಅರಸಿನವರು ಕಾಲುನಡೆಯಲ್ಲೇ ಅವನ ಬೆನ್ನು ಹತ್ತಿ ಹೋಗಿ ಕೈಲಿದ್ದ ರಿವಾಲ್ವರ್ ಎಂಬ ಪಿಸ್ತೂಲು ಬಾರ್ ಮಾಡಿ ಗುಂಡು ಹೊಡೆದು ಆ ಟರ್ಕಿ ಹುದ್ದೇದಾರನನ್ನು ಕೊಂದು ಕೆಡವಿದರು. ಹಿಂದಿನ ಎರಡು ದಿನಗಳಲ್ಲೂ ನಮ್ಮ ಸೈನಿಕರೂ ಅವರ ಕುದುರೆಗಳೂ ಬಹಳವಾಗಿ ದಣಿದು ಹೋಗಿದ್ದರೂ ಅವರು ಲಕ್ಷ್ಯಮಾಡದೆ ಶತ್ರುವಿನ ಮೇಲೆ ನುಗ್ಗಿ ಅವರನ್ನು ಸೋಲಿಸಿ ಕೊಂದು ಚದರಿಸಿಬಿಟ್ಟಿದ್ದು ಅವರ ಪರಾಕ್ರಮಗಳನ್ನು ಪ್ರಕಾಶಪಡಿಸುತ್ತದೆ ಎಂಬದಾಗಿ ಕಮ್ಯಾಂಡಿಂಗಿನ ಜನರಲ್ ಆಫೀಸರವರು ಅವರನ್ನು ಬಹಳವಾಗಿ ಕೊಂಡಾಡಿರುತ್ತಾರೆ.

ಮೈಸೂರು ಸರ್ಕಾರಿ ವ್ಯವಸಾಯದ ಇಲಾಖೆಯ ಇಸ್ತಿಹಾರು.

ವ್ಯವಸಾಯದ ಮುಟ್ಟುಗಳನ್ನು ಕಂತುಗಳ ಮೂಲಕ ಬಿಕರಿಮಾಡುವ ವಿಧಾನ.

1916 ನೇ ಇಸವಿ ಜನವರಿ 1 ನೇ ತಾ. ಲಾಗಾಯಿತು ಮೈಸೂರು ಸಂಸ್ಥಾನದ ರೈತರುಗಳಿಗೆ ಮುಟ್ಟುಗಳನ್ನು ಕಂತುಗಳ ಮೂಲಕ ಮಾರಾಟಮಾಡಲು ಉಪಕ್ರಮಿಸಲಾಗಿದೆ. ಸದರಿ ಮಾರಾಟಕ್ಕೆ ಸಂಬಂಧಿಸುವ ನಿಯಮಗಳು ತಿಳಿ... ಕೆ ಬಗ್ಗೆ ಪ್ರಕಟಿಸಲ್ಪಟ್ಟಿದೆ.

ವ್ಯವಸಾಯದ ಮುಟ್ಟುಗಳನ್ನು ಕಂತುಗಳ ಮೂಲಕ ಬಿಕರಿಗಾಗಿ ರಚಿಸಿ... ನಿಯಮಗಳು:—ನವೀನ ವ್ಯವಸಾಯದ ಮುಟ್ಟುಗಳನ್ನು ಸಂಸ್ಥಾನದಲ್ಲಿ ಜಾಸ್ತಿ... ಹೆಚ್ಚಾಗಿ ಉಪಯೋಗಿಸುವಂತೆ ಮಾಡುವದಕ್ಕೋಸ್ಕರ ಮುಟ್ಟುಗಳ ಡಿಪೋ... ಸಿಂದ ರೈತರಿಗೆ ಸಾಲವಾಗಿ ಮಾರಲಾಗುವದು ಮತ್ತು ಅವುಗಳ ಕಿಮ್ಮತ್ತನ್ನು ಇದರಡಿ ವಿಧಿಸಿರುವ ಸುಲಭವಾದ ಕಂತುಗಳ ರೂಪದಲ್ಲಿ ವಸೂಲ್ಮಾಡಲಾಗುವದು. ಯಾವನೊಬ್ಬ ರೈತನಾಗಲೀ ಯಾ ಜಮೀನ್ ಹಿಡುವಳಿದಾರನಾಗಲೀ ಮಾ... ಲ್ಪಟ್ಟ ಮತ್ತು ಯಾವದಾದರೊಂದು ಸಮಯದಲ್ಲಿ ವಸೂಲಾಗಬೇಕಾದ ಮುಟ್ಟುಗಳ ಕಿಮ್ಮತ್ತು 2,000 ರೂಪಾಯಿಗಳಿಗೆ ಮೀರಕೂಡದು. ಸಾಲಿಯಾನಾ ... ಯ ದರವು ಶೇಕಡ 5 ರಂತೆ ಹಾಕಲ್ಪಡುವದು. ವ್ಯವಸಾಯದ ಮುಟ್ಟುಗಳನ್ನು ಅಪೇಕ್ಷಿಸುವವರು ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ದರಖಾಸ್ತು ಮಾ... ಕೊಳ್ಳತಕ್ಕದ್ದು. ಕರಾರನ್ನು ಬರೆದು ಕೊಟ್ಟು ವಿನಹಾ ಯಾವ ದರಖಾಸ್ತುದಾರನ ದರಖಾಸ್ತೂ ಮಂಜೂರ್ ಮಾಡಲಾಗುವದಿಲ್ಲ. ಮುಟ್ಟುಗಳ ಕಿಮ್ಮತ್ತಿನ ನಾಲ್ಕನೇ ಒಂದು ಭಾಗ ಹಣವನ್ನು ಮುಂಗಡ ಬಗ್ಗೆ ದರಖಾಸ್ತಿನ ಸಮೇತ ಹಾಜರು ಮಾಡಿದ ಹೊರತು ಯಾವ ದರಖಾಸ್ತನ್ನೂ ಪರ್ಯಾಲೋಚಿಸಲಾಗದು. 100 ರೂಪಾಯಿ ಮತ್ತು ಅದಕ್ಕಿಂತ ಕಡಮೆ ಕಿಮ್ಮತ್ತು ಬಾಳುವ ಮುಟ್ಟುಗಳ ವಿಷಯದಲ್ಲಿ ಕಂತುಗಳು ಸಾವತಿ ಮಾಡುವದಕ್ಕೆ ವಾಯಿದೆ ಮೂರು ವರ್ಷಗಳಾಗಿಯೂ, ಉಳಿದ ಇತರ ಸಂದರ್ಭಗಳಲ್ಲಿ 5 ವರ್ಷಗಳಾಗಿಯೂ ಇರತಕ್ಕದ್ದು.

ಕಂತುದಾರನ ಹತೋಟಿಗೆ ಮೀರಿದ ಕಾರಣಗಳಿಂದ ಯಾವದಾದರೊಂದು ಕಂತನ್ನು ಕೊಡಲು ಆತನಿಗೆ ಅತಿ ಭಾರವಾಗಿ ಕಂಡುಬಂದರೆ ಆ ಕಂತನ್ನು ಮತ್ತು ತದನಂತರ ಪಾವತಿಮಾಡಬೇಕಾದ ಕಂತುಗಳನ್ನೂ ಈ ನಿಯಮಗಳಲ್ಲಿ ಅಡಗಿರುವ ಷರತ್ತುಗಳು ಏನೇ ಇದ್ದಾಗ್ಯೂ ಡೈರೆಕ್ಟರವರು ಒಂದು ಕಂತಿನ ವಾಯಿದೆ ವರೆಗೆ ನಿಲ್ಲಿಸಬಹುದು. ಹೀಗೆ ನಿಲ್ಲಿಸಿದ ಕಂತು ಮೊಬಲಗಿನ ಮೇಲೆ ಶೇಕಡ ಸಾಲಿಯಾನಾ 6 ರಂತೆ ಸರಳ ಬಡ್ಡಿಯು ಹಾಕಲ್ಪಡುವದು. ಈ ನಿಯಮಗಳ ಪ್ರಕಾರ ವಸೂಲಾಗಬೇಕಾದ ಮೊಬಲಗುಗಳೆಲ್ಲವೂ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು. ಕಂತುದಾರನು ಬರೆದು ಕೊಡುವ ಪ್ರತಿ ಕರಾರಿನಲ್ಲಿಯೂ ಈ ಷರತ್ತನ್ನು ನಮೂದಿಸತಕ್ಕದ್ದು.

ಕಂತುದಾರನು ಬರೆದುಕೊಟ್ಟ ಕರಾರಿನ ಪ್ರಕಾರ ತಾನು ಪಾವತಿಮಾಡಬೇಕಾದ ಕಂತುಗಳನ್ನೆಲ್ಲಾ ಪಾವತಿಮಾಡುವ ಪರ್ಯಂತರವೂ ಈ ನಿಯಮಗಳನ್ನನುಸರಿಸಿಕೊಟ್ಟ ಮುಟ್ಟುಗಳೆಲ್ಲವೂ ಮೈಸೂರು ಸರ್ಕಾರದ ಆಸ್ತಿಗಳಾಗಿರುತ್ತವೆ ಮತ್ತು ಈ ವಾಯಿದೆ ಒಳಗೆ ವ್ಯವಸಾಯದ ಇಲಾಖಾ ಡೈರೆಕ್ಟರವರು ಸ್ವಸ್ಥವೆಂತ ಭಾವಿಸುವಂತೆ ಅವುಗಳು ಕೆಲಸಕ್ಕೆ ಅನುಕೂಲವಾಗಿರುವ ರೀತಿಯಲ್ಲಿ ಇಟ್ಟಿರತಕ್ಕದ್ದು. ಯಾವ ಕಾಲದಲ್ಲಿಯಾದರೂ ಡೈರೆಕ್ಟರವರಿಗೆ ಕಂತುದಾರನು ಕರಾರಿನ ಷರತ್ತುಗಳೆಲ್ಲಾ ಅಥವಾ ಯಾವದಾದರೂ ಷರತ್ತಿಗೆ ವಿರುದ್ಧವಾಗಿ ನಡೆಸುತ್ತಾನೆಂತಾಗಲೀ ಅಥವಾ ಮುಟ್ಟುಗಳನ್ನು ಸರಿಯಾಗಿ ಕೆಲಸಕ್ಕೆ ಉಪಯೋಗಿಸಲು ಅನುಕೂಲವಾಗಿರುವ ರೀತಿ ಇಟ್ಟಿಲ್ಲವೆಂಬ ಅಂಶವಾಗಲೀ ಕಂಡುಬಂದಲ್ಲಿ ಸದರಿ ಡೈರೆಕ್ಟರವರು ತಮ್ಮ ತೀರ್ಮಾನಕ್ಕೆ ತಕ್ಕ ಕಾರಣಗಳನ್ನು ಲಿಖಿತ ಮೂಲಕ ಬರೆದು ಮುಂದೆ ಕಂತುದಾರನಿಂದ ಬರಬೇಕಾದ ಕಂತುಗಳೆಲ್ಲ ಮತ್ತು ಅದಕ್ಕೆ ತಗಲಬಹುದಾದ ಖರ್ಚು ಸಮೇತ ಕಂದಾಯ ಬಾಕಿಯಂತೆ ಕೂಡ್ಲೆ ವಸೂಲ್ ಮಾಡಲು ಹುಕುಂ ಮಾಡಬಹುದು. ಅಂಥಾ ಹುಕುಂ ನಕಲು ಡಿಸ್ಟ್ರಿಕ್ಟ್ ಕಾಪಿಯು ಡೆಪ್ಯುಟಿ ಕಮಿಷನರವರಿಗೆ ತಲುಪಿದ ಒಡನೆಯೇ ಅವರು ಅಂಥಾ ಬಾಕಿದಾರ ಅಥವಾ ಬಾಕಿದಾರರಿಂದ ವಸೂಲಾಗಬೇಕಾದ ಮೊಬಲಗು, ಅದಕ್ಕಾಗತಕ್ಕ ಬಡ್ಡಿ ಮತ್ತು ಖರ್ಚು ಸಮೇತ ಜಮೀನ್ ಕಂದಾಯದ ಬಾಕಿಯಂತೆಯೇ ವಸೂಲ್ಮಾಡುವದಕ್ಕೆ ತಕ್ಕ ಕ್ರಮ ನಡಿಸಬಹುದು. ಆದರೆ ಅಂಥಾ ಅಧಿಕಾರಿಯು ತನಗೆ ಯುಕ್ತವೆಂತ ಕಂಡುಬಂದಲ್ಲಿ ವ್ಯವಸಾಯದ ಇಲಾಖಾ ಡೈರೆಕ್ಟರವರ ಅನುಮತಿಯನ್ನು ಪಡೆದು ಬಾಕಿಯಾಗಿ ಪೂರಾ ಮೊಬಲಗಿಗಿಂತ ಕಡಮೆಯಾಗಿ ಎಷ್ಟು ಮೊಬಲಗನ್ನಾದರೂ ವಸೂಲ್ಮಾಡಬಹುದು. ಆದರೆ ಬಾಕಿ ನಿಂತ ಮೊಬಲಗನ್ನು ಆ ಮೇಲೆ ಯಾವಾಗಲಾದರೂ ವಸೂಲ್ಮಾಡಲು ಇದರಿಂದ ಯಾವ ಪ್ರತಿಬಂಧಕವೂ ಇರುವದಿಲ್ಲ.

ಇದಕ್ಕೆ ಸಂಬಂಧಪಟ್ಟ ದರಖಾಸ್ತು ಮತ್ತು ಇತರ ಫಾರಂಗಳನ್ನು ... ಕೆಳಗೆ ನಮೂದಿಸಿರುವ ಆಫೀಸುಗಳಿಂದ ಪಡೆಯಬಹುದು:—ಬೆಂಗಳೂರಿನಲ್ಲಿರುವ ವ್ಯವಸಾಯದ ಇಲಾಖಾ ಡೆಪ್ಯುಟಿ ಡೈರೆಕ್ಟರವರು, ಶಿವಮೊಗ್ಗದಲ್ಲಿರುವ ವ್ಯವಸಾಯದ ಇಲಾಖಾ ಅಸಿಸ್ಟೆಂಟ್ ಡೈರೆಕ್ಟರವರು, ಎಲ್ಲಾ ಡಿಸ್ಟ್ರಿಕ್ಟುಗಳ ಎಕ್ಸಿಕ್ಯುಟಿವ್ ಸೂಪರಿಂಟೆಂಡೆಂಟರವರು, ಎಲ್ಲಾ ತಾಲ್ಲೂಕು ಅಮಲ್ದಾರು ಮತ್ತು ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರರು, ಹೆಬ್ಬಾಳದ ಪ್ರಯೋಗ ಕ್ಷೇತ್ರದ ಮ್ಯಾನೇಜರವರು, ಬೆಂಗಳೂರು ವ್ಯವಸಾಯದ ಇಲಾಖಾ ಡೈರೆಕ್ಟರವರ ಆಫೀಸು ವ್ಯವಸಾಯದ ಮುಟ್ಟುಗಳ ಕೋಠಿ ಛಾರ್ಜಿನಲ್ಲಿರುವ ವ್ಯವಸಾಯದ ಇಲಾಖಾ ಇನ್‌ಸ್ಪೆಕ್ಟರವರು.

ಮಿತವ್ಯಯ.

ಕಲ್ಲಿಕೋಟೆಯ ಮ|| ಎಚ್. ಭೀಮರಾಯರು ಅರ್ಥಸಾಧಕ ಪತ್ರಿಕೆಯಲ್ಲಿ ಮೇಲ್ಕಂಡ ವಿಷಯವನ್ನು ಕುರಿತು ಬರೆದಿರುವುದನ್ನು ನಮ್ಮ ವಾಚಕರು ಓದಿ ಮನನ ಮಾಡಿಕೊಳ್ಳಲೆಂದು ಅದನ್ನು ಎತ್ತಿ ಇಲ್ಲಿ ಪ್ರಕಟಿಸಿರುತ್ತೇವೆ.

ಮಿತವ್ಯಯವು ಜೀವನದ ಸಾರವೆಂದು ಧಾರಾಳವಾಗಿ ಹೇಳಬಹುದು. ಆದರೆ ಅದನ್ನು ತಿಳಿದವರು ಅತಿ ವಿರಳ. ಆಚರಿಸತಕ್ಕವರು ಇನ್ನೂ ವಿರಳ. "ನಾಳೆ ನಾವೆಲ್ಲಿಯೋ? ಇಂದು ಮಾಡಿದುದೇ ಬಂತು" ಎಂದು ಹೇಳುವವರೇ ನಮ್ಮಲ್ಲಿ ಹೆಚ್ಚಾಗಿರುವರು. ಮಿತವ್ಯಯದ ಅಭಾವವು ಅನೇಕಾನೇಕ ಗೃಹಸ್ಥರುಗಳನ್ನು ನಿರ್ಮೂಲ ಮಾಡಿ, ಶ್ರೀಮಂತರನ್ನು ಹೀನಸ್ಥಿತಿಗೆ ತಂದಿರುವುದಿಲ್ಲವೇ?

ಜಗದ ರಾಶಿಯಲ್ಲಿ ತೇಲಾಡುತ್ತ, ಅಟ್ಟಹಾಸದಿಂದಿರುವ ಆ ಲಕ್ಷ್ಮೀಪುತ್ರರಲ್ಲಿ ಎಷ್ಟು ಮಂದಿ ತಾನೇ "ಮಿತವ್ಯಯ" ವನ್ನು ಕುರಿತು ಚಿಂತಿಸಿರುವರು? ಎಷ್ಟು ಮಂದಿ ತಾನೇ "ಆಡಂಬರ" ದ ಸಲುವಾಗಿ ವೆಚ್ಚವಾಗಿ ಹೋಗುವ "ವೃಥಾವ್ಯಯ" ದ "ಅನಾವಶ್ಯಕ" ಸಂಖ್ಯೆಯನ್ನು ಎಣಿಸಿರುವರು? ಇದರಿಂದ ಶ್ರೀಮಂತರು ಸಂಪೂರ್ಣವಾಗಿ ಕೈಬಿಗಿ ಹಿಡಿಯಬೇಕೆಂಬ ಅರ್ಥವಲ್ಲ. ಅವರವರ ಯೋಗ್ಯತೆ, ಪದವಿ ಗೌರವಗಳಿಗೆ ತಕ್ಕಂತೆ ವೆಚ್ಚವು ನಡೆಯಲೇ ಬೇಕು. ಆದರೆ "ಇರುವೆ ಕಚ್ಚಿದರೂ ವೈದ್ಯರೇ ಬೇಕು" ಎಂಬ ಇಂತಹ ಸೂತ್ರಗಳು "ಮಿತವ್ಯಯ" ದ ವ್ರತವನ್ನು ಎಷ್ಟರ ಮಟ್ಟಿಗೆ ಸಾಂಗಗೊಳಿಸುವವೋ ಸಂದೇಹವಾಗಿದೆ.

ಮದುವೆ, ಮುಂಜಿ; ಹಬ್ಬ, ಹುಣ್ಣಿಮೆ; ಇವುಗಳು ನಮ್ಮ ಜನ... ಸ್ವಲ್ಪ ಜಾಣಿಕೆಯಾಗಿ ಪರಿಣಮಿಸಿದಂತೆ ಕಾಣುತ್ತದೆ. ಅದು ನಮ್ಮ ... ಎಂದು ಹೇಳಬೇಕಾಗಿಲ್ಲ. "ಇವುಗಳನ್ನು ಮಾಡಿ ಮನೆ ಕಳೆದುಕೊಳ್ಳಿ" ಎಂದು ಯಾವ ಶಾಸ್ತ್ರಕಾರನೂ ಯಾವ ಕಾಲದಲ್ಲಿಯೂ ಅಭಿಪ್ರಾಯಪಟ್ಟಿರಲಾರನು ... ಅವುಗಳೆಲ್ಲವೂ ಸಂತೋಷಕಾಲಗಳೆಂಬುದು ನಿಜ. ಆದರೆ ಮುಂದೆ ಬರ... ದಾದ ದುಃಖವನ್ನು ಮನಸ್ಸಿನಲ್ಲಿಟ್ಟುಕೊಂಡು ಅಂದು ಸಂತೋಷವನ್ನು ... ತೋರಿಸಿಕೊಳ್ಳುವುದೂ, ಒಂದು ದಿನದ ಆನಂದಕ್ಕಾಗಿ ಜೀವಮಾನವನ್ನೇ ... ಮಾಡಿಕೊಳ್ಳುವುದೂ ಕೇವಲ ಹುಚ್ಚುತನವೇ ಅಲ್ಲದೆ ಮತ್ತೇನು!

ಹೊಟ್ಟೆ, ಬಟ್ಟೆಗಳೆಂಬುವು ಮನುಷ್ಯನ ಪ್ರಾಮುಖ್ಯವಾದ ಅವಶ್ಯ... ಅಲ್ಲಿಯೂ ಕುಂದುಕೊರತೆಗಳೆಲ್ಲವೆ, ನೋಡಿ! ತಂಗಳ ಗ್ರಾಸವನ್ನು ತಿನ್ನು... ಗಳಲ್ಲಿಯೇ ತಿಂದು ಧನಿಕರಾದವರೆಷ್ಟು ಮಂದಿ? ಕೈಯಲ್ಲಿ ಕಾಸಿಲ್ಲದಿದ್ದರೂ ... ಮಾಡಿ "ಕಾಫಿ" ಕುಡಿಯುದವರೆಷ್ಟು ಮಂದಿ? ಇನ್ನು ಇದರ ಮೇಲೆ ...

...ಕ್ಷೀಣತೆ, ಕುಡಿತ ಮೊದಲಾದ ದುರಭ್ಯಾಸಗಳು. ಇವುಗಳಿಂದ ಕಾಲವು ವ್ಯರ್ಥವಾಗಿ ಕರಗಿಹೋಗುವ ದ್ರವ್ಯವೆಷ್ಟೋ, ಹಿಂದಿರುಗಿ ಸಿಕ್ಕಲಾರದ ... ಲೆಕ್ಕಿಸಬೇಕಾದರೆ ನೂರಾರು ಗುಮಾಸ್ತರು ಹಗಲಿರುಳೂ ಅದೇ ಕೆಲಸವನ್ನೇ ಮಾಡಬೇಕಾದೀತಲ್ಲವೆ?

ನಾಗರಿಕತೆಯು ಹೆಚ್ಚುತ್ತ ಬಂದಂತೆ "ಮಿತವ್ಯಯ"ವು ಹಿಂಜರಿಯುವಂತೆ ... "ಷೋಕಿನ" ಕನ್ನಡಕಕ್ಕೆ ರೂಪಾಯಿ ಹದಿನೈದು! ಫ್ಲಾನಲ್ ... ಕ್ಕೆ ಬಡತನದಲ್ಲಿ ರೂಪಾಯಿ ಇಪ್ಪತ್ತೈದು! ನಾಗರಿಕತೆಯ ಜತೆ ... ಇತರ "ಷೋಕು"ಗಳಿಗೆ ಇನ್ನೂ ಹೆಚ್ಚಿನ ವೆಚ್ಚಗಳು. ಪೌಡರ್, ... ಸ್, ಅತ್ತರ್ ಇವುಗಳನ್ನೆಲ್ಲಾ ಹಾಕಿಕೊಂಡು ಯೋಗ್ಯತೆಯಿಲ್ಲದ ಬಡ ಮಕ್ಕಳೂ ಒದ್ದಾಡುವುದಾದ ಮೇಲೆ ದೇಶವೇ "ದಿವಾಳಿ"ಯಾಗುವುದರಲ್ಲಿ ... ತಡವೇನು?

ಗೃಹಕೃತ್ಯ, ಸಂಘ, ಸಭೆ, ಸಂಸ್ಥೆ, ರಾಜ್ಯ ಮೊದಲಾದುವುಗಳಿಗೆ ಅವಶ್ಯ ... ವೆಚ್ಚಗಳನ್ನು ಎಚ್ಚರಿಕೆಯುಳ್ಳ ಆಡಳಿತದಿಂದಲೂ, ಕ್ರಮವಾದ ಪರಾ... ದಿಂದಲೂ, ನಷ್ಟವಾಗದಂತೆಯೂ, ಹಾಳಾಗದಂತೆಯೂ ನೋಡಿಕೊಂಡು ಆದಾಯದಲ್ಲಿನ ಕೆಲವಂಶಗಳನ್ನು ಉಳಿಸಿ, ವೃದ್ಧಿಪಡಿಸುತ್ತಿರುವುದೇ "ಮಿತವ್ಯಯ"ದ ಲಕ್ಷಣ. ಆ ಬುದ್ಧಿಯು ಪ್ರಯತ್ನವಿಲ್ಲದೆ ಬರತಕ್ಕದ್ದಲ್ಲ ... ಅನುಭವ, ವ್ಯವಹಾರಜ್ಞಾನ, ಆಳವಾದ ಆಲೋಚನೆ, ದೂರದೃಷ್ಟಿ ... ಅವಶ್ಯವಾಗಿರಬೇಕು. "ಮಿತವ್ಯಯ"ವೆಂಬುದು ಒಂದು ಶಾಸ್ತ್ರ ... ಸ್ತ್ರೀಪುರುಷರೆಲ್ಲರೂ ತಿಳಿದಿರಬೇಕಾದ ಮುಖ್ಯಾಂಶ. ವಿದ್ಯಾ ಇಲಾಖೆಯವರು ಈ ವಿಷಯವನ್ನು ಪರ್ಯಾಲೋಚಿಸಿ ಮಿತವ್ಯಯದ ಬೋಧನೆಯು ... ಬಾಲಕಿಯರಿಗೆ ಸಿಕ್ಕುವಂತೆ ಏರ್ಪಡಿಸಿದರೆ ದೇಶಕ್ಕೂ ಜನಗಳಿಗೂ ... ಉಪಕಾರವಾದೀತು.

ಇಷ್ಟೇ ಅಲ್ಲ, ಪ್ರಜೆಗಳ ಕರ್ತವ್ಯವೂ ಇದರಲ್ಲಿ ಪ್ರತ್ಯೇಕವಾಗಿದೆ. ಕೆಲವು ... ದುರ್ವ್ಯಸನಗಳಿಂದಲೂ, ದುಂದುಗಾರಿಕೆಯ ಬುದ್ಧಿ, ದುರಭ್ಯಾಸಗ... ಎಷ್ಟೋ ಲಕ್ಷ ರೂಪಾಯಿಗಳು, ಚಿಕ್ಕ ದೊಡ್ಡ ದಾರಿ ಹಿಡಿದು, ... ಗೊತ್ತಾಗದೆಯೂ ನಷ್ಟವಾಗಿ ಹೋಗುತ್ತದೆಂದು ಮೊದಲೇ ... ಬಾಲ್ಯಕಾಲದಲ್ಲಿ ಶಿಕ್ಷಣ ರಕ್ಷಣ ಕರ್ತರ ದೃಷ್ಟಿಯು ಅನೇಕ ವೇಳೆ ... ದಿಂದ ಮುಂದಿನ ಕೇಡು ಸಂಭವಿಸಲು ಅವಕಾಶವಾಗುತ್ತದೆ. ... ಸಹವಾಸ ಸಂಪರ್ಕಗಳಿಂದ ಅನೇಕ ದುರ್ಗುಣಗಳನ್ನು ಬಾಲ್ಯದ ... ಬರುವುದರಿಂದ ಹೆತ್ತವರೂ ಉಪಾಧ್ಯಾಯರೂ ಅವುಗ... ಅಲ್ಲಲ್ಲಿಯೇ ಮುರಿಯಲು ಪ್ರಯತ್ನಿಸಬೇಕು. ಪ್ರಜೆಗಳು ಸಂಘವನ್ನೇ ... ಹಾನಿಕರವಾದ ವಿಷಯಗಳನ್ನು ಚರ್ಚಿಸಿ ತಕ್ಕ ನಿಯಮಗ... ಒಕ್ಕಟ್ಟಿನಿಂದಲೂ ಅವುಗಳ ಪ್ರಾಬಲ್ಯವನ್ನು ತಗ್ಗಿಸುವುದಕ್ಕೆ ಸಾಹಸ ... ಬೇಕು. ಹಾಗೆ ಮಾಡುವುದರಿಂದ ಈಗ ಅನ್ಯಥಾ ವ್ಯಯವಾಗುವ ಎಷ್ಟೋ ... ರೂಪಾಯಿಗಳನ್ನು ಉಳಿಸಬಹುದು. ಮತ್ತು ಅದನ್ನೇ ನಮ್ಮ ಕೈಗಾ... ವ್ಯಾಪಾರ, ವ್ಯವಸಾಯ ಮೊದಲಾದ ಉಪಯುಕ್ತ ಕಾರ್ಯಗಳಲ್ಲಿ ವಿನಿ... ಪರದೇಶಕ್ಕೆ ಪ್ರಯಾಣಮಾಡುವ ದುಡಿತದ ಜೀಲವನ್ನು ಅಡ್ಡಗಟ್ಟಿ ... ಅನ್ನಗಳನ್ನು ವೃದ್ಧಿಪಡಿಸಿದ ಪುಣ್ಯ ಕೀರ್ತಿಗಳಿಗೂ ಭಾಗಿಗಳಾಗ... ಮುಖ್ಯವಾಗಿ "ಹಾಸಿಗೆ ಇದ್ದಷ್ಟೇ ಕಾಲು ನೀಡಬೇಕು" ಎಂಬು... ಪ್ರತಿಯೊಬ್ಬನೂ ಆಚರಿಸಬಲ್ಲವನಾದರೆ ನಮ್ಮ ಕಂದುಕೊರತೆಗಳಲ್ಲಿ ... ದೊಡ್ಡ ಭಾಗವನ್ನೇ ಸರಿಪಡಿಸಿಕೊಂಡಂತಾಯಿತೆಂದು ... ಬಹುದು.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಬರುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ... ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ... ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ... ಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ... ಗಳಲ್ಲಿ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಕಟಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮ... ವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧ... ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಮೇಲಿನ ವಾರದಲ್ಲೇ ಪ್ರಕಟವಾಗುವ... ಕಡೆಯ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ... ಹೇಳುತ್ತೇವೆ.

ಕರೆಸ್ಪಾಂಡೆನ್ಸ್.

ಒಂದು ಸುಳ್ಳು ಸುದ್ದಿ.

ಅಮ್ಯ.—ನಾನು ನೆನ್ನೆಯೂ, ಈ ದಿನ ಬೆಳಿಗ್ಗೆಯೂ ಇಟ್ಟಿಗೆಗೂಡಿನ ಬೀದಿ... ಹೋಗುತ್ತಿದ್ದಾಗ ಕೆಲವು ಜನಗಳು ಕೋಳಿಗಳನ್ನು ಬೀದಿಗಳಲ್ಲಿ ಓಡಾ... ಹಿಡಿಯುತ್ತಿದ್ದರು. ನಾನು ಅದು ಯಾತಕ್ಕೆಂದು ಅವರನ್ನು ಕೇಳುವಕ್ಕೆ ... ಹೇಳಿದ್ದೇನೆಂದರೆ—ಇಲ್ಲಿ ಬಲಾತ್ಕಾರವಾಗಿ ಕೋಳಿಗಳನ್ನು ಹಿಡಿಯುತ್ತಾರೆ ಎಂಬುದಾಗಿಯೂ ಮತ್ತು ಕೆಲವು ಕಡೆಯಲ್ಲಿ ಹಿಡಿದುಕೊಂಡು ... ಎಂಬುದಾಗಿಯೂ ಕೇಳಿದೆನೆಂದೂ ಅದಕ್ಕೋಸ್ಕರ ಅವನ್ನು ಹಿಡಿದು ... ದಿಂದ ಹೇಳಿದರು. ಈ ವಿಷಯವೂ ಅನೇಕರಲ್ಲಿ ಹುಟ್ಟಿ ಹಬ್ಬಿ... ಮೇಲ್ಕಂಡ ವಿಚಾರ ಹಾಗೆ ಎಂಬುದನ್ನು ತಮ್ಮ ಪತ್ರಿಕೆಯಲ್ಲಿ ಪ್ರಚುರ... ಬೇಕೆಂಬದಾಗಿ ಕೇಳಿಕೊಳ್ಳುತ್ತೇವೆ. ಚಂದಾದಾರ.

[ಯಾರೋ ಅವಿವೇಕಿಗಳು ಇಂಥಾ ಸುಳ್ಳು ಸುದ್ದಿಯನ್ನು ಹುಟ್ಟಿಸಿ ಜನಗಳೂ ... ಹರಡಿದರು. ಅದು ಮೈಸೂರಿನ ತನಕ ವ್ಯಾಪಿಸಿದ್ದು ಆಶ್ಚರ್ಯಕರವೂ ... ಆಗಿದೆ. ಪೋಲೀಸಿನವರು ಅಂಥಾ ದುಷ್ಟರನ್ನು ಹಿಡಿದು ತಕ್ಕ ಶಾಸ್ತಿ ... ಮಾಡಬೇಕು.—ಎಡಿ.]

ಒಂದು ಕರ್ನಾಟಕ ವೈದ್ಯಶಾಲೆ.

ಅಮ್ಯ.—ಚನ್ನಗಿರಿ ತಾಲ್ಲೂಕು ಬಸವಾಪಟ್ಟಣಕ್ಕೆ ಕರ್ನಾಟಕ ಆಸ್ಪತ್ರೆಯು ಮಂಜೂರಾಗಿ 8-9 ವರ್ಷಗಳಾಗುತ್ತಾ ಬಂದಿತು. ಆ ಆಗಾಯಿತು... ಪಂಡಿತರಾದವರೂ ಬಹಳ ದಿನಗಳ ವರೆಗೆ ಇರಲಿಲ್ಲ. ಇದಕ್ಕೆ ಗ್ರಾಮಸ್ಥರ ... ಮತ್ತು ಅಗೌರವವೇ ಕಾರಣಭೂತವಾಗಿವೆ. ಈಗಿರುವ ಪಂಡಿತರು ಮ|| ... ಆನಂದಾಳ್ವಾರ್ರವರು ಬಂದು ಒಂದು ವರ್ಷದಿಂದ ನಿಷ್ಪಕ್ಷಪಾತಿಗಳಾಗಿ ... ಮಾಡುವುದು ಬಹಳ ಶ್ಲಾಘನೀಯವಾಗಿವೆ. ಇಂಥಾ ಪಂಡಿತರಮೇಲೂ ... ದವರು ಚರ್ಚೆ ಮಾಡುತ್ತಾರೆ. ಇದಕ್ಕೆ ನಮ್ಮ ಅಮಲ್ದಾರರು ... ಸಿದ ವೈದ್ಯಶಾಲೆಯನ್ನು ಅಭಿವೃದ್ಧಿಗೆ ತರುತ್ತಾರೆಂಬುದರಲ್ಲಿ ಸಂದೇಹ ... ಆಸ್ಪತ್ರೆ ವಿಷಯವಾಗಿ ಬಸವಾಪಟ್ಟಣದ ಗ್ರಾಮಸ್ಥರಿಗೆ ಲೇಶವೂ ... ನಂಬಿಕೆ ಇಲ್ಲದೆ ಬಹಳ ಅಲಕ್ಷ್ಯಮಾಡುವಂತೆ ಕಾಣುತ್ತದೆ ... ಗ್ರಾಮದವರು ಬಹಳವಾಗಿ ಗೌರವಿಸುವುದರಿಂದ ಸದರಿ ಆಸ್ಪತ್ರೆ ... ಸರ್ಕಾರದವರು ಬೇರೆ ಗ್ರಾಮಕ್ಕೆ ವರ್ಗಾಯಿಸಿ ವೈದ್ಯಶಾಲೆಯನ್ನು ... ಸ್ಥಿರವಾಗಿರುವಂತೆಯೂ, ಅಭಿವೃದ್ಧಿಸ್ಥಿತಿಗೆ ತರುವಂತೆಯೂ ಕೋರಿಕೆ.

ಒಬ್ಬ ನರೋಗಿ.

ಶಿವಮೊಗ್ಗಾ ವಿದ್ಯಾ ವಿಸ್ತಾರದರ ವಿಚಾರ.

ಅಮ್ಯ.—ನಾನು ತಾ. 16ನೇ ಮಧ್ಯಾಹ್ನ 12 ಘಂಟೆ ಸಮಯದಲ್ಲಿ ಸರಕಾರಿ ಆಸ್ಪತ್ರೆ ಸಮೀಪ ಡಾಕ್ಟರ ಮನೆ ಮುಂದೆ ಇರುವ ವಿದ್ಯಾರ್ಥಿಯು ಅಪಘಾತಗ್ರಸ್ತನಾದ ತನ್ನ ಸ್ನೇಹಿತನ ಔಷಧಿಗಾಗಿ ಕೆಲವು ಹೊತ್ತಿನಿಂದ ಕಾದಿರುವುದನ್ನು ತಿಳಿದು, ವೈದ್ಯರ ಧರ್ಮವನ್ನು ಕೂಗಿಕೊಂಡ ಕಡೆಗೆ ಬಟ್ಟೆಯನ್ನು ತೊಟ್ಟುಕೊಂಡು ಬರುವದಾಗಿ ಬಂದ ಜವಾಬು ಕೇಳಿ ಸ್ಟೂಡೆಂಟ್ಸ್ ಹೋಂ ಎಂಬ ಸ್ಥಳಕ್ಕೆ ಹೋಗಿ ವಿಷಯವನ್ನು ವಿಚಾರಿಸಲಾಗಿ ಮೆಟ್ರಿಕ್ಯುಲೇಷನ್ ಕ್ಲಾಸ್ ವರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿ ಕಡೂರು ಪುಟ್ಟರಾಮಯ್ಯನೆಂಬವನು ತನ್ನ ಕಡೇ ಸ್ಥಿತಿಯಲ್ಲಿದ್ದನು. ಇಂತಹ ಸ್ಥಿತಿಯಲ್ಲಿಯೂ ಕೂಡ ಈ ಸ್ಟೂಡೆಂಟ್ಸ್ ಹೋಮಿಗೆ ಜವಾಬ್ದಾರರಾಗಿರತಕ್ಕ ಯಾರೂ ವಿಚಾರಮಾಡಿಕೊಂಡಂತೆ ತಿಳಿದು ಬರಲಿಲ್ಲ. ಸಹಾಧ್ಯಾಯಿಗಳಾದ ಸ್ನೇಹಿತರು ಮಾತ್ರ ಈತನನ್ನು ಬಿಡಲಾರದೆ ಒಬ್ಬ ಡಾಕ್ಟರನ್ನು ಕರೆಯಲಿಕ್ಕೆ ಹೋದಾಗ "ಡಾಕ್ಟರು ಬಹಳ ಅಗ್ಗವೆಂದು ತಿಳಿದಿರುತ್ತೀರಿ" ಎಂಬ ಅರ್ಥವನ್ನು ಇಂಗ್ಲೀಷಿನಲ್ಲಿಯೂ, ಸಾಯುತಕ್ಕವನಿಗೆ ನಾವೇನು ಮಾಡತಕ್ಕದ್ದೆಂಬುದನ್ನು ಹೇಳಿ ಬರಲೇ ಇಲ್ಲವೆಂದು ತಿಳಿಯಿತು. ಆ ಕಾಲದಲ್ಲಿ ಹಾಜರಿದ್ದ ಕೋರೆ ಡಾಕ್ಟರು ತಮ್ಮ ಕೈಲಾದಷ್ಟು ಪ್ರಯತ್ನಮಾಡಿದರು. ಪ್ರಯೋಜನವಾಗದೆ ರೋಗಿಯು ಕಾಲವಾದನು. ಶವದ ಕೈಕಾಲುಗಳನ್ನು ಮುಗರಿಸಿ ಹೊರಗೆ ನಾನು ಬಂದ ಸ್ವಲ್ಪ ಹೊತ್ತಿನಲ್ಲಿಯೇ ಬಂದ ಹೈಸ್ಕೂಲ್ ಮಾಸ್ಟರುಗಳು ಮತ್ತು ವಿದ್ಯಾರ್ಥಿಗಳನ್ನು ಕುರಿತು ಈ ಶವವನ್ನು ಈಗಲೇ ತಗಿಸುವ ಪಕ್ಷಕ್ಕೆ ನಾನು ಹೆಗಲುಕೊಡಲು ಬರುವುದಾಗಿಯೂ, ಹೀಗೆ ಮಾಡದಲ್ಲಿ ಈ ಕಟ್ಟಡದಲ್ಲಿರುವ ವಿದ್ಯಾರ್ಥಿಗಳು ಗಾಬರಿಯಾಗುವುದಾಗಿಯೂ ... ಸ್ಕೂಲ್ ಪಂಡಿತರು ತಿರಸ್ಕಾರವಾಗಿ ಈ ಹೆಣವನ್ನು ಈಗ ತೆಗೆಯುವುದರಲ್ಲಿ ಪ್ರಮಾದವೆಂದು ತಿಳಿಸಿದರು. ಸತ್ತವನ ಹೆಂಡತಿಗೆ ತಂತಿಕೊಡಬೇಕಾಗಿ ತಿಳಿಸಿದ್ದಕ್ಕೆ ದುಡ್ಡು ಇಲ್ಲವೆಂದು ತಿಳಿದ ಕಡೆಗೆ ಒಂದು ರೂಪಾಯಿ ಕೊಟ್ಟು ತಂತಿ ಸಹಾ ಕೊಡಿಸಿ ನಾನು ಹೊರಟುಹೋದೆ. ಸತ್ತು ಹೋದವನಿಗೆ ಪಾಠ ಹೇಳಿದ ಸೈನ್ಸ್ ಟೀಚರ್ ಮ|| ವೆಂಗಟರಂಗಾಚಾರಿಯವರು ಮರುಕಪಟ್ಟು ಶ್ರೀಯುತ ಶಿವಲಿಂಗೇಶ್ವರ ಮಾಡತಕ್ಕ ಎಂಟರ್‌ಟೈನ್‌ಮೆಂಟ್ ಎಂಬ ಉತ್ಸವಕ್ಕೆ ಅಡ್ಡಿಯಾಗುತ್ತೆಂದು ಶವವನ್ನು ಸಾಗಿಸಲು ಒಂದು ಗಾಡಿ ಗೊತ್ತುಮಾಡಿಸಿ ಸದರಿ ಪಂಡಿತರೇ ಸಾಯಂಕಾಲ 5 ಘಂಟೆ ಸಮಯ ನನಗೆ ವರ್ತಮಾನ ಕೊಟ್ಟರು ಹೆಣ ಸಾಗಲಿಲ್ಲ. ಸಂಕಲ್ಪ ಮಾಡಿದ ಉತ್ಸವಕ್ಕೆ ಭಂಗತರುವ ಈ ಹೆಣವನ್ನು ಸತ್ತ ಕೋಣೆಯಲ್ಲಿ ಬಂದೋಬಸ್ತು ಮಾಡಿಸಿ ಉತ್ಸವವು ಸಾಂಗವಾಗಿ ನೆರವೇರಿತು. ರಾತ್ರಿ 11 ಗಂಟೆ ಸಮಯದಲ್ಲಿ ಸ್ಟೂಡೆಂಟ್ಸ್ ಹೋಮಿಗೆ ಹೋಗಿ ಕೂಗಿಕೊಂಡೆ ಹೆಣ ಏನಾಯಿತು ಅಲ್ಲಿ ಯಾರೂ ಕಾಣಿಸಲಿಲ್ಲ. ಮಾರುದಿನ ಮಧ್ಯಾಹ್ನ ದಹನವಾಯಿತು. ಆಪ್ತೇಷ್ಟರನ್ನು ಬಿಟ್ಟು ವಿದ್ಯಾ ಗುರುಗಳನ್ನು ನಂಬಿ ಪರಸ್ಥಳಕ್ಕೆ ಬಂದು ನ್ಯಾಸಂಗಮಾಡತಕ್ಕವರು ಈ ಅನಾಥನಾದ ಪುಟ್ಟರಾಮಯ್ಯನನ್ನು ಜ್ಞಾಪಿಸಿಕೊಂಡು ಜಾಗರೂಕರಾಗಿರಬೇಕೆಂದು ಬೇಡುತ್ತೇನೆ ತಾ 31-12-15. ಕೋಡುವಳ್ಳಿ ಸೂರ್ಯನಾರಾಯಣಪ್ಪ, ಶಿವರಾಜಪುರ, ತೀರ್ಥಹಳ್ಳಿ.

ಕೆ. ಆರ್. ರಾಮಚಂದ್ರರಾವ್, ಮೈಸೂರು; ಹಿತಚಿಂತಕ, ಬೆಂಗಳೂರು ಸಿಟಿ—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು—ಎಡಿ.]

ತಾಲ್ಲೂಕು ವರ್ತಮಾನಗಳು.

ಸೊರಬ ತಾಲ್ಲೂಕು.—ಈ ಪ್ರಾಂತ್ಯ ಸುಮಾರು 30 ದಿವಸಗಳಿಂದ ಮಳೆ ನಿಂತು ಛಳಿ ಬಹು ಜಾಸ್ತಿಯಾಗಿದೆ. ಘನ ಚಳಿ...ದಿಂದ ಈ ಪ್ರಾಂತ್ಯ ಹಳ್ಳಿಗಳಲ್ಲಿ ಅನೇಕರು ಛಳಿ ಜ್ವರದಿಂದ ನರಳುತ್ತಾರೆ. ಈಗ 3-4 ದಿವಸದಿಂದ ಸ್ವಲ್ಪ ಮೋಡ ಕಾಣಿಸುತ್ತಿದೆಯೇ ಹೊರತು ಮತ್ತೇನೂ ಇಲ್ಲ. ಹೊಲಗಳಲ್ಲಿ ಚಿಲವಾನು ಬೆಳೆ ಒಕ್ಕಲಿಗೆ ಬಂದಿರುತ್ತೆ. ಗದ್ದೆ ಕೊಯ್ಲಿಗೆ ಜನಗಳು ಓಡಾಡುತ್ತಿದ್ದಾರೆ. ಈ ತಾಲ್ಲೂಕು ಬೀಳಕೆರೆ ಹೋಬಳಿಗೆ ಹೊಸದಾಗಿ ಬಂದಿರುವ ಶೇಕ್‌ದಾರರು ಬಹಳ ಗುಣಾಢ್ಯರಾಗಿಯೂ ಜನಾನುರಾಗಿಗಳಾಗಿಯೂ ಸರ್ಕಾರಿ ಕೆಲಸವನ್ನು ಬಹಳ ಬೇಗ ನಡಿಸುತ್ತಾರಲ್ಲದೆ ಗ್ರಾಮಾಂತರಗಳಿಗೆ ಹೋಗಿ ಗ್ರಾಮದ ಸೌಕರ್ಯಕ್ಕೆ ತಕ್ಕ ಏರ್ಪಾಡುಗಳನ್ನು ನಡಿಸುತ್ತಾರೆ.—ಟೊಕಿಪುರ ಗ್ರಾಮದಲ್ಲಿ ಮೈಸೂರು ಇಂಪೀರಿಯಲ್ ಸರ್ವಿಸ್ ಲಾನ್ಸರುಗಳ ಯುದ್ಧದ ಫಂಡಿಗಾಗಿ ಮ|| ಸಾಹುಕಾರ್ ಪಟೇಲ್ ಹೆತ್ತಗೌಡರೇ ಮುಂತಾದವರು 26 ರೂಪಾಯಿ ವಸೂಲುಮಾಡಿ ರೆವಿನ್ಯೂ ಇನ್ಸ್‌ಪೆಕ್ಟರ್ ಮ|| ರಾಮಣ್ಣನವರಿಗೆ ಒಪ್ಪಿಸಿರುತ್ತೆ.—ತಾ. 22ನೇ ಶುಕ್ರವಾರ ಗ್ರಾಮದ ಸ್ಕೂಲ್ ಬಾಲಕರು ಶ್ರೀ ಬಸವೇಶ್ವರ ದೇವರಿಗೆ ಮಂಗಳಾರತಿ ಮಾಡಿ ಈಗ ನಡೆಯುತ್ತಿರುವ ಘೋರ ಯುದ್ಧದಲ್ಲಿ ಶೀಘ್ರದಲ್ಲಿಯೇ ನಮ್ಮ ಸಾರ್ವಭೌಮರಿಗೆ ಜಯವಾಗಲಿ: ನಮ್ಮನ್ನಾಳುವ ಮಹಾ ಪ್ರಭುವಿಗೂ ಅವರ ಸಹೋದರರಿಗೂ ಕಲ್ಯಾಣವಾಗಲಿ ಎಂದು ಬಯಸಿದರು.

ದೊಡ್ಡಬಳ್ಳಾಪುರ.—ನಂಜನಗೂಡಿಗೆ ಇತ್ತೀಚೆಗೆ ವರ್ಗವಾದ ಸಬ್ ರಿಜಿಸ್ಟ್ರಾರ್ ಮ|| ಲಕ್ಷ್ಮೀಕಾಂತಯ್ಯಂಗಾರ್ರನ್ನು 29ನೇ ತಾ ಸಾಯಂಕಾಲ ಊರಿನ ದೊಡ್ಡ ಮನುಷ್ಯರೂ ಸಾಹುಕಾರ್ ಮುಂತಾದವರೂ ಎ. ವಿ. ಸ್ಕೂಲ್ ಹಾಲಿಗೆ ಮಂಗಳವಾದ್ಯದೊಡನೆ ಬರಮಾಡಿಕೊಂಡು ಅನೇಕ ಮಿತ್ರರ ಸುಗುಣಗಳನ್ನೂ ಕೆಲಸದಲ್ಲಿ ಜನರಿಗೆ ಸೌಲಭ್ಯವನ್ನು ಕುರಿತು ಕೊಂಡಾಡಿದರು. ಮುನ್ಸಿಫ್ ಮ|| ಎಸ್. ಕೆ. ಶ್ರೀನಿವಾಸರಾಯರು ನಮ್ಮ ಜನಗಳ ಪ್ರಯೋಜನವನ್ನು ಕೊಂಡಾಡಿ ಸಭೆಯನ್ನು ಮುಗಿಸಿದರು. ಅದೇ ವೇಳೆಗೆ ಸಾಹುಕಾರ್ ಚಂದ್ರಶೇಖರಯ್ಯನವರು ನೆನ್ನೆ ಸಾಯಂಕಾಲ ತಮ್ಮ ಗೃಹಕ್ಕೆ ಇಲ್ಲಿನ ಸಮಸ್ತ ದೊಡ್ಡ ಮನುಷ್ಯರನ್ನು ಕರೆಸಿಕೊಂಡು ಅತ್ಯಂತ ವಿಜೃಂಭಣೆಯಾಗಿ ಸಬ್ ರಿಜಿಸ್ಟ್ರಾರ್ ಮ|| ಲಕ್ಷ್ಮೀಕಾಂತಯ್ಯಂಗಾರ್ರನ್ನು ಸನ್ಮಾನಿಸಿದರು. ಈ ಉಭಯ ಸಭೆಗಳಲ್ಲೂ ವಾದ್ಯ ವಿಶೇಷಗಳೂ ಸಂಗೀತಗಳೂ ಟೀ ಪಾರ್ಟಿಗಳೂ ನಡೆದವಲ್ಲದೆ ಮ|| ಚಂದ್ರಶೇಖರಯ್ಯನವರು ಶ್ರೇಷ್ಠವಾದ ಬೆಂಗಳೂರು ಹಣ್ಣು ಹಂಪಲುಗಳನ್ನೂ ಪುಷ್ಪಗಳನ್ನೂ ತರಿಸಿ ಸಭಿಕರೆಲ್ಲರನ್ನೂ ವಿಶೇಷವಾಗಿ ಸಬ್ ರಿಜಿಸ್ಟ್ರಾರ್ ಮ|| ಲಕ್ಷ್ಮೀಕಾಂತಯ್ಯಂಗಾರ್ರನ್ನೂ ಸಂತೋಷಪಡಿಸಿದರು. ಈ ಸಬ್ ರಿಜಿಸ್ಟ್ರಾರವರು ಈ ಊರಲ್ಲಿ 3½ ವರ್ಷಕಾಲ ಇದ್ದರೂ ಇವರು ಮೊದಲು ತಾವಿದ್ದ ಬೇರೆ ಬೇರೆ ತಾಲ್ಲೂಕುಗಳಲ್ಲಿ ಯಾವ ರೀತಿ ಸರ್ವರಲ್ಲು ಸ್ನೇಹಪ್ರೀತಿ ಪರೋಪಕಾರಿಗಳಾಗಿದ್ದರೋ ಅದೇ ರೀತಿ ಈ ಊರಲ್ಲಿ ಬಹು ಮಂದಿ ಸ್ನೇಹಪಡೆದು ಅಭಿವೃದ್ಧಿಗೆ ಬರುವಂತೆ ವರ್ಗವಾದರು. ಇವರ ವಿಯೋಗದಿಂದ ಅನೇಕರಿಗೆ ಬಹಳ ಶೋಕ ಜಾಸ್ತಿಯಾಗಿರುವುದು. ಈ 31ನೇ ತಾ ಸಾಯಂಕಾಲ ಇವರನ್ನು ಇವರ ಮಿತ್ರಮಂಡಲಿಯವರು ಸಮಸ್ತ ಮರ್ಯಾದೆಗಳೊಡನೆ ರೈಲ್ವೆ ಸ್ಟೇಷನ್ ವರೆಗೆ ಸಾಗಕಳುಹಿಸಲಿಕ್ಕೆ ಹೋಗಿದ್ದರು.

ಹೊಸಕೋಟೆ.—ಹೊಸಕೋಟೆ ಹತ್ತಿರ ಇರುವ ಉಪ್ಪಾರಹಳ್ಳಿ ಎಂಬ ಗ್ರಾಮದಲ್ಲಿ ಒಂದು ಪರಿಷೆ ನಡೆಯಿತು. ನಾನಾಕಡೆಯಿಂದ 8 ಸಾವಿರ ಉತ್ತಮವಾದ ಜಾನುವಾರುಗಳು ಬಂದಿದ್ದವು. ಇದರಲ್ಲಿ ಉತ್ತಮವಾದ ಎತ್ತುಗಳನ್ನು ಒಂದು ಕಡೆ ನಿಲ್ಲಿಸುವಂತೆ ನಮ್ಮ ಅಮಲ್ದಾರರು ಏರ್ಪಾಡು ಮಾಡಿದ್ದರು. ಮತ್ತೊಂದು ಕಡೆ ಒಳ್ಳೇ ಚಪ್ಪರಹಾಕಿಸಿ ಅಲಂಕಾರಮಾಡಿಸಿದ್ದರು. ಆ ಸ್ಥಳದಲ್ಲಿ ಅನೇಕ ದೊಡ್ಡ ಮನುಷ್ಯರೂ ಸರ್ಕಾರದ ಉದ್ಯೋಗಸ್ಥರೂ ಹಾಜರಾಗಿದ್ದರು. ಆ ಸ್ಥಳದಲ್ಲಿ ಬಹುಮಾನವನ್ನು ಹೊಂದುವದಕ್ಕೆ ಯೋಗ್ಯವಾದ ಒಳ್ಳೇ ಜೊತೆ ಎತ್ತುಗಳು ಆ ಚಪ್ಪರದ ಸುತ್ತಲೂ ನಿಲ್ಲಿಸಿದ್ದರು. ಸಾಯಂಕಾಲ ಡೆಪ್ಯುಟಿ ಕಮೀಷನರ್ ಮ|| ಚಾಂಡಿ ಸಾಹೇಬರು ಸುಮಾರು 4 ಗಂಟೆ ಹೊತ್ತಿನಲ್ಲಿ ಮೋಟರ್‌ನಲ್ಲಿ ಕುಳಿತು ಚಪ್ಪರದ ಹತ್ತಿರ ಬಂದು ... ಕುಳಿತುಕೊಂಡರು. ಬಹುಮಾನಕ್ಕೆ ಯೋಗ್ಯವಾದ ಎತ್ತುಗಳನ್ನು ಜೊತೆಜೊತೆಯಾಗಿ ಅವರ ಮುಂದೆ ತಂದು ನಿಲ್ಲಿಸಿದರು. ಆಗ ಮೊದಲನೆ ತರಗತಿಗೆ 6 ರೂಪಾಯಿ ಮೇರೆಗೂ, 2ನೇ ತರಗತಿಗೆ 3 ರೂಪಾಯಿ, 3ನೇ ತರಗತಿಗೆ 2 ರೂಪಾಯಿ, ಈ ಪ್ರಕಾರ 18 ಜೊತೆಗೆ ಮಾತ್ರ ಬಹುಮಾನ ಕೊಟ್ಟಿತು. ಮಿಕ್ಕ ಎತ್ತುಗಳಿಗೆ ಸರ್ಟಿಫಿಕೇಟುಗಳನ್ನು ಕೊಟ್ಟರು. ಇದು ಆದ ನಂತರ ಅವರು ಕೆಲವು ಮಾತುಗಳನ್ನು ಹೇಳಿದರು. ಅದೇನೆಂದರೆ ಹೋದ ವರ್ಷಕ್ಕಿಂತ ಪರಿಷೆ ದೊಡ್ಡದಾಗಿದೆ. ಮತ್ತು ಒಳ್ಳೇ ಎತ್ತುಗಳು ಬಂದವೆ. ಬರುವ ವರ್ಷ ಇದಕ್ಕಿಂತಲೂ ಉತ್ತಮವಾದ ಎತ್ತುಗಳನ್ನು ತಂದು ಪರಿಷೆಯನ್ನು ಅಭಿವೃದ್ಧಿಮಾಡುವುದಕ್ಕೆ ನೀವೆಲ್ಲರೂ ಪ್ರಯಾಸಪಡಬೇಕೆಂದು ಸೂಚಿಸಿದರು. ಕೂಡಲೇ ಅಮಲ್ದಾರರು ನಮ್ಮ ಅಧ್ಯಕ್ಷರಿಗೆ ಬಹಳ ಕೆಲಸವಿದ್ದಾಗ್ಯೂ ಹಬ್ಬದ ಕಾಲವಾದಾಗ್ಯೂ ಅದನ್ನೆಲ್ಲಾ ಬಿಟ್ಟು ಸಂತೋಷದಿಂದ ಬಂದದ್ದರಿಂದ ನಾವೆಲ್ಲಾ ಕೃತಜ್ಞರಾಗಿದೇವೆ ಎಂದು ಹೇಳಿ ಮುಗಿಸಿದರು. ಇನಾದ ತರುವಾಯ ಗಂಧ ಪುಷ್ಪಗಳನ್ನು ಹಂಚಿ ಮಹಾರಾಜರಿಗೆ ಜಯವಾಗಲೆಂದು ಜಯಧ್ವನಿ ಮಾಡಿದರು.

ಚಿತ್ರದುರ್ಗ.—ಈಗ 7-8 ದಿನಸಗಳಿಂದ ಚಳಿ ಕಡಮೆ. ಊರಲ್ಲಿ ಕಾಯಿಲೆಗಳು ಜಾಸ್ತಿಯಾಗಿದ್ದು ಈಗ ಕಮ್ಮಿಯಾಗಿದೆ—ಇಲ್ಲಿನ ಡೆಪ್ಯುಟಿ ಕಮೀಷನರ್ ಮ|| ಸಿ. ಎಸ್. ಬಾಲಸುಂದರಂ ಅಯ್ಯರವರು ಡಿಸೆಂಬರ್ ತಾ. 26 27 ಕ್ಕೆ ಹೊಳಲ್ಕೆರೆಯಲ್ಲಿ ತಾಲ್ಲೂಕು ಕಾನ್ಫರೆನ್ಸು ಮೀಟಿಂಗ್ ಪೂರೈಸಿಕೊಂಡು ತಾ 28 ಕ್ಕೆ ಇಲ್ಲಿಗೆ ದಯಮಾಡಿಸಿದರು. ಇದೇ ತಾಲ್ಲೂಕು ತುರುವನೂರು ಪಟೇಲ್ ಮತ್ತು ಗ್ರಾಮಸ್ಥರು ಸಾಧಾರಣವಾಗಿ 110 ಗಾಡಿಗಳು, 400 ಎತ್ತುಗಳು ಹೊಡಿಸಿಕೊಂಡು ಟವರ್‌ಗೆ ಸಮೀಪದಲ್ಲಿ ಬಿಟ್ಟಿರುತ್ತವನ್ನು ಅವರು ತಮಗೆ ಕ್ರಯವಾಗಿದೆಯೆಂದು ಕೇಳಿಸುವ ಉದ್ದಿಷ್ಟ ತಾ. 29 ಕ್ಕೆ ಬಂದು ದೇವಸ್ಥಾನ ತೀರಲಿಕ್ಕೆ ಪ್ರಯತ್ನಪಡುವಲ್ಲಿ ಶ್ರೀ ಮುರಿಗಿಮಠದ ಅಧಿಕಾರಿಗಳು ಪೋಲೀಸಿನವರ ಸಹಾಯ ತಗೆದುಕೊಂಡು ಬಂದು ತಡೆದರು. ತುರುವನೂರಿನವರು ಡೆಪ್ಯುಟಿ ಕಮೀಷನರವರಲ್ಲಿ ಹೋಗಿ ಹೇಳಿಕೊಳ್ಳುವದರಲ್ಲಿ ನೀವು ಕೆಲಸಮಾಡುವದಕ್ಕೆ ಬಂದಿದ್ದೀರೆಂದೂ, ಶ್ರೀ ಮುರಿಗಿಸ್ವಾಮಿಗಳಲ್ಲಿಗೆ ಹೋಗಿ ಅವರ ಅಪ್ಪಣೆ ತಗೆದುಕೊಂಡು ಮುಂದಿನ ಕೆಲಸ ನಡಿಸತಕ್ಕದ್ದೆಂದೂ ಮೇಲ್ಕಂಡವರಿಗೆ ಅಪ್ಪಣೆ ಮಾಡಿದರು. ಅದರಂತೆ ಅವರು ಚಳ್ಳಕೆರೆ ಮೊಕ್ಕಾಮಿಗೆ ಹೋಗಿದಾರೆ.—ಇಲ್ಲಿಗೆ ಸಮೀಪದಲ್ಲಿ ಹೊಸಮಳಿಗೆ ಎಂಬ ಗ್ರಾಮದಲ್ಲಿ ಒಬ್ಬ ಉಪಾಧ್ಯಾಯನು ಏನೂ ಕಾಯಿಲೆ ಇಲ್ಲದೆ ರಾತ್ರಿ ಮಲಗಿಕೊಂಡು ಹಾಗೇ ದೈವಾಧೀನನಾದನು.—ಈ ಗ್ರಾಮದಲ್ಲಿ ಮ|| ಗುಪ್ಪಿನ ಒಬಜ್ಜರೆಂಬ ಒಬ್ಬ ಜಮೀನ್‌ದಾರರಿದಾರೆ. ಇವರು ಸುಮಾರು 300 ರೂಪಾಯಿ ಕಂದಾಯಕೊಡತಕ್ಕ ಭಾರಿ ರೈತರಾಗಿದಾರೆ. ಇವರು ದೊಡ್ಡ ಕುಟುಂಬಿಗಳು. ಇವರ ಮನೆಯಲ್ಲಿ ಸುಮಾರು 70 ಜನಗಳವರೆಗೆ ಏಕಕುಟುಂಬಿಗಳಾಗಿದಾರೆ. ಇವರ ಮಕ್ಕಳು ಮ|| ಬಿ. ಚಿನ್ನೋಬಯ್ಯನವರು ಸುಮಾರು 20-22 ವಯಸ್ಸಾದರೂ ಗುಣಾಢ್ಯರಾಗಿ ಅಗ್ರಿಕಲ್‌ಚರಲ್ ಇಂಪ್ರೂಮೆಂಟು ಬಹಳ ಚೆನ್ನಾಗಿ ಇಟ್ಟುಕೊಂಡಿದಾರೆ. ಇವರು ಬಹಳ ಪರೋಪಕಾರಿಗಳು. ಡಿಸ್ಟ್ರಿಕ್ಟ್ ಅಸೋಸಿಯೇಷನ್ ಮೆಂಬರರಾಗಿಯೂ ಪ್ರೋಗ್ರೆಸ್ ಕಮಿಟಿ ಮೆಂಬರರಾಗಿಯೂ ಇದಾರೆ. ಇವರು ಚಿತ್ರದುರ್ಗದಲ್ಲಿ ಒಂದು ಛತ್ರವನ್ನು ಕಟ್ಟಿಸಬೇಕೆಂದು ಪ್ರಯತ್ನಪಡುತ್ತಾರೆ. ಇವರ ಉದ್ದೇಶ ನೆರವೇರುವದೆಂದು ನಂಬಿದೇನೆ.

ಇಂಡಿಯಾ ದೇಶದ ವೃತ್ತಾಂತಗಳು.

ಸಿಂಗಪುರದಲ್ಲಿ ಜರ್ಮನಿಯ ಯುದ್ಧದ ಹಡಗುಗಳು ಬಂದಿವೆ ಎಂದೂ, ಜರ್ಮನಿಯವರ ವಿಮಾನಯಂತ್ರಗಳು ಆಕಾಶದಲ್ಲಿ ಬಂದು ಸಿಡಿಮದ್ದಿನ ಗುಂಡುಗಳನ್ನು ಹಾಕುವವೆಂದೂ ಪ್ರಜೆಗಳಲ್ಲಿ ವಿಶೇಷವಾದ ಗಾಬರಿಯುಂಟಾಯಿತು. ಸರ್ಕಾರದವರು ಆ ಸುದ್ದಿಯೆಲ್ಲಾ ಶುದ್ಧ ಸುಳ್ಳೆಂದು ಪ್ರಕಟಮಾಡಿ, 4,000 ಮೈಲಿ ಆಚೆ ಇರುವ ಶತ್ರುವು ಸಿಂಗಪುರಕ್ಕೆ ಬರುವುದು ಅಸಾಧ್ಯವೆಂದು ಸಾರಿ ಪ್ರಜೆಗಳ ಕಳವಳವನ್ನು ಶಮನಮಾಡಿದರು.

ಕಳೆದ ಮಂಗಳವಾರ ರಾತ್ರಿ ಬೊಂಬಾಯಿನಲ್ಲಿ ಹಿಂದುಸ್ಥಾನದ ಸಂಘ ಪರಿಷ್ಕಾರಕರು ಸಹಪಂಕ್ತಿ ಭೋಜನವನ್ನು ಮಾಡಿದರು. ಸುಮಾರು 350 ಮಂದಿ ಎಲ್ಲಾ ಪಂಗಡಗಳ ಹಿಂದು ದೊಡ್ಡಮನುಷ್ಯರು ನೆರೆದು ಒಟ್ಟಾಗಿ ಕುಳಿತು ಊಟಮಾಡಿದರು. ಬೊಂಬಾಯಿ, ಮದರಾಸ್, ಬಂಗಾಳಾ, ಪಂಜಾಬ್, ಸಂಯುಕ್ತ ಅಧಿಪತ್ಯಗಳು, ಸಿಂಧು, ಮಧ್ಯ ಪ್ರಾಂತ್ಯಗಳಿಗೆ ಸೇರಿದ ದೊಡ್ಡಮನುಷ್ಯರು ಹಾಜರಾಗಿದ್ದರು. ಇವರಲ್ಲಿ 225 ಮಂದಿ ಬ್ರಾಹ್ಮಣರು, 60 ಮಂದಿ ಹೆಂಗಸರು, 20 ಮಂದಿ ಕೀಳು ಜಾತಿಯವರು. ಜಾತಿಗಳ ಕಟ್ಟನ್ನು ಒಡೆಯಬೇಕೆಂಬುವದೇ ಆ ಭೋಜನದ ಉದ್ದೇಶ.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಪತ್ಯಗಳ ಬ್ಯಾಂಕುಗಳಿಗೆ ಡಿಸೆಂಬರ್ ತಾ. 18ರ ವರೆಗೆ ಜಮಾ ಬಂದಿರುವ ಚಂದಾ ಹಣಗಳೆಷ್ಟೆಂದರೆ:—

ಸಿಮ್ಲಾ ಅಲ್ಲಯನ್ಸ್ ಬ್ಯಾಂಕಿಗೆ	ರೂ.	45,67,791- 3-11
ಬಂಗಾಳಾ ಬ್ಯಾಂಕಿಗೆ	,,	35,15,464-13- 3
ಬೊಂಬಾಯಿ ಬ್ಯಾಂಕಿಗೆ	,,	8,27,851-11- 8
ಮದರಾಸ್ ಬ್ಯಾಂಕಿಗೆ	,,	6,68 006- 0- 4
ಜುಮ್ಲಾ ರೂಪಾಯಿ		96,09,113-13- 2

ಹಿಂದುಸ್ಥಾನದ ಪೋಸ್ಟ್ ಆಫೀಸುಗಳ ಮೂಲಕ ಇಂಡಿಯಾ ಗವರ್ನ್‌ಮೆಂಟಿನವರು ಸಾಲದ ಪತ್ರಗಳನ್ನು ಬಿಕರಿಮಾಡಿ ಪ್ರಜೆಗಳಿಂದ ಹಣವನ್ನು ಸಾಲವಾಗಿ ಈಗ ತಾನೇ ತೆಗೆದುಕೊಂಡರಷ್ಟೆ. ಈ ವಿಷಯವಾದ ಇಸ್ತಿಹಾರು ನಮ್ಮ ಪತ್ರಿಕೆಯಲ್ಲೂ ಪ್ರಕಟವಾಗಿತ್ತು. ಈ ಸಾಲಕ್ಕೆ ಒಟ್ಟು 4,254 ಅರ್ಜಿಗಳು ಕೊಡಲ್ಪಟ್ಟವು. ಒಟ್ಟು 49,90,400 ರೂಪಾಯಿ ಸಾಲ ಉತ್ಪತ್ತಿ ಆಗಿದೆ. ಪ್ರಜೆಗಳು ಸೇವಿಂಗ್ಸ್ ಬ್ಯಾಂಕುಗಳಲ್ಲಿಟ್ಟಿರುವ ಹಣಗಳ ಪೈಕಿ 17,82,000 ರೂಪಾಯನ್ನು ವಾಪಸು ತೆಗೆದುಕೊಂಡು ಮೇಲ್ಕಂಡ ಸಾಲಕ್ಕೆ ಕೊಟ್ಟರು. ಸ್ತ್ರೀಯರೇ 609 ಮಂದಿ 6,77,800 ರೂಪಾಯಿ ಸಾಲ ಕೊಟ್ಟಿದಾರೆ.

ಕರಾಚಿ ಪಟ್ಟಣದಲ್ಲಿ ಕಳೆದ ವಾರ ಹಿಂದೂ ಸಂಘಪರಿಷ್ಕರಣ ಸಭೆಯೊಂದು ನಡೆಯಿತು. ದರ್ಭಾಂಗದ ಮಹಾರಾಜರವರು ಸಭಾನಾಯಕರಾಗಿದ್ದರು. ಆಗ ಸಭಿಕರು ಚರ್ಚೆಯಿಂದ ತೀರ್ಮಾನಮಾಡಿದ ವಿಷಯಗಳ್ಯಾವವೆಂದರೆ—ಮಹಮದೀಯರೂ ಕ್ರೈಸ್ತರೂ ತಮ್ಮ ಮಕ್ಕಳಿಗೆ ತಮ್ಮ ಮತಭಕ್ತಿಯನ್ನು ಹೇಳಿಕೊಟ್ಟು ಕಲಿಸುತ್ತಾರೆ. ಹಿಂದುಗಳ ಮಕ್ಕಳಿಗೆ ಮನೆಯಲ್ಲಾಗಲಿ, ಮಠದಲ್ಲಾಗಲಿ ಹಿಂದೂ ಮತಭಕ್ತಿಯನ್ನು ಹೇಳಿ ಕೊಡುವುದಿಲ್ಲ. ಆದಕಾರಣ ಹಿಂದುಗಳು ತಮ್ಮ ಮಕ್ಕಳಿಗೆ ತಮ್ಮ ಮತತತ್ವಗಳನ್ನು ಹೇಳಿಕೊಡುವಂತೆ ಏರ್ಪಾಡು ಮಾಡಿಕೊಳ್ಳಬೇಕು. (2) ಹಿಂದುಗಳು ವಿಧವೆಯರಿಗೆ ವಿವಾಹಮಾಡುವುದು ಯೋಗ್ಯವಾದುದಲ್ಲ. ಇದರಿಂದ ಸಿಂಧುದೇಶದಲ್ಲಿ 24 ವಯಸ್ಸಿನ ಹೆಂಗಸರು ಮದುವೆ ಇಲ್ಲದೆ ಅನೇಕರು ಇರುತ್ತಾರೆ. ಇವರಿಗೆ ಗಂಡಂದಿರು ಸಿಕ್ಕುವುದೇ ಪ್ರಯಾಸವಾಗಿದೆ. ವಿಧವೆಯರಿಗೆ ಮದುವೆಮಾಡುವುದಕ್ಕೆ ಪ್ರಯತ್ನವೂ ಪ್ರೋತ್ಸಾಹವೂ ಅದರ ಮದುವೆ ಇಲ್ಲದ ಹೆಂಗಸರ ಪಾಡೇನಾಗಬೇಕು? ಆದಕಾರಣ ವಿಧವಾ ವಿವಾಹ ಅವಶ್ಯವಿಲ್ಲ ಎಂಬುದು.

ರಿಜಿಸ್ಟರ್ ಇಂಡಿಯನ್ ಮೇಯಿಲ್ ಲೀವರ್ ವಾಚು.

ಉತ್ತಮ ಸರಪಣಿ ಸಹಿತ ಕ್ರಯ ರೂ. 3-0-0. | 5 ವರುಷಗಳ ಗ್ಯಾರಂಟಿ ಪತ್ರ. | ವಿ. ಪಿ. ಛಾರ್ಜು 4 ಆಣೆ.

ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಯಾರಲ್ಲಿಯೂ ಸಿಕ್ಕ ಲಾರದು. ಜಾಹೀರಾತುಗಳಿಗೋಸ್ಕರ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡು ಮಾರ್ಕ್, ಡಸ್ಟ್ ಪ್ರೂಫ್ ಎಂಬ ಗ್ಲಾಸು ಡೋಮೂ ಇರುವದು. ಬಹಳ ಶ್ರೇಷ್ಠತರ ವಾದ ಸಾಮಾನುಗಳಿಂದ ತಯಾರಿಸಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದ ರೂ, ಕುದುರೆ ಸವಾರಿ ಮಾಡಿದರೂ, ಕೆಳಗೆ ಜಾರಿ ಬಿದ್ದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು. ಪರೀಕ್ಷಿಸಿರಿ.

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,

[260-6] ಪೋಸ್ಟು ಬಾಕ್ಸ್ 167, ಮದರಾಸ್.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ಉದ್ದವಾದ, ಕಪ್ಪಾದ ಕೇಶಪಾಶವನ್ನು ಯಾವ ಸ್ತ್ರೀಯು ತಾನೇ ವಾಂಛಿಸಲೊಲ್ಲಳು! ಅಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೆಂದರೆ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು ತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯವ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕವು ತಂಪಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೀರಿಕೊಳ್ಳುತ್ತಿರುವಾಗ ಎಂದಿಗೂ ಉದುರಿ ಬೀಳುವದಿಲ್ಲ; ಅದರ ಬದಲು ದಟ್ಟವಾಗಿ ಬೆಳೆದು ಸಮೃದ್ಧವಾಗು ವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.



ಕೇಳುವರೆಲ್ಲರನ್ನೂ ಕೇಳುತ್ತೇವೆ; ಉಪಯೋಗಿಸಿ ನಮ್ಮ ಹಣವನ್ನು ಹಳೆಯದನ್ನು ಕಾಪಾಡುವುದಕ್ಕೋಸ್ಕರ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ನೋಡಿರಿ. ಈ ಎಣ್ಣೆಯ ಶ್ರೇಷ್ಠತೆಯು ಮೈಸೂರು ಪ್ರದರ್ಶನದಲ್ಲಿ ದೊರೆತ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ನಾನಾ ಗೃಹಸ್ಥರ ಉತ್ತಮೋತ್ತಮವಾದ ಪ್ರಶಂಸಾಪತ್ರಗಳೂ ದೊರೆತಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ಸೇಠ್ ನಹಾರರ ಬಂಧುಗಳು. ಉದಯನಗರ್, ಬೆಳಗಾಂವ—ಕಾವು ಕೆಲ ತಿಂಗಳ ಹಿಂದೆ ಕಳು ಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದದ್ದೊಂದು ಸಾಧನವಾಗಿರುತ್ತದೆ. ಅದ್ದರಿಂದ ಇನ್ನೊಂದು ಸೀಸೆಯನ್ನು ಈಗಲೇ ವಿ. ಪಿ. ದ್ವಾರಾ ಕಳುಹಿಸುವುದು.

ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ, 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಜನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬೆಳಗಿಯಿಂದ ತಮಗೆ ಅಲ್ಪ ಸ್ವಲ್ಪ ನಫೆಯೇ ದೊರೆಯುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುತುವರ್ಜಿ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಅರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಪಡಿಸಿದ್ದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲ. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಬಿಂದುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪ್ರಫುಲ್ಲತೆಯು ಆವರಿಸಿಕೊಳ್ಳುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೀಗಿಲ್ಲ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಎಲ್ಲರನ್ನು ಸೆಳೆದು, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-50]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಬಾಟಲು) ಸೀಸೆಗೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ಹಣ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಸಾಬೂನಿನ ಬಾಕ್ಸ್ ಒಂದಕ್ಕೆ 0-12-0.

ಮಾರಿ ಕೊಡತಕ್ಕ ಎಲ್ಲಾ ಅಂಗಡಿಗಳಲ್ಲಿಯೂ ಸಿಕ್ಕುವದು:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಸೀದ್, ಮಾರ್ಕೆಟ್, ಬಾಂಬೆ.

[illegible]

ಪ್ರಶ್ನೋತ್ತರ ಲೇಖ್ಯಬೋಧಿನಿ ಕ್ರಯ ೧-೮-೦

ಸಿವಿಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ಸಮಸ್ತ ವಿಚಾರಗಳನ್ನೂ, ವ್ಯವಹಾರಗಳನ್ನೂ, ಬೋಧಕರ ಸಹಾಯವಿಲ್ಲದೆ ತಿಳಿಸುವುದು. ಆನೆಯ ಮುದ್ರೆ ಯ, ಸರ್ವಾಂಗ ಸುಂದರವಾದ ಪುಸ್ತಕ! ಬೇಗ ಬೇಗ ಬರೆದು ತರಿಸಿಕೊಳ್ಳಿರಿ !!

ಕ್ರಯ ಒಂದು ರೂಪಾಯಿ ಎಂಟಾಣೆ.

ನಮ್ಮ ವಿಳಾಸ:—ಭಾರತಿ ಸಂಪಂಗಿರಾಮು,

[4-1] 42, ಸಿ. ಬೀದಿ, ಕೋಟೆ, ಬೆಂಗಳೂರು ಸಿಟಿ.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

ಲೋಕಪ್ರಸಿದ್ಧವಾದ ಈ ಪುಸ್ತಕದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಶ್ಲಾಘ್ಯತರವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಮತಿಗಳು ಆಮೂಲಾಗ್ರವಾಗಿ ಪರಿಶೀಲನೆಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ.ಪಿ.ಪಿ. ಮೂಲಕ ತರಿಸಿಕೊಂಡರೆ ರೂ. 2-4-0. ಜಾಗ್ರತೆ ನೋಡಿ [239-31]

ವಿಳಾಸ—ಮ್ಯಾನೇಜರ್, ಸಿ.ಎಲ್.ಎಸ್. ಬುಕ್ ಡಿಪೋ, ಮೈಸೂರು.

ರಿಜಿಸ್ಟರ್ಡ್ ಸುಪೀರಿಯರ್ ಲೀವರ್ ಜೂವೆಲ್ಡ್ ವಾಚು.

ಕ್ರಯ ಸರಪಣಿ ಸಹಿತ ರೂ. 3-0-0. | 5 ವರುಷಗಳ ಗ್ಯಾರಂಟಿ. | ವಿ. ಪಿ. ಛಾರ್ಜು 4 ಆಣೆ.

ಇದು ನಮಗಾಗಿ ಪ್ರತ್ಯೇಕವಾಗಿ ತಯಾರಾಗಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ನಿಕ್ಕಲ್ ಮೂವ್‌ಮೆಂಟು ಮತ್ತು ಹಿಂಭಾಗದಲ್ಲಿ ಗ್ಲಾಸು ಡೋಮು ಇರುವದು. ಇದರ ಹಿಂಭಾಗದಲ್ಲಿ ಸಿಂಹದ ಚಿಹ್ನೆ ಇರುವದು. ಇದೇ ನಮ್ಮ ಟ್ರೇಡು ಮಾರ್ಕು. ಇದು ಕಾಲವನ್ನು ಸರಿಯಾಗಿ ತೋರಿಸುವದು. ಹೆಚ್ಚು ಹೇಳುವದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ನೋಡಬಹುದು. ಈಗಲೇ ಒಂದನ್ನು ತರಿಸಿಕೊಂಡು ಪರೀಕ್ಷಿಸಿರಿ. ಇದರ ಪೆಟ್ಟಿಗೆ ಮೇಲೆ ಕೂಡ ನಮ್ಮ ಕಂಪನಿ ಹೆಸರು ಗಿಲ್ಟು ಅಕ್ಷರಗಳಿಂದ ಬರೆಯಲ್ಪಟ್ಟಿರುವದು.

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,

[260-6] ಪೋಸ್ಟು ಬಾಕ್ಸ್ 167, ಮದರಾಸ್.

ಉತ್ತಮವಾದ ಫೌಂಟೆನ್ ಪೆನ್ನುಗಳು ದೊರೆಯುತ್ತೆ.

ಸೆಲ್ಫ್ 200 ನೆ ನಂಬರ್ ಪೆನ್ [illegible]	ರೂ. 1-14-0
ಸೆಲ್ಫ್ 205 ನೆ ನಂಬರ್ ಪೆನ್ [illegible]ದಕ್ಕೆ	,, 2-10-0
ಸೆಲ್ಫ್ [illegible] ನೆ ನಂಬರ್ ಪೆನ್ ಒಂದಕ್ಕೆ	,, 3-12-0
ಸೆಲ್ಫ್ 210 ನೆ ನಂಬರ್ ಪೆನ್ ಒಂದಕ್ಕೆ	,, 4-0-0
ಸೆಲ್ಫ್ 251 ನೆ ನಂಬರ್ ಸೇಫ್ಟಿ ಪೆನ್ ಒಂದಕ್ಕೆ	,, 3-12-0
ಸೆಲ್ಫ್ 207 ನೆ ನಂಬರ್ ಪೆನ್ ಒಂದಕ್ಕೆ	,, 3-8-0
ಸೆಲ್ಫ್ 158 ನೆ ನಂಬರ್ ಪೆನ್ ಬೆಳ್ಳಿ ಗಿಲೀಟ್ ಕೋವೆ ಮತ್ತು ಕ್ಲಿಪ್ ಸಹಿತ ಒಂದಕ್ಕೆ	,, 4-2-0
ಉತ್ತಮವಾದ ಸ್ವಾನ್ ಬ್ಲ್ಯಾಕ್‌ಬರ್ಡ್ ಪೆನ್ ಒಂದಕ್ಕೆ	,, 3-12-0
ಉತ್ತಮವಾದ ಫೌಂಟೆನ್ ಪೆನ್ ಕ್ಲಿಪ್ ಕ್ರಯ ಒಂದಕ್ಕೆ	,, 0-4-0

ಲಾಗಾಯತು ರೂ. 0-12-0 ವರೆಗೆ. ಉತ್ತಮವಾದ ಫೌಂಟೆನ್ ಪೆನ್ ಸ್ವಾನ್ ಇಂಕು ಬಾಟ್ಲಿ ಒಂದಕ್ಕೆ ರೂ. 0-8-0.

ಸೂಚನೆ:—ಟಪ್ಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಬೇರೆ ಒಟ್ಟಿಗೆ 3 ಪೆನ್ನು ತರಿಸುವವರಿಗೆ ಪ್ರತಿ ಒಂದು ಪೆನ್ನಿಗೂ ಒಂದು ಸೊಗಸಾದ ಕ್ಲಿಪ್ ಉಚಿತವಾಗಿ ಕೊಡಲಾಗುತ್ತೆ. ಬೈಸಿಕಲ್ಲಿಗೆ ಬೇಕಾದ ಎಲ್ಲಾ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತೆ.

ನಮ್ಮ ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್,

[279-4] ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಅಸ್ಸಲ್ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾ ಅಸಲ್ ಸಾಲಾಮಿಸರಿಯಲ್ಲಿ ಬೆಳ್ಳಿ ರೇಖು ಮುಂತಾದ್ದು ಸೇರಿಸಿ ಅತಿ ನಯವಾಗಿ ತಯಾರುಮಾಡಿದೇವೆ. ಈ ಮುರಬ್ಬಾ ಉಷ್ಣ ಕಾರಣದಿಂದ ಉಂಟಾದ ಅನೇಕ ವ್ಯಾಧಿಗಳಿಗೆ ಸಂಜೀವನವಾಗಿರುತ್ತೆ. ಈ ಮುರಬ್ಬಾ ನಾವು ಲೋಕೋಪಕಾರವಾಗಿ ಕಾಲಾಂತರದಿಂದ ತಯಾರುಮಾಡುತ್ತೇವೆ. ಅತಿ ಯೋಗ್ಯರು ಈ ಮುರಬ್ಬವನ್ನು ನಮ್ಮಿಂದ ತರಿಸಿ ಸೇವನೆಯಿಂದ ಗುಣವುಳ್ಳದ್ದೆಂದು ನಿಶ್ಚಯಿಸಿರುತ್ತಾರೆ. ನಮಗೆ ಅಸಲ್ ಸಾಲಾಮಿಸರಿ ಬೇರೆ ದೇಶಗಳ ಅಧಿಕಾರಕ್ ಏಜಂಟರುಗಳ ಮೂಲಕ ಬರುತ್ತದೆ. ಈ ಮುರಬ್ಬಾ ಸಾಲಾಮಿಸರಿಯಲ್ಲಿ ತಯಾರಿದ್ದಲ್ಲವೆಂದು ವ್ಯಕ್ತಪಡಿಸಿ ನಮ್ಮಿಂದ 50 ಸವರನ್ ಬಹುಮಾನ ಪಡೆಯಬಹುದು. ಇದರ ಪೂರ ಸಮಾಚಾರ ತಿಳಿಯಬೇಕೆಂಬುವರು ಅರ್ಧಾಣೆ ಸ್ಟಾಂಪು ಕಳುಹಿಸಿ ಕ್ಯಾಟ್ಲಾಗ್ ಪಡೆಯಬಹುದು. 1915 ನೇ ಡಿಸೆಂಬರ್ ಲಾಗಾಯ್ತು ಫೆಬ್ರವರಿ ಆಖೈರಿನ ವರೆವಿಗೂ ವಿ. ಪಿ. ಛಾರ್ಜ್ ಮಾಫ್ ಮಾಡಿರುತ್ತೆ. ಡಾಕ್ಟರ್ ಸಂಗಡ ಬೆಳ್ಳಿ ಪದಕವೂ, ಅನುಮಾನದ ಪತ್ರಿಕೆಯೂ ಇರುತ್ತೆ. 20 ತೊಲಾ ಉಳ್ಳ ಡಬ್ಬಾ 1 ಕ್ಕೆ ಕ್ರಯ ರೂ. 2.

ಏಜಂಟ್

ಪಿ. ಸೈದ್ ಉಸ್ಮಾನ್ ಅಂಡ್ ಕೊ., ಜನರಲ್ ಮರ್ಚಂಟ್, ದೊಡ್ಡಪೇಟೆ, ಬೆಂಗಳೂರು ಸಿಟಿ (ಅಲ್ಲಿ ಯಾವಾಗಲೂ ಸ್ಟಾಕು ಇರುತ್ತೆ. ತರಿಸಿಕೊಳ್ಳಬಹುದು)

ಸಿ. ಹೆಚ್. ಅಜಾಜ್ [illegible] ವೈದ್ಯರು, [illegible] ಮಾರ್ಕೆಟ್ ರೋಡ್, ನಂಬರು 104, ಬೆಂಗಳೂರು ಸಿಟಿ.

[258-5]

ವ್ಯಾಪಾರಕ್ಕೆ ನಿಲ್ಲಿಸಿದ—ನೋಟೀಸು.

ನಮ್ಮ ಕಂಪೆನಿಯಲ್ಲಿ ಇದೇ ಜನವರಿ 1 ನೇ ತಾರೀಖಿನಿಂದ ವ್ಯಾಪಾರ ನಿಲ್ಲಿಸಿ ಇದೇವೆ. ಯಾರಾದರೂ ನಮಗೆ ಆರ್ಡರು ಕಳುಹಿಸಿದರೆ ಸಾಮಾನುಗಳು ದೊರೆಯಲಾರವು ತಿಳಿಯುವದು.

ಬಿ ಯಂ. ರಾಮಚಂದ್ರರಾವ್, 10/8 ದೇವಿಡ್ಸನ್ [illegible]

[6-1] ಬ್ರಾಡ್‌ವೇ, ಮ[illegible]

ಬೇಗ ತರಿಸಿಕೊಳ್ಳಿ

ಕನ್ನಡ ಕ್ರಿಮಿನಲ್ ಪ್ರೊಸಿಜರ್ ಕೋಡು

ಇದುವರೆಗಿನ ಕಾಯಿದೆಗಳಿಗಿಂತಲೂ ಹೆಚ್ಚಾಗಿ ವಿಶೇಷ [illegible] ಸಂಗ್ರಹಿಸಿ ದಪ್ಪನಾದ ಬಿಳೀ ನುಣುಪಾದ ಕಾಗದದಲ್ಲಿ ಅಚ್ಚು [illegible] ಪೋಲೀಸಿನವರಿಗೂ, ಪಟೇಲರಿಗೂ, ಜವಾನ್ ದಾರರಿಗೂ ಅತ್ಯಂತ [illegible]ದ್ದು. ಕ್ರಯ 696 ಪುಟದ್ದಕ್ಕೆ 3 ರೂಪಾಯಿಗಳು ಮಾತ್ರ. ಒಂದು [illegible] ಗಾಗಿ ತರಿಸಿಕೊಳ್ಳುವವರಿಗೆ ಟಪಾಲ್ ಹಾಸಲ್ ಮುಫತ್ತಾಗಿ [illegible]

[261-8] ವಿಳಾಸ:—ಬಿ. ನರಸಿಂಗರಾವ್, ಲಾ ಆಫೀಸ್, [illegible]

ಗೃಹಕೃತ್ಯದ ನೋಟೀಸು.

ಈ ಕೆಳಗೆ ರುಜು ಮಾಡಿರುವ ನಾನು ಸಮಸ್ತ ಜನಗಳಿಗೂ ತಿಳಿಯ[illegible] ದೇನೆಂದರೆ—ನನಗೆ ಮೂರು ಜನ ಹೆಂಡರು. ಒಂದು ಎರಡನೆಯವರು [illegible] ಯಾಗಿದಾರೆ. ಒಂದನೆಯವಳ ಮಗ ಕೃಷ್ಣನು ಈಗ ಮೂರುವರೆ ವರು[illegible] ಪ್ರತ್ಯೇಕ ಇದಾನೆ. ಎರಡನೆಯವಳ ಮಗ ಹೂವಪ್ಪನೆಂಬುವನು ನನ್ನ [illegible] ದ್ದವನು ತಾ. 9-12-1915 ರಲ್ಲಿ ಹೊರಟುಹೋಗಿ ಒಂದನೇ ಕೃಷ್ಣ[illegible] ಸೇರಿಕೊಂಡಿದಾನೆ. ಇವರು ದುಂದುಗಾರಿಕೆ ಮಾಡಿ ಜನಗಳ ಪ್ರೇರೇ[illegible] ಪಟ್ಟು, ವೃದ್ಧಾಪ್ಯಕಾಲದಲ್ಲಿ ನನಗೆ ಮತ್ತು ನನ್ನ ಮೂರನೇ ಹೆಂ[illegible] ವ್ಯಸನಗಳಿಗೂ ಕೆಡಕು ಮಾಡಬೇಕೆಂಬ ದುರಭಿಪ್ರಾಯದಿಂದ ಸಾಲ ಮ[illegible] ದ್ದನ್ನು ಮಾಡುತ್ತಾ, ಮನಸ್ಸಿ ದುಂದುಮಾಡುತ್ತಾ ಇದಾರೆ. ಇವರಿಂದ [illegible] ಜಿನಸು ಮತ್ತು ನನ್ನ ಸ್ವಯಾರ್ಜಿತ ಸ್ಥಿರ ಚರಾಸ್ತಿಗಳನ್ನು ಕ್ರಯ ಭೋಗ್ಯ [illegible] ವಗೈರೆ ಮಾಡಿಕೊಂಡರೆ ಆಗಲೀ, ಹಾಗೇನೇ ಸಾಲ ಮುಂತಾದ್ದನ್ನು [illegible] ಕೊಟ್ಟರೆ ಆಗಲೀ ಆ ಸಾಲಗಳಿಗೆ ನಮ್ಮ ಪಿತ್ರಾರ್ಜಿತ ಯಾ ಸ್ವಯಾರ್ಜಿತ [illegible] ಚರಾಸ್ತಿಗಳು ಜವಾಬುದಾರಿ ಆಗತಕ್ಕದ್ದಲ್ಲವೆಂದು ಈ ಮೂಲಕ ಸ[illegible] ಎಚ್ಚರಪಡಿಸಿರುತ್ತೇನೆ.

ತಾ. 26-12-1915. ಶೆಟ್ಟಿ ಗೋವಿಂದಪ್ಪ, [illegible]

ಗೃಹಕೃತ್ಯದ ನೋಟೀಸು.

ಹಾಸನದ ಡಿ|| ಅರಸೀಕೆರೆ ತಾ|| ಬಾಣಾವರದ ಕಸಬಾ [illegible] ವಾಸಿ ಹಾಲಿ ಮೃತನಾದ ಗಾಳಿ ಸುಬ್ಬಣ್ಣನ ಮಗ ನಣ್ಣಯ್ಯನು [illegible] ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ— ನನ್ನ [illegible] ದೊಡ್ಡ ತಮ್ಮಣ್ಣನ ಮಗ ತಮ್ಮಯ್ಯನ 2 ನೆ ಹೆಂಡತಿ ಲಕ್ಷ್ಮಮ್ಮನೆಂಬವಳು [illegible] ತೀರಿಹೋದ ಮೇಲೆ ಸ್ವಂತ ಮನೆ ಬಿಟ್ಟು ತವರು [illegible] ವಾಸವಾಗಿದಾಳೆ. ಈಕೆಗೆ ಮಕ್ಕಳಿಲ್ಲ. [illegible] ಹೋಗಿದಾಳೆ ಈಕೆಗೂ ಮಕ್ಕಳಿಲ್ಲ. [illegible] ಅನುಭವವ [illegible] ಪಡೆದಿರುತ್ತಾಳೆಯೇ [illegible] ಸೊತ್ತುಗಳ[illegible] 3 ಸೊತ್ತುಗಳನ್ನು [illegible] ಉತ್ತರ [illegible] ಸೊತ್ತು ನಿಶ್ಚಯ [illegible] ಲಕ್ಷ್ಮಮ್ಮನ [illegible] ಸೊತ್ತುಗಳನ್ನು ಯಾರಾದರೂ ಕ್ರಯ ಭೋಗ್ಯ ಅಥವಾ ವಗೈರೆ ಮಾಡಿ[illegible] ಅದು ಸಲ್ಲಲಾರದು. [illegible]ಗಳನ್ನು ಬರೆದು ಪಡೆಯಲು ದಾವಾ [illegible] ನನಗೆ ತಗಲುವ ಖರ್ಚು ನಷ್ಟಗಳಿಗೂ ಗುರಿಯಾಗಬೇಕೆಂದು ಎಚ್ಚರಿಸು[illegible] ಷೆಡ್ಯೂಲ್.—(1) ಬಾಣಾವರದ ಕಸಬಾ ಸರ್ವೆ ನಂ 113-1 ನೇ [illegible] ಎಕರೆ 10. ಆಕಾರ ರೂ 7; (2) ಬಾಣಾವರದ ಕಸಬಾ ಸರ್ವೆ ನಂ 11[illegible] ನೇ ತೆಂಗಿನ ತೋಟದಲ್ಲಿ ಪಶ್ಚಿಮಕ್ಕೆ ಮೂರನೇ [illegible] ಆಕಾರ ರೂ 3; (3) ಬಿಟೋಗ್ರಾಮದ ದಾಖಲೆ ದೊಡ್ಡೇನಹಳ್ಳಿಯಲ್ಲಿ [illegible] ಊರಬೇಲಿ, ಪಶ್ಚಿಮಕ್ಕೆ ಬಸಪ್ಪನ ಹುಲ್ಲು ಮನೆ, ದಕ್ಷಿಣಕ್ಕೆ ಊರಬೇಲಿ, [illegible] ಕ್ಕೆ ದಾರಿ ಮತ್ತು ರಾಮಕ್ಕನ ಮನೆ, ಈ ಮಧ್ಯೆ ಇರುವ [illegible] ಹೆಂಚಿನ ಮನೆ, ಮುನಿಸಿಪಾಲಿಟಿ ನಂಬರು ಗೊತ್ತಾಗಿಲ್ಲ.

ತಾ. 13-12-1915. [285-3] ನಣ್ಣಯ್ಯನ ರುಜು.

ನಂಬಿ ಮೋಸಹೋಗಬೇಡಿರಿ! ನಂಬಿ ಮೋಸಹೋಗದಿ[illegible]

ಅಸಲ್ ಪಂಜಾಬಿ ಮುರಬ್[illegible]

ಕೆಲವರು ನಮ್ಮನ್ನು ನೋಡಿ ನಕ್ಕಲ್ ಮುರಬ್ಬಾವನ್ನು ತಯಾರಿ[illegible] ಹೆಸರು ಇಟ್ಟು, ಜನಗಳಿಗೆ ಮೋಸಮಾಡುತ್ತಾರೆ. ಅವನ್ನು ಕಂಡು ಮೋ[illegible] ಬೇಡಿರಿ. ನಮ್ಮಿಂದ ಕಳುಹಿಸುವ ಭಾಂಗಿಯನ್ನು ತೆಗೆಯುವಾಗ ಧ್ಯಾನ[illegible] ಅಂಡ್ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು ಎಂಬ ಮುದ್ರಿ[illegible] ಲೇಬಲ್ ನೋಡಿ ತೆಗೆಯಿರಿ.

500 ರೂಪಾಯಿಗಳ ಬಹುಮಾನ!

ಲೋಕಪ್ರಸಿದ್ಧವಾದ "ಪಂಜಾಬಿ ಸಕಲ ರೋಗ ಸಂಜೀವಿ[illegible]

ನಿಮ್ಮ ಜನ್ಮಭೂಮಿಯ ಸೇವೆಯನ್ನು ಮಾಡುವದಕ್ಕೆ ತನ್ನ [illegible] ವನ್ನೂ, ಆಯುಷ್ಯವನ್ನೂ ಕಾಪಾಡಿಕೊಂಡು ಬರಲು ಅತ್ಯಂತ [illegible] ರಾಗಿರಬೇಕು. ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥದ್ದು ನಿಮ್ಮ ಮಾತುಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿಯೂ, ದೇಹಬಲವನ್ನು ಪಡೆದು ಆಯುಷ್ಯವಂತರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತಿರಬೇಕು. ಈ ಉದ್ದೇಶಕ್ಕಾಗಿ ನಮ್ಮ ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿರುವ "ಪಂಜಾಬಿ ಸಕಲ ರೋಗ ಸಂಜೀವಿ"ಯನ್ನು ಸೇವಿಸಿರಿ. ಇದರಲ್ಲಿ ಅಶಕ್ತಿ, ಬೆಳ್ಳಿ ಸೇರಿಸಿ ಬಹಳ ಶುದ್ಧವಾಗಿ ಶಾಸ್ತ್ರೋಕ್ತ ಪದ್ಧತಿಯಂತೆ ಮುಟ್ಟದೆ ತಯಾರುಮಾಡಿದೆ. ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ.

10 ತೊಲೆ ಡಬ್ಬಿ 1 ಕ್ಕೆ ರೂ. 1-8-0.

64 ಪೇಜು ದೊಡ್ಡ ಕ್ಯಾಟಲಾಗ್ ಬೇಕಾದವರಿಗೆ ಉಚಿತವಾಗಿ [illegible]

ನಮ್ಮ ವಿಳಾಸ:—ವೈದ್ಯಗುರುಸ್ವಾಮಿ ಅಂಡು ಕಂಪೆನಿ,

[252-8] 3, ಇರುಳಪ್ಪನ ಬೀದಿ, [illegible]

ಬೆಲೆಗೆ ದೊರೆಯುತ್ತದೆ.

ಬೆಲೆಗೆ ದೊರೆಯುತ್ತದೆ.

ರಬ್ಬರ್ ಮೊಹರುಗಳನ್ನು ತಯಾರಿಸುವದರಲ್ಲಿ ಕೇವಲ ಯಶಸ್ಸನ್ನು ಹೊಂದ ಅನುಭವಶಾಲಿ ಬಲಿ ಇರುತ್ತದೆ. ವೇಲ್ಕಂಡ ಕಸಬಿನಲ್ಲಿ ಅಭಿವೃದ್ಧಿಗೆ ಬರ ಬೇಕೆಂಬುದಾಗಿ ಅಪೇಕ್ಷೆಯುಳ್ಳವರಿಗೆ ನಮ್ಮಲ್ಲಿಂತಹ ಸಾವರ್ಣಗಳು ವಿಶಿಷ್ಟ ಪ್ರಾಶಸ್ತ್ಯ ಕೊಟ್ಟು ಅವರ ಕೆಲಸಗಳನ್ನು ಚೆನ್ನಾಗಿ ವಹಿತ ಮಾಡಿಕೊಡುತ್ತೇವೆ. ಸ್ವಲ್ಪ ಬಂಡವಾಳದಿಂದ ಹೆಚ್ಚು ಸಂಪಾದನೆ ಮಾಡಹಕ್ಕ ಈ ಕೈಗಾರಿಕೆಯನ್ನು ಮುಂದೆ ಅಭಿವೃದ್ಧಿಗೆ ಬರಬೇಕೆಂದು ಇಚ್ಛಿಸುವವರು ಇದರಡಿಯಿನ ವಿಳಾಸದಾರರ ಬಳಿಗೆ ಬಂದು ಅಥವಾ ಲೇಖನದ್ವಾರಾ ಸಂಗತಿಗಳನ್ನು ತಿಳಿಯಬಹುದು.

ನಮ್ಮ ವಿಳಾಸ.—ರತ್ನಾಕರ್ ಅಂಡ್ ಕೊ, ಮುದ್ರಾಕ್ಷರಶಾಲೆ,
[186-3] ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಯಥಾರ್ಥ ದೇಶವತ್ಸಲನು

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವುದಕ್ಕೆ ತನ್ನ ಶರೀರ ಸೌಖ್ಯ ವನ್ನು ಕಾಯಪುಷ್ಟಿಯನ್ನೂ ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕ ನಾಗುತ್ತಾನೆ. ನಮ್ಮ ಸಹೋದರರಿಂಗೆ ಉತ್ತೇಜನವನ್ನು ಕೊಡುವಂಥಾದ್ದು ಮಾತುಗಳಲ್ಲ; ನಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥ ರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮ ಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡ ಬೇಕು. ಈ ಉದ್ದೇಶಕ್ಕಾಗಿ ನೀವು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿ ದನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ಕ್ರಮವಾಗಿ ಸೇವನೆ ಮಾಡುತ್ತಾ ಬನ್ನಿ. ಈ ಮಾತ್ರೆಯು ನಿಮ್ಮ ಶರೀರ ದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿ ಯಾವ ರೋಗವೂ ತಲೆ ಎತ್ತದಂತೆ ನಾಶಮಾಡುವುದು.

ಕ್ರಯ 40 ಮಾತ್ರೆಗಳ ಡಬ್ಬಿಗೆ ರೂ. 1-0-0.

ಸಾ. ಕ:—ಒಂದು ದೊಡ್ಡ ಕ್ಯಾಟಲಾಗನ್ನು, ರೋಗ ಪರಿಹಾರಕ್ಕೆ ತಕ್ಕ ಸೂಚನೆಗಳನ್ನೂ ಬಿಟ್ಟಿ ಪಡೆಯಬಹುದು.

ವಿಳಾಸ:—ರಾಜವೈದ್ಯ ನಾರಾಯಣಜಿ ಕೇಶವಜಿ,
[855-7] 20, ಚೈನಾ ಬಜಾರ್ ರೋಡ್, ಮದರಾಸ್.

ಒಳ್ಳೇ ಸಮಯ! ಹೊಸ ಸಮೂನೆ ಗಡಿಯಾರ!! ಒಳ್ಳೇ ಲಾಭ!!!

ಸುಂದರವಾದ ಲಂಡನ್ ಪಾಕೆಟ್ (ರಿಜಿಸ್ಟರ್ಡ್) ವಾಚ್.

15 ಬಹುಮಾನಗಳ ಸಹಿತ ರೂ. 2 12 0 ಮಾತ್ರ

6 ವರ್ಷಗಳ ಗ್ಯಾರಂಟಿ ಕೊಡಲ್ಪಡುತ್ತ

ಆಹಾ, ಈ ಚಿತ್ರದಲ್ಲಿ ತೋರಿಸಿರುವ ಲಂಡನ್ ಗಡಿಯಾರವನ್ನು ನಮ್ಮ ಆರ್ಡರ್ ಮೇಲೆ ಸೀಮೆಯಿಂದ ತರಿಸಿರುತ್ತೇವೆ. ಈ ಗಡಿಯಾರ ಇತರ ಕಂಪನಿ



ಯಲ್ಲಿ ದೊರೆಯಲಾರದು. ಈ ಗಡಿಯಾರ ಬಹು ನಾಜೂಕಾಗಿಯೂ, ಮಜಬೂತಾದ ಸಾಮಾನುಗಳಿಂದ ಸರಿಯಾದ ಕಾಲವನ್ನು ತೋರಿಸುವದಾಗಿಯೂ, ಸ್ವಲ್ಪ ಬೆಲೆ ಉಳ್ಳದ್ದಾಗಿಯೂ ಇದೆ. ಅನೇಕ ಕಂಪನಿಗಳಲ್ಲಿ ಬೊಂಬಾಯಿ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳುವದೇ ಹೊರತು ಪ್ರಯೋಜನವಿಲ್ಲ. ಈ ವಾಚಿನ ಗಡಿಯಾರ 1ನ್ನು ತರಿಸಿಕೊಂಡರೆ ಎಷ್ಟು ವರುಷಗಳಾದರೂ ಪುನಃ ರಿಪೇರಿಗೆ ಕೊಡಬೇಕಾದ ಅವಶ್ಯವಿಲ್ಲ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರ ಗಳು ಮಾರಾಟವಾಗಿ, ಅನೇಕ ಯೋಗ್ಯತಾ ಪತ್ರಿಕೆಗಳು ಪಡೆದಿದೆ. ಈ ಗಡಿಯಾರಗಳನ್ನು ಪ್ರಖ್ಯಾತಿಪಡಿಸಬೇಕೆಂದು ಬಹುಮಾನಗಳು ಸಹಾ ಹಾಕಿರುತ್ತೇವೆ. ಜಾಗ್ರತೆ ಗಮನಿಸಿರಿ. ಬಹುಮಾನಗಳ ತಪಸೀಲು—ಸರಪಣಿ, ಕಂಪಾಸ್, ಜರ್ಮನ್ ಕರ ವಸ್ತ್ರ, ಕೈ ಉಂಗುರ, ಷರಟು ಗುಂಡಿ, ಸುವಾಸನೆ ಸೆಂಟ್, ಕೈ ಗುಂಡಿಗಳು, ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, ಗಿಲೀಟ್ ಬಟನ್, ಲೇಡಿ ಸಾಟಿಯೋಗಳು 4, ಕಿಲಿಪಿ ಗಿಣಿ, ರಾಜ ರಾಣಿ ಪೆಟ್ಟಿಗೆ.

ನಮ್ಮ ವಿಳಾಸ—ಸ್ವದೇಶಾಭಿವೃದ್ಧಿ ಅಂಡ್ ಕಂಪನಿ,
[352-8] 3, ಅರುಳಪ್ಪನ ಬೀದಿ, ಮದರಾಸು.

ಸಂತೋಷಕರವಾದ ಪ್ರಕಟನೆ!

ಹೊಸ ಸಮೂನೆ ಗಡಿಯಾರ ಸಂತೋಷಕರವಾದ ಬಹುಮಾನ

ಸುಂದರವಾದ ಜೂಬಿಲಿ ಪಾಕೆಟ್ ವಾಚ್.

9 ಬಹುಮಾನಗಳ ಸಹಿತ ರೂ 3 0 0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತ

ಆಹಾ, ಈ ಚಿತ್ರದಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕಂಪನಿ ಸೇಫ್



ಬಲಿಷ್ಠವಾದ ಸಾಮಾನುಗಳಿಂದಲೂ ನಾಜೂಕವಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿರುವ ಧೊರೆಗಳು ಕೊಂಡುಕೊಳ್ಳುತ್ತಾ ಇದಾರೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವಿರಿ. ಬಹುಮಾನ ತಪಸೀಲು—(1) ಸರಪಣಿ, (2) ಕಂಪಾಸ್, (3) ಜರ್ಮನ್ ಕರವಸ್ತ್ರ, (4) ಕೈ ಉಂಗುರ, (5) ಷರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.

ನಮ್ಮ ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕಂಪನಿ,
[362-8] 3, ಅರುಳಪ್ಪನ ಬೀದಿ, ಮದರಾಸು.

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು; ಎಂಜಲ್‌ಬರ್ಗ್ ಹಲ್ಲರುಗಳ ಚಿಲ್ಲರೆ ಸಾಮಾನುಗಳು; ಎಂಜಲ್‌ಬರ್ಗ್ ಸಿಸ್ಟಮ್ ಹಲ್ಲರುಗಳು ನಂ. 1 ಮತ್ತು 2; ಡೇವೀ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಫೈರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎನಮಲ್, ಸಿಮೆಂಟು, ಕೆಮಿಕಲ್ ಸಾಲ್ಟು; ಚಿಲ್ಲಡೆ ರೇಕುಗಳು; ಆಸ್ಟ್ರೇಲಿಯಾ ದೇಶದ ನಾಟು ಇದ್ದಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ. [208-13]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪನಿ, ಮದ್ರಾಸ್.

The Indian Commerce & Industries Co., Madras.

Branches—Bezwada and Tanjore.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ, ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈಕೈ ನೋವು; ಮರವು; ನಿಸ್ತ್ರಾಣ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಅರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವವು. [175-19]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೬೬ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಜಾಮೀನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕರ್‍ರಗೆ ಮಾಡುತ್ತೆ.

ಮತ್ತು

ಕೂದಲಿಗೆ ರೇಷ್ಮೆಯಂಥಾ ಹೊಳಪು ನುಣುಪು ಒರುತ್ತೆ.

ಈ ಕೂದಲ ರಂಗನ್ನು ನೆತ್ತಿ, ಗಡ್ಡ, ಮೀಸೆ ಮೊದಲಾದ ದೇಹದ ಯಾವ ಭಾಗಕ್ಕಾಗಲಿ ಸುಖವಾಗಿ ಹಚ್ಚಬಹುದು; ಚರ್ಮಕ್ಕೆ ಯಾವ ವಿಧವಾದ ಬಾಧೆಯೂ ನಷ್ಟವೂ ಕೆಡುಕೂ ಉಂಟಾಗುವುದಿಲ್ಲ. ಇದು ಯಾರಿಗೂ ಪತ್ತೆಯಾಗುವುದಿಲ್ಲ; ರಂಗು ಎಂದಿಗೂ ಕೆಡಮೆಯಾಗುವುದಿಲ್ಲ. ಒಂದಾವರ್ತಿ ಪರೀಕ್ಷಿಸಿದರೆ ಎಂದೆಂದಿಗೂ ಇದನ್ನೇ ಉಪಯೋಗಿಸುತ್ತೀರಿ.

ನರೆಕೂದಲನ್ನು ನಮ್ಮ ರಂಗು ಅಚ್ಚ ಕರ್‍ರಗೆ ಮಾಡುವುದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ನಕ್ಕಲ್ ರಂಗಿನ ವಿಷಯದಲ್ಲಿ ಎಚ್ಚರಿಕೆ! ರತನ್‌ಜೋತಿ ಕೂದಲಿಕ್ಕೆ ಎಂಬ ಚೀಟಿಯನ್ನು ನೋಡಿ ಕೊಂಡುಕೊಳ್ಳಿ. [282-3]

ಪೆಟ್ಟಿಗೆ, ಬ್ರಷ್ ಮತ್ತು ಬಟ್ಲ ಸಹಿತ ಕ್ರಯ ರೂ. 1-0-0.

ಏಜಂಟರು ಬೇಕು! ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್!

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು:—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
ಚೀನಾ ಬಜಾರ್ ರೋಡ್, ಮದರಾಸ್.

ESANOFELE

ಮಲೇರಿಯಾ ಜ್ವರವನ್ನು

ಖಂಡಿತವಾಗಿಯೂ ವಾಸಿಮಾಡುವುದರಲ್ಲಿ ಪ್ರಖ್ಯಾತಿ ಹೊಂದಿದ

"ಈಸಾನೊಫೆಲಿ"ಯನ್ನು

ಕೂಲಿ ಆಳುಗಳನ್ನು ಇಟ್ಟುಕೊಂಡಿರುವಂಥಾ ರಬ್ಬರ್, ಟೀ, ಕಾಫಿ ತೋಟಗಳ ಮಾಲೀಕರುಗಳೆಲ್ಲಾ ತರಿಸಿ ತಮ್ಮ ಬಳಿ ಇಟ್ಟುಕೊಂಡಿರಬೇಕು. ವಾಸಿಮಾಡುವುದರಲ್ಲಿ ಅದರ ಗುಣವು ಖಂಡಿತವಾದದ್ದು, ಭರವಸವುಳ್ಳದ್ದು. ಅದು ಬಹಳ ಬೇಗನೆ ಜ್ವರವನ್ನು ಇಳಿಸಿ ಹೊಟ್ಟೆಯೊಳಗಣ ಗಡ್ಡೆಯನ್ನು ಕರಗಿಸಿ, 15 ದಿನಗಳಲ್ಲಿ ಸಂಪೂರ್ಣವಾಗಿ ವಾಸಿಮಾಡಬಲ್ಲದು.

ಬೆಳಿಗ್ಗೆ ಮತ್ತು ರಾತ್ರಿ ಒಂದೊಂದು ಮಾತ್ರೆಯನ್ನು ಸೇವಿಸುತ್ತಾ ಬಂದ ಪಕ್ಷದಲ್ಲಿ ಮಲೇರಿಯ ಜ್ವರ ಬಾರದಂತೆ ಸಂರಕ್ಷಣೆ ಮಾಡುತ್ತದೆ.

ಕ್ರಯ 1 ಬಾಟ್ಲಿಗೆ ರೂ. 2-0-0. ಎಲ್ಲಾ ಔಷಧ ಮಾರಾಟದ ಅಂಗಡಿಗಳಲ್ಲೂ ಬಿಕರಿಗೆ ಇಟ್ಟದೇವೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ. ಇದು ಸೀಹಿಯಾದ ಇದ್ದು ಸೇವನೆಗೆ ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜಂಟರು:—ಜೆ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗಳ್ಲಿ ಡಿಪೋ— [176-19]

ಬಿ. ಜಿ. ಗೋರಿಯೋ ಕಂಪನಿ, ವಾಲೆನ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು:—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ

ಒಳ್ಳೇ ಸಮಯ! ಒಳ್ಳೇ ಲಾಭ!

ಮೇಲಾದ ರೇಷ್ಮೆ ಪಂಚೆಗಳು.

ಮುಂಚಿನ ಬೆಲೆ ರೂ. 1-12-0; ಈಗ ರೂ. 1-8-0.

ನಾವು ಈ ಪಂಚೆಯನ್ನು ಬರುವ ಪಾರ್ಲ್ಯುಮೇಂಟ್ ಮಹೋತ್ಸವಕ್ಕೆ ಜಪಾನ್‌ನಿಂದ ಡೈರೆಕ್ಟಾಗಿ ತರಿಸಿರುವದರಿಂದ ಅಸಲ್ ಕ್ರಯಕ್ಕೆ ವಿಕ್ರಯಿಸುತ್ತೇವೆ. ಇತರ ಕಂಪನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು.

ಶೃಂಗಾರವೂ ನಾಗರೀಕತೆಯೂ ಕೂಡಿದ ರೇಷ್ಮೆ ಪಂಚೆಗಳು ಹಬ್ಬದ ಕಾಲದಲ್ಲಿ ಧರಿಸುವದಕ್ಕೆ ಅನಂದವಾಗಿ ಇರುವದು. ಈ ಪಂಚೆಗಳು ಜಾಸ್ತಿಯಾಗಿ ಖರ್ಚಾಗುತ್ತಾ ಇರುವದರಿಂದ ಇದರ ಕ್ರಯವನ್ನು ಕಮ್ಮಿ ಮಾಡಿರುತ್ತೇವೆ. ಇದನ್ನು ಸ್ತ್ರೀ ಪುರುಷರು ಬಾಲಿಕಾ ಬಾಲಕರು ಸಂತೋಷದಿಂದ ಧರಿಸಬಹುದು. ಇವರಲ್ಲಿ ಕೆಂಪು, ಹಸರು, ರೋಜ, ಇತ್ಯಾದಿ ರಂಗುಗಳು ಇರುತ್ತೆ. ಜಾಗ್ರತೆ ತರಿಸಿಕೊಳ್ಳಿರಿ.

ಎರಡು ಪಂಚೆಗಳು ಒಂದೇ ಸಾರಿ ತರಿಸಿಕೊಂಡರೆ ಒಂದು ಪರಿಮಳ ಶೀಷೆ ಇನಾಂ ಸಿಕ್ಕುತ್ತದೆ.

ವಿಳಾಸ— ಪಿ. ಎ. ಎಸ್. ಪಾಣಿ ಕಂಪೆನಿ,
[252-8] 3, ಅರುಳಪ್ಪನ ಬೀದಿ, ಮದರಾಸು.

ಹೊಗಳಿಕೆಗಿಂತಲೂ

ಪರೀಕ್ಷೆಯೇ ಮೇಲು!!!

ನೂರಾರು ವರುಷಗಳ ಅನುಭವದಿಂದ ಗುಣಕಂಡು ಪ್ರಖ್ಯಾತಿ ಹೊಂದಿರುವ ಶಾಸ್ತ್ರ ಸಮ್ಮತವಾದ ಮತ್ತು ಅತಿ ಸುಲಭ ಬೆಲೆಯುಳ್ಳ ಈ ಮಹೌಷಧಗಳನ್ನು ಸವಿಾಪದಲ್ಲಿ ತರಿಸಿಕೊಳ್ಳಿರಿ. ಅಲ್ಪ ಕಾಲದಲ್ಲಿ ಮಹತ್ತಾದ ಗುಣ ಉಂಟುಮಾಡಿ ಶರೀರವನ್ನು ಕಾಪಾಡುವದು. ಪರೀಕ್ಷಿಸಿ ಗುಣವನ್ನು ತಿಳಿಯಿರಿ. [278-4]

ಶ್ರೀಕರ ಕಸ್ತೂರಿ ಮಾತ್ರೆ ಸುಮಾರು 300 ಮಾತ್ರೆ ಸೀಸೆಗೆ	4 ಆಣೆ.
ಸುಖಭೇದಿ ಮಾತ್ರೆ 50 ಮಾತ್ರೆ ಸೀಸೆಗೆ	4 ಆಣೆ.
ಬಾಲ ಸಂಜೀವಿನಿ 60 ಮಾತ್ರೆ ಸೀಸೆಗೆ	4 ಆಣೆ.
ಅಮೃತಲೇಪ (ಸಕಲನೋವು ವಾಯುನೋವುಗಳಿಗೆ ಸಿದ್ಧಾಮೃತ) ಸೀಸೆಗೆ	4 ಆಣೆ.
ನಾರಿಕೇಳಾಂಜನ ಸೀಸೆಗೆ	4 ಆಣೆ.
ಅಜೀರ್ಣ-ವಾಯುಗೋಳಿ, ವಾಯುನಾಶ, ಆಯಾಸಕ್ಕೆ 150 ಮಾತ್ರೆ,	4 ಆಣೆ.

ಮೇಲ್ಕಂಡ ಆರು ಔಷಧಗಳ ಪೈಕಿ ನಿಮಗೆ ಬೇಕಾಗುವ 6 ಸೀಸೆಗಳನ್ನು ಚುನಾಯಿಸಿ ಒಟ್ಟಿಗೆ ತರಿಸಿದರೆ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಸೇರಿ ರೂ. 1-8-0 12 ಸೀಸೆಗೆ ರೂ. 2-12-0. 25 ಸೀಸೆಗೆ ರೂ. 5-0-0.

ಪ್ರತಿ ಔಷಧದ ಜೊತೆಯಲ್ಲೂ ವಿವರವಾದ ಅನುಪಾನ ಪತ್ರವಿರುವುದು.
ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ 12 ಆಣೆಗೆ ಕೊಡಲ್ಪಡುತ್ತೆ.
ಆಶ್ಚರ್ಯವಾದ ಸೇಫಿಂಗು ಬಾಕ್ಸ್ ಎಂಬ ಮರ್ಮದ ಪೆಟ್ಟಿಗೆ

ಕಳ್ಳರ ಕಾಟ ಜಾಸ್ತಿ ಭಯ ವಿಲ್ಲ

ಕಳ್ಳರ ಕಾಟ ಜಾಸ್ತಿ ಭಯ ವಿಲ್ಲ

ಈ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ ಬಹು ಸೊಗಸಾಗಿ ಚಿತ್ರ ವಿಚಿತ್ರ ಕೆಲಸ ಮಾಡಿ ನೋಡುವವರಿಗೆ ಸಂತೋಷಕರವಾದ ಪೆಟ್ಟಿಗೆ. ಇದರ ಪ್ರಕಾಶ ಬೆಳ್ಳಿಯ ಕೂಡ ಹಿಂಬಾಲಿಸುತ್ತದೆ. ಈ ಪೆಟ್ಟಿಗೆಯಲ್ಲಿ ಹಣವನ್ನಾಗಲಿ, ಚಿಕ್ಕ ವಸ್ತುಗಳನ್ನು ಇಟ್ಟು ಮುಚ್ಚಿ ಬಿಡಬೇಕು. ಅನಂತರ ಅದನ್ನು ಯಾರಾದರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಮಾಯವಾಗುವವು. ಆ ಪದಾರ್ಥಗಳು ಇಟ್ಟವರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಕಾಣುವವು. ಈ ಪೆಟ್ಟಿಗೆ ಜೇಬಿನಲ್ಲಿ ಕೂಡ ಇಟ್ಟುಕೊಳ್ಳಬಹುದು. ಬೇಗನೆ ತರಿಸಿಕೊಳ್ಳಿ. ಈ ಪೆಟ್ಟಿಗೆ ಇಷ್ಟವಿಲ್ಲದಿದ್ದರೆ 8 ದಿನಗಳೊಳಗೆ ಬರೆದರೆ ತಪನಾಡದೆ ಹಣವನ್ನು ವಾಪಸ್ ಕಳುಹಿಸುವೆವು.

ನಮ್ಮ ಪೆಟ್ಟಿಗೆಯನ್ನು ತರಿಸಿಕೊಳ್ಳುವರಿಗೆ 1916 ನೇ ಸಂವತ್ಸರದ ಸುಂದರವಾದ ಲೇಡಿ ಕ್ಯಾಲೆಂಡರ್ ಇನಾಮಾಗಿ ಕಳಿಸುತ್ತೇವೆ.

[252-5] ನಮ್ಮ ವಿಳಾಸ—ರಾಮಚಂದ್ರ ಅಂಡ್ ಕಂಪ್ನಿ,
16, ತಿರುಪಳ್ಳಿ ಬೀದಿ, ಮದರಾಸು.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ : 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಅಂಗಡಿಗಳಲ್ಲಿ ಬಿಕರಿಗೆ ಇಟ್ಟಿದೆ. [64-38]

ಅಮೃತಾಂಜನ ಡಿಪೋ,
109, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಸೂ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಯಾವಾಗಲೂ ಜಿಂತಾನವನ್ನೇ

ಉಪಯೋಗಿಸಿ. JIN-TAN

ಜಿಂತ್ರಾನ ಬಿಟ್ಟರೆ ಬೇರೆ ಜಿಂತ್ರಾನವಿಲ್ಲ. ಪ್ರಪಂಚಕ್ಕೆಲ್ಲಾ ಅಪೂರ್ವವಾದ ಸಂತೃಪ್ತಿಯನ್ನುಂಟುಮಾಡಿ ಸರ್ವರಲ್ಲೂ ವಿಶೇಷ ನಂಬಿಕೆಯನ್ನುಂಟುಮಾಡಿರುವುದೇ ಜಿಂತ್ರಾನ.

ಕಂಚಿನ ಮೋಂಬತ್ತಿ ಸ್ಟಾಂಡುಗಳು ಬಹಳ ಗಟ್ಟಿಮುಟ್ಟಾಗಿಯೂ, ಅಲಂಕಾರವಾಗಿಯೂ, ಬಹಳ ಅಗ್ಗವಾಗಿಯೂ ಇವೆ.

ಉತ್ತಮೋತ್ತಮವಾದ ಅಲಂಬಿಕ್ ಸಾಬೂನುಗಳು, ಕೂದಲಿಗೆ ಹಚ್ಚುವ ಕೊಬ್ಬರಿ ಎಣ್ಣೆ, ಕಾರ್ಬಾಲಿಕ ಹಲ್ಲುಪುಡಿ, ಯುಡಿಕಲೋನ್ ಎಂಬ ಬಟ್ಟೆಗಳಿಗೆ ಹಾಕುವ ಸುವಾಸನಾ ದ್ರಾವಕ, ಸೆಂಟುಗಳು, ಪೋಮೇಡುಗಳು, ಕೋಲ್ಡ್ ಕ್ರೀಮ್, ಖಾತರಿಯಾದ ಔಷಧಗಳು, ಇತ್ಯಾದಿ.

ಪ್ರೊಫೆಸರ್ ಗೆಜ್ಜಾರ್‌ರವರ ಗುಣಕಂಡ ಮನೆ ಔಷಧಗಳು. ಇವು ಪ್ರತಿ ಒಂದು ಮನೆಯಲ್ಲೂ ಇರಬೇಕು. ಬಹಳ ನಂಬಿಕೆಯಾದವು. ಬಹಳ ಸುಲಭ ಕ್ರಯ. ಎಲ್ಲಾ ತರದ ಔಷಧಗಳೂ ಇವೆ.

"ಡೋಂಗ್ರೆಯವರ ಬಾಲಾಮೃತ" ಮಕ್ಕಳಿಗೆ ಶಕ್ತಿಕೊಡುವುದಕ್ಕೆ ಇದನ್ನು ಬಿಟ್ಟರೆ ಬೇರೆ ಔಷಧವೇ ಇಲ್ಲ. ಎಲ್ಲಾ ತರದ ನೋವನ್ನೂ ನಿವಾರಣೆಮಾಡುವ ಪೆರ್ಮಿ ಬಾಮ್ ಎಂಬ ಬಾಧೋಪಹಾರಿಣಿ ಬಹಳ ಅಗ್ಗ, ಬಹು ಬೇಗನೆ ಬಾಧೆಯನ್ನು ಶಮನಮಾಡಬಲ್ಲದು.

ಆರೋಗ್ಯಹಿತ ಮಾತ್ರೆಗಳು. ಧನ್ವಂತ್ರಿಯ ಉತ್ತಮೋತ್ತಮ ರಚನೆ. ಸ್ನಾನದ ಎಣ್ಣೆಗಳು, ರಸಾಯನಗಳು, ಹಲ್ಲುಪುಡಿಗಳು, ಇತ್ಯಾದಿ, ಇತ್ಯಾದಿ.

ದಕ್ಷಿಣ ಇಂಡಿಯಾ ಮುಖ್ಯ ಏಜಂಟರು:—

[214-13]

ಎಸ್. ವೈದ್ಯ ಮತ್ತು ಕಂಪನಿ, ಪಾರ್ಕ್ ಟೌನ್, ಮದರಾಸು.

ವಿಶೇಷ:—ನಮ್ಮಲ್ಲಿರುವ ಮೇಲ್ಕಂಡ ಪದಾರ್ಥಗಳನ್ನು ಒಂದಾವರ್ತಿ ತರಿಸಿನೋಡಿದರೆ ಅವುಗಳ ಉತ್ಕೃಷ್ಟವಾದ ಗುಣಗಳು ಖಂಡಿತವಾಗಿಯೂ ಅನುಭವವಾಗುತ್ತೆ. ವಿಷಯಗಳನ್ನು ತಿಳಿಯಬೇಕೆಂದು ಬರೆದರೆ ಎಲ್ಲಾ ವಿವರಗಳನ್ನೂ ಸ್ಪಷ್ಟವಾಗಿ ತಿಳಿಸಲು ಯಾವಾಗಲೂ ಸಿದ್ಧರಾಗಿರುತ್ತೇವೆ.

ಸನ್ ೧೯೧೬ ನೇ ಇಸವಿಯ ಡೋಂಗರೆ ಇವರ "ಬಾಲಾಮೃತದ" ಸಚಿತ್ರ

ಕನ್ನಡ ಕೆಲೆಂಡರವು!

ಪುಗಸಾಟೆ ಕಳುಹಿಸುವೆವು.

ಮತ್ತು ಅಂಗಡಿಕಾರರಿಗೆ ಬಣ್ಣದ ಅಂದವಾದ ಚಿತ್ರದ ಬೋರ್ಡು ಸಹ ಉಚಿತವಾಗಿಯೇ ಕಳುಹಿಸಿಕೊಡುವೆವು.

ತಮ್ಮ ವಿಳಾಸವನ್ನು ತಿಳಿಸಿರಿ.

[177 19]

K. T. DONGRE & Co.,
Chaupati, Girgaon, Bombay.

ಕೆ. ಟಿ. ಡೋಂಗರೆ ಕಂಪನಿ,
ಗಿರಿಗಾಂವ, ಮುಂಬಾಯಿ.

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ದಕ್ಷಿಣಾಯನೇ ಹೇಮಂತಋತೌ ಪುಷ್ಯ ಶುದ್ಧ ತದಿಗೆ ಶುಕ್ರವಾರದಿಂದ ಪುಷ್ಯ ಶುದ್ಧ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1916 ನೇ ಜನವರಿ.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ ತೇದಿ
7	ಶುಕ್ರ †	ತದಿಗೆ	54-50	ಶ್ರವಣ	27-36	23
8	ಶನಿ ‡	ಚೌತಿ	50-53	ಧನಿಷ್ಠ	24-57	24
9	ಭಾನು	ಪಂಚಮಿ	47-58	ಶತಭಿಷ	23-8	25
10	ಸೋಮ *	ಷಷ್ಠಿ	46-6	ಪೂಭಾ	22-20	26
11	ಮಂಗಳ §	ಸಪ್ತಮಿ	45-26	ಉತ್ತಭಾ	22-41	27
12	ಬುಧ ,,	ಅಷ್ಟಮಿ	45-56	ರೇವತಿ	24-17	28
14	ಗುರು	ನವಮಿ	47-51	ಅಶ್ವಿನಿ	27-2	29

† ಮಳೆ ನಕ್ಷತ್ರ—ಪೂರ್ವಾಷಾಢ 4 ನೇ ಪಾದ.
‡ ದೂರ್ವಾಗಣಪತೀ ವ್ರತ.
* ಮಳೆ ನಕ್ಷತ್ರ—ಉತ್ತರಾಷಾಢ 1 ನೇ ಪಾದ.
§ ಶ್ರೀರಂಗದಲ್ಲಿ ಧನುಪತಿ ಉತ್ಸವಾರಂಭ.
,, ಉಡುಪಿ ಕೃಷ್ಣೋತ್ಸವ.

Printed and Published by the Rev. H. Gulliford, Proprietor and Manager, Wesleyan Mission Press, Mysore. 6/1/1916.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸೆ ೧೯೧೬ ನೇ ಇಸವಿ ಜನವರಿ ತಾರೀಖು ೧೩ ನೇ ಗುರುವಾರ. ಸಂಚಿಕೆ ೩೩

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂಥ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಹೆಚ್ಚು ಪ್ರಕಟಿಸುವದೋ, ಹಾಗೆಯೇ ನಾನಾವಿಧ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾ



ರ್ಥಿಗಳಿಗೂ ಅಷ್ಟೇ ಅಗತ್ಯದ ಸಹಾಯಕ ವಾಗಿರುತ್ತದೆ. ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಕಾವೇರುವಿಕೆಯು ಕಡಿಮೆಯಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೊಂದಿಯೂ ಹೆಚ್ಚಾದ ಬಳಿಕ ಎಂದಿಗೂ ಉದುರಿ ಬಿದ್ದುಹೋಗಲಾರವು ; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಪ್ರಶಂಸಾಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು. ಬಸವನಗಲ್ಲಿ, ಬೆಳಗಾಂವ—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದದೊಂದು ಸಾಧನವಾಗಿರುತ್ತದೆ. ಅದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ 0-4-0 ಬೇರೆ 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವಾದ್ದೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ. ನಮ್ಮ ಮೊಹರು ಬ್ರಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕದೇ ನಿಜವಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಆಶ್ಚರ್ಯಕರವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಪಡಿಸಿದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಇದರ ಒಂದು ಗುಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದದೊಂದು ಸುವಾಸನೆಯು ಆವರಿಸಿಕೊಳ್ಳುವುದು. ಬೇರೆ ಯಾವ ಪರಿಮಳ ದ್ರವ್ಯದ ಸುಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [18-51]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ನಡುವಿಯಂ) ಸೀಸೆ ರೂ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ದೇಶಿ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಜೀದ್, ಮಾರ್ಕೆಟ್, ಬಾಂಬೆ.

ಏಜೆಂಟ್, ದಿ ಉಲ್ಫ ವರ್ಕ್ಸ್, ಮಂಗಳೂರು

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜುಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ ಪ್ರತಿಗೆ ರೂ. 1-12-0 [168-30]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಪ್ರಶ್ನೋತ್ತರ ಲೇಖ್ಯಬೋಧಿನಿ ಕ್ರಯ ೧-೮-೦

ಸಿವಿಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ಸಮಸ್ತ ವಿಚಾರಗಳನ್ನೂ, ವ್ಯವಹಾರಗಳನ್ನೂ, ಪ್ಲೀಡರ ಸಹಾಯವಿಲ್ಲದೆ ತಿಳಿಸುವುದು. ಆರನೆಯ ಮುದ್ರಣ, ಸರ್ವಾಂಗ ಸುಂದರವಾದ ಪುಸ್ತಕ ! ಬೇಗ ಬೇಗ ಬರೆದು ತರಿಸಿಕೊಳ್ಳಿರಿ !!

ಕ್ರಯ ಒಂದು ರೂಪಾಯಿ ಎಂಟಾಣೆ.

ನಮ್ಮ ವಿಳಾಸ ಭಾರತಿ ಸಂಸಂಗಿರಾಮ,

[1-2] 12. ಸಿ. ಜೆ.ಪಿ. ಕೋಟೆ, ಬೆಂಗಳೂರು ಸಿಟಿ.

ಬೇಗ ತರಿಸಿಕೊಳ್ಳಿ ಒಳ್ಳೆ ಸಮಯ

ಕನ್ನಡ ಕ್ರಿಮಿನಲ್ ಪ್ರೊಸಿಜರ್ ಕೋಡು.

ಇದುವರೆಗಿನ ಕೋಡುಗಳಿಗಿಂತಲೂ ಹೆಚ್ಚಾಗಿ ವಿಶೇಷ ವಿಷಯಗಳನ್ನು ಸಂಗ್ರಹಿಸಿ ದಪ್ಪನಾದ ಬಿಳೀ ನುಣುಪಾದ ಕಾಗದದಲ್ಲಿ ಅಚ್ಚುಹಾಕಲ್ಪಟ್ಟಿದೆ. ಪೋಲೀಸಿನವರಿಗೂ, ಪಟೇಲರಿಗೂ, ಜನರಲ್ ದಾರರಿಗೂ ಅತ್ಯಂತ ಅವಶ್ಯಕವಾದದ್ದು. ಕ್ರಯ 690 ಪುಟದ್ದಕ್ಕೆ 3 ರೂಪಾಯಿಗಳು ಮಾತ್ರ. ಒಂದು ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಟಪಾಲ್ ಹಾಸಲ್ ಮುಫತ್ತಾಗಿ ರವಾನಿಸಲ್ಪಡುವದು.

[251-9] ವಿಳಾಸ:—ಬಿ. ನರಸಿಂಗರಾವ್, ಲಾ ಆಫೀಸ್, ಬೆಂಗಳೂರು

ನವೀನ ಕಾದಂಬರಿಗಳು.

ಸತ್ಯರಾಜನ ಪೂರ್ವದೇಶ ಯಾತ್ರೆ—ಹಾಸ್ಯರಸ ಪ್ರಧಾನವಾದ ಲಂಕೆ—

ಮಲೆಯಾಳ ದೇಶಗಳ ಕಥೆ	1-0-0
ಮಾಧವಚಂದ್ರ—ಚಮತ್ಕಾರಿಕವಾದ ನಾವೆಲ್.	0-6-0
ಸರಳಬಾಲೆ—ಮನೋಹರವಾದ ಕಾದಂಬರಿ	0-8-0
ರಾಧಾಮಾಧವ—ನೀತಿಬೋಧಕವಾದ ಕಟ್ಟುಕಥೆ.	0-8-0

ಅನಂಗಸುಂದರಿ, ತಾರಾಸುಂದರಿ, ವಿನೋದಕರವಾದ ಕಾದಂಬರಿಗಳು— ಪ್ರತಿ 1 ಕ್ಕೆ 8 ಆಣೆ. ಇದಲ್ಲದೆ "ಕಮಲಿನಿ" 6 ಆಣೆ "ಸಂತಾಪಕ" 4 ಆಣೆ. ಮುಂತಾದ ಹಲವು ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

[277-6] ವಿಳಾಸ:—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಡೈರಿ ಬಹುಮಾನ.

ಒಂದು ತಿಂಗಳು ಮಾತ್ರ! ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ಕೈಕಿ 2 ರೂ. ಗಳ ನಮ್ಮ ಆರ್ಡರಿಗೆ 1 ಸುಂದರವಾದ 1916 ನೇ ವರ್ಷದ ಪಾಕೆಟ್ ಡೈರಿಯನ್ನು ಬಹುಮಾನವಾಗಿ ಕಳುಹಿಸುತ್ತೇವೆ. ಶೋಭನ-ಬಂಗಾಳಿ ನಾವೆಲ್ 12 ಆ ಕಲಾನಾಥ-ಕಥೆ 8 ಆ ಸುಭದ್ರೆ-ಹೊಸ ಕಾದಂಬರಿ 5 ಆ ಮೈತ್ರೇಯಿ 6 ಆ ವಾಲ್ಮೀಕಿಯುದಯ 6 ಆ ಅಧ್ಯಾತ್ಮವಿಚಾರ-ಉತ್ತರ, ಪ್ರತ್ಯಗಾತ್ಮನ ವರ ಸಹಿತ 2 ರೂ. ಸಂಗೀತ ಸಮಯಸಾರ-ಹೊಸ ಪುಸ್ತಕ 1-4-0. ಪ್ರತಿ ವರ್ಷವೂ ಉಪಯೋಗಿಸಬಹುದಾದ (S.T.A. Perpetual Calendar) ಪರ್ಪೆಚ್ಯುಯಲ್ ಕ್ಯಾಲೆಂಡರ್ 10 ಆ. S.T.A. ಮಹಾರಾಣಿ ಹೇರ್ ಆಯಿಲ್ 12 ಆಣೆ. ಪುಸ್ತಕದ ಪಟ್ಟಿ ಉಚಿತ. [281-5]

ವಿಳಾಸ.—ಎಂ. ಎಸ್. ರಾವ್ ಕಂಪನಿ, ಅವಿನ್ಯೂ ರೋಡ್ ಬೆಂಗಳೂರು ಸಿಟಿ.

ಉತ್ತಮವಾದ ಫೌಂಟನ್ ಪೆನ್ನುಗಳು ದೊರೆಯುತ್ತೆ.



ನೆಪ್ಚೂನ್ 200 ನೆ ನಂಬರ್ ಪೆನ್ ಒಂದಕ್ಕೆ	ರೂ 1-14-0
ನೆಪ್ಚೂನ್ 205 ನೆ ನಂಬರ್ ಪೆನ್ ಒಂದಕ್ಕೆ	,, 2-10-0
ನೆಪ್ಚೂನ್ 250 ನೆ ನಂಬರ್ ಪೆನ್ ಒಂದಕ್ಕೆ	,, 3-12-0
ನೆಪ್ಚೂನ್ 210 ನೆ ನಂಬರ್ ಪೆನ್ ಒಂದಕ್ಕೆ	,, 4- 0-0
ನೆಪ್ಚೂನ್ 251 ನೆ ನಂಬರ್ ಸೇಫ್ಟಿ ಪೆನ್ ಒಂದಕ್ಕೆ	,, 3-12-0
ನೆಪ್ಚೂನ್ 207 ನೆ ನಂಬರ್ ಪೆನ್ ಒಂದಕ್ಕೆ	,, 3- 6-0
ನೆಪ್ಚೂನ್ 158 ನೆ ನಂಬರ್ ಪೆನ್ ಚಿನ್ನ ಗಿಲೀಟ್ ಕೊಳವೆ ಮತ್ತು ಕ್ಲಿಪ್ ಸಹಿತ ಒಂದಕ್ಕೆ	,, 4- 2-0
ಉತ್ತಮವಾದ ಸಾದ್ ವ್ಯಾಕಬಿಲ್ ಪೆನ್ ಒಂದಕ್ಕೆ	,, 3-12-0
ಉತ್ತಮವಾದ ಫೌಂಟನ್ ಪೆನ್ ಕ್ಲಿಪ್ ಕ್ರಯ ಒಂದಕ್ಕೆ	,, 0-4-0

ಲಾಗಾಯತು ರೂ. 0-12-0 ವರಿಗೆ ಉತ್ತಮವಾದ ಫೌಂಟನ್ ಪೆನ್ ಸ್ಟೈಲ್ ಇಂಕು ಬಾಟ್ಲಿ ಒಂದಕ್ಕೆ ರೂ. 0-8-0.

ಸೂಚನೆ :—ಟಪಾಲ್ ಮತ್ತು ಪ್ಯಾಕಿಂಗ್ ಖರ್ಚು ಬೇರೆ ಒಟ್ಟಿಗೆ 3 ಪೆನ್ನು ತರಿಸುವವರಿಗೆ ಪ್ರತಿ ಒಂದು ಪೆನ್ನಿಗೂ ಒಂದು ಸೊಗಸಾದ ಕ್ಲಿಪ್ ಉಚಿತವಾಗಿ ಕೊಡಲಾಗುತ್ತೆ. ಬೈಸಿಕಲ್ಲಿಗೆ ಬೇಕಾದ ಎಲ್ಲಾ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತೆ.

ನಮ್ಮ ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್,

[279—5] ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಮೆಟ್ರಿಕ್ಯುಲೇಷನ್ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಅವಶ್ಯಕವಾದ

ಗಣಿತ ಪ್ರಶ್ನೋತ್ತರಾವಳಿ

ಎಂಬ ನವೀನ ಗಣಿತದಲ್ಲಿ ಸಂಕಲನ, ವ್ಯವಕಲನ, ಗುಣಾಕಾರ, ಭಾಗಹಾರ, ಮ. ಸಾ. ಅ., ಲ. ಸಾ. ಅ., ಇವೇ ಮೊದಲಾದ ಗಣಿತ ಭಾಗಗಳ ಮೇಲಿನ ಲೆಕ್ಕಗಳನ್ನು ಅತಿ ಸುಲಭವಾಗಿಯೂ, ಜಾಗ್ರತೆಯಾಗಿಯೂ ಮಾಡುವ ಕ್ರಮಗಳು ಸ್ಪಷ್ಟವಾದ ವಿವರಣೆಗಳೊಡನೆ ತೋರಿಸಲ್ಪಟ್ಟಿವೆ. ಅಲ್ಲದೆ ಲೆಕ್ಕಗಳನ್ನು ಮಾಡತಕ್ಕ ಪೂರ್ಣನ್ಯಾಸ ಕ್ರಮವೂ ತೋರಿಸಲ್ಪಟ್ಟಿದೆ ಮತ್ತು 16 ವರ್ಷಗಳಿಗೆ (1915-1930) ಮೇಲ್ಪಟ್ಟ ಎಲ್. ಸೆ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳೂ, ಇವುಗಳಿಗೆ ನ್ಯಾಯ ಸಹಿತವಾದ ಉತ್ತರಗಳೂ ಮತ್ತು ಇತರ ಪ್ರಶ್ನೆ ಪತ್ರಿಕೆಗಳೂ ಇರುತ್ತವೆ. ಸ್ವಲ್ಪ ಪ್ರತಿಗಳು ಮಾತ್ರವೇ ಇರುವುದರಿಂದ ಅಪೇಕ್ಷಕರು ತ್ವರೆ ಮಾಡಿ ತರಿಸಿಕೊಳ್ಳಬಹುದು. ಕ್ರಯ 8 ಆಣೆ; ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ—ಡಿ. ಮಹಾಬಲರಾವ್, ಅ. ಮಾಸ್ಟರ್, ಮಹಾರಾಣಿ ಕಾಲೇಜು,

[284-3] 591 ಕೊತ್ವಾಲರಾಮಯ್ಯನವರ ಬೀದಿ, ಶಿವರಾಂಪೇಟೆ, ಮೈಸೂರು.

ಗ್ರಹಪತ್ರದ ನೋಟೀಸು.

ಕಡೂರ್ ಡಿ ಮೂಡಿಗೆರೆ ತಾ|| ಕಳಸದ ಮಾಗಣೆ ತಲಗೋಡು ಗ್ರಾಮದ ಹೊಸಮನೆ ವಾಸಿ ಫೌತಿ ವೆಂಕಟರಾಮಯ್ಯನ ಹೆಂಡತಿ ಚೆನ್ನಮ್ಮ ಎಂಬುವಳು ದತ್ತುಮಗ ಸಲ್ಲಿಕೊಟ್ಟ ರಂಗಯ್ಯನ ಮಗ ಮಂಜಪ್ಪ ಗಾರ್ಡಿಯನ್ ವೈವಟ್ ದಾರ್ ಕೃಷ್ಣಯ್ಯನು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ. ಫೌತಿ ವೆಂಕಟರಾಮಯ್ಯನು ಅಪುತ್ರವಂತನಾದ್ದರಿಂದ ಮರಣಕಾಲ ವಾಗ್ದಾನ ಮಾಡಿದ ಮೇರೆಗೆ ಮೇಲ್ಕಂಡ ಮಂಜಪ್ಪನೆಂಬ ಮೈನರ್ ಹುಡುಗನನ್ನು ಶಾಸ್ತ್ರೋಕ್ತರೀತ್ಯಾ ಅಗ್ನಿಸಾಕ್ಷಿಯಾಗಿಯೂ ದತ್ತು ಸ್ವೀಕಾರ ಮಾಡಿ ಹಾಲಿ ಹೊಸಮನೆಯಲ್ಲಿಯೇ ವಾಸವಾಗಿದ್ದುಕೊಂಡು, ವೆಂಕಟರಾಮಯ್ಯನ ಉತ್ತರ ಕ್ರಿಯಾದಿಗಳು ಸಹ ನಡಿಸುತ್ತಿದ್ದಾನೆ. ಚೆನ್ನಮ್ಮನೆಂಬ ಮೈನವಳು ವಿಧವೆಯು ತನ್ನ ಮನೆ ಬಿಟ್ಟು ಜನರ ಪ್ರೇರಣೆಯಿಂದ ಮನಸಿಕವಾಗಿ ಸಂಚರಿಸುತ್ತಾಳೆ. ಇವಳಿಗೆ ಯಾವ ಸಂತಾನವೂ ಇಲ್ಲ. ದತ್ತು ಮಗನಿಗೆ ಮೋಸಪಡಿಸಬೇಕೆಂಬ ದುರ್ಬೋಧನೆಯ ಮೇರೆಗೆ ಕೆಲವು ಸ್ವತ್ತುಗಳನ್ನು ದತ್ತು ಮಗನಿಗೆ ಸಿಕ್ಕದಂತೆ ಮಾಡಬೇಕೆಂದು ಇರುತ್ತಾಳಾಗಿ ತಿಳಿಯಬರುತ್ತೆ. ಸದರಿ ಸ್ವತ್ತುಗಳಿಗೆ ದತ್ತು ಮಗ ಮಂಜಪ್ಪನೇ ಹಕ್ಕುದಾರನು. ಆದಕಾರಣ ಯಾರೇ ಆಗಲಿ ಕ್ರಯ, ಭೋಗ್ಯ, ದಾನ, ಅದವು ವಗೈರೆ ಮಾಡಿಕೊಂಡರೆ ಅದು ಎಂದಿಗೂ ಸಲ್ಲಲಾರದು. ಅಂಥವುಗಳನ್ನು ರದ್ದು ಪಡಿಸಲು ರೀತ್ಯಾ ಸಂಕ್ರಮ ಜರುಗಿಸುತ್ತೇನೆ. ಇದರಿಂದ ನಮಗೆ ಉಂಟಾಗುವ ಸಕಲ ನಷ್ಟಕ್ಕೂ ಅವರೇ ಗುರಿಯಾಗಿರಬೇಕೆಂದು ಎಚ್ಚರಿಸುತ್ತೇವೆ. ಷೆಡ್ಯೂಲ್—ತಲಗೋಡು ಗ್ರಾಮದ ಸರ್ವೆ ನಂ. ೧೨೮ ಬಂಗಾಯ್ತು ಎಕ್ರೆ ೭-೧೮, ಆಕಾರ ರೂ. ೩೧. ಸ. ನಂ. ೧೩೧ ತರಿ ಎಕರೆ ೨-೫, ಆಕಾರ ರೂ. ೫-೧೨ ಆ ಅಂತು ನಾಲ್ವತ್ತು ರೂಪಾಯಿ ಒಂಭತ್ತು ಪೈ ಆಕಾರದ ಜಮೀನುಗಳು. [2-1]

ತಾ. ೩೦-೧೨-೧೫. ಬಮ್ಮನಬೈಲಿ ಕೃಷ್ಣಯ್ಯ.

Pure Woollen Rugs.

ಬೆಂಗಳೂರು ಬಿನ್ನಿ ಮಿಲ್ ರಗ್ಗುಗಳು.

ಪ್ಯೂರ್ ಉಲ್ಲನಲ್ಲಿ ಮಾಡಿದ್ದು. ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಈಗಿನ ಬೆಲೆ ಮುಂದಕ್ಕೆ ದೊರೆಯುವದಿಲ್ಲ.

ಜಾಗ್ರತೆಯಾಗಿ ನೋಡಿ. ಸಮಯ ಕಳೆದ ನಂತರ ದೊರೆಯಲಾರದು. ಸಕಾಲದಲ್ಲಿ ಉಪಯೋಗ ಹೊಂದಬೇಕು.

ಸೈಜು	64 × 100	(ಅಂಗುಲ)	ರೂ. 10- 8- 0
,,	60 × 90	,,	,, 7- 0- 0

ಪರಸ್ಥಳದವರಿಗೆ ರೈಲ್ ಪಾರ್ಸೆಲ್ ಚಾರ್ಜು ಪ್ರತ್ಯೇಕ. ಒಂದೇ ರವಾನಿನಲ್ಲಿ 5 ರಗ್ಗುಗಳಿಗಿಂತಲೂ ಹೆಚ್ಚಾಗಿ ತೆಗೆದುಕೊಂಡವರಿಗೆ ರೈಲ್ ಪಾರ್ಸೆಲ್ ಚಾರ್ಜು ಬೀಳುವದಿಲ್ಲ. ಇವಲ್ಲದೆ ಇಂಗ್ಲೀಷ್ ಉಲ್ಲನ್ ರಗ್ಗುಗಳು, ಬಾಲಾಕ್ಲಾವಾ ಟೋಪಿಗಳು ಇವೇ ಮೊದಲಾದವೆಲ್ಲಾ ನಮ್ಮಲ್ಲಿ ದೊರೆಯುತ್ತವೆ.

H. JEWANMULL & Co.,
Chickpet, Bangalore City.

ನಮ್ಮ ವಿಳಾಸ—ಎಚ್. ಜವಾನ್‌ಮಲ್ ಕಂಪನಿ,

[3-2] ಚಿಕ್ಕಪೇಟೆ, ಬೆಂಗಳೂರು ಸಿಟಿ.

ರಿಜಿಸ್ಟರ್ ಇಂಡಿಯನ್ ಮೇಯಿಲ್ ಲೀವರ್ ವಾಚು.

ಉತ್ತಮ ಸರಪಣಿ ಸಹಿತ 6 ವರುಷಗಳ ಗ್ಯಾರಂಟಿ ವಿ ಪಿ ಛಾರ್ಜು
ಕ್ರಯ ರೂ. 3-0-0. ಪತ್ರ 4 ಆಣೆ.



ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಯಾರಲ್ಲಿಯೂ ಸಿಕ್ಕಲಾರದು. ಒಡೆಯದ ರಿಗೋಣ್ಣರ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಒಂದುಭಾಗದಲ್ಲಿ ನಮ್ಮ ಟ್ರೇಡು ಮಾರ್ಕ್, ಡಸ್ಟು ಪ್ರೂಫ್ ಗ್ಲಾಸು ದೋಮೂ ಇರುವದು ಬಹಳ ಗಟ್ಟಿಯಾದ ಸಾಮಾನುಗಳಿಂದ ತಯಾರಾದದ್ದು ಕಾಲವನ್ನು ಸರಿಯಾಗಿ ತೋರಿಸುವದು. ಒಡೆದರೂ ಉಚಿತ ಸರಿ ಮಾಡಿಕೊಡುವೆವು. ಬೇರೆ ಬಾರಿ ಬೆಲೆಯ ಗಡಿಯಾರದ ಸರಿಯಾಗಿ ಕಾಲವನ್ನು ಸರಿಯಾಗಿ ತೋರಿಸುವದು ಪರೀಕ್ಷಿಸಿ.

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,
[260-7] ಪೋಸ್ಟು ಬಾಕ್ಸು 167, ಮದರಾಸ್.

ಯಥಾರ್ಥ ದೇಶವತ್ಸಲನು

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವದಕ್ಕೆ ತನ್ನ ಶರೀರ ಸೌಖ್ಯವನ್ನು ಕಾಯವುಷ್ಟಿಯನ್ನು ಕಾಪಾಡಿಕೊಂಡು ಬರಲು ಅಕ್ಕರೆ ಉಳ್ಳವನಾಗಿರುತ್ತಾನೆ. ನಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥಾದ್ದು ನಮ್ಮ ಮಾತುಗಳಲ್ಲ; ನಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸದಲ್ಲಿ ತತ್ಪರರಾಗಿ ... ಈ ಉದ್ದೇಶಕ್ಕಾಗಿ ನೀವು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿರುವ ನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ತಪ್ಪದೆ ಕ್ರಮವಾಗಿ ಸೇವನೆ ಮಾಡುತ್ತಾ ಬನ್ನಿ. ಈ ಮಾತ್ರೆಯು ನಿಮ್ಮ ಶರೀರದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿ ಯಾವ ರೋಗವೂ ತಲೆ ಎತ್ತದಂತೆ ನಾಶಮಾಡುವುದು.

ಕ್ರಯ 40 ಮಾತ್ರೆಗಳ ಡಬ್ಬಿಗೆ ರೂ. 1-0-0.

ಶಾ. ಕ:—ಒಂದು ದೊಡ್ಡ ಕ್ಯಾಟ್ಲಾಗನ್ನು, ರೋಗ ಪರಿಹಾರಕ್ಕೆ ತಕ್ಕ ಸಲಹೆಗಳನ್ನೂ ಬಿಟ್ಟಿ ಪಡೆಯಬಹುದು.

ವಿಳಾಸ:—ರಾಜವೈದ್ಯ ನಾರಾಯಣಜಿ ಕೇಶವಜಿ,
[255-8] 20, ಚೈನಾ ಬಜಾರ್ ರೋಡ್, ಮದರಾಸ್.

ಒಳ್ಳೇ ಸಮಯ! ಹೊಸ ನಮೂನೆ ಗಡಿಯಾರ!! ಒಳ್ಳೇ ಲಾಭ!!!

ಸುಂದರವಾದ ಲಂಡನ್ ಪಾಕೆಟ್ (ರಿಜಿಸ್ಟರ್ಡ್) ವಾಚ್.

15 ಬಹುಮಾನಗಳ ಸಹಿತ ರೂ. 2-12-0 ಮಾತ್ರ

6 ವರ್ಷಗಳ ಗ್ಯಾರಂಟಿ ಕೊಡಲ್ಪಡುತ್ತೆ

ಅಯ್ಯಾ, ಈ ಚಿತ್ರದಲ್ಲಿ ತೋರಿಸಿರುವ ಲಂಡನ್ ಗಡಿಯಾರವನ್ನು ನಮ್ಮ ಆರ್ಡರ್ ಮೇಲೆ ಸೀಮೆಯಿಂದ ತರಿಸಿರುತ್ತೇವೆ. ಈ ಗಡಿಯಾರ ಇಂಗ್ಲೆಂಡ್ ಕಂಪೆನಿಯಲ್ಲಿ ದೊರೆಯಲಾರದು. ಈ ಗಡಿಯಾರ ಬಹು ನಾಜೂಕಾಗಿಯೂ, ವಿಚಿತ್ರವಾದ ಸಾಮಾನುಗಳಿಂದ ಸರಿಯಾದ ಕಾಲವನ್ನು ತೋರಿಸುವದಾಗಿಯೂ, ಸ್ವಲ್ಪ ಖರ್ಚಿನ ಉಲ್ಲಾಸವಾಗಿಯೂ ಇದೆ.



ಅನೇಕ ಕಂಪನಿಗಳಲ್ಲಿ ಬೆಲೆಬಾಳುವ ಗಡಿಯಾರಗಳನ್ನು ಕೊಂಡು ಹಣ ಕಳಕೊಳ್ಳುವದೇ ಹೊರತು ಪ್ರಯೋಜನವಿಲ್ಲ. ಈ ವಾಚಿನ ಗಡಿಯಾರ 1ನ್ನು ತಾವುಕೊಂಡರೆ ಎಷ್ಟು ಸಮಯಗಳಾದರೂ ಫ್ರೆಂಡು ರಿಪೇರಿಗೆ ಕೊಡಬೇಕಾದ ಅವಶ್ಯವಿಲ್ಲ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಮಿಟಾಗಿ ಅನೇಕ ಯೋಗ್ಯತಾ ಪತ್ರಿಕೆಗಳು ಪಡೆದಿವೆ. ಈ ಗಡಿಯಾರಗಳನ್ನು ಪ್ರಖ್ಯಾತಿಮಾಡಬೇಕೆಂದು ಬಹುಮಾನಗಳು ಸಹಾ ಹಾಕಿರುತ್ತೇವೆ. ಜಾಗ್ರತೆ ಗಿರಾಕಿಯಾಗಿ. ಬಹುಮಾನಗಳ ತಪಶೀಲು:—ಸರಪಣಿ, ಕಂಪಾಸ್, ಜರಾಕ್ ಕರವಸ್ತ್ರ, ಕೈ ಉಂಗುರ, ಪರಟು ಗುಂಡಿ ಸುವಾಸನೆ ಸೆಂಟ್, ಕೈ ಗುಂಡಿಗಳು, ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, ಗಿಲೀಟ್ ಬಟನ್, ಲೇಡಿ ಫೋಟೋಗಳು 4, ಕೋಟೆ ಗಿನಿ, ರಾಜ ರಾಣಿ ಪೆಟ್ಟಿಗೆ.

ನಮ್ಮ ವಿಳಾಸ—ದ್ಯೆಯಲಕ್ಷ್ಮಿ ಅಂಡ್ ಕಂಪನಿ,
[252-9] 3, ಇರುಳಪ್ಪನ ಬೀದಿ, ಮದರಾಸು.

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ. ಸಂತೋಷಕರವಾದ ಬಹುಮಾನ.

ಸುಂದರವಾದ ಜೂಬಿಲಿ ಪಾಕೆಟ್ಟು ವಾಚ್.

9 ಬಹುಮಾನಗಳ ಸಹಿತ ರೂ 3-0-0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ

ಅಯ್ಯಾ, ಈ ಚಿತ್ರದಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕಂಪೆನಿ ಸೇರ್ಪ



ಬಲಿಷ್ಟವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು ಬ್ಯಾಂಕಿನಲ್ಲಿರುವ ಧೊರೆಗಳು ಕೊಂಡುಕೊಳ್ಳುತ್ತಾ ಇದ್ದಾರೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ. ಜಾಗ್ರತೆ ಈ ಕೆಳಗಿನ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವ ಬಹುಮಾನ ತಪಶೀಲು—(1) ಸರಪಣಿ, (2) ಕಂಪಾಸ್, (3) ಜರಾಕ್ ಕರವಸ್ತ್ರ, (4) ಕೈ ಉಂಗುರ, (5) ಪರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.

ನಮ್ಮ ವಿಳಾಸ—ದ್ಯೆಯಲಕ್ಷ್ಮಿ ಅಂಡ್ ಕಂಪನಿ,
[252-9] 3, ಇರುಳಪ್ಪನ ಬೀದಿ, ಮದರಾಸು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರದ ಉಣ್ಣೆ ಥಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ, ಮಾದರಿಗಳನ್ನೂ, ದರಗಳನ್ನೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,
[188-17] GIRLS' INDUSTRIAL SCHOOL, HASSAN.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನದರೇಕು-ಲೋಹಭಸ್ಮ-ಮುಂತಾದವುಗಳಿಂದ ವಂಶ ಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು

ಛಳಿ ಮಳೆಗಾಲಗಳಲ್ಲೂ—ಸೋಂಕು ರೋಗಸ್ಥಳಗಳಲ್ಲೂ—ಪ್ರಯಾಣಕಾಲದಲ್ಲೂ—ಮಕ್ಕಳಿರುವ ಮನೆಗಳಲ್ಲೂ—ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ ಭೇದಿ, ವಮನ, ಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ವ್ಯಕ್ಕಳ ರೋಗ, ನಡು ನೋವು, ಹಲ್ಲು ನೋವು, ಆರೋಚಕಗಳು ಬಹಳ ಬೇಗನೆ ಬಾರಂ ಗುಣವಾಗುತ್ತವೆ ಮಕ್ಕಳ ಸಮಸ್ತ ರೋಗಗಳಿಗೂ ಅಮೃತವೇ ಸರಿ.

250 ಮಾತ್ರೆಯ ಸೀಸೆ 0-4-0. ಏಳಕ್ಕೆ 1 ಹೆಚ್ಚು. ಟ. ಖ ಪ್ರತ್ಯೇಕ.

[278-5] ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.

To P. D. Bhargova, Esqr:
Manager, General Assurance Society Ltd,
Ajmer.

Re Policy No:-2196 C. I. (Deceased)
Mr. P. Srinivasamoortha Char.

Dear sir,

I have this day received your Mdras Bank cheque No Co51170 for Rs 973/1- from the Branch Secretary of Bangalore, in settlement of claim under the above policy No. 2126. Further I desire you and your agents my deep appreciation for the prompt manner in which you settled my claim of Rs. 1,000/- of the above policy on my husband's life. Indeed, your Insurance Office is very honest and settles the claim very early, earlier than the other Insurance Companies, I think. Further I thank Mr. S. P. Ramanna, son of Sowley Parnachar, your Mysore Agent for the trouble he took in getting my husband's life Insurance.

Yours Faithfully,
Mark of RAMAMMA
[142-25] Wife of Srinivasamoortha Char.

ಓರಿಯಂಟಲ್ ಗ್ಹ್ಯಾ. ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು .... ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 1,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದವರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್. ಡಿ ಲಿಟಾ, ಚೀಫ್ ಏಜೆಂಟ್, ಬೆಂಗಳೂರು; ಮಿ॥ ಎಂ. ಎಸ್. ಸಂಪತ್ತು ಅಥವಾ ಮಿ॥ ವೆಂಕಟರಮಯ್ಯನವರು, ಕೆಂಪನ ಸಾಹುಕಾರರು, ಮೈಸೂರು; ಅಥವಾ

[122-13] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-20]

ಅಮೃತಾಂಜನ ಡಿಪೋ,

109, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಶಾ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆವಶ್ಯಕವಾದವರು ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.



ESANOFELE

ಮಲೇರಿಯಾ ಜ್ವರವನ್ನು

ನಿಶ್ಚಿತವಾಗಿಯೂ ವಾಸಿಮಾಡುವದರಲ್ಲಿ ಪ್ರಖ್ಯಾತಿ ಹೊಂದಿದ

"ಈಸಾನೊಫೆಲಿ"ಯನ್ನು

ಕೊಳಿ ಆಕಾರಗಳನ್ನು ಇಟ್ಟುಕೊಂಡಿರುವಂಥಾ ಬ್ಲಿಸ್ಟರ್, ಟೀ, ಕಾಫಿ ಕೋಟಗಳ ಮಾಲೀಕರುಗಳೆಲ್ಲಾ ತರಿಸಿ ತಮ್ಮ ಬಳಿ ಇಟ್ಟುಕೊಂಡಿರಬೇಕು. ವಾಸಿಮಾಡುವುದರಲ್ಲಿ ಅದು ಗುಣವುಳ್ಳ ಕಡಿಮೆಯಾದದ್ದು, ಭಯವಿಲ್ಲದ್ದು. ಅದು ಬಹಳ ಬೇಗನೆ ಜ್ವರವನ್ನು ಇಳಿಸಿ ಹೊಟ್ಟೆಯೊಳಗಣ ಗಡ್ಡೆಯನ್ನು ಕರಗಿಸಿ, 15 ದಿನಗಳಲ್ಲಿ ಸಂಪೂರ್ಣವಾಗಿ ವಾಸಿಮಾಡಬಲ್ಲದು.

ಬೆಳಿಗ್ಗೆ ಮತ್ತು ರಾತ್ರಿ ಒಂದೊಂದು ಮಾತ್ರೆಯನ್ನು ಸೇವಿಸುತ್ತಾ ಬಂದ ಪಕ್ಷದಲ್ಲಿ ಮಲೇರಿಯಾ ಜ್ವರ ಬಾರದಂತೆ ಸಂರಕ್ಷಣೆ ಮಾಡುತ್ತದೆ.

ಕ್ರಯ 1 ಬಾಟ್ಲಿಗೆ ರೂ. 2-0-0. ಎಲ್ಲಾ ಔಷಧ ವ್ಯಾಪಾರಿಗಳ ಅಂಗಡಿಗಳಲ್ಲೂ ಬಿಕರಿಗೆ ಇಟ್ಟಿದೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುದನ್ನು ಕೇಳಿರಿ ಎಂದು ಕೇಳಿ. ಇದು ಸಿಹಿಯಾದ ಇದು ಸೇವನೆಗೆ ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜೆಂಟರು:—ಜೆ. ಬಿ. ಫಾರ್‍ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗಳ್ಲಾ ಡಿಪೋ— [176-20]

ಬಿ. ಬಿ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು:—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಲಿ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ರಿಜಿಸ್ಟರ್ಡ್ ಸುಪೀರಿಯರ್ ಲೀವರ್ ಜೂವೆಲ್ಡ್ ವಾಚು.

ಕ್ರಯ ಸರಪಣಿ ಸಹಿತ ರೂ. 3-0-0. 6 ವರುಷಗಳ ಗ್ಯಾರಂಟಿ. ವಿ. ಪಿ. ಚಾರ್ಜು 4 ಆಣೆ.

ಇದು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟು ಮತ್ತು ಹಿಂಭಾಗದಲ್ಲಿ ಗ್ಲಾಸು ಡೋಮು ಇರುವದು. ಇದರ ಹಿಂಭಾಗದಲ್ಲಿ ಸಿಂಹದ ನಕ್ಷೆ ಇರುವದು. ಇದೇ ನಮ್ಮ ಟ್ರೇಡು ಮಾರ್ಕು. ಇದು ಕಾಲವನ್ನು ಸರಿಯಾಗಿ ತೋರಿಸುವದು. ಹೊಗಳುವದರಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ನೋಡಬಹುದು. ತಕ್ಷಣ ಒಂದನ್ನು ತರಿಸಿಕೊಂಡು ಪರೀಕ್ಷಿಸಿರಿ. ಇದರ ಪೆಟ್ಟಿಗೆ ಮೇಲೆ ಕೂಡ ನಮ್ಮ ಹೆಸರು ಗಿಲ್ಟು ಅಕ್ಷರಗಳಿಂದ ಹಾಕಲ್ಪಟ್ಟಿರುವದು.

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,

[290-7] ಪೋಸ್ಟು ಬಾಕ್ಸು 167, ಮದರಾಸ್.

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು; ಎಂಜಲ್‌ಬರ್ಗ್ ಹಲ್ಲರುಗಳ ಚಿಲ್ಲರೆ ಸಾಮಾನುಗಳು; ಎಂಜಲ್‌ಬರ್ಗ್ ಸಿಸ್ಟಮ್ ಹಲ್ಲರುಗಳು ನಂ. 1 ಮತ್ತು 2; ದೇವೀ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಸ್ಪಿರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು; ಇಲ್ಲದೆ ರೇಕುಗಳು; ಕ್ರೇಯನ್ ದೇಶದ ನಾಟು ಇದ್ದಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ಬಾಲ ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಕಡೆಗೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳುವರೆಂದು ನಂಬುತ್ತೇವೆ. [208-14]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪೆನಿ, ಮದ್ರಾಸ್.

The Indian Commerce & Industries Co., Madras.

Branches—Bezwada and Tanjore.

ಧರ್ಮಸಮಾವಯ, ಕಲ್ಕತ್ತಾ.

ಏರ್ಪಟ್ಟ ಮೂಲಧನ—ರೂ. 30,00,00,000.

ಈ ಕಂಪನಿಯು 1882 ನೇ ಇಸವಿ 7 ನೇ ಇಂಡಿಯಾ ಕಂಪನಿ ಆಕ್ಟಿನಂತೆ 1910 ನೇ ಇಸವಿ ಜೂನ್ ತಿಂಗಳಲ್ಲಿ ರಿಜಿಸ್ಟರಾಗಿರುತ್ತೆ. ಪ್ರತಿ ಒಂದು ಷೇರೂ ಐದು ರೂಪಾಯಿಗಳು. 1914 ನೇ ಇಸವಿ ತನಕ ಪ್ರತಿ ವರುಷವೂ ಶೇಕಡಾ 25 ರಂತೆ ಬಡ್ಡಿಯನ್ನು ಷೇರುದಾರರಿಗೆ ಬಟವಾಡೆ ಮಾಡಿದೆ. ಮತ್ತು ಮೂಲಧನಕ್ಕೆ ವಿಶೇಷ ಬಡ್ಡಿ ಉತ್ಪತ್ತಿಯಾಗುವಂತೆ ಜಮೀನುಗಳ ಅಭಿವೃದ್ಧಿಗೂ, ಮನೆಗಳ ಮೇಲೂ, ವ್ಯಾಪಾರಕ್ಕೂ, ಲೇವಾದೇವಿಗೂ ಸಾಲಾ ಕೊಡೋಣವಾಗಿದೆ.

ಸಮಾವಯದ ಬಾಂಡ್ ಪಾಲಿಸಿಗಳಿಗೆ ಷೇರುದಾರರಾಗತಕ್ಕ ಮೆಂಬರುಗಳಿಗೆ ಮ್ಯಾನೇಜಿಂಗ್ ಕಮಿಟಿಯವರು 10 ವರುಷಗಳ ತನಕ ಆರ್ಜನೆ ಮತ್ತು ಬಾಂಡ್ ಷೇರುಗಳಿಗೆ ಶೇಕಡಾ 12½ ಮತ್ತು 25 ರಂತೆ ಸಹಾಯವನ್ನು ಕೊಡಲು ಸಿದ್ಧರಾಗಿದ್ದಾರೆ.

ಸಮಾವಯದ ಡಿಬೆಂಚರ್ ಮತ್ತು ಬಾಂಡ್‌ಗಳನ್ನು ಬಹಳ ಅನುಕೂಲವಾದ ರೀತಿಯಲ್ಲಿ ಏರ್ಪಾಡು ಮಾಡಲಾಗಿದೆ. ಹಣ ಕೂಡಿಸಲು ವಿಶೇಷ ಫಲಕಾರಿಯಾದದ್ದು. ಫಾರಂಗಳಿಗೂ, ಹೆಚ್ಚು ವಿಷಯಗಳಿಗೂ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟ್ಯಾಂಪು ಸಹಿತ ಬರೆದು ಕೇಳಿ.

ನಂಬಿಗಸ್ತರಾದ ಏಜಂಟರು ಸಿಕ್ಕಿದರೆ ಒಳ್ಳೇ ಕಮಿಷನ್ ಉಂಟು.

ವಿಳಾಸ.—ಕೃಷ್ಣಾಜಿರಾವ್ ಶ್ರೀನಿವಾಸರಾವ್ ಕಂಪನಿ,

ಬೊಂಬಾಯಿ ಪ್ರಾಂತ್ಯದ ಮೈಸೂರು ಮತ್ತು ಕೊಡಗು

[270-6] ದೇಶದ ಚೀಫ್ ಏಜಂಟರು, ದಾವಣಗೆರೆ.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಬಿನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು. 16 ಮೊಳ, ಬಾಳಿಕೆ ಬರುವದು.

ಗೋಪರ್‌ಜಾರ್ ಬಳ್ಳಿ ಸೀರೆ

ರೂ. 2-8-0.

ಈ ಹೊಸ ನಮೂನೆ ಸೀರೆಗಳು ಬಹು ನಾಜೂಕಾದ ಬಿಳೀ ಮಲ್ಲಿನಲ್ಲಿ ಗೋಪರ್‌ಜಾರ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ಹಗುರ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಹಳ ಹೇಳಿದರು ಇಂಥಾ ಭಾರಿ ಕ್ರಯದ ಸೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಸೀರೆ ಪೇಟೆಯಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ.— ರಾಸ್ ವಾಚ್ ಕಂಪನಿ,

[252-9] 3, ಇರುಳಪ್ಪನ ಬೀದಿ, ಮದರಾಸು.

ಜನವರಿ ಮಹೋತ್ಸವದ ಕೈ ಗಡಿಯಾರ.

ಅರ್ಧ ಕ್ರಯ ರೂ. 1-14-0.



ಇದೇ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ 1-14-0 ಆಣೆಗೆ ಕೊಡಲ್ಪಡುತ್ತೆ. [111-33]

ವಿಳಾಸ—ವಿ. ಕೆ. ಕೆಂಚುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

1. ಗೋರೋಚನ ಮಾತ್ರೆ—2-3 ಮಾತ್ರೆಗಳು ಮಕ್ಕಳಿಗೆ ಹಿಂಸೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಆ, 5 ಶೀಸೆಗೆ 1 ರೂಪಾಯಿ.

2. ಜ್ವರದಮಾತ್ರೆ—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ. 24 ಮಾತ್ರೆ 8 ಆ, 6 ಶೀಸೆಗೆ 2½ ರೂ, 12 ಶೀಸೆಗೆ 4½ ರೂ.

3. ಬಾಧಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ಸುಲಭದಿಂದ ಬೇಗ ಗುಣಮಾಡುತ್ತೆ. ಡಬ್ಬಿಗೆ 4 ಆ, 5 ಕ್ಕೆ 1 ರೂ, 12 ಕ್ಕೆ 2½ ರೂ.

[126-19] ನಮ್ಮ ವಿಳಾಸ.—ಪಂಡಿತ್ ಎಸ್. ಗರಳಪುರಿ, ಮೈಸೂರು.

ಬೆಸ್ಟ್ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾ ಅಸಲ್ ಸಾಲಾಮಿಸರಿಯಲ್ಲಿ ಬೆಳ್ಳಿ ರೇಕು ಮುಂತಾದ್ದು ಸೇರಿಸಿ ಅತಿ ನಯವಾಗಿ ತಯಾರುಮಾಡಿದೇವೆ. ಈ ಮುರಬ್ಬ ಉಷ್ಣಕಾರಕದಿಂದ ಉಂಟಾದ ಅನೇಕ ವ್ಯಾಧಿಗಳಿಗೆ ಸಂಜೀವನವಾಗಿರುತ್ತೆ. ಈ ಮುರಬ್ಬಾ ನಾವು ಲೋಕೋಪಕಾರಕ್ಕಾಗಿ ಕಾಲಾಂತ್ರದಿಂದ ತಯಾರುಮಾಡುತ್ತೇವೆ. ಅತಿ ವೈದ್ಯರು ಈ ಮುರಬ್ಬವನ್ನು ನಮ್ಮಿಂದ ತರಿಸಿ ಸೇವನೆಯಿಂದ ಗುಣವುಳ್ಳದ್ದೆಂದು ಸಿಫಾರಸು ಮಾಡುತ್ತಾರೆ. ನಮಗೆ ಅಸಲ್ ಸಾಲಾಮಿಸರಿ ಬೇರೆ ದೇಶಗಳ ಕಮಿಷನ್ ಏಜಂಟರುಗಳ ಮೂಲಕ ಬರುತ್ತದೆ. ಈ ಮುರಬ್ಬಾ ಸಾಲಾಮಿಸರಿಯಲ್ಲಿ ತಯಾರಾಗಿದ್ದಲ್ಲವೆಂದು ವ್ಯಕ್ತಪಡಿಸಿ ನಮ್ಮಿಂದ 50

ರೂಪಾಯಿ ಬಹುಮಾನ ಪಡೆಯಬಹುದು. ಇದರ ಪೂರ್ತ ಸಮಾಚಾರ ತಿಳಿಯಬೇಕಾದವರು ಅರ್ಧಾಣೆ ಸ್ಟ್ಯಾಂಪು ಕಳುಹಿಸಿ ಕ್ಯಾಟಲಾಗ್ ಪಡೆಯಬಹುದು. 1915 ನೇ ಡಿಸೆಂಬರು ಆರಂಭಿಸಿ ಫೆಬ್ರವರಿ ಆಖೈರಿನ ವರಿವಿಗೂ ವಿ. ಪಿ. ಛಾರ್ಜು ಮಾಫ್ ಮಾಡಿರುತ್ತೆ. ಪಾರ್ಸಲ್ ಸಂಗಡ ಚಿಕ್ಕ ಹಳಡಿಯೂ, ಅನುಪಾನದ ಪತ್ರಿಕೆಯೂ ಇರುತ್ತೆ. 20 ತೊಲಾ ಉಳ್ಳ ಡಬ್ಬಾ 1 ಕ್ಕೆ ಕ್ರಯ ರೂ. 2.

ಏಜಂಟ್

ಡಿ. ಸೈದ್ ಉಸ್ಮಾನ್ ಅಂಡ್ ಕೋ., ಜನರಲ್ ಮರ್ಚಂಟ್, ದೊಡ್ಡಪೇಟೆ, ಬೆಂಗಳೂರು ಸಿಟಿ

(ಇಲ್ಲಿ ಯಾವಾಗಲೂ ಸ್ಟಾಕು ಇರುತ್ತೆ. ತರಿಸಿಕೊಳ್ಳಬಹುದು)

ಟಿ. ಹೆಚ್. ಆಗಾಜ್ ದಾರೋಗಂಜ್ ವೈದ್ಯರು, ಸುಲ್ತಾನ್ ಸಾಹೇಬ್ ಮಸ್ಕಾನ್ ರೋಡ್, ನಂಬರು 104, ಬೆಂಗಳೂರು ಸಿಟಿ

[258-6]

ಡೋಂಗರೆ ಇವರ

ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿದಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-20]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,

ಚೌಪಾಟಿ, ಗಿರಗಾಂವ, ಮುಂಬಯಿ.

ಜಾಮೀನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.

ಮತ್ತು

ಕೂದಲಿಗೆ ರೇಷ್ಮೆಯಂಥಾ ಹೊಳಪು ನುಣುಪು ಬರುತ್ತೆ.

ಈ ಕೂದಲ ರಂಗನ್ನು ನೆತ್ತಿ, ಗಡ್ಡ, ಮೀಸೆ ಮೊದಲಾದ ದೇಹದ ಯಾವ ಭಾಗಕ್ಕಾಗಲಿ ಸುಖವಾಗಿ ಹಚ್ಚಬಹುದು; ಚರ್ಮಕ್ಕೆ ಯಾವ ವಿಧವಾದ ಬಾಧೆಯೂ ನಷ್ಟವೂ ಕೆಡುಕೂ ಉಂಟಾಗುವುದಿಲ್ಲ. ಇದು ಯಾರಿಗೂ ಪತ್ತೆಯಾಗುವುದಿಲ್ಲ; ರಂಗು ಎಂದಿಗೂ ಕೆಡಮೆದಾಗುವುದಿಲ್ಲ. ಒಂದಾವರ್ತಿ ಪರೀಕ್ಷಿಸಿದರೆ ಎಂದೆಂದಿಗೂ ಇದನ್ನೇ ಉಪಯೋಗಿಸುತ್ತೀರಿ.

ನರೆಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ನಕ್ಕಲ್ ರಂಗಿನ ವಿಷಯದಲ್ಲಿ ಎಚ್ಚರಿಕೆ! ರತನ್‌ಜೋತಿ ಕೂದಲೆಣ್ಣೆ ಎಂಬ ಚೀಟಿಯನ್ನು ನೋಡಿ ಕೊಂಡುಕೊಳ್ಳಿ. [282-4]

ಪೆಟ್ಟಿಗೆ, ಬ್ರಷ್ ಮತ್ತು ಬಟ್ಲ ಸಹಿತ ಕ್ರಯ ರೂ. 1-0-0.

ಏಜಂಟರು ಬೇಕು! ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್!

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು:—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

ಚೀನಾ ಬಜಾರ್ ರೋಡ್, ಮದರಾಸ್.

ಹರಿವಾತದಿಂದ ಹಿಂಸೆ ಪಡಬೇಡಿ.

ನೀವು ಹಿಂಸೆಪಡಬೇಕಾದದ್ದು ಇಲ್ಲವೇ ಇಲ್ಲ. ಒಂದುವೇಳೆ ಅನೇಕ ಔಷಧಗಳನ್ನು ಉಪಯೋಗಿಸಿದ್ದೀರಿ. ಆದರೂ ಕಡೆಗೊಂದು ಸ್ವಾದರೂ ಹುಡುಕುವ ವಿಧವುಂಟು.

ನೆರೆ ಸಂಸ್ಥಾನದ ಸೋಟ್ ಹಿಲಿಯನ್ಸಿನ ಮಿ॥ ಸಾಮುವೆಲ್ ಪಾಲ್ಕರ್ ಹೇಳುವದೇನಂದರೆ:—ನಾನು ಹರಿವಾತದಿಂದ ಅಧಿಕ ಕಷ್ಟಪಟ್ಟೆನು. ನನ್ನ ನೋಳನ್ನು ದೂರವೂ ನೋಡಕೂಡದಿತ್ತು. ಕಣ್ಣು ತೆರೆದು ನೋಡಲಾರದಷ್ಟು ಕಷ್ಟವಾಗಿತ್ತು. ನನ್ನ ಹಣೆ ತಲೆಯಮೇಲೆಯೂ ತಲೆಯ ಪಕ್ಕಗಳಲ್ಲಿಯೂ ಒಂದಿಷ್ಟು ತೈಲವನ್ನು ತಿಕ್ಕಿದ್ದರಮೇಲೆ 7 ನಿಮಿಷಗಳಲ್ಲಿ ನೋವಿನಿಂದ ಬಿಡುಗಡೆ ಹೊಂದಿದೆನು. ಮೂರು ವಾರಗಳ ತರುವಾಯ ಆ ನೋವು ತಿರುಗಿ ಕಾಣಿಸಲೇ ಇಲ್ಲ. ಟಿಟಲ್ಸ್ ಓನಿಯಂಟಲ್ ಬಾಂ ಎಂಬದನ್ನು ಅರ್ಧ ಸೀಸೆ ಉಪಯೋಗಿಸಿ, ಪೂರ್ಣ ಕ್ಷೇಮ ಹೊಂದಿದೆನು.

ಸೀಸೆ 1ಕ್ಕೆ 1 ರೂ. ಮೇರೆಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

[81-37]

50 ರೂಪಾಯಿ ಸಂಪಾದನೆ.

ವಿರಾಮ ಕಾಲಗಳಲ್ಲಿ ಕೆಲಸಮಾಡುವದರಿಂದ ಇನ್ನೂ ಹೆಚ್ಚಾಗಿ ತಿಂಗಳಿಗೆ ಸಂಪಾದಿಸಬಹುದು. ಸ್ಟಾಂಪಿಟ್ಟು ಬರೆದುಕೊಳ್ಳಿರಿ.

[201-2] ವಿಳಾಸ:—ಓರಿಯಂಟಲ್ ಹೊಸ್ಯರಿ ವರ್ಕ್ಸ್, ವೇಲೂಕೋಟೆ.

ಶ್ರೀರಂಗಪಟ್ಟಣದ ಮುನ್ಸಿಫ್ ಕೋರ್ಟಿನಲ್ಲಿ.

1915-16 ನೇ ಇಸವಿ ಒರಿಜಿನಲ್ ನಂಬರು—703.

ವಾದಿಗಳು—ಕೃಷ್ಣರಾಜಪೇಟೆ ತಾ|| ಕಸಬಾ ಹೋಬಳಿ ಬೋದೂರು ಗ್ರಾಮದಲ್ಲಿರುವ 1 ಪಟೇಲ್ ರಾಮೇಗೌಡನ ಮಗ ಲಿಂಗರಾಜೇಗೌಡ, 2 ವ್ಯಾಪಾರಿ ಚನ್ನಪ್ಪನವರ ಮಗ ಗೌಡಯ್ಯ, 3 ದೊಡ್ಡ ಹಟ್ಟಿ ಬಸಪ್ಪನ ಮಗ ಲಿಂಗಪ್ಪ ಉರುಫ್ ಅಪ್ಪಯ್ಯ, 4 ವ್ಯಾಪಾರಿ ಬೋದರಪ್ಪನ ಮಗ ಲಿಂಗಪ್ಪ.

ಪ್ರತಿವಾದಿಗಳು—ಕೃಷ್ಣರಾಜಪೇಟೆ ತಾ|| ಕಸಬಾ ಹೋಬಳಿ ಬೋದೂರು ಗ್ರಾಮದಲ್ಲಿರುವ ಚಿಕ್ಕ ರಾಮೇಗೌಡನ ಮಕ್ಕಳು 1 ಪುಟ್ಟೆಗೌಡ, 2 ಕೋಟೆಗೌಡ.

ಇವರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ನಂಬರಿನಲ್ಲಿ ವಾದೀಗಳು ಬೋದೂರು ಗ್ರಾಮಸ್ಥರ ಹಕ್ಕಿಗೆ ಒಳಪಟ್ಟಿರುವ ಗೋಮಾಳದ ಸ್ಥಿರಸ್ವತ್ತು ಬರಬೇಕೆಂದು ಪ್ರತಿವಾದೀರ ಮೇಲೆ ದಾವಾ ದಾಖಲ್ಮಾಡಿರುವದರಿಂದ ಈ ಮೊಕದ್ದಮೆಯಲ್ಲಿ ಇಂಟರೆಸ್ಟು ಇರತಕ್ಕವರೂ ಈ ದಾವಾಕ್ಕೆ ವಾದಿಗಳಾಗಿ ಸೇರಬೇಕೆಂದು ಇಷ್ಟಪಟ್ಟವರೂ 1916 ನೇ ಇಸವಿ ಜನವರಿ 28 ನೇ ತಾರೀಖು ದಿವಸ 11 ಗಂಟೆಗೆ ಈ ಕೋರ್ಟಿಗೆ ರೂಬರೂ ಹಾಜರಾಗತಕ್ಕದ್ದು.

1916 ನೇ ಇಸವಿ ಜನವರಿ 3 ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ಮತ್ತು ದಸ್ತಖತ್ತಿನೊಡನೆ ಕೊಡಲಾಗಿದೆ.

(By Order.)

(Sd) N. KRISHNA IYANGAR,
Head Munshi.

[7-1

ವೃತ್ತಾಂತ ಪತ್ರಿಕೆ.

—:0:—

ಸಕ ೧೯೧೬ ನೇ ಇಸವಿ ಜನವರಿ ತಾ ೧೩ ನೇ ಗುರುವಾರ.

ಭಾರತೀಯರೂ ಸ್ವಾರಾಜ್ಯವೂ.

ಹಿಂದುಸ್ಥಾನದಲ್ಲಿ ಸ್ವಾರಾಜ್ಯದ ವಿಷಯವಾಗಿಯೂ, ಹೋಮ್ ರೂಲ್ ಲೀಗ್ ಎಂಬದನ್ನು ರೂಪಿಸುವ ವಿಷಯವಾಗಿಯೂ ಈಗ ಪ್ರಸ್ತಾಪಗಳು ಹುಟ್ಟಿ ಬಹಳ ಮಟ್ಟಿಗೆ ಬೆಳೆಯುತ್ತಾ ಬಂದಿರುವವು. ಪ್ರಜೆಗಳೇ ಸ್ವತಂತ್ರಿಸಿ ರಾಜ್ಯಭಾರ ಕಾರ್ಯಗಳನ್ನೂ ಪ್ರಜಾ ಪರಿಪಾಲನೆಯನ್ನೂ ಮಾಡುವಂತಾಗಬೇಕೆಂಬುವುದೇ ಮೇಲ್ಕಂಡ ಲೀಗಿನ ಉದ್ದೇಶವಾಗಿದೆ. ಹಿಂದುಸ್ಥಾನದಲ್ಲಿ ಯಾವ ರೀತಿಯಾದ ಸ್ವತಂತ್ರಾಧಿಪತ್ಯವಾಗಬೇಕೆಂದು ಕೇಳಿದರೆ ಆಸ್ಟ್ರೇಲಿಯ, ಕೆನಡ ಮೊದಲಾದ ಬ್ರಿಟಿಷ್ ಸ್ವಾಸ್ಥ್ಯಗಳಲ್ಲಿ ಯಾವ ರೂಪು ಲಕ್ಷಣಗಳುಳ್ಳ ಗವರ್ನಮೆಂಟು ಸ್ಥಾಪನೆಯಾಗಿ ಚಲಾವಣೆಯಲ್ಲಿದೆಯೋ ಅಂಥಾ ರಾಜ್ಯಭಾರ ಕ್ರಮಗಳು ಇಲ್ಲೂ ರೂಢಿಗೆ ಬರಬೇಕೆಂದು ಹೇಳುತ್ತಾರೆ. ಆ ಸೀಮೆಗಳು ಬ್ರಿಟಿಷ್ ಚಕ್ರಾಧಿಪತ್ಯದ ಅಂಗಗಳಾಗಿವೆ. ಅಲ್ಲಿನ ಸರ್ಕಾರಗಳೂ ಪ್ರಜೆಗಳೂ ತಮ್ಮ ಭಕ್ತಿ ಪ್ರೀತಿಗಳನ್ನು ಹೇರಳವಾಗಿ ಪ್ರಕಾಶ ಮಾಡಿರುವವು. ಸಾವಿರಾರು ಯುದ್ಧಭಟರುಗಳನ್ನು ಜಲನೌಕಾ ಮೂಲಕ ಯುದ್ಧಭೂಮಿಗೆ ಕಳುಹಿಸಿರುತ್ತವೆ; ಇದಲ್ಲದೆ ಯುದ್ಧದ ಖರ್ಚುಗಳಿಗೆ ಲಕ್ಷಾಂತರ ದ್ರವ್ಯವನ್ನೂ ಕೂಡಿಸಿ ಒದಗಿಸಿರುವವು.

ಅಂಥಾ ಸ್ವಾಸ್ಥ್ಯಗಳಲ್ಲಾದರೋ ಒಂದೊಂದರಲ್ಲಿ ಒಂದೊಂದು ಜಾತಿಯ ರಾಜ್ಯಭಾರ ಕ್ರಮವನ್ನಿಟ್ಟುಕೊಂಡಿದಾರೆ. ಒಂದು ಸ್ವಾಸ್ಥ್ಯದ ಪ್ರಜಾಪಾಲನಾ ಕ್ರಮಗಳು ಇನ್ನೊಂದರಲ್ಲಿ ಕಂಡುಬರುವುದಿಲ್ಲ. ಹಿಂದುಸ್ಥಾನಕ್ಕೆ ಸ್ವಾಸ್ಥ್ಯಗಳಲ್ಲಿರುವಂಥಾ ಸ್ವತಂತ್ರಾಧಿಕಾರ ಕೊಡಬೇಕೆಂದರೇನೋ ನಮಗೆ ತಿಳಿಯಲಿಲ್ಲ. ಅದನ್ನು ಕೇಳುವವರು ತಮ್ಮ ಇಷ್ಟಾರ್ಥವೇನೆಂಬದನ್ನು ಸ್ಪಷ್ಟವಾಗಿ ವಿವರಿಸಿ ಹೇಳಿದರಾದೀತು. ನಮಗೆ ಯಾವ ಲಕ್ಷಣಗಳುಳ್ಳ ರಾಜ್ಯಭಾರವಾಗಬೇಕೋ ಅದನ್ನು ನಮ್ಮ ನಮ್ಮಲ್ಲೇ ಮೊದಲು ಚರ್ಚಿಸಿ ಇತ್ಯರ್ಥಮಾಡಿಕೊಳ್ಳುವುದು ಉತ್ತಮಪಕ್ಷವೆಂದು ನಮಗೆ ತೋರುತ್ತದೆ. ಈಗಲಾದರೋ ಬ್ರಿಟಿಷ್ ಇಂಡಿಯಾದ ಜಿಲ್ಲಾಗಳಿ, ದೇಶೀಯ ಸಂಸ್ಥಾನಗಳಲ್ಲಾಗಲಿ ಪ್ರಜಾ ಪಾಲಕರನ್ನು ನೇಮಕಮಾಡುವುದಕ್ಕೂ, ರಾಜ್ಯಭಾರ ಲಕ್ಷಣಗಳನ್ನು ರೂಪಿಸುವುದಕ್ಕೂ ಪ್ರಜೆಗಳಿಗೆ ಅಧಿಕಾರವೇನೂ ಇರುವುದಿಲ್ಲ.

ಮಸಲಾ, ನಮ್ಮ ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳಿಗೆ ದಿವಾನ್‌ರು ಮೊದಲುಗೊಂಡು ಜವಾನನ ತನಕ ಯಾವ ನೌಕರಗೂ ಇಂಥವರನ್ನೇ ನೇಮಕ ಮಾಡಬೇಕೆಂದು ಕೇಳುವಷ್ಟು ಬಾಯಿ ಕೊಟ್ಟಿಲ್ಲ. ಈ ವಿಚಾರದಲ್ಲಿ ಪ್ರಜೆಗಳಿಗೆ ಅಂಥಾ ಬಾಯಿ ಇರಬೇಕಾದದ್ದು ಅವಶ್ಯವೇ? ಅಧಿಕಾರಿಗಳನ್ನು ನೇಮಕಮಾಡಿಕೊಳ್ಳುವುದಕ್ಕೆ ಪ್ರಜೆಗಳಿಗೆ ವಿವೇಕವೂ ಸಾಮರ್ಥ್ಯವೂ ಉಂಟೇ? ಈಗ ಕೆಲವು ಮ್ಯುನಿಸಿಪಾಲಿಟಿಗಳಲ್ಲಿ ಪ್ರಜೆಗಳಿಗೆ ತಮ್ಮ ಪ್ರತಿನಿಧಿಗಳನ್ನು ಕೌನ್ಸಿಲರಾಗಿ ಚುನಾಯಿಸುವ ಅಧಿಕಾರವಿರುವುದಷ್ಟೆ. ಪ್ರಜೆಗಳು ಆ ಅಧಿಕಾರವನ್ನು ಸಾರ್ಥಕವಾಗಿ ವಿನಿಯೋಗಿಸಿ ಸಮರ್ಥರನ್ನು ಚುನಾವಣೆ ಮಾಡುತ್ತಿದಾರೆಯೇ? ಪ್ರಜೆಗಳೇ ನೋಡಿ ನಡಿಸಿಕೊಳ್ಳಲೆಂದು ವಹಿಸಿಬಿಟ್ಟರೆ ಅವರು ಮ್ಯುನಿಸಿಪಾಲಿಟಿಗಳ ಕಾರುಬಾರುಗಳನ್ನು ಸಾರ್ಥಕವಾಗಿ ಜರುಗಿಸಬಲ್ಲರೇ?

ನಮಗೆ ಯಾವ ಬಗೆಯ ಗವರ್ನಮೆಂಟು ಬೇಕಾಗಿದೆಯೋ ಚೆನ್ನಾಗಿ ಯೋಚಿಸಿ ಇತ್ಯರ್ಥಮಾಡಿಕೊಳ್ಳಬೇಕು. ಕಾನೂನುಗಳನ್ನು ರಚಿಸಿ ರೂಢಿಸುವ ಕಾರ್ಯಭಾರವನ್ನು ವಹಿಸಿರುವಂಥಾ ಒಂದು ಕೌನ್ಸಿಲ್ಲಿಗೋ ಪಾರ್ಲಿಮೆಂಟಿಗೋ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸುವುದಕ್ಕೆ ಪ್ರಜೆಗಳಿಗೆ ಅಧಿಕಾರ ಬೇಕೇ? ಹಾಗಾದರೆ ಚುನಾಯಿಸುವ ಹಕ್ಕನ್ನು ಎಂಥವರಿಗೆ ಕೊಡಬೇಕು? ಎಲ್ಲಾ ಪಂಗಡಗಳಿಗೂ ಸೇರಿದ ಸಮಸ್ತ ಪ್ರಜೆಗಳಿಗೂ ಪ್ರತಿನಿಧಿಗಳನ್ನು ಚುನಾವಣೆಮಾಡುವಂಥಾ ಹಕ್ಕನ್ನು ವಹಿಸಬಹುದೇ? ರಾಜ್ಯ ಪರಿಪಾಲನೆಯ ಸಕಲ ಕಾರುಬಾರುಗಳನ್ನೂ ಪ್ರಜೆಗಳೇ ನಿರ್ವಹಿಸುವಂತಾಗಬೇಕೋ? ವಿದ್ಯಾವಿಹೀನರಾದ ಕೋಟ್ಯಂತರ ಪ್ರಜೆಗಳು ಓಟ್ ಮಾಡುವ ಅಧಿಕಾರವನ್ನು ಸಾರ್ಥಕವಾಗಿ ವಿನಿಯೋಗಿಸಲಾಪರೇ? ಇಷ್ಟೊಂದು ಅಗಾಧವಾದ ಭಾರತ ರಾಷ್ಟ್ರವನ್ನು ಪರಿಪಾಲನೆಮಾಡತಕ್ಕ ವಿಧಾನಗಳನ್ನು ಅವರು ತಿಳಿದಿರುವರೇ? ಪ್ರಜಾ ಕೋಟಿಗೆಲ್ಲಾ ಓಟ್‌ಮಾಡುವ ಅಧಿಕಾರ ಕೊಡಬೇಕಾದದ್ದಿಲ್ಲವಾದ ಪಕ್ಷದಲ್ಲಿ ಆ ಅಧಿಕಾರವನ್ನು ಎಂಥವರಿಗೆ ವಹಿಸಬೇಕು? ಪ್ರಜೆಗಳ ಪೈಕಿ ಕೆಲವರಿಗೆ ಮಾತ್ರ ಈ ಚುನಾವಣೆಯ ಅಧಿಕಾರ ಕೊಡುವುದಾದರೆ ಅಗ್ಗೆ ಅದು ಯಥಾರ್ಥವಾದ ಸ್ವಾರಾಜ್ಯವೆನಿಸಿಕೊಳ್ಳಲಾರದು. ಆಗ್ಗೆ ಕೆಲವು ಪ್ರಜೆಗಳು ಕೋಟ್ಯಂತರ ಪ್ರಜೆಗಳನ್ನು ಪರಿಪಾಲನೆಮಾಡುವುದಾಗುತ್ತದೆ. ಈಗ ಪ್ರಜೆಗಳ ಮುಖಂಡರು ಕೇಳಲಾರಂಭಿಸಿರುವುದು ಇಂಥಾ ಸ್ವಾರಾಜ್ಯವನ್ನೋ? ಬುದ್ಧಿವಂತರೂ ಆಲೋಚನಾಪರರೂ ವಿವೇಕಿಗಳೂ ಆದ ದೇಶಭಕ್ತರು ಕಲೆತು ಈ ವಿಚಾರಗಳನ್ನೆಲ್ಲಾ ತಮ್ಮೊಳಗೇ ಚೆನ್ನಾಗಿ ಮಥನಮಾಡಿಕೊಂಡು ಇಂಥಾ ಲಕ್ಷಣಗಳುಳ್ಳ ಸ್ವಾರಾಜ್ಯ ಹಿಂದುಸ್ಥಾನಕ್ಕೆ ಆಗಬೇಕೆಂದು ನಿರ್ಧರಿಸಿ ಸ್ಪಷ್ಟವಾಗಿ ತಿಳಿಸುವವರಾಗಲೆಂದು ಸೂಚಿಸಲಪೇಕ್ಷಿಸುತ್ತೇವೆ.

ಭಾರಿ ಭಾರೀ ಪದಗಳನ್ನು ಪ್ರಯೋಗಿಸಿ ಭಾಷಣಗಳನ್ನು ಮಾಡುವುದೂ, ಉಪನ್ಯಾಸಗಳನ್ನು ಬರೆದು ತಂದು ಓದುವುದೂ ಅಷ್ಟೇನೂ ಕಷ್ಟವಲ್ಲ; ಆದರೆ ಅವುಗಳ ಸತ್ಯಾರ್ಥಗಳೇನೆಂದು ಯೋಚಿಸಿ ಮನನ ಮಾಡಿಕೊಳ್ಳಬೇಕಾಗಿದೆ. ಮಸಲಾ, ಈಗ ನಮ್ಮ ಸಂಸ್ಥಾನದೊಳಗೆ ರಾಜ್ಯಭಾರ ಕಾರ್ಯಗಳನ್ನು ಪ್ರಜಾಪ್ರತಿನಿಧಿ ಸಭೆಗೆ ವಹಿಸಬಹುದೆಂದು ಹೇಳಿದರೆ ಇದನ್ನು ಒಪ್ಪತಕ್ಕವರು ಯಾರಾದರೂ ಇದ್ದಾರೇ? ಈ ಪ್ರಜಾಪ್ರತಿನಿಧಿ ಸಭೆಗೆ ಬರತಕ್ಕ ಮೆಂಬರುಗಳನ್ನು ಸಮಸ್ತ ಪ್ರಜೆಗಳೂ ಓಟ್ ಹಾಕಿ ಚುನಾವಣೆ ಮಾಡುತ್ತಾರೆಯೇ? ಇವೆಲ್ಲಾ ಅಗಾಧವಾದ ವಿಚಾರಗಳು. ಇವುಗಳನ್ನು ಕುರಿತು ಚೆನ್ನಾಗಿಯೂ ದೀರ್ಘವಾಗಿಯೂ ಪರ್ಯಾಲೋಚನೆ ಮಾಡಬೇಕೆಂದು ಸೂಚಿಸುತ್ತೇವೆ. ನಮ್ಮ ಸಹೋದರ ವರ್ಗಕ್ಕೆ ಸೇರಿದ ದೂರದೃಷ್ಟಿಯುಳ್ಳ ದೇಶಭಕ್ತರು ಸದ್ಯದಲ್ಲಿ ಹಿಂದುಸ್ಥಾನದ ಪ್ರಜೆಗಳು ಯಾವ ಸ್ಥಿತಿಯಲ್ಲಿದಾರೆಂದೂ, ಈಗ ಆಗಬೇಕಾಗಿರುವ ಗವರ್ನಮೆಂಟು ಯಾವ ಲಕ್ಷಣಗಳುಳ್ಳದ್ದಾಗಿರಬೇಕೆಂದೂ ಪರ್ಯಾಲೋಚಿಸುವವರಾಗಲೆಂದು ಹಾರೈಸುತ್ತೇವೆ.

ದೇವಾರಾಧನೆ.

ಕೆಲವರು ದೇವರೇ ಇಲ್ಲವೆಂದು ನಂಬಿರುವರು ಮತ್ತು ಕೆಲವರು ನಾನೇ ದೇವರೆಂದು ಹೇಳಿಕೊಳ್ಳುವರು. ಇಂಥವರಿಗೆ ದೇವಾರಾಧನೆಯು ಅರ್ಥರಹಿತವಾದ ಒಂದು ಮಾತಾಗಿ ಮಾತ್ರ ಇರುವದು. ಆದರೆ ಆಸ್ತಿಕರೆಲ್ಲರೂ ದೇವರು ತಮಗಿಂತಲೂ ದೊಡ್ಡವನಾಗಿರುತ್ತಾನೆಂದೂ ಆತನನ್ನು ಆರಾಧಿಸಿ ಘನಪಡಿಸಬೇಕಾದದ್ದು ಪರಮಧರ್ಮವಾಗಿದೆಯೆಂದೂ ದೃಢವಾಗಿ ನಂಬಿ ಆತನ ಕೃಪಾಕಟಾಕ್ಷವು ಸದಾ ತಮ್ಮ ಮೇಲೆ ನೆಲೆಯಾಗಿರಬೇಕೆಂದೂ ಹಾರೈಸುತ್ತಿರುವರು. ಹೀಗಿದ್ದರೂ ಇವರೆಲ್ಲರೂ ನಡಿಸುತ್ತಾ ಬರುವ ದೇವಾರಾಧನೆಯು ಏಕರೀತಿಯಾಗಿರುವದಿಲ್ಲ. ಈ ಲೋಕದಲ್ಲಿರುವ ವಿವಿಧ ಮತಸ್ಥರುಗಳವರು ವಿವಿಧ ರೀತಿಗಳಲ್ಲಿ ತಮ್ಮ ತಮ್ಮ ಮತಾಚಾರಕ್ಕನುಸಾರವಾಗಿ ದೇವಾರಾಧನೆ ಮಾಡುತ್ತಿರುವರು. ಹಿಂದುಗಳು ಒಂದು ರೀತಿಯಲ್ಲಿ ದೇವರನ್ನು ಆರಾಧಿಸುವರು. ಮಹಮ್ಮದೀಯರು ಬೇರೊಂದು ರೀತಿಯಲ್ಲಿ ಆತನನ್ನು ಆರಾಧಿಸುವರು. ಕ್ರೈಸ್ತರ ಆರಾಧನೆಯು ಇನ್ನೊಂದು ರೀತಿಯಾಗಿರುವದು. ಒಂದು ಸಮುದಾಯದವರು ಒಂದು ಸ್ಥಳವನ್ನು ಪುಣ್ಯಸ್ಥಳವೆಂದು ಹೇಳುವರು ಮತ್ತೊಬ್ಬರು ಬೇರೊಂದನ್ನು ಪುಣ್ಯಸ್ಥಳವೆಂದು ಹೇಳುವರು. ಒಬ್ಬರು ಮತ್ತೊಬ್ಬರ ಆರಾಧನಾ ರೀತಿಯನ್ನು ನೋಡಿ ನಮ್ಮ ಆರಾಧನಾ ರೀತಿಯೇ ಸರಿಯಾದದ್ದು, ಇತರರದು ಸರಿಯಲ್ಲವೆಂದು ಭಾವಿಸುವರು. ಹೀಗಿರುವಲ್ಲಿ ಯಾರದು ಸರಿ, ಯಾರದು ತಪ್ಪು ಎಂದು ತೀರ್ಮಾನಿಸುವದು ಸುಲಭಸಾಧ್ಯವಾಗಿರುವದಿಲ್ಲ. ಈ ವಿಷಯದಲ್ಲಿ ಯೇಸು ಕ್ರಿಸ್ತನು ಏನು ಬೋಧನೆ ಮಾಡಿರುತ್ತಾನೆ? ಆತನು ತಾನೇ ಯಾವ ರೀತಿಯಲ್ಲಿ ದೇವರನ್ನು ಆರಾಧಿಸುತ್ತಿದ್ದನೆಂದು ವಿಚಾರಮಾಡುವದು ಸರ್ವರಿಗೂ ತುಂಬಾ ಪ್ರಯೋಜನಕರವಾಗಿರುವದು.

ಒಂದು ದಿನ ಯೇಸು ಕ್ರಿಸ್ತನು ಸಮಾರ್ಯ ಸೀಮೆಯನ್ನು ಹಾದು ಹೋಗುತ್ತಿರುವಾಗ ಆ ಸೀಮೆಗೆ ಸೇರಿದ ಸುಖರೆಂಬ ಒಂದು ಊರಿಗೆ ಬಂದನು. ಆಗ ಮಧ್ಯಾಹ್ನವಾಗಿದ್ದದರಿಂದ ಆತನು ದಾಹಗೊಂಡವನಾಗಿ ಅಲ್ಲಿದ್ದ ಒಂದು ಭಾವಿಯ ಬಳಿಯಲ್ಲಿ ಕೂತುಕೊಂಡಿದ್ದನು. ಆಗ ಆ ಭಾವಿಯ ಬಳಿಗೆ ಒಬ್ಬ ಹೆಂಗಸು ನೀರು ಸೇದುವದಕ್ಕಾಗಿ ಬಂದಳು. ಅವಳು ಸಮಾರ್ಯರೆಂಬ ಒಂದು ಜಾತಿಗೆ ಸೇರಿದವಳಾಗಿದ್ದಳು. ಯೇಸು ಕ್ರಿಸ್ತನು ಯೆಹೂದ್ಯನಾಗಿದ್ದನು. ಯೆಹೂದ್ಯರಿಗೂ ಸಮಾರ್ಯರಿಗೂ ಹೊಕ್ಕುಬಳಿಕೆಯು ಇರಲಿಲ್ಲ. ಅವರು ಇವರನ್ನು ಕೀಳುಜಾತಿಯವರೆಂದು ಭಾವಿಸುತ್ತಿದ್ದರು. ಯೇಸು ಕ್ರಿಸ್ತನಿಗೂ ಈ ಹೆಂಗಸಿಗೂ ನಡೆದ ಸಂಭಾಷಣೆಯಲ್ಲಿ ಈ ಹೆಂಗಸು ಆತನನ್ನು ಕುರಿತು—ಸ್ವಾಮಿ, ನಾವು ನಮ್ಮ ಹಿರಿಯರ ಪದ್ಧತಿಯನ್ನನುಸರಿಸಿ ಗೆರಿಜಿಂ ಎಂಬ ಈ ಬೆಟ್ಟದಲ್ಲಿ ದೇವಾರಾಧನೆ ಮಾಡುತ್ತೇವೆ; ಯೆಹೂದ್ಯರಾದ ನೀವಾದರೋ ಯೆರೂಸಲೇಮ್ ಪಟ್ಟಣದಲ್ಲಿರುವ ಆ ದೇವಾಲಯದಲ್ಲಿ ನಿಮ್ಮ ಮತಾಚಾರದ ಪ್ರಕಾರವಾಗಿ ದೇವಾರಾಧನೆಮಾಡುತ್ತೀರಿ; ಇವೆರಡರಲ್ಲಿ ಯಾವದು ಸರಿ? ಎಂದು ಕೇಳಿದಳು. ಅದಕ್ಕೆ ಯೇಸು ಕ್ರಿಸ್ತನು ಆಕೆಯನ್ನು ಕುರಿತು—ಅಮ್ಮಾ, ನಾನು ಹೇಳುವ ಮಾತನ್ನು ನಂಬು; ಒಂದು ಕಾಲ ಬರುತ್ತದೆ; ಆ ಕಾಲದಲ್ಲಿ ನೀವು ತಂದೆಯನ್ನು (ಅಂದರೆ ದೇವರನ್ನು) ಆರಾಧಿಸಬೇಕಾದರೆ ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವದಿಲ್ಲ; ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನೆ; ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು.

ಯೇಸು ಕ್ರಿಸ್ತನು ಆ ಹೆಂಗಸಿಗೆ ಮಾಡಿದ ಈ ಬೋಧನೆಯಿಂದ ದೇವರನ್ನು ಆರಾಧಿಸುವವರು ದೇವರು ಆತ್ಮಸ್ವರೂಪಿಯಾಗಿದ್ದಾನೆಂದು ತಿಳಿದುಕೊಳ್ಳಬೇಕಾದದ್ದು ಆವಶ್ಯಕವೆಂದು ಹೇಳಿದಂತಾಯಿತು. ಮೂರ್ತಿ ಪೂಜೆಯು ದೇವಾರಾಧನೆಯಲ್ಲ. ದೇವರು ಒಂದು ಜಡ ವಸ್ತುವಿನಂತೆ ಒಂದು ಸ್ಥಳದಲ್ಲಿ ಬಂಧಿಸಲ್ಪಟ್ಟಿರುವಾತನಲ್ಲ. ಆತನು ಆತ್ಮಸ್ವರೂಪಿಯಾಗಿರುವದರಿಂದ ಸರ್ವವ್ಯಾಪಿಯಾಗಿರುತ್ತಾನೆ. ಆದಕಾರಣ ಆರಾಧಕರಿಗೆ ಸ್ಥಳವು ವಿಶೇಷವಾದದ್ದಲ್ಲ. ಆತನನ್ನು ಹುಡುಕಿಕೊಂಡು ಹೋಗಬೇಕಾದ ಕೆಲಸವೂ ಇರುವದಿಲ್ಲ. ಪುಣ್ಯಕ್ಷೇತ್ರಗಳೂ ತೀರ್ಥಯಾತ್ರೆಗಳೂ ಅನಾವಶ್ಯಕ. ಆತನು ನೆನೆವವರ ಮನದಲ್ಲಿಯೇ ಇರುತ್ತಾನೆ. ಆತನನ್ನು ಆರಾಧಿಸುವವರು ಯಾವ ಕಾಲದಲ್ಲಾದರೂ ಯಾವ ಸ್ಥಳದಲ್ಲಾದರೂ ಆರಾಧಿಸುವದು ಸಾಧ್ಯವಾಗಿರುತ್ತದೆ.

ಮತ್ತು ದೇವರು ಆತ್ಮಸ್ವರೂಪಿಯಾಗಿರುವದರಿಂದ ಆತನು ಮೆಚ್ಚತಕ್ಕ ಆರಾಧನೆಯು ಆತ್ಮೀಯ ರೀತಿಯದಾಗಿರಬೇಕೆಂದು ಯೇಸು ಕ್ರಿಸ್ತನು ಬೋಧಿಸುತ್ತಾನೆ. ಅದ್ದರಿಂದ ಯಥಾರ್ಥವಾದ ದೇವಾರಾಧನೆಗೆ ಹಣ್ಣು, ಕಾಯಿ, ಹೂವು, ಧೂಪ, ದೀಪ, ನೈವೇದ್ಯ ಮುಂತಾದವುಗಳೊಂದೂ ಆವಶ್ಯಕವಾಗಿರುವದಿಲ್ಲವೆಂದು ಹೇಳಿದಂತಾಯಿತು. ಈ ಲೋಕವೂ ಇದರಲ್ಲಿರುವ ಸಮಸ್ತವೂ ದೇವರದೇ ಆಗಿರುತ್ತದೆ. ಸಮಸ್ತಕ್ಕೂ ಒಡೆಯನು ಆತನೇ. ಮನುಷ್ಯರಾದ ನಮ್ಮ ಸುಖಕ್ಕಾಗಿ ಆತನು ಇವುಗಳನ್ನೆಲ್ಲಾ ನಮಗೆ ದಯಪಾಲಿಸಿರುತ್ತಾನೆ. ಆತನು ಇವುಗಳಲ್ಲಿ ಯಾವದನ್ನಾದರೂ ಹಿಂದಿರುಗಿ ನಮ್ಮಿಂದ ಅಪೇಕ್ಷಿಸುವದಿಲ್ಲ. ನಾವು ಆತನನ್ನು ತಿಳಿದು, ಆತನ ಮಹೋಪಕಾರಗಳನ್ನು ಸ್ಮರಿಸಿ, ಆತನಿಗೆ ಕೃತಜ್ಞರಾಗಿಯೂ ವಿಧೇಯರಾಗಿಯೂ ಜೀವಿಸಬೇಕೆಂಬುವದನ್ನು ಆತನು ನಮ್ಮಿಂದ ಅಪೇಕ್ಷಿಸುತ್ತಾನೆ. ಮಾನಸಿಕ ಪೂಜೆಯೇ ಆತನು ಮೆಚ್ಚತಕ್ಕ ಆರಾಧನೆಯಾಗಿರುತ್ತದೆ.

ಇಷ್ಟೇ ಅಲ್ಲ. ದೇವರು ಮೆಚ್ಚತಕ್ಕ ಆರಾಧನೆಯು ಸತ್ಯಕ್ಕೆ ತಕ್ಕದ್ದಾಗಿರಬೇಕೆಂದು ಯೇಸು ಕ್ರಿಸ್ತನು ಬೋಧಿಸಿರುತ್ತಾನೆ. ಆರಾಧಕನು ಉಚ್ಚರಿಸುವ ಮಾತುಗಳಾಗಲಿ ಕೈಕೊಳ್ಳುವ ನೇಮನಿಷ್ಠೆಗಳಾಗಲಿ ವಿಶೇಷವಾದವುಗಳಲ್ಲ. ಅಂತರ್ಯ ಭಕ್ತಿಯೇ ವಿಶೇಷವಾದದ್ದು. ಇದು ಇಲ್ಲದ ಪಕ್ಷದಲ್ಲಿ ಬಾಹ್ಯಾಚಾರಗಳೆಲ್ಲಾ ಕೇವಲ ನಿರರ್ಥಕವೆಂದು ಹೇಳಿದಂತಾಯಿತು. ದೇವರ ದೃಷ್ಟಿಯಿಂದ ಯಾವದನ್ನಾದರೂ ಮರೆಮಾಡುವದಕ್ಕಾಗುವದಿಲ್ಲ. ಮನುಷ್ಯನ ಅಂತರ್ಯದ ಗುಪ್ತವಾದ ಯೋಚನೆಗಳೂ ಉದ್ದೇಶಗಳೂ ಕೂಡ ಆತನಿಗೆ ಬಟ್ಟಬಯಲಾಗಿರುತ್ತವೆ. ಆಷಾಢಭಕ್ತಿಯು ಆತನಿಗೆ ಅಸಹ್ಯವಾಗಿದೆ. ನಾವು ಮನುಷ್ಯರನ್ನು ವಂಚಿಸುವ ಪ್ರಕಾರ ದೇವರನ್ನು ವಂಚಿಸುವದಕ್ಕಾಗುವದಿಲ್ಲ. ತ್ರಿಕರಣಶುದ್ಧವಾದ ನಡತೆಯೇ ಆತನು ಮೆಚ್ಚತಕ್ಕ ಆರಾಧನೆಯಾಗಿರುತ್ತದೆ.

ಇದು ಮಾತ್ರವಲ್ಲದೆ ದೇವರು ನಮ್ಮ ತಂದೆಯಾಗಿರುತ್ತಾನೆಂದು ಯೇಸು ಕ್ರಿಸ್ತನು ಉಪದೇಶಮಾಡುತ್ತಾನೆ. ಅನೇಕರು ದೇವರು ಮಹಾ ಕೋಪಿಷ್ಠನಾಗಿದ್ದಾನೆಂದೂ ನಾವು ಬಲಿಗಳ ಮೂಲಕವಾಗಿ ಆತನ ಕೋಪವನ್ನು ಶಾಂತಿಮಾಡದೆ ಹೋದರೆ ಆತನು ರೋಗಾದ್ಯುಪದ್ರಗಳನ್ನು ನಮ್ಮ ಮೇಲೆ ಕಳುಹಿಸಿ ನಮ್ಮನ್ನು ಕಾಡುತ್ತಾನೆಂದು ನಂಬಿ ಕೇವಲ ಭಯದಿಂದ ಆತನನ್ನು ಆರಾಧಿಸುವರು. ಆದರೆ ದೇವಾರಾಧಕರಲ್ಲಿ ದೇವರು ತಂದೆಯಾಗಿದ್ದಾನೆಂಬ ತಿಳುವಳಿಕೆಯು ಹುಟ್ಟಿದರೆ ಅವರು ದೇವರನ್ನು ಭಯಭಕ್ತಿಯಿಂದ ಮಾತ್ರವೇ ಅಲ್ಲ, ಪುತ್ರವಾತ್ಸಲ್ಯದಿಂದಲೂ ಉತ್ಸಾಹದಿಂದಲೂ ಆರಾಧಿಸಲು ಅವರಿಗೆ ಅವಕಾಶವು ಸಿಕ್ಕುವದು.

ಯೇಸು ಕ್ರಿಸ್ತನು ಆಗಾಗ್ಗೆ ಯೆಹೂದ್ಯರ ದೇವಸ್ಥಾನಗಳಿಗೆ ಹೋಗಿ ದೇವಾರಾಧನೆ ಮಾಡುತ್ತಿದ್ದನು. ಆತನು ಅನೇಕ ಸಮಯಗಳಲ್ಲಿ ಏಕಾಂತವಾಗಿ ಅಡವಿಗೆ ಹೋಗಿ ದೇವರಿಗೆ ಪ್ರಾರ್ಥನೆಮಾಡುತ್ತಿದ್ದನು. ಆತನು ಯಾವಾಗಲೂ ತನ್ನ ಚಿತ್ತವನ್ನು ದೇವರ ಚಿತ್ತಕ್ಕೆ ಅಧೀನಮಾಡಿಕೊಂಡು ದೇವರು ಮೆಚ್ಚುವ ರೀತಿಯಲ್ಲೇ ನಡೆಯುತ್ತಿದ್ದನು. ಕ್ಷಣಮಾತ್ರವಾದರೂ ದೇವರನ್ನು ಬಿಟ್ಟಗಲಿರುವದಕ್ಕೆ ಆತನು ಇಷ್ಟಪಡಲಿಲ್ಲ. ದೇವರಿಗೂ ಆತನಿಗೂ ಕೇವಲ ಅನುರಾಗವು ನೆಲಸಿತ್ತು. ಆತನು ತನ್ನ ಮನೋವಾಕ್ಕಾಯಗಳಲ್ಲಿ ಸದಾ ದೇವರನ್ನು ಆರಾಧಿಸುವವನಾಗಿದ್ದನು.

ಕ್ರೈಸ್ತರ ಸತ್ಯವೇದದಲ್ಲಿ ಹೀಗೆ ಬರೆದಿದೆ:—“ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು” ಎಂಬುವದೇ.

ಯುದ್ಧದ ಸಮಾಚಾರಗಳು.

ರಷ್ಯಾದವರು ಮುಂದೆ ನುಗ್ಗಿಹೋಗಿದಾರೆ.

ಕಳೆದ ವಾರ ಬಂದಿರುವ ಸಮಾಚಾರಗಳು ಮುಂದೆ ಮಿತ್ರಮಂಡಲಿಯವರು ನಡಿಸಬಹುದಾದ ಕಾರ್ಯಗಳನ್ನೇ ಸೂಚಿಸುವಂತೆ ಕಾಣುವುದು. ರಷ್ಯಾದವರು ರೂಮೇನಿಯಾ ಎಲ್ಲೆಕಟ್ಟಿನ ಬಳಿ ನುಗ್ಗಿ ಹೋಗುತ್ತಿದಾರೆ. ಅಲ್ಲಿ ರಷ್ಯಾದವರು ಬಹಳ ದೊಡ್ಡ ಸೈನ್ಯವನ್ನಿಟ್ಟಿದಾರೆಂದೂ, ಜರ್ಮನಿಯವರನ್ನೂ ಆಸ್ಟ್ರಿಯಾದವರನ್ನೂ ಸರ್ಬಿಯಾ ರಾಜ್ಯದಿಂದ ಅವರ ಸೈನ್ಯಗಳನ್ನು ಹಿಂದಕ್ಕೆ ಸಾಗಿಸಿಕೊಂಡು ಹೋಗುವಂತೆ ಒತ್ತರಿಸುತ್ತಿದಾರೆಂದೂ ಕಾಣುತ್ತದೆ. ಈ ಪ್ರಕಾರ ರಷ್ಯಾದವರು ಮುಂದಕ್ಕೆ ನುಗ್ಗಿ ಹೋಗುವುದಾದರೆ ರೂಮೇನಿಯಾದವರು ರಷ್ಯಾದವರ ಕೂಡ ಸೇರಬಹುದು; ಇಲ್ಲವೇ ರಷ್ಯಾ ಸೈನಿಕರು ನುಗ್ಗಿ ಸರ್ಬಿಯಾದವರಿಗೋ ಬಲ್ಗೇರಿಯಾದವರಿಗೋ ಹೋಗುವುದಕ್ಕೆ ರಷ್ಯಾದವರಿಗೆ ಅವಕಾಶ ಕೊಡಬಹುದು. ರಷ್ಯಾದವರು ಈ ಪ್ರಕಾರ ಶತ್ರುವಿನ ಮೇಲೆ ನುಗ್ಗಿ ಹೋಗೋಣದರಿಂದ ಶತ್ರುವು ಸಲಸ್ತೀನ್ ಕಡೆಯಿಂದ ಈಜಿಪ್ಟಿನ ಮೇಲೆ ನುಗ್ಗುವುದಕ್ಕೆ ಅಡ್ಡಿಯಾಗಬಹುದು. ಸನ್ನಾಹಗಳೇನೋ ಅಗಾಧವಾಗಿ ನಡೆಯುತ್ತಲಿವೆ; ಸೈನ್ಯಗಳು ಇತರ ರಣರಂಗಗಳಿಗೆ ಕಳುಹಲ್ಪಡಬೇಕಾಗಿದೆ. ಈಜಿಪ್ಟಿನಲ್ಲಿ ಬ್ರಿಟಿಷ್ ಸೈನ್ಯಗಳನ್ನು ಹೆಚ್ಚಾಗಿ ಇಟ್ಟಿದಾರೆ. ಎಂದಿನಂತೆ ಸೂಯಸ್ ಕಾಲುವೆಯ ಮೂಲಕ ಹಡಗುಗಳು ಹೋಗಿಬರುತ್ತಲಿವೆ. ಜರ್ಮನಿಯವರೂ ಆಸ್ಟ್ರಿಯಾದವರೂ ಸಲೋನಿಕ ತೀರಪಟ್ಟಣಕ್ಕೆ ನುಗ್ಗಿ ಅಲ್ಲಿರುವ ಮಿತ್ರಮಂಡಲಿಯವರ ಮೇಲೆ ಮುತ್ತಿಗೆ ಹಾಕುವುದಿಲ್ಲ. ಆದರೆ ಈಚೆಗೆ ಅವರು ರಷ್ಯಾದವರನ್ನು ಮುಂದಕ್ಕೆ ನುಗ್ಗಿ ಬಾರದಂತೆ ತಡೆಯುವುದಕ್ಕೋಸ್ಕರ ಬಾಲ್ಕನ್ ಸಂಸ್ಥಾನಗಳಿಂದ ಬಹಳ ಸೈನ್ಯಗಳನ್ನು ಅಲ್ಲಿಗೆ ಕರೆಸಿಕೊಳ್ಳಬೇಕಾಯಿತು. ಮಿತ್ರಮಂಡಲಿಯವರಾದರೋ ಸಲೋನಿಕ ತೀರಪಟ್ಟಣದಲ್ಲಿ ಸೈನ್ಯಗಳನ್ನಿಟ್ಟುಕೊಂಡು ಕೋಟೆ ಕೊತ್ತಲಗಳನ್ನು ಕಟ್ಟಿ ಫಿರಂಗಳನ್ನಿರಿಸಿ ಬಲಪಡಿಸಿಕೊಳ್ಳುತ್ತಿದಾರೆ. ಮತ್ತು ಅವರು ಸರಿಯಾದ ಸಂದರ್ಭ ಒದಗಿದ ಕೂಡಲೇ ಬಲ್ಗೇರಿಯಾಕ್ಕೆ ನುಗ್ಗಿ ಹೋಗುವರು. ಸದ್ಯದಲ್ಲಿ ವಿಶೇಷವಾದ ಸೈನ್ಯಗಳ ಚಲನೆಗಳೇನೂ ಆಗುವಂತಿಲ್ಲ. ಇನ್ನು ಕೆಲವು ತಿಂಗಳಲ್ಲಿ ಮುಂದರಿಸಿ ನುಗ್ಗಿ ಹೋಗುವ ಏರ್ಪಾಡುಗಳಿಗೆ ಎಲ್ಲಾ ಸಿದ್ಧಪಡುವವು. ನಮ್ಮ ಶತ್ರುಪಕ್ಷದವರು ಪಶ್ಚಿಮ ರಣರಂಗದಲ್ಲಿ 20,00,000 ಸೈನ್ಯಗಳನ್ನೂ, ಪೂರ್ವ ರಣರಂಗದಲ್ಲಿ 10,00,000 ಸೈನ್ಯಗಳನ್ನೂ, ರೈಲ್ ಮಾರ್ಗಗಳನ್ನೂ ಪಟ್ಟಣಗಳನ್ನೂ ಶಹರೆ ಇಟ್ಟು ಕಾಯುವುದಕ್ಕೆ 26,00,000 ಸೈನ್ಯಗಳನ್ನೂ ಇಟ್ಟಿದಾರೆಂದು ಹೇಳಲಾಗಿದೆ. ಜರ್ಮನಿಯವರೂ ಆಸ್ಟ್ರಿಯಾದವರೂ ಇನ್ನೆಂದು ವಿಶೇಷವೂ ಇಷ್ಟು ಸೈನ್ಯಗಳನ್ನು ಕೂಡಿಸಿಕೊಂಡಿರಲಾರರು. ಮಿತ್ರಮಂಡಲಿಯವರಾದರೋ ದಿನೇ ದಿನೇ ತಮ್ಮ ಸೈನ್ಯಗಳನ್ನು ಹೆಚ್ಚಿಸಿಕೊಳ್ಳುತ್ತಲೇ ಬಂದಿರೋಣದರಿಂದ ಕಡೆಯಲ್ಲಿ ಜರ್ಮನಿಯವರಿಗೂ, ಆಸ್ಟ್ರಿಯಾದವರಿಗೂ, ಟರ್ಕಿಯವರಿಗೂ ಸೋಲು ಸೋಲೇ ಆಗುವುದಕ್ಕೆ ಅನುಮಾನವಿಲ್ಲ. ಯುದ್ಧ ನಡಿಸುವುದಕ್ಕೆ ಹತ್ತಿಯೂ, ಕಬ್ಬಿಣವೂ, ರಬ್ಬರೂ ಬಹಳವಾಗಿ ಬೇಕು. ಈ ಪದಾರ್ಥಗಳು ಇತರ ಕಡೆಯಿಂದ ಜರ್ಮನಿಗಾಗಲಿ ಆಸ್ಟ್ರಿಯಾದವರಿಗಾಗಲಿ ಹೋಗದಂತೆ ಕಟ್ಟುಮಾಡಲ್ಪಟ್ಟಿದೆ. ಜರ್ಮನಿ ಆಸ್ಟ್ರಿಯಾ ರಾಜ್ಯಗಳಲ್ಲಿ ಪ್ರಜೆಗಳ ಆಹಾರ ಪದಾರ್ಥಗಳು ವಿಶೇಷ ಪ್ರಿಯವಾಗಿರೋಣದರಿಂದ ಜನಗಳು ಗೊಣಗುಟ್ಟಲಾರಂಭಿಸಿದಾರೆ. ಇನ್ನೂ ಅನೇಕ ತಿಂಗಳ ಕಾಲ ಯುದ್ಧ ನಡೆಯುತ್ತಲೇ ಬರಬಹುದಾದರೂ ಕಡೆಯಲ್ಲಿ ಮಿತ್ರಮಂಡಲಿಯವರಿಗೆ ನಿಂಚಿತವಾಗಿ ಜಯಪ್ರದವಾಗುತ್ತದೆ.

ಪಶ್ಚಿಮ ರಣರಂಗದಲ್ಲಿ.

ಎಂದಿನಂತೆ ಈ ರಣರಂಗದ ಯುದ್ಧಸಾಲಿನಲ್ಲಿ ಎರಡು ಕಡೆಗಳಲ್ಲೂ ಫಿರಂಗಿ ಗುಂಡುಗಳ ಹಾರಾಟವು ವಿಶೇಷವಾಗಿರುತ್ತದೆ. ಇದರ ದೆಸೆಯಿಂದ ಕೆಲವು ಕಡೆಗಳಲ್ಲಿ ಶತ್ರುಸೈನ್ಯದ ಕಂದಕಗಳು ನಾಶಮಾಡಲ್ಪಟ್ಟವು. ನಮ್ಮ ಪಕ್ಷದ ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಹೋಗಿ ಶತ್ರುವಿನ ಆಯುಧ ಮತ್ತು ಸರಂಜಾಮಿನ ಉಗ್ರಾಣಗಳಿಗೂ, ರೈಲ್ವೆಗಳ ಮೇಲೂ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಹಲಾಕುಮಾಡಿ ಬಂದಿರುತ್ತವೆ. ಸುರಂಗಗಳಲ್ಲಿ ಮದ್ದು ಹಾಕಿ ಹಾರಿಸಿರುತ್ತಾರೆ. ಜರ್ಮನಿಯವರು ಕೆಲವು ಸಾರಿ ಮಿತ್ರಮಂಡಲಿಯವರ ಸೈನ್ಯಗಳ ಮೇಲೆ ನುಗ್ಗಿ

ಡಿದರು. ನಮ್ಮ ಸೈನ್ಯಗಳು ಅವರನ್ನು ಸೋಲಿಸಿ ಓಡಿಸಿದರಲ್ಲದೆ ಜರ್ಮ ನ್ ಕೋಟೆ ಕೊತ್ತಲಗಳನ್ನು ಗುಂಡುಗಳ ಮಳೆ ಸುರಿಸಿ ನಾಶಪಡಿಸಿದಾರೆ

ಪೂರ್ವ ರಣರಂಗದಲ್ಲಿ.

ರಷ್ಯದವರು ಯುದ್ಧಶಾಲಿನ ದಕ್ಷಿಣ ಕೊನೆಯಲ್ಲಿ ಮುಂದರಿಸಿ ನುಗ್ಗಿ ದ್ದಾರೆ. ಅವರು ಈ ಯುದ್ಧದಲ್ಲಿ ಮೂರನೇ ಸಲ ಒಂದು ನಗರವನ್ನು ಹಿಡಿದು ಶತ್ರುವನ್ನು ಹಿಂದಕ್ಕೆ ಓಡಿಸಿದರೆಂದು ಹೇಳಲಾಗಿದೆ ಒಂದು ತಳಬಳದಲ್ಲಿ ರಷ್ಯಾದವರು ಇಪ್ಪತ್ತೆರಡು ಸಲ ಶತ್ರುವಿನ ಮೇಲೆ ನುಗ್ಗಿ ದರೆಂದು ತಿಳಿಸುವುದು. ಮತ್ತು ಈ ಪ್ರಾಂತ್ಯದಿಂದ ಬಂದಿರುವ ಶಂತೀ ಸಾವಗಳಿಂದ ರಷ್ಯದವರು ನಿದಾನವಾಗಿ ಆದರೂ ಖಚಿತವಾಗಿ ಮುಂದು ಕ್ಕೆ ನುಗ್ಗಿ ಹೋಗುತ್ತಿದಾರೆಂದು ಗೊತ್ತಾಗುತ್ತದೆ. ಒಂದು ಕಡೆ ಅವರು ಮೈಲಿ ದೂರ ನುಗ್ಗಿ ಬಂದಿದಾರೆ. ರಷ್ಯಾದವರ ಒಂದು ರಿಜಿಮೆಂಟ್ ಶತ್ರು ಸೈನ್ಯದಲ್ಲಿ 1,061 ಯುದ್ಧಭಟರನ್ನೂ, 4 ಮೆಷೀನ್ ಪಿರಂಗಿ ಗಳನ್ನೂ ಹಿಡಿದರು. ರಷ್ಯಾದವರು ಶತ್ರುವಿನ ಸೈನ್ಯದ ಮೇಲೆ ನುಗ್ಗುವ ಮುಂಚೆ 400 ಪಿರಂಗಿಗಳನ್ನು ಎತ್ತಿಕಟ್ಟಿ ಐವತ್ತು ಗಂಟೆಗಳ ವರೆಗೆ ಗುಂಡುಗಳನ್ನು ಸುರಿಸಿದರು. ತರುವಾಯ ಪಿರಂಗಿಗಳಿಂದ ಗುಂಡುಗಳನ್ನು ಹೊಡೆ ಯುವ ಕೂಡಲೇ ಕಾಲ್ಬಲದ ಸೈನ್ಯಗಳು ಏಳರು ನುಗ್ಗಿ ಹೋಗಿ ಶತ್ರು ಗಳನ್ನು ಹಿಂದಕ್ಕೆ ನೂಕಿ ಆ ರಾಜ್ಯವನ್ನು ಆಕ್ರಮಿಸಿಕೊಂಡವು. ಆ ಸೈನಿಕರ ರಷ್ಯಾ ಚಕ್ರವರ್ತಿ ಜಾರ್ ಯವರೇ ಖುದ್ದು ಹಾಜರಾಗಿದ್ದರೆಂದು ಹೇಳ ಲಾಗಿದೆ. ರಷ್ಯಾದವರು ಈ ರೀತಿ ನುಗ್ಗಿ ಬಂದಿರುವುದರಿಂದ ಆಸ್ಟ್ರಿಯಾದವರು ಸಬೋನಿಗದಲ್ಲಿದ್ದ ತಮ್ಮ ಸೈನ್ಯಗಳನ್ನು ಅಲ್ಲಿಂದ ವಾಪಸು ಕರೆಸಿಕೊಳ್ಳು ತ್ತಿದ್ದಾರೆ. ರಷ್ಯಾದವರು ಕ್ರಮವಾಗಿ ಹೀಗೆಯೇ ಮುಂದುವರಿದು ನುಗ್ಗಿ ಬರುವುದಕ್ಕೆ ಸಾಕಾಗುವಷ್ಟು ಸೈನ್ಯಗಳನ್ನು ಕೂಡಿಸಿಕೊಂಡಿದಾರೆಂದೂ, ಈಗ ಅವರು ಕದನಮಾಡುತ್ತಾ ಸರ್ಬಿಯಾದೊಳಕ್ಕೆ ನುಗ್ಗಿ ಬಂದಾರೆಂದೂ ಹೇಳಲ್ಪಟ್ಟಿದೆ.

ಇಟಲಿ.

ಕಳೆದ ವಾರ ಆಸ್ಟ್ರಿಯಾದವರು ಒಂದೆರಡು ರಾಜ್ಯಗಳಲ್ಲಿ ಇಟಲಿಯವರ ಮೇಲೆ ನುಗ್ಗಿ ಕದನಮಾಡುತ್ತಾ ಇದ್ದಾಗ್ಯೂ ಇಟಲಿಯವರು ಅವರನ್ನು ಪುನಃ ಹಿಂದಕ್ಕೆ ಓಡಿಸಿದಾರೆ. ಈ ರಣರಂಗದಲ್ಲೂ ಎರಡು ಕಡೆಗಳ ಸೈನಿಕರೂ ಗುಂಡುಗಳ ಮಳೆ ಸುರಿಸಿವಾರೆ. ಶತ್ರುವಿನ ಕಡೆ ವಿಮಾನಯಂತ್ರಗಳು ಹಾರಿ ಬಂದು ಸಿಡಿಮದ್ದಿನ ಗುಂಡುಗಳನ್ನು ಸುರಿಸಿರುತ್ತವೆ. ಇಟಲಿ ಯವರು ಪರ್ವತಗಳ ಮೇಲಿರುವ ಒಂದು ವಿಶೇಷವಾದ ಠಾಣ್ಯವನ್ನು ಆಕ್ರಮಿಸಿಕೊಂಡರು. ಇದಲ್ಲದೆ ಇಟಲಿಯವರು ಸರ್ಬಿಯದವರಿಗೆ ಸಹಾಯ ಕ್ಕೋಸ್ಕರ ಸೈನ್ಯಗಳನ್ನು ಆಡ್ರಿಯಾಟಿಕ್ ಕಡಲಿನ ಮೂಲಕ ವೆಲೋನಾ ಎಂಬ ಪಟ್ಟಣಕ್ಕೆ ಸಾಗಿಸುತ್ತಲೂ ಇದಾರೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಗ್ರೀಸ್ ರಾಜ್ಯವು ತಟಸ್ಥವಾಗಿದ್ದುಕೊಂಡು, ಮಿತ್ರಮಂಡಲಿಯವರಿಗೆ ಸೆಲೋನಿಕ ಎಂಬ ಪಟ್ಟಣದಲ್ಲಿ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿ ಕೊಳ್ಳುವ ಅವಕಾಶವನ್ನು ಕೊಟ್ಟಿದೆ ಕಳೆದ ವಾರ ನಾವು ತಿಳಿಸಿದಂತೆ ಮಿತ್ರ ಮಂಡಲಿಯವರು ಆ ನಗರದಲ್ಲಿದ್ದ ಶತ್ರುಪಕ್ಷದ ರಾಯಭಾರಿಗಳನ್ನು ಹಿಡಿದು ಬಂಧನದಲ್ಲಿ ಹಾಕಿದ್ದರು. ಆದರೆ ಈಚೆಗೆ ಅವರನ್ನೆಲ್ಲಾ ಬಂಧನದಿಂದ ಬಿಡಿಸಿ ದರು. ಆ ಪಟ್ಟಣದಲ್ಲಿದ್ದ ಆಸ್ಟ್ರಿಯಾ ರಾಯಭಾರಿಯ ವಶದಲ್ಲಿ 180 ತುಪಾಕಿಗಳು, 150 ರಿವಾಲ್ವರುಗಳೆಂಬ ಪಿಸ್ತೂಲುಗಳೂ, ಅವುಗಳಿಗೆ ತಕ್ಕ ಗುಂಡುಗಳೂ, ಟರ್ಕಿ ಸೈನಿಕರು ಹಾಕಿಕೊಳ್ಳುವಂಥಾ ಯೂನಿಫಾರಮ್ ಗಳು ಸಿಕ್ಕಿದವು. ಆಸ್ಟ್ರಿಯಾ, ಜರ್ಮನಿ, ಬಲ್ಗೇರಿಯಾ ಸೈನ್ಯಗಳು ಸೆಲೋನಿಕಕ್ಕೆ ನುಗ್ಗಿ ಬಂದ ಪಕ್ಷದಲ್ಲಿ ಅಲ್ಲಿರುವ ಟರ್ಕಿ ಪ್ರಜೆಗಳಿಗೆ ಯೂನಿಫಾರಮ್ಗಳನ್ನು ಹಾಕಿ ಬಂದೂಕು ಪಿಸ್ತೂಲುಗಳನ್ನು ಕೊಟ್ಟು ಮಿತ್ರಮಂಡ ಲಿಯ ಮೇಲೆ ಕದನಕ್ಕೆ [illegible]ಬಿಡುವದೇ ಅವರ ಉದ್ದೇಶವಾಗಿರಬೇ ಕೆಂದು ತೋರುತ್ತದೆ.—ಸರ್ಬಿಯಾ ಗವರ್ನ್ಮೆಂಟನ್ನು ಸೆಲೋನಿಕ ನಗರಕ್ಕೆ ಸಾಗಿಸಿದರು. ಸರ್ಬಿಯಾ ರಾಜ್ಯದ ಪೀಟರ್ ದೊರೆಯು ಗ್ರೀಸ್ ಪ್ರಜೆಗಳು ಮಾಡಿದ ಸನ್ಮಾನವನ್ನು ಬಯಸಿ ಅಟ್ಟಹಾಸದಿಂದ ಸತ್ಕಾರಗಳನ್ನು ನಡೆಸುತ್ತ ಸಂತೋಷಪಟ್ಟು ಗ್ರೀಸ್ ರಾಜ್ಯದ ಕಾನ್ಸ್ಟಂಟೈನ್ ದೊರೆಗೆ ಶಂತೀ ಸಮಾಚಾರವನ್ನು ತಿಳಿಸಿದಾರೆ.

ಬಾಲ್ಕನ್ ಸಂಸ್ಥಾನಗಳಲ್ಲೆಲ್ಲಾ ಮಾಂಟಿನೀಗ್ರೊದವರಿಗೂ ಬಲ್ಗೇರಿಯಾದ ವರಿಗೂ ಮಾತ್ರ ಯುದ್ಧವಾಗುತ್ತದೆ ಒಂದು ರಾಜ್ಯದಲ್ಲಿ ಆಸ್ಟ್ರಿಯಾದವರು ಪಿರಂಗಿಗಳನ್ನೂ ಮೆಷೀನ್ ಪಿರಂಗಿಗಳನ್ನೂ ಇಟ್ಟುಕೊಂಡು 20,000 ಸೈನ್ಯ ಏಕಕಾಲದಲ್ಲಿ ಮಾಂಟಿನೀಗ್ರೊದವರ ಮೇಲೆ ನುಗ್ಗಿ ಕದನವಾ ದರೂ ಮಾಂಟಿನೀಗ್ರೊದವರು ತಾವಿದ್ದ ತಳದ ರಾಜ್ಯಗಳನ್ನು ಕಾಪಾಡಿಕೊಂ ಡರು ಈ ಯುದ್ಧದಲ್ಲಿ ಎರಡು ಕಡೆಗಳಲ್ಲೂ ಅಪಾರ ನಷ್ಟ ಸಂಭವಿಸಿರುತ್ತದೆ. ಗ್ರೀಸ್ ರಾಜ್ಯದ ಪಶ್ಚಿಮಕ್ಕೆ ಅಲ್ಬೇನಿಯಾ ಎಂಬ ಒಂದು ಸಂಸ್ಥಾನ ವಿದೆ. ಬಲ್ಗೇರಿಯಾದವರು ಪಡೆಕಟ್ಟಿಕೊಂಡು ಅಲ್ಲಿಗೆ ಹೋಗಿದಾರೆ. ಈಗ ಅಲ್ಬೇ ನಿಯಾದವರು ಆಸ್ಟ್ರಿಯಾದವರ ಮೇಲೆ ಯುದ್ಧಕ್ಕೆ ನಿಂತರೆಂದು ಹೇಳಲಾ ಗಿದೆ ಅವರ ಸಹಾಯಕ್ಕೆ ಇಟಲಿಯವರು ಅಲ್ಲಿಗೆ ಸೈನ್ಯಗಳನ್ನು ಕಳುಹಿಸು ವರು—ಈಗ ನೋಡುವುದರಲ್ಲಿ ಗ್ರೀಸ್ ರಾಜ್ಯದೊಳಗೇ ದ್ವಯುದ್ಧವುಂಟಾ ಗುವ ಹಾಗಿರುವುದು. ಹಲವು ಪಟ್ಟಣಗಳಲ್ಲಿ ದಂಗೆಗಳಾದವು. ಕೆಲವರು ಗ್ರೀಕ್ ಸೈನಿಕರನ್ನು ಸೈನ್ಯದಿಂದ ಬಿಡಿಸಿದರೆ ಉತ್ತಮವೆಂದೂ, ಇನ್ನು ಕೆಲವರು ಅವಶ್ಯ ಬಿದ್ದಾಗ ಯುದ್ಧಕ್ಕೆ ಹೊರಡುವಂತೆ ಸೈನ್ಯವೆಲ್ಲಾ ಸಿದ್ಧವಾ ಗಿರಲು ಉತ್ತಮವೆಂದೂ ಹೇಳುತ್ತಾರೆ

ಸಂಧ್ಯಕ್ಕಾಗಿ ಇಟಲಿಗೆ ಹೊರಟು ಬಂದಿರುವ ಸರ್ಬಿಯಾ ಪ್ರಜೆಗಳು ಸೈನ್ಯಕ್ಕೆ ಸೇರಿಕೊಂಡು, ಶತ್ರುವನ್ನು ಓಡಿಸಿ ಮತ್ತೆ ತಮ್ಮ ರಾಜ್ಯವನ್ನು ಗೆದ್ದು ಕೊಳ್ಳಬೇಕೆಂದು ಉತ್ಸಾಹಪಡುತ್ತಿದಾರೆ

ಸೆಲೋನಿಕ ಪಟ್ಟಣದ ಮೇಲೆ ಹಾರಿ ಬಂದಿದ್ದ ಜರ್ಮನಿಯವರ ಎರಡು ವಿಮಾನಯಂತ್ರಗಳನ್ನು ನಮ್ಮ ಪಕ್ಷದವರು ಹೊಡೆದು ಕೆಳಗೆ ಇಳಿಸಿಕೊಂಡರು

ಟರ್ಕಿಯಲ್ಲಿ.

ಮೆಸೊಪೊಟೇಮಿಯಾ ಸೀಮೆಯಲ್ಲಿ ಬ್ರಿಟಿಷರಿಗೂ ಟರ್ಕಿಯವರಿಗೂ ಇನ್ನೂ ಯುದ್ಧಗಳು ನಡೆದವು. ಬ್ರಿಟಿಷರ ಕಡೆ ಹೊಸ ಸೈನ್ಯಗಳು ಬಂದಿರುತ್ತವೆ. ಅವರು ಶತ್ರುವಿನ ಠಾಣ್ಯವನ್ನು ಕಂಡು ಹಿಡಿದು ಜನವರಿ ತಾ 7 ರಲ್ಲಿ ಅದಕ್ಕೆ ಮುತ್ತಿಗೆ ಹಾಕಿದರು. ಮರುದಿನವೂ ಯುದ್ಧ ನಡೆಯಿತು. ಬ್ರಿಟಿಷರು 700 ಟರ್ಕಿ ಸೈನಿಕರನ್ನೂ ಅವರ ಎರಡು ಪಿರಂಗಿಗಳನ್ನೂ ಕೈಸೆರೆ ಹಿಡಿದುಕೊಂಡರು ಟರ್ಕಿ ಸೈನಿಕರಲ್ಲಿ 3,000 ಮಂದಿಯು ಕದನದ ನಷ್ಟವಾದರೆಂದು ಊಹಿಸಲ್ಪಟ್ಟಿದೆ ಡಾರ್ಡನೆಲ್ಸ್ ಜಲಮಾರ್ಗದಲ್ಲಿ ಏಷ್ಯಾ ಖಂಡದ ತೀರಪಟ್ಟಣಗಳಿಗೆ ಮಿತ್ರ ಮಂಡಲಿಯ ಹಡಗುಗಳು ಗುಂಡುಗಳನ್ನು ಹೊಡೆದವು. ಬ್ರಿಟಿಷರ ಒಂದು ಸಬ್ ಮೆರೀನು ಮಾರ್ಮೊರಾ ಕಡಲಿನೊಳಗೆ ನುಗ್ಗಿ ಟರ್ಕಿ ರಾಜಧಾನಿಯಾದ ಕಾನ್ಸ್ ಟಾಂಟಿನೋಪಲ್ ನಗರದ ಬಳಿಗೆ ಹೋಗಿ ಪೇಟ ಎಂಬಲ್ಲಿರುವ ಯುದ್ಧ ಸಾಮಗ್ರಿ ಕಾರ್ಖಾನೆಗೆ ಗುಂಡುಗಳನ್ನು ಹೊಡೆದು ತುಂಬಾ ನಷ್ಟವನ್ನುಂಟುಮಾಡಿತು. ಕಾಕಸಸ್ ಪರ್ವತ ಪ್ರಾಂತ್ಯಗಳಲ್ಲಿ ಟರ್ಕಿಯವರು ಸ್ವಲ್ಪ ಮಟ್ಟಿಗೆ ಮುಂದಕ್ಕೆ ನುಗ್ಗಿ ಹೋಗಿದ್ದರು. ಈಚೆಗೆ ರಷ್ಯಾದವರು ಅವರನ್ನು ಹಿಂದಕ್ಕೆ ಓಡಿಸಿದರು. ಕಪ್ಪು ಸಮುದ್ರದಲ್ಲಿ ರಷ್ಯಾದವರ ಟಾರ್ಪೀಡೋ ಎಂಬ ದೋಣಿ ಗಳು ಟರ್ಕಿಯವರ ಹನ್ನೊಂದು ಪ್ರಯಾಣಿಕರ ಹಡಗುಗಳನ್ನು ಸ್ವಾಧೀನಪಡಿ ಸಿಕೊಂಡು ಅವುಗಳಲ್ಲಿದ್ದ 40 ಮಂದಿಯನ್ನು ಕೈಸೆರೆ ಹಿಡಿದು ತ ದಿನೆ ಮಿತ್ರಮಂಡಲಿಯವರು ಗಲ್ಲಿಪೊಲಿ ಅರ್ಧದ್ವೀಪದಿಂದ ತಮ್ಮ ಸೈನ್ಯಗಳ ನ್ನೆಲ್ಲಾ ಏನೂ ನಷ್ಟವಿಲ್ಲದಂತೆ ವಾಪಸು ಕರೆಸಿಕೊಂಡರು. ಒಬ್ಬ ಸಿಪಾಯಿಗೆ ಮಾತ್ರ ಗಾಯವಾಯಿತು. ಸವದುಹೋಗಿದ್ದ ತಮ್ಮ ಹದಿನೇಳು ಪಿರಂಗಿಗಳನ್ನು ಮಿತ್ರಮಂಡಲಿಯವರು ತಾವಾಗಿಯೇ ಒಡೆದು ನಾಶಪಡಿಸಿ, ಉಳಿದವುಗಳನ್ನೆಲ್ಲಾ ಸುರಕ್ಷಿತವಾಗಿ ಸಾಗಿಸಿಕೊಂಡು ಬಂದಿದಾರೆ

ಪರ್ಷಿಯಾದಲ್ಲಿ.

ಪರ್ಷಿಯಾದೊಳಗೆ ದಂಗೆಗಳು ಇನ್ನೂ ಸಂಪೂರ್ಣವಾಗಿ ಅಡಗಲಿಲ್ಲ. ರಷ್ಯಾದವರು ಅವರ ಮೇಲೆ ನುಗ್ಗಿ ಕದನಮಾಡಿ ಅವರಲ್ಲಿದ್ದ 600 ಮಂದಿ ಯಲ್ಲಿ ಅನೇಕರನ್ನು ಕೊಂದುಹಾಕಿ, ಅವರ ಸಾಮಾನುಗಳನ್ನೆಲ್ಲಾ ಕಿತ್ತು ಕೊಂಡರು

ಆಫ್ರಿಕಾದಲ್ಲಿ.

ಮಿತ್ರಮಂಡಲಿಯವರು ಪಶ್ಚಿಮ ಆಫ್ರಿಕಾದಲ್ಲಿರುವ ಕ್ಯಾಮೆರೂನ್ಸ್ ಎಂಬ ಜರ್ಮನಿ ಅಧಿಪತ್ಯದ ಮುಖ್ಯ ಪಟ್ಟಣವನ್ನು ಗೆದ್ದು ಸ್ವಾಧೀನಮಾಡಿ ಕೊಂಡರು.—ಮಧ್ಯ ಆಫ್ರಿಕದಲ್ಲಿರುವ ಒಂದಾನೊಂದು ದೊಡ್ಡ ಕೆರೆಯಲ್ಲಿದ್ದ ಜರ್ಮನಿಯವರ ಒಂದು ಯುದ್ಧದ ಹಡಗಿನ ಮೇಲೆ ಬ್ರಿಟಿಷರು ನುಗ್ಗಿ ಹತ್ತು ನಿಮಿಷಗಳಲ್ಲಿ ಅದನ್ನು ಸ್ವಾಧೀನಮಾಡಿಕೊಂಡರು ಈ ಕದನದಲ್ಲಿ ಜರ್ಮನಿಯ ಹುದ್ದೇದಾರರೆಲ್ಲಾ ಕೊಲೆಯಾದರು. ಆ ಹಡಗನ್ನು ಮುಳುಗುತ್ತಿರುವಾಗ ತೀರಕ್ಕೆ ಸಾಗಿಸಿಕೊಂಡು ಬಂದರು.

ಇತರ ವಿಷಯಗಳು.

ಫ್ರೆಂಚರು 700,000 ಸೈನ್ಯವನ್ನು ಕೂಡಿಸಿದಾರೆಂದು ಪ್ರಕಟವಾಗಿದೆ

ಬ್ರಿಟನ್ನಲ್ಲಿ ಜನರನ್ನು ಬಲಾತ್ಕರಿಸಿ ಸೈನ್ಯಕ್ಕೆ ಸೇರಿಸಬೇಕೆಂಬ ಕಾನೂನು ಆಗುವುದರಲ್ಲಿರೋಣದರಿಂದ ಮಂತ್ರಿ ಸಭೆಯಲ್ಲಿದ್ದ ಸರ್ ಜಾನ್ ಸಿಮನ್ ರವರೂ, ಮಿ॥ ಹೆಂಡರ್ಸನ್ರವರೂ ಮೊದಲ ಕೆಲಸಕ್ಕೆ ರಾಜೀನಾಮೆ ಕೊಟ್ಟ ರು. ಇದರಿಂದ ಗವರ್ನ್ಮೆಂಟಿಗೆ ತೊಂದರೆಯೇನೂ ಆಗದು. ಅದು ಕಾನೂನಾ ಯಿತು. 403 ಮಂದಿ ಮೆಂಬರುಗಳು ಆಗಬಹುದೆಂದೂ, 105 ಮಂದಿ ಕೂಡ ದೆಂದೂ ಓಟ್ ಹಾಕಿದರು. ಈ ಕಾನೂನಿನ ಪ್ರಕಾರ 18 ರಿಂದ 41 ವಯಸ್ಸಿನ ವರೆಗೆ ಇರುವ ಮದುವೆಯಾಗದವರೂ, ಹೆಂಡತಿ ಸತ್ತು ಮಕ್ಕಳಿಲ್ಲದವರೂ ಸೈನ್ಯ ಕ್ಕೆ ಬಂದು ಸೇರಿಕೊಳ್ಳಬೇಕಾಗಿದೆ ಯುದ್ಧವನ್ನು ಕಡೇ ತನಕ ನಡೆಸುವುದಕ್ಕೆ ಬ್ರಿಟನ್ ರಾಜ್ಯದವರು ಸಿದ್ಧರಾಗಿದೇವೆಂದು ಸಂಕಲ್ಪ ಮಾಡಿಕೊಂಡಿದಾರೆ.

ಹೊಲ್ಲಾಂಡಿನ ತೀರದ ಹತ್ತಿರ ಬ್ರಿಟಿಷರ ಒಂದು ಸಬ್ಮೆರೀನು ನೆಲದ ಮೇಲೆ ಹರಿದು ನಿಂತುಬಿಟ್ಟಿತು. ಅದರೊಳಗಿದ್ದ 33 ಜನರೂ ಬದುಕಿಕೊಂಡರು. ಇವರನ್ನು ಯುದ್ಧ ಮುಗಿಯುವ ತನಕ ಬಿಡದೆ ತಮ್ಮ ದೇಶದಲ್ಲೇ ಇಟ್ಟು ಕೊಂಡಿರುತ್ತಾರೆ.—ಒಸ್ ಎಂಬ ರಾಜ್ಯದಲ್ಲಿ ಕೆಲವು ತಿಂಗಳ ಹಿಂದೆ ಅತ್ಯಂತ ಘೋರವಾದ ಯುದ್ಧವಾಯಿತಷ್ಟೆ. ಈ ಯುದ್ಧದಲ್ಲಿ ಬ್ರಿಟಿಷರ ಕಡೆ 2 678 ಹುದ್ದೇದಾರರೂ, 57,268 ಸೈನಿಕರೂ ನಷ್ಟವಾದರು ಈ ಪೈಕಿ 773 ಮಂದಿ ಹುದ್ದೇದಾರರೂ, 10,315 ಸೈನಿಕರೂ ಕೊಲೆಯಾದರು ; 1,288 ಹುದ್ದೇದಾ ರರೂ, 38,095 ಸೈನಿಕರಿಗೂ ಗಾಯಗಳಾಗಿವೆ.

ಬ್ರಿಟನ್ನೊಳಗಿರುವ ಹಿಂದುಸ್ಥಾನದ ಜನಗಳ ಪೈಕಿ ಕೆಲವರು ಸೈನ್ಯಕ್ಕೆ ಸೇರಿಕೊಂಡರು ; 272 ಮಂದಿ ಗಾಯಪಟ್ಟವರಿಗೆ ಸೇವೆ ಮಾಡುವ ಅಂಬ್ಯು ಲೆನ್ಸ್ ಕಂಪೆನಿಗೆ ಸೇರಿ ಯುದ್ಧಭೂಮಿಗೆ ಹೋಗಿದಾರೆ.

ಮುಳುಗಿಸಲ್ಪಟ್ಟಿತೆಂದು ಕಳೆದ ವಾರ ನಾವು ತಿಳಿಸಿದ ಪರ್ಷಿಯಾ ಎಂಬ ಮೆಯಿಲ್ ಜಹಜಿನಲ್ಲಿ ಹಿಂದುಸ್ಥಾನದ ದೇಶೀಯ ಜನರು ಕೂಡ ಪ್ರಯಾಣ ಮಾಡಿ ಬರುತ್ತಿದ್ದರು. ಎಂಟು ಮಂದಿ ಮಾತ್ರ ಉಳಿಕೊಂಡರು. ಮೂವರು ದೇಶೀಯ ವಿದ್ಯಾರ್ಥಿಗಳು ಸಮುದ್ರದ ಪಾಲಾದರು. ಕಪೂರ್ಥಲದ ಮಹಾರಾಜ ರವರ ಜವಾಹಿರಿ ಪೆಟ್ಟಿಗೆಗಳು ಮುಳುಗಿಹೋದವು. 20,000-30,000 ಅಂಚೆ ಟಪ್ಪಾಲುಗಳು ನಾಶವಾಗಿ ಒಂದು ಕಾಗದವೂ ಸಿಕ್ಕದಂತಾಯಿತು. ಈ ವಾರ ಸೀಮೆಯ ಟಪ್ಪಾಲ್ ಕಾಗದಗಳೂ, ವರ್ತಮಾನ ಪತ್ರಿಕೆಗಳೂ, ಭಾಂಗಿಗಳೂ ಯಾವವೂ ಇಲ್ಲದಂತಾಯಿತು. ಟಾರ್ಪೀಡೋ ಬಡಿದ ಐದು ನಿಮಿಷಗಳೊಳಗೇ ಜಹಜು ಮುಳುಗಿತು. ಅಷ್ಟು ಸ್ವಲ್ಪ ಹೊತ್ತಿನೊಳಗಾಗಿ 166 ಜನರು ಬದುಕಿ ಬಂದದ್ದು ಪರಮಾಶ್ಚರ್ಯವಾಗಿದೆ. ಒಟ್ಟು 335 ಜನರು ಮುಳುಗಿಹೋದರು

ಬ್ರಿಟಿಷರು ಜರ್ಮನಿಯ ಒಂದು ಸಬ್ಮೆರೀನನ್ನು ಮುಳುಗಿಸಿದರೆಂದೂ ಅದರೊಳಗಿದ್ದವರನ್ನು ಕೊಂದು ಬಿಟ್ಟರೆಂದೂ ಜರ್ಮನಿಯವರು ಬ್ರಿಟಿಷರ ಮೇಲೆ ಆಕ್ಷೇಪಣೆ ಮಾಡಿದರು. ಬ್ರಿಟಿಷ್ ಗವರ್ನ್ಮೆಂಟಿನವರು ಆ ಅಪ ವಾದ ನಿಜವಾದದ್ದಲ್ಲವೆಂದು ತಿರಸ್ಕಾರ ಮಾಡಿ ಅದಕ್ಕೆ ಪ್ರತಿಯಾಗಿ ಜರ್ಮನಿ ಯವರು ಅರೇಬಿಕ್ ಎಂಬ ಜಹಜನ್ನು ಮುಳುಗಿಸಿ ಅದರೊಳಗಿದ್ದ 47 ಮಂದಿ ಸಭ್ಯ ಪ್ರಜೆಗಳನ್ನು ಕೊಂದದ್ದಲ್ಲದೆ, ಡೇನಿಷ್ ಸಮುದ್ರ ತೀರದಲ್ಲಿ ನೆಲದ ಮೇಲೆ ಹೋಗಿ ನಿಂತಿದ್ದಂಥಾ ಬ್ರಿಟಿಷ್ ಸಬ್ಮೆರೀನಿನ ಜನರ ಮೇಲೆ ಗುಂಡು ಗಳನ್ನು ಹೊಡೆದದ್ದಲ್ಲದೆ, ಬಯಲು ಸಮುದ್ರದ ಮೇಲೆ ಸಂರಕ್ಷಣೆಯು ಮಾರ್ಗ ವಿಲ್ಲದೆ ದೋಣಿಗಳಲ್ಲಿದ್ದಂಥಾ ಜನಗಳ ಮೇಲೆ ಗುಂಡು ಹೊಡೆದು ಒಬ್ಬನನ್ನು ಕೊಂದು ಎಂಟು ಜನರನ್ನು ಗಾಯಮಾಡಿದ್ದಕ್ಕೆ ಉತ್ತರವೇನೆಂದು ಆಕ್ಷೇಪಣೆ ಮಾಡಿದರು ಬ್ರಿಟಿಷರು ಮುಳುಗಿ ಹೋಗುತ್ತಿದ್ದ 1,150 ಜರ್ಮನಿಯವರ ನಾವಿಕರನ್ನು ಇದುವರೆಗೆ ನೀರಿನಿಂದೆತ್ತಿ ಬದುಕಿಸಿದಾರೆ. ಜರ್ಮನಿಯವರಾದರೋ ಒಬ್ಬ ಬ್ರಿಟಿಷ್ ನಾವಿಕನನ್ನೂ ಬದುಕಿಸಿರುವುದಿಲ್ಲ.

ಜರ್ಮನಿಯು ಸಂಪೂರ್ಣವಾಗಿ ಕಟ್ಟಿಹಾಕಿದಂತಾಗಿದೆ. ಹತ್ತಿ, ಉಣ್ಣೆ, ರಬ್ಬರು, ಯಾವುವೂ ಇತರ ಕಡೆಗಳಿಂದ ಜರ್ಮನಿಗೆ ಹೋಗದಂತೆ ತಡೆಯಾಯಿ ತು. ಯುದ್ಧಕಾರ್ಯಗಳಿಗೆ ಈ ಪದಾರ್ಥಗಳು ಜರ್ಮನಿಗೆ ಬೇಕು. ಎಣ್ಣೆಯ ಮತ್ತು ಬೆಣ್ಣೆಯ ಧಾರಣೆಗಳು ಶಾಂತಿಕಾಲದಷ್ಟು ಹೆಚ್ಚಿವೆ ಆಹಾರ ಪದಾರ್ಥ ಗಳಿಗೋಸ್ಕರ ಜರ್ಮನಿಯ ಅನೇಕ ಪಟ್ಟಣಗಳಲ್ಲಿ ದಂಗೆಗಳು ನಡೆದಿವೆ.

ಆಸ್ಟ್ರಿಯಾದಲ್ಲಿ ಒಂದು ರಿಜಿಮೆಂಟಿನ ಸೈನಿಕರು ದಂಗೆಯೆದ್ದರು. ಆ ರಿಜಿಮೆಂಟಿನಲ್ಲಿದ್ದ ಸಮಸ್ತ ಹುದ್ದೇದಾರರನ್ನೂ, ಹತ್ತರಲ್ಲೊಬ್ಬನಂತೆ ಸೈನಿಕ ರನ್ನೂ ಹಿಡಿಸಿ ಗುಂಡಿನಿಂದ ಹೊಡಿಸಿ ಕೊಲ್ಲಿಸಿದರು.—ಗ್ರೀಸ್ ರಾಜ್ಯಕ್ಕೆ ಸೇರಿದ ಕಾರ್ಫು ಎಂಬ ದ್ವೀಪದಲ್ಲಿ ಜರ್ಮನಿ ಚಕ್ರವರ್ತಿಯವರ ದಿವ್ಯವಾದ ಬಂಗಲೆ ಯೊಂದಿದೆ. ಈಗ ಮಿತ್ರಮಂಡಲಿಯವರು ಆ ಬಂಗಲೆಯಲ್ಲಿ ಗಾಯಪಟ್ಟವ ರನ್ನಿಟ್ಟು ಚಿಕಿತ್ಸೆ ಮಾಡುವಂಥಾ ಆಸ್ಪತ್ರೆ ಮಾಡಿಕೊಂಡಿದಾರೆ.

ಬ್ರಿಟಿಷ್ ನಾವಿಕರಲ್ಲಿ ಹಲವರು ಫ್ರಾನ್ಸಿಗೆ ಹೋಗಿ ಕಂದಕಗಳನ್ನು ನೋಡಿ ಬಂದರು. ಅವುಗಳಲ್ಲಿ ಸೈನಿಕರಿದ್ದುಕೊಂಡು ಸ್ವರಾಜ್ಯಕ್ಕಾಗಿ ಎಷ್ಟು ಶ್ರಮವನ್ನನುಭವಿಸಿ ಎಂಥಾ ಪರಾಕ್ರಮ ಕಾರ್ಯಗಳನ್ನು ಮಾಡುತ್ತಾ ಬಂದಿದಾರೆ ನ್ನುವುದು ಅವರಿಗೆ ದೃಷ್ಟಾಂತವಾಯಿತು —ಇನ್ನು ಮುಂದೆ ಎಚ್ಚರಿಕೆ ಕೊಡದೆ ತಮ್ಮ ಸಬ್ಮೆರೀನುಗಳು ಯಾವ ಹಡಗನ್ನೂ ಮುಳುಗಿಸುವುದಿಲ್ಲವೆಂದು ಜರ್ಮನಿ ಯವರೂ ಆಸ್ಟ್ರಿಯಾದವರೂ ಹೇಳಿದಾರೆ —ಮೈಸೂರು ಶ್ರೀಮನ್ಮಹಾರಾಜ ರವರು ಗಾಯಪಟ್ಟವರನ್ನು ಯುದ್ಧಭೂಮಿಯಿಂದ ಸಾಗಿಸುವಂಥಾ ಆರು ಅಂಬ್ಯು ಲೆನ್ಸ್ ಮೋಟಾರು ಗಾಡಿಗಳನ್ನು ಕಳುಹಿಸಿಕೊಟ್ಟರು. ಇದನ್ನು ಗವರ್ನ್ಮೆಂಟಿನ ವರು ವಂದನಾಪೂರ್ವಕವಾಗಿ ಅಂಗೀಕರಿಸಿರುತ್ತಾರೆ —ಹೊಸ ವರುಷದ ಶುಭವಾದ ದಿನ ಕೂಚ ನೇಪಾಳದವರು ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಯುದ್ಧದ ಖರ್ಚಿಗೆಂದು ಮೂರು ಲಕ್ಷ ರೂಪಾಯನ್ನು ಕಳುಹಿಸಿದರು. ಈ ಪೈಕಿ 3 ಲಕ್ಷ ರೂಪಾಯಿ ನೇಪಾಳ ಸರ್ಕಾರದವರೂ, 1 ಲಕ್ಷ ರೂಪಾಯಿ ಅಲ್ಲಿನ ಮಂತ್ರಿಯವರೂ ಕೊಟ್ಟಿದಾರೆ.—ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಕಾಯಿಲೆ ವಾಸಿಯಾದ ಶುಭ ವರ್ತಮಾನವನ್ನು ಕೇಳಿ ಜಯಪುರದ ಮಹಾರಾಜ ರವರು ಆನಂದಪಟ್ಟು 31,000 ರೂಪಾಯನ್ನು ಮೆಷೀನ್ ಪಿರಂಗಿಗಳಿಗೋಸ್ಕರ ಕಳುಹಿ ತಮ್ಮ ಸಂತೋಷವನ್ನು ಪ್ರಕಾಶಪಡಿಸಿರುತ್ತಾರೆ.

"ಕಿಂಗ್ ಎಡ್ವರ್ಡ್ ದಿ ಸೆವೆಂತ್" ಎಂಬ ಬ್ರಿಟಿಷ್ ಯುದ್ಧದ ಜಹಜು ಸಮುದ್ರದೊಳಗಿದ್ದ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿ ಹೋಯಿತು. ಅದರಲ್ಲಿದ್ದವರನ್ನು ಬದುಕಿಸಿದರು. ಇಬ್ಬರಿಗೆ ಮಾತ್ರ ಗಾಯ ಗಳಾಗಿವೆ.—ರಷ್ಯಾದವರ ಒಂದು ಟಾರ್ಪೀಡೋ ದೋಣಿಯು ಬೊಸ್ಫರಸ್ನಿಂದ ಆಚೆ ಕಡೆಗೆ ಹೋಗುತ್ತಿದ್ದ ಒಂದು ಭಾರೀ ಜಹಜನ್ನು ಮುಳುಗಿಸಿದೆ.—ಟರ್ಕಿ ಮಂದಿ ಮಾಂಟಿನೀಗ್ರೋ ಸೈನಿಕರನ್ನು ಸಾಗಿಸಿಕೊಂಡು ಹೋಗುತ್ತಿದ್ದ ಇಟಲಿ ಜಹಜು ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿಹೋಯಿತು. ಅದರಲ್ಲಿದ್ದವರ ಪೈಕಿ ಇನ್ನೂರು ಜನಗಳು ಸಮುದ್ರದ ಪಾಲಾದರು.

ಇಟಲಿಯವರು ಪ್ರತ್ಯೇಕವಾಗಿ ಜರ್ಮನಿಯವರೊಡನೆ ಕರಾರುಮಾಡಿಕೊ ಳ್ಳುವುದಿಲ್ಲವೆಂದು ಮಿತ್ರಮಂಡಲಿಯವರಿಗೆ ಭಾಷೆಕೊಡುವುದಕ್ಕಿಂತ ಮುಂಚೆ ಜರ್ಮನಿಯವರು ಇಟಲಿಯವರ ಕೂಡ ಸಂಧಾನವನ್ನು ಮಾಡಿದ್ದ ಹಾಗೂ, ಇಟಲಿ ಯವರು ಕೇಳುವ ಅಧಿಪತ್ಯಗಳನ್ನೆಲ್ಲಾ ಅವರಿಗೆ ಸೇರಿಸಿ ಕೊಡುತ್ತೇವೆಂದು ಜರ್ಮನಿಯವರು ಇಟಲಿಯವರಿಗೆ ಆಹ್ವಾನವನ್ನು ಹೇಳಿದಾಗ್ಯೂ ಇಟಲಿಯ ವರು ಅದನ್ನು ತಿರಸ್ಕಾರ ಮಾಡಿದ ಹಾಗೂ ಪ್ರಕಟವಾಗಿದೆ.

ಒಳದೇಶದ ವೃತ್ತಾಂತಗಳು.

ಮದರಾಸು, ಬೆಂಗಳೂರು, ಬೌರಿಂಗ್ಪೇಟೆ ಈ ಮೊದಲಾದ ಪಟ್ಟಣಗಳಲ್ಲಿ ಕಳೆದ ಶುಕ್ರವಾರ ಬೆಳಗ್ಗೆ 6 ಗಂಟೆ ಸಮಯದಲ್ಲಿ ಸ್ವಲ್ಪ ಭೂಕಂಪವಾಯಿ ತೆಂದು ತಿಳಿದುಬಂದಿದೆ

ರಾಜಧಾನಿಯ ಸರ್ದಾರ್ ಗೋಪಾಲಕೃಷ್ಣ ಅರಸಿನವರ ಮನೆಯಲ್ಲಿ ಕಳು ವುಮಾಡಿ ಪೊಲೀಸಿನವರ ವಶದಿಂದ ತಪ್ಪಿಸಿಕೊಂಡು ಹೋಗಿದ್ದ ಇಬ್ಬರನ್ನು ಪತ್ತೆ ಮಾಡಿ ಹಿಡಿದು ಮುಂದಿನ ಕ್ರಮ ನಡೆಸುತ್ತಿದಾರೆ.

ಯುದ್ಧಭೂಮಿಗೆ ಮೈಸೂರು ಇಂಪೀರಿಯಲ್ ಸರ್ವಿಸ್ ಸೈನಿಕರನ್ನು ಕರೆದು ಕೊಂಡು ಹೋಗಿದ್ದ ಕರ್ನಲ್ ಬಿ ದೇಶರಾಜ ಅರಸಿನವರು ಕಳೆದ 5 ನೇ ತಾ. ಬುಧವಾರ ಬೆಂಗಳೂರಿಗೆ ವಾಪಸು ಬಂದು ಏಳು ದಿನಗಳ ರಜಾ ಪಡೆದು ಕೊಂಡಿದಾರೆ.

ಈ ತಿಂಗಳು ತಾ. 21 ಕ್ಕೆ ತೀರ್ಥಹಳ್ಳಿಯಲ್ಲಿ ವಿದ್ಯಾಭ್ಯಾಸದ ಸಭೆಯೂ ಪ್ರದರ್ಶನವೂ ಪ್ರಾರಂಭವಾಗಿ ಮೂರು ದಿನ ನಡೆಯುತ್ತದೆ ರಾವ್ ಬಹದೂರ್ ಮ॥ ಎಂ ಶಾಮರಾಯರು ಅಗ್ರಾಸನವನ್ನು ವಹಿಸಿ ಸಭೆಯ ಕಾರ್ಯಗಳನ್ನು ನಿರ್ವಹಿಸುವರು.

ನಮ್ಮ ಮಹಾರಾಜರವರು ಈ ವಾರ ಬೆಂಗಳೂರಿಂದ ಒಂದೆರಡು ದಿನಗಳ ಮಟ್ಟಿಗೆ ರಾಜಧಾನಿಗೆ ದಯಮಾಡಿದ್ದು, ಬಳಿಕ ಅರಮನೆಯ ರಾಣಿವಾಸದವರ ಸಮೇತ ಬೊಂಬಾಯಿಗೆ ಪ್ರಯಾಣಮಾಡುವರು. ಶ್ರೀಮದ್ಯುವರಾಜರವರೂ ಅವರ ಕೂಡ ತೆರಳುವರು.

ನಮ್ಮ ಸಂಸ್ಥಾನದ ಪ್ರಾಚೀನ ಲಿಖಿತ ಸಂಶೋಧನ ಇಲಾಖೆ ಸೂಪರಿಂಟೆಂಡೆಂ ಟರಾದ ಮ॥ ಆರ್. ನರಸಿಂಹಾಚಾರ್ಯರಿಗೆ ಇಂಡಿಯಾ ಗವರ್ನ್ಮೆಂಟಿನವರು ರಾವ್ ಬಹದೂರ್ ಎಂಬ ಬಿರುದನ್ನು ದಯಪಾಲಿಸಿದಾರೆಂದು ತಿಳಿಸಲು ಸಂತೋಷಪಡುತ್ತೇವೆ.

ಬೆಂಗಳೂರು ಸೆಂಟ್ರಲ್ ಬುಕ್ ಡಿಪೋದಲ್ಲಿ ಕಾರುಬಾರುಗಳು ತೃಪ್ತಿಕರ ವಾಗಿಲ್ಲವೆಂದು ಸರ್ಕಾರದವರು ರಾಜಧಾನಿಯಲ್ಲಿದ್ದ ಸ್ಕೂಲ್ ಇನ್ಸ್ಪೆಕ್ಟರ್ ಮ॥ ಎಸ್. ಶ್ರೀನಿವಾಸರಾಯರನ್ನು ಕ್ಯುರೇಟರ್ ಕೆಲಸಕ್ಕೆ ನೇಮಕ ಮಾಡಿರು ವಂತೆಯೂ, ಲೆಕ್ಕಗಳನ್ನು ತನಿಖೆ ಮಾಡಿಸುತ್ತಿದಾರೆಂದೂ ಕೇಳುತ್ತೇವೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಅನೇಕ ವರುಷಗಳ ತನಕ ಪ್ರಿನ್ಸಿ ಪಾಲರಾಗಿದ್ದು ಪೆನ್ಷನ್ ಪಡೆದು ಸೀಮೆಯಲ್ಲಿದ್ದ ಮಿ॥ ಜೆ ಕುಕ್ರವರು ಕಾಲ ವಾದರೆಂದು ವರ್ತಮಾನ ಬಂದು ಮೈಸೂರು ಸಂಸ್ಥಾನದಲ್ಲೆಲ್ಲಾ ತುಂಬಾ ವಿಷಾದವನ್ನುಂಟುಮಾಡಿದೆ.

ರಾಜಧಾನಿಯ ದೊಡ್ಡಪೇಟೆಯಲ್ಲಿರುವ ಮ॥ ಸುಬ್ರಹ್ಮಣ್ಯ ಆಚಾರರವರ ಪತ್ನಿಯನ್ನು ಆಭರಣಗಳ ಸಮೇತ ಪರಾರಿ ಮಾಡಬೇಕೆಂದು ಪ್ರಯತ್ನಪಟ್ಟಂತೆ ಒಂದು ಮೊಕದ್ದಮೆ ಆಗಿ ಶಾಮರಾವ್, ಈತನ ಹೆಂಡತಿ ಮತ್ತು ತಾಯಿ ಈ ಮೂರು ಮಂದಿಯನ್ನೂ ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟರು ದಯೋಕ್ತಿ ಮಾಡುತ್ತಿದಾರೆ.

ನಂಜನಗೂಡು ತಾಲ್ಲೂಕಿಗೆ ಸೇರಿದ ಹಗಡೂರಿಗೆ ಒಬ್ಬ ಸೂಲಗಿತ್ತಿಯನ್ನು ನೇಮಿಸಬೇಕೆಂದೂ, ಇಲವಾಲ ಗ್ರಾಮದಲ್ಲಿ ಸೂಲಗಿತ್ತಿಯನ್ನು ನೇಮಿಸಲು ಹಣ ವಿಲ್ಲವೆಂದೂ, ಕಾರಾಪುರ ಕ್ಯಾಂಪಿನ ಬಳಿ ಸಿಕನದ ಹತ್ತಿರ ಕಪಿಲೆ ಹೊಳೆಗೆ ಸೇತುವೆ ಕಟ್ಟುವುದಕ್ಕೆ 3,000 ರೂಪಾಯಿ ಕಂಟ್ರಿಬ್ಯೂಷನ್ ಕೊಡಬಹು ದೆಂದೂ, ಡಿಸ್ಟ್ರಿಕ್ಟ್ ಮಾಳೆ ರವಿನ್ಯೂ ಕಂದಾಯದ ಮೇಲೆ ರೂಪಾಯಿಗೆ 3 ಪೈ ನಂತೆ ಟೈಲ್ಸ್ ಸೆಸ್ಸು ವಸೂಲ್ಮಾಡಬೇಕೆಂದೂ ಮೈಸೂರು ಡಿಸ್ಟ್ರಿಕ್ಟ್ ಬೋರ್ಡ ನಲ್ಲಿ ಇತ್ಯರ್ಥವಾಗಿದೆ.

ಮಧುಗಿರಿ ತಾಲ್ಲೂಕು ಚೀಗೊಂಡನಹಳ್ಳಿ ಕೊಂಚಿಟಿಗರ ಈರಣ್ಣನ 2 ನೇ ಮಗ 19 ವಯಸ್ಸಿನ ತಿಮ್ಮಯ್ಯನೆಂಬವನೂ, ಚಿಂತಾಮಣಿ ತಾಲ್ಲೂಕು ಮುಂ ಗಾನಹಳ್ಳಿಯ ಕಾನ್ಸ್ಟೇಬಲ್ ಕೃಷ್ಣಪ್ಪನ ಮಗ 11 ವರುಷದ ಲಕ್ಷ್ಮೀನಾರಾ ಯಣಪ್ಪನೆಂಬವನೂ, ಬೆಂಗಳೂರು ತಾಲ್ಲೂಕು ಮಲ್ಲೆ ಕಸಬಾ ಚರಂತಿಪೇಟೆ ಮೈದಿನೆ ಬ್ಯಾರಿ ಮಗ 19 ವಯಸ್ಸಿನ ಹಸನ ಬ್ಯಾರಿ ಎಂಬವನೂ ಎಲ್ಲೋ ತಪ್ಪಿಸಿಕೊಂಡು ಹೋಗಿದಾರೆಂದೂ, ಅವರನ್ನು ಪತ್ತೆಮಾಡಿ ತಿಳಿಸಿದವರಿಗೆ ಅಲ್ಪ ಸ್ವಲ್ಪ ಬಹುಮಾನಗಳನ್ನು ಕೊಡುವುದಾಗಿಯೂ ಅವರುಗಳ [illegible]ದಾರೆ.

ಒಬ್ಬ ಬಾತ್ಮಿದಾರರಿಂದ.—ಮೇಲುಕೋಟೆಯಲ್ಲಿ ವಿಶ್ವಕರ್ಮ ಬ್ರಾಹ್ಮ ಣರ ವಿವಾಹದ ಮೆರವಣಿಗೆಗೆ ಅನನುಕೂಲವಾಗಿತ್ತು. ಈ ದಫ ನಡೆದ ಒಂದು ವಿವಾಹದಲ್ಲಿ ಗಂಡು ಹೆಣ್ಣು ಮೆರವಣಿಗೆ ಮಾಡಿಕೊಳ್ಳಲು ಫ್ರೆಂಚ್ ರಾಕ್ಸ್ ಸಬ್ ಡಿವಿಷನ್ ಅಮಲ್ದಾರ್ ಮ್ಯಾಜಿಸ್ಟ್ರೇಟರಾದ ಮ॥ ಮಲ್ಲರಾಜೆ ಅರಸಿನ ವರು ಲೈಸೆನ್ಸು ಕೊಟ್ಟು ತಕ್ಕ ಬಂದೋಬಸ್ತಿನಿಂದ ಆ ಮೆರವಣಿಗೆಯನ್ನು ಕಳೆ ದ ತಾ. 31 ನೇ ಶುಕ್ರವಾರ ಆಗಮಾಡಿಸಿದರು. ಇದಕ್ಕಾಗಿ ಸಮಸ್ತ ವಿಶ್ವಕರ್ಮ ಬ್ರಾಹ್ಮಣರೂ ಸದರಿ ಅಮಲ್ದಾರ್ ಮ್ಯಾಜಿಸ್ಟ್ರೇಟರವರಿಗೆ ವಂದನೆಯನ್ನು ಸಮರ್ಪಿಸುತ್ತಾರೆ.

ಇದೇ ಜನವರಿ ಪ್ರಾರಂಭದಿಂದ ಮೈಸೂರು, ಬೆಂಗಳೂರು ಪಟ್ಟಣಗಳ ಆಸ್ಪತ್ರೆಗಳಲ್ಲಿ ರೋಗಿಗಳಿಂದ ಚಿಕಿತ್ಸೆಗೂ, ಔಷಧಗಳಿಗೂ ಫೀಜು ವಸೂಲ್ಮಾಡು ತ್ತಿದಾರಷ್ಟೆ. ಈ ವಿಷಯದಲ್ಲಿ ರಾಜಧಾನಿಯ ಮ್ಯುನಿಸಿಪಾಲಿಟಿಯವರು ಚರ್ಚೆ ನಡಿಸಿ ಫೀಜು ವಸೂಲ್ಮಾಡುವುದನ್ನು ಇನ್ನೂ ಕೆಲವು ಕಾಲ ಮುನ್ನ ಮಾಡ ಬೇಕೆಂದು ಸರ್ಕಾರದವರಿಗೆ ತಿಳಿಸಿದರು ಕಳೆದ ವಾರ ಬೆಂಗಳೂರಿನ ಮ್ಯುನಿಸಿ ಪಾಲಿಟಿಯವರೂ ಅದೇ ರೀತಿ ತೀರ್ಮಾನ ಮಾಡಿ ಸರ್ಕಾರಕ್ಕೆ ಅರಿಕೆ ಮಾಡಿ ದಾರೆ. ಮೊದಲೇ ಸರ್ಕಾರದವರು ಪ್ರಜಾಪ್ರತಿನಿಧಿಗಳ ಅಭಿಮತವನ್ನು ಕೇಳಿದ್ದರೆ ಚೆನ್ನಾಗಿತ್ತು. ಈಗ ಅವರು ಹೇಗೆ ಇತ್ಯರ್ಥ ಮಾಡುವರೋ ನೋಡಬೇಕು.

ಯುದ್ಧ ಭೂಮಿಯಲ್ಲಿರುವ ನಮ್ಮ ಸಂಸ್ಥಾನದ ಸೈನಿಕರಿಗೆ ಬೇಕಾದ ಸೌಕರ್ಯ ಪದಾರ್ಥಗಳನ್ನು ಕಳುಹಿಸುವುದಕ್ಕೆ ಶ್ರೀಮದ್ಯುವರಾಜರವರು ಮತ್ತು ಸರ್ದಾರ್ ಕಾಂತರಾಜೆ ಅರಸಿನವರು ಮುಖಂಡರಾಗಿ ನಿಂತು ಚಂದಾ ಹಣಗಳನ್ನು ಸಂಸ್ಥಾನಾದ್ಯಂತ ಕೂಡಿಸುತ್ತಿದಾರಷ್ಟೆ. ನಮ್ಮ ಸೈನಿಕರು ಶತ್ರುವಿ ನಿಂದ ಕಿತ್ತುಕೊಂಡಿರುವ ಆಯುಧಗಳನ್ನು ಬೆಂಗಳೂರಿನಲ್ಲಿಟ್ಟು ಒಂದು ಪ್ರದ ರ್ಶನವನ್ನು ನಡಿಸುತ್ತಾರೆ. ಆಗ ಸಂತೋಷಕರವಾದ ಇತರ ಏರ್ಪಾಡುಗಳೂ ನಡೆಯುವವು. ಪ್ರಜೆಗಳು ಹೇರಳವಾಗಿ ಹೋಗಿ ಈ ಪ್ರದರ್ಶನವನ್ನು ನೋಡಿದ ಪಕ್ಷದಲ್ಲಿ ಉತ್ಪತ್ತಿಯಾಗುವ ದ್ರವ್ಯವು ಆ ಫಂಡಿಗೆ ಕೂಡಿಸಲ್ಪಡುತ್ತದೆ ಈ ಪ್ರದರ್ಶನವು ನಾಳೆಯಿಂದ ಭಾನುವಾರದ ವರೆಗೆ ಮೂರು ದಿನ ನಡೆಯುವುದ ರಿಂದ ಅದರ ಉತ್ಪತ್ತಿಯು ಹೆಚ್ಚಾಗುವಂತೆ ಪ್ರಜೆಗಳು ಸಹಾಯಮಾಡುವರಾ ರೆಂದು ನಿರೀಕ್ಷಿಸಲ್ಪಟ್ಟಿದೆ ರಾಜಧಾನಿಯಲ್ಲಿ ಪ್ರೊಫೆಸರ್ ದಿವಾಕರರವರು ಕಳೆದ ಭಾನುವಾರ ತಮ್ಮ ಸರ್ಕಸ್ ಆಟದಲ್ಲಿ ಉತ್ಪತ್ತಿಯಾದ ಹಣವನ್ನು ಮೇಲ್ಕಂಡ ಫಂಡಿಗೆ ಕೊಟ್ಟಿರುವುದು ಸಂತೋಷಪ್ರದವಾಗಿದೆ.

ಕರ್ಣಾಟಕ ಸಾಹಿತ್ಯ ಪರಿಷತ್ತು.

ಈ ಪರಿಷತ್ತಿನ ಕಾರ್ಯದರ್ಶಿಗಳಾದ ಮ|| ಬಿ ಕೃಷ್ಣಪ್ಪನವರು ಪರಿಷತ್ತಿನ ಮೆಂಬರುಗಳಿಂದ ಕೆಳಗೆ ಕಂಡಂತೆ ಚಂದಾ ಹಣಗಳು ವಸೂಲು ಬಂದಿವೆ ಎಂದು ತಿಳಿಸುತ್ತಾರೆ ಡಿಸೆಂಬರ್ ತಿಂಗಳಲ್ಲಿ—ಮ|| ಗಳಾದ ಪಿ. ಎಸ್. ಕಾಮತ್ ಮಂಗಳೂರು ರೂ. 12, ಪಿ. ಮಂಗೇಶರಾವ್, ಮಂಗಳೂರು ರೂ. 12, ಬಿ. ಎಸ್. ಚಿಟ್ನಿಗೇರಿ, ಬೆಳಗಾಂ (ದಫ 2) ರೂ 10, ಆರ್. ತಾತ ಎಂ. ಎ., ಎಲ್. ಟಿ. ಸೈದಾಪೇಟೆ (ದಫ 2) ರೂ. 4, ಎಂ ಚಲುವೈಯ್ಯಂಗಾರ್, ಚಿತ್ರದುರ್ಗ ರೂ. 3, ಎಂ. ಎಚ್. ಕಾಮತ್, ಉಡಿಪಿ ರೂ. 12, ಆರ್. ಎ. ಜಹಗೀರ್ದಾರ್, ಎಂ. ಎ., ಎಲ್. ಎಲ್. ಬಿ., ಬೊಂಬಾಯಿ ರೂ. 12, ಎಂ ಶ್ರೀನಿವಾಸರಾವ್, ಬಿ. ಎ., ಮೈಸೂರು ರೂ. 50, ಎಚ್. ಚನ್ನಕೇಶವಯ್ಯಂಗಾರ್, ಬೆಂಗಳೂರು (ದಫ 2) 16, ಒಟ್ಟು ಹಣ 129 ರೂಪಾಯಿ.

ಮೈಸೂರು ತಾಲೂಕು ಉಪಾಧ್ಯಾಯರ ಸಂಘ.

ಪ್ರಕೃತ ಈ ಸಂಘದ ಪರವಾಗಿ 8 ನೇ ತಾ. ಶನಿವಾರ ಅಕ್ಷರಶಾಲಾಧ್ಯಕ್ಷರಾದ ಮ|| ಕು. ಎಸ್. ಶ್ರೀಕಂಠಯ್ಯನವರು ಅಕ್ಷರಾಭ್ಯಾಸವೆಂಬ ವಿಷಯದಲ್ಲಿ ಸದ್ವಿದ್ಯಾಶಾಲೆಯಲ್ಲಿ ಉಪನ್ಯಾಸ ಮಾಡಿದರು. ಇವರು ಬಾಲಕರಿಗೆ ಬೋಧೆಯಾಗುವಂತೆ ಹೊಸದಾಗಿ ಕಂಡುಹಿಡಿದಿರುವ ಅಕ್ಷರಾಭ್ಯಾಸ ಕ್ರಮವು ಎಲ್ಲರಿಗೂ ಆನಂದವನ್ನುಂಟುಮಾಡಿತು. ಮತ್ತು ಇವರು ಪ್ರಸಿದ್ಧ ಪುರುಷರಾದ ರವೀಂದ್ರನಾಥ ಟಾಗೂರ್ ಯವರ ಲೇಖನಗಳನ್ನು ಕನ್ನಡಿಸಿ ತಮ್ಮ ಅಕ್ಷರಾಂಜಲಿ ಎಂಬ ಮಾಸಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದಾರೆ. ಈ ಉಪನ್ಯಾಸ ಕಾಲದಲ್ಲಿ ಮ|| ಎಂ ಶ್ರೀನಿವಾಸರಾಯರು ಅಗ್ರಾಸನವನ್ನು ಅಲಂಕರಿಸಿದ್ದರು. ಮ|| ವೆಂಕಟಸುಬ್ಬಯ್ಯನವರಿಗೆ ಬೇರೆ ತುರ್ತಾದ ಕೆಲಸ ಒದಗಿದ ಕಾರಣ ಅವರು ದಯಮಾಡಿಸಲು ಅವಕಾಶವಾಗಲಿಲ್ಲ. ಮ|| ಶ್ರೀನಿವಾಸರಾಯರು ಆ ಉಪನ್ಯಾಸದ ವಿಷಯದಲ್ಲಿ ತಮ್ಮ ಸದಭಿಪ್ರಾಯವನ್ನು ಅಪ್ಪಣೆ ಕೊಡಿಸಿದ ನಂತರ ಮೀಟಿಂಗು ಮುಗಿಸಲ್ಪಟ್ಟಿತು. ಮುಂದಿನ ಮೀಟಿಂಗು ನಡೆಯುವ ದಿವಸವನ್ನು ಇನ್ನು 15 ದಿವಸದೊಳಗಾಗಿ ನಿರ್ಣಯಿಸಿ, ಆ ಕಾಲದಲ್ಲಿ ಸಭೆಗೆ ಸಂಬಂಧಪಟ್ಟ ನಿಬಂಧನೆಗಳನ್ನು ಒಪ್ಪಿಸುವುದಲ್ಲದೆ ಈ ವರ್ಷದ ಪ್ರೋಗ್ರಾಮನ್ನೂ ಸಹ ಏರ್ಪಾಡು ಮಾಡಲಾಗುತ್ತೆ.

ಎಂ. ಎಚ್. ನರಸಿಂಹಜೋಯಿಸ್, ಸೆಕ್ರಿಟರಿ

ಮೈಸೂರು ಗವರ್ನಮೆಂಟು ಹುಕುಮುಗಳು.

ಮೈಸೂರು ನ್ಯಾಯ ವಿಧಾಯಕ ಸಭೆಯು.

ಮೈಸೂರು ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ 12 ಎ. ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರ ಸರ್ಕಾರದವರು ನ್ಯಾಯವಿಧಾಯಕ ಸಭೆಯಲ್ಲಿ ಬಜೆಟ್ಟನ್ನು ಕುರಿತು ಚರ್ಚಿಸುವ ಬಗ್ಗೆ, ಪ್ರಶ್ನೆಗಳನ್ನು ಕೇಳುವ ಬಗ್ಗೆ 1914 ನೆಯ ಫೆಬ್ರವರಿ 12 ನೆಯ ಮಸೂರಂ ಸರ್ಕಾರೀ ಇಶ್ತಿಹಾರ್ನಾಮೆಯ ಮೇರೆಗೆ ಸಾದರಾದ ನಿಬಂಧನೆಗಳನ್ನು ಇದರಡಿ ಕಂಡಂತೆ ತಿದ್ದುಪಾಟು ಮಾಡಲು ಹುಕುಂ ದಯಪಾಲಿಸಿರುತ್ತಾರೆ:—

1. 14 ನೆಯ ನಿಬಂಧನೆಯ ತರುವಾಯ ಇದರಡಿ ಕಂಡ ನಿಬಂಧನೆಗಳನ್ನು 15 ಮತ್ತು 16 ನೆಯ ನಿಬಂಧನೆಗಳನ್ನಾಗಿ ಸೇರಿಸತಕ್ಕದ್ದು —15. ಪ್ರಶ್ನೆಯನ್ನು ಕೇಳಿದ ಯಾವ ಮೆಂಬರೇ ಆಗಲಿ, ಯಾವ ವಿಷಯಕ್ಕೆ ಸಂಬಂಧಪಟ್ಟ ಸಂಗತಿಯನ್ನು ತಿಳಿದುಕೊಳ್ಳಬೇಕೆಂದು ಮೊದಲನೇ ಸಲ ಪ್ರಶ್ನೆಯನ್ನು ಕೇಳಿದ್ದರೋ ಅದೇ ವಿಷಯಕ್ಕೆ ಸಂಬಂಧಪಟ್ಟ ಸಂಗತಿಯನ್ನು ಇನ್ನೂ ಚೆನ್ನಾಗಿ ವ್ಯಕ್ತಪಡಿಸಿಕೊಳ್ಳುವುದಕ್ಕಾಗಿ ಪುನಃ ಎರಡನೇ ಸಲ ಮತ್ತೊಂದು ಪ್ರಶ್ನೆಯನ್ನು ಕೇಳಬಹುದು. 16. ಮೊದಲನೆಯ ಪ್ರಶ್ನೆಗೆ ಜವಾಬನ್ನು ಹೇಳಿದ ಮೇಲೆ ಎರಡನೇ ಸಲದ ಪ್ರಶ್ನೆ ವಿಷಯವನ್ನು ಪೂರ್ವಭಾವಿಯಾಗಿ ತಿಳಿಸದೆ ಇದ್ದಲ್ಲಿ ಆ ಪ್ರಶ್ನೆಗೆ ಜವಾಬು ಕೊಡಲಾಗುವುದಿಲ್ಲವೆಂದು ತಿರಸ್ಕರಿಸಬಹುದು. ಅಂಥಾ ಸಂದರ್ಭದಲ್ಲಿ, ಆ ಎರಡನೇ ಸಲದ ಪ್ರಶ್ನೆಯನ್ನು ಮುಂದಿನ ಸಾರಿ ಸಭೆಯು ಸೇರಿದಾಗ್ಗೆ ಹೊಸ ಪ್ರಶ್ನೆಯ ರೂಪದಲ್ಲಿ ಕೇಳಬಹುದು.

ರಿಜಿಸ್ಟ್ರೇಷನ್ ಇಲಾಖೆಯು.

ರಿಜಿಸ್ಟ್ರೇಷನ್ ಬಗ್ಗೆ ಹಾಜರ್ಮಾಡಲ್ಪಟ್ಟ ದಸ್ತಾವೇಜುಗಳನ್ನು ಪೋಸ್ಟ್ ಮೂಲಕ ವಾಪಸು ಕಳುಹಿಸುವದಕ್ಕಾಗಿ ಏರ್ಪಟ್ಟ ಇದರಡಿ ಕಂಡ ನಿಯಮಗಳು 1903 ನೇ ಇಸವಿಯ ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನಿನ 69 ನೆಯ ಪ್ರಕರಣಾನುಸಾರ ಸದರಿ ರೆಗ್ಯುಲೇಷನಿನ ಪ್ರಕಾರ ಸಾದರಾಗಿರುವ ನಿಬಂಧನೆಗಳ ಪೈಕಿ 89A ನಿಬಂಧನೆಯಾಗಿ ಸರ್ಕಾರದವರಿಂದ ಮಂಜೂರ್ಮಾಡಲ್ಪಟ್ಟು, ಸಮಸ್ತ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟು ಇರುತ್ತವೆ:—

"89A. ದಸ್ತಾವೇಜನ್ನು ಹಾಜರ್ಮಾಡಿದ ಮನುಷ್ಯನಾಗಲಿ ಅಥವಾ ಆತನ ನಾಮಿನಿಯಾಗಲಿ ಅಪೇಕ್ಷಿಸಿದರೆ ಅವರ ಜವಾಬ್ದಾರಿಯ ಮೇಲೆ ಇದರಡಿ ಕಾಣಿಸಿರುವ ಷರತ್ತುಗಳಿಗೆ ಒಳಪಡಿಸಿದ ದಸ್ತಾವೇಜನ್ನು ಪೋಸ್ಟ್ ಮೂಲಕ ವಾಪಸು ಕಳುಹಿಸಬಹುದು — (1) ದಸ್ತಾವೇಜನ್ನು ಹಾಜರ್ಮಾಡಿದವನಾಗಲಿ ಅಥವಾ ಆತನ ನಾಮಿನಿಯಾಗಲಿ ರಸೀತಿಯ ಪ್ರತಿಯಲ್ಲಿ ನಮೂದಿಸಲ್ಪಟ್ಟ ವಿಳಾಸದಾರನಿಗೆ ದಸ್ತಾವೇಜನ್ನು ವಾಪಸು ಕಳುಹಿಸತಕ್ಕದ್ದೆಂಬದಾಗಿ ಇಂಡಾರ್ಸ್‌ಮೆಂಟ್ ಬರೆದು ಅದಕ್ಕೆ ರುಜು ಮಾಡಬೇಕು. (2) ಪೋಸ್ಟೇಜಿನ ಮುಖೇನಾಗಿಯೂ, ಪೋಸ್ಟಲ್ ರಿಜಿಸ್ಟ್ರೇಷನ್ ಫೀಜಾಗಿಯೂ ಮತ್ತು ವಿಳಾಸದಾರನಿಗೆ ಸದರಿ ದಸ್ತಾವೇಜು ತಲಪಿದ್ದಕ್ಕೆ ರಸೀತಿಯನ್ನು ಪಡೆಯುವ ಫೀಜಾಗಿಯೂ ಮೊದಲನೇ ದಸ್ತಾವೇಜಿನ ಬಗ್ಗೆ ನಾಲ್ಕಾಣೆಯ ಮೊಬಲಗನ್ನು ನಗದಾಗಿ ವಸೂಲ್ಮಾಡಬೇಕಲ್ಲದೆ ಅದೇ ಕಾಲದಲ್ಲಿ ಅದೇ ವಿಳಾಸದಾರನಿಗೆ ವಾಪಸು ಕಳುಹಿಸತಕ್ಕಂಥ ಪ್ರತಿಯೊಂದು ಅಡಿಷನಲ್ ದಸ್ತಾವೇಜಿಗೂ ಒಂದಾಣೆಯಂತೆ ಹೆಚ್ಚು ಮೊಬಲಗನ್ನೂ ವಸೂಲ್ಮಾಡತಕ್ಕದ್ದು. (3) ವಸೂಲ್ಮಾಡಲ್ಪಟ್ಟ ಮೊಬಲಗನ್ನು ಪಕ್ಷಿಗಾರನಿಗೆ ಕೊಡುವ ರಸೀತಿಯಲ್ಲೇ ದಾಖಲ್ಮಾಡತಕ್ಕದ್ದು. (4) ರಿಜಿಸ್ಟ್ರೇಷನ್ ಪೂರೈಸಿದ ಮೇಲೆ, ರಿಜಿಸ್ಟರ್ ಮಾಡುವ ಆಫೀಸರರು ಸದರಿ ದಸ್ತಾವೇಜನ್ನು ಯಾ ದಸ್ತಾವೇಜುಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ ಹಾಕಿ ರಿಜಿಸ್ಟರ್ಡ್ ಸರ್ವಿಸ್ ಪೋಸ್ಟೇಜು ಮೂಲಕ ನಮೂದಿಸಲ್ಪಟ್ಟ ವಿಳಾಸದಾರನಿಗೆ ರವಾನಿಸಬೇಕು ಮತ್ತು ಆ ಸಂಗತಿಯನ್ನು ರಸೀತಿಯ ಪ್ರತಿಯಲ್ಲಿ ನಮೂದು ಮಾಡಬೇಕು. (5) ವಿಳಾಸದಾರನಿಗೆ ದಸ್ತಾವೇಜು ತಲಪಿರುತ್ತೆಂದು ಬಂದಿರತಕ್ಕ ರಸೀತಿಯನ್ನು ರಸೀತಿಯ ಪ್ರತಿಗೆ ಅಂಟಿಸಬೇಕು.

2. ಈ ನಿಬಂಧನೆಗಳು 1916 ನೆಯ ಜನವರಿ ಗುರ್‍ರ್ರ, ಲಾಗಾಯಿತು ಜಾರಿಗೆ ಬರತಕ್ಕದ್ದು.

3. ರಿಜಿಸ್ಟರಾದ ದಸ್ತಾವೇಜನ್ನು ಕಳುಹಿಸುವ ಬಗ್ಗೆ ಪ್ರತ್ಯೇಕ ಫೀಜು ವಸೂಲ್ಮಾಡತಕ್ಕದ್ದಕ್ಕಾಗಿ, ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನಿನ 78 ನೆಯ ಪ್ರಕರಣಾನುಸಾರ ವಿಧಿಸಲ್ಪಟ್ಟಿರುವ ಫೀಜಿನ ಪಟ್ಟಿಯ 16 ನೆಯ ಪ್ರಕರಣದಲ್ಲಿ ಇರುವ ನಿಯಮವನ್ನು ರದ್ದುಪಡಿಸಿರುತ್ತದೆ.

1916 ನೇ ವರುಷದ ಕ್ಯಾಲೆಂಡರುಗಳು.

"ವೃತ್ತಾಂತ ಪತ್ರಿಕೆ"ಯ ಕ್ಯಾಲೆಂಡರಿನಲ್ಲಿ ಈ ಸಲ ಬಹಳ ನೇತ್ರಾನಂದಕರವಾದ ಚಿತ್ರಗಳು ಪ್ರಕಟವಾಗಿವೆ. ನಮ್ಮ ಚಕ್ರವರ್ತಿ ಜಾರ್ಜ್ ಸಾರ್ವಭೌಮರವರು, ಬ್ರಿಟಿಷ್ ಗವರ್ನಮೆಂಟಿನ ಮಂತ್ರಿಶ್ರೇಷ್ಠರಾದ ಮಿ|| ಆಸ್ಕಿತ್ ರವರು, ಯುದ್ಧದ ಸೆಕ್ರೆಟರಿಯವರಾದ ಲಾರ್ಡ್ ಕಿಚ್ನರವರು, ಖಜಾನಾ ಛಕ್ಷಿಯವರಾಗಿದ್ದು ಯುದ್ಧಾರಂಭವಾದ ಮೇಲೆ ಯುದ್ಧಸಾಮಗ್ರಿಗಳನ್ನು ತಯಾರಿಸಿ ಒದಗಿಸುವ ಬಾಬಿನ ಸೆಕ್ರಿಟರಿಯಾಗಿರುವ ಮಿ|| ಲ್ಲಾಯಿಡ್ ಜಾರ್ಜ್ ರವರು, ಬೆಲ್ಜಿಯಂ ಮತ್ತು ಬ್ರಿಟಿಷ್ ಪ್ರಜೆಗಳಿಗೆ ಆಶ್ರಯ ಕೊಟ್ಟಳೆಂಬ ಅಪರಾಧವನ್ನು ಹೊರಿಸಿ ಜರ್ಮನಿಯವರು ಗುಂಡಿನಿಂದ ಹೊಡೆದು ಕೊಲ್ಲಿಸಿದ ಮಿಸ್ ಎಡಿತ್ ಕವೆಲ್ ಎಂಬ ಇಂಗ್ಲಿಷ್ ನರ್ಸ್ ಎಂಬ ಸೇವಾ ಸ್ತ್ರೀ, ಈ ಐವರ ಚಿತ್ರಗಳೂ ಸರ್ಕಾರೀ ರಜಾ ದಿನಗಳೂ ಹಿಂದು ಮಹಮದಿಯ ಕ್ರೈಸ್ತ ಸಂಗಡಗಳ ಹಬ್ಬ ಮೊದಲಾದ ವಿಶೇಷ ದಿನಗಳೂ ಪ್ರಕಟವಾಗಿರುತ್ತವೆ. ಹೊಸದಾಗಿ ಚಂದಾದಾರರಾಗತಕ್ಕವರಿಗೆಲ್ಲಾ ಇಂಥಾ ನಮ್ಮ ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುವೆವು. ಇತರರಿಗೆ ಕ್ರಯ 6 ಪೈ.

ಮೈಸೂರು ಸ್ಪಿರಿಟ್ ಪ್ರೆಸ್ ಕ್ಯಾಲೆಂಡರು ಗವರ್ನಮೆಂಟ್ ಪ್ರೆಸ್ಸಿನಲ್ಲಿ ತಯಾರಿಸಲ್ಪಡುವ ನಮೂನೆಯಾಗಿ ಬಹು ಚೆನ್ನಾಗಿರುವುದು. ಇದರಲ್ಲಿ ನಮ್ಮ ಮಹಾರಾಜರವರ, ಯುವರಾಜರವರ ಮತ್ತು ದಿವಾನರವರ ಚಿತ್ರಗಳು ಮುದ್ದಾಗಿ ಮುದ್ರಿಸಲ್ಪಟ್ಟಿವೆ. ಕ್ಯಾಲೆಂಡರೂ, ರಜಾ ದಿನಗಳೂ, ಹಬ್ಬ ಮುಂತಾದ ದಿನಗಳೂ ತಿಳಿಯಲನುಕೂಲವಾಗಿದೆ. ಎರಡು ತರದ ಶಾಯಿನಲ್ಲಿ ಈ ಕ್ಯಾಲೆಂಡರನ್ನು ಅಚ್ಚು ಹಾಕಿ ಬಹು ರಮಣೀಯವಾಗಿ ಮಾಡಿದ್ದಾರೆ. ಇದನ್ನು ನೋಡುವುದರಿಂದ ಆ ಪ್ರೆಸ್ಸಿನಲ್ಲಿ ತುಂಬಾ ಶ್ಲಾಘ್ಯವಾದ ಮುದ್ರಣ ಕೆಲಸ ಜರುಗುವುದು ವೇದ್ಯವಾಗುತ್ತದೆ.

ಮೈಸೂರು ಸುಗಂಧಕಾರಿಗಳಾದ ಮ|| ಟಿ. ಎಲ್. ಉಪಾಧ್ಯಾಯರವರು ನಮಗೆ ತಮ್ಮ ವ್ಯಾಪಾರ ವಿಷಯವನ್ನು ಕಾಣಿಸಿರುವ ಸುಗಂಧದ್ರವ್ಯಗಳ ವಿವರಣೆಯುಳ್ಳ ಕ್ಯಾಲೆಂಡರನ್ನು ಕಳುಹಿಸಿದಾರೆ. ಇದು ಬಹಳ ಮುದ್ದಾಗಿ ಅಚ್ಚು ಮಾಡಲ್ಪಟ್ಟಿದೆ.

ಮೈಸೂರು ಆಸ್ಥಾನ ಜ್ಯೋತಿಷ ವಿದ್ವಾಂಸರಾದ ವೇ. ಸುಬ್ರಹ್ಮಣ್ಯ ಶಾಸ್ತ್ರಿ ದಾನಂದ ಸಿದ್ಧಾಂತಿಗಳು ಹಿಂದಿನ ಸಂಪ್ರದಾಯ ಶಾಸ್ತ್ರಾನುಸಾರವಾದ ನಕ್ಷತ್ರದ ಪಂಚಾಂಗವನ್ನು ರಚಿಸಿ ಪರಿಶೋಧನೆಮಾಡಿ ದೊಡ್ಡ ಅಕ್ಷರದಲ್ಲಿ ಬಹಳ ಅಂದವಾಗಿ ಮುದ್ರಿಸಿರುತ್ತಾರೆ.

ಬೆಂಗಳೂರು ಸಿಟಿ ಚಿಕ್ಕಪೇಟೆ ಭಾರೀ ವರ್ತಕರು ತಮ್ಮ ಓರಿಯಂಟಲ್ ವೇರ್ ಹೌಸ್ ಎಂಬ ವ್ಯಾಪಾರದ ಕ್ಯಾಲೆಂಡರನ್ನು ನೇತ್ರಾನಂದಕರವಾಗಿ ರಚಿಸಿದಾರೆ. ಮ. ಸಿ. ವೆಂಕಟಾಚಾರ್ಯರು ಪ್ರೊಪ್ರೈಟರು, ಮ. ವಿ. ಜಿ. ವಾದಿಕೆಯವರು ಮ್ಯಾನೇಜರು. ಈ ಷಾಪಿನಲ್ಲಿ ಪ್ರಜೆಗಳಿಗೆ ಬೇಕಾಗುವ ನಾನಾ ಬಗೆಯ ಉಡುಪುಗಳೇ ಮೊದಲಾದುವು ವಿಕ್ರಯಿಸಲ್ಪಡುತ್ತಾ ಹೆಸರುವಾಸಿಯನ್ನು ಪಡೆದಿವೆ.

ಮ. ಬಿ. ಕೆ. ಗರುಡಾಚಾರ್ಯರು ಪ್ರೊಪ್ರೈಟರಾಗಿರುವ ಬೆಂಗಳೂರು ಸಿಟಿ ಚಿಕ್ಕಪೇಟೆ ಸಿಟಿ ಮಾರ್ಟ್ ಎಂಬ ಷಾಪಿನ ಮುದ್ದಾದ ಕ್ಯಾಲೆಂಡರು ನಮಗೆ ತಲಪಿದೆ. ಇವರಲ್ಲಿ ಹಿಂದುಸ್ಥಾನದ ಮತ್ತೂ ಅನ್ಯದೇಶಗಳ ಬಗೆ ಬಗೆಯ ಉಡುಪಿನ ಮತ್ತೂ ಇತರ ಪದಾರ್ಥಗಳು ವಿಕ್ರಯವಾಗುವವು.

ಬೆಂಗಳೂರು ದಂಡಿನಲ್ಲಿ ಹೊಸ ಮಾರ್ಕೆಟ್ಟಿನ ಬಳಿ ಇರುವ ಮ. ವಿ. ಅಪ್ಪಾವು ಚೆಟ್ಟಿಯವರು ತಮ್ಮ ಷಾಪಿನ ಕ್ಯಾಲೆಂಡರನ್ನು ಸೊಗಸಾಗಿ ಮುದ್ರಿಸಿ ಕಳುಹಿಸಿರುತ್ತಾರೆ. ಇವರಲ್ಲಿ ಬರೆಯುವ ಸಾಧನಗಳು, ಪುಸ್ತಕಗಳು ಮೊದಲಾದವು ಅಪಾರವಾಗಿ ದೊರಕುವವು. ಇವರು ರಾಬರ್ಟ್‌ಸನ್ ಪೇಟೆಯಲ್ಲೂ ಒಂದು ಷಾಪನ್ನು ಇಟ್ಟಿದಾರೆ.

ಚಿಕ್ಕಮಗಳೂರು ಶ್ರೀ ಲಕ್ಷ್ಮೀನರಸಿಂಹಭವನಂ ಪ್ರೊಪ್ರೈಟರು ಮ|| ಬಿ. ಎಚ್. ಹನುಮಂತಪ್ಪನವರು ತಮ್ಮ ವ್ಯಾಪಾರ ಪದಾರ್ಥಗಳ ವಿವರಣೆಯುಳ್ಳ ಕ್ಯಾಲೆಂಡರನ್ನು ರಚಿಸಿ, ತಮ್ಮಲ್ಲಿ ವ್ಯಾಪಾರಮಾಡತಕ್ಕವರಿಗೆ ಬಿಟ್ಟಿಯಾಗಿಯೂ, ಇತರರಿಗೆ 2 ಆಣೆ ಕ್ರಯಕ್ಕೂ ಕೊಡುತ್ತಾರೆ. ಇದು ತೆಲಗು ಮತ್ತು ಇಂಗ್ಲಿಷಿನಲ್ಲಿ ಚೆನ್ನಾಗಿ ಮುದ್ರಿತವಾಗಿದೆ.

ತೀರ್ಥಹಳ್ಳಿ ವ್ಯಾಪಾರ ಕಂಪನಿಯಲ್ಲಿ ದೇಶೀಯ ಮತ್ತೂ ಅನ್ಯದೇಶೀಯ ಒಳ್ಳೊಳ್ಳೇ ಔಷಧಗಳನ್ನೂ, ಸ್ಟೇಷನರಿ ಪದಾರ್ಥಗಳನ್ನೂ ವಿಕ್ರಯಿಸುತ್ತಿರುವುದು ಅವರು ಪ್ರಕಟಿಸಿರುವ ಅಂದವಾದ ಕ್ಯಾಲೆಂಡರಿನಲ್ಲಿ ವಿವರಿಸಲ್ಪಟ್ಟಿದೆ.

ಸ್ಕಾಟ್ಲೆಂಡಿನ ಸ್ಟಾಂಡರ್ಡ್ ಲೈಫ್ ಅಷೂರೆನ್ಸ್ ಕಂಪನಿಯ ದೊಡ್ಡ ಕ್ಯಾಲೆಂಡರು ನೇತ್ರಾನಂದಕರವಾಗಿ ಅಚ್ಚು ಮಾಡಲ್ಪಟ್ಟಿದೆ. ಈ ಕಂಪನಿಯಲ್ಲಿ 1,37,30,000 ಪೌಂಡು ಫಂಡಿದೆ. ಪ್ರಪಂಚದ ಎಲ್ಲಾ ದೊಡ್ಡ ಪಟ್ಟಣಗಳಲ್ಲೂ ಇದರ ಶಾಖೆಗಳಿರುವವು. ಕಳೆದ 1825 ನೇ ಇಸವಿಯಲ್ಲಿ ಈ ಕಂಪನಿ ಪ್ರಾರಂಭವಾಗಿ ಅನೇಕ ಸಾವಿರ ಪ್ರಜೆಗಳು ಈ ಕಂಪನಿಯಲ್ಲಿ ಜೀವವಿಮೆ ಮಾಡಿರುತ್ತಾರೆ. ಇದರ ಕಾರ್ಯಗಳು ಇದುವರೆಗೆ ಸುರಕ್ಷಿತವಾಗಿ ನಡೆದು ಬಂದಿರುವವು.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಕಡೂರು ಡಿಸ್ಟ್ರಿಕ್ಟ್ ರೋಡುಗಳ ಸ್ಥಿತಿ

ಅಯ್ಯಾ,—ಇದೇ ಮಾಹೆ 6 ತಾ. ಬೆಂಗಳೂರು "ಡೆಯಿಲಿ ಪೋಸ್ಟ್" ಎಂಬ ಪತ್ರಿಕೆಯಲ್ಲಿ ತರೀಕೆರೆ ಮತ್ತು ಶೃಂಗೇರಿ ಕೊಪ್ಪದ ಸರ್ಕಲ್ ರೋಡುಗಳು ಕೆಟ್ಟುಹೋಗಿವೆ ಎಂದು ತರೀಕೆರೆ ಬಾತ್ಮಿಯಲ್ಲಿ ಪ್ರಕಟವಾಗಿದೆ. ನಾನು ಇದನ್ನು ನೋಡಿ ತುಂಬಾ ವಿಷಾದಪಡುತ್ತೇನೆ. ತರೀಕೆರೆ ಸರ್ಕಲ್ ಮಾತ್ರ ಸಾಧಾರಣವಾಗಿ ಕೆಟ್ಟುಹೋಗಿರುವುದು ನಿಜ. ಆದರೆ ಶೃಂಗೇರಿ ಮತ್ತು ಕೊಪ್ಪ ಸರ್ಕಲ್ ರೋಡುಗಳು ಕೆಟ್ಟುಹೋಗಿವೆ ಎಂದು ಹೇಳುವುದು ನಿಜವಲ್ಲ. ತರೀಕೆರೆ ಸರ್ಕಲ್‌ಗೋಸ್ಕರ ಬೇಕಾದ ಮೆಟ್ಲು ಗ್ರಾವಲ್‌ಗಳನ್ನು ಜಮಾಯಿಸಿದಾರೆ. ಶೀಘ್ರದಲ್ಲಿಯೇ ಅದು ರಿಪೇರಿ ಆಗಬಹುದೆಂದು ನಂಬುತ್ತೇನೆ. ನಾನು ಕಡೂರು ಡಿಸ್ಟ್ರಿಕ್ಟಿನಲ್ಲಿರತಕ್ಕ ಎಲ್ಲಾ ರೋಡುಗಳಲ್ಲಿಯೂ ಕಳೆದ ವರ್ಷ ಅಂತ್ಯದಲ್ಲಿಯೂ ಮಧ್ಯದಲ್ಲಿಯೂ ಪ್ರಯಾಣ ಮಾಡಿದೇನೆ. ಈ ರಸ್ತೆಗಳು ಬಹಳ ಉತ್ತಮವಾದ ಸ್ಥಿತಿಯಲ್ಲಿವೆ. ಇದಕ್ಕೆ ಕಾರಣವೇನೆಂದರೆ ಹಾಲಿ ಇರತಕ್ಕ ಎಗ್ಜಿಕ್ಯುಟಿವ್ ಇಂಜಿನಿಯರವರು ಬಹು ಮುತುವರ್ಜಿ ವಹಿಸಿ ಸಕೀರ್ಟು ಮಾಡಿ ಇನ್‌ಸ್ಪೆಕ್ಷನ್ ಮಾಡಿದ್ದರ ಪ್ರತಿಫಲವೆಂದು ಇದರಿಂದ ತೋರುತ್ತದೆ. ಮೊದಲಿನ ಸ್ಥಿತಿಗೂ ಈಗಿನ ಸ್ಥಿತಿಗೂ ಉತ್ತಮವಾಗಿವೆ ಎಂದು ಈ ಡಿಸ್ಟ್ರಿಕ್ಟಿನಲ್ಲಿರತಕ್ಕ ಎಲ್ಲಾ ಯೂರೋಪಿಯನ್ ಮತ್ತು ಸ್ವದೇಶೀ ಪ್ಲಾಂಟರುಗಳೂ ಹೇಳುತ್ತಾರೆ. ಸ್ವಲ್ಪ ಹೆಚ್ಚು ಕಡಮೆ ಎಲ್ಲಾ ಪ್ಲಾಂಟರುಗಳೂ ಮೋಟಾರ್ ಕಾರುಗಳನ್ನು ಇಟ್ಟುಕೊಂಡು ಪ್ರಯಾಣ ಮಾಡುತ್ತಾ ಇದಾರೆ.

ಪ್ರತ್ಯಕ್ಷದರ್ಶಿ.

ಒಬ್ಬ ಡೆಪ್ಟಿ ಕಮಿಷನರ ಕಾರ್ಯ.

ಅಯ್ಯಾ,—ಮೈಸೂರು ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಸಾಹೇಬರವರು ಹುಜೂರು ಆಫೀಸಿನೊಂದಿಗೆ ಚಾಮರಾಜನಗರದ ತಾಲ್ಲೂಕ್ ಪ್ರಾಂತ್ಯಕ್ಕೆ ದಯಮಾಡಿ ಕಳೆದ ಡಿಸೆಂಬರ್ ತಿಂಗಳಲ್ಲಿ ಜಮಾಬಂದಿ ಮಾಡುವಾಗ್ಗೆ ಪ್ರತಿ ಒಂದು ದೊಡ್ಡ ಸಣ್ಣ ಗ್ರಾಮಗಳನ್ನೂ ಸಂಧಿಸಿ ಪ್ರಜೆಗಳ ಅಹವಾಲನ್ನು ಅಂಗೀಕರಿಸಿ ಅವರವರ ಕಷ್ಟ ನಷ್ಟಗಳನ್ನು ಪರಿಹಾರಮಾಡುತ್ತಾ, ತಾ. 28 ರಲ್ಲು ಹರದನಹಳ್ಳಿ ಹೋಬಳಿ ವೀರಭದ್ರಸ್ವಾಮಿ ಬಳಿ ಮೊಕ್ಕಾಂ ಮಾಡಿ ತಾ. 30 ರಲ್ಲು ಚಾಮರಾಜನಗರದ ತಾಲ್ಲೂಕ್ ಆಫೀಸರವರ ಸಮೇತ ಕೋಡಿಉಗನೆ ಗ್ರಾಮಕ್ಕೆ ಸವಾರಿ ಚಿತ್ತೈಸಿದರು. ಗ್ರಾಮದ ನಿವಾಸಿಗಳು ಪಟೇಲರು ಸಮೇತ ಪಂಚಮರೇ ಆದರೂ ಏನೂ ಭೇದವೆಣಿಸದೆ ಇದರ ಪೂರ್ವಕವಾಗಿ ಎಲ್ಲರ ಕಷ್ಟ ಸುಖಗಳನ್ನೂ ವಿಚಾರಿಸಿದರು. ಇಲ್ಲಿನ ಬಾಲಕರಿಗೆ ವಿದ್ಯಾಭ್ಯಾಸದ ಇಚ್ಛೆಯವರು ಕರುಣವಿಟ್ಟು ಒಂದು ಸ್ಕೂಲನ್ನು ಏರ್ಪಡಿಸುವಮೂಡಿ 4 ವರ್ಷಗಳಮೇಲಾಯ್ತು. ಡೆಪ್ಟಿ ಕಮಿಷನರರು ಸ್ಕೂಲಿನ ಹತ್ತಿರ ಬಂದು ವಿದ್ಯಾರ್ಥಿಗಳನ್ನು ಬಹು ಸಂತೋಷದಿಂದ ಸಂಗೀತ, ಡ್ರಿಲ್, ಬರವಣಿಗೆ, ಗಣಿತ, ಇವುಗಳಲ್ಲಿ ಪರೀಕ್ಷೆ ಮಾಡಿ ಸಂತೋಷಗೊಂಡು ತಮ್ಮ ಅವಧಿಯಲ್ಲಿ ಪಂಚಮರ ಪೈಕಿ ಇಷ್ಟು ಮಟ್ಟಿಗೆ ಉತ್ತಮ ಸ್ಥಿತಿಗೆ ಬಂದಿರುವ ಸ್ಕೂಲನ್ನು ನೋಡಲಿಲ್ಲವೆಂದು ಸ್ತುತಿಸಿ ಬರೆದರು. ಅನಂತರ ಮಕ್ಕಳು ಮಾಡಿರುವ ಚಿಕ್ಕ ಕೈ ತೋಟವನ್ನು ಪರಾಂಬರಿಸಿ ಸಂತೋಷಚಿತ್ತರಾಗಿ ಇನ್ನೂ ಈ ತೋಟದ ಕೆಲಸವನ್ನು ಅಭಿವೃದ್ಧಿಪಡಿಸಬೇಕೆಂದು ಅಪ್ಪಣೆಕೊಟ್ಟು, ಉಪಾಧ್ಯಾಯರಿಗೂ ಹುಡುಗರಿಗೂ ಪ್ರೋತ್ಸಾಹ ಉಂಟಾಗುವಂತೆ ಬೇಕಾದಷ್ಟು ಬಹುಮಾನವನ್ನೂ, ಸಿಹಿಯ ತಿನಿಸುಗಳನ್ನೂ ಕೊಡಿಸುವುದಾಗಿ ವಾಗ್ದಾನ ದಯಪಾಲಿಸಿದರು. ಉತ್ತಮರ ಗಣನೆಗೆ ಮರೆಯಾಗಿದ್ದ ಈ ಪ್ರಜೆಗಳಾದ ನಮ್ಮುಗಳ ಮೇಲೆ ಮಹಾಧಣಿಗಳು ಕೃಪೆಯಿಟ್ಟು ನಮ್ಮ ಕಷ್ಟವನ್ನಲ್ಲದೆ ನಮ್ಮ ಮಕ್ಕಳ ಮೇಲೆಯೂ ಕರುಣವಿಟ್ಟು ಭಿನ್ನ ಭೇದವಿಲ್ಲದೆ ನಮ್ಮ ಮಕ್ಕಳನ್ನು ಪರೀಕ್ಷಿಸಿ ಸಂತೋಷಪಟ್ಟು ಹೋದದ್ದು ನಮ್ಮ ಭಾಗ್ಯವೇ ಸರಿ.

ಗ್ರಾಮಸ್ಥ.

ಅಮಲ್ದಾರರುಗಳ ವಿಚಾರ.

ಅಯ್ಯಾ,—ಕಳೆದ ಡಿಸೆಂಬರು 16 ನೇ ತಾ. ತಮ್ಮ ಪತ್ರಿಕೆಯಲ್ಲಿ ಅಮಲ್ದಾರ್ರುಗಳ ವಿಚಾರವಾಗಿ ತಮ್ಮ ಕಿವಿಗೆ ಬಿದ್ದ ಕೆಲವು ಅಂಶಗಳನ್ನು ಬರೆಯೋಣವಾಗಿತ್ತಷ್ಟೆ. ಅದರ ಮೇಲೆ "ಹಿತೈಷಿ" ಎಂಬ ಒಬ್ಬರು ತಮ್ಮ ಅದೇ ಮಾಹೆ ತಾ. 23 ನೇ ಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯವು ಅನುಮಾನಕ್ಕೆ ಕಾರಣವೆಂದು ವಗೈರೆ ನಮೂದಿಸಿ ಅದರ ಪರಿಹಾರಾರ್ಥವಾಗಿ ಎಫಿಷೆನ್ಸಿ ಆಡಿಟ್ ಇಲಾಖೆಗೆ ಸೇರಿದ ಹಾಗೆ ಮತ್ತೊಂದು ಸಣ್ಣ ಇಲಾಖೆಯನ್ನು ಏರ್ಪಡಿಸಿ ಅದರ ಮೂಲಕ ಅಂತರಂಗ ವಿಚಾರಣೆ ಕ್ರಮ ನಡೆಸುವದು ಉತ್ತಮವೆಂದು ಅಭಿಪ್ರಾಯಪಟ್ಟು ಬರೆದಿರುವುದರ ಮೇಲೆ ತಮ್ಮ ಪತ್ರಿಕೆಯ ಚಂದಾದಾರರೊಬ್ಬರು ಅದೇ ಬರು 30 ನೇ ತಾ. ಪತ್ರಿಕೆಯಲ್ಲಿ ಅಮಲ್ದಾರ್ರುಗಳು ದುಷ್ಕಾರ್ಯಕ್ಕೆ ಆಸ್ಪದ ಕೊಡುತ್ತಾರೆಯೋ ಎಂಬ ವಿಷಯದಲ್ಲಿ ಅವರ ಅನುಭವಕ್ಕೆ ಬಂದ ಕೆಲವು ವಿಷಯಗಳನ್ನು ಬರೆದಿರುವದು ನೋಡಿದರೆ ಅನುಮಾನ ಬರುವದಕ್ಕೆ ಆಸ್ಪದ ತೋರುವದಿಲ್ಲ. ಇಂಥಾದ್ದರ ಮೇಲೆ ಈ ವಿಚಾರಗಳು ಯಥಾರ್ಥವಾಗಿದ್ದಲ್ಲಿ ನಮ್ಮ ಸರ್ಕಾರದವರು ತಾಮಸ ಮಾಡದೆ ತಕ್ಕ ಪರಿಹಾರವನ್ನು ಕಲ್ಪಿಸುವದು ಅವಶ್ಯಕವೆಂತ ತೋರುತ್ತವೆ ಎಂದು ತಾವು ಅಭಿಪ್ರಾಯಪಡೋಣವಾಗಿದೆ. ಇದರಿಂದ ತಮ್ಮ ಮನಸ್ಸಿನಲ್ಲಿ ಇನ್ನೂ ಸಂದೇಹ ಇರುವಂತೆಯೇ ತೋರುತ್ತದೆ. ಆದ್ದರಿಂದ ಆ ಸಂಶಯ ನಿವೃತ್ತಿಗೋಸ್ಕರ ನಾನು ಶ್ರೀಮಾನ್ ದಿವಾನ್ ಸಾಹೇಬ್ ಬಹದ್ದೂರವರ ಸನ್ನಿಧಾನಕ್ಕೆ ಬರೆದುಕೊಂಡಿರುವ ನನ್ನ ಅಹವಾಲ್ ಅರ್ಜಿಯ ಕಾಪಿಯನ್ನು ಇದಕ್ಕೆ ಲಗತ್ತು ಪಡಿಸಿದೇನೆ. ತಾವು ಪರಾಂಬರಿಸಿ ನಮ್ಮ ದಯಾಳುಗಳಾದ ಗವರ್ನಮೆಂಟಿನವರು ಪ್ರಜೆಗಳ ಪಾಲನಾರ್ಥವಾಗಿ ಕೊಟ್ಟಿರುವ ಅಧಿಕಾರವನ್ನು ಯಾವ ರೀತಿ ಚಲಾಯಿಸುತ್ತಿದಾರೆಂಬುವದನ್ನು ವ್ಯಕ್ತಪಡಿಸುತ್ತೆ. ಈ ನನ್ನ ಅರ್ಜಿಯಂತೆ ಅಂತರಂಗ ವಿಚಾರ ನಡೆದು ಮಹಬೂಬ್ ದಿವಾನ್ ಸಾಹೇಬರವರಲ್ಲಿಗೆ ಸಮನೊಳಿಗಳು ರವಾನೆ ಆಗಿರುವಂತೆಯೂ, ಕೃತ್ಯ ನಡಿಸಿದವರು ಅದನ್ನು ನಡಿಸಿದರೆಂಬುವ ಭಾಗ ಸಂರಯಾಸ್ಪದವೆಂತ ಬರೆದಿರುವಂತೆಯೂ, ಇದರ ಮೇಲೆ ಅರ್ಜಿ ಕೊಟ್ಟವರಿಗೇನೇ ಕಾಲಾನುಕಾಲದಲ್ಲಿ ಅನಾನುಕೂಲ ಸಂಭವಿಸಬಹುದೆಂದು ವಗೈರೆ ನಾನಾ ವಿಧವಾಗಿ ಜನಗಳು ಆಡಿಕೊಳ್ಳುತ್ತಿದಾರೆ. ಈ ವದಂತಿಯು ಎಷ್ಟರ ಮಟ್ಟಿಗೆ ನಿಜವೋ ನಾನು ಅರಿಯೆ. ನ್ಯಾಯಶಃ ಅಧಿಕಾರಿಗಳು ಮತ್ತೊಬ್ಬ ಅಧಿಕಾರಿಗಳ ಮೇಲೆ ಬಂದ ಫಿರ್ಯಾದುಗಳನ್ನು ನಿಷ್ಪಕ್ಷಪಾತವಾಗಿ ನಡಿಸಿದಾಗ್ಯೂ, ನ್ಯಾಯಾನ್ಯಾಯವನ್ನು ವಿಚಾರಿಸಿ ಕಾಪಾಡತಕ್ಕದ್ದು ಮುಖ್ಯ ಕರ್ತವ್ಯವಾಗಿದೆ. ಹಾಗಿಲ್ಲದೆ ತಾಯಿಯೇ ಮಕ್ಕಳಿಗೆ ವಿಷ ಕೊಡಬೇಕೆಂದರೆ ಅದು ದೊಡ್ಡದಲ್ಲ. ಇಷ್ಟಕ್ಕೂ ಈ ನನ್ನ ಅರ್ಜಿ ಮೇಲೆ ನಡೆದ ವಿಚಾರಣೆಗಳು ಅನುಮಾನ ತೋರಿ ಬಂದರೆ ನಮ್ಮ ದಯಾಳುಗಳಾದ ದಿವಾನ್ ಸಾಹೇಬರವರು ಈಗ ಇಟ್ಟುಕೊಂಡಿರುವ ಪದ್ಧತಿಯಂತೆ ಈ ಪ್ರಾಂತ್ಯಕ್ಕೂ ಕೃಪೆಯಿಟ್ಟು ದಯಮಾಡಿಸಿ ಅಂತರಂಗ ವಿಚಾರ ಮಾಡಿ ನನ್ನ ಅರ್ಜಿಯು ಸುಳ್ಳಾಗಿದ್ದ ಪಕ್ಷಕ್ಕೆ ನನಗೆ ಶಿಕ್ಷೆ ಮಾಡುವವರ ಮೂಲಕವಾಗಲಿ, ನಿಜವಾಗಿದ್ದ ಪಕ್ಷಕ್ಕೆ ತಪ್ಪು ಮಾಡಿದವರಿಗೆ ತಕ್ಕ ಶಿಕ್ಷೆಯಾಗಲಿ ಮಾಡಬೇಕೆನ್ನುವದೇ ನನ್ನ ಮುಖ್ಯ ಪ್ರಾರ್ಥನೆಯಾಗಿರುತ್ತೆ. ಇದಕ್ಕನುಸಾರವಾಗಿ ಸ್ಥಳಾಧಿಕಾರಿಗಳು ಅನ್ಯಾಯಕ್ಕೆ ಒಳಪಟ್ಟರೆಂಬ ಅಂಶ ಒಬ್ಬಾನೊಬ್ಬ ಶೀಘ್ರಾಲಿಪಿ ಹೊರಪಡಿಸಿದರೆಂದು ಆಕ್ಷೇಪದಿಂದ ಮೇಲಿನವರ ಅಪ್ಪಣೆಯಿಲ್ಲದೆ ಅವನನ್ನು ಸಸ್ಪೆಂಡು ಮಾಡಿದ್ದರೆಯೂ, ಅದರ ಮೇಲೆ ಆ ಬಗ್ಗೆ ಸದರಿ ಶೀಘ್ರಾಲಿಪಿ ಕೊಟ್ಟಿರುವ ಉದಾಹರಣೆಯನ್ನು ಗವರ್ನಮೆಂಟಿನವರು ತರಿಸಿ ಪರಾಂಬರಿಸೋಣವಾದರೆ ಎಲ್ಲವೂ ವ್ಯಕ್ತಪಡುತ್ತೆಂದೂ ತಿಳಿಯಬರುತ್ತೆ. ಈ ಭಾಗದಲ್ಲಿ ವಿಶೇಷವಾಗಿ ನಾನು ವಿಜ್ಞಾಪನೆ ಮಾಡಿಕೊಳ್ಳಲಾಸೆ. ನಿಷ್ಪಕ್ಷಪಾತವಾದ ಸ್ಥಳ ವಿಚಾರಣೆ ಕ್ರಮ ಕ್ರಮವಾಗಿ ನಡೆಯಬೇಕಾದದ್ದು ಅತ್ಯವಶ್ಯಕ. ಈಗಿನ ಕಾರ್ಬಾರು ಸ್ಥಿತಿಯಲ್ಲಿ ಕೋರ್ಟು ಪಕ್ಷಪಾತವಿಲ್ಲದೆ ದೊಡ್ಡವರಾಗಲಿ ಚಿಕ್ಕವರಾಗಲಿ ತಪ್ಪು ಮಾಡಿದರೆ ತಕ್ಕ ಶಿಕ್ಷೆಯೇ ಆಗುತ್ತೆಂಬ ಜಗದ್ವಿದಿತವಾಗಿರುತ್ತೆ. ತಾವು ಇವೆಲ್ಲಾ ಪರಾಂಬರಿಸಿ ದಯಾಳುಗಳಾದ ನಮ್ಮ ದಿವಾನ್ ಸಾಹೇಬ್ ಬಹದ್ದೂರ್ರವರ ನೋಟೀಸಿಗೆ ತಂದು ನನ್ನನ್ನು ಕಾಪಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಅನಾಥನಾದ ಒಬ್ಬಾನೊಬ್ಬ ವಿಕಂಟು.

[ಈತ ದಿವಾನರವರಿಗೆ ಕಳುಹಿಸಿದೇನೆಂದು ಮೇಲೆ ಹೇಳಿರುವ ಅರ್ಜಿ ನಕಲು ನಮಗೆ ತಲಪಿದೆ. ಸದ್ಯದಲ್ಲಿ ಅದನ್ನು ಪ್ರಕಟ ಮಾಡದೆ, ತೀರ್ಮಾನವನ್ನು ಎದುರು ನೋಡುವೆವು —ಎಡಿ.]

ಅಯ್ಯಾ,—ಹೊಸಕೋಟೆ ಅಮಲ್ದಾರ್ ಮ|| ಎಂ. ಎಚ್. ಶ್ರೀನಿವಾಸಯ್ಯಂಗಾರ್ರಿಗೆ ರಾಜಯುದ್ಧ ಎದ್ದು ಬಹಳ ದುರ್ಬಲವಾದ ಸ್ಥಿತಿಯಲ್ಲಿದ್ದರು. ದೇವರ ದಯದಿಂದ ಈಗ ಅವರು ಗುಣವಾಗಿ ಆರೋಗ್ಯವಾಗಿದಾರೆಂದು ಕೇಳಿ ಎಲ್ಲರೂ ಸಂತೋಷಪಡುತ್ತೇವೆ. ಅವರು ಈಗ ವಿಶ್ರಾಂತಿಗಾಗಿ ಮದ್ರಾಸ್ ಕಡೆ ಹೋಗಿದ್ದಾರೆಂದು ಕೇಳುತ್ತೇವೆ. ಫೆಬ್ರವರಿ ತಿಂಗಳ ವರೆವಿಗೂ ಅವರಿಗೆ ರಜಾ ಇದೆಯಂತೆ. ಅವರು ಈ ಊರಿನಲ್ಲಿ ಬಹಳ ಉತ್ತಮ ಕೆಲಸ ಮಾಡಿ ರೈತ ಜನಗಳಲ್ಲಿಯೂ, ಪಟೇಲ್ ಶ್ಯಾನುಭೋಗರಲ್ಲಿಯೂ, ಸರ್ಕಾರಿ ಉದ್ಯೋಗಸ್ಥರಲ್ಲಿಯೂ ಪ್ರೀತಿ ಸಂಪಾದಿಸಿ ಎಲ್ಲರಲ್ಲಿ ಬಳಕೆಯಾಗಿಯೂ, ಸ್ನೇಹಪರರಾಗಿಯೂ ಇದ್ದರು. ಅವರು ಈ ತಾಲ್ಲೂಕಿನಲ್ಲಿ ಮಾಡಿದ ಗ್ರಾಮಾಭಿವೃದ್ಧಿ ಕೆಲಸ ವಿಷಯದಲ್ಲಿ ಸರ್ಕಾರದವರಿಂದ ಒಳ್ಳೇ ಹೆಸರನ್ನು ಪಡೆದರು. ಇಂಥಾ ಮಹನೀಯರಿಗೆ ಕಾಯಿಲೆ ಸಂಭವಿಸಿ, ಈ ಸ್ಥಳವನ್ನು ಬಿಟ್ಟು ಹೋದದ್ದಕ್ಕಾಗಿ ಈ ತಾಲ್ಲೂಕಿನ ಪ್ರಜೆಗಳೆಲ್ಲಾ ವ್ಯಸನಪಡುತ್ತಾರೆ. ಪ್ರತಿ ಒಬ್ಬರೂ ಅವರ ಆಗಮನ ಬರೋಣವನ್ನು ಎದುರು ನೋಡುವರು. ಇದೇ ಪತ್ರಿಕೆಯಲ್ಲಿ 16-30 ನೇ ಡಿಸೆಂಬರ್ ಪತ್ರಿಕೆಗಳಲ್ಲಿ ಅಮಲ್ದಾರ್ರ ವಿಷಯ ಬರೆದಿತ್ತು. ಅದು ಎಲ್ಲಾ ನಿಜವೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಎಲ್ಲಾ ಅಮಲ್ದಾರ್ರುಗಳನ್ನೂ ಸೇರಿಸುವದು ಯೋಗ್ಯವಲ್ಲ. ಅನೇಕರು ಬಹಳ ಉತ್ತಮರು ಇದಾರೆಂದು ಹೇಳುವದಕ್ಕೆ ಏನೂ ಸಂಶಯವಿಲ್ಲ. ಕೆಲವರು ಮಾತ್ರ ಜನರಲ್ಲಿ ಬಳಕೆ ಇಲ್ಲದೆಯೂ, ಸ್ನೇಹವಿಲ್ಲದವರಾಗಿಯೂ, ಸಣ್ಣ ನೌಕರರನ್ನು ಮಾನ ಮರ್ಯಾದೆ ಇಲ್ಲದೆ ಮನಸ್ಸು ಬಂದ ಹಾಗೆ ಬಯ್ಯುವಂತವರಾಗಿಯೂ ಇದಾರೆಂದು ಹೇಳುವದಕ್ಕೆ ಏನೂ ಸಂದೇಹವಿಲ್ಲ. ಅಂತವರು ಇರುವ ಸ್ಥಳದಲ್ಲಿ ಕೆಲಸದವರಿಗೆ ಏನೂ ಸಮಾಧಾನವೂ ಇರುವದಿಲ್ಲ.

ನಿಮ್ಮ ವಾಚಕ.

ಕೃಷ್ಣರಾಜಪೇಟೆ ತಾಲ್ಲೂಕು ಮಂದಗೆರೆ ಗ್ರಾಮಕ್ಕೆ ಅಚನರು ಕೆಲ್ಲ ಯಿಂದ ವಾರಕ್ಕೆರಡುದಿನ ಹೋಗುತ್ತಿದ್ದರೂ ವರ್ತಮಾನ ಪತ್ರಿಕೆಗಳನ್ನು

...ಪಾಪ ಮಾಡುತ್ತಿಲ್ಲವೆಂದೂ, ಒಡೆದು 10-16 ದಿನಗಳ ಮೇಲೆ ಕಳುಹಿ ...ರೆಂದೂ ಒಬ್ಬ ಟಾಕ್ಕಿದಾರರು ತಿಳಿಸಿದಾರೆ. ಪೋಸ್ಟ್ ಇಲಾಖೆಯವರು ...ಷ್ಟು ಶ್ರಮಪಡಿಸುವರೆಂದು ನಿರೀಕ್ಷಿಸುತ್ತೇವೆ.

ಚಂದಾದಾರ್, ಶುಲೀಸ್‌ಪೇಟೆ :—ನಿಮ್ಮ ಹೆಸರು ಪೂರ್ತಿ ವಿಳಾಸಗಳ ...ಇಲ್ಲ.

ಚಂದಾದಾರ್, ಚಿತ್ರದುರ್ಗ —ನಿಮ್ಮ ಟಾಕ್ಕಿಯನ್ನು ಮೇಲ್ಪಟ್ಟ ಅಧಿಕಾ...ರಿಗೆ ರುಜುವಾತು ಕೊಟ್ಟರೆ ಅವರು ಶ್ರಮಪಡಿಸಬಲ್ಲರು — ಎಡಿ]

ತಾಲ್ಲೋಕು ವರ್ತಮಾನಗಳು.

ಆನೇಕಲು.—ಚಕ್ರವರ್ತಿಗಳ ಡಿಲ್ಲಿ ದರ್ಬಾರ್ ಮಹೋತ್ಸವದ ...ಸ್ಮಾರಕಾರ್ಥವಾಗಿ ಇಲ್ಲಿಯ ಕೋಟೆಯಲ್ಲಿ ಭವನ ಮನೆಯನ್ನು ಕಟ್ಟಿಸಿದ್ದರಷ್ಟೆ ...ಸು ತಿಂಗಳ ಹಿಂದೆ ಒಂದು ಪುಸ್ತಕ ಭಂಡಾರವನ್ನೂ, ವಾಚಕಶಾಲೆಯನ್ನೂ ...ರ್ವ ಮನೆಯಲ್ಲೇ ಏರ್ಪಡಿಸಿರುತ್ತ್ರ. ಸದ್ಯಕ್ಕೆ ಮೂರು ಇಂಗ್ಲಿಷ್ ಪತ್ರಿಕೆ ...ಳು, ಮೂರು ಕನ್ನಡ ಪತ್ರಿಕೆಗಳೂ ಬರುತ್ತಾ ಇವೆ ಸುಮಾರು 40 ಜನರು ...ಯಾಗಿ ಎಂಟು ರೂಪಾಯಿ ವರೆಗೆ ಚಂದಾ ವಸೂಲು ಆಗುತ್ತಾ ಇದೆ ...ಯು ಒಬ್ಬರು ಕಟ್ಟಿರು ಕಟ್ಟಿಸಿದ ಕಟ್ಟಡದಲ್ಲಿ ಇಲ್ಲಿಯ ಕೆಲವು ಸರ್ಕಾರಿ ...ರು ಕೆಲವು ದಿವಸ ಪತ್ರಿಕೆಗಳನ್ನು ತರಿಸಿ ಓದುತ್ತಾ ಇದ್ದರು ಈಗ ...ಯಲ್ಲಿ ವಾಚಕಶಾಲೆ ಆದ ಟಾಗಾಯಿತು ಅವರೂ ಅಲ್ಲೇ ಮೆಂಬರಾಗಿ ...ವುದರಿಂದ ಈ ಪೇಟೆಯ ಕಟ್ಟೋಣ ಹತ್ತಿ ಮುಚ್ಚಿ ಹೋಯಿತು. ...ಮು ವೃಕ್ಷದಲ್ಲಿ ನಾಲ್ಕು ಕಂಗಡಗಳಿರುತ್ತಾ ಈ ಕಟ್ಟೋಣದ ಮಾಲೀಕರ ...ದವರ ದೊರತು ಬಾಕಿ ಮೂರು ಪಂಗಡದವರು ಮೆಂಬರಾಗಲಿಕ್ಕೆ ಒಪ್ಪು... ಈ ಕಟ್ಟೋಣವನ್ನು ಮ್ಯುನಿಸಿಪಾಲಿಟಿಗಾಗಲಿ, ಪಠಕ್ಕೆ ಇವರ ಸ್ವಾಧೀನ ...ಮಾಡಿ ಕೊಡದೆ ಇದ್ದದ್ದರಿಂದ ಈಗ ಅದರ ಕೆಲಸ ಸಂಪೂರ್ಣವಾಗಿ ನಿಂತು ...ಕಡ್ಡಿ ಹಾಳಾಗಿದೆ. ಕೋಟೆಯ ಮಹಾಜನರು ಒಕ್ಕಟ್ಟಾಗಿ ನಡಿಸಿದಂತೆ ...ಮುವರೂ ಸೇರಿ ಆ ಕಟ್ಟೋಣದಲ್ಲಿ ವಾಚಕಶಾಲೆ ಏರ್ಪಡಿಸಿದರೆ ಪೇಟೆಯ ...ಗೆ ಬಹಳ ಅನುಕೂಲಪಡಿಸಿದಂತೆ ಆಗುತ್ತದೆ.

ಬಮಂಗ್‌ಪೇಟೆ ತಾ|| ಬಾಣಗಿಗ್ರಾಮ.—ಈ ಸಲ ಕ್ರಿಸ್ತಮಸ್ ರಜಾದಲ್ಲಿ ...ರ್ ವಕೀಲ್ ಮ|| ಎಂ. ಆರ್. ಶ್ರೀನಿವಾಸಮೂರ್ತಿರಾಯರು ಪಾಠಶಾ...ಮಂದಿರದಲ್ಲಿ ಏಳು ದಿನಗಳು ಏಳು ವಿಷಯಗಳನ್ನು ಕುರಿತು ಉಪನ್ಯಾಸ ...ಕೊಡುವಂತೆ ಏರ್ಪಾಡು ಮಾಡಿದರು. ಇದು 26 ನೇ ತಾ ಪ್ರಾರಂಭ ...ವರಿ 1 ನೇ ತಾ ಗೆ ಮುಗಿಯಿತು. ದೇವರು, ಆರೋಗ್ಯ, ವಿದ್ಯಾಭ್ಯಾಸ, ...ಯು, ಗ್ರಹಸ್ಥನ ಕರ್ತವ್ಯ, ಸ್ತ್ರೀಧರ್ಮ, ಆಶೆ ಎಂಬ ಈ ಏಳು ವಿಷಯಗ...ಕುರಿತು ಕ್ರಮವಾಗಿ ನಡೆದವು. ಮ|| ಬೆಂಗಳೂರು ಕ್ರಿಮಿನಲ್ ಕೋರ್ಟ್ ...ರ್ ಪ್ಲೀಡರ್ ರಾಮರಾಯರೂ, ಬಾಣಗಿರಿ ಗ್ರಾಮಭೋಗರೂ ಮತ್ತು ...ಯು ಲೋಕಲ್‌ಫಂಡ್‌ರೂ ಆದ ಮ|| ಗುರುಮೂರ್ತಯ್ಯನವರೂ, ಬೆಂಗ...ಳೂರು ಪೇಟೆ ಗರ್ಲ್ಸ್ ಹೈ ಸ್ಕೂಲಿನಲ್ಲಿ ಉಪಾಧ್ಯಾಯಿನಿಯರಾದ ಶ್ರೀಮತಿ ...ಯ್ಯನವರೂ, ಮೈಸೂರು ಮಹಾರಾಜಾ ಕಾಲೇಜ್ ವಿದ್ಯಾರ್ಥಿ ...ಯ್ಯನವರೂ ಈ ಉಪನ್ಯಾಸಗಳನ್ನು ಮಾಡಿದರು ಉಪನ್ಯಾಸಗಳು ...ವ್ಯವಾಗಿಯೂ ನೀತಿಭರಿತಗಳಾಗಿಯೂ ಇದ್ದವು ಮುಖ್ಯವಾಗಿ ...ಯ್ಯನವರು ಸ್ತ್ರೀ ಧರ್ಮವನ್ನು ಕುರಿತು ಮಾಡಿದ ಉಪನ್ಯಾಸವು ...ಶ್ಲಾಘನೀಯವಾಗಿತ್ತು. ಕೊನೆ ದಿನ ಮ|| ಶ್ರೀನಿವಾಸಮೂರ್ತಿಯವರು ...ಯ ಅಭಿವೃದ್ಧಿ ಪತ್ರವನ್ನು ಓದಿದರು. ಶ್ರೀಮನ್ಮಹಾರಾಜರವರಿಗೂ ...ಸಾರ್ವಭೌಮರವರಿಗೂ ದೀರ್ಘಾಯುರಾರೋಗ್ಯಗಳನ್ನು ಬಯಸಿ ...ರೂ ಪ್ರಾರ್ಥಿಸಿದರು ಈ ಗ್ರಾಮದಲ್ಲಿ ಪಾಠಶಾಲೆಯ ಅಭಿವೃದ್ಧಿ ... ಬಂದಿರುವ ಮಾಸ್ಟರ ದೆಸೆಯಿಂದ ಹೆಚ್ಚುತ್ತಲಿದೆ. ಪುರಜನರೂ ...ಕ್ಕೆ ನವಂತರಾಗಲು ಕಾಲವು ಒದಗಿದೆ. ಆದರೆ ಬಾಣಗಿರಿಯ ಜನರು ...ಷ್ಟು ಅಭಿರುಚಿ ತೆಗೆದುಕೊಳ್ಳದಿದ್ದರೂ ಗ್ರಾಮದ ಗ್ರಾಮಭೋಗರಾದ ಮ|| ...ಮೂರ್ತಯ್ಯನವರೂ, ಗ್ರಾಮದ ಮುಖಂಡರಲ್ಲಿಬ್ಬರಾದ ಮ|| ಮಹೋ...ಮಯು ಈ ವಿಷಯದಲ್ಲಿ ಬಹಳ ಮುತುವರ್ಜಿಯನ್ನು ತೆಗೆದುಕೊಂಡು ...ಲೆಯ ಅಭಿವೃದ್ಧಿಯನ್ನು ಹೆಚ್ಚು ಮಾಡಲು ಉಪಾಧ್ಯಾಯರನ್ನು ...ಹಿಸುತ್ತಿರುವುದು ತುಂಬಾ ಪ್ರಶಂಸನೀಯವಾಗಿದೆ.

ಸ್ಟೇಟ್ ರಾಕ್ಸ್ ತಾ|| ಚನ್ನ ಗ್ರಾಮ.—ಈ ಗ್ರಾಮದ ವಿಶೇಷ ಕಮಿಟಿ ...ಕಳೆದ ಡಿಸಂಬರು ತಾ. 28 ನೇ ಮಂಗಳವಾರ ಇಲ್ಲಿನ ಗೌರ್ನಮೆಂಟ್ ...ಕಟ್ಟಡದಲ್ಲಿ ಸಂಪದಭಿವೃದ್ಧಿ ಸಮಾಜದ ಮೆಂಬರಾದ ಮ|| ಉಪಾಧ್ಯ...ಯ್ಯಂಗಾರ್ರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗನ್ನು ನಡಿಸಿದರು. ಈ ...ಸಂಪದಭಿವೃದ್ಧಿ ಸಮಾಜದ ಮೈಸೂರು ಡಿ|| ಉಪನ್ಯಾಸಕರಾದ ಮ|| ...ಯ ಅಯ್ಯಂಗಾರ್ರ್ರು, ಸ್ಥಳೀಯ ಮತ್ತು ಪರಸ್ಥಳೀಯ ದೊಡ್ಡ ಮನುಷ್ಯ...ರು ಬಂದಿದ್ದರು. ಅಧ್ಯಕ್ಷರು ಮೀಟಿಂಗನ್ನು ಪ್ರಾರಂಭಿಸಿ ವಿದ್ಯಾಭ್ಯಾಸ, ...ಯು, ಕೈಗಾರಿಕೆ, ಪರಸ್ಪರಸಹಾಯ ಎಂಬೀ ಭಾಗಗಳನ್ನು ಕುರಿತು ...ಸ ಮಾಡಿದರು ನಂತರ ಲೆಕ್ಚರರು ಇದೇ ಭಾಗವನ್ನು ಕುರಿತು ಸರ್ವ...ರಿಗೂ ಮನಗಾಣುವಂತೆ ಉಪನ್ಯಾಸ ಮಾಡಿದರು. ಈ ಗ್ರಾಮಸಭ...ಕೆಳಗೆ ಕಂಡ ವಿಷಯಗಳು ಅತ್ಯಾವಶ್ಯಕವಾದ್ದರಿಂದ ಕ್ರಮಪಡಿಸಿ ...ಭಾಗದಲ್ಲಿ ಎಜುಕೇಷನ್ ಇಲಾಖೆಯವರಿಗೆ ರಿಪೋರ್ಟು ಮಾಡಿಕೊಳ್ಳ...ಲು ತೀರ್ಮಾನಿಸಲಾಯಿತು.—(1) ಸ್ಟೇಟ್ ಸ್ಕೂಲನ್ನು ಸ್ಯಾಂಕ್ಷನ್ ...ಮೇಲೆ ಈ ಜನವರಿ 3 ನೇ ತಾ. ಲಾಗಾಯ್ತು ಪ್ರಾರಂಭಿಸ ಪಾಠ ...ಕಲು ಬರದೇಕು; (2) ಗರ್ಲ್ಸ್ ಸ್ಕೂಲ್ ಆಗಬೇಕಾದವದ್ದು; (3) ಬಾಯ್ಸ್ ...ಯೊಬ್ಬರ ಸಾಲದೆಂದೂ, ಸಹಾಯೋಪಾಧ್ಯಾಯರನ್ನು ಕೊಡಿಸಬೇಕೆಂದೂ ...ಮಾಡಿಕೊಳ್ಳಬೇಕು; (4) ಹೊಸ ಸ್ಕೂಲ್ ಕಾಂಪೌಂಡಿನಲ್ಲಿ ರೀಡಿಂಗ್ ...ಕಟ್ಟಡ ಕಟ್ಟಿಸುವುದಕ್ಕೆ ಇಲಾಖೆಯವರ ಅಪ್ಪಣೆ ಅಪೇಕ್ಷಿಸಬೇಕೆಂ... ಚರ್ಚೆ ನಡೆದು ತೀರ್ಮಾನವಾಯಿತು. ಮ|| ಹೆಡ್ ಮಾಸ್ಟರ್ ...ಸಿಂಹಯ್ಯನವರು ರೀಡಿಂಗ್ ರೂಮಿಗೆ ತಮ್ಮ ಸ್ವಂತ ಜಾಗವಡಿಬಿಟ್ಟ...ರವಾಗಿ ಕಟ್ಟಡ ಕಟ್ಟಿಸಿ ಕೊಡುವುದಾಗಿ ಕೇವಲ ಉದಾರ ಬುದ್ಧಿಯಿಂದ ...ನ ಮಾಡಿದರು. ಅನಂತರ ಮ|| ಸಿ. ಬಿ ವೆಂಕಟರಮಣಯ್ಯನವರು ...ಸಮಾಜದ ವಿಚಾರವಾಗಿ ಸ್ವಲ್ಪ ಉಪನ್ಯಾಸ ಮಾಡಿ ಅಧ್ಯಕ್ಷರಿಗೂ, ...ವಾಗಿ ರೀಡಿಂಗ್ ರೂಮ್ ಕಟ್ಟಿಸಿಕೊಡಲು ಸಂತೋಷದಿಂದ ಮಾಗ್ದಾನ... ಮ|| ಹೆಡ್ ಮಾಸ್ಟರ್ ಅನಂತನರಸಿಂಹಯ್ಯನವರಿಗೂ ಸಹ ಸಭಿಕರ ... ವಂದನೆಗಳನ್ನು ಅರ್ಪಿಸಿದರು ಸರ್ವರೂ ಆನಂದದಿಂದ ನಮ್ಮ ...ಮಹಾರಾಜರವರಿಗೂ ಅವರ ಬಂಧು ವರ್ಗಕ್ಕೂ ನಮ್ಮ ಚಕ್ರವರ್ತಿ ...ಯವರವರಿಗೂ ಶ್ರೇಯಸ್ಸನ್ನು ಕೋರಿ ಸಭೆ ಮುಕ್ತಾಯ ಮಾಡಿದರು

ಮಂಡ್ಯ.—ಕಳೆದ ಮಂಗಳವಾರ ಮೈಸೂರಿಂದ ನೇಮಿರಾಗಿರ ಅವರ್ಣೀ...ಶಾಲಾದ ಜೈನ ಗುರುಗಳು ಮಂಡ್ಯಕ್ಕೆ ದಯಮಾಡಿಸಿ ಜನ ಬಸ್ತಿಯಲ್ಲೂ, ...ಸ್ಕೂಲ್ ಹಾಲಿನಲ್ಲೂ ಎರಡು ಉಪನ್ಯಾಸಗಳನ್ನು ಮಾಡಿದರು. ಭಕ್ತಿ ...ಜ್ಞಾನಯೋಗ, ಮುಕ್ತಿಯೋಗಗಳೆಂಬ ಮೂರು ಅಂಶಗಳ ಉಪನ್ಯಾಸ ...ಸ್ವಾರಸ್ಯವಾಗಿದ್ದವು ಅಮಲ್ದಾರರೇ ಆದಿಯಾಗಿ ಎಲ್ಲಾ ಅಧಿಕಾರಿ ...ಗಳೂ ಇಂಥಾ ಅಪೂರ್ವವಾದ ಉಪನ್ಯಾಸಗಳನ್ನು ಕೇಳಿ ತುಂಬಾ ...ದ್ದರು. ಈ ಉಪನ್ಯಾಸಗಳು ಎಲ್ಲರ ಮನಸ್ಸುಗಳಿಗೂ ನಾಟುವಂಥಾ ...ದ್ದರಿಂದ ಆಗಾಗ್ಗೆ ಬಂದು ಇಂಥಾ ಉಪನ್ಯಾಸಮಾಡುತ್ತಾ ಬರು...ಬೇಕೆ ಅಪೇಕ್ಷೆಯಾಗಿ ವಿಜ್ಞಾಪನೆಮಾಡಿಕೊಂಡದ್ದರ ಮೇಲೆ ಅದರಂತೆ ... ಒಪ್ಪಿಕೊಟ್ಟು ಮಾರನೆ ದಿನ ಮೈಸೂರಿಗೆ ತೆರಳಿದರು.—ಊರಿನ ಮ್ಯುನಿಸಿಪಾಲಿಟಿಯು ಬಹುಮಟ್ಟಿಗೆ ತೃಪ್ತಿಕರವಾಗಿರುವುದಲ್ಲದೆ ಮುಖ್ಯವಾಗಿ ಅಮಲ್ದಾರರೂ, ಸಬ್ ರಿಜಿಸ್ಟ್ರಾರರೂ, ಜಿ. ವಿ ನಂಜಪ್ಪ ಶೆಟ್ಟರೂ ಬದ್ಧಕಂಕಣರಾಗಿ ನಿಂತು ಗ್ರಾಮಸಭಿವೃದ್ಧಿ ಕಾರ್ಯಗಳಿಗೂ, ವಿದ್ಯಾಭ್ಯಾಸದ ಕಾರ್ಯಗಳಿಗೂ, ಕೋಆಪರೇಟಿವ್ ಸೊಸೈಟಿ ಕಾರ್ಯಗಳಿಗೂ, ಇತರ ವಿಧವಾದ ಪರೋಪಕಾರ ವಿಷಯಗಳಿಗೂ ಹೆಚ್ಚಾದ ಗಮನಕೊಟ್ಟು ಎಲ್ಲವನ್ನೂ ಕ್ರಮಪಡಿಸುತ್ತಿರುವುದು ಬಹು ಸ್ತೋತ್ರಾರ್ಹವಾಗಿರುತ್ತದೆ. ಈಗ ಗ್ರಾಮಗಳಲ್ಲಾ ಶುಚಿಗಿರುವುದಲ್ಲದೆ ರಸ್ತೆಗಳೂ ಏರ್ಪಟ್ಟವು ಗ್ರಾಮದ ಸ್ಕೂಲ್, ಶುಚಿ ವಗೈರೆ ವಿಷಯಗಳಿಗೆ ಕಮಿಟಿಮೆಂಬರುಗಳನ್ನು ಏರ್ಪಡಿಸಿರುವುದೂ, ರೀಡಿಂಗ್ ರೂಮು, ನೈಟ್ ಸ್ಕೂಲು ಮುಂತಾದವುಗಳನ್ನು ಸ್ಥಾಪಿಸಲು ಪ್ರೋತ್ಸಾಹ ಕೊಡುತ್ತಿರುವುದೂ, ಅದರಂತೆ ಅನೇಕ ಗ್ರಾಮಗಳಲ್ಲಿ ಜಾರಿಗೆ ಬಂದಿರುವಂತೆ ಮಾಡಿರುವುದೂ ಮತ್ತಷ್ಟು ಸಂತೋಷಕರವಾಗಿರುತ್ತದೆ —ಮಂಡ್ಯದ ಟೌನ್‌ನಲ್ಲಿ ಬಲಾತ್ಕಾರದ ವಿದ್ಯಾಭ್ಯಾಸಕ್ಕಾಗಿ ಕಟ್ಟಡವನ್ನು ಏರ್ಪಡಿಸಿ ಇನ್|| ಡ|| ರವರಿಂದ ಪ್ರಾರಂಭಿಸಲ್ಪಟ್ಟು ಈಗ ಕ್ರಮವಾಗಿ ನಡೆಯುತ್ತಲಿದ್ದರೂ ಸರ್ಕಾರದವರ ಉದ್ದೇಶವನ್ನು ಅನೇಕರು ತಿಳಿಯದೆ ಇನ್ನೂ ಅಲಕ್ಷ್ಯದಿಂದಿರುವಂತೆ ತೋರುತ್ತದೆ. ಇಂಥಾದ್ದಕ್ಕೆ ಸರ್ಕಾರದವರು ಮತ್ತೊಂದು ಸಾರಿ ಎಚ್ಚರಿಗೆ ಕೊಡುವರೆಂದು ನಂಬಲಾಗಿದೆ — ಈ ಊರಲ್ಲಿ ಆಗಾಗ್ಗೆ ಕಳ್ಳತನಗಳೂ, ಪುಂಡೂ ನಡೆಯುತ್ತಲಿವೆ. ಹೊಸದಾಗಿ ಬಂದಿರತಕ್ಕ ಪೊ. ಇನ್ಸ್‌ಪೆಕ್ಟರವರು, ಜಮೇದಾರರೂ ಮುಂತಾದವರಿಗಳೂ, ಗಟ್ಟಿಗರೂ, ಅನುಭವಶಾಲಿಗಳೂ ಆದ್ದರಿಂದ ಇನ್ನು ಮುಂದೆ ಇಂಥಾ ಕೃತ್ಯಗಳ್ಯಾವೂ ನಡೆಯಲಾರವೆಂದು ನಂಬಲಾಗಿದೆ.—ಮಂಡ್ಯದ ತಾಲ್ಲೋಕಿನ ಪಂಚಮರಸ್ಥಿತಿಯು ತುಂಬಾ ಪರಿತಾಪಕರವಾಗಿದೆ. ಸುಮಾರಾಗಿ ಎಲ್ಲರೂ ನೇಯಿಗೆಯಿಂದ ಜೀವಿಸುತ್ತಿದ್ದರು. ನೂಲಿನ ಧಾರಣೆಯಾದರೋ ಮೊದಲು ಇದ್ದದ್ದಕ್ಕಿಂತಲೂ ಈಗ 4-5 ರಷ್ಟು ಹೆಚ್ಚಾಗಿದೆ ಕಾಫಿ ತೋಟ, ಕನ್ನಂಬಾಡಿ ಕಟ್ಟೆ ಇವರಿಗೆ ಜೀವನಾರ್ಥದ ಆಶ್ರಯಸ್ಥಳಗಳಾಗಿದ್ದರೂ ಈಗ ಅಲ್ಲಿಯೂ ಕೆಲಸ ದೊರೆಯುವುದು ಕಷ್ಟವಾಗಿದೆ. ಈ ಬಡಜನರ ಕಷ್ಟಗಳನ್ನು ಬರೆಯಲು ಅಸಾಧ್ಯ. ಎಲ್ಲರೂ ಸಾಲಗಾರರಾಗಿ ಉತ್ತಮ ಕೋಟಿಯವರ ಕಟ್ಟುಪಾಡುಗಳಿಗೆ ಒಳಗಾಗಿ ತುಂಬಾ ಬಡತನದಿಂದ ಜೀವಿಸುವರು. ಇವರ ವಿಷಯದಲ್ಲಿ ಸರ್ಕಾರದವರು ಕನಿಕರವಿಟ್ಟು ಯಾವದಾದರೂ ಒಂದು ರಿಲೀಫ್ ಕಾಮಗಾರಿಯನ್ನು ಏರ್ಪಡಿಸಿ ಕಾಪಾಡಬೇಕೆಂದು ಬೇಡಿಕೊಳ್ಳಲಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಪಿಟ್ಟಾಪುರದ ರಾಜರವರು ಅಲ್ಲಿನ ವಿಕ್ಟೋರಿಯಾ ಹೆಂಗಸರ ಆಸ್ಪತ್ರೆಯನ್ನು ಬಡಾವಣೆ ಮಾಡುವುದಕ್ಕೆ 20,000 ರೂಪಾಯಿ ಕೊಟ್ಟಿದಾರೆ.

ಕಳೆದ ಗುರುವಾರ ಸಾಯಂಕಾಲ ಕಲ್ಕತ್ತಾ ಪಟ್ಟಣದಲ್ಲಿ ಯಾರೋ ಇಬ್ಬರು ಗುಂಡು ಹೊಡೆದು ಹಲಾಸ ದಫೆಸಿಂಟ ಪೋಲೀಸಿನವನನ್ನು ಕೊಂದು ಹಾಕಿದರು. ತನಿಖೆ ನಡೆಯುತ್ತಿದೆ

ಬೊಂಬಾಯಿನಲ್ಲಿ ಹತ್ತಿ ವ್ಯಾಪಾರಗಾರರ ಕಂಪನಿಯವರು ಯುದ್ಧದ ಇಲಾಖೆಯ ಖರ್ಚಿಗೆ 22,500 ರೂಪಾಯಿ ಚಂದಾ ಕೊಟ್ಟಿದ್ದನ್ನು ಇಂಡಿಯಾ ಗವರ್ನ್‌ಮೆಂಟಿನವರು ಅಂಗೀಕರಿಸಿ ವಂದನೆಮಾಡಿದಾರೆ.

ಬೊಂಬಾಯಿ ಪಟ್ಟಣದಲ್ಲಿ ಕ್ರಿಕೆಟ್ ಎಂಬ ಚೆಂಡಾಟದ ಪಂದ್ಯಗಳನ್ನು ಆಡಿ ನೋಟಕರಿಂದ ಟಿಕೀಟಿನ ದುಡ್ಡು ವಸೂಲ್ಮಾಡಿ ಉತ್ಪತ್ತಿಯಾದ 30,000 ರೂಪಾಯನ್ನು ಯುದ್ಧದ ರಿಲೀಫ್ ಫಂಡುಗಳಿಗೆ ಕೊಟ್ಟಿದಾರೆ.

ಕಾಶೀ ಪಟ್ಟಣದಲ್ಲಿ ಭೀಮುಲಚಂದ್ ಮುಖರ್ಜಿ ಎಂಬೊಬ್ಬ ವಿದ್ಯಾರ್ಥಿಯು ಮುಖರ್ಜಿ ಎಂಬ ಪೋಲೀಸ್ ಇನ್ಸ್‌ಪೆಕ್ಟರನ್ನು ಭೀತಿಪಡಿಸಿದನೆಂದು ಮೊಕದ್ದಮೆ ಆಗಿ ಆ ವಿದ್ಯಾರ್ಥಿಗೆ 100 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು.

ರಾಜಾ ಹನಾಮಸಿಂಗ್‌ರವರ ಕುಮಾರರಾದ ಕ್ಯಾಪ್ಟನ್ ಕುಡ್ವರ್ ಹಮೀರ್ ಸಿಂಗ್‌ರವರು ಡಾಕ್ಟರಾಗಿ ಪೂರ್ವ ಆಫ್ರಿಕದ ಸೈನಿಕರ ಕೂಡ ಇದ್ದಾಗ ಅವರಿಗೆ ಟಾಂಗಾ ಎಂಬಲ್ಲಿ ನಡೆದ ಒಂದು ಯುದ್ಧದಲ್ಲಿ ಗಾಯವಾಯಿತು ಈಗ ಆ ಡಾಕ್ಟರನ್ನು ಅಲ್ಲಿಂದ ವಾಪಸು ಕರೆಸಿ ಜಲಂಧರದಲ್ಲಿ ಆಸ್ಪತ್ರೆ ಕೆಲಸಕ್ಕೆ ನೇಮಕಮಾಡುತ್ತಾರೆ.

ಕಳೆದ 1 ನೇ ತಾರೀಖಿಗೆ ಅಮೈರಾದ ಒಂದು ವಾರದಲ್ಲಿ ಹಿಂದೂಸ್ಥಾನ ದೊಳಗೆ ಒಟ್ಟು 7,787 ಜನರಿಗೆ ಹೊಸದಾಗಿ ಪ್ಲೇಗ್ ತಗಲಿತು, 5,800 ಜನರು ಪ್ಲೇಗಿನಲ್ಲಿ ಕಾಲವಾದರು ಈ ಪೈಕಿ ಬೊಂಬಾಯಿ ಅಧಿಪತ್ಯದಲ್ಲಿ 1,542 ಸಂಯುಕ್ತ ಅಧಿಪತ್ಯಗಳಲ್ಲಿ 513, ಮಧ್ಯಪ್ರಾಂತ್ಯಗಳಲ್ಲಿ 632, ಹೈದರಾಬಾದ್ ಸಂಸ್ಥಾನದಲ್ಲಿ 1,035 ಮರಣಗಳಾಗಿವೆ.

ಕಲ್ಕತ್ತಾ ಪಟ್ಟಣದ ಒಂದು ಮನೆಯಲ್ಲಿ ನಾಗೇಂದ್ರ ಚಕ್ರವರ್ತಿ ಎಂಬ 17 ವಯಸ್ಸಿನ ಬಂಗಾಳಿ ಹುಡುಗನೊಬ್ಬನೇ ಒಂದು ಮಂಚದ ಮೇಲೆ ಮಲಗಿರುವಾಗ ಏನೋ ಶಬ್ದವಾಗಿ ಹಾರಿ ಅವನ ಮೈಯೆಲ್ಲಾ ಗಾಯಗಳಾದವು. ಈ ಶಬ್ದವನ್ನು ಕೇಳಿ ಜನರು ಮನೆಗೆ ಹೋಗಿ ಅವನನ್ನು ಆಸ್ಪತ್ರೆಗೆ ಸಾಗಿಸಿದರು. ಪೋಲೀಸಿನವರು ತನಿಖೆಮಾಡುತ್ತಿದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಪಿಯರ್ಸ್ ಎಂಬೊಬ್ಬ 17 ವರುಷದ ಬ್ರಿಟಿಷ್ ಸೋಜರನು ರಿಜರ್ವ್ ಪೋಲೀಸ್ ಕಾನ್‌ಸ್ಟೇಬಲ್ ದಯರಾಜಸಿಂಗನಿಗೆ ಬಂದೂಕು ಹಿಡಿದು ಡ್ರಿಲ್ ಮಾಡುವ ಕ್ರಮವನ್ನು ತೋರಿಸಿಕೊಡುತ್ತಿದ್ದಾಗ ಆ ಬಂದೂಕಿನಲ್ಲಿದ್ದ ಗೋಲಿಯು ಅಕಸ್ಮಾತ್ತಾಗಿ ಹಾರಿ ಪೋಲೀಸಿನವನಿಗೆ ಬಡಿದು ಅವನು ತತ್‌ಕ್ಷಣ ಮೃತಪಟ್ಟನು. ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ವಿಚಾರಣೆಮಾಡುತ್ತಿದಾರೆ.

ಮದರಾಸ್ ಗವರ್ನ್‌ಮೆಂಟಿನವರು ಆ ಅಧಿಪತ್ಯದಲ್ಲಿ ತಯಾರಾಗುವ ಉಪ್ಪನ್ನು ಉತ್ತರ ದೇಶದಲ್ಲಿ ಬಿಕರಿಮಾಡುವುದಕ್ಕೆ ಸಾಗಿಸುತ್ತಿದಾರೆ. ಇದರಿಂದ ಮದರಾಸಿನಲ್ಲಿ ಉಪ್ಪಿಗೆ ಗೋಟ್ಟು ಬಂದೀತೆಂದು ವ್ಯಾಪಾರಗಾರರು ಹೆದರಿಕೊಂಡಿದ್ದರು ಕಳೆದ ವಾರ ಉಪ್ಪಿನ ಕಂಟ್ರಾಕ್ಟರು ಮದರಾಸಿನಲ್ಲಿ ಹಲವು ಪೇಟೆಗಳಲ್ಲಿ ಅಂಗಡಿಗಳನ್ನಿಟ್ಟು ಸೇರಿಗೆ ಒಂದಾಣೆಯಂತೆ ಉಪ್ಪನ್ನು ಮಾರಿಸುತ್ತಿದಾರೆ. ಇದರಿಂದ ಪ್ರಜೆಗಳಲ್ಲಿದ್ದ ಗಾಬರಿಯು ಕೊಂಚಮಟ್ಟಿಗೆ ನಿವಾರಣೆಯಾಗಿದೆ

ಕಳೆದ ನೊವೆಂಬರ್ ತಾ. 18 ರಲ್ಲಿ ರಾವಲ್‌ಪಿಂಡಿ ಡಿಸ್ಟ್ರಿಕ್ಟಿಗೆ ಸೇರಿದ ನೂರ್‌ಪುರ ಷಹಾನ್ ಎಂಬ ಊರಿಗೆ ಕಳ್ಳರು ಬಿದ್ದು ಒಬ್ಬ ಸಾಹುಕಾರನ ಮನೆಯನ್ನು ಲೂಟಿಮಾಡಲಾರಂಭಿಸಿದರು. ಗ್ರಾಮದವರು ಆಯುಧಪಾಣಿಗಳಾಗಿ ಆ ಮನೆಯ ಸುತ್ತಾ ಘೇರಾಯಿಸಿಕೊಂಡು ಮನೆಯೊಳಗೆ ಸೇರಿಕೊಂಡಿದ್ದ ನಾಲ್ಕು ಮಂದಿ ಕಳ್ಳರನ್ನೂ ಬಹಳ ಸಾಹಸಪಟ್ಟು ಹಿಡಿದರು. ಅವರೀಗ ಹತ್ತು ವರುಷ ಕಠಿಣ ಸಜಾ ಅನುಭವಿಸುತ್ತಿದಾರೆ. ಆ ಗ್ರಾಮಸ್ಥರು ಕಳ್ಳರನ್ನು ಹಿಡಿದದ್ದನ್ನು ನೋಡಿ ಗವರ್ನ್‌ಮೆಂಟಿನವರು ಆ ಗ್ರಾಮದ ದೇವಸ್ಥಾನಕ್ಕೆ ಆ ಗ್ರಾಮದ ಉತ್ಪತ್ತಿಯನ್ನೆಲ್ಲಾ ಸಾಲಿಯಾನಾ 800 ರೂಪಾಯನ್ನು ಇನಾಮತಿ ಕೊಟ್ಟದ್ದಲ್ಲದೆ 1,000 ರೂಪಾಯಿ ನಗದು ಇನಾಮು ಕೊಟ್ಟಿದಾರೆ.

ಯಾವಜ್ಜೀವವೂ ಸಜಾ ಶಿಕ್ಷೆಯನ್ನನುಭವಿಸಬೇಕಾಗಿದ್ದ ಮೂವರು ಖೈದಿಗಳನ್ನು ಪೋಲೀಸಿನವರ ಪಹರೆಯಲ್ಲಿ ರೈಲಿನ ಮೇಲೆ ಸಾಗಿಸಿಕೊಂಡು ಹೋಗುತ್ತಿದ್ದಾಗ ಜಂಕ್ಷನ್ ಸ್ಟೇಷನ್ ಬಳಿ ಆ ಪೈಕಿ ಒಬ್ಬ ಖೈದಿಯು ತನ್ನ ಕೈಕೋಳಗಳಿಗೆ ಹಾಕಿದ್ದ ಸಂಕೋಲೆಗಳನ್ನು ಹ್ಯಾಗೋ ಸಡಲಿಸಿ ತೆಗೆದು ಕಿಟಕಿಯಿಂದ ಹೊರಕ್ಕೆ ಧುಮುಕಿ ತಪ್ಪಿಸಿಕೊಂಡನು. ಪೋಲೀಸಿನವನು ಅವನನ್ನು ಹಿಡಿಯಬೇಕೆಂದು ಅವನ ಹಿಂದೆಯೇ ಧುಮುಕಿದನು. ಖೈದಿ ಸಿಕ್ಕಲಿಲ್ಲ. ಪೋಲೀಸಿನವನ ಕೈಕಾಲುಗಳಿಗೆ ಪೂರಾ ಗಾಯಗಳಾದವು. ಸಮರಾತ್ರಿಯಲ್ಲಿ ರೈಲ್ ಗಾಡಿಯು ಬಹು ವೇಗವಾಗಿ ಹೋಗುತ್ತಿದ್ದಾಗ ಈ ಅಚಾತುರ್ಯ ನಡೆಯಿತು. ರೈಲ್ವೆ ಪೋಲೀಸಿನವರು ತನಿಖೆಮಾಡುತ್ತಿದಾರೆ.

ಕಾಶೀ ಪಟ್ಟಣದಲ್ಲಿ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಫೆಬ್ರವರಿ ತಾ 4 ರಲ್ಲಿ ಹಿಂದೂ ಯೂನಿವರ್ಸಿಟಿ ವಿದ್ಯಾನಿಲಯದ ಕಟ್ಟಡಗಳಿಗೆ ಅಸ್ತಿಭಾರ ಶಿಲೆಯನ್ನು ಹಾಕಿ ಪ್ರತಿಷ್ಠೆ ಮಾಡುತ್ತಾರೆ. ಈ ಉತ್ಸವಕ್ಕಾಗಿ ಅತ್ಯಂತ ಅಟ್ಟಹಾಸಯುಕ್ತವಾದ ಏರ್ಪಾಡುಗಳು ನಡೆಯುತ್ತಲಿವೆ. ಅತ್ಯಂತ ವಿಶಾಲವೂ ನೇತ್ರಾನಂದಕರವೂ ಆದ ಮಂಟಪವು ಸಿದ್ಧವಾಯಿತು ಅದರೊಳಗೆ ಮಧ್ಯೆ ವೈಸ್‌ರಾಯರವರಿಗೂ, ದೇಶೀಯ ಸಾಮಂತ ರಾಜರುಗಳಿಗೂ, ಗವರ್ನರುಗಳಿಗೂ, ಲೆಫ್ಟಿನೆಂಟ್ ಗವರ್ನರುಗಳಿಗೂ, ಇತರ ಮಹನೀಯ ಪುರುಷರುಗಳಿಗೂ ಪ್ರತ್ಯೇಕಾಸನಗಳು ನಿರ್ಮಾಣವಾದವು. ಬಲ ಎಡ ಪಾರ್ಶ್ವಗಳಲ್ಲಿ ದೊಡ್ಡಮನುಷ್ಯರಿಗೂ ಸ್ತ್ರೀಯರಿಗೂ ಸ್ಥಾನಗಳನ್ನು ಕಲ್ಪಿಸಿದಾರೆ ಉಳಿದ ಭಾಗಗಳಲ್ಲೆಲ್ಲಾ ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ಹೋಗುವ ಇತರ ದೊಡ್ಡಮನುಷ್ಯರುಗಳಿಗೆ ಸ್ಥಳ ಏರ್ಪಾಡಾಗಿದೆ ಈ ಉತ್ಸವಕ್ಕೆ ಸುಮಾರು 6,000 ಮಂದಿ ಅಲ್ಲಿ ಸೇರುತ್ತಾರೆನ್ನುವುದಕ್ಕೆ ಅನುಮಾನವಿಲ್ಲ. ದೇಶೀಯ ಸಾಮಂತ ಅರಸರುಗಳಿಗೆಲ್ಲಾ ಇಳುಕೊಳ್ಳುವುದಕ್ಕೂ, ಅವರಿಗೆ ಆತಿಥ್ಯವನ್ನು ನಡಿಸುವುದಕ್ಕೂ ಕಾಶೀ ಮಹಾರಾಜರವರು ಒಪ್ಪಿಕೊಂಡಿರುವರು. ಸುಮಾರು 25-30 ಮಂದಿ ಸಾಮಂತ ರಾಜರುಗಳು ಅಲ್ಲಿಗೆ ದಯಮಾಡುವರೆಂಬ ನಿರೀಕ್ಷೆಯುಂಟು. ಈ ವಿದ್ಯಾನಿಲಯದ ಫಂಡಿಗೆ 90,00,000 ರೂಪಾಯಿ ನಗದ ಕೊಡುವುದಾಗಿ ಹಿಂದೂಸ್ಥಾನದ ಮಹನೀಯರುಗಳು ಒಪ್ಪಿಕೊಂಡಿದಾರೆಂದೂ, ಆ ಪೈಕಿ ಇದುವರೆಗೆ 60,00,000 ರೂಪಾಯಿ ಕೊಡಿಸಲ್ಪಟ್ಟಿದೆ ಎಂದೂ ತಿಳಿದು ಬರುತ್ತದೆ.

ವಿದೇಶದ ವೃತ್ತಾಂತಗಳು.

ಆಸ್ಕರ್ ಎಂಬೊಂದು ಜಹಜಿನಲ್ಲಿ ಸಿಡಿಮದ್ದಿನ ಗುಂಡು ಹಾರಿ ಅದರೊಳಗಿದ್ದ ಸುಮಾರು ಇಪ್ಪತ್ತು ಜನಗಳು ಮೃತಪಟ್ಟರೆಂದು ಅಮೇರಿಕದಿಂದ ತಂತೀ ವರ್ತಮಾನ ಬಂದಿದೆ.

ಚಿಕಾಗೋ ಪಟ್ಟಣಕ್ಕೆ ಸೇರಿದ ಒಂದು ಎಣ್ಣೆ ಕಾರ್ಖಾನೆಯಲ್ಲಿ ಅಕಸ್ಮಾತ್ತಾಗಿ ಎಂಜಿನ್‌ಗಳು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿ 75 ಲಕ್ಷ ರೂಪಾಯಿನ ನಷ್ಟ ನಷ್ಟವಾಯಿತು 6 ಮಂದಿ ಕೊಲೆಯಾದರು; 20 ಜನರಿಗೆ ಗಾಯಗಳಾಗಿವೆ.

ಇಂಗ್ಲೆಂಡಿನ ಬೇರೆ ಬೇರೆ ವಿದ್ಯಾಶಾಲೆಗಳಲ್ಲಿ ವಿದ್ಯೆ ಕಲಿಯುತ್ತಿದ್ದ ಹಿಂದೂಸ್ಥಾನದ ವಿದ್ಯಾರ್ಥಿಗಳ ಪೈಕಿ 272 ಮಂದಿ ಯುದ್ಧಭೂಮಿಯಲ್ಲಿ ಗಾಯಪಡುವವರಿಗೆ ಶುಶ್ರೂಷೆ ಮಾಡುವುದಕ್ಕೋಸ್ಕರ ಆಂಬ್ಯುಲೆನ್ಸ್ ಸಂಘಕ್ಕೆ ಸೇರಿ ಹೋಗಿರುತ್ತಾರೆಂದೂ, ಕೆಲವರು ಸೈನಿಕರಾಗಿಯೂ ಸೇರಿರುತ್ತಾರೆಂದೂ ಮಿ|| ಮಲ್ಲೆಟ್ ಎಂಬ ಅಧಿಕಾರಿಯು ತಿಳಿಸುತ್ತಾರೆ.

ರಷ್ಯಾ ಗವರ್ನ್‌ಮೆಂಟಿನವರು ತಮ್ಮ ಚಕ್ರಾಧಿಪತ್ಯದಲ್ಲಿ ವೋಡ್ಕಾ ಎಂಬ ಮದ್ಯವನ್ನು ಯಾರೂ ಕುಡಿಯದಂತೆ ಯುದ್ಧದ ನಿಮಿತ್ತವಾಗಿ ಅಪ್ಪಣೆ ಹೊರಡಿಸಿಬಿಟ್ಟು, ಆ ಮದ್ಯ ಪದಾರ್ಥವನ್ನೆಲ್ಲಾ ಕೂಡಿಸಿ ಈಗ ಅದರಿಂದ ಒಂದು ವಿಧವಾದ ರಬ್ಬರನ್ನು ತಯಾರುಮಾಡಿಸುತ್ತಿದಾರೆ ಯುದ್ಧ ಮುಗಿದ ಬಳಿಕವೂ ಈ ಮದ್ಯದ ಸೇವನೆಯನ್ನು ಪ್ರಜೆಗಳಲ್ಲಿ ನಿಲ್ಲಿಸಿಬಿಡುತ್ತಾರೆಂದು ಪ್ರಕಟವಾಗಿದೆ.

ಜರ್ಮನಿಯಲ್ಲಿ ಸರ್ಕಾರದವರು ಕಾರ್ಖಾನೆ, ಕಂಪನಿ, ಸಾಪು, ಅಂಗಡಿ ಮುಂತಾದುವುಗಳ ಮೇಲೆ ಆದಾಯದ ಮೇಲಣ ತೆರಿಗೆಯನ್ನು ಶೇಕಡಾ 50 ರಷ್ಟು ಹೆಚ್ಚಿಸಿ, ಈ ಹಣವನ್ನು ಅವರು ತಮ್ಮ ಲೆಕ್ಕಗಳಲ್ಲಿ ತೋರಿಸಿ ಕೂಡಿಸಿದಬೇಕೆಂದೂ, ಸರ್ಕಾರಕ್ಕೆ ಬೇಕೆಂದು ಕೇಳಿದಾಗ ಬಾಬತು ಮಾಡಬೇಕೆಂದೂ ಅಪ್ಪಣೆ ಮಾಡಿದಾರೆ. ಜರ್ಮನಿಯವರು ಯುದ್ಧದ ಖರ್ಚನ್ನು ಈ ಹಣದಿಂದಲೂ, ನಷ್ಟದ್ರವ್ಯವನ್ನು ಶತ್ರುಗಳಿಂದ ವಸೂಲ್ಮಾಡಿಯೂ ಕೊಡಿಸಬೇಕೆಂದಿದಾರಂತೆ!

ಹಿಂದೂಸ್ಥಾನಕ್ಕೆ ಬರುತ್ತಿದ್ದು ಮೆಡಿಟರ್ರೇನಿಯನ್ ಕಡಲಿನಲ್ಲಿ ಶತ್ರುವಿನ ಟಾರ್ಪಿಡೋ ಬಡಿದು ಮುಳುಗಿಹೋದ ಪರ್ಷಿಯಾ ಎಂಬ ಬ್ರಿಟಿಷ್ ಮೆಯಿಲ್ ಜಹಜಿನಲ್ಲಿ ಈಜಿಪ್ಟ್, ಸೈಪ್ರಸ್, ಜಾನ್ಜಿಬಾರ್, ಇಂಡಿಯ, ಸಿಲೋನ್, ಮಾರಿಶಿಯಾ, ಸ್ಟ್ರೇಯಿಟ್ ಸೆಟ್ಲ್‌ಮೆಂಟ್, ಡಚ್ಚರ ದ್ವೀಪಗಳು, ಬೋರ್ನಿಯೋ, ಸಾರಾವಾಕ್, ಮನಿಲಾ, ಹಾಂಕಾಂಗ್ ಎಂಬೀ ಪ್ರಾಂತ್ಯಗಳಿಗೆ ಹೋಗುವ ಅಂಚೆ ಬಸ್ತುಗಳೂ, ಥಾಂಗಿಗಳೂ ಸುಮಾರು 20-30 ಸಾವಿರ ಚೀಲಗಳ ತುಂಬಾ ಇದ್ದು ಎಲ್ಲಾ ಸಮುದ್ರದ ಪಾಲಾದವು. ಇದಲ್ಲದೆ 9,00,000 ರೂಪಾಯಿನ ಬೆಳ್ಳಿ ಗಟ್ಟಿಗಳೂ ಮುಳುಗಿಹೋಗಿರುತ್ತವೆ

ಸುಮಾರು ಒಂದು ತಿಂಗಳ ಹಿಂದೆ ಸಮುದ್ರದ ಮೇಲೆ ಬ್ರಿಟಿಷರ ಒಂದು ವ್ಯಾಪಾರದ ಜಹಜಿಗೂ ಶತ್ರುವಿನ ಒಂದು ಸಬ್ ಮೆರೀನಿಗೂ ಕದನವಾಯಿತು. ಬ್ರಿಟಿಷ್ ಜಹಜು ಆ ಸಬ್ ಮೆರೀನಿಗೆ 32 ಫಿರಂಗಿ ಗುಂಡುಗಳನ್ನು ಹೊಡೆದು ಅದನ್ನು ಮುಳುಗಿಸಿತು. ಈ ಪರಾಕ್ರಮ ಕಾರ್ಯವನ್ನು ಮೆಚ್ಚಿ ಬ್ರಿಟಿಷ್ ಸರ್ಕಾರದವರು ಆ ಜಹಜಿನ ಕ್ಯಾಪ್ಟನ್ ಎಂಬ ಅಧಿಕಾರಿಗೆ ಚಿನ್ನದಿನ ಬಿಲ್ಲೆಯನ್ನೂ 2,400 ಪೌನ್ ಬಹುಮಾನವನ್ನೂ ದಯಪಾಲಿಸಿದರು. ಇದಲ್ಲದೆ ಈಜಿಪ್ಟಿನ ಖೇದೈವ ರಾಜರೂ 30,000 ರೂಪಾಯಿ ಬಹುಮಾನವನ್ನು ಕೊಟ್ಟಿದಾರೆ. ಈ ಯುದ್ಧವು ಯಾವ ಸಮುದ್ರದಲ್ಲಿ ನಡೆಯಿತೆಂದು ತಿಳಿಸಿಲ್ಲ.

ಚೀನಾ ಚಕ್ರಾಧಿಪತ್ಯದಲ್ಲಿ ಪ್ರಜೆಗಳ ಮುಖಂಡರು ಸೇರಿ ಕೆಲವು ವರುಷಗಳ ಹಿಂದೆ ಚಕ್ರವರ್ತಿಯನ್ನು ಓಡಿಸಿಬಿಟ್ಟು ಪ್ರಜಾಪ್ರಭುತ್ವವನ್ನು ಏರ್ಪಾಡು ಮಾಡಿಕೊಂಡು ಯುವಾನ್ ಷಿಕಾಯ್ ಎಂಬಾತನನ್ನು ಪ್ರೆಸಿಡೆಂಟರಾಗಿ ನೇಮಿಸಿದ್ದರು. ಈತನು ಇದುವರೆಗೆ ಪ್ರಜಾಪ್ರಭುತ್ವವನ್ನು ನಡಿಸುತ್ತಿದ್ದು ಈಗ ಸುಮಾರು ನಾಲ್ಕಾರು ವಾರಗಳ ಹಿಂದೆ ತಾನೇ ಚೀನೆಯ ಚಕ್ರವರ್ತಿ ಎಂದು ರಾಜ್ಯಾಭಿಷೇಕ ಮಾಡಿಕೊಂಡಿರುವಂತೆಯೂ, ಈ ವಿಚಾರವು ಆ ಚಕ್ರಾಧಿಪತ್ಯದಲ್ಲಿ ಕಳವಳವನ್ನೂ ಗಲಭೆಯನ್ನೂ ಉಂಟುಮಾಡಿದೆ ಎಂದೂ, ಕೆಲವು ಅಧಿಪತ್ಯಗಳ ಪ್ರಜೆಗಳೂ ಅಧಿಕಾರಿಗಳೂ ಚಕ್ರವರ್ತಿಯನ್ನು ಪ್ರತಿಭಟಿಸಿ ದಂಗೆ ಏಳುವವರಾಗಿರುವಂತೆಯೂ ತಂತೀ ವರ್ತಮಾನಗಳು ಬಂದಿರುತ್ತವೆ.

ಜರ್ಮನಿ ರಾಜ್ಯವು ಈಗಲೂ ಹೊರಗಿನಿಂದ ತನಗೆ ಬೇಕಾಗುವಷ್ಟು ಕೊಬ್ಬರಿಯನ್ನು ಅನ್ಯದೇಶಗಳಿಂದ ತರಿಸಿಕೊಳ್ಳುತ್ತಿರುವಂತೆ ತಿಳಿಯುವುದು. ಯುದ್ಧಕ್ಕೆ ಮುಂಚೆ ಪ್ರತಿ ವರುಷ 2,30,000 ಟನ್‌ಗಳ ಕೊಬ್ಬರಿಯನ್ನು ಜರ್ಮನಿಯವರು ತರಿಸಿಕೊಳ್ಳುತ್ತಿದ್ದರು. ಈ ಪೈಕಿ ಬ್ರಿಟಿಷ್ ಸ್ವಾಸ್ಥ್ಯಗಳಿಂದ 1,24,000 ಟನ್‌ಗಳ ಕೊಬ್ಬರಿ ಆ ರಾಜ್ಯಕ್ಕೆ ಸಾಗುತ್ತಿತ್ತು. ಈಗ ಕೊಬ್ಬರಿಯು ಟನ್ 1 ಕ್ಕೆ 600 ರೂಪಾಯಿ ಆಗಿರುತ್ತದೆ. ಕೊಬ್ಬರಿಯಲ್ಲಿ ಶೇಕಡಾ 70 ರಷ್ಟು ಎಣ್ಣೆ ಇದ್ದು ಗ್ಲಿಸರೀನ್, ಮಾರ್ಗರೀನ್, ಸಾಬೂನು, ಮೇಣಬತ್ತಿಗಳು ತಯಾರಾಗುತ್ತವೆ. ಗ್ಲಿಸರೀನ್‌ನಿಂದ ಒಂದು ತರಹಾ ಸಿಡಿಮದ್ದನ್ನು ತಯಾರುಮಾಡುವರು. ಒಂದಾನೊಂದು ಬ್ರಿಟಿಷ್ ಕಂಪನಿಯು ಹೊಲ್ಯಾಂಡ್ ರಾಜ್ಯದ ಒಂದು ಕಂಪನಿಯವರಿಗೆ ಮಾರ್ಗರೀನ್ ಎಂಬ ಪದಾರ್ಥದ ತಯಾರಿಗೋಸ್ಕರ ವರುಷೇ ವರುಷ 40,00,00,000 ಟನ್‌ಗಳ ಕೊಬ್ಬರಿಯನ್ನು ಒದಗಿಸುತ್ತೇವೆಂದು ಕಂಟ್ರಾಕ್ಟು ಒಪ್ಪಿಕೊಂಡಿದಾರೆ.

ಕ್ಯಾಲೆಂಡರ್ ಉಚಿತ.

ನಮ್ಮಲ್ಲಿ ತಯಾರಾಗುವ ಸುಗಂಧ ದ್ರವ್ಯಗಳನ್ನು ಎರಡು ರೂಪಾಯಿಗೆ ಕಡಮೆ ಇಲ್ಲದೆ ತರಿಸಿಕೊಳ್ಳತಕ್ಕವರಿಗೆ 1916 ನೇ ವರ್ಷದ ಸುಂದರವಾದ ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುವೆವು [8-1]

ವಿಳಾಸ:—ಟಿ ಎಲ್. ಉಪಾಧ್ಯಾಯ & ಕಂಪನಿ, ಸುಗಂಧಶಾಲಿ, ಮೈಸೂರು

GRATIS & POST FREE!!

"THE Art of Perfumery and How to make Scented Hair Oils, Spirit Perfumes, etc.," is being distributed free. Please mention this paper and apply to—

S. PAUL & Co., Perfumers,
4, Hospital Street, Dharamtola, CALCUTTA.

[252-4]

ಹೊಸ ಭೂವಿವರಣೆಗಳು.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ವಿಜ್ಞಾಪುರದ ಭೂವಿವರಣೆ 0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ 0-6-0
   ಮೇಲೆ ಕಂಡ ಎರಡೂ ಸೇರಿ 0-10-0
3. ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)

1916 ನೆಯ

ಲೋವರ್ ಸೆಕೆಂಡರಿ ಕನ್ನಡ ಟೆ|| ನೋಟ್ಸು.

ಕ್ರಯ 7 ಅಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಅಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಅಣೆ; ಪತ್ರರತ್ನಾಕರ 8 ಅಣೆ; ಲೇಖ್ಯತತ್ವ ಪ್ರಕಾಶಿಕೆ 4 ಅಣೆ.

ನಮ್ಮ ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ,
[31-47] ಸುಬೋಧ ಗ್ರಂಥಾಲಯ, ಮೈಸೂರು

ವೀರಕೇಸರಿಯು ಪ್ರತಿಯೊಂದು ಸಂಚಿಕೆಯಲ್ಲಿಯೂ ಈಗಿನ ಯುದ್ಧ ಪರಿಸ್ಥಿತಿಯನ್ನು ಸಾಕಿ ಓದುವವರಿಗೆ ಅತ್ಯಾಶ್ಚರ್ಯಕರವಾಗುವ ಹಾಗೆ ಪ್ರಕಟಿಸುತ್ತದೆ. ಇದರ ವಾರ್ಷಿಕ ಚಂದಾ ರೂ. 1-0-0 ಅದಕ್ಕೆ ಚಂದಾದಾರರಾಗುವವರಿಗೆ ಈ ಕೆಳಗೆ ಕಂಡ ಮಹಾಯುದ್ಧ ಚರಿತ್ರೆಯನ್ನು ಉಚಿತವಾಗಿ ಕೊಡುತ್ತೇವೆ.

ಈಗ ಯೂರೋಪು ದೇಶದಲ್ಲಿ ನಡೆಯುತ್ತಲಿರುವ ಮಹಾ ಯುದ್ಧದ ಚರಿತ್ರೆಯು ಕ್ರಯ ರೂ 1-0-0. ಇದು ಕನ್ನಡ ಭಾಷೆಯಲ್ಲಿ 14 ಅಧ್ಯಾಯಗಳಾಗಿ ಭಾಗಿಸಿ 30 ಚಿತ್ರಪಟಗಳೊಡನೆ ಪ್ರಕಟಿಸಲ್ಪಟ್ಟಿರುತ್ತೆ. ಇದರಲ್ಲಿ ಎಲ್ಲಾ ರಾಜ್ಯಗಳ ಚರಿತ್ರೆಗಳೂ, ಯುದ್ಧಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳೂ, ಪ್ರತಿಯೊಂದು ರಾಜ್ಯದ ಸೇನಾ ಬಲವೂ ಮತ್ತು ವಿಮಾನ ಬಲವೂ, ಅವುಗಳ ಪರಿಸರವೂ, ರಾಜರುಗಳ ಸೇನಾಧ್ಯಕ್ಷರುಗಳು, ಆಯಾ ದೇಶದ ರಾಜರುಗಳು, ಮಂತ್ರಿಗಳು ಮೊದಲಾದವರುಗಳ ಭಾವಚಿತ್ರಗಳೂ, ಯುದ್ಧಸಂಬಂಧವಾದ ವಿಷಯಗಳೂ, ಇವುಗಳೆಲ್ಲವೂ ಸವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. ಯುದ್ಧಾರಂಭವಾದ ರಾಗಾಯಿತು ರಣರಂಗದಿಂದ ಬಂದ ಯುದ್ಧದ ಸಮಾಚಾರಗಳು ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ. ಇಂಥಾ ಯುದ್ಧದ ಚರಿತ್ರೆಯನ್ನು ಇದುವರೆಗೆ ಯಾರೂ ಕನ್ನಡ ಭಾಷೆಯಲ್ಲಿ ತಯಾರಿಸಲಿಲ್ಲ. ಈ ಯುದ್ಧದ ಚರಿತ್ರೆಯನ್ನು ಓದುವಾಗ ಪ್ರತ್ಯಕ್ಷವಾಗಿ ರಣರಂಗವನ್ನೇ ನೋಡುತ್ತಿರುವ ಹಾಗೆ ತೋರುವುದು. ಮದರಾಸಿನಲ್ಲಿ ಯೆಮ್ಡನ್ ಹಡಗಿನಿಂದ ಹೊಡೆಯಲ್ಪಟ್ಟ ಗುಂಡಿನ ವಿವರಣೆಯನ್ನು ವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. [12-1]

ವಿಳಾಸ—ವೀರಕೇಸರಿ, ಬ್ರೊಮ್ಮೈಯರ್ ಬೀದಿ, ಮದರಾಸ್.

ವಾಚಕ ಮಹಾಶಯರೇ! ಈ ಕೆಳಗೆ ಕಂಡ ಆಭರಣಗಳನ್ನು ಅಸ್ಸ್ಟ್ರೇಲಿಯಾ ದೇಶದ ಬೆಳ್ಳಿ ಕಂಬಿಯಿಂದ ತಯಾರಿಸಿರುತ್ತೆ. ಇದರ ರಂಗು ಎಷ್ಟು ವರುಷಗಳಾದರೂ ಕೆಡುವದಿಲ್ಲ. ಇದು ಸರ್ವರಿಗೂ ಧರಿಸಿಕೊಳ್ಳುವದಕ್ಕೆ ಲಾಯಖಾದದ್ದು. ಈ ಕೆಳಗೆ ಕಂಡ ನಗಗಳನ್ನು ನಾವೇ ಸ್ವಂತವಾಗಿ ತಯಾರಿಸುವುದರಿಂದ ಸಾಧ್ಯವುಟ್ಟಿಗೆ ನಮ್ಮ ಬೆಲೆ ಕಮ್ಮಿಯಾಗಿರುವದು.

ಸುಂದರವಾದ ಕಾಲುಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-8-0	1-3-0	0-14-0	0-10-0

ಸುಂದರವಾದ ಪುದುಚೇರಿ ರುಳಿ (ಕಾಲು ಗೊಲಸು).



ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ
1-14-0	1-10-0	1-6-0

ಭಂಗಾರದ ಗಿಲೀಟಿನ ಕೈಗೊಲಸು.

ಸ್ತ್ರೀಯರು ಕೈಯಲ್ಲಿ ಹಾಕಿಕೊಳ್ಳುವದಕ್ಕೆ ಬಹು ಸೊಗಸಾಗಿ ಇರುವದು.

ದೊಡ್ಡವರಿಗೆ	ಚಿಕ್ಕವರಿಗೆ
1-6-0	1-0-0

ಇದರಲ್ಲಿ ಆವಶ್ಯ ಆಭರಣಗಳನ್ನು ತಾವು ನಮಗೆ ಬರೆಯುವಾಗ್ಗೆ ದೊಡ್ಡವರಿಗೆ ಚಿಕ್ಕವರಿಗೆ ಎಂಬುದು ಕ್ರಯ ಸಂಖ್ಯಾಗಿ ತಿಳಿಸಬೇಕು.

ವಿಳಾಸ:—ಮಹಾರಾಟ ಟ್ರೇಡಿಂಗ್ ಕಂಪನಿ,
[252-9] 16, ತಿರುಪಳ್ಳಿಬೀದಿ, ಮದರಾಸು.

ಗೃಹಕೃತ್ಯದ ನೋಟೀಸು.

ಹುಣಸೂರಿನಲ್ಲಿ ನಾಲ್ಕನೇ ಬೀದಿಯಲ್ಲಿರುವ ಮಹಮದ್ ಯಾಸಿಂ ಸಾಬರ ಹೆಂಡತಿ ಜೋರಾಬಿ ಅಮ್ಮನಾದ ನನಗೂ ಮತ್ತು ಮುಂತಮ್ಮನ ಮಕ್ಕಳಿಗೂ ಸಹಾ ಪೋಷಣೆ ಮಾಡಬೇಕೆಂತ ಸದರಿ ಮಹಮ್ಮದ್ ಯಾಸಿಂ ಸಾಬರ ನಿಕಾ ಹೆಂಡತಿ ಖತೀಜಾಬಿಯು ಇತರರ ದುರ್ಬೋಧನೆಗೆ ಒಳಪಟ್ಟು ಮನೆಯಲ್ಲಿದ್ದ ಕಾಗದಪತ್ರಗಳು ಮತ್ತು ಸುಮಾರು 1,000 ರೂಪಾಯಿ ಬೆಲೆ ಬಾಳುವ ಚಿನ್ನ ಬೆಳ್ಳಿ ನಗಗಳು ಇವುಗಳನ್ನು ತೆಗೆದುಕೊಂಡು 1916 ನೇ ಡಿಸೆಂಬರ್ ತಾ. 4 ರಲ್ಲಿ ಮೈಸೂರಿಗೆ ಹೊರಟು ಹೋಗಿರುತ್ತಾಳೆ. ಮಹಮ್ಮದ್ ಯಾಸಿಂ ಸಾಬರ ಆಸ್ತಿಯನ್ನು ವಾರಸು ಖತೀಜಾಬೀಗೇ ಆಗಲೀ ಅವರ ಮಕ್ಕಳಿಗೇ ಆಗಲೀ ಹಕ್ಕಿರುವದಿಲ್ಲ. ಮೈನರ್ ಮಕ್ಕಳಿಗೆ ಖತೀಜಾಬಿಯು ನ್ಯಾಯವಾದ ಗಾರ್ಡಿಯನ್ ಸಹಾ ಆಗಿರುವದಿಲ್ಲ. ಸ್ವತ್ತುಗಳನ್ನು ಅವರುಗಳಿಂದ ಯಾವ ವಿಧವಾಗಿಯೂ ಯಾರೂ ತೆಗೆದುಕೊಳ್ಳಕೂಡದು. ಈಗ ಗಾರ್ಡಿಯನ್ ಆಗುತ್ತೇನೆಂದು ಹೇಳುವವನು ಸಿಪಾಯಿ ಷೇಕ್ ಫರೀದ್ ಸಾಬರ ಮಗ ಇಬ್ರಾಹಿಂ ಸಾಬಿಗೂ, ಸಾರಾಯಿ ಕಂಟ್ರಾಕ್ಟರ್ ನೂರಹಮ್ಮದ್ ಕುಟ್ಟಿ ಮಗಳು ಬಿಟೋ ಖತೀಜಾಬೀಗೂ ಗಾರ್ಡಿಯನ್ ಆಗುವ ವಿಷಯದಲ್ಲಿ ಏನೂ ಹಕ್ಕು ಇರುವುದಿಲ್ಲ. ಮಹಮದ್ ಯಾಸಿಂ ಸಾಬರ ಹೆಂಡತಿ ಜೋರಾಬಿ ಅಮ್ಮ ಗಾರ್ಡಿಯನ್ನಾಗಿರುತ್ತಾರೆ. ಬೇರೆ ಹಕ್ಕುದಾರರು ಸಹ ಇರುತ್ತಾರೆ ತಿಳಿಯಬೇಕು.

[280-3] ಜೋರಾಬಿ ಅಮ್ಮನ ರುಜು.

ಒಳ್ಳೇ ಸಮಯ! ಒಳ್ಳೇ ಲಾಭ!

ಮೇಲಾದ ರೇಷ್ಮೆ ಪಂಚೆಗಳು.

ಮುಂಚಿನ ಬೆಲೆ ರೂ. 1-12-0; ಈಗ ರೂ. 1-6-0.

ನಾವು ಈ ಪಂಚೆಯನ್ನು ಬರುವ ಪಾರ್ಕ್ಫೇರ್ ಮಹೋತ್ಸವಕ್ಕೆ ಬನಾರಸ್ಸಿನಿಂದ ಡೈರೆಕ್ಟಾಗಿ ತರಿಸಿರುವದರಿಂದ ಅಸಲ್ ಕ್ರಯಕ್ಕೆ ವಿಕ್ರಯಿಸುತ್ತೇವೆ ಇತರ ಕಂಪನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು.

ಶೃಂಗಾರವು ನಾಗರೀಕತೆಯು ಕೂಡಿದ ರೇಷ್ಮೆ ಪಂಚೆಗಳು ಹಬ್ಬದ ಕಾಲದಲ್ಲಿ ಧರಿಸುವದಕ್ಕೆ ಆನಂದವಾಗಿ ಇರುವದು. ಈ ಪಂಚೆಗಳು ಜಾಸ್ತಿಯಾಗಿ ಖರ್ಚಾಗುತ್ತಾ ಇರುವದರಿಂದ ಇದರ ಕ್ರಯವನ್ನು ಕಮ್ಮಿ ಮಾಡಿರುತ್ತೇವೆ. ಇದನ್ನು ಸ್ತ್ರೀ ಪುರುಷರು ಬಾಲಿಕಾ ಬಾಲಕರು ಸಂತೋಷದಿಂದ ಧರಿಸಬಹುದು ಇದರಲ್ಲಿ ಕೆಂಪು, ಹಸರು, ರೋಜ, ಇತ್ಯಾದಿ ರಂಗುಗಳು ಇರುತ್ತೆ ಜಾಗ್ರತೆ ತರಿಸಿಕೊಳ್ಳಿರಿ.

ಎರಡು ಪಂಚೆಗಳು ಒಂದೇ ಸಾರಿ ತರಿಸಿಕೊಂಡರೆ ಒಂದು ಪಟ್ಟುದಾರ ಶೀಪೆ ಇನಾಮ ಸಿಕ್ಕುತ್ತದೆ.

ವಿಳಾಸ—ವಿ. ಎ. ಎಸ್. ವಾಣಿ ಕಂಪನಿ,
[252-9] 3, ಅರುಳಪ್ಪನ ಬೀದಿ, ಮದರಾಸು.

ಮೋಸ ಹೋಗಬೇಡಿ! ಮೋಸ ಹೋಗಬೇಡಿ!!

ನಮ್ಮ ಕಂಪನಿಯು ಕಳೆದ ನಾಲ್ಕು ವರುಷಗಳಿಂದಲೂ ಹೆಸರುವಾಸಿ ಪಡೆದಿದೆ ಪ್ರತಿ ದಿನವೂ ಹೈದ್ರಾಬಾದ್, ಮದ್ರಾಸ್, ಬೊಂಬಾಯಿ, ಕಲ್ಕತ್ತಾ, ರಂಗೂನ್, ಲಾಹೂರ್, ಕೊಲಂಬೊ, ಸಿಲೋನ್, ಪೆನ್ನಾಂಗ್ ಮುಂತಾದ ದೇಶಗಳಿಂದ ನಮಗೆ ಆರ್ಡರುಗಳು ಬರುತ್ತಲಿವೆ. ಬಹಳ ಜನಗಳು ನಮ್ಮ ಕಂಪನಿಯ ಔಷಧವನ್ನು ಉಪಯೋಗಿಸಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟಿರುವರು. ಬೇಕಾದವರು ನಮ್ಮ ಕಂಪನಿಗೆ ಬಂದು ನೋಡಬಹುದು—ಕೆಲವರು ನಮ್ಮ ಕಂಪನಿಯ ಹೆಸರನ್ನು ಹೇಳಿ ಜನಗಳಿಗೆ ನಕ್ಕಲ್ ಮಾಲುಗಳನ್ನು ಕೊಟ್ಟು ಮೋಸಪಡಿಸುತ್ತಿರುವರು ಆದ್ದರಿಂದ ನಮ್ಮ ಭಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 6 ಅವೆನ್ಯೂ ರೋಡ್, ಬೆಂಗಳೂರು ಸಿಟಿ ಎಂದು ಮತ್ತು ನಮ್ಮ ಕಣ್ಣಿನ ಎದುರಿನಲ್ಲಿ ಕಾಣುತ್ತಿರುವ ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಆಗಿರುವ ಟ್ರೇಡ್ ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿರಿ. ಹಾಗೆ ನೋಡಿ ತೆಗೆದುಕೊಳ್ಳದೆ ಹೋದರೆ ಮೋಸ ಹೋಗುವಿರಿ ಎಂದು ಡಂಗುರ ಹೊಡೆದು ಹೇಳುವೆವು.

1000 ರೂ. ಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಮಿಸ್ರಿ ಮುರಬ್ಬಾ.

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

Registered.

ಈ "ಸಾಲಾಮಿಸ್ರಿ ಮುರಬ್ಬಾ" ದಿನ ಸೇವಿಸುವದರಿಂದ ಮೂತ್ರಕೋಶ ಸಂಬಂಧದಿಂದ ಉಂಟಾದ ಎಲ್ಲಾ ವ್ಯಾಧಿಗಳನ್ನೂ ಗುಣಪಡಿಸುವದು. ಮತ್ತು ಕೈಕಾಲು, ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲಬದ್ಧತೆ ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತ ಕೆಟ್ಟುಹೋಗಿದ್ದರೂ ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಮಿಸ್ರಿಯಲ್ಲಿ ತಯಾರಾಗಿಲ್ಲವೆಂದು ಪ್ರಕಟಪಡಿಸುವವರಿಗೆ 1000 ರೂಪಾಯಿ ಬಹುಮಾನ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ ಡಬ್ಬಿ 1 ಕ್ಕೆ 2-0-0. ಟಪಾಲು ಖರ್ಚು 1 ಡಬ್ಬಾದಿಂದ 3 ಡಬ್ಬಿವರೆಗೆ 0-6-0. ಪೋಲೀಸಾಗಿ ಅಪೇಕ್ಷಿಸುವವರಿಗೆ ಪ್ರತ್ಯೇಕ ಕಳಿಸುವೆವು.

ನಮ್ಮ ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
[9-1] 6 ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಗಡಿಯಾರ ಬಿಟ್ಟಿ.

ಕ್ರಮ ತಿಳಿಯುವದಕ್ಕೆ ಅರ್ಧ ಅಣೆ ಸ್ಟಾಂಪು ಇಟ್ಟು ಇಂಗ್ಲಿಷಿನಲ್ಲಿ ನಮಗೆ ಬರೆದು ಕೇಳಿ. ನಮ್ಮ ವಿಳಾಸ:—

[13-1] Ghatala & Co., Chitto

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ 12 ಆಣೆಗೆ ಕೊಡಲ್ಪಡುತ್ತ

ಆಶ್ಚರ್ಯವಾದ ಸೇವಿಂಗು ಬಾಕ್ಸು ಎಂಬ ಮರ್ಮದ ಪೆಟ್ಟ

ಈ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ ಬಹು ಸೊಗಸಾಗಿ ವಿಚಿತ್ರ ಕೆಲಸ ಮಾಡಿ ನೋಡುವವನಿಗೆ ಸಂತೋಷಕರವಾದ ಪೆಟ್ಟಿಗೆ. ಈ ಪ್ರಕಾಶ ಬೆಳ್ಳಿಯ ಕೂಡ ಹೊಂಬಾಳಿಸುತ್ತದೆ. ಈ ಪೆಟ್ಟಿಗೆಯಲ್ಲಿ ಹಣವನ್ನು ಬೆಲೆ ವಸ್ತುಗಳನ್ನು ಇಟ್ಟು ಮುಚ್ಚಿ ಬಿಡಬೇಕು. ಅನಂತರ ಅದನ್ನು ಯಾರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಮಾಯವಾಗುವವು. ಆ ಪದಾರ್ಥಗಳು ಇಟ್ಟವರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಕಾಣುವವು. ಪೆಟ್ಟಿಗೆ ಜೇಬಿನಲ್ಲಿ ಕೂಡ ಇಟ್ಟುಕೊಳ್ಳಬಹುದು. ಬೇಗನೆ ತರಿಸಿಕೊಳ್ಳಿ. ಪೆಟ್ಟಿಗೆ ಇಷ್ಟವಿಲ್ಲದಿದ್ದರೆ 8 ದಿನಗಳೊಳಗೆ ಬರೆದರೆ ಹಣವನ್ನು ವಾಪಸ್ ಕಳುಹಿಸುವೆವು.

ನಮ್ಮ ಪೆಟ್ಟಿಗೆಯನ್ನು ತರಿಸಿಕೊಳ್ಳುವವರಿಗೆ 1916 ನೇ ಸಂವತ್ಸರದ ಸುಂದರವಾದ ಬೀಬಿ ಕ್ಯಾಲೆಂಡರ್ ಇನಾಮಾಗಿ ಕಳಿಸುತ್ತೇವೆ.

[252-9] ನಮ್ಮ ವಿಳಾಸ— ರಾಮಚಂದ್ರ ಅಂಡ್ ಕಂಪನಿ,
16, ತಿರುಪಳ್ಳಿ ಬೀದಿ, ಮದರಾ

ಜನವರಿ ಬಹುಮತಿ ಗಡಿಯಾರ.

8 ಸಾಮಾನುಗಳ ಸಹಿತ ಕ್ರಯ ರೂ. 3-8-0.



ಜನವರಿ ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ ಕ್ರಯವನ್ನು ರೂ. 3-6-0 ಕ್ಕೆ ಪ್ರಸಿದ್ಧಿಯರುಗಾಗಿ ಕಮ್ಮಿ ಬೆಲೆಗೆ ವಿಕ್ರಯಿಸುವೆ ಸ್ವಮಾಡಬೇಕಾದ 5 ವರುಷ ಗ್ಯಾರಂಟಿ. (1) ಸರಪಣಿ, (2) ಉತ್ತರ ಮುದ್ರಿ, (3) ರೆಸ್ಟ (4) ವಾಚ್ ಪೆಟ್ಟಿಗೆ, (5) ಕರವಸ್ತ್ರ, (6) ಉಂಗರ, (7) ಕೈಕಟ್ಟ ಮೈಕೂರು ದೀಪದ ಸಾಮಾ (8) ಬ್ಯಾಟ್ರಾಳು ಉಂಕಿಡಿಡಿ ಫೋಸ್ಟೇಜು ಬೆ

ಸುಂದರವಾದ ಮಧುರೆ ಜುನ್ನತಿ ಅಂಚಿನ ಸೀರೆ ಅಪ್ಪರಾ ರು



ರೂ 3-0-0; ನಮ್ಮ ಕಂಪನಿಯಿಂದಾಗಿ ಇರುವದರಿಂದ ಪ್ರತ್ಯಾಕ್ಷವಾಗಿ ನಾವೇ ಈ ಸೀರೆ ಸ್ವಂತ ತಯಾರು ಮಾಡಿಸಿ ಇರುತ್ತೇವೆ. ಇತರ ನಂಬಬೇಡಿ. ನಮ್ಮ ಸರಕು ಪರೀಕ್ಷಿಸಿ ನೋಡಿರಿ ಇದು ಉತ್ತಮವಾದ್ದು ಯಾಗಿಯೂ ನೋಟಕ್ಕೆ ನಯವಾಗಿ ಬೆಲೆ ಸುಲಭವಾಗಿಯೂ ಇದೆ. ಹೋಗಿರು. ಸೀರೆಯ ಉದ್ದ 18 ಸುಂದರವಾದ ಸೆರಗು.

ಬಹಳ ಮೇಲಾದ ಉಪನೇತ್ರ. ಕ್ರಯ ರೂ. 2-8-0.

ಸ್ಫಟಿಕದ ಉಪನೇತ್ರಗಳನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿರಿ. ನಮ್ಮಲ್ಲಿ ಉಪನೇತ್ರಗಳು ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ಬರೆದರೆ ತರಹದ ಮತ್ತು ಎಲ್ಲಾ ನಂಬರಿನ ಉಪನೇತ್ರಗಳನ್ನು ಕಳಿಸುತ್ತೇವೆ. ವಯಸ್ಸು ತಿಳಿಸಬೇಕು; ಕಣ್ಣಿದ್ದು ಪರೀಕ್ಷೆ ಮಾಡಿ ಕಳಿಸುತ್ತೇವೆ.

ಈ ಕೆಳಗೆ ಕಂಡ ನಗಗಳನ್ನು ಅಸ್ಟ್ರೇಲಿಯಾ ಬೆಳ್ಳಿ ಕಂಬಿಯಿಂದ ತಯಾರಿ ಇವೆ. ಇವು ಎಂದಿಗೂ ಕೆಡುವುದಿಲ್ಲ. ಅವು ಎಲ್ಲರೂ ಧರಿಸಿಕೊಳ್ಳಬಹುದು

ಸುಂದರವಾದ ಕಾಲು ಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-8-0	1-3-0	0-14-0	0-1

ಅಂದವಾದ ಡಾಬು (ಒಡ್ಯಾಣ).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ
1-6-0	1-4-0	0-15-0

ಅಂದವಾದ ಪುದುಚೇರಿ ರುಳಿ (ಕಾಲುಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	
1-14-0	1-10-0	1-6-0	1-

ಫೋಸ್ಟೇಜು ಬೇರೆ.

ತಂಜಾವೂರು ಗೆಜ್ಜೆ ಅಡ್ಡಿಗೆ.

[10-1] ಕ್ರಯ 0-7-0

ನಮ್ಮ ವಿಳಾಸ—ಕೆ. ಕೆ. ಮೂರ್ತಿ,
2-18 ತೇರು ಬೀದಿ, ತಿರುವಲ್ಲಿಕ್ಕೇಣಿ, ಮದರಾ

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದೂ ಯೂನಿವರ್ಸಿಟಿ ವಿದ್ಯಾನಿಲಯದ ಫಂಡಿಗೆ ಜಯಪುರದ ಮಹಾರಾಜರವರು 6,00,000 ರೂಪಾಯಿ ಚಂದಾ ಕೊಡುವುದಾಗಿ ವಾಗ್ದಾನ ಕೊಟ್ಟದ್ದಲ್ಲದೆ ವರುಷ ಒಂದಕ್ಕೆ 2,00,000 ರೂಪಾಯಿ ದಾನ ಮಾಡಿದರು.

ಅಹಮದ್‍ನಗರದ ಕ್ಯಾಂಪಿನಲ್ಲಿ ಬಂಧನದಲ್ಲಿಟ್ಟಿರುವ ಶತ್ರು ಪಕ್ಷದ ರಾಜ್ಯದ ಪ್ರಜೆಗಳಿಗೆ ಯಾವ ಕೆಲವು ಪದಾರ್ಥಗಳನ್ನು ಪಾರ್ಸಲ್ ಅಂಚೆ ಅಥವಾ ರೈಲ್ವೆ ಮೂಲಕ ಕಳುಹಿಸಕೂಡದೆಂದು ಇಂಡಿಯಾ ಗವರ್ನ್‍ಮೆಂಟಿನವರು ಹುಕುಂ ಕೊಟ್ಟಿದ್ದಾರೆ.

ಯುದ್ಧದ ಭೂಮಿಗೆ ಕಳುಹಿಸುವುದಕ್ಕಾಗಿ ಬೋನಸ್ ಐರಿಸ್ ದ್ವೀಪದಿಂದ ಒಂದು ಹಡಗಿನಲ್ಲಿ 1,058 ಹೇಸರಕತ್ತೆಗಳು ಕರಾಚಿ ಪಟ್ಟಣಕ್ಕೆ ಬಂದವೆ. ಈ ಹಡಗು 39 ದಿನ ಸಮುದ್ರ ಪ್ರಯಾಣ ಮಾಡಿತು. ದಾರಿಯಲ್ಲಿ 15 ಹೇಸರಕತ್ತೆಗಳು ಸತ್ತುಹೋದವು.

ಪಂಜಾಬ್ ಅಧ್ಯಕ್ಷರವರು ಯುದ್ಧದ ಇಲಾಖೆಗೆ ವಿಮಾನ ಯಂತ್ರಗಳನ್ನು ಕೊಡಬೇಕೆಂದು ಈಗಲೇ 5,37,650 ರೂಪಾಯಿ ಚಂದಾ ಕೂಡಿಸಿದಾರೆ. ಇದಲ್ಲದೆ ಆ ಅಧ್ಯಕ್ಷದಲ್ಲಿರುವ ದೇಶೀಯ ರಾಜರುಗಳು ಬೇರೆ 2,50,000 ರೂಪಾಯಿ ಕೊಡುವಂತೆ ವಾಗ್ದಾನ ಮಾಡಿರುವರು.

ಏಲೂರ್‍ಪುರದ ಪ್ರೆಸ್ ಗೆಜೆಟ್ ಎಂಬ ಪತ್ರಿಕೆಯು ಎಡಿಟರು 15-16 ಜನ ಡಕಾಯಿತಿ ಕಳ್ಳರು ಪೊಲೀಸ್ ಠಾಣಾದೊಳಕ್ಕೆ ನುಗ್ಗಿ ಪೊಲೀಸಿನವರಲ್ಲಿ ಇಟ್ಟಿದ್ದನ್ನು ಕೊಂಡುಹಾಕಿ, ಸರ್ಕಾರದ ಬಂದೂಕು ಕತ್ತಿ ಮುಂತಾದ ಆಯುಧಗಳನ್ನು ತೆಗೆದುಕೊಂಡು ಹೋದರೆಂದು ತಿಳಿಸಿದಾರೆ.

ಫ್ರೆಂಚ್ ಸರ್ಕಾರದವರು ಹಿಂದೂಸ್ಥಾನದ ಅವರ ಸ್ವಾಸ್ಥ್ಯ ನಗರಗಳಲ್ಲಿರುವ ಪ್ರಜೆಗಳಿಗೆ ಇನ್ನು ಮೇಲೆ ಚಿಕ್ಕ ವಯಸ್ಸಿನ ಪ್ರಜೆಗಳನ್ನು ಸೈನ್ಯಕ್ಕೆ ಸೇರಿಸಕೂಡದು ತಕರಾರು ಮಾಡಬೇಕೆಂದು ತಿಳಿಸಿದಾರೆ. ಸೈನ್ಯಕ್ಕೆ ಸೇರಲು ಯೋಗ್ಯರಾದವರೆಲ್ಲಾ ಸೇರಿಕೊಳ್ಳುತ್ತಿದಾರೆಂದು ತಿಳಿಸಲಾಗಿದೆ.

ಬರ್ಮ ಅಧ್ಯಕ್ಷಕ್ಕೆ ಸೇರಿದ ಕರ್ಥಿಕ್ ಎಂಬ ಗ್ರಾಮದಲ್ಲಿ ಒಂದು ಹೆಬ್ಬುಲಿ ಬಂದಿದೆ ಎಂಬ ಸಮಾಚಾರವನ್ನು ತಿಳಿದು ಎಂಟು ಮಂದಿ ಬರ್ಮಾಯರು ಆಯುಧ ಸಮೇತ ಹೆಬ್ಬುಲಿಕ್ಕೆ ಹೋಗಿ ಹುಲಿಯ ಕೂಡ ಕಾದಾಡಿದರು. ಹುಲಿಯು ಆ ಎಂಟು ಮಂದಿಯನ್ನೂ ಕಚ್ಚಿ ಪರಚಿ ಗಾಯಪಡಿಸಿ ಕಡೆಗೆ ತಪ್ಪಿಸಿಕೊಂಡು ಹೋಯಿತು. ಆ ಎಂಟು ಮಂದಿಯನ್ನೂ ಆಸ್ಪತ್ರೆಗಳಲ್ಲಿಟ್ಟು ಚಿಕಿತ್ಸೆ ಮಾಡುತ್ತಿದಾರೆ.

ಡೇರಾ ಘಾಜಿಖಾನ್ ಜಿಲ್ಲಾ ಸಿಂಘಾರ್ ತಹಸೀಲ್‍ಗೆ ಸೇರಿದ ಮಿತಾವಳ ಗ್ರಾಮದಲ್ಲಿ ಕಳೆದ ಡಿಸೆಂಬರ್ 31 ನೇ ತಾ. ರಾತ್ರಿ ಸುಮಾರು 25 ದರೋಡೆಕೋರರು ನುಗ್ಗಿ ಬಾಳಿ ಇದ್ದ ಹಿಂದುಗಳ ಕೆಲವು ಮನೆಗಳಿಗೆ ಬೆಂಕಿ ಹಾಕಿಟ್ಟು ಹಾಕಿದ್ದಲ್ಲದೆ ಒಬ್ಬ ಹಿಂದುವನ್ನು ಕೊಂದು, ಇನ್ನೊಬ್ಬ ಹಿಂದುವನ್ನು ಗಾಯಗೊಳಿಸಿದರು. ಹಿಂದಿನ ತಿಂಗಳಲ್ಲಿ ಒಂದು ದರೋಡೆ ನಡೆದು ಅಗಲೂ ಒಬ್ಬ ಹಿಂದೂ ಸಾಹುಕಾರನನ್ನು ಕೊಂದು ಹಾಕಿದರು.

ಬೊಂಬಾಯಿ ಪಟ್ಟಣದಲ್ಲಿ 1914 ನೇ ವರುಷ 31,853 ಮರಣಗಳಾಗಿದ್ದವು; 1915 ರಲ್ಲಿ 23,681 ಮರಣಗಳಾಗಿವೆ. ಈ ಪ್ರಕಾರ ಹಿಂದಿನ ವರುಷಕ್ಕಿಂತಲೂ 2,941 ಮರಣಗಳೂ, ಕಳೆದ ವರುಷ 699 ಮರಣಗಳೂ ಆದವು. ಈ ಲೆಕ್ಕಗಳಿಂದ ಆ ಮಹಾ ಪಟ್ಟಣದ ಆರೋಗ್ಯಸ್ಥಿತಿಯು ಪ್ರಜೆಗಳಿಗೆ ಹೆಚ್ಚು ಅನುಕೂಲವಾಗುತ್ತಿದೆ ಎಂದೂ, ಅಲ್ಲಿನ ಆರೋಗ್ಯ ಇಲಾಖೆಯವರ ಕಾರ್ಯಗಳು ಫಲಕಾರಿಗಳಾಗಿ ಇತ್ತವೆ ಎಂದೂ ಗೊತ್ತಾಗುವುದು.

ಮದರಾಸ್ ಹೈಕೋರ್ಟಿನ ಪ್ರಿಂಟಿಂಗ್ ಆಫೀಸಿನಲ್ಲಿ ಕೆಲಸ ಮಾಡುವ ಸುಮಾರು 200 ಮಂದಿ ತಮಗೆ ನ್ಯಾಯವಾದ ರಜಾ ಕೊಡಲಿಲ್ಲವೆಂದೂ, ಬಾಕಿ ಕೊಡಲಿಲ್ಲವೆಂದೂ ಆಕ್ಷೇಪಿಸಿ ಕೆಲಸಕ್ಕೆ ಹೋಗದೆ ಬಿಟ್ಟುಬಿಟ್ಟರು. ಆಫೀಸಿನ ಯಜಮಾನರು 4-5 ದಿನಗಳ ತನಕ ನೋಡಿ ಕೆಲಸದವರು ವಾಪಸು ಬಾರದೆಹೋದದ್ದರಿಂದ ಅವರಿಗೆಲ್ಲಾ ಬೇಕಾದ ಅನುಕೂಲವನ್ನು ಮಾಡಿಕೊಡುತ್ತೇವೆಂದು ಭರವಸೆ ಹೇಳಿ ಕೆಲಸಕ್ಕೆ ಬರಮಾಡಿಕೊಂಡರು.

ಕೊಯಮುತ್ತೂರಿನಲ್ಲಿ ಪ್ಲೇಗ್ ಉಪದ್ರವು ಬಹಳ ಜೋರಾಗಿರುವಂತೆ ಸಮಾಚಾರ ಬಂದಿದೆ. ಕಳೆದ 3 ನೇ ತಾ. ವರೆಗೆ 270 ಕಾಯಿಲೆಗಳೂ 155 ಮರಣಗಳೂ ಆದವು. ಸಣ್ಣ ವಯಸ್ಸಿನವರೇ ಬಹಳ ಮಂದಿ ರೋಗವಾಗುತ್ತಿದಾರೆ. 1,000 ಜನರು ಪ್ಲೇಗ್ ಲಿಂಫು ಹಾಕಿಸಿಕೊಂಡದ್ದರಲ್ಲಿ 9 ಜನರಿಗೆ ಪ್ಲೇಗ್ ಬಂದು 3 ಮಂದಿ ಮಾತ್ರ ರೋಗವಾದರು. ಸುಮಾರು 2,000 ಸಂಸಾರಗಳವರು ಮನೆಗಳನ್ನು ಬಿಟ್ಟುಬಿಟ್ಟು ಗುಡಿಸಲುಗಳಲ್ಲಿ ವಾಸಮಾಡುತ್ತಿದಾರೆ. ಬಡಜನರು ಈಗ ಕಷ್ಟಪಡುವಂತಾಗಿದೆ.

ಬೊಂಬಾಯಿ ಜನರಲ್ ಪೋಸ್ಟ್ ಆಫೀಸಿನ ಖಜಾನೆ ಕೊಠಡಿಯೊಳಗೆ ಇಟ್ಟಿದ್ದ ಪೆಟ್ಟಿಗೆಯಲ್ಲಿ 39,000 ರೂಪಾಯಿ ಕಳೆದ ವಾರ ಕಳುವಾಗಿತ್ತು. ಪೋಲೀಸಿನವರು ಪತ್ತೆ ತನಿಖೆ ನಡೆಸಿದ್ದರಲ್ಲಿ ಪೋಸ್ಟ್ ಆಫೀಸಿನ ಕ್ಯಾಷಿಯರ್ ಆದ್ದ ಕಾವಸ್‍ಜಿ ನವರೋಜಿ ಎಂಬ ಪಾರಸೀಯವನ ಮೇಲೆ ಅನುಮಾನವಾಗಿ ಅವನನ್ನು ಹಿಡಿದು ಶೋಧನೆ ಮಾಡಿದರು. ಕಳುವು ಪತ್ತೆ ಆಯಿತು. ಅವನ ಬಳಿ ಆ ಹಣವೆಲ್ಲಾ ಸಿಕ್ಕಿತು. ಅವನು ವಾಸವಾಗಿದ್ದ ಮನೆಯೊಳಗೆ ಕೆಲವು ಹಣವನ್ನು ಇಟ್ಟುಕೊಂಡಿದ್ದನು. ಅವನು ಬಾಕಿ ಹಣವನ್ನು ಸಮುದ್ರ ತೀರದಲ್ಲಿ ಒಂದು ಪೆಟ್ಟಿಗೆಯಲ್ಲಿಟ್ಟು ಮರಳಿನಲ್ಲಿ ಹೂತಿಟ್ಟಿದ್ದನು.

ಗುಜರಾನ್‍ವಾಲಾದ ಡಿಸ್ಟ್ರಿಕ್ಟಿನಲ್ಲಿ ಶ್ರೀಗೋವಿಂದಪುರವೆಂಬ ಊರಿನಲ್ಲಿ ಬಾಬೂಸೆಲ್ ಬೀಬಿ ಗುಡಿಸಲನು ಕಳುವು ಮಾಡಿದನೆಂದು ಪೋಲೀಸಿನವರು ಹಿಡಿದು ಬಂಧನದಲ್ಲಿಟ್ಟುಕೊಂಡು ಹಿಂಸೆಪಡಿಸಿದ್ದರಿಂದ ಅವನು ಸತ್ತುಹೋದನು. ಶವವನ್ನು ನದಿಯಲ್ಲಿ ತೇಲಬಿಟ್ಟರು; ಬಳಿಕ ಅದನ್ನು ಗುಣಿ ತೋಡಿ ಹಾಕಿದರು. ಆದರೆ ಅಬ್ದುಲ್ಲಾ ಎಂಬೊಬ್ಬ ಪೋಲೀಸ್ ಕಾನ್‍ಸ್ಟೇಬಲು ಸಾಕ್ಷಿಯಾಗಿ ಸರ್ಕಾರದ ಕಡೆ ಕೃತ್ಯ ನಡೆದ ವೃತ್ತಾಂತವನ್ನು ಹೇಳಿದನು. ಹೆಡ್ ಕಾನ್‍ಸ್ಟೇಬಲ್ ಎಂಬ ಹೆಡ್ ಕಾನ್‍ಸ್ಟೇಬಲೂ, ಅಹಮದ್ ಎಂಬ ಕಾನ್‍ಸ್ಟೇಬಲೂ ಸೇರಿ ಈ ಹಿಂಸೆಯನ್ನು ನಡಿಸಿದರೆಂಬ ಮೊಕದ್ದಮೆ ಬಂದು ವಿಚಾರಣೆ ನಡೆಯುತ್ತಿದೆ.

ಅವಿವೇಕ ಕಾಲ್ಲೂರಿಗೆ ಸೇರಿದ ಮುಂಚಾಳ ಪಟ್ಟಣದಲ್ಲಿ ಕಳೆದ ತಿಂಗಳ ಕಡೆ ಭಾಗದಲ್ಲಿ ಮಾಧ್ವ ಸಮಯ ಸಂವರ್ಧಿನಿ ಮಹಾಸಭೆಯು ನಡೆಯಿತು. ಮದರಾಸ್ ಅಧ್ಯಕ್ಷದಿಂದ ಸುಮಾರು 6,000 ಜನಗಳು ಅಲ್ಲಿ ಹೋಗಿ ಸೇರಿದ್ದರು. ಸುಮಾರು 50 ಮಂದಿ ಧರ್ಮಾಧಿಕಾರಿಗಳಿಗೂ 300 ಮಂದಿ ವಿದ್ಯಾರ್ಥಿಗಳಿಗೂ 1,500 ರೂಪಾಯಿ ತನಕ ಬಹುಮಾನಗಳು ಕೊಡಲ್ಪಟ್ಟವು. ಸಭೆಯ ಕಾರ್ಯಗಳು ತೃಪ್ತಿಕರವಾಗಿಯೂ ಸಂತೋಷಪ್ರದವಾಗಿಯೂ ಜರುಗಿ ಕಡೆಯಲ್ಲಿ ಮಹಾಸಭಿಕರು ಚಕ್ರವರ್ತಿ ಸಾರ್ವಭೌಮರವರ ಮುಕುಟ ಮೈಸೂರು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳನ್ನು ಮಾಡಿ ಸಭೆಯನ್ನು ಮುಕ್ತಾಯ ಮಾಡಿದರು. ಬಳಿಕ ಲೌಕಿಕ ದೊಡ್ಡಮನುಷ್ಯರು ಎರಡು ಸಭೆಯನ್ನು ಸೇರಿ ತಿರುಪತಿಯ ಶ್ರೀಮಧ್ವ ಸಿದ್ಧಾಂತೋನ್ನಾಹಕ ಸಭಾ ವಿಚಾರವನ್ನು ಕ್ರಮವಾದ ವಿಚಾರಣೆ ಮಾಡಿ, ಈ ಸಭೆಗಳನ್ನು ನಡಿಸುವುದಕ್ಕೆ ಬೆಂಗಳೂರಿನಲ್ಲಿ ಒಂದು ನಿಧಿಯನ್ನು ಪ್ರಾರಂಭಿಸಬೇಕೆಂದು ತೀರ್ಮಾನ ಮಾಡಿದರು.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ ? ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್‍ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನೀನೇ ಮೈಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮೂಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅಶಕ್ತಿ; ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‍ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ, ಕಲ್ಮಷವಾದ ವಾಯುವನ್ನೂ, ಮೂಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [175-20]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು; ಅಥವಾ ಡೋನ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಸುಲೋಚನಗಳು.



ಎಲ್ಲರಿಗೂ ಬೇಕಾದದ್ದು. ಎಲ್ಲರ ನೇತ್ರದೃಷ್ಟಿಯನ್ನೂ ಚೆನ್ನಾಗಿ ಪರೀಕ್ಷಿಸಿ ಉತ್ತಮ ತರಹ ಸುಲೋಚನಗಳನ್ನೇ ಕೊಡಲಾಗುವದು. ನಮ್ಮ ಚಂದ್ರಕಾಂತಿ ಮತ್ತು ಇತರ ತರಹ ಸುಲೋಚನಗಳು ಈಗಾಗಲೇ ಬಹು ಜನರ ಉಪಯೋಗದಲ್ಲಿವೆ. ನಮ್ಮ ಬಳಿ ಬಂದರೆ, ಸುಲೋಚನಗಳು ದಿಗಂತ ಪ್ರತ್ಯಕ್ಷವಾದವು. ಬೆಲೆ ಸುಲಭ.

ನಮ್ಮ ವಿಳಾಸ :—ಎಸ್. ಎನ್. ರಾಮರಾವ್ ಸನ್ಸ್,
[249-10] ಕೋಟೆ ಬಾಗಿಲು, ಬೆಂಗಳೂರು ಸಿಟಿ.

ಕರ್ಣಿಕ ಎಗ್ಯುಮಿಕ್ಸ್ಚರ

ಎಲ್ಲಾ ಜ್ವರಗಳಿಗೂ ಹಿಂದಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-14]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,
ಎಗ್ಯುಮಿಕ್ಸ್ಚರ್ ಡಿಪೋ, ಬೊಂಬಾಯಿ, 4.
KARNIK Bros., BOMBAY, 4.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ ?

ಅಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬಗೆ ಭೂಷಣಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಅಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಂಪಿಯನ್ ಆಗಿರುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳೆದುಕೊಂಡ

ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಅಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಗಮಲಿನ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾರುತಂಥಾದ್ದು ಅಟೋ ಮೋಹಿನಿಯೇ.

½ ಔನ್ಸ್ ಗಾಜಿನ ಬುಡ್ಡಿಯುಳ್ಳ ಸೀಸೆಗೆ ರೂ.	2—0—0	¼ ,, ,, ...	0—8—0
1 ಡ್ರಾಮ್ ಕೊಳವೆಗೆ	,, 0—12—0	ಕಾರ್ಡು ಡಜನ್‍ಗೆ ...	0—12—0

ಕೂದಲನ್ನು ಬೆಳೆಸುವುದರಲ್ಲಿ ನಿಮಗೆ ಇಷ್ಟವುಂಟೇ ? ಹಾಗಾದರೆ ಅತ್ಯಂತ ಶ್ರೇಷ್ಠವೂ ನೂತನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳೆಸುವಂಥಾದ್ದು. ಕಣ್ಣು ಮತ್ತು ಮಿದುಳಿಗೆ ತಂಪನ್ನು ಕೊಡಬಲ್ಲದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ನಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ ? ಇದೊಂದು ದೃಷ್ಟಾಂತವೇ ಸಾಕಾಗಿದೆ. [282-4]

ಕ್ರಯ 1 ಬಾಟ್ಲಿಗೆ ರೂ. 1-0-0
,, 3 ,, ,, 2-10-0.

ಸೋಲ್ ಏಜಂಟರು—ಪಾ ಭಗವಾನ್‍ದಾಸ್ ಚೂನಿಲಾಲ್ ಕಂಪನಿ,
177, ಟೈನಾಟಾರ್ ರೋಡ್, ಮದರಾಸು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವದು. ಈ ಸೆಶಿನ್‍ತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಅಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು. (5) ಬೇಸಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿನ್‍ತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [25-50]

15 ಮಾತ್ರೆಗಳ ಪೊಟ್ಟ 1 ಕ್ಕೆ 3 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	200 ,, ಟಿನ್ ,, 9 ,,	80 ,, ,, ,, 4 ,,	1200 ,, ,, ,, 3 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುವು. ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ರವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 3-0-0

ಜನವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆ ಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇದೆ. ಒಟ್ಟ ಹೋಲುವ ಸೀರೆಯು ಉದ್ದ 18 ಮೊಳ ಸುಂದರವಾದ ಸೀರೆಗಳು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ಎ. ಕೆ. ಕೆಂಪುಸ್ವಾಮಿ

[113-32] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಬೆಲೆ ಬಹುಸುಲಭ ಬೆಲೆ ಬಹುಸುಲಭ

ಸೊಗಸಾದ ಗೆಜ್ಜೆ ಕಟ್ಟಿದ ಭಂಗಾರು ಗಿಲೀಟಿನ ಡಾಬುಗಳು.

ಅನೇಕರು ಕಳುಹಿಸಿರುವ ಡಾಬುಗಳಂತೆ ಇರುವದಿಲ್ಲ. ಭಂಗಾರು ಗಿಲೀಟಿನಿಂದ ಪ್ರಖ್ಯಾತಿಹೊಂದಿದ ತಂಜಾವೂರ್ ದೇಶದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ಮಾಡಿಕೊಳ್ಳುವದಕ್ಕೆ ಚಿಕ್ಕವಾದ ಗುಂಡುಗಳು ಟ್ಟಿ ಡಾಬುಗಳಂತೆ ಮುಂಭಾಗದಲ್ಲಿ ಕೊಣೆಕೆ ಇಟ್ಟು ಸಾಧಾರಣ ಡಾಬುಗಳಂತೆ ತೆಗೆಯುವದಕ್ಕೂ ಹಾಕುವದಕ್ಕೂ ಕಷ್ಟಕೊಡುವದಿಲ್ಲ.



ನೋಟಕ್ಕೆ ಒಂದೇ ತುಂಡಾಗಿಯೇ ಇರುವದು. ಇದರ ಕೆಲಸದ ನಾಜೂಕು ಬರವಣಿಗೆಯಿಂದ ಉಪಯೋಗವಿಲ್ಲ. ಚಿನ್ನದ ಡಾಬಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ಒಟ್ಟರು ತರಿಸಿ ನೋಡಿದರೆ ಮತ್ತೊಬ್ಬರಿಗೆ ತಾವಾಗಿಯೇ ಶಿಫಾರಸು ಮಾಡುವರು.

ಭಂಗಾರದ ಗಿಲೀಟಿನ ಗೆಜ್ಜೆ ಕಟ್ಟಿದ ಡಾಬುಗಳು 1 ಕ್ಕೆ ರೂ. 2-12-0. ಗೆಜ್ಜೆ ಇಲ್ಲದ ಡಾಬುಗಳು ರೂ. 1-12-0.

ಮ್ಯಾನೇಜರ್, ಧೈರ್ಯಲಕ್ಷ್ಮೀ ಅಂಡ್ ಕಂಪೆನಿ,

[252-9] ನಂ. 3, ಇರುಳಪ್ಪನ ಬೀದಿ, ಮದರಾಸು.

ವ್ಯಾಪಾರ ನಿಲ್ಲಿಸಿದ—ನೋಟೀಸು.

ನಮ್ಮ ಕಂಪೆನಿಯಲ್ಲಿ ಇದೇ ಜನವರಿ 1 ನೇ ತಾರೀಖಿನಿಂದ ವ್ಯಾಪಾರ ನಿಲ್ಲಿಸಿ ಇದೇವೆ. ಯಾರಾದರೂ ನಮಗೆ ಆರ್ಡರು ಕಳುಹಿಸಿದರೆ ನಮ್ಮಲ್ಲಿ ಸಾಮಾನುಗಳು ದೊರೆಯಲಾರವು, ತಿಳಿಯುವುದು.

ಟಿ ಯಂ. ರಾಮಚಂದ್ರರಾವ್, 198 ದೇವಿಡ್‌ಸನ್ ಬೀದಿ,

[6-2] ಬ್ರಾಡ್‌ವೇ, ಮದರಾಸು.

ನಂಬಿ ಮೋಸಹೋಗಬೇಡಿರಿ ! ನಂಬಿ ಮೋಸಹೋಗಬೇಡಿರಿ !!

ಅಸಲ್ ಪಂಜಾಬಿ ಮುರಬ್ಬಾ.

ಕೆಲವರು ನಮ್ಮನ್ನು ನೋಡಿ ನಕ್ಕಲ್ ಮುರಬ್ಬಾವನ್ನು ತಯಾರಿಸಿ ನಮ್ಮ ಹೆಸರು ಇಟ್ಟು ಜನಗಳಿಗೆ ಮೋಸಮಾಡುತ್ತಾರೆ. ಅದನ್ನು ಕೊಂಡು ಮೋಸಹೋಗಬೇಡಿರಿ. ನಮ್ಮಂಥ ಕಳುಹಿಸುವ ಭಾರಿಗಳನ್ನು ತೆಗೆಯುವಾಗ ಧೈರ್ಯಲಕ್ಷ್ಮೀ ಅಂಡ್ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು ಎಂತ ಮುದ್ರಿಸಿರುವ ಲೇಬಲ್ ನೋಡಿ ತೆಗೆಯಿರಿ.

500 ರೂಪಾಯಿಗಳ ಬಹುಮಾನ!

ಲೋಕಪ್ರಸಿದ್ಧವಾದ "ಪಂಜಾಬಿ ಸಕಲ ರೋಗ ಸಂಜೀವಿ"

ನಿಮ್ಮ ಜನ್ಮಭೂಮಿಯ ಸೇವೆಯನ್ನು ಮಾಡುವದಕ್ಕೆ ತನ್ನ ಶರೀರ ಸೌಖ್ಯವನ್ನೂ, ಕಾಯಪುಷ್ಟಿಯನ್ನೂ ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕರಾಗಿರಬೇಕು. ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥದ್ದು ನಿಮ್ಮ ಮಾತುಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿಯೂ, ದಕ್ಷಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತಿರಬೇಕು. ಈ ಉದ್ದೇಶಕ್ಕಾಗಿ ನಮ್ಮ ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿರುವ "ಪಂಜಾಬಿ ಸಕಲ ರೋಗ ಸಂಜೀವಿ" ಯನ್ನು ಸೇವಿಸಿರಿ. ಇದರಲ್ಲಿ ಅಫಿನಂಜಿ, ಬೆಳ್ಳಿ ಸೇರಿಸಿ ಬಹಳ ಶುದ್ಧವಾಗಿ ಕೈಯಿಂದ ಮುಟ್ಟದೆ ತಯಾರುಮಾಡಿದೆ. ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ.

10 ತೊಲೆ ಡಬ್ಬಿ 1 ಕ್ಕೆ ರೂ. 1-8-0

64 ಪೇಜು ದೊಡ್ಡ ಕ್ಯಾಟಲಾಗ್ ಬೇಡುವವರಿಗೆ ಉಚಿತವಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:—ಧೈರ್ಯಲಕ್ಷ್ಮೀ ಅಂಡು ಕಂಪೆನಿ,

[252-9] 3, ಇರುಳಪ್ಪನ ಬೀದಿ ಮದರಾಸು.

"ಹನುಮಾರ್ಕ್" ಬೋರಾಕ್ಸ್ ಸಾಬೂನು.

ಹನುಮಾರ್ಕ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚೆರ್ಮ ಸಂಬಂಧವಾದ ತುಣ್ಣು, ಹಿಜ್ಜ, ತುರಿ ಮೊದಲಾದ ವ್ಯಾಧಿಗಳು ಹನುಮಾರ್ಕ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ಕೂದಲಿಗೆ ನುಣುಪು ಮತ್ತು ಕಳೆಯನ್ನೂ ಕೊಡುವುದರಲ್ಲಿ ಹನುಮಾರ್ಕ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ—ಪ್ರತಿ ದಿನವೂ ಹನುಮಾರ್ಕ್ ಸಾಬೂನಿನಿಂದ ಬೆಳಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ಜತೆಗೆ ಹಾಕಿಕೊಳ್ಳುವುದರಿಂದ ಹಲಿಕೆ ಕಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡುಗಿಯರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ಕ್ ಸಾಬೂನನ್ನು ಉಪಯೋಗಿಸಿದ ಜನರು ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಷಹರುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾರ್ಕ್ ಗುರುತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಸೂ. ಕ:—ಎಲ್ಲರೂ ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆಯಬೇಕು.

ಬೆಂಗಳೂರು ಸಿಟಿ ಮ್ಯಾ ಎಸ್. ದಾಸಪ್ಪನವರಲ್ಲಿ ಬಿಕರಿಗೆ ಇಟ್ಟಿದೇವೆ

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-13] ತುಪಿನಿಂಗ್ ಬಜಾರ್ ರೋಡ್, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

24 12—1915 ರಿಂದ 31 - 12 - 1915 ರ ವರೆಗೆ

ಸ್ಥಳ		ಪ್ಲೇಗ್ ಸಂಗತಿ ದ್ದು.	ಪ್ಲೇಗ್ ಸತ್ತ ದ್ದು.	ಕಾಲರಾ ಸಂಗತಿ ದ್ದು.	ಕಾಲರಾ ಸತ್ತ ದ್ದು.
ಬೆಂಗಳೂರು	ಪಟ್ಟಣ	3	2	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು		67	42	0	0
ಮೈಸೂರು	,,	33	28	0	0
ಕೋಲಾರ್	,,	7	5	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಮಕೂರು ಡಿಸ್ಟ್ರಿಕ್ಟು		0	0	0	0
ಹಾಸನ	,,	5	3	4	3
ಚಿತ್ರದುರ್ಗ	,,	102	62	0	0
ಕಡೂರ್	,,	10	8	4	4
ಶಿವಮೊಗ್ಗ	,,	34	22	0	0
	ಜುಮ್ಲಾ	261	172	8	7

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರದ ದಕ್ಷಿಣಾಯನೆ ಹೇಮಂತಋತೌ ಪುಷ್ಯ ಶುದ್ಧ ದಶಮಿ ಶುಕ್ರವಾರದಿಂದ ಪುಷ್ಯ ಶುದ್ಧ ಪೌರ್ಣಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1916 ನೇ ಜನವರಿ.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮೊಹರಮ್ ತೇದಿ
14	ಶುಕ್ರ †	ದಶಮಿ	50-57	ಭರಣಿ	39-59	1
15	ಶನಿ ‡	ಏಕಾದಶಿ	55-12	ಕೃತ್ತಿಕೆ	36-4	2
16	ಭಾನು ;;	ದ್ವಾದಶಿ	60-0	ರೋಹಿಣಿ	42-20	3
17	ಸೋಮ *	ದ್ವಾದಶಿ	0-34	ಮೃಗಶಿರ	48-30	4
18	ಮಂಗಳ §	ತ್ರಯೋದಶಿ	6-0	ಆರಿದ್ರಾ	55-11	5
19	ಬುಧ ,,	ಚತುರ್ದಶಿ	11-22	ಪುನರ್ವಸು	60-0	6
20	ಗುರು ::	ಪೌರ್ಣಮಿ	16-19	ಪುನರ್ವಸು	1-19	7

† ಉತ್ತರಾಯಣ ಪುಣ್ಯಕಾಲ, ಶಿವಗಂಗಾ ಗಂಗೋತ್ಪತ್ತಿ, ಮಳೆ ನಕ್ಷತ್ರ—ಉತ್ತರಾಷಾ 2 ನೇ ಪಾದ. ‡ ಸ್ಮಾರ್ತರ ಮುಂಜುಳ ಏಕಾದಶಿ, ತ್ರೈಲೋಕ್ಯಗೌರೀವ್ರತ, ಕನಕಿಹಬ್ಬ, ಚುಂಚನಕಟ್ಟೆ ರಾಮಸ್ವಾಮಿ ರಥ, ಶ್ರೀರಂಗಪಟ್ಟಣದ ರಂಗಸ್ವಾಮಿ ರಥ. ;; ಸರ್ವತ್ರ ವೈಷ್ಣವ ಏಕಾದಶಿ, ಹರಿವಾಸರ, ದಗ್ಧಯೋಗ * ಪ್ರದೋಷ, ಮಳೆ ನಕ್ಷತ್ರ—ಉತ್ತರಾಷಾ 3 ನೇ ಪಾದ § ನಾಕಂಬರೀವ್ರತ, ಮೂಗೂರು ಹೊಡೆ, ಶನಿಚಂದ್ರಯೋಗಸ್ನಾನಂ. ,, ಪಾತಾಭಾವ, ಬನಶಂಕರೀವ್ರತ, ಮೇಲುಕೋಟೆ ಪುನರ್ವಸು ಉತ್ಸವ, ಶ್ರೀರಂಗದಲ್ಲಿ ರಂಗನಾಥಸ್ವಾಮಿ ರಥ. :: ಪ್ರಥಮಾ ತಿಥಿ, ಮೂಗೂರು ಬಂಡೀ ಉತ್ಸವ, ಮಳೆ ನಕ್ಷತ್ರ—ಉತ್ತರಾಷಾ 4 ನೇ ಪಾದ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ನೋಡಿಯಿರುವದು ನಿಜವಾಗಿಯೂ ತಪ್ಪುವುದು—ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಾಲಹಿನತೆ ಕಟ್ಟಿಹಾಕು, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾವ್ಯೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 360 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆರೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಲ್. ಪ್ಯಾ ಇನ್ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಐ ಎಲ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸಕೋಶ್ಯಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಹಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ನಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ" (2) ಮ|| ಟಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರ್ಮಾಡಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ಸರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಾರೆ."

[189-18] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆಯಿರಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡುಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೀಲಿಕಲ್ಲಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ನಿರ್ನಾಮ ಮಾಡುವುದು. ಕೆನ್ನೆಯಲ್ಲಿ ಮಂಗುವನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರಜಾಜಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯೂ ಇರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಮೂರು ದಿವಸಗಳ ವರೆಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ಪಟ್ಟೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಜರ್ಮನ್ ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಪಾತ್ರೆ 22, ಕೊಂಡೆ ಗಿಣಿಗಳು 6, ಕಾರ್ನೇಷನ್ ಬ್ರೂಚ್ 1, ಜವಾಜಿ ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತಿ

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪೆನಿ,

[280 7] ನಂ. 44, ನಂಬುಳಯ್ಯರ ಬೀದಿ, ಮದರಾಸು.

Printed and Published by the Rev. H. Gulliford, Proprietor and Manager, Wesleyan Mission Press, Mysore. 19/1/1916.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು–ಸನ್ ೧೯೧೬ ನೇ ಇಸವಿ ಜನವರಿ ತಾರೀಖು ೨೦ ನೇ ಗುರುವಾರ. ಸಂಚಿಕೆ ೩೪

GRATIS & POST FREE!!

"THE Art of Perfumery and How to make Scented Hair Oils, Spirit Perfumes, etc.," is being distributed free. Please mention this paper and apply to—

S. PAUL & Co., Perfumers,

1, Hospital Street, Dharamtola, CALCUTTA. [[illegible]]

ನೋಟೀಸ್.

[illegible] [172-11]

ಮೋಹನ್ ಮತ್ತು ಜನರಲ್ ಏಜನ್ಸಿ—

144, ದೊಡ್ಡಪೇಟೆ, ಬೆಂಗಳೂರು ಸಿಟಿ.	ಕೋಟೆ [illegible] ಬೀದಿ, ಶಿವಮೊಗ್ಗ.

ಉತ್ತಮವಾದ ಫೌಂಟೆನ್ ಪೆನ್ನುಗಳು ದೊರೆಯುತ್ತೆ.

ಸ್ವಾನ್ 200 ನೆ ನಂಬರ್ ಪೆನ್ ಒಂದಕ್ಕೆ	ರೂ. 1-14-0
ಸ್ವಾನ್ 205 ನೆ ನಂಬರ್ ಪೆನ್ ಒಂದಕ್ಕೆ	,, 2-10-0
ಸ್ವಾನ್ 250 ನೆ ನಂಬರ್ ಪೆನ್ ಒಂದಕ್ಕೆ	,, 3-12-0
ಸ್ವಾನ್ 210 ನೆ ನಂಬರ್ ಪೆನ್ ಒಂದಕ್ಕೆ	,, 4-0-0
ಸ್ವಾನ್ 251 ನೆ ನಂಬರ್ ಸೇಫ್ಟಿ ಪೆನ್ ಒಂದಕ್ಕೆ	,, 3-12-0
ಸ್ವಾನ್ 2 7 ನೆ ನಂಬರ್ ಪೆನ್ ಒಂದಕ್ಕೆ	,, 3-6-0
ಸ್ವಾನ್ 158 ನೆ ನಂಬರ್ ಪೆನ್ [illegible] ಒಂದಕ್ಕೆ	,, 1-2-0
ಉತ್ತಮವಾದ ಸ್ವಾನ್ [illegible] ಪೆನ್ ಒಂದಕ್ಕೆ	,, 3-12-0
ಉತ್ತಮವಾದ ಫೌಂಟೆನ್ ಪೆನ್ ಕ್ಲಿಪ್ ಕ್ರಯ ಒಂದಕ್ಕೆ	,, 0-4-0

[illegible]

ನಮ್ಮ ವಿಳಾಸ–ದಿ ಸಿಟಿ ಸೈಕಲ್ ಸ್ಟೋರ್ಸ್,

[279-6] [illegible], ಮೈಸೂರು.

Pure Woollen Rugs.

ಬೆಂಗಳೂರು ಬಿನ್ನಿ ಮಿಲ್ ರಗ್ಗುಗಳು.

[illegible] ಉಲ್ಲನ್ನಿನಲ್ಲಿ ಮಾಡಿದ್ದು. ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಈಗಿನ ಬೆಲೆ ಮುಂದಕ್ಕೆ ದೊರೆಯುವಲ್ಲ.

ಜಾಗ್ರತೆಯಾಗಿ ನೋಡಿ. ಸಮಯ ಕಳೆದ ನಂತರ [illegible]ಲಾರದು. ಸಕಾಲದಲ್ಲಿ ಉಪಯೋಗ ಹೊಂದಬೇಕು.

ಸೈಜು 64 × 100 (ಅಂಗುಲ)	ರೂ. 10-8-0	
,, 60 × 90 ,,	,, 7-0-0	

ಕರೆಸಿಕೊಳ್ಳುವವನಿಗೆ ರೈಲ್ ಪಾರ್ಸೆಲ್ ಚಾರ್ಜು ಪ್ರತ್ಯೇಕ. [illegible]ದರಲ್ಲಿ 5 ರಗ್ಗುಗಳಿಗಿಂತಲೂ ಹೆಚ್ಚಾಗಿ ತೆಗೆದು[illegible] ರೈಲ್ ಪಾರ್ಸೆಲ್ ಚಾರ್ಜು ಬೀಳುವದಿಲ್ಲ. ಇವ[illegible] ಉಲ್ಲನ್ ರಗ್ಗುಗಳು, ಬಾಲಾಕ್ಲಾವಾ ಟೋಪಿ [illegible] ಮೊದಲಾದವೆಲ್ಲಾ ನಮ್ಮಲ್ಲಿ ದೊರೆಯುತ್ತವೆ.

H. JEWANMULL & Co.,

Chickpet, Bangalore City.

[illegible]–ಎಚ್. ಜವಾನ್‌ಮಲ್ ಕಂಪನಿ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸ್ತ್ರೀಯರ ಭೂಷಣವು!!!

[illegible]

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು [illegible]



[illegible] ಆಗುತ್ತದೆ. ಈ ತೈಲವನ್ನು [illegible] [illegible] ವು ಆಗುವುದು.

[illegible]

ಅಪ್ಪಟವಲ್ಲದ ಒಂದನ್ನೇ [illegible]

[illegible] ಕ್ರಯ ರೂ. 1-0-0 ಅ. ವೆ. 0-4-0 [illegible] ಕ್ರಯ ರೂ 2-10-0, ಅ ವೆ. 0-7-0 [illegible]

ಸೂಚನೆ.—[illegible] "ಕಾಮಿನಿಯಾ ತೈಲ" [illegible]

ಅತೀ ಮನೋಹರವಾದ ಸುಗಂಧಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು [illegible] [18-52]

[illegible] ರೂ. 0-8-0. ಒಂದು [illegible] (ಮೀಡಿಯಂ) [illegible] 0-12-0. [illegible] ರೂ. 2-0-0. [illegible] ರೂ. 0-4-0. ಒಟ್ಟೊ-ದಿಲ್ ಬಹಾರ್ [illegible] ಒಂದಕ್ಕೆ 0-12-0.

[illegible]—

[illegible] ಡ್ರಗ್ ಕೆಮಿಕಲ್ ಕಂಪನಿ,

[illegible], ಜುಮ್ಮಾ ಮಸೀದ್, ಮಾರ್ಕೆಟ್, ಬಾಂಬೆ.

[illegible]

ಕ್ಯಾಲೆಂಡರ್ ಉಚಿತ.

ನಮ್ಮಲ್ಲಿ [illegible] 1916 ನೇ ವರ್ಷದ [illegible] ಕ್ಯಾಲೆಂಡರನ್ನು ಉಚಿತವಾಗಿ [illegible]. [8 1]

ವಿಳಾಸ:—[illegible] ಉಪಾಧ್ಯಾಯ & ಕಂ, [illegible], ಮೈಸೂರು.

ವ್ಯವಹಾರ ನಿರ್ಣಯ.

ಕ್ರಯ [illegible] ಸಿವಿಲ್ ಕ್ರಿಮಿನಲ್ [illegible] 615 [illegible] ಗ್ರಂಥ. ವಿ. ಪಿ. [illegible] ರೂ. 2-8-0; [illegible] ರೂ. 1-12-0. [166-31]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಪ್ರಶ್ನೋತ್ತರ ಲೇಖ್ಯಬೋಧಿನಿ ಕ್ರಯ ೧-೮-೦

ಸಿವಿಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ಸಮಸ್ತ [illegible] ಕ್ಕೆ, ಸರ್ವಾಂಗ ಸುಂದರವಾದ ಪುಸ್ತಕ! ಬೇಗ ಬೇಗ ಬರೆದು [illegible]!!

ಕ್ರಯ ಒಂದು ರೂಪಾಯಿ ಎಂಟಾಣೆ.

ನಮ್ಮ ವಿಳಾಸ:—ಭಾರತಿ ಸಂಸಂಗಿರಾಮ,

[4-3] 49, ಸಿ. ಪೇಟೆ, ಕೋಟೆ, ಬೆಂಗಳೂರು ಸಿಟಿ.

ಬೇಗ ತರಿಸಿಕೊಳ್ಳಿ [illegible]

ಕನ್ನಡ ಕ್ರಿಮಿನಲ್ ಪ್ರೊಸಿಜರ್ ಕೋಡು.

[illegible] ಕ್ರಯ 696 ಪುಟಗಳ 3 [illegible] [251-10] ವಿಳಾಸ:—ಬಿ. [illegible], ಬೆಂಗಳೂರು.

ನವೀನ ಕಾದಂಬರಿಗಳು.

[illegible] ಕಥೆ	1-0-0
[illegible] ನಾವೆಲ್.	0-6-0
[illegible] ಕಾದಂಬರಿ	0-8-0
[illegible] ಕಥೆ.	0-8-0

[illegible] 1 ಕ್ಕೆ 8 ಆಣೆ. [illegible] 6 ಆಣೆ [illegible] 4 ಆಣೆ. ಮುಂತಾದ ಹಲವು ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

[277-6] ವಿಳಾಸ:—[illegible], ಮೈಸೂರು.

ಡೈರಿ ಬಹುಮಾನ.

ಒಂದು ತಿಂಗಳು ಮಾತ್ರ! ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

[illegible] 1916 ನೇ ವರ್ಷದ [illegible] 12 [illegible] 8 [illegible] 5 [illegible] 5 [illegible] 6 [illegible] 2 ರೂ. [illegible] 1-4-0. [illegible] (S.T.A. Perpetual Calendar) [illegible] 10 ಅ. S.T.A. [illegible] 12 [illegible]. [281-6]

ವಿಳಾಸ.—ಎಂ. ಎಸ್. ರಾವ್ ಕಂಪನಿ, [illegible] ರೋಡ್ ಬೆಂಗಳೂರು ಸಿಟಿ.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

(ಕನ್ನಡದಲ್ಲಿ)

[illegible] [illegible] ರೂ. 2-4-0. [illegible] [[illegible]]

[illegible]

ಲಿಟ್ಲ್ಸ್ ಓರಿಯೆಂಟಲ್ ಬಾಮ್ ಎಂಬದು.

ಹಳೇ ನೋವಿದ್ದರೂ, ಊತ ಇದ್ದರೂ, ಯಾವತರದ ಕಷ್ಟವಿದ್ದರೂ ಸ್ವಲ್ಪ ವಾಸಿ, ಬಿಡುಗಡೆಯು ಆಶೀರ್ವಾದವೂ ದೊರೆತ್ತದೆ.

ಚಟ್ಟರ್‌ಕೋಲ್ಡ್ ಫೀಲ್ಡಿನ ಜೆ. ಹ್ಯೂಜೆಸ್ ಬರೆಯುವದು:—"ನನ್ನ ಹತ್ತಿರವಿದ್ದ ಲಿಟಲ್‌ಸ್ ಓರಿಯಂಟಲ್ ಬಾಂ ಎಂಬದರ 1 ಸೀಸೆಯನ್ನು ನನ್ನ ಕಾಲಿಗೂ, ಮೋಣಕಾಲಿಗೂ ಹಚ್ಚಿದ 10 ನಿಮಿಷಗಳಲ್ಲಿ ನೋವು ಬಿಟ್ಟಿತು. ಮತ್ತೊರಡಾವರ್ತಿ ಉಪಯೋಗಿಸಿದೆನು.—ನನಗಿದ್ದ ನೋವು ತಿರುಗಿ ಬರಲೇ ಇಲ್ಲ. ಆ ತೈಲದಲ್ಲಿ ಸ್ವಲ್ಪ ಅಂಗೈಗೆ ಹಾಕಿಕೊಂಡು ನನ್ನ ಮಗನಗಂಟಲ್ನ ನೋವಿಗೆ ಹಚ್ಚಿದೆನು. ಅವನಿಗೆ ಸ್ವಸ್ಥವಾಯಿತು. ಒಬ್ಬ ಹೆಂಗಸಿನ ಳು! ಅವಳಕಾಲು 1 ವರುಷದವರೆಗೆ ಬಿಗಿದಾಗಿತ್ತು. ಅದರಿಂದ ಅವಳು ಅಧಿಕ ನೋವನ್ನು ಅನುಭವಿಸಿದಳು. ಲಿಟಲ್‌ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಲು ಹೇಳಿದೆನು. ನನ್ನಲ್ಲಿದ್ದ 1 ಸೀಸೆಯ ತೈಲವನ್ನು ಮಾತ್ರ ಆಕೆಗೆ ಕೊಟ್ಟೆನು. ಅದರಿಂದಲೇ ಆಕೆಗೆ ಕ್ಷೇಮವಾಯಿತು."

ಸೀಸೆ 1ಕ್ಕೆ 1 ರೂ. ಮೇರಿಗೆ ಔಷಧಿಗಳ ಅಂಗಡಿಗಳಲ್ಲಿ ಯೂ ಸಿಗುತ್ತೆ.

[81-38]

ಮೋಸ ಹೋಗಬೇಡಿ! ಮೋಸ ಹೋಗಬೇಡಿ !!

ನಮ್ಮ ಕಂಪನಿಯು ಕಳೆದ ನಾಲ್ಕು ವರುಷಗಳಿಂದಲೂ ಹೆಸರುವಾಸಿ ಪಡೆದಿದೆ. ಪ್ರತಿ ದಿನವೂ ಹೈದ್ರಬಾದ್, ಮದ್ರಾಸ್, ಬೊಂಬೈ, ಕಲ್ಕತ್ತಾ, ರಂಗೂನ್, ಬನಾರಸ್, ಕೊಲಂಬೊ, ಸಿಲೋನ್, ಸಿಂಗಪೂರ್ ಮುಂತಾದ ದೇಶಗಳಿಂದ ನಮಗೆ ಆರ್ಡರುಗಳು ಬರುತ್ತಲಿವೆ. ಬಹಳ ಜನಗಳು ನಮ್ಮ ಕಂಪನಿಯ ಔಷಧವನ್ನು ಉಪಯೋಗಿಸಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟಿರುವರು. ಬೇಕಾದವರು ನಮ್ಮ ಕಂಪನಿಗೆ ಬಂದು ನೋಡಬಹುದು.—ಕೆಲವರು ನಮ್ಮ ಕಂಪನಿಯ ಹೆಸರನ್ನು ಹೇಳಿ ಜನಗಳಿಗೆ ನಕ್ಲಲ್ ಮಾಲುಗಳನ್ನು ಕೊಟ್ಟು ಮೋಸಪಡಿಸುತ್ತಿರುವರು. ಆದ್ದರಿಂದ ನಮ್ಮ ಭಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯೂ ರೋಡ್, ಬೆಂಗಳೂರು ಸಿಟಿ ಎಂದು ಮತ್ತು ನಮ್ಮ ಕಣ್ಣಿನ ಎದುರಿನಲ್ಲಿ ಕಾಣುತ್ತಿರುವ ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಆಗಿರುವ ಟ್ರೇಡ್ ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿರಿ. ಹಾಗೆ ನೋಡಿ ತೆಗೆದುಕೊಳ್ಳದೆ ಹೋದರೆ ಮೋಸ ಹೋಗುವಿರಿ ಎಂದು ಮುಂಗಡ ಹೊಡೆದು ಹೇಳುವೆವು.

1000 ರೂ. ಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಮಿಸ್ರಿ ಮುರಬ್ಬಾ.

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

Registered.

ಈ "ಸಾಲಾಮಿಸ್ರಿ ಮುರಬ್ಬಾ" ವಿನ ಸೇವನೆಯಿಂದ ಮೂತ್ರಕೋಶ ಸಂಬಂಧದಿಂದ ಉಂಟಾದ ಎಲ್ಲಾ ವ್ಯಾಧಿಗಳನ್ನೂ ಗುಣಮಾಡುವುದು. ಮತ್ತು ಕೈಕಾಲು, ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತ ಕೆಟ್ಟುಹೋಗಿದ್ದರೂ ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಮಿಸ್ರಿಯಲ್ಲಿ ತಯಾರಿಲ್ಲವೆಂದು ವ್ಯಕ್ತಪಡಿಸುವವರಿಗೆ 1000 ರೂಪಾಯಿ ಬಹುಮಾನ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ ಡಬ್ಬಿ 1 ಕ್ಕೆ 2-0-0. ಟಪಾಲು ಖರ್ಚು 1 ಡಬ್ಬದಿಂದ 3 ಡಬ್ಬಿವರೆಗೆ 0-6-0. ಕೇಟಲಾಗು ಅಪೇಕ್ಷಿಸುವವರಿಗೆ ಪುಕ್ಕಟೆ ಕಳಿಸುವೆವು.

ನಮ್ಮ ವಿಳಾಸ:— ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
[0–2] 5 ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

1. ಆರೋಗ್ಯ ಪ್ರಭಾಕರ. (ಟಾನಿಕ್ ಪಿಲ್ಸ್)—ಪಿತ್ತಕೋಶ, ಶ್ವಾಸಕೋಶಗಳನ್ನು ಸರಿಪಡಿಸಿ, ರಕ್ತವೃದ್ಧಿ ಮಾಡಿ, ನರಗಳಿಗೆ ಬಲಕೊಡುತ್ತೆ. ಚಾತುರ್ಥಿಕ, ಪಿತ್ತಪಾಂಡು, ಕ್ಷಯ, ಬಾಣಂತಿಯರ ಕ್ಷಯ, ಮುಟ್ಟುಕಟ್ಟು, ಪಾರ್ಶ್ವವಾಯುಗಳನ್ನು ನಿವಾರಿಸುವದರಲ್ಲಿ ಅಸಮಾನವಾದುದು. 48 ಮಾತ್ರೆಗೆ 1 ರೂ, 6 ಶೀಸೆಗೆ 5 ರೂ.

2. ರೋಗನಾಶಿನಿ.—ಪ್ಲೇಗುಸೋಂಕು ಆಡುಬಾಡು ಗ್ರಾಮಗಳಲ್ಲಿರುವಾಗಲೇ ಪ್ರತಿ ಒಬ್ಬರೂ ದಿನವೂ 3-4 ಸಲ 1-2 ಮಾತ್ರೆಯಂತೆ ಸೇವಿಸುವದರಿಂದ ಪ್ರಾಣವನ್ನುಳಿಸಿಕೊಳ್ಳಬಹುದು. ಜನೋಪಕಾರಾರ್ಥವಾಗಿ ಬೆಲೆ ಸುಲಭವಿಟ್ಟಿದೆ. ಇದರ ಗುಣಕ್ಕೆ ನಮಗೆ ಅನೇಕ ಬಹುಮಾನಗಳು ಬಂದಿವೆ. 40 ಮಾತ್ರೆಗೆ 4 ಆ, 5 ಶೀಸೆಗೆ 1 ರೂ, 12 ಕ್ಕೆ 2½ ರೂ.

[126-20] ನಮ್ಮ ವಿಳಾಸ.— ಪಂಡಿತ್ ಎಸ್. ಗೋಪಾಲ, ಮೈಸೂರು.

S. U. N. & Co.,

BENARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸಿರುವ ಉತ್ತಮವಾದ ಬನಾರಸ್ ಜರಿ ಸೀರೆಗಳು, ಕಣ, ಪೇಟ, ಕಾಶ್ಮೀರ್ ಶಾಲು, ದುಪ್ಪಟಿ, ಮುಗುಟ, ಜಗನ್ನಾಥ ಜಮಖಾನ, ರುದ್ರಾಕ್ಷಿಗಳು, ಕೆಂಪುಕಾಗದು, ಆರತಿ ಪೇಟಿ, ಧರ್ಮಾರ್ಥದ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೇಲಾಗಿ ನಾವು ತಯಾರಿಸಿರುವೆವು. ಈ ಅಮೂಲ್ಯವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೇಟಲಾಗು ಒಂದು ಕಾಣಿ ರಾಕಟ್ಟಿನ ದಾರವನ್ನು ಉಚಿತವಾಗಿ ಕಳುಹಿಸಲಾದೀತು. [119-27]

ವಿಳಾಸ.— ಎಸ್. ಯು. ಎನ್. ಕಂಪನಿ, ಚೌಖಾಂಬಾ, ಕಾಶಿ.

ಸುಲೋಚನಗಳು.

ಎಲ್ಲರಿಗೂ ಬೇಕಾದದ್ದು. ಎಲ್ಲರ ನೇತ್ರದೃಷ್ಟಿಯನ್ನು ಚೆನ್ನಾಗಿ ಪರೀಕ್ಷಿಸಿ, ಉತ್ತಮ ತರಹೆ ಸುಲೋಚನಗಳನ್ನೇ ಕೊಡಲಾಗುವದು. ನಮ್ಮ ಚಂದ್ರಕಾಂತ ಮತ್ತು ಇತರ ತರಹೆ ಸುಲೋಚನಗಳು ಈಗಾಗಲೇ ಬಹು ಜನರ ಉಪಯೋಗದಲ್ಲಿವೆ. ನಮ್ಮ ಖಾತರಿ ಖಂಡಿತ. ಸುಲೋಚನಗಳು ದಿಗಂತ ಪ್ರಖ್ಯಾತವಾದಕ್ಕೆ ಬೆಲೆ ಸುಲಭ.

ನಮ್ಮ ವಿಳಾಸ:—ಎಸ್. ಎನ್. ರಾಮರಾವ್ ಸನ್ಸ್,
[249-11] ಕೋಟೆ ಬಾಗಲು, ಬೆಂಗಳೂರು.



ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-15]

ಕ್ರಯ 0–10–0 ; ಪೋಸ್ಟೇಜ್ 0–4–0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,
ಎಗ್ಯೂ ಮಿಕ್ಸ್ಚರ್ ಡಿಪೋ, ಬೊಂಬಾಯಿ, 4.
KARNIK Bros., BOMBAY, 4.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಅಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕ ನೀಚ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಲೆಂಜ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳಕೊಂಡ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಆಟೋ ಮೋಹಿನಿಯೇ. ನಾನಾರು ಹೊಸ ಪುಷ್ಪಗಳ ಗಮನಕ್ಕೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕೊಡುವಂಥಾದ್ದು ಆಟೋ ಮೋಹಿನಿ.



½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ	ರೂ 2—0—0	¼ „	0—8—0
1 ಡ್ರಾಮ್ ಸೀಸೆಗೆ	„ 0—12—0	ಶಾಂಪಲ್ ಬಾಟಲಿಗೆ	13—0

ಕೂದಲನ್ನು ಬೆಳೆಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವಾ... ಇದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ನುಣ್ಣನಾಗಿ ಕೂದಲನ್ನು ಸಾಕಿ ಬೆಳೆಸುವಂಥಾದ್ದು. ಕಣ್ಣು ಮತ್ತು ಮೆದುಳಿಗೆ ತಂಪನ್ನು ಕೊಡಬಲ್ಲುದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾದದ್ದು. ಇದು ಬಳಸಲು ಯೋಗ್ಯವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ನಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ! ಇದೊಂದು ದೃಷ್ಟಾಂತವೇ ಸಾಕಾಗಿದೆ. [282-5]

ಕ್ರಯ 1 ಬಾಟ್ಲಿಗೆ ರೂ. 1-0-0.
„ 3 „ „ 2-10-0.

ಸೋಲ್ ಏಜಂಟರು—ನಾ ಭಗವಾನ್ ದಾಸ್ ಚೂನಿಲಾಲ್ ಕಂಪನಿ,
177, ಟೈನಾಬಜಾರ್ ರೋಡ್, ಮದರಾಸು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.



ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಅಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [25–51]

45 ಮಾತ್ರೆಗಳ ಪೊಟ್ಲ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
95 „ „ „ 4 „	200 „ „ „ 9 „	80 „ „ „ 4 „	1200 „ „ „ 2 „

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಕೊಳುವುದು.

ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ರಿಜಿಸ್ಟರ್ ಇಂಡಿಯನ್ ಮೇಯಿಲ್ ಲೀವರ್ ವಾಚು.

ಚೈನು ಸರಪಣಿ ಸಹಿತ ಕ್ರಯ ರೂ. 3-0-0. 5 ವರುಷಗಳ ಗ್ಯಾರಂಟಿ ಪತ್ರ. ವಿ. ಪಿ. ಛಾರ್ಜು 4 ಆಣೆ.

ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಯಾರಲ್ಲಿಯೂ ಸಿಕ್ಕಲಾರದು. ಬಡಬಗ್ಗರಿಗೋಸ್ಕರ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡು ಮಾರ್ಕ್, ಡಸ್ಟು ಪ್ರೂಫ್ ಎಂಬ ಗ್ಲಾಸು ಡೋಮೂ ಇರುವದು. ಬಹಳ ಗಟ್ಟಿಯಾದ ಸಾಮಾನುಗಳಿಂದ ತಯಾರಾದಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದರೂ, ಕುದುರೆ ಸವಾರಿ ಮಾಡಿದರೂ, ಕೆಳಗೆ ಜಾರಿದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು ಪರೀಕ್ಷಿಸಿರಿ.

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸು 167, ಮದರಾಸ್.
[[illegible]-8]

ಯಥಾರ್ಥ ದೇಶವತ್ಸಲನು

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವುದಕ್ಕೆ ತನ್ನ ಶರೀರ ಸೌಖ್ಯವನ್ನು ಕಾಯಪುಷ್ಟಿಯನ್ನೂ ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕನಾಗುತ್ತಾನೆ, ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥಾದ್ದು ಬರೀ ಮಾತುಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತೀರಿ. ಈ ಉದ್ದೇಶಕ್ಕಾಗಿ ನೀವು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿದ ನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ಕ್ರಮವಾಗಿ ಸೇವನೆ ಮಾಡುತ್ತಾ ಬನ್ನಿ. ಈ ಮಾತ್ರೆಯು ನಿಮ್ಮ ಶರೀರದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿರುವ ರೋಗವು ಕಳೆ ಎತ್ತಿದಂತೆ ನಾಶಮಾಡುವುದು.

ಕ್ರಯ 40 ಮಾತ್ರೆಗಳ ಡಬ್ಬಿಗೆ ರೂ. 1-0-0.

ಪ. ಕೆ:—ಒಂದು ದೊಡ್ಡ ಕ್ಯಾಟಲಾಗನ್ನು, ರೋಗ ಪರಿಹಾರಕ್ಕೆ ಸಲಹೆಗಳನ್ನು ಬಿಟ್ಟಿ ಪಡೆಯಬಹುದು.

ವಿಳಾಸ:—ರಾಜವೈದ್ಯ ನಾರಾಯಣಜಿ ಕೇಶವಜಿ,
20, ಚೈನಾ ಬಜಾರ್ ರೋಡ್, ಮದರಾಸ್.
[[illegible]-9]

ಮಧುರೆ ಜರಿಸ್ನಡಿ ಅಂಚಿನ ಸೀರೆ ಅವ್ವಲ್ ರಕಂ ರೂ. 3-0-0

ಜನವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಯ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇವೆ. ಬಣ್ಣ ಹೋಗದು. ಸೀರೆಯ ಉದ್ದ 16 ಮೊಳ. ಸುಂದರವಾದ ರೆಡಗು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಕಂಭುಸ್ವಾಮಿ
[111-33] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಇದನ್ನು ಅವಶ್ಯವಾಗಿ ನೋಡಿ.

ಅರ್ಧ ಕ್ರಯ. ಈ ತಿಂಗಳು ಮಾತ್ರ.

ಸುಂದರವಾದ ಲಂಡನ್ ಪಾಕೆಟ್ ವಾಚ್.

ಮುಂಚಿನ ಬೆಲೆ ರೂ. 3-0-0, ಈಗ ರೂ. 2-0-0.
5 ವರ್ಷದ ಗ್ಯಾರಂಟಿ.

ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವನ್ನು ಇದುವರೆಗೂ ರೂ. 3-0-0 ಗೆ ವಿಕ್ರಯ ಮಾಡಿದೆವು. ಇದು ಎಲ್ಲರೂ ಅಂದರೆ ಬಡ ಭಾಗ್ಯವಂತರು ಕೊಂಡುಕೊಳ್ಳಬೇಕೆಂಬ ಉದ್ದೇಶವಾಗಿ ಇದನ್ನು ಈಗ ರೂ. 2-0-0 ವಿಕ್ರಯ ಮಾಡಬೇಕೆಂದು ಏರ್ಪಾಡು ಆಗಿಯದೆ. ಈ ಗಡಿಯಾರ ಬಹು ನಾಜೂಕಾಗಿಯೂ ಮಜಬೂತಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ಈ ಗಡಿಯಾರ ಇತರ ಕಂಪೆನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿ ಇರುತ್ತವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ರೂ. 2-0-0 ಕ್ಕೆ ಕೊಡಲ್ಪಡುತ್ತ.

ನಮ್ಮ ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕಂಪನಿ,
[252-10] 3, ಇರುಳಪ್ಪನ ಬೀದಿ, ಮದರಾಸು.

To P. D. Bhargova, Esqr:
Manager, General Assurance Society Ltd.,
Ajmer.

Re Policy No:-2196 C. I. (Deceased)
Mr. P. Srinivasamoortha Char.

Dear sir,

I have this day received your Mdras Bank cheque No:-Co54170 for Rs 973/1/- from the Branch Secretary of Bangalore, in settlement of claim under the above policy No. 2196, Further I desire you and your agents my deep appreciation for the prompt manner in which you settled my claim of Rs. 1,000/- of the above policy on my husband's life. Indeed, your Insurance Office is very honest and settles the claim very early, earlier than the other Insurance Companies, I think. Further I thank Mr. g. P. Ramanna, son of Sowley Purnachar, your Mysore Agent, for the trouble he took in getting my husband's life Insurance.

Yours Faithfully,
Mark of RAMABAKE
[142-26] Wife of Srinivasamoortha Char.

ಓರಿಯಂಟಲ್ ಗೌ|| ಸೆಕ್ಯೂರಿಟಿ ಲೈಫ್ ಅಸೂರೇನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000
ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆಂದಿರುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರಂಗಯ್ಯಂಗಾರ್, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟರಮಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ
[122-14] ಬ್ರ್ಯಾಂಚ್ ಸಕ್ರಿಟರಿ, ಮದರಾಸ.

ಈ ಲಾಭಕರವಾದ ಸಮಯವನ್ನು ಬಿಡಬೇಡಿ.

ಆಶ್ಚರ್ಯವಾದ ಸೇವಿಂಗ್ಸು ಬಾಕ್ಸು ಎಂಬ ಹಣದ ಪೆಟ್ಟಿಗೆ.

ಇದೇ ತಿಂಗಳು ಮಾತ್ರ 12 ಆಣೆ



1,000 ಪೆಟ್ಟಿಗೆ ಖರ್ಚಿಗಾಗಿ ಇದೆ.

ಈ ಪೆಟ್ಟಿಗೆಯನ್ನು ಎಲೆಕ್ಟ್ರಿಕ್ ಪ್ಲೇಟಿನಲ್ಲಿ ಚಿತ್ರ ವಿಚಿತ್ರ ಕೆಲಸದಿಂದ ಮಾಡಿ ನೋಡುವವರಿಗೆ ಸಂತೋಷಕರವಾದ ಪೆಟ್ಟಿಗೆ. ಇದಕ್ಕೆ ಕಳ್ಳರ ಭಯವೇ ಇಲ್ಲ. ಪ್ರಕಾಶ ಬೆಳ್ಳಿಯ ಹಾಗೆ ಹಿಂಬಾಲಿಸುತ್ತದೆ. ಈ ಪೆಟ್ಟಿಗೆಯಲ್ಲಿ ಹಣವನ್ನಾಗಲಿ, ಚಿಕ್ಕ ವಸ್ತುಗಳನ್ನು ಇಟ್ಟು ಮುಚ್ಚಬಿಡಬೇಕು. ಅನಂತರ ಅದನ್ನು ಯಾರಾದರೂ ತೆರೆದರೆ ಅದರಲ್ಲಿ ಇರುವ ವಸ್ತುಗಳು ಮಾಯವಾಗುವವು. ಆ ಪದಾರ್ಥಗಳು ಇಟ್ಟವರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಕಾಣುವವು. ಈ ಪೆಟ್ಟಿಗೆ ಜೇಬಿನಲ್ಲಿ ಕೂಡ ಇಟ್ಟುಕೊಳ್ಳಬಹುದು. ಬೇಗನೆ ತರಿಸಿಕೊಳ್ಳಿ. ಒಂದನ್ನು ನೋಡಿ ಪ್ರತಿಯೊಬ್ಬರು ತರಿಸಿಕೊಳ್ಳುವದಕ್ಕೆ ಪ್ರಯತ್ನ ಪಡುವರು.

[252-10] ನಮ್ಮ ವಿಳಾಸ—ರಾಮಚಂದ್ರ ಅಂಡ್ ಕಂಪನಿ,
16, ತಿರುಪಳ್ಳಿ ಬೀದಿ, ಮದರಾಸು.

ನಮ್ಮ ಕಂಪನಿಯ ಸೊಗಸಾದ 1916 ನೇ ಇಸವಿಯ ಕ್ಯಾಲೆಂಡರಿಗೆ ಬರೆದರೆ ಇನಾಮಾಗಿ ಕಳಿಸುತ್ತೇವೆ.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವ., ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಔಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತ್ರ ವೈದ್ಯರ ಸಮಯವನ್ನು ಕಾದು ಪೊರೆಯುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ಶಾಶ್ವತ ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಟೀನೆ, ಬಲಹೀನತೆ ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಲ್. ಎಂ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ವಿ. ಎಲ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—"ನನ್ನ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮೂಲವ್ಯಾಧಿ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನನ್ನ ಕೃತಜ್ಞತೆಯ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಪಿ. ಕೆ. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರಾದ ಬಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾದಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನನಗೆ ಬಹಳ ಆನಂದವಾಗುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ."

[[illegible]-19] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ತಲೆ ಕೂದಲುಗಳಿಗೆ ಹಚ್ಚಿಕೊಂಡುಬಾಚಿಕೊಳ್ಳುತ್ತಾ ಬಂದರೆ ನಿಲ್ಲುವದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೀಲಿಕಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿಚಿ ಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿದೆ. ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರೆಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲ ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ಪಟ್ಟಿ:—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಇಮಿಟೇಷನ್ ಕಾಡಿಗೆ ಭರಣಿ 1, ಅತ್ತರು ಬಟ್ಟಿ 1, ವಾಸನೆಯುಳ್ಳ ಸೋಪು 1, ಶಾಂತಿಬಲಮಾತ್ರೆ 23, ಕೊಂಡೆ ಗಿಣಿಗಳು 6, ಟಾಯಿಲೆಟ್ ಬ್ರಷ್ 1, ಇವಾದು 1. ಈ ತರಹ 36 ಇನಾಂ ಕೊಡಲ್ಪಡುತ್ತ.

ನಮ್ಮ ವಿಳಾಸ:—ಎಚ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. 44, ನಂಬುಳಯ್ಯರ ಬೀದಿ, ಮದರಾಸು.
[260 8]

"ಹನುಮಾರ್ಕ್" ಬೋರಾಕ್ಸ್ ಸಾಬೂಸು.

ಹನುಮಾರ್ಕ್ ಬೋರಾಕ್ಸು ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ಹುಣ್ಣು, ಇಜ್ಜ, ತುರಿ ಮೊದಲಾದ ವ್ಯಾಧಿಗಳು ಹನುಮಾರ್ಕ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ತಲೆಗಳಿಗೆ ಮೃದುತ್ವ ಮತ್ತು ಕಳೆಯನ್ನು ಕೊಡುವುದರಲ್ಲಿ ಹನುಮಾರ್ಕ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾರ್ಕ್ ಸಾಬೂನಿನಿಂದ ಬೆಳಿಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟು ಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡಿಗಿಯರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಸರ್ವಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ಕ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಟ್ಟಣಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾರ್ಕ್ ಗುರುತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಪಾ. ಕೆ:—ಎಲ್ಲರೂ ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆಯಬೇಕು.
ಬೆಂಗಳೂರು ಸಿಟಿ ಮ|| ಎಚ್. ದಾಸಪ್ಪನವರಲ್ಲೂ ಬಿಕರಿಗೆ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,
[211-14] ಆಪಿಸಿಂಗ್ ಬಜಾರ್ ರೋಡ್, ಮದರಾಸು.

ಮೈಸೂರು ಲೋ. ಸೆ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಅವಶ್ಯಕವಾದ

ಗಣಿತ ಪ್ರಶ್ನೋತ್ತರಾವಳಿ

ಎಂಬ ನವೀನ ಗ್ರಂಥದಲ್ಲಿ ಸಂಕಲನ, ವ್ಯವಕಲನ, ಗುಣಾಕಾರ, ಭಾಗಹಾರ, ಮ. ಸಾ. ಅ, ಲ. ಸಾ. ಅ, ಇವೇ ಮೊದಲಾದ ಗಣಿತ ಭಾಗಗಳ ಮೇಲಿನ ಲೆಕ್ಕಗಳನ್ನು ಅತಿ ಸುಲಭವಾಗಿಯೂ, ಜಾಗ್ರತೆಯಾಗಿಯೂ ಮಾಡುವ ಕ್ರಮಗಳು ಸ್ಪಷ್ಟವಾದ ವಿವರಣೆಗಳೊಡನೆ ತೋರಿಸಲ್ಪಟ್ಟಿವೆ. ಅಲ್ಲದೆ ಲೆಕ್ಕಗಳನ್ನು ಮಾಡತಕ್ಕ ಪೂರ್ಣನ್ಯಾಸ ಕ್ರಮವೂ ತೋರಿಸಲ್ಪಟ್ಟಿದೆ. ಮತ್ತು 16 ವರ್ಷಗಳಿಗೆ (1915-1900) ಮೇಲ್ಪಟ್ಟ ಲೋ. ಸೆ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳೂ, ಇವುಗಳಿಗೆ ಸ್ಥಾಲ ಸಹಿತವಾದ ಉತ್ತರಗಳೂ ಮತ್ತು ಇತರ ಪ್ರಶ್ನೆ ಪತ್ರಿಕೆಗಳೂ ಇರುತ್ತವೆ. ಸ್ವಲ್ಪ ಪ್ರತಿಗಳು ಮಾತ್ರವೇ ಇರುವುದರಿಂದ ಅಪೇಕ್ಷಕರು ತ್ವರೆ ಮಾಡಿ ತರಿಸಿಕೊಳ್ಳಬಹುದು. ಕ್ರಯ 8 ಆಣೆ; ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ—ಡಿ. ಮಹಾಬಲರಾವ್, ಅ|| ಮಾಸ್ಟರ್, ಮಹಾರಾಣಿ ಕಾಲೇಜು,

[284-4] 591 ಕೊತ್ವಾಲರಾಮಯ್ಯನವರ ಬೀದಿ, ಶಿವರಾಂಪೇಟೆ, ಮೈಸೂರು.

ವೃತ್ತಾಂತ ಪತ್ರಿಕೆ.

—:0:—

ಕ್ರಿ ೧೯೧೬ ನೇ ಇಸವಿ ಜನವರಿ ತಾ. ೨೦ ನೇ ಗುರುವಾರ.

ಹೊಸ ವೈಸ್‌ರಾಯರವರು.

ಲಾರ್ಡ್ ಹಾರ್ಡಿಂಗ್‌ರವರ ಅವಧಿಯು ಪೂರೈಸಿದ ಬಳಿಕ ಲಾರ್ಡ್ ಚೆಲಮ್ಸ್‌ಫರ್ಡ್‌ರವರು ಹಿಂದುಸ್ಥಾನದ ವೈಸ್‌ರಾಯ್ ಮತ್ತೂ ಗವರ್ನರ್ ಜನರಲ್ ಆಗತಕ್ಕದ್ದೆಂದು ನೇಮಕ ಮಾಡಲ್ಪಟ್ಟಿದೆ. ಹೊಸ ವೈಸ್‌ರಾಯರವರು ಫೆಬ್ರುವರಿ ಕಡೆಯಲ್ಲಿ ದಯಮಾಡಿ ಹಿಂದುಸ್ಥಾನದ ಅಧ್ಯಕ್ಷತೆಯನ್ನು ವಹಿಸುವರು. ಲಾರ್ಡ್ ಚೆಲಮ್ಸ್‌ಫರ್ಡ್‌ರವರು 1868 ರಲ್ಲಿ ಜನಿಸಿದವರಾದಕಾರಣ ಅವರಿಗೆ ಇನ್ನೂ 48 ವಯಸ್ಸಾಗಿಲ್ಲ. ಫ್ರೆಡರಿಕ್ ಜಾನ್ ನೇಪಿಯರ್ ತೆಸಿಗರ್ ಎಂಬುದೇ ಅವರಿಗೆ ನಾಮಕರಣವಾದ ಹೆಸರು. ಇವರು ಆಸ್ಟ್ರೇಲಿಯದ ಕ್ವೀನ್ಸ್‌ಲೆಂಡಿನಲ್ಲೂ, ನ್ಯೂ ಸೌತ್ ವೇಲ್ಸಿನಲ್ಲೂ ಗವರ್ನರಾಗಿದ್ದುದರಿಂದ ಬ್ರಿಟಿಷ್ ಸ್ವಾಧೀನಗಳ ಸ್ಥಿತಿಗತಿಯು ಅವರಿಗೆ ಮನದಟ್ಟಾಗಿದೆ. ಆದಕಾರಣ ಅವರು ಹಿಂದುಸ್ಥಾನವನ್ನು ಇತರ ಬ್ರಿಟಿಷ್ ಸ್ವಾಧೀನಗಳ ಸಂಗಡ ಸೇರಿಸುವುದಕ್ಕೆ ತಕ್ಕ ಅರ್ಹತೆಯನ್ನು ಪಡೆದಿದ್ದಾರೆಂದು ಹೇಳಬಹುದು. ಬ್ರಿಟನ್ನಿನಲ್ಲಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳೆಲ್ಲಾ ಅವರನ್ನು ನೇಮಕ ಮಾಡಿರುವುದು ಚೆನ್ನಾಗಿದೆ ಎಂದು ಮೆಚ್ಚಿಕೊಂಡಿರುತ್ತವೆ. ಇಂಥಾ ಭಾರವಾದ ಮತ್ತೂ ಜವಾಬ್ದಾರಿಯುಳ್ಳ ಪದವಿಗೆ ಲಾರ್ಡ್ ಚೆಲಮ್ಸ್‌ಫರ್ಡ್‌ರವರು ನೇಮಕವಾದರೆಂದು ಸಂತೋಷಪಟ್ಟು ಅವರಿಗೆ ಸುಸ್ವಾಗತವನ್ನು ಬಯಸುವೆವು.

ಮೈಸೂರು ವ್ಯವಸಾಯದ ಪಂಚಾಂಗವು.

ನಮ್ಮ ಸಂಸ್ಥಾನವು ವ್ಯವಸಾಯ ಸೀಮೆಯಾಗಿರುತ್ತದೆ. ರೈತರಿಗೆ ವ್ಯವಸಾಯ ಕಾರ್ಯಗಳನ್ನು ಕಾಲಾನುಗುಣವಾಗಿ ಬದಲಾವಣೆ ಮಾಡಿಕೊಳ್ಳುವುದಕ್ಕೂ, ಸುಲಭವಾದ ಮತ್ತೂ ಬಗೆಬಗೆಯ ದವಸ ಧಾನ್ಯಾದಿಗಳನ್ನು ಬೆಳೆಮಾಡಿಕೊಳ್ಳುವುದಕ್ಕೂ ಸಹಾಯವಾಗಲೆಂದು ನಮ್ಮ ಗವರ್ನಮೆಂಟಿನವರು ಕುತೂಹಲಪಟ್ಟು ಮಾಡುತ್ತಿರುವ ಪ್ರತಿ ಒಂದು ಕಾರ್ಯವನ್ನೂ ನಾವು ಸಂತೋಷದಿಂದ ಒಪ್ಪಿಕೊಳ್ಳುವೆವು. ಮೈಸೂರು ವ್ಯವಸಾಯದ ಇಲಾಖೆಯವರು ಇಂಗ್ಲೀಷಿನಲ್ಲಿ ರಚಿಸಿ ಒಂದು ಆಣೆ ಕ್ರಯವಿಟ್ಟಿರುವ 1916 ನೇ ವರುಷದ ವ್ಯವಸಾಯ ಪಂಚಾಂಗವನ್ನು ನೋಡಿ ಸಂತೋಷಪಡುತ್ತೇವೆ. ಅದರಂತೆಯೇ ಕನ್ನಡದಲ್ಲೂ ಪ್ರಕಟ ಮಾಡುವರೆಂದು ನಿರೀಕ್ಷಿಸುವೆವು. ಅನೇಕಾನೇಕ ರೈತಪ್ರಜೆಗಳಿಗೆ ಸ್ವಭಾಷೆಯಾದ ಕನ್ನಡವೇ ತಿಳಿಯದಿರುವಲ್ಲಿ ಇಂಥಾ ಪಂಚಾಂಗವನ್ನು ಇಂಗ್ಲೀಷಿನಲ್ಲಿ ಮಾತ್ರ ಪ್ರಕಟಿಸಿ ಪ್ರಯೋಜನವಿಲ್ಲ. ವಿದ್ಯೆಯು ನಮ್ಮ ರೈತರಲ್ಲಿ ಇನ್ನೂ ವಿಶೇಷವಾಗಿ ಹರಡಿದ ಹೊರತು ವ್ಯವಸಾಯದ ನೂತನ ಮಾರ್ಗಗಳು ಪ್ರಚಾರಕ್ಕೆ ಬರುವುದು ತುಂಬಾ ಪ್ರಯಾಸ. ರೈತಪ್ರಜೆಗಳಿಗೆ ವಿದ್ಯೆ ಕಲಿಸುವ ಭಾಗದಲ್ಲಿ ನಮ್ಮ ಸೀಮೆಯ ಒಕ್ಕಲಿಗರ ಸಂಘವು ಮಾಡಿರುವ ಕಾರ್ಯಗಳೇನೋ ನಮಗೆ ತಿಳಿಯದು. ಆ ಸಂಘವು ಸ್ಥಾಪನೆಯಾಗಿ ಇಲ್ಲಿಗೆ ಹಲವು ವರುಷಗಳಾದವು. ಆ ಸಂಘದವರು ರೈತರಿಗೆ ವಿದ್ಯೆ ಕಲಿಯುವುದಕ್ಕೂ, ಅವರು ಮಾಡುವ ವ್ಯವಸಾಯ ಕೆಲಸಗಳು ಅಭಿವೃದ್ಧಿಯಾಗುವಂತೆ ಮಾಡುವುದಕ್ಕೂ ಇದುವರೆಗೆ ಬೇಕಾದಷ್ಟು ಸಹಾಯ ಮಾಡುತ್ತಾರೆಂದು ವಿಶೇಷವಾದ ನಂಬಿಕೆಯೂ ನಿರೀಕ್ಷೆಯೂ ಉಂಟಾಗಿತ್ತು. ಈಚೆಗೆ ಬಹು ಕಾಲದಿಂದಲೂ ಆ ಸಂಘದ ಕಾರ್ಯಕ್ರಮಗಳೊಂದೂ ನಮ್ಮ ತಿಳುವಳಿಕೆಗೆ ಬಂದಿರುವುದಿಲ್ಲ.

ಮೈಸೂರು ಸರ್ಕಾರದ ವ್ಯವಸಾಯ ಇಲಾಖೆಯಿಂದ ಪ್ರಕಟವಾಗಿರುವ ಪಂಚಾಂಗವು ತುಂಬಾ ಪ್ರಯೋಜನಕರವಾದದ್ದೆಂದು ನಾವು ನೆನೆಸುತ್ತೇವೆ. ಅದರಲ್ಲಿ ತಿಥಿ, ನಕ್ಷತ್ರ, ಹಬ್ಬ, ಮಳೆ, ಈ ಮೊದಲಾದ ವಿಷಯಗಳನ್ನು ಕಾಣಿಸಿದ್ದಾರೆ. ಇದಲ್ಲದೆ ಈ ಪಂಚಾಂಗದಲ್ಲಿ ನೇಗಿಲು ಮೊದಲಾದ ವ್ಯವಸಾಯ ಸಾಧನಗಳು, ಆಲೂಗೆಡ್ಡೆಯನ್ನು ಬೆಳೆಯುವ ವಿಧಾನಗಳು, ಫಸಲುಗಳಿಗೆ ಹಿಡಿಯುವ ನಾನಾ ಬಗೆಯ ಹುಳು ಹುಪ್ಪಟೆಗಳು, ವಿನಾಶಕರ ಗೊಬ್ಬರಗಳು, ದನಗಳ ರೋಗಗಳು, ಇವೇ ಮೊದಲಾದ ಅನೇಕ ವಿಷಯಗಳನ್ನು ಬಹಳ ಚೆನ್ನಾಗಿ ವಿವರಿಸಿ ಪ್ರಬಂಧಗಳನ್ನು ಬರೆದಿರುತ್ತಾರೆ. ನಮ್ಮ ಸೀಮೆಯ ರೈತ ಪ್ರಜೆಗಳು ಈ ಪಂಚಾಂಗ ಪುಸ್ತಕವನ್ನು ತರಿಸಿ ಚೆನ್ನಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಹೃದ್ಗತ ಮಾಡಿಕೊಂಡು, ಅಲ್ಲಿ ಹೇಳಿರುವ ಕ್ರಮಗಳನ್ನನುಸರಿಸಿ ವ್ಯವಸಾಯ ಮಾಡುತ್ತಾ ಬಂದ ಪಕ್ಷದಲ್ಲಿ ಒಳ್ಳೇ ಹುಲುಸಾದ ಬೆಳೆಗಳನ್ನು ಬೆಳೆದು ಭಾಗ್ಯವಂತರಾದರೆನ್ನುವುದಕ್ಕೆ ಸಂಶಯವಿಲ್ಲ.

ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲೂ ವ್ಯವಸಾಯದ ಇನ್ಸ್‌ಪೆಕ್ಟರು ನೇಮಕವಾಗಿದ್ದಾರೆ. ಬೆಂಗಳೂರಿನ ಹತ್ತಿರ ಹೆಬ್ಬಾಳದಲ್ಲೂ, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಮರತೂರಿನಲ್ಲೂ ಪರೀಕ್ಷಾರ್ಥವಾದ ಫಾರಮುಗಳಿರುತ್ತವೆ. ಇದಲ್ಲದೆ ನಮ್ಮ ವ್ಯವಸಾಯದ ಇಲಾಖೆಯವರು ರೈತಪ್ರಜೆಗಳಿಗೆ ಹೊಸ ತರಹಾ ನೇಗಿಲುಗಳನ್ನೂ, ಒಳ್ಳೇ ಜಾತಿಯ ಬೀಜಗಳನ್ನೂ, ಗೊಬ್ಬರಗಳನ್ನೂ ಒದಗಿಸುವುದಕ್ಕೂ, ಹುಳ ಹುಪ್ಪಟೆಗಳನ್ನು ನಾಶಪಡಿಸುವ ಉಪಾಯಗಳನ್ನು ಹೇಳಿ ಕೊಡುವುದಕ್ಕೂ ಸಿದ್ಧರಾಗಿದ್ದಾರೆ. ಇಂಥಾದ್ದರಲ್ಲಿ ರೈತನು ತನ್ನ ಜಮೀನನ್ನೂ ದನಗಳನ್ನೂ ಅಭಿವೃದ್ಧಿ ಪಡಿಸಿಕೊಳ್ಳದೆ ಕಣ್ಣು ಮುಚ್ಚಿಕೊಂಡಿದ್ದರೆ ಅವನ ಹೀನಸ್ಥಿತಿಗೆ ಅವನೇ ಕಾರಣನಾದಾನೆಂದು ಹೇಳಬಹುದಾಗಿದೆ. ಆದ್ದರಿಂದ ರೈತನು ಮೊದಲು ಓದು ಬರಹವನ್ನು ಕಲಿಯಬೇಕು. ವ್ಯವಸಾಯದ ಇಲಾಖೆಯವರು ರೈತರ ಪ್ರಯೋಜನಕ್ಕಾಗಿ ಪ್ರಕಟಿಸುವ ಪತ್ರಿಕೆಗಳನ್ನು ಕೇಳಿ ತರಿಸಿಕೊಂಡು ಚೆನ್ನಾಗಿ ಓದಿ ಅವುಗಳಲ್ಲಿ ಹೇಳಿರುವ ಸಂಗತಿಗಳನ್ನು ತಿಳಿದವನಾಗಿ, ಆ ಪೈಕಿ ಸಾಮಾನ್ಯವಾಗಿಯೂ ಸುಲಭವಾಗಿಯೂ ಇರುವ ಭಾಗಗಳನ್ನು ಆಚರಣೆಗೆ ತರಬೇಕು. ಬಳಿಕ ಹಣಗಾರನಾದ ಮೇಲೆ ಒಳ್ಳೊಳ್ಳೇ ಮುಟ್ಟುಗಳನ್ನೂ, ಹೆಚ್ಚು ಹೆಚ್ಚಾಗಿ ಗೊಬ್ಬರ ಗೋಣನ್ನೂ ತರಿಸಿಕೊಳ್ಳಬಹುದಾಗಿದೆ. ಈಚೆಗೆ ಒಳ್ಳೆಯ ಧಾನ್ಯಗಳ ಧಾರಣೆಧಾರಿಗಳೆಲ್ಲಾ ಹೆಚ್ಚಿ ಹೋಗಿದ್ದರಿಂದ ಅವುಗಳನ್ನು ಬೆಳೆಯುವ ರೈತನು ಅನುಕೂಲಸ್ಥನಾದಾನೆಂದು ಹೇಳಬಹುದು. ಆದರೆ ರೈತನು ವ್ಯಾಜ್ಯ ಸಾಜ್ಯಗಳನ್ನು ಹಿಡಿದು ಕೋರ್ಟು ಕಚೇರಿಗಳನ್ನು ಹತ್ತುವುದನ್ನೂ, ಹುಚ್ಚು ಹಬ್ಬದ ತಿತಿ ಮತಿ ಪ್ರಸ್ತ ಪ್ರಯೋಜನಗಳಿಗೆ ಮಿತಿಮೀರಿ ಹಣ ಖರ್ಚು ಮಾಡುವುದನ್ನೂ ಬಿಟ್ಟು, ಸಂಪಾದನೆಯಾಗುವ ಹಣಕಾಸನ್ನು ತನ್ನ ಭೂಮಿಕಾಣಿಯ ಅಭಿವೃದ್ಧಿಗೆ ಅನುಕೂಲವಾಗುವಂತೆ ಕೋಆಪರೆಟಿವ್ ಸೊಸೈಟಿಗಳಲ್ಲಿ ಕೂಡಿಸಿಡುತ್ತಾ ಬರುವವನಾದರೆ ಕಾಲಕ್ರಮದಲ್ಲಿ ಅನುಕೂಲಸ್ಥನಾಗುವುದಕ್ಕೆ ಅಡ್ಡಿ ಇಲ್ಲ. ನಮ್ಮ ಸಂಸ್ಥಾನವು ಶ್ರೇಯಸ್ಸಿಗೆ ಬರಬೇಕಾದರೆ ನಮ್ಮ ರೈತಪ್ರಜೆಗಳು ಮೈಚೆಗ್ಗಿ ದುಡಿಯತಕ್ಕವರಾಗಿಯೂ, ಮಿತವ್ಯಯಿಗಳಾಗಿಯೂ, ಅನುಕೂಲಸ್ಥರಾಗಿಯೂ ಇದ್ದ ಹೊರತು ಸಾಧ್ಯವಿಲ್ಲ. ಈ ಭಾಗದಲ್ಲಿ ನಮ್ಮ ಸರ್ಕಾರದ ವ್ಯವಸಾಯ ಇಲಾಖೆಯವರು ರೈತರಿಗೆ ಸಹಾಯ ಮಾಡುವುದಕ್ಕೆ ಸಿದ್ಧರಾಗಿದ್ದಾರೆ.

ದೇವರ ಸರ್ವಜ್ಞತ್ವವೂ ಸರ್ವವ್ಯಾಪಕತ್ವವೂ

ದೇವರೇ, ನೀನು ನನ್ನನ್ನು ಪರೀಕ್ಷಿಸಿ ತಿಳುಕೊಂಡಿದ್ದೀ ;
ನಾನು ಕೂತುಕೊಳ್ಳುವದೂ ಏಳುವದೂ ನಿನಗೆ ಗೊತ್ತದೆ ;
ದೂರದಿಂದಲೇ ನನ್ನ ಆಲೋಚನೆಯನ್ನು ಬಲ್ಲವನಾಗಿರುತ್ತೀ ;
ನಾನು ನಡೆಯುವದನ್ನೂ ಮಲಗುವದನ್ನೂ ಶೋಧಿಸಿ ಗ್ರಹಿಸಿಕೊಳ್ಳುತ್ತೀ ;
ನನ್ನ ನಡತೆಯೆಲ್ಲಾ ನಿನಗೆ ಗೋಚರವಾಗಿದೆ.
ದೇವರೇ, ನನ್ನ ನಾಲಿಗೆಯ ಮಾತುಗಳಲ್ಲಿ
ನೀನು ಅರಿಯದೆ ಇರುವಂಥಾದ್ದು ಒಂದೂ ಇಲ್ಲ.
ಸುತ್ತಲೂ ನನ್ನನ್ನು ಆವರಿಸಿ
ನಿನ್ನ ಕೈಯನ್ನು ನನ್ನ ಮೇಲೆ ಇಟ್ಟಿದ್ದೀ.
ಇಂಥ ಜ್ಞಾನವು ನನಗೆ ಬಹು ಆಶ್ಚರ್ಯಕರವಾಗಿದೆ ;
ಅದು ಉನ್ನತವಾದದ್ದು, ನನಗೆ ನಿಲುಕುವದಿಲ್ಲ.
ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ ?
ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ ?
ಮೇಲಣ ಲೋಕಕ್ಕೆ ಏರಿಹೋದರೆ ಅಲ್ಲಿ ನೀನಿರುತ್ತೀ ;
ಪಾತಾಳಕ್ಕೆ ಹೋಗಿ ಮಲಗಿಕೊಂಡೇನೆಂದರೆ ಅಲ್ಲಿಯೂ ನೀನಿರುವಿ.
ಅರುಣನ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿಹೋಗಿ
ಸಮುದ್ರದ ಕಟ್ಟಕಡೆಯಲ್ಲಿ ವಾಸಮಾಡೇನೆಂದರೆ
ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸುವದು;
ನಿನ್ನ ಬಲಗೈ ನನ್ನನ್ನು ಹಿಡಿದಿರುವದು.
ಕಾರ್ಗತ್ತಲೆಯು ನನ್ನನ್ನು ಕವಿಯುವದು,
ಹಗಲು ಹೋಗಿ ನನ್ನ ಸುತ್ತಲು ಇರುಳಾಗುವದು ಎಂದು ಹೇಳಿಕೊಂಡರೇನು?
ನಿನಗೆ ಕತ್ತಲೆಯು ಕತ್ತಲೆಯಲ್ಲ ;
ಇರುಳ ಹಗಲಾಗಿಯೇ ಇರುತ್ತದೆ ;
ಕತ್ತಲು ಬೆಳಕುಗಳೆರಡೂ ನಿನಗೆ ಒಂದೇ.
ನನ್ನ ಅಂತರಿಂದ್ರಿಯಗಳನ್ನು ಉಂಟುಮಾಡಿದವನೂ
ತಾಯಿಯ ಗರ್ಭದಲ್ಲಿ ನನ್ನನ್ನು ರೂಪಿಸಿದವನೂ ನೀನಲ್ಲವೋ ?
ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ
ನಿನ್ನನ್ನು ಕೊಂಡಾಡುತ್ತೇನೆ.
ನಿನ ಕೃತ್ಯಗಳು ಆಶ್ಚರ್ಯಕರವಾಗಿವೆಯೆಂದು
ನನ್ನ ಹೃದಯವು ಚೆನ್ನಾಗಿ ಗ್ರಹಿಸಿಕೊಂಡಿದೆ
ನಾನು ಗುಪ್ತಸ್ಥಳದಲ್ಲಿ ನಿರ್ಮಿತನಾಗುತ್ತಾ
ಭೂಗರ್ಭದಲ್ಲಿ ರಚಿಸಲ್ಪಡುತ್ತಾ ಇದ್ದಾಗ
ನನ್ನ ಅಸ್ಥಿಪಂಜರವು ನಿನಗೆ ಮರೆಯಾಗಿದ್ದಿಲ್ಲ.
ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು
    ನೋಡಿದವು ;
ನನ್ನ ಆಯುಸ್ಕಾಲದ ಪ್ರಥಮದಿನವು ಪ್ರಾರಂಭವಾಗುವ ಮೊದಲೇ
ಅವು ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು.
ದೇವರೇ, ನಿನ್ನ ಸಂಕಲ್ಪಗಳು ನನ್ನ ಎಣಿಕೆಯಲ್ಲಿ ಎಷ್ಟೋ ಗೌರವವಾಗಿವೆ ;
ಅವುಗಳ ಒಟ್ಟು ಅಸಂಖ್ಯವಾಗಿದೆ
ಅವುಗಳನ್ನು ಲೆಕ್ಕಿಸುವದಾದರೆ ಸಮುದ್ರದ ಮರಳಿಗಿಂತ ಹೆಚ್ಚಾಗಿವೆ.
ನಾನು ಎಚ್ಚರವಾಗಲು ಮುಂಚಿನಂತೆಯೇ ನಿನ್ನ ಬಳಿಯಲ್ಲಿದ್ದೇನೆ.
ದೇವರೇ, ನೀನು ದುಷ್ಟರನ್ನು ಸಂಹರಿಸಿಬಿಟ್ಟರೆ ಎಷ್ಟೋ ಒಳ್ಳೇದು.
ಕೊಲೆಪಾತಕರೇ, ನನ್ನಿಂದ ತೊಲಗಿಹೋಗಿರಿ.
ದೇವರೇ, ಅವರು ನಿನ್ನ ಶತ್ರುಗಳು ;
ಅಯೋಗ್ಯಕಾರ್ಯಕ್ಕಾಗಿ ನಿನ್ನ ಹೆಸರೆತ್ತುತ್ತಾರೆ, ಸುಳ್ಳಾಣೆಯಿಡುತ್ತಾರೆ.
ದೇವರೇ, ನಿನ್ನನ್ನು ದ್ವೇಷಿಸುವವರನ್ನು ನಾನು ದ್ವೇಷಿಸುತ್ತೇನಲ್ಲವೋ ?
ನಿನ್ನ ವಿರೋಧಿಗಳಿಗೆ ನಾನು ಬೇಸರಗೊಳ್ಳುವದಿಲ್ಲವೋ ?
ನಾನು ಅವರನ್ನು ಸಂಪೂರ್ಣವಾಗಿ ಹಗೆಮಾಡುತ್ತೇನೆ ;
ಅವರು ನನಗೂ ವೈರಿಗಳೇ ಆಗಿದ್ದಾರೆ.
    ದೇವಾ, ನನ್ನನ್ನು ಪರೀಕ್ಷಿಸಿ ನನ್ನ ಹೃದಯವನ್ನು ತಿಳಿದುಕೋ ;
    ನನ್ನನ್ನು ಶೋಧಿಸಿ ನನ್ನ ಆಲೋಚನೆಗಳನ್ನು ಗೊತ್ತುಮಾಡು.
    ನಾನು ನಾಶಕರವಾದ ಮಾರ್ಗದಲ್ಲಿರುತ್ತೇನೋ ನೋಡಿ
    ಸನಾತನಮಾರ್ಗದಲ್ಲಿ ನನ್ನನ್ನು ನಡಿಸು.

ಯುದ್ಧದ ಸಮಾಚಾರಗಳು

ಗಲ್ಲಿಪೋಲಿಯಿಂದ ವಾಪಸು ಬಂದಾಯಿತು

ತಂತೀವರ್ತಮಾನಗಳು ಅನೇಕ ರಾಜ್ಯಗಳಲ್ಲಿ ಕದನಗಳಾದವೆಂದು ತಿಳಿಸುತ್ತವೆ. ಆದಾಗ್ಯೂ ಶತ್ರು ಶತ್ರುಗಳು ತಮ್ಮ ತಮ್ಮ ಸೈನ್ಯಗಳನ್ನು ಜೋಕೆಯಾಗಿಟ್ಟುಕೊಳ್ಳುತ್ತಲೂ, ಫಿರಂಗಿ ಮದ್ದುಗುಂಡುಗಳನ್ನು ಸಾಗಿಸಿ ತಂದಿಟ್ಟುಕೊಳ್ಳುತ್ತಲೂ ಈಗಿನ ಶೀತವೂ ನವೆಗಳೂ ಹಿಮವೂ ಕಳೆದ ಕೂಡಲೇ ಮುಂದರಿದು ನುಗ್ಗಿ ಹೋಗುವುದಕ್ಕೆ ಎಲ್ಲಾ ಸಿದ್ಧಪಡಿಸಿಕೊಳ್ಳುತ್ತಲೂ ಇದ್ದಾರೆಂದು ಸ್ಪಷ್ಟವಾಗಿ ಗೋಚರವಾಗುವುದು.

ಜರ್ಮನಿ ಚಕ್ರವರ್ತಿಯವರ ದೇಹಸ್ಥಿತಿಯ ವಿಷಯದಲ್ಲಿ ಹಲವು ತಂತೀವರ್ತಮಾನಗಳು ಬಂದಿವೆ. ಅವು ನಿಜವೆಂದು ಹೇಳುವುದು ಸಾಧ್ಯವಲ್ಲ. ಆ ತರವಾದ ವರ್ತಮಾನಗಳು ಬರುತ್ತಿರುವುವು. ಒಂದು ವರ್ತಮಾನವು ಚಕ್ರವರ್ತಿಯವರು ತಮ್ಮ ಸಹೋದರಿಯಾದ ಗ್ರೀಸಿನ ರಾಣಿಯನ್ನೂ, ತಮ್ಮ ಸ್ವಂತ ಆಪ್ತ ಸಂಬಂಧಿಗಳನ್ನೂ ರಾಜಧಾನಿಯಾದ ಬರ್ಲಿನ್ ನಗರಕ್ಕೆ ಬರುವಂತೆ ಹೇಳಿ ಕಳುಹಿಸಿದ್ದಾರೆಂದು ಹೇಳುತ್ತದೆ. ಇನ್ನೊಂದು ತಂತೀವರ್ತಮಾನದಿಂದ ಕೈಸರ್ ಚಕ್ರವರ್ತಿಗೆ ಏನೇ ಒಂದು ಹುಣ್ಣಾಗಿರುವಂತೆಯೂ, ಅವರು ಎದ್ದು ತಿರುಗಾಡುವುದಕ್ಕೆ ಅಡಚಣೆಯಾಗಿಲ್ಲವೆಂದೂ ಗೊತ್ತಾಗುವುದು. ಈಚೆಗೆ ಚಕ್ರವರ್ತಿಯು ಬರ್ಲಿನ್ ರಾಜಧಾನಿಯಿಂದ ಯುದ್ಧಭೂಮಿಗೆ ಹೋದರೆಂದು ತಂತೀವರ್ತಮಾನ ಬಂದಿದೆ.

ಪಶ್ಚಿಮ ರಣರಂಗದಲ್ಲಿ.

ಫ್ರೆಂಚ್ ಸೈನಿಕರಿದ್ದ ಸುಮಾರು ಆರು ಮೈಲಿ ಉದ್ದಕ್ಕೂ ಜರ್ಮನಿಯವರು ವಿಷವಾಯುಗಳನ್ನು ಸೂಸುತ್ತಾ ನುಗ್ಗಿ ಬಂದರು. ಅವರು ಸಾಲ್ಯಾವರ್ಟ್ ಫ್ರೆಂಚರ ಸಾಲನ್ನು ಭೇದಿಸಿ ನುಗ್ಗಬೇಕೆಂದು ಮೇಲೆ ಬಿದ್ದು ಮುತ್ತಿಗೆ ಹಾಕಿದರು. ಎರಡು ಜಾಗಗಳಲ್ಲಿ ಮಾತ್ರ ಅವರು ಫ್ರೆಂಚರ ಕೆಲವು ಕಂದಕಗಳನ್ನು ಗೆದ್ದುಕೊಂಡರು. ಬಳಿಕ ಫ್ರೆಂಚರು ಅವರ ಮೇಲೆ ನುಗ್ಗಿ ಮುತ್ತಿಗೆ ಹಾಕಿಕೊಂಡರು. ಅವರು ಎರಡು ಸಣ್ಣ ಜಾಗಗಳ ವಿನಾ ಉಳಿದ ಕಡೆಗಳಿಂದ ಜರ್ಮನರನ್ನು ಹಿಂದಕ್ಕೆ ಓಡಿಸಿರುತ್ತಾರೆ. ಈ ಕದನಗಳಲ್ಲಿ ಜರ್ಮನಿಯವರು ಅಗಾಧವಾದ ಸೈನ್ಯಗಳನ್ನು ತಂದು ನುಗ್ಗಿಸಿದರು. ಇದರಿಂದ ಅವರ ಕಡೆ ಬಹಳ ನಷ್ಟವಾಯಿತು. ಅವರು ನುಗ್ಗಿ ಬಂದದ್ದು ಕಡೆಗೆ ಸಾರ್ಥಕವಾಗಲಿಲ್ಲ.

ಇತರ ಜಾಗಗಳಲ್ಲಿ ಫಿರಂಗಿ ಗುಂಡುಗಳ ಹೊಡೆದಾಟಗಳೂ, ಅಂತರಿಕ್ಷದಲ್ಲಿ ವಿಮಾನಯಂತ್ರಗಳ ಹೋರಾಟವೂ ವಿಶೇಷವಾಗಿ ನಡೆದಿರುವವು. ಒಂದು ದಿನ ಯುದ್ಧಕ್ಕಾಗಿ ಹಾರಿಹೋಗಿದ್ದ ಬ್ರಿಟಿಷರ ನಾಲ್ಕು ವಿಮಾನಯಂತ್ರಗಳು ವಾಪಸು ಬರಲಿಲ್ಲ. ಅವುಗಳಲ್ಲಿದ್ದ ಎಂಟು ಜನಗಳ ಪೈಕಿ ಆರು ಮಂದಿ ಕೊಲೆಯಾದವರೆಂದೂ, ಇಬ್ಬರು ಗಾಯಪಟ್ಟರೆಂದೂ ಜರ್ಮನಿಯ ಒಂದು ವರ್ತಮಾನವು ತಿಳಿಸುತ್ತದೆ.

ಬ್ರಿಟಿಷರ ವಿಮಾನ ಯಂತ್ರವು ಅಂತರಿಕ್ಷದಲ್ಲಿ ಲೀಲ್ ಎಂಬ ನಗರದ ಸಮೀಪದಲ್ಲಿ ಸಿಡಿಮದ್ದಿನ ಗುಂಡುಗಳನ್ನು ಹಾಕಿದ್ದರಿಂದ ಶತ್ರುವಿನ ಮದ್ದುಗುಂಡುಗಳ ಉಗ್ರಾಣದಲ್ಲಿ ಮಹಾ ಕಿಚ್ಚೆದ್ದೊಡನೆ ಹಾರಿ ನಷ್ಟವಾಯಿತು, ಅನೇಕ ಮನೆಗಳು ನಾಶವಾದವೆಂದೂ, 70 ಜನಗಳು ಮೃತಪಟ್ಟರೆಂದೂ, 40 ಜನಗಳಿಗೆ ಘೋರ ಗಾಯಗಳಾದವೆಂದೂ ಜರ್ಮನಿಯವರು ತಿಳಿಸುತ್ತಾರೆ.

ಬೆಲ್ಜಿಯಂ ಸಮುದ್ರತೀರದಲ್ಲಿ ಬ್ರಿಟಿಷ್ ಯುದ್ಧದ ಜಹಜುಗಳು ನಡೆಸಿರುವ ಕಾರ್ಯಗಳನ್ನು ವಿವರಿಸಿ ಒಂದು ರಿಪೋರ್ಟನ್ನು ಪ್ರಕಟಿಸಿದ್ದಾರೆ. ಒಟ್ಟು ಗಣನೆ 80 ಹಡಗುಗಳು ಅಲ್ಲಿ ಕಾರ್ಯಗಳನ್ನು ನಡಿಸಿದವು. ಅವರು ಹದಿನಾಲ್ಕು ಸಲ ಶತ್ರುವಿನ ಮೇಲೆ ನುಗ್ಗಿದರು. ಆಗ ಶತ್ರುವಿನ ಒಂದು ಟಾರ್ಪೆಡೋ ದೋಣಿಯೂ ಎರಡು ಸಬ್‌ಮೆರೀನುಗಳೂ, ಒಂದು ಹಡಗೂ ಮುಳುಗಿಸಲ್ಪಟ್ಟವು. ಶತ್ರುವಿನ ನಾಲ್ಕು ಮಿಲಿಟರಿ ಕಾರ್ಖಾನೆಗಳನ್ನು ನಾಶಪಡಿಸಿದವು. ತೀರದಲ್ಲಿ ಜಹಜುಗಳನ್ನು ನಿಲ್ಲಿಸುವ ಕಟ್ಟಡಗಳನ್ನೂ, ಹಲವು ಫಿರಂಗಿಗಳನ್ನೂ, ಅನೇಕ ಮದ್ದುಗುಂಡುಗಳ ಉಗ್ರಾಣಗಳನ್ನೂ ಹಾಳು ಮಾಡಿರುತ್ತವೆ. ಇದಲ್ಲದೆ ಅನೇಕ ಸೈನಿಕರನ್ನು ಕೊಂದು ಗಾಯಪಡಿಸಿರುವವು.

ಪೂರ್ವ ರಣರಂಗದಲ್ಲಿ.

ರಷ್ಯಾದವರು ತಮ್ಮ ಬಹು ದೀರ್ಘವಾದ ಯುದ್ಧಸಾಲಿನ ದಕ್ಷಿಣಭಾಗದಲ್ಲಿ ಅಂದರೆ ಗೆಲಿಷಿಯಾದಲ್ಲೂ, ಬುಕೊವೀನದಲ್ಲೂ ತಮ್ಮ ಸೈನ್ಯಗಳನ್ನು ನುಗ್ಗಿಸಿ ಮುಂದಕ್ಕೆ ಹೋಗಿದ್ದಾರೆಂದು ವೇದ್ಯವಾಗುತ್ತದೆ. ಇದರಿಂದ ಜರ್ಮನಿ ಮತ್ತು ಆಸ್ಟ್ರಿಯಾದವರು ತಮ್ಮ ಸೈನ್ಯಗಳನ್ನು ಸರ್ಬಿಯಾದಿಂದಲೂ, ಇತರ ಕಡೆಗಳಿಂದಲೂ ವಾಪಸು ಕರೆಸಿಕೊಳ್ಳುವಂತೆ ಮಾಡಬೇಕೆನ್ನುವುದೇ ರಷ್ಯಾದವರ ಉದ್ದೇಶವೆಂದು ಕಾಣುವುದು. ಬಹಳ ಕಠಿನವಾದ ಯುದ್ಧಗಳು ನಡೆದವು. ರಷ್ಯಾದವರು ಬಹಳ ಪರಾಕ್ರಮದಿಂದ ನುಗ್ಗಿ ಜರ್ಮನಿ ಮತ್ತು ಆಸ್ಟ್ರಿಯಾದವರನ್ನು ಹಿಂದಕ್ಕೆ ಓಡಿಸಿಬಿಟ್ಟಿದ್ದಾರೆ. ಜರ್ಮನಿ ಮತ್ತು ಆಸ್ಟ್ರಿಯಾದವರು ಕಡೆ ಮೂರು ವಾರಗಳಲ್ಲಿ 70,000 ಸೈನ್ಯಗಳನ್ನು ಕಳೆದುಕೊಂಡು ಈಗ ಏನೂ ಮಾಡಲಾರದಂಥಾ ದುಸ್ಥಿತಿಯಲ್ಲಿ ಇದ್ದಾರೆಂದು ಹೇಳಲಾಗಿದೆ. ಜರ್ಮನಿಯವರಲ್ಲಿರುವ ಭಾರಿಭಾರಿ ಫಿರಂಗಿಗಳನ್ನು ಎತ್ತಿಕಟ್ಟಿ ಗುಂಡುಗಳನ್ನು ಹೊಡೆಯುವುದಕ್ಕೆ ಸಮರ್ಥರಾದ ಜನಗಳಿಲ್ಲವೆಂದು ಬಿಂಕಪಡುತ್ತಾರೆ. ಜರ್ಮನಿ ಮತ್ತು ಆಸ್ಟ್ರಿಯಾದವರು ಸರ್ಬಿಯಾದಿಂದ 3,00,000 ಸೈನ್ಯವನ್ನೂ, 60,000 ಸೈನ್ಯವನ್ನು ಇಟಲಿ ಪ್ರಾಂತ್ಯದಿಂದಲೂ, ಫ್ರಾನ್ಸಿನಿಂದ ಕೆಲವು ಸೈನ್ಯಗಳನ್ನೂ ವಾಪಸು ಕರೆಸಿಕೊಂಡರೆಂದು ವರ್ತಮಾನವಿದೆ. ಹೀಗೆಯೇ ಜರ್ಮನಿಯವರು ಸೈನ್ಯಗಳನ್ನು ಯಾವಾಗಲೂ ಹಿಂದಕ್ಕೂ ಮುಂದಕ್ಕೂ ಕರೆಸಿಕೊಂಡು ಕಳುಹಿಸುತ್ತಿರೋಣವೆಂದರೆ ಈ ಸೈನ್ಯಗಳ ಚಲನೆಯಲ್ಲಿ ಅರ್ಥವೇನೂ ಕಾಣುವುದಿಲ್ಲ. ರಷ್ಯಾದವರು ಮುಂದು ಮುಂದಕ್ಕೆ ನುಗ್ಗಿಕೊಂಡು ಹೋಗುತ್ತಿದ್ದಾರೆಂದು ಈ ಕಲ್ಪಿಸಿದ್ದಾಗ್ಯೂ ಖಚಿತವಾದ ಫಲಿತಾಂಶಗಳು ಕಂಡು ಬರುವಂಥಾ ದೊಡ್ಡ ಕದನಗಳು ನಡೆಯುವುದಕ್ಕೆ ಇನ್ನೂ ಕೆಲವು ಕಾಲವಾಗಬೇಕು.

ಇಟಲಿ.

ಚಳಿಯ ಹವಾ ದೆಸೆಯಿಂದ ಈ ಯುದ್ಧಭೂಮಿಯಲ್ಲಿ ವಿಶೇಷ ಕದನಗಳು ನಡೆಯದಂತೆ ಅಡ್ಡಿಯಾಗಿದೆ. ಆದಾಗ್ಯೂ ಎರಡು ಪಕ್ಷಗಳಲ್ಲೂ ಫಿರಂಗಿ ಗುಂಡುಗಳ ಹೋರಾಟವೂ, ಅಂತರಿಕ್ಷದಲ್ಲಿ ವಿಮಾನ ಯಂತ್ರಗಳ ಹೋರಾಟವೂ ನಡೆಯುತ್ತಲಿದೆ. ಈ ಯುದ್ಧಭೂಮಿಯ ಯಾವ ರಾಜ್ಯದಿಂದಲೂ ಏನೊಂದೂ ವಿಶೇಷ ಸಮಾಚಾರ ಹೊರಬಿಟ್ಟಿರುವುದಿಲ್ಲ. ಬಹುಶಃ ಇಟಲಿಯವರು ಆಲ್ಬೇನಿಯಾ ಸೀಮೆಯಲ್ಲಿ ಸರ್ಬಿಯಾದವರಿಗೆ ಸಹಾಯ ಮಾಡುತ್ತಿರಬಹುದು.

ಜನವರಿ ತಾ. 14 ರಲ್ಲಿ ಆಸ್ಟ್ರಿಯಾದವರು ಫಿರಂಗಿ ಗುಂಡುಗಳನ್ನು ಆರೋರವಾಗಿ ಸುರಿಸಿ ಇಟಲಿಯವರ ಮೇಲೆ ನುಗ್ಗಿ ಕದನಮಾಡಿ ಇಟಲಿಯವರಿದ್ದ ಕಂದಕಗಳನ್ನು ಪ್ರವೇಶ ಮಾಡಿದರು. ತರುವಾಯ ಇಟಲಿಯವರು ಅವರ ಮೇಲೆ ತಿರುಗಿ ಬಿದ್ದು ಕದನ ಮಾಡಿದ್ದರಲ್ಲಿ ಆಸ್ಟ್ರಿಯಾದವರೆಲ್ಲಾ ಹಿಂದಕ್ಕೆ ಹೊರಟು ಹೋಗಬೇಕಾಯಿತು. ಇಟಲಿಯವರಿಗೆ ಯುದ್ಧಸಾಮಗ್ರಿಗಳು ಬಹಳವಾಗಿ ಸಿಕ್ಕಿದವು.

ಬಾಲ್ಕನ್ ಸಂಸ್ಥಾನಗಳಲ್ಲಿ.

ಸರ್ಬಿಯಾದಲ್ಲೂ ಗ್ರೀಸಿನಲ್ಲೂ ಎಲ್ಲಾ ಶಾಂತವಾಗಿರುವಂತೆ ತೋರುತ್ತದೆ. ಮಾಂಟಿನೀಗ್ರೋದಲ್ಲಿ ಆಸ್ಟ್ರಿಯಾದವರಿಗೂ ಮಾಂಟಿನೀಗ್ರೋದವರಿಗೂ ಬಹಳ ಕಠಿನವಾದ ಯುದ್ಧಗಳು ನಡೆದವು. ಆಸ್ಟ್ರಿಯಾದವರು ಅಪಾರವಾದ ಸೈನ್ಯವನ್ನೂ ಫಿರಂಗಿಗಳನ್ನೂ ತಂದಿದ್ದರು. ಈ ಯುದ್ಧಗಳಲ್ಲಿ ಎರಡು ಕಡೆಗಳಲ್ಲೂ ಬಹಳ ನಷ್ಟವಾಗಿರುತ್ತದೆ. ಮಾಂಟಿನೀಗ್ರೋದವರು ಹಿಮ್ಮೆಟ್ಟಿ ಹೋಗಬೇಕಾಯಿತು. ಬಲ್ಗೇರಿಯಾದವರು ಆಲ್ಬೇನಿಯಾದೊಳಕ್ಕೆ ನುಗ್ಗಿ ಹೋಗ

...ಅಲ್ಲಿ ಸರ್ಬಿಯಾದವರು ಅವರನ್ನು ಸೋಲಿಸುತ್ತಿರುವುದರಿಂದಲೂ ಹೀಗೆ ಆಸ್ಟ್ರಿಯಾದವರು ಸರ್ಬಿಯಾದವರಿಗೆ ಸಹಾಯಕರಾಗಿದ್ದಂತೆಯೂ, ...ವರು ಕೂಡ ಅವರಿಗೆ ಬೆಂಬಲವಾಗಿ ನಿಂತು ಯುದ್ಧ ಮಾಡಿದಂತೆಯೂ ...ಗಿದೆ.

ಸರ್ಬಿಯಾದವರಿಗೆ ವಿಶ್ರಾಂತಿಯುಂಟಾಗಲೆಂದೂ, ಅವರು ಯುದ್ಧಕ್ಕೆ ...ಬೇಕಾದುದನ್ನು ತೆಗೆದುಕೊಂಡು ಸಿದ್ಧರಾಗಲೆಂದೂ ಫ್ರೆಂಚರು ಸರ್ಬಿಯಾದವ[ರನ್ನು] ಅಲ್ಬೇನಿಯಾದ ಸಮೀಪದಲ್ಲಿ ಗ್ರೀಕರಿಗೆ ಸೇರಿದ ಕೋರ್ಫು ಎಂಬ ... ಕಳುಹಿಸಿದರು. ಮಿತ್ರಮಂಡಲಿಯವರ ಹಡಗುಗಳು ಸರ್ಬಿಯಾದವ[ರನ್ನು] ಆ ದ್ವೀಪಕ್ಕೆ ಸಾಗಿಸಿಕೊಂಡು ಹೋಗಿ ಇಳಿಸುತ್ತಲಿವೆ. ಅವರು ಅಲ್ಲಿ ...ಕಾಲ ಮಾತ್ರ ಇದ್ದು ಬರುವರು. ಈ ದ್ವೀಪದಲ್ಲಿರುವ ಜರ್ಮನಿ ...ಯ ಅನುಮತಿಯ ಮೇಲೆ ಫ್ರೆಂಚರು ಬಾವುಟವನ್ನು ಎತ್ತಿಕಟ್ಟಿದಾರೆ. ...ದ ಸಂಪರ್ಕಸಿಗೋಸ್ಕರ ಸಾಧ್ಯವೂ ಅನೇಕ ಯುದ್ಧದ ಜಹಜುಗಳು ...ಟ್ಟಿರುವವು. ಗ್ರೀಸ್ ಸರ್ಕಾರದವರೇನೋ ಆಕ್ಷೇಪಣೆ ಮಾಡಬಹುದು. ...ಅವರು ತಮ್ಮ ಸ್ನೇಹವರ್ಗಕ್ಕೆ ಸೇರಿರುವ ಸರ್ಬಿಯಾದವರಿಗೆ ಸಹಾಯ ...ವ ವಿಷಯದಲ್ಲಿ ತಿರಸ್ಕಾರ ತೋರಲಾರರು.

ಫ್ರೆಂಚರ ಒಂದು ಸಬ್‌ಮೆರೀನು ಅಡ್ರಿಯಾಟಿಕ್ ಕಡಲಿನಲ್ಲಿ ಆಸ್ಟ್ರಿ[ಯಾದ] ಒಂದು ಯುದ್ಧದ ಜಹಜನ್ನು ಮುಳುಗಿಸಿಬಿಟ್ಟಿತು.

...ಕಿನ ತೀರಪ್ರದೇಶದಲ್ಲಿ ಮಿತ್ರಮಂಡಲಿಯವರು 2,50,000 ಸೈನ್ಯಗ[ಳನ್ನು] ...ಇಳಿಸಿರುವಂತೆ ತಿಳಿಯುವುದು. ಕೆಲವು ವಿಮಾನಯಂತ್ರಗಳು ಬಲ್ಗೇ[ರಿಯಾ]ದ ರಾಜಧಾನಿಯಾದ ಸೋಫಿಯ ಪಟ್ಟಣದ ಮೇಲ್ಭಾಗಕ್ಕೆ ಹಾರಿಹೋಗಿ ...ಡ್ಡಿನ ಗುಂಡುಗಳನ್ನು ಸುರಿಸಿದವು. ಆ ನಗರದಲ್ಲಿ ಆಸ್ತಿಪಾಸ್ತಿಗಳು ...; ಪ್ರಜೆಗಳಿಗೆ ತುಂಬಾ ಗಾಬರಿಯುಂಟಾಯಿತು.

ಟರ್ಕಿಯಲ್ಲಿ.

ಮೆಸಪೊಟೇಮಿಯಾದಲ್ಲಿ ಬ್ರಿಟಿಷರಿಗೂ ಟರ್ಕಿಯವರಿಗೂ ಇನ್ನೂ ಕೆಲವು ... ಹೊಸದಾಗಿ ಕಳುಹಿಸಲ್ಪಟ್ಟ ಬ್ರಿಟಿಷ್ ಸೈನ್ಯಗಳು ಟೈಗ್ರಿಸ್ ...ತೀರಗಳಿಗೆ ನುಗ್ಗಿ ಹೋಗಿ ಷೇಕ್ ಸಾದ್ ಎಂಬ ಠಾಣ್ಯದಲ್ಲಿ ಅಂದರೆ ...ಅಮಾರಾಗೆ ದಕ್ಷಿಣದಲ್ಲಿ ಸುಮಾರು 25 ಮೈಲಿ ದೂರದಲ್ಲಿ ಟರ್ಕಿಯ[ವರು] ...ಹಾಕಿಕೊಂಡಿದ್ದುದನ್ನು ಕಂಡು, ಆ ಟರ್ಕಿ ಸೈನ್ಯದ ಮೇಲೆ ನುಗ್ಗಿ ...ದಾಳಿ ಮಾಡಿದವು. ಈ ಯುದ್ಧವು ಜನವರಿ ತಾ. 7 ರಲ್ಲಿ ನಡೆಯಿತು. ಬ್ರಿಟಿ[ಷರು ಶತ್ರು] ಸೈನ್ಯದಲ್ಲಿ ಒಂದು ಭಾಗವನ್ನು ಬೇರ್ಪಡಿಸಿ ಸುತ್ತುಹಾಕಿಕೊಂಡು ...ಸೈನಿಕರನ್ನೂ 2 ಪಿರಂಗಿಗಳನ್ನೂ ಕೈಸೆರೆ ಹಿಡಿದುಕೊಂಡರು. ಬಳಿಕ ಟರ್ಕಿ[ಯವರು] ಹಿಮ್ಮೆಟ್ಟಿಹೋದರು. ನಮ್ಮ ಸೈನಿಕರು ಅವರ ಬೆನ್ನುಹತ್ತಿ ಹೋಗು[ತ್ತಿದ್ದಾರೆ]. ...ಟರ್ಕಿ ಸೈನ್ಯದಲ್ಲಿ ಅನೇಕ ಅರಬ್ಬಿಯವರೂ ಸೇರಿ ಅವರಿಗೆ ಸಹಾಯ ...ತ್ತಿರುವರು. ಅಲ್ಲಿ ಬ್ರಿಟಿಷ್ ಸೈನ್ಯಗಳ ಅಧಿಪತಿಯಾಗಿದ್ದ ಸರ್ ಜಾನ್ ...ರವರಿಗೆ ದೇಹಸ್ಥಿತಿ ಸರಿಯಾಗಿಲ್ಲದ್ದರಿಂದ ಅವರನ್ನು ವಾಪಸು ಕರಸಿ[ಕೊಳ್ಳಲಾ]ಯಿತು.

ಮಿತ್ರಮಂಡಲಿಯವರು ಗಲ್ಲಿಪೋಲಿ ಅರ್ಧದ್ವೀಪದಲ್ಲಿದ್ದ ತಮ್ಮ ಸಮಸ್ತ ...ಯುದ್ಧ ಸಾಮಗ್ರಿಗಳನ್ನೂ ಅಲ್ಲಿಂದ ಸಂಪೂರ್ಣವಾಗಿ ವಾಪಸು ...ಯಿತು. ಪಿರಂಗಿಗುಂಡುಗಳ ಹಾರಾಟವು ವಿಶೇಷವಾಗಿ ನಡೆದ ...ಜನವರಿ ತಾ. 7 ರಲ್ಲಿ ಟರ್ಕಿಯವರು ಮಿತ್ರಮಂಡಲಿಯವರ ಮೇಲೆ ...ಕಡೆ ಎರಡು ಠಾಣ್ಯಗಳಲ್ಲಿ ಮಾತ್ರ ಮುಂದಕ್ಕೆ ಬಂದರು. ಮಿತ್ರ[ಮಂಡಲಿ]ಯವರು ಶತ್ರು ಸೈನ್ಯವನ್ನು ಹಿಂದಕ್ಕೆ ಓಡಿಸಿಬಿಟ್ಟರು. ನಮ್ಮ ಕಡೆ ...ವರೂ ಗಾಯಪಟ್ಟವರೂ 135 ಜನರು. ಮರುದಿನ ನಮ್ಮ ಸೈನ್ಯ ...ಬಹಳ ಕಷ್ಟಕರವಾಗಿದ್ದರೂ ಯಾವುದೊಂದು ನಷ್ಟವೂ ಇಲ್ಲದೆ ...ನ್ನು ಹತ್ತಿ ವಾಪಸು ಬಂದುಬಿಟ್ಟವು. ನಮ್ಮ ಸೈನ್ಯಗಳೆಲ್ಲಾ ಜಹಜು ...ಹತ್ತಿ ತೀರವನ್ನು ಬಿಟ್ಟು ಬರುವ ತನಕ ಟರ್ಕಿಯವರು ಗುಂಡು ಹೊಡೆ[ಯಲೇ ಇ]ಲ್ಲ. ಸಕಲ ಪದಾರ್ಥಗಳನ್ನೂ ಸರಕುಗಳನ್ನೂ ಸಾಗಿಸಿಕೊಂಡು ...ಹದಿನೇಳು ಪಿರಂಗಿಗಳು ಮಾತ್ರ ಹಿಂದೆ ಉಳಿದುಕೊಂಡವು. ಈ ಪೈಕಿ ...ಪಿರಂಗಿಗಳು ಸವೆದುಹೋಗಿದ್ದವು. ಸೈನಿಕರು ಇವನ್ನು ಕೂಡ ಶತ್ರುವಿಗೆ ಪ್ರಯೋಜನವಾಗದಂತೆ ಕೆಡಿಸಿ, ಕೆಲವು ಸಾಮಾನನ್ನು ಸುಟ್ಟುಹಾಕಿಬಿಟ್ಟರು.

...ಕಡಲಿನಲ್ಲಿ ರಷ್ಯಾದವರ ಒಂದು ಟಾರ್ಪಿಡೋ ದೋಣಿಯು ಟರ್ಕಿ[ಯವ]ರ ಒಂದು ಸಬ್‌ಮೆರೀನನ್ನೂ ಕಲ್ಲಿದ್ದಲು ಸಾಗಿಸುತ್ತಿದ್ದ ಎರಡು ಹಡಗು[ಗಳನ್ನೂ] ಹಿಡಿದು ಮುಳುಗಿಸಿರುತ್ತದೆ.

ಕಾಕಸಸ್ ಪರ್ವತ ಪ್ರಾಂತ್ಯದಲ್ಲಿ ರಷ್ಯಾದವರಿಗೂ ಟರ್ಕಿಯವರಿಗೂ ಕದ[ನ] ...ವು ಟರ್ಕಿಯವರು ಸೋತು ಹೋದರು. ರಷ್ಯಾದವರು 20 ...ದಾರರನ್ನೂ, 400 ಮಂದಿ ಸೈನಿಕರನ್ನೂ, ಆರು ಪಿರಂಗಿಗಳನ್ನೂ, ...ಮೆಷೀನ್ ಪಿರಂಗಿಗಳನ್ನೂ, ಬಹಳ ಮದ್ದು ಗುಂಡನ್ನೂ ಕೈಸೆರೆ ಹಿಡಿದು[ಕೊಂ]ಡರು.

ಈಜಿಪ್ಟಿನಲ್ಲಿ.

ಜನವರಿ ತಾ. 13 ರಲ್ಲಿ ಬ್ರಿಟಿಷ್ ಸೈನಿಕರು 400 ಮಂದಿ ಇದ್ದ ಅರಬ್ಬಿ ...ಗುಂಪನ್ನು ಚದರಿಸಿ ಓಡಿಸಿದರು. ಅವರು ತಮ್ಮ ಕುರಿ, ಆಡು, ದನ ...ಗಳನ್ನೆಲ್ಲಾ ಬಿಟ್ಟು ಓಡಿಹೋದರು. ಬ್ರಿಟಿಷರ ಕಡೆ ನಷ್ಟವೇನೂ ...ಲ್ಲ.

ಪರ್ಶಿಯಾದಲ್ಲಿ.

...ದಲ್ಲಿ ರಷ್ಯಾದವರಿಗೂ ದಂಗೆಕೋರರಿಗೂ ಇನ್ನೂ ಕೆಲವು ಕದ[ನಗಳಾ]ದವು. ರಷ್ಯಾದವರು ಅಸ್ಸಾದಬಾದ್ ಎಂಬ ಠಾಣ್ಯದ ಬಳಿ ದಂಗೆಕೋರ[ರನ್ನು] ಸೋಲಿಸಿ, ಅವರ ಮಧ್ಯೆ ಇದ್ದ ಇಬ್ಬರು ಜರ್ಮನ ಹುದ್ದೇದಾರರನ್ನು ...ಹಿಡಿದಿರುತ್ತಾರೆ.

ಇತರ ವಿಷಯಗಳು.

ಜರ್ಮನಿ ಚಕ್ರವರ್ತಿಯವರು ಜನವರಿ ತಾ 27 ರಲ್ಲಿ ತಮ್ಮ ಹುಟ್ಟಿದ ...ನಾಳೆ ಆದ್ದರಿಂದ ತಮ್ಮ ಸೈನಿಕರೆಲ್ಲ ಇತ್ತ ... ಮೂಲಕ ತಿಳಿಸಿರುವುದೇನೆಂದರೆ—"ಯುದ್ಧ ನಡೆಯುವುದರ ಮಧ್ಯದಲ್ಲೇ ನನ್ನ ವರ್ಧಂತಿ ಉತ್ಸ[ವವು] ಇನ್ನೊಂದು ಸಲ ಬೆಳಗುವದಾಗಿದೆ. ಪರಾಕ್ರಮವುಳ್ಳ ಯುದ್ಧಕಾರ್ಯ[ಗಳು] ...ಯುಕ್ತವಾದ ಜಯಪ್ರದಗಳೂ ಆಗುತ್ತಿದ್ದಾಗ್ಯೂ ಮಹಾ ಕಷ್ಟ[ಕರವಾ]ದ ಯುದ್ಧಕಾರ್ಯಗಳು ಇನ್ನೂ ಮುಕ್ತಾಯವಾಗಿರುವುದಿಲ್ಲ. ಅಂತ್ಯ[ದಲ್ಲಿ] ಜಯಪ್ರದವಾಗುವವರೆಗೋಸ್ಕರ ನಮ್ಮ ರಾಜ್ಯದ ಒಳಗೂ ಯುದ್ಧಭೂಮಿ[ಯ]ಲ್ಲಿರುವ ಜರ್ಮನ ಜನಾಂಗದವರೆಲ್ಲಾ ತಮ್ಮ ಸರ್ವಸಾಮರ್ಥ್ಯವನ್ನೂ ವಿನಿಯೋಗಿಸಬೇಕು." ಈ ವರ್ಧಂತಿ ಉತ್ಸವದ ನಿಮಿತ್ತ ಬಹಿರಂಗವಾದ ...ಆಚರಣೆಯನ್ನೂ ನಡೆಸದೆ ದೇವರಿಗೆ ಮೌನವಾದ ಪ್ರಾರ್ಥನೆಗಳನ್ನು ಸಲ್ಲಿ[ಸಬೇಕೆಂದೂ], ಯುದ್ಧದ ದೆಸೆಯಿಂದ ಸಂಕಟಪಡತಕ್ಕವರಿಗೆ ಧರ್ಮಾರ್ಥವಾದ ...[illegible]ಗಳನ್ನು ಮಾಡಬೇಕೆಂದೂ ಸಾರಿಸಿರುತ್ತಾರೆ.

ಹಿಂದುಸ್ಥಾನದಲ್ಲಿದ್ದ ಆಸ್ಟ್ರಿಯಾ ಮತ್ತು ಜರ್ಮನಿ ಪ್ರಜೆಗಳ ಪೈಕಿ ...ನ್ನು ಬ್ರಿಟಿಷರು ಹಿಡಿದು ಗೋಲ್ಕೊಂಡ ಎಂಬ ಜಹಜು ಹತ್ತಿಸಿ ಅವ[ರ ದೇಶ]ಕ್ಕೆ ವಾಪಸು ಕಳುಹಿಸುತ್ತಿದ್ದರು. ಈ ಜಹಜು ಹಿಂದುಸ್ಥಾನದಿಂದ ...ಒಂದು ತಿಂಗಳಾಯಿತು. ಅವರಲ್ಲಿ ಹೆಂಗಸರು ಮಕ್ಕಳೇ ವಿಶೇಷ[ವಾಗಿದ್ದ]ರು. ಅವರ ಸಂಬಂಧಿಗಳು ಅವರನ್ನೆಲ್ಲಾ ಸಬ್‌ಮೆರೀನಿನ ಏಟಿಗೆ ಸಿಕ್ಕ...ಬಾರದೆಂದು ಕೇಳಿಕೊಂಡಿದ್ದರು. ಆಸ್ಟ್ರಿಯಾ ಗವರ್ನ್‌ಮೆಂಟಿನ ...ಮೇರೆಗೆ ರಾಯಭಾರಿಯ ಮೂಲಕ ಆ ಜಹಜಿನಲ್ಲಿರುವವರು ...ಸೇರಿದವರೆಂದೂ, ಅವರಿಗೆ ಯಾವುದೊಂದು ಅಪಾ[ಯವೂ] ...ಬಾರದಂತೆ ಬಹಳ ಜಾಗರೂಕತೆಯಿಂದ ಕರೆದು ತಂದು ಬಿಡ[ಬೇಕೆಂದೂ], ...ಅವರಲ್ಲಿ ಯಾರಾದರೂ ನಷ್ಟಪಟ್ಟ ಪಕ್ಷದಲ್ಲಿ ಅದರ ಜವಾಬ್ದಾರಿಯನ್ನು ವಹಿಸಬೇಕಾದೀತೆಂದೂ ಬ್ರಿಟಿಷ್ ಗವರ್ನ್‌ಮೆಂಟಿನ ಸರ್ ಎಡ್ವರ್ಡ್ ಗ್ರೇ ಸಾಹೇಬರಿಗೆ ಬರೆದು ಕಳುಹಿಸಿದ್ದರು. ಅದಕ್ಕೆ ಪ್ರತಿಯಾಗಿ ಸರ್ ಎಡ್ವರ್ಡ್ ಗ್ರೇಯವರು—ಆಸ್ಟ್ರಿಯಾದವರು ತಮ್ಮ ಪ್ರಜೆಗಳನ್ನು ಕಾಪಾಡುವ ವಿಷಯದಲ್ಲಿ ಅಷ್ಟೊಂದು ಆತುರ ಪಡುವುದು ಆಶ್ಚರ್ಯವನ್ನುಂಟುಮಾಡಿದೆ ಎಂದೂ, ದೊಡ್ಡ ಮನೆತನದವರನ್ನು ಇತರ ಸಾಮಾನ್ಯ ಪ್ರಜೆಗಳಂತೆಯೇ ನೋಡದೆ ತಾರತಮ್ಯವನ್ನು ತೋರಿಸುವದಕ್ಕೆ ಕಾರಣವೇನೂ ಕಾಣುವುದಿಲ್ಲವೆಂದೂ ಹೇಳಿದರು. ಇದಲ್ಲದೆ ಅಂಥಾ ಕಷ್ಟನಷ್ಟಗಳನ್ನು ಉಂಟುಮಾಡಿದವರು ಆಸ್ಟ್ರಿಯಾದವರು ಮತ್ತು ಜರ್ಮನಿಯವರು. ಈಗ ಅವರು ನಮ್ಮನ್ನು ಆ ರೀತಿ ಕೇಳಿಕೊಂಡಿರುವುದರಿಂದ ಅವರ ಗವರ್ನ್‌ಮೆಂಟಿನವರು ಹಡಗುಗಳನ್ನು ಮುಳುಗಿಸುವ ದುರ್ಧರ್ಮವನ್ನೇ ಆಚರಣೆಯಲ್ಲಿಟ್ಟುಕೊಂಡಿದಾರೆನ್ನುವುದೂ, ಅದು ಅವರ ಸಬ್‌ಮೆರೀನ್ ಹುದ್ದೇದಾರರುಗಳ ಕ್ರೂರಕೃತ್ಯಗಳೇನೂ ಅಲ್ಲವೆನ್ನುವುದೂ ವೇದ್ಯವಾಗುತ್ತದೆ. ಬ್ರಿಟಿಷ್ ಪ್ರಜೆಗಳನ್ನು ಸಂರಕ್ಷಣೆ ಮಾಡುವಂತೆಯೇ ಅವರನ್ನೂ ಕಾಪಾಡುತ್ತೇವೆ. ಅದಕ್ಕಿಂತ ಹೆಚ್ಚಿನ ಆವಶ್ಯಕತೆಯೇನೂ ಕಾಣುವುದಿಲ್ಲ. ಹಡಗುಗಳನ್ನು ಮುಳುಗಿಸುವುದರಲ್ಲಿ ಆಸಕ್ತರಾದಂಥಾ ಆಸ್ಟ್ರಿಯಾದವರು ಈ ರೀತಿ ಕೇಳಿಕೊಂಡಿರುವುದು ಪರಮಾಶ್ಚರ್ಯವೇ ಸರಿ!

ಬ್ರಿಟಿಷರ ಒಂದು ಹಡಗು ಮುಳುಗಿಸಲ್ಪಟ್ಟಿತು. ಅದರೊಳಗಿದ್ದವರು ಬದುಕಿಕೊಂಡು ಮಾಲ್ಟಾ ದ್ವೀಪಕ್ಕೆ ಬಂದಿಳಿದರು. ಈ ಹಡಗು ಬೊಂಬಾಯಿ ಪಟ್ಟಣಕ್ಕೆ ಬರುತ್ತಿತ್ತು. ಆ ಹಡಗಿನ ಸೇವಕರುಗಳಲ್ಲಿ ಹದಿನಾರು ಮಂದಿ ಒಂದು ದೋಣಿಯಲ್ಲಿದ್ದು ನೀರಿನ ಪಾಲಾದರು. ಇನ್ನೊಂದು ಹಡಗು ಮುಳುಗಿಹೋಗಿ ಅದರಲ್ಲಿದ್ದವರು ಬದುಕಿಸಲ್ಪಟ್ಟಿದಾರೆ.

ನೀರಿನಲ್ಲಿದ್ದಾಗ ಜರ್ಮನಿಯವರನ್ನು ಬ್ರಿಟಿಷರು ಗುಂಡು ಹೊಡೆದು ಕೊಂದುಹಾಕಿದರೆಂಬದಾಗಿ ಜರ್ಮನಿಯವರು ದೋಷಾರೋಪಣೆ ಮಾಡಿದ್ದರು. ಆ ಬ್ರಿಟಿಷರ ಹಡಗಿನಲ್ಲಿ ಕೆಲವು ಅಮೇರಿಕದವರೂ ಇದ್ದು, ಅವರು ದೋಷಾರೋಪಣೆಯು ನಿಜವಲ್ಲವೆಂದು ಸ್ಥಾಪಿಸಿದಾರೆ. ಈ ಅಮೇರಿಕದವರ ಪೈಕಿ ಒಬ್ಬನು ಗಾಯಪಟ್ಟು ನರಳುತ್ತಿದ್ದ ಹೇಸರಕತ್ತೆಗಳನ್ನು ಗುಂಡಿನಿಂದ ಹೊಡೆದು ಕೊಲ್ಲುತ್ತಿದ್ದನು.

ಜರ್ಮನಿ ಮತ್ತು ಆಸ್ಟ್ರಿಯಾ ರಾಜ್ಯಗಳಲ್ಲಿ ನಾಣ್ಯಗಳ ಬೆಲೆಯು ಬಹಳವಾಗಿ ಇಳಿಯುತ್ತಿದೆ. ಜರ್ಮನಿಯ ನಾಣ್ಯಗಳ ಬೆಲೆಯು ಶೇಕಡಾ 33 ರಷ್ಟೂ, ಆಸ್ಟ್ರಿಯಾದವರದು ಶೇಕಡಾ 48 ರಷ್ಟೂ ಕಡಮೆಯಾಗಿದೆ. ಜರ್ಮನಿಯಲ್ಲಿ ತಲೆಗೆ ದಿನ ಒಂದಕ್ಕೆ 40 ರೂಪಾಯಿ ತೂಕದ ನಾನ್ ರೊಟ್ಟಿಯನ್ನು ಕೊಡುತ್ತಿದ್ದರು; ಈಗ ಅದನ್ನು ಅರೆವಾಸಿ ಕಡಮೆ ಮಾಡಿಬಿಟ್ಟಿದಾರೆ. ವಿಯನ್ನಾ ನಗರದ [illegible] ತಿನ್ನುವುದಕ್ಕೆ ಮಾಂಸವಿಲ್ಲದೆ ನಾಯಿ ಮಾಂಸವನ್ನು ಕೊಂದು ತಿನ್ನುವರು.

ಪರ್ಶಿಯಾ ಎಂಬ ಬ್ರಿಟಿಷ್ ಮೆಯಿಲ್ ಜಹಜು ಮುಳುಗಿಸಲ್ಪಟ್ಟಿತಷ್ಟೆ. ಅದು ಮುಳುಗಿದ ಸಮಯದಲ್ಲಿ ಆಸ್ಟ್ರಿಯಾದವರು ತಮ್ಮ ಸಬ್‌ಮೆರೀನು ಇರಲಿಲ್ಲವೆಂದೂ, ಪರ್ಶಿಯಾ ಜಹಜು ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿ ಹೋಗಿರಬೇಕೆಂದೂ ಹೇಳುತ್ತಾರೆ.

ಗ್ರೇಟ್ ಬ್ರಿಟನ್ನಿನಲ್ಲಿ ಪ್ರಜೆಗಳನ್ನು ಬಲಾತ್ಕರಿಸಿ ಸೈನ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ಮಸೂದಾ ಕಾನೂನನ್ನು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಎರಡನೆಯ ಸಲ ಓದಿ ಮೆಂಬರುಗಳು ಚರ್ಚೆ ಮಾಡಿದರು. ಇದಕ್ಕೆ 431 ಮಂದಿ ಕಾನೂನು ಆಗಬೇಕೆಂದೂ, 39 ಮಂದಿ ಮಾತ್ರ ಅದಕ್ಕೆ ವಿರೋಧವಾಗಿಯೂ ಅಭಿಪ್ರಾಯಪಟ್ಟರು. ಕೂಲಿಕಾರರ ಪ್ರತಿನಿಧಿಯಾಗಿದ್ದ ಮಂತ್ರಿ ಸಭೆಯ ಮೆಂಬರುಗಳು ರಾಜೀನಾಮೆ ಕೊಟ್ಟಿದ್ದು ವಾಪಸು ತೆಗೆದುಕೊಂಡರು. ಯುದ್ಧಭೂಮಿಯಲ್ಲಿರುವ ಬ್ರಿಟಿಷ್ ಸೈನಿಕರಲ್ಲಿ ಶೇಕಡಾ 16 ಮಂದಿಯಂತೆ ಪ್ರತಿ ತಿಂಗಳಲ್ಲೂ ನಷ್ಟವಾಗುತ್ತಿದಾರೆ.

ಯುದ್ಧವು ಪ್ರಾರಂಭವಾದಾಗ್ಗೆ ಗ್ರೇಟ್ ಬ್ರಿಟನ್ನಿನಲ್ಲಿ ಜರ್ಮನಿ ಪ್ರಜೆಗಳು 32,028 ಮಂದಿ ಇದ್ದರು. ಈ ಪೈಕಿ ಸರ್ಕಾರದವರು 26,474 ಮಂದಿಯನ್ನು ಹಿಡಿದು ಬಂಧನದಲ್ಲಿ ಇಟ್ಟಿದಾರೆ. ಜರ್ಮನಿಯಲ್ಲಿ 7,20,00,000 ಪೌಂಡುಗಳ ಆಸ್ತಿಯು ಬ್ರಿಟಿಷರಿಗೆ ಸೇರುತ್ತದೆ; ಅತ್ತಲಾಗಿ ಬ್ರಿಟನ್ನಿನಲ್ಲಿ 10,50,00,000 ಪೌಂಡುಗಳ ಆಸ್ತಿಯು ಜರ್ಮನಿಯವರಿಗೆ ಸೇರಿದ್ದಾಗಿದೆ.

ದಕ್ಷಿಣ ಆಫ್ರಿಕಾದಲ್ಲಿರುವ ಹಿಂದುಸ್ಥಾನದವರು ಹೊರುವುದೇ ಮೊದಲಾದ ಕಾರ್ಯಗಳನ್ನು ಮಾಡುವುದಕ್ಕೋಸ್ಕರ ಯುದ್ಧದಲ್ಲಿ ಸಹಾಯಮಾಡಬೇಕೆಂದು ಬ್ರಿಟಿಷ್ ಪೂರ್ವ ಆಫ್ರಿಕಾಕ್ಕೆ ಹೋಗಿರುತ್ತಾರೆ. ಅವರು ಒಟ್ಟು 114 ಜನರು, ಇವರಲ್ಲಿ 88 ಮಂದಿ ತಮಿಳು ಜನರು, 22 ಮಂದಿ ಕಲ್ಕತ್ತೆಯವರು. ಆಸ್ಟ್ರೇಲಿಯಾದವರು ತಿರಿಗಿ 50,000 ಸೈನ್ಯವನ್ನು ಕೂಡಿಸಿ ಯುದ್ಧಭೂಮಿಗೆ ಕಳುಹಿಸುತ್ತಾರೆ.

ಫ್ರಾನ್ಸಿನಲ್ಲಿ ಪ್ರಜೆಗಳು 60,50,00,000 ಪೌಂಡು ದ್ರವ್ಯವನ್ನು ತಮ್ಮ ಸರ್ಕಾರಕ್ಕೆ ಸಾಲವಾಗಿ ಕೊಟ್ಟಿದಾರೆ.

ಹಾಲೆಂಡಿನ ತೀರದ ಬಳಿ ಜರ್ಮನಿಯ ಒಂದು ವಿಮಾನ ಯಂತ್ರವೂ, ಅದರಲ್ಲಿ ಇಬ್ಬರು ಹುದ್ದೇದಾರರೂ ಸಮುದ್ರದ ಮೇಲೆ ಸಿಕ್ಕಿದರು. ಅವರನ್ನು ನೀರಿನಿಂದೆತ್ತಿ ಬದುಕಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಕಳೆದ ಭಾನುವಾರ ರಾತ್ರಿ ಎಂಟು ಗಂಟೆಯ ಮೇಲೆ ಬೆಂಗಳೂರಿನಿಂದ ಮೋಟಾರಿನಲ್ಲಿ ರಾಜಧಾನಿಗೆ ಚಿತ್ತೈಸಿದರು. ಅವರು ಈ ದಿನವೋ ನಾಳೆಯೋ ಬೆಂಗಳೂರಿಗೆ ದಯಮಾಡುತ್ತಾರೆ.

ತುಮಕೂರಿನಲ್ಲಿ ತಾ. 21 ನೇ ಶುಕ್ರವಾರ ತಾಲೂಕ್ ಕಾನ್ಫರೆನ್ಸು ನಡೆಯುತ್ತದೆ. ದೇಶಾಭಿವೃದ್ಧಿಗೆ ಸಹಕಾರಿಗಳಾದ ನಾನಾ ವಿಷಯಗಳು ಅಲ್ಲಿ ಚರ್ಚಿಸಲ್ಪಡುವವೆಂದೂ, ಹಲವು ಉಪನ್ಯಾಸಗಳು ಓದಲ್ಪಡುವವೆಂದೂ ತಿಳಿಯಲಾಗಿದೆ.

ನಮ್ಮ ಮಹಾರಾಜರವರು ಅರಮನೆಯ ರಾಣಿವಾಸದವರೊಡನೆ ತಾ. 22 ರಲ್ಲಿ ಬೊಂಬಾಯಿಗೆ ಪ್ರಯಾಣಮಾಡಿ, ಉತ್ತರ ದೇಶದಲ್ಲಿ ಸಂಚಾರ ಮಾಡಿಕೊಂಡು ಸುಮಾರು ಮಾರ್ಚಿ ಮೊದಲನೆಯ ವಾರದಲ್ಲಿ ವಾಪಸು ದಯಮಾಡುವರೆಂದು ತಿಳಿಯುವುದು.

ಒಬ್ಬ ಬಾತ್ಮಿದಾರರು ಬರೆಯುವುದು:—ಬೇಲೂರು ಕಸಬ ಹೋಬಳಿ ಕೊಪ್ಪಲ ನಂಜಯ್ಯನವರ ಮಗ ಚೆನ್ನಬಸವಯ್ಯನು ಚಿಕ್ಕಮಗಳೂರು ಕೋರ್ಟಿನಲ್ಲಿ ಸುಳ್ಳು ಸಾಕ್ಷಿ ಹೇಳಿದ್ದರಿಂದ ಆರು ತಿಂಗಳು ಸಜ, 30 ರೂಪಾಯಿ ಜುಲ್ಮಾನೆಯಾಗಿರುತ್ತೆ.

ಮಂಚೇನಹಳ್ಳಿಯಲ್ಲಿದ್ದ ಡಿ|| ಜೆ. ಆರ್. ಎಲ್ಲಿಸ್‌ರವರು ಕಲ್ಲಮ್ಮ ಎದ್ದು ಎರಡು ವಾರ ಕಷ್ಟಪಟ್ಟು 62 ನೇ ವಯಸ್ಸಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಮಂಗಳೂರು, ಉಡುಪಿ, ಕೊಳ್ಳೇಗಾಲ, ಚಿಕ್ಕಬಳ್ಳಾಪುರ ಮುಂತಾದ ಅನೇಕ ಕಡೆಗಳಲ್ಲಿ ಸುವಾರ್ತಾ ಪ್ರಚಾರ ಕಾರ್ಯಗಳಲ್ಲಿ ಆಸಕ್ತರಾಗಿದ್ದರು.

ತೀರ್ಥಹಳ್ಳಿ ವಿದ್ಯಾಪ್ರದರ್ಶನದ ಸೆಕ್ರೆಟರಿ ಮ|| ಪಿ. ನರಸಿಂಹಯ್ಯನವರು ಬರೆಯುವುದು.—ತೀರ್ಥಹಳ್ಳಿ ತಾಲೂಕು ಉಪಾಧ್ಯಾಯರ ಕಾನ್ಫರೆನ್ಸು ಮತ್ತು ವಿದ್ಯಾಭ್ಯಾಸ ಪ್ರದರ್ಶನಗಳು ಜನವರಿ ತಾ 25 ರಲ್ಲಿ ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರಾದ ರಾವ್ ಬಹದ್ದೂರ್ ಮ|| ಎಂ. ಶಾಮರಾವ್, ಎಂ. ಎ. ಯವರಿಂದ ತೆರೆಯಲ್ಪಟ್ಟು 25-26-27 ಈ ಮೂರು ದಿವಸಗಳು ನಡೆಯಲ್ಪಡುವವು. ಈ ಪ್ರದರ್ಶನೋತ್ಸವಕ್ಕೆ ಸರ್ಕಲ್ ಇನ್ಸ್‌ಪೆಕ್ಟರರೂ, ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರುಗಳೂ, ಇನ್ನೂ ಅನೇಕ ವಿದ್ಯಾಭಿಮಾನಿಗಳಾದ ದೊಡ್ಡಮನುಷ್ಯರೂ ದಯಮಾಡಿಸಿ ಪ್ರೋತ್ಸಾಹಿಸುವವರಾಗಿರುತ್ತಾರೆ. ತಾ 22 ನೇ ಆಖೈರು ವರವಿಗೆ ಪ್ರದರ್ಶನದ ಸೆಕ್ರೆಟರಿ, ಎ. ವಿ. ಸ್ಕೂಲ್, ತೀರ್ಥಹಳ್ಳಿ, ಇವರಿಂದ ಪ್ರದರ್ಶನ ವಸ್ತುಗಳು ಅಂಗೀಕರಿಸಲ್ಪಡುವವು.

ಮಹಿಳಾ ಸಮಾಜ, ಚಿಕ್ಕಮಗಳೂರು.

ಚಿಕ್ಕಮಗಳೂರು ಗೌರ್ನಮೆಂಟ್ ಗರಲ್ಸ್ ಸ್ಕೂಲಿನಲ್ಲಿ ಜನವರಿ 3 ನೇ ತಾ. ಭಾನುವಾರ ಮಧ್ಯಾಹ್ನ 3 ಗಂಟೆಗೆ ಒಂದು ಮಹಿಳೆಯರ ಸಭೆಯು ಸೇರಿತ್ತು. ಎಲ್ಲಾ ದೊಡ್ಡಮನುಷ್ಯರ ಮನೆಯ ಸ್ತ್ರೀಯರುಗಳೂ ಬಂದಿದ್ದರು. ಆ ಕಾಲದಲ್ಲಿ ಸ್ಕೂಲ್ ಬಾಲಕಿಯರು ಹಾರ್ಮೋನಿಯಂ, ವೀಣೆ ಮೊದಲಾದವುಗಳಿಂದ ಹಾಡುಗಳನ್ನು ಹೇಳಿದರು. ಆ ದಿವಸ ಅಷ್ಟಕ್ಕೆ ಸಭೆಯು ಮುಕ್ತಾಯವಾಯಿತು. ಪುನಃ 6 ನೇ ತಾ. ಬುಧವಾರ ಮಧ್ಯಾಹ್ನ 4 ಗಂಟೆಗೆ ಚಿಕ್ಕಮಗಳೂರು ಗೌರ್ನಮೆಂಟ್ ಗರಲ್ಸ್ ಸ್ಕೂಲ್ ಹಾಲಿನಲ್ಲಿ ಆರ್ಯ ಮಹಿಳೆಯರ ಸಭೆಯು ಸೇರಿತ್ತು. ಆ ಕಾಲದಲ್ಲಿ ಸೌ|| ಕಮಲಮ್ಮನವರು ಸತ್ಯ ಮತ್ತು ಅಸತ್ಯ ಎಂಬ ವಿಚಾರವಾಗಿ ಒಂದು ಉಪನ್ಯಾಸವನ್ನು ಓದಿದರು. ಈ ಉಪನ್ಯಾಸವು ಬಹಳ ಚೆನ್ನಾಗಿತ್ತು. ಅನಂತರ ಹೆಡ್ ಮಿಸ್ಟ್ರೆಸ್ ಪಂಡಿತ ಸುಂದರಮ್ಮನವರು—"ಈಗ ಸೌ|| ಕಮಲಮ್ಮನವರು ಹೇಳಿದ ವಿಚಾರವು ಬಹಳ ಉತ್ಕೃಷ್ಟವಾದದ್ದು. ಅದರಲ್ಲಿಯೂ ನಮ್ಮ ಸ್ತ್ರೀಮಂಡಲಿಗೆ ಬಹಳ ಉಪಯೋಗವಾದದ್ದು. ಈಗಿನಿಂದಲೂ ಮಕ್ಕಳಿಗೆ ಒಳ್ಳೇ ಮಾರ್ಗವನ್ನೇ ಕಲಿಸಬೇಕು ಮತ್ತು ಸುಳ್ಳು ಅಭ್ಯಾಸವಾಗದಂತೆ ನೋಡಿಕೊಳ್ಳಬೇಕು" ಎಂಬ ವಿಚಾರದಲ್ಲಿ ಬಹಳ ಚೆನ್ನಾಗಿ ಉಪನ್ಯಾಸ ಮಾಡಿದರು. ಬಳಿಕ ಸ್ಕೂಲ್ ಬಾಲಕಿಯರು ಸರಸ್ವತೀ ಪೂಜೆಯನ್ನು ಮಾಡಿ, ಹಾಡುಗಳನ್ನು ಹೇಳಿದರು. ಸ್ಕೂಲ್ ಬಾಲಕಿಯರಿಬ್ಬರು ಹಾಸ್ಯಾರ್ಣವವೆಂಬ ನಕಲಿಯನ್ನು ಬಹಳ ಚೆನ್ನಾಗಿ ಅಭಿನಯಿಸಿದ ತರುವಾಯ ಮಂಗಳವನ್ನು ಪಾಡಿ ಸಭೆಯನ್ನು ಮುಕ್ತಾಯ ಮಾಡಿದರು.

ಒಬ್ಬ ಮಹಿಳೆ.

ಮೈಸೂರು ಟ್ರಸ್ಟ್ ಬೋರ್ಡ್ ಮೀಟಿಂಗು.

ರಾಜಧಾನಿಯ ನಗರಾಭಿವೃದ್ಧಿಯ ಬೋರ್ಡ್ ಮೀಟಿಂಗು ತಾ. 10ನೇ ಸೋಮವಾರ ಬೆಳಗ್ಗೆ ಟೌನ್ ಹಾಲಿನಲ್ಲಿ ನಡೆಯಿತು. ಚೇರ್‌ಮನ್ ಮ|| ಬಿ. ಜಿ. ಲಕ್ಷ್ಮಣರಾಯರು, ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಮ|| ಎಂ. ಶ್ರೀನಿವಾಸರಾಯರು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ|| ಜಿ. ನಾರಾಯಣರಾಯರು, ಹೆಲ್ತ್ ಆಫೀಸರ್ ಮ|| ಎ. ಕೆ. ಶಾಣೈಯವರು, ಮ|| ಎಂ. ವೆಂಕಟಕೃಷ್ಣಯ್ಯನವರು ಮತ್ತು ಮ|| ಮಹಮದ್ ಜಾಫರ್ ಸಾಹೇಬರು ಹಾಜರಾಗಿದ್ದರು. ಮೀಟಿಂಗಿನಲ್ಲಿ ಚರ್ಚೆಯಿಂದ ಇತ್ಯರ್ಥಮಾಡಲ್ಪಟ್ಟ ಮುಖ್ಯ ವಿಷಯಗಳಾವವೆಂದರೆ—

ಪ್ರಾರಂಭದಲ್ಲಿ ಟ್ರಸ್ಟ್ ಬೋರ್ಡಿನಿಂದ ಕಟ್ಟಿಸಲ್ಪಟ್ಟು ಈಗ ಶಿಥಿಲವಾಗಿರುವ ಗಾರೆ ಚಪ್ಪಲುಗಳನ್ನು ದುರಸ್ತು ಮಾಡಿಸುವುದಕ್ಕೆ 3,000 ರೂಪಾಯಿ ಖರ್ಚು ಮಾಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.—ಸಂಸ್ಕೃತ ಪಾಠಶಾಲೇ ಬಳಿ ಮ್ಯುನಿಸಿಪಲ್ ಆಫೀಸು ಕಟ್ಟುವುದಕ್ಕೆ ಮನೆಗಳನ್ನು ಕೊಂಡು ಒಡೆಯುವುದು, ಇಟ್ಟಿಗೇ ಗೂಡಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡಿಸುವುದಕ್ಕೆ ಕೆಲವು ಮನೆಗಳನ್ನು ಕೊಂಡು ಒಡೆಯುವುದು, ಈ ಕೆಲಸಗಳನ್ನು ಮಾಡಿಸಬಹುದೆಂದು ಒಪ್ಪಲಾಯಿತು.—ಹಾರ್ಡಿಂಗ್ ಸರ್ಕಲನ್ನು ಕಲ್ಪಿಸಿ ಸಿದ್ಧಪಡಿಸುವುದಕ್ಕೆ ಸ್ಯಾಂಕ್ಷನ್ ಆಗಿದ್ದ 28,500 ರೂಪಾಯಿನಲ್ಲಿ ಇನ್ನೂ ಸುಮಾರು 1,500 ರೂಪಾಯಿ ಉಳಿದಿವೆ ಎಂದೂ, ಈ ಹಣವನ್ನು ಖರ್ಚುಮಾಡಿ ಅಲ್ಲಿ ಜನರು ಕುಳಿತುಕೊಳ್ಳುವುದಕ್ಕೆ ಅನುಕೂಲವಾದ ಏರ್ಪಾಡನ್ನು ಮಾಡಬೇಕಾಗಿದೆ ಎಂದೂ ಚೇರ್‌ಮನ್‌ರವರು ಸೂಚಿಸಿದ್ದರ ಮೇಲೆ ಮೆಂಬರುಗಳು ಮಾಡಿಸಬಹುದೆಂದು ಒಪ್ಪಿಕೊಂಡರು.

ಮಂಡಿ ಮೊಹಲ್ಲಾದಲ್ಲಿ ಮ|| ನರ್ಸಮಾಸಯ್ಯನವರು ಭತ್ತ ಕುಟ್ಟುವ ಯಂತ್ರದ ಕಾರ್ಖಾನೆಯನ್ನು ಲೈಸೆನ್ಸ್ ಪಡೆದು ಕಟ್ಟುತ್ತಿದಾರೆಂದೂ, ಅದರ ಅಕ್ಕಪಕ್ಕದಲ್ಲಿರುವ ಕೊಳಕಾದ ಎರಡು ಮನೆಗಳನ್ನು ಕೊಂಡು ಒಡೆದು ಹಾಕಬೇಕೆಂದೂ ಚೇರ್‌ಮನ್‌ರವರು ಸೂಚಿಸಿದ್ದನ್ನು ಮೆಂಬರುಗಳು ಒಪ್ಪಿಕೊಂಡು, ಆ ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿಯಿಂದ ಭತ್ತ ಕುಟ್ಟುವುದಕ್ಕೆ ಅವಕಾಶಕೊಡಬೇಕಲ್ಲದೆ ಅನ್ಯಥಾ ಕೊಡಬಾರದೆಂದು ಸೂಚಿಸಿದರು.—ಕಾಳಮ್ಮ ಎಂಬಾಕೆ ನಿವೇಶನವನ್ನು ಕೊಂಡು ಒಂದು ಮೂಲೆಯಲ್ಲಿ ಸಣ್ಣ ಮನೆಯನ್ನು ಕಟ್ಟಿ ತನ್ನ ಸಹೋದರನಿಗೆ ಬಿಕರಿಮಾಡಿ, ಈಗ ಉಳಿದ ನಿವೇಶನದಲ್ಲಿ ತಾನು ಬೇರೆ ಮನೆ ಕಟ್ಟುತ್ತೇನೆಂದು ಚೇರ್‌ಮನ್‌ರವರು ತಿಳಿಸಿದರು. ಟ್ರಸ್ಟ್ ಬೋರ್ಡಿನಿಂದ ಆ ಸಹೋದರನ ಮನೆಯನ್ನು ಕೊಂಡು ಆಕೆಗೆ ಕೊಡಬೇಕೆಂದು ಮೆಂಬರುಗಳು ತೀರ್ಮಾನ ಮಾಡಿದರು.—ಕೋಟೆ ಗೋಡೆಯ ಮೇಲೆ ಬೆಳೆದಿರುವ ಗಿಡಗೆಂಡೆಗಳನ್ನು ಕತ್ತರಿಸಿ ಚೊಕ್ಕಟವಾಗಿ ಇಡಿಸುವುದಕ್ಕೆ 500 ರೂಪಾಯಿ ಖರ್ಚುಮಾಡುವಂತೆ ಒಪ್ಪಲಾಯಿತು.

ಡೆಪ್ಯುಟಿ ಸ್ಯಾನಿಟರಿ ಕಮಿಷನರ್‌ರವರನ್ನು ಬೋರ್ಡಿನವರು ಆವಶ್ಯಕವಾದ ಮೀಟಿಂಗುಗಳಿಗೆ ಮಾತ್ರ ಕರೆಸಿಕೊಳ್ಳಬಹುದೇ ಎಂದು ಸರ್ಕಾರದವರು ಕೇಳಿದ್ದರು. ಮೆಂಬರುಗಳು ಅವರು ಬರುವುದಕ್ಕೆ ಅಂಥಾ ನಿರ್ಬಂಧಗಳೇನೂ ಇರಕೂಡದೆಂದು ಅಭಿಪ್ರಾಯಪಟ್ಟರು.—ದೊಡ್ಡಕೆರೆಯ ಏರಿ ಬಳಿ ರಸ್ತೆ ಹಾಳುವಾಗ್ಗೆ ಹ್ಯಾಗೋ ಒಂದು ವಿದ್ಯುಚ್ಛಕ್ತಿಯ ದೀಪದ ಕಂಭ ಮುರಿದುಹೋಯಿತು. ಆ ಇಲಾಖೆಯವರು ಅದರ ಖರ್ಚು 44 ರೂಪಾಯಿ ಕೊಡಬೇಕೆಂದು ಬರೆದಿದ್ದರು. ಅಲ್ಲಿ ಕಾಮಗಾರಿ ಮಾಡಿಸುತ್ತಿದ್ದ ಕಂಟ್ರಾಕ್ಟರಿಂದ 22 ರೂಪಾಯಿ ಕೇಳಬೇಕೆಂದೂ, ಉಳಿದ 22 ರೂಪಾಯನ್ನು ಟ್ರಸ್ಟ್ ಬೋರ್ಡಿನಿಂದ ಕೊಡಬಹುದೆಂದೂ ಮೆಂಬರುಗಳು ಒಪ್ಪಿದರು.—ಬೆಂಗಳೂರು ರಿಕ್ಕಿ ಕಂಪನಿಯವರು ಹೊಸ ಮಾರ್ಕೆಟ್ಟಿನ ಕಟ್ಟಡಕ್ಕೆ ಕಬ್ಬಿಣದ ಸಾಮಾನುಗಳನ್ನು ಒದಗಿಸುವುದಾಗಿ ಕಂಟ್ರಾಕ್ಟು ತೆಗೆದುಕೊಂಡಿದ್ದರು. ಅವರು ಕೆಲವು ದರಗಳನ್ನು ಜಾಸ್ತಿ ಮಾಡಿಕೊಡಬೇಕೆಂದು ಕೇಳಿದ್ದರು. ನ್ಯಾಯವಾಗಿ ಕಂಡುಬರುವ ಜಾಸ್ತಿ ಹಣವನ್ನು ಕೊಡಬಹುದೆಂದು ಮೆಂಬರುಗಳು ಅಭಿಪ್ರಾಯಪಟ್ಟರು.—ಒಂದೊಂದು ಬಟ್ಟೆಗೆ ಒಂದು ರೂಪಾಯಿಗಿಂತ ಮಾರಿದಷ್ಟು ಬಚ್ಚಲ ತೆರಿಗೆಯನ್ನು ಹಾಕಿ ವಸೂಲ್‌ಮಾಡಬಹುದೆಂದು ಮ್ಯುನಿಸಿಪಲ್ ಕೌನ್ಸಿಲ್‌ನವರು ಒಪ್ಪಿಕೊಂಡಿರುವುದನ್ನು ಮೆಂಬರುಗಳು ಒಪ್ಪಿ, ಸರ್ಕಾರದ ಸ್ಯಾಂಕ್ಷನ್ ಬಗ್ಗೆ ಕಳುಹಿಸತಕ್ಕದೆಂದು ಇತ್ಯರ್ಥವಾಯಿತು.—ಕೋಟೆ ಆವರಣದಲ್ಲಿರುವ ಸೋಮೇಶ್ವರ ದೇವಸ್ಥಾನಕ್ಕೆ ಸ್ವಲ್ಪ ನಿವೇಶನವನ್ನು ಸೇರಿಸಿಕೊಡಬೇಕೆಂದೂ, ಅಲ್ಲೇ ಅಮ್ಮನವರ ಗುಡಿ ಕಟ್ಟಿಸುವುದಕ್ಕೆ ಸ್ಥಳ ಮಾಡಿಕೊಡಬೇಕೆಂದೂ ತೀರ್ಮಾನಿಸಲಾಯಿತು.—ಟ್ರಸ್ಟ್ ಬೋರ್ಡಿನಿಂದ ಕಟ್ಟಿಸುವ ಮಾದರಿ ಮನೆಗಳನ್ನು ವಿಕ್ರಯಿಸುವ ವಿಷಯದಲ್ಲಿ ಕೊಂಡುಕೊಳ್ಳತಕ್ಕವನಿಗೆ [illegible], ಅರ್ಧ ಕ್ರಯವನ್ನು ಮೊದಲೇ ಪಾವತಿಮಾಡಿ, ಉಳಿದ ಅರ್ಧ ಹಣವನ್ನು ನಾಲ್ಕು ವರ್ಷಗಳಲ್ಲಿ ತಿಂಗಳು ಬಿಸ್ತಿನ ಪ್ರಕಾರ ಶೇಕಡಾ ವರುಷಕ್ಕೆ 6 ರೂಪಾಯಿ ಬಡ್ಡಿ ಸೇರಿಸಿ ತೀರಿಸತಕ್ಕವರಿಗೆ ಮಾತ್ರ ಮಾರಬೇಕೆಂದು ನಿರ್ಬಂಧನೆ ಮಾಡಿದರು.—ಕಳೆದ ಜುಲೈನಿಂದ ಡಿಸೆಂಬರ್ ಆಖೈರುವರೆಗೆ ಟ್ರಸ್ಟ್ ಬೋರ್ಡಿನವರು ಪಟ್ಟಣದ ಒಳಭಾಗದಲ್ಲಿ 135 ನಿವೇಶನಗಳನ್ನೂ, 35 ಸಣ್ಣ ಸಣ್ಣ ನಿವೇಶನಗಳನ್ನೂ ಬಿಕರಿ ಮಾಡಿದ್ದರಿಂದ 8,700 ರೂಪಾಯಿ ಹುಟ್ಟುವಳಿ ಆಗಿದೆ ಎಂದು ಚೇರ್‌ಮನ್‌ರವರು ತಿಳಿಸಿದರು.

ಮೈಸೂರು ಲೋ. ಸೆ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಅವಶ್ಯಕವಾದ

ಗಣಿತ ಪ್ರಶ್ನೋತ್ತರಾವಳಿ

ಎಂಬ ನವೀನ ಗಣಿತದಲ್ಲಿ ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಹಾರ, ಮ. ಸಾ. ಅ., ಲ. ಸಾ. ಅ., ಇವೇ ಮೊದಲಾದ ಗಣಿತ ಭಾಗಗಳ ಮೇಲಿನ ಲೆಕ್ಕಗಳನ್ನು ಅತಿ ಸುಲಭವಾಗಿಯೂ, ಜಾಗ್ರತೆಯಾಗಿಯೂ ಮಾಡುವ ಕ್ರಮಗಳು ಸ್ಪಷ್ಟವಾದ ವಿವರಣೆಗಳೊಡನೆ ತೋರಿಸಲ್ಪಟ್ಟಿವೆ. ಅಲ್ಲದೆ ಲೆಕ್ಕಗಳನ್ನು ಮಾಡತಕ್ಕ ಪೂರ್ಣನ್ಯಾಸ ಕ್ರಮವೂ ತೋರಿಸಲ್ಪಟ್ಟಿದೆ. ಮತ್ತು 16 ವರ್ಷಗಳಿಗೆ (1915-1900) ಮೇಲ್ಪಟ್ಟ ಲೋ. ಸೆ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳೂ, ಇವುಗಳಿಗೆ ನ್ಯಾಯ ಸಹಿತವಾದ ಉತ್ತರಗಳೂ ಮತ್ತು ಇತರ ಪ್ರಶ್ನೆ ಪತ್ರಿಕೆಗಳೂ ಇರುತ್ತವೆ. ಸ್ವಲ್ಪ ಪ್ರತಿಗಳು ಮಾತ್ರವೇ ಇರುವುದರಿಂದ ಅಪೇಕ್ಷೆಯುಳ್ಳವರು ಶೀಘ್ರವಾಗಿ ತರಿಸಿಕೊಳ್ಳಬಹುದು. ಕ್ರಯ 8 ಆಣೆ; ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ—ಬಿ. ವೆಂಕಟಲಕ್ಷ್ಮಣರಾವ್, ಅಸಿಸ್ಟೆಂಟ್ ಮಾಸ್ಟರ್, ಮಹಾರಾಣಿ ಕಾಲೇಜು,

[284-4] 591 ಕೊತ್ವಾಲ್ ರಾಮಯ್ಯನವರ ಬೀದಿ, ತಿರಂಪಾಟೇಟೆ, ಮೈಸೂರು.

ವೃತ್ತಾಂತ ಪತ್ರಿಕೆ.

—:o:—

೧೯೧೬ ನೇ ಇಸವಿ ಜನವರಿ ತಾ. ೨೦ ನೇ ಗುರುವಾರ.

ಹೊಸ ವೈಸ್‌ರಾಯರವರು.

ಲಾರ್ಡ್ ಹಾರ್ಡಿಂಗ್‌ರವರ ಅವಧಿಯು ಪೂರೈಸಿದ ಬಳಿಕ ಲಾರ್ಡ್ ಚೆಲ್ಮ್ಸ್‌ಫರ್ಡ್‌ರವರು ಹಿಂದುಸ್ಥಾನದ ವೈಸ್‌ರಾಯ್ ಮತ್ತೂ ಗವರ್ನರ್ ಜನರಲ್ ರಾಗತಕ್ಕದ್ದೆಂದು ನೇಮಕ ಮಾಡಲ್ಪಟ್ಟಿದೆ. ಹೊಸ ವೈಸ್‌ರಾಯರವರು ಫೆಬ್ರವರಿ ಕಡೆಯಲ್ಲಿ ದಯಮಾಡಿ ಹಿಂದುಸ್ಥಾನದ ಆಳ್ವಿಕೆಯನ್ನು ವಹಿಸುವರು. ಲಾರ್ಡ್ ಚೆಲ್ಮ್ಸ್‌ಫರ್ಡ್‌ರವರು 1868 ರಲ್ಲಿ ಜನಿಸಿದವರಾದಕಾರಣ ಅವರಿಗೆ ಇನ್ನೂ 48 ವಯಸ್ಸಾಗಿಲ್ಲ. ಫ್ರೆಡರಿಕ್ ಜಾನ್ ನೇಪಿಯರ್ ತೆಸಿಗರ್ ಎಂಬುದೇ ಅವರಿಗೆ ನಾಮಕರಣವಾದ ಹೆಸರು. ಇವರು ಆಸ್ಟ್ರೇಲಿಯಾದ ಕ್ವೀನ್ಸ್‌ಲೆಂಡಿನಲ್ಲೂ, ನ್ಯೂ ಸೌತ್ ವೇಲ್ಸಿನಲ್ಲೂ ಗವರ್ನರಾಗಿದ್ದುದರಿಂದ ಪ್ರಿಟಿಷ್ ಸ್ವಾಧೀನಗಳ ಸ್ಥಿತಿಗತಿಯು ಅವರಿಗೆ ಮುಂದಟ್ಟಾಗಿದೆ. ಇದಕಾರಣ ಅವರು ಹಿಂದುಸ್ಥಾನವನ್ನು ಇತರ ಪ್ರಿಟಿಷ್ ಸ್ವಾಧೀನಗಳ ಪಂಕ್ತಿಗೆ ಸೇರಿಸುವುದಕ್ಕೆ ತಕ್ಕ ಅರ್ಹತೆಯನ್ನು ನಡೆಸುವರೆಂದು ಹೇಳಬಹುದು. ಬ್ರಿಟನ್ನಿನಲ್ಲಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳೆಲ್ಲಾ ಅವರನ್ನು ನೇಮಕ ಮಾಡಿರುವುದು ಚೆನ್ನಾಗಿದೆ ಎಂದು ಮೆಚ್ಚಿಕೊಂಡಿರುತ್ತವೆ. ಇಂಥಾ ಭಾರಿಯಾದ ಮುಖ್ಯ ಜವಾಬ್ದಾರಿಯುಳ್ಳ ಪದವಿಗೆ ಲಾರ್ಡ್ ಚೆಲ್ಮ್ಸ್‌ಫರ್ಡ್‌ರವರು ನೇಮಕವಾದರೆಂದು ಸಂತೋಷಪಟ್ಟು ಅವರಿಗೆ ಸುಸ್ವಾಗತವನ್ನು ಬಯಸುವೆವು.

ಮೈಸೂರು ವ್ಯವಸಾಯದ ಪಂಚಾಂಗವು.

ನಮ್ಮ ಸಂಸ್ಥಾನವು ವ್ಯವಸಾಯ ಸೀಮೆಯಾಗಿರುತ್ತದೆ. ರೈತರಿಗೆ ವ್ಯವಸಾಯ ಕಾರ್ಯಗಳನ್ನು ಕಾಲಾನುಗುಣವಾಗಿ ಬದಲಾವಣೆ ಮಾಡಿಕೊಳ್ಳುವುದಕ್ಕೂ, ಹುಲುಸಾದ ಮತ್ತೂ ಬಗೆಬಗೆಯ ದವಸಧಾನ್ಯಗಳನ್ನು ಬೆಳೆಸಿಕೊಳ್ಳುವುದಕ್ಕೂ ಸಹಾಯವಾಗಲೆಂದು ನಮ್ಮ ಗವರ್ನ್‌ಮೆಂಟಿನವರು ಕುತೂಹಲಪಟ್ಟು ಮಾಡುತ್ತಿರುವ ಪ್ರತಿ ಒಂದು ಕಾರ್ಯವನ್ನೂ ನಾವು ಸಂತೋಷದಿಂದ ಒಪ್ಪಿಕೊಳ್ಳುವೆವು. ಮೈಸೂರು ವ್ಯವಸಾಯದ ಇಲಾಖೆಯವರು ಇಂಗ್ಲಿಷಿನಲ್ಲಿ ರಚಿಸಿ ಒಂದು ಆಣೆ ಕ್ರಯವಿಟ್ಟಿರುವ 1916 ನೇ ವರುಷದ ವ್ಯವಸಾಯ ಪಂಚಾಂಗವನ್ನು ನೋಡಿ ಸಂತೋಷಪಡುತ್ತೇವೆ. ಅದರಂತೆಯೇ ಕನ್ನಡದಲ್ಲೂ ಪ್ರಕಟಮಾಡುವರೆಂದು ನಿರೀಕ್ಷಿಸುವೆವು. ಅನೇಕಾನೇಕ ರೈತಪ್ರಜೆಗಳಿಗೆ ಸ್ವಭಾಷೆಯಾದ ಕನ್ನಡವೇ ತಿಳಿಯದಿರುವಲ್ಲಿ ಇಂಥಾ ಪಂಚಾಂಗವನ್ನು ಇಂಗ್ಲಿಷಿನಲ್ಲಿ ಮಾತ್ರ ಪ್ರಕಟಿಸಿ ಪ್ರಯೋಜನವಿಲ್ಲ. ವಿದ್ಯೆಯು ನಮ್ಮ ರೈತರಲ್ಲಿ ಇನ್ನೂ ವಿಶೇಷವಾಗಿ ಹರಡಿದ ಹೊರತು ವ್ಯವಸಾಯದ ನೂತನ ಮಾರ್ಗಗಳು ಪ್ರಚಾರಕ್ಕೆ ಬರುವುದು ತುಂಬಾ ಪ್ರಯಾಸ. ರೈತಪ್ರಜೆಗಳಿಗೆ ವಿದ್ಯೆ ಕಲಿಸುವ ಭಾಗದಲ್ಲಿ ನಮ್ಮ ಸೀಮೆಯ ಒಕ್ಕಲಿಗರ ಸಂಘವು ಮಾಡಿರುವ ಕಾರ್ಯಗಳೇನೋ ನಮಗೆ ತಿಳಿಯದು. ಆ ಸಂಘವು ಸ್ಥಾಪನೆಯಾಗಿ ಇಲ್ಲಿಗೆ ಹಲವು ವರುಷಗಳಾದವು. ಈ ಸಂಘದವರು ರೈತರಿಗೆ ವಿದ್ಯೆ ಕಲಿಯುವುದಕ್ಕೂ, ಅವರು ಮಾಡುವ ವ್ಯವಸಾಯ ಕೆಲಸಗಳು ಅಭಿವೃದ್ಧಿಯಾಗುವಂತೆ ಮಾಡುವುದಕ್ಕೂ ಇದುವರೆಗೆ ಬೇಕಾದಷ್ಟು ಸಹಾಯ ಮಾಡುತ್ತಾರೆಂದು ವಿಶೇಷವಾದ ನಂಬಿಕೆಯೂ ನಿರೀಕ್ಷೆಯೂ ಉಂಟಾಗಿತ್ತು. ಈಚೆಗೆ ಬಹು ಕಾಲದಿಂದಲೂ ಈ ಸಂಘದ ಕಾರ್ಯಕ್ರಮಗಳೊಂದೂ ನಮ್ಮ ತಿಳುವಳಿಕೆಗೆ ಬಂದಿರುವುದಿಲ್ಲ.

ಮೈಸೂರು ಸರ್ಕಾರದ ವ್ಯವಸಾಯ ಇಲಾಖೆಯಿಂದ ಪ್ರಕಟವಾಗಿರುವ ಪಂಚಾಂಗವು ತುಂಬಾ ಪ್ರಯೋಜನಕರವಾದದ್ದೆಂದು ನಾವು ನೆನಸುತ್ತೇವೆ. ಅದರಲ್ಲಿ ತಿಥಿ, ನಕ್ಷತ್ರ, ಹಬ್ಬ, ಮಳೆ, ಈ ಮೊದಲಾದ ವಿಷಯಗಳನ್ನು ಕಾಣಿಸಿದಾರೆ. ಇದಲ್ಲದೆ ಈ ಪಂಚಾಂಗದಲ್ಲಿ ನೇಗಿಲು ಮೊದಲಾದ ವ್ಯವಸಾಯ ಸಾಧನಗಳು, ಆಲೂಗೆಡ್ಡೆಯನ್ನು ಬೆಳೆಯುವ ವಿಧಾನಗಳು, ಪಶುಗಳಿಗೆ ಹಿಡಿಯುವ ನಾನಾ ಬಗೆಯ ಹುಳು ಹುಪ್ಪಟೆಗಳು, ಬಿನಸಾವರಿ ಗೊಬ್ಬರಗಳು, ದನಗಳ ರೋಗಗಳು, ಇವೇ ಮೊದಲಾದ ಅನೇಕ ವಿಷಯಗಳನ್ನು ಬಹಳ ಚೆನ್ನಾಗಿ ವಿವರಿಸಿ ಪ್ರಬಂಧಗಳನ್ನು ಬರೆದಿರುತ್ತಾರೆ. ನಮ್ಮ ಸೀಮೆಯ ರೈತಪ್ರಜೆಗಳು ಈ ಪಂಚಾಂಗ ಪುಸ್ತಕವನ್ನು ತರಿಸಿ ಚೆನ್ನಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಮನದಟ್ಟು ಮಾಡಿಕೊಂಡು, ಅಲ್ಲಿ ಹೇಳಿರುವ ಕ್ರಮಗಳನ್ನನುಸರಿಸಿ ವ್ಯವಸಾಯ ಮಾಡುತ್ತಾ ಬಂದ ಪಕ್ಷದಲ್ಲಿ ಒಳ್ಳೇ ಹುಲುಸಾದ ಬೆಳೆಗಳನ್ನು ಬೆಳೆದು ಭಾಗ್ಯವಂತರಾದರೆನ್ನುವುದಕ್ಕೆ ಸಂಶಯವಿಲ್ಲ.

ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲೂ ವ್ಯವಸಾಯದ ಇನ್‌ಸ್ಪೆಕ್ಟರು ನೇಮಕವಾಗಿದಾರೆ. ಬೆಂಗಳೂರಿನ ಹತ್ತಿರ ಹೆಬ್ಬಾಳದಲ್ಲೂ, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಮರತೂರಿನಲ್ಲೂ ಪರೀಕ್ಷಾರ್ಥವಾದ ಫಾರಮುಗಳಿರುತ್ತವೆ. ಇದಲ್ಲದೆ ನಮ್ಮ ವ್ಯವಸಾಯದ ಇಲಾಖೆಯವರು ರೈತಪ್ರಜೆಗಳಿಗೆ ಹೊಸ ತರಹಾ ನೇಗಿಲುಗಳನ್ನೂ, ಒಳ್ಳೇ ಜಾತಿಯ ಬೀಜಗಳನ್ನೂ, ಗೊಬ್ಬರಗಳನ್ನೂ ಒದಗಿಸುವುದಕ್ಕೂ, ಹುಳು ಹುಪ್ಪಟೆಗಳನ್ನು ನಾಶಪಡಿಸುವ ಉಪಾಯಗಳನ್ನು ಹೇಳಿಕೊಡುವುದಕ್ಕೂ ಸಿದ್ಧವಾಗಿದಾರೆ. ಇಂಥಾದ್ದರಲ್ಲಿ ರೈತನು ತನ್ನ ಜಮೀನನ್ನೂ ದನಗಳನ್ನೂ ಅಭಿವೃದ್ಧಿ ಪಡಿಸಿಕೊಳ್ಳದೆ ಕಣ್ಣು ಮುಚ್ಚಿಕೊಂಡಿದ್ದರೆ ಅವನ ಹೀನಸ್ಥಿತಿಗೆ ಅವನೇ ಕಾರಣನಾದಾನೆಂದು ಹೇಳಬಹುದಾಗಿದೆ. ಆದ್ದರಿಂದ ರೈತನು ಮೊದಲು ಓದು ಬರಹವನ್ನು ಕಲಿಯಬೇಕು. ವ್ಯವಸಾಯದ ಇಲಾಖೆಯವರು ರೈತರ ಪ್ರಯೋಜನಕ್ಕಾಗಿ ಪ್ರಕಟಿಸುವ ಪತ್ರಿಕೆಗಳನ್ನು ಕೇಳಿ ತರಿಸಿಕೊಂಡು ಚೆನ್ನಾಗಿ ಓದಿ ಅವುಗಳಲ್ಲಿ ಹೇಳಿರುವ ಸಂಗತಿಗಳನ್ನು ತಿಳಿದವನಾಗಿ, ಆ ಕೃತಿ ಸಾಮಾನ್ಯವಾಗಿಯೂ ಸುಲಭವಾಗಿಯೂ ಇರುವ ಭಾಗಗಳನ್ನು ಆಚರಣೆಗೆ ತರಬೇಕು. ಬಳಿಕ ಹಣಗಾರನಾದ ಮೇಲೆ ಒಳ್ಳೊಳ್ಳೇ ಮುಟ್ಟುಗಳನ್ನೂ ಹೆಚ್ಚು ಹೆಚ್ಚಾಗಿ ಗೊಬ್ಬರ ಗೋಡನ್ನೂ ತರಿಸಿಕೊಳ್ಳಬಹುದಾಗಿದೆ. ಈಚೆಗೆ ಒಳ್ಳೆಯ ಧಾನ್ಯಗಳ ಧಾರಣೆವಾಸಿಗಳೆಲ್ಲಾ ಹೆಚ್ಚಿರೋಣದರಿಂದ ಅವುಗಳನ್ನು ಬೆಳೆಯುವ ರೈತನು ಅನುಕೂಲಸ್ಥನಾದಾನೆಂದು ಹೇಳಬಹುದು. ಆದರೆ ರೈತನು ವ್ಯಾಜ್ಯಸಾಜ್ಯಗಳನ್ನು ಹಿಡಿದು ಕೋರ್ಟುಕಚೇರಿಗಳನ್ನು ಹತ್ತುವುದನ್ನೂ, ಹಬ್ಬ ಹುಂಡಿನ ತಿತಿಮತಿ ಪ್ರಸ್ತ ಪ್ರಯೋಜನಗಳಿಗೆ ಮಿತಿಮೀರಿ ಹಣ ವಿಚ್ಚು ಮಾಡುವುದನ್ನೂ ಬಿಟ್ಟು, ಸಂಪಾದನೆಯಾಗುವ ಹಣಕಾಸನ್ನು ತನ್ನ ಭೂಮಿಕಾಣೆಯ ಅಭಿವೃದ್ಧಿಗೆ ಅನುಕೂಲವಾಗುವಂತೆ ಕೋಆಪರೆಟಿವ್ ಸೊಸೈಟಿಗಳಲ್ಲಿ ಕೂಡಿಸಿಡುತ್ತಾ ಬರುವವನಾದರೆ ಕಾಲಕ್ರಮದಲ್ಲಿ ಅನುಕೂಲಸ್ಥನಾಗುವುದಕ್ಕೆ ಅಡ್ಡಿ ಇಲ್ಲ. ನಮ್ಮ ಸಂಸ್ಥಾನವು ಶ್ರೇಯಸ್ಸಿಗೆ ಬರಬೇಕಾದರೆ ನಮ್ಮ ರೈತಪ್ರಜೆಗಳು ಮೈಬೊಗ್ಗಿ ದುಡಿಯತಕ್ಕವರಾಗಿಯೂ, ಮಿತವ್ಯಯಿಗಳಾಗಿಯೂ, ಅನುಕೂಲಸ್ಥರಾಗಿಯೂ ಇದ್ದ ಹೊರತು ಸಾಧ್ಯವಿಲ್ಲ. ಈ ಭಾಗದಲ್ಲಿ ನಮ್ಮ ಸರ್ಕಾರದ ವ್ಯವಸಾಯ ಇಲಾಖೆಯವರು ರೈತರಿಗೆ ಸಹಾಯ ಮಾಡುವುದಕ್ಕೆ ಸಿದ್ಧರಾಗಿದಾರೆ.

ದೇವರ ಸರ್ವಜ್ಞತ್ವವೂ ಸರ್ವವ್ಯಾಪಕತ್ವವೂ

ದೇವರೇ, ನೀನು ನನ್ನನ್ನು ಪರೀಕ್ಷಿಸಿ ತಿಳುಕೊಂಡಿದ್ದೀ ;
ನಾನು ಕೂತುಕೊಳ್ಳುವದೂ ಏಳುವದೂ ನಿನಗೆ ಗೊತ್ತದೆ ;
ದೂರದಿಂದಲೇ ನನ್ನ ಆಲೋಚನೆಯನ್ನು ಬಲ್ಲವನಾಗಿರುತ್ತೀ ;
ನಾನು ನಡೆಯುವದನ್ನೂ ಮಲಗುವದನ್ನೂ ಶೋಧಿಸಿ ಗ್ರಹಿಸಿಕೊಳ್ಳುತ್ತೀ ;
ನನ್ನ ನಡತೆಯೆಲ್ಲಾ ನಿನಗೆ ಗೋಚರವಾಗಿದೆ.
ದೇವರೇ, ನನ್ನ ನಾಲಿಗೆಯ ಮಾತುಗಳಲ್ಲಿ
ನೀನು ಅರಿಯದೆ ಇರುವಂಥಾದ್ದು ಒಂದೂ ಇಲ್ಲ.
ಸುತ್ತಲೂ ನನ್ನನ್ನು ಆವರಿಸಿ
ನಿನ್ನ ಕೈಯನ್ನು ನನ್ನ ಮೇಲೆ ಇಟ್ಟಿದ್ದೀ.
ಇಂಥ ಜ್ಞಾನವು ನನಗೆ ಬಹು ಆಶ್ಚರ್ಯವಾಗಿದೆ ;
ಅದು ಉನ್ನತವಾದದ್ದು, ನನಗೆ ನಿಲುಕುವದಿಲ್ಲ.
ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ ?
ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ ?
ಮೇಲಣ ಲೋಕಕ್ಕೆ ಏರಿಹೋದರೆ ಅಲ್ಲಿ ನೀನಿರುತ್ತೀ ;
ಪಾತಾಳಕ್ಕೆ ಹೋಗಿ ಮಲಗಿಕೊಂಡೇನಂದರೆ ಅಲ್ಲಿಯೂ ಇರುವಿ.
ಅರುಣನ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿಹೋಗಿ
ಸಮುದ್ರದ ಕಟ್ಟಕಡೆಯಲ್ಲಿ ವಾಸಮಾಡೇನಂದರೆ
ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸುವದು;
ನಿನ್ನ ಬಲಗೈ ನನ್ನನ್ನು ಹಿಡಿದಿರುವದು.
ಕಾರ್ಗತ್ತಲೆಯು ನನ್ನನ್ನು ಕವಿಯುವದು,
ಹಗಲು ಹೋಗಿ ನನ್ನ ಸುತ್ತಲು ಇರುಳಾಗುವದು ಎಂದು ಹೇಳಿಕೊಂಡರೇನು?
ನಿನಗೆ ಕತ್ತಲೆಯು ಕತ್ತಲೆಯಲ್ಲ ;
ಇರುಳು ಹಗಲಾಗಿಯೇ ಇರುತ್ತದೆ ;
ಕತ್ತಲು ಬೆಳಕುಗಳೆರಡೂ ನಿನಗೆ ಒಂದೇ.
ನನ್ನ ಅಂತರಿಂದ್ರಿಯಗಳನ್ನು ಉಂಟುಮಾಡಿದವನೂ
ತಾಯಿಯ ಗರ್ಭದಲ್ಲಿ ನನ್ನನ್ನು ರೂಪಿಸಿದವನೂ ನೀನಲ್ಲವೋ ?
ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ
ನಿನ್ನನ್ನು ಕೊಂಡಾಡುತ್ತೇನೆ.
ನಿನ ಕೃತ್ಯಗಳು ಆಶ್ಚರ್ಯವಾಗಿವೆಯೆಂದು
ನನ್ನ ಹೃದಯವು ಚೆನ್ನಾಗಿ ಗ್ರಹಿಸಿಕೊಂಡಿದೆ
ನಾನು ಗುಪ್ತಸ್ಥಳದಲ್ಲಿ ಏರ್ಪಡುತ್ತಾ
ಭೂಗರ್ಭದಲ್ಲಿ ರಚಿಸಲ್ಪಡುತ್ತಾ ಇದ್ದಾಗ
ನನ್ನ ಅಸ್ಥಿಪಂಜರವು ನಿನಗೆ ಮರೆಯಾಗಿದ್ದಿಲ್ಲ.
ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು
ನೋಡಿದವು ;
ನನ್ನ ಆಯುಸ್ಕಾಲದ ಪ್ರಥಮದಿನವು ಪ್ರಾರಂಭವಾಗುವ ಮೊದಲೇ
ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು.
ದೇವರೇ, ನಿನ್ನ ಸಂಕಲ್ಪಗಳು ನನ್ನ ಎಣಿಕೆಯಲ್ಲಿ ಎಷ್ಟೋ ಗೌರವವಾಗಿವೆ ;
ಅವುಗಳ ಒಟ್ಟು ಅಸಂಖ್ಯವಾಗಿದೆ
ಅವುಗಳನ್ನು ಲೆಕ್ಕಿಸುವದಾದರೆ ಸಮುದ್ರದ ಮರಳಿಗಿಂತ ಹೆಚ್ಚಾಗಿವೆ.
ನಾನು ಎಚ್ಚರವಾಗಲು ಮುಂಚಿನಂತೆಯೇ ನಿನ್ನ ಬಳಿಯಲ್ಲಿದ್ದೇನೆ.
ದೇವರೇ, ನೀನು ದುಷ್ಟರನ್ನು ಸಂಹರಿಸಿಬಿಟ್ಟರೆ ಎಷ್ಟೋ ಒಳ್ಳೇದು.
ಕೊಲೆಪಾತಕರೇ, ನನ್ನಿಂದ ತೊಲಗಿಹೋಗಿರಿ.
ದೇವರೇ, ಅವರು ನಿನ್ನ ಶತ್ರುಗಳು ;
ಅಯೋಗ್ಯಕಾರ್ಯಕ್ಕಾಗಿ ನಿನ್ನ ಹೆಸರೆತ್ತುತ್ತಾರೆ, ಸುಳ್ಳಾಣೆಯಿಡುತ್ತಾರೆ.
ದೇವರೇ, ನಿನ್ನನ್ನು ದ್ವೇಷಿಸುವವರನ್ನು ನಾನು ದ್ವೇಷಿಸುತ್ತೇನಲ್ಲವೋ ?
ನಿನ್ನ ವಿರೋಧಿಗಳಿಗೆ ನಾನು ಬೇಸರಗೊಳ್ಳುವದಿಲ್ಲವೋ ?
ನಾನು ಅವರನ್ನು ಸಂಪೂರ್ಣವಾಗಿ ಹಗೆಮಾಡುತ್ತೇನೆ ;
ಅವರು ನನಗೂ ವೈರಿಗಳೇ ಆಗಿದ್ದಾರೆ.
ದೇವಾ, ನನ್ನನ್ನು ಪರೀಕ್ಷಿಸಿ ನನ್ನ ಹೃದಯವನ್ನು ತಿಳಿದುಕೋ ;
ನನ್ನನ್ನು ಶೋಧಿಸಿ ನನ್ನ ಆಲೋಚನೆಗಳನ್ನು ಗೊತ್ತುಮಾಡು.
ನಾನು ನಾಶಕರವಾದ ಮಾರ್ಗದಲ್ಲಿರುತ್ತೇನೋ ನೋಡು
ಸನಾತನಮಾರ್ಗದಲ್ಲಿ ನನ್ನನ್ನು ನಡಿಸು.

ಯುದ್ಧದ ಸಮಾಚಾರಗಳು.

ಗಲ್ಲಿಪೋಲಿಯಿಂದ ವಾಪಸು ಬಂದಾಯಿತ್ತು.

ತಂತೀವರ್ತಮಾನಗಳು ಅನೇಕ ರಾಜ್ಯಗಳಲ್ಲಿ ಕದನಗಳಾದವೆಂದು ತಿಳಿಸುತ್ತವೆ. ಆದಾಗ್ಯೂ ಶತ್ರು ಶತ್ರುಗಳು ತಮ್ಮ ತಮ್ಮ ಸೈನ್ಯಗಳನ್ನು ಬಲಪಡಿಸಿಕೊಳ್ಳುತ್ತಲೂ, ಪಿರಂಗಿ ಮದ್ದುಗುಂಡುಗಳನ್ನು ಸಾಗಿಸಿ ತಂದಿಟ್ಟುಕೊಳ್ಳುತ್ತಲೂ ಈಗಿನ ಶೀತವೂ ಗಾಳಿಗಳಿಯೂ ಬೇಯೂ ಕಳೆದ ಕೂಡಲೇ ಮುಂದರಿಸಿ ನುಗ್ಗಿ ಹೋಗುವುದಕ್ಕೆ ಎಲ್ಲಾ ಸಿದ್ಧಪಡಿಸಿಕೊಳ್ಳುತ್ತಲೂ ಇದಾರೆಂದು ಸ್ಪಷ್ಟವಾಗಿ ಗೋಚರವಾಗುವುದು.

ಜರ್ಮನಿ ಚಕ್ರವರ್ತಿಯವರ ದೇಹಸ್ಥಿತಿಯ ವಿಷಯದಲ್ಲಿ ಹಲವು ತರಹ ವರ್ತಮಾನಗಳು ಬಂದಿವೆ. ಅವು ನಿಜವೆಂದು ಹೇಳುವುದು ಸಾಧ್ಯವಲ್ಲ. ಈ ತರವಾದ ವರ್ತಮಾನಗಳು ಬರುತ್ತಿರುವವು. ಒಂದು ವರ್ತಮಾನವು ಚಕ್ರವರ್ತಿಯವರು ತಮ್ಮ ಸಹೋದರಿಯಾದ ಗ್ರೀಸಿನ ರಾಣಿಯನ್ನೂ, ತಮ್ಮ ಸ್ವಂತ ಸಂಬಂಧಿಕರನ್ನೂ ರಾಜಧಾನಿಯಾದ ಬೆರ್ಲಿನ್ ನಗರಕ್ಕೆ ಬರುವಂತೆ ಕರೆಸಿದಾರೆಂದು ಹೇಳುತ್ತದೆ. ಇನ್ನೊಂದು ತಂತೀವರ್ತಮಾನದಿಂದ ಕೈಸರ್ ಚಕ್ರವರ್ತಿಗೆ ಏನೋ ಒಂದು ಶಸ್ತ್ರಚಿಕಿತ್ಸೆ ನಡೆದಿರುವಂತೆಯೂ, ಅವರು ಎದ್ದು ತಿರುಗಾಡುವುದಕ್ಕೆ ಅಡೆತಡೆಯಾಗಿಲ್ಲವೆಂದೂ ಗೊತ್ತಾಗುವುದು. ಈಚೆಗೆ ಚಕ್ರವರ್ತಿಯು ಬೆರ್ಲಿನ್ ರಾಜಧಾನಿಯಿಂದ ಯುದ್ಧಭೂಮಿಗೆ ಹೋದರೆಂದು ತಂತೀವರ್ತಮಾನ ಬಂದಿದೆ.

ಪಶ್ಚಿಮ ರಣರಂಗದಲ್ಲಿ.

ಫ್ರೆಂಚ್ ಸೈನಿಕರಿದ್ದ ಸುಮಾರು ಆರು ಮೈಲಿ ಉದ್ದಕ್ಕೂ ಜರ್ಮನಿಯವರು ವಿಷವಾಯುಗಳನ್ನು ಸುರಿಸುತ್ತಾ ನುಗ್ಗಿ ಬಂದರು. ಅವರು ನಾಲ್ಕಾವರ್ತಿ ಫ್ರೆಂಚರ ಸಾಲನ್ನು ಭೇದಿಸಿ ನುಗ್ಗಬೇಕೆಂದು ಮೇಲೆ ಬಿದ್ದು ಮುತ್ತಿಗೆ ಹಾಕಿದರು. ಎರಡು ಜಾಗ್ಯಗಳಲ್ಲಿ ಮಾತ್ರ ಅವರು ಫ್ರೆಂಚರ ಕೆಲವು ಕಂದಕಗಳನ್ನು ಗೆದ್ದುಕೊಂಡರು. ಬಳಿಕ ಫ್ರೆಂಚರು ಅವರ ಮೇಲೆ ನುಗ್ಗಿ ಮುತ್ತಿಗೆ ಹಾಕಿಕೊಂಡರು. ಅವರು ಎರಡು ಸಣ್ಣ ಜಾಗ್ಯಗಳ ವಿನಾ ಉಳಿದ ಕಡೆಯಿಂದ ಜರ್ಮನಿಯವರನ್ನು ಹಿಂದಕ್ಕೆ ಓಡಿಸಿರುತ್ತಾರೆ. ಈ ಕದನದಲ್ಲಿ ಜರ್ಮನಿಯವರು ಅಗಾಧವಾದ ಸೈನ್ಯಗಳನ್ನು ತಂದು ನುಗ್ಗಿಸಿದರು. ಇದರಿಂದ ಅವರ ಕಡೆ ಬಹಳ ನಷ್ಟವಾಯಿತು. ಅವರು ನುಗ್ಗಿ ಬಂದದ್ದು ಕಡೆಗೆ ಸಾರ್ಥಕವಾಗಲಿಲ್ಲ.

ಇತರ ರಾಜ್ಯಗಳಲ್ಲಿ ಪಿರಂಗಿ ಗುಂಡುಗಳ ಹೊಡೆದಾಟಗಳೂ, ಅಂತರಿಕ್ಷದಲ್ಲಿ ವಿಮಾನಯಂತ್ರಗಳ ಹೋರಾಟವೂ ವಿಶೇಷವಾಗಿ ನಡೆದಿರುವವು. ಒಂದು ದಿನ ಯುದ್ಧಕ್ಕಾಗಿ ಹಾರಿಹೋಗಿದ್ದ ಬ್ರಿಟಿಷರ ನಾಲ್ಕು ವಿಮಾನಯಂತ್ರಗಳು ವಾಪಸು ಬರಲಿಲ್ಲ. ಅವುಗಳಲ್ಲಿದ್ದ ಎಂಟು ಜನರ ಪೈಕಿ ಆರು ಮಂದಿ ಕೊಲೆಯಾದರೆಂದೂ, ಇಬ್ಬರು ಗಾಯಪಟ್ಟರೆಂದೂ ಜರ್ಮನಿಯ ಒಂದು ವರ್ತಮಾನವು ತಿಳಿಸುತ್ತದೆ.

ಬ್ರಿಟಿಷ ವಿಮಾನ ಯಂತ್ರವು ಅಂತರಿಕ್ಷದಲ್ಲಿ ಲೀಲ್ ಎಂಬ ನಗರದ ಸಮೀಪದಲ್ಲಿ ಸಿಡಿಮದ್ದಿನ ಗುಂಡುಗಳನ್ನು ಹಾಕಿದ್ದರಿಂದ ಶತ್ರುವಿನ ಮದ್ದುಗುಂಡುಗಳ ಉಗ್ರಾಣದಲ್ಲಿ ಮಹಾ ಶಬ್ದದೊಡನೆ ಹಾನಿ ನಷ್ಟವಾಯಿತು. ಅನೇಕ ಮನೆಗಳು ನಾಶವಾದವೆಂದೂ, 70 ಜನಗಳು ಮೃತಪಟ್ಟರೆಂದೂ, 40 ಜನಗಳಿಗೆ ಘೋರ ಗಾಯಗಳಾದವೆಂದೂ ಜರ್ಮನಿಯವರು ತಿಳಿಸುತ್ತಾರೆ.

ಬೆಲ್ಜಿಯಮ್ ಸಮುದ್ರತೀರದಲ್ಲಿ ಬ್ರಿಟಿಷ್ ಯುದ್ಧದ ಹಡಗುಗಳು ನಡೆಸಿರುವ ಕಾರ್ಯಗಳನ್ನು ವಿವರಿಸಿ ಒಂದು ರಿಪೋರ್ಟನ್ನು ಪ್ರಕಟಿಸಿದಾರೆ. ಒಟ್ಟು ಗಣತಿ 80 ಹಡಗುಗಳು ಅಲ್ಲಿ ಕಾರ್ಯಗಳನ್ನು ನಡಿಸಿದವು. ಅವು ಹಲವು ನಾಲ್ಕು ಸಲ ಶತ್ರುವಿನ ಮೇಲೆ ನುಗ್ಗಿದವು. ಆಗ ಶತ್ರುವಿನ ಒಂದು ಟಾರ್ಪೆಡೋ ದೋಣಿಯೂ ಎರಡು ಸಬ್‌ಮೆರೀನುಗಳೂ, ಒಂದು ಹಡಗೂ ಮುಳುಗಿಸಲ್ಪಟ್ಟವು. ಶತ್ರುವಿನ ನಾಲ್ಕು ಬ್ಯಾಟರಿ ಕಾವಲುಸೇನೆಗಳನ್ನು ನಾಶಪಡಿಸಿದವು. ಜೈಬ್ರುಗ್ಗ ತೀರದಲ್ಲಿ ಹಡಗುಗಳನ್ನು ನಿಲ್ಲಿಸುವ ಕಟ್ಟಡಗಳನ್ನೂ, ತುಪಾಕಿ ಪಿರಂಗಿಗಳನ್ನೂ, ಅನೇಕ ಮದ್ದುಗುಂಡುಗಳ ಉಗ್ರಾಣಗಳನ್ನೂ ಹಾಳುಮಾಡಿರುತ್ತವೆ. ಇವಲ್ಲದೆ ಅನೇಕ ಸೈನಿಕರನ್ನು ಕೊಂದು ಗಾಯಪಡಿಸಿರುವವು.

ಪೂರ್ವ ರಣರಂಗದಲ್ಲಿ.

ರಷ್ಯಾದವರು ತಮ್ಮ ಬಹು ದೀರ್ಘವಾದ ಯುದ್ಧಸಾಲಿನ ದಕ್ಷಿಣಭಾಗದಲ್ಲಿ ಅಂದರೆ ಗಲಿಷಿಯಾದಲ್ಲೂ, ಬುಕೊವಿನದಲ್ಲೂ ತಮ್ಮ ಸೈನ್ಯಗಳನ್ನು ನುಗ್ಗಿಸಿ ಮುಂದಕ್ಕೆ ಹೋಗಿದಾರೆಂದು ವೇದ್ಯವಾಗುತ್ತದೆ. ಇದರಿಂದ ಜರ್ಮನಿ ಮತ್ತು ಆಸ್ಟ್ರಿಯಾದವರು ತಮ್ಮ ಸೈನ್ಯಗಳನ್ನು ಸೆರ್ಬಿಯದಿಂದಲೂ, ಇತರ ಕಡೆಗಳಿಂದಲೂ ವಾಪಸು ಕರೆಸಿಕೊಳ್ಳುವಂತೆ ಮಾಡಬೇಕೆನ್ನುವುದೇ ರಷ್ಯಾದವರ ಉದ್ದೇಶವೆಂದು ಕಾಣುವುದು. ಬಹಳ ಕಠಿಣವಾದ ಯುದ್ಧಗಳು ನಡೆದವು. ರಷ್ಯಾದವರು ಬಹಳ ಪರಾಕ್ರಮದಿಂದ ನುಗ್ಗಿ ಜರ್ಮನರ ಮತ್ತು ಆಸ್ಟ್ರಿಯಾದವರನ್ನು ತಳ್ಳಿ ಹಿಂದಕ್ಕೆ ಓಡಿಸಿಬಿಟ್ಟಿದ್ದಾರೆ. ಜರ್ಮನರ ಮತ್ತು ಆಸ್ಟ್ರಿಯಾದವರು ಕಳೆದ ಮೂರು ವಾರಗಳಲ್ಲಿ 70,000 ಸೈನ್ಯಗಳನ್ನು ಕಳೆದುಕೊಂಡು ಈಗ ಏನು ಮಾಡಲಾರದಂಥಾ ದುಃಸ್ಥಿತಿಯಲ್ಲಿದಾರೆಂದು ಹೇಳಲಾಗಿದೆ. ಜರ್ಮನಿಯವರಲ್ಲಿರುವ ಭಾರಿಭಾರಿ ಪಿರಂಗಿಗಳನ್ನು ಎತ್ತಿ ಹಚ್ಚಿ ಗುಂಡುಗಳನ್ನು ಹೊಡೆಯುವುದಕ್ಕೆ ಸಮರ್ಥರಾದ ಜನಗಳಿಲ್ಲವೆಂದು ಚಿಂತೆಪಡುತ್ತಾರೆ. ಜರ್ಮನಿ ಮತ್ತು ಆಸ್ಟ್ರಿಯಾದವರು ಸೆರ್ಬಿಯಾದಿಂದ 3,00,000 ಸೈನ್ಯವನ್ನೂ, 80,000 ಸೈನ್ಯವನ್ನು ಇಟಲಿ ಪ್ರಾಂತ್ಯದಿಂದಲೂ, ಫ್ರಾನ್ಸಿನಿಂದ ಕೆಲವು ಸೈನ್ಯಗಳನ್ನೂ ವಾಪಸು ಕರೆಸಿಕೊಂಡರೆಂದು ವರ್ತಮಾನವಿದೆ. ಹೀಗೆಯೇ ಜರ್ಮನಿಯವರು ಸೈನ್ಯಗಳನ್ನು ಯಾವಾಗಲೂ ಹಿಂದಕ್ಕೆ ಮುಂದಕ್ಕೆ ಕರೆಸಿಕೊಂಡು ಕಳುಹಿಸುತ್ತಿರೋಣದರಿಂದ ಈ ಸೈನ್ಯಗಳ ಚಲನೆಯಲ್ಲಿ ಅರ್ಥವೇನೂ ಕಾಣುವುದಿಲ್ಲ. ರಷ್ಯಾದವರು ಮುಂದು ಮುಂದಕ್ಕೆ ನುಗ್ಗಿಕೊಂಡು ಹೋಗುತ್ತಿದಾರೆಂದು ಹೇಳಲ್ಪಟ್ಟಿದ್ದಾಗ್ಯೂ ನಿಶ್ಚಿತವಾದ ಫಲಿತಾಂಶಗಳು ಕಂಡು ಬರುವಂಥಾ ದೊಡ್ಡ ಕದನಗಳು ನಡೆಯುವುದಕ್ಕೆ ಇನ್ನೂ ಕೆಲವು ಕಾಲವಾಗಬೇಕು.

ಇಟಲಿ.

ಚಳಿಯು ಹವಾ ದೆಸೆಯಿಂದ ಈ ಯುದ್ಧಭೂಮಿಯಲ್ಲಿ ವಿಶೇಷ ಕದನಗಳು ನಡೆಯದಂತೆ ಅಡ್ಡಿಯಾಗಿದೆ. ಆದಾಗ್ಯೂ ಎರಡು ಪಕ್ಷಗಳಲ್ಲೂ ಪಿರಂಗಿ ಗುಂಡುಗಳ ಹೋರಾಟವೂ, ಅಂತರಿಕ್ಷದಲ್ಲಿ ವಿಮಾನ ಯಂತ್ರಗಳ ಹೋರಾಟವೂ ನಡೆಯುತ್ತಲಿದೆ. ಈ ಯುದ್ಧಭೂಮಿಯು ಯಾವ ರಾಜ್ಯದಿಂದಲೂ ಏನೊಂದೂ ವಿಶೇಷ ಸಮಾಚಾರ ಹೊರಡುತ್ತಿರುವುದಿಲ್ಲ. ಬಹುಶಾ ಇಟಲಿಯವರು ಆಲ್ಬೇನಿಯಾ ಸೀಮೆಯಲ್ಲಿ ಸೆರ್ಬಿಯಾದವರಿಗೆ ಸಹಾಯ ಮಾಡುತ್ತಿರಬಹುದು.

ಜನವರಿ ತಾ. 14 ರಲ್ಲಿ ಆಸ್ಟ್ರಿಯಾದವರು ಪಿರಂಗಿ ಗುಂಡುಗಳನ್ನು ಅಪಾರವಾಗಿ ಸುರಿಸಿ ಇಟಲಿಯವರ ಮೇಲೆ ನುಗ್ಗಿ ಕದನಮಾಡಿ ಇಟಲಿಯವರಿದ್ದ ಕಂದಕಗಳನ್ನು ಪ್ರವೇಶ ಮಾಡಿದರು. ತರುವಾಯ ಇಟಲಿಯವರು ಅವರ ಮೇಲೆ ತಿರುಗಿ ಬಿದ್ದು ಕದನ ಮಾಡಿದ್ದರಲ್ಲಿ ಆಸ್ಟ್ರಿಯಾದವರೆಲ್ಲಾ ಹಿಂದಕ್ಕೆ ಹೊರಟುಹೋಗಬೇಕಾಯಿತು. ಇಟಲಿಯವರಿಗೆ ಯುದ್ಧಸಾಮಗ್ರಿಗಳು ಬಹಳವಾಗಿ ಸಿಕ್ಕಿದವು.

ಬಾಲ್ಕನ್ ಸಂಸ್ಥಾನಗಳಲ್ಲಿ.

ಸೆರ್ಬಿಯಾದವರೆಲ್ಲಾ ಗ್ರೀಸಿನೊಳಗೂ ಎಲ್ಲಾ ನಿರಾಶ್ರಿತರಾಗಿರುವಂತೆ ತೋರುತ್ತದೆ. ಮಾಂಟಿನೀಗ್ರೋದಲ್ಲಿ ಆಸ್ಟ್ರಿಯಾದವರಿಗೂ ಮಾಂಟಿನೀಗ್ರೋದವರಿಗೂ ಬಹಳ ಕಠಿಣವಾದ ಯುದ್ಧಗಳು ನಡೆದವು. ಆಸ್ಟ್ರಿಯಾದವರು ಅಪಾರವಾದ ಸೈನ್ಯವನ್ನೂ ಪಿರಂಗಿಗಳನ್ನೂ ತಂದಿದ್ದರು. ಈ ಯುದ್ಧಗಳಲ್ಲಿ ಎರಡು ಕಡೆಯಲ್ಲೂ ಬಹಳ ನಷ್ಟವಾಗಿರುತ್ತದೆ. ಮಾಂಟಿನೀಗ್ರೋದವರು ಹಿಮ್ಮೆಟ್ಟಿ ಹೋಗಬೇಕಾಯಿತು. ಬಲ್ಗೇರಿಯಾದವರು ಆಲ್ಬೇನಿಯಾದೊಳಕ್ಕೆ ನುಗ್ಗಿ ಹೋಗಿ

…ಅಲ್ಲಿ ಸರ್ಬಿಯಾದವರು ಅವರನ್ನು ಸೋಲಿಸಿಬಿಟ್ಟರೆಂದೂ ಹೇಳ… ಅಲ್ಬೇನಿಯಾದವರು ಸರ್ಬಿಯಾದವರಿಗೆ ಸಹಾಯಕರಾಗಿದ್ದಂತೆಯೂ, …ರು ಕೂಡ ಅವರಿಗೆ ಬೆಂಬಲವಾಗಿ ನಿಂತು ಯುದ್ಧ ಮಾಡಿದಂತೆಯೂ …ವಾಗಿದೆ

…ರ್ಬಿಯಾದವರಿಗೆ ವಿಶ್ರಾಂತಿಯುಂಟಾಗಲೆಂದೂ, ಅವರು ಯುದ್ಧಕ್ಕೆ … ಚೇತರಿಸಿಕೊಂಡು ಸಿದ್ಧರಾಗಲೆಂದೂ ಫ್ರೆಂಚರು ಸರ್ಬಿಯಾದವ… ಅಲ್ಬೇನಿಯಾದಿಗೆ ಸಮೀಪದಲ್ಲಿ ಗ್ರೀಕರಿಗೆ ಸೇರಿದ ಕೋರ್ಫು ಎಂಬ … ಶಪಡಿಸಿದರು ಮಿತ್ರಮಂಡಲಿಯವರ ಹಡಗುಗಳು ಸರ್ಬಿಯಾದವ… ದ್ವೀಪಕ್ಕೆ ಸಾಗಿಸಿಕೊಂಡು ಹೋಗಿ ಇಳಿಸುತ್ತಿವೆ ಅವರು ಅಲ್ಲಿ … ಮಾತ್ರ ಇದ್ದು ಬರುವರು. ಈ ದ್ವೀಪದಲ್ಲಿರುವ ಜರ್ಮನ … ಯು ಅರಮನೆಯು ಮೇಲೆ ಫ್ರೆಂಚರ ಬಾವುಟವನ್ನು ಎತ್ತಿ ಕಟ್ಟಿದಾರೆ. …ನ ಕಾರಸ್ಥಾನಿಗೋಸ್ಕರ ಸುತ್ತಲೂ ಅನೇಕ ಯುದ್ಧದ ಹಡಗುಗಳು … ಟ್ಟಿರುವವು ಗ್ರೀಸ್ ಸರ್ಕಾರದವರೇನೋ ಆಕ್ಷೇಪಣೆ ಮಾಡಬಹುದು … ಅವರು ತಮ್ಮ ಸ್ನೇಹವರ್ಗಕ್ಕೆ ಸೇರಿರುವ ಸರ್ಬಿಯಾದವರಿಗೆ ಸಹಾಯ … ವಿಷಯದಲ್ಲಿ ತಿರಸ್ಕಾರ ಮಾಡಲಾರರು.

…ಫ್ರೆಂಚರ ಒಂದು ಸಬ್‌ಮೆರೀನು ಅದ್ರಿಯಾಟಿಕ್ ಕಡಲಿನಲ್ಲಿ ಆಸ್ಟ್ರಿ… ಒಂದು ಯುದ್ಧದ ಹಡಗನ್ನು ಮುಳುಗಿಸಿಬಿಟ್ಟಿತು

…ನೀಕಿ ತೀರದಲ್ಲಿ ಮಿತ್ರಮಂಡಲಿಯವರು 2,50,000 ಸೈನ್ಯಗ… ಸಿದ್ಧಮಾಡಿರುವಂತೆ ತಿಳಿಯುವುದು. ಕೆಲವು ವಿಮಾನಯಂತ್ರಗಳು ಬಲ್ಗೇ… ರಾಜಧಾನಿಯಾದ ಸೋಫಿಯ ಪಟ್ಟಣದ ಮೇಲ್ಭಾಗಕ್ಕೆ ಹಾರಿಹೋಗಿ …ಸ ಗುಂಡುಗಳನ್ನು ಸುರಿಸಿದವು. ಆ ನಗರದಲ್ಲಿ ಆಸ್ತಿಪಾಸ್ತಿಗಳು …; ಪ್ರಜೆಗಳಿಗೆ ತುಂಬಾ ಗಾಬರಿಯುಂಟಾಯಿತು.

ಟರ್ಕಿಯಲ್ಲಿ.

…ಮೆಸೊಪೊಟೇಮಿಯಾದಲ್ಲಿ ಬ್ರಿಟಿಷರಿಗೂ ಟರ್ಕಿಯವರಿಗೂ ಇನ್ನೂ ಕೆಲವು … ನಡೆದವು ಹೊಸದಾಗಿ ಕಳುಹಿಸಲ್ಪಟ್ಟ ಬ್ರಿಟಿಷ್ ಸೈನ್ಯಗಳು ಟೈಗ್ರಿಸ್ … ಮಾರ್ಗಕ್ಕೆ ನುಗ್ಗಿಹೋಗಿ ಷೇಕ್ ಸಾದ್ ಎಂಬ ಠಾಣ್ಯದಲ್ಲಿ ಅಂದರೆ … ಅಮಾರ ವಿಗೆ ದಕ್ಷಿಣದಲ್ಲಿ ಸುಮಾರು 25 ಮೈಲಿ ದೂರದಲ್ಲಿ ಟರ್ಕಿಯ… ಹಾಕಿಕೊಂಡಿದ್ದುದನ್ನು ಕಂಡು, ಆ ಟರ್ಕಿ ಸೈನ್ಯದ ಮೇಲೆನುಗ್ಗಿ … ಈ ಯುದ್ಧವು ಜನವರಿ ತಾ. 7 ರಲ್ಲಿ ನಡೆಯಿತು ಬ್ರಿಟಿ… ಸೈನ್ಯದಲ್ಲಿ ಒಂದು ಭಾಗವನ್ನು ಬೇರ್ಪಡಿಸಿ ಸುತ್ತಹಾಕಿಕೊಂಡು … 2 ಪಿರಂಗಿಗಳನ್ನೂ ಕೈವಶ ಹಿಡಿದುಕೊಂಡರು ಬಳಿಕ ಟರ್ಕ… ಹಿಮ್ಮೆಟ್ಟಿಹೋದರು. ನಮ್ಮ ಸೈನಿಕರು ಅವರ ಬೆನ್ನಟ್ಟಿ ಹೋಗು… ಟರ್ಕ ಸೈನ್ಯದಲ್ಲಿ ಅನೇಕ ಅರಬ್ಬಿಯವರೂ ಸೇರಿ ಅವರಿಗೆ ಸಹಾಯ… ರುವರು. ಅಲ್ಲಿ ಬ್ರಿಟಿಷ್ ಸೈನ್ಯಗಳ ಅಧಿಪತಿಯಾಗಿದ್ದ ಸರ್ ಜಾನ್ … ರವರಿಗೆ ದೇಹಸ್ಥಿತಿ ಸರಿಯಾಗಿಲ್ಲದ್ದರಿಂದ ಅವರನ್ನು ವಾಪಸು ಕರಸಿ…ರು.

…ಮಿತ್ರಮಂಡಲಿಯವರು ಗಲ್ಲಿಪೊಲಿ ಅರ್ಧದ್ವೀಪದಲ್ಲಿದ್ದ ತಮ್ಮ ಸಮಸ್ತ… ಯುದ್ಧ ಸಾಮಗ್ರಿಗಳನ್ನೂ ಅಲ್ಲಿಂದ ಸಂಪೂರ್ಣವಾಗಿ ವಾಪಸು … ಕೊಂಡದ್ದಾಯಿತು. ಫಿರಂಗಿಗುಂಡುಗಳ ಹಾರಾಟವು ವಿಶೇಷವಾಗಿ ನಡೆದ … ಜನವರಿ ತಾ. 7 ರಲ್ಲಿ ಟರ್ಕಿಯವರು ಮಿತ್ರಮಂಡಲಿಯವರ ಮೇಲೆ … ಎರಡು ಠಾಣ್ಯಗಳಲ್ಲಿ ಮಾತ್ರ ಮುಂದಕ್ಕೆ ಬಂದರು. ಮಿತ್ರ… ಶತ್ರು ಸೈನ್ಯವನ್ನು ಹಿಂದಕ್ಕೆ ಓಡಿಸಿದ್ದಾರೆ. ನಮ್ಮ ಕಡೆ … ಗಾಯಪಟ್ಟವರೂ 145 ಜನರು ಮಾರುದಿನ ನಮ್ಮ ಸೈನ್ಯ… ಬಹಳ ಕಷ್ಟಕರವಾಗಿದ್ದರೂ ಯಾವುದೊಂದು ನಷ್ಟವೂ ಇಲ್ಲದೆ … ಹತ್ತಿ ವಾಪಸು ಬಂದುಬಿಟ್ಟವು. ನಮ್ಮ ಸೈನ್ಯಗಳೆಲ್ಲಾ ಹಡಗು… ಹತ್ತಿ ತೀರವನ್ನು ಬಿಟ್ಟು ಬರುವ ತನಕ ಟರ್ಕಿಯವರು ಗುಂಡು ಹೊಡೆ…ಲಿಲ್ಲ. ಸಕಲ ಪದಾರ್ಥಗಳನ್ನೂ ಸರಕುಗಳನ್ನೂ ಸಾಗಿಸಿಕೊಂಡು … ಹನ್ನೊಂದು ಪಿರಂಗಿಗಳು ಮಾತ್ರ ಹಿಂದೆ ಉಳಕೊಂಡವು. ಈ ಪೈಕಿ … ಪಿರಂಗಿಗಳು ಸವೆದುಹೋಗಿದ್ದವು ಸೈನಿಕರು ಇವನ್ನು ಕೂಡ ಶತ್ರುವಿಗೆ … ವಾಗದಂತೆ ಕೆಡಿಸಿ, ಕೆಲವು ಸಾಮಾನನ್ನು ಸುಟ್ಟುಹಾಕಿಬಿಟ್ಟರು.

…ಕಡಲಿನಲ್ಲಿ ರಷ್ಯಾದವರ ಒಂದು ಟಾರ್ಪಿಡೋ ದೋಣಿಯು ಟರ್ಕಿ… ಒಂದು ಸಬ್‌ಮೆರೀನನ್ನೂ ಕಲ್ಲಿದ್ದಲು ಸಾಗಿಸುತ್ತಿದ್ದ ಎರಡು ಹಡಗು… ಹಿಡಿದು ಮುಳುಗಿಸಿರುತ್ತದೆ.

…ಕಸ್ ಪರ್ವತ ಪ್ರಾಂತ್ಯದಲ್ಲಿ ರಷ್ಯಾದವರಿಗೂ ಟರ್ಕಿಯವರಿಗೂ ಕದ… ಟರ್ಕಿಯವರು ಸೋತು ಹೋದರು. ರಷ್ಯಾದವರು 20 … ಉದ್ಯೋಗಸ್ಥರನ್ನೂ, 400 ಮಂದಿ ಸೈನಿಕರನ್ನೂ, ಆರು ಪಿರಂಗಿಗಳನ್ನೂ, …ಮೆಷೀನ್ ಪಿರಂಗಿಗಳನ್ನೂ, ಬಹಳ ಮದ್ದು ಗುಂಡನ್ನೂ ಕೈವಶ ಹಿಡಿದು…ರು

ಈಜಿಪ್ಟಿನಲ್ಲಿ.

…ವರಿ ತಾ. 13 ರಲ್ಲಿ ಬ್ರಿಟಿಷ್ ಸೈನಿಕರು 400 ಮಂದಿ ಇದ್ದ ಅರಬ್ಬಿ… ಗುಂಪನ್ನು ಚದರಿಸಿ ಓಡಿಸಿದರು. ಅವರು ತಮ್ಮ ಕುರಿ, ಆಡು, ದನ… …ವುಗಳನೆಲ್ಲಾ ಬಿಟ್ಟು ಓಡಿಹೋದರು. ಬ್ರಿಟಿಷರ ಕಡೆ ನಷ್ಟವೇನೂ …ಲ್ಲ.

ಪರ್ಷಿಯಾದಲ್ಲಿ.

…ಯಾದಲ್ಲಿ ರಷ್ಯಾದವರಿಗೂ ದಂಗೆಕೋರರಿಗೂ ಇನ್ನೂ ಕೆಲವು ಕದ… ರಷ್ಯಾದವರು ಅಸ್ಸಾದಬಾದ್ ಎಂಬ ಠಾಣ್ಯದ ಬಳಿ ದಂಗೆಕೋರ… ಸೋಲಿಸಿ, ಅವರ ಮಧ್ಯೆ ಇದ್ದ ಇಬ್ಬರು ಜರ್ಮನಿ ಉದ್ಯೋಗಸ್ಥರನ್ನು …ಹಿಡಿದಿರುತ್ತಾರೆ

ಇತರ ವಿಷಯಗಳು.

…ಜರ್ಮನಿ ಚಕ್ರವರ್ತಿಯವರು ಜನವರಿ ತಾ 27 ರಲ್ಲಿ ತಮ್ಮ ಹುಟ್ಟಿದ … ಹಬ್ಬದಿಂದ ತಮ್ಮ ಸೈನಿಕರಿಗೆಲ್ಲ ಇತ್ತಹಾರು ಮೂಲಕ ತಿಳಿಸಿರುವು… — "ಯುದ್ಧ ನಡೆಯುವುದರ ಮಧ್ಯದಲ್ಲೇ ನನ್ನ ವರ್ಧಂತಿ ಉತ್ಸ… ಒಂದು ಸಲ ಬರುವುದಾಗಿದೆ. ಪರಾಕ್ರಮಪೂರ್ವ ಯುದ್ಧಕಾರ್ಯ… ಯುಕ್ತವಾದ ಜಯಪ್ರದಗಳೂ ಆಗುತ್ತಿದ್ದಾಗ್ಯೂ ಮಹಾ ಕಷ್ಟ… ಯುದ್ಧಕಾರ್ಯಗಳು ಇನ್ನೂ ಮುಕ್ತಾಯವಾಗಿರುವುದಿಲ್ಲ. ಅಂತ್ಯ… ಜಯಪ್ರದವಾಗುವುದಕ್ಕೋಸ್ಕರ ನಮ್ಮ ರಾಜ್ಯದ ಒಳಗೂ ಯುದ್ಧಭೂಮಿ… ರುವ ಜರ್ಮನಿ ಜನಾಂಗದವರೆಲ್ಲಾ ತಮ್ಮ ಸರ್ವಸಾಮರ್ಥ್ಯವನ್ನೂ … ವಿನಿಯೋಗಿಸಬೇಕು." ಈ ವರ್ಧಂತಿ ಉತ್ಸವದ ಸಮಯ ಜರುಗತಕ್ಕ … ಉತ್ಸವವನ್ನು ನಡೆಸದೆ ದೇವರಿಗೆ ಮೌನದಿಂದ ಪ್ರಾರ್ಥನೆಗಳನ್ನು ಸಲ್ಲಿ… …ದೂ, ಯುದ್ಧದ ದೆಸೆಯಿಂದ ಸಂಕಟಪಡತಕ್ಕವರಿಗೆ ಧರ್ಮಾರ್ಥವಾದ … ಸಂತರ್ಪಣೆಗಳನ್ನು ಮಾಡಬೇಕೆಂದೂ ಸೂಚಿಸುತ್ತಾರೆ

…ಹಿಂದೂಸ್ಥಾನದಲ್ಲಿದ್ದ ಆಸ್ಟ್ರಿಯಾ ಮತ್ತು ಜರ್ಮನಿ ಪ್ರಜೆಗಳ ಪೈಕಿ … ಬ್ರಿಟಿಷರು ಹಿಡಿದು ಗೋಲ್ಕೊಂಡ ಎಂಬ ಹಡಗು ಹತ್ತಿಸಿ ಅವರ… ವಾಪಸು ಕಳುಹಿಸುತ್ತಿದ್ದರು. ಈ ಹಡಗು ಹಿಂದೂಸ್ಥಾನದಿಂದ … ಒಂದು ತಿಂಗಳಾಯಿತು. ಅದರಲ್ಲಿ ಹೆಂಗಸರು ಮಕ್ಕಳೇ ವಿಶೇಷ… ಅವರ ಗಂಡಂದಿರು ಆತನನ್ನೆಲ್ಲಾ ಸಬ್‌ಮೆರೀನಿನ ಏಟಿಗೆ ಸಿಕ್ಕ… …ವೆಂದು ಹೇಳಿಕೊಂಡಿದ್ದರು. ಆಸ್ಟ್ರಿಯಾ ಗವರ್ನ್‌ಮೆಂಟಿನ … ರಾಯಭಾರಿಯ ಮೂಲಕ ಆ ಹಡಗಿನಲ್ಲಿರುವವರು … ಮನೆಗಳಿಗೆ ಸೇರಿದವರೆಂದೂ, ಅವರಿಗೆ ಯಾವುದೊಂದು ಅಪಾ… …ದಂತೆ ಬಹಳ ಜಾಗರೂಕತೆಯಿಂದ ಕರೆದು ತಂದು ಬಿಡ… ಅವರಲ್ಲಿ ಯಾರಾದರೂ ನಷ್ಟಪಟ್ಟ ಪಕ್ಷದಲ್ಲಿ ಅದರ ಜವಾಬ್ದಾರಿ…

…ಯನ್ನು ವಹಿಸಬೇಕಾದೀತೆಂದೂ ಬ್ರಿಟಿಷ್ ಗವರ್ನ್‌ಮೆಂಟಿನ ಸರ್ ಎಡ್ವರ್ಡ್ ಗ್ರೇ ಸಾಹೇಬರಿಗೆ ಬರೆದು ತಿಳಿಸಿದ್ದರು ಅದಕ್ಕೆ ಪ್ರತಿಯಾಗಿ ಸರ್ ಎಡ್ವರ್ಡ್ ಗ್ರೇಯವರು—ಆಸ್ಟ್ರಿಯಾದವರು ತಮ್ಮ ಪ್ರಜೆಗಳನ್ನು ಕಾಪಾಡುವ ವಿಷಯದಲ್ಲಿ ಇಷ್ಟೊಂದು ಆತುರಪಡುವುದು ಆಶ್ಚರ್ಯವನ್ನುಂಟುಮಾಡಿದೆ ಎಂದೂ, ದೊಡ್ಡ ಮನೆತನದವರನ್ನು ಇತರ ಸಾಮಾನ್ಯ ಪ್ರಜೆಗಳಂತೆಯೇ ನೋಡದೆ ತಾರತಮ್ಯವನ್ನು ತೋರಿಸುವುದಕ್ಕೆ ಕಾರಣವೇನೂ ಕಾಣುವುದಿಲ್ಲವೆಂದೂ ಹೇಳಿದರು. ಇದಲ್ಲದೆ ಅಂಥಾ ಕಷ್ಟನಷ್ಟಗಳನ್ನು ಉಂಟುಮಾಡಿದವರು ಆಸ್ಟ್ರಿಯಾದವರು ಮತ್ತು ಜರ್ಮನಿಯವರು. ಈಗ ಅವರು ನಮ್ಮನ್ನು ಆ ರೀತಿ ಕೇಳಿಕೊಂಡಿರುವುದರಿಂದ ಅವರ ಗವರ್ನ್‌ಮೆಂಟಿನವರು ಹಡಗುಗಳನ್ನು ಮುಳುಗಿಸುವ ದುರ್ಧರ್ಮವನ್ನೇ ಅವಲಂಬಿಸಿಕೊಂಡಿದ್ದಾರೆನ್ನುವುದೂ, ಅದು ಅವರ ಸಬ್‌ಮೆರೀನ್ ಹಡಗುಗಳ ಕೃತ್ರಿಮ ಕೃತ್ಯಗಳೇನೂ ಅಲ್ಲವೆನ್ನುವುದೂ ವೇದ್ಯವಾಗುತ್ತದೆ. ಬ್ರಿಟಿಷ್ ಪ್ರಜೆಗಳನ್ನು ಸಂರಕ್ಷಣೆ ಮಾಡುವಂತೆಯೇ ಅವರನ್ನೂ ಕಾಪಾಡುತ್ತೇವೆ. ಅದಕ್ಕಿಂತ ಹೆಚ್ಚಿನ ಆವಶ್ಯಕತೆಯೇನೂ ಕಾಣುವುದಿಲ್ಲ. ಹಡಗುಗಳನ್ನು ಮುಳುಗಿಸುವುದರಲ್ಲಿ ಅಕ್ಕರೆಯಿಂದಂಥಾ ಆಸ್ಟ್ರಿಯಾದವರು ಈ ರೀತಿ ಕೇಳಿಕೊಂಡಿರುವುದು ಪರಮಾಶ್ಚರ್ಯವೇ ಸರಿ!

ಬ್ರಿಟಿಷರ ಒಂದು ಹಡಗು ಮುಳುಗಿಸಲ್ಪಟ್ಟಿತು. ಅದರೊಳಗಿದ್ದವರು ಬದುಕಿಕೊಂಡು ಮಾಲ್ಟಾ ದ್ವೀಪಕ್ಕೆ ಬಂದಿಳಿದರು. ಈ ಹಡಗು ಬೊಂಬಾಯಿ ಪಟ್ಟಣಕ್ಕೆ ಬರುತ್ತಿತ್ತು. ಆ ಹಡಗಿನ ಸೇವಕಾಳುಗಳಲ್ಲಿ ಹದಿನಾರು ಮಂದಿ ಒಂದು ದೋಣಿಯಲ್ಲಿದ್ದು ನೀರಿನ ಪಾಲಾದರು. ಇನ್ನೊಂದು ಹಡಗು ಮುಳುಗಿ ಹೋಗಿ ಅದರಲ್ಲಿದ್ದವರು ಬದುಕಿಸಲ್ಪಟ್ಟಿದಾರೆ.

ನೀರಿನಲ್ಲಿದ್ದಾಗ ಜರ್ಮನಿಯವನನ್ನು ಬ್ರಿಟಿಷರು ಗುಂಡು ಹೊಡೆದು ಕೊಂದು ಹಾಕಿದರೆಂಬದಾಗಿ ಜರ್ಮನಿಯವರು ದೋಷಾರೋಪಣೆ ಮಾಡಿದ್ದರು ಆ ಬ್ರಿಟಿಷ ಹಡಗಿನಲ್ಲಿ ಕೆಲವು ಅಮೇರಿಕದವರೂ ಇದ್ದು, ಅವರು ದೋಷಾರೋಪಣೆಯು ನಿಜವಲ್ಲವೆಂದು ಸ್ಥಾಪಿಸಿದಾರೆ. ಈ ಅಮೇರಿಕದವರ ಪೈಕಿ ಒಬ್ಬನು ಗಾಯಪಟ್ಟು ನರಳುತ್ತಿದ್ದ ಹೇಸರಕತ್ತೆಗಳನ್ನು ಗುಂಡಿನಿಂದ ಹೊಡೆದು ಕೊಲ್ಲುತ್ತಿದ್ದನು

ಜರ್ಮನಿ ಮತ್ತು ಆಸ್ಟ್ರಿಯಾ ರಾಜ್ಯಗಳಲ್ಲಿ ನಾಣ್ಯಗಳ ಬೆಲೆಯು ಬಹಳವಾಗಿ ಇಳಿಯುತ್ತಿದೆ. ಜರ್ಮನಿಯ ನಾಣ್ಯಗಳ ಬೆಲೆಯು ಶೇಕಡಾ 33 ರಷ್ಟೂ, ಆಸ್ಟ್ರಿಯಾದವರದು ಶೇಕಡಾ 48 ರಷ್ಟು ಕಡಮೆಯಾಗಿದೆ. ಜರ್ಮನಿಯಲ್ಲಿ ತಲೆಗೆ ದಿನ ಒಂದಕ್ಕೆ 40 ರೂಪಾಯಿ ತೂಕದ ಸಾರ್ ರೊಟ್ಟಿಯನ್ನು ಕೊಡುತ್ತಿದ್ದರು; ಈಗ ಅದನ್ನು ಅರೆವಾಸಿ ಕಡಮೆ ಮಾಡಿಬಿಟ್ಟಿದಾರೆ. ವಿಯೆನ್ನಾ ನಗರದಲ್ಲಿ ದರೋ ತಿನ್ನುವುದಕ್ಕೆ ಮಾಂಸವಿಲ್ಲದೆ ನಾಯಿ ಮಾಂಸವನ್ನು ಕೊಂಡು ತಿನ್ನುವರು.

ಪರ್ಸಿಯಾ ಎಂಬ ಬ್ರಿಟಿಷ್ ಮೆಯಿಲ್ ಹಡಗು ಮುಳುಗಿಸಲ್ಪಟ್ಟಿತಷ್ಟೆ. ಅದು ಮುಳುಗಿದ ಸಮಯದಲ್ಲಿ ಆಸ್ಟ್ರಿಯಾದವರು ತಮ್ಮ ಸಬ್‌ಮೆರೀನು ಇರಲಿಲ್ಲವೆಂದೂ, ಪರ್ಸಿಯಾ ಹಡಗು ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿ ಹೋಗಿರಬೇಕೆಂದೂ ಹೇಳುತ್ತಾರೆ.

ಗ್ರೇಟ್ ಬ್ರಿಟನ್‌ನಲ್ಲಿ ಪ್ರಜೆಗಳನ್ನು ಬಲಾತ್ಕರಿಸಿ ಸೈನ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ಮಸೂದಾ ಶಾಸನವನ್ನು ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಎರಡನೆಯ ಸಲ ಓದಿ ಮೆಂಬರುಗಳು ಚರ್ಚೆ ಮಾಡಿದರು. ಕಡೆಗೆ 431 ಮಂದಿ ಕಾನೂನು ಆಗಬೇಕೆಂದೂ, 39 ಮಂದಿ ಮಾತ್ರ ಅದಕ್ಕೆ ವಿರೋಧವಾಗಿಯೂ ಅಭಿಪ್ರಾಯಪಟ್ಟರು. ಕೂಲಿಕಾರರ ಪ್ರತಿನಿಧಿಗಳಾಗಿದ್ದ ಮಂತ್ರಿ ಸಭೆಯ ಮೆಂಬರುಗಳು ರಾಜೀನಾಮೆ ಕೊಟ್ಟದ್ದು ವಾಪಸು ತೆಗೆದುಕೊಂಡರು. ಯುದ್ಧಭೂಮಿಯಲ್ಲಿರುವ ಬ್ರಿಟಿಷ್ ಸೈನಿಕರಲ್ಲಿ ಶೇಕಡಾ 15 ಮಂದಿಯಂತೆ ಪ್ರತಿ ತಿಂಗಳಲ್ಲೂ ನಷ್ಟವಾಗುತ್ತಿದಾರೆ.

ಯುದ್ಧವು ಪ್ರಾರಂಭವಾದಾಗ್ಗೆ ಗ್ರೇಟ್ ಬ್ರಿಟನ್‌ನಲ್ಲಿ ಜರ್ಮನಿ ಪ್ರಜೆಗಳು 32,028 ಮಂದಿ ಇದ್ದರು. ಈ ಪೈಕಿ ಸರ್ಕಾರದವರು 26,174 ಮಂದಿಯನ್ನು ಹಿಡಿದು ಬಂಧನದಲ್ಲಿ ಹಾಕಿದಾರೆ ಜರ್ಮನಿಯಲ್ಲಿ 7,20,00,000 ಪೌಂಡುಗಳ ಆಸ್ತಿಯು ಬ್ರಿಟಿಷರಿಗೆ ಸೇರುತ್ತದೆ; ಅತ್ತಲಾಗಿ ಬ್ರಿಟನ್‌ನಲ್ಲಿ 10,50,00,000 ಪೌಂಡುಗಳ ಆಸ್ತಿಯು ಜರ್ಮನಿಯವರಿಗೆ ಸೇರಿದ್ದಾಗಿದೆ.

ದಕ್ಷಿಣ ಆಫ್ರಿಕಾದಲ್ಲಿರುವ ಹಿಂದೂಸ್ಥಾನದವರು ಹೊರುವುದೇ ಮೊದಲಾದ ಕಾರ್ಯಗಳನ್ನು ಮಾಡುವುದಕ್ಕಾಗಿ ಯುದ್ಧದಲ್ಲಿ ಸಹಾಯಮಾಡಬೇಕೆಂದು ಬ್ರಿಟಿಷ್ ಪೂರ್ವ ಆಫ್ರಿಕಾಕ್ಕೆ ಹೋಗಿರುತ್ತಾರೆ ಅವರು ಒಟ್ಟು 114 ಜನರು, ಇವರಲ್ಲಿ 88 ಮಂದಿ ತಮಿಳು ಜನರು, 22 ಮಂದಿ ಕಲ್ಕತ್ತೆಯವರು. ಆಸ್ಟ್ರೇಲಿಯದವರು ತಿರಿಗಿ 50,000 ಸೈನ್ಯವನ್ನು ಕೂಡಿಸಿ ಯುದ್ಧಭೂಮಿಗೆ ಕಳುಹಿಸುತ್ತಾರೆ.

ಫ್ರಾನ್ಸಿನಲ್ಲಿ ಪ್ರಜೆಗಳು 60,50,00,000 ಪೌಂಡು ದ್ರವ್ಯವನ್ನು ತಮ್ಮ ಸರ್ಕಾರಕ್ಕೆ ಸಾಲವಾಗಿ ಕೊಟ್ಟಿದಾರೆ

ಹಾಲೆಂಡಿನ ತೀರದ ಆಚೆ ಜರ್ಮನಿಯ ಒಂದು ವಿಮಾನಯಂತ್ರವೂ, ಅದರಲ್ಲಿ ಇಬ್ಬರು ಉದ್ಯೋಗಸ್ಥರೂ ಸಮುದ್ರದ ಮೇಲೆ ಸಿಕ್ಕಿದರು. ಅವರನ್ನು ನೀರಿನಿಂದೆತ್ತಿ ಬದುಕಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಕಳೆದ ಭಾನುವಾರ ರಾತ್ರಿ ಎಂಟು ಗಂಟೆಯ ಮೇಲೆ ಬೆಂಗಳೂರಿನಿಂದ ಮೋಟಾರಿನಲ್ಲಿ ರಾಜಧಾನಿಗೆ ಚಿತ್ತೈಸಿದರು. ಅವರು ಈ ದಿನವೋ ನಾಳೆಯೋ ಬೆಂಗಳೂರಿಗೆ ದಯಮಾಡುತ್ತಾರೆ.

ತುಮಕೂರಿನಲ್ಲಿ ತಾ. 21 ನೇ ಸೋಮವಾರ ತಾಲ್ಲೂಕ್ ಕಾನ್ಫರೆನ್ಸು ನಡೆಯುವುದು. ದೇಶಾಭಿವೃದ್ಧಿಗೆ ಸಹಕಾರಿಗಳಾದ ನಾನಾ ವಿಷಯಗಳು ಅಲ್ಲಿ ಚರ್ಚಿಸಲ್ಪಡುವವೆಂದೂ, ಹಲವು ಉಪನ್ಯಾಸಗಳು ಓದಲ್ಪಡುವವೆಂದೂ ತಿಳಿಯಲಾಗಿದೆ

ನಮ್ಮ ಮಹಾರಾಜರವರು ಅರಮನೆಯ ರಾಜವಾಹನದವರೊಡನೆ ತಾ. 22 ರಲ್ಲಿ ಬೊಂಬಾಯಿಗೆ ಪ್ರಯಾಣಮಾಡಿ, ಉತ್ತರ ದೇಶದಲ್ಲಿ ಸಂಚಾರ ಮಾಡಿಕೊಂಡು ಸುಮಾರು ಮಾರ್ಚಿ ಮೊದಲನೆಯ ವಾರದಲ್ಲಿ ವಾಪಸು ದಯಮಾಡುವರೆಂದು ತಿಳಿಯುವುದು.

ಒಬ್ಬ ಬಾತ್ಮಿದಾರರು ಬರೆಯುವುದು—ಬೇಲೂರು ಕಸಬ ಹೋಬಳಿ ಕೆಂಪನಹಳ್ಳಿ ನಂಜಯ್ಯನವರ ಮಗ ಚನ್ನಬಸವಯ್ಯನು ಚಿಕ್ಕಮಗಳೂರು ಕೋರ್ಟಿನಲ್ಲಿ ಸುಳ್ಳು ಸಾಕ್ಷಿ ಹೇಳಿದ್ದರಿಂದ ಆರು ತಿಂಗಳು ಸಜ, 30 ರೂಪಾಯಿ ಜುಲ್ಮಾನೆಯಾಗಿರುತ್ತೆ.

ಮಾಂಬೇನಹಳ್ಳಿಯಲ್ಲಿದ್ದ ಮಿ|| ಜೆ. ಆರ್. ಎಲ್ಲಿಸ್‌ರವರು ಕಲ್ಲಮ್ಮ ಎದ್ದು ಎರಡು ವಾರ ಕಷ್ಟಪಟ್ಟು 52 ನೇ ವಯಸ್ಸಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಮಂಗಳೂರು, ಉಡುಪಿ, ಕೊಳ್ಳೇಗಾಲ, ಚಿಕ್ಕಬಳ್ಳಾಪುರ ಮುಂತಾದ ಅನೇಕ ಕಡೆಗಳಲ್ಲಿ ಸುವಾರ್ತಾ ಪ್ರಚಾರ ಕಾರ್ಯಗಳಲ್ಲಿ ಆಸಕ್ತರಾಗಿದ್ದರು

ತೀರ್ಥಹಳ್ಳಿ ವಿದ್ಯಾಪ್ರದರ್ಶನದ ಸೆಕ್ರಿಟರಿ ಮಿ|| ಪಿ. ನರಸಿಂಹಯ್ಯನವರು ಬರೆಯುವುದು.—ತೀರ್ಥಹಳ್ಳಿ ತಾಲ್ಲೂಕು ಉಪಾಧ್ಯಾಯರ ಕಾನ್ಫರೆನ್ಸು ಮತ್ತು ವಿದ್ಯಾಭ್ಯಾಸ ಪ್ರದರ್ಶನಗಳು ಜನವರಿ ತಾ 25 ರಲ್ಲಿ ಮೈಸೂರು ದೇಶದ ವಿದ್ಯಾಭ್ಯಾಸದ ಅಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರಾದ ರಾವ್ ಬಹದ್ದೂರ್ ಮಿ|| ಎಂ. ಶಾಮರಾವ್, ಎಂ. ಎ ಯವರಿಂದ ತೆರೆಯಲ್ಪಟ್ಟು 25-26-27 ಈ ಮೂರು ದಿನಗಳು ನಡೆಯಲ್ಪಡುವವು ಈ ಪ್ರದರ್ಶನೋತ್ಸವಕ್ಕೆ ಸರ್ಕಲ್ ಇನ್ಸ್‌ಪೆಕ್ಟರರೂ, ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರುಗಳೂ, ಇನ್ನೂ ಅನೇಕ ವಿದ್ಯಾಭಿಮಾನಿಗಳಾದ ದೊಡ್ಡ ಮನುಷ್ಯರೂ ದಯಮಾಡಿಸಿ ಪ್ರೋತ್ಸಾಹಿಸುವವರಾಗಿರುತ್ತಾರೆ ತಾ 22 ನೇ ಆಖೈರು ವರೆಗೆ ಪ್ರದರ್ಶನದ ಸೆಕ್ರಿಟರಿ, ಎ. ವಿ. ಸ್ಕೂಲ್, ತೀರ್ಥಹಳ್ಳಿ, ಇವರಿಂದ ಪ್ರದರ್ಶನ ವಸ್ತುಗಳು ಅಂಗೀಕರಿಸಲ್ಪಡುವವು.

ಮಹಿಳಾ ಸಮಾಜ, ಚಿಕ್ಕಮಗಳೂರು.

ಚಿಕ್ಕಮಗಳೂರು ಗೌರ್ನಮೆಂಟ್ ಗರಲ್ಸ್ ಸ್ಕೂಲಿನಲ್ಲಿ ಜನವರಿ 3 ನೇ ತಾ ಭಾನುವಾರ ಮಧ್ಯಾಹ್ನ 3 ಗಂಟೆಗೆ ಒಂದು ಮಹಿಳೆಯರ ಸಭೆಯು ಸೇರಿತ್ತು. ಎಲ್ಲಾ ದೊಡ್ಡ ಮನುಷ್ಯರ ಮನೆಯ ಸ್ತ್ರೀಯರುಗಳೂ ಬಂದಿದ್ದರು. ಆ ಕಾಲದಲ್ಲಿ ಸ್ಕೂಲ್ ಬಾಲಿಕೆಯರು ಹಾರ್ಮೋನಿಯಂ, ವೀಣೆ ಮೊದಲಾದವುಗಳಿಂದ ಹಾಡುಗಳನ್ನು ಹೇಳಿದರು. ಆ ದಿವಸ ಅಷ್ಟಕ್ಕೆ ಸಭೆಯು ಮುಕ್ತಾಯವಾಯಿತು. ಪುನಃ 6 ನೇ ತಾ. ಬುಧವಾರ ಮಧ್ಯಾಹ್ನ 4 ಗಂಟೆಗೆ ಚಿಕ್ಕಮಗಳೂರು ಗೌರ್ನಮೆಂಟ್ ಗರಲ್ಸ್ ಸ್ಕೂಲ್ ಹಾಲಿನಲ್ಲಿ ಆರ್ಯ ಮಹಿಳೆಯರ ಸಭೆಯು ಸೇರಿತ್ತು. ಆ ಕಾಲದಲ್ಲಿ ಸೌ|| ಕಮಲಮ್ಮನವರು ಸತ್ಯ ಮತ್ತು ಅಸತ್ಯ ಎಂಬ ವಿಚಾರವಾಗಿ ಒಂದು ಉಪನ್ಯಾಸವನ್ನು ಓದಿದರು. ಈ ಉಪನ್ಯಾಸವು ಬಹಳ ಚೆನ್ನಾಗಿತ್ತು. ಅನಂತರ ಹೆಡ್ ಮಿಸ್ಟ್ರೆಸ್ ಮಾಡಿಕ ಸುಂದರಮ್ಮನವರು—"ಈಗ ಸೌ|| ಕಮಲಮ್ಮನವರು ಹೇಳಿದ ವಿಚಾರವು ಬಹಳ ಉತ್ಕೃಷ್ಟವಾದದ್ದು. ಅದರಲ್ಲಿಯೂ ನಮ್ಮ ಸ್ತ್ರೀಮಂಡಲಿಗೆ ಬಹಳ ಉಪಯೋಗವಾದದ್ದು. ಈಗಿನಿಂದಲೂ ಮಕ್ಕಳಿಗೆ ಒಳ್ಳೇ ಮಾರ್ಗವನ್ನೇ ಕಲಿಸಬೇಕು ಮತ್ತು ಸುಳ್ಳು ಅಭ್ಯಾಸವಾಗದಂತೆ ನೋಡಿಕೊಳ್ಳಬೇಕು" ಎಂಬ ವಿಚಾರದಲ್ಲಿ ಬಹಳ ಚೆನ್ನಾಗಿ ಉಪನ್ಯಾಸ ಮಾಡಿದರು. ಬಳಿಕ ಸ್ಕೂಲ್ ಬಾಲಿಕೆಯರು ಸರಸ್ವತೀ ಪೂಜೆಯನ್ನು ಮಾಡಿ, ಹಾಡುಗಳನ್ನು ಹೇಳಿದರು. ಸ್ಕೂಲ್ ಬಾಲಿಕೆಯರಿಬ್ಬರು ಹಾಸ್ಯಾರ್ಣವವೆಂಬ ವಿಳಲಿಯನ್ನು ಬಹಳ ಚೆನ್ನಾಗಿ ಅಭಿನಯಿಸಿದ ತರುವಾಯ ಮಂಗಳವನ್ನು ಪಾಡಿ ಸಭೆಯನ್ನು ಮುಕ್ತಾಯ ಮಾಡಿದರು.

ಒಬ್ಬ ಮಹಿಳೆ.

ಮೈಸೂರು ಟ್ರಸ್ಟ್ ಬೋರ್ಡ್ ಮೀಟಿಂಗು.

ರಾಜಧಾನಿಯ ನಗರಾಭಿವೃದ್ಧಿಯ ಬೋರ್ಡ್ ಮೀಟಿಂಗು ತಾ. 10ನೇ ಸೋಮವಾರ ಟೌನ್ ಹಾಲಿನಲ್ಲಿ ನಡೆಯಿತು. ಚೇರ್‌ಮನ್ ಮಿ|| ಬಿ. ಜಿ. ಲಕ್ಷ್ಮೀನಾರಾಯಣರು, ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಮಿ|| ಎಂ. ಶ್ರೀನಿವಾಸರಾಯರು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮಿ|| ಜಿ. ನಾರಾಯಣರಾಯರು, ಹೆಲ್ತ್ ಆಫೀಸರ್ ಮಿ|| ಎ ಕೆ ರಾಜೆಯವರು, ಮಿ|| ಎಂ. ವೆಂಕಟಕೃಷ್ಣಯ್ಯನವರು ಮತ್ತು ಮಿ|| ಮಹಮದ್ ಜಾಫರ್ ಸಾಹೇಬರು ಹಾಜರಾಗಿದ್ದರು. ಮೀಟಿಂಗಿನಲ್ಲಿ ಚರ್ಚೆಯಿಂದ ಇತ್ಯರ್ಥಮಾಡಲ್ಪಟ್ಟ ಮುಖ್ಯ ವಿಷಯಗಳಾವವೆಂದರೆ—

ಪ್ರಾರಂಭದಲ್ಲಿ ಟ್ರಸ್ಟ್ ಬೋರ್ಡಿನಿಂದ ಕಟ್ಟಿಸಲ್ಪಟ್ಟು ಈಗ ಶಿಥಿಲವಾಗಿರುವ ಗಾರೆ ಬಚ್ಚಲುಗಳನ್ನು ದುರಸ್ತು ಮಾಡಿಸುವುದಕ್ಕೆ 3,000 ರೂಪಾಯಿ ಖರ್ಚು ಮಾಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.—ಸಂಸ್ಕೃತ ಪಾಠಶಾಲೇ ಬಳಿ ಮ್ಯುನಿಸಿಪಲ್ ಆಫೀಸು ಕಟ್ಟುವುದಕ್ಕೆ ಮನೆಗಳನ್ನು ಕೊಂಡು ಒಡೆಯುವುದು, ಇಟ್ಟಿಗೆ ಗೂಡಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡಸುವುದಕ್ಕೆ ಕೆಲವು ಮನೆಗಳನ್ನು ಕೊಂಡು ಒಡೆಯುವುದು, ಈ ಕೆಲಸಗಳನ್ನು ಮಾಡಬಹುದೆಂದು ಒಪ್ಪಲಾಯಿತು—ಹಾರ್ಡಿಂಗ್ ಸರ್ಕಲನ್ನು ಕಲ್ಪಿಸಿ ಸಿದ್ಧಪಡಿಸುವುದಕ್ಕೆ ಸ್ಯಾಂಕ್ಷನ್ ಆಗಿದ್ದ 28,500 ರೂಪಾಯಿಯಲ್ಲಿ ಇನ್ನೂ ಸುಮಾರು 1,500 ರೂಪಾಯಿ ಉಳಿದಿದೆ ಎಂದೂ, ಈ ಹಣವನ್ನು ಖರ್ಚುಮಾಡಿ ಅಲ್ಲಿ ಜನರು ಕುಳಿತುಕೊಳ್ಳುವುದಕ್ಕೆ ಅನುಕೂಲವಾದ ಏರ್ಪಾಡನ್ನು ಮಾಡಬೇಕಾಗಿದೆ ಎಂದೂ ಚೇರ್‌ಮನ್‌ರವರು ಸೂಚಿಸಿದ್ದರ ಮೇಲೆ ಮೆಂಬರುಗಳು ಮಾಡಿಸಬಹುದೆಂದು ಒಪ್ಪಿಕೊಂಡರು.

ಮಂಡಿ ಮೊಹಲ್ಲಾದಲ್ಲಿ ಮಿ|| ವರ್ಧಮಾನಯ್ಯನವರು ಭತ್ತ ಕುಟ್ಟುವ ಯಂತ್ರದ ಕಾರ್ಖಾನೆಯನ್ನು ಲೈಸೆನ್ಸ್ ಪಡೆದು ಕಟ್ಟುತ್ತಿದಾರೆಂದೂ, ಅದರ ಅಕ್ಕಪಕ್ಕದಲ್ಲಿರುವ ಕೊಳಕಾದ ಎರಡು ಮನೆಗಳನ್ನು ಕೊಂಡು ಒಡೆದು ಹಾಕಬೇಕೆಂದೂ ಚೇರ್‌ಮನ್‌ರವರು ಸೂಚಿಸಿದ್ದನ್ನು ಮೆಂಬರುಗಳು ಒಪ್ಪಿಕೊಂಡು, ಆ ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿಯಿಂದ ಭತ್ತ ಕುಟ್ಟುವುದಕ್ಕೆ ಅವಕಾಶಕೊಡಬೇಕಲ್ಲದೆ ಅನ್ಯಥಾ ಕೂಡದೆಂದು ಸೂಚಿಸಿದರು—ಕಾಳಮ್ಮನ ಬೀದಿ ನಿವೇಶನವನ್ನು ಕೊಂಡು ಒಂದು ಮೂಲೆಯಲ್ಲಿ ಸಣ್ಣ ಮನೆಯನ್ನು ಕಟ್ಟಿ ತನ್ನ ಸಹೋದರನಿಗೆ ಬಳುವಳಿ ಮಾಡಿ, ಈಗ ಉಳಿದ ನಿವೇಶನದಲ್ಲಿ ತಾನು ಬೇರೆ ಮನೆ ಕಟ್ಟುತ್ತಾನೆಂದು ಚೇರ್‌ಮನ್‌ರವರು ತಿಳಿಸಿದರು ಟ್ರಸ್ಟ್ ಬೋರ್ಡಿನಿಂದ ಆ ಸಹೋದರನ ಮನೆಯನ್ನು ಕೊಂಡು ಆತನಿಗೆ ಕೊಡಬೇಕೆಂದು ಮೆಂಬರುಗಳು ತೀರ್ಮಾನ ಮಾಡಿದರು.—ಕೋಟೆ ಗೋಡೆಯ ಮೇಲೆ ಬೆಳೆದಿರುವ ಗಿಡಗೆಂಡೆಗಳನ್ನು ಕತ್ತರಿಸಿ ಚೊಕ್ಕಟವಾಗಿ ಇಡಿಸುವುದಕ್ಕೆ 500 ರೂಪಾಯಿ ಖರ್ಚುಮಾಡುವಂತೆ ಒಪ್ಪಲಾಯಿತು.

ಡೆಪ್ಯುಟಿ ಸ್ಯಾನಿಟರಿ ಕಮಿಷನರವರನ್ನು ಬೋರ್ಡಿನವರು ಆವಶ್ಯಕವಾದ ಮೀಟಿಂಗುಗಳಿಗೆ ಮಾತ್ರ ಕರಸಿಕೊಳ್ಳಬಾರದೇ ಎಂದು ಸರ್ಕಾರದವರು ಕೇಳಿದ್ದರು. ಮೆಂಬರುಗಳು ಅವರು ಬರುವುದಕ್ಕೆ ಅಂಥಾ ನಿರ್ಬಂಧಗಳೇನೂ ಇರಕೂಡದೆಂದು ಅಭಿಪ್ರಾಯಪಟ್ಟರು.—ದೊಡ್ಡಕೆರೆಯ ಏರಿ ಬಳಿ ರಸ್ತೆ ಪಾಳು ವಾಗ್ಗೆ ಹ್ಯಾಗೋ ಒಂದು ವಿದ್ಯುಚ್ಛಕ್ತಿಯ ದೀಪದ ಕಂಭ ಮುರಿದುಹೋಯಿತು ಆ ಇಲಾಖೆಯವರು ಅದರ ಖರ್ಚು 44 ರೂಪಾಯಿ ಕೊಡಬೇಕೆಂದು ಬರೆದಿದ್ದರು. ಅಲ್ಲಿ ಕಾಮಗಾರಿ ಮಾಡಿಸುತ್ತಿದ್ದ ಕಂಟ್ರಾಕ್ಟರಿಂದ 22 ರೂಪಾಯಿ ವಸೂಲ್ ಮಾಡಬೇಕೆಂದೂ, ಉಳಿದ 22 ರೂಪಾಯನ್ನು ಟ್ರಸ್ಟ್ ಬೋರ್ಡಿನಿಂದ ಕೊಡಬಹುದೆಂದೂ ಮೆಂಬರುಗಳು ಒಪ್ಪಿದರು—ಬೆಂಗಳೂರು ರೆಡ್ಡಿ ಕಂಪನಿಯವರು ಹೊಸ ಮಾರ್ಕೆಟ್ಟಿನ ಕಟ್ಟಡಕ್ಕೆ ಕಬ್ಬಿಣದ ಸಾಮಾನುಗಳನ್ನು ಒದಗಿಸುವುದಾಗಿ ಕಂಟ್ರಾಕ್ಟು ತೆಗೆದುಕೊಂಡಿದಾರೆ. ಅವರು ಕೆಲವು ದಿನಗಳನ್ನು ಜಾಸ್ತಿ ಮಾಡಿಕೊಡಬೇಕೆಂದು ಕೇಳಿದ್ದರು ನ್ಯಾಯವಾಗಿ ಕಂಡುಬರುವ ಜಾಸ್ತಿ ಹಣವನ್ನು ಕೊಡಬಹುದೆಂದು ಮೆಂಬರುಗಳು ಅಭಿಪ್ರಾಯಪಟ್ಟರು—ಒಂದೊಂದು ಬಚ್ಚಲಿಗೆ ಒಂದು ರೂಪಾಯಿಗಿಂತ ಸಾಧಾರಣ ಬಚ್ಚಲು ತೆರಿಗೆಯನ್ನು ಹಾಕಿ ವಸೂಲ್ ಮಾಡಬಹುದೆಂದು ಮ್ಯುನಿಸಿಪಲ್ ಕೌನ್ಸಿಲ್‌ನವರು ಒಪ್ಪಿಕೊಂಡಿರುವುದನ್ನು ಮೆಂಬರುಗಳು ಒಪ್ಪಿ ಸರ್ಕಾರದ ಸ್ಯಾಂಕ್ಷನ್ ಬಗ್ಗೆ ಕಳುಹಿಸತಕ್ಕದೆಂದು ಇತ್ಯರ್ಥವಾಯಿತು—ಕೋಟೆ ಆವರಣದಲ್ಲಿರುವ ಸೋಮೇಶ್ವರ ದೇವಸ್ಥಾನಕ್ಕೆ ಸ್ವಲ್ಪ ನಿವೇಶನವನ್ನು ಸೇರಿಸಿಕೊಡಬೇಕೆಂದೂ, ಅಲ್ಲೇ ಅಮ್ಮನವರ ಗುಡಿ ಕಟ್ಟಿಸುವುದಕ್ಕೂ ಸ್ಥಳ ಮಾಡಿಕೊಡಬೇಕೆಂದೂ ತೀರ್ಮಾನಿಸಲಾಯಿತು.—ಟ್ರಸ್ಟ್ ಬೋರ್ಡಿನಿಂದ ಕಟ್ಟಿಸುವ ಮಾದರಿ ಮನೆಗಳನ್ನು ವಿಕ್ರಯಿಸುವ ವಿಷಯದಲ್ಲಿ ಕೊಂಡುಕೊಳ್ಳತಕ್ಕವರಿಗೆ ಇತರ ಕ್ರಯದ ಜತೆ, ಅರ್ಧ ಕ್ರಯವನ್ನು ಮೊದಲೇ ಪಾವತಿಮಾಡಿ, ಉಳಿದ ಅರ್ಧ ಹಣವನ್ನು ನಾಲ್ಕು ವರುಷಗಳಲ್ಲಿ ತಿಂಗಳು ಬಿಸ್ತಿನ ಪ್ರಕಾರ ಶೇಕಡಾ ವರುಷಕ್ಕೆ 3 ರೂಪಾಯಿ ಬಡ್ಡಿ ಸೇರಿಸಿ ತೀರಿಸತಕ್ಕವರಿಗೆ ಮಾತ್ರ ಮಾರಬೇಕೆಂದು ನಿಬಂಧನೆ ಮಾಡಿದರು.—ಕಳೆದ ಜುಲೈನಿಂದ ಡಿಸೆಂಬರ್ ಆಖೈರುವರೆಗೆ ಟ್ರಸ್ಟ್ ಬೋರ್ಡಿನವರು ಪಟ್ಟಣದ ಒಳಭಾಗದಲ್ಲಿ 136 ನಿವೇಶನಗಳನ್ನೂ, 35 ಸಣ್ಣ ಸಣ್ಣ ನಿವೇಶನಗಳನ್ನೂ ಬಿಕರಿ ಮಾಡಿದ್ದರಿಂದ 8,700 ರೂಪಾಯಿ ಹುಟ್ಟುವಳಿ ಆಗಿದೆ ಎಂದು ಚೇರ್‌ಮನ್‌ರವರು ತಿಳಿಸಿದರು.

ಸೇಂಟ್ ಜಾನ್ ಆಂಬ್ಯುಲೆನ್ಸ್ ಸಂಘ, ಮೈಸೂರು.

ಮೇಲ್ಕಂಡ ಸಂಘದ ಮೈಸೂರು ಶಾಖೆಯ ಗೌರವ ಸೆಕ್ರೆಟರಿಯವರಾದ ಸರ್ದಾರ್ ಎಂ. ಲಕ್ಷ್ಮೀಕಾಂತರಾಜೆ ಅರಸಿನವರು ತಮಗೆ ತಲಪಿರುವ ಚಂದಾ ಹಣಗಳನ್ನು ಈ ಮೂಲಕ ಪ್ರಕಟಿಸಿದ್ದಾರೆ. 16 ನೇ ಚಂದಾ ಪಟ್ಟಿ:— ಮೈಸೂರು ಗುಡ್ ಷೆಫರ್ಡ್ ಕಾನ್ವೆಂಟಿನ ಮಕ್ಕಳು ನಡಿಸಿದ ಸಂತೋಷ ಕೂಟದ ಉತ್ಪತ್ತಿ ರೂ. 388, ನೆಲಮಂಗಲದ ತಾಲ್ಲೂಕ್ ಪ್ರಜೆಗಳು ಅಮಲ್ದಾರ್ರ ಮೂಲಕ ರೂ. 71-10-0, ಎನ್. ಎನ್. ಡಿಸೆಂಬರ್ ಮತ್ತು ಜನವರಿ ಬಾಬತು ರೂ. 30, ಮಿಸ್ ಮೂರ್ ರೂ. 10, ತರೀಕೆರೆ ಪ್ರಜೆಗಳು ಅಮಲ್ದಾರ್ರ ಮೂಲಕ ರೂ. 0-7 0, ಹಿರಿಯೂರು ಪ್ರಜೆಗಳು ಅಮಲ್ದಾರ್ರ ಮೂಲಕ ರೂ. 6-10-0, ಮಿಸ್ ಎಚ್. ಎಂ. ವಿಲ್ಲಿಯರ್ ರೂ. 5, ಮಿಸೆಸ್ ಸ್ಪೆನ್ಸರ್ ರೂ. 5, ಜುಮ್ಲಾ ರೂ. 537-13-0; ಹಿಂದೆ ವಸೂಲಾದ ಬಾಬ ತು ರೂ. 10,927-9-3 ಪೈ. ಜುಮ್ಲಾ ರೂ. 11,445-6 3 ಪೈ. ಇದಲ್ಲದೆ ಮೈಸೂರಿನಲ್ಲಿರುವ ಮಿಸೆಸ್ ರೈಸ್ ಯವರು ನಾಲ್ಕು ಜೊತೆ ಕಂಬಳಿ ಕಾಲು ಚೀಲಗಳನ್ನೂ, ಒಂದು ಕಂಬಳಿ ಪಟ್ಟಿಯನ್ನೂ ಕಳುಹಿಸಿಕೊಟ್ಟಿದ್ದಾರೆ.

ಕೋಆಪರೇಟಿವ್ ಸೊಸೈಟಿಗಳೂ ಸರ್ಕಾರದ ನೌಕರರೂ.

ಪರಸ್ಪರ ಸಹಾಯ ಸಂಘಗಳ ಏಳಿಗೆಯಲ್ಲಿ ಸರ್ಕಾರಿ ಹುದ್ದೇದಾರರು ಎಷ್ಟರಮಟ್ಟಿಗೆ ಪ್ರವರ್ತಿಸಬಹುದು ಎಂಬ ವಿಚಾರದಲ್ಲಿ ಅನೇಕರಿಗೆ ಸಂಶಯ ಉಂಟಾಗಿದ್ದದ್ದರಿಂದ ಗೌರ್ನಮೆಂಟಿನವರು 1915 ನೇ ಇಸವಿ ನವಂಬರು ಪ್ರೊಸೀಡಿಂಗ್ಸ್‌ನಲ್ಲಿ ಅನುಮಾನ ಪರಿಚ್ಛೇದಮಾಡಿ ಈ ಕೆಳಗೆ ಕಂಡ ಹುಕುಂ ಕೊಟ್ಟಿರುತ್ತಾರೆ.—“ಸರ್ಕಾರಿ ನೌಕರರು ತಮ್ಮ ವಿರಾಮಕಾಲದಲ್ಲಿ ನಿಯಮಿತವಾದ ಸರ್ಕಾರಿ ಕೆಲಸಗಳಿಗೆ ಕುಂದಕಬಾರದಂತೆ ತಮ್ಮ ಕೈಲಾದಮಟ್ಟಿಗೆ ಪರಸ್ಪರ ಸಹಾಯ ಸಂಘಗಳ ಕೆಲಸದಲ್ಲಿ ವಿಶೇಷ ಆಸಕ್ತಿಯೊಡನೆ ಪ್ರವರ್ತಿಸಬಹುದು ಕೋಆಪರೇಟಿವ್ ಸೊಸೈಟಿಗಳಲ್ಲಿ ಮೆಂಬರುಗಳಾಗಿ ಷೇರುಗಳನ್ನು ಪಡೆಯಬಹುದು. ಸೊಸೈಟಿಯ ಪಂಚಾಯಿತಿ ಮೆಂಬರುಗಳಾಗಿ ಅಲ್ಲಿನ ಆಡಳಿತಗಳನ್ನು ನಡಿಸಬಹುದು. ಆದರೆ ಅವರು 100 ರೂಪಾಯಿಗಿಂತ ಹೆಚ್ಚು ಸಂಬಳಗಾರರಾಗಿದ್ದರೆ ಗೌರ್ನಮೆಂಟಿನವರ ಮಂಜೂರಾತಿವಿನಾ, ಅದಕ್ಕೆ ಕಮ್ಮಿ ಸಂಬಳಗಾರರಾಗಿರುವಲ್ಲಿ ಇಲಾಖಾ ಮೇಲ್ವಿಚಾರಕರ ಅಪ್ಪಣೆ ವಿನಾ ಸೊಸೈಟಿಯ ಕೆಲಸ ಕಾರ್ಯಗಳನ್ನು ನಡಿಸಿದ್ದಕ್ಕಾಗಿ ಯಾವ ವಿಧವಾದ ಬಹುಮಾನವನ್ನೂ ಹೊಂದಕೂಡದು. ಯಾವ ದರ್ಜೆಯ ಹುದ್ದೇದಾರರೇ ಆಗಲಿ ದೇಶವಾತ್ಸಲ್ಯದಿಂದ ಸೊಸೈಟಿಗಳನ್ನು ಸೇರಿ ಅದರ ಕೆಲಸ ಕಾರ್ಯಗಳಲ್ಲಿ ಆಸಕ್ತಿ ತೋರಿಸಬೇಕೇ ವಿನಹ ಸಂಘಗಳ ಸ್ವಾತಂತ್ರ್ಯಕ್ಕೆ ವಿರೋಧ ಬರುವಂತೆ ತಮ್ಮ ಸರ್ಕಾರಿ ಸ್ಥಾನಬಲವನ್ನು ಸಂಘಗಳ ಕೆಲಸ ಕಾರ್ಯಗಳಲ್ಲಿ ಉಪಯೋಗಿಸಕೂಡದು.” ಈ ಸರ್ಕ್ಯುಲರ್ ಕಾಪಿಯನ್ನು ಆಯಾ ಪಂಚಾಯಿತಿ ಮೆಂಬರುಗಳಿಗೆ ತಿಳಿಯಪಡಿಸಿ ಮತ್ತೊಂದು ಕಾಪಿಯನ್ನು ಸೊಸೈಟಿಯ ಆಫೀಸಿನ ಬಹಿರಂಗವಾದ ಜಾಗದಲ್ಲಿ ಎಲ್ಲರ ತಿಳುವಳಿಕೆ ಬಗ್ಗೆ ಪ್ರಕಟಿಸಬೇಕೆಂದು ಎಲ್ಲಾ ಸೊಸೈಟಿಗಳ ಸೆಕ್ರೆಟರಿಗಳನ್ನು ಈ ಮೂಲಕ ಕೋರಿದೆ.

ಎಂ. ಎ. ನಾರಾಯಣಯ್ಯಂಗಾರ್,

ಮೈಸೂರು ಸೀಮೆಯ ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರ್.

ಒಬ್ಬ ಇಂಜನಿಯರಿಗೆ ಸನ್ಮಾನಮಾಡಿದ್ದು.

ತರೀಕೆರೆ ಟ್ರಾಂವೇ ಇಲಾಖೆಯ ಅ|| ಇಂಜನಿಯರ್ ಮ|| ಆರ್. ತಿಪ್ಪಯ್ಯನವರಿಗೆ ಕೋಲಾರಕ್ಕೆ ವರ್ಗವಾಗಲು ಅವರನ್ನು ಬೀಳ್ಕೊಡುವ ಉದ್ದಿಶ್ಯ ಟ್ರಾಂವೇ ಇಲಾಖೆಯವರೆಲ್ಲರೂ ಸೇರಿ ತಾ. 10 ರಲ್ಲಿ ಅಲ್ಲಿನ ಸಂದಲ್ ಕೋಠಿಯಲ್ಲಿ ಒಂದು ಟೀ ಪಾರ್ಟಿಯನ್ನು ನಡಿಸಿದರು. ಮ|| ತಿಪ್ಪಯ್ಯನವರ ಸ್ಥಾನಕ್ಕೆ ಹೊಸದಾಗಿ ಬಂದಿರುವ ಮ|| ಎ. ಕೆ. ಕಾಟ್ಕರ್ ಯವರೂ, ಸಬ್ ಓವರ್ಸಿಯರೂ, ಎಲ್ಲಾ ಸ್ಟೇಷನ್ ಮಾಸ್ತರುಗಳೇ ಆದಿಯಾಗಿ ಇಲಾಖಾ ಅಲ್ಲದೆ ಸ್ಥಳದ ಅಮಲ್ದಾರ್ರು, ಸಬ್ ರೆಜಿಸ್ಟ್ರಾರ್ರು, ಡಾಕ್ಟರು, ಫಾರೆಸ್ಟ್ ರೇಂಜರು, ಡೆಪ್ಯುಟಿ ರೇಂಜರು, ವಕೀಲರು, ಮತ್ತು ಇತರ ಸಾಹುಕಾರರುಗಳು ಮೊದಲಾಗಿ ಮ|| ತಿಪ್ಪಯ್ಯನವರ ಮಿತ್ರಮಂಡಲಿಯವರು ಸಭೆಯನ್ನು ಅಲಂಕರಿಸಿದ್ದರು, ಮೈಸೂರು ಆಸ್ಥಾನ ಸಂಗೀತ ವಿದ್ವಾಂಸರಾದ ಮ|| ಚಿಕ್ಕರಾಮರಾಯರು ತಮ್ಮ ಮೃದುಮಧುರವಾದ ಸಂಗೀತಾಮೃತದಿಂದ ಸಭಿಕರ ಕರ್ಣಗಳನ್ನು ಆನಂದಪಡಿಸುತ್ತಾ ಇದ್ದರು. ಇವರ ವಿದ್ಯಾಸಾಮರ್ಥ್ಯವು ಅತಿಶಯವಾದದ್ದು. ಸಭೆಗೆಲ್ಲಾ ತಿಂಡಿ ಪದಾರ್ಥಗಳು ಹಂಚಲಾಯಿತು. ಇಲ್ಲಿನ ಅಮಲ್ದಾರ್ ಮ|| ಸಂತಾನಂ ಅಯ್ಯಂಗಾರ್ರು ಅಗ್ರಾಸನರಾಗಲು ಮ|| ತಿಪ್ಪಯ್ಯನವರೂ, ಕಾಟ್ಕರವರೂ ಯೋಗ್ಯಸ್ಥಾನಗಳನ್ನು ಅಲಂಕರಿಸಿದರು. ಮ|| ವೆಂಕಟರಾಮಯ್ಯ ಸಬ್ ಓವರ್ಸಿಯರವರು ಇಲಾಖೆಯವರ ಪರವಾಗಿ ಒಂದು ವಂದನಾ ಪತ್ರಿಕೆಯನ್ನು ಓದಿ, ಮ|| ತಿಪ್ಪಯ್ಯನವರು ಈ ಸಭೆಯಲ್ಲಿ ನಡಿಸಿದ ಕೆಲಸ, ಅವರ ಚಟುವಟಿಕೆ ಮತ್ತು ಸಾಹಸ, ಅಲ್ಲಿಂದಲ್ಲಿ ಇರಿಸಿಕೊಂಡಿದ್ದ ಗೌರವಗಳನ್ನು ತಿಳಿಸಿ ಆಯುರಾರೋಗ್ಯ ಭಾಗ್ಯಗಳನ್ನು ಬಯಸಿದರು. ಮ|| ಗೋಪಾಲಯ್ಯ, ಶ್ರೀಕಂಠಯ್ಯ, ವಕೀಲರೇ ಮೊದಲಾಗಿ ಅನೇಕರು ಮ|| ತಿಪ್ಪಯ್ಯನವರ ಕೆಲಸ, ಗುಣಗಳನ್ನು ವಿವರಿಸಿ ಕೊಂಡಾಡಿದರು. ಕಡೆಯಲ್ಲಿ ಮ|| ತಿಪ್ಪಯ್ಯನವರು ವಿನಯ ಪ್ರೀತಿಯಿಂದ ಸಂದರ್ಭಾನುಸಾರ ಮಾತುಗಳನ್ನು ಆಡಿ ವಂದಿಸಲು, ಸಭಿಕರಿಗೆಲ್ಲಾ ಹಾರ ಗಂಧ ತಾಂಬೂಲಗಳು ಹಂಚಲ್ಪಟ್ಟವು. ಶ್ರೀಮನ್ ಸಾರ್ವಭೌಮರವರಿಗೂ, ನಮ್ಮ ಮಹಾರಾಜರವರಿಗೂ ಆಯುರಾರೋಗ್ಯ ಭಾಗ್ಯಗಳನ್ನು ಬಯಸಿ ಜಯಘೋಷಗಳಿಂದ ಸದರಿ ಸಭೆಯನ್ನು ಬರಖಾಸ್ತು ಮಾಡಲಾಯಿತು. ಮ|| ತಿಪ್ಪಯ್ಯನವರು ತಾ 12 ನೇ ಬುಧವಾರದ ರಾತ್ರಿ ಮೇಲ್ ಗಾಡಿಯಲ್ಲಿ ಇಲಾಖೆಯವರೂ ಮಿತ್ರರುಗಳಿಂದ ಪುರಸ್ಕೃತರಾಗಿ ತೆರಳಿದರು.

ಒಬ್ಬ ಬಾತ್ಮಿದಾರ.

“ಡೇಲಿ ಮೆಮೋರಿಯಲ್ ಹಾಲ್.”

ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಘನವಂತರಾದ ಕರ್ನಲ್ ಸರ್ ಹ್ಯು ಡೇಲಿ, ಕೆ ಸಿ ಐ.ಇ, ಸಿ ಎಸ್ ಐ. ಅವರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಬೆಂಗಳೂರಿನಲ್ಲಿ ಒಂದು ಬಂಗಲೆಯನ್ನು ಕಟ್ಟಿ “ಮಿಥಿಕ್ ಸೊಸೈಟಿ” ಎಂಬ ಸಂಘದವರ ಕಾರ್ಯಾಲಯವನ್ನಾಗಿ ಮಾಡಿಕೊಡಬೇಕೆಂದು ಯೋಚಿಸಲ್ಪಟ್ಟಿದೆ. ಸರ್ ಹ್ಯು ಡೇಲಿಯವರು ಬ್ರಿಟಿಷ್ ರೆಸಿಡೆಂಟರಾಗಿ ದಯಮಾಡಿ ಐದು ವರುಷಗಳ ಮೇಲಾಯಿತು. ಅವರ ವಿನಯದಲ್ಲಿ ಮೈಸೂರು ಸೀಮೆಯ ಪ್ರಜೆಗಳು ಬಹು ವಿಶೇಷವಾದ ಭಕ್ತಿ ಪ್ರೀತಿಗಳನ್ನು ಪಡೆದಿರುವುದು ಜನಜನಿತವಾಗಿದೆ. ಅವರು ಮಿಥಿಕ್ ಸೊಸೈಟಿಗೆ ಸಹಾಯಕರಾಗಿ ನಿಂತು ವಿಶೇಷ ಪ್ರೋತ್ಸಾಹ ಪಡಿಸುತ್ತಿರುವ ಕಾರಣ ಆ ಸೊಸೈಟಿಯ ಕಾರ್ಯಗಳು ಪ್ರಜೆಗಳಲ್ಲಿ ಉತ್ಸಾಹವನ್ನುಂಟುಮಾಡುತ್ತವೆ. ಅವರ ಹೆಸರನ್ನು ಶಾಶ್ವತಪಡಿಸುವಂಥಾ ಕೆಲಸವನ್ನು ಮೈಸೂರು ಸರ್ಕಾರದವರು ಮೆಚ್ಚಿ ಕಟ್ಟಡದ ಫಂಡಿಗೆ 10,000 ರೂಪಾಯಿ ಚಂದಾ ಕೂಡಿಸಿದ ಪಕ್ಷದಲ್ಲಿ ತಾವೂ 10 000 ರೂಪಾಯಿ ಚಂದಾ ಕೊಡುತ್ತೇವೆಂದೂ, ಬೆಂಗಳೂರು ಸಿನೋಟಾಫ್ ರೋಡಿನಲ್ಲಿ ಗವರ್ನ್ಮೆಂಟ್ ಹೈ ಸ್ಕೂಲಿನ ಹಿಂಭಾಗದಲ್ಲಿ ಆ ಕಟ್ಟಡಕ್ಕೆ ಬೇಕಾಗುವಷ್ಟು ನಿವೇಶನವನ್ನೂ ಕೊಡುವುದಾಗಿಯೂ ವಾಗ್ದಾನ ಮಾಡಿದ್ದಾರೆ. ಇದುವರೆಗೆ ಮುಂದೆ ಹೇಳುವಂತೆ ಚಂದಾಗಳು ವಾಗ್ದಾನಮಾಡಲ್ಪಟ್ಟಿವೆ:—ಶ್ರೀಮನ್ ಮಹಾರಾಜರವರು ರೂ. 2,500, ಶ್ರೀಮದ್ಯುವರಾಜರವರು ರೂ. 1,000, ಸರ್ ಎಂ. ವಿಶ್ವೇಶ್ವರಯ್ಯನವರು ರೂ. 600, ಸರ್ದಾರ್ ಎಂ. ಕಾಂತರಾಜೆ ಅರಸಿನವರು ರೂ. 600, ಮಿಥಿಕ್ ಸೊಸೈಟಿಯ ಕಾರ್ಯಗಳಲ್ಲಿ ಪ್ರೀತಿ ಉತ್ಸಾಹಗಳನ್ನು ಪಡೆದಿರುವಂಥಾ ಸ್ತ್ರೀ ಪುರುಷರೂ, ಸರ್ ಹ್ಯು ಡೇಲಿಯವರ ಹೆಸರನ್ನು ನಮ್ಮ ಸಂಸ್ಥಾನದಲ್ಲಿ ಶಾಶ್ವತಪಡಿಸುವುದು ಅವಶ್ಯವೆಂಬುದಾಗಿ ಕುತೂಹಲಪಡತಕ್ಕ ಸಕಲ ಪ್ರಜೆಗಳೂ ಈ ಫಂಡಿಗೆ ಚಂದಾ ಹಣಗಳನ್ನು ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಲ್ಪಟ್ಟಿದೆ. ಈ ಫಂಡಿಗೆ ಬೆಂಗಳೂರು ರೆಸಿಡೆನ್ಸಿ ರೋಡ್ ಕೆಥೀಡ್ರಲ್ ಮ|| ಎ. ಎಂ. ಟಾಬರ್ಡ್ ರವರೂ, ಬೆಂಗಳೂರು ಕಬ್ಬನ್ ಪಾರ್ಕ್ ಮ|| ಡಿ. ಎಂ. ನರಸಿಂಗರಾಯರೂ ಸೆಕ್ರೆಟರಿಗಳಾಗಿರೋಣದರಿಂದ ಚಂದಾ ಹಣಗಳನ್ನು ಇವರಿಬ್ಬರ ಪೈಕಿ ಯಾರಿಗಾದರೂ ಕಳುಹಿಸಬಹುದೆಂದು ಸೂಚಿಸಲ್ಪಟ್ಟಿದೆ

ವರ್ತಕರೂ ರೈಲ್ವೆ ಸ್ಟೇಷನ್‌ಗಳೂ.

ಮೈಸೂರು ಸಂಸ್ಥಾನದಲ್ಲಿ ವರ್ತಕರು ರೈಲಿನ ಮೇಲೆ ವ್ಯಾಪಾರ ಸರಕುಗಳನ್ನು ಇತರ ಕಡೆಗಳಿಂದ ತರಿಸುವರು; ಮತ್ತೂ ಇತರ ಕಡೆಗಳಿಗೆ ರವಾನೆ ಮಾಡುವರು. ಹೀಗೆ ಮಾಡುವುದರಲ್ಲಿ ರೈಲ್ವೆ ಸ್ಟೇಷನ್‌ಗಳೊಳಗೆ ಅಂಥಾ ಪದಾರ್ಥಗಳು ಅನೇಕವಾಗಿ ಕಳುವಾಗುತ್ತವೆ ಈ ವಿಚಾರವನ್ನು ತಿಳಿ ಮಾಡಿಸಿ ಈ ಕಳುವು ನಿಲ್ಲಿಸಬೇಕೆಂದು ವರ್ತಕ ಪ್ರತಿನಿಧಿಗಳು ವರುಷೇ ವರುಷ ನಮ್ಮ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಗವರ್ನ್ಮೆಂಟಿಗೆ ಅರಿಕೆ ಮಾಡಿಕೊಳ್ಳುವರು. ಈ ವರುಷ ದಿವಾನ್‌ರವರು ವರ್ತಕರಿಗೆ ಅಂಥಾ ಕಳುವುಗಳನ್ನು ಕ್ರಮವಾಗಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೂ, ರೈಲ್ವೆ ಇಲಾಖೆಯವರಿಗೂ ತಿಳಿಸುತ್ತಾ ಬರಬೇಕೆಂದೂ, ಅದರಿಂದ ಪ್ರಯೋಜನವಾದೀತೆಂದೂ ಅಪ್ಪಣೆ ಕೊಡಿಸಿದರು. ಸಂಸ್ಥಾನದ ಮೆಯ ವರ್ತಕರು ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ಶ್ರದ್ಧೆವಹಿಸಿ ರಿಪೋರ್ಟ್ ಮಾಡುತ್ತಿದ್ದಾರೆಯೋ ನಮಗೆ ತಿಳಿಯದು. ಆದರೆ ಬೆಂಗಳೂರು ವರ್ತಕಮಂಡಲಿಯವರು ದಿವಾನ್‌ರವರ ಅಪ್ಪಣೆಯಂತೆ ತಮ್ಮ ನಷ್ಟಗಳನ್ನು ಪ್ರಕಟಮಾಡ ಲಾರಂಭಿಸಿರುವುದು ಸಂತೋಷಪ್ರದವಾಗಿದೆ ಹೀಗೆಯೇ ಪ್ರತಿ ಒಂದು ಊರಿನಲ್ಲೂ ಇರುವ ವರ್ತಕರು ಒಂದೊಂದು ಸ್ಥಳೀಯ ಸಂಘವನ್ನು ಮಾಡಿಕೊಂಡು ಬೆಂಗಳೂರು ವ್ಯಾಪಾರಿಗಳ ಮೇಲ್ಪಂಕ್ತಿಯನ್ನು ಅನುಸರಿಸಿ ಕಾರ್ಯನಡಿಸುತ್ತಾ ಬಂದರೆ ರೈಲ್‌ಗಾಡಿಗಳಲ್ಲಾಗುವ ಕಷ್ಟನಷ್ಟಗಳು ಕೊನೆಗಾಣಬಹುದು

ಕಳೆದ ನಾಲ್ಕು ವಾರಗಳಲ್ಲಿ ಬೆಂಗಳೂರು ಸಿಟಿಯ ವರ್ತಕಮಂಡಲಿಯ ಸೆಕ್ರೆಟರಿಯವರು ಅಲ್ಲಿನ ವರ್ತಕರಿಗಾಗಿರುವ ನಷ್ಟಗಳನ್ನು ಕೆಲವು ಮಟ್ಟಿಗೆ ಕೂಡಿಸಿ ಪ್ರಕಟಮಾಡಿದ್ದಾರೆ. ಈ ನಷ್ಟವೆಲ್ಲಾ ಕೆಲವು ವರ್ತಕರಿಗೆ ಮಾತ್ರ ಸಂಭವಿಸಿದ್ದು. ಸಾಮಾನುಗಳನ್ನು ಕಳೆದುಕೊಂಡಿರುವ ವ್ಯಾಪಾರಸ್ಥರೂ ಇತರರೂ ಕ್ರಮವಾಗಿ ಸೆಕ್ರೆಟರಿಯವರಿಗೆ ತಿಳಿಸುತ್ತಾ ಬಂದರೆ ಈ ಕಳುವಿನ ಮಹತ್ವವೆಷ್ಟಕ್ಕೆ ಬಂದಿದೆ ಎಂಬ ಸಂಗತಿಯು ಸಕಲಪ್ರಜೆಗಳಿಗೂ, ಸರ್ಕಾರಕ್ಕೂ, ರೈಲ್ವೆ ಅಧಿಕಾರಿಗಳಿಗೂ ಗೋಚರವಾಗುತ್ತದೆ. ಇದರಿಂದ ಪರಿಹಾರವೂ ಸುಲಭವಾದೀತು ನಾಲ್ಕು ವಾರಗಳಲ್ಲಿ ಕಳುವಾಗಿರುವ ಕೆಲವು ಸರಕುಗಳೂ, ಅವುಗಳ ಕ್ರಯವೂ ಇಲ್ಲಿ ತಿಳಿಸಲ್ಪಟ್ಟಿದೆ

ದಿನಸಿ		ಕ್ರಯ	ದಿನಸಿ		ಕ್ರಯ
ಉಪ್ಪು	ರೂ.	99- 8-0	ರಾಕ್ ಸಾಲ್ಟ್	ರೂ.	13- 8-0
ಅಕ್ಕಿ	,,	267- 2-0	ಬೆಲ್ಲ	,,	20-14-0
ಸೋಜಿ	,,	67-10-0	ಮೆಣಸು	,,	29- 4-0
ಸಕ್ಕರೆ	,,	171- 4-0	ಗಸಗಸೆ	,,	16- 0-0
ತುಪ್ಪ	,,	21- 0-0	ಧನಿಯ	,,	51- 8 0
ಬಾದಾಮಿ	,,	30- 0-0	ದೀಪದ್ರಾಕ್ಷಿ	,,	11- 0-0
ಹಲಸಂದೆ	,,	7- 4-0	ಉದ್ದಿನ ಬೇಳೆ	,,	4- 4-0
ಕೊಬರಿ ಎಣ್ಣೆ	,,	23- 4-0	ಬೇಳೆ	,,	7- 0-0
ಹೆಸರು	,,	5- 7-0	ಮೆಣಸಿನಕಾಯಿ	,,	21- 0-0
ಬಾರುಗಲು	,,	1- 5-0	ಜೀರಿಗೆ	,,	58- 0-0
ಮಿಠಾಯಿ	,,	26- 8-0	ಕಡ್ಲೆ ಬೇಳೆ	,,	16- 0-0
ಅಮೃತಾಂಜನ	,,	2-10-0	ಹಸಿಕಡ್ಲೆ	,,	32- 8-0
ದಾಲಚಿನ್ನಿ	,,	7- 8-0	ದೀಪದಕಡ್ಡಿ	,,	25-10-0
ಬೂಸ	,,	1- 8-0	ಗೋಡಂಬಿ	,,	16-12-0

ಜುಮ್ಲಾ ರೂಪಾಯಿ 1,059-2-0.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ದೇವನಹಳ್ಳಿ ವಿದ್ಯಮಾನಗಳು.

ಅಯ್ಯಾ,—ದೇವನಹಳ್ಳಿ ಟವನ್‌ನಲ್ಲಿ ಮ್ಯುನಿಸಿಪಲ್ ಲಾಂದ್ರಗಳ ವಿಷಯವಾಗಿ ಹಿಂದೆ ಸೂಚಿಸಿ ಇದ್ದೆ. ತಹಲ್ ನೋಡಿದಾಗ್ಯೂ ಮೇಲ್ಪಟ್ಟ ಅಧಿಕಾರಿಗಳು ಸಗಾಕ್ಕೆ ತಾಪರೇಖೂ, ಇದಕ್ಕೆ ತಕ್ಕ ಏರ್ಪಾಡು ಮಾಡದೇಲಿರುವುದು ನೋಡಿದರೆ ತುಂಬಾ ಅನ್ಯಾಯವಾಗಿದೆ. ಒಂದು ತಿಂಗಳಿಗೆ 21 ದಿವಸಗಳು ಅಂಟಿಸುವ ರೂಲ್ಸು ಇದೆ 6೬ ಲಾಂದ್ರಗಳಿವೆ. ಇದರಲ್ಲಿ ಪ್ರತಿ ದಿನವೂ 10 ಲಾಂದ್ರಗಳು ಕೂಡಾ ಅಂಟಿಸುವದೇ ಇಲ್ಲ. ಟವನ್‌ನಲ್ಲಿ ರಸ್ತೆಗಳ ವಿಷಯವಂತು ಹೇಳತೀರದು. ಬೈಸಿಕಲ್‌ಗಳು ಮತ್ತು ಜಟ್ಕಾಗಳು ತಿರುಗಾಡುವದಕ್ಕೆ ತುಂಬಾ ತೊಂದರೆಯಾಗಿದೆ. ಇದಕ್ಕೆ ಮ್ಯುನಿಸಿಪಲ್ ಮೆಂಬರುಗಳೂ ಸ್ಯಾನಿಟರಿ ಇನ್ಸ್‌ಪೆಕ್ಟರೂ ಸಿಗಾಕ್ಕೆ ತಂದು ಜಾಗ್ರತೆ ಸರಿಪಡಿಸ್ಯಾರೆಂದು ನಂಬಿ ಇದ್ದೇನೆ. ಹಾಲಿ ಪೋಸ್ಟು ಮಾಸ್ಟರಾಗಿರುವವರು ಪ್ರಜೆಗಳ ವಿಷಯದಲ್ಲಿ ತುಂಬಾ ಶ್ರದ್ಧೆಯಿಂದಲೂ ಬಹಳ ಮೆಹನತ್ತಿನಿಂದಲೂ ಕೆಲಸಗಳು ನಡಿಸುತ್ತಾರೆಂದು ಕೇಳುತ್ತೇನೆ. ಸರ್ಕಾರದವರು ಎಷ್ಟು ಖಂಡಿತವಾದ ರೂಲ್ಸು ಜಾರಿಗೆ ತಂದು ಇದ್ದಾಗ್ಯೂ ಸಂತೇಲಿ ಹಳೇ ತೂಕದ ಬಟ್ಟುಗಳಲ್ಲಿ ತೂಗುವುದು ಮುಕ್ತಾಯವಾಗಲು ವರ್ತಕರು ಬಿಟ್ಟಿಲ್ಲ. ಪೊಲೀಸ್ ಆಫೀಸರು ಇದಕ್ಕೆ ತಕ್ಕ ನಿಗಾ ಇಟ್ಟು ಸಂತೇಲಿ ಬಂದೋಬಸ್ತು ಮಾಡಿಸ್ಯಾರೆಂದು ನಂಬಿ ಇದ್ದೇನೆ. ಕೋಆಪರೇಟಿವ್ ಸೊಸೈಟಿಯ ಕೋಟೆಯಿಂದ ಪಬ್ಲಿಕ್ ಪೇಟೆಯಲ್ಲಿ ಬಂದಾಗಿನಿಂದ ಕೆಲಸ ಕಾರ್ಯಗಳು ಮಹುವರ್ಜಿಯಿಂದ ನಡೆಯುತ್ತಲೂ, ಮುಂದೆ ಇನ್ನೂ ಅಭಿವೃದ್ಧಿಸ್ಥಿತಿಗೆ ಬರುವಂತೆಯೂ ಇರುವುದು ನೋಡಿದರೆ ತುಂಬಾ ಸಂತೋಷವಾಗಿದೆ. ಈ ಟವನ್‌ನಲ್ಲಿ ಶಿವಾಚಾರಸ್ಥರ ಎರಡು ಕಟ್ಟೆಗಳಲ್ಲಿ ಬರೀ ಎಣ್ಣೆ ಪದಾರ್ಥಗಳಿಂದ ನಿಬಿಡೀಕೃತವಾಗಿದೆ ಇದನ್ನು ಕಮಿಟಿಯಿಂದ ಬಂದೋಬಸ್ತು ಪಡಿಸ್ಯಾರೆಂದು ನಂಬಿ ಇದ್ದೇನೆ. ಇದರಿಂದ ದೊಡ್ಡವರಿಗೂ ಮಕ್ಕಳಿಗೂ ತುಂಬಾ ವಿರೋಧಗಳಾಗಿವೆ. ಇವನ್ನು ಬಂದೋಬಸ್ತು ಪಡಿಸಬೇಕು.

ಪ್ರತ್ಯಕ್ಷದರ್ಶಿ.

ಕಡೂರು ವಿದ್ಯಮಾನಗಳು.

ಅಯ್ಯಾ,—ಇಲ್ಲಿ ಕಳ್ಳತನಗಳು ಈಗ ತಿಂಗಳಿಂದ ಜಾಸ್ತಿಯಾಗಿವೆ ಪೋಲೀಸಿನವರ ಉಸ್ತುವಾರಿ ಸರಿಯಾಗಿಲ್ಲ. ರಾತ್ರಿ ಹೊತ್ತು ಬೀಟು ಸರಿಯಾಗಿ ನೋಡುವ ಹಾಗೆ ತೋರುವದಿಲ್ಲ. ಕಳೆದ ವಾರ ಸೊಸೈಟಿ ಸೆಕ್ರೆಟರಿ ಮ|| ಪರಮೇಶ್ವರಯ್ಯನವರ ಮನೆಯಲ್ಲಿ 200 ರೂಪಾಯಿ ವರಿಗೂ ಕಳ್ಳತನವಾಯಿತು. ಅಷ್ಟರಲ್ಲಿ ಅವರಿಗೆ ಎಚ್ಚರಿಕೆ ಆದ್ದರಿಂದ ಬಾಕಿ ಜಾಸ್ತಿ ಹೋಗಲು ಅವಕಾಶವಾಗಲಿಲ್ಲ. ಇಲ್ಲಿನ ಪೋಸ್ಟ್ ಮಾಸ್ಟರು ಭಾಜಿಕಾಗದಗಳಿಗೆ ಪಡ್ಡುಯವರಿಂದ ಒಂದು ಆಣೆ, ಎರಡು ಆಣೆ ಜಾಸ್ತಿಯಾಗಿ ತೆಗೆದುಕೊಳ್ಳುವದಾಗಿಯೂ, ಇದಕ್ಕಾಗಿ ಈ ಊರಿನ ಕೆಲವರು ಪೋಸ್ಟ್ ಆಫೀಸ್ ಅಧಿಕಾರಿಗಳಿಗೂ, ರೆವಿನ್ಯೂ ಅಧಿಕಾರಿಗಳಿಗೂ ಅರ್ಜಿ ಹಾಕಿರುವದಾಗಿಯೂ ವರ್ತಮಾನವಿದೆ. ಅಧಿಕಾರಿಗಳು ಈ ವಿಚಾರದಲ್ಲಿ ನ್ಯಾಯದ ವಿಚಾರಣೆ ಮಾಡುವರೆಂದು ನಂಬಿದೆ.—ಹೊಸದಾಗಿ ಈ ಊರಿಗೆ ಒಬ್ಬ ಡಾಕ್ಟರು ಬೆಂಗಳೂರಿನಿಂದ ಬಂದಿರುವರು. ಇವರು ಈ ಊರಿನ ಜನಗಳ ಪ್ರೀತಿಪಾತ್ರರಾಗಿ ವಿಶ್ವಾಸವನ್ನೂ ನಂಬಿಕೆಯನ್ನೂ ಉಂಟುಮಾಡಿ ವಿಶೇಷ ಸಂಪಾದನೆ ಮೇಲೆ ದೃಷ್ಟಿಯಿಡದೆ ಕೀರ್ತಿ ಸಂಪಾದಿಸಬೇಕಾಗಿದೆ. ಈ ಊರಿನವರು ಬೇರೆ ಆಸ್ಪತ್ರೆ ಡಾಕ್ಟರಿಂದ ಔಷಧ ತರಿಸಿಕೊಳ್ಳುತ್ತಿರುವದು ಆಶ್ಚರ್ಯ.—ನೆನ್ನೆ ಸಂತೆಯಲ್ಲಿ ಒಬ್ಬ ರೈಲ್ವೆ ಪೋರ್ಟರಿಗೆ ಒಬ್ಬ ಗಂಧಮಾರುವ ಸಾಬಿಯು 1 ರೂಪಾಯಿ ಚಿಲ್ಲರೆ ಕೊಟ್ಟಾಗ 3 ಕಾಸಿಗೆ ಮತ್ತು 1 ಕಾಸಿಗೆ ಕನ್ನಡಿ ರ... ಹಾಕಿದ 8 ಆಣೆ ಬೆಳ್ಳಿ 4 ಆಣೆ ಬೆಳ್ಳಿ ಎಂದು ಕೊಟ್ಟು ಮೋಸಪಡಿಸಿದ... ಪೋಲೀಸಿಗೆ ಒಪ್ಪಿಸಿದ್ದಾರೆ.—ಸಂತೆ ಸೇರುವ ಪಕ್ಕದಲ್ಲಿ ನೀರಿನಕಾಲುವೆ ಕೊಳ್ಳೆ... ಬಹಳ ಅಸಹ್ಯವಾಗಿ ಜನಗಳ ಆರೋಗ್ಯಕ್ಕೆ ಕೆಡಕಾಗಿರುತ್ತೆ. ಇಲ್ಲಿನ ಸ್ಯಾನಿ... ಇನ್ಸ್‌ಪೆಕ್ಟರ ನಿಗಾ ಬೀಳಬೇಕಾಗಿದೆ.—ಕೋಟೆಯಲ್ಲಿ ಹಾವಿನ ಹಾವಳಿ ಬಹ... ಜನಗಳು ಗಾಬರಿಪಡುತ್ತಿರುವರು ಹಾವು ಹಿಡಿದವರಿಗೆ ಇನಾಂ ಕೊಡುವ... ಏರ್ಪಾಟು ಮಾಡಿದರೆ ತುಂಬಾ ಅನುಕೂಲವುಂಟು.—ಇಲ್ಲಿನ ಇಂಜನಿಯರ... ಇಲಾಖೆ ಸೂಪ್ರವೈಜರ್ ಮ|| ವಾಡುರ್ನಾರ್ಟ್ ಸಾಹೇಬರು 3 ತಿಂಗಳು ಖಾಯಿಲೆ ರಜದ ಮೇಲೆ ಹೋಗುವವರಾಗಿದ್ದಾರೆ. ಇವರು ಇಲ್ಲಿ ಬಹಳ ಒಳ್ಳೇ ಹೆಸರು ಪಡೆ... ಇರುತ್ತಾರೆ. ಬೇಗ ಖಾಯಿಲೆ ವಾಸಿಯಾಗಿ ಇವರು ವಾಪಸು ಬರುವರು ಎಂ... ನಿರೀಕ್ಷಣೆಯಲ್ಲಿದೆ.

ನಿಮ್ಮ ವಾಚಕ.

ಶಿವಮೊಗ್ಗಾ ವಿದ್ಯಾರ್ಥಿ ಮರಣದ ವಿಚಾರ.—ಜವಾಬು.

ಅಯ್ಯಾ,—ತಮ್ಮ ತಾ. 6 ನೇ ಪತ್ರಿಕೆಯಲ್ಲಿ “ಶಿವಮೊಗ್ಗಾ ವಿದ್ಯಾರ್ಥಿ ಮರಣದ ವಿಚಾರ” ವೆಂಬ ಶಿರೋಲೇಖನವುಳ್ಳ ಬಾತ್ಮಿಯ ವಿಷಯದಲ್ಲಿ ಈ ಕೆಳಗೆ ಕಂಡ ವಾಸ್ತವವಾದ ಸಂಗತಿಗಳನ್ನು ತಮ್ಮ ಘನವಾದ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೋರುತ್ತೇನೆ. ಕಡೂರು ಪುಟ್ಟಸ್ವಾಮಯ್ಯನೆಂಬ ವಿದ್ಯಾರ್ಥಿಯು ಪ್ಲೇಗ್ ಗಲಾಟೆಗಾಗಿ ಶಿವಮೊಗ್ಗೆಯನ್ನು ಬಿಟ್ಟು ತನ್ನ ಊರು ಕಡೆ ಹೋಗಿದ್ದು ಕಳೆದ ಡಿಸೆಂಬರ್ ತಾ. 13 ನೇ ಸಾಯಂಕಾಲ ಶಿವಮೊಗ್ಗೆಗೆ ಬಂದು 14 ನೇ ತಾ. ಮಧ್ಯರಾತ್ರಿಯ ವರೆಗೂ ಸ್ವಸ್ಥವಾಗಿಯೇ ಇದ್ದು, ಆಗ ತನಗೆ ಕತ್ತು ಮತ್ತು ಎದೆಗಳಲ್ಲಿ ಸ್ವಲ್ಪ ನೋವೆಂದು ತನ್ನ ಸಂಗಡಿಗರೊಡನೆ ಹೇಳಿದನು. ಈ ವಿದ್ಯಾರ್ಥಿಯ ಅಸ್ವಸ್ಥತೆಯ ವಿಚಾರವು ಹೆಡ್ ಮಾಸ್ಟರ ಕಿವಿಗೆ ಬಿದ್ದ ಕೂಡಲೇ ಡಾಕ್ಟರ್ ಕೃಷ್ಣಮೂರ್ತಿರಾಯರನ್ನು ರೋಗಿಯ ಉಪಚಾರಕ್ಕಾಗಿ ಕಳುಹಿಸಿ, ಸ್ಕೂಲ್ ಪಂಡಿತರೂ ಮತ್ತು ರೋಗಿಯ ದೂರಬಂಧುವೂ ಆದ ಮ|| ಸುಬ್ಬಶಾಸ್ತ್ರಿಗಳನ್ನು ಕರೆದುಕೊಂಡು ಹೋಮಿಗೆ ಬಂದು ರೋಗಿಯ ಉಪಚಾರಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡುತ್ತಲಿದ್ದರು. ಮ|| ಕೃಷ್ಣಮೂರ್ತಿರಾಯರು ವಿದ್ಯಾರ್ಥಿಯನ್ನು ಪರೀಕ್ಷಿಸಿ ಆತನ ಸಮೀಪ ಬಂಧುಗಳನ್ನು ಕರೆಯಿಸುವುದು ಒಳ್ಳೆಯದೆಂದು ಸೂಚಿಸಿದುದರಿಂದ ಶಿವಮೊಗ್ಗೆಯಲ್ಲೇ ಇರುವ ರೋಗಿಯ ಮಾವಂದಿರ ಸಹೋದರರಾದ ಮ|| ಸೀತಾರಾಮಶಾಸ್ತ್ರಿಗಳೆಂಬವರನ್ನು ಕರೆಯಿಸಿದರು. 15 ನೇ ತಾ. ಪ್ರಾತಃಕಾಲದಿಂದ ಹಿಡಿದು ಕಡೆಯ ವರೆಗೂ ಹೆಡ್ ಮಾಸ್ಟರೂ, ಮ್ಯಾನೇಜರೂ, ಶಾಸ್ತ್ರಿಗಳೂ, ಹೋಮಿನ ವಿದ್ಯಾರ್ಥಿಗಳೂ ರೋಗಿಯನ್ನು ನೋಡಿಕೊಳ್ಳುತ್ತಲೇ ಇದ್ದದ್ದಲ್ಲದೆ ಮಧ್ಯಾಹ್ನ 12 ಗಂಟೆಗೆ ಡಾಕ್ಟರು ಪಾಲೀಯವರೂ ಮತ್ತೊಬ್ಬ ಡಾಕ್ಟರೂ ಬಂದು ರೋಗಿಗೆ ತಮ್ಮ ಕೈಯಿಂದಲೇ ಔಷಧವನ್ನು ಕುಡಿಸಿದರು. ಮೃತ ವಿದ್ಯಾರ್ಥಿಯು ಹೆಂಡತಿಯೂ ಇತರ ಸಮೀಪ ಬಂಧುಗಳೂ ಬೇರೂರು ಕಡೂರುಗಳಲ್ಲಿಯೇ ಇರುವುದರಿಂದ ಅವರ ಅನುಮತಿ ಇಲ್ಲದೆಯೂ ಶವವನ್ನು ಸಾಗಿಸಲು ಬ್ರಾಹ್ಮಣರು ಸಿಕ್ಕದೆ ಇದ್ದುದರಿಂದಲೂ ಶವವನ್ನು ಸಂಸ್ಕಾರಮಾಡುವುದು ಉಚಿತವಾಗಿ ತೋರಲಿಲ್ಲ. ಸ್ಟೂಡೆಂಟ್ಸ್ ಹೋಮಿನಲ್ಲಿ ಮ್ಯಾನೇಜರೂ ಅಡಿಗೆಯವರೂ ರಾತ್ರಿಯೆಲ್ಲಾ ಕಾಯ್ದುಕೊಂಡು ಇದ್ದರು. ಮೃತ ವಿದ್ಯಾರ್ಥಿಯ ಊರಿಗೆ ವರ್ತಮಾನ ಕಳುಹಿಸಿದ್ದರೂ ಬಂಧುಗಳಲ್ಲಿ ಒಬ್ಬರೂ ಮಾರನೇ ದಿನ ಬೆಳಗಿನ ವರೆಗೂ ಕಾದಿದ್ದರೂ ಬಾರದೆಹೋದುದರಿಂದ ಶವವನ್ನು ಬ್ರಾಹ್ಮಣರ ಮೂಲಕ ಸಾಗಿಸಿ ಶಾಸ್ತ್ರೋಕ್ತವಾಗಿ ಮೃತನ ಬಂಧುವಾದ ಮ|| ಸೀತಾರಾಮಶಾಸ್ತ್ರಿಗಳ ಕೈಯಿಂದ ಸಂಸ್ಕಾರಮಾಡಿಸಲಾಯಿತು. ವಾಸ್ತವಾಂಶವು ಹೀಗಿರುವುದು.

ಎ. ಎನ್.

ಕೂಲಿಗಿತ್ತಿಯರ ಲಕ್ಷಣ.

ಅಯ್ಯಾ,—ವೈದ್ಯ ಇಲಾಖೆಯಲ್ಲಿ ಸೂಲಗಿತ್ತಿ ಕೆಲಸವೆಂಬ ಶಾಖೆಯುಂಟು. ಇದು ಸ್ತ್ರೀ ವರ್ಗಕ್ಕೆ ಮತ್ತೆಷ್ಟು ಶ್ಲಾಘನೀಯವಾದ ಧರ್ಮದ ಏರ್ಪಾಡಾಗಿದೆ. ಈ ಏರ್ಪಾಡಿನ ವಿಷಯ ಎಷ್ಟಾಗಿ ಕೊಂಡಾಡಿದರೂ ಸಾಲದು ಈ ಕೆಲಸ... ಸೇರತಕ್ಕ ಸ್ತ್ರೀಯರ ವಿಷಯ ಸರ್ಕಾರದವರು ಅಂದರೆ ವೈದ್ಯ ಇಲಾಖೆಯವರು ನೆಟ್ಟ ನಿಗಾ ಕೊಡತಕ್ಕದ್ದು ಧರ್ಮ ಸರ್ವಸಾಧಾರಣವಾಗಿ ಹೇಳಬೇಕಾದರೆ ಪತಿ ಧರ್ಮಕ್ಕೆ ಒಳಪಟ್ಟ ಉತ್ತಮ ಸ್ತ್ರೀಯರು ಸೇರುವುದು ಅಪರೂಪ. ರಾಜರು ಮೊದಲುಗೊಂಡು ಗುಡಿಸಿಲಿಯವರೆಗೂ ಕನಿಷ್ಠ ಕೋಮುಗಳಲ್ಲಿ ಸಹ ಸ್ತ್ರೀಯರುಗಳು ವಿಂಗಡವಾಗದಂತೆ ಒಂದಾಗಿ ಕೂಡಿಬರುತ್ತಿರುತ್ತಾರೆ ಆದರೆ ಈ ಸೂಲಗಿತ್ತಿ ಇಲಾಖೆಯಲ್ಲಿ ಕೆಲವು ನೌಕರರು ದೇವರು ಕೂಡಿಸಿದ್ದನ್ನು ಅಗಲಿಸುವದಕ್ಕೆ ಪ್ರಯತ್ನಿಸುವವರಾಗಿರುತ್ತಾರೆಂದು ಹೇಳಲು ವಿಷಾದಿಸಬೇಕಾಗಿದೆ. ಮನು ಹಿಂದೂವೇದದ ಧರ್ಮಕ್ಕನುಸಾರವಾಗಿ ಸ್ತ್ರೀಯರಲ್ಲಿ ಸೂಳೆಯರು, ದಾಸಿ ಸ್ತ್ರೀಯರು, ಜಾತಿಭ್ರಷ್ಟ ಸ್ತ್ರೀಯರು ವಿನಹ ಎಲ್ಲಾ ಸ್ತ್ರೀಯರೂ ತಮ್ಮ ಬಂಧುವರ್ಗಗಳ ಕಟ್ಟಿಗೆ ಒಳಪಟ್ಟು ಇರುತ್ತಾರೆಯೇ ಹೊರತು ಯುರೋಪು ದೇಶದ ಸ್ತ್ರೀಯರಂತೆ ಪೂರ್ಣ ಸ್ವತಂತ್ರ್ಯವುಳ್ಳವರಾಗಿ ಜೀವಿಸುತ್ತಿರುವುದಿಲ್ಲವೆಂಬುದನ್ನು ಸಕಲ ಹಿಂದೂ ಅಧಿಕಾರಿಗಳೂ ತಿಳಿದವರಾಗಿರುತ್ತಾರೆ. ಹೀಗಿರುವಲ್ಲಿ ವೈದ್ಯ ಇಲಾಖೆಯವರು ಸ್ತ್ರೀಯರನ್ನು ವೈದ್ಯ ಇಲಾಖೆಗೆ ಸೇರಿಸಿಕೊಳ್ಳುವಾಗ್ಗೆ ವಿದ್ಯಾವಂತರಾಗಿರುವದಕ್ಕೆ ಬದಲಾಗಿ ಗಂಡ, ಬಂಧು, ಕುಲ, ಆರೋಗ್ಯ, ಗುಣ, ನಡತೆ, ಅಂಗಲೋಪ, ಯೋಗ್ಯತೆ ಮುಂತಾದವುಗಳು ಯಾವವೂ ತಮ್ಮ ರಿಪೋರ್ಟ್ ಅರ್ಜಿಗಳಲ್ಲಿ ಹೊರಬಡದಂತೆ ಇದ್ದು ಬರೆದುಕೊಟ್ಟ ಈ ಘನವಾದ ಉದ್ಯೋಗದಲ್ಲಿ ನುಗ್ಗಲು ದಾರಿ ಮಾಡಿಕೊಡುವ ನೌಕರನು ಯಾರೇ ಆಗಲಿ ರಾಜ... ಧರ್ಮ ಕಾರ್ಯಕ್ಕೆ ಅಪಕೀರ್ತಿ ತರುವವನೂ ಸಜ್ಜನರ ಕೃತ್ಯಗಳಿಗೆ ಕಂಟಕನೂ, ಪ್ರಜಾಹಿತಕ್ಕೆ ದ್ರೋಹಿ ಎಂದು ಸಕಲರೂ ತಿಳಿಯತಕ್ಕದ್ದಾಗಿದೆ. ಇಂಥವನನ್ನು ಅಧಿಕಾರಿಗಳೂ ಪ್ರಜೆಗಳೂ ಯೋಗ್ಯನೆಂದು ಭಾವಿಸಬಹುದೇ? ಅಧಿಕಾರಿಗಳು ಇಂಥಾ ಕಂಟಕರುಗಳನ್ನು ಪರಿಶೋಧಿಸಿ ಅಂಗೀಕರಿಸತಕ್ಕದ್ದು ಯೋಗ್ಯವಲ್ಲವೇ? ಪತಿ ಧರ್ಮಕ್ಕೆ ಒಳಪಟ್ಟು ಕೆಲವು ಕಾಲದ ನಂತರ ದುರಾಲೋಚ... ಪೀಡಿತರಾದ ಸ್ತ್ರೀಯರು ಬುದ್ಧಿ ವಿಕಲ್ಪಹೊಂದಿ ತಮ್ಮ ಇಚ್ಛಾಪೂರ್ತಿಗೆ ಸೂಲಗಿತ್ತಿ ಕೆಲಸ ಅನುಕೂಲವಾದದ್ದೆಂದು ಭಾವಿಸಿ ನುಗ್ಗಲು ಯತ್ನಿಸುತ್ತಾರೆಂಬುದು ಸಹಜ. ಇಂಥವರಿಗೆ ಶಿಫಾರಸು ಮಾಡಿ ಮುಂಜೂರು ಮಾಡಿಕೊಡುವವರು ಅಪಕೀರ್ತಿಗೆ ಕಾರಣರೇ ಹೊರತು ಕೀರ್ತಿಗೆ ಕಾರಣರಲ್ಲ. ಪತಿಯೇ ದೈವವೆಂದು ಭಾವಿಸಿ ಪೂಜಿಸುವ ಸ್ತ್ರೀಯರು ಸಹ ಕೆಟ್ಟುಹೋಗುವುದಕ್ಕೆ ಕಾರಣವಾದೀತು. ಸಹವಾಸದಿಂದ ಸನ್ಯಾಸಿ ಕೆಟ್ಟನೆಂಬ ಗಾದೆ ಎಲ್ಲರಿಗೂ ಗೊತ್ತಿರಷ್ಟೆ. ಈ ಇಲಾಖೆಯಲ್ಲಿ ಹೆಂಗಸರಿಗೆ ಅನುಕೂಲವಾದ ಅನೇಕ ಜ... ಬಾಬಿನ ಕೆಲಸಗಳಿರುತ್ತವೆ. ಈ ಕೆಲಸಗಳಲ್ಲಿ ಸಹ ಸಭ್ಯರಾದ ಸ್ತ್ರೀಯರು ... ವದು ಅಪರೂಪ. ಅಂಥವರಿಗೆ ಶಿಫಾರಸು ಸಿಕ್ಕುವದೇ ಕಷ್ಟ. ಯೂರೋಪ್ ... ಪಾದ್ರಿಗಳು ದುರ್ನಡತೆಯುಳ್ಳ ಸ್ತ್ರೀಯರಿಗಾಗಲಿ, ಪುರುಷರಿಗಾಗಲಿ ... ಮಾಡುತ್ತಾ ಬಂದಿರುವದು ಬಹಳ ಅಪರೂಪವೆಂದು ಹೇಳಲು ... ಸಂತೋಷಪಡತಕ್ಕದ್ದಾಗಿದೆ. ಮೇಲ್ಕಂಡ ಲೋಪಗಳು ವೈದ್ಯ ... ಅಲ್ಲಲ್ಲಿ ತಲೆದೋರುತ್ತಾ, ರಾಜಕೀರ್ತಿಗೂ ಪ್ರಜಾ ನೆಮ್ಮದಿಗೂ ಭಂಗ ...

...ವುದರಿಂದ ಸಕ್ಕ ಪ್ರಭುಗಳು ಈ ತೊಂದರೆಗಳನ್ನು ಹೋಗಲಾಡಿಸಲು ...ವರೆಂದು ನಂಬಿ ಹಾರೈಸಲ್ಪಡ್ತಾಗಿದೆ.

ನಮ್ಮ ಕುಮುಟೂರು ವಾಚಕ.

ಅಮಲ್ದಾರರುಗಳ ವಿಚಾರ.

ಅಯ್ಯಾ,—ತಾವು ಕಳೆದ ಡಿಸೆಂಬರ್ 16 ತಾ. ತಮ್ಮ ಪತ್ರಿಕೆಯಲ್ಲಿ ...ರ ವಿಚಾರವಾಗಿ ಒಂದು ಪ್ರಬಂಧವನ್ನು ರಚಿಸಿರುವುದೂ, ಇದರ ... "ಹಿತೈಷಿ" ಎಂಬುವರು 23 ನೇ ತಾ ಪತ್ರಿಕೆಯಲ್ಲಿಯೂ, "ಚಂದಾ..." ಎಂಬುವರು 30 ನೇ ತಾ. ಪತ್ರಿಕೆಯಲ್ಲೂ ವ್ಯಾಖ್ಯಾನಗಳನ್ನು ಬರೆದಿರು...ತ್ತಾರೆ. ಈಗ ನಾನು ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡು...ತ್ತೇನೆ. ಏನೆಂದರೆ, ತುಮಕೂರು ಡಿಸ್ಟ್ರಿಕ್ಟು ತಿಪಟೂರು ತಾಲೂಕು ಕಿಬ್ಬನ...ಹಳ್ಳಿ ಹೋಬಳಿ ...ದುಂಡ ಎಂಬ ಒಂದು ಗ್ರಾಮವಿದೆ. ಇದು ಬಹಳ ಒತ್ತಾಗಿರುವ ...ದಲೂ, ಜನಬಾಹುಳ್ಯದಿಂದಲೂ ಕಿಷ್ಕಿಂದ ಗಾಳಿ ಬೆಳಕುಗಳಿಗೆ ... ಅವಕಾಶವಿಲ್ಲದೆ, ಬಚ್ಚಲುಗಳ ರೊಚ್ಚಿನ ದುರ್ಗಂಧವುಳ್ಳುದಾಗಿ ಸದಾ ...ಕ್ಕೆ ಆಕರವಾಗಿತ್ತು. ಆ ಗ್ರಾಮನಿವಾಸಿಗಳು ಈ ಅನಾರೋಗ್ಯ...ವನ್ನು ಸ್ವತಃ ಅರಿತು ಅವರಲ್ಲಿ ಕೆಲವರು ಆ ಗ್ರಾಮದ ಮುಂದಿರುವ ಒಬ್ಬ ...ರನ ಬಾಕಿ ಜಮೀನಿನಲ್ಲಿ ಕೆಲ ಕೆಲವು ಭಾಗಗಳನ್ನು ಕೊಂಡು, ಸರ್ಕಾರದ ... ಲೈಸೆನ್ಸ್ ಪಡೆದು ಅಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸಮಾಡುತ್ತಾ ...ಆರೋಗ್ಯಭಾಗ್ಯವಂತರಾದರು. ಇದನ್ನು ನೋಡಿ ಬೇರೆ ಕೆಲವು ರೈತರು ಇಟ್ಟಿರುವ ...ನ ಕೆಲವು ನಿವೇಶನಗಳನ್ನು ಕೊಂಡು, ನಿಷ್ಟ ಸಾಮಾನುಗಳನ್ನೂ ...ಕೊಂಡು ಅಲ್ಲಿನ ಮನೆಗಳನ್ನು ಕಟ್ಟಿಕೊಳ್ಳಲು ಇಲ್ಲಿಗೆ ಸುಮಾರು ...ಸಗಳ ಕೆಳಗೆ ತಾಲೂಕು ಅಮಲ್ದಾರ್ರಿಗೆ ಲೈಸೆನ್ಸು ಬಗ್ಗೆ ಅರ್ಜಿ ...ಕೊಟ್ಟು ಸುಮಾರು 6 ತಿಂಗಳು ನಿರೀಕ್ಷಿಸಿದಾಗ್ಯೂ ಲೈಸೆನ್ಸು ಬರಲಿಲ್ಲ. ... ಅವರು ಸಾಮಾನುಗಳೆಲ್ಲಾ ಕೆಟ್ಟುಹೋಗುತ್ತಾ ಬರುವುದನ್ನು ತಿಳಿದು ಈ ... ರಿಮೈಂಡರ್ ಅರ್ಜಿಗಳನ್ನು ಬರೆದುಕೊಂಡು, ಮತ್ತೆ 6 ತಿಂಗಳು ...ಸಿದಾಗ್ಯೂ ಲೈಸೆನ್ಸು ಕೊಡಲೇ ಇಲ್ಲ. ಆ ಮೇಲೆ ಆ ರೈತರು ರೂಬರೂ ... ಹೋಗಿ ಅಮಲ್ದಾರರ ಎದುರಿನಲ್ಲಿ ಈ ವಿಷಯವಾಗಿ ಮೊರೆ ಇಟ್ಟು...ದ್ದಕ್ಕೆ ಇವರಿಗೆ ಅಮಲ್ದಾರರು ಲೈಸೆನ್ಸ್ ಕೊಡುವುದಕ್ಕಾಗುವುದಿಲ್ಲ ..., ಹಿಂದೆ ಲೈಸೆನ್ಸ್ ಪಡೆದು ಕಟ್ಟಲ್ಪಟ್ಟಿರುವ ಮನೆಗಳನ್ನು ಸಹ ...ಬೇಕಾಗುತ್ತದೆಂದೂ ಗದರಿಸಿ ಕಳುಹಿಸಿದರಂತೆ. ಬಳಿಕ ಆ ರೈತರು ಹೆದರದೆ ... ಕೆಲವು ರೈತರಿಗೆ ಅಲ್ಲಿ ಮನೆ ಕಟ್ಟಿಕೊಳ್ಳಲು ಕೊಟ್ಟಿದ್ದ ಲೈಸೆನ್ಸ್‌ಗಳ ...ಯೂ, ಆ ಪ್ರಕಾರವೇ ತಮಗೂ ಲೈಸೆನ್ಸ್ ಕೊಡಬೇಕೆಂತಲೂ, ಇಲ್ಲದ ... ಹಾಗೆ ಕೊಡುವುದಕ್ಕಾಗದೆ ಇರುವ ಕಾರಣವನ್ನು ನಮೂದಿಸಿ ಹಿಂಬರಹ ...ಬೇಕೆಂತಲೂ ಪುನಃ ಅರ್ಜಿಗಳನ್ನು ಬರೆದುಕೊಂಡು ತಿರಿಗಿ ಅಮಲ್ದಾರರಿಗೆ ... ನಿರೀಕ್ಷಿಸಿದರೂ ಲೈಸೆನ್ಸ್ ಅಥವಾ ಹಿಂಬರಹ ಕೊಡಲಿಲ್ಲ. ಇಲ್ಲಿಗೆ ... ಒಂದು ತಿಂಗಳಲ್ಲಿ ಸಮ್ಮತ್ ಶೇಕದಾರರು ಆ ಗ್ರಾಮಕ್ಕೆ ಬಂದು ...ಯನ್ನು ಕುರಿತು ಏನೋ ಹೇಳಿದರು. ಕೂಡಲೇ ಕೆಲವು ರೈತರು ... ಸಿದ್ಧರಾದರು. ಆಗ ನಾನು ಅಂಥಾದ್ದಕ್ಕೆ ಅವಕಾಶ ಕೊಡಬೇಡಿ..., ಈ ವಿಷಯವಾಗಿ ಮೇಲ್ಪಟ್ಟ ಕೋರ್ಟುಗಳಲ್ಲಿ ವ್ಯವಹರಿಸಬಹುದು ... ಅವರನ್ನು ಧೈರ್ಯವುಳ್ಳುವರನ್ನಾಗಿ ಪ್ರೋತ್ಸಾಹಿಸಿರುತ್ತೇನೆ. ಈಗ ಪ್ರಜಾ...ಪಕರಾದ ನಮ್ಮ ದಿವಾನ್ ಬಹದೂರ್ ಸಾಹೇಬರವರೂ, ಸಪ್ಲೈ ... ನಮ್ಮ ಡೆಪ್ಯುಟಿ ಕಮಿಷನರ್‌ರವರೂ ಡಿಟೋ ಗ್ರಾಮವಾಸಿಗಳ ಪ್ರೀತಿ...ಮಂದಿ, ಯಾವಾಗ ಲೈಸೆನ್ಸು ಪಡೆದು ಆ ಗ್ರಾಮದ ಹೊರಗೆ ಮನೆ ...ದ್ದಾರೆ? ತದನಂತರ ಎಷ್ಟು ಮಂದಿ, ಯಾವಾಗ ಅಲ್ಲಿ ಮನೆ ಕಟ್ಟಲು ಲೈಸೆನ್ಸು ಕೊಡಬೇಕೆಂದು ಅರ್ಜಿ ಕೊಟ್ಟರು? ಈ ಬಗ್ಗೆ ರಿಮೈಂ...ರ್ ಅರ್ಜಿಗಳನ್ನು ಎಷ್ಟು ಮಂದಿ, ಯಾವಾಗ ಕೊಟ್ಟರು? ಇವರಿಗೆ ಲೈಸೆನ್ಸ್ ... ಇವರಿಗೆ ಹೆದರಿಸುತ್ತಾ ಇರುವುದಕ್ಕೆ ಕಾರಣವೇನು? ಈ ಬಗ್ಗೆ ...ಚಾರಣೆಯನ್ನು ನಡೆಸಿದರೆ ಇದರ ಮೂಲತತ್ವವು ಗೊತ್ತಾಗುವುದು, ...ಸಲಾಗಿರುವ 16, 23, 30 ನೇ ತಾ ಗಳ ಅಮಲ್ದಾರರುಗಳ ವಿಚಾರ...ವಾಕ್ಯಗಳು ಸಾರ್ಥಕವಾಗಿ ಪರಿಣಮಿಸುವುವೆಂದು ಆಶಿಸಿಕೊಂಡಿದ್ದೇನೆ.

ತಾ 6-1-16. ಟಿ. ಹುಚ್ಚಪ್ಪ, ದುಂಡದ ಗ್ರಾಮವಾಸಿ.

ಅಯ್ಯಾ,—ತಾ 30 ನೇ ವೃತ್ತಾಂತ ಪತ್ರಿಕೆಯನ್ನು ನೋಡಿದೆನು. ಅದ...ಅಮಲ್ದಾರರು ಸತ್ಯಸಂಧರಲ್ಲವೆಂದೂ, ಅವರಿಗೆ ಮ್ಯಾಜಿಸ್ಟ್ರೇಟ್ ಪವರ್ ...ಹೆಡ್ ಆಫ್ ಪೋಲೀಸ್ ಎಂಬ ಅಧಿಕಾರವಿರುವುದರಿಂದ ಈ ಬಲದಿಂದ ...ತೊಂದರೆ ಕೊಡುತ್ತಿದ್ದರೆಂದೂ ಒಬ್ಬ ಬಾತ್ಮೀದಾರರು ನಮೂದಿಸಿರು... ಆದರೆ ಅಮಲ್ದಾರರೆಲ್ಲರೂ ಇದೇ ರೀತಿ ಇದ್ದರೆ ಈ ದೇಶ ಈ ವರಿವಿಗೆ ...ಉರ್ಜಿತಸ್ಥಿತಿಗೆ ಬರುತ್ತಲೇ ಇರಲಿಲ್ಲ. ಚಿತ್ರದುರ್ಗದಲ್ಲಿ ಲಂಚ ತೆಗೆ...ದ ಬಗ್ಗೆ ರುಜುವಾತು ಕೊಟ್ಟಾಗ್ಯೂ ಏನೂ ಆಗಲಿಲ್ಲವಾಗಿಯೂ, ರುಜು...ವಾಡಿಕೊಟ್ಟ ಪ್ರಜೆಗೆ ಅಮಲ್ದಾರರೂ ಪೋಲೀಸಿನವರೂ ಅನೇಕ ಕಷ್ಟಗ...ಕೊಡುತ್ತಿರುವರಾಗಿಯೂ ನಮೂದಿಸಿರುವುದಕ್ಕೆ ವಿಷಾದಿಸುತ್ತೇನೆ. ಈ ...ಕ್ಕೆ ಹೊಲ ಮನೆ ಹೆಂಡರು ಮಕ್ಕಳು ಇಲ್ಲದ ಒಬ್ಬ ವೀರಾಚಾರಿ ...ಬಂದು ವಾಸವಾಗಿರುತ್ತಾರೆ. ಇವರು ಹಿಂದೆ ಇದ್ದ ಇನ್‌ಸ್ಪೆಕ್ಟರು ...ಕೊಂಡರೆಂದು ಅರ್ಜಿ ಬರೆದುಕೊಂಡದ್ದರ ಮೇಲೆ ಅದನ್ನು ಡೆಪ್ಯು...ಟಿ ಸಾಹೇಬರು ವಿಚಾರಮಾಡಲಾಗಿ ಕೇಸು ರುಜುವಾತು ಆಗದೆ ...ಗೆ ನದರಿ ರಿಕಾರ್ಡು ರವಾನೆ ಮಾಡಿದಂತೆ ತಿಳಿಯಬರುತ್ತೆ. ಹಾಲಿ ... ಕೇಸಿನಲ್ಲಿ ಸುಳ್ಳುಸಾಕ್ಷಿ ಹೇಳಿದರೆಂದು ಪೋಲೀಸಿನವರು ಪ್ರಾಸಿ...ಗೆ ಆದರು ಕೇಳುತ್ತಾರೆ. ಈ ವಿಚಾರದ ಕೇಸು ಚಿತ್ರದುರ್ಗದ ...ರ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಾ ಇದೆ. ಈ ಮೊದಲೇ ...ಯೋಜನೆ ಬರವಣಿಗೆ ನೋಡಿದರೆ ಮೇಲ್ಕಂಡಂತೆ ಕಷ್ಟಮಾಡಿ...ವರಿಂದಲೇ ಇದು ನಡೆದಿರುವಂತೆ ಊಹಿಸುತ್ತೇನೆ. ನಮ್ಮ ಗ್ರಾಮದಲ್ಲಿ ... ದುಷ್ಟರಿದ್ದು ಕೊಂಡು ಬಹಳ ಪುಂಡಾಟಗಳನ್ನು ಮಾಡುತ್ತಿದ್ದರು. ...ಅಮಲ್ದಾರ್ರು ಬಂದ ಲಾಗಾಯಿತು ಈ ದುಷ್ಟರನ್ನೆಲ್ಲಾ ಶಿಕ್ಷಿಸುತ್ತಾ ...ಗಿ ದಯೆದಾಕ್ಷಿಣ್ಯವಿಲ್ಲದೆ ಕೆಲಸಮಾಡುತ್ತಾ ಮರ್ಯಾದಸ್ಥರಿಗೆ ಗೌರವ ...ವನಿಸುತ್ತಿದ್ದಾರೆ. ಇವರು ನಮ್ಮ ಗ್ರಾಮಕ್ಕೆ ರೈಲು ಬರುವ ವಿಚಾರದ ... ಗ್ರಾಮಾಭಿವೃದ್ಧಿ ಮುಂತಾದವುಗಳ ವಿಷಯದಲ್ಲಿಯೂ ವಹಿಸಿರುವ ಮುತು... ವರ್ಣಿಸಲು ಅಸಾಧ್ಯವಾಗಿರುತ್ತೆ. ಇಂಥಾ ಸದ್ಗುಣಗಳಿಂದ ಕೂಡಿದ ...ನ್ನು ದುಷ್ಕೃತ್ಯವಾಡಿ ಶಿಕ್ಷೆ ಹೊಂದಿದ ಅಲ್ಪಮನುಷ್ಯರು ಹೊಟ್ಟೇ ಕಿಚ್ಚಿ...ನಿಂದ ಮಾಡುವುದನ್ನು ಯಾರೂ ಅಂಗೀಕರಿಸಬಾರದೆಂಬುದೇ ನನ್ನ .... ಇವರು ಇನ್ನೂ ಅನೇಕ ಕಾಲದಲ್ಲಿ ನಮ್ಮ ಗ್ರಾಮಕ್ಕೆ ಜಾಗ್ರತೆ ...ಕೊಳ್ಳುತ್ತಿರುವುದರಲ್ಲಿಯೂ, ದುಷ್ಟರನ್ನೆಲ್ಲಾ ನಿಗ್ರಹಿಸಿ ಜನಗಳಿಗೆ ಅನುಕೂಲ ...ಮಾಡುತ್ತಿರುವುದರಲ್ಲಿಯೂ ಸ್ವಲ್ಪವೂ ಸಂದೇಹವಿಲ್ಲ. ಇವರನ್ನೇ ಇನ್ನು ... ಇಲ್ಲಿ ಇಟ್ಟುಕೊಡಬೇಕಾಗಿ ಕೇಳಿಕೊಳ್ಳುವುದರಲ್ಲಿ ಈ ತಾಲೂಕಿನ ... ಪ್ರಜೆಗಳು ಕುತೂಹಲವುಳ್ಳವರಾಗಿರುತ್ತಾರೆಂದು ಹೇಳುತ್ತೇನೆ.

ಚಂದಾದಾರ್.

ತಾಲ್ಲೋಕು ವರ್ತಮಾನಗಳು.

...—ದಾವಣಗೆರೆ ತಾಲ್ಲೋಕು ಕೊಳಗದಲ್ಲಿ ಶ್ರೀಕೊಲಕೇಶ್ವರ ಸ್ವಾಮಿ ...ದಿಂದ ಒಂದು ಸ್ಟೋರನ್ನು ಸ್ಥಾಪಿಸಿದರೆ ಈ ಪುರವಾಸಿಗಳಿಗೆ ...ಕೊಂಬ ಮ|| ಚಾವಡಿ ಗಣೇಶರಾಯರು ಸ್ಥಳೀಯ ಮಹಾಜನ ...ಸ್ತ್ರೀಗಳು, ಮ|| ಕೆಸವೆ ಶ್ಯಾನುಭೋಗ್ ಮಂಜಪ್ಪಯ್ಯನವರಿಗೆ ಸದರಿ ಸ್ಟೋರನ್ನು ಸ್ಥಾಪಿಸುವದಕ್ಕೂ, ಅಭಿವೃದ್ಧಿ ಪಡಿಸುವದಕ್ಕೂ ಕೂಡ ಅಗ್ರಾಸನವನ್ನು ವಹಿಸಿದರು. ಮ|| ಮಂಜಪ್ಪಯ್ಯನವರಾದರೋ ಸ್ಟೋರಿನ ಅಭಿವೃದ್ಧಿ ವಿಷಯದಲ್ಲಿ ತುಂಬಾ ಉತ್ಸಾಹಶಾಲಿಗಳಾಗಿ ಸ್ಥಳೀಯ ಮಹನೀಯರುಗಳೊಂದಿಗೆ ತಾ. 7ನೇ ಶುಕ್ರವಾರ ಬೆಳಗ್ಗೆ ಸ್ಥಾಪಿಸಿದರು. ಈ ಕಾರ್ಯವಾದ ಬಳಿಕ ಸ್ಟೋರಿನ ಅಭಿವೃದ್ಧಿ ವಿಷಯದಲ್ಲೂ, ಜನಗಳಿಗೆ ಇದರಿಂದ ಉಂಟಾಗುವ ಉಪಯೋಜನದ ವಿಷಯದಲ್ಲೂ ಸಹ ಮ|| ವೆಂಕಟಸುಬ್ಬಾಜೋಯಿಸರು ಬಹಳ ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಆ ನಂತರ ಸಭೆಯವರು ಗಂಧ ಪುಷ್ಪ ತಾಂಬೂಲಾದಿಗಳಿಂದ ಸಂತೋಷಪಟ್ಟರು. ಸಾರ್ವಜನೋಪಕಾರಕವಾದ ಈ ಸ್ಟೋರನ್ನು ನಮ್ಮ ಸರ್ಕಾರದವರು ಜಾಗ್ರತೆ ರಿಜಿಸ್ಟರು ಮಾಡಿಕೊಟ್ಟು ಅದು ಶಾಶ್ವತವಾಗಿ ನಡೆಯುವಂತೆ ಮಾಡುತ್ತಾರೆಂತ ನಿರೀಕ್ಷಿಸುತ್ತಿದೇವೆ.

ತರೀಕೆರೆ.—ಎರಡು ತಿಂಗಳಿಂದ ಹವಾ ಕೆಟ್ಟು ಆರೋಗ್ಯವಿರುವದಿಲ್ಲ. ಹದಿನೈದು ದಿನಗಳಿಂದೀಚೆಗೆ ಕುರುಬ, ಅಗಸ, ಉಪ್ಪಾರ, ಬ್ರಾಹ್ಮಣ ಶ್ರೇಣಿಗಳಲ್ಲಿ ಇಲಿಗಳು ಸಾಯುವುದೂ, ಜನರು ಮನೆಯಿಂದ ಮನೆಗೆ ಅಲೆದಾಡುತ್ತಿರುವದೂ ಜಾಸ್ತಿಯಾಗಿ ಈಗಿನ ವರಿಗೆ 8-10 ಪ್ಲೇಗ್ ಮರಣಗಳಾದವು. ಕೆಲವರು ಊರು ಮನೆಗಳನ್ನು ಬಿಡಬೇಕಾದೀತೆಂಬ ಉದ್ದೇಶ್ಯ ಕ್ಯಾಂಪುಗಳನ್ನು ಸಿದ್ಧಪಡಿಸಿರುವರು. ಹಲವರು ಯತ್ನವಿಲ್ಲದೆಯೋ, ಉದಾಸೀನದಿಂದಲೋ ಕಟಿಬದ್ಧರಾಗಿರುವರು. ಡಾಕ್ಟರ್ ರಾಮಚಂದ್ರರಾಯರು ಆಸ್ಪತ್ರೆಯಲ್ಲಿ ಕೆಲವರಿಗೆ ಪ್ಲೇಗ್ ಸಿರಮು ಹಾಕಿದರು. ಅಲ್ಲದೆ ಪ್ರಜೆಗಳನ್ನೂ ಪ್ರೋತ್ಸಾಹಪಡಿಸುತ್ತಿದಾರೆ. ಜನರು ಮಾತ್ರ ಇನ್ನೂ ತಾಮಸಗುಣದಲ್ಲಿದಾರೆ. ನೆನ್ನೆ ಮೊನ್ನೆಯಿಂದ ಹೊಸ ರೋಗಿಗಳು ಇಲ್ಲವೆಂಬುವದರಿಂದಲೂ, ಇಲ್ಲಿಂದೀಚೆಗೆ ಸಮಾಧಾನ ಸ್ಥಿತಿಗೆ ಬಂದೀತೆಂಬ ನಿರೀಕ್ಷೆ ಇರುತ್ತೆ. ಸಂತಾಪಿಸತಕ್ಕ ವಿಷಯಗಳೇನೆಂದರೆ ಇಲ್ಲಿನ ಮ|| ಛತ್ರಸಿಂಗರಾಯರ ಅಳಿಯಂದಿರು ಸದರಿ ರೋಗದಿಂದ ಕಾಲವಾದಾಗ ಕುಲಜನರ ಸಹಾಯ ದೊರೆಯದೆ ಶವವನ್ನು ಮಧ್ಯಾಹ್ನಾನಂತರ ಗಾಡಿಯಲ್ಲಿ ಸಾಗಿಸಬೇಕಾಯ್ತು. ಇದಾದ ಮರುದಿನ ಒಬ್ಬ ಬೇವರ್ಸಿ ಮನುಷ್ಯನು ಕಾಫಿ, ದೋಸೆ ತಿನ್ನಲು ಬಂದು ಫಕ್ಕನೆ ಸೊಕ್ಕಿ ಬಿದ್ದುಬಿಟ್ಟನು. ನಿಂತು ನೋಡತಕ್ಕವರೇ ಹೊರತು ಮುಟ್ಟಿ ನೋಡಿ ಗತಿಯಾದ ಸ್ಥಿತಿ ಮಲಗಿಸುವವರೇ ಇಲ್ಲ. ಬಹಳ ಹೊತ್ತಿನ ಮೇಲೆ ಅಮಲ್ದಾರ್ರು, ಡಾಕ್ಟರು ಬಂದರು. ಆದರೇನು, ಬಡ ಮನುಷ್ಯನು ಹೋಟ್ಲಿಯಿಂದ ಸಂಜೆ ವರಿಗೂ ಅನುಪಾನವಿಲ್ಲದೆ ಸಂಕಟಪಟ್ಟು ಸತ್ತೇ ಹೋದನು. ಆಸ್ಪತ್ರೆಗೆ 15-20 ಗಜ ದೂರದಲ್ಲಿದ್ದನು. ಅಲ್ಲಿ ಯಾವ ಚಿಕಿತ್ಸೆಯೂ ದೊರೆಯಲಿಲ್ಲ.—ಕೆಲವು ದಿನಗಳ ಹಿಂದೆ ಕಳ್ಳರು ಸಂತೆ ಗಾಡಿಗಳನ್ನು ತಡೆದು ಹೊಡೆದರೆಂತಲೂ, ವಕೀಲ್ ಮ|| ವೆಂಕಟರಾಮಯ್ಯನವರ ಮನೆಗೆ ಕನ್ನ ಹಾಕಿದರೆಂತಲೂ, ಪತ್ತೆ ಹರಡೋದಿನಲ್ಲಿದ್ದಾರೆಂತಲೂ ಗೊತ್ತಾಗುತ್ತೆ.

ಇಂಡಿಯಾ ದೇಶದ ವೃತ್ತಾಂತಗಳು.

ಯುದ್ಧದ ರಿಲೀಫ್ ಫಂಡಿಗೆ ಬೊಂಬಾಯಿ ಅಧಿಪತ್ಯದೊಳಗೆ 40 ಲಕ್ಷವೂ 80 ಸಾವಿರ ರೂಪಾಯಿ ಚಂದಾ ವಸೂಲಾಗಿರುವುದು.

ಕೋಸಿಟ್ ಎಂಬ ಹಡಗಿನಲ್ಲಿ 750 ಮಂದಿ ಹಿಂದೂಸ್ಥಾನದ ಮುಸಲ್ಮಾನ ಯಾತ್ರಾರ್ಥಿಗಳು ಮಕ್ಕೆಯಿಂದ ಕಳೆದ ವಾರ ಬೊಂಬಾಯಿಗೆ ವಾಪಸು ಬಂದಿದಾರೆ.

ಬೊಂಬಾಯಿ ಪಟ್ಟಣದಲ್ಲಿ ಜೀವಾಂಜ ಸೇಟರ ಹತ್ತಿ ಗಟ್ಟಾ ಕಾರ್ಖಾನೆಯಲ್ಲಿ ಕಳೆದ ಬುಧವಾರ ಸಾಯಂಕಾಲ ಬೆಂಕಿಹುಟ್ಟಿ ಬಹಳ ಹತ್ತಿಯೂ, ಕಟ್ಟಡವೂ ಹಾಳಾದವು. ವರ್ತಕರಿಗೆ ಸುಮಾರು 50,000 ರೂಪಾಯಿ ನಷ್ಟವಾಗಿದೆ.

ಅಲ್ಲಯನ್ಸ್ ಬ್ಯಾಂಕಿನ ಲಾಹೋರ್ ಶಾಖೆಯ ಮ್ಯಾನೇಜರಾಗಿದ್ದ ಮಿ|| ಪ್ರೀಸ್ಟ್ಲೀ ಎಂಬಾತನನ್ನು ಯಾರೋ ಕೊಂದು ಹಾಕಿದರು. ಪತ್ತೆ ಮಾಡಿದವರಿಗೆ 1,000 ರೂಪಾಯಿ ಬಹುಮಾನ ಕೊಡುತ್ತೇವೆಂದು ಪೋಲೀಸಿನವರು ಪ್ರಕಟ ಮಾಡಿದಾರೆ.

ಕೊಚ್ಚಿ ಸಂಸ್ಥಾನದ ಮಹಾರಾಜರಾದ ಸರ್ ರಾಮವರ್ಮರವರು ಟ್ರಾವಂಕೂರ್ ಪಟ್ಟಣಕ್ಕೆ ದಯಮಾಡಿ ಪ್ರೈವೇಟು ಕಾರ್ಯಗಳನ್ನು ನಡಿಸುತ್ತಿದಾರೆ. ಅಲ್ಲೂ ಮಹಾಯುವಕರಲ್ಲೂ ಪ್ರಜೆಗಳು ಉತ್ಸವದಿಂದ ಅವರನ್ನು ಎದುರುಗೊಂಡು ಸತ್ಕಾರ ಮಾಡಿದರು.

ಕಲ್ಕತ್ತೆ ಪಟ್ಟಣದಲ್ಲಿ ಆಲ್ಫ್ರೆಡ್ ಗಾಂಗೆ ಎಂಬುವನು ತನ್ನ ಬಳಿ ಇದ್ದ ಮಾಸೂರ್ ಪಿಸ್ತೂಲನ್ನು ಲೈಸೆನ್ಸ್‌ದಾರನಲ್ಲದ ಇನ್ನೊಬ್ಬನಿಗೆ ಕೊಟ್ಟಿದ್ದಕ್ಕಾಗಿ 70 ವರುಷದ ಗಾಂಗೆಗೆ ಮ್ಯಾಜಿಸ್ಟ್ರೇಟರು ಮೂರು ತಿಂಗಳ ಸಾದಾ ಸಜಾ ವಿಧಿಸಿದರು.

ಬೊಂಬಾಯಿ ಪೋಸ್ಟ್ ಆಫೀಸಿನಲ್ಲಿ 39,000 ರೂಪಾಯಿ ಕಳುವುಮಾಡಿ ಸಿಕ್ಕಿಬಿದ್ದ ಕ್ಯಾಷಿಯರ್ ಕಾವಸ್‌ಜಿ ನವರೋಜಿ ಎಂಬ ನೌಕರನಿಗೆ 9 ತಿಂಗಳ ಕಠಿಣ ಸಜಾ, 1,000 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು. ಕಳುವಾದ ಹಣವೆಲ್ಲಾ ಸಿಕ್ಕಿರುತ್ತದೆ.

ನಾಗಪುರದಲ್ಲಿ ಅನೇಕ ಐಶ್ವರ್ಯವಂತರಿಗೆ ದುಷ್ಟರು ಹೆಸರಿಲ್ಲದ ಕಾಗದಗಳನ್ನು ಬರೆದು ಹಣ ಕೊಡಬೇಕೆಂದೂ, ಇಲ್ಲವಾದರೆ ಫಲವನ್ನು ಅನುಭವಿಸುವದಕ್ಕೆ ಸಿದ್ಧವಾಗಿರಬೇಕೆಂದೂ ಗಾಬರಿ ಹುಟ್ಟಿಸಲಾರಂಭವಾಗಿದೆ. ಕೆಲವು ಕಡೆಗಳಲ್ಲಿ ಕಳ್ಳತನಗಳೂ ನಡೆದವು.

ಕಳೆದ ತಾ. 8 ಕ್ಕೆ ಅಖೈರಾದ ವಾರದಲ್ಲಿ ಹಿಂದುಸ್ಥಾನದೊಳಗೆ 7,624 ಜನರಿಗೆ ಪ್ಲೇಗ್ ತಗಲಿತು ; 5,777 ಜನರು ಆ ರೋಗದಲ್ಲಿ ಕಾಲವಾದರು. ಮರಣಗಳ ಹಂಚಿಕೆ—ಬೊಂಬಾಯಿ ಅಧಿಪತ್ಯ ಮತ್ತು ಸಿಂಧುದೇಶ 2,022, ಸಂಯುಕ್ತ ಅಧಿಪತ್ಯಗಳು 1,630, ಮಧ್ಯಪ್ರಾಂತ್ಯಗಳು 688, ಮೈಸೂರು ಸಂಸ್ಥಾನ 241, ಹೈದರಾಬಾದ್ 571.

ಆಫ್ಘಾನಿಸ್ಥಾನದಲ್ಲಿ ಎಂದಿಗಿಂತಲೂ ಈ ಸಲ ಚಳಿ ಬಹಳ ಹೆಚ್ಚಾಗಿದೆ. ಅಮೀರರು ಆರೋಗ್ಯವಾಗಿದಾರೆ. ವಾಯುವ್ಯ ಸರಹದ್ದಿನಲ್ಲಿ ಮೊದಲಿಗಿಂತ ಈಗ ಪ್ರಶಾಂತಿಯು ಚೆನ್ನಾಗಿದೆ. ಎಲ್ಲಿ ವಿನಾ ಬಾಧೆ ಹಾವಳಿ ಮಾಡಿದ ದರೋಡೆಕೋರರನ್ನು ಬ್ರಿಟಿಷ್ ಸರ್ಕಾರದವರು ಚೆನ್ನಾಗಿ ಶಿಕ್ಷೆಮಾಡಿ ಬುದ್ಧಿ ಕಲಿಸಿದ್ದರಿಂದ ಈಚೆಗೆ ಅವರ ಕುತ್ಸಿತಕೃತ್ಯಗಳೇನೂ ನಡೆಯುಲಿಲ್ಲ.

ಸಚನ ಲಾಲನೆಂಬುವನು ಬರ್ಮಾ ಅಧಿಪತ್ಯದಲ್ಲಿರುವ ಬ್ರಿಟಿಷ್ ಪಿರಂಗಿ ಸೈನ್ಯದಲ್ಲಿರುವ ದೇಶೀಯ ಕುದುರೆದಾರರಿಗೂ ಸಿಪಾಯಿಗಳಿಗೂ ದಂಗೆ ಏಳುವಂತೆ ಚಿತಾವಣೆ ಮಾಡಿದಾಗ್ಯೂ ಅವರು ತಮ್ಮ ನಿಷ್ಕಲ್ಮಷದ ರಾಜಭಕ್ತಿಗೆ ಕುಂದಕವನ್ನು ತಂದುಕೊಳ್ಳಲಿಲ್ಲ. ಸರ್ಕಾರದವರು ಆ ಪಿತೂರಿಕೋರನನ್ನು ಹಿಡಿದು ದರ್ಯಾಪ್ತಿ ಮಾಡಿ ಅವನಿಗೆ ಮರಣ ದಂಡನೆಯನ್ನು ವಿಧಿಸಿರುತ್ತಾರೆ.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಪತ್ಯಗಳ ಬ್ಯಾಂಕುಗಳಿಗೆ ಡಿಸೆಂಬರ್ ತಾ. 31 ರ ವರಿಗೆ ಜಮೆಯಾಗಿ ಬಂದಿರುವ ಚಂದಾ ಹಣ ಎಷ್ಟೆಂದರೆ :—

ಸಿಮ್ಲಾ ಅಲ್ಲಯನ್ಸ್ ಬ್ಯಾಂಕಿಗೆ	ರೂ.	45,76,391-10-7
ಬಂಗಾಳಾ ಬ್ಯಾಂಕಿಗೆ	,,	35,62,639-15-3
ಬೊಂಬಾಯಿ ಬ್ಯಾಂಕಿಗೆ	,,	8,28,417- 3-5
ಮದರಾಸ್ ಬ್ಯಾಂಕಿಗೆ	,,	6,68 569- 8-3
ಜುಮ್ಲಾ ರೂಪಾಯಿ		96,35,838- 5-6

ಕಲ್ಕತ್ತಾ ಪಟ್ಟಣದಲ್ಲಿ ಅನೇಕ ಐಶ್ವರ್ಯವಂತರಿಗೆ ಅವರ ಮನೆಗಳನ್ನು ನುಗ್ಗಿ ಆಸ್ತಿಯನ್ನೆಲ್ಲಾ ಲೂಟಿ ಮಾಡುತ್ತೇವೆಂದು ದುರಾತ್ಮರು ಕಾಗದಗಳನ್ನು ಬರೆದು ಹಾಕುತ್ತಿದಾರೆ. ಇದುವರೆಗೆ ಇಂಥಾ ಕಾಗದ ತಲುಪಿದ ಯಾವ ಮನೆಯಲ್ಲೂ ಕಳುವೇನೂ ಆಗಲಿಲ್ಲ. ಆದರೆ ಅಂಥಾ ಪ್ರಜೆಗಳು ಪ್ರೈವೇಟ್ ಪಹರೆ ... ರುವ ಸೈನಿಕರನ್ನು ಸಂಬಳ ಕೊಟ್ಟು ತಮ್ಮ ಮನೆಗಳಲ್ಲಿ ಪಹರೆಗೆ ನೇಮಿಸಿಕೊಂಡಿದಾರೆ.

ಬೊಂಬಾಯಿ ಸಾಂಡ್‌ಹರ್ಸ್ಟ್ ಬೀದಿಯಲ್ಲಿ ಅಲ್ಲಿನ ಮಾರ್ವಾಡಿ ಮಹಾಜನರು ಸೇರಿ ತಮ್ಮ ಸಂಗಡದ ಬಾಲಕರಿಗೆ ವಿದ್ಯೆ ಕಲಿಸುವುದಕ್ಕೋಸ್ಕರ ಒಂದು ದೊಡ್ಡ ಸ್ಕೂಲನ್ನು ಕಟ್ಟಿಸಿರುತ್ತಾರೆ. ಅದು ಮೂರು ಅಂತಸ್ತಿನ ಕಟ್ಟಡ ; 500 ಬಾಲಕರು ಓದುವುದಕ್ಕೆ ಅನುಕೂಲವಾಗಿದೆ. ಈ ಕಟ್ಟಡವನ್ನು ಗವರ್ನರವರು ಕಳೆದ ವಾರ ಪ್ರತಿಷ್ಠೆಮಾಡಿ, ಆ ಜನಗಳ ದೂರದೃಷ್ಟಿಯನ್ನು ಕೊಂಡಾಡಿದರು.

ರಾವಲ್‌ಪಿಂಡಿ ಪಟ್ಟಣದ ಸೆಂಟ್ರಲ್ ಜೈಲಿನಲ್ಲಿ ಒಬ್ಬ ಜವಾನನ ದಸ್ತರ ಸಿಡಿಮದ್ದಿನ ಗುಂಡು ಮಾಡುವ ಪದಾರ್ಥಗಳೆಲ್ಲಾ ಸಿಕ್ಕಿದವು. ಅಧಿಕಾರಿಗಳು ಅವನನ್ನು ಆಲಸದಿಂದ ವಜಾಮಾಡಿ, ಕೆಲವು ಬಂದೀವಾನರನ್ನು ಹೊರಕ್ಕೆ ಬಿಡವಂತೆ ಬಂಧನದಲ್ಲಿ ಹಾಕಿದರು. ಸಿಡಿಮದ್ದಿನ ಗುಂಡನ್ನು ಸೂಪರಿಂಟೆಂಟರಿಗೆ ಹಾಕಿ ಅವರನ್ನು ಕೊಲ್ಲಬೇಕೆಂದು ಪಿತೂರಿ ನಡೆದಿದ್ದಂತೆಯೂ, ಈಗ ಆ ಜೈಲಿನಲ್ಲಿ ಬಂಧೀಖಾನೆ ಅನುಭವಿಸುತ್ತಿರುವ ಲಾಹೋರ್ ರಾಜದ್ರೋಹಿಗಳು ಹೇಳಿಕೊಟ್ಟು ಏರ್ಪಾಡು ಮಾಡಿದ್ದಂತೆಯೂ ಊಹಿಸಲ್ಪಟ್ಟಿದೆ.

ಲಾಹೋರ್ ಪಟ್ಟಣದಲ್ಲಿ ನಂದಗೋಪಾಲನೆಂಬ ಕೋಟ್ಯಾಧೀಶ್ವರನು ಭಾಯಿ ಮನೋಹರಲಾಲನೆಂಬವನನ್ನು ದತ್ತು ತೆಗೆದುಕೊಂಡು ಕೆಲವು ಕಾಲದ ಮೇಲೆ ಕಾಲವಾದನು. ದತ್ತ ಪುತ್ರನ ಜನಕ ತಂದೆ ನಾನಕ ಚಂದನೇ ಗಾರ್ಡಿಯನ್ನಾಗಿ ಆಸ್ತಿಯನ್ನೆಲ್ಲಾ ರಕ್ಷಿಸುತ್ತಿದ್ದನು. ದತ್ತ ಪುತ್ರನು ಪ್ರಾಪ್ತವಯಸ್ಕನಾಗಿ ತನ್ನ ಜನಕ ತಂದೆ ಮತ್ತು ಗಾರ್ಡಿಯನ್ ಲೆಕ್ಕಗಳನ್ನು ಹೆಚ್ಚುಕಡಮೆ ಮಾಡಿದಾನೆಂದೂ, ಒಂದು ಲಕ್ಷ ರೂಪಾಯಿ ಅವನಿಂದ ಬರಬೇಕಾಗಿದೆಯೆಂದೂ ದಾವಾ ತಂದನು. ಸಬ್ ಜಡ್ಜಿಯವರು ದರ್ಯಾಪ್ತಿಮಾಡಿ ಆ ಜನಕ ತಂದೆಯ ಮೇಲೆ ಮಗನಿಗೆ 5,000 ರೂಪಾಯಿಗೆ ಡಿಕ್ರಿ ಕೊಟ್ಟದಾರೆ.

ನೆಲ್ಲೂರು ಪಟ್ಟಣದ ಪೋಸ್ಟ್ ಆಫೀಸಿನ ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟಿದ್ದ ಸುಮಾರು 23,000 ರೂಪಾಯಿನ ಕರೆನ್ಸಿ ನೋಟುಗಳೂ, ಪಾರ್ಸಲುಗಳೂ ಇಟ್ಟ ಪಾಲಿಗೇ ದಿನವೇ ಮಾಯವಾದವು. ಪೋಸ್ಟ್ ಮತ್ತು ಪೋಲೀಸ್ ಇಲಾಖೆಗಳ ಅಧಿಕಾರಿಗಳು ಹೋಗಿ ತನಿಖೆಮಾಡಿದರು. ಅನುಮಾನದ ಮೇಲೆ ಒಬ್ಬ ಪೋಸ್ಟ್ ಮೆನ್‌ನನ್ನು ಹಿಡಿದು ವಿಚಾರಿಸಿದಾಗ ಕಳುವಿನ ಪೂರ್ವೋತ್ತರ ತಿಳಿಯಿತು. ಅವನ ಮನೆ ಹಿತ್ತಲಲ್ಲಿ 1,800 ರೂಪಾಯಿನಷ್ಟು ಸಿಕ್ಕಿತು. ಅದಾದ ಸ್ವಲ್ಪ ಹೊತ್ತಿನೊಳಗಾಗಿ ಉಳಿದ ಮಾಲುಗಳೂ ಪತ್ತೆ ಆದವು. ಪೋಸ್ಟ್ ಮಾಸ್ಟರು, ಇವನ ಮಗ, ಮೂರು ಮಂದಿ ಪೋಸ್ಟ್ ಜವಾನರು, ಇಷ್ಟು ಮಂದಿಯನ್ನೂ ಹಿಡಿದು ಇಟ್ಟಿದ್ದಾರೆ.

ಅಹಮದ್‌ನಗರದ ಸಬ್ ಜಡ್ಜ್ ಆಗಿದ್ದ ಗೋವಿಂದ ಬಲವಂತ ಲಘಾಟೆ ಎಂತನು ಲಂಚ ತೆಗೆದುಕೊಂಡನೆಂದು ಮೊಕದ್ದಮೆ ಆಗಿ ಆತನಿಗೆ ಮೂರು ವರುಷ ಕಠಿಣ ಸಜಾವೂ, 3,000 ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತ್ತು. ಆತನು ಬೊಂಬಾಯಿ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದನು. ಅಲ್ಲಿರು ಜಡ್ಜಿಗಳು ಪರಾಂಬರಿಸಿ ಅಂಥಾ ದೊಡ್ಡ ನೌಕರಿಯಲ್ಲಿದ್ದು ವಿಶೇಷ ಗೌರವವುಳ್ಳವನಾಗಿ ಇಂಥಾ ಅಲ್ಪ ಕೆಲಸವನ್ನು ಮಾಡಿರುವುದು ಅಯೋಗ್ಯವಾಗಿದೆ ಎಂದೂ, ಅಂಥಾ ಮೊಕದ್ದಮೆಯು ರುಜುವಾತಾಗುವುದು ತುಂಬಾ ಪ್ರಯಾಸವೆಂದೂ ಹೇಳಿ ಕೆಳ ಕೋರ್ಟಿನವರು ಕೊಟ್ಟಿರುವ ಶಿಕ್ಷೆಯನ್ನು ಖಾಯಂ ಮಾಡಿ, ಆ ಶಿಕ್ಷೆಯು ಹೆಚ್ಚಲ್ಲವೆಂದು ಅಪೀಲನ್ನು ವಜಾ ಮಾಡಿದರು.

ಪಂಜಾಬ್ ಅಧಿಪತ್ಯದ ... 39 ಮಂದಿ ಪ್ರಕಾರ ಹೊಸದಾಗಿ ವಕೀಲರಾಗಬಹುದೆಂದು ... ಎರಡು ವರುಷವಾಯಿತು. ಈ ಸಲ ಲಾಯರ್ ಪರೀಕ್ಷೆಯಲ್ಲಿ ... ತೇರ್ಗಡೆ ಹೊಂದಿದರು. ಕಾನೂನಿನಂತೆ 39 ಜನರನ್ನು ಲಾಯರುಗಳಾಗಿ ದಾಖಲ್ ಮಾಡಿಕೊಂಡರು. ಉಳಿದವರು ಸರ್ಕಾರಕ್ಕೆ ಅರ್ಜಿ ಮಾಡಿಕೊಂಡರು. ಇದಲ್ಲದೆ ಪ್ರಜೆಗಳಲ್ಲಿ ಆ ಹುಕುಮು ವ್ಯಥೆಯನ್ನುಂಟುಮಾಡಿತ್ತು. ಈಗ ಸರ್ಕಾರದವರು ಪುನರಾಲೋಚನೆಮಾಡಿ ಆ ಹುಕುಮನ್ನು ವಾಪಸು ತೆಗೆದುಕೊಂಡು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವವರು ಅಡ್ಡಿ ಇಲ್ಲದೆ ಲಾಯರಾಗಬಹುದೆಂದು ಅಪ್ಪಣೆ ಕೊಟ್ಟಿದಾರೆ. ಇದು ಪ್ರಜೆಗಳಲ್ಲಿ ತುಂಬಾ ಸಂತೋಷವನ್ನುಂಟುಮಾಡಿದೆ.

ಪಂಜಾಬಿನ ಪ್ರಜೆಗಳು ನಮ್ಮ ಸಾರ್ವಭೌಮ ಸರ್ಕಾರಕ್ಕೆ ಯುದ್ಧದ ನಿಮಿತ್ತ ಉಪಯೋಗಿಸುವಂಥಾ ವಿಮಾನ ಯಂತ್ರಗಳನ್ನು ಒದಗಿಸ ಬೇಕೆಂದು ಪ್ರಯತ್ನ ಮಾಡಿ ಚಂದಾ ಕೂಡಿಸುತ್ತಿದಾರೆ. ಈ ಫಂಡಿಗೆ ಲಾಹೋರ್ ಮ್ಯುನಿಸಿಪಾಲಿಟಿಯವರು 10,000 ರೂಪಾಯಿ ಕೊಡುವುದಾಗಿ ಕೌನ್ಸಿಲಿನವರು ತೀರ್ಮಾನಮಾಡಿ ಸ್ಯಾಂಕ್ಷನ್ ಬಗ್ಗೆ ಗವರ್ನಮೆಂಟಿಗೆ ಅರ್ಜಿ ಮಾಡಿಕೊಂಡರು. ಲೆಫ್ಟಿನೆಂಟ್ ಗವರ್ನರವರು—ಮ್ಯುನಿಸಿಪಾಲಿಟಿಯವರು ಇಷ್ಟು ಧಾರಾಳವಾಗಿ ಹಣ ಸ್ಯಾಂಕ್ಷನ್ ಮಾಡಿರುವುದು ಅವರ ರಾಜಭಕ್ತಿಯನ್ನು ಪ್ರಕಾಶಪಡಿಸುತ್ತದೆಯಾದಾಗ್ಯೂ ಈ ವಿಧವಾದ ಖರ್ಚನ್ನು ಮ್ಯುನಿಸಿಪಾಲಿಟಿಯ ಅಥವಾ ಲೋಕಲ್ ಬೋರ್ಡುಗಳ ಮೇಲೆ ಹೊರಿಸುವುದು ಸಹಜವಾದದ್ದಲ್ಲವೆಂದೂ, ಇದನ್ನು ಸರ್ಕಾರದವರು ಒಪ್ಪುವುದಿಲ್ಲವೆಂದೂ ಹುಕುಂ ಮಾಡಿದಾರೆ.

ರಂಗೂನ್ ಪಟ್ಟಣದ ಮ್ಯುನಿಸಿಪಾಲಿಟಿಯವರು ತಮ್ಮ ಸರಹದ್ದಿನೊಳಗಿರುವ ರೈಲ್ವೆ ಕಟ್ಟಡಗಳಿಗೂ, ರೈಲ್ ಸ್ಟೇಷನ್ ನಲ್ಲಿರುವ ಬೈಲು ಪ್ರದೇಶಗಳಿಗೂ, ರೈಲ್ ಕಂಬಿ ಹಾಕಿರುವ ಪಾಲಿ ಜಾಗಾದಿಗೂ ಕಂದಾಯವನ್ನು ಕಟ್ಟಿ ಮಾಡಿದರು. ಮೊದಲು ಈ ಕಂದಾಯ ಒಟ್ಟು 6,18,120 ರೂಪಾಯಿ ಇತ್ತು ; ಈಗ ರೈಲ್ ಕಂಪನಿಯವರು ಸಾಲಿಯಾನಾ 7,11,441 ರೂಪಾಯಿ ತೆರಿಗೆ ಕೊಡಬೇಕಾಯಿತು. ಮ್ಯುನಿಸಿಪಾಲಿಟಿಯವರು ರೈಲ್ವೆಗೆ ಸೇರಿದ ಪಾಲಿ ನಿವೇಶನಕ್ಕೆ ಬಾಡಿಗೆ ದರದ ಮೇಲೆ ಶೇಕಡಾ 4 ರೂಪಾಯಿನಂತೆಯೂ, ಕಟ್ಟಡಗಳಿಗೆ ಶೇಕಡಾ 8 ರೂಪಾಯಿನಂತೆಯೂ ತೆರಿಗೆ ಹಾಕಿದರು. ರೈಲ್ವೆ ಕಂಪನಿಯವರು ಮ್ಯುನಿಸಿಪಾಲಿಟಿಯ ಮೇಲೆ ಆ ರೀತಿ ಜಾಸ್ತಿಮಾಡಕೂಡದೆಂದು ತಡೆಯುವುದಕ್ಕಾಗಿ ದಾವಾ ತಂದರು. ಈ ಮೊಕದ್ದಮೆಯನ್ನು ದರ್ಯಾಪ್ತಿ ಮಾಡಿದ ಕಮಿಷನರವರು ಮೇಲ್ಕಂಡ ಪ್ರಕಾರ ತೆರಿಗೆ ಜಾಸ್ತಿ ಮಾಡಿರುವುದು ನ್ಯಾಯವಾಗಿದೆ ಎಂದು ಒಪ್ಪಿಕೊಂಡು, ಕಂಪನಿಯವರು ತಮ್ಮ ಆವರಣದೊಳಗೆ ಗುಡಿಸುವುದು, ನೀರು ಒದಗಿಸುವುದು, ದೀಪ ಹಚ್ಚುವುದು ಈ ಭಾಗಗಳಿಗೆ ಹಣ ಖರ್ಚು ಮಾಡುತ್ತಾರಾದ್ದರಿಂದ ಮ್ಯುನಿಸಿಪಾಲಿಟಿಯವರು ಈ ಮೂರು ಬಾಬುಗಳಿಗಾಗಿ ರೈಲ್ವೆಯವರಿಂದ ಪೂರಾ ತೆರಿಗೆಯನ್ನು ವಸೂಲ್ಮಾಡದೆ ಅರೆವಾಸಿಯನ್ನು ಮಾತ್ರ ತೆಗೆದುಕೊಳ್ಳಬೇಕೆಂದು ತೀರ್ಮಾನಮಾಡಿದರು. ಇದು ಕಂಪನಿಯವರಿಗೆ ಸಮ್ಮತವಾಗದೆ ರೈಲ್ವೆ ಬೋರ್ಡಿನವರಲ್ಲಿ ಅಪೀಲ್ ಮಾಡಿಕೊಳ್ಳುವರು.

ವಿದೇಶದ ವೃತ್ತಾಂತಗಳು.

ಜೋಹೋರ್ ಗವರ್ನಮೆಂಟಿನವರು ವಿಮಾನಯಂತ್ರಗಳಿಗೋಸ್ಕರ 25,000 ದ್ರವ್ಯವನ್ನು (ಸುಮಾರು 1,00,000 ರೂಪಾಯಿ) ಬ್ರಿಟಿಷ್ ಗವರ್ನಮೆಂಟಿಗೆ ಕಳುಹಿಸಿಕೊಟ್ಟದಾರೆ.

ಅರ್ಲ್ ಕಿಚನರ್ ಅವರ ತಂದೆ ಲಾರ್ಡ್ ಸ್ಪೆನ್ಸರ್‌ರವರ ಒಂಗಿಲೆಗೆ ಕಳ್ಳರು ಬಿದ್ದು ಬೆಳ್ಳಿ ಭಂಗಾರದ ಹಲವು ಅಪೂರ್ವ ಪದಾರ್ಥಗಳನ್ನು ತೆಗೆದುಕೊಂಡು ಹೋದರು.

ಆಫ್ರಿಕಕ್ಕೆ ಸೇರಿದ ಸೊಮಾಲಿ ಎಂಬ ಅಧಿಕೃತದಲ್ಲಿ ಭೂಕಂಪ ಉಂಟಾಗಿ ಅರ್ಮೇನಿಯದ ಪೂರ್ವ ಮುಖ್ಯಪಟ್ಟಣವಾಗಿದ್ದ ರಬೌಲ್ ಎಂಬ ನಗರದಲ್ಲಿ ಕೆಲವು ಭಾಗಗಳು ನಾಶವಾದವು.

ಟ್ರಾನ್ಸ್‌ವಾಲ್ ಪ್ರಾಂತ್ಯದ ಗಣಿಗಳಿಂದ 1915 ನೇ ವರುಷದಲ್ಲಿ 3,56,27,461 ಪೌಂಡು ಕ್ರಯದಷ್ಟು ಚಿನ್ನವನ್ನು ತೆಗೆದರು; ಅಂದರೆ ಹಿಂದಿನ ವರುಷಕ್ಕಿಂತ 20,34,306 ಪೌಂಡುಗಳಷ್ಟು ಚಿನ್ನವು ಹೆಚ್ಚು.

ಫ್ರೆಂಚ್ ಸೈನಿಕರು ಕಟ್ಟಿಕೊಂಡಿರುವ ಯುದ್ಧಕಾಲದ ಕಂದಕಗಳಲ್ಲಿ ಇಲಿ ಗಳ ಕಾಟ ಅಪಾರವಾಗಿದೆ. ಅವುಗಳನ್ನು ಹಿಡಿದು ಕೊಲ್ಲುವುದಕ್ಕೋಸ್ಕರ ಫ್ರಾನ್ಸ್ ಪಟ್ಟಣದಿಂದ 2,700 ನಾಯಿಗಳನ್ನು ಕೈರ್ಗಂದಕಗಳಲ್ಲಿ ಯುದ್ಧ ಭೂಮಿಗೆ ಕಳುಹಿಸಿಕೊಟ್ಟಿದ್ದಾರೆ.

ಜರ್ಮನ್ ರಾಜ್ಯದ ಮಂತ್ರಿಶ್ರೇಷ್ಠರಾದ ಕೌಂಟ್ ಓಕನವಾಯರವರು ಟೋಕಿಯೊನಲ್ಲಿ ಹೋಗುತ್ತಿದ್ದಾಗ ದುಷ್ಟನ್ಯಾರೋ ಅವರನ್ನು ಕೊಲ್ಲಬೇಕೆಂದು ಅವರ ಗಾಡಿಗೆ ಸಿಡಿಮದ್ದಿನ ಗುಂಡು ಎಸೆದನು. ಆದರೆ ಅದು ಅವರಿಗೆ ತಗಲಲಿಲ್ಲ. ಆ ಕೊಲೆಗಾರನು ತಲೆತಪ್ಪಿಸಿಕೊಂಡು ಹೋದನು.

ಇಂಗ್ಲೆಂಡಿನಲ್ಲಿ ಹಾರ್ಸ್ಲಿ ಎಂಬ ಹುಡುಗನು ಜೂಜಿನಲ್ಲಿ ಕುದುರೆಗಳನ್ನು ಓಡಿಸುವ ಉದ್ಯೋಗದಲ್ಲಿ ವರುಷಕ್ಕೆ 30,000 ರೂಪಾಯಿ ಸಂಪಾದನೆ ಮಾಡುತ್ತಾನೆ. ಅವನಿಗೆ ಇನ್ನೂ 21 ವರುಷವಾಗಿಲ್ಲದ ಕಾರಣ ನ್ಯಾಯದಿಂದ ಆದಾಯದ ಮೇಲಿನ ತೆರಿಗೆಯನ್ನು ಸರಕಾರದವರು ವಸೂಲ್ಮಾಡುವುದಕ್ಕಿಲ್ಲವಾಗಿದೆ.

ಇಂಗ್ಲೆಂಡಿಗೆ ಸೇರಿದ ಬ್ರಿಸ್ಟಲ್ ಪಟ್ಟಣದಲ್ಲಿ ಒಬ್ಬನು ತನ್ನ ಹೆಂಡತಿಯನ್ನು ಮದ್ಯದ ಅಂಗಡಿಗೆ ಕರೆದುಕೊಂಡು ಹೋಗಿ ಅವಳಿಗೆ ಮದ್ಯವನ್ನು ಕೊಂಡು ಕುಡಿಸಿದನು. ಇದು ನೋಡಿದ್ದವು ಆಗ ಆ ಗಂಡನಿಗೆ ರೂಪಾಯಿ 6-12-0 ಜುಲ್ಮಾನೆ ವಿಧಿಸಲ್ಪಟ್ಟಿತು. ಈ ತರದ ಮೊಕದ್ದಮೆ ಬಂದದ್ದು ಇದೇ ಮೊದಲೆಂದು ಪ್ರಕಟವಾಗಿದೆ.

ವೈಟ್ ಸ್ಟಾರ್ ಲೈನ್ ಎಂಬ ಬ್ರಿಟಿಷ್ ನಾವೆಯ ಕಂಪೆನಿಯವರು ಬೆಲ್ಫಾಸ್ಟ್ ಪಟ್ಟಣದ ಕಾರ್ಖಾನೆಯಲ್ಲಿ ಒಂದು ಹಡಗನ್ನು ತಯಾರು ಮಾಡಿಸಿಕೊಂಡರು. ಇದು ಬ್ರಿಟಿಷ್ ಹಡಗುಗಳಲ್ಲೆಲ್ಲಾ ಅತ್ಯಂತ ಭಾರವಾದದ್ದು. ಇದನ್ನು ಆ ಕಂಪೆನಿಯವರು ಆಸ್ಪತ್ರೆ ಹಡಗಿನಂತೆ ಉಪಯೋಗಿಸಿಕೊಳ್ಳುವ ಗವರ್ನ್‌ಮೆಂಟಿನ ಯುದ್ಧದ ಇಲಾಖೆಗೆ ವಹಿಸುತ್ತಾರೆ.

ಯುದ್ಧದ ದೆಸೆಯಿಂದ ಕಷ್ಟಕ್ಕೆ ಗುರಿಯಾದ ಬೆಲ್ಜಿಯನ್ ಪ್ರಜೆಗಳ ರಿಲೀಫ್ ಫಂಡಿಗೆ ಮಿ|| ಕಾರ್ನೆಗಿ ಎಂಬ ಕೋಟ್ಯಾಧೀಶ್ವರನು ಮೊದಲನೇ ಬಾರಿ ಚಂದಾ 3,00,000 ರೂಪಾಯಿ ಕಳುಹಿಸಿರುತ್ತಾನೆ. ಇದಲ್ಲದೆ ಆತನು ಅಮೇರಿಕದೊಳಗೆ ಕೈಸೆರೆಯಾಗಿರುವಂಥಾ ಬೆಲ್ಜಿಯನ್ ಪ್ರಜೆಗಳಿಗೆ ತಲಾ 30 ರೂಪಾಯಿನಂತೆ ಬೇರೆ ಕಳುಹಿಸಿರುವನು.

ನಾನು ನನ್ನ ಮಿತ್ರಳಾದ ಎಡಿತ್ ಕವೆಲ್ ಅಮ್ಮನನ್ನು ನೋಡಿದಾಗ ಆಕೆಯು ದೇವರ ಚಿತ್ತಕ್ಕೆ ತನ್ನನ್ನು ಒಪ್ಪಿಸಿ ಪೂರ್ಣವಾದ ಮನಶ್ಶಾಂತಿಯಿಂದ ಲವಲೇಶವೂ ಕಳವಳಪಡದೆ ದಿಗಿಲಿಲ್ಲದೆ ಇರುವದನ್ನು ನೋಡಿ ಆಶ್ಚರ್ಯಪಟ್ಟೆನು. ನನಗೂ ಅದರಿಂದ ತಕ್ಕಮಟ್ಟಿಗೆ ಮನಃ ಸಮಾಧಾನವಾಯಿತು. ಅದರೇನು? ಆಕೆಗೂ ಮೃತ್ಯುವಿಗೂ ಮಧ್ಯೆ ಬಹಳ ವಿರಾಮಕಾಲವಿರಲಿಲ್ಲವೆಂಬದನ್ನು ಸ್ಮರಿಸಿಕೊಂಡು ಅತಿಕರುಣಾರಸದಿಂದಲೂ ಮಮತೆಯಿಂದಲೂ ಆಕೆಯ ಸಂಗಡ ಸಲ್ಲಾಪವಾಡ ಕಡೆಗೆ ಸುಮಾರು ಒಂದು ಗಂಟೆಯ ಕಾಲ ಅಲ್ಲಿದ್ದೆನು. ಆಕೆಯು ಮೊಟ್ಟಮೊದಲು—ನನ್ನನ್ನು ಕುರಿತು ಹೇಗೆ ತೀರ್ಪುಮಾಡಿದರು? ಎಂದು ಕೇಳಿದಳು. ನಾನು ಸತ್ಯನೂ ಪರಮಾತ್ಮನೂ ಆಗಿರುವ ದೇವರನ್ನು ಜಪಿಸಿ ಆಕೆಗೆ ಕ್ಷಿಪ್ರದಲ್ಲೇ ಪ್ರಾಪ್ತಿಸುವದಕ್ಕಿರುವ ಗತಿಯನ್ನು ಗಂಭೀರವಾದ ವಚನಗಳಿಂದ ಸೂಚಿಸಿದೆನು. ಅವಳು ಅದನ್ನು ಕೇಳಿ—ನಾನು ನನ್ನ ದೇಶದ ಹಿತಕ್ಕಾಗಿ ನನ್ನ ಪ್ರಾಣಗಳನ್ನು ಬಿಡುವದಕ್ಕೆ ಮನಸ್ಸುಳ್ಳವಳಾಗಿದ್ದೇನೆ. ಇದನ್ನು ನನ್ನ ಮಿತ್ರಮಂಡಲಿಯವರಿಗೆ ತಿಳಿಸಬೇಕೆಂದು ಅಭಿಲಾಷೆಪಡುತ್ತೇನೆ. ನನಗೆ ಈ ವಿಷಯದಲ್ಲಿ ಸ್ವಲ್ಪಮಾತ್ರವೂ ಭಯವಿಲ್ಲ; ಹೀಗೆಂದು ಗುಣುಗುಟ್ಟುವದಿಲ್ಲ. ನಾನು ಸಾಯುತ್ತಿದ್ದವರನ್ನು ಅನೇಕಾವರ್ತಿ ನೋಡಿದ್ದೇನೆ. ಆದದರಿಂದ ನನಗೆ ಅದು ವಿಲಕ್ಷಣವಾದ ಭಯವನ್ನುಂಟುಮಾಡಲಾರದು ನನ್ನ ಅಂತ್ಯಕಾಲಕ್ಕೆ ಮುಂಚೆ ಕಳೆದ ಹತ್ತು ವಾರಗಳಿಂದ ನನಗೆ ಲಭ್ಯವಾದ ವಿರಾಮಕ್ಕಾಗಿಯೂ ಶಾಂತಿಗಾಗಿಯೂ ನಾನು ದೇವರ ಕರುಣೆಯನ್ನು ಸ್ತುತಿಸುತ್ತೇನೆ. ಯಾಕೆಂದರೆ ನನ್ನ ಯಾವತ್ತು ಜೀವಮಾನವೂ ತ್ವರೆಯಾಗಿ ಮಾಡಬೇಕಾದ ಕೆಲಸಗಳಿಂದಲೂ ಪ್ರಯಾಸಗಳಿಂದಲೂ ವಿರಾಮವಿಲ್ಲದೆ ಕಳೆದದ್ದಾಗಿತ್ತು ವಿಶ್ರಾಂತಿಯನ್ನು ಹೊಂದುವದಕ್ಕೆ ದೊರಕಿದ ಈ ಸ್ವಲ್ಪ ಕಾಲವು ದೇವರ ಮಹಾ ಕರುಣೆಯೇ ಸರಿ. ಇಲ್ಲಿರುವವರೆಲ್ಲರೂ ನನ್ನನ್ನು ಬಹು ಆದರದಿಂದ ಉಪಚರಿಸಿರುವರು ಆದರೆ ನಾನು ದೇವರ ಸನ್ನಿಧಾನದಲ್ಲಿ ನಿಂತುಕೊಂಡು ಸತ್ಯವನ್ನು ಸ್ಪಷ್ಟವಾಗಿ ಪ್ರಘೋಷಮಾಡಲಿಕ್ಕಿರುವದರಿಂದ ಹೇಳಬೇಕಾದದ್ದೇನಂದರೆ—"ನಾನು ಸ್ವದೇಶಾಭಿಮಾನಿಯಾಗಿರುವದೇ ಸಾಲದು; ಆದರೆ ಯಾರ ಕಡೆಗಾದರೂ ಹಗೆಯನ್ನಾಗಲಿ ಕಹಿಯಾದ ಮನಸ್ಸನ್ನಾದರೂ ಇಟ್ಟುಕೊಂಡಿರಕೂಡದು" ಎಂಬುವದೇ. ಆಕೆಯು ಇದನ್ನು ಹೇಳಿದ ನಂತರ ನಾವಿಬ್ಬರೂ ಕೂಡ ಕ್ರಿಸ್ತನ ಪವಿತ್ರವಾದ ಅನ್ಯೋನ್ಯ ಸಂಸ್ಕಾರವನ್ನು ಆಚರಿಸಿದೆವು. ಅವಳು ಪೂರ್ಣ ಹೃದಯದಿಂದ ಸುವಾರ್ತೆಯ ಸಮಾಧಾನದ ವಚನಗಳನ್ನು ಸ್ವೀಕರಿಸಿದಳು ಹೀಗೆ ದೇವಾರಾಧನೆಯು ಪೂರೈಸಿದ ನಂತರ ನಾನು ಮೃದುಸ್ವರದಿಂದ ಹಾಡಲೆತ್ನಿಸಿ—

"ಓ ಪ್ರಭು ಯೇಸು! ಸಂಜೆಯಾಯಿತು.
ನನ್ನೊಂದಿಗೆ ನೀ ವಾಸವಾಗಿರು;
ಈ ಲೋಕದ ಸಹಾಯ ತಪ್ಪುತ್ತೆ,
ನೀನೇ ಸಹಾಯ ಬಲಹೀನಗೆ
ಜೀವಾಂತ್ಯಕಾಲ ತೀವ್ರಬರುತ್ತೆ.
ಭೂಲೋಕ ಶೋಭೆ ಪರಪರ ಹೋಗುತ್ತೆ.
ಎಲ್ಲೆಲ್ಲಿಯೂ ಮಾರ್ಪಾಟು ಕಾಣುತ್ತೆ.
ಎನ್ನೊಂದಿಗಿರು ನಿರ್ವಿಕಾರನೇ"

ಎಂಬ ಸಂಗೀತವನ್ನು ಹಾಡಿದೆನು. ಆಕೆಯೂ ನನ್ನ ಕೂಡ ಅತಿ ಅತಿಸ್ವರದಿಂದ ಹಾಡಿದಳು ಅನಂತರ ಆಕೆಯು ತನ್ನ ಬಂಧುಮಿತ್ರರಿಗೆ ಶುಭವಾದವನ್ನು ನುಡಿದಳು. ಅವಳು ದೇವರ ಭಕ್ತಿಯಲ್ಲಿ ನಿಶ್ಚಲಳಾಗಿ ಆತನ ಧ್ಯಾನದಲ್ಲಿ ತತ್ಪರಳಾಗಿರುವಾಗ ನಾನು ಅವಳನ್ನು ಕಟ್ಟಕಡೆಯಲ್ಲಿ ವಂದಿಸಿ "ದೇವರು ನಿನ್ನೊಂದಿಗಿರಲಿ" ಅಂದು ಅಪ್ಪಣೆ ತೆಗೆದುಕೊಳ್ಳಲು ಆಕೆಯು "ನಾವು ದೇವರ ಸಾನ್ನಿಧ್ಯದಲ್ಲಿ ಪುನಃ ಭೇಟಿಯಾಗುವೆವು" ಅಂದಳು.

ಯುದ್ಧದ ಸಮಾಚಾರಗಳು.

ರಷ್ಯಾವಿನ ಜಯಪ್ರದಗಳು.

ಈ ವಾರ ವಿಶೇಷವಾದ ಸಮಾಚಾರಗಳು ಅಷ್ಟೇನೂ ಬಂದಿರುವದಿಲ್ಲ. ಮುಂದೆ ಬೇಸಿಗೇ ಕಾಲದಲ್ಲಿ ಯುದ್ಧಕಾರ್ಯಗಳನ್ನು ನಡಿಸುವುದಕ್ಕೆ ಸನ್ನಾಹಗಳನ್ನು ಮಾಡಿಕೊಳ್ಳುತ್ತಿದಾರೆಂದು ಗೋಚರವಾಗುತ್ತದೆ. ಅವಶ್ಯವೆಂದು ಕಂಡು ಬರುವ ಠಾಣ್ಯಗಳಿಗೆ ಸೈನ್ಯಗಳನ್ನು ಸಾಗಿಸುತ್ತಲಿದಾರೆ. ಈ ಅಗಾಧವಾದ ಘೋರ ಯುದ್ಧವು ಈ ವರುಷ ಮುಕ್ತಾಯ ಹೊಂದಬಹುದೆಂಬ ಅಭಿಪ್ರಾಯವು ಎಲ್ಲಾ ಕಡೆಗಳಲ್ಲಿ ವ್ಯಾಪಿಸಿರುವುದು.

ಪಶ್ಚಿಮ ರಣರಂಗದಲ್ಲಿ.

ಈ ಯುದ್ಧಭೂಮಿಯ ಠಾಣ್ಯಗಳಲ್ಲಿ ಫಿರಂಗಿ ಗುಂಡುಗಳ ಹಾರಾಟವೂ, ಸುರಂಗಗಳು ಹಾರಿಸಲ್ಪಡುವುದೂ, ವಿಮಾನಗಳಲ್ಲಿ ಕದನಮಾಡುವುದೂ ಜರುಗುತ್ತಾಗಿದೆಯಾದಾಗ್ಯೂ ಶತ್ರು ಶತ್ರುಗಳು ನುಗ್ಗಿ ಮುಂದರಿಸಿ ಹೋಗುವ ಪ್ರಯತ್ನಗಳೇನೂ ಕಂಡುಬರಲಿಲ್ಲ. ಒಂದಾನೊಂದು ದಿನ ನಮ್ಮ ಕಡೆಯ ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಹೋಗಿ ಶತ್ರುವು ಉಗ್ರಾಣ ಮಾಡಿಕೊಂಡಿದ್ದ ಒಂದು ನಗರದ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಸುರಿದು ಬಹಳ ನಷ್ಟಪಡಿಸಿದವು. ಇನ್ನೊಂದು ದಿನ ನಮ್ಮ ಕಡೆಯ ವಿಮಾನಗಳು ಹಲ ಅಂತರಿಕ್ಷಕ್ಕೆ ಹಾರಿ ಹೋಗಿ ಶತ್ರುವಿನ ವಿಮಾನಗಳ ಕೂಡ ಹೋರಾಡಿದವು. ಇದರಲ್ಲಿ ನಮ್ಮ ಕಡೆ ಎರಡು ವಿಮಾನಗಳೂ ಶತ್ರುವಿನ ಐದು ವಿಮಾನಗಳು ಹಾಳಾದವು. ಮತ್ತೊಂದು ದಿನ ನಮ್ಮ ಪಕ್ಷದ ವಿಮಾನಗಳು 14 ಅಡಿ ಹಾರಿಹೋಗಿ ಶತ್ರುವಿನ ಎರಡು ವಿಮಾನಗಳನ್ನು ನಾಶಪಡಿಸಿದವು; ನಮ್ಮವರಲ್ಲಿ ಒಂದು ವಿಮಾನ ಹಾಳಾಯಿತು.

ನಮ್ಮ ಪಕ್ಷದ ಫಿರಂಗಿ ಗುಂಡುಗಳು ಶತ್ರುವಿನ ಕಂದಕಗಳನ್ನು ನಾಶಪಡಿಸಿ, ಅವರ ಸೈನ್ಯದಲ್ಲಿ ನಷ್ಟವನ್ನುಂಟುಮಾಡಿವೆ ಮತ್ತು ನಮ್ಮ ಯುದ್ಧಭಟರು ಹೊರಟು ಶತ್ರುವಿನ ಕಂದಕಗಳ ಮೇಲೆ ಬಿದ್ದು ಒಳಗಿದ್ದವರಲ್ಲಿ ಕೆಲವರನ್ನು ಕೈಸೆರೆ ಹಿಡಿದು ತಂದಿದಾರೆ.

ಜರ್ಮನಿಯವರು ಯುದ್ಧಸಾಲಿನಲ್ಲಿ ಫ್ರೆಂಚ್ ಸೈನಿಕರಿದ್ದ ಠಾಣ್ಯದ ಮೇಲೆ ನುಗ್ಗಿ ಕೆಲವು ಕಂದಕಗಳನ್ನು ಗೆದ್ದುಕೊಂಡರು. ಬಳಿಕ ಫ್ರೆಂಚರು ಅವರ ಮೇಲೆ ನುಗ್ಗಿ ಹಲವು ಕಂದಕಗಳಿಂದ ಶತ್ರುವನ್ನು ಹಿಂದಕ್ಕೆ ಓಡಿಸಿದರು. ಜರ್ಮನಿಯ ಸೈನಿಕರಲ್ಲಿ ಬಹಳ ಮಂದಿ ನಷ್ಟವಾದರು.

ಪೂರ್ವ ರಣರಂಗದಲ್ಲಿ.

ಗೆಲಿಷಿಯಾ ಸೀಮೆಯಲ್ಲಿ ರಷ್ಯಾದವರು ಮುಂದರಿಸಿ ನುಗ್ಗಿ ಹೋಗುತ್ತಲಿದಾರೆ ರಷ್ಯಾದವರು ಅರಾಪತಿ ತವು ಮೇಲೆ ನುಗ್ಗಿಬಂದರೆಂದೂ, ಅವರನ್ನು ಹಿಮ್ಮೆಟ್ಟಿಸುವುದು ಕಷ್ಟದಿಂದ ಸಾಧ್ಯವಾಗಲಿಲ್ಲವೆಂದೂ, ತಾವು ತಮ್ಮ ಕೆಲವು ಠಾಣ್ಯಗಳನ್ನು ರಷ್ಯಾದವರಿಗೆ ಒಪ್ಪಿಸಿ ಹಿಂದಕ್ಕೆ ಬರಬೇಕಾಯಿತೆಂದೂ ಆಸ್ಟ್ರಿಯಾದವರು ಹೇಳಿಕೊಂಡಿದಾರೆ. ಕಳೆದುಕೊಂಡ ಕಂದಕಗಳನ್ನು ಗೆದ್ದುಕೊಳ್ಳಬೇಕೆಂದು ಆಸ್ಟ್ರಿಯಾದವರು ವಿದಾವರ್ತಿ ಸಾಹಸಪಟ್ಟು ನುಗ್ಗಿ ಕದನ ಮಾಡಿದರು. ರಷ್ಯಾದವರು ಅವರಿಗೆ ಸ್ಥಳಕೊಡದೆ ಸೋಲಿಸಿ ಅನೇಕರನ್ನು ನಷ್ಟಪಡಿಸಿ ಹಿಂದಕ್ಕೆ ಓಡಿಸಿಬಿಟ್ಟರು.

ಅಲ್ಲಿಂದ ಉತ್ತರಕ್ಕೆ ಒಂದು ಠಾಣ್ಯದಲ್ಲಿ ಜರ್ಮನಿಯವರು ಒಂದು ನದಿಯನ್ನು ದಾಟಿ ಹಿಂದಕ್ಕೆ ಹೋಗಬೇಕಾಯಿತು. ಹೀಗೆ ಹೋಗುವಾಗ್ಗೆ ರಷ್ಯಾದವರು ಅನೇಕರನ್ನು ಕೊಂದು ಅಪಾರ ನಷ್ಟವನ್ನುಂಟುಮಾಡಿದರು. ಆದರೆ ವರ್ತಮಾನವೇನಾಯಿತೆಂದರೆ, ಜರ್ಮನಿಯವರು ಸರ್ಬಿಯಾದಿಂದ ಬಹಳ ಸೈನ್ಯಗಳನ್ನು ಕರಸಿಕೊಂಡರೆಂದು ತಿಳಿಸಲ್ಪಟ್ಟಿದೆ.

ಇಟಲಿ.

ಇಟಲಿಯವರು ಫಿರಂಗಿಗಳನ್ನು ಎತ್ತಿಕಟ್ಟಿ ಆಸ್ಟ್ರಿಯಾದವರ ಸೈನ್ಯಗಳ ಮೇಲೆ ಗುಂಡುಗಳನ್ನು ಇನ್ನೂ ಸುರಿಸುತ್ತಲೇ ಇದಾರೆ. ಕೆಲವು ಇಟಲಿ ಸೈನಿಕರು ಮಂಜುಗಡ್ಡೆಗಳ ಮೇಲೆ ಹಿಮದ ಮಳೆ ಸುರಿಯುತ್ತಿರುವಲ್ಲಿ ಲಕ್ಷ್ಯಮಾಡದೆ ಬಹಳ ಪರಾಕ್ರಮದಿಂದ 10,000 ಅಡಿಯ ಮೇಲಕ್ಕೆ ಬೆಟ್ಟವನ್ನು ಹತ್ತಿ ಹೋಗಿ ಆಸ್ಟ್ರಿಯಾದವರ ಕೆಲವು ಕೋಟೆ ಕೊತ್ತಲಗಳನ್ನು ನಾಶಪಡಿಸಿದರು.

ಆಸ್ಟ್ರಿಯಾದವರ ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಹೋಗಿ ಅಂಕೋನಾ ಎಂಬ ಇಟಲೀ ನಗರದ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದರು ಒಂದು ಮಗು ಮಾತ್ರ ಸತ್ತುಹೋಯಿತಂತೆ

ಬ್ರಿಟಿಷರ ಒಂದು ಸಬ್‌ಮೆರೀನು ಆಸ್ಟ್ರಿಯಾದವರ ಒಂದು ಸಮುದ್ರ ವಿಮಾನ ಯಂತ್ರವನ್ನು ಮುಳುಗಿಸಿ, ಅದರೊಳಗಿದ್ದವರನ್ನು ಕೈಸೆರೆ ಹಿಡಿದುಕೊಂಡಿತು. ಮತ್ತು ಆ ಸಮುದ್ರ ವಿಮಾನ ಯಂತ್ರದ ಸಹಾಯಕ್ಕೆ ಬಂದ ಆಸ್ಟ್ರಿಯಾದ ಒಂದು ಟಾರ್ಪೆಡೋ ಎಂಬ ದೋಣಿಯನ್ನು ಕೂಡ ನಮ್ಮ ಸಬ್‌ಮೆರೀನು ಮುಳುಗಿಸಿಬಿಟ್ಟಿತು.

ಟರ್ಕಿಯಲ್ಲಿ.

ಮೆಸೊಪೊಟೇಮಿಯಾ ಸೀಮೆಯಲ್ಲಿ ಟೈಗ್ರಿಸ್ ನದಿಯ ಬಳಿ ಇನ್ನೂ ಕೆಲವು ಕದನಗಳಾದವು. ಜನವರಿ ತಾ. 7 ರಲ್ಲಿ ಒಂದು ಯುದ್ಧವಾಯಿತು ಆಗ ಟರ್ಕಿಯವರು ಸೋತು ಐದು ಮೈಲಿ ಹಿಂದಕ್ಕೆ ಹೋಗಿಬಿಟ್ಟರು. ಬಳಿಕ ಬ್ರಿಟಿಷರು ಆ ಯುದ್ಧಭೂಮಿಯಲ್ಲಿ ಮಡಿದು ಬಿದ್ದಿದ್ದ 350 ಟರ್ಕಿ ಸೈನಿಕರ ಹೆಣಗಳನ್ನು ಸಮಾಧಿಮಾಡಿ 3 ಪರ್ವತದ ಫಿರಂಗಿಗಳನ್ನೂ, 2 ಮೆಷೀನ್ ಫಿರಂಗಿಗಳನ್ನೂ, 600 ಸೈನಿಕರನ್ನೂ ಕೈಸೆರೆ ಹಿಡಿದು ತಂದರು. ಬಳಿಕ ಬ್ರಿಟಿಷ್ ಸೈನಿಕರು ಅಲ್ಲಿಂದ ಮುಂದಕ್ಕೆ ನುಗ್ಗಿ ಹೋದರು. ಜನವರಿ ತಾ. 13 ರಲ್ಲಿ ಅವರು ನದಿಯ ಎಡದ ದಡದಲ್ಲಿ ಟರ್ಕಿಯವರ ಮೇಲೆ ನುಗ್ಗಿ ಮುತ್ತಿಗೆ ಹಾಕಿಕೊಂಡು ಟರ್ಕಿಯವರ ಎದುರಿನಲ್ಲಿ ಎಡಗಡೆಯೂ ನುಗ್ಗಿ ಹೋದರು ಟರ್ಕಿಯವರು ರಾತ್ರಿ ಕತ್ತಲಲ್ಲಿ ಅಲ್ಲಿಂದ ಬಿಟ್ಟು ಹೋದದ್ದರಿಂದ ಅವರ ಕಂದಕಗಳನ್ನೆಲ್ಲಾ ಬ್ರಿಟಿಷ್ ಸೈನಿಕರು ನುಗ್ಗಿ ಆಕ್ರಮಿಸಿಕೊಂಡರು. ಈಗ ಬ್ರಿಟಿಷರು ಇನ್ನೂ 25 ಮೈಲಿ ದೂರ ಹೋದರೆ ಕೂಟ್ ಎಂಬ ಠಾಣ್ಯ ಸಿಕ್ಕುವುದು. ಆ ಠಾಣ್ಯದಲ್ಲಿ ಜನರಲ್ ಟೌನ್‌ಸೆಂಡ್‌ರವರು ಬ್ರಿಟಿಷ್ ಸೈನ್ಯಗಳನ್ನಿಟ್ಟುಕೊಂಡಿದ್ದಾರೆ ಅಲ್ಲಿ ಅಲ್ಲಿ ಅಪಾರವಾಗಿ ಮಳೆ ಸುರಿಯಿತು ಈಗ ಮಳೆ ಬರುವುದು ಅಪೂರ್ವ. ಇದರಿಂದ ಭೂಮಿಯು ತೇವದಿಂದ ಬುರದೆಯಾಗಿದೆ. ನದಿಯಲ್ಲೂ ಕೆಲವು ಅಡಿ ಹೊಸ ನೀರು ಬಂದಿದೆ. ಟರ್ಕಿ ದಳಪತಿಯಾಗಿದ್ದ ಜನರಲ್ ಬೇಕರ್ ಸಾಬಿ ಬಿ ಎಂಬಾತನು ಕೊಲೆಯಾದಂತೆ ತಿಳಿಸಲಾಗಿದೆ.

ಜನವರಿ ತಾ. 21 ರಲ್ಲಿ ಮೆಸೊಪೊಟೇಮಿಯಾದಲ್ಲಿ ಇನ್ನೂ ಕದನಗಳು ನಡೆದವು ಎರಡು ಕಡೆಗಳಲ್ಲೂ ಅಪಾರ ನಷ್ಟವಾಯಿತು ಟರ್ಕಿಯವರ ಕಡೆ ಹೊಸ ಸೈನ್ಯಗಳು ಬಂದು ಸೇರಿಕೊಂಡದ್ದರಿಂದ ಬ್ರಿಟಿಷರು ಅವರ ಯುದ್ಧಸಾಲುಗಳನ್ನು ಭೇದಿಸಿ ನುಗ್ಗಲು ಸಾಧ್ಯವಾಗಲಿಲ್ಲ. ವಿಶೇಷ ಮಳೆ ಸುರಿದ ಪ್ರಯುಕ್ತ ಕೆಸರಿನಿಂದ ಯುದ್ಧ ಕಾರ್ಯಗಳನ್ನು ನಡಿಸುವುದಕ್ಕೆ ಅಡಚಣೆಯುಂಟಾಗಿದೆ.

ಕಾಕಸಸ್ ಪರ್ವತ ಪ್ರಾಂತ್ಯದಲ್ಲಿ ರಷ್ಯಾ ಸೈನಿಕರು ಎಪ್ಪತ್ತು ಮೈಲಿ ಅಗಲಕ್ಕೆ ನಿಂತು ಮುಂದರಿಸಿ ನುಗ್ಗಿ ಹೋಗಿರುವರು. ಟರ್ಕಿಯವರನ್ನು ಅಕಸ್ಮಿಕವಾಗಿ ಸುತ್ತುಹಾಕಿಕೊಳ್ಳುವಷ್ಟರಲ್ಲೇ ಅವರೆಲ್ಲಾ ಗಾಬರಿಬಿದ್ದು ಚದರಿ ಎರ್ಜೆರೂಮ್ ನಗರದ ಕಡೆ ಓಡಿಹೋದರು. ಓಡಿ ಹೋಗುವುದರಲ್ಲಿ ತಮ್ಮ ಕಡೆಯ ಹೆಣಗಳನ್ನು ಹೂಳುವುದಕ್ಕೂ ಅವರಿಗೆ ಅವಕಾಶವಾಗಲಿಲ್ಲ. ಸಾವಿರಾರು ಹೆಣಗಳು ಬಿದ್ದಿದ್ದದ್ದನ್ನು ರಷ್ಯಾದವರು ಕಂಡರು. ರಷ್ಯಾದವರಿಗೆ ಅಲ್ಲಿ ಫಿರಂಗಿಗಳೂ, ಬಂದೂಕುಗಳೂ, ಮದ್ದು ಗುಂಡೂ, ಸೈನಿಕರೂ ಕೈಸೆರೆ ಸಿಕ್ಕಿದಾರೆ.

ರಷ್ಯಾದವರು ಟರ್ಕಿಯವರ ಬೆನ್ನುಹತ್ತಿ ಅವರನ್ನು ಓಡಿಸಿಕೊಂಡು ಹೋಗಿ ಎರ್ಜೆರೂಮ್ ನಗರದ ಕೋಟೆಗಳಲ್ಲಿ ಸೇರಿಕೊಳ್ಳುವಂತೆ ಮಾಡಿದ್ದಲ್ಲದೆ 1,500 ಸೈನಿಕರನ್ನೂ ಒಂದು ಫಿರಂಗಿ ಮತ್ತು ಅವರ ಬಳಿಯಲ್ಲಿದ್ದ ಒಟ್ಟು ದಂಡಿನ ಡೇರೆಗಳನ್ನೂ ಸ್ವಾಧೀನಪಡಿಸಿಕೊಂಡರು. ಟರ್ಕಿಯವರು ಎರ್ಜೆರೂಮ್ ಪಟ್ಟಣದೊಳಗೆ ಸೇರಿಕೊಳ್ಳುವುದಕ್ಕಾಗಿ ನಾನಾ ಕಡೆಗಳಿಂದ ಹಿಮ್ಮೆಟ್ಟಿ ಹೋಗುತ್ತಿದಾರೆ. ದಾರಿಯ ಉದ್ದಕ್ಕೂ ಬಂದೂಕುಗಳನ್ನೂ ಮದ್ದು ಗುಂಡುಗಳನ್ನೂ ಬಿಟ್ಟು ಹೋದರು ಈಗ ರಷ್ಯಾದವರು ಎರ್ಜೆರೂಮ್ ಪಟ್ಟಣಕ್ಕೆ ಫಿರಂಗಿ ಗುಂಡುಗಳನ್ನು ಹೊಡೆಯುತ್ತಿದಾರೆ. ಇದನ್ನು ನೋಡಲಾಗಿ ರಷ್ಯಾದವರಿಗೆ ಇಲ್ಲಿ ತುಂಬಾ ಜಯಪ್ರದವಾಯಿತೆಂದೇ ಹೇಳಬಹುದು.

ಕಪ್ಪು ಕಡಲಿನಲ್ಲಿ ರಷ್ಯಾದವರು ಟರ್ಕಿಯವರ 163 ವ್ಯಾಪಾರದ ಹಡಗುಗಳನ್ನು ಮುಳುಗಿಸಿದಾರೆ. ಆ ಪೈಕಿ 73 ಹಡಗುಗಳಲ್ಲಿ ಆಹಾರ ದಿನಸುಗಳು.

...ತು. ಆಸ್ಕ್ವಿತ್ ವ್ಯಾನರಿನ ಬಳಿ ಅಷ್ಟನ್ನೆಲ್ಲಾ ಮುಳುಗಿಸಿದರು. ...ರು ಕಾನೀವರ್ತಮಾನವು ರಷ್ಯಾದವರು ಈಚೆಗೂ ಇನ್ನೂ 40 ಟರ್ಕಿ ...ದ ಹಡಗುಗಳನ್ನು ಮುಳುಗಿಸಿರುವಂತೆ ಹೇಳುತ್ತದೆ.

ಪರ್ಷಿಯಾದಲ್ಲಿ.

...ಯ ರಾಜ್ಯದ ದಂಗೆಯು ಹಲವು ಭಾಗಗಳಿಗೆ ಹರಡಿಕೊಂಡಿರು ...ವುದು ಕ್ಯಾಸ್ಪಿಯನ್ ಕಡಲಿನ ಹತ್ತರ 1,000 ದಂಗೇಕೋರರನ್ನು ...ರು ಸುತ್ತುಗಟ್ಟಿಕೊಂಡು ಯುದ್ಧಮಾಡಿ ಸೋಲಿಸಿದರು. ಮೆಸೊಪೊ ...ದ ಕಡೆಯಲ್ಲೂ ರಷ್ಯಾದವರು ಪಟ್ಟಣಗಳನ್ನು ಗೆದ್ದು ಸೈನಿಕರನ್ನು ...ತ್ತಾರೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

...ನ್ ಸಂಸ್ಥಾನಗಳಿಂದ ಬಂದಿರುವ ವರ್ತಮಾನಗಳಲ್ಲೆಲ್ಲಾ ಮಾಂಟಿ ...ಸಂಸ್ಥಾನಕ್ಕೆ ಸಂಬಂಧಪಟ್ಟ ಸುದ್ದಿಗಳೇ ವಿಶೇಷವಾದವು. ಆ ಸಂಸ್ಥಾ ...ಜನಸಂಖ್ಯೆಯೆಲ್ಲಾ ಒಟ್ಟು 2,25,000; ಅಂದರೆ ಮದ್ರಾಸ್ ಪಟ್ಟಣದಲ್ಲಿ ...ರುವುದರ ಅರ್ಧಮಾತ್ರವಾಯಿತು. ಇಂಥಾ ಸಣ್ಣ ಸಂಸ್ಥಾನವು ಆಸ್ಟ್ರಿ ...ದ ಮೇಲೆ ತನ್ನ ಪರಾಕ್ರಮವನ್ನು ತೋರಿಸಿ ಯುದ್ಧ ಕೊಟ್ಟಿದೆ. ಹಿಂಗಿರ ...ದಲ್ಲಿ ಮಾಂಟನೀಗ್ರೋದವರು ಆಸ್ಟ್ರಿಯಾದವರಿಗೆ ಶರಣಾಗತರಾ ...ದಾಯಿತು. ಈಚೆಗೆ ಬಂದ ತಂತೀವರ್ತಮಾನಗಳನ್ನು ನೋಡಿದರೆ ...ದವರು ಮಾಂಟನೀಗ್ರೋದವರ ಕೂಡ ಸಂಧಾನ ನಡಿಸಿ ಅವರಿಗೆ ಹೇಳಿದ ...ಪ್ರಕಾರ ಮಾಂಟನೀಗ್ರೋದವರು ತಮ್ಮ ಸಂಸ್ಥಾನದೊಳಗಿಂದ ...ಕೆಲವು ಹೆಂಗಳರನ್ನೂ ಹೊರಕ್ಕೆ ಸಾಗಿಸಬೇಕಾಯಿತೆಂದು ತಿಳಿಯು ...ಮಾಂಟನೀಗ್ರೋದವರು ತಪ್ಪಿಸಿಕೊಂಡು ಹೋಗಲು ಅವಕಾಶ ದೊರಕ ...ಪ್ರಯತ್ನಗಳನ್ನು ನಡಿಸುತ್ತಲೇ ಇದ್ದರು. ಮಾಂಟನೀಗ್ರೋ ದೊರೆಯಾದ ...ರಾಜನೂ ಆತನ ಸೈನಿಕರೂ ಅಂಥಾ ಸಂಧಾನಕ್ಕೆ ಒಪ್ಪಲಿಲ್ಲ ... ಅವರು ನಿಂತು ಯುದ್ಧಮಾಡುತ್ತಿದ್ದಾರೆಂದೂ ತಿಳಿಸಲಾಗಿದೆ. ...ದವರು ಹೇಳುವ ಕರಾರನ್ನು ಒಪ್ಪಿಕೊಳ್ಳುವುದಕ್ಕಿಂತಲೂ ಪ್ರಾಣ ...ರೆಂದು ನಿಕೋಲಸ್ ರಾಜನು ಹೇಳುತ್ತಾನೆ. ಆಸ್ಟ್ರಿಯಾದವರು ...ವನ್ನು ಸ್ವಾಧೀನಪಡಿಸಿಕೊಂಡರು. ಆದರೆ ಮಾಂಟನೀಗ್ರೋ ...ನ 40,000 ಸೈನಿಕರು ಒಟ್ಟುಗೂಡಿ ಅಲ್ಬೇನಿಯಾದಿಗೆ ಹೋಗಿ ಸರ್ಬಿಯಾ ...ನ್ನು ಸೇರಿಕೊಂಡರು. ಅವರ ರಾಜನೂ, ರಾಣಿಯೂ, ಅವರ ರಕ್ತ ...ಅಲ್ಲಿಂದ ಜೆನರಲು ಫ್ರೆಂಚ್ ಸಿಗೆ ಸೇರಿದ ಲಯನ್ಸ್ ಪಟ್ಟಣಕ್ಕೆ ...ದ್ದಾರೆ. ರಾಜಕುಮಾರರು ಮಾತ್ರ ಸ್ವದೇಶದಲ್ಲೇ ಇರುವರು. ಮಾಂಟ ...ಸೈನಿಕರೂ, ಸರ್ಬಿಯಾದವರೂ ಕಾರ್ಫ್ಯೂ ದ್ವೀಪದಲ್ಲಿ ಕಲೆತು, ಮುಂದೆ ...ತೊಡಗಲು ಎಲ್ಲಾ ಸಿದ್ಧಪಡಿಸಿಕೊಳ್ಳುವಂತೆ ಕಾಣುವುದು.

...ಯಾ ಗವರ್ನಮೆಂಟೇ ಕಾರ್ಫ್ಯೂ ದ್ವೀಪದಲ್ಲಿರುವಂತೆ ಫ್ರೆಂಚ್ ಮಿಲಿ ...ದಾರರು ಆ ದ್ವೀಪವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆಂದು ...ನಮ್ಮ ಚಕ್ರವರ್ತಿ ಜಾರ್ಜ್ ಸಾರ್ವಭೌಮರವರು ಸರ್ಬಿಯಾ ...ದ ಪೀಟರ್ ದೊರೆಯವರಿಗೆ—"ಮಿತ್ರಮಂಡಲಿಯವರು ಪರಾಕ್ರಮ ...ಸರ್ಬಿಯಾ ಸೈನಿಕರಿವರನೆ ಕಲೆತು ನಮ್ಮ ಪ್ರಜೆಗಳ ಸ್ವಾತಂತ್ರ್ಯ ...ಕೊಡುತ್ತೇವೆಂದು ಖಚಿತಮಾಡಿಕೊಂಡಿದ್ದಾರೆ" ಎಂಬದಾಗಿ ತಂತೀ ...ವನ್ನು ಕಳುಹಿಸಿದಾರೆ.

...ಮಂಡಲಿಯವರು ಬಾಲ್ಕೇನಿಯಾದ ಎರಡು ತೀರಪಟ್ಟಣಗಳಿಗೆ ಮಿರಂಗಿ ...ನ್ನು ಹೊಡೆದರು. ಅದಲ್ಲದೆ ಅವರು ಮಿತಿಲೀನ ಎಂಬ ಆಸ್ಟ್ರಿಯಾ ...ಯ ದ್ವೀಪಕ್ಕೆ ಕೆಲವು ಸೈನ್ಯಗಳನ್ನು ಕಳುಹಿಸಿಕೊಟ್ಟು ಅಲ್ಲಿ ...ಗ್ರೀಕ್ ದವರು ರಷ್ಯಾದವರ ಮೇಲೆ ಯುದ್ಧವನ್ನು ಹೂಡುವುದಕ್ಕಾಗಿ ...ಸಂಸ್ಥಾನಗಳಲ್ಲಿದ್ದ ಸೈನ್ಯಗಳನ್ನು ವಾಪಸು ಕರಸಿಕೊಂಡಿರೋಣದ ...ದು ಸಲೋನಿಕ ಪಟ್ಟಣದ ಮೇಲೆ ನುಗ್ಗಬಹುದಾಗಿಲ್ಲವೆಂದು ತಂತೀ ...ಹೇಳುವವು.

...ಜರ್ಮನ್ ಚಕ್ರವರ್ತಿಯವರು ಸರ್ಬಿಯಾ ರಾಜಧಾನಿಯಾದ ನಿಷ್ ಪಟ್ಟಣ ...ವರಿ ತಾ 18 ರಲ್ಲಿ ಬಾಲ್ಗೇರಿಯಾ ಸಂಸ್ಥಾನದ ಫರ್ಡಿನೆಂಡ್ ರಾಜ ...ಭೇಟಿ, ಆ ರಾಜನಿಗೆ "ಫೀಲ್ಡ್ ಮಾರ್ಷಲ್" ಎಂಬ ಬಿರುದನ್ನು ...ದರು, ಆ ರಾಜನು ಅದಕ್ಕೆ ಪ್ರತಿಯಾಗಿ ಜರ್ಮನ ಚಕ್ರವರ್ತಿಯವರ ...ವನ್ನು ಕೊಂಡಾಡಿ ಅವರಿಗೆ ಒಂದು ಬಿರುದನ್ನು ಕೊಟ್ಟನೆಂದೂ ...ಯಾಗಿದೆ.

ಆಫ್ರಿಕಾದಲ್ಲಿ.

...ಯ ಬ್ರಿಟಿಷರೂ ಸೇರಿ ಜನವರಿ ತಾ. 1 ರಲ್ಲಿ ಆಫ್ರಿಕಾದಲ್ಲಿರುವ ...ನ್ ನೀವೋಯು ರಾಜಧಾನಿಯನ್ನು ಜರ್ಮನಿಯವರಿಂದ ಕಿತ್ತು ... ಅಲ್ಲಿಂದೀಚೆಗೆ ಅವರು ಜರ್ಮನಿಯವರು ದಕ್ಷಿಣದಲ್ಲಿರುವ ಸ್ಪೆಯಿನ್ ...ಹೋಗಿ ಸೇರಿಕೊಳ್ಳದಂತೆ ಮುರಿದು ಹಾಕಿದರು. ಜರ್ಮನಿಯವರು ...ಕೊಂಡಿದ್ದ 17 ಮಂದಿ ಬ್ರಿಟಿಷ್ ಮತ್ತು 7 ಮಂದಿ ಫ್ರೆಂಚ್ ಸಭ್ಯ ...ನ್ನು, 3 ಮಂದಿ ಫ್ರೆಂಚ್ ಹುದ್ದೇದಾರರನ್ನು ಬಿಡುಗಡೆಮಾಡಿದರು ...ಸುವರು ಎರಡು ನಗರಗಳನ್ನು ಕೈವಶಸಿಬಿಟ್ಟು, ಸ್ಪೆಯಿನ್ನವರಿಗೆ ಸೇರಿದ ...ಹೋಗಿ ಸೇರಿಕೊಳ್ಳಬೇಕೆಂದು ಪ್ರಯತ್ನ ಪಡುತ್ತಿರುವರಂತೆ. ದಕ್ಷಿಣ ...ಆಫ್ರಿಕದಲ್ಲಿ ಜರ್ಮನಿಯವರನ್ನು ಸೋಲಿಸಿ ಅವರ ಸ್ಥಾನಗಳಿಂದ ಓಡಿ ...ದರು. ಆದಕಾರಣ ಅಲ್ಲಿ ಯುದ್ಧಕಾರ್ಯಗಳು ಕೊನೆಗಾಣುತ್ತಿರುವೆ ...ಯಾಗಿದೆ.

ಇತರ ವಿಷಯಗಳು.

...ಸ್ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆ ...ವರೆಗೆ ತಿಳಿದು ಬಂದಿರುವ ಮಟ್ಟಿಗೂ ಕಳೆದ ಮರುಷ ಜರ್ಮನ ಸೈ ...ಆದ ನಷ್ಟವನ್ನು ಸಂಗ್ರಹವಾಗಿ ಪ್ರಕಟಿಸಿದರು. ಜರ್ಮನ ಸೈನ್ಯದ ...ರತರದವರು 6,83,986 ಮಂದಿ, ಸತ್ತುಹೋದವರು 24,080 ಮಂದಿ, ...ದವರು, 15,66,549 ಮಂದಿ ಸಿಕ್ಕದೆ ಇರುವವರು 3,50,153 ಮಂದಿ, ...ಟ್ಟು 25,35,768 ಮಂದಿ.—ಜರ್ಮನಿಯ ಹಲವು ಪಟ್ಟಣಗಳಲ್ಲಿ ದಂಗೆ ...ಪ್ರಕಟವಾಗಿದೆ. ಜರ್ಮನಿಯವರ ಜೆಪ್ಪೆಲಿನ್ ಎಂಬ ಭಾರೀ ವಿಮಾ ...ಗಳು ಎರಡು ಬೆಲ್ಜಿಯಮ್ ನಲ್ಲಿ ನಾಶವಾದವೆಂದೂ, ಇನ್ನೊಂದು ...ಸುಟ್ಟುಹೋಯಿತೆಂದೂ ತಿಳಿಸಲ್ಪಟ್ಟಿದೆ.—ಜರ್ಮನಿಯ ಒಂದು ಟಾರ್ಪೀ ...ದೋಣಿಯು ಡೆನ್ಮಾರ್ಕ್ ರಾಜ್ಯದ ತೀರದ ಬಳಿ ಮುಳುಗಿಹೋಯಿತು. ...ಯುದ್ಧದಲ್ಲಿ ಯಾವ ಪಕ್ಷವನ್ನೂ ವಹಿಸದೆ ತಟಸ್ಥರಾಗಿರುವ ದೇಶಗಳ ...ಗಳಿಗೆ ಲಂಚ ಕೊಡುವುದಕ್ಕೋಸ್ಕರ ಜರ್ಮನಿಯವರು 7,25,00 0 0 ...ನ್ನು ಖರ್ಚುಮಾಡಿದರೆಂದು ಅಮೇರಿಕದ ಪತ್ರಿಕೆಗಳು ಹೇಳುತ್ತವೆ ...ದಲ್ಲಿ ಜನರಿಗೆ ಬನಾಸಾಗಳನ್ನು, ಬೀಡಾದಲ್ಲಿ ಜನರಿಗೆ ಅರ ...ಗ್ರೀಸಿನ ರಾಯರುಗಳಿಗೆ ಮೋಟರ್ ಕಾರುಗಳನ್ನೂ ಕೊಡಿಸಿದರಂತೆ ...ಯವರು ನಾಲ್ವರು ಬೆಲ್ಜೀಯನವರನ್ನು ಯುದ್ಧದಲ್ಲಿ ದ್ರೋಹ ...ಹಿಡಿದು ಕೊಂದು ಹಾಕಿದರೆಂದೂ, ಅನೇಕ ಗಂಡಸರನ್ನೂ ಹೆಂಗ ...ಸೆರೆಮನೆಗೆ ಹಾಕಿದನೆಂದೂ ತಿಳಿದು ಬಂದಿದೆ.

...ಆಫ್ರಿಕದ ಬ್ರಿಟಿಷ್ ಸೈನಿಕರು ಈಜಿಪ್ಟಿಗೆ ಬಂದಿಳಿದರು. ಸೂಯಸ್ ...ಕಾಲುವೆಯನ್ನು ಬಹಳ ಬಲವಾಗಿ ಸೈನ್ಯಗಳನ್ನಿಟ್ಟು ಕಾಪಾಡುತ್ತಿದಾರೆ. ...ಎಂಬ ಬ್ರಿಟಿಷ್ ಮೆಯಿಲ್ ಜಹಜು ಮುಳುಗಿಹೋಯಿತಷ್ಟೆ ...ತಮ್ಮ ಸಬ್ ಮೆರೀನುಗಳು ಇರಲಿಲ್ಲವೆಂದು ಜರ್ಮನಿಯವರೂ ಆಸ್ಟ್ರಿಯಾದವರೂ ಹೇಳಿದ ಕಾರಣ ಅದು ಮುಳುಗಿದ್ದು ಹೇಗೆಂದು ಬ್ರಿಟಿಷ್ ವ್ಯಾಪಾರ ಮಂಡಲಿಯ ಅಧಿಕಾರಿಗಳು ತನಿಖೆ ಮಾಡುತ್ತಿದಾರೆ. ಪರ್ಷಿಯಾ ಎಂಬೀ ಜಹಜನ್ನು ಟರ್ಕಿಯ ಸಬ್ ಮೆರೀನು ಬಂದು ಮುಳುಗಿಸಿತೆಂದು ತಿಳಿಸಲಾಗಿದೆ. ಕಳೆದ ವಾರ ಬ್ರಿಟಿಷರ ಎರಡು ಜಹಜುಗಳು ಮುಳುಗಿಸಲ್ಪಟ್ಟವು. ಅದರೊಳಗಿದ್ದವರು ಬದುಕಿಬಂದರು.

ಮಿತ್ರಮಂಡಲಿಯ ಕಡೆ ಯುದ್ಧದ ಸಭೆಯು ಲಂಡನ್ ಪಟ್ಟಣದಲ್ಲಿ ಕೂಡಿ ವಿಷಯಗಳನ್ನು ಕುರಿತು ಚರ್ಚೆಗಳು ನಡಿಸಲ್ಪಟ್ಟವು. ಎಲ್ಲಾ ರಾಜ್ಯಗಳವರೂ ಏಕಮನಸ್ಸಿನಿಂದ ಶತ್ರುವನ್ನು ಸೋಲಿಸುವ ಭಾಗದಲ್ಲಿ ಸಂಕಲ್ಪ ಮಾಡಿ ಕೊಂಡಿದಾರೆ.

ಕಳೆದ ಶನಿವಾರ ರಾತ್ರಿ ಶತ್ರುವಿನ ಒಂದು ಸಮುದ್ರವಿಮಾನವು ಇಂಗ್ಲೆಂಡಿನಲ್ಲಿ ಕೆಂಟ್ ತೀರದ ಮೇಲೆ ಬಂದು ಒಂಭತ್ತು ಸಿಡಿಮದ್ದಿನ ಗುಂಡುಗಳನ್ನು ಹಾಕಿ ತಪ್ಪಿಸಿಕೊಂಡು ಹೋಯಿತು. ಇದರಿಂದ ಬೆಂಕಿಗಳು ಹುಟ್ಟಿದವು. ಒಬ್ಬ ಗಂಡಸು ಮೃತಪಟ್ಟನು; ಗಂಡಸರಿಬ್ಬರು, ಒಬ್ಬ ಹೆಂಗಸು, ಮಕ್ಕಳು ಮೂರು ಮಂದಿ ಇವರಿಗೆ ಸ್ವಲ್ಪ ಗಾಯಗಳಾಗಿವೆ. ಮರುದಿನ ಹಗಲಿನಲ್ಲೇ ಎರಡು ಸಮುದ್ರವಿಮಾನಗಳು ಬಂದವು. ಆದರೆ ಬ್ರಿಟಿಷ್ ವಿಮಾನಗಳು ಅವನ್ನು ಓಡಿಸಿಬಿಟ್ಟವು. ನಷ್ಟವೇನೂ ಆಗಲಿಲ್ಲ.

ಒಳದೇಶದ ವೃತ್ತಾಂತಗಳು.

ಈ ವಾರ ನಮಗೆ ತಲುಪಿರುವ ಕೆಲವು ಬಾತ್ಮಿಗಳನ್ನು ಪ್ರಕಟಿಸಲು ಅವಕಾಶವಾಗಲಿಲ್ಲವೆಂದು ವಿಷಾದಿಸುತ್ತೇವೆ.

ನಮ್ಮ ದಿವಾನ್ ರವರು ನಾಳಿದ್ದು ಬೆಂಗಳೂರಿಂದ ರಾಜಧಾನಿಗೆ ದಯಮಾಡಿ, ಸುತ್ತು ಮುತ್ತಿನ ಕೆಲವು ಗ್ರಾಮಗಳನ್ನು ಪರ್ಯಾಟನೆ ಮಾಡುವರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿರುವ ರಾಯಬಹದೂರ್ ಮ|| ಎ. ನರಸಿಂಹಯ್ಯಂಗಾರ್ಯರಿಗೆ ಕಾಯಿಲೆಯಾಗಿ ಹಾಸಿಗೆಯಲ್ಲಿದಾರೆಂದು ತಿಳಿಸಲು ವಿಷಾದವಾಗುವುದು. ಅವರಿಗೆ ಬೇಗನೆ ಆರೋಗ್ಯವುಂಟಾಗಲೆಂದು ಹಾರೈಸುತ್ತೇವೆ

ರಾಜಧಾನಿಯ ದೊಡ್ಡಪೇಟೆಯಲ್ಲಿ ಭಾರೀ ವರ್ತಕರಾದ ಮ|| ಕೃಷ್ಣರಾಮಸೆಟ್ಟರು ಕಳೆದ ಭಾನುವಾರ ತಮ್ಮ ತಂದೆಯವರ ತದ್ದಿನದ ನಿಮಿತ್ತ ಸಾವಿರಾರು ಬಡವರಿಗೆ ಅನ್ನದಾನ ಮಾಡಿ ಸಂತೋಷಪಡಿಸಿದರು. ಮ|| ಸೆಟ್ಟರ ಔದಾರ್ಯವು ಸ್ತೋತ್ರಾರ್ಹವಾಗಿದೆ.

ಮೈಸೂರು ನ್ಯಾಯವಿಧಾಯಕ ಸಭೆಗೆ ಡಿಸ್ಟ್ರಿಕ್ಟುಗಳಿಂದ ಮೆಂಬರಾಗ ತಕ್ಕವರ ಚುನಾವಣೆಯು ಮಾರ್ಚಿ ತಾ. 10 ನೇ ಶುಕ್ರವಾರ ನಡೆಯುವುದೆಂದೂ, ಮೆಂಬರಾಗಬೇಕೆಂಬವರು ಫೆಬ್ರವರಿ ತಾ 11 ರೊಳಗಾಗಿ ಗವರ್ನಮೆಂಟಿಗೆ ಅರ್ಜಿ ಕೊಡಬೇಕೆಂದೂ ಸರ್ಕಾರದವರು ತಿಳಿಸಿದಾರೆ.

ಫೆಬ್ರವರಿ ತಾ. 12 ನೇ ಶನಿವಾರ ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲೂ, ತಾ. 13 ನೇ ಭಾನುವಾರ ಟಿ. ನರಸೀಪುರದ ತಾಲೂಕು ಮುಡುಕುತೊರೆಯಲ್ಲೂ ದನಗಳ ಪ್ರದರ್ಶನಗಳು ನಡಿಸಲ್ಪಟ್ಟು ಉತ್ತಮವಾದ ರಾಸುಗಳಿಗೆ ಬಹುಮಾನಗಳು ಕೊಡಲ್ಪಡುವವೆಂದು ಡೆಪ್ಯುಟಿ ಕಮಿಷನರು ಪ್ರಕಟಿಸಿದಾರೆ.

ಕೋಲಾರದ ಪ್ಲೀಡರ್ ಮ|| ಎಂ. ಎಸ್. ರಾಮಾಚಾರ್ಯರು ಸಿದ್ಲಘಟ್ಟ ಕೇಸಿನ ವಿಚಾರವಾಗಿ ಮ|| ಬಿ. ನಾರಣಪ್ಪನವರಿಗೆ ಅಪಮಾನ ಕರವಾದ ಸಂಗತಿಗಳನ್ನು ಬೆಂಗಳೂರು ಪತ್ರಿಕೆಯಲ್ಲಿ ಬಾತ್ಮಿ ಬರೆದರೆಂದು ಮೊಕದ್ದಮೆ ಆಯಿತು. ಮಾಜಿಸ್ಟ್ರೇಟರು ವಿಚಾರಣೆ ಮಾಡಿ ಪ್ರತಿವಾದಿಯಿಂದ 100 ರೂಪಾಯಿ ದಂಡವನ್ನು ಕೊಡಿಸಿದರು.

ಕಂಟ್ರ್ಯಾಕ್ಟರ್ ರಾಮಯ್ಯನೆಂಬಾತನು ಶಿವಮೊಗ್ಗಾ ಇಂಜನಿಯರ್ ಮ|| ಅರುಣಾಚಲಯ್ಯನವರಿಗೆ ಲಂಚ ಕೊಡುವುದಕ್ಕೆ ಪ್ರಯತ್ನಪಟ್ಟಂತೆ ಮೊಕದ್ದಮೆ ಆಗಿ 20 ದಿನಗಳ ಸಜಾವೂ 200 ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು. ಚೀಫ್ ಕೋರ್ಟಿನವರು ಆ ಶಿಕ್ಷೆ ಸಾಲದೆಂದು ಈಗ ಆತನಿಗೆ ನೋಟೀಸು ಕೊಟ್ಟಿರುವಂತೆ ಪ್ರಕಟವಾಗಿದೆ

ಬೆಂಗಳೂರು ಫ್ರೀಮೇಸನರ ಸಂಘದ ಪ್ರೀತಿಸಭೆಯಲ್ಲಿ ಕಳೆದ ಶನಿವಾರ ಪ್ರೀತಿಯ ಕೂಟವು ಜರುಗಿತು. ಪ್ರೀತಿಯಲ್ಲಿರಬೇಕಾದ ಪರಸ್ಪರ ಪ್ರೀತಿ ವಿಚಾರವಾಗಿ ಸ್ವಾಮಿ ಚಂದ್ರಶೇಖರಯ್ಯನವರು ಬಹಳ ಚೆನ್ನಾಗಿ ಭಾಷಣ ಮಾಡಿದರು. ಪುಂಗನೂರು ಸಂಸ್ಥಾನದ ರಾಜೇಂದ್ರರು ಹಾಜರಾಗಿದ್ದು ಸಂಘವನ್ನು ಪುರಸ್ಕರಿಸಿ ಸಂತೋಷಪಟ್ಟರು.

ಕಳೆದ ಸೋಮವಾರ ಸಾಯಂಕಾಲ ರಾಜಧಾನಿಯ ಪ್ರಜೆಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ಅಡ್ವೊಕೇಟ್ ಮ|| ಎಸ್. ನಂಜಪ್ಪನವರ ಅಧ್ಯಕ್ಷತೆಯಲ್ಲಿ ಮೈಸೂರು ಸಿಟಿಯ ರೈತ ಸಂಘವನ್ನು ಪುನಸ್ಥಾಪನೆಮಾಡಿದರು ಮ|| ಸಂಜೀವಪ್ಪ, ಮೌಲ್ವಿ ದರ್ವೇಷ್ ಸೀರ್ ಸಾಹೇಬರು, ವೇ|| ಟಿ. ಶ್ರೀನಿವಾಸ ಜೋಯಿಸರು, ಮ|| ವೆಂಕಟಕೃಷ್ಣಯ್ಯನವರೇ ಮುಂತಾದವರು ಭಾಷಣಗಳನ್ನು ಮಾಡಿ ಪ್ರಜೆಗಳು ತಮ್ಮ ಕಷ್ಟ ಕೊರತೆ ಅಭಿಪ್ರಾಯಗಳನ್ನು ಸರ್ಕಾರದವರ ಗಮನಕ್ಕೆ ತರಬೇಕಾದದ್ದು ಅವಶ್ಯವೆಂದು ದೃಷ್ಟಾಂತಪಡಿಸಿದರು. ಈ ರೈತ ಸಂಘಕ್ಕೆ ಮ|| ವಿ. ಎಸ್. ನರಸಿಂಹಯ್ಯಂಗಾರ್ಯರು ಪ್ರೆಸಿಡೆಂಟರಾಗಿಯೂ, ಮ|| ವೆಂಕಟಕೃಷ್ಣಯ್ಯನವರು ವೈಸ್ ಪ್ರೆಸಿಡೆಂಟರಾಗಿಯೂ, ಮ|| ಸಾಹುಕಾರ್ ವರ್ಧಮಾನಯ್ಯನವರೂ ಅಡ್ವೊಕೇಟ್ ಮ|| ಎಸ್. ನಂಜಪ್ಪನವರೂ ಸೆಕ್ರೆಟರಿಗಳಾಗಿಯೂ ನೇಮಕವಾದರು. ಎಲ್ಲಾ ಮೊಹಲ್ಲೆಗಳಲ್ಲೂ ಮುಖಂಡರಾಗಿರುವ ಬೇರೆ ಬೇರೆ ಕೋಮುಗಳ ಮತ್ತು ಕಸಬುಗಳ ದೊಡ್ಡ ಮನುಷ್ಯರನ್ನು ಕಮಿಟಿ ಮೆಂಬರಾಗಿ ನೇಮಕ ಮಾಡಿಕೊಂಡಿದರು. ಬಳಿಕ ಸರ್ಕಾರದವರು ಆಸ್ಪತ್ರೆಗಳಲ್ಲಿ ರೋಗಿಗಳಿಂದ ಚಿಕಿತ್ಸೆಗಾಗಿ ಫೀಜು ವಸೂಲ್ಮಾಡುವುದನ್ನು ನಿಲ್ಲಿಸಬೇಕೆಂಬ ವಿಷಯದಲ್ಲೂ, ಹೊಸ ಮನೆಗಳನ್ನೂ ಕಟ್ಟಿಕೊಟ್ಟು ಹಳೇ ಮನೆಗಳನ್ನು ಒಡೆಯಬೇಕೆಂತಲೂ, ಭಾವಿಗಳನ್ನು ಹೆಲ್ತ್ ಆಫೀಸರು ಮುಚ್ಚಿಸದಂತೆ ತಡೆಯಬೇಕೆಂಬ ವಿಷಯದಲ್ಲೂ ಮೇಲ್ಕಂಡ ಕಮಿಟಿಯ ಕೆಲವು ಮೆಂಬರುಗಳು ದಿವಾನ್ ರವರನ್ನು ಮೊಖ್ತಾ ಕಂಡು ಅರಿಕೆ ಮಾಡಿಕೊಳ್ಳುವಂತೆ ಗೊತ್ತುಮಾಡಿದಾರೆ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲಿನಲ್ಲಿ ಸಭೆ ಸೇರಿ ತಿಂಗಳು ಕಟ್ಟೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಕಳೆದ ಡಿಸೆಂಬರ್ ತಿಂಗಳಲ್ಲಿ ರಾಜಧಾನಿಯಲ್ಲಿ ಜನನ 196; ಮರಣ—ಪ್ಲೇಗ್ 1, ಜ್ವರ 24, ಮಲೇರಿಯ 14, ಎಳವು 10, ಕ್ಷಯ 8, ಇತರ ಕಾರಣಗಳು 145, ಒಟ್ಟು 202 ಆಗಿವೆ ಮೆಂಬರುಗಳು ಚರ್ಚಿಸಿ ತೀರ್ಮಾನಮಾಡಿದ ಮುಖ್ಯ ವಿಷಯಗಳೇನೆಂದರೆ—ಮ್ಯುನಿಸಿಪಲ್ ಶಿಲ್ಕು ಹಣಗಳ ಪೈಕಿ 25,000 ರೂಪಾಯನ್ನು ಮೈಸೂರು ಬ್ಯಾಂಕಿನಲ್ಲಿ ಶೇಕಡಾ 4½ ಬಡ್ಡಿ ಬರುವಂತೆ ಡಿಪಾಜಿಟ್ಟು ಇಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.—ಛತ್ರ, ಮಠ, ದೇವಸ್ಥಾನಾದಿ ಧರ್ಮಗಳಿಗೆ ಎಷ್ಟೆಷ್ಟು ನೀರನ್ನು ಧರ್ಮಕ್ಕೆ ಕೊಡಬಹುದೆಂಬ ವಿಷಯ ಚರ್ಚೆಯಾಯಿತು. ಮ್ಯುನಿಸಿಪಾಲಿಟಿಯವರು ಎಲ್ಲಾ ಮೊಹಲ್ಲೆಗಳಲ್ಲೂ 88 ಧರ್ಮನಲ್ಲಗಳಿರುವವೆಂದು ಪಟ್ಟಿ ಮಾಡಿದ್ದರು. ಅವುಗಳಿಗೆಲ್ಲಾ ಮೀಟರ್ ಇಟ್ಟು ಒಂದು ವರುಷ ಎಷ್ಟು ನೀರು ಖರ್ಚಾಗುತ್ತೆಂದು ಗೊತ್ತು ಮಾಡಿ ಅದರ ಮೇಲೆ ಧರ್ಮಕ್ಕೆ ಇಷ್ಟು ಗ್ಯಾಲನ್ ಬಿಡಬಹುದೆಂದು ತೀರ್ಮಾನಿಸಬಹುದೆಂದು ಕೆಲವು ಮೆಂಬರುಗಳು ಅಭಿಪ್ರಾಯಪಟ್ಟರು. ಅಷ್ಟು ಮೀಟರುಗಳನ್ನು ಇಡಿಸುವುದಕ್ಕೆ ಬಹಳ ಹಣ ಖರ್ಚಾಗೋಣ ದರಿಂದ ಆ ಅಭಿಪ್ರಾಯ ಸಾಧುವಲ್ಲವೆಂದು ಇತ್ಯಾರ ಮಾಡಲಾಯಿತು. ಮ|| ಎಂ. ಸಿ. ರಂಗಯ್ಯಂಗಾರ್ಯರು ಧರ್ಮಕ್ಕೆ ಅನುಕೂಲವಾಗುವಂತೆಯೂ, ಧರ್ಮಕ್ಕೆ ಕೊಟ್ಟ ಯಾರೂ ನೀರನ್ನು ದುರ್ವ್ಯಯದಿಂದ ಉಪಯೋಗಿಸದಂತೆಯೂ ಮಾಡಬೇಕಾಗಿದೆ. ಇದನ್ನು ಇತ್ಯರ್ಥಮಾಡುವುದು ಕಷ್ಟ ಎಂದು ಹೇಳಿದರು. ಕಡೆಗೆ ಈ ನೀರಿನ ಸರಬರಾಯಿ ವಿಚಾರವನ್ನು ಆಮೂಲಾಗ್ರವಾಗಿ ಶೋಧಿಸಿ ರಿಪೋರ್ಟು ಕೊಡಬೇಕೆಂದು ಒಂದು ಕಮಿಟಿಯನ್ನು ನೇಮಕ ಮಾಡಿದರು.

ಚಾಮರಾಜಪೇಟೆಯಲ್ಲಿ ಮ|| ನಂಜುಂಡರಾಜೆ ಅರಸಿನವರ ಬಂಗಲೆಯ ಉತ್ತರ ಪಾರ್ಶ್ವದಲ್ಲಿರುವ ಖಾಲಿ ನಿವೇಶನವನ್ನು ಅವರಿಗೆ ಗಜ ಒಂದಕ್ಕೆ 2 ಆಣೆಯಂತೆ ಮಾರಬಹುದೆಂದೂ, ಅದಕ್ಕೆ ಅವರು ಪ್ರೆಸಿಡೆಂಟರವರು ಒಪ್ಪುವಂತೆ ಅದರ ಗೋಡೆಯನ್ನು ಮೂರು ತಿಂಗಳೊಳಗಾಗಿ ಹಾಕಿಕೊಂಡು ಕಟ್ಟಡವೇನೂ ಕಟ್ಟದೆ ಖಾಲಿ ಬಿಟ್ಟುಕೊಂಡಿರಬೇಕೆಂದೂ ಕಮಿಟಿಯವರು ಮಾಡಿದ್ದ ಶಿಫಾರಸನ್ನು ಮೆಂಬರುಗಳು ಒಪ್ಪಿಕೊಂಡಿದಾರೆ.—ಹೊಸ ಮ್ಯುನಿಸಿಪಲ್ ಆಫೀಸನ್ನು ಕಟ್ಟುವುದಕ್ಕಾಗಿ ಸಂಸ್ಕೃತ ಪಾಠಶಾಲೆಯ ಉತ್ತರ ಪಾರ್ಶ್ವದಲ್ಲಿರುವ ಮನೆಗಳನ್ನು ಕೊಂಡುಕೊಳ್ಳುವುದಕ್ಕೋಸ್ಕರ 28,865 ರೂ ಅಂದಾಜಾ ಪಟ್ಟಿಯನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.—ದೊಡ್ಡಕೆರೆಯಲ್ಲಿ ಸೋಪಾನಗಳ ಬಳಿ ಉದ್ಭವಿಸ್ಸ ಆಳವಾದ ಒಂದು ವಿಧವಾದ ಸೊಳ್ಳೆಗಳು ಹುಟ್ಟದಂತೆ ಮಾಡುವುದಕ್ಕೆ ತಿಂಗಳಿಗೆ 40 ರೂಪಾಯಿ ಖರ್ಚಿನಲ್ಲಿ ಸಿಬ್ಬಂದಿಯನ್ನು ಮೂರು ತಿಂಗಳ ವರೆಗೆ ನೇಮಿಸಿಕೊಳ್ಳಬಹುದೆಂದೂ, ಈ ಕೆಲಸಕ್ಕೆ ಬೇಕಾಗುವ ಸಾಮಾನುಗಳಿಗಾಗಿ 30 ರೂಪಾಯಿ ಖರ್ಚು ಮಾಡಬಹುದೆಂದೂ ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.—ಮಲೇರಿಯಾ ಜ್ವರವನ್ನುಂಟುಮಾಡುವಂಥಾ ಸೊಳ್ಳೆಗಳು ಹುಟ್ಟದಂತೆ ಜಾಗ್ರತೆ ವಹಿಸುವ ಸಿಬ್ಬಂದಿಯನ್ನು 1916 ನೇ ಮಾರ್ಚಿ ಆಪ್ರಿಲ್ ವರೆಗೆ ಇಟ್ಟುಕೊಂಡಿರಬಹುದೆಂದು ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿದಾರೆ.—ಮ್ಯುನಿಸಿಪಲ್ ಆಫೀಸಿನಲ್ಲಿ ಹಂಗಾಮಿಯಾಗಿ ಇಟ್ಟುಕೊಂಡಿರುವ ಸಿಬ್ಬಂದಿಯನ್ನೆಲ್ಲಾ 1916 ನೇ ಜೂನ್ ಆಪ್ರಿಲ್ ತನಕ ವಜಾಮಾಡಬೇಕಾದ್ದಿಲ್ಲವೆಂದು ಸರ್ಕಾರದವರು ಹುಕುಂ ಮಾಡಿದಾರೆ.—ರಾಜಧಾನಿಯಲ್ಲಿ ಅರಮನೆಗೂ ಸರ್ಕಾರಕ್ಕೂ ಸೇರಿರುವ ಕಟ್ಟಡಗಳಿಂದ ವಸೂಲಾಗದೆ ಬಾಕಿ ನಿಂತಿರುವ ರೂ. 7,229-1-4 ಪೈ ಕಂದಾಯಗಳನ್ನು ರಿಮಿಷನ್ ಮಾಡಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದನ್ನು ಮೆಂಬರುಗಳು ಒಪ್ಪಿಕೊಂಡರು

ಹೋ ಮನೆ ಕಟ್ಟುವವರಿಗೆ ಪ್ಲಾನ್ ಬರೆದುಕೊಡುವುದಕ್ಕೋಸ್ಕರ 20 ರೂಪಾಯಿ ಸಂಬಳ, 5 ರೂಪಾಯಿ ಟ್ರಾವೆಲಿಂಗ್ ಅಲೋಯನ್ಸೂ ಕೊಟ್ಟು ಹಂಗಾಮಿ ನೌಕರನನ್ನು ಜೂನ್ ಆಪ್ರಿಲ್ ವರೆಗೆ ನೇಮಿಸಿಕೊಳ್ಳಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಚಟ್ಟಹಳ್ಳಿ ಬಡಾವಣೆಯಲ್ಲಿ ಎಲ್ಲಾ ತಂಗಡದ ಜನಗಳ ಉಪಯೋಗಕ್ಕಾಗಿ 11 ಎಕರೆ ಜಮೀನನ್ನು ಕೊಂಡುಕೊಂಡು ಅಲ್ಲಿ ಹೆಣಗಳನ್ನು ಹೂಳುವುದಕ್ಕೂ, ಸುಡುವುದಕ್ಕೂ ತಕ್ಕ ಅನುಕೂಲಗಳನ್ನು ಕಲ್ಪಿಸಬೇಕೆಂದು ಇತ್ಯರ್ಥವಾಗಿದೆ. ಅಲ್ಲಿ ಬೇಲಿ ಹಾಕಿ, ಭಾವಿಗಳನ್ನು ತೋಡಿಸಿ, ಕಟ್ಟೆಕಟ್ಟಿಸಿ, ಬೋರ್ಡು ಹಾಕಿಸುವುದೇ ಮೊದಲಾದ ಕಾಮಗಾರಿಗಳಿಗೆ 2,648 ರೂಪಾಯಿ ಖರ್ಚು ಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.— ಮ|| ಅಯಾಚಿತ ನಾರಾಯಣ ದೀಕ್ಷಿತರು ಟೋಲ್ ಗೇಟ್ ಕಂಟ್ರಾಕ್ಟು ಮಾಡಿ, ಆ ಬಾಬತು ಹಣವನ್ನು ಮ್ಯುನಿಸಿಪಾಲಿಟಿಗೆ ಪಾವತಿ ಮಾಡಲಿಲ್ಲವಾಗಿ ದಾವಾ ಮಾಡಬೇಕಾಯಿತು. ಅಸಲ್ ಹಣವನ್ನು ಬಳಿಕ ಪಾವತಿ ಮಾಡಿದರು. ಕೋರ್ಟಿನವರು ತೀರ್ಮಾನ ಮಾಡಿದ್ದಂತೆ ಆ ಬಾಬತು ಬಡ್ಡಿ 197 ರೂಪಾಯಿ ವಸೂಲಾಗಿಲ್ಲವೆಂದು ತಿಳಿಯಿತು. ಈ ಬಡ್ಡಿಯನ್ನು ವಸೂಲ್ಮಾಡಬೇಕೆಂದು ಮೆಂಬರು ತೀರ್ಮಾನ ಮಾಡಿದಾರೆ.—ಮಂಡಿಯಲ್ಲಿರುವ ಹಕೀಂ ಅಲಿ ಪೀರ್ ಎಂಬ ವೈದ್ಯರಿಗೆ ಮ್ಯುನಿಸಿಪಾಲಿಟಿಯಿಂದ ಮಾಸಿಯಾನಾ 20 ರೂಪಾಯಿ ಗ್ರ್ಯಾಂಟು ಕೊಡಬಹುದೆಂದು ಸರ್ಕಾರದವರು ಸಾಕ್ಷಾತ್ ರವರು ಸ್ಯಾಂಕ್ಷನ್ ಮಾಡಿದಾರೆ.— ಪಟ್ಟಣದಲ್ಲಿ ಪೋಲಿ ದನಗಳನ್ನು ಹಿಡಿದ ದೊಡ್ಡಿಗೆ ಕೂಡುವುದಕ್ಕೆ 5 ರೂಪಾಯಿ ಸಂಬಳದ ಮೇಲೆ 12 ಮಂದಿ ಜವಾನರನ್ನು ನೇಮಕ ಮಾಡಬಹುದೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ - ಪಟ್ಟಣದಲ್ಲಿ ಪ್ರಜೆಗಳು ಕಟ್ಟುವ ಮನೆಗಳ ರಚನೆ, ಕಾಮಗಾರಿಗಳನ್ನು ಮೇಲ್ವಿಚಾರಣೆಗೆ ಇಟ್ಟು ನೋಡಿಕೊಳ್ಳುವುದಕ್ಕೆ 25 ರೂಪಾಯಿ ಸಂಬಳ, 5 ರೂಪಾಯಿ ಅಲೋಯನ್ಸೂ ಉಳ್ಳ ಇಬ್ಬರು ಇನ್ ಸ್ಪೆಕ್ಟರುಗಳನ್ನು ನೇಮಿಸಿಕೊಳ್ಳಬೇಕೆಂದು ಹೋದ ಮರುಷ ಮೇ ತಿಂಗಳಲ್ಲಿ ಮ್ಯುನಿಸಿಪಾಲಿಟಿಯವರು ಗವರ್ನಮೆಂಟಿಗೆ ಶಿಫಾರಸು ಮಾಡಿದ್ದರು. ಸರ್ಕಾರದವರು ಈಗ ಅದರಂತೆ ಸ್ಯಾಂಕ್ಷನ್ ಮಾಡಿ, ಕಟ್ಟಡಗಳು ಕಡಮೆಯಾದ ಕೂಡಲೆ ಈ ಸಿಬ್ಬಂದಿಯನ್ನು ವಜಾ ಮಾಡಬೇಕೆಂದು ಅಪ್ಪಣೆ ಕೊಡಿಸಿದಾರೆ.

ಮೈಸೂರು ಆಸ್ಪತ್ರೆಗಳಲ್ಲಿ ರೋಗಿಗಳಿಂದ ರುಸುಂ ವಸೂಲ್ಮಾಡಬೇಕೆಂದು ಸರ್ಕಾರದವರು ಕೊಟ್ಟಿರುವ ಹುಕುಮಿನ ವಿಷಯದಲ್ಲಿ ಆಲೋಚನೆ ಮಾಡಿ ರಿಪೋರ್ಟು ಕೊಡಬೇಕೆಂದು ಕೆಲವು ಮೆಂಬರುಗಳನ್ನು ಕಮಿಟಿ ಮಾಡಿದ್ದರು. ಈ ಕಮಿಟಿಯವರು ಮೇಲ್ಕಂಡ ವಿಷಯದಲ್ಲಿ ಬರೆದು ಕಳುಹಿಸಿದ ರಿಪೋರ್ಟನ್ನು ಮೆಂಬರುಗಳು ಓದಿಸಿದರು. ಅದೇನೆಂದರೆ—"ಮ್ಯುನಿಸಿಪಲ್ ತೆರಿಗೆಗಳು ಪ್ರತಿ ಮನೆ ರೋಗನಿವಾರಣೆಗೋಸ್ಕರ ಆಸ್ಪತ್ರೆಗಳಲ್ಲಿಯೂ ಮತ್ತು ಡಿಸ್ಪೆನ್ಸರಿಗಳಲ್ಲಿಯೂ ಆಗತಕ್ಕ ಚಿಕಿತ್ಸೆಗೆ ವಿನಿಯೋಗಿಸಲ್ಪಡಬೇಕು. ಅನಂತರ ನಿರ್ಮಲವಾದ ನೀರು ದೊರೆಯುವುದಕ್ಕೂ, ಕಸುವಾರು ಸ್ಯಾನಿಟರಿ ಏರ್ಪಾಡುಗಳಿಗೂ, ನಂತರ ವಿದ್ಯಾಭ್ಯಾಸ ಮೊದಲಾದವುಗಳಿಗೆ ವಿನಿಯೋಗಿಸಲ್ಪಡಬೇಕು. ಒಂದನೆಯದಾಗಿ ತಕ್ಕ ರೋಗನಿವಾರಣೆಗೋಸ್ಕರ ನಮ್ಮನ್ನು ಆಳುವ ಮಹಾಸ್ವಾಮಿಯವರು ಅವರ ಜಾನವಾಗಿ ಧರ್ಮವಾಗಿ ಏರ್ಪಡಿಸಿರುವ ಆಸ್ಪತ್ರೆ ಮತ್ತು ಡಿಸ್ಪೆನ್ಸರಿಗಳಲ್ಲಿ ಔಷಧಿಗೋಸ್ಕರ ಬಂದಂಥಾ ರೋಗಿಗಳಿಂದ ಔಷಧಿಗೋಸ್ಕರ ದುಡ್ಡು ತೆಗೆದುಕೊಳ್ಳುವುದು ಧರ್ಮವಲ್ಲವೆಂತ ನಮಗೆ ತೋರುತ್ತದೆ. ಮತ್ತು ಪುರವಾಸಿಗಳೆಲ್ಲರೂ ಇದಕ್ಕಾಗಿ ಕ್ಲೇಶಪಡುತ್ತಾರೆ. ಈ ಅಂಶವನ್ನು ಗೌರ್ನಮೆಂಟಿನವರಿಗೂ ಮತ್ತು ಶ್ರೀಮನ್ಮಹಾರಾಜರವರಿಗೂ ವಿಜ್ಞಾಪಿಸಬೇಕೆಂದು ಇರುತ್ತಾರೆ. ಅದ್ದರಿಂದ ಈ ರೂಲುಗಳು 1916 ನೇ ಜನವರಿ ಗುತ್ತೆ ಆಗಾಯಿತು ಜಾರಿಗೆ ಬಾರದಂತೆ ದಯವಿಟ್ಟು ನಿಲ್ಲಿಸಬೇಕೆಂದು ತಾವು ಗೌರ್ನಮೆಂಟಿಗೆ ಶಿಫಾರಸ್ ಮಾಡಬೇಕೆಂದು ಪ್ರಾರ್ಥಿಸುತ್ತೇವೆ." ಬಳಿಕ ರಾವ್ ಬಹದೂರ್ ಮ|| ರಂಗಯ್ಯಂಗಾರ್ಯರು—ಸರ್ಕಾರದವರು ತಿಂಗಳಿಗೆ 50 ರೂಪಾಯಿಗಿಂತ ಹೆಚ್ಚು ವರಮಾನವಿರತಕ್ಕವರಿಂದ ಆಸ್ಪತ್ರೆಯ ಔಷಧಿ ರುಸುಮನ್ನು ತೆಗೆದುಕೊಳ್ಳಬೇಕೆಂದು ಮಾಡಿದಾರಷ್ಟೆ ಅದನ್ನು 100 ರೂಪಾಯಿ ಎಂದು ಬದಲಾಯಿಸಬೇಕೆಂದೂ, ಸರ್ಕಾರದ ನೌಕರರಿಗೆ ವಿನಾಯಿತಿ ಮಾಡಕೂಡದೆಂದೂ, ಮನೆಗೆ ಸರ್ಕಾರಿ ವೈದ್ಯರು ಬಂದು ಮನೆಯವರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದರೆ ತಿಂಗಳಿಗೆ 4 ರೂಪಾಯಿ ರುಸುಂ ಕೊಡಬೇಕೆನ್ನುವುದನ್ನು 2 ರೂಪಾಯಿಗೆ ಇಳಿಸಬೇಕೆಂದೂ ಸೂಚಿಸಿದರು. ಈ ಸಲಹೆಯನ್ನು ಮಿ|| ಗಲ್ಲಿಫೋರ್ಡ್ ಸಾಹೇಬರು ಅನುಮೋದಿಸಿದರು. ಇದನ್ನು 9 ಮಂದಿ ಒಪ್ಪಲಿಲ್ಲ; ನಾಲ್ವರು ಮಾತ್ರ ಒಪ್ಪಿದ್ದರಿಂದ ಮ|| ರಂಗಯ್ಯಂಗಾರ್ಯರ ಸಲಹೆಯು ನಿಷ್ಪ್ರಯೋಜನವಾಯಿತು. ಬಳಿಕ ಮೇಲ್ಕಂಡ ಕಮಿಟಿಯವರ ಅಭಿಪ್ರಾಯವುಳ್ಳ ರಿಪೋರ್ಟು ಅಂಗೀಕರಿಸತಕ್ಕದ್ದೆಂದೂ, ಅದನ್ನು ಗವರ್ನಮೆಂಟಿಗೆ ಕಳುಹಿಸಬೇಕೆಂದೂ ಒಪ್ಪಲಾಯಿತು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಜನವರಿ 13 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮಾ:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 50,000
,, (3) ಡಿಪಾಜಿಟ್ಟುಗಳು	....	,, 40,77,501
,, (4) ಇತರೆ	....	,, 87,848
(ಆಸಿ ಜಾಸು ಬಿಟ್ಟಿರುತ್ತೆ.)		ಒಟ್ಟು ರೂ. 52,15,349

ಖರ್ಚು:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 11,35,740
,, (2) ಸಾಲ ಮತ್ತು ಇತರ ಸಾಲಗಳು	......	,, 28,73 590
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು		,, 4,21,772
,, (4) ಇನ್ವೆಸ್ಟ್‌ಮೆಂಟುಗಳು	....	,, 7,55,852
,, (5) ಏಜಂಟರುಗಳಲ್ಲಿರುವ ಮೊಬಲಗು	......	,, 5,251
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	......	,, 16,008
,, (7) ಇತರೆ	....	,, 7,136
(ಆಸಿ, ಜಾಸು ಬಿಟ್ಟಿರುತ್ತೆ.)		ಒಟ್ಟು ರೂ. 52,15,349

ವಿ. ರಾಮಸ್ವಾಮಯ್ಯ, ಆ: ಮ್ಯಾನೇಜರ್.

ಆರ್ಯಮಹಿಳಾ ಸಮಾಜ, ಚಿಕ್ಕಮಗಳೂರು.

ಚಿಕ್ಕಮಗಳೂರು ಗವರ್ನಮೆಂಟ್ ಗರಲ್ಸ್ ಸ್ಕೂಲಿನಲ್ಲಿ 19 ನೇ ತಾ. ಬುಧವಾರ ಮಧ್ಯಾಹ್ನ ಒಂದು ಮಹಿಳೆಯರ ಸಭೆಯು ಸೇರಿತ್ತು. ಆ ಕಾಲದಲ್ಲಿ ವೇ|| ಸರಹರಿಶಾಸ್ತ್ರಿಗಳೆಂಬುವರು ಅಲ್ಲಿಗೆ ಬಂದು ಮನಶ್ಶಕ್ತಿ ಎಂಬುವುದು ಎಂಥಾದ್ದು, ಅದರಿಂದ ಜನಗಳಿಗೆ ಎಷ್ಟು ಪ್ರಯೋಜನಗಳಾಗುತ್ತವೆ, ಮತ್ತು ಆ ಮನಸ್ಸಿನ ಶಕ್ತಿಯಿಂದಲೇ ಇತರರಿಗೆ ಎಷ್ಟು ಒಳ್ಳೇದನ್ನು ಮಾಡಬಹುದು ಎಂಬೀ ವಿಚಾರವಾಗಿ ಅಲ್ಲಿ ಸೇರಿದ್ದ ಸ್ತ್ರೀಮಂಡಲಿಗೂ, ಚಿಕ್ಕ ಹುಡುಗರಿಗೂ ಸಹ ಸುಲಭವಾಗಿ ತಿಳಿಯುವಂತೆ ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಹೇಳಿದರು. ನಂತರ ಈ ಸ್ಕೂಲಿನ ಹೆಡ್ ಮಿಸ್ಟ್ರೆಸ್ ರವರಾದ ಶ್ರೀಮತಿ ಪಂಡಿತಾ ಎಂ. ಸುಂದರಮ್ಮನವರು ಅವರ ಉಪನ್ಯಾಸದಿಂದ ಆ ದಿನ ಕೂಡಿದ್ದವರೆಲ್ಲರಿಗೂ ಬಹಳ ಸಂತೋಷವಾಯಿತೆಂದು ಹೇಳಿ ವಂದನೆಯನ್ನು ಸೂಚಿಸಿದರು. ನಂತರ ಸ್ಕೂಲು ಬಾಲಕಿಯರು ಈ ಆರ್ಯಮಹಿಳಾ ಸಮಾಜವು ದಿನದಿನಕ್ಕೆ ಅಭಿವೃದ್ಧಿಯನ್ನೈದಲಿ ಎಂದು ಹೇಳಿ ಮಂಗಳವನ್ನು ಹಾಡಿ ಸಭೆಯನ್ನು ಮುಕ್ತಾಯಗೊಳಿಸಿದರು. ಶ್ರೀಮತಿಯವರು ಈ ಸ್ಕೂಲಿಗೆ ಹೆಡ್ ಮಿಸ್ಟ್ರೆಸರಾಗಿ ಬಂದಾರಭ್ಯ ಸ್ಕೂಲು ಬಹಳ ಉತ್ತಮಸ್ಥಿತಿಯಲ್ಲಿರುತ್ತೆ. ಈ ಊರಿನಲ್ಲಿ ಸ್ತ್ರೀಯರ ಏಳಿಗೆಗೆ ಯಾವ ಸಮಾಜವೂ ಏರ್ಪಟ್ಟಿರಲಿಲ್ಲ. ಇವರು ಬಂದು ಈ ಮಹಿಳಾ ಸಮಾಜವನ್ನೇರ್ಪಡಿಸಿದರು. ಪ್ರತಿ ಬುಧವಾರವೂ ದೊಡ್ಡ ಮನುಷ್ಯರ ಮನೆ ಹೆಂಗಸರು ಬಂದು ಇಲ್ಲಿ ಸಭೆ ಸೇರುವರು. ಆ ಕಾಲದಲ್ಲಿ ಶ್ರೀಮತಿಯವರು ಎಲ್ಲರನ್ನೂ ತನ್ನ ಸಹೋದರಿ ಪ್ರೀತಿಯಿಂದ ಕಾಣುತ್ತಾ ಸದ್ವಿಷಯಗಳನ್ನು ಬೋಧಿಸಿ, ಎಲ್ಲರನ್ನೂ ಆನಂದಗೊಳಿಸುತ್ತಲಿರುವರು. ಇವರು ಬಂದ ಸ್ವಲ್ಪ ದಿವಸಗಳಲ್ಲೇ ಸಮಾಜವು ಬಹಳ ಉತ್ತಮ ಸ್ಥಿತಿಯಲ್ಲಿರುವುದು ಬಹಳ ಸಂತೋಷಪ್ರದವಾಗಿದೆ.

ಪ್ರತ್ಯಕ್ಷದರ್ಶಿ.

ಚಿತ್ರದುರ್ಗ ಡಿಸ್ಟ್ರಿಕ್ಟ್ ವಿದ್ಯಾಭಿವೃದ್ಧಿ ಸಂಘವು.

ಜನವರಿ ತಾ. 9 ನೇ ಭಾನುವಾರ ಮಧ್ಯಾಹ್ನ ಎ. ವಿ. ಸ್ಕೂಲ್ ಹಾಲಿನಲ್ಲಿ ಈ ಸಂಘದ ಮೆಂಬರುಗಳು ತಿಂಗಳು ಕಟ್ಟಿ ಮೀಟಿಂಗನ್ನು ನಡಸಿದರು. ಹಳ್ಳಿಗಳಿಂದ ಕೆಲವು ಜನ ಉಪಾಧ್ಯಾಯರು ಮಾತ್ರ ಬಂದಿದ್ದರು. ಜಾಯಿಂಟ್ ಸೆಕ್ರೆಟರಿಯವರು ರೀಡಿಂಗ್ ರೂಮುಗಳ ಪ್ರಯೋಜನವನ್ನು ಕುರಿತು ಸ್ವಲ್ಪ ಹೊತ್ತು ಸಂಕ್ಷೇಪವಾಗಿ ವಿವರಿಸಿ ಹೇಳಿದರು. ಉಪಾಧ್ಯಾಯರುಗಳು ಪ್ರಯತ್ನ ಪಡುವುದಾದರೆ ಗ್ರಾಮಾಂತರಗಳಲ್ಲಿ ವಿದ್ಯೆ ಕಲಿಯದವರೂ ಪ್ರಯೋಜನ ಹೊಂದಲು ಅವಕಾಶವಾಗುವುದೆಂದೂ, ಆದಕ್ಕಾಗಿ ಈ ಸಂಘದ ಮೆಂಬರುಗಳಾದವರೆಲ್ಲರೂ ಗ್ರಾಮಾಂತರಗಳಲ್ಲಿ ವಾಚನಶಾಲೆಯನ್ನು ಸ್ಥಾಪಿಸಲು ಪ್ರಯತ್ನ ನಡೆಸುವುದಕ್ಕಾಗಿ ಒಪ್ಪಿಕೊಂಡರು. ಈಗಲೇ ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ 3-4 ವಾಚನಶಾಲೆಗಳು ಸ್ಥಾಪಿಸಲ್ಪಟ್ಟಿರುವುದಾಗಿ ಹೇಳಿದರು. ಗೊಡಬನಾಳು ಸ್ಕೂಲು ಹೆಡ್ ಮಾಸ್ಟರು ಮ|| ರಾಮರಂಗಯರು ಬಹು ಸಾಹಸದಿಂದ ಒಂದು ರೀಡಿಂಗು ರೂಮನ್ನು ಸ್ಥಾಪಿಸಿದ್ದಾಗಿಯೂ, ಈಗ 9 ಪೇಪರುಗಳು ಬರುತ್ತಿವೆ ಎಂದೂ ಅನೇಕರು ಓದಿಕೊಂಡು ಹೋಗಲು ತಕ್ಕ ಏರ್ಪಾಡಾಗಿದೆ ಎಂದೂ ತಿಳಿಸಿದರು. ಅಲ್ಲದೆ ಗ್ರಾಮಸ್ಥರೆಲ್ಲರೂ ಉತ್ಸಾಹದಿಂದ 300 ರೂಪಾಯಿ ವೆಚ್ಚಸಿ ಕಟ್ಟಡವನ್ನು ಕಟ್ಟಿಸಿಕೊಟ್ಟಿರುವುದಾಗಿ ಹೇಳಿದರು. ಈ ರೀತಿಯಲ್ಲಿ ವಿದ್ಯೆಯು ಹರಡುವದಕ್ಕೆ ಉಪಾಧ್ಯಾಯರು ಎಷ್ಟು ಮಟ್ಟಿನ ಪ್ರಯತ್ನ ನಡಸಬೇಕೋ ಅಂಥಾ ಅಂಶಗಳನ್ನೆಲ್ಲಾ ಚರ್ಚಿಸಿ ತೀರ್ಮಾನ ಮಾಡಿದರು. ಅಲ್ಲಿಗೆ ಹೊತ್ತು ಮೀರಿದ್ದರಿಂದ ಉಳಿದ ಅಂಶಗಳನ್ನು ಮುಂದಕ್ಕೆ ಇತ್ಯರ್ಥ ಮಾಡುವದಾಗಿ ನಿಲ್ಲಿಸೋಣವಾಯಿತು. ಮುಂದಿನ ತಿಂಗಳ ಮೀಟಿಂಗು ಫೆಬ್ರವರಿ 13 ನೇ ತಾ. ನಡೆಯತಕ್ಕದ್ದೆಂದು ಗೊತ್ತು ಮಾಡಿದರು. ಆ ದಿನದ ಕಾರ್ಯಗಳೇನೆಂದರೆ—"ಭಾಷೆಯನ್ನು ಕಲಿಸುವ ಮಾರ್ಗ" ಎಂಬ ಅಂಶದಲ್ಲಿ ಒಂದು ಉಪನ್ಯಾಸ; ಚರಿತ್ರೆಯ ಪಾಠದಲ್ಲಿ ಪ್ರಾಕ್ಟಿಕಲ್ ಸ್ಕೂಲು ನಡೆಸಲ್ಪಡುವುದು.

ವಿ. ತಿಪ್ಪಣ್ಣ, ಜಾ. ಸೆಕ್ರೆಟರಿ.

ಹಿರೇಹಳ್ಳಿ ಸನ್ಮಿತ್ರಸಂಘ.

ಕೃಷ್ಣರಾಜಪೇಟೆ ತಾಲ್ಲೂಕು ಹಿರೇಹಳ್ಳಿ ಗ್ರಾಮದಲ್ಲಿ ಕೆಲವು ಜನ ಮಹನೀಯರು ಸೇರಿ ಕಳೆದ ತಿಂಗಳು 23 ನೇ ತಾ. ಸಭೆ ಸೇರಿ ಸನ್ಮಿತ್ರಸಂಘವೆಂಬುದಾಗಿ ಒಂದು ಕೂಟವನ್ನು ಮಾಡಿಕೊಂಡಿದಾರೆ. ಈ ಸಂಘದ ಮೆಂಬರುಗಳು ಕಲೆಗೆ ½ ರೂಪಾಯಿಯಂತೆ ಚಂದಾ ಹಾಕಿ ಈ ಸಂಘದ ಆಶ್ರಯದಲ್ಲಿಯೇ ಸನ್ಮಿತ್ರಸಂಘಾ ರೀಡಿಂಗ್ ರೂಮು ಎಂಬದಾಗಿ ಒಂದು ವಾಚನಶಾಲೆಯನ್ನು ನಡಸುತ್ತಾರೆ. ಈ ಸಂಘದ ಉದ್ದೇಶವೇನೆಂದರೆ—ಗ್ರಾಮದಲ್ಲಿ ಪರಸ್ಪರ ಅನುರಾಗವಿಲ್ಲದೆ ದ್ವೇಷಾಸೂಯೆಗಳು ಹೆಚ್ಚಾಗುತ್ತಾ ಬರುವುದನ್ನು ಸಾಧ್ಯವಾದ ಮಟ್ಟಿಗೂ ತಪ್ಪಿಸುತ್ತಲೂ, ಗ್ರಾಮಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡುತ್ತಲೂ, ಸರ್ಕಾರದವರಿಂದ ಗ್ರಾಮಕ್ಕೆ ಉಪಯೋಗವಾದ ಉಪಯುಕ್ತವಾದ ಕೆಲಸಗಳನ್ನು ಈ ಸಂಘದ ಮೆಂಬರುಗಳು ಮೀಟಿಂಗು ಮಾಡಿ ಅದನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸುವುದರ ಮೂಲಕ ಗ್ರಾಮಕ್ಕೆ ಬೇಕಾದ ಸಹಾಯ ಸಂಪತ್ತನ್ನು ಪಡೆಯಬೇಕೆಂಬುದೇ ಈ ಸಂಘದ ಮುಖ್ಯೋದ್ದೇಶವಾಗಿರುತ್ತದೆ. ಈ ಸಂಸ್ಥೆಗೆ ಇಲ್ಲಿನ ಪೊಲೀಸ್ ಪಟೇಲರು ಮತ್ತು ಯೂನಿಯನ್ ಮೆಂಬರಾಗಿರುವ ಮ|| ಉಮ್ಮಯ್ಯ ಗೌಡರವರು ಸೆಕ್ರೆಟರಿಯಾಗಿರುವದರಿಂದ ಈ ಸಂಘವು ಒಳ್ಳೇ ಪುರೋಭಿವೃದ್ಧಿಗೆ ಬರುವುದರಲ್ಲಿ ಏನೂ ಸಂದೇಹವಿಲ್ಲ. ಈ ಸಂಘದವರು ಪ್ರತಿ ಭಾನುವಾರವೂ ಮೀಟಿಂಗ್ ನಡಸುತ್ತಾ, ಗ್ರಾಮದಲ್ಲಿ ನಡೆಯಬೇಕಾದ ಕೆಲಸಗಳನ್ನು ಯೋಚಿಸುತ್ತಾರೆ. ಇಂಗ್ಲಿಷ್ ಸ್ಕೂಲು ಅಭಿವೃದ್ಧಿಗೆ ಬೇಕಾದ ವಿಚಾರದಲ್ಲೂ, ದೇವಸ್ಥಾನದ ಪುನರುದ್ಧಾರದ ಮೊಬಲಗು ಒಂದು ಸಾವಿರ ರೂಪಾಯಿ ಪ್ರತಿ ವರ್ಷ ಬರಬೇಕಾದ ಬಾಕಿ ವಸೂಲಿಗೆ ಬಂದಿರತಕ್ಕ ಜನರ ಅಂಗಡಿ ವೆಂಕಟಪ್ಪಶೆಟ್ಟರು ಕೊಡಬೇಕಾದ 200 ರೂಪಾಯಿ ವಸೂಲಿ ವಿಚಾರದಲ್ಲೂ ಪ್ರೊಸೀಡಿಂಗ್ಸ್ ಮಾಡಿರುತ್ತಾರೆ. ಇಂಗ್ಲಿಷ್ ಸ್ಕೂಲ್ ವಿಚಾರದಲ್ಲಿ ಅಗ್ರ ಮ್ಯಾನೇಜರಾಗಿದ್ದವರಿಗೆ ಇಂಗ್ಲಿಷ್ ಏಡೆಡ್ ಸ್ಕೂಲ್ ಬಾಬ್ತು ಯೂನಿವರ್ಸಿಟಿ ಪಠ್ಯಪುಸ್ತಕಗಳ ಮತ್ತು ಲೆಕ್ಕಗಳು ಸಹ ಕಳುಹಿಸಿಕೊಡಬೇಕೆಂದು ಎರಡು ಸಲ ಬರಹ ಮೂಲಕ ಕೇಳಿದಾಗ್ಯೂ ಕಳುಹಿಸದೆ ಹೋಗಿರುವದರಿಂದ ಮೇಲ್ಪಟ್ಟ ಇಲಾಖೆಯವರಿಗೆ ತಿಳಿಸಬೇಕೆಂದಿರುತ್ತಾರೆ. ಈ ಗ್ರಾಮದಲ್ಲಿ ಈ ಸಂಘದ ದೊಡ್ಡ ಮನುಷ್ಯರು ತಮ್ಮ ಗ್ರಾಮ ವಾತ್ಸಲ್ಯವನ್ನು ಇಟ್ಟುಕೊಂಡು ಈ ಮೇರೆ ಗ್ರಾಮವನ್ನು ಪುರೋಭಿವೃದ್ಧಿಗೆ ತರತಕ್ಕ ವಿಚಾರದಲ್ಲಿ ಮಾಡತಕ್ಕ ಏರ್ಪಾಡುಗಳು ಬಹಳ ಶ್ಲಾಘನೀಯವಾಗಿದೆ.

ಚಂದಾದಾರ.

ಒಂದು ರೀಡಿಂಗ್ ರೂಮ್ ಸ್ಥಾಪನೆ.

ಮಂಡ್ಯ ತಾಲ್ಲೂಕು ಮದ್ದೂರು ಸಮ್ಮತು ಸೋಮನಹಳ್ಳಿಯಲ್ಲಿ ನಮ್ಮ ತಾಲ್ಲೂಕು ಅಮಲ್ದಾರರವರಾದ ಮ|| ಎಚ್. ಬಸವರಾಜೇ ಅರಸಿನವರ ಪ್ರೋತ್ಸಾಹದಿಂದ ಗ್ರಾಮಾಭಿವೃದ್ಧಿಯ ಏರ್ಪಾಡಿನಲ್ಲೊಂದಾದ ರೀಡಿಂಗ್ ರೂಮ್ ಹೊಸ ಕಟ್ಟಡದಲ್ಲಿ ಜನವರಿ ತಾ. 15-ನೇ ಸಾಯಂಕಾಲ ಪ್ರಾರಂಭೋತ್ಸವವು ಶೇಕ್‌ದಾರ್ ಮ|| ಕೇಶವಯ್ಯನವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಕಟ್ಟಡವು ಫಲಪುಷ್ಪಗಳಿಂದಲಂಕೃತವಾಗಿ ಪರಸ್ಥಳದ ಅನೇಕ ದೊಡ್ಡ ಮನುಷ್ಯರಿಂದಲೂ, ಸರ್ಕಾರಿ ಉದ್ಯೋಗಸ್ಥರಿಂದಲೂ, ಈ ಗ್ರಾಮದ ರೈತವರ್ಗದವರು ವರ್ತಕವೃಂದಗಳಿಂದಲೂ ಸಹ ಸೇರಿ ಶೋಭಾಯಮಾನವಾಗಿ ಪ್ರಾರಂಭದಲ್ಲಿ ಪಾಠಶಾಲೆಯ ಬಾಲಕರುಗಳಿಂದ ದೇವರ ಪ್ರಾರ್ಥನೆಯು ಮಧುರವಾದ ಸಂಗೀತ ವೀಣಾಗಾನವು ಕರ್ಣಾನಂದವನ್ನುಂಟುಮಾಡಿತು. ಸಿರಿಕಲ್ಚರಲ್ ಇನ್ಸ್‌ಪೆಕ್ಟರು ಮ|| ಎಸ್. ಮುತ್ತಣ್ಣನವರು ಮಧುರವಾಕ್ಯಗಳಿಂದ ವೇಸಿಲ್ಕ್ ಎಂಬ ಭಾಗಕ್ಕೆ ಸೇರಿದ ಕೃಷಿ ಕೈಗಾರಿಕೆ ಎಂಬೀ ವಿಷಯದಲ್ಲಿ ಭಾಷಣ ಮಾಡಿದರು. ನಂತರ ಸ್ಕೂಲು ಮಾಸ್ತರು ಎ. ಲಿಂಗೇಗೌಡರು ಗಂಭೀರವಾಕ್ಯಗಳಿಂದ ಗುರುಭಕ್ತಿ ಮಕ್ಕಳ ವಿದ್ಯಾಭ್ಯಾಸ ಎಂಬೀ ವಿಷಯದಲ್ಲಿ ನೆರೆದಿದ್ದ ಸಭಾಜನರೆಲ್ಲರಿಗೂ ಮಂದಟ್ಟಾಗುವಂತೆ ಭಾಷಣಮಾಡಿದರು. ನಂತರ ಮಲ್ಲಯ್ಯನವರು ಈರೀತಿ ನಮ್ಮ ಒಕ್ಕಲಿಗ ರೈತರೇ ಮೊದಲಾದವರು ತಮ್ಮ ಬಿಡುವು ಕಾಲದಲ್ಲಿ ಇಂಥಾ ವಿಹಾರಸ್ಥಾನಗಳಲ್ಲಿ ಸದುದ್ದೇಶವಾಗಿ ಸೇರಿ ಒಬ್ಬರಿಗೊಬ್ಬರು ಗ್ರಾಮಾಭಿವೃದ್ಧಿ ವಿಚಾರದಲ್ಲಿ ಸಂಭಾಷಣೆ ಮಾಡಿ ಸತ್ಪ್ರಯೋಜನ ಪಡೆಯಬೇಕೆಂದೂ ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿಯೂ ಒಳ್ಳೇ ಭಾಷಣವನ್ನು ಮಾಡಿದರು. ನಂತರ ಮ|| ಕೇಶವಯ್ಯನವರು ಗ್ರಾಮಾಭಿವೃದ್ಧಿ ವಿಚಾರದಲ್ಲಿ ಪ್ರೌಢತರವಾದ ಉಪನ್ಯಾಸವನ್ನು ಮಾಡಿ ಸಭಿಕರನ್ನು ಆನಂದಗೊಳಿಸಿದರು. ಚಕ್ರವರ್ತಿ ಸಾರ್ವಭೌಮರವರ ನಮ್ಮ ಮಹಾರಾಜರ ಯುವರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮುಗಿಸಿದನಂತರ ಮ|| ಪಟೇಲ್ ಚಿಕ್ಕೇಗೌಡರು ಧರ್ಮಪರೋಪಕಾರಿಗಳಾಗಿಯೂ ಈ ಹೊಸ ರೀಡಿಂಗ್‌ರೂಮು ಪೋಷಕರಾಗಿಯೂ ಸ್ವಂತ ತಾವೇ ಕಟ್ಟಿಸಿಕೊಟ್ಟ ಮುಖ್ಯ ಪ್ರೆಸಿಡೆಂಟರಾಗಿರುವುದರಿಂದ ಇವರನ್ನು ಸಭಿಕರೆಲ್ಲರೂ ಸನ್ಮಾನಿಸಿದರು. ನಂತರ ಗಂಧಪುಷ್ಪ ತಾಂಬೂಲ ಫಲಹಾರಾದಿಗಳು ಸಭಾಸದರೆಲ್ಲರಿಗೂ ಸಮರ್ಪಿಸಲ್ಪಟ್ಟು ಸಭೆಯು ಉಪಸಂಹರಿಸಲ್ಪಟ್ಟಿತು. ಈ ರೀಡಿಂಗ್ ರೂಮಿನ ಕಾರ್ಯಕ್ರಮಗಳನ್ನು ನೆರವೇರಿಸಲು ಏರ್ಪಡಿಸತಕ್ಕ ಪ್ರೆಸಿಡೆಂಟು ಮೆಂಬರುಗಳು ಪುರಪ್ರಮುಖರು ಸಹ ಇದನ್ನು ನಿರಂತರ ನಡಿಸಿಕೊಂಡು ಬರುವವರಾಗಲೆಂದು ಹಾರೈಸಲ್ಪಟ್ಟಿದೆ.

ಮೆಂಬರು.

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮ|| ಪಿ. ರಾಮಸ್ವಾಮಯ್ಯನವರಿಗೆ ಡಿಸೆಂಬರ್ ತಾ. 22 ರಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರ್ ಮಿ|| ಎ. ಕೆ. ಸಯ್ಯದ್ ತಾಜ್ ಪೀರಾನ್‌ರವರು ಅವರ ಕೆಲಸದ ಭಾರ್ಜನ್ನು ವಹಿಸಿದ್ದರು.

ಬೆಂಗಳೂರು ಸೆಷನ್ಸ್ ಜಡ್ಜಿ ಮಿ|| ಆರ್. ಬಿ. ಪ್ರಮರ್ ಯವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೆರಡು ವಾರ ಜಾಸ್ತಿ ಮಾಡಿದೆ. ಈಗಿನ ಬದಲಿ ಏರ್ಪಾಡು ಜಾರಿಯಲ್ಲಿರತಕ್ಕದ್ದು.

ಮ|| ಆನಂದರಾವ್ ಸಿಸ್ತಯವರನ್ನು ಅ|| ಕಮೀಷನರ ದರ್ಜೆಯಲ್ಲಿ ಕಳೆದ ಜೂಲೈ, ತಾ. 1 ರಿಂದ 1 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮ|| ಆರ್. ರಾಮಯ್ಯನಾಯುಡು ಯವರು ಆನೆಕಲ್ ತಾಲ್ಲೂಕು ಛಾರ್ಜನ್ನು ವಹಿಸಿರುವ ಕಾಲದಲ್ಲಿ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಚಲಾಯಿಸತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟ್ ಖಜಾನೆ ಛಾರ್ಜನ್ನು ವಹಿಸಿರುವ ಮ|| ಟಿ. ರಾಮುಚೆಟ್ಟಿಯವರು ಸಾಕ್ಷಿಗಳ ಹೇಳಿಕೆಯನ್ನು ಸ್ವಹಸ್ತ ಇಂಗ್ಲಿಷಿನಲ್ಲಿ ಬರೆದು ಕೊಳ್ಳತಕ್ಕದ್ದು.

ಕರ್ನಲ್ ಜೆ. ದೇಶರಾಜೆ ಅರಸಿನವರು ಮೈಸೂರು ಸೈನ್ಯಗಳ ಚೀಫ್ ಕಮಾಂಡಾಂಟರ ಛಾರ್ಜನ್ನು ಜನವರಿ ತಾ. 12 ರಲ್ಲಿ ವಹಿಸಿಕೊಂಡಿದಾರೆ.

ಅಕ್ಕಿಹಳ್ಳಿ ರೇಂಜಿನ ಛಾರ್ಜನ್ನು ವಹಿಸಿರುವ ಫಾರೆಸ್ಟ್ ಸಬ್ ಅ|| ಕನ್ಸರ್ವೇಟರ್ ಮ|| ಎಂ. ವಿ. ನರಸಿಂಹಯ್ಯನವರಿಗೆ ಫೆಬ್ರವರಿ ತಾ. 1 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮಿ|| ಸಿ. ಅಬ್ದುಲ್ ಜಬ್ಬಾರ್ ಯವರು ಅವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಹೊಳಲ್ಕೆರೆ ತಾಲ್ಲೂಕು ಅಮಲ್ದಾರ್ ಮ|| ಪಿ. ಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಆರು ತಿಂಗಳ ರಜಾ ಕೊಟ್ಟಿದೆ. ಶಿವಮೊಗ್ಗ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ|| ಎಚ್. ಶ್ರೀನಿವಾಸರಾಯರು ಹೊಳಲ್ಕೆರೆ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮೈಸೂರು ರೆವಿನ್ಯೂ ಸರ್ವೆ ಅ|| ಕಮಿಷನರ ಮ|| ಎಚ್. ವಾಸುದೇವರಾಯರಿಗೆ ನೆವೆಂಬರ್ ತಾ. 24 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ವೈ. ನಂಜುಂಡಯ್ಯನವರು ಅವರ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಕಾಫಿ ಪ್ಲಾಂಟರ್ ಮತ್ತು ಪ್ರಜೆಗಳಿಂದ ಚುನಾಯಿಸಲ್ಪಟ್ಟಿರುವ ಮ|| ಸಿ. ವಾಸುದೇವರಾಯರನ್ನು ಚಿಕ್ಕಮಗಳೂರು ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟರಾಗಿ ಜನವರಿ ತಾ. 31 ರಿಂದ ನೇಮಕವಾಗಿದೆ.

ಮೈಸೂರು ಸರ್ಕಾರದ ಹುಕುಮುಗಳು.

ಮೋಟರುಗಳ ವೇಗದ ಪರಿಮಿತಿ.

ಮೈಸೂರು ಸಿಟಿಯಲ್ಲಿ ಮೋಟಾರ್ ಗಾಡಿಗಳ ವೇಗವನ್ನು ಕ್ರಮಪಡಿಸುವ ದಕ್ಕೋಸ್ಕರ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಕೆಳಗಿನ ನಿಯಮಗಳನ್ನು ವಿಧಿಸಿ ಆಜ್ಞಾಪಿಸಿರುತ್ತಾರೆ.

ಸಿಟಿಯ ಮಧ್ಯ ಬಸ್ತಿಗಳಲ್ಲಿ ಇರುವ ಯಾವ ಪಬ್ಲಿಕ್ ರಸ್ತೆಯಲ್ಲಿಯೂ ಹೋಗುವ ಮೋಟರ್ ಗಾಡಿಯನ್ನೂ ಘಂಟೆಗೆ 15 ಮೈಲಿಗಿಂತ ಹೆಚ್ಚಿನ ವೇಗದಿಂದ ನಡಿಸಕೂಡದು. ಆದರೆ ಈ ಕೆಳಗೆ ಕಂಡ ರಸ್ತೆಗಳ ವಿಷಯದಲ್ಲಿ ವೇಗವು ಘಂಟೆಗೆ ಆರು ಮೈಲಿಗಿಂತ ಮೀರಕೂಡದು:—

(1) ಪೇಟೆ—ಹೊಸಗಡಿಯಾರದ ಟವರಿನಿಂದ ಊರನಾರಿಕೆ ಗೇಟಿನ ವರೆಗೆ. (2) ಮಂಡಿಪೇಟೆ—ಶಾಲಿವನ್ನನರಾದಿ ರಸ್ತೆ, ಬೊಂಬುಬಜಾರು ರಸ್ತೆ, ಮಂಡಿ ಮಾರ್ಕೆಟ್ ರಸ್ತೆ. (3) ಸಂತೇಪೇಟೆ ರಸ್ತೆ—ದೇವರಾಜ ಮಾರ್ಕೆಟ್ಟಿನಿಂದ ಸಂಸ್ಕೃತ ಕಾಲೇಜಿನ ವರೆಗೆ. (4) ಮೈಸೂರು ಮಾನಂದವಾಡಿ ರಸ್ತೆ—ಸಂಸ್ಕೃತ ಪಾಠಶಾಲೆಯ ಹಿಂಭಾಗದಿಂದ ಚಿಟ್ಟಹಳ್ಳಿ ಉಕ್ಕಡದ ವರೆಗೆ. (5) ಹೊಸಕೆರೆ ಹಳ್ಳಿ ರಸ್ತೆ—ಹೊಸಕೆರೆಹಳ್ಳಿಯಿಂದ ಎತ್ತುಗಳ ಕರೆಹಳ್ಳಿಯ ವರೆಗೆ. (6) ಇಲವಾಲದ ರಸ್ತೆ—ವೆಸ್ಲಿಯನ್ ಮಿಷನ್ ಸ್ಕೂಲಿನಿಂದ ವಾಣೀವಿಲಾಸ ಆಸ್ಪತ್ರೆಯ ವರೆಗೆ. (7) ರೈಲ್ವೇ ಸ್ಟೇಷನ್ ರಸ್ತೆ—ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಿಂದ ಸೆಂಟ್ರಲ್ ಪೊಲೀಸ್ ಸ್ಟೇಷನ್ ವರೆಗೆ.

ಮೇಲಿನ ನಿಯಮಗಳನ್ನು ಅತಿಕ್ರಮಿಸಿದಲ್ಲಿ ಮೋಟಾರ್ ಗಾಡಿಗಳ ರೆಗ್ಯುಲೇಷನ 12 ನೆಯ ಪ್ರಕರಣದ ಮೇರೆಗೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

ಮೈಸೂರು ಸೀಮೆಯ ವ್ಯವಸಾಯದ ಇಲಾಖೆ.

ಕಬ್ಬಿನ ಬೆಳೆ ಮತ್ತು ಬೆಲ್ಲ ಮಾಡುವ ವಿಷಯವಾಗಿ ಕೊಡುವ ವ್ಯವಸಾಯಕ್ಕೆ ಸಂಬಂಧಪಟ್ಟ ಸುಲಭ ಪಾಠವು ಹೆಬ್ಬಾಳದ ಫಾರಂನಲ್ಲಿ 1916 ನೇ ಇಸವಿ ಫೆಬ್ರವರಿ 14ನೇ ತಾರೀಖು ಮೊದಲು ಮಾಡಿಕೊಂಡು ಒಂದುವಾರ ನಡೆಯುವದು. ಸದರಿ ಸುಲಭ ಪಾಠವನ್ನು ಕೇಳಲು ಬರತಕ್ಕ ಜನಗಳಿಗೆ ಹೆಬ್ಬಾಳದ ಫಾರಂನಲ್ಲಿ ಇರಲು ಸ್ಥಳವು ಕೊಡಲಾಗುತ್ತೆ. ಅಲ್ಲದೆ ಊಟಕ್ಕೆ ತಗಲಬಹುದಾದಷ್ಟು ಖರ್ಚು ಮಾತ್ರ ವಸೂಲ್ ಮಾಡಲಾಗುತ್ತೆ ಮತ್ತು ಅವರಿಗೆ ತಗಲತಕ್ಕ ರೈಲು ಛಾರ್ಜು ಮತ್ತು ಊಟದ ಖರ್ಚಿನಲ್ಲಿ ಮೂರನೇ ಒಂದು ಭಾಗ ಸರ್ಕಾರದಿಂದ ಮುಫತ್ತಾಗಿ ಕೊಡಲಾಗುತ್ತೆ. ಸದರಿ ಸುಲಭಪಾಠವನ್ನು ಕೇಳಲು ಬರಲಪೇಕ್ಷೆಯುಳ್ಳ ಜನಗಳು ಹೆಬ್ಬಾಳದ ಫಾರಂ ಮ್ಯಾನೇಜರವರಿಗೆ ಒಂದು ವಾರ ಮುಂಚಿತವಾಗಿ ತಿಳಿಸತಕ್ಕದ್ದು.

ಕಬ್ಬಿನ ಬೆಳೆ ಮತ್ತು ಬೆಲ್ಲ ಮಾಡುವ ವಿಷಯವಾಗಿ ಕೊಡುವ ವ್ಯವಸಾಯದ ಸಂಬಂಧಪಟ್ಟ ಸುಲಭ ಪಾಠವು ಶಿವಮೊಗ್ಗ ಡಿಸ್ಟ್ರಿಕ್ಟ್ ಸಾಗರದ ತಾಲ್ಲೂಕು ಮರತೂರ್ ಫಾರಂನಲ್ಲಿ 1916 ನೇ ಇಸವಿ ಫೆಬ್ರವರಿ 14 ನೇ ತಾರೀಖು ಮೊದಲುಮಾಡಿಕೊಂಡು ಒಂದು ವಾರ ನಡೆಯುವದು. ಸದರಿ ಸುಲಭ ಪಾಠವನ್ನು ಕೇಳಲು ಬರತಕ್ಕ ಜನಗಳಿಗೆ ಮರತೂರ್ ಫಾರಂನಲ್ಲಿ ಇರಲು ಸ್ಥಳವು ಕೊಡಲಾಗುತ್ತೆ. ಮತ್ತು ಊಟಕ್ಕೆ ತಗಲಬಹುದಾದಷ್ಟು ಖರ್ಚು ಮಾತ್ರ ವಸೂಲು ಮಾಡಲಾಗುತ್ತೆ. ಅಲ್ಲದೆ ಅವರಿಗೆ ತಗಲತಕ್ಕ ರೈಲುಚಾರ್ಜು ಮತ್ತು ಊಟದ ಖರ್ಚಿನಲ್ಲಿ ಮೂರನೇ ಒಂದು ಭಾಗ ಸರ್ಕಾರದಿಂದ ಮುಫತ್ತಾಗಿ ಕೊಡಲಾಗುತ್ತೆ. ಸದರಿ ಸುಲಭ ಪಾಠವನ್ನು ಕೇಳಲು ಬರಲಪೇಕ್ಷೆಯುಳ್ಳ ಜನಗಳು ಮಂಡ್ಯ? ಶಿವಮೊಗ್ಗದಲ್ಲಿರುವ ವ್ಯವಸಾಯದ ಇಲಾಖಾ ಇನ್ಸ್‌ಪೆಕ್ಟರವರಿಗೆ ಒಂದು ವಾರ ಮುಂಚಿತವಾಗಿ ತಿಳಿಸತಕ್ಕದ್ದು.

ಚಿಕಿತ್ಸೆಗಾಗಿ ಸರ್ಕಾರೀ ಆಸ್ಪತ್ರೆಗಳಿಗೂ ಔಷಧಾಲಯಗಳಿಗೂ ಹೋಗುವ ರೋಗಿಗಳಿಂದ ರುಸುಂ ವಸೂಲ್ಮಾಡುವುದನ್ನು ಕ್ರಮಗೊಳಿಸುವ ನಿಯಮಗಳು.

1916 ನೇ ಇಸವಿ ಜನವರಿ 1 ನೆಯ ತಾರೀಖಿನ ಆಗಾಯಿತು ಹಂಗಾಮಿಯಾಗಿ ಮೂರು ವರುಷಗಳ ವರೆಗೆ, ಬೆಂಗಳೂರು ಮತ್ತು ಮೈಸೂರು ನಗರದಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿಯೂ ಔಷಧಾಲಯಗಳಲ್ಲಿಯೂ ಇದರ ಕೆಳಕಂಡ ನಿಯಮಗಳು ಅನುಸರಿಸಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

(1) ಎಲ್ಲಾ ಬಾಬುಗಳಿಂದಲೂ ಮಾಹೆಯಾನಾ 50 ರೂಪಾಯಿಗೆ ಮೀರಿದ ಸಂಪಾದನೆಯುಳ್ಳ ಜನರೂ ಅವರ ಆಶ್ರಿತರೂ ಈ ನಿಯಮಗಳ ಉದ್ದೇಶಗಳಿಗಾಗಿ ಬಡವರೆಂದು ಎಣಿಸಲ್ಪಡುತ್ತಾರಲ್ಲದೆ, ಇವರ ಪ್ರಾವಿನ್ಸಿಯಲ್, ಮ್ಯುನಿಸಿಪಲ್ ಯಾ ಲೋಕಲ್ ಫಂಡುಗಳಿಂದ ಪೋಷಿಸಲ್ಪಡುವ ಎಲ್ಲಾ ಆಸ್ಪತ್ರೆಗಳಲ್ಲಿಯೂ ಔಷಧಾಲಯಗಳಲ್ಲಿಯೂ ಮುಫತ್ತಾಗಿ ವೈದ್ಯಕೀಯ ಬುದ್ಧಿವಾದವನ್ನೂ ಚಿಕಿತ್ಸೆಯನ್ನೂ ಪಡೆಯಲು ಹಕ್ಕುಳ್ಳವರಾಗಿರುವರು. (2) ಆಸ್ಪತ್ರೆಗೆ ಹೋಗಿ ಔಷಧವನ್ನು ತೆಗೆದುಕೊಂಡುಬರುವ ರೋಗಿಗಳು—ಮಾಹೆಯಾನಾ ನಾಲ್ಕು ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಾಗಿ ಆಸ್ಪತ್ರೆಗೆ ಯಾ ಔಷಧಾಲಯಕ್ಕೆ ಚಂದಾದಾರರಾಗಿ ಕೊಡುವವರು ತಮಗೂ ತಮ್ಮ ಕುಟುಂಬದವರಿಗೂ ರುಸುಂ ಇಲ್ಲದೆ ಔಟ್ ಪೇಷಂಟರ ಇಲಾಖೆಯಲ್ಲಿ ವೈದ್ಯಕೀಯ ಬುದ್ಧಿವಾದವನ್ನೂ ಚಿಕಿತ್ಸೆಯನ್ನೂ ಪಡೆಯುವುದಕ್ಕೆ ಅವಕಾಶ ಕೊಡಲಾಗುವುದು. (3) ಇತರ ಜನರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಯಾ ಔಷಧಾಲಯಕ್ಕೆ ಹೊರಗಿನ ರೋಗಿಗಳಾಗಿ ಹೋದರೆ, ಪ್ರತಿಯೊಬ್ಬರಿಂದಲೂ ಚಿಕಿತ್ಸೆಯ ಖರ್ಚಿಗಾಗಿ ದಿನಕ್ಕೆ ಎರಡಾಣೆಯಂತೆ ರುಸುಂ ವಸೂಲ್ಮಾಡದ ಹೊರತು, ರೋಗಿಗಳನ್ನು ಪರೀಕ್ಷಿಸಿ ನೋಡಿದ ಖರ್ಚು (ಸಾಮಾನ್ಯ ಶಸ್ತ್ರ, ಚಿಕಿತ್ಸೆಯೂ ಸೇರಿ) ಒಂದು ದಿನದ ಔಷಧದ ಖರ್ಚು ಸೇರಿರುತ್ತವೆ.

ಜನರಲ್ ವಾರ್ಡುಗಳು—(4) ಆಸ್ಪತ್ರೆಯಲ್ಲಿಯೇ ಇದ್ದು ಔಷಧ ತೆಗೆದುಕೊಳ್ಳುವವರು—ಬಡವನಲ್ಲದ ಪ್ರತಿಯೊಬ್ಬನೂ ಆಸ್ಪತ್ರೆಯಲ್ಲಿಯೇ ಜನರಲ್ ವಾರ್ಡಿನಲ್ಲಿದ್ದು ಚಿಕಿತ್ಸೆ ಹೊಂದಬೇಕಾದರೆ ಅವನು ಆಸ್ಪತ್ರೆಯಲ್ಲಿ ಇರುವಷ್ಟು ದಿನಗಳೂ ದಿನಕ್ಕೆ ಎಂಟಾಣೆಯಂತೆ ರುಸುಂ ಕೊಡಬೇಕು. (5) ಆಸ್ಪತ್ರೆಯಲ್ಲಿದ್ದುಕೊಂಡು ಮುಫತ್ತಾಗಿ ಚಿಕಿತ್ಸೆ ಹೊಂದಬೇಕಾದ ಜನಗಳು ತಮ್ಮ ಅಥವಾ ತಮ್ಮ ಪೋಷಕರ ತಿಂಗಳುವಾರಿ ಆದಾಯವು 50 ರೂಪಾಯಿಗೆ ಮೀರಿಲ್ಲವೆಂದು ಒಂದು ಪ್ರಮಾಣ ಪತ್ರಿಕೆಯನ್ನು ಬರೆದುಕೊಡಬೇಕು.

ಸ್ಪೆಷಲ್ ವಾರ್ಡುಗಳು—(6) ಸ್ಪೆಷಲ್ ವಾರ್ಡಿನಲ್ಲಿ ದಾಖಲಾಗಲು ಇಷ್ಟಪಡುವ ಪ್ರತಿಯೊಬ್ಬ ಮನುಷ್ಯನೂ ತನಗೇ ಒಂದು ಪೂರಾ ಕೊಠಡಿಯನ್ನು ಪಡೆದ ಮೊದಲನೇ ತರಗತಿಯ ರೋಗಿಯಂತೆ ಚಿಕಿತ್ಸೆ ಹೊಂದಬೇಕಾದರೆ ಅವನು ದಿನ ಒಂದಕ್ಕೆ ಎರಡು ರೂಪಾಯಿಯಂತೆ ರುಸುಂ ಕೊಡಬೇಕಾಗುವುದು; ಎರಡನೇ ತರಗತಿಯ ರೋಗಿಯಂತೆ ಚಿಕಿತ್ಸೆ ಹೊಂದಬೇಕಾದರೆ ದಿನ ಒಂದಕ್ಕೆ ಒಂದು ರೂಪಾಯಿಯಂತೆ ರುಸುಂ ಕೊಡಬೇಕಾಗುವುದು. ಎರಡನೇ ತರಗತಿಯ ರೋಗಿಗಳಿಬ್ಬರನ್ನು ಒಂದು ಕೊಠಡಿಯಲ್ಲಿ ಇಡಲಾಗುವುದು. ಷರಾ—ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ವಿಷಯದಲ್ಲಿ ಹಿಂದೆ 1910 ನೇ ಇಸವಿ ಏಪ್ರಲ್ 2 ನೆಯ ತಾರೀಖಿನ ಸರ್ಕಾರೀ ಹುಕುಮಿನಲ್ಲಿ ಬೇರೆ ಸ್ಪೆಷಲ್ ದರಗಳನ್ನು ವಿಧಿಸಿರುವದರಿಂದ ಈ ಮೇಲ್ಕಂಡ ದರಗಳು ಸದರೀ ಆಸ್ಪತ್ರೆಗೆ ಅನ್ವಯಿಸುವದಿಲ್ಲ. (7) ಹನ್ನೆರಡು ವರುಷದೊಳಗಿರುವ ಮಕ್ಕಳು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ನಿಂತರೆ ಮೇಲ್ಕಂಡ ದರಗಳಲ್ಲಿ ಅರ್ಧವನ್ನು ವಸೂಲ್ಮಾಡಲಾಗುವುದು. (8) ಮೇಲ್ಕಂಡ ದರಗಳಲ್ಲಿ ವೈದ್ಯರು ಮಾಡುವ ಪರೀಕ್ಷೆ, ಚಿಕಿತ್ಸೆ, ಆಹಾರ ಕೊಡಲಾಗುವ ಸಾಮಾನ್ಯ ಖರ್ಚುಗಳೂ ಸೇರಿರುತ್ತವೆ. ಸ್ಪೆಷಲ್ ಆಸ್ಪತ್ರೆಯನ್ನು ಅಪೇಕ್ಷಿಸುವ ರೋಗಿಗಳು ಸ್ವಂತ ಪರಿಚಾರಕರನ್ನು ಮಾಡಿಕೊಳ್ಳಬೇಕು. (9) ಮೇಲ್ಕಂಡ ನಿಯಮಗಳನ್ನನುಸರಿಸಿ ರುಸುಮುಗಳ ಸಂಬಂಧವಾಗಿಯೇ ವಸೂಲಾದ ಹಣ ಸರ್ಕಾರಕ್ಕೆ ಜಮಾ ಆಗತಕ್ಕದ್ದು. (10) ಪರಾಕ್ರಮದ ಪ್ರಯೋಜನಗಳು ಇಲ್ಲದೆ ರೋಗಿಗಳನ್ನು ಮುಫತ್ತಾಗಿ ನೋಡಲಾಗುವದು.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರ ಪಜೂರು ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಈ ಮತವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಬರೆಯುವ ಬಾತ್ಮೀದಾರರು ನಮ್ಮ ಓದುಗರಿಗೆ ಉಪಯುಕ್ತವಾದ ಸರಿಯಾದ ಸುದ್ದಿ ವಿಚಾರಗಳನ್ನು ಬರೆದು ತಿಳಿಸಬೇಕು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗು

...ಕವನು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ...ತ್ತೇವೆ. —ಎಡಿ.]

ಕರೆಸ್ಪಾಂಡೆನ್ಸ್.

ಹಳ್ಳಿ ವಿದ್ಯಾಭ್ಯಾಸ.

...—ಗವರ್ನಮೆಂಟಿನವರು ಸಕಲರೂ ವಿದ್ಯಾವಂತರಾಗಬೇಕೆಂದು ...ಬಲಾತ್ಕಾರ್ಯಂಧವಿಧಿಸಿ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂದು ...ಟುವುದು ಸರಿಯಷ್ಟೆ. ಗ್ರಾಮಾಂತರಗಳಲ್ಲಿ ಈ ಪದ್ಧತಿಯನ್ನು ಜಾರಿ ...ಕೃಷಿಕರು ತಮ್ಮ ಧನವನ್ನು ಕಾಪಾಡಿಕೊಂಡು ಅದರಲ್ಲಿ ಅಭಿವೃದ್ಧಿ ...ರುವುದಕ್ಕೆ ಸಂಶಯವಿಲ್ಲ. ಇಲ್ಲದಿದ್ದಲ್ಲಿ ದುರ್ವಿನಿಯೋಗದ ದಂ ...ಆಗುವುದರಲ್ಲಿ ಸಂದೇಹವಿಲ್ಲ. ಈಗ ಪ್ರತಿ ಗ್ರಾಮದಲ್ಲಿ ಒಂದೊಂ ...ಮಠವಿದೆ. ಅಲ್ಲಿ ಕೈಮಿನಿ ಭಾರತ, ಗೋವಿನಕಥೆ ಮುಂತಾದವುಗಳ ...ಪಾರ. ಹೀಗೆ ಹೇಳುವುದು ಬಾಲಕರಿಗೆ ಬಾಯಿಪಾಠ ಮಾತ್ರವಾಗು ...ಅಕ್ಷರದೃಷ್ಟಿ ಆಗುವುದಿಲ್ಲ. ಪ್ರಾಯಶಃ ಗ್ರಾಮಾಂತರಗಳಲ್ಲಿ ...ಗೆ ಓದು ಬರಹ ಬರುವವರು ತಾವು ಸರ್ವಜ್ಞರೆಂದು ಮೆರೆವರು. ...ಓದನ್ನು ನಾಶಮಾಡಬೇಕಾದರೂ ಕೈಗೆ ಸಿಕ್ಕುವದಿಲ್ಲ. ಕಾರಣವೇನಂ ...ತೆಗೆ ಹಾಕುವರೋ, ಅಥವಾ ಯಾವ ದಂಡವನ್ನು ತೆರಬೇಕೆನ್ನು ...ಎಂದು ಭಯಪಡುತ್ತಿರುವರು. ಸರ್ಕಾರದವರು ಬಲಾತ್ಕಾರ ವಿದ್ಯಾಭ್ಯಾಸ ...ಜಾರಿಗೆ ತಂದರೆ ರೈತರನ್ನು ಉದ್ಧಾರಮಾಡಿದಂತಾಗುತ್ತೆ.

ಸಮ್ಮ ಪಾಟೀಲ.

ಅರಕಲಗೂಡು ರೀಡಿಂಗ್ ರೂಮ್—ಜವಾಬು.

...—ತಮ್ಮ 13 ನೇ ತಾ. ಪೇಪರಿನಲ್ಲಿ ಬಾತ್ಮಿದಾರರು ಪತ್ರಿಕೆಯ ...ಸುವು ಸಿದ್ಧನಾದದ್ದಲ್ಲ. ಹಾಲಿ ಇರುವ ಸ್ಥಿತಿಯಲ್ಲಿ ಇಲ್ಲಿನ ವಿದ್ಯಾ ...ತೀಟಿಯು ಬೆಳ್ಳೂರು...ಟ್ಟಿಸಿರುವಾ ರೀಡಿಂಗು ರೂಮು ಅಭಿವೃದ್ಧಿಗೆ ...ಹೆಸರು ಪ್ರಸಿದ್ಧಿಯಾಗುತ್ತದೆ ಎಂಬ ಕುಹಕ ಮನಸ್ಸಿನಿಂದ ಆ ...ರೂಮನ್ನು ಹೇಗಾದರೂ ಹೀನಸ್ಥಿತಿಗೆ ತರಬೇಕೆಂಬ ಅಭಿಲಾಷೆಯಿಂದ ...ಮೆಂಬರುಗಳನ್ನು ನಿಲ್ಲಿಸಿ ಬೇರೆ ರೀಡಿಂಗ್ ರೂಮನ್ನು ಹೊಸದಾಗಿ ಪ್ರಸ್ತಾ ...ಪು. ಇದು ಹಾಲಿ ನನ್ನ ಅನುಭವವಾಗಿರುತ್ತದೆ ಅಲ್ಲದೆ ಹಿಂದಿದ್ದ ಸೆಕ್ರೆ ...ಟರಿಯಾಗಿ ಕೆಲಸ ನಡಿಸದೆ ಮೆಂಬರುಗಳಿಗೆ ಚಂದಾ ಹಣ ಬಾಕಿನಿಲ್ಲಿಸಿ ...ಚಂದಾದಾರನ್ನು ಅದರಲ್ಲಿ ತಮ್ಮ ಮೇಲೆ ಬೀಳುತ್ತದೆಯೋ ಎಂದು ಕೆಲವರು ...ಕೊಟ್ಟರು. ಪೇಟೆಯಲ್ಲಿ ನಾಲ್ಕು ಪಾರ್ಟಿಗಳಾಗಿವೆಯೆ. ದೂ, ...ರೂಮು ಕಟ್ಟಿಸಿರುವ ಶೆಟ್ಟರು ಅವರ ಪಾರ್ಟಿ ವಿನಹ ಬೇರೆ ಪಾರ್ಟಿ ...ಚಂದಾದಾರರಾಗಲು ಅಭಿಪ್ರಾಯ ಪಡುವುದಿಲ್ಲವೆಂದೂ ಬರೆದಿರು ...ಈ ರೀತಿ ಶೆಟ್ಟರು ಅಭಿಪ್ರಾಯ ಪಟ್ಟಿದ್ದಲ್ಲಿ ಹಿಂದೆ ಬೇರೆ ಪಾರ್ಟಿಯ ...ಚಂದಾದಾರರಾಗಿದ್ದರಲ್ಲ. ಇದು ಎಲ್ಲರಿಗೂ ತಿಳಿದ ವಿಷಯ. ...ರೂಮಿನ ಪ್ರವೇಶೋತ್ಸವದ ದಿವಸ ಸಕಲ ವಿಘ್ನವಾದ ಹಳ್ಳಿಸನ್ನು ಮ್ಯುನಿ ...ಟಿಯ ಮಹೋದಯರೇ? ಇದು ಈ ತಮ್ಮ ಪತ್ರಿಕೆಯಲ್ಲೇ ಪ್ರಕಟವಾಗಿ ...ಈ ವಿಚಾರದಲ್ಲಿ ಆಮಲ್ದಾರ್ರು ಮುಖ್ಯವಹಿಸಿ ಇಂಥಾ ...ಗೆ ಅವಕಾಶವಿಲ್ಲದಂತೆಯೂ, ಉದಾರ ಮನಸ್ಸಿನಿಂದ ಮಾಡಿರುವ ...ರೀಡಿಂಗ್ ರೂಮು ಶಾಶ್ವತಿಗೆ ತರುವಂತೆಯೂ ಅನುಕೂಲ ಮಾಡ ...ವರು.

ಒಬ್ಬ ವಾಚಕ.

ನೊಂದಿ ಕಟ್ಟುಮಾಡಿಕೊಂಡು ಬಿಟ್ಟರಂಥವಂತೆ

...—ಚಿಕ್ಕಬಳ್ಳಾಪುರದ ನೊಂದಿ ಕಂಟ್ರಾಕ್ಟರಾದ ಮ॥ ದೇವನಹಳ್ಳಿ ...ರು ಮತ್ತು ವ. ತಾಲೂಕಿನ ನಾಂಗಸ್ತನವರು ಸಹ ಸುಮಾರು ಹತ್ತು ...ರ ನೊಂದಿ ಕಂಟ್ರಾಕ್ಟ್ ಮಾಡಿಕೊಂಡಿರುತ್ತಾರೆ. ಇವರು ಮೊದಲನೇ ...ಕು ಒಂದಕ್ಕೆ 4 ಮದ್ದು ಪ್ರಕಾರವು, ಆ ಮೇಲೆ ಅತ್ತಿ ದುಡ್ಡು ಪ್ರಕಾ ...ವತ್ತೆ ಕೆಲವು ಕಾಲ ೬ ದುಡ್ಡುಗಳ ಪ್ರಕಾರವೂ ಮಾಡುತ್ತಿದ್ದು, ಈ ತಿಂಗ ...ಳಿಗೆ ಪ್ರಕಾರ ಹಾಕುತ್ತಿದ್ದರಿಂದ ಯೋಜನೆಯಾಗಿದ್ದು ಯಾರೂ ಹಿಂದ ...ಕ್ಕೆ ತೋರಲಿಲ್ಲ. ಆಗಸ್ಟ್ ಅಂಗಡಿಯ ಮುಖ್ಯಸ್ಥರು ... ಉಳ ...ಸರಿಯಿಸ ... ಮಾಡದಿಂಗಿ ... ನಾಲ್ಕು ...ಯುತ್ತೇವೆ. ಈಗಿನ ಜಾಡಂತೆ ಮಾಡುವದರ ಕೊಡುಮುವುದಿಲ್ಲ ಎಂದು ಈ ...ಯ ಕೊಡಿವಾಡಿಗಳ ಮುಖ್ಯರಾಗಿರೆಲ್ಲಾ ನೊಂದಿ ಕಟ್ಟು ಮಾಡಿಕೊಂಡು ಇದಾ ...ಯು ಬರುತ್ತದೆ ಅವರ ಈ ನೊಂದಿ ಕಂಟ್ರಾಕ್ಟು ಮುಖ್ಯರು ರೂಪಿಸುವ ...ಯವರಿಗೆ ಎನಗೆ ಇನ್ನಾರು ಕೊಡುತ್ತೇವೆ. ... ರೂಪ ಕೊಡುವುದು ...ಎಂದು ಹೇಳುತ್ತಿರುವಂತೆ ಆದರೂ, ಇವರು ಒಪ್ಪದೆ ಮಾಡಿ ...ಕೇಳಿದಂತೆ ಮಾಡಿಕೊಂಡು ನೊಂದಿರುವವರು ಕಡಿಮೆ ಮಾಡಿ ...ಗಿರುವುದರಿಂದ, ಎಲ್ಲರೂ ಕಡಿಮೆ ಬೆಲೆಯ ಮರವು ಊರಿನ ...ತಿಳಿಸಿದ ... ಇದು ಹಿಂತಿರುಗಿ ... ...ರುವ ಹೊರಗೆ ಮಾರುವುದಕ್ಕೆ ... ಮಾಡುವ ... ...ದರಿಂದ ಈ ಕಂಟ್ರಾಕ್ಟಿನ ಅಭಿಪ್ರಾಯ ಒಂದು ತಿಂಗಳ ವರ ...ದಲ್ಲಿ ಯಾರೂ ಕಾವಲಿಲ್ಲವಾಗಿ ತಿಳಿಯಬರುತ್ತೆ. ಮತ್ತು ...ದಿನಗಳಲ್ಲಿ ಮೊದಲಿನ ಹಾಗೆ ಅವು ಜಗಳಗಳು, ಹೊಡೆದಾಟಗಳೂ ...ಕಾಣುವುದಿಲ್ಲ. ಅಲ್ಲದೆ ಈಗ ಎಲ್ಲರ ಮನೆಗಳಲ್ಲಿಯೂ ... ...ಹೊಸ ದೀಪಗಳು ಉರಿಯುತ್ತಾ ಇರುತ್ತವೆ ಮತ್ತು ಈಗ ...ತುಂಬಾ ಊಟ ಮಾಡುತ್ತಿರುವರು. ಮೊದಲಿಂತ ... ...ಟಿ ಪೇಶಾನುಗಳಿಗೆ ಕೊಟ್ಟು ಎಷ್ಟೆ ... ...ರು. ಹೀಗಿರುವ ಹಾಗೆಯೇ ಇವರು ಕಟ್ಟಡದಲ್ಲಿ ಇದ್ದ ... ಇದ ...ಹಾಗೆ ಸುಖವಾಗಿಯೂ ಮಾನವಾಗಿಯೂ ಜೀವನ ನಡಿಸಿಕೊಂಡು ...ಸ್ಥಿತಿಗೆ ಬರುವರೆಂದು ಹೇಳುವುದಕ್ಕೆ ಏನೇನೂ ಸಂದೇಹವಿಲ್ಲ.

ಪ್ರಜಾ ಹಿತಚಿಂತಕ.

ಚಿತ್ರದುರ್ಗದ ಕೆಳಕೋಟೆ ಮಠ—ಜವಾಬು.

...—ತಮ್ಮ ಪತ್ರಿಕೆಯಲ್ಲಿ ಚಿತ್ರದುರ್ಗದ ಕೆಳಕೋಟೆಯಲ್ಲಿರುವ ...ಯ ಪೀಠಾಲಂಕೃತರಾದ ಶ್ರೀ ಗುರು ಆನಂದಭಾರತಿ ಸ್ವಾಮಿಗಳ ...ಲ್ಲಿ ಮಠವು ಹಾಳಾಗಿದ್ದದ್ದಾಗಿಯೂ, ಸೋಲ್ಪಂದ ಸ್ವಾಮಿಗಳು ...ಕೆಲಸ ನಡಿಸಲು ಶಕ್ತಿ ಇಲ್ಲದವರಾಗಿದ್ದರೆಂದಲೂ, ಮಠವು ಹೀನ ...ಯಿರುವದೆಂತಲೂ, ಈಗ ಮೇಲ್ಕಂಡ ಪೀಠಾಲಂಕೃತರಾಗಿರುವ ಶ್ರೀ ...ಗುರುಸ್ವಾಮಿಗಳನ್ನು ಮ॥ ಗಾಯಕವಾಡ್ ಪೀರೋಜಿರಾಯರು ...ಈ ಪೀಠಕ್ಕೆ ಆರಿಸಿದರೆಂತಲೂ ಪ್ರಕಟವಾಗಿದೆ. ಇದನ್ನು ...ರಕ್ತ ಅನೇಕ ಮಹಾರಾಷ್ಟ್ರ ಮಂಡಲಿಯ ಭಕ್ತಜನಗಳಿಗೆ ...ದಾಗಿರುತ್ತೆ. ಈ ಬಾತ್ಮಿಯನ್ನು ಕೊಟ್ಟವರಾದವರು ಈ ಮಠದ ...ಗೊತ್ತಿಲ್ಲದವರಾಗಿ ತೋರುತ್ತೆ. ಈ ಮಠದ ಪೀಠಾಲಂಕೃತರಾದ ...ಆನಂದಭಾರತಿ ಸ್ವಾಮಿಗಳವರು ಪೂರ್ಣ ವಿದ್ವಾಂಸರೆಂಬುದನ್ನು ...ರಾಜಾವರ ಇಂಪೀರಿಯಲ್ ರಜಿಮೆಂಟಿನಲ್ಲಿರುವ ಮಹಾರಾ ...ರು ಮತ್ತು ಮೈಸೂರು ದೇಶದಲ್ಲಿರತಕ್ಕ ಸಮಸ್ತ ಮಹಾರಾ ...ಯವರು ಸಹ ಬಲ್ಲವರಾಗಿರುತ್ತಾರೆ. ಈ ಮಠವು ಈಗಿನವರಿ ...ದಲ್ಲದೆ ಯಥಾಸ್ಥಿತಿಯಲ್ಲಿ ನಡೆಯುತ್ತಾ ಇದೆ. ಶ್ರೀ ...ಭಾರತಿ ಸ್ವಾಮಿಗಳವರು ತಮ್ಮ ವೃದ್ಧಾಪ್ಯದಶೆಯಿಂದ ಈಗಿರತಕ್ಕ ...ಸ್ವಾಮಿಗಳವರನ್ನು ಮ॥ ಗಾಯಕವಾಡ್ ಪೀರೋಜಿರಾಯರು ಮುಂಬಯಿದ ಅನೇಕ ಮಹಾರಾಷ್ಟ್ರ ಮಂಡಲಿಯವರ ಅನುಮತಿಯಿಂದ 18-11-15 ರಲ್ಲಿ ತಮ್ಮ ಪೀಠಕ್ಕೆ ಅಧಿಕಾರಿಗಳನ್ನಾಗಿ ನೇಮಿಸಿದರು. ಈ ಸಂತೋಷದ ಮಹೋತ್ಸವಕ್ಕಾಗಿ ಆ ದಿನ ಚಿತ್ರದುರ್ಗ ಸ್ಥಳೀಕರಾದ ಮಹಾಜನಗಳಿಗೆ ಫಲಪುಷ್ಪ ತಾಂಬೂಲಾದಿಗಳಿಂದ ಆನಂದಪಡಿಸಿ ದೇವರ ಪ್ರಾರ್ಥನೆ ಮಂಗಳ ವಗೈರೆ ನಡೆದು ಶ್ರೀಮನ್ ಯುವರಾಜರವರಿಗೂ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೂ ಶ್ರೀಯುವರಾಜ್ಞೀ ಮಣಿಗಳನ್ನು ಮಾಡಿ ಕಡೆಯಲ್ಲಿ ಸರ್ವರೂ ಎದ್ದು ಚಕ್ರವರ್ತಿ ಸಾರ್ವಭೌಮರವರಿಗೆ ಜಯಧ್ವನಿಯನ್ನು ಮಾಡಿದರು. ಮತ್ತು ಮೇಲ್ಕಂಡ ಶ್ರೀಗುರು ಆನಂದಭಾರತಿ ಸ್ವಾಮಿಗಳವರ ಖಾಸ್ ತಮ್ಮಂದಿರಾದ ಶ್ರೀ ಯಂಕೋಜಿ ಬಾವಾಜಿಯವರು ಕಾಲವಾದರೆಂದು ತಿಳಿಸಲು ವಿಷಾದಪಡುತ್ತೇನೆ. ಇವರು ಕೇವಲ ಸಾಧುಗಳು, ಜಿತೇಂದ್ರಿಯ ಪುರುಷರು; ಇವರ ವಿಯೋಗಕ್ಕೋಸ್ಕರ ಬಹುಜನ ಮಹಾರಾಷ್ಟ್ರ ಮಂಡಲಿಯವರು ವಿಷಾದಪಡುತ್ತಿರುವರು. ಇವರ ಉತ್ತರ ಕ್ರಿಯೆಗಳು ಸನ್ಯಾಸ ರೀತಿ ಈಗಿರತಕ್ಕ ಶ್ರೀಗುರು ರತ್ನಭಾರತಿ ಸ್ವಾಮಿಗಳವರಿಂದ ನಡಿಸಲ್ಪಟ್ಟಿತು. ತಾ. 12 ನೇ ಬುಧವಾರ 200 ಜನ ಬಡವರನ್ನು ದಿವ್ಯವಾದ ಭೋಜನದಿಂದ ತೃಪ್ತಿಪಡಿಸಿದರು.

ಟಿ. ಗೋವಿಂದರಾವ್.

ಲಂಚ.

ಅಯ್ಯಾ,—ಸರ್ಕಾರಿ ಉದ್ಯೋಗಗಳಲ್ಲಿ ಮಾತ್ರವಲ್ಲ; ರೈಲ್ವೆ, ಸಾಹುಕಾರಿ, ಮಿಷನ್ ಆಫೀಸುಗಳಲ್ಲಿಯೂ ಸಹ ಲಂಚ ಕೊಡುವದೂ, ಲಂಚ ತಕ್ಕೊಳ್ಳುವದೂ ಅಲ್ಲಲ್ಲಿ ಕಂಡೋಯುತ್ತಾ ಬರುತ್ತಿದೆ. ಇದು ಅನೇಕರನ್ನು ಹಾಳು ಮಾಡುವ ಅಸಹ್ಯವಾದ ಪಿಶಾಚವಾಗಿದೆ. ಇದರಿಂದ ಆಗುವ ಕೇಡುಗಳನ್ನು ಅಧಿಕಾರಿಗಳೂ ಪ್ರಜೆಗಳೂ ಸಾಧ್ಯವಾಗುವ ಮಟ್ಟಿಗೆ ಕಡಿಮೆ ಮಾಡಲು ಪ್ರಯಾಸ ಪಡಬೇಕಲ್ಲವೇ? ಇದು ಯಾವ ದೇಶದಲ್ಲಿ ಹೆಚ್ಚುತ್ತದೋ ಆ ದೇಶದ ನೀತಿ ನ್ಯಾಯಗಳೂ ಪ್ರಜಾ ನೆಮ್ಮದಿಯೂ ಕೆಟ್ಟು ಹೋಗುತ್ತವೆಂದು ನಿಸ್ಸಂದೇಹವಾಗಿ ಹೇಳಬಹುದು.

ಲಂಚವನ್ನು ಕಡಿಮೆಮಾಡುವ ಮಾರ್ಗ.—ಯಾವ ಆಫೀಸಿನಲ್ಲಿಯೇ ಆಗಲಿ ಶಿಫಾರಸು ಬೇಕು ಎಂಬ ವಾರ್ತೆ ರೂಢಿಯಲ್ಲಿದೆ. ಅನೇಕ ಸಂದರ್ಭಗಳಲ್ಲಿ ಕೆಲವು ನೀಚರು ತಮ್ಮ ಇಷ್ಟಾರ್ಥಗಳಿಗೆ ಒಳಪಟ್ಟು ಬಂದರೆ ಸಾಕು; ಪರಿಣಾಮ ಫಲಗಳನ್ನು ಯೋಚಿಸದೆ ಶಿಫಾರಸು ಮಾಡಿಬಿಡುತ್ತಾರೆ. ಇಂಥಾ ಅಯೋಗ್ಯ ಮತ್ತೀಯರು ದೇಶಗಳಲ್ಲಿ ಹೆಚ್ಚುವದರಿಂದ ರಾಜದ್ರೋಹಗಳೂ, ಪ್ರಜಾನೆಮ್ಮದಿ ಭಂಗಗಳೂ, ಅನೇಕ ಅನೀತಿಗಳೂ ಹೆಚ್ಚುವವೇ ಹೊರತು ಕಡಿಮೆಯಾಗಲಾರವು. ಆದದರಿಂದ ಸರ್ಕಾರದವರೂ ನೀತಿಯುಕ್ತ ಪ್ರಜೆಗಳೂ ಸಹ ಏಕೀಭವಿಸಿ, ಶಿಫಾರಸನ್ನು ಪಡೆದು ಒಂದು ಉದ್ಯೋಗದಲ್ಲಿ ನುಗ್ಗಿ ರಾಜನೀತಿಗೂ ಪ್ರಜಾ ನೆಮ್ಮದಿಗೂ ಇರಾದಾ ಕೇಡಿಗೂ ರಾಜಭಂಡಾರದ ನಷ್ಟಕ್ಕೂ ಕಾರಣರಾದ ನೌಕರರಿಗೆ ಕಲ್ಲಿನ ಶಿಕ್ಷೆ ಎಂಬ ಪಟದಲ್ಲಿ ಅಲ್ಪಸ್ವಲ್ಪವಾದರೂ ಶಿಫಾರಸು ಮಾಡಿದವರು ಅನುಭವಿಸುವಂತೆ ಮಾಡಿದರೆ ತಮ್ಮ ಇಷ್ಟಾರ್ಥಕ್ಕಾಗಿ ಮಾಡಿದ ಶಿಫಾರಸಿನ ಪ್ರತಿಫಲವನ್ನು ಅವರೂ ಸ್ವಲ್ಪ ಉಣ್ಣುವರಲ್ಲವೇ? ಇದರಿಂದ ಶಿಫಾರಸು ಮಾಡುವವರ ಯೋಗ್ಯತಾಯೋಗ್ಯತೆಗಳೂ ಹೊರಪಡದಿರುವವೇ? ಇದು ಸಕಲ ಇಲಾಖೆಗಳಲ್ಲಿಯೂ ಸಕಲರಿಗೂ ಎಚ್ಚರಿಕೆಯನ್ನೂ ಬುದ್ಧಿವಾದವನ್ನೂ ನಿಸ್ಸಂದೇಹವಾಗಿ ಕಲಿಸಿಕೊಡದೆ ಇರಲಾರದು.

ಶಿಫಾರಸಿನ ಫಲ.—ಒಬ್ಬ ಮಹನೀಯರು ತಾವು ಎಂಥವರಿಗೆ ಶಿಫಾರಸು ಮಾಡುತ್ತೇವೆಂಬ ಸಂಗತಿಯನ್ನು ಮರೆತುಬಿಟ್ಟು ತಮ್ಮ ಶಿಫಾರಸು ಹೊಂದಿದವರ ಯೋಗ್ಯತೆ ಗುಣ ನಡತೆ ಆರೋಗ್ಯಭಾಗ್ಯಗಳಿಂದ ಕೂಡಿದ ಸೇವೆಯು ಪ್ರಜೆಗಳ ಕ್ಷೇಮಲಾಭಗಳಿಗೆ ಅನುಕೂಲಪ್ರಾಯವಾಗಿರುವವೇ, ಅಥವಾ ವಿಷಪ್ರಾಯವಾಗಿರುವವೇ ಎಂಬ ಸಂಗತಿಯನ್ನು ತಿರಸ್ಕರಿಸಿ ಯಾವದೋ ಒಂದು ಆಶೆಯಿಂದ ಅನಾಯಾಸವಾಗಿ ರಾಜಭಂಡಾರಕ್ಕೆ ಖರ್ಚುಮಾಡುತ್ತಾರೆಂದೂ, ಈ ಖರ್ಚು ನಿಂದ ಒದಗಿದ ನೌಕರನ ಸೇವೆಯು ಪ್ರಜೆಗೆ ವಿಷವೇ ಹೊರತು ಅಮೃತವಲ್ಲವೆಂಬ ಸಂಗತಿಯನ್ನು ಸ್ವತಸ್ಸಿದ್ಧ ಪ್ರಮಾಣವಾಗಿ ಮುಂದೆ ಸಿದ್ಧಾಂತಪಡಿಸಬಹುದಾಗಿದೆ. ಹೀಗಿರುವಲ್ಲಿ ಶಿಫಾರಸು ಮಾಡಿದವರು ರಾಜಭಂಡಾರದ ನಷ್ಟದಲ್ಲಿ ಪಾಲುಗಾರರಾಗಿ ಭಂಡಾರಕ್ಕೆ ದಿಂಡುಕಟ್ಟಿರುವವರಿಂದ ದೇಶದ ಕುಶಲವೂ ಪ್ರಜಾ ಕ್ಷೇಮ, ನೆಮ್ಮದಿಗಳು ಹೆಚ್ಚುವವೆಂದು ಸಂತೋಷಿಸಬೇಕಾಗಿದೆ.

ರಾಜದ್ರೋಹಕ್ಕೆ ದಸ್ತ್ರಾಹಿ, ಸ್ವಜನದ್ರೋಹ.—ನಮ್ಮಲ್ಲಿ ಸಿದ್ಧಾಂತಕ್ಕೆ ತಕ್ಕ ... ಗಳು ಪಾಸಾಗಿವೆ. ಮತ್ತು ದರ್ಖಾಸ್ತುಗಳು ಹನುಮೆ ಬಗ್ಗೆ ವಿದ್ಯಾಬಲ 10 ರಲ್ಲಿ ಆರಿಸಲಾಗಿರುತ್ತೆ. ಸರ್ಕಾರದವರಲ್ಲಿ ನಂಬಿಕೆ ಎಂಬುದು ... ಗುಣ ಇದು ಒಂದು ಪತ್ರ ಇಲ್ಲದಿದ್ದರೆ ಪ್ರಸಂಗನೇ ... ಹೇಳಬಹುದು. ಸಕಲ ಇಲಾಖೆಗಳಲ್ಲಿ ಸಕಲರಿಗೂ ಬೇಕಾದ ಗುಣವಿರುವದೇ? ಪರಿಪತ್ರಗಳ ವಿನಿಯೋಗವಾಗುವ ನೌಕರರು ನಂಬಿಗಸ್ಥರೇ? ಸರ್ಕಾರಿ ನೌಕರರು ಸರಕಾರಿ ಕಾಗದಗಳನ್ನು ಕದಿಯಬಹುದೇ? ಪ್ರಜೆಗಳಿಗೆ ಸಂಬಂಧ ದಸ್ತಾವೇಜುಗಳನ್ನು ತಿದ್ದಿ ಬರೆದು ಕೊಡಬಹುದೇ? ಪರಸ್ತ್ರೀಯರಿಗೆ ಸರಕಾರಿ ಕಾಗದಗಳಿಂದ ಅಂತರಂಗ ಕಾಗದಗಳನ್ನು ಬರೆಯಬಹುದೇ? ಪರಪುರುಷರ ಹೆಂಡತಿಯರಿಗೆ ಅಂತರಂಗವಾಗಿ ಸರ್ವೀಸ್ ಕಾಗದಗಳನ್ನು ಬರೆಯಬಹುದೇ? ತಾನು ಒಬ್ಬ ಜವಾಬ್ದಾರ ಅಧಿಕಾರಿಯಾದ ಮಾತ್ರಕ್ಕೇ ಒಂದು ದಿವಸ ... ಹೆಂಡತಿಯಿಂದ ಭೋಜನದ ಸಂಪ್ರದಾಯದ ಹೆಂಡತಿಗೆ ಯಾವ ಸ್ವತಂತ್ರದಿಂದ ಶಿಫಾರಸು ಮಾಡಬಹುದು? ಒಂದು ವೇಳೆ ಮಹಾಪ್ಪನ ಹೊಟ್ಟೆ ದೊಡ್ಡ ಅಧಿಕಾರಿಯ ಹೆಂಡತಿಗೆ ಹೀಗೆ ಮಾಡಲು ಧೈರ್ಯಗೊಳ್ಳುವರೋ? ಎಂದಿಗೂ ಇಲ್ಲ. ನನ್ನ ಕೈಗೆ ಗರಿ ಮುಟ್ಟಿತೆ ಎಂಬ ಗಾದೆಗನುಸಾರವಾಗಿ ಪ್ರಭುತ್ವಗಳು ನಡೆವದೆ ಬರೆವರ ಗತಿಯೇನು? ರಾಜಾಶಾಸನದಲ್ಲಿ ದೊಡ್ಡ ಅಧಿಕಾರಿಗಳಿಗೆ ಹೆಚ್ಚು ಸಂಬಳ ಯಾತಕ್ಕಾಗಿ ಕೊಡಲ್ಪಡುವದು? ಪ್ರಜಾಹಿತ ಹೆಚ್ಚುವದಕ್ಕಾಗಿ ಅಲ್ಲವೇ? ಸರ್ಕಾರಿ ಕಾಗದ ಕದ್ದವನು ಸಿಕ್ಕಿದರೆ ಎಂಥಾದ ಶಿಕ್ಷೆಯನ್ನೇ? ಮೈಸೂರು ಸಂಸ್ಥಾನದಲ್ಲಿ ನೆಮ್ಮದಿಯಾಗಿ ಜೀವಿಸುತ್ತಿದ್ದ ಏಳು ಲಕ್ಷಗಳಿಂದ ಕೂಡಿದ ಒಂದು ಸಣ್ಣ ಬಡ ಸ್ತ್ರೀಯನ್ನು ಅಂತರಂಗ ಸರಕಾರಿ ಕಾಗದದ ಮೂಲಕ ಬಡರ ಬಡದ ನೌಕರನು ಸ್ವಾರ್ಥದ ದ್ರೋಹ ಮಾಡಲಿಲ್ಲವೇ? ಸ್ವದೇಶೀಯರೇ, ಯೋಚಿಸಿ. ನಂಬಿಕೆ ಎಲ್ಲಿದೆ?

ಸಾವುಕಾರರು ನಿವಾಸಿ.

ತಾಲ್ಲೂಕು ವರ್ತಮಾನಗಳು.

ತಿಪ್ಪೂರು ತಾ॥ ಬಳ್ಳಕೆರೆ.—ಇಲ್ಲಿ 8-10 ದಿನಗಳಿಂದಲೂ ರೈತರು ರಾಗಿ ಮೊದಲಾದ ಧಾನ್ಯಗಳನ್ನು ಬಡಿದು ರಾಶಿ ಮಾಡುತ್ತಿರುವರು.—ಈ ಗ್ರಾಮದಲ್ಲಿ ಒಂದು ಸ್ವಂತವಾದ ಶಾಲೆಯು ಇರತಕ್ಕದ್ದರೂ 25-30 ಬಾಲಕರು ಓದುತ್ತಾರೆ. ನಮ್ಮ ಅಮಲ್ದಾರ್ರು ಸ್ಕೂಲ್ ಕಟ್ಟಡಕ್ಕಾಗಿ ಬೇರೆ ಸ್ಥಳವನ್ನು ಚುನಾಯಿಸಿ ಗ್ರಾಮಸ್ಥರಿಗೆ ಮನೆಗೆ 4-5 ರೂಪಾಯಿ ಕಟ್ಟಡದ ವೆಚ್ಚಕ್ಕಾಗಿ ವಸೂಲ್ಮಾಡುವಂತೆ ಗ್ರಾಮದ ಪಟೇಲರಿಗೆ ಹುಕುಂ ಮಾಡಿರುವರು. ಸ್ಕೂಲ್ ಮಾಸ್ತರು ತಾಲೂಕಿಗೂ, ಡೆಪ್ಯುಟಿ ಇನ್ಸ್ಪೆಕ್ಟರಿಗೂ, ಜನರಲ್ ಸಾಹೇಬರಿಗೂ ಗ್ರಾಂಟಿಗಾಗಿ ಗ್ರಾಮಸ್ಥರ ರುಜು ಸಹ 4-5 ಸಾರಿ ಅರ್ಜಿ ಬರೆದುಕೊಂಡಾಗ್ಯೂ ಯಾವ ಹುಕುಂ ದಯಪಾಲಿಸಲಿಲ್ಲ. ಮಾಸ್ತರು 3 ನೇ ತರಗತಿಯು ತನಕ ಪಾಠ ಹೇಳುತ್ತಿರುವರು.

ಹೊಳಲ್ಕೆರೆ.—ಅಮಲ್ದಾರ್ ಮ॥ ಬಸವರಾಜೇ ಅರಸಿನವರ ಕಾಲದಲ್ಲಿ ತಾಲೂಕಿನ ಪ್ರಜೆ ಕೆಲವು ಸೇರಿ ಮಹಾರಾಜರವರಿಗೆ ಜಿ. ಸಿ. ಎಸ್. ಐ. ಎಂಬ ಬಿರುದು ಬಂದ ಜ್ಞಾಪಕಾರ್ಥವಾಗಿ ಕೃಷ್ಣರಾಜೇಂದ್ರ ಹಾಲ್ ಎಂಬ ಹೆಸರನ್ನು ಇಟ್ಟು ಒಂದು ದಿವ್ಯವಾದ ಮಂದಿರವನ್ನು ಕಟ್ಟಿಸಿದರು. ಅದನ್ನೇ ರೀಡಿಂಗ್ ರೂಮ್ ಮಾಡಿ ಅನೇಕ ಉತ್ತಮ ಪೇಪರುಗಳನ್ನು ತರಿಸಿ ಬಹಳ ಅಭಿವೃದ್ಧಿಗೆ ತಂದರು. ಅವರ ತರುವಾಯ ಬಂದವರೆಲ್ಲಾ ಅದೇ ಪ್ರಕಾರ ನಡಿಸಿಕೊಂಡು ಬಂದರು. ಈಗ ಈ ರೀಡಿಂಗ್ ರೂಮ್‌ಗೆ ಹೋದರೆ ಉತ್ತಮ ಕಟ್ಟಡವನ್ನು ಮೇಜು ಕುರ್ಚಿಗಳನ್ನು ನೋಡಬಹುದೇ ಹೊರತು ಪೇಪರುಗಳು ಇಲ್ಲ. ರೀಡಿಂಗ್ ರೂಮ್ ಯಾಕೆ ಈ ಸ್ಥಿತಿಗೆ ಬಂತೋ ಯಾರೂ ವಿಚಾರಿಸುವವರೇ ಇಲ್ಲ. ಇನ್ನು ಮೇಲಾದರೂ ತಿರಿಗಿ ಮೊದಲಿನ ಸ್ಥಿತಿಗೆ ಬರುವಂತೆ ಅಧಿಕಾರಿಗಳು ಪ್ರಯತ್ನಿಸುವರೆಂದು ನಂಬುತ್ತೇವೆ.

ತೀರ್ಥರು.—ತಿರಪತ್ತಿ ಸಂಗೀತ ನಾಟಕ ಮಂಡಲಿಯವರು ಚಿತ್ರದುರ್ಗದಿಂದ ಇಲ್ಲಿಗೆ ಬಂದು ಒಂದೂವರೆ ತಿಂಗಳಿಂದಲೂ ಉತ್ತಮ ರೀತಿಯಲ್ಲಿ ನಾಟಕಗಳನ್ನು ಪ್ರದರ್ಶಿಸಿ ಈ ಪುರಜನರಿಗೆ ಆತ್ಯಾನಂದವನ್ನುಂಟುಮಾಡಿರುವದಲ್ಲದೆ ಶ್ರೇಷ್ಠರಿಂದ ವ್ಯಯವಾಗುವ ಕಾಲ, ದ್ರವ್ಯಕ್ಕೆ ಸಾರ್ಥಕವಾಗಿ ತಮ್ಮ ಬೋಧಕರ ನಾಟಕಗಳಿಂದ ಧಾರ್ಮಿಕ ವೃತ್ತಿಯನ್ನು ಜನಗಳ ಹೃದಯದಲ್ಲಿ ಸ್ಥಿರಗೊಳಿಸಿ ಮಹದುಪಕಾರ ಮಾಡಿರುವರು. ಅಲ್ಲದೆ ಚಿತ್ರದುರ್ಗದ ಮ॥ ಭೀಮರಾಯ ಮಾಸ್ತರು ಇವರಿಗೆ ಕೆಲವು ಭಕ್ತಿಪರ ನಾಟಕಗಳನ್ನು ಹೊಸದಾಗಿ ಬರೆದುಕೊಟ್ಟಿರುವರು. ಈ ರೀತಿ ಕರ್ನಾಟಕ ಭಾಷಾಭಿವೃದ್ಧಿಯನ್ನು ಮಾಡುತ್ತಿರುವುದು ಸ್ತೋತ್ರಾರ್ಹವಾಗಿದೆ. ಇವರಿಂದ ಹೊಂದಿದ ಆಲ್ಹಾದಾರ್ಥಕ್ಕಾಗಿ ಈ ರೈಲ್ವೆ ಸ್ಟೇಷನ್ ಮಾಸ್ತರುಗಳೇ ಮೊದಲಾದವರೆಲ್ಲರೂ ಸೇರಿ ಕಂಪನಿಗೆ ಒಂದು ಸುವರ್ಣ ಪದಕವನ್ನು ಕೊಟ್ಟಿರುವರಲ್ಲದೆ ಡಾಕ್ಟರು, ಪೋಸ್ಟ್ ಮಾಸ್ತರು, ಸ್ಯಾನಿಟರಿ ಇನ್ಸ್ಪೆಕ್ಟರು ಮೊದಲಾದವರು ಸೇರಿ ನಾರದನ ಪಾರ್ಟು ಉತ್ತಮವಾಗಿ ಅಭಿನಯಿಸಿ ತೋರಿಸುವ ಬಸಪ್ಪನೆಂಬ ಬಾಲಕನಿಗೂ, ನಕಲಿಯ ಪಾರ್ಟು ಆಹ್ಲಾದಕರವಾಗಿ ಮಾಡಿ ತೋರಿಸುವ ಫಕೀರಯ್ಯನೆಂಬ ಬಾಲಕನಿಗೂ ಸುವರ್ಣ ಪದಕಗಳನ್ನು ಬಹುಮಾನ ಮಾಡಿರುವರಲ್ಲದೆ ಇಲ್ಲಿಯ ಸಾಹುಕಾರ್ ಮ॥ ಪತ್ರಿವೀರಪ್ಪನವರೇ ಮೊದಲಾದ ಮಹಾಶಯರು ಸೇರಿ ಈ ಕಂಪನಿ ಪ್ರೊಪ್ರೈಟರ್ ಮತ್ತು ಉತ್ತಮ ಆಕ್ಟರಾದ ಮ॥ ಎಂ. ಚನ್ನಯ್ಯನಿಗೆ ಒಂದು ಸುವರ್ಣ ಪದಕವನ್ನು ಬಹುಮಾನವಾಗಿ ಕೊಟ್ಟರು.

ಕೋಲಾರ್ ಪೇಟೆ.—ಇಲ್ಲಿ ಈಗ್ಗೆ ಸುಮಾರು 3-4 ತಿಂಗಳಿಂದ ಪ್ಲೇಗು ಕಾಲೂರಿಕೊಂಡು ಜನಗಳೆಲ್ಲಾ ಚೋಪಡಿಗಳಲ್ಲಿ ವಾಸಮಾಡಿಕೊಂಡಿದ್ದಾರೆ. ಇನ್ನೂ ಪ್ರತಿ ದಿವಸ 1-2 ಕೇಸುಗಳು ಅಲ್ಲಲ್ಲಿ ಆಗುತ್ತಲೇ ಇದೆ. ರಾತ್ರಿ ಕಾಲದಲ್ಲಿ ಚಳಿಯ ದೆಸೆಯಿಂದಲೂ, ಚೋರರ ಅವಾಂತ್ರದಿಂದಲೂ ಜನಗಳು ತುಂಬಾ ತೊಂದರೆ ಪಟ್ಟುಕೊಂಡಿದ್ದರು. ನಮ್ಮ ಪೋಲೀಸು ಇನ್ಸ್ಪೆಕ್ಟರ್ ಮ॥ ಸುಬ್ಬರಾಯರು ರಾತ್ರಿ ಕಾಲದಲ್ಲಿ ಅಲ್ಲಲ್ಲಿ ಇರುವ ಚೋಪಡಿಗಳಿಗೆ ಪೋಲೀಸಿನವರನ್ನು ಕಳುಹಿಸಿ ಬಹಳ ಉಸ್ತುವಾರಿಯಿಂದ ನೋಡಿಕೊಳ್ಳುವುದಲ್ಲದೆ ಪ್ರಜೆಗಳು ಊರಿನಲ್ಲಿ ಮನೆಗಳಲ್ಲಿ ಬಿಟ್ಟು ಬಂದಿತಕ್ಕ ಮಾಲುಗಳು ಖಿಲ್ ಆಗದಂತೆ ರಾತ್ರಿಕಾಲಗಳಲ್ಲಿ ಇನ್ಸ್ಪೆಕ್ಟರೇ ಖುದ್ದಾಗಿ ಬಂದು ಉಸ್ತುವಾರಿ ಮಾಡುತ್ತಿದ್ದಾರೆ. ಸುಮಾರು ಒಂದು ವಾರಕ್ಕೆ ಹಿಂದೆ ಕಾನ್ಸ್ಟೇಬಲ್ ಗೇಟಿನ ಬಳಿ ಹಾಕಿಕೊಂಡಿದ್ದ ಚೋಪಡಿಗಳಲ್ಲಿ ಚೋರಿ ಮಾಡುತ್ತಿದ್ದ ಮೂರು ಜನ ಕಳ್ಳರನ್ನು ದಸ್ತಗಿರಿ ಮಾಡಿದಂದಿನಿಂದ ಚೋರರ ಭೀತಿ ತಪ್ಪಿ ಜನಗಳು ಚೋಪಡಿಗಳಲ್ಲಿ ರಾತ್ರಿಕಾಲದಲ್ಲಿ ಸುಖವಾಗಿ ನಿದ್ದೆ ಮಾಡುತ್ತಾರೆ. ಪ್ಲೇಗಿನ ಕಾಲದಲ್ಲಿ ಪ್ರಜೆಗಳ ಮೇಲೆ ಇಷ್ಟು ಕನಿಕರಪಟ್ಟು ರಾತ್ರಿ ಹಗಲೂ ವಿಶ್ರಾಂತಿ ಇಲ್ಲದೆ ಚೋಪಡಿಗಳಿಗೆ ತಾವೇ ಖುದ್ದಾಗಿ ಹೋಗಿ ಪ್ರತಿ ಒಬ್ಬರ ಕ್ಷೇಮ ಸಮಾಚಾರವನ್ನೂ ವಿಚಾರಿಸಿ ಉಸ್ತುವಾರಿ ಮಾಡುತ್ತಿದ್ದ ಇಂಥಾ ಇನ್ಸ್ಪೆಕ್ಟರು ಹಿಂದೆ ಯಾರೂ ಬಂದಿರುವುದಿಲ್ಲವೆಂದು ಪ್ರಜೆಗಳೆಲ್ಲರೂ ಇವರನ್ನು ಬಹಳ ಕೊಂಡಾಡುತ್ತಿದ್ದಾರೆ.—ಈಗ್ಗೆ ಸುಮಾರು ಒಂದೂವರೆ ತಿಂಗಳಿಗೆ ಹಿಂದೆ ಇದೇ ಊರಿನ ಸುಮಾರು 18-20 ವರುಷ ವಯಸ್ಸುಳ್ಳ ಮರಿಯನೆಂಬುವನು ಊಟ ತೀರಿಸಿಕೊಂಡು ಮಧ್ಯಾಹ್ನ ಹುಲ್ಲು ಕೊಯ್ಯಲು ಹೊಲಕ್ಕೆ ಹೋದನು. ಹೋದ ಒಂದು ಗಂಟೆಗೆಲ್ಲಾ ವಾಪಸು ಮನೆಗೆ ಬಂದು ವಾಂತಿಭೇದಿಯಿಂದ ಬಹಳ ತೊಂದರೆ ಪಡುತ್ತಿದ್ದನು. ಆಗ ಅವನ ಮನೆಯಲ್ಲಿ ಇದ್ದವರು ಹೀಗೆ ಆಗಲು ಕಾರಣವೇನೆಂದು ಕೇಳಿದಾಗ ತನ್ನ ಹೊಲದ ಗಿಡಗಳಲ್ಲಿ ಸುಮಾರು ಅರ್ಧಸೇರಿನಷ್ಟು ಸಕ್ಕರೆ ಪೊಟ್ಟಣ ಬಿದ್ದಿದ್ದ ಹಾಗೂ, ಅದನ್ನೆಲ್ಲಾ ತಾನೇ ತಿಂದ ಹಾಗೂ ನಂತರ ಸಹಿಸಲಾರದಷ್ಟು ದಾಹವಾದ ಹಾಗೂ, ತನಗೆ ಬೇಕಾದಷ್ಟು ನೀರು ಕುಡಿದ ಹಾಗೂ ಹೇಳಿದನು. ನಂತರ ವೈದ್ಯರುಗಳನ್ನು ಕರೆಸಿಯೂ ಯಾವ ಔಷಧಿ ಕೊಟ್ಟರೂ ದಕ್ಕದೆ ಜಾಸ್ತಿಯಾಗಿ ವಾಂತಿ ಭೇದಿ ಆಗಲು ಶುರು ಆದಾಗ ಡಾಕ್ಟರನ್ನು ಕರೆದುಕೊಂಡು ಬಂದು ತೋರಿಸಿದರು. ಅವರು ಸಹ ಏನು ಪ್ರಯತ್ನ ಪಟ್ಟರೂ ಸಾಗದೆ ಮರಿಯನೆಂಬುವನು ತೀರಿಹೋದನು.

ಹುಣಸೂರು.—ಟೌನ್ನಿನೊಳಕ್ಕೆ ಜನರು ವಾಸಕ್ಕಾಗಿ ಇನ್ನೂ ಬಂದಿಲ್ಲ. ಪ್ಲೇಗ್ ಭೀತಿಯಿಂದ ಷೆಡ್ಡುಗಳಲ್ಲೇ ಇರುತ್ತಾರೆ. ಆದರೆ ಈಚೀಚೆಗೆ ಅವರ ಹಾವಳಿ ಬಹು ಸ್ವಲ್ಪಕ್ಕೆ ಕಮ್ಮಿಯಾಗಿರುವುದು.—ಈ ತಾಲ್ಲೂಕಿನ ಬೇರೆ ಬೇರೆ ಗ್ರಾಮಾಂತರಗಳಲ್ಲಿ ಪ್ಲೇಗ್ ವ್ಯಾಧಿಯಿಂದ ಜನರು ತಮ್ಮ ಮನೆ ಮಠಗಳನ್ನು ಬಿಟ್ಟು ಚೋಪಡಿಗಳಲ್ಲಿ ವಾಸ ಮಾಡುವುದನ್ನು ನೋಡುವುದು ತುಂಬಾ ವಿಷಾದಕರವಾಗಿದೆ. ಹೀಗೆ ಪದೇ ಪದೇ ಪ್ಲೇಗ್ ತಲೆದೋರುವ ಜಾಡ್ಯಗಳಿಗೆ ಆಕರವಾಗಿ ಪ್ರತಿ ವರ್ಷವೂ ತೊಂದರೆಪಡುವ ಈ ದೊಡ್ಡ ಊರಿನಲ್ಲಿ ಮ್ಯುನಿಸಿಪಲ್ ಖಜಾನೆ ಇದುವರೆಗೆ ಎಷ್ಟು ಕಟ್ಟಿಗಿದ್ದರೆಂದೂ, ಮುಂದೆ ಎಷ್ಟರ ಮಟ್ಟಿಗೆ ಇರಬೇಕೆಂದೂ ಯಾರಿಗೂ ನಂಬುವುದಕ್ಕೆ ಇರಲಾರದು. ಲೋಕಲ್ ಮತ್ತು ಸರ್ಕಾರಿ ನೌಕರರುಗಳೂ ಅಮಲ್ದಾರರ ಟೌನಿನ ಆರೋಗ್ಯ ವಿಚಾರದಲ್ಲಿ ತುಂಬಾ ಮುತುವರ್ಜಿ ವಹಿಸಿರುವುದಾಗಿರುತ್ತೆ.—ಕಳೆದ ಜಾನ್‌ಸ್ಟೀಡ್‌ನ ಬೀದಿಯಲ್ಲಿ ಒಕ್ಕಲಿಗ ಜಾತಿಯ ಒಬ್ಬ ಹೆಂಗಸು ಗಂಡನಿಂದ ಹೊಡಿಸಿಕೊಂಡು ಸೀರೆ ಬದಲಾಯಿಸುವ ಕಾರಣ ಹಿಂದುಗಡೆ ಹೊಳೆಗೆ ಅಗತ್ಯವಾಗಿರುವ ಕೊಳದಲ್ಲಿ ಹಾಕಿದ್ದಳು. ಪೋಲೀಸಿನವರು ಆಕೆಯನ್ನೂ ಸಂಬಂಧಪಟ್ಟವರನ್ನೂ ಪತ್ತೆ ಮಾಡಿ ಹಿಡಿದು ಲಾಕಪ್ಪಿನಲ್ಲಿಟ್ಟಿದ್ದು ಈಚೆಗೆ ಜಾಮೀನ್ ಮೇಲೆ ಬಿಟ್ಟಿರುವರು.—ಕಳೆದ ವಾರ ಯಾರೋ ಅಪ್ಪತ್ರಿ ಕಳಕಿ ಟೆಂಗಿನನ್ನು ಎರಡು ಒಳಹೊಕ್ಕು ಮನ್ನಿನ ಬುಟ್ಟಿ ಮುಂತಾದ ಕೆಲವು ಸಾಮಾನುಗಳನ್ನು ಗಲಿಬಿಲಿ ಮಾಡಿ ಡಾಕ್ಟರ ಬೈಸಿಕಲ್ ಬಾಂದ್ರವನ್ನು ಮಾತ್ರ ತೆಗೆದುಕೊಂಡು ಹೋದರು. ಇದೊಂದು ವಿನೋದವಾದ ಚೋರಿ.—ಈ ಊರಿಗೆ 12 ಮೈಲಿ ದೂರದ ಎಡತೊರೆಯಲ್ಲಿ ಒಂದು ಸರಿಷೆ ವ್ರತ ವರುಷದಲ್ಲಿ ನಡೆಯುವುದು. ಆದರೆ ಹಿಂದಿನ ಯಾವ ವರುಷದಲ್ಲೂ ಇಲ್ಲದ ಕೆಲವು ಸಂಗತಿಗಳು ನಡೆದದ್ದನ್ನು ನೋಡಿ ಬಂದ ಜನಗಳು ಹೇಳಿಕೊಳ್ಳುತ್ತಿರುವರು. ಒಬ್ಬನೋ ಇಬ್ಬರೋ ಪೋಲೀಸಿನವರಿದ್ದರು. ಹುಣಸೂರು ಗಾಡಿಗ ಶೆಟ್ಟಿಗಳಲ್ಲಿ ಕೆಲವರಿಗೂ ಹೆಗ್ಗಡದೇವನ ಕೋಟೆಯ ತಿವಾಚಾರದ ಕೆಲವರಿಗೂ ಗುದ್ದಾಟ ನಡೆದವು. ವಿಚಾರಿಸುವವರೇ ಇರಲಿಲ್ಲ. ಹಿಂದೆ ಕೋಲ ಆಡಿಸುತ್ತಿರಲಿಲ್ಲ. ಈ ವರುಷ ಗೋಲಕವನ್ನಿಟ್ಟಿದ್ದರು. ಅಲ್ಲಿಗೆ (ದೇವಸ್ಥಾನಕ್ಕೆ) ಹೋಗುವವರಿಂದ ಎಷ್ಟೆಷ್ಟು ರುಸುಂ ವಸೂಲ್ಮಾಡುತ್ತಿದ್ದರು. ಅಂಗಡಿ ಮುಂಗಟ್ಟುಗಳವರಿಂದ ಕ್ರಮವಾದ ಸರ್ಕಾರಿ ತರಫ್ ರಶೀತಿಯಿಲ್ಲದೆ ಸ್ಥಳಗಳ ಬಾಡಿಗೆಯನ್ನು ವಸೂಲ್ಮಾಡುತ್ತಿದ್ದರು. ನಿದರ್ಶನಕ್ಕೆ ಒಂದು ಬಿಳೀ ಕಾಗದದ ಮೇಲೆ ಹೆಸರು, ಊರು, ಕಸುಬು, ಕೊಟ್ಟ ಬಾಡಿಗೆ ಮೊಬಲಗು ಎಂದು ದಾಖಲು ಮಾಡಿಕೊಳ್ಳುತ್ತಿದ್ದರು. ಇದೇನು ಮುಜರಾಯಿ ಇಲಾಖೆಗೆ ಸೇರಿದೋ ಇಲ್ಲವೋ ತಿಳಿಯದು. ತನಿಖೆಯಿಂದ ಕ್ರಮಪಡಿಸಬೇಕಾಗಿದೆ.—ದೂರಭಾಗದ ಕೆಲವು ಗ್ರಾಮಗಳಲ್ಲಿ ಕೆಲವು ಜನರು ಯುದ್ಧದ ಖರ್ಚಿಗೆಂದು ತಪ್ಪುಗಾಡು ಜನರನ್ನು ಹೆದರಿಸಿ ಹಣ ವಸೂಲ್ಮಾಡುತ್ತಿರುವರೆಂಬ ಪುಕಾರುಂಟು. ಸರ್ಕಾರದವರು ಇದನ್ನು ವಿಚಾರಿಸಿ ಇತ್ತಿಹಾದು ಹಾಕಿಸಿದರೆ ಯುಕ್ತವಾಗಿ ತೋರುವುದು.—ಮೂರು ವರುಷಗಳಿಂದಲೂ ಹುಣಸೂರಿನಲ್ಲಿ ಪೋಸ್ಟ್ ಮಾಸ್ಟರಾಗಿದ್ದ ಮ॥ ಕೃಷ್ಣಮೂರ್ತಿಯವರಿಗೆ ಈಗ ತಾನೇ ಬನ್ನೂರು ಮೇಲೆ ಮಡಿಕೇರಿಗೆ ವರ್ಗವಾಗಿದೆ. ವರ್ಗವಾಗಿದುದ್ದಕ್ಕೆ ಅನೇಕರು ವಿಷಾದಿಸುವರು. ಇವರು ಇಲ್ಲಿ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿಯೂ, ಜಾಗರೂಕರಾಗಿಯೂ, ಸಹಾಯಕರಾಗಿಯೂ, ಸಮರ್ಥರಾಗಿಯೂ ಇದ್ದರು. ಅವರ ಜಾಗಕ್ಕೆ ಮೈಸೂರಿಂದ ಒಬ್ಬರು ಬಂದು ಆಗಲೇ ಚಾರ್ಜು ತೆಗೆದುಕೊಂಡರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಜನವರಿ 13 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಬಾಕಿ:—(1) ಷೇರು ಮೊಬಲಗು	.... ರೂ.	10,00,000
,, (2) ರಿಜರ್ವ್ ಫಂಡು	.... ,,	50,000
,, (3) ಠೇವಣಿಗಳು	.... ,,	40,77,501
,, (4) ಇತರ	.... ,,	87,848
(ಅಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	52,15,349

ಜಮೆ:—(1) ಕೈಯಲ್ಲಿ, ಬ್ಯಾಂಕುಗಳಲ್ಲಿರುವ ಹಣ ರೂ.		11,35,740
,, (2) ಖಾತೆ ಮತ್ತು ಇತರ ಸಾಲಗಳು	...... ,,	28,73,690
,, (3) ಡಿಸ್ಕೌಂಟುಮಾಡಿದ್ದವಾಯಿದೆ ಹುಂಡಿಗಳು	,,	4,31,773
,, (4) ಇನ್‌ವೆಸ್ಟ್‌ಮೆಂಟುಗಳು	...... ,,	7,55,852
,, (5) ಏಜೆಂಟರುಗಳಲ್ಲಿರುವ ಮೊಬಲಗು	...... ,,	5,251
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	...... ,,	16,008
,, (7) ಇತರೆ	.... ,,	7,136
(ಅಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	52,15,349

ಪಿ. ರಾಮಸ್ವಾಮಯ್ಯ, ಆ : ಮ್ಯಾನೇಜರ್.

ಆರ್ಯಮಹಿಳಾ ಸಮಾಜ, ಚಿಕ್ಕಮಗಳೂರು.

ಚಿಕ್ಕಮಗಳೂರು ಗವರ್ನಮೆಂಟ್ ಗರಲ್ಸ್ ಸ್ಕೂಲಿನಲ್ಲಿ 10 ನೇ ತಾ. ಬುಧವಾರ ಮಧ್ಯಾಹ್ನ ಒಂದು ಮಹಿಳೆಯರ ಸಭೆಯು ಸೇರಿತ್ತು. ಆ ಕಾಲದಲ್ಲಿ ವೇ॥ ನರಹರಿಶಾಸ್ತ್ರಿಗಳೆಂಬುವರು ಅಲ್ಲಿಗೆ ಬಂದು ಮನಶ್ಶಕ್ತಿ ಎಂಬುವುದು ಎಂಥಾದ್ದು, ಅದರಿಂದ ಜನಗಳಿಗೆ ಎಷ್ಟು ಪ್ರಯೋಜನಗಳಾಗುತ್ತವೆ, ಮತ್ತು ಆ ಮನಸ್ಸಿನ ಶಕ್ತಿಯಿಂದಲೇ ಇತರರಿಗೆ ಎಷ್ಟು ಒಳ್ಳೇದನ್ನು ಮಾಡಬಹುದು ಎಂಬೀ ವಿಚಾರವಾಗಿ ಅಲ್ಲಿ ಸೇರಿದ್ದ ಸ್ತ್ರೀಮಂಡಲಿಗೂ, ಚಿಕ್ಕ ಹುಡುಗಿಗೂ ಸಹ ಸುಲಭವಾಗಿ ತಿಳಿಯುವಂತೆ ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಹೇಳಿದರು ನಂತರ ಈ ಸ್ಕೂಲಿನ ಹೆಡ್ ಮಿಸ್ಟ್ರೆಸ್ ರವರಾದ ಶ್ರೀಮತಿ ಪಂಡಿತಾ ಎಂ. ಸುಂದರಮ್ಮನವರು ಅವರ ಉಪನ್ಯಾಸದಿಂದ ಆ ದಿನ ಕೂಡಿದ್ದವರೆಲ್ಲರಿಗೂ ಬಹಳ ಸಂತೋಷವಾಯಿತೆಂದು ಹೇಳಿ ವಂದನೆಯನ್ನು ಸೂಚಿಸಿದರು ನಂತರ ಸ್ಕೂಲು ಬಾಲಿಕೆಯರು ಈ ಆರ್ಯಮಹಿಳಾ ಸಮಾಜವು ದಿನದಿನಕ್ಕೆ ಅಭಿವೃದ್ಧಿಯನ್ನೈದಲಿ ಎಂದು ಹೇಳಿ ಮಂಗಳವನ್ನು ಪಾಡಿ ಸಭೆಯನ್ನು ಮುಕ್ತಾಯಗೊಳಿಸಿದರು. ಶ್ರೀಮತಿಯವರು ಈ ಸ್ಕೂಲಿಗೆ ಹೆಡ್ ಮಿಸ್ಟ್ರೆಸರಾಗಿ ಬಂದಾರಭ್ಯ ಸ್ಕೂಲು ಬಹಳ ಉತ್ತಮಸ್ಥಿತಿಯಲ್ಲಿರುತ್ತೆ. ಈ ಊರಿನಲ್ಲಿ ಸ್ತ್ರೀಯರ ಏಳಿಗೆಗೆ ಯಾವ ಸಮಾಜವೂ ಏರ್ಪಟ್ಟಿರಲಿಲ್ಲ. ಇವರು ಬಂದು ಈ ಮಹಿಳಾ ಸಮಾಜವನ್ನೇರ್ಪಡಿಸಿದರು ಪ್ರತಿ ಬುಧವಾರವೂ ದೊಡ್ಡಮನುಷ್ಯರ ಮನೆ ಹೆಂಗಸರು ಬಂದು ಇಲ್ಲಿ ಸಭೆ ಸೇರುವರು. ಆ ಕಾಲದಲ್ಲಿ ಶ್ರೀಮತಿಯವರು ಎಲ್ಲರನ್ನೂ ತಮ್ಮ ಸಹೋದರಿ ಪ್ರೀತಿಯಿಂದ ಕಾಣುತ್ತಾ ಸದ್ವಿಷಯಗಳನ್ನು ಬೋಧಿಸಿ, ಎಲ್ಲರನ್ನೂ ಆನಂದಗೊಳಿಸುತ್ತಲಿರುವರು, ಇವರು ಬಂದ ಸ್ವಲ್ಪ ದಿವಸಗಳಲ್ಲೇ ಸಮಾಜವು ಬಹಳ ಉತ್ತಮಸ್ಥಿತಿಯಲ್ಲಿರುವುದು ಬಹಳ ಸಂತೋಷಪ್ರದವಾಗಿದೆ. ಪ್ರತ್ಯಕ್ಷದರ್ಶಿ.

ಚಿತ್ರದುರ್ಗ ಡಿಸ್ಟ್ರಿಕ್ಟ್ ವಿದ್ಯಾಭಿವೃದ್ಧಿ ಸಂಘವು.

ಜನವರಿ ತಾ. 9 ನೇ ಭಾನುವಾರ ಮಧ್ಯಾಹ್ನ ಎ. ವಿ. ಸ್ಕೂಲ್ ಹಾಲಿನಲ್ಲಿ ಈ ಸಂಘದ ಮೆಂಬರುಗಳು ತಿಂಗಳು ಮೀಟಿಂಗನ್ನು ನಡಸಿದರು. ಹಳ್ಳಿಗಳಿಂದ ಕೆಲವು ಜನ ಉಪಾಧ್ಯಾಯರು ಮಾತ್ರ ಬಂದಿದ್ದರು ಜಾಯಿಂಟ್ ಸೆಕ್ರೆಟರಿಯವರು ರೀಡಿಂಗ್ ರೂಮುಗಳ ಪ್ರಯೋಜನವನ್ನು ಕುರಿತು ಸ್ವಲ್ಪ ಹೊತ್ತು ಸಂಕ್ಷೇಪವಾಗಿ ವಿವರಿಸಿ ಹೇಳಿದರು. ಉಪಾಧ್ಯಾಯರುಗಳು ಪ್ರಯತ್ನ ಪಡುವುದಾದರೆ ಗ್ರಾಮಾಂತರಗಳಲ್ಲಿ ವಿದ್ಯೆ ಕಲಿಯದವರೂ ಪ್ರಯೋಜನ ಹೊಂದಲು ಅವಕಾಶವಾಗುವುದೆಂದೂ, ಅದಕ್ಕಾಗಿ ಈ ಸಂಘದ ಮೆಂಬರುಗಳಾದವರೆಲ್ಲರೂ ಗ್ರಾಮಾಂತರಗಳಲ್ಲಿ ವಾಚಕಶಾಲೆಯನ್ನು ಸ್ಥಾಪಿಸಲು ಪ್ರಯತ್ನ ನಡಿಸುವುದಕ್ಕಾಗಿ ಒಪ್ಪಿಕೊಂಡರು. ಈಗಲೇ ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ 3-4 ವಾಚಕಶಾಲೆಗಳು ಸ್ಥಾಪಿಸಲ್ಪಟ್ಟಿರುವುದಾಗಿ ಹೇಳಿದರು. ಗೊಡಬನಾಳು ಸ್ಕೂಲು ಹೆಡ್ ಮಾಸ್ಟರು ಮ॥ ರಾಮರಾಯರು ಬಹು ಸಾಹಸದಿಂದ ಒಂದು ರೀಡಿಂಗು ರೂಮನ್ನು ಸ್ಥಾಪಿಸಿದ್ದಾಗಿಯೂ, ಈಗ 9 ಪೇಪರುಗಳು ಬರುತ್ತಿವೆ ಎಂದೂ ಅನೇಕರು ಓದಿಕೊಂಡು ಹೋಗಲು ತಕ್ಕ ಏರ್ಪಾಡಾಗಿದೆ ಎಂದೂ ತಿಳಿಸಿದರು. ಅಲ್ಲದೆ ಗ್ರಾಮಸ್ಥರೆಲ್ಲರೂ ಉತ್ಸಾಹದಿಂದ 300 ರೂಪಾಯಿ ಹುಟ್ಟಿಸಿ ಕಟ್ಟಡವನ್ನು ಕಟ್ಟಿಸಿಕೊಟ್ಟಿರುವುದಾಗಿ ಹೇಳಿದರು. ಈ ರೀತಿಯಲ್ಲಿ ವಿದ್ಯೆಯು ಹರಡುವದಕ್ಕೆ ಉಪಾಧ್ಯಾಯರು ಎಷ್ಟು ಮಟ್ಟಿನ ಪ್ರಯತ್ನ ನಡಿಸಬೇಕೋ ಅಂಥಾ ಅಂಶಗಳನ್ನೆಲ್ಲಾ ಚರ್ಚಿಸಿ ತೀರ್ಮಾನ ಮಾಡಿದರು ಅಲ್ಲಿಗೆ ಹೊತ್ತು ಮೀರಿದ್ದರಿಂದ ಉಳಿದ ಅಂಶಗಳನ್ನು ಮುಂದಕ್ಕೆ ಇತ್ಯರ್ಥ ಮಾಡುವದಾಗಿ ನಿಲ್ಲಿಸಲಾಯಿತು. ಮುಂದಿನ ತಿಂಗಳ ಮೀಟಿಂಗು ಫೆಬ್ರುವರಿ 13 ನೇ ತಾ ನಡೆಯತಕ್ಕದ್ದೆಂದು ಗೊತ್ತು ಮಾಡಿದರು. ಆ ದಿನದ ಕಾರ್ಯಗಳೇನೆಂದರೆ—"ಭಾಷೆಯನ್ನು ಕಲಿಸುವ ಮಾರ್ಗ" ಎಂಬ ಅಂಶದಲ್ಲಿ ಒಂದು ಉಪನ್ಯಾಸ; ಚರಿತ್ರೆಯ ಪಾಠದಲ್ಲಿ ಪ್ರಾಕ್ಟಿಕಲ್ ಸ್ಕೂಲು ನಡಿಸಲ್ಪಡುವುದು

ಬಿ. ಬಿಷ್ಟಪ್ಪ, ಜಾ. ಸೆಕ್ರೆಟರಿ

ಕಿಕ್ಕೇರಿ ಸನ್ಮಿತ್ರಸಂಘ.

ಕೃಷ್ಣರಾಜಪೇಟೆ ತಾಲ್ಲೂಕು ಕಿಕ್ಕೇರಿ ಗ್ರಾಮದಲ್ಲಿ ಕೆಲವು ಜನ ಮಹನೀಯರು ಸೇರಿ ಕಳೆದ ತಿಂಗಳು 23 ನೇ ತಾ ಸನ್ಮಿತ್ರಸಂಘವೆಂಬದಾಗಿ ಒಂದು ಕೂಟವನ್ನು ಮಾಡಿಕೊಂಡಿದ್ದಾರೆ. ಈ ಸಂಘದ ಮೆಂಬರುಗಳು ಕಳೆದ 2 ವರ್ಷದಿಂದ ಈ ಸಂಘದ ಆಶ್ರಯದಲ್ಲಿಯೇ ಸನ್ಮಿತ್ರ ಸಂಘಾ ರೀಡಿಂಗ್ ರೂಮು ಎಂಬದಾಗಿ ಒಂದು ವಾಚಕಶಾಲೆಯನ್ನು ಮಾಡಿರುತ್ತಾರೆ. ಈ ಸಂಘದ ಉದ್ದೇಶವೇನೆಂದರೆ—ಗ್ರಾಮದಲ್ಲಿ ಪರಸ್ಪರ ಅನುರಾಗವಿಲ್ಲದೆ ದ್ವೇಷಾಸೂಯೆಗಳು ಹೆಚ್ಚುತ್ತಾ ಬರುವುದನ್ನು ಸಾಧ್ಯವಾದ ಮಟ್ಟಿಗೂ ತಪ್ಪಿಸುತ್ತಲೂ, ಗ್ರಾಮಾಭಿವೃದ್ಧಿಗಾಗಿ ಬೇಕಾದ ವಿಚಾರಗಳನ್ನು ಮಾಡುತ್ತಲೂ, ಸರ್ಕಾರದವರಿಂದ ಗ್ರಾಮಕ್ಕೆ ಆಗಬೇಕಾದ ಉಪಯುಕ್ತವಾದ ಕೆಲಸಗಳನ್ನು ಈ ಸಂಘದ ಮೆಂಬರುಗಳು ಮೀಟಿಂಗು ಮಾಡಿ ಅದರ ಮೂಲಕ ಅಧಿಕಾರಿಗಳಿಗೆ ತಿಳಿಸುವುದರ ಮೂಲಕ ಗ್ರಾಮಕ್ಕೆ ಬೇಕಾದ ಸಹಾಯ ಸಂಪತ್ತನ್ನು ಪಡೆಯಬೇಕೆಂಬುದೇ ಈ ಸಂಘದ ಮುಖ್ಯೋದ್ದೇಶವಾಗಿರುತ್ತದೆ. ಈ ಸಂಘಕ್ಕೆ ಇಲ್ಲಿನ ಪೋಸ್ಟ್ ಮಾಸ್ಟರ್ ಮತ್ತು ಯಾಜಮಾನ್ ಮೆಂಬರಾಗಿರುವ ಮ॥ ಉತ್ಸಾಹಿ ... ಸೆಕ್ರೆಟರಿಯಾಗಿರುವದರಿಂದ ಈ ಸಂಘವು ಒಳ್ಳೇ ಪುರೋಭಿವೃದ್ಧಿಗೆ ಬರುವುದರಲ್ಲಿ ... ಸಂದೇಹವಿಲ್ಲ. ಈ ಸಂಘದವರು ಪ್ರತಿ ಭಾನುವಾರವೂ ಮೀಟಿಂಗ್ ಮಾಡುತ್ತಾ, ಗ್ರಾಮದಲ್ಲಿ ನದಿಯ ನಂತರ ... ಇಂಗ್ಲಿಷ್ ಸ್ಕೂಲು ... ವಿಚಾರದಲ್ಲೂ, ದೇವಸ್ಥಾನಗಳ ಪುರಾತನ ಶೋಭೆಗಾಗಿ ಒಂದು ಸಾವಿರ ರೂಪಾಯಿ ವೆಚ್ಚ ಬೀಳುವದ ಅರಲಿಗೇ ವಹಿಸ ... ಮೆಂಟನ್ಸ ... ಕೊಡಬೇಕಾದ 200 ರೂಪಾಯಿ ವಸೂಲಿ ವಿಚಾರದಲ್ಲೂ ಪ್ರೊಸೀಡಿಂಗ್ಸ್ ಮಾಡಿರುತ್ತಾರೆ. ಇಂಗ್ಲಿಷ್ ಸ್ಕೂಲ್ ವಿಚಾರದಲ್ಲಿ ಅಗ್ಗೆ ಮ್ಯಾನೇಜರಾಗಿದ್ದವರಿಗೆ ಇಂಗ್ಲಿಷ್ ಹೆಡ್ ಸ್ಕೂಲ್ ಬಾಬ್ತು ಪೂರ್ವದ್ವಿಶಿಷ್ಟ ಜವಾಬುದಾರಿ ಮತ್ತು ಲೆಕ್ಕಗಳು ಸಹ ಕಳುಹಿಸಿಕೊಡಬೇಕೆಂದು ಎರಡು ಸಲ ಬರಹ ಮೂಲಕ ಕೇಳಿದ್ದಾಗ್ಯೂ ಕಳುಹಿಸದೆ ಹೋಗಿರುವದರಿಂದ ಮೇಲ್ಪಟ್ಟ ಇಲಾಖೆಯವರಿಗೆ ತಿಳಿಸಬೇಕೆಂದಿರುತ್ತಾರೆ. ಈ ಗ್ರಾಮದಲ್ಲಿ ಈ ಸಂಘದ ದೊಡ್ಡ ಮನುಷ್ಯರು ತಮ್ಮ ಗ್ರಾಮ ವಾತ್ಸಲ್ಯವನ್ನು ಇಟ್ಟುಕೊಂಡು ಈ ಮೇರೆ ಗ್ರಾಮವನ್ನು ಪುರೋಭಿವೃದ್ಧಿಗೆ ತರತಕ್ಕ ವಿಚಾರದಲ್ಲಿ ಪಾಡತಕ್ಕ ಪರಿಶ್ರಮಗಳು ಬಹಳ ಶ್ಲಾಘನೀಯವಾಗಿವೆ. ಚೆಂದಾದಾರ್

ಒಂದು ರೀಡಿಂಗ್ ರೂಮ್ ಸ್ಥಾಪನೆ.

ಮಂಡ್ಯ ತಾಲ್ಲೂಕು ಮದ್ದೂರು ಸಮೀಪ ಸೋಮನಹಳ್ಳಿಯಲ್ಲಿ ನಮ್ಮ ತಾಲ್ಲೂಕು ಅಮಲ್ದಾರರವರಾದ ಮ॥ ಎಚ್. ಬಸವರಾಜೇ ಅರಸಿನವರ ಪ್ರೋತ್ಸಾಹದಿಂದ ಗ್ರಾಮಾಭಿವೃದ್ಧಿಯ ಏರ್ಪಾಡಿನಲ್ಲೊಂದಾದ ರೀಡಿಂಗ್ ರೂಮ್ ಹೊಸ ಕಟ್ಟಡದಲ್ಲಿ ಜನವರಿ ತಾ. 16 ನೇ ಸಾಯಂಕಾಲ ಪ್ರಾರಂಭೋತ್ಸವವು ಶೇಕದಾರ್ ಮ॥ ಕೇಶವಯ್ಯನವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಕಟ್ಟಡವು ಫಲಪುಷ್ಪಗಳಿಂದಲಂಕೃತವಾಗಿ ಪರಸ್ಥಳದ ಅನೇಕ ದೊಡ್ಡ ಮನುಷ್ಯರಿಂದಲೂ, ಸರ್ಕಾರಿ ಉದ್ಯೋಗಸ್ಥರಿಂದಲೂ, ಈ ಗ್ರಾಮದ ಸರ್ವವರ್ಗದವರು ವರ್ತಕರುಮುಂತಾದವರು ಸಹ ಸೇರಿ ಶೋಭಾಯಮಾನವಾಗಿ ಪ್ರಾರಂಭದಲ್ಲಿ ಪಾಠಶಾಲೆಯ ಬಾಲಕರುಗಳಿಂದ ದೇವರ ಪ್ರಾರ್ಥನೆಯು ಮಧುರವಾದ ಸಂಗೀತ ವೀಣಾಗಾನವು ಕರ್ಣಾನಂದವನ್ನುಂಟುಮಾಡಿತು. ಸಿರಿಕಲ್ಚರಲ್ ಇನ್ಸ್‌ಪೆಕ್ಟರು ಮ॥ ಎಸ್. ಮುತ್ತಣ್ಣನವರು ಮಧುರವಾಕ್ಯಗಳಿಂದ ದೇಶೋನ್ನತಿ ಎಂಬ ಭಾಗಕ್ಕೆ ಸೇರಿದ ಕೃಷಿ ಕೈಗಾರಿಕೆ ಎಂಬೀ ವಿಷಯದಲ್ಲಿ ಭಾಷಣ ಮಾಡಿದರು. ನಂತರ ಸ್ಕೂಲು ಮಾಸ್ತರು ಎ. ಲಿಂಗೇಗೌಡರು ಗಂಭೀರವಾಕ್ಯಗಳಿಂದ ಗುರುಭಕ್ತಿ ಮಕ್ಕಳ ವಿದ್ಯಾಭ್ಯಾಸ ಎಂಬೀ ವಿಷಯದಲ್ಲಿ ನೆರೆದಿದ್ದ ಸಭಾಜನರೆಲ್ಲರಿಗೂ ಮಂದಟ್ಟಾಗುವಂತೆ ಭಾಷಣಮಾಡಿದರು. ನಂತರ ಮಲ್ಲಯ್ಯನವರು ಈಗೀಗ ನಮ್ಮ ಒಕ್ಕಲಿಗ ರೈತರೇ ಮೊದಲಾದವರು ತಮ್ಮ ಬಿಡುವು ಕಾಲದಲ್ಲಿ ಇಂಥಾ ವಿಹಾರಸ್ಥಾನಗಳಲ್ಲಿ ಸದುದ್ದೇಶವಾಗಿ ಸೇರಿ ಒಬ್ಬರಿಗೊಬ್ಬರು ಗ್ರಾಮಾಭಿವೃದ್ಧಿ ವಿಚಾರದಲ್ಲಿ ಸಂಭಾಷಣೆ ಮಾಡಿ ಸತ್ಪ್ರಯೋಜನ ಪಡೆಯಬೇಕೆಂದೂ ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿಯೂ ಒಳ್ಳೇ ಭಾಷಣವನ್ನು ಮಾಡಿದರು ನಂತರ ಮ॥ ಕೇಶವಯ್ಯನವರು ಗ್ರಾಮಾಭಿವೃದ್ಧಿ ವಿಚಾರದಲ್ಲಿ ಶ್ರೀಷ್ಠತರವಾದ ಉಪನ್ಯಾಸವನ್ನು ಮಾಡಿ ಸಭಿಕರನ್ನು ಆನಂದಗೊಳಿಸಿದರು ಚಕ್ರವರ್ತಿ ಸಾರ್ವಭೌಮರವರ ನಮ್ಮ ಮಹಾರಾಜರ ಯುವರಾಜರವರ ಶ್ರೇಯಃಪ್ರಾರ್ಥನೆಯನ್ನು ಮುಗಿಸಿದನಂತರ ಮ॥ ಪಟೇಲ್ ಚಿಕ್ಕೇಗೌಡರು ಧರ್ಮಪರೋಪಕಾರಿಗಳಾಗಿಯೂ ಈ ಹೊಸ ರೀಡಿಂಗ್‌ರೂಮ ಪೋಷಕರಾಗಿಯೂ ಸ್ವಂತ ತಾವೇ ಕಟ್ಟಿಸಿಕೊಟ್ಟ ಮುಖ್ಯ ಪ್ರೆಸಿಡೆಂಟರಾಗಿರುವುದರಿಂದ ಇವರನ್ನು ಸಭಿಕರೆಲ್ಲರೂ ಸನ್ಮಾನಿಸಿದರು ನಂತರ ಗಂಧಪುಷ್ಪ ತಾಂಬೂಲ ಫಲಹಾರಾದಿಗಳು ಸಭಾಜನರೆಲ್ಲರಿಗೂ ಸಮರ್ಪಿಸಲ್ಪಟ್ಟು ಸಭೆಯು ಉಪಸಂಹರಿಸಲ್ಪಟ್ಟಿತು. ಈ ರೀಡಿಂಗ್ ರೂಮಿನ ಕಾರ್ಯಕ್ರಮಗಳನ್ನು ನೆರವೇರಿಸಲು ಏರ್ಪಡಿಸಿರತಕ್ಕ ಪ್ರೆಸಿಡೆಂಟರು ಮೆಂಬರುಗಳು ಪುನಃಪ್ರಮುಖರು ಸಹ ಇದನ್ನು ನಿರಂತರ ನಡಿಸಿಕೊಂಡು ಬರುವವರಾಗಲೆಂದು ಹಾರೈಸಲ್ಪಟ್ಟಿದೆ ಮೆಂಬರು.

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮ॥ ಪಿ ರಾಮಸ್ವಾಮಯ್ಯನವರಿಗೆ ಡಿಸೆಂಬರ್ ತಾ 22 ರಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರ್ ಮ॥ ಎ ಕೆ. ಸೆಯ್ಯದ್ ತಾಜ್ ಪೀರಾನ್ ರವರು ಅವರ ಕೆಲಸದ ಛಾರ್ಜನ್ನು ವಹಿಸಿದ್ದರು.

ಬೆಂಗಳೂರು ಸೆಷನ್ಸ್ ಜಡ್ಜ್ ಮ॥ ಆರ್. ಬಿ ಪ್ಲಮರ್ ಯವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೆರಡು ವಾರ ಜಾಸ್ತಿ ಮಾಡಿದೆ. ಈಗಿನ ಬದಲಿ ಏರ್ಪಾಡು ಜಾರಿಯಲ್ಲಿರತಕ್ಕದ್ದು.

ಮ॥ ಅನಂತರಾವ್ ಸಿರ್ಸಿಯವರನ್ನು ಅ॥ ಕಮಿಷನರ್ ರ ದರ್ಜೆಯಲ್ಲಿ ಕಳೆದ ಜುಲೈ ತಾ. 1 ರಿಂದ 1 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮ॥ ಆರ್. ರಾಮಯ್ಯನಾಯುಡು ಯವರು ಅನೆಕಲ್ ತಾಲ್ಲೂಕ್ ಛಾರ್ಜನ್ನು ವಹಿಸಿರುವ ಕಾಲದಲ್ಲಿ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಚಲಾಯಿಸತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟ್ ಖಜಾನೆ ಛಾರ್ಜನ್ನು ವಹಿಸಿರುವ ಮ॥ ಟಿ. ರಾಮಲಿಂಗಯ್ಯನವರು ಸಾಕ್ಷಿಗಳ ಹೇಳಿಕೆಯನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳತಕ್ಕದ್ದು.

ಕರ್ನಲ್ ಜೆ ದೇಶರಾಜೆ ಅರಸಿನವರು ಮೈಸೂರು ಸೈನ್ಯಗಳ ಚೀಫ್ ಕಮಾಂಡಾಂಟರ ಛಾರ್ಜನ್ನು ಜನವರಿ ತಾ. 12 ರಲ್ಲಿ ವಹಿಸಿಕೊಂಡಿದ್ದಾರೆ

ಬಳ್ಳಿಪಳ್ಳಿ ರೇಂಜಿನ ಛಾರ್ಜನ್ನು ವಹಿಸುವ ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮ॥ ಎಂ ವಿ. ನರಸಿಂಹಯ್ಯನವರಿಗೆ ಫೆಬವರಿ ತಾ. 1 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ॥ ಸಿ. ಅಬ್ದುಲ್ ಜಬ್ಬಾರ್ ಯವರು ಅವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಹೊಳಲ್ಕೆರೆ ತಾಲ್ಲೂಕು ಅಮಲ್ದಾರ್ ಮ॥ ಬಿ ಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ರಜಾ ಕೊಟ್ಟಿದೆ ಶಿವಮೊಗ್ಗ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ॥ ಎಚ್. ಶ್ರೀನಿವಾಸರಾಯರು ಹೊಳಲ್ಕೆರೆ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಮೈಸೂರು ರೆವಿನ್ಯೂ ಸರ್ವೆ ಅ॥ ಕಮಿಷನರ್ ರ ಮ॥ ಎಚ್. ನಾಗರಾಯರಿಗೆ ನೊವೆಂಬರ್ ತಾ 24 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ॥ ವೈ ನಂಜುಂಡಯ್ಯನವರು ಅವರ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಕಾಫಿ ಪ್ಲಾಂಟರ್ ಮತ್ತು ಪ್ರಜೆಗಳಿಂದ ಚುನಾಯಿಸಲ್ಪಟ್ಟಿರುವ ಮ॥ ... ಪಾಲದೇವರಾಯರನ್ನು ಚಿಕ್ಕಮಗಳೂರು ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟರಾಗಿ ಜನವರಿ ತಾ. 31 ರಿಂದ ನೇಮಕಮಾಡಿದೆ.

ಮೈಸೂರು ಸರ್ಕಾರಿ ಹುಕುಮುಗಳು.

ಮೋಟರುಗಳ ವೇಗದ ಪರಿಮಿತಿ.

ಮೈಸೂರು ಸಿಟಿಯಲ್ಲಿ ಮೋಟಾರ್ ಗಾಡಿಗಳ ವೇಗವನ್ನು ಕ್ರಮಪಡಿಸುವ ಪಕ್ಕ್ಯೋಸ್ಕರ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ನಿಯಮಗಳನ್ನು ವಿಧಿಸಿ ಅಪ್ಪಣೆ ದಯಪಾಲಿಸಿರುತ್ತಾರೆ

ಸಿಟಿಯ ಮಧ್ಯ ಬಸ್ತಿಗಳಿಗಾಗಿ ಇರುವ ಯಾವ ಪಬ್ಲಿಕ್ ರಸ್ತೆಯಲ್ಲಿ ಯಾಗಲಿ ಯಾವ ಮೋಟರ್ ಗಾಡಿಯನ್ನೂ ಘಂಟೆಗೆ 15 ಮೈಲಿಗಿಂತ ಹೆಚ್ಚಾದ ವೇಗದಿಂದ ನಡಿಸಕೂಡದು. ಅದರ ಈ ಕೆಳಗೆ ಕಂಡ ರಸ್ತೆಗಳ ವಿಷಯದಲ್ಲಿ ವೇಗವು ಘಂಟೆಗೆ ಆರು ಮೈಲಿಗಿಂತ ಮೀರಕೂಡದು :—

(1) ದೊಡ್ಡಪೇಟೆ—ಹೊಸಗಡಿಯಾರದ ಟವರಿನಿಂದ ಅರಮನೆಗೆ ಗೇಟಿನ ವರೆಗೆ. (2) ಮಂಡಿಪೇಟೆ—ಶಿವರಾಮ್ಪೇಟೆ ರಸ್ತೆ, ಚಿಂತನವಾಬನ ರಸ್ತೆ, ಮಂಡಿ ಮಾರ್ಕೆಟ್ ರಸ್ತೆ (3) ಸಂತೇಪೇಟೆ ರಸ್ತೆ—ದೇವರಾಜ ಮಾರ್ಕೆಟ್ಟಿನಿಂದ ಸಂಸ್ಕೃತ ಕಾಲೇಜಿನ ವರೆಗೆ. (4) ಮೈಸೂರು ನಾನಂದವಾಡಿ ರಸ್ತೆ—ಸಂಸ್ಕೃತ ಪಾಠಶಾಲೆಯ ಹಿಂಭಾಗದಿಂದ ಚಿಟ್ನಿಹಳ್ಳಿ ಉಕ್ಕಡದ ವರೆಗೆ. (5) ಹೊಸಕೇರಿ ಬಿಟ್ಟ ರಸ್ತೆ—ಹೊಸಕೇರಿ ಪೇಟೆಯಿಂದ ಎತ್ತುಗಳ ಕೆರೋಸಿಟ್ಟಿಯ ವರೆಗೆ (6) ಇಲವಾಲದ ರಸ್ತೆ—ವೆಸ್ಲಿಯನ್ ಮಿಷನ್ ಸ್ಕೂಲಿನಿಂದ ಮಹಾರಾಣಿ ಆಸ್ಪತ್ರೆಯ ವರೆಗೆ (7) ರೈಲ್ವೇ ಸ್ಟೇಷನ್ ರಸ್ತೆ—ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನಿಂದ ಸೆಂಟ್ರಲ್ ಪೊಲೀಸ್ ಸ್ಟೇಷನ್ ವರೆಗೆ.

ಮೇಲಿನ ನಿಯಮಗಳನ್ನು ಅತಿಕ್ರಮಿಸಿದಲ್ಲಿ ಮೋಟಾರ್ ಗಾಡಿಗಳ ರೆಗ್ಯುಲೇಷನಿನ 13 ನೆಯ ಪ್ರಕರಣದ ಮೇರೆಗೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

ಮೈಸೂರು ಸೀಮೆಯ ವ್ಯವಸಾಯದ ಇಲಾಖೆ.

ಕಬ್ಬಿನ ಬೆಳೆ ಮತ್ತು ಬೆಲ್ಲ ಮಾಡುವ ವಿಷಯವಾಗಿ ಕೊಡುವ ವ್ಯವಸಾಯಕ್ಕೆ ಸಂಬಂಧಪಟ್ಟ ಸುಲಭ ಪಾಠವು ಹೆಬ್ಬಾಳದ ಫಾರಂನಲ್ಲಿ 1916 ನೇ ಇಸವಿ ಫೆಬ್ರುವರಿ 14ನೇ ತಾರೀಖು ಮೊದಲ್ಗೊಂಡು ಒಂದುವಾರ ನಡೆಯುವದು. ಸದರಿ ಸುಲಭ ಪಾಠವನ್ನು ಕೇಳಲು ಬರತಕ್ಕ ಜನಗಳಿಗೆ ಹೆಬ್ಬಾಳದ ಫಾರಂನಲ್ಲಿ ಇರಲು ಸ್ಥಳವು ಕೊಡಲಾಗುತ್ತೆ. ಅಲ್ಲದೆ ಊಟಕ್ಕೆ ತಗಲಬಹುದಾದ ಖರ್ಚು ಮಾತ್ರ ವಸೂಲ್ ಮಾಡಲಾಗುತ್ತೆ ಮತ್ತು ಅವರಿಗೆ ತಗಲತಕ್ಕ ರೈಲು ಛಾರ್ಜು ಮತ್ತು ಊಟದ ಖರ್ಚಿನಲ್ಲಿ ಮೂರನೇ ಒಂದು ಭಾಗ ಸರ್ಕಾರದಿಂದ ಮುಫತ್ತಾಗಿ ಕೊಡಲಾಗುತ್ತೆ. ಸದರಿ ಸುಲಭಪಾಠವನ್ನು ಕೇಳಲು ಬರಲಪೇಕ್ಷೆಯುಳ್ಳ ಜನಗಳು ಹೆಬ್ಬಾಳದ ಫಾರಂ ಮ್ಯಾನೇಜರವರಿಗೆ ಒಂದು ವಾರ ಮುಂಚಿತವಾಗಿ ತಿಳಿಸತಕ್ಕದ್ದು.

ಕಬ್ಬಿನ ಬೆಳೆ ಮತ್ತು ಬೆಲ್ಲ ಮಾಡುವ ವಿಷಯವಾಗಿ ಕೊಡುವ ವ್ಯವಸಾಯದ ಸಂಬಂಧಪಟ್ಟ ಸುಲಭ ಪಾಠವು ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರ ತಾಲ್ಲೂಕು ಮರತೂರ್ ಫಾರಂನಲ್ಲಿ 1916 ನೇ ಇಸವಿ ಫೆಬ್ರುವರಿ 14 ನೇ ತಾರೀಖು ಮೊದಲುಮಾಡಿಕೊಂಡು ಒಂದು ವಾರ ನಡೆಯುವದು ಸದರಿ ಸುಲಭ ಪಾಠವನ್ನು ಕೇಳಲು ಬರತಕ್ಕ ಜನಗಳಿಗೆ ಮರತೂರ್ ಫಾರಂನಲ್ಲಿ ಇರಲು ಸ್ಥಳ ಕೊಡಲಾಗುತ್ತೆ. ಮತ್ತು ಊಟಕ್ಕೆ ತಗಲಬಹುದಾದಷ್ಟು ಖರ್ಚು ಮಾತ್ರ ವಸೂಲು ಮಾಡಲಾಗುತ್ತೆ ಅಲ್ಲದೆ ಅವರಿಗೆ ತಗಲತಕ್ಕ ರೈಲುಛಾರ್ಜು ಮತ್ತು ಊಟದ ಖರ್ಚಿನಲ್ಲಿ ಮೂರನೇ ಒಂದು ಭಾಗ ಸರ್ಕಾರದಿಂದ ಮುಫತ್ತಾಗಿ ಕೊಡಲಾಗುತ್ತೆ ಸದರಿ ಸುಲಭ ಪಾಠವನ್ನು ಕೇಳಲು ಬರಲಪೇಕ್ಷೆಯುಳ್ಳ ಜನಗಳು ಮರತೂರಿನಲ್ಲಿರುವ ವ್ಯವಸಾಯದ ಇಲಾಖಾ ಇನ್‌ಸ್ಪೆಕ್ಟರವರಿಗೆ ಒಂದು ವಾರ ಮುಂಚಿತವಾಗಿ ತಿಳಿಸತಕ್ಕದ್ದು.

ಚಿಕಿತ್ಸೆಗಾಗಿ ಸರ್ಕಾರೀ ಆಸ್ಪತ್ರೆಗಳಿಗೂ ಔಷಧಾಲಯಗಳಿಗೂ ಹೋಗುವ ರೋಗಿಗಳಿಂದ ರುಸುಂ ವಸೂಲ್ಮಾಡುವುದನ್ನು ಕ್ರಮಗೊಳಿಸುವ ನಿಯಮಗಳು.

1916 ನೇ ಇಸವಿ ಜನವರಿ 1 ನೆಯ ತಾರೀಖಿನ ಲಾಗಾಯ್ತು ತಂಗಾಮಿಯಾಗಿ ಮೂರು ವರುಷಗಳ ವರೆಗೆ, ಬೆಂಗಳೂರು ಮತ್ತು ಮೈಸೂರು ನಗರದಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿಯೂ ಔಷಧಾಲಯಗಳಲ್ಲಿಯೂ ಇದರ ಕೆಳಗಿನ ನಿಯಮಗಳು ಅನುಸರಿಸಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

(1) ಎಲ್ಲಾ ಬಾಬುಗಳಿಂದಲೂ ಮಾಹೆಯಾನಾ 50 ರೂಪಾಯಿಗೆ ಮೀರಿದ ಸಂಪಾದನೆಯುಳ್ಳ ಜನರೂ ಅವರ ಆಶ್ರಿತರೂ ಈ ನಿಯಮಗಳ ಉದ್ದೇಶಗಳಿಗಾಗಿ ಬಡವರೆಂದು ಎಣಿಸಲ್ಪಡುತ್ತಾರಲ್ಲದೆ, ಇವರ ಪ್ರಾವಿನ್ಷಿಯಲ್, ಮ್ಯುನಿಸಿಪಲ್ ಯಾ ಲೋಕಲ್ ಫಂಡುಗಳಿಂದ ಪೋಷಿಸಲ್ಪಡುವ ಎಲ್ಲಾ ಆಸ್ಪತ್ರೆಗಳಲ್ಲಿಯೂ ಔಷಧಾಲಯಗಳಲ್ಲಿಯೂ ಮುಫತ್ತಾಗಿ ವೈದ್ಯಕೀಯ ಬುದ್ಧಿವಾದವನ್ನೂ ಚಿಕಿತ್ಸೆಯನ್ನೂ ಪಡೆಯಲು ಹಕ್ಕುಳ್ಳವರಾಗಿರುವರು. (2) ಆಸ್ಪತ್ರೆಗೆ ಹೋಗಿ ಔಷಧವನ್ನು ತೆಗೆದುಕೊಂಡುಬರುವ ರೋಗಿಗಳು—ಮಾಹೆಯಾನಾ ನಾಲ್ಕು ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಾಗಿ ಆಸ್ಪತ್ರೆಗೆ ಯಾ ಔಷಧಾಲಯಕ್ಕೆ ಚಂದಾವಾಗಿ ಕೊಡುವವರು ತಮಗೂ ತಮ್ಮ ಕುಟುಂಬದವರಿಗೂ ರುಸುಂ ಇಲ್ಲದೆ ಔಟ್ ಪೇಷಂಟರ ಇಲಾಖೆಯಲ್ಲಿ ವೈದ್ಯಕೀಯ ಬುದ್ಧಿವಾದವನ್ನೂ ಚಿಕಿತ್ಸೆಯನ್ನೂ ಪಡೆದುಕೊಳ್ಳಲು ಅವಕಾಶ ಕೊಡಲಾಗುವುದು. (3) ಇತರ ಜನರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಯಾ ಔಷಧಾಲಯಕ್ಕೆ ಹೊರಗಿನ ರೋಗಿಗಳಾಗಿ ಹೋದರೆ, ಪ್ರತಿ ರೋಗಿಯಿಂದಲೂ ಚಿಕಿತ್ಸೆಯ ಖರ್ಚಿಗಾಗಿ ದಿನಕ್ಕೆ ಎಂಟಾಣೆಯಂತೆ ರುಸುಂ ವಸೂಲ್ಮಾಡಿದ ಮೇಲಲ್ಲಿ, ರೋಗಿಗಳನ್ನು ಪರೀಕ್ಷಿಸಿ ನೋಡಿದ ಖರ್ಚೂ (ಸಾಮಾನ್ಯ ಶಸ್ತ್ರ ಚಿಕಿತ್ಸೆಯೂ ಸೇರಿ) ಒಂದು ದಿನದ ಔಷಧದ ಖರ್ಚೂ ಸೇರುತ್ತವೆ

ಜನರಲ್ ವಾರ್ಡುಗಳು —(4) ಆಸ್ಪತ್ರೆಯಲ್ಲಿಯೇ ಇದ್ದು ಔಷಧ ತೆಗೆದುಕೊಳ್ಳುವವರು — ಬಡವನಲ್ಲದ ಪ್ರತಿಯೊಬ್ಬನೂ ಆಸ್ಪತ್ರೆಯ ಜನರಲ್ ವಾರ್ಡಿನಲ್ಲಿದ್ದು ಚಿಕಿತ್ಸೆ ಹೊಂದಬೇಕಾದರೆ ಅವನು ಆಸ್ಪತ್ರೆಯಲ್ಲಿ ಇರುವಷ್ಟು ದಿನಗಳೂ ದಿನಕ್ಕೆ ಎಂಟಾಣೆಯಂತೆ ರುಸುಂ ಕೊಡಬೇಕು. (5) ಆಸ್ಪತ್ರೆಯಲ್ಲಿದ್ದುಕೊಂಡು ಮುಫತ್ತಾಗಿ ಚಿಕಿತ್ಸೆ ಹೊಂದಬೇಕಾದ ಜನಗಳು ತನ್ನ ಅಥವಾ ತಮ್ಮ ಪೋಷಕರ ತಿಂಗಳುಸಂಬಳ ಆದಾಯವು 50 ರೂಪಾಯಿಗೆ ಮೀರಿಲ್ಲವೆಂದು ಒಂದು ಪ್ರಮಾಣ ಪತ್ರಿಕೆಯನ್ನು ಬರೆದುಕೊಡಬೇಕು.

ಸ್ಪೆಷಲ್ ವಾರ್ಡುಗಳು —(6) ಸ್ಪೆಷಲ್ ವಾರ್ಡಿನಲ್ಲಿ ದಾಖಲಾಗಲು ಇಷ್ಟಪಡುವ ಪ್ರತಿಯೊಬ್ಬ ಮನುಷ್ಯನೂ ತನಗೇ ಒಂದು ಪೂರಾ ಕೊಠಡಿಯನ್ನು ಪಡೆದ ಮೊದಲನೇ ತರಗತಿಯ ರೋಗಿಯಂತೆ ಚಿಕಿತ್ಸೆ ಹೊಂದಬೇಕಾದರೆ ಅವನು ದಿನ ಒಂದಕ್ಕೆ ಎರಡು ರೂಪಾಯಿಯಂತೆ ರುಸುಂ ಕೊಡಬೇಕಾಗುವುದು ಎರಡನೇ ತರಗತಿಯ ರೋಗಿಯಂತೆ ಚಿಕಿತ್ಸೆ ಹೊಂದಬೇಕಾದರೆ ದಿನ ಒಂದಕ್ಕೆ ಒಂದು ರೂಪಾಯಿಯಂತೆ ರುಸುಂ ಕೊಡಬೇಕಾಗುವುದು ಎರಡನೇ ತರಗತಿಯ ರೋಗಿಗಳಿಬ್ಬರನ್ನು ಒಂದು ಕೊಟ್ಟಡಿಯಲ್ಲಿ ಇಡಲಾಗುವುದು. ನೋಟ—ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ವಿಷಯದಲ್ಲಿ ಹಿಂದೆ 1910 ನೇ ಇಸವಿ ಏಪ್ರಲ್ 2 ನೆಯ ತಾರೀಖಿನ ಸರ್ಕಾರೀ ಹುಕುಮಿನಲ್ಲಿ ಬೇರೆ ಸ್ಪೆಷಲ್ ದರಗಳನ್ನು ವಿಧಿಸಿರುವದರಿಂದ ಈ ಮೇಲ್ಕಂಡ ದರಗಳು ಸದರೀ ಆಸ್ಪತ್ರೆಗೆ ಅನ್ವಯಿಸುವದಿಲ್ಲ. (7) ಹನ್ನೆರಡು ವರುಷದೊಳಗಿನ ಮಕ್ಕಳು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ... ಮೇಲ್ಕಂಡ ದರಗಳಲ್ಲಿ ಅರ್ಧವನ್ನು ವಸೂಲ್ಮಾಡಲಾಗುವುದು (8) ... ವಾರ್ಡುಗಳಲ್ಲಿ ವೈದ್ಯರು ... ಚಿಕಿತ್ಸೆಯೂ, ಆಹಾರ ... ಸಾಮಾನು, ... ಸ್ಪೆಷಲ್ ... ರೋಗಿಗಳು ... ಮಾಡಿಕೊಳ್ಳಬೇಕು. (9) ಮೇಲ್ಕಂಡ ನಿಯಮಗಳನ್ನನುಸರಿಸಿ ... ಸರ್ಕಾರಕ್ಕೆ ಪ್ರಾರ್ಥಿಸಲು ... ಅನಹಕ್ಕದ್ದು (10) ... ರೋಗಿಗಳನ್ನು ಮುಫತ್ತಾಗಿ ನೋಡಲಾಗುವದು

ಖಾತೆದಾರರಿಗೆ ನೋಟೀಸ್.

ಖಾತೆದಾರರು ಸದರಿ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ... ವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದ ಬರಹಕ್ಕೆ ಖಾತೆಗಳಿಗೆ ನಾವು ಸ್ಥಳ ಕೊಡಲಾರೆವು. ಬರಹಗಾರರು ಖಾತೆದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತೆಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು; ಅಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಕಟಪಡಿಸುವುದಕ್ಕೆ ಬರತಕ್ಕ ಖಾತೆಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಖಾತೆಗಳು ಆಯಾ ವಾರದಲ್ಲೇ ಪ್ರಕಟವಾಗುವ

[illegible] ಶಡವು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ [illegible]. —ಎಡಿ.]

ಕರೆಸ್‌ಪಾಂಡೆನ್ಸ್.

ಹಳ್ಳಿ ವಿದ್ಯಾಭ್ಯಾಸ.

ಅಯ್ಯಾ,—ಸರಕಾರದವರು ಸಕಲರೂ ವಿದ್ಯಾವಂತರಾಗಬೇಕೆಂದು [illegible] ಬಲೋದ್ಬಂಧಪಡಿಸಿ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂದು [illegible]ರುವುದು ಸರಿಯಷ್ಟೆ. ಗ್ರಾಮಾಂತರಗಳಲ್ಲಿ ಈ ಪದ್ಧತಿಯನ್ನು ಜಾರಿ[illegible] ರೈತರು ತಮ್ಮ ಧನವನ್ನು ಕಾಪಾಡಿಕೊಂಡು ಅದರಲ್ಲಿ ಅಭಿವೃದ್ಧಿ[illegible]ರೆಂಬುದಕ್ಕೆ ಸಂಶಯವಿಲ್ಲ. ಇಲ್ಲದಿದ್ದಲ್ಲಿ ದುರ್ವಿನಿಯೋಗದ [illegible] ಗುವುದರಲ್ಲಿ ಸಂದೇಹವಿಲ್ಲ. ಈಗ ಪ್ರತಿ ಗ್ರಾಮದಲ್ಲಿ ಒಂದೊಂ[illegible] ಮಠವಿದೆ ಅಲ್ಲಿ ಜೈಮಿನಿ ಭಾರತ, ಗೋವಿನಕಥೆ ಮುಂತಾದವುಗಳ[illegible]. ಹೀಗೆ ಹೇಳುವುದು ಬಾಲಕರಿಗೆ ಬಾಯಿಪಾಠ ಮಾತ್ರವಾಗು[illegible] ಇದರಿಂದ ಅಕ್ಷರದೃಷ್ಟಿ ಆಗುವುದಿಲ್ಲ. ಪ್ರಾಯೋಗ ಗ್ರಾಮಾಂತರಗಳಲ್ಲಿ [illegible]ಗೆ ಓದು ಬರಹ ಬರುವವರು ತಾವು ಸರ್ವಜ್ಞರೆಂದು ಮೆರೆವರು. [illegible] ಅಧಿಕಾರಿಗಳೊಡನೆ ಮಾತಾಡಬೇಕಾದರೂ ಕೈಗೆ ಸಿಕ್ಕುವುದಿಲ್ಲ. ಕಾರಣವೇನೆಂ[illegible] ಯಾವ ತೆರಿಗೆ ಹಾಕುವರೋ, ಅಥವಾ ಯಾವ ದಂಡವನ್ನು ತೆರಬೇಕೆನ್ನು[illegible] ಎಂದು ಭಯಪಡುತ್ತಿರುವರು. ಸರ್ಕಾರದವರು ಬಲಾತ್ಕಾರ ವಿದ್ಯಾಭ್ಯಾಸ[illegible] ಜಾರಿಗೆ ತಂದರೆ ರೈತರನ್ನು ಉದ್ಧಾರಮಾಡಿದಂತಾಗುತ್ತೆ.

ನಿಮ್ಮ ವಾಚಕ.

ಅರಕಲಗೂಡು ರೀಡಿಂಗ್ ರೂಮ್—ಜವಾಬು.

ಅಯ್ಯಾ,—ತಮ್ಮ 13 ನೇ ತಾ. ಪೇಪರಿನಲ್ಲಿ ಬಾತ್ಮಿದಾರರು ಪಟ್ಟಿರುವ [illegible]ಯವು ಸಹಜವಾದದ್ದಲ್ಲ. ಹಾಲಿ ಇರುವ ಸ್ಥಿತಿಯಲ್ಲಿ ಇಲ್ಲಿನ ವಿದ್ಯಾ[illegible] ಕೆಲವು ಶೆಟ್ಟರು ಕಟ್ಟಿಸಿರುವ ರೀಡಿಂಗು ರೂಮು ಅಭಿವೃದ್ಧಿಗೆ [illegible] ಅವರ ಹೆಸರು ಪ್ರಸಿದ್ಧಿಯಾಗುತ್ತದೆ ಎಂಬ ಕುಹಕ ಮನಸ್ಸಿನಿಂದ ಆ [illegible] ರೂಮನ್ನು ಹೇಗಾದರೂ ಹೀನಸ್ಥಿತಿಗೆ ತರಬೇಕೆಂಬ ಅಭಿಲಾಷೆಯಿಂದ [illegible] ತೆರಲುಗಳನ್ನು ನಿಲ್ಲಿಸಿ ಬೇರೆ ರೀಡಿಂಗ್ ರೂಮನ್ನು ಹೊಸದಾಗಿ ಏರ್ಪ[illegible]. ಇದು ಹಾಲಿ ನನ್ನ ಅನುಭವವಾಗಿರುತ್ತದೆ ಅಲ್ಲದೆ ಹಿಂದಿದ್ದ ಸೆಕ್ರೆ[illegible] ಸರಿಯಾಗಿ ಕೆಲಸ ನಡಿಸದೆ ಪೇಪರುಗಳಿಗೆ ಚಂದಾ ಹಣ ಬಾಕಿನಿಲ್ಲಿಸಿ [illegible] ಚಂದಾದಾರರು ಅದೆಲ್ಲಿ ತಮ್ಮ ಮೇಲೆ ಬೀಳುತ್ತದೋ ಎಂದು ಕೆಲವರು [illegible] ಕೊಟ್ಟರು. ಪೇಟೆಯಲ್ಲಿ ನಾಲ್ಕು ಪಾರ್ಟಿಗಳಾಗಿವೆ. [illegible] ರೂಮು ಕಟ್ಟಿಸಿರುವ ಶೆಟ್ಟರು ಅವರ ಪಾರ್ಟಿ ವಿನಹ ಬೇರೆ ಪಾರ್ಟಿ[illegible] ಚಂದಾದಾರರಾಗಲು ಅಭಿಪ್ರಾಯ ಪಡುವುದಿಲ್ಲವೆಂದೂ ಬರೆದಿರು[illegible]. ಈ ರೀತಿ ಶೆಟ್ಟರು ಅಭಿಪ್ರಾಯ ಪಟ್ಟಿದ್ದಲ್ಲಿ ಹಿಂದೆ ಬೇರೆ ಪಾರ್ಟಿಯ [illegible] ಚಂದಾದಾರರಾಗಿದ್ದರಲ್ಲ. ಇದು ಎಲ್ಲರಿಗೂ ತಿಳಿದ ವಿಷಯ. [illegible] ರೂಮಿನ ಪ್ರವೇಶೋತ್ಸವದ ದಿವಸ ಸಕಲ ವಿಧವಾದ ಜಕ್ಕಸ್ಸೊ ಮಾಡ್ಯವಿ[illegible] ಬರಲಿಲ್ಲವೇ? ಇದು ಈ ತಮ್ಮ ಪತ್ರಿಕೆಯಲ್ಲೇ ಪ್ರಕಟವಾಗಿ[illegible]ವೆ? ಈ ವಿಚಾರದಲ್ಲಿ ಅಮಲ್ದಾರರು ಮುಖಂಡರಾಗಿ [illegible] ಅವಕಾಶವಿಲ್ಲದಂತೆಯೂ, ಉದಾರ ಮನಸ್ಸಿನಿಂದ ನಡಿಸುವ [illegible] ರೀಡಿಂಗ್ ರೂಮು [illegible]ಗೆ ತರದಂತೆಯೂ ಅನುಕೂಲ ಮಾಡ[illegible].

ಒಬ್ಬ ವಾಚಕ.

ಸೆಂಧಿ ಅಂಗಡಿಯಿಂದ ಕೆಲವು ಸ್ಥಳಾಂತರವಂತೆ

ಅಯ್ಯಾ,—[illegible] ಸೆಂಧಿ [illegible] ದೇವನಹಳ್ಳಿ [illegible] ಸೆಂಧಿ [illegible] ಮಾಡಿಕೊಂಡಿದ್ದಾರೆ. [illegible] 4 [illegible] 4½ [illegible]

[illegible]

ಪ್ರಜಾ ಹಿತಚಿಂತಕ.

ಚಿತ್ರದುರ್ಗದ ಕೆಳಕೋಟೆ ಮಠ—ಜವಾಬು.

ಅಯ್ಯಾ,—ತಮ್ಮ ಪತ್ರಿಕೆಯಲ್ಲಿ ಚಿತ್ರದುರ್ಗದ ಕೆಳಕೋಟೆಯಲ್ಲಿರುವ [illegible] ಪೀಠಾಲಂಕೃತರಾದ ಶ್ರೀ ಗುರು ಆನಂದಭಾರತಿ ಸ್ವಾಮಿಗಳ[illegible] ಮಠವು ಹಾಳಾಗಿದ್ದುದಾಗಿಯೂ, ಸ್ವಾಮಿಗಳು [illegible] ನಡಿಸಲು ಶಕ್ತಿ ಇಲ್ಲದವರಾಗಿದ್ದರೆಂತಲೂ, ಮಠವು ಹೀನ [illegible]ದೆಂತಲೂ, ಈಗ ಮೇಲ್ಕಂಡ ಪೀಠಾಲಂಕೃತರಾಗಿರತಕ್ಕ ಶ್ರೀ [illegible] ಗುರುಸ್ವಾಮಿಗಳನ್ನು ಮ॥ ಗಾಯಕವಾಡ್ ಪೀರಜಾದಾಯರು [illegible] ಈ ಪೀಠಕ್ಕೆ ಕರತಂದರೆಂತಲೂ ಪ್ರಕಟವಾಗಿದೆ. ಇದನ್ನು [illegible]ದಲ್ಲಿರತಕ್ಕ ಅನೇಕ ಮಹಾರಾಷ್ಟ್ರ ಮಂಡಲಿಯ ಭಕ್ತಜನಗಳಿಗೆ [illegible]ವಾಗಿರುತ್ತೆ. ಈ ಬಾತ್ಮಿಯನ್ನು ಕೊಟ್ಟಿರತಕ್ಕವರು ಈ ಮಠದ [illegible] ಗೊತ್ತಿಲ್ಲದವರಾಗಿ ತೋರುತ್ತೆ. ಈ ಮಠದ ಪೀಠಾಲಂಕೃತರಾದ [illegible] ಆನಂದಭಾರತಿ ಸ್ವಾಮಿಗಳವರು ಪೂರ್ಣ ವಿದ್ವಾಂಸರೆಂಬುದನ್ನು [illegible] ಮಹಾರಾಜರವರ ಇಂಪೀರಿಯಲ್ ರಿಜಿಮೆಂಟಿನಲ್ಲಿರತಕ್ಕ ಮಹಾರಾ[illegible] ಮಂಡಲಿಯವರು ಮತ್ತು ಮೈಸೂರು ದೇಶದಲ್ಲಿರತಕ್ಕ ಸಮಸ್ತ ಮಹಾರಾ[illegible] ಮಂಡಲಿಯವರು ಸಹ ಬಲ್ಲವರಾಗಿರುತ್ತಾರೆ. ಈ ಮಠವು ಈಗಿನವರಿ[illegible] ಲೋಪವೂ ಇಲ್ಲದೆ ಯಥಾಸ್ಥಿತಿಯಲ್ಲಿ ನಡೆಯುತ್ತಾ ಇದೆ. ಶ್ರೀ [illegible] ಸ್ವಾಮಿಗಳವರು ತಮ್ಮ ವೃದ್ಧಾಪ್ಯದೆಸೆಯಿಂದ ಈಗಿರತಕ್ಕ [illegible] ಮಾಡಿಕೊಂಡು ಮ॥ ಗಾಯಕವಾಡ್ ಪೀರಜಾದಾಯರು

ಮುಂತಾದ ಅನೇಕ ಮಹಾರಾಷ್ಟ್ರ ಮಂಡಲಿಯವರ ಅನುಮತಿಯಿಂದ 18-11-15 ರಲ್ಲಿ ತಮ್ಮ ಪೀಠಕ್ಕೆ ಅಧಿಕಾರಿಗಳನ್ನಾಗಿ ನೇಮಿಸಿದರು. ಈ ಸಂತೋಷದ ಮಹೋತ್ಸವಕ್ಕಾಗಿ ಆ ದಿನ ಚಿತ್ರದುರ್ಗ ಸ್ಥಳೀಕರಾದ ಮಹಾಜನಗಳಿಗೆ ಫಲಪುಷ್ಪ ತಾಂಬೂಲಾದಿಗಳಿಂದ ಆನಂದಪಡಿಸಿ ದೇವರ ಪ್ರಾರ್ಥನೆ ಮಂಗಳ ವಗೈರೆ ನಡೆದು ಶ್ರೀಮನ್ ಯುವರಾಜರವರಿಗೂ ತಮ್ಮ ಚಕ್ರವರ್ತಿ ಸಾರ್ವಭೌಮರವರಿಗೂ ಶ್ರೇಯಃಪ್ರಾರ್ಥನೆಗಳನ್ನು ಮಾಡಿ ಕಡೆಯಲ್ಲಿ ಸರ್ವರೂ ಎದ್ದು ಚಕ್ರವರ್ತಿ ಸಾರ್ವಭೌಮರವರಿಗೆ ಜಯಧ್ವನಿಯನ್ನು ಮಾಡಿದರು. ಮತ್ತು ಮೇಲ್ಕಂಡ ಶ್ರೀಗುರು ಆನಂದಭಾರತಿ ಸ್ವಾಮಿಗಳವರ ಖಾಸ್ ತಮ್ಮಂದಿರಾದ ಶ್ರೀ ಯಂಕಟಾಪುರಿ ಬಾವಾಜಿಯವರು ಕಾಲವಾದರೆಂದು ತಿಳಿಸಲು ವಿಷಾದಪಡುತ್ತೇನೆ. ಇವರು ಕೇವಲ ಸಾಧುಗಳು, ಜಿತೇಂದ್ರಿಯ ಪುರುಷರು; ಇವರ ವಿಯೋಗಕ್ಕೋಸ್ಕರ ಒಟ್ಟು ಜನ ಮಹಾರಾಷ್ಟ್ರ ಮಂಡಲಿಯವರು ವಿಷಾದಪಡುತ್ತಿರುವರು. ಇವರ ಉತ್ತರ ಕ್ರಿಯೆಗಳು ಶಾಸ್ತ್ರೋಕ್ತ ರೀತಿ ಈಗಿರತಕ್ಕ ಶ್ರೀಗುರು ರಘುಭಾರತಿ ಸ್ವಾಮಿಗಳವರಿಂದ ನಡಿಸಲ್ಪಟ್ಟಿತು. ತಾ. 12 ನೇ ಬುಧವಾರ 200 ಜನ ಬಡವರನ್ನು ದಿವ್ಯವಾದ ಭೋಜನಗಳಿಂದ ತೃಪ್ತಿಪಡಿಸಿದರು.

ಜಿ. ಗೋವಿಂದರಾವ್.

ಲಂಚ.

ಅಯ್ಯಾ,—ಸರ್ಕಾರಿ ಉದ್ಯೋಗಗಳಲ್ಲಿ ಮಾತ್ರವಲ್ಲ; ರೈಲ್ವೆ, ಸಾಹುಕಾರ, ಮರ್ಚೆಂಟ್ ಆಫೀಸುಗಳಲ್ಲಿಯೂ ಸಹ ಲಂಚ ಕೊಡುವದೂ, ಲಂಚ ತೆಗೆದುಕೊಳ್ಳುವದೂ ಅಲ್ಲಲ್ಲಿ ಕಲೆದೋರುತ್ತಾ ಬರುತ್ತಿದೆ. ಇದು ಅನೇಕರನ್ನು ಹಾಳುಮಾಡುವ ಅನಿಷ್ಟವಾದ ಪಾಷಾಣವಾಗಿದೆ. ಇದರಿಂದ ಆಗುವ ಕೇಡುಗಳನ್ನು ಅಧಿಕಾರಿಗಳೂ ಪ್ರಜೆಗಳೂ ಸಾಧ್ಯವಾಗುವ ಮಟ್ಟಿಗೆ ಕಡಮೆ ಮಾಡಲು ಪ್ರಯಾಸಪಡಬೇಕಲ್ಲವೇ? ಇದು ಯಾವ ದೇಶದಲ್ಲಿ ಹೆಚ್ಚುತ್ತದೋ ಆ ದೇಶದ ನೀತಿ ನ್ಯಾಯಗಳೂ ಪ್ರಜಾ ಸಮೃದ್ಧಿಯೂ ಕೆಟ್ಟು ಹೋಗುತ್ತವೆಂದು ನಿಸ್ಸಂದೇಹವಾಗಿ ಹೇಳಬಹುದು.

ಲಂಚವನ್ನು ಕಡಮೆಮಾಡುವ ಮಾರ್ಗ.—ಯಾವ ಇಲಾಖೆಯಲ್ಲಿಯೇ ಆಗಲಿ ಶಿಫಾರಸು ಬೇಕು ಎಂಬ ವಾರ್ತೆ ರೂಢಿಯಲ್ಲಿದೆ. ಅನೇಕ ಸಂದರ್ಭಗಳಲ್ಲಿ ಕೆಲವು ನೀಚರು ತಮ್ಮ ಇಷ್ಟಲಾಭಗಳಿಗೆ ಒಳಪಟ್ಟು ಬಂದರೆ ಸಾಕು; ಫಲಾಫಲಗಳನ್ನು ಯೋಚಿಸದೆ ಶಿಫಾರಸು ಮಾಡಿಬಿಡುತ್ತಾರೆ. ಇಂಥಾ ಅಯೋಗ್ಯ ಮಹನೀಯರು ದೇಶಗಳಲ್ಲಿ ಹೆಚ್ಚುವದರಿಂದ ರಾಜದ್ರೋಹಗಳೂ, ಪ್ರಜಾಸಮೃದ್ಧಿ ಭಂಗಗಳೂ ಅನೇಕ ಅನೀತಿಗಳೂ ಹೆಚ್ಚುವದೇ ಹೊರತು ಕಡಮೆಯಾಗಲಾರವು. ಆದದರಿಂದ ಸರ್ಕಾರದವರೂ ನೀತಿಯುಳ್ಳ ಪ್ರಜೆಗಳೂ ಸಹ ಏಕೀಭವಿಸಿ, ಶಿಫಾರಸನ್ನು ಪಡೆದು ಒಂದು ಉದ್ಯೋಗದಲ್ಲಿ ಸುಗ್ಗಿ ರಾಜನೀತಿಗೂ ಪ್ರಜಾ ಸಮೃದ್ಧಿಗೂ ವಿರೋಧ ಕೆಲಸಗಳ ರಾಜಭ್ರಷ್ಟವಾದ ನಷ್ಟಕ್ಕೂ ಕಾರಣರಾದ ನೌಕರರಿಗೆ ಕಲ್ಲಿನಷ್ಟು ಶಿಕ್ಷೆ ಎಂಬ ಫಂದದಲ್ಲಿ ಅಲ್ಪಸ್ವಲ್ಪವಾದರೂ ಶಿಫಾರಸು ಮಾಡಿದವರು ಅನುಭವಿಸುವಂತೆ ಮಾಡಿದರೆ ತಮ್ಮ ಇಷ್ಟಪೂರ್ತಿಗಾಗಿ ಮಾಡಿದ ಶಿಫಾರಸಿನ ಪ್ರತಿಫಲವನ್ನು ಅವರೂ ಸ್ವಲ್ಪ ಉಣ್ಣುವರಲ್ಲವೇ? ಇದರಿಂದ ಶಿಫಾರಸು ಮಾಡುವವರ ಯೋಗ್ಯತಾಯೋಗ್ಯತೆಗಳೂ ಹೊರಪಡುವುದಿಲ್ಲವೇ? ಇದು ಸಕಲ ಇಲಾಖೆಗಳಲ್ಲಿಯೂ ಸಕಲರಿಗೂ ಎಚ್ಚರಿಕೆಯನ್ನೂ ಬುದ್ಧಿವಾದವನ್ನೂ ನಿಸ್ಸಂದೇಹವಾಗಿ ಕಲಿಸಿಕೊಡದೆ ಇರಲಾರದು.

ಶಿಫಾರಸಿನ ಫಲ.—ಒಬ್ಬ ಮಹನೀಯರು ತಾವು ಎಂಥವರಿಗೆ ಶಿಫಾರಸು ಮಾಡುತ್ತೇವೆಂಬ ಸಂಗತಿಯನ್ನು ಮರೆತುಬಿಟ್ಟು ತಮ್ಮ ಶಿಫಾರಸು ಹೊಂದಿದವರ ಯೋಗ್ಯತೆ ಗುಣ ನಡತೆ ಆರೋಗ್ಯಭಾಗ್ಯಗಳಿಂದ ಕೂಡಿದ ಸೇವೆಯು ಪ್ರಜೆಗಳ ಶ್ರೇಯೋಲಾಭಗಳಿಗೆ ಅಮೃತಪ್ರಾಯವಾಗಿರುವದೇ, ಅಥವಾ ವಿಷಪ್ರಾಯವಾಗಿರುವದೇ ಎಂಬ ಸಂಗತಿಯನ್ನು ತರ್ಕಿಸಿ ಯಾವದೋ ಒಂದು ಆಶೆಯಿಂದ ಅನ್ಯಾಯವಾಗಿ ರಾಜಭಂಡಾರಕ್ಕೆ ಖರ್ಚಿಡುತ್ತಾರೆಂದೂ, ಈ ಖರ್ಚಿನಿಂದುಂಟಾದ ಸೇವೆಯು ಪ್ರಜೆಗೆ ಹಾನಿಯೇ ಹೊರತು ಅನುಕೂಲವಲ್ಲವೆಂಬ ಸಂಗತಿಯನ್ನೂ ಸ್ಪಷ್ಟವಾಗಿ ಪ್ರಸಿದ್ಧವಾಗಿ ಮುಂದೆ ಸಿದ್ಧಾಂತಪಡಿಸಬಹುದಾಗಿ[illegible]. ಹೀಗಿರುವಲ್ಲಿ ಶಿಫಾರಸು ಮಾಡುವವರು ರಾಜದ್ರೋಹವಾದ ನಷ್ಟದಲ್ಲಿ ಪಾಲುಗಾರರಾಗಿ ಭಂಡಾರಕ್ಕೆ ರಿಫಂಡು ಮಾಡುವದರಿಂದ ದೇಶವು ಸುಕ್ಷೇತ್ರ, ಪ್ರಜಾ ಎಚ್ಚರಿಕೆ, ಸಮೃದ್ಧಿಗಳು ಹೆಚ್ಚುತ್ತವೆಂದು ಸಂತೋಷಿಸಬೇಕಾಗಿದೆ.

ರಾಜ್ಯದ ರಾಜಕೀಯ ಪ್ರವೃತ್ತಿ, ಮುನ್ಸಿಫ್ ಕೋರ್ಟ್‌ಗಳು.—ನಮ್ಮಲ್ಲಿ ಸಿದ್ಧಾಂತಕ್ಕೆ ತಕ್ಕ [illegible] ಯಾಗಿವೆ. ಮತ್ತು ದಿವಾನ್‌ರವರಿಗೂ ಇದರ ಬಗ್ಗೆ ಡಿಸೆಂಬರ್ 16 ರಲ್ಲಿ ಅರಿಕೆಯಾಗಿರುತ್ತೆ. ಸಕಲ ಶಾಸ್ತ್ರಗಳಲ್ಲಿ ನಂಬಿಕೆ ಎಂಬುದು [illegible] ಗುಣ. ಇದು ಒಂದು ಪತ್ರ ಇಲ್ಲದಿದ್ದರೆ ಪ್ರಸಂಗನೇ [illegible] ಹೇಳಬಹುದು. ಸಕಲ [illegible] ಸಕಲರಿಗೂ ಬೇಕಾದ ಗುಣ ಇರುವದೇ? [illegible] ನಂಬಿಸ್ಯನೇ? [illegible] ನೌಕರರು ಸರಕಾರಿ ಕಾಗದಗಳನ್ನು ಕದಿಯ ಬಹುದೇ? [illegible] ಟೋಗಳನ್ನು ತಪ್ಪು ಬರೆದು ಕೊಡಬಹುದೇ? [illegible] ಸರ್ಕಾರಿ ಕಾಗದಗಳಿಂದ ಅಂತರಂಗ [illegible] ಬರೆಯಬಹುದೇ? [illegible] ಅಂತರಂಗವಾಗಿ ಸರ್ಕ್ಯುಲರ್ ಕಾಗದಗಳನ್ನು [illegible] ಬಹುದೇ? [illegible] ಒಬ್ಬ ದೊಡ್ಡ ಅಧಿಕಾರಿಯವರ ಎಚ್ಚರಿಕೆಯೇ ಒಂದು ದಿನದ [illegible] ಹಿಂದುಮುಂದು ಯೋಚಿಸದೆ [illegible] ಸ್ವತಂತ್ರ [illegible] ಶಿಫಾರಸು [illegible]? ಒಂದು [illegible] ದೊಡ್ಡ ಅಧಿಕಾರಿ[illegible] ಹೀಗೆ ಮಾಡಲು ಧೈರ್ಯಗೊಳ್ಳುವರೋ? ಎಂದಿಗೂ ಇಲ್ಲ. [illegible] ಎಂಬ [illegible]. ಪ್ರಭುತ್ವಗಳು ನಡೆವರೆ [illegible] ರಾಜ್ಯಾಂಗದಲ್ಲಿ ದೊಡ್ಡ ಅಧಿಕಾರಗಳಿಗೆ ಹೆಚ್ಚು ಸಂಬಳ [illegible] ಯಾತಕ್ಕಾಗಿ ಕೊಡಲ್ಪಡುತ್ತವೆ? ಪ್ರಜಾಹಿತ ಹೆಚ್ಚುವದಕ್ಕಾಗಿ ಅಲ್ಲವೇ? ಸರಕಾರಿ [illegible] ಕೆಲಸವನು ಸಿಕ್ಕಿದರೆ ಸಂಬಳ ಕಡಿಮೆಯೇ? ಮೈಸೂರು [illegible]ದಲ್ಲಿ ಸಮೃದ್ಧಿಯಾಗಿ ಜೀವಿಸುತ್ತಿದ್ದ [illegible] ಕಷ್ಟಗಳಿಂದ ಕೂಡಿದ ಒಂದು [illegible] ಗ್ರಾಮವನ್ನು [illegible] ನೌಕರನು [illegible] ದಲ್ಲವೇ? ಸ್ವದೇಶೀಯರೇ, ಯೋಚಿಸಿ. ನಂಬಿಕೆ ಎಲ್ಲಿದೆ?

ಸುಮುಖೋಧು ಸವಾಸಿ.

ತಾಲ್ಲೋಕು ವರ್ತಮಾನಗಳು.

ತಿಪ್ಟೂರು ತಾ॥ ಬಳ್ಳೆಕೆರೆ.—ಇಲ್ಲಿ 8-10 ದಿನಗಳಿಂದಲೂ ರೈತರು ರಾಗಿ ಮೊದಲಾದ ಧಾನ್ಯಗಳನ್ನು ಒಡೆದು ರಾಶಿ ಮಾಡುತ್ತಿರುವರು.—ಈ ಗ್ರಾಮದಲ್ಲಿ ಒಂದು ಸ್ವಂತವಾದ ಶಾಲೆಯು ಇಡಲ್ಪಟ್ಟಿರುವುದು. 25-30 ಬಾಲಕರು ಓದುತ್ತಾರೆ. ನಮ್ಮ ಅಮಲ್ದಾರರು ಸ್ಕೂಲ್ ಕಟ್ಟಡಕ್ಕಾಗಿ ಬೇರೆ ಸ್ಥಳವನ್ನು ಬಿಡಿಸಿಯೂ ಗ್ರಾಮಸ್ಥರಿಗೆ ಮನೆಗೆ 4-5 ರೂಪಾಯಿ ಕಟ್ಟಿಸಿದ ವೆಚ್ಚಕ್ಕಾಗಿ ವಸೂಲ್ಮಾಡುವಂತೆ ಗ್ರಾಮದ ಪಟೇಲರಿಗೆ ಹುಕುಂ ಮಾಡಿರುವರು. ಸ್ಕೂಲ್ ಮಾಸ್ಟರು ತಾಲ್ಲೋಕಿಗೂ, ಡೆಪ್ಯುಟಿ ಇನ್ಸ್‌ಪೆಕ್ಟರಿಗೂ, ಜನರಲ್ ಸಾಹೇಬರಿಗೂ ಗ್ರಾಮಸ್ಥರ ಮುಖಾಂತರ ಸುಮಾರು 4-5 ಸಾರಿ ಅರ್ಜಿ ಬರೆದುಕೊಂಡಿದ್ದಾಗ್ಯೂ ಯಾವ ಹುಕುಂ ದೊರೆತಿಲ್ಲ. ಮಾಸ್ತರು 3 ನೇ ತರಗತಿಯ ತನಕ ಪಾಠ ಹೇಳುತ್ತಿರುವರು.

ಹೊಳೆನರಸೀಪುರ.—ಅಮಲ್ದಾರ್ ಮ॥ ಲಕ್ಷ್ಮಣರಾವ್ ಅರಸಿನವರ ಕಾಲದಲ್ಲಿ ತಾಲ್ಲೋಕಿನ ಪ್ರತಿ ಕೆಲ್ಸ ಸೇರಿ ಮಹಾರಾಜರವರಿಗೆ ಜಿ. ಸಿ. ಎಸ್. ಐ. ಎಂಬ ಬಿರುದು ಬಂದ ಜ್ಞಾಪಕಾರ್ಥವಾಗಿ ಕೃಷ್ಣರಾಜೇಂದ್ರ ಹಾಲ್ ಎಂಬ ಹೆಸರನ್ನು ಇಟ್ಟು ಒಂದು ದಿವ್ಯವಾದ ಮಂದಿರವನ್ನು ಕಟ್ಟಿಸಿದರು. ಅದನ್ನೇ ರೀಡಿಂಗ್ ರೂಮ್ ಮಾಡಿ ಅನೇಕ ಉತ್ತಮ ಪೇಪರುಗಳನ್ನು ತರಿಸಿ ಬಹಳ ಅಭಿವೃದ್ಧಿಸ್ಥಿತಿಗೆ ತಂದರು. ಅವರ ತರುವಾಯ ಬಂದವರೆಲ್ಲಾ ಅದೇ ಪ್ರಕಾರ ನಡಿಸಿಕೊಂಡು ಬಂದರು. ಈಗ ಈ ರೀಡಿಂಗ್ ರೂಮ್‌ಗೆ ಹೋದರೆ ಉತ್ತಮ ಕಟ್ಟಡವನ್ನೂ ಮೇಜು ಕುರ್ಚಿಗಳನ್ನೂ ನೋಡಬಹುದೇ ಹೊರತು ಪೇಪರುಗಳು ಇಲ್ಲ. ರೀಡಿಂಗ್ ರೂಮ್ ಯಾಕೆ ಈ ಸ್ಥಿತಿಗೆ ಬಂತೋ ಯಾರೂ ವಿಚಾರಿಸುವವರೇ ಇಲ್ಲ. ಇನ್ನು ಮೇಲಾದರೂ ತಿರಿಗಿ ಮೊದಲಿನ ಸ್ಥಿತಿಗೆ ಬರುವಂತೆ ಅಧಿಕಾರಿಗಳು ಪ್ರಯತ್ನಪಡುವರೆಂದು ನಂಬುತ್ತೇವೆ.

ಬೀರೂರು.—ಶಿರಹಟ್ಟಿ ಸಂಗೀತ ನಾಟಕ ಮಂಡಲಿಯವರು ಚಿತ್ರದುರ್ಗದಿಂದ ಇಲ್ಲಿಗೆ ಬಂದು ಒಂದೂವರೆ ತಿಂಗಳಿಂದಲೂ ಉತ್ತಮ ರೀತಿಯಲ್ಲಿ ನಾಟಕಗಳನ್ನು ಪ್ರದರ್ಶಿಸಿ ಈ ಪುರಜನರಿಗೆ ಅತ್ಯಾನಂದವನ್ನುಂಟುಮಾಡಿರುವದಲ್ಲದೆ ಪ್ರೇಕ್ಷಕರಿಂದ ವ್ಯಯವಾಗುವ ಕಾಲ, ದ್ರವ್ಯಕ್ಕೆ ಸಮರ್ಪಕವಾಗಿ ತಮ್ಮ ಬೋಧಪರ ನಾಟಕಗಳಿಂದ ಧಾರ್ಮಿಕ ವೃತ್ತಿಯನ್ನು ಜನಗಳ ಹೃದಯದಲ್ಲಿ ಸ್ಥಿರಗೊಳಿಸಿ ಮಹದುಪಕಾರ ಮಾಡಿರುವರು. ಅಲ್ಲದೆ ಚಿತ್ರದುರ್ಗದ ಮ॥ ಭೀಮರಾಯ ಮಾಸ್ತರು ಇವರಿಗೆ ಕೆಲವು ಭಕ್ತಿಪರ ನಾಟಕಗಳನ್ನು ಹೊಸದಾಗಿ ಬರೆದುಕೊಟ್ಟರು. ಈ ರೀತಿ ಕರ್ಣಾಟಕ ಭಾಷಾಭಿವೃದ್ಧಿಯನ್ನು ಮಾಡುತ್ತಿರುವುದು ಸ್ತೋತ್ರಾರ್ಹವಾಗಿದೆ. ಇವರಿಂದ ಹೊಂದಿದ ಉಲ್ಲಾಸಾರ್ಥಕ್ಕಾಗಿ ಈ ರೈಲ್ವೆ ಸ್ಟೇಷನ್ ಮಾಸ್ಟರುಗಳೇ ಮೊದಲಾದವರೆಲ್ಲರೂ ಸೇರಿ ಕಂಪನಿಗೆ ಒಂದು ಸುವರ್ಣ ಪದಕವನ್ನು ಕೊಟ್ಟಿರುವರಲ್ಲದೆ ಡಾಕ್ಟರು, ಪೋಸ್ಟ್ ಮಾಸ್ಟರು, ಸ್ಯಾನಿಟರಿ ಇನ್ಸ್‌ಪೆಕ್ಟರು ಮೊದಲಾದವರು ಸೇರಿ ನಾರದನ ಪಾರ್ಟನ್ನು ಉತ್ತಮವಾಗಿ ಅಭಿನಯಿಸಿ ತೋರಿಸುವ ಬಸಪ್ಪನೆಂಬ ಬಾಲಕನಿಗೂ, ನಳನ ಪಾರ್ಟನ್ನು ಆಹ್ಲಾದಕರವಾಗಿ ಮಾಡಿ ತೋರಿಸುವ ಫಕೀರಯ್ಯನೆಂಬ ಬಾಲಕನಿಗೂ ಸುವರ್ಣ ಪದಕಗಳನ್ನು ಬಹುಮಾನ ಮಾಡಿರುವರಲ್ಲದೆ ಇಲ್ಲಿಯ ಸಾಹುಕಾರ್ ಮ॥ ಪತ್ರಿವೀರಪ್ಪನವರೇ ಮೊದಲಾದ ಮಹಾಶಯರು ಸೇರಿ ಈ ಕಂಪನಿ ಪ್ರೊಪ್ರೈಟರ್ ಮತ್ತು ಉತ್ತಮ ಆಕ್ಟರಾದ ಮ॥ ಎಂ. ಚನ್ನಯ್ಯನವರಿಗೆ ಒಂದು ಸುವರ್ಣ ಪದಕವನ್ನು ಬಹುಮಾನವಾಗಿ ಕೊಟ್ಟರು.

ಕುಂದೂರ್‌ಪೇಟೆ.—ಇಲ್ಲಿ ಈಗ್ಗೆ ಸುಮಾರು 3-4 ತಿಂಗಳಿಂದ ಪ್ಲೇಗು ಕಾಲಿರಿಕೊಂಡು ಜನಗಳೆಲ್ಲಾ ಜೋಪಡಿಗಳಲ್ಲಿ ವಾಸಮಾಡಿಕೊಂಡಿದ್ದಾರೆ. ಇನ್ನೂ ಪ್ರತಿ ದಿನವೂ 1-2 ಕೇಸುಗಳು ಅಲ್ಲಲ್ಲಿ ಆಗುತ್ತಲೇ ಇವೆ. ರಾತ್ರಿ ಕಾಲದಲ್ಲಿ ಚಳಿಯ ದೆಸೆಯಿಂದಲೂ, ಚೋರರ ಉಪಾಂತ್ರದಿಂದಲೂ ಜನಗಳು ತುಂಬಾ ತೊಂದರೆಪಟ್ಟುಕೊಂಡಿದ್ದರು. ನಮ್ಮ ಪೋಲೀಸು ಇನ್ಸ್‌ಪೆಕ್ಟರ್ ಮ॥ ಸುಬ್ಬರಾಯರು ರಾತ್ರಿ ಕಾಲದಲ್ಲಿ ಅಲ್ಲಲ್ಲಿ ಇರುವ ಜೋಪಡಿಗಳಿಗೆ ಪೋಲೀಸಿನವರನ್ನು ಕಳುಹಿಸಿ ಬಹಳ ಉಸ್ತುವಾರಿಯಿಂದ ನೋಡಿಕೊಳ್ಳುವುದಲ್ಲದೆ ಪ್ರಜೆಗಳು ಊರಿನಲ್ಲಿ ಮನೆಗಳಲ್ಲಿ ಬಿಟ್ಟು ಬಂದಿರತಕ್ಕ ಮಾಲುಗಳು ಖಲಾಸ್ ಆಗದಂತೆ ರಾತ್ರಿಕಾಲಗಳಲ್ಲಿ ಇನ್ಸ್‌ಪೆಕ್ಟರೇ ಖುದ್ದಾಗಿ ಬಂದು ಉಸ್ತುವಾರಿ ಮಾಡುತ್ತಿದ್ದಾರೆ. ಸುಮಾರು ಒಂದು ವಾರಕ್ಕೆ ಹಿಂದೆ ರಾತ್ರಿಕಾಲದಲ್ಲಿ ಗೇಟಿನ ಬಳಿ ಹಾಕಿಕೊಂಡಿದ್ದ ಜೋಪಡಿಗಳಲ್ಲಿ ಚೋರಿ ಮಾಡುತ್ತಿದ್ದ ಮೂರು ಜನ ಮುಸಲ್ಮಾನರನ್ನು ದಸ್ತಗಿರಿ ಮಾಡಿದಂದಿನಿಂದ ಚೋರರ ಭೀತಿ ತಪ್ಪಿ ಜನಗಳು ಜೋಪಡಿಗಳಲ್ಲಿ ರಾತ್ರಿಕಾಲದಲ್ಲಿ ಸುಖವಾಗಿ ನಿದ್ದೆ ಮಾಡುತ್ತಾರೆ. ಪ್ಲೇಗಿನ ಕಾಲದಲ್ಲಿ ಪ್ರಜೆಗಳ ಮೇಲೆ ಇಷ್ಟು ಕನಿಕರಪಟ್ಟು ರಾತ್ರಿ ಹಗಲೂ ವಿಶ್ರಾಂತಿ ಇಲ್ಲದೆ ಜೋಪಡಿಗಳಿಗೆ ತಾವೇ ಖುದ್ದಾಗಿ ಹೋಗಿ ಪ್ರತಿ ಒಬ್ಬರ ಕ್ಷೇಮ ಸಮಾಚಾರವನ್ನೂ ವಿಚಾರಿಸಿ ಉಸ್ತುವಾರಿ ಮಾಡುತ್ತಿದ್ದ ಇಂಥಾ ಇನ್ಸ್‌ಪೆಕ್ಟರು ಹಿಂದೆ ಯಾರೂ ಬಂದಿರುವುದಿಲ್ಲವೆಂದು ಪ್ರಜೆಗಳೆಲ್ಲರೂ ಇವರನ್ನು ಬಹಳ ಕೊಂಡಾಡುತ್ತಿದ್ದಾರೆ.—ಈಗ್ಗೆ ಸುಮಾರು ಒಂದೂವರೆ ತಿಂಗಳಿಗೆ ಹಿಂದೆ ಇದೇ ಊರಿನ ಸುಮಾರು 18-20 ವರುಷ ವಯಸ್ಸಿನ [illegible] ಮರಿಯಪ್ಪನೆಂಬುವನು ಊಟ ತೀರಿಸಿಕೊಂಡು ಮಧ್ಯಾಹ್ನ ಹುಲ್ಲು ಕೊಯ್ಯಲು ಹೊಲಕ್ಕೆ ಹೋದವನು. ಹೋದ ಒಂದು ಗಂಟೆಗೆಲ್ಲಾ ವಾಪಸು ಮನೆಗೆ ಬಂದು ವಾಂತಿಭೇದಿಯಿಂದ ಬಹಳ ತೊಂದರೆ ಪಡುತ್ತಿದ್ದನು. ಆಗ ಅವನ ಮನೆಯಲ್ಲಿ ಇದ್ದವರು ಹೀಗೆ ಆಗಲು ಕಾರಣವೇನೆಂದು ಕೇಳಲಾಗ ತನ್ನ ಹೊಲದ ಕಡೆ ಸುಮಾರು ಅರ್ಧಸೇರಿನಷ್ಟು ಸಕ್ಕರೆ ಪೊಟ್ಟಣ ಬಿದ್ದಿದ್ದ ಹಾಗೂ, ಅದನ್ನೆಲ್ಲಾ ತಾನೇ ತಿಂದ ಹಾಗೂ ನಂತರ ಸಹಿಸಲಾರದಷ್ಟು ದಾಹವಾದ ಹಾಗೂ, ತನಗೆ ಬೇಕಾದಷ್ಟು ನೀರು ಕುಡಿದ ಹಾಗೂ ಹೇಳಿದನು. ನಂತರ ವೈದ್ಯರುಗಳನ್ನು ಕರೆಸಿ ಯಾವ ಔಷಧಿ ಕೊಟ್ಟರೂ ಫಲಕಾರಿಯಾಗದೆ ರಕ್ತರಕ್ತವಾಗಿ ವಾಂತಿ ಭೇದಿ ಆಗಲು ಶುರು ಆದಾಗ ಡಾಕ್ಟರನ್ನು ಕರೆದುಕೊಂಡು ಬಂದು ತೋರಿಸಿದರು. ಅವರೂ ಸಹ ಏನು ಪ್ರಯತ್ನ ಪಟ್ಟರೂ ಸಾಗದೆ ಮರಿಯಪ್ಪನು ತೀರಿಹೋದನು.

ಹುಣಸೂರು.—ಟೌನ್ನಿನೊಳಕ್ಕೆ ಜನರು ವಾಸಕ್ಕಾಗಿ ಇನ್ನೂ ಬಂದಿಲ್ಲ. ಪ್ಲೇಗ್ ಭೀತಿಯಿಂದ ಜೋಪಡಿಗಳಲ್ಲೇ ಇರುತ್ತಾರೆ. ಇದರ ಉಪಟಳಕ್ಕೆ ಆವರ ಹಾವಳಿ ಬಹು ಹೆಚ್ಚಿಗೆ ಆಗಿರುವುದು.—ಈ ತಾಲ್ಲೋಕಿನ ಬೇರೆ ಬೇರೆ ಗ್ರಾಮಾಂತರಗಳಲ್ಲಿ ಪ್ಲೇಗ್ ವ್ಯಾಧಿಯಿಂದ ಜನರು ತಮ್ಮ ಮನೆ ಮಠಗಳನ್ನು ಬಿಟ್ಟು ಜೋಪಡಿಗಳಲ್ಲಿ ವಾಸ ಮಾಡುವುದನ್ನು ನೋಡುವುದು ತುಂಬಾ ವಿಷಾದಕರವಾಗಿದೆ. ಹೀಗೆ ಪದೇ ಪದೇ ಪ್ಲೇಗ್ ಮೊದಲಾದ ವ್ಯಾಧಿಗಳಿಗೆ ಆಕರವಾಗಿ ಪ್ರಜೆಗಳಿಗೆ ತೊಂದರೆಯನ್ನುಂಟುಮಾಡುತ್ತಿರುವ ಈ ದೊಡ್ಡ ಊರಿನಲ್ಲಿ ಮ್ಯುನಿಸಿಪಲ್ ಏರ್ಪಾಡು ಇದುವರೆಗೆ ಏಕೆ ಮಾಡಿಲ್ಲದಿರುವುದೆಂದೂ, ಮುಂದೆ ಎಷ್ಟರ ಮಟ್ಟಿಗೆ ಇರಬೇಕೆಂದೂ ಯಾರಿಗೂ ಮುಂದಾಲೋಚನೆ ಇರಲಾರದು. ಲೋಕಲ್ ಮತ್ತು ಸರ್ಕಾರಿ ಮೊಬಲಗುಗಳೂ ಅಮಲ್ದಾರರೂ ಟೌನಿನ ಆರೋಗ್ಯ ವಿಚಾರದಲ್ಲಿ ತುಂಬಾ ಸಹಾಯಕರಾಗಿರುತ್ತೆ.—ಕಳೆದ [illegible] ಬೀದಿಯಲ್ಲಿ ಒಕ್ಕಲಿಗ ಜಾತಿಯ ಒಬ್ಬ ಹೆಂಗಸು ಗಂಡುಕೂಸನ್ನು ಹಡೆದು [illegible] ಹೊಳೆಗೆ ಬಿಸಾಡಿ [illegible] ಪೋಲೀಸಿನವರು ಆಕೆಯನ್ನೂ ಸಂಬಂಧಪಟ್ಟವರನ್ನೂ ಪತ್ತೆ ಮಾಡಿ ಹಿಡಿದು ಚಾಲನ್ ಮಾಡಿದ್ದಾರೆ. ಆಕೆಗೆ ಜಾಮೀನ್ ಮೇಲೆ ಬಿಟ್ಟಿರುವರು.—ಕಳೆದ ವಾರ ಯಾರೋ ಅಪ್ಸರೆ ತಿಪ್ಪಿ ರಂಗಿಯನ್ನು ವಿಠಲ ಒಳಕೊಳ್ಳ ಮನ್ನಿನ ಬುಟ್ಟಿ ಮುಂತಾದ ಕೆಲವು ಸಾಮಾನುಗಳನ್ನು ಗಲಿಬಿಲಿ ಮಾಡಿ ರಾತ್ರಿ ಬೈಸಿಕಲ್ ಯಂತ್ರವನ್ನು ಮಾತ್ರ ತೆಗೆದುಕೊಂಡು ಹೋದರು. ಇದೊಂದು ವಿನೋದವಾದ ಚೋರಿ.—ಈ ಊರಿಗೆ 12 ಮೈಲಿ ದೂರದ ಎಡತೊರೆಯಲ್ಲಿ ಒಂದು ಪರಿಷೆ ಪ್ರತಿ ವರುಷದಲ್ಲಿ ನಡೆಯುವುದು. ಆದರೆ ಹಿಂದಿನ ಯಾವ ವರುಷದಲ್ಲೂ ಇಲ್ಲದ ಕೆಲವು ಸಂಗತಿಗಳು ನಡೆದದ್ದನ್ನು ನೋಡಿ ಬಂದ ಜನಗಳು ಹೇಳಿಕೊಳ್ಳುತ್ತಿರುವರು. ಒಬ್ಬನೋ ಇಬ್ಬರೋ ಪೋಲೀಸಿನವರಿದ್ದರು. ಹುಣಸೂರು ಗಾಡಿಗಳಲ್ಲಿ ಕೆಲವರೂ [illegible] ಕೋಲೆಯು ಶಿವಾಚಾರದ ಕೆಲವರಿಗೂ ಗುದ್ದಾಟವಾಯಿತು. ವಿಚಾರಿಸುವವರೇ ಇರಲಿಲ್ಲ. ಹಿಂದೆ ಗೋಲಿ ಕಟ್ಟಲಿಕ್ಕಿರಲಿಲ್ಲ. ಈ ವರುಷ ಗೋಲಿಕಟ್ಟಿದ್ದರು. ಅಲ್ಲಿಗೆ (ದೇವಸ್ಥಾನಕ್ಕೆ) ಹೋಗುವವರಿಂದ ಅಷ್ಟಷ್ಟು ರುಸುಂ ವಸೂಲ್ಮಾಡುತ್ತಿದ್ದರು. ಅಂಗಡಿ ಮುಂಗಟ್ಟುಗಳವರಿಂದ ಪ್ರಯಾಣದ ಸರಕಾರಿ ಕಂದಾಯ ಅಲ್ಲದೆ ಸ್ಥಳದ ಬಾಡಿಗೆಯನ್ನು ವಸೂಲ್ಮಾಡುತ್ತಿದ್ದರು. ನಿಪಟಾತ್ರಕ್ಕೆ ಒಂದು ಬಳೇ ಕೋಗದ ಮೇಲೆ ಹೆಸರು, ಊರು, ಕಸಬು, ಕೊಟ್ಟ ಬಾಡಿಗೆ ಮೊಬಲಗು ಎಂದು ದಾಖಲಾತಿ ಕೊಡುತ್ತಿದ್ದರು. ಇದೇನು ಮುಜರಾಯಿ ಇಲಾಖೆಯ ಏರ್ಪಾಡೋ ಇಲ್ಲವೋ ತಿಳಿಯದು. ತನಿಖೆಯಿಂದ ಕ್ರಮಪಡಿಸಬೇಕಾಗಿದೆ.—ದೊರೆಹಳ್ಳಿಯ ಕೆಲವು ಗ್ರಾಮಗಳಲ್ಲಿ ಕೆಲವು ಜನರು ಯುದ್ಧದ ವಿಚಾರವೆಂದು ಹಳ್ಳಿಗರು ಜನರನ್ನು ಹೆದರಿಸಿ ಹಣ ವಸೂಲ್ಮಾಡುತ್ತಿರುವರೆಂಬ ಪುಕಾರುಂಟು. ಸರ್ಕಾರದವರು ಇದನ್ನು ವಿಚಾರಿಸಿ ಇನ್ನು ಮುಂದೆ ನಡೆಯದಂತೆ ಬಂದೋಬಸ್ತಾಗಿ ತೀರಿಸುವುದು.—ಮೂರು ವರುಷಗಳಿಂದಲೂ ಹುಣಸೂರಿನಲ್ಲಿ ಪೋಸ್ಟ್ ಮಾಸ್ಟರಾಗಿದ್ದ ಮ॥ ಕೃಷ್ಣಮೂರ್ತಿಯವರಿಗೆ ಈಗ ತಾನೇ ಬಡ್ತಿ ಮೇಲೆ ಮಡಿಕೇರಿಗೆ ವರ್ಗವಾಗಿದೆ. ವರ್ಗವಾಗಿದಕ್ಕೆ ಅನೇಕರು ವಿಷಾದಿಸುವರು. ಇವರು ಇಲ್ಲಿ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿಯೂ, ಸಿನಿಯರಾಗಿಯೂ, ಉಗಾದ್ಯರಾಗಿಯೂ, ಸಮರ್ಥರಾಗಿಯೂ ಇದ್ದರು. ಅವರ ಎಪಜಿಗೆ ಮೈಸೂರಿಂದ ಒಬ್ಬರು ಬಂದು ಆಗಲೇ ಚಾರ್ಜು ತೆಗೆದುಕೊಂಡರು.

ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು.—ಈ ಗ್ರಾಮದಲ್ಲಿ ಒಂದು ವಾರದ ಲಾಗಾಯತು ಪ್ಲೇಗ್ ರೋಗದಿಂದ ಜನಗಳು ಸಾಯುತ್ತಿದ್ದರು. ಈ ವಿಷಯವನ್ನು ಡಾಕ್ಟರ್ ವಿ. ಮುತ್ತುಸ್ವಾಮಿದಾಸ್‌ರವರು ತಿಳಿದು ತಾ. 18 ಮತ್ತು 21 ರಲ್ಲಿ ಗ್ರಾಮಕ್ಕೆ ಬಂದು ಜನಗಳಿಗೆ ಪ್ಲೇಗ್ ರೋಗದಿಂದ ತಪ್ಪಿಸಿಕೊಳ್ಳಲು ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕಾದದ್ದೆಂದು ಉಪಾಯವೆಂದು ಪ್ರೋತ್ಸಾಹ ಕೊಟ್ಟು 686 ಪ್ರಜಾ ಸಂಖ್ಯೆಯಲ್ಲಿ 350 ಮಂದಿಗೆ ಇನಾಕ್ಯುಲೇಷನ್ ಮಾಡಿದರು. ತಹಶೀಲ್ದಾರ್ ಲೇಕ್ಷ್ಮಣರೊಡನೆ ಗ್ರಾಮವನ್ನು ಪ್ರವೇಶಿಸಿ ಪ್ರತಿ ಸಂದನ್ನೂ ಪರೀಕ್ಷಿಸಿ ಗ್ರಾಮ ಸ್ವಚ್ಛಗೊಳ್ಳುವ ವಿಚಾರದಲ್ಲಿ ಪಟೇಲರಿಗೂ, ಪ್ಲೇಗ್ ಪ್ರಾರಂಭವಾದಾಗ ಜನರ ಆರೋಗ್ಯದ ವಿಚಾರದಲ್ಲಿಯೂ, ಮತ್ತು ಇಲಿ ಸತ್ತಾಗ ಮನೆಯನ್ನು ಶುದ್ಧಿಮಾಡುವ ವಿಷಯದಲ್ಲಿಯೂ ಪ್ರಜೆಗಳಿಗೆ ತಿಳುವಳಿಕೆ ಕೊಟ್ಟು ಹೋದರು. ಯಾವ ವಿಧದಲ್ಲಿಯೂ ಮುಂದುವರಿಯದೆ ಅನಾಗರಿಕತೆಯೂ ಅನಕ್ಷರತ್ವವೂ ಇರುವ ಈ ಗ್ರಾಮದಲ್ಲಿ ಮುಕ್ಕಾಲು ಭಾಗ ಜನಗಳು ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದಕ್ಕೆ ಡಾಕ್ಟರ್ ಮುತ್ತುಸ್ವಾಮಿದಾಸರ ಜನಾನುರಾಗವೂ, ವಿನಯವೂ, ಜನರ ಆರೋಗ್ಯ ವಿಷಯದಲ್ಲಿ ಅವರಿಗಿರುವ ಪ್ರೀತಿಯೂ ಕಾರಣವಾಗಿರುತ್ತವೆ.

FREE! Do you wish to know "How to Make the Best Quality ROSE, JASMINE, LILY, LOTUS & Sweet Scented Hair Oils at a very cheap cost at your own home? If so, please write us at once and mention this paper. [263-6]

S. PAUL & Co., *Perfumers,*
4, Hospital Street, Dharamtola, **Calcutta.**

ಅರ್ಧನೋಟು ಕಳೆದುಹೋಯಿತು.—ಬಹುಮಾನ.

ತುಲ್ಲಹಳ್ಳಿ ಅಂಚೆಯಿಂದ ದೊಡ್ಡಬಳ್ಳಾಪುರಕ್ಕೆ ಬರುವಾಗ ನನ್ನ ಜೇಬಿನ ಬಿ. ಸಿ. 3-0222 ನಂಬರ್ ಮತ್ತು 6-4-1911 ನೇ ತಾರೀಖುಳ್ಳ 50 ರೂಪಾಯಿನ ಎರಡುಭಾಗದ ಅರ್ಧನೋಟು ದಾರಿಯಲ್ಲಿ ಕಳೆದುಹೋಯಿತು. ಅದನ್ನು ಪತ್ತೆಮಾಡಿ ತಂದುಕೊಡುವವರಿಗೆ 3 ರೂಪಾಯಿ ಬಹುಮಾನ ಕೊಡುವೆನು. ನನ್ನ ವಿಳಾಸ—ಬೆಂಗಳೂರು ತಾಲ್ಲೂಕು ಹೆಸರಘಟ್ಟ ಹೋಬಳಿ ಬ್ಯಾತ ಗ್ರಾಮದ ಒಕ್ಕಲಿಗರ ಚನ್ನರಾಯಪ್ಪನ ಮಗ ಚನ್ನತಿಮ್ಮಯ್ಯ [18-1]

OFFICE OF THE MILITARY SECRETARY
To His Highness the Maharaja of Mysore.
NOTICE.
Dated, Bangalore 17th January, 1916.

Thirty seven ponies of the Mysore Imperial Service Transport Corps, the property of Mysore Government, will be sold by public auction on Saturday the 5th February 1916, at 8-30 A.M., near the Queen's Statue, Cubbon Part, Bangalore.

Terms of sale:—Strictly cash.

(Sd.) C. Venkat Sao,
[23-1] *Office Assistant to Mily. Secy. to H.H. the Maharaja (In charge).*

"SENPAPOD"—The latest Laxative. A highly concentrated essence from the Senna Pod, combined with aromatics etc: Rs. 1/4 per bottle of 60 doses, 12 annas per bottle of 30 doses. *Pleasant, Perfect, Purgative.* [17-1]

"ALETRIS COMPOUND."—Tones up the system and has a direct action on the whole productive area. No woman who values relief from pain, can afford to be without ALETRIS COMPOUND, Rs. 1/4 per bottle of 32 doses. Both the above are made by qualified English Experts at Mysore Pharmaceuticals Ltd. Bangalore, and can be obtained from Messrs. J. B. Forster & Co., Bangalore.

ಗೃಹಕೃತ್ಯದ ನೋಟೀಸು.

ಹೊಳೆನರಸೀಪುರದ ಕಸಬಾದಲ್ಲಿರುವ ತಿರುಪತಿ ಗುರುರಾಜಾಚಾರ್ಯರ ಮಗ ನರಸಿಂಹಮೂರ್ತ್ಯಾಚಾರ್ಯನು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ—ನನ್ನ ಅವಿಭಕ್ತ ಸಹೋದರನಾದ ಜಗನ್ನಾಥಾಚಾರ್ಯನ ಹೆಂಡತಿ ..ನಕಬಾಯಮ್ಮನು ಇದುವರೆಗೆ ನನ್ನ ಮನೆಯಲ್ಲಿಯೇ ಇದ್ದು, ಕೆಲವರ ದುರ್ಬೋಧನೆಯಿಂದ ಅಪುತ್ರವತಿಯಾದ ಈಕೆಯು ಕೆಳಗೆ ಕಂಡ ಅವಿಭಕ್ತ ಕುಟುಂಬಕ್ಕೆ ಸಂಬಂಧಪಟ್ಟ ಸ್ವತ್ತುಗಳನ್ನು ಅಕಾರಣವಾಗಿ ಪರಾಧೀನ ಮಾಡುವಂತೆ ಕೇಳುತ್ತೇನೆ. ಹಿಂದೂ ಲಾ ಪ್ರಕಾರ ಪರಾಧೀನ ಮಾಡಲು ಯಾವ ಹಕ್ಕೂ ಇಲ್ಲದ ಈಕೆಯಿಂದ ಯಾರಾದರೂ ಕ್ರಯ, ಭೋಗ್ಯ, ಆಧಾರಾದಿಗಳನ್ನು ಮಾಡಿಕೊಂಡರೆ ಊರ್ಜಿತವಾಗುವುದಿಲ್ಲವೆಂದು ಎಚ್ಚರಿಸಿರುತ್ತೇನೆ ಷೆಡ್ಯೂಲ್.—(1) ಹೊಳೆನರಸೀಪುರ ತಾ॥ ಹಳೆಕೋಟೆ ಹೋ॥ ಉತ್ತರ ನಾಲಾ ಬೇಚಿನಹಳ್ಳಿ ಹಂತದಲ್ಲಿ ಸರ್ವೆ ನಂ 18, ಎಕರೆ 1-35, ಆಕಾರ ರೂ 7-6-0; (2) ಸರ್ವೆ ನಂ. 21 ನೇ ಪೈಕಿ 2 ನೇ ಫೋಡು ಎಕರೆ 1-3, ಆಕಾರ ರೂ. 7-12-0 ಉಳ್ಳ ಎರಡು ಜಮೀನುಗಳು. [15-2] ತಿರುಪತಿ ನರಸಿಂಹಮೂರ್ತ್ಯಾಚಾರ್ಯ.

ನೋಟೀಸ್.

ದಿ ಯೂನಿವರ್ಸಲ್ ಎಸ್ಸ್ಯೂರೆನ್ಸ್ ಕಂಪನಿ, ಕಲ್ಕತ್ತಾ.

ಈ ಕಂಪನಿ ಪಾಲಸಿ ಹೋಲ್ಡರುಗಳು ತಿಳಿಯಬೇಕಾದ ಅಂಶಗಳು:—ಈ ಕಂಪನಿಯು ಮದುವೆ ಶಾಖೆಯಲ್ಲಿ ಲಗ್ನವಾದ ಮೆಂಬರುಗಳಿಗೆ ಕೊಡ್ಡ ಕಂಪನಿ ರೂಲ್ಸ್ ಅನುಸರಿಸಿ ಲಗ್ನಕ್ಕೆ ಪೂರ್ವ ಯಾ ಅನಂತರ ಬೋನಸ್ಸು ಹಣ ಪಾವತಿ ಮಾಡತಕ್ಕ ಸ್ವಾತಂತ್ರ್ಯವು ಈ ಮೊದಲು ಕಂಪನಿಯಿಂದ ಹೊರತಾಗಿ ನಮ್ಮಲ್ಲೇ ಉಳಿದಿತ್ತು. ಹಾಗೂ ಪಾಲಿಸಿ ಹೋಲ್ಡರುಗಳಿಗೆ ಅನುಕೂಲವಾಗ ಬಹುದಾದ ರೂಲ್ಸ್‌ಗಳು ಈಚೆಗೆ ಏರ್ಪಾಟಾಗುತ್ತಾ ಬಂದಿರುವುದರಿಂದ ನಾವು ಈ ವರೆವಿಗೂ ಕಂಪನಿಗೂ ಮತ್ತು ಪಾಲಿಸಿ ಹೋಲ್ಡರುಗಳಿಗೂ ಮಧ್ಯದಲ್ಲಿ ಉಭಯತ್ರರಿಗೂ ಸಾಕಾದಷ್ಟು ನಂಬಿಕೆಯಿಂದಲೂ ಮುತುವರ್ಜಿಯಿಂದಲೂ ಕೆಲಸ ಮಾಡುತ್ತಾ ಬಂದು, ಈಚೆಗೆ ಮೇಲಿನ ಸ್ವಾತಂತ್ರ್ಯ ನಮ್ಮಿಂದ ತಪ್ಪಿದ ಆಗಾಯ್ತು ಕೆಲವು ಹಣ ಕಾರ್ಲಗಳಿಗೆ ಬಾರದೆ ಇರುವುದು ನಮ್ಮ ಅಶ್ರದ್ಧೆಯಾಗಲಿ, ಲೋಪವೇ ಆಗಲಿ ಯಾವದೂ ಇಲ್ಲ. ಪಾಲಿಸಿ ಹೋಲ್ಡರುಗಳಿಗೆ ನಾವು ಕೆತ್ತ ಹಣವನ್ನು ಪಡೆಯತಕ್ಕ ಭಾಗದಲ್ಲಿ ಉದ್ದೇಶ್ಯದಂತೆ ಯಾವ ಕಾಲದಲ್ಲಿಯೂ ಎಲ್ಲಾ ಕಾರಣಗಳಿಂದಲೂ ಕಂಪನಿಯಿಂದಲೇ ಹೊಂದಲು ಪೂರ್ಣ ಸ್ವತಂತ್ರರಿದೆ. ನಾವು ಹಣವನ್ನು ವಸೂಲು ಮಾಡಿಕೊಳ್ಳುವ ಜವಾಬ್ದಾರಿಯನ್ನು ಕಳೆದುಕೊಂಡಿರುತ್ತೇವೆ. ನಮ್ಮ ಚೀಫ್ ಏಜಂಟರವರ ಹೀಳಿ ಮೇರೆ ಕಂಪನಿಗೆ ವಸೂಲ್ ಬರತಕ್ಕ ಹಣವನ್ನು ಮಾತ್ರ ವಸೂಲ್ ಮಾಡಿ ಕಳುಹಿಸುವ ಕೆಲಸ ಮಾತ್ರ ನಮ್ಮದಾಗಿರುತ್ತೆ. ಈ ಎಲ್ಲಾ ಭಾಗಗಳ ಪರಿಹಾರವೂ ಕಂಪನಿಯಿಂದಲೇ ಆಗತಕ್ಕದ್ದಾಗಿದೆ. ತಾ. 20-1-1916 [20-1]

ಯು. ವೆಂಕಟಸುಬ್ಬಯ್ಯ, ಏಜಂಟ್, ತೀರ್ಥಹಳ್ಳಿ.

ಜನವರಿ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಈವೇ ಜನವರಿ ತಿಂಗಳದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ 1-14-0 ರವಿಗೆ ಕೊಡಲಾಗುವುದು. [11-34]



ವಿಳಾಸ—ವಿ. ಕೆ. ಕಂಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಗೋರೋಚನ ವಟಿ.—2-3 ಮಾತ್ರೆಗಳು ಮಕ್ಕಳಿಗೆ ಹಿಂಸೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಆ, 6 ಶೀಸೆಗೆ 1 ರೂಪಾಯಿ.

2. ಜ್ವರದಮಾತ್ರೆ.—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ. 24 ಮಾತ್ರೆ 8 ಆ, 6 ಶೀಸೆಗೆ 2½ ರೂ, 12 ಶೀಸೆಗೆ 4½ ರೂ.

3. ಬಾಧಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ನಂಬಿಗೆಯಿಂದ ಬೇಗ ಗುಣಮಾಡುತ್ತೆ. ಡಬ್ಬಿಗೆ 4 ಆ, 6 ಕ್ಕೆ 1 ರೂ, 12 ಕ್ಕೆ 2½ ರೂ

[126-31] ನಮ್ಮ ವಿಳಾಸ,—ಪಂಡಿತ್ ಎಸ್. ಗರಳಪುರಿ, ಮೈಸೂರು

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ ಸೂಚರಿಗಳನ್ನೂ, ದರಗಳನ್ನೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply:—MANAGER, WOOL WORKS,
[188-19] GIRLS' INDUSTRIAL SCHOOL, HASSAN.

ಸ್ವದೇಶ ಕೈಗಾರಿಕೆಗಳು.

ಅನೇಕ ಸ್ಥಳಗಳಲ್ಲಿ ಕೈಗಾರಿಕೆಗಳ ಕಾರ್ಖಾನೆಗಳನ್ನೂ, ಲಂಟಾನಾ ಬೂದಿಯಿಂದ ಗೊಬ್ಬರವನ್ನು ತಯಾರಿಸ ಬಹುದಾದ ಕಾರ್ಖಾನೆ ಗಳನ್ನೂ ಏರ್ಪಡಿಸುವ ಉದ್ದೇಶದಿಂದ ನಮ್ಮ ದೇಶಬಾಂಧವರಿಗೆ ಅರಿಕೆ ಮಾಡಿಕೊಳ್ಳುವುದೇನಂದರೆ ನಿಮ್ಮ ಸ್ಥಳದಲ್ಲಿ ಯಾವುದಾದರೂ ಕೈಕಾರಿಕೆಯನ್ನ ಆಗಲಿ ಗೊಬ್ಬರದ ಕಾರ್ಖಾನೆಯನ್ನೇ ಆಗಲಿ ಇಡಬೇಕೆಂದು ಯಾರಿಗಾದರೂ ತಾತ್ಪರ್ಯವಿದ್ದರೆ ಅಲ್ಲಿನ ಮುಖ್ಯಾಂಶದ ಕಲೆತು ಮಾತನಾಡಿಕೊಂಡು ನನಗೆ ತಿಳಿಸಿದರೆ ನಾನು ಬಂದು ಏರ್ಪಾಡನ್ನು ತಯಾರಿಸುವ ರೀತಿಯನ್ನು ತೋರಿಸಿ ಅನುಭವದಿಂದ ಕಾರ್ಖಾನೆಯನ್ನು ಏರ್ಪಡಿಸುವೆನು ಕೆ ಆರ್. ಚಕ್ರವರ್ತಿ,

[26-1] ಏಜಂಟ್, ನ್ಯೂ ಸ್ವದೇಶೀ ಟ್ರೇಡಿಂಗ್ ಕಂಪನಿ, ಬೆಂಗಳೂರು ಸಿಟಿ

ಹೊಸ ನಮೂನೆ ಜವಳಿ.

1. ಹರಕ್ ಬಲುವೆ ಕೇವಲೀರುಗಳು.
2. ಧಡೂತಾದ ಗಟ್ಟಿಬಣ್ಣದ ಚಕ್ಕಗಳು
3. ಬಾಳಿಕೆಬರುವ, ಗಂಜಿಯಿಲ್ಲದ ಪಂಚೆಗಳು
4. 54 ಅಂಗುಲ ಅಗಲ, 8 ಮೊಳ ಉದ್ದದ ಪಂಚೆಗಳು
5. ಟ್ವೀಡ ಮತ್ತು ಫ್ಲಾನೆಲ್ ನಮೂನೆ ಗಟ್ಟಿಬಣ್ಣದ ಕೋಟಿನ ಬಟ್ಟೆ 12 ಗಜದ ಥಾನುಗಳು.
6. ಅಂಚಾದದ ಬಣ್ಣದ ಸೂಟಿನ ಬಟ್ಟೆಗಳು.
7. ಸರಹದಾರಿ ಹೊದಿಯುವ ವಿಲಾಯತಿ ಕಂಬಳಿಗಳು.
8. 7¼, 8, 8½ ಗಜದ ಜಾತರಿ ರಂಗಿನ ನೂಲಿನ ಸೀರೆಗಳು.
9. ಬೆಂಕೆಯುಲ್ಲದ, ಬುದ್ಧಿವಂದಿದ ಹತ್ತಿಯು ತುಪ್ಪದ ಸಣ್ಣ ಬಟ್ಟೆಗಳು.

ಬೆಲೆ ಸುಲಭ, ವ್ಯಾಪಾರಿಗಳಿಗೆ ಹೆಚ್ಚು ರಿಯಾಯ್ತಿ [55-4]

ಇಂಪೀರಿಯಲ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್,
150, ಕಿಲಾರಿ ರೋಡ್ (ಕುಂಬಾರಪೇಟೆ), ಬೆಂಗಳೂರು ಸಿಟಿ.

ನೂತನ ಸ್ಪ್ರಿಂಗಿನ ಜಾಲಪೆಟ್ಟಿಗೆ ಕ್ರಯ 0-8-0

ಈ ಜಾಲ ಪೆಟ್ಟಿಗೆಯಲ್ಲಿ ಹಣವನ್ನಾಗಲಿ ಆಭರಣವನ್ನಾಗಲಿ ಇಟ್ಟು ಮುಚ್ಚಿದ ಮೇಲೆ ಇತರರು ಪೆಟ್ಟಿಗೆಯನ್ನು ತೆರೆದರೆ ಆಭರಣವಾಗಲಿ ಹಣವಾಗಲಿ ಮಾಯವಾಗುತ್ತೆ. ಬೇಕಾದಾಗ ಇಟ್ಟಿರುವವರು ಮಾತ್ರ ಪೆಟ್ಟಿಗೆಯನ್ನು ತೆರೆದು ಇಟ್ಟ ಪದಾರ್ಥವನ್ನು ಸುಲಭವಾಗಿ ಪಡೆಯಬಹುದು. ಇದು ನಮ್ಮಲ್ಲಿ ಸ್ವಲ್ಪವೇ ಇದೆ ಬೇಕಾದವರು ಜಾಗ್ರತೆ ದರಖಾಸ್ತು ಕಳುಹಿಸಿ. ಇದರ ಸಂಗಡ ಸುಂದರವಾದ ಕ್ಯಾಲೆಂಡರ್ ಉಚಿತವಾಗಿ ಕಳುಹಿಸುತ್ತೇವೆ.

ನೊಗಸಾದ ಜಪಾನ್ ದೇಶದ ರೇಷ್ಮೆ ಪಂಚೆ	ಕ್ರಯ ರೂ.	1- 4-0
ಚಿನ್ನದ ಮುಲಾಮಿನ ಸುಂದರವಾದ ಡಾಬು	,, ,,	2- 8-0
ಬಹಳ ನೊಗಸಾದ ಮಲ್ಲಿಗೆ ಹೂಗಳ ಸೀರೆ	,, ,,	2- 4-0
ಚಂದ್ರಕಾಂತಿ ಸುವಾಸನೆ ಪರಿಮಳಸ್ಸಲ ಸೀಸೆ 1ಕ್ಕೆ	,, ,,	0-12-0

ಕೋರುವವರಿಗೆ ಮಾದರಿ ಸೀಸೆಯನ್ನು ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ.—ಎಸ್. ಸಂಜೀವರಾವ್ ಕಂಪನಿ,
[11.2] ನಂ. 33, ಪೋಸ್ಟ್ ಆಫೀಸ್ ಬೀದಿ, ಮದರಾಸ್

ಪರೀಕ್ಷೆಗಾಗಿ ಮುಫತ್ತು.

ನಮ್ಮ "ಜೀವಾಕಾ" ಎಂಬುವದು ಕಲೆನೋವನ್ನು ತತ್‌ಕ್ಷಣವೇ ನಿಲ್ಲಿಸುತ್ತೆಂದು ಬಹು ಕಾಲದಿಂದಲೂ ಬರ್ಮಾದಲ್ಲಿ ಖ್ಯಾತಿಹೊಂದಿದೆ ಬಹಳ ಜನರ ಆಶ್ರಯವನ್ನು ಸಂಪಾದಿಸಿಕೊಂಡಿದೆ. ಆದ್ದರಿಂದದ್ದೆಂದೂ ಎಲ್ಲಾ ತರದ ಕಲೆನೋವುಗಳನ್ನೂ ಉತ್ತರ ಕ್ಷಣದಲ್ಲೇ ಗುಣಮಾಡತಕ್ಕದ್ದೆಂದೂ ಕೇಳದೇನ ಸರ್ಟಿಫಿಕೇಟುಗಳನ್ನು ಅನೇಕವಾಗಿ ಸಂಪಾದಿಸಿಕೊಂಡಿದೆ—ಈ ಔಷಧವನ್ನು ಹಿಂದುಸ್ಥಾನ, ಸಿಲೋನ್ ಮತ್ತು ಇತರ ದೇಶಗಳಲ್ಲಿ ಪ್ರಚುರಕ್ಕೆ ತರಬೇಕೆಂಬ ಉದ್ದೇಶದಿಂದ ನೀವು ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿಯೂ ಸಂಪೂರ್ಣವಾಗಿಯೂ ನಮಗೆ ತಿಳಿಸಿದರೆ ನಿಮಗೆ ನಾವು ಬಿಟ್ಟಿಯಾಗಿ ಎರಡು ಸಣ್ಣ ಪೊಟ್ಟಣಗಳನ್ನು ಕಳುಹಿಸುವೆವು. ಅದನ್ನು ಉಪಯೋಗಿಸಿದರೆ ಅದರ ಗುಣ ನಿಮಗೇ ಮುಂದಕ್ಕಾಗುತ್ತದೆ.—ಈ ಕಲೆನೋವಿನ ಔಷಧಿಯನ್ನು ದೊಡ್ಡವರಿಗೆ ಉಪಯೋಗಿಸುವಷ್ಟು ಹೆಚ್ಚಾಗಿ ಮಾಡಿದೇವೆ. ಅದನ್ನು ಪೊಟ್ಟಣಗಳಾಗಿಯೂ ಬಿಲ್ಲೆಗಳಾಗಿಯೂ ತಯಾರುಮಾಡಿರುವೆವು. ಅಂಥಾ 12 ಪೊಟ್ಟಣಗಳಾಗಲಿ, 12 ಬಿಲ್ಲೆಗಳಿರುವ ಒಂದು ಸೀಸೆಗಾಗಲಿ ಕ್ರಯ ರೂಪಾಯಿ 1-0-0.

Address—Francis Medical Hall,
Manufacturing Chemists, Myanaung, Burma.

ನಮ್ಮ ವಿಳಾಸ—ಫ್ರಾನ್ಸಿಸ್ ಮೆಡಿಕಲ್ ಹಾಲ್,
[19-1] ಮಯಾನಾಂಗ್, ಬರ್ಮಾ.

ಪ್ರಕಟನೆ.

ಶಿವಮೊಗ್ಗದಲ್ಲಿ ಪ್ರಬುದ್ಧರಾದ ಹೆಂಗಸರುಗಳಿಗೆ ಅವರವರ ಮನೆಗಳಲ್ಲಿ ಪಾಠ ಹೇಳಿಕೊಡಲು (to hold home education classes for women) ಉಪಾಧ್ಯಾಯಿನಿಯು ಬೇಕಾಗಿದೆ. ಅವರಿಗೆ ತಿಂಗಳಿಗೆ 15 ರೂಪಾಯಿ ಸಂಬಳವನ್ನು ಮತ್ತು 10 ರೂಪಾಯಿ ಗಾಡೀ ಬಾಡಿಗೆಯನ್ನೂ ಕೊಡುತ್ತೇವೆ. ಇಷ್ಟಪಡುವರು ಶಿವಮೊಗ್ಗ ಡಿಸ್ಟ್ರಿಕ್ಟ್ ಎಜುಕೇಷನಲ್ ಕಮಿಟಿ ಸೆಕ್ರೆಟರಿಯವರಿಗೆ ದರಖಾಸ್ತು ಕಳುಹಿಸುವುದು. [25-1]

ಇಸ್ತಿಹಾರ್.

ಶ್ರೀರಂಗಪಟ್ಟಣದ ಮುನ್ಸಿಫ್ ಕೋರ್ಟಿನಲ್ಲಿ.

1915-16 ನೇ ಇಸವಿ ಅಸಲ್ ನಂಬರು-745.

ವಾದಿ —1. ಗಂಜಾಂನಲ್ಲಿರುವ ದೇವತಾ ಹನುಮಂತಶೆಟ್ಟಿ, 2. ಶ್ರೀರಂಗಪಟ್ಟಣದಲ್ಲಿರುವ ಜವಳಿ ಶ್ರೀನಿವಾಸಶೆಟ್ಟಿ, 3. ಶ್ರೀರಂಗಪಟ್ಟಣದ ತೊಳಸಿ ಕೃಷ್ಣಶೆಟ್ಟಿ.

ಪ್ರತಿವಾದಿ —ಶ್ರೀರಂಗಪಟ್ಟಣದ ಕಸಬಾದಲ್ಲಿರುವ ಕೊಪ್ಪರಂ ವೀರಪ್ಪಶೆಟ್ರ ಮಗ ಕೊಪ್ಪರಂ ನಂಜುಂಡಶೆಟ್ಟಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಶ್ರೀರಂಗಪಟ್ಟಣದಲ್ಲಿರುವ ಜನಾರ್ದನಸ್ವಾಮಿ ಶ್ರೀ ನಗರೇಶ್ವರ ಸ್ವಾಮಿ ದೇವರ ಭಂಡಾರಕ್ಕೆ ಸಂಬಂಧಪಟ್ಟ ವೈಶ್ಯರ ಕುಲದ ಹತ್ತೂ ಜನಗಳ ಬಾಬ್ತು ಮೊಬಲಗಿನಲ್ಲಿ ಮೇಲ್ಕಂಡ ಪ್ರತಿವಾದಿಯು 14-10-1901 ರಲ್ಲಿ ಭಾಷಾ ಪತ್ರ ಮೂಲಕ ಪಡೆದ ಮೊಬಲಗು ಬಡ್ಡಿ ವಸೂಲ್ ಚಾತಾ ಬಾಕಿ 500-0-0 ರೂಪಾಯಿಗಳು ಮೇಲ್ಕಂಡ ಪ್ರತಿವಾದಿಯಿಂದ ಬರಬೇಕೆಂದು ವಾದಿಯು ದಾವಾ ದಾಖಲ್ಮಾಡಿ ಇರುವದರಿಂದ ಇದರಲ್ಲಿ ಇಂಟರೆಸ್ಟು ಇರತಕ್ಕ ವಾದಿಯಾಗಿ ಸೇರಲು ಇಷ್ಟವುಳ್ಳವರೆಲ್ಲರೂ 1916 ನೇ ಇಸವಿ ಫೆಬ್ರವರೀ ಮಾಹೆಯೊಳಗೆ 7ನೇ ತಾರೀಖು ದಿವ 11 ಘಂಟೆಗೆ ಈ ಕೋರ್ಟ್ ರೂಬರೂಬು ಹಾಜರಾಗಿ ತಿಳಿಸತಕ್ಕದ್ದೆಂದು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿದೆ. ತಪ್ಪಿದರೆ ರೂಲ್ಸು ಮೇರೆ ನಡಿಸಲಾದೀತು

1916 ನೇ ಇಸವಿ ಜನವರಿ 22 ನೇ ತಾರೀಖಿನ ದಿವಸ ಈ ಕೋರ್ಟಿನ ಮೊಹರ್ ಮತ್ತು ದಸ್ತಖತ್ತಿನೊಡನೆ ಕೊಡೋಣಾಗಿದೆ

(ಬೈ ಆರ್ಡರ್)

[24-1] ಎಚ್. ಕೃಷ್ಣ ಅಯ್ಯಂಗಾರ್, ಹೆಡ್ ಮುನ್ಷಿ.

ಇಸ್ತಿಹಾರ್.

ಶ್ರೀರಂಗಪಟ್ಟಣದ ಮುನ್ಸಿಫ್ ಕೋರ್ಟಿನಲ್ಲಿ.

1915-16 ನೇ ಇಸವಿ ಅಸಲ್ ನಂಬರು-758.

ವಾದಿ—1 ಶ್ರೀರಂಗಪಟ್ಟಣದ ತಾ॥ ಗಂಜಾಂನಲ್ಲಿರುವ ದೇವತಾ ಹನುಮಂತಶೆಟ್ಟಿ, ಶ್ರೀರಂಗಪಟ್ಟಣದಲ್ಲಿರುವರು—2. ಜವಳಿ ಶ್ರೀನಿವಾಸಶೆಟ್ಟಿ, 3. ತೊಳಸೀ ಕೃಷ್ಣಶೆಟ್ಟಿ.

ಪ್ರತಿವಾದಿ—ಶ್ರೀರಂಗಪಟ್ಟಣದ ಕಸಬಾದಲ್ಲಿರುವ ವೈಶ್ಯರ ಚೆನ್ನ ಚೆಲುವಶೆಟ್ರ ಮಗ ರಾಮಶೆಟ್ಟಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ—

ಮೇಲ್ಕಂಡ ನಂಬರಿನಲ್ಲಿ ವಾದಿಯು ಶ್ರೀರಂಗಪಟ್ಟಣದ ಶ್ರೀಜನಾರ್ದನಸ್ವಾಮಿ ಶ್ರೀ ನಗರೇಶ್ವರಸ್ವಾಮಿ ದೇವರುಗಳ ಭಂಡಾರಕ್ಕೆ ಸಂಬಂಧಪಟ್ಟ ವೈಶ್ಯ ಕುಲದ ಹತ್ತು ಜನಗಳ ಬಾಬ್ತು ಮೊಬಲಗಿನಲ್ಲಿ ಪ್ರತಿವಾದಿಯು 20-12-1906 ನುಕರ್ ಭಾಷಾ ಪತ್ರದ ಮೇರೆ ಪಡೆದ ಮೊಬಲಗು ಬಡ್ಡಿ ವಸೂಲ್ ಚಾತಾ ಬಾಕಿ 60-0-0 ರೂಪಾಯಿಗಳನ್ನು ಪ್ರತಿವಾದಿಯಿಂದ ಬರಮಾಡಿಸಿಕೊಡಬೇಕೆಂದು ವಾದಿಯು ದಾವಾ ದಾಖಲ್ಮಾಡಿರುತ್ತಾರಾಗಿ ಈ ಮೊಕದ್ದಮೆಯಲ್ಲಿ ಇಂಟರೆಸ್ಟು ಇರತಕ್ಕ ವಾದಿಯಾಗಿ ಸೇರಲು ಅಪೇಕ್ಷೆಯುಳ್ಳವರು 1916 ನೇ ಇಸವಿ ಫೆಬ್ರವರಿ ಮಾಹೆ 10 ನೇ ತಾರೀಖು ದಿವ 11 ಘಂಟೆಗೆ ಈ ಕೋರ್ಟಿನ ರೂಬರೂಬು ಹಾಜರಾಗಿ ತಿಳಿಸತಕ್ಕದ್ದಿದೆ ಎಂದು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿದೆ. ತಪ್ಪಿದರೆ ರೂಲ್ಸು ಮೇರೆ ನಡಿಸಲಾದೀತು.

1916 ನೇ ಇಸವಿ ಜನವರಿ 22 ನೇ ತಾರೀಖಿನ ದಿವಸ ಈ ಕೋರ್ಟಿನ ಮೊಹರ್ ಮತ್ತು ದಸ್ತಖತ್ತಿನೊಡನೆ ಕೊಡೋಣಾಗಿದೆ

(ಬೈ ಆರ್ಡರ್)

[24-1] ಎಚ್. ಕೃಷ್ಣ ಅಯ್ಯಂಗಾರ್, ಹೆಡ್ ಮುನ್ಷಿ.

ಇಸ್ತಿಹಾರ್.

ಶ್ರೀರಂಗಪಟ್ಟಣದ ಮುನ್ಸಿಫ್ ಕೋರ್ಟಿನಲ್ಲಿ.

1915-16 ನೇ ಇಸವಿ ಅಸಲ್ ನಂಬರು-744.

ವಾದಿ.—(1) ಶ್ರೀರಂಗಪಟ್ಟಣದ ತಾಲ್ಲೂಕು ಗಂಜಾಂನಲ್ಲಿರುವ ದೇವತಾ ರಾಮಶೆಟ್ಟರ ಮಗ ದೇವತಾ ಹನುಮಂತಶೆಟ್ಟಿ; ಶ್ರೀರಂಗಪಟ್ಟಣದಲ್ಲಿರುವರು—(2) ರಂಗಶೆಟ್ಟರ ಮಗ ಜವಳಿ ಶ್ರೀನಿವಾಸಶೆಟ್ಟಿ, (3) ತೊಳಸಿ ವೆಂಕಟಾಚಲಶೆಟ್ರ ಮಗ ತೊಳಸಿ ಕೃಷ್ಣಶೆಟ್ಟಿ.

ಪ್ರತಿವಾದಿ —ಶ್ರೀರಂಗಪಟ್ಟಣದ ಕಸಬಾದಲ್ಲಿರುವ ಕೊಪ್ಪರಂ ವೀರಪ್ಪಶೆಟ್ಟರ ಮಗ ಕೊಪ್ಪರಂ ನಂಜುಂಡಶೆಟ್ಟಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ:—

ಶ್ರೀರಂಗಪಟ್ಟಣದಲ್ಲಿರುವ ಜನಾರ್ದನಸ್ವಾಮಿ ಶ್ರೀನಗರೇಶ್ವರಸ್ವಾಮಿ ದೇವರ ಭಂಡಾರಕ್ಕೆ ಸಂಬಂಧಪಟ್ಟ ವೈಶ್ಯಕುಲಸ್ಥ ಜನಗಳ ಬಾಬ್ತು ಮೊಬಲಗಿನಲ್ಲಿ ಮೇಲ್ಕಂಡ ಪ್ರತಿವಾದಿಯು ತಾ. 1-4-1904 ರಲ್ಲಿ ಖಾಲಿ ಕಾಗದ ಬರೆದುಕೊಟ್ಟು ಪಡೆದು ಇರುವ ಮೊಬಲಗು ಪೈಕಿ ವಸೂಲ್ ಚಾತಾ ಬಾಕಿ ಅಸಲ್ ಬಡ್ಡಿ ಜೇರಿಜು ರೂ. 60-12-0 ಯನ್ನು ಮೇಲ್ಕಂಡ ವಾದಿಯು ಪ್ರತಿವಾದಿಯಿಂದ ಬರಬೇಕೆಂದು ದಾವಾ ದಾಖಲ್ಮಾಡಿರುತ್ತಾರಾಗಿ ಇದರಲ್ಲಿ ಇಂಟರೆಸ್ಟು ಇರತಕ್ಕ ವಾದಿಯಾಗಿ ಸೇರಲು ಅಪೇಕ್ಷೆಯುಳ್ಳವರೆಲ್ಲರೂ 1916 ನೇ ಇಸವಿ ಫೆಬ್ರವರಿ ಮಾಹೆಯೊಳಗೆ 7 ನೇ ತಾರೀಖು ದಿವ 11 ಘಂಟೆಗೆ ಈ ಕೋರ್ಟ್ ರೂಬರೂಬು ಹಾಜರಾಗಿ ತಿಳಿಸತಕ್ಕದ್ದಿದೆ ಎಂದು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿದೆ. ತಪ್ಪಿದರೆ ರೂಲ್ಸು ಮೇರೆ ನಡಿಸಲಾದಿತು.

1916 ನೇ ಇಸವಿ ಜನವರಿ 20 ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್‌ನೊಡನೆ ಕೊಡೋಣಾಗಿದೆ.

(ಬೈ ಆರ್ಡರ್)

[24-1] ಎಚ್. ಕೃಷ್ಣ ಅಯ್ಯಂಗಾರ್, ಹೆಡ್ ಮುನ್ಷಿ.

ಚೀನಾ ರಾಜ್ಯಕ್ಕೆ ಸೇರಿದ ಹಾಂಕಾಂಗ್ ಎಂಬ ತೀರಪಟ್ಟಣದಲ್ಲಿ ಹಲವು ಶತ್ರುಪಕ್ಷದ ಪ್ರಜೆಗಳನ್ನು ಹಿಡಿದು ಒಂದು ಕಡೆ ಬಂಧನದಲ್ಲಿ ಇಟ್ಟಿದ್ದರು. ಆ ಶತ್ರುಪಕ್ಷದವರು ತಪ್ಪಿಸಿಕೊಂಡು ಓಡಿಹೋಗಬೇಕೆಂಬ ಉದ್ದೇಶದಿಂದ ಭೂಮಿಯೊಳಗೇ ಬಹಳ ದೂರ ಸುರಂಗವನ್ನು ತೋಡಿ ಸಿದ್ಧಗೊಳಿಸಿಕೊಂಡರು. ಇದು ಹೇಗೆ ಅವರಿಗೆಲ್ಲಾ ಇನ್ನೊಂದು ಕಡೆ ಸಾರಿಯುವ ಅವರನ್ನು ಜಹಜುಗಳ ಮೇಲೆ ಅಲ್ಲಿಂದ ಸಾಗಿಸಿಬಿಡುವ ವಿಚಾರವು

ಮಾತೃಭೂಮಿಗೆ ಮಹಿಳೆಯರ ಕರ್ತವ್ಯ.

[illegible] ಮಹಿಳಾ ಸೇವಾಸದನಾಧದ ಪರವಾಗಿ ಆ ಸಮಾಜದ ಪ್ರೆಸಿ[illegible] ಶ್ರೀಮತಿ ಪಾರ್ವತಿ ಅಮ್ಮನವರು (ಮ|| ಚಂದ್ರಶೇಖರಯ್ಯ [illegible]) ಇದೇ ಜನವರಿ 12, 13, 14 ನೇ ತಾ. ಗಳಲ್ಲಿ ಹೆಂಗಸ[illegible]ನಾಗಿ ಕನ್ನಡದಲ್ಲಿ 3 ಉಪನ್ಯಾಸಗಳನ್ನು ಕೊಟ್ಟರು. ಅವರು [illegible] ಚೀಫ್ ಕೋರ್ಟಿನ ಜಡ್ಜಿಯವರಾದ ತಮ್ಮ ಯಜಮಾನ[illegible] ಮತ್ತು ಬೊಂಬಾಯಿ ಪಟ್ಟಣಗಳಿಗೆ ಹೋಗಿ ಬಂದದ್ದರಿಂದ [illegible] ಕಂಡ ಸಂಗತಿಗಳನ್ನೂ, ಅವುಗಳಿಂದ ತಿಳಿಯತಕ್ಕ ಅಂಶಗಳನ್ನೂ [illegible] ಉಪನ್ಯಾಸದಲ್ಲಿ ತಿಳಿಸಿದರು. ಅಲ್ಲಿನ ಮುಖ್ಯವಾದ ಭಾಗ [illegible] ಮತ್ತು ಮನೋಹರವಾಗಿಯೂ ಸೌಂದರ್ಯವಾಗಿಯೂ ಇರತಕ್ಕ [illegible] ವರ್ಣಿಸಿ ಬೊಂಬಾಯಿಯಲ್ಲಿ ಪಾರ್ಸಿಯರ ಮತ್ತು ಪೂರ್ವ[illegible] ಸ್ವಭಾವದನ್ಯವಾದ ಗುಣಗಳು ಆಹ್ಲಾದಕರವಾಗಿ ಮಿಳಿತವಾಗಿರುವ [illegible]. ಅವರು ತಿಳಿಸಿದ ಅನೇಕ ಮುಖ್ಯಾಂಶಗಳಲ್ಲದೆ ಇಲ್ಲಿಗಿಂತಾ [illegible] ಜನಗಳಿಗಿರುವ ದೇಶಸೇವಾಪರತೆಯನ್ನೂ ದೇಶವಾತ್ಸಲ್ಯವನ್ನೂ [illegible]. ಇದಲ್ಲದೆ ಹೆಂಗಸರೂ ಗಂಡಸರೂ ಅನೇಕ ಸರ್ವಜನೋಪ[illegible] ಕಾರ್ಯಗಳಲ್ಲಿ ನಿರತರಾಗಿ, ಹೆಂಗಸರು ವಿಶೇಷವಾಗಿ ವಿದ್ಯಾವತಿಯ[illegible] ವರ್ಗದವರಲ್ಲಿ ಅತ್ಯಂತ ಮರ್ಯಾದೆಯನ್ನು ಹೊಂದತಕ್ಕವ[illegible] ಅಂಶಗಳನ್ನು ವಿಶದಪಡಿಸಿದರು.

[illegible] ಉಪನ್ಯಾಸದಲ್ಲಿ ಪ್ರೆಸಿಡೆಂಟರವರು ಪೂನಾ ಮತ್ತು ಬೊಂಬಾಯಿ [illegible] ಸೇವಾಸದನ ಸಂಘವು ನೆರವೇರಿಸುತ್ತಿರುವ ಕಾರ್ಯಗಳನ್ನು ತಿಳಿ[illegible] ಸಂಘದ ಮೇಲ್ಪಂಕ್ತಿಯಂತೆಯೇ ಬೆಂಗಳೂರು ಮಹಿಳಾ ಸೇವಾಸದನ [illegible]ಪಟ್ಟಿರುವದು. ಈ ಎರಡು ಸಂಘಗಳು ಮಾಡುತ್ತಿರುವ ಕಾರ್ಯ[illegible] ವಿಷಯಗಳಿಂದ ಭಾರತ ಮಹಿಳೆಯರು ಜನಾಂಗದ ಪುರೋಭಿವೃದ್ಧಿ[illegible] ಕರ್ತವ್ಯಾಂಶವನ್ನು ನೆರವೇರಿಸತಕ್ಕ ಬಗ್ಗೆ ಅವರನ್ನು ತರಬೇತು [illegible]ಯುವದು ಈ ಸಂಘಗಳ ಉದ್ದೇಶವೆಂದು ಹೇಳಿದರು. ಈ ಎರಡು [illegible] ಬಹಳ ಮಟ್ಟಿಗೆ ಪ್ರಯೋಜನಕರವಾದ ಕಾರ್ಯಗಳು ನಡೆದಿ[illegible] ಸ್ವಲ್ಪಮಟ್ಟಿಗೆ ಇವು ಮಾಡಿದ ಕಾರ್ಯಗಳು (ಯುದ್ಧ ಮಾಡುತ್ತಿರುವ [illegible]ಗೋಸ್ಕರ ಸಹಾಯ ದ್ರವ್ಯವನ್ನು ಕೂಡಿಸುವ ಸಂಬಂಧದಲ್ಲಿ) [illegible] ಪತ್ರಿಕೆಗಳ ಓದುಗರಿಗೂ ತಿಳಿದಿರುತ್ತವೆ. ಪ್ರತಿಯೊಬ್ಬ[illegible] ಸಂಘದ ಕಾರ್ಯಗಳನ್ನು ತಮ್ಮ ಸ್ವಂತ ಕಾರ್ಯಗಳೆಂದು ಭಾವಿ[illegible] ಆಸ್ವಾರ್ಥತೆಯಿಂದಲೂ ಕೆಲಸ ಮಾಡಿದ್ದರಿಂದ ಸಂಘಗಳು [illegible]ತ್ತವೆ. ಇದೂ ಅಲ್ಲದೆ ದೊಡ್ಡ ದೊಡ್ಡ ಹುದ್ದೆಯಲ್ಲಿರುವ ಅಥವಾ [illegible]ಯನ್ನು ಪಡೆದಿರುವ ಪುರುಷರು ಸ್ವಲ್ಪವೂ ಹಿಂತೆಗೆಯದೆ ಏಕೀಭವಿಸಿ [illegible]ಗಳಲ್ಲಿಯೂ ಬುದ್ಧಿವಾದವನ್ನು ಕೊಟ್ಟು ಸಹಾಯ ಮಾಡುತ್ತಾರೆ. [illegible]ಯಲ್ಲಿರುವ ನಾವೂ ಸಹ ಈ ರೀತಿಯಲ್ಲಿ ಕೆಲಸಮಾಡಿ ನಮ್ಮ [illegible] ಸಂಪತ್ತುಗಳನ್ನೂ ಅನುಕೂಲಗಳನ್ನೂ ಸಂಪೂರ್ಣವಾಗಿ [illegible] ನಮ್ಮ ಸೇವಾಸದನವನ್ನು ವೃದ್ಧಿಪಡಿಸಿಕೊಳ್ಳಬೇಕೆಂದು ಹೇಳಿ [illegible] ಮುಗಿಸಿದರು.

3 ನೇ ಉಪನ್ಯಾಸವೇ ಕೊನೆಯದು. ಇದರಲ್ಲಿ ಹಿಂದಿನ ಮತ್ತು ಈಗಿನ [illegible]ಗಳನ್ನು ಓದಿ ತಿಳಿದುಕೊಂಡು ಅನ್ನು ಮುಂದೆ ಇಂಥಾ ಸ್ಥಿತಿ[illegible]ವೆಂದರಿಸಿ ಮಹಿಳೆಯರು ತಮ್ಮ ಮಾತೃಭೂಮಿಗೆ ನೆರವೇ[illegible] ಕರ್ತವ್ಯಾಂಶವೇನಿರುವದೆಂದು ವಿವರಿಸಿದರು. ಪೂರ್ವ ಕಾಲಗಳಲ್ಲಿ [illegible] ಗಂಡಸರೂ ಜನಸಾಮಾನ್ಯದ ಮೇಲಿಗಾಗಿ ಕೆಲಸ ಮಾಡತಕ್ಕದ್ದು [illegible]ವೆಂದು ತಿಳಿದುಕೊಂಡು ಅದಕ್ಕಾಗಿ ಪ್ರಯಾಸಪಡುತ್ತಿದ್ದರೆಂಬ [illegible] ಪಡಿಸಿದರು. ಶೌರ್ಯ, ಜ್ಞಾನ, ಮೋಕ್ಷಗಳಿಗೆ ಗಂಡಸರೂ ಹೆಂಗ[illegible] ಭಾಗಿಗಳು. ಯಾವಳಾದರೂ ಹೆಣ್ಣುಮಕ್ಕಳೂ ವಿವಾಹವಾಗುವುದಕ್ಕೆ [illegible] ಸರಿಯಾಗಿ ನಡೆಸುವುದಕ್ಕೆ ತಕ್ಕಂತೆ ತರಬೇತು ಹೊಂದುತ್ತಿ[illegible] ಅವರವರ ಶಕ್ತಿ ವಿಶೇಷಗಳೇ ಮುಖ್ಯವಾದ ಹೊಂದುತ್ತಿದ್ದವೇ ಹೊರತು [illegible] ಎಂಬ ವ್ಯತ್ಯಾಸಕ್ಕೆ ಅಷ್ಟು ಗಮನ ಕೊಡುತ್ತಿರಲಿಲ್ಲ. ಉತ್ತರೋ[illegible] ಬೇರೆ ಜನಗಳು ನಮ್ಮ ದೇಶಕ್ಕೆ ನುಗ್ಗಿ ರಾಜ್ಯವನ್ನು ಆಕ್ರಮಿಸಿಕೊಂಡ [illegible] ಪೂರ್ವದ ಸ್ಥಿತಿಗಳು ಬದಲಾವಣೆ ಹೊಂದಬೇಕಾಯಿತು. ಹೆಂಗ[illegible] ಹೊರಗೆ ಹೋಗದಂತೆ ಏರ್ಪಡಿಸಿ ಅವರಿಗೆ ಅಪಾಯವುಂಟಾಗದಂತೆ [illegible] ಅವಶ್ಯಕವಾಯಿತು. ಆದ್ದರಿಂದ ಅವರು ಸ್ವಾತಂತ್ರ್ಯವನ್ನೂ [illegible]ಯನ್ನೂ ಹೊಂದಲು ಅವಕಾಶವಿಲ್ಲದೇನೇ ಹೋಯಿತು. ಆದರೂ [illegible] ಆತ್ಮನಿಗ್ರಹ ಮುಂತಾದ ಸದ್ಗುಣಗಳು ಅವರಲ್ಲಿದ್ದೇ [illegible]. ಸುಮಾರು 150-200 ವರ್ಷಗಳ ಕೆಳಗೆ ರಜಪುತ್ರ ಸ್ತ್ರೀಯರು [illegible]ಯುದ ಕಾಲಗಳಲ್ಲಿಯೂ ಧೈರ್ಯವನ್ನೂ ಸಾಹಸವನ್ನೂ ಆತ್ಮ[illegible]ವನ್ನು ಪ್ರಕಟಪಡಿಸಿ ಖ್ಯಾತಿಯನ್ನು ಪಡೆದರು. ತಮ್ಮ ಮಾತೃಭೂಮಿಯ [illegible] ತಮ್ಮ ಪತ್ರಿಗಳನ್ನೂ, ಸಮೀಪ ಬಂಧುಗಳ ಪ್ರಾಣಗಳನ್ನೂ ಸಂತೋ[illegible] ಧಾರೆಯೆರೆದ ಪದ್ಮಿನಿ, ಕರ್ಣಾವತಿ, ಕೃಷ್ಣಕುಮಾರಿ, ಪನ್ನ, [illegible] ಶೀಲೋಪೇತೆಯರಾದ ಸ್ತ್ರೀಯರ ಚರಿತ್ರೆಯನ್ನು ಉಪನ್ಯಾಸಕರು [illegible]. ಈಗಲಾದರೋ ಹೆಂಗಸರು ಮನೆ ಕೆಲಸಗಳಲ್ಲಿಯೇ ಮಗ್ನ[illegible]. ಬ್ರಾಹ್ಮಣೇತರರಲ್ಲಿ ಮಟ್ಟಿಗೆ ಹೆಂಗಸರು ಈಗಲೂ ತಮ್ಮ [illegible] ವ್ಯವಸಾಯಗಳಲ್ಲಿಯೂ ವ್ಯಾಪಾರಗಳಲ್ಲಿಯೂ ಸಹಾಯ ಮಾಡು[illegible]. ಹೆಂಗಸರಿಗೆ ವಿದ್ಯಾಭ್ಯಾಸ ಮಾಡಿಸದೆ ಇರುವದರಿಂದ ನಮ್ಮ ಜನಾಂ[illegible] ಬುದ್ಧಿಕುಶಲತೆಯು ಪ್ರಕಾಶಕ್ಕೆ ಬಾರದೆ ಮಾತೃಭೂಮಿಯ [illegible]ವುಂಟಾಗಿದೆ. ಗಂಡಸರೇನೋ ಬಹಳ ಮಟ್ಟಿಗೆ ಮುಂದುವರಿದು [illegible] ಹೆಂಗಸರು ಇದ್ದಲ್ಲಿಯೇ ನಿಂತರೆ ಗಂಡ, ಹೆಂಡರ ಯೋಚನೆ[illegible] ಆಗಾಗಳಾದ ವ್ಯತ್ಯಾಸಗಳುಂಟಾಗಿ ಕುಂಟ ಎತ್ತಿನ ಕತ್ತಿ[illegible] ಮರ ಕಟ್ಟಿದಂತೆ ಹೆಂಗಸರಿಂದ ಪ್ರಪಂಚದ ಅಭಿವೃದ್ಧಿಗೆ ಅಡ್ಡಿ[illegible]. ಹೀಗೆ ಆಗಕೂಡದು. ಗಂಡಸರು ಅಭಿವೃದ್ಧಿಹೊಂದಿ ಮುಂದು[illegible]ಗಲೆಲ್ಲಾ ಹೆಂಗಸರೂ ಅವರಂತೆಯೇ ನಡೆದು ಅವರಿಗೆ ಸಹಾಯ [illegible] ನಮ್ಮ ಜನಾಂಗವು ಮುಂದಕ್ಕೆ ಬರಲಾರದು. ಇದಕ್ಕಾಗಿ ಹೆಂಗ[illegible]ಭ್ಯಾಸದ ಮೂಲಕ ಜ್ಞಾನ ಸಂಪಾದನೆಯನ್ನು ಮಾಡಿಕೊಂಡು [illegible]ವಾಗಿರುವ ತಮ್ಮ ಶಕ್ತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. [illegible]ವಾಗಿ ಶರೀರಕ್ಕೆ ಬಂದರೆ ಅವಯವಗಳೆಲ್ಲಾ ಆರೋಗ್ಯವಾಗಿದ್ದು [illegible] ಕೆಲಸಗಳನ್ನು ಕ್ರಮವಾಗಿ ನೆರವೇರಿಸುವಂತೆಯೇ ಸಂಪೂರ್ಣವಾದ [illegible] ಬುದ್ಧಿ ವಿಕಾಸಗಳು ವೃದ್ಧಿಹೊಂದಿ ಲೋಕಸೇವೆಗೆ ತಕ್ಕ[illegible]ಗಿ ನಮ್ಮ ದೇಶವು ನೆಳಗೆ ಬರುವುದು. ಹೀಗೆಲ್ಲಾ ಹೆಂಗಸರು ತಮ್ಮ [illegible] ಸಮಯವನ್ನೂ ಸಲಕರಣಗಳನ್ನೂ ಉಪಯೋಗಿಸಿಕೊಂಡು ಪೂರ್ವ[illegible]ಯರು ನೆರವೇರಿಸಿದ ಮಹಾಕಾರ್ಯವನ್ನು ನೆರವೇರಿಸಿ ಗಂಡಸರು [illegible] ಮೇಲ್ಮೆಗಾಗಿ ಮಾಡುತ್ತಿರುವ ಕಾರ್ಯಗಳಲ್ಲಿ ಸಹಾಯಕರಾಗಿ [illegible] ಪ್ರಯಾಸಪಡಬೇಕು. ಪ್ರಪಂಚದ ಚರಿತ್ರೆಯಲ್ಲಿ ಈಗಿನ ಕಾಲವು [illegible]ವಾದದ್ದು. ಇನ್ನು ಸ್ವಲ್ಪ ಕಾಲದಲ್ಲಿಯೇ ಈ ಇಂಡಿಯಾ ರಾಜ್ಯಕ್ಕೆ [illegible] ಅನೇಕ ಬದಲಾವಣೆಗಳು ಆಗುವಂತಿದೆ. ಆದ್ದರಿಂದ [illegible] ಗಂಡಸರು ಎನ್ನದೆ ಪ್ರಯಾಸಪಡಬೇಕು. ಈಗ ಇರತಕ್ಕ [illegible]ವನ್ನು ಸರಿಯಾಗಿ ಉಪಯೋಗಿಸಿಕೊಂಡು ಇನ್ನೂ ಹೆಚ್ಚು ಅನು[illegible]ಮಾಡಿಕೊಂಡು ಜ್ಞಾನಸಂಪಾದನೆ ಮಾಡಿ ನಮಗಿಂತಲೂ ಕೀ[illegible]ವರಿಗೆ ಸಹಾಯಮಾಡಿ ತನ್ಮೂಲಕ ನಮ್ಮ ಜನ್ಮಭೂಮಿಯ [illegible] ಕೈಲಾಗುವ ಮಟ್ಟಿಗೂ ಕೆಲಸಮಾಡಬೇಕು ಎಂದು ಹೇಳಿ [illegible] ಮುಗಿಸಿದರು.

ಒಬ್ಬ ಮಹಿಳೆ.

ರಿಜಿಸ್ಟರ್ ಇಂಡಿಯನ್ ಮೇಯಿಲ್ ಲೀವರ್ ವಾಚು.

ಉತ್ತಮ ಸರಪಣಿ ಸಹಿತ ಕ್ರಯ ರೂ. 3-0-0. | 6 ವರುಷಗಳ ಗ್ಯಾರಂಟಿ ಪತ್ರ. | ವಿ. ಪಿ ಛಾರ್ಜು 4 ಆಣೆ.



ಇದು ಸಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟಿದ್ದು, ಬೇರೆ ಅಂಗಡಿಗಳಲ್ಲಿಯೂ ಸಿಕ್ಕ ಲಾರದು. ಇದಬಗ್ಗರಿಗೋಸ್ಕರ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡು ಮಾರ್ಕು, ಡಸ್ಟ ಪ್ರೂಫ್ ಎಂಬ ಗ್ಲಾಸು ಡೋಮೂ ಇರುವದು. ಬಹಳ ಗಟ್ಟಿಯಾದ ಸಾಮಾನುಗಳಿಂದ ತಯಾರಾಗಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದರೂ, ಕುದುರೆ ಸವಾರಿ ಮಾಡಿದರೂ, ಕೆಳಗೆ ಜಾರಿ ಬಿದ್ದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು ಪರೀಕ್ಷಿಸಿರಿ.

ನಮ್ಮ ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,

[260-9] ಪೋಸ್ಟು ಬಾಕ್ಸು 167, ಮದರಾಸ್.

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಬಂ ರೂ. 3-0-0

ಜನವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಾರು [illegible] ಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧರಿಸುವುದಕ್ಕೂ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಹು ಹೊಸದು. ಸೀರೆಯು ಉದ್ದ 16 ಮೊಳ. ಸುಂದರವಾದ ಶಾಲು. ಒಂದನ್ನು ತರಿಸಿ ಪರೀಕ್ಷಿಸಿ. ವಿಳಾಸ—

ವಿ. ಕೆ. ಶೆಂಬಗಾಮ

[111-34] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಯಥಾರ್ಥ ದೇಶವತ್ಸಲನು.

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವುದಕ್ಕೆ ತನ್ನ ಶರೀರ ಸೌಖ್ಯವನ್ನೂ ಕಾಯಪುಷ್ಟಿಯನ್ನೂ ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕನಾಗಿರುತ್ತಾನೆ. ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥಾದ್ದು ನಿಮ್ಮ ಮಾತುಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತಿರಬೇಕು. ಈ ಉದ್ದೇಶಕ್ಕಾಗಿ ನೀವು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿರುವ ನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ತಪ್ಪದೆ ಕ್ರಮವಾಗಿ ಸೇವನೆ ಮಾಡುತ್ತಾ ಬನ್ನಿ. ಈ ಮಾತ್ರೆಯು ನಿಮ್ಮ ಶರೀರದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿ ಯಾವ ರೋಗವೂ ತಲೆ ಎತ್ತದಂತೆ ನಾಶಮಾಡುವುದು.

ಕ್ರಯ 40 ಮಾತ್ರೆಗಳ ಡಬ್ಬಿಗೆ ರೂ. 1-0-0.

ಜಾ. ಕ:—ಒಂದು ದೊಡ್ಡ ಕ್ಯಾಟ್ಲಾಗನ್ನೂ, ರೋಗ ಪರಿಹಾರಕ್ಕೆ ತಕ್ಕ ಸಲಹೆಗಳನ್ನೂ ಬಿಟ್ಟಿ ಪಡೆಯಬಹುದು.

ವಿಳಾಸ:—ರಾಜವೈದ್ಯ ನಾರಾಯಣಜಿ ಕೇಶವಜಿ,

[255-10] 20, ಚೈನಾ ಬಜಾರ್ ರೋಡ್, ಮದರಾಸ್.

ಇದನ್ನು ಅವಶ್ಯವಾಗಿ ನೋಡಿ.

ಅರ್ಧ ಕ್ರಯ. ಈ ತಿಂಗಳು ಮಾತ್ರ.

ಸುಂದರವಾದ ಲಂಡನ್ ಪಾಕೆಟ್ ವಾಚ್.

ಮುಂಚಿನ ಬೆಲೆ ರೂ. 3-0-0, ಈಗ ರೂ. 2-0-0.

5 ವರ್ಷದ ಗ್ಯಾರಂಟಿ.

ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವನ್ನು ಇದುವರೆಗು ರೂ. 3-0-0 ಗೆ ವಿಕ್ರಯ ಮಾಡಿದೆವು. ಇದು ಎಲ್ಲರೂ ಅಂದರೆ ಬಡ ಭಾಗ್ಯವಂತರು ಕೊಂಡುಕೊಳ್ಳಬೇಕೆಂಬ ಉದ್ದೇಶವಾಗಿ ಇದನ್ನು ಈಗ ರೂ. 2-0-0 ವಿಕ್ರಯ ಮಾಡಬೇಕೆಂದು ನಿರ್ಧಾರ ಆಗಿಯದೆ.



ಈ ಗಡಿಯಾರ ಬಹು ನಾಜೂಕಾಗಿಯೂ ಮಜಬೂತಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿದ್ದು. ಈ ಗಡಿಯಾರ ಇತರ ಕಂಪೆನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿ ಇರುತ್ತವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ರೂ. 2-0-0 ಕ್ಕೆ ಕೊಡಲ್ಪಡುತ್ತೆ.

ನಮ್ಮ ವಿಳಾಸ—ಧೈರ್ಯಲಕ್ಷ್ಮೀ ಅಂಡ್ ಕಂಪನಿ,

[252-11] 3, ಅರುಳಪ್ಪನ ಬೀದಿ, ಮದರಾಸು.

ಕೊಳ್ಳೇದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫ್ರೆಂಚ ಇಂಡಿಯಾ, ಆಸ್ಟ್ರೇಲಿಯಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮುಖ್ಯ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಪಾಪು ಮಾತಿಗೂ ವೈದ್ಯರ ಸಮಯವನ್ನು ಕಾದು ನೋಡಿಯುತುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ನಿಶ್ಶಕ್ತಿ, ಬಲಹೀನತೆ ಕಟ್ಟುಶವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರೆಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನ ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಲ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಐ. ಎಲ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯಾರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—“ ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿರುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ.” (2) ಮ|| ಡಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—“ ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಕೊಳ್ಳೇದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಯಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ.”

[189-20] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಲ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 16 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡುಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೀಳಕಪ್ಪನಂತೆ ಕಪ್ಪಾಗಿ ಥಳಥಳಿಸುವದು. ದೇಹದಲ್ಲಿ ಅತಿಶಯ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು, ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೇಳುಕ್ಕೆ ಉಲ್ಲಾಸವನ್ನು ಓದುವವರಿಗೆ ಅಭ್ಯಾಸವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ಕೇಸರ್, ಪಚ್ಚೆಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರಜಾಜಿ, ದವನ, ಮರುಗ, ಇವ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿ ಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲೂ ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ಪಟ್ಟೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ಅಮೂಲ್ಯ, ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಿಲ್ಲೆ 1, ವಾಸನೆಯುಳ್ಳ ಸೋಪು 1, ತಾಂಬೂಲಮಾತ್ರೆ 22, ಕೊಂಡಿ ಗಿಣಗಳು 6, ಕಾರ್ಡೋರ್ಡ್ ಬ್ರೂಚ್ 1, ಜಾಮಾಲು ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎಲ್. ಎಮ್. ಸ್ವಾಮಿ ಅಂಡ್ ಕಂಪನಿ,

[260-9] ನಂ. 44, ನಂಬುಳಯ್ಯರ ಬೀದಿ, ಮದರಾಸು.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-27]

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಓರಿಯಂಟಲ್ ಗಾ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..........ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 1,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ. ಎಸ್. ಬಿ ಲಿ, ಚೀಫ್ ಏಜೆಂಟ್, ಬೆಂಗಳೂರು; ... ಅಥವಾ ಮಿ॥ ವೆಂಕಟರತ್ನಯ್ಯನವರು, ... ಅಥವಾ ಬ್ರಾಂಚ್ ಸೆಕ್ರೆಟರಿ, ಮದರಾಸ್.

[222-15]

ಸ್ವಸ್ಥವಾಗುವದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರವನ್ನು ವಿಸರ್ಜಿಸುವುದರಿಂದ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೇ ಹೋದರೆ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ...

[175-22]



ಬೆಲೆ, ... ಅಥವಾ ... ಬೊಂಬಾಯಿ ...

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಬಾಟ್ಲಿ 1 ಕ್ಕೆ 0-12-0 ಆಣೆ. ... ಇನಾಂ ಸಾಮಾನುಗಳ ತಪಶೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಲಿ 6, ವೈಭರಣೆ 1, ... 40, ... 1, ... 1, ... 1, ... 60 ... ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಹಾಣಿ ಕಂಪನಿ,

[252-11] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸಿಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದ್ದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸಿಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನು ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಉಪಯೋಗಿಸುತ್ತಾ ಬಂದಲ್ಲಿ ತಿಂದದ್ದು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮು ... ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗಗಳನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಅಂತಹ ಗುಣಕಾರಿಯಾದ ಸಿಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [25—52]

45 ಮಾತ್ರೆಗಳ ಪೊಟ್ಟಣ 1 ಕ್ಕೆ 3 ಆಣೆ | 200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ | 100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ | 550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
96 ,, ,, 4 ,, | 200 ,, ,, 9 ,, | 80 ,, ,, 4 ,, | 1200 ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವದಿಲ್ಲವು. ಮತ್ತೂ ... ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸಿಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

ನಿಮ್ಮ ಜೀವನಾವಧಿಯ ಅರ್ಧ ಭಾಗವೆಲ್ಲ ನೀವು ವಾಯುವಿನಿಂದ ಕಷ್ಟಪಟ್ಟು, ಮುಸ್ಸು ವೈದ್ಯರಿಂದಲೂ ಆಸ್ಪತ್ರಿಯಿಂದಲೂ ಪ್ರಯೋಜನ ಹೊಂದದೆ ನಿರಾಶೆ ಹೊಂದಿದ್ದರೂ, ನಿಮ್ಮ ವಾಯುನೋವು ವಾಸಿಯಾಗಬಹುದು.

ಲಿಟಲ್ಸ್ ಓರಿಯಂಟಲ್ ಬಾಂ ಎಂಬದು ತಕ್ಷಣ ನಿಶ್ಚಿಂತೆಯನ್ನು ಕೊಟ್ಟು, ನೋವನ್ನು ಹೊರಡಿಸಿ, ಕಡತುಕೊಂಡಿರುವ ಕೀಲುಗಳನ್ನೂ ನರಗಳನ್ನೂ ನಿಮ್ಮ ಮನ್ನಮೊಳಗಿನಲ್ಲಿದ್ದಂತೆ ಮಾಡುವುದು.

... ಬರೆಯುವದು:—"ವಾಯುವಿನ ಬಾಧೆಯಿಂದ ನಾನು ಬಹು ಸಂಕಟಪಡುತ್ತಿದ್ದೆನು. ಲೋಕದಲ್ಲಿ ನನ್ನಂ ... ನಿಲ್ಲವೆಂದು ನೆನಸಿದೆನು. ಅನೇಕ ವೈದ್ಯರುಗಳೂ ಔಷಧಿಗಳಿಗೂ ಬಹಳ ಹಣ ಖರ್ಚ ಮಾಡಿದೆನು. ಆದರೂ ಪ್ರಯೋಜನವಾಗಲಿಲ್ಲ. ... ಇನ್ನು ವಾಸಿಯಾಗುವದಿಲ್ಲವೆಂದು ... 1 ಸೀಸೆ ಲಿಟಲ್ಸ್ ಓರಿಯಂಟಲ್ ಬಾಮನ್ನು ಉಪಯೋಗಿಸಿದ 3 ಗಂಟೆಗಳಲ್ಲಿ ಗುಣ ಕಂಡುಬಂತು. ಮರುದಿನ ನಡೆಯಲು ... ಈಗ ಪೂರ್ಣ ಕ್ಷೇಮವೆಂದು ತಿಳಿದು ಸಂತೋಷಿಸುತ್ತೇನೆ."

ಸೀಸೆ 1ಕ್ಕೆ 1 ರೂ. ಸೇರಿಗೆ ಔಷಧಗಾರರೆಲ್ಲರಲ್ಲಿಯೂ ಸಿಗುತ್ತೆ.

[81-39]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

7—1—1916 ರಿಂದ 14—1—1916 ರ ವರೆಗೆ

ಸ್ಥಳ		ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಹಿಡಿದದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	4	4	0	0
ಮೈಸೂರು	,,	0	0	0	0
ಬೆಂಗಳೂರು	ಡಿಸ್ಟ್ರಿಕ್ಟ್	63	32	0	0
ಮೈಸೂರು	,,	27	23	0	0
ಕೋಲಾರ್	,,	21	14	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಮಕೂರು	ಡಿಸ್ಟ್ರಿಕ್ಟ್	0	0	0	0
ಹಾಸನ	,,	9	8	1	0
ಚಿತ್ರದುರ್ಗ	,,	48	38	0	0
ಕಡೂರ್	,,	6	4	0	0
ಶಿವಮೊಗ್ಗ	,,	25	14	0	0
	ಒಟ್ಟು.....	193	137	1	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ದಕ್ಷಿಣಾಯನೇ ಹೇಮಂತರುತೌ ಪುಷ್ಯ ಬಹುಳ ಅಷ್ಟಮಿ ಶುಕ್ರವಾರದಿಂದ ಪುಷ್ಯ ಬಹುಳ ಅಮಾವಾಸ್ಯೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1916 ನೇ ಜನವರಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮರಾಠಿ ಮಾಸ ತಿಥಿ
28	ಶುಕ್ರ †	ಅಷ್ಟಮಿ	16-25	ಸ್ವಾತಿ	14-9	15
29	ಶನಿ ‡	ನವಮಿ	11-42	ವಿಶಾಖ	11-9	16
30	ಭಾನು ;;	ದಶಮಿ	6-24	ಅನೂರಾಧ	7-31	17
31	ಸೋಮ *	ಏಕಾದಶಿ	0-43	ಜ್ಯೇಷ್ಠ	54-11	18
1	ಮಂಗಳ §	ತ್ರಯೋದಶಿ	48-51	ಪೂರ್ವಾಷಾಢ	55-7	19
2	ಬುಧ ,,	ಚತುರ್ದಶಿ	43-2	ಉತ್ತರಾಷಾಢ	51-13	20
3	ಗುರು ::	ಅಮಾವಾಸ್ಯೆ	37-51	ಶ್ರವಣ	47-44	21

† ನವಮೀ ತಿಥಿ, ದಗ್ಧಯೋಗ. ‡ ದಗ್ಧಯೋಗ. ;; ಸ್ಮಾರ್ತ ಏಕಾದಶಿ, ಮೃತ್ಯುಯೋಗ, ಮಳೆ ನಕ್ಷತ್ರ—ಶ್ರವಣ 3 ನೇ ಪಾದ. * ವೈಷ್ಣವ ಏಕಾದಶಿ, ಹರಿವಾಸರ. § ಪ್ರದೋಷ. ,, ಮಳೆ ನಕ್ಷತ್ರ—ಶ್ರವಣ 4 ನೇ ಪಾದ. :: ಸರ್ವತ್ರ ಶ್ರಾದ್ಧ್ಯಮಾವಾಸ್ಯಾ, ಮಹೋದಯ.

Printed and Published by the Rev. H. Gulliford, Proprietor and Manager, Wesleyan Mission Press, Mysore. 27/1/1916.

REGISTERED
M. 30

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸರ್ ೧೯೧೬ ನೇ ಇಸವಿ ಫೆಬ್ರವರಿ ತಾರೀಖು ೩, ನೇ ಗುರುವಾರ. ಸಂಚಿಕೆ ೩೬

S. U. N. & Co.,

BENARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕಂಪನಿಯಲ್ಲಿ ನೆಯುವ ಕಯಾರಿಸುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಕಣ, ಪೇಟ, ಅತ್ಲಾಸ್ ಶಾಲು, ದುಪ್ಪಟಿ, ಮಗುಟ, ಜನನ್ನಾಥ ಟೋಪಿಗಳು, ರುದ್ರಾಕ್ಷಿಗಳು, ಕಡಾವುಗಳು, ಅರಳಿ ಪೇಟಿ, ಧರ್ಮಗಳ ಈ ಮುಂತಾದ ಅನೇಕ ಬೊಂಬೆ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ದರದ ಅನ್ಯದೇಶಗಳಿಗಾಗಿ ಅತಿ ಜೋಪಾನದಿಂದ ಕಳುಹಿಸುವೆವು. ಈ ಅಮೂಲ್ಯವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೇಟಲಾಗು ಒಂದು ಕಾಣಿ ಕಾರ್ಡಿನ ದಾರವನ್ನು ಇನಾಮಾಗಿ ಕಳುಹಿಸಲಾಗುವುದು. [119-20]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಂಬಾ, ಕಾಶಿ.

ಉತ್ತಮವಾದ ಫೌಂಟೆನ್ ಪೆನ್ನಾಗಳು ದೊರೆಯುತ್ತೆ.

ನೆಪ್ಚೂನ್ 200 ನೆ ನಂಬರ್ ಪೆನ್ ಒಂದಕ್ಕೆ	ರೂ. 1-14-0
ನೆಪ್ಚೂನ್ 205 ನೆ ನಂಬರ್ ಪೆನ್ ಒಂದಕ್ಕೆ	,, 2-10-0
ನೆಪ್ಚೂನ್ 230 ನೆ ನಂಬರ್ ಪೆನ್ ಒಂದಕ್ಕೆ	,, 3-12-0
ನೆಪ್ಚೂನ್ 210 ನೆ ನಂಬರ್ ಪೆನ್ ಒಂದಕ್ಕೆ	,, 4- 0-0
ನೆಪ್ಚೂನ್ 251 ನೆ ನಂಬರ್ ಸೇಫ್ಟಿ ಪೆನ್ ಒಂದಕ್ಕೆ	,, 3-12-0
ನೆಪ್ಚೂನ್ 207 ನೆ ನಂಬರ್ ಪೆನ್ ಒಂದಕ್ಕೆ	,, 3- 6-0
ನೆಪ್ಚೂನ್ 158 ನೆ ನಂಬರ್ ಪೆನ್ ಚಿನ್ನ ಗಿಲೀಟ್ ಕೊಳವೆ ಮತ್ತು ಕ್ಲಿಪ್‌ಸಹಿತ ಒಂದಕ್ಕೆ	,, 4- 2-0
ಉತ್ತಮವಾದ ಸ್ವಾನ್ ಫ್ಲೌಂಟೆನ್ ಪೆನ್ ಒಂದಕ್ಕೆ	,, 3-12-0
ಉತ್ತಮವಾದ ಫೌಂಟೆನ್ ಪೆನ್ ಕ್ಲಿಪ್ ಕ್ರಯ ಒಂದಕ್ಕೆ	,, 0-4-0

ಲಾಗಾಯತು ರೂ. 0-12-0 ವರೆಗೆ. ಉತ್ತಮವಾದ ಫೌಂಟೆನ್ ಪೆನ್ ಸ್ಟಾರ್ ಇಂಕು ಬಾಟ್ಲು ಒಂದಕ್ಕೆ ರೂ. 0-8-0.

ಸೂಚನೆ:—ಟಪ್ಪಾಲ್ ಮತ್ತು ಪ್ಯಾಕಿಂಗ್ ಖರ್ಚು ಬೇರೆ ಒಟ್ಟಿಗೆ 3 ಪೆನ್ನಾ ತರಿಸುವವರಿಗೆ ಪ್ರತಿ ಒಂದು ಪೆನ್ನಾಕ್ಕೂ ಒಂದು ಸೊಗಸಾದ ಕ್ಲಿಪ್ ಉಚಿತವಾಗಿ ಕೊಡಲಾಗುತ್ತೆ. ಪೈಸಿಕಲ್ಲಿಗೆ ಬೇಕಾದ ಎಲ್ಲಾ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತೆ.

ನಮ್ಮ ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್,
[270-8] ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

Pure Woollen Rugs.

ಬೆಂಗಳೂರು ಬಿನ್ನಿ ಮಿಲ್ ರಗ್ಗುಗಳು.

ಈ ಊರಿನಲ್ಲಿ ತಯಾರಿದ್ದು. ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಈಗಿನ ಬೆಲೆ ಮುಂದಕ್ಕೆ ದೊರೆಯುವಲ್ಲ.

ಜಾಗ್ರತೆಯಾಗಿ ನೋಡಿ. ಸಮಯ ಕಳೆದ ನಂತರ ದೊರೆಯಲಾರದು. ಸಕಾಲದಲ್ಲಿ ಉಪಯೋಗ ಹೊಂದಬೇಕು.

ಸೈಜು	64 × 100 (ಅಂಗುಲ)	ರೂ.	10 8-0
,,	60 × 90	,,	7-0 0

ಪರಸ್ಥಳದವರಿಗೆ ರೈಲು ಪಾರ್ಸೆಲ್ ಚಾರ್ಜು ಪ್ರತ್ಯೇಕ. ಇದೇ ದರದಲ್ಲಿ ಈ ರಗ್ಗುಗಳಿಗಿಂತಲೂ ಹೆಚ್ಚಾಗಿ ತೆಗೆದುಕೊಂಡವರಿಗೆ ರೈಲು ಪಾರ್ಸೆಲ್ ಚಾರ್ಜು ಬೀಳುವದಿಲ್ಲ. ಇದಲ್ಲದೆ ಇಂಗ್ಲೀಷ್ ಉಲನ್ ರಗ್ಗುಗಳು, ಬಾಂಬಾಸ್ಲಾ ಟೋಪಿಗಳು ಇವೇ ಮೊದಲಾದವೆಲ್ಲಾ ನಮ್ಮಲ್ಲಿ ದೊರೆಯುತ್ತವೆ.

H. JEWANMULL & Co.,
Chickpet, Bangalore City.

ನಮ್ಮ ವಿಳಾಸ—ಎಚ್. ಜವಾನ್‌ಮಲ್ ಕಂಪನಿ,
[3-5] ಚಿಕ್ಕಪೇಟೆ, ಬೆಂಗಳೂರು ಸಿಟಿ.

ಲೋವರ್ ಸೆಕೆಂಡರಿ ಪರೀಕ್ಷೆಯ

ಗಣಿತಪ್ರಶ್ನೋತ್ತರಾವಳಿ

ಎಂಬ ನವೀನ ಗ್ರಂಥದಲ್ಲಿ ಎಲ್ಲಾ ಲೆಕ್ಕಗಳನ್ನೂ ಸುಲಭವಾಗಿಯೂ ಚಾತ್ರತೆಯಾಗಿಯೂ ಮಾಡುವ ಅನೇಕ ವಿಧಗಳು ಉದಹರಿಸಲ್ಪಟ್ಟವೆ. ಮತ್ತು 1900-15 ರ ವರೆಗಿನ ಪ್ರಶ್ನೆಗಳಿಗೆ ಪೂರ್ಣ ವ್ಯಾಖ್ಯಾನಸಹಿತವಾದ ಉತ್ತರಗಳೂ ಇರುತ್ತವೆ. ಇದು ಉಪಾಧ್ಯಾಯರುಗಳಿಗೂ, ಸ್ಕೂಲ್ ಮತ್ತು ಪ್ರೈವೇಟ್ ವಿದ್ಯಾರ್ಥಿಗಳಿಗೂ ಅತ್ಯಂತ ಆವಶ್ಯಕವಾಗಿರುವದು. ಸ್ವಲ್ಪ ಪ್ರತಿಗಳೇ ಉಳಿದಿವೆ. ಕ್ರಯ 0-8-0; ವಿ.ಪಿ 10 ಆ.

ವಿಳಾಸ—ಡಿ ಮಹಾಬಲರಾವ್, ಬಿ ಎ., ಅಸಿ ಮಾಸ್ಟರ್, ಮಹಾರಾಜರ
[284-6] ಕಾಲೇಜು; ಅಥವಾ, ಸ್ಟೂಡೆಂಟ್ಸ್ ಹಾಲ್, ಮೈಸೂರು.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interst to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-28]

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ. ಹೆಡ್ ಆಫೀಸು—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು; ಮಿ॥ ಎಂ. ಎಸ್. ನಂಜಪ್ಪನವರು ಅಥವಾ ಮಿ॥ ವೆಂಕಟರಮಣಯ್ಯನವರು, ಕಂಪನಿ ಏಜೆಂಟರು, ಮೈಸೂರು; ಅಥವಾ

[122-10] ಬ್ರಾಂಚ್ ಸೆಕ್ರೆಟರಿ, ಮದರಾಸ.

"ಹನುಮಾರ್ಕ"

ಬೋರಾಕ್ಸ್ ಸಾಬೂನು.

ಹನುಮಾರ್ಕ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ತುರಿಕೆ, ಕಜ್ಜಿ, ಕುರಿ ಮೊದಲಾದ ವ್ಯಾಧಿಗಳು ಹನುಮಾರ್ಕ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ಕೂದಲಿಗೆ ಸುವಾಸನೆ ಮತ್ತು ಕಪ್ಪನ್ನೂ ಕೊಡುವುದರಲ್ಲಿ ಹನುಮಾರ್ಕ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾರ್ಕ ಸಾಬೂನಿನಿಂದ ಸ್ನಾನ ಮಾಡಿದರೆ ಮುಖಕ್ಕೆ ಕಾಂತಿಕೊಡುವುದರಿಂದ ದೇಹಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ಹಚ್ಚಿದರೆ ನಾಜೂಕಾಗುವುದರಿಂದ ಕಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡುಗಿಯರು, ಯೌವನಸ್ಥರು ಮತ್ತು ವೃದ್ಧರು ಭೇದವಿಲ್ಲದಂತೆ ಸರ್ವಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ಕ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪೇಟೆಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನಿನ ಬಿಲ್ಲೆಯ ಮೇಲೆ ಹನುಮಾರ್ಕ ಗುರುತು ಇರುವದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಶಾ. ಕ:—ಎಲ್ಲರೂ ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆಯಬೇಕು. ಬೆಂಗಳೂರು ಸಿಟಿ ಮಿ॥ ಎಚ್. ದಾಸಪ್ಪನವರಲ್ಲೂ ಬಿಕರಿಗೆ ಇಟ್ಟದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,
[211-16] ಗೋವಿಂದಪ್ಪ ಬಜಾರ್ ರೋಡ್, ಮದರಾಸು.

FREE! Do you wish to know "How to Make the Best Quality ROSE, JASMINE, LILY, LOTUS & Sweet Scented Hair Oils at a very cheap cost at your own home? If so, please write us at once and mention this paper. [263-7]

S. PAUL & Co., *Perfumers,*
4, Hospital Street, Dharamtola, **Calcutta.**

ಕ್ಯಾಲೆಂಡರ್ ಉಚಿತ.

ನಮ್ಮಲ್ಲಿ ತಯಾರಾಗುವ ಸುಗಂಧ ದ್ರವ್ಯಗಳನ್ನು ಎರಡು ರೂಪಾಯಿಗೆ ಕಡಿಮೆ ಇಲ್ಲದೆ ತರಿಸಿಕೊಳ್ಳತಕ್ಕವರಿಗೆ 1916 ನೇ ವರ್ಷದ ಸುಂದರವಾದ ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುವೆವು. [8-4]

ವಿಳಾಸ:—ಟಿ. ಎಲ್. ಉಪಾಧ್ಯಾಯ & ಸನ್ಸ್, ಸುಗಂಧಶಾಲಾ, ಮೈಸೂರು.

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ, ವೀಲುನಾಮೆ ಎಲ್ಲಾ ತರದ ಲೇಖನ ಪ್ರಮಾಣಗಳನ್ನೂ, ಸಿವಿಲ್ ಕ್ರಿಮಿನಲ್ ರಿವಿಷನ, ವ್ಯವಹಾರಗಳ ರೀತಿಯನ್ನು ತಿಳಿಸುವ 616 ಪೇಜುಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ಇತರ ಪ್ರತಿಗೆ ರೂ. 1-12-0 [158-32]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಪ್ರಕಟನೆ.

ಶಿವಮೊಗ್ಗದಲ್ಲಿ ಪ್ರಬುದ್ಧರಾದ ಹೆಂಗಸರುಗಳಿಗೆ ಅವರವರ ಮನೆಗಳಲ್ಲಿ ಪಾಠ ಹೇಳಿಕೊಡಲು (to hold home education classes for women) ಉಪಾಧ್ಯಾಯಿನಿಯು ಬೇಕಾಗಿದೆ. ಅವಳಿಗೆ ತಿಂಗಳಿಗೆ 25 ರೂಪಾಯಿ ಸಂಬಳವನ್ನು ಮತ್ತು 10 ರೂಪಾಯಿ ಗಾಡಿ ಬಾಡಿಗೆಯನ್ನು ಕೊಡುತ್ತೇವೆ. ಇಷ್ಟಪಡುವವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಎಜುಕೇಷನ್ ಕಮಿಟಿ ಸೆಕ್ರೆಟರಿಯವರಿಗೆ ದಯಮಾಡಿ ಕಳುಹಿಸುವದು. [25-3]

ಪ್ರಶ್ನೋತ್ತರ ಲೇಖ್ಯಬೋಧಿನಿ ಕ್ರಯ ೧-೮-೦

ಸಿವಿಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ಸಮಸ್ತ ವಿಚಾರಗಳನ್ನೂ, ವ್ಯವಹಾರಗಳನ್ನೂ, ಬೋಧಕರ ಸಹಾಯವಿಲ್ಲದೆ ತಿಳಿಯಬಹುದು. ಅದೆಯು ಮುದ್ರಣ, ಸರ್ವಾಂಗ ಸುಂದರವಾದ ಪುಸ್ತಕ! ಬೇಗ ಬೇಗ ಖರೀದು ಕೊಳ್ಳಿರಿ!!

ಕ್ರಯ ಒಂದು ರೂಪಾಯಿ ಎಂಟಾಣೆ.

ನಮ್ಮ ವಿಳಾಸ:—ಭಾರತಿ ಸಂಪಂಗಿರಾಮು,
[4-5] 42, ಸಿ. ಬೀದಿ, ಕೋಟೆ, ಬೆಂಗಳೂರು ಸಿಟಿ.

ಬೇಗ ತರಿಸಿಕೊಳ್ಳಿ, ಒಳ್ಳೆ ಸಮಯ

ಕನ್ನಡ ಕ್ರಿಮಿನಲ್ ಪ್ರೊಸಿಜರ್ ಕೋಡು.

ಇದುವರೆಗಿನ ಕೋಡುಗಳಿಗಿಂತಲೂ ಹೆಚ್ಚಾಗಿ ವಿಶೇಷ ವಿಷಯಗಳನ್ನು ಸಂಗ್ರಹಿಸಿ ದಪ್ಪನಾದ ಬಿಳೀ ನುಣುಪಾದ ಕಾಗದದಲ್ಲಿ ಅಚ್ಚುಹಾಕಲ್ಪಟ್ಟಿದೆ. ಪೋಲೀಸಿನವರಿಗೂ, ಪಟೇಲರಿಗೂ, ಶಾನುಭೋಗರಿಗೂ ಅತ್ಯಂತ ಅವಶ್ಯಕವಾದದ್ದು. ಕ್ರಯ 696 ಪುಟಪುಸ್ತಕಕ್ಕೆ 3 ರೂಪಾಯಿಗಳು ಮಾತ್ರ. ಒಂದು ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಟಪಾಲ್ ಹಾಸಲ್ ಮುಫತ್ತಾಗಿ ರವಾನಿಸಲ್ಪಡುವದು.

[251-12] ವಿಳಾಸ:—ಬಿ. ವಸಂತರಾವ್, ಲಾ ಆಫೀಸ್, ಬೆಂಗಳೂರು.

ನವೀನ ಕಾದಂಬರಿಗಳು.

ಸತ್ಯರಾಜನ ಪೂರ್ವದೇಶ ಯಾತ್ರೆ—ಸಾಸ್ವರಸ ಪ್ರಧಾನವಾದ ಒಂದು ಮಲೆಯಾಳ ದೇಶಗಳ ಕಥೆ

ಸತ್ಯರಾಜನ ಪೂರ್ವದೇಶ ಯಾತ್ರೆ—ಮಲೆಯಾಳ ದೇಶಗಳ ಕಥೆ	...	1-4-0
ಮಾಧವಚಂದ್ರ—ಚಮತ್ಕಾರಿಕವಾದ ನಾವೆಲ್.	...	0-6-0
ಸರಳಾಬಾಲೆ—ಮನೋಹರವಾದ ಕಾದಂಬರಿ.	...	0-8-0
ರಾಘವಾನಂದ—ನೀತಿಬೋಧಕವಾದ ಚಟ್ಟಕಥೆ.	...	·8-0

ಅನಂಗಸುಂದರಿ, ಶಾರದಾಸುಂದರಿ, ವಿನೋದಕರವಾದ ಕಾದಂಬರಿಗಳು.— ಪ್ರತಿ 1 ಕ್ಕೆ 8 ಆಣೆ. ಇವಲ್ಲದೆ ಕಮಲಿನಿ 6 ಆಣೆ ಸಂತಾಪಕ 4 ಆಣೆ. ಮುಂತಾದ ಹಲವು ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

[277-8] ವಿಳಾಸ:—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

Free! **ಬಹುಮಾನ.** Free!

ಈ ಕಾದಂಬರಿಗಳಲ್ಲಿ 5 ರೂಪಾಯಿಗೆ ಕಮ್ಮಿ ಇಲ್ಲದ ಪುಸ್ತಕ ಆರ್ಡರಿಗೆ ಶೋಭನೆ ಎಂಬ 12 ಆ. ಬೆಲೆಯ ಸೊಗಸಾದ ಬಂಗಾಳಿ ಕಾದಂಬರಿಯು ಉಚಿತ. ಅಥವಾ 10 ಆಣೆ ಬೆಲೆಯ S.T.A. ಕ್ಯಾಲೆಂಡರ್ ಉಚಿತ. [281-8]

ಸುಶೀಲೆ—	ಶ್ರೀ. ಕಮಲಮ್ಮನವರಿಂದ	0- 6-0
ಸತೀಸ್ಮರಣಿ—ಸಥಾ ಭಾಗ 1	,,	0- 8-0
ವಿದ್ಯುಲ್ಲತಾ— ಹನಿದೆ	,,	0-14-0
ವಿರಾಗಿಣೀ— ಸಥಾ ಭಾಗ 2	,,	1- 0-0
ದಕ್ಷಕನ್ಯಾ— ವಿಂಧಾ	,,	1- 8-0.
ಮಾಧವಿ— ಬಂಗಾಳಿ ಪ್ರಭಾವಿ ನಾವಲ್		0- 6-0
ರಾಜಪುತ್ರ ಜೀವನಸಂಧ್ಯಾ—ಬಂಗಾಳಿ ನಾವಲ್		0-12-0
ಚಂದ್ರಪ್ರಭಾ ಎಂಬ ಹೊಸ ಕಾದಂಬರಿ		0-14-0

ವಿಳಾಸ. ಎಂ. ಎಸ್. ಬುಕ್ ಕಂಪೆನಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಹೊಗಳಿಕೆಗಿಂತಲೂ

ಪರೀಕ್ಷೆಯೇ ಮೇಲು !!!

ನೂರಾರು ವರುಷಗಳ ಅನುಭವದಿಂದ ಗುಣಕಂಡು ಪ್ರಖ್ಯಾತಿ ಹೊಂದಿರುವ ಶಾಸ್ತ್ರ ಸಮ್ಮತವಾದ ಮತ್ತು ಅತಿ ಸುಲಭ ಬೆಲೆಯುಳ್ಳ ಈ ಮಹೌಧಗಳನ್ನು ಸಮಾ ಪದಲ್ಲಿ ತರಿಸಿ ಉಪಯೋಗಿಸಿಕೊಳ್ಳಿರಿ. ಸ್ವಲ್ಪ ಕಾಲದಲ್ಲಿ ಮತ್ತಾವುದೂ ಇದರಂತೆ ಶರೀರವನ್ನು ಕಾಪಾಡಲಾರದು. ಪರೀಕ್ಷಿಸಿ ಗುಣವನ್ನು ತಿಳಿಯಿರಿ. [278-8]

ಶ್ರೀಕರ ಕಸ್ತೂರಿ ಮಾತ್ರೆ ನೂರಾರು 300 ಮಾತ್ರೆ ಸೀಸೆಗೆ	4 ಆಣೆ.
ಸುಖಭೇದಿ ಮಾತ್ರೆ ೧೮೦ ಮಾತ್ರೆ ಸೀಸೆಗೆ	4 ಆಣೆ.
ಬಾಲ ಸಂಜೀವಿನಿ 60 ಮಾತ್ರೆ ಸೀಸೆಗೆ	4 ಆಣೆ.
ಅಶ್ವಗಂಧ (ಸಕಲ ವಾಯು ರೋಗಗಳಿಗೆ ಸಿದ್ಧ ವ್ಯಾಧಿ) ಸೀಸೆಗೆ	4 ಆಣೆ.
ನಾರಿಕೇಳಾಂಜನ ಸೀಸೆಗೆ	4 ಆಣೆ.
ಅವಿ-ದನಿ-ಬಾಯಿಯಾರಿಕೆ, ಬಾಯಿನಾಥ, ಆಯಾಸಕ್ಕೆ 180 ಮಾತ್ರೆ	4 ಆಣೆ.

ಮೇಲ್ಕಂಡ ಆರು ಔಷಧಗಳ ಪೈಕಿ ನಿಮಗೆ ಬೇಕಾಗುವ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಸೇರಿ ರೂ. 1-8-0 12 ಸೀಸೆಗೆ ರೂ. 2-12-0. 25 ಸೀಸೆಗೆ ರೂ. 5-0-0.

ಪ್ರತಿ ಔಷಧದ ಜೊತೆಯಲ್ಲೂ ವಿಶದವಾದ ಅನುಪಾನ ಪತ್ರವಿರುವುದು.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು ! 16 ಮೊಳ !! ಬಾಳಿಕೆ ಬರುವದು !!!

ಹವಳದ ಬಳ್ಳಿ ಶೀರೆ. ರೂ. 2-8-0.

ಈ ತಾಜಾ ನಮೂನೆ ಸೀರೆಗಳು ಬಹು ನಾಜೂಕಾದ ಬಿಳೀ ಮಲ್ಲಿನಲ್ಲಿ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸನ್ನ ಅಂಚು

ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಭಾರಿ ಕ್ರಯದ ಶೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಬೇರಲ್ಲಿಯೂ ದೊರಿಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು

ವಿಳಾಸ:— ರಾಸ್ ನಾಚ್ ಅಂಡ್ ಕಂಪೆನಿ,

[252-12] 3, ಇರುಳಪ್ಪನ ಬೀದಿ, ಮದರಾಸು

ಮಾರ್ಜ್ಜಾವಾಯುವಿನವರೂ ಸ್ವಸ್ಥರಾಗುತ್ತಾರೆ

ಬಹುಕಿಷ್ಟರೂ ಅರ್ಧ ಸತ್ತಿರುವ ಮೂರ್ಚ್ಛಾ ವಾಯುವಿನವರನ್ನು ಕಂಡರೆ ವ್ಯಸನವಾಗುತ್ತೆ. ಈ ಭಯಂಕರವಾದ ರೋಗದಿಂದ ಕಷ್ಟಪಡುತ್ತಿರುವ ಸುಗನಾಪರೂ ಮಗೂಡರೂ ನಿಮಗಿದ್ದಾರೋ? ಇಂಥಾ ಕಷ್ಟದಿಂದಲೂ ಯತ್ನವಿಲ್ಲದ ಚಿಕಿತ್ಸೆಯಿಂದಲೂ ಬಿಡುಗಡೆಯಾಗಲು ಮರಣವನ್ನು ಅಪೇಕ್ಷಿಸುವ ಸ್ನೇಹಿತರ್ಯಾರಾದರೂ ನಿಮಗಿದ್ದಾರೋ?

ಲಂಡನ್ ನಗರದ ಬೀಸ್ಟ್ರೀಟ್ ಬೀದಿಯಲ್ಲಿರುವ ಮಿ॥ ಆ. ಜೆ. ಪಿರ್ಸನ್‌ರವರು ಬರೆಯುವುದು :—"ನನ್ನ ಮಗಳ ಮೂರ್ಚ್ಛಾ ವಾಯುವನ್ನು ಗಟ್ಟಿಗರಾದ ಅನೇಕ ವೈದ್ಯರು ನೋಡಿ ಬಿಟ್ಟುಕೊಟ್ಟರು. ಆದರೆ ಆಕೆಗೆ ದಿನವೊಂದಕ್ಕೊಂದು ಏನೂ ಪ್ರಯೋಜನವಾಗಲಿಲ್ಲ. ಟ್ರೆಂಚ್ ಪೆಮಿಡಿ ಎಂಬವನ್ನು ಉಪಯೋಗಿಸಿದಾಗಲಿಂದ ತುಂಬಾ ಬದಲಾವಣೆ ಯಾಯಿತು. ಆಕೆಯು ಇದಕ್ಕೆ ಮುಂಚೆ ಅನುಭವಿಸದಂಥಾ ಹೊಸ ಜೀವವೂ ಹೊಸ ಬಲವೂ ತನಗೆ ಬಂದಂತೆ ವರ್ಣಿಸುತ್ತಾಳೆ. ಬೇಗ ಆಕೆಯು ಪೂರ್ಣ ಸ್ವಸ್ಥಳಾಗುವಳೆಂದು ನಿಸ್ಸಂದೇಹವಾಗಿ ತಿಳಿದಿದ್ದೇನೆ."

ಸೀಸೆ 1ಕ್ಕೆ 1 ರೂ. ಮೇಲಿಗೆ ವಿವರವಾದ ಪತ್ರಿಕೆಯೂ ಸಿಗುತ್ತೆ.

[81-40]

ರಿಜಿಸ್ಟರ್ ಇಂಡಿಯನ್ ಮೇಯಿಲ್ ಲೀವರ್ ವಾಚು.

ಉತ್ತಮ ಸರಪಣಿ ಸಹಿತ ಕ್ರಯ ರೂ. 3-0-0.	6 ವರುಷಗಳ ಗ್ಯಾರಂಟಿ ಪತ್ರ.	ವಿ ಪಿ ಛಾರ್ಜು 4 ಆಣೆ.



ಇದು ನಮಗಾಗಿ ಉತ್ತಮ ರೀತಿಯಿಂದ ಮಾಡಲ್ಪಟ್ಟದ್ದು. ಬೇರೆ ಯಾರಲ್ಲಿಯೂ ಸಿಕ್ಕಲಾರದು. ಬಡಜನ್ಗರಿಗೋಸ್ಕರ ಇಷ್ಟು ಕಡಮೆ ಕ್ರಯ ಇಟ್ಟಿರುತ್ತೇವೆ. ಕಡಮೆ ಕ್ರಯವಾದರೂ ಬಹಳ ಉತ್ತಮವಾದದ್ದು. ಇದರ ಹಿಂಭಾಗದಲ್ಲಿ ನಮ್ಮ ಟ್ರೇಡು ಮಾರ್ಕು, ಡಸ್ಟ್ ಪ್ರೂಫ್ ಎಂಬ ಗ್ಲಾಸು ಡೋಮೂ ಇರುವದು. ಬಹಳ ಗಟ್ಟಿಯಾದ ಸಾಮಾನುಗಳಿಂದ ತಯಾರಾಗಲ್ಪಟ್ಟು ಕಾಲವನ್ನು ಸರಿಯಾಗಿ ತೋರಿಸುವದು. ಓಡಿದರೂ, ಕುದುರೆ ಸವಾರಿ ಮಾಡಿದರೂ, ಕೆಳಗೆ ಜಾರಿ ಬಿದ್ದರೂ ಗಡಿಯಾರ ನಿಲ್ಲದೆ ಕಾಲವನ್ನು ಸರಿಯಾಗಿ ತೋರಿಸುವದು ಪರೀಕ್ಷಿಸಿರಿ.

ನಮ್ಮ ವಿಳಾಸ :—ಸುಪೀರಿಯರ್ ವಾಚ್ ಕಂಪೆನಿ,

[260-10] ಪೋಸ್ಟು ಬಾಕ್ಸು 167, ಮದರಾಸ್.

ಯಥಾರ್ಥ ದೇಶವತ್ಸಲನು

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವುದಕ್ಕೆ ತನ್ನ ಶರೀರ ಸೌಖ್ಯವನ್ನೂ ಕಾಯಪುಷ್ಟಿಯನ್ನೂ ಕಾಪಾಡಿಕೊಂಡು ಬಹಳ ಅತ್ಯಂತ ಜಾಗರೂಕನಾಗಿರುತ್ತಾನೆ. ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥಾದ್ದು ನಿಮ್ಮ ಮಾತುಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತಿರಬೇಕು. ಈ ಉದ್ದೇಶಕ್ಕಾಗಿ ನೀವು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿರುವ ನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ತಪ್ಪದೆ ಕ್ರಮವಾಗಿ ಸೇವನೆ ಮಾಡುತ್ತಾ ಬನ್ನಿ. ಈ ಮಾತ್ರೆಯು ನಿಮ್ಮ ಶರೀರದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿ ಯಾವ ರೋಗವೂ ತಲೆ ಎತ್ತದಂತೆ ನಾಶವಾಗುವುದು.

ಕ್ರಯ 40 ಮಾತ್ರೆಗಳ ಡಬ್ಬಿಗೆ ರೂ. 1-0-0.

ತಾ. ಕ :—ಒಂದು ದೊಡ್ಡ ಕ್ಯಾಟ್‌ಲಾಗನ್ನೂ, ರೋಗ ಪರಿಹಾರಕ್ಕೆ ತಕ್ಕ ಸಲಹೆಗಳನ್ನೂ ಬಿಟ್ಟಿ ಪಡೆಯಬಹುದು.

ವಿಳಾಸ :—ರಾಜವೈದ್ಯ ನಾರಾಯಣಜಿ ಕೇಶವಜಿ,

[255-11] 20, ಚೈನಾ ಬಜಾರ್ ರೋಡ್, ಮದರಾಸ್.

ಮಧುರೆ ಜುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ. 3-0-0.

ಜನವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ... ಒಂದನ್ನು ... ಪರೀಕ್ಷಿಸಿ. ವಿಳಾಸ

ವಿ. ಕೆ. ಕಂಪುಸಾಮಿ

[111-35] ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಇದನ್ನು ಅವಶ್ಯವಾಗಿ ನೋಡಿ.

ಅರ್ಧ ಕ್ರಯ. ಈ ತಿಂಗಳು ಮಾತ್ರ.

ಸುಂದರವಾದ ಲಂಡನ್ ಪೋಕೆಟ್ ವಾಚ್.

ಮುಂಚಿನ ಬೆಲೆ ರೂ. 3-0-0, ಈಗ ರೂ. 2-0-0.

5 ವರ್ಷದ ಗ್ಯಾರಂಟಿ.

ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವನ್ನು ಇದುವರೆಗು ರೂ. 3-0-0 ಗೆ ವಿಕ್ರಯ ಮಾಡಿದೆವು. ಇದು ಎಲ್ಲರೂ ಅಂದರೆ ಬಡ ಭಾಗ್ಯವಂತರು ಕೊಂಡುಕೊಳ್ಳಬೇಕೆಂಬ ಉದ್ದೇಶವಾಗಿ ಇದನ್ನು ಈಗ ರೂ. 2-0-0 ವಿಕ್ರಯ ಮಾಡಬೇಕೆಂದು ಏರ್ಪಾಡು ಆಗಿಯದೆ. ಈ ಗಡಿಯಾರ ಬಹು ನಾಜೂಕಾಗಿಯೂ ಮಜಬೂತಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ಈ ಗಡಿಯಾರ ಇತರ ಕಂಪೆನಿಯಲ್ಲಿ ಇಷ್ಟು ಕಡಿಮೆ ಧಾರಣೆಗೆ ದೊರೆಯಲಾರದು. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಮಾರಲ್ಪಡುತ್ತವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ರೂ. 2-0-0 ಕ್ಕೆ ಕೊಡಲ್ಪಡುತ್ತೆ.



ನಮ್ಮ ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕಂಪನಿ,

[252-12] 3, ಇರುಳಪ್ಪನ ಬೀದಿ, ಮದರಾಸು.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಾನಾ ವಿಪತ್ತಿಗೂ ವೈದ್ಯರ ಸಮಯವನ್ನು ಕಾದು ನೋಡುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾತವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಜಕರ್ಣ, ಬಲಹೀನತೆ ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರ ಪ್ರತಿ ಸೀಸೆಯೊಡನೆಯೂ ಇರುವುದು. 380 ಮಾತ್ರೆಗಳುಳ್ಳ ಡಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲ್ ಛಾರ್ಜು ಸೇರಿ ರೂ. 1-8-0; 12 ಸೀಸೆಗಳಿಗೆ ರೂ 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫರಿಡ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಬಿ ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರೀನ್ ನಂ 3, ಬೊಂಬಾಯಿ, ಇವರು ಬರೆದಿರುವದು—"ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ... ಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ" (2) ಮ॥ ... ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಬಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ... ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ನಾಟಿಕೆಗಳಿಂದಲೇ ಔಷಧವನ್ನು ತಯಾರಾಗುತ್ತಾರೆ.

[189-21] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗಿಗಾಗಿ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ 1 ಕ್ಕೆ 36 ವಿಧವಾದ ಇನಾಂ ಸಾಮಾನುಗಳ ಸಮೇತ 15 ತೊಲೆ ಎಣ್ಣೆಯ ಕ್ರಯ ರೂ. 1-0-0.

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡುಬಾಳಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವದು. ಒರಟಾಗಿರುವ ಕೂದಲು ಮೃದುವಾಗುವದು. ನೇರಳೆಹಣ್ಣಿನಂತೆ ಕಪ್ಪಾಗಿ ಥಳಥಳಿಸುವದು. ... ದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಡನ್ನು ಸರಿಮಾಡುವದು. ... ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ ಜವ್ವಾಜಿ, ಪುನುಗು, ಅಂಬರ್, ... ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ... ತಿಗೆ, ಕ್ಯಾದಿಗೆ, ಗುಲಾಬಿ, ಪಚ್ಚೆತೆನೆ, ದವನ, ಮರುಗ, ಇತ್ಯಾದಿ ... ಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ... ಹಚ್ಚಿಕೊಂಡರೆ ಯಾವತ್ತು ದಿವಸಗಳ ವರೆಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಎಲ್ಲರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ತೈಲವು ಆವಶ್ಯಕವಾಗಿ ಇರಬೇಕಾದದ್ದು.

15 ತೊಲ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳ ಸಮೇತ ರೂ. 1-0-0.

ಇನಾಂ ಸಾಮಾನುಗಳ ಪಟ್ಟಿ—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1, ದಂತದ ಬಾಚಣಿಗೆ 1, ಮುಖ ನೋಡಿಕೊಳ್ಳುವ ಕನ್ನಡಿ 1 ... ಸಿಲ್ವರ್ ಕಾಡಿಗೆ ಭರಣಿ 1, ಅತ್ತರು ಬಲ್ಡಿ 1, ವಾಸನೆಯುಳ್ಳ ಸೋಪು 1, ತಾಂಬೂಲಮಾತ್ರೆ 22, ಕೊಂಡೆ ಗಿಣಿಗಳು 6, ಕಾರೊನೇಷನ್ ಬ್ರೂಚ್ 1, ... ಡಬ್ಬಿ 1. ಈ ತರಹ 36 ಇನಾಂ ಕೊಡಲ್ಪಡುತ್ತೆ.

ನಮ್ಮ ವಿಳಾಸ:—ಎನ್. ಎಮ್. ಸ್ವಾಮಿ ಅಂಡ್ ಕಂಪೆನಿ,

[200-10] ನಂ. 44, ನಂಬುಳಯ್ಯರ ಬೀದಿ, ಮದರಾಸು

ಸ್ವದೇಶ ಕೈಗಾರಿಕೆಗಳು.

ಅನೇಕ ಸ್ಥಳಗಳಲ್ಲಿ ಕೈಗಾರಿಕೆಗಳ ಕಾರ್ಖಾನೆಗಳನ್ನೂ, ಲಂಟಾನಾ ಬೂದಿ ಕಡ್ಡಿ ಗೊಬ್ಬರವನ್ನು ತಯಾರಿಸ ಬಹುದಾದ ಕಾರ್ಖಾನೆಗಳನ್ನೂ ಏರ್ಪಡಿಸುವ ಉದ್ದೇಶದಿಂದ ನಮ್ಮ ದೇಶಬಾಂಧವರಿಗೆ ಅರಿಕೆ ಮಾಡಿಕೊಳ್ಳುವುದೇನಂದರೆ ನಮ್ಮ ಸ್ಥಳದಲ್ಲಿ ಯಾವುದಾದರೂ ಕೈಗಾರಿಕೆಯನ್ನ ಆಗಲಿ ಗೊಬ್ಬರದ ಕಾರ್ಖಾನೆ ಆಗಲಿ ಇಡಬೇಕೆಂದು ಯಾರಿಗಾದರೂ ತಾತ್ಪರ್ಯವಿದ್ದರೆ ತಿಳಿಸಿದ ಪಕ್ಷದಲ್ಲಿ ಅವರು ಕಳೆಕು ಮಾತನಾಡಿಕೊಂಡು ನನಗೆ ತಿಳಿಸಿದರೆ ನಾನು ಬಂದು ಎಲ್ಲವನ್ನು ತಯಾರಿಸುವ ರೀತಿಯನ್ನು ತೋರಿಸಿ ಅನುಭವಪಡಿಸಿ ಕಾರ್ಖಾನೆಯನ್ನು ಏರ್ಪಡಿಸುವೆನು. ಕೆ. ಆರ್. ಚಕ್ರವರ್ತಿ,

[...] ಏಜಂಟ್, ನ್ಯು. ಸ್ಟೀಂ ಟ್ರಾಂವೆ ಕಂಪನಿ, ಬೆಂಗಳೂರು ಸಿಟಿ

ಪರೀಕ್ಷೆಗಾಗಿ ಮುಫತ್ತು.

ನಮ್ಮ "ಬೇಷಾಕಾ" ಎಂಬುವದು ತಲೆನೋವನ್ನು ತಕ್ಷಣವೇ ನಿಲ್ಲಿಸುತ್ತದೆ. ಇದು ಕಾಲದಿಂದಲೂ ಬರ್ಮಾದಲ್ಲಿ ಖ್ಯಾತಿಗೊಂಡಿದೆ. ಬಹಳ ಜನಗಳ ವಿಶ್ವಾಸವನ್ನು ಸಂಪಾದಿಸಿಕೊಂಡಿದೆ. ಅದು ತವಾದದ್ದರಿಂದಲೂ ಎಲ್ಲಾ ತರದ ತಲೆನೋವುಗಳನ್ನೂ ಉತ್ತರ ಕ್ಷಣದಲ್ಲೇ ಗುಣವಾಡತಕ್ಕದ್ದರಿಂದಲೂ ಕೇಳಿದರೂ ಸರ್ಟಿಫಿಕೇಟುಗಳನ್ನು ಅನೇಕವಾಗಿ ಸಂಪಾದಿಸಿಕೊಂಡಿದೆ — ಈ ಔಷಧವನ್ನು ಹಿಂದೂಸ್ಥಾನ, ಸಿಲೋನ್ ಮತ್ತು ಇತರ ದೇಶಗಳಲ್ಲಿ ಪ್ರಚಾರಕ್ಕೆ ತರಬೇಕೆಂಬ ಉದ್ದೇಶದಿಂದ ನೀವು ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿಯೂ ಸಂಪೂರ್ಣವಾಗಿಯೂ ನಮಗೆ ತಿಳಿಸಿದರೆ ನಿಮಗೆ ನಾವು ಬಟ್ಟಿಯಾಗಿ ಎರಡು ಸಣ್ಣ ಪೊಟ್ಟಣಗಳನ್ನು ಕಳುಹಿಸುವೆವು. ಅವನ್ನು ಉಪಯೋಗಿಸಿದರೆ ಅದರ ಗುಣ ನಿಮಗೇ ತಿಳಿಯುತ್ತದೆ.— ಈ ತಲೆನೋವಿನ ಔಷಧಿಯನ್ನು ದೊಡ್ಡವರಿಗೆ ಉಪಯೋಗಿಸುವಷ್ಟು ಹೆಚ್ಚಾಗಿ ಮಾಡಿದೇವೆ. ಅವನ್ನು ಪೊಟ್ಟಣಗಳಾಗಿಯೂ ಬಿಲ್ಲೆಗಳಾಗಿಯೂ ತಯಾರ್ಮಾಡಿರುವೆವು. ಅಂಥಾ 12 ಪೊಟ್ಟಣಗಳಾಗಲಿ, 12 ಬಿಲ್ಲೆಗಳ ಒಂದು ಸೀಸೆಗಾಗಲಿ ಕ್ರಯ ರೂಪಾಯಿ 1-0-0.

Address—Francis Medical Hall,
Manufacturing Chemists, Myanaung, Burma.
ನಮ್ಮ ವಿಳಾಸ—ಫ್ರಾನ್ಸಿಸ್ ಮೆಡಿಕಲ್ ಹಾಲ್,
[12-2] ಮಯಾನಾಂಗ್, ಬರ್ಮಾ.

ಬೆಸ್ಟ್ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾ ಅಸಲ್ ಸಾಲಾಮಿಸರಿಯಲ್ಲಿ ಬೆಳ್ಳಿ ರೇಖು ಮುಂತಾದ್ದು ಸೇರಿಸಿ ಅತಿ ನಯವಾಗಿ ತಯಾರಾಗುವಮಾಡಿದೇವೆ. ಈ ಮುರಬ್ಬ ಉಷ್ಣಕಾರಕದಿಂದ ಉಂಟಾದ ಅನೇಕ ವ್ಯಾಧಿಗಳಿಗೆ ಸಂಜೀವನವಾಗಿರುತ್ತೆ. ಈ ಮುರಬ್ಬಾ ನಾವು ಲೋಕೋಪಕಾರಾರ್ಥವಾಗಿ ಶಾಸ್ತ್ರಾಂತ್ರದಿಂದ ತಯಾರಿಸುವರು ಋತ್ತೇವೆ. ಅತಿ ಯೋಗ್ಯರು ಈ ಮುರಬ್ಬವನ್ನು ನಮ್ಮಿಂದ ತರಿಸಿ ಸೇವನೆಯಿಂದ ಗುಣವುಳ್ಳದ್ದೆಂದು ಸರ್ಟಿಫಿಕೇಟ್ ಕೊಟ್ಟಿರುತ್ತಾರೆ. ನಮಗೆ ಅಸಲ್ ಸಾಲಾಮಿಸರಿ ಬೇರೆ ದೇಶಗಳ ಕಪಾಸ ಸಕ್ ಏಜಂಟರುಗಳ ಮೂಲಕ ಬರುತ್ತದೆ. ಈ ಮುರಬ್ಬಾ ಸಾಲಾಮಿಸರಿಯಲ್ಲಿ ತಯಾರಾದ್ದಲ್ಲವೆಂದು ವ್ಯಕ್ತಪಡಿಸಿ ನಮ್ಮಿಂದ 60 ನವರ್ ಬಹುಮಾನ ಪಡೆಯಬಹುದು. ಇದರ ಪೂರಾ ಸಮಾಚಾರ ತಿಳಿಯಬೇಕೆನ್ನುವವರು ಅರ್ಧಾಣೆ ಸ್ಟಾಂಪು ಕಳುಹಿಸಿ ಕ್ಯಾಟಲಾಗ್ ಪಡೆಯಬಹುದು.

915 ನೇ ಡಿಸೆಂಬರು ಲಾಗಾಯ್ತು ಫೆಬ್ರವರಿ ಆಖೈರಿನ ವರೆಗೂ ವಿ. ಪಿ. ಛಾರ್ಜು ಮಾಫ್ ಮಾಡಿರುತ್ತೆ. ಪಾರಸಲ್ ಸಂಗಡ ಚಿಕ್ಕ ತಕ್ತಿಯೂ, ಅನುಪಾನದ ಪತ್ರಿಕೆಯೂ ಇರುತ್ತೆ. 20 ತೊಲಾ ಉಳ್ಳ ಡಬ್ಬಾ 1 ಕ್ಕೆ ಕ್ರಯ ರೂ. 2.

ಏಜಂಟ್

ಡಿ. ಸೈದ್ ಉಸ್ಮಾನ್ ಅಂಡ್ ಕೊ., ಜನರಲ್ ಮರ್ಚೆಂಟ್, ದೊಡ್ಡಪೇಟೆ ಬೆಂಗಳೂರು ಸಿಟಿ
(ಇಲ್ಲಿ ಯಾವಾಗ್ಯೂ ಸ್ಟಾಕು ಇರುತ್ತೆ ತರಿಸಿಕೊಳ್ಳಬಹುದು)

ಟಿ. ಹೆಚ್. ಆಗಾಜ್ ದಾತಾಗಂಜ್ ವೈದ್ಯರು, ಸುಲ್ತಾನ್ ಷಾ ಸಾಹೇಬ್ ಮಾರ್ಕೆಟ್ ರೋಡ್, ನಂಬರು 104, ಬೆಂಗಳೂರು ಸಿಟಿ.

[358-9]

"SENPAPOD"—The latest Laxative. A highly concentrated essence from the Senna Pod, combined with aromatics etc: Rs. 1/4 per bottle of 60 doses. 12 annas per bottle of 30 doses. *Pleasant, Perfect, Purgative.* [17-2]

"ALETRIS COMPOUND,"—Tones up the system and has a direct action on the whole productive area. No woman who values relief from pain, can afford to be without ALETRIS COMPOUND. Rs. 1/4 per bottle of 32 doses. Both the above are made by qualified English Experts at Mysore Pharmaceuticals Ltd. Bangalore, and can be obtained from Messrs. J. B. Forster & Co., Bangalore.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಆರೋಗ್ಯ ಪ್ರಭಾಕರ. (ಟಾನಿಕ್ ಪಿಲ್ಸ್)—ಪಿತ್ತಕೋಶ, ಜ್ವರಕೋಶಗಳನ್ನು ಸರಿಪಡಿಸಿ, ರಕ್ತವೃದ್ಧಿ ಮಾಡಿ, ನರಗಳಿಗೆ ಬಲಕೊಡುತ್ತೆ. ಬಾತಃಧಿಕ, ಪಿತ್ತ ವಿಕಾರ, ಕ್ಷಯ, ಬಾಣಂತಿಯರ ಕ್ಷಯ, ಮುಟ್ಟುಕಟ್ಟು, ಪಾರ್ಶ್ವವಾಯುಗಳನ್ನು ನಿವಾರಿಸುವದರಲ್ಲಿ ಅಸಮಾನವಾದುದು. 48 ಮಾತ್ರೆಗೆ 1 ರೂ, 6 ಸೀಸೆಗೆ 5 ರೂ.

2. ರೋಗನಾಶಿನಿ.—ಪ್ಲೇಗುಸೋಂಕು ಆಡಬಾರದು ಗ್ರಾಮಗಳಲ್ಲಿರುವಾಗಲೇ ಪ್ರತಿ ಒಬ್ಬರೂ ದಿನನಿತ್ಯ 3-4 ಸಲ 1-2 ಮಾತ್ರೆಯಂತೆ ಸೇವಿಸುವದರಿಂದ ಪ್ರಾಣವನ್ನು ಉಳಿಸಿಕೊಳ್ಳಬಹುದು. ಜನೋಪಕಾರಕ್ಕೆನೆ ಬೆಂ ನ ಲಭವಿಟ್ಟಿದೆ. ಇದರ ಗುಣಕ್ಕೆ ನಮಗೆ ಅನೇಕ ಬಹುಮಾನಗಳು ಬಂದಿವೆ. 40 ಮಾತ್ರೆಗೆ 4 ಆ, 6 ಸೀಸೆಗೆ 1 ರೂ, 12 ಕ್ಕೆ 2½ ರೂ.

[126-22] ನಮ್ಮ ವಿಳಾಸ.—ಪಂಡಿತ್ ಎಸ್. ಗೋಪಾಲ, ಮೈಸೂರು.

ಹೊಸ ನಮೂನೆ ಜವಳಿ.

1. ಹರ್ಕ ಚಲುವೆ ಕೇಮುರೇಕುಗಳು.
2. ಧಡೂತಾದ ಗಟ್ಟಿಬಣ್ಣದ ಚೆಕ್ಕುಗಳು.
3. ಬಾಳಿಕೆಬರುವ, ಗಂಜಿಯಿಲ್ಲದ ಪಂಚೆಗಳು
4. 54 ಅಂಗುಲ ಅಗಲ, 8 ಮೊಳ ಉದ್ದದ ಪಂಚೆಗಳು
5. ಟ್ವೀಡ್ ಮತ್ತು ಫ್ಲಾನೆಲ್ ನಮೂನೆ ಗಟ್ಟಿಬಣ್ಣದ ಕೋಟಿನ ಬಟ್ಟೆ 12 ಗಜದ ಥಾನುಗಳು.
6. ಅಂಚಾರದ ಬಣ್ಣದ ನೂಲಿನ ಶಾಲುಗಳು.
7. ತರತರಾ ಹೊದಿಯುವ ವಿಲಾಯತಿ ಕಂಬಳಿಗಳು
8. 7½, 8, 8½ ಗಜದ ಜಾತರಿ ರಂಗಿನ ಸರೋಂಚಿನ ಸೀರೆಗಳು.
9. ಬೆರಕೆಯಿಲ್ಲದ, ಶುದ್ಧಿಮಾಡಿದ ಹತ್ತಿಯ ತುಪ್ಪಟ ಸಣ್ಣ ದಬ್ಬಗಳು.

ಮಿತಿರಿ ಸುಲಭ, ವ್ಯಾಪಾರಿಗಳಿಗೆ ಹೆಚ್ಚು ರಿಯಾಯಿತಿ [55-41]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್, 159, ತಿಲಾರಿ ರೋಡ್ (ಕುಂಚಿಗರಪೇಟೆ), ಬೆಂಗಳೂರು ಸಿಟಿ.

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಸಾವಿತ್ರೀ ಹೇರ್ ಆಯಿಲ್

ಇದರ ಜೊತೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 0-12-0 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಹರಡುವ ವಾಸನೆ ತೋರುವದು. ಇದರ ಪರಿಮಳ ಸುವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಅಸಾಧ್ಯ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿನ ಮದುಳನ್ನು ಸ್ವಾಧೀನಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೇ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೋಡಿ ರಿಂಗ್ 6, ಪೆ ಛರೆ 1, ತಾಂಬೂಲಪತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರ್ಡ್‌ಬೋರ್ಡ್ ಪಟ್ಟಿಗೆ 1, ರವಿವರ್ಮ ಫೋಟೋ ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, ಒಟ್ಟು 60. ನಮ್ಮ ಕಂಪನಿ ಪ್ರಖ್ಯಾತಿಹೊಂದುವದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ದಾಣಿ ಕಂಪನಿ,
[253-12] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ಫಲಾಹಾರವನ್ನು ಸಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಶಾರೀರಶಕ್ತಿಯು ಕ್ರಮವಾಗಿ ಏರುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಪಾಠಕರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ಆರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನ ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. 26-53

... ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
... " " " 4 "	200 " ... " 9 "	80 " " " 4 "	1200 " " 2 "

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಕೊಡುವರು.

ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಮಾರಾಟಕ್ಕೆ ಇಡಲಾಗಿದೆ.

ಫೀವರ್ ಮಿಕ್ಸ್ಚರ್

ಎಲ್ಲಾ ಜ್ವರಗಳಿಗೂ ಹಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ವಿಜ್ಞಾಪಿಸುತ್ತೇವೆ. [213-17]

ಕ್ರಯ 0-10-0; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,
ಎಗ್ಯೂ ಮಿಕ್ಸ್ಚರ್ ಡಿಪೊ, ಬೊಂಬಾಯಿ, 4.
KARNIK Bros. BOMBAY, 4.

ಈ ಲಾಭಕರವಾದ ಸಮಯವನ್ನು ಬಿಡಬೇಡಿ.

ಆಶ್ಚರ್ಯವಾದ ಸೇವಿಂಗ್ಸ್ ಬಾಕ್ಸ್ ಎಂಬ ಮರ್ಮದ ಪೆಟ್ಟಿಗೆ.

ಇದೇ ತಿಂಗಳು ಮಾತ್ರ 12 ಆಣೆ

1,000 ಪೆಟ್ಟಿಗೆ ಖರ್ಚಾಗಿ ಇದೆ.

ಈ ಪೆಟ್ಟಿಗೆಯನ್ನು ಎಲಕ್ಟ್ರಿಕ ವೈಖರಿ ಚಿತ್ರವಿಚಿತ್ರ ಕೆಲಸದಿಂದ ಮಾಡಿ ನೋಡುವವರಿಗೆ ಸಂತೋಷಕರವಾದ ಪೆಟ್ಟಿಗೆ. ಇದಕ್ಕೆ ಕಳ್ಳರ ಭಯವೇ ಇಲ್ಲ. ... ಈ ಪೆಟ್ಟಿಗೆಯಲ್ಲಿ ಹಣವನ್ನಾಗಲಿ, ಚಿನ್ನ ವಸ್ತುಗಳನ್ನ ಇಟ್ಟು ಮುಚ್ಚಿ ಬಿಡಬೇಕು. ಅನಂತರ ಅದನ್ನು ಯಾರೇ ... ತೆರೆದರೆ ಅದರಲ್ಲಿ ಇರುವ ವಸ್ತುಗಳು ಮಾಯವಾಗುವವು. ಆ ಪದಾರ್ಥ ... ಇಟ್ಟವರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಕಾಣುವವು. ಈ ಪೆಟ್ಟಿಗೆ ... ಕಂಡ ಇಟ್ಟುಕೊಳ್ಳಬಹುದು. ಬೇಗನೆ ತರಿಸಿಕೊಳ್ಳಿ. ... ದನ್ನು ನೋಡಿ ಸ್ವತಃ ... ತರಿಸಿಕೊಳ್ಳುವದಕ್ಕೆ ಪ್ರಯತ್ನ ಪಡುವರು.

[262-12] ನಮ್ಮ ವಿಳಾಸ—ರಾಮಚಂದ್ರ ಅಂಡ್ ಕಂಪನಿ,
16, ತಿರುಪಳ್ಳಿ ಬೀದಿ, ಮದರಾಸು.

ನಮ್ಮ ಪೆಟ್ಟಿಗೆಯನ್ನು ತರಿಸಿಕೊಳ್ಳುವವರಿಗೆ ಮಾತ್ರ 1916 ನೇ ಹೊಸದಾದ ... ಕ್ಯಾಲೆಂಡರು ಇನಾಮಾಗಿ ಕೊಡುವೆವು

BANGALORE CITY MUNICIPALITY.
Notice, dated 28th January, 1916.
READY FOR SALE

Kanarese translation of the Municipal Rules and Bye-laws framed under the several sections of the Mysore Municipal Regulation of 1906, bound into book form of convenient size, can be had at the City Municipal Office. Price annas 10.

(Sd.) **R. Subba Rao,**
Vice-President.

[31-1]

ಅರೇಬಿಯನ್ ನೈಟ್ಸ್
ಎಂಬ
ಯವನ ಯಾಮಿನೀ ವಿನೋದ ಕಥೆಗಳು.
[ರಕ್ಷಪತ್ರ]

[illegible] ಮುದ್ರಣವು [illegible] ಎರಡನೇ ಮುದ್ರಣವನ್ನು [illegible] ಪ್ರಿಂಟಿಂಗ್ ಮತ್ತು ಬೈಂಡಿಂಗ್ ಸಂಬಂಧದ [illegible] ಈ ಎರಡನೇ ಮುದ್ರಣವನ್ನು [illegible] ಅವುಗಳಲ್ಲಿನ ಕಥೆಗಳು ಬಹು [illegible] ಬೆಲೆ [illegible] ವಿ. ಪಿ. ಪಿ. [illegible] ರೂ 3-4-0. [illegible] [239-33]

[illegible]—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ವೃತ್ತಾಂತ ಪತ್ರಿಕೆ.

—:0:—

೬೮ ೧೯೧೬ ನೇ ಇಸವಿ ಫೆಬ್ರವರಿ ತಾ. ೩ ನೇ ಗುರುವಾರ.

ಮೈಸೂರು ವೈದ್ಯ ಇಲಾಖೆ.

ನಮ್ಮ ಸಂಸ್ಥಾನದಲ್ಲಿರುವ ಸಾಧಾರಣ ಆಸ್ಪತ್ರೆಗಳು, ಡಿಸ್ಪೆನ್ಸರಿಗಳ ಮತ್ತು ಸ್ಪೆಷಲ್ ಆಸ್ಪತ್ರೆಗಳ 1914 ನೇ ಇಸವಿಯ ಆಡಳಿತದ ರಿಪೋರ್ಟುಗಳು ಈಗತಾನೇ ನಮಗೆ ತಲಪಿವೆ; ಅಂದರೆ, ಈ ರಿಪೋರ್ಟುಗಳಲ್ಲಿ ಕಂಡ ವಿಚಾರಗಳೆಲ್ಲಾ ನಡೆದು ಹನ್ನೆರಡು ತಿಂಗಳಿಗಿಂತ ಹೆಚ್ಚಾಯಿತು. ರಿಪೋರ್ಟುಗಳೇನೋ ವರುಷ ಕಳೆದ ಆರು ತಿಂಗಳಲ್ಲಿ ಸರ್ಕಾರಕ್ಕೆ ಆಯಾ ಇಲಾಖೆಗಳಿಂದ ತಲಪಿದವು. ಗವರ್ನ್‌ಮೆಂಟಿನವರು ಅವುಗಳನ್ನು ಓದಿ ನೋಡಿ ಅವುಗಳ ಮೇಲೆ ತಮ್ಮ ಹುಕುಮುಗಳನ್ನು ಬರೆಯದೆ ರಿಪೋರ್ಟುಗಳನ್ನು ತಮ್ಮ ಮೇಜಿನ ಮೇಲೆ ಆರು ತಿಂಗಳಕಾಲ ಇಟ್ಟುಕೊಂಡಿದ್ದರು. ಆಳ್ವಿಕೆಗೆ ಸಂಬಂಧಪಡುವ ಇಂಥಾ ಸಿತ್ಯಗಳ್ಲ ಇಲಾಖೆಯ ವಿಷಯದಲ್ಲಿ ನಮ್ಮ ಸರ್ಕಾರದವರು ಈ ರೀತಿ ಅನಾದರಣೆ ಮಾಡುವುದು ತರವಲ್ಲ. ವೈದ್ಯಕೀಯವಾದ ಕಾರ್ಯವನ್ನು ನಡಿಸುವುದು ಯೋಗ್ಯವೂ ಹಿತಕರವೂ ಆಗಿರುವ ಪಕ್ಷಕ್ಕೆ—ಗವರ್ನ್‌ಮೆಂಟಿನವರು ಪ್ರಜೆಗಳ ವಿಷಯದಲ್ಲಿ ನಡಿಸಬಹುದಾದ ಕಾರ್ಯಗಳಲ್ಲೆಲ್ಲಾ ಈ ಏರ್ಪಾಟು ಅತ್ಯಂತ ಅನುಕೂಲ್ಯವಾದದ್ದೇ ಸರಿ—ಇಂಥಾ ಕಾರ್ಯವನ್ನು ನಡಸುವ ಇಲಾಖೆಯ ರಿಪೋರ್ಟನ್ನು ಗವರ್ನ್‌ಮೆಂಟಿನವರು ಕೇಳಿ ತರಿಸಿಕೊಳ್ಳುವ ಪಕ್ಷಕ್ಕೆ, ಅಂಥಾ ರಿಪೋರ್ಟನ್ನು ಓದಿ ನೋಡಿ ಅದರ ಮೇಲೆ ತಮ್ಮ ಅಭಿಮತವನ್ನು ಬರೆಯದೆ ಆರು ತಿಂಗಳಕಾಲ ಇಟ್ಟುಕೊಳ್ಳಬಾರದು. ನಮ್ಮ ಗವರ್ನ್‌ಮೆಂಟಿನವರು ಸರ್ಕಾರದ ನಾನಾ ಇಲಾಖೆಗಳ ಕಾರುಬಾರುಗಳನ್ನು ಯಾವ ರೀತಿ ನೋಡಿ ನಡಿಸುತ್ತಾರೆಂಬುವುದಕ್ಕೆ ಇದೊಂದು ದೃಷ್ಟಾಂತವೆಂದು ಇಟ್ಟುಕೊಳ್ಳಬಹುದೇ? ಹಾಗಾದ ಪಕ್ಷಕ್ಕೆ ಆ ಇಲಾಖೆಗಳೂ ಅವುಗಳ ಮೂಲಕ ನಡೆಯುವ ಕಾರ್ಯಗಳೂ ತಾಮಸಕ್ಕೆ ಬಿದ್ದು ಕ್ಷೀಣಗತಿಗೆ ಬರುವವೆನ್ನುವುದಕ್ಕೆ ಸಂಶಯ ಕಾಣುವುದಿಲ್ಲ. ಯಾಕೆಂದರೆ ಆ ಇಲಾಖೆಗಳಲ್ಲಿ ಕೆಲಸ ಮಾಡತಕ್ಕವರಿಗೆ "ಗವರ್ನ್‌ಮೆಂಟಿನವರಿಗೆ ನಮ್ಮ ಇಲಾಖೆಗಳ ಕೆಲಸ ಕಾರ್ಯಗಳ ಮೇಲೆ ವಿಶ್ವಾಸವಿಲ್ಲ" ಎಂಬ ಅಭಿಪ್ರಾಯ ಹುಟ್ಟಿ ಹಬ್ಬುವುದು ಖಂಡಿತವೇ ಸರಿ.

ಸಂಸ್ಥಾನದಲ್ಲಿ ಸಾಮಾನ್ಯ ವೈದ್ಯಕೀಯ ಶಾಲೆಗಳು 156 ಇದ್ದದ್ದು ವರುಷಾಂತ್ಯದಲ್ಲಿ 160 ಕ್ಕೆ ಹೆಚ್ಚಿದವು; ಇದಲ್ಲದೆ 7 ಸ್ಪೆಷಲ್ ಆಸ್ಪತ್ರೆಗಳಿದ್ದವು. ಇವು ಯಾವವೆಂದರೆ—ಬೆಂಗಳೂರು ಘೋಷ [illegible] ಆಸ್ಪತ್ರೆ, ಬೆಂಗಳೂರು ಕುಷ್ಠರೋಗಿಗಳ ಆಸ್ಪತ್ರೆ, ಬೆಂಗಳೂರು—ರಾಬರ್ಟ್‌ಸನ್‌ಪೇಟೆ ಮತ್ತು ಮೈಸೂರು ಹೆರಿಗೆ ಆಸ್ಪತ್ರೆಗಳು, ಬೆಂಗಳೂರು ಮಿಂಟೋ ಕಣ್ಣಾಸ್ಪತ್ರೆ, ಬೆಂಗಳೂರು ಐಸೋಲೇಷನ್ ಆಸ್ಪತ್ರೆ. ಇವನ್ನು ಸ್ಪೆಷಲ್ ಆಸ್ಪತ್ರೆಗಳೆಂದು ಯಾಕೆ ಪ್ರತ್ಯೇಕ ಮಾಡಬೇಕಾಯಿತೋ ನಮಗೆ ತಿಳಿಯಲಿಲ್ಲ. ಹೆರಿಗೆಯ ಮತ್ತು ಐಸೋಲೇಷನ್ ಆಸ್ಪತ್ರೆಗಳನ್ನು ಇತರ ಸಾಮಾನ್ಯ ವೈದ್ಯಶಾಲೆಗಳಂತೆ ಎಣಿಸಬಹುದಾಗಿದೆ. ಸಾಮಾನ್ಯ ಆಸ್ಪತ್ರೆಗಳಿಗೂ, ಡಿಸ್ಪೆನ್ಸರಿಗಳಿಗೂ 1914 ನೇ ವರುಷದಲ್ಲಿ 4,48,437 ರೂಪಾಯಿ ಖರ್ಚಾಗಿದೆ. ಅವುಗಳಲ್ಲಿ ಒಟ್ಟು 14,16,523 ರೋಗಿಗಳಿಗೆ ಚಿಕಿತ್ಸೆಗಳು ಮಾಡಲ್ಪಟ್ಟರೋಣದಿಂದ ತಲೆಗೆ 5 ಆಣೆಯಷ್ಟು ಖರ್ಚಾಯಿತೆಂದು ಹೇಳಬಹುದು. ಸರಾಸರಿ ಎಲ್ಲಾ ಆಸ್ಪತ್ರೆಗಳಲ್ಲೂ ದಿನವಹಿ 415 ರೋಗಿಗಳಿದ್ದ ಹಾಗೂ, 7,810 ಮಂದಿ ರೋಗಿಗಳು ಔಷಧವನ್ನು ಪಡೆದ ಹಾಗೂ ಗೊತ್ತಾಗುವುದು.

ಈ ಏರ್ಪಾಟಿನಿಂದ ಪ್ರಜೆಗಳ ರೋಗ ಸಂಕಟಗಳು ಬಹಳ ಮಟ್ಟಿಗೆ ನಿವಾರಣೆಯಾಗಿರುವವೆಂದೂ, ಇದಕ್ಕಾಗಿ ನಮ್ಮ ಸರ್ಕಾರದಿಂದ ನೇಮಕವಾಗಿರುವ ಸ್ತ್ರೀಪುರುಷ ವೈದ್ಯರುಗಳು ತಮ್ಮ ಸಾಮರ್ಥ್ಯವನ್ನೂ ಬುದ್ಧಿಕುಶಲತೆಯನ್ನೂ ಬಹಳವಾಗಿ ಖರ್ಚು ಮಾಡಿರುತ್ತಾರೆಂದೂ ಸಂತೋಷದಿಂದ ಒಪ್ಪಿ ಹೇಳುವೆವು. ನಮ್ಮ ಗವರ್ನ್‌ಮೆಂಟಿನವರು ಇನ್ನೂ ಸ್ವಲ್ಪ ಮುತುವರ್ಜಿಯನ್ನೂ ಅರ್ಥವ್ಯಯವನ್ನೂ ವಹಿಸಿದ ಪಕ್ಷದಲ್ಲಿ ವೈದ್ಯ ಸಹಾಯವು ಅನೇಕ ಪ್ರಜೆಗಳಿಗೆ ದೊರಕುವಂತೆ ಮಾಡಬಹುದಾಗಿದೆ. ಸಕಲ ಪ್ರಜೆಗಳಿಗೂ ಗವರ್ನ್‌ಮೆಂಟಿನವರೇ ವೈದ್ಯ ಸಹಾಯ ಮಾಡುವಂಥಾ ಜವಾಬ್ದಾರಿಯನ್ನು ವಹಿಸುವುದು ಸಾಧ್ಯವಲ್ಲವೆಂದೂ, ಪ್ರಜೆಗಳೂ ಶಕ್ತಮಟ್ಟಿಗೆ ಆ ಖರ್ಚನ್ನು ವಹಿಸಿಕೊಂಡು ಕೊಡುವುದು ಸಾಧುವೆಂದೂ ನಮಗೆ ತೋರುತ್ತದೆ. ಈ ಭಾಗವನ್ನು ಪ್ರಜೆಗಳು ವಹಿಸುವ ವಿಷಯದಲ್ಲಿ ಬಹಳ ಬಲವಾದ ವಿರೋಧಾಭಿಪ್ರಾಯ ಹುಂಟಾಗಿದೆ. ನಮ್ಮ ಸರ್ಕಾರದವರು ಈಚೆಗೆ ಮೈಸೂರು ಮತ್ತು ಬೆಂಗಳೂರು ಷಹರುಗಳ ಆಸ್ಪತ್ರೆಗಳಲ್ಲಿ ರೋಗಿಗಳಿಂದ ರುಸುಮನ್ನು ವಸೂಲ್ಮಾಡಬೇಕೆಂದು ಹುಕುಂ ಕೊಟ್ಟಿದಾರಷ್ಟೆ. ಇದು ಪ್ರಜೆಗಳಿಗೆ ಸಮ್ಮತವಾಗದೆ ಅದನ್ನು ರದ್ದು ಮಾಡಬೇಕೆಂದು ಕೇಳಿಕೊಂಡಿದಾರೆ.

ಸ್ಪೆಷಲ್ ಆಸ್ಪತ್ರೆಗಳಿಗೆ ಒಟ್ಟು 81,375 ರೂಪಾಯಿ ಖರ್ಚಾಯಿತು. ಘೋಷ [illegible] ಆಸ್ಪತ್ರೆಯೊಳಗೆ ಸರಾಸರಿ ದಿನ ಒಂದಕ್ಕೆ 231 ಮಂದಿ ರೋಗಿಗಳಿದ್ದು ಚಿಕಿತ್ಸೆ ಹೊಂದಿದರು. ಈ ಆಸ್ಪತ್ರೆಯಲ್ಲಿ ಶೇಕಡಾ 38 ಮಂದಿ ರೋಗಿಗಳಿಗೆ ವಾಸಿಯಾಗಿರುವುದೆಂದೂ, ಶೇಕಡಾ 32 ಮಂದಿ ಅಭಿವೃದ್ಧಿ ಹೊಂದಿದರೆಂದೂ ತಿಳಿದು ಸಂತೋಷಪಡುವೆವು. ಹುಚ್ಚು ಹಿಡಿದ 33 ಮಂದಿ ಅಪರಾಧಿಗಳು ಈ ಆಸ್ಪತ್ರೆಯಲ್ಲಿ ಇದ್ದರು. ರೋಗಿಗಳಿಗೆ ಈ ಆಸ್ಪತ್ರೆಯಲ್ಲಿ ನಡೆಯುವ ಚಿಕಿತ್ಸಾ ಕಾರ್ಯಗಳು ವಿಶದವಾಗಿಲ್ಲವೆಂದು ಈ ರಿಪೋರ್ಟು ಹೇಳುವುದು. ಕುಷ್ಠರೋಗಿಗಳ ಆಸ್ಪತ್ರೆಯಲ್ಲಿ ವರುಷಾರಂಭದಲ್ಲಿ 34 ಮಂದಿ ರೋಗಿಗಳಿದ್ದರು; ಆ ವರುಷ 31 ಮಂದಿ ಹೊಸಬರಾಗಿ ದಾಖಲಾದರು. 15 ಮಂದಿಯನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದರು. 7 ಮಂದಿ ಸತ್ತುಹೋದರು. ವರುಷಾಂತ್ಯದಲ್ಲಿ 40 ರೋಗಿಗಳು ಆಸ್ಪತ್ರೆಯಲ್ಲಿದರು. ತೊನ್ನು ಹಿಡಿದವರು ಸಂಸ್ಥಾನದೊಳಗೆ ಇನ್ನೂ ಎಷ್ಟೋ ಜನರು ಇರಬೇಕೆಂದು ನೆನಸುತ್ತೇವೆ. ನಮ್ಮ ಗವರ್ನ್‌ಮೆಂಟಿನವರು ಅವರನ್ನೆಲ್ಲಾ ಕೂಡಿಸಿ ಒಂದು ಕಡೆ ಪ್ರತ್ಯೇಕವಾಗಿಡುವುದಕ್ಕೆ ಏರ್ಪಾಡು ಮಾಡುವುದು ತುಂಬಾ ಹಿತಕರವಾದದ್ದು.

ಅದ್ವಿತೀಯನಾದ ಬೋಧಕನು.

ಕ್ರೈಸ್ತಮತವು ಪ್ರಪಂಚದ ಚರಿತ್ರೆಯಲ್ಲಿ ಮಹತ್ತರವಾದ ಸಹಾಂಶವಾಗಿದೆ. ಮತ್ತು ಕ್ರಿಸ್ತನು ಕ್ರೈಸ್ತಮತದಲ್ಲಿ ಮಹತ್ತರವಾದ ನೈಜವ್ಯಕ್ತಿಯಾಗಿದ್ದಾನೆ. ಕ್ರೈಸ್ತಮತವೆಂದರೇನು? ಆ ಮತಕ್ಕೆ ಆಧಾರವೇನು? ಕ್ರೈಸ್ತಮತಕ್ಕೆ ಆಧಾರವೂ ಮೂಲವೂ ಅಸ್ತಿವಾರವೂ ಕ್ರಿಸ್ತನೇ. ಕ್ರೈಸ್ತಮತದಿಂದ ಅದನ್ನು ಸ್ಥಾಪಿಸಿದ ಕ್ರಿಸ್ತನನ್ನು ಪ್ರತ್ಯೇಕಿಸುವದು ಅಸಾಧ್ಯವಾದ ಕಾರ್ಯವಾಗಿದೆ. ಒಬ್ಬನು ಕ್ರಿಸ್ತನನ್ನು ಕುರಿತು ನಾನೇಕೆ ಅಷ್ಟು ಲಕ್ಷ್ಯಮಾಡಬೇಕು? ಆತನು ಈ ಲೋಕದಲ್ಲಿ ಹುಟ್ಟಿ ಬದುಕಿದ್ದನಂತೆ. ಸತ್ಪುರುಷನಾಗಿ ನಡೆದು ಇಂತಿಂತಹ ಕಾರ್ಯಗಳನ್ನು ನಡಿಸುತ್ತಾ ಸಂಚರಿಸಿದನಂತೆ; ಇದ್ದರೂ ಇರಬಹುದು. ಆದರೆ ಆತನು ಇದ್ದನೆಂದು ಹೇಳುವ ಕಾಲಕ್ಕೂ ಸಾಮ್ಪ್ರತಕ್ಕೂ ಎರಡುಸಾವಿರ ವರುಷಗಳ ಅಂತರವಿದೆ. ಆ ಚರಿತ್ರೆಯನ್ನೆಲ್ಲಾ ಕೂಲಂಕಷವಾಗಿ ವಿಚಾರಿಸಿ ನಿರ್ಧರಿಸುವದಕ್ಕೆ ಬಹಳ ಕಾಲವೂ ವಿದ್ವತ್ತೂ ಶ್ರಮವೂ ಬೇಕಾಗಿವೆ. ಮತ್ತು ಕ್ರಿಸ್ತನ ವಿಷಯ ಅಷ್ಟುಮಟ್ಟಿಗೆ ತಿಳಿಯುವದು ಅಗತ್ಯವಿಲ್ಲ. ಆತನ ಮತವನ್ನೂ ಆತನು ಉಪದೇಶಮಾಡಿದ ಬೋಧನೆಯನ್ನೂ ತಿಳಿದು ಅದರಂತೆ ನಡೆದರೆ ಸಾಲದೇ? ಎಂದು ಹೇಳಬಹುದು. ಕ್ರಿಸ್ತನ ಮತದ ವಿನಾ ಉಳಿದ ಸಕಲ ಮತಗಳ ವಿಷಯದಲ್ಲಿ ಈ ಅಭಿಪ್ರಾಯವು ನಿಜವಾಗಿದೆ. ಆದರೆ ಕ್ರಿಸ್ತನ ಮತದ ವಿಷಯದಲ್ಲಿ ಮಾತ್ರ ಹೀಗೆ ಯೋಚಿಸಿ ಕ್ರಿಸ್ತನನ್ನೂ ಆತನ ಮತವನ್ನೂ ಬೇರ್ಪಡಿಸಿ—ಕ್ರಿಸ್ತನು ಇದ್ದನೋ? ಇಲ್ಲವೋ? ಆತನು ಎಂಥವನಾಗಿ ನಡೆದನೋ? ಆತನ ವಿಷಯ ನನಗೇನು? ಸುವಾರ್ತೆಯಲ್ಲಿ ಆತನು ಹೇಳಿದನೆಂದು ಬರೆದಿರುವ ಉಪದೇಶವೇ ನನಗೆ ಸಾಕು ಎಂದು ಹೇಳುವದಕ್ಕಾಗುವದೇ ಇಲ್ಲ. ಯಾಕೆಂದರೆ ಕ್ರಿಸ್ತನ ಮತವು ಕ್ರಿಸ್ತನನ್ನೇ ಆಶ್ರಯಿಸಿ ನಿಂತಿದೆ. ಆತನನ್ನೂ ಆತನ ಉಪದೇಶವನ್ನೂ ಪೃಥಕ್ ಪೃಥಕ್ಕಾಗಿ ಬೇರೆ ಮಾಡುವದಕ್ಕೆ ಪ್ರಯತ್ನಿಸಿದರೆ ಕ್ರೈಸ್ತಮತವು ಅಂತ್ಯಗತಿಯನ್ನು ಪಡೆಯುವದು. ಬೇರೆ ಮತಗಳನ್ನೂ ಅವುಗಳ ಸ್ಥಾಪಕರನ್ನೂ ಪ್ರತ್ಯೇಕಿಸಿದರೂ ಆ ಮತಸ್ಥಾಪಕರಿಗೂ ಅವರು ಸ್ಥಾಪಿಸಿದ ಮತಕ್ಕೂ ಅಷ್ಟು ನೈಜಸಂಬಂಧವಿಲ್ಲದಿರುವದರಿಂದ ಅವು ಪ್ರತ್ಯೇಕಪ್ರತ್ಯೇಕವಾಗಿ ನಿಂತು ವರ್ತಿಸುತ್ತವೆ. ಮೊದಲು ಬುದ್ಧನು ಅನೇಕ ಸಾವಿರ ವರುಷಗಳಿಗೆ ಮುಂಚೆ ಬೌದ್ಧಮತವನ್ನು ಸ್ಥಾಪಿಸಿದನಷ್ಟೆ. ಆತನ ಮತಕ್ಕೆ ಆಧಾರವೇನು? ಆತನು ಹೇಳಿದ ಉಪದೇಶವೂ ನೀತಿಸೂತ್ರಗಳೂ ಆತನ ಮತಕ್ಕೆ ಅಸ್ತಿವಾರವೂ ಆಧಾರವೂ ಆಗಿವೆಯಲ್ಲವೇ? ಬೌದ್ಧಮತಾವಲಂಬಿಗಳು ಮತಸ್ಥಾಪಕನಾದ ಬುದ್ಧನ ವಿಷಯ ತಿಳಿದರೂ ತಿಳಿಯದಿದ್ದರೂ ಅಷ್ಟು ಚಿಂತಿಸುವದು ಅಗತ್ಯವಲ್ಲ. ಆತನನ್ನು ಕುರಿತು ತಿಳಿಯುವದು ಒಳ್ಳೇದು. ಸಾಧ್ಯವಾದರೆ ತಿಳಿಯಬಹುದು. ಆದರೆ ತಿಳಿಯದಿದ್ದರೂ ಏನೂ ಚಿಂತೆಯಿಲ್ಲ. ಬುದ್ಧನು ಇದ್ದನೋ? ಇರಲಿಲ್ಲವೋ? ಆತನನ್ನು ನಂಬಬೇಕಾದ ಅಗತ್ಯವಿಲ್ಲ. ಬೌದ್ಧಮತಾವಲಂಬಿಗಳಿಗೆ ಆತನು ಆಶ್ರಯಕರ್ತನಲ್ಲ. ಆತನನ್ನು ಕುರಿತು ಒಬ್ಬನು ಕೊಂಚವೂ ತಿಳಿಯದೆ ಆತನನ್ನು ನಂಬದೆ ಆತನನ್ನು ಆಶ್ರಯಿಸದೆ ಆತನು ಹೇಳಿದ ಬೋಧನೆಯನ್ನು ಮಾತ್ರ ನಂಬಿ ಆತನು ಬೋಧಿಸಿದ ನೀತಿಸೂತ್ರಗಳನ್ನು ಮಾತ್ರ ಕೈಕೊಂಡರೆ ಸಾಕು. ಬೌದ್ಧಮತಕ್ಕೆ ಬುದ್ಧನು ಆಧಾರವಲ್ಲ. ಆತನು ಹೇಳಿದ ಉಪದೇಶ ನೀತಿಸೂತ್ರಗಳು ಬೋಧನೆ ಇವೇ ಆತನ ಮತಕ್ಕೆ ಮೂಲವಾಗಿವೆ. ಬುದ್ಧನ ಶಿಷ್ಯನಾದ ಆನಂದನು ಗುರುವಿನ ಸನ್ನಿಧಿಗೆ ಹೋಗಿ—ಗುರುವೇ, ನಮಗೆ ಯಾರು ಆಶ್ರಯ? ಯಾರನ್ನು ನಂಬಬೇಕು? ನೀನು ನಮ್ಮ ರಕ್ಷಕನೋ? ನಮ್ಮ ಆಶ್ರಯವು ನೀನೋ? ನಾವು ಯಾರನ್ನು ನಂಬಬೇಕು? ಎಂದು ಕೇಳಿದ್ದಕ್ಕೆ ಬುದ್ಧನು—ಒಬ್ಬೊಬ್ಬನು ತನಗೆ ತಾನೇ ಆಶ್ರಯವಾಗಿರಲಿ. ನಾನು ಯಾರಿಗೂ ಆಶ್ರಯವಲ್ಲ. ನನ್ನನ್ನು ನಂಬಬಾರದು. ನಾನು ಹೇಳಿದ ಬೋಧನೆಯೂ ನಾನು ಆಜ್ಞಾಪಿಸಿದ ಕಟ್ಟಳೆಗಳೂ ನೀತಿಸೂತ್ರಗಳೂ ಇವೇ ನಿಮಗೆ ಆಧಾರವಾಗಿವೆಯೆಂದು ಹೇಳಿದನಂತೆ. ಹಾಗೆಯೇ ಮಹಮ್ಮದೀ ಮುಂತಾದ ಸಕಲ ಮತಗಳಿಗೂ ಆಯಾ ಮತಸ್ಥಾಪಕರು ಆಧಾರವಲ್ಲ. ಅವರು ಇಲ್ಲದಿದ್ದರೂ ಅವರ ವಿಷಯ ಆ ಮತಾವಲಂಬಿಗಳಿಗೆ ತಿಳಿಯದಿದ್ದರೂ ಚಿಂತೆಯಿಲ್ಲ. ಅವರನ್ನು ನಂಬುವದೂ ಆಶ್ರಯಿಸುವದೂ ಮುಕ್ತಿಗೆ ಅಗತ್ಯವಿಲ್ಲ. ಅವರ ಉಪದೇಶವನ್ನು ಮಾತ್ರ ನಂಬಿ ನಡೆದರೆ ಸಾಕು ಯೆಂಬ ಆ ಮತಸ್ಥರಿಂದ ವೇದ್ಯವಾಗಿದೆ.

ಆದರೆ ಕ್ರಿಸ್ತನ ಮತದ ವಿಷಯದಲ್ಲಿ ಮಾತ್ರ ಆತನನ್ನೂ ಆತನ ಉಪದೇಶ, ನೀತಿಸೂತ್ರ ಕಟ್ಟಳೆಗಳನ್ನೂ ಪ್ರತ್ಯೇಕಿಸಿ—ಆತನನ್ನು ಕುರಿತು ತಿಳಿಯದಿದ್ದರೂ ಆತನ ಉಪದೇಶ, ಕಟ್ಟಳೆ ನೀತಿಸೂತ್ರಗಳೇ ನನಗೆ ಸಾಕೆಂದು ಯಾರೂ ಹೇಳುವದಕ್ಕಾಗುವದೇ ಇಲ್ಲ. ಯಾಕೆಂದರೆ ಕ್ರಿಸ್ತನು ತನ್ನ ಮತಕ್ಕೆ ಆಧಾರವಾಗಿ ಕೆಲವು ನೀತಿಸೂತ್ರಗಳನ್ನು ಕಲಿಸಿ ಅಗೋ! ಇವೇ ನನ್ನ ಮತದ ನಿಜವಾದ ಮಾರ್ಗ; ಇವುಗಳನ್ನು ಕೈಗೊಂಡರೆ ನಿಮಗೆ ಮುಕ್ತಿ ಸಿಕ್ಕುವದು ಎಂದು ಹೇಳಲಿಲ್ಲ. ಅಥವಾ ಆತನು ತತ್ವಜ್ಞಾನ ಪಟ್ಟಿಯನ್ನು ಹೇಳಿ—ಇದೇ ನಾನು ಲೋಕಕ್ಕೆ ಕೊಟ್ಟು ಹೋಗಬೇಕೆಂದಿದ್ದ ಜ್ಞಾನ; ಇದನ್ನು [illegible] ಎಂದು ಹೇಳಲಿಲ್ಲ. ಅಥವಾ ಕೆಲವು ಆಚಾರಗಳನ್ನು ನೇಮಿಸಿ—ಈ ಆಚಾರಗಳನ್ನು ಆಶ್ರಯಿಸಿ ಸಾಂಗವಾಗಿ ಅವುಗಳನ್ನು ನಿರ್ವಹಿಸಿದರೆ ಸಾಕು ಎಂದು ಅಪ್ಪಣೆ ಕೊಡಲಿಲ್ಲ. ಆತನು ನೀತಿಸೂತ್ರಗಳನ್ನು ಹೇಳಲಿಲ್ಲವೇ? ತತ್ವಜ್ಞಾನವನ್ನು ಉಪದೇಶಿಸಲಿಲ್ಲವೇ? ಸಂಸ್ಕಾರಗಳನ್ನು ನೇಮಿಸಲಿಲ್ಲವೇ? ಎಂದು ವಾಚಕರು ಕೇಳಬಹುದು. ಹೌದು. ಆತನು ನೀತಿಸೂತ್ರಗಳನ್ನೂ ತತ್ವಜ್ಞಾನವನ್ನೂ ಕಟ್ಟಳೆಗಳನ್ನೂ ಬೋಧಿಸಿ ಸಂಸ್ಕಾರಗಳನ್ನು ಸ್ಥಾಪಿಸಿದ್ದು ನಿಜವೆ. ಆದರೆ ಆ ಸಕಲ ನೀತಿಸೂತ್ರಗಳೂ ತತ್ವಜ್ಞಾನ ಸಕಲ ಕಟ್ಟಳೆ ಸಂಸ್ಕಾರಗಳಿಗೂ ನಾನೇ ಆಧಾರ. ನನ್ನ ವ್ಯಕ್ತಿಯನ್ನು ಅವು ನಂಬಿವೆ. ನಾನಿಲ್ಲದೆ ಅವು ನಿಲ್ಲಲಾರವು. ಅದ್ದರಿಂದ ನನ್ನ ಮತಾಶ್ರಯಿಸಬೇಕೆಂದಿರುವವನು ನನ್ನನ್ನೇ ಆಶ್ರಯಿಸಬೇಕು ಎಂದು ಹೇಳಿದನು. ಒಬ್ಬ ಶಿಷ್ಯನು ಆತನನ್ನು ಕಂಡು—ಗುರುವೇ, ಮೋಕ್ಷಕ್ಕೆ ಮಾರ್ಗವ್ಯಾವದು? ಎಂದು ಕೇಳಿದ್ದಕ್ಕೆ ಆತನು ತನ್ನನ್ನೇ ಶಿಷ್ಯನಿಗೆ ನಿರ್ದೇಶಿಸಿ—ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯಾದ ದೇವರ ಬಳಿಗೆ ಬರುವದಕ್ಕಾಗುವದಿಲ್ಲ. ನೀವು ನನ್ನನ್ನು ತಿಳುಕೊಂಡರೆ ನನ್ನ ತಂದೆಯಾದ ದೇವರನ್ನು ತಿಳುಕೊಳ್ಳುವಿರಿ ಅಂದನು. ಮತ್ತೊಬ್ಬ ಶಿಷ್ಯನು—ಸ್ವಾಮಿ, ನನಗೆ ತಂದೆಯಾದ ದೇವರನ್ನು ತೋರಿಸು, ನಮಗೆ ಅಷ್ಟೇ ಸಾಕು ಎಂದು ವಿಜ್ಞಾಪಿಸಲು ಯೇಸು ಅವನಿಗೆ—ಫಿಲಿಪ್ಪನೇ, ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದಾಗ್ಯೂ ನೀನು ನನ್ನನ್ನು ಇನ್ನೂ ತಿಳುಕೊಳ್ಳಲಿಲ್ಲವೇ? ನನ್ನನ್ನು ನೋಡಿದವನು ಸಾಕ್ಷಾತ್ ತಂದೆಯನ್ನೇ ನೋಡಿದ್ದಾನೆ; ನಾನು ತಂದೆಯಾದ ದೇವರಲ್ಲಿ ಇದ್ದೇನೆ; ಆತನು ನನ್ನಲ್ಲಿದ್ದಾನೆ ಎಂದು ನುಡಿದನು. ಹಸಿವೆಯುಳ್ಳವರನ್ನು ತನ್ನ ಬಳಿಗೆ ಕ್ರಿಸ್ತನು ಕರೆದು ನಾಶನಾಗುವ ಆಹಾರಕ್ಕಾಗಿ ದುಡಿಯಬೇಡಿರಿ, ಬದಲಾಗಿ ದುಡಿಯುತ್ತೀರಲ್ಲ; ನಿತ್ಯಜೀವವನ್ನು ಕೊಡುವ ಆಹಾರಸಂಪಾದನೆಗಾಗಿ ದುಡಿಯಿರಿ; ನಾನೇ ನಿತ್ಯಜೀವವನ್ನು ಕೊಡುವ ರೊಟ್ಟಿಯಾಗಿದ್ದೇನೆ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ; ನನ್ನನ್ನು ಆಶ್ರಯಿಸಿ ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ ಎಂದು ಹೇಳಿದನು. ಒಂದು ಗ್ರಾಮದಲ್ಲಿ ಇದ್ದ ಶಿಷ್ಯಳ ತಮ್ಮನು ಸತ್ತುಹೋದನು. ಯೇಸು ಅಲ್ಲಿಗೆ ಬಂದು ಆಕೆಯು ಶೋಕತಪ್ತಳಾಗಿರುವದನ್ನು ನೋಡಿ—ನಿನ್ನ ತಮ್ಮನು ಜೀವಿತನಾಗಿ ಎದ್ದು ಬರುವನು ಅಂದನು. ಆಕೆಯು ನಿರಾಶೆಯಿಂದ ಹೌದು ಸ್ವಾಮಿ, ಪ್ರಳಯಕಾಲಕ್ಕೆ ಆತ ಪುನರುತ್ಥಾನವಾಗಿ ಎದ್ದು ಬಂದಾನು ಎಂದು ಬಿಸುಸುಯ್ಯಲು ಸ್ವಾಮಿಯು ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬಿದವನು ಸಾಯುವನೇ ಇಲ್ಲ; ನಂಬಿ ಸತ್ತವರು ಬದುಕುವರು ಅಂದನು.

ವಾಚಕರೇ, ಇತರ ಮತಗಳನ್ನು ಸ್ಥಾಪಿಸಿದವರಿಗೂ ಈತನಿಗೂ ವ್ಯತ್ಯಾಸವಿಲ್ಲವೇ? ಈತನು ದೇವರಲ್ಲವೇ? ಮನುಷ್ಯಮಾತ್ರದವನಾದರೆ ದೇವರ ಲಕ್ಷಣಗಳನ್ನು ತನಗೆ ಆರೋಪಿಸಿಕೊಳ್ಳಬಹುದೇ?

ಯುದ್ಧದ ಸಮಾಚಾರಗಳು.

ಯೂರೋಪ್ ಆಫ್ರಿಕಾ ಯುದ್ಧ ಕಾರ್ಯಗಳು.

ಈ ವಾರದ ವರ್ತಮಾನಗಳಲ್ಲಿ ವಿಶೇಷವೆಂದು ಹೇಳಬಹುದಾದ ಯುದ್ಧ ಕಾರ್ಯಗಳೇನೂ ನಡೆದಿರುವಂತೆ ಕಂಡು ಬರುವುದಿಲ್ಲ. ಆದರೂ ನಡೆಯುವ ಯುದ್ಧ ಕಾರ್ಯಗಳಲ್ಲಿ ಮಿತ್ರಮಂಡಲಿಯವರಿಗೇ ಅನುಕೂಲವಾಗಿವೆ ಎಂದು ಹೇಳಬಹುದು.

ಪಶ್ಚಿಮ ರಣರಂಗದಲ್ಲಿ.

ಇಸರ್ ನದಿಯು ಬೆಲ್ಜಿಯಮ್ ದೇಶದಲ್ಲಿ ಸಮುದ್ರಕ್ಕೆ ಬೀಳುವ ತೀರದ ಬಳಿ ಜರ್ಮನಿಯವರು ಬೆಲ್ಜಿಯನ್ ಸೈನಿಕರ ಸಾಲನ್ನು ಭೇದಿಸಿ ನುಗ್ಗಬೇಕೆಂದು ಸಾಹಸಪಟ್ಟರು. ಅವರು ಈ ಉದ್ದೇಶದಿಂದ ನ್ಯೂಪೋರ್ಟ್ ಎಂಬ ಪಟ್ಟಣಕ್ಕೆ 20,000 ಗುಂಡುಗಳನ್ನು ಹಾರಿಸಿ, ಆ ಪಟ್ಟಣದ ಟವರ್ ಎಂಬ ಎತ್ತರವಾದ ಕಟ್ಟಡವನ್ನು ನಾಶ ಮಾಡಿದರು. ಮಿತ್ರ ಮಂಡಲಿಯವರು ಅದಕ್ಕೆ ಪ್ರತಿಯಾಗಿ ಜರ್ಮನಿಯವರ ಮೇಲೆ ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆದು ಗುಂಡುಗಳ ಮಳೆಗರೆದರು. ಇದರಿಂದ ಜರ್ಮನಿಯವರು ತಮ್ಮ ಕಂದಕಗಳನ್ನು ಬಿಟ್ಟು ಬರುವದೇ ಅಸಾಧ್ಯವಾಗಿ ಕೆಲವರು ಮಾತ್ರ ನುಗ್ಗಿ ಬಂದರು. ಹೀಗೆ ಬಂದವರನ್ನು ಮಿತ್ರಮಂಡಲಿಯವರು ಕೂಡಲೇ ಬರಿಸಿಬಿಟ್ಟರು, ಇಲ್ಲವೇ ಹಿಂದಕ್ಕೆ ಓಡಿಸಿಬಿಟ್ಟರು. ಶತ್ರುವಿನ ಪ್ರಯತ್ನವು ನಿಷ್ಪ್ರಯೋಜನವಾಯಿತು. ಅದರಲ್ಲಿ ಜರ್ಮನಿಯವರ ಕಡೆ 12,000 ಸೈನಿಕರು ನಷ್ಟವಾದಂತೆ ತಿಳಿಸಲ್ಪಟ್ಟಿದೆ.

ಈ ರಣರಂಗದಲ್ಲಿ ಅನೇಕವಾಗಿ ಫಿರಂಗಿ ಗುಂಡುಗಳ ಹೊಡೆದಾಟವೂ, ಸುರಂಗಗಳನ್ನು ಮದ್ದು ಹಾಕಿ ಹಾರಿಸಿದ್ದೂ ವಿಶೇಷವಾಗಿ ನಡೆದಿವೆ. ಇದರಲ್ಲಿ ಎರಡು ಕಡೆಗಳೊಳಗೂ ಕೆಲ ಕೆಲವು ಸೈನಿಕರು ನಷ್ಟವಾದದ್ದಲ್ಲದೆ ವಿಶೇಷ ಕಾರ್ಯಗಳೇನೂ ಆಗಿರುವದಿಲ್ಲ.

ವಿಮಾನಗಳಲ್ಲಿ ಕದನ ಕಾರ್ಯಗಳು ಬಹಳ ಮಟ್ಟಿಗೆ ನಡೆದಿರುತ್ತವೆ. ಜರ್ಮನಿಯವರು 27 ವಿಮಾನ ಯಂತ್ರಗಳನ್ನೂ 2 ಆಕಾಶ ಬುಟ್ಟಿಗಳನ್ನೂ ಅಂತರಿಕ್ಷದಲ್ಲಿ ಕೆಡವಿ ಕದನ ಮಾಡಿದರು. ಇದರಲ್ಲಿ ಅವರ ಎರಡು ವಿಮಾನ ಯಂತ್ರಗಳನ್ನೂ ಎರಡು ಆಕಾಶ ಬುಟ್ಟಿಗಳನ್ನೂ ಮಿತ್ರಮಂಡಲಿಯವರು ಹೊಡೆದು ಕೆಳಕ್ಕೆ ಇಳಿಸಿಬಿಟ್ಟರು.

ಈಚೆಗೆ ಬಂದಿರುವ ತಂತಿ ವರ್ತಮಾನಗಳು ಜರ್ಮನಿಯವರು ಬಹಳ ಶೌರ್ಯದಿಂದ ಯುದ್ಧ ಕಾರ್ಯಗಳನ್ನು ನಡಿಸಿದರೆಂದು ತಿಳಿಯುವದು. ಅವರು ಮಿತ್ರ ಮಂಡಲಿಯವರ ಸಾಲುಗಳ ಮೇಲೆ ನಾಲ್ಕೈದು ತಾಣ್ಯಗಳಲ್ಲಿ ನುಗ್ಗಿ ಬಂದು ಕದನ ಮಾಡಿದರು. ಒಂದು ತಾಣ್ಯದಲ್ಲಿ ಅವರು ಕೆಲವು ಕಂದಕಗಳನ್ನು ಗೆದ್ದುಕೊಂಡರು. ಬಳಿಕ ಮಿತ್ರ ಮಂಡಲಿಯವರು ಶತ್ರುವನ್ನು ಓಡಿಸಿ ಆ ಪೈಕಿ ಕೆಲವು ಕಂದಕಗಳನ್ನು ಬಿಡಿಸಿಕೊಂಡರು. ಪುನಃ ಗೆದ್ದುಕೊಂಡಂಥಾ ಒಂದು ದೊಡ್ಡ ಹಳ್ಳದೊಳಗೆ ಜರ್ಮನ ಸೈನಿಕರ 150 ಹೆಣಗಳು ಸಿಕ್ಕಿದವು. ಇನ್ನೊಂದು ತಾಣ್ಯದಲ್ಲಿ ಜರ್ಮನಿಯವರು ತಮ್ಮ ಸೈನಿಕರಲ್ಲಿ ಕೊಲೆಯಾದವರನ್ನು ನಾಲ್ಕು ಪಟ್ಟೆದವನ್ನು, ಕೈಸೆರೆ ಹಿಡಿದಿದ್ದ 50 ಮಂದಿ ಫ್ರೆಂಚ್ ಸೈನಿಕರನ್ನು ಬಿಟ್ಟು ಓಡಿ ಹೋದರು. ಜರ್ಮನಿಯವರ ಸಾಹಸವೆಲ್ಲಾ ನಿಷ್ಫಲವಾಯಿತು; ಅವರ ಕಡೆ ಬಹಳ ನಷ್ಟಗಳು ಸಂಭವಿಸಿದವು.

ಜರ್ಮನಿಯ ಜೆಪ್ಪೆಲಿನ್ ಎಂಬ ಭಾರೀ ವಿಮಾನಯಂತ್ರವು ಫ್ರಾನ್ಸಿನ ರಾಜಧಾನಿಯಾದ ಪಾರಿಸ್ ಪಟ್ಟಣದ ಮೇಲೆ ಬಂದು ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಒಂಭತ್ತು ಮನೆಗಳು ನಾಶವಾದವು, ಏಳು ಮಂದಿ ಮೃತಪಟ್ಟರು, ಇಪ್ಪತ್ತೆರಡು ಜನರಿಗೆ ಗಾಯಗಳಾಗಿವೆ.

ಫ್ರೆಂಚರ ವಿಮಾನಯಂತ್ರವು ಅಂತರಿಕ್ಷದಲ್ಲಿ ಹೋಗಿ ಜರ್ಮನಿಯ ಒಂದು ಪಟ್ಟಣದ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಬಹಳ ನಷ್ಟ ಪಡಿಸಿತು.

ಪೂರ್ವ ರಣರಂಗದಲ್ಲಿ.

ರಷ್ಯಾದವರ ಸೈನ್ಯ ಸಾಲುಗಳಿಂದ ಈ ವಾರ ಬಂದಿರುವ ಸಮಾಚಾರ ಬಹಳ ಸ್ವಲ್ಪ. ಅಲ್ಲಿ ನಡೆದ ಒಂದು ವಿಶೇಷ ಸಂಗತಿಯೇನೆಂದರೆ—ರಷ್ಯಾದ [illegible] ಸೈನಿಕರಲ್ಲಿ ಕೆಲವರು [illegible] ಧೈರ್ಯವನ್ನು ವಹಿಸಿ, [illegible] ಜರ್ಮನ ಸೈನಿಕರು [illegible] ಮಾಡಿದರು. [illegible] ಮಾಡಿದರು. ರೈಲ್ [illegible] ಎಂದು [illegible]

...ದಲ್ಲಿ ಬಿದ್ದು ಒಡೆದು ನಾಶವಾಯಿತು. ಸುಮಾರು 100 ಮಂದಿ ಜರ್ಮನ ...ರು ಅಲ್ಲಿ ಕೊಲೆಯಾದರು.

...ಒಂದು ಕಡೆ ಬಿರುಗಾಳಿ ಗಳೂ ಮಂಜೂ ಕರಗಿದ್ದರಿಂದ ಅವೆಲ್ಲಾ ಪ್ರವಾಹ ...ಜರ್ಮನ ಸೈನಿಕರಿದ್ದ ಕಂದಕಗಳಿಗೆ ಹರಿದು ಹೋಗಿ ತುಂಬಿಕೊಂಡು ...ವಾದ ನಷ್ಟವನ್ನುಂಟುಮಾಡಿತೆಂದು ಒಂದು ತಂತೀ ವರ್ತಮಾನ ...ದೆ. ಭಾರಿಯಾದ ಅನೇಕ ಫಿರಂಗಿಗಳೂ, ಹಲವು ವಾಗನ್ ಗಳನ್ನು ...ಗುಂಡುಗಳೂ ಕೆಸರಿನ ಪಾಲಾದವು. ನೂರಾರು ಸೈನಿಕರು ನೀರಿನಿಂದ ...ಪಾರಾಗದೆ ಅಲ್ಲೇ ಮುಳುಗಿ ಸತ್ತರು.

ಇಟಲಿ.

...ಯಿಂದ ಬಂದಿರುವ ವರ್ತಮಾನ ಬಹಳ ಕೆಟ್ಟಂತ. ಆಸ್ಟ್ರಿಯಾದವ ...ಒಂದು ದಿನ ವಿಶೇಷ ಮಂಜು ಮುಸುಕಿದ್ದಾಗ ಅವರ ಮರೆಯಲ್ಲಿ ನುಗ್ಗಿ ...ಇಟಲಿಯವರ ಸೈನ್ಯ ಸಾಲಿನ ದಕ್ಷಿಣ ಭಾಗದ ಮೇಲೆ ಬಿದ್ದು ಅವರನ್ನು ...ದಕ್ಕೆ ಎರಡನೇ ಸಾಲಿನ ಕಂದಕಗಳಿಗೆ ಓಡಿಸಿದಂತೆ ವರ್ತಮಾನ ...ದೆ. ಇಟಲಿಯವರು ಅಷ್ಟರಲ್ಲೇ ಜವಾಬವಾಗಿ ಮಾಡಿಕೊಂಡು ಶತ್ರುವಿಗೆ ...ಬಾರದಂತೆ ಬಲವಾದ ತಡೆಯನ್ನು ಕಟ್ಟಿದರು.

...ವರೆಗೆ ಇಟಲಿಯವರು ನಡೆಸಿರುವ ಯುದ್ಧ ಕಾರ್ಯಗಳನ್ನೆಲ್ಲಾ ಒಟ್ಟು ...ಒಂದು ತಂತೀವರ್ತಮಾನವು ಪ್ರಕಟಿಸುತ್ತದೆ. ಇಟಲಿಯವರು ಟ್ರೆಂಟಿ ...ಅಧಿಕಾರದಲ್ಲಿ ಒಂದು ಭಾಗವನ್ನು ಆಕ್ರಮಿಸಿಕೊಂಡು ಆಸ್ಟ್ರಿಯಾ ...ನಾಟುಗಳನ್ನು ಹಿಂದಕ್ಕೆ ಓಡಿಸಿದ್ದಾರೆ. ಮತ್ತು ಇಟಲಿಯವರು ...00 ಸೈನಿಕರನ್ನೂ, ಅಪಾರವಾದ ಮದ್ದು ಗುಂಡನ್ನೂ ಸ್ವಾಧೀನ ಮಾಡಿ ...ದ್ದಾರೆ. ಇಟಲಿ ಸೈನಿಕರು ಇದುವರೆಗೆ ವಿಶೇಷ ಜಯಪ್ರದವನ್ನು ಹೊಂದಿ ...ಕ್ಷಿಣದ ಯುದ್ಧ ಕಾರ್ಯಗಳನ್ನು ಮುಂದರಿಸಿರುತ್ತಾರೆ.

ಟರ್ಕಿಯಲ್ಲಿ.

...ಕಸ್ ಪರ್ವತ ಪ್ರಾಂತ್ಯದಲ್ಲಿ ಟರ್ಕಿಯವರಿಗೆ ಕೆಟ್ಟ ಸೋಲಾಗಿರುವ ...ಕಾರ್ಯದ ರಷ್ಯಾದವರು ಟರ್ಕಿಯವರನ್ನು ಎರ್ಜರೂಮ್ ನಗರ ...ಓಡಿಸುತ್ತಾರೆ. ಅಲ್ಲಿ ರಷ್ಯಾದವರಿಗೆ 50 ಮಂದಿ ಹುದ್ದೇದಾರರೂ, ...00 ಸೈನಿಕರೂ ಕೈಸೆರೆ ಸಿಕ್ಕಿದ್ದಲ್ಲದೆ ಟರ್ಕಿಯವರ ಅನೇಕ ಮೆಷೀನ್ ...ಗಳು, ಬಹಳ ಮದ್ದು ಗುಂಡೂ ಅವರ ವಶವಾಗಿರುತ್ತವೆ. ಈ ಪ್ರಬಲ ...ರಷ್ಯಾದವರು ಬಿರುಗಾಳಿಗಳಿಂದ ಮುಚ್ಚಲ್ಪಟ್ಟಿರುವ 11,000 ಅಡಿ ಎತ್ತ ...ಪರ್ವತಗಳನ್ನು ಹತ್ತಿ ಹಾದು ಹೋಗಬೇಕಾಯಿತು. ಎತ್ತಗಳು ಹಾಯ ...ಕಷ್ಟಕರವಾಗಿದ್ದವು. ಇಂಥಾ ಕಷ್ಟಗಳನ್ನು ಸಹಿಸಿಕೊಂಡೂ ನುಗ್ಗಿ ಬಂದ ...ಅವರು ಟರ್ಕಿಯವರಿಗೆ ವಿಸ್ಮಯವುಂಟಾಗಿ ಅವರನ್ನು ಕಂದಕದಿಂದಲೇ ...ವಾಗಿ ಚದರಿಹೋದರು.

...ರ್ಕಿ ರಾಜಧಾನಿಯಾದ ಕಾನ್ ಸ್ಟಂಟನೋಪಲ್ ಪಟ್ಟಣದೊಳಗೆ 50,000 ...ಸೈನಿಕರು ಇರುವುದಾಗಿಯೂ, ಆ ಪಟ್ಟಣದಲ್ಲಿ ಪ್ರಜೆಗಳಿಗೆ ಕಳವಳ ...ಉಂಟಾಗಿ ತಿಳಿದುಬರುತ್ತದೆ. ಒಂದಾನೊಂದು ವರ್ತಮಾನವು 31 ...ರ್ಕಿ ಹುದ್ದೇದಾರರನ್ನು ಹಿಡಿದು ಅವರ ಕತ್ತಿಗೆ ಕಲ್ಲುಗುಂಡುಗಳನ್ನು ...ಸಮುದ್ರಕ್ಕೆ ಎಸೆಯಬಿಟ್ಟರೆಂದು ಹೇಳುತ್ತದೆ. ಗೇಬೆನ್ ಎಂಬ ಜರ್ಮನಿಯ ...ದ ಹಡಗು ರಷ್ಯಾದವರ ಯುದ್ಧದ ಹಡಗಿನ ಕಡೆ ಯುದ್ಧಮಾಡಿ ...ಬಹುಬೇಗ ಕಾನ್ ಸ್ಟಂಟನೋಪಲ್ ನಗರಕ್ಕೆ ಬಂದು ಸೇರಿಕೊಂಡಿತು. ...ಯುದ್ಧದಲ್ಲಿ ಗೇಬೆನ್ ಹಡಗಿನಲ್ಲಿದ್ದ ಸೈನಿಕರಲ್ಲಿ 33 ಮಂದಿ ಕೊಲೆಯಾ ...ಮಂದಿಗೆ ಗಾಯಗಳಾಗಿವೆ.

...ಪೊಟೇಮಿಯಾ ಸೀಮೆಯಲ್ಲಿ ಬ್ರಿಟಿಷರು ಟೈಗ್ರಿಸ್ ನದಿಯನ್ನು ...ಹಿಡಿದು ನುಗ್ಗಿ ಹೋಗುವುದು ಅವರಿಗೆ ಬಹಳ ಪ್ರಯಾಸವಾಗಿರುವಂತೆ ...ದೆ. ತಾ. 21 ರಲ್ಲಿ ಯುದ್ಧವಾಯಿತು. ಎರಡು ಕಡೆಗಳಲ್ಲೂ ಬಹಳ ...ನಷ್ಟವಾಗಿರುತ್ತವೆ. ಈಗ ಎರಡು ಸೈನ್ಯಗಳೂ ಎದುರುಬದುರಾಗಿ ...ಗಳನ್ನು ತೋಡಿಕೊಂಡು ತಣ್ಣಗೆ ಕಾಲಕಳೆಯುತ್ತಿರುವುದು.

...ಇತ್ತೀಚೆಗೆ ಬಂದಿರುವ ತಂತೀ ವರ್ತಮಾನಗಳಿಂದ ಒಂದು ಲಕ್ಷ ಟರ್ಕಿ ಸೈನ ...ಸೇರಿಕೊಂಡಿರುವ ಎರ್ಜರೂಮ್ ಪಟ್ಟಣಕ್ಕೆ ರಷ್ಯಾದವರು ಮುತ್ತಿಗೆ ಹಾಕಿ ...ಮುತ್ತಿಕೊಂಡು, ಇತರ ಕಡೆಗಳಲ್ಲಿರುವ ಟರ್ಕಿ ಸೈನ್ಯಗಳನ್ನು ಏಕವಾಗ ...ರಷ್ಯಾದವರು ಚದರಿಸಿಬಿಡುತ್ತಿದ್ದಾರೆಂದೂ ತಿಳಿದು ಬರುವುದು.

ಈಜಿಪ್ಟಿನಲ್ಲಿ.

ಈಜಿಪ್ಟ್ ಸೀಮೆಯ ಪಶ್ಚಿಮ ಭಾಗದಲ್ಲಿ ಈಚೆಗೂ ಕದನಗಳಾಗಿರುತ್ತವೆ. ...ಅರಬ್ಬಿಯವರು ಸೈನ್ಯಗಳನ್ನು ಕೂಡಿಸಿಕೊಂಡು ನುಗ್ಗಿ ಬಂದರು. ಬ್ರಿಟಿ ...ಸೈನಿಕರು ಅವರ ಮೇಲೆ ನುಗ್ಗಿ ಯುದ್ಧಮಾಡಿದರು. ಬ್ರಿಟಿಷ್ ಸೈನ್ಯದಲ್ಲಿ ...ಸ್ಥಾನದವರು, ಬ್ರಿಟಿಷ್ ನವರು, ಸ್ವಾದೇಶಿಕರ ಯುದ್ಧಭಟರೂ ಇದ್ದರು. ...ರಬ್ಬಿಯವರು ಸೋತು ಹಿಂದಕ್ಕೆ ಓಡಿ ಹೋದರು. ಅವರ ಠಾಣ್ಯವನ್ನು ...ಸುಟ್ಟುಬಿಟ್ಟರು. ಬ್ರಿಟಿಷರ ಕಡೆ 24 ಮಂದಿ ಕೊಲೆಯಾದರು; 294 ...ಗೆ ಗಾಯಗಳಾಗಿವೆ. ಅರಬ್ಬಿಯವರಲ್ಲಿ 150 ಮಂದಿ ಹತರಾದರು; 500 ...ಗೆ ಗಾಯಗಳಾಗಿವೆ. ಅರಬ್ಬಿಯವರು ಈ ಯುದ್ಧದಲ್ಲಿ ಮೂರು ಫಿರಂಗಿ ...ಕೆಲವು ಮೆಷೀನ್ ಫಿರಂಗಿಗಳನ್ನೂ ಇಟ್ಟುಕೊಂಡಿದ್ದರು. ಮತ್ತು ...ಕ್ಕಿ ಹುದ್ದೇದಾರರು ಇದ್ದು ಅವರನ್ನು ನಡೆಸಿದರು.

...ಕ್ರಿಸ್ ಮಸ್ ಹಬ್ಬ ಕಾಲದ ಸುಮಾರಿನಲ್ಲಿ ಈಜಿಪ್ಟಿನಲ್ಲಿ ನಡೆದ ಯುದ್ಧಗಳ ...ಈಗ ತಕ್ಕ ಮಟ್ಟಿಗೆ ಪ್ರಕಟವಾಗಿವೆ. ಮೊದಲನೇ ಯುದ್ಧದಲ್ಲಿ ಅರಬ್ಬಿ ...ಕಡೆ 400 ಮಂದಿ ಕೊಲೆಯಾದರು; 82 ಮಂದಿ ಕೈಸೆರೆ ಹಿಡಿಯಲ್ಪ ...; 18,000 ತೋಟಾಗಳೂ, 300 ಕುರಿಗಳೂ, 50 ಒಂಟೆಗಳೂ, ನಾವಿ ...ಗಳನ್ನು ಅಪಾರ ಧಾನ್ಯಾದಿಗಳೂ ಬ್ರಿಟಿಷರಿಗೆ ಸಿಕ್ಕಿದವು. ಕೆಲವು ...ದಿನಗಳ ಮೇಲೆ ಎರಡನೇ ಯುದ್ಧವಾಯಿತು. ಇದರಲ್ಲಿ ಬ್ರಿಟಿಷರು 400 ಕುರಿಗ ...50 ಒಂಟೆಗಳನ್ನೂ, 200 ದೋಣಿಗಳನ್ನೂ, ಒಂದು ತಿಂಗಳಿಗಾಗುವಷ್ಟು ...ಪದಾರ್ಥಗಳನ್ನೂ ಅರಬ್ಬಿಯವರಿಂದ ಕಿತ್ತುಕೊಂಡು ಬಂದರು.

ಪರ್ಷಿಯಾದಲ್ಲಿ.

...ದೇಶದಲ್ಲಿ ವಿಶೇಷ ಕದನಗಳೇನೂ ಆಗಲಿಲ್ಲ. ರಷ್ಯಾದವರು ...ಕಾಷಾನ್ ಎಂಬ ನಗರವನ್ನು ಗೆದ್ದು ಸ್ವಾಧೀನ ಪಡಿಸಿಕೊಂಡಿದ್ದಾರೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

...ಲ್ಕನ್ ಸಂಸ್ಥಾನಗಳ ಕಡೆಯಿಂದಲೂ ಹೊಸ ಸಮಾಚಾರಗಳೇನೂ ... ಶತ್ರು ಪಕ್ಷದವರು ತಮ್ಮ ದಂಡನ್ನು ಗ್ರೀಸ್ ರಾಜ್ಯದೊಳಕ್ಕೆ ನುಗ್ಗಿ ... ಮಿತ್ರಮಂಡಲಿಯವರ ಎಲ್ಲಾ ಕಾರ್ಯಗಳನ್ನೂ ಗ್ರೀಕಿನವರು ಒಪ್ಪಿ ...ತ್ತಿರುವ ಸೂಚನೆಯೇ ಕಂಡು ಬರುತ್ತಿದೆ. ಮಿತ್ರ ಮಂಡಲಿಯವರು ...ಮಂಟಿನೀಗ್ರೋ ಕಾರ್ಫೂ ದ್ವೀಪವನ್ನು ತಮ್ಮ ಅಧೀನದಲ್ಲಿ ಟ್ಟುಕೊಂಡ ...ಗ್ರೀಕಿನವರು ಒಪ್ಪಿಕೊಂಡಿರುವುದರಿಂದ ಅವರು ಸೆರ್ಬಿಯಾದವರಿಗೆ ... ಸಹಾಯವಾಗುವುದರಲ್ಲೂ ಅಭಿಪ್ರಾಯವುಳ್ಳವರಾಗಿದ್ದಾರೆನ್ನುವುದು ವೇದ್ಯ ...ತ್ತು.

...ಫ್ರೆಂಚ್ 45 ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಗಂಟೆಗೆ 70 ...ಮೈಲು ಹಾರಿಹೋಗಿ ಸೆರ್ಬಿಯಾದಲ್ಲಿರುವ ಎರಡು ಪಟ್ಟಣಗಳಿಗೆ ಸಿಡಿ ...ಗುಂಡುಗಳನ್ನು ಹಾಕಿದವು. ಒಂದು ಪಟ್ಟಣದಲ್ಲಿ 200 ಗುಂಡುಗಳೂ, ...ದರಲ್ಲಿ 100 ಗುಂಡುಗಳೂ ಬಿದ್ದವು. ಇದರಿಂದ ರೈಲ್ ರಸ್ತೆಗಳೂ ...ಮನೆಗಳೂ, ಸೈನಿಕರು ಉಪಯೋಗಿಸುತ್ತಿದ್ದ ಇತರ ಕಟ್ಟಡಗಳೂ ...ಹೋಗಿವೆ. ಬಳಿಕ ಆ ವಿಮಾನಗಳೆಲ್ಲಾ ಸುರಕ್ಷಿತವಾಗಿ ವಾಪಸು

ಜರ್ಮನಿ ಮತ್ತು ಆಸ್ಟ್ರಿಯಾ ಸೈನ್ಯಗಳ ನುಗ್ಗುವಿಕೆಯಿಂದ ಮಾಂಟಿನೀಗ್ರೋ ಸೈನಿಕರು ಹಿಮ್ಮೆಟ್ಟಿ ಬರುತ್ತಿದ್ದಾಗ ಮಾಂಟಿನೀಗ್ರೋ ರಾಜಕುಮಾರನೊಬ್ಬನ ಕೊಲೆಯಾಗಿರಬೇಕು, ಇಲ್ಲವೇ ಶತ್ರುವಿನ ಕೈಗೆ ಸಿಕ್ಕಿರಬೇಕು ಎಂಬ ಸಂಶಯ ಉಂಟಾಗಿದೆ.

ಸೆರ್ಬಿಯಾದವರು ಹಿಮ್ಮೆಟ್ಟಿ ವಲೋನಾ ನಗರದೊಳಕ್ಕೆ ಬಂದು ಸೇರಿಕೊಂಡಿದ್ದಾರೆ. ಈ ಪಟ್ಟಣವನ್ನು ಶತ್ರುವು ಮುತ್ತಿಗೆ ಹಾಕದಂತೆ ಇಟಲಿಯವರು ಸಂರಕ್ಷಣೆ ಮಾಡುವುದಾಗಿ ಸಂಕಲ್ಪ ಮಾಡಿಕೊಂಡಿದ್ದಾರೆ. ಈ ಪಟ್ಟಣದಿಂದ ಇಟಲಿಯವರು ಪಶ್ಚಿಮ ಕಡೆಗೂ, ಫ್ರೆಂಚರೂ ಬ್ರಿಟಿಷರೂ ಸಲೋನಿಕದಿಂದಲೂ ನುಗ್ಗಿ ಹೊರಟ ಪಕ್ಷದಲ್ಲಿ ಈ ಸೈನ್ಯಗಳೆಲ್ಲಾ ಅಲ್ಬೇನಿಯಾ ಸೆರ್ಬಿಯಾಗಳಿಂದಲೂ ಮಾಂಟಿನೀಗ್ರೋದಿಂದಲೂ ಶತ್ರುವನ್ನು ಓಡಿಸಿ ಬಿಡಬಲ್ಲರೆನ್ನುವುದಕ್ಕೆ ಸಂಶಯ ವಿರಲಾರದು.

ಆಫ್ರಿಕಾದಲ್ಲಿ.

ಜರ್ಮನಿಯ ಪೂರ್ವ ಆಫ್ರಿಕಾದಲ್ಲಿ ಯುದ್ಧಕಾರ್ಯಗಳು ಪ್ರಾರಂಭವಾಗಿರುತ್ತವೆ. ಬ್ರಿಟಿಷ್ ಸೈನ್ಯಗಳು ಜರ್ಮನೀ ಸೀಮೆಯೊಳಗೆ ಸುಮಾರು ಹನ್ನೆರಡು ಮೈಲಿಯಷ್ಟು ದೂರ ನುಗ್ಗಿ ಹೋಗಿ ಜರ್ಮನಿಯವರಿದ್ದ ಒಂದು ಠಾಣ್ಯವನ್ನೂ ಗೆದ್ದು ಸ್ವಾಧೀನ ಪಡಿಸಿಕೊಂಡಿರುವವು.

ಇತರ ವಿಷಯಗಳು.

ಆಸ್ಟ್ರಿಯಾ ರಾಜ್ಯದ ಫ್ರಾನ್ಸಿಸ್ ಜೋಸೆಫ್ ಎಂಬ ಚಕ್ರವರ್ತಿಯವರಿಗೆ ಬಹಳ ಕಾಯಿಲೆಯಾಗಿದೆ ಎಂದು ತಿಳಿಸಲ್ಪಟ್ಟಿದೆ. ಅವರು ತುಂಬಾ ಮುದುಕರಾದ್ದರಿಂದ, ತಮ್ಮ ರಾಜ್ಯದ ಕಾರುಬಾರುಗಳನ್ನು ಸ್ವತಂತ್ರಿಸಿ ನೋಡಿಕೊಳ್ಳಲಾರದವರಾಗಿದ್ದಾರೆ.

ಸೆರ್ಬಿಯಾದಲ್ಲಿ ಜರ್ಮನ ಚಕ್ರವರ್ತಿಯವರು ಇದ್ದುದನ್ನು ನೋಡಿದ ಒಬ್ಬ ಬಾತ್ಮೀದಾರನು ಚಕ್ರವರ್ತಿಯ ಕೂದಲು ಬೆಳ್ಳಗಾಗಿದೆ ಎಂದೂ, ಅವರು ದೇಹದ ಚಿಂತಾಕ್ರಾಂತರಾದ ಪುರುಷರಂತೆ ಕಾಣುತ್ತಾರೆಂದೂ, ಪದೇಪದೇ ಕೆಮ್ಮುತ್ತಾರೆಂದೂ ಹೇಳುವನು.

ಆಸ್ಟ್ರಿಯಾದವರು ತಮ್ಮ ಪ್ರಜೆಗಳಲ್ಲಿ 47-48 ವರುಷ ವಯಸ್ಸಾದವರನ್ನು ಸೈನ್ಯಕ್ಕೆ ಬಂದು ಸೇರಬೇಕೆಂದು ಇಸ್ತಿಹಾರು ಹಾಕಿಸುತ್ತಾರೆ.

ಬ್ರಿಟನ್ನಿನಲ್ಲಿ ಕೆಲವು ತರದ ಪ್ರಜೆಗಳನ್ನು ಬಲಾತ್ಕರಿಸಿ ಸೈನ್ಯಕ್ಕೆ ಸೇರಿಸಬೇಕೆಂಬ ಮಸೂದೆಯು ಶಾಸನವು ಹೌಸ್ ಆಫ್ ಕಾಮನ್ಸ್ ಸಭೆ ಮನೆಯಲ್ಲಿ ಪಾಸಾಯಿತು. 383 ಮಂದಿ ಅದು ಶಾಸನವಾಗಬಹುದೆಂದೂ, 36 ಮಂದಿ ಮಾತ್ರ ಕೂಡದೆಂದೂ ಅಭಿಪ್ರಾಯಪಟ್ಟರು. ಈಚೆಗೆ ಪಾರ್ಲಿಮೆಂಟು ಬರಖಾಸ್ತಾಗಿದೆ.

ಬ್ರಿಟಿಷರ ಕಡೆ ಇದುವರೆಗೆ ಆಗಿರುವ ಸೈನ್ಯಗಳ ನಷ್ಟಗಳನ್ನು ಈಗ ಪ್ರಕಟನ ಮಾಡಿದಾರೆ. ಅದರ ವಿವರವೇನೆಂದರೆ.—

	ಕೊಲೆಯಾದವರು.	ಗಾಯಪಟ್ಟವರು.	ಸಿಕ್ಕಿದ್ದವರು.
ಫ್ರಾನ್ಸಿನಲ್ಲಿ	87,268	2,59 107	54, 35
ಡಾರ್ಡನೆಲ್	28,200	78 095	11,254
ಇತರ ಕಡೆ	12 670	16,981	2 758
ಒಟ್ಟು	1,28,138	3,53,183	68,046

ಅಂತೂ, ಎಲ್ಲಾ ಕಡೆಗಳಲ್ಲೂ 5,49,367 ಬ್ರಿಟಿಷ್ ಸೈನಿಕರು ಇದುವರೆಗೆ ನಷ್ಟವಾಗಿರುತ್ತಾರೆಂದು ತಿಳಿಸಲ್ಪಟ್ಟಿದೆ.

ಮಿ|| ಲ್ಲಾಯಿಡ್ ಜಾರ್ಜ್ ರವರು ತಿಳಿಸಿರುವುದೇನೆಂದರೆ—ಬ್ರಿಟಿಷ್ ಪ್ರಜೆಗಳು ಕಠಾಕಿರಿಯಿಂದ ಮದ್ದುಗುಂಡುಗಳನ್ನು ಅಪಾರವಾಗಿ ತಯಾರಿಸಿ ಒದಗಿಸುತ್ತಲಿದ್ದಾರೆ. ಬ್ರಿಟಿಷ್ ಜನಾಂಗದ ಮಹತ್ವವು ಜರ್ಮನಿಯವರಿಗೆ ಇಷ್ಟರಲ್ಲೇ ಅನುಭವವಾದೀತು. ಈ ಯುದ್ಧ ಕಳೆದ ಬಳಿಕ ನಮ್ಮ ದೇಶವು ಬಹಳ ಉತ್ಕೃಷ್ಟವಾದ ಸ್ಥಿತಿಗೆ ಬಂದೀತು ಎಂದು ಹೇಳಿದರು. ಮಿ|| ಬಾಲ್ಫರವರು ಹೇಳಿರುವುದೇನೆಂದರೆ—ಜರ್ಮನಿಯವರು ತಮ್ಮ ನಾವೆಗಳನ್ನು ಕಟ್ಟಿಕೊಂಡರೂ ಚಿಂತೆಯಿಲ್ಲ. ಬ್ರಿಟನ್ನಿನಲ್ಲಿರುವ ಕಾರ್ಖಾನೆಗಳಲ್ಲಿ ಬ್ರಿಟಿಷ್ ನಾವೆಗಳನ್ನು ಬಲಪಡಿಸಿ ಕಟ್ಟಿಸಿಕೊಳ್ಳುವುದಕ್ಕೆ ಕೈಲಾದಷ್ಟು ಸಾಹಸಪಡುತ್ತಿದ್ದೇವೆ. ಈಗ ಬ್ರಿಟಿಷ್ ನಾವೆಯು ಎಂಥಾ ಮಹತ್ತರವಾದ ಕೆಲಸಕ್ಕೂ ಸಿದ್ಧವಾಗಿರುತ್ತದೆ ಎಂದು ಹೇಳಿದರು.

ಜರ್ಮನಿಯ ಬ್ಯಾಂಕರುಗಳು (ಲೇವಾದೇವಿ ನಡೆಸುವ ವರ್ತಕಮಂಡಲಿಯವರು) ಆಗಸ್ಟ್ ತಿಂಗಳು ಕಳೆದ ಬಳಿಕ ಯುದ್ಧವನ್ನು ಜರ್ಮನಿಯವರು ಮುಂದರಿಸಲಾರರೆಂದೂ, ಅದುವರೆಗೆ ಜರ್ಮನಿಯು ದಿವಾಳಿಯಾಗುವುದೆಂದೂ ಹೇಳುತ್ತಾರೆಂದು ತಿಳಿಸಲ್ಪಟ್ಟಿದೆ. ಜರ್ಮನಿ ರಾಜ್ಯದ ಬರ್ಲಿನ್, ಲಿಪ್ ಜಿಗ್ ಮೊದಲಾದ ಹಲವು ಮುಖ್ಯ ನಗರಗಳಲ್ಲಿ ಪ್ರಜೆಗಳು ತಿನ್ನುವುದಕ್ಕೆ ರೊಟ್ಟಿ ಸಾಲದೆಂದು ದಂಗೆಗಳನ್ನು ಮಾಡುತ್ತಲಿದ್ದಾರೆ. ಕೆಲವು ಕಡೆ ದೊಂಬಿಯನ್ನು ಅಡಗಿಸುವುದಕ್ಕೆ ಪೋಲೀಸಿನವರು ಬಹಳ ಸಾಹಸ ಪಡಬೇಕಾಯಿತು. ಈ ಗಲಾಟೆಯಲ್ಲಿ ಕೆಲವರು ಕೊಲೆಯೂ ಆದರು.

ಮಾಂಟಿನೀಗ್ರೋ ಸಂಸ್ಥಾನದ ನಿಕೊಲಸ್ ರಾಜನು ತನ್ನ ಇಬ್ಬರು ಕುಮಾರರ ಸಮೇತ ಫ್ರಾನ್ಸಿನ ದಕ್ಷಿಣ ಭಾಗದಲ್ಲಿರುವ ಲಯನ್ಸ್ ನಗರಕ್ಕೆ ಹೋಗಿ ಅಲ್ಲೇ ಇರುತ್ತಾನೆ.

ಫ್ರಾನ್ಸಿನಲ್ಲಿರುವ ಡನ್ ಕರ್ಕ್ ನಗರಕ್ಕೆ ಜರ್ಮನಿಯ ವಿಮಾನ ಯಂತ್ರಗಳು ಹೋಗಿ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಸಭ್ಯ ಪ್ರಜೆಗಳಲ್ಲಿ ಐದು ಮಂದಿ ಮೃತಪಟ್ಟರು; ಮೂವರಿಗೆ ಗಾಯಗಳಾದವು. ಜರ್ಮನಿಯವರಲ್ಲಿ ಪ್ರಖ್ಯಾತಿ ಪಡೆದಿದ್ದ ಒಬ್ಬ ವಿಮಾನಚಾರನು ನಷ್ಟವಾಗಿರುತ್ತಾನೆ.

ಒಳದೇಶದ ವೃತ್ತಾಂತಗಳು.

ಈ ವರುಷ ನವರಾತ್ರಿ ಉತ್ಸವಗಳ ಜೊತೆಗೆ ರಾಜಧಾನಿಯಲ್ಲಿ ವ್ಯವಸಾಯ ಮತ್ತು ಕಸಬುಗಳ ಪ್ರದರ್ಶನವು ನಡೆಸಲ್ಪಡುವುದೆಂದು ಕೇಳುತ್ತೇವೆ.

ಕಣಕೂರು ಬ್ಯಾಟರಾಯರ ಮಗ ಕೆ. ಬಿ. ಹನುಮಂತರಾಯನೆಂಬ ವಿದ್ಯಾರ್ಥಿಯು ಸ್ಕೂಲ್ ಫೈನಲ್ ಪರೀಕ್ಷೆಯ ಸರ್ಟಿಫಿಕೇಟಿನಲ್ಲಿ ಅಂಕಿಗಳನ್ನು ತಿದ್ದಿದನೆಂದು ಅವನು ಐದು ವರುಷ ಆ ಪರೀಕ್ಷೆಗೆ ಸೇರಕೂಡದೆಂದು ವಿದ್ಯಾ ಇಲಾಖೆಯವರು ಏರ್ಪಡಿಸಿದ್ದಾರೆ.

ಬರುವ ಗುರುವಾರ ರಾಜಧಾನಿಯ ಸಂಸ್ಕೃತ ಕಾಲೇಜಿನ ಒಂದು ಸಭೆ ನಡೆದು ವಿದ್ಯಾರ್ಥಿಗಳಿಗೆ ಬಹುಮಾನಗಳು ಹಂಚಲ್ಪಡುವವೆಂದು, ಕೌನ್ಸಿಲರ್ ಮ|| ಎಚ್. ವಿ. ನಂಜುಂಡಯ್ಯನವರು ಆ ದಿನ ಸಭೆಯ ಅಗ್ರಾಸನವನ್ನು ವಹಿಸುವರೆಂದೂ ತಿಳಿಯುತ್ತೇವೆ.

ಬನಾರಸ್ (ಕಾಶಿ) ಪಟ್ಟಣದಲ್ಲಿ ಏರ್ಪಾಡಾಗುವ ಹಿಂದೂ ಯೂನಿವರ್ಸಿಟಿ ವಿದ್ಯಾನಿಲಯದ ಫಂಡಿಗೆ ನವಾನಗರದ ಮಹಾರಾಜರವರು 2,00,000 ರೂಪಾಯನ್ನೂ, ಹತ್ತು ವರುಷಗಳವರೆಗೆ ಪ್ರತಿ ವರುಷವೂ 12,000 ರೂಪಾಯನ್ನೂ ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ.

ಮುಂದೆ ಹೇಳುವ ಸಬ್ ರಿಜಿಸ್ಟ್ರಾರುಗಳ ವರ್ಗಾವರ್ಗಿಯನ್ನು ಸರ್ಕಾರದವರು ಹುಕುಂ ಮಾಡಿದ್ದಾರೆ—ಮ|| ಎಲ್. ಕೃಷ್ಣರಾಯರು ನಂಜನಗೂಡಿನಿಂದ ಶ್ರೀನಿವಾಸಪುರಕ್ಕೆ, ಮ|| ಎನ್. ಲಕ್ಷ್ಮೀಕಾಂತಯ್ಯಂಗಾರ್ಯರು ದೊಡ್ಡಬಳ್ಳಾಪುರದಿಂದ ನಂಜನಗೂಡಿಗೆ, ಮ|| ಟಿ. ಎಸ್. ಕೃಷ್ಣಸ್ವಾಮಿಯವರು ಶಿವಮೊಗ್ಗೆಯಿಂದ ದೊಡ್ಡಬಳ್ಳಾಪುರಕ್ಕೆ, ಮ|| ಎಚ್. ಕೃಷ್ಣಮೂರ್ತಿರಾಯರು ತೀರ್ಥಹಳ್ಳಿಯಿಂದ ಕುಣಿಗಲಿಗೆ.

ಮ|| ಆಂಜಲ ಕೃಷ್ಣಮೂರ್ತಿರಾಯರು ಬೆಂಗಳೂರು “ಒಕ್ಕಲಿಗರ ಪತ್ರಿಕೆ” ಸಂಪಾದಕರ ಮೇಲೆ ಮಾನ ನಷ್ಟದ ಮೊಕದ್ದಮೆ ತಂದಿದ್ದರು. ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆಯಿಂದ ಸಂಪಾದಕರ ಮೇಲೆ ಅಪರಾಧ ರುಜುವಾತಾಗಲಿಲ್ಲವೆಂದು ತೀರ್ಮಾನಮಾಡಿದರು.

ಬೆಂಗಳೂರು ಸಿಟಿ ಅಕ್ಕಿ ಪೇಟೆಯಲ್ಲಿ ಪೂಗಾಲು ನರಸಿಂಹಯ್ಯನೆಂಬ ವರ್ತಕನು ಕೀಳದಾ 90 ರಷ್ಟು ಕೊಟ್ಟು ಬೆಲೆಯಾದ ಕುದುರೆನು ಒಳ್ಳೇ ಕುದುರೆ ಎಂದು ಬಿಳಿಂವಿಣಿ ಮೋಸ ಪಡಿಸಿದನೆಂದು ಮೊಕದ್ದಮೆ ಆಯಿತು. ಬೆಂಚ್ ಮ್ಯಾಜಿಸ್ಟ್ರೇಟರು ಆ ವರ್ತಕನಿಗೆ 60 ರೂಪಾಯಿ ಜುಲ್ಮಾನೆ ಹಾಕಿದರು.

ರಾಜಧಾನಿಯಲ್ಲಿ ಅರಮನೆಯ ಮೋಟರ್ ಷೆಡ್ಡಿನಲ್ಲಿ ನೌಕರನಾಗಿದ್ದು ಮೋಟರ್ ಗಾಡಿಚಕ್ರಗಳಿಗೆ ಹಾಕುವ ಬಹು ಬೆಲೆಯುಳ್ಳ ರಬ್ಬರ್ ಕವಚಗಳನ್ನು ಕದ್ದು ಕಳವಾಗಿ ಮಾರುತ್ತಿದ್ದು ಸಿಕ್ಕಿಬಿದ್ದ ದಾಸಪ್ಪನೆಂಬವನಿಗೆ ಸಿಟಿ ಮ್ಯಾಜಿಸ್ಟ್ರೇಟರು ಮೂನ್ನೆ ಮಂಗಳವಾರ ಒಂದು ವರುಷ ಕಠಿಣ ಸಜಾ ವಿಧಿಸಿರುತ್ತಾರೆ.

ಬೊಂಬಾಯಿ ಪಟ್ಟಣದ ಮಲಬಾರ್ ಹಿಲ್ ಗವರ್ನ್ ಮೆಂಟ್ ಬಂಗಲೆಯಲ್ಲಿ ಕಳೆದ ಶನಿವಾರ ರಾತ್ರಿ, ಬೊಂಬಾಯಿ ಗವರ್ನರವರು ಗಣ್ಯರಾದ ಅಧಿಕಾರಿಗಳನ್ನೂ ಮಹನೀಯರಾದ ದೊಡ್ಡ ಮನುಷ್ಯರನ್ನೂ ಕರಸಿಕೊಂಡು ಅವರಿಗೆ ಔತಣವನ್ನು ಮಾಡಿದರೆಂದೂ, ಅಗ್ಗೆ ನಮ್ಮ ಶ್ರೀಮದ್ಯುವರಾಜರವರೂ ದಯಮಾಡಿ ಸಿದ್ದರೆಂದೂ ಪ್ರಕಟವಾಗಿದೆ.

ಸಿರಿಯಾದಲ್ಲಿ ಒಂದು ತಾಲೂಕ್ ಮಹಾ ಸಭೆ ತಾ 17 ನೇ ಗುರುವಾರ ಡೆಪ್ಯುಟಿ ಕಮೀಷನರವರ ಅಧ್ಯಕ್ಷತೆಯಲ್ಲಿ ನಡೆಯುವಂತೆ ಏರ್ಪಾಡಾಗಿದೆ. ಅಗ್ಗೆ ಆ ತಾಲ್ಲೂಕಿಗೆ ಸಂಬಂಧಪಟ್ಟ ಹಲವು ಹಿತಕರವಾದ ಅಭಿವೃದ್ಧಿ ವಿಚಾರಗಳು ಚರ್ಚಿಸಲ್ಪಡುವವು. ಅಮಲ್ದಾರ್ ಮ|| ಎನ್. ಶ್ರೀನಿವಾಸರಾಯರು ಸಭೆಯ ಕಾರ್ಯಗಳನ್ನು ನಿರ್ವಹಿಸುವವರಾಗಿದ್ದಾರೆ.

ಮೈಸೂರು ತಾಲ್ಲೂಕಿಗೆ ಸೇರಿದ ಮರುಡಿ ಆಚೆ ಉತ್ತನ ಹಳ್ಳಿ ರೋಂದಿ ದುರ್ಗನ ಬಳಿ ಕಳೆದ 16 ನೇ ತಾ. ಸಾಯಂಕಾಲ ಮೂರಾ ಮೂರಿ ನಡೆಸು ದಾಟನಂಬ ಹೊಲೆಯನನ್ನು ಕೊಂದು ಹಾಕಿದರು. ನಮ್ಮ ತಾಲ್ಲೂಕ್ ಪೋಲೀಸಿನವರು ಬಹಳ ಸಾಹಸಪಟ್ಟು ಪತ್ತೆ ಹರವಾದು ನಡಿಸಿ ಕೊಂದವೊಕದ್ದೀನ್ ವಗ್ಯರೆ ಆರು ಮಂದಿಯನ್ನು ದಸ್ತಗಿರಿ ಮಾಡಿದಾರೆಂದು ಕೇಳುತ್ತೇವೆ.

ಇಂಡಿಯಾ ಗವರ್ನ್ ಮೆಂಟಿನ ಫಾರೆಸ್ಟ್ ಇಲಾಖೆಯ ಡೈರೆಕ್ಟರ್ ಜನರಲ್ ರವರು ಕಳೆದ ವಾರ ರಾಜಧಾನಿಗೆ ಬಂದಿದ್ದು, ನಮ್ಮ ಫಾರೆಸ್ಟ್ ಕನ್ಸರ್ವೇಟರ್ ಮ|| ಎಂ. ಜಿ ರಾಮರಾಯರ ಕೂಡ ಇಲ್ಲಿನ ಫಾರೆಸ್ಟ್ ಪ್ರದರ್ಶನಾಲಯ, ಡಿಪೋ, ಶ್ರೀರಂಗಪಟ್ಟಣದ ಸಂದಲ್ ಕೋಠಿ, ಕಾನಕಾನಹಳ್ಳಿಯ ಫಾರೆಸ್ಟ್ ಮುಂತಾದವುಗಳನ್ನು ನೋಡಿ, ಇಲ್ಲಿನ ಫಾರೆಸ್ಟ್ ಆಡಳಿತವನ್ನೆಲ್ಲಾ ವಿಚಾರಿಸಿ ತಿಳಿದುಕೊಂಡು ಹೋದರು.

ಮದರಾಸ್ ಪಟ್ಟಣದ ತಂಬುಚೆಟ್ಟಿ ಬೀದಿಯಲ್ಲಿರುವ ಅಮೃತಾಂಜನ ಡಿಪೋವಿನ ಮ್ಯಾನೇಜರವರೂ, ಬೆಂಗಳೂರು ಕೋಟೆಯಲ್ಲಿ ಉಡುಪುಗಳನ್ನು ತಯಾರುಮಾಡಿಕೊಡುವ ಭಾರೀ ವರ್ತಕರಾದ ಮ|| ಟಿ. ಲಕ್ಷ್ಮೀರಮಣಯ್ಯಂಗಾರರೂ ತಮ್ಮ ವ್ಯಾಪಾರ ವಿಷಯಗಳನ್ನೊಳಗೊಂಡ, ಅತ್ಯಂತ ಸುಂದರವಾದ ಚಿತ್ರಗಳನ್ನುಳ್ಳ ಹೊಸ ವರುಷದ ಕ್ಯಾಲೆಂಡರುಗಳನ್ನು ಕಳುಹಿಸಿರುವುದಕ್ಕಾಗಿ ಅವರನ್ನು ವಂದಿಸುತ್ತೇವೆ.

ಹಿಂದೆ ಮೈಸೂರು “ವೃತ್ತಾಂತ ಪತ್ರಿಕೆ” ಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಒಬ್ಬ ಇಂಜನಿಯರು ಸರ್ಕಾರದ ಹಣವನ್ನು ದುರುಪಯೋಗ ಮಾಡಿದ ಹಾಗೆ ಪ್ರಕಟಿಸಿದ್ದ ವರ್ತಮಾನವನ್ನು ಸರ್ಕಾರದವರು ಓದಿದಾರೆಯೋ ಎಂದೂ, ಅದರ ಪೂರ್ವೋತ್ತರವೇನೆಂದೂ ಮ|| ಬಿ. ನರಸಿಂಗರಾಯರು ಮೊನ್ನೆ ನಡೆದ ನ್ಯಾಯವಿಧಾಯಕ ಸಭೆಯಲ್ಲಿ ಪ್ರಶ್ನೆಮಾಡಿದ್ದಕ್ಕೆ ಸರ್ಕಾರದವರು—ಆ ವರ್ತಮಾನವನ್ನು ಓದಿದೆವೆಂದೂ, ಆ ವಿಷಯ ಇನ್ನೂ ಆಲೋಚನೆಯಲ್ಲಿದೆ ಎಂದೂ ಜವಾಬು ಕೊಟ್ಟಿದಾರೆ.

ಒಬ್ಬ ಬಾತ್ಮೀದಾರರಿಂದ.—ಮಂಡ್ಯದ ಸಾ|| ಅಮೃತಕೃಷ್ಣನವರು ಕೆಲವು ದಿವಸಗಳಿಂದ ಕಾಯಿಲೆಯಾಗಿದ್ದು 55 ನೇ ವಯಸ್ಸಿನಲ್ಲಿ ತಾ. 26 ನೇ ಬುಧವಾರ ಸಾಯಂಕಾಲ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಮ್ಯುನಿಸಿಪಲ್ ಮತ್ತು ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಿದ್ದುದು ಮಾತ್ರವಲ್ಲದೆ, ಜೈನಮತಸ್ಥರಲ್ಲಿ ಮುಖಂಡರಾಗಿಯೂ, ಮಂಡ್ಯದ ಪ್ರಜೆಗಳಲ್ಲಿ ಗಣ್ಯರಾಗಿಯೂ, ಬಡಜನಗಳಿಗೆ ಉಪಕಾರಿಗಳಾಗಿಯೂ, ಮಂಡ್ಯ, ಮದ್ದೂರು, ಚನ್ನಪಟ್ಟಣ, ಬೆಂಗಳೂರು ಮುಂತಾದ ಸ್ಥಳಗಳಲ್ಲೆಲ್ಲಾ ಕೀರ್ತಿಯನ್ನು ಸಂಪಾದಿಸಿದವರಾಗಿಯೂ ಇದ್ದರು.

ಕಳೆದ ಭಾನುವಾರ ಮಧ್ಯಾಹ್ನ ಕರ್ನಲ್ ಡೇರಲಿ ಅವರನವರು ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿದರು. ಇಲ್ಲಿನ ಎಲ್ಲಾ ಪಂಗಡಗಳ ದೊಡ್ಡ ಮನುಷ್ಯರೂ, ಮಿಲಿಟರಿ ಹುದ್ದೇದಾರರೂ, ನೂರಾರು ಮಂದಿ ಪ್ರತಿಷ್ಠಿತರೂ ರೈಲ್ವೆ ಸ್ಟೇಷನ್ನಿನಲ್ಲಿ ಕಾದಿದ್ದು ಅವರಿಗೆ ಸುಸ್ವಾಗತವನ್ನು ಬಯಸಿ ಹೂವಿನ ಹಾರ ತುರಾಯಿಗಳನ್ನೂ ಫಲಗಳನ್ನೂ ಒಪ್ಪಿಸಿದರು. ಕರ್ನಲ್ ರವರು ಬಹಳ ಸಂತೋಷಪಟ್ಟು ಪ್ರಜೆಗಳೂ ಇತರರೂ ಮಾಡಿದ ಸನ್ಮಾನಗಳಿಗಾಗಿ ಅವರನ್ನೆಲ್ಲಾ ವಂದಿಸಿ ಸ್ಟೇಷನ್ನಿನಿಂದ ಜೋಡಿ ಕುದುರೆ ಸಾರೋಟಿನಲ್ಲಿ ತಮ್ಮ ಭವನಕ್ಕೆ ದಯಮಾಡಿದರು.

ಕಳೆದ ಬುಧವಾರ ಸಾಯಂಕಾಲ ರಾಜಧಾನಿಯ ಸಂಸ್ಕೃತ ಪಾಠಶಾಲೆಯ ಸಭಾ ಮಂದಿರದಲ್ಲಿ ಡೆಪ್ಯುಟಿ ಕಮೀಷನರ್ ಮ|| ಎ. ಸುಬ್ರಹ್ಮಣ್ಯಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಮಹಾ ಸಭೆ ನಡೆಯಿತು. ಶ್ರೀ ಶೃಂಗೇರಿ ಮಠದ ಮೈಸೂರು ಸೀಮೆಯ ಆಚಾರ ವಿಚಾರಾಧಿಕಾರಿಗಳಾದ ವೇ|| ಯಜ್ಞೇಶ್ವರ ಶಾಸ್ತ್ರಿಗಳು ಶ್ರೀ ಸ್ವಾಮಿಗಳವರಿಂದ ದಯಪಾಲಿಸಲ್ಪಟ್ಟ ನಿರೂಪವನ್ನು ಸಭಿಕರಿಗೆ ಓದಿ ಹೇಳಿದರು. ಶೃಂಗೇರಿಯಲ್ಲಿ ಶಾರದಾ ದೇವಾಲಯವನ್ನೂ, ಶ್ರೀಮದಾಚಾರ್ಯರ ದೇವಾಲಯವನ್ನೂ ಪ್ರತಿಷ್ಠೆಮಾಡುವ ಸಮಯ ಸನ್ನಿಹಿತವಾಗಿದೆ ಎಂದು ಮುಂತಾಗಿ ತಿಳಿಸಿದರು. ಈ ಕಾರ್ಯಕ್ಕೆ ರಾಜಧಾನಿಯ ಆಸ್ತಿಕರು ತಮ್ಮ ಶಕ್ತ್ಯನುಸಾರ ವಷ್ಟು ಧನ ಸಹಾಯ ಮಾಡಬೇಕೆಂದು ಇತ್ಯರ್ಥವಾಗಿ ತ್ರಿಮತಸ್ಥ ವೈದಿಕ ಲೌಕಿಕ ದೊಡ್ಡಮನುಷ್ಯರೂ ಉಳ್ಳ ಒಂದು ಕಮಿಟಿಯು ನೇಮಿಸಲ್ಪಟ್ಟಿತು.

ಕಳೆದ ಸೋಮವಾರ ಬೆಂಗಳೂರು ಡೆಪ್ಯುಟಿ ಕಮೀಷನರ್ ಮ|| ಟೆಂಪಿಯವರು ಪೋಲೀಸ್ ಸೂಪರಿಂಟೆಂಡ್ ಟೌನ್ ಹಾಲ್ ನಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿ ನಾನಾ ಅಪರಾಧಗಳನ್ನು ಪತ್ತೆ ಮಾಡಿ ಕೊಟ್ಟ ಪೋಲೀಸಿನವರಿಗೂ ಇತರರಿಗೂ ಬಹುಮಾನಗಳನ್ನು ಹಂಚಿದರು. ಇಬ್ಬರು ಇನ್ಸ್ಪೆಕ್ಟರುಗಳೂ, ಮೂರು ಮಂದಿ ಪಟೇಲರುಗಳೂ, ಐದು ಜನ ಹೆಡ್ ಕಾನ್ ಸ್ಟೇಬಲ್ ಗಳೂ 12 ಜನ ಸಾರ್ಜಂಟುಗಳೂ, 13 ಮಂದಿ ಕಾನ್ ಸ್ಟೇಬಲ್ ಗಳೂ, ಇಬ್ಬರು ಜವಾನರೂ, 4 ಮಂದಿ ದಫೇದಾರರೂ ಬಹುಮಾನಗಳನ್ನು ಪಡೆದರು. ದುಷ್ಟರನ್ನು ಹಿಡಿದು ಪ್ರಜಾನೆಮ್ಮದಿಗೆ ಸಹಾಯಮಾಡಿದವರ ಮೆಹನತ್ತನ್ನು ಡೆಪ್ಯುಟಿ ಕಮೀಷನರು ಕೊಂಡಾಡಿ, ಬಹುಮಾನ ಪಡೆಯದೆ ಇದ್ದವರಿಗೆ ಪ್ರೋತ್ಸಾಹ ಪಡಿಸಿ, ಪೋಲೀಸಿನವರನ್ನು ಪಡೆದಿದ್ದಾಗಲೂ, ಅವರಿಲ್ಲದಿದ್ದರೆ ಬಹಳ ಕಷ್ಟವಾಗುವುದೆಂದೂ, ಇತರ ಕಡೆಗಳಿಗಿಂತ ನಮ್ಮ ಸಂಸ್ಥಾನದ ಪೋಲೀಸಿನವರು ಉತ್ತಮರಾಗಿದ್ದಾರೆಂದೂ ಹಿತವಾಕ್ಯಗಳನ್ನು ಹೇಳಿ ಆ ಸಂತೋಷ ಕೂಟವನ್ನು ಮುಗಿಸಿದರು.

ಮಲೆಬೆನ್ನೂರು ಎ. ವಿ. ಬಾಯ್ಸ್ ಸ್ಕೂಲು.

ತಾ. 16 ರಲ್ಲಿ ಈ ಮಲೆಬೆನ್ನೂರು ಬಾಯ್ಸ್‌ಸ್ಕೂಲಿನ ಹೊಸಕಟ್ಟಡವನ್ನು ತಮ್ಮ ಬಾಬಿಗೆ ತೆರೆದುಕೊಳ್ಳಲು, ಚಿತ್ರದುರ್ಗದ ಡಿ|| ಸ್ಕೂಲುಗಳ ಅ|| ಡೆ|| ಇನ್ಸ್‌ಪೆಕ್ಟರಾದ ಮ|| ಪಿ. ವೆಂಕಟರಾಯರು ಡಾ|| ಮೋತ್ರಿ ಮ|| ಶಂಕರರಾವ ಮುತಾಲಿಕದಾರರೊಂದಿಗೆ ದಯಮಾಡಿಸಿ, ಹೊಸಕಟ್ಟಡವನ್ನು ಶೃಂಗರಿಸಿ ಪ್ರವೇಶ ಮಹೋತ್ಸವವನ್ನು ನಡೆಯಿಸಿದರು. ಕಟ್ಟಡವು ತೋರಣಗಳಿಂದಲೂ, ಧ್ವಜಪಟಗಳಿಂದಲೂ, ಕಟ್ಟಡದೊಳಗೆ ಅಲಂಕರಿಸಿದ್ದ ಚಿತ್ರಪಟಗಳಿಂದಲೂ, ಕಲಿಯುತ್ತಿರುವ ವಿದ್ಯಾರ್ಥಿಗಳಿಂದಲೂ, ಅಕ್ಕಪಕ್ಕದ ಗ್ರಾಮಗಳ ಸ್ಕೂಲ್ ಮಾಸ್ಟರಿಂದಲೂ ಶೋಭಿಸುತ್ತಿದ್ದ ಈ ಕಟ್ಟಡಕ್ಕೆ ಊರಿನ ಪ್ರಮುಖಜನ ಮುಂತಾದವರು ಕೂಡಿಕೊಂಡು ಜೋಯಿಸರವರಿಂದ ವಿಧಿಪ್ರಕಾರ ಪೂಜಾ ವಗೈರೆ ನಡೆಯಿಸಿ ಒಳಗೆ ಪ್ರವೇಶಿಸಿ, ಮ|| ನಾಡಿಗ ಭಗವಂತರಾಯರ ಕೋರಿಕೆಯಂತೆ ಮ|| ಪಿ. ವೆಂಕಟರಾಯರು ಅಗ್ರಾಸನವನ್ನು ವಹಿಸಿದರು. ನಂತರ, ಸ್ಕೂಲಿನ ವಿದ್ಯಾರ್ಥಿಗಳಿಂದ ವಿದ್ಯೆಯು ಎಲ್ಲರಿಗೂ ಅವಶ್ಯಕವೆಂಬ ವಿಷಯದಲ್ಲಿ ನಡೆಸಿದ ನಾಟಕವು ಬಹು ಸ್ವಾರಸ್ಯವಾಗಿತ್ತು. ನಂತರ ಬಾಲಕ ಬಾಲಕಿಯರ ಸ್ತೋತ್ರಪಾಠ ನಡೆದ ಮೇಲೆ ಸ್ಕೂಲ್ ಹೆಡ್ ಮಾಸ್ಟರ್ ಸಿದ್ದಯ್ಯನವರು ಸ್ಕೂಲಿನ ಚರಿತ್ರೆಯನ್ನು ಈ ಸ್ಕೂಲು ಅಭಿವೃದ್ಧಿಗೆ ಬಂದ, ಮುಂದೆ ಇನ್ನೂ ಹೆಚ್ಚಾಗಿ ಬರುವ ವಿಷಯವನ್ನು ಓದಿ ಹೇಳಿದರು. ಆ ವೇಳೆ ಪಟೇಲ್ ಮಹಾಂತಪ್ಪನವರು ಗ್ರಾಮದ ಪರವಾಗಿ ಹಾಜರಿರುವ ಹೆಡ್ ಮಾಸ್ಟರು ಮತ್ತು ಅ|| ಮಾಸ್ಟರುಗಳ ವಿಷಯದಲ್ಲಿ ತಮ್ಮ ಅನುರಾಗವನ್ನು ಉಪನ್ಯಾಸಮೂಲಕ ತೋರ್ಪಡಿಸಿದರು. ತರುವಾಯ ಮ|| ಪಿ. ವೆಂಕಟರಾಯರು ಮಾಸ್ಟರಿಗೂ ಗ್ರಾಮನಿವಾಸಿಗಳಿಗೂ ಪರಸ್ಪರ ಪ್ರೀತಿ ಉತ್ಸಾಹ ಗೌರವಗಳಿದ್ದರೆ ದಿನೇದಿನೇ ಸ್ಕೂಲುಗಳು ಅಭಿವೃದ್ಧಿಗೆ ಬರಬಹುದೆಂಬ ವಿಷಯದಲ್ಲಿ ಉಪನ್ಯಾಸವನ್ನು ಬಹುಸರಸವಾಗಿ ಮಾಡಿದರು. ಆ ಮೇಲೆ ಮ|| ಪಿ. ಯುಸ್. ರಂಗಭಟ್ಟರು ಧನವ್ಯಯದ ವಿಷಯದಲ್ಲಿ ಒಂದು ಉಪನ್ಯಾಸ ಮಾಡಿದ ಮೇಲೆ ಬಾಲಕ ಬಾಲಕಿಯರಿಗೆ ಇನ್ಸ್‌ಪೆಕ್ಟರ ಹಸ್ತದಿಂದ ಇನಾಂ ಪುಸ್ತಕಗಳು ಹಂಚಲ್ಪಟ್ಟವು. ಹೊಸ ಪದ್ಧತಿಯ ಪ್ರಕಾರ ಕಿಂದರ್ ಗಾರ್ಟನ್ ಗೀತ ಮತ್ತು ಆಟಗಳು ನಡೆಸಿದ ಮೇಲೆ ಮಹಾರಾಜಾವರ ಮತ್ತು ಚಕ್ರವರ್ತಿಗಳವರ ಶ್ರೇಯಃ ಪ್ರಾರ್ಥನೆ ನಡೆಯಿಸಿ ಮಕ್ಕಳಿಗೆಲ್ಲಾ ಫಲಾಹಾರ, ಸಭಿಕರಿಗೆಲ್ಲಾ ಗಂಧ ತಾಂಬೂಲಗಳನ್ನು ಹಂಚಿದ ಮೇಲೆ ಸಭೆಯು ಬರಖಾಸ್ತು ಆಯಿತು.

ಚಂದಾದಾರ

ಮೈಸೂರು ಬ್ಯಾಂಕ್, ಬೆಂಗಳೂರು.

ಈ ದಿನ ಮೇಲ್ಕಂಡ ಬ್ಯಾಂಕಿನ ಮೂರನೇ ವರುಷದ ಆಖೈರದ ರಿಪೋರ್ಟು ಮುಂತಾದವನ್ನು ಬೆಂಗಳೂರು ಹೆಡ್ ಆಫೀಸಿನಲ್ಲಿ ಡೈರೆಕ್ಟರುಗಳು ಓದುತ್ತಾರೆ. ಈ ರಿಪೋರ್ಟಿನಲ್ಲಿ ಕಂಡುಬರುವ ಮುಖ್ಯಾಂಶಗಳನ್ನು ಇಲ್ಲಿ ಸೂಚಿಸುವೆವು.

ಮೇಲ್ಕಂಡ ಬ್ಯಾಂಕಿನ ಲೇವಾದೇವಿಯಿಂದ 1915 ನೇ ಜೂನ್ ಆಖೈರಿಗೆ ಮುಗಿದ ಛಮಾಹೆಯಲ್ಲಿ ರೂ. 65,255-4-4 ಪೈ, 1915 ನೇ ಡಿಸೆಂಬರ್ 31 ಕ್ಕೆ ಆಖೈರಾದ ಛಮಾಹೆಯಲ್ಲಿ ರೂ. 71,613-8-7 ಪೈ, 1914 ನೇ ಡಿಸೆಂಬರ್ ಆಖೈರಿನ ಶಿಲ್ಕು ರೂ. 54-0-11 ಪೈಕಿ ಜುಮ್ಲಾ ರೂ. 1,36,922-13-10 ಪೈ ನಫೆ ಉತ್ಪತ್ತಿಯಾಗಿರುತ್ತದೆ. 1915 ನೇ ಜೂನ್ ಆಖೈರಿನ ಛಮಾಹೆಯಲ್ಲಿ ಷೇರುದಾರರಿಗೆ ಸೇಕಡಾ 6 ರಂತೆ ಬಡ್ಡಿ ಹಂಚಿಕೆಗೆ 30,000 ರೂಪಾಯನ್ನೂ ರಿಜರ್ವ್ ಫಂಡಿಗೆ 25,000 ರೂಪಾಯನ್ನೂ ವಿನಿಯೋಗಿಸಿದರು. ಉಳಿದ ನಫೆಯನ್ನು ಡೈರೆಕ್ಟರುಗಳು ಮುಂದೆ ಹೇಳುವಂತೆ ವಿನಿಯೋಗಿಸಬಹುದೆಂದು ಸೂಚಿಸುತ್ತಾರೆ. ಹ್ಯಾಗೆಂದರೆ—ಷೇರುದಾರರಿಗೆ ಸೇಕಡಾ 6 ರಂತೆ ಬಡ್ಡಿ ಹಂಚಿಕೆಗೆ 30,000 ರೂಪಾಯಿ ಕೊಡಬೇಕೆಂದೂ ರಿಜರ್ವ್ ಫಂಡಿಗೆ 50,000 ರೂಪಾಯಿ ತೆಗೆದಿಡಬೇಕೆಂದೂ, ಸಾದಿಲ್ವಾರ್ ಫಂಡಿಗೆ 5,000 ರೂಪಾಯಿ, ಸಿಬ್ಬಂದಿಯ ನೌಕರರ ಇನಾಮಿಗಾಗಿ 1,500 ರೂಪಾಯಿ, ಸಹಕಾರಿ ಪತ್ರದ ಬೆಲೆ ಕಡಮೆಯಾದದ್ದಕ್ಕೆ 6,300 ರೂಪಾಯಿ ತೆಗೆದಿಡಬೇಕೆಂದೂ ಉಳಿದ ರೂ. 14,062-13-10 ಪೈಯನ್ನು ಶಿಲ್ಕಾಗಿ ಇಡಬೇಕೆಂದೂ ಸೂಚಿಸಲಾಗಿದೆ. ಇದಲ್ಲದೆ ಯುದ್ಧದ ದೆಸೆಯಿಂದ ಲೇವಾದೇವಿಯು ಕಡಿಮೆಯಾಗಿದ್ದರೂ ಬ್ಯಾಂಕು ಕ್ರಮವಾಗಿ ಅಭ್ಯುದಯ ಸ್ಥಿತಿಗೆ ಬರುತ್ತಿದೆ ಎಂದು ಡೈರೆಕ್ಟರುಗಳು ತಿಳಿಸುತ್ತಾರೆ. ಷೇರುದಾರರಿಗೆ ಸಲ್ಲಬೇಕಾಗುವ ಬಡ್ಡಿಯನ್ನು ಫೆಬ್ರವರಿ ತಾ. 14 ರಿಂದ ಬಟವಾಡೆ ಮಾಡುವರು.

ಈ ಬ್ಯಾಂಕು 20,00,000 ರೂಪಾಯಿಗೆ ರಿಜಿಸ್ಟರ್ ಮಾಡಲ್ಪಟ್ಟು, 1000 ರೂಪಾಯಿ ಬಾಬತು 20,000 ಷೇರುಗಳೂ ಬಿಕರಿ ಆಗಿ, ಷೇರ್ 1 ಕ್ಕೆ 50 ರೂಪಾಯಿಯಂತೆ 10 ಲಕ್ಷ ರೂಪಾಯನ್ನು ವಸೂಲು ಮಾಡಿರುತ್ತದೆ. ಮೈಸೂರು ಗವರ್ನ್‌ಮೆಂಟಿನವರು 10,00,000 ರೂಪಾಯನ್ನು ಡಿಪಾಜಿಟ್ಟು ಮಾಡಿದ್ದಾರೆ. ಇದಲ್ಲದೆ 191,0 698 ಚಿಲ್ಲರೆ ರೂಪಾಯಿ ಜನಗಳಿಂದ ಡಿಪಾಜಿಟ್ಟು ಮಾಡಲ್ಪಟ್ಟಿರುವುವು. ಬ್ಯಾಂಕಿನ ಸೇವಿಂಗ್ಸ್ ಬ್ಯಾಂಕ್ ಮತ್ತು ಪ್ರಾವಿಡೆನ್ಸಲ್ ಡಿಪಾಜಿಟ್ಟುಗಳು ಸುಮಾರು 63,750 ರೂಪಾಯಿನ ತನಕ ಇವೆ. ಈ ಬ್ಯಾಂಕಿನ ಶಾಖೆಗಳು ನಮ್ಮ ಸೀಮೆಯೊಳಗೆ ಚನ್ನಪಟ್ಟಣ, ದಾವಣಗೆರೆ, ತಿಪಟೂರು, ಚಿಕ್ಕಮಗಳೂರು, ಮೈಸೂರು, ತುಮಕೂರು, ಶಿವಮೊಗ್ಗೆ ಈ ಸ್ಥಳಗಳಲ್ಲೂ ಹಿಂದು ಸ್ಥಾನದಲ್ಲಿ ಅಲ್ಲಹಾಬಾದು, ಕಾನ್ಪುರ, ದೆಹಲಿ, ಲಾಹೋರ್, ಕರಾಚಿ, ಸಿಮ್ಲಾ ಎಂಬೀ ಪಟ್ಟಣಗಳಲ್ಲೂ ಸ್ಥಾಪಿಸಲ್ಪಟ್ಟು ವ್ಯಾಪಾರಸ್ಥರಿಗೆ ಅನುಕೂಲ ಮಾಡಲ್ಪಟ್ಟಿದೆ. ಲಂಡನ್, ಬೊಂಬಾಯಿ, ಕಲ್ಕತ್ತಾ ಪಟ್ಟಣಗಳಲ್ಲಿ ಇಂಪೀರಿಯಲ್ ಬ್ಯಾಂಕ್ ಶಾಖೆಗಳೂ, ಮದರಾಸ್ ಪಟ್ಟಣದಲ್ಲಿ ಮದರಾಸ್ ಬ್ಯಾಂಕೂ ಏಜನ್ಸಿ ಕೆಲಸವನ್ನು ವಹಿಸಿಕೊಂಡು ಸಹಾಯಮಾಡುವಂತೆ ಏರ್ಪಾಡುಮಾಡಲಾಗಿದೆ.

ರಾಜಧಾನಿಯ ಟ್ರಸ್ಟ್ ಬೋರ್ಡ್ ಮೀಟಿಂಗ್.

ಮೈಸೂರು ಪುರಾಭಿವೃದ್ಧಿ ಸಂಘದ ಮೀಟಿಂಗು ಕಳೆದ ಸೋಮವಾರ ಟೌನ್ ಹಾಲ್ ಮಂದಿರದಲ್ಲಿ ಜರುಗಿತು. ರಾವ ಬಹದೂರ್ ಮ|| ಎಂ. ಸಿ. ರಂಗಯ್ಯಂಗಾರ್ರು, ಮಿ|| ಮಹಮದ್ ಚಂಪರ್ ಸಾಹೇಬರು, ವೈಸ್ ಪ್ರೆಸಿಡೆಂಟ್ ಮ|| ಬಿ. ನಾರಾಯಣರಾಯರು, ರೆವ್. ಜೆ. ದಬ್ಲ್ಯೂ. ಸಾಡೆಸಾಹೇಬರು ಹಾಜರಾಗಿದ್ದರು. ಚೇರ್ ಮನ್ ಮ|| ಟಿ. ಲಕ್ಷ್ಮಣರಾಯರು ಅಧ್ಯಕ್ಷತೆಯನ್ನು ವಹಿಸಿದರು. ಮೀಟಿಂಗಿನಲ್ಲಿ ಚರ್ಚೆಯಾಗಿ ತೀರ್ಮಾನವಾಡಲ್ಪಟ್ಟ ಮುಖ್ಯ ವಿಷಯಗಳ್ಯಾವವೆಂದರೆ—

ಹೊಲಗೇರಿಯಲ್ಲಿ ಮಕ್ಕಳಿಗೆ ವಿದ್ಯೆ ಕಲಿಸುವಂಥಾ ಪಾಠಶಾಲೆಯನ್ನು ಕಟ್ಟಿಕೊಳ್ಳುವದಕ್ಕೆ ಡಿಪ್ರೆಸ್ಡ್ ಕ್ಲಾಸ್ ಮಿಷನ್ನವರಿಗೆ ಟ್ರಸ್ಟ್ ಬೋರ್ಡಿನವರು ಪ್ರತ್ಯೇಕವಾದ ನಿವೇಶನವನ್ನು ಕೊಟ್ಟಿದ್ದಾರೆ. ಆ ಮಿಷನ್ ಪ್ರೆಸಿಡೆಂಟರಾದ ಮ|| ವಿ. ಎಸ್. ನರಸಿಂಹಯ್ಯಂಗಾರ್ರು ಆ ನಿವೇಶನವು ಹೊಲಗೇರಿಯ ಹೊರಗಡೆ ಇರೋಣದರಿಂದ ಹೊಲಗೇರಿಯವರು ಅಲ್ಲಿಗೆ ತಮ್ಮ ಮಕ್ಕಳನ್ನು ಕಳುಹಿಸುವುದಕ್ಕೆ ಒಪ್ಪುವದಿಲ್ಲವೆಂದು ಆಕ್ಷೇಪಣೆ ಮಾಡುವುದಾಗಿಯೂ, ಹೊಲಗೇರಿಯ ಮಧ್ಯೆ ಬಿಟ್ಟಿರುವ ನಿವೇಶನವನ್ನು ಅದಕ್ಕೆ ಪ್ರತಿಯಾಗಿ ಕೊಡಬೇಕೆಂದೂ ಟ್ರಸ್ಟ್ ಬೋರ್ಡಿನವರನ್ನು ಕೇಳಿದರು. ಆ ಮಧ್ಯ ಪ್ರದೇಶದಲ್ಲಿ ಈಗ ಒಂದು ಮಿಷನ್ ಸ್ಕೂಲು ಇರೋಣದರಿಂದ ಒಂದಕ್ಕೊಂದು ಅಷ್ಟು ಸಮೀಪವಾಗುವಂತೆ ನಿವೇಶನವನ್ನು ಕೊಟ್ಟು ಸ್ಕೂಲು ಕಟ್ಟಿಸುವುದು ಚೆನ್ನಾಗಿಲ್ಲವೆಂದು ಮೆಂಬರುಗಳು ಅಭಿಪ್ರಾಯಪಟ್ಟು, ಮ್ಯುನಿಸಿಪಲ್ ಸ್ಕೂಲ್ ಕಮಿಟಿಯವರಿಗೆ ಈ ವಿಷಯವನ್ನು ತಿಳಿಸಿ ಅವರ ಅಭಿಪ್ರಾಯವನ್ನು ಕೇಳಬೇಕೆಂದು ಇತ್ಯರ್ಥವಾಡಿದರು.—ಫೀವರ್ ಶೆಡ್ ಬಡಾವಣೆಯಲ್ಲಿ ಒಂದು ಕಡೆ ಆನ ಕರ್ವೆನ್ಸಿ ಗಲ್ಲಿಯನ್ನು ಉದ್ದಕ್ಕೂ 31 ಅಡಿಯಿಂದ 16 ಅಡಿಗೆ ಕಡಮೆಮಾಡಿ, ಉಳಿದ 15 ಅಡಿ ನಿವೇಶನವನ್ನು ಆಯಾ ಮನೆಯವರ ಸಿತ್ತುಗಳಿಗೆ ಸೇರಿಸಿಕೊಡಬೇಕೆಂದೂ, ಈ ನಿವೇಶನಕ್ಕೆ ಗಜಕ್ಕೆ 4 ಆಣೆಯಂತೆ ಬೆಲೆ ಕಟ್ಟುವುದು ಸಾಧುವಾಗಿದೆ ಎಂದೂ ಚೇರ್ ಮನ್ನರವರು ಸೂಚಿಸಿದರು. ಮ|| ರಂಗಯ್ಯಂಗಾರ್ರು 2 ಆಣೆಯಂತೆ ಕೊಡಬೇಕೆಂದು ಅಭಿಪ್ರಾಯಪಟ್ಟದ್ದನ್ನು ಇತರ ಮೆಂಬರುಗಳೂ ಅನುಮೋದಿಸಿದ್ದರಿಂದ ಆ ರೀತಿ ತೀರ್ಮಾನವಾಯಿತು.

ಚಟ್ಟಿನಹಳ್ಳಿ ಬಡಾವಣೆಯಲ್ಲಿ ಸಣ್ಣ ಬಂಗಲೆಗಳ ನಿವೇಶನಗಳಿಗೆ ಹಿಂಭಾಗದಲ್ಲಿ ಸುಮಾರು 12 ಮನೆಗಳನ್ನು ಕಟ್ಟಿಕೊಳ್ಳುವದಕ್ಕೆ ವಿಂಗಡಿಸಿ ಬೇಕಾದವರಿಗೆ ಕ್ರಯಕ್ಕೆ ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು—ಈರನಗೆರೆ ಪೋಲೀಸ್ ಸ್ಟೇಷನ್ ಆವರಣಕ್ಕೆ ಗವರ್ನ್‌ಮೆಂಟಿಗೆ ಸೇರಿದ ಕೆಲವು ಪ್ರದೇಶಗಳನ್ನು ಬಿಡಿಸಿಕೊಡಬೇಕೆಂಬ ಸಲಹೆ ಇತ್ತು. ಗವರ್ನ್‌ಮೆಂಟಿನವರು ಅಷ್ಟು ಸ್ಥಳವನ್ನು ಬಿಕರಿ ಮಾಡಲಿಷ್ಟಪಡುತ್ತಾರೆಯೇ? ಅದರ ಕ್ರಯವನ್ನು ಪೋಲೀಸ್ ಇಲಾಖೆಯವರು ಪಾವತಿ ಮಾಡುವುದಕ್ಕೆ ಸಮ್ಮತಿಸುವರೇ ಎಂಬ ಅಂಶವನ್ನು ಕೇಳಿ ತಿಳಿಯಬೇಕೆಂದು ತೀರ್ಮಾನವಾಯಿತು.—ಲಷ್ಕರ್ ಮಂಡಿಮೊಹಲ್ಲಿಗಳಲ್ಲಿ ಇನ್ನು ಕೆಲವು ಮನೆಗಳನ್ನು ಕೊಂಡು ಒಡೆಯಬೇಕೆಂದು ಸಬ್ ಕಮಿಟಿಯವರು ರಿಪೋರ್ಟನ್ನು ಒಪ್ಪಿಸಿದರು. ಈ ಮನೆಗಳನ್ನು ಕಳಕೊಳ್ಳುವವರಿಗೆ ಅನುಕೂಲವಾದ ಬೇರೆ ಸ್ಥಳಗಳನ್ನು ಒದಗಿಸಬೇಕೆಂದು ಇತ್ಯರ್ಥವಾಯಿತು.—ಮಿ|| ಹಂಜಾಸು ಸೇನ್ ಸಾಹೇಬರ ಮನೆ ಹಿಂಪಾರ್ಶ್ವದಿಂದ ಮಂಡಿಮೊಹಲ್ಲೆಯ ಕೆಲವು ಬಡ ಬ್ರಾಹ್ಮಣರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ನಿವೇಶನವನ್ನು ವಿಂಗಡಿಸಿ ಕ್ರಯ ಗೊತ್ತುಮಾಡಿ ಬಿಕರಿ ಮಾಡಬೇಕೆಂದು ನಿಷ್ಕರ್ಷೆಯಾಗಿತ್ತು. ಸರ್ಕಾರದವರು ಆ ನಿವೇಶನಗಳನ್ನು ಹರಾಜು ಹಾಕಬೇಕೆಂದು ಹುಕುಂಕೊಟ್ಟಿದ್ದರು. ಹರಾಜು ಹಾಕಬಾರದೆಂದು ಸರ್ಕಾರಕ್ಕೆ ತಿಳಿಸಿ ಅವರ ಅನುಮತಿಯನ್ನು ಪಡೆಯಬೇಕೆಂದು ಮೆಂಬರುಗಳು ಅಭಿಪ್ರಾಯಪಟ್ಟರು.—ಈರನಗೆರೆ ಬಾಗಿಲು, ಮಾನಂದವಾಡಿ ರಸ್ತೆ ಬಾಗಿಲು, ನಂಜನಗೂಡು ರಸ್ತೆ ಬಾಗಿಲು, ಈ ಮೂರು ಭಾಗಗಳಲ್ಲೂ ರಾಜಧಾನಿಯ ಪ್ರವೇಶಸ್ಥಳಗಳಲ್ಲಿ ತಲಾ 1,400 ರೂಪಾಯಿ ಮುಟ್ಟಿಸಿ ರಸ್ತೆಯ ಎರಡು ಕಡೆಗಳಲ್ಲೂ ಒಂದೊಂದು ಸುಂದರವಾದ ಕಟ್ಟಡವನ್ನು ಕಟ್ಟಬೇಕೆಂದು ಮೆಂಬರುಗಳು ಒಪ್ಪಿಕೊಂಡರು. ಈ ಪೈಕಿ ಅರ್ಧ ಹಣವನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಂಡು ಕೊಡಬೇಕಾಗಿದೆ—ದೊಡ್ಡಕೆರೆಯೊಳಗಿರುವ ಕೊಳದ ಸುತ್ತಲೂ ಭರ್ತಿ ಹಾಕಿ ನೆಲಸಮ ಮಾಡುವುದಕ್ಕೆ ಇನ್ನೂ 100 ರೂಪಾಯಿ ಜಾಸ್ತಿ ಖರ್ಚು ಮಾಡಬಹುದೆಂದು ಒಪ್ಪಲಾಯಿತು.

ಶಿಕಾರಿಪುರ ತಾಲ್ಲೂಕು ಮಲೆನಾಡು ಮತ್ತು ವಿಲೇಜು ಇಂಪ್ರೂವ್‌ಮೆಂಟ್ ಕಾನ್ಫರೆನ್ಸು.

ಈ ಕಾನ್ಫರೆನ್ಸು ತಾ. 8 ರಲ್ಲಿ ಶಿಕಾರಿಪುರದಲ್ಲಿ ನಡೆಯಿತು. ಕಛೇರಿ ಹತ್ತಿರ ಹಾಕಿದ ಸುಂದರವಾದ ಚಪ್ಪರಕ್ಕೆ ತಾ. 8 ನೇ ಪ್ರಾತಃಕಾಲ ದಯಮಾಡಿಸಿದ ಮಹನೀಯರುಗಳನ್ನು ಕಮಿಟಿ ಸೆಕ್ರೆಟರಿಗಳಾದ ಮ|| ಭವಾನಿರಾಯರು, ಚನ್ನವೀರಪ್ಪನವರು ಉಚಿತಾಸನದಲ್ಲಿ ಕೂಡಿಸಿದರು. 200 ಜನ ಮೆಂಬರುಗಳು, 100 ಜನ ಅತಿಥಿಗಳು, 600 ಜನ ಪ್ರೇಕ್ಷಕರು ಬಂದಿದ್ದರು. ಕಮಿಟಿ ಪ್ರೆಸಿಡೆಂಟ್ ಮ|| ವಿಟ್ಠಲಮುಡಿತ್ತಾಯಾಚಾರ್ರು ಸಭಿಕರಿಗೆ ಸ್ವಾಗತವನ್ನು ಹೇಳುವದರ ಮೂಲಕ ಸಭಾಕಾರ್ಯವನ್ನು ಪ್ರಾರಂಭಿಸಿದರು.

ಶಿವಮೊಗ್ಗ ಡಿಸ್ಟ್ರಿಕ್ಟ್ ಕಮಿಷನರ್ ರಾದ ಮಿ|| ಕೆ ಮಾರ್ಶನ್ ರವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಮಲೆನಾಡು ಇಂಪ್ರೂವ್‌ಮೆಂಟು ಆಫೀಸರ್ ಮ|| ಅಪ್ಪಣ್ಣಯ್ಯಂಗಾರ್ರು ಸೂಚಿಸಿದರು. ಮ|| ಶ್ರೀನಿವಾಸದೀಕ್ಷಿತರೂ ಡಾ|| ಕರ್ನಿಸಾಹೇಬರೂ ಅನುಮೋದಿಸಿದರು. ಕೂಡಲೆ ಮಂಗಳವಾದ್ಯಗಳು ನುಡಿಯುವ ಸಮಯದಲ್ಲಿ ಸಭಿಕರ ಆನಂದ ಸೂಚನೆಯನ್ನರಿತು ಮಿ|| ಕೆ. ಮಾರ್ಶನ್ ಸಾಹೇಬರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಸಭಾಧ್ಯಕ್ಷರಿಗೆ ಕಮಿಟಿ ಪರವಾಗಿ ಸೆಕ್ರೆಟರಿ ಮ|| ಭವಾನಿರಾಯರಿಂದ ಅಡ್ರೆಸ್ ಓದಿ ಒಪ್ಪಿಸಲ್ಪಟ್ಟಿತು. ವ್ಯವಸಾಯಾಭಿವೃದ್ಧಿ, ವಿದ್ಯಾಭ್ಯಾಸ, ಮಲೆನಾಡು ವಿಚಾರ ಈ ವಿಷಯವಾಗಿ ಉಪನ್ಯಾಸಗಳು ಓದಲ್ಪಟ್ಟವು. ಮಲೆನಾಡು ಇಂಪ್ರೂವ್‌ಮೆಂಟ್ ಸ್ಕೀಮಿನಿಂದ ಹೊಂದಿದ ಪ್ರಯೋಜನ ತಾಲ್ಲೂಕು, ಟೌನ್ ಮತ್ತು ಗ್ರಾಮಾಭಿವೃದ್ಧಿ ಕಮಿಟಿಗಳಿಂದ ಉಂಟಾದ ಪ್ರಯೋಜನ ಇವುಗಳ ರಿಪೋರ್ಟು ಓದಲ್ಪಟ್ಟವು. ರೆವಿನ್ಯೂ ಸ್ಪೆಷಲ್ ಡೆಪ್ಯುಟಿ ಕಮಿಷನರೂ, ಹೆಲ್ತ್ ಆಫೀಸರೂ, ಅಮಲ್ದಾರರೂ, ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರೂ ಮತ್ತು ಕೋಆಪರೇಟಿವ್ ಇನ್ಸ್‌ಪೆಕ್ಟರೂ ಮೇಲ್ಕಂಡ ರಿಪೋರ್ಟುಗಳ ವಿಚಾರವಾಗಿ ಸಂಬಂಧಪಟ್ಟ ವಿಷಯವನ್ನು ಕುರಿತು ಇನ್ನೂ ಬಹುಭಾಗ ಪ್ರಯೋಜನ ಹೊಂದತಕ್ಕ ಅಂಶವನ್ನು ವಿಶದವಾಗಿ ಸಭಿಕರಿಗೆ ತಿಳಿಯಪಡಿಸಿದರು. ನಂತರ ಪ್ರೆಸಿಡೆಂಟರು ಪ್ರಸ್ತುತ ವಿಷಯವನ್ನು ಕುರಿತು ಸಂಕ್ಷಿಪ್ತ ಭಾಷಣ ಹೇಳಿದರು. ಮಧ್ಯಾಹ್ನ $1\frac{1}{2}$ ಘಂಟೆಗೆ ಸಬ್‌ಜೆಕ್ಟುಗಳ ತೀರ್ಮಾನದ ಬಗ್ಗೆ ಸಭೆಯು ಪ್ರಾರಂಭವಾಯಿತು. 40 ವಿಷಯಗಳುಳ್ಳ ಪಟ್ಟಿ ಸಭಿಕರಿಗೆ ಕೊಡಲಾಯಿತು. ಆ ಪೈಕಿ ಮುಖ್ಯವಾದವುಗಳ್ಯಾವವೆಂದರೆ —(1) ವಿಲೇಜು ಕಮಿಟಿ ಫಂಡು ಅಲ್ಲದೆ ಸರದ ಮೇಲೆ ಫಂಡು ಮಾಡಿಕೊಂಡು ಆ ಪೈಕಿ 5 ರೂ ಗೆ ಕಮ್ಮಿ ಇಲ್ಲದ ಮೊಬಲಗನ್ನು ಪ್ರತಿ ಕಮಿಟಿಯು ತಾಲ್ಲೂಕು ಪ್ರೋಗ್ರೆಸ್ ಕಮಿಟಿಗೆ ಕೊಡುವದರಿಂದ ವ್ಯವಸಾಯ ಮೊದಲಾದ ಗ್ರಾಮಾಭಿವೃದ್ಧಿಗೆ ಹೆಚ್ಚು ಪ್ರಯೋಜನವನ್ನುಂಟುಮಾಡುವದು ಎಂಬದಾಗಿ ಮ|| ದೀಕ್ಷಿತರು ಸೂಚಿಸಿದರು. ಕಾಗಿನಲ್ಲಿ ಪಟೇಲ್ ಮ|| ಕೆಂಚಪ್ಪನವರು, ಮ|| ಭವಾನಿರಾಯರು ಅನುಮೋದಿಸಿದರು. ಸಭಿಕರ ಏಕಾಂಗೀಕಾರದಿಂದ ರೆಜೊಲ್ಯೂಷನ್ ಮಾಡಲಾಯಿತು. (2) ಮಲೆನಾಡು ಇಂಪ್ರೂವ್‌ಮೆಂಟ್ ಸ್ಕೀಮಿಗೆ ಶಿಕಾರಿಪುರ ತಾಲ್ಲೂಕು ಪೂರಾ ಭಾಗವನ್ನು ಒಳಪಡಿಸುವದು (3) ಮೈನರ್ ಕೆರೆಗಳು (ಈ ವಿಷಯವಾಗಿ ಮಂಚಮುತ್ ಸೂಪ್ರೆಂಜಾವರು ಕೆಲವು ಸಂಗತಿಗಳನ್ನು ಹೇಳಿದರು) (4) ವಿದ್ಯಾಭಿವೃದ್ಧಿಗೆ ಬೇಕಾದ ಸೌಕರ್ಯ (5) ಖಾನವನ್ನು ಕಡಮೆ ಮಾಡುವದು. (6) ಗ್ರಾಮರಸ್ತೆ (ಲೋಕಲ್ ಫಂಡ್ ರಸ್ತೆಗೆ ಗ್ರಾಮ ರಸ್ತೆಗಳನ್ನು ಸೇರಿಸಲು ಅನೇಕರು ಒಪ್ಪಿಕೊಂಡರು) (7) ಮಲೇರಿಯಾ ಜ್ವರ ನಿವಾರಣೆ (8) ಬಲಾತ್ಕಾರವಾಗಿ ದೇವಿ ಹಾಕುವುದನ್ನು ಯೂನಿಯನ್ನುಗಳಲ್ಲಿ ಜಾರಿಗೆ ತರಬೇಕಾಗಿದೆ (9) ಗ್ರಾಮ ಬದಲಾವಣೆ ವಿಷಯದಲ್ಲಿ ಪುಸ್ತಕ ರಚಿಸುವದು. (10) ಲಾಂಟಾನಾ ನಾಶಪಡಿಸುವದಕ್ಕೆ ರಿಯಾಯಿತಿ. ಇವೇ ಮೊದಲಾದ ವಿಷಯಗಳು ರಿಜೊಲ್ಯೂಷನ್ ಮಾಡಲಾಯಿತು.

ಮಲೆನಾಡು ಹೋಬಳಿ ಮತ್ತು ತಾಲ್ಲೂಕು ಕಮಿಟಿಗಳು ಏರ್ಪಟ್ಟು ಮ|| ದೀಕ್ಷಿತರವರು ಡಾ|| ಎಚ್. ಗಂಗಾಧರರಾಯರು ಜಾಯಿಂಟ್ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟರು. ಈ ಕಾನ್ಫರೆನ್ಸು ಪ್ರತಿ ವರುಷವೂ ನಡೆಯಬೇಕೆಂತಲೂ ಸ್ಟಾಂಡಿಂಗ್ ಕಮಿಟಿಗೆ 16 ಜನ ಮೆಂಬರುಗಳ ಹೆಸರನ್ನು ಮ|| ದೀಕ್ಷಿತರು ಸೂಚಿಸಿದರು. ಇದು ಪಾಸಾಯಿತು. ಮುಂದಿನ ಕಾನ್ಫರೆನ್ಸು ಶಿರಾಳಕೊಪ್ಪದಲ್ಲಿ ನಡೆಯುವದಾಗಿ ಮ|| ಸುರಹೊನ್ನೆ ಹಾಲಪ್ಪನವರು ಹೇಳಿದರು. ಪ್ರೆಸಿಡೆಂಟರವರು ಆಖೈರು ಭಾಷಣದಲ್ಲಿ ಒಗ್ಗಟ್ಟಿನಿಂದ ಮಹತ್ವ ಕೆಲಸವನ್ನು ಸಾಧಿಸಬಹುದು ಸಂಪದಭಿವೃದ್ಧಿ ಪಡೆಯಬಹುದೆಂಬ ಸಾರಾಂಶವುಳ್ಳ ಬಹು ಸ್ವಾರಸ್ಯ ಭಾಷಣಮಾಡಿ ಸಭಾ ಕಾರ್ಯವನ್ನು ಸಾಂಗಗೊಳಿಸಿದರು.

ಮೀಟಿಂಗಿನ ಕಾರ್ಯವನ್ನು ನೆರವೇರಿಸುವದಕ್ಕೆ ಕಮಿಟಿಯವರಿಗೆ ಅಮಲ್ದಾರ್ರು ಮಾಡಿದ ಸಹಾಯವು ಅಪೂರ್ವ ಶ್ಲಾಘನೀಯವಾಗಿದ್ದಿತು. ಹಿಂದೆ ಅನೇಕ ಮಹನೀಯರುಗಳು ಪ್ರಜೆಗಳಲ್ಲಿ ಒಗ್ಗಟ್ಟಿಲ್ಲದ್ದರಿಂದ ಕೆಲಸ ನಡೆಯಲು ಸಾಧನವಿಲ್ಲವೆಂದು ಹೇಳುತ್ತಿದ್ದ ಅನೈಕ್ಯ ದೋಷವನ್ನು ಹೋಗಲಾಡಿಸಿದ ಮಲೆನಾಡು ಇಂಪ್ರೂವ್‌ಮೆಂಟ್ ಆಫೀಸರು ಮ|| ಅಪ್ಪಣ್ಣಯ್ಯಂಗಾರ್ರಿಗೂ, ಅಮಲ್ದಾರ್ ಮ|| ಸ್ವಾಮಿನಾಥಶಾಸ್ತ್ರಿಯವರಿಗೂ ಶ್ರೇಯಸ್ಸುಂಟಾಗಲಿ.

ದೇಶ ಸೇವಕ.

ಮಲೆನಾಡಿನ ವಿದ್ಯಾ ಪ್ರಚಾರ.

ಗ್ರಾಮಾಂತರಗಳಲ್ಲಿ ವಿದ್ಯಾಪ್ರಚಾರ ಮಾಡಬೇಕೆನ್ನುವ ಕುತೂಹಲ ಸರ್ಕಾರದವರಲ್ಲಿಯೂ ಪ್ರಜೆಗಳಲ್ಲಿಯೂ ಏಕರೀತಿಯಾಗಿರುವದನ್ನು ನೋಡಿದರೆ ದೇಶದ ಏಳಿಗೆಗೆ ಯಾವ ಸಂದೇಹವೂ ಇಲ್ಲವೆಂದು ಹೇಳಲೇಬೇಕು. ಆದರೆ ಅನುಭವದಲ್ಲಿ ಗ್ರಾಮ ಪಾಠಶಾಲೆಯ ಶಿಕ್ಷಣಾ ಕ್ರಮವಾಗಲಿ, ಗ್ರಾಮಗಳಲ್ಲಿ ಉಪಾಧ್ಯಾಯರಿಗೆ ಲಭಿಸುವ ಗೌರವವಾಗಲಿ ಗ್ರಾಮ ಪಾಠಶಾಲೆಗಳು ಏರ್ಪಾಡಾಗಿರುವ ಗ್ರಾಮಗಳಲ್ಲಿ ಜನಗಳ ಉತ್ಸಾಹವಾಗಲೀ, ಸ್ವಲ್ಪವೂ ಸಂತೋಷಕ್ಕೆ ಕಾರಣವಲ್ಲ. ಒಂದು ಕಡೆ ಉಪಾಧ್ಯಾಯರುಗಳು ಅಷ್ಟು ಶ್ರದ್ಧೆಯಿಂದ ಪಾಠಗಳನ್ನು ಹೇಳುವದಿಲ್ಲ. ಕೇವಲ ವೇತನಕ್ಕೆ ಮಾತ್ರ ಕೆಲಸ ಮಾಡುವದಾಗಿ ಭಾವಿಸಿ, ಎಂದಿಗೆ ತಮ್ಮ ವೇತನವನ್ನು ಶೇಕದಾರರು ತಂದು ಕೊಡುತ್ತಾರೋ, ಎಂದಿಗೆ ತಮಗೆ ಬೇರೆ ಕಡೆಗೆ ವರ್ಗವಾಗಬಹುದೋ ಎಂದು ಆಲೋಚಿಸುತ್ತಾ ಕಾಲ ಕಳೆಯುತ್ತಾರೆ. ಆದರೆ ಇದು ಸರ್ವಸಾಮಾನ್ಯವೆಂದೂ ಎಲ್ಲಾ ಉಪಾಧ್ಯಾಯರುಗಳೂ ಎಂದಿಗೂ ಅನ್ಯಾಯಸಲ್ಲದು. ದೇಶವಾತ್ಸಲ್ಯದಿಂದಲೂ ತಮ್ಮ ಕೆಲಸದ ಮಹಾ ಗೌರವವನ್ನು ಅರಿತು ಅದರ ಪ್ರೀತಿಯಿಂದಲೂ ಕಷ್ಟಪಡುತ್ತಿರುವ ಮಹನೀಯರಾದ ಉಪಾಧ್ಯಾಯರುಗಳು ಇದ್ದಾರೆ. ಅಂಥಾ ಮಹಾತ್ಮರ ಸಂಖ್ಯೆ ಮಾತ್ರ ಕಮ್ಮಿ ಎಂದು ಹೇಳಲೇಬೇಕು. ಅನ್ಯತ್ರ ಗ್ರಾಮಪಾಠಶಾಲೆಗಳ ಉಪಾಧ್ಯಾಯರುಗಳನ್ನು ಕೃಪಾಪಾತ್ರರಾಗಿ ಎಣಿಸಿ ಅವರಿಗೆ ಸದಾಕಾಲದಲ್ಲಿಯೂ ಅಗೌರವವನ್ನುತ್ತ ಗ್ರಾಮಸ್ಥರು ಅವರ ಮೇಲೆ ಕೈಮಾಡುತ್ತಿರುವದು ಅನೇಕ ಗ್ರಾಮಗಳಲ್ಲಿ ಅನುಭವದಿಂದ ತಿಳಿದುಬಂದಿದೆ. ಉಪಾಧ್ಯಾಯರ ಕೆಲಸದ ಮಹಿಮೆಯನ್ನು ನಮ್ಮ ದೇಶದ ಜನಗಳು ಇನ್ನೂ ಅರಿತಿಲ್ಲವೆಂದು ಹೇಳಬೇಕು. ದೇಶದ ಏಳಿಗೆಗೆಲ್ಲಾ ವಿದ್ಯೆಯೇ ಆಸ್ತಿಭಾರವು. ಪ್ರತಿ ಒಂದು ವಿದ್ಯಾಶಾಲೆಯೂ ಒಂದು ಪವಿತ್ರ ಕ್ಷೇತ್ರವು. ಈ ದಿವಸದ ಮಕ್ಕಳು ನಾಳೆ ದೊಡ್ಡವರು. ಈ ಮಕ್ಕಳನ್ನು ಯಾವ ರೀತಿ ಉಪಾಧ್ಯಾಯರು ಶಿಕ್ಷಿಯೇಸು ಮಾಡುತ್ತಾರೆಯೋ ಹಾಗೆಯೇ ಅವರು ಮುಂದೆ ಪರಿಣಮಿಸುವರೆನ್ನುವದಕ್ಕೆ ಸಂದೇಹವಿಲ್ಲ. ಆದುದರಿಂದ ದೇಶದ ಪುರೋಭಿವೃದ್ಧಿಯೆಲ್ಲಾ ಇವರೊಂದು ಕಸಬಿನ ಮೇಲೆ ನಿಂತಿತು. ಅದು ಯಾವದೆಂದರೆ ಮಕ್ಕಳ ಶಿಕ್ಷಣ. ಈ ಕೆಲಸವು ಗ್ರಾಮ ಉಪಾಧ್ಯಾಯರುಗಳಿಗೆ ಕೊಡಲ್ಪಟ್ಟಿದೆ. ಈ ಉಪಾಧ್ಯಾಯರುಗಳ ಮೇಲೆ ಮಹತ್ತರವಾದ ಭಾರವನ್ನು ವಹಿಸಿದೆ ಎಂದು ಅರಿತು ಅವರಿಗೆ ಎಷ್ಟು ಸನ್ಮಾನವನ್ನು ಮಾಡಿದರೂ ಕಡಮೆಯೆಂದರಿಯಬೇಕು. ಮತ್ತು ಜನಗಳ ಕುತೂಹಲವು ಪಾಠಶಾಲೆ ಮುಂಜೂರಾಗುವವರೆಗೂ ಇದ್ದು, ಬೇಡಿಕೆ ಹೊರ್ತು ಅದು ಅನಂತರ ಪಾಠಶಾಲೆಯ ಪುರೋಭಿವೃದ್ಧಿ ಹ್ಯಾಗಾದರೂ ಹೋಗಲೆಂದು ಭಾವಿಸಿ ಉಪಾಧ್ಯಾಯರ ಯೋಗಕ್ಷೇಮವಾಗಲಿ, ಪಾಠಶಾಲೆಯ ಯೋಗಕ್ಷೇಮವಾಗಲಿ ತಮ್ಮದಲ್ಲವೆಂದು ತಟಸ್ಥರಾಗುವರು. ಪಾಠಶಾಲೆಯ ಕಮಿಟಿ ಮೆಂಬರುಗಳೆನ್ನುವವರು ನಾಮ ಮಾತ್ರಕ್ಕೆ ಇದ್ದಾಗಿಯೇ ಹೊರ್ತು ಅವರು ಅವರುಗಳ ಕೆಲಸದ ಗೌರವವನ್ನು ಕೂಡ ಅರಿವವಿಲ್ಲ. ಮೇಲ್ವಿಚಾರಣೆ ಎಂದ ಮಾತ್ರಕ್ಕೆ ಉಪಾಧ್ಯಾಯರನ್ನು ತಮ್ಮ ಜೀತದಾಳೆಂದು ಭಾವಿಸಬಾರದು. ಮೇಲೆ ವಿವರಿಸುವಂತೆ ಇವರು ಮಾಡತಕ್ಕ ವಿಶೇಷವಾದ ಕಾರ್ಯಕ್ಕೆ ಬಹಳವಾದ ಗೌರವವನ್ನು ಕೊಟ್ಟು ಮರ್ಯಾದೆಯಿಂದ ಇವರನ್ನು ಕಾಣಬೇಕು. ಅದಕ್ಕೆ ಪ್ರತಿಯಾಗಿ ಉಪಾಧ್ಯಾಯರೂ ಕೂಡ ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗಿ ಅವರ ಕಾರ್ಯಭಾಗಗಳನ್ನು ನೆರವೇರಿಸುತ್ತಾ ತಮ್ಮ ಪಾಠಶಾಲೆಯನ್ನು ದಿನೇ ದಿನೇ ಅಭ್ಯುದಯ ಸ್ಥಿತಿಗೆ ತರಬೇಕು. ಹೀಗೆ ಮಾಡುವದರಲ್ಲಿ ತಮ್ಮ ಕೈಯಿಂದ ದುಡ್ಡು ಕೊಟ್ಟು ಉಪಾಧ್ಯಾಯರ ವೇತನವನ್ನು ಸಲ್ಲಿಸುವದಾಗಿಯೂ ಊಹಿಸಿ ಪ್ರಜೆಗಳು ಉಪಾಧ್ಯಾಯರ ಕೆಲಸದಲ್ಲಿಯೂ ಪಾಠಶಾಲೆಯ ಮನೆಯಲ್ಲಿಯೂ ಹೆಚ್ಚು ಮುತುವರ್ಜಿ ವಹಿಸ ವರು. ತಾವು ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗಿ ಪಾಠಶಾಲೆಯನ್ನು ಅಭಿವೃದ್ಧಿ ಸ್ಥಿತಿಗೆ ತರದಿದ್ದರೆ ಇಂಥಾ ದುರ್ದೇಶೆಗಳಿಗೆ ಕಾರಣಗಳೇನೆಂಬುವದನ್ನು ಯೋಚಿಸಿದಲ್ಲಿ ಕೇವಲ ಸರ್ಕಾರದಿಂದಲೇ ವಿದ್ಯಾಪ್ರಚಾರವಾಗಬೇಕೆಂದು ಎಣಿಸುವದೇ ಮುಖ್ಯವಾದುದೆಂದು ತೋರಿಬರುತ್ತದೆ. ಸರ್ಕಾರದ ವೇತನವನ್ನು ತೆಗೆದುಕೊಳ್ಳುವ ಉಪಾಧ್ಯಾಯರನ್ನು ಮಾತನಾಡಿಸುವದಕ್ಕೆ ತಮಗೆ ಹಕ್ಕಿಲ್ಲವೆಂದು ಭಾವಿಸಿದಾದರೋ, ಅಥವಾ ಸರ್ಕಾರಿ ಉದ್ಯೋಗಸ್ಥರ ಕರ್ತವ್ಯವನ್ನು ಪರಿಶೋಧಿಸಿ ತನಿಖೆ ಮಾಡುವದಕ್ಕೆ ಸರ್ಕಾರದವರೇ ಅವಶ್ಯಕವೆನ್ನುವ ಒಂದು ದುರಭಿಪ್ರಾಯದಿಂದಲಾದರೋ ಏನೋ ಒಂದು ಕಾರಣದಿಂದ ಸರ್ಕಾರಿ ಸ್ಕೂಲುಗಳಿಗೆ ಗ್ರಾಮಾಂತರಗಳಲ್ಲಿ ಏಳಿಗೆಯು ಕಡಮೆ. ಹೀಗೆಯೇ ಕೆಲಸವು ಯಥಾಸ್ಥಿತಿಯಾಗಿ ನಡೆಯಲು ಬಿಟ್ಟುಬಿಟ್ಟರೆ ಕಾಲ ಕ್ರಮೇಣ ಇಂಥಾ ಪಾಠಶಾಲೆಗಳ ಪ್ರಯೋಜನವು ಕಡಮೆಯಾಗುತ್ತಾ ಬರುವದೆನ್ನುವದರಲ್ಲಿ ಯಾವ ಸಂದೇಹವೂ ಇಲ್ಲ.

ಇದಕ್ಕೆ ಏನು ಮಾಡಬೇಕೆಂದು ಕೇಳಿದರೆ ಪ್ರಜೆಗಳು ಬಾಲ್ಯವಿದ್ಯಾಭ್ಯಾಸಕ್ಕೆ ಸರ್ಕಾರದವರನ್ನೇ ನಂಬಿಕೊಂಡಿರದೆ ತಮ್ಮ ತಮ್ಮ ಊರುಗಳಲ್ಲಿ ಖಾಸಗಿ ಮಠಗಳನ್ನು ಏರ್ಪಡಿಸಿಕೊಳ್ಳಬೇಕು. ಒಂದು ವೇಳೆ ಉಪಾಧ್ಯಾಯರ ವೇತನವನ್ನು ಕೊಡಲಾರದಷ್ಟು ಬಡವರು ಒಂದು ಗ್ರಾಮದಲ್ಲಿದ್ದರೆ ಅಂಥಾ ಗ್ರಾಮಕ್ಕೆ ಸರ್ಕಾರದಿಂದ ಕಿಂಚಿತ್ ಸಹಾಯ ಹೊಂದುವ ಮಠದ ಉಪಾಧ್ಯಾಯರನ್ನು ತಮ್ಮ ಮೇಲ್ವಿಚಾರಣೆಗೆ ಒಳಪಡಿಸಿಕೊಂಡಿಟ್ಟುಕೊಳ್ಳಬೇಕು. ಕೇವಲ ತಮಗೆ ಯಾವ ತರದಲ್ಲಿಯೂ ಪ್ರಯೋಜನವಾಗಲಿ, ಗೌರವವಾಗಲಿ ಉಂಟಾಗಲಾರದೆನ್ನುವ ಒಂದು ಭಯದಿಂದ ಉಪಾಧ್ಯಾಯರುಗಳು ತಮ್ಮ ಕಾರ್ಯಭಾರವನ್ನು ಚೆನ್ನಾಗಿ ನಡಿಸುವರು. ಗ್ರಾಮಾಂತರಗಳಲ್ಲಿ ಮುಸ್ಸು ಸರ್ಕಾರಿ ಸ್ಕೂಲುಗಳಿಗಿಂತಲೂ ಏಡೆಡ್ ಸ್ಕೂಲುಗಳನ್ನು ಸ್ಥಾಪಿಸಿದಲ್ಲಿ ದೇಶದ ಪುರೋಭಿವೃದ್ಧಿಯು ವಿಶೇಷವಾಗಿಯೂ ತ್ವರಿತವಾಗಿಯೂ ಆಗುವದೆಂದು ನಂಬುವ

ಸೇವಕ.

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬಂತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವ ಸಂಭವನೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಅಪೇಕ್ಷಿಸುತ್ತೇವೆ.

ಕರೆಸ್‌ಪಾಂಡೆನ್ಸ್.

ಮಿಷನ್ ಇಲಾಖೆಯ ಮೇಲೆ ಬಂದಿರುವ ಅಪವಾದ.

ಅಯ್ಯಾ,—ಜಾನ್ 27 ನೇ ತಾ ಪತ್ರಿಕೆಯಲ್ಲಿ ... ಮತಾಂತರಗೊಳಿಸುವ ... ಎಂಬ ಹೆಸರಿನವರು ಮಿಷನ್ ಇಲಾಖೆಯಲ್ಲಿಯೂ ಒಂದು ... ಕೊಡುವದು ...

ಶ್ಯವದು ಉಂಟೆಂದು ಬರೆದಿರುತ್ತಾರೆ. ಅವರು ತಿಳಿಸಿರುವ ಸಂಗತಿ ನಿಜವದ್ದೋ ಅಥವಾ ಗಾಳಿಸವಾಚಾರವದ್ದೋ ತಿಳಿಯದು. ಈ ಸಂಗತಿ ಒಂದು ವೇಳೆ ಸತ್ಯವಾದದ್ದೆಂತ ರುಜುವಾತಾಗುವ ಪಕ್ಷಕ್ಕೆ ಈ ದುಷ್ಟಪದ್ಧತಿಯನ್ನು ನಿರ್ಮೂಲ ಮಾಡಲಿಕ್ಕೆ ಮಿಷನ್ ಅಥವಾ ಅಧಿಕಾರಿಗಳು ಸಿದ್ಧರಾಗಿರುವದಲ್ಲದೆ ಈ ದುಷ್ಕೃತ್ಯದಲ್ಲಿ ಸೇರಿರುವವರನ್ನು ದಾಕ್ಷಿಣ್ಯವಿಲ್ಲದೆ ಶಿಕ್ಷಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಹೀಗಿದ್ದ ಪಕ್ಷಕ್ಕೆ ಪತ್ರಿಕೆಗೆ ಈ ಸಂಗತಿಯನ್ನು ಬರೆದವರು ತುಮಕೂರು ವೆಸ್ಲಿಯನ್ ಮಿಷನ್ ಅಥವಾ ಸೂಪ್ರಿಂಟ್ ಪೊಲೀಸ್ ರವರಿಗೆ ಧೈರ್ಯವಾಗಿ ಹೇಳಿ ತಾವು ಕೇಳಿದ ಅಕ್ರಮವನ್ನು ಕುರಿತು ಏಕೆ ತಿಳಿಸಬಾರದು?

ಮೈಸೂರು ನಿವಾಸಿ.

ಅಮಲ್ದಾರರ ವಿಚಾರ.

ಅಯ್ಯಾ,—ಡಿಸೆಂಬರ್ 16, 30 ಮತ್ತು ಜನವರಿ 13ನೇ ತಾ. ವೃತ್ತಾಂತ ಪತ್ರಿಕೆಯಲ್ಲಿ ಮೈಸೂರು ಸಂಸ್ಥಾನದ ಅಮಲ್ದಾರ್ರ ವಿಚಾರವಾಗಿ ಕೆಲವು ಆಕ್ಷೇಪ, ಪ್ರತಿಪಾದನೆ ಮತ್ತು ಕೆಲವರು ಜನಗಳಲ್ಲಿ ಬಳಕೆಯಿಲ್ಲದೆಯೂ, ಸ್ನೇಹಪರತೆಯೂ, ಸಣ್ಣ ನೌಕರರನ್ನು ಮಾನಮರ್ಯಾದೆಯಿಲ್ಲದೆ ದೂಷಣೆ ಮಾಡುವುದರಿಂದ ಕೆಲಸ ಮಾಡುವವರಿಗೆ ಸಮಾಧಾನವಿಲ್ಲವೆಂತಲೂ ಬರೆಯಲ್ಪಟ್ಟಿತ್ತು. ಈ ರೀತಿ ಆಕ್ಷೇಪಣೆ ಮಾಡುವುದು ಯುಕ್ತವಲ್ಲ. ಸಣ್ಣ ನೌಕರರು ಮಾಡುವ ತಪ್ಪುಗಳನ್ನು ಕಂಡುಹಿಡಿದು ತಿದ್ದುವದಕ್ಕೆ ತಕ್ಕ ಸಮಯವಂತು ಯುಕ್ತಾನುಸಾರ ಶಿಕ್ಷೆಯ ಮಾಡದಿದ್ದರೆ ಪ್ರಜಾ ನೆಮ್ಮದಿಗೆ ಭಂಗವುಂಟಾಗುತ್ತದೆಂಬುದು ನಾನು ಹೇಳಬೇಕಾದ್ದಾಗಿದೆ. ಒಂದು ಜನರನ್ನು ನಮ್ಮ ಭಯಗಳಿಂದ ತಿದ್ದದಿದ್ದರೆ ಕೆಲಸಗಳು ನಡೆಯುವುವೇ? ತಿಳುವಳಿಕೆಯಿಲ್ಲದ ಜನರು ಪಡುವ ಅಭಿಪ್ರಾಯಗಳು ನಂಬತಕ್ಕದ್ದಾಗಿಲ್ಲ.

ಎಚ್. ಎ.

ಮೈಸೂರು ಜೈಲಿನಲ್ಲಿ ಬ್ರಾಹ್ಮಣ ಖೈದಿಗಳು.

ಅಯ್ಯಾ,—ಮೈಸೂರು ಚೀಫ್ ಕೋರ್ಟಿನಲ್ಲಿ ತೀರ್ಮಾನವಾದ ಒಂದು ಕೇಸಿನಲ್ಲಿ ಶಿಕ್ಷಿತನಲ್ಲನೆಂತ ಸಾಬೀತಾಗಿ ಮೈಸೂರು ಜೈಲಿನಲ್ಲಿ ಕೆಳಗಿನ ಕೋರ್ಟಿನ ತೀರ್ಮಾನದಂತೆ ಶಿಕ್ಷೆ ಅನುಭವಿಸುತ್ತಿದ್ದ ಒಬ್ಬ ಬ್ರಾಹ್ಮಣ ಖೈದಿಯು ಕೆಲವು ವಾರಗಳ ಹಿಂದೆ ಬಿಡುಗಡೆಯಾದನು. ವೀರಶೈವರ ಜಾತಿ ಪರಿಚಾರಕರು ಬ್ರಾಹ್ಮಣ ಖೈದಿಗಳಿಗೆ ಅಡಿಗೆ ಮಾಡಿ ಬಡಿಸುವದಾಗಿ ಕೇಳುತ್ತಾನೆ. ಬ್ರಾಹ್ಮಣರು ಜೈಲಿಗೆ ಹೋಗುವದು ಸಾಮಾನ್ಯವಾದ ಸಂಗತಿಯಲ್ಲ. ಅವರು ಜೈಲಿನಲ್ಲಿ ಅನುಭವಿಸುವ ಶಿಕ್ಷೆಯೇ ಸಾಕು; ಮತ್ತು ಧರ್ಮವೂ ಅಗಿರುತ್ತೆ. ಈ ಕಾಲದಲ್ಲಿ ಈ ರೀತಿ ಮಾಡುವದು ಧರ್ಮವಾದದ್ದಲ್ಲವೆಂದು ನನಗೆ ತೋರುತ್ತೆ. ಈ ವಿಚಾರದಲ್ಲಿ ಧರ್ಮಪ್ರಭುಗಳಾದ ನಮ್ಮ ಗೌರ್ನಮೆಂಟಿನವರು ಗಮನ ಕೊಟ್ಟು ಬ್ರಾಹ್ಮಣ ಪರಿಚಾರಕರನ್ನೇ ಬ್ರಾಹ್ಮಣ ಖೈದಿಗಳಿಗೆ ಮತ್ತು ಸಾಕಷ್ಟು ತೋರಿಸದ ಕಾರಣಗಳ ಜೈಲಿಗೆ ಕಳುಹಿಸಿ ಧರ್ಮಪಾಲನೆ ಮಾಡುವರು ಎಂತ ನಂಬಿರುತ್ತೇನೆ.

ಧರ್ಮ ಹಿತಚಿಂತಕ.

ದನಗಳಿಗೆ ಹೊಸ ರೋಗವಂತೆ.

ಅಯ್ಯಾ,—ಗೋವು ಎಮ್ಮೆಗಳಿಗೆ ಎರಡು ವಾರಗಳ ರೋಗವೊಂದು ಒಂದು ಹೊಸ ಜಾಡ್ಯ ಸೇರಿರುತ್ತೆ. ಕಾಯಿಲೆ ಸ್ಥಿತಿ ಪ್ರಥಮ ಕಾಯಿಲೆ ಸಾಧ್ಯ ಅಗತ್ಯ. ಅವುಗಳಿಗೆ ಜ್ವರ ಬರುವ ಹೊತ್ತಿನ ನಂತರ ಕೀವುಬರುತ್ತದೆ. ನಂತರ ಯಾವ ಚಿಕಿತ್ಸೆ ಮಾಡಿದ ಪಕ್ಷಕ್ಕೂ ಪ್ರಯೋಜನ ಬರುವದಿಲ್ಲ. ಜ್ವರ ಬಂದ ಕೂಡಲೆ ಹೊಟ್ಟೆ ಉಬ್ಬುತ್ತದೆ. ಗಂಟಲಿನಲ್ಲಿ ಅಂದರೆ ಒಳಗಡೆ ಬಾವು ಏಳುತ್ತದೆ. ಮೂರನೇ ದಿವಸಕ್ಕೆ ಅದು ದೊಡ್ಡದಾಗುತ್ತಾ ಬಂದು ಶ್ವಾಸಧಾರಣೆ ಮಾಡಲಿಕ್ಕೆ ಸಾಧ್ಯವಿಲ್ಲದೆ ಹಾಗೆಯೇ ಉಬ್ಬಿಸಿಕೊಂಡು ಛಿದ್ರವಾಗುತ್ತಾ ಇದ್ದು 5 ಯಾ 6ನೇ ದಿವಸ ಸಾಯುತ್ತದೆ. ಆದ್ದರಿಂದ ಬಡ ರೈತರಿಗೆ ಇಂಥಾ ಕಷ್ಟವೆಂದರೆ ಮುಂದಿನ ವ್ಯವಸಾಯ ಸ್ಥಿತಿ ಯಾರಿಂದಲೂ ಸಹಿಸಲಾರದು. ಬಲ್ಲಂಥಾ ಡಾಕ್ಟರು ಬಂದು ಪರೀಕ್ಷಿಸುವದಾದರೆ ಒಳ್ಳೇ ಹಿತ ಸಂಭವಿಸುವದು ಅಧಿಕ. ಮತ್ತು ಪುಣ್ಯವಾಗುತ್ತೆ.

ಈ ದಕ್ಷಿಣ ಕನ್ನಡ ಜಿಲ್ಲಾ ಉಪ್ಪಿನಂಗಡಿ ತಾಲ್ಲೋಕು ಅಮರವರ ಪೇಟೆ ಮುಖ್ಯಾರು ಪೇಟೆ ಚಂಡಿನೇಣಿ ಕೆ. ಪರಮೇಶ್ವರಯ್ಯ, ಸನಿಕ್ಕ ಜಿವೇಕ ಪರೇಲ್ ಅವರಿಗೆ.

ಆರ್ಯಸಮಾಜದವರ ಸಂಘ ಸಮಾವೇಶವು.

ಅಯ್ಯಾ,—ಗತ ಡಿಸೆಂಬರು ೨೮ ನೆ ತಾರೀಖಿನಲ್ಲಿ ಚಿತ್ರದುರ್ಗ ಜಿಲ್ಲಾ ಕಂಪರಾಯರು ಕರ್ಮಮಾಡುವ ಕೀರ್ಣ ರಘುನಾಥರೆಡ್ಡಿಯವರ ಭವನದಲ್ಲಿ ಬೆಂಗಳೂರು ವಿದ್ಯಾವಿದ ಎಂ. ಎ. ರವರ ಅಧ್ಯಕ್ಷತೆ ಕೆಳಗೆ ಜರುಗಿತು. ಸಮಾಜದಲ್ಲಿ ಆರ್ಯಸಿದ್ಧಾಂತಗಳನ್ನು ಪ್ರಚಾರಪಡಿಸಲು ಕೆಲವು ಪತ್ರಗಳನ್ನು ಹೊರಡಿಸುವದಕ್ಕೆ ಎಂಬ ಗ್ರಂಥವನ್ನು ತೆಲುಗು ಭಾಷೆಯಲ್ಲಿ ಪ್ರಕಟನೆ ಪಡಿಸಬೇಕೆಂಬ ಈ ಅಭಿಪ್ರಾಯವನ್ನು ಅದಿಯು ಸಮಾಜದಲ್ಲಿ ಅಧೀನ ತೀರ್ಮಾನಿಸಿ ತೀರ್ಮಾನವನ್ನು ಸಮಾಜದವರು ಅಂಗೀಕರಿಸಿದರು. ಸತ್ಯಾರ್ಥಪ್ರಕಾಶಿಕೆ ನಮ್ಮ ಪ್ರಕಟಿಸುವದಕ್ಕಾಗಿ ಮೊಬಲಗು ಎರಡು ಸಾವಿರ ರೂಪಾಯಿಗಳು ಬೇಕಾಗಬಹುದೆಂದೂ ಸನ್ನಿಕೃತರಿಂದಲೂ ಚಂದಾ ಹಣವನ್ನು ಸಂಗ್ರಹಿಸುವ ಕೆಲಸವು ಶ್ರೀ ಚೆಂಕಲ ರಘುನಾಥರೆಡ್ಡಿಯವರ ಸ್ವಾಧೀನ ಮಾಡಲ್ಪಟ್ಟಿತು. ಈ ಸಭೆಯಲ್ಲಿ ಅಧಿಕಾರವಹಿಸಿದ್ದಕ್ಕೆ ರಘುನಾಥರೆಡ್ಡಿಯವರಿಗೂ ಸಭೆಯನ್ನು ಜಯಪ್ರದವಾಗಿ ನಡೆಸಿದ್ದಕ್ಕೆ ವಿದ್ಯಾದೇವರಿಗೂ ವಂದನೆಗಳರ್ಪಿಸಲ್ಪಟ್ಟು ಸಭೆ ಮುಗಿಯಿತು.

ಪಿ. ಯಸ್. ಶೇಷಗಿರಿಶರ್ಮ.

ಸೂಲಗಿತ್ತಿಯರ ನಡತೆ ಪ್ರಜೆಗೆ ಅಗತ್ಯ.

ಅಯ್ಯಾ,—ಪ್ರತಿಯೊಬ್ಬರಿಗೂ ಆಗಾಗ್ಗೆ ಸೂಲಗಿತ್ತಿಯರ ಸಹಾಯವು ಬೇಕಾಗಿಯೇ ಇರುವುದು ಬೇಕಾಗಿರುತ್ತೆ. ಸರ್ವರು ಇವರನ್ನು ಪ್ರೀತಿ ಗೌರವಗಳಿಂದ ನೋಡಬೇಕೆಂದು ಹೇಳಲು ಸಂತೋಷಪಡತಕ್ಕದ್ದಾಗಿದೆ. ಕೆಲವು ಸಮಯಗಳಲ್ಲಿ ಸೂಲಗಿತ್ತಿಯರು ಸೇರಿಕೊಂಡಂತೆ ಅಂತಃಪುರಗಳಿಗೆ ಸಹ ಇವರು ಹೋಗುವ ಸ್ತ್ರೀಯರು ಬೇಕಾಗುತ್ತೆ. ಹೀಗಿರುವದರಿಂದ ಸೂಲಗಿತ್ತಿಯರು ಬಹಳ ಯೋಗ್ಯರಾಗಿರಬೇಕು, ಗುರುಹಿರಿಯರಿಂದ ಪೂಜ್ಯರೂ, ಅಂಟುವ್ಯಾಧಿಗಳಿಂದ ಪೀಡಿತರಲ್ಲದವರು, ಅಂಗಗಳಲ್ಲಿ ದುರ್ಬಲತೆ ವ್ಯಾಧಿಗಳಿಲ್ಲದೆ ಪೂರ್ಣ ಆರೋಗ್ಯ ಭಾಗ್ಯವುಳ್ಳ ಸತೀವ ಸೌಶೀಲವುಳ್ಳ ಸ್ತ್ರೀಯರಾಗಿದ್ದಲ್ಲಿ ಪೂಜ್ಯರಾದ ಮಹನೀಯರು ಮುಂತಾದವರು ಇವರನ್ನು ತಮ್ಮ ಪತಿಭಕ್ತಿಯುಳ್ಳ ಅಂತಃಪುರದ ಸ್ತ್ರೀಯರಲ್ಲಿ ಇವರು ಎಲ್ಲೇ ಮಕ್ಕಳಲ್ಲಿಯೂ ಪ್ರವೇಶಿಸಿ ಸುಖಲಕ್ಷಣಗಳನ್ನು ಬೆಳೆಸಲು ಅವಕಾಶ ಕೊಡಲು ಅನುಮಾನಿಸುವರು? ಯಾರಿಗಾಗಲಿ ಇಂಥ ಸ್ತ್ರೀಯರು ಸಂದೇಹಪಡತಕ್ಕವರು ಎಂದು ಧೈರ್ಯವಾಗಿ ಹೇಳಬಹುದು. ಇಂಥಾ ಪೂಜ್ಯರಾದ ಸ್ತ್ರೀಯರನ್ನು ಬಿಟ್ಟು ಮಾಯಾವಿ ವೃದ್ಧ ಅಥವಾ ಧರ್ಮಕಾರ್ಯಗಳಿಗೆ ಉಪಯೋಗಿಸಲ್ಪಡದವರಾಗಿ ಇರುವವರಾದ ವೃದ್ಧ ಅಥವಾ ಧರ್ಮಕಾರ್ಯಗಳಿಗೆ ಉಪಯೋಗಿಸಲ್ಪಡದವರು, ಮಾತ್ರವಲ್ಲದೆ ಅನೇಕಾನೇಕ ಜಾರ, ಭ್ರಷ್ಟ ಸ್ತ್ರೀಯರು ಒಳ್ಳೇ ನಡತೆಯುಳ್ಳವರಾಗಲು ಕಾರಣವಾದೀತು. ಸ್ತ್ರೀಯರಲ್ಲಿ ಅಕ್ಕಾ ತಂಗಿಯರಿಗೆ ಈ ಥರವಾದ ಸೂಲಗಿತ್ತಿ ಕೆಲಸ ಯಾರಿಂದರೂ ಕೊಡಬೇಕು. ಇವರುಗಳು ಹಾಗೆ ನಡೆಯುತ್ತಾರೆಯೇ? ಇಂಥವರನ್ನು ಪೂಜ್ಯರ ನಮ್ಮ ಅಂತಃಪುರಗಳಲ್ಲಿ ಬರಬಹುದೇ? ಒಂದುವೇಳೆ ಸೂಲಗಿತ್ತಿಯರುಗಳನ್ನು ಬಿಡದಿದ್ದರೆ ಸಂಸಾರದ ಸುಖ ಅಂತಃಪುರಕ್ಕೆ ಹೋಗಿ ಬಂದಂತಾಗುವದು. ಹೀಗಿರುವದರಿಂದ ಅಂತಃಪುರದ ಸ್ತ್ರೀಯರಲ್ಲಿ ಮೇಲ್ಕಂಡ ದುರ್ನಡತೆಯುಳ್ಳ ಸ್ತ್ರೀಯರು ಓಡಾಡುವ

ಲು ಸರ್ಕಾರದವರೇ ಅವಕಾಶಕೊಟ್ಟರೆ ಏನೆಂದು ಹೇಳಬೇಕು? ಪ್ರಥಮತ್ವಗಳ ಪೀಠಿಗೂ, ಸುಶೀಲರಿಗೂ ಪ್ರಜೆಗಳ ನೆಮ್ಮದಿಗೆ ಬಹಳವಾಗಿ ನಾನಾ ಕರವಾದ ಕೇಡುಗಳಿಗೂ ಅಬಲಾಸ್ತ್ರೀಯರ ಸುನಡತೆಗೂ ಇಂಥಾ ದುರ್ನಡತೆಯುಳ್ಳ ಸೂಲಗಿತ್ತಿಯರು ಕಂಟಕರಾಗಿರುವರೆ ಹೊರತು ಸರ್ಕಾರೀ ಧರ್ಮೋಪಕಾರ ಕಾರ್ಯಗಳಿಗೆ ನಡೆಸತಕ್ಕವರಲ್ಲದೆ ಪಾಷಾಣವನ್ನು ಅಮೃತವೆಂದು ತಾಯಿ ತನ್ನ ಮಕ್ಕಳಿಗೆ ಕೊಡಬಹುದೇ? ನಾನು ಅಲ್ಲಾರೆ ನೋಡಿದ್ದೇನೆ ಮತ್ತು ವಾಚಕರು ಸಹ ಅಲ್ಲಲ್ಲಿ ನೋಡಿರಬಹುದು. ಆದು ಏನಂದರೆ ಆಲಸಕ್ಕೆ ಸೇರುವಾಗ್ಗೆ ಸ್ವಾರಸ್ಯವಿಯ ಗಿದವರು ಕೆಲವುಕಾಲದನಂತರ ರೋಗಗ್ರಸ್ತರಾಗಿರುವರು. ಸೇವಾವಾಗಳೇ ಕುಂಟಿತವಾಗಿರುವವರು ಇತ್ಯರ್ಥಕ್ಕರ ಏನಾಗಬಹುದೋ. ಸಕಲರೂ ಯೋಚಿಸತಕ್ಕ ಕಾರ್ಯವೇ ಸರಿ.

ಸ್ವದೇಶ ಅಬಲಾಸ್ತ್ರೀವರ್ಗದವರ ಹಿತಚಿಂತಕ.

ಏತಕ್ಕೆ ಭಯಪಡಬೇಕು?

ಅಯ್ಯಾ,—ನಮ್ಮ ಸರ್ಕಾರದವರು ಮೈಸೂರ್ ದೇಶದ ಪ್ರಜೆಗಳ ವಿಚಾರದಲ್ಲಿ ಜಾನುವಾರುಗಳನ್ನು ಹೆಚ್ಚಾಗಿಟ್ಟುಕೊಂಡು ಜರಾಯ್ತು ಕೆಲಸಗಳನ್ನು ಹೆಚ್ಚಿಸುತ್ತಾ ಇನ್ನೂ ಅಭಿವೃದ್ಧಿಗೆ ಬರುವರೋ, ಅಥವಾ ಕ್ಷೀಣಗತಿಗೆ ಬರುತ್ತಿರುವರೋ ಎಂಬುದನ್ನು ತಿಳಿಯಲೋಸ್ಕರ 5 ವರ್ಷಗಳಿಗೊಂದಾವರ್ತಿ ಜಾನುವಾರ್ ಖಾನೇಷುಮಾರಿ ಎಂಬುದಾಗಿಯೂ, 10-12 ವರ್ಷಗಳಿಗೊಂದಾವರ್ತಿ ಜನಗಳ ಅಭಿವೃದ್ಧಿ ಕ್ಷೀಣತೆ, ಇವುಗಳನ್ನು ನೋಡುವುದಕ್ಕಾಗಿ ಜನರಲ್ ಖಾನೇಷುಮಾರಿ ಎಂಬುದಾಗಿಯೂ ನಿರ್ಣಯಿಸಿರುವದು ಸರಿಯಷ್ಟೆ. ಅದರಂತೆ ಈ 1916ನೇ ಜನವರಿ 22ನೇ ತಾ. ನಲ್ಲಿ ಜಾನುವಾರ್ ಖಾನೇಷುಮಾರಿ ಬರೆಯಲು ಗೊತ್ತುಮಾಡಲ್ಪಟ್ಟಿದ್ದಂತೆ ಆಯಾಯ ತಾಲ್ಲೂಕಿನ ಅಮಲ್ದಾರರು ಸಮ್ಮತ್ ಶೇಖದಾರ್ರು ಮೂಲಕ ವಿದ್ಯಾವಂತರಾದವರಿಗೆಲ್ಲಾ ಒಂದೊಂದು ಗ್ರಾಮದಲ್ಲಿ 60-70-80-90 ಮನೆಗಳ ಮೇರೆಗೆ ಎಣಿಕೆಮಾಡಬೇಕೆಂದು ಅಪ್ಪಣೆ ಕೊಟ್ಟ ಮೇರೆಗೆ ಪೇಮಾಯ ಮಾಡಲ್ಪಟ್ಟಂತೆ ಆಯಾ ಬ್ಲಾಕಿನ ಎಣಿಕೆದಾರು ಆಯಾ ಮನೆಗಳಲ್ಲಿ ಹೋಗಿ ಕೇಳಲು ಪ್ರಯತ್ನಿಸಿದಾಗ ಇನ್ನೊಂದು ಬೀದಿಯ ಜನಗಳು ತಮ್ಮ ತಮ್ಮ ಜಾನುವಾರುಗಳಲ್ಲಿ ಒಳ್ಳೆಯವಾಗಿರತಕ್ಕ ದನ, ಕುರಿ, ಟಗರು, ಹೋತ, ಆಡು ಮುಂತಾದವುಗಳನ್ನು ಹಿತ್ತಲುಗಳ ಮಾರ್ಗವಾಗಿ ಕಳುಹಿ ತೋಪುಗಳಲ್ಲಿ ಕಟ್ಟಿಕೊಂಡು ಹೋದದ್ದರಿಂದ ಲೆಕ್ಕಗಳು ಪ್ರತಿಯೊಂದು ಗ್ರಾಮದಲ್ಲಿಯೂ ಬಹಳ ಕಡಿಮೆಯಾಗಿರುವುದು ಇದಕ್ಕೆ ಕಾರಣವೇನೆಂದರೆ ಯಾರೋ ಪುಂಡುಜನಗಳು ಈಗ ಯೂರೋಪ್ ಖಂಡದಲ್ಲಿ ದೊಡ್ಡ ಯುದ್ಧವಾಗುತ್ತಿರುವುದರಿಂದ ಆ ಸ್ಥೇಳಗೆ ಸಾಗಣೆಯಾಗುತ್ತಿ ತಾನು ದೊರೆಯದೇ ಇದ್ದದ್ದರಿಂದ ಈ ದನ ಕುರಿಗಳ ಲೆಕ್ಕಗಳನ್ನೆಲ್ಲಾ ಮೊದಲು ಬರೆದು ಕೊಂಡು, ನಂತರ ಹಿಡಿಯುತ್ತಾರೆ ಎಂದು ಸುಳ್ಳು ವರ್ತಮಾನ ಹುಟ್ಟಿಸಿದ್ದರಿಂದ ಹಳ್ಳಿಗಳಲ್ಲಿರತಕ್ಕ ರೈತರು ತುಂಬಾ ಹೆದರಿ ಜಾನುವಾರುಗಳನ್ನು ಮರೆಮಾಚಿದ್ದರಿಂದ ಲೆಕ್ಕವು ತುಂಬಾ ಕಡಿಮೆಯಾಗುವದಕ್ಕೆ ಕಾರಣವಾಯಿತು. ಹಾಗೆ ಈ ಮಾತು ಸುಳ್ಳು ಎಂದು ಸರ್ಕಾರದವರು ಅಪ್ಪಣೆ ಕೊಡಿಸುವ ಭಾಗದಲ್ಲಿ ಹಿಂದೆ 5 ವರ್ಷಗಳಿಗೆ ನಡೆದ ಸೆನ್ಸಸ್ ಲೆಕ್ಕವೂ ಈಗ ನಡೆದ ಲೆಕ್ಕವೂ ದಾಖಲೆ ನೋಡಿದ ಪಕ್ಷದಲ್ಲಿ ಅಕ್ಕಕ್ಕೆ ವ್ಯತ್ಯಾಸವಾಗಬಹುದು ಹಳ್ಳಿಗಳಲ್ಲಿ ಈ ರೀತಿ ಆಗಲು ಅವಕಾಶವಾಗಲಿಲ್ಲ. ಯಾಕೆಂದರೆ ಅಲ್ಲಿ ವಿದ್ಯಾವಂತರು ಹೆಚ್ಚಾಗಿರುವರು. ಹಳ್ಳಿಗಳಲ್ಲಿ ಅಂಥವರು ದುರ್ಲಭ. ಆದ್ದರಿಂದ ನಮ್ಮ ಸರ್ಕಾರದವರು ಈ ವಿಚಾರವನ್ನು ಚೆನ್ನಾಗಿ ಪರ್ಯಾಲೋಚಿಸಿ 4-5 ಹಳ್ಳಿಗಳು ಒಟ್ಟಾಗಿರುವ ಪ್ರದೇಶವನ್ನು ನೋಡಿ ಮಧ್ಯವಾಗಿರುವ ಗ್ರಾಮಕ್ಕೆ ಸ್ಕೂಲ್ ಕಟ್ಟಿಸಿ ಬಾಕಿ ಸುತ್ತಣ ಗ್ರಾಮಗಳಿಂದ ಹುಡುಗರು ಬಂದು ಸೇರುವಂತೆ ನೇಮಕ ಮಾಡಿದರೆ ಇಂಥಾ ಮೌಢ್ಯತೆ ಪೂರ್ತಿಯಾಗಿ ನಿವಾರಣೆಯಾಗುವದರಲ್ಲಿ ಏನೇನೂ ಸಂದೇಹವಿಲ್ಲ. ಅದಕ್ಕಾ ಸಹ ಅವರು ಗಮನಿಸಿಕೊಡದೇ ಹೋದರೆ ವಿದ್ಯಾಭ್ಯಾಸದ ವಿಚಾರದಲ್ಲಿ ಬಲೆಯಿಂದ ಹುಡುಗರನ್ನು ಜಾರಿಯಲ್ಲಿ ತಂದರೆ ಮೌಢ್ಯತೆಯ ಹೋಗುವದಕ್ಕೆ ದಾರಿಯೂ, ಜನಗಳಿಗೆ ಸೌಖ್ಯವೂ, ದೇಶಕ್ಕೆ ಏಳಿಗೆಯೂ ಉಂಟಾಗುವದೆಂತ ನಂಬಿದೇನೆ.

ಹೊನ್ನಪ್ಪ, ರಾವತೆ.

ಶಿವಮೊಗ್ಗಾ ಸ್ಟೂಡೆಂಟ್ಸ್ ಹೋ.ಪಿ.ಲ್ ಅಡಿಗೆಯವರಿಗೂ ವಿದ್ಯಾರ್ಥಿಗಳಿಗೂ ಪ್ರೀತಿ ವಿಶ್ವಾಸವಿಲ್ಲವೆಂದು ಮುಂತಾಗಿ "ಬೋರ್ಡರ್‌ಗಳ ಹಿತಚಿಂತಕ" ಎಂಬ ಬ್ರಾಹ್ಮಣರೊಬ್ಬರು ಆಕ್ಷೇಪಣೆ ಮಾಡಿರುತ್ತಾರೆ. ವಿದ್ಯಾರ್ಥಿಗಳು ಒಂದಾಗಿ ತಮ್ಮ ಕಷ್ಟಗಳನ್ನು ಹೆಡ್ ಮಾಸ್ಟರಿಗೆ ತಿಳಿಸಿದರೆ ಅವರು ಸರಿಪಡಿಸುವರು.

ಹರಿ ಪುರದ ಬಾಬಣ್ಣ, ರಾಮಕೃಷ್ಣಪ್ಪ, ಅನುಪ ಕೊಪ್ಪದ ಬಸವಣ್ಣಪ್ಪ ಶೆಟ್ಟಿ, ಸಾಗರ ಎಸ್ಸಿಗರು:—ನಿಮ್ಮ ಬರವಣಿಗೆ ಅರ್ಥವಾಗುವಂತಿಲ್ಲ. ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು.

ಸಕ್ರೆಟರಿ, ವರ್ಣಾಶ್ರಮಧರ್ಮಸಂಘ, ಬೆಂಗಳೂರು:—ಒಂದುಗಳನ್ನು ಪ್ರಕಟಿಸಲಾರೆವು.

ವೆಂಕಟಸುಬ್ಬರಾವ್, ಬಾಮಸಾಗರ; ಚೆಂದಿನಡಾರ್ ಮತ್ತು ಶಿವಪಾಳಿ ಚಿತ್ರದುರ್ಗ; ಮೈಸೂರು ಟಿ ದಾಸಪ್ಪ; ಚಿಂದಿದಾರ್, ಚಿತ್ರದುರ್ಗ; ಪ್ರಜಾಹಿತಚಿಂತಕ, ಚಿತ್ರದುರ್ಗ; ಟ ನರಸಿಂಗರಾವ್, ಸಿರ:—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ. —ಎಡಿ.]

ತಾಲ್ಲೋಕು ವರ್ತಮಾನಗಳು.

ಅರಸೀಕೆರೆ.—ಇಲ್ಲಿಗೆ ಹೊಸದಾಗಿ ಬಂದಿರುವ ಅಮಲ್ದಾರ್ ಮೆ|| ಜಿ. ರಾಘವಸಾಹೇಬರು ಆಗಾಗ್ಗೆ ಊರನ್ನೂ ಗ್ರಾಮಗಳನ್ನೂ ಸಂಚರಿಸಿ ಪ್ರಜೆಗಳ ಅಹವಾಲುಗಳನ್ನು ಕೇಳಿದು ಪ್ರಜೆಗಳ ಪ್ರೀತಿಗೆ ಪಾತ್ರರಾಗಿದಾರೆ.—ಮ್ಯುನಿಸಿಪಾಲಿಟಿ ವಿಷಯ ಬಹಳ ಯೋಚನೀಯವಾಗಿದೆ. ಬಡಜನರಿಗೆ ಮನೆಗಳನ್ನು ಕಟ್ಟಿಕೊಳ್ಳುವದಕ್ಕೆ ನಿವೇಶನಗಳು ಸಿಕ್ಕುವದು ದುಸ್ತರ. ಇದಕ್ಕೆ ಮುಂಚೆ ದೊಡ್ಡವರಿಗೆ ವಿಶೇಷ ಜಾಗಗಳನ್ನು ಕೊಟ್ಟು ಅವರು ದೊಡ್ಡದೊಡ್ಡ ಮನೆಗಳನ್ನು ಕಟ್ಟಿ ಬಾಡಿಗೆಗೆ ಬಿಡುವ ಹಾಗೆ ಅನುಕೂಲಮಾಡಿರುತ್ತಾರೆ. ಎಷ್ಟೋ ಜನ ಬಡವರು ಸಂತೆಗೆ ಆಚೆಯೂ ರೈಲ್ವೆಗೆ ಆಚೆಯೂ ಬೇಲಿಗಳನ್ನು ಗುಡಿಸಲುಗಳನ್ನು ಕಟ್ಟಿಕೊಂಡು ವಾಸಮಾಡುತ್ತಾರೆ. ಇನ್ನೂ ಕೆಲವರು ಬಾಡಿಗೆ ಮನೆಗಳಿಗೆ 3-4 ರೂಪಾಯಿ ಕೊಟ್ಟು ಬಹಳ ಕಾಲದಿಂದ ವಾಸಮಾಡುತ್ತಾರೆ. ಬೇಗನೆಯಲ್ಲಿ ಜೋಪಡಿಗಳಲ್ಲಿ ವಾಸಮಾಡುವವರು ಬಹಳ ಅಪಾಯಕರವಾಗಿದೆ. ಈ ವಿಷಯದಲ್ಲಿ ನಮ್ಮ ಅಮಲ್ದಾರ್ರು ತಕ್ಕ ಪರ್ಯಾಲೋಚನೆ ಮಾಡಿ ಬಡಜನರು ಮನೆ ಕಟ್ಟಿಕೊಳ್ಳುವದಕ್ಕೆ ಸ್ಥಳವನ್ನು ಅನುಕೂಲವಾಗಿ ಕೊಡುತ್ತಾರೆಂದು ನಂಬುತ್ತೇವೆ.—ಹಾಸನದ ಜನರಲ್ ಅ|| ಕಮಿಷನರ್‌ ರವರೂ, ನಮ್ಮ ಅಮಲ್ದಾರ್ರು ಮುಖಂಡರು ಇಲ್ಲಿನ ಕಂಟ್ರಾಕ್ಟರ್ ಮೆ|| ಕೃಷ್ಣಾಜಿರಾಯರನ್ನು ಪ್ರೋತ್ಸಾಹಿಸಿ ಒಂದು ಹಿಟ್ಟಿನಗಿರಣಿ ಯಂತ್ರದ ಕಾರ್ಖಾನೆಯನ್ನು ಇಡುವ ಹಾಗೆ ಕಂಟ್ರಾಕ್ಟರ ಮನೆ ಎದುರಿಗೆ ಇರುವ ಸರ್ಕಾರದ ಖಾಲಿ ನಿವೇಶನವನ್ನು ಒದಗಿಸಿದ್ದಾರೆ. ಇದು ಎಲ್ಲರಿಗೂ ಉಪಯೋಗವಾದ ಕಾರ್ಯವಾಗಿದೆ. ಈ ಕಾರ್ಖಾನೆಯು ಬೇಗನೆ ಅಭಿವೃದ್ಧಿಗೆ ಬರಬೇಕೆಂದು ಹಾರೈಸುತ್ತೇವೆ.

ಮುಳುಬಾಗಿಲ್ ತಾ ದೇವರಾಯಸಮುದ್ರ.—ಈ ಗ್ರಾಮಕ್ಕೆ ಸರ್ಕಾರದಿಂದ ಮಂಜೂರಾಗಿದ್ದ ಮ್ಯುನಿಸಿಪಲ್ ಎಂಜಿನಿಯರ್‌ಗೆ ಪ್ರತಿವರ್ಷವೂ ಹಣ ಕೊಡಲು ಜಾಸ್ತಿಯೆಂತ ಅನೇಕರು ಅಭಿಪ್ರಾಯಪಟ್ಟು ಇದೀಗ ಸ್ವಂತವಾಗಿ ಯೂನಿಯನ್ ಇಟ್ಟುಕೊಂಡು ಗ್ರಾಮಪಂಚಾಯಿತಿ ವಿಚಾರ ತೃಪ್ತಿಯಾಗಿರುವಂತೆ ಊರನ್ನು ಇಟ್ಟುಕೊಂಡಿರುವಂತೆಯೂ ಅರ್ಜಿ ಕೊಟ್ಟಿದ್ದರ ಮೇರೆ ಯೂನಿಯನ್ ವಜಾ ಮಾಡಿರುತ್ತಾರೆ. ಈಗ ಗ್ರಾಮವು ಆರೋಗ್ಯಕ್ಕೆ ಅವಕಾಶವಿಲ್ಲದಂತೆ ಇದೆ. ಇದೇ ರೀತಿ ಮುಂದೆಯೂ ಇಟ್ಟುಕೊಂಡಾರೆಂದು ನಿರೀಕ್ಷಿಸಲ್ಪಟ್ಟಿದೆ.—ಇಲ್ಲಿನ ಕನ್ನಡ ಸೂಲ್ ಮಾಸ್ಟರು ಮುಖವರ್ತಿವಹಿಸಿ ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಒಂದು ಡಿಟೆಕ್ಟಿವ್ ಸೊಸೈಟಿಯನ್ನು ಏರ್ಪಡಿಸಿ ರೀಡಿಂಗ್ ರೂಮ್ ಇಟ್ಟಿದಾರೆ.—ಸುತ್ತು ಮುತ್ತಲಿನ ಹಳ್ಳಿಯವರು ಈಗಿನ ಯುದ್ಧಕ್ಕಾಗಿ ಅಂಜಿ ನೋಟು ಸಹನ್ನು, ಬೆಳ್ಳಿ ನಿಕ್ಕಲ್ ನಾಣ್ಯಗಳನ್ನು ಮಾರಿ ಚಿನ್ನದ ಮೇಲೆ ಅಸ್ತಿಯೊಣ್ಣು ಉಪಯೋಗಿಸುವದನ್ನು ನೋಡಿ ಮೆ|| ಸಾಹುಕಾರ್ ಪಿ. ಎಸ್. ರಾಮಯ್ಯನವರು ಬುದ್ಧಿವಾದ ಹೇಳುತ್ತಾ ಹಳ್ಳಿಯವರ ಹೆದರಿಕೆಯನ್ನೆಲ್ಲಾ ಹೋಗಲಾಡಿಸಿರುತ್ತಾರೆ.—ಮೆ|| ರಾಮಯ್ಯನವರಿಂದಲೂ ಮತ್ತು ಡಾಕ್ಟರ್ ಎಚ್ ರಾಮಯ್ಯನವರಿಂದಲೂ ಧರ್ಮಕ್ಕಾಗಿ ಕಟ್ಟಲ್ಪಟ್ಟಿದ್ದ ಇಂಗ್ಲಿಷ್‌ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿದೆ. ಇಂಗ್ಲೀಷ್ ಎ ವಿ ಸ್ಕೂಲ್ ಮುಂಜೂರುಮಾಡಬೇಕೆಂದು ಗ್ರಾಮಸ್ಥರು ಸರ್ಕಾರದವರನ್ನು ಕೇಳಿಕೊಂಡಿದಾರೆ. ಮೈಸೂರು ಅರಮನೆ ರೇಂಜ್ ಇನ್‌ಜನೀಯರಾಗಿದ್ದು ಕೆಲವು ತಿಂಗಳಿಗೆ ಮುಂಚೆ ಮೃತಪಟ್ಟ ಮೆ|| ಸಿ. ರಾಮಕೃಷ್ಣಯ್ಯನವರು ಈ ಊರಲ್ಲಿ ಒಂದು ಊಟದ ಶಾಲೆಯನ್ನು ಕಟ್ಟಿಸುವದಕ್ಕೂ, ಸ್ಕೂಲ್ ಕಟ್ಟಡ ಒದಗಿಸುವದಕ್ಕೂ ಸುಮಾರು ಒಂದುಸಾವಿರದ ಎಂಟುನೂರು ರೂಪಾಯಿ ತಮ್ಮ ಆಸ್ತಿಯಿಂದ ಕೊಡುವಂತೆ ವಿಲ್ ಬರೆದು ಮೆ|| ಕೆ. ನಾಗೇಶಯ್ಯನವರನ್ನು ಟ್ರಸ್ಟಿಯಾಗಿ ನೇಮಿಸಿದರು. ಇವರ ಧರ್ಮಬುದ್ಧಿಯು ಕೊಂಡಾಡತಕ್ಕದ್ದಾಗಿದೆ. ಇಲ್ಲಿ 17 ವರ್ಷದಿಂದ ಬ್ರಾಂಚ್ ಪೋಸ್ಟ್‌ಮಾಸ್ಟರಾದ ಮೆ|| ಕೆ. ಸುಬ್ಬಾವಧಾನಿಗಳು ಈಗ ರಾಜೀನಾಮೆ ಕೊಟ್ಟಿದ್ದಕ್ಕಾಗಿ ಅನೇಕರು ವಿಷಾದಪಡುತ್ತಾರೆ. ಇವರು ಜನಗಳ ಪ್ರೀತಿಗೂ ವಿಶ್ವಾಸಕ್ಕೂ ಪಾತ್ರರಾಗಿದ್ದರು. ಈಗ ಬಂದಿರುವ ಪೋಸ್ಟ್‌ಮಾಸ್ಟರಿಗೆ ಭಾಷಾಜ್ಞಾನಗಳು ಬಾರದ ಕಾರಣ ಅಷ್ಟು ಸುಖಂಬಾದಿಲ್ಲ. ಇದರಿಂದ ಈ ಊರಿನವರಿಗೂ ಪಕ್ಕದ ಗ್ರಾಮದವರಿಗೂ ತುಂಬಾ ತೊಂದರೆಯಾಗಿದೆ.

ಕೋಲಾರ.—ಈ ಊರಲ್ಲಿ ಈಗೆ ಹವಾ ಬದಲಾವಣೆಯಾಗಿದೆ. ಅಲ್ಲಲ್ಲಿ ಇಲಿಗಳು ಸಾಯುತ್ತಿರುವುದೆಂಬ ವರ್ತಮಾನ. 1-2 ಪ್ಲೇಗು ಮರಣಗಳೂ ಆದುವಂತೆ. ಗ್ರಾಮಪಂಚಾಯಿತಿ ಚೆನ್ನಾಗಿದೆ. ಆದರೆ ಸಂದಿಗೊಂದಿಗಳಲ್ಲಿರುವ ಕಕ್ಕಸವನ್ನು ತೆಗೆಯಿಸಿ ಊರಹೊರಗೆ ಸಾಗಿಸುವುದಕ್ಕೆ ಗಮನಕೊಟ್ಟರೆ ಮತ್ತಷ್ಟು ಅನುಕೂಲ.—ಇಲ್ಲಿನ ನಾರ್ಮಲ್ ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿದೆ. ಮುಖ್ಯೋಪಾಧ್ಯಾಯರು ಪರಿಶ್ರಮದಿಂದ ಟ್ರೈನಿಂಗ್ ಕ್ಲಾಸಿಗೆ ಬಂದಿರತಕ್ಕ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವನ್ನು ಕಲ್ಪಿಸಿಕೊಟ್ಟು, ಅವರ ವಿದ್ಯಾಭಿವೃದ್ಧಿಯನ್ನು ಹಾರೈಸುತ್ತಿದಾರೆ.—ಕಳೆದ ಸೆಪ್ಟೆಂಬರು ತಿಂಗಳಲ್ಲಿ ಇವರಿಗೋಸ್ಕರ ಡಿಬೇಟಿಂಗ್ ಸೊಸೈಟಿಯನ್ನು ಸ್ಥಾಪಿಸಿ, ಪ್ರತಿ ಶನಿವಾರವೂ ಇಟ್ಟರು ಮಾಸ್ತರುಗಳು ನೂತನ ವಿದ್ಯಾಭ್ಯಾಸ ಕ್ರಮದಲ್ಲಿ ಉಪನ್ಯಾಸ ನಡೆಸುವಂತೆ ಏರ್ಪಡಿಸಿದರು. ಈ ಉಪನ್ಯಾಸಗಳಲ್ಲೂ ಕಿಂಡರ್‌ಗಾರ್ಟನ್ ಕ್ರಮದಲ್ಲಿ ಮಕ್ಕಳ ವಿದ್ಯಾಭ್ಯಾಸ, ಪ್ರಕೃತಿ ವಿಮರ್ಶೆ, ಪಾಠಶಾಲೆಯ ಸಂವಿಧಾನ, ನೀತ್ಯಾನುಶಾಸನ ಮುಂತಾದ್ದಕ್ಕೆ ಸಂಬಂಧಪಟ್ಟದ್ದಾಗಿರುವುದು. ಈ ನಾರ್ಮಲ್ ಸ್ಕೂಲಿನ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ "ಹಾಸ್ಟಲ್" ಇಲ್ಲದೆ ಹೈಸ್ಕೂಲಿಗೆ ಸೇರಿದ ಹಾಸ್ಟಲಿನಲ್ಲಿಯೇ ಕೆಲವರು ವಾಸಿಸ್ತಿರುತ್ತಿದ್ದರು. ಕಳೆದ ಮೂರು ತಿಂಗಳಿಂದ ನಾರ್ಮಲ್ ಸ್ಕೂಲಿಗೇನೇ ಪ್ರತ್ಯೇಕವಾಗಿ ಹಾಸ್ಟಲು ಏರ್ಪಾಡಾಗಿದೆ. ಇದು ಇನ್ನೂ ಪ್ರಾರಂಭದೆಸೆಯಲ್ಲಿದೆ. ಮೇಲ್ವಿಚಾರಣೆಯು ತೃಪ್ತಿಕರವಾಗಿದೆ. ಇಲ್ಲಿನ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ಎಂ|| ದೇವದಾಸ್ ಸಾಹೇಬರು ಈ ತಿಂಗಳ ಪ್ರಾರಂಭದಿಂದ ಅಂಬ್ಯುಲೆನ್ಸ್ (ಶುಶ್ರೂಷಾ ಸಂಘ) ವಿಚಾರವಾಗಿ ಪ್ರತಿ ಶನಿವಾರವೂ ನಾರ್ಮಲ್ ಸ್ಕೂಲಿನಲ್ಲಿ ಉಪನ್ಯಾಸ ಮಾಡುತ್ತಲಿದಾರೆ. ಇದು ಇಲ್ಲಿನ ವಿದ್ಯಾರ್ಥಿಗಳಿಗೆ ತುಂಬಾ ಸಹಾಯವಾಗಿ, ಅವರು ತಮ್ಮ ಊರುಗಳಿಗೆ ಹೋದನಂತರ ಆಪಾಯ ಸಂಭವಿಸಿದವರಿಗೆ ಕೈಲಾದಷ್ಟು ಸಹಾಯ ಮಾಡಬಹುದಾಗಿದೆ. ವಿದ್ಯಾಭ್ಯಾಸದ ಇಲಾಖೆಯವರು ಡಾಕ್ಟರಿಗೆ ಅನುಕೂಲಿಸಬಹುದಾದ ಸಾಮಾನುಗಳನ್ನು ಒದಗಿಸುವುದರ ಮೂಲಕ ಪ್ರೋತ್ಸಾಹ ಕೊಡುವುದಾದರೆ ಈ ಕೆಲಸವು ಇನ್ನೂ ಚೆನ್ನಾಗಿ ನಡೆದು ವಿದ್ಯಾಭ್ಯಾಸದ ಇಲಾಖೆ ಶ್ಲಾಘನೀಯವಾಗುವುದು.—ಬೌರಿಂಗ್ ಪೇಟೆಯಲ್ಲಿ ಪ್ಲೇಗು ಇರುವುದರಿಂದ ಕೆಲವರು ಈ ಊರಿಗೆ ವಾಸಕ್ಕೆ ಬಂದಿರುವದಾಗಿ ಕೇಳುತ್ತೇವೆ. ಅಂಥವರನ್ನು 10 ದಿನ ಊರ ಹೊರಗೆ ವಾಸಮಾಡುವಂತೆ ಏರ್ಪಡಿಸಿ ಅನಂತರ ಊರೊಳಗೆ ಪ್ರವೇಶಿಸುವಂತೆ ಮಾಡುವುದು ಒಳ್ಳೆಯದು.—ಚಿಂತಾಮಣಿ, ಶ್ರೀನಿವಾಸಪುರದ ರೈಲ್ವೆ ಲೈನು ಪೂರೈಸುತ್ತಿರುವುದರಿಂದಲೂ, ಬರುವ ಮಾರ್ಚಿ ತಿಂಗಳಿಂದ ರೈಲುಗಳು ಬಿಡುವರೆಂತಲೂ ಕೇಳುತ್ತೇವೆ.

ಚಿಂತಾಮಣಿ.—ಇಲ್ಲಿದ್ದ ರೈಲ್ವೆ ಇನ್‌ಜನೀಯರ್ ಮೆ|| ಕೃಷ್ಣಮೂರ್ತಿರಾಯರನ್ನು ಬೆಂಗಳೂರಿಗೆ ವರ್ಗಾಯಿಸಿರುತ್ತಾರೆ. ಇವರು ವಿದ್ಯಾವಂತರಾಗಿಯೂ, ಸಿಪಾಯಿಯವರಿಂದ ಕೇಳಿ ಮಾಡತಕ್ಕವರಾಗಿಯೂ ಇದ್ದರು. ಇಲ್ಲಿನ ಟೆನಿಸ್ ಕ್ಲಬ್ಬಿನವರು ಇವರಿಗೆ ಎಂಟರ್‌ಟೇನ್‌ಮೆಂಟ್ ಕೊಟ್ಟು ಮತ್ತು ಫೋಟೋ ತೆಗೆಸಿದರು. ಇಲ್ಲಿನ ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಇಲ್ಲಿನ ಎ. ವಿ ಸ್ಕೂಲ್ ಹೆಡ್ ಮಾಸ್ಟರು ಮೆ|| ಪಿ. ಕೃಷ್ಣರಾಯರು ಕೋ ಆಪರೇಟಿವ್ ಸೊಸೈಟಿ ಇನ್ಸ್‌ಪೆಕ್ಟರ ಕೆಲಸಕ್ಕೆ ಬಡ್ತಿ ಮೇಲೆ ಹೋಗುವದಾಗಿ ವರ್ತಮಾನವಿದೆ.—ಇವರು ವಿದ್ಯಾಭ್ಯಾಸದ ಇಲಾಖೆಗೆ ಸರ್ವೀಸ್‌ಮಾಡಿದರು. ಒಳ್ಳೇ ಅನುಭವಸ್ಥರು. ಇಂಥವರನ್ನು ಪ್ರವರ್ತಕ ಕೊಟ್ಟು ಈ ಇಲಾಖೆಯಲ್ಲೇ ಇಟ್ಟಿದ್ದರೆ ಚೆನ್ನಾಗಿತ್ತು.—ನಮ್ಮ ಅಮಲ್ದಾರ್ ಮೆ|| ಲಿಂಗೋಜಿರಾವ್ ಮೆ|| ಬಾದಾಮಿಯವರು ಈ ಊರಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿ ಒಂದು ಸಂಘ ಮಾಡಿರುತ್ತಾರೆ. ಈ ವಿದ್ಯಾರ್ಥಿಗಳ ವಿದ್ಯಾ ವಿಚಾರದಲ್ಲೂ, ಆಟಪಾಟಗಳಲ್ಲೂ ಬಹು ಮುತುವರ್ಜಿ ವಹಿಸಿದಾರೆ.—ಅಲ್ಲದೆ ಟಿವರ್ ಸ್ವಾನಿಟರಿ ಇನ್ಸ್‌ಪೆಕ್ಟರ್ ಮೆ|| ಗೀರ್ವಾಣರಾಯರು ಎ. ವಿ. ಸ್ಕೂಲ್ ಅ|| ಮಾಸ್ಟರುಗಳಲ್ಲಿ ಕೆಲವರನ್ನು ನಾಲಕ್ಕೆ ಒಂದು ಸಲ ವಿದ್ಯಾರ್ಥಿಗಳ ಕೊಡನೆ ಅನುಕ್ರಮವಾಗಿ 2-3 ಮೈಲಿ ಫಾಲೋಯಿಂಗ್ ಹೋಗಿ ಹಳ್ಳಿಗಳನ್ನು ಸುತ್ತಿ ಅವರಿಗೆ ಅನೇಕ ವಿಧವಾದ ನೇಚರ್ ಸ್ಟಡಿ ಸಂಬಂಧವಾದ ವಿಷಯಗಳನ್ನು ಹೇಳುತ್ತಾರೆ.—ಅಲ್ಲದೆ ನಮ್ಮ ಅಮಲ್ದಾರು ಪಂಚಮರ ಸ್ಕೂಲ್ ಸ್ಥಾಪನೆ ಮಾಡಿದಾರೆ. ಇವರು ಇಲ್ಲಿನ ಪ್ರಜೆಗಳ ಅನುರಾಗಕ್ಕೆ ತುಂಬಾ ಪಾತ್ರರಾಗಿರುತ್ತಾರೆ. ಇದುವರೆಗೆ ರಜಾ ಮೇಲೆ ಇದ್ದ ನಮ್ಮ ಪೊ|| ಇನ್ಸ್‌ಪೆಕ್ಟರು ಮೆ|| ಸುಬ್ಬರಾಯರು ಅವರು ತಮ್ಮ ಕೆಲಸದ ಮೇಲೆ ಹಾಜರಾಗಿರುತ್ತಾರೆ.—ಅವರು ಬಂದ ಮೇಲೆ ಇಲ್ಲಿನ ರೀಡಿಂಗ್ ರೂಮಿಗೆ ತುಂಬಾ ಸಹಾಯ ಮಾಡಿದ್ದಲ್ಲದೆ ಸರ್ಕಾರದಿಂದಲೂ ಸಹಾಯ ಮಾಡಿದಾರೆ.—ನಮ್ಮ ಆ ಸಿಬ್ಬಂದ್ದಿ ಇಲ್ಲಿನ ಕನ್ನಡ ಗರಲ್ಸ್ ಸ್ಕೂಲ್ ಹಾಲಿನಲ್ಲಿ ಈ ಊರಿನಲ್ಲಿರತಕ್ಕ ವರ್ತಕ ಮಂಗಲಿಯವರನ್ನೂ, ಗ್ರಾಮಸ್ಥರಾದ ಅನೇಕ ದೊಡ್ಡ ಮನುಷ್ಯರನ್ನೂ ಸಹ ಸೇರಿಸಿ ಟ್ರೇಡ್ ಇಂಪ್ರೂವ್‌ಮೆಂಟ್ ವಿಚಾರದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಅಪ್ಪಣೆ ಕೊಡಿಸಿದರು.—ಇಲ್ಲಿನ ಕೋ ಆಪರೇಟಿವ್ ಸೊಸೈಟಿಯಲ್ಲಿ ಸಕ್ರೆಟರಿಯವರು ಮತ್ತು ಡೈರೆಕ್ಟರ್‌ಗಳು ಬಹು ತೃಪ್ತಿಕರವಾಗಿ ಕೆಲಸಮಾಡುತ್ತಿರುವುದರಿಂದ ಈ ಸಲದ ಜನರಲ್ ಮೀಟಿಂಗಿನಲ್ಲಿ ಇವರುಗಳಿಗೆ 45 ರೂಪಾಯಿ ಬೋನಸ್ ರೂಪವಾಗಿ ಸೊಸೈಟಿಯವರು ಕೊಟ್ಟಿರುತ್ತಾರೆ. ಅವರ ಈ ಮಹನೀಯರು ಪಡೆದ ಬೋನಸ್ ಹಣದಲ್ಲಿ 20 ರೂಪಾಯಿಯನ್ನು ಇಲ್ಲಿನ ಎ ವಿ ಸ್ಕೂಲಿನಲ್ಲಿ ಓದತಕ್ಕ ಬಡ ವಿದ್ಯಾರ್ಥಿಗಳಿಗೆ ಸ್ಕೂಲ್ ಫೀ ಕೊಡುವುದಕ್ಕಾಗಿಯೂ, ಮಿಕ್ಕ 25 ರೂಪಾಯಿಗಳನ್ನು ಮೈಸೂರ್ ವ್ಯಾಕ್ಸಿನೇಷನ್ ವಾರ್ ಫಂಡಿಗೂ ಕೊಟ್ಟಿರುತ್ತಾರೆ. ಇದು ಬಹು ಶ್ಲಾಘನೀಯವಾಗಿರುತ್ತೆ.

ಚಿತ್ರದುರ್ಗದ ತಾ|| ಹಾಯ್ಕಲ್—ಈ ಗ್ರಾಮವು 100 ಮನೆಗಳುಳ್ಳದ್ದಾಗಿದೆ. ಸ್ನಾನಪಾನಾದಿಗಳಿಗೆ ಊರಿಗೆ ಒಂದು ಭಾವಿಯಲ್ಲಿ ದನಕರುಗಳನ್ನು ಸಹಾ ಕುಡಿಯುವದು ತುಂಬಾ ಶೋಚನೀಯವಾಗಿದೆ. ಈ ಗ್ರಾಮದ ಸ್ಕೂಲು ತುಂಬಾ ಹೀನಸ್ಥಿತಿಯಲ್ಲಿದೆ. ಈಗ ಬಂದಿರತಕ್ಕ ಸ್ಕೂಲುಮಾಸ್ಟರು ಬಿ. ಲಕ್ಷ್ಮೀನರಸಪ್ಪನವರು ಅಭಿವೃದ್ಧಿಗೆ ತಂದಾರೆಂದು ತೋರುತ್ತೆ. ಇವರು ಬಂದ ಕೂಡಲೆ ಯುವ ಜನಗಳಿಗೆ ಪ್ರೋತ್ಸಾಹಿಸಿ ರೀಡಿಂಗ್ ರೂಂ ಸ್ಥಾಪಿಸಿರುತ್ತಾರೆ. 4 ವಾರ ಪತ್ರಿಕೆಗಳೂ 2 ಮಾಸಪತ್ರಿಕೆಗಳೂ ಬರುತ್ತವೆ. ಇನ್ನೂ ಕರಿಸತಕ್ಕ ಹಂಬಲದಿನಲ್ಲಿದಾರೆ.—ಸುತ್ತಮುತ್ತಲ ಗ್ರಾಮಗಳಲ್ಲಿ ದನಗಳಿಗೆ ದೊಡ್ಡರೋಗವು ಪ್ರಾಪ್ತವಾಗಿರುತ್ತೆ. ಇದಕ್ಕೆ ತಕ್ಕ ಚಿಕಿತ್ಸೆಯನ್ನು ಸರ್ಕಾರದವರು ಮಾಡಿರುತ್ತಾರಾಗಿ ನಂಬಿರುತ್ತೇವೆ.—ಈ ಗ್ರಾಮಸ್ಥರೆಲ್ಲಾ ಅಂತಃಕಲಹಗಳನ್ನು ತ್ಯಜಿಸಿ ಐಕಮತ್ಯದಿಂದ ಕಾರ್ಯಗಳನ್ನು ನಿರ್ವಹಿಸಿದರೆ ದೇವರ ಸೇವೆಯೂ ಸ್ಕೂಲ್ ಅಭಿವೃದ್ಧಿಯೂ ಗ್ರಾಮದ ಇತರ ಕೆಲಸಗಳೂ ನಿರಾತಂಕವಾಗಿ ನಡೆಯುತ್ತವೆ.

ದಾವಣಗೆರೆ.—ಈ ಊರಿಗೆ ಪ್ಲೇಗ್ ರೋಗ ತಲೆ ಹಾಕಿದ್ದರಿಂದ ಇಲ್ಲಿನ ತ್ರಜೆಗಳು ಸುಮಾರು 3,000 ಜನರು ಇನಾಕ್ಯುಲೇಷನ್ ಮಾಡಿಸಿಕೊಂಡಿರುತ್ತಾರೆ. ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ ಇದ್ದ ನೂರಾರು ಜನಗಳು ಪ್ಲೇಗ್ ರೋಗದಿಂದ ಮೃತಪಟ್ಟರು. ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದು ಉತ್ತಮವೆಂದು ಎಲ್ಲಾ ಜನಗಳಿಗೂ ಪೂರ್ಣ ನಂಬಿಕೆ ಉಂಟಾಗಿರುತ್ತದೆ. ಇನ್ನೂ ಪ್ಲೇಗ್ ರೋಗವು ಸಂಪೂರ್ಣವಾಗಿ ಬಿಟ್ಟುಹೋಗಿಲ್ಲ.—ಇಲ್ಲಿನ ಸಾಹುಕಾರ್ ಜನಗಳೂ ಅನಾಥರಿಗಾಗಿ ಫಂಡು ಕೂಡಿಸಿ ಈಗ ಎರಡು ಮಾಸಗಳಿಂದಲೂ ಪ್ಲೇಗ್ ಕಾಯಿಲೆ ಜನಗಳಿಗೆ ಔಷಧಿ, ಹಾಲು, ಸಕ್ಕರೆ, ರವೆ ಅಕ್ಕಿ ಮುಂತಾದವುಗಳನ್ನು ಕೊಟ್ಟು ಕಾಪಾಡುತ್ತಾ ಇದಾರೆ. ಈ ಕಾರ್ಯವು ತುಂಬಾ ಸ್ತೋತ್ರಾರ್ಹವಾಗಿರುತ್ತದೆ. ಪ್ಲೇಗ್ ತಲೆ ಹಾಕಿದ ಕಾರಣ ಊರಿನ ಜನಗಳು ಕೆಲವರು ಹೊರಗೆ ಕ್ಯಾಂಪುಗಳಲ್ಲಿ ವಾಸ ಮಾಡುತ್ತಾರೆ. ಆರ್ಧ ಊರು ಬಿಟ್ಟಿರುತ್ತಾರೆಯೇ ಹೊರತು ಸಂಪೂರ್ಣವಾಗಿ ಜನಗಳು ಊರನ್ನು ಬಿಡಲಿಲ್ಲ.—ಇದೂ ಅಲ್ಲದೆ ಪ್ಲೇಗ್ ರೋಗದ ಭಯದಿಂದ ಕೆಲವು ಸ್ಕೂಲುಗಳು ಮುಚ್ಚಿರುತ್ತವೆ. ಮಕ್ಕಳಿಗೆ ವಿದ್ಯಾಭ್ಯಾಸ ನಡೆಯುವದಕ್ಕೆ ಕುಂದಕವಾಗಿದೆ. ಇಂಥಾ ಕಾಲದಲ್ಲಿ ಇಲ್ಲಿನ ಜವಳಿ ಅಂಗಡಿ ಮ|| ಪಿ ಗಂಗಪ್ಪ ಸುಬ್ಬಣ್ಣ ಇವರು ತಮ್ಮದಾಗಿ ಕಟ್ಟಿಸಿರುವ ಗಿಡ್ಡನ ಮಳಿಗೆಯನ್ನು ಪಿ ಸರ್ ಗರ್ಲ್ಸ್ ಸ್ಕೂಲ್ ಮಕ್ಕಳ ವಿದ್ಯಾಭ್ಯಾಸ ನಡೆಯಿಸುವುದಕ್ಕೆ ಬಿಟ್ಟುಕೊಟ್ಟಿರುವುದು ತುಂಬಾ ಶ್ಲಾಘನೀಯವಾಗಿರುತ್ತದೆ

ನೋಟೀಸ್.

ಬೊಂಬಾಯಿಯ ಕಾಶೀನಾಥ ಸ್ವದೇಶಿ ಮಿಲ್ಲು ಕಂಪೆನಿಯಲ್ಲಿ ತಯಾರಾಗುವ ಪಂಚೆಗಳು, ಸೀರೆಗಳು, ಚಕ್ಮ, ಟ್ವಿಲ್, ದುಪ್ಪಟ ಮುಂತಾದ ಜವಳಿ ಮತ್ತು ನಂಬರುವಾರು ನೂಲು ವ್ಯಾಪಾರ ಮಾಡಲು ನಮ್ಮನ್ನು ಸೋಲ್ ಏಜಂಟರನ್ನಾಗಿ ಏರ್ಪಡಿಸಿರುವದರಿಂದ ನಮ್ಮಲ್ಲಿ ಈ ಮಾಲು ಕಂಪೆನಿ ಧಾರಣೆಗೆ ದೊರೆಯುವದಲ್ಲದೆ ಜವಳಿ ಡಿಸ್ಕೌಂಟು ದೊರೆಯುತ್ತೆ. [172-12]

ಕಮಿಷನ್ ಮತ್ತು ಜನರಲ್ ಏಜನ್ಸಿ—

144, ದೊಡ್ಡಪೇಟೆ, ಬೆಂಗಳೂರು ಸಿಟಿ.	ಕೊಲ್ಲೂರಯ್ಯನ ಬೀದಿ, ಶಿವಮೊಗ್ಗ

ನೋಟೀಸ್.

ದಿ ಯೂನಿವರ್ಸಲ್ ಎಸ್ಯೂರೆನ್ಸ್ ಕಂಪನಿ, ಕಲ್ಕತ್ತಾ.

ಈ ಕಂಪನಿ ಪಾಲಿಸಿ ಹೋಲ್ಡರುಗಳು ತಿಳಿಯಬೇಕಾದ ಅ ಂಶಗಳು :— ಈ ಕಂಪನಿಯು ಮದುವೆ ರಾಜದುಲ್ಲಿ ಲಗ್ನವಾದ ಮೆಂಬರುಗಳಿಗೆ ಕೂಡ್ಲೆ ಕಂಪನಿ ರೂಲ್ಸ್ ಅನುಸರಿಸಿ ಲಗ್ನಕ್ಕೆ ಪೂರ್ವ ಯಾ ಅನಂತರ ಬೋನಸ್ಸು ಹಣ ಪಾವತಿ ಮಾಡತಕ್ಕ ಸ್ವಾತಂತ್ರ್ಯವು ಈ ಪೂರ್ವ ಕಂಪನಿಯಿಂದ ಹೊರತಾಗಿ ನಮ್ಮಲ್ಲೇ ಉಳಿದಿತ್ತು. ಹಾಗೂ ಪಾಲಿಸಿ ಹೋಲ್ಡರುಗಳಿಗೆ ಅನುಕೂಲವಾಗಬಹುದಾದ ರೂಲ್ಸ್‌ಗಳು ಈಚೆಗೆ ತಿದ್ದುಪಾಟಾಗುತ್ತಾ ಬಂದಿರುವುದರಲ್ಲಿ ನಾವು ಈ ಏಜಂಟರೂ ಕಂಪನಿಗೂ ಮತ್ತು ಪಾಲಿಸಿ ಹೋಲ್ಡರುಗಳಿಗೂ ಮಧ್ಯದಲ್ಲಿ ಉಭಯತ್ರರಿಗೂ ಸಾಕಾದಷ್ಟು ನಂಬಿಕೆಯಿಂದಲೂ ಮಿತವ್ಯಯದಿಂದಲೂ ಕೆಲಸ ಮಾಡುತ್ತಾ ಬಂದು, ಈಚೆಗೆ ಮೇಲಿನ ಸ್ವಾತಂತ್ರ್ಯ ನಮ್ಮಿಂದ ತಪ್ಪಿದ ಬಂಗಾರವು ಕೆಲವು ಹಣ ಪಾರ್ಟಿಗಳಿಗೆ ಬಾಧೆ ಇರುವದು ನಮ್ಮ ಅಸ್ವಸ್ಥ್ಯವಾಗಲಿ, ಕೋಪವೇ ಆಗಲಿ ಯಾವದೂ ಇಲ್ಲ. ಪಾಲಿಸಿ ಹೋಲ್ಡರುಗಳಿಗೆ ಪಾವತ್ತು ಹಣವನ್ನು ಪಡೆಯತಕ್ಕ ಭಾಗದಲ್ಲಿ ಉದ್ದೇಶ್ಯದಂತೆ ಯಾವ ಕಾಲದಲ್ಲಿಯೂ ಎಲ್ಲಾ ಕಾರಣಗಳಿಂದಲೂ ಕಂಪನಿಯಿಂದಲೇ ಹೊಂದಲು ಪೂರ್ಣ ಸ್ವಾತಂತ್ರ್ಯವಿದೆ. ನಾವು ಹಣವನ್ನು ವಸೂಲು ಮಾಡಿಕೊಡುವ ಜವಾಬ್ದಾರಿಯನ್ನು ಕಳೆದುಕೊಂಡಿರುತ್ತೇವೆ. ನಮ್ಮ ಚೀಫ್ ಏಜಂಟರವರ ಹೇಳಿಕೆ ಮೇರೆ ಕಂಪನಿಗೆ ವಸೂಲ್ ಬರತಕ್ಕ ಹಣವನ್ನು ಮಾತ್ರ ವಸೂಲ್ ಮಾಡಿ ಕಳುಹಿಸುವ ಕೆಲಸ ಮಾತ್ರ ನಮ್ಮದಾಗಿರುತ್ತೆ. ಈ ಎಲ್ಲಾ ಭಾಗಗಳ ಪರಿಹಾರವು ಕಂಪನಿಯಿಂದಲೇ ಆಗತಕ್ಕದ್ದಾಗಿದೆ. ತಾ. 21-1-1916 [20-2]

ಯು ವೆಂಕಟನಾರ್ಣಯ್ಯ, ಏಜಂಟ್, ತೀರ್ಥಹಳ್ಳಿ.

ವೀರಕೇಸರಿಯ ಪ್ರತಿಯೊಂದು ಸಂಚಿಕೆಯಲ್ಲಿಯೂ ಈಗಿನ ಯುದ್ಧ ಪಠನವನ್ನು ಹಾಕಿ ಓದುವವರಿಗೆ ಆಕರ್ಷಣೀಯವಾಗುವ ಹಾಗೆ ಪ್ರಕಟಿಸುತ್ತದೆ ಇದರ ವಾರ್ಷಿಕ ಚಂದಾ ರೂ 1-0-0. ಇದಕ್ಕೆ ಚಂದಾದಾರರಾಗುವವರಿಗೆ ಈ ಕೆಳಗೆ ಕಂಡ ಮಹಾಯುದ್ಧ ಚರಿತ್ರೆಯನ್ನು ಉಚಿತವಾಗಿ ಕೊಡುತ್ತೇವೆ

ಈಗ ಯೂರೋಪು ದೇಶದಲ್ಲಿ ನಡೆಯುತ್ತಿರುವ ಮಹಾ ಯುದ್ಧದ ಚರಿತ್ರೆ ಕ್ರಯ ರೂ 1-0-0. ಇದು ಕನ್ನಡ ಭಾಷೆಯಲ್ಲಿ 14 ಅಧ್ಯಾಯಗಳಾಗಿ

ಭಾಗಿಸಿ 30 ಚಿತ್ರಪಟಗಳೊಡನೆ ಪ್ರಕಟಿಸಲ್ಪಟ್ಟಿರುತ್ತೆ. ಇದರಲ್ಲಿ ಎಲ್ಲಾ ರಾಜ್ಯಗಳ ಚರಿತ್ರೆಗಳೂ, ಯುದ್ಧಕ್ಕೆ ಪ್ರಸಕ್ತ ಮತ್ತು ಪರೋಕ್ಷ ಕಾರಣಗಳೂ, ಪ್ರತಿಯೊಂದು ರಾಜ್ಯದ ಸೇನಾ ಬಲವು ಮತ್ತು ವಿಮಾನ ಬಲವೂ, ಅವುಗಳ ಪಡೆಗಳೂ, ರಾಜರುಗಳ ಸೇನಾಧ್ಯಕ್ಷರುಗಳ, ಆಯಾ ದೇಶದ ರಾಜರುಗಳ, ಮಂತ್ರಿಗಳ ಮೊದಲಾದವರುಗಳ ಭಾವಚಿತ್ರಗಳೂ, ಯುದ್ಧಸಂಬಂಧವಾದ ವಿಷಯಗಳೂ, ಅವುಗಳೆಲ್ಲವೂ ಸವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. ಯುದ್ಧಾರಂಭವಾದ ಬಾಗಾಯಿತು ರಣರಂಗದಿಂದ ಬಂದ ಯುದ್ಧದ ಸಮಾಚಾರಗಳು ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ. ಇಂಥಾ ಯುದ್ಧದ ಚರಿತ್ರೆಯನ್ನು ಇದುವರೆಗೆ ಯಾರೂ ಕನ್ನಡ ಭಾಷೆಯಲ್ಲಿ ತರಲಿಲ್ಲ. ಈ ಯುದ್ಧದ ಚರಿತ್ರೆಯನ್ನು ಓದುವಾಗ ಪ್ರತ್ಯಕ್ಷವಾಗಿ ರಣರಂಗವನ್ನೇ ನೋಡುತ್ತಿರುವ ಹಾಗೆ ತೋರುವುದು. ಮದರಾಸಿನಲ್ಲಿ ಯೆಮ್ಡನ್ ಹಡಗಿನಿಂದ ಹೊಡೆಯಲ್ಪಟ್ಟ ಗುಂಡಿನ ವಿವರಣೆಯನ್ನು ವಿಸ್ತಾರವಾಗಿ ಬರೆಯಲ್ಪಟ್ಟಿದೆ. ಈ ಮಹಾ ಯುದ್ಧ ಚರಿತ್ರೆಯನ್ನು ವೀರಕೇಸರಿ ಒಡನೆ ನಮ್ಮ ಏಜಂಟರಾದ ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಿ.

[12-4] ವಿಳಾಸ—ಬ್ಯಾರರ್ ಕಂಪೆನಿ, ಪಾರ್ಕ್ ಟವನ್, ಮದರಾಸು.

ಇದನ್ನು ತರಿಸಿಕೊಳ್ಳುವವರಿಗೆ ಲೇಡಿ 1916 ರ ಕ್ಯಾಲೆಂಡರ್ ಇನಾಂ.

ವಿಚಿತ್ರ ಗೋಲ್ಡನ್ ಪಾಕೆಟ್ ದೀಪವು.

ಕ್ರಯ ರೂ. 2-0-0 ಮಾತ್ರ.

ಈ ವಿಚಿತ್ರ ಜೇಬು ದೀಪಗಳು ಇಂಗ್ಲಾಂಡ್ ದೇಶದ ಶಾಸ್ತ್ರಜ್ಞರಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟು ಈಗತಾನೇ ನಮ್ಮ ಹಿಂದೂ ದೇಶಕ್ಕೆ ಕಳುಹಿಸಿರು

ತ್ತಾರೆ. ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿ ಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ನೋಡುವರಿಗೆ ಆಶ್ಚರ್ಯವಾಗುವ ಹಾಗೆ ಹತ್ತಿ ಉರಿಯುತ್ತೆ. ಈ ದೀಪ ಒಂದನ್ನು ಕರಿಸಿಕೊಂಡರೆ ಯಾವಾಗಲೂ ದೀಪದ ಕಡ್ಡಿ ಅವಶ್ಯಕವೇ ಇರುವದಿಲ್ಲ. ಸರ್ವರಿಗೂ ಇದು ಬಹಳ ಉಪಯೋಗ ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿ ಇರಬೇಕು. [22-]

ವಿಳಾಸ—ಟಿ ರಾಮಚಂದ್ರ ಕಂಪನಿ, 66, ತಿರುಪಳ್ಳಿ ಬೀದಿ, ಮದರಾಸು.

ಸತ್ಯವಾದದ್ದು. ಅನುಭವಸಿದ್ಧವಾದ ಔಷಧ. ಮೋಸವಿಲ್ಲದ್ದು

ಮಹಾವ್ಯಾಕ್ಸಾದಿ ಚೂರ್ಣ.

ಗುಣವಾಗದಿದ್ದರೆ ಹಣವನ್ನು ಪರತ ಕೊಡುತ್ತೇವೆ.

ಈ ಔಷಧಿಯು ಅತಿ ಉತ್ತಮವಾದದ್ದೆಂದು ಚರಕರಾಚಾರ್ಯಾದಿ ಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ಈ ಔಷಧಿಯು ಕೆಳಗೆ ಕಂಡ ರೋಗಗಳಿಗೆ ಬಹು ನಂಬಿಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಇದನ್ನು 15 ದಿವಸ ಸೇವಿಸಿದರೆ ಅನೇಕರಿಗೆ ಕ್ಷಯ, ಪಿತ್ತ, ಪೀನಸ, ಕೆಮ್ಮು, ಕಾಗೆ ರೋಗ, ಕೋಷ್ಠ, ಟೈಫಾಯ್ಡ್, ಉಬ್ಬಸ, ವಾಕರಿಕೆ, ದಣಿವು, ರಕ್ತ, ಉಷ್ಣ, ಹೊಟ್ಟೆನೋವು, ಹೊಟ್ಟೆಯುಬ್ಬರ, ನೆಗಡಿ, ಕ್ರಿಮಿಗಳು ಹರಿಯುವದನ್ನು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ನಾಶಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸುವದು. ಶಕ್ತಿಯನ್ನು ಹೆಚ್ಚಿಸುವದು. ಅಧಿಕ ಬಲ ಬರುವದು. 15 ದಿನ ಸೇವಿಸುವ ಡಬ್ಬಿ 1 ಕ್ಕೆ ವಿ ಪಿ ರೂ 2-0-0. ಈ ಔಷಧಿಯು ಹತ್ತುಸಾವಿರ ಡಬ್ಬಿಗಳು ಖರ್ಚಾದ ಕೂಡಲೆ 5000 ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಹಂಚುತ್ತೇವೆ. ಹ್ಯಾಗೆಂದರೆ 1 ಡಜನ್ ಬಾಟ್ಲು ತರಿಸಿದವರಿಗೆ ಎರಡು ಸಾವಿರ ರೂಪಾಯಿ; 6 ಡಜನ್ ತರಿಸಿಕೊಂಡವರಿಗೆ ರೂ 1300; 3 ಡಜನ್ ತರಿಸಿಕೊಂಡವರಿಗೆ ರೂ 300; 2 ಡಜನ್ ತರಿಸಿಕೊಂಡವರಿಗೆ ರೂ 600; 1 ಡಜನ್ ತರಿಸಿಕೊಂಡವರಿಗೆ 400 ರೂಪಾಯಿ ಬಹುಮಾನ. ಈ ಪ್ರಕಾರವಾಗಿ 1915 ನೇ ನವಂಬರ್ 1 ನೇ ತೇದಿ ಮೊದಲು 1916 ನೇ ನವಂಬರ್ 1 ನೇ ತೇದಿ ವರೆಗು ಇದನ್ನು ಲೆಕ್ಕಕ್ಕೆ ದಾಖಲಾದಾ ಪ್ರಕಾರ ಹಾಗೂ ಬಳಿಯನ್ನು ಹೆಚ್ಚಿಸದೆ ಕೊಡತಕ್ಕ ಬಹುಮಾನ ಹಣವನ್ನು ಖಂಡಿತವಾಗಿ ಹಂಚುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವೂ ವಂಚನೆಯೂ ಖಂಡಿತವಾಗಿ ಇರುವದಿಲ್ಲ. ಒಂದುವೇಳೆ ದಲ್ಲಿ ನಾವು ಕರಿಸಿದನಂತರ ಮೋಸವೆಂದು ಕಂಡುಬಂದರೆ ಅಗತ್ಯವೇ ಜನಗಳು ಬರೆದರೆ ನಿಮ್ಮ ಹಣವನ್ನು ಆ ಕೂಡಲೆ ವಾಪಸ್ ಕಳುಹಿಸಲು ಸಿದ್ಧರಾಗಿರುವೆವು. ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೇಟನ್ನು ಡಬ್ಬಿ ಸಂಗಡ ಕಳುಹಿಸುವೆವು. ಈ ವರೆಗೆ ಕೆಲವರು ಬಹುಮಾನ ಹಣವನ್ನು ಹೊಂದಿದವರು ಹೆಸರನ್ನು ಪ್ರಸಿದ್ಧಪಡಿಸುವೆವು. ನಾವು ಇದನ್ನು ಕ್ರಮವಾಗಿ ಪ್ರತಿವರುಷವು ನಡೆಸುವೆವು. ಕಾರಣ ಖಂಡಿತವಾಗಿ ಇದರಲ್ಲಿ ಯಾವ ವಿಧವಾದ ಮೋಸವಿರುವುದಿಲ್ಲ. ಈ ಮಹಾ ದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ನಮ್ಮಲ್ಲಿ ತಯಾರಾಗಿರುವ ಜ್ವರಸಂಹಾರಿ ವಿನ ವಾತ್ರೆಯೆಂಬುವ 21 ಮಾತ್ರೆಗಳುಳ್ಳ ಒಂದು ಪಟ್ಟಿನನ್ನು ಉಚಿತವಾಗಿ ಕಳುಹಿಸಿಕೊಡುತ್ತೇವೆ. ಇದರಿಂದ ಎಂಥಾ ಕಠಿಣವಾದ ಛಳಿಜ್ವರವಾದರೂ 3 ತಾಸಿನಲ್ಲಿ ಖಂಡಿತವಾಗಿ ನಿಲ್ಲುತ್ತದೆ. ನಮ್ಮ ವಿಳಾಸ ಚೆನ್ನಾಗಿರಲಿ

[28-1] ನಮ್ಮ ವಿಳಾಸ ...ನಾರಾಯಣರಾವ್, ಬಳ್ಳಾರಿ.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನೆಂದರೆ—

ಮೈಸೂರು ಸಿಟಿ ಮ್ಯುನಿಸಿಪಾಲಿಟಿಗೆ ಸುಟ್ಟ ಇಟ್ಟಿಗೆಗಳು ಸಪ್ಲೈಯಾಗಬೇಕಾಗಿರುವದರಿಂದ ಸದರಿ ಇಟ್ಟಿಗೆಗಳನ್ನು ಸಪ್ಲೈ ಮಾಡುವಂಥವರು ಯಾವ ದರದ ಮೇರೆ ಸಪ್ಲೈ ಮಾಡುವರೆಂಬ ಅಂಶವನ್ನು ಇದೇ ಇಸವಿ ಫೆಬ್ರವರಿ ಮಾಹೆ ತಾರೀಖು 10 ರ ಒಳಗಾಗಿ ಸಿಟಿ ಮ್ಯುನಿಸಿಪಲ್ ಇಂಜನಿಯರ್ ಸಾಹೇಬರವರ ಆಫೀಸಿಗೆ ಟೆಂಡರನ್ನು ಕೊಡತಕ್ಕದ್ದೆಂದು ತಿಳಿಯಪಡಿಸಿರುತ್ತೆ. [27-1]

ಮೈಸೂರು, 28-1-16

E. Ramaswamy Iyer.
Municipal Engineer

ಬ್ಯಾರರ್ಸ್ ಮೆಡಿಕೇಟೆಡ್ ಪರಿಮಳ ನಶ್ಯದಪುಡಿ.

ಈ ಅದು ತಹಾದ ಪರಿಮಳ ನಶ್ಯದ ಪುಡಿಯನ್ನು ಉಪಯೋಗಿಸುವದರಿಂದ ಪೀನಸ, ತಲೆನೋವು, ನೆಗಡಿ, ಒಂದು ಒಂಟಿ ತಲೆನೋವು, ಜಲದೋಷ,

ಭಾರ, ಕಣ್ಣು ನೋವು, ಕಣ್ಣುರಿ, ಕಣ್ಣು ಕೆಂಪಗಾಗುವಿಕೆ ವೊದಲಾದ ಅನೇಕ ವಿಧ ವ್ಯಾಧಿಗಳನ್ನು ಹೋಗಲಾಡಿಸಿ ಚುರುಕುತನವನ್ನೂ, ಮನಸ್ಸಿಗೆ ಉಲ್ಲಾಸವನ್ನೂ ಕೊಟ್ಟು ಸದಾ ಆನಂದವನ್ನುಂಟುಮಾಡುತ್ತದೆ. ಅನೇಕ ಸಾರಿ ಇದನ್ನು ಹಾಕುವವರು ಇದನ್ನು ಒಂದು ಸಾರಿ ಹಾಕಿದರೆ ಸಾಕು. ಈ ನಶ್ಯವನ್ನು ಇದರ ನಲ್ಲಿ ಒಂದು ಚಿಟಿಕೆ ಹಾಕಿ ಕೆಲಸದ ಸಮಯದಲ್ಲಿ ಸುವಾಸನೆಯಾಗುತ್ತೆ. ಕ್ರಯ ಚಿಕ್ಕ ಡಬ್ಬಿಗೆ 3 ಆಣೆ. 1 ಡಜನ್ 12 ಡಬ್ಬಿಗೆ 2 ರೂಪಾಯಿ. 1 ನೇ ನಂಬರ್ ಶೀಷೆ ಡಜನ್‌ಗೆ 8 ಆಣೆ. 2 ನೇ ನಂಬರ್ ಶೀಷೆ ಡಜನ್ 5 ಆಣೆ. 3 ನೇ ನಂಬರ್ ಶೀಷೆ ಡಜನ್‌ಗೆ 3 ಆಣೆ. 9 ತೊಲೆ ಹಿಡಿಯುವ ದೊಡ್ಡ ನಶ್ಯದ ಡಬ್ಬಿಗೆ 11 ಆಣೆ. ಉತ್ತಮವಾದ ಮತ್ತು ಧ್ವಾಹಾರ ಮರದ ನಶ್ಯದ ಪುಡಿ 24 ರೂಪಾಯಿ ತೂಕದ ಸೇರಿಗೆ 10 ಆಣೆ. ಇದು ಪ್ರಸಿದ್ಧವಾದ ಉದ್ಘಟ ಪರಿಮಳ ನಶ್ಯವನ್ನು 1 ರೂಪಾಯಿಗೆ ಕಮ್ಮಿ ಇಲ್ಲದೆ ತರಿಸುವವರಿಗೆ ಪ್ರತಿ ಅಹಮದಾಬಾದ್ ಕೈ ವಸ್ತ್ರ ಒಂದನ್ನು ಉಚಿತವಾಗಿ ಕೊಡುತ್ತೇವೆ.

[30-1] ವಿಳಾಸ—ಬ್ಯಾರರ್ ಕಂಪೆನಿ, ಪಾರ್ಕ್ ಟವನ್, ಮದರಾಸು

ಸ್ತ್ರೀಯರಿಗೆ ವರಪ್ರದಾನ.

- ಮಹಂಕಾಳಭಗ ಅಥವಾ ದೊಡ್ಡ ಮಾರಿಯಾಗಿಯೂ ಚನ್ನಾಗಿಯೂ ರೋಗವನ್ನು ಹರಿಸುವ ಉಪಾಯವು ಮನೆ ನಮ್ಮ ಸ್ತ್ರೀಯರು ಸಾಮಾನ್ಯವಾಗಿ ತುಂಬಾ ಕಳವಳ ಪಡುತ್ತಾರೆ. ನಾವು ಕಂಡು ಹಿಡಿದಿರುವದು ಸಾಮಾನ್ಯವಾದದ್ದಲ್ಲ. ಉತ್ತಮ ಕ್ರಮವಾದದ್ದು. ಉಪಯೋಗದ ವಿಧಾನ—ನಮ್ಮ ಭಸ್ಮದ ಒಂದು ಚಿಟಿಕೆ ತೆಗೆದುಕೊಂಡು ನೀರಿನಲ್ಲಿ ಗಟ್ಟಿಯಾಗಿ ಕಲಸಿ ಅವಶ್ಯಕವಾದ ಭಾಗಕ್ಕೆ ಹಚ್ಚಬೇಕು. ಬಹಳ ಸ್ವಲ್ಪ ಹೊತ್ತಿನೊಳಗಾಗಿ ಆಶ್ಚರ್ಯಪಡುವಂತೆ ಆ ಭಾಗಗಳಲ್ಲಿರುವ ಕೂದಲು ಉದುರಿಹೋಗುತ್ತೆ. ಚರ್ಮದ ಮೇಲೆ ಸ್ವಲ್ಪವೂ ಕಲೆ ನಿಲ್ಲುವದಿಲ್ಲ. ಕ್ರಯ 0-11-0; ವಿ. ಪಿ. ಚಾರ್ಜಿ ಬೇರೆ

ಸೊಗಸಾದ ಎಲೆಕ್ಟ್ರೋ ಪ್ಲೇಟ್ ಬಲವಾದ ಕಂಠಸರ ಗೆಜ್ಜೆ ಅಡ್ಡಿಗೆ ಇದು ಚಿನ್ನದಂತೆ ಹೊಳೆಯುವ ರಿಗಾಗಲಿ ಚಿಕ್ಕವರಿಗಾಗಲಿ ಶೋಭಾಯಮಾನವಾಗಿರುತ್ತೆ. ಕ್ರಯ 0-12-0 ವಿ. ಪಿ. ಬೇರೆ

ನಮ್ಮ ವಿಳಾಸ- ಎಸ್. ನರಸಿಂಹನಾಯುಡು

[21-1] ತಿರುವಲ್ಲಿಕ್ಕೇಣಿ, ಮದರಾಸು

ESANOFELE

ಮಲೇರಿಯಾ ಜ್ವರವನ್ನು

ಖಚಿತವಾಗಿಯೂ ನಾಶಮಾಡುವುದರಲ್ಲಿ ಖ್ಯಾತಿ ಹೊಂದಿದ

"ಈಸಾನೋಫೆಲಿ"ಯನ್ನು

ಕೆಲವು ಆಕಾರಗಳನ್ನು ಇಟ್ಟುಕೊಂಡಿರುವ ಪಿಲ್ಸ್, ಟೀ, ಕಾಫಿ ಕೋಟುಗಳ ಮಾಲೀಕರುಗಳೆಲ್ಲಾ ತರಿಸಿ ತಮ್ಮ ಬಳಿ ಇಟ್ಟುಕೊಳ್ಳಬೇಕು. ಮಾಂಸವಾದುವುದರಲ್ಲಿ ಅದರ ಗುಣವು ಬಹಳ ಸರಾಸರಿ, ಭಯಪಡಲ್ಲದು. ಅದು ಬಹಳ ಬೇಗನೆ ಜ್ವರವನ್ನು ಇಳಿಸಿ ಹೊಟ್ಟೆಯೊಳಗಣ ಗಡ್ಡೆಯನ್ನು ಕರಗಿಸಿ, 15 ದಿನಗಳಲ್ಲಿ ಸಂಪೂರ್ಣವಾಗಿ ನಾಶಮಾಡಬಲ್ಲದು

ಬೆಳಗ್ಗೆ ಮತ್ತು ರಾತ್ರಿ ಒಂದೊಂದು ಮಾತ್ರೆಯನ್ನು ಸೇವಿಸುತ್ತಾ ಬಂದ ಪಕ್ಷದಲ್ಲಿ ಮಲೇರಿಯಾ ಜ್ವರ ಬಾರದಂತೆ ಸಂರಕ್ಷಣೆ ಮಾಡುತ್ತದೆ

ಕ್ರಯ 1 ಬಾಟ್ಲಿಗೆ ರೂ. 2-0-0. ಎಲ್ಲಾ ಔಷಧ ವ್ಯಾಪಾರದ ಅಂಗಡಿಗಳಲ್ಲೂ ಬಿಕರಿಗೆ ಇಟ್ಟಿದೇವೆ. ದೊಡ್ಡವರಿಗಾಗಲಿ, ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೋಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ. ಇದು ಸಕ್ಕರೆಯಿಂದ ಮಾಡಿ ಇದ್ದು ಸೇವನೆಗೆ ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜಂಟರು :- ಜಿ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗಳಲ್ಲಿ ಡಿಸ್ಟ್ರಿ— [176-22]

ಜಿ. ಬಿ. ಗೋರಿಯೋ ಕಂಪನಿ, ಪಾಲೆನ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು :—

ಫೆಲಿನ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಜನವರಿ 20 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮಾ—(1) ಷೇರು ಮೊಬಲಗು	ರೂ.	10,00,000
(2) ರಿಜರ್ವ್ ಫಂಡು	,,	50,000
(3) ಡಿಪಾಸಿಟ್ಟುಗಳು	,,	40,54,067
(4) ಇತರೆ	,,	88,910
(ಅತಿ ಶಾಖ ಬಿಟ್ಟಿರುತ್ತೆ.) ಜುಮ್ಲಾ	ರೂ.	51,92,927

ಖರ್ಚು—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	9,73,072
(2) ಖಾತೆ ಮತ್ತು ಇತರ ಸಾಲಗಳು	,,	29,92,858
(3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	4,38,932
(4) ಇನ್ವೆಸ್ಟ್‌ಮೆಂಟುಗಳು	,,	7,55,852
(5) ಬಿಲ್ಡಿಂಗುಗಳಲ್ಲಿರುವ ಮೊಬಲಗು	,,	9,080
(6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	15,995
(7) ಇತರೆ	,,	7,138
(ಅತಿ, ಶಾಖ ಬಿಟ್ಟಿರುತ್ತೆ.) ಜುಮ್ಲಾ	ರೂ.	51,92,927

ಪಿ. ರಾಮಸ್ವಾಮಯ್ಯ, ಆ : ಮ್ಯಾನೇಜರ್.

ವ್ಯವಸಾಯ ಸುಧಾರಣೆಯ ಮೇಲೆ ಒಬ್ಬ ಪ್ರಸಿದ್ಧ ಜೇಸಾಯಗಾರರ ಬೋಧಪ್ರದವಾದ ಭಾಷಣ.

ಮೈಸೂರು ಸೀಮೆಯ ತಾಲ್ಲೋಕು ಬೆಂಬಲಕಟ್ಟೆಯಲ್ಲಿ ನಡೆದ ವ್ಯವಸಾಯ ದನಗಳ ಪ್ರದರ್ಶನದ ಸಂಬಂಧದಲ್ಲಿ ಗೌರ್ನಮೆಂಟಿನವರು ನಡಿಸಿದ ಅಗ್ರಿಕಲ್ಚರಲ್ ಕಾನ್ಫರೆನ್ಸಿನ ಸಂಬಂಧವಾದ ಸಭೆಗೆ ನಮ್ಮ ಸರ್ಕಾರದ ಎಲ್ಲಾ ಡಿಪಾರ್ಟುಮೆಂಟಿನ ಮುಖ್ಯಮುಖ್ಯವಾದ ಅಧಿಕಾರಿಗಳೂ, ಆ ಪ್ರಾಂತ್ಯದ ಅನೇಕ ಮುಖ್ಯ ರೈತರೂ ಮತ್ತು ವೃದ್ಧಾಪ್ಯಕಾಲದಲ್ಲಿ ಕೂಡ ದೇಶ ಸೇವೆಯನ್ನು ಬಹು ಉತ್ಸಾಹದಿಂದ ಈಗಲೂ ಮಾಡುತ್ತಲಿರುವ ದೇಶಮಾನ್ಯರಾದ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮೆಂಬರಾದ ಮ॥ ವೆಂಕಟಕೃಷ್ಣಯ್ಯನವರೂ ಕೂಡ ದಯಮಾಡಿಸಿದ್ದರು. ಆಗ್ಗೆ ಈ ಸಭೆಯ ಅಗ್ರಾಸನವನ್ನು ನಮ್ಮ ಡೈರೆಕ್ಟರ್ ಆಫ್ ಅಗ್ರಿಕಲ್ಚರಾದ ರಾಜಸಭಾ ಭೂಷಣ ಮ॥ ಕಸ್ತೂರಿ ರಂಗಾಚಾರ್ಯರವರು ಅಲಂಕರಿಸಿದ್ದರು. ಅಲ್ಲಿ ಸೇರಿದ್ದ ರೈತರೆಲ್ಲರಿಗೂ ವ್ಯವಸಾಯದ ಮೇಲೆ ಸುಧಾರಣೆಯನ್ನು ತಿಳಿಸುತ್ತಿರುವವರ ಕಾಲವಾಗಿ ಗೌರ್ನಮೆಂಟಿನಿಂದ ಬರಮಾಡಲ್ಪಟ್ಟ ಶ್ರೀರಂಗಪಟ್ಟಣದ ಜವಳಿ ವ್ಯಾಪಾರಿಗಳಾದ ಮ॥ ರಾ॥ ಸ್ವಾಮಿಗಳು ದೇವರವರು ನಮ್ಮ ರೈತರು ಮಾಡುತ್ತಲಿರುವ ವ್ಯವಸಾಯದ ಕ್ರಮಗಳಲ್ಲಿರುವ ಅನಿಷ್ಟಗಳನ್ನೂ, ಅವರ ಶೋಚನೀಯವಾದ ಹೀನಸ್ಥಿತಿಗಳನ್ನು ಮತ್ತು ಇವರ ಮೇಲ್ಮೆಗಾಗಿ ಇವರು ಅತ್ಯವಶ್ಯಕವಾಗಿ ತಾವಾಗಿಯೇ ಅವಲಂಬಿಸಬೇಕಾಗಿರುವ ಅನೇಕಾನೇಕ ಅಮೌಲ್ಯವಾದ ಸುಧಾರಣೆಯ ಸಂಗತಿಗಳನ್ನೂ, ಪಾಶ್ಚಾತ್ಯ ದೇಶಗಳಲ್ಲಿ ಈ ಕಸಬು ಹೊಂದಿರುವ ಉಚ್ಛ್ರಾಯಸ್ಥಿತಿಯನ್ನು ಪ್ರಾಮುಖ್ಯವಾಗಿ ಇವರ ಬುದ್ಧಿಗಳಿಗೆ ಸಮಂಜಸವಾಗುವಂತೆ ಹೋಲಿಸಿ, ಬಹು ಸೂಕ್ಷ್ಮವಾಗಿ ವಿವರಿಸಿ ಬೋಧಿಸಿದ್ದಲ್ಲದೆ ನಮ್ಮ ರೈತರನ್ನು ಉದ್ಧರಿಸುವವರ ಸುಲಭ ಮಾರ್ಗವನ್ನು ನಮ್ಮ ದಯಾಳು ಸರ್ಕಾರದವರು ಕಲ್ಪಿಸಿಕೊಡಬೇಕಾಗಿರುವ ಉದಾರವಾದ ಅನೇಕ ಸಲಹೆಗಳನ್ನು ಕೂಡ ಯುಕ್ತಿಯುಕ್ತವಾಗಿ ಇವರು ಸೂಚಿಸಿದರು. ಇದೂ ಅಲ್ಲದೆ ನಮ್ಮ ಈ ಪವಿತ್ರವಾದ ಬೇಸಾಯದ ಕಸಬೇ ನಮ್ಮೆಲ್ಲರ ಜೀವನಾಧಾರ, ಜನಾಂಗದ ಭಾಗ್ಯೋದಯಕ್ಕೂ, ದೇಶದ ಏಳಿಗೆಗೂ ಮೂಲಕಾರಣವಾಗುವದರಿಂದ ಎಲ್ಲದಕ್ಕಿಂತಲೂ ಅತಿಶಯವಾಗಿ ಈ ಕಸಬಿನ ಅಭಿವೃದ್ಧಿಗೆ ದಯಾಳು ಗೌರ್ನಮೆಂಟಿನವರೂ ಮತ್ತು ಜನಾಂಗದವರೆಲ್ಲರೂ ಸಹ ಲಕ್ಷ್ಯವನ್ನು ಕೊಟ್ಟೇ ತೀರಬೇಕೆಂಬುವ ಬಹು ಮುಖ್ಯವಾದ ಸಂಗತಿಯನ್ನು ಅನೇಕ ಮಹನೀಯರು ಇದುವರೆವಿಗೆ ಈ ವಿಷಯದಲ್ಲಿ ಅಪ್ಪಣೆ ಕೊಡಿಸಿದ ದೊಡ್ಡ ದೊಡ್ಡ ಆಧಾರಗಳು ಅಂದರೆ ಹಿತೋಪದೇಶದ ಉಕ್ತಿಗಳನ್ನು ಉದಾಹರಿಸುತ್ತಾ ಈ ಸಭೆಯಲ್ಲಿ ಸೇರಿದ್ದ ರೈತರೆಲ್ಲರ ಮನಸ್ಸಿಗೆ ಚೆನ್ನಾಗಿ ಅವರಲ್ಲಿ ಜ್ಞಾನೋದಯವುಂಟಾಗುವಂತೆಯೂ, ನಮ್ಮನ್ನಾಳುವ ರಾಜ ಪ್ರಭುಗಳ ಚಿತ್ತವೆಲ್ಲವೂ ಕರಗಿ ನೀರಾಗುವಂತೆಯೂ ಸಹ ಮ॥ ದೇವರವರು ಎರಡು ಘಂಟೆಯ ಪರ್ಯಂತರವೂ ಬಹು ಸ್ವಾರಸ್ಯವಾದ ಮತ್ತು ಬೋಧಪ್ರದವಾದ ಉಪನ್ಯಾಸವನ್ನು ಮಾಡಿ ಸಭೆಯವರೆಲ್ಲರ ಮನಸ್ಸನ್ನು ಆನಂದಗೊಳಿಸಿ ಬಹು ಪ್ರಶಂಸೆಗೆ ಪಾತ್ರರಾದರು.

ಅನಂತರ ಸಭೆಯ ಅಧ್ಯಕ್ಷರ ಅಪೇಕ್ಷೆಯಾದ ಭಾಷಣದಲ್ಲಿ ಮ॥ ದೇವರವರ ಉಪನ್ಯಾಸವನ್ನು ಚೆನ್ನಾಗಿ ಕೊಂಡಾಡಿ ಈಗ ಹಿಂದುಗಳಿರುವ ಇತರ ರೈತರೆಲ್ಲರೂ ಇವರನ್ನು ಹಿಂಬಾಲಿಸಿ ತನ್ಮೂಲಕ ಹೆಚ್ಚಿನ ಸಂಪತ್ತನ್ನು ಅವರ ಕಸಬಿನಲ್ಲಿ ಪಡೆಯಬೇಕೆಂತಲೂ, ಮತ್ತು ವಯೋವೃದ್ಧರೂ, ಜ್ಞಾನವೃದ್ಧರೂ ಮತ್ತು ದೇಶಮಾನ್ಯರೂ ಆದ ಮ॥ ವೆಂಕಟಕೃಷ್ಣಯ್ಯನವರು ಹಿತವಚನಗಳಿಂದ ಕೂಡಿದ ಭಾಷಣದಲ್ಲಿ ಬುದ್ಧಿವಂತ ರೈತರಾದ ಮತ್ತು ರೈತಪ್ರಜೆಗಳ ಸೇವೆಯನ್ನು ಮಾಡುತ್ತಿರುವ ಈಗ ಹತ್ತಿರದಲ್ಲಿರುವ ಮ॥ ದೇವರವರು ಈಗ ಸೂಚಿಸಿದ ಅಮೌಲ್ಯವಾದ ಸಲಹೆಗಳಂತೆ ನಮ್ಮ ರೈತರೆಲ್ಲರೂ ಕಾರ್ಯಕ್ಕೆ ಆಚರಣೆಗೆ ತಂದು, ಅಭಿವೃದ್ಧಿಯನ್ನು ಹೊಂದಿ ತನ್ಮೂಲಕ ನಮ್ಮ ರಾಜ್ಯದ ಸಂಪತ್ತನ್ನು ಹೆಚ್ಚಿಸಿ ನಮ್ಮನ್ನಾಳುವ ಘನವನ್ನು ಹೊಂದಿದ ದಯಾಳು ಶ್ರೀಮನ್ಮಹಾರಾಜರವರ ಅಪೇಕ್ಷೆಯನ್ನು ಎಲ್ಲರೂ ಸೇರಿ ನೆರವೇರಿಸಬೇಕೆಂದು ಸಭೆಯಲ್ಲಿ ಬುದ್ಧಿವಾದಗಳನ್ನು ಅಪ್ಪಣೆ ಕೊಡಿಸಿದರು. ಅನಂತರ ಸಭೆಯು ಮುಗಿಯುವ ಕಾಲದಲ್ಲಿ ಅಧ್ಯಕ್ಷರು ಅವರೂ ಎಲ್ಲಾ ಅಧಿಕಾರಸ್ಥರೂ ಮತ್ತು ರೈತರ ಮುಂದೆ ಮ॥ ದೇವರವರ ಭಾಷಣವನ್ನು ಕೇಳುವದರಿಂದ ತಮಗೆ ಉಂಟಾದ ಆನಂದವನ್ನು ಅವರಿಗೆ ವ್ಯಕ್ತಪಡಿಸಿದರು. ಮತ್ತು ಆ ಸಭೆಯಲ್ಲಿ ಸೇರಿದ್ದ ರೈತಪ್ರಮುಖರೆಲ್ಲಾ ಉಪನ್ಯಾಸಕರು ಮಾಡಿದ ಬೋಧಪ್ರದವಾದ ಉಪನ್ಯಾಸದ ಕಾಪಿಗಳನ್ನು ತಮಗೆ ದಯಪಾಲಿಸಿ ಕೊಡಿಸಬೇಕೆಂದು ಅಧ್ಯಕ್ಷರನ್ನು ಕೇಳಿಕೊಂಡರು. ಅದಕ್ಕೆ ಉಪನ್ಯಾಸಕರು ಇದುವರೆವಿಗೆ ರೈತರ ಸೇವೆಯನ್ನು ಮಾಡುವದರ ಸಲುವಾಗಿ ಹೇಮಗಿರಿ, ಹರಿಹರ, ಹೊನ್ನಾಳಿ, ದಾವಣಗೆರೆ, ಚಿತ್ರದುರ್ಗ ಮೊದಲಾದ ಅನೇಕ ಸ್ಥಳಗಳಲ್ಲಿ ತಾವು ಉಪನ್ಯಾಸ ಮಾಡಿದಾಗ್ಗೆ ಅಲ್ಲಿ ನೆರೆದಿದ್ದ ಅನೇಕ ಪ್ರಮುಖ ರೈತರೂ ಕೂಡ ಉಪನ್ಯಾಸದ ಕಾಪಿಗಳನ್ನು ಕಳುಹಿಸಿಕೊಡಬೇಕೆಂದು ಅಪೇಕ್ಷಿಸಿರುವದರಿಂದ ನಿಮ್ಮೆಲ್ಲರ ಅಪೇಕ್ಷೆಯ ಮೇರೆ ತಾವೇ ಪ್ರಿಂಟುಮಾಡಿ ಕೇಳಿದವರಿಗೆ ಕ್ಷಿಪ್ರದಲ್ಲೇ ಹಂಚುವದಲ್ಲದೆ, ತಮ್ಮ ಸೇವೆಯನ್ನು ಪ್ರತ್ಯಕ್ಷವಾಗಿ ಇನ್ನೂ ಯಾವತ್ತೂ ರೈತರಿಗೆ ಬೇಕಾದರೂ ತಕ್ಕ ವ್ಯವಸಾಯದ ಸುಧಾರಣೆಗೆ ಬೇಕಾಗುವದಕ್ಕೆ ತಾವು ಯಾವಾಗಲೂ ಕಟಿಬದ್ಧರಾಗಿ ಈ ವಿಧದಲ್ಲಿ ಉಪಕಾರಿಗಳಾದ ರೈತಪ್ರಜೆಗಳ ಸೇವೆಯನ್ನು ಬಹು ಸಂತೋಷದಿಂದ ತಾವು ಯಾವಾಗಲೂ ಸಿದ್ಧವಾಗಿರುತ್ತೇವೆ ಎಂದು ಸಭೆಯಲ್ಲಿ ಸಾರಿ ಇದರಿಂದ ಅಪ್ರಾರ್ಥಿತವಾಗಿ ನಮ್ಮ ರೈತರ ಭಾಗ್ಯೋದಯದಿಂದ ನಮಗೆ ಲಭ್ಯವಾಗಿರುವ ನಿಪುಣರೈತರಾದ ಮತ್ತು ನಮ್ಮ ರೈತರ ಹಿತೈಷಿಗಳಾದ ಮ॥ ದೇವರವರ ಪರಿಶ್ರಮವನ್ನು ಅಂದರೆ ಇತರ ಪ್ರಾಂತ್ಯದ ರೈತರು ಸಹ ಉಪಯೋಗಿಸಿಕೊಳ್ಳಬೇಕಾಗಿ ತಪ್ಪದೆ ತೆಗೆದುಕೊಳ್ಳುತ್ತಿರುವ

ಪ್ರಜಾಪ್ರತಿನಿಧಿ ಸಭೆಯ ಒಬ್ಬ ಮೆಂಬರು

ಸುಲೋಚನಗಳು.

ಎಲ್ಲರಿಗೂ ಬೇಕಾದದ್ದು. ಎಲ್ಲರ ನೇತ್ರದೃಷ್ಟಿಯನ್ನೂ ಚೆನ್ನಾಗಿ ಪರೀಕ್ಷಿಸಿ ಉತ್ತಮ ತರತರ ಸುಲೋಚನಗಳನ್ನೇ ಕೊಡತಕ್ಕದ್ದು. ನಮ್ಮ ಚಂದ್ರಕಾಂತ ಮತ್ತು ಇತರ ತರತರ ಸುಲೋಚನಗಳು ಈಗಾಗಲೇ ಬಹು ಜನರ ಉಪಯೋಗದಲ್ಲಿವೆ. ನಮ್ಮ ಬಾಚಿ ಮಂಡಿತ ಸುಲೋಚನಗಳು ದಿನಂಕ ಪ್ರಖ್ಯಾತವಾದವು. ಬೆಲೆ ಸುಲಭ.

ನಮ್ಮ ವಿಳಾಸ :—ಎಸ್. ಎನ್. ರಾಮರಾವ್ ಸನ್ಸ್,
[249-13] ಕೋಟೆ ಬಾಗಲು, ಬೆಂಗಳೂರು ಸಿಟಿ.

ನಿನಗೆ ಮೈ ಸ್ವಸ್ಥವಿಲ್ಲವೋ ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ನೋವೇ ಉಂಟಾಗಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ ? ಎಂದು ನಿನ್ನನ್ನು ನೀನೇ ಕೇಳಿಕೋ ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಲಭವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳಲ್ಲಿ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತಕೋಶದ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ, ಅಗ್ನಿಮಾಂದ್ಯ; ಗಾಬರಿ; ಅಶಕ್ತಿ ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ ಮಲಕ್ಕೆಗಿನ ಹೊಟ್ಟೆನೋವು; ಚರ್ಮದ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟು ಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ನಂಜಿನಿಂದಾಗಲಿ ಹೇಸಿಗೆಯಿಂದಾಗಲಿ ಮಾಳ್ಕೆಗಳಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಸುಖವಾಗಿಯೂ ಹಿತವಾಗಿಯೂ ಇಟ್ಟು ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [176-23]

ಬೆಲೆ ೪ ಆಣೆ, ೭ ಆಣೆ ಮತ್ತು ೧೨ ಆಣೆ ೧೩ ಆಣೆ. ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು ; ಅಥವಾ ಡೋನ್. ಪಿ. ಒ. ಬಾಕ್ಸ್ ೫೦, ಬೊಂಬಾಯಿ—ಇವರಲ್ಲಿ ದೊರೆಯುವದು. [9-1]

ಮೋಸ ಹೋಗಬೇಡಿ ! ಮೋಸ ಹೋಗಬೇಡಿ !!

ನಮ್ಮ ಕಂಪನಿಯು ಕಳೆದ ನಾಲ್ಕು ವರುಷಗಳಿಂದಲೂ ಹೆಸರುವಾಸಿ ಪಡೆದಿದೆ. ಪ್ರತಿ ದಿನವೂ ಹೈದ್ರಬಾದ್, ಮದ್ರಾಸ್, ಬೊಂಬೈ, ಕಲ್ಕತ್ತಾ, ರಂಗೂನ್, ಬರ್ಮಾ, ಕೊಲಂಬೊ, ಸಿಲೋನ್, ಪೆನ್ಯಾಂಗ್ ಮುಂತಾದ ದೇಶಗಳಿಂದ ನಮಗೆ ಆರ್ಡರುಗಳು ಬರುತ್ತಲಿವೆ. ಬಹಳ ಜನಗಳು ನಮ್ಮ ಕಂಪನಿಯ ಔಷಧವನ್ನು ಉಪಯೋಗಿಸಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟಿರುವರು. ಕೇಳಾದವರು ನಮ್ಮ ಕಂಪನಿಗೆ ಬಂದು ಮೋಸ ಹೋದರು.—ಕೆಲವರು ನಮ್ಮ ಕಂಪನಿಯ ಹೆಸರನ್ನು ಹೇಳಿ ಜನಗಳಿಗೆ ನಕಲಿ ಮಾಲುಗಳನ್ನು ಕೊಟ್ಟು ಮೋಸಪಡಿಸುತ್ತಿರುವರು. ಆದ್ದರಿಂದ ನಮ್ಮ ಭಾಂಗಿಯನ್ನು ತೆಗೆದುಕೊಳ್ಳುವಾಗ "ಡಿ. ಮುನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯು ರೋಡ್, ಬೆಂಗಳೂರು ಸಿಟಿ" ಎಂದು ಮತ್ತು ನಿಮ್ಮ ಕಣ್ಣಿನ ಎದುರಿನಲ್ಲಿ ಕಾಣುತ್ತಿರುವ ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಆಗಿರುವ ಟ್ರೇಡ್ ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿರಿ ಹಾಗೆ ನೋಡಿ ತೆಗೆದುಕೊಳ್ಳದೆ ಹೋದರೆ ಮೋಸ ಹೋಗುವಿರಿ ಎಂದು ಡಂಗೂರ ಹೊಡೆದು ಹೇಳುವೆವು.

1000 ರೂ. ಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

Registered.

ಈ "ಸಾಲಾಮಿಸ್ರಿ ಮುರಬ್ಬಾ" ವಿನ ಸೇವನೆಯಿಂದ ಮೂತ್ರಕೋಶ ಸಂಬಂಧದಿಂದ ಉಂಟಾದ ಎಲ್ಲಾ ವ್ಯಾಧಿಗಳನ್ನೂ ಗುಣವಾಗುವುದು. ಮತ್ತು ಕೈಗಾಲು, ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತ ಕೆಟ್ಟುಹೋಗಿದ್ದರೂ ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಮಿಸ್ರಿಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ 1000 ರೂಪಾಯಿ ಬಹುಮಾನ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ ಡಬ್ಬಿ 1 ಕ್ಕೆ 2-0-0. ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ 0-6-0. ಕೇಟಲಾಗು ಅಪೇಕ್ಷಿಸುವವರಿಗೆ ಪುಕಟ್ಟೆ ಕಳಿಸುವೆವು.

ನಮ್ಮ ವಿಳಾಸ : ಡಿ. ಮುನ್ನಾಲಾಲ್, ಡಿಲ್ಲಿ ವೈದ್ಯರು,
5 ಅವೆನ್ಯು ರೋಡ್, ಬೆಂಗಳೂರು ಸಿಟಿ.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ॥ 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿಯ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇಲ್ಲದಿದ್ದರೆ ವಿ. ಪಿ. ಖರ್ಚು ಸೇರಿ 4 ಆಣೆ ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5 4-0.

ಶ್ರಾವಣ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-41]

ಅಮೃತಾಂಜನ ಡಿಪೋ,

109, ಫ್ರೇರ್ ರೋಡ್, ಬೊಂಬಾಯಿ. 6 ತಂಬುಚೆಟ್ಟಿಬೀದಿ, ಮದ್ರಾಸ್.

ಜ್ಞಾ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಸಿಗುತಾಗಿವೆ ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ ?

ಆಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ ಜಾಹಿರಾತ್ ಕೊಡುತ್ತಿರುವುದು 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳೆಕೊಂಡ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಆಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಗಮಾಲೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾಣುವಂಥಾದ್ದು ಆಟೋ ಮೋಹಿನಿಯೇ.

ಕ್ರಯ 1 ಬಾಟ್ಲಿಗೆ ರೂ. 1-0-0
,, 3 ,, ,, 2-10-0.

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ	ರೂ.	2—0—0
¼ ,, ,,	—	0—8—0
1 ಡ್ರಾಮ್ ಕೊಳವೆ	,,	0—12—0
ಕಾರ್ಡು ಬೋರ್ಡಿಗೆ	.....	0—12—0

ಕೂದಲನ್ನು ಬೆಳೆಸುವುದರಲ್ಲಿ ನಿಮಗೆ ಇಷ್ಟವುಂಟೇ ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳೆಸುವಂಥಾದ್ದು. ಕಣ್ಣು ಮತ್ತು ಮಿದುಳಿಗೆ ತಂಪನ್ನು ಕೊಡಬಲ್ಲುದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇವೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಜಾಹಿರಾತ್ ಕೊಟ್ಟಿರುವುದುಂಟೇ ? ಇದೊಂದು ದೃಷ್ಟಾಂತವೇ ಸಾಕಾಗಿದೆ [282-7]

ಸೋಲ್ ಏಜಂಟರು—ಷಾ ಭಗವಾನ್‌ದಾಸ್ ಚುನಿಲಾಲ್ ಕಂಪನಿ,
177, ಚೈನಾಬಜಾರ್ ರೋಡ್, ಮದರಾಸು.

ರಿಜಿಸ್ಟರ್ಡ್ ಸುಪೀರಿಯರ್ ಲೀವರ್ ಜೂಬಿಲೀ ವಾಚು.

ಕ್ರಯ ಸರಪಣಿ ಸಹಿತ 5 ವರುಷಗಳ ವಿ. ಪಿ. ಚಾರ್ಜು
ರೂ. 3-0-0. ಗ್ಯಾರಂಟಿ. 4 ಆಣೆ.

ಇದು ಸರ್ಕಾರಕ್ಕೆ ಪ್ರತ್ಯೇಕವಾಗಿ ರಿಜಿಸ್ಟರಾಗಿದೆ. ಇದು ಒಳ್ಳೇ ಮಜಬೂತಾಗಿಯೂ, ಚಕ್ರಗಳೆಲ್ಲ ಕೆಂಪುಗಳು ಕೆತ್ತಲ್ಪಟ್ಟು ಗಿಲ್ಟು ಮಾಡಲ್ಪಟ್ಟು ಮತ್ತು ಹಿಂಭಾಗದಲ್ಲಿ ಗ್ಲಾಸು ಹೊಂದಿರುತ್ತದೆ. ಇದರ ಹಿಂಭಾಗದಲ್ಲಿ ಸಿಂಹದ ಚಿಹ್ನೆ ಇರುವದು. ಇದೇ ನಮ್ಮ ಟ್ರೇಡು ಮಾರ್ಕು. ಇದು ಕಾಲವನ್ನು ಸರಿಯಾಗಿ ತೋರಿಸುವದು. ಈ ಗಡಿಯಾರದಿಂದ ಪ್ರಯೋಜನವಿಲ್ಲ. ಉಪಯೋಗದಲ್ಲಿ ನೋಡಬಹುದು. ತಕ್ಷಣ ಒಂದನ್ನು ತರಿಸಿಕೊಂಡು ಪರೀಕ್ಷಿಸಿ. ಇದರ ಪೆಟ್ಟಿಗೆ ಮೇಲೆ ಕೆಳಕಂಡ ನಮ್ಮ ಕಂಪನಿ ಹೆಸರು ಗಿಲ್ಟು ಅಕ್ಷರಗಳಿಂದ ಹಾಕಲ್ಪಟ್ಟಿರುವದು.

ನಮ್ಮ ವಿಳಾಸ :—ಸುಪೀರಿಯರ್ ವಾಚ್ ಕಂಪೆನಿ,
[260-10] ಪೋಸ್ಟು ಬಾಕ್ಸು 167, ಮದರಾಸ್.

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು ; ಎಂಜಲ್‌ಬರ್ಗ್ ಹಲ್ಲರುಗಳ ಟಿಲ್ಲರಿ ಸಾಮಾನುಗಳು ; ಎಂಜಲ್‌ಬರ್ಗ್ ಸಿಸ್ಟಮ್ ಹಲ್ಲರುಗಳು ನಂ. 1 ಮತ್ತು 2; ಡೇವಿ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳು, ಬಾಯಿಲರ್‌ಗಳು; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಫೈರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು ; ಬಲ್ಲದ ರೀಲುಗಳು; ಅಕ್ಕಿ, ಲಿಯೂ ದೇಶದ ಪಾಟು ಇದ್ದಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟಿ ಕೊಡಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ. [208-17]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪೆನಿ, ಮದ್ರಾಸ್.
The Indian Commerce & Industries Co., Madras.
Branches—Bezwada and Tanjore.

ಧರ್ಮಸಮಾವಯ, ಕಲ್ಕತ್ತಾ.

ನಿರ್ಧಾಲ್ಟ ಮೂಲಧನ—ರೂ. 30,00,00,000.

ಈ ಕಂಪನಿಯು 1882 ನೇ ಇಸವಿ 7 ನೇ ಇಂಡಿಯಾ ಕಂಪನಿ ಆಕ್ಟಿನಂತೆ 1910 ನೇ ಇಸವಿ ಜೂನ್ ತಿಂಗಳಲ್ಲಿ ರಿಜಿಸ್ಟರಾಗಿದೆ. ಪ್ರತಿ ಒಂದು ಷೇರು ಐದು ರೂಪಾಯಿಗಳು. 1914 ನೇ ಇಸವಿ ತನಕ ಪ್ರತಿ ವರುಷವೂ ಶೇಕಡಾ 25 ರಂತೆ ಬಡ್ಡಿಯನ್ನು ಷೇರುದಾರರಿಗೆ ಬಡವಾಡಿ ಮಾಡಿದೆ. ಮತ್ತು ಮುಂದಿನ ವರ್ಷ ವಿಶೇಷ ಒಳ್ಳೆ ಉತ್ಪತ್ತಿಯಾಗುವಂತೆ ಜನಿಸುಗಳ ಅಭಿವೃದ್ಧಿಗೂ, ಮನೆ ಕರ ಮೇಲೂ, ವ್ಯಾಪಾರಕ್ಕೂ, ಲೇವಾದೇವಿಗೂ ಸಾಲ ಕೊಡಲಾಗಿದೆ.

ಸಮಾವಯದ ಬಾಂಡ್ ಪಾಲಿಸಿಗಳಿಗೆ ಸೇರುವವರಿಗೆ ಮೊಬಲಗು ಸೇರಿದ ವ್ಯಾನೇಜಿಂಗ್ ಕಮಿಟಿಯವರು 10 ವರುಷಗಳ ತನಕ ಆರ್ಡರು ಮತ್ತು ಬಾಂಡ್ ಸೇರುಗಳಿಗೆ ಶೇಕಡಾ 12½ ಮತ್ತು 25 ರಂತೆ ಬಡ್ಡಿಯನ್ನು ಕೊಡಲು ಕ್ರಯ ಕೊಡಲು ಕೃಪೆಮಾಡಿದ್ದಾರೆ.

ಸಮಾವಯದ ಡಿಬೆಂಚರ್ ಮತ್ತು ಬಾಂಡ್‌ಗಳನ್ನು ಬಹಳ ಅನುಕೂಲವಾದ ರೀತಿಯಲ್ಲಿ ಏರ್ಪಾಡು ಮಾಡಲಾಗಿದೆ. ಹಣ ಕೊಡಿಸಲು ವಿಶೇಷ ಫಲ ಕಾರಿಯಾದದ್ದು. ಫಾರಂಗಳಿಗೂ, ಹೆಚ್ಚು ವಿಷಯಗಳಿಗೂ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟಾಂಪು ಸಹಿತ ಬರೆಯ ಬೇಕು.

ನಂಬಿಕಸ್ಥರಾದ ಏಜಂಟರು ಸಿಕ್ಕಿದರೆ ಒಳ್ಳೇ ಕಮಿಷನ್ ಉಂಟು.

ವಿಳಾಸ.—ಕೃಷ್ಣಾಜೀರಾವ್ ಶ್ರೀನಿವಾಸರಾವ್ ಕಂಪನಿ,
ಬೊಂಬಾಯಿ ಪ್ರಾಂತ್ಯದ ಮೈಸೂರು ಮತ್ತು ಕೊಡಗು
[270-9] ದೇಶದ ಚೀಫ್ ಏಜಂಟರು, ದಾವಣಗೆರೆ.

ಕ್ರಿಸ್ಮಸ್ ಹಬ್ಬದ ವಿಶೇಷ ಮಾರಾಟ! 1916 ನೇ ಜನವರಿ 25 ರ ವರೆಗೆ ಮಾತ್ರ. ತುಲಾ ಮತ್ತು ಬಾಯಾ ಪೆಟ್ಟಿ.

ಮೂರು ಜಾಮೀನ್
ವರ್ಷದ ಕೊಡುತ್ತೇ.

ನಮ್ಮ ಪ್ರಸಿದ್ಧ ಕೆಂಪಾದ ಫ್ಲೂಟ್ ಹಾರ್ಮೋನಿಯಂ ಬಹಳ ಉತ್ತಮವಾದದ್ದು, ಬಹಳ ಇಂಪಾದ ನಾದವುಳ್ಳದ್ದು. ಯಾವ ಹವೆಯಲ್ಲೂ ಕೆಡುವುದಿಲ್ಲ. ಎಲ್ಲಾ ತರದ ಸಂಗೀತಗಳಿಗೂ ಹಿತವಾದದ್ದು. ಒಂದು ವರುಷಕ್ಕೆ ಗ್ಯಾರಂಟಿ ಕೊಡುವೆವು. ಇದು ಬೀಸ್ ಮತ್ತು ತೇಗದಿಂದ ತಯಾರಾದ ಒಳ್ಳೇ ಉತ್ತಮವಾದ ರೀಡ್ ಉಳ್ಳದ್ದಾಗಿದೆ. ಒಂದು ರೀಡಿನದಕ್ಕೆ ಕ್ರಯ ರೂ. 38, 45, 50; ಈಗಿನ ಕ್ರಯ ರೂ. 19, 22-8-0, 25; ಇದಲ್ಲದೆ 5 ರೂ. ಬಾಯು ಪೆಟ್ಟಿ ಕೊಡುತ್ತೇವೆ. ಜೋಡಿ ರೀಡ್ ಹಾರ್ಮೋನಿಯಂ ಕ್ರಯ ರೂ. 65, 70, 80, 90; ಈಗಿನ ಕ್ರಯ ರೂ. 32-8-0, 35, 40, 45; ಇದರ ಕೂಡ ರೂ. 6-12-0 ಕ್ರಯದ ಒಂದು ಜೊತೆ ತಬಲ ಮತ್ತು ಬಾಯನ್ನು ಬಿಟ್ಟಿ ಕೊಡುವೆವು. ಉತ್ತಮೋತ್ತಮವಾದ ಮಡಿಸುವ ಹಾರ್ಮೋನಿಯಂ (ಕೈಯಿಂದಲೂ ಕಾಲಿನಿಂದಲೂ ನಡಿಸಬಹುದು) ಕ್ರಯ ರೂ. 130; ಈಗ ಇದನ್ನು ರೂ. 65 ಕ್ಕೆ ಕೊಡುತ್ತೇವೆ. ಕ್ರಯದಲ್ಲಿ ಕಾಲುಪಾಲು ಅಡ್ವಾನ್ಸು ಕೊಟ್ಟು, ಸವಿವರದ ಲಿಸ್ಟ್ ಸ್ಟೇಷನ್ ತಿಳಿಸಿದರೆ ಬಾಕಿ ಹಣಕ್ಕೆ ವಿ. ಪಿ. ಮಾಡುತ್ತೇವೆ.

ವಿಳಾಸ—The National Harmonium Co.,
[276-7] SIMLA T.S.O., (E) CALCUTTA.

ಜನವರಿ ಮಹೋತ್ಸವದ ಕೈ ಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಥಾಂ ಕ್ರಯದ ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ. 1-14-0 ಕ್ಕೆ ಕೊಡಲು ಕ್ಷಿಪ್ತ. [111-35]

ವಿಳಾಸ—ವಿ. ಕೆ. ಕಣ್ಣುಸಾಮಿ ಅಂಡ್ ಕಂಪನಿ, 24, ವಿನಾಯಕ ಮೇಸ್ತ್ರಿ ಬೀದಿ, ಮದರಾಸು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ಕೆಯಾರಿಸಲ್ಪಡುವ ಸಾಮಾನುಗಳು ಬೇಕಾದವರು, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರ್ಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[188-20] GIRLS' INDUSTRIAL SCHOOL, HASSAN.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಿ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ಏಷ್ಯಾಖಂಡದ ಭೂವಿವರಣೆ 0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ 0-6-0
   ಮೇಲೆ ಕಂಡ ಎರಡೂ ಸೇರಿ 0-10-0
3. ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿದೆ)

1916 ನೆಯ
ಲೋವರ್ ಸೆಕಂಡರಿ ಕನ್ನಡ ಟಿ॥ ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 2 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಶ್ನೆ ಕೆ 4 ಆಣೆ.

ನಮ್ಮ ವಿಳಾಸ—ಎಚ್. ಆರ್. ವೆಂಕಟಸುಬ್ಬಾಚಾರ್ಯ,
[31-50] ಸುಬೋಧ ಗ್ರಂಥಾಲಯ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

14—1—1916 ರಿಂದ 21 1 19 6 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ಸಂಗ ದು	ಸತ್ತ ವು.	ಸಂಗ ದು	ಸತ್ತ ವು.
ಬೆಂಗಳೂರು	ಪಟ್ಟಣ	1	1	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು		48	44	0	0
ಮೈಸೂರು	,,	32	23	0	0
ಕೋಲಾರ್	,,	9	9	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟು		0	0	0	
ಹಾಸನ	,,	9	6	0	6
ಚಿತ್ರದುರ್ಗ	,,	36	36	0	0
ಕಡೂರ್	,,	6	6	0	0
ಶಿವಮೊಗ್ಗ	,,	41	23	0	0
ಒಟ್ಟು.....		132	148	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರ ಉತ್ತರಾಯಣೇ ಶಿಶಿರಋತೌ ಮಾಘ ಶುದ್ಧ ಪಾಡ್ಯಮಿ ಶುಕ್ರವಾರದಿಂದ ಮಾಘ ಶುದ್ಧ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1916 ನೇ ಫೆಬ್ರವರಿ.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಾ...
4	ಶುಕ್ರ †	ಪಾಡ್ಯಮಿ	33-3	ಧನಿಷ್ಠ	44-48	23
5	ಶನಿ ‡	ಬಿದಿಗೆ	29-9	ಶತಭಿಷ	42-49	23
6	ಭಾನು *	ತದಿಗೆ	26-25	ಭಾದ್ರಾ	41-45	24
7	ಸೋಮ	ಚೌತಿ	24-35	ಉತ್ತರಾಭಾದ್ರಾ	41-51	25
8	ಮಂಗಳ §	ಪಂಚಮಿ	24-1	ರೇವತಿ	43-1	26
9	ಬುಧ ,,	ಷಷ್ಠಿ	24-39	ಅಶ್ವಿನಿ	45-36	27
10	ಗುರು ::	ಸಪ್ತಮಿ	26-37	ಭರಣಿ	49-19	28

† ಮಾಘಗೌರೀವ್ರತ, ಮಳೆ ನಕ್ಷತ್ರ—ಶ್ರವಣ 4 ನೇ ಪಾದ. ‡ ಚಂದ್ರದರ್ಶನ, ರಬ್ಬಿಸಾನಿ ಚಂದ್ 1, ಮಳೆ ನಕ್ಷತ್ರ—ಧನಿಷ್ಠ 1 ನೇ ಪಾದ. * ಮಹಾಗೌರೀ ವ್ರತ, ಶ್ರೀರಂಗದಲ್ಲಿ ತೆಪ್ಪೋತ್ಸವಾರಂಭ. § ಶ್ರೀಪಂಚಮಿ, ದಗ್ಧಯೋಗ. ,, ಕುಮಾರಷಷ್ಠಿ, ಮಳೆ ನಕ್ಷತ್ರ—ಧನಿಷ್ಠ 2 ನೇ ಪಾದ. :: ರಥಸಪ್ತಮಿ, ಮೇಲುಗಿರಿ ರಂಗಸ್ವಾಮಿ ರಥ, ಶ್ರೀರಂಗಪಟ್ಟಣದಲ್ಲಿ ರಂಗಸ್ವಾಮಿ ರಥ.

ಡೋಂಗರೆ ಇವರ
ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿಯಾಗೋಣ, ನಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-23]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,
ಚೌಪಾಟಿ, ಗಿರಗಾಂವ, ಮುಂಬಯಿ.

ಜಾಮೀನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.
ಮತ್ತು
ಕೂದಲಿಗೆ ರೇಷ್ಮೆಯಂಥಾ ಹೊಳಪು ನುಣುಪು ಬರುತ್ತೆ.

ಈ ಕೂದಲ ರಂಗನ್ನು ನೆತ್ತಿ, ಗಡ್ಡ, ಮೀಸೆ ಮೊದಲಾದ ದೇಹದ ಯಾವ ಭಾಗಕ್ಕಾಗಲಿ ಸುಲಭವಾಗಿ ಹಚ್ಚ ಬಹುದು; ಚರ್ಮಕ್ಕೆ ಯಾವ ವಿಧವಾದ ಬಾಧೆಯೂ ನಷ್ಟವೂ ಕೊಡುವದು ಉಂಟಾಗುವದಿಲ್ಲ. ಇದು ಯಾರಿಗೂ ಪತ್ತೆಯಾಗುವುದಿಲ್ಲ; ರಂಗು ಎಂದಿಗೂ ಕದಲುವುದಿಲ್ಲ. ಒಂದಾವರ್ತಿ ಪರೀಕ್ಷಿಸಿದರೆ ಎಂದೆಂದಿಗೂ ಇದನ್ನೇ ಉಪಯೋಗಿಸುತ್ತೀರಿ.

ಬಿಳಿಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂಬ ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ನಕಲ್ ರಂಗಿನ ವಿಷಯದಲ್ಲಿ ಎಚ್ಚರಿಕೆ! ರತನ್‌ಜೋತಿ ಕೂದಲನ್ನೇ ಎಂಬ ಚೀಟಿಯನ್ನು ನೋಡಿ ಕೊಂಡುಕೊಳ್ಳಿ. [283-7]

ಪೆಟ್ಟಿಗೆ, ಬ್ರಷ್ ಮತ್ತು ಬಟ್ಟಲ ಸಹಿತ ಕ್ರಯ ರೂ. 1-0-0.

ಏಜಂಟರು ಬೇಕು: ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್!

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು :—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
ಜೀನಾ ಬಜಾರ್ ರೋಡ್, ಮದರಾಸ್.

Printed and Published by the Rev. H. Gulliford, Proprietor and Manager, Wesleyan Mission Press, Mysore. 3/2/1916.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—೧೯೧೬ ನೇ ಇಸವಿ ಫೆಬ್ರವರಿ ತಾರೀಖು ೧೦ ನೇ ಗುರುವಾರ. ಸಂಚಿಕೆ ೩೨

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿನೊಬಿಂದ ಜಬಿದವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲಿಲ್ಲ ಳು? ಇಂತಹ ಕೇಶವನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾದ ಉಪಕರಣವಾವುದೆಂದರೆ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅನರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು ವುದೋ, ಹಾಗೆಯೇ ನಾನಾವಿಧ ಪರಿಶ್ರಮವನ್ನು ವಹಿಸುವ ಪುರುಷರಿಗೂ ಬಹು



ಧೀರಗಳಿಗೂ ಅಷ್ಟೇ ಅಗತ್ಯದ ವಸ್ತುವಾಗಿರುತ್ತದೆ ಈ ತೈಲವನ್ನು ಹಚ್ಚುವುದರಿಂದ ಶಿರಸ್ಸು ತಂಪಾಗಿ, ಮಸ್ತಿಷ್ಕದ ನೋವು ಕಮ್ಮಿಯಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ಹಚ್ಚಿಕೊಂಡಾಗಿನಿಂದ ಎಂದಿಗೂ ಉದುರಿ ಬಿದ್ದು ಹೋಗಲಾರವು; ಅದರ ಬದಲು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೇಶವರ್ಧಕ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ನೋಡಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ನಾವಿದಾಸು ಸ್ಥಳಗಳ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅನೇಕ ಪತ್ರಿಕೆಗಳಲ್ಲಿ ಒಂದನ್ನೇ ನೋಡಿರಿ: ನೀಗಿ ನಹಾಲೆಕರ ಬಂಧುಗಳು. ಬಸವನಗುಡಿ, ಬೆಂಗಳೂರು ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲನ್ನು ಬೆಳೆಯಿಸುವುದಕ್ಕೆ ಸಮೋತ್ತಮವಾದೊಂದು ಸಾಧನವಾಗಿರುತ್ತದೆ ... ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ಕಳುಹಿಸುವುದು.

ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಾಸನೆಯಾದ ವ್ಯಾಪಾರಿಗಳು ಒಳ್ಳೆಯ ಮತ್ತು ಶ್ರೇಷ್ಠ ವಸ್ತುಗಳ ಬೆಳೆರಿಯಿಂದ ತಮಗೆ ಅಷ್ಟಲ್ಲ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವಾದದ್ದು ಇದೆ" ಎಂದು ಅವರಿಗೆ ಬಹಳ ಲಾಭ ದೊರಕಿಸತಕ್ಕ ಕೀಳುತರದ ಬೇರೆ ಎಣ್ಣೆಯನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ತರಿಸಿಕೊಳ್ಳಿ ... ನಕಲಿ ವಸ್ತುಗಳ ಬಲೆಯಲ್ಲಿ ಸಿಲುಕದೆ ಶ್ರೇಷ್ಠವಾದ ಉತ್ತಮ ವಸ್ತುವನ್ನೇ ಪಡೆಯಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ-ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮ. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಮಾಡಿದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಬಿಂದುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ವಾತಾವರಣವು ಆವರಿಸಿದಂತಾಗುವುದು. ಬೇರೆ ಯಾವ ಸುವಾಸನಾ ದ್ರವ್ಯದ ಅವಶ್ಯಕತೆಯೂ ಇರದು. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವರನ್ನು ಆಕರ್ಷಿಸಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [34-?]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಬಾಟಲಿಯ) ಸೀಸೆ ರೂ. 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಸಾಬೂನಿನ ಬಿಲ್ಲೆ ಒಂದಕ್ಕೆ 0-12-0.

ಮೇಲೆ ಹೇಳಿದ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ನಂ. ..., ಜುಮ್ಮಾಮಜಿದ್, ಮಾರ್ಕೆಟ್, ಬಾಂಬೆ.

ಏಜೆಂಟ್, ... ಮಾರ್ಕೆಟ್, ಮಂಗಳೂರು

FREE! Do you wish to know "How to Make the Best Quality ROSE, JASMINE, LILY, LOTUS & Sweet Scented Hair Oils at a very cheap cost at your own home? If so, please write us at once and mention this paper. [263-8]

S. PAUL & Co., *Perfumers,*
4, Hospital Street, Dharamtola, **Calcutta.**

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜುಗಳುಳ್ಳ ದೊಡ್ಡ ಗ್ರಂಥ. ಎ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ ಪ್ರತಿಗೆ ರೂ. 1-12-0. [158-34]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಪ್ರಕಟನೆ.

ಶಿವಮೊಗ್ಗಾದಲ್ಲಿ ಪ್ರೌಢರಾದ ಹೆಂಗಸರುಗಳಿಗೆ ಅವರವರ ಮನೆಗಳಲ್ಲಿ ಪಾಠ ಹೇಳಿಕೊಡಲು (to hold home education classes for women) ಉಪಾಧ್ಯಾಯಿನಿಯು ಬೇಕಾಗಿದೆ. ಇವರಿಗೆ ತಿಂಗಳಿಗೆ 15 ರೂಪಾಯಿ ಸಂಬಳವನ್ನು ಮತ್ತು 10 ರೂಪಾಯಿ ಗಾಡಿ ಬಾಡಿಗೆಯನ್ನು ಕೊಡುತ್ತೇವೆ. ಇಷ್ಟವುಳ್ಳವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಎಕನಾಮಿಕ್ ಕಮಿಟಿ ಸೆಕ್ರೆಟರಿಯವರಿಗೆ ದರಖಾಸ್ತು ಕಳುಹಿಸುವದು. [25-3]

ಪ್ರಶ್ನೋತ್ತರ ಲೇಖ್ಯಬೋಧಿನಿ ಕ್ರಯ ೧-೮-೦

ಸಿವಿಲ್, ಕ್ರಿಮಿನಲ್, ರೆವೆನ್ಯೂ ಮುಂತಾದ ಸಮಸ್ತ ವಿಚಾರಗಳನ್ನೂ, ವ್ಯವಹಾರಗಳನ್ನೂ, ಬೋಧಕರ ಸಹಾಯವಿಲ್ಲದೆ ತಿಳಿಸುವುದು. ಅಂದವಾದ ಮುದ್ರಣ, ಸರ್ವಾಂಗ ಸುಂದರವಾದ ಪುಸ್ತಕ! ಬೇಗ ಬೇಗ ಬರೆದು ತರಿಸಿಕೊಳ್ಳಿರಿ !!

ಕ್ರಯ ಒಂದು ರೂಪಾಯಿ ಎಂಟಾಣೆ.

ನಮ್ಮ ವಿಳಾಸ:—ಭಾರತಿ ಸಂಪಂಗಿರಾಮು,
[4-6] 42, ಸಿ. ಬೀದಿ, ಕೋಟೆ, ಬೆಂಗಳೂರು ಸಿಟಿ.

ಬೇಗ ತರಿಸಿಕೊಳ್ಳಿ ಒಳ್ಳೆ ಸಮಯ

ಕನ್ನಡ ಕ್ರಿಮಿನಲ್ ಪ್ರೊಸಿಜರ್ ಕೋಡು.

ಇದುವರಿಗಿನ ಕೋಡುಗಳಿಗಿಂತಲೂ ಹೆಚ್ಚಾಗಿ ವಿಶೇಷ ವಿಷಯಗಳನ್ನು ಸಂಗ್ರಹಿಸಿ ದಪ್ಪನಾದ ಬಿಳೀ ನುಣುಪಾದ ಕಾಗದದಲ್ಲಿ ಅಚ್ಚುಹಾಕಲ್ಪಟ್ಟದೆ. ಪೋಲೀಸಿನವರಿಗೂ, ಪಟೇಲರಿಗೂ, ವಕೀಲ್ದಾರರಿಗೂ ಅತ್ಯಂತ ಅವಶ್ಯಕವಾದದ್ದು. ಕ್ರಯ 608 ಪುಟದ್ದಕ್ಕೆ 3 ರೂಪಾಯಿಗಳು ಮಾತ್ರ. ಒಂದು ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಟಪಾಲ್ ಹಾಸಲ್ ಮುಫತ್ತಾಗಿ ರವಾನಿಸಲ್ಪಡುವದು.

[251-13] ವಿಳಾಸ:—ಬಿ. ನರಸಿಂಗರಾವ್, ಲಾ ಆಫೀಸ್, ಬೆಂಗಳೂರು.

ನವೀನ ಕಾದಂಬರಿಗಳು.

ಸತ್ಯರಾಜನ ಪೂರ್ವದೇಶ ಯಾತ್ರೆ—ಹಾಸ್ಯರಸ ಪ್ರಧಾನವಾದ ಲಂಕೆ—

ಮಲೆಯಾಳ ದೇಶಗಳ ಕಥೆ	......	1-0-0
ಮಾಧವಚಂದ್ರ—ಚಮತ್ಕಾರಿಕವಾದ ನಾವೆಲ್.	......	0-6-0
ಸರಳಾ—ಮನೋಹರವಾದ ಕಾದಂಬರಿ	......	0-8-0
ರಾಧಾಮಾಧವ—ನೀತಿಬೋಧಕವಾದ ಕಟ್ಟುಕಥೆ.	......	0-8-0

ಅನಂಗಸುಂದರಿ, ತಾರಾಸುಂದರಿ, ವಿನೋದಕರವಾದ ಕಾದಂಬರಿಗಳು—ಪ್ರತಿ 1 ಕ್ಕೆ 8 ಆಣೆ. ಇದಲ್ಲದೆ "ಕಮುದಿನಿ" 6 ಆಣೆ "ಸಂತಾಪಕ" 4 ಆಣೆ. ಮುಂತಾದ ಹಲವು ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

[277-9] ವಿಳಾಸ:—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾನ್ಫರೆನ್ಸ್ ಕಾರಣವಿಧಿಗಳೊಡನೆ ರಚಿಸಲ್ಪಟ್ಟಿವೆ.

1.	ವಿಶ್ವಪಿಂಡದ ಭೂವಿವರಣೆ	0–5–0
2.	ಪ್ರಾಕೃತಿಕ ಭೂಗೋಳ ಶಾಸ್ತ್ರ	0–6–0
	...ಮೇಲೆ ಹೇಳಿದ ಎರಡೂ ಸೇರಿ	0–10–0
3.	ಯೂರೋಪ್, ಆಫ್ರಿಕ, ಅಮೇರಿಕ (ಅಚ್ಚಿನಲ್ಲಿವೆ)	

1916 ನೆಯ

ಲೋವರ್ ಸೆಕಂಡರಿ ಕನ್ನಡ ಪ॥ ನೋಟ್ಸು.

ಕ್ರಯ 7 ಆಣೆ. ಡಿಸ್ಕೌಂಟ್ 10 ಕ್ಕೆ 1.

ಮಕ್ಕಳ ಭೂವಿವರಣೆ 3 ಆಣೆ; ಆರೋಗ್ಯ ಪ್ರಶ್ನೋತ್ತರ ನೋಟ್ಸು 1 ಆಣೆ; ಪತ್ರರತ್ನಾಕರ 8 ಆಣೆ; ಲೇಖ್ಯತತ್ವ ಪ್ರಕಾಶಿಕೆ 4 ಆಣೆ.

ನಮ್ಮ ವಿಳಾಸ—ಎ. ಆರ್. ವೆಂಕಟಸುಬ್ಬಾಚಾರ್ಯ,
[91–51] ಸುಬೋಧ ಗ್ರಂಥಾಲಯ, ಮೈಸೂರು.

ಲೋವರ್ ಸೆಕಂಡರಿ ಪರೀಕ್ಷೆಯ

ಗಣಿತಪ್ರಶ್ನೋತ್ತರಾವಳಿ

ಎಂಬ ನವೀನ ಗಣಿತದಲ್ಲಿ ಎಲ್ಲಾ ಲೆಕ್ಕಗಳನ್ನೂ ಸುಲಭವಾಗಿಯೂ ಜಾಗ್ರತೆಯಾಗಿಯೂ ಮಾಡುವ ಅನೇಕ ವಿಧಾನಗಳು ಉದಹರಿಸಲ್ಪಟ್ಟಿವೆ. ಮತ್ತು 1900-15 ರ ವರೆಗಿನ ಪ್ರಶ್ನೆಗಳಿಗೆ ಪೂರ್ಣವ್ಯಾಖ್ಯಾನವಾದ ಉತ್ತರಗಳೂ ಇರುತ್ತವೆ. ಇದು ಮಾಸ್ತರುಗಳಿಗೂ, ಸ್ಕೂಲ್ ಮತ್ತು ಪ್ರೈವೇಟ್ ವಿದ್ಯಾರ್ಥಿಗಳಿಗೂ ಅತ್ಯಂತ ಅವಶ್ಯಕವಾಗಿರುವದು. ಸ್ವಲ್ಪ ಪ್ರತಿಗಳೇ ಉಳಿದಿವೆ ಕ್ರಯ 0-8-0; ವಿ.ಪಿ 10 ಆ.

ವಿಳಾಸ—ಡಿ ಮಹಾಬಲರಾವ್, ಬಿ ಎ, ಅ॥ ಮಾಸ್ತರ್, ಮಹಾರಾಣಿ
[284-7] ಕಾಲೇಜು; ಅಥವಾ, ಸ್ಟೂಡೆಂಟ್ಸ್ ಹಾಲ್, ಮೈಸೂರು.

"SENPAPOD"—The latest Laxative. A highly concentrated essence from the Senna Pod, combined with aromatics etc: Rs. 1/4 per bottle of 60 doses. 12 annas per bottle of 30 doses. *Pleasant, Perfect, Purgative.* [17-3]

"ALETRIS COMPOUND."—Tones up the system and has a direct action on the whole productive area. No woman who values relief from pain, can afford to be without ALETRIS COMPOUND. Rs. 1/4 per bottle of 32 doses. Both the above are made by qualified English Experts at Mysore Pharmaceuticals Ltd. Bangalore, and can be obtained from Messrs. J. B. Forster & Co., Bangalore.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interst to know the rates of premium and terms of Agency speccially prepared by the Society's Consulting Actuary, Mr. H. E. W. Lutt, F I. A. (one of the most eminent Actuaries in England). [142-29]

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ. ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್. ರಿಚಿಲಿಯೊ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[222-17] ಬ್ರಾಂಚ್ ಸೆಕ್ರೆಟರಿ, ಮದರಾಸ.

ಉತ್ತಮವಾದ ಫೌಂಟೆನ್ ಪೇನಾಗಳು ದೊರೆಯುತ್ತೆ.

ನೆಪ್ಚೂನ್ 200 ನೆ ನಂಬರ್ ಪೆನ್ ಒಂದಕ್ಕೆ	ರೂ. 1-14-0
ನೆಪ್ಚೂನ್ 205 ನೆ ನಂಬರ್ ಪೆನ್ ಒಂದಕ್ಕೆ	,, 2-10-0
ನೆಪ್ಚೂನ್ 250 ನೆ ನಂಬರ್ ಪೆನ್ ಒಂದಕ್ಕೆ	,, 3-12-0
ನೆಪ್ಚೂನ್ 210 ನೆ ನಂಬರ್ ಪೆನ್ ಒಂದಕ್ಕೆ	,, 4- 0-0
ನೆಪ್ಚೂನ್ 251 ನೆ ನಂಬರ್ ಸೇಫ್ಟಿ ಪೆನ್ ಒಂದಕ್ಕೆ	,, 3-12-0
ನೆಪ್ಚೂನ್ 207 ನೆ ನಂಬರ್ ಪೆನ್ ಒಂದಕ್ಕೆ	,, 3- 6-0
ನೆಪ್ಚೂನ್ 158 ನೆ ನಂಬರ್ ಪೆನ್ ಚಿನ್ನ ಗಿಲೀಟ್ ಕೊಳವೆ ಮತ್ತು ಕ್ಲಿಪ್‌ಸಹಿತ ಒಂದಕ್ಕೆ	,, 4- 2-0
ಉತ್ತಮವಾದ ಸ್ವಾನ್ ಬ್ಲಾಕಬರ್ಡ್ ಪೆನ್ ಒಂದಕ್ಕೆ	,, 3-12-0
ಉತ್ತಮವಾದ ಫೌಂಟನ್ ಪೆನ್ ಕ್ಲಿಪ್ ಕ್ರಯ ಒಂದಕ್ಕೆ	,, 0-4-0

ಲಾಗಾಯತು ರೂ. 0-12-0 ವರೆಗೆ. ಉತ್ತಮವಾದ ಫೌಂಟನ್ ಪೆನ್ ಸ್ವಾನ್ ಇಂಕು ಬಾಟ್ಲಿ ಒಂದಕ್ಕೆ ರೂ. 0-8-0.

ಸೂಚನೆ:—ಟಪಾಲ್ ಮತ್ತು ಪ್ಯಾಕಿಂಗ್ ಖರ್ಚು ಬೇರೆ. ಒಟ್ಟಿಗೆ 3 ಪೇನಾ ತರಿಸುವವರಿಗೆ ಪ್ರತಿ ಒಂದು ಪೇನಾಕ್ಕೂ ಒಂದು ಸೊಗಸಾದ ಕ್ಲಿಪ್ ಉಚಿತವಾಗಿ ಕೊಡಲಾಗುತ್ತೆ. ಬೈಸಿಕಲ್ಲಿಗೆ ಬೇಕಾದ ಎಲ್ಲಾ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತೆ.

ನಮ್ಮ ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್,
[279–9] ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಸ್ತ್ರೀಯರಿಗೆ ವರಪ್ರದಾನ.

"ಮಹಂಕಾಳೀಭಸ್ಮ ಅಥವಾ ರೋಮ ಹಾರಿ." ಸರಿಯಾಗಿಯೂ ಚೆನ್ನಾಗಿಯೂ ರೋಮವನ್ನು ಹರಿಸುವ ಉಪಾಯ ತಿಳಿಯದೆ ನಮ್ಮ ಸ್ತ್ರೀಯರು ಸಾಮಾನ್ಯವಾಗಿ ತುಂಬಾ ಕಳವಳ ಪಡುತ್ತಾರೆ. ನಾವು ಈಗ ಕಂಡು ಹಿಡಿದಿರುವದು ಸಾಮಾನ್ಯವಾದ ಮಟ್ಟಿಗೂ ಉತ್ತಮೋತ್ತಮವಾದದ್ದು. ಉಪಯೋಗದ ವಿಧಾನ—ನಮ್ಮ ಭಸ್ಮವನ್ನು ಒಂದು ಚಿಟಿಕೆ ತೆಗೆದುಕೊಂಡು ನೀರಿನಲ್ಲಿ ಗಟ್ಟಿಯಾಗಿ ಕಲಸಿ ಅವಶ್ಯಕವಾದ ಭಾಗಗಳಿಗೆ ಹಚ್ಚಬೇಕು. ಬಹಳ ಸ್ವಲ್ಪ ಹೊತ್ತಿನೊಳಗಾಗಿ ಆಶ್ಚರ್ಯವುಂಟಾಗುವಂತೆ ಆ ಭಾಗಗಳಲ್ಲಿರುವ ಕೂದಲು ಉದುರಿಹೋಗುತ್ತೆ. ಚರ್ಮದ ಮೇಲೆ ಸ್ವಲ್ಪವೂ ಕಲೆ ನಿಲ್ಲುವದಿಲ್ಲ. ಕ್ರಯ 0-11-0; ವಿ. ಪಿ. ಪಿ. ಬೇರೆ.

ಸೊಗಸಾದ ಎಲೆಕ್ಟ್ರೋಪ್ಲೇಟ್ ಬಲವಾದ ಕಂಚಾ ಪೂರು ಗೆಜ್ಜೆ ಅಡ್ಡಿಗೆ. ಇದು ಚಿಕ್ಕವರಿಗಾಗಲಿ ದೊಡ್ಡವರಿಗಾಗಲಿ ಒಪ್ಪುವದಾಗಿರುತ್ತೆ. ಕ್ರಯ 0-12-0 ವಿ. ಪಿ. ಪಿ. ಬೇರೆ

ನಮ್ಮ ವಿಳಾಸ—ಎಸ್. ನರಸಿಂಹನಾಯುಡು,

[21-2] ತಿರುವಲಿಕ್ಕೇಣಿ, ಮದರಾಸು.

ಅಮೇರಿಕನ್ ರೋಮಹರಿ.

ಕ್ರಯ ಡಪ್ಪಿ 1 ಕ್ಕೆ 4 ಆಣೆ, 3 ಡಬ್ಬಿಗಳಿಗೆ 8 ಆಣೆ.

ಇತರರು ರೋಮಹರಿ ಸೋಪೆಂದು ಮಾರುತ್ತಲಿರುವ ಸೋಪುಗಳಿಗೆ ನಾವು ತಯಾರಿಸಿರುವ ಅಮೇರಿಕನ್ ರೋಮಹರಿ ಔಷಧವನ್ನು ಹಾಕಿ ಸೀಮೆಸುಣ್ಣ, ಎಣ್ಣೆ, ಕರ್ಪೂರದ ತೈಲ ಮೊದಲಾದವುಗಳನ್ನು ಸೇರಿಸಿ ಸೋಪಿನ ಹಾಗೆ ಬಿಲ್ಲೆ ಮಾಡಿ ಡಬ್ಬಿಯಲ್ಲಿಟ್ಟು ಮೋಸ ಮಾಡುತ್ತಾರೆ. ನಮ್ಮ ಅಮೇರಿಕನ್ ರೋಮಹರಿಯು ಘಾಟು ಹೋಗದ ಹಾಗೆಯೂ, ಎಣ್ಣೆ, ಸುಣ್ಣ, ಕರ್ಪೂರ ತೈಲಗಳಿಂದ ಸೇರದೆಯೂ ತಯಾರಿಸಿ ತಿರುಪಿನ ಸೀಸೆಯಲ್ಲಿ ಗಟ್ಟಿಯಾಗಿ ಬಿಗಿಸಿರುವದರಿಂದ ಇದನ್ನು ಕೂದಲುಗಳ ಮೇಲೆ ಸವರಿದ ಕ್ಷಣಮಾತ್ರದಲ್ಲಿ ರೋಮಗಳು ಉದುರಿ ಆ ಸ್ಥಳವು ನುಣ್ಣಗಾಗುತ್ತೆ. ಪರೀಕ್ಷಿಸಲಪೇಕ್ಷಿಸುವವರು ತರಿಸಿ ಉಪಯೋಗಿಸುವದರಿಂದಲೂ, ವಾಸನೆಯಿಂದಲೂ ಇದರ ನಿಜಸ್ಥಿತಿಯನ್ನು ತಿಳಿಯಬಹುದು.



ಫೆಬ್ರುವರಿ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಫೆಬ್ರವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ 1-14-0 ಆಣೆಗೆ ಕೊಡಲ್ಪಡುತ್ತೆ.

[111-36]

ಮಧುರೆ ಜುನ್ನಡಿ ಅಂಚಿನ ಸೀರೆ ಅಮ್ಸಲ್ ರಿಮಂ ರೂ. 3-0-0

ಫೆಬ್ರವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.



ಇದು ಉಡುವುದಕ್ಕೆ ಧರಾಳವಾಗಿಯೂ ನೋಟಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇದೆ ಒಳ್ಳೆ ಜೋಡು ಸೀರೆಯ ಉದ್ದ 18 ಮೊಳ ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ.

ವಿಳಾಸ ಎ. ಕೆ ಕೆಂಗುಸಾಮಿ ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು.

ಸತ್ಯವಾದದ್ದು ಅನುಭವಸಿದ್ಧವಾದ ಔಷಧ. ಮೋಸವಿಲ್ಲದ್ದು

ಮಹಾದ್ರಾಕ್ಷಾದಿ ಚೂರ್ಣ.

ಗುಣವಾಗದಿದ್ದರೆ ಹಣವನ್ನು ವಾಪಸ ಕೊಡುತ್ತೇವೆ.

ಈ ಔಷಧಿಯು ಅತಿ ಉತ್ತಮವಾದದ್ದೆಂದು ಬಸವರಾಜೀಯಾದಿ ಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ಈ ಔಷಧಿಯು ಕೆಳಗೆ ಕಂಡ ರೋಗಗಳಿಗೆ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಇದನ್ನು 15 ದಿವಸ ಸೇವಿಸಿದರೆ ಅನೇಕರಿಗೆ ಕ್ಷಯ, ಪಿತ್ತ, ಪೀನಸ, ಕೆಮ್ಮು, ಶಾಗೆ ರೋಗ, ಶೋಫೆ, ದೀರ್ಘಜ್ವರ, ಉಬ್ಬಸ, ವಾಕರಿಕೆ, ದಣಿ, ಗಲ್ಲೆ, ಉಷ್ಣ, ಎದೆಬೇಗೆಟ್ಟು, ಹೊಟ್ಟೆಶೂಲೆ, ನಡಶೂಲೆ, ಕೈಕಾಲು ಹರಿಯುವದನ್ನು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ನಾಶಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸುವದು. ನಿಶ್ಶಕ್ತವನ್ನು ಹೋಗಲಾಡಿಸುವದು. ಅಧಿಕ ಬಲ ಬರುವದು. 15 ದಿನ ಸೇವಿಸುವ ಡಬ್ಬಿ 1 ಕ್ಕೆ ಕ್ರಯ ರೂ 2-0-0. ಈ ಔಷಧಿಯು ಹತ್ತುಸಾವಿರ ಡಬ್ಬಿಗಳು ಖರ್ಚಾದ ಕೂಡಲೆ 5000 ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಹಂಚುತ್ತೇವೆ. ಹ್ಯಾಗಂದರೆ 1 ಡಜನ್ ಬಾಟ್ಲಿ ತರಿಸಿದವರಿಗೆ ಎರಡು ಸಾವಿರ ರೂಪಾಯಿ; 6 ಬಾಟ್ಲಿ ತರಿಸಿಕೊಂಡವರಿಗೆ ರೂ 1300; 3 ಬಾಟ್ಲಿ ತರಿಸಿಕೊಂಡವರಿಗೆ ರೂ 300; 2 ಡಬ್ಬಿ ತರಿಸಿಕೊಂಡವರಿಗೆ ರೂ 600; 1 ಡಬ್ಬಿ ತರಿಸಿಕೊಂಡವರಿಗೆ 400 ರೂಪಾಯಿ ಬಹುಮಾನ. ಈ ಪ್ರಕಾರವಾಗಿ 1915 ನೇ ನವಂಬರ್ 1 ನೇ ತೇದಿ ಮೊದಲು 1916 ನೇ ನವಂಬರ್ 1 ನೇ ತೇದಿ ವರಿಗು ಅದನ್ನು ಲೆಖ್ಖಕ್ಕೆ ದಾಮಾಷಾ ಪ್ರಕಾರ ವಾಯಿದೆಯನ್ನು ಹೆಚ್ಚಿಸದೆ ಕೊಡತಕ್ಕ ಬಹುಮಾನ ಹಣವನ್ನು ಖಂಡಿತವಾಗಿ ಹಂಚುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವೂ ವಂಚನೆಯೂ ಖಂಡಿತವಾಗಿ ಇರುವದಿಲ್ಲ. ಒಂದುಪಕ್ಷದಲ್ಲಿ ನೀವು ತರಿಸಿದನಂತರ ಮೋಸವೆಂದು ಕಂಡುಬಂದರೆ ತಕ್ಷಣವೇ ಜವಾಬು ಬರೆದರೆ ನಿಮ್ಮ ಹಣವನ್ನು ಆ ಕೂಡ್ಲೆ ವಾಪಸ್ ಕಳುಹಿಸಲು ಸಿದ್ಧರಾಗಿರುವೆವು. ಅನುಮಾನ ಪತ್ರಿಕೆಯನ್ನು ಬಹುಮಾನದ ಟಿಕೇಟನ್ನು ಡಬ್ಬಿ ಸಂಗಡ ಕಳಿಸುವೆವು. ಖಂಡಿತವಾಗಿ ಕೆಲವರು ಬಹುಮಾನ ಹಣವನ್ನೂ ಹೊಂದಿದವರ ಹೆಸರನ್ನೂ ಪ್ರಸಿದ್ಧಪಡಿಸುವೆವು. ನಾವು ಇದನ್ನು ಕ್ರಮವಾಗಿ ಪ್ರತಿವರ್ಷವೂ ನಡಿಸುವೆವು ಕಾರಣ ಖಂಡಿತವಾಗಿ ಇದರಲ್ಲಿ ಯಾವ ವಿಧವಾದ ಮೋಸವಿರುವುದಿಲ್ಲ. ಈ ಮಹಾ ದ್ರಾಕ್ಷಾದಿಚೂರ್ಣವನ್ನು ತರಿಸಿಕೊಳ್ಳುವವರಿಗೆ ನಮ್ಮಲ್ಲಿ ತಯಾರಾಗಿರುವ ಜ್ವರಸಂಜೀವಿನೀ ಮಾತ್ರೆಯೆಂಬುವ 21 ಮಾತ್ರೆಗಳುಳ್ಳ ಒಂದು ಪೆಟ್ಟಿಯನ್ನು ಉಚಿತವಾಗಿ ಕಳುಹಿಸಿಕೊಡುತ್ತೇವೆ. ಇದರಿಂದ ಎಂಥಾ ಕಠಿಣಜ್ವರವಾದ ಛಳಿಜ್ವರವಾದರೂ 3 ತಾಸಿನಲ್ಲಿ ಖಂಡಿತವಾಗಿ ನಿಲ್ಲುತ್ತದೆ. ನಿಮ್ಮ ವಿಳಾಸ ಚೆನ್ನಾಗಿರಲಿ.

[28-2] ನಮ್ಮ ವಿಳಾಸ ಬಸವರಾಜಕಂಪನಿ ಬಳ್ಳಾರಿ.

ಸ್ವದೇಶ ಕೈಗಾರಿಕೆಗಳು.

ಅನೇಕ ಸ್ಥಳಗಳಲ್ಲಿ ಕೈಗಾರಿಕೆಗಳ ಕಾರ್ಖಾನೆಗಳನ್ನು, ಲಂಟಾನಾ ಬೂದಿಯಿಂದ ಗೊಬ್ಬರವನ್ನು ತಯಾರಿಸ ಬಹುದಾದ ಕಾರ್ಖಾನೆಗಳನ್ನು ಏರ್ಪಡಿಸುವ ಉದ್ದೇಶದಿಂದ ನಮ್ಮ ದೇಶಬಾಂಧವರಿಗೆ ಅರಿಕೆ ಮಾಡಿಕೊಳ್ಳುವುದೇನಂದರೆ ನಿಮ್ಮ ಸ್ಥಳದಲ್ಲಿ ಯಾವುದಾದರೂ ಕೈಗಾರಿಕೆಯನ್ನೆ ಆಗಲಿ ಗೊಬ್ಬರದ ಕಾರ್ಖಾನೆಯನ್ನೇ ಆಗಲಿ ಇಡಬೇಕೆಂದು ಯಾರಿಗಾದರೂ ತಾತ್ಪರ್ಯವಿದ್ದರೆ ಅಲ್ಲಿನ ಮುಖಂಡರು ಕಲೆತು ಮಾತನಾಡಿಕೊಂಡು ನನಗೆ ತಿಳಿಸಿದರೆ ನಾನು ಬಂದು ಪದಾರ್ಥವನ್ನು ತಯಾರಿಸುವ ರೀತಿಯನ್ನು ತೋರಿಸಿ ಅನುಭವಪಡಿಸಿ ಕಾರ್ಖಾನೆಯನ್ನು ಏರ್ಪಡಿಸುವೆನು. ಕೆ. ಆರ್. ಚಕ್ರವರ್ತಿ,

[26-3] ಏಜಂಟ್, ವೆಸ್ಟ್ ಸ್ಟೀಂ ಟ್ರಾಂವೆ ಕಂಪನಿ, ಬೆಂಗಳೂರು ಸಿಟಿ

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ-ಚಿನ್ನವರೇಖು-ಲೋಹಭಸ್ಮ-ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ-ಸೋಂಕು ರೋಗಸ್ಥಳಗಳಲ್ಲೂ ಪ್ರಯಾಣಕಾಲದಲ್ಲೂ-ಮಕ್ಕಳಿರುವ ಮನೆಗಳಲ್ಲೂ—ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ, ಭೇದಿ, ಮರಳಿ ಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ವ್ಯಾಕೆ, ನೋವು, ನಡು ನೋವು, ಹಲ್ಲು ನೋವು, ಅರೋಚಕಗಳು ಬಹಳ ಬೇಗನೆ ವಾಸಿಯಾಗಿ ಗುಣವಾಗುತ್ತವೆ ಮಕ್ಕಳ ಸಮಸ್ತ ರೋಗಗಳಿಗೂ ಅದ್ಭುತವೇ ಸರಿ.

250 ಮಾತ್ರೆಯ ಸೀಸೆ 0-4-0. ಐದಕ್ಕೆ 1 ಡಬ್ಬಿ ಟಪಾಲ ಪ್ರತ್ಯೇಕ

[278-9] ವಿಳಾಸ—ಸದ್ವೈದ್ಯಶಾಲಾ, ನಂಜನಗೂಡು.

JUST PUBLISHED.

(1) Aids to Grammatical Analysis, 5 as. (2) English Essays and Letters, 6 as. (3) English Papers, 8 as. (4) Spelling Book, 4 as. (5) L. S. English Notes for 1917 (will be ready soon).

Apply to:—**M. N. SITA RAMA RAO,**
[35-1] **Krishnaraja Mohalla, Mysore.**

ಎಲ್ಲರೂ ಅಪೇಕ್ಷಿಸುತ್ತಿದ್ದ ಸೀಮೆ ಚಿತ್ರಪಟಗಳೊಡನೆ

ಯೂರೋಪಿನ ಮಹಾ ಯುದ್ಧದ ಚರಿತ್ರೆಯು

ಕ್ರಯ 14 ಆಣೆ; ಪೋಸ್ಟು ಖರ್ಚು 2 ಆಣೆ.

ಇತರರು ನಮ್ಮ ಪ್ರಕಟನೆಗಳ ಪ್ರಕಾರ ಪ್ರಕಟಿಸಿ ಬಂದಾದಾರಿಗೆ ಇನಾಮಾಗಿ ಕೊಡುವ ಚಿತ್ರ ಇದು ಅಲ್ಲ. ನಿಜವಾಗಿ ಯೂರೋಪ್ ಖಂಡದಲ್ಲಿ ಜರ್ಮನಿ ಮೊದಲಾದ ರಾಜ್ಯಗಳವರಿಗೆ ನಡೆಯುವ ಯುದ್ಧವು ಎಲ್ಲಾ ಸವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. ಇದನ್ನು ಕನ್ನಡ ಭಾಷೆಯಲ್ಲಿ 14 ಅಧ್ಯಾಯಗಳಾಗಿ ಭಾಗಿಸಿ 32 ಸೀಮೆ ಫೋಟೋಗಳೊಡನೆ ಚಿತ್ರಪಟಗಳೂ ಎಲ್ಲಾ ದೇಶದ ರಾಜರುಗಳ ಪಟಗಳೂ, ಅವರ ಚರಿತ್ರೆಗಳೂ ಯುದ್ಧದ ಹಡಗುಗಳೂ, ಯುದ್ಧಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳೂ, ಪ್ರತಿಯೊಂದು

ರಾಜ್ಯದ ಸೇನಾ ಬಲವೂ ಮತ್ತು ವಿಮಾನ ಬಲವೂ, ಅವುಗಳ ಪಟಗಳೂ, ಸೇನಾಧ್ಯಕ್ಷರುಗಳ, ಆಯಾ ದೇಶದ ರಾಜರುಗಳ, ಮಂತ್ರಿಗಳ ಮೊದಲಾದವರುಗಳ ಭಾವ ಚಿತ್ರಗಳೂ, ಯುದ್ಧಸಂಬಂಧವಾದ ವಿಷಯಗಳೂ, ಇವುಗಳೆಲ್ಲವೂ ಸವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. ಯುದ್ಧಾರಂಭವಾದ ಲಾಗಾಯ್ತು ರಣರಂಗದಿಂದ ಬಂದ ಯುದ್ಧದ ಸಮಾಚಾರಗಳು ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ. ಇಂಥಾ ಯುದ್ಧದ ಚರಿತ್ರೆಯನ್ನು ಇದುವರೆಗೆ ಯಾರೂ ಕನ್ನಡ ಭಾಷೆಯಲ್ಲಿ ತಯಾರಿಸಲಿಲ್ಲ. ಈ ಯುದ್ಧದ ಚರಿತ್ರೆಯನ್ನು ಓದುವಾಗ ಪ್ರತ್ಯಕ್ಷವಾಗಿ ರಣರಂಗವನ್ನೇ ನೋಡುತ್ತಿರುವ ಹಾಗೆ ತೋರುವುದು

[252-13] ಸೋಲ್ ಏಜಂಟರು—ರಾಮಚಂದ್ರ ಅಂಡ್ ಕಂಪನಿ, 16, ತಿರುಪಳ್ಳಿ ಬೀದಿ, ಮದರಾಸು.

ಜಾಮಿನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.

ಮತ್ತು

ಕೂದಲಿಗೆ ಶ್ರೇಷ್ಠ ಥಂಥಾ ಹೊಳಪು ಸುವಾಸನೆ ಬರುತ್ತೆ.

ಈ ಕೂದಲ ರಂಗನ್ನು ನೆತ್ತಿ, ಗಡ್ಡ, ಮೀಸೆ ಮೊದಲಾದ ದೇಹದ ಯಾವ ಭಾಗಕ್ಕಾಗಲಿ ಸುಖವಾಗಿ ಹಚ್ಚಬಹುದು; ಚರ್ಮಕ್ಕೆ ಯಾವ ವಿಧವಾದ ಬಾಧೆಯೂ ನಷ್ಟವೂ ಕೆಡುಕೂ ಉಂಟಾಗುವುದಿಲ್ಲ. ಇದು ಯಾರಿಗೂ ಪಿತ್ತಯಾಗುವುದಿಲ್ಲ; ರಂಗು ಎಂದಿಗೂ ಮಾಸುವದಾಗುವುದಿಲ್ಲ. ಒಂದಾವರ್ತಿ ಪರೀಕ್ಷಿಸಿದರೆ ಎಂದೆಂದಿಗೂ ಇದನ್ನೇ ಉಪಯೋಗಿಸುತ್ತೀರಿ

ನರೆಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ನಕ್ಕಲ್ ರಂಗಿನ ವಿಷಯದಲ್ಲಿ ಎಚ್ಚರಿಕೆ! ರತನ್ ಜೋತಿ ಕೂದಲ್‌ರಂಗು ಎಂಬ ಚೀಟಿಯನ್ನು ನೋಡಿ ಕೊಂಡುಕೊಳ್ಳಿ. [282-?]

ಪೆಟ್ಟಿಗೆ, ಬ್ರಷ್ ಮತ್ತು ಬಟ್ಟಲು ಸಹಿತ ಕ್ರಯ ರೂ. 1-0-0

ಏಜಂಟರು ಬೇಕು! ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್!

ದಕ್ಷಿಣ ಹಿಂದುಸ್ತಾನಕ್ಕೆಲ್ಲಾ ಏಜಂಟರು:—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

ಚೀನಾ ಬಜಾರ್ ರೋಡ್, ಮದರಾಸ್.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.



ಸೇಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [32-1]

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ $4\frac{1}{2}$ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
95 ,, ,, ,, 4 ,,	200 ,, ಟಿನ್ ,, 9 ,,	80 ,, ,, ,, 4 ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಕೊಡುವುದು

ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

S. UDIPI NARAYANACHARYA & Co.,
BANARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸಿರುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಕಣ, ಪೇಟ, ಕಾಶ್ಮೀರ್ ಶಾಲು, ದುಪ್ಪಟ, ಮಗುಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು, ಕೊನಾರ್ರಿಡು, ಅರಳೆ ಪೇಟ, ಧರ್ಮಶಾಸ್ತ್ರದ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೇಸ್ತ್ರಿಯಿಂದ ತಯಾರಿಸಿರುವೆವು. ಈ ಅಮೂಲ್ಯವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೇಟಲಾಗು ಒಂದು ಕಾಶಿ ಕಾಲಭೈರವನ ದಾರವನ್ನು ಇನಾಮಾಗಿ ಕಳುಹಿಸಲಾದೀತು. [119-30]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೇ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ಹೆಚ್ಚಾಗಿಯೋ ಬಿರುಸಾಗಿಯೋ ಇಳಿಯುವುದು; ಬಿಡದ ಬಾಯಾರಿಕೆ; ಬಳಲಿಕೆ; ಎದೆ ಕಲ್ಲಿಡಿಸುವುದು; ತಲೆನೋವು; ಗಾಬರಿ; ಕಣ್ಣುಮಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು; ಸಕ್ಕರೆ; ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮತಿಭ್ರಂಶ, ವಾಯು, ಮೈಬಾವು, ಉರಿಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಪಡಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವ ಹಾಗೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-24]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿರುವುವು



ರೂ. ೨—೦—೦ ; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿ ಅಂಗಡಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್ ೩೬ ಬಾಕ್ಸ್ ೫೨, ಬೊಂಬಾಯಿ ಇವರಲ್ಲಿ ದೊರೆಯುವುದು

ಕರ್ಣಿಕ ಎಗ್ಯ್ಯೂಮಿಕ್ಸ್ಚರ

ಎಲ್ಲಾ ಜ್ವರಗಳಿಗೂ ಖಂಡಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ವಿನ್ನೈಸುತ್ತೇವೆ. [213-18]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,
ಎಗ್ಯ್ಯೂಮಿಕ್ಸ್ಚರ್ ಡಿಪೋ, ಬೊಂಬಾಯಿ. 4.
KARNIK Bros., BOMBAY, 4.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು ! 10 ಮೊಳ !! ಬಾಳಿಕೆ ಬರುವದು !!!

ಹವಳದ ಬಳ್ಳಿ ಶೀರೆ. ರೂ. 2-8-0.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೀ ಮಲ್ಲಿನಲ್ಲಿ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಕಪ್ಪು ಅಂಚು

ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣಾ ಹೋಗದು ಇಂಥಾ ಭಾರಿ ಕ್ರಯದ ಶೀರೆಗಳು ಇದುವರೆಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಚಾತ್ರಿಕ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರಿಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು

ವಿಳಾಸ:— ರಾಸ್ ವಾಚ್ ಅಂಡ್ ಕಂಪನಿ,
[252-13] 3, ಇರುಳಪ್ಪನ ಬೀದಿ, ಮದರಾಸು

USE I. C. O. BRAND

[55-42]

Refined Edible Cotton Seed Oil.

For Cooking and Salads.

An appoved substitute for Ghee in all preparations. Price—

Re. 1-4-0 per tin of 3 lbs
„ 0-7-0 per „ of 1lb

Liberal Terms to Trade.

The Indian Co-Operative Stores Co., Ltd., 159, Kilari Road, Bangalore.

1,000 ರೂಪಾಯಿ ಬಹುಮಾನ



ಈ ವರೆವಿಗೂ ನಮ್ಮಲ್ಲಿಗೆ ಬಂದಿರುವ ಸಾವಿರಾರು ಯೋಗ್ಯತಾ ಪತ್ರಿಕೆಗಳಲ್ಲಿ ಕೆಲವನ್ನು ಇಲ್ಲಿ ಪ್ರಚುರಪಡಿಸಿರುತ್ತೇವೆ. ಇವುಗಳಲ್ಲಿ ಯಾವುದನ್ನಾದರೂ ನಕ್ಕಲ್ ಯೋಗ್ಯತಾಪತ್ರಿಕೆಯೆಂದು ವ್ಯಕ್ತಪಡಿಸಿದವರಿಗೆ ಮೇಲೆ ಕಂಡಿರುವ 1,000 ರೂಪಾಯಿ ಬಹುಮಾನ ಕೊಡುವೆವು.

ಡಿಲ್ಲಿವೈದ್ಯರು ಡಿ. ಮನ್ನಾಲಾಲ್‌ಯವರಿಂದ ತಯಾರುಮಾಡಲ್ಪಟ್ಟ ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬಾ.

(1) ತಾವು ಕಳುಹಿಸಿದ ಸಾಲಾಮಿಸ್ರಿ ಮುರಬ್ಬ ತೆಗೆದುಕೊಂಡದ್ದರಿಂದ ಬಹಳ ಗುಣಹೊಂದಿದೇನೆ. ನಿಮ್ಮ ಕ್ಯಾಟಲಾಗಿನಲ್ಲಿ ಕಾಣಿಸಿರುವಷ್ಟು ಗುಣವೂ ಸಂಪೂರ್ಣವಾಗಿ ಕೊಡುತ್ತದೆ ಎಂದು ಧಾರಾಳವಾಗಿ ಹೇಳುತ್ತೇನೆ. ದಯವಿಟ್ಟು ಇನ್ನೊಂದು ಡಬ್ಬಿಯನ್ನು ವಿ. ಪಿ. ಮೂಲಕ ಜಾಗ್ರತೆ ಕಳುಹಿಸಿರಿ. [37-1]

ತೀರ್ಥಹಳ್ಳಿ ಪೋಸ್ಟು, ಅಂಗಡಿ ಮಂಜಪ್ಪ,
6-12-1915 ಮೇಗರವಳ್ಳಿ.

(2) ನಿಮ್ಮ ಸಾಲಾಮಿಸ್ರಿ ಮುರಬ್ಬದಿಂದ ನನಗೆ ಇದ್ದ ...... ಕಾಯಿಲೆಯು ಗುಣ ಕಂಡುಬಂದದ್ದರಿಂದ ಇನ್ನು ಎರಡು ಡಬ್ಬಿ ಸಾಲಾಮಿಸ್ರಿ ಮುರಬ್ಬವನ್ನು ಕಳುಹಿಸಿರಿ.

ಹುಬ್ಬಳ್ಳಿ, ಗೋವಿಂದರಾವ ಗಾಡಗೀಳ,
23-8-1915. ಚಾಹ ದುಕಾನ.

(3) ನಿಮ್ಮ ಮುರಬ್ಬವನ್ನು ಅಶಕ್ತನಾಗಿದ್ದ ನನ್ನ ಕುಟುಂಬಕ್ಕೆ ಕೊಟ್ಟೆನು. ನಿಮ್ಮ ಪ್ರಕಟನೆಯಂತೆ ಅದನ್ನು ಸೇವಿಸಿದ್ದರಿಂದ ತುಂಬಾ ಗುಣಕೊಟ್ಟಿರುತ್ತೆ. ನಿಮ್ಮ ಔಷಧವು ಸರ್ವೋತ್ಕೃಷ್ಟವಾದದ್ದೆಂದು ನಾನು ನಿರ್ಧರವಾಗಿ ಹೇಳುತ್ತೇನೆ. ಇನ್ನೂ ಒಂದು ಡಬ್ಬಿಯನ್ನು ಸೇವಿಸಿದರೆ ಅನುಕೂಲವೆಂದು ತೋರುವುದರಿಂದ ಕೂಡಲೆ ಇನ್ನೊಂದು ಡಬ್ಬಿಯನ್ನು ರವಾನಿಸಿರಿ.

ಮೈಸೂರು, ಎಡಿಟರ್,
23-1-1916 ಕಾದಂಬರಿ ಸಂಗ್ರಹ ಆಫೀಸ್.

(4) ನನಗೆ ಎರಡು ವರ್ಷಗಳಿಂದ ..... ಇದ್ದ ಕಾಯಿಲೆಗಳಿಗೆ ಮೈಸೂರು ವೈದ್ಯರುಗಳಲ್ಲಿ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ಗುಣವಾಗದೆ ಕಷ್ಟಪಡುತ್ತಿದ್ದೆನು. ನಂತರ ಏನೋ ಕಾರಣಾಂತರದಿಂದ ಬೆಂಗಳೂರಿಗೆ ಬಂದಿದ್ದಾಗ್ಗೆ ನಿಮ್ಮಲ್ಲಿ ತೆಗೆದುಕೊಂಡ ಸಾಲಾಮಿಸ್ರಿ ಮುರಬ್ಬವನ್ನು ಸೇವನೆ ಮಾಡಿದ್ದರಿಂದ ಮೇಲ್ಕಂಡ ರೋಗ ಗುಣವಾಗಿರುತ್ತೆ. ಇದಕ್ಕೆ ಏನೇನೂ ಸಂಶಯವಿಲ್ಲ. ಈಗ ಪುನಹ ಸಾಲಾಮಿಸ್ರಿ ಮುರಬ್ಬವನ್ನೂ ಮತ್ತು ಕೆಲವು ಔಷಧಿಗಳನ್ನೂ ನಮ್ಮ ಅಳಿಯ ಕೃಷ್ಣರಾಯನ ಕೈಯಲ್ಲಿ ಕೊಟ್ಟು ಕಳುಹಿಸಿರಿ

ದೊಡ್ಡಪೇಟೆ, ಮೈಸೂರು, ಬಕ್ಷಿ ನರಸಪ್ಪನವರ ಮನೆಯಲ್ಲಿರುವ
29-7-1913 ಶ್ಯಾಮರಾಯ.

By Telegram :

(5) Send three tins of Salamisri Murabba by V. P. P.

Mandalay, P. R. V. ALGAPPA CHETTY.
30-12-1915.

(6) ನಿಮ್ಮ ಸಾಲಾಮಿಸ್ರಿ ಮುರಬ್ಬದಿಂದ ನನಗೆ ಬಹಳ ಶಕ್ತಿಯು ಕಂಡುಬಂದುದರಿಂದ ಇನ್ನು 3 ಡಬ್ಬಿಯನ್ನು ವಿ. ಪಿ. ಮೂಲಕ ಕಳುಹಿಸಿರಿ.

ಮಗೋಗಯಿ, ಬರ್ಮ, ಮಹಮ್ಮದ್ ಸಾಲೇಹ್,
25-12-1915. ಸ್ಕೂಲ್ ಮಾಸ್ಟರ್, ಜನರ್-ಉಲ್-ಇಸ್ಲಾಮ್.

(7) Your Panjab Salamisri Murabba, which you sent me on 24-11-1915, has given me entire satisfaction as it has improved my strength and health a good deal. I therefore wish to take some more time and requst you will please send me 6 tins of the above Murabba by V. P. P.

Malpe. S. Canara, GIRGITH HAYATH,
19-1-1916. Merchant.

(8)......It is with extream pleasure that I express my gratitude towards you. Your Salamisri Murabba has given me marvellous effect. I request you to send me one more tin of the sanme quality as soon as posible.

Aurangabad, G. Bhim Singh, S. Caps
13-1-1916. Clerk, Ex. En. Office.

ಕ್ರಯ ಡಬ್ಬಿ 1 ಕ್ಕೆ ರೂ. 2.
ಟಪಾಲ್ ಖರ್ಚು ಒಂದು ಡಬ್ಬಿ ಯಿಂದ 3 ಡಬ್ಬಿಗಳಿಗೆ 6 ಆಣೆ.

ಇದನ್ನು ಕೊಳ್ಳುವಾಗ ಇಲ್ಲಿ ಕಾಣುತ್ತಿರುವ ಟ್ರೇಡ್ ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿ. ಕೇಟಲಾಗು ಅಪೇಕ್ಷಿಸುವವರಿಗೆ ಪುಗಸಟ್ಟೆ ಕಳುಹಿಸುವೆವು. ನಮ್ಮ ವಿಳಾಸ—

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯ,
5, ಅವೆನ್ಯೂ ರೋಡ್,
ಬೆಂಗಳೂರು ಸಿಟಿ.

ಡೋಂಗರೆ ಜ್ಞಾವರ
ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿಮಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-24]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,
ಚೌಪಾಟಿ, ಗಿರಗಾಂವ, ಮುಂಬಯಿ.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ ?

ಅಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಅಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಲೆಂಜ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳಕೊಂಡ

ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಅಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಗನಾಲೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾರುವಂಥಾದ್ದು ಅಟೋ ಮೋಹಿನಿಯೇ

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ	3—0—0	½	„	„	0—8—0
1 ಡ್ರಾಮ್ ಕೊಳವೆಗೆ	„ 0—12—0	ಕಾರ್ಡು ಡಜನ್‌ಗೆ		....	0—12—0

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳಸುವಂಥಾದ್ದು. ಕಣ್ಣು ಮತ್ತು ಮೆದುಳಿಗೆ ತಂಪನ್ನೂ ಕೊಡಬಲ್ಲುದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಘನಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ ? ಇದೊಂದು ದೃಷ್ಟಾಂತವೇ ಸಾಕಾಗಿದೆ [282-8

ಕ್ರಯ 1 ಬಾಟ್ಲಿಗೆ ರೂ. 1-0-0
„ 3 „ „ 2-10-0.

ಸೋಲ್ ಏಜಂಟರು—ಸಾ ಭಗವಾನ್‌ದಾಸ್ ಚುನಿಲಾಲ್ ಕಂಪನಿ,
177, ಜೈನಾಬಜಾರ್ ರೋಡ್, ಮದರಾಸು.

ವೃತ್ತಾಂತ ಪತ್ರಿಕೆ.

—:o:—

೧೯೧೬ ನೇ ಇಸವಿ ಫೆಬ್ರವರಿ ತಾ. ೧೦ ನೇ ಗುರುವಾರ

ಮೈಸೂರು ಜೈಲುಖಾನೆಗಳು.

ಮೈಸೂರು ಸಂಸ್ಥಾನದ ಬಂದೀಖಾನೆಗಳ ಮತ್ತು ಲಾಕಪ್ಪುಗಳ ವಾರ್ಷಿಕ ರಿಪೋರ್ಟು ಪ್ರಕಟವಾಗಿದೆ. ಇದರಲ್ಲಿ ಕೆಲವು ಸ್ವಾರಸ್ಯವಾದ ವಿಷಯಗಳು ಬರೆಯಲ್ಪಟ್ಟಿರುತ್ತವೆ. ನಮ್ಮ ಸಂಸ್ಥಾನದೊಳಗೆ ಎರಡು ಬಂದೀಖಾನೆಗಳೂ, ಆರು ಡಿಸ್ಟ್ರಿಕ್ಟ್ ಲಾಕಪ್ಪುಗಳೂ, ಕೋಲಾರ್ ಚಿನ್ನದ ಗಣಿಗಳಲ್ಲಿ ಒಂದು ಸ್ಪೆಷಲ್ ಲಾಕಪ್ಪೂ, 71 ತಾಲ್ಲೂಕ್ ಲಾಕಪ್ಪುಗಳೂ ಇರುವವು. ಸರಾಸರಿ ನೋಡಿದರೆ ಈ ಬಂದೀಖಾನೆಗಳಲ್ಲೆಲ್ಲಾ ಒಟ್ಟು 1,251 ಮಂದಿ ಇಡಲ್ಪಟ್ಟಿದ್ದರೆಂದು ಗೊತ್ತಾಗುತ್ತದೆ.

ಕಳೆದ ಸಾಲ್ ಪ್ರಾರಂಭದಲ್ಲಿ ಬಂದೀಖಾನೆಗಳಲ್ಲಿ ಒಟ್ಟು 1,174 ಮಂದಿ ಖೈದಿಗಳಿದ್ದರು. ಕಳೆದ ವರುಷ 10,464 ಅಪರಾಧಿಗಳು ಶಿಕ್ಷೆ ಹೊಂದಿ ಬಂದು ಸೇರಿದರು. ಆ ಸಾಲಿನಲ್ಲಿ 10,282 ಮಂದಿ ಖೈದಿಗಳು ಬಿಡುಗಡೆ ಮಾಡಲ್ಪಟ್ಟಿದ್ದಾರೆ. ಇದರಿಂದ ಬಂದೀಖಾನೆಗಳೊಳಗೆ ಬಹಳ ಸ್ವಲ್ಪಕಾಲ ಇದ್ದು ಹೋಗತಕ್ಕವರೇ ವಿಶೇಷವೆಂದು ಗೊತ್ತಾಗುವುದು. ಆದಕಾರಣ ಅಲ್ಪಮಾತ್ರವಾದ ಅವಧಿಯುಳ್ಳಂಥಾ ಸಜಾ ಶಿಕ್ಷೆಯನ್ನು ವಿಧಿಸೋಣದರಿಂದ ಸಜಾ ಶಿಕ್ಷೆಯ ಭೀತಿ ಕಡಮೆಯಾಗುವದೆಂದು ಸರ್ಕಾರದವರು ಸೂಚಿಸಿರುವ ಅಭಿಪ್ರಾಯ ಸಹಜವೆಂದೇ ಕಾಣುತ್ತದೆ. ಯಾಕೆಂದರೆ ಇಂಥಾ ಸ್ವಲ್ಪ ಶಿಕ್ಷೆಯನ್ನು ಅನುಭವಿಸಿದವರು ಮತ್ತೆ ಕೆಟ್ಟ ಕೃತ್ಯಗಳನ್ನು ಮಾಡುವುದಕ್ಕೆ ಒಮ್ಮಟ್ಟಿಗೆ ಪ್ರೋತ್ಸಾಹವಾಗುವುದು.

ತಕ್ಸೀರುಗಳನ್ನು ಮಾಡಿ ಬಂದವರನ್ನು ಬಂದೀಖಾನೆಗಳಲ್ಲಿ ಖೈದಿಗಳೆಂದು ಪ್ರತ್ಯೇಕಮಾಡಿದಾರೆಂದೂ, ಇತರರು ಅವರ ಸಹವಾಸದಲ್ಲಿ ಇರುವದಿಲ್ಲವೆಂದೂ ತಿಳಿಸಲ್ಪಟ್ಟಿದೆ. ಆದರೆ ಅವರವರಿಗೆ ತಾರತಮ್ಯವೇನೋ ರಿಪೋರ್ಟಿನಲ್ಲಿ ಗೋಚರವಾಗುವದಿಲ್ಲ. ವರುಷದ ಆರಂಭದಲ್ಲಿ 926 ಮಂದಿ ಬಂದೀವಾಸರಿದ್ದರು. ಹೊಸದಾಗಿ ದಾಖಲಾದವರು ಸೇರಿ 2,530 ಮಂದಿ ಆದರು. ಮತ್ತೆ ಬಂದು ಸೇರಿಸಲ್ಪಟ್ಟವರು 91 ಮಂದಿ ವರುಷಾಂತ್ಯದಲ್ಲಿ ಬಂದೀವಾಸರು 1,007 ಮಂದಿ ಉಳಿದಿದ್ದರು. ಹೊಸದಾಗಿ ದಾಖಲಾದ ಬಂದೀವಾಸರ ಪೈಕಿ ಹೆಂಗಸರು 136 ಮಂದಿ. ಮತಗಳ ಪ್ರಕಾರ ಹಂಚಿ ನೋಡಿದರೆ ಕ್ರೈಸ್ತರು 143 ಮಂದಿಯೂ, ಮಹಮದೀಯರು 335 ಮಂದಿಯೂ, ಹಿಂದುಗಳು 2,058 ಮಂದಿಯೂ, ಜೈನರು 3 ಮಂದಿಯೂ ಇದ್ದಂತೆ ತಿಳಿಯುವುದು.

ಅನೇಕಾನೇಕ ಬಂದೀವಾಸರು ಅಕ್ಷರಸ್ಥರಲ್ಲ. 12 ಮಂದಿ ಮಾತ್ರ ಓದಬಲ್ಲರು; ಓದು ಬರಹ ಕಲಿತವರು 476 ಮಂದಿ ಇದ್ದರು. ಖೈದಿಗಳಲ್ಲಿ ಅನೇಕ ಜನರು ವ್ಯವಸಾಯ ಮಾಡತಕ್ಕವರು. ಸರ್ಕಾರದ ಅಥವಾ ಮ್ಯುನಿಸಿಪಾಲಿಟಿಗಳ ನೌಕರನೂಕರುಗಳೂ 91 ಮಂದಿ ಇದ್ದರು. ಇನ್ನು ಕೆಲವರು ಉತ್ತಮ ಸ್ಥಿತಿಗಳಲ್ಲಿದ್ದವರು; ಇಂಥವರು ದುಷ್ಕೃತ್ಯಗಳನ್ನು ಮಾಡಿ ಬಂದೀಖಾನೆಗೆ ಹೋದದ್ದು ತುಂಬಾ ಅವಮಾನಕರವಾಗಿರುತ್ತದೆ.

ಬಂದೀಖಾನೆಗಳಲ್ಲಿ ಇರತಕ್ಕ ಖೈದಿಗಳಿಗೆ ಅಲ್ಲೇ ಭಕ್ತಿ ಗುಣ ನಡತೆಗಳ ವಿಚಾರವಾಗಿ ಬೋಧನೆ ಮಾಡುವುದಕ್ಕೆ ಕೆಲವು ಮಟ್ಟಿಗೆ ಪ್ರಯತ್ನಗಳು ನಡೆಯುತ್ತಿರುವವು. ಬೆಂಗಳೂರಿನಲ್ಲಿ ಒಬ್ಬ ಕ್ರೈಸ್ತನೂ, ಒಬ್ಬ ಮಹಮದೀಯ ಮೌಲ್ವಿಯೂ, ರಾಮಕೃಷ್ಣ ಮತದ ಒಬ್ಬ ಸ್ವಾಮಿಯೂ ಜೈಲಿಗೆ ಪ್ರತಿ ವಾರವೂ ಹೋಗಿ ಬಂದೀವಾಸರಿಗೆ ಮತವಿಚಾರವಾಗಿಯೂ, ಸಚ್ಚರಿತ್ರೆಯ ವಿಚಾರವಾಗಿಯೂ ಬೋಧನೆ ಮಾಡುತ್ತಾರೆ. ಮೈಸೂರು ಜೈಲಿಗೆ ವೈಷ್ಣವ ಸಮಾಜದ ಒಬ್ಬ ಮೆಂಬರೂ, ಮಹಮದೀಯರ ಒಬ್ಬ ಖಾಜಿಯೂ ಹೋಗಿ ಬಂದೀವಾಸರಿಗೆ ಹಿತವಾಕ್ಯಗಳನ್ನು ಹೇಳುವರು. ಓದು ಬಲ್ಲ ಖೈದಿಗಳಿಗೆ ಮತಸಂಬಂಧವಾದ ಪುಸ್ತಕಗಳನ್ನೂ ಹಂಚಿರುತ್ತಾರೆ.

ಎಲ್ಲಾ ಒಟ್ಟುಕೂಡಿಸಿ ನೋಡಿದಲ್ಲಿ ಮೈಸೂರು ಮತ್ತು ಬೆಂಗಳೂರು ಬಂದೀಖಾನೆಗಳೊಳಗೆ ಖೈದಿಗಳು ಬಹಳ ಸುಖವಾಗಿದ್ದಾರೆಂದು ಹೇಳಬಹುದು. ಅವರಿಗೆ ಒಳ್ಳೆಯ ಆಹಾರವನ್ನು ಕೊಡುತ್ತಾರೆ. ಕಾಯಿಲೆಯಾದವರನ್ನು ನೋಡಿ ಚಿಕಿತ್ಸೆ ಮಾಡುವುದಕ್ಕೆ ವೈದ್ಯರನ್ನಿಟ್ಟಿದ್ದಾರೆ. ಕಳೆದ ವರುಷದಲ್ಲೆಲ್ಲಾ 17 ಮಂದಿ ಬಂದೀವಾಸರು ಕಾಲವಾದರು. ಬಂದೀಖಾನೆಗಳಲ್ಲಿ ಕ್ರಮಗಳು ತೃಪ್ತಿಕರವಾಗಿಲ್ಲವೆಂದು ಕಾಣುತ್ತದೆ. ಅದನ್ನು ಸರಿಪಡಿಸಿ ದರ್ಪಣವಬೇಕೆಂದು ಸೂಚಿಸುವೆವು. ಇದಲ್ಲದೆ ಬಂದೀಖಾನೆಗೆ ದಾಖಲಾದವರ ಗುಣ ನಡತೆಗಳನ್ನು ತಿದ್ದಿ ಸರಿಪಡಿಸುವುದಕ್ಕೆ ನಮ್ಮ ಸರ್ಕಾರದವರು ಪ್ರಯತ್ನಪಡುವವರಾಗಲೆಂದು ಪ್ರಾರ್ಥಿಸುತ್ತೇವೆ.

ಪಾಪವು ಕೊಡುವ ಸಂಬಳ ಮರಣ.

ಒಂದಾನೊಂದು ಊರಿನಲ್ಲಿ ಒಬ್ಬ ಬಡ ಕಮ್ಮಾರನಿದ್ದನು. ಅವನು ತನ್ನ ಊರಿನ ಜನಗಳಿಗೆ ಬೇಕಾದ ಕಬ್ಬಿಣದ ಸಾಮಾನುಗಳನ್ನು ಮಾಡಿಕೊಡುತ್ತಾ ಅದರಿಂದ ಬರುತ್ತಿದ್ದ ಕೂಲಿಯಿಂದ ಕಾಲಕ್ಷೇಪಮಾಡುತ್ತಿದ್ದನು. ಒಂದು ದಿನ ಅವನ ಬಳಿಗೆ ಒಬ್ಬ ಮನುಷ್ಯನು ಬಂದು—ಅಯ್ಯಾ! ಕಮ್ಮಾರನೇ, ನನಗೆ ಒಂದು ಕಬ್ಬಿಣದ ಸರಪಣಿಯು ಬೇಕಾಗಿದೆ; ನೀನು ನಿನ್ನಲ್ಲಿರುವ ಕಬ್ಬಿಣವನ್ನು ಹಾಕಿ ಒಂದು ಸರಪಣಿಯನ್ನು ಮಾಡು; ನಾನು ಆ ಕಬ್ಬಿಣಕ್ಕಾಗುವ ಕ್ರಯವನ್ನೂ ನಿನ್ನ ಮಜೂರಿಯನ್ನೂ ಒಟ್ಟಾಗಿ ಕೊಟ್ಟು ಆ ಸರಪಣಿಯನ್ನು ತೆಗೆದುಕೊಂಡು ಹೋಗುತ್ತೇನೆಂದು ಹೇಳಿ ಹೊರಟುಹೋದನು. ಅವನು ಹೋದ ಮೇಲೆ ಈ ಕಮ್ಮಾರನು—ಆ ಮನುಷ್ಯನ ರೀತಿಯನ್ನು ನೋಡಿದರೆ, ತುಂಬಾ ಧನಿಕನಾಗಿ ತೋರುತ್ತಾನೆ; ಇಂಥವನ ಸೇವೆಯನ್ನು ಮಾಡಿದರೆ, ನನ್ನ ಬಡತನದ ಹೊಟ್ಟೆಬಾಳು ನೀಗಿ ಮುಂದೆ ಶಾಶ್ವತವಾದ ಸುಖವು ಪ್ರಾಪ್ತವಾದೀತೆಂದು ತುಂಬಾ ನಿರೀಕ್ಷೆಯಿಂದಲೂ ಸಂತೋಷದಿಂದಲೂ ಕೂಡಿದವನಾಗಿ ತನ್ನಲ್ಲಿದ್ದ ಕಬ್ಬಿಣವನ್ನು ತೆಗೆದುಕೊಂಡು ಒಂದು ಸರಪಣಿಯನ್ನು ಮಾಡುವದಕ್ಕೆ ಪ್ರಾರಂಭಿಸಿದನು. ಎರಡು ಮೂರು ದಿನಗಳ ತರುವಾಯ ಆ ಮನುಷ್ಯನು ತಿರಿಗಿ ಆ ಕಮ್ಮಾರನ ಬಳಿಗೆ ಬಂದು ಅವನು ಮಾಡಿದ್ದ ಸರಪಣಿಯನ್ನು ನೋಡಿ—ಇದು ಬಹಳ ಚನ್ನಾಗಿದೆ; ಶಹಬಾಸ್; ಆದರೆ ಉದ್ದ ಮಾತ್ರ ಇಷ್ಟೇ ಸಾಲದು; ಇನ್ನೂ ಸ್ವಲ್ಪ ಉದ್ದವಾಗಿ ಮಾಡು; ನಾನು ಮತ್ತೊಂದು ದಿನ ಬರುತ್ತೇನೆಂದು ಹೇಳಿ ಹೊರಟುಹೋದನು. ಇತ್ತ ಆ ಕಮ್ಮಾರನು ತಾನು ಮಾಡಿದ್ದ ಕೆಲಸವು ಆ ಮನುಷ್ಯನಿಗೆ ಮೆಚ್ಚಿಗೆಯಾದದ್ದನ್ನು ಕಂಡು ಸಂತೋಷದಿಂದ ಹಿಗ್ಗಿದವನಾಗಿ, ಅವನು ಹೇಳಿದಂತೆ ಆ ಸರಪಣಿಯನ್ನು ಮತ್ತಷ್ಟು ಉದ್ದವಾಗಿ ಮಾಡಲುಪಕ್ರಮಿಸಿದನು. ಇನ್ನು ಕೆಲವು ದಿನಗಳ ನಂತರ ಆ ಮನುಷ್ಯನು ಮೂರನೇಸಾರಿ ಆ ಕಮ್ಮಾರನ ಬಳಿಗೆ ಬಂದು ಆ ಸರಪಣಿಯನ್ನು ನೋಡಿ—ಎಲ್ಲಾ ಸರಿ; ಬಹಳ ಚೆನ್ನಾಗಿದೆ; ಆದರೆ ಉದ್ದ ಮಾತ್ರ ಇನ್ನೂ ಸಾಲದು; ನಿನ್ನ ಕೈಯಲ್ಲಿ ಸಾಧ್ಯವಾಗುವ ಮಟ್ಟಿಗೂ ಉದ್ದವಾಗಿ ಮಾಡು; ನಿನಗೆ ಒಳ್ಳೇ ಪ್ರತಿಫಲ ಕೊಡುತ್ತೇನೆಂದು ಹೇಳಿ ಹಿಂದಿರುಗಿದನು. ಇತ್ತಲಾ ಕಮ್ಮಾರನು ತನಗೆ ಕಡೆಯಲ್ಲಿ ದೊಡ್ಡ ಗಂಟು ಸಿಕ್ಕುವದೆಂಬ ಆಶೆಯಿಂದ ತನ್ನಲ್ಲಿ ಇದ್ದಬದ್ದ ಕಬ್ಬಿಣವನ್ನೆಲ್ಲಾ ಹಾಕಿ ರಾತ್ರಿ ಹಗಲೆನ್ನದೆ ತನ್ನ ಬುದ್ಧಿಶಕ್ತಿಗಳನ್ನೆಲ್ಲಾ ಉಪಯೋಗಿಸಿ ಬಹಳ ಉದ್ದವಾದ ಸರಪಣಿಯನ್ನು ಮಾಡಿಟ್ಟುಕೊಂಡು ಆ ಮನುಷ್ಯನ ಆಗಮನವನ್ನು ನಿರೀಕ್ಷಿಸುತ್ತಾ ಕಾದಿದ್ದನು. ಕಡೆಯಲ್ಲಿ ಆ ಮನುಷ್ಯನು ಬಂದು, ಆ ಉದ್ದವಾದ ಸರಪಣಿಯನ್ನು ತೆಗೆದುಕೊಂಡು ಅದೇ ಸರಪಣಿಯಿಂದ ಆ ಕಮ್ಮಾರನನ್ನು ಕಟ್ಟಿ ಸೆರೆಮನೆಯಲ್ಲಿ ಹಾಕಿಬಿಟ್ಟನು. ಆಗ ಆ ಬಡ ಕಮ್ಮಾರನು—ಅಕಟಾ, ಮೋಸಹೋದೆನು; ಈ ಮನುಷ್ಯನು ಇಂಥ ಮೋಸಗಾರನೂ ಕ್ರೂರಾತ್ಮನೂ ಆಗಿದ್ದಾನೆಂಬುವದು ನನಗೆ ತಿಳಿಯದೆ ಹೋಯಿತಲ್ಲಾ! ನಾನು ಮಾಡಿದ ಸರಪಣಿಯು ನನ್ನ ಕೈಕಾಲುಗಳಿಗೇ ಸಂಕೋಲೆಯಾಯಿತಲ್ಲಾ! ಎಂದು ಪ್ರಲಾಪಿಸಿ ಗೋಳಾಡಿದನು.

ಮನುಷ್ಯರಾದ ನಾವು ಮೇಲೆ ಕಂಡ ದೃಷ್ಟಾಂತದಲ್ಲಿ ಹೇಳಿರುವ ಆ ಬಡ ಕಮ್ಮಾರನಿಗೆ ಸಮಾನರಾಗಿರುತ್ತೇವೆ. ಪಾಪವು ಆ ಮೋಸಗಾರನಿಗೆ ಸಮಾನವಾಗಿರುತ್ತದೆ. ಪಾಪದ ಇಚ್ಛೆಗಳು ನಮ್ಮಲ್ಲಿ ಮೊಟ್ಟಮೊದಲು ಹುಟ್ಟುವಾಗ ಅದರಿಂದ ನಮಗೊಂದು ಶಾಶ್ವತವಾದ ಸುಖವು ಲಭ್ಯವಾಗುವದಕ್ಕಿದೆ ಎಂಬ ಭ್ರಾಂತಿಯಿಂದ ನಮ್ಮ ತನುಮನಗಳನ್ನು ಆ ಕಾರ್ಯಕ್ಕೆ ಒಪ್ಪಿಸಿಕೊಟ್ಟು ಅದರಲ್ಲಿ ಆಸಕ್ತರಾಗುತ್ತೇವೆ. ಪಾಪಭೋಗದ ಕೆಟ್ಟ ಸಂತೋಷವು ಆ ಕಾರ್ಯದಲ್ಲಿ ನಮ್ಮನ್ನು ಆಗಿಂದಾಗ್ಗೆ ಪ್ರೋತ್ಸಾಹಪಡಿಸಿ ಅದರಲ್ಲಿ ನಿರತರಾಗಿರುವಂತೆ ಮುಖೋಪಚನೆ ಮಾಡುತ್ತಿರುವದು. ಪಾಪವೆಂಬ ಈ ಕ್ರೂರಾತ್ಮನ ಸೇವೆಗೆ ತಮ್ಮ ಕಾಲವನ್ನೂ ಬುದ್ಧಿಯನ್ನೂ ಶಕ್ತಿಯನ್ನೂ ಧನವನ್ನೂ ವಿನಿಯೋಗಿಸಿ ಅದರಲ್ಲಿ ನಿರತರಾಗಿರುವವರಿಗೆ ಸಿಕ್ಕುವ ಪ್ರತಿಫಲವೇನು? ಅವನವನು ಮಾಡುತ್ತಾ ಬರುವ ಪಾಪಕೃತ್ಯಗಳಿಂದಲೇ ಅವನವನು ಬಂಧಿಸಲ್ಪಟ್ಟು ಕಟ್ಟಕಡೆಯಲ್ಲಿ ಯಮಕೂಪದಲ್ಲಿ ಹಾಕಲ್ಪಡುವದೇ. ಇದೇ ಪಾಪವು ಕೊಡುವ ಸಂಬಳ.

ಅಕಟಾ! ಪಾಪವೆಂಬ ಕ್ರೂರವಾದ ಯಜಮಾನನ ಸೇವೆಯಿಂದ ಮನುಷ್ಯನಿಗೆ ಬರುವ ಪ್ರತಿಫಲವು ಎಷ್ಟು ಭೀಕರವಾಗಿರುತ್ತದೆ! ಇದರಿಂದ ಜನರು ಅನುಭವಿಸುತ್ತಿರುವ ಕಷ್ಟನಷ್ಟಗಳನ್ನು ಯಾರು ತಾನೇ ವಿವರಿಸಬಲ್ಲರು? ಇಂಥ ಕ್ರೂರನಾದ ಯಜಮಾನನ ಪಾಶಕ್ಕೆ ಸಿಕ್ಕಿ ಬೀಳದಿರುವ ಮಾನವರುಂಟೇ? ಹೀಗೆ ಪಾಪದ ಸೆರೆಬಿದ್ದವರಿಗೆ ಬಿಡುಗಡೆಯಾಗುವ ನಿರೀಕ್ಷೆಯು ಇರುತ್ತದೆಯೋ? ಅನೇಕಾನೇಕರು ತಾವು ಬಿದ್ದಿರುವ ಹೇಯವಾದ ಸ್ಥಿತಿಯಲ್ಲಿ ಕೇವಲ ಅತೃಪ್ತಿಪಟ್ಟವರಾಗಿ ಅದರಿಂದ ಬಿಡುಗಡೆಯಾಗುವ ಮಾರ್ಗವನ್ನು ಹುಡುಕುತ್ತಿರುವರು. ಮನುಷ್ಯನು ಎಷ್ಟೇ ಪ್ರಯತ್ನಗಳನ್ನು ಮಾಡಿದಾಗ್ಯೂ ಪಾಪದ ಬಂಧದಿಂದ ತನ್ನನ್ನು ಬಿಡಿಸಿಕೊಳ್ಳುವದು ತನ್ನ ಶಕ್ತಿಗೆ ಮೀರಿದ್ದಾಗಿದೆ ಎಂಬುವದು ಅನುಭವಕ್ಕೆ ಬರುವದು. ಮಾನವರನ್ನು ಬಂಧಿಸಿರುವ ಪಾಪಬಂಧನದಿಂದ ಅವರನ್ನು ಬಿಡಿಸುವಷ್ಟು ಸಮರ್ಥನಾದ ಒಬ್ಬ ಸಹಾಯಕನು ಸಿಕ್ಕುವದುಂಟೇ? ಅಂಥಾತನು ಸಿಕ್ಕುವ ಪಕ್ಷದಲ್ಲಿ ಆತನ ಮರೆಹೊಕ್ಕು ಆತನು ಕೊಡುವ ಸಹಾಯದಿಂದ ಬಂಧವಿಮೋಚನೆಯನ್ನು ಹೊಂದುವದು ಪ್ರತಿಯೊಬ್ಬರಿಗೂ ಪರಮಾವಶ್ಯಕವಾಗಿರುವದಿಲ್ಲವೇ? ಅಂಥ ರಕ್ಷಕನು ಯಾರು? ಯೇಸು ಕ್ರಿಸ್ತನು ಪಾಪದ ಪಾಶಗಳನ್ನು ಹರಿದು ಮನುಷ್ಯರಿಗೆ ಬಿಡುಗಡೆಯನ್ನುಂಟುಮಾಡುವ ಸಹಾಯಕನಾಗಿದ್ದಾನೆಂದು ಕ್ರೈಸ್ತ ಮತವು ಬೋಧಿಸುತ್ತದೆ. ಈತನಿಂದ ಬಿಡುಗಡೆಯನ್ನು ಹೊಂದಿದವರು ದೇವರನ್ನು ತಮ್ಮ ಯಜಮಾನನನ್ನಾಗಿ ಮಾಡಿಕೊಂಡು ಆತನಿಗೆ ವಿಧೇಯರಾಗಿ ಜೀವಿಸಿ, ಆತನು ಉಚಿತಾರ್ಥವಾಗಿ ದಯಪಾಲಿಸುವ ನಿತ್ಯಜೀವವನ್ನು ಪಡೆಯುತ್ತಾರೆ.

“ನೀವು ಸಹ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ. ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ. ಇದು ಮಾತ್ರವಲ್ಲದೆ, ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಕೃತ್ಯವನ್ನು ನಡಿಸುವ ಸಾಧನಗಳಾಗ ಮಾಡಬೇಡಿರಿ. ಆದರೆ ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡಿಸುವ ಸಾಧನಗಳಾಗ ಮಾಡಿರಿ. ನೀವು ಯಾವನಿಗೆ ಆಳುಗಳಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿ ಕೊಡುತ್ತೀರೋ ಆ ಯಜಮಾನನಿಗೆ ಆಳುಗಳಾಗಿಯೇ ಇರುವಿರೆಂಬುವದು ನಿಮಗೆ ಗೊತ್ತಿಲ್ಲವೋ? ಪಾಪಕ್ಕೆ ಆಳುಗಳಾದರೆ, ಮರಣವೇ ಫಲ; ದೇವರಿಗೆ ಆಳುಗಳಾದರೆ ನೀತಿಯೇ ಫಲ. ಅಧರ್ಮ ಮಾಡುವದಕ್ಕಾಗಿ ನಿಮ್ಮ ಅಂಗಗಳನ್ನು ಬಂಡುತನಕ್ಕೂ ಅಧರ್ಮಕ್ಕೂ ಆಳುಗಳಾಗಿ ಒಪ್ಪಿಸಿ ಕೊಟ್ಟಿದ್ದಂತೆಯೇ ಈಗ ಪರಿಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಗೆ ಆಳುಗಳಾಗಿ ಒಪ್ಪಿಸಿಕೊಡಿರಿ. ನೀವು ಪಾಪಕ್ಕೆ ಆಳುಗಳಾಗಿದ್ದಾಗ ನೀತಿಯ ಹಂಗಿನವರಾಗಿದ್ದಿಲ್ಲ. ಆದರೆ ನೀವು ಆವಾಗ ಮಾಡಿದ ಕೃತ್ಯಗಳಿಂದ ನಿಮಗುಂಟಾದ ಫಲವೇನು? ಈಗ ಅವುಗಳ ವಿಷಯದಲ್ಲಿ ನಿಮಗೆ ನಾಚಿಕೆಯುಂಟಷ್ಟೆ. ಕಡೆಗೆ ಅವುಗಳಿಂದ ಬರುವದು ಮರಣವೇ. ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ಆಳುಗಳಾದದರಿಂದ ಪರಿಶುದ್ಧರಾಗುವದೇ ನಿಮಗೆ ಫಲ. ಕಡೆಗೆ ದೊರೆಯುವಂಥಾದ್ದು ನಿತ್ಯಜೀವ. ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ.”

ಯುದ್ಧದ ಸಮಾಚಾರಗಳು.

ಇಂಗ್ಲೆಂಡಿಗೆ ಜೆಪ್ಪೆಲಿನ್ ದರೋಡೆ.

ರಣರಂಗಗಳಲ್ಲಿ ಕದನಗಳು ನಡೆದಿರುವ ಸುದ್ದಿಗಳು ಈ ವಾರ ಬಹಳ ಸ್ವಲ್ಪ; ಆ ಪೈಕಿ ವಿಶೇಷವಾದದ್ದೇನೂ ಕಾಣುವದಿಲ್ಲ. ಆದಾಗ್ಯೂ ಎಲ್ಲಾ ಯುದ್ಧಭೂಮಿಗಳಲ್ಲೂ ಅಲ್ಪಮಾತ್ರವಾದ ಕದನಗಳು ಅನೇಕವಾಗಿ ನಡೆದಿರುತ್ತವೆ.

ಪಶ್ಚಿಮ ರಣರಂಗದಲ್ಲಿ.

ಜರ್ಮನಿಯವರು ಫ್ರೆಂಚರ ಮೇಲೆ ನುಗ್ಗಿ ಕದನ ಮಾಡಿ ಎರಡು ಮೈಲಿ ಉದ್ದ ಒಂದು ಮೈಲಿ ಅಗಲವುಳ್ಳ ಸ್ವಲ್ಪ ಪ್ರದೇಶವನ್ನು ಫ್ರೆಂಚರಿಂದ ಗೆದ್ದುಕೊಂಡೆವೆಂದು ಹೇಳುತ್ತಾರೆ ಆದರೆ ಫ್ರೆಂಚರು ತಿಳಿಸಿರುವ ಪ್ರಕಾರ ಫ್ರೆಂಚರು ಜರ್ಮನಿಯವರನ್ನು ಬಹಳ ದೂರ ಹಿಮ್ಮೆಟ್ಟಿಸಿದರೆಂದು ಗೊತ್ತಾಗುವುದು.

ಎರಡು ಪಕ್ಷಗಳಲ್ಲೂ ಫಿರಂಗಿ ಗುಂಡುಗಳ ಹೋರಾಟಗಳೂ, ಸುರಂಗಗಳನ್ನು ಹಾರಿಸಿದ್ದೂ ನಡೆದಿರುತ್ತವೆ. ಇದಲ್ಲದೆ ಅನೇಕ ಸಣ್ಣ ಪುಟ್ಟ ಕದನಗಳೂ ಆದವು. ಈ ಪೈಕಿ ಒಂದು ಕದನದಲ್ಲಿ ಬ್ರಿಟಿಷ್ ಸೈನಿಕರು ಶತ್ರು ಸೈನ್ಯದಲ್ಲಿ ಮೂವತ್ತು ಮಂದಿ ಯುದ್ಧಭಟರನ್ನು ಕೊಂದುಹಾಕಿ, ಮೂರು ಮಂದಿಯನ್ನು ಕೈಸೆರೆ ಹಿಡಿದುಕೊಂಡು, ಎರಡು ಮೆಷೀನ್ ಫಿರಂಗಿಗಳನ್ನು ನಾಶಮಾಡಿದರು.

ಜರ್ಮನಿಯವರ ಜೆಪ್ಪೆಲಿನ್ ಎಂಬ ಭಾರೀ ವಿಮಾನ ಯಂತ್ರಗಳ ಹಾವಳಿಯು ಮತ್ತೆ ವಿಶೇಷವಾಗಿದೆ. ಅವು ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ನಗರಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಹಾಳುಮಾಡಬೇಕೆಂದು ಪ್ರಯತ್ನಪಟ್ಟವು ಈ ಉದ್ದೇಶದಿಂದ ಕೆಲವು ಸಿಡಿಮದ್ದಿನ ಗುಂಡುಗಳನ್ನು ಹಾಕಿದಾಗ್ಯೂ ಅವುಗಳಿಂದ ವಿಶೇಷ ನಷ್ಟವೇನೂ ಸಂಭವಿಸಲಿಲ್ಲ. ಆ ವಿಮಾನ ಯಂತ್ರಗಳು ಇಂಗ್ಲೆಂಡಿನ ಮೇಲೆ ಹಾರಿಬಂದವು. ಅವು ಇಂಗ್ಲೆಂಡಿನ ಮಧ್ಯದೇಶದ ತನಕ ನುಗ್ಗಿ ಬಂದವು. ಬಹಳ ವಿಸ್ತಾರವಾದ ಪ್ರದೇಶದ ಮೇಲೆಲ್ಲಾ ಅವು ಸುಮಾರು 300 ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಇವುಗಳ ದೆಸೆಯಿಂದ ಒಟ್ಟು 59 ಪ್ರಜೆಗಳು ಮೃತರಾದರು, 101 ಜನರಿಗೆ ಗಾಯಗಳಾಗಿವೆ. ಕೆಲವು ಕಡೆಗಳಲ್ಲಿ ಆಸ್ತಿಪಾಸ್ತಿಗಳೂ ನಷ್ಟ ಹೊಂದಿದವು. ಒಂದು ಸ್ಥಳದಲ್ಲಿ ಸ್ತ್ರೀಯರು ಕೂಡಿಕೊಂಡು ಒಂದು ಸಭೆಯನ್ನು ನಡಿಸುತ್ತಿದ್ದರು. ಒಬ್ಬ ಸ್ತ್ರೀಯು ಅಗ್ರಸ್ಥಾನವನ್ನು ವಹಿಸಿ ಉಪನ್ಯಾಸವನ್ನು ಓದುತ್ತಿರುವಾಗ ಸಿಡಿಮದ್ದಿನ ಗುಂಡು ಬಿದ್ದಿತು. ಆಕೆಯೂ, ಇನ್ನಿಬ್ಬರು ಸ್ತ್ರೀಯರೂ ತತ್ಕ್ಷಣವೇ ಮೃತಪಟ್ಟರು. ಇನ್ನೊಂದು ಊರಿನಲ್ಲಿ ಒಂದು ಮನೆಯೊಳಗಿದ್ದ ತಾತ, ಅಜ್ಜಿ, ಮಗಳು, ಇಬ್ಬರು ಮಕ್ಕಳು, ಅಂತು ಐದು ಮಂದಿ ಅಕಾಲಮರಣ ಹೊಂದಿದರು. ಮತ್ತೊಂದು ಪ್ರದೇಶದಲ್ಲಿ ಐವತ್ತು ಸಿಡಿಮದ್ದಿನ ಗುಂಡುಗಳು ಬಿದ್ದು ಒಡೆದವು. ಮೂರು ಮಂದಿ ಮಾತ್ರ ಈ ಕ್ರೂರಕೃತ್ಯಕ್ಕೆ ಸಿಕ್ಕಿ ಮೃತಪಟ್ಟರು.

ಮೇಲ್ಕಂಡ ಜೆಪ್ಪೆಲಿನ್‌ಗಳ ಪೈಕಿ ಒಂದು ಮುರಿದು ಹೋಗಿ ಉತ್ತರ ಕಡಲಿನಲ್ಲಿ ಬಿದ್ದುಕೊಂಡಿತು. ಅದರ ಒಂದು ಭಾಗ ನೀರಿನ ಮೇಲೆ ತೇಲುತ್ತಿತ್ತು. ಅದರಲ್ಲಿ ಸುಮಾರು ಇಪ್ಪತ್ತು ಮಂದಿ ಪ್ರಾಣ ರಕ್ಷಣೆಗಾಗಿ ನಿಂತು ಇದ್ದರು. ಒಂದು ಸಣ್ಣ ಹಡಗು ಆ ಮಾರ್ಗವಾಗಿ ಹೋಗುತ್ತಾ ಇರುವಾಗ ಅವರು ಅದರಲ್ಲಿದ್ದವರನ್ನು ಕೂಗಿ ತಮ್ಮನ್ನು ಬದುಕಿಸಬೇಕೆಂದು ಬೇಡಿಕೊಂಡರು. ಆ ಸಣ್ಣ ಹಡಗಿನಲ್ಲಿದ್ದವರು ಬಹಳ ಸ್ವಲ್ಪ ಮಂದಿಯಾದದ್ದರಿಂದ ಇವರು ಆ ಜರ್ಮನಿಯವರನ್ನು ಕರೆದು ತಮ್ಮ ಹಡಗಿನಲ್ಲಿ ಕೂರಿಸಿಕೊಂಡರೆ ಅವರು ತಮ್ಮನ್ನೆಲ್ಲ ಕಟ್ಟಿ ಹಾಕಿ ಹಿಂಸೆ ಪಡಿಸುವರೋ ಎಂದು ಭೀತಿಪಟ್ಟು ಹೊರಟು ಹೋಗಿ ಸಮುದ್ರ ತೀರವನ್ನು ತಲಪಿ ಅಲ್ಲಿ ಆ ಸುದ್ದಿಯನ್ನು ತಿಳಿಸಿದರು. ಜರ್ಮನಿಯವರ ಮಾತಿನಲ್ಲಿ ನಂಬಿಕೆ ತಪ್ಪಿಹೋಗಿರುವುದರಿಂದಲೇ ಅವರು ಆ ವಿಮಾನದಲ್ಲಿ ಸಿಕ್ಕಿಕೊಂಡಿದ್ದ ಜರ್ಮನಿಯವರನ್ನು ಬದುಕಿಸದೆ ಹೊರಟು ಬಂದರು.

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದಲ್ಲಿ ವಿಶೇಷ ಯುದ್ಧಗಳು ನಡೆದ ವರ್ತಮಾನವೇನೂ ಬಂದಿರುವುದಿಲ್ಲ. ಕೆಲವು ಠಾಣ್ಯಗಳಲ್ಲಿ ರಷ್ಯಾದವರು ಮುಂದಕ್ಕೆ ನುಗ್ಗಿ ಹೋಗಿದ್ದಾರೆ; ಇನ್ನು ಕೆಲವು ಕಡೆಗಳಲ್ಲಿ ಜರ್ಮನಿಯವರು ನುಗ್ಗಿ ಬರದಂತೆ ನಿರ್ಬಂಧಪಡಿಸಿದ್ದಾರೆ.

ಇಟಲಿ.

ಕೆಲವು ಯುದ್ಧ ಸಾಲುಗಳಲ್ಲಿ ಆಸ್ಟ್ರಿಯಾದವರು ಬಹು ಕ್ರೂರವಾಗಿಯೂ ಪರಾಕ್ರಮದಿಂದಲೂ ಇಟಲಿಯವರ ಮೇಲೆ ನುಗ್ಗಿ ಅವರನ್ನು ಹಿಂದಕ್ಕೆ ಓಡಿಸಬೇಕೆಂದು ಸಾಹಸ ಪಟ್ಟರು. ಅದು ಸಾರ್ಥಕವಾಗಲಿಲ್ಲ. ಇಟಲಿಯವರು ಅವರಿಗೆ ಸ್ಥಳಕೊಡದೆ ಅವರನ್ನೆಲ್ಲಾ ಹಿಂದಕ್ಕೆ ಓಡಿಸಿರುತ್ತಾರೆ. ಇದರಲ್ಲಿ ಇಟಲಿಯವರಿಗೆ ಹೆಚ್ಚು ಭೂಪ್ರದೇಶವೇನೂ ಸ್ವಾಧೀನವಾಗಲಿಲ್ಲ.

ಆಸ್ಟ್ರಿಯಾದವರ ಯುದ್ಧದ ಹಡಗುಗಳು ಇಟಲಿ ತೀರದಲ್ಲಿರುವ ಕೆಲವು ಪಟ್ಟಣಗಳಿಗೆ ಗುಂಡು ಹೊಡೆದು ಮುತ್ತಿಗೆ ಹಾಕಿದವು. ಅಷ್ಟರೊಳಗೇ ತೀರದ ಕೋಟೆ ಕೊತ್ತಲಗಳಿಂದ ಫಿರಂಗಿ ಗುಂಡುಗಳನ್ನು ಹೊಡೆದದ್ದರಿಂದ ಆ ಗುಂಡುಗಳೆಲ್ಲಾ ಹಿಂದಕ್ಕೆ ಓಡಿಹೋದವು.

ಪರ್ವತಗಳ ಮೇಲೆ ಸಿಡಿಮದ್ದಿನ ಗುಂಡುಗಳು ಬಿದ್ದು ಒಡೆದಾಗ ಬಂಡೆಗಳು ಒಡೆದು ಕಲ್ಲು ಚೂರುಗಳು ಕಣ್ಣುಗಳಿಗೆ ತಗಲಿ ಆಸ್ಟ್ರಿಯಾ ಸೈನಿಕರಲ್ಲಿ 70,000 ಮಂದಿ ಕುರುಡರಾದರೆಂದು ಹೇಳಲಾಗಿದೆ.

ಟರ್ಕಿಯಲ್ಲಿ.

ಕಾಕಸಸ್ ಪರ್ವತ ಪ್ರಾಂತ್ಯದಲ್ಲಿ ರಷ್ಯಾದವರು ಮುಂದು ಮುಂದಕ್ಕೆ ನುಗ್ಗಿಹೋಗುತ್ತಿದ್ದಾರೆ. ಅವರು ಪರ್ವತದ ಮೇಲೆ ಇದ್ದರು. ಅಲ್ಲಿಂದ ನಲವತ್ತು ಮೈಲಿ ಅಗಲಕ್ಕೆ ಅವರ ಸೈನ್ಯಗಳು ವಿಸ್ತರಿಸಿಕೊಂಡು ಕೆಳಗಡೆಗೆ ನುಗ್ಗಿ ಬಂದು ಎದುರಿಗಿದ್ದ ಟರ್ಕಿ ಸೈನಿಕರನ್ನೆಲ್ಲಾ ಹಿಂದು ಹಿಂದಕ್ಕೆ ಓಡಿಸಿ ಬಿಟ್ಟರು. ರಷ್ಯಾದವರು ಎರ್ಜರೂಮ್ ನಗರವನ್ನು ಸುತ್ತು ಹಾಕಿ ಮುತ್ತಿಕೊಳ್ಳಬೇಕೆಂದು ಸಾಹಸ ಪಡುತ್ತಿದ್ದಾರೆ. ಅನೇಕ ಟರ್ಕಿ ಸೈನ್ಯಗಳು ನಾಶಮಾಡಲ್ಪಟ್ಟವು. ಟರ್ಕಿ ರಾಜಧಾನಿಯಿಂದ ಹೊಸ ಸೈನ್ಯಗಳು ಹೋಗಬೇಕಾಗಿದೆಯಂತೆ.

ಟರ್ಕಿ ರಾಜ್ಯದ ಯುವರಾಜರು ಸತ್ತು ಹೋದರು. ಒಂದು ಸುದ್ದಿಯು ಅವರು ಆತ್ಮಹತ್ಯ ಮಾಡಿಕೊಂಡರೆಂದೂ, ಇನ್ನೊಂದು ವರ್ತಮಾನವು ಅವರನ್ನು ಕೊಂದುಹಾಕಿಬಿಟ್ಟರೆಂದೂ ತಿಳಿಸುತ್ತವೆ.

ಮೆಸೊಪೊಟೇಮಿಯಾದಲ್ಲಿ ನದಿಯೊಳಗೆ ಪ್ರವಾಹ ಹೆಚ್ಚಿರುವ ಕಾರಣ ಬ್ರಿಟಿಷ್ ಸೈನ್ಯಗಳು ಮುಂದಕ್ಕೆ ನುಗ್ಗಿಹೋಗದಂತೆ ಅಡ್ಡಿಯಾಗಿರುತ್ತದೆ. ಒಂದು

ಗಳೂ ಪ್ರವಾಹ ನುಗ್ಗಿದ್ದರಿಂದ ಆಘಾತಿಳಿದ್ದಗಿದ್ದ ಟರ್ಕಿ ಸೈನಿ ದೂರಕ್ಕಿಂತಲೂ ಹೆಚ್ಚಾಗಿಯೇ ಹಿಂದಕ್ಕೆ ಹೋಗಬೇಕಾ ದಿಂದ ಬ್ರಿಟಿಷರು ಹೋಗಿ ಆ ಕಂದಕಗಳನ್ನೆಲ್ಲಾ ಆಕ್ರಮಿಸಿ ಅವುಗಳೊಳಗೆ ಟರ್ಕಿಯವರ ಅನೇಕ ಹೆಣಗಳು ಬಿದ್ದಿದ್ದವು. ರು ಒಂದು ಕಡೆ ನುಗ್ಗಿಹೋಗಿ ಅರಬ್ಬಿಯವರ ಠಾಣ್ಯಕ್ಕೆ ಮುತ್ತಿಗೆ ಅನೇಕ ಕುರಿ ಗೋಣಿಯಗಳನ್ನು ಸ್ವಾಧೀನಪಡಿಸಿಕೊಂಡರು.

ಬಾಲ್ಕನ್ ಸಂಸ್ಥಾನಗಳಲ್ಲಿ.

ಸಂಸ್ಥಾನದಿಂದ ಬಂದಿರುವ ವರ್ತಮಾನಗಳು ಸಮಂಜಸವಾಗಿಲ್ಲ. ಮತ್ತು ಆಸ್ಟ್ರಿಯಾ ಸೈನ್ಯಗಳು ಗ್ರೀಸ್ ರಾಜ್ಯದ ಎಲ್ಲೆಕಟ್ಟಿನ ಸಮೀ ಹತ್ತಿರಕ್ಕೆ ಹೋದವೆಂದೂ, ಅಲ್ಲಿ ಬಲ್ಗೇರಿಯಾದವರು ತಮ್ಮ ಪವಾಡಗಳ ಮಾಡುತ್ತಿದಾರೆಂದೂ ಹೇಳಲಾಗಿದೆ. ಒಂದು ಸಣ್ಣ ವರ್ತಮಾನ ಬಂದಿದೆ.

ಶತ್ರುಗಳವರು ಸಲೋನಿಕಾ ತೀರ ಪಟ್ಟಣದ ಮೇಲಕ್ಕೆ ಜೆಪ್ಪೆಲಿನ್ ಮಾನವನ್ನು ಕಳುಹಿಸಿದರು. ಅದು 16 ಸಿಡಿಮದ್ದಿನ ಗುಂಡುಗಳನ್ನು ಮೂರು ಮಂದಿ ಗ್ರೀಕರೂ, ಒಬ್ಬ ಫ್ರೆಂಚನೂ, ಇಬ್ಬರು ಬ್ರಿಟಿಷ ಪ್ರಜೆಗಳು ಗ್ರೀಕ್ ಪ್ರಜೆಗಳೂ ಕೊಲೆಯಾದರು ; 29 ಮಂದಿ ಗ್ರೀಕ ಗಾಯವಾಗಿವೆ. ಒಂದು ಮಸೀತಿಯೂ, ಕೆಲವು ಅಂಗಡಿಗಳೂ ನಾಶವಾದವು. ಶತ್ರುಗಳ ಸಬ್‌ಮೆರೀನುಗಳು ಗ್ರೀಸಿನ ಕೆಲವು ತೀರಪಟ್ಟಣಗಳಿಂದ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳುತ್ತಿದ್ದುದ್ದರಿಂದ ಮಿತ್ರಮಂಡಲಿ ಯವರಿಗೆ ಆ ಗ್ರೀಸಿನ ತೀರಪ್ರದೇಶವನ್ನು ಆಕ್ರಮಿಸಿಕೊಂಡಿದಾರೆ ಶತ್ರುವಿನ ಒಂದು ಸಬ್‌ಮೆರೀನು ಹೊಸರ ಶತ್ರುಗಳು ಭರ್ತಿ ಹಡಗಿಗೆ ಟಾರ್ಪಿಡೋ ಬಿಟ್ಟು ಬಡಿಸಿತು. ಆದರೆ ಹಡಗಿನಲ್ಲಿ ಟ್ಟು ನೆಲದ ಮೇಲೆ ಹರಿಸಿದ್ದರಿಂದ ಅನೇಕ ಹೆಸರ ಶತ್ರುಗಳು ದವು.

ವಿಮಾನ ಯಂತ್ರಗಳು ಸಿಡಿಮದ್ದಿನ ಗುಂಡುಗಳನ್ನು ಸುರಿಸಿದ್ದರಿಂ ಸೈನ್ಯಗಳಿದ್ದ ರಾಜ್ಯದಲ್ಲಿ 1,000 ಸೈನಿಕರು ನಷ್ಟವಾದಂತೆಯೂ, ಮಂದಿ ಮೃತಪಟ್ಟ ಹಾಗೂ ಬಲ್ಗೇರಿಯಾದವರು ತಿಳಿಸುತ್ತಾರೆ ಮತ್ತು ಬಲ್ಗೇರಿಯಾದವರ ಕಡೆಯ ಕಾವಲರು ಎಲ್ಲೆಕಟ್ಟಿನಲ್ಲಿ ಯವಾಯಿತು. ಫ್ರೆಂಚರ ಕಡೆ ಇಬ್ಬರಿಗೆ ಗಾಯಗಳಾದವು. ಬಲ್ಗೇರಿ ಎಷ್ಟು ನಷ್ಟವಾಯಿತೋ ತಿಳಿಯಲಿಲ್ಲ.

ಪರ್ಷಿಯಾದಲ್ಲಿ.

ದಂಗೆಕೋರರನ್ನು ಕೆರಮಾನ್‌ಷಾ ಎಂಬ ಪಟ್ಟಣದ ಕಡೆಗೆ ಹೋಗುತ್ತಿದಾರೆ. ಈ ಪ್ರಾಂತ್ಯದಿಂದ ಬಂದಿರುವ ವರ್ತಮಾನ ಸ್ವಲ್ಪ.

ಆಫ್ರಿಕಾದಲ್ಲಿ.

ಪೂರ್ವ ಆಫ್ರಿಕಾದಲ್ಲಿ ನುಗ್ಗಿ ಹೋಗುತ್ತಿದಾರೆ. ಅವರು ಯಾವ ಸ್ಥಳಗಳನ್ನು ಒಂದೊಂದಾಗಿ ತಿತ್ತು ಸ್ವಾಧೀನಪಡಿಸಿಕೊ ಜರ್ಮನಿಯವರು ನಿಂತು ಯುದ್ಧಕೊಡದೆ ಊರು ಕೇರಿಗ ಬಿಟ್ಟುಕೊಡುತ್ತಿರುವಂತೆ ಕಾಣುತ್ತದೆ. ಆ ಪ್ರಾಂತ್ಯ .ಜರ್ಮನಿ ಬಲವಾಗಿಲ್ಲ. ಅವರೆಲ್ಲಾ ಚದರಿ ಹೋಗಿರುವುದರಿಂದ ಎಲ್ಲರೂ ಸೇರಿಕೊಂಡು ಯುದ್ಧ ಕೊಡಬಹುದೆಂದು ಕಾಣುತ್ತದೆ.

ಮರೂನ್ ಸೀಮೆಯಲ್ಲಿ ಸಮುದ್ರತೀರ ಪ್ರದೇಶಗಳೂ, ಕೆಲವು ಭಾಗ ಮಿತ್ರಮಂಡಲಿಯವರ ಸ್ವಾಧೀನವಾಗಿರುತ್ತವೆ. ಸುಮಾರು 700 ದಕ್ಷಿಣ ಎಲ್ಲೆಕಟ್ಟಿನಲ್ಲಿ ಸ್ಪೈಯಿನ್ ಸ್ವಾಸ್ಥ್ಯದ ಸಮೀಪದಲ್ಲಿ ಅನೇಕರು ಅವರ ಗುಂಪನ್ನು ಬಿಟ್ಟು ಹೋಗುತ್ತಿದಾರೆ. ದಾಟಿ ಹೋಗುವವರನ್ನು ಸ್ಪೈಯಿನ್ ಅಧಿಕಾರಿಗಳು ಹಿಡಿದು ನ್ನಿಡುವುದಕ್ಕೆ ಅನುಮಾನಕಾಣುವುದಿಲ್ಲ.

ಇತರ ವಿಷಯಗಳು.

ಆಫ್ರಿಕಾದಿಂದ ಹೋಗುತ್ತಿದ್ದ ಬ್ರಿಟಿಷ್ ಮೆಯಿಲ್ ಜಹಜನ್ನು ತಾ. 16 ರಲ್ಲಿ ಜರ್ಮನಿಯವರು ಹಿಡಿದು ಅಮೇರಿಕಕ್ಕೆ ಸಾಗಿಸಿ ದರು. ಈ ಕೃತ್ಯ ಹೇಗೆ ನಡೆಯಿತೋ ಸ್ಪಷ್ಟವಾಗಿ ತಿಳಿಯುವು ವೇಷವಾದ ಒಂದು ಜರ್ಮನ ಹಡಗು—ಇದು ಜರ್ಮನಿಯಿಂದ ಅಥವಾ ಈ ಯುದ್ಧದಲ್ಲಿ ಬೇರೆಯದೆ ಪ್ರತ್ಯೇಕವಾಗಿರುವ ತೀರಪಟ್ಟಣದಿಂದಲಾದರೂ ಹೋಯಿತೋ ತಿಳಿಯದು_ಆಫ್ರಿಕದ ಕೊಂಡು, ಅಲ್ಲಿಗೆ ಹೋಗಿಬರುತ್ತಿದ್ದ ಹಲವು ಹಡಗುಗಳನ್ನು ದ್ದವರನ್ನು ಇಳಿಸಿ, ಹಡಗುಗಳನ್ನು ಮುಳುಗಿಸಿತು ಆ ಪೈಕಿ ಯು ಆ ಜರ್ಮನಿ ಜಹಜಿನ ಕೂಡ ಅರ್ಧ ಗಂಟೆ ಹೊತ್ತು ಕದನ ಗೆ ಬ್ರಿಟಿಷ್ ಹಡಗು ಮುಳುಗಿಸಲ್ಪಟ್ಟಿತು. ಅದರಲ್ಲಿದ್ದವರ ಕೊಲೆಯಾದರು. ಆ ಮೆಯಿಲ್ ಜಹಜಿನಲ್ಲಿ ಬ್ರಿಟಿಷರು ಕೆಲವ ನ್ನು ಹಿಡಿದಿಟ್ಟುಕೊಂಡಿದ್ದರು ; ಇದಲ್ಲದೆ ಅವರೊಳಗೆ ಬಹಳ ಸದ್ಯಕ್ಕೆ ಆ ಜಹಜನ್ನು ಅಮೇರಿಕದವರು ಹಿಡಿದು ತಡೆದಿಟ್ಟು ದ್ದಾರೆ.

ಸಂಘದಲ್ಲಿ 1,050 ಹಡಗುಗಳಿದ್ದವು. ಯುದ್ಧದ ನಿಮಿತ್ತ ಇವು ಕೆಲಸಗಳಲ್ಲಿ ವಿಮೆ ಮಾಡಿದರು. ಆ ಪೈಕಿ 60 ಮುಳುಗಿಸಲ್ಪ ಈಚೆಗೆ 72 ಹಡಗುಗಳನ್ನು ಹೊಸದಾಗಿ ಕಟ್ಟ ಉಪಯೋಗಕ್ಕೆ ಅದಕಾರಣ ಯುದ್ಧಾರಂಭದಲ್ಲಿದ್ದದ್ದಕ್ಕಿಂತಲೂ ಈಗ ಹಡ ಹೆಚ್ಚಾದವು.

ಉತ್ತರ ಸಮುದ್ರದಲ್ಲಿ ನಾಲ್ಕು ಸಣ್ಣ ಹಡಗುಗಳು ಮುಳುಗಿಸ ಸ್ಕಾಟ್ಲೆಂಡಿಗೂ ಇಂಗ್ಲೆಂಡಿಗೂ ಹೋಗಿಬರುತ್ತಿದ್ದ ಮೆಯಿಲ್ ಜಹಜು ವೈಕ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿಯಿತು. ಆದರೆ ಮುಳುಗದಂತೆ ತೀರಕ್ಕೆ ಎಳೆದು ತಂದುಬಿಟ್ಟಿದಾರೆ. ಅದರಲ್ಲಿ ಅಪಾಯವೇನೂ ಆಗಲಿಲ್ಲ.

ಜರ್ಮನರೂ ಆಸ್ಟ್ರಿಯಾದವರೂ ಪ್ರತ್ಯೇಕವಾಗಿ ರಷ್ಯಾದವರ ಮಾಡಿಕೊಳ್ಳಬೇಕೆಂದು ಸಂಧಾನವನಾಡಿದರು. ಆದರೆ ಅದಕ್ಕೆ ಪ್ಪದೆ ತಿರಸ್ಕಾರ ಮಾಡಿದರು. ಜರ್ಮನ ಕಡೆಯಿಂದ ಕರಾರಿನ ವರ್ತಮಾನಗಳು ಹೊರಟಿರುವಂತೆ ಪ್ರಕಟವಾಗಿವೆ. ಆದರೆ ಇಂಥಾ ಸುದ್ದಿಗಳಿಗೆ ಗಮನಕೊಡಬೇಕಾದ ಅಗತ್ಯ ಕಾಣುವುದಿಲ್ಲ.

ಜರ್ಮನಿಯವರ ಒಂದು ಯುದ್ಧದ ಜಹಜು ಸ್ವೀಡನ್ ದೇಶದ ಸಮುದ್ರ ತೀರದಿಂದ ಸ್ವಲ್ಪ ದೂರದಲ್ಲಿ ಮುಳುಗಿಹೋದಂತೆ ಸಮಾಚಾರ ಬಂದಿದೆ.

ಕಳೆದ ವಾರ ಶತ್ರುವಿನ ಸಬ್‌ಮೆರೀನುಗಳ ದೆಸೆಯಿಂದ ಎರಡು ಬ್ರಿಟಿಷ್ ಜಹಜುಗಳು ಮುಳುಗಿಸಲ್ಪಟ್ಟಿರುತ್ತವೆ.

ತೀರ್ಥಹಳ್ಳಿ ಉಪಾಧ್ಯಾಯರುಗಳ ಪ್ರದರ್ಶನ.

ಈ ಬಗ್ಗೆ ಧರ್ಮಿಷ್ಠರಾದ ಅನೇಕರು ದ್ರವ್ಯ ಸಹಾಯ ಮಾಡಿದ್ದಾರೆ ಜನವರಿ ತಾ. 25 ನೇ ದಿವಸ ಈ ಇಲಾಖೆ, ಇತರ ಇಲಾಖೆ ಅಧಿಕಾರಿಗಳು, ಮತ್ತು ಗ್ರಾಮಸ್ಥರು ಸೇರಿ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಆ ಕಾಲದಲ್ಲಿ ಇದರ ಉದ್ದೇಶವು ಮುಖ್ಯರುಗಳಿಂದ ಹೇಳಲ್ಪಟ್ಟಿತು. ಮಾರನೇ ದಿನ ಉಪಾಧ್ಯಾಯರುಗಳ ಸಂಘವು ಸೇರಲ್ಪಟ್ಟಾಗ ಅನೇಕ ವಿಷಯಗಳ ಚರ್ಚೆಯಾಯಿತು. ಈ ಪ್ರದರ್ಶನಕ್ಕೆ ಅನೇಕ ಪದಾರ್ಥಗಳು ಸಂಗ್ರಹಿಸಲ್ಪಟ್ಟು, ಉಪಾಧ್ಯಾಯರು ಹಾಗೂ ಉಪಾಧ್ಯಾಯಿನಿಯರು ಹುಡುಗರಿಗೆ ಪಾಠ ಹೇಳುವ ಕ್ರಮವನ್ನು ಈ ಸಭೆಯಲ್ಲಿಯೇ ತೋರಿಸಿದರು. ಅನೇಕ ಬಾಲಕಿಯರು ಮತ್ತು ಬಾಲಕರು ಪ್ರತ್ಯೇಕ ಪ್ರತ್ಯೇಕವಾಗಿ ನಾಟಕಗಳನ್ನು ಕ್ರಮವಾಗಿ ಅಭಿನಯಿಸಿದ್ದರಿಂದ ಸಭಿಕರಿಗೆ ಆನಂದ ನೇತ್ರಾನಂದವಾಯಿತು. ಈ ನವೀನವಾದ ವಿಚಾರಕ್ಕೆ ಈಗಲೇ ಅಂಕುರಾರ್ಪಣವಾದದ್ದರಿಂದ ಇದರ ಫಲವನ್ನು ಸಂಬಂಧ ಪಟ್ಟವರೆಲ್ಲರೂ ಆದಷ್ಟು ಜಾಗ್ರತೆ ಹೊಂದಲು ದೇವರು ದಯಮಾಡಬಹುದು.

ತಾ 29 ನೇ ಶನಿವಾರವು ದೇಶವತ್ಸಲರಾದ ಸ್ವಾಮಿ ವಿವೇಕಾನಂದರವರ ಜನ್ಮದಿವಸವಾದ್ದರಿಂದ ಪ್ರದರ್ಶನದ ಚಪ್ಪರದಲ್ಲಿ ಬೆಳಗಿನಿಂದ ಸಾಯಂಕಾಲದವರೆಗೂ ದೇವರ ಭಜನೆ, ಬಡವರಿಗೆ ಅನ್ನದಾನ ನಡೆದು, ಧರ್ಮ ರಹಸ್ಯವೂ, ದೇಶಹಿತಕರವೂ ಸೇರಿದ ಉಪನ್ಯಾಸ ರೂಪವಾದ ಹರಿಕಥೆಯು ಸ್ಕೂಲ್ ಅ|| ದೆಪ್ಯುಟಿ ಇನ್‌ಸ್ಪೆಕ್ಟರವರು ಮ|| ಕೂಡ್ಲಿ ಸುಬ್ರಾಯರಿಂದ ಕೇಳಲ್ಪಟ್ಟ ಅದೊಂದು ಅಪಾರ ಸಂತೋಷವು ಸೇರಿದವಾಗಿಯಿತು ಈ ಸಂತೋಷಕ್ಕೆ ಕಾರಣರಾದ ಮಲೆನಾಡು ಇಂಪ್ರೂವ್‌ಮೆಂಟು ಆಫೀಸರು ಮ|| ಅಣ್ಣಯ್ಯಂಗಾರ್ರವರ ಶುದ್ಧಾಂತಃಕರಣದ ಮೊಳಕೆಯು ಪ್ರದರ್ಶನೋತ್ಸವದಲ್ಲಿ ಹುಟ್ಟಿದ ಮೊಳಕೆಯಾಗಿ ಕಾಲ ವಿಶೇಷದಿಂದ ಜಾಗ್ರತೆ ಫಲಕಾರಿಯಾಗದಿದ್ದರೂ ಒಂದಲ್ಲದೊಂದು ದಿನ ಆ ಸದ್ಗುರುವಾದ ಸ್ವಾಮಿ ವಿವೇಕಾನಂದರವರ ಚರಣಸೇವೆ ನಮ್ಮ ದೇಶೀಯರೆಲ್ಲರಿಗೂ ಲಭಿಸುವಂತೆ ಶ್ರೀ ದೇವರು ಕೃಪೆಮಾಡಬೇಕೆಂದು ಪ್ರಾರ್ಥಿಸುವ

ಕೊಡುವಳ್ಳಿ ಸೂರ್ಯನಾರಾಯಣಪ್ಪ, ಶಿವರಾಜಪುರ, ತೀರ್ಥಹಳ್ಳಿ.

ಒಳದೇಶದ ವೃತ್ತಾಂತಗಳು.

ಭಾರತಧರ್ಮ ಮಹಾ ಮಂಡಲದವರು ರಾಜಧಾನಿಯಲ್ಲಿರುವ ಮ|| ಎ ಗೋವಿಂದಾಚಾರ್ಯರವರಿಗೆ ಶ್ರೀ ವಿದ್ಯಾಭೂಷಣ ಎಂಬ ಬಿರುದನ್ನು ದಯಪಾಲಿಸಿದಾರೆಂದು ಕೇಳಿ ಸಂತೋಷಪಡುತ್ತೇವೆ.

ನಮ್ಮ ದಿವಾನ್‌ರವರು ಈ ತಿಂಗಳು 16 ನೇ ತಾ. ಬೆಂಗಳೂರಿಂದ ಬೊಂಬಾಯಿಗೆ ಪ್ರಯಾಣಮಾಡಿ ಅಲ್ಲಿಂದ ನಮ್ಮ ಮಹಾರಾಜರವರ ಕೂಡ ದೆಹಲಿಗೆ ಹೋಗಿ ವೈಸ್ರಾಯರವರ ಭೇಟಿಮಾಡುವರೆಂದು ಪ್ರಕಟವಾಗಿದೆ.

ಕೌನ್‌ಸಿಲರಾದ ಸರ್ದಾರ್ ಎಂ. ಕಾಂತರಾಜೆ ಅರ್ಸ್, ಸಿ ಎಸ್. ಐ ರವರು ಜಪಾನ್ ರಾಜ್ಯಕ್ಕೆ ಹೋಗಿ ಬರಬೇಕೆಂಬ ಉದ್ದೇಶದಿಂದ ಆರು ತಿಂಗಳ ರಜಾ ಪಡೆದುಕೊಂಡಿದಾರೆಂದೂ, ಮುಂದಿನ ಏಪ್ರಿಲ್ ತಿಂಗಳಲ್ಲಿ ಪ್ರಯಾಣಮಾಡುವವರಾಗಿದಾರೆಂದೂ ಕೇಳುತ್ತೇವೆ.

ಶ್ರೀರಂಗಪಟ್ಟಣದ ತಾಲೂಕು ಕರಿಘಟ್ಟದಲ್ಲಿ ಇದೇ ಫೆಬ್ರವರಿ ತಾ 21 ರಿಂದ ರಥೋತ್ಸವ ನಡೆಯೋಣವರಿಂದ ತಾ. 19 ರಿಂದ 22 ನೇ ತಾ. ವರೆಗೆ ದನಗಳ ಪ್ರದರ್ಶನವನ್ನು ಮಾಡಿಸುವ ವಿಷಯದಲ್ಲಿ ಅಮಲ್ದಾರ್ ಮ|| ವೇದಾಂತಯ್ಯಂಗಾರ್ರ ಏರ್ಪಾಡು ಮಾಡಿರುತ್ತಾರೆ.

ಗಾಯಪಟ್ಟ ಬ್ರಿಟಿಷ್ ಸೈನಿಕರಲ್ಲಿ ಐವತ್ತು ಮಂದಿಯನ್ನು ಬ್ರಿಟಿಷ್ ಸರ್ಕಾರದವರು ಮೆಸೊಪೊಟೇಮಿಯಾ ಯುದ್ಧ ಭೂಮಿಯಿಂದ ಬೆಂಗಳೂರು ದಂಡಿಗೆ ಕಳುಹಿಸಿದರು. ಇವರನ್ನು ಕಳೆದ ಗುರುವಾರ ರೈಲ್ ಸ್ಟೇಷನ್ ನಿಂದ ಮೋಟರ್ ಗಾಡಿಗಳಲ್ಲಿ ಆಸ್ಪತ್ರೆಗಳಿಗೆ ಸಾಗಿಸಿ ಅಲ್ಲಿ ಚಿಕಿತ್ಸೆ ಮಾಡುತ್ತಿದಾರೆ

ಕೊಚ್ಚಿ ಸಂಸ್ಥಾನದಲ್ಲಿ ದಿವಾನ್‌ಗಿರಿ ಮಾಡಿದ ಮ|| ಎ. ಆರ್. ಬ್ಯಾನರ್ಜಿ ಎಂಬ ಬಂಗಾಳಿ ದೊಡ್ಡಮನುಷ್ಯರನ್ನು ನಮ್ಮ ಸರ್ಕಾರದವರು ಕರಸಿಕೊಂಡು ಅವರಿಗೆ ಕೌನ್‌ಸಿಲರ್ ಕೆಲಸವನ್ನು ಕೊಡುತ್ತಾರೆಂದೂ, ಮ|| ಎಚ್. ವಿ ನಂಜುಂಡಯ್ಯನವರು ಇಷ್ಟರಲ್ಲೇ ಕೌನ್‌ಸಿಲರ್ ಕೆಲಸದಿಂದ ನಿವೃತ್ತರಾಗುವರೆಂದೂ ಪ್ರಕಟವಾಗಿದೆ.

ಕಳೆದ ವಾರ ಚಳ್ಳಕೆರೆಯಲ್ಲಿ ತಾಲೂಕ್ ಕಾನ್‌ಫರೆನ್ಸು ನಡೆಯಿತು. ಅಗ್ಗೆ ಚಿತ್ರದುರ್ಗದ ಡೆಪ್ಯುಟಿ ಕಮಿಷನರವರು ದಯಮಾಡಿದ್ದರು. ಅಲ್ಲಿ ಅವರು ಒಂದು ಉದ್ಯಾನವನವನ್ನು ಪ್ರತಿಷ್ಠೆಮಾಡಿ ಕೆಲವು ಒಳ್ಳೊಳ್ಳೇ ಗಿಡಗಳನ್ನು ನೆಟ್ಟರು. ಅದಕ್ಕೆ ಸೇರಿದಂತೆ ಒಂದು ಟೌನ್ ಹಾಲನ್ನು ಕಟ್ಟುವ ವಿಷಯದಲ್ಲಿ ಪ್ರಜೆಗಳು ಪ್ರಯತ್ನಪಡುತ್ತಿದಾರೆಂದು ತಿಳಿದು ಬಂದಿದೆ.

ವೆಸ್ಲಿಯನ್ ಮಿಷನರಿ ಸಂಘದ ಸೆಕ್ರೆಟರಿಯವರಾದ ರೆವ್|| ಮಾರ್ಷಲ್ ಹಾರ್ಟ್ಲೆಯವರು ಈ ದಿನ ರಾಜಧಾನಿಗೆ ದಯಮಾಡುವರು, ಈ ದಿನ ಸಾಯಂಕಾಲ ಇಲ್ಲಿನ ವೆಸ್ಲಿಯನ್ ಹೈಸ್ಕೂಲಿನಲ್ಲಿ ಅಗ್ರಾಸನವನ್ನು ವಹಿಸಿ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿನಿಯೋಗಿಸಿ ನಾಳೆ ಚಾಮರಾಜನಗರದ ಕಡೆ ಸಂಚಾರ ಮಾಡಿಕೊಂಡು ಬಂದು ಒಂದೆರಡು ದಿನಗಳಲ್ಲೇ ವಾಪಸು ತೆರಳುವವರಾಗಿದಾರೆ

ನಾಗಮಂಗಲದ ತಾಲೂಕು ಕೋಟೆಬೆಟ್ಟದಲ್ಲಿ ಈ ತಿಂಗಳು 14 ನೇ ತಾ. ನಿಂದ 28 ನೇ ತಾ. ವರೆಗೆ ರಥೋತ್ಸವಕ್ಕೆ ಸಂಬಂಧಪಟ್ಟ ಉತ್ಸವಾದಿಗಳು ನಡೆಯೋಣದರಿಂದ ಎಂದಿನಂತೆ ಅಲ್ಲಿ 19 ನೇ ತಾ. ಆಗಾಯಿತು ಮೂರು ದಿನಗಳ ತನಕ ದನಗಳ ಪ್ರದರ್ಶನವನ್ನು ಜರುಗಿಸುತ್ತಾರೆ. ಮ|| ಪಿ. ಎನ್. ಶಂಕರಯ್ಯನವರು ಸೆಕ್ರೆಟರಿಯಾಗಿ ನಿಂತು ಈ ಪ್ರದರ್ಶನದ ಏರ್ಪಾಡುಗಳನ್ನು ಮಾಡುತ್ತಿರುವರು.

ನಮ್ಮ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರು ಕಳೆದ ವಾರ ರಾಜಧಾನಿಗೆ ದಯಮಾಡಿ ಮೂರು ದಿನಗಳ ತನಕ ಇದ್ದು ಪ್ರತಿ ದಿನವೂ ನೆರೆಯೂರಿನಲ್ಲಿ ಗ್ರಾಮಾಂತರಗಳ ಮೇಲೆ ಹೋಗಿ ಸುತ್ತುತ್ತಾ ಗ್ರಾಮಸ್ಥರ ಅಭಿವೃದ್ಧಿಗೆ ಅವಶ್ಯವಾದ ವಿವೇಕವನ್ನು ಹೇಳುತ್ತಾ, ಸ್ಥಳಾಧಿಕಾರಿಗಳು ನಡಿಸುವ ಅಭಿವೃದ್ಧಿಕಾರ್ಯಗಳನ್ನು ಪರಾಂಬರಿಸಿಕೊಂಡು ಮೊನ್ನೆ ಭಾನುವಾರ ವಾಪಸು ಬೆಂಗಳೂರಿಗೆ ತೆರಳಿದರು.

ಕಳೆದ ಶನಿವಾರ ಮಧ್ಯಾಹ್ನ ನಮ್ಮ ಶ್ರೀಮನ್ ಮಹಾರಾಜರವರು ಬೊಂಬಾಯಿನಲ್ಲಿಗ ವರ್ನರವರ ಭೇಟಿ ಮಾಡಿದರು. ಬಳಿಕ ನಮ್ಮ ಮಹಾಸ್ವಾಮಿ ಶ್ರೀಯವರು ಗವರ್ನರವರ ಪತ್ನಿಯರಾದ ಲೇಡಿ ವೆಲ್ಲಿಂಗ್‌ಡನ್‌ರವರನ್ನು ಕಂಡು ಅವರ ಕೂಡ ಸಂಭಾಷಣೆ ಬೆಳಸಿ ದಯಮಾಡಿದರು. ಶ್ರೀಮದ್ಯುವರಾಜರವರು ಬರೋಡೆಗೆ ಅಲ್ಲಿ ನಡೆದ ಒಂದು ವಿವಾಹೋತ್ಸವಕ್ಕೆ ಹೋಗಿ ಮೂರು ದಿನ ಇದ್ದು ಬಂದರೆಂದು ತಿಳಿಯುತ್ತದೆ.

ಮೈಸೂರು ರಾಯಲ್ ಪ್ರೆಸ್ಸಿನ ಪ್ರೊಪ್ರೈಟರಾದ ಮ|| ಟಿ. ವಿ. ನರಸಿಂಹಯ್ಯಂಗಾರ್ರ ಹೊಸ ವರುಷದ ಕ್ಯಾಲೆಂಡರನ್ನು ನಮಗೆ ಕಳುಹಿಸಿದಾರೆ. ಇದರಲ್ಲಿ ನಮ್ಮ ಮಹಾರಾಜ ಯುವರಾಜರುಗಳ ತಸ್ವೀರುಗಳೂ ಸರ್ಕಾರಿ ರಜಗಳೂ, ಇತರ ವಿಷಯಗಳೂ ಸುಂದರವಾಗಿ ಅಚ್ಚು ಮಾಡಲ್ಪಟ್ಟಿವೆ.—ಬೆಂಗಳೂರು ಅಮೆಚೂರ್ ನಾಟಕ ಸಂಘದ ಸೆಕ್ರೆಟರಿ ಮ|| ಬಿ. ಶ್ರೀನಿವಾಸಯ್ಯಂಗಾರ್ರ ಹೊಸ ವರುಷದ ಪಾಕೆಟ್ ಡೈರಿಯನ್ನು ಬಹಳ ಮುದ್ದಾಗಿ ರಚಿಸಿ, ಆ ಸಂಘದ ಸಂಕ್ಷೇಪ ಚರಿತ್ರೆಯನ್ನೂ, ಉದ್ದೇಶ ಕಾರಣಾದಿಗಳನ್ನೂ, ಮೆಂಬರುಗಳ ಹೆಸರುಗಳನ್ನೂ, ಜನಸಿ ಮರ್ಮ ಲೆಕ್ಕಗಳನ್ನೂ ತಿಳಿಸಿರುತ್ತಾರೆ. ಸಂಘದ ಪೋಷಕರಾಗಿರುವ ನಮ್ಮ ಶ್ರೀಮದ್ಯುವರಾಜರವರ ಛಾಯಾಚಿತ್ರವು ಮುಖಪತ್ರದಲ್ಲಿರುತ್ತದೆ.

ಮಾರ್ಚಿ ತಾ. 1 ರಿಂದ ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರುವ ಮೆಯಿಲ್ ಟ್ರೇನಿನ ಕಾಲವನ್ನು ಬದಲಾವಣೆ ಮಾಡುವಂತೆ ಗೊತ್ತಾಗಿದೆ. ಅಗ್ಗಿಂತಲೂ ಶಕ್ತಿಯುಳ್ಳ ಎಂಜಿನ್‌ಗಳನ್ನು ಗಾಡಿಗಳಿಗೆ ಹಾಕುತ್ತಾರೆ. ರಾಜಧಾನಿಯಿಂದ ಮೆಯಿಲ್ ಟ್ರೇನು ಮಧ್ಯಾಹ್ನ 11¾ ಗಂಟೆಗೆ ಪ್ರತಿಯಾಗಿ 1¾ ಗಂಟೆಗೆ ಹೊರಟು ಸಾಯಂಕಾಲ 6 ಗಂಟೆಗೆ ಬೆಂಗಳೂರನ್ನು ತಲುಪುತ್ತದೆ. ಬೆಂಗಳೂರಿನಿಂದ ಮೆಯಿಲ್ ಗಾಡಿಯು ಬೆಳಗ್ಗೆ 7 ಗಂಟೆಗೆ ಬದಲು 7½ ಗಂಟೆಗೆ ಹೊರಟು ಮಧ್ಯಾಹ್ನ 11½ ಗಂಟೆಗೆ ರಾಜಧಾನಿಗೆ ಬರುತ್ತದೆ. ಮೆಯಿಲ್ ಗಾಡಿಯು ರಾಜಧಾನಿಯ ಸ್ಟೇಷನ್ ನಿಂದ ಮಧ್ಯಾಹ್ನ 12½ ಗಂಟೆಗೆ ಚಾಮರಾಜಪುರಂ ಸ್ಟೇಷನ್‌ಗೆ ಹೋಗಿ ಅಲ್ಲಿಂದ ಬರತಕ್ಕ ಪ್ರಯಾಣಿಕರನ್ನು ಕೂರಿಸಿ ತರುತ್ತದೆ. ಈಗ ನಂಜನಗೂಡಿನಿಂದ ದಿನವಹಿ ರಾತ್ರಿ 8½ ಗಂಟೆಗೆ ಬರುವ ರೈಲ್ ಗಾಡಿಯು ಮುಂದಕ್ಕೆ ರಾತ್ರಿ 9 ಗಂಟೆಗೆ ರಾಜಧಾನಿಗೆ ಬರುವುದು.

ಕಳೆದ ಶುಕ್ರವಾರ ಬೆಳಗ್ಗೆ 11½ ಗಂಟೆಗೆ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಕಾಶೀ ಪಟ್ಟಣದಲ್ಲಿ ಹಿಂದೂ ಮಹಾ ವಿದ್ಯಾಲಯದ ಕಟ್ಟಡಗಳಿಗೆ ಅಸ್ತಿಭಾರ ಶಿಲೆಯನ್ನು ಹಾಕಿ ಪ್ರತಿಷ್ಠೆಮಾಡಿದರು. ಆ ದಿನ ಬೆಳಗ್ಗೆ ನಮ್ಮ ರಾಜಧಾನಿಯ ವೈದಿಕ ಲೌಕಿಕ ವಿದ್ಯಾವಂತರೂ, ಅಧಿಕಾರಸ್ಥರೂ, ಎಲ್ಲಾ ಕೋಮುಗಳ ಪ್ರತಿನಿಧಿಗಳೂ ಟೌನ್ ಹಾಲಿನಲ್ಲಿ ಸಭೆ ಸೇರಿ ಮ|| ಟಿ. ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ಒಂದು ಸಂತೋಷ ಕೂಟವನ್ನು ನಡಿಸಿದರು. ಅಧ್ಯಕ್ಷರೂ, ಮ|| ಬಿ ರಾಮಕೃಷ್ಣಾಚಾರರೂ, ಮ|| ವೆಂಕಟಕೃಷ್ಣಯ್ಯನವರೂ ಆ ದಿನ ಕಾಶಿಯಲ್ಲಿ ಸ್ಥಾಪಿಸಲ್ಪಟ್ಟ ವಿದ್ಯಾನಿಲಯದ ಪೂರ್ವೋತ್ತರವನ್ನು ವಿವರಿಸಿ ಉಪನ್ಯಾಸ ಮಾಡಿದರು. ವೇ|| ಗೋಮಠಂ ಶ್ರೀನಿವಾಸ ಜೋಯಿಸರು ಕವನವನ್ನು ಮಾಡಿ ಓದಿ ಹೇಳಿದರು ಸಭಿಕರ ಪರವಾಗಿ ಆ ದಿನ ಮಹಾ ವಿದ್ಯಾನಿಲಯದ ಮೂಲಪುರುಷರಿಗೆ ಸಂತೋಷಸೂಚಕವಾದ ತಂತೀವರ್ತಮಾನವನ್ನು ಕಳುಹಿಸಲಾಯಿತು.

ಶ್ರೀರಂಗಪಟ್ಟಣದ ಪ್ಲೀಡರ್ ಮ|| ಬಿ. ನರಸಿಂಗರಾಯರು ಕಳೆದ ಭಾನುವಾರ ಅಲ್ಲಿನ ಜಹಗೀರುದಾರರ ತೋಟದ ಬಂಗಲೆಯಲ್ಲಿ ದಿನ್ನವಾದ ಔತನವನ್ನು ಮಾಡಿಸಿದರು. ಶ್ರೀರಂಗಪಟ್ಟಣ, ಗಂಜಾಂ, ಆ ಸುತ್ತುಮುತ್ತಿನ ಎಲ್ಲಾ ಪಂಗಡಗಳ ಮುಖಂಡರನ್ನೂ, ರಾಜಧಾನಿಯ ಅನೇಕ ದೊಡ್ಡ ಮನುಷ್ಯರನ್ನೂ, ಅಧಿಕಾರಿಗಳನ್ನೂ ಕರಸಿದ್ದರು. ಆ ದಿನ ಸುಮಾರು 300 ಮಂದಿ ದೊಡ್ಡ ಮನುಷ್ಯರು ಕಲೆತು ಮ|| ನರಸಿಂಗರಾಯರ ಉದಾರವಾದ ಆತಿಥ್ಯವನ್ನು ಸ್ವೀಕರಿಸಿ ಆನಂದಪಟ್ಟರು. ಔತನದ ಏರ್ಪಾಡುಗಳೆಲ್ಲಾ ಬಹು ಚಿತರಣೆಯಾಗಿ ತೃಪ್ತಿಕರವಾಗಿ ನೆರವೇರಿದವು. ವಿದ್ವಾನ್ ರಾಚಪ್ಪನವರ ಮನೋಹರವಾದ ಹಾಡುಗಾರಿಕೆಯು ನಡೆದ ಬಳಿಕ ಅತಿಗಳ ಪರವಾಗಿ ಮ|| ಎಂ. ವೆಂಕಟಕೃಷ್ಣಯ್ಯನವರು ಮ|| ನರಸಿಂಗರಾಯರ ಔದಾರ್ಯವನ್ನೂ ಸ್ವದೇಶಾಭಿಮಾನವನ್ನೂ ಕುರಿತು ಭಾಷಣಮಾಡಿ ಅವರನ್ನು ವಂದಿಸಿದರು. ಮ|| ಬಿ. ನರಸಿಂಗರಾಯರು ಅತಿಥಿಗಳನ್ನೆಲ್ಲಾ ಪ್ರತಿವಂದಿಸಿ, ಆ ದಿನದ ಏರ್ಪಾಡುಗಳನ್ನೆಲ್ಲಾ ಮ|| ವೀಣೆ ರಂಗಸ್ವಾಮಯ್ಯಂಗಾರ್ರ ವಹಿಸಿಕೊಂಡು ನಡಿಸಿದರಾದಕಾರಣ ಅತಿಥಿಗಳ ವಂದನೆಯು ಅವರಿಗೆ ಸಲ್ಲತಕ್ಕದ್ದಾಗಿದೆ ಎಂದು ಸೂಚಿಸಿ ಅತಿಥಿಗಳನ್ನು ಬೀಳ್ಕೊಟ್ಟರು.

ರಾಜಧಾನಿಯಲ್ಲಿ ಕಪ್ಪಾಡಿಪುರವೆಂಬ ಮೂರು ಸಾಲು ಅಗ್ರಹಾರದ ಮನೆಗಳಿರುತ್ತವೆ. ಅವೆಲ್ಲಾ ಸೇರಿ 72 ಮನೆಗಳೂ, ಪ್ರತಿ ಒಂದು ಮನೆಗೂ ಒಂದು ವೃತ್ತಿಯೂ ಇದ್ದು, ಇವನ್ನು ಲೇಟ್ ಕೃಷ್ಣರಾಜ ಒಡೆಯರವರು ದಯಪಾಲಿಸಿದರು. ಈಗ ರಾಜಧಾನಿಯ ಟ್ರಸ್ಟ್ ಬೋರ್ಡಿನವರು ಆ ಪೈಕಿ 38 ಮನೆಗಳನ್ನು ಆರೋಗ್ಯಾಭಿವೃದ್ಧಿಯ ನಿಮಿತ್ತ ಒಡೆದುಹಾಕಬೇಕೆಂದು ಇತ್ಯರ್ಥಮಾಡಿಕೊಂಡು ಮನೆಯವರಿಗೆ ನೋಟೀಸುಗಳನ್ನು ಕೊಟ್ಟಿದಾರೆ. ಕೊಳಕಾದ ಮತ್ತು ಒತ್ತಾದ ಮನೆ ಮಠಗಳನ್ನು ಒಡೆದು ಪ್ರಜಾ ಆರೋಗ್ಯವನ್ನು ಕಾಪಾಡುವುದಕ್ಕೆ ತಕ್ಕ ಏರ್ಪಾಟು ಮಾಡುವುದೇನೋ ಅವಶ್ಯ. ಆದರೆ ಹೊಸ ಮನೆಗಳು ಆಗುವುದಕ್ಕೆ ಮೊದಲೇ ಇರುವ ಮನೆಗಳನ್ನೂ ಒಡೆದುಹಾಕುವುದೂ, ಸಂಸಾರಗಳನ್ನು ಚದರಿಸಿ ನಾನಾ ಸಂಕಟಗಳಿಗೆ ಗುರಿಪಡಿಸುವುದೂ ಧರ್ಮವಲ್ಲ. ಈಗಲೇ ರಾಜಧಾನಿಯಲ್ಲಿ ಮನೆಗಳು ಸಿಕ್ಕದೆ ಪರಿತಾಪವುಂಟಾಗಿದೆ. ಈ ವಿಚಾರಗಳೆಲ್ಲಾ ನಮ್ಮ ಟ್ರಸ್ಟ್ ಬೋರ್ಡಿನವರಿಗೂ ಚೆನ್ನಾಗಿ ತಿಳಿದಿರೋಣದರಿಂದ ಇನ್ನಾದರೂ ಮೊದಲು ಹೊಸ ಮನೆಗಳು ಕಟ್ಟಿ ಸಿದ್ಧವಾಗುವ ತನಕ ಹಳೇ ಮನೆಗಳನ್ನು ಒಡೆಯದಂತೆ ನೋಡಿಕೊಂಡಾರೆಂದು ನಿರೀಕ್ಷಿಸಲ್ಪಟ್ಟಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಜನವರಿ 31 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಲೇಣಿ:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 50,000
,, (3) ಡಿಪಾಜಿಟ್ಟುಗಳು	....	,, 39,76,195
,, (4) ಇತರೆ	....	,, 91,568
(ಆನೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 51,17,763

ದೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 7,60,836
,, (2) ಜಾಮಿ ಮತ್ತು ಇತರ ಸಾಲಗಳು	......	,, 30,96,748
,, (3) ಡಿಸ್ಕೌಂಟುಮಾಡಿದವಾಯಿದೆಹುಂಡಿಗಳು		,, 4,63,297
,, (4) ಇನ್‌ವೆಸ್ಟ್‌ಮೆಂಟುಗಳು	......	,, 7,56,822
,, (5) ಏಜಂಟಗಳಲ್ಲಿರುವ ಮೊಬಲಗು	......	,, 14,708
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	......	,, 16,155
,, (7) ಇತರೆ	....	,, 9,197
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 51,17,763

ಎ. ರಾಮಸ್ವಾಮಯ್ಯ, ಆ : ಮ್ಯಾನೇಜರ್.

ಹೊಸಕೋಟೆ ಉಪಾಧ್ಯಾಯರ ಸಂಘ.

ಈ ಊರಿನಲ್ಲಿ ಜನವರಿ ತಾ. 23 ರಲ್ಲಿ ಉಪಾಧ್ಯಾಯರ ಕೂಟವು ನೆರೆದಿತ್ತು. ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರ್ ಮ|| ವೆಂಕಟರಮಣಯ್ಯನವರು ಅಗ್ರಾಸನಾಧಿಪತಿಗಳಾಗಿದ್ದರು. ಆ ಸಮಯದಲ್ಲಿ ಗರಲ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮ|| ಆರ್. ರಾಮಸ್ವಾಮಯ್ಯನವರು 2 ನೇ ತರಗತಿಗೆ ವ್ಯಾಕರಣವನ್ನೂ, ಅ|| ಮಾಸರ್ ಮ|| ನರಸಿಂಗರಾಯರು ಎ ತರಗತಿಗೆ ಕಥೆಯನ್ನೂ ಟ್ರೇನಿಂಗ್ ನಿಯಮಗಳಿಗನುಸಾರವಾಗಿ ಪಾಠ ನಿದರ್ಶನ ಮಾಡಿದರು. ಅಗ್ರಾಸನಾಧಿಪತಿಗಳು ತಮ್ಮ ಅಭಿಪ್ರಾಯದಲ್ಲಿ ತುಂಬಾ ಸಂತೋಷಪಟ್ಟರು. ಅಲ್ಲದೆ ಇವರು ದಯಮಾಡಿಸಿದ ಸ್ಥಳಗಳಲ್ಲಿ ಉಪಾಧ್ಯಾಯರಿಗೆ ಹೇಳುತ ಬುದ್ಧಿವಾದಗಳಿಂದ ಇವರು ಸರ್ವರ ಸ್ತೋತ್ರಕ್ಕೂ ಪಾತ್ರರಾಗಿರುವರು. ನಂತರ ಅ|| ಮಾಸ್ಟರ್ ಮ|| ರಾಮಯ್ಯನವರು ಕರ್ಣಾನಂದವಾಗುವಂತೆ ಗಾನಮಾಡಿದರು. ಈ ಸಂಘಕ್ಕೆ ಅಮಲ್ದಾರ್ ಮ|| ಎಸ್. ಸುಬ್ಬರಾಯರೂ, ಡಾಕ್ಟರೂ ಮೊದಲಾದ ಮಹನೀಯರು ದಯಮಾಡಿಸಿದ್ದು ಸಭೆಯವರಿಗೆ ತುಂಬಾ ಪ್ರೋತ್ಸಾಹವೂ ಆನಂದವೂ ಆಗಿತ್ತು. ಇನ್‌ಸ್ಪೆಕ್ಟರವರು ಈ ಊರಿನಲ್ಲಿ ಒಂದು ವಾರ ಇದ್ದು ಎಲ್ಲಾ ಸ್ಕೂಲುಗಳನ್ನೂ ಕ್ರಮವಾಗಿ ಪರೀಕ್ಷಿಸಿ ತೆರಳಿದರು.

ಕರ್ಣಾಟಕ ಸಾಹಿತ್ಯ ಪರಿಷತ್ತು.

(1) ಘನ ಹೊಂದಿದ ಮೈಸೂರು ಸರ್ಕಾರದವರು ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ತಿಂಗಳೊಂದಕ್ಕೆ 13 ರೂಪಾಯಿಗಳ ಮೇರೆಗೆ ಎರಡು ವರುಷಗಳ ವರೆಗೆ ಗ್ರಾಂಟನ್ನೂ, ಪರಿಷತ್ತಿಗೆ ಬೇಕಾದ್ದುದನ್ನು ಕುರ್ಚಿ, ಮೇಜು, ಟೈಪ್ ರೈಟರ್, ಪುಸ್ತಕಗಳು, ಇವೇ ಮೊದಲಾದವುಗಳಿಗಾಗಿ 1,000 ರೂಪಾಯಿಗಳ ಒಟ್ಟು ಸಹಾಯ ಧನವನ್ನೂ ದಯಪಾಲಿಸಿರುವರು.

(2) ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸದಸ್ಯರುಗಳಿಂದ 1916 ನೆಯ ಜನವರಿ ತಿಂಗಳಲ್ಲಿ ಈ ಕೆಳಗೆ ಕಂಡಂತೆ ಚಂದಾ ವಸೂಲಾಗಿದೆ :—ಮ|| ಗಳಾದ ಎಚ್. ಕೆ. ವೀರಬಸವಯ್ಯನವರು ಬಿ.ಎ., ಬಿ. ಎಲ್. ಹೊಳೆ ನರಸೀಪುರ ರೂ. 50, ಸಿ ಕಪ್ಪಣ್ಣನವರು, ಮಂಡ್ಯ 4, ಕೆ ಆರ್. ಸದಾಶಿವಯ್ಯನವರು, ಚಿಕ್ಕಬಳ್ಳಾಪುರ 3. ಎಚ್. ಚನ್ನಕೇಶವಯ್ಯಂಗಾರ್ರು, ಬೆಂಗಳೂರು ದಫ 3 10. ಬಿ ಕೃಷ್ಣಪ್ಪನವರು, ಬೆಂಗಳೂರು 4 ; ಒಟ್ಟು ರೂ. 71 ಪರಿಷತ್ತಿಗೆ ಇದುವರೆಗೂ ವಸೂಲಾಗಿರುವ ಒಟ್ಟು ಚಂದಾ ಹಣ ರೂಪಾಯಿ 635-9-5 ಪೈ.

(3) ಕರ್ಣಾಟಕ ಭಾಷಾಭಿಮಾನಿಗಳಾದವರು ಈ ಸಂಘಕ್ಕೆ ಸೇರಬೇಕೆಂದು ಕೋರಿದೆ. ಈ ಪರಿಷತ್ತಿನ ವಿಷಯದಲ್ಲಿ ಹೆಚ್ಚು ಸಂಗತಿಯನ್ನು ತಿಳಿದುಕೊಳ್ಳ ಬೇಕೆಂದಿರುವವರು ಈ ಕೆಳಗೆ ರುಜು ಮಾಡಿರುವವರಿಗೆ ಬರೆದು ತಿಳಿದುಕೊಳ್ಳಬಹುದು.

ಬೆಂಗಳೂರು, ತಾ. 4-2-1916. — ಬಿ. ಕೃಷ್ಣಪ್ಪ, ಸ. ಕಾರ್ಯದರ್ಶಿ, ಕರ್ಣಾಟಕ ಸಾಹಿತ್ಯ ಪರಿಷತ್ತು.

ಕಡೂರು ಫೆಡರಲ್ ಕೋಆಪರೆಟಿವ್ ಬ್ಯಾಂಕಿಂಗ್ ಯೂನಿಯನ್, ಲಿಮಿಟೆಡ್.

ಈ ಬ್ಯಾಂಕಿನ ಪ್ರಾರಂಭದ ವಿಚಾರವು ನಡೆಯುವ ಬಗ್ಗೆ ಸೆಕ್ರೆಟರಿಯವರು ಕಳುಹಿದ ಆಹ್ವಾನ ಪತ್ರಿಕೆಗಳ ಪ್ರಕಾರ ಕಡೂರು ಮತ್ತು ತರೀಕೆರೆ ತಾಲ್ಲೂಕು ಸಂಘಗಳ ಪಾಲಾದ ಮೆಂಬರುಗಳು, ಯೂನಿಯನ್ ಪರವಾದ ಮೆಂಬರುಗಳು, ಇತರ ದೊಡ್ಡ ಮನುಷ್ಯರುಗಳು ಕಳೆದ ತಾ. 5 ರಲ್ಲಿ ಹಾಜರಾಗಿದ್ದರು. ಬ್ಯಾಂಕಿನ ಪ್ರೆಸಿಡೆಂಟ್ ಸ್ಥಾನವನ್ನು ಅಂಗೀಕರಿಸಿ ದಯಮಾಡಿದ ಮ|| ಸಾಹುಕಾರ್ ಪತ್ರಿ ವೀರಪ್ಪನವರಿಗೆ ಪ್ರಾರಂಭದಲ್ಲಿ ಸಂಘದವರು ವಂದನೆಯನ್ನು ಮಾಡಿದರು. ಈ ಯೂನಿಯನ್ ಸೆಕ್ರೆಟರಿ ಮ|| ಪರಮೇಶ್ವರಯ್ಯನವರು ನೂತನ ಬ್ಯಾಂಕಿನ ಸ್ಥಾಪನೆ, ಉದ್ದೇಶ, ಮುಂದೆ ನಡೆಯಬೇಕಾದ ಕ್ರಮ ಮುಂತಾದ್ದನ್ನು ಕುರಿತು ಸರ್ವರಿಗೂ ಮನನವಾಗುವಂತೆ ಉಪನ್ಯಾಸ ಮಾಡಿದರು. ನಂತರ ಬೈಲಾದಲ್ಲಿ ನಡೆಯಬೇಕಾದ ಕೆಲವು ತಿದ್ದುಪಾಟುಗಳು ಚರ್ಚಿಸಿ ತೀರ್ಮಾನಿಸಲ್ಪಟ್ಟವು. ಆಗ ಪ್ರೆಸಿಡೆಂಟರವರು 1 0 ರೂಪಾಯಿನ 10 ಷೇರುಗಳನ್ನು, ಮ|| ಖರೀದಿ ತಿಮ್ಮಪ್ಪಶೆಟ್ಟರು 8 ಷೇರುಗಳನ್ನು, ಮ|| ಜ ನಂಜೇಗೌಡರು, ದೇ ಸಂಪತ್ತಯ್ಯಂಗಾರ್ರು, ಸಿ. ಅನಂತಜೋಯಿಸರು, ರಾಂಕಪ್ಪಶೆಟ್ಟರು, ಮುಂತಾದವರು ಷೇರು ಪಡೆದದ್ದಲ್ಲದೆ ಕಡೂರು ಟವನ್ ವಾಸಿಗಳು ಸುಮಾರು 20 ಜನರು 40 ಷೇರುಗಳಿಗಾಗಿ ದರಖಾಸ್ತು ಕೊಟ್ಟರು. ಬ್ಯಾಂಕಿನ ಅಭಿವೃದ್ಧಿ ವಿಷಯದಲ್ಲಿ ಈ ಮಹನೀಯರು ತೋರಿಸಿರುವ ಪ್ರೋತ್ಸಾಹದಲ್ಲಿ ಅದು ಚಿರಸ್ಥಾಯಿಯಾಗಿ ನಡೆಯುವದರಲ್ಲಿ ಅಭ್ಯಂತರವಿರುವದಿಲ್ಲ. ಈ ಎರಡು ತಾಲ್ಲೂಕುಗಳಲ್ಲಿ ಹಾಲಿ ಇರುವ, ಮುಂದೆ ಆಗುವ ಸಂಘಗಳವರು ಈ ಬ್ಯಾಂಕಿನಿಂದ ಬಂಡವಾಳವನ್ನು ಒದಗಿಸಿಕೊಂಡು ಅನುಕೂಲಪಡಿಸಿಕೊಳ್ಳಬಹುದು. ಪರಸ್ಪರ ಸಹಾಯ ಪ್ರವರ್ತನೆಯಲ್ಲಿ ಮ|| ಪರಮೇಶ್ವರಯ್ಯನವರು ತುಂಬಾ ಆಸಕ್ತಿಯನ್ನು ತೋರಿಸುತ್ತಿರುವದು ಸ್ತುತ್ಯರ್ಹವಾಗಿದೆ. ವಾಚಕ.

ಬೆಂಗಳೂರು ಸ್ತ್ರೀಯರ ಕೂಟಗಳು.

ಮಹಿಳಾ ಸೇವಾಸಮಾಜ, ಬೆಂಗಳೂರು.—ಮೈಸೂರು ಸೀಮೆಯ ದಿವಾನ್‌ರವರಾದ ಶ್ರೀಮಾನ್ ಸರ್ ಎಂ ವಿಶ್ವೇಶ್ವರಯ್ಯ, ಕೆ ಸಿ ಐ ಇ. ಯವರು ಕಳೆದ ವಾರದ ಬೆಂಗಳೂರು ಮಹಿಳಾ ಸೇವಾಸಮಾಜಕ್ಕೆ ದಯಮಾಡಿ ಅಲ್ಲಿ ನಡೆಯುತ್ತಿರುವ ಕೆಲಸಗಳ ವಿಷಯವಾಗಿ ತಪಶೀಲಾಗಿ ವಿಚಾರಿಸಿ ಸಮಾಜವು ಸ್ಥಾಪಿಸಲ್ಪಟ್ಟ ಸ್ವಲ್ಪ ದಿವಸಗಳಲ್ಲಿಯೇ ಇಷ್ಟು ಅಭಿವೃದ್ಧಿ ಸ್ಥಿತಿಗೆ ಬಂದಿರುವದನ್ನು ತಿಳಿದು ಸಂತುಷ್ಟರಾದರು. ಸಮಾಜದಲ್ಲಿ ವಿದ್ಯೆ ಕಲಿಯುತ್ತಿರುವ ಸ್ತ್ರೀಯರಿಗೆ “ಗೃಹಕೃತ್ಯ ನಿರ್ವಾಹ ಕ್ರಮ” ವನ್ನು ಬೋಧಿಸುವುದಕ್ಕಾಗಿ ತಿಂಗಳಿಗೆ 20 ರೂಪಾಯಿ ಮೇರಿಗೆ ಒಂದು ವರ್ಷದ ತನಕ ಸಹಾಯ ದ್ರವ್ಯವನ್ನು ದಯಪಾಲಿಸುವುದಾಗಿ ಅವರು ವಾಗ್ದಾನ ಮಾಡಿರುತ್ತಾರಲ್ಲದೆ ಆರು ತಿಂಗಳಿನ ದ್ರವ್ಯ ಸಹಾಯವನ್ನು ಮುಂಗಡವಾಗಿಯೇ ಕಳುಹಿಸಿ ಕೊಟ್ಟಿರುವರು. ಹಿಂದೂ ಮಹಿಳೆಯರ ಪ್ರಯೋಜನಾರ್ಥವಾಗಿ ಈ ವಿಷಯದಲ್ಲಿ ಕ್ರಮವಾಗಿ ಉಪನ್ಯಾಸಗಳ ಮೂಲಕ ಬೋಧನೆಯನ್ನು ಏರ್ಪಡಿಸುವುದಕ್ಕೆ ತಕ್ಕ ಕಂದೋಬಸ್ತು ನಡೆಸುತ್ತಿದೆ. ಸೆಕ್ರೆಟರಿ.

ಶ್ರೀನಿವಾಸ ಮಂದಿರ ಸ್ತ್ರೀಸಭೆ.—6 ನೇ ತಾ. ಶನಿವಾರ ಕ್ರಮ ಪ್ರಕಾರ ನಡೆಯುವ ವಿಚಾರಗಳಲ್ಲಿ ಸೌ|| ಅಮೃತವಲ್ಲಿ ತಾಯಾರಮ್ಮನವರ ಸೋದರಿಯು ಭಕ್ತಿಗ್ರೇಸರನಾದ ನಂದನ ಚರಿತ್ರೆಯ ಮುಖ್ಯ ಮುಖ್ಯ ಹಾಡುಗಳನ್ನೂ ಕೆಲವು ಶ್ಲೋಕಗಳನ್ನೂ ಬಹಳ ರಮ್ಯವಾಗಿ ಹಾರ್ಮೋನಿಯಂನಲ್ಲಿ ನುಡಿಸಿ ಸಭಿಕರ ಮನಸ್ಸನ್ನು ಬಹಳ ಆನಂದಗೊಳಿಸಿದರು. ಸೌ|| ಟಿ. ಗಂಗಾಬಾಯಮ್ಮನವರು ಸ್ತ್ರೀಯರ ಸುಶಿಕ್ಷಣ ಎಂಬ ವಿಷಯವನ್ನು ಕುರಿತು ಉಪನ್ಯಾಸಮಾಡಿದರು. ಅದರಲ್ಲಿ ಅಡಕವಾದ ವಿಷಯಗಳು ದೇಶೋನ್ನತಿಗೆ ಅವಶ್ಯವಾದದ್ದಾಗಿದ್ದವು. ನಂತರ ಕೆಲವು ಹೆಣ್ಣು ಮಕ್ಕಳು ಪ್ರಾರ್ಥನೆಯಿಂದ ಸಭೆಯನ್ನು ಮುಕ್ತಾಯ ಪಡಿಸಿದರು. ಮ|| ಷಣ್ಮುಗಂ ಮೊದಲಿಯಾರ್ರ ಕುಮಾರಿ ಸೌ|| ವಿಜಯಮ್ಮಾಳ್ ಯವರೂ, ಕಲ್ಲಿಕೋಟೆ ಮ|| ವೇಣುಗೋಪಾಲ ಮೊದಲಿಯಾರ್ರ ಪತ್ನಿಯವರೂ ಆರ್ಫನೇಜು ಕಟ್ಟದಲ್ಲಿ ನಡೆಯುವ ಸೇವೆಯನ್ನು ನೋಡಿ ಬಹಳ ಸಂತೋಷಪಟ್ಟು, ತಾವೂ ರಮ್ಯವಾಗಿ ಕೆಲವು ಪ್ರಾರ್ಥನಾ ಶ್ಲೋಕಗಳನ್ನು ಹೇಳಿ, ಬಾಲಕ ಬಾಲಕಿಯರಿಗೆ ಫಲಾಹಾರಗಳನ್ನು ಕೊಡಿಸಿದರು. ಸ್ತ್ರೀರಾಜಿಯವರಿಂದ ತಯಾರು ಮಾಡಲ್ಪಟ್ಟ ಕೆಲವು ಕೈಗಾರಿಗೆ ಸಾಮಾನುಗಳನ್ನು ತೆಗೆದುಕೊಂಡು ಹೀಗೆಯೇ ದಿನೇ ದಿನೇ ಬಾಲಕ ಬಾಲಕಿಯರು ಅಭಿವೃದ್ಧಿ ಹೊಂದಬೇಕೆಂದು ಪ್ರಾರ್ಥಿಸಿದರು. ಸೆಕ್ರೆಟರಿ.

ಸತ್ಕಾರ ಕೂಟವು.

ಚಿತ್ರದುರ್ಗ ತಾಲ್ಲೂಕು ಮದಕೇರಿಪುರ ಎಂಬ ಗ್ರಾಮದಲ್ಲಿ ಭೂಮಿ ಜಮೀನುದಾರರಾದ ಅಟ್ಟಪ್ಪ, ನಾರಪ್ಪ, ಸೋಮಣ್ಣ ಎಂಬ ಮೂರು ಜನ ಅಣ್ಣತಮ್ಮಂದಿರುವರು. ಕೆಲವು ದಿವಸದ ಕೆಳಗೆ ಚಿತ್ರದುರ್ಗದಲ್ಲಿ ಮೊಕದ್ದಮೆ ನಡೆದು ಆ ದೆಸೆಯಿಂದ ಇವರಿಗೆ ಕಷ್ಟವು ಪ್ರಾಪ್ತಿಯಾಗಿ ಮೇಲು ಕೋರ್ಟಿನಲ್ಲಿ ನಿವಾರಣೆಯಾಯಿತು. ಆ ಮೊಕದ್ದಮೆಯಲ್ಲಿ ಕಷ್ಟವನ್ನು ಪರಿಹಾರ ಮಾಡಿದ ಮ|| ಅಡ್ವೊಕೇಟ್ ಶ್ರೀನಿವಾಸಯ್ಯಂಗಾರ್ರು, ಮ|| ಕೃಷ್ಣಮೂರ್ತಿರಾಯರೂ ಚಿತ್ರದುರ್ಗಕ್ಕೆ ದಯಮಾಡಿಸಿದ್ದರಿಂದ ಮೂರು ಜನ ಅಣ್ಣತಮ್ಮಂದಿರೂ ಅವರನ್ನು ತಮ್ಮ ಊರಿಗೆ ಕರೆದುಕೊಂಡು ಹೋದರು. ಆ ಗ್ರಾಮದವರೆಲ್ಲರೂ ಹರುಷಿತರಾದರು. ಸ್ಕೂಲ್ ಕಟ್ಟಡದಲ್ಲಿ ಎಲ್ಲರೂ ದಯಮಾಡಿದರು. ಅಲ್ಲಿ ಮ|| ಸಾರ್ವಜನಿಕಪ್ಪನವರು, ಪಾಟಿಲ್ ಕರಿಯಪ್ಪ, ಭೀಮಪ್ಪ, ತಿಪ್ಪೇರುದ್ರಪ್ಪ, ನಿಂಗಪ್ಪ, ಸಣ್ಣಪ್ಪ, ಇನ್ನೂ ಅನೇಕ ಜನರು ದಯಮಾಡಿದರು. ಆ ಕಾಲದಲ್ಲಿ ಪಿಟ್ಟಿಚರ್ ಅಂಚೆ ಮಾದಪ್ಪನವರು ಭಕ್ತಿವಿಜಯದಲ್ಲಿ ಕನ್ನಡದಲ್ಲಿ ರಚಿಸಲ್ಪಟ್ಟಿರುವ ಸಾಧು ಮಹಾತ್ಮರ ಚರಿತ್ರೆಯಲ್ಲಿ ಕಬೀರ ಮಹಾತ್ಮರ ಸಾಧು ಚರಿತ್ರೆಯನ್ನು ಪಾಡಿ ಆ ಮೇಲೆ ಗ್ರಾಮದಲ್ಲಿ ವೈರವಿಲ್ಲದೆ ಎಲ್ಲರೂ ಬಹು ಪ್ರೀತಿಯಿಂದ ಇರಬೇಕೆಂದು ಹೇಳಿ ಎಲ್ಲರನ್ನೂ ಹರುಷಪಡಿಸಿದರು. ಮ|| ಅಡ್ವೊಕೇಟ್ ಸ್ವಾಮಿಗಳವರು ಹರುಷಿತರಾಗಿ ಬಹುಮಾನವನ್ನು ದಯಪಾಲಿಸಿದರು. ಪುನಃ ಎಲ್ಲರೂ ದಿವ್ಯ ಭೋಜನದಿಂದ ತೃಪ್ತರಾಗಿ ಗಂಧ, ಪುಷ್ಪ, ಫಲಹಾರಗಳಿಂದ ಎಲ್ಲರೂ ಆನಂದ ಹೊಂದಿದರು. ಪುನಃ ಮ|| ಅಡ್ವೊಕೇಟರುಗಳು—ನಾವು ಇಲ್ಲಿಗೆ ಬಂದದ್ದರಿಂದ ಕಲ್ಯಾಣ ಕಾಲದಲ್ಲಿ ಎಲ್ಲರೂ ಹರುಷಪಡುವಂತೆ ನಮ್ಮ ಮನಸ್ಸಿಗೆ ಸಂತೋಷವನ್ನುಂಟುಮಾಡಿದಿರಿ. ನಾವು ಎಂದಿಗೂ ಮರೆಯಲಾರೆವು. ಊರಲ್ಲಿ ಕಲಹವಿಲ್ಲದಂತೆ ಎಲ್ಲರೂ ಅಣ್ಣತಮ್ಮಂದಿರಂತೆ ಪ್ರೀತಿಯಿಂದ ಇರಬೇಕೆಂದು ಹೇಳಿ ಸ್ಕೂಲ್ ಬಾಲಕರಿಗೆ ಬಹುಮಾನವನ್ನು ದಯಪಾಲಿಸಿದರು. ಪುನಃ ಮಾದಪ್ಪನವರು ವಿಜ್ಞಾಪಿಸಿಕೊಂಡರು. ಹಿಂದೆ ಮಹಾಭಾರತ ಯುದ್ಧದಲ್ಲಿ ಪಾರ್ಥಸಾರಥಿ(?)ನವರು ಕರ್ಣನಿಗೆ ಜಯವಾಗಲೆಂದು ಕೋರಿಕೊಳ್ಳುತಿದ್ದರು. ಪಾರ್ವತೀಶನು ಅರ್ಜುನನಿಗೆ ಜಯವಾಗಲೆಂದು ಕೋರಿಕೊಳ್ಳುತಿದ್ದನು. ಈಗಿನ ಯುದ್ಧವು ಪ್ರಾರಂಭವಾಗಿ ಎಷ್ಟೋ ದಿನಗಳಾದವು. ಪ್ರಜೆಗಳನ್ನು ಮಕ್ಕಳಂತೆ ಕಾಪಾಡುವ ಇಂಡ್ಯ ಜಾರ್ಜ್ ಚಕ್ರವರ್ತಿ ಸಾರ್ವಭೌಮರವರಿಗೆ ಬಹಳ ಜಾಗ್ರತೆಯಿಂದ ಕರ್ಣನ ಭುಜವಂ ಬಿಟ್ಟು ಅರ್ಜುನನ ಭುಜಕ್ಕೆ ಬಂದ ಜಯಲಕ್ಷ್ಮಿಯು ಪುನಃ ಕರ್ಣನ ಬಳಿಗೆ ಹೋಗದಂತೆ ಜಯವನ್ನಿತ್ತು ಬಗೆಯೀಶನೇ ಕರುಣಿಸೆಂದು ಎಲ್ಲರೂ ಆನಂದದಿಂದ ಚಪ್ಪಾಳೆಯಂ ತಟ್ಟುತ್ತಾ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರನ್ನು ಹೊಗಳುತ್ತಾ, ಜಯಧ್ವನಿಯಂ ಮಾಡುತ್ತಾ ಮ|| ಪಾಟಿಲ್ ಕರಿಯಪ್ಪನವರ ಗೃಹಕ್ಕೂ, ಬಚ್ಚಪ್ಪನವರ ಗೃಹಕ್ಕೂ ದಯಮಾಡಿಸಿ ತೆರಳಿದವರಾದರು. ನಮ್ಮ ಬಂದಾದಾರ.

ಮೈಸೂರು ಗೆಜೆಟ್ ಸಂಗ್ರಹ.

ಗುಬ್ಬಿ ಸಬ್ ಡಿವಿಜನ್ ಛಾರ್ಜಿಗೆ ವರ್ಗಮಾಡಲ್ಪಟ್ಟಿರುವ ಅ|| ಕಮಿಷನರ್ ಮ|| ಬಿ. ಬಸವಾರಾಧ್ಯರವರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಅ|| ಸರ್ಜನ್ ಮ|| ಎಸ್. ಕೆ ಹನುಮಂತರಾಯರನ್ನು ಕಳೆದ ಅಕ್ಟೋಬರ್ ತಾ. 17 ರಿಂದ 2 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಅ|| ಲೇಡಿ ಮೆಡಿಕಲ್ ಆಫೀಸರ್ ಮಿಸ್. ಎ ಜಿ ಆರ್ಚರ್‌ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ನಾಲ್ಕು ದಿನಗಳ ಪ್ರಿವಿಲೆಜ್ ರಜವನ್ನೂ, ಒಂದು ವರುಷ ಆರು ತಿಂಗಳ ಸಂಬಳವಿಲ್ಲದ ರಜವನ್ನೂ ಕೊಟ್ಟಿದೆ.

ಮುಂದೆ ಹೇಳುವ ಪೋಲೀಸ್ ಸೂಪರಿಂಟೆಂಡೆಂಟರ ವರ್ಗಾವರ್ಗಿ ಹುಕುಂ ಮಾಡಿದೆ—ಮ|| ಬಿ ರಾಮಸ್ವಾಮಯ್ಯನವರು ಬೆಂಗಳೂರಿನಿಂದ ತುಮಕೂರಿಗೆ; ಮ|| ಎ ಹೇಸ್‌ಯವರು ತುಮಕೂರಿನಿಂದ ಬೆಂಗಳೂರಿಗೆ.

ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫೀಸರ್ ಮ|| ಬಿ. ಸಿ. ಕೃಷ್ಣಶಾಸ್ತ್ರಿಯವರಿಗೆ ಸಾಕ್ಷಿಗಳ ಹೈಫಿಯತ್ತನ್ನು ಸ್ವಹಸ್ತ ಇಂಗ್ಲಿಷಿನಲ್ಲಿ ಬರೆದುಕೊಳ್ಳುವ ಅಧಿಕಾರ ವಹಿಸಿದೆ.

ಕರ್ನಲ್ ಜೆ ದೇಸರಾಜೆ ಅರಸಿನವರು ಜನವರಿ ತಾ. 27 ರಲ್ಲಿ ಮಿಲಿಟರಿ ಸೆಕ್ರೆಟರಿ ಆಫೀಸ್ ಛಾರ್ಜನ್ನು ವಹಿಸಿಕೊಂಡಿದ್ದಾರೆ.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಕ್ಲಾರ್ಕ್ ಮ|| ಎಂ. ರಾಮಸ್ವಾಮಯ್ಯನವರನ್ನು ಮಾಲೂರು ತಾಲ್ಲೂಕು ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ. ಅಮಲ್ದಾರ್ ಮ|| ಬಿ. ಕೃಷ್ಣಸಿಂಗ್ ರವರು ಕೆಲಸದಿಂದ ನಿವೃತ್ತರಾಗೋಣದರಿಂದ ಮ|| ರಾಮಸ್ವಾಮಯ್ಯನವರು ಫೆಬ್ರವರಿ ತಾ. 8 ರಲ್ಲಿ ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ಗುಬ್ಬಿ ಸಬ್ ಡಿವಿಜನ್ ಆಫೀಸರ್ ಮ|| ಎಚ್. ವಿ. ರಾಮಸ್ವಾಮಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ರಜದ ಮೇಲಿರುವ ಅ|| ಕಮಿಷನರ್ ಮ|| ಬಿ ಬಸವಾರಾಧ್ಯರವರು ಗುಬ್ಬಿ ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು.

ಎಕ್ಸೈಜ್ ಡಿಟೆಕ್ಟಿವ್ ಸ್ಟಾಫ್ ಸೂಪರಿಂಟೆಂಡೆಂಟ್ ಮ|| ಮಹಮದ್ ಅಬ್ದುಲ್ಲಾ ಷೆರೀಫ್‌ರವರು ಕಡೂರು ಡಿಸ್ಟ್ರಿಕ್ಟಿನ ಎಕ್ಸೈಸ್ ಆಫೀಸರಾಗಿ ವರ್ಗ ಮಾಡಲ್ಪಟ್ಟಿದಾರೆ. ಕೂಡಲೇ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಬೌರಿಂಗ್‌ಪೇಟೆ ತಾಲ್ಲೂಕು ಕೊಪ್ಪದಬೈಲ್ಲು, ಕೋಲಾರ್ ತಾಲ್ಲೂಕು ಹೊಳೂರಿನಲ್ಲೂ ಏಪ್ರಿಲ್ ತಾ. 1 ರಿಂದ ಗ್ರಾಮ ಕೋರ್ಟುಗಳು ಸ್ಥಾಪಿಸತಕ್ಕದ್ದೆಂದು ಹುಕುಂ ಮಾಡಲಾಗಿದೆ.

ಬಲಾತ್ಕರಿಸಿ ದೇವಿ ಬಿಡಲು ಹಾಕುವ ಕಾನೂನನ್ನು ಬೌರಿಂಗ್‌ಪೇಟೆ ಮ್ಯುನಿಸಿಪಲ್ ಸರಹದ್ದಿನಲ್ಲಿ 1916 ನೇ ಮಾರ್ಚಿ ಲಾಗಾಯಿತು ಐದು ವರುಷ, ಹಿರಿಯೂರು ಮ್ಯುನಿಸಿಪಲ್ ಸರಹದ್ದಿನಲ್ಲಿ ಎರಡು ವರುಷಗಳೂ ಜಾರಿ ಕರಲ್ಪಡತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿದೆ.

ಮ|| ಗೋಪಾಲ ಸಿಂಗರವರನ್ನು ಫ್ರೆಂಚ್ ರಾಕ್ಸ್ ಮ್ಯುನಿಸಿಪಲ್ ಬೋರ್ಡು ಮೆಂಬರಾಗಿ ನೇಮಕಮಾಡಿದೆ.

ಮ|| ಆರ್ ಸುಬ್ಬರಾಯರನ್ನು ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ಲಿನ ವೈಸ್ ಪ್ರೆಸಿಡೆಂಟರಾಗಿ ಫೆಬ್ರವರಿ ತಾ. 2 ರಿಂದ ಒಂದು ವರುಷ ನೇಮಕ ಮಾಡಲಾಗಿದೆ.

ರಾಗಿ ಬೊಮ್ಮನಹಳ್ಳಿ ಪಟೇಲ್ ಮ|| ಮಾದಪ್ಪನವರನ್ನು ಮ... ತಾಲ್ಲೂಕ್ ಪ್ರೋಗ್ರೆಸ್ ಕಮಿಟಿಯ ಮೆಂಬರಾಗಿ ನೇಮಿಸಿದೆ.

ಬೆಂಗಳೂರಿನಲ್ಲಿ ನಡೆದ ವೈಶ್ಯ ಬಾಲಕರ ಸಂತೋಷಕೂಟ.

ಮ|| ಸಾಹುಕಾರ್ ಬೆಂಕಲಪಲ್ಲಿ ವೆಂಕಟಮುನಯ್ಯಶ್ರೇಷ್ಠಿಯವರ ಧರ್ಮಸತ್ರದ ವೈಶ್ಯ ವಿದ್ಯಾರ್ಥಿಗಳು ಫೌಂಡರ್ಸ್ ಡೇ ಎಂಬ ತಮ್ಮ ವಾರ್ಷಿಕ ಸ್ಥಾಪಕರ ಮಹೋತ್ಸವದ ಮೈಲಿ ಕಲ್ಲನ್ನು ಕಳೆದ ತಿಂಗಳು ತಾ. 29 ಶನಿವಾರದ ದಿನ ಮೈಸೂರು ಸಂಸ್ಥಾನದ ಚೀಫ್ ಇಂಜನಿಯರಾಗಿಯೂ, ರಾಜಸಭಾಭೂಷಣವೆಂಬ ಬಿರುದನ್ನುಳ್ಳವರಾಗಿಯೂ, ವಿದ್ವನ್ಮಣಿಗಳಾಗಿಯೂ ಇರುವ ಮ|| ಕಪೂರ್ ಶ್ರೀನಿವಾಸರಾಯರಿಂದ ಸ್ಥಾಪಿಸಿದರು. ಆ ದಿನ ತಮ್ಮ ಹಾಲನ್ನು ಫೋಟೋ, ಹೂವು, ಕುರ್ಚಿಯ ಸಾಲುಗಳಿಂದ ಬಹಳ ರಮ್ಯವಾಗಿ ಅಲಂಕರಿಸಿದ್ದರು. ಈ ಮನೋಹರವಾದ ಸಭಾಮಂದಿರವು ಸುಬಾಗಮನವನ್ನು ಹೊಂದಿ ಆಹ್ವಾನ ಪತ್ರಿಕೆಗಳ ಮೂಲಕ ಬರಮಾಡಿಕೊಳ್ಳಲ್ಪಟ್ಟ ಅನೇಕ ಮಹನೀಯರುಗಳಿಂದ ಕಿಕ್ಕಿರಿಯುತ್ತಿತ್ತು. ಅಲ್ಲಿ ಸೇರಿದ್ದ ಮಹನೀಯರುಗಳು ರಾವ್ ಬಹದ್ದೂರ್. ಕೆ ಕೃಷ್ಣಯ್ಯಂಗಾರ್ರು, ಅಡ್ವೊಕೇಟ್ ರಿ ವೆಂಕಟರಾಮಯ್ಯನವರು, ರಟೈರ್ಡ್ ಡೆಪ್ಯುಟಿ ಕಮಿಷನರು ಎಂ. ಬೆಂಗಯ್ಯ, ಎಸ್. ವಿ ಶೆಟ್ಟಿಯವರು, ಎಚ್ ರಾಮಯ್ಯನವರು, ಎಚ್. ಆರ್. ಕೃಷ್ಣಮೂರ್ತಿರಾಯರು, ಬಿ. ಎಸ್. ರಾಜಗೋಪಾಲರಾಯರು, ಮತ್ತು ಚಿನ್ನಸ್ವಾಮಿ ಡಿ. ಆದಪ್ಪನವರು, ದೊಡ್ಡಣ್ಣಶೆಟ್ಟರು, ಇನ್ನು ಅನೇಕ ವರ್ತಕರು ನೆರೆದಿದ್ದರು.

ಈ ಥಾ ಮನೋರಂಜಕವಾದ ಸಭೆಗೆ ಸಭಾಧ್ಯಕ್ಷರಾಗಿರಲು ಒಪ್ಪಿಕೊಂಡ ಮ|| ಕಪೂರ್ ಶ್ರೀನಿವಾಸರಾಯರು ಸಕಾಲದಲ್ಲಿ ಬಿಜಯಂಗೈದು ಸಂತೋಷವಾದ ಜಯಘೋಷಗಳಿಂದ ಕೂಡಿದ ಸಭೆಯ ಮಧ್ಯದಲ್ಲಿ ತಮಗೋಸ್ಕರ ಏರ್ಪಡಿಸಲ್ಪಟ್ಟ ಉಚಿತಾಸನವನ್ನು ಸ್ವೀಕರಿಸಿದರು. ಕೂಡಲೆ ದೇವರ ಪ್ರಾರ್ಥನೆ ತೆಲುಗಿನಲ್ಲಿ ನಡೆಯಿತು. ನಂತರ ನಾಟಕ ಸಂಬಂಧವಾದ ಆಟಗಳು ತೆಲುಗಿನಲ್ಲಿಯೂ, ಇಂಗ್ಲಿಷಿನಲ್ಲಿಯೂ, ಕನ್ನಡದಲ್ಲಿಯೂ ನಡೆದವು. ಇವುಗಳು ತುಂಬಾ ಸ್ವಾರಸ್ಯವಾಗಿಯೂ, ಬುದ್ಧಿವಾದವನ್ನು ತಿಳಿಸತಕ್ಕವುಗಳಾಗಿಯೂ ಸಭಿಕರ ಮನಸ್ಸನ್ನು ಸಂತೋಷಪಡಿಸುವಂತೆಯೂ ನಡೆದವು. ಕೂಡಲೆ ಸೆಕ್ರೆಟರಿ ಕೆ ಎಲ್. ಸೂರ್ಯನಾರಾಯಣಶೆಟ್ಟರು ತಮ್ಮ ಹಾಸ್ಟಲಿನ 1915-1916 ಸಾಂವತ್ಸರಿಕ ರಿಪೋರ್ಟನ್ನು ಕನ್ನಡದಲ್ಲಿ ಓದಿ ಹೇಳಿದರು. ಅದರಲ್ಲಿ ಹಾಸ್ಟಲಿಗೆ ಸಂಬಂಧಪಟ್ಟ ಕಟ್ಟಳೆಗಳೂ, ಇತರ ಸಂಗತಿಗಳೂ ನಿಖರವಾಗಿಯೂ, ಸ್ಪಷ್ಟವಾಗಿಯೂ ಇದ್ದವು.

ನಂತರ ಸಭಾಧ್ಯಕ್ಷರಿಗೆ ಹಾರ ತುರಾಯಿಗಳು ಅರ್ಪಿಸಲ್ಪಟ್ಟವು. ಒಡನೆ ಸಭಾಧ್ಯಕ್ಷರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಧರ್ಮಕರ್ತರಿಂದ ಕೊಡಲ್ಪಟ್ಟ ಇನಾಮು ಪುಸ್ತಕಗಳನ್ನು ದಯಪಾಲಿಸಿದರು. ನಂತರ ಸಭಾಧ್ಯಕ್ಷರು ಈ ಹಾಸ್ಟಲಿನ ವಿದ್ಯಾರ್ಥಿಗಳ ಸಂಖ್ಯೆಯು 15 ರಿಂದ 150 ರ ವರಿಗೆ ಹೆಚ್ಚಿಸಲು ದೇವರು ಪ್ರೇರಣೆಮಾಡಬೇಕೆಂದೂ, ಹಾಸ್ಟಲು ಉನ್ನತವಾಗಿ ನಡೆಯಬೇಕೆಂದೂ ಹೇಳಿದರು. ಅಲ್ಲದೆ ಈ ಹಾಸ್ಟಲಿನ ಧರ್ಮಕರ್ತರ ಗುಣಾತಿಶಯಗಳಿಗೂ, ಉದಾರವಾದ ಮತ್ತು ಪರೋಪಕಾರವಾದ ಧರ್ಮಕಾರ್ಯಕ್ಕೂ ಮೆಚ್ಚಿ ತಮಗೆ ಪೂರ್ವದಿಂದಲೂ ಸ್ನೇಹಿತರಾಗಿರುವ ಮ|| ವೆಂಕಟಮುನಸ್ವಾಮಿಶೆಟ್ಟರನ್ನು ಕೊಂಡಾಡಿದ್ದಲ್ಲದೆ ತಮ್ಮ ಸಂತೋಷವನ್ನು ತೋರ್ಪಡಿಸಿ ಕೃತಜ್ಞತಾ ಸೂಚಕವಾದ ಶುಭಕರಗಳೊಡನೆ ವಂದನೆಗಳನ್ನು ಅರ್ಪಿಸಿದರು. ವಿದ್ಯಾರ್ಥಿಗಳು ಮಾಡಿದ ಕಾರ್ಯಗಳಲ್ಲಿ ಮನೋಲ್ಲಾಸವನ್ನು ಹೊಂದಿ ಅದರಿಂದ ತಿಳಿಯುವ ನೀತಿಗಳನ್ನು ಸಭಿಕರಿಗೆ ವಿಶದವಾಗಿ ತಿಳಿಯುಂತೆ ಕನ್ನಡದಲ್ಲಿ ಉಪನ್ಯಾಸ ಮಾಡಿದರು. ಇದೇ ಮೇರೆ ಪ್ರತಿ ಒಬ್ಬ ಧನಿಕನೂ ಇಂಥಾ ಧರ್ಮಕಾರ್ಯಗಳನ್ನು ನಡೆಸಬೇಕೆಂತಲೂ ಹೇಳಿದರು.

ಕೂಡಲೆ ಪ್ರೆಸಿಡೆಂಟರಾದ ಮ|| ಎನ್. ವಿ. ನಾರಾಯಣಮೂರ್ತಿಯವರು ಸಭಾಧ್ಯಕ್ಷರಿಗೂ ನೆರೆದಿದ್ದ ಮಹನೀಯರುಗಳಿಗೂ, ಬಾಲಕರು ಮಾಡಿದ ಪಾಟಗಳನ್ನು ಕಲಿಸಲು ಶ್ರಮೆಯನ್ನು ತೆಗೆದುಕೊಂಡ ವೆಸ್ಲಿಯನ್ ಮಿಷನ್ ಉಪಾಧ್ಯಾಯರಿಗೂ, ತುಂಬಾ ಶ್ರಮೆಯನ್ನು ವಹಿಸಿ ಕಾರ್ಯಗಳನ್ನು ಮಾಡಿದ ಹಾಸ್ಟಲಿನ ಮ್ಯಾನೇಜರು ಮ|| ವೆಂಕಟಪಂತಿಶೆಟ್ಟರಿಗೂ ಬಾಲಕರ ಪರವಾಗಿ ವಂದನೆಗಳನ್ನು ಅರ್ಪಿಸಿದರು. ನಂತರ ನಮ್ಮ ಮಹಾರಾಜರಿಗೆ ಶ್ರೇಯಸ್ಸನ್ನು ಪ್ರಾರ್ಥನೆಗಳನ್ನು ಮಾಡಿ ಮಂಗಳವನ್ನು ಹಾಡಿದರು.

ಎ. ಎಸ್ ನಾರಾಯಣಸ್ವಾಮಿ.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬುದನ್ನು ಗಮನಿಸಿ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ವಿಳಾಸಗಳನ್ನು ಬರೆದು ತಿಳಿಸಕ್ಕದು ಮತ್ತು ಬಾತ್ಮಿಯನ್ನು ಕಾಗದದ ಒಂದೇ ಪಕ್ಕಗಳಲ್ಲಿ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವು ... ವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಬೇಕು. ಮಂಗಳವಾರ ... ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಹೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ಅಮಲ್ದಾರರ ವಿಚಾರ.

ಅಯ್ಯಾ,—ಡಿಸೆಂಬರ್ ತಾ 16, 30, ಜನವರಿ 13 ನೇ ತಾ. ... ವಿಷಯ ಈ ತಿಂಗಳು 3 ನೇ ತಾ ಪತ್ರಿಕೆಯಲ್ಲಿ ಹೆಚ್. ವಿ. ಎಂಬುವರು ಜನಗಳಲ್ಲಿ ಬಳಕೆ ಇಲ್ಲದೆಯೂ, ಸ್ನೇಹವಿಲ್ಲದೆಯೂ ಕನ್ನರನ್ನು ಪಾಠನ ಮರ್ಯಾದೆ ಇಲ್ಲದೆ ದೂಷಣೆ ಮಾಡುವದರಿಂದ ಕೆಲವರಿಗೆ ಸಮಾಧಾನವಿಲ್ಲವೆಂದೂ ಬರೆದಿತ್ತು. ದೂಷಣೆ ಎಂಬ ಮಾತು ... ಕಗಳಲ್ಲಿ ಇಲ್ಲವೇ ಇಲ್ಲ. ಮತ್ತು ಹೆಚ್. ವಿ. ಎಂಬುವರು ಮೇಲಿನ ಬಾತ್ಮಿ...

...ಕಂಟಿಕೋರರನ್ನು ಪುಂಡು ಜನರನ್ನೂ ಕಡಿಮೆ ಮಾಡುವ ನಿಮಿತ್ತ ...ಮಾಡಬಹುದೆಂದು ಸೂಚಿಸಿದಾರೆ. ಸರ್ಕಾರಿ ಉದ್ಯೋಗಸ್ಥರಲ್ಲಿ ಕಂಟಿ... ಪುಂಡು ಜನರು ಯಾರು? ದಯವಿಟ್ಟು ತಿಳಿಸಬೇಕೆಂದು ಬೇಡಿಕೊ... ಇಂಥಾ ನಾಗರಿಕ ಕಾಲದಲ್ಲಿ ಬೈಯುವದಕ್ಕೂ, ಮರ್ಯಾದೆ ಇಲ್ಲದ ...ಡುವದಕ್ಕೂ ಯಾವ ಸರ್ಕಾರಿ ರೂಲ್ಸಿನಲ್ಲಿದೆ? ದಯವಿಟ್ಟು ತೋರಿಸಲಿ ...ಇಲ್ಲದ ಜನರು ಪಡುವ ಅಭಿಪ್ರಾಯಗಳು ನಂಬತಕ್ಕದ್ದಾಗಿಲ್ಲವೆಂದು ... ತಿಳವಳಿಕೆ ಇಲ್ಲದವರು ಬರೆಯುವ ಬಾತ್ಮಿಗಳನ್ನು ತಿಳುವಳಿಕೆ ಇದ್ದ ...ನಂಬುವದಿಲ್ಲ.

ನಿಮ್ಮ ವಾಚಕ.

ದರ್ಜಿ ಕೆಲಸಕ್ಕೆ ಪ್ರೋತ್ಸಾಹ ಬೇಕಂತೆ.

...ಮ್ಮ,—ಮೈಸೂರು ಕೈಗಾರಿಕೆ ಕೆಲಸವನ್ನು ಅಭಿವೃದ್ಧಿಸ್ಥಿತಿಗೆ ತರುತ್ತ... ...ಗೌರ್ನಮೆಂಟಿನವರಿಗೆ ಅರಿಕೆ ಮಾಡಿಕೊಳ್ಳುವದೇನೆಂದರೆ—ಮೈಸೂರು ...ನಲ್ಲಿ ವಾಸವಾಗಿರುವ ಆರಣಿ ಶ್ಯಾಮಿಯಾರ್ ಸುಬ್ರಾಯಮೊದಲಿಯಾರ್ರ ...18 ವರುಷ ವಯಸ್ಸಿನ ಎ. ಷಣ್ಮುಗಮೊದಲಿಯಾರ್ ಎಂಬಾತನು ಎಡು... ...ಯೂರೋಪಿಯನ್ ಲೇಡೀಸ್ ಮತ್ತು ಜಂಟಲ್‌ಮೆನ್ ...ಕೆಲಸದಲ್ಲಿ ತುಂಬಾ ಹೆಸರಾಗಿ ಇದೆದು 1915 ನೇ ಇಸವಿಯಲ್ಲಿ ...ಮದರಾಸ್ ಟೆಕ್ನಿಕಲ್ ಎಗ್ಸಾಮಿನೇಷನ್‌ನಲ್ಲಿ ಇಂಟರ್ ಮೀಡಿಯೇಟ್ ...ಕಟಿಂಗ್‌ನಲ್ಲಿ ಫಸ್ಟ್ ಕ್ಲಾಸಿನಲ್ಲಿ ತೇರ್ಗಡೆಯಾಗಿರುತ್ತಾನೆಂದು ...ಫೋರ್ಟ್ ಸೆಂಟ್ ಜಾರ್ಜ್ ಗೆಜೆಟ್ಟಿನಲ್ಲಿ ಪ್ರಾಯಿಷ್ ಆಗಿರುತ್ತೆ. ...ದೇಶದಲ್ಲಿ ಈ ರೀತಿ ತೇರ್ಗಡೆಯಾಗಿರುವುದು ಇದೇ ಮೊದಲಾಗಿರುತ್ತೆ ...ಗೌರ್ನಮೆಂಟಿನವರು ಇಂಥಾವರಿಗೆ ಇನ್ನು ಮುಂದಕ್ಕೆ ಯಾತಕ್ಕೆ ಸಹಾಯ ...ಅಭಿವೃದ್ಧಿಸ್ಥಿತಿಗೆ ತರಬಾರದು?

ದೇಶಾಭಿಮಾನಿ

[...ನಿದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಅರ್ಜಿ ಬರೆ...ಬಹುದು; ಇಲ್ಲವೇ, ಅಂಗಡಿ ಇಟ್ಟು ಸಾಮರ್ಥ್ಯವನ್ನು ತೋರಿಸಿದರೆ ...ಕೆಲಸಕೊಟ್ಟು ಪ್ರೋತ್ಸಾಹಿಸುವರು.—ಎಡಿ]

ಸೇಂದಿ ಕುಡಿಯಬೇಕೆಂಬ ನಿರ್ಬಂಧವಂತೆ—ಜವಾಬು.

...ಮ್ಮ,—ಜನವರಿ 25 ನೆ ತಾ ತಮ್ಮ ಪತ್ರಿಕೆಯಲ್ಲಿ ಪ್ರಜಾಹಿತಚಿಂತ... ...ಬಾತ್ಮಿದಾರರು ತಿಳಿಸಿರುವ ಅಂಶಗಳು ಸಂಶಯ ನಿವೃತ್ತಿ ಮಾಡತಕ್ಕವ... ಹೇಗೆಂದರೆ ಚಿಕ್ಕಬಳ್ಳಾಪುರದಲ್ಲಿ ಈಗ 10 ವರುಷಗಳಿಂದ ಮ... ...ಬಾಯಿರೂ, ತೋಟಗೆರೆ ನಾಗಪ್ಪನವರೂ ಸೇಂದಿ ಕಂಟ್ರಾಕ್ಟು ಮಾಡಿ 4 ...½ ದುಡ್ಡು ಪ್ರಕಾರ ಸೇರು 1 ಕ್ಕೆ ಬಿಕರಿ ಮಾಡಿ ಈ ವರುಷ 6 ...ಪ್ರಕಾರ ಬಿಕರಿ ಮಾಡುವದರಿಂದ ಪ್ರಾಶೀಕರು ಅನೇಕ ಜನ ಸೇಂದಿ ...ಕಟ್ಟು ಮಾಡಿಕೊಂಡು ಇರುವದಾಗಿಯೂ, ಇದರಿಂದ ತೊಂದರೆ ಮಾಡಿ ...ಉತ್ಸವ ಸಿರಿಗೆ ಬಂದು ಮನೆಗಳಲ್ಲಿ ದೀಪ ಮುಟ್ಟಿಸಿ ಎರಡು ...ಊಟಾ ಮಾಡುತ್ತಾರೆಂಬ ವಾಕ್ಯಗಳು ನಿಜವಲ್ಲ. ಸೇಂದಿ ...ಕುಡಿದು 3-30-40-50 ರೂಪಾಯಿ ವರೆಗೂ ಸಾಲಗಾರರಾಗಿಯೂ ...ಇದರಿಂದ ದೇಹ ಅನಾರೋಗ್ಯಕರವಾಗಿರುವದೂ ಹಿತಚಿಂತಕರಿಗೆ ತಿಳಿಯ... ...ಮುಖ್ಯವಾಗಿ ಸೇಂದಿ, ಸಾರಾಯಿ, ಈ ಎರಡು ಬಾಬುಗಳೂ ನಮ್ಮ ಸೀಮೆ ...ಇಲ್ಲದೇನೇ ಹಿತಚಿಂತರು ಮಾಡಿದರೆ ಆಗ ನೋಡದಿನಲ್ಲಿ ಫಾಯಿಸು... ...ಕ್ಕೆ ಸಂತೋಷ ದೊರೆತಕ್ಕದ್ದೇ ಹೊರತು ಕಳೆದ 25 ನೇ ತಾ ...ಫಾಯಿಸು ಮಾಡಿಸಿರುವ ಸಂದಿಗ್ಧರಾದ ಉಪ್ಪಾರಣೆಗಳು ನಂಬ...

ಬಾತ್ಮಿದಾರ್.

ರಾಜಧಾನಿಯ ಸೊಪ್ಪಿನ ಕೊಳದ ವಿಚಾರ

...ಮ್ಮ,—ನಮ್ಮ ಸರ್ಕಾರದವರು ರಾಜಧಾನಿಯ ಬೀದಿಗಳಲ್ಲಿದ್ದ ಮುಚ್ಚ... ...ಮನೆಗಳಿಗೆ ತೊಂದರೆಯಾಗುತ್ತಿದ್ದ ಹಾಳು ಭಾವಿಗಳನ್ನು ಮುಚ್ಚಿ... ...ಮತ್ತು ಸಂದಿಗೊಂದಿಗಳಲ್ಲಿ ಮನೆಗಳು ಹೆಚ್ಚಾಗಿದ್ದುದರಿಂದ ಕಳ್ಳತನವು ...ನಡೆಯುತ್ತಿತ್ತು. ಅಂಥಾ ತೊಂದರೆಯನ್ನು ತಪ್ಪಿಸಬೇಕಾಗಿ ಆ ಮನೆ ...ಕೈಯಕ್ಕೆ ತೆಗೆದುಕೊಂಡು ಕೆಡವಿಸಿ ದೊಡ್ಡ ರಸ್ತೆಗಳನ್ನಾಗಿ ಮಾಡಿದ... ...ಸಂತೋಷಪಡತಕ್ಕದ್ದಾಗಿದೆ. ಆದರೆ ರಾಜಧಾನಿಯ ಕೃಷ್ಣರಾಜ ...ದಲ್ಲಿ ಅತ್ಯಂತ ಭಯಂಕರವಾದ ಮತ್ತು ಬಹಳ ದೊಡ್ಡದಾದ ಸೊಪ್ಪಿನ ...ಇರುವುದು. ಇದರಿಂದ ತಿಂಗಳಿಗೆ ಸುಮಾರು 3 4 ಜನಗಳ ಪ್ರಾಣ ಹೋ... ...ನೀರು ಬಹಳ ಕೊಳಕಾಗಿರುವುದರಿಂದ ಅದರಲ್ಲಿ ಹುಟ್ಟುವ ...ಗಳು ವಾಯುವಿನ ಕೂಡ ಮಿಶ್ರವಾಗಿ ಸಮೀಪದಲ್ಲಿರುವ ಮನೆ ...ಜನರನ್ನು ಕೆಡಿಸುತ್ತವೆ. ಜನಗಳು ಬಿದ್ದು ಸಾಯುವುದರಿಂದ ...ಗಳು ಬಹಳವಾಗಿ ಭಯಪಡುವರು. ಆದರೆ ಕಳ್ಳಕಾರರಿಗೆ ಅನು... ...ಇದರಿಂದ ಪ್ರಜೆಗಳಿಗಾಗಲಿ ಸರ್ಕಾರಕ್ಕಾಗಲಿ ಯಾವ ವಿಧವಾದ ...ಫಾ ಕಾಣಬರುವದಿಲ್ಲ. ಈ ಕೊಳವನ್ನು ಮುಚ್ಚಿಸಾರೆಂದು ...

ಬಿ. ಎಸ್. ವೆಂಕಟರಾವ ಜಮಾಬಂದಿ, ಅಗ್ರಹಾರ

[...ಬಹಳ ಅವಶ್ಯವಾದದ್ದು. ಟ್ರಸ್ಟ್ ಬೋರ್ಡಿನವರಾಗಲಿ, ಮ್ಯುನಿಸಿ...ನವರಾಗಲಿ ಜಾಗ್ರತೆಯಿಂದ ಈ ಕೊಳವನ್ನು ಮುಚ್ಚಿಸ್ಯಾರೆಂದು ನಿರೀಕ್ಷಿ...ನೆ—ಎಡಿ]

ತೀರ್ಥಹಳ್ಳಿ ಪ್ರದರ್ಶನ—ಆಕ್ಷೇಪಣೆ.

...ಮ್ಮ,—ತೀರ್ಥಹಳ್ಳಿ ವಿದ್ಯಾಭ್ಯಾಸ ಪ್ರದರ್ಶನ ನಡೆದಾಗ ಮಹಾ... ...ಅಧ್ಯಕ್ಷತೆಯನ್ನು ವಹಿಸಿದ ಮ ... ರಾಮಸ್ವಾಮಿರಾವ್ ಎಂ. ಎ ...ಬಾಲಕ ಬಾಲಕಿಯರು ಪ್ರದರ್ಶಿಸಿದ ನಾಟಕವು ತೃಪ್ತಿಕರವಾಗಿರು... ...ಮೇಲೆ ತೀರ್ಥಹಳ್ಳಿ ಎ. ವಿ. ಸ್ಕೂಲ್ ವಿದ್ಯಾರ್ಥಿಗಳಿಗೆ 20 ರೂಪಾಯಿ, ...ಸ್ಕೂಲ್ ವಿದ್ಯಾರ್ಥಿನಿಯರಿಗೆ 20 ರೂಪಾಯಿ, ಹೀಗೆ ಬಹುಮಾನವಾಗಿ ...ನ್ನು ಕೆಲವು ಜನ ಮಹಸ್ಥರುಗಳು ಇನ್ನು ಇತರ ಮಹನೀಯರೂ ...ಮಕ್ಕಳುಗಳಿಂದಲೂ ತಾವು ತಾವೇ ಸೇರಿಕೊಂಡು ಮೀರು... ...ತಿಂಡಿಗಳನ್ನು ಮಾಡಿ ತಿಂದು ಸಂತೋಷಪಟ್ಟರೆಂತಲೂ, ಸ್ಕೂಲ್ ...ಭಾಗಕ್ಕೆ ಆ ಬಹುಮಾನವು ಯಾವ ರೂಪದಿಂದಲೂ ಹಂಚಲ್ಪಡಲಿಲ್ಲ ...ಬಹುಮಾನ ಮಾಡಿದವರ ಸದುದ್ದೇಶವು ಅವರ ಪರೋಕ್ಷದಲ್ಲಿ ...ಯೋಗವಾಯಿತೆಂತಲೂ ಅನೇಕ ಬಾಲಕರು ವಿಷಾದಪಡುತ್ತಾರೆ ಇದು ...ಸುವದೇ ಎಂದು ವಿಚಾರ ಮಾಡಿದ್ದರಲ್ಲಿ ಬಹಿರಂಗವಾಗಿ ವಿಷಯಗಳು ...ಸಂತೋಷವಾಗುತ್ತಾ ಇದ್ದರೂ ಅಂತರಂಗದಲ್ಲಿ ನಿಜವಾಗಿಯೂ, ...ಕಾರ್ಯಗಳು ನಡೆಯುತ್ತ ಈ ಪ್ರದರ್ಶನವು ಕೆಲವು ಅನೇಕ ...ಆಶಿರ್ವಾದಂತ ಜನಗಳ ಮನಸ್ಸಿಗೆ ವ್ಯಕ್ತವಾಗಿದೆ. ಬಾಯಿಯಿಂದ ...ಸ್ವಲ್ಪವೆಂತ ಮೌನವಾಗಿರುತ್ತಾರೆ. ಸದುದ್ದೇಶ್ಯದ ಕಾರಣಗಳನ್ನು ...ಮಾಡಿಕೊಂಡು ಅನೇಕರು ಅನೇಕ ರೂಪವಾಗಿ ಸ್ವಾರ್ಥಪ್ರಯೋಜನ ...ಕೊಂಡಿರುತ್ತಾರೆ. ಇಂತಹ ವಿಷಯಗಳು ಪ್ರತ್ಯಕ್ಷದಲ್ಲಿ ವಿಚಾರಕ್ಕೆ ...ದೊಡ್ಡ ಕಾರುಬಾರುಗಳಿಗೆ ಬಾಧಕಪಡಿಸುತ್ತೆ. ಮಹನೀಯ ...ಇದಕ್ಕೆ ಸಂಬಂಧಪಟ್ಟವರೆಲ್ಲರೂ ನ್ಯೂನತೆ ವಿಷಯದಲ್ಲಿ ಈಗಲೂ ...ಕ್ಷಿಸುತ್ತಾಗಿ ಬಾಲಕರು ಹಾರೈಸುತ್ತಾರೆ.

ಕಾ ರಾಘವೇಂದ್ರರಾವ್.

ಲಕ್ಕುವಳ್ಳಿ ವಿಚಾರಗಳು.

...ಮ್ಮ,—ತರೀಕೆರೆಯಿಂದ ಕೊಪ್ಪದ ವರೆಗೆ ಜನಗಳಿಗೆ ಪ್ರಯಾಣಕ್ಕಾಗಿ ...ಸುಮಾರು 20 ಜನಗಳ ವರೆಗೆ ಕೂರಬಹುದಾದ ಮೋಟಾರ್ ಗಾಡಿಯನ್ನು ಇಟ್ಟಿರುತ್ತಾರೆ. ಇದು ಜನಗಳ ಪ್ರಯಾಣಕ್ಕೆ ತುಂಬಾ ಅನುಕೂಲ ವಾಗಿರುತ್ತದೆ. ಆದರೆ ಈ ಮೋಟರಿಗೆ ಛಾರ್ಜು ಮಾತ್ರ ಬಹಳ ಜಾಸ್ತಿಯಾಗಿ ರುತ್ತಾರೆ. ಈಗಿರುವ ಛಾರ್ಜನ್ನು ಕಮ್ಮಿ ಮಾಡಿದರೆ ಅವರಿಗೆ ತುಂಬಾ ಫಾಯಿದೆ ಆಗುವುದರಲ್ಲಿ ಏನೂ ಅಡ್ಡಿಯಿರುವುದಿಲ್ಲ. ಮೋಟರ್ ಗಾಡಿಯು ಈ ರಸ್ತೆ ಯಲ್ಲಿ ಹೋಗಿಬರುವದಕ್ಕೆ ರಸ್ತೆ ಚೆನ್ನಾಗಿಲ್ಲವೆಂದು "ಡೇಲಿ ಪೋಸ್ಟ್" ನಲ್ಲಿ ಪ್ರಕಟಿಸಿದ್ದರು. ಪ್ರಕಟಿಸಿದವರಿಗೆ ಚೆನ್ನಾಗಿಲ್ಲವೆಂಬ ಆಕ್ಷೇಪಣೆ ಒಂದೇ ಗೊತ್ತೇ ವಿನಹ ಇಲ್ಲಿರತಕ್ಕ ದೊಡ್ಡ ಕಷ್ಟ ಗೊತ್ತಿಲ್ಲವಾಗಿ ಕಾಣುತ್ತದೆ. ಏನೆಂದರೆ ಲಕ್ಕುವಳ್ಳಿ ರೇಂಜು ಎಂಬುವದು ಬಹಳ ದೊಡ್ಡದು ಈ ಕಡೇ ಜಂಗಲ್‌ಗಳಿಂದ ನಾಟಾಗಳು ತರೀಕೆರೆ ವರಿಗೆ ರಸ್ತೆಯಲ್ಲಿ ಗಾಡಿಗಳ ಮೇಲೆ ಹೋಗಬೇಕು. ಈಗ ದಿನ 1 ಕ್ಕೆ 60-70 ಗಾಡಿಗಳಂತೆ ನಾಟಾಗಳು ಹೋಗುತ್ತಲಿವೆಯಂತೆ ಇಂಜನಿಯರ್ ಇಲಾಖೆಯವರು ಎಷ್ಟು ಚೆನ್ನಾಗಿ ರಸ್ತೆಯನ್ನು ರಿಪೇರಿ ಮಾಡಿಸಿದಾಗ್ಯೂ ಈ ನಾಟಾಗಳ ಗಾಡಿಗಳಿಂದ ಕೆಡುವದಕ್ಕೆ ಕಾರಣವೇ ವಿನಹ ಬೇರೆ ಯಾವ ಕಾರಣವೂ ಇರುವುದಿಲ್ಲ. ನಾಟಾಗಳನ್ನೆಲ್ಲಾ ಟ್ರಾಂವೆ ಮೂಲಕ ರವಾನಿಸಬೇಕೆಂದು ಸರ್ಕಾರದ ಹುಕುಂ ಇದ್ದಾಗ್ಯೂ ಇನ್ನೂ ಗಾಡಿಗಳ ಮೂಲಕವೇ ಸಾಗಿಸುತ್ತಲಿವೆ. ಈ ನಾಟಾ ಟ್ರಾಫಿಕ್ಕನ್ನು ಗಾಡಿ ಮೂಲಕ ಸಾಗಿಸುವದು ತಪ್ಪಿಸಿ ಟ್ರಾಂವೆ ಮೂಲಕ ಸಾಗಿಸಿದರೆ ಸರ್ಕಾರಕ್ಕೆ ತುಂಬಾ ಫಾಯಿದೆಯೂ, ರಸ್ತೆಯಲ್ಲಿ ಜನಗಳ ಪ್ರಯಾಣಕ್ಕೆ ತುಂಬಾ ಅನುಕೂಲವಾಗುತ್ತದೆಂದು ನಂಬುತ್ತೇವೆ. ಈ ವಿಷಯವನ್ನು ಸರ್ಕಾರದವರು ಯೋಚಿಸಬೇಕೆಂದು ಕೋರುತ್ತವೆ

ತರೀಕೆರೆಯಿಂದ ನರಸಿಂಹರಾಜಪುರದ ವರಿಗೆ ಟ್ರಾಂವೆ ಲೈನು ಹಾಕಿರುತ್ತಾರಷ್ಟೆ. ಈ ಟ್ರಾಂವೆಯು ಇದುವ ನರಸಿಂಹರಾಜಪುರಕ್ಕೆ ಹೋಗುತ್ತಿಲ್ಲ ಲಕ್ಕುವಳ್ಳಿವರಿಗೆ ಮಾತ್ರ ಹೋಗುತ್ತಲಿದೆ. ಈ ಟ್ರಾಂವೆಯು ನರಸಿಂಹರಾಜಪುರಕ್ಕೆ ಹೋಗಲು ಲಕ್ಕುವಳ್ಳಿಯಿಂದ ನರಸಿಂಹರಾಜಪುರದ ವರಿಗೆ 7 ಸೇತುವೆಗಳು ಕಟ್ಟಬೇಕಾಗಿದೆಯಂತೆ. ಈ ಸೇತುಗಳನ್ನೆಲ್ಲಾ ಒಬ್ಬ ಕಂಟ್ರಾಕ್ಟರಿಗೇ ಕೊಟ್ಟಿರುತ್ತಾರಂತೆ. 7 ಸೇತುವೆಗಳ ಪೈಕಿ ಇದುವರಿಗೆ 2 ಮಾತ್ರ ಪೂರೈಸುತ್ತಾ ಬಂದಿದೆ ಬಾಕಿ ಸೇತುವೆಗಳನ್ನು ಇನ್ನೂ ಶುರು ಮಾಡಿದಂತೆ ಇಲ್ಲ. ಟ್ರಾಂವೆ ಇಲಾಖೆಗೆ ಈಗ ಹೊಸ ಇಂಜನಿಯರು ಬಂದಿರುತ್ತಾರೆ. ಇವರು ಈ ಸೇತುವೆಗಳನ್ನೆಲ್ಲಾ ಇನು 1½ ತಿಂಗಳೊಳಗೆ ಪೂರೈಸಿ ಟ್ರಾಂವೆಯನ್ನು ನರಸಿಂಹರಾಜಪುರಕ್ಕೆ ಬಿಡಬೇಕೆಂಬ ಅಭಿಲಾಷೆ ಇವರಿಗೆ ತುಂಬಾ ಇರುವಂತೆ ಕಾಣುತ್ತದೆ. ಈ ಅಭಿಲಾಷೆ ನೆರವೇರಬೇಕಾದರೆ ಬಾಕಿ ಇರತಕ್ಕ ಸೇತುವೆಗಳನ್ನು ಕಟ್ಟುವದಕ್ಕೆ ಇನ್ನು ಬೇರೆ ಕಂಟ್ರಾಕ್ಟುದಾರರಿಗೆ ಕೊಟ್ಟು ಕೆಲಸ ನಡಿಸಿದರೆ ಜಾಗ್ರತ ಪೂರೈಸುತ್ತೆ. ಇಂಜನಿಯರವರು ಬೇರೆ ಏರ್ಪಾಡು ಮಾಡಿದಲ್ಲಿ ನರಸಿಂಹರಾಜಪುರಕ್ಕೆ ತುಂಬಾ ಫಾಯಿದೆಯೂ ಆಗಿ ಪ್ರಯಾಣಿಕರಿಗೆ ನಷ್ಟ ಕಷ್ಟಗಳು ತಪ್ಪಿ ಬಹಳ ಪ್ರಯೋಜನ ವಾಗುತ್ತದೆಂದು ನಂಬುತ್ತೇವೆ.

ಚಂದಾದಾರ

ಟಿ. ಆರ್, ತೀರ್ಥಹಳ್ಳಿ:—ಈ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

ಸ್ವದೇಶಾಭಿಮಾನಿ, ತುಮಕೂರು:—ನಿಮ್ಮ ಅಭಿಪ್ರಾಯಗಳು ಹಿಂದೆಯೇ ಪ್ರಕಟಿಸಲಾಗಿದೆ.

ಪ್ರತ್ಯಕ್ಷದರ್ಶಿ, ಚಿತ್ರದುರ್ಗ:—ನೀವು ಹೇಳುವ ವಿಷಯಗಳನ್ನು ಮೊದಲು ನಿಮ್ಮ ಡೆಪ್ಟಿ ಕಮಿಷನರಿಗೆ ತಿಳಿಸಿ ದೃಷ್ಟಾಂತಗಳನ್ನು ತೋರಿಸಬೇಕು

ನೀಲಗಿರಿ ನಡುವಣ ತಗರಿಬಂಗಲಿಯಲ್ಲಿ ಕೆಲಸದ ಮೇಲೆ ಇರುವ ಸಿಪಾಯಿ ಮೋಸ್ಸಿಯವರು ಏಳುತಿಂಗಳ ಸಂಬಳ ಬಾಕಿ ಬೇಕೆಂದು ಬೆಂಗಳೂರು ಸರ್ವೆ ಇಲಾಖಾ ಆಫೀಸಿಗೆ ಡಿಸೆಂಬರ್ ತಾ. 1 ರಲ್ಲೂ, ಈಚೆಗೂ, ತರುವಾಯ ಸ್ಟಾಂಪು ಇಟ್ಟು ಜನವರಿ ತಾ. 31 ರಲ್ಲೂ ಮೂರಾವರ್ತಿ ಅರ್ಜಿ ಬರೆದುಕೊಂಡ ಹಾಗೂ, ಒಂದಕ್ಕೂ ಜವಾಬೇ ಬರಲಿಲ್ಲವೆಂದೂ, ಇದಕ್ಕೆ ಕಾರಣವೇನೋ ತಿಳಿಯಲಿಲ್ಲ, ವೆಂದೂ ವ್ಯಸನಪಟ್ಟು ಬರೆದಿದಾರೆ. —ಎಡಿ]

ತಾಲ್ಲೋಕು ವರ್ತಮಾನಗಳು.

ಮಂಜರಾಬಾದ್ ತಾ ಹುಲಸುರಿಗೆ ಗ್ರಾಮ—ನಮ್ಮ ಗ್ರಾಮದಲ್ಲಿ ನಮ್ಮ ಸರ್ಕಾರದವರು ... ಕುಡಿಯುವ ನೀರಿಗೆ ಅನನುಕೂಲವಾಗಿರುವದನ್ನು ನೋಡಿ ... ದು ಸೋಪಾನ ಭಾವಿ ತೆಗೆಸಿಕೊಡುವುದಕ್ಕೆ ಒಪ್ಪಿ 650 ರೂಪಾಯಿ ... ಮಂಜೂರು ಮಾಡಿದರು ಭಾವಿ ಕಂಟ್ರಾಕ್ಟು ವಹಿಸಿಕೊಂಡಿದ್ದ ಶೇಕ್ ... ಸಾಹೇಬರ ಮಕ್ಕಳು ಅಮೀರ್‌ಜಾನ್ ಸಾಹೇಬರು ವಹಿಸಿಕೊಂಡು ಕಳೆದ ವರುಷ ಕೆಲಸ ಪ್ರಾರಂಭಮಾಡಿ ಇಲ್ಲಿಗೆ ಸುಣ್ಣ ಕೆಲಸ, ಕಲ್ಲು ಕಟ್ಟಡ ಪೂರೈಸಿದರು ... ಕಾಮಗಾರಿ, ಕಲ್ಲು ಚಪ್ಪಡಿ ವಗೈರೆ ಕೆಲಸ ಪೂರೈಸಿ ಭಾವಿ ಪಕ್ಕದಲ್ಲಿ ಪಶುಗಳು ಕುಡಿಯುವದಕ್ಕೆ ಎರಡು ಕಲ್ಲು ತೊಟ್ಟಿಗಳನ್ನು ಇಡಿಸಿ ಗ್ರಾಮದವರಿಗೆ ಸಂತೋಷವನ್ನು ಮಾಡುವರೆಂದು ನಂಬಿದೇವೆ.—ಬಸವೇಶ್ವರ ದೇವಸ್ಥಾನ, ... ದೇವಸ್ಥಾನ ಎರಡೂ ಬಿದ್ದು ಹೋಗಿವೆ ಇವಕ್ಕೆ ... ಗ್ರಾಂಟು ಏನಾಗುತ್ತದೆಯೋ ತಿಳಿಯದು—ಈ ಗ್ರಾಮದ ಸಿದ್ದಯ್ಯನವರ ಮಕ್ಕಳು ರುದ್ರಯ್ಯನವರ ಮಗ ನಂಜಪ್ಪನವರು 68 ನೇ ವಯಸ್ಸಿನಲ್ಲಿ ಕಾಲವಾದರು. ಇವರು ವಿದ್ಯೆಯಲ್ಲಿಯೂ, ಮಕ್ಕಳಿಗೆ ವಿದ್ಯೆ ಕಲಿಸುವದರಲ್ಲೂ, ಕಥೆ ಪುರಾಣಗಳಲ್ಲೂ, ಗ್ರಹಕೃತ್ಯದಲ್ಲಿ ನಡೆಯುವ ಆದಾಯವ್ಯಯ ನಕಲೂ ಬಹಳ ನಿಪುಣತ್ವವನ್ನು ಪಡೆದಿದ್ದರು

ಚಿಂತಾಮಣಿ—ಇಲ್ಲಿನ ಎ ವಿ ಸ್ಕೂಲ್ ಡಿಬೇಟಿಂಗ್ ಸೊಸೈಟಿಯವರು ಕಳೆದ ಶುಕ್ರವಾರ ಸಾಯಂಕಾಲ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಶಾರದಾ ಪೂಜೆಯನ್ನು ಬಹು ವಿಜೃಂಭಣೆಯಿಂದ ನಡಿಸಿದರು ಹೆಡ್ ಮಾಸ್ಟರೇ ಮೊದಲಾದ ಉಪಾಧ್ಯಾಯರುಗಳೂ, ಸ್ಕೂಲಿನ ವಿದ್ಯಾರ್ಥಿಗಳೂ ಸೇರಿದ್ದರು ಗಾನರೂಪದಲ್ಲಿ ಇಬ್ಬರು ವಿದ್ಯಾರ್ಥಿಗಳೂ, ಇಂಗ್ಲಿಷಿನಲ್ಲಿ ಒಬ್ಬ ವಿದ್ಯಾರ್ಥಿಯೂ ದೇವಿ ಸ್ತೋತ್ರವನ್ನು ಹೇಳಿದರು. ಅಸಿಸ್ಟೆಂಟ್ ಮಾಸ್ಟರ್ ಆರ್ ಭೀಮ ಸೇನರಾಯರು ನೇಮಿಸಲ್ಪಟ್ಟ ಕೆಲಸವನ್ನು ಕ್ಲುಪ್ತಕಾಲದಲ್ಲಿ ನೆರವೇರಿಸಬೇಕೆಂಬ ವಿಚಾರದಲ್ಲಿ ಒಂದು ಸಣ್ಣ ಉಪನ್ಯಾಸವನ್ನು ಮಾಡಿದರು. ತರುವಾಯ ಮಂಗಳವನ್ನೂ ಮತ್ತು ಚಕ್ರವರ್ತಿಗಳ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಗಳೂ ವಿದ್ಯಾರ್ಥಿಗಳು ಹಾಡಿದರು ಕಡೆಯಲ್ಲಿ ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ಪುಷ್ಪ, ಗಂಧ, ಫಲ, ತಿಂಡಿ ವಗೈರೆ ಹಂಚಲ್ಪಟ್ಟು ಸಭೆ ಮುಕ್ತಾಯವಾಯಿತು—ಕೋಲಾರದಿಂದ ಈ ಊರಿನವರೆಗೆ ಲೈಟ್ ರೈಲು ಗಾಡಿ ಪೂರೈಸಿರುತ್ತೆ, ರೈಲ್ ... ಸ್ಟೇಷನ್‌ಗೆ ಬರುತ್ತಿದೆ. ಮಾರ್ಚ ಸುರ್ರೀಲಾಗಾಯ್ತು ಪ್ರಯಾಣಿಕರನ್ನು ಬಿಡುವದಾಗಿ ಹೇಳುತ್ತಾರೆ. ಇದರಿಂದ ಊರಿನ ವ್ಯಾಪಾರವು ಮತ್ತಷ್ಟು ಅಭಿವೃದ್ಧಿಗೆ ಬರಲು ಕಾರಣವಾಯಿತು.—ಊರಲ್ಲಿ ಸ್ಟೇಟ್ ಸ್ಕೂಲ್ ಸ್ಥಾಪನೆ ಆಗಿ ಸುಮಾರು ವರ್ಷವಾದಾಗ್ಯೂ ಅಲ್ಲಿನ ಮಾಸ್ಟರುಗಳಿಗೆ ಸಂಬಳವೇ ದೊರೆಯದೆ ಪೇಚಾಡುತ್ತಿದಾರೆ. ಇಲಾಖಾದವರು ಇದಕ್ಕೆ ಬೇಗನೆ ಗಮನಕೊಟ್ಟಾರೆಂದು ನಿರೀಕ್ಷಿಸುತ್ತೇನೆ.

ಹಾಸನ—ಕಳೆದ ವಾರ ಡೆಪ್ಟಿ ಸ್ಯಾನಿಟರಿ ಕಮಿಷನರ್ ಮ॥ ಎಂ. ಶ್ರೀನಿವಾಸರಾಯರು ಹಾಸನಕ್ಕೆ ಬಂದು, ಈ ಊರನ್ನೆಲ್ಲಾ ಸುತ್ತಿ ಇನ್ಸ್‌ಪೆಕ್ಟ್ ಮಾಡಿದ್ದಲ್ಲದೆ ಆಸ್ಪತ್ರೆಗಳಿಗೂ ಹೋಗಿ ಅಲ್ಲಿ ನಡೆಯುವ ಕಾರ್ಯಗಳನ್ನೂ ತನಿಖೆ ಮಾಡಿದರು.—ಪ್ಲೇಗ್ ಉಪದ್ರವ ಮೊದಲಿನಷ್ಟು ಇಲ್ಲ; ಸ್ವಲ್ಪ ಶಮನವಾಗಿದೆ. ಪ್ಲೇಗ್ ಆಸ್ಪತ್ರೆಯಲ್ಲಿ ಒಬ್ಬ ರೋಗಿ ಮಾತ್ರ ಇರುವನು ಮನೆಗಳಲ್ಲಿ ಇಲಿಗಳು ಸತ್ತದ್ದರಿಂದ ಕೆಲವು ಪ್ರಜೆಗಳು ಹೆದರಿ ಬೋಪಡಿಗಳಲ್ಲಿ ವಾಸ ಮಾಡುತ್ತಲಿದಾರೆ.—ನಮ್ಮ ಮ್ಯುನಿಸಿಪಾಲಿಟಿಯವರು ಎರಡು ಬಡಾವಣೆಗಳನ್ನು ಮಾಡಬೇಕೆಂದು ಏರ್ಪಾಡು ಮಾಡುತ್ತಿರುವರು. ಈ ವಿಚಾರದಲ್ಲಿ ಡೆಪ್ಟಿ ಕಮಿಷನರಿಗೆ ಸಹಾಯ ಮಾಡಬೇಕೆಂದು ಎರಡು ಕಮಿಟಿಗಳು ನೇಮಕವಾಗಿರುತ್ತವೆ. ಅನೇಕ ಪ್ರಜೆಗಳು ಬಡಾವಣೆಗಳಲ್ಲಿ ನಿವೇಶನಗಳನ್ನು ಪಡೆಯಬೇಕೆಂದು ಕುತೂಹಲಪಡುವರು ಹಳೆ ರೇಸ್ ಕೋರ್ಸಿನ ಬಳಿ ಉತ್ತರ ಭಾಗದಲ್ಲಿ ಒಂದು ಬಡಾವಣೆಯೂ, ಪೂರ್ವ ದಕ್ಷಿಣದಲ್ಲಿ ಒಂದು ಬಡಾವಣೆಯೂ ಆಗುವಂತೆ ಏರ್ಪಾಡಾಗಿದೆ. ಇವೆರಡೂ ಎಲ್ಲಾ ಭಾಗಗಳಲ್ಲೂ ವಿಶೇಷ ಅನುಕೂಲವಾಗಿರುತ್ತವೆ.—ಹಾಸನದಲ್ಲಿ ರೋಗ ಹಿಡಿದ ನಾಯಿಗಳ ಕಾಟ ಬಹಳ ವಿಶೇಷವಾಗಿದೆ. ಇವುಗಳ ದೆಸೆಯಿಂದ ಪ್ರಜೆಗಳಿಗೆ ಕೇಡು ಉಂಟು. ಆಗಲೇ ಹುಚ್ಚುನಾಯಿಗಳು ಹಲವರನ್ನು ಕಡಿದು ನರಳುತ್ತಿದಾರೆ. ಇಂಥಾ ಅಪಾಯವನ್ನು ಬೇಗನೆ ನಿವಾರಣೆಮಾಡಬೇಕಾಗಿದೆ. ಪ್ರಜೆಗಳನ್ನು ಕಾಪಾಡುವುದಕ್ಕೋಸ್ಕರ ಮ್ಯುನಿಸಿಪಾಲಿಟಿಯವರು ತುಂಬಾ ಕಠಿಣವಾದ ಕಾನೂನನ್ನು ಜಾರಿಗೆ ತರುವುದೆಂದು ವರ್ತಮಾನವಿದೆ.—ರೈಲ್ವೆ ಬಡಾವಣೆಯ ವಿಷಯದಲ್ಲಿ ಇಂಜನಿಯರುಗಳ ಬಂಗಲೆ ಕಾಮಗಾರಿಯು ಮುಗಿಯುತ್ತಾ ಬಂದಿರುವುದು.

ಶಿವಮೊಗ್ಗಾ—ಹವಾ ಆರೋಗ್ಯಕರವಾಗಿದೆ, ಪ್ಲೇಗ್ ಉಪದ್ರವವು ಶಮನವಾಗಿದೆ. ಜನಗಳೆಲ್ಲರೂ ಊರೊಳಗೆ ತಮ್ಮ ತಮ್ಮ ಮನೆಗಳಿಗೆ ಬರುತ್ತಿದಾರೆ.—ದನಕರುಗಳಿಗೆ ದೊಡ್ಡ ಜಡಬಂದು ಬಹಳ ದನಗಳು ಸತ್ತು ಹೋದವು. ಈಗ ಮೊಸರು ಬೆಣ್ಣೆ ಧಾರಣೆ ಜಡಾವಾಗುತ್ತಾ ಇವೆ—ಈ ಊರು ಡಿ॥ ಆಫೀಸಿಗೆ ಮಂಗಳೂರು ಹೆಂಚು ಹೊದಿಸುವ ಕೆಲಸ ಪೂರೈಸುತ್ತಾ ಬಂತು. ನೋಡುವುದಕ್ಕೆ ಬಹಳ ರಮ್ಯವಾಗಿ ಕಾಣುತ್ತದೆ—ಬೆಂಗಳೂರಿಂದ ಸ್ಕೂಲ್‌ಗಳ ಇ॥ ಜನರಲ್ ಸಾಹೇಬರು ತೀರ್ಥಹಳ್ಳಿಯಲ್ಲಿ ನಡೆದ ಎಗ್ಸಿಭಿಷನ್‌ಗೆ ದಯಮಾಡಿಸಿದ್ದು ಬಂದು ಮುಸಾಫರ್ ಬಂಗ್ಲೆಯಲ್ಲಿ ಇಳಿದಿದ್ದರು. ನಾರ್ಮಲ್ ಸ್ಕೂಲ್ ವಿದ್ಯಾರ್ಥಿಗಳು ತಮ್ಮ ಅಹವಾಲುಗಳನ್ನು ಹೇಳಿಕೊಂಡರು. ಈ ಸ್ಕೂಲಿನ ವಿದ್ಯಾರ್ಥಿಗಳಿಗೇನೇ ಪ್ರತ್ಯೇಕವಾದ ಸ್ಟೂಡೆಂಟ್ಸ್ ಹೋಮ್ ಮಾಡಿಸಿಕೊಡಬೇಕೆಂತಲೂ, ಒಂದು ಅಪ್ಪರ್ ಸೆಕೆಂಡರಿ ತರಗತಿಯನ್ನು ತೀರ್ಥ ಹಳ್ಳಿಯಲ್ಲಿ ಇಡುವುದಾಗಿಯೂ ಅಪ್ಪಣೆ ಕೊಡಿಸಿದರು.—ನದಿಯು ಇಳಿದು ಮರಳು ಬಿಟ್ಟಿದೆ. ಜನಗಳು ಮುಸುರೆ ವಗೈರೆ ತಿಕ್ಕಿ ಸ್ನಾನಕ್ಕೆ ಹೋಗಿ ಬರುವ ದಾರಿಯನ್ನೆಲ್ಲಾ ಕೆಡಿಸುತ್ತಾ ಇದಾರೆ. ಸರ್ಕಾರದವರು ನಿಗಾ ಕೊಟ್ಟಲ್ಲಿ ಉಪಕಾರವಾದೀತು.—ಸೇತುವೆ ಬಳಿ ಇರುವ ಸುಂಕದಕಟ್ಟೆ ಮೇಲ್ಛಾವಣಿ ಬಿದ್ದು ಕಾವಲಿನವರು ಇರಲು ತೊಂದರೆಯಾಗಿದೆ. ವೈಸ್ ಪ್ರೆಸಿಡೆಂಟರು ನಿಗಾ ತೆಗೆದುಕೊಂಡು ಜಾಗ್ರತೆ ರಿಪೇರಿ ಮಾಡಿಸಿಕೊಟ್ಟಾರಾಗಿ ನಂಬಿದೇವೆ—ಈ ವರ್ಷ ಉದುರು ಮಳೆಯಾಯವಾದ್ದರಿಂದ ಯಾತ್ರಿಕರ ಗಲಾಟೆ ಬಹಳವಾಗಿದೆ. ಬಂಡಿ ಬಾಡಿಗೆ ಯವರಿಗೆ ತುಂಬಾ ನಫೆ ಸಿಕ್ಕಲು ಅವಕಾಶವಾಯಿತು.

ದೊಡ್ಡಬಳ್ಳಾಪುರ—ಇದೇ ಮಾಹೆ 2 ನೇ ತಾ. ರಾತ್ರಿ 8-8½ ಗಂಟೆಯಲ್ಲಿ ಈ ಊರಿನ ಮುಸಲ್ಮಾನ್ ಮಹನೀಯರೆಲ್ಲಾ ಸೇರಿ ಮಹಾತ್ಮನಾದ ತಮ್ಮ ಪೈಗಂಬರ್ ಹುಟ್ಟಿದ ದಿನವೆಂದು ಎಲ್ಲಾ ಹಿಂದೂ ಪ್ರಜೆಗಳ ಮುಖಂಡರನ್ನು ಬರಮಾಡಿಕೊಂಡು ತಮ್ಮ ಪ್ರಜಾ ಕೋಟಿಗೆಲ್ಲಾ ಪೈಗಂಬರ್ ಮಾಡಿದ ಮಹೋನ್ನತವಾದ ಉಪಕಾರಗಳ ವಿಷಯವಾಗಿ ಮುಸಲ್ಮಾನರ ಕಡೆಯಿಂದ ಹಿಂದು ಸ್ಥಾನಿ ಸ್ಕೂಲ್ ಮಾಸ್ಟರ್ ಮಿ॥ ಶೇಕ್ ಅಹಮದ್ ಸಾಹೇಬರು ಬಹು ವಿನಯವಾಗಿ ಉಪನ್ಯಾಸಮಾಡಿದರು ಮಿ॥ ಆಸೂಫ್ ಖಾನ್‌ರವರು ಬಹು ದೈನ್ಯದಿಂದ ಖುರಾನ್ ಎಂಬ ತಮ್ಮ ವೇದವನ್ನು ಹೇಳಿದರು. ಪ್ರಜೆಗಳೆಲ್ಲ ವಿಧೇಯತೆಯಿಂದ ಲಾಲಿಸಿದರು ನಂತರ ಮುನ್ಸೀಫ್ ಸಾಹೇಬರು ಪ್ರಜೆಗಳಪರವಾಗಿ ನಿಂತು ಏಕಕಾಲದಲ್ಲಿ ಇಷ್ಟು ಪ್ರಜೆಗಳು ಸೇರಲು ಅಸಾಧ್ಯ. ಪೈಗಂಬರ್ ಎಂಬ ಮಹಾಪುರುಷನು ಹುಟ್ಟಿದ ಸುದಿನವಾದ ಕಾರಣ ಸೇರಲಾಯ್ತು. ಸರ್ವರೂ ಪೈಗಂಬರ್ ಬೋಧಿಸಿದ ನೀತಿವಾಕ್ಯಗಳಂತೆ ಒಳ್ಳೆ ನಡತೆಯಲ್ಲಿರಬೇಕಾದದ್ದು ಅತ್ಯವಶ್ಯಕವೆಂಬೀ ವಾಕ್ಯಗಳಿಂದ ಮುಸಲ್ಮಾನರಿಗೆಲ್ಲಾ ಪ್ರೋತ್ಸಾಹ ಕೊಟ್ಟರು ಹಿಂದೂ ಪ್ರಜೆಗಳನ್ನೆಲ್ಲಾ ಆದರದಿಂದ ಪುರಸ್ಕರಿಸಿ ಪುಷ್ಪ ತಾಂಬೂಲಾದಿಗಳಿಂದ ಗೌರವಿಸಿದರು. ಇದರಿಂದ ಈ ಊರಲ್ಲಿ ಹಿಂದೂ ಮುಸಲ್ಮಾನರು ಅನ್ಯೋನ್ಯ ಮೈತ್ರೀಭಾವದಿಂದ ಇರುತ್ತಾರೆಂದು ವ್ಯಕ್ತವಾಯ್ತು. ಹೀಗೆಯೇ ಸರ್ವದಾ ಇರಬೇಕು. ಮುಸಲ್ಮಾನರಲ್ಲಿ 10-15 ಮನೆಯ ಪಂಗಡದ ಬೇರೆಯವರೂ ಸಹ ಇವರಲ್ಲೇ ಸೇರಿ ಒಬ್ಬರಿಗೊಬ್ಬರು ಪ್ರೀತಿಯಿಂದ ಇದ್ದರೆ ಬಹು ಚೆನ್ನಾಗಿರುತ್ತೆ—ಹೋದ ವರ್ಷ ಲಘೋತ್ಸವದಲ್ಲಿ ಹೂವಿನ ಪಲ್ಲಕ್ಕಿ ಉತ್ಸವಕ್ಕೆಂದು ಒಬ್ಬ ದೊಡ್ಡಮನುಷ್ಯರು ಅನೇಕರಿಂದ ಚಂದಾ ವಸೂಲು ಮಾಡಿದರು. ಅವರು ಈ ಮಾಹೆ ಲಘೋತ್ಸವದಲ್ಲಿ ಪಾಲ್ಲಕ್ಕಿ ಉತ್ಸವ ಮಾಡಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ

ಶ್ರೀರಂಗಪಟ್ಟಣದ ಕಸಬಾ ಗಂಜಾಂ.—ಬೆಳಗಿನಲ್ಲಿ ಚಳಿ ಹೆಚ್ಚು. ಸುಗಿಯಲ್ಲಿ ರೈತರು ಉಗ್ಗುತ್ತಿರುವರು ವ್ಯಾಪಾರಸ್ಥರೂ ಸಂತೋಷಚಿತ್ತರಾಗಿರುವರು ಮ್ಯುನಿಸಿಪಲ್ ಕಟದಾ ಸಕಾಲದಲ್ಲಿ ವಸೂಲಾಗುತ್ತಿಲ್ಲವೆಂದು ತೋರುತ್ತಿದೆ ಲಾಂದ್ರಗಳು ಕೆಲವು ಕಡೆ ಒಂದೊಂದು ಬಗೆಯಾಗಿ ಬೆಳಕನ್ನು ಕೊಡುತ್ತಿವೆ—ನಮ್ಮ ಮ್ಯುನಿಸಿಪಲ್ ಮೆಂಬರುಗಳು ಇಲ್ಲಿನ ಗೌರೀ ಘಟ್ಟದಲ್ಲಿ ನೀರಿಗೆ ಹೋಗುವ ಜನಗಳ ಸೌಕರ್ಯಕ್ಕಾಗಿ ಒಂದು ಲಾಂದ್ರ ಇಡಿಸಿದಾರೆ ತುಂಬಾ ಕ್ಷೇಮ—ಈಗ್ಗೆ 3-4 ದಿನಗಳಲ್ಲಿ ಸ್ಯಾನಿಟರಿ ಕಮಿಷನರೂ, ಸ್ಯಾನಿಟರಿ ಇಂಜನಿಯರೂ ಇಲ್ಲಿಗೆ ಮತ್ತು ಶ್ರೀರಂಗಪಟ್ಟಣಕ್ಕೆ ದಯಮಾಡಿಸಿ ಟೌನ್ ಅಭಿವೃದ್ಧಿಗೆ ತಕ್ಕ ಸಲಹೆಗಳಿಗಾಗಿ ಏನಾದರೂ ನಡಿಸಿ, ಟೌನ್ ಇನ್ಸ್‌ಪೆಕ್ಟ್ ನಂದ ಹೊರಟು ಹೋದರು ಮುಖ್ಯವಾಗಿ ಈ ಟೌನ್‌ಗಳು ಅಭಿವೃದ್ಧಿಗೆ ಬರಬೇಕಾದರೆ ನೀರಿನ ಸೌಕರ್ಯವನ್ನು ಕಲ್ಪಿಸಿ ಹೊಟ್ಟೆಗಿಲ್ಲದೆ ಬಡವರಾಗಿರುವ ಸಾವಿರಾರು ಜನಗಳ ಜೀವನೋಪಾಯಕ್ಕೆ ಅನುಕೂಲವಾಗಿ ಕೂಲಿ ಮುಂತಾದುವುಗಳು ದೊರಕುವಂತೆ ಯಾವದಾದರೂ ಕೈಗಾರಿಕೆ ಕಾರ್ಖಾನೆಗಳನ್ನು ಸರ್ಕಾರದವರು ಇಡಿಸುವದೂ, ಜನಗಳು ಇಡಬೇಕೆಂದಿರುವ ಅಕ್ಕಿ ಯಂತ್ರ ಮುಂತಾದುವುಗಳಿಗೆ ಜಾಗ್ರತೆ ಪ್ರೋತ್ಸಾಹ ಕೊಡಬೇಕಾಗಿರುವುದೂ, ಸಾಧ್ಯವಾದ ಮಟ್ಟಿಗೆ ಹುಣಿಸೆ ಮರಗಳನ್ನು ಕಡಿಮೆ ಮಾಡುವುದೂ, ಇಲ್ಲದಿದ್ದರೆ ಇವರ ಹವವನ್ನು ಬಹಳ ಮಟ್ಟಿಗೆ ಕಡಿಮೆ ಮಾಡುವ ಬೇರೆ ಗಿಡಗಳನ್ನು ಬೆಳಸುವುದು ಮುಂತಾದ ಕೆಲಸಗಳನ್ನು ಸರ್ಕಾರದವರು ಗಮನಕ್ಕೆ ತಂದು ಕೊಂಡಿದ್ದಾದರೆ ಅಭಿವೃದ್ಧಿಗೆ ಬರುವುದರಲ್ಲಿ ಯಾವ ಅನುಮಾನವೂ ಇರುವುದಿಲ್ಲ.—ಈ ಟೌನ್‌ನಲ್ಲಿ ಬಲಾತ್ಕಾರವಾದ ವಿದ್ಯಾಭ್ಯಾಸದ ನಡವಳಿಕೆ ಜಾರಿಗೆ ಬಂದಿರುತ್ತೆ. ಆದರೂ ಬಹಳ ಹುಡುಗರು ಸ್ಕೂಲಿಗೆ ಬರುತ್ತಲೂ ಇಲ್ಲ. ದಾಖಲಾಗಿರುವಂಥಾ ಹುಡುಗರ ಹಾಜರಾತಿಯೂ ಸರಿಯಿಲ್ಲ. ಉಪಾಧ್ಯಾಯರ ಪ್ರೋತ್ಸಾಹದ ಜೊತೆಗೆ ಅಟೆಂಡೆನ್ಸ್ ಆಫೀಸರು ಈಗ್ಗಿಂತಲೂ ಹೆಚ್ಚಿನ ಪ್ರೋತ್ಸಾಹವು ಒದಗಿದರೆ ಅನುಕೂಲವೆಂದು ತೋರುತ್ತೆ ಗ... ಬಾಯ್ಸ್ ಸ್ಕೂಲಿನ ಕೆಲವು ಅ॥ ಮಾಸ್ಟರುಗಳು ಹೆಡ್ ಮಾಸ್ಟರು ಸಹ ಆಗಾಗ್ಗೆ ಊರಿನಲ್ಲಿ ಸಂಚಾರ ಮಾಡುತ್ತಾ, ಬಾಲಕರ ವಿದ್ಯಾಭಿವೃದ್ಧಿಯ ನಿಗಾವಣೆಯನ್ನು, ವಿದ್ಯಾ ಪ್ರೋತ್ಸಾಹವನ್ನೂ ನಡಿಸುತ್ತಿರುವುದು ತುಂಬಾ ಶ್ಲಾಘ್ಯವಾಗಿದೆ—ಈ ಟೌನ್‌ನಲ್ಲಿ ಒಂಟೆತ್ತಿನ ಬಂಡಿಗಳು ಹೇರಳವಾಗಿವೆ. ಈ ಎತ್ತುಗಳನ್ನು ಸಾಕುವುದರಲ್ಲಿ ಜನಗಳು ತುಂಬಾ ಉತ್ಸಾಹ ಶಾಲಿಗಳಾಗಿದಾರೆ. ಆಗಾಗ್ಗೆ ಇಲ್ಲಿನ ಒಂಟೆತ್ತಿನ ಮಾಲೀಕರಿಗೂ, ಪರಸ್ಥಳದವರಿಗೂ ಎತ್ತಿನ ದಾರ್ಢ್ಯ, ಚಟುವಟಿಕೆ, ವೇಗ, ವಿಚಾರದಲ್ಲಿ ಪೋಟಾಪೋಟಿಗಳು ನಡೆಯುತ್ತಿವೆ. ನೆನ್ನೆ ಈ ರೀತಿಯಾದ ಒಂದು ಎತ್ತು ಮೈಸೂರಿಗೆ ಹೋಗಿತ್ತು. ಅದಾಗ್ಯೂ ಇಲ್ಲಿಂದ ಹೋದ ಎತ್ತಿಗೆ ಅನುಕೂಲವಾದುದು ಯಾವುದೂ ದೊರೆಯಲಿಲ್ಲವೆಂಬ ವ್ಯರ್ಥ ಇಲ್ಲಿ ಜನಜನಿತವಾಗಿದೆ. ಈ ರೀತಿಯಿಂದಲಾದರು ಲೋಕೋಪಕಾರದಿಂದ ಈ ಮೂಕ ಪ್ರಾಣಿಗಳ ಕಾಪಾಡಿಸಿಕೊಂಡು ಜೀವಿಸುವಂತೆ ಪ್ರೋತ್ಸಾಹಿಸುತ್ತಿರುವುದು ಶ್ಲಾಘ್ಯವಾಗಿದೆ.

ತಿಪ್ಟೂರು ತಾ॥ ಒಳೆಕೆರೆ — ಈ ಗ್ರಾಮದಲ್ಲಿ ಸ್ಕೂಲ್ ಕಟ್ಟಡದ ಏರ್ಪಾಡು ತಾಲ್ಲೂಕು ಅಮಲ್ದಾರ್ರು ಒಂದಾವರ್ತಿ ದಯಮಾಡಿಸಿದ್ದ ಹೊರ್ತು ಯಾವದೂ ನಡೆಯುವ ಹಾಗಿಲ್ಲ. ಈ ಗ್ರಾಮದ ಉದಾರಿಗಳಾದ ಮ॥ ಪಟೇಲ್ ತಿಮ್ಮೇಗೌಡರು, ದೇವಸ್ಥಾನದ ಧರ್ಮದರ್ಶಿ ಹೊನ್ನೇಗೌಡರು ಮತ್ತು ಶಾನಭೋಗರು ಮುಂತಾದವರು ಬಹಳ ಉತ್ಸಾಹಶಾಲಿಗಳಾಗಿದ್ದಾರೆ. ಇವರುಗಳು ಈ ಕಟ್ಟಡಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡುವುದಕ್ಕೆ ತುಂಬಾ ಸಹಾಯಕರಾಗಿರುವರಾಗಿದ್ದಾರೆ. ಅದಲ್ಲದೆ ಸ್ಕೂಲ್ ಕಟ್ಟಡವನ್ನು ಕಟ್ಟತಕ್ಕ ಹಿತ್ತಲಿನ ವಾರಸುದಾರರಾದ ನಡ್ಲ ಕೀರಿ ಗಿರಿತಿಮ್ಮೇಗೌಡರು ಮುಫತ್ತಾಗಿ ಜಮೀನನ್ನು ಕೊಡಲು ಒಪ್ಪಿರುತ್ತಾರೆ. ನಮ್ಮ ಅಮಲ್ದಾರ್ ಮ॥ ಬಿ. ಸಿ. ಲಕ್ಷ್ಮಯ್ಯನವರು ದಯಮಾಡಿ ಸ್ಕೂಲ್ ಕಟ್ಟಡವನ್ನು ಕಟ್ಟಿಸಿದಲ್ಲಿ ಈ ಕೀರ್ತಿಯು ದಿಗಂತವಿಶ್ರಾಂತವಾಗಿರುತ್ತೆ.

ನೋಟೀಸು.

ಮೈಸೂರು ಸಿಟಿ ಮ್ಯುನಿಸಿಪಲ್ ಇಂಜನಿಯರ್ ಸಾಹೇಬರವರ ಆಫೀಸಿಗೆ.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನೆಂದರೆ:—ಮೈಸೂರು ಟೌನ್‌ನಲ್ಲಿ ಹೊಸದಾಗಿ ಮನೆ ಕಟ್ಟುವದಕ್ಕಾಗಲಿ, ಅಥವಾ ರಿಪೇರಿ ಮತ್ತು ಬದಲಾವಣೆಗೆಯಾಗಲಿ ಲೈಸೆನ್ಸು ಪಡೆಯಲು ಪ್ಲಾನು ತಯಾರುಮಾಡಲು ಪ್ರತ್ಯೇಕವಾಗಿ ಒಬ್ಬರನ್ನು (Draughtsman) ನೇಮಿಸಿರುವದರಿಂದ ಬೇಕಾದವರು ಈ ಕೆಳಗೆ ರುಜುಮಾಡಿರುವವರಲ್ಲಿಗೆ ಅರ್ಜಿ ಬರೆದುಕೊಂಡಲ್ಲಿ ಹೊಸದಾಗಿ ಪ್ಲಾನು ತಯಾರುಮಾಡಿಸಿಕೊಡಲು ಏರ್ಪಾಡು ಮಾಡುತ್ತಾರೆ. ಪ್ಲಾನುಗಳನ್ನು ತಯಾರುಮಾಡಲು ಈ ಕೆಳಗೆ ನಮೂದಿಸಿರುವಂತೆ ಫೀಜು ವಸೂಲ್ಮಾಡಲ್ಪಡುತ್ತದೆ:— [39-1]

ಮನೆ ಕಿಮ್ಮತ್ತು 200 ರೂಪಾಯಿಗೆ ಮೀರದ ಪ್ಲಾನು

	ತಯಾರುಮಾಡಲು	ರೂ. 1-8-0
ಡಿಟೋ 500	ಡಿಟೋ	„ 3-8-0
ಡಿಟೋ 1,000	ಡಿಟೋ	„ 4-0-0
ಇದರ ಮೇಲೆ ಪ್ರತಿ ಸಾವಿರಕ್ಕೂ ಮತ್ತು ಇದರ ಭಿನ್ನಾಂಶಕ್ಕೂ	....	„ 2-0-0 ಸಂತೆ.

ಇ. ರಾಮಸ್ವಾಮಿ ಅಯ್ಯರ್, ಮ್ಯುನಿಸಿಪಲ್ ಇಂಜನಿಯರ್.

ಗೃಹಕೃತ್ಯದ ನೋಟೀಸು.

ಮಂಡ್ಯದ ತಾ॥ ಬಸರಾಳು ಹೋ॥ ಮುತ್ತೇಗೆರೆ ಗ್ರಾಮದ ಜಕ್ಕನಹಳ್ಳಿ ಬೋರಮ್ಮನ ಮಗ ಕರಿಗೌಡನ ಹೆಂಡತಿ ಸಿಂಗಮ್ಮನಾದ ನಾನು ಮೇಲ್ಕಂಡ ಕರಿಗೌಡನಿಗೆ ಧರ್ಮ ಪತ್ನಿಯಾಗಿ 10 ವರ್ಷದ ಗಂಡು, 3 ವರ್ಷದ ಹೆಣ್ಣು ಈ ಮಕ್ಕಳಿಬ್ಬರನ್ನು ಪಡೆದೆವು ಈಗ ಕೆಲವು ದಿವಸಗಳಿಂದ ನನ್ನ ಗಂಡನು ಬುದ್ಧಿ ಸ್ಥಿಮಿತವಿಲ್ಲದೆ ಪರಸ್ತ್ರೀಯು ಮತ್ತು ಇತರ ಜನಗಳ ದುರ್ಬೋಧನೆಗಳಿಗೆ ಒಳಗಾಗಿ ಪಿತ್ರಾರ್ಜಿತವಾಗಿ ಬಂದ ಸೊತ್ತುಗಳನ್ನು (ಅಂದರೆ—ಹೊಲ ಸರ್ವೆ ನಂ. 111, ಎಕರೆ 2 ಅರ್ಧ, 10 ಆಣೆ ಆಕಾರ ಉಳ್ಳದ್ದು; ಗದ್ದೆ ಸ. ನಂ. 128, ಗುಂಟೆ 13 ಅರ್ಧ, 6 ಆಣೆ ಆಕಾರವುಳ್ಳದ್ದು; ಹೊಲ ಸ. ನಂ. 202, ಎಕರೆ 2 ಗುಂಟೆ 15 ಅರ್ಧ, 14 ಆಣೆ ಆಕಾರ ಉಳ್ಳದ್ದು; ಸದರಿ ಗ್ರಾಮದ 6 ಅಂಕಣದ ಮಾಳಿಗೆ ಮನೆ, ಇವುಗಳನ್ನು) ಪರಾಧೀನ ಮಾಡುತ್ತಿರುವಂತೆ ಕೇಳುತ್ತೇನೆ. ಆದ್ದರಿಂದ ಮೇಲ್ಕಂಡ ಸೊತ್ತುಗಳನ್ನು ನನ್ನ ಅನುಮತಿಯಿಲ್ಲದೆ ಯಾರಾದರೂ ಆತನಿಂದ ಕ್ರಯ ಭೋಗ್ಯ ಆಧಾರ ವಗೈರೆ ಮಾಡಿಸಿಕೊಂಡರೆ ಊರ್ಜಿತವಾಗದೆ ನನ್ನ ವಿಶಿಷ್ಟ ನಷ್ಟಕ್ಕೂ ಗುರಿಯಾಗಬೇಕಾದೀತು. ನಮಗೆ ದೊಡ್ಡಮಾಯಿ ಜವರೇಗೌಡನ ಬಾಬತು 50 ರೂ; ಕೆಸಲಗೆರೆ ಶಾಳ ಬಾಬತು 20 ರೂ. ಇವೆರಡು ವಿನಃ ಇನ್ಯಾವ ಸಾಲವಿರುವದಿಲ್ಲ. [36-1]

ತಾ. 5-3-1916. ಕರಿಗೌಡನ ಹೆಂಡತಿ ಸಿಂಗಮ್ಮನ ರುಜು.

ಪೀಪಲ್ಸ್ ಬ್ಯಾಂಕ್ ಲಿಮಿಟೆಡ್, ತೀರ್ಥಹಳ್ಳಿ.

ನೋಟೀಸ್.

ನಗರ ತಾಲ್ಲೋಕು ಯಡೂರು ಮಾಗಣೆ ಉಳ್ಳ ಗ್ರಾಮದ ಮಜರೆ ಮಲಗೋಡುಮಠದ ತೋಟಯ್ಯ ಬಿನ್ ನಂಜಯ್ಯನವರು—ಈ ಮೆಂಬರು ಮೃತಪಟ್ಟಿರುವದಾಗಿಯೂ, ಇವರಿಗೆ ಹೆಂಡತಿ ಮಕ್ಕಳು, ಯಾ ತನ್ನ ಶಿವಾಯಿ ಬೇರೆ ಖಾಸಾ ಅಣ್ಣತಮ್ಮಂದಿರು ಯಾರೂ ಇಲ್ಲದಿರುವದರಿಂದ ಅವಿಭಕ್ತ ಕುಟುಂಬದಲ್ಲಿರುವ ಇವರ ಖಾಸಾ ತಮ್ಮನಾದ ತಾನೇ ಫವತಿಯವರಿಗೆ ಸಮೀಪ ವಾರಸುದಾರನೆಂದೂ, ಈ ಕಾರಣದಿಂದ ಫವತಿ ತೋಟಯ್ಯನವರ ಹೆಸರಿನಲ್ಲಿರುವ ಹಿಸ್ಸೆಗಳನ್ನು ತನ್ನ ಹೆಸರಿಗೆ ದಾಖಿಲ್ ಮಾಡಿಸಿ ಆ ಬಗ್ಗೆ ತನಗೆ ಹಿಸ್ಸೆಯ ಸರ್ಟಿಫಿಕೇಟನ್ನು ಕೊಡಿಸಿಕೊಡಬೇಕೆಂದೂ ಮಲಗೋಡು ಮಠದ ವೀರಯ್ಯ ಬಿನ್ ನಂಜಯ್ಯನವರು ಈ ಬ್ಯಾಂಕಿಗೆ ಅರ್ಜಿ ಬರೆದುಕೊಂಡಿದ್ದ ವಿಷಯದಲ್ಲಿ ಫವತಿ ಮೆಂಬರ ಹೆಸರಿನಲ್ಲಿರುವ 5 ಹಿಸ್ಸೆಗಳನ್ನು ಈ ಅರ್ಜಿದಾರರ ಹೆಸರಿಗೆ ದಾಖಿಲ್ ಮಾಡಬೇಕೆಂದೂ; ಮತ್ತು

ತೀರ್ಥಹಳ್ಳಿ ತಾಲ್ಲೋಕು ಕಸಬಾ ಹೋಬಳಿ ಸಿಬ್ಬಿನ ಗ್ರಾಮದ ಮಜರೆ ಮಕ್ಕಿಕೊಪ್ಪದ ಫಣಿಯನಾಯ್ಕರು—ಈ ಮೆಂಬರು ಮೃತಪಟ್ಟಿರುವದಾಗಿಯೂ, ಇವರ ಖಾಸಾ ಮಕ್ಕಳು 1 ನೇ ತಿಮ್ಮನಾಯ್ಕ, 2 ನೇ ಮಂಜನಾಯ್ಕ, ಇವರಿಬ್ಬರೂ ಮೈನರಾಗಿರುವದರಿಂದ ಇವರ ತಾಯಿಯಾದ ತಾನು ಇವರಿಗೆ ಗಾರ್ಡಿಯನ್ ಆಗಿರುವದಾಗಿಯೂ, ಫವತಿಯವರ ಹೆಸರಿನಲ್ಲಿರುವ ಹಿಸ್ಸೆಗಳನ್ನು ಈ ಮೈನರರ ಹೆಸರಿಗೆ ದಾಖಿಲ್ ಮಾಡಿಸಿ ಆ ಬಗ್ಗೆ ಗಾರ್ಡಿಯನ್ ಆದ ತನಗೆ ಹಿಸ್ಸೆಯ ಸರ್ಟಿಫಿಕೇಟನ್ನು ಕೊಡಿಸಿಕೊಡಬೇಕೆಂದೂ ಫವತಿ ಫಣಿಯನಾಯ್ಕರ ಹೆಂಡತಿ ಪುಟ್ಟಮ್ಮನು ಅರ್ಜಿ ಬರೆದುಕೊಂಡಿದ್ದ ವಿಷಯದಲ್ಲಿ ಫವತಿ ಮೆಂಬರ ಹೆಸರಿನಲ್ಲಿರುವ 20 ಹಿಸ್ಸೆಗಳನ್ನು ಸದರಿ ಮೈನರರ ಹೆಸರಿಗೆ ದಾಖಿಲ್ ಮಾಡಬೇಕೆಂದೂ ತಾರೀಖು 6-1-1916 ನೇ ಬೋರ್ಡ್ ಮೀಟಿಂಗಿನಲ್ಲಿ ತೀರ್ಮಾನವಾಗಿರುವದರಿಂದ ಮೇಲ್ಕಂಡ ಫವತಿ ಮೆಂಬರುಗಳ ಹೆಸರಿನಲ್ಲಿರುವ ಹಿಸ್ಸೆಗಳು ಮೇಲೆ ನಮೂದಿಸಿದ ಆಯಾಯ ವಾರಸದಾರರ ಹೆಸರಿಗೆ ದಾಖಿಲ್ ಮಾಡಲ್ಪಡುತ್ತವೆ. [38-1]

ತೀರ್ಥಹಳ್ಳಿ, ಎಂ. ಎಸ್. ಬಸಪ್ಪ,
ತಾ. 1-2-1916. ಮ್ಯಾನೇಜಿಂಗ್ ಡಿರೆಕ್ಟರ್.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರಿನಲ್ಲಿ ಇರುವ ಪುರೋಹಿತ ವಾಸುದೇವಾಚಾರ್ಯರವರ ಮಕ್ಕಳಾದ ನನ್ನ ಗಂಡಂದಿರು ನರಸಿಂಹಮೂರ್ತಿ ಆಚಾರ್ಯರವರು ಈಗ ಕೆಲವು ದಿನಗಳಾರಭ್ಯ ಚಿತ್ತಸ್ವಾಸ್ಥ್ಯವಿಲ್ಲದೆ ಸ್ವೇಚ್ಛೆಯಾಗಿ ತಿರುಗುತ್ತಾ ಇರುತ್ತಾರೆ. ಇದನ್ನು ಹಂಗಾಮು ಮಾಡಿಕೊಂಡು ನಮಗೆ ಆಗದ ಕೆಲವು ಜನಗಳು ನಮ್ಮ ಯಜಮಾನರ ಬಾಬತು ಚರ ಸ್ಥಿರ ಸ್ವತ್ತುಗಳನ್ನು ಎತ್ತಿ ಹಾಕುವ ತರದೂದಿನಲ್ಲಿ ಇರುತ್ತಾರೆ. ನನಗೆ ತಿಳಿದಮಟ್ಟಿಗೆ ಸದರಿ ಸ್ವತ್ತುಗಳನ್ನು ಷೆಡ್ಯೂಲಿನಲ್ಲಿ ವಿವರಿಸಿ ಇರುತ್ತೇನೆ. ನಮ್ಮ ಬಾಬತು ಈ ಸ್ವತ್ತುಗಳನ್ನಾಗಲಿ, ಇತರ ಸ್ವತ್ತುಗಳನ್ನಾಗಲಿ ಯಾರು ಯಾವ ವಿಧವಾಗಿ ಪರಾಧೀನ ಮಾಡಿಕೊಂಡಾಗ್ಯೂ ಅವು ಅವರಿಗೆ ದಕ್ಕುವದಿಲ್ಲ; ಮತ್ತು ಪಡೆದುಕೊಳ್ಳತಕ್ಕವರು ಸ್ವತ್ತುಗಳನ್ನು ಕಳೆದುಕೊಳ್ಳುವದಲ್ಲದೆ ನಮ್ಮ ವ್ಯವಹಾರಣೆಗಳಿಗೆಲ್ಲಾ ಗುರಿಯಾಗಿ, ನಮ್ಮ ನಷ್ಟವನ್ನು ತೆರಬೇಕಾಗುತ್ತದೆ.

ಷೆಡ್ಯೂಲ್:—(1) ತುಮಕೂರು ತಾಲ್ಲೂಕು ಕಸಬಾ ಸಮ್ಮತು ಅರಿಕೆರೆ ಗ್ರಾಮದಲ್ಲಿ ಮೇಲ್ಕಂಡ ನರಸಿಂಹಮೂರ್ತಿ ಆಚಾರ್ಯರವರ ಖಾತೆ ಸದರಿಯವರ ಅನುಭವದ ಸರ್ವೆ 68 ನೇ ತರಿ 32 ಗುಂಟೆ, ಆಕಾರ 4 ರೂಪಾಯಿ—ಪೂರ್ವಕ್ಕೆ ಶ್ಯಾನುಭಾಗ ವೆಂಕಟಕೃಷ್ಣಯ್ಯನವರ ಜಮೀನು, ಪಶ್ಚಿಮಕ್ಕೆ ನರಸಿಂಹಮೂರ್ತಿ ಆಚಾರ್ ಮತ್ತು ಕೊಮಾರಯ್ಯನವರ ಜಮೀನು, ಉತ್ತರಕ್ಕೆ ರಾಮೇಗೌಡನ ಜಮೀನು, ದಕ್ಷಿಣಕ್ಕೆ ಕೊಮಾರಯ್ಯನ ಜಮೀನು. (2) ಸದರಿ ಗ್ರಾಮದ ಸರ್ವೆ 59 ನೇ ತರಿ 2 ಎ. 2 ಗುಂಟೆ, ಆಕಾರ 12 ರೂಪಾಯಿ— ಪೂರ್ವಕ್ಕೆ ನರಸಿಂಹಮೂರ್ತಿ ಆಚಾರ್ಯರ ಜಮೀನು, ಪಶ್ಚಿಮಕ್ಕೆ ರಾಮೇಗೌಡನ ಜಮೀನು, ಉತ್ತರಕ್ಕೆ ರಾಮೇಗೌಡನ ಜಮೀನು, ದಕ್ಷಿಣಕ್ಕೆ ಕೊಮಾರಯ್ಯನ ಜಮೀನು. (3) ಸದರಿ ಗ್ರಾಮದ ಸರ್ವೆ 11 ನೇ ನಂಬರು ಖುಷ್ಕಿ 2 ಎ 34 ಗುಂಟೆ, ಆಕಾರ 3 ರೂಪಾಯಿ — ಪೂರ್ವಕ್ಕೆ ಶ್ಯಾನುಭಾಗ ವೆಂಕಟಕೃಷ್ಣಯ್ಯ ದೊಡ್ಡಯ್ಯ ಇವರ ಜಮೀನು, ಪಶ್ಚಿಮಕ್ಕೆ ಅಣ್ಣೇನಹಳ್ಳಿ ಗಡಿ, ಉತ್ತರಕ್ಕೆ ವೆಂಕಟಯ್ಯನ ಜಮೀನು, ದಕ್ಷಿಣಕ್ಕೆ ದೊಡ್ಡಯ್ಯನ ಜಮೀನು. (4) ಡಿಟೋ ಗ್ರಾಮದ ಸರ್ವೆ 103 ನೇ ಖುಷ್ಕಿ 2 ಎ 34 ಗುಂಟೆ, ಆಕಾರ 3 ರೂಪಾಯಿ— ಪೂರ್ವಕ್ಕೆ ಶ್ಯಾನುಭಾಗ ವೆಂಕಟಕೃಷ್ಣಯ್ಯನ ಜಮೀನು, ಪಶ್ಚಿಮಕ್ಕೆ ವೆಂಕಟಕೃಷ್ಣಯ್ಯನ ಜಮೀನು, ಉತ್ತರಕ್ಕೆ ಸಂಜೀವರಾಯರ ಜಮೀನು, ದಕ್ಷಿಣಕ್ಕೆ ವೆಂಕಟಕೃಷ್ಣಯ್ಯನ ಜಮೀನು [33-1]

ತಾ. 1 ನೇ ಫೆಬ್ರವರಿ, ಲಕ್ಷ್ಮಮ್ಮ ಮೈನರ್ ತಂದೆ ತುಂಕೂರು
1916, ತುಮಕೂರು. ಪಲ್ಲಕ್ಕಿ ವೆಂಕಟಾಚಾರ್ ಗಾರ್ಡಿಯನ್ ರುಜು

ಆಫೀಸ್ ಗಡಿಯಾರಗಳು.

ಈ ಗಡಿಯಾರಗಳು ಮನೆ, ಆಫೀಸು, ಕಚೇರಿ, ಹೋಟೇಲು, ಅಂಗಡಿ ಮೊದಲಾದ ಸ್ಥಳಗಳಲ್ಲಿ ತಗಲಿ ಹಾಕುವುದಕ್ಕೋಸ್ಕರವೇ ತಯಾರುಮಾಡಿಸಿದೇವೆ. ಅದರ ಡಯಲ್ 8 ಅಂಗುಲ, ಬಿಳಿ ಎನಾಮಲ್ ಮಾಡಿದೆ 19½ ಅಂಗುಲ ಎತ್ತರ ಒಂದು ಸಲ ಬೀಗ ಕೊಟ್ಟರೆ 8 ದಿನ ನಡೆಯುತ್ತೆ ಕ್ರಯ ರೂ. 6-8-0 ತಾರೀಖು ಸಹ ತೋರಿಸುವುದಕ್ಕೆ ರೂ 7-8-0

ಆನ್‌ಸೋನಿಯಾ ಕ್ಲಾಕುಗಳು.

6	ಅಂಗುಲ,	ಸುಂದರವಾದ ಡಯಲ್ ಉಳ್ಳದ್ದು			ಕ್ರಯ	ರೂ 11-8-0
8	„	ಡಿಟ್ಟೋ	„	„	„	ರೂ. 14-8-0
10	„	„	„	„	„	ರೂ. 15-8-0
12	„	„	„	„	„	ರೂ. 16-8-0

ಸೇಠ್ ಥಾಮಸ್ ಒಂದು ರೂಪಾಯಿ ಜಾಸ್ತಿ.

ನಮ್ಮ ವಿಳಾಸ — ಗೌಥಾ ಅಂಡ್ ಕಂಪೆನಿ,
[12-1] 57, ತಿರುಪತಿನಾಯಕನ್ ಪೇಟೆ, ಮದರಾಸ್.

ತಾಕೀತು.—ದರಖಾಸ್ತುದಾರರು ಅಡ್ವಾನ್ಸು 2 ರೂಪಾಯಿ ಕಳುಹಿಸಬೇಕು. ನಮ್ಮಲ್ಲಿ ವಾಚುಗಳು, ಟೈಂಪೀಸುಗಳು, ಟೈಪ್‌ರೈಟರುಗಳು, ಹಾರ್ಮೋನಿಯಂ, ಫೌಂಟನ್‌ಪೇನಾ ಮುಂತಾದ ಅನೇಕ ಪದಾರ್ಥಗಳು ಸುಲಭ ಕ್ರಯಕ್ಕೆ ಇಟ್ಟಿದೇವೆ.

ಮೋಸ ಹೋಗಬೇಡಿರಿ.

ಕೈಗೆ ಕಷ್ಟವಿಲ್ಲ. ಹಣಕ್ಕೆ ನಷ್ಟವಿಲ್ಲ.
ಅರ್ಧ ಕ್ರಯ! ಈ ತಿಂಗಳು ಮಾತ್ರ!

ಮುಂಚಿನ ಕ್ರಯ ರೂ. 4, ಈಗ ವಿ. ಪಿ. ಸಹಿತ ರೂ. 2 ಮಾತ್ರ. ಯಾವಾಗಲು ಕೃಷ್ಣಾ ಫೌಂಟನ್ ಪೇನಾವನ್ನು ಸೇವಿಸಿರಿ. ಪ್ರಿಯರೇ, 7-10 ರೂ. ಬಾಳತಕ್ಕ ಫೌಂಟನ್ ಪೇನಾಗಳನ್ನು ಸೇವಿಸಿ ಇರುತ್ತೀರಲ್ಲವೆ? ನಮ್ಮ ಕಂಪನಿಯಲ್ಲಿ 22 ಜಿಲ್ಲಾಗಳಲ್ಲಿ ಕೆಲಸಮಾಡುವ 14 ಕ್ಯಾರೆಟ್ ರೋಲ್ಡ್ ಗೋಲ್ಡ್ ನಿಬ್ಬು ಹಾಕಿದ ಉತ್ತಮವಾದ ಕೃಷ್ಣಾ ಪೇನಾವನ್ನು ಸೇವಿಸಿ ನೋಡಿರಿ. ನಮ್ಮ ಕಂಪನಿಯ ಹೆಸರು ಪ್ರಖ್ಯಾತಿಯಾಗಲೆಂದು ಈ ತಿಂಗಳು ಮಾತ್ರ ಅರ್ಧ ಕ್ರಯಕ್ಕೆ ಕಳಿಸುತ್ತೇವೆ ಸ್ಕೂಲ್ ಮಾಸ್ಟರು, ವಿದ್ಯಾರ್ಥಿಗಳು 3 ಪೇನಾ ಮೇಲೆ ತರಿಸಿಕೊಳ್ಳುವವರಿಗೆ ರೂ. 1ಕ್ಕೆ 2 ಆಣೆ ಕಮಿಷನ್ ದೊರೆಯುತ್ತೆ. ಪ್ರಿಯರೇ, ಜಾಗ್ರತೆಯಾಗಿ ತರಿಸಿಕೊಳ್ಳಬೇಕು ಎಂದು ಪ್ರಾರ್ಥನೆ.

ವಿಳಾಸ—ಮ್ಯಾನೇಜರ್, ಕೃಷ್ಣಾ ಅಂಡ್ ಕೋ,
[29-1] 20 ಎಲಿಫೆಂಟ್‌ಗೇಟ್ ಬೀದಿ, ಸಾಹುಕಾರ್ ಪೇಟ್, ಮದರಾಸು.

ಪುಷ್ಪರಾಗದಿಂದ ಕಟ್ಟಿದ ಅಚ್ಚ ಚಿನ್ನದ ಮೂಗುಬಟ್ಟು

ಕ್ರಯ ರೂ. 7-8-0.

ಫಳಂಗಿ ಚಾರ್ಜು ಮಾಫಿ.

ವಜ್ರದಂತೆ ಥಳಥಳಿಸುವ ಉತ್ತಮ ಜಾತಿಯ ಪುಷ್ಪರಾಗದಿಂದ ಕಟ್ಟಲ್ಪಟ್ಟ ಅಚ್ಚ ಚಿನ್ನದ ಮೂಗುಬಟ್ಟುಗಳು ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುತ್ತೆ. ನಾವು ಲಕ್ಷಾಂತರ ರೂಪಾಯಿ ಬಂಡವಾಳ ಇಟ್ಟು ಹೊರಗಿನ ಭಾರೀ ಉದ್ಯೋಗ ಮೊದಲುಗೊಂಡು ಸರ್ವರಿಗೂ ಉತ್ತಮವಾದ ಆಭರಣಗಳು ಬಹು ಸುಲಭ ಕ್ರಯದಲ್ಲಿ ದೊರಕುವಂತೆಯೂ, ನಮ್ಮ ಹೆಸರು ಪ್ರಖ್ಯಾತಿಯಾಗಬೇಕೆಂಬ ಅಭಿಪ್ರಾಯದಿಂದಲೂ ಸ್ವಲ್ಪವೇ ಲಾಭ ಇಟ್ಟು ಅನೇಕ ಆಭರಣಗಳನ್ನು ತಯಾರಿಸಿದೇವೆ. ದರಖಾಸ್ತುದಾರರು ತರಿಸಿಕೊಳ್ಳುವ ಆಭರಣವು ಸಮರ್ಪಕವಿಲ್ಲದಿದ್ದ ಪಕ್ಷ ಫಳಂಗಿಯನ್ನು ಪಡೆದ ತಿಂಗಳೊಳಗೆ ಪುನಃ ನಮಗೆ ಸದರಿ ಆಭರಣವನ್ನು ವಿ. ಪಿ. ಫಳಂಗಿ ಮೂಲಕ ವಾಪಸು ಕಳುಹಿಸಿ ನಿಮ್ಮ ಹಣವನ್ನು ಪಡೆಯಬಹುದು. ಆದಕಾರಣ ನೀವು ಕೋರುವ ಆಭರಣದ ಫಳಂಗಿಯ ದರಲೀ ಆಲಾಯಿದಾ ಕವರಿನಲ್ಲಿ ಈ ಕರಾರಿಗೆ ನಾವು ಒಪ್ಪಿರುವದಾಗಿ ಸ್ವದಸ್ತೂರು ರಸೀತಿ ಬರೆದು ದರಖಾಸ್ತುದಾರರಿಗೆ ಕಳಿಸುತ್ತೇವೆ. ಅರ್ಜಿದಾರರು ಆಭರಣವನ್ನು ನಿರ್ಭಯವಾಗಿ ಬರೆದು ತರಿಸಿಕೊಳ್ಳಬಹುದು. ನಿಮಗೆ ಇತರ ಯಾವ ಆಭರಣಗಳು ಬೇಕಾದರೂ ಬರೆದರೆ ತಯಾರಿಸಿ ಕಳುಹಿಸುತ್ತೇವೆ.

[40-1] ನಮ್ಮ ವಿಳಾಸ:—ಏಕಾಂಬರ್ ಕಂಪೆನಿ,
18, ಸೆಕೆಂಡ್ ಲೈನ್ ಬೀಚ್, ಮದರಾಸ್

ಇದನ್ನು ಅವಶ್ಯವಾಗಿ ನೋಡಿ.

ಅರ್ಧ ಕ್ರಯ. ಈ ತಿಂಗಳು ಮಾತ್ರ.

ಸುಂದರವಾದ ಲಂಡನ್ ಪಾಕೆಟ್ ವಾಚ್.

ಮುಂಚಿನ ಬೆಲೆ ರೂ. 3-0-0, ಈಗ ರೂ. 2-0-0.

5 ವರ್ಷದ ಗ್ಯಾರಂಟಿ.

ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವನ್ನು ಇದುವರೆಗೂ ರೂ 3-0-0 ಗೆ ವಿಕ್ರಯ ಮಾಡಿದೆವು. ಇದು ಎಲ್ಲರೂ ಅಂದರೆ ಬಡ ಭಾಗ್ಯವಂತರು ತೆಗೆದುಕೊಳ್ಳಬೇಕೆಂಬ ಉದ್ದೇಶವಾಗಿ ಇದನ್ನು ರೂ. 2-0-0 ವಿಕ್ರಯ ಮಾಡಬೇಕೆಂದು ತೀರ್ಮಾನ ಆಗಿ ಇದೆ. ಈ ಗಡಿಯಾರ ಬಹು ನಾಜೂಕಾದ ಮಜಬೂತಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ಈ ಗಡಿಯಾರ ಇತರ ಕಂಪೆನಿಯವರು ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು. ನಮ್ಮ ಪೇಟೆಯಲ್ಲಿ ಅನೇಕ ಗಡಿಯಾರಗಳು ಜಾಸ್ತಿ ಇರುತ್ತವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ರೂ. 2-0-0 ಕ್ಕೆ ಕೊಡಲ್ಪಡುತ್ತೆ



ನಮ್ಮ ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕಂಪನಿ,
[252-13] 3, ಇರುಳಪ್ಪನ ಬೀದಿ, ಮದರಾಸ್

ಯೂರೋಪ್ ದೇಶದ ಮಹಾಯುದ್ಧದ ಚರಿತ್ರೆಯು.

ಕ್ರಯ ರೂಪಾಯಿ 1-0-0.

ಈಗ ಯೂರೋಪ್ ದೇಶದಲ್ಲಿ ನಡೆಯುತ್ತಲಿರುವ ಮಹಾ ಯುದ್ಧದ ಚರಿತ್ರೆಯು ಕನ್ನಡ ಭಾಷೆಯಲ್ಲಿ ಪಂಡಿತರಿಗೂ ಪಾಮರರಿಗೂ ಸ್ತ್ರೀಯರಿಗೂ ಸುಲಭವಾಗಿ ತಿಳಿಯುವಂತೆ ಅಧ್ಯಾಯಗಳಾಗಿ ಭಾಗಿಸಿ 30 ಚಿತ್ರಗಳೊಡನೆ ಪ್ರಕಟಿಸಲ್ಪಟ್ಟಿರುತ್ತೆ. ಜರ್ಮನಿ, ಫ್ರಾನ್ಸ್, ರಷ್ಯಾ, ಇಂಗ್ಲೆಂಡ್, ಆಸ್ಟ್ರಿಯಾ, ಟರ್ಕಿ ಸರ್ವಿಯಾ, ಬೆಲ್ಜಿಯಂ ಮೊದಲಾದ ರಾಜ್ಯಗಳ ಚರಿತ್ರೆಗಳೂ, ಯುದ್ಧಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳೂ, ಪ್ರತಿಯೊಂದು ರಾಜ್ಯದ ಸೇನಾಬಲವೂ ಮತ್ತು ವಿಮಾನವೂ, ಅವುಗಳ ಪಟಗಳೂ, ರಾಜರುಗಳು, ಸೇನಾಧ್ಯಕ್ಷರುಗಳು, ಆಯಾಯ ದೇಶದ ರಾಜರುಗಳು, ಮಂತ್ರಿಗಳು ಮೊದಲಾದವರುಗಳ ಛಾಯಾಚಿತ್ರಗಳು, ಯುದ್ಧಸಂಬಂಧವಾದ ವಿಷಯಗಳು, ಇವುಗಳೆಲ್ಲವೂ ಸವಿಸ್ತಾರವಾಗಿ ಬರೆಯಲ್ಪಟ್ಟಿವೆ. ಯುದ್ಧಾರಂಭವಾದ ಲಾಗಾಯ್ತು ರಣರಂಗದಿಂದ ಬಂದ ಯುದ್ಧದ ಸಮಾಚಾರಗಳು ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ.

[41-1] ನಮ್ಮ ವಿಳಾಸ—ಬ್ಯಾರನ್ ಕಂಪೆನಿ,
18, ಸೆಕೆಂಡ್ ಲೈನ್ ಬೀಚ್, ಮದರಾಸ್

ಬ್ಯಾರನ್ಸ್ ಮೆಡಿಕೇಟೆಡ್ ಪರಿಮಳ ನಸ್ಯದಪುಡಿ

ಈ ಅದ್ಭುತವಾದ ಪರಿಮಳ ನಸ್ಯದ ಪುಡಿಯನ್ನು ಉಪಯೋಗಿಸುವದರಿಂದ ಪೀನಸ, ತಲೆನೋವು, ನೆಗಡಿ, ಒಂಟಿ ತಲೆನೋವು, ಜಲದೋಷ, ಕೆಮ್ಮು ಮೊದಲಾದ ಅನೇಕ ವಿಧ ವ್ಯಾಧಿಗಳನ್ನು ಶೀಘ್ರದಲ್ಲಿ ಗುಣಪಡಿಸಿ ಚುರುಕುತನವನ್ನೂ, ಉತ್ಸಾಹವನ್ನೂ ಆನಂದವನ್ನೂ ಉಂಟುಮಾಡುತ್ತದೆ. ಅನೇಕರು ಇತರ ನಸ್ಯವನ್ನು ಹಾಕುವವರು ಇದನ್ನು ಒಂದಾವರ್ತಿ ಹಾಕಿದರೆ ಸಾಕು. ಈ ನಸ್ಯವನ್ನು ನಸ್ಯದಲ್ಲಿ ಒಂದು ಚಿಟಿಕೆ ಹಾಕಿ ಕೆಲವು ನಸ್ಯವೆಲ್ಲಾ ಸುವಾಸನೆಯಾಗುತ್ತೆ.



ಡಬ್ಬಿ 1 ಕ್ಕೆ ಕ್ರಯ	....	0-
ಡಿಟೋ 12 ಡಬ್ಬಿಗೆ ಕ್ರಯ		2-
1 ನೇ ನಂಬರ್ ಶೀಷೆ 12 ಕ್ಕೆ		1-
2 ನೇ ನಂಬರ್ ಶೀಷೆ 12 ಕ್ಕೆ	....	0-
3 ನೇ ನಂಬರ್ ಶೀಷೆ 12 ಕ್ಕೆ	....	0-

9 ತೊಲೆ ಹಿಡಿಯುವ ಪರಿಮಳ ನಸ್ಯದ ಟಿನ್ ಡಬ್ಬಿ 1ಕ್ಕೆ 0-1
ಉತ್ತಮ ಮದರಾಸು ಸಾದಾ ನಸ್ಯ 24 ರೂ. ತೂಕದ ಸೇರು 1ಕ್ಕೆ 10

ತಾಕೀತು.—ಅನೇಕ ಸುಳ್ಳು ಪ್ರಕಟನೆಗಳಿಂದ ಜನಗಳಿಗೆ ನಂಬಿಕೆ ಇಲ್ಲದಿರುವದು ಸಹಜವಾಗಿದೆ. ಆದಕಾರಣ ಮೇಲೆ ಕಾಣಿಸಿದ ಸಾಮಾನುಗಳನ್ನು ಕೋರುವ ದರಖಾಸ್ತುದಾರರಿಗೆ ವಿ. ಪಿ. ಫಳಂಗಿ ಕಂಗದಲೇ ಪ್ರತ್ಯೇಕ ಮಾದ್ರಿಯನ್ನು ಉಚಿತವಾಗಿ ಕಳುಹಿಸುತ್ತೇವೆ. ಅದನ್ನು ಪರೀಕ್ಷಿಸಿ ವಿ. ಪಿ. ಫಳಂಗಿ ಪಡೆಯಿರಿ.

ನಮ್ಮ ವಿಳಾಸ:—ಬ್ಯಾರನ್ ಕಂಪೆನಿ,
[41-1] 18, ಸೆಕೆಂಡ್ ಲೈನ್ ಬೀಚ್, ಮದರಾಸ್

ಪ್ಲೇಗ್ ರೋಗವು ಆದರ ಸುಲಭವಾದ ಪ್ರತಿಕಾರೋಪಾಯವು.

ಬೊಂಬಾಯಿ ಪಟ್ಟಣದ "ಪ್ಲೇಗ್ ರೀಸರ್ಚ್ ಲ್ಯಾಬೊರೇಟರಿ" ಯ ಮೇಜರ್ ಲಿಸ್ಟ್ ಎಂಬುವರು—"ಟಿಂಕ್ಚರ್ ಐಯೊಡಿನ್" ಎಂಬ ದ್ರಾವಕವು ಪ್ಲೇಗ್ ಅತ್ಯುತ್ತಮವಾದ ಮತ್ತು ಖಾತ್ರಿಯಾಗಿ ಆ ರೋಗವನ್ನು ವಾಸಿಮಾಡತಕ್ಕ ಔಷಧವೆಂದು ಕಂಡು ಹಿಡಿದಿರುತ್ತಾರೆ. ಇದೇ ಟಿಂಕ್ಚರ್ ಐಯೊಡಿನನ್ನು ಪಂಜಾಬ್ ಗವರ್ನ್ಮೆಂಟಿನ ಪ್ಲೇಗ್ ಇಲಾಖೆಯಲ್ಲಿ ಕಳೆದ ವರುಷ ಪ್ಲೇಗ್ ಕಾಲದಲ್ಲಿದ್ದಾಗ ರೋಗಿಗಳಿಗೆ ಕೊಟ್ಟದ್ದರಿಂದ ಕೆಳಕಂಡ 80 ಮಂದಿಯಂತೆ ಪ್ಲೇಗ್ ರೋಗದಿಂದ ಬದುಕಿಸಲ್ಪಟ್ಟರು ಅದು ಹೇಗೆಂದರೆ—

ಡಿಸ್ಟ್ರಿಕ್ಟ್.	ಔಷಧವನ್ನು ಸೇವಿಸಿದವರು	ಬದುಕಿದ್ದು.	ಸತ್ತದ್ದು.
ಜಲಂಧರ್	139	126	13
ಫಿರೋಜಪುರ್	268	214	58
ಹುಷಾರಪುರ್	33	26	8
ಅಂಬಾಲ	211	162	50
ಲೈಯಲ್‌ಪುರ್	54	50	4
ಜುಮ್ಲಾ.	705	578	133

ಯಾವಾಗಲಾದರೂ ಒಂದು ಸ್ಥಳದಲ್ಲಿ ಪ್ಲೇಗ್ ರೋಗವು ಪ್ರಾಪ್ತವಾದಾಗ ಮೇಲ್ಕಂಡ ದ್ರಾವಕದ ಒಂದೆರಡು ತೊಟ್ಟುಗಳನ್ನು ಸ್ವಲ್ಪ ನೀರಿನ ಸಂಗಡ ಪ್ರತಿ ನಿತ್ಯವೂ ಕುಡಿಯುವುದರಿಂದ ಆ ರೋಗ ತಗಲುವುದಕ್ಕೆ ಅವಕಾಶ ಕೊಡುವುದಿಲ್ಲ. ಹಾಗೆ ರೋಗ ತಗಲಿದರೂ ರೋಗದ ತಾಪವು ಬಹಳ ಮಟ್ಟಿಗೆ ಕಡಿಮೆಯಾಗಿರುವುದಲ್ಲದೆ ಆ ರೋಗದಿಂದ ಬದುಕುವ ಸಂಭವವೂ ಉಂಟು.

ಪ್ಲೇಗ್ ರೋಗ ತಗಲಿರುವವರ ವಿಷಯದಲ್ಲಿ ನಿಗಾ ಕೊಡಬೇಕಾದ ಅಂಶವೇನೆಂದರೆ :—

(1) ವಿಸ್ತಾರವಾಗಿರುವ ಮತ್ತು ಹೆಚ್ಚಾಗಿ ಗಾಳಿ ಸಂಚಾರಕ್ಕೆ ಅವಕಾಶವಿರುವ ಕೊಟಡಿಯಲ್ಲಿ ರೋಗಿಯನ್ನು ಯಾವಾಗಲೂ ಮಲಗಿಸಿಯೇ ಇರಬೇಕು. (2) ಯಾವಾಗಲೂ ಸುಲಭವಾಗಿರುವ ಆಹಾರವನ್ನೇ ಕೊಡಬೇಕು. (3) ನೀರಡಿಕೆಯಾದಾಗ ನಿರ್ಮಲವಾಗಿರುವ ತಣ್ಣೀರನ್ನು ಎಷ್ಟು ಬೇಕಾದರೂ ಕುಡಿಯುವುದಕ್ಕೆ ಕೊಡಬೇಕು. (4) ಅರ್ಧ ಔನ್ಸ್ ನೀರಿನಲ್ಲಿ ಒಂದು ತೊಟ್ಟು "ಟಿಂಕ್ಚರ್ ಐಯೊಡಿನ್" ದ್ರಾವಕವನ್ನು ಬೆರಸಿ ಎರಡು ಗಂಟೆಗಳಿಗೊಂದಾವರ್ತಿ ರೋಗಿಗೆ ಕೊಡಬೇಕು. ಆದರೆ ರೋಗಿಯು ನಿದ್ರೆ ಮಾಡುತ್ತಿರುವಾಗ ಔಷಧಿ ಕೊಡಿಸುವುದಕ್ಕೋಸ್ಕರ ಎಬ್ಬಿಸಕೂಡದು. (5) ಪ್ಲೇಗ್ ಗೆಡ್ಡೆಗಳಿಗೆ ಮೇಲ್ಕಂಡ ದ್ರಾವಕವನ್ನು ದಿನಕ್ಕೆ ಎರಡಾವರ್ತಿ ಲೇಪನ ಮಾಡಬೇಕು.

ಇನ್ನು ಇತರ ವಿಧವಾದ ಯಾವ ಔಷಧವನ್ನೂ ರೋಗಿಗೆ ಕುಡಿಸಕೂಡದು.

ರೇಷ್ಮೆ ಹುಳುಗಳನ್ನು ಸಾಕತಕ್ಕ ರೈತರಿಗೋಸ್ಕರ.

[ಶ್ರೀಮಾನ್ ಆ. ಮ್ಯ. ಎ. ವಿ. ಗೊ ಪಾಲಶಾಸ್ತ್ರಿಗಳವರು ಬರೆದದ್ದು.]

ಬೀಜಕ್ಕಾಗಿ ರೋಗದ ಗೂಡುಗಳನ್ನು ತೆಗೆದುಕೊಳ್ಳಬಾರದು. ಗೂಡುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದರಲ್ಲಿ ಸರಿಯಾದ ಎಚ್ಚರಿಕೆ ತೆಗೆದುಕೊಳ್ಳಬೇಕು. ಗೂಡಿನಿಂದ ಚಿಟ್ಟೆಗಳು ಈಚೆಗೆ ಬಂದ ನಂತರ ಸುಮಾರು 9-10 ಗಂಟೆಯೊಳಗಾಗಿ ಇವುಗಳನ್ನೆಲ್ಲಾ ಪ್ರತ್ಯೇಕಿಸಬೇಕು. ಆ ಪ್ರತ್ಯೇಕಿಸಿದ ಚಿಟ್ಟೆಗಳನ್ನು ಶುಚಿಯಾದ ಕಾಗದದ ಮೇಲೆ ಜೊತೆ ಮಾಡಬೇಕು. ಜೊತೆಗೂಡಿದ 6 ಗಂಟೆಗಳ ನಂತರ ಗಂಡು ಹುಳುಗಳನ್ನು ಪ್ರತ್ಯೇಕಿಸಿ ಪ್ರತಿ ಹೆಣ್ಣು ಹುಳುವನ್ನೂ ಮೊಟ್ಟೆ ಹಾಕುವುದಕ್ಕಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಬಟ್ಟೆಯ ಉಂಗುರದಲ್ಲಾಗಲಿ ಅಥವಾ ಕಾಗದದ ಉಂಗುರದಲ್ಲಾಗಲಿ ಇಡಬೇಕು. ಹುಳು ಮೊಟ್ಟೆಗಳನ್ನಿಟ್ಟ ಬಳಿಕ ಚಿಟ್ಟೆಗಳ ರಸವನ್ನು ಸೂಕ್ಷ್ಮದರ್ಶಕ ಯಂತ್ರದಿಂದ ಪರೀಕ್ಷಿಸಲಿ. ಅವುಗಳಲ್ಲಿ ರೋಗವೇನಾದರೂ ಇದ್ದಲ್ಲಿ ಅದು ಕೂಡಲೆ ವ್ಯಕ್ತವಾಗುತ್ತದೆ. ಈ ಮೂಲಕ ರೋಗವಿದೆಯೆಂದು ಗೊತ್ತಾಗುವ ಹುಳುಗಳ ಮೊಟ್ಟೆಗಳನ್ನು ಕಾಗದದಿಂದ ಕತ್ತರಿಸಿ ತೆಗೆದುಹಾಕಿ, ರೋಗರಹಿತವಾದ ಮೊಟ್ಟೆಗಳನ್ನೇ ಬೀಜಕ್ಕಾಗಿ ಉಪಯೋಗಿಸುವರೆ ಒಳ್ಳೇದು. ಆದರೆ ಈ ರೀತಿ ಪರೀಕ್ಷೆ ಮತ್ತು ಮುಂತಾದ ರೈತರಿಗೆ ಸಾಧ್ಯವಿಲ್ಲವಾದ್ದರಿಂದ, ಅವರು ರೋಗರಹಿತವಾದ ಮೊಟ್ಟೆಗಳನ್ನು ಈಗ ಸರ್ಕಾರದಲ್ಲಿ ಏರ್ಪಾಡಾಗಿರುವ ಚನ್ನಪಟ್ಟಣದಲ್ಲಿನ ಸರ್ಕಾರಿ ಫಾರಂನಿಂದ ಪಡೆಯುವುದು ಉತ್ತಮ. ಇದು ಸಾಧ್ಯವಿಲ್ಲದಿದ್ದರೆ, ಸರ್ಕಾರಿ ಫಾರಂನಿಂದ ರೋಗರಹಿತವಾದ ಮೊಟ್ಟೆಗಳನ್ನು ತಂದು ಹುಳುಗಳನ್ನು ಸಾಕಿ, ಗೂಡುಗಳನ್ನು ಮೇಲೆ ಕ್ರಮದಿಂದ ಬೀಜಕ್ಕೆ ಅವರ ಗೂಡುಗಳನ್ನು ಕೊಳ್ಳುವುದು ಮಧ್ಯಮ ಪಕ್ಷವಾಗಿದೆ. ಒಳ್ಳೇ ಮೊಟ್ಟೆಗಳನ್ನು ಶುದ್ಧವಾದ ನೀರಿನಲ್ಲಿ ತೊಳೆಯುವಾಗ ನೀರಿನ ಮೇಲೆ ತೇಲುವ ಮೊಟ್ಟೆಯನ್ನು ಬಿಟ್ಟು ನೀರಿನಲ್ಲಿ ಮುಳುಗುವ ಮೊಟ್ಟೆಯನ್ನು ತೆಗೆದುಕೊಳ್ಳಬೇಕು. ಮೊಟ್ಟೆ ಹಾಕಿದ 4 ದಿನಗಳ ಮೇಲೆ 7 ದಿನಗಳೊಳಗಾಗಿ ಮೊಟ್ಟೆಯನ್ನು ಮತ್ತೊಂದು ಸಲ ತೊಳೆಯಬೇಕು. ಆಯಾ ದಿವಸ ಮೊಟ್ಟೆಯೊಡೆದು ಮರಿಯಾದ ಹುಳುಗಳನ್ನು 10 ಗಂಟೆಯ ಮೇಲೆ ಪ್ರತ್ಯೇಕವಾಗಿ ಬೆಳಸಿ ಆಹಾರ ಕೊಡಬೇಕು. ಹುಳುಗಳನ್ನು ಒತ್ತಾಗಿ ಇಡಬಾರದು. ಸಂಸಾರ ತನ ಇರುವ ಗಾಳಿಯಲ್ಲಿ ಸಾಕಬಾರದು, ಜಾಗದಲ್ಲಿಡಬೇಕು. ಹುಳುಗಳು ಜ್ವರಕ್ಕೆ ಹೋಗಿರುವಾಗ ಎಚ್ಚರಿಕೆಯಲ್ಲಿರಬೇಕು. ಆಗಲೇ ಹುಳುಗಳಿಗೆ ಮೇಲೆ ಬರುವ ಸಣ್ಣನ ಸೊಪ್ಪು. ಹುಳುಗಳನ್ನು ಅಧಿಕವಾದ ಉಷ್ಣವಿಲ್ಲದಿರುವ ಕಡೆಯಲ್ಲಿ ಇಟ್ಟಿರಬೇಕು. ಉಷ್ಣಮಾಪಕ ಯಂತ್ರದಿಂದ ಉಷ್ಣಸ್ಥಿತಿಯ ವ್ಯತ್ಯಾಸಗಳನ್ನು ತಿಳಿಯಬಹುದಾದುದರಿಂದ, ಈ ಥರ್ಮಾ ಯಂತ್ರವನ್ನು ಸಾಕುವ ಮನೆಯಲ್ಲಿ ಇಟ್ಟುಕೊಂಡಿದ್ದರೆ ಬಹಳ ಅನುಕೂಲವಾಗಿರುತ್ತದೆ. ಅಂಥಾ ಯಂತ್ರಗಳನ್ನು ಅಪೇಕ್ಷಿಸುವವರು ಅಗ್ರಿಕಲ್ಚರಲ್ ಕೆಮಿಸ್ಟ್ ಸಕ್ರೆಟರಿಯವರಿಗೆ ಬರೆದುಕೊಂಡಲ್ಲಿ, ಅವರು ಅವುಗಳನ್ನು ತರಿಸಿಕೊಡುವ ಏರ್ಪಾಡನ್ನು ಮಾಡುತ್ತಾರೆ. ಜ್ವರಕ್ಕೆ ಹೋಗಿರುವ ಹುಳುಗಳನ್ನು, ಜ್ವರದಿಂದ ಬಂದಿರುವ ಹುಳುಗಳನ್ನು, ಜ್ವರಕ್ಕೆ ಹೋಗದೆ ಇರುವ ಹುಳುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಇಡಬೇಕು. ಜ್ವರದಿಂದ ಎದ್ದ ನಂತರ ಒಂದು ತಟ್ಟೆಯಲ್ಲಿದ್ದ ಹುಳುಗಳನ್ನು 2, ಅಥವ 3 ತಟ್ಟೆಗಳಲ್ಲಿ ಇಡಬೇಕು. ಹುಳು ಚಿಕ್ಕದಾಗಿರುವಾಗ ಸೊಪ್ಪು ಹಾಕುವ ಹಾಗೆಲ್ಲಾ ಕ್ರಮವಾದ ಹೊತ್ತಿಗೆ ಸೊಪ್ಪು ಹಾಕುತ್ತಾ ಬರಬೇಕು. ಕ್ರಮ ಕ್ರಮೇಣ 3 ಗಂಟೆಗೊಂದಾವರ್ತಿ, ಬಿಸಲು ಜೋರಾಗಿದ್ದಲ್ಲಿ 2 ಗಂಟೆಗೊಂದಾವರ್ತಿ, ಬಹಳ ಮೋಡವಾಗಿ ತಂಪಾಗಿ ಇದ್ದಲ್ಲಿ 3½ ಅಥವಾ 4 ಗಂಟೆಗೊಂದಾವರ್ತಿ ಸೊಪ್ಪು ಹಾಕಬೇಕು. ಒಳ್ಳೇ ಸೊಪ್ಪನ್ನು ಬೆಳಗ್ಗೆ, ಅಥವ ಬೇಸಿಗೆಕಾಲ ಬಿಸಿಲಿನ ಧೂಳ ಕಮ್ಮಿಯಾಗಿರುವಾಗ ಕುಯ್ದು ಒದಗಿಸಿಕೊಳ್ಳಬೇಕು. ಬಾಡುವಾಗ ಸೊಪ್ಪನ್ನು ಕುಯ್ಯಬಾರದು. ಸೊಪ್ಪನ್ನು ಗಾಳಿ ಬರುವ ಕಡೆಯಲ್ಲಿ ಅದನ್ನು ಇಡಬಾರದು. ಹುಳುಗಳನ್ನು ಒಂದು ತಟ್ಟೆಯಿಂದ ಮತ್ತೊಂದು ತಟ್ಟೆಗೆ ಬದಲಾಯಿಸುವಾಗ ಹುಳುಗಳನ್ನು ಇಟ್ಟಿರುವ ಮನೆಯ ಬಾಗಿಲು ಮುಚ್ಚಿಕೊಂಡಿರಬಾರದು. ಹುಳುವಿನ ಮೇಲೆ ಎದುರುಗಾಳಿ ಹೊಡೆಯುವ ರೀತಿಯಲ್ಲಿ ಕಿಟಕಿಯ ಬಾಗಿಲುಗಳನ್ನು ತೆರೆಯಕೂಡದು. ಹುಳು ಸಾಕುವ ಮನೆಯ ಹತ್ತಿರ ಹುಳುವಿನ ಕಸವನ್ನು ಇಟ್ಟುಕೊಳ್ಳಕೂಡದು. ಹುಳು ಸಾಕುವ ಮನೆಯಲ್ಲಿ ಯಾವಾಗಲೂ ವಿಶೇಷ ಜನಗಳು ತುಂಬಿಕೊಂಡಿರಬಾರದು. ಹುಳು ಸಾಕುವ ಮನೆಯಲ್ಲಿ ಮಲಗಬಾರದು. ಊಟ, ಅಡಿಗೆ ಮಾಡತಕ್ಕ ಕೊಠಡಿ, ಮಲಗುವ ಕೊಠಡಿಯೂ, ದನಕರುಗಳು ಕಟ್ಟತಕ್ಕ ಪ್ರದೇಶಗಳೂ ಹುಳು ಸಾಕುವ ಮನೆಯಿಂದ ಪ್ರತ್ಯೇಕವಾಗಿರಬೇಕು. ಪ್ರತಿ ಒಂದು ಬೆಳೆಯಾದ ಮೇಲೂ ಇನ್ನೊಂದು ಬೆಳೆ ಇಡುವುದಕ್ಕೆ ಮೊದಲು ಆ ಮನೆಯನ್ನು ಚೊಕ್ಕಟ ಮಾಡಿ ತೊಳೆದು ಗಂಧಕದ ಹೊಗೆಯನ್ನು ಹಾಕಿ 24 ಗಂಟೆಗಳ ಕಾಲ ಹೊಗೆ ಹೋಗದ ರೀತಿಯಲ್ಲಿ ಬಾಗಿಲು ಕಿಟಕಿಗಳನ್ನೆಲ್ಲಾ ಮುಚ್ಚಿರಬೇಕು. ಹುಳು ಸಾಕಿದ ತಟ್ಟೆ, ದವೆ ಮುಂತಾದವುಗಳನ್ನು ಕೊತ ಪೈಲ್ಯುಕ್ತವಾದ ನೀರಿನಿಂದ ಚೆನ್ನಾಗಿ ತೊಳೆದು ಬಿಸಿಲಿನಲ್ಲಿ ಒಣಗಿಸಿ ನಂತರ ಉಪಯೋಗಿಸಬೇಕು.

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು ; ಎಂಜೆಲ್‌ಬರ್ಗ್ ಹಲ್ಲರುಗಳ ಬಿಲ್ಲಿಡಿ ಸಾಮಾನುಗಳು ; ಎಂಜಲ್‌ಬರ್ಗ್ ಸಿಸ್ಟಮ್ ಹಲ್ಲರುಗಳು ನಂ. 1 ಮತ್ತು 2; ದೇವೀ ಪ್ಯಾಕ್ಸ್‌ಮನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಸ್ಟೈಲ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು ; ಬಲ್ಲಿಡೆ ರೀಳುಗಳು; ಲಿಸ್ಟ್ರೀಬಿಯಾ ಬೀಜದ ನಾಟು ಇದ್ದಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ [208-18]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪನಿ, ಮದ್ರಾಸ್.

The Indian Commerce & Industries Co., Madras.

Branches—Bezwada and Tanjore.

ಕ್ರಿಸ್ಮಸ್ ಹಬ್ಬದ ವಿಶೇಷ ಮಾರಾಟ! 1916 ನೇ ಜನವರಿ 25 ರ ವರೆಗೆ ಮಾತ್ರ. ತಬಲಾ ಮತ್ತು ಬಾಯಾ ಜಟ್ಟಿ.

ಮೂರು ವರ್ಷದ  ಜಾಮೀನ್ ಕೊಡುತ್ತೇ.

ನಮ್ಮ ಕೃಪ್ತಿಕರವಾದ ಫ್ಲೂಟ್ ಹಾರ್ಮೋನಿಯಂ ಬಹಳ ಉತ್ತಮವಾದದ್ದು, ಬಹಳ ಇಂಪಾದ ನಾದವುಳ್ಳದ್ದು. ಯಾವ ಹವೆಯಲ್ಲೂ ಕೆಡುವುದಿಲ್ಲ. ಎಲ್ಲಾ ತರದ ಸಂಗೀತಗಳಿಗೂ ಹಿತವಾದದ್ದು. ಒಂದು ವಾರದೊಳಗೆ ಸಮ್ಮತವಾಗದಿದ್ದರೆ ಹಣ ವಾಪಸ್ ಕೊಡುವೆವು. ಇದು ಬೇಸ್ ಮತ್ತು ತೇಗದಿಂದ ತಯಾರ್ ಮಾಡಲ್ಪಟ್ಟು ಉತ್ತಮವಾದ ರೀಡ್ ಉಳ್ಳದ್ದಾಗಿದೆ. ಒಂದು ರೀಡಿನದಕ್ಕೆ ಕ್ರಯ ರೂ. 38, 45, 60; ಈಗಿನ ಕ್ರಯ ರೂ 19, 22-8-0, 25; ಇದರ ಕೂಡ 5 ರೂ. ಬಾಬು ಬಿಟ್ಟು ಕೊಡುತ್ತೇವೆ. ಡಬಲ್ ರೀಡ್ ಹಾರ್ಮೋನಿಯಂ ಕ್ರಯ ರೂ. 65, 70, 80, 90; ಈಗಿನ ಕ್ರಯ ರೂ. 32-8-0, 35, 40, 45; ಇದರ ಕೂಡ ರೂ. 6-12-0 ಕ್ರಯದ ಒಂದು ಜೊತೆ ತಬಲ ಮತ್ತು ಬಾಯಾವನ್ನು ಬಿಟ್ಟು ಕೊಡುವೆವು. ಉತ್ತಮೋತ್ತಮವಾದ ಮಡಿಸುವ ಹಾರ್ಮೋನಿಯಂ (ಕೈಯಿಂದಲೂ ಕಾಲಿನಿಂದಲೂ ನಡಿಸಬಹುದು) ಕ್ರಯ ರೂ. 130; ಈಗ ಇದನ್ನು ರೂ. 65 ಕ್ಕೆ ಕೊಡುತ್ತೇವೆ ಕ್ರಯದಲ್ಲಿ ಕಾಲುಪಾಲು ಅಡ್ವಾನ್ಸು ಕಳಿಸಿ, ಸವಿಸ್ತರ ಲಿಸ್ಟ್ ಸ್ಪೇಷಲ್ ತಿಳಿಸಿದರೆ ಬಾಕಿ ಹಣಕ್ಕೆ ವಿ.ಪಿ. ಮಾಡುತ್ತೆ.

ವಿಳಾಸ—**The National Harmonium Co.,**

[276-8] **SIMLA T.S.O., (E) CALCUTTA.**

ಹಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವ, ಫೀಜಿ ಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ಕೊರಗುವುದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾತರ್ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಉಬ್ಬಸ ಹೊಟ್ಟೆನೋವು, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಸೀಸೆಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಲ್. ಎಂ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ ಎಲ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವುದು—"ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ತಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡತಕ್ಕದ್ದೆಂದು ಶಿಫಾರಸು ಮಾಡುತ್ತೇನೆ" (2) ಮ|| ರಾ|| ವಿ. ಎಸ್. ಅಪ್ಪುಶರ್ಮ, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್ಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಹಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ."

[189-22] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ESANOFELE

ಮಲೇರಿಯಾ ಡಿಸ್ಟ್ರಿಕ್ಟುಗಳಲ್ಲಿ ವಾಸಮಾಡತಕ್ಕವರೆಲ್ಲಾ "ಈಸಾನೊಫೆಲಿ" ಯನ್ನು ಸೇವನೆ ಮಾಡಬೇಕು.

ಹಿಂದುಸ್ಥಾನದಲ್ಲಿರುವ ಪ್ರಖ್ಯಾತಿಪಡೆದ ವೈದ್ಯನು ಹೀಗೆ ಬರೆಯುತ್ತಾನೆ:—"ಜನರಲ್ ಆಸ್ಪತ್ರೆಯೊಳಗೆ ಐದು ಜನ ರೋಗಿಗಳಿಗೆ ಈಸಾನೋಫೆಲಿಯನ್ನು ಕೊಟ್ಟು ಚಿಕಿತ್ಸೆ ಮಾಡಲಾಯಿತು. ಈ ಔಷಧವನ್ನು ಕೊಟ್ಟ 24 ರಿಂದ 36 ಗಂಟೆ ಹೊತ್ತಿನೊಳಗಾಗಿ ಪ್ರತಿ ಒಬ್ಬರಿಗೂ ಜ್ವರವು ಇಳಿದು ಹೋಯಿತು; ಪುನಹ ಜ್ವರ ಹೆಚ್ಚಾಗಲೇ ಇಲ್ಲ"—ಮಲೇರಿಯ, ಅದರ ಕಾರಣ, ಅದನ್ನು ತಡೆಯುವುದು, ಅದನ್ನು ವಾಸಿಮಾಡುವುದು ಎಂಬ ವಿಷಯಗಳನ್ನು ಕುರಿತ ಪುಸ್ತಕವನ್ನು ಕೇಳಿ ನಮ್ಮಿಂದ ತರಿಸಿಕೊಂಡು ಓದಿನೋಡಿ.

ಕ್ರಯ 1 ಬಾಟ್ಲಿಗೆ ರೂ 2-0-0. ಎಲ್ಲಾ ಔಷಧ ವ್ಯಾಪಾರದ ಅಂಗಡಿಗಳಲ್ಲೂ ಬಿಕರಿಗೆ ಇಟ್ಟಿದೇವೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುವನ್ನು ಕೊಡಿ ಎಂದು ಕೇಳಿ ಇದು ನೀಲೋಪಾಧಿ ಇದ್ದು ಸೇವಿಸಗೆ ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜಂಟರು :—ಜೆ. ಬಿ. ಫಾರ್ಸ್ಟರ್ ಕಂಪನಿ, ಬೆಂಗಳೂರು

ಇಂಡಿಯಾ, ಬರ್ಮಾ, ಸಿಲೋನ್‌ಗೆಲ್ಲಾ ಡಿಪೋ:— [176-23]

ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ

ಪ್ರೊಪ್ರೈಟರುಗಳು :—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಲಿ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ಪರೀಕ್ಷೆಗಾಗಿ ಮುಫತ್ತು.

ನಮ್ಮ "ಬೇವಾಕಾ" ಎಂಬುವದು ಕಲೆಸೋವನ್ನು ತಕ್ಷಣವೇ ನಿಲ್ಲಿಸುತ್ತೆಂದು ಬಹು ಕಾಲದಿಂದಲೂ ಬರ್ಮಾದಲ್ಲಿ ಖ್ಯಾತಿಹೊಂದಿದೆ ಬಹಳ ಜನಗಳ ಆಶ್ರಯವನ್ನು ಸಂಪಾದಿಸಿಕೊಂಡಿದೆ. ಅದ್ಭುತವಾದದ್ದೆಂದೂ ಎಲ್ಲಾ ತರದ ಕಲೆಸೋವುಗಳನ್ನೂ ಉತ್ತರ ಕ್ಷಣದಲ್ಲೇ ಗುಣವಾದಕಕ್ಕದ್ದೆಂದೂ ಕೇಳವೇಸೀ ಸರ್ಟಿಫಿಕೇಟುಗಳನ್ನು ಅನೇಕವಾಗಿ ಸಂಪಾದಿಸಿಕೊಂಡಿದೆ —ಈ ಔಷಧವನ್ನು ಹಿಂದುಸ್ಥಾನ, ಸಿಲೋನ್ ಮತ್ತು ಇತರ ದೇಶಗಳಲ್ಲಿ ಪ್ರಚಾರಕ್ಕೆ ತರಬೇಕೆಂಬ ಉದ್ದೇಶದಿಂದ ನೀವು ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿಯೂ ಸಂಪೂರ್ಣವಾಗಿಯೂ ನಮಗೆ ತಿಳಿಸಿದರೆ ನಿಮಗೆ ನಾವು ಬಿಟ್ಟಿಯಾಗಿ ಎರಡು ಸಣ್ಣ ಪೊಟ್ಟಣಗಳನ್ನು ಕಳುಹಿಸುವೆವು. ಅವನ್ನು ಉಪಯೋಗಿಸಿದರೆ ಅದರ ಗುಣ ನಿಮಗೇ ಮಂದಟ್ಟಾಗುತ್ತದೆ.—ಈ ಕಲೆಸೋವಿನ ಔಷಧಿಯನ್ನು ದೊಡ್ಡವರಿಗೆ ಉಪಯೋಗಿಸುವಷ್ಟು ಹೆಚ್ಚಾಗಿ ಮಾಡಿದೇವೆ ಅವನ್ನು ಪೊಟ್ಟಣಗಳಾಗಿಯೂ ಬಿಲ್ಲೆಗಳಾಗಿಯೂ ತಯಾರುಮಾಡಿರುವೆವು ಅಂಥಾ 12 ಪೊಟ್ಟಣಗಳಾಗಲಿ, 12 ಬಿಲ್ಲೆಗಳುಳ್ಳ ಒಂದು ಸೀಸೆಯಾಗಲಿ ಕ್ರಯ ರೂಪಾಯಿ 1-0-0.

Address—Francis Medical Hall,
Manufacturing Chemists, Myanaung, Burma.

ನಮ್ಮ ವಿಳಾಸ ಫ್ರಾನ್ಸಿಸ್ ಮೆಡಿಕಲ್ ಹಾಲ್,
[19-3] ಮಯಾನಾಂಗ್, ಬರ್ಮಾ.

ಯಥಾರ್ಥ ದೇಶವತ್ಸಲನು

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವುದಕ್ಕೆ ತನ್ನ ಶರೀರ ಸೌಖ್ಯವನ್ನೂ ಕಾಯಪುಷ್ಟಿಯನ್ನೂ ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕನಾಗಿರುತ್ತಾನೆ. ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥಾದ್ದು ನಿಮ್ಮ ಮಾತುಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥರಾಗಿಯೂ, ರಕ್ತಬಲವನ್ನು ಪಡೆದು ಕಾಯಪುಷ್ಟರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸರಾಗಿರಬೇಕು. ಈ ಉದ್ದೇಶಕ್ಕಾಗಿ ನೀವು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿರುವ ನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ತಪ್ಪದೆ ಕ್ರಮವಾಗಿ ಸೇವಿಸಿ ನೋಡುತ್ತಾ ಬನ್ನಿ. ಈ ಮಾತ್ರೆಯು ನಿಮ್ಮ ಶರೀರದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿ ಯಾವ ರೋಗವೂ ತಲೆ ಎತ್ತದಂತೆ ನಾಶನಮಾಡುವುದು.

ಕ್ರಯ 40 ಮಾತ್ರೆಗಳ ಡಬ್ಬಿಗೆ ರೂ. 1-0-0.

ತಾ. ಕ:—ಒಂದು ದೊಡ್ಡ ಕ್ಯಾಟಲಾಗನ್ನೂ, ರೋಗ ಪರಿಹಾರಕ್ಕೆ ತಕ್ಕ ಸಲಹೆಗಳನ್ನೂ ಬಿಟ್ಟಿ ಪಡೆಯಬಹುದು.

ವಿಳಾಸ:—ರಾಜವೈದ್ಯ ನಾರಾಯಣಜಿ ಕೇಶವಜಿ,
[255-12] 20, ಚೈನಾ ಬಜಾರ್ ರೋಡ್, ಮದರಾಸ್.

ಲೆಖ್ಖವಿಲ್ಲದಷ್ಟುಮಂದಿ ಗುಣ ಹೊಂದಿರುತ್ತಾರೆ.

ಕೂಟರು ನಡಿಯುವಂತೆ ಆಯಿತು. ವಾಯುವಿನಿಂದ ಹಾಸಿಗೆಯಲ್ಲಿ ಬಿದ್ದಿದ್ದ, ಹಿಂಸೆಗೆ ಗುರಿಯಾದವರನೇಕರು ಸ್ವಸ್ಥರೊಂದಿ ಎದ್ದಿದ್ದಾರೆ. ವೈದ್ಯರಿಂದಲೂ ಆಸ್ಪತ್ರೆಗಳಿಂದಲೂ ಇನ್ನು ವಾಸಿಯಾಗುವದಿಲ್ಲವೆಂದು ಹೇಳಲ್ಪಟ್ಟವರು ಲಿಟಲ್ಸ್ ಓರಿಯೆಂಟಲ್ ಬಾಂ ಎಂಬದನ್ನು ಉಪಯೋಗಿಸಿ, ತಕ್ಷಣ ಕ್ಷೇಮ ಹೊಂದಿದ್ದಾರೆ. ಬರ್ಮಿಂಗ್ಹ್ಯಾಂ ನಗರದ ನ್ಯೂಹಾಲ್ ಬೀದಿಯಲ್ಲಿರುವ ಮಿ! ಸಾಮುರ್ ಎಂಬವರು ಬರೆಯುವುದು:—"ಸುಮಾರು 3 ವರುಷಗಳ ಹಿಂದೆ ನನ್ನ ಕೆಲಸಕ್ಕೆ ಹೋಗಲಾರದಷ್ಟು ಕಾಲುವಾಯು ನನ್ನ ಎಡ ಮೊಣಕಾಲಿನಲ್ಲಿ ಬಡಿಗಿತು. ವೈದ್ಯರಿಗೂ ಬೇರೆ ಖರ್ಚುಗಳಿಗೂ ಬಹಳ ಖರ್ಚಾಯಿತು. ಆದರೂ ಏನೂ ಪ್ರಯೋಜನ ವಾಗಲಿಲ್ಲ. ಲಿಟಲ್ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಿದ ಒಬ್ಬ ಸ್ನೇಹಿತರು ಸೇರಿದ್ದನ್ನು ಕೇಳಿ, 1 ಸೀಸೆಯ ತೈಲವನ್ನು ಕೊಂಡುಕೊಂಡೆನು. ಅದನ್ನು ಉಪಯೋಗಿಸಿದ 3 ದಿನಗಳಲ್ಲಿ ನೋವು ಪೂರ್ಣ ಬಿಟ್ಟಿತು. ಇದರಿಂದ ನನ್ನಲ್ಲಿ ಆಶ್ಚರ್ಯವೂ ಕೃತಜ್ಞತೆಯೂ ಉಂಟಾದವು. ಅಂದಿನಿಂದ ಅದು ತಿರಿಗಿ ಕಾಣಿಸಲಿಲ್ಲ."

ಸೀಸೆ 1ಕ್ಕೆ 1 ರೂ. ಮೇಲಿಗೆ ಔಷಧಗಾರರೆಲ್ಲರಲ್ಲಿಯೂ ಸಿಗುತ್ತೆ.

[81-41]

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಗೋರೋಚನ ಮಾತ್ರೆ—2-3 ಮಾತ್ರೆಗಳು ಮಕ್ಕಳಿಗೆ ಹಿಂಸೆಯಿಲ್ಲದ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಆ, 5 ಶೀಸೆಗೆ 1 ರೂಪಾಯಿ.

2. ಜ್ವರದಮಾತ್ರೆ—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ 24 ಮಾತ್ರೆ 8 ಆ, 6 ಶೀಸೆಗೆ 2½ ರೂ, 12 ಶೀಸೆಗೆ 4½ ರೂ.

3. ಬಾಧಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ಸಂಬಿಗೆಯಿಂದ ಬೇಗ ಗುಣಮಾಡುತ್ತೆ. ಡಬ್ಬಿಗೆ 4 ಆ, 5 ಕ್ಕೆ 1 ರೂ, 13 ಕ್ಕೆ 2½ ರೂ

[126-23] ನಮ್ಮ ವಿಳಾಸ.—ಪಂಡಿತ್ ಎಸ್. ಗರಳಪುರಿ, ಮೈಸೂರು.

"ಹನುಮಾನ್" ಬೋರಾಕ್ಸ್ ಸಾಬೂನು.

ಹನುಮಾನ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ಹುಣ್ಣು, ಇಜ್ಜಿ, ತುರಿ ಮೊದಲಾದ ವ್ಯಾಧಿಗಳು ಹನುಮಾನ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ಕೂಗಲಿಗೆ ನುಣುಪು ಮತ್ತು ಕಳೆಯನ್ನೂ ಕೊಡುವುದರಲ್ಲಿ ಹನುಮಾನ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾನ್ ಸಾಬೂನಿನಿಂದ ಬೆಳಿಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡುಗಿಯರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು—ಒಂದು ಸಲ ಹನುಮಾನ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಹರುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾನ್ ಗುರ್ತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ತಾ. ಕ:—ಎಲ್ಲರೂ ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆಯಬೇಕು. ಬೆಂಗಳೂರು ಸಿಟಿ ಮಿ॥ ಎಚ್. ದಾಸಪ್ಪನವರ ಷಾಪು ಬಳಗಿಗೆ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,
[211-17] ಕಪಸಿಂಗ್ ಬಜಾರ್ ರೋಡ್, ಮದರಾಸು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21 1—1916 ರಿಂದ 28 - 1 19 6 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ತಗಲಿದ್ದು	ಸತ್ತದ್ದು.	ತಗಲಿದ್ದು	ಸತ್ತದ್ದು.
ಬೆಂಗಳೂರು	ಪಟ್ಟಣ	5	5	0	.
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು		61	47.	0	0
ಮೈಸೂರು	,,	35	26	0	0
ಕೋಲಾರ್	,,	17	8	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟು		0	0	0	0
ಹಾಸನ	,,	6	3	0	0
ಚಿತ್ರದುರ್ಗ	,,	27	14	0	0
ಕಡೂರ್	,,	0	0	0	0
ಶಿವಮೊಗ್ಗ	,,	24	9	0	0
	ಜುಮ್ಲಾ.....	175	112	0	0

ಶಾಲಿವಾಹನ ಶಕ ವರುಷಗಳು 1838 ನೇ ರಾಕ್ಷಸ ಸಂವತ್ಸರದ ಉತ್ತರಾಯಣ ಶಿಶಿರಋತು ಮಾಘ ಶುದ್ಧ ಅಷ್ಟಮಿ ಶುಕ್ರವಾರದಿಂದ ಮಾಘ ಶುದ್ಧ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1916 ನೇ ಫೆಬ್ರವರಿ.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಕರ ಕುಂಭ ತೇದಿ
11	ಶುಕ್ರ †	ಅಷ್ಟಮಿ	29-51	ಕೃತ್ತಿಕೆ	54-1	29
12	ಶನಿ ‡	ನವಮಿ	34-4	ರೋಹಿಣಿ	60-0	1
13	ಭಾನು *	ದಶಮಿ	39-28	ರೋಹಿಣಿ	0-18	2
14	ಸೋಮ ;;	ಏಕಾದಶಿ	41-27	ಮೃಗಶಿರ	6-39	3
15	ಮಂಗಳ §	ದ್ವಾದಶಿ	49-56	ಆರಿದ್ರಾ	13-16	4
16	ಬುಧ ,,	ತ್ರಯೋದಶಿ	54-56	ಪುನರ್ವಸು	19-35	5
17	ಗುರು ::	ಚತುರ್ದಶಿ	59-5	ಪುಷ್ಯ	25-23	6

† ಭೀಷ್ಮಾಷ್ಟಮಿ, ದಗ್ಧಯೋಗ, ‡ ಮಧ್ವನವಮಿ, ಮಳೆ ನಕ್ಷತ್ರ—ಧನಿಷ್ಠ 3 ನೇ ಪಾದ * ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ರಥ ;; ಸರ್ವತ್ರ ಭೀಷ್ಮೈಕಾದಶಿ, ತಿಲಕಪದ್ಮವ್ರತ, ದಗ್ಧಯೋಗ, § ಮಳೆ ನಕ್ಷತ್ರ—ಧನಿಷ್ಠ 4 ನೇ ಪಾದ ,, ಪ್ರದೋಷ, ತೊಂಡನೂರು ಗೋಪಾಲಕೃಷ್ಣಸ್ವಾಮಿ ರಥ. :: ಶ್ರೀಶ್ವರಸ್ವಾಮಿ ರಥ.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ ; 12 ಕ್ಕೆ ವಿ. ಪಿ. ಖರ್ಚು ಸಹಿತ ರೂ 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-42]

ಅಮೃತಾಂಜನ ಡಿಪೋ,
109, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ತಾ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ ; ಅಭಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಇನಾಂ ಸಾಮಾನು 60! ಇನಾಂ ಸಾಮಾನು 60!

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1 ಕ್ಕೆ 0-12-0 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವುದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ಸುವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣಿ 6, ಮೈಭರಣಿ 1, ಕಾಂಬೂಲಶಾಸ್ತ್ರ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೋನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋ ಕಾರ್ಡು 6, ಸುವಾಸನೆ ಅತ್ತರುಬಿಲ್ಲೆ 1, ಗಂಧದಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೂಚ್ 1, ಮೊತ್ತ 60 ನಮ್ಮ ಕಂಪನಿ ಪ್ರಖ್ಯಾತಿಹೊಂದುವದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
[262-13] ನಂ. ೩, ಇರುಳಪ್ಪನ್ ಬೀದಿ, ಮದರಾಸ್.

Printed and Published by the Rev. H. Gulliford, Proprietor and Manager, Wesleyan Mission Press, Mysore. 10/2/1916.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

...ಯು ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸ್ ೧೯೧೮ ನೇ ಇಸವಿ ಫೆಬ್ರುವರಿ ತಾರೀಖು ೧೪ ನೇ ಗುರುವಾರ. ಸಂಚಿಕೆ ೩೮

JUST PUBLISHED.

(1) Aids to Grammatical Analysis, 5 as. (2) English Essays and Letters, 6 as. (3) English Papers, 8 as. (4) Spelling Book, 4 as. (5) L. S. English Notes for 1917 (will be ready soon).

Apply to: **M. N. SITA RAMA RAO,**
Krishnaraja Mohalla, Mysore

ವ್ಯವಹಾರ ನಿರ್ಣಯ.

[illegible] ವ್ಯವಹಾರಗಳ [illegible] 615 [illegible] ವಿ. ಪಿ. [illegible] 2-8-0; [illegible] 1-12-0 [168-35]

ವಿಳಾಸ— [illegible] ಪಂಡಿತಾರಾಧ್ಯರು, ಮೈಸೂರು.

[illegible]ರ ಲೇಖ್ಯಬೋಧಿನಿ ಕ್ರಯ ೧-೮-೦

[illegible]

ಕ್ರಯ ಒಂದು ರೂಪಾಯಿ ಎಂಟಾಣೆ.

ನಮ್ಮ ವಿಳಾಸ: ಭಾರತಿ ಸಂಸ್ಥೆ [illegible],
[illegible] ಕೋಟೆ, ಬೆಂಗಳೂರು ಸಿಟಿ.

ನೋಟೀಸ್.

[illegible] [172-13]

ಕಮಿಷನ್ ಮತ್ತು ಜನರಲ್ ಏಜನ್ಸಿ
[illegible], [illegible]
ಬೆಂಗಳೂರು [illegible] ಶಿವಮೊಗ್ಗ

ಅರೇಬಿಯನ್ ಸ್ಟೋರೀಸ್
ಎಂಬ
ಯವನ ಯಾಮಿನೀ ವಿನೋದ ಕಥೆಗಳು.
[ಕನ್ನಡದಲ್ಲಿ]

[illegible] ಕಥೆಗಳು ಬಹು ಮನೋರಂಜಕವಾಗಿಯೂ [illegible] ಕ್ರಯ [illegible] ವಿ. ಪಿ. ಪಿ. [illegible] 2-1-0 [239-34]

ವಿಳಾಸ—ಮ್ಯಾನೇಜರ್, [illegible], ಮೈಸೂರು.

[illegible]ನ್ ತರಗತಿ ಭೂವಿವರಣೆ.

[illegible] ಮತ್ತು ಭೂಪಟಗಳೊಡನೆ (ಕ್ರಯ 1 ಆಣೆ).
ಮೈಸೂರು ದೇಶದ ಭೂಪಟಗಳು.

(ಪ್ರಾಕೃತಿಕ ಮತ್ತು ರಾಜಕೀಯ) ಕ್ರಯ 2 ಆಣೆ.

ಹೊಸ ಭೂವಿವರಣೆಗಳು.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ [illegible] ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. [illegible] ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯ ಕಾರಣ [illegible]ಡನೆ ರಚಿಸಲ್ಪಟ್ಟಿವೆ.

1. ವಿಶ್ವಾಪಿಂಡದ ಭೂವಿವರಣೆ	...	0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ	...	0-6-0
ಮೇಲೆ ಕಂಡ ಎರಡೂ ಸೇರಿ	...	0-10-0

[illegible] 2 ಆಣೆ; The English L. S. Text [illegible] for 1916 by a Graduate, Price 3 as.

ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

ಲೋವರ್ ಸೆಕೆಂಡರಿ ಪರೀಕ್ಷೆಯ
ಗಣಿತಪ್ರಶ್ನೋತ್ತರಾವಳಿ

ಎಂಬ ನವೀನ ಗ್ರಂಥದಲ್ಲಿ ಎಲ್ಲಾ ಲೆಕ್ಕಗಳನ್ನೂ ಸುಲಭವಾಗಿಯೂ, [illegible] ಮಾಡುವ ಅನೇಕ ಮಾರ್ಗಗಳು ಉದಹರಿಸಲ್ಪಟ್ಟಿವೆ. ಮತ್ತು 1900-15 ರ ವರೆಗಿನ ಪ್ರಶ್ನೆಗಳಿಗೆ ಪೂರ್ಣವ್ಯಾಖ್ಯಾನವಾದ ಉತ್ತರಗಳೂ ಇರುತ್ತವೆ. ಇದು ಮಾಸ್ಟರುಗಳಿಗೂ, ಸ್ಕೂಲ್ ಮತ್ತು ಪ್ರೈವೇಟ್ ವಿದ್ಯಾರ್ಥಿಗಳಿಗೂ ಅತ್ಯಂತ ಆವಶ್ಯಕವಾಗಿರುವದು. ಸ್ವಲ್ಪ ಪ್ರತಿಗಳೇ ಉಳಿದಿವೆ. ಕ್ರಯ 0-8-0; ವಿ ಪಿ 10 ಆ.

ವಿಳಾಸಗಳು—ಡಿ [illegible], ಬಿ ಎ , ಅ|| ಮಾಸ್ಟರ್, ಮಹಾರಾಣಿ [284-8] ಕಾಲೇಜು, ಮೈಸೂರು; ಅಥವಾ, ಸ್ಟೂಡೆಂಟ್ಸ್ ಹಾಲ್, ಮೈಸೂರು.

Free! ಬಹುಮಾನ. Free!

ಈ ಕಾದಂಬರಿಗಳಲ್ಲಿ 5 ರೂಪಾಯಿಗೆ ಕಮ್ಮಿ ಇಲ್ಲದ ನಿಮ್ಮ ಆರ್ಡರಿಗೆ [illegible] ಎಂಬ 12 ಆ. ಬೆಲೆಯ [illegible] ಬಂಗಾಳಿ ಕಾದಂಬರಿಯು ಉಚಿತ ಅಥವಾ 10 ಆಣೆ ಬೆಲೆಯ S.T.A. ಕ್ಯಾಲೆಂಡರ್ ಉಚಿತ. [281-9]

ಸುಶೀಲೆ—	ಶ್ರೀ. ತಿರುಮಲಮ್ಮನವರಿಂದ	0- 6-0
[illegible]—	ಸಭಾ ಭಾಗ 1 ,,	0- 8-0
[illegible]—	[illegible] ,,	0-14-0
[illegible]—	ಸಭಾ ಭಾಗ 2 ,,	1- 0-0
[illegible]—	[illegible] ,,	1- 8-0
[illegible]—	ಬಂಗಾಳಿ ಪತ್ತೇದಾರಿ ನಾವಿಲ್	0- 6-0
ರಾಜಪುತ್ರ ಜೀವನಸಂಧ್ಯಾ—	ಬಂಗಾಳಿ ನಾವಿಲ್	0-12-0
ಚಂದ್ರಪ್ರಭಾ ಎಂಬ ಹೊಸ ಕಾದಂಬರಿ		0-14-0

ವಿಳಾಸ.—ಎಂ. ಎಸ್. ರಾವ್ [illegible], [illegible] ರೋಡ್, ಬೆಂಗಳೂರು ಸಿಟಿ

ನೋಟೀಸು.

ಮೈಸೂರು ಸಿಟಿ ಮ್ಯುನಿಸಿಪಲ್ ಇಂಜನಿಯರ್
ಸಾಹೇಬರವರ ಆಫೀಸಿನಿಂದ.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ:—ಮೈಸೂರು ಟವನ್ನಲ್ಲಿ ಹೊಸದಾಗಿ ಮನೆ ಕಟ್ಟುವದಕ್ಕಾಗಲಿ, ಅಥವಾ ರಿಪೇರಿ ಮತ್ತು ಒಡಾವಣೆಗೆಯಾಗಲಿ ಲೈಸೆನ್ಸು ಪಡೆಯಲು ಪ್ಲಾನು ತಯಾರಿಸುವದಕ್ಕೆ ಪ್ರತ್ಯೇಕವಾಗಿ ಒಬ್ಬರನ್ನು (Draughtsman) ನೇಮಿಸಿರುವದರಿಂದ ಬೇಕಾದವರು ಈ ಕೆಳಗೆ [illegible] ಅರ್ಜಿ ಬರೆದುಕೊಂಡಲ್ಲಿ ಹೊಸದಾಗಿ ಪ್ಲಾನು ತಯಾರು ಮಾಡಿಸಿಕೊಡಲು ಏರ್ಪಾಡು ಮಾಡುತ್ತಾರೆ. ಪ್ಲಾನುಗಳನ್ನು ತಯಾರಿಸಲು ಈ ಕೆಳಗೆ ನಮೂದಿಸಿರುವಂತೆ ಫೀಜು ವಸೂಲ್ಮಾಡಲ್ಪಡುತ್ತದೆ:— [39-2]

ಮನೆ ಕಿಮ್ಮತ್ತು 200 ರೂಪಾಯಿಗೆ ಮೀರದ ಪ್ಲಾನು
ತಯಾರಿಸಲು ರೂ. 1-8-0

ಡಿಟೋ 500	,,	ಡಿಟೋ	,,	2-8-0
ಡಿಟೋ 1,000	,,	ಡಿಟೋ	,,	4-0-0

ಇದರ ಮೇಲೆ ಪ್ರತಿ ಸಾವಿರಕ್ಕೂ ಮತ್ತು ಇದರ ಭಿನ್ನಾಂಶಕ್ಕೂ .... ,, 2-0-0 ಸಂತೆ.

ಇ. ರಾಮಸ್ವಾಮಿ ಅಯ್ಯರ್,
ಮ್ಯುನಿಸಿಪಲ್ ಇಂಜನಿಯರ್.

ಸ್ವಲ್ಪ ಕ್ರಯ! ವಿಶೇಷ ಬಾಳಿಕೆ!

ಒಳ್ಳೇ ಸಮಯ!

ನ್ ಪ್ಯಾಟರ್ನ್ ಲೇಖಣಿ.

200 ನೇ ನಂಬರ್ ಫೌಂಟನ್ ಪೆನ್ನಾ 14 ಕ್ಯಾರೆಟ್ ಗೋಲ್ಡ್ ನಿಬ್ಬು, ಫಿಲ್ಲರ್ ಮತ್ತು ಪೆಟ್ಟಿಗೆ ಸಹಿತ ಕ್ರಯ ರೂ. 1-14-0 ಮಾತ್ರ. ಟಪಾಲು ಮತ್ತು ಪ್ಯಾಕಿಂಗ್ ಖರ್ಚು ಬೇರೆ. ಇದೇ ತಿಂಗಳು ಒಳಗೆ ತರಿಸಿಕೊಳ್ಳುವವರಿಗೆ ಪ್ರತಿ ಒಂದು ಪೆನ್ನಾಕ್ಕೂ ಸೊಗಸಾದ ಕ್ಲಿಪ್ಪು ಉಚಿತವಾಗಿ ಕೊಡಲಾಗುತ್ತೆ. ಸೈಕಲ್‌ಗೆ ಯಾವ ಸಾಮಾನು ಬೇಕಾದರೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತೆ. [275-10]

ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, [illegible] ಕೇಶಪಾಶವನ್ನು [illegible] ಸ್ತ್ರೀಯರಿಗೆ [illegible]

ಕಾಮಿನಿಯಾ ತೈಲವ!
(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು [illegible]



[illegible] ಈ ತೈಲವನ್ನು [illegible] ಮನಸ್ಸು [illegible] ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. [illegible]

[illegible] ಶ್ರೇಷ್ಠತೆಯ [illegible] ಮೈಸೂರು ಪ್ರದರ್ಶನದಲ್ಲಿ [illegible] ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, [illegible] ದೊರಕಿವೆ.

[illegible] ಕಾಮಿನಿಯಾ [illegible] ವಿ. ಪಿ. ಮೂಲಕ [illegible] ಕ್ರಯ ರೂ. 1-0-0 ಅ. ವೆ. 0-4-0 ಬೇರೆ 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಬುದ್ಧಿಗಳಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ [illegible] "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವು [illegible]" [illegible] "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; [illegible] ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-[illegible]-ಮತ್ತು [illegible] [illegible] ದಿಂದ ಸಿದ್ಧವಾದುದು. ಅದರಲ್ಲಿ ಮದಿರೆಯು (ಆಲ್ಕೋಹೋಲ್) ಸಂಪರ್ಕವಿಲ್ಲದ [illegible] ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ [illegible] ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೀಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು [illegible] ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. [illegible] ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [34-2]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಧ್ಯಮ) ಸೀಸೆ [illegible] 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ [illegible] ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
೧೫೫, ಜುಮ್ಮಾಮಸಿದ್, ಮಾರ್ಕೆಟ್, ಬಾಂಬೆ.
ಏಜೆಂಟ್, [illegible] ಮಾರ್ಕೆಟ್, ಮಂಗಳೂರು.

5,000 ರೂ. ಬಹುಮಾನ



ಈ ವರಿವಿಗೂ ನಮ್ಮಲ್ಲಿಗೆ ಬಂದಿರುವ ಸಾವಿರಾರು ಯೋಗ್ಯತಾ ಪತ್ರಿಕೆಗಳಲ್ಲಿ ಕೆಲವನ್ನು ಇಲ್ಲಿ ಪ್ರಚುರ ಪಡಿಸಿರುತ್ತೇವೆ. ಇವುಗಳಲ್ಲಿ ಯಾವುದನ್ನಾದರೂ ನಕ್ಕಲ್ ಯೋಗ್ಯತಾ ಪತ್ರಿಕೆಯೆಂದು ವ್ಯಕ್ತಪಡಿಸಿದವರಿಗೆ ಮೇಲೆ ತಿಳಿಸಿರುವ 5,000 ರೂಪಾಯಿ ಬಹುಮಾನ ಕೊಡುವೆವು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ಕೊಡದೆ ನಿರಾಕರಿಸುವುದಾದರೆ ಕೋರ್ಟಿನ ಮೂಲಕ ನಮ್ಮಿಂದ ಪಡೆಯಬಹುದು. [37-2]

ಡಿಲ್ಲಿವೈದ್ಯರು ಡಿ. ಮನ್ನಾಲಾಲ್ ಯವರಿಂದ ತಯಾರುಮಾಡಲ್ಪಟ್ಟ ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ.

(1) ತಾವು ಕಳುಹಿಸಿದ ಸಾಲಾಮಿಸ್ರಿ ಮುರಬ್ಬ ತೆಗೆದುಕೊಂಡದ್ದರಿಂದ ಬಹಳ ಗುಣಕೊಂಡಿವೇನೆ. ನಿಮ್ಮ ಕ್ಯಾಟಲಾಗಿನಲ್ಲಿ ಕಾಣಿಸಿರುವಷ್ಟು ಗುಣವೂ ಸಂಪೂರ್ಣವಾಗಿ ಕೊಡುತ್ತದೆ ಎಂದು ಧಾರಾಳವಾಗಿ ಹೇಳುತ್ತೇನೆ ದಯವಿಟ್ಟು ಇನ್ನೊಂದು ದಬ್ಬಿಯನ್ನು ವಿ ಪಿ ಮೂಲಕ ಜಾಗ್ರತೆ ಕಳುಹಿಸಿರಿ.

ತೀರ್ಥಹಳ್ಳಿ ಪೋಸ್ಟು, ಅಂಗಡಿ ಮಂಜಪ್ಪ,
6-12-1915 ಮೇಗರವಳ್ಳಿ

(2) ನಿಮ್ಮ ಸಾಲಾಮಿಸ್ರಿ ಮುರಬ್ಬದಿಂದ ನನಗೆ ಇದ್ದ ....ಕಾಯಿಲೆಯು ಗುಣ ಕಂಡುಬಂದದ್ದರಿಂದ ಇನ್ನು ಎರಡು ಡಬ್ಬಿ ಸಾಲಾಮಿಸ್ರಿ ಮುರಬ್ಬವನ್ನು ಕಳುಹಿಸಿರಿ.

ಹುಬ್ಬಳ್ಳಿ, ಗೋವಿಂದರಾವ ಗಾಡಗೀಳ,
23-8-1915. ಬಾಕ ದುಕಾನ

(3) ನಿಮ್ಮ ಮುರಬ್ಬವನ್ನು ಅಶಕ್ತಳಾಗಿದ್ದ ನನ್ನ ಕುಟುಂಬಕ್ಕೆ ಕೊಟ್ಟೆನು. ನಿಮ್ಮ ಪ್ರಕಟಣೆಯಂತೆ ಅದನ್ನು ಸೇವಿಸಿದ್ದರಿಂದ ತುಂಬಾ ಗುಣಕೊಟ್ಟಿರುತ್ತೆ. ನಿಮ್ಮ ಔಷಧವು ಸರ್ವೋತ್ಕೃಷ್ಟವಾದದ್ದೆಂದು ನಾನು ನಿರ್ಭಯವಾಗಿ ಹೇಳುತ್ತೇನೆ ಇನ್ನೂ ಒಂದು ಡಬ್ಬಿಯನ್ನು ಸೇವಿಸಿದರೆ ಅನುಕೂಲವೆಂದು ತೋರುವುದರಿಂದ ಕೂಡಲೆ ಇನ್ನೊಂದು ಡಬ್ಬಿಯನ್ನು ರವಾನಿಸಿರಿ.

ಮೈಸೂರು, ಎಡಿಟರ್,
23-1-1916 ಕಾದಂಬರಿ ಸಂಗ್ರಹ ಆಫೀಸ್.

(4) ನನಗೆ ಎರಡು ವರ್ಷಗಳಿಂದ .. ..ಇದ್ದ ಕಾಯಿಲೆಗಳಿಗೆ ಮೈಸೂರು ವೈದ್ಯರುಗಳಲ್ಲಿ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ಗುಣವಾಗದೆ ಕಷ್ಟಪಡುತ್ತಿದ್ದೆನು. ನಂತರ ವಿಷೇಶ ಕಾರಣಾಂತರದಿಂದ ಬೆಂಗಳೂರಿಗೆ ಬಂಧಿದ್ದಾಗ್ಗೆ ನಿಮ್ಮಲ್ಲಿ ತೆಗೆದುಕೊಂಡ ಸಾಲಾಮಿಸ್ರಿ ಮುರಬ್ಬವನ್ನು ಸೇವನೆ ಮಾಡಿದ್ದರಿಂದ ಮೇಲ್ಕಂಡ ರೋಗ ಗುಣವಾಗಿರುತ್ತೆ. ಇವಕ್ಕೆ ಏನೇನೂ ಸಂಶಯವಿಲ್ಲ. ಈಗ ಪುನಹ ಸಾಲಾಮಿಸ್ರಿ ಮುರಬ್ಬವನ್ನೂ ಮತ್ತು ಕೆಲವು ಔಷಧಿಗಳನ್ನೂ ನಮ್ಮ ಅಳಿಯ ಕೃಷ್ಣರಾಯನ ಕೈಯಲ್ಲಿ ಕೊಟ್ಟು ಕಳುಹಿಸಿರಿ

ದೊಡ್ಡಪೇಟೆ, ಮೈಸೂರು, ಬಕ್ಷಿ ನರಸಪ್ಪನವರ ಮನೆಯಲ್ಲಿರುವ
29-7-1913 ಶ್ಯಾಮರಾಯ.

By Telegram: -

(5) Send three tins of Salamisri Murabba by V. P. P.

Mandalay, P. R. V. ALGAPPA CHETTY.
30-12-1915.

(6) ನಿಮ್ಮ ಸಾಲಾಮಿಸ್ರಿ ಮುರಬ್ಬದಿಂದ ನನಗೆ ಬಹಳ ಶಕ್ತಿಯು ಕಂಡು ಬಂದುದರಿಂದ ಇನು 3 ಡಬ್ಬಿಯನ್ನು ವಿ ಪಿ. ಮೂಲಕ ಕಳುಹಿಸಿ.

ಮಗೋರ್ಯಾ, ಬರಾರ್, ಮುಹಮ್ಮದ್ ನೂರೋದ್ದಿನ್,
25-12-915. ಹೆಡ್ಡ್ ಮಾಸ್ಟರ್, ಜೀನತ್-ಉಲ್-ಇಸ್ಲಾಮ್.

(7) Your Panjab Salamisri Murabba, which you sent me on 24-11-1915, has given me entire satisfaction as it has improved my strength and health a good deal. I therefore wish to take some more time and requst you will please send me 6 tins of the above Murabba by V. P. P.

Malpe, S. Canara, GIRGITH HAYATH,
19-1-1916. Merchant.

(8)......It is with extreme pleasure that I express my gratitude towards you. Your Salamisri Murabba has given me marvellous effect. I request you to send me one more tin of the same quality as soon as possible

Aurangabad, G. Bhim Singh, S. Caps
13-1-1916. Clerk, Ex. En. Office.



ಕ್ರಯ ಡಬ್ಬಿ 1 ಕ್ಕೆ ರೂ. 2. ಟಪಾಲ್ ಖರ್ಚು ಒಂದು ಡಬ್ಬಿಗೆ ... 3 ಡಬ್ಬಿಗಳಿಗೆ 6 ಆಣೆ.

ಇದನ್ನು ಕೊಳ್ಳುವಾಗ ಇಲ್ಲಿ ಕಾಣುತ್ತಿರುವ ಟ್ರೇಡ್ ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿ. ಕೇಟಲಾಗು ಅಪೇಕ್ಷಿಸುವವರಿಗೆ ಪ್ರಗಸಟ್ಟೆ ಕಳುಹಿಸುವೆವು. ನಮ್ಮ ವಿಳಾಸ—

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯ,
೩, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಸಂಗೀತ ಪಾರಿಜಾತ

ಮೂರನೆಯ ಮುದ್ರಣ! ಸಂಗೀತಪದ್ಯಗಳೂ ಕೀರ್ತನೆಗಳೂ ಮೊದಲಿಗಿಂತ ಹೆಚ್ಚಾಗಿವೆ. ಬೇಗರೂಢಿ ಆಗುತ್ತಿರುವ ಹಾಡು ಮುಂತಾದ ಅನೇಕ ಹಾಡುಗಳವೆ ಕ್ರಯ ೦-೪-೦ ನೂರು ಪ್ರತಿಗೆ ಕಮ್ಮಿ ಇಲ್ಲದಂತೆ ತರಿಸಿಕೊಂಡರೆ ಧಾರಾಳವಾದ ಕಮಿಷನ್ ಕೊಡುವೆವು

ಶಬ್ದಾದರ್ಶ ನೋಟ್ಸ್.

ಲೋವರ್ ಸೆಕೆಂಡ್ರೀ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದುದು. ಕ್ರಯ ೦-೩-೦ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಸಿಗುತ್ತೆ.

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.
[277-10] ಸ್ಟೂಡೆಂಟ್ಸ್ ಹಾಲ್, ಮೈಸೂರು.



ಇಂಗ್ಲಾಂಡಿನ ಬಾತ್ ನಗರದ ... ಬೀದಿಯಲ್ಲಿರುವ ... ಬರೆಯುವುದು:—"... ಹಗಲು ... ದಿ: ನೋವಿನಿಂದ ... ನನ್ನ ಬೆನ್ನು ತೊಡೆಯುವೇದನೆಯಿಂದ ... ಪರ್ಯಂತರ ವಾಯುವಿನ ... ಬಾಧೆಪೊಂದಿತು. ರಾತ್ರೀ ಹಗಲು ... ನನಗೆ ತಿಳಿದಿದ್ದ ಮದ್ದುಗಳನ್ನೆಲ್ಲಾ ಉಪಯೋಗಿಸಿದೆನು; ಆದರೂ ಯಾವುದೂ ಗುಣವಾಗಲಿಲ್ಲ. ... ಪಿಲ್ಸ್ ಬಂದ ... ಮೊದಲನೇ ಸೀಸೆಯು ... ಮಾಡದು. 3 ಸೀಸೆಗಳನ್ನು ಉಪಯೋಗಿಸಿದ್ದ ... ಅವರ ... ತು. ನನಗೆ ಪೂರ್ಣ ಗುಣವಾಯಿತೆಂದು ನಂಬುತ್ತೇನೆ."

ನಿನಗೆ ... ಅನುಭವಗಳನ್ನೆಲ್ಲಾ ... ಪ್ರಯೋಜನಕ್ಕೋಸ್ಕರವೂ ಈ ಮಹಾ ಔಷಧವ ಪರೀಕ್ಷೆಗೋಸ್ಕರವೂ ಪರೀಕ್ಷಿಸಿ ನೋಡು.

ಸೀಸೆ 1ಕ್ಕೆ 1 ರೂ. ... ವ್ಯಾಪಾರರಲ್ಲಿಯೂ ಸಿಗುತ್ತೆ.
[81-42]

USE I. C. O. BRAND

[56-43]



Refined Edible Cotton Seed Oil.

For Cooking and Salads.

An appoved substitute for Ghee in all preparations. Price—

Re. 1-4-0 per tin of 3½ lbs
" 0-7-0 per " of 1 lb

Liberal Terms to Trade.

The Indian Co-Operative Stores Co., Ltd.,
159, Kilari Road, Bangalore.

"ಹನುಮಾರ್ಕ್"

ಬೋರಾಕ್ಸ್ ಸಾಬೂನು.

ಹನುಮಾರ್ಕ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ಹುಣ್ಣು, ತಿಕ್ಕ, ತುರಿ ಮೊದಲಾದ ವ್ಯಾಧಿಗಳು ಹನುಮಾರ್ಕ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ತಲೆಗಳಿಗೆ ನುಣುಪು ಮತ್ತು ಕಳೆಯನ್ನೂ ಕೊಡುವುದರಲ್ಲಿ ಹನುಮಾರ್ಕ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾರ್ಕ್ ಸಾಬೂನಿನಿಂದ ಬೆಳಿಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂಧರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟು ಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡಿಗಿಯರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು—ಒಂದು ಸಲ ಹನುಮಾರ್ಕ್ ಸಾಬೂನನ್ನು ಉಪಯೋಗಿಸಿದ ಜನರು ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಷಹರುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾರ್ಕ್ ಗುರುತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ

ಶಾ. ಕ:—ಎಲ್ಲರೂ ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆಯಬೇಕು.
ಬೆಂಗಳೂರು ಸಿಟಿ ಮು ಎಚ್. ದಾಸಪ್ಪನವರ ... ಏಜೆಂಟರಿಗೆ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಸೆಟ್ಟಿ ಅಂಡ್ ಬ್ರದರ್ಸ್,
[211-18] ಆಪಿಸಿಂಗ್ ಬಜಾರ್ ರೋಡ್, ಮದರಾಸು.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5 4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-43]

ಅಮೃತಾಂಜನ ಡಿಪೋ,
109, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಶಾ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆವಶ್ಯಕವಾದವರು ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಜಪಾನ್, ಸಿಲೋನ್, ಮಲಯ ಸ್ಟೇಟ್, ಗೋವ, ಫೀಜಿ ಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯು ... ನಿಮ್ಮ ಮನೆಯಲ್ಲಿದ್ದರೆ ನಾಳು

ನಾಜೂಕಿನ ವೈದ್ಯರ ಸಮಯವನ್ನು ಕಾದು ನೋಡುವದು ನಿಜವಾಗಿಯೂ ತಪ್ಪುವುದು—ಶೀತ ಶೀತವಾಯು, ಅಜೀರ್ಣ, ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೀಬೇನೆ, ಬಲಹೀನತೆ ಕಟ್ಟಿಹಸಾ, ಮತ್ತು ಕಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರಿಕೆ ಪ್ರತಿ ಸೀಸೆಯೊಡನೆಯೂ ಇರುವುದು. 380 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ 2-12-0; 25 ಸೀಸೆಗಳಿಗೆ ರೂ. 5-0-0

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಲ್. ಮ್ಯ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ವಿ ಎಲ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಂಪ್ಲಿಯನ್ ನಂ 2, ಬೊಂಬಾಯಿ, ಅವರು ಬರೆದಿರುವುದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿರುವುದರಲ್ಲಿ ಕ್ರಮಕ್ರಮವಾಗಿ ತ್ವಾಟೋಟ್ಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಳ್ಳೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರುಮಾಡಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುವಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ."

[189-23] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಯಥಾರ್ಥ ದೇಶವತ್ಸಲನು

ತನ್ನ ಜನ್ಮಭೂಮಿಯ ಸೇವೆಯನ್ನು ಮಾಡುವದಕ್ಕೆ ತನ್ನ ಶರೀರ ಸೌಖ್ಯ ವನ್ನು ಆಯುಷ್ಯವನ್ನೂ ಕಾಪಾಡಿಕೊಂಡು ಬರಲು ಅತ್ಯಂತ ಜಾಗರೂಕ ನಾಗುತ್ತಾನೆ. ನಿಮ್ಮ ಸಹೋದರರಿಗೆ ಉತ್ತೇಜನವನ್ನು ಕೊಡುವಂಥಾದ್ದು ನಿಮ್ಮ ಮಾತುಗಳಲ್ಲ; ನಿಮ್ಮ ಕಾರ್ಯಗಳೇ. ನಿಮ್ಮ ಕ್ರಿಯೆಗಳಿಂದ ನೀವು ಯಥಾರ್ಥ ದೇಶಸೇವಕರಾಗಿ ಪರಿಣಮಿಸಬೇಕಾದರೆ ನೀವು ಸರ್ವದಾ ಯೌವನಸ್ಥರಾಯೂ, ರಕ್ತಬಲವನ್ನು ಪಡೆದು ದೀರ್ಘಾಯುಷ್ಯವುಳ್ಳವರಾಗಿಯೂ, ನಿಮ್ಮ ಜನ್ಮಭೂಮಿಗೆ ಸೇವೆ ಮಾಡಲು ಅರ್ಹರಾಗಿಯೂ ಇರುವಂತೆ ಸರ್ವದಾ ಸಾಹಸಪಡುತ್ತೀರಿ. ಈ ಉದ್ದೇಶಕ್ಕಾಗಿ ನೀವು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಹೊಂದಿದ ನಮ್ಮ

ಎಲಿಕ್ಸರ್ ಟಾನಿಕ್ ಮಾತ್ರೆಗಳನ್ನು

ಕ್ರಮವಾಗಿ ಸೇವನೆ ಮಾಡುತ್ತಾ ಬನ್ನಿ. ಈ ಮಾತ್ರೆಯು ನಿಮ್ಮ ಶರೀರದಲ್ಲಿರುವ ಪ್ರತಿ ಒಂದು ನರವನ್ನೂ ಗಟ್ಟಿಮಾಡುವುದು; ಮನುಷ್ಯ ದೇಹದಲ್ಲಿರುವ ರೋಗವು ಕಳೆ ಎತ್ತಿದಂತೆ ನಾಶವಾಡುವುದು.

ಕ್ರಯ 40 ಮಾತ್ರೆಗಳ ಡಬ್ಬಿಗೆ ರೂ. 1-0-0.

ಸೂ. ಕ:—ಒಂದು ದೊಡ್ಡ ಕ್ಯಾಟ್ಲಾಗನ್ನೂ, ರೋಗ ಪರೀಕ್ಷೆಗೆ ತಸ್ತ ಪತ್ರವನ್ನೂ ಬಿಟ್ಟಿ ಪಡೆಯಬಹುದು.

ವಿಳಾಸ :—ರಾಜವೈದ್ಯ ನಾರಾಯಣಜಿ ಕೇಶವಜಿ,

[44-13] 20, ಚೈನಾ ಬಜಾರ್ ರೋಡ್, ಮದರಾಸ್.

ಅಮೇರಿಕನ್ ರೋಮಹರಿ.

ಕ್ರಯ ಡಬ್ಬಿ 1 ಕ್ಕೆ 4 ಆಣೆ, 3 ಡಬ್ಬಿಗಳಿಗೆ 8 ಆಣೆ.

ಅನೇಕರು ರೋಮವು ಸೋಸಿಂದು ಮಾರುತ್ತಿರುವ ಸೋಪುಗಳಿಗೆ ನಾವು ಮಾರುವ ಅಮೇರಿಕನ್ ರೋಮಹರಿ ಔಷಧವನ್ನು ಹಾಕಿ ಸೀಮೆಸುಣ್ಣ, ಕರ್ಪೂರ ತೈಲ ಮೊದಲಾದವುಗಳನ್ನು ಸೇರಿಸಿ ಸೋಪಿನ ಬಿಲ್ಲೆ ಮಾಡಿ ಡಬ್ಬಿಯಲ್ಲಿಟ್ಟು ಮೋಸ ಮಾಡುತ್ತಾರೆ.

ನಮ್ಮ ಅಮೇರಿಕನ್ ರೋಮಹರಿಯು ಘಾಟು ಹೋಗದ ಹಾಗೆ, ಎಣ್ಣೆ, ಸುಣ್ಣ, ಕರ್ಪೂರ ತೈಲಗಳಿಂದ ಸೇರದೆಯೂ ಮುಚ್ಚಿಸಿ ತಗಡಿನ ಸೀಸೆಯಲ್ಲಿ ಗಟ್ಟಿಯಾಗಿ ಬಿಗಿಸಿರುವದರಿಂದ ನಮ್ಮ ಕೂದಲುಗಳ ಮೇಲೆ ಸವರಿದ ಕ್ಷಣ ಮಾತ್ರದಲ್ಲಿ ರೋಮಗಳು ಉದುರಿ ಆ ಸ್ಥಳವು ನುಣ್ಣಗಾಗುತ್ತೆ. ಪರೀಕ್ಷಿಸಲಪೇಕ್ಷಿಸುವವರು ತರಿಸಿ ಉಪಯೋಗಿಸುವದರಿಂದಲೂ, ವಾಸನೆಯಿಂದಲೂ ಇದರ ಶ್ರೇಷ್ಠತೆಯನ್ನು ತಿಳಿಯಬಹುದು.

ಫೆಬ್ರವರಿ ಮಹೋತ್ಸವದ ಕೈ ಗಡಿಯಾರ.

ಅರ್ಧ ಕ್ರಯ ರೂ. 1-14-0.

ಇದೇ ಫೆಬ್ರವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ 1-14-0 ಆಣೆಗೆ ಕೊಡಲಪಡುತ್ತೆ.

[111-37]

ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಸಲ್ ರಪಿಂ ರೂ. 3-0-0

ಫೆಬ್ರವರಿ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ಬನೀನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ

ಇದು ಉಡುವುದಕ್ಕೆ ಧಡೂತಿಯಾಗಿಯೂ ಮೋಟಕ್ಕೆ ನಯವಾಗಿಯೂ. ಬೆಲೆ ಸುಲಭವಾಗಿಯೂ ಇದೆ ಒಪ್ಪ ಹೋಗದು ಸೀರೆಯು ಉದ್ದ 18 ಗಜ ... ಲವಾದ ಸೆರಗು ಒಂದನ್ನು ತರಿಸಿ ನೋಡಿ.

ವಿಳಾಸ ವಿ ಕೆ ಕೆಂಪುಸ್ವಾಮಿ ಅಂಡ್ ಕಂಪೆನಿ, 24 ವಿನಾಯಕ ಮೇಸ್ತ್ರಿ ಬೀದಿ, ಮದರಾಸ್.

Direct Importers.

ಸೀಮೆಯಿಂದ ನಮಗೆ ಬಂದಿವೆ.

ಅನೇಕ ವಿ.ಪಿ. ಕಂಪನಿಯವರು ಹೆಚ್ಚು ದರಗಳಿಗೆ ಪ್ರಕಟಿಸಿರುವ ಈ ಕೆಳಗೆ ವಿವರಿಸಿರುವ ಜೇಬು ಗಡಿಯಾರಗಳು ಬಹಳ ಅಗ್ಗವಾದ ಕ್ರಯವಿಟ್ಟು ವಿಕ್ರಯಿಸುತ್ತಿದೇವೆ. ಬೇಗ ನೋಡಿ ತರಿಸಿಕೊಳ್ಳಿರಿ. ನಮ್ಮ ಕಂಪನಿ ಶಾಶ್ವತವಾದದ್ದು.



ವಾಚುಗಳು.		ಕ್ರಯ.
1. ಸಿಸ್ಟಂ ರಾಸ್ಕೋಪ	ರೂ.	1-14-0
2. ಬೆಸ್ಟ್ ಲೀವರು	,,	2- 4-0
3. ಡಿಟೋ ಗನ್ ಟೈಮ್	,,	2- 8-0
4. ಕ್ವೈಲ್ಟಿ ರೆಗ್ಯುಲೇಟರ್	,,	2-10-0
5. ಮಣಿಕಟ್ಟು ಸಣ್ಣ ಗಡಿಯಾರ ಚರ್ಮದಪಟ್ಟಿ ಸಹಿತ	,,	4- 8-0
6. ಡಿಟೋ ಬೆಳ್ಳಿಯದು	,,	6- 0-0

ನಮ್ಮ ವಿಳಾಸ—ಗೌಥಾ ಅಂಡು ಕೋ,

[42-2] 57, ಆದಿಯಪ್ಪನಾಯಕನ್ ಬೀದಿ, ಮದರಾಸ್.

ಕಾಪಾ ಕಲಂ.—ದರಖಾಸ್ತುದಾರರು ತಮ್ಮ ಹೆಸರು ವಿಳಾಸ ಸ್ಪಷ್ಟವಾಗಿ ಬರೆಯಬೇಕು. ನಮ್ಮಲ್ಲಿ ವಾಚುಗಳು, ಟೈಂಪೀಸುಗಳು, ಟ್ರಿಸ್ಟ್‌ರೈಟುಗಳು, ಹಾರ್ಮೋನಿಯಂ, ಫೌಂಟನ್ ಪೇನಾ ಮುಂತಾದ ಅನೇಕ ಪದಾರ್ಥಗಳು ಸುಲಭ ಕ್ರಯಕ್ಕೆ ಇಟ್ಟಿದೇವೆ.

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು : ಎಂಜಲ್‌ಬರ್ಗ್ ಹಲ್ಲರುಗಳ ಚಿಲ್ಲರೆ ಸಾಮಾನುಗಳು; ಎಂಜಲ್‌ಬರ್ಗ್ ಸಿಸ್ಟಮ್ ಹಲ್ಲರುಗಳು ನಂ 1 ಮತ್ತು 2; ಡೇವೀ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯುಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಫೈರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು ; ಜಲ್ಲಡೆ ರೇಕುಗಳು; ಆಸ್ಟ್ರೇಲಿಯಾ ದೇಶದ ನಾಟು ಇಡಲು ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ. [208-19]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪನಿ, ಮದ್ರಾಸ್.

The Indian Commerce & Industries Co., Madras.

Branches—Bezwada and Tanjore.

ESANOFELE

ಮಲೇರಿಯಾ ಡಿಸ್ಟ್ರಿಕ್ಟುಗಳಲ್ಲಿ

ವಾಸಮಾಡತಕ್ಕವರೆಲ್ಲಾ "ಈಸಾನೊಫೆಲಿ" ಯನ್ನು

ಸೇವನೆ ಮಾಡಬೇಕು.

ಹಿಂದುಸ್ಥಾನದಲ್ಲಿರುವ ಪ್ರಖ್ಯಾತಿಪಡೆದ ವೈದ್ಯನು ಹೀಗೆ ಬರೆಯುತ್ತಾನೆ:—"ಜನರಲ್ ಆಸ್ಪತ್ರೆಯೊಳಗೆ ಐದು ಜನ ರೋಗಿಗಳಿಗೆ ಈಸಾನೊಫೆಲಿಯನ್ನು ಕೊಟ್ಟು ಚಿಕಿತ್ಸೆ ಮಾಡಲಾಯಿತು ಈ ಔಷಧವನ್ನು ಕೊಟ್ಟ 24 ರಿಂದ 36 ಗಂಟೆ ಸಂಪತ್ತಿನೊಳಗಾಗಿ ಪ್ರತಿ ಒಬ್ಬ ರೋಗಿಯ ಜ್ವರವು ಇಳಿದು ಹೋಯಿತು; ಪುನಃ ಜ್ವರ ಬರುವುದೇ ಇಲ್ಲ." "ಮಲೇರಿಯ, ಅದರ ಕಾರಣ, ಅದನ್ನು ತಡೆಯುವುದು, ಅದನ್ನು ಪರಿಹರಿಸುವುದು" ಎಂಬೀ ವಿಷಯಗಳನ್ನು ಉಚಿತ ಪುಸ್ತಕವನ್ನು ಕೇಳಿ ನಮ್ಮಿಂದ ತರಿಸಿಕೊಂಡು ಓದಿನೋಡಿ.

ಕ್ರಯ 1 ಬಾಟ್ಲಿಗೆ ರೂ 2-0-0. ಎಲ್ಲಾ ಔಷಧ ವ್ಯಾಪಾರದ ಅಂಗಡಿಗಳಲ್ಲೂ ಬಿಕರಿಗೆ ಇಟ್ಟದೇವೆ ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುದನ್ನು ಕೊಡಿ ಎಂದು ಕೇಳಿ ಇದು ಸಕ್ಕರೆಯಾದ ಇದ್ದು ಸೇವನೆಗೆ ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜಂಟರು :—ಜೆ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗೆಲ್ಲಾ ಡಿಪೋ— [176-24]

ಬಿ. ಜಿ. ಗೋರಿಯೋ ಕಂಪನಿ, ಪಾಲೀಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು :—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

FREE! Do you wish to know "How to Make the Best Quality ROSE, JASMINE, LILY, LOTUS & Sweet Scented Hair Oils at a very cheap cost at your own home? If so, please write us at once and mention this paper. [269-9]

S. PAUL & Co., *Perfumers,*
4, Hospital Street, Dharamtola, **Calcutta.**

ಕೆಂಪುಗಳು ಕಟ್ಟಡ ಕಟ್ಟಿರುವ ರಾಜಸ್ ಪ್ರಜೆಂಟೇಷನ್ ವಾಚ್.

ಸುಂದರವಾದ ಸರಪಣಿ ಸಹಿತ ರೂಪಾಯಿ 3-0-0.

6 ವರ್ಷದ ಗ್ಯಾರಂಟಿ ಸಹ.

ಈ ಗಡಿಯಾರವನ್ನು ನಾವು ಸೀಮೆಯಿಂದ ತರಿಸಿರುತ್ತೇವೆ. ಈ ಗಡಿಯಾರದ ಮೇಲೆ ಇಮಿಟೇಷನ್ ಕೆಂಪುಗಳು ಇಟ್ಟು ಬಹು ಸೊಗಸಾಗಿ ಕಟ್ಟಡ ಕಟ್ಟಿಸುತ್ತೆ. ಇದುವರಿಗೂ ಈ ಕೆಂಪುಗಳ ಗಡಿಯಾರವನ್ನು ಯಾರೂ ತರಿಸಲಿಲ್ಲ. ಇದರ ಎಲ್ಲಾ ಸಾಮಾನುಗಳ ಕೆಲಸದ ನಾಜೂಕು ಬರೆಯುವದರಲ್ಲಿ ಪ್ರಯೋಜನವಿಲ್ಲ. ಇದನ್ನು ಕೈಗೆ ಸಹ ಕಟ್ಟಿಕೊಳ್ಳಬಹುದು. ಜಾಗ್ರತೆ ತರಿಸಿಕೊಳ್ಳುವರಿಗೆ ಮಾತ್ರ ದೊರಿಯುವದು. ನಮ್ಮ ವಿಳಾಸ—

[43-1] ಟಿ. ರಾಮಚಂದ್ರ ಕಂಪನಿ, ತಿರುಪಳ್ಳಿ ಬೀದಿ, ಮದರಾಸು.

ಪರೀಕ್ಷೆಗಾಗಿ ಮುಫತ್ತು.

ನಮ್ಮ "ಜೀವಾಕಾ" ಎಂಬುವದು ಕಲೆನೋವನ್ನು ತತ್‌ಕ್ಷಣವೇ ನಿಲ್ಲಿಸುತ್ತೆಂದು ಬಹು ಕಾಲದಿಂದಲೂ ಬರ್ಮಾದಲ್ಲಿ ಖ್ಯಾತಿಹೊಂದಿದೆ ಬಹಳ ಜನಗಳ ಆಶ್ರಯವನ್ನು ಸಂಪಾದಿಸಿಕೊಂಡಿದೆ. ಅದ್ಭುತವಾದದ್ದೆಂದೂ ಎಲ್ಲಾ ತರದ ತಲೆನೋವುಗಳನ್ನೂ ಉತ್ತರ ಕ್ಷಣದಲ್ಲೇ ಗುಣಮಾಡತಕ್ಕದ್ದೆಂದೂ ಕೀರದೇನೇ ಸರ್ಟಿಫಿಕೇಟುಗಳನ್ನು ಅನೇಕವಾಗಿ ಸಂಪಾದಿಸಿಕೊಂಡಿದೆ.—ಈ ಔಷಧವನ್ನು ಹಿಂದುಸ್ಥಾನ, ಸಿಲೋನ್ ಮತ್ತು ಇತರ ದೇಶಗಳಲ್ಲಿ ಪ್ರಚಾರಕ್ಕೆ ತರಬೇಕೆಂಬ ಉದ್ದೇಶದಿಂದ ನೀವು ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿಯೂ ಸಂಪೂರ್ಣವಾಗಿಯೂ ನಮಗೆ ತಿಳಿಸಿದರೆ ನಿಮಗೆ ನಾವು ಬಿಟ್ಟಿಯಾಗಿ ಎರಡು ಸಣ್ಣ ಪೊಟ್ಲಗಳನ್ನು ಕಳುಹಿಸುವೆವು. ಅವನ್ನು ಉಪಯೋಗಿಸಿದರೆ ಅದರ ಗುಣ ನಿಮಗೇ ಮುಂದಿಟ್ಟಿರುತ್ತದೆ.—ಈ ತಲೆನೋವಿನ ಔಷಧಿಯನ್ನು ದೊಡ್ಡವರಿಗೆ ಉಪಯೋಗಿಸುವಷ್ಟು ಹೆಚ್ಚಾಗಿ ಮಾಡಿದೇವೆ. ಅದನ್ನು ಪೊಟ್ಲಗಳಾಗಿಯೂ ಬಿಲ್ಲೆಗಳಾಗಿಯೂ ತಯಾರ್ಮಾಡಿರುವೆವು. ಅಂಥಾ 12 ಪೊಟ್ಲಗಳಾಗಲಿ, 12 ಬಿಲ್ಲೆಗಳಿರುವ ಒಂದು ಸೀಸೆಯಾಗಲಿ ಕ್ರಯ ರೂಪಾಯಿ 1-0-0.

Address—Francis Medical Hall,
Manufacturing Chemists, Myanaung, Burma.

ನಮ್ಮ ವಿಳಾಸ—ಫ್ರಾನ್ಸಿಸ್ ಮೆಡಿಕಲ್ ಹಾಲ್,

[19-4] ಮಯಾನಾಂಗ್, ಬರ್ಮಾ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತವನ್ನು ಓದಿನೋಡಿರಿ.

ಸ್ವಲ್ಪ ಕ್ರಯ : **ಪ್ರೋಟೋ.** ಬಹು ಲಾಭ !

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯ ಬಿಂದು

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳ ಮೇಲೆ ನಡೆಯುತ್ತಿದ್ದು, ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣ ಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದ ಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರರಿಗೆ ಮತ್ತು ವೈದ್ಯರ ಜರೂರವಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವದು. ಇದು ಅಮೃತದಂತೆ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಉದರರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗ, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಶಿರಶೂಲಿ, ಮೂಗಿನೊಳಗಿನ ಪಿನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಸ್ವಾಸ, ಅಪಗ್ಗೆ, ಅಪಸ್ಮಾರ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರೆದಲೆಶೂಲಿ, ನರಶೂಲಿ, ವಾತಶೂಲಿ, ರಕ್ತಪಿತ್ತ, ಗುದ್ಧದ್ವಾರದ ಬೇನೆ, ಹುರಕು ಕಜ್ಜಿ, ಗಜಕರ್ಣ, ತದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ತೊಡಗೆಮ್ಮು, ಅರುವು ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ 6 ವರ್ಷಗಳಾಗಿದ್ದ ರೂ 1,300 ಬಾಟ್ಲಿಗಳು ಖರ್ಚು ಆಗಿರುತ್ತವೆ ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ ನಮೂನೆ ಉದ್ದೇಶ್ಯ ಐದು ಆಣೆ ಕೂಡದ ಬಾಟ್ಲಿ ಒಂದಕ್ಕೆ ಎಂಟಾಣೆ, ವಿ.ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ ಇದಕ್ಕೆ ವಿ.ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ. ವಿ.ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೊಟ ಹೊರಟರೆ ಪರತ ತಕ್ಕೊಳ್ಳುತ್ತೇನೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಜವಾಬಿಗಾಗಿ ಟಿಕೇಟುಳ್ಳ ಇದರ ಹೊರ್ತು ಜವಾಬು ದೊರೆಯಲಿಕ್ಕಿಲ್ಲ. ಅನುಪಾನ ಪತ್ರವು ಕನ್ನಡ, ಮರಾಠಿ, ಮುಸಲ್ಮಾನ ಭಾಷೆ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು.

ನಮ್ಮ ವಿಳಾಸ—ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ, ಅರ್ಕಶಫಾ ಕೋಠಕ, ಹೆಡ್ ಆಫೀಸ ಮುಕ್ಕಾಮ ಶಾಹಪೂರ, ಬೆಳಗಾಂವ. [44-1]

ವೃತ್ತಾಂತ ಪತ್ರಿಕೆ.

—:O:—

ಸನ್ ೧೯೧೬ ನೇ ಇಸವಿ ಫೆಬ್ರವರಿ ತಾ. ೧೭ ನೇ ಗುರುವಾರ.

ಗ್ರಾಮಾಂತರ ಸೇವಿಂಗ್ಸ್ ಬ್ಯಾಂಕುಗಳು.

ನಮ್ಮ ಮೈಸೂರು ಗವರ್ನ್‌ಮೆಂಟಿನವರು ಪ್ರಜೆಗಳಿಗೆ ಸಹಾಯಮಾಡಿ ಅವರನ್ನು ಅಭಿವೃದ್ಧಿಗೆ ತರಬೇಕೆಂದು ಕುತೂಹಲಪಡುತ್ತಿದ್ದಾರೆನ್ನುವುದಕ್ಕೆ ಸಂಶಯವಿಲ್ಲ. ಆದರೆ ಪ್ರಜೆಗಳು ಮಾತ್ರ ಅಂಥಾ ಸಹಾಯವನ್ನು ಪಡೆಯಲು ಸಿದ್ಧರಾಗಿರುವರೇ ಎಂದು ಸಂಶಯಪಡುತ್ತೇವೆ. ನಮ್ಮ ಸರ್ಕಾರದವರು ಈಗ ಒಂದು ಹೊಸ ಏರ್ಪಾಡನ್ನು ಮಾಡಬೇಕೆಂದು ಉದ್ದೇಶಪಟ್ಟಿದ್ದಾರೆ. ಗ್ರಾಮಾಂತರಗಳಲ್ಲಿ ಸೇವಿಂಗ್ಸ್ ಬ್ಯಾಂಕುಗಳನ್ನು ಕಲ್ಪಿಸುತ್ತಾರೆ. ಗ್ರಾಮಸ್ಥರು ಈ ಬ್ಯಾಂಕುಗಳಲ್ಲಿ ತಮ್ಮ ಹಣವನ್ನು ತಂದಿಡಬಹುದು. ಈ ಹಣಕ್ಕೆ ಗವರ್ನ್‌ಮೆಂಟಿನವರು ಎರಡು ರೂಪಾಯಿಗೆ ತಿಂಗಳಿಗೆ ಒಂದು ಕಾಸಿನಂತೆ ಬಡ್ಡಿ ಕೊಡಒಪ್ಪಿದ್ದಾರೆ. ಬ್ಯಾಂಕನ್ನು ನಡಿಸುವುದಕ್ಕೆ ಯೋಗ್ಯತೆಯುಳ್ಳ ಮನುಷ್ಯನನ್ನು ಸರ್ಕಾರದವರು ಹುಡುಕಿ ನೇಮಕ ಮಾಡಿ, ಆತನ ಹೆಸರನ್ನು ಮೈಸೂರು ಸರ್ಕಾರೀ ಗೆಜೆಟ್ಟಿನಲ್ಲಿ ಪ್ರಕಟಿಸುತ್ತಾರೆ.

ಆತನ ವಶದಲ್ಲಿ ಕಾಣಿಕೆ ಪೆಟ್ಟಿಗೆಗಳಂಥಾ ಬೀಗ ಹಾಕಿದ ಒಂದೊಂದು ಪೆಟ್ಟಿಗೆ ಇರುತ್ತದೆ. ಅದರ ಮೇಲ್ಗಡೆಯಿಂದ ನಾಣ್ಯಗಳನ್ನು ಒಳಕ್ಕೆ ಇಳೀ ಬಿಡುವಷ್ಟು ರಂಧ್ರವನ್ನು ಮಾಡಿರುವುದು. ಗ್ರಾಮಸ್ಥನು ಹಣ ಹಾಕಬೇಕಾದಾಗ ಹಣವನ್ನೂ ಅದಕ್ಕಾಗಿ ಕೊಡಲ್ಪಡುವ ರಶೀತಿಯನ್ನೂ ಆ ಪೆಟ್ಟಿಗೆಗೆ ರಂಧ್ರದ ಮುಖಾಂತರ ಹಾಕತಕ್ಕದ್ದು. ಆ ಪೆಟ್ಟಿಗೆಯನ್ನು ಸ್ವಾಧೀನದಲ್ಲಿಟ್ಟುಕೊಂಡಿರತಕ್ಕ ಮನುಷ್ಯನು ಜಾಮೀನು ಕೊಡಬೇಕೆಂಬ ಅಗತ್ಯವಿಲ್ಲ. ಈತನು ತಿಂಗಳಿಗೊಂದಾವರ್ತಿ ಆ ಪೆಟ್ಟಿಗೆಯನ್ನೂ, ರಶೀತಿ ಪುಸ್ತಕಗಳನ್ನೂ ತಾಲ್ಲೂಕ್ ಖಜಾನೆಗೆ ತೆಗೆದುಕೊಂಡು ಹೋಗಿ ಸಾದರ್ಪಡಿಸಿ ಒಪ್ಪಿಸುತ್ತಾನೆ. ಅಲ್ಲಿ ಅಧಿಕಾರಿಗಳು ಹಣವನ್ನು ತೆಗೆದುಕೊಂಡು ಲೆಕ್ಕವನ್ನು ತನಿಖೆ ಮಾಡುವರು. ಬಳಿಕ ಈತನು ಪೆಟ್ಟಿಗೆಯನ್ನೂ ರಶೀತಿ ಪುಸ್ತಕವನ್ನೂ ವಾಪಸು ತನ್ನ ಗ್ರಾಮಕ್ಕೆ ತಂದುಕೊಳ್ಳುತ್ತಾನೆ. ಹೀಗೆ ಗ್ರಾಮಸ್ಥರು ಕೊಡುವ ಹಣವು ಸರ್ಕಾರದಲ್ಲಿ ಭದ್ರವಾಗಿದ್ದು ವೃದ್ಧಿಹೊಂದುತ್ತದೆ.

ಹಣ ಹಾಕಿದ ರೈತನಿಗೇನಾದರೂ ದುಡ್ಡು ವಾಪಸು ಬೇಕಾದರೆ ಅವನು ಒಂದು ಫಾರಮಿನಲ್ಲಿ ತನಗೆ ಬೇಕಾದ ಹಣ ಮುಂತಾದ ವಿಷಯಗಳನ್ನು ಬರೆದುಕೊಡಬೇಕು. ಪೆಟ್ಟಿಗೆಯನ್ನು ತಾಲ್ಲೂಕ್ ಕಛೇರಿಗೆ ತೆಗೆದುಕೊಂಡು ಹೋಗತಕ್ಕ ಅಧಿಕಾರಿಯು ಹಣವನ್ನು ಅಲ್ಲಿಂದ ತಂದುಕೊಡುತ್ತಾನೆ. ರೈತನಿಗೆ ಹಣದ ಆತುರ ಜಾಸ್ತಿಯಾಗಿದ್ದರೆ ಅವನೇ ತಾಲ್ಲೂಕ್ ಖಜಾನೆಗೆ ಹೋಗಿ ತಂದುಕೊಳ್ಳಬಹುದು.

ಈ ಬ್ಯಾಂಕಿನಲ್ಲಿ ರೈತರು ಎಷ್ಟು ಹಣವನ್ನು ಬೇಕಾದರೂ ಇಡಬಹುದು. ಒಂದು ಆಣೆಗಿಂತ ಕಮ್ಮಿಯಾದರೆ ಅಂಗೀಕರಿಸುವುದಿಲ್ಲ. ಅಧಿಕಾರಿಯು ಬೆಳಿಗ್ಗೆ 8 ರಿಂದ 10 ಗಂಟೆ ವರಿಗೂ, ಮಧ್ಯಾಹ್ನ 3 ರಿಂದ 5 ಗಂಟೆ ವರಿಗೂ ಆ ಪೆಟ್ಟಿಗೆಯನ್ನಿಟ್ಟುಕೊಂಡು ಆ ಹೊತ್ತಿನಲ್ಲಿ ಗ್ರಾಮಸ್ಥರು ತಂದು ಕೊಡುವ ಹಣಗಳನ್ನು ಪೆಟ್ಟಿಗೆಗೆ ಹಾಕಿಸಿಕೊಳ್ಳುತ್ತಾನೆ.

ಪ್ರಜೆಗಳು ಹ್ಯಾಗಾದರೂ ಹಣವನ್ನು ಕೂಡಿಸಿಡಲಿ ಎಂಬ ಉದ್ದೇಶವು ನಮ್ಮ ಸರ್ಕಾರದವರಿಗೆ ಉಂಟಾಗಿ ಅದಕ್ಕೋಸ್ಕರ ಅವರು ಪ್ರಯತ್ನಪಡುತ್ತಿರುವುದನ್ನು ನೋಡಿ ತುಂಬಾ ಸಂತೋಷಪಡುತ್ತೇವೆ. ಆದರೆ ಈ ಏರ್ಪಾಡು ಅವರ ಉದ್ದೇಶದಂತೆ ಸಾರ್ಥಕವಾಗಿ ನೆರವೇರುವುದೇ ಎಂದು ಶಂಕೆಯುಂಟಾಗಿದೆ. ಹಣವನ್ನು ಪಡೆದಿರುವ ಮನುಷ್ಯನೇ ಇತರರಿಗೆ ಸಾಲಕೊಡುವನು. ಅವನಿಗೆ ಅದರಲ್ಲಿ ಸರ್ಕಾರದವರು ಕೊಡುವುದಕ್ಕಿಂತ ನಾಲ್ಕರಷ್ಟು ಹೆಚ್ಚು ಬಡ್ಡಿ ಉತ್ಪತ್ತಿಯಾಗುತ್ತದೆ. ಅಂಥಾ ಮನುಷ್ಯರು ಜಾಮೀನು ಕೊಡದಿರುವ ಅಧಿಕಾರಿಯ ಬಳಿಗೆ ಹೋಗಿ ಅವನ ಪೆಟ್ಟಿಗೆಗೆ ಹಣ ಹಾಕಲೊಪ್ಪುತ್ತಾನೆಂದು ನಿರೀಕ್ಷಿಸುವುದು ಸ್ವಲ್ಪ ಕಷ್ಟವಾಗಿದೆ.

ಅದಕ್ಕೆ ಪ್ರತಿಯಾಗಿ ಕೋಆಪರೆಟಿವ್ ಸೊಸೈಟಿಗಳಿಗೆ ಗ್ರಾಮಸ್ಥರು ಹಣ ಹಾಕುವಂತೆ ಪ್ರೋತ್ಸಾಹಪಡಿಸುವುದು ಸಾರ್ಥಕವಾದೀತೆಂದು ನಮಗೆ ತೋರುತ್ತದೆ. ಅಂಥಾ ಹಣವನ್ನು ಕೂಡಿಸಿ ಸರ್ಕಾರದವರು ತೆಗೆದುಕೊಳ್ಳುವುದಕ್ಕಿಂತ ರೈತನು ತನ್ನ ಜಮೀನುಗಳನ್ನೂ ಗೋಕಾಯಿಗಳನ್ನೂ ಅಭಿವೃದ್ಧಿಪಡಿಸುವುದಕ್ಕೆ ವಿನಿಯೋಗಿಸಿಕೊಳ್ಳುವಂತೆ ಮಾಡಿದರೆ ಎಷ್ಟೋ ಉಪಕಾರವಾಗುವುದು. ಅದರೂ ನಮ್ಮ ಸರ್ಕಾರದವರು ಗ್ರಾಮಾಂತರ ಪ್ರಜೆಗಳನ್ನು ಅಭಿವೃದ್ಧಿಗೆ ತರಬೇಕೆಂದು ಕುತೂಹಲಪಡುವುದನ್ನು ನೋಡಿ ನಾವು ಸಂತೋಷಪಡುತ್ತೇವೆ. ಗವರ್ನ್‌ಮೆಂಟಿನವರು ಪ್ರಾರಂಭಿಸಿರುವ ಹಲವು ಹೊಸ ಏರ್ಪಾಡುಗಳಲ್ಲಿ ಕೆಲವಾದರೂ ಸಾರ್ಥಕತೆಹೊಂದಿ ಗ್ರಾಮಾಂತರ ಪ್ರಜೆಗಳಿಗೆ ಸೌಭಾಗ್ಯವುಂಟಾಗಲೆಂದು ನಂಬಿ ನಿರೀಕ್ಷಿಸುತ್ತೇವೆ.

ಅಪ್ರತಿಮನಾದ ಅರಸನು.

ಯೇಸು ಕ್ರಿಸ್ತನು ಆಸ್ಯಾ ಖಂಡದ ಪಶ್ಚಿಮ ದಿಕ್ಕಿನಲ್ಲಿರುವ ಪಾಲೆಸ್ಟೈನ್ ದೇಶದಲ್ಲಿ ಈಗ ಸುಮಾರು ಎರಡುಸಾವಿರ ವರುಷಗಳಿಗೆ ಪೂರ್ವದಲ್ಲಿ ಹುಟ್ಟಿದನು. ಈತನ ತಂದೆತಾಯಿಗಳು ಕೇವಲ ಬಡವರಾಗಿದ್ದದರಿಂದ ಆತನು ಹುಟ್ಟಿದ ಗ್ರಾಮವಾದ ಬೆತ್ಲೆಹೇಮಿನಲ್ಲಿನ ಛತ್ರದಲ್ಲಿಯೂ ಅವರಿಗೆ ಇಳುಕೊಳ್ಳುವ ಸ್ಥಳ ದೊರೆಯದೆ ಇದ್ದದರಿಂದ ಆತನ ತಾಯಿಯು ಆಗಲೇ ಹುಟ್ಟಿದ ಹಸುಳೆಯನ್ನು ಗೋದಲಿಯಲ್ಲಿ ಮಲಗಿಸಿದಳು. ಆತನು ಉತ್ಕೃಷ್ಟವಾದ ಪಾಠಶಾಲೆಗಳಲ್ಲಿ ಪಂಡಿತೋತ್ತಮರ ಬಳಿ ವಿದ್ಯೆ ಕಲಿತು ಪಾರಂಗತನೆನ್ನಿಸಿಕೊಳ್ಳಲಿಲ್ಲ. ಐಶ್ವರ್ಯವಂತೂ ಆತನ ಪಾಲಿಗೆ ಬಂದುದೇ ಇಲ್ಲ. ತನ್ನ ಬಡತನವನ್ನು ಕುರಿತು ಆತನೇ—ನರಿಗಳಿಗೆ ವಾಸಮಾಡುವದಕ್ಕೆ ಕುಣಿಗಳುಂಟು; ಅಂತರಿಕ್ಷದಲ್ಲಿ ಸಂಚರಿಸುವ ಪಕ್ಷಿಗಳ ವಾಸಕ್ಕೆ ಗೂಡುಗಳುಂಟಾಗಿರುತ್ತವೆ; ಆದರೆ ನನಗೆ ತಲೆ ಮರೆಸಿಕೊಳ್ಳುವದಕ್ಕು ಸಹ ಸ್ಥಳವಿಲ್ಲವೆಂದು ಹೇಳಿದನು. ಆತನು ಗಲಿಲಾಯದ ಹಳ್ಳಿಗಳಲ್ಲಿ ಬಡಗಿ ಕೆಲಸವನ್ನು ಮಾಡಿ ಜೀವನಮಾಡಿದನು. ಆತನ ಪಕ್ಷವನ್ನು ಕೆಲವರು ಹಿಡಿದು ಆತನ ಶಿಷ್ಯರಾದರು. ಆದರೆ ಅವರೆಲ್ಲರೂ ಮೀನು ಹಿಡಿದು ಜೀವನಮಾಡುವ ಬೆಸ್ತರು, ಅಥವಾ ಸಾಧಾರಣವಾದ ಕೈಕೆಲಸದ ಕೂಲೀನಾಲೀ ಜನಗಳು. ಆತನು ತಾನೇ ದುಃಖವುಳ್ಳವನೂ ಕಷ್ಟತಿಳಿದವನೂ ಆಗಿದ್ದನು.

ಈ ಸ್ಥಿತಿಯಲ್ಲಿ ಹುಟ್ಟಿ ಬೆಳೆಯುತ್ತಿದ್ದ ಕ್ರಿಸ್ತನು ತನ್ನ ಆಯುಷ್ಯದ ಮೂವತ್ತನೇ ವರುಷದಲ್ಲಿ ಅಕಸ್ಮಾತವಾಗಿ ಬಹಿರಂಗಕ್ಕೆ ಬಂದು ಜನಸಮೂಹಗಳ ಮುಂದೆಯೂ ಆ ಕಾಲದ ವಿದ್ವಾಂಸರ ಎದುರಿಗೂ ಬಂದು ನಿಂತು—ನರ ಜಾತಿಯವರನ್ನು ಪಾಪದಿಂದ ಬಿಡಿಸಿ ಉದ್ಧರಿಸುವದಕ್ಕೆ ಬಂದ ರಕ್ಷಕನು ನಾನೇ; ನಾನೂ ನನ್ನ ತಂದೆಯಾದ ದೇವರೂ ಒಂದೇಯಾಗಿದ್ದೇವೆ; ನಾನು ದೇವರಲ್ಲವೋ ? ನನ್ನ ಬೋಧೆಯನ್ನೂ ನಾನು ಮಾಡುವ ಮಹತ್ಕಾರ್ಯಗಳನ್ನೂ ಪರೀಕ್ಷಿಸಿರಿ ಎಂದು ಅನುಮಾನವಿಲ್ಲದೆ ಹೇಳತೊಡಗಿದನು. ಮತ್ತು ಸಾಕ್ಷಾತ್ ದೇವರಿಗೆ ಸಲ್ಲುವ ಪೂಜೆಯು ನನಗೂ ಸಲ್ಲತಕ್ಕದ್ದು ಎಂದು ನಿಸ್ಸಂದೇಹವಾಗಿ ನಂಬಿ ಹಾಗೆಯೇ ತನ್ನ ಬಳಿಗೆ ಬಂದವರಿಗೆ ಬೋಧಿಸಿದನು. ಆತನ ಶಿಷ್ಯರು—ನೀನು ಜೀವವುಳ್ಳ ದೇವರ ಕುಮಾರನಾದ ಅಭಿಷಿಕ್ತನು ಎಂದು ಅರಿಕೆಮಾಡಿದಾಗ ತನ್ನ ವಿಷಯವಾಗಿ ಅವರ ಅಭಿಪ್ರಾಯವು ಸರಿಯೆಂದು ಒಪ್ಪಿಕೊಂಡನು. ದೇವರಿಗೆ ತಾನು ಸರಿಸಮಾನನೂ ದೇವರ ಹಾಗೆಯೇ ತಾನು ನಿತ್ಯಾತ್ಮನೂ ಆಗಿದ್ದೇನೆಂದು ಪರಿಷ್ಕಾರವಾಗಿ ಹೇಳಿದನು. ಆದರೆ ಆ ಕಾಲದ ವಿದ್ವಾಂಸರೂ ರಾಜಾಧಿಕಾರಿಗಳೂ ಆತನನ್ನು ಹಾಸ್ಯಮಾಡಿ ತಿರಸ್ಕರಿಸಿದರು. ಮತ್ತು ಕಡೆಗೆ ಅವನನ್ನು ಹಿಡಿದು ನ್ಯಾಯಸ್ಥಾನದಲ್ಲಿ ವಿಚಾರಣೆಗೆ ಗುರಿಮಾಡಿ ರಾಜದ್ರೋಹಿಯೆಂದು ತೀರ್ಪು ಮಾಡಿಸಿ ವರ್ಣನಾಗೋಚರವಾದ ನಿಂದನೆ ದಂಡನೆಗಳನ್ನು ಅವನಿಗೆ ಏರ್ಪಡಿಸಿ ಕಡೆಯಲ್ಲಿ ಭಯಂಕರವಾದ ನರಹತ್ಯವೇ ಮುಂತಾದ ಅಪರಾಧಗಳನ್ನು ಮಾಡಿದವರಿಗೆ ನೇಮಕವಾದ ಸಿಲುಬೆಯ ಮೇಲೆ ಆತನನ್ನು ಮಲಗಿಸಿ ಕೈ ಕಾಲುಗಳಿಗೆ ಮೊಳೆಗಳನ್ನು ಜಡಿದು ಹಾಗೆಯೇ ಸಂಹರಿಸಿದರು.

ರೋಮನ್ ಚಕ್ರಾಧಿಪತಿಯ ಕೈಕೆಳಗೆ ಪಾಲೆಸ್ಟೈನ್ ದೇಶಕ್ಕೆ ಗವರ್ನರಾಗಿದ್ದ ಪಿಲಾತನೆಂಬ ದೇಶಾಧಿಪತಿಯು ಕ್ರಿಸ್ತನನ್ನು ಅಪರಾಧಿಸ್ಥಾನದಲ್ಲಿ ನಿಲ್ಲಿಸಿ—ನಿನ್ನ ಮೇಲೆ ರಾಜದ್ರೋಹಿಯೆಂಬ ಅಪರಾಧವು ಆರೋಪಿತವಾಗಿದೆ; ನೀನು ಯೆಹೂದ್ಯರ ಅರಸನು ಎಂದು ಹೇಳಿಕೊಳ್ಳುತ್ತೀಯಂತೆ, ನೀನು ಯೆಹೂದ್ಯರ ಅರಸನೆಂಬ ಮಾತು ನಿಜವೋ ? ಎಂದು ಗದ್ದಿಸಿ ಕೇಳಿದನು. ಯೇಸು ಅವನಿಗೆ ಪ್ರತ್ಯುತ್ತರವಾಗಿ—ನಾನು ಅರಸನೇ ಹೌದು; ಆದರೆ ನನ್ನ ರಾಜ್ಯವು ಈ ಲೋಕದ್ದಲ್ಲವೆಂದು ತನ್ನ ರಾಜಪದವಿಯ ಸ್ವಭಾವವನ್ನೂ ತನ್ನ ರಾಜ್ಯದ ಸ್ವಭಾವವನ್ನೂ ಹೇಳಿ ನಾನು ಸತ್ಯದ ವಿಷಯದಲ್ಲಿ ಸಾಕ್ಷಿ ಹೇಳುವದಕ್ಕೋಸ್ಕರ ಹುಟ್ಟಿದವನು ಅದಕ್ಕೋಸ್ಕರವೇ ಈ ಲೋಕಕ್ಕೆ ಬಂದಿದ್ದೇನೆ. ಸತ್ಯಪರರು ನನ್ನ ಮಾತಿಗೆ ಕಿವಿಗೊಡುತ್ತಾರೆ ಎಂದು ನುಡಿದನು. ದೇಶಾಧಿಕಾರಿಯು ಈ ಮಾತುಗಳನ್ನು ಕೇಳಿ ಗಹಗಹಿಸಿ ನಕ್ಕು ಹಾಸ್ಯಮಾಡಿ ಕೊರಡೆಗಳಿಂದ ಅವನನ್ನು ಹೊಡಿಸಿ ಮರಣದಂಡನೆ ವಿಧಿಸಿದನು.

ಆದರೆ ನೋಡಿರಿ, ಪಿಲಾತನೆಂಬ ಆ ರೋಮ ಸಾಮ್ರಾಜ್ಯದ ಅಧಿಕಾರಿಯು ಯೇಸುವನ್ನು ಅವಮಾನಪಡಿಸಿ ಹಾಸ್ಯಮಾಡಿದಾಗ ಅವನ ರಾಜ್ಯದ ಪ್ರಜೆಗಳಲ್ಲಿ ಅರೆವಾಸಿ ಭಾಗದ ಪ್ರಜೆಗಳು ಜೀತಗಾರರಾಗಿ ಪಶು ವೃತ್ತಿಯನ್ನು ಮಾಡುತ್ತ ಕೇವಲ ಪಶು ಕತ್ತೆಗಳ ಹಾಗೆ ಭಾವಿಸಲ್ಪಟ್ಟಿದ್ದರು. ಆದರೆ ಈಗ ಗುಲಾಮರ ವ್ಯಾಪಾರವೇ ನಿಂತು ಹೋಗಿದೆ. ಪುರುಷರನ್ನೂ ಸ್ತ್ರೀಯರನ್ನೂ ಮಕ್ಕಳನ್ನೂ ಸಂತೆಗಳಿಗೆ ತಂದು ಕ್ರಯ ಕಟ್ಟಿ ವ್ಯಾಪಾರ ಮಾಡುತ್ತಿದ್ದರು. ಅದು ನಿಂತುಹೋಗಿ ಎಲ್ಲಾ ಮನುಷ್ಯರೂ ಪರಸ್ಪರ ಸಹೋದರರಾಗಿದ್ದಾರೆಂಬ ಅಭಿಪ್ರಾಯವು ಭೂಮಂಡಲದಲ್ಲಿ ವ್ಯಾಪಿಸುತ್ತ ಬಂದಿದೆಯಷ್ಟೆ. ಈ ಭೇದವು ಹ್ಯಾಗೆ ಸಂಭವಿಸಿತು? ಎರಡುಸಾವಿರ ವರುಷಗಳಿಗೆ ಮುಂಚೆ ಹೀನೈಸಲ್ಪಟ್ಟು ಸಿಲುಬೆಗೆ ಜಡಿಯಲ್ಪಟ್ಟ ಯೇಸುವಿನ ನಡತೆಯನ್ನೂ ಬೋಧನೆಯನ್ನೂ ಅನುಸರಿಸಿ ಆತನನ್ನು ತಮ್ಮ ಅರಸನೆಂದು ತಾವಾಗಿಯೇ ಒಪ್ಪಿಕೊಂಡಿರುವ ಆತನ ಶಿಷ್ಯರಿಂದಲೇ ಈ ಸಾಧಾರಣವಾದ ರಕ್ಷಣೆಯು ಲಭ್ಯವಾಯಿತು. ಆತನು ಗತಿಸಿಹೋಗಿ ಎರಡುಸಾವಿರ ವರುಷಗಳಾಗಿದ್ದರೂ ಆತನು ತನ್ನ ಶಕ್ತಿಯನ್ನು ಆತನ ಶಿಷ್ಯರಲ್ಲಿ ಪ್ರಯೋಗಿಸಿ ಅವರು ಸಕಲ ಪಾಪವನ್ನು ಅಸಹ್ಯಿಸಿ ಅದನ್ನೂ ಅದರಿಂದ ಬರುವ ಕೇಡಳವಾದ ಲಾಭವನ್ನೂ ತ್ಯಜಿಸಿಬಿಡುವಂತೆ ಈಗಲೂ ಮಾಡುತ್ತಿದ್ದಾನೆ. ಇಂಥವನು ಅಸಾಧಾರಣನಾದ ಅರಸನಲ್ಲವೇ ?

ಎರಡುಸಾವಿರ ವರುಷಗಳಿಗೆ ಮುಂಚೆ ಹಳ್ಳಿಗಾಡಿನಲ್ಲಿ ವಾಸಮಾಡಿ ಅವಿದ್ಯಾವಂತನೂ ಅನಾಗರಿಕನೂ ದರಿದ್ರನೂ ಎಂದು ಎಣಿಕೆಯಾಗಿದ್ದವನು ಈಗ ಸಕಲ ವಿದ್ಯೆ, ನಾಗರಿಕತೆ, ಬುದ್ಧಿ ಕಲಾಕೌಶಲ್ಯಗಳಲ್ಲಿ ಕೋವಿದರಾದ ಯೂರೋಪ್ ಖಂಡದ ಚಕ್ರವರ್ತಿಗಳಿಗೂ ಅರಸರಿಗೂ ಅರಸನಾಗಿ ಮೆರೆಯುತ್ತಿರುವ ಈತನು ಅಪ್ರತಿಮನಾದ ಅರಸನಲ್ಲವೇ ? ಈ ಸಕಲ ಚಕ್ರಾಧಿಪತ್ಯಗಳ ನ್ಯಾಯನಿಬಂಧನೆಗಳಿಗೂ ಕಾಯಿದೆ ಕಾನೂನುಗಳಿಗೂ ಶಿಕ್ಷರಕ್ಷೆಗಳಿಗೂ ಯೇಸು ಕ್ರಿಸ್ತನ ಬೋಧನೆ ನಡತೆಗಳು ಮೂಲವಾಗಿವೆ. ಆತನೊಬ್ಬನು ಮೆಚ್ಚುವಂತೆ ನಮ್ಮ ಕಾಯಿದೆ, ರಾಜ್ಯಪರಿಪಾಲನೆ, ಆಡಳಿತ, ಪ್ರತಿವ್ಯಕ್ತಿ ಪುರುಷನ ನಡತೆಯಿದ್ದರೆ ಸಾಕು ಎಂದು ಸಕಲರೂ ಪ್ರತಿಯೊಬ್ಬನೂ ಆತನನ್ನು ಮೆಚ್ಚಿಸುವಂತೆ ಹೋರಾಡುತ್ತಿರುವರು. ಆತನು ಮೆಚ್ಚುವಂತೆ ತಮ್ಮ ನಡತೆಯನ್ನು ಆತನ ಬೋಧನೆ, ನಡತೆಗಳಿಗೆ ಹೋಲಿಸಿ ತಿದ್ದಿಕೊಳ್ಳುತ್ತಿರುವರು. ಈತನು ಚಕ್ರವರ್ತಿಗಳ ಚಕ್ರವರ್ತಿಯಲ್ಲವೇ ?

ದಕ್ಷಿಣ ಅಮೇರಿಕದಲ್ಲಿ ಪಟಗೋಣಿಯಾ ಎಂಬ ಒಂದು ದೇಶವಿದೆ. ಅದರ ನಿವಾಸಿಗಳು ಕೇವಲ ಕಿರಾತಕರು ಕಾಡುಮೃಗಗಳೋಪಾದಿಯಲ್ಲಿ ಸಂಚರಿಸಿ ನರಮಾಂಸವನ್ನೂ ಕಾಡು ಮೃಗಗಳನ್ನೂ ತಿಂದು ಬದುಕುತ್ತಿದ್ದರು. ಲೋಕಪ್ರಖ್ಯಾತನಾದ ಡಾರ್ವಿನ್ ಎಂಬ ಮಹಾ ಪಂಡಿತನು ಅಲ್ಲಿಗೆ ಹೋಗಿ ಆ ಪಾಮರರ ಸ್ಥಿತಿಯನ್ನು ನೋಡಿ ಚಿಂತಾಕ್ರಾಂತನಾಗಿ—ಕ್ರಿಸ್ತನ ಶಿಷ್ಯರಾದ ಪಾದ್ರಿಗಳು ಸಹ ಇವರನ್ನು ಸಾಧುತ್ವಕ್ಕೆ ತರುವದು ಅಸಾಧ್ಯವಾಗಿ ತೋರುತ್ತೆಯೆಂದು ಹೇಳಿದನು. ಕ್ರಿಸ್ತನ ಶಿಷ್ಯರು ತಮ್ಮ ಗುರುವಿನ ಹೆಸರಿನಲ್ಲಿ ಆ ಕಿರಾತಕರ ಗುಂಪನ್ನು ಹೊಕ್ಕು ಅವರಿಗೆ ವಿದ್ಯೆ, ನಾಗರಿಕತೆ, ಸಾಧುತ್ವ, ಕ್ರಿಸ್ತನ ಸದ್ಭಕ್ತಿಯನ್ನು ಕಲಿಸಿದ್ದನ್ನು ಡಾರ್ವಿನ್ ಪಂಡಿತನು ಕೇಳಿ ಆಶ್ಚರ್ಯಪಟ್ಟು ಸಂತೋಷಚಿತ್ತನಾಗಿ ಆ ಪಾದ್ರಿಗಳ ಕೆಲಸವು ಬೇಗಬೇಗನೆ ಮುಂದರಿಯುವಂತೆ ಅವರಿಗೆ ದ್ರವ್ಯಸಹಾಯವನ್ನು ಕಳುಹಿಸಿದನು. ಯೇಸು ಕ್ರಿಸ್ತನ ಪ್ರಭುತ್ವದ ಮಹತ್ವವನ್ನು ನೋಡಿದಿರಾ ? ಈತನು ಅಮಾನುಷ ರೀತಿಯಾಗಿ ಆತನ ಶಿಷ್ಯರಲ್ಲಿ ಅದೃಶ್ಯವಾಗಿ ಇದ್ದುಕೊಂಡು ನೀತಿಯಿಂದಲೂ ಸತ್ಯದಿಂದಲೂ ತನ್ನ ಅಧಿಕಾರವನ್ನು ಸಕಲರ ಮೇಲೆ ಸ್ಥಾಪಿಸುತ್ತಾನೆ.

ಜರ್ಮನಿಯವರ ಸಬ್‌ಮೆರೀನುಗಳ ದೆಸೆಯಿಂದ ಕಳೆದ ವಾರ ಬ್ರಿಟಿಷರದ್ದು ಎರಡು, ನಾರ್ವೇಯವರದು ಎರಡು, ಬೆಲ್ಜಿಯಂರದು ಒಂದು, ಅಂತು ಐದು ಹಡಗುಗಳು ಮುಳುಗಿ ಹೋದವು. ಆ ಪೈಕಿ ಒಂದನ್ನು ಎಚ್ಚರಿಕೆ ಕೊಡದೇನೇ ಮುಳುಗಿಸಿದಾರೆ. ಫ್ರೆಂಚರ ಒಂದು ಯುದ್ಧದ ಹಡಗು ಏನಾಯಿತೆಂಬುವುದೇ ಫೆಬ್ರವರಿ ತಾ. 2 ರಿಂದ ಗೊತ್ತಾಗಲಿಲ್ಲವಾಗಿ ಅದು ಮುಳುಗಿ ಹೋಗಿರಬೇಕೆಂಬ ಶಂಕೆಯುಂಟಾಗಿದೆ.

ಅರೆಥೂಸಾ ಎಂಬ ಬ್ರಿಟಿಷ್ ಯುದ್ಧದ ಹಡಗು ಇಂಗ್ಲೆಂಡಿನ ಪೂರ್ವ ಸಮುದ್ರತೀರದ ಬಳಿ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ನಷ್ಟವಾಯಿತೆಂದು ತಿಳಿಯುತ್ತದೆ. ಅದರಲ್ಲಿದ್ದವರನ್ನೆಲ್ಲಾ ಬದುಕಿಸಿದರು, ಹತ್ತು ಮಂದಿ ಮಾತ್ರ ನೀರಿನ ಪಾಲಾದರು.

ಯುದ್ಧದ ಸಮಾಚಾರಗಳು.

ನಮ್ಮ ಚಕ್ರವರ್ತಿಯವರ ಭಾಷಣವು.

ಯುದ್ಧವಿಚಾರವಾದ ಸುದ್ದಿಗಳು ಬಂದಿರುವುದು ಬಹಳ ಸ್ವಲ್ಪ. ಕೆಲ ಕಾರ್ಯಗಳು ನಡೆಯುವುದಕ್ಕೆ ಇನ್ನೂ ಸಮಯ ಒದಗಿಲ್ಲ. ಲಂಡನ್ ಪಟ್ಟಣದಲ್ಲಿರುವ ಕೆಲವು ಹಿಂದುಸ್ಥಾನದ ಯುದ್ಧಭಟರು ಜಾರ್ಜ್ ಸಾರ್ವಭೌಮರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಚಕ್ರವರ್ತಿಯವರಿಗೆ ಈಗ ದೇಹಾಲಸ್ಯವಿಲ್ಲದೆ ವಾಸಿಯಾಗಿದೆ ಎಂದೇ ಹೇಳಬಹುದು. ಅವರು ಆಸ್ಪತ್ರೆಗಳಿಗೆ ದಯಮಾಡಿ ಗಾಯಪಟ್ಟ ಯುದ್ಧಭಟರನ್ನು ಪರಾಂಬರಿಸುತ್ತಾ ಇದ್ದಾರೆ. ಹಿಂದುಸ್ಥಾನದ ದೇಶೀಯ ಸೈನಿಕರ ಹುದ್ದೇದಾರರನ್ನು ಕುರಿತು ದೊರೆಯವರು ಅಪ್ಪಣೆಕೊಡಿಸಿದ ವಾಕ್ಯಗಳೇನೆಂದರೆ—

ಸರ್ದಾರರುಗಳಿರಾ,—ನಮ್ಮ ಚಕ್ರಾಧಿಪತ್ಯವೂ ಮಿತ್ರಮಂಡಲಿಯವರೂ ಬೆರೆತು ಯುದ್ಧಮಾಡುತ್ತಿರುವ ಈ ಮಹಾ ಯುದ್ಧಕ್ಕೆ ಹಿಂದುಸ್ಥಾನದ ಪರಾಕ್ರಮಶಾಲಿಗಳಾದ ದೇಶೀಯ ಸೈನಿಕರು ಸಹಾಯಕರಾಗಿ ಇಷ್ಟು ದೂರ ಬಂದಿರುವುದು ನಮಗೆ ಪರಮಾನಂದವನ್ನುಂಟುಮಾಡಿದೆ. ಹಿಂದುಸ್ಥಾನದ ದೇಶೀಯ ಸೈನಿಕರ ಪಲವಾಗಿ ನಿಮಗೆ ಸಾಕ್ಷಾತ್ತಾಗಿ ಭೇಟಿ ಕೊಡಲು ಸಂತೋಷವಾಗುವುದು. ನೀವುಗಳು ಶತ್ರುವಿನಿಂದ ಗಾಯಪಟ್ಟವರಾಗಿದ್ದೀರಿ. ನಿಮ್ಮ ಪರಾಕ್ರಮವು ಅಜೇಯವಾದದ್ದೆಂದು ಮೆಚ್ಚಿಕೊಂಡಿದ್ದೇವೆ—ನೀವು ಅತ್ತಸ್ಥಳದಲ್ಲಿ ಅರಿಕೆಮಾಡಿರುವ ನಿಮ್ಮ ರಾಜಭಕ್ತಿ ಪೂರಿತವಾದ ವಾಕ್ಯಗಳು ನಿಮ್ಮ ಸ್ವಕೀಯವಾದ ಭಕ್ತಿಯನ್ನು, ಹಿಂದುಸ್ಥಾನದ ನಮ್ಮ ಸಕಲ ಸೈನಿಕರ ಭಕ್ತಿಯನ್ನೂ ಪ್ರಕಟಪಡಿಸುತ್ತವೆ. ನೀವು ಇಲ್ಲಿ ಸಾಕ್ಷಾತ್ತಾಗಿ ಬಂದಿರುವುದು ನಮ್ಮ ಚಕ್ರಾಧಿಪತ್ಯವೆಲ್ಲಾ ಏಕವಾಗಿದೆ ಎಂಬ ಅರ್ಥವನ್ನು ಸೂಚಿಸುವುದಕ್ಕೆ ಸಂಶಯವಿಲ್ಲ. ಮತ್ತು ನೀವುಗಳು ಪರಾಕ್ರಮದಿಂದ ಕಾದಾಡಿ ನಿಮ್ಮ ಶರೀರವನ್ನೇ ಮಾತೃಭೂಮಿಯ ಸಂರಕ್ಷಣೆಗಾಗಿ ಕೊಟ್ಟುಬಿಟ್ಟಿರೆಂದೂ ಸೂಚಿಸಿಯಾಗಿದೆ—ನಿಮ್ಮ ರಾಜಭಕ್ತಿಯನ್ನೂ, ಕೃತಜ್ಞತೆಯನ್ನೂ, ಈ ದ್ವೀಪಗಳಲ್ಲಿರುವ ಪ್ರಜೆಗಳಲ್ಲಿ ನಿಮಗಿರುವ ಸಾಮರಸ್ಯವನ್ನೂ ನೋಡಿ ನಮಗೆ ಪರಮಾನಂದ ಉಂಟಾಗಿದೆ. ಇವರೂ ನೀವೂ ಏಕೀಭವಿಸಿ ನಿಮ್ಮಗಳ ಮನೆಮಠಗಳನ್ನೂ ರಾಜ್ಯವನ್ನೂ ಸಂರಕ್ಷಣೆ ಮಾಡಿಕೊಳ್ಳುವ ಭಾಗದಲ್ಲಿ ನಮ್ಮ ಹಿರಿಯರಂತೆ ನೀವೂ ಕೀರ್ತಿಶಾಲಿಗಳಾಗುತ್ತೀರಿ. ಚಕ್ರಾಧಿಪತ್ಯದ ಸೇನಾ ಬಲವು ಹಿಂದುಸ್ಥಾನವನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದಿದೆ. ಇದರಿಂದ ಈ ಘೋರವಾದ ಯುದ್ಧದ ಸೆಟೆಯು ಅಲ್ಲಿನ ಜನಗಳಿಗೆ ವ್ಯಾಪನೆಯಾಗಿರುವುದಿಲ್ಲ. ದೇವರ ದಯದಿಂದ ಹಿಂದುಸ್ಥಾನದ ಪ್ರಜೆಗಳು ತಮ್ಮ ಸಾಂಸಾರಿಕ ವ್ಯವಹಾರಗಳಲ್ಲೂ, ರಾಜ್ಯಭಾರ ಕಾರ್ಯಗಳ ಅನುಭವದಲ್ಲೂ ಅಭಿವೃದ್ಧಿ ಹೊಂದಿದ ಹಾಗೆಲ್ಲಾ ಬ್ರಿಟಿಷ್ ರಾಜ್ಯಭಾರದ ಸ್ವಾತಂತ್ರ್ಯಗಳು ಅವರಿಗೂ ಕ್ರಮೇಣ ಹೆಚ್ಚು ಹೆಚ್ಚಾಗಿ ದೊರಕುತ್ತವೆ. ನಮ್ಮ ಹುದ್ದೇದಾರರುಗಳೆಲ್ಲಾ ನಮ್ಮ ಆಜ್ಞಾನುಸಾರ ನಿಮ್ಮಗಳನ್ನು ನಿಮ್ಮ ಮತಭಕ್ತಿಗೆ ವಿರೋಧವೇನೂ ಆಗದಂತೆ ನೋಡಿ ನಡಿಸಿಕೊಂಡು ಬರುತ್ತಿದ್ದಾರೆಂದು ನೀವು ವಂದನಾಪೂರ್ವಕವಾಗಿ ಹೇಳಿರುವುದನ್ನು ಕೇಳಿದ್ದರಲ್ಲಿ ನಮಗೆ ಸಂತೋಷವಾಗುತ್ತದೆ. ನೀವುಗಳು ಈ ಅನ್ಯದೇಶಗಳಲ್ಲಿ ನಿಮ್ಮ ಮತಭಕ್ತಿ ಕಾರ್ಯಗಳೂ ಆಚಾರ ವ್ಯವಹಾರಗಳೂ ಎಲ್ಲಿ ಕುಂದಕಗಳುಂಟಾಗುವವೋ ಎಂದು ಶಂಕೆಪಡುತ್ತಿದ್ದದ್ದೇನೋ ಸಹಜವೇ. ಆದರೆ ನಮ್ಮ ಕೀರ್ತಿಶೇಷರಾದ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರು ಅಪ್ಪಣೆ ಕೊಡಿಸಿರುವ ವಾಕ್ಯಗಳು ಈ ಸಂದರ್ಭದಲ್ಲಿ ನಮಗೆ ಜ್ಞಾಪಕಕ್ಕೆ ಬರುತ್ತವೆ. ಆಕೆಯವರು ತಮ್ಮ ಹಿಂದುಸ್ಥಾನದ ಪ್ರಜಾಕೋಟಿಗಳಿಗೆ ಅವರನ್ನು ಸಂರಕ್ಷಣೆ ಮಾಡುವ ಕಾರ್ಯಭಾರವನ್ನು ವಹಿಸಿಕೊಂಡಾಗ ಹೇಳಿರುವುದೇನೆಂದರೆ—ನಮ್ಮ ಪ್ರಜೆಗಳು ಯಾವ ಜಾತಿ ಮತಗಳವರೇ ಆಗಿರಲಿ, ಮತಭಕ್ತಿ ಆಚರಣೆಗಾಗಿ ಯಾರರೊಬ್ಬರ ವಿಷಯದಲ್ಲೂ ಪಕ್ಷಪಾತಮಾಡುವುದಿಲ್ಲ; ಯಾರನ್ನೊಬ್ಬರನ್ನೂ ಹಿಂಸೆಪಡಿಸುವುದಿಲ್ಲ. ಯಾರೊಬ್ಬರಿಗೂ ಮನಸ್ಸಿಗೆ ಅಸಮಾಧಾನವನ್ನುಂಟುಮಾಡುವುದಿಲ್ಲ. ಸಕಲ ಪ್ರಜೆಗಳೂ ಏಕರೀತಿಯಾದ ನಿಷ್ಪಕ್ಷಪಾತವುಳ್ಳ ಕಾನೂನಿನ ಸಂರಕ್ಷಣೆಯನ್ನು ಅನುಭೋಗಿಸುತ್ತಾರೆ. ಯಾವ ಪ್ರಜೆಗಳನ್ನೂ ಅವರ ಮತಭಕ್ತಿ ಆಚಾರ ನಿಮಿತ್ತವಾಗಿ ನಮ್ಮ ಕೈಕೆಳಗಿನ ಅಧಿಕಾರಿಗಳ್ಯಾರೂ ಯಾವ ವಿಧವಾಗಿಯೂ ಕಷ್ಟ ಸಂಕಟಗಳಿಗೆ ಗುರಿಪಡಿಸಕೂಡದೆಂದೂ, ಇದಕ್ಕೆ ತಪ್ಪಿದರೆ ಅವರು ನಮ್ಮ ವಿಶೇಷವಾದ ಅಪ್ರೀತಿಗೆ ಪಾತ್ರರಾದಾರೆಂದೂ ತಿಳಿದಿರತಕ್ಕದ್ದು. ನಮ್ಮ ಈ ವಾಕ್ಯಗಳನ್ನು ನಾವು ನಮ್ಮ ಪಟ್ಟದಲ್ಲಿ ಇರುವವರು ಅಕ್ಷರಶಃವಾಗಿಯೂ ಅರ್ಥವಶಾತಾಗಿಯೂ ನೆರವೇರಿಸುತ್ತಾ ಬರುವರೆಂದು ವಾಗ್ದಾನ ಮಾಡುತ್ತೇವೆ—ಸರ್ದಾರರುಗಳಿರಾ, ನಿಮ್ಮ ರಾಜಭಕ್ತಿ ಪೂರಿತವಾದ ವಿಜ್ಞಾಪನಾ ಪತ್ರಿಕೆಗಾಗಿ ನಿಮ್ಮನ್ನು ವಂದನೆ ಮಾಡುವೆವು.

ಪಶ್ಚಿಮ ರಣರಂಗದಲ್ಲಿ.

ಜರ್ಮನಿಯವರು ಬೆಲ್ಜಿಯಮ್‌ನಲ್ಲೂ ಫ್ರಾನ್ಸಿನಲ್ಲೂ ಮುಂದಕ್ಕೆ ನುಗ್ಗಿ ಬರಬೇಕೆಂದು ಅನೇಕಾವರ್ತಿ ಪ್ರಯತ್ನ ಪಟ್ಟರು. ಯಾವ ಪ್ರಯತ್ನದಿಂದಲೂ ಅವರಿಗೆ ವಿಶೇಷ ಜಯಪ್ರದವಾಗದೆ ಹೋಯಿತು. ಅವರ ಕಡೆ ಬಹಳ ಸೈನಿಕರನ್ನು ಕಳೆದುಕೊಂಡರು. ಮಿತ್ರಮಂಡಲಿಯವರು ಅವರ ಯುದ್ಧಭಟರನ್ನು ಸೆರೆ ಹಿಡಿದರು. ಜರ್ಮನಿಯವರ ಒಂದು ವಿಮಾನ ಯಂತ್ರವು ನಾಶವಾಡಲ್ಪಟ್ಟಿತು.

ಜರ್ಮನಿಯವರ ಎರಡು ವಿಮಾನ ಯಂತ್ರಗಳು ಥೇಮ್ಸ್ ನದಿ ಸಮುದ್ರಕ್ಕೆ ಸೇರುವ ಕಡೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ಇದರಿಂದ ಹೆಂಗಸೊಬ್ಬರೂ ಒಂದು ಮಗುವೂ ಗಾಯಪಟ್ಟವು. ಬ್ರಿಟಿಷ್ ವಿಮಾನ ಯಂತ್ರಗಳು ಕೂಡಲೆ ಅಂತರಿಕ್ಷಕ್ಕೆ ಹತ್ತಿ ಹೋದವು. ಅಷ್ಟರೊಳಗೆ ಶತ್ರುವಿನ ವಿಮಾನಗಳು ಸಿಕ್ಕದಂತೆ ತಪ್ಪಿಸಿಕೊಂಡು ಹೋಗಿಬಿಟ್ಟವು.

ಉತ್ತರ ಕಡಲಿನಲ್ಲಿ ಒಂದು ಸಣ್ಣ ಹಡಗು ಸಮುದ್ರವನ್ನು ಶೋಧನೆಮಾಡಿ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ತೆಗೆದು ಹಾಕುತ್ತಿದ್ದಾಗ ಜರ್ಮನಿಯವರ ಡಿಸ್ಟ್ರಾಯರೆಂಬ ಹಡಗು ಬಂದು ಅದನ್ನು ಮುಳುಗಿಸಿತು. ಜರ್ಮನಿಯವರು ಅದರಲ್ಲಿದ್ದ ಮೂರು ಮಂದಿ ಹುದ್ದೇದಾರರನ್ನೂ, 21 ಮಂದಿ ಸೈನಿಕರನ್ನೂ ಬದುಕಿಸಿದರು. ಅಲ್ಲಿ ಒಟ್ಟು ನಾಲ್ಕು ಹಡಗುಗಳಿದ್ದವು. ಒಂದು ಮಾತ್ರ ಮುಳುಗಿಹೋಯಿತು. ಉಳಿದ ಮೂರೂ ಸುರಕ್ಷಿತವಾಗಿ ವಾಪಸು ಬಂದವು.

ಪೂರ್ವ ರಣರಂಗದಲ್ಲಿ.

ರಷ್ಯಾದವರು ದಕ್ಷಿಣ ಭಾಗದಲ್ಲಿ ಚುರುಕಾಗಿ ಯುದ್ಧಕಾರ್ಯಗಳನ್ನು ನಡಿಸಿದಾರೆ. ಅವರ ಸೈನ್ಯಗಳು ಒಂದು ಮುಖ್ಯವಾದ ನದಿಯನ್ನು ದಾಟಿ ಆಚೆಗೆ ಬಂದವು. ಎದುರಿಗಿದ್ದ ಆಸ್ಟ್ರಿಯಾ ಸೈನಿಕರನ್ನೆಲ್ಲಾ ಹಿಂದಕ್ಕೆ ಓಡಿಸಿರುತ್ತಾರೆ.—ಇನ್ನೊಂದು ಸ್ಥಾನ್ಯದಲ್ಲಿ ರಷ್ಯಾದವರು ಆಸ್ಟ್ರಿಯಾದವರ ಮೇಲೆ ನುಗ್ಗಿ ಅವರ ಸೈನ್ಯಗಳ ಸಾಲನ್ನು ಒಡೆದುಬಿಟ್ಟರು. ಇತರ ಸ್ಥಾನ್ಯಗಳಲ್ಲೂ ಫಿರಂಗಿ ಗುಂಡುಗಳ ಹಾರಾಟವು ವಿಶೇಷವಾಗಿ ನಡೆದಿದೆ. ರಷ್ಯಾದವರು ಉತ್ತರ ಭಾಗದಲ್ಲೂ ದಕ್ಷಿಣ ಕಡೆಯಲ್ಲೂ ಮುಂದುವರಿದು ನುಗ್ಗಿ ಹೋಗುತ್ತಲಿದಾರೆ. ಆದರೆ ಅವರ ನುಗ್ಗಾಟವು ನಿದಾನವಾಗಿದೆ.

ಇಟಲಿ.

ಇಟಲಿಯವರನ್ನು ಹಿಂದಕ್ಕೆ ಓಡಿಸಬೇಕೆಂದು ಆಸ್ಟ್ರಿಯಾದವರು ಬಹಳ ಪರಾಕ್ರಮದಿಂದ ಅವರಮೇಲೆ ನುಗ್ಗಿ ಕದನ ಮಾಡಿದರು. ಇದು ನಡೆದು ಕೆಲವು ದಿನಗಳಾದವು. ಆ ಕದನದ ವಿವರವನ್ನು ನೋಡಿದರೆ ಆಸ್ಟ್ರಿಯಾದವರು ಅದರಲ್ಲಿ ಸಂಪೂರ್ಣವಾಗಿ ಸೋತುಹೋದರೆಂದು ಗೊತ್ತಾಗುತ್ತದೆ. ಆಸ್ಟ್ರಿಯಾದವರು ಮೊದಲು ತಮ್ಮ ಸೈನಿಕರಿಗೆ ಅಮಲೇರುವಂತೆ ಮಾಡಿ ಇಟಲಿಯವರ ಮೇಲೆ

...ಸಿದ್ದರಿಂದಲೂ, ಇದರಿಂದ ಅನೇಕರು ಕೋಟೆಪಾಲಾದರೆಂದೂ, ಹಲವರು ...ಮೇಲೆ ಪ್ರಜ್ಞೆಯಿಲ್ಲದೆ ಅಲ್ಲಲ್ಲೇ ಬಿದ್ದು ಕೊಂಡು ನಷ್ಟ ಮಾಡಿ ಬಿಟ್ಟರೆಂದೂ ...ಮ ಬಂದಿದೆ

ಆಸ್ಟ್ರಿಯಾದವರ ವಿಮಾನಯಂತ್ರಗಳು ಇಟಲಿಯ ಮೇಲೆ ನುಗ್ಗಿ ದರೋಡೆ ...ಸಿದವು. ಅವು ಸುರಿಸಿದ ಸಿಡಿಮದ್ದಿನ ಗುಂಡುಗಳಿಂದ 15 ಮಂದಿ ಸಭ್ಯ ಪ್ರಜೆ ...ಸು ಹತರಾದರು. ಅನೇಕರಿಗೆ ಗಾಯಗಳಾಗಿವೆ. ಹೆಂಗಸರು ಮಕ್ಕಳೂ ಈ ...ತ್ಯದಲ್ಲಿ ಸಿಕ್ಕಿ ಪ್ರಾಣ ಕಳೆದುಕೊಂಡಿದ್ದಾರೆ.

ಆಸ್ಟ್ರಿಯಾದವರು ವಿಮಾನ ಯಂತ್ರಗಳಲ್ಲಿ ಹೋಗಿ ಇಟಲಿಯ ಮಹಾ ...ವಾದ ಮಿಲನ್ ನಗರಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು ...ಮಂದಿ ಈ ಕ್ರೌರ್ಯಕೃತ್ಯಕ್ಕೆ ಸಿಕ್ಕಿ ಮೃತಪಟ್ಟರು; ಅನೇಕರು ಜನರಿಗೆ ...ಯಗಳಾದವು.

ಟರ್ಕಿಯಲ್ಲಿ.

...ಸ್ ಪರ್ವತ ಪ್ರಾಂತ್ಯದಲ್ಲಿ ರಷ್ಯಾದವರು ನುಗ್ಗಿ ಹೋಗುತ್ತಾ ...ಯವರನ್ನು ಎರ್ಜರೂಮ್ ನಗರದ ಎರಡು ಕಡೆಗಳಿಂದಲೂ ಮುತ್ತಿಗೆ ಹಾ...ದ್ದರು. ಅವರು ಈಗ ಆ ಪಟ್ಟಣವನ್ನೂ ಆವರಿಸಿಕೊಂಡಿದ್ದಾರೆ. ಆ ...ದಲ್ಲಿ ಅವರು ಟರ್ಕಿ ಸೈನ್ಯದಲ್ಲಿ 800 ಯುದ್ಧಭಟರನ್ನೂ, ಎಳು ಫಿರಂ...ಗಳನ್ನೂ, ಅಪಾರ ಕೊಳ್ಳೆಯನ್ನೂ ಹಿಡಿದು ಸಾಗಿಸಿಕೊಂಡು ಬಂದರು.

...ಕಡಲಿನಲ್ಲಿ ರಷ್ಯಾದವರ ಯುದ್ಧದ ಹಡಗುಗಳು ನುಗ್ಗಿ ಹೋಗಿ ... ಪಟ್ಟಣಗಳಿಗೆ ಮುತ್ತಿಗೆ ಹಾಕಿದ್ದಲ್ಲದೆ ಅವರ ಏಳು ವ್ಯಾಪಾರದ ಹಡ...ನ್ನು ಮುಳುಗಿಸಿರುತ್ತವೆ.

...ಯವರ ಮೇಲೆ ಯುದ್ಧಕ್ಕೆ ಹೊರಟಾಗಿನಿಂದ ರಷ್ಯಾದವರು ಕಪ್ಪು ... ಟರ್ಕಿಯವರ 68 ಹಡಗುಗಳನ್ನೂ, ಅವರ 4 000 ವ್ಯಾಪಾರದ ಹಡ...ಗಳನ್ನು ಮುಳುಗಿಸಿದರು; ಇಲ್ಲವೇ ಹಿಡಿದು ತಂದರು ಎಂದು ತಿಳಿಸಲ್ಪಟ್ಟಿದೆ.

...ಪೊಟೇಮಿಯದಲ್ಲಿ ಪ್ರವಾಹಗಳ ದೆಸೆಯಿಂದ ಬ್ರಿಟಿಷ್ ಸೈನ್ಯಗಳು ...ದಕ್ಕೆ ನುಗ್ಗಿ ಹೋಗುವುದಕ್ಕಾಗಲಿಲ್ಲ. ಫೆಬ್ರವರಿ ತಾ. 7 ಮತ್ತು 9 ರಲ್ಲಿ ... ಅರಬ್ಬಿಯವರ ಕ್ಯಾಂಪಿಗೆ ಮುತ್ತಿಗೆ ಹಾಕಿ ಕದನ ಮಾಡಿದರು. ಅರಬ್ಬಿ...ಯವರ 336 ಮಂದಿ ಕೊಲೆಯಾದರು.

ಪರ್ಷಿಯಾದಲ್ಲಿ.

...ಯಾ ರಾಜ್ಯದಲ್ಲಿ ಇನ್ನೂ ಅಲ್ಪ ಸ್ವಲ್ಪ ಕದನಗಳಾಗುವವು. ರಷ್ಯಾ... ದಂಗೆಕೋರರನ್ನು ಪಶ್ಚಿಮ ಕಡೆಗೆ ಓಡಿಸಿಕೊಂಡು ಹೋಗುತ್ತಲಿದ್ದಾರೆ. ...ಹಿಡಿಯಲ್ಪಟ್ಟಿರುವವರಲ್ಲಿ ಪರ್ಷಿಯಾದಲ್ಲಿದ್ದ ಟರ್ಕಿ ರಾಯಭಾರಿಯೂ ...ದೂ ಮಿಲಿಟರಿ ಆಫೀಸರೂ ಸಿಕ್ಕಿ ಬಿದ್ದಿದ್ದಾರೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

...ಮಂಡಲಿಯವರು ಬಲ್ಗೇರಿಯಾ ರಾಜ್ಯದೊಳಕ್ಕೆ ನುಗ್ಗಿ ಹೋಗು...ವಾಗಿದೆ. ಫ್ರೆಂಚರಿಗೂ ಬಲ್ಗೇರಿಯನ್ನರಿಗೂ ಸಂಧಿಮಾಗಿ ... ಸಣ್ಣ ಕದನಗಳೂ ನಡೆದವು ಫ್ರೆಂಚರು ವರ್ದರ್ ಎಂಬ ನದಿಯನ್ನು ...ದ್ದರೆಂದು ಒಂದು ವರ್ತಮಾನವೂ, ಅವರು ದಾಟಲಿಲ್ಲವೆಂದು ಒಂದು ...ಮಾನವೂ ಹೇಳುವವು

...ಕರೂ ಬಲ್ಗೇರಿಯನ್ನರಿಗೂ ಒಂದು ಕದನವಾಯಿತೆಂದೂ, ಗ್ರೀಕರು ...ರಿಯಾ ಸೈನಿಕರಲ್ಲಿ ಹಲವರನ್ನು ಸೆರೆ ಹಿಡಿದು ಬಿಟ್ಟರೆಂದೂ ಪ್ರಕಟ...ದೆ.

...ರ್ಮನಿಯವರು ಆಲ್ಬೇನಿಯಾದೊಳಗೆ ಇನ್ನೂ ಆಸ್ಟ್ರಿಯಾದವರ ... ಕದನವನ್ನು ನಡೆಸುತ್ತಿದ್ದಾರೆ. ಒಂದು ರಾಜ್ಯದಲ್ಲಿ ಸರ್ಬಿಯಾದವರು ...ಸೈನ್ಯದಲ್ಲಿ ಹಲವರನ್ನು ಸೆರೆ ಹಿಡಿದಿರುವಂತೆ ಹೇಳಲಾಗಿದೆ.

...ಯಾಟಿಕ್ ಕಡಲಿನೊಳಗೆ ಇಟಲಿ ಮತ್ತು ಆಸ್ಟ್ರಿಯಾ ಹಡಗುಗಳು ...ಗಳ ಮೇಲೊಂದು ನುಗ್ಗಿ ಯುದ್ಧಮಾಡಿದವು ಸ್ವಲ್ಪ ಹೊತ್ತಿನೊಳ... ಆಸ್ಟ್ರಿಯಾದವರ ಹಡಗುಗಳು ಹಿಮ್ಮೆಟ್ಟಿ ತೀರದೊಳಗೆ ಸೇರಿಕೊಂಡು...ವು.

...ತ್ರಮಂಡಲಿಯವರು ಸರ್ಬಿಯಾ ಸೈನಿಕರನ್ನು ಕಾರ್ಫ್ಯೂ ದ್ವೀಪಕ್ಕೆ ಸಾಗಿ... ಸಾಗಿಸುತ್ತಲಿದ್ದಾರೆ. ಇನ್ನೂ ಅವರು 25,000 ಸೈನಿಕರನ್ನು ...ಸಬೇಕಾಗಿದೆ ಎಂದು ತಿಳಿಸಲ್ಪಟ್ಟಿದೆ.

ಆಫ್ರಿಕಾದಲ್ಲಿ.

...ಮರೂನ್‌ನ ಸೀಮೆಯಿಂದ ಓಡಿಹೋದ 2,600 ಜರ್ಮನಿಯವರನ್ನು ...ಯವರು ತಮ್ಮ ಸ್ವಾಸ್ಥ್ಯದಲ್ಲಿ ಹಿಡಿದಿಟ್ಟುಕೊಂಡಿದ್ದಾರೆಂದು ತಂತೀ ವ...ಗಳು ತಿಳಿಸುವವು. ಇವರೂ, ಇವರ ಸಂಸಾರಕ್ಕೆ ಸೇರಿದವರೂ ಎಲ್ಲಾ ...(,00) ಜನರಾಗುತ್ತಾರೆ. ಸ್ಪೈನ್ ನವರು ಇಷ್ಟು ಜನರನ್ನೂ ಅಲ್ಲಿಂದ ... ರಾಜ್ಯಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನಿರ್ಬಂಧದಲ್ಲಿ ಇಡುತ್ತಾ...ಹೇಳಲಾಗಿದೆ.

...ಆಫ್ರಿಕಾದಲ್ಲಿರುವ ಬೆಲ್ಜಿಯನ್ ಸೈನಿಕರು ಪೂರ್ವ ಆಫ್ರಿಕಾಖಂಡದಲ್ಲಿರುವ ...ನಿಯವರ ಮೇಲೆ ಪಶ್ಚಿಮ ಕಡೆಯಿಂದ ನುಗ್ಗಿ ಹೋಗುತ್ತಲಿದ್ದಾರೆ. ರೊಡೇ...ದಲ್ಲಿರುವ ಬ್ರಿಟಿಷರೂ ಅವರಿಗೆ ಸಹಾಯಮಾಡುತ್ತಿರುವರು.

...ಆಫ್ರಿಕಾದಲ್ಲಿರುವ ಒಂದು ಭಾರಿ ಕೆರೆಯೊಳಗೆ ಬ್ರಿಟಿಷ್ ಮತ್ತು ...ಜ್ ದೋಣಿಗಳು ಯುದ್ಧಕ್ಕೆ ಹೊರಟು ಜರ್ಮನಿಯ ಒಂದು ಫಿರಂಗಿ ...ನ್ನು ಮುಳುಗಿಸಿದವು ಜರ್ಮನಿಯವರಲ್ಲಿ ಇಬ್ಬರು ಕೊಲೆಯಾದರು; ...ರು ಸೆರೆ ಹಿಡಿಯಲ್ಪಟ್ಟರು.

...ವ ಆಫ್ರಿಕಾದಲ್ಲಿರುವ ಬ್ರಿಟಿಷ್ ಸೈನ್ಯಗಳ ಅಧಿಪತಿಯಾಗಿದ್ದ ಜನರಲ್ ...ಡೊರಿಯನ್‌ರವರಿಗೆ ದೇಹಾಲಸ್ಯವಾದ ಕಾರಣ ಅವರು ಕೆಲಸಕ್ಕೆ ...ನಾಮ ಕೊಟ್ಟುಬಿಟ್ಟರು ದಕ್ಷಿಣ ಆಫ್ರಿಕದಿಂದ ಬೋಅರ್ ದಳಪತಿ ...ನರಲ್ ಸ್ಮಟ್ಸ್‌ರವರು ಅವರ ಕೆಲಸಕ್ಕೆ ನೇಮಕವಾದರು.

ಇತರ ವಿಷಯಗಳು.

...ದಲ್ಲಿ ಸಿಡಿಮದ್ದಿನ ಗುಂಡು ಹೊಡೆದು ಅದರೊಳಗಿದ್ದ ತುಂಡು ...ಕೆಗಳೂ ಎರಚಲ್ಪಟ್ಟದ್ದರಿಂದ ಕೆಲವು ಮರುಕಗಳು ಜರ್ಮನಿ...ಯ ಯುವರಾಜನಾದ ಓಸ್ಕರ್ ಎಂಬಾತನಿಗೆ ಬಡಿದು ತಲೆಯ ಮೇಲೂ, ...ಗಾಯಗಳಾಗಿವೆ ಎಂದು ಸರ್ಕಾರಿಯಾಗಿ ಪ್ರಕಟಿಸಲ್ಪಟ್ಟಿದೆ.

...ನಿಯವರ ಸೈನ್ಯಗಳಲ್ಲಿ 23,77,378 ಮಂದಿ ಯುದ್ಧಭಟರು ನಷ್ಟ...ರೆ. ಇವರೆಲ್ಲಾ ಪ್ರಷ್ಯಾ ಸೈನಿಕರು. ಜರ್ಮನಿಯವರ ಕಡೆ ಇತರ ...ದ ಸೈನಿಕರು ಎಷ್ಟು ಮಂದಿ ನಷ್ಟವಾಗಿರುವರೋ ಪ್ರಕಟವಾಗಿಲ್ಲ.

...ದವರು ತಮ್ಮ ಸೈನ್ಯಗಳಲ್ಲಿ 30,00,000 ಮಂದಿ ನಷ್ಟವಾಗಿದ್ದಾ...ದ್ದಾರೆ. ಆದರೆ ಅವರು ಜರ್ಮನಿ ಮತ್ತು ಆಸ್ಟ್ರಿಯಾ ಸೈನಿಕರಲ್ಲಿ ...00 ಮಂದಿಯನ್ನು ಸೆರೆ ಹಿಡಿದಿಟ್ಟುಕೊಂಡಿರುವರು. ರಷ್ಯಾದವರು ...ಕಾರ್ಖಾನೆಗಳೊಳಗೆ ಅಪಾರವಾದ ಮದ್ದು ಗುಂಡು ಮೊದಲಾದ ...ಸಾಮಗ್ರಿಗಳನ್ನು ತಯಾರುಮಾಡಿಕೊಳ್ಳುತ್ತಿದ್ದಾರೆ. ಅವರಲ್ಲಿ ಯುದ್ಧ...ರಂಗಕ್ಕೆ ಹೋಗಲು ಸಿದ್ಧರಾಗಿರುವ 15,00,000 ಸೈನಿಕರು ...ಮಂದಿ ರಿಜರ್ವ್ ಇರುತ್ತಾರೆ.

...ನಿಯವರು ಬೆಲ್ಜಿಯಮ್‌ನವರ ಕಡೆ ಕರಾರು ಮಾಡಿಕೊಳ್ಳಬೇ...ನಮಾಡಿದಂತೆ ತಂತೀ ವರ್ತಮಾನಗಳು ತಿಳಿಸುತ್ತವೆ ಜರ್ಮನಿ...ಯಮ್ ದೇಶವನ್ನು ಬಿಟ್ಟು ಹೋಗುತ್ತೇವೆಂದೂ, ಭಾರೀ ಹಣ...ವಾಗಿ ಕೊಡುತ್ತೇವೆಂದೂ ಹೇಳಿದರಂತೆ. ಆದರೆ ಬೆಲ್ಜಿಯನ್ ...ಗಳನ್ನು ಮಾತ್ರ ಜರ್ಮನಿಯವರು ತಮ್ಮ ಸ್ವಾಧೀನದಲ್ಲಿ ...ಕೊಂಡು ಹೇಳಿದರು. ಬೆಲ್ಜಿಯಮ್ ರಾಜ್ಯವು ಬ್ರಿಟನ್ ರಾಜ್ಯ...ಯ ಭದ್ರವಾಡುವ ತನಕ ತಾನೂ ಯುದ್ಧ ಮಾಡುತ್ತಲೇ ಬರುವುದಾಗಿ ಜವಾಬು ಕೊಟ್ಟಿದೆ ಜರ್ಮನಿಯವರು ಯುದ್ಧ ಪ್ರಾರಂಭವಾಗುವುದಕ್ಕಿಂತ ಮೊದಲು ಇದ್ದಂತೆಯೇ ಎಲ್ಲಾ ಬಿಟ್ಟುಕೊಡುವುದಕ್ಕೂ ಸಿದ್ಧವಾಗಿರುವಂತೆ ಒಂದು ತಂತೀ ವರ್ತಮಾನ ತಿಳಿಸುವುದು ಆದರೆ ಮಿತ್ರಮಂಡಲಿಯವರು ಅಂಥಾ ಕರಾರಿಗೆ ಒಪ್ಪುವುದಿಲ್ಲ

ಫ್ರೆಂಚರು ವಿಮಾನ ಯಂತ್ರಗಳಲ್ಲಿ ಹೋಗಿ ಆಸ್ಕ ವ್ಯಾಲಿನಲ್ಲಿರುವ ಸ್ಟೆನಾಯ್ ಪಟ್ಟಣದೊಳಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು

ಜರ್ಮನಿಯ ಒಂದು ಯುದ್ಧದ ಹಡಗು ಸ್ವೀಡನ್ ಸಮುದ್ರ ತೀರದ ಬಳಿ ಮುಳುಗಿ ನಷ್ಟವಾಯಿತೆಂದು ಹೇಳಲಾಗಿದೆ.

ಒಳದೇಶದ ವೃತ್ತಾಂತಗಳು.

ಚಿಕ್ಕಬಳ್ಳಾಪುರದ ತಾಲ್ಲೂಕು ನಂದೀ ಗ್ರಾಮದಲ್ಲಿ ಮಾರ್ಚಿ ತಾ. 8 ರಲ್ಲಿ ದನಗಳ ಪ್ರದರ್ಶನವನ್ನು ನಡಿಸುವಂತೆ ಏರ್ಪಾಡಾಗಿದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಚನ್ನಗಿರಿಯಲ್ಲಿ ನಾಳೆಯೂ ನಾಡಿದ್ದೂ ಡೆಪ್ಯುಟಿ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ತಾಲ್ಲೂಕ್ ಕಾನ್‌ಫರೆನ್ಸೂ, ಕೋಆಪರೇಟಿವ್ ಕಾನ್‌ಫರೆನ್ಸೂ ನಡೆಯುವವು.

ಬರುವ ಜೂಲೈ ಲಾಗಾಯಿತು ಸರ್ಕಾರದವರು ಲೈಸೆನ್ಸ್ ಪಡೆದಿರುವಂಥಾ ಮುಕಾಸ್‌ದಾರರಿಗೆ ಅಫೀಮನ್ನು 80 ತೋಲಾ ಸೇರಿಗೆ ರೂ 41-8-0 ನಂತೆ ಬಿಕರಿಮಾಡುತ್ತೇವೆಂದು ಪ್ರಕಟಿಸಿದ್ದಾರೆ.

ತಿಪಟೂರು ತಾಲ್ಲೂಕು ಹಾಲ್ಕುರಿಕೆ ಗ್ರಾಮದಲ್ಲಿ ಈ ತಿಂಗಳು 19 ನೇ ತಾ. ವರೆಗೆ ಒಂದು ವಾರ ರಥೋತ್ಸವಕ್ಕೆ ಸಂಬಂಧಪಟ್ಟ ಉತ್ಸವಾದಿಗಳು ನಡಿಸಲ್ಪಡುವವೆಂದು ಮ. ಸುಂಕದ ಗುಂಡಪ್ಪನವರು ನಮಗೊಂದು ಲಗ್ನಪತ್ರಿಕೆಯನ್ನು ಕಳುಹಿಸಿದ್ದಾರೆ

ಕಳೆದ ಶನಿವಾರ ಮಧ್ಯಾಹ್ನ ರಾಜಧಾನಿಯ ಕೃಷ್ಣರಾಜ ಮೊಹಲ್ಲಾದಲ್ಲಿ ಒಬ್ಬ ಸ್ತ್ರೀಯು ನೀರು ಸೇದುವಾಗ ಮೂರ್ಛೆಯಿಂದ ಭಾವಿಯಲ್ಲಿ ಬಿದ್ದಳು ಅಂದರೆ ಜನಗಳು ತಕ್ಷಣವೇ ಸೇರಿ ಆಕೆಯನ್ನು ಮೇಲಕ್ಕೆ ಎತ್ತಿ ಆಸ್ಪತ್ರೆಗೆ ಕಳುಹಿಸಿದ್ದರಿಂದ ಪ್ರಾಣಾಪಾಯವೇನೂ ಆಗಲಿಲ್ಲ.

ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಸೇರಿದ ಸಾಗರದ ಆಚೆ ಒಂದು ಗ್ರಾಮದಲ್ಲಿ 18 ವರುಷದ ಒಬ್ಬ ಬ್ರಾಹ್ಮಣ ಹುಡುಗಿಯು ಒಂದೇ ದಿನ ಎರಡು ಗಂಡು, ಎರಡು ಹೆಣ್ಣು, ಅಂತು ನಾಲ್ಕು ಶಿಶುಗಳನ್ನು ಹೆತ್ತಳೆಂದೂ, ಆದರೆ ಆ ಮಕ್ಕಳೆಲ್ಲಾ 10-12 ದಿನಗಳೊಳಗಾಗಿ ತೀರಿಹೋದವೆಂದೂ, ಬಾಣಂತಿಯು ಸುಖವಾಗಿದ್ದಾಳೆಂದೂ ಪ್ರಕಟವಾಗಿದೆ.

ಬೆಂಗಳೂರಿನಲ್ಲಿ ಕಬ್ಬನ್ನದ ಕಾರ್ಖಾನೆ ಇಟ್ಟಿರುವ ರಿಕ್ಕಿ ಎಂಬ ಯೂರೋಪಿಯನ್ ಮೇಲೆ ಸಮನ್ ಜಾರಿಮಾಡುವುದಕ್ಕೆ ಹೋದಾಗ ಅತನು ಪೋಲೀಸ್ ಇನ್‌ಸ್ಪೆಕ್ಟರ ಮೇಲೆ ಕೈಮಾಡಿ ಪಿಸ್ತೂಲಿನಿಂದ ಹೊಡೆಯುವುದಾಗಿ ಹೆದರಿಸಿದನೆಂದು ಮೊಕದ್ದಮೆ ಆಗಿ ಮದರಾಸ್ ಹೈಕೋರ್ಟಿನಲ್ಲಿ ವಿಚಾರಣೆ ಆಯಿತು. ಜಡ್ಜಿಯವರು ಆತನಿಗೆ ಆರು ತಿಂಗಳ ಸಾದಾ ಸಜಾ ವಿಧಿಸಿದಾರೆ.

ಮೈಸೂರು ದೇವೀರಾಂಬಾ ಅಗ್ರಹಾರದಲ್ಲಿರುವ ಜ್ಯೋತಿಷ ವಿದ್ವಾನ್ ಮ. ಯಟ್ಟಾನ್ ಸಂಪತ್ಕುಮಾರ ಜೋಯಿಸರು ಪದ್ಧತಿಯ ಪ್ರಕಾರ ನಳಸಂವತ್ಸರದ ಪಂಚಾಂಗವನ್ನು ರಚಿಸಿ ನಮಗೊಂದು ಪ್ರತಿಯನ್ನು ಕಳುಹಿಸಿದ್ದಾರೆ ಇದರಲ್ಲಿ ಪಂಚಾಂಗವಿಷಯಗಳಲ್ಲದೆ 1917 ನೇ ಮಾರ್ಚಿ ತನಕ ಇಂಗ್ಲೀಷ್ ತಾರೀಖುಗಳ ಕ್ಯಾಲೆಂಡರೂ ಶ್ರೀಮನ್ ಮಹಾರಾಜರವರ ಛಾಯಾಚಿತ್ರಸಹಿತ ಬಹು ಅಂದವಾಗಿ ಮುದ್ರಿಸಲ್ಪಟ್ಟಿದೆ. ಇದರ ಕ್ರಯ ಒಂದಾಣೆ.

ಮೈಸೂರು ಡೆಪ್ಯುಟಿ ಕಮಿಷನರಾದ ಮ. ಎ. ಸುಬ್ರಹ್ಮಣ್ಯ ಅಯ್ಯರವರು ತಮ್ಮ ಕುಮಾರ್ತೆಯ ವಿವಾಹವನ್ನು ಕಳೆದ ಬುಧವಾರ ಅಟ್ಟಹಾಸವಾಗಿ ಬೆಳಸಿದರು. ಅಧಿಕಾರಿಗಳೂ, ಎಲ್ಲಾ ಕೋಮುಗಳ ದೊಡ್ಡಮನುಷ್ಯರೂ ಹೋಗಿದ್ದು ನೂತನ ವಧೂವರರನ್ನು ಆಶೀರ್ವದಿಸಿ ಬಂದರು. ಈ ವಿವಾಹದ ನಿಮಿತ್ತ ಮ. ಅಯ್ಯರವರು ಕಳೆದ ಭಾನುವಾರ ಭೂರಿ ಭೋಜನವನ್ನು ಮಾಡಿದರು. ಈ ವಿವಾಹಕ್ಕಾಗಿ ಹಲವು ಅಧಿಕಾರಿಗಳೂ ಬಂಧುಗಳೂ ಹೊರಗಿನಿಂದ ಬಂದಿದ್ದರು

ಕಳೆದ ಗುರುವಾರ ನಮ್ಮ ಮಹಾರಾಜರವರ ಪಟ್ಟಾಭಿಷೇಕೋತ್ಸವದ ವರ್ಧಂತಿಯಾದ ನಿಮಿತ್ತ ರಾಜಧಾನಿಯಲ್ಲಿ ಬೆಳಗ್ಗೆ ಕೋಟೆಕೊತ್ತಲಗಳಿಂದ 31 ತೋಪುಗಳನ್ನು ಹಾರಿಸಿದರು ದೇವಸ್ಥಾನಾದಿಗಳಲ್ಲಿ ಶ್ರೀಮನ್ ಮಹಾರಾಜರ ಶ್ರೇಯಃಪ್ರಾರ್ಥನೆಗಳು ನಡಿಸಲ್ಪಟ್ಟವು. ರಾತ್ರಿ ಮಹಾರಾಜರವರ ಕಂಪೆನಿಯವರು ಟೌನ್ ಹಾಲಿನಲ್ಲಿ ಹರಿಶ್ಚಂದ್ರನಾಯನೆಂಬ ನಾಟಕವನ್ನು ಮನೋಜ್ಞವಾಗಿಯೂ ವಿಶೇಷವಾದ ಸೀನರಿಗಳಿಂದಲೂ ಅಭಿನಯಿಸಿದರು ತಾ. 19 ನೇ ಶನಿವಾರ ರಾತ್ರಿ ಈ ಕಂಪೆನಿಯವರು ಗಯಚರಿತ್ರೆಯನ್ನು ಅಭಿನಯಿಸುವರಾಗಿದ್ದಾರೆ.

ನಮ್ಮ ಶ್ರೀಮನ್ ಮಹಾರಾಜರವರು ಕಳೆದ ವಾರ ಬೊಂಬಾಯಿನಿಂದ ಬರೋಡೆಗೆ ದಯಮಾಡಿದರು. ಅವರು ದಿವಾನ್‌ರವರ ಸಮೇತ ದೆಹಲಿಗೆ ಮುಂದಿನ ವಾರ ತೆರಳಿ ವೈಸ್‌ರಾಯರವರ ಭೇಟಿಮಾಡುವವರಾಗಿದ್ದಾರೆ. ಇದಕ್ಕಾಗಿಯೇ ಕಳೆದ ವಾರ ನಮ್ಮ ಬ್ರಿಟಿಷ್ ರೆಸಿಡೆಂಟರವರೂ ಬೆಂಗಳೂರಿನಿಂದ ಉತ್ತರ ದೇಶಕ್ಕೆ ಪ್ರಯಾಣಮಾಡಿರುತ್ತಾರೆ ಮಹಾರಾಜರವರು ಮಾರ್ಚಿ ಮೊದಲನೇ ವಾರ ಸೀಮೆಯಿಂದ ಬೊಂಬಾಯಿಗೆ ಬಂದಿಳಿಯುವ ಹೊಸ ವೈಸ್‌ರಾಯರವರ ಭೇಟಿಮಾಡಿಕೊಂಡು, ಸುಮಾರು ಮಾರ್ಚಿ ತಾ. 7 ಕ್ಕೆ ವಾಪಸು ಬೆಂಗಳೂರಿಗೆ ಚಿತ್ತೈಸುವರೆಂದು ಕೇಳುತ್ತೇವೆ.

ರಾಜಧಾನಿಯ ನಜರಬಾದ್ ಮೊಹಲ್ಲಾ ಮ್ಯುನಿಸಿಪಲ್ ಕೌನ್ಸಿಲರಾದ ಮ|| ತಿರುವೆಂಗಡಂ ಮೊದಲಿಯಾರ್ರು ಇಟ್ಟಿಗೆಗೂಡಿನಲ್ಲಿ ಒಂದು ಕಟ್ಟಡವನ್ನು ಒದಗಿಸಿ ಬಾಲಿಕಾ ಪಾಠಶಾಲೆಯನ್ನಿಟ್ಟು ಸುಮಾರು ಎರಡು ವರುಷಗಳಿಗಿಂತಲೂ ಹೆಚ್ಚಾಗಿ ಸ್ವಂತ ಖರ್ಚಿನಿಂದ ನಡಿಸಿಕೊಂಡು ಬಂದರು ಇದರ ಪ್ರಾರಂಭೋತ್ಸವವು ರಾವ್ ಬಹದೂರ್ ಮ|| ಎಂ. ರಾಮರಾಯರೇ ನಿಂತು ಕೋಲಾಹಲದಿಂದ ನೆರವೇರಿಸಿದರು. ಆದರೆ ಮ್ಯುನಿಸಿಪಾಲಿಟಿಯವರಾಗಲಿ ಸರ್ಕಾರದವರಾಗಲಿ ಈ ಪಾಠಶಾಲೆಗೆ ದ್ರವ್ಯಸಹಾಯ ಮಾಡದೆ ಹೋದಕಾರಣ ಮ|| ಮೊದಲಿಯಾರ್ರು ಅದನ್ನು ವಜಾ ಮಾಡಿಬಿಟ್ಟರೆಂದು ಕೇಳಿ, ಅವರು ಎರಡು ವರುಷ ಅದನ್ನು ಶಾಶ್ವತಪಡಿಸಬೇಕೆಂದು ಸಾಹಸಪಟ್ಟು ದ್ರವ್ಯ ಖರ್ಚುಮಾಡಿದ್ದು ಸಾರ್ಥಕವಾಗದೇ ಹೋಯಿತೆಂದು ವಿಷಾದವಾಗುವುದು.

ಕಳೆದ ಶನಿವಾರ ರಾಜಧಾನಿಯ ಜಗನ್ಮೋಹನ ಬಂಗಲೆಯ ಆವರಣದಲ್ಲಿ ಫಲಪುಷ್ಪಾದಿಗಳ ಪ್ರದರ್ಶನವು ನಡಿಸಲ್ಪಟ್ಟಿತು. ಅರಮನೆಯ ತೋಟಗಳಿಂದಲೂ, ಮ್ಯಾನ್ಷನ್‌ಗಳಿಂದಲೂ, ಯೂರೋಪಿಯನ್ ಮತ್ತು ದೇಶೀಯ ದೊಡ್ಡಮನುಷ್ಯರ ಮನೆಗಳಿಂದಲೂ, ಬೆಂಗಳೂರಿನಿಂದಲೂ ಬಗೆಬಗೆಯ ಫಲಪುಷ್ಪಗಳೂ, ದಿನಸಾವರಿ ತರಕಾರಿಗಳೂ, ನಾನಾ ಜಾತಿಯ ಗಿಡಗಳೂ ಪ್ರದರ್ಶನಕ್ಕೆ ಕಳುಹಿಸಲ್ಪಟ್ಟಿದ್ದವು ಈ ಪ್ರದರ್ಶನವು ಮನೋಹರವಾಗಿಯೂ ನೇತ್ರಾನಂದಕರವಾಗಿಯೂ ಜರುಗಿ ಪ್ರಜೆಗಳಿಗೆ ವಿಶೇಷ ಪ್ರೋತ್ಸಾಹವನ್ನುಂಟುಮಾಡಿತು ಮ|| ಟಿ. ಲಕ್ಷ್ಮೀನಾರಾಯಣರೂ, ಮ|| ಜವರಯ್ಯನವರೂ, ಮ|| ಪಾರ್ಕ್ ಓವರ್ಸಿಯರ್ ಲಕ್ಷ್ಮಣರಾಯರೂ ತುಂಬಾ ಶ್ರಮಪಟ್ಟು ಪ್ರದರ್ಶನವನ್ನು ವಿಶೇಷ ಸಂತೋಷಪ್ರದವಾಗಿ ನಡಿಸಿದರು. ಮುಂದಿನ ಆಗಸ್ಟ್ ತಿಂಗಳಲ್ಲಿ ಮತ್ತೊಂದು ಫಲಪುಷ್ಪಾದಿಗಳ ಪ್ರದರ್ಶನ ನಡಿಸಲ್ಪಡುವುದೆಂದು ತಿಳಿಸಿದ್ದಾರೆ.

ರಾಜಧಾನಿಯಲ್ಲಿ ಅರಮನೆ ಹುಜೂರು ಸೆಕ್ರೆಟರಿಯವರ ಆಫೀಸಿನಲ್ಲಿ ಮೂರು ತಿಂಗಳ ಹಿಂದೆ ರಂಗನೆಂಬ ಓಲೇಕಾರನು 8,000 ಚಿಲ್ಲರೆ ರೂಪಾಯಿನ ಕರೆನ್ಸಿ ನೋಟುಗಳನ್ನು ಕಳವುಮಾಡಿ ಕಲೆತಪ್ಪಿಸಿಕೊಂಡು ಹೋಗಿದ್ದು ಕೆಲವು ದಿನಗಳ ಮೇಲೆ ತಾನಾಗಿಯೇ ವಾಪಸು ಬಂದು ಪಶ್ಚಿಮವಾಹಿನಿ ಘಟ್ಟದಲ್ಲಿ ಸ್ನಾನಮಾಡುತ್ತಿದ್ದಾಗ ಅರಮನೆಯ ಒಬ್ಬ ಓಲೇಕಾರನು ಗುರುತು ಹಿಡಿದು ಅವನನ್ನು ಅಲ್ಲಿನ ಪೋಲೀಸಿಗೆ ಹಿಡಿದು ಕೊಟ್ಟನು ಬಳಿಕ ರಾಜಧಾನಿಯ ಪೋಲೀಸಿನವರು ಅವನನ್ನು ವಿಚಾರಿಸಿದಾಗ ಕಳುವು ಮಾಡಿದ ಹಣವನ್ನು ಹ್ಯಾಗೆ ಖರ್ಚು ಮಾಡಿದ್ದನೆಂದು ಅವನೇ ಹೇಳಿಬಿಟ್ಟನು ಅದೇ ರೀತಿ ಕಳವಾದ ಹಣವೆಲ್ಲಾ ಪತ್ತೆ ಆಗಿ ವಸೂಲು ಮಾಡಲ್ಪಟ್ಟಿತು ಸಿಟಿ ಮ್ಯಾಜಿಸ್ಟ್ರೇಟರು ಆ ಲಾಗಾಯಿತು ದರ್ಯಾಫ್ತು ಮಾಡಿ ಕಳೆದವಾರ ರಂಗನಿಗೆ 2 ವರುಷ ಕಠಿಣ ಸಜವನ್ನೂ, ಅವನಿಂದ ಕಳವು ಮಾಲನ್ನು ತೆಗೆದುಕೊಂಡಿದ್ದ ಪುಟ್ಟನೆಂಬವನಿಗೆ 18 ತಿಂಗಳ ಕಠಿಣ ಸಜ 200 ರೂಪಾಯಿ ಜುಲ್ಮಾನೆಯನ್ನೂ, ವೆಂಕಟದಾಸಿ ಎಂಬವನಿಗೆ 1 ವರುಷ ಕಠಿಣ ಸಜ 200 ರೂಪಾಯಿ ಜುಲ್ಮಾನೆಯನ್ನೂ, ಮುನಿಸಾಮಿ ಎಂಬವನಿಗೆ 6 ತಿಂಗಳ ಕಠಿಣ ಸಜವನ್ನೂ ವಿಧಿಸಿರುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಅ|| ಸರ್ಜನ್ ಮಿ|| ಎಫ್. ಫರ್ನಾಂಡಿಸ್‌ರವರನ್ನು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಹೆಲ್ತ್ ಆಫೀಸರಾಗಿ ವರ್ಗಮಾಡಿದೆ.

ಅ|| ಸರ್ಜನ್ ಮಿ|| ಎಸ್. ಜಿ. ಅಶೀರ್ವಾದಂ ಯವರಿಗೆ ಕೊಟ್ಟಿರುವ ಹದಿನಾಲ್ಕು ದಿನಗಳ ಪ್ರಿವಿಲೇಜ್ ರಜವನ್ನು ಇನ್ನು ಹತ್ತು ದಿನ ಜಾಸ್ತಿಮಾಡಿದೆ. ಈಗಿನ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು.

ಕಡೂರು ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರ್ ಮಿ|| ಷೇಕ್ ಅಬ್ದುಲ್ಲಾಯವರನ್ನು ತರೀಕೆರೆ ತಾಲ್ಲೂಕಿನ ಅಮಲ್ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ವರ್ಗಮಾಡಿದೆ.

ಹಾಸನ್ ಡಿವಿಜನ್ ಸಬ್ ಅ|| ಇಂಜನಿಯರ್ ಮ|| ಸಿ. ವಿ ರಾಮಸ್ವಾಮಿ ಶಾಸ್ತ್ರಿಯವರಿಗೆ ಜನವರಿ ತಾ. 7 ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು.

ಅ|| ಇಂಜನಿಯರ್ ಮ|| ಕೆ. ನಾರಾಯಣ ಅಯ್ಯಂಗಾರ್ರನ್ನು ಕಾವೇರಿ ರಿಜರ್ವಾಯರ್ ಸರ್ಕಲ್‌ನಿಂದ ಮೈಸೂರು ಡಿವಿಜನ್‌ಗೆ ವರ್ಗಮಾಡಿದೆ.

ಬಲಾತ್ಕಾರಿಸಿ ದೇಪೀ ಸಿಡಬು ಹಾಕುವ ಕಾನೂನನ್ನು ಇಾನಿಕಾನಹಳ್ಳಿ ಮ್ಯುನಿಸಿಪಲ್ ಸರಹದ್ದಿನಲ್ಲಿಯೂ, ಗುಂಡ್ಲುಪೇಟೆ ಮ್ಯುನಿಸಿಪಲ್ ಸರಹದ್ದಿನಲ್ಲಿಯೂ ಮಾರ್ಚಿ 1 ರ ಲಾಗಾಯಿತು ಒಂದು ವರುಷ ತನಕ ಜಾರಿಗೆ ತರಲ್ಪಡುವುದು.

ಮೊಳಕಾಲ್ಮೂರು ತಾಲ್ಲೂಕ್ ಅಮಲ್ದಾರ್ ಮ|| ಜಿ. ಮರುದಪ್ಪನವರು ತಮ್ಮ ಹೆಸರನ್ನು ಮ|| ಜಿ. ಮುರುಡಯ್ಯನವರೆಂದು ಬದಲಾಯಿಸಿಕೊಂಡಿದ್ದಾರೆ.

ಮ|| ಎಂ. ಎಲ್. ವರ್ಧಮಾನಯ್ಯನವರನ್ನು ಮೈಸೂರು ತಾಲ್ಲೂಕ್ ಬೋರ್ಡಿನ ಮೆಂಬರಾಗಿ ನೇಮಕ ಮಾಡಿದೆ.

ಮ|| ಪ್ಲೀಡರ್ ಆನಂದತೀರ್ಥಾಚಾರ್ಯರನ್ನು ಚಳ್ಳಕೆರೆ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಕ ಮಾಡಿದೆ.

ತಾಲ್ಲೋಕು ವರ್ತಮಾನಗಳು.

ಹೊಸಕೋಟೆ.—ನಮ್ಮ ಅಮಲ್ದಾರ್ ಮ|| ಎಂ. ಎನ್. ಶ್ರೀನಿವಾಸಯ್ಯಂಗಾರ್ರಿಗೆ ಆದಷ್ಟು ಎಷ್ಟು ಮಟ್ಟದ ಹಾಸಿಗೆಯಲ್ಲಿ ಇದ್ದವರನ್ನು ಸರ್ವೇಶನು ಕಾಪಾಡಿ ಅವರಿಗೆ ಈಗ ಆರೋಗ್ಯಭಾಗ್ಯವನ್ನು ಕೊಟ್ಟದ್ದಕ್ಕಾಗಿ ಪ್ರಜೆಗಳೆಲ್ಲಾ ಕೊಂಡಾಡುತ್ತಾರೆ. ಇವರು ರಜಾಗಿ ಈ ಸ್ಥಳಕ್ಕೆ ಬಂದು ಅಮಲ್ದಾರ್ ಮ|| ಎಸ್. ಸುಬ್ಬರಾಯರಿಂದ ಕೆಲಸದ ಛಾರ್ಜನ್ನು ಫೆಬ್ರವರಿ 5 ನೇ ತಾ. ತೆಗೆದುಕೊಂಡಿದ್ದಕ್ಕಾಗಿ ಟವನ್ ಮತ್ತು ತಾಲ್ಲೂಕು ಪ್ರಜೆಗಳಿಗೆಲ್ಲಾ ಬಹಳ ಸಂತೋಷವಾಯಿತು. ಇವರು ಗ್ರಾಮಾಭಿವೃದ್ಧಿ ವಿಷಯ ಬಹಳ ಪ್ರಯಾಸ ತೆಗೆದುಕೊಂಡಿದ್ದಾರೆಂದು ಸಂದೇಹವಿಲ್ಲದೆ ಹೇಳುತ್ತೇನೆ. ಇವರು ಬಂದ ಮೇಲೆ ಪ್ರತಿ ಒಂದು ಗ್ರಾಮದಲ್ಲೂ ವರ್ತಮಾನ ಪತ್ರಿಕೆಗಳನ್ನು ತರಿಸಿ ಓದಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಈಗ ಇವರು 60 ಪತ್ರಿಕೆಗಳನ್ನು ತರಿಸಿ ಹಂಚಿಕೊಡುತ್ತಿರುವರು. ಇನ್ನೂ ಅಭಿವೃದ್ಧಿಮಾಡುವುದಕ್ಕೆ ಬಹಳ ಇಷ್ಟ ಉಳ್ಳವರಾಗಿದ್ದಾರೆಂದು ನಂಬುತ್ತೇನೆ—ಹೊಸಕೋಟೆ ಉಪಾಧ್ಯಾಯರ ಸಂಘದಲ್ಲಿ ಇಬ್ಬರು ಮಾಸ್ತರುಗಳು ಪಾಠ ನಿದರ್ಶನ ಮಾಡಿದರು ಎಂದು ಬರೆದಿತ್ತು. ಇವರಿಬ್ಬರ ಹೆಸರು ಕಾಣಲಿಲ್ಲ. ಅವನ್ನು ಈಗ ತಿಳಿಸುತ್ತೇನೆ ಎ. ವಿ. ಸ್ಕೂಲ್ ಅ|| ಮಾ|| ಮಿ|| ಅಬ್ದುಲ್ ವಾರಿಸ್ ಸಾಹೇಬರು 4 ನೇ ತರಗತಿಗೆ ಇಂಗ್ಲಿಷ್ ವ್ಯಾಕರಣ ಇಂಗ್ಲಿಷ್ ಭಾಷೆಯಲ್ಲಿಯೇ ಟ್ರೈನಿಂಗ್ ನಿಯಮಗಳಿಗನುಸಾರವಾಗಿ ಪಾಠ ನಿದರ್ಶನಮಾಡಿದರು. ಅಗ್ರಾಸನಾಧಿಪತಿಗಳು ಇವರ ಬೋಧನೆಯನ್ನು ನೋಡಿ ಸಂತೋಷಪಟ್ಟರು. ಇವರ ಬೋಧನೆಯಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವಾಯಿತೆಂದು ಕೇಳುತ್ತೇವೆ—ಬೆಂಗಳೂರು ದಂಡಿನ ಪೋಲೀಸ್ ಲೈನ್ ಮಸ್ತಿದು ಅಕ್ಬರ್ ಹುಸೇನ್ ಶಿಷ್ಯ ಹೊಸಕೋಟೆ ಅಂಚೆಮನೆ ಮ್ಯಾನೇಜರ್ ಬಾಲಾಮಿಯ ಲೈಸೆನ್ಸ್‌ದಾರರು ಇವರ ಮುಖಾಂತರ ವೆಂಕಟಾಚಲಯ್ಯನವರ ಛತ್ರದಲ್ಲಿ ಫೆಬ್ರವರಿ 5ನೇ ತಾ. ಸಾಯಂಕಾಲ ಅಮಲ್ದಾರ್ರು, ಡಾಕ್ಟರು, ಊರಿನ ದೊಡ್ಡ ಮನುಷ್ಯರು ಹಾಜರಾಗಿದ್ದರು. ಆ ಸಮಯದಲ್ಲಿ ದಂಡಿನ ಅಬ್ದುಲ್ ವಿಲ್ ಎಂಬವರಿಗೂ ಮದನಪಲ್ಲಿ ಅಬ್ದುಲ್ ಅಜೀಜ್ ಖಾನ್ ಎಂಬವರಿಗೂ ಕುಸ್ತಿ ಆಯಿತು, 5 ನಿಮಿಷದೊಳಗಾಗಿ ಮದನಪಲ್ಲಿಯವರು ಗೆದ್ದರು. ಇದರಿಂದ ಬಾಲಾಮಿಯವರು ಯುದ್ಧದ ಫಂಡಿಗೆ 5 ರೂಪಾಯಿ ಕೊಟ್ಟರು.

ಶಿವಮೊಗ್ಗಾ.—ಹವಾ ಆರೋಗ್ಯಕರವಾಗಿದೆ. ತಾ. 31 ರಲ್ಲಿ ಬೆಂಗಳೂರಿಂದ ಈ ಊರ ಅ|| ಖಜಾನೆಗೆ ಹೊಸ ನಾಣ್ಯಗಳು ರೈಲ್ ಮೇಲೆ ಬಂದವು. ಬಾಲ್ ಸಹರಿಯೊಡನೆ ರೈಲಿನಿಂದ ಖಜಾನೆಗೆ ಸಾಗಿಸಿದರು ಮೈಸೂರಿನಿಂದ ಹೊಸದಾಗಿ ತಯಾರಿಸಿದ ಹುಲಿ ಹಿಡಿಯುವ ಬೋನು ತಂದು ಡಿ|| ಕಚೇರಿ ಹತ್ತಿರ ಇಟ್ಟಿದ್ದರು ಬಹಳ ಚೆನ್ನಾಗಿ ಮಾಡಿದ್ದಾರೆ. ಅನೇಕ ಜನಗಳು ಹೋಗಿ ನೋಡಿಕೊಂಡು ಬಂದರು —ಈ ಊರಿಗೆ ಮೇಕೆ ಕರುಗಳ ಸರ್ಕಸ್, ನಾಟಕ ಸಹ ಬಂದಿವೆ ಚೆನ್ನಾಗಿ ಆಡುತ್ತಾ ಇದ್ದಾರೆ. ಮೊನ್ನೆ ಮೇಕೆ ಸರ್ಕಸ್ಸಿನವರು ಕಡೇ ನಾಟಕ ಮಾಡಿ ಊರಿಗೆ ಹೋದರು.—ಸೂಪರಿಂಟೆಂಡಿಂಗ್ ಇಂಜನಿಯರ್ ಸಾಹೇಬರು ಈ ಊರಿಗೆ ಬಂದು ಇನ್‌ಸ್ಪೆಕ್ಟ್ ಮಾಡಿದರು. ಶಿಕಾರಿಪುರ, ಸಾಗರಗಳಿಗೂ ಹೋಗಿ ಬರುವರೆಂದು ವರ್ತಮಾನವಿದೆ —ಈಗ ಸುಮಾರು 15 ದಿವಸದ ಕೆಳಗೆ ಹಿರಿಯೂರ ಮಾರ್ಗ ಸಂಜಾಪುರ ಗ್ರಾಮಕ್ಕೆ ಅರ್ಧ ಮೈಲಿ ಫಾಸಲೆಯಲ್ಲಿ ಒಂದು ಹುಲಿ ಒಬ್ಬ ಮುಸಲ್ಮಾನನನ್ನು ಹಿಡಿದು ತಿಂದಿತೆಂದು ವರ್ತಮಾನ ಕೇಳಿದೆವು. ಸರ್ಕಾರದವರು ಅಂಥಾ ದುಷ್ಟ ಮೃಗ ಸಂಹಾರಕ್ಕೆ ಸಹಾಯ ಮಾಡಿ ಅದರ ಬಾಧೆ ತಪ್ಪಿಸುವರೆಂದು ನಂಬಿದ್ದೇವೆ.—ಸೇತ್ರೆ ಬಳಿ ಇರುವ ಸಂಕದ ಕಟ್ಟೆಯನ್ನು ವೈಸ್ ಪ್ರೆಸಿಡೆಂಟರವರು ರಿಪೇರಿಗೆ ತಕ್ಕ ಏರ್ಪಾಡು ಮಾಡಿದ್ದಾರೆಂದು ತಿಳಿಸಲು ಸಂತೋಷಿಸುತ್ತೇವೆ.—ಶಿವಮೊಗ್ಗಾ ತಾಲ್ಲೂಕ ನಿದಿಗೆ ಅ|| ಡ|| ಸಾಹೇಬರ ಹೆಡ್ ರೈಟರ್ ಎಂತ ಹೇಳಿಕೊಂಡು ಯಾರೋ ಒಬ್ಬರು ಬಂದು ಅಲ್ಲಿ ಗಾವಟಿ ಪಾಠಶಾಲೆ ಇಟ್ಟುಕೊಂಡಿದ್ದವರನ್ನೇ ಗ್ರಾಂಟಿನೇಡ್ ಸ್ಕೂಲ್ ಮಾಸ್ಟರ್ ಎಂತ ನೇಮಿಸಿ ಕವಾಯಿತು ಏರ್ಪಾಟು ಮಾಡಿ ತಾಲ್ಲೂಕಿಗೆ ಸಹ ವರ್ತಮಾನ ಕೊಟ್ಟರೆಂತಲೂ, ಸದ್ರಿಯವರೇ ಬಿದರೆ ಸ್ಟೇಷನ್ ಬಳಿ ಬಂದು ಸ್ಕೂಲ್ ಮಾಸ್ಟರಿಂದ ಆತಿಥ್ಯ ಹೊಂದಿ ಶಿವಮೊಗ್ಗಾಕ್ಕೆ ರೈಲ್ ಹತ್ತಿದರೆಂದೂ, ಸಂತೋಷಾರ್ಥವಾಗಿ ಸದರಿ ನಿದಿಗೆ ಗ್ರಾಮಸ್ಥರು ಸುಮಾರು ಹದಿನೈದು ರೂಪಾಯಿ ಅವರಿಗೆ ಉಚಿತವಾಗಿ ಕೊಟ್ಟರೆಂದೂ ಜನಗಳು ಬಹಳವಾಗಿ ಆಡಿಕೊಳ್ಳುತ್ತಿದ್ದಾರೆ.

ಮೈಸೂರು ತಾಲ್ಲೂಕು ಉಪಾಧ್ಯಾಯರ ಸಂಘ.

ಈ ಸಂಘದ ಪರವಾಗಿ ಇದೇ ತಿಂಗಳು 12 ನೇ ತಾ. ಮಂಮಲ್ಲಪ್ಪನವರ ಹೈ ಸ್ಕೂಲಿನಲ್ಲಿ ಸಂಘದ ಪ್ರೆಸಿಡೆಂಟರಾದ ಮ|| ಶ್ರೀನಿವಾಸರಾಯರು "ಉಪಾಧ್ಯಾಯರು ವಿರಾಮ ಕಾಲದಲ್ಲಿ ಮಾಡಬಹುದಾದ ಐಚ್ಛಿಕ ಯತ್ನಗಳು" ಎಂಬ ವಿಷಯದಲ್ಲಿ ಉಪನ್ಯಾಸ ಮಾಡಿದರು. ಅದರ ಮುಖ್ಯ ಸಾರಾಂಶವೇನೆಂದರೆ— ಉಪಾಧ್ಯಾಯರು ತಮ್ಮ ಪಾಠಶಾಲೆಯ ಕಾಲವಲ್ಲದೆ ಮಿಕ್ಕ ಕಾಲಗಳಲ್ಲಿ ವ್ಯವಸಾಯ ಸಂಬಂಧವಾದ ಮತ್ತು ಇತರ ವಿಷಯವಾದ ಪತ್ರಿಕೆಗಳನ್ನೋದಿ ತಮ್ಮ ಜ್ಞಾನವನ್ನು ಅಭಿವೃದ್ಧಿ ಪಡಿಸಿಕೊಳ್ಳಬಹುದಲ್ಲದೆ ತಮ್ಮ ಗ್ರಾಮಗಳ ರೈತರಿಗೂ ಆ ವಿಷಯವನ್ನು ಬೋಧಿಸುವುದರ ಮೂಲಕ ಅವರ ಅನುರಾಗಕ್ಕೆ ಪಾತ್ರರಾಗಬಹುದು. ಮತ್ತು ತನಗೆ ಸಾಧ್ಯವಾದಷ್ಟು ಹೆಚ್ಚು ಖರ್ಚು ತಗಲದ ಆಟಗಳ ಸ್ನೇಹರ್ಧಿ ಹುಡುಗರಿಂದ ಆಡಿಸಿ ಅವರ ನಡತೆಗಳನ್ನು ತಿದ್ದಬಹುದು. ಮತ್ತು ಆಯಾ ಗ್ರಾಮಗಳಲ್ಲಿಯೇ ಪರೀಕ್ಷೆ ತೋಟಗಳನ್ನೂ ನೈಟ್ ಸ್ಕೂಲುಗಳನ್ನೂ ಏರ್ಪಡಿಸಿ ವಯಸ್ಕರಾದವರಿಗೆ ಸ್ವಲ್ಪ ಮಟ್ಟಿಗಾದರೂ ವಿದ್ಯಾಭ್ಯಾಸ ಮಾಡಿಸಿದಲ್ಲಿ ಮಾಸ್ಟರುಗಳು ರೈತರ ಅನುರಾಗಕ್ಕೆ ಪಾತ್ರರಾಗಿ ತಮ್ಮ ಏಳಿಗೆಯನ್ನೂ, ರೈತರಿಗೆ ಉಪಕಾರವನ್ನೂ ಸಹ ಮಾಡಿಕೊಳ್ಳುವುದರಲ್ಲಿ ಸಂಶಯವಿಲ್ಲ.

ಇವರ ಉಪನ್ಯಾಸವು ಮುಗಿದ ನಂತರ ಮ|| ಲಕ್ಷ್ಮೀನರಸಿಂಹಯ್ಯನವರೂ, ಮ|| ಎನ್. ಕೃಷ್ಣರಾಯರೂ ಅದೇ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ಅರ್ಪಣೆ ಕೊಡಿಸಿದರು. ಅನಂತರ ಮ|| ಶ್ರೀನಿವಾಸರಾಯರು ವಯಸ್ಕರಾಗಿದ್ದೂ ನಿರಕ್ಷರ ಕುಕ್ಷಿಗಳಾಗಿಯೂ ಇರುವ ಜನಗಳಿಗೆ (ಎಂಟು ಜನಗಳಿಗೆ ಕಮ್ಮಿ ಇಲ್ಲದೆ) ಮೊದಲನೆಯ ಬಾಲಬೋಧೆಯನ್ನು ಚೆನ್ನಾಗಿ ಓದುವುದಕ್ಕೂ ಬರೆಯುವುದಕ್ಕೂ ಕಲಿಸತಕ್ಕಂಥಾ ಮಾಸ್ಟರುಗಳಿಗೆ 5 ರೂಪಾಯಿ ಬೆಲೆ ಬಾಳುವ 3 ಬಹುಮಾನಗಳನ್ನು ಕೊಡುತ್ತೇನೆಂದು ಹೇಳಿ ತಮ್ಮ ಔದಾರ್ಯವನ್ನೂ ವಿದ್ಯಾಭಿವೃದ್ಧಿಯಲ್ಲಿ ತಮಗಿರುವ ಉತ್ಸಾಹವನ್ನೂ ವ್ಯಕ್ತಪಡಿಸಿದರು. ಅನಂತರ ಸಭೆಯ ಪರವಾಗಿ ಕಮಿಟಿಯವರು ಚರ್ಚಿಸಿ ತೀರ್ಮಾನಿಸಿದ್ದ ರೆಗ್ಯುಲೇಷನ್‌ಗಳನ್ನು ಮೆಂಬರುಗಳೆಲ್ಲರೂ ಒಪ್ಪಿ ಅನುಮೋದಿಸಿದರು.

ಈ ಸಂಘದ ಮುಂದಿನ ಮೀಟಿಂಗು ಬರುವ ಮಾರ್ಚಿ ತಿಂಗಳಲ್ಲಿ ನಡೆಸಲಾಗುತ್ತೆ. ಆಗ ಮ|| ಸಿ. ಎನ್. ವೆಂಕಟರಾಯರು ಶಿಶುಗಳ ಮೂಗಿನ ವಿದ್ಯಾಭ್ಯಾಸ ವಿಷಯದಲ್ಲಿ ಉಪನ್ಯಾಸ ಮಾಡುತ್ತಾರೆ.

ಎಂ. ಎನ್. ನರಸಿಂಹಜೋಯಿಸ್, ಗೌರವ ಸೆಕ್ರೆಟರಿ.

ಒಂದು ಕೋಆಪರೆಟಿವ್ ಸೊಸೈಟಿ.

ಚಿಕ್ಕಮಗಳೂರು ತಾಲ್ಲೂಕು ಸರ್ವ ಇನಾಂ ಬೆಳವಾಡಿ ಮಾಗಣೆ ಶೇಕದಾರ್ ಮ|| ಆರ್. ಶೇಷಗಿರಿರಾಯರ ಉತ್ತಮವಾದ ಪ್ರೋತ್ಸಾಹದಿಂದ ಕಳೆದ ತಿಂಗಳು ಈ ಗ್ರಾಮದಲ್ಲಿ ಒಂದು ಪರಸ್ಪರ ಸಹಾಯ ಸಂಘವು ಏರ್ಪಡಿಸಲ್ಪಟ್ಟು ಸರಕಾರದಲ್ಲಿ ರಿಜಿಸ್ಟರಾಗಿರುತ್ತೆ. ಸೊಸೈಟಿ ಕೆಲಸದ ಸೌಕರ್ಯಕ್ಕಾಗಿ ಕೆಳಗೆ ನಮೂದಿಸಿರುವಂತೆ ಅಧಿಕಾರಿಗಳು ನೇಮಿಸಲ್ಪಟ್ಟರು. ಮ|| ಶ್ಯಾ. ವೆಂಕಣ್ಣಯ್ಯನವರು ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್ ಮ|| ಶಿ. ರಾಮಣ್ಣನವರು, ಸೆಕ್ರೆಟರಿ ಮ|| ಶ್ಯಾ. ಹಿರಿಯಣ್ಣನವರು, ಟ್ರೆಷರರ್ ಮ|| ವಿ ಸುಬ್ಬಣ್ಣನವರು, ಆಡಿಟರ್ ಹೆಡ್ ಮಾಸ್ಟರ್ ಮ|| ಡಿ. ರಾಮಯ್ಯನವರು, ಮ|| ಆರ್ ಶೇಷಗಿರಿರಾವ್ ಮುಂತಾದ 10 ಜನ ಪಂಚಾಯಿತರು. ತಾ. 3 ರಲ್ಲಿ ಸಂಘದ ಆಡಿಟರು ಲೆಕ್ಕವನ್ನು ನೋಡಿದರು. ಸೊಸೈಟಿ ಕಾರ್ಯವು ಪ್ರಾರಂಭವಾದ ಒಂದು ಮಾಹೆ ಅವೈರ್ ಒಳಗೆ 232 ಷೇರುಗಳು (ಒಟ್ಟು ಷೇರಿನ ಕಾಲು ಭಾಗ) ಬಿಕರಿಯಾಗಿರುವುದಲ್ಲದೆ 81 ಜನ ಮೆಂಬರುಗಳು ಸೇರಿರುವುದು ಸಂತೋಷವಾಗಿರುತ್ತದೆ 450 ರೂಪಾಯಿ ವರಿಗೂ ಉಚಿತ ರೀತಿಯಲ್ಲಿ ಸಾಲ ಕೊಡಲ್ಪಟ್ಟಿರುತ್ತದೆ. ಲೆಕ್ಕಪತ್ರಗಳು ಸರಿಯಾಗಿಯೂ, ಶಿಲ್ಕು ಮೊಬಲಗು ಕ್ರಮವಾಗಿಯೂ ಇದ್ದವು. ಈ ಸೊಸೈಟಿ ಸ್ಥಾಪನೆಯಾದ ಇಷ್ಟು ಸ್ವಲ್ಪ ಕಾಲದಲ್ಲಿಯೇ ನೆರೆಹೊರೆ ಗ್ರಾಮಗಳ ಸೊಸೈಟಿಗಿಂತ ಹೆಚ್ಚು ಅಭಿವೃದ್ಧಿಯಾಗಿರುವುದಕ್ಕೆ ಮ|| ಶೇಕದಾರ್ ಆರ್. ಶೇಷಗಿರಿರಾಯರ ಮತ್ತು ಸೆಕ್ರೆಟರಿ ಮ|| ಶ್ಯಾ. ಹಿರಿಯಣ್ಣಯ್ಯನವರ ಜನೋಪಕಾರ ಬುದ್ಧಿಯೂ ಮತ್ತು ಪ್ರೋತ್ಸಾಹವೂ ಕಾರಣವಾಗಿರುತ್ತೆ. ಹೀಗೆಯೇ ಸಂಘದ ದೊಡ್ಡ ಮನುಷ್ಯರುಗಳು ಶ್ರದ್ಧೆಯಿಂದ ಕೆಲಸ ಮಾಡುವುದರ ಮೂಲಕ ಜನರಿಗೆ ಪ್ರೋತ್ಸಾಹ ಪಡಿಸಿ, ಈ ಸೊಸೈಟಿಯು ಪರಿಪೂರ್ಣಾಭಿವೃದ್ಧಿಗೆ ಭಾಗಿಗಳಾಗಬೇಕೆಂದು ಅಪೇಕ್ಷಿಸುತ್ತೇನೆ. ಪರೋಪಕಾರ ಬುದ್ಧಿಯುಳ್ಳ ಮಹನೀಯರೆಲ್ಲಾ ಇಲ್ಲಿನ ಸೊಸೈಟಿಯು ಅಭಿವೃದ್ಧಿಯಾಗಲು ಇರುವ ನ್ಯೂನತೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಪರಿಹರಿಸಿ ಸರ್ವ ಕಾರ್ಯಕ್ಕೂ ಬಂಡವಾಳವನ್ನು ಒದಗಿಸಿಕೊಡುವ ಮತ್ತು ಜನರ ಏಳಿಗೆಗೆ ಸಾಧನವಾದ ಇಂಥಾ ಸಂಘವು ಅಭಿವೃದ್ಧಿಯಾಗಲು ಸಹಾಯ ಮಾಡಬೇಕು. ಈ ಸೊಸೈಟಿಗೆ ಸಂಬಂಧಪಟ್ಟ ಮಾಚೇನಹಳ್ಳಿ ಗ್ರಾಮಸ್ಥರು ಅವಿದ್ಯಾವಂತರಾದಾಗ್ಯೂ ನಾನು ಮುಂದೆ ತಾನು ಮುಂದೆ ಎಂದು ಮೆಂಬರಾಗಿ ಸೇರುತ್ತಿರುವುದು ಸಂತೋಷವಾಗಿದೆ ಈ ಸರ್ವ ಇನಾಂ ಗ್ರಾಮಕ್ಕೆ ಯಜಮಾನರಾದ ಶ್ರೀ ಶೃಂಗೇರಿ ಜಗದ್ಗುರು ಸಂಸ್ಥಾನದ ಏಜಂಟ್ ವೇ|| ಶ್ರೀಕಂಠಶಾಸ್ತ್ರಿಗಳಿಗೆ ಈ ಗ್ರಾಮದ ಪಟೇಲ್ ಮ|| ಬಿ ವೆಂಕಟ ದಾಸಪ್ಪನವರು ಮತ್ತು ಇತರ ಗ್ರಾಮಸ್ಥರೂ ಸಹ ಅರಿಕೆ ಮಾಡಿಕೊಂಡಿರುವಂತೆ ಶ್ರೀ ಸಂಸ್ಥಾನದ ಪ್ರೋತ್ಸಾಹವು ಈ ಸೊಸೈಟಿಗೆ ಲಭಿಸಿದಲ್ಲಿ ಸಂಘವು ವಿಶೇಷ ಅಭಿವೃದ್ಧಿಯನ್ನು ಹೊಂದೀತೆನ್ನುವುದಕ್ಕೆ ಸಂದೇಹವಿಲ್ಲ.

ಪ್ರಜಾ ಹಿತಚಿಂತಕ.

ಒಬ್ಬ ಅಮಲ್ದಾರ್ರವರಿಗೆ ನಡೆದ ಸನ್ಮಾನ.

ತುಮಕೂರು ತಾಲ್ಲೂಕು ಅಮಲ್ದಾರರಾಗಿದ್ದು ಬೆಂಗಳೂರಿಗೆ ವರ್ಗಮಾಡಲ್ಪಟ್ಟ ಮ|| ಎಸ್. ಧರ್ಮರಾಯರನ್ನು ಸನ್ಮಾನಿಸುವದಕ್ಕೋಸ್ಕರ ತುಮಕೂರು ಕೋಟೆ ಬಡಾವಣೆ ಪಾಠಶಾಲೆಯು ಹಲವು ತೋರಣಾದಿಗಳಿಂದ ಅಲಂಕರಿಸಲ್ಪಟ್ಟು ಬಹಳ ಮನೋಹರವಾಗಿ ಕಣ್ಗೊಳಿಸುತ್ತಿತ್ತು. ಆ ದಿವಸ ಸಾಯಂಕಾಲ ಬ್ಯಾಂಡ್ ವಾದ್ಯವು ಭೋರ್ಗರೆಯುತ್ತಿರಲು ಡೆಪ್ಯುಟಿ ಕಮಿಷನರ್ ಸಾಹೇಬರವರೂ ಇತರ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಆಫೀಸುಗಳ ಹುದ್ದೇದಾರರೂ, ಗುಮಾಸ್ತರುಗಳೂ, ಲಾಯರುಗಳೂ, ವರ್ತಕರೂ, ಇತರ ದೊಡ್ಡಮನುಷ್ಯರೇ ಅಧಿಕವಾಗಿ ಅನೇಕ ಮಹಾ ಜನಗಳು ನೆರೆದಿದ್ದರು. ಆಗ ಎಲ್ಲರ ಕೋರಿಕೆಯಂತೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಅಗ್ರಾಸನವನ್ನು ವಹಿಸಿದರು. ಅನಂತರ ಅಗ್ರಾಸನಾಧಿಪತಿಗಳೂ ಮತ್ತು ಮ|| ಶೇಷಾದ್ರಿಯ್ಯಂಗಾರ್ರವರೂ ಸಹ ಮೇಲ್ಕಂಡ ಅಮಲ್ದಾರರ ಗುಣಕಥನವನ್ನು ಮಾಡಿದರು. ತರುವಾಯ ಟೀ ಪಾರ್ಟಿಯೂ ಸಂಗೀತವೂ, ಅದನಂತರ ಮ|| ಎಸ್ ಧರ್ಮರಾಯರು ಯಥೋಚಿತವಾದ ಮಾತುಗಳನ್ನಾಡಿದರು. ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ವಿನಿಯೋಗಿಸಲ್ಪಟ್ಟು ತರುವಾಯ ಮ|| ಎಸ್. ಧರ್ಮರಾಯರನ್ನು ಪ್ರಕಾಶಮಾನವಾದ ಗ್ಯಾಸ್ ಲೈಟಿನ ಬೆಳಕಿನಿಂದಲೂ, ಬ್ಯಾಂಡ್ ಮುಂತಾದ ವಾದ್ಯಗಳಿಂದಲೂ ಅವರ ಮನೆಯವರೆಗೂ ಮೆರವಣಿಗೆಯಾಗಿ ಕರೆದುಕೊಂಡು ಹೋಗಿ ಬಿಟ್ಟು ಸರ್ವರೂ ವಾಪಸು ಬಂದರು.

ಇವರು ತಾ. 25-6-15 ರಲ್ಲಿ ಈ ತಾಲ್ಲೋಕಿಗೆ ದಯಮಾಡಿಸಿ ತಾ. 31-1-16 ರಲ್ಲಿ ಈ ತಾಲ್ಲೋಕಿನ ಛಾರ್ಜನ್ನು ಮ|| ಸೀತಾರಾಮಯ್ಯನವರಿಗೆ ವಹಿಸಿ ಬೆಂಗಳೂರು ತಾಲ್ಲೋಕಿಗೆ ಪ್ರಯಾಣಮಾಡಿದರು. ಈ ಸ್ವಲ್ಪ ದಿವಸಗಳಲ್ಲಿ ಈ ಮಹನೀಯರು ರೆವಿನ್ಯೂ ನಡವಳಿಕೆಗಳ ವಿಷಯದಲ್ಲಿ ರೈತರುಗಳ ಅಹವಾಲುಗಳನ್ನು ವಿಚಾರಮಾಡಿ "ಅಹಿಂಸಾ ಪರಮೋಧರ್ಮಃ" ಎಂಬ ವಾಕ್ಯಾನುಸಾರವಾಗಿಯೂ, ಜುಡಿಷಲ್ ಸಂಬಂಧದಲ್ಲಿ "ಧರ್ಮೋ ವಿಜಯತೇ" ಎಂಬ ವಾಕ್ಯಾನುಸಾರವಾಗಿಯೂ ತಾಲ್ಲೋಕು ಅಧಿಕಾರವನ್ನು ನಡಿಸುತ್ತಿದ್ದರಲ್ಲದೆ ತಾಲ್ಲೋಕು ನೌಕರವರ್ಗದವರುಗಳ ಕಷ್ಟಸುಖಗಳನ್ನು ವಿಚಾರಮಾಡಿ ಅನೇಕರಿಗೆ ಬಡ್ತಿ ಕೆಲಸಕ್ಕೆ ಶಿಫಾರಸು ಮಾಡಿದ್ದರ ಮೇಲೆ ನಮ್ಮ ದಯಾಳು ಮಾನ್ಯರಾದ ಡೆಪ್ಯುಟಿ ಕಮಿಷನರ್ ಸಾಹೇಬರವರು ಅವರಿಗೆ ಬಡ್ತಿ ಹುಕುಂ ದಯಪಾಲಿಸಿರುತ್ತಾರೆ. ಇಂಥಾ ಮಹನೀಯರು ಇಷ್ಟು ಸ್ವಲ್ಪಕಾಲ ಇಲ್ಲಿಯೇ ವರ್ಗವಟ್ಟಿದ್ದಕ್ಕೋಸ್ಕರ ವ್ಯಸನಪಡಬೇಕಾಗಿದೆ. ಆದರೆ ಗೌರ್ನಮೆಂಟ್ ಹುಕುಂ ಪ್ರಕಾರ ಮ|| ಧರ್ಮರಾಯರು ಜಾಸ್ತಿ ತಲಬಿನೊಡನೆ ಬೆಂಗಳೂರಿಗೆ ದಯಮಾಡಿಸಿದ್ದರಿಂದ ಇವರಿಗೆ ಕಡ್ಡಿ ಇನ್ನೂ ಹೆಚ್ಚಿನ ಪದವಿಯನ್ನು ಕೊಡಬೇಕೆಂದು ತ್ರಿಕಾಲದಲ್ಲಿಯೂ ಪ್ರಾರ್ಥಿಸುತ್ತೇವೆ. ಈ ರೀತಿ ಕರುಣಾಹೃದಯವುಳ್ಳ ಮ|| ಸೀತಾರಾಮಯ್ಯನವರನ್ನು ಇಲ್ಲಿನ ಅಧಿಕಾರಕ್ಕೆ ಅರ್ಪಣೆ ಕೊಡಿಸಿರುವ ವಿಚಾರದಲ್ಲಿ ನಮ್ಮಗಳ ಆನಂದವನ್ನು ಹೇಳಲು ಸಾಧ್ಯವಿಲ್ಲ.

ನಿಷ್ಪಕ್ಷಪಾತಿ, ಗೂಳೂರು.

ತುಮಕೂರು ಟವರ್ನಲ್ಲಿ ನಡೆದ ಆಕಸ್ಮಿಕ ಮರಣಗಳು.

ಈ ಊರು ವೆಸ್ಲಿಯನ್ ಮಿಷನ್ ಕೋಟೆ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮ|| ಟಿ. ಎನ್. ಲಕ್ಷ್ಮೀನರಸಯ್ಯನವರ ಪತ್ನಿ ಶ್ರೀಮತಿ ರಂಗನಾಯಕಮ್ಮನವರು ವಿದ್ಯಾವತಿಯರಾಗಿಯೂ, ಗಂಡನಲ್ಲಿ ಪ್ರೀತಿ ವಿಶ್ವಾಸ ವಿಧೇಯತೆಯುಳ್ಳವರಾಗಿಯೂ, ವೇದಾಂತ ಮಾರ್ಗದಲ್ಲಿ ಅತ್ಯಾಸಕ್ತಿಯುಳ್ಳವರಾಗಿಯೂ ಇದ್ದರು. ದೀರ್ಘಕಾಲದ ಶರೀರ ಸೌಖ್ಯದಿಂದ್ದರೂ ಗಟ್ಟಿಗಟ್ಟಿಯ ಕೆಲಸ ಕಾರ್ಯಗಳನ್ನು ಮಾಡಿಕೊಂಡಿದ್ದರು. ಇವರಿಗೆ ತಮ್ಮಿಂದ ಇತರರು ಕಷ್ಟಪಡಬೇಕೆಂಬ ಅಭಿಪ್ರಾಯ ತುಷ್ಟಿ ಎರಡು ತಿಂಗಳ ಹಿಂದೆಯೇ ತಮ್ಮ ಚಿಕ್ಕಮ್ಮನವರಿಗೆ ತನಗೆ ಮರಣ ಕಾಲವು ಸಮೀಪಿಸುತ್ತಾ ಬಂದಿದೆ ಎಂಬ ಗೂಢಾರ್ಥದ ಒಂದು ಕಾಗದವನ್ನು ಬರೆದಿದ್ದರು. ಹೀಗಿರುತ್ತಾ ಕಳೆದ ತಾ. 31 ನೇ ಭಾನುವಾರ ಬೆಳಗಿನ ಝಾವ 4½ ಘಂಟೆ ಸಮಯದಲ್ಲಿ ಕಿರೋಸಿನ್ ಎಣ್ಣೆಯಲ್ಲಿ ಒಂದು ಬಿಳೀ ಪಂಚೆಯನ್ನು ನೆನಸಿ ಉಟ್ಟುಕೊಂಡು ಹೊರಗೆ ಬಂದು ಅಗ್ನಿಯನ್ನು ಸ್ವಹಸ್ತ ಇಟ್ಟುಕೊಂಡು "ನಾರಾಯಣ! ನಾರಾಯಣ!" ಎಂದು ಭಗವಂತನನ್ನು ಧ್ಯಾನಿಸುತ್ತ ಏಕಚಿತ್ತದಿಂದಿರುವಾಗ್ಗ ಇವರ ವೃದ್ಧ ಉಗ್ರಪ್ಪನವರು ಕಂಡು ಉರಿಯನ್ನು ಶಮನಗೊಳಿಸಿದರು. ನಂತರ ಆಸ್ಪತ್ರೆಗೆ ಸಾಗಿಸಿದರು. ಅಲ್ಲೂ ಭಗವಂತನನ್ನು ಧ್ಯಾನಿಸುತ್ತಾ ಇವರು ಬೆಂಗಳೂರಿಗೆ ಹೋಗಿದ್ದ ತನ್ನ ಪತಿಯು ಬಂದ ನಂತರ "ನಾನು ಲೋಕಕ್ಕೆ ಉಪಕಾರಿಯಾಗಿರಲಿಲ್ಲ; ಉಪಕಾರ ಮಾಡುವಷ್ಟು ಶಕ್ತಿಯುಳ್ಳವಳೂ ಆಗಿರಲಿಲ್ಲ; ನನ್ನ ಮಕ್ಕಳು ಈ ಲೋಕದಲ್ಲಿ ಉಪಕಾರಿಗಳಾಗಿದ್ದು ಬದುಕಲಿ. ಹೆಣ್ಣು ಮಕ್ಕಳು 17-18 ವರ್ಷದವರಿಗೆ ಲಗ್ನವಾಗದೆ ಇದ್ದು ತಮಗೆ ಇಷ್ಟ ಬಂದ ವರನನ್ನು ಆರಿಸಿಕೊಳ್ಳಲಿ. ನಾನು ಭಗವಂತನ ಸಾಮೀಪ್ಯವಿಂದವನ್ನು ಸೇರುತ್ತೇನೆ" ಎಂದು ಹೇಳುತ್ತಾ ತಾ. 2 ನೇ ಬುಧವಾರ ಕಾಲವಾದರು. ಈಕೆಯನ್ನು ನೋಡಲು ನೂರಾರು ಮಂದಿ ಹೋಗಿದ್ದರು. ಮೂರು ಮಂದಿ ಸಣ್ಣ ಸಣ್ಣ ಮಕ್ಕಳಿದ್ದಾರೆ. ಮ|| ಲಕ್ಷ್ಮೀನರಸಯ್ಯನವರಿಗೆ ಉಂಟಾಗಿರತಕ್ಕ ದುಃಖವನ್ನು ಭಗವಂತನೇ ಶಮನಗೊಳಿಸಲಿ.

ಈ ಮಾಹೆ 4 ನೇ ಶುಕ್ರವಾರ ಬೆಳಿಗ್ಗೆ ಬೆಂಗಳೂರಿನ ಅಪ್ಪಾಜಪ್ಪನೆಂಬ ಒಬ್ಬ ಬಡಗಿಯು ಬೆಳಿಗ್ಗೆ ಎದ್ದು ತನ್ನ ನಿತ್ಯಕರ್ಮಗಳನ್ನು ತೀರಿಸಿಕೊಂಡು ತಾನು ಹಿಂದಿನ ದಿನ ಗೊತ್ತು ಮಾಡಿಕೊಂಡಿದ್ದ ಪ್ರಕಾರ ಸಣ್ಣ ಸಣ್ಣ ಕಿಟಕಿಗಳನ್ನು ಮಾಡಲು 1½ ಅಡಿ ಉದ್ದದ ತುಂಡುಗಳನ್ನು ತನ್ನ ಮನೆಗೆ ತಂದು ಮೂತ್ರವಿಸರ್ಜನೆ ಮಾಡಲು ಕೂತಿದ್ದವನು ಹಾಗೇ ಕೆಳಗೆ ಬಿದ್ದನು. ನಂತರ ಮನೆಗೆ ಕರೆದುಕೊಂಡು ಬಂದ 2-3 ನಿಮಿಷದಲ್ಲಿ ಈ ಲೋಕವನ್ನು ಬಿಟ್ಟನು ಈತನ ಈ ರೀತಿಯಾದ ಮರಣಕ್ಕೆ ಏನು ಕಾರಣವೋ ಗೊತ್ತಾಗಲಿಲ್ಲ. ಮಾಟಕರೇ, ಶರೀರವು ಅಸ್ಥಿರವಾದದ್ದೆಂದು ತಿಳಿದಿದ್ದಾಗ್ಯೂ ದ್ವೇಷ, ಅಸೂಯೆ, ಅಸತ್ಯ ಮೊದಲಾದ ದುರ್ವ್ಯಾಪಾರಗಳಲ್ಲಿ ಅನೇಕರು ನಡೆಯುತ್ತಿರುವರು ಎಲ್ಲರೂ ಮರಣಕ್ಕೆ ಸಿದ್ಧರಾಗಿರಬೇಕೆಂದು ತಿಳಿದು ಸನ್ಮಾರ್ಗದಲ್ಲಿ ನಡೆಯುವವರಾಗಲಿ.

ಪ್ರತ್ಯಕ್ಷದರ್ಶಿ.

ವಿದ್ಯಾಶಾಲೆಗಳಲ್ಲಿ ಬಹುಮಾನ ವಿನಿಯೋಗಗಳು.

ಮೈಸೂರು ವೆಸ್ಲಿಯನ್ ಮಿಷನ್ ಹೈ ಸ್ಕೂಲು.

ಮೈಸೂರು ವೆಸ್ಲಿಯನ್ ಮಿಷನ್ ಹೈ ಸ್ಕೂಲಿನಲ್ಲಿ ಕಳೆದ ಗುರುವಾರ ಸಾಯಂಕಾಲ ಹೈ ಸ್ಕೂಲ್ ಮತ್ತೂ ಹಾರ್ಡ್ವಿಕ್ ಕಾಲೇಜಿನ ವಿದ್ಯಾರ್ಥಿಗಳಿಗೆ ಬಹುಮಾನಗಳು ವಿನಿಯೋಗಿಸಲ್ಪಟ್ಟವು. ಸೀಮೆಯಿಂದ ಬಂದಿರುವ ಮಿಷನ್ ಇಲಾಖಾ ಸೆಕ್ರೆಟರಿಯವರಾದ ರೆವ|| ಮಾರ್ಷಲ್ ಹಾರ್ಟ್ಲಿಯವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಮೈಸೂರು ಸೀಮೆಯ ಮಿಷನ್ ಇಲಾಖಾ ಚೇರ್ಮನ್‌ರವರಾದ ರೆವ|| ಡಿ. ಎ ರೀಸ್‌ರವರೂ, ರಾಜಧಾನಿಯಲ್ಲಿರುವ ಯೂರೋಪ್ಯನ್ ಮತ್ತು ದೇಶೀಯ ಮಿಷನರಿಗಳೂ, ದೊರೆಸಾನಿಗಳೂ, ವಿದ್ಯಾರ್ಥಿಗಳ ಪೋಷಕರೂ, ಇತರ ದೊಡ್ಡ ಮನುಷ್ಯರೂ ಸಭೆಯಲ್ಲಿ ಹಾಜರಾಗಿದ್ದರು. ಹೈ ಸ್ಕೂಲ್ ಪ್ರಿನ್ಸಿಪಲ್‌ರಾದ ರೆವ|| ಎಚ್. ಸ್ಪೆನ್ಸರ್, ಬಿ ಎ. ಯವರು ಹೈ ಸ್ಕೂಲ್, ಹಾರ್ಡ್ವಿಕ್ ಕಾಲೇಜ್, ಪ್ರಾಥಮಿಕ ಸ್ಕೂಲುಗಳ ವಾರ್ಷಿಕ ರಿಪೋರ್ಟುಗಳನ್ನು ಓದಿ ಹೇಳಿದರು. ಅದರಿಂದ ಆ ಸ್ಕೂಲುಗಳು ವರುಷೇ ವರುಷ ವೃದ್ಧಿ ಹೊಂದುತ್ತಿರುವವೆಂದೂ, ವಿದ್ಯಾರ್ಥಿಗಳ ಸಂಖ್ಯೆಯು ತೃಪ್ತಿಕರವಾಗಿರುವುದೆಂದೂ, ಮಕ್ಕಳು ಚಿಕ್ಕಂದಿನಿಂದ ಸಚ್ಚರಿತ್ರೆಯನ್ನು ಕಲಿಯುವುದಕ್ಕೂ ಸತ್ಪ್ರಜೆಗಳಾಗುವುದಕ್ಕೂ ಈ ವಿದ್ಯಾಶಾಲೆಗಳಲ್ಲಿ ಶ್ರೇಷ್ಠವಾದ ಶಿಕ್ಷಣ ಕ್ರಮಗಳು ರಚಿಸಲ್ಪಟ್ಟಿರುವವೆಂದೂ ತಿಳಿಯಿತು. ವಿದ್ಯಾರ್ಥಿಗಳ ಶರೀರ ಶಕ್ತಿಯು ದೃಢಪಡುವುದಕ್ಕೆ ಬಗೆಬಗೆಯ ಕಸರತ್ತುಗಳನ್ನು ಮಾಡುವುದಕ್ಕೂ, ಆಟಗಳಿಗೂ ಪ್ರೋತ್ಸಾಹ ಕೊಡಲ್ಪಟ್ಟಿರುವವು. ಹಲವು ಪಂದ್ಯಗಳಲ್ಲಿ ವಿದ್ಯಾರ್ಥಿಗಳು ಗೆಲ್ಲುಗರೆನಿಸಿಕೊಂಡಿದ್ದಾರೆಂದು ರಿಪೋರ್ಟಿನಿಂದ ಗೊತ್ತಾಯಿತು. ಬಳಿಕ ವಿದ್ಯಾರ್ಥಿಗಳಿಗೆ ಇನಾಂ ಪುಸ್ತಕಗಳೂ, ಸರ್ಟಿಫಿಕೇಟುಗಳೂ ಪ್ರೆಸಿಡೆಂಟರ ಹಸ್ತದಿಂದ ಕೊಡಲ್ಪಟ್ಟವು ಹೆಡ್ ಮಾಸ್ಟರ್ ಮ|| ಎಂ ಸುಬ್ಬಕೃಷ್ಣಯ್ಯನವರು ಉಪಾಧ್ಯಾಯರುಗಳ ಪರವಾಗಿ ಪ್ರೆಸಿಡೆಂಟರಿಗೆ ಸುಬಾಗಮನವನ್ನು ಬಯಸಿ ಅವರೆಲ್ಲಾ ಮನಃಪೂರ್ವಕವಾಗಿಯೂ ಭಕ್ತಿಶ್ರದ್ಧೆಗಳಿಂದಲೂ ವಿದ್ಯಾರ್ಥಿಗಳನ್ನು ಸರಮೇತು ಮಾಡುತ್ತಾ ಬಂದಿರುವುದಾಗಿ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು. ಪ್ರೆಸಿಡೆಂಟರವರು ಬಳಿಕ ಸಂಕ್ಷೇಪವಾದ ಭಾಷಣವನ್ನು ಮಾಡಿ ತಾವು ಮೈಸೂರಿಗೆ ಅನೇಕ ವರುಷಗಳ ಹಿಂದೆ ಬಂದಿದ್ದಾಗ್ಗೆ ವಿದ್ಯೆಯು ಬಹಳ ಕೊಂಚವಾಗಿತ್ತೆಂದೂ, ಈಗ ಅದರ ಅವಶ್ಯಕತೆಯನ್ನು ಪ್ರಜೆಗಳು ಗ್ರಹಿಸಿಕೊಂಡಿರೋಣದರಿಂದ ವಿದ್ಯಾರ್ಥಿಗಳ ಸಂಖ್ಯೆಯು ಹೇರಳವಾಗಿದೆಯೆಂದೂ ಹೇಳಿ ಆನಂದಪಟ್ಟು ವಿದ್ಯಾರ್ಥಿಗಳಿಗೆ ಕೆಲವು ಶ್ರೇಷ್ಠವಾದ ಹಿತೋಕ್ತಿಗಳನ್ನು ಅರ್ಪಣೆ ಕೊಡಿಸಿದರು. ರೆವ|| ಡಿ. ಎ. ರೀಸ್ ಸಾಹೇಬರು ಚೇರ್ಮನ್‌ರವರ ಗುಣಕಥನವನ್ನು ಮಾಡಿ ಸಭಿಕರ ಪರವಾಗಿ ಅವರನ್ನು ವಂದನೆಮಾಡಿದ ಬಳಿಕ ಸಭಿಕರ ಜಯಧ್ವನಿಯಿಂದ ಆ ದಿನದ ಸಂತೋಷ ಕೂಟವು ಮುಕ್ತಾಯವಾಯಿತು.

ಮೈಸೂರು ಸಂಸ್ಕೃತ ಮಹಾ ಪಾಠಶಾಲೆ.

ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವರುಷೇ ವರುಷ ಕೊಡುವ ಏರ್ಪಾಡನ್ನು ಅರಮನೆ ಕಂಟ್ರೋಲರ್ ಮ|| ಬಿ. ರಾಮಕೃಷ್ಣರಾಯರು ಪ್ರಾರಂಭಿಸಿ ಅದು ನಮ್ಮ ಮಹಾರಾಜರವರ ಪಟ್ಟಾಭಿಷೇಕದ ದಿನ ಜರುಗುವಂತೆ ನಿಶ್ಚಯ ಮಾಡಿದರು. ಕಳೆದ ಗುರುವಾರ ಸಾಯಂಕಾಲ ಈ ಸಂತೋಷ ಸಭೆಯು ಜರುಗಿತು ಕೌನ್ಸಿಲ್ ಮ|| ಎಚ್. ವಿ ನಂಜುಂಡಯ್ಯನವರು ಸಭೆಯ ಅಗ್ರಸ್ಥಾನವನ್ನು ದಯಮಾಡಿ ವಹಿಸುವಂತೆ ಒಪ್ಪಿಕೊಂಡಿದ್ದು, ಅನನುಕೂಲದ ದೆಸೆಯಿಂದ ಬರಲಿಲ್ಲವಾಗಿ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಸುಬ್ರಹ್ಮಣ್ಯನವರು ಪ್ರಾರ್ಥಿಸಲ್ಪಟ್ಟು ಅಗ್ರಾಸನವನ್ನು ವಹಿಸಿದರು. ಪಾಠಶಾಲೆಯ ಮುಂದಿರುವ ಚಿಕ್ಕರಿಯುವಂತೆ ದೊಡ್ಡ ಮನುಷ್ಯರೂ, ವೈದಿಕ ಮುಂತಾದವರೂ, ಅಧಿಕಾರಿಗಳೂ ಸೇರಿದ್ದರು. ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಮನೋಜ್ಞವಾದ ಮಂಗಳಾಚರಣೆಯು ಕವನ ಶ್ಲೋಕಗಳೂ ಪದ್ಯಗಳೂ ಓದಲ್ಪಟ್ಟ ಬಳಿಕ ವೇಣೀಸಂಹಾರ ನಾಟಕದಲ್ಲಿ ಒಂದು ಅಂಕವನ್ನು ವಿದ್ಯಾರ್ಥಿಗಳು ಬಹಳ ಮೇಲಾಗಿ ಅಭಿನಯಿಸಿದರು. ತರುವಾಯ ಚತುಶ್ಶಾಸ್ತ್ರಗಳಲ್ಲಿ ವಾಕ್ಯಾರ್ಥಗಳು ನಡೆದವು. ಬಳಿಕ ಪಾಠಶಾಲಾ ಗೌರವ ಸೆಕ್ರೆಟರಿಯವರಾದ ಮ|| ಎಸ್. ರಂಗಾಚಾರ್ಯರು ರಿಪೋರ್ಟನ್ನು ಓದಿದರು. ಅದರ ಮುಖ್ಯಾಂಶಗಳೇನೆಂದರೆ.—

ಈ ಪಾಠಶಾಲೆಯ ರಿಜಿಸ್ಟರಿನಲ್ಲಿ ಕಳೆದ ಹತ್ತು ವರ್ಷಗಳಿಂದ ತಿಂಗಳ ಸರಾಸರಿ ವಿದ್ಯಾರ್ಥಿ ಸಂಖ್ಯೆ 169. ಆನಂದ ಸಂವತ್ಸರದ ಭಾದ್ರಪದಮಾಸದ ಸಂಖ್ಯೆ 162. ಈ ರಾಕ್ಷಸ ಸಂವತ್ಸರದ ಭಾದ್ರಪದಮಾಸದ ಸಂಖ್ಯೆ 169. ಈ ತಿಂಗಳಲ್ಲಿ 196. ಈ ಪ್ರಕಾರ ಇದೆ.—ನಾಲ್ಕು ವೇದಗಳು. ನಾಲ್ಕು ಶಾಸ್ತ್ರಗಳು, ಸಾಹಿತ್ಯ, ಜ್ಯೋತಿಶ್ಶಾಸ್ತ್ರ, ಧರ್ಮಶಾಸ್ತ್ರ ಮೊದಲಾದುವುಗಳ ಪಾಠಪ್ರವಚನಗಳಿಗೆ ಇಲ್ಲಿ ತಕ್ಕ ಏರ್ಪಾಡು ಇದೆ ಎಂಬುದು ತಮಗೆ ತಿಳಿದುದಾಗಿಯೇ ಇದೆ. ಈಗ ಇರುವ ವಿದ್ಯಾರ್ಥಿಗಳು ಆಯಾ ವರ್ಗಗಳಲ್ಲಿ ವಿನಿಯುಕ್ತರಾಗಿರುವುದು ಹೇಗೆಂದರೆ:—ಋಗ್ವೇದ ವರ್ಗಗಳಲ್ಲಿ 11 ಮಂದಿ, ಯಜುರ್ವೇದದಲ್ಲಿ 22, ಸಾಮವೇದದಲ್ಲಿ 10, ಶ್ರೌತಸ್ಮಾರ್ತಪ್ರಯೋಗಗಳಲ್ಲಿ 8, ತರ್ಕಶಾಸ್ತ್ರದಲ್ಲಿ 24, ವ್ಯಾಕರಣಶಾಸ್ತ್ರದಲ್ಲಿ 13, ಅದ್ವೈತವೇದಾಂತದಲ್ಲಿ 7, ದ್ವೈತವೇದಾಂತದಲ್ಲಿ 3, ವಿಶಿಷ್ಟಾದ್ವೈತವೇದಾಂತದಲ್ಲಿ 3, ಜ್ಯೋತಿಶ್ಶಾಸ್ತ್ರದಲ್ಲಿ 5, ಮೀಮಾಂಸಾಶಾಸ್ತ್ರದಲ್ಲಿ 3, ಚಂಪೂ ಮೊದಲ್ಗೊಂಡು ಅಲಂಕಾರಾಂತ ಸಾಹಿತ್ಯದಲ್ಲಿ 41, ಕಾವ್ಯಾದಿಗಳಲ್ಲಿ 46, ಈ ಪ್ರಕಾರ ಇದಾರೆ.—ಇವರಲ್ಲಿ ಅನೇಕರಿಗೆ ಅವರವರ ವರ್ಗಗಳ ತಾರತಮ್ಯಾನುಗುಣವಾಗಿ ತಿಂಗಳ ಗಟ್ಟಳೆ ವಿದ್ಯಾರ್ಥಿ ವೇತನಗಳು ಸಲ್ಲುತ್ತವೆ. ಈ ವೇತನಗಳು ನಾಲ್ಕು ತಿಂಗಳಿಗೆ ಒಂದಾವೃತ್ತಿ ನಡೆಯುವ ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಹೊರತು ಇತರರಿಗೆ ಸಲ್ಲುವುದಿಲ್ಲ. ಆದುದರಿಂದ ಪ್ರತಿಯೊಂದು ಪರೀಕ್ಷಾನಂತರದಲ್ಲಿಯೂ ವೇತನವಿದ್ದವರಿಗೆ ತಪ್ಪಿಹೋಗುವುದೂ, ಇಲ್ಲದವರಿಗೆ ಹೊಸದಾಗಿ ದೊರೆಯುವುದೂ ಉಂಟು.—ಶಕ್ಯಮಟ್ಟಿಗೆ ವಿಪ್ರರಾಗಿಯೂ, ಪರಸ್ಥಳದವರಾಗಿ ಉಪವೃತ್ತಿ ಇಲ್ಲದವರಾಗಿಯೂ ಇರುವ 59 ಮಂದಿ ವಿದ್ಯಾರ್ಥಿಗಳಿಗೆ ಶ್ರೀಮನ್ಮಹಾರಾಜರವರ ಛತ್ರದಲ್ಲಿಯೂ, ದೇವಸ್ಥಾನದಲ್ಲಿಯೂ ಎರಡು ವೇಳೆಯೂ ಭೋಜನಕ್ಕೆ ಏರ್ಪಾಡು ಇದೆ.—ಭೋಜನದ ವಿದ್ಯಾರ್ಥಿಗಳೂ ಇತರರೂ ಸೇರಿ ಒಟ್ಟು ಪರಸ್ಥಳದ 95 ಮಂದಿ ವಿದ್ಯಾರ್ಥಿಗಳು ಪಾಠಶಾಲೆಯ ಆವರಣದಲ್ಲಿಯೇ ವಾಸಮಾಡುತ್ತಿದಾರೆ.—ಭಾದ್ರಪದ ಮಾಸದಲ್ಲಿ ನಡೆದ ವಾರ್ಷಿಕ ಪರೀಕ್ಷೆಯಲ್ಲಿ ಈ ಪಾಠಶಾಲೆಯ ವಿದ್ಯಾರ್ಥಿಗಳ ಜತೆಗೆ ಪ್ರತಿವರ್ಷದ ಕಟ್ಟಳೆ ಮೇರೆಗೆ ಮೇಲುಕೋಟೆ, ನಂಜನಗೂಡು, ಶ್ರವಣಬೆಳಗೊಳ ಮೊದಲಾದ ಪರಸ್ಥಳಗಳಿಂದ ವಿದ್ಯಾರ್ಥಿಗಳು ಬಂದಿದ್ದರು. ಇವರು ಮತ್ತು ಈ ಪಾಠಶಾಲೆಯ ವಿದ್ಯಾರ್ಥಿಗಳು ಸಹ 222 ಮಂದಿ.—ಪರೀಕ್ಷಾ ಕಾಲದ ವರ್ಗಗಳನ್ನು ಅನುಸರಿಸಿ ಎಣಿಕೆಮಾಡುವ ಈ ವಿದ್ಯಾರ್ಥಿ ಸಂಖ್ಯೆಯು ಒಟ್ಟು ಆನಂದ ಸಂವತ್ಸರಕ್ಕೆ 250. ಇವರಲ್ಲಿ ತೇರ್ಗಡೆಯಾದವರು 166 ಮಂದಿ ಇದೇ ಈ ರಾಕ್ಷಸ ಸಂವತ್ಸರದಲ್ಲಿ ಬಂದ ಒಟ್ಟು ವಿದ್ಯಾರ್ಥಿ ಸಂಖ್ಯೆ 260. ತೇರ್ಗಡೆಯಾದವರು 171 ಮಂದಿ. ಈ ರಾಕ್ಷಸಸಂವತ್ಸರದಲ್ಲಿ ಪರೀಕ್ಷೆಕೊಟ್ಟವರಲ್ಲಿ ಈ ಪಾಠಶಾಲೆಯ ವಿದ್ಯಾರ್ಥಿಗಳು ಮಾತ್ರ ಒಟ್ಟು 198 ಮಂದಿ ಇವರುಗಳಲ್ಲಿ ಮೂರು ವೇದಗಳಲ್ಲಿಯೂ ಪರೀಕ್ಷೆಕೊಟ್ಟವರು 42 ಮಂದಿ; ತೇರ್ಗಡೆಯಾದವರು 38. ಶಾಸ್ತ್ರದಲ್ಲಿ ಪರೀಕ್ಷಿತರು 73 ಮಂದಿ; ತೇರ್ಗಡೆಯಾದವರು 61, ಸಾಹಿತ್ಯದಲ್ಲಿ ಪರೀಕ್ಷಿತರು 73 ಮಂದಿ; ತೇರ್ಗಡೆಯಾದವರು 9 ಮಂದಿ. ಕಾವ್ಯದಲ್ಲಿ ಪರೀಕ್ಷೆ ಕೊಟ್ಟವರು 60 ಮಂದಿ; ತೇರ್ಗಡೆಯಾದವರು 32 ಮಂದಿ. ಮೇಲುಕೋಟೆ ಪಾಠಶಾಲೆಯಿಂದ ತರ್ಕಶಾಸ್ತ್ರದಲ್ಲಿ ಬಂದಿದ್ದ 4 ಮಂದಿ ಇಬ್ಬರು ತೇರ್ಗಡೆಯಾದರು. ನಂಜನಗೂಡು ಪಾಠಶಾಲೆಯಿಂದ ವ್ಯಾಕರಣದಲ್ಲಿ ಒಬ್ಬ ವಿದ್ಯಾರ್ಥಿ ಬಂದು ತೇರ್ಗಡೆಯಾಗಿದಾನೆ. ಸಾಹಿತ್ಯದಲ್ಲಿ ಬಂದಿದ್ದ ಮತ್ತೊಬ್ಬನು ತೇರ್ಗಡೆಯಾಗಲಿಲ್ಲ. ಚನ್ನರಾಯಪಟ್ಟಣದಿಂದ ವ್ಯಾಕರಣಕ್ಕೆ ಬಂದ ಇಬ್ಬರೂ ತೇರ್ಗಡೆಯಾಗಲಿಲ್ಲ. ಕಾವ್ಯಕ್ಕೆ ಮೇಲುಕೋಟೆ, ನಂಜನಗೂಡು, ಹೊಳೇನರಸೀಪುರ, ತಲಕಾಡು, ಶ್ರವಣಬೆಳಗೊಳ, ಚನ್ನರಾಯಪಟ್ಟಣ, ಬೇಲೂರು, ಬಾಗೇಪಲ್ಲಿ ಈ ಸ್ಥಳಗಳಿಂದ ಬಂದಿದ್ದವರು ಒಟ್ಟು 71 ಮಂದಿ ತೇರ್ಗಡೆಯಾದವರು 41 ಮಂದಿ.—ಸಲಕ್ಷಣಘನಾಂತ ಯಜುರ್ವೇದದಲ್ಲಿ ಶ್ರೀ ಯೋಗ್ಯತೆಯುಳ್ಳರಾಗಿ ಇಲ್ಲಿ ತಮ್ಮ ಕರ್ತವ್ಯವನ್ನು ನಿರಾತಂಕವಾಗಿ ನಿರ್ವಹಿಸುತ್ತಿದ್ದ ಮಹಾದೇವಾವಧಾನಿಗಳೆಂಬ ವೃದ್ಧ ಘನಪಾಠಿಗಳು ಕಾಲಾಧೀನರಾದುದು ಒಂದು ಕೊರತೆಯಾಯಿತು. ಇವರ ಸ್ಥಾನದಲ್ಲಿ ಸಲಕ್ಷಣಘನಾಂತ ಯಜುರ್ವೇದದಲ್ಲಿಯೂ, ಯಾಜ್ಞಿಕಸ್ಮಾರ್ತ ಪ್ರಯೋಗಗಳಲ್ಲಿಯೂ ಪರೀಕ್ಷೆ ಕೊಟ್ಟಿರುವ ಬ್ರಹ್ಮ ಶ್ರೀ ವೆಂಕಟರಾಮಾವಧಾನಿಗಳು ನಿಯಮಿಸಲ್ಪಟ್ಟರು. ಸಾಹಿತ್ಯೋಪಾಧ್ಯಾಯರಾಗಿದ್ದ ಸಾಹಿತ್ಯವಿದ್ವಾನ್ ಬ್ರ. ಶ್ರೀ ರಾಜಗೋಪಾಲಾಚಾರ್ಯರವರು ಗೌರ್ನಮೆಂಟು ವಿದ್ಯಾ ಇಲಾಖೆಗೆ ತೆಗೆದುಕೊಂಡುದರಿಂದ ಇವರ ಸ್ಥಾನಕ್ಕೆ ಅದ್ವೈತವೇದಾಂತಗಳಲ್ಲಿ ನಿಶಿತಪರೀಕ್ಷೆ ಕೊಟ್ಟು ವ್ಯಾಕರಣ ಸಾಹಿತ್ಯಜ್ಞರಾದ ಬ್ರ|| ಶ್ರೀ ಆಕ್ಕಳೂರು ರಂಗಾಚಾರ್ಯರು ಬಂದರು. ಬ್ರ|| ಶ್ರೀ ಜಿ ರಾಮಸ್ವಾಮಿಶಾಸ್ತ್ರಿಗಳು ಅನನ್ಯಮನಸ್ಕರಾಗಿ 5 ವರ್ಷಗಳ ವರೆಗೆ ಅದ್ವೈತ ವೇದಾಂತೋಪಾಧ್ಯಾಯರಾಗಿದ್ದು 3 ಮಂದಿ ಶಿಷ್ಯರನ್ನು ಪ್ರಥಮ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿಸ್ವತಃ ಕೆಲಸದಿಂದ ನಿವೃತ್ತರಾದರು ಅವರ ಸ್ಥಾನದಲ್ಲಿ ಮಹಾಮಹೋಪಾಧ್ಯಾಯ ಬಿರುದಾಂಕಿತರಾದ ಬ್ರಹ್ಮಶ್ರೀ ಚಿದಂಬರದ ಹರಿಹರ ಶಾಸ್ತ್ರಿಗಳು ನೃತ್ತಿಸ್ಥಿತರಾದರು. ಸಾಹಿತ್ಯಭಾಗದಲ್ಲಿ ಉಪಾಧ್ಯಾಯರು ಸಾಲದೆ ಇದ್ದುದರಿಂದ ಪರೀಕ್ಷೆಕೊಟ್ಟು ಪಾಠಪ್ರವಚನಗಳಲ್ಲಿ ಅನುಭವಶಾಲಿಗಳಾಗಿರುವ ಬ್ರಹ್ಮ ಶ್ರೀ ಆಸ್ಥಾನ ಮಹಾವಿದ್ವಾನ್ ಜಾಸನದ ನರಸಿಂಹಶಾಸ್ತ್ರಿಗಳು ಈ ದಿನ ಮೊದಲ್ಗೊಂಡು ಇಲ್ಲಿ ಉಪಾಧ್ಯಾಯರಾಗಿ ನಿಯುಕ್ತರಾಗಿದಾರೆ. ಈ ನಿಯೋಗಗಳೆಲ್ಲವೂ ಪಾಠಶಾಲೆಯ ಶಿಕ್ಷಣಶಕ್ತಿಯ ಉಲ್ಲಾಸಕ್ಕೆ ಅನುಕೂಲವಾದುವು.—ಈ ಪಾಠಶಾಲೆಯಿಂದ ರಾಕ್ಷಸಸಂವತ್ಸರದಲ್ಲಿ 3 ಮಂದಿ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮೊದಲಿಂದ ಇದುವರೆಗೆ 147 ಮಂದಿ ಸಂಪೂರ್ಣ ವಿದ್ಯಾಂಸರಾಗಿ ಸ್ಥಳ ಪರಸ್ಥಳಗಳಲ್ಲಿ ಸ್ಕೂಲ್, ಕಾಲೇಜ್ ಮೊದಲಾದವುಗಳಲ್ಲಿ ಉಪಾಧ್ಯಾಯತ್ವ ಮೊದಲಾದ ಜೀವಿಕೆಗಳನ್ನು ಅವಲಂಬಿಸಿದಾರೆ.—ಅನುಪಪನ್ನರಾದ ಪರಸ್ಥಳದ ವಿದ್ಯಾರ್ಥಿಗಳ ವಾಸಕ್ಕೆ ಪೂರ್ವಕಾಲದ ರೀತಿಯಲ್ಲಿ ಸಾಮಾನ್ಯವಾದ ನಿವಾಸಗಳು ಇಲ್ಲಿ ಇದ್ದುವು ಬಹಳ ಅನುಕೂಲವಾದುದಲ್ಲ. ಈ ಸರಸ್ವತೀಪ್ರಾಸಾದಕ್ಕೆ ಅನುಕೂಲ ರೀತಿಯ ವಾದುವೂ ಅಲ್ಲ. ಸರ್ವ ವಿದ್ಯಾಭಿವೃದ್ಧಿ ಬದ್ಧಾದರರಾದ ನಮ್ಮ ಶ್ರೀಮನ್ಮಹಾರಾಜರವರ ಸರ್ವತೋಮುಖವಾದ ಔದಾರ್ಯದ ಶ್ರೀಹಸ್ತಪ್ರಸಾದದಿಂದ ಈ ನ್ಯೂನತೆಯು ನಿಶ್ಶೇಷವಾಗಿ ಪರಿಹಾರವಾಯಿತು. ಜರ್ಜರ ಕುಟೀರಗಳ ಸ್ಥಾನದಲ್ಲಿ ವಿದ್ಯಾರ್ಥಿಗಳ ದೇಹಶುದ್ಧಿ ಚಿತ್ತಶುದ್ಧಿಗಳಿಗೂ, ಆರೋಗ್ಯಸೌಖ್ಯಗಳಿಗೂ ಅನುಕೂಲವಾಗಿ ನೋಟಕ್ಕೆ ರಮ್ಯವಾಗಿರುವ ನವೀನ ರೀತಿಯ ನಿವಾಸಶ್ರೇಣಿಗಳು ಉದ್ಭವಿಸಿವೆ. ಇದಕ್ಕೋಸ್ಕರ ಕಮಿಟಿಯವರು ಮೊದಲ್ಗೊಂಡು ಎಲ್ಲರೂ ಕೃತಜ್ಞರಾಗಿರುವರಲ್ಲದೆ ಉಪಾಧ್ಯಾಯಮಂಡಲಿಯೂ, ವಿದ್ಯಾರ್ಥಿಗಳೂ ಅನವರತವೂ ಶ್ರೀಮನ್ಮಹಾರಾಜರವರ ಶ್ರೇಯಸ್ಸನ್ನು ಬಯಸುತ್ತಿದಾರೆ.—ನಮ್ಮ ಸೀಮೆಯಲ್ಲಿ ಸಂಸ್ಕೃತವಿದ್ಯೆಗೆ ವಿಶೇಷ ಪ್ರೋತ್ಸಾಹಕೊಟ್ಟು ಅದನ್ನು ಹೆಚ್ಚಾದ ಏಳಿಗೆಗೆ ತರುವ ಬಗೆಯನ್ನರಿಯಲು ನಮ್ಮ ಶ್ರೀಮನ್ಮಹಾರಾಜರವರಿಂದ ನಿಯುಕ್ತವಾದ ಸಂಸ್ಕೃತ ವಿದ್ಯಾಭ್ಯಾಸದ ಕಮಿಟಿಯವರು ಸಾವಧಾನವಾಗಿ ಪರ್ಯಾಲೋಚಿಸಿ ನಿಶ್ಚಯ ಮಾಡಿರುವ ಸಲಹೆಗಳು ಕೂಡಲೇ ಅನುಷ್ಠಾನಕ್ಕೆ ಬಂದಲ್ಲಿ ಸಂಸ್ಕೃತ ವಿದ್ಯೆಯು ಇನ್ನೂ ಕಾರ್ಯೋಪಕಾರಿಯಾಗಿ ಬೆಳೆದು ವಿಶಾಲವಾಗಿ ಹಬ್ಬಿ ಸರ್ವರಿಗೂ ಶ್ರೇ

ಸ್ಥಗಳನ್ನು ಹೆಚ್ಚಿಸಿ ಇಹಪರ ಸುಖಪರಂಪರೆಯನ್ನು ಸಂಘಟಿಸುವುದೆಂದು ಹೇಳಿದರು.

ತರುವಾಯ ಅಗ್ರಾಸನಾಧಿಪತಿಗಳು ವಿದ್ಯಾರ್ಥಿಗಳಿಗೆ ಬಹುಮಾನವಾಗಿ ಗ್ರಂಥಗಳನ್ನು ಸ್ವಹಸ್ತ ದಯಪಾಲಿಸಿದರು. ವೇಣೀ ಸಂಹಾರ ನಾಟಕವನ್ನು ಬಹಳ ಚೆನ್ನಾಗಿ ಅಭಿನಯಿಸಿ ಸಭಿಕರಿಗೆ ವಿಶೇಷ ಆನಂದವನ್ನುಂಟು ಮಾಡಿದ ಮ|| ವೆಂಕಟಾಚಾರ್‍ಯರೂ, ಮ|| ಅನಂತ ಕೃಷ್ಣಶರ್ಮರೂ ಮ|| ರಾಮಕೃಷ್ಣರಾಯರೂ, ಮ|| ಎಂ. ಶ್ರೀನಿವಾಸರಾಯರೂ ವಿಶೇಷ ಬಹುಮಾನವನ್ನು ಕೊಟ್ಟರು. ಬಳಿಕ ಪ್ರೆಸಿಡೆಂಟರು ಹೇಳಿದ ಅಭಿಪ್ರಾಯಗಳೇನೆಂದರೆ—ಮ|| ಎಚ್. ವಿ. ನಂಜುಂಡಯ್ಯನವರು ದಯಮಾಡಿ ಅಗ್ರಾಸನವನ್ನು ವಹಿಸಿದರೆ ನಮ್ಮ ಸಂಸ್ಥಾನದಲ್ಲಿ ನಿರ್ಮಾಣವಾಗುವ ಮಹಾ ವಿದ್ಯಾ ನಿಲಯದಲ್ಲಿ ಪ್ರಾಚೀನ ಭಾಷೆಯ ಸಂಸರ್ಗವು ಎಷ್ಟು ಮಟ್ಟಿಗೆ ಯಾವ ರೂಪದಲ್ಲಿ ಆಗುವುದೆಂಬ ಭಾವವನ್ನು ಬಹುತಾ ಅಪೇಕ್ಷಿಸುತ್ತಿದ್ದರು. ಬರೀ ಸಂಸ್ಕೃತ ವಿದ್ಯೆಯನ್ನು ಕಲಿಯುವುದರಲ್ಲಿ ಜೀವನೋಪಾಯವಾಗುವುದು ಪ್ರಯಾಸವಾಗಿದ್ದರೂ 200 ಮಂದಿಯು ಶನಕ ಈ ಪಾಠಶಾಲೆಯಲ್ಲಿ ಓದುತ್ತಿರುವುದು ಆಶ್ಚರ್ಯವೂ ಆನಂದಕರವೂ ಆಗಿದೆ. ವಿದ್ಯಾರ್ಥಿಗಳಾದರೋ ಚತುಶ್ಶಾಸ್ತ್ರಗಳಲ್ಲೂ ವಾಕ್ಯಾರ್ಥಗಳನ್ನು ಬಹಳ ಸಾಮರ್ಥ್ಯದಿಂದ ಮಾಡಿದ್ದನ್ನು ಈ ದಿನ ನಾವೆಲ್ಲಾ ನೋಡಿದೆವು. ಇಂಥ ಪ್ರಾಚೀನ ಶಾಸ್ತ್ರಗಳನ್ನು ಶೋಧನೆ ಮಾಡುವಂಥಾ ಸಂದಿಕೋಷ್ಣ ಮತ ವಿಚಾರ ಶೀಲತೆ ಎಷ್ಟು ವಿಶೇಷವಾದದ್ದೆಂಬ ವಿಷಯದಲ್ಲಿ ಪ್ರಶಂಸೆಮಾಡಲು ನಮಗೆ ಶಕ್ತಿಯಿಲ್ಲ. ಧರ್ಮವೇ ಜಯವಾದೀತೆಂಬ ಅರ್ಥವನ್ನು ನಾಟಕದಲ್ಲಿ ವಿದ್ಯಾರ್ಥಿಗಳು ಅಭಿನಯಿಸಿ ತೋರಿಸುವಂತೆ ನಮ್ಮನ್ನು ಧರ್ಮದಿಂದ ಪರಿಪಾಲಿಸುತ್ತಿರುವ ಸಾರ್ವಭೌಮರವರಿಗೆ ಈಗಿನ ಯುದ್ಧದಲ್ಲಿ ಜಯಪ್ರದವಾದೀತೆನ್ನುವುದಕ್ಕೆ ಸಂಶಯವೇ ಇಲ್ಲ ಎಂದು ಮನೋಹರವಾಗಿ ಭಾಷಣಮಾಡಿದರು. ಬಳಿಕ ಮ|| ಬಿ. ರಾಮಕೃಷ್ಣರಾಯರು ಆ ಪಾಠಶಾಲೆಯ ಪೂರ್ವಚರಿತ್ರೆಯನ್ನೂ, ಸಂಸ್ಕೃತ ವಿದ್ಯೆಗೆ ನಮ್ಮ ಸಂಸ್ಥಾನದಲ್ಲಿ ಏರ್ಪಟ್ಟಿರುವ ಮಹಾದಾಶ್ರಯವನ್ನೂ, ಶ್ರೀಮನ್ಮಹಾರಾಜರವರ ಉದಾರವಾದ ಸಹಾಯ ಪ್ರೋತ್ಸಾಹಗಳನ್ನೂ ಕುರಿತು ದೀರ್ಘವಾಗಿಯೂ, ಸ್ತೋತ್ರಾರ್ಹವಾಗಿಯೂ ಉಪನ್ಯಾಸ ಮಾಡಿದರು. ಕಡೆಗೆ ವೇ|| ವ್ಯಾಸಾಸ್ತ್ರಿಗಳು ಕನ್ನಡದಲ್ಲಿ ಮಂಗಳ ಪದ್ಯಗಳನ್ನು ರಚಿಸಿ ಓದಿ ಸಭೆಯವರುಗಳನ್ನು ಜಯ ಘೋಷಗಳೊಡನೆ ಮುಕ್ತಾಯ ಮಾಡಿದರು.

ಕಡೂರು ಡಿಸ್ಟ್ರಿಕ್ಟ್ ಉಪನ್ಯಾಸಕರು.

ಈವರು ಮೊನ್ನೆ ಉತ್ತಮೋತ್ಸವಸ್ವಾಮಿ ದೇವಸ್ಥಾನದಲ್ಲಿ ಹರಿಹರಪುರದ ಮಠದ ಶ್ರೀ ಸ್ವಯಂಪ್ರಕಾಶ ರಾಮಾನಂದ ಸರಸ್ವತೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆದ ಉತ್ತಮೋತ್ಸವಸ್ವಾಮಿಯ ರಥೋತ್ಸವಕ್ಕಾಗಿ ಸೇರಿದ್ದ ಸಾವಿರಾರು ಜನಗಳಿಗೆಯಲ್ಲಿ ನಿಂತು ಕೇವಲ ಅನಾಗರಿಕರಾದ ಈ ಮಲೆನಾಡು ಪ್ರಜೆಗಳಿಗೆ ಮುಖ್ಯ ಸಾಧಕವಾದ ವಿದ್ಯೆಯು ಸರ್ವರಿಗೂ ಬಂದೇ ತೀರಬೇಕೆಂದು ಬಹು ಉತ್ತಮವಾದ ಕಥೆಗಳಿಂದ ಬೋಧಿಸಿದರು. ಅಗ್ಗೆ ಸದರಿ ಶ್ರೀಯವರು ಬಹಳ ಸಂತೋಷಪಟ್ಟು ಪ್ರಜೆಗಳ ಏಳಿಗೆಗಾಗಿ ಇಂತಹ ದಕ್ಷರಾದ ಉಪನ್ಯಾಸಕರನ್ನು ಏರ್ಪಡಿಸಿದ್ದಕ್ಕಾಗಿ ಗೌರ್ನ್‌ಮೆಂಟಿನವರ ಸದುದ್ದೇಶವನ್ನು ಬಹಳವಾಗಿ ಶ್ಲಾಘಿಸಿದರು. ಅಗ್ಗೆ ನಾನು ಸದರಿ ಉಪನ್ಯಾಸಕರನ್ನು ಕಂಡು ನಮ್ಮ ಗ್ರಾಮಕ್ಕೂ ಬಂದು ಹಾಗೆಯೇ ಬೋಧಿಸಬೇಕೆಂದು ಕೇಳಿಕೊಳ್ಳಲು ಅವರು ಅದಕ್ಕೆ ಅನುಮೋದಿಸಿ ಹಾಗೆಯೇ ನಮ್ಮ ಗ್ರಾಮಕ್ಕೆ ಬಂದು ಇಲ್ಲಿನ ಸ್ಕೂಲ್ ಪರೀಕ್ಷೆ ಮಾಡಿ ಸಂತೋಷಪಟ್ಟು, ಹುಡುಗರಿಗೆ ವಿದ್ಯೆ, ಜೀವನ ಶಾಸ್ತ್ರ, ಪರಸ್ಪರ ಸಹಾಯ ವಗೈರೆ ಬೋಧಿಸಿದ್ದಲ್ಲದೆ ಅಲ್ಲಿ ಸದಸ್ಯರಾಗಿದ್ದ ನೈಟ್ ಕ್ಲಾಸ್ ಗ್ರಾಮಸ್ಥರಿಗೆಲ್ಲಾ (ಸುಮಾರು 50 ಮಂದಿ) ವಿದ್ಯೆ, ಪರಸ್ಪರ ಸಹಾಯ, ವ್ಯವಸಾಯ, ಗ್ರಾಮಾಭಿವೃದ್ಧಿ ಸಂಘ, ಆರೋಗ್ಯ ಧರ್ಮ ವಗೈರೆ ಗಳನ್ನು ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಬೋಧಿಸಿದರು. ಅಗ್ಗೆ ರಾಜ ಧರ್ಮ ಇನ್ಸ್‌ಪೆಕ್ಟರ್ ದಾರರೆಲ್ಲರೂ ವಿದ್ಯಾ ಮಹಿಮೆಯನ್ನೂ, ಸರ್ಕಾರದವರ ಘನ ಉದ್ದೇಶವನ್ನೂ ತಿಳಿದುಕೊಂಡು ತಾವೆಲ್ಲರೂ ತಮ್ಮ ಮಕ್ಕಳಲ್ಲಿ ಗಂಡು, ಹೆಣ್ಣು ಎಂಬ ಭೇದವಿಡದೆ ಸ್ಕೂಲಿಗೆ ಕ್ರಮವಾಗಿ ಕಳುಹಿಸುವುದಾಗಿಯೂ, ತಮ್ಮ ತಮ್ಮ ಯೋಗ್ಯತಾನುಸಾರ ಸಹಾಯ ಮಾಡುವುದಾಗಿಯೂ, ವ್ಯವಸಾಯ ವಿಷಯದಲ್ಲಿ ಹೊಸ ಮುಟ್ಟುಗಳನ್ನು ತರಿಸಿ ಉಪನ್ಯಾಸಕರ ಬೋಧೆಯಂತೆ ವ್ಯವಸಾಯ ನಡೆಸುವುದಾಗಿಯೂ ಒಪ್ಪಿ ಇಂಥಾ ದಕ್ಷರನ್ನು ನಮ್ಮ ಡಿಸ್ಟ್ರಿಕ್ಟಿಗೆ ಕಳುಹಿಸಿದ್ದಕ್ಕಾಗಿ ಘನ ಸರ್ಕಾರದವರಿಗೆ ವಂದಿಸಿ ಸದರಿ ಉಪನ್ಯಾಸಕರನ್ನು ಕಳುಹಿಸಿದರು. ನಮ್ಮ ಈ ಮಲೆನಾಡು ಅಧೀನ ಮಹಲೆಗಳಿಗೆಲ್ಲಾ ಕಳುಹಿಸಿ ಬೋಧಿಸುತ್ತಾ ಬರುತ್ತಿದ್ದಲ್ಲಿ ಕೇವಲ ಅನಾಗರಿಕರಾಗಿ ವಿದ್ಯಾಗಂಧವಿಲ್ಲದೆ ಕಾಲಕ್ಷೇಪ ಮಾಡುತ್ತಿರುವ ಈ ಮಲೆನಾಡು ಪ್ರಜೆಗಳು ವಿದ್ಯಾವಂತರೂ ಆರೋಗ್ಯವಂತರೂ, ವ್ಯವಸಾಯ ಶಾಸ್ತ್ರ ನಿಪುಣರೂ ಆಗಿ ಜನಸಾಂದ್ರತೆಯಲ್ಲಿಯೂ, ಐಶ್ವರ್ಯದಲ್ಲಿಯೂ ಅಭಿವೃದ್ಧಿಗೆ ಬರುವುದರಲ್ಲಿ ಸಂಶಯವಿಲ್ಲವೆಂದು ನಂಬುತ್ತೇನೆ. ನಮ್ಮ ಮಲೆನಾಡಿನವರು ಕೇವಲ ಬಡವರೆಂಬುದು ಸರ್ಕಾರದವರು ಚೆನ್ನಾಗಿ ಬಲ್ಲರು. ಬಹಳ ಪ್ರಯತ್ನದಿಂದ ಕೆಲಸಮಾಡುತ್ತಾ, ಜನಾನುರಾಗವಂತರಾಗಿರುವ ಈ ಹುಲಗರಡಿ ಸ್ಕೂಲ್ ಮಾಸ್ತರಿಗೆ ಗ್ರಾಂಟ್ ಸ್ಯಾಂಕ್ಷನ್ನಾಗಿ ಅನೇಕ ತಿಂಗಳಾದಾಗ್ಯೂ ಅದ್ಯಾಪಿ ಗ್ರಾಂಟ್ ಬಂದಿಲ್ಲವೆಂಬುದು ವ್ಯಸನ. ಸದರಿಯವರ ಪುರೋಭಿವೃದ್ಧಿ ವಿಷಯದಲ್ಲಿ ಬದ್ಧಾದರದಿಂದ ನಮ್ಮ ಸರ್ಕಾರದವರು ಈ ವಿಷಯದಲ್ಲಿ ಗಮನಿಸಿ ಬಾಕಿ ನಿಂತಿರುವ ಗ್ರಾಂಟ್ ಕೊಡಿಸಿ ಕೊಡ ಬೇಕೆಂದೂ ಮುಂದೆ ಕ್ರಮವಾಗಿ ಸಲ್ಲುವಂತೆ ಮಾಡಬೇಕೆಂದೂ ಹೀಗೆ ಮಾಡುವುದರಲ್ಲಿ ಈ ಮಲೆನಾಡಿನವರು ಏಳಿಗೆಗೆ ಬರುವದರಲ್ಲಿ ಸಂಶಯವಿಲ್ಲವೆಂದೂ ಪ್ರಾರ್ಥಿಸುವ

ಪ್ರತ್ಯಕ್ಷ ದರ್ಶಿ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಕಳುಹುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಮೈಸೂರು ಲೈಫ್ ಅಂಡ್ ಪ್ರಾವಿಡೆಂಟ್ ವಿಮೆ ಕಂಪನಿ.

ಅಯ್ಯಾ,—ಮೈಸೂರು ಗೌವರ್ನಮೆಂಟು ಸೆಕ್ಯೂರಿಟಿ ಲೈಫ್ ಅಂಡ್ ಜನರಲ್ ಅಷ್ಯೂರೆನ್ಸ್ ಕಂಪನಿ ಲಿಮಿಟೆಡ್, ಮೈಸೂರು, ಈ ಕಂಪನಿಯ ಮೆಂಬರ್ ಜನರು ನಾನಾ ವಿಧವಾಗಿ ಮಾತನಾಡಿಕೊಳ್ಳುತ್ತಿರುವರು. ಇದಕ್ಕೆ ಕಾರಣ ಈ ಕಂಪನಿ ಮೆಂಬರುಗಳೂ, ಪಾಲಿಸಿ ಹೋಲ್ಡರುಗಳೂ ಆಗತಕ್ಕ ವರಿಗೆ ಕಡಿಮೆಯಾಗುವುದೂ, ಹೊಸದಾಗಿ ಮೆಂಬರುಗಳಾಗಲು ಅಪೇಕ್ಷೆಯುಳ್ಳವರಿಗೆ ಸಂಶಯವೂ ಉಂಟಾಗುತ್ತಿರುವದು, ಆದುದರಿಂದ ಈ ಕಂಪನಿಯು ವಿಷಯಗಳ ಸಂಗತಿಗಳನ್ನು ದಯವಿಟ್ಟು ವಿಮರ್ಶೆಯಿಂದ ತಾವೇ ಆಗಲಿ, ತಮ್ಮ ಪತ್ರಿಕಾ ವಾಚಕರಲ್ಲಿ ಯಾರೇ ಆಗಲಿ ವಿಶದವಾಗಿ ತಿಳಿಸಿ ಸಾರ್ವಜನಿಕರ ಬುದ್ಧಿಯಿಂದ ಈ ಕಂಪನಿಯ ವಿಷಯವಾಗಿ ಘನವನ್ನು ನಮ್ಮ ಸರ್ಕಾರದವರು ಎಷ್ಟರ ಮಟ್ಟಿನ ಜವಾಬ್ದಾರಿಯನ್ನು ಹೊಂದಿರುವರು, ಈ ಕಂಪನಿಯು ಎಷ್ಟರ ಮಟ್ಟಿನ ಭದ್ರವಾಗಿರುವುದು, ಇವೇ ಮುಂತಾದ ವಿಷಯಗಳನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ಪ್ರಚಾರಪಡಿಸಿ ಪ್ರಜೆಗಳಿಗೆ ಉಪಕರಿಸಬೇಕೆಂದು ಪ್ರಾರ್ಥಿಸುವ ಪ್ರಜಾ ಹಿತೈಷಿ, ಕೃಷ್ಣರಾಜ ಸಂದ್ರ.

ಒಂದು ಜಮೀನಿನ ತರಾಟು ವಿಚಾರ.

ಅಯ್ಯಾ,—ಚಿತ್ರದುರ್ಗದ ತಾಲ್ಲೂಕು ಜಂಪಳನಾಯ್ಕನ ಕೋಟೆ ಮಜರೆ ಪರೇನಾಯಗ್ರಾಮದ 262 ನೇ ಸರ್ವೆ ನಂಬರನ್ನು ನನ್ನ ಕುಕ್ಕೇ ಕಂದಾಯ್ರು ರೂ. 8-8-0 ಗೆ ಪೂರಾ ನಂಬರನ್ನು ದೊಡ್ಡ ಕಾಟಪ್ಪನೆಂಬುವನ ಹೆಸರಿಗೆ ಮುಂಚಿನಿಂದ ಮಾಡಿ ಬಂದರು. ಅದೇ ಗ್ರಾಮದ ಕುರುಬರ ಸುಂಕಣ್ಣನ ಮಗ ಬೀರಪ್ಪನೆಂಬುವನು ಅರ್ಧ ಭಾಗದ ಜಮೀನನ್ನು ಗ್ರಾಮದ ಅನುಕೂಲಕ್ಕೆ ಬಿಟ್ಟು ಮಿಕ್ಕ ಅರ್ಧ ಭಾಗದ ಜಮೀನಿಗೆ 100 ರೂಪಾಯಿ ಪರಿಕೂ ಸವಾಲ್ ಮಾಡಿ 100 ರೂಪಾಯಿ ಡಿಪಾಜಿಟ್ ಕಟ್ಟುತ್ತೇನೆಂದು ತಾಲ್ಲೂಕ್ ಅಮಲ್ದಾರ್ರವರಿಗೆ ಎರಡು ಮೂರು ಅರ್ಜಿ ಗುಜರಾಯಿಸಿಕೊಂಡರೂ ಯಾವದೊಂದಕ್ಕೂ ಆರ್ಡರು ದಯಪಾಲಿಸಲಿಲ್ಲ. ಇವರು ರಜಾದ ಮೇಲೆ ಹೋದಾಗ್ಗೆ ಬದಲಿ ಬಂದಿದ್ದ ಅಮಲ್ದಾರ್ರವರು 100 ರೂ. ತೀವಣಿ ಕಟ್ಟಿಸಿಕೊಂಡರು. ತಾ. 9-9-15 ರಲ್ಲಿ ರೆವಿನ್ಯೂ ಕಮಿಷನರಿಗೆ ಬರೆದುಕೊಂಡಿದ್ದರಿಂದ ದುಬಾರಾ ಹರಾಜಿಗೆ ಇಡಿಸಬೇಕೆಂದು ತಾ. 5-1-16 ರಲ್ಲಿ ಇಂಡಾರಸು ಬಂದಿರುತ್ತೆ. ಸಂಕಟ ರೂ. 8-8-0 ತರಾಟು ಮೇಲಿಬಲಗು ಪಾವಸುಮಾಡಿಸರೆಂಬದಾಗಿ ವರ್ತಮಾನ ಕೇಳುತ್ತೇನೆ. ಪ್ರಜಾ ಹಿತಚಿಂತಕ.

ನಮ್ಮ ಸರ್ಕಾರದ ನಡವಳಿಕೆಗಳು.

ಅಯ್ಯಾ,—ಸ್ವದೇಶೀಯನಾಗಿಯೂ, ವೃದ್ಧನಾಗಿಯೂ ಇರತಕ್ಕ ನನಗೆ ನಮ್ಮ ಜನ್ಮಭೂಮಿಯಲ್ಲಿ ಈಗ ನಡೆಯುತ್ತಿರತಕ್ಕ ನಡವಳಿಕೆ ನೋಡಿ ಅದರ ಅಂತ್ಯದ ಫಲಸ್ಥಾಗಿ ಪರಿಣಮಿಸುತ್ತೇ ಎಂಬ ಯೋಚನೆ ನನ್ನನ್ನು ಬಾಧಿಸುತ್ತಾ ಇದೆ. ನನ್ನ ಸಂಶಯವನ್ನು ಜಗತ್ತಿಗೆ ಹಿತವಾಗಿಯೂ, ಸತ್ಯಪರರಾಗಿಯೂ ಇರತಕ್ಕ ತಮಗೆ ವಿಜ್ಞಾಪಿಸುತ್ತೇನೆ. ದೇಶಾಭಿಮಾನ, ಗೌರ್ನಮೆಂಟಿನ ನಡತೆ, ಪ್ರಜೆಗಳ ನಡವಳಿಕೆ, ಅದರಿಂದ ಪ್ರಜೆಗಳಲ್ಲಿ ಉಂಟಾಗತಕ್ಕ ಸುಗುಣ-ದುರ್ಗುಣ, ಈ ಮುಂತಾದ ನಡವಳಿಕೆಯ ಅನುಭವ ಸಹ ಪ್ರಜೆಯೂ ವೃದ್ಧನೂ ಆದ ನನ್ನ ಸಂಶಯವು ಯುಕ್ತವಾದದ್ದೇ, ಅಯುಕ್ತವಾದದ್ದೇ ಎಂಬುವದನ್ನು ಯೋಚಿಸಿ ತಮ್ಮ ತಾತ್ಪರ್ಯವನ್ನು ಬಹಿರಂಗ ಪಡಿಸಬೇಕಾಗಿ ಬೇಡುತ್ತೇನೆ.

ಕೆಲವು ವರುಷಗಳಿಂದ ನಮ್ಮ ದೇಶದಲ್ಲಿ ಪಬ್ಲಿಷ್ ಆಗುತ್ತಿರತಕ್ಕ ಯಾವ ನ್ಯೂಸ್ ಪೇಪರ್ ಓದಿದಾಗ್ಯೂ ಅವರಲ್ಲಿ ಪ್ರತಿ ದಿವಸವೂ ಯಾವದಾದರೂ ಒಂದು ಹಳ್ಳಿ, ಹೋಬಳಿ, ತಾಲ್ಲೂಕು ಹೆಡ್ ಕ್ವಾರ್ಟರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರು ಮುಂತಾದ ಸ್ಥಳಗಳಲ್ಲಿ ಡಿಸ್ಟ್ರಿಕ್ಟ್ ತಾಲ್ಲೂಕ್ ಆಫೀಸರುಗಳು ಮೊದಲುಗೊಂಡು ಪೋಲೀಸ್ ಇಲಾಖಾ ಎಕ್ಸೈಜ್ ದಫೇದಾರ್ರುಗಳು, ರೆವಿನ್ಯೂ ಇಲಾಖಾ ಶ್ಯಾನುಭೋಗ, ಪಟೇಲ, ನೀರಗಂಟಿ ಮುಂತಾದವರು ಸಹ ವಿದ್ಯಾಭಿವೃದ್ಧಿ, ವ್ಯಾಪಾರ, ವ್ಯವಸಾಯ, ಇವುಗಳ ಅಭಿವೃದ್ಧಿಗಾಗಿ ಮೀಟಿಂಗುಗಳು ಮಾಡಿ ಥೀಯೇಟ್ರಿಕಲ್‌ಗಳಾಗಿ, ಉಪನ್ಯಾಸಕರಾಗಿ, ಪೋಷಕರಾಗಿ ವಿನೋದಪಡುತ್ತಾ, ಊಟಗಳೂ, ಫಲಹಾರಗಳೂ, ಸಂತರ್ಪಣೆಗಳೂ ನಡಿಸಿಕೊಳ್ಳುತ್ತಿದ್ದಾರೆ. ಹಳ್ಳಿ ರೈತರಿಗೆ ಇಂಥಾ ವಿನೋದಗಳು ಮೊದಲೇ ಸಂತೋಷಕರವಾದದ್ದು. ಇಂಥಾದ್ದರಲ್ಲಿ ಅವನ್ನು ಸರ್ಕಾರದವರೇ ಅದಕ್ಕೆ ಪ್ರೋತ್ಸಾಹಕೊಟ್ಟರೆ ಹೇಳತಕ್ಕದ್ದೇ ಇಲ್ಲ. ಸರ್ಕಾರಿ ನೌಕರರು ಕುರ್ಚಿಗಳ ಮೇಲೆ ಕೂಡಿ ಈ ನಡವಳಿಕೆಗೆ ಅವರಿಂದ ದ್ರವ್ಯ ಬರುವಂತೆ ಮಾಡಿಕೊಳ್ಳತಕ್ಕದ್ದು ಇವುಗಳೇ ಅವುಗಳ ಫಲವಾಗಿ ಪರಿಣಮಿಸಿ ಇದೆ. ಇದರಿಂದ ರೈತರ ಕಸಬು ಕಟ್ಟಿತು, ಖರ್ಚು ಜಾಸ್ತಿ ಆಯಿತು.

ಈ ದೇಶದಲ್ಲಿ ಸ್ಥಾಪಿಸಿ ಇರತಕ್ಕ ಪ್ರಜಾಪಾಲನೆಯ ರೀತಿ, ಅನಂತರ ನಡವಳಿಕೆ, ಅದಕ್ಕಾಗಿ ಹುಟ್ಟಿ ಇರತಕ್ಕ ಲಾಗಳ ಅರ್ಥ, ಇವುಗಳನ್ನು ಚೆನ್ನಾಗಿ ಯೋಚಿಸಿ ಮತ್ತು ಯಾವ ಗೌರ್ನಮೆಂಟಾಗಲಿ ಅದು ಚೆನ್ನಾಗಿ ಬಾಳಲೇ ಬೇಕಾದರೆ ಅದು ಪ್ರಥಮತಃ ತನ್ನ ಪ್ರಜೆಗಳಲ್ಲಿ ಸಮಾಧಾನ ಸ್ಥಾಪಿಸತಕ್ಕದ್ದು, ಅವರ ಮಾನ ಪ್ರಾಣ ಧನ ಇವುಗಳಿಗೆ ಅಪಾಯವಿಲ್ಲದಂತೆ ಕಾಪಾಡತಕ್ಕದ್ದು, ಅವರಿಗೆ ಗೌರ್ನಮೆಂಟ್ ತಮ್ಮ ರಕ್ಷಣೆಗಾಗಿ ಇದೆ ಅದರ ನಡವಳಿಕೆ ಸತ್ಯವಾದದ್ದೆಂಬ ನಂಬಿಕೆ ಭಕ್ತಿ ಸಹ ಹುಟ್ಟಿಸುತ್ತದೆ. ಇವುಗಳೇ ಅದರ ಪ್ರಥಮ ಕರ್ತವ್ಯವಾಗಿ ಇದೆ. ಅದಕ್ಕಾಗಿ ಯಾವದೊಂದು ಬಾಬಿಗೆ ಒಂದೊಂದು ಇಲಾಖಾ ಏರ್ಪಟ್ಟು ಇದೆ. ಆ ನೌಕರರ ಸಲಬು, ಗೌರ್ನಮೆಂಟಿನ ಇತರ ಖರ್ಚು, ಈ ಮುಂತಾದವುಗಳಿಗೆ ಕಷ್ಟ ಜೀವಿಗಳಾದ ರೈತರೂ, ವ್ಯಾಪಾರಿಗಳೂ ಸಹಾ ಹಣವನ್ನು ಒದಗಿಸುತ್ತಿದ್ದಾರೆ. ಆ ಹಣದ ಕ್ಲಿಪ್ತ, ಅದರ ವಸೂಲಿಯ ನಡವಳಿಕೆ, ಇವುಗಳ ವಿಷಯದಲ್ಲಿ ರೂಲ್ಸ್‌ಗಳೂ ಏರ್ಪಟ್ಟಿವೆ. ಆ ರೂಲ್ಸ್ ಪ್ರಕಾರ ಹೊರತು ಪಬ್ಲಿಕ್ ಸರ್ವೆಂಟು ತನ್ನ ಅಧಿಕಾರದ ಸರಹದ್ದಿನಲ್ಲಿರತಕ್ಕ ಪ್ರಜೆಗಳಿಂದ ಇತರ ಯಾವ ಸಂಭ್ರಮದಲ್ಲೂ ಹಣ ವಸೂಲ್ ಮಾಡಲಿಕ್ಕೆ ಅವನಿಗೆ ಅಧಿಕಾರವಿಲ್ಲ. ಈ ನಿಬಂಧ ಈಗ ತಪ್ಪಿಹೋಯಿತೆಂತ ಕಾಣುತ್ತೆ. ಇದು ಹಾಗಿರಲಿ.

ಮೇಲೆ ನಾನು ಗೌರ್ನಮೆಂಟು, ಅದನ್ನು ನಡೆಸಲಿಕ್ಕೆ ಏರ್ಪಟ್ಟಿರತಕ್ಕ ಪಬ್ಲಿಕ್ ಸರ್ವೆಂಟು ಇವರ ಕರ್ತವ್ಯಗಳನ್ನು ವಿವರಿಸಿ ಇದೆ ನಷ್ಟೆ. ಆಯಾ ಇಲಾಖೆಯವರು ತಮ್ಮ ಜವಾಬ್ದಾರಿ ಕೆಲಸಗಳಲ್ಲಿ ಸದಾ ನಿರತರಾಗಿ ಮುಂಜಾಗ್ರತೆ ತೆಗೆದುಕೊಂಡು ಅಪಾಯಗಳು ನಡೆಯದಂತೆ ತಡೆಯತಕ್ಕದ್ದು, ಅದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಳ್ಳತಕ್ಕದ್ದು, ಸತ್ಯವಾಗಿ ನಡೆಯತಕ್ಕದ್ದು, ಇವೇ ಅವರ ನಿಜವಾದ ಕೆಲಸಗಳಾಗಿರುತ್ತವೆ. ಅನುಭವ ಸಹಿತ ಯೋಚಿಸಿದರೆ ಆ ನೌಕರರಿಗೆ ತಮ್ಮ ಜವಾಬ್ದಾರಿ ಕೆಲಸ ಮಾಡಲಿಕ್ಕೇನೇ ಸಮಯ ಸಾಲದು. ಹೀಗಿರತಕ್ಕದ್ದರಲ್ಲಿ ಅವರು ಸದಾ ವಿನೋದಗಳಲ್ಲಿ ಕಾಲ ಕಳೆಯುತ್ತಾ ಇದ್ದರೆ ಏರ ಬಂದೋಬಸ್ತು ಮಾಡತಕ್ಕವರ್ಯಾರು? ದೇಶದ ಸ್ಥಿತಿ ಕೆಟ್ಟರೆ ಹೆಚ್ಚು ನೌಕರರನ್ನು ಏರ್ಪಡಿಸತಕ್ಕದ್ದು ನಿಜವಾದ ಗೌರ್ನಮೆಂಟ್ ನಡವಳಿಕೆಯೋ, ಅಥವಾ ಸರಿಯಾಗಿ ನಡೆಯುತ್ತಿದ್ದದ್ದು ಯಾಕೆ ಕೆಟ್ಟಿತೆಂಬ ಕಾರಣ ತಿಳಿದು ತಕ್ಕ ಬಂದೋಬಸ್ತು ಮಾಡತಕ್ಕದ್ದು ನಿಜವಾದ ನಡವಳಿಕೆಯೋ. ಇವೂ ಈಗಿನ ನಡವಳಿಕೆ ಸಹಾ ಯೋಚಿಸಿ.

ದೇಶದಲ್ಲಿ ಕಷ್ಟಪಟ್ಟು ಜೀವಿಸತಕ್ಕವರಿಗೆ ಇದರಿಂದ ಕಾಲ ನಿಕ್ಕಿಸಯೂ, ಈ ವಿನೋದಕಾರ್ಯಗಳಲ್ಲಿ ಸೇರುವದರಿಂದ ಡಾಂಭಿಕತ್ವ ಹುಟ್ಟಿ ತಮ್ಮ ಕೆಲಸವನ್ನು ಹೀನೈಸಿ ಲಾಯರುಗಳಿಗೆ ಸಹಾಯ ಮಾಡತಕ್ಕ ಕಸಬುಗಳಲ್ಲೂ, ಜೂಜಾಡತಕ್ಕ ಅಭ್ಯಾಸವೂ, ಅದಕ್ಕೆ ಸಹಕಾರಿಯಾದ ಕಳ್ಳತನ, ವ್ಯಭಿಚಾರ, ಅದಕ್ಕೆ ಸಹಾಯಕರಾಗತಕ್ಕದ್ದು, ಈ ಮೊದಲಾದ ದುರ್ಗುಣಗಳನ್ನು ಕಲಿಯುತ್ತಿದ್ದಾರೆ. ನೌಕರರ ವಿಷಯ ಹೇಳತಕ್ಕದ್ದಾಗಿಯೇ ಇಲ್ಲ. ಅವರುಗಳೆಲ್ಲಾ ಒಂದೇ ವೃಕ್ಷದ ಮೂಲವಾಗಿದ್ದಾರೆ. ಹೆಚ್ಚು ಹೇಳಲಾರೆ

ರಿಟೈರ್ಡ್ ಆಫೀಸರ್, ಬೆಂಗಳೂರು.

ಆತಕೋಗರೂಡು ರೀಡಿಂಗ್ ರೂಮಿನ ವಿಚಾರವಾದ ಬಾತ್ಮಿಗಳನ್ನು ಹಿಂದೆಯೇ ಪ್ರಕಟಿಸಿದ್ದಾಗಿದೆ. ಪ್ರಜಾ ಏಳಿಗೆಗೆ ಹಿತಕರವಾದ ಇಂಥಾ ಏರ್ಪಾಡನ್ನು ವಿವೇಕಿಗಳೂ ಮುಂದಾಳುಗಳೂ ಏಕೀಭವಿಸಿ ಅಭಿವೃದ್ಧಿಗೆ ತರುವುದನ್ನು ಬಿಟ್ಟು ಪರಸ್ಪರ ವಿರೋಧಗಳನ್ನು ಹುಟ್ಟಿಸಿಕೊಳ್ಳುವುದೂ, ಅಂಥಾ ಏರ್ಪಾಡನ್ನು ಕೆಡಿಸಿಕೊಳ್ಳುವುದೂ ಬಹಳ ಶೋಚನೀಯವಾಗಿರುತ್ತದೆ. —ಎಡಿ]

ಇಂಡಿಯಾ ದೇಶದ ವೃತ್ತಾಂತಗಳು.

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಹಿಂದೂ ಮಹಾ ವಿದ್ಯಾನಿಲಯದ ಫಂಡಿಗೆ ಒಂದು ಲಕ್ಷ ರೂಪಾಯಿ ಚಂದಾ ಕೊಟ್ಟಿದ್ದಾರೆ.

ಟೀಟನ್ ಎಂಬ ಹಡಗು ಕಳೆದ ವಾರ ಕರಾಚಿ ಪಟ್ಟಣಕ್ಕೆ ಬಂದಾಗ ಅದರಲ್ಲಿದ್ದ ಸ್ಟುವರ್ಟ್ ಎಂಬ ನೌಕರನು ನಿದ್ರಾರೋಗಪೀಡಿತನಾಗಿದ್ದಾನೆಂದು ಕಂಡು ಬಂದದ್ದರಿಂದ ಅವನನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡುತ್ತಿದ್ದಾರೆ.

ಈ ತಿಂಗಳ ಕಡೇ ಭಾಗದಲ್ಲಿ ನಮ್ಮ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಜೋಧಪುರಕ್ಕೆ ದಯಮಾಡಿ ಅಲ್ಲಿನ ಮಹಾರಾಜರವರಿಗೆ ಸಂಸ್ಥಾನದ ಆಳ್ವಿಕೆಯ ಸ್ವಾತಂತ್ರ್ಯವನ್ನು ಉತ್ಸವ ಪೂರ್ವಕವಾಗಿ ವಹಿಸುವವರಾಗಿದ್ದಾರೆ.

ಪೆಷಾವರ್ ಪಟ್ಟಣದ ಒಂದು ಕೋರ್ಟಿನಲ್ಲಿ ಗೋಪ್ಯವಾದ ಕೆಲವು ಕಾಗದಗಳೂ ರೆಕಾರ್ಡುಗಳೂ ಕಳುವಾಗಿರುತ್ತವೆ. ಜಡ್ಜರು ಆ ಕೋರ್ಟಿನ ಶಿರಸ್ತೇದಾರನನ್ನೂ ಗುಮಾಸ್ತರಿಬ್ಬರನ್ನೂ ಕೆಲಸದಿಂದ ಬಿಡಿಸಿ ದರ್ಯಾಪ್ತು ಮಾಡುತ್ತಿದ್ದಾರೆ.

ಕಳೆದ ವಾರ ಲಾಹೋರ್ ಪಟ್ಟಣದಲ್ಲಿ ಒಂದು ದಿನ ಬೆಳಗಿನ ಝಾವದ 5 ಗಂಟೆ ಸಮಯದಲ್ಲಿ ಭೂಮಿಯು ಒಂದಾವರ್ತಿ ನಿಮಿಷದ ತನಕ ಅದುರಿತು. ಆದರೆ ಜನಗಳಿಗಾಗಲಿ ಗಾಲರಿ ಬಿದ್ದಾಗ್ಯೂ ಕಷ್ಟನಷ್ಟಗಳೇನೂ ಸಂಭವಿಸಲಿಲ್ಲ.

ಬೊಂಬಾಯಿನ ಒಂದು ಹತ್ತಿ ಕಂಪನಿಯವರು ತಮ್ಮ ಕಂಪನಿಯಲ್ಲಿ ಕಳೆದ ವರುಷ ಹುಟ್ಟುವಳಿ ಆದ ಲಾಭವನ್ನೆಲ್ಲಾ ಅಂದರೆ 5000 ರೂಪಾಯನ್ನು ಯುದ್ಧದ ರಿಲೀಫ್ ಫಂಡಿಗೆ ಕೊಟ್ಟು ತಮ್ಮ ರಾಜಭಕ್ತಿಯನ್ನು ಪ್ರಕಾಶ ಪಡಿಸಿದ್ದಾರೆ.

ಕಲ್ಕತ್ತೆಯಲ್ಲಿ ಪ್ರಕಟಿಸಲ್ಪಡುವ ಇಕದಮ್, ರಿಸಾಲತ್, ತಹರ್ವಾರ್ ಎಂಬೀ ಮೂರು ವರ್ತಮಾನ ಪತ್ರಿಕೆಗಳನ್ನೂ ಪಂಜಾಬ್ ಅಧಿಪತ್ಯದಲ್ಲಿ ಯಾರೂ ತರಿಸಕೂಡದೆಂದು ಪಂಜಾಬ್ ಗವರ್ನ್‌ಮೆಂಟಿನವರು ಇಸ್ತಿಹಾರು ಹಾಕಿಸಿರುತ್ತಾರೆ.

ಕಲ್ಕತ್ತಾ ಪಟ್ಟಣದಲ್ಲಿ ಅಂತ್ಯಜರ ಒಂದು ಮಹಾ ಸಭೆ ನಡೆದು ಅವರನ್ನು ಉದ್ಧಾರ ಮಾಡುವುದಕ್ಕೆ ಒಂದು ಫಂಡು ಏರ್ಪಾಡಾಯಿತು. ಸರ್ ಎಸ್. ಪಿ. ಸಿಂಹರವರು ಈ ಫಂಡಿಗೆ ಪ್ರತಿ ವರುಷವೂ 500 ರೂಪಾಯಿ ಚಂದಾ ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ.

ಮಧುರೆಯಿಂದ ಮದರಾಸಿಗೆ ರವಾನೆಯಾದ ಅಂಚೆ ಬಸ್ತುಗಳ ಪೈಕಿ ಒಂದು ಬಸ್ತು ಮಾಯವಾಯಿತು. ಅದರೊಳಗೆ 12,000 ರೂಪಾಯಿ ನೋಟುಗಳಿದ್ದ ಹದಿಮೂರು ರೆಜಿಸ್ಟರ್ ಕಾಗದಗಳಿದ್ದವು. ಅವು ಕಳುವಾಗಿರಬೇಕೆಂದು ಪೋಲೀಸಿನವರು ಪತ್ತೆ ತರಡೂದು ನಡಿಸುತ್ತಿದ್ದಾರೆ.

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಯುದ್ಧವು ಪೂರೈಸುವವರಾಗುವ ತನಕ ತಿಂಗಳೊಂದಕ್ಕೆ 12,000 ರೂಪಾಯಿನಂತೆ ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ದ್ರವ್ಯವನ್ನು ಒದಗಿಸಿ ಸಹಾಯ ಮಾಡುತ್ತಾ ಬರುವೆವೆಂದು ಬಹು ಉದಾರವಾಗಿ ತಿಳಿಸಿರುತ್ತಾರೆ. ಗವರ್ನ್‌ಮೆಂಟಿನವರು ಸಂತೋಷದಿಂದ ಅಂಗೀಕರಿಸಿ ಮಹಾರಾಜರವರನ್ನು ವಂದನೆ ಮಾಡಿದರು.

ಮದರಾಸ್ ಎಂಬ ಆಸ್ಪತ್ರೆ ಹಡಗು ಸೂಯೆಸ್ ಕಡಲು ಕಾಲುವೆಯ ತನಕ ಹೋಗಿ ಗಾಯಪಟ್ಟ 500 ಮಂದಿ ಸೈನಿಕರನ್ನು ಕರೆದುಕೊಂಡು ಬಂದಿದೆ. ದೇಶೀಯ ಹುದ್ದೇದಾರರು 19 ಮಂದಿ, ಬ್ರಿಟಿಷ್ ಹುದ್ದೇದಾರರೂ ಸೈನಿಕರೂ, 10 ಮಂದಿ ; ದೇಶೀಯ ಸೈನಿಕರು 471 ಮಂದಿ; ಗಾಯಪಟ್ಟ ಇಷ್ಟುಮಂದಿಯೂ ಕಳೆದ ತಾ. 3 ರಲ್ಲಿ ಬೊಂಬಾಯಿಗೆ ಬಂದು ಅಲ್ಲಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ.

ಪಾಲ್ಘಾಟಿನಲ್ಲಿ 23 ವಯಸ್ಸಿನ ವೆಂಕಟೇಶ್ವರನೆಂಬ ಬ್ರಾಹ್ಮಣ ಯುವಕನು ಬೈಸಿಕಲ್ ಮೇಲೆ ಬಹಳ ವೇಗವಾಗಿ ಹೋಗುತ್ತಾ ಬೈಸಿಕಲ್ ಗಾಡಿಯನ್ನು 40 ವರುಷದ ಒಬ್ಬ ಬ್ರಾಹ್ಮಣ ಸ್ತ್ರೀಯ ಮೇಲೆ ಓಡಿಸಿದ್ದರಿಂದ ಆಕೆಯು ಗಾಯಪಟ್ಟು ಸ್ವಲ್ಪ ಹೊತ್ತಿನೊಳಗಾಗಿ ಕಾಲವಾದಳು. ಮ್ಯಾಜಿಸ್ಟ್ರೇಟರು ದರ್ಯಾಪ್ತಿ ಮಾಡಿ ಆ ಯುವಕನಿಗೆ ಮೂರು ತಿಂಗಳ ಕಠಿಣ ಸಜಾ ವಿಧಿಸಿ ಅವನ ಬೈಸಿಕಲ್ಲನ್ನು ಕಿತ್ತಿಟ್ಟುಕೊಂಡರು.

ಕಾಶ್ಮೀರ ಸಂಸ್ಥಾನದ ರಾಜಧಾನಿಯಾದ ಶ್ರೀನಗರದಲ್ಲಿ ಪುರಾತನ ಕಾಲದಿಂದಲೂ ಪ್ರಸಿದ್ಧಿ ಹೊಂದಿರುವ ಜುಮ್ಮಾ ಮಸೀದಿ ಕಟ್ಟಡವು ಶಿಥಿಲವಾಗುತ್ತಿದ್ದದ್ದನ್ನು ನೋಡಿ ಅದನ್ನು ದುರುಸ್ತು ಮಾಡಿ ಜೀರ್ಣೋದ್ಧಾರ ಮಾಡಬೇಕೆಂದು ಮಹಾರಾಜರವರು ಮೂರು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಪೂರ್ವ ದಿಗ್ರಾಜ್ಯಗಳಲ್ಲೆಲ್ಲೂ ಅಷ್ಟು ಭಾರಿಯಾದ ಮರದ ಕಟ್ಟಡವು ಇರುವುದಿಲ್ಲ. ಬಹಳ ಚರಿತ್ರಾರ್ಹವಾದದ್ದಾಗಿರುತ್ತದೆ.

ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೆ ಪಟ್ಟಣದಲ್ಲಿ ಗೂರ್ಖರು ಇಬ್ಬರೂ, ಒಬ್ಬ ಹಿಂದುವೂ ಯುದ್ಧದ ವಿಷಯದಲ್ಲಿ ನಾನಾ ಅಬದ್ಧ ವರ್ತಮಾನಗಳನ್ನು ಹಬ್ಬಿಸುತ್ತಾ ಇದ್ದದ್ದರಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವರನ್ನು ಆ ಡಿಸ್ಟ್ರಿಕ್ಟಿನಿಂದ ಗಡೀಪಾರು ಮಾಡಿದ್ದಾರೆ. ಅವರು ಅಲ್ಲಿ ಆಸ್ತಿಗಳನ್ನು ಮಾಡಿಕೊಂಡಿದ್ದದ್ದರಿಂದ ಏಳು ದಿನಗಳ ಅವಧಿಕೊಟ್ಟು ಅಷ್ಟರೊಳಗೆ ಅವರು ತಮ್ಮ ಗೃಹಕೃತ್ಯವನ್ನು ಸರಿಪಡಿಸಿಕೊಳ್ಳಬೇಕೆಂದು ಹುಕುಂ ಮಾಡಿದ್ದಾರೆ.

ಬ್ರಿಟಿಷ್ ಯುದ್ಧದ ಇಲಾಖೆಗೆ ವಿಮಾನ ಯಂತ್ರಗಳನ್ನು ಒದಗಿಸುವುದರ ಕಸ್ಸೋಸ್ಕರ ಪಂಜಾಬ್ ಅಧಿಪತ್ಯದಲ್ಲಿ ಒಂದು ಫಂಡು ಏರ್ಪಾಡಾಗಿ ಪ್ರಜೆಗಳಿಂದ ಚಂದಾ ವಸೂಲಾಗುತ್ತಿದೆ. ಈ ಫಂಡಿನವರು ಇದುವರೆಗೆ ಚಂದಾ ಕೂಡಿದ ಹಣಗಳ ಪೈಕಿ 32 ವಿಮಾನಗಳನ್ನು ತಯಾರ್ಮಾಡುವುದಕ್ಕೆ ಬೇಕಾಗುವ 10,80,000 ರೂಪಾಯನ್ನು ಸೀಮೆಗೆ ಕಳುಹಿಸಿದರು. ಲೆಫ್ಟಿನೆಂಟ್ ಗೌವರ್ನರವರು ಈ ತಿಂಗಳ ಆಖೈರಿಗೆ ಈ ಫಂಡನ್ನು ನಿಲ್ಲಿಸಬಿಡುವಂತೆ ಪ್ರಕಟಿಸಿದ್ದಾರೆ.

ಕಳೆದ 5 ನೇ ತಾ. ಗೆ ಆಖೈರಾದ ಒಂದು ವಾರದಲ್ಲಿ ಹಿಂದೂಸ್ಥಾನದೊಳಗೆ ಪ್ಲೇಗ್ ಉಪದ್ರದಲ್ಲಿ ಒಟ್ಟು 6,628 ಜನರು ಕಾಲವಾದರು. ಬೊಂಬಾಯಿ ಅಧಿಪತ್ಯ ಮತ್ತು ಸಿಂಧು ದೇಶದಲ್ಲಿ 1,721 ಸಂಯುಕ್ತ ಅಧಿಪತ್ಯಗಳಲ್ಲಿ 1,628 ಮರಣಗಳಾಗಿವೆ. ಇತರ ಅಧಿಪತ್ಯಗಳಲ್ಲೆಲ್ಲಾ ಮರಣಗಳೆಷ್ಟೆಂದರೆ—ಮದರಾಸ್ ಅಧಿಪತ್ಯ 431, ಬಂಗಾಳ 3, ಬೀಹಾರ್ ಮತ್ತು ಒರಿಸ್ಸಾ 602, ಪಂಜಾಬ್ 63, ಬರ್ಮಾ 330, ಮಧ್ಯ ಪ್ರಾಂತ್ಯಗಳು 703, ಮೈಸೂರು ಸಂಸ್ಥಾನ 164, ಹೈದರಾಬಾದ್ ಸಂಸ್ಥಾನ 874, ಮಧ್ಯ ಇಂಡಿಯಾ 60, ಕಾಶ್ಮೀರ ಸಂಸ್ಥಾನ 4.

ಸಿವಿಯಲ್ಲಿ ಎಂಬೊಬ್ಬ ಯೂರೋಪಿಯನ್ ರೈಲ್ವೆ ಗಾರ್ಡು ಒಬ್ಬ ಬಂಗಾಳಿ ಸ್ತ್ರೀಯನ್ನು ಬಂಧನದಲ್ಲಿಟ್ಟು ಮಾನಭಂಗ ಪಡಿಸಬೇಕೆಂದು ಪ್ರಯತ್ನ ಪಟ್ಟಂತೆ ಮೊಕದ್ದಮೆ ಆಗಿ ಹೌರಾಪಟ್ಟಣದ ಮ್ಯಾಜಿಸ್ಟ್ರೇಟರು ದರ್ಯಾಪ್ತಿ ಮಾಡಿದ್ದರಲ್ಲಿ ಮೊಕದ್ದಮೆ ರುಜುವಾತಾಗಲಿಲ್ಲವೆಂದು ಹೇಳಿ ಆ ಗಾರ್ಡನ್ನು ಬಿಟ್ಟುಬಿಟ್ಟರು. ಅದರ ಮೇಲೆ ಸರ್ಕಾರದವರು ಸೆಷನ್ಸ್ ಕೋರ್ಟಿನಲ್ಲಿ ಅಪೀಲ್ ಮಾಡಿ, ಕೆಳಕೋರ್ಟಿನವರು ಅಪರಾಧ ರುಜುವಾತಾದರೂ ಶಿಕ್ಷೆ ಮಾಡದೆ ಇರುತ್ತಾರೆಂದು ತಿಳಿಸಿದ್ದಾರೆ. ಸೆಷನ್ಸ್ ಜಡ್ಜರು ಅಪೀಲ್ ದಾಖಲ್ ಮಾಡಿಕೊಂಡು ಅಪರಾಧಿಗೆ ನೋಟೀಸ್ ಕೊಟ್ಟಿದ್ದಾರೆ.

ಕಾಶೀ ಪಟ್ಟಣದಲ್ಲಿ ವೈಸ್‌ರಾಯಿ ಪ್ರಭುಗಳು ಹಿಂದೂ ಯೂನಿವರ್ಸಿಟಿ (ಮಹಾ ವಿದ್ಯಾನಿಲಯ) ಕಟ್ಟಡಕ್ಕೆ ಅಸ್ತಿಭಾರಶಿಲೆಯನ್ನು ಪ್ರತಿಷ್ಠೆ ಮಾಡುವುದಕ್ಕೆ ಹೋಗಿದ್ದಾಗ್ಗೆ ಕ್ರಾಂತಿವಾದಿಗಳು ಅವರಿಗೆ ಯಾವ ವಿಧವಾದ ಅಪಾಯವನ್ನೂ ಉಂಟುಮಾಡದಂತೆ ಹುಷಾರಿ ನೋಡಿಕೊಳ್ಳಬೇಕೆಂದು ಬಹಳ ವಿಶೇಷವಾದ ಪೋಲೀಸ್ ಬಂದೋಬಸ್ತು ಮಾಡಿದ್ದರು. ಈ ವಿಚಾರದಲ್ಲಿ ಮಿ|| ಗಾಂಧಿಯವರಿಗೂ ಮಿಸೆಸ್ ಬೆಸೆಂಟರಿಗೂ ಮನಸ್ತಾಪವುಂಟಾಗಿ ಒಂದು ಉಪನ್ಯಾಸ ನಡೆಯುವ ಸಭಾಮಂದಿರದಲ್ಲಿ ಹಾಜರಾಗಿದ್ದ ದೇಶೀಯ ರಾಜರುಗಳೆಲ್ಲಾ ಹೊರಟು ಹೋದರು. ಬಳಿಕ ಒಂದು ವಾರದ ವರೆಗೆ ಮಹನೀಯರುಗಳು ನಾನಾ ದೇಶಾಭ್ಯುದಯ ವಿಚಾರಗಳನ್ನು ಕುರಿತು ಉಪನ್ಯಾಸಗಳನ್ನು ಮಾಡಿದರು. ಹಿಂದೂ ಮಹಾ ವಿದ್ಯಾನಿಲಯವು ಸಾರ್ಥಕವಾಗುವುದಕ್ಕೆ ನಾಲ್ಕು ಕೋಟಿ ರೂಪಾಯಿ ಫಂಡು ಅವಶ್ಯಕವೆಂದೂ ಪ್ರಜೆಗಳು ತಮ್ಮ ಔದಾರ್ಯವನ್ನು ಪ್ರಕಾಶಪಡಿಸಿದರೆ ಅಷ್ಟು ಹಣ ಕೂಡುವುದೇನೋ ಅಸಾಧ್ಯವಲ್ಲವೆಂದೂ ಪಂಡಿತ ಮದನಮೋಹನ ಮಾಳವೀಯರವರು ತಿಳಿಸಿದ್ದಾರೆ. ಅಲ್ವಾರ್ ಸಂಸ್ಥಾನದ ಮಹಾರಾಜರವರು ಸಂಸ್ಕೃತ ಸಾಹಿತ್ಯ ಮತ್ತು ವೇದಾಂತವನ್ನು ಹೇಳಿಕೊಡುವುದಕ್ಕೆ ವಿದ್ಯಾನಿಲಯದಲ್ಲಿ ಪಂಡಿತೋತ್ತಮರನ್ನು ನೇಮಕ ಮಾಡಿದರೆ ತಾವು ಅದಕ್ಕಾಗಿ ಐದು ವರುಷಕಾಲ ವರುಷಕ್ಕೆ 12,000 ರೂಪಾಯಿನಂತೆ ದ್ರವ್ಯ ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದ್ದಾರೆ

ಕಳೆದ ವಾರ ಬೊಂಬಾಯಿ ಗವರ್ನರಾದ ಲಾರ್ಡ್ ವಿಲ್ಲಿಂಗ್ಡನ್‌ರವರು ರಾಜಕೋಟೆಯಲ್ಲಿರುವ ರಾಜಕುಮಾರರ ವಿದ್ಯಾಶಾಲೆಗೆ ದಯಮಾಡಿ ಅಲ್ಲಿನ ಏರ್ಪಾಡುಗಳನ್ನು ಕಣ್ಣಿನಿಂದ ಪರಾಂಬರಿಸಿ ವಿದ್ಯಾರ್ಥಿಗಳಾದ ರಾಜಕುಮಾರರಿಗೆ ಹಿತವಾದವನ್ನು ಹೇಳಿದರು. ರಾಜಕುಮಾರರು ಈ ಪಾಠಶಾಲೆಗೆ ಓದುವುದಕ್ಕೆ ಬರುವಾಗ ತಮ್ಮ ಊರಿನಿಂದ ಬರುವಾಗ ಸೇವಕರನ್ನಾಗಲಿ ಮುಸಾಹೇಬರುಗಳನ್ನಾಗಲಿ ಕರೆದು ತರಬಾರದು. ಇದರಿಂದ ವಿದ್ಯಾರ್ಥಿಗಳಿಗೆ ಇರಬೇಕಾದ ಪರಸ್ಪರಾನುರಾಗಕ್ಕೆ ಕುಂದಕವುಂಟಾಗುತ್ತದೆ. ಸೀಮೆಯಲ್ಲಿ ರಾಜಕುಮಾರರು ಪಾಠಶಾಲೆಗೆ ತಮ್ಮ ಸೇವಕರುಗಳನ್ನು ಕರೆತರುವುದಿಲ್ಲ. ಇಲ್ಲಿಯೂ ಅದೇ ರೀತಿ ಆಚರಣೆಗೆ ತರಬೇಕು ಎಂದು ಹೇಳಿದರು.

ಫತ್ತೆಘಡದಲ್ಲಿದ್ದ 47 ನೇ ಸಿಖ್ ಸ್ಪೈನಿಕರ ರೆಜಿಮೆಂಟಿಗೆ ಸೇರಿದ ಒಬ್ಬ ಹಾವಲ್ದಾರನಿಗೂ ಇಬ್ಬರು ಸಿಪಾಯಿಗಳಿಗೂ ರಾಮಪ್ರಸಾದನೆಂಬುವನು ಯುದ್ಧದ ವಿಷಯದಲ್ಲಿ ಸುಳ್ಳು ಸುದ್ದಿಯನ್ನು ಹೇಳಿ, ಮಿತ್ರಮಂಡಲಿಗೆ ಸೇರಿದ ರಷ್ಯದವರೂ ಫ್ರೆಂಚರೂ ಬಹಳ ನಷ್ಟಪಟ್ಟು, ಫ್ರೆಂಚರು ಇಷ್ಟರಲ್ಲೇ ಜರ್ಮನಿಯವರ ಕೂಡ ಕರಾರು ಮಾಡಿಕೊಳ್ಳುವಂತೆ ಇದ್ದಾರೆಂದೂ, ರಷ್ಯದವರು ಆಗಲೇ ಕರಾರು ಮಾಡಿಕೊಂಡು ಬಿಟ್ಟಿದ್ದಾರೆಂದೂ ತಿಳಿಸಿದನಂತೆ. ಇದಕ್ಕಾಗಿ ಫತ್ತೆಘಡದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ರಾಮಪ್ರಸಾದನಿಗೆ ಕಠಿಣ ಸಜೆಯನ್ನೂ 500 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು. ರಾಮಪ್ರಸಾದನು ತಾನು ಆ ರೀತಿ ಹೇಳಲಿಲ್ಲವೆಂದೂ ಸುಳ್ಳು ಬನಾವಟ್ಟು ಮಾಡಿ ತನ್ನನ್ನು ಅನ್ಯಾಯವಾಗಿ ಶಿಕ್ಷೆಗೆ ಗುರಿಪಡಿಸಿದ್ದಾರೆಂದೂ ಅಲ್ಲಹಾಬಾದ್ ಹೈಕೋರ್ಟಿನಲ್ಲಿ ಅಪೀಲು ಮಾಡಿಕೊಂಡಿದ್ದಾನೆ.

ಬೊಂಬಾಯಿ ಅಧಿಪತ್ಯದ ಗವರ್ನರವರಾದ ಲಾರ್ಡ್ ವಿಲ್ಲಿಂಗ್ಡನ್‌ರವರು ಕಚ್ಛಾವಾಡಕ್ಕೆ ಸೇರಿದ ಜಾಮ್ ನಗರಕ್ಕೆ ದಯಮಾಡಿಸಿದರು. ಮಹಾರಾಜಾ ಜಾಮ್ ಸಾಹೇಬರೂ, ಸಂಸ್ಥಾನದ ಮುಖ್ಯಾಧಿಕಾರಿಗಳೂ ಶಾದಿದ... ಗವರ್ನರಿಗೆ ಸುಸ್ವಾಗತವನ್ನು ಬಯಸಿ ಕರೆದುಕೊಂಡು ಹೋದರು. ಸೇಟ್ ಅಬ್ದುಲ್ ಕರೀಮ್ ಕಮಾಲ್ ಎಂಬ ಭಾರೀ ವರ್ತಕನು ಒಂದು ಜನಾನಾ ಆಸ್ಪತ್ರೆಯನ್ನೂ ಔಷಧ ಶಾಲೆಯನ್ನೂ ಧರ್ಮಾರ್ಥವಾಗಿ ಕಟ್ಟಿಸುತ್ತಾನೆ. ಮತ್ತು ಆತನು ಆ ಸಂಸ್ಥಾನದಲ್ಲಿ ವಿದ್ಯಾಶಾಲೆಯನ್ನು ಕಟ್ಟಿಸುವುದಕ್ಕಾಗಿ ದಯಪಾಲಿಸಿ 80,000 ರೂಪಾಯಿ ವಿನಿಯೋಗಿಸುವನು. ಇಂಥಾ ಪ್ರಜಾಹಿತ ಚಿಂತಕನಿಂದ ಕಟ್ಟಿಸಲ್ಪಟ್ಟ ಆಸ್ಪತ್ರೆಯನ್ನು ಗವರ್ನರವರು ಬಹಳ ಸಂತೋಷಪಟ್ಟು ಪ್ರತಿಷ್ಠೆ ಮಾಡಿದರು. ಆ ಸಂಸ್ಥಾನದ ರಾಜಾದಾಯವು ಸಾಲಿಯಾನಾ 20 ಲಕ್ಷ ಇದ್ದದ್ದು ಈಗ 29 ಲಕ್ಷ ರೂಪಾಯಿ ಆಗಿದೆ. ಯುದ್ಧದ ರಿಲೀಫ್ ಫಂಡಿಗೆ ಜಾಮ್ ನಗರದ ಮುಖ್ಯ ಪ್ರಜೆಗಳು 20,000 ರೂಪಾಯಿ ಚಂದಾ ಹಾಕಿ ಒಪ್ಪಿಸಿದಾರೆ.

ನಮ್ಮ ವೈಸ್‌ರಾಯಿ ಮತ್ತು ಗೌವರ್ನರ್ ಜನರಲ್‌ರವರಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಅಧಿಕಾರದ ಅವಧಿಯು ಮುಂದಿನ ಮಾರ್ಚಿ ಅಖೈರಿಗೆ ಪೂರೈಸೋಣವರಿಂದ ಅವರು ಕೆಲಸಬಿಟ್ಟು ಸೀಮೆಗೆ ತೆರಳುವರು. ಲಾರ್ಡ್ ಚೆಲಮ್ಸ್‌ಫರ್ಡ್‌ರವರು ದಯಮಾಡಿ ವೈಸ್‌ರಾಯಿ ಪದವಿಯಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಲಾರ್ಡ್ ಹಾರ್ಡಿಂಗ್‌ರವರು ಮಾರ್ಚಿ ತಾ. 31 ರಲ್ಲಿ ಡೆಹಲಿಯನ್ನು ಬಿಟ್ಟು ಏಪ್ರಿಲ್ ತಾ. 1 ರಲ್ಲಿ ಬೊಂಬಾಯಿಗೆ ದಯಮಾಡುತ್ತಾರೆ. ಎರಡು ದಿನಗಳ ತನಕ ಅವರು ಬೊಂಬಾಯಿನಲ್ಲಿದ್ದು ಅಲ್ಲಿನ ಪ್ರಜೆಗಳ ಸಂತೋಷಕೂಟಗಳಿಗೆ ಅವಕಾಶವನ್ನು ಕೊಟ್ಟು ಅವುಗಳಿಂದ ಅಡ್ರೆಸ್ಸುಗಳನ್ನು ಅಂಗೀಕರಿಸುತ್ತಾರೆ. ಅವರು ತಾ. 3 ನೇ ವಾರ ಮಧ್ಯಾಹ್ನ ಹಡಗು ಹತ್ತಿ ಪ್ರಯಾಣ ಮಾಡುವರು. ಹೊಸ ವೈಸ್‌ರಾಯ್ ಲಾರ್ಡ್ ಚೆಲಮ್ಸ್‌ಫರ್ಡ್‌ರವರು ಒಂದೆರಡು ದಿನಗಳ ತನಕ ಬೊಂಬಾಯಿನಲ್ಲಿ ಮುಕ್ಕಾಂ ಮಾಡಿರುವರು, ಪ್ರಜೆಗಳ ಒಪ್ಪಿಸುವ ಅಡ್ರೆಸ್ಸುಗಳನ್ನು ಅಂಗೀಕರಿಸಿ, ಅಲ್ಲಿಂದ ಡೆಹಲಿ ನಗರಕ್ಕೆ ತೆರಳುವರೆಂದು ಪ್ರಕಟವಾಗಿದೆ.

ಮದರಾಸ್ ಪಟ್ಟಣದಲ್ಲಿ ಚಿಂತಾದ್ರಿ ಪೇಟೆಯಲ್ಲಿ ಕಳೆದ ವಾರ ಹೊಲೆಯರ ಮಹಾ ಸಭೆ ನಡೆಯಿತು. ಮ|| ಜಿ ಎಸ್ ವೇಲಾಂಟೀರ್‌ರವರು ಸಭಾ ನಾಯಕರಾಗಿದ್ದರು. ಮ|| ವಿ. ಡಿ. ಬೆಂಜಮಿನ್‌ರವರು ಉತ್ತಮ ಜಾತಿಯವರಾದ ನಾಲ್ಕನೇ ಜಾತಿಯವರಿಗೆ ನಾನಾ ತರದ ಕಷ್ಟನಷ್ಟಗಳುಂಟಾಗುತ್ತಿವೆ ಎಂದೂ, ಬ್ರಿಟಿಷ್ ಗವರ್ನ್ಮೆಂಟಿನವರ ಧರ್ಮವಾದ ಆಳ್ವಿಕೆಯಲ್ಲೂ ಈ ರೀತಿಯಾದ ನಡವಳಿಕೆಗಳಿರುವುದು ಸರಿಯಲ್ಲವೆಂದೂ, ಹೊಲೆಯರು ವಿದ್ಯಾವಂತರಾಗಿ ವರ್ತಮಾನ ಪತ್ರಿಕೆಗಳನ್ನು ಓದಿಕೊಂಡು ಪ್ರಪಂಚದಲ್ಲಿ ನಡೆಯುವ ವಿದ್ಯಮಾನಗಳನ್ನು ಗ್ರಹಿಸುತ್ತಾ ಅಭಿವೃದ್ಧಿಗೆ ಬರಬೇಕಾಗಿದೆ ಎಂದೂ ಹೇಳಿದರು. ಮ|| ಆರ್. ಚಿನ್ನಯ್ಯನವರು ಹೊಲೆಯರೂ ಪಂಚಮರೂ ಒಂದಾಗಿ ಪರಸ್ಪರ ಪ್ರೀತಿ ವಿಶ್ವಾಸಗಳನ್ನಿಟ್ಟುಕೊಂಡು ಅಭಿವೃದ್ಧಿ ಹೊಂದಬೇಕೆಂದು ಸೂಚಿಸಿದರು. ಸ್ವಾಮಿ ಸಹಜಾನಂದರೆಂಬುವರು ಜಾತಿಯ ಕಟ್ಟುಪಾಡುಗಳೆಲ್ಲಾ ಬ್ರಾಹ್ಮಣರಿಂದ ಕಲ್ಪಿತವಾದವುಗಳೆಂದೂ, ಇವು ಭಕ್ತಿ ಮಾರ್ಗಕ್ಕೆ ಪ್ರತಿಬಂಧಕವಾದದ್ದೆಂದೂ ಹೇಳಿದರು. ಮ|| ಎಂ ಗಂಗಾಧರರವರು ಪಂಚಮರು ಅಭಿವೃದ್ಧಿಗೆ ಬರಬೇಕಾದರೆ ಅವರು ಈ ಸಭೆಯಲ್ಲಿ ಸೇರಬೇಕಾದದ್ದು ಅವಶ್ಯವೆಂದು ತಿಳಿಸಿದರು. ಮ|| ಕಳತೂರು ಮುನಿಸಾಮಿಪಿಳ್ಳೆಯವರು ಬ್ರಿಟಿಷ್ ರಾಜ್ಯಭಾರದಲ್ಲಿ ಜಾತಿ ಧರ್ಮಗಳನ್ನು ಆಚರಿಸಿಕೊಳ್ಳುವುದು ಸಾಧ್ಯವೆಂದೂ, ವರ್ಣಾಶ್ರಮ ಧರ್ಮಗಳನ್ನು ಊರ್ಜಿತಪಡಿಸುವುದಾಗಿ ಮಹಾರಾಜಾ ದರ್ಭಾಂಗದವರು ಅಪ್ಪಣೆ ಕೊಡಿಸಿರುವುದು ಬರಿಯ ಮಾತೇ ಹೊರತು ಅದರಿಂದ ಫಲವೇನೂ ಆಗುವುದಿಲ್ಲವೆಂದೂ, ಅದು ಈಗಿನ ಕಾಲಕ್ಕೆ ತಕ್ಕದ್ದಾಗಿಯೂ ಇಲ್ಲವೆಂದೂ ಹೇಳಿದರು. ಮ|| ವೇಲ್ಪಾಪಿಳ್ಳೆಯವರು ಪಂಚಮರು ವಿದ್ಯೆಯನ್ನು ಹೆಚ್ಚಾಗಿ ಕಲಿತರೆ ಅವರು ಅಭಿವೃದ್ಧಿಗೆ ಬರುವರೆಂದು ಒತ್ತಿ ಹೇಳಿದರು. ಸಭೆಯ ಅಧ್ಯಕ್ಷರು ಪಂಚಮರು ಒಂದು ಫಂಡನ್ನು ಕೂಡಿಸಿ ಪಾಠಶಾಲೆಗಳನ್ನು ಇಟ್ಟು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕಾದದ್ದು ಮೊದಲನೇ ಕರ್ತವ್ಯವೆಂದೂ, ಈ ವಿಷಯದಲ್ಲಿ ಎಲ್ಲರೂ ಏಕೀಭವಿಸಿ ಕಾರ್ಯಗಳನ್ನು ನಡೆಸಬೇಕೆಂದೂ ತಿಳಿಸಿ ಸಭೆಯನ್ನು ಮುಕ್ತಾಯಮಾಡಿದರು.

ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್, ತೀರ್ಥಹಳ್ಳಿ.

ನೋಟೀಸ್.

ನಗರ ತಾಲ್ಲೋಕು ಯಡೂರು ಮಾಗಣೆ ಉಳ್ಳ ಗ್ರಾಮದ ಮಜರೆ ಮುಲಗೋಡು ಮನೆ ತಿಮ್ಮಯ್ಯ ಬಿನ್ ನಾರಾಯಣನವರು—ಈ ಮೆಂಬರು ಮೃತಪಟ್ಟಿರುವದಾಗಿಯೂ, ಇವರಿಗೆ ಹೆಂಡತಿ ಮಕ್ಕಳು, ಮಗ ತನ್ನ ಶಿವಾಯಿ ಬೇರೆ ಮಾಸಾ ಅಣ್ಣತಮ್ಮಂದಿರು ಯಾರೂ ಇಲ್ಲದಿರುವದರಿಂದ ಅವಿಭಕ್ತ ಕುಟುಂಬದಲ್ಲಿರುವ ಇವರ ಮಾಸಾ ತಮ್ಮನಾದ ತಾನೇ ಫಣಿಯಪ್ಪನಿಗೆ ಸಮೀಪ ವಾರಸುದಾರನೆಂದೂ, ಈ ಕಾರಣದಿಂದ ಫಣಿ ತಿಮ್ಮಯ್ಯನವರ ಹೆಸರಿನಲ್ಲಿರುವ ಹಿಸ್ಸೆಗಳನ್ನು ತನ್ನ ಹೆಸರಿಗೆ ದಾಖಲ್ ಮಾಡಿಸಿ ಆ ಬಗ್ಗೆ ತನಗೆ ಹಿಸ್ಸೆಯ ಸರ್ಟಿಫಿಕೇಟನ್ನು ಕೊಡಿಸಿಕೊಡಬೇಕೆಂದೂ ಮುಲಗೋಡು ಮನೆಯ ವೀರಯ್ಯ ಬಿನ್ ನಂಜಪ್ಪನವರು ಈ ಬ್ಯಾಂಕಿಗೆ ಅರ್ಜಿ ಬರೆದುಕೊಂಡಿದ್ದ ವಿಷಯದಲ್ಲಿ ಫಣಿ ಮೆಂಬರ ಹೆಸರಿನಲ್ಲಿರುವ 5 ಹಿಸ್ಸೆಗಳನ್ನು ಈ ಅರ್ಜಿದಾರರ ಹೆಸರಿಗೆ ದಾಖಲ್ ಮಾಡಬೇಕೆಂದೂ; ಮತ್ತು

ತೀರ್ಥಹಳ್ಳಿ ತಾಲ್ಲೋಕು ಕಸಬಾ ಹೋಬಳಿ ನಲ್ಲಿಸರ ಗ್ರಾಮದ ಮಜರೆ ಮತ್ತಿಕೊಪ್ಪದ ಫಣಿಯನಾಯ್ಕರು ಈ ಮೆಂಬರು ಮೃತಪಟ್ಟಿರುವದಾಗಿಯೂ, ಇವರ ಮಾಸಾ ಮಕ್ಕಳು 1 ನೇ ತಿಮ್ಮನಾಯ್ಕ, 2 ನೇ ಮಂಜನಾಯ್ಕ, ಇವರಿಬ್ಬರೂ ಮೈನರರಾಗಿರುವದರಿಂದ ಇವರ ತಾಯಿಯಾದ ತಾನು ಇವರಿಗೆ ಗಾರ್ಡಿಯನ್ ಆಗಿರುವದಾಗಿಯೂ, ಫಣಿಯವರ ಹೆಸರಿನಲ್ಲಿರುವ ಹಿಸ್ಸೆಗಳನ್ನು ಈ ಮೈನರರ ಹೆಸರಿಗೆ ದಾಖಲ್ ಮಾಡಿಸಿ ಆ ಬಗ್ಗೆ ಗಾರ್ಡಿಯನ್ ಆದ ತನಗೆ ಹಿಸ್ಸೆಯ ಸರ್ಟಿಫಿಕೇಟನ್ನು ಕೊಡಿಸಿಕೊಡಬೇಕೆಂದೂ ಫಣಿ ಫಣಿಯನಾಯ್ಕರ ಹೆಂಡತಿ ಪುಟ್ಟಮ್ಮನು ಅರ್ಜಿ ಬರೆದುಕೊಂಡಿದ್ದ ವಿಷಯದಲ್ಲಿ ಫಣಿ ಮೆಂಬರ ಹೆಸರಿನಲ್ಲಿರುವ 20 ಹಿಸ್ಸೆಗಳನ್ನು ಸದರಿ ಮೈನರರ ಹೆಸರಿಗೆ ದಾಖಲ್ ಮಾಡಬೇಕೆಂದೂ ತಾರೀಖು 26-1-1916 ನೇ ಬೋರ್ಡ್ ಮೀಟಿಂಗಿನಲ್ಲಿ ತೀರ್ಮಾನವಾಗಿರುವದರಿಂದ ಮೇಲ್ಕಂಡ ಫಣಿ ಮೆಂಬರುಗಳ ಹೆಸರಿನಲ್ಲಿರುವ ಹಿಸ್ಸೆಗಳು ಮೇಲೆ ನಮೂದಿಸಿದ ಆಯಾಯ ವಾರಸುದಾರರ ಹೆಸರಿಗೆ ದಾಖಲ್ ಮಾಡಲ್ಪಡುತ್ತವೆ. [38-2]

ತೀರ್ಥಹಳ್ಳಿ,
ತಾ. 1-2-1916.

ಎಂ. ಎಸ್. ಬಸಪ್ಪ,
ಮ್ಯಾನೇಜಿಂಗ್ ಡಿರೆಕ್ಟರ್.

ಹೊಗಳಿಕೆಯನ್ನು ನಂಬುವದಕ್ಕಿಂತಲೂ ಪರೀಕ್ಷಿಸುವದೇ ಮೇಲು.

ಪರೀಕ್ಷೆಗಾಗಿ ಉಚಿತ.

"ಗೋಲ್ಡನ್ ಆಪರ್‌ಚುನಿಟಿ" ಅಂದರೆ ಚಿನ್ನದಂಥಾ ಸಮಯವೆಂದರ್ಥ. ಈ ಪದವನ್ನು ಇಲ್ಲಿ ಬರೆಯಲು ಕಾರಣವೇನೆಂದು ವಾಚಕರು ಯೋಚಿಸಬಹುದು. ಇದಕ್ಕೆ ಮುಖ್ಯ ಕಾರಣವು, ಭಾಗ್ಯವಂತರು ಬಡವರಾದಿಯಾಗಿ ಧರಿಸುವ 500 ರೂ. ಬೆಲೆಯುಳ್ಳ ಆಭರಣವನ್ನು ಜನೋಪಕಾರಾರ್ಥವಾಗಿ ರೂ. 16 ಕ್ಕೆ ಸುಲಭೋಪಾಯದಿಂದ ತಯಾರಿಸಿ ವಿಕ್ರಯಿಸುತ್ತಲಿದೇವೆ. ಕೆಲವರು ಚಮತ್ಕಾರವಾದ ಪ್ರಕಟಣೆಗಳಿಂದ ಜೀವಿಸುತ್ತಿರುವರು, ಸಕಲರಿಗೂ ತಿಳಿದೇ ಇದೆ. ಅದರಂತಹ ನಡತೆಯು ನಮಗೆ ತಿಳಿಯುವ ಪ್ರಯುಕ್ತ ಮೇಲೆ ಉದಹರಿಸಿದ ಆಭರಣವನ್ನು ಪರೀಕ್ಷಾರ್ಥವಾಗಿ ಕೇಳುವವರಿಗೆ ಉಚಿತವಾಗಿ ಕಳುಹಿಸುತ್ತೇವೆ. ಇದರ ವಿವರವನ್ನು ಆಭರಣದ ಸಂಗಡ ಬರೆದು ತಿಳಿಸುವೆವು. ನಮ್ಮ ವಿಳಾಸ—
[16-1] ಆರ್. ವಿ. ಪಂಡಿಟ್ ಕಂಪನಿ, ನಂ 6, ಬಂದರ್ ಬೀದಿ, ಮದರಾಸು.

ಅರ್ಧ ಬೆಲೆ! ಒಂದು ತಿಂಗಳು ಮಾತ್ರ!

ನಮ್ಮ ರೈಲ್ವೆ ರೆಗ್ಯುಲೇಟರ್ ವಾಚ್ ಸಪೋರ್ಟ್ ಮಾದರಿ ಕಾಲವನ್ನು ತೋರಿಸತಕ್ಕದ್ದು. ದೊಡ್ಡ ಮನುಷ್ಯರಿಗೆ ಲಾಭಕರವಿದೆ. 3 ವರುಷದ ಗ್ಯಾರಂಟಿ ಕೊಡುವೆವು.



ಕ್ರಯ ರೂ. 7-14-0; ರೂ. 9-14-0. ಈಗ ನಾವು ಇಟ್ಟಿರುವ ಕ್ರಯ ರೂ 3-15-0; ರೂ. 4-15-0. ಉತ್ತಮವಾದ ಕೈಗೆ ಕಟ್ಟಿಕೊಳ್ಳುವ ಗಡಿಯಾರ ಚರ್ಮದ ಪಟ್ಟಿ ಸಮೇತ ಕ್ರಯ ರೂ. 10; ಈಗ ಇದನ್ನು ರೂ 5 ಕ್ಕೆ ಕೊಡುವೆವು. ಲೇಡಿ 9 ಕ್ಯಾರೆಟ್ ಚಿನ್ನದ ಗಡಿಯಾರ ಕ್ರಯ ರೂ. 32 ಈಗ ರೂ. 16 ಕ್ಕೆ ಬಿಳಿ ಲೇಡಿ ಬೆಳ್ಳಿ ವಾಚ್ ಕ್ರಯ ರೂ. 14; ಈಗ ರೂ 7 ಮಾತ್ರ. ಒಳ್ಳೇದಾದ ಸಂಚಿಕೆಯುಳ್ಳ 8 ದಿನದ ನಿಕ್ಕಲ್ ವಾಚ್ ರೂ 18; ಈಗ ರೂ 9. ಇದೇ ಬೆಳ್ಳಿಯದು ರೂ 24, ಈಗಿನ ಕ್ರಯ ರೂ 12. ಅದೇ ಬೆಳ್ಳಿ ಹ. ಟಿ ಗ್ ವಾಚ್ 30; ಈಗಿನ ಬೆಲೆ ರೂ 15. ಸ್ಪೆಷಲ್ ಬಹುಮಾನ ಕೈಗೆ ಕಟ್ಟುವ ತರಹಾ ಅಲ್ಲದೆ ಇತರ ತರಹಾ ಪ್ರತಿ ಒಂದು ವಾಚು ಕೊಂಡುಕೊಳ್ಳುವವರಿಗೂ ಒಂದು ಸುಂದರ ಸರಪಣಿಯೂ, 6 ವಾಚು ಕೊಳ್ಳುವವರಿಗೆ ಒಂದು ಹೆಚ್ಚು ವಾಚನ್ನು ಇನಾಮು ಕೊಡುವೆವು.

ನಮ್ಮ ವಿಳಾಸ— The Competition Watch Co.,
[276-10] 25, Madan Mitra Lane, E. Calcutta.

Useful in Peace and War

FIRST AID IN ACCIDENTS,

BY DR. U. RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ನಡಿಸಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು. ರಾಮರಾವ್ ಇವರಿಂದ ರಚಿತವಾಗಿ ಮದರಾಸ್ ಕ್ರಿಶ್ಚಿಯನ್ ಕಾಲೇಜು ಪಂಡಿತರಾದ ದೇವಶಿಖಾಮಣಿ ಅಳಸಿಂಗರಾಚಾರ್ಯರಿಂದ ಸುಲಭವಾದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿದ್ದು.

DEDICATED TO H. H. THE MAHARAJA OF MYSORE

ಅಪಾಯಕ್ಕೆ ಗುರಿಯಾದ ಮನುಷ್ಯನ ಅದೃಷ್ಟವು, ಮೊದಲು ಅವನು ಯಾರ ಕೈಗೆ ಸಿಕ್ಕಿಬೀಳುವನೋ, ಅವರ ಕಾರ್ಯಗಳಿಗೆ ತಕ್ಕಂತಿರುವುದು. ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ಪಕ್ಷದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪುಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ಮೊದಲು ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆಯಾ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡಿಸಿದ್ದರೆ, ನಿಸ್ಸಂದೇಹವಾಗಿ ಬದುಕಬಹುದಾಗಿದ್ದ ಪ್ರಾಣವೂ ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು. ಈ ವಿಧವಾಗಿ ಪ್ರತಿ ವರ್ಷವೂ ಎಷ್ಟೋ ಬೆಲೆಯುಳ್ಳ ಜೀವಗಳು ಮರಣಹೊಂದುತ್ತಿರುವುವು.

ಒಬ್ಬ ಮನುಷ್ಯನಿಗೆ ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯಾಗಲಿ, ಇಲ್ಲವೇ ಯಾವುದಾದರೂ ಅಪಾಯವಾಗಲಿ ಸಂಭವಿಸಿದಾಗ, ಸಮರ್ಥರಾದ ವೈದ್ಯರ ಸಹಾಯವು ದೊರೆಯುವುದರೊಳಗಾಗಿ, ತತ್ಕಾಲಕ್ಕೆ ತಮ್ಮ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ತಕ್ಕ ಚಿಕಿತ್ಸೆಯನ್ನು ಕೊಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿಯೇ ಲಭಿಸಬೇಕು.

"ಅಲ್ಪಜ್ಞಾನವು ಅಪಾಯಹೇತು" ವೆಂಬ ನಾಣ್ಣುಡಿಯು ಲೋಕದಲ್ಲಿ ವಾಡಿಕೆಯಿದ್ದರೂ, ಇತರ ವಿಷಯಗಳಲ್ಲಿ ಅದಕ್ಕೆ ಪ್ರಾಧಾನ್ಯವನ್ನು ಕೊಡಬಹುದೇ ಹೊರತು, ಪ್ರಥಮ ಚಿಕಿತ್ಸೆಯ ವಿಷಯದಲ್ಲಿ ಆ ನಿಯಮವಿಲ್ಲ. ಇದರಲ್ಲಿ ಅತ್ಯಲ್ಪ ಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ಕ್ರೂರವಾದ ವೇದನೆಯನ್ನೂ ನೀಗಿಸಬಹುದು! ಎಷ್ಟೋ ಪ್ರಾಣಗಳನ್ನುಳಿಸಬಹುದು! ಬಹಳವಾಗಿ ರಕ್ತಸ್ರಾವಕ್ಕೆ ಕಾರಣವಾದ ಮಹಾ ವಿಪತ್ತುಗಳಲ್ಲಿಯೂ ಪೆಟ್ಟು ತಗುಲುವುದು, ಮೂಳೆ ಮುರಿಯುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ, ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಗಳೂ ಕೂಡ, ಸಮರ್ಥರಾದ ವೈದ್ಯರು ಬರುವಷ್ಟರೊಳಗಾಗಿ ಏನುಮಾಡಬೇಕೆಂಬುದನ್ನು ತಿಳಿಯದೆ ಹೋಗುವುದರಿಂದ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸಾಕ್ರಮದಲ್ಲಿ ಅಲ್ಪ ಜ್ಞಾನವನ್ನು ಪಡೆದು, ಅದನ್ನುಪಯೋಗಿಸುವುದರಿಂದಲೇ ಸಾಯುವ ಸ್ಥಿತಿಯಲ್ಲಿದ್ದ ಸಾವಿರಾರು ಜೀವಗಳು ಬದುಕಿಕೊಂಡಿರುವುವು.

ಸಾಮಾನ್ಯವಾಗಿ ಬೇರೊಬ್ಬರಿಗೆ ಅಪಾಯವುಂಟಾದ ಸಂದರ್ಭವನ್ನು ನೋಡಿದಾಗ, ಅವರಿಗೆ ಸಹಾಯಮಾಡಬೇಕೆಂಬ ಬುದ್ಧಿಯು ನಮ್ಮೆಲ್ಲರಿಗೂ ಹುಟ್ಟುವುದು ಸಹಜವು. ಆದರೆ, ಯಾವ ಸಂದರ್ಭಗಳಲ್ಲಿ ಹೇಗೆ ಮಾಡಬೇಕೆಂದು ತಿಳಿಯದೆ, ಅನೇಕ ಜನರು ಈ ವಿಷಯದಲ್ಲಿ ಪ್ರವರ್ತಿಸುವುದಕ್ಕೆ ಹೆದರುವರು. ತಾವು ಕೈಯಿಡುವುದರಿಂದ ಮೊದಲಿದ್ದುದಕ್ಕಿಂತಲೂ ಹೆಚ್ಚಾದ ಅಪಾಯಕ್ಕೆ ಕಾರಣವಾಗಬಹುದೆಂಬ ಭಯದಿಂದ ಕೆಲವರು ತಟಸ್ಥರಾಗುವರು. [45 1]

ಇದಕ್ಕಾಗಿ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೈತೊಗುಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ, ಅಗ್ನಿಗಂಡ, ನರಗಳು ಸೆಳೆಯುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಸೌಕರ್ಯಗಳನ್ನು ಕಲ್ಪಿಸಿಡುವುದು, ಇನ್ನೂ ಇವರಂತೆಯೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳೊಡನೆ ಇಷ್ಟು ವಿಷಯಗಳಿದ್ದರೂ, ಸರ್ವಸಾಮಾನ್ಯವಾಗಿ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆಮಾಡಿರುವೆವು.

ಪುಸ್ತಕದ ಬೆಲೆ 0—8—0. ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀಕೃಷ್ಣ ಬ್ರದರ್ಸ್, 323, ತಂಬೂಚೆಟ್ಟಿ ಬೀದಿ, ಮದರಾಸು. ಪೋಸ್ಟು ಬಾಕ್ಸ್ 166.

ಒಂದು ರೀಡಿಂಗ್ ರೂಮ್ ಸ್ಥಾಪನೆ.

ಮಂಡ್ಯದಾಚೆಯ ತಾಲ್ಲೂಕು ಬೆಳಗೊಳ ಹೋಬಳಿ ಬಾಳ್ಳ ಗ್ರಾಮದಲ್ಲಿ ನಮ್ಮ ತಾಲ್ಲೂಕು ಅಮಲ್ದಾರ್ ಮ|| ಆರ್. ತಿರುನಾರಣಯ್ಯಂಗಾರ್ರವರ ಪ್ರೋತ್ಸಾಹದಿಂದ ಗ್ರಾಮಾಭಿವೃದ್ಧಿಯ ಏರ್ಪಾಡಿನಲ್ಲೊಂದಾದ ರೀಡಿಂಗ್ ರೂಮ್ ಮ|| ಗುರುವೆ ಗೌಡರು ಕಟ್ಟಿಸಿರುವ ಹೊಸ ಕಟ್ಟಡದಲ್ಲಿ ಬಸವರಾಜೇಂದ್ರ ಪೇಟೆ ಶ್ರೀ ವಾಚನಶಾಲೆ ಮತ್ತು ಸರಸ್ವತೀ ಭಂಡಾರವೆಂಬ ನಾಮಧೇಯದಿಂದ ಫೆಬ್ರವರಿ ತಾ. ೮ನೇ ಭಾನುವಾರ ಸಾಯಂಕಾಲ ಪ್ರಾರಂಭೋತ್ಸವವು ಶೇಕ್ದಾರ್ ಮ|| ಬಿ ನರಸಿಂಹಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಕಟ್ಟಡವು ಫಲಪುಷ್ಪ ಮಕರತೋರಣಗಳಿಂದಲಂಕೃತವಾಗಿ ಸ್ಥಳ ಮತ್ತು ಪರಸ್ಥಳದ ದೊಡ್ಡ ಮನುಷ್ಯರುಗಳಿಂದ ಶೋಭಾಯಮಾನವಾಗಿ ಪ್ರಾರಂಭದಲ್ಲಿ ಮ|| ಗಳಾದ ಸ್ಕೂಲ್ ಮಾಸ್ಟರು ಕೇಶವಾಚಾರ್ರು, ರೀಡಿಂಗ್ ರೂಮ್ ಸೆಕ್ರೆಟರಿ ರಾಂತರ್ಲಗೌಡರು, ಮೊಂಬರು ಗುರಪ್ಪಗೌಡರು; ಇವುಗಳು ಭಾಷಣ ಮಾಡಿದ ನಂತರ ಮ|| ಶೇಕ್ದಾರ್ ಬಿ ನರಸಿಂಹಯ್ಯಂಗಾರ್ರು ಗ್ರಾಮಾಭಿವೃದ್ಧಿ ವಿಚಾರ, ರೀಡಿಂಗ್ ರೂಮ್‌ನಿಂದ ಆಗತಕ್ಕ ಪ್ರಯೋಜನಗಳು, ಬ್ರಿಟಿಷ್ ಸಾರ್ವಭೌಮರವರಿಂದ ನಮ್ಮಗಳಿಗೆ ಉಂಟಾಗಿರತಕ್ಕ ಅನುಕೂಲತೆ, ಗ್ರಾಮನ್ಯಾಯ, ಕೋಆಪರೆಟಿವ್ ಸೊಸೈಟಿ ಮತ್ತು ವ್ಯವಸಾಯ, ಈ ವಿಷಯದಲ್ಲಿ ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ಸಭಿಕರ ಮನಸ್ಸನ್ನು ಆಕರ್ಷಿಸಿದರು. ಚಕ್ರವರ್ತಿ ಸಾರ್ವಭೌಮರವರು, ನಮ್ಮ ಮಹಾರಾಜರವರು ಮತ್ತು ಯುವರಾಜರವರ ಶ್ರೇಯಃಪ್ರಾರ್ಥನೆಯನ್ನು ಮುಗಿಸಿದ ನಂತರ ಸ್ವಂತ ಉಪಯೋಗಕ್ಕೋಸ್ಕರ ಹೊಸ ಮನೆಯನ್ನು ಕಟ್ಟಿಸುವ ಮ|| ಗುರುವೆ ಗೌಡರನ್ನು ಮತ್ತು ಈ ರೀಡಿಂಗ್ ರೂಮ್ ಪೋಷಕರಾಗಿಯೂ ಪ್ರೆಸಿಡೆಂಟ್ ಆಗಿಯೂ ಇರುವ ಮ|| ಬಸಪ್ಪಗೌಡರನ್ನು ಸನ್ಮಾನಿಸಿದ ಬಳಿಕ ಗಂಧಪುಷ್ಪ ತಾಂಬೂಲ ಫಲಹಾರಾದಿಗಳು ಸಭಾಜನರಿಗೆಲ್ಲರಿಗೂ ಸಮರ್ಪಿಸಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಈ ವಾಚನಶಾಲೆಯ ಕಾರ್ಯಕ್ರಮಗಳನ್ನು ನೆರವೇರಿಸುವುದಕ್ಕೆ ಪ್ರೆಸಿಡೆಂಟರು ಮತ್ತು ಸೆಕ್ರೆಟರಿಯವರು, ಪೂರ್ಣ ಪ್ರಯತ್ನವನ್ನು ನಿರಂತರ ನಡೆಸಿಕೊಂಡು ಬರುವರಾಗಲೆಂದು ಪ್ರಾರ್ಥಿಸಲ್ಪಟ್ಟಿತು.—ಅದೇ ದಿನ ಗ್ರಾಮಸ್ಥರುಗಳು ಸರ್ಕಾರದವರಿಂದ ಸಹಾಯವನ್ನು ಹೊಂದಿ ಗ್ರಾಂಟ್ ಇನ್ ಏಡ್ ಆಗಿ ಬರುವತಕ್ಕ ಹೊಸ ಸ್ಕೂಲ್ ಕಟ್ಟಡಕ್ಕೆ ಅಸ್ತಿಭಾರವು ಹಾಕಲ್ಪಟ್ಟಿತು. ಮ|| ಬಸಪ್ಪಗೌಡರು ಈ ಗ್ರಾಮದಲ್ಲಿ ಸಧ್ಯದಲ್ಲೇ ದೇವಾಲಯವನ್ನು ಕಟ್ಟಿಸುವದಕ್ಕೆ ನಿರ್ಧರಿಸಿರುವದು ಬಹಳ ಸಂತೋಷಕರವಾದ ವಿಷಯ. ಎಲ್ಲಾ ವಿಧದಲ್ಲೂ ಮುಂದಕ್ಕೆ ಬರುತ್ತಿರುವ ಈ ರೀತಿಯು ಬಾಳ ಗ್ರಾಮಕ್ಕೆ ಒಂದು ಪೋಸ್ಟ್ ಆಫೀಸು ಇಲ್ಲದಿರುವದು ದೊಡ್ಡ ನ್ಯೂನತೆಯಾಗಿರುತ್ತೆ.

ಪುರವಾಸಿ

ಮಲೆನಾಡಿನ ವಿದ್ಯಾಭ್ಯಾಸಕ್ಕೆ ಪ್ರಜೆಗಳ ಮುಖ್ಯ ಕರ್ತವ್ಯ.

ದೇಶದ ಏಳಿಗೆಗೆ ಕಾರಣಭೂತವಾದ ವಿದ್ಯಾಭ್ಯಾಸದ ವಿಚಾರವಾಗಿ ಈ ಹಿಂದೆ ಅನೇಕ ಲೇಖನಗಳು ಬರೆದು ಈ ಪತ್ರಿಕೆಯಲ್ಲಿ ಪ್ರಕಟಿಸಿರುವದು ಸರಿಯಷ್ಟೆ. ದೇಶದ ಅಭ್ಯುದಯಕ್ಕೆ ಮುಖ್ಯ ಸಾಧನವಾದ ಇದು ಈ ಕಾಲದಲ್ಲಿಯೂ ಮುಖ್ಯವಾಗಿ ಮಲೆನಾಡಿನ ನಮ್ಮ ನಾಡಿನ ಜನಗಳಿಗೆ ವಿದ್ಯಾಪ್ರಚಾರಕ್ಕಾಗಿ ಎಷ್ಟು ಲೇಖನಗಳು ಬರೆದರೂ ಫಲಕಾರಿಯಾಗದೆ ಇರಬಾರದೆಂದು ಊಹಿಸಬೇಕು. ಸರ್ಕಾರದವರು ಮಲೆನಾಡಿನ ಪ್ರಜೆಗಳ ಏಳಿಗೆಗೋಸ್ಕರ ಗ್ರಾಮಾಂತರಗಳಲ್ಲಿ ಪಾಠಶಾಲೆಗಳನ್ನು ಏರ್ಪಡಿಸಿರುವದೇನೋ ಸಹಜ. ಅಷ್ಟು ಮಾತ್ರವಲ್ಲದೆ ಇನ್ನು ವಿಶೇಷವಾಗಿ ಸರ್ಕಾರದಿಂದ ನಡೆಯಬೇಕಾದ ಕರ್ತವ್ಯಗಳೆಷ್ಟಿದ್ದರೂ ಪ್ರಥಮತಃ ಯಾವದೊಂದು ಗ್ರಾಮವೂ ವಿದ್ಯಾಶಾಲೆಯಿಲ್ಲದಿರಕೂಡದೆಂಬುವ ನಿಯಮವೂ, ಅದನಂತರ ಪ್ರತಿಯೊಬ್ಬರೂ ವಿದ್ಯೆಯನ್ನು ಕಲಿಯಬೇಕೆಂಬುವ ನಿಯಮವೂ, ಕೇವಲ ಸರ್ಕಾರದವರಿಂದ ಮಾತ್ರ ಆಗಬೇಕಾದದ್ದೆಂದು ಊಹಿಸದೆ, ಇದಕ್ಕೆ ಪ್ರಜೆಗಳು ಉತ್ತೇಜಕರಾಗಿ ಯಾವ ತರಹದಲ್ಲಿಯಾದರೂ ವಿದ್ಯಾಪ್ರಚಾರವಾಗಬೇಕೆನ್ನುವ ಆಸಕ್ತಿಯುಳ್ಳವರಾಗಬೇಕು. ಮಡಿಲಿನಲ್ಲಿ ವಿಷದ ಹಾವನ್ನು ಇಟ್ಟುಕೊಂಡು, ಎಚ್ಚರಿಕೆಯಿಲ್ಲ ಎಂದು ಅತ್ತರೆ ಪ್ರಯೋಜನವೇನು ? ಅಹೋರಾತ್ರಿ ನಮ್ಮನ್ನು ಪೀಡಿಸಿ ತನ್ನ ಅಧೀನವಾಗಿ ಮಾಡಿಕೊಳ್ಳುವ ಈ ಘೋರಶತ್ರುವಾದ ಅವಿದ್ಯೆಯನ್ನು ಧ್ವಂಸಮಾಡಲಿಕ್ಕೆ ಬಗೆಯೇನೆಂದು ಯೋಚಿಸಬೇಕಲ್ಲವೇ ?

ಈ ವಿಚಾರದಲ್ಲಿ ಪ್ರಜೆಗಳ ಕರ್ತವ್ಯವು ಬಹಳ ಇದೆ. ಅದು ನಾನಾ ತರಹದವಿಲ್ಲ. ಸರ್ಕಾರದವರೇ ಎಲ್ಲವನ್ನೂ ವಹಿಸಬೇಕೆಂದು ಈಗ ಮಾಡಿರುವ ಕಲ್ಪನೆಯು ದೇಶದ ಹಾನಿಗೆ ಕಾರಣವಾಗುತ್ತದೆಯೋ ಹೊರತು ಏಳಿಗೆಗಲ್ಲ. ಆಗಾಗ ಒಂದು ಪಾಠಶಾಲೆಯನ್ನು ಏರ್ಪಡಿಸಿದರೆ ಪ್ರಜೆಗಳು ಎರಡನ್ನು ಸ್ಥಾಪಿಸಬೇಕು. ಇದಕ್ಕೆ ವೇತನವೇ ಪ್ರಧಾನವೆಂದು ಎಣಿಸದೆ ದೇಶಾಭ್ಯುದಯವನ್ನೇ ಮುಂದಿಟ್ಟುಕೊಂಡು ಕಾರ್ಯಭಾಗವನ್ನು ನೆರವೇರಿಸುವ ಮಹನೀಯರು ಬೇಕು. ಸಾಧ್ಯವಿದ್ದರೆ ವೇತನವಿಲ್ಲದೆ ಕೆಲಸ ಮಾಡತಕ್ಕ ಉಪಾಧ್ಯಾಯರು ಬೇಕು. ಯಾವ ರೀತಿ ಒಂದು ದೇಶದ ಮೇಲೆ ಪರರಾಜರು ದಂಡೆತ್ತಿ ಬಂದಾಗೆನ್ನುವ ಶಂಕೆಯಿಂದ ವೇತನದ ಸಿಪಾಯಿಗಳಲ್ಲದೆ ವೇತನವಿಲ್ಲದ ಸ್ವಯಂಸೈನ್ಯವೂ ಸಹ ಸಧ್ಯಕಾಲದ ಯುದ್ಧದಲ್ಲಿ ಪಾಶ್ಚಿಮಾತ್ಯರಲ್ಲಿ ಕೆಲವು ಕಡೆ ಉಂಟೋ ಅದೇ ರೀತಿ ಇಲ್ಲಿ ವೇತನದ ಉಪಾಧ್ಯಾಯರೊಂದಿಗೆ ವೇತನವಿಲ್ಲದ ಉಪಾಧ್ಯಾಯರೂ ಬೇಕು; ಮತ್ತು ಈ ಅವಿದ್ಯೆಯೆನ್ನುವ ಶತ್ರುವನ್ನು ಸಮೂಲವಾಗಿ ಕಿತ್ತೊಗೆಯಲಿಕ್ಕೆ ವಿದ್ಯೆಕಲಿತ ಪ್ರತಿಯೊಬ್ಬ ಮನುಷ್ಯನೂ ವಾರಕ್ಕೆ ಒಂದು ತಾಸಾಗಲಿ ವೇತನವಿಲ್ಲದೆ ಉಪದೇಶಕನಾಗಬೇಕೆನ್ನುವ ನಿಯಮವನ್ನು ಸರ್ಕಾರದವರಿಂದ ಕಲ್ಪಿತವಾದರೆ ಇನ್ನೂ ಬೇಕು. ಈಗಿನ ಸ್ಥಿತಿಯನ್ನು ನೋಡಿದರೆ ಪ್ರಜೆಗಳಿಗೆ ಅವಿದ್ಯೆ ಎನ್ನುವ ಶತ್ರುವಿನಿಂದ ಉಂಟಾಗಿರುವ ಮತ್ತು ಉಂಟಾಗುತ್ತಿರುವ ಹಾನಿಯು ಪರಿಣಾಮವು ಗೊತ್ತಾಗುವಂತೆ ತೋರುವದಿಲ್ಲ. ಹಾಗೆ ತೋರಿದ್ದ ಪಕ್ಷದಲ್ಲಿ ಪ್ರಜೆಗಳು ಈ ರೀತಿ ಮೂಢರಾಗಿ ಎಂದಿಗೂ ಇರುತ್ತಿರಲಿಲ್ಲ.

ದೇವರೇ, ಎಂದಿಗೆ ಪ್ರತಿ ಗ್ರಾಮದಲ್ಲಿಯೂ ಒಂದು ಪಾಠಶಾಲೆಯಾದೀತು ! ಎಂದಿಗೆ ವಿದ್ಯಾಶಾಲಿಯಾದ ಪ್ರತಿಯೊಬ್ಬನೂ ತಾನು ಕಲಿತಿರುವ ಯುಕ್ತಿ ಚಿತ್ರವನ್ನೂ ಈ ಅವಿದ್ಯೆ ಎನ್ನುವ ಶತ್ರುಗ್ರಸ್ತರಾದ ತನ್ನ ಸಹೋದರರಿಗೆ ವಿನಿಯೋಗಿಸಿ ದೇಶದ ಏಳಿಗೆಗೆ ಕಾರಣಭೂತನಾಗುತ್ತಾನೆ ! ಇಂಥಾ ಪಶ್ಚಾತ್ತಾಪವು ಸರ್ವರಲ್ಲಿ ಹುಟ್ಟಲೆಂದು ಹಾರೈಸುವ

ಸೇವಕ.

S. UDIPI NARAYANACHARYA & Co.,
BANARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಕಣ, ಪೇಟ, ಕಾಶ್ಮೀರ್ ಶಾಲು, ದುಪ್ಪಟ, ಮುಗುಟ, ಜಗನ್ನಾಥ ಬಾಗಂಟೆಗಳು, ರುದ್ರಾಕ್ಷಿಗಳು, ಕೊನಾರ್ಕ, ಅರಳೆ ಪೇಟ, ಧರ್ಮಾವರ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ನಮೂನೆ ಲಗ್ನಕಾರ್ಯಗಳಿಗಾಗಿ ಅತಿ ಮೋಹಕವಾಗಿ ತಯಾರಿಸಿರುವೆವು. ಈ ಅಮೂಲ್ಯವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೇಟಲಾಗು ಒಂದು ಕಾಶಿ ಕಾಲಜ್ಞಾನದ ದೊರವನ್ನು ಇನಾಮಾಗಿ ಕಳುಹಿಸಲಾಗುವುದು. [119-31]

ವಿಳಾಸ.— ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮಯಿತ್ರಾವ್ನು ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸುತ್ತಿರುವಷ್ಟು ವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೇ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ.— ಬೆನ್ನಿನಲ್ಲಿ ಛಳುಕು, ನಡು ಉಳುಕಿದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ಅಧಿಕವಾಗಿಯೋ ಬಿಸುವಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ; ಬಳಲಿಕೆ, ಎದೆ ಕಲ್ಲಾಗಿರುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು, ನಿದ್ರಾಭ; ಇವೇ ಮೊದಲಾದುವು ಲಕ್ಷಣಗಳಾದರೆ ಮೂತ್ರಪ್ರಮೇಹ, ವಾಯು, ಮೈಬಾವು, ಅಸುಮೂತ್ರ ಮೂತ್ರಕೋಶದ ಕ್ಷಯ ಇತ್ಯಾದಿಗಳಾಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು.

ಡೋನ್ಸ್ ಬ್ಯಾಕೇಕ್ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನು, ಶುದ್ಧಿಪಡಿಸಿ, ರಕ್ತದಿಂದ ಮಯಿತ್ರಾವ್ನು ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ. ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-25]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುದ್ದಿಗಳಿಗೆ ರೂ. ೧೦—೮—೦. ಔಷಧ ಗಳನ್ನು ಮಾರುವವರಲ್ಲರಲ್ಲಿಯೂ ದೊರೆಯುವುದು ಅಥವಾ ಫೋಸ್ಟರ್ ಮ್ಯಾಕ್ ಕ್ಲೆಲ್ಲನ್ ಕಂ. ಬಾಕ್ಸ್ ... ಬೊಂಬಾಯಿ—ಇವರಲ್ಲಿ ದೊರೆಯುವುದು

The General Assurance Society, Ltd.,
Ajmer.
(A Popular Life Office.)

Before insuring or taking Agency elsewhere, it would be to your interst to know the rates of premium and terms of Agency specially prepared by the Society's Consulting Actuary, Mr. H. E. W. Lott, F. I. A. (one of the most eminent Actuaries in England). [142-30]

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಓರಿಯಂಟಲ್ ಗ|| ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮ|| ಎಂ. ಎಸ್. ರಮಲಿಂ, ಚೀಫ್ ಏಜೆಂಟ್, ಬೆಂಗಳೂರು ; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟಸತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ
[122-18] ಬ್ರ್ಯಾಂಚ್ ಸೆಕ್ರೆಟರಿ, ಮದರಾಸ.

ಕರ್ನಾಟಕ ಜ್ವರ...

ಎಲ್ಲಾ ಜ್ವರಗಳಿಗೂ ಹಿಂದಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-19]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,
ಎಗ್ರ್ಯೂ ಮಿಕ್ಸ್ಚರ್ ಡಿಪೋ, ಬೊಂಬಾಯಿ, 4.

KARNIK Bros., BOMBAY, 4.

ಡೋಂಗರೆ ಇವರ
ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿದಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲಿಷ್ಠವು ಮತ್ತು ಸೊಗಸುಳ್ಳವು ಆಗುತ್ತವೆ. [177-25]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,
ಚೌಪಾಟಿ, ಗಿರಗಾಂವ, ಮುಂಬಯಿ.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ ?

ಆಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಲೆಂಜ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳಕೊಂಡ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಆಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಸವಾಲಿಗೆ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾರುವಂಥಾದ್ದು ಆಟೋ ಮೋಹಿನಿಯೇ.

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ	2—0—0	½ ,, ,,	0—8—0
1 ಡ್ರಾಮ್ ಕೊಳವೆಗೆ	,, 0—12—0	ಕಾರ್ಡು ಡಬ್ಬಿಗೆ	0—12—0

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳಸುವಂಥಾದ್ದು. ಕಣ್ಣು ಮತ್ತು ಮೆದುಳಿಗೆ ತಂಪನ್ನು ಕೊಡಬಲ್ಲದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದಿ ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ ? ಇದೊಂದು ದೃಷ್ಟಾಂತವೇ ಸಾಕಾಗಿದೆ [282-9]

ಕ್ರಯ 1 ಬಾಟ್ಲಿಗೆ ರೂ. 1-0-0
,, 3 ,, ,, 2-10-0.

ಸೋಲ್ ಏಜಂಟರು—ಸಾ ಭಗವಾನ್ ದಾಸ್ ಚುನಿಲಾಲ್ ಕಂಪನಿ,
177, ಬೈನಾಬಜಾರ್ ರೋಡ್, ಮದರಾಸು.

ಸ್ವದೇಶ ಕೈಗಾರಿಕೆಗಳು.

ಅನೇಕ ಸ್ಥಳಗಳಲ್ಲಿ ಕೈಗಾರಿಕೆಗಳ ಕಾರ್ಖಾನೆಗಳನ್ನೂ, ಬಂಡವಾಳ ಬಹಳ ಯಿಂದ ಗೊಬ್ಬರವನ್ನು ತಯಾರಿಸ ಬಹುವಾದ ಕಾರ್ಖಾನೆಗಳನ್ನೂ ಏರ್ಪಡಿಸುವ ಉದ್ದೇಶದಿಂದ ನಮ್ಮ ದೇಶಬಾಂಧವರಿಗೆ ಅರಿಕೆ ಮಾಡಿಕೊಳ್ಳುವುದೇನಂದರೆ ನಿಮ್ಮ ಸ್ಥಳದಲ್ಲಿ ಯಾವುದಾದರೂ ಕೈಗಾರಿಕೆಯನ್ನ ಆಗಲಿ ಗೊಬ್ಬರದ ಕಾರ್ಖಾನೆಯನ್ನೇ ಆಗಲಿ ಇಡಬೇಕೆಂದು ಯಾರಿಗಾದರೂ ತಾತ್ಪರ್ಯವಿದ್ದರೆ ಅಲ್ಲಿನ ಮುಖಂಡರು ಕಲೆತು ಮಾತನಾಡಿಕೊಂಡು ನನಗೆ ತಿಳಿಸಿದರೆ ನಾನು ಬಂದು ಪದಾರ್ಥವನ್ನು ತಯಾರಿಸುವ ರೀತಿಯನ್ನು ತೋರ್ಪಡಿಸ ಅನುಭವಪಡಿಸಿ ಕಾರ್ಖಾನೆಯನ್ನು ಏರ್ಪಡಿಸುವೆನು. ಕೆ. ಆರ್. ಚಕ್ರವರ್ತಿ,

[26-4] ಏಜಂಟ್, ಮೈ. ಸ್ಟೀಂ ಟ್ರಾಂವೆ ಕಂಪನಿ, ಬೆಂಗಳೂರು ಸಿಟಿ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ, ಸಾಮಾನುಗಳನ್ನೂ, ದರಗಳನ್ನೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[188-21] GIRLS' INDUSTRIAL SCHOOL, HASSAN.

ಶ್ರೇಷ್ಠ ಮಹೌಷಧಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಆರೋಗ್ಯ ಪ್ರಭಾಕರ. (ಟಾನಿಕ್ ಪಿಲ್ಸ್)—ಪಿತ್ತಕೋಶ, ಶ್ವಾಸಕೋಶಗಳನ್ನು ಸರಿಪಡಿಸಿ, ರಕ್ತವೃದ್ಧಿ ಮಾಡಿ, ನರಗಳಿಗೆ ಬಲಕೊಡುತ್ತ, ಅಜೀರ್ಣ, ಪಿತ್ತವಾಂತಿ, ಕ್ಷಯ, ಬಾಣಂತಿಯರ ಕ್ಷಯ, ಮುಟ್ಟುಕಟ್ಟು, ದೌರ್ಬಲ್ಯ ಮುಂತಾದ ರೋಗಗಳನ್ನು ನಿವಾರಿಸುವದರಲ್ಲಿ ಅಸಮಾನವಾದುದು. 48 ಮಾತ್ರೆಗೆ 1 ರೂ, 6 ಶೀಸೆಗೆ 5 ರೂ.

2. ರೋಗನಾಶಿನಿ.—ಪ್ಲೇಗುಸೋಂಕು ಅಕ್ಕಪಕ್ಕದ ಗ್ರಾಮಗಳಲ್ಲಿ ರುವಾಗಲೇ ಪ್ರತಿ ಒಬ್ಬರೂ ದಿನವೂ 3-1 ಸಲ 1-2 ಮಾತ್ರೆಯಂತೆ ಸೇವಿಸುವದರಿಂದ ಪ್ರಾಣವನ್ನು ಉಳಿಸಿಕೊಳ್ಳಬಹುದು. ಜನೋಪಕಾರಕ್ಕಾಗಿ ಬೆಲೆ ಸುಲಭವಿಟ್ಟಿದೆ. ಇದರ ಗುಣಕ್ಕೆ ನಮಗೆ ಅನೇಕ ಬಹುಮಾನಗಳು ಬಂದಿವೆ. 40 ಮಾತ್ರೆಗೆ 4 ಆ, 6 ಶೀಸೆಗೆ 1 ರೂ, 12 ಕ್ಕೆ 2½ ರೂ.

[126-21] ನಮ್ಮ ವಿಳಾಸ.—ಪಂಡಿತ್ ಎಸ್. ಗೋಪಾಲ, ಮೈಸೂರು.

ಹೊಗಳಿಕೆಗಿಂತಲೂ

ಪರೀಕ್ಷೆಯೇ ಮೇಲು!!!

ನೂರಾರು ವರುಷಗಳ ಅನುಭವದಿಂದ ಗುಣಕಂಡು ಪ್ರಖ್ಯಾತಿ ಹೊಂದಿರುವ ಶಾಸ್ತ್ರ ಸಮ್ಮತವಾದ ಮತ್ತು ಅತಿ ಸುಲಭ ಬೆಲೆಯುಳ್ಳ ಈ ಮಹೌಷಧಗಳನ್ನು ಸಮಾಪದಲ್ಲಿ ತರಿಸಿ ಇರಿಸಿಕೊಳ್ಳಿರಿ. ಕಷ್ಟ ಕಾಲದಲ್ಲಿ ಮಾತ್ರವಲ್ಲದೆ ಇವರಿಂತ ಶರೀರವನ್ನು ಕಾಪಾಡಲಾರದು. ಪರೀಕ್ಷಿಸಿ ಗುಣವನ್ನು ತಿಳಿಯಿರಿ. [278-10]

ಶ್ರೀಕರ ಕಸ್ತೂರಿ ಮಾತ್ರೆ ಸುಮಾರು 300 ಮಾತ್ರೆ ಸೀಸೆಗೆ	4 ಆಣೆ.
ಸುಖಭೇದಿ ಮಾತ್ರೆ 60 ಮಾತ್ರೆ ಸೀಸೆಗೆ	4 ಆಣೆ.
ಬಾಲ ಸಂಜೀವಿನಿ 60 ಮಾತ್ರೆ ಸೀಸೆಗೆ	4 ಆಣೆ.
ಅಮೃತಲೇಪ (ಚರ್ಮರೋಗ ವಾಯುನೋವುಗಳಿಗೆ ಸಿದ್ಧೌಷಧ) ಸೀಸೆಗೆ	4 ಆಣೆ.
ನಾರಿಕೇಳಾಂಜನ ಸೀಸೆಗೆ	4 ಆಣೆ.
ಅಮೋದಿನಿ-ದಂತಮಂಜನ, ಬಾಯಿನಾತ, ಅಯಾಸಕ್ಕೆ 160 ಮಾತ್ರೆ	4 ಆಣೆ.

ಮೇಲ್ಕಂಡ ಆರು ಔಷಧಗಳ ಪೈಕಿ ನಿಮಗೆ ಬೇಕಾಗುವ 6 ಸೀಸೆಗಳನ್ನು ಜುನಾಯಿಸಿ ಒಟ್ಟಿಗೆ ತರಿಸಿದರೆ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಸೇರಿ ರೂ. 1-8-0. 12 ಸೀಸೆಗೆ ರೂ. 2-12-0. 25 ಸೀಸೆಗೆ ರೂ. 5-0-0.

ಪ್ರತಿ ಔಷಧದ ಜೊತೆಯಲ್ಲೂ ವಿಶದವಾದ ಅನುಪಾನ ಪತ್ರವಿರುವುದು.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್, ವೈದ್ಯಶಾಲೆ, ನಂಜನಗೂಡು.

ನೋಡ ಹೋಗಬೇಡಿರಿ.

ಕೈಗೆ ಕಷ್ಟವಿಲ್ಲ. ಹಣಕ್ಕೆ ನಷ್ಟವಿಲ್ಲ.

ಅರ್ಧ ಕ್ರಯ! ಈ ತಿಂಗಳು ಮಾತ್ರ!

ಮುಂಚಿನ ಕ್ರಯ ರೂ. 4. ಈಗ ವಿ. ಪಿ. ಸಹಿತ ರೂ. 2 ಮಾತ್ರ. ಯಾವಾಗಲು ಕೃಷ್ಣಾ ಫೌಂಟನ್ ಪೇನಾವನ್ನು ಸೇವಿಸಿರಿ. ಪ್ರಿಯರೇ, 7-10 ರೂ. ಬಾಳ

ತಕ್ಕ ಫೌಂಟನ್ ಪೇನಾಗಳನ್ನು ಸೇವಿಸಿ ಇರುತ್ತೀರಲ್ಲವೇ? ನಮ್ಮ ಕಂಪನಿಯಲ್ಲಿ 22 ಜಿಲ್ಲಾಗಳಲ್ಲಿ ಹೆಸರುವಾಸಿಯಾದ 14 ಕ್ಯಾರೆಟ್ ರೋಲ್ಡ್ ಗೋಲ್ಡ್ ನಿಬ್ಬು ಹಾಕಿದ ಉತ್ತಮವಾದ ಕೃಷ್ಣಾ ಪೇನಾವನ್ನು ಸೇವಿಸಿ ನೋಡಿರಿ. ನಮ್ಮ ಕಂಪನಿಯ ಹೆಸರು ಪ್ರಖ್ಯಾತಿಯಾಗಲೆಂದು ಈ ತಿಂಗಳು ಮಾತ್ರ ಅರ್ಧ ಕ್ರಯಕ್ಕೆ ಕಳಿಸುತ್ತೇವೆ. ಸ್ಕೂಲ್ ಮಾಸ್ಟರು, ವಿದ್ಯಾರ್ಥಿಗಳು 3 ಪೇನಾ ಮೇಲೆ ತರಿಸಿಕೊಳ್ಳುವವರಿಗೆ ರೂ. 1ಕ್ಕೆ 2 ಆಣೆ ಕಮಿಷನ್ ದೊರೆಯುತ್ತೆ. ಪ್ರಿಯರೇ, ಜಾಗ್ರತೆಯಾಗಿ ತರಿಸಿಕೊಳ್ಳಬೇಕು ಎಂದು ಪ್ರಾರ್ಥನೆ.

ವಿಳಾಸ—ಮ್ಯಾನೇಜರ್, ಕೃಷ್ಣಾ ಅಂಡ್ ಕೋ,

[29-2] 20 ಎಲಿಫೆಂಟ್‌ಗೇಟ್ ಬೀದಿ, ಸಾಹುಕಾರ್ ಪೇಟೆ, ಮದರಾಸು.

ಕ್ರಿಸ್ಮಸ್ ಹಬ್ಬದ ವಿಶೇಷ ಮಾರಾಟ! 1916 ನೇ ಜನವರಿ 25 ರ ವರೆಗೆ ಮಾತ್ರ. ತಬಲಾ ಮತ್ತು ಬಾಯಾ ಬಿಟ್ಟಿ.

ಮೂರು ವರ್ಷದ ಜಾಮೀನ್ ಕೊಡುತ್ತೆ.



ನಮ್ಮ ಕೃಷ್ಣಕರವಾದ ಫ್ಲೂಟ್ ಹಾರ್ಮೋನಿಯಂ ಬಹಳ ಉತ್ತಮವಾದದ್ದು, ಬಹಳ ಇಂಪಾದ ನಾದವುಳ್ಳದ್ದು. ಯಾವ ಹವೆಯಲ್ಲೂ ಕೆಡುವುದಿಲ್ಲ. ಎಲ್ಲಾ ತರದ ಸಂಗೀತಗಳಿಗೂ ಹಿತವಾದದ್ದು. ಒಂದು ವಾರದೊಳಗೆ ಸಮ್ಮತವಾಗದಿದ್ದರೆ ಹಣ ವಾಪಸ್ ಕೊಡುವೆವು. ಇದು ಬೀಸ್ ಮತ್ತು ತೇಗದಿಂದ ತಯಾರಾದ್ದು, ಉತ್ತಮವಾದ ರೀಡ್ ಉಳ್ಳದ್ದಾಗಿದೆ. ಒಂದು ರೀಡಿನದಕ್ಕೆ ಕ್ರಯ ರೂ. 38, 45, 60; ಈಗಿನ ಕ್ರಯ ರೂ. 19, 22-8-0, 25; ಇದರ ಕೂಡ 5 ರೂ. ವಾಟು ಬಿಟ್ಟು ಕೊಡುತ್ತೇವೆ. ಜೋಡಿ ರೀಡ್ ಹಾರ್ಮೋನಿಯಂ ಕ್ರಯ ರೂ. 65, 70, 80, 90; ಈಗಿನ ಕ್ರಯ ರೂ. 32-8-0, 35, 40, 45; ಇದರ ಕೂಡ ರೂ. 6-12-0 ಕ್ರಯದ ಒಂದು ಜೊತೆ ತಬಲ ಮತ್ತು ಬಾಯಾವನ್ನು ಬಿಟ್ಟಿ ಕೊಡುವೆವು. ಉತ್ತಮೋತ್ತಮವಾದ ಮಡಿಸುವ ಹಾರ್ಮೋನಿಯಂ (ಕೈಯಿಂದಲೂ ಕಾಲಿನಿಂದಲೂ ನಡಿಸಬಹುದು) ಕ್ರಯ ರೂ. 130; ಈಗ ಇದನ್ನು ರೂ. 65 ಕ್ಕೆ ಕೊಡುತ್ತೇವೆ. ಕ್ರಯದಲ್ಲಿ ಕಾಲುಪಾಲು ಅಡ್ವಾನ್ಸು ಕಳಿಸಿ, ಸಮೀಪದ ರೈಲ್ವೆ ಸ್ಟೇಷನ್ ತಿಳಿಸಿದರೆ ಬಾಕಿ ಹಣಕ್ಕೆ ವಿ. ಪಿ. ಮಾಡುತ್ತೆ.

ವಿಳಾಸ—The National Harmonium Co.,

[270-9] SIMLA T.S.O., (E) CALCUTTA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21 1—1916 ರಿಂದ 28 1—1916 ರ ವರೆಗೆ

ಸ್ಥಳ		ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	5	5	0	6
ಮೈಸೂರು	,,	0	0	0	0
ಬೆಂಗಳೂರು	ಡಿಸ್ಟ್ರಿಕ್ಟು	61	47	0	0
ಮೈಸೂರು	,,	35	26	0	0
ತುಮಕೂರು	,,	17	8	0	0
ಕೋಲಾರ ಚಿನ್ನದ ಗಣಿಗಳು		0	0	0	0
ಕೋಲಾರು ಡಿಸ್ಟ್ರಿಕ್ಟು		0	0	0	0
ಹಾಸನ	,,	6	3	0	0
ಚಿತ್ರದುರ್ಗ	,,	27	14	0	0
ಕಡೂರ್	,,	0	0	0	0
ಶಿವಮೊಗ್ಗ	,,	24	9	0	0
	ಒಟ್ಟು	175	112	0	0

ಶಾಲಿವಾಹನ ಶಕ ವರುಷಗಳು 1838 ನೇ ರಾಕ್ಷಸ ಸಂವತ್ಸರದ ಉತ್ತರಾಯಣ ಶಿಶಿರಋತು ಮಾಘ ಶುದ್ಧ ಪೌರ್ಣಮಿ ಮೊದಲ್ಗೊಂಡು ಮಾಘ ಬಹುಳ ಪಂಚಮಿ ಗುರುವಾರದ ವರೆಗಿನ ಒಂದು ವಾರದ ದಿನಚರಿ.

1916 ನೇ ಫೆಬ್ರವರಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕುಂಭ ಮಾಸ ತೇದಿ
18	ಶುಕ್ರ *	ಪೌರ್ಣಮಿ	60-9	ಆಶ್ಲೇಷ	30-15	7
19	ಶನಿ ‡	ಪೌರ್ಣಮಿ	1-38	ಮಘಾ	33-59	8
20	ಭಾನು	ಪಾಡ್ಯಮಿ	3-22	ಪುಬ್ಬಾ	36-39	9
21	ಸೋಮ †	ಬಿದಿಗೆ	3-18	ಉತ್ತರಾ	37-43	10
22	ಮಂಗಳ §	ತದಿಗೆ	2-57	ಹಸ್ತ	37-12	11
23	ಬುಧ	ಚೌತಿ	0-56	ಚಿತ್ತಾ	57-28	12
24	ಗುರು	ಪಂಚಮಿ	54-11	ಸ್ವಾತಿ	34-41	13

* ಮ್ಯಾಕಪೂಜಾ, ಬೆಳಗೂರು ಶ್ರೀ ಲಕ್ಷ್ಮೀ ನೃಸಿಂಹಸ್ವಾಮಿ ರಥ

‡ ಮಳೆ ನಕ್ಷತ್ರ—ಶತಭಿಷ 1 ನೇ ಪಾದ

† ಕರೀಘಟ್ಟದ ಶ್ರೀನಿವಾಸಸ್ವಾಮಿ ರಥ.

§ ಸಂಕಟಹರ ಚತುರ್ಥಿ, ಮಳೆ ನಕ್ಷತ್ರ—ಶತಭಿಷ 2 ನೇ ಪಾದ.

ಜಾಮೀನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.

ಮತ್ತು

ಕೂದಲಿಗೆ ರೇಷ್ಮೆಯಂಥಾ ಹೊಳಪು ನುಣುಪು ಬರುತ್ತೆ.

ಈ ಕೂದಲು ರಂಗನ್ನು ನೆತ್ತಿ, ಗಡ್ಡ, ಮೀಸೆ ಮೊದಲಾದ ದೇಹದ ಯಾವ ಭಾಗಕ್ಕಾಗಲಿ ಸುಲಭವಾಗಿ ಹಚ್ಚಬಹುದು, ಚರ್ಮಕ್ಕೆ ಯಾವ ವಿಧವಾದ ಬಾಧೆಯೂ ನಷ್ಟವೂ ಕೆಡುಕೂ ಉಂಟಾಗುವುದಿಲ್ಲ. ಇದು ಯಾರಿಗೂ ಪತ್ತೆಯಾಗುವುದಿಲ್ಲ; ರಂಗು ಎಂದಿಗೂ ಕದಡುವುದಾಗುವುದಿಲ್ಲ. ಒಂದಾವರ್ತಿ ಪರೀಕ್ಷಿಸಿದರೆ ಎಂದೆಂದಿಗೂ ಇದನ್ನೇ ಉಪಯೋಗಿಸುತ್ತೀರಿ.

ನರೆಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ನಕ್ಕಲ್ ರಂಗಿನ ವಿಷಯದಲ್ಲಿ ಎಚ್ಚರಿಕೆ! ರತನ್‌ಜೋತಿ ಕೂದಲ ರಂಗು ಎಂಬ ಚೀಟಿಯನ್ನು ನೋಡಿ ಕೊಂಡುಕೊಳ್ಳಿ. [282-10]

ಪೆಟ್ಟಿಗೆ, ಬ್ರಷ್ ಮತ್ತು ಬಟ್ಲ ಸಹಿತ ಕ್ರಯ ರೂ. 1-0-0.

ಏಜಂಟರು ಬೇಕು! ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್!

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು :—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

177, ಚೀನಾ ಬಜಾರ್ ರೋಡ್, ಮದರಾಸ್.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸಿಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸಿಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸಿಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [32-2]

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
95 ,, ,, ,, 4 ,,	200 ,, ಟಿನ್ ,, 8 ,,	80 ,, ,, ,, 4 ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸಿಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ರವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ.

Printed and Published by the Rev. H. GULLIFORD, Proprietor and Manager, Wesleyan Mission Press, Mysore. 17/2/1916.

REGISTERED M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸರ್ ೧೯೧೬ ನೇ ಇಸವಿ ಫೆಬ್ರವರಿ ತಾರೀಖು ೨೪ ನೇ ಗುರುವಾರ. ಸಂಚಿಕೆ ೩೯

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ಕಪ್ಪಾಗಿರುವ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶವನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯರಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವುದೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಪದಾರ್ಥವಾಗಿರುತ್ತದೆ. ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ಕಡಿಮೆಯಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ, ಕೂದಲುಗಳು ಇದನ್ನು ಲೇಪಿಸಿಕೊಂಡಾದ ಬಳಿಕ ಎಂದಿಗೂ ಜಿಗುಟಾಗಿ ಬಿದ್ದು ಹೋಗಲಾರವು; ಅವರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯದಿರಿ. ಈ ಕಾಮಿನಿಯಾ ತೈಲವನ್ನು ಉಪಯೋಗಿಸಿ ... ಈ ಎಣ್ಣೆಯು ... ಮೈಸೂರು ಪ್ರದರ್ಶನದಲ್ಲಿ ... ಪ್ರದರ್ಶನದಲ್ಲಿ ... ಸರ್ಟಿಫಿಕೇಟ್ ಆಫ್ ಮೆರಿಟ್ ... ಅನೇಕ ಗಣ್ಯರಾದ ... ಉತ್ತಮೋತ್ತಮವಾದ ಪ್ರಶಂಸಾಪತ್ರಗಳನ್ನು ಪಡೆದಿದೆ.

ಅವುಗಳಲ್ಲಿ ಒಂದನ್ನೇ ನೋಡಿರಿ: ... ಬಂಧುಗಳು, ... ಕಾಮಿನಿಯಾ ತೈಲವನ್ನು ... ಬಳಸುವುದಕ್ಕೆ ಸರ್ವೋತ್ಕೃಷ್ಟವಾದುದೆಂದು ಸಾರ್ವಜನಿಕರಿಗೆ ... ಹೇಳುತ್ತೇವೆ. ಬೆಲೆ ಒಂದು ಬಾಟ್ಲಿಯ ಕ್ರಯ ರೂ. 1-0-0. ಅ. ವೆ. 0-4-0 ಬೇರೆ. 3 ಬಾಟ್ಲಿಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಬಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಳಕೆಯಿಂದ ತಮಗೆ ಅಧಿಕ ಲಾಭವು ದೊರೆಯುತ್ತದೆಂದು ಈ "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಅದು ಅದಕ್ಕಿಂತ ಉತ್ಕೃಷ್ಟವಾದ್ದು ಇದೇ" ಎಂದು ಅವರಿಗೆ ಬಹಳ ಲಾಭ ದೊರೆಯತಕ್ಕ ಕೀಳುತರದ ಬೇರೆ ಬೆಳ್ಳು ಎಣ್ಣೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭಗಳಲ್ಲಿ ಮೋಸಹೋಗದೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ. ಅವರಲ್ಲಿ ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ. ... ಎಂದರೆ ನೀವು ... ಅಸಲೀತನದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಓಟೊ-ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮ. ಅತ್ಯಾಗಿ ಪರಿಶುದ್ಧ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ತಯಾರಿಸಿದುದು. ಇದರಲ್ಲಿ ಮದಿರೆಯು (ಆಲ್ಕೋಹೋಲ್) ಸಂಪರ್ಕವಿಲ್ಲ. ಈ ದ್ರವದ ಒಂದು ಹನಿ ... ಕೈಚೌಕದಲ್ಲಿ ಅಥವಾ ಅಂಗಿಯಲ್ಲಿ ಹಾಕಿದರೆ, ನಿಮ್ಮ ಸುತ್ತಲೂ ಸುಗಂಧವಾದೆಂದು ... ಬೇರೆ ಯಾವ ಪರಿಮಳ ದ್ರವ್ಯ ... ಈ ಓಟೊ-ದಿಲ್ ಬಹಾರಿನ ಗಂಧವು ಅವಲ್ಲಿ ... ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಯುತ್ತದೆ. ಒಂದು ... ಪರೀಕ್ಷಿಸಿರಿ. [34-3]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಾದರಿಯ) ಸೀಸೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ... ರೂ. 0-4-0. ಓಟೊ-ದಿಲ್ ಬಹಾರ್ ... 0-12-0.

ಬೇರೆ ಬೇರೆ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾ ಮಸಜಿದ್, ಮಾರ್ಕೆಟ್, ಬಾಂಬೆ.

ಏಜಂಟ್, ... ಮಂಗಳೂರು.

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 616 ಪೇಜುಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ ಪ್ರತಿಗೆ ರೂ. 1-12-0. [168-36]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಪ್ರಶ್ನೋತ್ತರ ಲೇಖ್ಯಬೋಧಿನಿ ಕ್ರಯ ೧–೮–೦

ಸಿವಿಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ಸಮಸ್ತ ವಿಚಾರಗಳನ್ನೂ, ವ್ಯವಹಾರಗಳನ್ನೂ, ಬೋಧಕರ ಸಹಾಯವಿಲ್ಲದೆ ತಿಳಿಸುವುದು. ಆರನೆಯ ಮುದ್ರಣ, ಸರ್ವಾಂಗ ಸುಂದರವಾದ ಪುಸ್ತಕ! ಬೇಗ ಬೇಗ ಬರೆದು ತರಿಸಿಕೊಳ್ಳಿರಿ!!

ಕ್ರಯ ಒಂದು ರೂಪಾಯಿ ಎಂಟಾಣೆ.

ನಮ್ಮ ವಿಳಾಸ:—ಭಾರತಿ ಸಂಪಂಗಿರಾಮು,

[4–8] 42, ಸಿ. ಪೇಟೆ, ಕೋಟೆ, ಬೆಂಗಳೂರು ಸಿಟಿ.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-31]

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಅರ್ಧಬೆಲೆ! ಒಂದು ತಿಂಗಳು ಮಾತ್ರ!

ನಮ್ಮ ರೈಲ್ವೆ ರೆಗ್ಯುಲೇಟರ್ ವಾಚ್ ಪ್ರಖ್ಯಾತವಾದ ಕಾಲವನ್ನು ತೋರಿಸತಕ್ಕದ್ದು. ದೊಡ್ಡ ಸೈಜು, ... 3 ವರುಷದ ಗ್ಯಾರಂಟಿ ಕೊಡುತ್ತೇವೆ.



ಕ್ರಯ ರೂ. 7-14-0; ರೂ. 9-14-0 ಈಗ ನಾವು ಇಟ್ಟಿರುವ ಕ್ರಯ ರೂ. 3-15-0; ರೂ. 4-15-0 ಉತ್ತಮವಾದ ಕೈಗೆ ಕಟ್ಟಿಕೊಳ್ಳುವ ಗಡಿಯಾರ ಚರ್ಮದ ಪಟ್ಟಿ ಸಮೇತ ಕ್ರಯ ರೂ. 10; ಈಗ ಇದನ್ನು ರೂ. 5 ಕ್ಕೆ ಕೊಡುವೆವು. ಬೆಳ್ಳಿ 9 ಕ್ಯಾರೆಟ್ ಚಿನ್ನದ ಗಡಿಯಾರ ಕ್ರಯ ರೂ. 32 ಈಗ ರೂ. 16 ಕ್ಕೆ ... ಬೆಳ್ಳಿ ವಾಚ್ ಕ್ರಯ ರೂ. 14; ಈಗ ರೂ. 7 ಮಾತ್ರ. ... 8 ದಿನದ ನಿಕ್ಕಲ್ ವಾಚ್ ರೂ. 18; ಈಗ ರೂ. 9 ಇದೇ ಬೆಳ್ಳಿಯದು ರೂ. 24; ಈಗಿನ ಕ್ರಯ ರೂ. 12. ಅದೇ ಬೆಳ್ಳಿ ... ವಾಚ್ 30; ಈಗಿನ ಬೆಲೆ ರೂ. 15. ಸ್ಪೆಷಲ್ ಬಹುಮಾನ ಕೈಗೆ ಕಟ್ಟುವ ತರಹಾ ಅಲ್ಲದೆ ಇತರ ತರಹಾ ಪ್ರತಿ ಒಂದು ವಾಚು ಕೊಂಡು ಕೊಳ್ಳುವವರಿಗೂ ಒಂದು ಸುಂದರ ಸರಪಣಿಯೂ, 6 ವಾಚು ಕೊಳ್ಳುವವರಿಗೆ ಒಂದು ಹೆಚ್ಚು ವಾಚೂ ಇನಾಮು ಕೊಡುವೆವು.

ನಮ್ಮ ವಿಳಾಸ—The Competition Watch Co.,

[276-11] 25, Madan Mitra Lane, E. Calcutta.

2 ನೆ ತರಗತಿ ಭೂವಿವರಣೆ.

ಚಿತ್ರಗಳು ಮತ್ತು ಭೂಪಟಗಳೊಡನೆ (ಕ್ರಯ 4 ಆಣೆ).

ಮೈಸೂರು ದೇಶದ ಭೂಪಟಗಳು.

(ಪ್ರಾಕೃತಿಕ ಮತ್ತು ರಾಜಕೀಯ) ಕ್ರಯ 2 ಆಣೆ.

ಹೊಸ ಭೂವಿವರಣೆಗಳು.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ.

ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ವಿಶ್ವಾಬಂಡದ ಭೂವಿವರಣೆ	...	0–5–0
2. ಪ್ರಾಕೃತಿಕ ಭೂಗೋಲ ಶಾಸ್ತ್ರ	...	0–6–0
ಮೇಲೆ ಕಂಡ ಎರಡೂ ಸೇರಿ	...	0–10–0

ಮೈಸೂರು ಭೂವಿವರಣೆ 2 ಆಣೆ; The English L. S. Text Examiner for 1916 by a Graduate, Price 3 as.

ನಮ್ಮ ವಿಳಾಸ—ಎಲ್. ಆರ್. ವೆಂಕಟಸುಬ್ಬಾಚಾರ್ಯ,

[47–1] ಸುಬೋಧ ಗ್ರಂಥಾಲಯ, ಮೈಸೂರು.

ಲೋವರ್ ಸೆಕೆಂಡರಿ ಪರೀಕ್ಷೆಯ

ಗಣಿತಪ್ರಶ್ನೋತ್ತರಾವಳಿ

ಎಂಬ ನವೀನ ಗಣಿತದಲ್ಲಿ ಎಲ್ಲಾ ಲೆಕ್ಕಗಳನ್ನು ಸುಲಭವಾಗಿಯೂ, ಜಾಗ್ರತೆಯಾಗಿಯೂ ಮಾಡುವ ಅನೇಕ ಮಾರ್ಗಗಳು ಉದಹರಿಸಲ್ಪಟ್ಟಿವೆ. ಮತ್ತು 1900-15 ರ ವರೆಗಿನ ಪ್ರಶ್ನೆಗಳಿಗೆ ಪೂರ್ಣವ್ಯಾಸಸಹಿತವಾದ ಉತ್ತರಗಳೂ ಇರುತ್ತವೆ. ಇದು ಮಾಸ್ಟರುಗಳಿಗೂ, ಸ್ಕೂಲ್ ಮತ್ತು ಪ್ರೈವೇಟ್ ವಿದ್ಯಾರ್ಥಿಗಳಿಗೂ ಅತ್ಯಂತ ಅವಶ್ಯಕವಾಗಿರುವದು. ಸ್ವಲ್ಪ ಪ್ರತಿಗಳೇ ಉಳಿದಿವೆ. ಕ್ರಯ 0-8-0; ವಿ.ಪಿ 10 ಆ.

ವಿಳಾಸಗಳು—ಡಿ. ಮಹಾಬಲರಾವ್, ಬಿ ಎ, ಅಸಿ ಮಾಸ್ಟರ್, ಮಹಾರಾಣಿ ಕಾಲೇಜು, ಮೈಸೂರು; ಅಥವಾ, ಸ್ಟುಡೆಂಟ್ಸ್ ಹಾಲ್, ಮೈಸೂರು. [284-9]

Free! **ಬಹುಮಾನ.** Free!

ಈ ಕಾದಂಬರಿಗಳಲ್ಲಿ 5 ರೂಪಾಯಿಗೆ ಕಡಿಮೆ ಇಲ್ಲದ ಬೆಲೆಯ ಆರ್ಡರಿಗೆ ಶೋಭನೆ ಎಂಬ 12 ಆ. ಬೆಲೆಯ ಸೊಗಸಾದ ಬಂಗಾಳಿ ಕಾದಂಬರಿಯು ಉಚಿತ. ಅಥವಾ 10 ಆಣೆ ಬೆಲೆಯ S.T.A. ಕ್ಯಾಲೆಂಡರ್ ಉಚಿತ. [281-10]

ಸುಶೀಲೆ—	ಶ್ರೀ. ತಿರುಮಲಯ್ಯನವರಿಂದ	0- 6-0
ಸತೀಶ್ವರಶಕ್ತಿ—	ಸಭಾ ಭಾಗ 1 ,,	0- 8-0
ವಿದ್ಯುಲ್ಲತಾ—	ಹರಿಣಿ ,,	0-14-0
ವಿರಾಗಿಣೀ—	ಸಭಾ ಭಾಗ 2 ,,	1- 0-0
ದಕ್ಷಕನ್ಯಾ—	ವಿಂದಾ ,,	1- 8-0
ಜುಮಲಿ—	ಬಂಗಾಳಿ ಪತ್ತೇದಾರಿ ನಾವಲ್	0- 6-0
ರಾಜಪುತ್ರ ಜೀವನಸಂಧ್ಯಾ—	ಬಂಗಾಳಿ ನಾವಲ್	0-12-0
ಚಂದ್ರಪ್ರಭಾ ಎಂಬ ಹೊಸ ಕಾದಂಬರಿ		0-14-0

ವಿಳಾಸ—ಎಂ. ಎಸ್. ರಾವ್ ಕಂಪನಿ, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಸ್ವಲ್ಪ ಕ್ರಯ! ವಿಶೇಷ ಬಾಳಿಕೆ!

ಒಳ್ಳೇ ಸಮಯ!

ಸೆಲ್ಫ್ ಫಿಲಿಂಗ್ ಫೌಂಟನ್ ಪೆನ್.

200 ನೇ ನಂಬರ್ ಫೌಂಟನ್ ಪೆನ್ನು 14 ಕ್ಯಾರೆಟ್ ಗೋಲ್ಡ್ ನಿಬ್ಬು, ಫಿಲ್ಲರ್ ಮತ್ತು ಪೆಟ್ಟಿಗೆ ಸಹಿತ ಕ್ರಯ ರೂ. 1-14-0 ಮಾತ್ರ. ಟಪಾಲ್ ಮತ್ತು ಪ್ಯಾಕಿಂಗ್ ಖರ್ಚು ಬೇರೆ. ಇದೇ ತಿಂಗಳು ಒಳಗೆ ತರಿಸಿಕೊಳ್ಳುವವರಿಗೆ ಪ್ರತಿ ಒಂದು ಪೆನ್ನಿನ ಜೊತೆಗೆ ಸೊಗಸಾದ ಕ್ಲಿಪ್ಪು ಉಚಿತವಾಗಿ ಕೊಡಲಾಗುತ್ತೆ. ಬೈಸಿಕಲ್‌ಗೆ ಯಾವ ಸಾಮಾನು ಬೇಕಾದರೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತೆ. [279-11]

ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ನೋಟೀಸು.

ಮೈಸೂರು ಸಿಟಿ ಮ್ಯುನಿಸಿಪಲ್ ಇಂಜನಿಯರ್ ಸಾಹೇಬರವರ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನೆಂದರೆ:—ಮೈಸೂರು ಟೌನ್‌ನಲ್ಲಿ ಹೊಸದಾಗಿ ಮನೆ ಕಟ್ಟುವದಕ್ಕಾಗಲಿ, ಅಥವಾ ರಿಪೇರಿ ಮತ್ತು ಬದಲಾವಣೆಯಾಗಲಿ ಲೈಸೆನ್ಸು ಪಡೆಯಲು ಪ್ಲಾನು ತಯಾರುಮಾಡಲು ಪ್ರತ್ಯೇಕವಾಗಿ ಒಬ್ಬರನ್ನು (Draughtsman) ನೇಮಿಸಿರುವದರಿಂದ ಬೇಕಾದವರು ಈ ಕೆಳಗೆ ರುಜುಮಾಡಿರುವವರಲ್ಲಿಗೆ ಅರ್ಜಿ ಬರೆದುಕೊಂಡಲ್ಲಿ ಹೊಸದಾಗಿ ಪ್ಲಾನು ತಯಾರುಮಾಡಿಕೊಡಲು ಏರ್ಪಾಡು ಮಾಡುತ್ತಾರೆ. ಪ್ಲಾನುಗಳನ್ನು ತಯಾರುಮಾಡಲು ಈ ಕೆಳಗೆ ನಮೂದುಮಾಡಿರುವಂತೆ ಫೀಜು ವಸೂಲ್ಮಾಡಲ್ಪಡುತ್ತದೆ:— [39-3]

ಮನೆ ಕಿಮ್ಮತ್ತು 200 ರೂಪಾಯಿಗೆ ಮೀರದ ಪ್ಲಾನು ತಯಾರುಮಾಡಲು			ರೂ. 1-8-0
ಡಿಟೋ 600	,,	ಡಿಟೋ......	,, 2-8-0
ಡಿಟೋ 1,000	,,	ಡಿಟೋ......	,, 4-0-0
ಇದರ ಮೇಲೆ ಪ್ರತಿ ಸಾವಿರಕ್ಕೂ ಮತ್ತು ಇದರ ಭಿನ್ನಾಂಶಕ್ಕೂ	.....	.....	,, 2-0-0 ಸಂ.

ಇ. ರಾಮಸ್ವಾಮಿ ಅಯ್ಯರ್,

ಮ್ಯುನಿಸಿಪಲ್ ಇಂಜನಿಯರ್.

S. UDIPI NARAYANACHARYA & Co.,
BANARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸಿರುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಶಲ, ಪೇಟ, ಕಾಶ್ಮೀರ್ ಶಾಲು, ದುಪ್ಪಟಿ, ಮಗುಟ, ಜಗನ್ನಾಥ ಜಾಗಂಟೆಗಳು. ರುದ್ರಾಕ್ಷಿಗಳು, ಕೊನಾರಗಳು, ಆರಳಿ ಪೇಟಿ, ಧರ್ಮಾವರ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೇನತ್ತಿನಿಂದ ತಯಾರಿಸಿರುವೆವು. ಈ ಅಮೂಲ್ಯವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೇಟಲಾಕು ಒಂದು ಕಾಶಿ ಕಾಲಭೈರವನ ದಾರವನ್ನು ಉಚಿತವಾಗಿ ಕಳುಹಿಸಲಾದೀತು. [119-32]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಪರೀಕ್ಷೆಗಾಗಿ ಮುಫತ್ತು.

ನಮ್ಮ "ಜಿ-ವಾಲಾ" ಎಂಬುವದು ಕಲೆಸೋವನ್ನು ತತ್‌ಕ್ಷಣವೇ ನಿಲ್ಲಿಸುತ್ತೆಂದು ಬಹು ಕಾಲದಿಂದಲೂ ಬರ್ಮಾದಲ್ಲಿ ಖ್ಯಾತಿಹೊಂದಿದೆ. ಬಹಳ ಜನಗಳ ಆಶ್ರಯವನ್ನು ಸಂಪಾದಿಸಿಕೊಂಡಿದೆ. ಅದು ಕಡಾದಷ್ಟೆಂದೂ ಎಲ್ಲಾ ತರದ ಕಲೆಸೋವುಗಳನ್ನೂ ಉಕ್ತರ ಕ್ಷಣದಲ್ಲೇ ಗುಣವಾದತಕ್ಕದ್ದೆಂಬ ಕೇಳದೇನೇ ಸರ್ಟಿಫಿಕೇಟುಗಳನ್ನು ಅನೇಕವಾಗಿ ಸಂಪಾದಿಸಿಕೊಂಡಿದೆ — ಈ ಔಷಧವನ್ನು ಹಿಂದುಸ್ಥಾನ, ಸಿಲೋನ್ ಮತ್ತು ಇತರ ದೇಶಗಳಲ್ಲಿ ಪ್ರಚಾರಕ್ಕೆ ತರಬೇಕೆಂಬ ಉದ್ದೇಶದಿಂದ ನೀವು ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿಯೂ ಸಂಪೂರ್ಣವಾಗಿಯೂ ನಮಗೆ ತಿಳಿಸಿದರೆ ನಿಮಗೆ ನಾವು ಬಿಟ್ಟಿಯಾಗಿ ಎರಡು ಸಣ್ಣ ಪೊಟ್ಟಣಗಳನ್ನು ಕಳುಹಿಸುವೆವು. ಅದನ್ನು ಉಪಯೋಗಿಸಿದರೆ ಅದರ ಗುಣ ನಿಮಗೇ ಮುಂದಟ್ಟುಗುತ್ತದೆ.— ಈ ಕಲೆಸೋವಿನ ಔಷಧಿಯನ್ನು ದೊಡ್ಡವರಿಗೆ ಉಪಯೋಗಿಸುವಷ್ಟು ಹೆಚ್ಚಾಗಿ ಮಾಡಿದೇವೆ. ಅದನ್ನು ಪೊಟ್ಟಣಗಳಾಗಿಯೂ ಬಿಲ್ಲೆಗಳಾಗಿಯೂ ತಯಾರಿಸಲಾಗಿರುವೆವು. ಅಂಥಾ 12 ಪೊಟ್ಟಣಗಳಾಗಲಿ, 12 ಬಿಲ್ಲೆಗಳಿರುವ ಒಂದು ಸೀಸೆಗಾಗಲಿ ಕ್ರಯ ರೂಪಾಯಿ 1-0-0.

Address—Francis Medical Hall,
Manufacturing Chemists, Myanaung, Burma.

ನಮ್ಮ ವಿಳಾಸ—ಫ್ರಾನ್ಸಿಸ್ ಮೆಡಿಕಲ್ ಹಾಲ್,
[10-6] ಮಯಾನಾಂಗ್, ಬರ್ಮಾ.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ

ಶ್ರೀಕರಕಸ್ತೂರಿಮಾತ್ರೆ

ಬಬಿಜ್ಜ, ... ಪನ್ನದರೀಯು-ಲೋಹಭಸ್ಮ-ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರ ಕಸ್ತೂರಿ ಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳ ಹೊತ್ತು ಬಾಯಿ ಘಮಘಮಿಸುವುದು.

ಛಳಿ ಮಳೆಗಾಲಗಳಲ್ಲೂ-ಸೊಂಕು ರೋಗಸ್ಥಳಗಳಲ್ಲೂ ಪ್ರಯಾಣಕಾಲದಲ್ಲೂ-ಮಕ್ಕಳಿರುವ ಮನೆಗಳಲ್ಲೂ—ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಮಲಬಂಧ, ಅಜೀರ್ಣ, ಭೇದಿ, ವಿಷಮಜ್ವರ, ಪ್ಲೇಗು ಜ್ವರ, ಮಲೇರಿಯಾ ಜ್ವರ, ಹೊಟ್ಟೆ ನೋವು, ನಡು ನೋವು, ಹಲ್ಲು ನೋವು, ಅರೋಚಕಗಳು ಬಹಳ ಬೇಗನೆ ವಾಸಿ ಗುಣವಾಗುತ್ತವೆ ಮಕ್ಕಳ ಸಮಸ್ತ ರೋಗಗಳಿಗೂ ಅಮೃತವೇ ಸರಿ.

250 ಮಾತ್ರೆಯ ಸೀಸೆ 0-4-0, ಐದಕ್ಕೆ 1 ಜಟ್ಟಿ, ಟಿ. ಕ. ಪ್ರತ್ಯೇಕ.

[278-11] ವಿಳಾಸ—ಸದ್ವೈದ್ಯಶಾಲಾ, ನಂಜನಗೂಡು.

ಕ್ರಿಸ್ಮಸ್ ಹಬ್ಬದ ವಿಶೇಷ ಮಾರಾಟ! 1916 ನೇ ಜನವರಿ 25 ರವರೆಗೆ ಮಾತ್ರ. ತಬಲಾ ಮತ್ತು ಛಾಯಾ ಬಿಟ್ಟಿ.

ಮೂರು ವರ್ಷದ ಜಾಮೀನ್ ಕೊಡುತ್ತೇ.



ನಮ್ಮ ಕೃಪ್ತಿಕರವಾದ ಫ್ಲೂಟ್ ಹಾರ್ಮೋನಿಯಂ ಬಹಳ ಉತ್ತಮವಾದದ್ದು, ಬಹಳ ಇಂಪಾದ ನಾದವುಳ್ಳದ್ದು ಯಾವ ಹವೆಯಲ್ಲೂ ಕೆಡುವುದಿಲ್ಲ. ಎಲ್ಲಾ ತರದ ಸಂಗೀತಗಳಿಗೂ ಹಿತವಾದದ್ದು. ಒಂದು ವಾರದೊಳಗೆ ಸಮ್ಮತವಾಗದಿದ್ದರೆ ಹಣ ವಾಪಸ್ ಕೊಡುವೆವು. ಇದು ಬೇಸ್ ಮತ್ತು ತೇಗದಿಂದ ತಯಾರಾದಪ್ಪಟ್ಟು ಉತ್ತಮವಾದ ರೀಡ್ ಉಳ್ಳದ್ದಾಗಿದೆ. ಒಂದು ರೀಡಿನದಕ್ಕೆ ಕ್ರಯ ರೂ. 38, 45, 60; ಈಗಿನ ಕ್ರಯ ರೂ 19, 22-8-0, 25; ಇದು ಕೊಡ 5 ರೂ. ವಾಜು ಬಿಟ್ಟಿ ಕೊಡುತ್ತೇವೆ. ಜೋಡಿ ರೀಡ್ ಹಾರ್ಮೋನಿಯಂ ಕ್ರಯ ರೂ. 65, 70, 80, 9 ; ಈಗಿನ ಕ್ರಯ ರೂ. 32-8-0, 35, 40, 45; ಇದರ ಕೂಡ ರೂ. 6-13-0 ಕ್ರಯದ ಒಂದು ಜೋತೆ ತಬಲ ಮತ್ತು ಛಾಯಾವನ್ನು ಬಿಟ್ಟಿ ಕೊಡುವೆವು. ಉತ್ತಮೋತ್ತಮವಾದ ಮಡಿಸುವ ಹಾರ್ಮೋನಿಯಂ (ಕೈಯಿಂದಲೂ ಕಾಲಿನಿಂದಲೂ ನಡಿಸಬಹುದು) ಕ್ರಯ ರೂ. 130; ಈಗ ಇದನ್ನು ರೂ. 65 ಕ್ಕೆ ಕೊಡುತ್ತೇವೆ. ಕ್ರಯದಲ್ಲಿ ಕಾಲುಪಾಲು ಅಡ್ವಾನ್ಸು ಕಳಿಸಿ, ಸಮೀಪದ ರೈಲ್ವೆ ಸ್ಟೇಷನ್ ತಿಳಿಸಿದರೆ ಬಾಕಿ ಹಣಕ್ಕೆ ವಿ ಪಿ ಮಾಡುತ್ತೆ

ವಿಳಾಸ—**The National Harmonium Co.,**
[276-12] **SIMLA T.S.O., (E) CALCUTTA.**

ಕರ್ಣಿಕ ಎಗ್ಯೂಮಿಕ್ಸ್ಚರ — ಎಲ್ಲಾ ಜ್ವರಗಳಿಗೂ ಹಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರಿಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-20]

ಕ್ರಯ 0-10-0; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,
ಎಗ್ಯೂ ಮಿಕ್ಸ್ಚರ್ ಡಿಪೋ, ಬೊಂಬಾಯಿ, 4.
KARNIK Bros., BOMBAY, 4.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದವರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ — ಮಿ॥ ಎಂ ಎಸ್. ರಬಿಕೊ, ಚೀಫ್ ಏಜೆಂಟ್ ಬೆಂಗಳೂರು; ಮಿ॥ ಎಂ ಎಸ್. ನಂಜಪ್ಪನವರು ಅಥವಾ ಮಿ॥ ವೆಂಕಟರಮಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ [22-10] ಬ್ರಾ. ಚ್ ಸೆಕ್ರಟರಿ, ಮದರಾಸ.

ಸಂಗೀತ ಪಾರಿಜಾತ

ಮೂರನೆಯ ಮುದ್ರಣ! ಸೀಸಪದ್ಯಗಳೂ ಕೀರ್ತನೆಗಳೂ ಸೇರಿರುವ ಹೆಚ್ಚಾಗಿವೆ. ಬೀಗರಹಾಡು ಆರತಿಯೆತ್ತುವ ಹಾಡು ಮುಂತಾದ ಅನೇಕ ಹಾಡುಗಳವೆ ಕ್ರಯ ೦-೪-೦ ನೂರು ಪ್ರತಿಗೆ ಕಮ್ಮಿ ಇಲ್ಲದಂತೆ ತರಿಸಿಕೊಂಡರೆ ಧಾರಾಳವಾದ ಕಮಿಷನ್ ಕೊಡುವೆವು

ಶಬ್ದಾದರ್ಶ ನೋಟ್ಸ್.

ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದುದು. ಕ್ರಯ ೦-೩-೦ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಸಿಗುತ್ತೆ.

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.
[277-11] ಸ್ಟೂಡೆಂಟ್ಸ್ ಹಾಲ್, ಮೈಸೂರು.

ಆಫೀಸ್ ಗಡಿಯಾರಗಳು.



ಈ ಗಡಿಯಾರಗಳು ಮನೆ, ಆಫೀಸು, ಕಚೇರಿ, ಹೊಟೇಲು, ಅಂಗಡಿ ಮೊದಲಾದ ಸ್ಥಳಗಳಲ್ಲಿ ಹಾಕುವುದಕ್ಕೋಸ್ಕರಲೇ ತಯಾರಾಗಿರುವೆವು. ಇದರ ಡಯಲ್ 8 ಅಂಗುಲ, ಬಿಳಿ ಎನಾಮಲ್ ಮಾಡಿದ. 19½ ಅಂಗುಲ ಎತ್ತರ ಒಂದು ಸಲ ಬೀಗಹಾಕಿದರೆ 8 ದಿನ ನಡೆಯುತ್ತೆ. ಕ್ರಯ ರೂ. 6-8-0. ತಾರಿಖು ಸಹ ತೋರಿಸುವುದಕ್ಕೆ ರೂ. 7-8-0.

ಅನ್‌ಸೋನಿಯಾಕ್ಲಾಕುಗಳು.

6 ಅಂಗುಲ, ಸುಂದರವಾದ ಡಯಲ್ ಉಳ್ಳದ್ದು				ಕ್ರಯ	ರೂ 11-8-0.
8 ,,	ಡ್ರ್ಯಾಸ್	,,	,,	,,	ರೂ. 14-8-0.
10 ,,	,,	,,	,,	,,	ರೂ. 15-8-0.
12 ,,	,,	,,	,,	,,	ರೂ. 16-8-0.

ಸೇತ್ ಥಾಮಸ್ ಒಂದು ರೂಪಾಯಿ ಜಾಸ್ತಿ.

ನಮ್ಮ ವಿಳಾಸ—ಗೌಥಾ ಅಂಡ್ ಕಂಪನಿ,
[12-3] 57, ಅಯ್ಯಪ್ಪನಾಯಕನ್ ಪೇಟೆ, ಮದರಾಸ್.

ತಾಜಾಕಲಂ.— ಪಟಮಾಸ್ತು ಮಾತು ಅಡ್ವಾನ್ಸು 3 ರವಿವಾರು ಕಳುಹಿಸಲೇ ಬೇಕು. ನಮ್ಮಲ್ಲಿ ವಾಚುಗಳು, ಬೈಸಿಕಲುಗಳು, ಟೈಪ್‌ರೈಟರುಗಳು, ಹಾರ್ಮೋನಿಯಂ, ಫೌಂಟನ್ ಪೆನ್ನು ಮುಂತಾದ ಅನೇಕ ಪದಾರ್ಥಗಳು ಸುಲಭ ಕ್ರಯಕ್ಕೆ ಇಟ್ಟಿದೇವೆ.

ಜಾಮೀನ್ ಉಳ್ಳದ್ದು! ಯಥಾರ್ಥ ವಾದದ್ದು! ನಂದಿರಿ!

ರತನ್‌ಜೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.
ಮತ್ತು
ಕೂದಲಿಗೆ ರೇಷ್ಮೆಯಂಥಾ ಹೊಳಪು ನುಣುಪು ಬರುತ್ತೆ.

ಈ ಕೂದಲ ರಂಗನ್ನು ಸೆತ್ತಿ, ಗಡ್ಡ, ಮೀಸೆ ಮೊದಲಾದ ದೇಹದ ಯಾವ ಭಾಗಕ್ಕಾಗಲಿ ಸುಲಭವಾಗಿ ಹಚ್ಚಬಹುದು; ಚರ್ಮಕ್ಕೆ ಯಾವ ವಿಧವಾದ ಬಾಧೆಯೂ ನಷ್ಟವೂ ಕೆಡುಕೂ ಉಂಟಾಗುವುದಿಲ್ಲ. ಇದು ಯಾರಿಗೂ ಶಕ್ತಿಯಾಗುವುದಿಲ್ಲ; ರಂಗು ಎಂದಿಗೂ ಕಡಿಮೆಯಾಗುವುದಿಲ್ಲ. ಒಂದು ಸಲ ಪರೀಕ್ಷಿಸಿದರೆ ಎಂದೆಂದಿಗೂ ಇದನ್ನೇ ಉಪಯೋಗಿಸುತ್ತೀರಿ ನರೆಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ನಕ್ಕಲ್ ರಂಗಿನ ವಿಷಯದಲ್ಲಿ ಎಚ್ಚರಿಕೆ! ರತನ್ ಜೋತಿ ಕೂದಲೆಣ್ಣೆ ಎಂಬ ಚೀಟಿಯನ್ನು ನೋಡಿ ಕೊಂಡುಕೊಳ್ಳಿ. [282-11]

ಪೆಟ್ಟಿಗೆ, ಬ್ರಷ್ ಮತ್ತು ಬಟ್ಲ ಸಹಿತ ಕ್ರಯ ರೂ. 1-0-0.

ಏಜಂಟರು ಬೇಕು! ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್!

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು:—
ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
177, ಜೇನಾ ಬಜಾರ್ ರೋಡ್, ಮದರಾಸ್.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

(ಟ್ರೇಡ್ ಮಾರ್ಕ್)

ಸೇಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನ್ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಜರುಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಿನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಪಾಠಶಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲಾ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಇದಕಾರಣ ಇಂತಹ ಗುಣಕಾರಿಯಾದ ಸೇಶಿಂತಾನ್ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [32-3]

16 ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	650 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
96 ,, ,, ,, 4 ,,	200 ,, ಟಿನ್ ,, 9 ,,	80 ,, ,, ,, 4 ,,	1200 ,, ,, ,, 2 ,,

1. ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೇಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಬಿಕರಿಗೆ ಇಡಲಾಗಿದೆ. ನಮ್ಮ ದಕ್ಷಿಣ ಕನಡಾ ಏಜಂಟರು—ದಿ ಉರ್ಲ ಮಾರ್ಟ್, ಮಂಗಳೂರು.

5,000 ರೂ. ಬಹುಮಾನ

ಈ ವರಿವಿಗೂ ನಮ್ಮಲ್ಲಿಗೆ ಬಂದಿರುವ ಸಾವಿರಾರು ಯೋಗ್ಯತಾ ಪತ್ರಿಕೆಗಳಲ್ಲಿ ಕೆಲವನ್ನು ಇಲ್ಲಿ ಪ್ರಚುರ ಪಡಿಸಿರುತ್ತೇವೆ. ಇವುಗಳಲ್ಲಿ ಯಾವುದನ್ನಾದರೂ ನಕ್ಕಲ್ ಯೋಗ್ಯತಾ ಪತ್ರಿಕೆಯೆಂದು ವ್ಯಕ್ತಪಡಿಸಿದವರಿಗೆ ಮೇಲೆ ತಿಳಿಸಿರುವ 5,000 ರೂಪಾಯಿ ಬಹುಮಾನ ಕೊಡುವೆವು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ಕೊಡದೆ ನಿರಾಕರಿಸುವೆವಾದರೆ ಕೋರ್ಟಿನ ಮೂಲಕ ನಮ್ಮಿಂದ ಪಡೆಯಬಹುದು. [37-3]

ದಿಲ್ಲಿವೈದ್ಯರು ಡಿ. ಮನ್ನಾಲಾಲ್ ಯವರಿಂದ ತಯಾರ್ಮಾಡಲ್ಪಟ್ಟ ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ.

(1) ತಾವು ಕಳುಹಿಸಿದ ಸಾಲಾಮಿಸ್ರಿ ಮುರಬ್ಬ ತೆಗೆದುಕೊಂಡದ್ದರಿಂದ ... ಗುಣಹೊಂದಿದೇನೆ. ನಮ್ಮ ಕ್ಯಾಟಲಾಗಿನಲ್ಲಿ ಕಾಣಿಸಿರುವಷ್ಟು ಗುಣಪೂರ್ಣವಾಗಿ ಕೊಡುತ್ತದೆ ಎಂದು ಧಾರಾಳವಾಗಿ ಹೇಳುತ್ತೇನೆ. ದಯವಿಟ್ಟು ... ಒಂದು ಡಬ್ಬಿ ಸಾ. ಮಿ. ಮುರಬ್ಬ ವಿ. ಪಿ. ಮೂಲಕ ಜಾಗ್ರತೆ ಕಳುಹಿಸಿರಿ.

ಅರ್ಕಳ್ಳಿ ಪೋಸ್ಟು, ಅಂಗಡಿ ಮಂಜಪ್ಪ,
6-12-1915 ಮೋಗರವಳ್ಳಿ.

(2) ನಿಮ್ಮ ಸಾಲಾಮಿಸ್ರಿ ಮುರಬ್ಬದಿಂದ ನನಗೆ ಇಷ್ಟ.........ಕಾಯಿಲೆಯು ... ಕಡಿಮೆಯಾದದ್ದರಿಂದ ಇನ್ನು ಎರಡು ಡಬ್ಬಿ ಸಾಲಾಮಿಸ್ರಿ ಮುರಬ್ಬವನ್ನು ಕಳುಹಿಸಿರಿ.

ಹುಬ್ಬಳ್ಳಿ, ಗೋವಿಂದರಾವ ಗಾಡಗೀಳ,
13-8-1915. ಚಹಾ ದುಕಾನ

(3) ನಿಮ್ಮ ಮುರಬ್ಬವನ್ನು ಅಶಕ್ತಳಾಗಿದ್ದ ನನ್ನ ಕುಟುಂಬಕ್ಕೆ ಕೊಟ್ಟೆನು. ನಿಮ್ಮ ಪ್ರಕಟನೆಯಂತೆ ಅದನ್ನು ಸೇವಿಸಿದ್ದರಿಂದ ತುಂಬಾ ಗುಣಕೊಟ್ಟಿತು. ನಿಮ್ಮ ಔಷಧವು ಸರ್ವೋತ್ಕೃಷ್ಟವಾದದ್ದೆಂದು ನಾನು ನಿರ್ಧಾರವಾಗಿ ಹೇಳುತ್ತೇನೆ. ಇನ್ನೂ ಒಂದು ಡಬ್ಬಿಯನ್ನು ಸೇವಿಸಿದರೆ ಅನುಕೂಲವೆಂದು ತೋರುವುದರಿಂದ ಕೂಡಲೆ ಇನ್ನೊಂದು ಡಬ್ಬಿ ಸಾ. ಮಿ. ಮುರಬ್ಬ ರವಾನಿಸಿರಿ.

ಮೈಸೂರು. ಎಡಿಟರ್,
23-1-1916 ಕಾದಂಬರಿ ಸಂಗ್ರಹ ಆಫೀಸ್.

(4) ನನಗೆ ಎರಡು ವರ್ಷಗಳಿಂದ ...ಇದ್ದ ಕಾಯಿಲೆಗಳಿಗೆ ಮೈಸೂರು ... ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ಗುಣವಾಗದೆ ಕಷ್ಟಪಡುತ್ತಿದ್ದೆನು. ನಂತರ ಏನೋ ಕಾರ್ಯಾಂತರದಿಂದ ಬೆಂಗಳೂರಿಗೆ ಬಂದಿದ್ದಾಗ ... ತೆಗೆದುಕೊಂಡ ಸಾಲಾಮಿಸ್ರಿ ಮುರಬ್ಬವನ್ನು ಸೇವನೆ ಮಾಡಿದ್ದರಿಂದ ... ರೋಗ ಗುಣವಾಗಿರುತ್ತೆ. ಇದಕ್ಕೆ ಏನೇನೂ ಸಂದೇಹವಿಲ್ಲ. ಈಗ ... ಸಾಲಾಮಿಸ್ರಿ ಮುರಬ್ಬವನ್ನೂ ಮತ್ತು ಕೆಲವು ಔಷಧಿಗಳನ್ನೂ ನಮ್ಮ ... ಕೃಷ್ಣರಾಯನ ಕೈಯಲ್ಲಿ ಕೊಟ್ಟು ಕಳುಹಿಸಿರಿ

... ಪೇಟೆ, ಮೈಸೂರು, ಬಕ್ಷಿ ನರಸಪ್ಪನವರ ಮನೆಯಲ್ಲಿರುವ
29-7-1913 ತ್ಯಾಮರಾಯ

By Telegram.

(5) Send three tins of Salamisri Murabba by V. P. P.

Mandalay, P. R. V. ALAGAPPA CHETTY.
30-12-1915.

(6) ನಮ್ಮ ಸಾಲಾಮಿಸ್ರಿ ಮುರಬ್ಬದಿಂದ ನನಗೆ ಬಹಳ ಶಕ್ತಿಯು ಕಂಡು ಬರುವದರಿಂದ ಇನ್ನು 3 ಡಬ್ಬಿ ಸಾ. ಮಿ. ಮುರಬ್ಬ ವಿ. ಪಿ. ಮೂಲಕ ಕಳುಹಿಸಿರಿ.

ಹಿಂಗೋಲಿ, ದಖನ, ರುಖನ್ನುದ್ದೀನ್ ನೂರೋದ್ದೀನ್,
25-12-1915. ಸಪ್ಲಾಯ್ ಮಾಸ್ತರ್, ಜೀನತ್-ಉಲ್-ಇಸ್ಲಾಮ್.

(7) Your Panjab Salamisri Murabba, which you sent me on 21-11-1915, has given me entire satisfaction as it has improved my strength and health a good deal. I therefore wish to take some more time and request you will please send me 6 tins of the above Murabba by V. P. P.

Malpe, S. Canara, GIRIJTH HAYATH,
19-1-1916. Merchant.

(8)......It is with extreme pleasure that I express my gratitude towards you. Your Salamisri Murabba has given me marvellous effect. I request you to send me one more tin of the same quality as soon as possible

Aurangabad, G. Bhim Singh, S. Caps
13-1-1916. Clerk, Ex. En. Office.



ಕ್ರಯ ಡಬ್ಬಿ 1 ಕ್ಕೆ ರೂ. 2. ಟಪಾಲ್ ಖರ್ಚು ಒಂದು ಡಬ್ಬಿಯಿಂದ 3 ಡಬ್ಬಿಗಳಿಗೆ 6 ಆಣೆ.

ಇದನ್ನು ಕೊಳ್ಳುವಾಗ ಇಲ್ಲಿ ಕಾಣುತ್ತಿರುವ ಟ್ರೇಡ್ ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿ. ಕೇಟಲಾಗು ಅಪೇಕ್ಷಿಸುವವರಿಗೆ ಪ್ರಗಸಟ್ಟೆ ಕಳುಹಿಸುವೆವು. ನಮ್ಮ ವಿಳಾಸ—

ಡಿ. ಮನ್ನಾಲಾಲ್, ದಿಲ್ಲಿ ವೈದ್ಯ,
5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಡೋಂಗರೆ ಇವರ
ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿದಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-25]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,
ಚೌಪಾಟಿ, ಗಿರಗಾಂವ, ಮುಂಬಯಿ.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಆಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅನವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನ್ನಣೆ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನು ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಲೆಂಜ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳಕೊಂಡ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಆಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಸವಾಲೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾರುವಂಥಾದ್ದು ಆಟೋ ಮೋಹಿನಿಯೇ.

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ 3—6—0	½ „ „	0—8—0
1 ಡ್ರಾಮ್ ಕೊಳವೆಗೆ ...... „ 0—12—0	ಕಾರ್ಡ್ ಪರ್ಸ್ ಗೆ ...	0—12—0

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕೇರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸುಕಿ ಬೆಳೆಸುವಂಥಾದ್ದು. ಕಣ್ಣು ಮತ್ತು ಮೆದುಳಿಗೆ ತಂಪನ್ನು ಕೊಡಬಲ್ಲುದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಕಾಗಿದೆ. [282-11]

ಕ್ರಯ 1 ಬಾಟ್ಲಿಗೆ ರೂ. 1-0-0
„ 3 „ „ 2-10-0.

ಸೋಲ್ ಏಜಂಟರು—ಲಾ ಭಗವಾನ್ ದಾಸ್ ಚುನಿಲಾಲ್ ಕಂಪನಿ,
177, ಮೈನಾಲ್ಬಜಾರ್ ರೋಡ್, ಮದರಾಸು

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತೆಗೆ ಸೇರಿದ ಉತ್ತರ ಪರಾಂತ್ರವೆಂಬ ಮೊಹಲ್ಲೆಯಲ್ಲಿ ಕಟ್ಟಿಇದ ಕಾರ್ಖಾನೆಯನ್ನು ಇಟ್ಟುಕೊಂಡಿರುವ ಕೇದವ ಚಂದ್ರ ಬ್ಯಾನರ್ಜಿ ಎಂಬಾತನಿಗೆ ಮಿಸ್ಟರ್ ಕ್ಯಾರೊ ಕಳುಹಿದ್ದ ಕಾಗದವನ್ನು ಬರೆದು ತಾವು ಆತನನ್ನು ಕಾಣುವುದಕ್ಕೆ ಬರುತ್ತೇವೆಂದೂ, ಆಗ ಆತನು ಅವರಿಗೆ ಏನೊಂದೂ ಜವಾಬು ಹೇಳದೆ 10,000 ರೂಪಾಯಿ ಕೊಟ್ಟುಬಿಡಬೇಕೆಂದೂ ತಿಳಿಸಿದಾರೆ.

ಅಲ್ಲೀಪೋರಿನ ಸೆಷನ್ಸ್ ಜಡ್ಜರವರು ಕಳೆದ ವಾರ ಯುವ ಜಾತಿಯ ಅಪರಾಧಿಗೆ ಖೋಟಾ ನಾಣ್ಯಗಳನ್ನು ತಯಾರುಮಾಡಿದನೆಂದು ಐದು ವರುಷ ಕಠಿಣ ಸಜಾ ವಿಧಿಸಿದರು. ಅವನು ಒಂದಾಣೆ, ನಾವಳಿ, ರೂಪಾಯಿ ಈ ನಾಣ್ಯಗಳನ್ನು ಬಹಳ ಚೆನ್ನಾಗಿ ಮಾಡಿದ್ದನು. ಅವನ ಹತ್ತಿರ ಅಂಥಾ ಕೆಲವು ನಾಣ್ಯಗಳೂ, ಅವನ್ನು ತಯಾರುಮಾಡುವ ಸಾಧನಗಳೂ ಪೊಲೀಸಿನವರಿಗೆ ಸಿಕ್ಕಿದವು.

ಯುದ್ಧಭೂಮಿಯಿಂದ ಗಾಯಪಟ್ಟವರನ್ನೂ ಕಾಯಿಲೆಯಾದವರನ್ನೂ ಸಾಗಿಸಿಕೊಂಡು ಬರುತ್ತಿರುವ ಮದರಾಸ್ ಎಂಬ ಆಸ್ಪತ್ರೆ ಜಹಜಿನಲ್ಲಿ ಹೊಸದಾಗಿ ಕೆಲವು ಬದಲಾವಣೆಗಳನ್ನು ಮಾಡಬೇಕಾಗಿತ್ತು. ಮದರಾಸ್ ಪಟ್ಟಣದ ಭಾರೀ ವರ್ತಕರಾದ ಮಾ. ಸಿ. ಟಿ. ಮುತ್ತಯ್ಯಚೆಟ್ಟಿಯವರು ಅದಕ್ಕಾಗಿ 30,000 ರೂಪಾಯಿ ಕಳುಹಿಸಿ ತಮ್ಮ ಔದಾರ್ಯವನ್ನು ಪ್ರಕಾಶಪಡಿಸಿದಾರೆ.

ದಿವಾಳಿಯಾದ ಸಿಂಧು ಬ್ಯಾಂಕಿನ ಡೈರೆಕ್ಟರುಗಳು ಬ್ಯಾಂಕಿನಲ್ಲಿ ಕ್ರಮವಾದ ಲೆಕ್ಕದ ಪುಸ್ತಕಗಳನ್ನು ಇಟ್ಟಿರಲಿಲ್ಲವೆಂದೂ, ಬ್ಯಾಂಕಿನ ಆದಾಯ ವ್ಯಯ ಆಸ್ತಿ ಸಾಲಗಳ ಸರಿಯಾದ ಪಟ್ಟಿಯನ್ನು ಪ್ರಕಟಿಸದೆ ತಪ್ಪಿದರೆಂದೂ ಮುಲ್ತಾನ್ ಮ್ಯಾಜಿಸ್ಟ್ರೇಟರು ಪ್ರತಿ ಒಬ್ಬ ಡೈರೆಕ್ಟರಿಗೂ 2,000 ರೂಪಾಯಿ ಜುಲ್ಮಾನೆ ವಿಧಿಸಿದರು. ಪಂಜಾಬ್ ಚೀಫ್ ಕೋರ್ಟಿನವರು ಇದನ್ನು ಖಾಯಂ ಮಾಡಿದಾರೆ.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಕಚ್ ಸಂಸ್ಥಾನದ ರಾಜರವರು ಯುದ್ಧವು ಪೂರೈಸಿ ಶಾಂತವು ಆಗುವ ತನಕ ಪ್ರತಿ ತಿಂಗಳಲ್ಲೂ ತಾವು 45,000 ರೂಪಾಯಿಯಂತೆ ಸರ್ಕಾರಕ್ಕೆ ಕೊಡುತ್ತಾ ಬರುವೆವೆಂದೂ, ಈ ಹಣದಿಂದ ಯುದ್ಧಭೂಮಿಯಲ್ಲಿರುವ ಹಿಂದುಸ್ಥಾನದ ಒಂದು ರೆಜಿಮೆಂಟು ಸಿಪಾಯಿಗಳನ್ನು ಸಾಕಬೇಕೆಂದೂ ತಿಳಿಸಿದರು. ಇಂಡಿಯಾ ಗವರ್ನ್ಮೆಂಟಿನವರು ಅಂಗೀಕರಿಸಿ, ಆ ರಾಜರ ಸಹಾಯವನ್ನು ಕೊಂಡಾಡಿದಾರೆ.

ಕಳೆದ ತಾ 12 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ಪ್ಲೇಗ್ ಉಪದ್ರದಿಂದ 7,505 ಜನರು ಕಾಲವಾದರು. ಇದರ ಹಂಚಿಕೆ ಹ್ಯಾಗೆಂದರೆ—ಬೊಂಬಾಯಿ ಅಧಿಪತ್ಯ ಮತ್ತು ಸಿಂಧುದೇಶ 1,718, ಮದರಾಸ್ 341. ಬೀಹಾರ್ ಮತ್ತು ಒರಿಸ್ಸಾ 980 ಸಂಯುಕ್ತ ಅಧಿಪತ್ಯಗಳು 1,69 , ಪಂಜಾಬ್ 86, ಬರ್ಮಾ 405 ಮಧ್ಯಪ್ರಾಂತ್ಯಗಳು 901, ಮೈಸೂರು ಸಂಸ್ಥಾನ 121, ಹೈದರಾಬಾದ್ 1,327, ಮಧ್ಯ ಇಂಡಿಯಾ 40, ಕಾಶ್ಮೀರ 6.

ಸಂಯುಕ್ತ ಅಧಿಪತ್ಯಗಳ ಲೆಫ್ಟಿನೆಂಟ್ ಗವರ್ನರಾದ ಸರ್ ಜೇಮ್ಸ್ ಮೆಸ್ಟನ್ ರವರು ಕಳೆದ ವಾರ ಲಕ್ನೋ ಪಟ್ಟಣದಲ್ಲಿ ಒಂದು ಭಾರೀ ದರ್ಬಾರನ್ನು ನಡಿಸಿ ಯುದ್ಧದ ಫಂಡಿಗೆ ಚಂದಾ ಹಣವನ್ನು ಕೊಡಿಸುವ ಏರ್ಪಾಡು ಮಾಡಿದರು. ಸಭೆಯಲ್ಲಿ ಮೊದಲನೇ ದಿನವೇ 1,00,000 ರೂಪಾಯಿ ಚಂದಾ ವಾಗ್ದಾನವಾಯಿತು. ಇಬ್ಬರು ಭಾರೀ ಜಮೀನ್ದಾರರು ಯುದ್ಧ ಮುಗಿಯುವ ತನಕ 1,000 ರೂಪಾಯಿಯಂತೆ ವಾರ್ಷಿಕ ಚಂದಾ ಕೊಡುವುದಾಗಿ ಒಪ್ಪಿಕೊಂಡರು.

ಪಂಜಾಬಿಗೆ ಸೇರಿದ ಒಂದು ಗ್ರಾಮದಲ್ಲಿ ಡೆಪ್ಯುಟಿ ಕಮಿಷನರೂ, ಅಸಿಸ್ಟೆಂಟ್ ಕಮಿಷನರೂ ಸರ್ಕೀಟು ಹೋಗಿ ಬೇಟೆಯಾಡಲು ಊಟಮಾಡುತ್ತಿದ್ದಾಗ ಒಬ್ಬ ಗ್ರಾಮಸ್ಥನು ಬಾವಿಯಲ್ಲಿ ಬಿದ್ದು ಅದರ ಕೆಳಗೆ ಸಿಕ್ಕಿಹೋಗಿದಾನೆಂದು ತಿಳಿಯಿತು. ಕೂಡಲೇ ಸಾಹೇಬರುಗಳು ಗ್ರಾಮಸ್ಥರಿಗೆಲ್ಲಾ ಪ್ರೋತ್ಸಾಹಿಸಿದರು. ಯಾರೂ ಬರದೇಹೋದದ್ದರಿಂದ ತಾವುಗಳೇ ಬಾವಿಯೊಳಕ್ಕೆ ಧುಮುಕಿ ಮಣ್ಣನ್ನು ಅಗೆದು ತೆಗೆದು ಆ ಮನುಷ್ಯನನ್ನು ಮೇಲಕ್ಕೆತ್ತಿದರು. ಅವನಿಗೆ ಜ್ಞಾನವೇ ಇರಲಿಲ್ಲ. ಸಾಹೇಬರ ಪತ್ನಿಯು ಬಂದು ಆತನಿಗೆ ಬಹಳ ವೈದ್ಯೋಪಚಾರವನ್ನು ಮಾಡಿದರು. ಆದರೆ ಅವರ ಸಾಹಸವು ಫಲಕಾರಿಯಾಗದೆ ಗ್ರಾಮಸ್ಥನು ಮೃತಪಟ್ಟನು. ಆ ಅಧಿಕಾರಿಗಳ ಸಾಹಸವನ್ನೂ ಪ್ರೀತಿಯನ್ನೂ ನೋಡಿ ಆ ಪ್ರಾಂತ್ಯದ ಪ್ರಜೆಗಳು ಕೊಂಡಾಡುತ್ತಿದಾರೆ.

ಭಾಯಿ ಕೇಸರಸಿಂಗ್ ಎಂಬ ಸಿಕ್ ದೇಶಭಕ್ತನನ್ನು ಸರ್ಕಾರದವರು ಹಿಡಿದು ಬಂಧನದಲ್ಲಿ ಹಾಕಿದ್ದರು. ಲಾಹೋರ್ ಪಟ್ಟಣದ ಡೆಪ್ಯುಟಿ ಕಮಿಷನರವರು ಆತನನ್ನು ಬಿಡಿಸಿ ಪಂಜಾಬಿನ ಗ್ರಾಮ ಪಂಚಾಯಿತಿ ಮತ್ತು ದರ್ಬಾರುಗಳ ಪ್ರೆಸಿಡೆಂಟ್ ಸ್ಥಾನಕ್ಕೆ ನೇಮಕ ಮಾಡಿದಾರೆ.

ಗ್ವಾಲಿಯರ್ ಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿ ಸೈನಾನಾ ಎಂಬ ಗ್ರಾಮವಿದೆ. ದರೋಡೆಕೋರರು ಅದರೊಳಕ್ಕೆ ನುಗ್ಗಿ ಕೊಳ್ಳೆಹೊಡೆಯಲಾರಂಭಿಸಿದರು. ಗ್ರಾಮಸ್ಥರೆಲ್ಲಾ ಸೇರಿ ಕಳ್ಳರ ಮೇಲೆ ಬಿದ್ದು ಹೊಡೆದಾಡಿದ್ದರಲ್ಲಿ ಒಬ್ಬ ಕಳ್ಳನು ಕೊಲೆಯಾದನು. ಇನ್ನಿಬ್ಬರಿಗೆ ಗಾಯವಾಗಿ ಬಿದ್ದು ಹೋದರು. ಆದರೆ ಹೆಣವನ್ನೂ ಗಾಯಪಟ್ಟವರನ್ನೂ ಹೊತ್ತುಕೊಂಡು ಪರಾರಿಯಾಗಿರುತ್ತಾರೆ.

ಹೈಕೋರ್ಟ್ ವಕೀಲನಾಗಿ ಗೋರಖಪುರದಲ್ಲಿ ವಕಾಲತ್ತು ಮಾಡುತ್ತಿದ್ದ ರಾಯಿ ಜವಾಹರ ಪ್ರಸಾದ್ ಎಂಬಾತನು ತನ್ನ ಕಕ್ಷಿಗಾರರಲ್ಲಿ ಒಬ್ಬ ಹೆಂಗಸಿಗೆ ಬರಬೇಕಾಗಿದ್ದ 2,000 ರೂಪಾಯಿ ವಸೂಲ್ ಮಾಡಿಕೊಂಡು, ಆಕೆಗೆ ವಾಪಸ್ಸು ಮಾಡದೆ ಸುಮ್ಮನೆ ಮಾಡುತ್ತಿದ್ದನು. ಚೀಫ್ ಜಡ್ಜರವರು ಆತನ ನಡತೆಯು ನೀಚತನವಾದ್ದೆಂದು ಹೇಳಿ, ಆತನ ಸರ್ಟಿಫಿಕೇಟನ್ನು ಕಿತ್ತುಕೊಂಡು ಇನ್ನು ಮೇಲೆ ಆತನು ವಕಾಲತ್ತು ನಡಿಸಕೂಡದೆಂದು ವಕೀಲರ ಹೆಸರು ಪಟ್ಟಿಯಿಂದ ವಜಾ ಮಾಡಿಬಿಟ್ಟರು.

ಪಂಜಾಬ್ ನ್ಯಾಯಸ್ಥಾನಗಳಲ್ಲಿ ವೇಮ್ಯಾಕರ ಗಿದ್ದ ಜಗದೀಶ ಸಾಹಿಬ್ ಎಂಬವನೂ ಇವನ ಗುಮಾಸ್ತನೂ ಕಕ್ಷಿಗಾರನಿಗೆ 800 ರೂಪಾಯಿ ಕಾಣಿಕೆ ಆಯಿತೆಂಬ ಅರ್ಥಕ್ಕೆ ಒಂದು ಸುಳ್ಳಿನ ರಶೀತಿಯನ್ನು ಮಾಡಿ ಅವನು ಬರೆದುಕೊಟ್ಟನೆಂದು ಹೇಳಿ ಸಾಧಿಸಿದರು. ಸೆಷನ್ಸ್ ಕೋರ್ಟಿನವರು ಆ ವೇಮ್ಯಾಕರನಿಗೆ ಆರು ವರುಷವೂ, ಅವನ ಗುಮಾಸ್ತನಿಗೆ ಮೂರು ವರುಷವೂ ಕಠಿಣ ಸಜಾ ವಿಧಿಸಿದರು. ಅದರ ಮೇಲೆ ಅವರಿಬ್ಬರೂ ಅಪೀಲ್ ಮಾಡಿಕೊಂಡಾಗ ಹೈಕೋರ್ಟ್ ಜಡ್ಜಿಗಳು ಶಿಕ್ಷೆಯನ್ನು ಖಾಯಂ ಮಾಡಿರುತ್ತಾರೆ

ಕಾಟಿಯಾವಾಡ ಸಂಸ್ಥಾನದ ಮಹಾರಾಜರವರು ಪಟ್ಟ ಎಂಬ ಊರಿನಲ್ಲಿ ಜಹಾಂಗೀರ ವಿದ್ಯಾರ್ಥಿಗಳ ನಿಲಯವನ್ನು ಕಟ್ಟುವದಕ್ಕೆ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠೆ ಮಾಡಿ, ಕಟ್ಟಡದ ಫಂಡಿಗೆ 3,000 ರೂಪಾಯಿ ಕೊಟ್ಟದ್ದಲ್ಲದೆ ಆ ನಿಲಯದ ಖರ್ಚಿಗೆ 50 ರೂಪಾಯಿ ಮಾಸಾಶನವನ್ನು ಕೊಡುವುದಾಗಿ ವಾಗ್ದಾನ ಮಾಡಿದರು. ಇದಲ್ಲದೆ ಆ ನಿಲಯದ ಮೇಲ್ವಿಚಾರಣಾ ಕಮಿಟಿಯವರು ಸಿಕ್ ಪ್ರಜೆಗಳಿಂದ 61,000 ರೂಪಾಯಿ ಚಂದಾ ಶೇಖರಿಸಿದಾರೆ. ಆ ಪೈಕಿ 20,000 ರೂಪಾಯಿಯನ್ನು ಕೆನಡಾದಲ್ಲಿರುವ ಸಿಕ್ಕರು ಒದಗಿಸಿರುವರು

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಪತ್ಯಗಳ ಬ್ಯಾಂಕುಗಳಿಗೆ ಜನವರಿ ತಾ. 29 ರ ವರೆಗೆ ಪಾವತಿಯಾಗಿರುವ ಚಂದಾ ಹಣ ಎಷ್ಟೆಂದರೆ:—

ಸಿಮ್ಲಾ ಅಲ್ಲಯನ್ಸ್ ಬ್ಯಾಂಕಿಗೆ	......	ರೂ. 45,80,750- 5-3
ಬಂಗಾಳಾ ಬ್ಯಾಂಕಿಗೆ	......	„ 35,78,118-14-3
ಬೊಂಬಾಯಿ ಬ್ಯಾಂಕಿಗೆ	......	„ 8,91,928-12-0
ಮದರಾಸ್ ಬ್ಯಾಂಕಿಗೆ	......	„ 6,70,34-14-3
ಒಟ್ಟು ರೂಪಾಯಿ		96,61,118-13-9

ಮನೆ ಸಾಮಾನುಗಳ ಬಿಕರಿ.

ಮೈಸೂರು ಕಿಲ್ಲೆ ಬಾಳೆ ಅರಸಿನವರ ಬೀದಿಯಲ್ಲಿ ಕಡಬದ ಮನ್ನಾರ್ ಕೃಷ್ಣ ಶೆಟ್ಟರ ಬಾಬತು 3 ಅಂತಸ್ತಿನ ತಪ್ಪುಪೋಷು ಮಹಡಿ ಮನೆಯನ್ನು ಕೀಳಿಸಿ ಸಾಮಾನುಗಳನ್ನು ಅಂದರೆ ತ್ಯಾಗದಮರದ ಕಿಟಕಿಗಳು, ಚೌಕಟ್ಟು ಬಾಗಿಲುಗಳು, ಕುರಾಯಿ ಕಂಭಗಳು, ಕಿರಣಗಳು, ಹಂತಿಗಳು, ತೊಲೆಗಳು, ಹಲಗೆಗಳು, ಹೆಂಚು ವಗೈರೆ ಸಾಮಾನುಗಳನ್ನು ಇದೇ ಫೆಬ್ರವರಿ ತಾ 27 ನೇ ಭಾನುವಾರ ಬೆಳಿಗ್ಗೆ 8 ಘಂಟೆ ಲಾಗಾಯಿತು ಸದರಿ ಸ್ಥಳದಲ್ಲಿ ಪಬ್ಲಿಕ್ಕಾಗಿ ಹರಾಜು ಮಾಡಲ್ಪಡುತ್ತೆ. ಕಡೇ ಬೀಟುದಾರರು ಮೊಬಲಗು ಪಾವತಿಯಿಂದ ಮಾಲು ಪಡೆಯಲು ಬದ್ಧರಾಗಿ ಇರುತ್ತಾರೆ. ಮತ್ತು ಇಷ್ಟಪಟ್ಟವರು ಖುಷ್ ಖರೀದಿಗೆ ಬೇಕಾದಲ್ಲಿ ಸಾಮಾನುಗಳನ್ನು ನೋಡಿ ಮಾಲೀಕರಿಂದ ಖರೀದಿಗೆ ಪಡೆಯಬಹುದು. ಹರಾಜು ಖೈದಾದ ಕೂಡಲೆ ಆಖೈರು ಬೀಟುದಾರರು ತಕ್ಷಣ ಮೊಬಲಗು ಪಾವತಿ ಮಾಡಿ ಮಾಲು ಪಡೆಯಬೇಕು ತಪ್ಪಿದಲ್ಲಿ ದುಸರಾ ಹರಾಜು ಮಾಡುತ್ತೆ. ಅದರಲ್ಲಿ ಕಮ್ಮಿ ಆದ ಪಕ್ಷದಲ್ಲಿ ಮೊದಲು ಬೀಟ್‌ದಾರರು ಕೊಡಬೇಕಾಗುತ್ತೆ ಜಾಸ್ತಿ ಆದ ಪಕ್ಷದಲ್ಲಿ ಮೊದಲು ಬೀಟ್‌ದಾರರಿಗೆ ಸಲ್ಲಲಾರದು.

ಮೈಸೂರು. [51-1] ಮನ್ನಾರ್ ಕೃಷ್ಣಶೆಟ್ಟಿ.

ವೃತ್ತಾಂತ ಪತ್ರಿಕೆ.

—:o:—

ಶಕೆ ೧೮೩೭ ನೇ ಆನಂದ ಫೆಬ್ರವರಿ ತಾ. ೨೪ ನೇ ಗುರುವಾರ.

ದೇಶೀಯ ಪ್ರಜಾ ಮುಖಂಡರುಗಳು.

ಈಗ ನಮ್ಮ ಭರತಖಂಡದಲ್ಲಿ ವಿಶೇಷ ಉತ್ಸಾಹವುಂಟಾಗಿದೆ. ರಾಜಕೀಯ ವಿಚಾರಗಳು ಎಲ್ಲಾ ಕಡೆಗಳಲ್ಲೂ ಚರ್ಚೆ ಮಾಡಲ್ಪಡುತ್ತಲಿವೆ. ಇಂಥಾ ಸಂದಿಗ್ಧವಾದ ಸಮಯದಲ್ಲಿ ಪ್ರಜೆಗಳಿಗೆ ವಿವೇಕ ಹೇಳಿ ಅವರನ್ನು ಸುಖಲಿತವಾಗಿ ನಡಿಸುವುದಕ್ಕೆ ವಿವೇಕವೂ, ಅನುಭವವೂ, ದೂರದೃಷ್ಟಿಯೂ ಉಳ್ಳ ಮಹನೀಯರು ಮುಂದಾಳುಗಳಾಗಿ ಬರಬೇಕಾದದ್ದು ಪರಮಾವಶ್ಯಕವು. ಈ ಭಾಗದಲ್ಲಿ ಗೋಖಲೆಯವರು ತಕ್ಕವರಾಗಿದ್ದರು. ಅವರ ಸಾಮರ್ಥ್ಯವೂ, ವಾಕ್ಚತುರತೆಯೂ ಅಸಮಾನಗಳಾಗಿದ್ದವು. ಅವರಿಗೆ ಸರಿಸಮಾನವಾದ ಯೋಗ್ಯತಾ ಸಿದ್ಧಿಯನ್ನು ಪಡೆದಿದ್ದ ಮಹನೀಯರುಗಳೂ ಇದ್ದರು. ಇಂಥವರೆಲ್ಲಾ ಈ ಸಮಯದಲ್ಲಿ ಇಲ್ಲದಂತಾದರಲ್ಲಾ ಎಂದು ಮರುಗಬೇಕಾಗಿದೆ. ಅವರುಗಳಂಥವರು ಈಗ ಯಾರಿದ್ದಾರೆಂದು ಹೇಳೋಣ? ಸದ್ಯದಲ್ಲಿ ವಾಚಾಳಿಗಳೇನೋ ಹೇರಳವಾಗಿ ಇದಾರೆ; ಆದರೆ ಸಕಲರಿಂದಲೂ ಭಕ್ತಿಭರವಸೆಗಳನ್ನು ಸಂಪಾದಿಸಿಕೊಂಡಿರತಕ್ಕವರು ದೊರಕುವುದು ಬಹಳ ವಿರಳ. ಪ್ರಜೆಗಳ ಮುಖಂಡರೆಂದು ಹಾರೈಸುವವರಲ್ಲಿ ನೋಡಿದರೆ ಪರಸ್ಪರ ಪ್ರೀತಿ ಸಾಮರಸ್ಯಗಳು ಕಾಣಬರುವುದಿಲ್ಲ. ಅಂಥವರು ಏಕೀಭವಿಸಿ ಕಾರ್ಯಗಳಲ್ಲಿ ಪ್ರವರ್ತಿಸಲಾರರು. ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಕೂಟವು ಪ್ರಜೆಗಳನ್ನು ಒಮ್ಮತವಾಗಿ ಮಾಡುವುದೇನೋ ಎಂದು ನೋಡಿದರೆ ಅದರೊಳಗೇ ಭಿನ್ನಾಭಿಪ್ರಾಯಗಳಿರುವವು. ಕೆಲವು ಮುಖಂಡರುಗಳೇ ಪರಸ್ಪರ ಕಕ್ಷಿಪ್ರತಿಕಕ್ಷಿಗಳಾಗಿ ಪರಿಣಮಿಸಿದಾರೆ.

ಮೊನ್ನೆ ಕಾಶೀ ಪಟ್ಟಣದಲ್ಲಿ ಹಿಂದೂ ಸರ್ವವಿದ್ಯಾನಿಲಯದ ಕಟ್ಟಡಕ್ಕೆ ಅಸ್ತಿಭಾರ ಶಿಲಾ ಪ್ರತಿಷ್ಠೆ ಮಾಡಿದ ಸಂದರ್ಭದಲ್ಲಿ ಇಬ್ಬರು ಮುಖಂಡರ ವರ್ತನೆಗಳು ಹಿಂದುಸ್ಥಾನದಲ್ಲೆಲ್ಲಾ ಜಿಜ್ಞಾಸವಾಗುತ್ತಲಿವೆ. ಈ ರಾಷ್ಟ್ರದಲ್ಲಿ ಪ್ರಜೆಗಳಿಗೆ ಸ್ವಾರಾಜ್ಯವನ್ನು ಸಂಪಾದಿಸಿಕೊಡುತ್ತೇನೆಂದು ಹೇಳುತ್ತಾ ಮಿಸೆಸ್ ಬೆಸೆಂಟರು ತಾನೇ ಹಿಂದುಸ್ಥಾನದ ಮುಖಂಡಳೆನಿಸಿಕೊಳ್ಳಬೇಕೆಂದು ಸಾಹಸಪಡುತ್ತಿದಾರೆ. ಈಕೆ ರಾಜಕೀಯ ವಿಚಾರಗಳನ್ನು ಹಿಡಿದು ಹೋರಾಡಲಾರಂಭಿಸಿ, ಹಿಂದುಸ್ಥಾನದ ದೇಶೀಯ ವಿದ್ಯಾವಂತರು ತನ್ನ ಮಾತನ್ನೇ ನಂಬಿ ತನ್ನ ಶಿಷ್ಯರಾಗಬೇಕೆಂದು ಹೇಳುವವರಾಗಿದಾರೆ. ಇನ್ನೊಬ್ಬ ಮುಖಂಡನು ಹಿಂದುಸ್ಥಾನದಲ್ಲಿ ಹುಂಬಾ ಸಮರ್ಥತೆಯನ್ನು ತೋರ್ಪಡಿಸಿ ಹೆಸರುವಾಸಿಗೆ ಬಂದಿರುತ್ತಾನೆ. ಆತನ ಹೆಸರು ಮ|| ಗಾಂಧಿ. ಇವರು ದಕ್ಷಿಣ ಆಫ್ರಿಕಾದಲ್ಲಿರುವ ಹಿಂದುಸ್ಥಾನದ ಪ್ರಜೆಗಳ ಕಷ್ಟ ಸಂಕಟಗಳ ನಿವಾರಣೆಗಾಗಿ ಎಷ್ಟೋ ಶ್ರಮವನ್ನು ಅನುಭವಿಸಿರುತ್ತಾರೆ. ಒಳಸಂಚು ನಡಿಸುವುದಾಗಲಿ, ಬಲವದ್ವಂದಿಮಾಡುವುದಾಗಲಿ ಇವರಿಗೆ ಅಭಿಮತವಾಗಿಲ್ಲ. ಅವರು ನ್ಯಾಯಕ್ಕೂ ಸತ್ಯಕ್ಕೂ ಕಟ್ಟುಬೀಳತಕ್ಕವರು. ಅವುಗಳ ಸಿದ್ಧಿಗೋಸ್ಕರ ಅವರು ಗುಣಗುಟ್ಟದೆ ದೀರ್ಘಕಾಲ ಸಹಿಸಿಕೊಂಡಿರುವುದಕ್ಕೆ ಒಪ್ಪುವವರಾಗಿದಾರೆ. ಮ|| ಗಾಂಧಿಯವರು ಕಾಶಿಯಲ್ಲಿ ನಡೆದ ಸಭೆಯೊಳಗೆ ಭಾಷಣಮಾಡುತ್ತಿದ್ದಾಗ ಮಿಸೆಸ್ ಬೆಸೆಂಟರು ಅವರನ್ನು ಯಾತಕ್ಕಾಗಿ ಅಡ್ಡಿಮಾಡಿ ಆ ಸಭೆಯನ್ನು ಚದುರಿಸಿಬಿಟ್ಟರೋ ನಮಗೆ ತಿಳಿಯಲಿಲ್ಲ. ಈಚೆಗೆ ಅವರಿಬ್ಬರೂ ಹೇಳಿರುವ ಸಮಾಧಾನ ವಾಕ್ಯಗಳು ಪರಸ್ಪರ ಹೊಂದುವುದಿಲ್ಲ. ಮತ್ತು ಮ|| ಗಾಂಧಿಯವರ ಭಾಷಣವನ್ನು ಆದ್ಯಂತವಾಗಿ ಪ್ರಕಟಮಾಡುವ ತನಕ ಯಥಾರ್ಥ ವಿದ್ಯಮಾನಗಳು ಯಾರಿಗೂ ಪರಿಷ್ಕಾರವಾಗಿ ಗೊತ್ತಾಗುವಹಾಗಿಲ್ಲ.

ಈಗ ನಮ್ಮ ವಿಚಾರಕ್ಕೆ ಅವಶ್ಯವಾದ ವಿಷಯವೇನೆಂದರೆ—ಇವರನ್ನು ಹಿಂದುಸ್ಥಾನದ ಪ್ರಮುಖರೆಂದು ನಾವು ಅಂಗೀಕಾರ ಮಾಡಬಹುದೇ? ಮಿಸೆಸ್ ಬೆಸೆಂಟರು ಸಹಜವಾದ ರಾಜಕೀಯ ವಿಷಯದಲ್ಲಿ ಹಿಂದುಸ್ಥಾನಕ್ಕೆಲ್ಲಾ ಮುಂದಾಳಾಗಿ ನಿಂತು ನಮ್ಮ ರಾಷ್ಟ್ರವನ್ನು ಶ್ರೇಯಸ್ಕರವಾಗಿಯೂ, ಸುಖಪ್ರದವಾಗಿಯೂ ಮಾಡಬಲ್ಲರೇ? ಅಥವಾ, ಮ|| ಗಾಂಧಿಯವರ ಅಭಿಮತವನ್ನವಲಂಬಿಸುವುದರಿಂದ ಹಿಂದುಸ್ಥಾನವು ಏಳಿಗೆಯಾಗುವುದೋ?

ಮಿಸೆಸ್ ಬೆಸೆಂಟರ ಚರಿತ್ರೆಯು ಎಲ್ಲರಿಗೂ ತಿಳಿದೇ ಇದೆ. ಈಕೆಯ ಹಾಗೆ ರೂಪವನ್ನು ಬದಲಾಯಿಸುವ ಪುರುಷರಾಗಲಿ ಸ್ತ್ರೀಯರಾಗಲಿ ಪ್ರಪಂಚದಲ್ಲಿ ಬಹಳ ಅಪರೂಪ. ಈಕೆ ಹಿಡಿದ ಯಾವ ಮಾರ್ಗವನ್ನೇ ಆಗಲಿ ದೀರ್ಘಕಾಲ ಅನುವರ್ತಿಸಲಿಲ್ಲ. ಪ್ರಜೆಗಳಲ್ಲಿ ತಾನು ಹಿತವಾದಿನಿ ಎನಿಸಿಕೊಳ್ಳುವುದಕ್ಕೆ ಉಪಾಯಾಂತರಗಳನ್ನು ಹುಡುಕುವುದರಲ್ಲಿ ಈಕೆ ಹಿಂತೆಗೆಯುವವಳಲ್ಲ; ಮತ್ತು ಆ ಉಪಾಯಗಳಲ್ಲಿ ತನ್ನ ಹೆಸರು ಕೆಡುತ್ತೆಂದು ತಿಳಿದ ಕೂಡಲೆ ಆಕೆ ಅಂಥಾ ಮಾರ್ಗವನ್ನು ತ್ಯಜಿಸಿಬಿಡುವಳು. ಆಕೆ ಹಿಂದುಸ್ಥಾನದ ಪ್ರಜೆಗಳ ವಿಷಯದಲ್ಲಿ ಹೇಗೆ ವರ್ತಿಸುತ್ತಿರುವಳೋ ಸ್ವಲ್ಪ ನೋಡಿ. ಈಕೆ ಒಂದಾನೊಂದು ಕಾಲದಲ್ಲಿ ಜಾತಿಯ ಕಟ್ಟುಪಾಡುಗಳು ಸರ್ವೋತ್ತಮವಾದವುಗಳೆಂದೂ, ಅವನ್ನು ದೇವರೇ ಮಾಡಿಟ್ಟನೆಂದೂ ಸಾರಿದಳು; ಕೆಲವು ಕಾಲ ಕಳೆದ ಮೇಲೆ ಜಾತಿಯನ್ನು ದೂರುವವಳಾದಳು. ಒಂದು ವೇಳೆ ಆಕೆ ಬಾಲ್ಯ ವಿವಾಹವನ್ನು ಹೊಗಳಿದಳು; ಇನ್ನೊಂದು ವೇಳೆ ಅದನ್ನು ತಿರಸ್ಕಾರಮಾಡಿದಳು. ನಮ್ಮ ಪದ್ಧತಿ ಆಚಾರ ವ್ಯವಹಾರಗಳನ್ನು ಸ್ತುತಿಸಿದವಳೂ ಈಕೆಯೇ; ಅವನ್ನು ಅಯೋಗ್ಯವಾದವುಗಳೆಂದು ಅಲ್ಲಗಳೆದವಳೂ ಈಕೆಯೇ. ಇಂಥಾ ಮಿಸೆಸ್ ಬೆಸೆಂಟ್ ಎಂಬ ಸ್ತ್ರೀಯು ಪ್ರಜೆಗಳಲ್ಲಿ ಮುಂದಾಳೆನಿಸಿಕೊಳ್ಳಬೇಕೆಂದೂ, ಪ್ರಜೆಗಳ ಅಭಿಮಾನಕ್ಕೆ ಪಾತ್ರಳಾಗಿ ಅವರಿಂದ ಹೊಗಳಿಸಿಕೊಳ್ಳಬೇಕೆಂದೂ ಕುತೂಹಲಪಡತಕ್ಕವಳಾಗಿದಾಳೆ. ಇಂಥವಳನ್ನು ಬುದ್ಧಿಶಾಲಿನಿಯಾದ ಮುಖಂಡಳೆಂದು ಭಾವಿಸುವುದು ಕ್ಷೇಮಕರವಲ್ಲ. ದೇಶೀಯರಲ್ಲಿ ದೀರ್ಘಾಲೋಚನೆಯುಳ್ಳ ಪುರುಷರು ಈ ಭಾಗವನ್ನು ಚೆನ್ನಾಗಿ ತಿಳಿದವರಾಗಿಯೂ ಆ ರೀತಿ ವಾಚಾ ಹೇಳುವವರಾಗಿಯೂ ಇರುವುದನ್ನು ನೋಡಿದರೆ ನಮಗೆ ಸಂತೋಷವಾಗುತ್ತದೆ. ಮಿಸೆಸ್ ಬೆಸೆಂಟರನ್ನು ನಂಬಿಕೊಂಡರೆ ನಮ್ಮ ರಾಷ್ಟ್ರಕ್ಕೆ ಕೇಡು ಇನ್ನೂ ಹೆಚ್ಚಾಗಿ ಪ್ರಾಪ್ತವಾದೀತಲ್ಲದೆ ನಿಮ್ಮದಿ ಸುಖ ಶ್ರೇಯಸ್ಸುಗಳು ಲಭಿಸಲಾರವು.

ಮ|| ಗಾಂಧಿಯವರ ಹಿತೋಪದೇಶವು ಸತ್ಯವಾದದ್ದು. ಇವರಿಗೆ ಈ ರಾಷ್ಟ್ರದಲ್ಲಿ ಸಚ್ಚರಿತ್ರೆಯೂ, ಧರ್ಮವೂ, ಸತ್ಯತೆಯೂ ವೃದ್ಧಿಯಾಗಬೇಕೆಂಬ ಕುತೂಹಲವಿದೆ. ಈ ಕುತೂಹಲವೇ ನಮ್ಮ ದೇಶೀಯರಲ್ಲೆಲ್ಲಾ ಇನ್ನೂ ವಿಶೇಷವಾಗಿ ಕಂಡುಬರುವಂತಾಗಲೆಂದು ಹಾರೈಸುತ್ತೇವೆ. ಆಳುವವರಲ್ಲೂ ಪ್ರಜೆಗಳಲ್ಲೂ ಈ ಪ್ರಧಾನವಾದ ಸದ್ಗುಣಗಳು ಇನ್ನೂ ಹೆಚ್ಚಾಗಿ ಆಚರಣೆಯಲ್ಲೂ ಪ್ರಕಾಶವಾಗದಿದ್ದರೆ ಪ್ರಜೆಗಳಾಗಲಿ ದೇಶವಾಗಲಿ ಶ್ರೇಯಸ್ಸಿಗೆ ಬರುವುದಿಲ್ಲ. ನಮ್ಮಲ್ಲಿ ಸಚ್ಚರಿತ್ರೆ, ಸತ್ಯತೆ, ಧರ್ಮ, ದೇವರ ವಿಷಯದಲ್ಲಿ ಭಯಭಕ್ತಿ, ಮಹಾತ್ಕಾರ್ಯವನ್ನು ಹಗೆಯಂತೆ ಕಾಣುವುದು, ಈ ಸದ್ಗುಣಗಳನ್ನು ಮ|| ಗಾಂಧಿಯವರು ಮುಂದಾಳಾಗಿ ನಿಂತು ವೃದ್ಧಿಮಾಡುವ ಪಕ್ಷದಲ್ಲಿ ಅವರಿಂದ ನಮಗೂ ನಮ್ಮ ರಾಷ್ಟ್ರಕ್ಕೂ ಮಹೋಪಕಾರವಾದೀತೆನ್ನುವುದಕ್ಕೆ ಸಂಶಯವಿಲ್ಲ. ಆದರೆ ಕಷ್ಟಗಳನ್ನು ಗುಣಗುಟ್ಟದೆ ಅನುಭವಿಸಿಕೊಂಡು ಬರೋಣದರಿಂದ ಅವು ಕಾಲಾನು ಕಾಲದಲ್ಲಿ ನಿವಾರಣೆಯಾಗುವವೆಂಬ ಮಾತನ್ನು ನಾವು ಒಪ್ಪಿಕೊಳ್ಳಲಾರೆವು. ದೇಶಕ್ಕೂ ಪ್ರಜಾಕೋಟಿಗೂ ಹಿತವಾಗಬೇಕಾದರೆ ಅವನ್ನು ಹಿಡಿದು ಹೋರಾಡತಕ್ಕ ಪುರುಷನು ಕಷ್ಟನಷ್ಟಗಳನ್ನು ಅನುಭವಿಸಲೇ ಬೇಕು. ಆತನು ಕಷ್ಟವನ್ನನುಭವಿಸುವುದೇ ಸಾಲದು; ಆತನು ಕೇಡುಕಾರಿಯಾದದ್ದನ್ನು ಹುಡುಕಿ ತೆಗೆದು ದೂರ ಮಾಡುವವನಾಗಬೇಕು. ಆತನು ಕಂಡ ಕಡೆ ಮೋಸ ಕೃತ್ರಿಮವನ್ನೂ ದ್ರೋಹವನ್ನೂ—ಅವು ತನ್ನ ಇಷ್ಟಮಿತ್ರರಲ್ಲಿದ್ದಾಗ್ಯೂ, ಎತ್ತಿ ಹಾಕುವುದಕ್ಕೂ, ಸತ್ಯತೆಯನ್ನೂ ಸಚ್ಚರಿತ್ರೆಯನ್ನೂ ನೆಲೆಗೊಳಿಸುವುದಕ್ಕೂ, ಸಿದ್ಧನಾಗಿರಬೇಕು. ಇಂಥಾ ವರ್ತನವನ್ನವಲಂಬಿಸಿದವನು ಕಷ್ಟನಷ್ಟಗಳನ್ನನುಭವಿಸುವನೇನೋ ಖಂಡಿತ. ಆದರೆ ಆತನು ಕಷ್ಟವಾದೀತೆಂದು ಹಿಂತೆಗೆಯಲೇ ಕೂಡದು.

ನಮ್ಮ ಮಧ್ಯೆ ಮುಂದಾಳುಗಳಾಗಿ ನಿಲ್ಲತಕ್ಕವರು ತಮ್ಮ ವರ್ತನದಿಂದ ಸತ್ಯವಾದದ್ದನ್ನೂ ತಮ್ಮ ಬುದ್ಧಿವಿಕಾಸದಿಂದ ಒಳ್ಳೇದು ಕೆಟ್ಟದ್ದನ್ನೂ ನಮಗೆ ತೋರಿಸಿಕೊಡತಕ್ಕವರಾಗಬೇಕು. ಮತ್ತೂ ಅವರು ಕೆಟ್ಟದ್ದನ್ನು ತ್ಯಜಿಸಿ ಒಳ್ಳೆಯದನ್ನು ಹಿಡಿಯುವಂತೆ ನಮ್ಮಲ್ಲಿ ಉತ್ಸಾಹವನ್ನೂ ಕಲ್ಪಿಸುವವರಾಗಬೇಕು. ಇಂಥಾ ಮುಂದಾಳುಗಳು ಸಿಕ್ಕುವುದು ಬಹಳ ಪ್ರಯಾಸ. ಸತ್ಯಸಂಧರೂ ದೇಶವತ್ಸಲರೂ ಆದ ಸ್ತ್ರೀ ಪುರುಷರನ್ನು ಪರಮಾತ್ಮನು ಈ ರಾಷ್ಟ್ರದ ಎಲ್ಲಾ ಭಾಗಗಳಲ್ಲೂ ಬೆಳಸುವವನಾಗಲೆಂದು ಪ್ರಾರ್ಥಿಸುತ್ತೇವೆ.

ಜಗದ್ರಕ್ಷಕನಾದ ಯೇಸು ಕ್ರಿಸ್ತನ ಚರಿತ್ರೆ.

ಮೇಲ್ಗಂಡ ಮಾತನ್ನು ದಯವಿಟ್ಟು ಓದಿ ಗಮನಿಸಿರಿ. ನೋಡಿರಿ: ಇದು ಬರೀ ಮಾತಲ್ಲ. ಈ ಮಾತು ಒಂದು ದಿವ್ಯವಾದ ಗ್ರಂಥದ ಹೆಸರಾಗಿದೆ. ಈ ಗ್ರಂಥವು ಪರಮಗುರುವಾದ ಯೇಸುಸ್ವಾಮಿಯವರು ಎತ್ತಿದ ಪಾರಮಾರ್ಥವಾದ ಅವತಾರವನ್ನು ಪ್ರಸ್ತಾಪಿಸುವ ಚರಿತ್ರೆಯಾಗಿದೆ. ಆದ್ದರಿಂದ ಈ ಮಹಾ ಚರಿತ್ರೆಯನ್ನು ಓದುವದು ಎಲ್ಲರಿಗೂ ಕರ್ತವ್ಯ. ಅದನ್ನು ಓದುವದರಿಂದ ಸರ್ವರಿಗೂ ಪ್ರಯೋಜನ ಉಂಟಾಗುವದು. ಹೇಗಂದರೆ—ಜಗದ್ರಕ್ಷಕನಾದ ಯೇಸು ಕ್ರಿಸ್ತನು ಸಾಕ್ಷಾತ್ ದೇವರಾಗಿಯೇ ಇದ್ದಾನೆಂದು ತಿಳುಕೊಳ್ಳುವದಕ್ಕೆ ಮಾರ್ಗವಾಗುವದು. ಈ ಮುಖ್ಯಾಂಶಕ್ಕೆ ಮೂರು ಸಿದ್ಧಾಂತಗಳು ಈ ಚರಿತ್ರೆಯಲ್ಲಿ ಅಡಗಿರುವವು. ಅವು ಯಾವವಂದರೆ—ಪರಮ ಗುರುವಾದ ಯೇಸು ಸ್ವಾಮಿಯವರು ದೀನಮನಸ್ಸುಳ್ಳವರೂ ಪ್ರೀತಿಸ್ವರೂಪರೂ ಪಾಪವಿಲ್ಲದವರೂ ಆಗಿದ್ದಾರೆ ಎಂಬುವದೇ, ಸ್ವಲ್ಪ ಮಟ್ಟಿಗೆ ಈ ಸಿದ್ಧಾಂತವನ್ನು ನೀವು ವಿಚಾರಿಸುವ ಹಾಗೆ ಈ ಗ್ರಂಥದಿಂದ ಕೆಳಗೆ ಕಾಣುವ ವಾಕ್ಯಗಳನ್ನು ಆರಿಸಿ ಛಾಪಿಸಿದ್ದೇವೆ.

ಯೇಸು ಆ ಜನರ ಗುಂಪುಗಳನ್ನು ಕಂಡು ಬೆಟ್ಟವನ್ನೇರಿ ಕೂತುಕೊಂಡ ತರುವಾಯ ಆತನ ಶಿಷ್ಯರು ಆತನ ಬಳಿಗೆ ಬಂದರು. ಆತನು ಅವರಿಗೆ ಉಪದೇಶಮಾಡಿ ಹೇಳಿದ್ದೇನಂದರೆ—

ಆತ್ಮದಲ್ಲಿ ಬಡವರಾಗಿರುವವರು ಧನ್ಯರು; ಪರಲೋಕರಾಜ್ಯವು ಅವರದು.
ದುಃಖಪಡುವವರು ಧನ್ಯರು; ಅವರು ಸಮಾಧಾನ ಹೊಂದುವರು.
ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು.
ನೀತಿಗೆ ಹಸಿದು ಬಾಯಾರಿದವರು ಧನ್ಯರು; ಅವರಿಗೆ ತೃಪ್ತಿ ಆಗುವದು.
ಕರುಣೆಯುಳ್ಳವರು ಧನ್ಯರು; ಅವರು ಕರುಣೆ ಹೊಂದುವರು.
ನಿರ್ಮಲಚಿತ್ತರು ಧನ್ಯರು; ಅವರು ದೇವರನ್ನು ನೋಡುವರು.
ಸಮಾಧಾನ ಪಡಿಸುವವರು ಧನ್ಯರು; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು.
ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು ಧನ್ಯರು; ಪರಲೋಕರಾಜ್ಯವು ಅವರದು.

ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ಮುಂದೆ ಮಾಡಬಾರದು, ನೋಡಿರಿ; ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯ ಹತ್ತಿರ ನಿಮಗೆ ಫಲದೊರೆಯದು.

ಆದದರಿಂದ ನೀನು ಧರ್ಮ ಕೊಡುವಾಗ ನಿನ್ನ ಮುಂದೆ ತುತೂರಿ ಊದಿಸಬೇಡ; ಜನರಿಂದ ಹೊಗಳಿಸಿಕೊಳ್ಳಬೇಕೆಂದು ಕಪಟಿಗಳು ಸಭಾಮಂದಿರಗಳಲ್ಲಿಯೂ ಬೀದಿಗಳಲ್ಲಿಯೂ ಹಾಗೆ ಮಾಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ನೀನಾದರೆ ಧರ್ಮ ಕೊಡುವಾಗ ನೀನು ಧರ್ಮ ಕೊಟ್ಟದ್ದು ಅಂತರಂಗವಾಗುವ ಹಾಗೆ ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ. ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು.

ಮತ್ತು ನೀವು ಪ್ರಾರ್ಥನೆಮಾಡುವಾಗ, ಕಪಟಿಗಳ ಹಾಗೆ ಮಾಡಬೇಡಿರಿ. ಜನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದಿಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆಮಾಡುವದಕ್ಕೆ ಇಷ್ಟಪಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಪ್ರಾರ್ಥನೆಮಾಡಬೇಕಾದರೆ, ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ, ಬಾಗಿಲನ್ನು ಮುಚ್ಚಿಕೊಂಡು, ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು; ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು.

ನಾನೇ ಒಳ್ಳೇ ಕುರುಬನು; ಒಳ್ಳೇ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ. ಕೂಲಿಯಾಳು ಕುರುಬನೂ ಕುರಿಗಳ ಒಡೆಯನೂ ಆಗಿರದೆ, ತೋಳ ಬರುವದನ್ನು ಕಾಣುತ್ತಲೇ ಕುರಿಗಳನ್ನು ಬಿಟ್ಟು ಓಡಿಹೋಗುತ್ತಾನೆ; ತೋಳವು ಅವುಗಳನ್ನು ಹಿಡುಕೊಂಡು ಹಿಂಡನ್ನು ಚದರಿಸುತ್ತದೆ. ಅವನು ಕೂಲಿಯಾಳು; ಕುರಿಗಳ ಚಿಂತೆ ಅವನಿಗಿಲ್ಲ. ನಾನೇ ಒಳ್ಳೇ ಕುರುಬನು; ತಂದೆಯು ನನ್ನನ್ನು ನಾನು ತಂದೆಯನ್ನು ತಿಳಿದಿರುವಂತೆಯೇ ನಾನು ನನ್ನ ಕುರಿಗಳನ್ನು ತಿಳಿದಿದ್ದೇನೆ; ನನ್ನ ಕುರಿಗಳು ನನ್ನನ್ನು ತಿಳಿದಿವೆ; ಮತ್ತು ಕುರಿಗಳಿಗೋಸ್ಕರ ನನ್ನ ಪ್ರಾಣವನ್ನು ಕೊಡುತ್ತೇನೆ. ಇದಲ್ಲದೆ ಈ ಹಟ್ಟಿಗೆ ಸೇರದಿರುವ ಇನ್ನು ಬೇರೆ ಕುರಿಗಳು ನನಗೆ ಅವೆ, ಅವುಗಳನ್ನೂ ನಾನು ತರಬೇಕು; ಅವು ನನ್ನ ಸ್ವರಕ್ಕೆ ಕಿವಿಗೊಡುವವು; ಆಗ ಒಂದೇ ಹಿಂಡು ಆಗುವದು, ಒಬ್ಬನೇ ಕುರುಬನಿರುವನು. ನಾನು ತಿರಿಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ; ಅದರ ನಿಮಿತ್ತವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ. ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು, ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ; ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು, ಅದನ್ನು ತಿರಿಗಿ ತಕ್ಕೊಳ್ಳುವದಕ್ಕೆ ನನಗೆ ಅಧಿಕಾರ ಉಂಟು, ಈ ಅಪ್ಪಣೆಯನ್ನು ನನ್ನ ತಂದೆಯಿಂದ ಹೊಂದಿದ್ದೇನೆ ಅಂದನು.

ಆತನು ಇನ್ನೂ—ಮನುಷ್ಯನೊಳಗಿಂದ ಹೊರಡುವಂಥಾದ್ದೇ ಮನುಷ್ಯನನ್ನು ಹೊಲೆಮಾಡುವದು, ಒಳಗಿನಿಂದ ಅಂದರೆ ಮನುಷ್ಯರ ಹೃದಯದೊಳಗಿಂದ ಸೂಳೆಗಾರಿಕೆ ಕಳ್ಳತನ ಕೊಲೆ ಹಾದರ ದ್ರವ್ಯಾಶೆ ಕೆಡುಕುತನ ಮೋಸ ಬಂಡತನ ಹೊಟ್ಟೇಕಿಚ್ಚು ಬೈಗಳು ಸೊಕ್ಕು ಬುದ್ಧಿಗೇಡಿತನ ಇವೇ ಮೊದಲಾದವುಗಳ ಕೆಟ್ಟ ಆಲೋಚನೆಗಳು ಹೊರಡುತ್ತವೆ. ಈ ಕೆಟ್ಟ ವಿಷಯಗಳೆಲ್ಲಾ ಒಳಗಿನಿಂದ ಹೊರಡುವಂಥವುಗಳಾಗಿ ಮನುಷ್ಯನನ್ನು ಹೊಲೆಮಾಡುತ್ತವೆ ಅಂದನು.

ವಾಚಕ ಮಹನೀಯರೇ, ಪರಮಗುರುವಾದ ಯೇಸು ಸ್ವಾಮಿಯವರ ಚರಿತ್ರೆಯಲ್ಲಿ ಈ ಭಾಗಗಳನ್ನು ಓದುವದು ಸಾಲದು ದಯವಿಟ್ಟು, ಆ ದಿವ್ಯಗ್ರಂಥವನ್ನು ತರಿಸಿಕೊಂಡು ನೀವು ಪೂರ್ತಿಯಾಗಿ ಓದಿದರೆ ನಿಮ್ಮಲ್ಲಿ ಆನಂದವು ಹುಟ್ಟುವದಕ್ಕೆ ಅನುಮಾನವೇನೂ ಇಲ್ಲ.

ಯುದ್ಧದ ಸಮಾಚಾರಗಳು.

ರಷ್ಯಾದವರ ದೊಡ್ಡ ಜಯಪ್ರದವು.

ಆಸ್ಯಾ ಮೈನರಿನಲ್ಲಿರುವ ಎರ್ಜರೂಮ್ ಪಟ್ಟಣವನ್ನು ರಷ್ಯಾದವರು ಗೆದ್ದು ಸ್ವಾಧೀನಪಡಿಸಿಕೊಂಡದ್ದೇ ಈ ವಾರದ ಮುಖ್ಯ ಯುದ್ಧಸಮಾಚಾರವಾಗಿದೆ. ಇದರ ವಿವರವನ್ನೆಲ್ಲಾ ಟೆಲಿಗ್ರಾಂ ಕಾಲಮಿನಲ್ಲಿ ತಿಳಿಸಿದೇವೆ. ಇಲ್ಲಿಂದ ಮುಂದಕ್ಕೆ ಮಿತ್ರಮಂಡಲಿಯವರಿಗೆ ಉದ್ದಕ್ಕೂ ಜಯಪ್ರದಗಳೇ ಆಗುವವೆಂದು ನಂಬುತ್ತೇವೆ. ಯುದ್ಧಭೂಮಿಯ ಇತರ ರಣರಂಗಗಳಲ್ಲೂ ಕದನಗಳು ನಡೆದವು ಯಾವಾವ ವಿಶೇಷವಾದ ಫಲಿತಾಂಶಗಳೇನೂ ಕಾಣುವುದಿಲ್ಲ.

ಪಶ್ಚಿಮ ರಣರಂಗದಲ್ಲಿ.

ಪಶ್ಚಿಮ ರಣರಂಗದ ಯುದ್ಧಸಾಲಿನ ಉದ್ದಕ್ಕೂ ಫಿರಂಗಿ ಗುಂಡುಗಳ ಹಾರಾಟಗಳೂ, ಸುರಂಗಗಳು ಒಡೆದು ಹಾರಿದ್ದೂ, ಕೈಬಾಂಬುಗಳ ಕದನವಾದದ್ದೂ ನಿಲುಗಡೆ ಇಲ್ಲದೆ ನಡೆಯುತ್ತಾ ಬಂದಿವೆ. ಜರ್ಮನಿಯವರು ನುಗ್ಗಿ ಬಂದು ಮಿತ್ರಮಂಡಲಿಯವರ ಸೈನಿಕರ ಸಾಲುಗಳನ್ನು ಒಡೆದು ಛೇದಿಸಬೇಕೆಂದು ಪ್ರಯತ್ನಪಡುತ್ತಿರುವಂತೆ ಕಾಣುವುದು. ಆದರೇನು, ಜರ್ಮನಿಯ ಸೈನಿಕರು ಕದನಮಾಡುವುದಕ್ಕೆ ಆತುರಪಡುವವರಾಗಿಲ್ಲವಾದ್ದರಿಂದ ಅವರು ನುಗ್ಗಿ ಬಂದಾಗಲೆಲ್ಲಾ ವಿಶೇಷ ಸೈನಿಕರನ್ನು ನಷ್ಟಪಡಿಸಿಕೊಂಡು ವಾಪಸು ಹೋಗುತ್ತಿದಾರೆ. ಒಂದು ರಾತ್ರಿಯಲ್ಲಿ ಸುಮಾರು 100 ಮಂದಿ ಸೈನಿಕರನ್ನು ಮಿತ್ರಮಂಡಲಿಯವರು ಸುತ್ತುಕಟ್ಟಿಕೊಂಡು ಕದನಮಾಡಿದ್ದರಲ್ಲಿ ಹಲವರು ಕೊಲೆಯಾದರು. ಉಳಿದವರೆಲ್ಲಾ—ಒಬ್ಬ ಕ್ಯಾಪ್ಟನ್ 70 ಮಂದಿ ಸೈನಿಕರ ಸಮೇತ ಶರಣಾಗತರಾದರು.

ಜರ್ಮನಿಯವರು ಸುರಂಗಗಳನ್ನು ತೋಡಿ ಮದ್ದು ತುಂಬಿಸಿ ಉಡಾಯಿಸುವದರಲ್ಲಿ ತುಂಬಾ ಚುರುಕಾಗಿದಾರೆ. ಒಂದು ರಾತ್ರಿಯಲ್ಲಿ 24 ಗಂಟೆಗಳೊಳಗಾಗಿ ಏಳು ಸುರಂಗಗಳನ್ನೂ, ಇನ್ನೊಂದು ಕಡೆ ಎಂಟು ಸುರಂಗಗಳನ್ನೂ ಹಾರಿಸಿದರು. ಇಷ್ಟೊಂದು ಸುರಂಗಗಳನ್ನು ಹಾರಿಸಿದಾಗ್ಯೂ, ಅತ್ಯುಗ್ರವಾದ ಫಿರಂಗಿ ಗುಂಡುಗಳ ಮಳೆ ಸುರಿಸಿದರೂ ಜರ್ಮನಿಯವರಿಗೆ ಒಂದು ಕಡೆ ಬಹಳ ಸ್ವಲ್ಪ ಪ್ರದೇಶ ಮಾತ್ರ ಸ್ವಾಧೀನವಾಯಿತು. 4,000 ಗಜಗಳಷ್ಟು ಕಂದಕಗಳ ಪೈಕಿ ಅವರಿಗೆ 600 ಗಜದಷ್ಟು ಕಂದಕಗಳು ಮಾತ್ರವೇ ಸಿಕ್ಕಿದವು. ಇದಕ್ಕೆ ಅವರು ನಿಲುಗಡೆ ಇಲ್ಲದೆ ಸಾವಿರಾರು ಗುಂಡುಗಳನ್ನು ಸುರಿಸಿದ್ದಲ್ಲದೆ ಐದು ಸಲ ಸುರಂಗಗಳನ್ನು ಉಡಾಯಿಸಿದರು. ಈ ಯುದ್ಧದಲ್ಲಿ ಈ ಕಂದಕಗಳು ಎಷ್ಟೋ ಸಲ ಮಿತ್ರಮಂಡಲಿಯವರಿಗೂ, ಜರ್ಮನಿಯವರಿಗೂ ಸಿಕ್ಕಿ, ಕಳೆದು ಹೋಗಿರುತ್ತವೆ. ಫೆಬ್ರವರಿ ತಾ. 4 ರಿಂದ 11 ರ ವರೆಗೆ ಜರ್ಮನಿ ಸೈನಿಕರಲ್ಲಿ ಒಂದೇ ಭಾಗದಲ್ಲಿ 11,000 ಯುದ್ಧ ಭಟರು ನಷ್ಟಪಟ್ಟಿರಬೇಕೆಂದು ಎಣಿಸಲ್ಪಟ್ಟಿದೆ.

ಇಂಗ್ಲೆಂಡಿನಲ್ಲೂ ಹಲವು ಕದನಗಳಾದವು. ಒಂದಾನೊಂದು ದಿನ 17 ಸಲ ವಿಮಾನಗಳ ಯುದ್ಧವಾಗಿರುತ್ತದೆ.

ಬ್ರಿಟಿಷ್ ಯುದ್ಧದ ಇಲಾಖೆಯ ಸೆಕ್ರೆಟರಿಯವರಾದ ಲಾರ್ಡ್ ಕಿಚ್ನರವರು ಫ್ರಾನ್ಸಿನಲ್ಲಿರುವ ಯುದ್ಧಭೂಮಿಗೆ ಹೋಗಿ ಸ್ಥಳ ವಿದ್ಯಮಾನಗಳನ್ನು ನೋಡಿಕೊಂಡು ವಾಪಸು ಲಂಡನ್ ಪಟ್ಟಣಕ್ಕೆ ಬಂದರು.

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದ ಯುದ್ಧಸಾಲಿನಲ್ಲಿ ವಿಶೇಷ ಸಮಾಚಾರಗಳೇನೂ ನಡೆದಂತೆ ಪ್ರಕಟವಾಗಿಲ್ಲ. ಯುದ್ಧಸಾಲುಗಳಲ್ಲಿ ಫಿರಂಗಿ ಗುಂಡುಗಳ ಹಾರಾಟವೂ, ಸಣ್ಣ ಪುಟ್ಟ ಕದನಗಳೂ ಆಗಿವೆ. ಕಳೆದ ವಾರವೆಲ್ಲಾ ವಿಮಾನ ಯುದ್ಧಗಳು ನಡೆಸಿದ ಕಾರ್ಯಗಳೇ ಮುಖ್ಯವಾದವು. ಜರ್ಮನಿಯವರು ಜಪ್ಪೆಲಿನ್‌ಗಳಿಂದ ತಮ್ಮ ಭಾರೀ ವಿಮಾನ ಯುಂತ್ರಗಳಿಂದ ರೀಗಾ ತೀರದಲ್ಲಿರುವ ಸುತ್ತುಮುತ್ತಿನ ಪ್ರದೇಶಗಳಿಗೂ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು.

ಇಟಲಿ.

ಇಟಲಿಯಿಂದ ಬಂದಿರುವ ವರ್ತಮಾನ ಬಹಳ ಸ್ವಲ್ಪ. ಇಟಲಿಯವರು ಹೋಗಿ ಆಸ್ಟ್ರಿಯಾ ಸೈನಿಕರ ಮೇಲೆ ಬಿದ್ದು ಅವರ ಕೆಲವು ಕಂದಕಗಳನ್ನು ವಶಪಡಿಸಿಕೊಂಡಿದಾರೆ. ಶತ್ರು ಪಕ್ಷದವರು ವಿಮಾನಗಳಿಂದ ಇಟಲಿಯ ಪಟ್ಟಣಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ಒಂದು ಸ್ಥಳ ದಲ್ಲಿ ಸಿಡಿಮದ್ದಿನ ಗುಂಡುಗಳಿಂದ ಒಬ್ಬನು ಕೊಲೆಯಾದನು; ಐದು ಮಂದಿಗೆ ಗಾಯವಾಗಿದೆ.

ಟರ್ಕಿಯಲ್ಲಿ.

ಟರ್ಕಿಯವರು ಎರ್ಜರೂಮ್ ನಗರವನ್ನು ಕಳೆದುಕೊಂಡದ್ದು ಅಪಾರ ನಷ್ಟವಾಯಿತು. ಅದು ಆಸ್ಯಾ ಮೈನರ್ ಸೀಮೆಯಲ್ಲಿ ಪೂರ್ವ ಭಾಗದ ರಾಜಧಾನಿ; ಅಲ್ಲಿ ಬಹಳ ದೊಡ್ಡ ಕೋಟೆ ಇದೆ. ಆ ಪ್ರಾಂತ್ಯಕ್ಕೆಲ್ಲಾ ಅದೇ ಭಾರೀ ಕೋಟೆ. ಅದರ ಸುತ್ತಲೂ ಹಲವು ಕೋಟೆಗಳಿರುತ್ತವೆ. ಕೋಟೆ ಕೊತ್ತಲಗಳ ಮೇಲೆ ಭಾರೀ ಫಿರಂಗಿಗಳನ್ನು ಏರಿಸಿದಾರೆ. ಯುದ್ಧ ವಿಚಾರದಲ್ಲೂ ಅದು ಬಹು ಮುಖ್ಯವಾದದ್ದು. ಈ ಕೋಟೆಯೊಳಗೆ 1,00,000 ಸೈನಿಕರಿದ್ದರೆಂದೂ, ಕೋಟೆಗಳ ಮೇಲೂ ಸುಮಾರು 1,000 ಫಿರಂಗಿಗಳನ್ನು ಏರಿ ಸಿಟ್ಟಿದ್ದ ರೆಂದೂ ಹೇಳಲಾಗಿದೆ. ಆ ಪಟ್ಟಣವಾದರೋ ಸಮುದ್ರಮಟ್ಟಕ್ಕಿಂತ 6,000 ಅಡಿ ಎತ್ತರವಾಗಿದ್ದು, ಶೀತಕಾಲದಲ್ಲಿ ಬಹಳ ಚಳಿಯಾಗುತ್ತದೆ. ಈ ಚಳಿಯ ಮಧ್ಯದಲ್ಲೇ ರಷ್ಯಾದವರು ಆ ಪ್ರಾಂತ್ಯವೆಲ್ಲಾ ಹಿಮ ಬಿದ್ದು ಕೊರಕಲಾಗಿದ್ದಾಗ ಅದರ ಮೇಲೆ ನುಗ್ಗಿ ಹೋದರು. ಇವರು ನುಗ್ಗಿ ಮುತ್ತಿಗೆಹಾಕುತ್ತಾರೆಂದು ಟರ್ಕರವರಿಗೆ ತಿಳಿದೇ ಇರಲಿಲ್ಲ. ಐದು ದಿನಗಳ ವರೆಗೆ ಅವರು ಬಹಳ ರಭಸವಾಗಿ ಹೋರಾಡಿದರು. ಇಲ್ಲದೇನೂ ಆ ಪಟ್ಟಣಕ್ಕೆ ಮುತ್ತಿಹಾಕಿದರು. ರಷ್ಯಾದವರನ್ನು ಹಿಮ್ಮೆಟ್ಟಿ ಬಾರದಂತೆ ಶತ್ರುವು ತಡೆಯಲಾರದೆಹೋದರು. ಅದರಿಂದ ರಷ್ಯಾದವರು ಹೊರ ಆವರಣದಲ್ಲಿದ್ದ ಕೋಟೆಗಳಿಗೆ ಮುತ್ತಿಗೆಹಾಕಿ ಟರ್ಕಿ ಸೈನ್ಯಗಳನ್ನು ಅಲ್ಲಿಂದ ಓಡಿಸಿಬಿಟ್ಟರು. ಸೈಬೀರಿಯಾದಲ್ಲಿದ್ದ ರಷ್ಯಾ ಸೈನ್ಯಗಳು ಈ ಮುತ್ತಿಗೆಯಲ್ಲಿ ಅವರು 48 ಗಂಟೆಗಳೊಳಗಾಗಿ ಹೊರಗಣ ಕೋಟೆಗಳನ್ನು ವಶಪಡಿಸಿಕೊಂಡರು. ಬಳಿಕ ರಷ್ಯಾದವರು ಮುಂದಕ್ಕೆ ನುಗ್ಗಿ ಹೋಗಿ ಆ ಪಟ್ಟಣವನ್ನು ಸಂಪೂರ್ಣವಾಗಿ ಕೋಟೆಗಳ ಸಮೇತ ಗೆದ್ದು ಸ್ವಾಧೀನಪಡಿಸಿಕೊಂಡರು. ರಷ್ಯಾದವರು ಕೋಟೆಯ ಸಮೀಪಕ್ಕೆ ತಮ್ಮ ಭಾರೀ ಫಿರಂಗಿಗಳನ್ನು ತರಲಾರದೆಹೋದದ್ದರಿಂದ ಕೋಟೆ ಕೊತ್ತಲಗಳಿಗೇನೂ ಹಾಳಾಗಲಿಲ್ಲ. ರಷ್ಯಾ ಸೈನಿಕರು ತಮ್ಮ ಸಂಗೀನುಗಳನ್ನು ತೋರಿಸಿ ತಿವಿಯುತ್ತಾ ನುಗ್ಗಿ ಹೋಗಿ, ಕೋಟೆಗಳ ಹೋತ್ತು ನಲುಗಿಯಿಲ್ಲದೆ ಅತ್ಯಂತ ಪರಾಕ್ರಮದಿಂದ ಅದನ್ನು ಮೊದಲೇ ನಾಲು ಕೋಟೆಗಳನ್ನು ಗೆದ್ದುಕೊಂಡರು. ಟರ್ಕಿಯವರು ಬಹು ಸಾಹಸವಾಗಿ ಹಿಮ್ಮೆಟ್ಟಿ ಅಳಕ ಓಡಿಹೋದರು. ಮೊದಲು ರಷ್ಯಾ ದ ಜಾರ್ ಸೈನಿಕರು ಪಟ್ಟಣವನ್ನು ಪ್ರವೇಶಮಾಡಿದರು. ಇವರ ಹಿಂದೆ ಸೈನ್ಯ ನುಗ್ಗಿತು. ರಷ್ಯಾದವರು ಬಹಳ ಆಕಸ್ಮಿಕವಾಗಿ ನುಗ್ಗಿ ಪಟ್ಟಣಗಳನ್ನು ವಶಪಡಿಸಿಕೊಂಡದ್ದರಿಂದ ಟರ್ಕಿಯವರು ತಮ್ಮ ಫಿರಂಗಿಗಳನ್ನೂ ಮದ್ದು ಗುಂಡು ಗಳನ್ನೂ ನಾಶಮಾಡುವುದಕ್ಕೆ ಸಮಯವಾಗಲಿಲ್ಲ. ಇದರಿಂದ ರಷ್ಯಾದವರಿಗೆ ಬಹಳ ಹೆಚ್ಚಾಗಿ ಕೊಳ್ಳೆ ಸಿಕ್ಕಿತು. ಈಚೆಗೆ ರಷ್ಯಾದವರು ಓಡಿಹೋಗುವ ಟರ್ಕರವರನ್ನು ಬೆನ್ನು ಹತ್ತಿ ಓಡಿಸಿಕೊಂಡು ಹೋಗಿದಾರೆ. ಟರ್ಕಿಯವರು ಅಲ್ಲಲ್ಲಿ 10 ಮೈಲಿ ದೂರದಲ್ಲಿ ನಿಂತು ಯುದ್ಧಮಾಡಬೇಕೆಂದು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಎಷ್ಟು ಮಂದಿ ಟರ್ಕಿ ಸೈನಿಕರು ತಪ್ಪಿಸಿಕೊಂಡು ಹೋದರೋ, ಎಷ್ಟು ಮಂದಿ ರಷ್ಯಾದವರಿಗೆ ಕೈಸೆರೆ ಸಿಕ್ಕಿದರೋ ತಿಳಿಯದು. ಇದುವರೆಗೆ ಸುಮಾರು 1,20,000 ಸೈನಿಕರು ನಷ್ಟಪಟ್ಟಂತೆ ಎಣಿಸಲ್ಪಟ್ಟಿದೆ.

ಪ್ರತಿ ಒಂದು ಕೋಟೆಯು ತುಂಬಾ ಹೆಣಗಳು ರಾಸಿಯಾಗಿ ಬಿದ್ದಿದ್ದವು. ಇನ್ನೂ ಕೆಲವು ಸೈನಿಕರು ಬೇಗನೆ ಶರಣಾಗತರಾಗುತ್ತೇವೆಂದು ಒಪ್ಪಿಕೊಂಡರು. ಸಾಯಂಕಾಲದ ಹೊತ್ತಿಗೆ ಅವರೆಲ್ಲಾ ಚಳಿಯಲ್ಲಿ ಶೀತಹಿಡಿದು ಸತ್ತುಹೋಗಿದ್ದರು.

ಈ ಜಯಪ್ರದದ ನಿಮಿತ್ತ ರಷ್ಯಾದಲ್ಲಿ ನಾನಾ ಉತ್ಸವಗಳು ನಡೆಸಲ್ಪಟ್ಟು ಜನರು ಕೋಲಾಹಲ ಮಾಡಿದರು. ಈ ಜಯಪ್ರದವಾರ್ತೆಯನ್ನು ಕೇಳಿ ಬ್ರಿಟಿಷ್ ಚಕ್ರವರ್ತಿಯವರಾದ ಜಾರ್ಜ್ ಸಾರ್ವಭೌಮರವರು ಹರ್ಷಾನಂದಪಟ್ಟು ರಷ್ಯಾದ ಜಾರ್ ಯವರಿಗೆ ತಮ್ಮ ಸಂತೋಷವನ್ನು ತಂತೀವರ್ತಮಾನ ಕೊಟ್ಟು ತಿಳಿಸಿದರು.

ಎರ್ಜರೂಮ್ ಪಟ್ಟಣವು ಬಹಳ ಬಡತನವಾದದ್ದು, ಅದರ ಕೋಟೆ ಯ ಪ್ರಜಾ ಸಂಖ್ಯೆಯು 1,00,000 ಕ್ಕಿಂತ ಕಡಮೆ. ಆದರೂ ಟರ್ಕಿ ಪ್ರದೇಶಕ್ಕೆ ಸೇರಿದ ಆ ಪ್ರಾಂತ್ಯದಲ್ಲೆಲ್ಲಾ ಇದೇ ಅತ್ಯಂತ ಪ್ರಾಮುಖ್ಯವಾದ ಸ್ಥಾನವಾಗಿತ್ತು. ಇದಕ್ಕೆ ಮೊದಲೇ ರಷ್ಯಾದವರು ಆ ಪಟ್ಟಣವನ್ನು ಎರಡು ಸಲ ಗೆದ್ದು ಕಡೆಗೆ ವಾಪಸು ಟರ್ಕಿಯವರಿಗೆ ಕೊಟ್ಟುಬಿಟ್ಟಿದ್ದರು. ಇನ್ನು ಟರ್ಕರವರನ್ನು ಅಲ್ಲಿಂದ ಹಿಂದಕ್ಕೆ ಓಡಿಸಲಾರರೆಂದೂ, ಅವರು ಅಲ್ಲಿಂದ ಮುಂದಕ್ಕೆ ನುಗ್ಗಿಹೋಗಿ ಮೆಸೊಪೊಟೇಮಿಯಾದಲ್ಲಿ ಬ್ರಿಟಿಷರಿಗೆ ಸಹಾಯ ಮಾಡುವರೆಂದೂ ನಿರೀಕ್ಷಿಸಲ್ಪಟ್ಟಿದೆ.

ಮೆಸೊಪೊಟೇಮಿಯಾದಲ್ಲಿ ಯುದ್ಧಕಾರ್ಯಗಳನ್ನು ಇದುವರೆಗೆ ಇಂಡಿಯಾ ಗವರ್ಮೆಂಟಿನವರು ನಡೆಸುತ್ತಿದ್ದರು. ಈಗ ಲಂಡನ್ ಪಟ್ಟಣದ ಯುದ್ಧದ ಕಛೇರಿಯವರೇ ಅದನ್ನು ವಹಿಸಿಕೊಂಡು ನಡೆಸಲಾರಂಭಿಸಿದಾರೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಮಿತ್ರಮಂಡಲಿಯವರು ಸಲೋನೀಕ ಪಟ್ಟಣದಿಂದ ಮುಂದರಿಸಿ ನುಗ್ಗು ವಂತೆ ಕಾಣುತ್ತದೆ. ಅವರು ಬಲ್ಗೇರಿಯಾ ದೇಶದೊಳಕ್ಕೆ ಪ್ರವೇಶಮಾಡಿರುವರು, ಇನ್ನೂ ಇಲ್ಲವೋ ಸರಿಯಾಗಿ ತಿಳಿಯುವುದಿಲ್ಲ. ಬಲ್ಗೇರಿಯಾ ದವರಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ ಬರುವಂತೆ ಅವರು ಕೆಲವು ವಿಮಾನಯಂತ್ರಗಳನ್ನು ಕಳುಹಿಸಿದ್ದರು. ಅವು 158 ಸಿಡಿಮದ್ದಿನ ಗುಂಡುಗಳನ್ನು ಹಾಕಿ ಅಪಾರವಾಗಿ ನಷ್ಟವನ್ನುಂಟುಮಾಡಿದವು; ಅನೇಕ ಕಡೆ ಬೆಂಕಿಗಳು ಬಿದ್ದವು. ವಿಮಾನಯಂತ್ರಗಳೆಲ್ಲಾ ಸುರಕ್ಷಿತವಾಗಿ ವಾಪಸು ಬಂದಿರುತ್ತವೆ. ಪಶ್ಚಿಮ ಭಾಗದಲ್ಲಿ ಆಸ್ಟ್ರಿಯಾ ಸೈನ್ಯಗಳೂ ಬಲ್ಗೇರಿಯಾ ಸೈನ್ಯಗಳೂ ಅಲ್ಬೇನಿಯಾ ಸೀಮೆಯಲ್ಲಿ ಏಕವಾಗಿ ಸೇರಿಕೊಂಡವೆಂದೂ, ಆಸ್ಟ್ರಿಯಾದವರು ಸಮುದ್ರತೀರದ ಬಳಿಗೆ ಹೋಗದಂತೆ ಇಟಲಿಯವರು ಬಂದು ತಡೆದಿದಾ ರೆಂದೂ ಹೇಳಲಾಗಿದೆ. ಅಲ್ಲಿಂದ ಬಂದಿರುವ ತಂತೀ ವರ್ತಮಾನಗಳು ಖಚಿತ ಸುದ್ದಿಯನ್ನು ತಿಳಿಸುವುದಿಲ್ಲ.

ಗ್ರೀಕರು ಬಲ್ಗೇರಿಯಾ ಸೈನಿಕರನ್ನು ತಡೆದು ಚದರಿಸಿಬಿಟ್ಟಿದಾರೆ. ಆದರೆ ಅವರು ಕ್ರಮವಾದ ಸೈನಿಕರಲ್ಲ.

ಬಲ್ಗೇರಿಯಾದವರಿಗೆ ಜರ್ಮನಿಯವರ ವಿಷಯದಲ್ಲಿ ಅಸಮಾಧಾನ ಉಂಟಾಗಿದೆ ಎಂದೂ, ಅವರು ಕೆರಾರು ಮಾಡಿಕೊಳ್ಳಬೇಕೆಂದು ಅಪೇಕ್ಷಿಸುತ್ತಿರು ವರೆಂದೂ ಹೇಳಲಾಗಿದೆ. ಆದರೆ ಈ ಸುದ್ದಿಗಳಲ್ಲಿ ಅಷ್ಟೇನೂ ನಿಜವಿರುವಂತೆ ತೋರುವುದಿಲ್ಲ.

ಆಫ್ರಿಕಾದಲ್ಲಿ.

ಕ್ಯಾಮರೂನ್ಸ್ ಸೀಮೆಯಲ್ಲಿದ್ದ ಕಡೆಯ ಜರ್ಮನೀ ಸೈನಿಕರು ಶರಣಾಗತರಾದರು. ಅಲ್ಲಿನ ಯುದ್ಧ ಕಾರ್ಯಗಳೆಲ್ಲಾ ಕೊನೆಯಾಯ್ತವೆ. ಅನೇಕ ಜರ್ಮನರು ತಪ್ಪಿಸಿಕೊಂಡು ಸ್ಪೇಯಿನ್‌ನವರ ಸೀಮೆಗೆ ಹೋಗಿ ಸೇರಿರುವರು. ಅಲ್ಲಿನ ಸರ್ಕಾರದವರು ಅವರ ಆಯುಧಗಳನ್ನು ಕಿತ್ತುಕೊಂಡು ಅವರನ್ನು ಬಂಧದಲ್ಲಿಡುತ್ತಿದಾರೆ. ಅವರನ್ನೆಲ್ಲಾ ಆಫ್ರಿಕದ ತೀರದ ಬಳಿ ಇರುವ ದ್ವೀಪಕ್ಕೆ ಕಳುಹಿಸಿಬಿಡುವಂತೆ ಕಾಣುತ್ತದೆ.

ಪೂರ್ವ ಆಫ್ರಿಕಾದಲ್ಲಿ ಉತ್ತರ ತೀರದಲ್ಲೂ ಪಶ್ಚಿಮದಲ್ಲೂ ಕದನಗಳು ನಡೆದವು. ಪಶ್ಚಿಮ ದಿಕ್ಕಿನಲ್ಲಿ ಕೊಂಗೊ ಸೀಮೆಯಿಂದ ಬೆಲ್ಜಿಯನ್ನರು ನುಗ್ಗಿ ಹೋಗುತ್ತಿರುವಂತೆ ತೋರುತ್ತದೆ. ಬಹಳ ಕಠಿಣವಾದ ಕದನಗಳು ನಡೆದು ಎರಡು ಪಕ್ಷಗಳಲ್ಲೂ ತುಂಬಾ ನಷ್ಟವಾಗಿರುತ್ತದೆ. ಉತ್ತರ ಪೂರ್ವ ದಿಕ್ಕಿನಲ್ಲಿ ಬ್ರಿಟಿಷರು ನುಗ್ಗಿ ಹೋಗಿ ಜರ್ಮನಿಯವರ ಮುಖ್ಯ ಸೈನ್ಯದ ಠಾಣೆಯನ್ನು ಹುಡುಕುತ್ತಿದಾರೆ. ಅಲ್ಲಿ ಒಂದು ಕದನವಾಯಿತು. ಬ್ರಿಟಿಷ್ ಸೈನಿಕರಲ್ಲಿ 172 ಮಂದಿ ತನಕ ನಷ್ಟವಾದರು. ಶತ್ರುವಿನ ಕಡೆ ಎಷ್ಟು ಮಂದಿ ನಷ್ಟಪಟ್ಟರೋ ತಿಳಿಸಿಲ್ಲ. ನಮ್ಮ ಸೈನ್ಯಗಳನ್ನು ಸಾಗಿಸುವುದಕ್ಕೆ ಒಂದು ರೈಲ್ ರಸ್ತೆಯನ್ನು ತಯಾರುಮಾಡುತ್ತಲಿದಾರೆ. ಜರ್ಮನಿಯವರ ಭಾಗಕ್ಕೆ ಉಳಿದಿರುವ ಈ ಕೊನೇ ಸ್ಥಾನವನ್ನು ಕಿತ್ತುಕೊಳ್ಳುವುದಕ್ಕೆ ಏರ್ಪಾಡುಗಳು ಬಹಳ ಚೆನ್ನಾಗಿ ನಡೆಯುತ್ತಿರುವವು. ಜರ್ಮನಿಯ ಪೂರ್ವ ಆಫ್ರಿಕವನ್ನು ಕಿತ್ತುಕೊಂಡುಬಿಟ್ಟರೆ ಜರ್ಮನಿಯಿಂದ ಹೊರಗಡೆ ಅವರಿಗೆ ಯಾವುದೊಂದು ಸ್ವಾಸ್ಥ್ಯವೂ ಇಲ್ಲದಂತಾದೀತು.

ಇತರ ವಿಷಯಗಳು.

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯು ಕೂಡಿದೆ. ಮೊದಲನೇ ದಿನ ದೊರೆಯವರು ಪಾರ್ಲಿಮೆಂಟನ್ನು ಪ್ರತ್ಯಕ್ಷವಾಗಿ ದಯಮಾಡಲು ಅನುಕೂಲಿಸಲಿಲ್ಲ; ಅವರು ಮೆಂಬರುಗಳಿಗೆ ಅಪ್ಪಣೆ ಕೊಡಿಸಿರುವ ಸಂದೇಶದಲ್ಲಿ ಮಿತ್ರಮಂಡಲಿಯವರಿಗೆ ಸ್ನೇಹವು ಮೊದಲಿಗಿಂತ ಬಹಳ ವಿಶೇಷವಾಗಿ ಹೆಚ್ಚಿರುತ್ತದೆಂದೂ, ಶತ್ರುವಿನ ಕ್ರೂರತನದ ದಾಂಧಲೆಯು ದೆಸೆಯಿಂದ ನಷ್ಟಪಟ್ಟಿರುವಂಥಾ ಜನಾಂಗಗಳ ಸ್ಥಿತಿಗತಿ ಆಸ್ತಿಪಾಸ್ತಿಗಳು ಮೊದಲಿದ್ದಂತೆ ಆಗುವ ತನಕ ಮತ್ತು ಶೌರ್ಯ ಪರಾಕ್ರಮಗಳೇ ಧರ್ಮವಾಗಿಟ್ಟುಕೊಂಡಿರುವ ಶತ್ರುವಿನ ಅಹಂಕಾರವನ್ನು ಮತ್ತೆ ತಲೆ ಎತ್ತದಂತೆ ಅಡಗಿಸಿಬಿಡುವ ತನಕ ಈ ಯುದ್ಧವನ್ನು ನಿಲ್ಲಿಸುವುದಿಲ್ಲವೆಂದೂ ತಿಳಿಸಿದಾರೆ. ಮತ್ತು ದೊರೆಯವರು ಈ ತಮ್ಮ ಉದ್ದೇಶಕಾರ್ಯವನ್ನು ಸಾರ್ಥಕವಾಗಿ ನೆರವೇರಿಸುವ ವಿಷಯದಲ್ಲಿ ಬ್ರಿಟಿಷ್ ಸಮುದ್ರ ಸೈನ್ಯ ಮತ್ತು ಭೂಸೈನ್ಯಗಳ ಮೇಲೆ ಸಂಪೂರ್ಣವಾದ ಭರವಸೆಯನ್ನು ಇಟ್ಟುಕೊಂಡಿರುವರು.

ಯುದ್ಧದ ಖರ್ಚುಗೋಸ್ಕರ ಮತ್ತೆ 42,00,00,000 ಪೌಂಡುಗಳನ್ನು ಸ್ಯಾಂಕ್ಷನ್ ಮಾಡಬೇಕೆಂದು ಬ್ರಿಟಿಷ್ ಪಾರ್ಲಿಮೆಂಟಿನ ಸಮ್ಮತಿಯನ್ನು ಕೇಳುವರು. ಆಗ್ಗೆ ಈ ಯುದ್ಧಕ್ಕೆಲ್ಲಾ ಒಟ್ಟು 2 8,21,00,000 ಪೌಂಡುಗಳನ್ನು ಬ್ರಿಟಿಷ್ ಪಾರ್ಲಿಮೆಂಟನವರು ಸ್ಯಾಂಕ್ಷನ್ ಮಾಡಿದಂತಾಗುವುದು. ಈಗ ಗ್ರೇಟ್ ಬ್ರಿಟನ್ ರಾಜ್ಯದವರು ದಿನ ಒಂದಕ್ಕೆ 50,00,000 ಪೌಂಡಿನಂತೆ ಯುದ್ಧದ ಖರ್ಚುಮಾಡುತ್ತಲಿದಾರೆ. ರಾಜಾದಾಯವೂ ಕೂಡ ಮೊದಲ ಅಂದಾಜು ಪಟ್ಟದ್ದಕ್ಕಿಂತಲೂ ಎಷ್ಟೋ ಹೆಚ್ಚಾಗಿ ಹುಟ್ಟುವಳಿ ಆಗುತ್ತಲಿದೆ. ಈ ಸಾಲಿಗೆ 30,50,00,000 ಪೌಂಡು ಉತ್ಪತ್ತಿಯಾದೀತೆಂದು ಅಂದಾಜು ಮಾಡಲ್ಪಟ್ಟಿತ್ತು. ಈಗ ನೋಡಿದರೆ 33,70,00,000 ಪೌಂಡು ಉತ್ಪತ್ತಿಯಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಯುದ್ಧದ ನಿಮಿತ್ತ ಯೂರೋಪ್ಪಿನ ಎಲ್ಲಾ ರಾಜ್ಯಗಳಲ್ಲೂ ಆಹಾರ ಪದಾರ್ಥಗಳ ಧಾರಣೆಗಳು ಬಹಳವಾಗಿ ಹೆಚ್ಚಿರುತ್ತವೆ. ಗ್ರೇಟ್ ಬ್ರಿಟನ್‌ನಲ್ಲಿ ಶೇಕಡಾ 47 ರಷ್ಟು, ಜರ್ಮನಿಯಲ್ಲಿ 83 ರಷ್ಟು; ಆಸ್ಟ್ರಿಯಾದಲ್ಲಿ 112 ರಷ್ಟು ಧಾರಣೆಗಳು ಹೆಚ್ಚಿರುವವು. ಜರ್ಮನಿ ನಾಣ್ಯದ ಬೆಲೆಯಾದರೋ ದಿನೇ ದಿನೇ ಬಹಳ ಕಡಮೆಯಾಗುತ್ತಲಿದೆ.

ಮೆಡಿಟರ್ರೇನಿಯನ್ ಕಡಲಿನಲ್ಲಿ ಫ್ರೆಂಚರ ಒಂದು ಯುದ್ಧದ ಹಡಗು ಮುಳುಗಿ ಹೋಯಿತು. ಒಬ್ಬ ಮಾತ್ರ ಬದುಕಿಬಂದನು. ದೋಣಿಗಳನ್ನು ಇಳಿಸುವುದಕ್ಕೂ ಅವಕಾಶವಾಗದಂತೆ ಬಹಳ ಬೇಗನೆ ಆ ಹಡಗು ಮುಳುಗಿಹೋಯಿತು. ಆಡ್ರಿಯಾಟಿಕ್ ಕಡಲಿನಲ್ಲಿ ಫ್ರೆಂಚರ ಯುದ್ಧದ ಹಡಗುಗಳು ಶತ್ರುವಿನ ಎರಡು ಅಥವಾ ಮೂರು ಸಬ್‌ಮರೀನುಗಳನ್ನು ಮುಳುಗಿಸಿರುವವು.

ಜರ್ಮನಿಯವರು ಡಚ್ಚರ ಒಂದು ಹಡಗನ್ನು ಮುಳುಗಿಸಿದ್ದು ತಪ್ಪಾಯಿತೆಂದೂ, ಆ ತಮ್ಮ ಸಬ್‌ಮರೀನಿನ ಅಧಿಕಾರಿಯನ್ನು ಶಿಕ್ಷೆಮಾಡುತ್ತೇವೆಂದೂ, ಪರಿಹಾರ ದ್ರವ್ಯವನ್ನು ಕೊಡುತ್ತೇವೆಂದೂ ಒಪ್ಪಿಕೊಂಡು ಡಚ್ಚರ ಕ್ಷಮಾಪಣೆಯನ್ನು ಬೇಡಿಕೊಂಡರು.

ಮಡಗಾಸ್ಕರ್ ಎಂಬ ದ್ವೀಪದಲ್ಲಿ (ಇದು ಫ್ರೆಂಚರಿಗೆ ಸೇರಿದ್ದು; ಆಫ್ರಿಕಾ ಖಂಡದ ಪೂರ್ವದಿಕ್ಕಿನಲ್ಲಿದೆ.) ಜರ್ಮನಿಯವರು ಗಲಭೆಯನ್ನುಂಟುಮಾಡಬೇಕೆಂದು ಪ್ರಯತ್ನಪಡುತ್ತಿದಾರೆ. ಜರ್ಮನಿಯವರು ಪ್ರಜೆಗಳಿಗೆ ದುರ್ಬೋಧನೆ ಮಾಡಿ ಅವರನ್ನು ಫ್ರೆಂಚರ ಮೇಲೆ ತಿರುಗಿಬೀಳುವಂತೆ ಧಿತೂರಿ ಮಾಡಿದರು. ಆದರೆ ಅದೆಲ್ಲಾ ಹೊರಪಟ್ಟಿದೆ.

ಕಳೆದ ಭಾನುವಾರ ಜರ್ಮನಿಯ ವಿಮಾನಯಂತ್ರಗಳು ಇಂಗ್ಲೆಂಡಿನ ಮೇಲೆ ಹಾರಿ ಬಂದು ನಾರ್‌ಫೋಕ್ ಮತ್ತು ಕೆಂಟ್ ಎಂಬ ತಾಲೂಕುಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದವು. ಅಷ್ಟರಲ್ಲೇ ಬ್ರಿಟಿಷ್ ವಿಮಾನಗಳು ಹೋಗಿ ಅವನ್ನು ಓಡಿಸಿಬಿಟ್ಟವು. ನಾರ್‌ಫೋಕ್‌ನಲ್ಲಿ ಕೆಲವು ಕಟ್ಟಡಗಳು ಕೆಟ್ಟುಹೋದವು; ಆದರೆ ಯಾರಿಗೂ ಅಪಾಯ ಸಂಭವಿಸಲಿಲ್ಲ. ಕೆಂಟಿನಲ್ಲಿ ಕೆಲವು ಮನೆಗಳು ಕೆಟ್ಟುಹೋದವು. ಇಬ್ಬರು ಗಂಡಸರೂ ಒಬ್ಬ ಹುಡುಗನೂ ಮೃತಪಟ್ಟರು; ಒಬ್ಬ ಗಂಡಸಿಗೆ ಗಾಯವಾಯಿತು.

ಒಳದೇಶದ ವೃತ್ತಾಂತಗಳು.

ಶೃಂಗೇರಿಯ ವೇ॥ ಪಂಡಿತ ವಿರೂಪಾಕ್ಷ ಶಾಸ್ತ್ರಿಯವರಿಗೆ ಕಾಶೀ ವಿದ್ವತ್ ಮಂಡಲಿಯವರು “ವಿದ್ಯಾ ವಾಚಸ್ಪತಿ” ಎಂಬ ಬಿರುದನ್ನು ಕೊಟ್ಟಿದಾರೆ.

ನಮ್ಮ ಬ್ರಿಟಿಷ್ ರೆಸಿಡೆಂಟರಿಗೆ ಅ॥ ರಾಗಿರುವ ಮಿ॥ ವಾರ್‌ಬರ್ಟನ್ ರವರು ಬೇರೇ ಕೆಲಸದ ಮೇಲೆ ಹೋಗೋಣವರಿಂದ ಮಿ॥ ಇ. ಬಿ. ಹಾಲ್ಫೀಲ್‌ರವರನ್ನು ಅವರ ಸ್ಥಾನಕ್ಕೆ ನೇಮಕ ಮಾಡಿರುತ್ತಾರೆ.

ಚನ್ನಗಿರಿಯಲ್ಲಿ ಕಳೆದ ಶುಕ್ರವಾರ ಡೆಪ್ಯುಟಿ ಕಮಿಷನರ್‌ರವರು ಅಧ್ಯಕ್ಷತೆಯನ್ನು ವಹಿಸಿ ತಾಲ್ಲೂಕ್ ಕಾನ್‌ಫರೆನ್ಸನ್ನೂ ಪ್ರದರ್ಶನವನ್ನೂ ಪ್ರಾರಂಭಿಸಿದರು. ಜಾತ್ರೆ ಉತ್ಸವಾದಿಗಳು ಚೆನ್ನಾಗಿ ನಡೆದವು.

ಶಿವಮೊಗ್ಗಾ ಟವನ್‌ನಲ್ಲಿರುವ ಮ॥ ಡಿ. ರಾಜಾರಾಯರ ಮನೆಯಲ್ಲಿ 2,000 ರೂಪಾಯಿನ ಮಾಲುಗಳು ಕಳುವಾದವೆಂದೂ, ಈ ಕಳುವಿಗೆ ಏಳು ಮಂದಿ ಪೋಲೀಸಿನವರೂ ಸೇರಿದ್ದರೆಂದೂ ಪ್ರಕಟವಾಗಿದೆ.

ಬೆಂಗಳೂರಿನಲ್ಲಿ ದಿವಾನ್‌ರ ಬಳಿ ಕೆಲಸಮಾಡುವ ಡಾ॥ ಬಿ. ಸಂಜಪ್ಪನವರು ಅಲ್ಲಿನ ಸ್ತ್ರೀಮಂಡಲಿಯವರಿಗೆ ಪ್ರಥಮ ಚಿಕಿತ್ಸೆಯ ವಿಷಯವಾಗಿ ಪ್ರತಿ ಭಾನುವಾರವೂ ಕನ್ನಡದಲ್ಲಿ ಉಪನ್ಯಾಸ ಮಾಡಲಾರಂಭಿಸಿದಾರೆ.

ಹೊಸಕೋಟೆಯಲ್ಲಿರುವ ಡಿ॥ ಬೋರ್ಡ್ ಮೆಂಬರು ಮ॥ ಸೀನಪ್ಪನವರು ಪ್ರಜೆಗಳಿಗೆ ಪ್ರೋತ್ಸಾಹ ಪಡಿಸಿ ಮೈಸೂರು ಇಂಪೀರಿಯಲ್ ಎಕ್ಸ್‌ಪರ್ಸ್ ರಿಲೀಫ್ ಫಂಡಿಗೆ 103 ರೂಪಾಯಿ ಚಂದಾ ಕೂಡಿಸಿ ಖಜಾನೆಗೆ ಪಾವತಿಮಾಡಿದಾರೆಂದು ತಿಳಿಸಲು ಸಂತೋಷಪಡುತ್ತೇವೆ.

ಸಕಲೇಶಪುರದಲ್ಲಿ ಹತ್ತು ವರುಷಗಳಿಂದ ಡಾಕ್ಟರಾಗಿದ್ದು ಬೆಂಗಳೂರಿಗೆ ಹೆಲ್ತ್ ಆಫೀಸರಾಗಿ ವರ್ಗಪಟ್ಟಿರುವ ಮಿ॥ ಫರ್ನಾಂಡಿಸ್ ರವರಿಗೆ ಅಲ್ಲಿನ ದೊಡ್ಡಮನುಷ್ಯರೂ ಪ್ರಜೆಗಳೂ ಕಳೆದ ಗುರುವಾರ ಸೇರಿ ಔತಣವನ್ನು ಮಾಡಬೇಕೆಂದು ತೀರ್ಮಾನ ಮಾಡಿರುತ್ತಾರೆ.

ದಾವಣಗೆರೆಯಲ್ಲಿ ಬರುವ ಮಾರ್ಚ್ ತಿಂಗಳು ಮೊದಲನೆಯ ವಾರದಲ್ಲಿ ನಡೆಯುವ ತಾ॥ ಕಾನ್‌ಫರೆನ್ಸ್ ಕಾಲದಲ್ಲಿ ದಾವಣಗೆರೆ ತಾ॥ ಉಪಾಧ್ಯಾಯರ ಕಾನ್‌ಫರೆನ್ಸೂ, ವಿದ್ಯಾಪ್ರದರ್ಶನವೂ, ಉಪನ್ಯಾಸಗಳೂ ಗ॥ ಎ. ವಿ. ಸ್ಕೂಲ್ ಕಟ್ಟಡದಲ್ಲಿ ನಡೆಯುವಂತೆ ಏರ್ಪಾಡಾಗಿದೆ.

ಕಳೆದ ವಾರ ಅರಸೀಕೆರೆ-ದೇವನೂರ ರೈಲ್ವೆ ಲೈನಿನಲ್ಲಿ ಗ್ರಾಮಸ್ಥರಿಬ್ಬರ ಶವಗಳು ದೇಹ ಕತ್ತರಿಸಲ್ಪಟ್ಟು ಬಿದ್ದಿದ್ದವು. ರೈಲ್ ಗಾಡಿಯ ಕೆಳಗೆ ಅವರು ಸಿಕ್ಕಿ ಅಕಾಲಮರಣ ಹೊಂದಿದರೆಂದು ಊಹಿಸಲ್ಪಟ್ಟಿದೆ. ಇದರ ಪೂರ್ವೋತ್ತರವನ್ನು ಪೋಲೀಸಿನವರು ತನಿಖೆ ಮಾಡುತ್ತಲಿದಾರೆ.

ಕಳೆದ ಸೋಮವಾರ ದೊಡ್ಡಬಳ್ಳಾಪುರದಲ್ಲಿ ಡೆಪ್ಯುಟಿ ಕಮಿಷನರು ಅಗ್ರಾಸನವನ್ನು ವಹಿಸಿ ತಾಲ್ಲೂಕ್ ಕಾನ್‌ಫರೆನ್ಸನ್ನೂ, ಪ್ರದರ್ಶನಶಾಲೆಯನ್ನೂ ಪ್ರಾರಂಭಿಸಿ ಮೂರು ದಿನ ನಡೆಸಿದರು. ಆ ದಿನದ ದರ್ಬಾರಿನಲ್ಲಿ ಆ ಪ್ರಾಂತ್ಯ ಧರ್ಮಕಾರ್ಯಗಳನ್ನು ಮಾಡಿರುವ 18 ಮಂದಿ ದೊಡ್ಡಮನುಷ್ಯರಿಗೆ ಬಿಲ್ಲೆಗಳನ್ನು ಕೊಟ್ಟು ಅವರ ಔದಾರ್ಯವನ್ನು ಕೊಂಡಾಡಿದರು.

ಸಿವಿಲ್ ಕೋರ್ಟುಗಳಲ್ಲಿ ಜಡ್ಜಿಗಳು ಆಯಾ ಕೋರ್ಟಿನ ತಾಬೇದಾರಿ ನೌಕರರನ್ನು ನೇಮಿಸಿಕೊಳ್ಳಬಹುದೆಂದೂ, ಅವರಿಗೆ ಜುಲ್ಮಾನೆ ಹಾಕಬಹುದೆಂದೂ, ಸಸ್ಪೆಂಡ್ ಅಥವಾ ಕೆಲಸದಿಂದ ವಜಾ ಮಾಡಬಹುದೆಂದೂ ಸರ್ಕಾರದವರು ರೂಲಸು ಮಾಡಿ ಅಧಿಕಾರವನ್ನು ಕೊಟ್ಟಿದಾರೆ. ಕೋರ್ಟಿನ ಜಡ್ಜಿಗಳು ಅಕ್ರಮಗಳನ್ನು ದರ್ಪವಿಟ್ಟು ತಿದ್ದುವುದಕ್ಕೆ ತುಂಬಾ ಸಹಾಯವಾಯಿತು.

ಮದ್ದಗಿರಿ ಮುನ್ಸಿಫರಾಗಿದ್ದ ಮ॥ ಎಂ. ಎಲ್. ಶ್ರೀಕಂಠೇಶಗೌಡರ ಮೇಲೆ ಮೂರು ಅಪರಾಧಗಳು ಹೊರಿಸಲ್ಪಟ್ಟು, ಕಳೆದ ಸೋಮವಾರ ಚೀಫ್ ಕೋರ್ಟಿನಲ್ಲಿ ಅಂತರಂಗವಾಗಿ ವಿಚಾರಣೆಗೆ ಪ್ರಾರಂಭವಾಯಿತು. ಗವರ್ನ್‌ಮೆಂಟ್ ಅಡ್ವೊಕೇಟ್ ಮ॥ ದೊರಸಾಮಿ ಅಯ್ಯರವರು ಸರ್ಕಾರಿ ತರಫಿನಲ್ಲೂ, ಮ॥ ಎಲ್. ಶ್ರೀನಿವಾಸಯ್ಯಂಗಾರ್ರು ಅಪರಾಧಿಯ ತರಫಿನಲ್ಲೂ ಮೊಕದ್ದಮೆ ನಡಿಸುತ್ತಲಿದಾರೆ.

ರಾಜಧಾನಿಯ ಕೆಲವು ಅಡ್ವೊಕೇಟರು ಸೇರಿ ಒಂದು ಸಂಗೀತದ ಕ್ಲಬ್ಬನ್ನು ಮಾಡಿಕೊಂಡು ಆ ವಿದ್ಯೆಯನ್ನು ಕಲಿಯುತ್ತಿರುವುದು ಸಂತೋಷಕರವಾಗಿದೆ. ಅವರು ಕಳೆದ ವಾರ ಕ್ಲಬ್ಬಿನ ವಾರ್ಷಿಕೋತ್ಸವವನ್ನು ಅಟ್ಟಹಾಸವಾಗಿ ನಡಿಸಿ ಬಹು ಜನ ದೊಡ್ಡ ಮನುಷ್ಯರನ್ನು ಕರಸಿ ಸಂತೋಷಪಡಿಸಿದರು. ವೈಣಿಕ ಶಿಖಾಮಣಿ ಶೇಷಣ್ಣನವರ ದಿವ್ಯವಾದ ವೀಣಾ ಗಾನವು ನಡೆಯಿತು. ಮ॥ ಎಂ. ವೆಂಕಟಕೃಷ್ಣಯ್ಯನವರು ಕ್ಲಬ್ಬಿಗೆ ಶ್ರೇಯಸ್ಸನ್ನು ಕೋರಿ ಭಾಷಣ ಮಾಡಿದರು. ಕ್ಲಬ್ಬಿಗೆ ಅಡ್ವೊಕೇಟರುಗಳಾದ ಮ॥ ಎಂ. ಡಿ. ಶ್ರೀನಿವಾಸಯ್ಯಂಗಾರ್ರೂ, ಮ॥ ಎಂ. ವಿ. ವೆಂಕಟರಾಯರೂ ಸೆಕ್ರಿಟರಿಗಳಾಗಿದ್ದು, ಅದನ್ನು ಅಭಿವೃದ್ಧಿಗೆ ತರುವುದರಲ್ಲಿ ಉತ್ಸಾಹಶಾಲಿಗಳಾಗಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗಳಲ್ಲಿ ಕೇಳಗಡೆ ಹೊಂದಿರುವ ಮ॥ ಎಂ. ಶೇಷಾದ್ರಿಯವರನ್ನೂ, ಮ॥ ಪಿ. ಎಚ್. ಕೃಷ್ಣರಾಯರನ್ನೂ, ಮ॥ ಎನ್. ಸುಂದರರಾಜಯ್ಯಂಗಾರ್ರನ್ನೂ ಎ. ತರಗತಿಯ ಪ್ರೊ॥ ಅ॥ ಕಮಿಷನರುಗಳಾಗಿ ನೇಮಿಸಿದೆ.

ಕೆಳಗೆ ಹೇಳುವ ಮೂರು ಮಂದಿ ದೊಡ್ಡ ಮನುಷ್ಯರನ್ನು ಬಿ. ತರಗತಿಯ ಪ್ರೊ॥ ಅ॥ ಕಮಿಷನರುಗಳಾಗಿ ನೇಮಿಸಲಾಗಿದೆ:—ಅಮಲ್ದಾರರಾಗಿದ್ದು ಈಗ ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿನ್‌ಟೆಂಡೆಂಟರಾಗಿರುವ ಮಿ॥ ಬಿ. ಅಬ್ದುಲ್ ಜಾಪರ್‌ಯವರು, ಅಮಲ್ದಾರ್ ಮ॥ ಟಿ. ಪಿ. ಎ. ಅಯ್ಯರ್‌ರವರು, ಮೈಸೂರು ಅಡ್ವೊಕೇಟ್ ಮ॥ ಎಂ. ಚನ್ನರಾಜೆ ಅರಸಿನವರು.

ಗವರ್ನ್‌ಮೆಂಟ್ ಜನರಲ್ ಸೆಕ್ರೆಟರಿ ಮ॥ ಡಿ. ಎಂ. ನರಸಿಂಗರಾಯರಿಗೆ ಫೆಬ್ರವರಿ ತಾ. 17 ರಿಂದ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಮ॥ ವಿ. ಆರ್. ತ್ಯಾಗರಾಜ ಅಯ್ಯರವರು ಅವರ ಕೆಲಸದ ಭಾರವನ್ನು ವಹಿಸತಕ್ಕದ್ದು.

ಮುಂದೆ ಹೇಳುವ ಮುನ್ಸಿಫರುಗಳ ಬತ್ತಿಗಳು ಹುಕುಂಪಡಿಸಲ್ಪಟ್ಟಿವೆ:— 1 ನೇ ಕ್ಲಾಸಿಗೆ ಮ॥ ಟಿ. ಕೃಷ್ಣಯ್ಯಂಗಾರ್ರು; 2 ನೇ ಕ್ಲಾಸಿಗೆ ಮ॥ ಗಳಾದ ಡಿ. ಕೆ. ರಾಮರಾಯರು, ಜಿ. ಶ್ರೀನಿವಾಸ ಅಯ್ಯರವರು, ಟಿ. ವೆಂಕೋಬರಾಯರು; 3 ನೇ ಕ್ಲಾಸಿಗೆ ಮ॥ ಗಳಾದ ಜಿ. ಸತ್ಯಾಚಾರ್ಯರು, ಎಸ್. ವೆಂಕಟಕೃಷ್ಣಯ್ಯನವರು, ಪಿ. ಮಹಾದೇವಯ್ಯನವರು.

ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ॥ ಕೆ. ಆರ್. ಶ್ರೀನಿವಾಸಯ್ಯಂಗಾರ್ರಿಗೆ ಫೆಬ್ರವರಿ ತಾ. 21 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಆರು ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಈಗ ಕಡೂರು ಡೆಪ್ಯುಟಿ ಕಮಿಷನರಾಗಿ ಬದಲಿ ನೋಡುತ್ತಿರುವ ಸೀನಿಯರ್ ಅ॥ ಕಮಿಷನರ್ ಮ॥ ನಗರ ಸುಬ್ಬರಾಯರು ತುಮಕೂರು ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ವಿದ್ಯುಚ್ಛಕ್ತಿ ಇಲಾಖೆಯ ಚೀಫ್ ಇಂಜನಿಯರ ಅ॥ ರಾದ ಮ॥ ಜಿ. ಆರ್. ನರಸಿಂಹಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಹಾಸನದ ಡಿವಿಜನ್ ಅ॥ ಇಂಜನಿಯರ್ ಮ॥ ಸಿ. ವಿ. ಕಾಶೀಪತಿಶಾಸ್ತ್ರಿಯವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೊಂದು ಪಕ್ಷ ಜಾಸ್ತಿ ಮಾಡಿದೆ.

ಮೈಸೂರು ಡಿವಿಜನ್ ಅ॥ ಇಂಜನಿಯರ್ ಮ॥ ಬಿ. ಗರುಡಾಚಾರ್ಯರಿಗೆ ಮೂರು ತಿಂಗಳ ಪ್ರಿವಿಲೇಜ್ ರಜವನ್ನೂ, ಒಂದು ವರುಷ ಒಂಭತ್ತು ತಿಂಗಳ ಬೇರೆ ರಜವನ್ನೂ ಕೊಟ್ಟಿದೆ.

ದಾವಣಗೆರೆ ತಾಲ್ಲೂಕು ಮಾಯಕೊಂಡ ಗ್ರಾಮದಲ್ಲಿ ಸರ್ಕಾರದವರು ಮೇ ತಾ. 1 ರಿಂದ ಒಂದು ಗ್ರಾಮ ಕೋರ್ಟನ್ನು ಏರ್ಪಾಡುಮಾಡುತ್ತಾರೆ.

ಶಿವಮೊಗ್ಗಾ ಫಸ್ಟ್ ಗ್ರೇಡ್ ಪ್ಲೀಡರ್ ಮ॥ ಬಿ. ಭೀಮರಾಯರನ್ನು ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿ ಅವರಿಗೆ 2 ನೇ ಕ್ಲಾಸ್ ಅಧಿಕಾರ ವಹಿಸಲಾಗಿದೆ.

ಮೈಸೂರು ನ್ಯಾಯವಿಧಾಯಕ ಸಭೆಗೆ ಡಿಸ್ಟ್ರಿಕ್ಟ್‌ಗಳಿಂದ ಮೆಂಬರಾಗಲು ಮುಂದೆ ಹೇಳುವವರು ಚುನಾವಣೆಗೆ ನಿಂತಿದಾರೆ.—(1) ಬೆಂಗಳೂರು, ಕೋಲಾರ್ ಡಿಸ್ಟ್ರಿಕ್ಟ್‌ಗಳಿಗೆ—ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲರು ಮತ್ತು ಆನರರಿ ಮ್ಯಾಜಿಸ್ಟ್ರೇಟರಾದ ಮ॥ ಬಿ. ಕೆ. ಗರುಡಾಚಾರ್ರು, ಕೋಲಾರದ ಮ್ಯುನಿಸಿಪಲ್ ಕೌನ್ಸಿಲರಾದ ಮ॥ ಬಿ. ಗಿರಿರಾಜರಾಯರು; (2) ಮೈಸೂರು, ಹಾಸನ ಡಿಸ್ಟ್ರಿಕ್ಟ್‌ಗಳಿಗೆ—ಮೈಸೂರು ಮ್ಯುನಿಸಿಪಲ್ ಕೌನ್ಸಿಲರಾದ ಮ॥ ಎಂ. ವೆಂಕಟಕೃಷ್ಣಯ್ಯನವರು, ಹಾಸನದ ಅಡ್ವೊಕೇಟ್ ಮ॥ ಎಸ್. ವೆಂಕಟೇಶಯ್ಯನವರು; (3) ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್‌ಗಳಿಗೆ— ಕಡಬದ ಮ॥ ಕೆ. ರಾಮಾನುಜಯ್ಯಂಗಾರ್ರು; ಚಿತ್ರದುರ್ಗದ ಅಡ್ವೊಕೇಟ್ ಮ॥ ಸಿ. ಚನ್ನಕೇಶವಯ್ಯನವರು, ತುಮಕೂರು ಅಡ್ವೊಕೇಟ್ ಮ॥ ಎಚ್. ವೆಂಕಟರಾಮಯ್ಯನವರು, ಚಿತ್ರದುರ್ಗದ ಅಡ್ವೊಕೇಟ್ ಮ॥ ಬಿ. ವೆಂಕಟರಾಮಣ್ಣನವರು; (4) ಶಿವಮೊಗ್ಗೆ ಮತ್ತು ಕಡೂರು ಡಿಸ್ಟ್ರಿಕ್ಟ್‌ಗಳಿಗೆ—ಶಿವಮೊಗ್ಗಾ ಅಡ್ವೊಕೇಟರುಗಳಾದ ಮ॥ ಗಳಾದ ಬಿ. ಸೀತಾರಾಮಯ್ಯನವರು, ಎಸ್. ಆರ್. ಬಾಲಕೃಷ್ಣರಾಯರು, ಸಿ. ಸುಬ್ಬರಾಯರು, ಟಿ. ಜಿ. ನಾರಾಯಣಯ್ಯಂಗಾರ್ರು.

ಬಲಾತ್ಕರಿಸಿ ದೇವೀತಿಡುಬು ಹಾಕುವ ಕಾನೂನನ್ನು ಮಾರ್ಚ್ ತಾ. 1 ರಿಂದ ಗುಂಡ್ಲುಪೇಟೆ ಮತ್ತು ಕಾನಕಾನಹಳ್ಳಿ ಮ್ಯುನಿಸಿಪಲ್ ಸರಹದ್ದುಗಳಲ್ಲಿ ಒಂದು ವರುಷ ಕಾಲವೂ, ಹಿರಿಯೂರು ಮ್ಯುನಿಸಿಪಲ್ ಸರಹದ್ದಿನಲ್ಲಿ ಎರಡು ವರುಷ ಕಾಲವೂ, ಬೌರಿಂಗ್‌ಪೇಟೆ ಮ್ಯುನಿಸಿಪಲ್ ಸರಹದ್ದಿನಲ್ಲಿ ಐದು ವರುಷ ಕಾಲವೂ ಜಾರಿಗೆ ತರಲ್ಪಡಲಾಗುತ್ತ.

ಹಲಸುಳಿಗೆ ಶ್ಯಾನುಭೋಗ್ ಮ॥ ಎಚ್. ತಿಮ್ಮಪ್ಪಯ್ಯನವರನ್ನು ಸಕಲೇಶಪುರದ ಮ್ಯುನಿಸಿಪಲ್ ಬೋರ್ಡಿಗೆ ಮೆಂಬರಾಗಿ ನೇಮಕಮಾಡಿದೆ.

ಬೆಂಗಳೂರು ಚಾಮರಾಜಪೇಟೆ ಡಿವಿಜನ್‌ಗೆ ಮ॥ ಎಸ್. ವೆಂಕಟರಾಮಯ್ಯರವರನ್ನು ಮ್ಯುನಿಸಿಪಲ್ ಕಾನ್ಸಿಲರಾಗಿ ಚುನಾವಣೆ ಮಾಡಿದಾರೆ.

ಸನ್ಮಾರ್ಗಪ್ರವರ್ತನೆ.

ತಾರೀಖು 13 ರಲ್ಲಿ ಶಿವಮೊಗ್ಗ ತಾಲ್ಲೂಕು ಮಾರಶೆಟ್ಟಿಹಳ್ಳಿ ಬಾಯ್ಸ್ ಸ್ಕೂಲ್ ಮತ್ತು ಶ್ರೀವೀರಭದ್ರ ದೇವಸ್ಥಾನವು ಸಹ ತಳಿರುತೋರಣಗಳಿಂದಲೂ, ಕದಳೀ ಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದಾಗಿಯೂ, ಗ್ರಾಮ ಮುಖಂಡರೇ ಮೊದಲಾದ ಜನಗಳಿಂದ ನಿಬಿಡೀಕೃತವಾಗಿ ಕಟ್ಟಡವು ಕಿಕ್ಕಿರಿಯುವಂತೆ ಸಭೆಯು ಸೇರಿದ್ದಿತು. ಸ್ಕೂಲ್ ಮಾಸ್ಟರ್ ಮ|| ಕೆ. ಶ್ರೀನಿವಾಸಾಚಾರ್ಯರ ಕೋರಿಕೆ ಯಂತೆ ಹೊಳೇಹೊನ್ನೂರು ಗ್ರಾಮ ಮರ್ಚೆಂಟ್ ಮ|| ನಾಡಿಗ ಶಂಕರಪ್ಪ ನವರು ಅಗ್ರಾಸನವನ್ನು ವಹಿಸಿದರು. ಸಭಾ ಕಾರ್ಯಗಳು ದೇವರ ಪ್ರಾರ್ಥನೆ ಯಿಂದ ಪ್ರಾರಂಭಿಸಲ್ಪಟ್ಟವು. ಮಾರಶೆಟ್ಟಿಹಳ್ಳಿ ಸ್ಕೂಲ್ ಮಾಸ್ಟರ್ ಮ|| ಕೆ. ಶ್ರೀನಿವಾಸಾಚಾರ್ಯರು ದ್ರವ್ಯಾರ್ಜನೆ ಮತ್ತು ದ್ರವ್ಯವ್ಯಯದ ವಿಷಯವಾಗಿಯೂ, ಕೆಲವು ಜನಗಳು ಅನ್ಯಾಯವಾಗಿ ಮದ್ಯಪಾನವೇ ಮೊದಲಾದ ನಿಷಾದ್ರವ್ಯಗಳ ಸೇವನೆಗೋಸ್ಕರ ಖರ್ಚು ಮಾಡಿ ಕೇವಲ ಹೀನಸ್ಥಿತಿಗೆ ಬರುತ್ತಿರಾರೆ ಆದ್ದರಿಂದ ಅಂಥ ನಿಷಾ ದ್ರವ್ಯಗಳನ್ನು ಪಾನ ಮಾಡುವದರಿಂದ ಉಂಟಾಗುವ ಬಾಧಕಗಳನ್ನೂ ಉಪನ್ಯಾಸ ಮೂಲಕ ತಿಳಿಯಪಡಿಸಿ, ಅಂಥ ದುಷ್ಟವರ್ತನೆಗೆ ಅವಕಾಶ ವನ್ನು ಕೊಡಬಾರದು ಎಂಬ ವಿಷಯವಾಗಿಯೂ ಬಹು ಸ್ವಾರಸ್ಯವಾಗಿ ಉಪ ನ್ಯಾಸ ಮಾಡಿದರು. ಬಳಿಕ ಮ|| ನಾಡಿಗ ಶಂಕರಪ್ಪನವರು ಸರ್ಕಾರದವರು ಇಷ ಕ್ಕೋಸ್ಕರ ಅಲ್ಲಲ್ಲಿ ಸ್ಕೂಲುಗಳನ್ನು ಸ್ಥಾಪಿಸಿ ಜನಗಳು ವಿದ್ಯಾವಂತರಾಗಿ ಇಂಥ ದುರ್ನಡತೆಗಳನ್ನು ಬಿಟ್ಟು ಸನ್ಮಾರ್ಗಾವಲಂಬಿಗಳಾಗಲಿ ಎಂದು ಅನೇಕ ದ್ರವ್ಯ ವನ್ನು ಪ್ರಜೆಗಳಿಗೋಸ್ಕರ ಖರ್ಚು ಮಾಡುತ್ತಿರುವರು ಮತ್ತು ನೈಟ್ ಸ್ಕೂಲು ಗಳನ್ನು ಸಹ ಇಟ್ಟು ಉಪಕಾರ ಮಾಡುತ್ತಲಿರುವರು ಎಂಬದಾಗಿ ತಿಳಿಯಪಡಿಸಿ ಗ್ರಾಮಾಭಿವೃದ್ಧಿ, ಆರೋಗ್ಯಾಭಿವೃದ್ಧಿ ಮೊದಲಾದ ವಿಷಯಗಳನ್ನು ಚೆನ್ನಾಗಿ ಜನಗಳಿಗೆ ತಿಳಿಯಪಡಿಸಿದ್ದಲ್ಲದೆ ಬಾಲಕರನ್ನು ಕ್ರಮವಾಗಿ ಸ್ಕೂಲಿಗೆ ಕಳುಹಿಸು ವಂತೆ ಪ್ರೋತ್ಸಾಹಿಸಿದರು. ಕಡೆಯಲ್ಲಿ ಶ್ರೀಮನ್ಮಹಾರಾಜರವರ ಮತ್ತು ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನೆ ನಡೆಯಿಸಿ ಸಭಿಕರಿಗೆ ಗಂಧ ಪುಷ್ಪ ತಾಂಬೂ ಲಗಳನ್ನು ಹಂಚಿದ ಮೇಲೆ ಸಭೆಯು ಬರಖಾಸ್ತು ಆಯಿತು. ಪ್ರೇಕ್ಷಕ.

ಒಬ್ಬ ಹೆಡ್ ಮಾಸ್ಟರಿಗೆ ನಡೆದ ಸನ್ಮಾನ.

ಕೃಷ್ಣರಾಜಪೇಟೆ ಎ. ವಿ. ಸ್ಕೂಲ್ ಹೆಡ್ ಮಾಸ್ಟರಾಗಿದ್ದ ಮ|| ವೆಂಗಟ ರಾಯರಿಗೆ ಮೈಸೂರು ಬಾಡಿಗಾರ್ಡ್ಸ್ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಕೆಲ ಸಕ್ಕೆ ವರ್ಗವಾಯಿತು. ಇವರು ಗುಣಶಾಲಿಗಳೂ, ಉತ್ತಮ ಬೋಧಕರೂ ಆಗಿ ದ್ದುದರಿಂದ ಇವರ ಅಗಲಿಕೆಯು ಇಲ್ಲಿನ ಪುರಜನರ ಮತ್ತು ಸರ್ಕಾರಿ ನೌಕರರ ಅಲ್ಲದೆ ಸಹೋಪಾಧ್ಯಾಯರ, ಮುಖ್ಯವಾಗಿ ವಿದ್ಯಾರ್ಥಿಗಳ ಮನಸ್ಸಿಗೆ ಬಹು ವ್ಯಾಕುಲವನ್ನು ಉಂಟುಮಾಡಿತು. ಅವರನ್ನು ಗೌರವಿಸುವ ಉದ್ದೇಶಕ್ಕಾಗಿ ಈ ಮಾಹೆ 14 ತಾ. ಸೋಮವಾರ ಸಾಯಂಕಾಲ 5 ಘಂಟೆಯಲ್ಲಿ ಎ. ವಿ. ಸ್ಕೂಲ್ ಹಾಲಿನಲ್ಲಿ ಸಭೆ ನೆರೆಯಿತು. ಸಭೆಗೆ ಪುರಪ್ರಮುಖರೂ, ಸಬ್ ರೆಜಿಸ್ಟ್ರಾರ್ರು ಮೊದಲಾದ ಸರ್ಕಾರಿ ನೌಕರರೂ, ಡಿಸ್ಟ್ರಿಕ್ಟ್ ಎಕಿಸಾಮಿನರ್ ಬೆಕ್ಲರರ್ ಮ|| ಅಪ್ಪಮೋಯ ಅಯ್ಯಂಗಾರ್ರು ದಯಮಾಡಿಸಿದ್ದರು. ಸಭಿಕರ ಕೋರಿ ಕೆಯಂತೆ ಪ್ರಜಾಪ್ರತಿನಿಧಿಸಭೆಯ ಸಭ್ಯರೂ, ಈ ಪೌರ ಪ್ರಮುಖರೂ, ಬಹು ಗಣ್ಯರೂ ಆದ ಮ|| ಎಚ್. ಕೃಷ್ಣಶಾಸ್ತ್ರಿಗಳು ಅಗ್ರಾಸನವನ್ನು ಅಲಂಕರಿಸಿದರು ಆಫೀಸಿಯಲ್ ಸಂಸ್ಕೃತ ಪಾಠಶಾಲಾಧ್ಯಕ್ಷರು ವೇ|| ಶ್ರೀನಿವಾಸ ರಾಘವಾಚಾರ್ರು ಮ|| ವೆಂಗಟರಾಯರ ಗುಣಕಥನವನ್ನೂ, ಮೇಲು ಕೋಟೆಯಲ್ಲಿ ಉಪಾಧ್ಯಾಯ ರಾಗಿದ್ದು ತಮ್ಮ ಗುಣದಿಂದ ಅನೇಕರ ಗೌರವಕ್ಕೆ ಪಾತ್ರರಾಗಿದ್ದ ಮತ್ತು ಈಗ ಹೆಡ್ ಮಾಸ್ಟರಾಗಿ ಇಲ್ಲಿಗೆ ಬಂದಿರುವ ಮ|| ಬೆಳ್ಳಾವೆ ನರಹರಿಶಾಸ್ತ್ರಿಗಳ ಗುಣಗ ಳನ್ನೂ ಯಥಾವತ್ತಾಗಿ ವಿವರಿಸಿರುವ ಶ್ಲೋಕಗಳನ್ನು ಪಠಿಸಿದರು. ತಮಗೆ ಪರಿಚಿತ ರೂ, ಗುಣಶಾಲಿಗಳೂ, ಸಮರ್ಥರೂ ಆದ ಹೊಸ ಹೆಡ್ ಮಾಸ್ಟರ ಗುಣಾನುವಾದ ದಿಂದ ಸಭಿಕರಿಗೆ ವಿಯೋಗದುಃಖ ಕಡಮೆಯಾಗಿ ಆನಂದವೂ ಉಂಟಾಯಿತು. ಆ ಮೇಲೆ ಸ್ಕೂಲ್ ವಿದ್ಯಾರ್ಥಿಗಳು ಮ|| ವೆಂಗಟರಾಯರಿಗೆ ಅಡ್ರೆಸ್ಸನ್ನು ಓದಿ ಒಪ್ಪಿಸಿದರು. ಇದಕ್ಕೆ ಮ|| ವೆಂಕಟರಾಯರು ಕಾಲೋಚಿತವಾದ ಸದುತ್ತರವನ್ನು ಅಪ್ಪಣೆ ಕೊಡಿಸಿದರು. ಅನಂತರ ಎಕಿಸಾಮಿನರ್ ಲೆಕ್ಚರರ್ ಮ|| ಅಪ್ಪಮೋಯ ಅಯ್ಯಂಗಾರ್ರು ವಿದ್ಯಾರ್ಥಿಗಳಿಗೆ ಉಪಯುಕ್ತವೂ, ಕಾಲೋಚಿತವೂ, ನೀತಿಬೋಧಕವೂ ಆದ ಒಂದು ಉಪನ್ಯಾಸವನ್ನು ಎಲ್ಲರಿಗೂ ಹೃದಯಂಗಮವಾಗುವಂತೆ ನಡೆಯಿಸಿದರು. ಕೊನೆಗೆ ಅಗ್ರಾಸನಾಧಿಪತಿಗಳು ಕಾಲೋಚಿತ ಭಾಷಣ ಮಾಡಿದ ಮೇಲೆ ನಮ್ಮ ಸಾರ್ವಭೌಮರ, ನಮ್ಮ ಮಹಾರಾಜರವರ, ಮಗ್ಗದಪ್ಪ ಮ|| ವೆಂಕಟರಾಯರ ಶ್ರೇಯಃಪ್ರಾರ್ಥನೆಗಳು ಮಾಡಲ್ಪಟ್ಟವು ಸಭಿಕರಿಗೆ ಫಲಾಹಾರ ವನ್ನು ಮಾಡಿಸಿ ಗಂಧ ಪುಷ್ಪ ತಾಂಬೂಲಗಳನ್ನು ವಿನಿಯೋಗಿಸಿದರು ಈಗಿನ ಹೆಡ್ ಮಾಸ್ಟರು ತಮ್ಮ ಗುಣಗಳನ್ನೂ, ವಿದ್ಯಾ ಸಾಮರ್ಥ್ಯವನ್ನೂ ಪ್ರಕಾಶಪಡಿಸಿ ವಿದ್ಯಾರ್ಥಿಗಳನ್ನು ಸಜ್ಜನರನ್ನಾಗಿ ಮಾಡಿ ಜನರ ಪ್ರೀತಿಗೆ ಪಾತ್ರರಾಗುವರೆಂದು ನಾವುಗಳು ನಂಬಿರುವೆವು. ವಿದ್ಯಾಭಿವೃದ್ಧಿ ಬದ್ಧಾದರ

ಮೈಸೂರು ಟ್ರೈನಿಂಗ್ ಕಾಲೇಜು.

ರಾಜಧಾನಿಯ ಟ್ರೈನಿಂಗ್ ಕಾಲೇಜಿನಲ್ಲಿ ಶಿಕ್ಷಣಕ್ಕಾಗಿ ಸಂಸ್ಥಾನದ ಮಳೆಯಿಂದ ಬಂದಿರುವ ಕನ್ನಡ ಸ್ಕೂಲುಗಳ ಉಪಾಧ್ಯಾಯರುಗಳು ಪ್ರಿನ್ಸಿಪಲ್ ಮ|| ಸಿ. ಆರ್. ನಾರಾಯಣರಾಯರ ಪ್ರೋತ್ಸಾಹದಿಂದ ಒಂದು ಸಂಘ ವನ್ನು ಮಾಡಿಕೊಂಡು ತಮ್ಮ ಪುರೋಭಿವೃದ್ಧಿಗೆ ಸಹಕಾರಿಗಳಾದ ಸಾಧನಗಳನ್ನು ಒದಗಿಸಿಕೊಳ್ಳುತ್ತಿರುವರು ಈ ಸಂಘದ ವಾರ್ಷಿಕ ಕೂಟವು ಕಳೆದ ಸೋಮ ವಾರ ಸಾಯಂಕಾಲ ಟ್ರೈನಿಂಗ್ ಕಾಲೇಜ್ ಸಭಾ ಮಂದಿರದಲ್ಲಿ ನಡೆಯಿತು. ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್ ಮ|| ಎಂ. ಶ್ರೀನಿವಾಸರಾಯರು ಅಗ್ರಾಸನವನ್ನು ವಹಿಸಿದರು. ಇತರ ಸ್ಕೂಲು ಮತ್ತು ಕಾಲೇಜುಗಳ ಉಪಾಧ್ಯಾಯರುಗಳೂ, ಕೆಲವು ಸಭ್ಯ ಗೃಹಸ್ಥರೂ ಸಭೆಯನ್ನಲಂಕರಿಸಿದ್ದರು ದೇವ ಪ್ರಾರ್ಥನೆಯಿಂದ ಸಭಾಕಾರ್ಯಗಳು ಪ್ರಾರಂಭವಾದವು. 3-4 ಮಂದಿ ಉಪಾಧ್ಯಾಯರು ಕೆಲವು ಭಾರತ ಪದ್ಯಗಳನ್ನು ರಾಗವಾಗಿ ಓದಿದರು. ಮನೋಹರವಾದ ಸಂಗೀತವಾಯಿತು. ಸಂಘದ ವಾರ್ಷಿಕ ರಿಪೋರ್ಟು ಓದಲ್ಪಟ್ಟಿತು ಕಳೆದ ವರುಷ ಉಪಾಧ್ಯಾಯರುಗಳು ಹಲವು ಕೂಟಗಳನ್ನು ನಡಿಸಿ ಉಪನ್ಯಾಸ ಗಳನ್ನು ಭಾಷಣಗಳನ್ನು ನಡಿಸಿದರೆಂದೂ ಶಾಸ್ತ್ರೀಯ ವಿಚಾರಗಳನ್ನು ತಿಳಿಸುವ ಕನ್ನಡ ಪುಸ್ತಕಗಳು ಇಲ್ಲದೆ ಅವರ ಅಭಿವೃದ್ಧಿಗೆ ಕೊರತೆಯುಂಟಾಗಿದೆ ಎಂದೂ ಸರ್ಕಾರದವರೂ ಉಭಯ ಭಾಷಾ ಪಂಡಿತರುಗಳೂ ಈ ಕೊರತೆಯನ್ನು ನಿವಾರಣೆ ಮಾಡಿಕೊಡಬೇಕೆಂದು ಮುಖ್ಯವಾಗಿ ಆ ರಿಪೋರ್ಟಿನಲ್ಲಿ ಕಾಣಿಸಲ್ಪಟ್ಟಿತ್ತು. ಬಳಿಕ ಮ್ಯಾಜಿಕ್ ಲ್ಯಾಂಟರ್ನ್ ಪ್ರದರ್ಶನ ನಡೆದು ಕೆಲವು ದೇಶ ವಿದೇಶ ಕಟ್ಟಡಗಳ ರಚನೆಯೂ, ಸೂರ್ಯ ಭೂಮಿ ಚಂದ್ರ ಗ್ರಹಗಳೇ ಮೊದಲಾದವುಗಳ ಸ್ವಾಭಾವಿಕ ಗತಿಗಳೂ ಚಿತ್ರಗಳ ಮೂಲಕ ವಿವರಿಸಲ್ಪಟ್ಟವು. ಅಗ್ರಾಸನಾಧಿಪತಿಗಳು ತಮ್ಮ ಭಾಷಣದಲ್ಲಿ ಉಪಾಧ್ಯಾಯರ ಕರ್ತವ್ಯಗಳನ್ನೂ, ವಿದೇಶಗಳಲ್ಲಿನ ವಿದ್ಯಾಪ್ರಚಾರವನ್ನೂ, ಗ್ರಾಮ್ಯ ಶ್ರೇಯೋಭಿವೃದ್ಧಿಗೆ ಉಪಾಧ್ಯಾಯರು ಮಾಡಬೇಕಾಗಿರುವ ಹಲವು ಕಾರ್ಯಗಳನ್ನು ವಿವರಿಸಿ, ಕಾಲೇಜಿನ ಉಭಯ ಭಾಷಾ ಪಂಡಿತರುಗಳು ಒಂದು ಸಂಘವನ್ನು ಮಾಡಿಕೊಂಡು ಶಾಸ್ತ್ರವಿಷಯಕ ಗಳಾದ ಪುಸ್ತಕಗಳನ್ನು ಕನ್ನಡದಲ್ಲಿ ಬರೆದುಕೊಡಬೇಕೆಂದೂ, ಈ ಕಾರ್ಯಕ್ಕೆ ತಾವು 100 ರೂಪಾಯಿ ಒದಗಿಸಲು ಸಿದ್ಧರಾಗಿರುತ್ತೇವೆಂದೂ ಹೇಳಿದರು. ತರುವಾಯ ಮ|| ಅಂಬಳೆ ಅಣ್ಣಯ್ಯಪಂಡಿತರು ಉಪಾಧ್ಯಾಯರ ಕರ್ತವ್ಯಗಳನ್ನು ಕುರಿತು ಸ್ವಲ್ಪ ಹೊತ್ತು ಪ್ರಸಂಗ ಮಾಡಿ ಕೆಲವು ಹಿತೋಕ್ತಿಗಳನ್ನು ಹೇಳಿದರು. ಸಂಘದ ಪ್ರೆಸಿಡೆಂಟರಾದ ಮ|| ಎಚ್. ಸೀತಾರಾಮಯ್ಯನವರು ದೇಶಭಾಷಾಭಿವೃದ್ಧಿಯನ್ನು ಎಲ್ಲರೂ ಬಯಸುತ್ತಾರಾದರೂ ಅದಕ್ಕೆ ಸಹಕಾರಿಯೂ ಪ್ರೋತ್ಸಾಹವೂ ಆಗುವ ಕೂಟಗಳೂ ಕಾರ್ಯಗಳೂ ನಡೆದರೆ ಅನೇಕರು ಸೇರದೆ ಅಸಡ್ಡೆ ಮಾಡುತ್ತಾರೆಂದು ಹೇಳಿ, ಉಪಾಧ್ಯಾಯರ ಪರವಾಗಿ ಅಗ್ರಾಸನಾಧಿಪತಿಗಳಿಗೂ ಮ|| ಪಂಡಿತರಿಗೂ ವಂದನೆಗಳನ್ನು ಸಮರ್ಪಿಸಿದರು. ಮುಕ್ಕಳಿಂದ ಮಂಗಳವನ್ನು ಹೇಳಿಸಿ ಶ್ರೀಮನ್ಮಹಾರಾಜರವರಿಗೂ, ಚಕ್ರವರ್ತಿಯವರಿಗೂ ಶ್ರೇಯಸ್ಸನ್ನು ಕೋರಿ ಆ ದಿನದ ಉತ್ಸವ ಕೂಟವನ್ನು ಕೊನೆಗಾಣಿಸಿದರು.

ಮಲೆನಾಡು ರೈತನ ಸಾಲವನ್ನು ಬಗೆಹರಿಸುವ ರೀತಿ.

ಮಲೆನಾಡು ಗ್ರಾಮಗಳಲ್ಲಿ ರೈತರು ಸಾಲವಂದಿಗರಾಗಿ ತಾವು ಬೆಳೆದದ್ದೆಲ್ಲಾ ಸಾಹುಕಾರರ ಕೈವಶ ಮಾಡುತ್ತಿರುವುದು ಎಲ್ಲರ ಅನುಭವದಲ್ಲಿಯೂ ಇರತಕ್ಕ ವಿಷಯವಾಗಿದೆ. ಸಾಲ ಹಾಕದಿರುವ ರೈತನು ಮಲೆನಾಡಿನಲ್ಲಿ ಸಿಕ್ಕುವದು ದುರ್ಲಭ. ಈ ಪದ್ಧತಿಯನ್ನು ತಪ್ಪಿಸಬೇಕೇ ಇಲ್ಲವೇ ಎನ್ನುವ ವಿಷಯವು ಆಲೋಚಿಸತಕ್ಕದ್ದಾಗಿದೆ. ಪ್ರತಿವರ್ಷದಲ್ಲಿಯೂ ತಾನು ಬೆಳೆದ ಫಸಲೆಲ್ಲಾ ಸಾಲಗಾರನ ಮನೆಗೆ ಹೊತ್ತು ಆತ ಹೇಳಿದ ಹಾಗೆಲ್ಲಾ ಕೇಳಿಕೊಂಡು ಆತನ ಸಾಲದ ಸಾಧನಗಳಿಂದಲಾಗಲೀ ಬೆಳೆಯ ಸಾಮಗ್ರಿಗಳಿಂದಲಾಗಲೀ ಫಸಲನ್ನು ಆತನಿಗೆ ಕೊಟ್ಟು, ಕೇವಲ ನಿರ್ಗತಿಕನಾಗಿ ಮಲೆನಾಡಿನ ರೈತನಿರುವದು ಪ್ರತಿ ದಿವಸದಲ್ಲಿ ದೃಷ್ಟಾಂತವಾಗಿದೆ. ಈ ಸಾಲದ ನಿವಾರಣೆಯ ಬಗೆ ಹೇಗೆ ಎನ್ನುವದು ಆಲೋಚಿಸಬೇಕಲ್ಲವೇ? ಪರಸ್ಪರ ಸಹಾಯ ಸಂಘಗಳನ್ನು ಜಾಸ್ತಿ ಮಾಡಿದರೆ ರೈತನಿಗೆ ಬಹಳ ಪ್ರಯೋಜನವುಂಟು. ಎಲ್ಲಾ ಗ್ರಾಮಗಳಲ್ಲಿಯೂ ಈ ಸಂಘಗಳು ಏರ್ಪಡುವಲ್ಲಿ ಶೀಘ್ರದಲ್ಲಿಯೇ ರೈತರು ಋಣಮುಕ್ತರಾಗುತ್ತಾರೆನ್ನುವದಕ್ಕೆ ಸಂದೇಹವಿಲ್ಲ. ಆದರೆ ನಿರಕ್ಷರ ಕುಕ್ಷಿಗಳಾದ ನಮ್ಮ ರೈತರುಗಳು ವಿದ್ಯಾವಂತರಾಗುವವರೆಗೂ ಪ್ರತಿ ಗ್ರಾಮದಲ್ಲಿಯೂ ಒಂದು ಪರಸ್ಪರ ಸಹಾಯ ಸಂಘವಾಗಲಾರದು. ಪ್ರಾರಂಭಿಕ ಸಂಘದ ಉದ್ದೇಶಗಳನ್ನು ಮುಂದಿಟ್ಟು ಮಾಡಿಕೊಳ್ಳಬೇಕು. ತದನಂತರ ಸ್ಥಾಪಿತವಾದ ಸಂಘದ ಕಾರ್ಯವನ್ನು ನಿರ್ವಹಿಸಲು ಸಮರ್ಥರಾದ ಒಬ್ಬೊಬ್ಬರಾದರೂ ಪ್ರತಿಯೊಂದು ಗ್ರಾಮದಲ್ಲಿಯೂ ಇರಬೇಕು. ಹೀಗೆ ಸಂಘದ ಲೆಕ್ಕ ಪತ್ರಗಳನ್ನಿಡಲು ಸಮರ್ಥರಾದ ರೈತರುಳ್ಳ ಗ್ರಾಮದ ಸಂಖ್ಯೆಯು ಈಗ ಅತಿ ವಿರಳ. ಹೀಗೆಂದ ಮಾತ್ರಕ್ಕೆ ಪರಸ್ಪರ ಸಹಾಯ ಸಂಘಗಳ ಸ್ಥಾಪನೆಯನ್ನು ಕಡಮೆ ಮಾಡಬೇಕಾದ್ದಿಲ್ಲ, ಸಾಧ್ಯವಾದ ಕಡೆಗಳಲ್ಲೆಲ್ಲಾ ಇಂಥ ಸಂಘಗಳನ್ನು ಏರ್ಪಡಿಸಿಯೇ ತೀರಬೇಕು. ತಮ್ಮ ತಮ್ಮ ಆದಾಯಗಳನ್ನು ತಾವು ತಾವೇ ನೋಡಿಕೊಂಡು ತಮ್ಮ ತಮ್ಮ ಸಾಲಗಳನ್ನು ಹರಿಸಿಕೊಳ್ಳುವದಕ್ಕೆ ಈ ಸಂಘಗಳಿಂದ ಸುಲಭಸಾಧ್ಯ. ವಿದ್ಯಾಪ್ರಚಾರದೊಂದಿಗೆ ಈ ಸಂಘಗಳ ಏರ್ಪಾಡು ಜಾಸ್ತಿಯಾಗುತ್ತಲೇ ಹೋಗಬೇಕು. ಮುಖ್ಯ ವಿದ್ಯೆಯನ್ನು ಯಾವ ತರದಲ್ಲಿಯಾದರೂ ಪ್ರಚಾರ ಮಾಡಬೇಕು. ವಿದ್ಯೆಯನಂತರ ಸಕಲ ಸಂಪತ್ತೂ ತಾನಾಗಿಯೇ ಬಂದು ಒದಗುತ್ತದೆ ಆದರೆ ಎಲ್ಲಾ ಗ್ರಾಮಗಳ ರೈತರುಗಳನ್ನು ವಿದ್ಯಾವಂತರನ್ನಾಗಿ ಮಾಡಬೇಕಾದರೆ ಸುಲಭ ಸಾಧ್ಯವಲ್ಲ; ಅಥವಾ ಎಲ್ಲಾ ಗ್ರಾಮಗಳಲ್ಲಿಯೂ ಪಾಠಶಾಲೆಗಳನ್ನು ಏರ್ಪಡಿಸಬೇಕಾದರೆ ಶ್ರಮಸಾಧ್ಯವೆಂದು ಹೇಳಬೇಕು. ಪರಸ್ಪರ ಸಹಾಯ ಸಂಘಗಳನ್ನು ಎಲ್ಲಾ ಗ್ರಾಮಗಳಲ್ಲಿ ಸ್ಥಾಪನೆಮಾಡಲು ಪ್ರಕೃತಸಾಧ್ಯವಿಲ್ಲದಿದ್ದರೆ ರೈತನ ಸಾಲವನ್ನು ಮತ್ತೆ ಯಾವ ತರದಲ್ಲಿಯಾದರೂ ಹರಿಸಲಿಕ್ಕೆ ಬೇರೊಂದು ಉಪಾಯವನ್ನು ಹುಡುಕಬೇಕಾಯಿತು. ಈ ಸಂದರ್ಭದಲ್ಲಿ ಕೆಲವು ಪಶ್ಚಿಮ ದೇಶಗಳಲ್ಲಿ ಸ್ಥಾಪಿತವಾಗಿರುವ ಲ್ಯಾಂಡು ಬ್ಯಾಂಕು ಎನ್ನುವ ಬ್ಯಾಂಕುಗಳನ್ನು ಈ ಸೀಮೆಯಲ್ಲಿ ಸ್ಥಾಪಿಸುವದು ಸಾಧ್ಯವೇ ಎಂದು ಆಲೋಚಿಸಬೇಕಾದ ವಿಷಯವಾಗಿದೆ. ಈ ವಿಚಾರವನ್ನು ಮಲೆನಾಡು ಅಭಿವೃದ್ಧಿ ಕಮಿಟಿಯವರು ಯೋಚಿಸುತ್ತಿರುವದು ಕೆಲವರಿಗೆ ಮಾತ್ರ ವೇದ್ಯವಿರಬಹುದು. ಆದರೆ ಕೇವಲ ಕಮಿಟಿಯವರಿಂದಲೇ ಕೆಲಸ ನೆರವೇರಿದರೆ ಸಾಕೆಂದು ಕಟ್ಟೆದಾಗದೆ ಮಲೆನಾಡಿನ ಪುರೋಭಿವೃದ್ಧಿಯಲ್ಲಿ ಆಸಕ್ತಿಯುಳ್ಳ ದೇಶವಾಸಿಗಳೆಲ್ಲರೂ ಕೂಡ ಈ ವಿಷಯವೇನೆಂಬುದನ್ನು ಕೂಲಂಕಷವಾಗಿ ಚರ್ಚಿಸಿ ತಮ್ಮ ಉದ್ದೇಶವನ್ನು ಕಮಿಟಿಯವರಿಗೆ ಧಾರಾಳವಾಗಿ ಸೂಚಿಸಬೇಕೆಂದು ಕೋರುವ ಸೇವಕ

ಮೈಸೂರು ಮಹಾರಾಜರವರ ಕಾಲೇಜು.

ಈ ಕಾಲೇಜಿನ ಹೈ ಸ್ಕೂಲ್ ತರಗತಿಗಳ ವಿದ್ಯಾರ್ಥಿಗಳಿಗೆ ಕಳೆದ ಬುಧವಾರ ಸಾಯಂಕಾಲ ಅನಮೆನಿಂಟು ರಿಟೈರ್ಡ್ ಕಂಟ್ರೋಲರವರಾದ ಮ|| ವಿ. ಎನ್. ನರಸಿಂಹಯ್ಯಂಗಾರ್ರವರು ಅಗ್ರಾಸನವನ್ನು ವಹಿಸಿ ಬಹುಮಾನಗಳನ್ನು ಹಂಚಿಕೊಟ್ಟರು. ಆ ದಿನ ಕಾಲೇಜಿನ ಸಭಾ ಮಂದಿರವು ಕಿಕ್ಕಿರಿಯುವಂತೆ ದೊಡ್ಡ ಮನುಷ್ಯರೂ ಅಧಿಕಾರಿಗಳೂ ವಿದ್ಯಾರ್ಥಿಗಳೂ ಸೇರಿದ್ದರು. ವಿದ್ಯಾರ್ಥಿಗಳು ಇಂಗ್ಲಿಷಿನಲ್ಲೂ ಕನ್ನಡದಲ್ಲೂ ನಾಟಕಗಳನ್ನು ಬಹು ಸರಸವಾಗಿ ಅಭಿನಯಿಸಿದರು ಇನ್ನು ಕೆಲವು ವಿದ್ಯಾರ್ಥಿಗಳು ಸೈನ್ಸಿನಲ್ಲಿ ಕೆಲವು ಪರೀಕ್ಷೆಗಳನ್ನು ಸಾಕ್ಷಾತ್ತಾಗಿ ಮಾಡಿ ತೋರಿಸಿ ವಿವರಿಸಿದರು. ಹೆಡ್ ಮಾಸ್ಟರಾದ ಮ|| ಡಿ. ವೆಂಕಟರಾಮಯ್ಯನವರು ಹೈ ಸ್ಕೂಲ್ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೂ ಅವರ ಅಭಿವೃದ್ಧಿಯೂ ಬಹಳ ತೃಪ್ತಿಕರವಾಗಿದೆ ಎಂದೂ, ಸ್ಥಳ ಸಂಕೋಚದಿಂದ ತರಗತಿಗಳನ್ನು ಮೂರು ಕಟ್ಟಡಗಳಲ್ಲಿ ನಡಿಸಬೇಕಾಗಿದೆ ಎಂದೂ, ಖರ್ಚನ್ನು ಹಂಚಿ ಹಾಕಿದರೆ ಪ್ರತಿ ಒಬ್ಬ ವಿದ್ಯಾರ್ಥಿಗೂ ಸರ್ಕಾರದವರಿಗೆ 44 ರೂಪಾಯಿ ನಂತೆ ಖರ್ಚಾಗುತ್ತದೆ ಎಂದೂ, ಸೈನ್ಸ್ ಉಪಕರಣಗಳನ್ನು ತರಿಸಿ ಒದಗಿಸುವದಕ್ಕೆ ಸರ್ಕಾರದವರು 10,000 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆಂದೂ, ವಿದ್ಯಾರ್ಥಿಗಳ ಕಾಯಪುಷ್ಟಿಯು ಚೆನ್ನಾಗುವುದಕ್ಕೆ ಅವರು ನಾನಾ ಆಟಗಳಲ್ಲಿ ನೇರ ಅಭ್ಯಾಸಮಾಡುತ್ತಾ ಹಲವು ಬಹುಮಾನಗಳನ್ನು ಸಂಪಾದಿಸುತ್ತಾರೆಂದೂ, ರಾಜಧಾನಿಯಲ್ಲಿ ಹೊರಗಣ ವಿದ್ಯಾರ್ಥಿಗಳಿಗೆ ಆರೋಗ್ಯ ಜನಕವಾದ ನಿಲಯಗಳೂ ಭೋಜನಶಾಲೆಗಳೂ ಇಲ್ಲದೆ ಬಹಳ ಕಷ್ಟಪಡುತ್ತಿರೋಣದರಿಂದ ಇವಕ್ಕೆ ತಕ್ಕ ಏರ್ಪಾಡುಗಳು ಆಗಬೇಕಾಗಿದೆ ಎಂದೂ ಮುಂತಾಗಿ ರಿಪೋರ್ಟು ಓದಿದರು.

ಬಹುಮಾನಗಳನ್ನು ಹಂಚಿದ ಬಳಿಕ ಮ|| ವಿ. ಎನ್. ನರಸಿಂಹಯ್ಯಂಗಾರ್ರು ದೀರ್ಘವಾದ ಭಾಷಣವನ್ನು ಮಾಡಿ ವಿದ್ಯಾರ್ಥಿಗಳಿಗೆ ಹಿತೋಕ್ತಿಗಳನ್ನು ಹೇಳಿದರು ಆ ವೈಕಿ ಕೆಲವನ್ನು ಇಲ್ಲಿ ಸೂಚಿಸುವೆವು. ನಮ್ಮ ವಿದ್ಯಾರ್ಥಿಗಳು ದೇಶೀಯ ಉಡುಪುಗಳನ್ನು ಬಿಟ್ಟು ವಿಲಕ್ಷಣವಾದ ಟೋಪಿಗಳನ್ನು ಹಾಕಿಕೊಳ್ಳುತ್ತಾರೆ. ಕೆಲವು ವರುಷಗಳ ಹಿಂದೆ ಸ್ವದೇಶೀ ಏರ್ಪಾಡಿನ ಮೇಲೆ ಅಭಿಮಾನ ಹಿಂದುಸ್ಥಾನದಲ್ಲೆಲ್ಲಾ ಹೇರಳವಾಗಿ ಉದ್ರೇಕಗೊಂಡಿದ್ದಾಗ ನಮ್ಮ ರಾಜಧಾನಿಯ ವಿದ್ಯಾರ್ಥಿಗಳು ಉತ್ಸಾಹಶೀಲರಾಗಿ ತಮ್ಮ ಟೋಪಿಗಳನ್ನೆಲ್ಲಾ ಜೂಬಿಲಿ ಹಾಲ್ ಕಟ್ಟಡದ ಮೈದಾನದಲ್ಲಿ ರಾಶಿ ಹಾಕಿ ಸುಟ್ಟುಬಿಟ್ಟರು. ಈಚೆಗೆ ಆ ಉತ್ಸಾಹ ಕುಂಗಿ ಮತ್ತೆ ಟೋಪಿ, ಲುಂಗಿಗಳು ಪ್ರಾಚುರ್ಯಕ್ಕೆ ಬಂದಿವೆ ಕಚೇರಿಗಳಿಗಾಗಲಿ, ಸಭೆಗಳಿಗಾಗಲಿ, ಗೌರವ ಸ್ಥಾನಗಳಿಗಾಗಲಿ ಟೋಪಿ ಹಾಕಿಕೊಂಡು ಹೋಗುವುದು ಉಚಿತವಲ್ಲದಾಗಿದ್ದರೂ ನಮ್ಮ ಹುಡುಗರು ಇದನ್ನು ಯಾಕೆ ಉಪಯೋಗಿಸುವರೋ ತಿಳಿಯಲಿಲ್ಲ. ಎರಡನೆಯದಾಗಿ ಈಗಿನ ವಿದ್ಯಾರ್ಥಿಗಳಲ್ಲಿ ಗುರುಹಿರಿಯರ ಮೇಲಣ ಪ್ರೀತಿ ವಿಶ್ವಾಸವೂ ಸನ್ಮಾನವೂ ಗೌರವವೂ ಕಡಮೆಯಾಗಿದೆ. ಅವರ ದಿನಚರಿ ನಡವಳಿಕೆಯು ವ್ಯಂಗ್ಯವಾಗಿರುವುದು ವಿನಯಕ್ಕೆ ಬದಲಾಗಿ ಅಹಂಭಾವ ಹೆಚ್ಚುತ್ತಿರುವುದನ್ನು ನೋಡಿದರೆ ವಿಷಾದವಾಗುತ್ತದೆ ಮೂರನೆಯದಾಗಿ ನಮ್ಮಲ್ಲಿ ಶ್ರೇಯಸ್ಕರವಾದ ಆಚಾರಗಳನ್ನು ಬಿಡದೆ ಪಾಶ್ಚಾತ್ಯರ ನಡಾವಳಿಗಳನ್ನು ಮಾತ್ರ ಅವಲಂಬಿಸಿ ವರ್ತಿಸುತ್ತಾ ಬಂದರೆ ನಮ್ಮ ಬಾಲಕರು ಯುಕ್ತೋವಂತರಾಗುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ನಾಲ್ಕನೆಯದಾಗಿ ಪಾಶ್ಚಾತ್ಯರ ನಾಗರಿಕತೆಯು ಪ್ರಚಾರಕ್ಕೆ ಬಂದು ಅನೇಕ ಸಂದರ್ಭಗಳಲ್ಲಿ ನಮ್ಮ ಹುಡುಗರ ನಡತೆಯನ್ನು ಕೆಡಿಸಿರುತ್ತದೆ ಈಗ ರಾಜಧಾನಿಯಲ್ಲಿ ವಯಸ್ಕರಾದ ವಿದ್ಯಾರ್ಥಿಗಳು ಮೈಮುರಿದು ಕಾಯಪುಷ್ಟಿಯಾಗುವಂಥಾ ಆಟಗಳಲ್ಲಿ ಆಸಕ್ತರಾಗುವುದನ್ನು ಬಿಟ್ಟು ಬ್ಯಾಡ್ಮಿಂಟನ್ ಎಂಬ ಹೆಂಗಸರ ಆಟವನ್ನು ಹಿಡಿದಿದಾರೆ. ಅದು ಶೀತದೇಶಗಳಿಗೆ ತಕ್ಕ ಆಟ; ನಮ್ಮ ಹುಡುಗರು ಅದನ್ನಾಡುವುದನ್ನು ನೋಡಿದರೆ ಅಸಹ್ಯವಾಗುತ್ತದೆ. ಐದನೆಯದಾಗಿ ಬಾಲ್ಯವಿವಾಹವು ದೇಹಧಾರಾಢ್ಯಕ್ಕೂ ದೀರ್ಘಾಯುಸ್ಸಿಗೂ ಕುಂದಕವಾಗಿದೆ ವಿದ್ಯಾರ್ಥಿಗಳು ಈ ಭಾಗದಲ್ಲಿ ಮಾತ್ರ ತಮ್ಮ ಹಿರಿಯರ ವಚನವನ್ನು ಉಲ್ಲಂಘಿಸಿ ಬ್ರಹ್ಮಚರ್ಯವನ್ನು ಕಾಪಾಡಿಕೊಂಡು ವಿದ್ಯಾಭ್ಯಾಸದಲ್ಲೇ ನಿರತರಾಗಿರಬೇಕು. ಆರನೆಯದಾಗಿ ಹುಡುಗರು ಆರೋಗ್ಯಸೂತ್ರಗಳನ್ನು ಅನುಸರಿಸಿ ಸರಿಯಾಗಿ ಸ್ನಾನವಮಾಡಿ ದೇಹಶುಚಿಯಾಗಿ ಮಾಡಿಕೊಳ್ಳುವರು. ಆದರೆ ಅವರಲ್ಲಿ ಭಕ್ತಿ ವರ್ಧಕವಾದ ಕ್ರಿಯೆಗಳೇನೂ ಕಾಣುವುದಿಲ್ಲ. ಸಂಧ್ಯಾವಂದನೆ, ದೇವರ ಪೂಜೆ, ವ್ರತಾಚರಣೆಗಳಲ್ಲಿ ಅವರಿಗೆ ಅಭಿರುಚಿಯಿಲ್ಲ. ಈ ರೀತಿ ದೇವರ ಭಕ್ತಿ ಪ್ರೀತಿಗಳ ಲಾಂಛನಗಳನ್ನು ಬಿಟ್ಟು ವರ್ತಿಸುವುದರಿಂದ ನಮ್ಮ ಬಾಲಕರೂ, ಅವರ ಮೂಲಕ ನಮ್ಮ ದೇಶವೂ ಕೆಡುವವು. ಅವರಿಗೆ ಅರ್ಥ ತಿಳಿಯದಿದ್ದರೆ ಯಾರನ್ನಾದರೂ ಕೇಳಿ ತಿಳಿದುಕೊಳ್ಳಬಹುದು. ಒಂದು ವೇಳೆ ಅದರಲ್ಲಿ ಅಭಿರುಚಿ ಇಲ್ಲದಿದ್ದರೆ ಕಾಲಕಾಲಕ್ಕೆ ಏಕಾಂತದಲ್ಲಿ ಪರಮಾತ್ಮನ ಧ್ಯಾನವನ್ನಾದರೂ ಮಾಡುತ್ತಾ ಬರಬೇಕು ಪ್ರಾರ್ಥನಾ ವಾಕ್ಯಗಳು ಯಾವ ಮತದಲ್ಲೂ ಇಲ್ಲದೆ ಇಲ್ಲ. ಯೇಸು ಕ್ರಿಸ್ತನು ಹೇಳಿಕೊಟ್ಟಿರುವ ಪ್ರಾರ್ಥನೆಯು ಎಷ್ಟೋ ಭಕ್ತಿ ಸಹಿತವಾದದ್ದಾಗಿದೆ. ಅಂತು ನಮ್ಮ ಹುಡುಗರು ಸದ್ಭಕ್ತರೂ, ಸಚ್ಚರಿತ್ರರೂ ಆಗಿ ಬೆಳೆದು ಹೊರತು ಸತ್ಪ್ರಜೆಗಳಾಗುವುದಿಲ್ಲ ಕಡೆಯದಾಗಿ ವಿದ್ಯಾರ್ಥಿಗಳು ನಾನಾ ದುರಭ್ಯಾಸಗಳಲ್ಲಿ ಬಿದ್ದು ಕೆಡುತ್ತಿರುವರು ಇದಕ್ಕೆ ದೃಷ್ಟಾಂತವಾಗಿ ಸಿಗರೆಟ್ ಬೀಡಿಗಳನ್ನು ಸೇದುವುದನ್ನು ನಾವೆಲ್ಲಾ ಬಲ್ಲೆವು. ಇಂಥಾ ವ್ಯಸನಗಳಿಂದ ಅವರು ಚಿಕ್ಕಂದಿನಲ್ಲೇ ಕಾಯಪುಷ್ಟಿಯನ್ನೂ ದೃಷ್ಟಿಶಕ್ತಿ ಬುದ್ಧಿಶಕ್ತಿಗಳನ್ನೂ ಕಳೆದುಕೊಳ್ಳುತ್ತಾರಲ್ಲಾ ಎಂದು ಚಿಂತಿಸಬೇಕಾಗಿದೆ. ಆದಕಾರಣ ಈ ವಿಚಾರಗಳೆಲ್ಲಾ ವಿದ್ಯಾರ್ಥಿಗಳು ಮನಸ್ಸುಕೊಟ್ಟು ಶ್ರೇಯಸ್ಕರವಾದ ಆಚಾರಗಳನ್ನು ಅವಲಂಬಿಸಿ ಪ್ರವೃದ್ಧಮಾನರಾದಾರೆಂದು ನಿರೀಕ್ಷಿಸಲ್ಪಟ್ಟಿದೆ.

ಕಡೆಯಲ್ಲಿ ಮ|| ಡಿ. ವೆಂಕಟರಾಮಯ್ಯನವರು ಸಭಾನಾಯಕರಿಗೂ, ಸಭಾಸದರಿಗೂ ಹೈ ಸ್ಕೂಲ್ ಪರವಾಗಿ ವಂದನೆಗಳನ್ನು ಸಮರ್ಪಿಸಿ ಸಂತೋಷ ಕೂಟವನ್ನು ಮುಕ್ತಾಯಮಾಡಿದರು. ಸಭಿಕರೂ ವಿದ್ಯಾರ್ಥಿಗಳೂ ನಮ್ಮ ಮಹಾರಾಜರವರ ಮತ್ತು ಚಕ್ರವರ್ತಿ ಸಾರ್ವಭೌಮರವರ ಶ್ರೇಯಸ್ಸನ್ನು ಪ್ರಾರ್ಥಿಸಿ ಹೊರಟರು.

ನಮ್ಮ ಪುಸ್ತಕ ಭಂಡಾರವು.

"ಅಪಾಯ ಸಂಭವಗಳಲ್ಲಿ ಪ್ರಥಮ ಚಿಕಿತ್ಸೆ."—ಈ ಸಣ್ಣ ಪುಸ್ತಕವನ್ನು ಮೈಸೂರಿನಲ್ಲಿರುವ ರಾವ್ ಸಾಹೆಬ್ ಡಾಕ್ಟರ್ ಬಿ. ರಾಮರಾಯರು ಕನ್ನಡದಲ್ಲಿ ರಚಿಸಿ ಪ್ರತಿಗೆ 8 ಆಣೆ ಕ್ರಯವಿಟ್ಟು ಬಿಕರಿ ಮಾಡಲಾರಂಭಿಸಿದಾರೆ. ಇದನ್ನು ಅವರು ನಮ್ಮ ಮಹಾರಾಜರವರ ಅಂಕಿತದಿಂದ ಅವರ ಬಹು ಸಂದರ್ಭದ ಸ್ಥಿರತೆ ಸಹಿತ ಅಚ್ಚುಮಾಡಿಸಿರುವರು. ಇದರಲ್ಲಿ ಅಪಾಯ ಸಂಭವಿಸಿದಾಗ ವೈದ್ಯರ ಬಳಿಗೆ ಹೋಗುವುದಕ್ಕಿಂತ ಮುಂಚೆ ಮಾಡಬಹುದಾದ ಅನೇಕ ಸುಲಭ ಕಾರ್ಯಗಳನ್ನು ಅನೇಕ ಚಿತ್ರಗಳ ಸಮೇತ ವಿವರಿಸಿ ತೋರಿಸಿದಾರೆ. ಸಮಸ್ತ ಪ್ರಜೆಗಳೂ ಈ ಪುಸ್ತಕವನ್ನು ಓದಿ ಪ್ರಯೋಜನಹೊಂದತಕ್ಕದ್ದಾಗಿದೆ. ಕಠಿಣವಾದ ವೈದ್ಯಶಾಸ್ತ್ರದ ಕ್ರಮಗಳನ್ನು ಕನ್ನಡದಲ್ಲಿ ಬಹಳ ಸುಲಭವಾಗಿ ತಿಳಿಯುವಂತೆ ಬರೆಯಲಾಗಿದೆ. ಮನುಷ್ಯನ ಪ್ರಾಣಾಪಾಯಗಳನ್ನು ಸಾಧ್ಯವಾದ ಮಟ್ಟಿಗೂ ತಪ್ಪಿಸುವುದಕ್ಕೆ ಈ ಪುಸ್ತಕದಿಂದ ಹಲವು ಮುಖ್ಯ ಸೂಚನೆಗಳನ್ನು ತಿಳಿದುಕೊಳ್ಳಬಹುದು ಈ ಪುಸ್ತಕದ ರಚನೆಯು ಎಲ್ಲಾ ಭಾಗಗಳಲ್ಲೂ ಬಹಳ ತೃಪ್ತಿಕರವಾಗಿರುವುದು. ಬಾಲಕ, ಬಾಲಕಿಯರ ಪಾಠಶಾಲೆಗಳಲ್ಲಿ ಈ ಸಣ್ಣ ಪುಸ್ತಕವನ್ನು ಮಕ್ಕಳೂ ಉಪಾಧ್ಯಾಯರೂ ಓದಿಕೊಂಡು ಪರಿಶೋಧಿಸುವಂತೆ ಏರ್ಪಾಡಾದರೆ ಎಷ್ಟೋ ಉಪಕಾರವಾಗುವುದು. ಇಂಥಾ ಶ್ರೇಷ್ಠವಾದ ಪುಸ್ತಕಕ್ಕೆ ನಮ್ಮ ಮಹಾರಾಜರವರು ತಮ್ಮ ಅಂಕಿತವನ್ನು ದಯಪಾಲಿಸಿರುವುದನ್ನು ನೋಡಿ ಬಹಳಾ ಸಂತೋಷಪಡುವೆವು. ಗ್ರಂಥಕರ್ತರು ಈ ಪುಸ್ತಕದ ಮಾರಾಟದಿಂದ ಬರುವ ಉತ್ಪತ್ತಿಯನ್ನು ಯುದ್ಧದ ರಿಲೀಫ್ ಫಂಡಿಗೆ ಕೊಟ್ಟುಬಿಡುವದಾಗಿ ಸಂಕಲ್ಪಿಸಿರೋಣದರಿಂದ ಪೋಲೀಸಿನವರೂ, ಹೆಂಗಸರೂ, ರೈಲ್ವೆ ನೌಕರರೂ, ಗ್ರಾಮಸ್ಥರೂ, ಸಾಮಾನ್ಯ ಪ್ರಜೆಗಳೂ ಈ ಪುಸ್ತಕವನ್ನು ಕೊಂಡು ಪ್ರಯೋಜನ ಹೊಂದುವುದರ ಮೂಲಕ ಯುದ್ಧದ ರಿಲೀಫ್ ಫಂಡಿಗೂ ಸಹಾಯ ಮಾಡಬಹುದಾಗಿದೆ.

"ಬೋಧನ ಕ್ರಮ. ಭಾಗ 1."—ಮೈಸೂರು ಡಿಸ್ಟ್ರಿಕ್ಟಿನ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರಾದ ಮ|| ಎ. ವೆಂಕಟಸುಬ್ಬಯ್ಯನವರು ಕನ್ನಡ ಸ್ಕೂಲ್ ಮಾಸ್ಟರುಗಳ ಶ್ರೇಯಸ್ಸನ್ನು ಬಯಸಿ ಅವರಿಗೋಸ್ಕರ ಈ ಸಣ್ಣ ಪುಸ್ತಕವನ್ನು ಬಹು ಲಲಿತವಾದ ಶೈಲಿಯಲ್ಲಿ ರಚಿಸಿ ಪ್ರಕಟಿಸಿದಾರೆ ಇದರ ಕ್ರಯ 8 ಆಣೆ. ಇದರಲ್ಲಿ ಉಪಾಧ್ಯಾಯರು ತಿಳಿಯಬೇಕಾದ ವಿಷಯಗಳನ್ನು ಹದಿನಾರು ಅಧ್ಯಾಯಗಳಾಗಿ ವಿಂಗಡಿಸಿ ಬರೆದಿರುವರು. ಮ|| ವೆಂಕಟಸುಬ್ಬಯ್ಯನವರು ರಾಜಧಾನಿಯ ನಾರ್ಮಲ್ ಸ್ಕೂಲಿನಲ್ಲೂ, ಈಚೆಗೆ ಟ್ರೈನಿಂಗ್ ಕಾಲೇಜಿನಲ್ಲೂ ಹಲವು ವರುಷಗಳಿಂದ ಇದ್ದು ಉಪಾಧ್ಯಾಯರುಗಳನ್ನು ತಯಾರು ಮಾಡುತ್ತಿದ್ದು ಈಗ ಕಾನೇ ಸುಮಾರು ಮೂರು ವರ್ಷ ತಾಲ್ಲೂಕುಗಳಲ್ಲಿ ಇನ್ಸ್ಪೆಕ್ಟರಾಗಿ ಸೇವಿಸಲ್ಪಟ್ಟರು. ಇದರಿಂದ ಈ ಪುಸ್ತಕವನ್ನು ರಚಿಸಲು ಅವರು ವಿಶೇಷ ಸಾಮರ್ಥ್ಯವುಳ್ಳವರಾಗಿದಾರೆಂದು ಧಾರಾಳವಾಗಿ ಹೇಳಬಹುದು. ಗ್ರಾಮಾಂತರಗಳಲ್ಲಿರುವ ಉಪಾಧ್ಯಾಯರುಗಳು ಈ ಪುಸ್ತಕದಿಂದ ಪ್ರಯೋಜನ ಹೊಂದುವರೆಂದು ನಿರೀಕ್ಷಿಸಲ್ಪಟ್ಟಿದೆ

"ಗಣಿತ ಪ್ರಶ್ನೋತ್ತರಾವಳಿ."—ರಾಜಧಾನಿಯ ಮಹಾರಾಣಿ ಕಾಲೇಜಿನ ಸಹಾಯೋಪಾಧ್ಯಾಯರಾದ ಮ|| ಡಿ. ಮಹಾಬಲರಾಯರು ಮೈಸೂರು ಅಪ್ಪರ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವಂತೆ ಈ ನವೀನ ಗಣಿತ ಪುಸ್ತಕವನ್ನು ಪ್ರಶ್ನೋತ್ತರ ರೂಪವಾಗಿ ರಚಿಸಿದ್ದಾರೆ. ಇವಲ್ಲದೆ ಅವರು 1900 ರಿಂದ 1915 ನೇ ಇಸವಿ ವರೆಗಿನ ಲೋ. ಸೆ. ಪರೀಕ್ಷೆಯ ಗಣಿತ ಪ್ರಶ್ನೆಗಳನ್ನು ಹೊಸ ರೀತಿಯಲ್ಲಿ ಮಾಡಬಹುದೆಂದು ತೋರಿಸಿಕೊಟ್ಟಿದಾರೆ ವಿದ್ಯಾರ್ಥಿಗಳು 8 ಆಣೆ ಕ್ರಯದ ಈ ಪುಸ್ತಕವನ್ನು ಕೊಂಡುಕೊಂಡು ಪ್ರಯೋಜನ ಹೊಂದಬಹುದಾಗಿದೆ.

"ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡ್."—ಬೆಂಗಳೂರು ಚೀಫ್ ಕೋರ್ಟ್ ಅಡ್ವೊಕೇಟ್ ಮ|| ಟಿ. ಅಪ್ಪುರಾಯರ ಸಹಾಯ ಪಡೆದು ಕನ್ನಡದಲ್ಲಿ ಈ ಪುಸ್ತಕವನ್ನು ಅಲ್ಲಿನ ಮ|| ಬಿ. ನರಸಿಂಗರಾಯರು ರಚಿಸಿ ಪ್ರಕಟಿಸಿದಾರೆ. ಇದರ ಬೆಲೆ 3 ರೂಪಾಯಿ. ಕ್ರಿಮಿನಲ್ ಕೋರ್ಟುಗಳಲ್ಲಿ ಮೊಕದ್ದಮೆಗಳು ವಿಚಾರಣೆಯಾಗುವ ವಿಧಾನಗಳೆಲ್ಲಾ ಇದರಲ್ಲಿ ವಿವರಿಸಲ್ಪಟ್ಟಿವೆ ಕ್ರಿಮಿನಲ್ ಕಾನೂನು ಯಾವ ರೀತಿ ಇದೆ ಎಂದು ಪ್ರಜೆಗಳು ತಿಳಿಯಬೇಕಾದದ್ದು ಅವಶ್ಯ. ಮ|| ನರಸಿಂಗರಾಯರು ಈ ಪುಸ್ತಕವನ್ನು ರಚಿಸಿರುವುದು ಕನ್ನಡಿಗರಿಗೆ ಬಹು ಅನುಕೂಲವಾಯಿತು ಓದು ಬಲ್ಲವರು ಕಾನೂನನ್ನು ತಿಳಿದಿದ್ದರೆ ಕಷ್ಟನಷ್ಟಗಳಿಂದ ಬಹುಗಡೆ ಹೊಂದುವುದಲ್ಲದೆ ಓದು ತಿಳಿಯದವರನ್ನೂ ಬುದ್ಧಿ ಹೇಳಿ ಉತ್ತಮ ಪ್ರಜೆಗಳಾಗಿ ಮಾಡಬಹುದು. ಮುಖ್ಯವಾಗಿ ಕಾನೂನು ತಿಳಿದಿರುವುದು ಪ್ರಜೆಗಳ ನೆಮ್ಮದಿಗೂ, ಕ್ಷೇಮಕ್ಕೂ, ಧೈರ್ಯಕ್ಕೂ, ನಿರ್ಭೀತಿಗೂ ಕಾರಣವಾಗಿದೆ.

"ಮೈಸೂರಿನ ಕೈಕನ್ನಡಿ" ಕರ್ನಾಟಕ ವಾರ್ಷಿಕ ಪುಸ್ತಕವು.—ಬೆಂಗಳೂರಿನಲ್ಲಿ ಕರ್ನಾಟಕ ಪತ್ರಿಕಾ ಸಂಪಾದಕರಾದ ಮ|| ಡಿ. ವಿ. ಗುಂಡಪ್ಪನವರು ಈ ಪುಸ್ತಕವನ್ನು ಪ್ರಕಟಿಸಿರುವರು. ಇವರು ಇದಕ್ಕೆ ಮೊದಲೇ ಇಂಗ್ಲಿಷಿನಲ್ಲಿ ಒಂದು ಪುಸ್ತಕವನ್ನು ಪ್ರಕಟಿಸಿರುವರು. ಈ ಕರ್ನಾಟಕ ಪುಸ್ತಕವು ಕೈಕನ್ನಡಿ

...ಅಕ್ಷರಜ್ಞಾನವುಳ್ಳದ್ದಾಗಿ, ವಾಚಕರ ಪುಸ್ತಕವೆಂಬ ಸಾರ್ಥಕನಾಮವುಳ್ಳ ... ವಿದ್ಯಾಮಂಡಲದಿಂದ ಅಚ್ಚಾಗಿರುವುದಾಗಿದೆ. ಈ ವರೆಗೂ ಕನ್ನಡದಲ್ಲಿ ಇಂಥಾ ಪುಸ್ತಕ ... ಇದ್ದುದುಂಟಾಗಿದ್ದ ಹೆಚ್ಚು ಕೊರತೆಯು ಈ ಗ್ರಂಥಕರ್ತೃಗಳಿಂದ ... ನೀಗಲ್ಪಟ್ಟಿದ್ದಲ್ಲದೆ ಮೈಸೂರು ಸೀಮೆಗೇ ಒಂದು ಉತ್ತಮವಾದ ನೂತನ ... ಯನ್ನು ಪ್ರಚಾರಕ್ಕೆ ತಂದ ಇವರ ಉಪಕಾರವು ಪ್ರಶಂಸಾರ್ಹವಾಗಿದೆ. ... ಪುಸ್ತಕದಲ್ಲಿ ಸರ್ವಜನರ ತಿಳುವಳಿಕೆಗೆ ಆವಶ್ಯಕವಾದ ಮೈಸೂರು ... ನ ಕೆಲವು ವಿಷಯಗಳು ಅಂದರೆ—ದೇಶದ ಆಕಾರ, ಸಸ್ಯವರ್ಗ, ... ವರ್ಗ, ಜನಸಂಖ್ಯೆ, ಮತ, ಕೈಗಾರಿಕೆ, ವಿದ್ಯಾಭ್ಯಾಸ, ಸರ್ಕಾರ, ವೊದ ... ಪುಸ್ತಕಗಳನ್ನು ಓದಿ ತಿಳಿದುಕೊಳ್ಳಬೇಕಾದ ಅನೇಕ ವಿಷಯ ... ಈ ಒಂದೇ ಪುಸ್ತಕದ ಸಹಾಯದಿಂದ ದೊರೆಯತಕ್ಕವುಗಳಾಗಿವೆ. ಮ|| ... ನವರ ಕಾರ್ಯವು ದೇಶೀಯ ಪ್ರಜೆಗಳ ಕೃತಜ್ಞತೆಗೂ, ಪ್ರೋತ್ಸಾಹಕ್ಕೂ ... ವಾಗುವುದೆಂದು ಧಾರಾಳವಾಗಿ ಹೇಳುತ್ತೇವೆ. ಇದರ ಕ್ರಯ 1 ರೂ.

ಮೈಸೂರು ಸರ್ಕಾರದ ವ್ಯವಸಾಯ ಇಲಾಖೆಯವರು ಪ್ರಕಟಿಸಿರುವ 1916 ನೇ ವರುಷದ 1 ಆಣೆ ಕ್ರಯದ ಕನ್ನಡ ಕ್ಯಾಲೆಂಡರೂ, ಬೆಂಗಳೂರು ದಂಡಿನಲ್ಲಿ ... ಮ|| ಎಂ. ರಾಮರಾಯರು ರಚಿಸಿರುವ 1 ಆಣೆ ಕ್ರಯದ ಚಂದ್ರಹಾಸ ... ಸೀತಾಕಥೆಯೂ, ಬೆಂಕಿಪುರದ ಮ|| ಎ. ಬಿ. ವಿಯುಷ್ಕೆಸ್ಕರವರು ... ರುವ ½ ಆಣೆ ಬೆಲೆಯುಳ್ಳ ಆಕೆಂಡರೇನ್ ಎಂಬ ಸಣ್ಣ ಚರಿತ್ರೆಯೂ ... ಮುಟ್ಟಿರುತ್ತವೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ತಾ 19 ನೇ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರುಗಳು ಟೌನ್ ಹಾಲ್ ಮಂದಿರದಲ್ಲಿ ಸಭೆ ಸೇರಿ ತಿಂಗಳುಗಟ್ಟಿಯ ಮ್ಯುನಿಸಿಪಲ್ ಮೀಟಿಂಗನ್ನು ನಡೆಸಿದರು ಕಳೆದ ಜನವರಿ ತಿಂಗಳ ಜಮಾ ಖರ್ಚು ಮುಂತಾದ ಲೆಕ್ಕಗಳನ್ನು ಮೊದಲು ಓದಿಸಿ ಪಾಸ್ ಮಾಡಿದರು ... ಬಾಬಿನಲ್ಲಿ ಉತ್ಪತ್ತಿಯು 514 ರೂ ಕಡಮೆ ಆಯಿತೆಂದೂ, ... ಬಂಗಲೆಯ ಉತ್ಪತ್ತಿ ಖರ್ಚು ಲೆಕ್ಕಗಳನ್ನು ಪ್ರತ್ಯೇಕವಾಗಿ ... ಹೆಚ್ಚು ಹಣವಿದ್ದರೆ ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಡಬೇಕೆಂದು ... ಮೆಂಬರುಗಳು ಸೂಚಿಸಿದ್ದರು. ಜನವರಿ ತಿಂಗಳಲ್ಲಿ ಜನನ 173, ಮರಣ ... ವೆಂದು ತಿಳಿಯಿತು ಡಿಪ್ತೀರಿಯಾ ಎಂಬ ಅಂಟು ಜಾಡ್ಯವು ... ಯಲ್ಲಿ ಹೊಸದಾಗಿ ಪ್ರಾಪ್ತವಾಗಿ ಆಗಲೇ 6 ಮಂದಿ ಕಾಲವಾಗಿದಾರೆ.

ಮಾರ್ಕಟ್ಟಿನ ಎದುರಿಗೆ ಮಿಠಾಯಿ ಅಂಗಡಿಗೆ ಕನ್ನಡಿ ಕದಗಳನ್ನು ಮಾಡಿಸಿ ... ಪದಾರ್ಥಗಳಿಗೆ ನೊಣ ಮುತ್ತದಂತೆ ಮಾಡಿದ್ದಕ್ಕೆ 77 ರೂಪಾಯಿ ... ದ್ದೂ, ಅದನ್ನು ಆ ಅಂಗಡಿಯವನು ಕೊಡಲಾರನೆಂದು ಹೇಳುತ್ತಾ ... ಹೆಲ್ತ್ ಆಫೀಸರು ಸೂಚಿಸಿದರು. ಕೌನ್ಸಿಲರುಗಳು ಆ ಹಣವನ್ನು ... 4 ರೂಪಾಯಿನಂತೆ ಅಂಗಡಿಯವನಿಂದ ವಸೂಲ್ಮಾಡಬೇಕೆಂದು ... ನ ಮಾಡಿದಾರೆ.—ಕರ್ಜನ್ ಪಾರ್ಕಿನಲ್ಲಿ ಈಗ ಇರುವ ವಿದ್ಯುಚ್ಛಕ್ತಿಯ ... ದೀಪಗಳನ್ನು ತೆಗೆದು ಹಾಕಿ ಭಾರಿಯಾದ ವಿದ್ಯುಚ್ಛಕ್ತಿ ದೀಪಗಳನ್ನು ಇಡ ... ಸರ್ಕಾರದವರು ಇಷ್ಟಪಡುವ ಇಷ್ಟಪಡುವ, ಇದಕ್ಕೆ ಪಾಲಿಯಾಗಿ ಮ್ಯುನಿಸಿ ... ಯವರು 3,000 ರೂಪಾಯಿ ಕೊಡಬಲ್ಲರೇ ಎಂದು ವಿದ್ಯುಚ್ಛಕ್ತಿಯ ... ಕೇಳಿದ್ದರು. ಅಷ್ಟು ಭಾರೀ ದೀಪಗಳಿಗೆ ಪ್ರತಿಫಲವನ್ನು ... ಮ್ಯುನಿಸಿಪಲ್ ಫಂಡಿನಲ್ಲಿ ಹಣವಿಲ್ಲವೆಂದು ಮೆಂಬರುಗಳು ಇತ್ಯ... ರಿಸಿದಾರೆ.—ಮ್ಯುನಿಸಿಪಲ್ ಪಿಸಾಬ್ ಖಾನೆಯಲ್ಲಿ ನೀರು ಉಪಯೋಗ ... ದ ಅವಕ್ಕೆ ನೀರಿನ ಕ್ರಯ ಕೊಟ್ಟೇ ತೀರಬೇಕೆಂದು ಸರ್ಕಾರದ ... ಕೊಟ್ಟರುವರು—ಕನ್ನಂಗಾಡಿ ... ಬಳಿ ಮ|| ದೊಡ್ಡಯ್ಯ ... ಶಕ್ತಿಯ ಯಂತ್ರದ ಕಾರ್ಖಾನೆಯು ಪಕ್ಕದಲೇ ತಾವೂ ತಮ್ಮ ... ವಾಸಮಾಡುವುದಕ್ಕಾಗಿ ಮನೆಗಳನ್ನು ಕಟ್ಟಿಕೊಳ್ಳಬೇಕಾಗಿದೆ ... ಇವರಿಗೆ 225 x 150 ಅಡಿ ವಿಸ್ತಾರವುಳ್ಳ ನಿವೇಶನವನ್ನು ಕೊಡ ... ಕೇಳಿದ್ದರು. ಅವರಿಗೆ ಆ ನಿವೇಶನವನ್ನು ಗಜಕ್ಕೆ 4 ಆಣೆಯಂತೆ ... ಬಹುದೆಂದೂ, ಪ್ರೆಸಿಡೆಂಟರು ಒಪ್ಪುವ ಪ್ರಕಾರ ಮನೆಗಳನ್ನು ... ಕಟ್ಟಬೇಕೆಂದೂ ಇತ್ಯರ್ಥವಾಯಿತು.

ಮ|| ಎಂ. ಕೃಷ್ಣಸ್ವಾಮಿರಾಯರು ರಾಜಧಾನಿಯಲ್ಲಿ ಒಂದು ಹೋಟೇಲನ್ನು ... ಕ್ಕೆ ತಮಗೆ ಕೆಲವು ರಿಯಾಯಿತಿಗಳನ್ನು ಮ್ಯುನಿಸಿಪಾಲಿಟಿಯವರು ... ಬೇಕೆಂದು ಕೇಳಿದರು ಈ ವಿಚಾರವು ಸರ್ಕಾರದಲ್ಲಿ ಚರ್ಚೆಯಾಗುತ್ತಿ ... ದರಿಂದ ಅವರ ಅರ್ಜಿಯನ್ನು ಸರ್ಕಾರಕ್ಕೆ ಇತ್ಯರ್ಥದ ಬಗ್ಗೆ ಕಳುಹ ... ವೆಂದು ಮೆಂಬರುಗಳು ಒಪ್ಪಿಕೊಂಡರು.—ಬಟ್ಟೆ ಮಳಿ ... ಬೀದಿಗೆ ... ಬೀದಿ ಎಂದು ಹೆಸರಿಡಲಾಯಿತು —ಮ್ಯುನಿಸಿಪಾ ... ಸೇರುತ್ತಿರುವ ಪಿಪಲ್ಸ್ ಪಾರ್ಕನ್ನು ಸರ್ಕಾರಕ್ಕೆ ವಹಿಸಬೇಕೆಂದೂ ... ಆಗುವ ಖರ್ಚನ್ನೆಲ್ಲಾ (ಸಾಲಿಯಾನಾ ಸುಮಾರು 1,000 ರೂಪಾಯಿ) ... ಮ್ಯುನಿಸಿಪಾಲಿಟಿಯವರೇ ವಹಿಸಿಕೊಳ್ಳಬೇಕೆಂದೂ ಗವರ್ನ್ಮೆಂಟಿನ ... ಕೇಳಿದ್ದರು ಆ ಸೂತ್ರದ ಪ್ರಕಾರ ಆ ಪಾರ್ಕನ್ನು ಸರ್ಕಾರಕ್ಕೆ ವಹಿಸ ... ಕೆಲ್ಲವೆ ದ ಮೆಂಬರುಗಳು ತೀರ್ಮಾನ ಮಾಡಿದರು.—ಅವೆನ್ಯು ... ರಸ್ತೆಗೆ ಟ್ರೈನಿಕಲ್ ಇನ್ಸ್ಟಿಟ್ಯೂಟು ಮಾರ್ಗವಾಗಿ ... ರೂಪಾಯಿ ಕೊಡಬಹುದೆಂದು ಒಪ್ಪಲಾಯಿತು —ಮ್ಯುನಿಸಿಪಲ್ ಸಿಬ್ಬಂ ... ಯನ್ನು ಪುನರಾಲೋಚನೆಯಿಂದ ಕ್ರಮಪಡಿಸಿದಾರೆ. ಆಕ್ಟ್ರಾಯಿ ಮುನೀಗಾರ ... 10-1-12 ರಂತೆಯೂ, ಮ್ಯುನಿಸಿಪಲ್ ಕಂಪೌಂಡು ... 12-...6 ರಂತೆಯೂ ಕೊಡಬೇಕೆಂದು ಇತ್ಯರ್ಥವಾಗಿದೆ.—ನಾಲೆ ... ಸಾಗುವುದಕ್ಕೆ ಬೀದಿಗಳಲ್ಲಿ ನಲ್ಲಿಗಳಿಗೆ ಬಾಗಿಲು ಇಟ್ಟು ... ಅನುಕೂಲವಾಗುವಂತೆ ಪ್ಲಾಟ್ಫಾರಂಗಳನ್ನು ಇಡಬೇಕೆಂದೂ, ... 3,774 ರೂಪಾಯಿ ಬೇಕಾಗಿದೆ ಎಂದೂ ಸೂಚಿಸಲ್ಪಟ್ಟಿತು. ಮ್ಯುನಿಸಿ ... ಈ ಖರ್ಚನ್ನು ವಹಿಸಿಕೊಳ್ಳುವುದಕ್ಕೆ ಶಕ್ತಿಯಿಲ್ಲದಕಾರಣ ಟ್ರಸ್ಟ್ ... ರವರೇ ವಹಿಸಬೇಕೆಂದು ಮೆಂಬರುಗಳು ಅಭಿಪ್ರಾಯಪಟ್ಟರು.

... ಬಳಿ ಮ|| ಮುತ್ತಯ್ಯನವರು ವಿದ್ಯುಚ್ಛಕ್ತಿಯಿಂದ ಭತ್ತ ... ಮತ್ತು ಹಿಟ್ಟುಗಳನ್ನು ತಯಾರುಮಾಡುವ ಯಂತ್ರಗಳನ್ನು ಇಟ್ಟು ... ವೆ ದು ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಅಗಬಹು ... ಒಪ್ಪಿಕೊಂಡಿದಾರೆ —ಕರ್ನಾಟಕ ಮುಕ್ತ ಯುನಾನಿ ಆಸ್ಪತ್ರೆಗಳಿಗೆ ... ರೋಗಿಗಳನ್ನು ಆಸ್ಪತ್ರೆಗಳಲ್ಲೇ ಇಟ್ಟು ಚಿಕಿತ್ಸೆಮಾಡುವುದಕ್ಕೆ ವಾರ್ಡ ... ಕೊಡಬೇಕೆಂದು ಕೇಳಿದ್ದಕ್ಕೆ ಸರ್ಕಾರದವರು ಹೊಸದಾಗಿ ಕಟ್ಟು ... ದೊಡ್ಡ ಆಸ್ಪತ್ರೆಯಲ್ಲಿ ಕೆಲವು ವಾರ್ಡುಗಳನ್ನು ಬಿಡಿಸಿಕೊಡಬಹು ... ಕಾಮಗಾರಿ ಪೂರೈಸಿದ ಬಳಿಕ ಈ ವಿಚಾರವನ್ನು ಪುನಃ ಸರ್ಕಾರದವರ ... ತರಬೇಕೆಂದೂ ಜವಾಬು ಕೊಟ್ಟಿದಾರೆ —ರಾತ್ರಿ ಪಾಠಶಾಲೆಗಳನ್ನೂ ... ಶಾಲೆಗಳನ್ನೂ ಸರ್ಕಾರದವರು ವಹಿಸಿಕೊಂಡು ನಡೆಸಿದರೆ ಮ್ಯುನಿ ... ಪಾಲಿಟಿಯವರು ಗಂಡು ಹುಡುಗರ ಪ್ರಥಮ ವಿದ್ಯಾಭ್ಯಾಸವನ್ನು ಕ್ರಮವಾಗಿಯೂ ... ಸ್ಪಷ್ಟವಾಗಿಯೂ ನಡೆಸಬಹುದೆಂದು ಮೆಂಬರುಗಳು ಸರ್ಕಾರಕ್ಕೆ ... ತಿಳಿಸಬೇಕೆಂದು ತೀರ್ಮಾನ ಮಾಡಿದರು.—ದೇವರಾಜ ಮಾರ್ಕಟ್ಟಿನಲ್ಲಿ ... ರುವ ಮಾಂಸದ ಅಂಗಡಿಗಳನ್ನು ತೆಗೆದು ಹೊರಗಡೆ ಸಮೀಪದಲ್ಲೇ ... ಸ್ಥಳದಲ್ಲಿ ನಡೆಸಬೇಕೆಂದು 11 ಮೆಂಬರುಗಳು ಒಪ್ಪಿಕೊಂಡರು.—... ಎಕ್ಸಿಕ್ಯೂಟಿವ್ ಇಂಜನಿಯರ್ ಮ|| ಕೆ. ರಾಮಸ್ವಾಮಿ ಅಯ್ಯಂಗಾರವರು ... ಬಳಿ ... ಗೇಟಿನ ಹತ್ತಿರ 75 x 100 ಅಡಿ ವಿಸ್ತಾರವಾದ ನಿವೇಶನ ... ದು ಬಂಗಲೆ ಕಟ್ಟಿಕೊಳ್ಳುತ್ತೇವೆಂದು ಕೇಳಿದರು ಅದರಂತೆ ಅವ ... ನಿವೇಶನವನ್ನು ಗಜಕ್ಕೆ 3 ಆಣೆಯಂತೆ ಬೆಲೆ ಮಾಡಬಹುದೆಂದು

ಮೆಂಬರುಗಳು ಸಮ್ಮತಿಪಟ್ಟರು.—ಮಾರ್ಕೆಟ್ಟಿನಲ್ಲಿ ಕೆಲವು ಅಂಗಡಿಗಳನ್ನು ಕಾಮಗಾರಿ ನಿಮಿತ್ತ ಮ್ಯುನಿಸಿಪಾಲಿಟಿಯವರು ಒಡೆಸಿಹಾಕಿದ್ದರಿಂದ ಮಾರ್ಕೆಟ್ ಕಂಟ್ರಾಕ್ಟರು ತನಗೆ ನಷ್ಟವಾಯಿತೆಂದು ಅರ್ಜಿ ಬರೆದುಕೊಂಡಿದ್ದನು. ಅವನ ಕಂಟ್ರಾಕ್ಟಿನಲ್ಲಿ ಅರ್ಧ ಹಣವನ್ನು ಕಡಮೆ ಮಾಡಬಹುದೆಂದು ತೀರ್ಮಾನವಾಯಿತು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಕಳುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕೊಡುವಳ್ಳಿ, ಸೂರ್ಯನಾರಣಪ್ಪ.—ಈ ಬಾತ್ಮಿಯನ್ನು ಪ್ರಕಟಿಸೋಣದರಲ್ಲಿ ಸತ್ಫಲವೇನೂ ಕಾಣುವುದಿಲ್ಲ.

ಹರಿಹರದ ದೇವಸ್ಥಾನದ ರಥೋತ್ಸವದ ಕಾರ್ಯಗಳು ಖರ್ಚಿಗೆ ತಕ್ಕಷ್ಟು ತೃಪ್ತಿಕರವಾಗಿ ನಡೆಯಲಿಲ್ಲವೆಂದೂ, ದೇವಸ್ಥಾನದ ವಿಚಾರಕರ್ತರುಗಳ ಸಂಖ್ಯೆ ಹೆಚ್ಚಿರೋಣವೂ, ಅವರಲ್ಲಿ ಹಲವರು ಸ್ಥಳ ವಿಶ್ವಾಸಗಳನ್ನು ಸರಿಯಾಗಿ ಅರಿಯದಿರೋಣವೂ ಕಾರಣವೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ, ಸ್ಥಳದ ಮುಖಂಡರು ಒಂದಾದಲ್ಲದೆ ಯಾವುದೊಂದೂ ಕ್ರಮಪಡುವುದಿಲ್ಲವಾದ ಕಾರಣ ನಿಜಸ್ಥಿತಿಯನ್ನು ಕುರಿತು ಗಣ್ಯರಾದವರು ಸರ್ಕಾರಕ್ಕೆ ಅರಿಕೆ ಮಾಡಿಕೊಂಡರೆ ಅವರು ಕ್ರಮಪಡಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ.—ಎಡಿ.]

ಕರೆಸ್ಪಾಂಡೆನ್ಸ್.

ಸಂಪದಭಿವೃದ್ಧಿಯ ಒಂದು ಸಲಹೆ.

ಅಯ್ಯಾ,—ನಮ್ಮ ದೇಶದಲ್ಲಿ ಅದರಲ್ಲಿಯೂ ಹೆಚ್ಚಾಗಿ ನುಲೆನಾಡು ಡಿಸ್ಟ್ರಿಕ್ಟುಗಳಲ್ಲಿ ಕೆಲವು ವರ್ಗಾಶ್ರಮದ ರೈತಾಪೀ ಜನರು ಕಾಂಬೂಲ ಚರ್ವಣದ ಜೊತೆಯಲ್ಲಿ ಒಂದು ತಗರಿಕಾಳು ಗಾತ್ರದ ಕಾಚನ್ನು ಹಾಕಿಕೊಳ್ಳುವುದು ವಾಚಕರೆಲ್ಲರಿಗೂ ತಿಳಿದೇ ಇರುತ್ತದೆ. ಇಷ್ಟು ಅಲ್ಪವಾಗಿ ಅದನ್ನು ಉಪಯೋಗಿಸುತ್ತಿದ್ದರೂ ಇದರ ವಿಕ್ರಯವು ಹಾಸನ, ಕಡೂರು, ಶಿವಮೊಗ್ಗ ಈ ಮೂರು ಡಿಸ್ಟ್ರಿಕ್ಟುಗಳಿಂದಲೇ ಲಕ್ಷಾಂತರ ರೂಪಾಯಿಗಳಿಗೆ ಮೇಲ್ಪಟ್ಟು ಕಾಚು ವ್ಯಾಪಾರ ನಡೆಯುತ್ತಿದೆ ಇದು ನಮ್ಮ ದೇಶದಲ್ಲಿ ತಯಾರಿಲ್ಲದೆ ಇತರ ದೇಶಗಳಿಂದ ಇಲ್ಲಿಗೆ ಬಂದು ಮಾರಾಟವಾಗಿ ಆಯಾ ಗೌರ್ನಮೆಂಟಿಗೂ, ಸ್ವಂತಗಾರರಿಗೂ ಅತ್ಯಂತ ಲಾಭಕರವಾಗುತ್ತಿದೆ. ಅಲ್ಲದೆ ಅವರಿಂದ ತಂದು ಇಲ್ಲಿ ಚಿಲ್ಲರೆ ವಿಕ್ರಯಮಾಡುವ ನಮ್ಮ ದೇಶದ ವರ್ತಕರೂ ಕೂಡ ಈ ವ್ಯಾಪಾರದಿಂದ ಐಶ್ವರ್ಯವಂತರಾಗಿರುತ್ತಾರೆ. ಇದನ್ನು ಹೆಚ್ಚಾಗಿ ದಕ್ಷಿಣ ಕೆನರಾ ಜಿಲ್ಲೆಯಲ್ಲಿ ಅತ್ಯಂತ ಸುಲಭವಾದ ಖರ್ಚಿನಿಂದ ತಯಾರಿಸಿ ನಮ್ಮಲ್ಲಿಯ ಅಪಾರ ಧನವನ್ನು ಸಂಪಾದಿಸುತ್ತಿದಾರೆ ನಮ್ಮ ದೇಶದಲ್ಲಿ ಇದನ್ನು ಹೆಚ್ಚಾಗಿ ಭೋಗ್ಯವಸ್ತುವಾಗಿಯೂ, ಇತರ ದೇಶಗಳಲ್ಲಿ ಈ ಕಾಚನ್ನು ಬಣ್ಣ ತಯಾರಿಗೂ ಉಪಯೋಗಿಸುತ್ತಾರೆ. ಇದು ಕೆಲವು ಜಾತಿಯ ಮರಗಳಿಂದ ತಯಾರಾಗುತ್ತದೆ. ಈ ಜಾತಿಯ ಮರಗಳು ನಮ್ಮ ದೇಶದ ಫಾರೆಸ್ಟುಗಳಲ್ಲಿ ಬೇಕಾದಷ್ಟು ದೊರೆಯುವವು. ಅವುಗಳ ಬೆಲೆಯನ್ನರಿಯದೆ ನಾವುಗಳು ಸರ್ವದಾ ಸೌದೆಯಾಗಿ ಉಪಯೋಗಿಸುತ್ತೇವೆ. ಈ ವಿಷಯವು ನಮ್ಮ ಘನ ಸಂಪದಭಿವೃದ್ಧಿ ಸಮಾಜದವರ ದೃಷ್ಟಿಗಮನಕ್ಕೆ ಗೋಚರವಾಗದಿರಲು ಕಾರಣವೇನೋ ಗೊತ್ತಿಲ್ಲ. ಇದು ವಿಶೇಷವಾಗಿ ಕರೇದ ಮರದಿಂದ ತಯಾರಾಗುತ್ತದೆ. ಇನ್ನು ಯಾವಯಾವ ಜಾತಿ ಮರಗಳಿಂದ ತಯಾರಿಸಬಹುದೋ ಪ್ರಯೋಗ ಶೋಧನೆಯಿಂದ ಗೊತ್ತಾಗುವುದು. ನಮ್ಮ ಸಂಪದಭ್ಯುದಯ ಸಮಾಜದವರು ಮೇಲ್ಕಂಡ ಕಾಚು ತಯಾರಿ ವಿಷಯದಲ್ಲಿ ಪರೀಕ್ಷೆ ನಡೆಸಿ ಲಾಭ ಕಂಡು ಬರುವುದಾದರೆ ಮೊದಲು 1-2 ಕಾರ್ಖಾನೆಯುಗಳನ್ನು ಸ್ಥಾಪಿಸುವರಾಗಲೆಂದು ಹಾರೈಸುತ್ತೇನೆ. ಸ್ವದೇಶಾಭಿಮಾನಿ.

ತೀರ್ಥಹಳ್ಳಿ ಪ್ರದರ್ಶನ—ಸಮಾಧಾನ.

ಅಯ್ಯಾ,—ತಾ. ನೇ ತಮ್ಮ ಪತ್ರಿಕೆಯಲ್ಲಿದ್ದ ತೀರ್ಥಹಳ್ಳಿ ವಿದ್ಯಾಭ್ಯಾಸ ಪ್ರದರ್ಶನ ಆಕ್ಷೇಪಣೆಗೆ ಸಮಾಧಾನ ಹೇಳುತ್ತೇನೆ. ಮ|| ಕಾ. ರಾಘವೇಂದ್ರರಾಯರು ಹೇಳುವಂತೆ ಇ|| ಜನರಲ್ ನಾಗೇಟರು ಜನವರಿ ತಾ. 25 ರಲ್ಲು ಇಲ್ಲಿನ ವಿದ್ಯಾಭ್ಯಾಸ ಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸಲು ದಯಮಾಡಿದಾಗ ಬಾಲಕ ಬಾಲಕಿಯರು ಅಭಿನಯಿಸಿದ ನಾಟಕಕ್ಕೆ ತೃಪ್ತರಾಗಿ ಅವರಿಗೆ ಬಹುಮಾನ ರೂಪವಾಗಿ 40 ರೂಪಾಯಿ ದಯಪಾಲಿಸಿದ ಸಂಗತಿ ನಿಜ. ಸದರಿ ಬಹುಮಾನ ಇನ್ನೂ ಉಪಾಧ್ಯಾಯರ ಕೈ ಸೇರಿಯೇ ಇಲ್ಲ. ಇವರು ತಮ್ಮ ಪಾಠಶಾಲೆಯ ಹಾಲು ಬೀರನ್ನ ಉಪಾಧ್ಯಾಯರುಗಳಿಗೆ ತಿನ್ನಿಸಿ ತಮ್ಮ ಮನಸ್ಸಿನಲ್ಲಿರುವ ವಿಷವನ್ನು ಬಾಲಕರ ಪೋಷಕರ ಮನಸ್ಸಿನಲ್ಲಿ ಬೆರಸಿ ಬಾಲಕರ ವಿದ್ಯಾಭಿವೃದ್ಧಿಗೆ ವಿಘ್ನವನ್ನೆಸಗಲು ಪ್ರಯತ್ನಪಟ್ಟಿರುವರು. ಇವರ ಬರವಣಿಗೆಗೆ ವಿಷಾದಿಸಬೇಕಾಗಿದೆ - ಪ್ರದರ್ಶನವು ಅಸಾಧುವೆಂದು ಅನೇಕರು ಹೇಳುವರು - ಎಂದೂ ಹೇಳಿದಾರೆ. ಹಾಗೆಂದೇನೂ ಯಾರೂ ತಿಳಿದಿರಲಾರರು. ಇವರು ಹೇಳುವುದು ನಿಜವಾಗಿದ್ದ ಪಕ್ಷದಲ್ಲಿ ಅವರೂ ಇವರ ಸಹೋದರರೆಂದೇ ಹೇಳಬೇಕು...... ತೀರ್ಥಹಳ್ಳಿ.

[ಆಕ್ಷೇಪಣೆಗೆ ಸಮಾಧಾನವಿದ್ದರೆ ಹೇಳಬೇಕೇ ಹೊರತು ಆಗ್ರಹ ಹುಟ್ಟಿಸುವ ಪದಗಳನ್ನು ಪ್ರಯೋಗಿಸುವುದು ಸರಿಯಲ್ಲವಾಗಿ ಈ ಬಾತ್ಮಿಯಲ್ಲಿ ಕೆಲವು ಭಾಗವನ್ನು ಬಿಟ್ಟುಬಿಡಬೇಕಾಗಿದೆ —ಎಡಿ.]

II

ಅಯ್ಯಾ,—ಹಿಂದಿನ ಪತ್ರಿಕೆಯಲ್ಲಿ ಮ|| ಕಾ. ರಾಘವೇಂದ್ರರಾಯರು ಹೇಳಿದಂತೆ ಮ|| ಎಂ. ರಾಮರಾವ್, ಎಂ. ಎ ಯವರು ಎರಡು ಸ್ಕೂಲುಗಳಿಗೂ 40 ರೂಪಾಯಿ ಕೊಡುವಂತೆ ಹೇಳಿದ್ದೇನೋ ನಿಜ. ಆದರೆ ಅದು ಇನ್ನೂ ಮಂಜೂರಾದಂತೆ ಇಲ್ಲ. ಮಂಜೂರಾದ್ದರೂ ಸರಿಯಾಗಿಯೇ ವಿನಿಯೋಗಿಸುವರು. ಇದೊಂದು ವಿಷಯದಲ್ಲಿ ಮಾತ್ರ ಅಸಾಧುತನವು ತೋರುವದಿಲ್ಲ. ಆದರೆ ಈ ಪ್ರದರ್ಶನದ ಕೆಲಸವು ಅನೇಕ ಭಾಗದಲ್ಲಿ ಅಸಾಧುವಾದ್ದೆಂತ ಜನಗಳ ಮನಸ್ಸಿಗೆ ವ್ಯಕ್ತವಾದಂತೆ ತೋರುತ್ತೆ. ಮ|| ರಾಘವೇಂದ್ರರಾಯರೂ ಬಾಲಕರೂ ಅಗ್ರಾಸನಾಧಿಪತಿಗಳು ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದನ್ನು ಕೇಳಿರಬಹುದು. ಪ್ರದರ್ಶನವಾಗಿ ಇಷ್ಟು ದಿನವಾದರೂ ಕೊಡಲಿಲ್ಲವಲ್ಲಾ ಎಂದು ತಿಳಿಯದೆ ಬಾಲಕರು ಹೇಳಿದ್ದರೂ ಇರಬಹುದು ಅದನ್ನು ಕೇಳಿಕೊಂಡು ಇವರು ಪ್ರಕಟಿಸಿರಬಹುದು. ಅದರ ಇದರಲ್ಲಿ ಯಾವ ತಪ್ಪೂ ಇಲ್ಲವೆಂದು ತೋರುತ್ತೆ. ಬಾಲಕರನ್ನು ಬಿಟ್ಟು ಉಪಾಧ್ಯಾಯರು ಬಾಲಕಿಯರೊಂದಿಗೆ ಮೀರು ಮುಂತಾದ ಸವಿ ತಿಂಡಿಗಳನ್ನು ಮಾಡಿ ತಿಂದು ಸಂತೋಷಪಟ್ಟಿದ್ದಾವೆ. ಆದರೆ ಈ ಬಹುಮಾನದ ದುಡ್ಡಿನಿಂದ ತಿಂದದ್ದಲ್ಲ. ಹೆಚ್ಚು ಕಷ್ಟಪಟ್ಟವರು ಬಾಲಕರು. ಆದ್ದರಿಂದಲೇ ಅವರಿಗೆ ಆಹ್ವಾನವನ್ನು ಹಂಚಿರುವರು. ನಡೆಯುವ ಮನುಷ್ಯನು ಎಡವಿಬೀಳದೇ ಇರಲಾರನು. ಅದರಂತೆ ಇದರಲ್ಲೂ ಸ್ವಲ್ಪ ಕುಂದು ಬಂತು. ಆದರೆ ಗುಣಗ್ರಾಹಿಗಳು ಗುಣವನ್ನೇ ಆರಿಸಬೇಕಾಗಿ ಪ್ರಾರ್ಥನೆ. ಅಷ್ಟೊಂದು ಕಷ್ಟಪಟ್ಟ ಉಪಾಧ್ಯಾಯರುಗಳನ್ನು ನಾವು ದೂರುವದೂ ಅಲ್ಲ. ಆದರೆ ಅವರು ಬಾಲಕರಿಗೂ ಸರಿಯಾದ ಉಪಚಾರ ಮಾಡಬೇಕಾಗಿತ್ತು. ಮಾಡದೇ ಇದ್ದುದು ಭೇದವನ್ನೆಣಿಸಿದಂತೆ ಆಯಿತು. ಮ|| ರಾಘವೇಂದ್ರರಾಯರನ್ನೂ ದೂರುವಂತಿಲ್ಲ. ಅವರೂ ಏನೋ ಒಂದು ಸಲ ಮೋಸಹೋದರು. ಪ್ರದರ್ಶನದ ಕಾಲದಲ್ಲಿ ಕಷ್ಟಪಟ್ಟ ಉಪಾಧ್ಯಾಯರುಗಳು ಮಾತ್ರ ಮುಂದಕ್ಕೆ ಬರಲೆಂದು ಬೇಡುವ ಸಜ್ಜನ ವಿಧೇಯ.

ತಾಲ್ಲೂಕು ವರ್ತಮಾನಗಳು.

<u>ಬೇಲೂರು.</u>—ಈ ಬೇಲೂರು ಪೇಟೆ ಹೈ ರೋಡಿನಲ್ಲಿ ಕಳೆದ ತಾ. 9 ನೇ ಬುಧವಾರ ಮಧ್ಯಾಹ್ನ ಸುಮಾರು 3 ಘಂಟೆ ವೇಳೆಯಲ್ಲಿ ತಿಪ್ಪಯ್ಯನ ರಾಮಶೆಟ್ಟರ ಮನೆಯಲ್ಲಿ ಮನೆ ಹೆಂಗಸರು ಬಾಗಿಲು ತೆಗೆದುಕೊಂಡು ತಮ್ಮ ಅಂಗಡಿಯಲ್ಲೇ ವ್ಯಾಪಾರ ಮಾಡುತ್ತಾ ಕುಳಿತಿದ್ದಾಗ್ಗೆ ಒಳಸಂಚನ್ನು ಬಲ್ಲ ನಾಲ್ವರು ಸೇರಿ ಆ ಮನೆ ಹಿತ್ತಲ ಬಾಗಿಲಿನಲ್ಲಿ ಒಳಹೊಕ್ಕು ನಗನಾಣ್ಯಗಳಿದ್ದ ಸುಮಾರು ಸಾವಿರಾರು ರೂಪಾಯಿ ವರೆಗೆ ಬೆಲೆ ಬಾಳುವ ಟ್ರಂಕ್ ಒಂದನ್ನು ಹೊತ್ತುಕೊಂಡು ಹೋದ ಅರ್ಧ ಗಂಟೆಯೊಳಗಾಗಿ ಮನೆಯವರ ಅವಗಾಹನೆಗೆ ಬಂದು ಗಲಾಟೆಯಾಗಲು ಸುತ್ತುಮುತ್ತಲು ಹುಡುಕಲು ನಗನಾಣ್ಯಗಳನ್ನು ತೆಗೆದುಕೊಂಡು ಪೆಟ್ಟಿಗೆಯನ್ನು ಪಕ್ಕದ ಗೋಡೆಯಲ್ಲಿ ಹಾಕಿ ಹೋಗಿದ್ದರು ಅನಂತರ ಪೋಲೀಸಿಗೆ ರಿಪೋರ್ಟಾಗಿ ನೆನ್ನೆ ದಿವಸ ಪೋಲೀಸಿನವರ ಮಹನತ್ತಿನಿಂದ ಕೆಲವು ಕಳುವಾದ ನಗಗಳ ಸಮೇತ ಕಳ್ಳರನ್ನು ಪತ್ತೇ ಮಾಡಿ ಹಿಡಿದು ತಂದದ್ದು ಸಂತೋಷಕರವಾದ ಸಂಗತಿಯಾಗಿದೆ. ಈ ಪೈಕಿ ಮೂವರು ಸಿಕ್ಕಿರುವುದಾಗಿಯೂ ಇನ್ನೊಬ್ಬನು ಇನ್ನೂ ಸಿಕ್ಕಿಲ್ಲವಾಗಿ ತಿಳಿದು ಬಂದಿದೆ. ಕಳುವಾದ ಸಾಮಾನುಗಳ ಪೈಕಿ 400 ರೂ ನಗಗಳು ಮಾತ್ರ ಈಗ ಸಿಕ್ಕಿರುತ್ತವೆ.

<u>ಶಿವಮೊಗ್ಗ</u> —ತಾ. 13 ನೇ ಸೋಮವಾರ ಅಗಡಿಯ ಅವಧೂತರ ಪುಣ್ಯದಿನವನ್ನು ಈ ಊರ ಭಕ್ತಜನಗಳು ತಮ್ಮ ಶಕ್ತ್ಯಾನುಸಾರ ಚಂದಾ ಹಾಕಿ ನಡಿಸಿದರು.—ಈ ಊರು ಸಾಹುಕಾರ್ ಬೇಲೂರ ರಾಮಣ್ಣನವರ ಸೋದರತ್ತೆಗೆ ಮೈಲಿರೋಗ ಬರುತ್ತಿತ್ತು. ಭಾನುವಾರ ಸದರಿ ಹೆಂಗಸು ನದಿಯಲ್ಲಿ ಸ್ನಾನ ಮಾಡುವಾಗ್ಗೆ ಮೈಲಿರೋಗ ಬಂದು ಬಿದ್ದು ಸತ್ತುಹೋದಳು. ಸಾಹುಕಾರರೂ ಇತರರೂ ಸೇರಿ ಶವವನ್ನು ಸಾಗಿಸಿದರು.—ಪ್ಲೇಗ್ ಗಲಾಟೆಯಿಂದ ಇದು ವರೆಗೆ ಗ್ರಾ|| ಗರ್ಲ್ಸ್ ಸ್ಕೂಲನ್ನು ಎ. ವಿ. ಸ್ಕೂಲಿನಲ್ಲಿ ಬೆಳಗಿನ ಹೊತ್ತು ಮಾತ್ರ ಮಾಡುತ್ತಿದ್ದರು. ಈಗ ಗಲಾಟೆ ಕಡಮೆ ಆದ್ದರಿಂದ ದೊಡ್ಡ ಬ್ರಾಹ್ಮಣರ ಕೇರಿ ಕೆರೆಹೋಡೆ ರಾಮರಾಯರ ಮನೆಯಲ್ಲಿ ಮಾಡುತ್ತಾರೆ ಆದರೆ ಮೊನ್ನೆ ದಿನ ಪೇಟೆಯಲ್ಲಿರುವ ಸುಂಕದ ಕಟ್ಟೆಯ ಬೋರ್ಡಿನಲ್ಲಿ 2 ಪ್ಲೇಗ್ ತಗಲಿದವೆಂತಲೂ, 2 ಸತ್ತದ್ದು ಎಂತಲೂ ತೋರಿಸಿತ್ತು. ಇದರಿಂದ ಜನಗಳು ಪುನಃ ಗಾಬರಿಯಾಗಲು ಕಾರಣವಾಗಿದೆ.—ಈ ಊರ ಪೇಟೆ ವೈಶ್ಯ ಪುರೋಹಿತ ಪುಟ್ಟಭಟ್ಟರು ಕಾಲವಾದರು. ಇವರು ಬಹಳ ಜನಗಳಿಗೆ ಉಪಕಾರಿಗಳಾಗಿದ್ದರೆಂದು ಇವರ ಅಕಾಲ ಮರಣಕ್ಕೆ ವ್ಯಸನಪಡುತ್ತೇವೆ.

<u>ಮಂಗಳೂರು.</u>—ಯಂಗ್ ಮೆನ್ಸ್ ಯೂನಿಯನ್ ಎಂಬ ಈ ಯುವಜನ ಸಮಾಜದ ವಾರ್ಷಿಕೋತ್ಸವವು ಇದೇ ತಿಂಗಳು ತಾ 6 ಕ್ಕೆ ರಾ|| ಬೇರಿಸ್ಟರ್ ರೋಬು ಇವರ ಅಧ್ಯಕ್ಷತೆಯಲ್ಲಿ ಅತೀ ವಿಜೃಂಭಣೆಯಿಂದ ನಡೆಯಿತು —ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ತಾ. 10 ಕ್ಕೆ ನಡೆಯಿತು. ಈ ವರ್ಷ ಇಲ್ಲಿ ಪ್ಲೇಗಿನ ಗಲಾಟೆ ಇಲ್ಲವಾದ ಕಾರಣ ಹೊರ ಊರಿನ ಭಕ್ತಾದಿಗಳು ಭಾರಿಯಾಗಿ ಬಂದಿದ್ದರು. ವೇ|| ನರಹರಿಶಾಸ್ತ್ರಿಗಳು ಮೈಸೂರಿಂದ ಇಲ್ಲಿಗೆ ಬಂದು ಪ್ರಹ್ಲಾದಚರಿತ್ರೆ, ಹಿಂದೂದೇಶದ ಅಭಿವೃದ್ಧಿ ಮೊದಲಾದ ಉಪನ್ಯಾಸಗಳು ಮಾಡುತ್ತಿರುವರು.—ಇಲ್ಲಿಯ ಹವಾ ಗುಣಗಳು ಚೆನ್ನಾಗಿವೆ. ಪೇಟೆಯ ಧಾರಣೆಗಳು ಏರುಪೇರಾಗಿಯೇ ಇವೆ.—ಉಲ್ಲಾಳ್ ಮೊಟ್ಟಿನ ರಾ|| ಸಿ. ಆರ್. ಕಮತ್‌ರವರು ತಮ್ಮ ಕುಮಾರನ ಉಪನಯನವನ್ನು ತಾ 9 ಕ್ಕೆ ಅಟ್ಟಹಾಸವಾಗಿ ಮಾಡಿದರು. ಸಾಹುಕಾರರೇ ಮೊದಲಾದ ಎಲ್ಲಾ ಕೋಮುಗಳ ದೊಡ್ಡ ಮನುಷ್ಯರು ಹಾಜರಿದ್ದು, ನೂತನ ವಟುವನ್ನು ಆಶೀರ್ವದಿಸಿ, ಉಡುಗೆರೆ ಉಪಚಾರಗಳನ್ನು ಮಾಡಿದರು.—ಇಲ್ಲಿಯ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿಯ ಮೋಟರ್ ಕಾರುಗಳು ಬರುವ ತಿಂಗಳಿಂದ ಉಡುಪಿ ವರೆಗೆ ಪ್ರಯಾಣಿಕರ ಸಲುವಾಗಿ ಚಲಾಯಿಸುವದೆಂಬ ವರ್ತಮಾನವಿದೆ. ಮಳೆಗಾಲದ ಛಳಿಯು ಇನ್ನೂ ಬಿಟ್ಟಿಲ್ಲ. ಮೋಡವು ಆಗಾಗ್ಗೆ ಕಾಣುತ್ತಲೇ ಇವೆ.

<u>ಮೇಲುಕೋಟೆ</u> —ಹವಾ ಹಿತಕರವಾಗಿದೆ. ಕುಡಿಯುವ ನೀರು ಸಮೃದ್ಧಿಯಾಗಿ ಇಲ್ಲಿಗೆ ಬರತಕ್ಕ ಯಾತ್ರಿಕರಿಗೆ ಅನುಕೂಲವಾಗಿದೆ.—ಈ ಸಲ ನಡೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮೆಂಬರುಗಳು ಉತ್ಪತ್ತಿಯನ್ನು ಹೆಚ್ಚಿಸಲು ಬೇಕಾದ ಸಲಹೆಗಳನ್ನು ಬಹಳ ಚೆನ್ನಾಗಿ ಚರ್ಚಿಸಿದರು ಇದೇ ರೀತಿ ಮ್ಯುನಿಸಿಪಲ್ ಖರ್ಚಿನ ವಿಚಾರದಲ್ಲಿ ಜನಗಳಿಗೆ ... ಬಾಬುಗಳನ್ನು ಕುರಿತು ಪರ್ಯಾಲೋಚಿಸುವರೆಂದು ... . ಮ್ಯುನಿಸಿಪಲ್ ಲಾಂದ್ರಗಳು 21 ಇದ್ದದ್ದು 13 ಆಗಿವೆ. ಬ್ರಾಂಚ್ ಪೋಸ್ಟಾಫೀಸಿನ ಬೀದಿಗಳಿಗೆ ಗಾಡಿಗಳು ಹೋಗುವ ದಕ್ಕೆ ರಸ್ತೆಗಳು ಇಲ್ಲದಿದ್ದರೂ ರಾತ್ರಿ ವೇಳೆಯಲ್ಲಿ ದೀಪದ ಬೆಳಕನ್ನು ನೋಡಿ ಅನೇಕ ಪ್ರಸಂಗಗಳಾಗಿಬಹುದು ಈ ಕುಂದಕವನ್ನು ವೈಸ್ ಪ್ರೆಸಿಡೆಂಟರು ನಿವಾರಣೆ ಮಾಡಿಯಾರೆಂದು ಪ್ರಾರ್ಥಿಸುತ್ತೇವೆ —ಈ ಸಲ ವೈರಮುಡಿ ಉತ್ಸವವು ಮಾರ್ಚಿ ತಾ. 10 ರಿಂದ ... ನ ನಡೆಯುವುದು ನಮ್ಮ ಡೆಪ್ಯುಟಿ ಅಮಲ್ದಾರರು ಮತ್ತು ಧರ್ಮದರ್ಶಿಗಳು ಉತ್ಸವಕಾಲದ ಪ್ರೋಗ್ರಾಮನ್ನು ಬಹಳ ಮೆಹನತ್ತಿನಿಂದ ಏರ್ಪಡಿಸಿರುತ್ತಾರೆ. ಇದು ಎಷ್ಟರಮಟ್ಟಿಗೆ ಫಲಕಾರಿಯಾಗಿ ಯಾತ್ರಿಕರಿಗೆ ಅನುಕೂಲವಾಗುತ್ತೆಂದು ಸಂದೇಹಪಡಬೇಕಾಗಿದೆ. ಧರ್ಮದರ್ಶಿಗಳು ದೇವಾಲಯದ ಕಾರ್ಯಗಳನ್ನು ಬಹಳ ಸಮರ್ಪಕವಾಗಿ ನೆರವೇರಿಸಬೇಕೆಂದು ಅನೇಕ ರೆಜಲ್ಯೂಷನ್ಗಳನ್ನು ಮಾಡಿರುತ್ತಾರೆ. ಇವರು ಉತ್ಸವಕಾಲಗಳಲ್ಲಿ ಮುಂದಾಳಾಗಿ ಸರ್ಕಾರದವರಿಗೆ ಸಹಾಯಮಾಡಿದರೆ ಬಹಳ ಅನುಕೂಲವಾಗುವುದು.—ಈ ಸಲದ ಉತ್ಸವ ಕಾಲದಲ್ಲಿ ಇಲ್ಲಿನವರ ಸಂಪದಭ್ಯುದಯಕ್ಕೆ ಕಾರಣಗಳಾದ ನಾನಾ ವಿಧ ಕಾನ್ಫರೆನ್ಸುಗಳೂ, ಉಪನ್ಯಾಸಗಳೂ, ಸಂತೋಷ ಕೂಟಗಳೂ ನಡೆಯುವವು ಈ ಪ್ರಾಂತ್ಯದ ಬಹಳ ಜನಗಳು ಅದರ ಪ್ರಯೋಜನವನ್ನು ಪಡೆಯಬಹುದು — ಇಲ್ಲಿಂದ ಸಿಂಧಘಟ್ಟಕ್ಕೆ ವರ್ಗವಾದ ಅ|| ಮಾಸ್ಟರ್ ಮ|| ಶಂಕರಶಾಸ್ತ್ರಿಯವರಿಗೆ ಇಲ್ಲಿನ ಬಾಲಕರು ತಮ್ಮ ಕೃತಜ್ಞತೆಯನ್ನು ತೋರ್ಪಡಿಸಲು ಒಂದು ಸಂತೋಷ ಕೂಟವನ್ನು ನಡಿಸಿದರು. ಇವರು ಇಲ್ಲಿನವರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿದ್ದರು. ಇವರ ಸ್ಥಾನಕ್ಕೆ ಮ|| ಕೆ. ತಿರುವಲಿಯಾಂಡಾನ್ ಅಯ್ಯಂಗಾರ್ಯರು ಬಂದಿದಾರೆ.—ಇಲ್ಲಿನ ವೇದ ಪಾಠಶಾಲೆಯು ಕ್ರಮವಾಗಿ ನಡೆಯುತ್ತಲಿದೆ ಈ ಶಾಲೆಗೆ ಮ|| ಯಂ. ಕೆ ತಿರುಮಲಾಚಾರ್ಯರು ಪೋಷಕರಾಗಿರುತ್ತಾರೆ. ಮದರಾಸ್ ಯತೀಂದ್ರ ಪ್ರವಣಶೆಟ್ಟಿಯವರ ಮತ್ತು ರಾಮಾನುಜಂಶೆಟ್ಟಿಯವರ ಧರ್ಮ ಕೆಲಸಗಳು ಇಲ್ಲಿ ಬಹಳ ಏತಲದಿಂದ ಶ್ರೀಮಾನ್ ಮ. ಕೆ ಶ್ರೀನಿವಾಸಯ್ಯಂಗಾರ್ರ ಮೂಲಕ ನಡೆಸಲ್ಪಡುತ್ತಿದೆ. ನಮ್ಮ ಹೆಡ್ ಮಾಸ್ಟರ್ ಮ|| ಯಂ. ಜಿ ರಾಮಯ್ಯಂಗಾರ್ರು ಈ ಸಲ ನಡೆಯುವ ಕಾನ್ಫರೆನ್ಸ್ ಮಗ್ಗರೆ ಕೆಲಸಗಳಿಗಾಗಿ ಅನೇಕ ಏರ್ಪಾಡುಗಳನ್ನು ಮಾಡುತ್ತಿರುವರು. ಇವರು ಇಲ್ಲಿನವರ ಶ್ರೇಯಸ್ಸಿಗಾಗಿ ಅನೇಕ ಕಾರ್ಯಗಳನ್ನು ಮಾಡಿದ್ದರಲ್ಲಿ ಈಗ ಒಂದೊಂದಾಗಿ ಫಲಕಾರಿಯಾಗುತ್ತಿರುವುದು ಬಹಳ ಸಂತೋಷವಾಗಿದೆ.

ಹಾಸನ.—ಮೈಸೂರು ಸರ್ಕಲ್ ಇನ್ಸ್‌ಪೆಕ್ಟರವರು ಹಾಸನಕ್ಕೆ ಬಂದು ಇಲ್ಲಿನ ಸ್ಕೂಲುಗಳನ್ನು ಪರೀಕ್ಷೆ ಮಾಡಿದರು. ಹಾಸನದಲ್ಲಿ ವಿದ್ಯೆಯು ಹರಡುತ್ತಿರುವ ಸೂಚನೆಗಳು ಕಂಡು ಬರುತ್ತಿವೆ. ಹೋಕ್ಸ್ ಸ್ಕೂಲ್ ಕಟ್ಟಡವು ತಯಾರಾಗುತ್ತಿದೆ. ಕೆಲವು ತಿಂಗಳುಗಳ ಹಿಂದೆ ಒಂದು ಹೊಸ ಸ್ಕೂಲನ್ನು ಸ್ಥಾಪಿಸಿರುತ್ತಾರೆ.—ಪ್ರಜೆಗಳಲ್ಲಿ ಕೆಲವರಿಗೆ "ವೃತ್ತಾಂತ ಪತ್ರಿಕೆ" ಎಲ್ಲಿ ಸಿಕ್ಕುತ್ತದೆಂಬುದು ತಿಳಿದಿಲ್ಲ. ಕ್ರಮವಾಗಿ ಪತ್ರಿಕೆ ಪಡೆಯಬೇಕೆನ್ನುವವರು ಹಾಸನದ ಮಿಷನ್ ಸೂಪರಿಂಟೆಂಡೆಂಟರನ್ನು ಕಂಡರೆ ಅವರು ಏರ್ಪಾಡು ಮಾಡುತ್ತಾರೆ—ಪ್ಲೇಗ್ ಉಪದ್ರವು ಕಡಮೆಯಾಯಿತು, ಸುತ್ತುಮುತ್ತಿನ ಕೆಲವು ಗ್ರಾಮಗಳಲ್ಲಿ ಇನ್ನೂ ಇದ್ದೇ ಇದೆ. ಗ್ರಾಮಾಂತರಗಳಲ್ಲಿ ಇಲಿಗಳು ಸತ್ತುಹೋದರೆ ಪ್ರಜೆಗಳು ಹುಚ್ಚರಾಗಿಯೇ ಮನೆಗಳನ್ನು ಬಿಟ್ಟು ಜೋಪಡಿಗಳನ್ನು ಹಾಕಿಕೊಂಡು ವಾಸ ಮಾಡುವರು. ಪಟ್ಟಣಗಳಲ್ಲಿರುವ ಪ್ರಜೆಗಳಾದರೋ ಅವರಷ್ಟು ವಿವೇಕಶಾಲಿಗಳಲ್ಲ. ನೆರೆಹೊರೆಯವರು ಪ್ಲೇಗಿನಲ್ಲಿ ಸತ್ತದ್ದನ್ನು ಕಂಡರೂ ಮನೆಗಳನ್ನು ಬಿಡುವುದಕ್ಕೆ ಒಪ್ಪುವುದಿಲ್ಲ. ಎಷ್ಟು ವಿವೇಕ ಹೇಳಿದರೂ ಸೋಂಕಿರುವ ಮನೆಗಳೊಳಗೇ ವಾಸಮಾಡುತ್ತಾ ಬರುವರು. ಸರ್ಕಾರಿ ಅಧಿಕಾರಿಗಳು ಹೇಳುವಂತೆ ಪ್ರಜೆಗಳು ನಡೆದು ಸಹಾಯ ಮಾಡುತ್ತಾ ಬಂದ ಪಕ್ಷದಲ್ಲಿ ಪ್ಲೇಗ್ ಉಪದ್ರವನ್ನು ಸಂಪೂರ್ಣವಾಗಿ ಅಡಗಿಸಿಬಿಡಬಹುದು.—ಕೆಲವು ವಾರಗಳ ಕೆಳಗೆ ಇಲ್ಲಿನ ವೆಸ್ಲಿಯನ್ ಮಿಷನ್‌ನವರ ಸ್ತ್ರೀಯರ ಆಸ್ಪತ್ರೆಯಲ್ಲಿ ಒಂದು ಹೊಸ ವಾರ್ಡನ್ನು ಪ್ರತಿಷ್ಠೆ ಮಾಡಿದರು. ಈ ಆಸ್ಪತ್ರೆಯೊಳಗೆ ಹಲವು ರೋಗಿಗಳಿದ್ದು ಚಿಕಿತ್ಸೆ ಹೊಂದುವುದಕ್ಕೆ ಬಹಳ ಸೌಕರ್ಯವಿದೆ. ಸೀಮೆಯಿಂದ ಗಟ್ಟಿಗರಾದ ಲೇಡಿ ಡಾಕ್ಟರು ಬಂದು ಕೆಲವು ದಿನವಾಯಿತು. ಆಕೆಯವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿರುವರು. ಚಿಕಿತ್ಸೆಗಾಗಿ ಪರಸ್ಥಳದ ರೋಗಿಗಳು ಬಂದರೆ ಇಳುಕೊಳ್ಳುವುದಕ್ಕೆ ಬಹಳ ಅನುಕೂಲವಾದ ಚತ್ರಗಳು ಇಲ್ಲಿರುವವು.

ಇಂಡಿಯಾ ದೇಶದ ವೃತ್ತಾಂತಗಳು.

ಹೈದರಾಬಾದ್ ಸಂಸ್ಥಾನದ ಚೀಫ್ ಜಸ್ಟೀಸರಾದ ನವಾಬ್ ಹಕೀಮ್ ಉದ್ದೌಲಾ ಯವರು ಕಳೆದ ಶುಕ್ರವಾರ ಕಾಲವಾದರು.

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಕರ್ನಲ್‌ರವರ ಪತ್ನಿಯು ಕಾರ್ಖಾನೆಯಲ್ಲಿ ಯುದ್ಧಕ್ಕಾಗಿ ಗುಂಡುಗಳನ್ನು ತಯಾರುಮಾಡಿಕೊಡುತ್ತಿದ್ದಾಳೆ.

ಯುದ್ಧಕ್ಕೆ ಸಹಾಯ ಮಾಡಿದ್ದಕ್ಕಾಗಿ ನೇಪಾಳದ ಸೋಮೇಶ್ವರಜಂಗ್ ಬಹದೂರ್‌ಯವರಿಗೆ ಕೆ.ಸಿ.ಐ.ಇ. ಎಂಬ ಬಿರುದು ಕೊಡಲ್ಪಟ್ಟಿದೆ.

ಡಿಂಡಿಗಲ್‌ನಿಂದ ಪಾಲಘಾಟಿನ ವರೆಗೆ ರೈಲ್ ರಸ್ತೆ ಹಾಕಿ ನಡಿಸಬಹುದೆಂದು ಮದರಾಸ್ ಗವರ್ನ್‌ಮೆಂಟಿನವರು ಬನ್ನಿ ಕಂಪನಿಯವರಿಗೆ ವಹಿಸಿದ್ದಾರೆ.

ಪೂನಾ ಪಟ್ಟಣದ ಪ್ರೊಫೆಸರ್ ಕಾರ್ವೆ ಯವರು ಹಿಂದುಸ್ಥಾನದಲ್ಲಿ ಸ್ತ್ರೀಯರನ್ನು ವಿದ್ಯಾವತಿಯರನ್ನಾಗಿ ಮಾಡುವುದಕ್ಕೆ ಪ್ರತ್ಯೇಕವಾದ ವಿದ್ಯಾನಿಲಯವನ್ನು ಕಲ್ಪಿಸಬೇಕೆಂದು ಸಾಹಸಪಡುತ್ತಿದ್ದಾರೆ.

ರಾಜದ್ರೋಹಿ ಎಂದು ತೀರ್ಮಾನವಾಗಲ್ಪಟ್ಟ ಸೋಹನ್‌ಲಾಲ್ ಎಂಬವನನ್ನು ಕಳೆದ ಶುಕ್ರವಾರ ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದ ಬಂದೀಖಾನೆಯೊಳಗೆ ಗಲ್ಲಿಗೆ ಹಾಕಿಬಿಟ್ಟರು.

ಸಿಮ್ಲಾ ಪಟ್ಟಣದಲ್ಲಿರುವ ರಿಪನ್ ಆಸ್ಪತ್ರೆಯಲ್ಲಿ ಬಿಟ್ಟ ಗುಡ್ಡಗಳ ಗಂಡಸರಿಗೂ ಹೆಂಗಸರಿಗೂ ರೋಗ ಬಂದರೆ ಚಿಕಿತ್ಸೆ ಮಾಡಬೇಕೆಂದು ಗತಿಸಿದ ಸರ್ ಜೇಮ್ಸ್ ವಾಕರ್ ಯವರು ತಮ್ಮ ಆಸ್ತಿಯಲ್ಲಿ 6,500 ರೂಪಾಯಿ ಬರೆದಿಟ್ಟಿದ್ದಾರೆ.

ಪೂರ್ವ ಬಂಗಾಳದಲ್ಲಿ ಸರ್ಕಾರದವರು ಮೂರು ಮಂದಿ ದುಷ್ಟ ವಿದ್ಯಾರ್ಥಿಗಳನ್ನು ಹಿಡಿದು ಅವರ ಗ್ರಾಮಗಳಿಗೆ ವಾಪಸು ಕಳುಹಿಸಿ, ಅವರು ಪೊಲೀಸ್ ಕಮಿಷನರ್‌ರವರ ಅಪ್ಪಣೆ ಪಡೆಯದೆ ತಮ್ಮ ಗ್ರಾಮಗಳಿಂದ ಹೊರಗೆ ಹೋಗಕೂಡದೆಂದು ಹುಕುಂ ಮಾಡಿದ್ದಾರೆ.

ರಾಮನಾಡು ಡಿಸ್ಟ್ರಿಕ್ಟಿನಲ್ಲಿ ವೇಲಾಯುಧಂಪಿಳ್ಳೆ ಎಂಬವನ ಮೊದಲನೇ ಹೆಂಡತಿಯಾದ ಯುಕವಿ ಅಮ್ಮನು ಅವನ ಎರಡನೇ ಹೆಂಡತಿ (ತನ್ನ ಸವತಿ)ಯನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟದ್ದು ರುಜುವಾತಾಯಿತು. ಸೆಷನ್ಸ್ ಜಡ್ಜರು ಅವಳಿಗೆ ಶಿಕ್ಷೆ ವರುಷ ಕಠಿಣ ಸಜಾ ವಿಧಿಸಿದರು.

ಕಲ್ಕತ್ತಾ ಪಟ್ಟಣದ ಹೈಕೋರ್ಟ್ ವಕೀಲರಾದ ಅದಿನಾಥಚಂದ್ರ ಚಕ್ರವರ್ತಿಯವರು ಪ್ರಜಾ ಸಮ್ಮತಿಗೆ ಭಂಗವನ್ನು ತರಬಹುದೆಂದು ಅನುಮಾನದ ಮೇಲೆ ಹಿಡಿದು ಬಂದೀಖಾನೆಯಲ್ಲಿಟ್ಟಿದ್ದರು. ಕಳೆದ ವಾರ ಆತನನ್ನು ಜೈಲಿನಿಂದ ಬಿಡುಗಡೆ ಮಾಡಿ, ಆತನನ್ನು ತನ್ನ ಗ್ರಾಮದಿಂದ ಹೊರಕ್ಕೆ ಬರಕೂಡದೆಂದು ಕಳುಹಿಸಿಬಿಟ್ಟರು.

ಕಲ್ಕತ್ತಾ ಪಟ್ಟಣದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಪ್ರೊಫೆಸರ್ ಓಟನ್ ಎಂಬ ಪಂಡಿತರ ಮೇಲೆ ಬಿದ್ದು ಜೊಂಬಿ ಮಾಡಿದರು. ಈ ವಿಚಾರವನ್ನು ಕಾಲೇಜಿನ ಅಧ್ಯಕ್ಷರು ತನಿಖೆ ಮಾಡುವ ತನಕ ಆ ವಿದ್ಯಾಶಾಲೆಯನ್ನು ಮುಚ್ಚಿಬಿಟ್ಟಿರುವಂತೆ ನೋಟಿಸ್ ಕೊಟ್ಟಿದ್ದಾರೆ. ದುಷ್ಟರ ದೆಸೆಯಿಂದ ಸಭ್ಯರಾದ ವಿದ್ಯಾರ್ಥಿಗಳಿಗೂ ಬಾಧೆ ನಡೆಯುವಂತಾಯಿತು.

ಬೊಂಬಾಯಿನಲ್ಲಿ ದಿವಾಳಿ ಆದ ಇಂಡಿಯನ್ ಸ್ಪೀಸೀ ಬ್ಯಾಂಕಿನ ಲಿಕ್ವಿಡೇಟರು ಡೈರೆಕ್ಟರುಗಳ ಮೇಲೆ ಬ್ಯಾಂಕಿನ ನಷ್ಟವನ್ನು ಕೊಡಬೇಕೆಂದು ದಾವಾ ಮಾಡಿದ್ದರು. ಈ ಮೊಕದ್ದಮೆ ಕೆಲವು ತಿಂಗಳುಗಳಿಂದ ವಿಚಾರಣೆಯಲ್ಲಿದ್ದು ಕಳೆದ ವಾರ ರಾಜೀ ಆಯಿತು. ಬ್ಯಾಂಕಿನ ಡೈರೆಕ್ಟರುಗಳು ತಮ್ಮ ಪಾಲಿನ ನಷ್ಟದ ಹಣವನ್ನು ಮುಂದೆ ಹೇಳುವಂತೆ ಕೊಡುವುದಾಗಿ ಒಪ್ಪಿಕೊಂಡಿದ್ದಾರೆ. ಸರ್ ವಿಟ್ಠಲದಾಸ್ ಥಾಕರ್ಸೀಯವರು ರೂ. 1,80,000, ಸರ್ ಜಗಮೋಹನ್‌ದಾಸ್ ವರ್ಜೀವನ್‌ದಾಸ್ ಯವರು 5,00,000, ಸರ್ ಚಾಮ್‌ಸೇಟ್‌ಜಿ ಜೀಜೀಭಾಯಿ ಯವರು 15,000, ಪುರುಷೋತ್ತಮದಾಸ್ ಮಾಪ್‌ಜಿ 25,000, ಬೆರಾದಾಸ್ ಚತುರ್ಭುಜ ಮೊರಾರ್‌ಜೀ 2,500, ಲಾಲೂಭಾಯಿ ಧರಮ್‌ಚಂದ್ 15,000, ಮೇಲಾಜ ಲಕ್ಷ್ಮೀದಾಸ್ 87,500 ರೂಪಾಯಿ.

FREE! Do you wish to know "How to Make the Best Quality ROSE, JASMINE, LILY, LOTUS & Sweet Scented Hair Oils at a very cheap cost at your own home? If so, please write us at once and mention this paper. [263-9]

S. PAUL & Co., *Perfumers*,
4, Hospital Street, Dharamtola, **Calcutta.**

ಹೊಗಳಿಕೆಯನ್ನು ನಂಬುವುದಕ್ಕಿಂತಲೂ ಪರೀಕ್ಷಿಸುವುದೇ ಮೇಲು.
ಪರೀಕ್ಷೆಗಾಗಿ ಉಚಿತ.

"ಗೋಲ್ಡನ್ ಅಕಾರ್ಡಿಯನ್" ಅಂದರೆ ಚಿನ್ನದಂಥಾ ಸಮಯ. ಈ ಪದವನ್ನು ಇಲ್ಲಿ ಬರೆಯಲು ಕಾರಣವೇನೆಂದು ವಾಚಕರು ಯೋಚಿಸಬಹುದು. ಇದಕ್ಕೆ ಕಾರಣವು, ಭಾಗ್ಯವಂತರು ಮೊದಲು ಬಡವರಾದಿಯಾಗಿ ಧರಿಸುವ 500 ರೂ. ಬೆಲೆಯುಳ್ಳ ಆಭರಣವನ್ನು ಜನೋಪಕಾರಾರ್ಥವಾಗಿ ರೂ. 15 ಕ್ಕೆ ಸುಲಭೋಪಾಯದಿಂದ ತಯಾರಿಸಿ ವಿಕ್ರಯಿಸುತ್ತಿದ್ದೇವೆ. ಆಭರಣವನ್ನು ಪರೀಕ್ಷಾರ್ಥವಾಗಿ ಕೇಳುವವರಿಗೆ ಉಚಿತವಾಗಿ ಕಳುಹಿಸುತ್ತೇವೆ. ನಮ್ಮ ವಿಳಾಸ—

[46-3] ಆರ್. ವಿ. ಹಂಟರ್ ಕಂಪನಿ, ನಂ. 6, ಬಂದರ್ ಬೀದಿ, ಮದರಾಸು.

ದೊಡ್ಡಬಳ್ಳಾಪುರದ ಮುನ್ಸಿಫ್ ಕೋರ್ಟಿನಲ್ಲಿ.

1914-15 ನೇ ಇಸವಿ ಅಸಲು ನಂಬರ್ 496.

1915-16 ನೇ ಇಸವಿ ಜಾರಿ ನಂಬರ್ 345.

ವಾದಿ :—ಕಿಟ್ಟಾಚಿ ತಿಪ್ಪಯ್ಯ, ಮಂಚೇನಹಳ್ಳಿ.

ಪ್ರತಿವಾದಿ :—ರಾಮಣ್ಣನ ಮಗ ಮುನಿಯಪ್ಪ, ಡಿಟೋ ಮಂಚೇನಹಳ್ಳಿ.

ಈ ಕೋರ್ಟ್ ಜಾರಿ 1049-1914-15 ನೇ ನಂಬರಿನಲ್ಲಿ ಹರಾಜಾಗಿ ಪ್ರತಿವಾದಿ ಮುನಿಯಪ್ಪನಿಗೆ ಬಾಪತು ಬಗ್ಗೆ ಕೋರ್ಟಿನಲ್ಲಿ ಡಿಪಾಜಿಟ್ ಇರುವ ಮೊಬಲಗಿನ ಪೈಕಿ ಮೇಲ್ಕಂಡ ವಾದಿ ತಿಪ್ಪಯ್ಯನು ಮೇಲ್ಕಂಡ ಡಿಕ್ರಿ ಮೊಬಲಗಿಗಾಗಿ ರೂ. 114-5-6 (ಒಂದುನೂರ ಹದಿನಾಲ್ಕು ರೂಪಾಯಿ ಐದಾಣೆ ಆರುಕಾಸುಗಳನ್ನು) ಪಡೆ ಮಾಡಿಸಿರುತ್ತಾನೆ ಎಂಬ ವಿಷಯವನ್ನು ಇದರಿಂದ ತಿಳಿಯಪಡಿಸಿರುತ್ತೆ.

1916 ನೇ ಇಸವಿ ಫೆಬ್ರುವರಿ 16 ರಲ್ಲಿ ನಮ್ಮ ದಸ್ಕತ್ತಿನೊಡನೆ ಕೋರ್ಟ್ ಮೊಹರಿನಿಂದ ಕೊಡಲಾಯಿತು.

[48-1] ಹಿಯರಿಂಗ್ ತಾರೀಖು 25-2-1916

(By order)
V. N. SHUNMUGAM,
Head Munshi.

ಗೃಹಕೃತ್ಯದ ನೋಟೀಸು.

ಶ್ರೀರಂಗಪಟ್ಟಣ ತಾ|| ಕ್ಯಾತನಹಳ್ಳಿ ಹೋ|| ಕುರುಬರ ಶೆಟ್ಟಿಹಳ್ಳಿ. ವಾಸಿ ಶ್ರೀನಿವಾಸಪುರದ ಅಗ್ರಹಾರದಲ್ಲಿರುವ ಗಂಗಡಕಾರ ಜಾತಿ ಪಟೇಲ್ ಚಲುವೇಗೌಡನ ಮಗ ಚಲುವೇಗೌಡನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—

1. ನನ್ನ ಬಾವಾ ಚಿಕ್ಕಪ್ಪ ಘನತಿಯಾದ ಪಟೇಲ್ ನರಸೇಗೌಡನಿಗೆ ನಂಜಮ್ಮ, ಹೊನ್ನಮ್ಮ ಎಂಬಿಬ್ಬರು ಹೆಂಡತಿಯರಿದ್ದಾರೆ.

2. ಮೃತಪಟ್ಟ ನರಸೇಗೌಡನು ಅಪುತ್ರವಂತನೆಂದು 1887-88 ನೇ ಇಸವಿ ಸುಮಾರಿನಲ್ಲಿ ಒಂದು ವರುಷದ ನರಸಯ್ಯನೆಂಬ ಹುಡುಗನನ್ನು ದತ್ತು ಮಾಡಿಕೊಂಡನು. ಈಚೆಗೆ ಹೊನ್ನಮ್ಮನ ಹೊಟ್ಟೆಯಲ್ಲಿ ಇಬ್ಬರು ಹೆಣ್ಣುಮಕ್ಕಳೂ, ಚಿಕ್ಕನರಸಯ್ಯನೆಂಬೊಬ್ಬ ಮಗನೂ ಹುಟ್ಟಿದರು.

3. ಸದರಿ ನರಸೇಗೌಡನು ತನ್ನ ಆಸ್ತಿ ಆದಾಯಗಳಿಗೆ ತಪಸೀಲಾಗಿ ವಿಲ್ ಬರೆದು ಶ್ರೀರಂಗಪಟ್ಟಣದ ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ 19 ನೇ ನಂಬರಿಗೆ (ತಾ 15-5-1900) ರೆಜಿಸ್ಟರ್ ಮಾಡಿಟ್ಟು ಆ ತರುವಾಯ ಕಾಲವಾದನು.

4. ವಿಲ್ಲಿನ ಪ್ರಕಾರ ಸ್ವತ್ತಿಗೆ ಮುಖ್ಯ ವಾರಸುದಾರರಾಗಿದ್ದ ದತ್ತು ಮಗ ನರಸಯ್ಯನು 8-9 ವರುಷದಲ್ಲೂ, ಔರಸಪುತ್ರನಾದ ಚಿಕ್ಕನರಸಯ್ಯನು 2-3 ವರ್ಷದಲ್ಲೂ ಲಗ್ನವಗೈರೆ ಇಲ್ಲದೆ ಮೃತಪಟ್ಟರು. ಇವನ ಕೂಡ ಹುಟ್ಟಿದ ಇಬ್ಬರು ಹೆಣ್ಣುಮಕ್ಕಳೂ ಮದುವೆಯಾಗಿ ಅವರವರ ಗಂಡಂದಿರ ಮನೆಗಳಲ್ಲಿ ಬಾಳುತ್ತಾ ಇದ್ದಾರೆ. ಮೃತರ ಅದ್ಯಂತ ಸ್ವತ್ತಿನ ಪೂರಾ ಬಾಧ್ಯತೆಯನ್ನೂ ಹೋಗಲಾಡಿಸಿಕೊಂಡು ಜೀವನಾರ್ಥ ಮಾತ್ರ ಉಳಿಸಿಕೊಂಡಿರುವ ಮೇಲ್ಕಂಡ ನಂಜಮ್ಮ, ಹೊನ್ನಮ್ಮ ಹಾಲಿ ಉಳಿದಿದ್ದಾರೆ.

5. ಮೃತಪಟ್ಟ ನರಸೇಗೌಡನ ಉದ್ದೇಶಕ್ಕೆ ವಿರೋಧವಾಗಿ—(1) ಕರೀಘಟ್ಟದ ಶ್ರೀನಿವಾಸ ದೇವರಿಗೆ ಪ್ರತಿ ಆಶ್ವೀಜ ಶುದ್ಧ 1 ರ ಲಾಗಾಯ್ತು 9 ವರೆಗೆ ನಡೆಯತಕ್ಕ ಸೇವೆಯನ್ನು ನಡಿಸದೆ ಬಿಟ್ಟಿರುವುದೂ; (2) ಕರೀಘಟ್ಟದ ರಥೋತ್ಸವದ ದಿವಸ ಬೆಲ್ಲದ ಪಾನಕ ನೀರುಮಜ್ಜಿಗೆ ಪಂಚಾಮೃತ ಹೆಸರುಬೇಳೆ ಕಳ್ಳೇಬೇಳೆ ಮುಂತಾದ ಪದಾರ್ಥಗಳು ಪಾನಕಪೂಜೆ ಸೇವೆ ನಡಿಸದೆ ಬಿಟ್ಟಿರುವುದೂ; (3) ನರಸೇಗೌಡ ಕಾಲವಾದ ದಿವಸ ಬ್ರಾಹ್ಮಣರ ಸಂತರ್ಪಣೆ ನಡಿಸದೆ ಬಿಟ್ಟಿರುವುದೂ ಈ ಮುಂತಾದ ಧರ್ಮಕೆಲಸಗಳನ್ನು ನಡಿಸದೆ ಕೆಲವು ವರ್ಷದಿಂದ ತಪ್ಪಿಸಿರುವುದಲ್ಲದೆ ಸಾವಿರಾರು ರೂಪಾಯಿಗಳ ವರಮಾನವನ್ನು ದುರ್ವಿನಿಯೋಗಮಾಡದೆ ವ್ಯರ್ಥಗೊಳಿಸುತ್ತಿರುವುದರಿಂದ ಮತ್ತು ತಮ್ಮಗಳಿಗೆ ಬಾಧ್ಯತೆ ಇಲ್ಲದ ಷೆಡ್ಯೂಲ್ ಸ್ವತ್ತುಗಳನ್ನು ತನ್ನ ಹೆಣ್ಣುಮಕ್ಕಳಿಗೂ ಇತರರಿಗೂ ಪರಾಧೀನಪಡಿಸಬೇಕೆಂದು ವಗೈರೆ ಜನಗಳ ದುರ್ಬೋಧನೆಯಿಂದ ಮೇಲ್ಕಂಡ ನಂಜಮ್ಮ, ಹೊನ್ನಮ್ಮ ಸಹಾ ಪ್ರಯತ್ನಪಟ್ಟಿರುವಂತೆ ತಿಳಿಯಬಂದಿರುತ್ತೆ. ಆದರೆ ಈ ಸ್ವತ್ತುಗಳನ್ನು ಪರಾಧೀನಮಾಡಲು ಸದರಿ ಇಬ್ಬರಿಗೂ ಅಧಿಕಾರವೇನೂ ಇರುವದಿಲ್ಲ. ಆದ್ಯಂತ ಸ್ವತ್ತಿಗೂ ಚಲುವೇಗೌಡನಾದ ನಾನು ವಾರಸುದಾರನಾಗಿರುತ್ತೇನೆ.

6. ಷೆಡ್ಯೂಲ್ ಸ್ವತ್ತುಗಳು ಹೊಂದತಕ್ಕ ಚಲುವೇಗೌಡನಾದ ನನ್ನ ಅಪ್ಪಣೆ ವಿನಹಾ ನಂಜಮ್ಮ, ಹೊನ್ನಮ್ಮ ಇವರುಗಳು ಯಾರಿಗೂ ಯಾವ ವಿಧವಾಗಿಯೂ ಪರಾಧೀನ ವಗೈರೆ ಮಾಡುವುದಕ್ಕೆ ಸ್ವಾತಂತ್ರ್ಯವುಳ್ಳವರಲ್ಲವೆಂತಲೂ, ಇವರ ಮೇಲೆ ಸ್ವತ್ತನ್ನು ಪಡೆದವರು ತಾವು ಕೊಟ್ಟ ಹಣವನ್ನು ಕಳೆದುಕೊಂಡು ವ್ಯರ್ಥವಾಗಿ ಹೋಗುವುದಲ್ಲದೆ ಚಲುವೇಗೌಡನಾದ ನಾನು ಮಾಡುವ ದಾವಾಕ್ಕೆ ತಗಲುವ ಕೋರ್ಟು ವಿಚಾರ ಮುಂತಾದ್ದಕ್ಕೆ ಗುರಿಯಾಗಬೇಕೆಂತಲೂ ಸಮಸ್ತ ಜನಗಳಿಗೂ ತಿಳಿಯಪಡಿಸಿದೇನೆ. [55-1]

7. ಸದರಿ ನಂಜಮ್ಮ, ಹೊನ್ನಮ್ಮ ಸಹಾ ಮೇಲೆ ವಿವರಿಸಿರುವ ಎಲ್ಲಾ ವಿಚಾರಕ್ಕೂ ಮನಃಪೂರ್ತಿಯಾಗಿ ಗಮನಕೊಟ್ಟು ತಪ್ಪಿಸಿರುವ ಧರ್ಮಕಾರ್ಯಗಳನ್ನು ತಪ್ಪದೆ ಸಕಾಲದಲ್ಲಿ ನಡಿಸುತ್ತಾ ಬರಬೇಕೆಂತಲೂ, ಜನಗಳ ದುರ್ಬೋಧನೆಗೆ ಒಳಪಟ್ಟು ಸ್ವತ್ತು ಪರಾಧೀನ ವಗೈರೆ ಮಾಡುವುದು ಸರಿಯಲ್ಲವೆಂತಲೂ, ತಕ್ಕ ಕೋರ್ಟಿನಲ್ಲಿ ಕೇಳಿದ ಕೂಡಲೇ ಸಮರ್ಪಕವಾದ ಉತ್ತರವನ್ನು ಕೊಡಲು ಸಿದ್ಧರಾಗಿರಬೇಕೆಂತಲೂ, ಈ "ವೃತ್ತಾಂತ ಪತ್ರಿಕೆ" ಎರಡು ಪ್ರತಿಯನ್ನು ದಾಖಲೆ ಮಾನೆ ತಿಳುವಳಿಕೆ ಬಗ್ಗೆ ನಂಜಮ್ಮ, ಹೊನ್ನಮ್ಮ ಇವರಿಗೆ ಸಹಾ ಪೋಸ್ಟು ಮೂಲಕ ರವಾನಿಸಲು ಏರ್ಪಾಡು ಮಾಡಿರುತ್ತೇನೆಂತಲೂ ಈ ಮೂಲಕ ತಿಳಿಯಪಡಿಸಿರುತ್ತೇನೆ.

ಪಟೇಲ್ ಚಲುವೇಗೌಡನ ಮಗ
ತಾ 16-2-1916. ಪ ಚಲುವೇಗೌಡ.

ಷೆಡ್ಯೂಲ್.

	ಸ.ನಂ.	ತರಹಾ.	ಎ.ಗು.	ರೂ.	ಆ.	ಪೈ.
ಶ್ರೀರಂಗಪಟ್ಟಣ ತಾ|| ಕ್ಯಾತನಹಳ್ಳಿ ಗ್ರಾಮ	241	ತರಿ	2-18	14	0	0
	192	ಬಾಗಾಯ್ತು	1-28	9	8	0
	194	ತರಿ	2-17	14	0	0
	193	ಖುಷ್ಕಿ	0-8	0	8	0
	240	ತರಿ	1-36	11	0	0
	206	ತರಿ	0-39	5	0	0
ಶ್ರೀರಂಗಪಟ್ಟಣ ತಾ|| ಕೆರೆತೊಣ್ಣೂರು ಗ್ರಾಮ	108	ತರಿ	1-31	10	0	0
	76-77	ತರಿ	2-33	12	8	0
	136	ಖುಷ್ಕಿ	5-32	6	8	0
	118-119	ತರಿ	2-28	14	8	0
	104	ಬಾಗಾಯ್ತು	1-26	9	8	0
	112 ನೇ	ತರಿ	0-17	2	8	0
	96	ತರಿ	0-32	4	8	0
	63 ನೇ	ತರಿ	0-17	2	4	0
	102	ತರಿ	2-5	12	0	0

ಈ ಜಮೀನುಗಳೂ ಮತ್ತು ಶ್ರೀನಿವಾಸಪುರದ ಅಗ್ರಹಾರದಲ್ಲಿ ನಂಜಮ್ಮ, ಹೊನ್ನಮ್ಮ ಹಾಲಿ ವಾಸವಾಗಿರುವ ಹೆಂಚಿನ ಮಹಡಿ ಮನೆ ಅಂಕಣ 20, ಇದರ ಹಿಂಭಾಗದ ಕೊಟ್ಟಿಗೆ, ಹೆಂಚಿನ ಕಟ್ಟೆ ಮನೆ ಅಂಕಣ 8 ಸಹಾ.

ಮೈಸೂರು ಕುರುಡ ಮೂಗರ ಪಾಠಶಾಲೆ.

ಆಶ್ಚರ್ಯ ! ವಿನೋದ ! ಆಶ್ಚರ್ಯ !
ಕುರುಡರು ಓದುತ್ತಾರೆ ! ಮೂಗರು ಮಾತನಾಡುತ್ತಾರೆ !

ತಾ|| 25 ನೇ ಶುಕ್ರವಾರ ಸಂಜೆ 6 ರಿಂದ 8 ಘಂಟೆ ತನಕ,
ಮೈಸೂರು ಟೌನ್ ಹಾಲಿನಲ್ಲಿ.

ಹಿಂದೆ ಎಂದಿಗೂ ನೋಡದೆ ಇದ್ದ ಅನೇಕ ವಿಚಿತ್ರವಾದ ವಿಷಯಗಳು ಪ್ರದರ್ಶಿಸಲ್ಪಡುತ್ತವೆ. ಕುರುಡರ ಮೃದುವಾದ ಗಾನವು ಇಂಪಾದ ವಾದ್ಯಗಳಿಂದ ಸೇರಿ ವ್ಯಸನಕರವಾದ ಮನಸ್ಸನ್ನು ಕೂಡ ಸಂತೋಷಕರವಾಗಿ ಮಾಡುವುದಲ್ಲದೆ, ಸರ್ವರಿಗೂ ಆನಂದವನ್ನು ಕೊಡುವುದು. ಇದು ನೆನಸಿಕೊಂಡಾಗ ಸಿಕ್ಕತಕ್ಕದ್ದಲ್ಲ.—ಈಗ ನಡೆಯುತ್ತಿರುವ ಘೋರವಾದ ಯುದ್ಧದಲ್ಲಿ ಪ್ರಾಣದ ಮೇಲಿನ ಆಸೆಯನ್ನು ತೊರೆದು ಹೋರಾಡುತ್ತಿರುವ ನಮ್ಮ ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಸೈನ್ಯದ ಸಹಾಯಾರ್ಥವಾಗಿ ಕುರುಡ ಮೂಗರು ತಮ್ಮ ಬುದ್ಧಿಕುಶಲತೆಯನ್ನು ಪ್ರದರ್ಶಿಸುತ್ತಾರೆ. ಆದುದರಿಂದ ದೇಶಾಭಿಮಾನಿಗಳು ದಯೆಮಾಡಿಸಿ ಅಂಗಹೀನರಾಗುತ್ತಲಿರುವ ಸೈನಿಕರಿಗೆ ಈ ಮೂಲಕವಾಗಿಯೂ ಸಹಾಯಮಾಡುವುದಲ್ಲದೆ, ಕುರುಡ ಮೂಗರಿಗೂ ಪ್ರೋತ್ಸಾಹ ಕೊಡಬೇಕೆಂದು ಪ್ರಾರ್ಥಿಸಲ್ಪಟ್ಟಿದೆ.—ಈ ಪ್ರದರ್ಶನಕ್ಕೆ ಅರಮನೆಯ ಕಂಟ್ರೋಲರನವರಾದ ಮ|| ಬಿ. ರಾಮಕೃಷ್ಣರಾಯರವರೇ ಮೊದಲಾದ ಅನೇಕ ದೊಡ್ಡಮನುಷ್ಯರುಗಳು ಪ್ರೋತ್ಸಾಹಿಸಿರುತ್ತಾರೆ.

ಟಿಕೆಟ್ ದರಗಳು.—ಕುರ್ಚಿ (ರಿಜರ್ವ್‌ಡ್) ರೂ 2-0-0, ಕುರ್ಚಿ ರೂ. 1-0-0, ಬೆಂಚು ರೂ. 0-8-0, ಗ್ಯಾಲರಿ ರೂ 0-4-0. ಷರಾ.—(1) ಸ್ತ್ರೀಯರಿಗೆ ಪ್ರತ್ಯೇಕವಾದ ಸ್ಥಳವು ಏರ್ಪಡಿಸಲ್ಪಟ್ಟಿದೆ. (2) ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಅರ್ಧ ಛಾರ್ಜು.

ವಿಷಯ ಸೂಚನೆ.—ದೇವರ ಸ್ತುತಿ, ಪ್ರಸ್ತಾವನೆ (ಮೂಗರಿಂದ), ವೀಣೆ, ಮೂಗರು ಕಣ್ಣಿನಿಂದ ಕೇಳುವುದು, ಕುರುಡರು ಓದುವುದು, ಹಾರ್ಮೋನಿಯಂ, ಭಾರತವನ್ನು ಓದುವುದು, ಸಂಗೀತ, ಕುರುಡ ಮೂಗರ ಸಂಭಾಷಣೆ, ಅಗ್ರಾಸನಾಧಿಪತಿಗಳ ಭಾಷಣ, ಕಾರ್ಯದರ್ಶಿಗಳು ವಂದಿಸುವುದು, ಮೈಸೂರು ನ್ಯಾಷನಲ್ ಆನ್ಥಮ್.

ಮೈಸೂರು, ಎಂ. ಶ್ರೀನಿವಾಸರಾವ್, ಬಿ. ಎ. (ರಿ|| ಸರ್ಕಲ್ ಇನ್ಸ್‌ಪೆಕ್ಟರ್),
21-2-1916. ಸಿ. ಕೃಷ್ಣರಾವ್, (ರಿ|| ಅ|| ಕಮಿಷನರ್),
ಕಾರ್ಯದರ್ಶಿಗಳು.

CUDDAPAH STONES.

ನಾವು ಉತ್ತಮವಾದ ಕಡಪ ಕಲ್ಲುಗಳನ್ನು ನಮ್ಮ ಸ್ವಂತ ಗನಿಯಿಂದ ಬೇಕಾಗುವ ಅಳತೆಗೆ ತಯಾರುಮಾಡಿಸಿ ಸುಲಭ ಬೆಲೆಗೆ ಒಳಪಡಿಸುತ್ತಿರುತ್ತೇವೆ. ಅವಶ್ಯಕವಿರುವವರು ಬರೆದು ತರಿಸಿಕೊಳ್ಳಬಹುದು. ಮತ್ತು ಸರ್ಕಾರ ಕಟ್ಟಡ ಇಲ್ಲದ ದೇವಸ್ಥಾನ, ಛತ್ರ ಮೊದಲಾದುವುಗಳಿಗೆ ಯುಕ್ತ ಕೋರುವಷ್ಟು ಉಚಿತವಾಗಿ ನಮ್ಮ ಗನಿಯಲ್ಲಿ ಕೊಡುತ್ತೇವೆ. ಛಾರ್ಜ್ ಕೊಟ್ಟು ತರಿಸಿಕೊಳ್ಳಬಹುದು. ಹೆಚ್ಚು ಸಂಗತಿಯನ್ನು ನಮಗೆ ಬರೆದು ತಿಳಿಯಬಹುದು. [52-1]

ನಮ್ಮ ವಿಳಾಸ—**D. KRISHNA RAO & SONS,**
Yerraguntla, Cuddapah Dist.; or Bangalore City.

ನೋಟೀಸ್.

ಮೈಸೂರು 1 ನೇ ಮುನ್ಸಿಫ್ ಕೋರ್ಟಿನಲ್ಲಿ.

O. S. No. 358 of 1915—16.

ವಾದಿ.—ಸಿದ್ದಯ್ಯ.

ಪ್ರತಿವಾದಿಗಳು —1 ನೇ ವೆಂಕಟನರಸಮ್ಮ, 2 ನೇ ಸಣ್ಣಮ್ಮ, 3 ನೇ ಓಲೇಕಾರ ಕೊಂಡಿ. 4 ನೇ ಓಲೇಕಾರ ಅಲಂಕು.

ಮೇಲ್ಕಂಡ ನಂಬರಿನ ವಾದಿಯು ಪ್ರತಿವಾದಿಗಳ ಮೇಲೆ ಮೈಸೂರು ದೇವರಾಜ ಮೊಹಲ್ಲಾ ಚಿಕ್ಕಪೇಟೆಗೆ ವಿಶಾಲಿನಲ್ಲಿ ಇರುವ ಕೆಳಗೆ ನಮೂದು ಮಾಡುವ ಷೆಡ್ಯೂಲ್‌ನಲ್ಲಿ ಕಂಡ ಖಾಲೀ ಜಾಗದ ವಿಷಯದಲ್ಲಿ ದಾವಾ ತಂದಿರುತ್ತಾನೆ. ವಿವಾದದಲ್ಲಿರುವ ಡಿಟೋ ಜಾಗಕ್ಕೆ ಮೈಸೂರು ಚಿಕ್ಕಪೇಟೆಗೆ ವಿಶಾಲಿನಲ್ಲಿ ಇರುವ ಹೋಟೆಲ್‌ದಾರ್ ಸುಬ್ಬಣ್ಣನವರ ಗಾಡಿಯಲ್ಲಿ ಹಕ್ಕು ಇರತಕ್ಕವರುಗಳ ಪೈಕಿ ಈ ನಂಬರು ವಾದಿಯ ಹಕ್ಕಿಗೆ ತಕರಾರು ಮಾಡುವವರು ಇನ್ಯಾರಾದರೂ ಇದ್ದರೆ ಅಂಥವರು 1916 ನೇ ಇಸವಿ ಫೆಬ್ರುವರಿ 29 ನೇ ತಾರೀಖು ಹಗಲು 11 ಘಂಟೆಗೆ ಈ ಕೋರ್ಟಿನ ರೂಬರೂಬು ಹಾಜರಾಗಿ ತಮ್ಮ ತಕರಾರುಗಳನ್ನು ತಿಳಿಸತಕ್ಕದ್ದಿದೆ.

ತಾ. 16-2-1916. D. K. Rama Rao, B.A., B.L.,
First Munsiff.

ಷೆಡ್ಯೂಲ್.

ಮೈಸೂರು ದೇವರಾಜ ಮೊಹಲ್ಲಾ ಚಿಕ್ಕಪೇಟೆಗೆ ಸೇರಿದ ವಿಶಾಲಿನಲ್ಲಿ ಇರುವುದು :—ಪೂರ್ವಕ್ಕೆ ಕನ್ಸರ್ವೆನ್ಸಿ ರೋಡ್, ಪಶ್ಚಿಮಕ್ಕೆ ವಾದಿಯು ಕ್ರಯಕ್ಕೆ ಪಡೆದು ಹಾಲಿ ವಾಸವಾಗಿರುವ ಮನೆ, ದಕ್ಷಿಣಕ್ಕೆ ಬಸವಲಿಂಗಪ್ಪನಿಗೆ ಖರೀದಿಯಾಗಿರುವ ಮನೆ ಮತ್ತು ಖಾಲೀ ಜಾಗ (ಪೂರ್ವದಲ್ಲಿ ಗಾಡಿಯಾಗಿತ್ತು), ಉತ್ತರಕ್ಕೆ ಗಲ್ಲಿ—ಈ ಮಧ್ಯೆ ಇರುವ ಪೂರ್ವ ಪಶ್ಚಿಮ ಅಡಿ 33, ದಕ್ಷಿಣೋತ್ತರ ಅಡಿ 20 ಉಳ್ಳ ಖಾಲೀ ಜಾಗ.

D. K. R.,
[53-1] First Munsiff.

BASS DIAL PRESANTATION WATCH.
PRIME CLASS GENTLEMAN WATCH.
ಪ್ರೈಮ್ ಕ್ಲಾಸ್ ಜಂಟಲ್‌ಮೆನ್ ಪಾಕೆಟ್ ವಾಚ್.
10 ಬಹುಮಾನಗಳ ಸಹಿತ ರೂ. 3-0-0 ಮಾತ್ರವೇ.
7 ವರುಷದ ಖಾತ್ರಿಯಾದ ಗ್ಯಾರಂಟಿ ಸಹಾ.

ಅಯ್ಯಾ ಪ್ರಿಯ ಮಿತ್ರರೇ, 1916 ಮಹೋತ್ಸವಕ್ಕೆ ನಮ್ಮ ಜನರನ್ನು ಸಂತೋಷ ಮಾಡಬೇಕೆಂದು ಉದ್ದೇಶಪಟ್ಟು ಈ ಗಡಿಯಾರವನ್ನು ಕಡಿಮೆ ಬೆಲೆಗೆ ಹಾಕಿ ಇರುತ್ತೇವೆ. ಈ ವಾಚ್ ಅಂತಿ ಮೇಲಾದ ಇಮಿಟೇಷನ್ ಕೆಂಪುಗಳು ಮಹಗಿ ಕಟ್ಟಿದ ಕಟ್ಟಿ, 6 ರತ್ನಗಳು ಉಳ್ಳ ಓಪನ್ ಫೇಸ್ ಕೆಂಪು ಬಣ್ಣ ಲೀವರ್ ಕೆಲಸದಲ್ಲೇ ಕೂಡಿ ಬಂದು ಇರುತ್ತೆ. ಇದನ್ನು ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. ಒಂದು ಸಾರಿ ಪರೀಕ್ಷೆ ಮಾಡಿದರೆ ತಿಳಿಯುವುದು.



ಬಹುಮಾನ ವಿವರ.—ಸರಪಣಿ 1, ಪೆಟ್ಟಿಗೆ 1, ಕಾರ್ನೇಷನ್ ಕನ್ನಡಿ 1, ಅತ್ತರು ಬಾಟಲಿ 1, ಸೆಂಟ್ ಸೀಸೆ 1, ಷರಟು ಗುಂಡಿ ಸೆಟ್ 1, ಎಲೆಕ್ಟ್ರೋ ಬಂಗಾರದ ಕೈ ಉಂಗುರ 1, ಸ್ತ್ರೀಯರು ಧರಿಸಿಕೊಳ್ಳುವ ಚಿನ್ನ ... 1, ... 2, ಒಟ್ಟು 10 ಸೇರಿ ವಾಚ್ ಕ್ರಯ ರೂ. 3-0-0 ಮಾತ್ರವೇ.

ನಮ್ಮ ವಿಳಾಸ.—**T. RAMACHANDRA & Co.,**
16, Tirupalli Street, Madras.

[43-2] ರಾಮಚಂದ್ರ ಕಂಪೆನಿ, ತಿರುಪಳ್ಳಿಬೀದಿ, ಮದರಾಸು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

೧೯೧೬ ನೇ ಇಸವಿ ಫೆಬ್ರವರಿ 10 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮೆ.—(1) ಷೇರು ಬಂಡವಾಳ	....	ರೂ.	10,00,000
„ (2) ರಿಜರ್ವ್ ಫಂಡು	....	„	75,000
„ (3) ಡಿಪಾಜಿಟ್ಟುಗಳು	....	„	41,64,357
„ (4) ಇತರೆ	....	„	26,029
(ಆನೆ ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ.	51,65,386

ಖರ್ಚು. (1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ ರೂ.			7,07,665
„ (2) ಖಾತೆ ಮತ್ತು ಇತರ ಸಾಲಗಳು	..	„	31,71,658
„ (3) ಡಿಸ್ಕೌಂಟುಮಾಡಿದ ವಾಯಿದೆಹುಂಡಿಗಳು		„	4,98,640
„ (4) ಇನ್ವೆಸ್ಟ್‌ಮೆಂಟುಗಳು	....	„	7,56,822
„ (5) ಬ್ರಾಂಚುಗಳಲ್ಲಿರುವ ಬಂಡವಾಳ	.....	„	4,374
„ (6) ಬ್ಯಾಂಕಿನಲ್ಲಿರುವ ಸಾಮಾನುಗಳು	...	„	16,382
„ (7) ಇತರೆ	....	„	11,045
(ಆನೆ. ಕಾಸು ಬಿಟ್ಟಿರುತ್ತೆ.)		ಜುಮ್ಲಾ ರೂ.	51,65,386

ವಿ. ರಾಮಸ್ವಾಮಯ್ಯ, ಆ : ಮ್ಯಾನೇಜರ್.

ತಾಲ್ಲೋಕು ವರ್ತಮಾನಗಳು.

ಅರಕಲಗೂಡು ಕಸಬಾ ಸ್ಕೂಲಿಗೆ ತೆರೆದುದು.—ಹಾಸನ ಡಿಸ್ಟ್ರಿಕ್ಟು ಉಪಾಧ್ಯಾಯರು ಈ ಗ್ರಾಮದ ಸ್ಕೂಲ್ ಕಟ್ಟಡಕ್ಕೆ ದಯಮಾಡಿ ಗ್ರಾಮದ ಮುಖಂಡರೆಲ್ಲರನ್ನು ಕರಸಿಕೊಂಡು ಹೆಣ್ಣು ಮತ್ತು ಗಂಡು ಮಕ್ಕಳ ವಿದ್ಯಾಭ್ಯಾಸದ ಅವಶ್ಯಕತೆ, ವಯಸ್ಸಾದವರು ವಿದ್ಯಾಭ್ಯಾಸ ಮಾಡಲು ರಾತ್ರಿ ಸ್ಕೂಲ್ ಮೂಲಕ ವಿದ್ಯೆ ಕಲಿಯಲು ಶಕ್ಯ ವಿರುವುದು, ನೂತನ ವ್ಯವಸಾಯ ಕ್ರಮದಿಂದ ಈಗಿನ ಹಳೇ ಪದ್ಧತಿಗಿಂತಲೂ ಜಾಸ್ತಿ ಆದಾಯವನ್ನು ಹೊಂದತಕ್ಕ ರೀತಿ, ಆರೋಗ್ಯ ವಿಚಾರದಲ್ಲಿ ಬೇಕಾದ ಸೂಚನೆಗಳಿಂದುಂಟಾಗುವ ಅನುಕೂಲ ಪ್ರತಿಕೂಲಗಳನ್ನೆಲ್ಲಾ ಶಕ್ಯ ದೃಷ್ಟಾಂತಗಳೊಡನೆ ಸರ್ವರಿಗೂ ಚೆನ್ನಾಗಿ ತಿಳುವಳಿಕೆಯುಂಟಾಗುವಂತೆ ಬೋಧಿಸಿದರು. ಮಲೆನಾಡು ಬಹಳ ದೈನ್ಯದ ಮಾರ್ಗ ಜನರಿಗೆ ನಮ್ಮ ಸರ್ಕಾರದ ಸಂಪೂರ್ಣ ದಯವಿಟ್ಟು ಈ ವಿಧವಾಗಿ ಮಾಡುವ ಮನೋಸಹಾಯವು ಬಹಳ ಸ್ತುತಿ ಮಾಡತಕ್ಕದ್ದಾಗಿದೆ.

ಚಿತ್ರದುರ್ಗ ತಾ|| ಕೋಗುಂಡೆ.—ಈ ಗ್ರಾಮವು ಬೂದಿಹಾಳ್ ಉಪ ವಿಭಾಗದ ಮಾರ್ಗ ದಲ್ಲಿ ಆದ್ದರಿಂದ ಒಂದಾದರೂ ಇಲ್ಲದೆ ಇರುವುದು ಶೋಚನೀಯ. ಇದರಿಂದ ರಾತ್ರಿಯ ಕಾಲದಲ್ಲಿ ಸಂಚಾರ ಮಾಡುವುದು ಬಹಳ ಕಷ್ಟ. ಗ್ರಾಮದ ಖರ್ಚು ಕಳ್ಳರಿಗೆ ಚೆನ್ನಾಗಿರುತ್ತದೆ.—ಈ ಗ್ರಾಮದಲ್ಲಿ ಒಂದು ವಿ ಇ ಸ್ಕೂಲ್ ಇರುತ್ತದೆ. ಇದು ಕೇವಲ ಹೀನಸ್ಥಿತಿಯಲ್ಲಿರುತ್ತದೆ. ಈಗ ಹುಣಸೆಹಳ್ಳಿ ಗರಲ್ಸ್ ಸ್ಕೂಲಿನಿಂದ ವರ್ಗವಾಗಿ ಬಂದಿರುವ ಹೆಡ್ ಮಾಸ್ಟರ್ ಮ|| ಟಿ. ಎಂ. ಚಂದ್ರಶೇಖರಯ್ಯನವರು ಅಭಿವೃದ್ಧಿಗೆ ತರುವರೆಂದು ನಂಬಿದೇನೆ. ಇವರು ಬಂದ ಸ್ವಲ್ಪ ದಿವಸಗಳಲ್ಲಿಯೇ ಸ್ಕೂಲನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಮಾಡುತ್ತಿರುವ ಪ್ರಯತ್ನವು ತುಂಬಾ ಸ್ತುತ್ಯರ್ಹವಾದುದು. ಹಾಲಿ 80 ಜನ ಬಾಲಕರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇವರು ಒಂದು ನೈಟ್ ಸ್ಕೂಲನ್ನು ಸಹ ಸ್ಥಾಪಿಸಿರುತ್ತಾರೆ.—ನಮ್ಮ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸಾಹೇಬರವರು ಈ ಗ್ರಾಮಕ್ಕೆ ದಯಮಾಡಿಸಿದ್ದಾಗ ಈ ವರುಷ ತಾ 1 ರಲ್ಲಿ ಗ್ರಾಮವನ್ನು ಪರಾಂಬರಿಸಿದ ನಂತರ ಈ ಸ್ಕೂಲಿಗೆ ದಯಮಾಡಿಸಿ ಹುಡುಗರನ್ನು ಪರೀಕ್ಷಿಸಿ ಬಹಳ ಸಂತೋಷಪಟ್ಟು, ನೈಟ್ ಸ್ಕೂಲನ್ನು ಸಹಾ ಪರಾಂಬರಿಸಿದರು. ಇಲ್ಲಿಗೆ ಒಂದು ಪಂಚಮ ಸ್ಕೂಲು ಅವಶ್ಯಕವಾಗಿರುತ್ತದೆ. ಇಲ್ಲಿನ ಬಿಲ್ಡಿಂಗ್ ದಾರಂಗೆ ಕಟ್ಟಡವಿಲ್ಲದೆ ಇರುವುದು ಬಹಳ ಕೊರತೆಯಾಗಿದೆ.—ಇಲ್ಲಿಗೆ ಏಲೇಟ್ ಪೋಸ್ಟ್ ಪ್ಯಾಕ್ ಕಳುಹಿಸಿಗಿಲ್ಲ. ಪತ್ರಿಕೆ ಮುಂತಾದುವುಗಳು ಆಯಾ ವಾರದಲ್ಲಿ ತಲುಪುವುದಿಲ್ಲ. ತಲುಪಬೇಕಾದರೆ ಭರಮಸಾಗರದ ಸಂತೆಗೆ ಹೋದ ಜನಗಳ ಕೈಯಿಂದ ತರಿಸೋಣ ಇಲ್ಲವಾದರೆ ಇಲ್ಲವೇ ಇಲ್ಲ. ಈ ವಿಷಯದಲ್ಲಿ ಸರ್ಕಾರದವರು ಗಮನಿಸಬೇಕಾಗಿ ಕೋರುತ್ತೇವೆ.—ಈ ಗ್ರಾಮಕ್ಕೆ ಸಮೀಪದಲ್ಲಿರುವ ಬಹಳ ಗಟ್ಟಿಗೂ ಯಮ್ಮನ ಗಟ್ಟಿಗೂ ಮಧ್ಯದಲ್ಲಿ ಈಗ 8 ದಿವಸಗಳ ಕೆಳಗೆ ಚಿರತೆ ಬಂದಿತ್ತು, 13 ವರ್ಷ ವಯಸ್ಸಿನ ಒಬ್ಬ ಹುಡುಗಿಯನ್ನು ಕಚ್ಚಿ ಕೊಂದು ಹಾಕಿರುತ್ತಾರೆ. ಪತ್ತೇ ತಂದೂರು ನಡೆಯುತ್ತಲಿದೆ.

ಚೆನ್ನರಾಯಪಟ್ಟಣ.—ಈ ಊರಿನಲ್ಲಿ ಕಟಾವಾದ ಪೈರೆಲ್ಲಾ ರೇಟು ಆಗುತ್ತಿದೆ. ಯಾವ ರೋಗರುದ್ಯಪದ್ರಗಳೂ ಇಲ್ಲದೆ ಜನ ಮತ್ತು ಜಾನುವಾರುಗಳ ಸ್ಥಿತಿ ಚೆನ್ನಾಗಿದೆ.—ಇದೇ ಪೌರ್ಣಮಿಯ ಸುಮಾರಿನಲ್ಲಿ ರಥೋತ್ಸವವೂ, ಈ ಕಾಲದಲ್ಲಿ ದನಗಳ ಪ್ರದರ್ಶನವೂ, ಎಗ್ರಿಕಲ್ಚರ್ ಸ್ ಮೊದಲಾದವೂ ನಮ್ಮ ಗ್ರಾಮಸ್ಥರು ಏರ್ಪಾಡು ಇಟ್ಟುಕೊಂಡಿದ್ದಾರೆ. ಬೆಂಗಳೂರು ಮ|| ಲಕ್ಷ್ಮಯ್ಯನವರಲ್ಲಿ ತಯಾರಾಗುತ್ತಿರುವ ಹೊಸ ರಥ ಬರುವುದಕ್ಕೆ ಕೊಂಚ ವಿಳಂಬವಾದ್ದರಿಂದ ಬರುವ ಫಾಲ್ಗುಣ ಮಾಸದಲ್ಲಿ ನಡೆಸಲು ಏರ್ಪಾಡಾಗಿದೆ. ಈಗ ಗೊತ್ತಾದ ರಥದಿಂದಿಗೆ ಇನ್ನೊಂದು ಟೆಂಟನ್ನು ತಯಾರುಮಾಡಿಸುವುದಕ್ಕೆ ಪ್ರಯತ್ನಿಸಿರುವರು.—ಈ ಟೌನ್‌ನಲ್ಲಿ ಪ್ರೈಮರಿ ಸ್ಕೂಲ್ ಎಂತ ಮಾಡಿ 6-7 ತಿಂಗಳ ಮೇಲಾಯಿತು. ಯಾವ ಕೆಲಸವೂ ಪ್ರಾರಂಭ ಆಗುವುದಿಲ್ಲ. ಮುಖ್ಯವಾಗಿ ಟೌನಿಗೆ ಏರ್ಪಾಡು ಇಲ್ಲದೆ ಕೆಲವು ಮೆಂಬರುಗಳು ಗೊಣಗುಟ್ಟುತ್ತಾರೆ.—ದಿವಾನ್ ಸಾಹೇಬರು ಚಿತ್ತೈಸುತ್ತೆಂದು ತಾಲ್ಲೋಕು ಗ್ರಾಮಗಳಲ್ಲೆಲ್ಲಾ ರಕ್ಷೆ ಮೊದಲಾದ ಕೆಲಸಗಳು ನಡೆದವು. ಅದರಲ್ಲೂ ನಮ್ಮ ಕಸಬಾ ಶೇಕದಾರ್ ಮ|| ಕೃಷ್ಣರಾಯರು ತುಂಬಾ ಮುತುವರ್ಜಿ ವಹಿಸುತ್ತಾರೆ. ಇದು ಟೌನ್ ಆದ್ದರಿಂದ ಅವಶ್ಯಕವಾಗಿ ಮೇಲಾಗಿಬೇಕಾದದ್ದು. ಈ ಟೌನ್ ಪ್ರೆಸಿಡೆಂಟ್ ಕಮಿಟಿಗೆ ಅಸಿಸ್ಟೆಂಟ್ ಶಿರಸ್ತೇದಾರ್ ಮ|| ಗರುಡಾಚಾರ್ಯರೇ ಪ್ರೆಸಿಡೆಂಟ್‌ರವರಾಗಿ ಇರುವುದರಿಂದಲೂ, ಇವರು ಇಲ್ಲಿಗೆ ಬಂದು 6 7 ವರ್ಷಗಳ ಮೇಲಾಗಿ ಈ ಟೌನ್ ಅಭಿವೃದ್ಧಿಗೆ ನಡೆಸಬಹುದಾದ ಅನೇಕ ಏರ್ಪಾಡುಗಳು ಇರುವುದನ್ನು ಬಲ್ಲವರಾದುದರಿಂದಲೂ ಟೌನ್ ಪ್ರಜೆಗಳಲ್ಲಿ ಕಲೆತು ನಡೆಯಬೇಕಾದ ಕೆಲಸಗಳಿಗೆ ಇವರು ತಮ್ಮ ಸಹಾಯದಿಂದ ಮುಂದಾದರೂ ಜಾಗ್ರತೆ ವಹಿಸ್ಯಾರೆಂದು ನಂಬಿದ್ದೇವೆ.—ಮುಜ್ರಾಯಿ ಕೋಲದ ಶ್ರೀ ಆಂಜನೇಯಸ್ವಾಮಿ ಇನಾಂ ಭೂಮಿಗಳನ್ನು ಬಹಳ ಕಾಲ ಅನುಭವಿಸುತ್ತಿದ್ದ ಜನಗಳಿಂದ ಸರ್ಕಾರದ ಆರ್ಡರ್ ಪ್ರಕಾರ ಮ|| ಕೃಷ್ಣವಲ್ಲೀ ಷಾಪ್ ಸಾಹೇಬರವರು ಕೈ ತಪ್ಪಿಸಿ ಹರಾಜು ಮಾಡಿ ಉತ್ಪತ್ತಿಯಿಂದ ಗ್ರಾಮಸ್ಥರ ಇಚ್ಛೆಯಂತೆ ಆ ದೇವರ ರಥೋತ್ಸವ ನಡೆಸುವುದಕ್ಕೆ ಏರ್ಪಾಡು ಮಾಡಲು ಗಮನಿಸುತ್ತಾರೆ. ಇದರಿಂದ ಇವರಿಗೆ ಹಿಂದುಗಳು ಹೆಚ್ಚು ಪ್ರೀತಿಸುವುದಕ್ಕೆ ಕಾರಣವಾಗಿರುತ್ತೆ.—ಗಣಪತಿಪ್ಯವೇಳೆಯಲ್ಲಿ ಆಸಿಸ್ಟೆಂಟ್ ಸರ್ಜನ್‌ರಾದ ತಮ್ಮಣ್ಣಯ್ಯನವರು ಮ|| ಗುಂಡಪ್ಪನವರು ಸಹಾ ನಾಟಕದ ಕಂಪನಿಯನ್ನು ಏರ್ಪಾಡು ಮಾಡಿ ಅವರಿಂದ ಸಾವಿರಾರು ರೂಪಾಯಿ ಖರ್ಚು ಮಾಡಿ ಅವಶ್ಯಕವಾದ ಸಲಕರಣೆಗಳೆಲ್ಲಾ ಒದಗಿಸುತ್ತಿದ್ದಾರೆ.—ಈಗ ಬೇಸಗೆಕಾಲವಾದ್ದರಿಂದ ಪೋಲೀಸ್ ಅಮಲ್ದಾರ್ ತುಂಬಾ ಮೆಯುಲ್ ಓವರ್‌ಸಿಯರ್ ಮ|| ದಮಾರ ಮೇಸ್ತ್ರಿಗಳು ಪ್ರತಿ ಸಂತೆ ದಿವಸ ಎಲ್ಲಾ ಜನಗಳಿಗೂ ದಾಹ ನಿವಾರಣಾರ್ಥವಾಗಿ ಕುಡಿಯುವುದಕ್ಕೆ ನೀರಿನ ಏರ್ಪಾಡು ಇಟ್ಟಿರುವುದು ಶ್ಲಾಘ್ಯವಾಗಿದೆ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಥಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply :—MANAGER, WOOL WORKS,

[188-22] GIRLS' INDUSTRIAL SCHOOL, HASSAN.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಕಾಣದಿದ್ದಾಗಲೂ "ನನಗೆ ದಿನಕ್ಕೆ ಒಂದು ಸಲವಾದರೂ ಮಲಪ್ರವೃತ್ತಿಯಾಗುತ್ತದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲ ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆನೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳಲ್ಲಿ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ :—ಪಿತ್ತಕೋಶದ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ, ಅಗ್ನಿಮಾಂದ್ಯ; ಗಾಬರಿ; ಅರುಚಿ; ಎದೆಯು ಕಲ್ಲಿಸಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟು ಬಿಟ್ಟರೆ ದೇಹವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನು ಕಷ್ಟವಿಲ್ಲದ ವಾಯುವನ್ನು ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [175-26]

ಬೆಲೆ ೪ ಆನೆ, ೮ ಆನೆ ಮತ್ತು ೧೨ ಆನೆ ೧೨ ಆನೆ. ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆನೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿ ಎಲ್ಲಾ ದೊರೆಯುವುದು ; ಅಥವಾ ಡೋನ್. ಪಿ. ಒ. ಬಾಕ್ಸ್ ೩೦ ಬೊಂಬಾಯಿ—ಇವರಲ್ಲಿ ದೊರೆಯುವದು

USE I. C. O. BRAND

[55-14]



Refined Edible Cotton Seed Oil.

For Cooking and Salads.

An approved substitute for Ghee in all preparations. Price—

Rc. 1-4-0 per tin of 3½ lbs

„ 0-7-0 per „ of 1lb

Liberal Terms to Trade.

The Indian Co-Operative Stores Co., Ltd., 159, Kilari Road, Bangalore.

"ಹನುಮಾರ್ಕ್" ಬೋರಾಕ್ಸ ಸಾಬೂನು.

ಹನುಮಾರ್ಕ್ ಬೋರಾಕ್ಸ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ಹುಣ್ಣು, ತುರಿ, ಹುರಿ ಮೊದಲಾದ ವ್ಯಾಧಿಗಳು ಹನುಮಾರ್ಕ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ಕೂದಲಿಗೆ ನುಣುಪು ಮತ್ತು ಕಳೆಯನ್ನು ಕೊಡುವುದರಲ್ಲಿ ಹನುಮಾರ್ಕ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾರ್ಕ್ ಸಾಬೂನಿನಿಂದ ಬೆಳಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡಿಗಿಯರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ಕ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಹರುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾರ್ಕ್ ಗುರ್ತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಶಾ. ಕ :—ಎಲ್ಲರೂ ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆಯಬೇಕು.

ಬೆಂಗಳೂರು ಸಿಟಿ ಮ|| ಎಚ್. ದಾಸಪ್ಪನವರಲ್ಲೂ ಬಿಕರಿಗೆ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-19] "ಆಪಸಿಂಗ್ ಬಜಾರ್ ರೋಡ್, ಮದರಾಸು.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಒಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5 4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-44]

ಅಮೃತಾಂಜನ ಡಿಪೋ,

100, ಫ್ರೇರ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಶಾ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಶಾಳ್ವದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾಳು ವ ತಿಗೂ ವೈದ್ಯರ ಸಮಯವನ್ನು ಕಾದು ನೋಡಿಯಿರುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾಕರಿಕೆ ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಸಸೋಬೆ, ಬಲಹೀನತೆ ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 200 ಮಾತ್ರೆಗಳುಳ್ಳ ಕುಪ್ಪಿಗೆ ೬ ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫರಿಡ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಂ. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಎ ಎಂ. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಶಾಳ್ವದ ವೆಂಕಟಾಚಲ ಪಂಡಿತರವರಿಂದ ತಯಾರಿಸಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ."

[189-24] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, **ಮೈಸೂರು.**

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

1. ಗೋರೋಚನ ವಟಿ.—2-3 ಮಾತ್ರೆಗಳು ಮಕ್ಕಳಿಗೆ ಹಿಂಸೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಆ, [illegible]ಸೆಗೆ 1 ರೂಪಾಯಿ.

2. ಜ್ವರದಮಾತ್ರೆ.—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ. 36 ಮಾತ್ರೆ 8 ಆ, 6 ಶೀಸೆಗೆ 2½ ರೂ, 12 ಶೀಸೆಗೆ 4½ ರೂ.

3. ಬಾಧಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ನಾಲಿಗೆಯಿಂದ ಬೇಗ ಗುಣಮಾಡುತ್ತೆ. ಡಬ್ಬಿಗೆ 4 ಆ, 6 ಕ್ಕೆ 1 ರೂ, 12 ಕ್ಕೆ 2½ ರೂ

[126-25] ನಮ್ಮ ವಿಳಾಸ.—ಪಂಡಿತ್ ಎಸ್. ಗಂಗಾಧರಂ, ಮೈಸೂರು

ನಡುವಿನ ನೋವು.

ಹಾಸಿಗೆಯಲ್ಲಿ ನೋವಿನಿಂದ ಹೊರಳಾಡುತ್ತಾ ಇದ್ದು, ಕೆಲಸ ಮಾಡಲೂ ಆಗದೆ [illegible] ದುಃಖ ಎಷ್ಟು, ಸಂತೋಷವಿಲ್ಲದಾಗಿದ್ದೀರೋ? ಹಾಗಿದ್ದರೆ ಬಹಳ ನಡುವಿನ ನೋವು ನಿಮಗುಂಟು. ಉದಾಸೀನ ಮಾಡಲಾಗದು. ಹಲ್ಲು ಕಚ್ಚಿ ಸಹಿಸಬಾರದು,'' ಡೋಲ್ಸ್ ಓಯಿಂಟ್‌ಮೆಂಟ್ ಬಾಂ ಎಂಬುದನ್ನು ಉಜ್ಜುವದರಿಂದ ಅದನ್ನು ನಿಲ್ಲಿಸಬೇಕು.

ವಿಸ್ಕಾನ್ಸಿನ ಮ್ಯಾಡಿಸನ್ನಿನಲ್ಲಿರುವ ಮಿ|| ಸಿ. ಸಕ್ಲರ್ ಬರೆಯುವುದು:— "ಮೂರು ತಿಂಗಳು ನಡುನೋವಿನಿಂದ ನಾನು ಬಹು ಹಿಂಸೆಪಟ್ಟು ಯಾವ ಕೆಲಸಕ್ಕೂ ಅಯೋಗ್ಯನಾಗಿ ಹಾಸಿಗೆಯಲ್ಲಿಯೇ ಬಿದ್ದಿದ್ದೆನು.

ಡೋಲ್ಸ್ ಓಯಿಂಟ್‌ಮೆಂಟ್ ಬಾಂ ಎಂಬುದನ್ನು ಉಪಯೋಗಿಸಬೇಕೆಂಬ ಶಿಫಾರಸ್ಸಾಯಿತು. ಅದರಂತೆಯೇ ಮಾಡಿ ಅದರ ಫಲಕಾರಕವನ್ನು ಕಂಡು ಆಶ್ಚರ್ಯಪಟ್ಟೆನು— 6 ಸೀಸೆಗಳ ತೈಲವನ್ನು ಉಪಯೋಗಿಸಿದಾಗ ಚೆನ್ನಾಗಿ ನಿದ್ದೆ ಮಾಡುತ್ತೇನೆ. ಕೆಲಸಕ್ಕೆ ಹೋಗುತ್ತೇನೆ.''

ಸೀಸೆ 1ಕ್ಕೆ 1 ರೂ. ಮೋಹಿನೀ ಔಷಧಿ ರಪ್ಲಿ[illegible] ಸಿಗುತ್ತೆ.

[81-43]

ಪುಷ್ಪರಾಗದಿಂದ ಕಟ್ಟಿದ ಅಚ್ಚ ಚಿನ್ನದ ಮೂಗುಬಟ್ಟು

ಕ್ರಯ ರೂ. 7–8–0. ಛಾಂಗಿ ಚಾರ್ಜು ಮಾಫಿ.

ವಜ್ರದಂತೆ ಥಳಥಳಿಸುವ ಉತ್ತಮ ಜಾತಿಯ ಪುಷ್ಪರಾಗದಿಂದ ಕಟ್ಟಲ್ಪಟ್ಟ ಅಚ್ಚ ಚಿನ್ನದ ಮೂಗುಬಟ್ಟುಗಳು ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುತ್ತೆ. [illegible]

[illegible]

[40-1] ನಮ್ಮ ವಿಳಾಸ:—ಪಕ್ರಾಂಬರ್ ಕಂಪೆನಿ, 18, ಸೆಕಿಂಡ್ ಲೈನ್ ಬೀಚ್, ಮದರಾಸು.

ಅಮೇರಿಕನ್ ರೋಮಹರಿ.

ಕ್ರಯ ಡಬ್ಬಿ 1 ಕ್ಕೆ 4 ಅಣೆ, 3 ಡಬ್ಬಿಗಳಿಗೆ 8 ಅಣೆ.

[illegible] ಅಮೇರಿಕನ್ ರೋಮಹರಿ [illegible] ನಮ್ಮ ಅಮೇರಿಕನ್ ರೋಮಹರಿಯು [illegible]



ಫೆಬ್ರವರಿ ಮಹೋತ್ಸವದ ಕೈ ಗಡಿಯಾರ.

ಅರ್ಧ ಕ್ರಯ ರೂ. 1–14–0.

ಈದೇ ಫೆಬ್ರವರಿ ಹಬ್ಬದ ಮಹೋತ್ಸವಕ್ಕಾಗಿ ಈ [illegible] ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ [illegible] ರೂ 1-14-0 ಅಣೆಗೆ ಕೊಡಲ್ಪಡುತ್ತೆ.

[111-38]

ಮಧುರೆ ಜುಸ್ತಿಡಿ ಅಂಚಿನ ಸೀರೆ ಅಮ್ಮಲ್ ರವಿಂ ರೂ. 3–0–0

ಫೆಬ್ರವರಿ [illegible] ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು [illegible] ಉಚಿತವಾಗಿ ಕೊಡುತ್ತೇವೆ



[illegible] 18 ಮೊಳ. [illegible]

ವಿಳಾಸ ಎ. ಕೆ ಕೆಂಚುಸ್ವಾಮಿ ಅಂಡ್ ಕೋ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು

ESANOFELE

ಮಲೇರಿಯಾ ಡಿಸ್ಟ್ರಿಕ್ಟುಗಳಲ್ಲಿ ವಾಸಮಾಡತಕ್ಕವರೆಲ್ಲಾ "ಈಸಾನೋಫೆಲಿ" ಯನ್ನು ಸೇವನೆ ಮಾಡಬೇಕು.

ಹಿಂದೂಸ್ಥಾನದಲ್ಲಿರುವ ಪ್ರಖ್ಯಾತನಾದ ವೈದ್ಯನು ಹೀಗೆ ಬರೆಯುತ್ತಾನೆ:—"ಜನರಲ್ ಆಸ್ಪತ್ರೆಯೊಳಗೆ [illegible] ಜನ ರೋಗಿಗಳಿಗೆ ಈಸಾನೋಫೆಲಿಯನ್ನು ಕೊಟ್ಟು ಚಿಕಿತ್ಸೆ ಮಾಡಲಾಯಿತು ಈ ಔಷಧವನ್ನು ಕೊಟ್ಟ 24 ರಿಂದ 36 ಗಂಟೆ ಹೊತ್ತಿನೊಳಗಾಗಿ [illegible] ಮಲೇರಿಯ, ಅದರ ಕಾರಣ, ಅದನ್ನು ತಡೆಯುವುದು, ಅದನ್ನು [illegible] ಪುಸ್ತಕವನ್ನು ಕೇಳಿ ನಮ್ಮಿಂದ ತರಿಸಿಕೊಂಡು ಓದಿನೋಡಿ

ಕ್ರಯ 1 ಬಾಟ್ಲಿಗೆ ರೂ 2-0-0. ಎಲ್ಲಾ ಔಷಧ ಮಾರಾಟದ ಅಂಗಡಿಗಳಲ್ಲೂ ಬಿಕರಿಗೆ ಇಟ್ಟಿದೇವೆ [illegible] ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೋಫೆಲೀನಾ'' ಎಂಬುದನ್ನು ಕೊಡಿ ಎಂದು ಕೇಳಿ ಇದು [illegible] ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜಂಟರು :—ಜೆ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗೆಲ್ಲಾ ಡಿಪೋ— [176-25]

ಬಿ. ಜಿ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ

ಪ್ರೊಪ್ರೈಟರುಗಳು :—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

JUST PUBLISHED.

(1) Aids to Grammatical Analysis, 5 as. (2) English Essays and Letters, 6 as. (3) English Papers, 8 as. (4) Spelling Book, 4 as. (5) L. S. English Notes for 1917 (will be ready soon).

Apply to:—**M. N. SITA RAMA RAO,**
Krishnaraja Mohalla, Mysore.
[35-3]

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬರ್ಟ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು ; ಎಂಜಲ್‌ಬರ್ಗ್ ಕಲ್ಲರುಗಳ ಚಲ್ಲರೆ ಸಾಮಾನುಗಳು ; ಎಂಜಲ್‌ಬರ್ಗ್ ಸಿಲ್ವರ್ ಹಲ್ಲರುಗಳು ನಂ 1 ಮತ್ತು 2; [illegible] ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳು, ಬಾಯಿಲರ್‌ಗಳು; ಸೆಂಟ್ರಿಫ್ಯೂಗಲ್ [illegible] ಮತ್ತು ಪವರ್ ಪಂಪುಗಳು; ಸ್ಟೀರ್ ಇಂಜನುಗಳು; ಹ್ಯಾಂಡು ಪವರ್ [illegible] ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು ; [illegible] ; ಆಸ್ಟ್ರೇಲಿಯಾ ದೇಶದ [illegible] ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ [illegible]; ಬಿಸುಳ, ಒಂಟಿ [illegible] ಮತ್ತು [illegible] ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ಮಿಲ್ಲು ಮೊದಲಾದವುಗಳಿಗೆ ಬೇಕಾದ ಎಲ್ಲಾ ಸಾಮಾನುಗಳು ಬೇಕಾದವರು ಇಸ್ಪೇಸ್ಮೆ [illegible] ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವದೆಂದು ಸಂಬುತ್ತೇವೆ. [208.20]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪೆನಿ, ಮದ್ರಾಸ್.

The Indian Commerce & Industries Co., Madras.
Branches—Bezwada and Tanjore.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

4 2—1916 ರಿಂದ 11—2—16 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ಜಾಡ್ಯ	ಮೃತ್ಯು	ಜಾಡ್ಯ	ಮೃತ್ಯು
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	2	2	0	0
ಬೆಂಗಳೂರು ಡಿಸ್ಟ್ರಿಕ್ಟು	36	20	0	0
ಮೈಸೂರು ,,	9	8	0	0
ಕೋಲಾರ್ ,,	4	6	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	1	5	0	0
ಚಿತ್ರದುರ್ಗ ,,	55	28	0	0
ಕಡೂರ್ ,,	21	16	0	0
ಶಿವಮೊಗ್ಗ ,,	15	8	0	0
ಜುಮ್ಲಾ.....	147	103	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಬಹುಳ ಸಪ್ತಮಿ ಶುಕ್ರವಾರದಿಂದ ಮಾಘ ಬಹುಳ ತ್ರಯೋದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1916 ನೇ ಫೆಬ್ರವರಿ ಮತ್ತು ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಕುಂಭ ಮಾಸ ಗತಿ
25	ಶುಕ್ರ *	ಸಪ್ತಮಿ	49-9	ವಿಶಾಖ	31-38	14
26	ಶನಿ ‡	ಅಷ್ಟಮಿ	43-42	ಅನೂರಾಧ	28-7	15
27	ಭಾನು	ನವಮಿ	37-49	ಜ್ಯೇಷ್ಠ	24-11	16
28	ಸೋಮ	ದಶಮಿ	31-50	ಮೂಲ	20-0	17
29	ಮಂಗಳ §	ಏಕಾದಶಿ	25-52	ಪೂರ್ವಾ	15-52	18
1	ಬುಧ †	ದ್ವಾದಶಿ	20-8	ಉತ್ತರಾ	11-54	19
2	ಗುರು ;;	ತ್ರಯೋದಶಿ	14-54	ಶ್ರವಣ	8-11	20

* ಮಳೆ ನಕ್ಷತ್ರ—ಶತಭಿಷ 3 ನೇ ಪಾದ.

‡ ಚಲುವಾಜಮ್ಮಣ್ಣಿಯವರ 1 ನೇ ಕುಮಾರಿ ವರ್ಧಂತಿ.

§ ಸರ್ವತ್ರ ಏಕಾದಶಿ, ಮಳೆ ನಕ್ಷತ್ರ—ಶತಭಿಷ 4 ನೇ ಪಾದ.

† ತಿಥಿದ್ವಯ, ಪ್ರದೋಷ.

;; ಚತುರ್ದಶೀತಿಥಿ, ಮಹಾಶಿವರಾತ್ರಿ.

Printed and Published by the Rev. H Gulliford, Proprietor and Manager, Wesleyan Mission Press, Mysore. 24/2/1916.

REGISTERED
M. 90

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸನ್ ೧೯೧೬ ನೇ ಇಸವಿ ಮಾರ್ಚಿ ತಾರೀಖು ೨ ನೇ ಗುರುವಾರ. ಸಂಚಿಕೆ ೪೦

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ವಿಭಾಗಗಳ ವಿಚಾರಗಳ ಎಲ್ಲಾ ಕಚೇರಿ ಫೀಜಿನ ಕ್ರಮಗಳನ್ನು, ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನು ತಿಳಿಸುವ 615 ಪೇಜು ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ ರೂ. 1-12-0. [156-37]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

JUST PUBLISHED.

(1) Aids to Grammatical Analysis, 5 as. (2) English Essays and Letters, 6 as. (3) English Papers, 8 as. (4) Spelling Book, 4 as. (5) L. S. English Notes for 1917 (will be ready soon).

Apply to: - **M. N. SITA RAMA RAO,**
Krishnaraja Mohalla, Mysore.

ಕೃಷ್ಣೇಶ್ವರ ಲೇಖ್ಯಬೋಧಿನಿ ಕ್ರಯ ೧-೮-೦

ಸಿವಿಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ಸಮಸ್ತ ವಿಚಾರಗಳನ್ನು, ದಸ್ತಾವೇಜುಗಳನ್ನು, ಬೇರೊಬ್ಬರ ಸಹಾಯವಿಲ್ಲದೆ ತಿಳಿಯುವುದು. ಅಕ್ಷರವೂ ಮುದ್ರಣವೂ ಸುಂದರವಾದ ಪುಸ್ತಕ! ಬೇಗ ಬೇಗ ಬರೆದು ತರಿಸಿಕೊಳ್ಳಿರಿ !!

ಕ್ರಯ ಒಂದು ರೂಪಾಯಿ ಎಂಟಾಣೆ.

ನಮ್ಮ ವಿಳಾಸ :—ಭಾರತಿ ಸಂಗಂಗಿರಾಮ,
42, ಸಿ. ಬೀದಿ, ಕೋಟೆ, ಬೆಂಗಳೂರು ಸಿಟಿ.

...ನೆ ತರಗತಿ ಭೂವಿವರಣೆ.

ಚಿತ್ರಗಳು ಮತ್ತು ಭೂಪಟಗಳೊಡನೆ (ಕ್ರಯ 1 ಆಣೆ).
ಮೈಸೂರು ದೇಶದ ಭೂಪಟಗಳು.
(ಪ್ರಾಕೃತಿಕ ಮತ್ತು ರಾಜಕೀಯ) ಕ್ರಯ 2 ಆಣೆ.

ಹೊಸ ಭೂವಿವರಣೆಗಳು.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ. ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಅಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯ ಕಾರಣ ಸಂಬಂಧಗಳೊಡನೆ ರಚಿಸಲ್ಪಟ್ಟಿವೆ.

1. ವಿಶ್ವಾಖಂಡದ ಭೂವಿವರಣೆ	...	0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ	...	0-6-0
ಮೇಲೆ ಕಂಡ ಎರಡೂ ಸೇರಿ	...	0-10-0

ಬೈಸಿಕಲ್ ಭೂವಿವರಣೆ 2 ಆಣೆ; The English L. S. Text Examiner for 1916 by a Graduate, Price 3 as.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

Direct Importers.

ಸೀಮೆಯಿಂದ ನಮಗೆ ಬಂದಿವೆ.

ಜೆ. ಬಿ. ಕಂಪೆನಿಯವರು ಹೊಟ್ಟು ದರಗಳಿಗೆ ಪ್ರಕಟಿಸಿರುವ ಈ ಕೆಳಗೆ ಕಾಣುವ ಜೇಬು ಗಡಿಯಾರಗಳು ಬಹಳ ಅಗ್ಗವಾದ ಕ್ರಯಕ್ಕೆ ವಿಕ್ರಯ

ಮಾಡುತ್ತೇವೆ ಬೇಗ ನೋಡಿ ತರಿಸಿಕೊಳ್ಳಿರಿ. ನಮ್ಮ ಕಂಪನಿ ನಾಣ್ಯಕವಾದದ್ದು.

ವಾಚುಗಳು	ಕ್ರಯ.
1. ಸಿಸ್ಕಂ ರಾಸ್ಕೋಪ್	ರೂ. 1-14-0
2. ಬೆಸ್ಟ್ ಲೀವರು	,, 2- 4-0
3. ಡಿಟೋ ಗರ್ಟ್ಟಿಮ್	,, 2- 8-0
4. ರೈಲ್ವೆ ರೆಗ್ಯುಲೇಟರ್	,, 2-10-0
5. ಮಣಿಕಟ್ಟು ಸಣ್ಣ ಗಡಿಯಾರ ಚರ್ಮಪಟ್ಟಿ ಸಹಿತ	,, 4- 8-0
6. ಡಿಟೋ ಬೆಳ್ಳಿಯದು	,, 6- 0-0

ನಮ್ಮ ವಿಳಾಸ—ಗೌಥಾ ಅಂಡು ಕೋ,
57, ಆದಿಯಪ್ಪನಾಯಕರ್ ಬೀದಿ, ಮದರಾಸ್.

ಸೂಚನೆ.—ದಯಮಾಡಿ ಬರೆಯುವಾಗ ನಿಮ್ಮ ಹೆಸರು ವಿಳಾಸ ಸ್ಪಷ್ಟವಾಗಿ ಬರೆಯಿರಿ. ನಮ್ಮಲ್ಲಿ ವಾಚುಗಳು, ಟೈಂಪೀಸುಗಳು, ಟೈಪ್‌ರೈಟರುಗಳು, ...ಗಳು, ಫೌಂಟನ್ ಪೆನ್ ಮುಂತಾದ ಅನೇಕ ಪದಾರ್ಥಗಳು ಸಿಕ್ಕುತ್ತವೆ.

ನೋಟೀಸ್.

ಬೆಂಗಳೂರಿನ ಖಾತಾ ಸಣ್ಣ ಸ್ವದೇಶೀ ಮಿಲ್ಲು ಕಂಪೆನಿಯಲ್ಲಿ ತಯಾರಾಗುವ ಪಂಚೆಗಳು, ಪಡಿಯಂಗು, ಚಕ್ಕು, ಟ್ವಿಲ್, ಹಚ್ಚಡ ಮುಂತಾದ ಜವಳಿ ಮತ್ತು ನಂಬರುವಾರು ನೂಲು ವ್ಯಾಪಾರ ಮಾಡಲು ನಮ್ಮನ್ನು ಸೋಲ್ ಏಜಂಟರನ್ನಾಗಿ ಏರ್ಪಡಿಸಿರುವದರಿಂದ ನಮ್ಮಲ್ಲಿ ಈ ಮಾಲು ಕಾರ್ಖಾನೆ ಬೆಲೆಗೆ ದೊರೆಯುವದಲ್ಲದೆ ಜವಳಿ ಡಿಸ್ಕೌಂಟು ದೊರೆಯುತ್ತೆ. [172-14]

ಕಮಿಷನ್ ಮತ್ತು ಜನರಲ್ ಏಜನ್ಸಿ—

143, ದೊಡ್ಡಪೇಟೆ, ಬೆಂಗಳೂರು ಸಿಟಿ.	ಕೆಂಪಣ್ಣಯ್ಯನ ಬೀದಿ, ಶಿವಮೊಗ್ಗ.

ಲೋವರ್ ಸೆಕೆಂಡರಿ ಪರೀಕ್ಷೆಯ

... ಗಣಿತಪ್ರಶ್ನೋತ್ತರಾವಳಿ

ಎಂಬ ನವೀನ ಗ್ರಂಥದಲ್ಲಿ ಎಲ್ಲಾ ಲೆಕ್ಕಗಳನ್ನು ಸುಲಭವಾಗಿಯೂ, ಶೀಘ್ರವಾಗಿಯೂ ಮಾಡುವ ಅನೇಕ ಮಾರ್ಗಗಳು ಉದಹರಿಸಲ್ಪಟ್ಟಿವೆ. ಮತ್ತು 1900-15 ರ ವರೆಗಿನ ಪ್ರಶ್ನೆಗಳಿಗೆ ಪೂರ್ಣವ್ಯಾಖ್ಯಾನವಾದ ಉತ್ತರಗಳೂ ಇರುತ್ತವೆ. ಇದು ಮಾಸ್ಟರುಗಳಿಗೂ, ಸ್ಕೂಲ್ ಮತ್ತು ಪ್ರೈವೇಟ್ ವಿದ್ಯಾರ್ಥಿಗಳಿಗೂ ಅತ್ಯಂತ ಆವಶ್ಯಕವಾಗಿರುವದು. ಸ್ವಲ್ಪ ಪ್ರತಿಗಳೇ ಉಳಿದಿವೆ ಕ್ರಯ 0-8-0; ವಿ.ಪಿ 10 ಆ.

ವಿಳಾಸಗಳು—ಡಿ ಮಹಾಬಲರಾವ್, ಬಿ ಎ, ಅ|| ಮಾಸ್ಟರ್, ಮಹಾರಾಣಿ ಕಾಲೇಜು, ಮೈಸೂರು; ಅಥವಾ, ಸ್ಟುಡೆಂಟ್ಸ್ ಹಾಲ್, ಮೈಸೂರು. [264-10]

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

[ಕನ್ನಡದಲ್ಲಿ]

ಲೋಕಪ್ರಸಿದ್ಧವಾದ ಈ ಪುಸ್ತಕ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ರಮ್ಯವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆ ಮಾಡಿ ತಿದ್ದಿ ಪರಿಷ್ಕರಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ತರಿಸಿಕೊಂಡರೆ ರೂ 2-4-0. ಜಾಗ್ರತೆ ನೋಡಿ. [239-35]

ವಿಳಾಸ—ಮ್ಯಾನೇಜರ್, ಎ. ಎಲ್. ಎಸ್. ಬುಕ್ ಡಿಪೋ, ಮೈಸೂರು

Free! ಬಹುಮಾನ. Free!

ಈ ಕಾದಂಬರಿಗಳಲ್ಲಿ 5 ರೂಪಾಯಿಗೆ ಕಮ್ಮಿ ಇಲ್ಲದ ನಮ್ಮ ಆರ್ಡರಿಗೆ ಶೋಭನೆ ಎಂಬ 12 ಆ. ಬೆಲೆಯ ಹೊಸದಾದ ಬಂಗಾಳಿ ಕಾದಂಬರಿಯು ಉಚಿತ. ಅಥವಾ 10 ಆಣೆ ಬೆಲೆಯ S.T.A. ಕ್ಯಾಲೆಂಡರ್ ಉಚಿತ. [281-11]

ಸುಶೀಲೆ—	ಶ್ರೀ. ತಿರುಮಲಮ್ಮನವರಿಂದ	0- 6-0
ಸತೀತ್ವರಕ್ಷಣೆ—ನಭಾ ಭಾಗ 1	,,	0- 8-0
ವಿದ್ಯುಲ್ಲತಾ— ಹರಿಣಿ	,,	0-14-0
ವಿರಾಗಿಣೀ— ನಭಾ ಭಾಗ 2	,,	1- 0-0
ಪತ್ನೀಕರ್ತವ್ಯ— ವಿಂದಾ	,,	1- 8-0
ಜಾಮಲಿ—	ಬಂಗಾಳಿ ಪತ್ತೇದಾರಿ ನಾವಿಲ್	0- 6-0
ರಾಜಪುತ್ರ, ಜೀವನಸಂಧ್ಯಾ—ಬಂಗಾಳಿ ನಾವೆಲ್		0-12-0
ಚಂದ್ರಪ್ರಭಾ ಎಂಬ ಹೊಸ ಕಾದಂಬರಿ		0-14-0

ವಿಳಾಸ.—ಎಂ. ಎಸ್. ರಾವ್ ಕಂಪೆನಿ, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

VIKATA VINODINI.

An Illustrated Kannada Monthly Journal, Full of Humourous Stories, Witty Sayings, Comic Sketches, Moral Truths, Etc.

Annual subscription (including postage) Re. 1-0-0 only. Sample Copy will be sent free on application.

Address:-**VIKATA VINODINI OFFICE,**
Cottonpet, Bangalore City.

ಕನ್ನಡ ಮಾಸಪತ್ರಿಕೆ.

ವಿ ಕ ಟ ವಿ ನೋ ದಿ ನಿ.

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಕ್ತಿಗಳನ್ನೊಳಗೊಂಡಿರುವ ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ. ಮಾದರೀ ಪತ್ರಿಕೆ ಉಚಿತವಾಗಿ ರವಾನಿಸಲ್ಪಡುವದು.

ನಮ್ಮ ವಿಳಾಸ :—“ವಿಕಟವಿನೋದಿನಿ” ಆಫೀಸು,
ಅರಳೆಪೇಟೆ, ಬೆಂಗಳೂರು ಸಿಟಿ. [58-1]

FREE! Do you wish to know “How to Make the Best Quality ROSE, JASMINE, LILY, LOTUS & Sweet Scented Hair Oils at a very cheap cost at your own home? If so, please write us at once and mention this paper. [263-10]

S. PAUL & Co., *Perfumers,*
4, Hospital Street, Dharamtola, **Calcutta.**

CUDDAPAH STONES.

ನಾವು ಉತ್ತಮವಾದ ಕಡಪ ಕಲ್ಲುಗಳನ್ನು ನಮ್ಮ ಸ್ವಂತ ಗಣಿಯಿಂದ ತೆಗೆಯುವ ಆರ್ಡರಿಗೆ ತಯಾರಾಗಿಸಿ ಸುಲಭ ಬೆಲೆಗೆ ವಿಕ್ರಯಿಸುತ್ತಿದ್ದೇವೆ. ಆವಶ್ಯಕವಿರುವವರು ಬರೆದು ತರಿಸಿಕೊಳ್ಳಬಹುದು. ಮತ್ತು ಸರ್ಕಾರ ಕಚೇರಿ ವಿಲ್ಲದ ದೇವಸ್ಥಾನ, ಛತ್ರ ಮೊದಲಾದುವುಗಳಿಗೆ ಯುಕ್ತ ಕಲ್ಲುಗಳನ್ನು ಉಚಿತವಾಗಿ ನಮ್ಮ ಗಣಿಯಲ್ಲಿ ಕೊಡುತ್ತೇವೆ. ಭಾಡಿಗೆ ಕೊಟ್ಟು ತರಿಸಿಕೊಳ್ಳಬಹುದು. ಹೆಚ್ಚು ಸಂಗತಿಯನ್ನು ನಮಗೆ ಬರೆದು ತಿಳಿಯಬಹುದು. [52-2]

ನಮ್ಮ ವಿಳಾಸ—**D. KRISHNA RAO & SONS,**
Yerraguntla, Cuddapah Dist.; or Bangalore City.

ಸಂಗೀತ ಪಾರಿಜಾತ

ಮೂರನೆಯ ಮುದ್ರಣ! ಸೀನಪದ್ಯಗಳೂ ಕೀರ್ತನೆಗಳೂ ಮೊದಲಿಗಿಂತ ಹೆಚ್ಚಾಗಿವೆ. ಬೇಗರಹಾದು ಆರತಿಯ ಹಾಡು ಮುಂತಾದ ಅನೇಕ ಹಾಡುಗಳಿವೆ ಕ್ರಯ ೦-೪-೦ ನೂರು ಪ್ರತಿಗೆ ಕಮ್ಮಿ ಇಲ್ಲದಂತೆ ತರಿಸಿಕೊಂಡರೆ ಧಾರಾಳವಾದ ಕಮಿಷನ್ ಕೊಡುವೆವು

ಶಬ್ದಾದರ್ಶ ನೋಟ್ಸ್.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದುದು ಕ್ರಯ ೦-೪-೦ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಸಿಗುತ್ತೆ

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.
ಸ್ಟೂಡೆಂಟ್ಸ್ ಹಾಲ್, ಮೈಸೂರು. [277 12]

ಅರ್ಧ ಬೆಲೆ! ಒಂದು ತಿಂಗಳು ಮಾತ್ರ!

ನಮ್ಮ ರೈಲ್ವೆ ರೆಗ್ಯುಲೇಟರ್ ವಾಚ್ ಸರ್ವೋತ್ಕೃಷ್ಟವಾದ ಕಾಲವನ್ನು ತೋರಿಸತಕ್ಕದ್ದು, ದೊಡ್ಡ ಮನುಷ್ಯರಿಗೆ ಉಪಯುಕ್ತ 3 ವರುಷದ ಗ್ಯಾರಂಟಿ ಕೊಡುವೆವು.



ಕ್ರಯ ರೂ. 7-14-0; ರೂ. 9-14-0. ಈಗ ನಾವು ಇಟ್ಟಿರುವ ಕ್ರಯ ರೂ 3-15-0; ರೂ. 4-15 0. ಉತ್ತಮವಾದ ಕೈಗೆ ಕಟ್ಟಿಕೊಳ್ಳುವ ಗಡಿಯಾರ ಚರ್ಮದ ಪಟ್ಟಿ ಸಮೇತ ಕ್ರಯ ರೂ. 10; ಈಗ ಅದನ್ನು ರೂ 5 ಕ್ಕೆ ಕೊಡುವೆವು. ಲೇಡಿ 9 ಕ್ಯಾರೆಟ್ ಚಿನ್ನದ ಗಡಿಯಾರ ಕ್ರಯ ರೂ. 32; ಈಗ ರೂ. 16 ಕ್ಕೆ ಮಾತ್ರ. ಲೇಡಿ ಬೆಳ್ಳಿ ವಾಚ್ ಕ್ರಯ ರೂ. 14; ಈಗ ರೂ 7 ಮಾತ್ರ ಬಲವಾದ ನಂಬಿಕೆಯುಳ್ಳ 8 ದಿನದ ನಿಕ್ಕಲ್ ವಾಚ್ ರೂ 18; ಈಗ ರೂ 9 ಅದೇ ಬೆಳ್ಳಿಯದು ರೂ. 24; ಈಗಿನ ಕ್ರಯ ರೂ 12 ಅದೇ ಬೆಳ್ಳಿ ಹಂಟಿಂಗ್ ವಾಚ್ 30; ಈಗಿನ ಬೆಲೆ ರೂ. 15. ವಿಶೇಷ ಬಹುಮಾನ ಕೈಗೆ ಕಟ್ಟುವ ತರಹಾ ಅಲ್ಲದೆ ಇತರ ತರಹಾ ಪ್ರತಿ ಒಂದು ವಾಚು ಕೊಂಡುಕೊಳ್ಳುವವರಿಗೂ ಒಂದು ಸುಂದರ ಸರಪಣಿಯೂ, 6 ವಾಚು ಕೊಳ್ಳುವವರಿಗೆ ಒಂದು ಹೆಚ್ಚು ವಾಚೂ ಇನಾಮು ಕೊಡುವೆವು.

ನಮ್ಮ ವಿಳಾಸ—The Competition Watch Co.,
25, Madan Mitra Lane, E. Calcutta. [276-12]

ಊದಬತ್ತಿಗಳು

ಇಂಡಿಯಾ ದೇಶದಲ್ಲಿ ನಡೆದಿರುವ ವಸ್ತುಪ್ರದರ್ಶನಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನೂ 32 ಮೆಡಲುಗಳನ್ನೂ ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕ ಸಮಯದಲ್ಲಿಯೂ ದೇವರ ಉತ್ಸಾಹ ಸಮಯಗಳಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರವನ್ನು ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೊಲದ ಸೇರು 1 ಕ್ಕೆ ರೂ. 12, ರೂ 5, 3, 2-8 0, 1-4-0, 1.

ಅರಗಜ ಮತ್ತು ಬತ್ತಿಗಳು ತೊಲ 1 ಕ್ಕೆ ರೂ. 3, 1, ಆ. 12, 6

ಸುವಾಸನೆ ಸುಣ್ಣ ಡಬ್ಬಿ 1 ಕ್ಕೆ 2 ಆಣೆ.

ಸುವಾಸನೆ ಸಾದು ಡಬ್ಬಿ 1 ಕ್ಕೆ 3 ಆಣೆ.

ವಿಳಾಸ.—**ಟಿ. ಎಲ್. ಉಪಾಧ್ಯಾಯ,**
ಸುಗಂಧಕಾರಿ, ಮೈಸೂರು. [54-1]

USE I. C. O. BRAND

[55-45]



Refined Edible Cotton Seed Oil.

For Cooking and Salads.

An approved substitute for Ghee in all preparations. Price—

Re. 1-4-0 per tin of 3½lbs
„ 0-7-0 per „ of 1lb

Liberal Terms to Trade.

The Indian Co-Operative Stores Co., Ltd.,
159, Kilari Road, Bangalore.

ಸ್ತ್ರೀಯರ ಜೋಕೆ!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಗಿಯಂದ ನವಿರಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲಿಲ್ಲವು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಹೆಚ್ಚಿಸುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ದಿವ್ಯ

ಔಷಧಿಗಳಂತೆ ಅಷ್ಟೇ ಅಗತ್ಯದ ಪದಾರ್ಥವಾಗಿರುತ್ತದೆ. ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ಹಚ್ಚಿಕೊಳ್ಳದಿದ್ದರೆ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ತಲೆಯನ್ನು ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ನೋಡಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ನಾನಾ ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ: ನೇಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವ—ನಾವು ಕೆಲ ತಿಂಗಳ ಹಿಂದೆ ಕೆಲವು ಹಿಡಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ: ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದು ಮೆಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಉದ್ಯಾನವೇ ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [34-4]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಡಿಜ್ಜನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಸಾಬೂನುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಸಜಿದ್, ಮಾರ್ಕೆಟ್, ಬಾಂಬೆ.

ಏಜಂಟ್, ೨ ಅರ್ ಹಾರ್ಡೀ, ಮಂಗಳೂರು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತವನ್ನು ಓದಿನೋಡಿರಿ.

ಸ್ವಲ್ಪ ಕ್ರಯ! **ಪೋಟೆಬೋ.** ಬಹು ಲಾಭ;

ಅನೇಕ ರೋಗಗಳಿಗೆ ಒಂದೇ ಔಷಧವು.

ಅತುರ್ಕಫಾ ಅಂದರೆ ಆರೋಗ್ಯ ಬಿಂದು.

ಈ ಅತುರ್ಕಫಾ ಎಂಬ ಔಷಧವು ಎಷ್ಟೋ ರೋಗಗಳ ಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣ ಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದ ಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರರಿಗೆ ಮತ್ತು ವೈದ್ಯರ ಜರೂರವಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂತೆ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಪಡವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗ, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಸಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೆಯೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ನೈಶೂಲಿ, ಅರವಶೂಲಿ, ನವಶೂಲಿ, ಪಾತಶೂಲಿ, ರೇಚಿ ಜಡ್ತು, ಗುದದ್ವಾರದ ಬೇನೆ, ಹುರಕು ಕಜ್ಜಿ, ಗಜಕರ್ಣ, ತಮ್ಮ ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಪಡದನಂಜು, ಸಣ್ಣಕೂಸುಗಳ ಬಾಲಗ್ರಹ, ತೊಡಗೆಮ್ಮು, ಅರವಿ ಮುಟ್ಟಿ ಮೋಷ ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಹೊಂದಿದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರಾಗಿ 6 ವರ್ಷಗಳಾಗಿದ್ದ ರೂ 1,300 ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 3 ರೂಪಾಯಿ. ನಮೂನೆ ಉಪ್ಪಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ, ವಿ.ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಷನ್ ಕೊಡುತ್ತವೆ. ಇದಕ್ಕೆ ವಿ.ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಷನ್ ಇಲ್ಲ. ವಿ.ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತಿ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಜವಾಬಿಗಾಗಿ ಟಿಕೇಟುಗಳ ಇದರ ಹೊರ್ತು ಜವಾಬು ದೊರೆಯಲಿಕ್ಕಿಲ್ಲ. ಅನುಪಾನ ಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಜೋಡಿ ಸಿಗುವದು.

ನಮ್ಮ ವಿಳಾಸ—ಹುಸೇನ ಸಾಹೇಬ ಮೋಹಿದಿನ ಸಾಹೇಬ ಮುಲ್ಲಾ, ಅತುರ್ಕಫಾ ಶೋಧಕ, ಹೆಡ್ ಆಫೀಸ ಮುಕ್ಕಾಮ ಶಾಹಪುರ, ಬೆಳಗಾಂವ. [44-2]

The General Assurance Society, Ltd., Ajmer.

(A Popular Life Office.)

Before insuring or taking Agency elsewhere, [it will] be to your interest to know the rates of premium and of Agency specially prepared by the Society's Co[nsulting] Actuary, Mr. H. E. W. Lutt, F. I. A. (one of the eminent Actuaries in England). [142-3?]

First Valuation Result:—The total liabilities unde[r] Assurances issued up to 31st March 1913, are fully co[vered] by the Society's Life Assurance Fund and Paid Capital.

Write for full particulars, Annual valuation Reports [to] the Manager, or Mr. K. S. Tirupathi, F. C. I., Secre[tary], Opposite Minto Hospital, Bangalore City. Mysore Agen[t] Mr. S. P. Ramanna.



ಹುಚ್ಚು ಹಿಡಿಸತಕ್ಕ ತಲೆ ನೋವುಗಳು.

ಲಿಪಿಲ್‌ಸ್ ಓರಿಯೆಂಟಲ್ ಬಾಂ ಎಂಬ ತೈಲವನ್ನು ಉಪಯೋಗಿಸುವದರಿಂದ ತಲೆ ನೋವು, ತಲೆ ಬೊದಿತ, ಕಣ್ಣುಗುಡ್ಡೆಯ ನೋವು, ಮುಖದ ನೋವು, ಪಿತ್ತ, ಕಾಲಿನ ನೋವು ಕಿವಿಗಳ ನೋವು, ತಲೆಯಲ್ಲಿರುವ ನಾನಾ ಜಾತಿಯ ತಿಸಿತಗಳೂ, ಅನೇಕ ರೀತಿಯಲ್ಲಿ ಬಾಧಿಸುವ ನೋವುಗಳೆಲ್ಲವು, ಒಡನೇ ಸ್ವಸ್ಥ ವಾಗುತವೆ. ಒಬ್ಬ ಬೆಸ್ತರಿಂದ ಸ್ವಾಂಪ್ರಿಸಿಯೆಂದ ವೆಂಬಿ. ವಿಲ್ಕಾಕ್ಸ್ ಬರೆದುದ್ದು:—"ನಾನು ಮಿಲ್ಸಿದ್ದ ಕಲಿತನೋವುಗಳಿಂದ, ನನ್ನನ್ನು ಹುಚ್ಚನಂತೆ ಮಾಡಿದ್ದ ಭಯಂಕರ ನೋವುಗಳಲ್ಲಿ, ಲಿಪಿಲ್‌ಸ್ ಓರಿಯೆಂಟಲ್ ಬಾಂ ಎಂಬ ತೈಲವನ್ನು ನನ್ನ ಹಣೆಯ ಮೇಲೆಯೂ ಕಾಲಿನ ಮೇಲೆ ಯೂ ಉಪಯೋಗಿಸಿದ ಬಳಿಕ ಒಡನೇ ಅದ್ಭುತ ರೀತಿಯಲ್ಲಿ ವಾಸಿಯಾಯಿತು."

ಸೀಸೆ 1ಕ್ಕೆ 1 ರೂ. ಮೋಡಿ ಔಷಧಗಾರರಲ್ಲೆಲ್ಲಿಯೂ ಸಿಗುತ್ತೆ. [91-

ESANOFELE

ಮಲೇರಿಯಾ ಡಿಸ್ಟ್ರಿಕ್ಟುಗಳಲ್ಲಿ ವಾಸಮಾಡತಕ್ಕವರೆಲ್ಲಾ "ಈಸಾನೊಫೆಲಿ" ಯನ್ನು ಸೇವಿಸ ಮಾಡಬೇಕು.

ಹಿಂದುಸ್ಥಾನದಲ್ಲಿರುವ ಪ್ರಖ್ಯಾತಿಪಡೆದ ವೈದ್ಯನು ಹೀಗೆ ಬರೆಯುತ್ತಾನೆ.—"ಜನರಲ್ ಆಸ್ಪತ್ರೆಯೊಳಗೆ ಐದು ಜನ ರೋಗಿಗಳಿಗೆ ಈಸಾನೊಫೆಲಿಯನ್ನು ಕೊಟ್ಟು ಚಿಕಿತ್ಸೆ ಮಾಡಲಾಯಿತು. ಈ ಔಷಧವನ್ನು ಕೊಟ್ಟ 24 ರಿಂದ 36 ಗಂಟೆ ಹೊತ್ತಿನೊಳಗಾಗಿ ಪ್ರತಿ ಒಬ್ಬರಿಗೂ ಜ್ವರವು ಇಳಿದು ಹೋಯಿತು; ಪುನಃ ಜ್ವರ ಹೆಚ್ಚಾಗಲೇ ಇಲ್ಲ." ಮಲೇರಿಯಾ, ಅದರ ಕಾರಣ, ಅದನ್ನು ತಡೆಯುವುದು, ಅದನ್ನು ಪರಿಹರಿಸುವುದು ಎಂಬೀ ವಿಷಯಗಳನ್ನು ಕುರಿತ ಪುಸ್ತಕವನ್ನು ಕೇಳಿ ನಮ್ಮಿಂದ ತರಿಸಿಕೊಂಡು ಓದಿನೋಡಿ.

ಕ್ರಯ 1 ಬಾಟ್ಲಿಗೆ ರೂ. 2-0-0. ಎಲ್ಲಾ ಔಷಧ ಮಾರಾಟದ ಅಂಗಡಿಗಳಲ್ಲೂ ಬಿಕರಿಗೆ ಇಟ್ಟದೇವೆ. ಎಳೇ ಮಕ್ಕಳಿಗಾಗಲಿ, ಯಾವ ವಯಸ್ಸಿನ ಗಂಡು ಹೆಣ್ಣು ಮಕ್ಕಳಿಗಾಗಲಿ ಬೇಕಾಗಿದ್ದರೆ "ಈಸಾನೊಫೆಲೀನಾ" ಎಂಬುವನ್ನು ಕೊಡಿ ಎಂದು ಕೇಳಿ. ಇದು ನೀರಿನೋಪಾದಿ ಇದ್ದು ಸೇವನೆಗೆ ರುಚಿಯಾಗಿರುತ್ತದೆ.

ಮೈಸೂರು ಸಂಸ್ಥಾನದ ಏಜಂಟರು:—ಜೆ. ಬಿ. ಫಾರ್‌ಸ್ಟರ್ ಕಂಪನಿ, ಬೆಂಗಳೂರು.

ಇಂಡಿಯಾ, ಬರ್ಮಾ, ಸಿಲೋನ್‌ಗೆಲ್ಲಾ ಡಿಪ್ರೋ— [176-26]

ಬಿ. ಜೆ. ಗೋರಿಯೋ ಕಂಪನಿ, ವಾಲೆಸ್ ಬೀದಿ, ಬೊಂಬಾಯಿ.

ಪ್ರೊಪ್ರೈಟರುಗಳು:—

ಫೆಲಿಸ್ ಬಿಸ್ಲೆರಿ ಕಂಪನಿ, ಮಿಲ್ಯಾನ್, ಇಟಲಿ.

ನಕ್ಕಲ್ ಔಷಧ ಕೊಂಡುಕೊಂಡು ಮೋಸಹೋಗಬೇಡಿ.

ಕರ್ಣಿಕ ಎಗ್ಯುಮಿಕ್ಸ್ಚರ

ಎಲ್ಲಾ ಜ್ವರಗಳಿಗೂ ಖಂಡಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಸಾರಿ ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ವಿಜ್ಞಾಪಿಸುತ್ತೇವೆ. [213-21]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜೆಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ಕ್ರಮ. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,
ಎಗ್ಯು ಮಿಕ್ಸ್ಚರ್ ಡಿಪೊ, ಬೊಂಬಾಯಿ, 4.

KARNIK Bros., BOMBAY, 4.

ನಮ್ಮ ಏಜಂಟರು.—ದಿ ಕುಲಕರ್ಣಿ ಮಾರ್ಟ್, ಮಂಗಳೂರು.

ಬಿಸಿಲು ಕಾಲಕ್ಕೆ ಮೂರು

ಮಹೌಷಧಗಳು.

ಅಮೃತಾಮಲಕ ತೈಲ.

ಈ ತೈಲವು ಕಣ್ಣು ಕೈಕಾಲುರಿ, ಬಿಸಿಲಿನ ತಲೆನೋವು, ಕಣ್ಣು ಮಂಜು, ಕಣ್ಣು ಕೆಂಗಣ್ಣು, ಮುಂತಾದ್ದನ್ನು 1-2 ಅಭ್ಯಂಗದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ವಿಶೇಷವಾಗಿ ಹೆಚ್ಚಿಸುತ್ತದೆ. ಬಿಸಿಲು ಕಾಲಕ್ಕೆ ಇದಕ್ಕಿಂತಲೂ ಉತ್ತಮವಾದುದು ಖಂಡಿತವಾಗಿಯೂ ಇಲ್ಲವೆಂಬುದನ್ನು ಅನುಭವದಿಂದ ತಿಳಿಯಿರಿ.

ಅಭ್ಯಂಗಕ್ಕೆ ಆಗುವ ತೈಲ 8 ಆಣೆ.

ಖಂಡಾಮಲಕ ರಸಾಯನ.

ಸಮಸ್ತ ಪಿತ್ತ ವಾತ ವಿಕಾರಗಳನ್ನು ಜಾಗ್ರತೆ ಗುಣಮಾಡಿ ಜೀರ್ಣಶಕ್ತಿಯನ್ನು ಸರಿಪಡಿಸಿ ರಾತ್ರಿ ಸುಖನಿದ್ರೆಯನ್ನುಂಟುಮಾಡಿ ಮಲವನ್ನು ಸಲೀಸಾಗಿ ಜಾರಿಸುವುದು. ಸೇವಿಸಲು ರುಚಿಯಾಗಿದೆ. 15 ದಿನದ ಔಷಧ 12 ಆಣೆ.

ಅಪೋದಿನಿ.

ಬಾಯಾರಿಕೆಯನ್ನು ತಕ್ಷಣ ಅಜೀರ್ಣ-ಆಯಾಸವನ್ನು ಪರಿಹರಿಸಿ-ಸರ್ವರ ಮನಸ್ಸನ್ನು-ತನ್ನ ಅಮೋಘವಾದ ಗುಣ ಮತ್ತು ಸುವಾಸನೆಗಳಿಂದ ಮೋಹಗೊಳಿಸುವ ಈ ರತ್ನವನ್ನು ಈಗಲೇ ತರಿಸಿಕೊಳ್ಳಿರಿ-ಪೂರ್ವಕ್ಕಿಂತಲೂ ಎಷ್ಟೋ ಮನೋಹರವಾಗಿ ತಯಾರಿಸಲ್ಪಟ್ಟಿರುವುದು. 150 ಮಾತ್ರೆ ಸೀಸೆ 4 ಆಣೆ. [278-12]

ಎರಡು ರೂಪಾಯಿಗೆ ಕಡಮೆ ಇಲ್ಲದೆ ಔಷಧ ತರಿಸಿದರೆ ಟಿ. ಕ. ಮುಫತ್ತು.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್, ನಂಜನಗೂಡು.

"ಹನುಮಾನ್"  ಬೋರಾಕ್ಸ್ ಸಾಬೂನು.

ಹನುಮಾನ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ತುಷ್ಟು, ತಜ್ಜು, ತುರಿ ಮೊದಲಾದ ವ್ಯಾಧಿಗಳು ಹನುಮಾನ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ಕೊಳೆಗೆ ನುಣುಪು ಮತ್ತು ಕಳೆಯನ್ನು ಕೊಡುವುದರಲ್ಲಿ ಹನುಮಾನ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾನ್ ಸಾಬೂನಿನಿಂದ ಬೆಳಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡಿಗಿಯರು, ಯೌವನಸ್ಥರು ಮತ್ತು ವೃದ್ಧರು ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾನ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಹರುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾನ್ ಗುರ್ತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಸೂ. ಕ :—ಎಲ್ಲರೂ ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆಯಬೇಕು.

ಬೆಂಗಳೂರು ಸಿಟಿ ಮ|| ಎಚ್. ದಾಸಪ್ಪನವರಲ್ಲಿ ಬಿಕರಿಗೆ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,
[211-20] ಈವಿನಿಂಗ್ ಬಜಾರ್ ರೋಡ್, ಮದರಾಸು.

ಸ್ಕಾಟ್ಸ್ ಮೆಡಿಕೇಟೆಡ್ ಪರಿಮಳ ನಶ್ಯದಪುಡಿ

ಈ ಉತ್ಕೃಷ್ಟವಾದ ಪರಿಮಳ ನಶ್ಯದ ಪುಡಿಯನ್ನು ಉಪಯೋಗಿಸುವುದರಿಂದ ನೆಗಡಿ, ತಲೆನೋವು, ಒಂಟಿ ತಲೆನೋವು, ಜಲದೋಷ, ತಲೆಭಾರ ಮೊದಲಾದ ಅನೇಕ ವಿಧ ವ್ಯಾಧಿಗಳನ್ನು ಹೋಗಲಾಡಿಸಿ ಚಟುವಟಿಕೆಯನ್ನೂ, ಉತ್ಸಾಹವನ್ನೂ ಆನಂದವನ್ನೂ ಉಂಟುಮಾಡುತ್ತದೆ. ಅನೇಕ ಸಾರಿ ಇತರ ನಶ್ಯವನ್ನು ಹಾಕುವವನು ಇದನ್ನು ಒಂದು ಸಾರಿ ಹಾಕಿದರೆ ಸಾಕು. ಈ ನಶ್ಯವನ್ನು ಇತರ ನಶ್ಯದಲ್ಲಿ ಒಂದು ಚಿಟಿಕೆ ಹಾಕಿ ಕಲಸಿದರೆ ನಶ್ಯವೆಲ್ಲಾ ಸುವಾಸನೆಯಾಗುತ್ತೆ. ತಗಡಿನ ಗ್ಲಾಸು

ಡಬ್ಬಿ 1 ಕ್ಕೆ ಕ್ರಯ	0-3-0
ಡಿಟೋ 12 ಡಬ್ಬಿಗೆ ಕ್ರಯ	2-0-0
1 ನೇ ನಂಬರ್ ಸೀಸೆ 12 ಕ್ಕೆ	1-4-0
2 ನೇ ನಂಬರ್ ಸೀಸೆ 12 ಕ್ಕೆ	0-8-0
3 ನೇ ನಂಬರ್ ಸೀಸೆ 12 ಕ್ಕೆ	0-5-0
ಹೊಳೆ ಹಿಡಿಯುವ ಪರಿಮಳ ನಶ್ಯದ ಟಿನ್ ಡಬ್ಬಿ 1 ಕ್ಕೆ	0-11-0

ಇದು ಮೊದಲು ಸಾವಿರ ನಶ 21 ರೂ ತೂಕದ ಸೇರು 1 ಕ್ಕೆ 10 ಆಣೆ.

ಜಾಹೀರು.—ಅನೇಕ ಸುಳ್ಳು ಪ್ರಕಟನೆಗಳಿಂದ ಜನರಿಗೆ ನಂಬಿಕೆ ತಪ್ಪಿ ಹೋಗಿದೆ. ಆದಕಾರಣ ಮೇಲೆ ಕಾಣಿಸಿದ ಸಾಮಾನುಗಳನ್ನು ಕೊಡ ದೆಯಾಗುತ್ತಾರೆಗೆ ವಿ. ಪಿ. ಛಾರ್ಜಿ ಸಂಗಡಲೇ ಪ್ರತ್ಯೇಕವಾಗಿ ಇವುಗಳನ್ನು ಉಚಿತವಾಗಿ ಕಳುಹಿಸುತ್ತೇವೆ. ಅವನ್ನು ಪರೀಕ್ಷಿಸಿದನಂತರ ಬೆಲೆ ಭಾಗಿ ಪಡೆಯಿರಿ.

ನಮ್ಮ ವಿಳಾಸ :— ಸ್ಕಾಟ್ ಕಂಪನಿ,
[0-2] 18, ಸೆಕೆಂಡ್ ಲೈನ್ ಬೀಚ್, ಮದರಾಸು.

ಅವಶ್ಯವಾಗಿ ಗಮನಿಸಿ ನೋಡಿರಿ.

ಬಹು ಸೊಗಸಾದ ಸಾಚು ! ಬಹು ಸಾಹ್ಯವಾದ ಕೆಲಸ !

ಸ್ವಲ್ಪ ವಾಚುಗಳು ಮಾತ್ರ ಇವೆ. ತ್ವರೆ ಮಾಡಿರಿ.

10 ಬಹುಮಾನಗಳ ಸಹಿತ ಕ್ರಯ ರೂ. 3-0-0 ಮಾತ್ರ.

5 ವರುಷ ಖಾತ್ರಿಯಾದ ಗ್ಯಾರಂಟಿ.

Price Rs. 3-0-0 Only.



With Rewards 10 Only.

ಈಗತಾನೆ ಬಂದಿರುತ್ತೆ. ಈ ವಾಚಿಗೆ ಬಹು ಬಲಿಷ್ಟವಾದ ಲೀವರು ಕೆಲಸದಿಂದಲೂ ಸಾಹ್ಯವಾದ ಎಲೆಕ್ಟ್ರಿಕ್ ಚಕ್ರದಿಂದಲೂ ತಯಾರಾಗಿ ಬಂದಿರುತ್ತೆ. ಇದಕ್ಕೆ ಇನ್ನೂ ನಾನಾ ವಿಧ ಕೆಲಸಗಳು ಮಾಡಿರುತ್ತೆ. ಇದನ್ನು ವರ್ಣಿಸಿ ಬರೆಯುವುದರಿಂದ ಪ್ರಯೋಜನವಿಲ್ಲ. ಒಂದು ಸರಿ ನೋಡಿದರೆ ತಾವು ತಮ್ಮ ಸ್ನೇಹಿತರಿಗೆ ಒಂದೊಂದು ತರಿಸಿಕೊಡುವುದಕ್ಕೆ ಸಂದೇಹವಿಲ್ಲ. ಬಹುಮಾನಗಳ ವಿವರ— ಸರಪಣಿ, ಕೆಂಪಾಸ್, ಪಟ್ಟಿಗೆ ಕರವಸ್ತ್ರ, ಲಬ್ಬರ್ ಬಿಸಂಟೆ, ಸೆಂಟು ಬಾಟ್ಲಿ, ಪಟಿಕ ಗುಂಡಿ ಸೆಟ್, ಕಾಸಿನೇಷನ್ ಕನ್ನಡಿ, ಇಂಗ್ಲೀಷು ಬಾಚಣಿಗೆ, ಎಪ್ಸ್ಕ್ರೀಕ್ ಕ್ಕೆ ಉಂಗರ: ಜುಮ್ಲಾ 10 ಸೇರಿ ಕ್ರಯದಹ 3-0-0 ಮಾತ್ರ.

[57-1] ನಮ್ಮ ವಿಳಾಸ—ಎಸ್. ಮಹಮದೀನ್ ಸಾಹೇಬ್,
ನಂ. 359, ಮಿಂಟ್ ಸ್ಟ್ರೀಟು, ಸಾಹ್ಕಾರ್ ಪೇಟೆ, ಮದರಾಸು.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಕ್ಕುವಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪ್ರತ್ಯೇಕವಾಗಿ ಒಂದಕ್ಕೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಛಾರ್ಜು ಸೇರಿ 4 ಆಣೆ ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0

ಅಮೃತಾಂಜನವು ನೋವಿಗೆ ಸಿದ್ಧೌಷಧವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ [64-15]

ಅಮೃತಾಂಜನ ಡಿಪೋ,

100, ಫ್ರೀರ್ ರೋಡ್, ಬೊಂಬಾಯಿ. 8 ತಂಬುಚೆಟ್ಟಿ ಬೀದಿ, ಮದ್ರಾಸ್.

ಸೂ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ ; ಆದಾಗ್ಯೂ ನಿರಾಶರಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವ, ಫೀಜಿ ಐಲೆಂಡ್, ಆಸ್ಟ್ರೇಲಿಯಾ ಮೊದಲಾದ ಕಡೆಯವರು ಕೂಡ ಈ ಔಷಧಿಯನ್ನು ಉಪಯೋಗಿಸುತ್ತಿದ್ದಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಮ್ಮ ಮನೆಯಲ್ಲಿದ್ದರೆ ಏನಾದರೂ ಮಾತ್ರವೂ ವೈದ್ಯನ ಸಮೀಪವನ್ನು ಕಾದು ನೋಡಿಯೂ ಇರುವುದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾಂತಿ, ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೋಬೇನೆ, ಬಲಹೀನತೆ ಹೊಟ್ಟೆನೋವು, ಮತ್ತು ಹೆರುವಾಗ ನಾರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಂತಿ, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 250 ಮಾತ್ರೆಗಳುಳ್ಳ ಉಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಛಾರ್ಜು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಲ್. ವಿ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಐ. ಎಲ್. ಆಫ್ ಪಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆಯುವುದು.—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಅತಿಸಾರ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತ ಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮ ಮನೆ ಪ್ರತಿಯೊಬ್ಬರೂ ಬರುವ ರೋಗಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಬಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು.—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರುಮಾಡಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನನಗೆ ತುಂಬಾ ಆನಂದವಾಗುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ."

[10-25] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಉಗಾದಿ ಬಹುಮತಿ ಗಡಿಯಾರ.

40 ಸಾಮಾನುಗಳ ಸಹಿತ ಕ್ರಯ ರೂ. 3-15-0.



ಉಗಾದಿ ಒಳಗಾಗಿ ತರಿಸಿಕೊಳ್ಳುವವರಿಗೆ ಈ 7 ರೂಪಾಯಿ ಕ್ರಯದ್ದು ರೂ. 3-15-0 ಕ್ಕೆ ಸ್ಪ್ಯಾಷ್ ಕ್ಲಿಯರೆನ್ಸಾಗಿ ಕಮ್ಮಿ ಬೆಲೆಗೆ ವಿಕ್ರಯಿಸುವೆವು. ಅಲಸ್ಯಮಾಡಬೇಡಿರಿ. 5 ವರುಷ ಗ್ಯಾರಂಟಿ. (1) ವಾಚ್ ಸರಪಣಿ, (2) ಉತ್ತರ ಮುಖಿ, (3) ರೇಷ್ಮೆ ಧಾರ, (4) ವಾಚ್ ಪೆಟ್ಟಿಗೆ, (5) ಕರವಸ್ತ್ರ, (6) ಸರ್ಪದ ಉಂಗುರ, (7) ಸಿಂಗಪೂರು ಗಿಳಿಗಳು 25, ರಂಗೂನು ರೋಜಾ ಹುವ್ವುಗಳು 18, (8) ಬಿಲ್ಲಬ್ಬಾಳು ಇಂಕೆಪಡಿ. ಪೋಸ್ಟೇಜು ಬೇರೆ.

ಚಿನ್ನದ ಗಿಲ್ಟು ಬೆಲ್ಟು ನಮೂನೆ ಗೆಜ್ಜೆ ಡಾಬು.

ಚಿನ್ನದ ಡಾಬು	ಜತೆ ರೂ. 4-0-0	ಪೋಸ್ಟೇಜು ಬೇರೆ.
2 ನೇ ನಂ ಗಿಲ್ಟು ಡಾಬು	,, ,, 2-8-0	

ಈ ಡಾಬನ್ನು ಚಿಕ್ಕವರು ದೊಡ್ಡವರು ಸಹಾ ಹಾಕಿಕೊಳ್ಳಲು ಉಪಯೋಗಿಸುವ ಬೆಲ್ಟಿನ ನಮೂನೆಯಂತೆ ತಯಾರುಮಾಡಲ್ಪಟ್ಟಿದೆ. ಇದಕ್ಕೆ ಮುಂಭಾಗದಲ್ಲಿ ಮಲ್ಲಿಗೆ ಮೊಗ್ಗಿಗೆ ಸಮಾನವಾದ 150 ಗಟ್ಟಿ ಗೆಜ್ಜೆಗಳು ಸುತ್ತಲ್ಪಟ್ಟಿರುತ್ತೆ. ನಾವು ಕೊಟ್ಟಿರುವ ಗಿಲ್ಟು ಅಲ್ಪ ಸ್ವಲ್ಪ ಗಿಲ್ಟಲ್ಲ. ನಮ್ಮ ಗಿಲ್ಟು ಎಂದಿಗೂ ಕೆಡದು. ಶ್ರೀಮಂತರು ಸಹಾ ಇದನ್ನು ಉಪಯೋಗಿಸುತ್ತಿದ್ದಾರೆ. ನಾಗಮುರಿಗೆ ಕ್ರಯ ರೂ. 4-0-0.

ಬಹಳ ಮೇಲಾದ ಉಪನೇತ್ರ. ಕ್ರಯ ರೂ. 2-8-0.



ಸ್ಪಟಿಕದ ಉಪನೇತ್ರವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ. ನಮ್ಮಲ್ಲಿ ಸ್ಪಟಿಕದ ಉಪನೇತ್ರಗಳು ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಉಪನೇತ್ರಗಳನ್ನು ಕಳುಹಿಸುತ್ತೇವೆ. ಅವರವರ ವಯಸ್ಸು ತಿಳಿಸಬೇಕು ; ತಕ್ಕದ್ದು ಪರೀಕ್ಷೆಮಾಡಿ ಕಳುಹಿಸುತ್ತೇವೆ.

ಈ ಕೆಳಗೆ ಕಂಡ ನಗಗಳು ಆಸ್ಟ್ರೇಲಿಯಾ ಬೆಳ್ಳಿ ಕಂಬಿಯಿಂದ ಮಾಡಿದಾಗಿ ಇವೆ. ಇವು ಎಂದಿಗೂ ಕೆಡುವುದಿಲ್ಲ. ಅವು ಎಲ್ಲರು ಧರಿಸಿಕೊಳ್ಳಬಹುದು.

ಸುಂದರವಾದ ಕಾಲು ಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-8-0	1-3-0	0-14-0	0-10-0

ಅಂದವಾದ ಡಾಬು (ಒಡ್ಯಾಣ).



ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-6-0	1-4-0	0-15-0

ಅಂದವಾದ ಪ್ರಮುಚೇರಿ ರುಳಿ (ಕಾಲುಗೊಲಸು).

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-14-0	1-10-0	1-6-0	1-4-0

ಪೋಸ್ಟೇಜು ಬೇರೆ.

ತಂಜಾವೂರು ಗೆಜ್ಜೆ ಅಟ್ಟಿಗೆ.

[10-2] ಕ್ರಯ 0-7-0

ನಮ್ಮ ವಿಳಾಸ—ಕೆ. ಕೆ. ಮೂರ್ತಿ,
2-18 ಕೇರು ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೬ ನೇ ಇಸವಿ ಮಾರ್ಚಿ ತಾ. ೨ ನೇ ಗುರುವಾರ.

ದೇವಿ ಸಿಡುಬು ಹಾಕುವುದು.

ಮೈಸೂರು ಸಂಸ್ಥಾನದ ಸ್ಯಾನಿಟರಿ ಕಮಿಷನರ್‌ರವರು ನಮ್ಮ ಸೀಮೆಯ ಸಿಡುಬಿನ ಇಲಾಖೆಯಲ್ಲಿ ನಡಿಸಲ್ಪಟ್ಟ ಕೆಲಸ ಕಾರ್ಯಗಳ 1914 ನೇ ವರುಷದ ರಿಪೋರ್ಟನ್ನು 1915 ನೇ ಜೂನ್ ತಿಂಗಳಲ್ಲಿ ತಯಾರುಮಾಡಿ ಗವರ್ನಮೆಂಟಿಗೆ ಕಳುಹಿಸಿಕೊಟ್ಟರು. ನಮ್ಮ ಸರ್ಕಾರದವರು 1915 ನೇ ನೊವೆಂಬರ್ ತಾ. 17 ರಲ್ಲಿ ಆ ರಿಪೋರ್ಟನ್ನು ಪರಿಶೀಲಿಸಿ ಅದರ ಮೇಲೆ ತಮ್ಮ ಹುಕುಮನ್ನು ಬರೆದು ಸರ್ಕಾರಿ ಛಾಪಖಾನೆಗೆ ಕಳುಹಿಸಿದರು. ಇದು ಛಾಪಖಾನೆಯಲ್ಲಿ ಮುದ್ರಣವಾಗಿ 1916 ನೇ ಫೆಬ್ರುವರಿ ತಾ. 17 ರಲ್ಲಿ ನಮಗೆ ತಲಪಿದೆ. ಈ ವಿಚಾರವು ನಾವು ಹಿಂದೆಯೇ ಅನೇಕ ಸಲ ಹೇಳುತ್ತಾ ಬಂದಿರುವ ಅಭಿಪ್ರಾಯವನ್ನು ದೃಷ್ಟಾಂತಪಡಿಸುವುದು. ನಮ್ಮ ಗವರ್ನಮೆಂಟಿನವರು ಸಂಸ್ಥಾನದ ನಾಯಕ ಇಲಾಖೆಗಳ ಪತ್ರಗಳ ಕಾರುಬಾರುಗಳಿಗೆ ಗಮನಕೊಡುವುದು ಕಡಮೆಯಾಗಿ ಹೊಸ ಹೊಸ ವಿಚಾರಗಳಿಗೆ ತಮ್ಮ ಸಾಮರ್ಥ್ಯವನ್ನು ವಿನಿಯೋಗಿಸುವುದು ರೂಢಿಗೆ ಬಂದಿರುವ ಹಾಗೆ ಸ್ಪಷ್ಟವಾಗುತ್ತದೆ; ಇದರಲ್ಲಿ ಅನೇಕ ಸಂದರ್ಭಗಳಲ್ಲಿ ನಮ್ಮ ರಾಜಾದಾಯವು ವ್ಯರ್ಥವಾಗಿ ಖರ್ಚಾಗಿಹೋಗುವುದೇ ಹೊರತು ಪ್ರಯೋಜನವನ್ನು ಕಾಣುವುದು ಅಪರೂಪವೇ ಸರಿ.

ಸಿಡುಬು ರೋಗವು ನಮ್ಮ ಸಾಮಾನ್ಯವಾಗಿ ಸಂಸ್ಥಾನದ ಮೇಲೆ ವ್ಯಾಪ್ತವಾಗುತ್ತದೆ; ಇದು ಬಹು ಭಯಂಕರವಾದ ಜಾಡ್ಯವೆನ್ನುವುದಕ್ಕೆ ಸಂಶಯವಿಲ್ಲ. ಕಳೆದ 1914 ನೇ ವರುಷದಲ್ಲಿ ನಮ್ಮ ಸಂಸ್ಥಾನದೊಳಗೆ 13,034 ಜನರು ಈ ರೋಗದಲ್ಲಿ ಕಾಲವಾಗಿರುತ್ತಾರೆ. ಈ ರೋಗದಲ್ಲಿ ಸಾಯುವುದಕ್ಕೆ ಕಾರಣವೇ ಇಲ್ಲ; ಯಾಕೆಂದರೆ ವೈದ್ಯಶಾಸ್ತ್ರ ಶೋಧಕರು ಈ ರೋಗ ಬಾರದಂತೆ ತಡೆದುಹಿಡಿಯುವ ಉಪಾಯವನ್ನು ಕಂಡುಹಿಡಿದಿದ್ದಾರೆ. ಜನನವಾದ ಮೇಲೆ ಬೇಗನೆ ಮಕ್ಕಳಿಗೆ ಸಿಡುಬು ಹಾಕಿ ಬಳಿಕ ಏಳೆಂಟು ಹತ್ತು ವರುಷಕ್ಕೆ ಇನ್ನೊಂದು ಸಲ ಸಿಡುಬು ಹಾಕಿದ ವ್ಯಕ್ತಿಗೆ ಈ ರೋಗ ಬರುವುದೇ ಇಲ್ಲವೆಂದು ಖಂಡಿತವಾಗಿ ಹೇಳಬಹುದು. ಈ ಪ್ರಕಾರ ಅನೇಕ ಪ್ರದೇಶಗಳಿಗೆ ತಿಳಿದೇ ಇದೆ. ನಮ್ಮ ಸರ್ಕಾರದವರು ಕೂಡ ಸಿಡುಬನ್ನು ಬಲಾತ್ಕಾರದಿಂದ ಹಾಕಬೇಕೆಂದು ಕಾನೂನು ಮಾಡಿ ಅನೇಕ ಸ್ಥಳಗಳಲ್ಲಿ ಜಾರಿಗೆ ತಂದಿದ್ದಾರೆ. ಆದರೂ ಮಕ್ಕಳ ಪೈಕಿ ಐದಕ್ಕೆ ಒಂದರಂತೆ ಮಾತ್ರ ಸಿಡುಬು ಹಾಕಲ್ಪಡುತ್ತದೆ. ಉಳಿದ ನಾಲ್ಕು ಮಕ್ಕಳು ಈ ಭಯಂಕರವಾದ ರೋಗಕ್ಕೆ ಸಿಕ್ಕಿ ಕಾಲವಾದರೂ ಆಗಬಹುದು.

ಇದಕ್ಕೆ ಕಾರಣವೇನೆಂದು ಕೇಳಬಹುದು. ಮೊದಲನೆಯದಾಗಿ ಸಿಡುಬು ಹಾಕುವ ನೌಕರರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುವುದಿಲ್ಲ. ಒಬ್ಬ ನೌಕರನು ಸುಳ್ಳು ಲೆಕ್ಕವನ್ನು ಬರೆದಿಟ್ಟನೆಂದು ಅವನಿಗೆ ಜುಲ್ಮಾನೆ ಹಾಕಿ ಕೆಲಸದಿಂದ ತೆಗೆದುಬಿಟ್ಟರು; ಇದೇ ಕಾರಣಕ್ಕಾಗಿ ಇನ್ನೊಬ್ಬ ನೌಕರನ ಪ್ರಕಾರವು ತನಿಖೆಯಲ್ಲಿತ್ತು. ಗ್ರಾಮಾಂತರಗಳಲ್ಲಿ ಜನಗಳಿಗೆ ಅನೇಕ ವೇಳೆ ಇಷ್ಟವಿಲ್ಲ. ಅವರ ಮಕ್ಕಳಿಗೆ ಸಿಡುಬು ಹಾಕುವುದು ಬಹಳ ಪ್ರಯಾಸವೆನ್ನುವುದನ್ನು ನಾವೂ ಒಪ್ಪಿಕೊಳ್ಳುತ್ತೇವೆ. ಇಷ್ಟು ಮಾತ್ರಕ್ಕೇ ಸಿಡುಬಿನ ನೌಕರರು ಸುಳ್ಳು ಲೆಕ್ಕಗಳನ್ನು ಬರೆಯುವುದು ಯೋಗ್ಯವಲ್ಲ. ಅವರಿಗೆ ತಮ್ಮ ನೌಕರಿಯಲ್ಲಿ ಭಕ್ತಿ ಪ್ರೀತಿಗಳಿದ್ದ ಪಕ್ಷದಲ್ಲಿ ಗ್ರಾಮಾಧಿಕಾರಿಗಳ ಮತ್ತು ಸ್ಕೂಲ ಮಾಸ್ತರುಗಳ ಸಹಾಯ ಪ್ರೋತ್ಸಾಹಗಳಿಂದ ಅನೇಕ ಮಕ್ಕಳಿಗೆ ಸಿಡುಬು ಹಾಕುವುದೇನೂ ಕಷ್ಟವಲ್ಲ. ಅವರು ಮಾಡುವ ಕೆಲಸಗಳನ್ನು ಸ್ಯಾನಿಟರಿ ಇನ್ಸ್‌ಪೆಕ್ಟರುಗಳು ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುತ್ತಿರಬೇಕು. ಯಾಕೆಂದರೆ ಈ ಮರಣಕರವಾದ ರೋಗವನ್ನು ಅಡಗಿಸುವುದಕ್ಕೆ ಪ್ರಯಾಸಪಡಬೇಕಾದದ್ದು ಅವರ ಕರ್ತವ್ಯಾಂಶವಾಗಿದೆ.

ಎರಡನೆಯದಾಗಿ ಸ್ಥಳಾಧಿಕಾರಿಗಳು ತಮ್ಮ ಅಧಿಕಾರಕ್ಕೊಳಪಟ್ಟ ಪ್ರದೇಶದಲ್ಲಿ ಕಾನೂನನ್ನು ಸರಿಯಾಗಿ ದರ್ಪವಿಟ್ಟು ಜಾರಿಗೆ ತರುವುದಿಲ್ಲ. ನಮ್ಮ ಗವರ್ನಮೆಂಟಿನವರಲ್ಲೂ ಅನೇಕ ಅಧಿಕಾರಿಗಳಲ್ಲೂ ಕಾನೂನು ರಚಿಸಿ ಜಾರಿಗೆ ತರಲ್ಪಟ್ಟಿದೆ ಎಂದು ಪ್ರಕಟ ಮಾಡಿದರೆ ಕೃತಾರ್ಥರಾದೆವೆಂಬ ಭಾವನೆಯುಂಟು. ಕಾನೂನು ತನ್ನಷ್ಟಕ್ಕೆ ತಾನೇ ಚಲಾವಣೆಗೆ ಬರುವುದೆಂದು ಯೋಚಿಸಿರುವಂತೆ ಕಾಣುತ್ತದೆ. ಅಂಥಾ ಕಾನೂನನ್ನು ಬಲ್ಲವರಾದವರೋ ಪ್ರಜೆಗಳಲ್ಲಿ ನೂರಕ್ಕೆ ಒಬ್ಬರು ಸಿಕ್ಕುವುದೂ ಅಪರೂಪ. ಯಾರೇ ಆಗಲಿ ಅದರ ಉದ್ದೇಶವನ್ನೂ ಅಭಿಪ್ರಾಯವನ್ನೂ ಜನಗಳಿಗೆ ಸರಿಯಾಗಿ ತಿಳಿಯಪಡಿಸುವುದಿಲ್ಲ. ಪ್ರಜೆಗಳ ಕ್ಷೇಮಚಿಂತನೆಯುಳ್ಳ ಅಧಿಕಾರಿಗಳಿಗೆ ಸಿಡುಬು ಎಬ್ಬಿಸುವ ಕಾನೂನನ್ನು ರೂಢಿಸುವ ಜವಾಬ್ದಾರಿ ವಹಿಸಿದರೆ ಅವರು ಪ್ರಜೆಗಳಿಗೆ ಸಿಡುಬಿನ ಪ್ರಯೋಜನವನ್ನು ಚೆನ್ನಾಗಿ ತಿಳಿಯಹೇಳಿ, ಹಾಗೂ ಸಿಡುಬು ಹಾಕಿಸಿಕೊಳ್ಳದೆ ತಪ್ಪಿದವರನ್ನು ಶಿಕ್ಷೆಗೆ ಗುರಿಮಾಡುತ್ತೇವೆಂಬುದನ್ನು ಹೇಳಿಯಾರು. ಸರ್ಕಾರದವರ ಉದ್ದೇಶವೂ ತಮ್ಮ ಕರ್ತವ್ಯವೂ ಪ್ರಜೆಗಳಿಗೆ ಮುಂದಟ್ಟಾದರೆ ಈ ಕೆಲಸವು ಸರಾಗವಾಗಿ ನೆರವೇರೀತು. ಸ್ಯಾನಿಟರಿ ಇನ್ಸ್‌ಪೆಕ್ಟರುಗಳು ಸಿಡುಬು ಎಬ್ಬಿಸುವುದರಿಂದಾಗುವ ಫಲವನ್ನು ಚೆನ್ನಾಗಿ ಪ್ರಜೆಗಳಿಗೆ ವಿವರಿಸಿ ಹೇಳಿ, ಬಳಿಕ ಕಾನೂನನ್ನು ದರ್ಪವಿಟ್ಟು ಜಾರೀ ಮಾಡಬೇಕು.

ಪ್ರಪಂಚದ ಮೇಲೆ ಅನೇಕ ದೇಶಗಳಲ್ಲಿ ಸಿಡುಬಿನ ಜಾಡ್ಯವೇ ಸಂಪೂರ್ಣವಾಗಿ ನಿಂತುಹೋಗಿದೆ. ಮಕ್ಕಳಿಗೆ ಸರಿಯಾಗಿ ಸಿಡುಬು ಎಬ್ಬಿಸಿ ಚೊಕ್ಕಟ ಶುಭ್ರವಾಗಿದ್ದುಕೊಂಡು ಆರೋಗ್ಯ ಸೂತ್ರಗಳಿಗನುಸಾರವಾಗಿ ನಡೆಯುತ್ತಾ ಬಂದರೆ ಸಿಡುಬು ತಲೆ ಹಾಕುವುದಕ್ಕೆ ಅವಕಾಶವೇ ಉಂಟಾಗುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ಸಾಧಾರಣವಾಗಿ ಅನೇಕ ಜನಗಳು ಈ ರೋಗ ತಗಲಿ ಸಾಯುವರಲ್ಲಾ ಎಂದು ಮರುಗುತ್ತೇವೆ. ನಮ್ಮ ಗವರ್ನಮೆಂಟಿನವರು ಮುತುವರ್ಜಿಯಿಂದ ಆರೋಗ್ಯ ಇಲಾಖೆಯ ಅಧಿಕಾರಿಗಳ ಮೂಲಕ ಸಿಡುಬು ಎಬ್ಬಿಸುವ ವಿಚಾರದಲ್ಲಿ ಪ್ರಜೆಗಳನ್ನು ಒತ್ತಾಯ ಮಾಡಿ ಕಾನೂನನ್ನು ಜಾರೀ ಮಾಡಿಸಬೇಕೆಂದು ಆಗ್ರಹದಿಂದ ಹೇಳುವೆವು.

ಮೈಸೂರು ಗವರ್ನಮೆಂಟಿನವರು ಸಿಡುಬಿನ ಹಾಲನ್ನು ತಯಾರುಮಾಡಿ ಒದಗಿಸುವುದಕ್ಕೆ ಬೆಂಗಳೂರಿನಲ್ಲಿ ಒಂದು ಕಾರ್ಖಾನೆಯನ್ನಿಟ್ಟಿದ್ದಾರೆ. ಅದರಲ್ಲಿ ತಯಾರಾಗಿ ಸಿಡುಬು ಎಬ್ಬಿಸುವ ನೌಕರರಿಗೆ ಕಳುಹಿಸಿಕೊಟ್ಟಿರುವ ಹಾಲು ನಮಗೆ ತಿಳಿದ ಮಟ್ಟಿಗೂ ತೃಪ್ತಿಕರವಾಗಿದೆ; ಅದರಲ್ಲಿ ದೋಷವೇನೂ ಇರುವಂತೆ ಕಂಡು ಬರುವುದಿಲ್ಲ. ನಮ್ಮ ಕಾರ್ಖಾನೆಯಲ್ಲಿ ತಯಾರಾದ ಹಾಲನ್ನೇ ಹೊರಗಿನ ಅನೇಕ ಸ್ಥಳಗಳ ಅಧಿಕಾರಿಗಳೂ ತರಿಸಿಕೊಳ್ಳುತ್ತಿರುವರು. ಇದರಿಂದ ನಮ್ಮ ಕಾರ್ಖಾನೆಯಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿದೆ ಎಂದು ತಿಳಿದು ಸಂತೋಷಪಡತಕ್ಕದ್ದಾಗಿದೆ. ಈ ಸಂಬಂಧವಾಗಿ ಪ್ರಕಟಿಸಲ್ಪಟ್ಟಿರುವ ಲೆಕ್ಕಗಳಲ್ಲಿ ಒಂದು ಭಾಗ ನಮಗೆ ಸರಿಯಾಗಿ ಅರ್ಥವಾಗಲಿಲ್ಲ. ಇಲಾಖೆಯವರು ಆ ವರುಷ 3,101 ರೂಪಾಯಿ ಕೊಟ್ಟು ಕಂದಕರುಗಳನ್ನು ಮಾಡಿದ್ದರಲ್ಲಿ 1,800 ರೂಪಾಯಿ ಮಾತ್ರ ಉತ್ಪತ್ತಿಯಾಯಿತೆಂದು ಹೇಳಲಾಗಿದೆ. ಇಷ್ಟೊಂದು ಹಣ ನಷ್ಟವಾಗಲು ಕಾರಣವೇನೋ ಚೆನ್ನಾಗಿ ತಿಳಿಯಲಿಲ್ಲ. ಚೆನ್ನಾಗಿ ಸಾಕಿ ಸಿಡುಬಿನ ಹಾಲು ತೆಗೆದುಕೊಂಡ ಬಳಿಕ ಕರುಗಳನ್ನು ವಿಕ್ರಯ ಮಾಡಿದರೆ ಕೊಟ್ಟ ಹಣವಾದರೂ ಹುಟ್ಟುವ ಹಾಗಿಲ್ಲವೇ ಎಂದು ಸಂಶಯಪಡುತ್ತೇವೆ. ಹೀಗೆ ನಷ್ಟವಾಗುವುದಕ್ಕೆ ಇನ್ನೇನೋ ತೃಪ್ತಿಕರವಾದ ಕಾರಣವಿದ್ದರೂ ಇರಬಹುದು.

ನಮ್ಮ ಸ್ಯಾನಿಟರಿ ಇಲಾಖೆಯಲ್ಲಿ ಇನ್ನೂ ಹೆಚ್ಚು ಕೆಲಸಗಳು ಚಟುವಟಿಕೆಯಾಗಿ ನಡೆಯಬೇಕೆನ್ನುವುದಕ್ಕೆ ಸಂಶಯವಿಲ್ಲ. ನಮ್ಮ ಸರ್ಕಾರದವರು ಈ ಇಲಾಖೆಗೆ ಬೇಕಾದಷ್ಟು ಸಹಾಯ ಸಂಪತ್ತುಗಳನ್ನು ಒದಗಿಸಬೇಕಾದದ್ದೂ ಪರಮಾವಶ್ಯಕವಾಗಿದೆ. ವಿದ್ಯಾವಂತರಾದ ಪ್ರಜೆಗಳು ಕೂಡ ಸರ್ಕಾರದವರ ಕಾರ್ಯಗಳಿಗೆ ಬೆಂಬಲವಾಗಿ ನಿಂತು ಜನಗಳಿಗೆ ಆರೋಗ್ಯ ಭಾಗ್ಯದ ಕ್ರಮಗಳನ್ನು ಚೆನ್ನಾಗಿ ತಿಳಿದು ಅನುಸರಿಸುವಂತೆ ಬುದ್ಧಿವಿವೇಕಗಳನ್ನು ಹೇಳುತ್ತಾ ಬರಬೇಕೆಂದು ಜ್ಞಾಪಕ ಕೊಡುತ್ತೇವೆ.

ಕ್ರಿಸ್ತನ ಮಹತ್ವವನ್ನು ಸೂಕ್ಷ್ಮರೂಪವಾಗಿ ಗ್ರಹಿಸಿದ ರೋಮನಾಯಕನು.

ಮಹತ್ತು ಅಥವಾ ಅದ್ಭುತಗಳು ಲೋಕದಲ್ಲಿ ಸಾಧಾರಣವಾಗಿ ನಡೆಯುವದಿಲ್ಲ. ಅದು ಹೇಗೆಂದರೆ ಏನು? ಪ್ರಪಂಚದಲ್ಲಿ ಸಕಲವೂ ಕ್ರಮಕ್ಕೆ ಒಳಪಟ್ಟು ನಡೆಯುತ್ತವೆ. ನೀರಿನ ಮೇಲೆ ಒಂದು ಕಲ್ಲನ್ನು ಎಸೆದರೆ ಅದು ಅದರ ಪ್ರಮಾಣವು ನೀರಿಗಿಂತ ಭಾರವಾಗಿರುವದರಿಂದ ಮುಳುಗುತ್ತದೆ. ಹೀಗೆ ನಮ್ಮ ಕಾಲದಲ್ಲಿ ನಡೆಯುತ್ತದೆ. ನಮ್ಮ ಪಿತೃಗಳ ಕಾಲದಲ್ಲಿಯೂ ಅವರಿಗೆ ಪೂರ್ವದ ಪಿತೃಗಳ ಕಾಲದಲ್ಲಿಯೂ ಪ್ರಾಯಶಃ ಪ್ರಪಂಚವು ಉತ್ಪತ್ತಿಯಾದದ್ದು ಮೊದಲ್ಗೊಂಡು ಈ ವರೆಗೂ ನಡೆಯುತ್ತದೆ. ಇನ್ನು ಮುಂದೆಯೂ ಇದೇ ಕ್ರಮವು ನಡೆಯುತ್ತಿರುವದು ಎಂದು ನಾವು ನಂಬಿ ನಡೆಯುತ್ತೇವೆ. ಒಬ್ಬನು ಒಂದು ಮಾವಿನ ಬೀಜವನ್ನು ಭೂಮಿಯಲ್ಲಿ ಹಾಕಿ ತೆಂಗಿನ ಗಿಡವು ಹುಟ್ಟುವದೆಂದು ನಂಬುವದಿಲ್ಲ. ಯಾಕೆಂದರೆ ಲೋಕಾದಿಯಿಂದ ಈ ವರೆಗೂ ಮಾವಿನ ಬೀಜವು ಮಾವಿನ ಗಿಡವನ್ನೇ ಬೆಳೆಸುವದು. ತೆಂಗಿನ ಗಿಡವು ತೆಂಗಿನಕಾಯಿಂದ ಹುಟ್ಟುವದು ಲೋಕದಲ್ಲಿ ಕ್ರಮವಾಗಿದೆ. ಈ ಕ್ರಮವು ವ್ಯತ್ಯಾಸವಾದರೆ ಪ್ರಪಂಚದಲ್ಲಿ ಮಹಾ ಗಲಿಬಿಲಿ ಹುಟ್ಟಿ ಬಹಳ ತೊಂದರೆ ಸಂಭವಿಸುವದು. ದೇವರು ಲೋಕದಲ್ಲಿ ಕ್ರಮವನ್ನು ಸ್ಥಾಪಿಸಿ ಆ ಕ್ರಮಾನುಸಾರವಾಗಿ ನಿಯಮಕ್ಕೆ ತಪ್ಪದೆ ಪ್ರಪಂಚವನ್ನು ನಡಿಸಿಕೊಂಡು ಬರುವದರಿಂದ ಲೋಕವು ಉದ್ದಕ್ಕೂ ನಡೆದು ಬಂದಿದೆ. ಮತ್ತು ಈ ಕ್ರಮಗಳಿಗೆ ಅನುಸಾರವಾಗಿಯೇ ಈ ಪ್ರಪಂಚವು ನಡೆಯುತ್ತ ಹೋಗುವದು.

ಆದರೆ ಈಗ ನಮಗೆ ತಿಳಿದಿರುವ ವಿಷಯಗಳಲ್ಲದೆ ಪ್ರಪಂಚದಲ್ಲಿ ಇನ್ನೂ ಅನೇಕ ಕ್ರಮಗಳೂ ನಿಯಮಗಳೂ ಇರುತ್ತವೆ. ನಾವು ಆ ಕ್ರಮಗಳನ್ನು ಕಂಡುಕೊಂಡು ಅವುಗಳನ್ನು ಪ್ರಯೋಗಕ್ಕೆ ತಂದರೆ ನಮಗೆ ಅದರಿಂದ ಬಹು ಪ್ರಯೋಜನವಾಗುವದು. ಮೊದಲು ಒಂದು ಕಬ್ಬಿಣದ ತುಂಡನ್ನು ನೀರಿನ ಮೇಲೆ ಎಸೆದರೆ ಅದು ತೇಲದೆ ಮುಳುಗಿಹೋಗುವದಷ್ಟೆ. ಆದರೆ ಅದೇ ಕಬ್ಬಿಣದ ತುಂಡನ್ನು ತಗಡು ಮಾಡಿ ಆ ತಗಡಿನಿಂದ ಒಂದು ಸಂದೂಕದೋಪಾದಿ ಅಥವಾ ಪೆಟ್ಟಿಗೆಯಂತೆ ಮಾಡಿ ನೀರಿನ ಮೇಲೆ ಹಾಕಿದರೆ ಅದು ಮುಳುಗದೆ ತೇಲುವದು. ಈ ನಿಯಮವನ್ನನುಸರಿಸಿ ಹಡಗುಗಳನ್ನು ಕಟ್ಟುತ್ತಾರೆ. ಆ ಹಡಗವು ಮುಳುಗದೆ ಸಾವಿರಾರು ಮೈಲಿಗಳ ದೂರದಲ್ಲಿರುವ ಬೇರೆ ಬೇರೆ ದೇಶಗಳಿಗೆ ಪ್ರಯಾಣ ಮಾಡುವದಕ್ಕೂ ವ್ಯಾಪಾರದ ಸರಕುಗಳನ್ನು ಕೊಂಡು ತರುವದಕ್ಕೂ ನಮಗೆ ಅನುಕೂಲವಾಯಿತಲ್ಲವೇ? ಇದರಲ್ಲಿ ಎರಡು ನಿಯಮಗಳು ನಮಗೆ ತಿಳಿದು ಬಳಕೆ ಪ್ರಯೋಗಕ್ಕೆ ಬಂದಿವೆ. ಯಾವವೆಂದರೆ—1 ನೀರಿಗಿಂತ ಭಾರವಾದ ವಸ್ತುವನ್ನು ನೀರಿನ ಮೇಲೆ ಹಾಕಿದರೆ ಅದು ಮುಳುಗುತ್ತದೆ. 2 ಅದೇ ವಸ್ತುವನ್ನು ಟೊಳ್ಳುಮಾಡಿ ಅದರ ವಿಸ್ತಾರವನ್ನೂ ಗಾತ್ರವನ್ನೂ ಹೆಚ್ಚಿಸಿದರೆ ಅದರಷ್ಟೆ ನೀರಿನ ಗಾತ್ರದ ಭಾರಕ್ಕಿಂತ ಆ ವಸ್ತುವಿನ ಭಾರವು ಕಮ್ಮಿಯಾದ್ದರಿಂದ ಅದು ತೇಲುತ್ತದೆ. ಈ ಎರಡು ನಿಯಮಗಳು ಪರಸ್ಪರ ವಿರುದ್ಧವಾಗಿ ಕಾಣಬರುತ್ತವೆ. ಆದರೆ ಅವು ಪರಸ್ಪರ ವಿರುದ್ಧವಾದ ನಿಯಮಗಳಲ್ಲ. ಒಂದು ಹೇಗೆ ನಿಜವೋ ಹಾಗೆಯೇ ಮತ್ತೊಂದು ನಿಜವಾಗಿದೆ. ಮೊದಲನೆಯ ನಿಯಮ ಒಂದರಿಂದಲೇ ನಮಗೆ ಬಹಳ ಪ್ರಯೋಜನ ಬರುವದು. ಆದರೆ ಇದರ ಜೊತೆಗೆ ಎರಡನೇದನ್ನು ಸಹ ತಿಳಿದರೆ ನಮಗೆ ಬಹಳ ಪ್ರಯೋಜನವಾಗಿ ನಮಗೆ ಎರಡು ಶಕ್ತಿಯುಂಟಾಗುವ ಮೊದಲನೇ ನಿಯಮವನ್ನು ಎರಡನೇದರಿಂದ ಜಯಿಸಿ ಅದರ ಫಲವನ್ನು ಅನುಭವಿಸುತ್ತೇವೆ. ಲೋಕದಲ್ಲಿ ಹೀಗೆಯೇ ಒಂದಕ್ಕಿಂತ ಮೇಲಾದ ಪ್ರಯೋಜನಕಾರಿಯಾದ ನಿಯಮಗಳು ಅನೇಕವಿರುತ್ತವೆ. ಅವುಗಳನ್ನು ಕಂಡುಹಿಡಿದು ಅವುಗಳ ಫಲವನ್ನು ಅನುಭೋಗಿಸುವದು ನಮಗೆ ಹಿತಕರವಾದುದೆಂದು ದೇವರು ಈ ನಿಯಮಗಳನ್ನು ಸೃಷ್ಟಿಕ್ರಮದಲ್ಲಿ ಜೋಡಿಸಿ ಇಟ್ಟಿದ್ದಾನೆ. ಪಾರಮಾರ್ಥಿಕ ವಿಷಯಗಳಲ್ಲಿ ಇದೇ ಕ್ರಮವು ವರ್ತಿಸುತ್ತದೆ. ಇದನ್ನು ಗ್ರಹಿಸಿದವನೊಬ್ಬನನ್ನು ಕ್ರಿಸ್ತನು ಮೆಚ್ಚಿಕೊಂಡು ಅವನನ್ನು ಆ ಕಾಲದ ಪಾರಮಾರ್ಥಿಕ ಬೋಧಕರಿಗೆ ಮೇಲ್ಪಙ್ಕ್ತಿಯಾಗಿಟ್ಟನು. ಆ ವಿವರವನ್ನು ಸಂಕ್ಷೇಪವಾಗಿ ಹೇಳುತ್ತೇವೆ.

ಕಪೆರ್ನೌಮಿನಲ್ಲಿ ದಂಡಿನ ಶತಾಧಿಪತಿ ಇದ್ದನು. ಅವನ ಇಷ್ಟನಾದ ಒಬ್ಬ ಆಳು ಕ್ಷೇಮವಿಲ್ಲದೆ ಸಾಯುವ ಹಾಗಿದ್ದನು. ಆಗ ಯೇಸು ಅಲ್ಲಿಗೆ ಬಂದನೆಂದು ಶತಾಧಿಪತಿಯು ಕೇಳಿ ಆತನ ಬಳಿಗೆ ಆ ಕಾಲದ ಮತಬೋಧಕರನ್ನು ಕಳುಹಿಸಿ ನೀನು ದಯಮಾಡಿ ನನ್ನ ಆಳನ್ನು ಸ್ವಸ್ಥಮಾಡೆಂದು ಬೇಡಿಕೊಂಡನು. ಆ ಬೋಧಕರು ಯೇಸುವಿನ ಬಳಿಗೆ ಬಂದು ಈ ಶತಾಧಿಪತಿಯು ಬಹಳ ಸತ್ಪುರುಷನು ದೇವಭಕ್ತನು; ನೀನು ಬಂದು ಅವನನ್ನು ಸ್ವಸ್ಥಮಾಡಬೇಕೆಂದು ಬೇಡಿಕೊಂಡರು. ಯೇಸು ಅವರ ಸಂಗಡ ಅನ್ಯಮತದವನಾದ ಈ ಶತಾಧಿಪತಿಯ ಮನೆಗೆ ಬಂದನು. ಇದನ್ನು ಆ ರೋಮಾಯ ಶತಾಧಿಪತಿಯು ಕೇಳಿ ಬೇಗ ಸ್ನೇಹಿತರನ್ನು ಯೇಸುವಿನ ಬಳಿಗೆ ಕಳುಹಿಸಿ—ನಿನ್ನನ್ನು ನನ್ನ ಮನೆಗೆ ಕರಸಿಕೊಳ್ಳುವ ಯೋಗ್ಯತೆ ನನಗಿಲ್ಲ. ನೀನು ಇಷ್ಟು ದೂರ ದಣಿದು ಬರುವದೂ ಅಗತ್ಯವಿಲ್ಲ. ನಾನು ಸಹ ನಿನ್ನ ಬಳಿಗೆ ಬರುವದಕ್ಕೆ ಅಯೋಗ್ಯನೆಂದು ಭಾವಿಸಿಕೊಂಡು ಬರಲಿಲ್ಲ. ನೀನು ಒಂದು ಮಾತು ಮಾತ್ರ ಹೇಳಿದರೆ ಸಾಕು, ನನ್ನ ಆಳು ಸ್ವಸ್ಥನಾಗುವದು. ನಾನು ಒಬ್ಬರಿಗೆ ಕೈಕೆಳಗಿನ ಸೇವಕನಾಗಿದ್ದೇನೆ. ಆದಾಗ್ಯೂ ನನ್ನ ಕೈಕೆಳಗಿರುವ ಆಳುಗಳೂ ಸಿಪಾಯಿಗಳೂ ನನ್ನ ಮಾತಿಗೆ ವಿಧೇಯರಾಗುವರು ಎಂದು ಹೇಳಿ ಕಳುಹಿಸಿದನು. ಕ್ರಿಸ್ತನು ಈ ಮಾತನ್ನು ಕೇಳಿ ಆಶ್ಚರ್ಯಪಟ್ಟು ತನ್ನ ಸಂಗಡಲೇ ನಡೆದು ಬರುತ್ತಿದ್ದ ಬೋಧಕರಿಗೆ—ಇಂಥಾ ದೊಡ್ಡ ನಂಬಿಕೆ ನಿಮ್ಮಲ್ಲಿ ಸಹ ಇಲ್ಲದೆ ಹೋಯಿತಲ್ಲಾ ಎಂದು ಅವರ ಅಪನಂಬಿಕೆಗಾಗಿ ಅವರನ್ನು ಖಂಡಿಸಿ ಆ ಶತಾಧಿಪತಿಗೆ—ನೀನು ನಂಬಿದಂತೆ ನಿನಗೆ ಆಗಲಿ ಎಂದು ಹೇಳಿ ಕಳುಹಿಸಿದನು. ಅದೇ ಗಳಿಗೆಯಲ್ಲಿ ಆ ಆಳಿಗೆ ಗುಣವಾಯಿತು.

ಯೆಹೂದ್ಯ ಮತಬೋಧಕರಿಗಿಂತ ಈ ಲೌಕಿಕ ಶತಾಧಿಪತಿಯು ಉತ್ತಮ ನಂಬಿಕೆಯೂ ಭಕ್ತಿಯೂ ಉಳ್ಳವನೆಂದೂ ಕ್ರಿಸ್ತನು ಅವನನ್ನು ಹೊಗಳಿದ್ದಕ್ಕೆ ಕಾರಣವೇನು? ಕ್ರಿಸ್ತನು ಜಗದ್ರಕ್ಷಕನಾಗಿ ಲೋಕದಲ್ಲಿ ಹುಟ್ಟಿದಾಗ ಆತನು ದೈವಶಕ್ತಿಯಿಂದ ಮಹತ್ತುಗಳನ್ನು ಅನೇಕವಾಗಿ ಮಾಡುವನೆಂದು ಯೆಹೂದ್ಯ ಮತಬೋಧಕರು ಸಾರುತ್ತಿದ್ದರು. ಆದರೆ ಕ್ರಿಸ್ತನು ಲೋಕದ ಆಡಂಬರದಿಂದಲೂ ವೈಭವದಿಂದಲೂ ಐಶ್ವರ್ಯ ಅಧಿಕಾರಗಳಿಂದಲೂ ಮೆರೆಯದೆ ಸಾಧಾರಣನಾದ ಬಡವನಂತೆ ಇದ್ದದ್ದನ್ನು ನೋಡಿ ಅವರು ಪಾರಮಾರ್ಥಿಕ ದೃಷ್ಟಿಯಿಲ್ಲದೆ ಅವನು ಕ್ರಿಸ್ತನೆಂದು ತಿಳಿಯದೆ ಕುರುಡರಾದರು. ಮತ್ತು ಈ ಯೇಸು ಯಾರೋ ಒಬ್ಬ ವೈದ್ಯ, ಇವನಿಂದ ರೋಗಿಗೆ ಔಷಧಿ ಕೊಡಿಸೋಣವೆಂದುಕೊಂಡರು. ಶತಾಧಿಪತಿಯಾದರೋ ಪಾರಮಾರ್ಥಿಕ ದೃಷ್ಟಿಯಿಂದ ಯೇಸುವು ಸಾಕ್ಷಾತ್ ದೇವರೇ ಎಂದು ಗ್ರಹಿಸಿ—ಸ್ವಾಮಿ, ನೀನು ಔಷಧಿ ಪ್ರಯೋಗಿಸಬೇಕಾದದ್ದಿಲ್ಲ. ಅದು ಮನುಷ್ಯಮಾತ್ರದವರು ಕೈಕೊಳ್ಳಬೇಕಾದ ನಿಯಮ. ದೇವರಾದ ನೀನು ಇದಕ್ಕಿಂತ ಉತ್ತಮ ನಿಯಮವನ್ನು ಅನುಸರಿಸಿ ರೋಗಕ್ಕೆ ವಾಸಿಮಾಡು; ಅದು ನಿನ್ನ ಆಜ್ಞೆಗೆ ವಿಧೇಯವಾಗುವದೆಂದು ನಾನು ನಂಬಿದ್ದೇನೆ ಅಂದನು.

ಯುದ್ಧದ ಸಮಾಚಾರಗಳು.

ಫ್ರಾನ್ಸಿನಲ್ಲಿ ಘೋರವಾದ ಕದನವು.

ಜರ್ಮನಿಯವರ ಅಪಾಯ.

ಕಳೆದ ವಾರ ರಣರಂಗದಿಂದ ಬಂದಿರುವ ವರ್ತಮಾನಗಳಲ್ಲಿ ಜರ್ಮನಿಯವರು ಪಶ್ಚಿಮ ರಣರಂಗದಲ್ಲಿ ನುಗ್ಗಿ ಫ್ರೆಂಚರ ಸೈನ್ಯ ಸಾಲನ್ನು ಚದರಿಸಬೇಕೆಂದು ಸಾಹಸಪಟ್ಟದ್ದೇ ಮುಖ್ಯವಾದದ್ದಾಗಿದೆ. ಜರ್ಮನಿಯವರು ಐದು ಲಕ್ಷ ಸೈನ್ಯಗಳನ್ನು ಏಳು ಮೈಲಿ ಅಗಲಕ್ಕೂ ವಿಸ್ತರಿಸಿ ತಂದು ನುಗ್ಗಿಸಿದರಿಂದಲೂ, ನೂರಾರು ಭಾರೀ ಫಿರಂಗಿಗಳನ್ನು ಎತ್ತಿಕಟ್ಟಿ ಗುಂಡುಗಳ ಮಳೆಗರೆದರಿಂದಲೂ, ವೆರ್ಡನ್ ಎಂಬ ಭಾರೀ ಕೋಟೆಯನ್ನು ಗೆದ್ದುಕೊಳ್ಳಬೇಕೆಂದು ಸಾಹಸಪಟ್ಟರೆಂದೂ ಕೆಲವು ವರ್ತಮಾನಗಳು ತಿಳಿಸುತ್ತವೆ. ಇದು ಅವರಿಗೆ ಸಾಧ್ಯವಾಗದೆ ಹೋಯಿತು. ಫ್ರೆಂಚ್ ಸೈನ್ಯಗಳು ಬಹಳ ಸ್ವಲ್ಪ ಭೂಮಿಯನ್ನು ಬಿಟ್ಟುಕೊಟ್ಟು ಹಿಂದಕ್ಕೆ ಹೋದವು.

ಪಶ್ಚಿಮ ರಣರಂಗದಲ್ಲಿ.

ಕಳೆದ ಎರಡು ತಿಂಗಳಿಂದಲೂ ಜರ್ಮನಿಯವರು ಫ್ರೆಂಚ ರಣರಂಗದ ಅಪಾರ ಸೈನ್ಯಗಳನ್ನೂ ಫಿರಂಗಿ ಮದ್ದುಗುಂಡುಗಳನ್ನೂ ಸಾಗಿಸಿ ತಂದು, ಸುಮಾರು ಹತ್ತು ದಿವಸಗಳ ಹಿಂದೆ ಬೆಲ್ಜಿಯಮ್‌ನಿಂದ ಸ್ವಿಟ್ಸರ್‌ಲೆಂಡಿನ ತನಕ ಉದ್ದಕ್ಕೂ ಇರುವ ಮಿತ್ರಮಂಡಲಿಯವರ ಸೈನ್ಯಗಳ ಸಾಲುಗಳನ್ನು ಭೇದಿಸಬೇಕೆಂದು ಪರೀಕ್ಷಿಸಿ ನೋಡಿದರು. ಹಲವು ಠಾಣ್ಯಗಳಲ್ಲಿ ಅವರು ಮೇಲೆ ಬಿದ್ದು ಕದನವನ್ನು ನಡಿಸಿದರು. ಅವುಗಳ ಪೈಕಿ ವೆರ್ಡನ್ ಕೋಟೆಯ ಸುಮಾರು ಉತ್ತರ ಭಾಗದಿಂದ ಹಿಡಿದು ದಕ್ಷಿಣದ ವರೆಗೂ ಇರುವ ಫ್ರೆಂಚ ಸೈನ್ಯ ಸಾಲುಗಳ ಮೇಲೆ ನುಗ್ಗಿ ಮಾಡಿದ ಕದನವೇ ಬಹು ವಿಶೇಷವಾಗಿತ್ತು. 1914 ನೇ ಸೆಪ್ಟೆಂಬರಿನಲ್ಲಿ ಜರ್ಮನಿಯ ಯುವರಾಜರವರು ಅಧಿಕ ಸೈನ್ಯಗಳನ್ನು ನುಗ್ಗಿಸಿ ಈ ಕೋಟೆಯನ್ನು ಗೆದ್ದುಕೊಳ್ಳಬೇಕೆಂದೂ, ಫ್ರೆಂಚರನ್ನು ಆ ಬಳಿಯಿಂದ ಓಡಿಸಬೇಕೆಂದೂ ಬಹಳ ಪರಾಕ್ರಮವನ್ನು ತೋರಿಸಿದ್ದರು. ಈ ಕೋಟೆಯ ಮೂಲಕ ಹೋಗುವ ಮಾರ್ಗವೇ ಜರ್ಮನಿ ರಾಜಧಾನಿಯಾದ ಬೆರ್ಲಿನ್ ಪಟ್ಟಣದಿಂದ ಪ್ಯಾರಿಸ್ ರಾಜಧಾನಿಗೂ ಹೋಗುವ ಛೋಟಾ ಮಾರ್ಗವಾಗಿದೆ. ಜರ್ಮನಿಯವರು ಇದನ್ನು ವಶಪಡಿಸಿಕೊಳ್ಳಬೇಕೆಂದು ಹಲವು ವೇಳೆ ಬಹಳವಾಗಿ ಸಾಹಸಪಟ್ಟರು. ಆದರೂ ಒಂದೂ ಫಲಕಾರಿಯಾಗದೆ ಹೋಯಿತು. ಫೆಬ್ರವರಿ 21 ರಲ್ಲಿ ಜರ್ಮನಿಯವರು ಮುತ್ತಿಗೆಯನ್ನು ಹಾಕಿ ಪರಾಕ್ರಮದಿಂದ ಕದನ ಮಾಡಿದರು. ಏಳು ಮೈಲಿ ಅಗಲಕ್ಕೂ ವಿಸ್ತಾರವಾದ ಸೈನ್ಯಗಳನ್ನು ತಂದು ಫ್ರೆಂಚರ ಮೇಲೆ ನುಗ್ಗಿಸಿದರು. ಭಾರೀ ಫಿರಂಗಿಗಳನ್ನು ತಂದು ಎತ್ತಿಕಟ್ಟಿ ಗುಂಡುಗಳನ್ನು ನಿಲುಗಡೆ ಇಲ್ಲದೆ ಹೊಡೆದರು. ಫ್ರೆಂಚರು ದೊಡ್ಡ ಫಿರಂಗಿಗಳನ್ನು ಒದಗಿಸಿಕೊಂಡಿದ್ದು ಶತ್ರುವಿನ ಮೇಲೆ ಜವಾಬಾಗಿ ಗುಂಡುಗಳ ಮಳೆಗರೆದರು. ಒಂದಾದ ಮೇಲೊಂದರಂತೆ ಜರ್ಮನಿಯವರು ತಮ್ಮ ಏಳು ಸೈನ್ಯಗಳನ್ನು ತಂದು ಫ್ರೆಂಚರ ಮೇಲೆ ನುಗ್ಗಿಸಿದರು. ಜರ್ಮನಿ ದಳಪತಿಯು ಸೈನ್ಯಕ್ಕೆ ಕೊಟ್ಟ ಹುಕುಮನ್ನು ನೋಡಿದರೆ ಜರ್ಮನಿಯವರು ಪ್ಯಾರಿಸ್ ನಗರದ ಮೇಲೆ ನುಗ್ಗಿ ಹೋಗಬೇಕೆಂದು ಅತ್ಯಂತ ವಿಶೇಷವಾದ ಸನ್ನಾಹಗಳನ್ನು ಮಾಡಿದ್ದರೆಂದು ಗೊತ್ತಾಗುತ್ತದೆ. ಪ್ಯಾರಿಸ್ ನಗರದ ಮೇಲೆ ನುಗ್ಗಿ ಹೋಗುವುದೇ ಕಡೇ ಪ್ರಯತ್ನವೆಂದು ಜರ್ಮನಿ ಸೈನಿಕರಿಗೆ ಆ ಹುಕುಮು ತಿಳಿಸುತ್ತದೆ. ತಾ. 21 ನೇ ಸೋಮವಾರ ಜರ್ಮನಿಯವರ ಕಾಲ್ದಳವು ನುಗ್ಗಿ ಬಂದಿತು; ಫ್ರೆಂಚರು ತಮ್ಮ ಫಿರಂಗಿ ಗುಂಡುಗಳಿಂದಲೂ, ಬಂದೂಕು ಗುಂಡುಗಳಿಂದಲೂ ಅವರನ್ನು ಹಿಮ್ಮೆಟ್ಟಿಸಿ ಹಾಕಿದರು. ಜರ್ಮನಿ ಕಾಲ್ದಳದಲ್ಲಿ ಸಾವಿರಾರು ಮಂದಿ ಮೃತರಾದರು; ಸಾವಿರಾರು ಸೈನಿಕರು ಗಾಯಪಟ್ಟರು. ಇಷ್ಟೊಂದು ಅಪಾರವಾದ ನಷ್ಟವನ್ನು ಅನುಭವಿಸಿದರೂ ಜರ್ಮನಿಯವರು ಲಕ್ಷ್ಯ ಮಾಡದೆ ಹಾಗೇ ಮುಂದಕ್ಕೆ ನುಗ್ಗಿಕೊಂಡೇ ಬಂದರು. ಮತ್ತು ಕೆಲವು ಠಾಣ್ಯಗಳಲ್ಲಿ ಅವರು ಫ್ರೆಂಚರ ಮುಂಭಾಗದ ಕಂದಕಗಳನ್ನು ಗೆದ್ದು ಆಕ್ರಮಿಸಿಕೊಂಡರು. ಜರ್ಮನಿಯವರ ಸೈನ್ಯಗಳು ಬಹಳ ಅಪಾರವಾಗಿದ್ದವು. ಅವುಗಳನ್ನು ನೋಡಿ ಫ್ರೆಂಚರು ಅವರಿಗೆ ನಿಂತು ಯುದ್ಧ ಕೊಡುವುದು ಸರಿಯಲ್ಲವೆಂದೂ, ವೃಥಾ ಸೈನಿಕರನ್ನು ಕಳಕೊಳ್ಳುವುದು ತರವಲ್ಲವೆಂದೂ ನಿಶ್ಚಯಿಸಿ ಅಲ್ಲಿಂದ ಸ್ವಲ್ಪ ದೂರ ಹಿಮ್ಮೆಟ್ಟಿ ಹೋದರು. ಐದು ದಿನ ಹಗಲೂ ರಾತ್ರಿ ನಿಲುಗಡೆಯಿಲ್ಲದೆ ಸಂಗ್ರಾಮವಾಯಿತು. ಕಡಿದ ಮಟ್ಟಿಗೂ ಹೆಚ್ಚಾಗಿ ಜರ್ಮನಿ ಸೈನಿಕರನ್ನು ಕೊಂದು ಮುಗಿಸಬೇಕೆಂದು ಫ್ರೆಂಚರು ಉದ್ದೇಶಪಟ್ಟುಕೊಂಡು, ಜರ್ಮನಿಯ ಸೈನಿಕರು ಇನ್ನೂ ಹೆಚ್ಚಾಗಿ ಮರೆಯಿಂದ ಬೈಲಿಗೆ ಬರಲೆಂದು ಸ್ವಲ್ಪ ದೂರ ಹಿಮ್ಮೆಟ್ಟಿ ಹೋದರು. ಯುದ್ಧವು ಅತ್ಯಂತ ಘೋರವಾಗಿ ನಡೆಯಿತು. ನಷ್ಟಗಳನ್ನು ಇಷ್ಟೆಂದು ವಿವರಿಸದಷ್ಟಿರಬೇಕು. ಎಷ್ಟು ನಷ್ಟವಾಯಿತೋ ಹೇಳುವುದಕ್ಕೆ ಇನ್ನೂ ಅವಕಾಶವಿಲ್ಲ. ಫಲಿತಾಂಶವೇನಾಯಿತೆಂದರೆ ಫ್ರೆಂಚರು ಸ್ವಲ್ಪ ದೂರ ಹಿಂದಕ್ಕೆ ಓಡಿಸಲ್ಪಟ್ಟರು. ಆದರೂ ಶತ್ರುವು ಅವರ ಸೈನ್ಯ ಸಾಲುಗಳನ್ನು ಒಡೆದು ನುಗ್ಗಲಾರದೆ ಹೋಯಿತು. ಪ್ಯಾರಿಸ್ ನಗರದ

...ನ ಸೈನ್ಯ ಈಗಲು ಮೊದಲಿಗಿಂತ ಎಷ್ಟೋ ಬಲವಾಗಿರುತ್ತದೆ. ಮಿತ್ರ ...ಯವರು ಶತ್ರು ಸೈನಿಕರನ್ನು ಕೈಸೆರೆ ಹಿಡಿದರೆಂದು ಹೇಳಲಾಗಿದೆ; ...ಸಂಖ್ಯೆಯೇನೋ ಅಷ್ಟು ಹೆಚ್ಚಾಗಿಲ್ಲ. ಫ್ರೆಂಚರ ಕಂದಕಗಳ ಮುಂಭಾಗ ...ದ್ದಕ್ಕೂ ಶತ್ರು ಸೈನಿಕರ ಹೆಣಗಳು ರಾಶಿರಾಶಿಯಾಗಿ ಬಿದ್ದಿದ್ದುವೆಂದು ...ವರ್ತಮಾನಗಳು ತಿಳಿಸುವವು. ಅಂತು ಜರ್ಮನಿಯವರು ಪಶ್ಚಿಮ ರಣರಂ...ದ ಫ್ರಾನ್ಸಿನ ಮೇಲೆ ನುಗ್ಗಬೇಕೆಂದು ಮಹತ್ತರವಾದ ಸಾಹಸಪಟ್ಟು ...ದರು. ಅವರು ಮತ್ತೊಂದು ಸಲ ನುಗ್ಗಿ ಬರುತ್ತಾರೆಯೋ ಏನೋ ...ರು. ಈ ಸಲ ಅವರು ಬಹಳ ಅಗಾಧವಾದ ಸನ್ನಾಹಗಳನ್ನು ಮಾಡಿ ...ನುಗ್ಗಿ ಬಂದರು. ಆದರೆ ಅವರ ಪರಾಕ್ರಮವೂ ಅವರ ಮುಂಜಾಗ್ರ...ಯ ಏರ್ಪಾಡುಗಳೂ ಎಲ್ಲಾ ವ್ಯರ್ಥವಾಗಿ ಪರಿಣಮಿಸಿದವು.

...ಗೆ ಬಂದ ತಂತೀ ವರ್ತಮಾನಗಳು ಜರ್ಮನಿ ಚಕ್ರವರ್ತಿ ಕೈಸರವರೇ ...ವೆರ್ಡನ್ ಕೋಟೆಯ ಬಳಿ ನಡೆದ ಘೋರ ಯುದ್ಧರಂಗದಲ್ಲಿ ಹಾಜ...ರೆಂದು ಹೇಳುವವು. ಫ್ರೆಂಚರು ತಮ್ಮ ಠಾಣ್ಯಗಳನ್ನು ಬಹಳವಾಗಿ ಬಲ...ಪಡಿಸಿಕೊಳ್ಳುತ್ತಲಿದ್ದಾರೆ.

...ವರ್ತಮಾನಗಳಿಂದ ಅಂತರಿಕ್ಷದಲ್ಲಿ ಅನೇಕ ಕದನಗಳಾಗಿರುವಂತೆ ...ಬರುವುದು. ನಮ್ಮ ಪಕ್ಷದ ವಿಮಾನಯಂತ್ರಗಳು ಹೋಗಿ ಶತ್ರುವಿನ ...ಗಳು, ರೈಲ್ವೆ ಸ್ಟೇಷನ್ನುಗಳೂ, ವಿಮಾನಯಂತ್ರಗಳ ತಲೇಪಿಗಳೂ ...ಮದ್ದಿನ ಗುಂಡುಗಳನ್ನು ಸುರಿಸಿರುತ್ತವೆ. ಶತ್ರುವಿನ ಹಲವು ವಿಮಾನಯಂತ್ರ...ಗಳು ಕೆಳಗೆ ನೆಲದ ಮೇಲೆ ಇಳಿಯುವಂತೆ ಮಾಡಿದರು. ಜರ್ಮನಿಯವರ ...ಯ ಭಾರೀ ವಿಮಾನವು (ಜೆಪ್ಪೆಲಿನ್) ಹಾಳಾಯಿತೆಂದು ತಿಳಿಯುವುದು. ...ರು ಅದಕ್ಕೆ ಗುರಿಯಿಟ್ಟು ಗುಂಡುಗಳನ್ನು ಹೊಡೆದರು. ಒಂದು ಸಿಡಿಮದ್ದಿನ ...ಒಡೆದು ಜೆಪ್ಪೆಲಿನ್ ಹತ್ತಿಕೊಂಡಿತು. ಬೆಂಕಿಯು ಜ್ವಾಲೆಗಳು ಅದರ ...ಭಾಗಗಳಿಗೂ ವ್ಯಾಪಿಸಿದ್ದರಿಂದ ಜೆಪ್ಪೆಲಿನ್ ಸುತ್ತಲಾರಂಭಿಸಿ ಕೆಳಗೆ ನೆಲದ ...ಬಿದ್ದುಕೊಂಡಿತು. ಆಗ ಅದರೊಳಗಿದ್ದ ಸಿಡಿಮದ್ದಿನ ಗುಂಡುಗಳು ಎಲ...ಒಡೆದುಹೋದವು. ಫ್ರೆಂಚರು ಅದರ ಸಮೀಪಕ್ಕೆ ಓಡಿಹೋಗಿ ...ಆ ಜೆಪ್ಪೆಲಿನ್ ಸಂಪೂರ್ಣವಾಗಿ ಹಾಳಾಯಿತು. ಅದರೊಳಗಿದ್ದವರ ...ಸುಟ್ಟುಹೋಗಿ 30 ಹೆಣಗಳು ಬಿದ್ದಿದ್ದುವು.

ಬ್ರಿಟಿಷ್ ವಿಮಾನಗಳಲ್ಲಿ ಕೆಲವಕ್ಕೆ ಅಪಾಯಕ್ಕೆ ಉಂಟಾಯಿತು. ಒಂದು ...ದಲ್ಲಿ ವಿಮಾನಚಾರಕನಿಗೆ ಸಿಡಿಮದ್ದಿನ ಗುಂಡು ತಾಗಿ ಒಂದು ಚೂರು ...ಅವನ ಕಾಲು ಎರಡು ತುಂಡಾಯಿತೆಂದೇ ಹೇಳಬಹುದು. ಆದರೂ ಅತ ...ಗೆಡದೆ ತನ್ನ ಯಂತ್ರವನ್ನು ಸುರಕ್ಷಿತವಾಗಿ ಕೆಳಗೆ ಇಳಿಸಿದನು. ಅವ...ಇದ್ದವನಿಗೆ ಅಪಾಯವೇನೂ ಆಗಲಿಲ್ಲ.

...ಮ ರಣರಂಗದ ಯುದ್ಧಸಾಲಿನ ಉದ್ದಕ್ಕೂ ಅಲ್ಲಲ್ಲಿ ಕದನಗಳು ನಡೆ...ತ್ತವೆ. ಹಿಮ ಕೆಸರೂ ಹಿಮವೂ ಸುರಿಯುತ್ತಿದ್ದರೂ ಲಕ್ಷ್ಯ ಮಾಡದೆ ...ಯುದ್ಧಮಾಡಿದರು. ಈ ಪ್ರಕಾರ ಮೋಜಿ ಬಿದ್ದು ಬರುವ ಜರ್ಮನಿ ...ಎಷ್ಟೆಷ್ಟು ಹೆಚ್ಚಾಗಿ ಮಡಿದುಹೋಗುತ್ತಾ ಬರುವರೋ ಯುದ್ಧದ ...ವೂ ಅಷ್ಟಷ್ಟು ಸಮೀಪವಾದೀತು.

ಪೂರ್ವ ರಣರಂಗದಲ್ಲಿ.

...ನಿಯ ಸೈನ್ಯಗಳು ಪಶ್ಚಿಮ ರಣರಂಗದಲ್ಲಿ ಕದನ ಕಾರ್ಯಗಳೊಳಗೆ ...ವಾಗಿರೋಣವರಿಂದ ಪೂರ್ವ ರಣರಂಗದಲ್ಲಿ ಯುದ್ಧಕಾರ್ಯಗಳು ವಿಶೇಷ ...ನಡೆಯುವುದಿಲ್ಲ. ಕೆಲವು ಠಾಣ್ಯಗಳಲ್ಲಿ ಸಣ್ಣಪುಟ್ಟ ಕದನಗಳೇನೋ ಆಗಿ...ರು ಸುರಂಗಗಳಿಗೆ ಮದ್ದು ತುಂಬಿಸಿ ಹಾರಿಸಿದರು; ಭಾರೀ ಫಿರಂಗಿಗಳನ್ನು ...ಗುಂಡುಗಳನ್ನು ಸುರಿಸಿದರು; ವಿಮಾನಯಂತ್ರಗಳು ಅಂತರಿಕ್ಷದಿಂದ ...ದ್ದಿನ ಗುಂಡುಗಳನ್ನು ಹಾಕಿದವು. ಆದಾಗ್ಯೂ ವಿಶೇಷ ಭೂಪ್ರದೇಶಗಳನ್ನು ...ಗೆದ್ದುಲೂ ಇಲ್ಲ; ಕಳೆದುಕೊಂಡೂ ಇಲ್ಲ.

ರಷ್ಯಾದಲ್ಲಿ ಜಾರ್ ಚಕ್ರವರ್ತಿಯವರು ತಮ್ಮ ಡೂಮಾ ಎಂಬ ಪಾರ್ಲಿ...ಮೆಂಟಿಗೆ ದಯಮಾಡಿದ್ದು ಒಂದು ವಿಶೇಷ ವರ್ತಮಾನ. ಪಾರ್ಲಿಮೆಂಟಿನ ಮೆಂಬರು...ತಮ್ಮ ಚಕ್ರವರ್ತಿಯನ್ನು ವಿಶೇಷ ಪ್ರಯತ್ನನಿಯಿಂದಲೂ ಉತ್ಸಾಹದಿಂ...ದ ಎದುರುಗೊಂಡರು. ಪಾರ್ಲಿಮೆಂಟಿನಲ್ಲಿ ರಷ್ಯಾ ಮಂತ್ರಿಶ್ರೇಷ್ಠರು ಒಂದು ...ಭಾಷಣವನ್ನು ಮಾಡಿದರು. ಅದನ್ನು ಕೇಳಿ ಮೆಂಬರುಗಳು ಅತ್ಯಂತ ...ದಿಂದ ಜಯಘೋಷ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಹೇಳಿದ ...ದ್ದುವೇನೆಂದರೆ—ಮಿತ್ರಮಂಡಲಿಗೆ ಸೇರಿದ ಇತರ ರಾಜ್ಯಗಳಂತೆ ರಷ್ಯಾ ...ವು ಜರ್ಮನಿಯನ್ನು ಸಂಪೂರ್ಣವಾಗಿ ಸೋಲಿಸಬಹುದಾದ ತನಕ ಯುದ್ಧ...ವನ್ನು ನಿಲ್ಲಿಸುವುದಿಲ್ಲವೆಂದು ಸಂಕಲ್ಪ ಮಾಡಿಕೊಂಡಿದ್ದಾರೆ. ಮನುಷ್ಯ ಕುಲ...ದ ಯುದ್ಧವನ್ನು ಕಲ್ಪಿಸುವದು ಮಹಾ ಕ್ರೂರತನವು. ಇಂಥಾ ಕ್ರೂರತ...ವಾದ ಈ ಯುದ್ಧಕ್ಕೆ ಜರ್ಮನಿಯೇ ಮೂಲ ಕಾರಣವೆಂದು ಹೇಳಿ... ಫ್ರಾನ್ಸ್, ಗ್ರೇಟ್ ಬ್ರಿಟನ್ ಮತ್ತು ಇಟಲಿಯವರು ಅಹರಿಸುತನಾದ ...ಮಾಡಿದಾರೆಂದು ಅವರುಗಳನ್ನು ಮಂತ್ರಿವರ್ಯರು ಕೊಂಡಾಡಿದರು. ...ವನ್ನು ಬೆಲ್ಜಿಯಮನ್ನೂ ಮೊದಲಿನ ಸ್ಥಿತಿಗೆ ತಂದಿಡುವ ಭಾಗದಲ್ಲಿ ...ಗೊಳಿಸಿರುವವರೆಲ್ಲಾ ಒಂದೇ ಸಂಕಲ್ಪ ಮಾಡಿಕೊಂಡಿರುತ್ತಾರೆಂದು ಹೇಳಿ... ರಷ್ಯದವರು ಪೋಲೆಂಡನ್ನೆಲ್ಲಾ ಏಕವಾಗಿ ಮಾಡಬೇಕೆಂದು ಉದ್ದೇಶಿಸ...ರು. ರಷ್ಯಾವಿಗೂ ಸ್ವೀಡನ್ ರಾಜ್ಯಕ್ಕೂ ಸಮಾಧಾನವಿದೆ. ರೂಮೇನಿಯಾ...ದಿಂದ ಯಾವ ತೊಂದರೆಯೂ ಬರುವಂತಿಲ್ಲವೆಂದು ತಿಳಿಸಿದರು. ಜಪಾನ್ ...ರಷ್ಯದವರಿಗೆ ಮಾಡಿರುವ ಸಹಾಯವು ಅಮೂಲ್ಯವಾದದ್ದೆಂದು ಮಂತ್ರಿ...ಜಪಾನವರನ್ನು ಕೊಂಡಾಡಿದರು. ಪರ್ಷಿಯಾದಲ್ಲಿ ಬಹಳ ಗಲಭೆ ...ಟಾಗಿದೆ; ಅಲ್ಲಿ ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕೆ ಕೆಲವು ಕಾಲ ...ಯುತ್ತದೆ ಎಂದು ಹೇಳಿದರು. ಪಾರ್ಲಿಮೆಂಟಿನಲ್ಲಿ ಮೆಂಬರುಗಳು ಈ ...ವನ್ನು ಕೇಳಿ ಮೆಚ್ಚಿಕೊಂಡಿದ್ದಾರೆ. ರಷ್ಯದವರು ಕೈ ಹಾಕಿರುವ ಈ ...ಭಾರವನ್ನು ಅವರು ಬಿಟ್ಟುಬಿಡುವವರಾಗಿಲ್ಲವೆನ್ನುವುದು ಆ ಭಾಷಣ...ದ ವೇದ್ಯವಾಗುತ್ತದೆ.

ಇಟಲಿ.

ಇಟಲಿಯಿಂದ ಬಂದಿರುವ ಕೆಲವು ತಂತೀ ವರ್ತಮಾನಗಳು ಹಿಮ ಸುರಿ...ಯುತ್ತಿರೋದರಿಂದ ಯುದ್ಧ ಕಾರ್ಯಗಳನ್ನು ನಡಿಸಲು ಅಡಚಣೆಯುಂಟಾಗಿದೆ...ಯು ಹೇಳುವವು. ಸಣ್ಣ ಪುಟ್ಟ ಕದನಗಳೇನೋ ನಡೆಯುತ್ತವೆ. ಕೆಲವು ...ಕಡೆ ಇಟಲಿಯವರು ಮುಂದರಿಸಿ ನುಗ್ಗಿ ಹೋಗಿದ್ದಾರೆಂದೂ ತಂತೀ ...ವರ್ತಮಾನಗಳು ತಿಳಿಸುವವು. ಶತ್ರುವಿನ ವಿಮಾನ ಯಂತ್ರಗಳು ಇಟಲಿ ನಗರಗಳ ...ಸಿಡಿಮದ್ದಿನ ಗುಂಡುಗಳನ್ನು ಸುರಿಸಿದವು. ಸಣ್ಣ ಪ್ರಜೆಗಳು ನಾಲ್ವರು ...ದರು; ಹನ್ನೆರಡು ಜನರಿಗೆ ಗಾಯಗಳಾಗಿವೆ.

ಟರ್ಕಿಯಲ್ಲಿ.

...ಕಾಸಸ್ ಪರ್ವತ ಪ್ರಾಂತ್ಯಗಳಲ್ಲಿ ರಷ್ಯದವರು ಟರ್ಕಿಯವರನ್ನು ಓಡಿ...ಸಿ ಹೋಗುತ್ತಲೂ, ಅವರಲ್ಲಿ ಹಲವರನ್ನು ಕೈಸೆರೆ ಹಿಡಿಯುತ್ತಲೂ, ...ವನ್ನು ಕಿತ್ತುಕೊಳ್ಳುತ್ತಲೂ ಇದ್ದಾರೆ. ಎರ್ಜೆರೂಮ್ ನಗರದಲ್ಲಿ ...ಯವರ ಕಡೆ 40,000 ಸೈನ್ಯ ನಷ್ಟವಾದಂತೆ ತಿಳಿಸಲ್ಪಟ್ಟಿದೆ. ರಷ್ಯಾದವರು ...ಓಡಿಸಿಕೊಂಡು ಹೋಗುವಾಗ್ಗೆ ಅವರಲ್ಲಿ ೩,೬೪೯ ಸೈನಿಕರನ್ನು ಅರು... ಫಿರಂಗಿಗಳ ಸಮೇತ ಸೆರೆ ಹಿಡಿದರೆಂದು ತಿಳಿಯುವುದು. ಅನ್ನೊಂದು ...ಲ್ಲಿ ರಷ್ಯಾ ಸವಾರ್ ಸೈನಿಕರು ಮೂರು ದೊಡ್ಡ ಫಿರಂಗಿಗಳನ್ನು ಕಿತ್ತು...ಡರು. ಅಷ್ಟರೊಳಗೆ ಟರ್ಕಿಯವರಿಗೆ ಸಹಾಯ ಮಾಡುವುದಕ್ಕೋ ...ಸೈನ್ಯಗಳು ಬರುತ್ತಿದ್ದವು. ರಷ್ಯದವರು ಎರ್ಜೆರೂಮನ್ನು ಗೆದ್ದು ...ರೆಂದು ಆ ಸೈನ್ಯಗಳು ಹಿಂದಕ್ಕೆ ಹೊರಟುಹೋದವು.

...ಬಂದ ತಂತೀ ವರ್ತಮಾನದಂತೆ ಎರ್ಜೆರೂಮ್ ನಗರದಲ್ಲಿ ...ರು 13,000 ಟರ್ಕಿಯವರನ್ನೂ 323 ಫಿರಂಗಿಗಳನ್ನೂ ಅಪಾರ ಸಾಮಗ್ರಿಗಳನ್ನೂ ಸ್ವಾಧೀನಪಡಿಸಿಕೊಂಡರೆಂದು ಗೊತ್ತಾಗುವುದು. ಈಗ ಟರ್ಕಿ ಸೈನಿಕರು ಆ ಪಟ್ಟಣದಿಂದ ಪಶ್ಚಿಮಕ್ಕೆ 50 ಮೈಲಿ ದೂರದಲ್ಲಿ ಠಾಣ್ಯ ಹಾಕಿಕೊಂಡಿರುವರು. ರಷ್ಯಾದವರು ಹಿಮವು ಆ ಪ್ರದೇಶದಲ್ಲಿ ಹಾಲ್ಟು ಅಡಿ ಪ್ರಮಾಣಕ್ಕೆ ಬಿದ್ದಿದ್ದರೂ ಲಕ್ಷ್ಯಮಾಡದೆ ಅವರನ್ನು ಓಡಿಸಿಕೊಂಡು ಹೋಗುತ್ತಿದ್ದಾರೆ.

ಕಪ್ಪುಕಡಲಿನಲ್ಲಿ ರಷ್ಯಾದವರು ಟರ್ಕಿಯವರ ನಾಲ್ಕು ವ್ಯಾಪಾರ ಹಡಗುಗಳನ್ನು ಮುಳುಗಿಸಿದ್ದಲ್ಲದೆ, ಆ ಪ್ರಾಂತ್ಯದ ಭೂಪ್ರದೇಶದಲ್ಲಿದ್ದ ಕೆಲವು ರೈಲ್ವೆ ಸೇತುವೆಗಳನ್ನು ನಾಶಮಾಡಿದ್ದಾರೆ.

ಬ್ರಿಟಿಷರ ಒಂದು ಸಬ್‌ಮೆರೀನ್ ಎಂಬ ಜಲಯಂತ್ರವು ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ಹೋಗಿ ತೀರದಲ್ಲಿದ್ದ ಟರ್ಕಿಯ ಒಂದು ಹಡಗನ್ನೂ, ಸೈನ್ಯಗಳನ್ನು ಸಾಗಿಸುವಂಥಾ ಅರು ಹಡಗುಗಳನ್ನೂ ಮುಳುಗಿಸಿ ಬಂದಿತೆಂದೂ, ಇದನ್ನು ನೋಡಿ ಟರ್ಕಿ ಪ್ರಜೆಗಳಿಗೆ ಕಳವಳ ಉಂಟಾಯಿತೆಂದೂ ವರ್ತಮಾನ ಬಂದಿದೆ.

ಮೆಸೊಪೊಟೇಮಿಯಾ ದೇಶದಲ್ಲಿ ಬ್ರಿಟಿಷರು ಸ್ವಲ್ಪ ದೂರ ನುಗ್ಗಿ ಹೋಗಿದ್ದಾರೆ. ಒಂದು ಸೈನ್ಯವು ನದಿಯ ಎಡ ದಡದಿಂದ ಮೇಲಕ್ಕೆ ನುಗ್ಗಿ ಹೋಗಿ ಅಲ್ಲಿಂದ ಟರ್ಕಿ ಠಾಣ್ಯಕ್ಕೆ ಗುಂಡುಗಳನ್ನು ಸುರಿಸಿತು. ಕುದುರೆಗಳು, ಒಂಟೆಗಳು, ಸಾಮಾನು ಸಾಗಿಸುವ ಮೂಗ ಪ್ರಾಣಿಗಳು ಎಲ್ಲಾ ಗಾಬರಿಯಿಂದ ಓಡಿಹೋದವು. ಸೈನಿಕರಲ್ಲೂ ತುಂಬಾ ನಷ್ಟಪಟ್ಟರು. ಈ ಸೈನಿಕರು ಹೊಡೆಯುವ ಫಿರಂಗಿಗಳ ಶಬ್ದವು ಕೂಟಲ್ ಅಮಾರಾದೊಳಗಿರುವ ಬ್ರಿಟಿಷ್ ಸೈನಿಕರಿಗೆ ಕೇಳಬರುವಂತಾಯಿತು. ಆ ಬ್ರಿಟಿಷ್ ಸೈನಿಕರ ಬಳಿ ಬೇಕಾದಷ್ಟು ಆಹಾರ ಸಾಮಗ್ರಿಗಳಿರುತ್ತವೆ. ತಂತಿಗಳಿಲ್ಲದೆ ವರ್ತಮಾನಕಳುಹಿಸುವಂಥಾ ಏರ್ಪಾಡಿನಿಂದಲೂ, ವಿಮಾನಯಂತ್ರಗಳ ಸಹಾಯದಿಂದಲೂ ಆ ಪಟ್ಟಣದೊಳಗಿರುವ ಬ್ರಿಟಿಷ್ ಸೈನಿಕರ ಯೋಗಕ್ಷೇಮವು ಬ್ರಿಟಿಷ್ ಸರಕಾರಕ್ಕೆ ತಿಳಿದು ಬರುತ್ತಲಿದೆ. ಒಂದು ಕಡೆ ಟರ್ಕಿಯವರ ಸವಾರ್ ಸೈನಿಕರು ಪೆಟ್ರೋಲ್ ಹೊಂಚಿ ಮಾಡುತ್ತಿದ್ದಾಗ ಬ್ರಿಟಿಷ್ ಸೈನಿಕರು ಅವರನ್ನು ಸುತ್ತುಗಟ್ಟಿಕೊಂಡು ಕಾದಾಡಿ ಅವರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಸವಾರರನ್ನು ಗಾಯಪಡಿಸಿ ಕೊಂದು ಹಾಕಿದರು. ಬಳಿಕ ಅರಬ್ಬಿಯವರ ಒಂದು ಠಾಣ್ಯವನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಅಲ್ಲಿ ಬ್ರಿಟಿಷರಿಗೆ ಅನೇಕ ಕುರಿಗಳೂ ಬಹಳ ಆಹಾರ ಪದಾರ್ಥಗಳೂ ಸಿಕ್ಕಿದವು.

ಈಜಿಪ್ಟಿನಲ್ಲಿ.

ಬ್ರಿಟಿಷರ ಒಂದು ವಿಮಾನಯಂತ್ರವು ಅಂತರಿಕ್ಷದಲ್ಲೇ ಸೂಯಸ್ ಕಾಲುವೆಯಿಂದ ಪೂರ್ವ ದಿಕ್ಕಿಗೆ ಐವತ್ತು ಮೈಲಿ ದೂರ ಹೋಗಿ ಅಲ್ಲಿ ಒಂದು ಠಾಣ್ಯಕ್ಕೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿತು. ಟರ್ಕಿಯವರು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಕಾರ್ಖಾನೆ ಇಟ್ಟಿದ್ದರು. ಅದೆಲ್ಲಾ ನಾಶವಾಯಿತು.

ಪರ್ಷಿಯಾದಲ್ಲಿ.

ರಷ್ಯಾದವರು ಪರ್ಷಿಯಾದಲ್ಲಿ ರಾಜಧಾನಿಯಾದ ಟೆಹೆರಾನ್ ನಗರದಿಂದ ಪಶ್ಚಿಮಕ್ಕೆ ಹೊರಟು ಬಾಗ್ದಾದಿನ ಕಡೆ ನುಗ್ಗಿಹೋಗುತ್ತಲಿದ್ದಾರೆ. ಅವರು ಕುಮಾರ್‌ಷಾ ಎಂಬ ಪಟ್ಟಣವನ್ನೂ ಇನ್ನು ಕೆಲವು ಸ್ಥಳಗಳನ್ನೂ ವಶಮಾಡಿಕೊಂಡಿರುತ್ತಾರೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಬಾಲ್ಕನ್ ಸಂಸ್ಥಾನಗಳಿಂದ ವರ್ತಮಾನಗಳೇನೂ ಬಂದಿಲ್ಲವು. ಗ್ರೀಸಿನೊಳಕ್ಕೆ ಪ್ರವೇಶ ಮಾಡುವುದಕ್ಕಾಗಲಿ, ಸಲೋನಿಕ ತೀರ ಪಟ್ಟಣದ ಮೇಲೆ ಮುತ್ತಿಗೆ ಹಾಕುವುದಕ್ಕಾಗಲಿ ಬಲ್ಗೇರಿಯಾದವರಿಗೆ ಇಷ್ಟವಿಲ್ಲವೆಂದು ತೋರುತ್ತದೆ. ಮಿತ್ರಮಂಡಲಿಯವರಾದರೋ ಮಾಂಟಿನೆಗ್ರೋ ಮತ್ತು ಸರ್ಬಿಯಾದವರಿಗೆ ಸಹಾಯ ಮಾಡಿ ಅವರನ್ನು ಯುದ್ಧಕ್ಕೆ ಸಿದ್ಧಪಡಿಸುತ್ತಿದ್ದಾರೆ. ಅವರು ಇಷ್ಟರೊಳಗೇ ಮಾಂಟಿನೆಗ್ರೋ ಮತ್ತು ಸರ್ಬಿಯಾ ದೇಶಗಳಿಗೆ ವಾಪಸು ಹೋಗುವರು.

ಆಫ್ರಿಕಾದಲ್ಲಿ.

ಪೂರ್ವ ಆಫ್ರಿಕಾದಲ್ಲಿ ಒಂದು ಕಷ್ಟ ಕದನವಾದಂತೆ ಸಮಾಚಾರ ಬಂದಿದೆ. ಒಂದು ಬ್ರಿಟಿಷ್ ಠಾಣ್ಯವನ್ನು ಇಬ್ಬರು ಬ್ರಿಟಿಷ್ ಮತ್ತು 35 ದೇಶೀಯ ಸೈನಿಕರಿದ್ದು ಸಂರಕ್ಷಣೆ ಮಾಡಿಕೊಳ್ಳುತ್ತಿದ್ದರು. ಈ ಠಾಣ್ಯದ ಮೇಲೆ ಜರ್ಮನಿಯವರು ನುಗ್ಗಿ ಮುತ್ತಿಗೆ ಹಾಕಿದರು. ಅವರಲ್ಲಿ ಜರ್ಮನಿಯವರು ನಾಲ್ವರೂ, ದೇಶೀಯ ಸಿಪಾಯಿಗಳು 200 ಮಂದಿಯೂ ಇದ್ದರು. ಈ ಕದನದಲ್ಲಿ ಜರ್ಮನಿಯವರ ಕಡೆ ನಾಲ್ವರು ಯೂರೋಪಿಯನ್ನರೂ 63 ಮಂದಿ ದೇಶೀಯ ಸಿಪಾಯಿಗಳೂ ನಷ್ಟಪಟ್ಟರು. ಮತ್ತು ಒಂದು ಮೆಷೀನ್ ಫಿರಂಗಿಯೂ 45 ಬಂದೂಕುಗಳೂ ಬ್ರಿಟಿಷರಿಗೆ ಸಿಕ್ಕಿದವು. ಬ್ರಿಟಿಷರ ಕಡೆ ನಷ್ಟವೇನೂ ಆಗಲಿಲ್ಲ.

ಇತರ ವಿಷಯಗಳು.

ಹಿಂದುಸ್ಥಾನಕ್ಕೆ ಬರುತ್ತಿದ್ದ ಇನ್ನೊಂದು ಮೆಯಿಲ್ ಹಡಗು (ಅದರ ಹೆಸರು ಮಲೋಯಾ) ಡೋವರಿನ ಹತ್ತಿರ ಸಮುದ್ರದೊಳಗೆ ಮೈನ್ ಎಂಬ ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿಹೋಯಿತು. ಅದರಲ್ಲಿ 119 ಮಂದಿ ಪ್ರಯಾಣಿಕರೂ, ಇತರರು 2?? ಮಂದಿಯೂ ಇದ್ದರು. ಈ ಪೈಕಿ 260 ಮಂದಿಯನ್ನು ಬದುಕಿಸಿದಾರೆಂದೂ, ಅವರಲ್ಲಿ 61 ಜನರು ಪ್ರಯಾಣಿಕರೆಂದೂ ತಿಳಿಸಲ್ಪಟ್ಟಿದೆ. ಸಮುದ್ರದಲ್ಲಿ ಅಲೆಗಳ ಬಡಿದಾಟ ಬಹಳವಾಗಿ ಹೆಚ್ಚಿದ್ದರಿಂದ ಆ ಸಿಡಿಮದ್ದಿನ ಗುಂಡು ತನ್ನ ಸ್ಥಾನದಿಂದ ಕಿತ್ತು ಬಡಿದುಕೊಂಡು ಹೋಗಿತ್ತೆಂದೂ, ಅದು ಈ ಹಡಗಿಗೆ ತಗಲಿ ಅಪಾಯಕರವಾಯಿತೆಂದೂ ಊಹಿಸಲ್ಪಟ್ಟಿದೆ. ಮೊದಲು ಈ ಹಡಗಿನಲ್ಲಿ ಶಿವಮೊಗ್ಗಾ ಶಾಸ್ತ್ರಿಯವರಾದ ರೆವ್|| ಎ. ಇ. ಸ್ಪೆಟಂಗೇಲ್ ರವರು ಪ್ರಯಾಣಮಾಡಿ ಬರುತ್ತಾರೆಂದು ನಮೂದಾಗಿತ್ತು; ಈಚೆಗೆ ಅವರ ಹೆಸರು ಪ್ರಯಾಣಿಕರ ಹೆಸರು ಪಟ್ಟಿಯಲ್ಲಿ ಕಾಣಿಸಲಿಲ್ಲ. ಅದಕಾರಣ ಅವರು ಕ್ಷೇಮವಾಗಿರುವುದಕ್ಕೆ ಜನಾಲು ಕೊಡಬೇಕೆಂದು ಸೀಮೆಗೆ ತಂತೀ ವರ್ತಮಾನ ಕಳುಹಿದೆ.

ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯ ಮೆಂಬರುಗಳು ಯುದ್ಧದ ಖರ್ಚಿಗೋಸ್ಕರ ಹೊಸದಾಗಿ 43,00,00,000 ಪೌಂಡುಗಳನ್ನು ಸ್ಯಾಂಕ್ಷನ್ ಮಾಡಿದರು. ಇದೂ ಸೇರಿ ಯುದ್ಧದ ಖರ್ಚಿಗೆ ಒಟ್ಟು 205,20,00,000 ಪೌಂಡು ಸ್ಯಾಂಕ್ಷನ್ ಆಗಿರುತ್ತೆ. ದಿನ ಒಂದಕ್ಕೆ ಯುದ್ಧದ ಖರ್ಚು 43,00,000 ಪೌಂಡ್ ಆಗುವುದು. ಈಗ ಉಳಿಯುವ ಹಣ ಮುಂದಿನ ಮಾರ್ಚಿ ತಾ. 10 ರ ವರೆಗೆ ಸಾಕಾದೀತು. ಗ್ರೇಟ್ ಬ್ರಿಟನ್ನಲ್ಲಿ ಮದ್ದು ಗುಂಡುಗಳನ್ನು ತಯಾರುಮಾಡುವ ಬಾಬಿನಲ್ಲಿ ವಾರಕ್ಕೆ 4,00,000 ಪೌಂಡುಗಳಂತೆ ಹಿಡಿಯುವ ರೀತಿ ಖರ್ಚನ್ನು ಕಡಮೆಮಾಡಿರುತ್ತಾರೆ. ನಾವೆಯ ಸೈನ್ಯದಲ್ಲಿರುವ ಜನಗಳು ಜಾಸ್ತಿ ಸಂಬಳವೇನೂ ಕೇಳದೆ ಮದ್ದು ಗುಂಡುಗಳನ್ನು ಕಾರ್ಖಾನೆಗಳಲ್ಲಿ ತಯಾರುಮಾಡಿ ಒದಗಿಸುತ್ತಲಿದ್ದಾರೆ.

ನಮ್ಮ ಚಕ್ರವರ್ತಿ ಸಾರ್ವಭೌಮರವರು ಆರೋಗ್ಯಹೊಂದಿರುವ ಕಾರಣ ಅವರು ಸೈನ್ಯಗಳ ಕವಾಯತನ್ನು ದಯಮಾಡಿ ಹೋಗಬಾರದೆಂಬುವಂತೆ ವೈದ್ಯರು ತಿಳಿಸಿದಾರೆ.

ಯುದ್ಧಾರಂಭವಾದಾಗ್ಗೆ ಜರ್ಮನಿ ಮತ್ತು ಆಸ್ಟ್ರಿಯಾ ರಾಜ್ಯಗಳಿಗೆ ಸೇರಿದ 36 ಹಡಗುಗಳು ಹೋಗಿ ಪೋರ್ಚುಗೀಸರ ತೀರಪಟ್ಟಣಗಳಲ್ಲಿ ನಿಂತು ಬಿಟ್ಟವು. ಆ ಸರಕಾರದವರು ಆ ಹಡಗುಗಳನ್ನೆಲ್ಲಾ ಹಿಡಿದು ಸ್ವಾಧೀನದಲ್ಲಿಟ್ಟು ಕೊಂಡಿದಾರೆ.

ಜರ್ಮನಿಯ ಒಂದು ಹಡಗು ಆರು ಹಡಗುಗಳನ್ನು ಹಿಡಿದು ಮುಳುಗಿಸಿತು. ಆ ಹಡಗುಗಳಲ್ಲಿದ್ದ 306 ಜನರನ್ನು ಕೈಸೆರೆ ಹಿಡಿದು ಟೆನೆರಿಫ್ ಎಂಬ ತೀರಪಟ್ಟಣಕ್ಕೆ ಕರೆದುಕೊಂಡುಹೋದರು. ಅಲ್ಲಿ ಕೈಸೆರೆಯವರಿದ್ದ ಹಡಗನ್ನು ರೇವಿನಿಂದ ಹೊರಕ್ಕೆ ಸಾಗಿಸಿ ಅದನ್ನು ಸಮುದ್ರದಲ್ಲಿ ಮುಳುಗಿಸಿಬಿಟ್ಟರು.

ಬ್ಯಾಲ್ಟಿಕ್ ಕಡಲಿನಲ್ಲಿ ಒಂದು ಸೀಸೆಯು ಸಿಕ್ಕಿಕೊಂಡು ಬಂತು. ಅದರಲ್ಲಿ ಜೆಪ್ಪೆಲಿನ್ ವಿಮಾನಯಂತ್ರದ ಅಧಿಕಾರಿಯು ತನ್ನ ಹೆಂಡಿರು ಮಕ್ಕಳಿಗೆ ಬರೆದಿದ್ದ ಕಾಗದವಿತ್ತು. ಅದರಲ್ಲಿ ಅವನು ತನ್ನ ವಿಮಾನವು ಸಮುದ್ರದಲ್ಲಿ ಬಿದ್ದುಕೊಂಡಿತೆಂದೂ, ಅದು ಮುಳುಗುತ್ತಲಿದೆ ಎಂದೂ ತಿಳಿಸಿದಾನೆ.

ಟರ್ಕಿ ಸುಲ್ತಾನರವರ ಯುವರಾಜರು ಆತ್ಮಹತ್ಯ ಮಾಡಿಕೊಂಡರೆಂದು ತಿಳಿಸಲ್ಪಟ್ಟಿತ್ತಷ್ಟೆ. ಅವರ ಶವವನ್ನು ಪರೀಕ್ಷೆ ಮಾಡಿದಾಗ ಹೊಡೆದಾಡಿದ್ದರಲ್ಲಿ ಪ್ರಾಣಹೋಯಿತೆಂದು ವೇದ್ಯವಾಯಿತು. ಇದರಿಂದ ಅವರು ಆತ್ಮಹತ್ಯ ಮಾಡಿಕೊಳ್ಳಲಿಲ್ಲವೆಂದೂ, ಯಾರೋ ಅವರನ್ನು ಕೊಂದುಹಾಕಿರಬೇಕೆಂದೂ ಗೊತ್ತಾಗುವುದು.

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಮದ್ದು ಗುಂಡು ತಯಾರಾಗುತ್ತಿದ್ದ ಒಂದು ಭಾರೀ ಕಾರ್ಖಾನೆಗೆ ಬೆಂಕಿಬಿದ್ದು ಸುಟ್ಟುಹೋಯಿತು. ಇದರಿಂದ ಸುಮಾರು 30 ಲಕ್ಷ ರೂಪಾಯಿನ ಆಸ್ತಿ ನಷ್ಟವಾಗಿರುವುದು.

ಅನೇಕ ದೇಶಗಳಿಂದ ಯಾವುದೊಂದು ಪದಾರ್ಥವೂ ಜರ್ಮನಿಗಾಗಲಿ ಆಸ್ಟ್ರಿಯಾವಿಗಾಗಲಿ ರಫ್ತಾಗಿ ಹೋಗುವುದಿಲ್ಲವೆಂದು ಹೇಳಲಾಗಿದೆ. ಇದಲ್ಲದೆ ಜರ್ಮನಿಯವರು ತಮ್ಮ ಕಡೆ ಆದ ನಷ್ಟವನ್ನು ಪ್ರಕಟಿಸುವುದು ಕೂಡ ನಂಬತಕ್ಕದ್ದಾಗಿಲ್ಲವೆಂದು ತಿಳಿಸಲ್ಪಟ್ಟಿದೆ.

ಜನವರಿ ತಾ. 31 ರಲ್ಲಿ ಶತ್ರುವಿನ ವಿಮಾನಯಂತ್ರಗಳು ಹಾಕಿದ 390 ಸಿಡಿಮದ್ದಿನ ಗುಂಡುಗಳಿಂದ ಇಂಗ್ಲೆಂಡಿನಲ್ಲಿ 184 ಮಂದಿ ನಷ್ಟವಾದರು. ಗಂಡಸರೂ, ಹೆಂಗಸರೂ, ಮಕ್ಕಳೂ ಈ ಪರಿಣಾಮಕ್ಕೆ ಒಳಗಾದರು.

ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಫೆಬ್ರವರಿ ತಾ. 22 ರಲ್ಲಿ ಪ್ರಜೆಗಳು ದೊಡ್ಡ ದಂಗೆ ಮಾಡಿದರು. ಕುದುರೆ ಸವಾರರು ನುಗ್ಗಿ ದಂಗೆಯನ್ನು ಅಡಗಿಸುವುದಕ್ಕೆ ಗುಂಡು ಹೊಡೆದು 100 ಮಂದಿಯನ್ನು ಕೊಂದುಹಾಕಿದರಂತೆ.

ಒಳದೇಶದ ವೃತ್ತಾಂತಗಳು.

ನಮ್ಮ ವಿವಾನ್ (?) ರವರೂ, ಬ್ರಿಟಿಷ್ ರೆಸಿಡೆಂಟರೂ ಕಳೆದ ಗುರುವಾರ ಮೈಸೂರಿನಿಂದ ಹಿಂತಿರುಗಿದರು. ಅದೇ ವಾರದಲ್ಲೇ ಅವರು ಬೆಂಗಳೂರಿಗೆ ಹೊರಡುತ್ತಾರೆ.

ಈ ದಿನ ಶಿವರಾತ್ರಿ ಹಬ್ಬದ ನಿಮಿತ್ತ ಮಹಾರಾಜರವರ ನಾಟಕದ ಕಂಪನಿಯವರು ರಾಜಧಾನಿಯ ಟೌನ್ ಹಾಲಿನಲ್ಲಿ ಮಹಾಭಾರತ ಕಥೆಯನ್ನು ಅಭಿನಯಿಸುತ್ತಾರೆ.

ಕಳೆದ ವಾರ ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಛಾಂಪಿಯನ್ ರೀಫ್ ಎಂಬ ಗಣಿಯೊಳಗೆ ಗಾಳಿಯು ಸಿಡಿದು ಹುಟ್ಟಿ ದಿಬ್ಬ ಕುಸಿದುಬಿದ್ದು ಕೆಲಸಗಾರರಲ್ಲಿ ಒಬ್ಬ ಮೇಸ್ತ್ರಿಯೂ ಮೃತಪಟ್ಟನು.

ಮಹಾಸ್ವಾಮಿ ಶ್ರೀ ಯುವರಾಜರವರು ಬೊಂಬಾಯಿಯಿಂದ ಬೆಂಗಳೂರು ತಲುಪಿ, ಸರ್ದಾರ್ ಗೋಪಾಲರಾಜೇ ಅರಸಿನವರ ಕೂಡ ಮಧ್ಯಾಹ್ನ 1¼ ಗಂಟೆಗೆ ಮೋಟಾರಿನಲ್ಲಿ ರಾಜಧಾನಿಗೆ ಸುರಕ್ಷಿತವಾಗಿ ಚಿತ್ತೈಸಿದರು.

ಈ ಸಲ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ನಂಜನಗೂಡು ಸೆಂಟರಿಗೆ ಹೋಗುವ ವೀರಶೈವ ವಿದ್ಯಾರ್ಥಿಗಳಿಗೆ ಅಲ್ಲಿನ ವರ್ತಕರಾದ ಮ|| ಡಿ. ಸುಬ್ಬಲ್ಲ ದೇವಣ್ಣ ನಂಜುಂಡಯ್ಯನವರುಗಳು ಭೋಜನಾದಿಗಳಿಗೆ ಉದಾರವಾದ ಏರ್ಪಾಡು ಮಾಡಿದಾರೆಂದು ತಿಳಿಸಲು ಸಂತೋಷವಾಗುತ್ತದೆ.

ಬೆಂಗಳೂರು ಅಡ್ವೊಕೇಟ್ ಮ. ಮುರಾರರಾಯರ ಸಹೋದರನಾದ ಕೃಷ್ಣಮೂರ್ತಿ ಎಂಬ 18 ವಯಸ್ಸಿನ ವಿದ್ಯಾರ್ಥಿಯು ಬಿ.ಎ. ತರಗತಿಯಲ್ಲಿ ಓದುತ್ತಿದ್ದು, ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲವೆಂಬ ಕಾರಣಕ್ಕಾಗಿ ಕಳೆದ ... ಆತ್ಮಹತ್ಯ ಮಾಡಿಕೊಂಡನು.

ರಾಜಧಾನಿಯ ಅಡ್ವೊಕೇಟ್ ನಾರಾಯಣ್ಯಂಗಾರ್‍ರ ಕುಮಾರರಾದ ಅಡ್ವೊಕೇಟ್ ಮ|| ಎಂ. ಡಿ. ತಿರುಮಲಾಚಾರ್‍ರನ್ನು ಸರ್ಕಾರದವರು ಬೆಂಗಳೂರು ಮುನಿಸಿಫ್ ಕೆಲಸಕ್ಕೆ ನೇಮಕಮಾಡಿದರು. ಇವರು ಹಿಂದೆ ಕೆಲವು ವೇಳೆ ಮುನ್ಸಿಫರಿಗೆ ಬದಲಿ ಕೆಲಸಮಾಡಿ ಒಳ್ಳೇ ಹೆಸರು ಪಡೆದಿರುವರು.

ರಾಜಧಾನಿಯ ಪೋಲೀಸಿನವರು 15 ಮಂದಿ ಕಳ್ಳಕೊರಚರನ್ನು ಹಿಡಿದು, ಅವರ ಬಳಿ ಸಿಕ್ಕಿದ ಸುಮಾರು ಎರಡು ಗಾಡಿಗಳು ತುಂಬುವಷ್ಟು ಪಾತ್ರೆಪದಾರ್ಥ, ಬಟ್ಟೆಬರೆ, ಒಡವೆ ವಸ್ತುಗಳನ್ನು ನಜರಬಾದ್ ಪೋಲೀಸ್ ಸ್ಟೇಷನ್ನಲ್ಲಿ ಇಟ್ಟಿದಾರೆ. ಮಾಲು ಕಳೆದುಕೊಂಡವರು ಹೋಗಿ ದಾಖಲೆಕೊಟ್ಟು ತಮ್ಮ ಪದಾರ್ಥಗಳನ್ನು ಪಡೆಯಬಹುದಾಗಿದೆ. ಆ ಕಳ್ಳರ ವಿಚಾರಣೆ ನಡೆಯುತ್ತದೆಯುವುದು.

ಮೈಸೂರು ಸೈನಿಕರ ಯುದ್ಧದ ರಿಲೀಫ್ ಫಂಡಿಗೆ ಹಣ ಕೂಡಿಸಿ ಕೊಡುವುದಕ್ಕೆ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ರಾಜಧಾನಿಯ ಶಿಕ್ಷಕರು ಮೂಗರ ಮತ್ತು ಕುರುಡರ ಪಾಠಶಾಲೆಯ 50 ಮಂದಿ ವಿದ್ಯಾರ್ಥಿಗಳು ತಮ್ಮ ವಿದ್ಯಾ ಸಾಮರ್ಥ್ಯವನ್ನು ತೋರಿಸಿದರು. ಅವರ ಓದು ಬರಹ ಹಾಡುಗಾರಿಕೆ, ಸಂಭಾಷಣೆಗಳು ನೋಟಕರಲ್ಲಿ ಮರುಕವನ್ನೂ ಆಶ್ಚರ್ಯವನ್ನೂ ಉಂಟುಮಾಡಿದವು. ರಾಜಧಾನಿಯ ಸಂಗೀತ ಸಮಾಜದವರು ಸಂಗೀತ ವಿದ್ಯಾ ಪಂಡಿತರಿಂದ ವಿನೋದಯನ್ನು ನಡಿಸಿದರು. ಇದೂ ತುಂಬಾ ಆಹ್ಲಾದಕರವಾಗಿತ್ತು. ಸೆಕ್ರೆಟರಿಗಳು ಈ ರೀತಿ ಹಣವನ್ನು ಉತ್ಪತ್ತಿ ಮಾಡಿ ಮೇಲ್ಕಂಡ ಫಂಡಿಗೆ ಒದಗಿಸಿದ್ದು ಸಂತೋಷಪ್ರದವಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಅ|| ಅ|| ಕಂಟ್ರೋಲರ್ ಮ|| ಎಸ್. ವೆಂಕಟರಂಗಂ ಯವರನ್ನು ಇನ್ಸ್‌ಟಿಟ್ಯೂಟ್ ಕಮಿಟಿಯ ಮೆಂಬರಾಗಿಯೂ, ಜಾಯಿಂಟ್ ಸೆಕ್ರೆಟರಿಯಾಗಿಯೂ ನೇಮಿಸಿದೆ.

ಅ|| ಸರ್ಜನ್ ಮ|| ಬಿ. ಕೃಷ್ಣಮೂರ್ತಿರಾಯರನ್ನು ಶಿವಮೊಗ್ಗಾ ಆಸ್ಪತ್ರೆಯಿಂದ ಸಕಲೇಶಪುರದ ಆಸ್ಪತ್ರೆ ಛಾರ್ಜಿಗೆ ವರ್ಗಮಾಡಿದೆ. ಕೂಡಲೇ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಹಾಸನದ ಡೆಪ್ಯುಟಿ ಕಮಿಷನರ್ ಮ. ಬಿ. ರಾಮಸ್ವಾಮಯ್ಯನವರಿಗೆ ಕೊಟ್ಟಿರುವ 2 ತಿಂಗಳು 5 ದಿವಸಗಳ ಪ್ರಿವಿಲೆಜ್ ರಜವನ್ನು ಇನ್ನಾರು ದಿನಗಳಿಗೆ ಜಾಸ್ತಿ ಮಾಡಿದೆ; ಮತ್ತು ಆ ಬಳಿಕ ಜನವರಿ ತಾ. 4 ರ ತನಕ ಕಾಯಿಲೆ ರಜಾ ಕೊಟ್ಟಿದೆ. ಅದುವರೆಗೆ ಈಗಿನ ಬದಲಿ ಏರ್ಪಾಡು ಜಾರಿಯಲ್ಲಿರತಕ್ಕದ್ದು.

ಹೆಗ್ಗಡದೇವನಕೋಟೆ ಫಾರೆಸ್ಟ್ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಅ. ಕನ್ಸರ್ವೇಟರ್ ಮ. ಎಲ್. ಪಿ. ಮಾಸ್ಕರೆನ್ಹಾಸ್ ಯವರಿಗೆ ಮಾರ್ಚಿ ತಾ. 1 ರಿಂದ ಎರಡು ತಿಂಗಳು ಹದಿನೈದು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರ ಗೈರ್‌ಹಾಜರಿಯಲ್ಲಿ ಮುಂದೆ ಹೇಳುವ ಬದಲಿ ಏರ್ಪಾಡು ಹುಕುಂ ಆಗಿದೆ.

ಶಿವಮೊಗ್ಗಾ ಸಬ್ ಡಿವಿಜನ್‌ನಿಂದ ಮಿ|| ಸಿ. ಎಚ್. ಈಗಲ್‌ರವರು ಹೆಗ್ಗಡದೇವನಕೋಟೆಗೂ ಮ|| ಬಿ. ನರಸಿಂಹಯ್ಯಂಗಾರ್‍ರು ಶಿವಮೊಗ್ಗಾ ಸಬ್ ಡಿವಿಜನ್‌ಗೂ ವರ್ಗಮಾಡಲ್ಪಟ್ಟಿದಾರೆ.

ಪಾವುಗಡ ತಾಲೂಕು ಅಮಲ್ದಾರ್ ಮ|| ಪಿ. ಗೋಪಾಲರಾಯರಿಗೆ ಮಾರ್ಚಿ ತಾ|| 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೊರಟಗೆರೆ ಸಬ್ ತಾಲೂಕು ಡೆಪ್ಯುಟಿ ಅಮಲ್ದಾರ್ ಮ|| ಎಸ್. ಸುಬ್ಬರಾಯರು ಪಾವುಗಡದ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ, ಕೋಲಾರು ಡಿಸ್ಟ್ರಿಕ್ಟ್ ಟ್ರೆಜರರ್ ಮ|| ಎಂ. ನಾರಾಯಣರಾಯರು ಕೊರಟಗೆರೆಯ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ.

ಮ|| ಎಸ್. ಸಿ. ಶೇಷಾದ್ರಿ ಅಯ್ಯಂಗಾರ್‍ರನ್ನು ಫೆಬ್ರವರಿ ತಾ. 7 ರಿಂದ ಶಿವಸಮುದ್ರದಲ್ಲಿ ಚೀಫ್ ಆಪರೇಟರಾಗಿ ಖಾಯಂ ಮಾಡಿದೆ.

ಮುಂಬಾಯಿ ಕನ್ನಡ ಗ್ರಂಥ ವಾಚನಾಲಯ ಸಂಘ.

ಈ ಸಂಘದ ಶ್ರೇಯಸ್ಸನ್ನು ಬಯಸಿ ಅದರ ಪುಸ್ತಕ ಭಂಡಾರಕ್ಕೆ ಧನ ಸಹಾಯ ಮಾಡಿದ ಈ ಕೆಳಗೆ ಹೆಸರು ತೋರಿಸಿರುವ ದಾತರ ಉದಾರತೆಗಾಗಿ ಸಂಘದ ಕಾರ್ಯನಿರ್ವಾಹಕ ಸಭೆಯವರು ತಮ್ಮ ಕೃತಜ್ಞತೆಯನ್ನು ಈ ಮೂಲಕ ಪ್ರಕಟಿಗೊಳಿಸುವದರೆ ಸಂತೋಷಪಡುತ್ತಾರೆ. ಮ|| ಕಣ್ಣಂಗಾರಬೆಂದು ಪುತ್ರನ್ನಾಯವರ ಮುಖಾಂತರ ರೂ. 25, ಮ|| ಮಟ್ಟು ನಾರಾಯಣನವರ ಮುಖಾಂತರ ರೂ. 23, ಮ|| ಬೋಳ ಅಟ್ಟಣ್ಣಶೆಟ್ಟರವರ ಮುಖಾಂತರ ರೂ. 21, ಮ|| ಬಿ. ವಾಮನರಾಯರ ಮುಖಾಂತರ ರೂ. 11, ಮ|| ಮುಲ್ಕಿ ಗುರುವ ಕುಂದರಣ್ಣಾಯವರ ಮುಖಾಂತರ ರೂ. 10, ಮ|| ಕೊಲ್ನಾಡುಗುತ್ತು ಸೀಲಯ್ಯ ಶೆಟ್ಟರವರ ಮುಖಾಂತರ ರೂ. 8, ಮ|| ಬೋಳೂರು ಕ್ಯಾಂಪನವರಿಂದ ರೂ. 6-5-6, ಮ|| ಮುಳ್ಕ ಉಗ್ಗಪ್ಪಶೆಟ್ಟರವರಿಂದ ರೂ. 5, ಮ|| ಮುಲ್ಕಿ ಸುಬ್ಬಣ್ಣನವರ ಮುಖಾಂತರ ರೂ. 5, ಮ|| ಮುಲ್ಕಿ ಕೊರಗಪ್ಪನವರಿಂದ ರೂ. 3, ಮ|| ಪೆರ್ಮುದೆ ಬಾಬುನವರಿಂದ ರೂ. 2, ಮ|| ಮುಳ್ಕ ದುಗ್ಗಣ್ಣನವರ ಮುಖಾಂತರ ರೂ. 2, ಕಾಶೀ ಕ್ಷೇತ್ರ ಯಾತ್ರಿಕರೊಬ್ಬರಿಂದ ರೂ. 1; ಜುಮ್ಲಾ ರೂ. 121-5-5 ಪೈ. ಇದೇ ರೀತಿಯಲ್ಲಿ ಕನ್ನಡ ಭಾಷಾಭಿವೃದ್ಧಿಗಾಗಿ ಸ್ಥಾಪಿಸಲ್ಪಟ್ಟು, ಇನ್ನೂ ಬಾಲ್ಯಾವಸ್ಥೆಯಲ್ಲಿ ಉಳ್ಳ ಈ ಸಂಘಕ್ಕೆ ಪ್ರೋತ್ಸಾಹದೋರಲಿಚ್ಛಿಸುವವರು ತಮ್ಮ ಯಥಾಶಕ್ತಿಯಿಂದ ಸಹಾಯ ಮಾಡಲಿಕ್ಕಿರುವ ದಾನಗಳನ್ನು ಈ ಕೆಳಗಿನ ವಿಳಾಸಕ್ಕೆ ರವಾನಿಸಿದಲ್ಲಿ ಅವು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವವು.

ಮುಂಬಾಯಿ, CHANDOO J. PUTRANNAIR,
ತಾ|| 1-3-1916. M. SUBBANNA,
Joint Hony: Secretaries,
The Bombay Canarese Literature Society,
Asraf Subhan Khan House, Pitha St., Fort, Bombay.

ಕೃತಕ ಪುಷ್ಪಗಳು.

ಮ|| ಹನುಮಂತಕೃಷ್ಣ ಉಕ್ಕಿಲಿಯವರು ಕೃತಕವಾದ ಹೂವುಗಳನ್ನು ರಚಿಸುವುದರಲ್ಲಿ ಪ್ರಸಿದ್ಧರಾಗಿರುವರು. ಇವರು ತಮ್ಮ ಕುಶಲವಿದ್ಯೆಯಿಂದ ನಮ್ಮ ಶ್ರೀಮತ್ಕೃಷ್ಣರಾಜ ಒಡೆಯರ್ ಬಹದೂರ್‌ರವರನ್ನೂ ಶ್ರೀಮದ್ಯುವರಾಜರವರನ್ನೂ ಸಂತೋಷಗೊಳಿಸುವುದರ ಮೂಲಕ ಅವರ ಕೃಪೆಗೆ ಪಾತ್ರರಾಗಿರುವರು. ಅಲ್ಲದೆ ಅನೇಕ ಪ್ರದರ್ಶನಗಳಲ್ಲಿ ಚಿನ್ನದ ಪದಕಗಳನ್ನೂ ಯೋಗ್ಯತಾ ಪತ್ರಿಕೆಗಳನ್ನೂ ಪಡೆದಿರುವರು. ಇವರನ್ನು ವಿದ್ಯಾವೇತ್ತೃಗಳಾದ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ಮೈಸೂರು ಶ್ರೀ ಮಹಾರಾಣಿಯವರ ಕಾಲೇಜಿನಲ್ಲಿ ಉಪಾಧ್ಯಾಯರನ್ನಾಗಿ ನಿಯಮಿಸಿದರು. ಕಳೆದ ತಿಂಗಳು ತಾ. 12 ರಲ್ಲಿ ಮೈಸೂರು ಜಗನ್ಮೋಹನ ಪ್ರಾಸಾದದಲ್ಲಿ ನಡೆದ ಪ್ರದರ್ಶನವು ಮ|| ಉಕ್ಕಿಲಿಯವರ ಕುಶಲವಿದ್ಯೆಯನ್ನು ನೋಡಿ ಎಲ್ಲರೂ ಸಂತೋಷಪಡುವುದಕ್ಕೆ ಅವಕಾಶವನ್ನುಂಟುಮಾಡಿತು. ಈ ಪುಷ್ಪ ನಿರ್ಮಾಪಕರು ತಮ್ಮ ಕೃತಕ ಪುಷ್ಪಗಳನ್ನು ಸಹಜವಾದ ಗಿಡಗಳಲ್ಲಿ ಸೇರಿಸಿದ್ದರು. ಪ್ರೇಕ್ಷಕರಿಗೆ ಸಹಜ ಪುಷ್ಪಗಳಿಗೂ ಕೃತಕ ಪುಷ್ಪಗಳಿಗೂ ಭೇದವೇ ತೋರುತ್ತಿರಲಿಲ್ಲ. ಸಹಜವಾದ ಸಂಪಗೆ, ಸೇವಂತಿಗೆ, ಮತ್ತು ಗುಲಾಬಿ ಗಿಡಗಳಲ್ಲಿದ್ದ ಕೃತಕ ಪುಷ್ಪಗಳು ಸಹಜವಾದ ಪುಷ್ಪಗಳಿಗಿಂತಲೂ ಮೇಲಾಗಿ ಕಂಗೊಳಿಸುತ್ತಿದ್ದುವು. ಈ ಪ್ರದರ್ಶನದಲ್ಲಿ ಅಪೂರ್ವವಾದ ಕುಶಲವಿದ್ಯೆಯನ್ನು ತೋರಿಸಿ ಆಶ್ಚರ್ಯ ಆನಂದಗಳನ್ನುಂಟುಮಾಡಿದ ಇವರಿಗೆ ಪ್ರಥಮ ವರ್ಗದ ಬಹುಮಾನವೂ, ಪ್ರಶಸ್ತಿ ಪತ್ರಿಕೆಯೂ ದೊರೆತುದು ಸಕಲರಿಗೂ ಸಂತೋಷಕರವಾಗಿರುವುದು. ಇವರ ಕುಶಲ ವಿದ್ಯೆಯು ಗುಣಜ್ಞರ ಪ್ರೋತ್ಸಾಹದಿಂದ ಇನ್ನೂ ಸರ್ವತೋಮುಖವಾಗಿ ಪ್ರಕಾಶಿಸಿ ಜನಗಳಿಗೆ ಆನಂದದಾಯಕವಾಗಲೆಂದು ಹಾರೈಸುತ್ತೇವೆ.

ಪ್ರೇಕ್ಷಕ.

[ಮುಲ್ಕಿಯಂಡ ಪ್ರದರ್ಶನದಲ್ಲಿ ಅವರು ಮಾಡಿಟ್ಟಿದ್ದ ಕೃತಕ ಪುಷ್ಪಗಳನ್ನು ನೋಡಿದಾಗ ಇವಕ್ಕೂ ಸ್ವಾಭಾವಿಕ ಪುಷ್ಪಗಳಿಗೂ ಸ್ವಲ್ಪವೂ ವ್ಯತ್ಯಾಸ ಕಂಡು ಬರಲಿಲ್ಲ. ಹಲವು ನೋಟಕರು ಕಿವಿಮಾಡಿ ಬೆಳಸಿದ ಪುಷ್ಪಗಳೆಂದು ಭ್ರಾಂತಿಪಟ್ಟು ಹೇಳುತ್ತಿದ್ದರು. ಮ|| ಉಕ್ಕಿಲಿಯವರಾದರೋ ಅಂಥವರ ಭ್ರಾಂತಿಯನ್ನು ಹೋಗಲಾಡಿಸಿ, ಇವೆಲ್ಲಾ ಕೃತಕಗಳೆಂದು ತಿಳಿಸುತ್ತಿದ್ದರು. —ಎಡಿ.]

ರೇಷ್ಮೆ ವ್ಯವಸಾಯ.

ಮೈಸೂರು ಸಂಸ್ಥಾನ ರೇಷ್ಮೆ ವ್ಯವಸಾಯದ ನಿಪುಣರ ಅ|| ರಾದ ಮ|| ಎಂ. ಪಿ. ಗೋಪಾಲ ಕೃಷ್ಣಯ್ಯನವರು ಈ ಕೈಗಾರಿಕೆಯನ್ನು ಕುರಿತು ಕನ್ನಡದಲ್ಲಿ ಒಂದು ಹಸ್ತಪತ್ರವನ್ನು ಪ್ರಕಟಿಸಿದಾರೆ. ಈ ಕಸಬು ಮಾಡುವ ರೈತರು ಅದನ್ನು ತರಿಸಿಕೊಂಡು ಅದರಲ್ಲಿ ಅವರು ಹೇಳಿರುವಂತೆ ರೇಷ್ಮೆಯನ್ನು ಬೆಳೆದರೆ ವಿಶೇಷ ಲಾಭ ಪಡೆಯುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಈ ಹಸ್ತಪತ್ರದ ಕಡೇ ಭಾಗದಲ್ಲಿ ಅವರು ಬರೆಯುವುದೇನೆಂದರೆ—

ರೇಷ್ಮೆ ಹುಳುಗಳಿಗೆ ಬರುವ ರೋಗಗಳೆಲ್ಲಾ ಸ್ವಲ್ಪ ಹೆಚ್ಚು ಕಡಮೆ ಸಾಂಕ್ರಾಮಿಕ ಜಾಡ್ಯಗಳಾದದ್ದರಿಂದ ಬಾಧಿಸಿದ ಹುಳುಗಳನ್ನೆಲ್ಲಾ ದೂರ ಸಾಗಿಸಿ ಭೂಮಿಯಲ್ಲಿ ಹೂಳತಕ್ಕದ್ದು. ಹುಳು ಸಾಕುವದಕ್ಕೆ ಒಳ್ಳೇ ಮೊಟ್ಟೆಗಳನ್ನು ಉಪಯೋಗಿಸಬೇಕು. ಪ್ರತಿಯೊಂದು ಬೆಳೆಯಾದನಂತರವೂ ಮನೆಯನ್ನೂ ಸಾಮಾನುಗಳನ್ನೂ ಶುದ್ಧಿ ಮಾಡುತ್ತಾ ಬಂದಲ್ಲಿ ಈ ಬಾಧೆಗಳನ್ನೆಲ್ಲಾ ಉಪಾಯಾಂತರದಿಂದಲೇ ದೂರಮಾಡಬಹುದು. ಪ್ರಪಂಚದಲ್ಲಿ ಎಲ್ಲಾ ದೇಶಗಳಲ್ಲಿಯೂ ಆಗತಕ್ಕ ರೇಷ್ಮೆಯ ವಿವರ —

ದೇಶ.	ಪೌಂಡುಗಳು.	ದೇಶ.	ಪೌಂಡುಗಳು
ಇಟಲಿ	7,86,660	ಒಂದೂ ಚೈನಾ	22,50,000
ಫ್ರಾನ್ಸ್	13,49,400	ಇಂಡಿಯಾ	14,68,800
ಆಸ್ಟ್ರಿಯಾ	6,69,100	ಮಧ್ಯ ಏಷ್ಯಾ	8,25,000
ಯೂರೋಪಿನ ಟರ್ಕಿ	3,78,000	ಏಷ್ಯಾದಲ್ಲಿರುವ ರಷ್ಯಾ	7,80,000
ಸ್ಪೈನ್	1,47,600	ಏಷ್ಯಾದ ಟರ್ಕಿ	16,30,600
ಗ್ರೀಸ್	79,800	ಪರ್ಷಿಯಾ	5,80,500
ಪೋರ್ಚುಗಲ್	37,500	ಕೋರಿಯಾ	30 000
ಸ್ವಿಟ್ಜರ್‌ಲೆಂಡ್	67,200	ಆಫ್ರಿಕಾದೇಶ	15,000
ರೊಮೇನಿಯಾ ಮತ್ತು		ಅಮೇರಿಕಾ	5,400
ಬಲ್ಗೇರಿಯಾ	91,800	ಕಾಡುತ್ಪನ್ನ ರೇಷ್ಮೆ.	
ಯೂರೋಪಿನ ರಷ್ಯ	18,00	ಚೀನಾದೇಶ	3,47,000
ಚೀನಾದೇಶ	2,10,00,000	ಇಂಡಿಯಾ	17,55,000
ಜಪಾನ್	1,71,12,000	ಜಪಾನ್	27,000

ಅಂತು ಪ್ರಪಂಚದಲ್ಲಿ ಒಟ್ಟು 6 ಕೋಟಿ ಪೌಂಡು ರೇಷ್ಮೆ ತಯಾರಾಗುತ್ತದೆ. ಯೂರೋಪ್ ದೇಶದಲ್ಲಿ ಖರ್ಚಾಗತಕ್ಕದ್ದು 4 ಕೋಟಿ ಪೌಂಡ್ ರೇಷ್ಮೆ. ಬಾಕಿ ಇತರ ದೇಶಗಳಲ್ಲಿ ಖರ್ಚಾಗುತ್ತದೆ. ಈ ಪಟ್ಟಿಯಿಂದ ಇತರ ದೇಶಗಳಲ್ಲಿ ರೇಷ್ಮೆ ವ್ಯವಸಾಯವು ಎಷ್ಟು ಅಭಿವೃದ್ಧಿಯಲ್ಲಿ ಇದೆ ಎಂಬ ಸಂಗತಿ ಸೂಚನೆಯಾಗುತ್ತದೆ. ಆದದ್ದರಿಂದ ನಾವುಗಳು ಎಷ್ಟು ಆಸಕ್ತಿ ತೆಗೆದುಕೊಂಡು ಇದನ್ನು ಅಭಿವೃದ್ಧಿಸ್ಥಿತಿಗೆ ತಂದರೆ ಅಷ್ಟು ಮಟ್ಟಿಗೆ ಆದಾಯ ಪಡೆಯಬಹುದು. ಅಲ್ಲದೆ ಅನೇಕ ಬಡಜನಗಳಿಗೆ ಜೀವನೋಪಾಯವನ್ನು ಕಲ್ಪಿಸಿಕೊಟ್ಟಹಾಗಾಗುತ್ತೆ. ಮುಖ್ಯವಾಗಿ ಪರಸ್ಪರ ಸಹಾಯ ಸಂಘಗಳ ಕಾನೂನುಗಳನ್ನು ಅನುಸರಿಸಿ ನಡೆದುಕೊಂಡ ಪಕ್ಷದಲ್ಲಿ ಒಳ್ಳೇ ಮೊಟ್ಟೆಗಳನ್ನು ಪ್ರಚುರಪಡಿಸುವದಕ್ಕೂ, ನೂಲು ತೆಗೆಯುವ ದೊಡ್ಡ ಕಾರ್ಖಾನೆಗಳನ್ನಿಡುವದಕ್ಕೂ ಮತ್ತು ಇತರ ವಿಧವಾದ ಯಾವ ಪರಸ್ಪರ ಸಹಾಯಗಳನ್ನೇ ಹೊಂದಬೇಕಾದಾಗ್ಯೂ ಸರ್ವ ಸೌಲಭ್ಯಗಳುಂಟಾಗುವವು.

ಮೈಸೂರು ಸರ್ಕಾರದ ವ್ಯವಸಾಯ ಇಲಾಖೆ.

ಜೋಳದ ಕಾಡಿಗೆರೋಗಕ್ಕೆ ಚಿಕಿತ್ಸೆ—ರೈತರ ಅನುಭವ.

ವ್ಯವಸಾಯದ ಇಲಾಖಾ ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರವರಿಗೆ ಹರಿಹರದ ಸಬ್ ತಾಲ್ಲೂಕು ದೇವರಬೆಳಕೆರೆಯಲ್ಲಿರುವ ಪಟೇಲ್ ನಾರಾಯಣಶಾಸ್ತ್ರಿಗಳ ಮಗ ರಾಮಶಾಸ್ತ್ರಿಯು ಬರೆದುಕೊಂಡ ರಿಪೋರ್ಟು:—ಕಳೆದ ಮಾಹೆಯಲ್ಲಿ ಜೋಳ, ನವಣೆ ಧಾನ್ಯಗಳಿಗೆ ತಗಲುವ ಕಾಡಿಗೆರೋಗದ ಚಿಕಿತ್ಸೆಗಾಗಿ ತಮ್ಮಲ್ಲಿ 24 ಪೊಟ್ಟಣಗಳನ್ನು ತೆಗೆದುಕೊಂಡು ಹೋದದ್ದು ಸರಿಯಷ್ಟೆ. ಸದರಿ ಪೊಟ್ಟಣಗಳ ಪೈಕಿ ನಮ್ಮ ಗ್ರಾಮದ ರೈತರುಗಳಿಗೆ 19 ಪೊಟ್ಟಣಗಳನ್ನು ವಿಲೆ ಮಾಡಿ ಬಾಕಿ 5 ಪೊಟ್ಟಣಗಳನ್ನು ನನ್ನ ಸ್ವಂತ ಉಪಯೋಗದ ಬಗ್ಗೆ ತೆಗೆದುಕೊಂಡು ಉಪಯೋಗಿಸಿದ್ದು 20 ಎಕರೆ ಪ್ರದೇಶಕ್ಕೆ ಜೋಳದ ಫಸಲನ್ನು ಪೇರಾವು ಮಾಡಿರುತ್ತೇನೆ. ರೈತರುಗಳು ತೆಗೆದುಕೊಂಡು ಉಪಯೋಗಿಸಿರುವದು ಸುಮಾರು 60 ಎಕರೆ ಪ್ರದೇಶಕ್ಕೆ ಜೋಳ ಪೇರಾವು ಮಾಡಿರುತ್ತಾರೆ. ಈ ಚಿಕಿತ್ಸೆ ಮಾಡಿ ಪೇರಾವು ಮಾಡಿದ ಜೋಳದಲ್ಲಿ ಮಾಹೆರಿ ನೋಡಬೇಕೆಂದು ಅಪೇಕ್ಷಿಸಿದರೂ ಒಂದಾದರೂ ಕಾಡಿಗೆ ತೆನೆ ಅಪೇಕ್ಷಿಸುವ ಹಾಗಿಲ್ಲ. ಚಿಕಿತ್ಸೆ ಮಾಡದೆ ಇತರರ ಫಸಲಿನಲ್ಲಿ ಬಹು ಮಟ್ಟಿಗೆ ಕಾಡಿಗೆರೋಗ ತಗಲಿರುತ್ತೆ. ಸಾಧಾರಣವಾಗಿ ಇದರಿಂದ ಕೇಕಡ 20 ಕ್ಕೆ ಕಡಮೆಯಿಲ್ಲದೆ ಲುಕ್ಸಾನು ಆಗುವದರಲ್ಲಿ ಸಂದೇಹವಿಲ್ಲ; ಅಂದರೆ, ಒಂದು ಖಂಡುಗ ಜೋಳ ಬೆಳೆದವನು ಅಥವಾ ಪಲ್ಲ 4 ಕೊಳಗ ಕಾಡಿಗನ ಜೋಳ ಒಕ್ಕುತ್ತಾನೆ. ಇದೇ ಕಾಡಿಗನ ತೆನೆಗಳಲ್ಲಿ ಕಾಡಿಗೆ ಇಲ್ಲದೆ ಇರುವ ಸಂದರ್ಭಗಳಲ್ಲಿ 12 ಕೊಳಗ ಒಕ್ಕಬಹುದು. ಒಟ್ಟಿನಲ್ಲಿ ಒಂದು ಖಂಡುಗದ ಹನ್ನೆರಡು ಕೊಳಗಕ್ಕೆ ಬದಲಾಗಿ ಒಂದು ಖಂಡುಗದ ನಾಲ್ಕು ಕೊಳಗ ಜೋಳ ಉತ್ಪತ್ತಿ ತೋರಿಸಿದಂತೆ ಆಗುತ್ತೆ. ಈ ನಷ್ಟವು ಪಕ್ಕಾ ಕಾಡಿಗೆ ರೋಗದಿಂದಲೇ ಆದದ್ದು. 8 ಕೊಳಗಕ್ಕೆ ಈಗಿನ ಧಾರಣೆಯಲ್ಲಿ 32 ರೂಪಾಯಿ ಆಗುತ್ತವೆ. ಇಷ್ಟು ಒಕ್ಕುವ ಹೊಲಕ್ಕೆ ಬಿತ್ತತಕ್ಕ ಬೀಜ 8 ಸೇರಿಗಿಂತ ಜಾಸ್ತಿ ಆಗುವದಿಲ್ಲ. ಇದನ್ನು ತೊಳೆಯುವದಕ್ಕೆ ಸರ್ಕಾರದವರು ಮಾಡಿಸಿದತಕ್ಕ ಒಂದು ಪೊಟ್ಟಣ ಉಪಯೋಗಿಸಿದರೆ ಸಾಕಾಗಿರುತ್ತೆ. ಈ ಕಾರಣಗಳಿಂದ ಮೈಸೂರು ವ್ಯವಸಾಯದ ಇಲಾಖೆಯವರು ಕಂಡುಹಿಡಿದಿರತಕ್ಕ ಚಿಕಿತ್ಸೆಯನ್ನು ಎಲ್ಲರೂ ಯಾವ ಅನುಮಾನವೂ ಇಲ್ಲದೆ ಮಾಡುತ್ತಾ ಬಂದಲ್ಲಿ ಈ ಕಾಡಿಗೆರೋಗದ ಹಾವಳಿಯನ್ನೇ ಸಂಪೂರ್ಣವಾಗಿ ಕೆಲವು ವರ್ಷಗಳಲ್ಲಿ ಮೂಲೋಚ್ಛಾಟನ ಮಾಡುವದರಲ್ಲಿ ಯಾವ ಸಂದೇಹವೂ ಇಲ್ಲವೆಂತ ನಾನು ಅಭಿಪ್ರಾಯಪಡುತ್ತೇನೆ.

ತಾ. 12-11-1915. ಎಚ್. ರಾಮಶಾಸ್ತ್ರೀ.

ವ್ಯವಸಾಯದ ಇಲಾಖೆ ಇನ್‌ಸ್ಪೆಕ್ಟರವರ ಜವಾಬಿಗೆ ಮಾಯಕೊಂಡದ ಪಟೇಲನು ಬರೆದುಕೊಂಡ ರಿಪೋರ್ಟು—ತಮ್ಮಿಂದ ಹೋದ ಸಾಲಿನಲ್ಲಿ 15 ಪೊಟ್ಟಣ ಕಾಡಿಗೆರೋಗದ ಔಷಧ ತೆಗೆದುಕೊಂಡಿರುವದು ಸರಿಯಷ್ಟೆ. ಆ ಪೈಕಿ ನನ್ನ ಸ್ವಂತ ಉಪಯೋಗಕ್ಕೋಸ್ಕರ ಒಂದು ಪೊಟ್ಟಣವನ್ನು 16 ಸೇರು ಕಾಳಿಗೆ ಉಪಯೋಗಿಸಿ 2 ಕೂರಿಗೆ ಜಮೀನಿಗೆ ಬಿತ್ತಿರುತ್ತೇನೆ. ಬಾಕಿ ಪೊಟ್ಟಣಗಳನ್ನು ನಮ್ಮ ಗ್ರಾಮಸ್ಥರಾದ ದಿವರುದ್ರಪ್ಪ, ಅಕ್ಕಪ್ಪ ನೋಟದ ಕೆಂಚಪ್ಪ, ಗ್ರಾಮ ಸಣ್ಣಕೊಟ್ರಪ್ಪ, ಮುದಿಮಲ್ಲಪ್ಪ, ದಾಸಪ್ಪ, ಇವರುಗಳು ಸುಮಾರು 18 ಕೂರಿಗೆ ಅಂದರೆ 73 ಎಕರೆ ಪ್ರದೇಶಕ್ಕೆ ಉಪಯೋಗಿಸಲ್ಪಟ್ಟರು. ಈ ಔಷಧಿ ಹಾಕಿದ ಜಮೀನು ಪೈಕಿ ಕೇಕಡ 6 ರಂತೆ ಕಾಡಿಗೆ ಬಿದ್ದಿರುತ್ತೆ. ಇದು ಹೋಗಲಾಗಿ ಬಾಕಿ ಪ್ರದೇಶವು ಬಹಳ ಚೆನ್ನಾಗಿರುತ್ತೆ. ನಮ್ಮ ಗ್ರಾಮದಲ್ಲಿರುವ ಇತರೆ ಜನಗಳ ಜಮೀನು ನೋಡಿದರೆ ವಿಪರೀತ ಕಾಡಿಗೆ ಬಿದ್ದಿರುತ್ತೆ; ಅಂದರೆ, ಕೇಕಡ 20 ಕ್ಕೆ ಕಡಮೆ ಇಲ್ಲದೆ ಕಾಡಿಗೆ ಬಿದ್ದಿರುತ್ತೆ. ಈ ಲೆಕ್ಕಾಚಾರದಂತೆ ಎಕರೆಗೆ 30 ಸೇರು ಕಾಡಿಗೆ ಇಲ್ಲದ ಜಮೀನಿಗೆ ಜಾಸ್ತಿ ಉತ್ಪತ್ತಿಯಾಗಿರುತ್ತೆ. ಇದರಿಂದ ನನ್ನ ಅನುಭವಕ್ಕೆ ಔಷಧ ಉಪಯೋಗಿಸುವದು ಒಳ್ಳೇದಾಗಿ ಕಾಣುತ್ತೆ. ಆದ್ದರಿಂದ ಬಾಕಿಯವರೆಲ್ಲರೂ ಧಾರಾಳವಾಗಿ ಅನುಮಾನವಿಲ್ಲದೆ ಉಪಯೋಗಿಸಬಹುದು.

ಪಟೇಲ್ ಕೆಂಚಪ್ಪ.

ಒಬ್ಬ ಸೆಷನ್ಸ್ ಜಡ್ಜಿಯ ಕೊಲೆ.

ತಿರುಚನಾಪಲ್ಲಿಯ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿದ್ದ ಮಿ| ಎಚ್. ಓ. ಡಿ. ಹಾರ್ಡಿಂಗ್, ಐ.ಸಿ.ಎಸ್ ರವರನ್ನು ಸೈಯದ್ ಇಸ್ಮೈಲ್ ಎಂಬೊಬ್ಬ ಮಹಮ್ಮದೀಯನು ಕಳೆದ ವಾರ ಕೊಂದುಹಾಕಿದನು. ಈ ಕೊಲೆಯ ಕಥೆ ಪ್ರಕಟವಾಗಿರುವದು ಹ್ಯಾಗೆಂದರೆ—ಸೈಯದ್ ಇಸ್ಮೈಲ್ ಎಂಬ ಆ ಕೊಲೆಪಾತಕಿಯು ಸುಮಾರು ಆರು ತಿಂಗಳ ಹಿಂದೆ ತಿರುಪತ್ತೂರಿನಿಂದ ತಿರುಚನಾಪಲ್ಲಿಗೆ ಬಂದನು. ಅವನ ಹೆಂಡತಿಯನ್ನು ಇನ್ನೊಬ್ಬ ಮಹಮ್ಮದೀಯನು ಎತ್ತಿ ಹಾಕಿಕೊಂಡು ಬಂದನು. ತನ್ನ ಹೆಂಡತಿಯನ್ನು ತನ್ನ ವಶಕ್ಕೆ ಕೊಡಿಸಿಕೊಡಿ ಎಂದು ಪೋಲೀಸಿನವರಿಗೆ ಮೊರೆಯಿಟ್ಟುಕೊಂಡದು ಸಾರ್ಥಕವಾಗಲಿಲ್ಲ. ಪೋಲೀಸ್ ಇನ್‌ಸ್ಪೆಕ್ಟರು ತನಗೆ ಅಡ್ಡಿ ಮಾಡುತ್ತಿದಾರೆಂದು ಯೋಚಿಸಿ ಇಸ್ಮೈಲನು ಅವರನ್ನು ಕೊಂದುಬಿಡಬೇಕೆಂದು ಇನ್‌ಸ್ಪೆಕ್ಟರ ಮನೆಗೆ ನುಗ್ಗಿದನು. ಆದರೆ ಆಗ ಇನ್‌ಸ್ಪೆಕ್ಟರು ಮನೆಯಲ್ಲಿರಲಿಲ್ಲ. ಆತನ ಪ್ರಾಣ ಉಳಿಯಿತು.

ಬಳಿಕ ತಾ. 2. ನೇ ಸೋಮವಾರ ಇಸ್ಮೈಲನು ನೆಟ್ಟಗೆ ಸೆಷನ್ಸ್ ಕೋರ್ಟಿಗೆ ಹೋಗಿ ಜಡ್ಜರಾದ ಮಿ|| ಹಾರ್ಡಿಂಗ್ ರವರಿಗೆ ಅರ್ಜಿ ಕೊಟ್ಟು ತನ್ನ ಹೆಂಡತಿಯನ್ನು ಬಿಡಿಸಿಕೊಡಬೇಕೆಂದು ಕೇಳಿಕೊಂಡನು. ಅವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಹೇಳಿಕೊಂಡರೆ ಅನುಕೂಲವೆಂದು ಅವನಿಗೆ ಸಮಾಧಾನ ಹೇಳಿದರು. ಅವನಿಗೆ ಆ ಮಾತು ಸಮಾಧಾನವಾಗಲಿಲ್ಲ. ಕೋರ್ಟಿನಲ್ಲೇ ನಿಂತು ಗಲಭೆ ಮಾಡುತ್ತಾ ಬಂದನು. ಆಗ ಸೆಷನ್ಸ್ ಜಡ್ಜರು ಕೋರ್ಟಿನ ಜವಾನರ ಮೂಲಕ ಅವನನ್ನು ಹೊರಗಡೆಗೆ ಕಳುಹಿಸಿದರು. ಅಲ್ಲಿ ಅವನು ಸ್ವಲ್ಪ ಹೊತ್ತು ಗುಜುಗುಟ್ಟುತ್ತಿದ್ದು ಪ್ರಾಣ ಕಳಕೊಳ್ಳುವೆನೆಂದು ಅಲ್ಲಿಂದ ಕೆಳಕ್ಕೆ ಬಿದ್ದನು. ಆದರೆ ಅವನಿಗೆ ಅಪಾಯವೇನೂ ಸಂಭವಿಸಲಿಲ್ಲ. ಅಲ್ಲಿಂದ ಅವನು ಹೊರಟುಹೋದನು. ಅವನ ಮನಸ್ಸಿನಲ್ಲಿ ಎಲ್ಲರೂ ಸೇರಿ ತನಗೆ ವಿರೋಧವಾಗಿ ತನ್ನ ಹೆಂಡತಿಯನ್ನು ತನಗೆ ಕೊಡಿಸದಂತೆ ಮಸಲತ್ತು ಮಾಡಿಕೊಂಡಿದಾರೆಂಬ ಭಾವನೆಯುಂಟಾಯಿತು. ಅದೇ ಸಾಯಂಕಾಲ ಮಸೀದಿಗೆ ಹೋದನು. ಅಲ್ಲಿ ಮುಸಲ್ಮಾನರು ಸೇರಿ ಪ್ರಾರ್ಥನೆ ಮಾಡುತ್ತಿದ್ದಾಗ ಗಲಭೆಯನ್ನುಂಟುಮಾಡಿ, ಪಂಚಾಯತಿಯಲ್ಲಿ ತನ್ನ ಹೆಂಡತಿಯನ್ನು ತನಗೆ ಬಿಡಮಾಡಿಕೊಡಬೇಕೆಂದು ಕೇಳಿದನು. ಆ ಮಹಮ್ಮದೀಯರೂ ಇವನ ವಿಷಯದಲ್ಲಿ ಏನೂ ಮಾಡಲಾರದೆ ಹೋದರು. ಇದರ ಮೇಲೆ ಅವನಿಗೆ ಪ್ರಪಂಚವೇ ನಿರಾಶೆಯಾಯಿತು; ರೋಷವೂ ಹೆಚ್ಚಿತು. ರಾತ್ರಿಯೆಲ್ಲಾ ಅವನು ಕಳವಳಪಟ್ಟಿರುವಂತೆ ಕಾಣುತ್ತದೆ. ಮಾರು ದಿನ ಬೆಳಿಗ್ಗೆ ಅವನು ಮತ್ತೆ ಸೆಷನ್ಸ್ ಕೋರ್ಟಿನ ಬಾಗಿಲ ಹತ್ತಿರ ಹೋಗಿ ಕಾದಿದ್ದನು.

ಸೆಷನ್ಸ್ ಜಡ್ಜ್ ಮಿ|| ಹಾರ್ಡಿಂಗ್ ರವರು ತಮ್ಮ ಬಂಗಲೆಯಿಂದ ಭೋಜನ ತೀರಿಸಿಕೊಂಡು ಸಾರೋಟಿನಲ್ಲಿ ಕುಳಿತು ಕೋರ್ಟಿನ ಬಾಗಿಲ ಬಳಿ ಇಳಿದು ಕೋರ್ಟಿನೊಳಗೆ ಹೋಗುವುದಕ್ಕಿಂತ ಮುಂಚೆ ಪದ್ಧತಿಯ ಪ್ರಕಾರ ಕುದುರೆಯನ್ನು ತಟ್ಟುತ್ತಿರುವಾಗ ಅಲ್ಲಿ ಕಾದಿದ್ದ ಸೈಯದ್ ಇಸ್ಮೈಲನು ಅವರ ಮೇಲೆ ಬಿದ್ದು ಬಚ್ಚಿಟ್ಟುಕೊಂಡಿದ್ದ ದೊಡ್ಡ ಚಾಕುವಿನಿಂದ ಜಡ್ಜಿಯವರ ಬೆನ್ನಿನ ಕಡೆಯಿಂದ ಬಲವಾಗಿ ತಿವಿದನು. ಅಷ್ಟರಲ್ಲೇ ಕೋರ್ಟಿನ ದಲಾಯತನು ಬಿಡಿಸಿಕೊಳ್ಳಬೇಕೆಂದು ನುಗ್ಗಿ ಬಂದನು. ಕೊಲೆಗಾರನು ಅವನನ್ನೂ ತಿವಿದು ಗಾಯ ಮಾಡಿದನು. ಸೆಷನ್ಸ್ ಜಡ್ಜರವರು ಮುಂದಕ್ಕೆ ಹೆಜ್ಜೆ ಇಡಲಾರದೆ ಅಲ್ಲೇ ಬಿದ್ದುಕೊಂಡರು. ಕೂಡಲೇ ಡಾಕ್ಟರುಗಳೂ ಅಧಿಕಾರಿಗಳೂ ಅಲ್ಲೇ ಸೇರಿ ಜಡ್ಜಿಯವರಿಗೆ ಶೈತ್ಯೋಪಚಾರ ಚಿಕಿತ್ಸಾದಿಗಳನ್ನು ಎಷ್ಟೋ ಮಾಡಿದರೂ ಪ್ರಯೋಜನವಾಗಲಿಲ್ಲ. ಸುಮಾರು ಅರ್ಧ ಗಂಟೆಯೊಳಗೆ ಪ್ರಾಣಹೋಯಿತು. ಜನಗಳು ಸುತ್ತಿಕೊಂಡದ್ದನ್ನು ನೋಡಿ ಗಾಯಪಟ್ಟು ಬಿದ್ದಿಯವರು - ಅವನನ್ನು ಹಿಂಡಿ

ಮಾಡಬೇಡಿ" ಎಂದು ಹೇಳಿದರಂತೆ. ಅವರು ದೊಡ್ಡ ಸಂಸಾರಿ. ಹಿರೀ ಮಗ ಮೊನ್ನೆ ತಾನೇ ಯುದ್ಧಭೂಮಿಯಲ್ಲಿ ಮಡಿದುಹೋದನು. ಹೆಂಡತಿ, ಹೆಣ್ಣು ಗಂಡು ಮಕ್ಕಳು ಬಹು ಮಂದಿ ಇದಾರೆ. ಅವರು ಹಿಂದುಸ್ಥಾನದಲ್ಲೇ ಸುಮಾರು ಮೂವತ್ತು ವರುಷಗಳಿಂದ ಉದ್ಯೋಗಸ್ಥರಾಗಿದ್ದು ದೇಶೀಯ ಪ್ರಜೆಗಳ ವಿಷಯದಲ್ಲಿ ತುಂಬಾ ಪ್ರೀತಿ ವಿಶ್ವಾಸಗಳನ್ನು ಪಡೆದಿದ್ದರು. ಪೆನ್ಶನ್ ಆಗುವ ಕಾಲದಲ್ಲಿ ಇಂಥಾ ಅಕಾಲ ಮರಣವು ಅವರಿಗೆ ಪ್ರಾಪ್ತವಾಯಿತೆಂದು ದಕ್ಷಿಣ ದೇಶದವರೆಲ್ಲಾ ಮರುಗುತ್ತಾರೆ.

ಕೊಲೆಪಾತಕಿಯಾದ ಇಸ್ಮೈಲನನ್ನು ಕೂಡಲೇ ಒಬ್ಬ ಸರ್ಜನ್ ಜವಾನನು ಹಿಡಿದು ಜೈಲಿಗೆ ಕಳುಹಿಸಿದರು. ಅಲ್ಲಿ ಅವನು ಹ್ಯಾಗೋ ತನ್ನ ಸಂಕೋಲೆಗಳನ್ನು ಕಳಚಿಕೊಂಡು ಹೊರಗೆ ಬಂದು ಕಾವಲಿನವನ ಬಳಿ ಇದ್ದ ಆಯುಧವನ್ನು ಕಿತ್ತುಕೊಂಡು ಅವನನ್ನು ಗಾಯಮಾಡಿ ಕೆಡವಿದನು. ಅಷ್ಟರಲ್ಲೇ ಇತರರು ಸೇರಿ ಗುಂಡುಹೊಡೆದು ಅವನ ಕಾಲು ಗಾಯಮಾಡಿ ಅವನನ್ನು ಹಿಡಿದು ಅಲ್ಲಿಂದ ಸೆಂಟ್ರಲ್ ಜೈಲಿಗೆ ಕಳುಹಿಸಿರುತ್ತಾರೆ. ಗಾಯಪಟ್ಟ ಕೋರ್ಟ್ ದಲಾಯತನೂ, ಜೈಲ್ ವಾರ್ಡರೂ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದಾರೆ. ಇವರಿಗೆ ಪ್ರಾಣಭಯವೇನೂ ಇಲ್ಲ.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಅದೇ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕೊಡೆವು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

—ಎಡಿ.]

ಕರೆಸ್ಪಾಂಡೆನ್ಸ್.

ಕುಂಕೂರು ಕೈಗಾರಿಕೆ ಕೆಲಸಗಳು.

ಅಯ್ಯಾ,—ಕೆಲವು ಕಾಲದಿಂದ ಸ್ಲೇಟುಬಳಪ ಇಲ್ಲಿ ತಯಾರು ಆಗುತ್ತಿದೆ. ಅನ್ಯ ಸ್ಥಳಗಳವರು ಗುತ್ತಿಗೆ ಮುಂತಾದ ಕರಾರುಗಳ ಮೂಲಕ ವ್ಯಾಪಾರ ಮಾಡಲು ಶುರು ಮಾಡಿರುತ್ತಾರೆ. ಇದರಿಂದ ಅನೇಕ ಬಡವರ ಜೀವನೋಪಾಯವಾಯಿತು. ಇಷ್ಟರಲ್ಲಿಯೇ ಗೋಲಿ, ಸ್ಲೇಟುಗಳಿಗೆ ಮುಂತಾದವುಗಳು ಸಹ ತಯಾರಾಗಬಹುದೆಂದು ಕಾಣುತ್ತೆ. ಪುರನಿವಾಸಿಗಳೂ ಸರ್ಕಾರದವರೂ ಇಂಥಾ ಕೈಗಾರಿಕೆ ಕೆಲಸಗಳಿಗೆ ಪ್ರೋತ್ಸಾಹಪಡಿಸಲು ಪ್ರಯಾಸಪಡುವವರಾದರೆ ಉತ್ತರೋತ್ತರ ಕುಂಕೂರು ಸ್ಥಳವು ಕೈಗಾರಿಕೆ ಕೆಲಸಗಳಲ್ಲಿ ದೊಡ್ಡ ಪಟ್ಟಣವಾಗುವದೆಂದು ಹೇಳಲು ಸಂತೋಷಪಡತಕ್ಕದ್ದಾಗಿದೆ.

ಜ. ಹಾ.

ವೈದ್ಯ ಇಲಾಖೆಯವರು.

ಅಯ್ಯಾ,—ಇಲಾಖೆ ಸ್ಥಾಪಿತವಾದ ಲಾಗಾಯತು ಪ್ರಜೆಗಳೂ, ಅಧಿಕಾರಿಗಳೂ ಸ್ತ್ರೀಯರಿಗೆ ಉಂಟಾಗುತ್ತಿರುವ ಮಹತ್ತಾದ ಉಪಕಾರವನ್ನು ಗಮನಿಸುತ್ತಾ ಬಂದಿರುತ್ತಾರೆಯೋ ಹೊರತು ಘನವಾದ ಈ ಉದ್ಯೋಗದಲ್ಲಿ ಸೇರಿಕೊಳ್ಳುತ್ತಿರುವ ನೌಕರವರ್ಗವು ಎಂಥವರು, ಬಡಹೀನ ಸ್ತ್ರೀಯರಿಗೆ ಕೊಡುತ್ತೀರೇ ಎಂಬ ವಿಷಯಗಳಲ್ಲಿ ಅಷ್ಟು ಸಾವಧಾನರಾಗಿಲ್ಲವೆಂದು ಸಂದೇಹಪಡಲು ಅವಕಾಶವಾಗಿದೆ. ದೊರೆಗಳೂ ಪ್ರಭುಗಳೂ ಪ್ರಜೆಗಳೂ ದೇಶಸ್ಥರನ್ನು ಸತ್ಯ ಧರ್ಮಗಳನ್ನು ವೃದ್ಧಿಪಡಿಸಿ ದೇಶದ ಕೀರ್ತಿಯನ್ನು ಪ್ರಜಾ ನೆಮ್ಮದಿಯನ್ನು ಹೆಚ್ಚಿಸಲು ಪಡಾ ಪ್ರಯಾಸಪಡುತ್ತಿರುವದು ಸ್ತ್ರೀಯರಾಗದಲ್ಲಿ ಬಿಡಿಬಿಟ್ಟು ವಿಷ ಬಿಟ್ಟಂತೆ ಪ್ರಜಾ ಧರ್ಮ, ಮತ ಧರ್ಮ, ರಾಜ ಧರ್ಮಗಳ ಒಳಗಾಗದ ಕೆಲವು ಸ್ತ್ರೀಯರು ಮಾತ್ರ ಈ ಸೂಲಗಿತ್ತಿ ಇಲಾಖೆಗೆ ಸೇರುತ್ತಾರೆಂದು ಹೇಳಲು ವಿಷಾದಿಸಬೇಕಾಗಿರುತ್ತೆ. ಅಮ್ಮನವರೊಡನೆ ವಿಷವು ಸೇರುತ್ತಾ ಬಂದರೆ ಅಮ್ಮನವರು ಶುದ್ಧರಾಗುವದು ಪ್ರಯಾಸ. ಸರ್ಕಾರದವರು ಅಧಿಕಾರಿದ್ದು ಮಾಡುವದರಿಂದ ಈ ಇಲಾಖೆ [illegible] ದವರಿಗೆ ಅಮೃತಪ್ರಾಯವಾಗಿ ಕೀರ್ತಿಪಡೆಯುವದೆಂದು ಹೇಳಲು ಸಂದೇಹವಿಲ್ಲ.

ನಿಮ್ಮ ವಾಚಕ.

ಕುಂಕೂರು ತಾಲ್ಲೂಕು ರಟ್ಟೀರಿ ವಿವರ

ಅಯ್ಯಾ,—ಈ ತಾಲ್ಲೂಕಿನ ಕಾರ್ಯಗಳೆಲ್ಲವೂ ಸುವ್ಯವಸ್ಥೆಯಾದ ನಮ್ಮ ಅಮಲ್ದಾರ್ ಮ|| ಎಸ್. ಧರ್ಮರಾಯರವರ ದಕ್ಷತೆಯಿಂದ ನಡೆಯುತ್ತಿರುವವು. ಪ್ರಜೆಗಳು ಅನಂತಾನಂತ ಸೌಖ್ಯವನ್ನು ಹೊಂದುತ್ತಿರುವರೆಂದು ಹೇಳಬಹುದು. ಇಂಥಾ ಸನ್ನಿವೇಶದಲ್ಲಿ ಕಾರ್ಯನಿರ್ವಹಣೆಯಿಂದ ಸಂತೋಷಪಡುವ ಕ್ಷೇತ್ರವು ಕೋಪದಿಂದ ನಡೆಯುತ್ತಿರುವುದು ಬಹುಜನ ಪರವಾಗಿ ಗ್ರಾಂಟ್ ಮಾಸ್ಟರುಗಳ ಗೋಳಾಗಿದೆ. ಅದೇನೆಂದರೆ ಈ ಸ್ಕೂಲುಗಳ ಅಂದರೆ ಪಿಟ್ಸಿಡ್ಜ್ ಇನ್ಸ್ಪೆಕ್ಟರ್ ರಾಮಚಂದ್ರರಾವ್ ಎಂಬುವರು ಪ್ರತಿಯೊಬ್ಬ ಮಾಸ್ಟರುಗಳ ಸಂಬಳದ ನಾಲ್ಕು ರೂಪಾಯಿ ಹತ್ತು ರೂಪಾಯಿವರೆಗೂ, ಹೊರಡುವಾಗ ಸ್ಕೂಲ್ ಆಗಿ ಆರು ತಿಂಗಳ ತಲೆಬಲಿ ಒಟ್ಟಿಗೆ ಬಂದಲ್ಲಿ ವಸೂಲಾದ ಸಂಬಳದಲ್ಲಿ ಕೇಳುವುದಾಗಿ ಇರುತ್ತದೆ. ಈ ಮಧ್ಯೆ ಅಮಲ್ದಾರ್ ಸಾಹೇಬರು ವರ್ಗವಾದರೆಂಬ ಸುದ್ದಿ ಹುಟ್ಟಿ ಈ ಕ್ಲಾರ್ಕ್ ಇದೇ ಸಮಯವೆಂದು ಬಹು ಜನ ಮಾಸ್ಟರುಗಳ ಹಣವನ್ನು ತೆಗೆದು ಬಿಟ್ಟರು. ಈ ಸಂಗತಿಯನ್ನು ಇನ್ಸ್ಪೆಕ್ಟರ್ ಇನ್ ಚಾರ್ಜ್ ಸಾಹೇಬರವರಿಗೂ ಅರಿಕೆ ಮಾಡಿ ಪ್ರಾರ್ಥಿಸುತ್ತೇವೆ. ಸದ್ಯದಲ್ಲಿ ಒಂದು ಬಳ್ಳಾಪುರ, ಚಿತ್ತಗಾರ ಹಳ್ಳಿ ವರ್ಗವಾದ ಮಾಸ್ಟರೊಬ್ಬರಿಂದ ಏಳು ರೂಪಾಯಿ ಸುಲಿದುಕೊಂಡಿರು. ಮತ್ತೆ ಈಗ ಈ ಸಂಬಂಧಕ್ಕೆ ಎಂಟು ಆಣೆಯನ್ನು ಕೊಡಬೇಕೆಂದು ಪತ್ರಿಕೆ ಹಾಕಿರುತ್ತಾರೆ. ಇದು ಎಷ್ಟು ಸಹೋಲಿಯರದೋ ಗೊತ್ತಿಲ್ಲ. ದಯಾಳುಗಳಾದ ನಮ್ಮ ಅಮಲ್ದಾರರು ಈ ಕಷ್ಟವನ್ನು ನಿವಾರಿಸಿ ನಮಗೆ ಪಾಲು ಕೊಡುವರೆಂದು ನಂಬಿರುತ್ತೇವೆ.

ಹೆಚ್. ಮೈಲಾರಿರಾವ್,
ಗ್ರಾಂಟ್ ಮಾಸ್ಟರ್, ಹೊನ್ನೇನಹಳ್ಳಿ.

ಮೈಸೂರು ಸೀಮೆಯ ಗ್ರಾಮ ಮುನ್ಸಿಫ್ ಕೋರ್ಟುಗಳ ವಿಚಾರ.

ಅಯ್ಯಾ,—ಮೈಸೂರು ಸರ್ಕಾರದವರು ಸಂಸ್ಥಾನದಲ್ಲಿ ಸ್ಥಾಪಿಸಿದ ಗ್ರಾಮ ಮುನ್ಸಿಫ್ ಕೋರ್ಟುಗಳಿಂದ ಉಂಟಾಗಿರುವ ಸೌಕರ್ಯ ಮತ್ತು ಪ್ರಯೋಜನಗಳನ್ನು ಈ ಮೂಲಕ ತಿಳಿಸಲು ಸಾಧ್ಯವಿಲ್ಲ. ವಿಚಾರದಿಂದ ಅನುಭವದಿಂದಲೂ ತಿಳಿಯಬೇಕಾಗಿದೆ. ಇಂಥಾ ಉಪಕಾರ ಮಾಡಿದ ಸರ್ಕಾರದವರನ್ನು ಕೊಂಡಾಡತಕ್ಕದ್ದಾಗಿದೆ. ಆದರೆ ಈ ವಿಚಾರದಲ್ಲಿರುವ ಕೆಲವು ಅನಾನುಕೂಲಗಳನ್ನು ಇಲ್ಲಿ ಕಾಣಿಸಿದೆ. ನಮ್ಮ ಸರ್ಕಾರದವರು ಇದನ್ನು ಸರಿಪಡಿಸಿ ಪ್ರಜೆಗಳಿಗೆ ಅನುಕೂಲಪಡಿಸುತ್ತಾರೆಂದು ನಂಬಿದೇನೆ.

(1) ಸಂಸ್ಥಾನದಲ್ಲಿ ಕೆಲವು ಗ್ರಾಮಗಳಲ್ಲಿ ಮಾತ್ರ ಗ್ರಾಮ ಮುನ್ಸಿಫ್ ಕೋರ್ಟು ಇರುವದರಿಂದ ಬಾಕಿ ಗ್ರಾಮಗಳಲ್ಲಿರತಕ್ಕವರು ದೂರ ದೂರ ಕೋರ್ಟಿಗೆ ಹೋಗಿ ವ್ಯಾಜ್ಯ ನಡಿಸಲು ಕಷ್ಟ. ಈ ತೊಂದರೆಯನ್ನು ತಪ್ಪಿಸಲು ಪ್ರತಿ ಗ್ರಾಮದಲ್ಲಿಯೂ ಕೋರ್ಟು ಮಾಡಲು ಸಾಧ್ಯವಿಲ್ಲ. ಆದ್ದರಿಂದ ತಾಲ್ಲೂಕಿನ ಹೋಬಳಿ ಕಸಬಾ ಗ್ರಾಮದಲ್ಲೂ ಒಂದೊಂದು ಕೋರ್ಟ

ಹೋಬಳಿ ಗ್ರಾಮಗಳನ್ನೆಲ್ಲಾ ಅದಕ್ಕೆ ಸೇರಿಸಿದರೆ ಬಹಳ ಅನುಕೂಲ. ಎಲ್ಲರಿಗೂ ಮಹದುಪಕಾರವಾಗುತ್ತೆ. (೨) ಗ್ರಾಮ ಮುನ್ಸೀಫ್ ಕೋರ್ಟುಗಳಲ್ಲಿ ಸಾಕ್ಷಿ ಕೈಫಿಯತ್ತು ಬರವಣಿಗೆ ಕೈಯಲ್ಲಿ ತೆಗೆಯಕೂಡದೆಂದು ರೂಲ್ಸು ಇದೆ. ಅದರಿಂದ ಕಕ್ಷಿಗಾರರಿಗೂ ಗ್ರಾಮ ಮುನ್ಸೀಫರಿಗೂ ಬೆಂಚು ಮೆಂಬರುಗಳಿಗೂ ತುಂಬಾ ತೊಂದರೆ. ಆದ್ದರಿಂದ ಸಾಕ್ಷಿ ಕೈಫಿಯತ್ತು ಬರವಣಿಗೆಯಲ್ಲಿ ತೆಗೆಯುವದು ಒಳ್ಳೇದು. (೩) ಅಮಲ್ದಾರಿ ಅಧಿಕಾರವನ್ನು ಗ್ರಾಮ ಮುನ್ಸೀಫರಿಗೆ ಕೊಟ್ಟರೆ, ಇದನ್ನು ಬಿಟ್ಟು ಡಾರಿ ಅರ್ಜಿ ಬಂದ ಕೂಡಲೆ ಗ್ರಾಮ ಮುನ್ಸೀಫರವರು ರಾಡರ್ ಮುನ್ಸೀಫ್ ಕೋರ್ಟಿಗೆ ಕಳುಹಿಸಿ ಆ ಮೂಲಕ ಜಾರಿ ನಡೆಸುವದು ಒಳ್ಳೇದು. ಇದು ಕಕ್ಷಿಗಾರರಿಗೂ ಗ್ರಾಮ ಮುನ್ಸೀಫರಿಗೂ ಅನುಕೂಲವಾಗಿದೆ. (೪) ಗ್ರಾಮ ಮುನ್ಸೀಫ್ ಕೋರ್ಟು ಇರುವ ಗ್ರಾಮಗಳು ಬಹಳ ಸಣ್ಣವು. ಇವರಲ್ಲಿ ಬರವಣಿಗೆ ಬಂದವರೂ ಕಡಿಮೆಯಾಗಿ ಅಂಥಾ ಸ್ಥಳದಲ್ಲಿದ್ದಾರೆ. ಅರ್ಜಿ ಡಿಕ್ರಿಸನುಗಳನ್ನು ಬರೆದುಕೊಡಲು ಒಬ್ಬಿಬ್ಬರು ಇರುತ್ತಾರೆ. ಅವರಿಂದ ಬರೆಸಲು 1 ಅಥವಾ 2 ರೂಪಾಯಿ ಕೊಡಬೇಕಾಗುತ್ತೆ. ಅಲ್ಲದೆ ಅರ್ಜಿ ಅಂಶವನ್ನು ಕೋರ್ಟಿಗೆ ತಿಳಿಸಲು ಕಕ್ಷಿಗಾರರಿಗೆ ಸಾಧ್ಯವಿಲ್ಲ. ಕೆಲವರಿಗೆ ಮಾತನಾಡುವದಕ್ಕೂ, ಕೈಫಿಯತ್ತು ಕೊಡುವುದಕ್ಕೂ ಸುತರಾಂ ತಿಳಿಯದು. ಲಾಯರನ್ನು ಇಡಲು ಸಾಧ್ಯವಲ್ಲ. ಇದರಿಂದ ನ್ಯಾಯವಾದ ವ್ಯಾಜ್ಯವು ಕೆಡುತ್ತೆ. ಇದನ್ನು ತಪ್ಪಿಸಲು ಕೋರ್ಟು ಇರುವ ಗ್ರಾಮದಲ್ಲಿ ವಾಸವಾಗಿರುವ ನಂಬಿಗಸ್ತರಾದ, ವಿದ್ಯಾವಂತರಾದ, ನಿಷ್ಪಕ್ಷಪಾತಿಗಳಾದ, ನ್ಯಾಯವನ್ನು ಕೋರ್ಟಿನವರಿಗೆ ತಿಳಿಯಪಡಿಸಲು ಶಕ್ತಿಯುಳ್ಳ, ಕನಿಷ್ಠಪಕ್ಷ ಕನ್ನಡದಲ್ಲಿ ಲೋವರ್ ಸೆಕೆಂಡರಿ ವ್ಯಾಸಾಂಗವನ್ನು ಮಾಡಿದವರನ್ನು ಮುಖಾಲೀಕರನ್ನಾಗಿ ನೇಮಿಸಿ ಅವರ ಮೂಲಕ ಕಕ್ಷಿಗಾರರು ತಮ್ಮ ವ್ಯಾಜ್ಯಗಳನ್ನು ನಡಿಸುವಂತೆ ಸರ್ಕಾರಿ ಹುಕುಂ ಆದಲ್ಲಿ ಪ್ರಜೆಗಳಿಗೆ ತುಂಬಾ ಸೌಕರ್ಯವಾಗುತ್ತೆ. ಇದಕ್ಕಾಗಿ ವಕಾಲತ್ತು ಕೊಡತಕ್ಕದ್ದಕ್ಕೆ ಸ್ಟಾಂಪು ಹಚ್ಚುವದೂ ಬೇಕಿಯಿಲ್ಲ. ಈಗ ಅರ್ಜಿಗಳು ಬರೆಯುವುದಕ್ಕೆ ಕೊಡುತ್ತಿರುವ 1-2 ರೂಪಾಯಿ ಆವಾಗ ಉಳಿಯಬಹುದು. ಅವರಿಗೂ ಸರ್ಕಾರದವರು ವಿನಾದವರೂ ಫೀಜು ಹಾಕಬಹುದು.

ಮೇಲ್ಕಂಡ ಅಂಶಗಳನ್ನೆಲ್ಲಾ ಸರ್ಕಾರದವರು ಆಲೋಚನೆಗೆ ತಂದು ಅವುಗಳನ್ನೆಲ್ಲಾ ಸರಿಪಡಿಸಿ ಪ್ರಜೆಗಳಿಗೆ ಮಹದುಪಕಾರವನ್ನು ಮಾಡುತ್ತಾರೆಂದು ನಂಬಿದ್ದೇವೆ.

ಬಿ. ಸೀತಾರಾಮಯ್ಯ, ಕೆಂಗೇರಿ.

ತಾ|| 20-2-16. ಕೆ. ರಾಮಸ್ವಾಮಯ್ಯಂಗಾರ್, ಅತ್ತಿಬೆಲೆ.

ಸಂಪದಭ್ಯುದಯದ ಇನ್ನೊಂದು ಸಲಹೆ.

ಅಯ್ಯಾ,—ನಮ್ಮ ಈ ಮೈಸೂರು ದೇಶವು ಅನೇಕ ವಿಧ ನಿಧಿ ನಿಕ್ಷೇಪಗಳಿಗೆ ವಾಸಸ್ಥಾನವಾಗಿ ಚರಿತ್ರಾರ್ಹವಾಗಿರುವುದು. ಹೀಗಿದ್ದಾಗ್ಯೂ, ಅದರ ಪೂರ್ಣ ಫಲಾನುಭವವನ್ನು ನಾವು ಅನುಭವಿಸುತ್ತಿಲ್ಲ. ಈ ದೇಶದ ಪೂರ್ಣ ಫಲಾನುಭವಿಗಳು ಪರದೇಶೀಯರಾಗಿರುತ್ತಾರೆ. ನಿದರ್ಶನವಾಗಿ ಕೋಲಾರದ ಚಿನ್ನದ ಗಣಿ, ಮ್ಯಾಂಗನೀಸ್ ಲೋಹ, ರೈಲ್ವೆ ಮೊದಲಾದುವುಗಳ ಕಾರ್ಯವ್ಯಾಪಾರವನ್ನು ನಾವೇ ಸ್ವಂತವಾಗಿ ನಡೆಸಿ ಪೂರ್ಣ ಫಲಾನುಭವವನ್ನು ಹೊಂದದೆ ಈ ಲಾಭಗಳ ಶತಾಂಶದಲ್ಲಿ ಒಂದಂಶಕ್ಕೆ ಮಾತ್ರ ನಾವು ಪಾತ್ರರಾಗಿರುವೆವು. ಇದನ್ನರಿತೇ ನಮ್ಮ ದೇಶವನ್ನು ಪೂರ್ಣ ಸಂಪದಭಿವೃದ್ಧಿಯನ್ನಾಗಿಸಲು ನಮ್ಮ ಸರ್ಕಾರದವರಿಂದ ಸಂಪದಭಿವೃದ್ಧಿ ಸಮಾಜವು ಸ್ಥಾಪಿಸಲ್ಪಟ್ಟು ಮೇಲ್ಕಂಡ ಉದ್ದೇಶ ಸಾಫಲ್ಯಕ್ಕಾಗಿ ಅವಶ್ಯಕವಾದ ಶೋಧನೆಗಳು ನಡೆಯುತ್ತಾ ಇವುಗಳ ಮೂಲಕ ಈಗೀಗ ಕನ್ನಾಗರೀಕ(?) ವಲಂಬಿಗಳಾಗಿರುತ್ತೇವೆ.

ಪ್ರಕೃತದಲ್ಲಿ ನಮ್ಮ ದೇಶದ ಮೇಲ್ಕಂಡ ಅಪೂರ್ವ ವಸ್ತುಗಳಿಗಿಂತಲೂ ಶ್ರೀಗಂಧದ ಮರವು ನಮ್ಮ ದೇಶದ ಫಾರೆಸ್ಟುಗಳಲ್ಲೆಲ್ಲಾ ಸ್ವೇಚ್ಛೆಯಾಗಿ ಬೆಳೆದು ನಮ್ಮ ದೇಶಕ್ಕೆ ವಿಶೇಷ ಆದಾಯವನ್ನೀಯುತ್ತಲಿರುವುದು. ಸಾಧಾರಣವಾಗಿ ಇದರ ಬೆಳವಣಿಗೆಯು ನಮ್ಮ ದೇಶದಲ್ಲಿರುವಷ್ಟು ಹೆಚ್ಚಾಗಿ ಬೇರೆ ದೇಶಗಳಲ್ಲಿಲ್ಲವೆಂದು ಊಹಿಸಬೇಕಾಗಿದೆ. ನಮ್ಮ ಸರ್ಕಾರದವರು ಪ್ರತಿ ವರ್ಷವೂ ಹೇರಳವಾಗಿ ಶ್ರೀಗಂಧದ ಕೊರಡುಗಳನ್ನೆಲ್ಲಾ ವಿದೇಶವರ್ತಕರಿಗೆ ವಿಕ್ರಯಿಸುತ್ತಾರೆ. ಇವರು ಇದರಿಂದ ಎಣ್ಣೆ ತೆಗೆದು ಸುಗಂಧದ್ರವ್ಯಗಳಿಗೂ ಇತರ ಅನೇಕ ಉಪಯುಕ್ತ ಕಾರ್ಯಗಳಿಗೂ ಉಪಯೋಗಿಸಲು ಪುನಃ ನಮ್ಮ ದೇಶಕ್ಕೇ ಕಳುಹಿಸುವುದರ ದ್ವಾರಾ ತಮ್ಮ ವೆಚ್ಚದ ನಾಲ್ಕೈದರಷ್ಟು ಲಾಭ ಸಂಪಾದಿಸುತ್ತಾ ಐಶ್ವರ್ಯವಂತರಾಗಿಯೂ ಆಗುತ್ತಲೂ ಇರುತ್ತಾರೆ. ಹಾಗಾದರೆ ಈ ಕಾರ್ಯನಿರ್ವಾಹಕತ್ವವನ್ನು ನಮ್ಮ ದೇಶದ ಐಶ್ವರ್ಯವಂತರಾಗಲೀ, ಸರ್ಕಾರದವರಾಗಲೀ ಕೈಕೊಳ್ಳಬಾರದೇಕೆ? ಹೀಗಾದರೆ ನಮ್ಮ ದೇಶದಲ್ಲಿಯ ಅಪೂರ್ವ ವಸ್ತುಗಳ ಸಾಧನಗಳಿಗೆಲ್ಲಾ ನಮ್ಮ ಮುಖ್ಯ ಗಮನ ಕೊಟ್ಟಲ್ಲಿ ದೇಶದ ಮತ್ತು ಪ್ರಜೆಗಳ ಸಂಪದಭ್ಯುದಯಕ್ಕೆ ಏನುತಾನೇ ಕಡಮೆ?

ಈ ವಿಷಯವನ್ನು ನಮ್ಮ ನೂತನ ಸಂಪದಭಿವೃದ್ಧಿ ಸಮಾಜದವರು ದೀರ್ಘಾಲೋಚನೆಯಿಂದ ಶ್ರೀಗಂಧದಿಂದ ತೆಗೆಯಬಹುದಾದ ರಸಾಯನಗಳನ್ನು ಇಲ್ಲಿಯೇ ತಯಾರಿಸಲು ಏರ್ಪಡಿಸಿ ಪರದೇಶಕ್ಕೆ ಇವನ್ನು ರವಾನಿಸುತ್ತಾ ದೇಶದ ಸಂಪತ್ತನ್ನು ಅಭಿವೃದ್ಧಿ ಮಾಡುತ್ತಾ ಬರೋಣವೆಂದು ಈ ಮೂಲಕ ದೇಶದ ಏಳಿಗೆಗೆ ಮುಖ್ಯ ಸಹಕಾರಿಗಳಾಗಿ ಕೀರ್ತಿಭಾಜನರಾಗಬೇಕೆಂದು ಹಾರೈಸುತ್ತೇನೆ.

ಸ್ವದೇಶಾಭಿಮಾನಿ.

ಮೈಸೂರು ಪಟ್ಟಣದಲ್ಲಿ ಭತ್ತಕುಟ್ಟುವ ಮಿಲ್ಲುಗಳು

ಅಯ್ಯಾ,—ಮೈಸೂರು ಗೌರ್ನಮೆಂಟಿನವರ ಪ್ರೋತ್ಸಾಹದಿಂದ ಅನೇಕ ರೈಸ್ ಮಿಲ್ಲುಗಳು ಇಟ್ಟು ಇರುತ್ತಾರೆ. ದೇವನ್ನಾರಾಯಣಕಟ್ಟೆ ಬಳಿ ಇರುವ ಮಿ|| ಶ್ರೀಕಂಠಯ್ಯನವರ ಮಿಲ್ಲಿನಲ್ಲಿ ದಿನಕ್ಕೆ 350 ಖಂಡಿ ಭತ್ತವನ್ನು ಅಕ್ಕಿ ತಯಾರುಮಾಡಿ ಕೊಡುತ್ತಾರೆ. ಸಾಹುಕಾರ್ ಸಿ. ವರ್ಧಮಾನಯ್ಯನವರು ಮಂಡಿ ಪೇಟೆಯಲ್ಲಿ ಇಡುವ ರೈಸ್ ಮಿಲ್ಲಿನಲ್ಲಿ ದಿನಕ್ಕೆ ಸುಮಾರು 250 ಖಂಡಿ ಭತ್ತವನ್ನು ಅಕ್ಕಿ ತಯಾರುಮಾಡುತ್ತಾರೆ. ಸಾಹುಕಾರ್ ಚಿಕ್ಕಣ್ಣನವರ ದೊಡ್ಡ ಮಗನವರು ಏಗಿ ಫರ್ಮ್ ಬಳಿ ಇಡುವ ರೈಸ್ ಮಿಲ್ಲಿನಲ್ಲಿ 250 ಖಂಡಿ ಭತ್ತ ಅಕ್ಕಿ ತಯಾರುಮಾಡಿ ಕೊಡುತ್ತಾರೆ. ಸಾಹುಕಾರ್ ಮಿ|| ಮಾದಯ್ಯನವರ ರೈಸ್ ಮಿಲ್ಲಿನಲ್ಲಿ ಸುಮಾರು 100 ಖಂಡುಗ ಭತ್ತವನ್ನು ಅಕ್ಕಿ ತಯಾರುಮಾಡಿ ಕೊಡುತ್ತಾರೆ. ಚಾಮರಾಜಪೇಟೆಯಲ್ಲಿ ಇರುವ ಮಿ|| ಶ್ರೀ ಕೃಷ್ಣಾ ರೈಸು ಮಿಲ್ಲಿನಲ್ಲಿ 50 ಖಂಡಿ ಭತ್ತ ಅಕ್ಕಿ ತಯಾರುಮಾಡಿ ಕೊಡುತ್ತಾರೆ. ಚಾಮರಾಜಪೇಟೆಯಲ್ಲಿ ಇರುವ ಮಿ|| ಹಿರಣ್ಯಪ್ಪನವರ ಮಿಲ್ಲಿನಲ್ಲಿ 30 ಖಂಡುಗ ಭತ್ತವನ್ನು ಅಕ್ಕಿ ತಯಾರುಮಾಡಿ ಕೊಡುತ್ತಾರೆ. ಶ್ರೀರಾಮಪೇಟೆಯಲ್ಲಿರುವ ಮಿ|| ಎಂ. ಕೆ. ಇಬ್ರಾಹಿಂ ಸಾಬರ ರೈಸು ಮಿಲ್ಲಿನಲ್ಲಿ ಸುಮಾರು 30 ಖಂಡಿ ಭತ್ತವನ್ನು ಅಕ್ಕಿ ತಯಾರು ಮಾಡಿ ಕೊಡುತ್ತಾರೆ. ನಜರಬಾದಿನಲ್ಲಿ ಇಟ್ಟಿರುವ ಮಿ|| ಹಿರೋಡೆ ಮಲ್ಲಯ್ಯನವರ ರೈಸು ಮಿಲ್ಲಿನಲ್ಲಿ ಸುಮಾರು 30 ಖಂಡಿ ಭತ್ತವನ್ನು ಅಕ್ಕಿ ತಯಾರು ಮಾಡುತ್ತಾರೆ.

ಅಂತು ಹಾಲಿ ಮೈಸೂರಿನಲ್ಲಿ 8 ರೈಸ್ ಮಿಲ್ಲುಗಳಾಗಿರುತ್ತವೆ. ಈ ಎಂಟು ಮಿಲ್ಲುಗಳಿಗೆ ದಿನ ಒಂದಕ್ಕೆ ಒಂದು ಸಾವಿರ ಖಂಡಿ ಭತ್ತ ಅಕ್ಕಿ ತಯಾರಿ ಬಗ್ಗೆ ಬೇಕಾಗುವುದು. ಭತ್ತದ ಸುಗ್ಗಿ ಕಾಲದಲ್ಲಿ ಸುಮಾರು 3 ತಿಂಗಳ ವರಿವಿಗೆ ಭತ್ತ ಸಪ್ಲೈ ಆಗಬಹುದು. ಇನ್ನು ಒಂಭತ್ತು ತಿಂಗಳುಗಳಲ್ಲಿ ವಾರಕ್ಕೆ 3-4 ದಿನ ಮಾತ್ರ ಮಿಲ್ಲು ನಡೆಯುವುದೇ ತುಂಬಾ ಕಷ್ಟವಾಗಿದೆ. ಹಿಂದೆ ಭತ್ತದ ಸುಗ್ಗಿ ಕಾಲದಲ್ಲಿ ದಿನಕ್ಕೆ ಯಡತೊರೆ ಮಾರ್ಗವಾಗಿ ಸುಮಾರು 250-300 ಗಾಡಿಗಳ ಭತ್ತವೂ, ಶ್ರೀರಂಗಪಟ್ಟಣ, ಬನ್ನೂರು, ನಂಜನಗೂಡು ಮುಂತಾದ ಉತ್ತರಗಳ ಮಾರ್ಗವಾಗಿ 300 ಗಾಡಿ ಭತ್ತವೂ ಮೈಸೂರಿಗೆ ಬರುತ್ತಾ ಇತ್ತು. ಅಂದರೆ ದಿನಕ್ಕೆ 500-550 ಗಾಡಿ ಭತ್ತಾ ಬರುತ್ತಾ ಇತ್ತು. ಈ ವರುಷ ರೈಸ್ ಮಿಲ್ಲುಗಳು ಮೈಸೂರಿನಲ್ಲೂ, ಇತರ ತಾಲ್ಲೋಕುಗಳಲ್ಲಿಯೂ ಜಾಸ್ತಿಯಾಗುತ್ತಾ ಬಂದಿವೆ. ಹಾಲಿ ಮೈಸೂರಿಗೆ ತಾಲ್ಲೂಕು ಉತ್ತರಗಳಿಂದ 150-200 ಗಾಡಿಗಳು ಭತ್ತಾ ಬರುವುದಕ್ಕೆ ಪ್ರಾರಂಭವಾಗಿದೆ.

ಇದರಲ್ಲಿಯೂ ಕೂಡ ರೈಲು ಮಾರ್ಗವಾಗಿ ಪರಸ್ಥಳಗಳಿಗೆ ದಿನಕ್ಕೆ ಸುಮಾರು 100 ಗಾಡಿ ಭತ್ತದ ವರಿವಿಗೆ ಹೋಗುತ್ತೆ. ಅಲ್ಲದೆ ಬನ್ನೂರಲ್ಲಿ ಒಂದು, ಯಡತೊರೆಯಲ್ಲಿ ಒಂದು, ನಂಜನಗೂಡಿನಲ್ಲಿ ಒಂದು, ಫ್ರೆಂಚರಾಕ್ಸಿನಲ್ಲಿ ಎರಡು ಅಕ್ಕಿ ಮಿಷನ್ ಇಟ್ಟಿದಾರೆ. ಮತ್ತು ಮದ್ದೂರಿನಲ್ಲಿ ಒಂದು ರೈಸು ಮಿಲ್ ಇಡುವವರಲ್ಲಿದಾರೆ. ಈ ಮಿಲ್‌ಗಳಿಗೆಲ್ಲಾ ಭತ್ತಾ ಸಪ್ಲೈ ಆಗಿ ಈ ಮಧ್ಯೆ ಪರಸ್ಥಳಗಳಿಗೆ ರೈಲು ಮಾರ್ಗವಾಗಿ ಸಪ್ಲೈ ಆಗಿ ಇದರ ಮಧ್ಯೆ ಮೈಸೂರು ರೈಸ್ ಮಿಲ್‌ಗಳಿಗೂ ಭತ್ತಾ ಒದಗಬೇಕು. ಒಂದು ವೇಳೆ ಸುಗ್ಗಿ ಕಾಲದಲ್ಲಿ 3 ತಿಂಗಳು ಸಪ್ಲೈ ಆದರೂ ಆಗಬಹುದು. ಉಳಿದ ಒಂಭತ್ತು ತಿಂಗಳು ಭತ್ತ ಸಪ್ಲೈ ಆಗುವುದಿಲ್ಲ. ಅಂಥಾ ಕಾಲಗಳಲ್ಲಿ ಮಿಲ್ಲಿನವರೇ ದ್ರವ್ಯವನ್ನು ಒದಗಿಸಿಕೊಂಡು ಭತ್ತಾ ಖರೀದಿಗೆ ತಂದು ಮಿಲ್ ನಡಿಸಿಕೊಳ್ಳಬೇಕಾಗುತ್ತೆ. ಆದರೂ ಭತ್ತಾ ಸಪ್ಲೈ ಆಗುವುದು ಕಷ್ಟವಾಗುತ್ತೆ. ಧಾರಣೆ ಹೆಚ್ಚುತ್ತೆ. ಅಲ್ಲದೆ ಮಿಲ್ಲಿನವರೇ ಭತ್ತ ಕೊಂಡು ಅಕ್ಕಿ ಬಿಕರಿ ಮಾಡುವುದಾದರೆ ಅನೇಕ ಅಂಗಡಿ ವ್ಯಾಪಾರಸ್ಥರಿಗೆ ತುಂಬಾ ನಷ್ಟವಾಗುತ್ತೆ. ಆದ ಪ್ರಯುಕ್ತ ಈಗ ಗೌರ್ನಮೆಂಟಿನವರ ಪ್ರೋತ್ಸಾಹದಿಂದ ಹಾಲಿ ಇರುವ ಎಂಟು ರೈಸು ಮಿಲ್‌ಗಳೇ ಸಾಕಾಗಿವೆ. ಇನ್ನು ಮುಂದೆ ಗೌರ್ನಮೆಂಟಿನವರು ಅಕ್ಕಿ ಮಿಲ್ಲು ಇಡಲು ಅವಕಾಶಕೊಟ್ಟದ್ದೇ ಆದರೆ ಹಾಲಿ ಗೌರ್ನಮೆಂಟಿನವರ ಪ್ರೋತ್ಸಾಹದಿಂದ ಇಟ್ಟು ಇರುವ ಮಿಲ್‌ಗಳಿಗೆ ನಷ್ಟಪಡಿಸಿದಂತೆ ಆಗುತ್ತೆ. ಪ್ರಜೆಗಳು ಕೂಡ ಕೆಟ್ಟುಹೋಗುತ್ತಾರೆ. ಅಲ್ಲದೆ ಎಂಟು ಮಿಲ್‌ಗಳಲ್ಲಿಯೂ 500 ಜನ ಕೂಲಿ ಜನಗಳು ಜೀವನಮಾಡಿಕೊಂಡಿರುವುದು ಸಹಾ ಕೆಡಿಸಿದಂತೆ ಆಗುತ್ತೆ. ಆದ್ದರಿಂದ ಹಾಲಿ ಇರುವ ರೈಸು ಮಿಲ್ಲುಗಳೇ ಸಾಕಾಗಿರುತ್ತೆ. ಇನ್ನು ಮುಂದೆ ರೈಸು ಮಿಲ್ ಇಡತಕ್ಕವರಿಗೆ ಗೌರ್ನಮೆಂಟಿನವರು ಪ್ರೋತ್ಸಾಹ ಕೊಡಕೂಡದು. ಮತ್ತು ಇತರ ಮಿಲ್ ಎಂದರೆ ಮಂಗಳೂರು ಹೆಂಚಿನ ಕಾರ್ಖಾನೆ, ಎಣ್ಣೆ ಕಾರ್ಖಾನೆ, ಗೋಧಿಹಿಟ್ಟು, ರವೆ, ಅಕ್ಕಿಹಿಟ್ಟು, ರಾಗಿಹಿಟ್ಟು, ಕಡ್ಲೆಹಿಟ್ಟು ವಗೈರೆ ಹಿಟ್ಟುಗಳ ಕಾರ್ಖಾನೆ, ಮರ ಕುಯ್ಯುವ ಮಿಷನು ವಗೈರೆ ಇಂಥಾ ಮಿಷನು ಕಾರ್ಖಾನೆ ಇಡತಕ್ಕವರಿಗೆ ಪ್ರೋತ್ಸಾಹ ಮಾಡಿ, ನಮ್ಮ ಊರು ಅಭಿವೃದ್ಧಿಗೆ ಬರುವಂತೆ ಮಾಡಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮೈಸೂರು, ಜಿ. ಕೆ. ಗುಂಡಪ್ಪ,

26-2 1916. ನಂ. 532, ಚಾಮರಾಜಪೇಟೆ.

ತಾಲ್ಲೋಕು ವರ್ತಮಾನಗಳು.

ಕುಣಿಗಲ್ ತಾ|| ನಾಗಸಂದ್ರ.—ಕಳೆದ ತಿಂಗಳು 24 ನೇ ತಾ. ಗುರುವಾರ ದೇವಸ್ಥಾನದಲ್ಲಿ ಕಲ್ಯಾಣೋತ್ಸವವು ಮ|| ಜಡ್ಡಿಗೆರೆ ತಾ|| ರಾಮಚಂದ್ರಯ್ಯನವರ ಉದಾರತ್ವದಿಂದ ವಿಚಿತ್ರವಾಗಿ ನೆರವೇರಿತು.—ಗ್ರಾಮಾಭಿವೃದ್ಧಿಯ ಕಾರ್ಯಗಳು ಸಾವಧಾನವಾಗಿ ನಡೆಯುತ್ತಾ ಇವೆ. ಸ್ಕೂಲಿನಲ್ಲಿ ದಿನ ದಿನ ಬಾಲಕರ ಸಂಖ್ಯೆ ಹೆಚ್ಚುತ್ತಾ ಇದೆ. ಸರ್ಕಾರದವರು ಇಲ್ಲಿನ ಎ. ಇ. ಸ್ಕೂಲಿನಲ್ಲಿ 5 ನೇ ತರಗತಿಯನ್ನು ಇಟ್ಟು ಮತ್ತೊಬ್ಬ ಮಾಸ್ಟರನ್ನು ನೇಮಿಸಿದರೆ ಬಹಳ ಅನುಕೂಲವಾಗುತ್ತದೆ.—ಇಲ್ಲಿ ಒಂದು ಕೋಆಪರೇಟಿವ್ ಸೊಸೈಟಿಯೂ ಇದೆ. ಪ್ರಾರಂಭವಾಗಿ 2-3 ವರ್ಷವಾಯಿತು. ಮೊದಲನೇ ವರ್ಷ ಷೇರುದಾರರಿಗೆ ಅಲ್ಪಸ್ವಲ್ಪ ಬಡ್ಡಿ ಸಂದಾಯವಾಯಿತು. ಈಚೆಗೆ 2 ವರ್ಷವಾದರೂ ಬಡ್ಡಿ ಕೊಟ್ಟಿಲ್ಲ. ರಿಜಿಸ್ಟ್ರಾರ್ ಅವರು ಈ ವಿಷಯಕ್ಕೆ ಗಮನ ಕೊಡಬೇಕಾಗಿದೆ.—ರೈತರು ತಮ್ಮ ಕೆಲಸಗಳಲ್ಲಿ ಆತುರರಾಗಿದ್ದಾರೆ.

ಮೈಸೂರು ತಾ|| ಸಾಗರಕಟ್ಟೆ.—ಈ ಗ್ರಾಮವು ಮೈಸೂರು ಯಡತೊರೆಗಳಿಗೆ ಮಧ್ಯದಲ್ಲಿದೆ. ಈ ಊರಿನ ಹತ್ತಿರದಲ್ಲಿ ಕನ್ನಂಬಾಡಿಯಲ್ಲಿ ಹರಿಯುವ ಕಾವೇರಿ ಪ್ರವಾಹಕ್ಕೆ ರೈಲ್ವೆ ಲೈನ್‌ನಲ್ಲಿ ಒಂದು ದೊಡ್ಡ ಸೇತುವೆಯನ್ನು ಕಟ್ಟಿದಾರೆ. ಇಂಥಾ ಸೇತುವೆಯು ದಕ್ಷಿಣ ಇಂಡಿಯಾದಲ್ಲಿ ಇನ್ನೆಲ್ಲಿಯೂ ಇಲ್ಲವೆಂದು ಹೇಳಬಹುದು. ಈ ಗ್ರಾಮಕ್ಕೆ ಫೆಬ್ರವರಿ ತಾ. 4 ರಲ್ಲಿ ನಮ್ಮ ದಿವಾನ್ ಸಾಹೇಬರು ದಯಮಾಡಿ ಇಲ್ಲಿನ ಅದ್ಭುತವಾದ ಸೇತುವೆ, ರೈಲ್ವೆ ಲೈನ್, ಸ್ಕೂಲು ಬಾಲಕರನ್ನು ಪರಾಂಬರಿಸಿ, ಬಾಲಕರಿಗೆ ತಿಂಡಿಯನ್ನು ಕೊಡಲು ಬಹುಮಾನ ದಯಪಾಲಿಸಿ ಮಧ್ಯಾಹ್ನ ಇಲ್ಲಿಯೇ ಮೊಕ್ಕಾಂ ಮಾಡಿ ಸಾಯಂಕಾಲ ಮೈಸೂರಿಗೆ ದಯಮಾಡಿದರು. ಈ ಗ್ರಾಮವು ಕಾವೇರಿ ಪ್ರವಾಹಕ್ಕೆ ಕಟ್ಟಿರುವ ಕನ್ನಂಬಾಡಿ ಕಟ್ಟೆಯ ದೆಸೆಯಿಂದ ಕ್ಷಿಪ್ರದಲ್ಲಿಯೇ ಮುಳುಗಡೆಯಾಗುತ್ತದೆ. ಈ ಗ್ರಾಮಕ್ಕೆ ಸ್ಕೂಲು ಬಂದು 12 ವರ್ಷವಾಗಿರಬಹುದು. ಈಚೆಗೆ ವರ್ಷದಿಂದ ಉತ್ತಮ ಸ್ಥಿತಿಯಲ್ಲಿದೆ. ತಾ. 22 ನೇ ಮಂಗಳವಾರ ಈ ಸ್ಕೂಲು ಮಂದಿರದಲ್ಲಿ ದಿವಾನ್ ಸಾಹೇಬರು ದಯಪಾಲಿಸಿದ ದ್ರವ್ಯದಿಂದ ಮಕ್ಕಳಿಗೆ ತಿಂಡಿ ಹಂಚಿಕೊಡಲು ಒಂದು ಸಭೆ ಸೇರಿತ್ತು. ಈ ಸಭೆಗೆ ಗ್ರಾಮದ ಮುಖಂಡರು, ಸ್ಕೂಲು ಕಮಿಟಿ ಮೆಂಬರುಗಳು, ಇತರ ವಿದ್ಯಾಭಿಮಾನಿಗಳು ದಯಮಾಡಿಸಿದ್ದರು. ಮ|| ಲೋಕಲ್ ಗೋಪಾಲರಾಯರು ಅಗ್ರಾಸನವನ್ನು ವಹಿಸಿ ದಿವಾನ್‌ರವರಿಗೆ ವಿದ್ಯಾ ಪ್ರಚಾರದಲ್ಲಿರುವ ಆಸಕ್ತಿಯನ್ನು ಸುಲಭ ಭಾಷೆಯಲ್ಲಿ ಉಪನ್ಯಾಸ ಮಾಡಲು ಸಭೆಯವರೆಲ್ಲರೂ ಕೊಂಡಾಡಿದರು. ಸ್ಕೂಲು ಇನ್ನು ಹೆಚ್ಚಾಗಿ ಅಭಿವೃದ್ಧಿ ಹೊಂದಲು ಗ್ರಾಮವು ಕ್ಷಿಪ್ರದಲ್ಲಿಯೇ ಮುಳುಗಿ ಹೋಗುತ್ತೆಂದು ರಾ|| ಸುಬ್ರಾಯಶೆಟ್ಟರು ಪ್ರಸ್ತಾಪಮಾಡಿದರು. ನಂತರ ಶ್ರೀಮಹಿಂದಿರಾ ಚಕ್ರವರ್ತಿಯವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳನ್ನು ಬಾಲಕ ಬಾಲಕಿಯರು ಇಂಪಾದ ಸ್ವರದಿಂದ ಗಾನಮಾಡಿದರು. ಫಲ ಪುಷ್ಪ ತಾಂಬೂಲ ತಿಂಡಿಯು ಬಾಲಕ ಬಾಲಕಿಯರಿಗೂ ಸಭಿಕರಿಗೂ ಸಹ ಹಂಚಲ್ಪಟ್ಟು, ಸಭೆಯವರು ದೇಶಾಧಿಪ್ರ(?) ದಯಮಾಡಿದ್ದಕ್ಕಾಗಿ ಅವರನ್ನು ವಂದಿಸಿತೆರಳಿದರು.

ಕಾರೇಕೆರೆ.—ಬಿಸಿಲಿನ ಧಗೆ ಸಹಿಸುವದಕ್ಕಾಗದು. ಧಾರಣೆವಾಸಿ ಈಗಾಗಲೇ ಪ್ರಾರಂಭಿಸಿದೆ. ಪ್ಲೇಗಿನ ದೆಸೆಯಿಂದ ಬಹಳ ಜನರು ಊರು ಬಿಟ್ಟಿದ್ದಾರೆ. ಇಲಿಗಳು ಸಾಯುತ್ತಿರುವಾಗಲೇ ಊರು ಬಿಡಿಸುವ ಏರ್ಪಾಡು ಮಾಡಿರುವದು ಹೆಚ್ಚು ನಷ್ಟಕ್ಕೆ ಕಾರಣ. ಇದುವರೆಗೂ ದಿನಕ್ಕೆ 2-3 ರ ವರೆಗೂ ಪ್ಲೇಗು ಮರಣವಾಗಿದೆ. ಈಗ ಸ್ವಲ್ಪ ಕಡಮೆಯಾದಂತೆ ಕಾಣುತ್ತೆ. ಬ್ರಾಹ್ಮಣರ ಕೆಲವು ಬೀದಿಗಳೂ, ದೊಡ್ಡ ರಸ್ತೆಗಳೂ ಶುದ್ಧವಾಗಿರುವಂತೆ ಇತರ ಎಲ್ಲಾ ಚಿಕ್ಕ ದೊಡ್ಡ ಗಲ್ಲಿಗಳೂ, ಖಾಲಿ ನಿವೇಶನಗಳೂ, ಹಿತ್ತಲುಗಳೂ ಚೊಕ್ಕಟವಾಗಿದ್ದರೆ ಆರೋಗ್ಯವರ್ಧನೆಗೂ, ಅಂಟುರೋಗಗಳ ವ್ಯಾಪನೆಗೆ ಅಡ್ಡಿಯೂ ಆಗುವದರಲ್ಲಿ ಅನುಮಾನವಿಲ್ಲ. ಈ ವಿಷಯದಲ್ಲಿ ಸ್ಯಾನಿಟರಿ ಆಫೀಸರು ತುಂಬಾ ನಿಗಾ ವಹಿಸುವರೆಂದು ನಂಬುತ್ತೇವೆ. ಜನರು ಊರು ಬಿಟ್ಟಿರುವದರಿಂದ ಪೋಲೀಸ್ ಬಂದೋಬಸ್ತು ಚೆನ್ನಾಗಿರಬೇಕು. ಇಲ್ಲಿನ ಡಾಕ್ಟರ ಜೊತೆಗೆ ಇತರ ಆಫೀಸರೂ ಸೇರಿಕೊಂಡರೆ ಹೆಚ್ಚು ಜನರು ಇನಾಕ್ಯುಲೇಷನ್ ಮಾಡಿಸಿಕೊಳ್ಳುವದರಲ್ಲಿ ಅನುಮಾನವಿಲ್ಲ. ಇಲ್ಲಿನ ಆಸ್ಪತ್ರೆ ಇರುವ ಸ್ಥಳ ಅನನುಕೂಲವಾಗಿದೆ. ಆಸ್ಪತ್ರೆಗೆ ಜನರ ಗದ್ದಲದಿಂದಲೂ ಧೂಳಿನಿಂದಲೂ ತೊಂದರೆಯಾಗುತ್ತೆ. ಅಲ್ಲದೆ 4 ಜನಕ್ಕೆ ಹೆಚ್ಚು ರೋಗಿಗಳು ಇರುವದಕ್ಕೆ ಸ್ಥಳವಿಲ್ಲ. ಹಾಗೂ ಪರಸ್ಥಳದ ರೋಗಿಗಳೂ, ಅವರ ಸಹಾಯಕರೂ ಇರುವದಕ್ಕೆ ಬೇರೆ ಏರ್ಪಾಡುಗಳಿಲ್ಲದೆ ಬಹಳಷ್ಟು ಅನನುಕೂಲ. ಹಾಗೂ ಬಂದು ಇರುವವರಿಗೆ ವಸತಿಯಾದ ಸ್ಥಳವಿಲ್ಲದೆ ಬಹಳವಾಗಿ ಪೇಚಾಡುತ್ತಾರೆ. ಇದನ್ನು ನಮ್ಮ ಸರ್ಕಾರದವರು ಎಂದಿಗೆ ಸರಿಪಡಿಸುವರೋ ತಿಳಿಯದು.—ಇಲ್ಲಿನ ಸಂತೆಯಲ್ಲಿ ಕಮ್ಮಿ ತೂಕಗಳೂ, ಅಳತೆಗಳೂ ತಪ್ಪುವ ಹಾಗೆ ಕಾಣುವದಿಲ್ಲ. ಅಲ್ಲದೆ ಮೈಸೂರು ದೇಶದಲ್ಲಿಲ್ಲದ 22 ರೂ. ತೂಕವು ಎಂದಿಗೆ ಈ ಊರನ್ನು ಬಿಡುವದೋ ತಿಳಿಯದು. ಕೆಲವು ವರ್ತಕರ ಪತ್ರವ್ಯವಹಾರಗಳು ಯಾವಾಗ ನಿಲ್ಲುತ್ತೋ ತಿಳಿಯದು. ಇದರ ಮರ್ಮವೇ ಗೊತ್ತಾಗುವದಿಲ್ಲ. ಕಾಡು ಕಲ್ಲುಗಳಿಂದಲೂ, ಹಳೇ ಬಟ್ಟುಗಳಿಂದಲೂ, ಪೌನು ಬಟ್ಟುಗಳಿಂದಲೂ, ಸೇರುಳ್ಳ ತಕ್ಕಡಿಗಳಿಂದಲೂ ಏನೇನೂ ವ್ಯತ್ಯಾಸಗಳು, ಕೆಲವು ಸಾರಿ ವಿದ್ಯಾವಂತರಿಗೂ ಆಗುವ ಮೋಸ ಬಹಳವಾಗಿದೆ. ಇಲ್ಲಿನ ಮಾಂಸದ ಅಂಗಡಿಗಳು ಗಲ್ಲಿಗಳಲ್ಲಿವೆ. ಹೆಚ್ಚು ಬೆಲೆಯಾದರೂ ಮಾಂಸವು ಚೆನ್ನಾಗಿರುವದಿಲ್ಲ. ಈ ಅಂಗಡಿಗಳನ್ನು ಶುದ್ಧವಾದ ಹವಾ ಇರುವ ಸ್ಥಳದಲ್ಲಿರುವಂತೆ ಏರ್ಪಡಿಸಬೇಕು. ಆಗಾಗ್ಗೆ ಅಜಮಾಯಿಷಿಯೂ ಆಗಬೇಕು. ಈ ವಿಷಯಗಳಲ್ಲೆಲ್ಲಾ ಹೊಸದಾಗಿ ಬಂದಿರುವ ನಮ್ಮ ಅಮಲ್ದಾರ್ರು ಮುಂದುವರಿದು ಸರಿಪಡಿಸಿಕೊಳ್ಳುವರೆಂದು ನಂಬಿರುತ್ತೇವೆ.—ಸುತ್ತಮುತ್ತಿನ ಮನ್ನಾ ಜಂಗಲಿಯು ಬಹು ಮಟ್ಟಿಗೆ ಬೆಂಕಿಗೆ ತಪ್ಪಿಸಿಕೊಳ್ಳುತ್ತೆಂದು ಹೇಳಬಹುದು. ಆದರೆ ಡಿಸ್ಟ್ರಿಕ್ಟ್ ಜಂಗಲಿಯು ವರ್ಷೇ ವರ್ಷೇ ಬೆಂಕಿ ಬಿದ್ದು ಹುಲ್ಲು, ಗಿಡ, ಮರಗಳು ಸುಟ್ಟು ರೈತರಿಗೆ ಹೆಚ್ಚು ನಷ್ಟವಾಗುತ್ತೆ. ಫಾರೆಸ್ಟ್ ಇಲಾಖೆಯ ನಿಗಾ ಕಡಮೆ ಎಂದು ಹೇಳಬೇಕು. ತಕ್ಕ ಏರ್ಪಾಡು ಮಾಡಿದರೆ ಸರ್ಕಾರಕ್ಕೂ ರೈತರಿಗೂ ಎಷ್ಟೋ ಲಾಭವಾಗುತ್ತೆ.—ಜನರು ಆತ್ಮರಕ್ಷಣೆಗೆಂದೂ ಫಸಲಿನ ಪೋಷಣೆಗೆಂದೂ ಲೈಸೆನ್ಸು ಪಡೆದು ಬಂದೂಕು ಇಟ್ಟುಕೊಂಡಿದಾರೆ. ಇವರು ವರ್ಷವೆಲ್ಲಾ ಆಗಾಗ್ಗೆ ಜಂಗಲಿನಲ್ಲಿ ಶಿಕಾರಿ ಮಾಡುತ್ತಾರೆ. ಇವರನ್ನು ಕೇಳುವವರಿಲ್ಲ. ಇವರಿಗೆ ಹೊರಗಿನ ಪೋಲೀಸಿನವರೂ, ಗ್ರಾಮದ ಕೆಲವರೂ ಸಹಾಯಕರಾಗಿರುವರು. ಕೆಲವು ಸಾರಿ ಹೊರಗಿನ ಪೋಲೀಸ್ ಸ್ಟೇಷನ್‌ಗಳಲ್ಲಿನ ಬಂದೂಕಗಳನ್ನು ಬೇರೆಯವರು ಶಿಕಾರಿಗಾಗಿ ಉಪಯೋಗಿಸುವರೆಂಬ ವರ್ತಮಾನವೂ ಉಂಟು. ಈ ವಿಷಯದಲ್ಲಿ ತಕ್ಕ ಬಂದೋಬಸ್ತು ಆಗುವದೆಂದು ನಂಬುತ್ತೇನೆ. ಎಲ್ಲರಿಗೂ ಶಿಕಾರಿ ಲೈಸೆನ್ಸು ಕೊಡಿಸಿದರೆ ಸರ್ಕಾರಕ್ಕೆ ಉತ್ಪತ್ತಿಯೂ ಆಗುತ್ತೆ. ಕಾನೂನಿನಂತೆ ಶಿಕಾರಿ ಮಾಡಬಹುದು. ಕಾನೂನು ಜನರಿಗೆ ತಿಳಿಯುತ್ತೆ. ಕಳ್ಳತನವಾಗಿ ಬಂದೂಕು ಇಟ್ಟುಕೊಂಡಿರುವದು ತಪ್ಪುತ್ತೆ. ಇದನ್ನು ಸರ್ಕಾರದವರು ಯೋಚಿಸುವದು ಶ್ರೇಯ.—ಗ್ರಾಮಾಭಿವೃದ್ಧಿ ಎಂಬದಾಗಿ ಒಂದು ಏರ್ಪಾಡು ಇದೆಯಷ್ಟೆ. ಇದರ ಸಂಗತಿ ಏನೆಂಬದು ತಿಳಿಯುವದಿಲ್ಲ. ಪ್ರತಿ ತಿಂಗಳಲ್ಲಿ ಮೀಟಿಂಗ್ ನಡೆಯಬೇಕೆಂಬ ಕಾನೂನು ಇದ್ದರೂ ಕೆಲವು ಗ್ರಾಮಗಳಲ್ಲಿ ವರ್ಷವಾದರೂ ನಡೆದಿಲ್ಲ. ಇದಕ್ಕಾಗಿ ಪ್ರತಿ ತಾಲ್ಲೂಕಿನಲ್ಲಿ ಒಬ್ಬರು ಮುನ್ಸಿಗಳಿರುವರು. ಜಮಾಬಂದಿ ನಡೆಯುವ ಗ್ರಾಮಕ್ಕೆ ಆಯಾ ಹೋಬಳಿಗಳ ಪಟೇಲ, ಶ್ಯಾನುಭೋಗರು ಬರುವರು. ಅಗ್ಗ ಗ್ರಾಮಾಭಿವೃದ್ಧಿಯ ಮುನ್ಸಿಯು ದೇವಸ್ಥಾನದ ಕೆಲಸ ಏನು ನಡೆದಿದೆ? ಪತ್ರಿಕೆ ಬರುತ್ತವೆಯೋ? ಮಠ ಉಂಟೋ? ಗ್ರಾಮದಲ್ಲಿ ರಸ್ತೆ, ಚರಂಡಿ ಮಾಡಿದೆಯೋ? ಲಾಂಟಾನ ಕತ್ತರಿಸಿದೆಯೋ ಎಂದು ಕೇಳುವದೂ, ಇದಕ್ಕೆ ಉತ್ತರ ಹೇಳಿದ್ದನ್ನು ಬರೆದುಕೊಳ್ಳುವದೂ, ಇಷ್ಟು ಹೊರತು ಜಮಾಬಂದಿ ನಡೆಯುವ ಗ್ರಾಮವನ್ನು ಕೂಡ ಗ್ರಾಮಾಭಿವೃದ್ಧಿ ಕಾರ್ಯ ಹ್ಯಾಗೆ ನಡೆದಿದೆ ಎಂಬದನ್ನು ಹೋಗಿ ನೋಡುವದಿಲ್ಲ. ಜಮಾಬಂದಿ ನಡೆಯುವ ಸ್ಥಳವನ್ನು ಕೂಡ ಪೂರ್ಣವಾಗಿ ನೋಡುವ ಹಾಗೆ ಕಾಣುವದಿಲ್ಲ. ಹೀಗಾದರೆ ಗ್ರಾಮಾಭಿವೃದ್ಧಿ ಎಂಬ ಏರ್ಪಾಡಿನಿಂದ ಕೆಲವರಿಗೆ ಜೀವನಕ್ಕೆ ದಾರಿಯೇ ಹೊರತು ಕಾರ್ಯತಃ ಪ್ರಯೋಜನ ಕಾಣುವುದಿಲ್ಲ. ಸರ್ಕಾರದವರು ಗ್ರಾಮಗಳ ಬಡ ಜನರ ಅಭಿವೃದ್ಧಿಯನ್ನು ಕೋರಿ ಇದಕ್ಕಾಗಿ ಹಣ ಖರ್ಚುಮಾಡಿದ ಮೇಲೆ ಪ್ರಯೋಜನವೂ ಕಾಣುವಂತಾಗಲೆಂದು ಹಾರೈಸುತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಯುದ್ಧ ನಡೆಯುತ್ತಿರುವ ತನಕ ಹಿಂದುಸ್ಥಾನದ ಸರ್ಕಾರಿ ಅಧಿಕಾರಿಗಳಾಗಿರತಕ್ಕ ಯೂರೋಪಿಯನ್ನರೂ, ರೈಲ್ವೆ ಕಂಪನಿಗಳಲ್ಲಿ ನೌಕರಿ ಮಾಡುತ್ತಿರುವವರೂ ಬ್ರಿಟಿಷ್ ಸೈನಿಕರಾಗಿ ಸೇರಿಕೊಳ್ಳಬಹುದೆಂದು ಇಂಡಿಯಾ ಗವರ್ನ್‌ಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ.

ಸಕ್ಕರ್ ಪಟ್ಟಣದಲ್ಲಿ ಕಾಲು ಎಂಬ ಪೋಸ್ಟ್ ಜವಾನನು ವಿಳಾಸದಾರರಿಗೆ ಬಂದ ಮಣಿಆರ್ಡರುಗಳನ್ನು ತಾನೇ ತೆಗೆದುಕೊಂಡು ಫಾರಮುಗಳಿಗೆ ತನ್ನ ಹಿಪ್ಪಟ್ಟಿನ ಗುರುತನ್ನು ಒತ್ತುತ್ತಾ ಮೋಸ ಮಾಡುತ್ತಿದ್ದನೆಂದು ರುಜುವಾತಾಯಿತು. ಸೆಷನ್ಸ್ ಜಡ್ಜರು ಅವನಿಗೆ ಎರಡು ವರುಷ ಕಠಿಣ ಸಜಾ ವಿಧಿಸಿದರು.

ಅಮೃತಸಾರ ನಗರದ ಅಂಗಡಿಗಳಲ್ಲಿ ಯಾರೋ ಕೃತಕದ ಟೀ ಸೊಪ್ಪನ್ನು ಬಿಕರಿ ಮಾಡುತ್ತಿದ್ದಾರೆಂದು ಪೋಲೀಸಿನವರು ವರ್ತಕರ ಅಂಗಡಿಗಳನ್ನೆಲ್ಲಾ ಶೋಧನೆ ಮಾಡಿದರು. ಒಬ್ಬ ಮಹಮದೀಯ ವರ್ತಕನ ಹತ್ತಿರ ಹಲವು ಮಣಗಳಷ್ಟು ಕೃತಕ ಟೀ ಸೊಪ್ಪು ಸಿಕ್ಕಿತು. ಸರ್ಕಾರದವರು ಅವನ ಮೇಲೆ ಮೊಕದ್ದಮೆ ಮಾಡಿದಾರೆ.

ಕಲ್ಕತ್ತಾ ಪಟ್ಟಣದಲ್ಲಿ ರಾಜೇಂದ್ರಕುಮಾರ ಚೌಧ್ರಿ ಎಂಬಾತನು ವೈಸ್ ರಾಯರ ನ್ಯಾಯವಿಧಾಯಕ ಸಭಾ ಮೆಂಬರಾದ ಮಿ|| ಫಜ್ನಾವಿ ಎಂಬಾತನ ಮೇಲೆ 17,830 ರೂಪಾಯಿಗೆ ಡಿಕ್ರಿ ಪಡೆದು ಜಾರಿಗೆ ಕೊಟ್ಟು ವಾರಂಟಿನಿಂದ ಹಿಡಿಸಬೇಕೆಂದು ಡಿಸ್ಟ್ರಿಕ್ಟ್ ಜಡ್ಜಿಯವರನ್ನು ಪ್ರಾರ್ಥಿಸಿದನು. ಜಡ್ಜಿಯವರು ಆತನಿಗೆ ನೋಟೀಸ್ ಕೊಡಿಸಿರುತ್ತಾರೆ.

ರಾಬರ್ಟ್ ಮಕ್ಕಾಲೆ ಎಂಬೊಬ್ಬ ಯೂರೋಪಿಯನ್ನನು ತಾನು ಇಂಜನಿಯರೆಂದು ಸುಳ್ಳು ಯೋಗ್ಯತಾ ಪತ್ರಿಕೆಯನ್ನು ಹಾಜರು ಮಾಡಿ ಬೊಂಬಾಯಿನಲ್ಲಿ ನೌಕರಿಗೆ ಸೇರಿದ್ದು ಪತ್ತೆ ಆಯಿತು. ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ತನಿಖೆಮಾಡಿ ಅವನಿಗೆ ನಾಲ್ಕು ತಿಂಗಳ ಕಠಿಣ ಸಜಾ ಮತ್ತು 52 ರೂಪಾಯಿ ಜುಲ್ಮಾನೆ ಎಂಬೀ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಮದರಾಸ್ ಅಧಿಪತ್ಯದೊಳಗೆ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಬೋರ್ಡುಗಳಲ್ಲಿ ಮೆಂಬರುಗಳಾಗಿರತಕ್ಕವರೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ಬಿರುದುಗಳನ್ನು ಪಡೆದಿರತಕ್ಕವರೂ, ಮದರಾಸ್ ಪಟ್ಟಣದೊಳಗೆ ಮಾತ್ರ ಸಬ್ ರಿಜಿಸ್ಟ್ರಾರ್‌ಗಳೂ ವಕಾಲತ್ತು ಮೊದಲಾದ ಫಾರಮುಗಳಿಗೆ ರುಜುಮಾಡಿ ಕೊಡಬಹುದೆಂದು ರಿಯಾಯಿತಿ ತೋರಿಸಿದಾರೆ. ಕಕ್ಷಿಗಾರರೇ ಮೊದಲಾದವರು ಇದಕ್ಕಾಗಿ ಕಷ್ಟಪಡುತ್ತಿದ್ದದ್ದು ತಪ್ಪಿತು.

ಪಂಜಾಬ್ ಅಧಿಪತ್ಯಕ್ಕೆ ಸೇರಿದ ನಾರ್ತ್‌ಗೇಟ್ ದರ್ಯಾಯಿತಿ ಮೊಕದ್ದಮೆಯಲ್ಲಿ ಡೇರಾ ಘಾಜಿ ಖಾನ್ ಪಟ್ಟಣದ ಎಸ್. ಫಕೀರ್ ಷಾ ಜೋಜ್ದಾರ್ ಎಂಬಾತನಿಗೆ ಏಳು ವರುಷದ ಬಂಕೋಲ್ ಸಜಾ ಶಿಕ್ಷೆಯಾಯಿತು. ಈ ಶಿಕ್ಷೆಯನ್ನು ಮಾಫ್ ಮಾಡಿಕೊಡಬೇಕೆಂದು ಆ ಫಕೀರನು ಲೆಫ್ಟಿನೆಂಟ್ ಗವರ್ನರವರನ್ನು ಬೇಡಿಕೊಂಡದ್ದಕ್ಕೆ ಅವರ, ಆ ಶಿಕ್ಷೆಯನ್ನು ಮನ್ನಿಸಿ ಒಂದು ವರುಷ ಆತನನ್ನು ತನ್ನ ಊರಿಗೆ ಬಾರದಂತೆ ಗಡೀಪಾರು ಮಾಡಬೇಕೆಂದು ಅಪ್ಪಣೆಕೊಟ್ಟು ಬಿಡುಗಡೆ ಮಾಡಿದರು.

ವಾಯುವ್ಯ ಸರಹದ್ದಿನಲ್ಲಿರುವ ಆಫ್ರಿದೀ ಪ್ರಜೆಗಳ ಮುಖಂಡರು ಜಾಮ್‌ರೂದ್ ನಗರದಲ್ಲಿ ಸಭೆ ಸೇರಿ ವೈಸ್‌ರಾಯರವರು ಸಾಹೆಬ್ ಜಾದಾ ಅಬ್ದುಲ್ ಖಯೂಂ ಎಂಬ ಆಫ್ರಿದೀ ಮುಖಂಡರಿಗೆ ನವಾಬ್ ಎಂಬ ಬಿರುದು ದಯಪಾಲಿಸಿದ ಸಂತೋಷಕ್ಕಾಗಿ ವೈಸ್‌ರಾಯರವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ತಂತೀವರ್ತಮಾನಕೊಟ್ಟು ಆಕೆತಾಡಿದ್ದಲ್ಲದೆ 1,000 ರೂಪಾಯಿ ನಜರಾನೆಯನ್ನು ಕಳುಹಿಸಿ ಈ ಹಣವನ್ನು ಯುದ್ಧದಲ್ಲಿ ಗಾಯಪಟ್ಟವರ ರಿಲೀಫ್ ಫಂಡಿಗೆ ವಿನಿಯೋಗಿಸಿಕೊಳ್ಳಬೇಕೆಂದು ವಿಜ್ಞಾಪಿಸಿಕೊಂಡರು.

ಕಲ್ಕತ್ತಾ ಪಟ್ಟಣದಲ್ಲಿ ಒಂದು ರೈಲ್ವೆ ಕಂಪನಿಯ ಗುಮಾಸ್ತನಾಗಿದ್ದ ಸುರೇಂದ್ರನಾಥನೆಂಬುವನು ಕಂಪನಿ ಚೆಕ್ ಪುಸ್ತಕದಲ್ಲಿ ಒಂದು ಹಾಳೆಯನ್ನು ಹರಿದು ತೆಗೆದುಕೊಂಡು 12,500 ರೂಪಾಯಿ ಬೇಕೆಂದು ಅದರಲ್ಲಿ ಬರೆದು ಬಂಗಾಳಿಗಳಿಬ್ಬರ ಕೈಯಲ್ಲಿ ಕೊಟ್ಟು ಹಣ ತರುವಂತೆ ಬಂಗಾಳಾ ಬ್ಯಾಂಕ್ ಆಫೀಸಿಗೆ ಕಳುಹಿದನು. ಆ ಬ್ಯಾಂಕಿನವರು ಕಳೆದ ಸೆಪ್ಟಂಬರಿನಲ್ಲಿ ಫೋರ್ಜರಿ ಮಾಡಿದ 14,700 ರೂಪಾಯಿನ ಎರಡು ಚೆಕ್ಕುಗಳಿಗೆ ಹಣ ಕೊಟ್ಟು ಮೋಸಹೋಗಿದ್ದರು. ಈಗ ಕೊಟ್ಟ ಚೆಕ್ಕಿಗೆ ಹಣಕೊಡದೆ ಅನುಮಾನದ ಮೇಲೆ ಪೋಲೀಸಿಗೆ ತಿಳಿಸಿದರು. ಅವರು ಪತ್ತೆ ಮಾಡಿದ್ದು ನಡೆಸಿದ್ದರಲ್ಲಿ ಈ ಚೆಕ್ಕೂ ಫೋರ್ಜರಿ ಆದದ್ದೆಂದು ಗೊತ್ತಾಯಿತು. ಈಗ ಆ ಗುಮಾಸ್ತೆಯನ್ನೂ, ಬಂಗಾಳಿಗಳಿಬ್ಬರನ್ನೂ ಹಿಡಿದು ಸೆಷನ್ಸ್ ಕೋರ್ಟಿನಲ್ಲಿ ಮೊಕದ್ದಮೆ ಮಾಡಿದಾರೆ.

ಕಳೆದ 1909 ನೇ ಇಸವಿಯಲ್ಲಿ ಸ್ವಾರಾಜ್ಯವೆಂಬ ಪತ್ರಿಕೆ ಎಡಿಟರಾಗಿದ್ದು ರಾಜದ್ರೋಹವೆಂಬ ಅಪರಾಧಕ್ಕೆ ಗುರಿಯಾಗಿ ಹತ್ತು ವರುಷ ಕಠಿಣ ಶಿಕ್ಷೆಯನ್ನು ನಾಗಪುರದ ಸೆಂಟ್ರಲ್ ಜೈಲಿನಲ್ಲಿ ಅನುಭವಿಸುತ್ತಿದ್ದ ರಾಮಚರಣ ಲಾಲನೆಂಬುವನು ಬಂದೀಖಾನೆಯಲ್ಲಿ ಕೆಲಸಮಾಡಲೊಪ್ಪದೆ ಹಟಹಿಡಿದನು. ಜೈಲ್ ಅಧಿಕಾರಿಯು ಅದಕ್ಕಾಗಿ ಅವನ ಮೇಲೆ ಮೊಕದ್ದಮೆ ತಂದಿದ್ದಾರೆ. ಅವನು ಕೆಲಸ ಮಾಡುವುದಿಲ್ಲವೆಂದು ಮ್ಯಾಜಿಸ್ಟ್ರೇಟರ ಮುಂದೂ ಹೇಳಿ ಒಪ್ಪಿಕೊಂಡನು. ಈ ಮೊಕದ್ದಮೆ ನಾಳೆ ಸೋಮವಾರ ವಿಚಾರಣೆಗೆ ಇದ್ದಿತು

ಗೃಹಕೃತ್ಯದ ನೋಟೀಸು.

ತಿಪ್ಪೂರು ತಾ॥ ಸೊಣವಿನಕೆರೆಯಲ್ಲಿರುವ ಲವಂಬ್ಯಾರ್ ಅಳಸಿಂಗ್ರಯ್ಯಂಗಾರ್ರ ಸೊಸೆ ಅಮ್ಮಣ್ಣಮ್ಮನೆಂಬುವರಿಗೆ ತಮ್ಮ ಗಂಡನ ಪಿತ್ರಾರ್ಜಿತವಾದ ಪೆಡ್ಡ್ಯಾಲ್ ಸ್ಥಿರಸೊತ್ತನ್ನು ಉತ್ತರಾಧಿಕಾರಿಗಳ ಒಪ್ಪಿಗೆ ವಿನಹಾ ಪರಭಾರೆ ಮಾಡಲು ಹಕ್ಕಿಲ್ಲ. ಒಂದು ವೇಳೆ ಜನಗಳ ದುರ್ಬೋಧನೆಯಿಂದಲೂ, ತಮ್ಮ ವೃದ್ಧಾಪ್ಯದ ಪೀಡನೆಯಿಂದಲೂ, ಬುದ್ಧಿಚಾಂಚಲ್ಯದಿಂದಲೂ ಕ್ರಯ, ಭೋಗ್ಯ, ಆಧಾರ ಮತ್ತು ಪರಿವರ್ತನೆಗಳು ಮಾಡಿಕೊಡುವದಾಗಿ ಹೇಳಿದಲ್ಲಿ ಅವರ ಮಾತಿನ ನಂಬಿಕೆಯಿಂದ ಯಾರೂ ಯಾವ ವಿಧವಾಗಿಯೂ ಸದರಿ ಸೊತ್ತನ್ನು ಪಡೆದುಕೊಳ್ಳತಕ್ಕದ್ದಲ್ಲ. ಹಾಗೆ ಹೊಂದಿದಲ್ಲಿ ಯಾವ ವಿಧವಾದ ಪ್ರತಿಫಲವೂ ಇಲ್ಲದೇನೇ ಸೊತ್ತನ್ನು ಮೇಲ್ಕಂಡ ಅಮ್ಮಣ್ಣಮ್ಮನವರ ಉತ್ತರಾಧಿಕಾರಿಗೆ ಬಿಟ್ಟುಕೊಡಬೇಕಾಗಿದೆಯೆಂದು ಈ ಮೂಲಕ ಎಚ್ಚರಿಸಲಾಗಿದೆ.

ಷೆಡ್ಯೂಲ್.—ತಿಪ್ಪೂರು ತಾ॥ ಸೊಣವಿನಕೆರೆ ಟವರ್ನಲ್ಲಿರುವ ಖಾನೇಷುಮಾರಿ 150 ನೇ ನಂಬರು ಹೆಂಚಿನ ಮಹಡಿ ಮನೆ. ಪೂರ್ವಕ್ಕೆ ರಾ॥ ಸುಬ್ಬರಾಮಯ್ಯನವರ ಮನೆ, ಪಶ್ಚಿಮ, ಉತ್ತರ ಮತ್ತು ದಕ್ಷಿಣಕ್ಕೆ ಸರ್ಕಾರಿ ಸಿಗ.

ಸೊಣವಿನಕೆರೆ, ಎನ್. ಕಸ್ತೂರಿ ರಂಗಯ್ಯಂಗಾರ್,
ತಾ॥ 8-1-1916. [56-1] ಉತ್ತರಾಧಿಕಾರಿ.

ಗೃಹಕೃತ್ಯದ ನೋಟೀಸು.

ಚಾಮರಾಜನಗರ ತಾಲ್ಲೂಕಿಗೆ ಸೇರಿದ ಕಸಬಾ ಹೋಬಳಿ ದೊಡ್ಡಮೋಳೆ ಗ್ರಾಮದಲ್ಲಿರುವ ಉಪ್ಪಲಿಗರ ಜಾತಿ ಮೊಟ್ಟೆ ಅಂಕಶೆಟ್ಟಿಯ ಮೊಮ್ಮಗ ಅಂಕಶೆಟ್ಟಿಯ ಹೆಂಡತಿ ಸಿದ್ದಿಯು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದು ಏನಂದರೆ—ನನಗೆ ಹನ್ನೊಂದನೇ ವರುಷದಲ್ಲಿ ಸದರಿ ಅಂಕಶೆಟ್ಟಿಗೆ ಲಗ್ನವಾಗಿ ನಾನು ದೊಡ್ಡವಳಾದ ನಂತರ ಸದರಿ ಅಂಕಶೆಟ್ಟಿಗೆ ಋತುಶಾಂತಿ ಪ್ರಸ್ತವಾಗಿ ಆ ಲಾಗಾಯತು ನನ್ನ ಗಂಡನ ಅನುಜ್ಞೆಯ ಪ್ರಕಾರ ಗಂಡನ ಮನೆಯಲ್ಲಿ ಬಾಳುತ್ತಾ ಇದ್ದೇನೆ. ಸದರಿ ನನ್ನ ಗಂಡ ಫಿತಿಯಾಗಿ ಸುಮಾರು 3 ತಿಂಗಳಾಗುತ್ತೆ. ನನ್ನ ಗಂಡನ ಹೆಸರಿನ ಪಟ್ಟೆ ಜಮೀನುಗಳು ಬೇಡಮೂಡ್ಲು ಗ್ರಾಮಕ್ಕೆ ಸೇರಿದ್ದು, ಹರದನಹಳ್ಳಿ ಗ್ರಾಮಕ್ಕೆ ಸೇರಿದ್ದು ಮತ್ತು ದೊಡ್ಡಮೋಳೆ ಗ್ರಾಮಕ್ಕೆ ಸೇರಿದ್ದು. ಈ ಗ್ರಾಮಗಳ ಪೈಕಿ ಹರದನಹಳ್ಳಿ, ಬೇಡಮೂಡ್ಲು ಈ ಎರಡು ಗ್ರಾಮದ ಜಮೀನುಗಳು ನನ್ನ ಹೆಸರಿಗೆ ಖಟ್ಟೆ ಆಯಿತು. ನನ್ನ ಹೆಸರಿಗೆ ಪಟ್ಟೆ ಆದದ್ದಕ್ಕೆ ನನ್ನ ದೊಡ್ಡ ಮಾವ ಹುಚ್ಚಶೆಟ್ಟಿ ಮಗ ಹುಚ್ಚಶೆಟ್ಟರು ದುರಾಶೆಯಿಂದ ಈ ಸೊತ್ತನ್ನು ಅಪಹರಿಸಬೇಕೆಂತ ಬಹಳ ಪ್ರಯತ್ನಪಟ್ಟು, ಕಳೆದ ಜನವರಿ 18-1-1916 ರಲ್ಲಿನ ವೃತ್ತಾಂತ ಪತ್ರಿಕೆಯಲ್ಲಿ ಸುಳ್ಳು ಮಾತನ್ನು ಕಲ್ಪನೆ ಮಾಡಿ 2,000 ರೂ. ತೆಗೆದುಕೊಂಡು ಹೋದಳೆಂದು ದೂರು ಮಾಡಿರುವರು. ಅಲ್ಲದೆ ನನಗೆ ಯಾವ ಹಕ್ಕಿಲ್ಲವೆಂದೂ ಪ್ರಕಟಿಸಿರುತ್ತಾರೆ. ಸದರಿ ಜಮೀನುಗಳನ್ನು ನನ್ನ ಇರಾದೆ ವಿನಹ ಬೇರೆ ಯಾರಾದರೂ ಖರೀದಿ ಸಾಗುವಳಿ ಮಾಡಿದರೆ ಮುಂದಿನ ನನ್ನ ನಷ್ಟಕ್ಕೆ ಗುರಿಯಾಗುವರು. ಅಲ್ಲದೆ ನನ್ನ ಮಾವ ಚಿಕ್ಕಶೆಟ್ಟಿಯವರು ಜೀವಂತರಾಗಿ ಇದ್ದ ಕಾಲದಲ್ಲೇ ಬೇರೆ ಬೇರೆ ಪಟ್ಟೆಯಾದ ರಿಕಾರ್ಡು ಉಂಟು. [59-1]

ತಾ॥ 25-2-1916. ಅಂಕಶೆಟ್ಟಿ ಹೆಂಡತಿ ಸಿದ್ದಿಯು ಗೆರೆ ರುಜು.

ಸ್ವದೇಶ ಕೈಗಾರಿಕೆಗಳು.

ಅನೇಕ ಸ್ಥಳಗಳಲ್ಲಿ ಕೈಗಾರಿಕೆಗಳ ಆಯೋಜನೆಗಳನ್ನೂ, ಬಂಡವಾಳ ಬಾಧೆಯಿಂದ ಗೊಬ್ಬರವನ್ನು ತಯಾರಿಸಬಹುದಾದ ಆಯೋಜನೆಗಳನ್ನೂ ಏರ್ಪಡಿಸುವ ಉದ್ದೇಶದಿಂದ ನಮ್ಮ ದೇಶಬಾಂಧವರಿಗೆ ಅರಿಕೆ ಮಾಡಿಕೊಳ್ಳುವುದೇನಂದರೆ ನಿಮ್ಮ ಸ್ಥಳದಲ್ಲಿ ಯಾವುದಾದರೂ ಕೈಗಾರಿಕೆಯನ್ನೇ ಆಗಲಿ, ಗೊಬ್ಬರದ ಆಯೋಜನೆಯನ್ನೇ ಆಗಲಿ ಇಡಬೇಕೆಂದು ಯಾರಿಗಾದರೂ ತಾತ್ಪರ್ಯವಿದ್ದರೆ ಅಲ್ಲಿನ ಮುಖಂಡರು ಕಾಗದ ಬರೆದು ನನಗೆ ತಿಳಿಸಿದರೆ ನಾನು ಬಂದು ಗೊಬ್ಬರವನ್ನು ತಯಾರಿಸುವ ರೀತಿಯನ್ನು ತೋರಿಸಿ ಅನುಭವಪಡಿಸಿ ಆಯೋಜನೆಯನ್ನು ಏರ್ಪಡಿಸುವೆನು. ಕೆ. ಆರ್. ಚಕ್ರವರ್ತಿ,

[60-1] ಏಜಂಟ್, ಮೈ. ಸ್ಟೀಂ ಪ್ರಿಂಟಿಂಗ್ ಕಂಪನಿ, ಬೆಂಗಳೂರು ಸಿಟಿ

ನಮ್ಮಲ್ಲಿ ಹಾಜರಾಗಿರುವ ಸಾಮಾನುಗಳು ಬಹಳ ಕಮ್ಮಿ ಬೆಲೆಗೆ ದೊರೆಯುತ್ತವೆ.



ರಾಬ್‌ಸನ್ ಕ್ರೂಡ್ ಆಯಿಲ್, ಗ್ಯಾಸ್ ಇಂಜನುಗಳು ; ಎಂಜೆಲ್‌ಬರ್ಗ್ ಹಲ್ಲರುಗಳ ಚಿಲ್ಲರೆ ಸಾಮಾನುಗಳು ; ಎಂಜೆಲ್‌ಬರ್ಗ್ ಸಿಸ್ಟಮ್ ಹಲ್ಲರುಗಳು ನಂ. 1 ಮತ್ತು 2; ಡೇವಿ ಪ್ಯಾಕ್ಸ್‌ಮ್ಯಾನ್ ಸ್ಟೀಂ, ಗ್ಯಾಸ್ ಮತ್ತು ಆಯಿಲ್ ಇಂಜನುಗಳೂ, ಬಾಯಿಲರ್‌ಗಳೂ; ಸೆಂಟ್ರಿಫ್ಯೂಗಲ್ ಹ್ಯಾಂಡು ಮತ್ತು ಪವರ್ ಪಂಪುಗಳು; ಫೈರ್ ಇಂಜನುಗಳು; ಹ್ಯಾಂಡು ಪವರ್ ಐಸ್ ಮಾಡುವ ಯಂತ್ರಗಳು; ಎಮರಿ, ಸಿಮೆಂಟು, ಕೆಮಿಕಲ್ ಸಾಲ್ಟು ; ಚಲ್ಲದ ರೇಕುಗಳು; ಆಸ್ಟ್ರೇಲಿಯಾ ದೇಶದ ನಾಟು ಇಟ್ಟಿಗೆ ಮಾಡುವ ಯಂತ್ರಗಳು; ಹ್ಯಾಂಡು ಮತ್ತು ಪವರ್ ಭತ್ತದ ಹಲ್ಲರುಗಳು; ಚರ್ಮ, ಒಂಟೆ ಕೂದಲು ಮತ್ತು ನೂಲು ಬೆಲ್ಟುಗಳು; ಇನ್ನೂ ಸಕಲ ವಿಧವಾದ ಇಂಜನೀರಿಂಗು, ವಿಲ್ಲು ಮೊದಲಾದವುಗಳಿಗೆ ಬೇಕಾದ ಯಾವತ್ತು ಸಾಮಾನುಗಳು ಬೇಕಾದವರು ಇನ್ನೊಂದು ಸ್ಥಳಕ್ಕೆ ಹೋಗುವದಕ್ಕೆ ಮುಂಚೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವರೆಂದು ನಂಬುತ್ತೇವೆ. [208-21]

ಇಂಡಿಯನ್ ಕಾಮರ್ಸ್ & ಇಂಡಸ್ಟ್ರೀಸ್ ಕಂಪನಿ, ಮದ್ರಾಸ್.

The Indian Commerce & Industries Co., Madras.

Branches—Bezwada and Tanjore.

ಅಮೇರಿಕನ್ ಕೇಶಮೋಹರಿ.

ಕ್ರಯ ಡಬ್ಬಿ 1 ಕ್ಕೆ 4 ಆಣೆ, 3 ಡಬ್ಬಿಗಳಿಗೆ 8 ಆಣೆ.

ಇತರರು ಕೇಶಮೋಹರಿ ಹೆಸರಿನಿಂದ ಮಾರುತ್ತಲಿರುವ ಸೋಪುಗಳಿಗೆ ನಾವು ತಯಾರಿಸಿರುವ ಅಮೇರಿಕನ್ ಕೇಶಮೋಹರಿ ಔಷಧವನ್ನು ಜಾತಿ ಸಾಬೂನು, ಎಣ್ಣೆ, ಕರ್ಪೂರದ ತೈಲ ಮೊದಲಾದವುಗಳನ್ನು ಸೇರಿಸಿ ಸೋಪಿನ ಹಾಗೆ ಬಿಲ್ಲೆ ಮಾಡಿ ಡಬ್ಬಿಯಲ್ಲಿಟ್ಟು ಮೋಸ ಮಾಡುತ್ತಾರೆ. ನಮ್ಮ ಅಮೇರಿಕನ್ ಕೇಶಮೋಹರಿಯು ಫಾಟು ಹೋಗದ ಹಾಗೆಯೂ, ಎಣ್ಣೆ, ಸುಣ್ಣ, ಕರ್ಪೂರದ ತೈಲಗಳಿಂದ ಸೇರದೆಯೂ ತಯಾರಿಸಿ ತಗಡಿನ ಸೀಸೆಯಲ್ಲಿ ಗಟ್ಟಿಯಾಗಿ ಬಿಗಿಸಿರುವದರಿಂದ ಇದನ್ನು ಕೂದಲುಗಳ ಮೇಲೆ ಸವರಿದ ಕ್ಷಣ ಮಾತ್ರದಲ್ಲಿ ರೋಮಗಳು ಉದುರಿ ಆ ಸ್ಥಳವು ನುಣ್ಣಗಾಗುತ್ತೆ. ಪರೀಕ್ಷೆ ನಡೆಸಬೇಕೆನ್ನುವವರು ತರಿಸಿ ಉಪಯೋಗಿಸುವದರಿಂದಲೂ, ಪಡಸಿಯಿಂದಲೂ ಇದರ ನಿಜಸ್ಥಿತಿಯನ್ನು ತಿಳಿಯಬಹುದು.

ಫೆಬ್ರವರಿ ಮಹೋತ್ಸವದ ಕೈ ಗಡಿಯಾರ.



ಅರ್ಧ ಕ್ರಯ ರೂ. 1–14–0.

ಇದೇ ಫೆಬ್ರವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಡಿಸೆಂಬರ್ ಒಳಗೆ ತರಿಸಿಕೊಳ್ಳುವರಿಗೆ ರೂ 1-14-0 ಆಣೆಗೆ ಕೊಡಲಾಗುವುದು. [111-39]

ಮಧುರೆ ಚುಂಗುಡಿ ಅಂಚಿನ ಸೀರೆ ಅವ್ವಲ್ ವರ್ಗ ರೂ. 3–0–0 ಫೆಬ್ರವರಿ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರವಿಕೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಘನತೆಯಾಗಿಯೂ ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ನುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ.

ವಿಳಾಸ— ವಿ. ಕೆ. ಕಂದಸ್ವಾಮಿ ಅಂಡ್ ಕಂಪನಿ, 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು

5,000 ರೂ. ಬಹುಮಾನ



ಈ ವರೆವಿಗೂ ನಮ್ಮಲ್ಲಿಗೆ ಬಂದಿರುವ ಸಾವಿರಾರು ಯೋಗ್ಯತಾ ಪತ್ರಿಕೆಗಳಲ್ಲಿ ಕೆಲವನ್ನು ಇಲ್ಲಿ ಪ್ರಚುರ ಪಡಿಸಿರುತ್ತೇವೆ. ಇವುಗಳಲ್ಲಿ ಯಾವುದನ್ನಾದರೂ ನಕ್ಕಲ್ ಯೋಗ್ಯತಾ ಪತ್ರಿಕೆಯೆಂದು ವ್ಯಕ್ತಪಡಿಸಿದವರಿಗೆ ಮೇಲೆ ತಿಳಿಸಿರುವ 5,000 ರೂಪಾಯಿ ಬಹುಮಾನ ಕೊಡುವೆವು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ಕೊಡದೆ ನಿರಾಕರಿಸುವದಾದರೆ ಕೋರ್ಟಿನ ಮೂಲಕ ನನ್ನಿಂದ ಪಡೆಯಬಹುದು. [37–4]

ಡಿಲ್ಲಿವೈದ್ಯರು ಡಿ. ಮನ್ನಾಲಾಲ್ ಯವರಿಂದ ತಯಾರುಮಾಡಲ್ಪಟ್ಟ ಲೋಕಪ್ರಸಿದ್ಧವಾದ

ಸಾಲಾಮಿಸ್ರಿ ಮುರಬ್ಬ.

(1) ತಾವು ಕಳುಹಿಸಿದ ಸಾಲಾಮಿಸ್ರಿ ಮುರಬ್ಬ ತೆಗೆದುಕೊಂಡದ್ದರಿಂದ ಬಹಳ ಗುಣಹೊಂದಿದೇನೆ. ನಿಮ್ಮ ಕ್ಯಾಟಲಾಗಿನಲ್ಲಿ ಕಾಣಿಸಿರುವಷ್ಟು ಗುಣವು ಸಂಪೂರ್ಣವಾಗಿ ಕೊಡುತ್ತದೆ ಎಂದು ಧಾರಾಳವಾಗಿ ಹೇಳುತ್ತೇನೆ. ದಯವಿಟ್ಟು ಇನ್ನೊಂದು ಡಬ್ಬಿ ಸಾ. ಮಿ. ಮುರಬ್ಬ ವಿ. ಪಿ. ಮೂಲಕ ಜಾಗ್ರತೆ ಕಳುಹಿಸಿ.

ತೀರ್ಥಹಳ್ಳಿ ಪೋಸ್ಟು, ಅಂಗಡಿ ಮಂಜಪ್ಪ,
6-12-1915 ಮೇಗರವಳ್ಳಿ.

(2) ನಿಮ್ಮ ಸಾಲಾಮಿಸ್ರಿ ಮುರಬ್ಬದಿಂದ ನನಗೆ ಇದ್ದ.......ಕಾಯಿಲೆಯು ಗುಣ ಕಂಡುಬಂದದ್ದರಿಂದ ಇನ್ನು ಎರಡು ಡಬ್ಬಿ ಸಾಲಾಮಿಸ್ರಿ ಮುರಬ್ಬವನ್ನು ಕಳುಹಿಸಿರಿ.

ಹುಬ್ಬಳ್ಳಿ, ಗೋವಿಂದರಾವ ಗಾಡಗೀಳ,
23-8-1915. ಬಾಠ ದುಕಾನ.

(3) ನಿಮ್ಮ ಮುರಬ್ಬವನ್ನು ಅಶಕ್ತರಾಗಿದ್ದ ನನ್ನ ಕುಟುಂಬಕ್ಕೆ ಕೊಟ್ಟೆನು. ನಿಮ್ಮ ಪ್ರಕಟನೆಯಂತೆ ಅದನ್ನು ಸೇವಿಸಿದ್ದರಿಂದ ತುಂಬಾ ಗುಣಕೊಟ್ಟಿರುತ್ತೆ. ನಿಮ್ಮ ಔಷಧವು ಸರ್ವೋತ್ಕೃಷ್ಟವಾದದ್ದೆಂದು ನಾನು ನಿರ್ಭಯವಾಗಿ ಹೇಳುತ್ತೇನೆ. ಇನ್ನೂ ಒಂದು ಡಬ್ಬಿಯನ್ನು ಸೇವಿಸಿದರೆ ಅನುಕೂಲವೆಂತು ತೋರುವುದರಿಂದ ಕೂಡಲೆ ಇನ್ನೊಂದು ಡಬ್ಬಿ ಸಾ. ಮಿ. ಮುರಬ್ಬ ರವಾನಿಸಿ.

ಮೈಸೂರು, ಎಡಿಟರ್,
23-1-1916 ಕಾವೇರಿ ಸಂಗ್ರಹ ಆಫೀಸ್.

(4) ನನಗೆ ಎರಡು ವರ್ಷಗಳಿಂದ ...ಇದ್ದ ಕಾಯಿಲೆಗೆ ಮೈಸೂರು ವೈದ್ಯರುಗಳಲ್ಲಿ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ಗುಣವಾಗದೆ ಕಷ್ಟಪಡುತ್ತಿದ್ದೆನು. ನಂತರ ಏನೋ ಕಾರಣಾಂತರದಿಂದ ಬೆಂಗಳೂರಿಗೆ ಬಂದಿದ್ದಾಗ ನಿಮ್ಮಲ್ಲಿ ತೆಗೆದುಕೊಂಡ ಸಾಲಾಮಿಸ್ರಿ ಮುರಬ್ಬವನ್ನು ಸೇವನೆ ಮಾಡಿದ್ದರಿಂದ ಮೇಲ್ಕಂಡ ರೋಗ ಗುಣವಾಗಿರುತ್ತೆ. ಇದಕ್ಕೆ ಏನೇನೂ ಸಂದೇಹವಿಲ್ಲ. ಈಗ ಪುನಹ ಸಾಲಾಮಿಸ್ರಿ ಮುರಬ್ಬವನ್ನು ಮತ್ತು ಕೆಲವು ಔಷಧಿಗಳನ್ನೂ ನಮ್ಮ ಅಳಿಯ ಕೃಷ್ಣರಾಯನ ಕೈಯಲ್ಲಿ ಕೊಟ್ಟು ಕಳುಹಿಸಿ

ದೊಡ್ಡಪೇಟೆ. ಮೈಸೂರು, ಬಕ್ಷಿ ನರಸಪ್ಪನವರ ಮನೆಯಲ್ಲಿರುವ
29-7-1913 ಸ್ವಾಮಿರಾಯ.

By Telegram.

(5) Send three tins of Salamisri Murabba by V. P. P.

Mandalay, P. R. V. ALAGAPPA CHETTY.
30-12-1915.

(6) ನಿಮ್ಮ ಸಾಲಾಮಿಸ್ರಿ ಮುರಬ್ಬದಿಂದ ನನಗೆ ಬಹಳ ಶಕ್ತಿಯು ಕಂಡುಬಂದುದರಿಂದ ಇನ್ನು 3 ಡಬ್ಬಿ ಸಾ. ಮಿ. ಮುರಬ್ಬ ವಿ. ಪಿ. ಮೂಲಕ ಕಳುಹಿಸಿ.

ಮುಗೋಳಿಯ, ಬಿದರ, ಮಹಮ್ಮದ್ ಸಾದಿಕ್,
25-12-1915. ಸ್ಕೂಲ್ ಮಾಸ್ಟರ್, ಜೀನಸ್-ಉರ್-ಮಾನ್ಸ್.

(7) Your Panjab Salamisri Murabba, which you sent me on 24-11-1915, has given me entire satisfaction as it has improved my strength and health a good deal. I therefore wish to take some more time and requst you will please send me 6 tins of the above Murabba by V. P. P.

Malpe, S. Canara. GIRGITH HAYATH,
19-1-1916. Merchant.

8)......It is with extreme pleasure that I express my gratitude towards you. Your Salamisri Murabba has given me marvellous effect. I request you to send me one more tin of the same quality as soon as possible

Aurangabad, G. Bhim Singh, S. Caps
13-1-1916. Clerk, Ex. En. Office.

ಕ್ರಯ ಡಬ್ಬಿ 1 ಕ್ಕೆ ರೂ. 2. ಟಪಾಲ್ ಖರ್ಚು ಒಂದು ಡಬ್ಬಿಯಿಂದ 3 ಡಬ್ಬಿಗಳಿಗೆ 6 ಆಣೆ.

ಇದನ್ನು ಕೊಳ್ಳುವಾಗ ಇಲ್ಲಿ ಕಾಣುತ್ತಿರುವ ಟ್ರೇಡ್ ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿ. ಕೇಟಲಾಗು ಅಪೇಕ್ಷಿಸುವವರಿಗೆ ಪುಗಸಟ್ಟೆ ಕಳುಹಿಸುವೆವು. ನಮ್ಮ ವಿಳಾಸ—

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯ,

5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

Useful in Peace and War **FIRST AID IN ACCIDENTS.** BY DR. U. RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ನಡೆಸಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು. ರಾಮರಾವ್ ಇವರಿಂದ ರಚಿತವಾಗಿ ಮದರಾಸ್ ಕ್ರಿಶ್ಚಿಯನ್ ಕಾಲೇಜು ಪಂಡಿತರಾದ ದೇವಶಿಖಾಮಣಿ ಅಳಸಿಂಗರಾಚಾರ್ಯರಿಂದ ಸುಲಭವಾದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟುದು.

DEDICATED TO H. H. THE MAHARAJA OF MYSORE

ಅಪಾಯಕ್ಕೆ ಗುರಿಯಾದ ಮನುಷ್ಯನ ಅದೃಷ್ಟವು, ಮೊದಲು ಅವನು ಯಾರ ಕೈಗೆ ಸಿಕ್ಕಬೀಳುವನೋ, ಅವರ ಕಾರ್ಯಗಳಿಗೆ ತಕ್ಕಂತಿರುವುದು. ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ತಕ್ಷಣದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪು ಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ಮೊದಲು ಮಾಡಬೇಕಾದ ಚಿಕಿತ್ಸಾಶಾಸ್ತ್ರವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆಯಾ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡಿಸಿದ್ದರೆ, ನಿಸ್ಸಂದೇಹವಾಗಿ ಬದುಕಬಹುದಾಗಿದ್ದ ಪ್ರಾಣವೂ ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು. ಈ ವಿಧವಾಗಿ ಪ್ರತಿ ವರ್ಷವೂ ಎಷ್ಟೋ ಬೆಲೆಯುಳ್ಳ ಜೀವಗಳು ಮರಣಹೊಂದುತ್ತಿರುವುವು.

ಒಬ್ಬ ಮನುಷ್ಯನಿಗೆ ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯಾಗಲಿ, ಇಲ್ಲವೇ ಯಾವುದಾದರೂ ಅಪಾಯವಾಗಲಿ ಸಂಭವಿಸಿದಾಗ, ಸಮರ್ಥರಾದ ವೈದ್ಯರ ಸಹಾಯವು ಬಂದೊದಗುವುದರೊಳಗಾಗಿ, ತತ್ಕಾಲಕ್ಕೆ ತಮ್ಮ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿದೇ ಲಭಿಸೋಲ್ಲ.

"ಅಲ್ಪಜ್ಞಾನವು ಅಪಾಯಹೇತು" ವೆಂಬ ನಾಣ್ಣುಡಿಯು ಲೋಕದಲ್ಲಿ ವಾಡಿಕೆಯಿದ್ದರೂ, ಇತರ ವಿಷಯಗಳಲ್ಲಿ ಇದಕ್ಕೆ ಪ್ರಾಧಾನ್ಯವನ್ನು ಕೊಡಬಹುದೇ ಹೊರತು, ಪ್ರಥಮ ಚಿಕಿತ್ಸೆಯ ವಿಷಯದಲ್ಲಿ ಆ ನಿಯಮವಿಲ್ಲ. ಇದರಲ್ಲಿ ಅಲ್ಪಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು ! ಎಷ್ಟೋ ತೀವ್ರವಾದ ವೇದನೆಯನ್ನು ನೀಗಿಸಬಹುದು : ಎಷ್ಟೋ ಪ್ರಾಣಗಳನ್ನುಳಿಸಬಹುದು : ಬಹಳವಾಗಿ ರಕ್ತಸ್ರಾವಕ್ಕೆ ಕಾರಣವಾದ ಮಹಾ ವಿಪತ್ತುಗಳಲ್ಲಿಯೂ ಬೆಂಕಿ ತಗಲುವುದು, ಮೂಳೆ ಮುರಿಯುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ, ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಗಳೂ ಕೂಡ, ಸಮರ್ಥರಾದ ವೈದ್ಯರು ಬರುವಷ್ಟರೊಳಗಾಗಿ ಏನು ಮಾಡಬೇಕೆಂಬುದನ್ನು ತಿಳಿಯದೆ ಹೋಗುವುದರಿಂದ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸಾಶಾಸ್ತ್ರದಲ್ಲಿ ಅಲ್ಪಜ್ಞಾನವನ್ನು ಪಡೆದು, ಅದನ್ನುಪಯೋಗಿಸುವುದರಿಂದಲೇ ಸಾಯುವ ಸ್ಥಿತಿಯಲ್ಲಿದ್ದ ಸಾವಿರಾರು ಜೀವಗಳು ಬದುಕಿಕೊಂಡಿರುವುವು. [61-1]

ಸಾಮಾನ್ಯವಾಗಿ ಬೇರೊಬ್ಬರಿಗೆ ಅಪಾಯವುಂಟಾದ ಸಂದರ್ಭವನ್ನು ನೋಡಿದಾಗ, ಅವರಿಗೆ ಸಹಾಯಮಾಡಬೇಕೆಂಬ ಬುದ್ಧಿಯು ನಮ್ಮೆಲ್ಲರಿಗೂ ಹುಟ್ಟುವುದು ಸಹಜವು. ಆದರೆ ಯಾವ ಸಂದರ್ಭಗಳಲ್ಲಿ ಹೇಗೆ ಮಾಡಬೇಕೆಂದು ತಿಳಿಯದೆ ಅನೇಕ ಜನರು ಈ ವಿಷಯದಲ್ಲಿ ಪ್ರವರ್ತಿಸುವುದಕ್ಕೆ ಹೆದರುವರು. ತಾವು ಕೈಯಿಕ್ಕುವುದರಿಂದ ಮೊದಲಿದ್ದುದಕ್ಕಿಂತಲೂ ಹೆಚ್ಚಾದ ಅಪಾಯಕ್ಕೆ ಕಾರಣರಾಗಬಹುದೆಂಬ ಭಯದಿಂದ ಕೆಲವರು ಹಟಸ್ಥರಾಗುವರು.

ಇದಕ್ಕಾಗಿ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೈಕೋಲುಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ, ಅಗ್ನಿಗಂಡ, ನರಗಳು ಕಡಿಯುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಸೌಕರ್ಯಗಳನ್ನು ಕಲ್ಪಿಸುವುದು, ಇನ್ನೂ ಇದರಂತೆಯೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳೊಡನೆ ಇಷ್ಟು ವಿಷಯಗಳಿದ್ದರೂ, ಸರ್ವಸಾಮಾನ್ಯವಾಗಿ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಿಮೆಮಾಡಿರುವೆವು.

ಪುಸ್ತಕದ ಬೆಲೆ 0—8—0, ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣನ್ ಬ್ರದರ್ಸ್, 323, ತಂಬೂಚೆಟ್ಟಿ ಬೀದಿ, ಮದರಾಸು. ಪೋಸ್ಟು ಬಾಕ್ಸ್ 166.

ಶ್ರೀಗೋಪಾಲಕೃಷ್ಣ ಗೋಖಲೆಯವರ ಪುಣ್ಯದಿನ.

ಫೆಬ್ರವರಿ ತಾ. 20 ನೇ ಭಾನುವಾರ ದಿನ ಸಾಯಂಕಾಲ 6 ಗಂಟೆಗೆ ಈ ಬೆಂಗಳೂರು ದಂಡು ಸೆಪ್ಪಿಂಗ್ಸ್ ರೋಡಿನಲ್ಲಿರುವ ಗಾಯಕ್ ಗ್ರಾಮಣಿ ಸಂಘದಲ್ಲಿ ಕಳೆದ 1915 ನೇ ಇಸವಿ ಏಪ್ರೆಲ್ ತಾ. 9 ರಲ್ಲಿ ಶ್ರೀಗೋಖಲೆ ಸ್ಮಾರಕಾರ್ಥವಾಗಿ ಕೂಲಿ ಕೆಲಸಗಾರರ ಧರ್ಮಾರ್ಥವಾದ ರಾತ್ರಿಶಾಲೆಯನ್ನು ಸ್ಥಾಪಿಸಿ ಇದುವರೆಗೂ ಶ್ರದ್ಧೆಯಾಗಿ ನಡಿಸುತ್ತಿರುವ ಮೋಲ್ಕಂಡ ಕಮಿಟಿಯವರು ಮೇಲ್ಕಂಡ ಗಾಯಕ್ ಗ್ರಾಮಣಿ ವಿದ್ಯಾ ಸಂಘದ ಲ್ಲಿ ಶ್ರೀಗೋಪಾಲಕೃಷ್ಣ ಗೋಖಲೆ ಪರಮಹಂಸರವರ ಪುಣ್ಯದಿನವನ್ನು ವೈಭವದಿಂದ ನಡಿಸಿದರು. ಸುಮಾರು 100-150 ಮಂದಿ ದೊಡ್ಡ ಮನುಷ್ಯರು, 50-60 ಮಂದಿ ಧರ್ಮ ಪಾಠಶಾಲೆಯ ವಿದ್ಯಾರ್ಥಿಗಳೂ ಬಂದು ಸೇರಿದ್ದರು. ಸಭೆಯು ನಡುವೆ ಗೋಡೆಯಲ್ಲಿ ಶ್ರೀಗೋಖಲೆ ಪರಮ ಹಂಸರವರ ಚಿತ್ರವನ್ನು ತೂಗಹಾಕಿದ್ದರು. ಸಂಘದ ಹಾಲನ್ನು ಅಲಂಕರಿಸಿದ್ದರು. ಕನ್ನಡ, ತೆಲುಗು, ಇಂಗ್ಲೀಷು ಭಾಷೆಗಳಲ್ಲಿ ಶ್ರೀಗೋಖಲೆಯವರ ಚರಿತ್ರೆಯನ್ನು ಕುರಿತು ಉಪನ್ಯಾಸಗಳು ನಡೆಯಿತು. ಗೋಖಲೆಯವರ ಜೀವಮಾನದಲ್ಲಿ ಅವರು ಮಾಡಿದ ಕೆಲಸಗಳಲ್ಲೆಲ್ಲಾ ಅತಿ ಮುಖ್ಯವಾದುದು ನಮ್ಮ ಭಾರತ ಭೂಮಿಗೆ ಪ್ರಥಮ ವಿದ್ಯೆಯನ್ನು ಸಂಪ್ರಾಪ್ತಿಸಿದುದೇ. ಈ ಉದ್ದೇಶದಂತೆ ಮೇಲ್ಕಂಡ ರಾತ್ರಿ ಪಾಠಶಾಲೆಯು ಕಮಿಟಿಯವರು ಮಾಡುವ ಕೆಲಸವು ಶ್ಲಾಘನೀಯವಾದುದೇ ಸರಿ. ಶ್ರೀಗೋಖಲೆಯವರ ಸ್ಮರಣಾರ್ಥವಾಗಿ ಕೂಲಿ ಕೆಲಸಗಾರರ ರಾತ್ರಿ ಧರ್ಮ ಪಾಠಶಾಲೆಯು ಕ್ರಮವಾಗಿ ನಡೆಯಬೇಕೆಂದು ಮಹನೀಯರು ಬಂದು ಉದಾರ ಚಿತ್ತದಿಂದ ಈ ವಿದ್ಯಾದಾನ ಸೇವೆಗಾಗಿ ತಮ್ಮ ಸ್ಥಳವನ್ನು ಕೊಟ್ಟು ಇನ್ನೂ ಅನೇಕ ವಿಧವಾಗಿ ಸಹಾಯಮಾಡಿದುದ ರಿಂದ ಗಾಯಕ್ ಗ್ರಾಮಣಿ ವಿದ್ಯಾ ಸಂಘದವರಿಗೂ, ದೇಶಾಭಿಮಾನಿಗಳಾದ ಮಹನೀಯರು ಹಗಲು ತಮ್ಮ ಜೀವನಕ್ಕಾಗಿ ಕೆಲಸ ಮಾಡಿ ತಮ್ಮ ಸ್ವಾತಂತ್ರ್ಯಗಳನ್ನು ಎಣಿಸದೆ ರಾತ್ರಿ ಈ ಪಾಠಶಾಲೆಯ ಬಡ ವಿದ್ಯಾರ್ಥಿಗಳ ಬೋಧನೆಗಾಗಿ ಯಾವ ರುಸುಮನ್ನೂ ಹೊಂದದೆ ಧರ್ಮಾರ್ಥವಾಗಿ ಶ್ರದ್ಧೆಯಿಂದ ವಿದ್ಯಾದಾನ ಸೇವೆಯನ್ನು ಮಾಡುವ ಮಹನೀಯರಾದ ಉಪಾಧ್ಯಾಯರಿಗೂ, ದೇಶಾಭಿಮಾನಿಗಳಾದ ಬೆಂಗಳೂರು ದಂಡು ಮಹಾಜನರು ಉದಾರ ಬುದ್ಧಿಯಿಂದ ದ್ರವ್ಯ ಮೂಲಕ ಸಹಾಯ ಮಾಡಿದುದಕ್ಕಾಗಿ ಸ್ಕೂಲು ಕಮಿಟಿಯವರು ತಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸಿದರು. ದೇಶಬಾಂಧವರಿಂದ ಈಗ ಶಾಲೆ ಹೊಂದುತ್ತಿರುವ, ಇನ್ನು ಮುಂದೆ ಹೊಂದತಕ್ಕ ದ್ರವ್ಯ ರೂಪವಾದ ಸಹಾಯವನ್ನು ಅಪೇಕ್ಷೆಯಿಂದ ಕಾಯುವ ಅಭಿಪ್ರಾಯವನ್ನು ಸೂಚಿಸಿದರು. ಈ ಪಾಠಶಾಲೆಯು ಹಗಲೆಲ್ಲಾ ಜೀವನಾರ್ಥವಾಗಿ ಅಂಗಡಿಗಳು, ಹಾಲ್ ಮಂಡಿಗಳು, ಮಂಡಿಗಳು, ಪ್ರೆಸ್ಸುಗಳು, ಅನೇಕ ಕಡೆಗಳಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ರಾತ್ರಿ ವೇಳೆ 8.30 ರ ವರೆಗೆ ಈ ಕಾಲಕ್ಕೆ ತಕ್ಕಂತೆ ಪ್ರಪಂಚ ವ್ಯವಹಾರಗಳಲ್ಲಿ ಸ್ವಲ್ಪ ಸಾಧಾರಣಗಳು ಅತ್ಯಾವಶ್ಯಕವಾದ ಪ್ರಥಮ ವಿದ್ಯೆಯನ್ನು ಕೇವಲ ಉಚಿತದ ಕನ್ನಡ, ಅರವ, ತೆಲುಗು, ಇಂಗ್ಲೀಷು ಭಾಷೆಗಳಲ್ಲಿ ಹಿಂದುಗಳು, ಮಹಮ್ಮದೀಯರು, ಕ್ರೈಸ್ತರು ಎಂಬ ಮತಭೇದವಿಲ್ಲದೆ ಸರ್ವತ್ರರಿಗೂ ರಾತ್ರಿ ಶಾಲೆಯಲ್ಲಿ ವಿದ್ಯೆ ಕಲಿಸುತ್ತಿರುವರು. ಈ ರೀತಿಯಾಗಿ ಮುಂದುವರಿದು ಬಡ ಜನರಿಗೆಲ್ಲಾ ಶ್ರೇಷ್ಠವಾದ ವಿದ್ಯಾದಾನ ಸೇವೆಯನ್ನು ಮಾಡುವುದು ದೇಶೋಪಕಾರವೇ ಸರಿ. ಅಗ್ರಾಸನಾಧಿಪತಿಗಳ ಭಾಷಣವಾದ ನಂತರ ಭಜನೆ ಮಂಗಳಾರತಿ ಪಾಠಶಾಲೆಯ ವಿದ್ಯಾರ್ಥಿಗಳಿಂದ ಮಂಗಳವನ್ನು ಹಾಡಿಸಿ ಕರತಾಡನದ ನಂತರ ಸಭೆಯು ಪೂರೈಸಿತು. ನಮ್ಮ ದೇಶದವರೆಲ್ಲರೂ ಇದೇ ಭಾವದೊಡನೆ ಏಕೀಭವಿಸಿದ ಹೊರತು ದೇಶವು ಉನ್ನತ ಸ್ಥಿತಿಗೆ ಬಾರದು. ದೇಶಾಭಿಮಾನಿಗಳು ತಮ್ಮ ತಮ್ಮ ಸ್ಥಳಗಳಲ್ಲಿ ಈ ರೀತಿ ಪುರವಾಸಿ ಜನಾಯಾಗಳೊಡನೆ ವಿದ್ಯಾದಾನ ಸೇವೆ ಮಾಡುವದರಿಂದ ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆಯನ್ನು ಹೆಚ್ಚಿಸಬಹುದು. ವಿದ್ಯಾರ್ಥಿಗಳನ್ನು ಕಳುಹಿಸುವ ಮೂಲಕವೂ ಇತರ ವಿಧವಾದ ಸಹಾಯದಿಂದಲೂ ಬೆಂಗಳೂರು ದಂಡು ಮಹಾಜನರು ಮೇಲ್ಕಂಡ ಪಾಠಶಾಲೆಯನ್ನು ಪ್ರೋತ್ಸಾಹಿಸಿದಲ್ಲಿ ಪಾಠಶಾಲೆಯು ಬಹು ಉತ್ತಮ ಸ್ಥಿತಿಗೆ ಬರುವದರಲ್ಲಿ ಯಾವ ಸಂದೇಹವೂ ಇಲ್ಲ.

ದೇಶಾಭಿಮಾನಿ.

ಮಲೆನಾಡಿನಲ್ಲಿ ಮಲೇರಿಯಾ ಜ್ವರದ ನಿವಾರಣೆಗೆ ಪ್ರಜೆಗಳ ಕರ್ತವ್ಯ.

ಮಲೆನಾಡಿನ ಗ್ರಾಮಾಂತರಗಳಲ್ಲಿ ಮಲೇರಿಯಾ ಜ್ವರವು ವ್ಯಾಪಿಸಿರುವಾಗಿ ಅನೇಕ ಜನರು ಅಕಾಲ ಮೃತ್ಯುವನ್ನು ಹೊಂದುತ್ತಿರುವದು ಸರ್ವರಿಗೂ ತಿಳಿದ ವಿಷಯವೇ ಆಗಿರುತ್ತದೆ. ಇದಕ್ಕೆ ಏನು ಮಾಡಿದರೆ ತಾನೆ ಫಲಕಾರಿ ಯಾಗಿ ಈ ರೋಗದ ಹಾವಳಿ ಕಡಮೆಯಾಗಬಹುದೆಂದು ಸರ್ಕಾರದ ಹುದ್ದೆದಾರರ ಯೋಚನೆಗೆ ಕಾರಣವಾಗಿದೆ. ಆದರೆ ಈ ಮಲೇರಿಯಾ ಜ್ವರವನ್ನು ಪದರ ವಿಷಯವು ಕೇವಲ ಮಲೆನಾಡಿಗೆ ಮಾತ್ರ ಅನ್ವಯಿಸುವದಿಲ್ಲ. ಮೈದಾನ ಪ್ರದೇಶಗಳಲ್ಲಿ ಕೂಡ ಈ ರೋಗವು ತಲೆದೋರಿಕೊಂಡಿರುವದು ಎಲ್ಲರ ಅನುಭವದಲ್ಲಿಯೂ ತಿಳಿಯಬಹುದು. ಇದಕ್ಕೆ ದೃಷ್ಟಾಂತವಾಗಿ ಬೆಂಗಳೂರು ಪಟ್ಟಣವು ಒಂದೇ ಸಾಕು. ಮಲೆನಾಡಿನಲ್ಲಿ ಯಾವದೋ ಪ್ರಜಾ ಪ್ರೀಣತೆಗೆ ಅನೇಕ ಕಾರಣಗಳು ಕಲಿ ತಿರುವ ಸ್ಥಳಗಳಲ್ಲಿ ಈ ಮಲೇರಿಯಾ ಜ್ವರವೂ ಕೂಡ ಒಂದು ದೊಡ್ಡ ಕಾರಣವಾಗಿರುವದರಿಂದ ಈಗಾಗಲೇ ಪ್ರಜಾ ರಾಹಿತ್ಯವನ್ನು ಅಲಕ್ಷ್ಯವೋ ಹೊಂದು ತ್ತಿರುವ ಮಲೆನಾಡಿನಲ್ಲಿ ಈ ಮಲೇರಿಯಾ ರೋಗವು ನಿರ್ಮೂಲವಾಗ ಬೇಕಾದರೆ ಸರ್ಕಾರದವರೊಂದಿಗೆ ಪ್ರಜೆಗಳು ಪ್ರಯತ್ನಿಸಬೇಕಲ್ಲವೇ ? ಈ ಭಾಗದ ಪ್ರಜೆಗಳಿಂದ ಆಗಬೇಕಾದ ಕರ್ತವ್ಯಗಳು ಅನೇಕ ಇವೆ. ಕಲಿಯುಗದಲ್ಲಿ ಯಾವೊಂದು ಕಾರ್ಯಕ್ಕೂ ಜನಗಳು ಸಂಘದಲ್ಲಿ ಕೂಡಿ ಮಾಡದಿದ್ದರೆ ಫಲ ವನ್ನು ಹೊಂದಲಾಗುವದಿಲ್ಲ. ತಥಾಪಿ ರೋಗದ ನಿವಾರಣೆ ಎನ್ನುವ ಮಹ ತ್ಕಾರ್ಯಕ್ಕೆ ಈ ರೀತಿ ಸಂಘವು ಅತ್ಯಾವಶ್ಯಕವೆಂದು ಹೇಳಬೇಕು. ಮಲೆನಾಡಿನ ಗ್ರಾಮಾಂತರಗಳಿಗೆ ಸರ್ಕಾರದ ಉದ್ಯೋಗಸ್ಥರು ಸುಲಭವಾಗಿ ಬಂದು ಹೋಗ ಲಿಕ್ಕೆ ರಸ್ತೆಗಳ ಅಭಾವದಿಂದ ಅನೇಕ ಗ್ರಾಮಗಳ ರೈತರುಗಳು ಸರ್ಕಾರದ ಪುರಸ್ಕಾರ ಗಣನೆಗೆ ಬರುತ್ತಾರೆಯೋ ಇಲ್ಲವೋ ಎಂದು ಸಂದೇಹಪಡಬೇ ಕಾದ ವಿಷಯವಾಗಿದೆ ಇಂಥಾದ್ದರಲ್ಲಿ ಪ್ರಜೆಗಳು ತಮಗೆ ತಾವೇ ಕೆಲವು ಕಡೆ ಗಳಲ್ಲಿ ಒಂದಾಗಿ ಸೇರಿ ಕಾರ್ಯಭಾಗವನ್ನು ಆಲೋಚಿಸಿ ಸರ್ಕಾರದವರ ಸಹಾಯಕ್ಕೆ ಕಾದಿದ್ದರೆ ಉಪಯೋಗವಿಲ್ಲ. ಈಗ ಮಲೇರಿಯಾ ಜ್ವರದ ನಿವಾರಣೆ ಗೆ ಕ್ವೈನಾ ಮಾತ್ರೆಗಳನ್ನು ಉಚಿತವಾಗಿ ಸರ್ಕಾರದಿಂದ ಹಂಚಲ್ಪಡುತ್ತಿರು ವದು ಪ್ರಜೆಗಳಿಗೆ ಒಂದು ದೊಡ್ಡ ಉಪಕಾರವೇ ಸರಿ. ಆದರೂ ಈ ಮಾತ್ರೆಗಳು ಸರಿಯಾಗಿ ವಿನಿಯೋಗಿಸಲ್ಪಡಬೇಕಾಗಿದ್ದರೆ ಪ್ರಜೆಗಳು ಅಲ್ಲಲ್ಲಿಯೇ ಕಮಿಟಿ ಗಳನ್ನು ಮಾಡಿಕೊಂಡು ಈ ಕೆಲಸವನ್ನು ತಾವು ವಹಿಸಿಕೊಂಡರೆ ಇನ್ನೂ ವಿಶೇಷ ಪ್ರಯೋಜನವಾಗುವದೆನ್ನುವದಕ್ಕೆ ಸಂದೇಹವಿಲ್ಲ. ಈ ಕಮಿಟಿಯವರು ಕ್ವೈನಾ ಮಾತ್ರೆಗಳನ್ನು ಹಂಚುವದರೊಂದಿಗೆ ಮಲೇರಿಯಾ ಜ್ವರವು ವಿಶೇಷವಾಗಿ ಪ್ರಚಾರ ದಲ್ಲಿರುವ ಗ್ರಾಮಗಳ ಹೆಸರುಗಳನ್ನು ಒಡನೆಯೇ ಸಮೀಪದ ಸರ್ಕಾರಿ ಉದ್ಯೋಗಸ್ಥರಿಗೆ ತಿಳಿಸಬೇಕು. ಅದರಲ್ಲಿಯೂ ಸಮೀಪದ ಆಸ್ಪತ್ರೆಯ ಡಾಕ್ಟರು ಗಳಿಗೆ ತಿಳಿಸಿದರೆ ಇನ್ನೂ ಉತ್ತಮ. ಇದೂ ಅಲ್ಲದೆ ಜನಗಳಿಗೆ ಪದೇಪದೇ ಉಪನ್ಯಾಸ ಪೂರ್ವಕವಾಗಲೀ, ಅಥವಾ ಕರ್ಪಗಳ ರೂಪಕವಾಗಲೀ, ಮಲೇರಿಯಾ ಜ್ವರದಿಂದ ಉಂಟಾಗುವ ಹಾನಿಯನ್ನು ಕುರಿತು ಬರೆದಿರಬಹುದಾದ ಪುಸ್ತಕಗ ಳನ್ನು ಪತ್ರಿಕೆಗಳನ್ನು ಹಂಚುವದರ ಮೂಲಕವಾಗಲೀ, ಓದುವದರ ಮೂಲಕ ವಾಗಲೀ ಸಹಾಯ ಮಾಡಬೇಕು. ಇನ್ನೂ ಕ್ವೈನಾ ಗುಳಿಗೆಗಳನ್ನು ತೆಗೆದು ಕೊಂಡ ಪ್ರತಿಯೊಬ್ಬ ಮನುಷ್ಯನ ವಿಷಯವಾಗಿಯೂ ಸಿರಿವಾರಕ ಲಿಸ್ಟು ಪತ್ರಗ ಳನ್ನು ಇಟ್ಟು ಗುಣಾವಗುಣಗಳನ್ನು ಸರ್ಕಾರಿ ಉದ್ಯೋಗಸ್ಥರಿಗೆ ತಿಳಿಯಪಡಿಸ ಬೇಕು. ಮತ್ತು ಮಲೇರಿಯಾ ಜ್ವರದಿಂದ ಪೀಡಿತರಾದ ಜನಗಳ ಸಂಖ್ಯೆ, ಸತ್ತವರ ಸಂಖ್ಯೆ, ಕ್ವೈನಾ ಮಾತ್ರೆಗಳನ್ನು ಸೇವಿಸುವದರಿಂದ ಗುಣವಾದವರ ಸಂಖ್ಯೆ, ಇವೇ ಮೊದಲಾದ ಲೆಕ್ಕಗಳನ್ನು ಸಾಧ್ಯವಾದ ಮಟ್ಟಿಗೆ ತಯಾರು ಮಾಡಿ ಸರ್ಕಾರದವರ ತಿಳುವಳಿಕೆಗೆ ತರಬೇಕು. ಈ ರೀತಿ ಮಾಡುವದರಿಂದ ಸರ್ಕಾರದವರು ಈಗ ನಡಿ ಸುತ್ತಿರುವ ವಿಶೇಷ ಏರ್ಪಾಡುಗಳಿಗೆ ಪ್ರಜೆಗಳು ವಿಶ್ವಾಸವನ್ನು ಕೊಟ್ಟಂತಾಗಿ ಅನೇಕ ಜನ ಮಲೆನಾಡಿನ ಬಡಪ್ರಜೆಗಳಿಗೆ ಮಹದುಪಕಾರವಾಗಿ ಮಲೆನಾಡು ಶೀಘ್ರದಲ್ಲಿಯೇ ಅಭಿವೃದ್ಧಿಗೆ ಬರಬಹುದಲ್ಲವೇ ? ಇಂಥಾ ಕಮಿಟಿಗಳಿಗೆ ಮಲೇ ರಿಯಾ ವಿಜಿಲೆನ್ಸ್ ಕಮಿಟಿ ಅಂದರೆ ಜಾಗ್ರತಾ ಸಂಘಗಳೆಂದು ಹೆಸರಿಡಬಹುದು. ಮಲೆನಾಡಿನ ಪುರೋಭಿವೃದ್ಧಿಗಾಗಿ ಪ್ರಕೃತ ಸರ್ಕಾರದವರಿಂದ ಏರ್ಪಾಡಾಗಿ ರುವ ವಿಶೇಷ ವಿಷಯಗಳನ್ನು ಮಲೆನಾಡಿನ ಶ್ರೀಮಂತರೂ ಭೂಮಾಲೀಕರೂ ದೇಶಾಭಿಮಾನಿಗಳಾದ ದೊಡ್ಡ ಮನುಷ್ಯರು ಈ ಮುಖ್ಯ ಕೆಲಸಕ್ಕೆ ಸಂಪೂರ್ಣವಾಗಿ ಗಮನಕೊಟ್ಟು ತಮ್ಮ ಜೀವನವನ್ನು ಸಾರ್ಥಕಗೊಳಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುವ

ಸೇವಕ.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಆರೋಗ್ಯ ಪ್ರಭಾಕರ. (ಟಾನಿಕ್ ಪಿಲ್ಸ್)—ಪಿತ್ತಕೋಶ, ಜ್ಞಾನಕೋಶ ಗಳನ್ನು ಸರಿಪಡಿಸಿ, ರಕ್ತವೃದ್ಧಿ ಮಾಡಿ, ನರಗಳಿಗೆ ಬಲಕೊಡುತ್ತೆ. ಜಾಠರ್ಥಿಕ, ಪಿತ್ತವಾಂತು, ಕೆಮ್ಮು, ಬಾಣಂತಿಯರ ಕ್ಷಯ, ಮುಟ್ಟುಕಟ್ಟು, ಪಾರ್ಶ್ವವಾಯುಗಳನ್ನು ನಿವಾರಿಸುವದರಲ್ಲಿ ಅಸಮಾನವಾದುದು. 48 ಮಾತ್ರೆಗೆ 1 ರೂ, 6 ಶೀಷೆಗೆ 5 ರೂ.

2. ರೋಗನಾಶಿನಿ. — ಪ್ಲೇಗುಸೋಂಕು ಅಂಟಿರುವ ಗ್ರಾಮಗಳಲ್ಲಿರುವಾಗಲೇ ಪ್ರತಿ ಒಬ್ಬರೂ ದಿನವೂ 3-4 ಸಲ 1-2 ಮಾತ್ರೆಯಂತೆ ಸೇವಿಸುವದರಿಂದ ಪ್ರಾಣವನ್ನು ಉಳಿಸಿಕೊಳ್ಳಬಹುದು. ಜನೋಪಕಾರಕ್ಕೋಸ್ಕರ ಬೆಲೆ ಸುಲಭವಿಟ್ಟಿದೆ. ಇದರ ಗುಣಕ್ಕೆ ನಮಗೆ ಅನೇಕ ಬಹುಮಾನಗಳು ಬಂದಿವೆ. 40 ಮಾತ್ರೆಗೆ 4 ಆ, 5 ಶೀಷೆಗೆ 1 ರೂ, 12 ಕ್ಕೆ 2½ ರೂ.

[126-26] ನಮ್ಮ ವಿಳಾಸ.—ಪಂಡಿತ್ ಎಸ್. ಗುರುಸ್ವಾಮಿ, ಮೈಸೂರು

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ, ದರಗಳನ್ನೂ, ದರಗಳನ್ನೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[188-23] GIRLS' INDUSTRIAL SCHOOL, HASSAN.

ಕ್ರಿಸ್ಮಸ್ ಹಬ್ಬದ ವಿಶೇಷ ಮಾರಾಟ! 1916 ನೇ ಜನವರಿ 25 ರ ವರೆಗೆ ಮಾತ್ರ. ತಬಲಾ ಮತ್ತು ಬಾಯಾ ಬಿಟ್ಟಿ.

ಮೂರು ಜಾಮೀನ್



ವರ್ಷದ ಕೊಡುತ್ತೆ.

ನಮ್ಮ ಖ್ಯಾತಿಕರವಾದ ಫ್ಲೂಟ್ ಹಾರ್ಮೋನಿಯಂ ಬಹಳ ಉತ್ತಮವಾದದ್ದು, ಬಹಳ ಇಂಪಾದ ನಾದವುಳ್ಳದ್ದು. ಯಾವ ಹವೆಯಲ್ಲೂ ಕೆಡುವದಿಲ್ಲ. ಎಲ್ಲಾ ತರದ ಸಂಗೀತಗಳಿಗೂ ಹಿತವಾದದ್ದು. ಒಂದು ವಾರದೊಳಗೆ ನಮ್ಮ ಹವಾಗದಿದ್ದರೆ ಹಣ ವಾಪಸ್ ಕೊಡುವೆವು. ಇದು ಬೀಸ್ ಮತ್ತು ತೇಗದಿಂದ ತಯಾರುಮಾಡಲ್ಪಟ್ಟು ಉತ್ತಮವಾದ ರೀಡ್ ಉಳ್ಳದ್ದಾಗಿದೆ. ಒಂದು ರೀಡಿನದಕ್ಕೆ ಕ್ರಯ ರೂ. 38, 45, 60; ಈಗಿನ ಕ್ರಯ ರೂ. 19, 22-8-0, 25; ಇದರ ಕೂಡ 5 ರೂ. ಬಾಬು ಬಿಟ್ಟಿ ಕೊಡುತ್ತೇವೆ. ಜೋಡಿ ರೀಡ್ ಹಾರ್ಮೋನಿಯಂ ಕ್ರಯ ರೂ. 65, 70, 80, 95; ಈಗಿನ ಕ್ರಯ ರೂ. 32-8-0, 35, 40, 45; ಇದರ ಕೂಡ ರೂ. 6-12-0 ಕ್ರಯದ ಒಂದು ಜೊತೆ ತಬಲ ಮತ್ತು ಬಾಯಾವನ್ನು ಬಿಟ್ಟಿ ಕೊಡುವೆವು. ಉತ್ತಮೋತ್ತಮವಾದ ಮಡಿಸುವ ಹಾರ್ಮೋನಿಯಂ (ಕೈಯಿಂದಲೂ ಕಾಲಿನಿಂದಲೂ ನಡಿಸಬಹುದು) ಕ್ರಯ ರೂ. 130; ಈಗ ಇದನ್ನು ರೂ. 65 ಕ್ಕೆ ಕೊಡುತ್ತೇವೆ. ಕ್ರಮದಲ್ಲಿ ಕಾಟಲಾಗು ಅಡ್ವಾನ್ಸ್ ಕಳಿಸಿ, ಸಮೀಪದ ರೈಲ್ವೆ ಸ್ಟೇಷನ್ ತಿಳಿಸಿದರೆ ಬಾಕಿ ಹಣಕ್ಕೆ ವಿ.ಪಿ ಮಾಡುತ್ತೆ.

ವಿಳಾಸ—**The National Harmonium Co.,**

[276-13] **SIMLA T.S.O., (E) CALCUTTA.**

ಜಾಮೀನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.

ಮತ್ತು

ಕೂದಲಿಗೆ ರೇಷ್ಮೆಯಂಥಾ ಹೊಳಪು ನುಣುಪು ಬರುತ್ತೆ.

ಈ ಕೂದಲ ರಂಗನ್ನು ಸೆತ್ತಿ, ಗಡ್ಡ, ಮೀಸೆ ಮೊದಲಾದ ದೇಹದ ಯಾವ ಭಾಗಕ್ಕಾದರೂ ಸುಲಭವಾಗಿ ಹಚ್ಚಬಹುದು; ಚರ್ಮಕ್ಕೆ ಯಾವ ವಿಧವಾದ ಬಾಧೆಯೂ ನಷ್ಟವೂ ಕೆಡುಕೂ ಉಂಟಾಗುವುದಿಲ್ಲ. ಇದು ಯಾರಿಗೂ ಪತ್ತೆಯಾಗುವುದಿಲ್ಲ; ರಂಗು ಎಂದಿಗೂ ಕಡಮೆಯಾಗುವುದಿಲ್ಲ. ಒಂದಾವರ್ತಿ ಪರೀಕ್ಷಿಸಿದರೆ ಎಂದೆಂದಿಗೂ ಇದನ್ನೇ ಉಪಯೋಗಿಸುತ್ತೀರಿ.

ನರೆಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುತ್ತದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ನಕ್ಕಲ್ ರಂಗಿನ ವಿಷಯದಲ್ಲಿ ಎಚ್ಚರಿಕೆ! ರತನ್‌ಜೋತಿ ಕೂದಲಿನ ಎಂಬ ಚೀಟಿಯನ್ನು ನೋಡಿ ಕೊಂಡುಕೊಳ್ಳಿ. [282-13]

ಪೆಟ್ಟಿಗೆ, ಬ್ರಷ್ ಮತ್ತು ಬಟ್ಲ ಸಹಿತ ಕ್ರಯ ರೂ. 1-0-0.

ಏಜಂಟರು ಬೇಕು! ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್!

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು :—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

177, ಜೀನಾ ಬಜಾರ್ ರೋಡ್, ಮದರಾಸ್.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನು ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಅಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [32-4]

45 ಮಾತ್ರೆಗಳ ಪೊಟ್ಲ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಲ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
95 ,, ,, ,, 4 ,,	200 ,, ,, ,, 9 ,,	80 ,, ,, ,, 4 ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೊಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ. ನಮ್ಮ ದಕ್ಷಿಣ ಕನಡಾ ಏಜಂಟರು- ದಿ ಊರ್ಲ್ ವರ್ಕ್ಸ್, ಮಂಗಳೂರು.

S. UDIPI NARAYANACHARYA & Co.,
BANARES CITY, U. P.

ಯೋಗ್ಯವಾದ ಕ್ರಯ. **ಸೊಗಸಾದ ಸರಕುಗಳು.**

ಈ ನಮ್ಮ ಕಂಪೆನಿಯಲ್ಲಿ ನೆಯದು ತಯಾರಿಸಿರುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಶಲ, ಪೇಟ, ಕಾಶ್ಮೀರ್ ಶಾಲು, ದುಪ್ಪಟಿ, ಮುಗುಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು, ಕೊನಾರಿಯು, ಅರಳೆ ಪೇಟ, ಧರ್ಮಾವರ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೇಸಕ್ತಿಯಿಂದ ತಯಾರಿಸಿರುವೆವು. ಈ ಅಮೂಲ್ಯವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೇಟಲಾಗು ಒಂದು ಕಾಶಿ ಕಾಲಭೈರವರ ದಾರವನ್ನು ಇನಾಮಾಗಿ ಕಳುಹಿಸಲಾದೀತು. [119-33]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಬೆಸ್ಟ್ ಬಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾ ಅಸಲ್ ಬಾಲಾಮಿಸರಿಯಲ್ಲಿ ಬೆಳ್ಳಿ ರೇಖು ಮುಂತಾದ್ದು ಸೇರಿಸಿ ಅತಿ ನಯವಾಗಿ ತಯಾರುಮಾಡಿದೇವೆ ಈ ಮುರಬ್ಬ ಉಷ್ಣಕಾರಣದಿಂದ ಉಂಟಾದ ಅನೇಕ ವ್ಯಾಧಿಗಳಿಗೆ ಸಂಜೀವಿನಿಯಾಗಿರುತ್ತೆ. ಈ ಮುರಬ್ಬಾ ನಾವು ಲೋಕೋಪಕಾರಕ್ಕಾಗಿ ಶಾಸ್ತ್ರೋಕ್ತದಿಂದ ತಯಾರುಮಾಡುತ್ತೇವೆ. ಅತಿ ಯೋಗ್ಯರು ಈ ಮುರಬ್ಬವನ್ನು ನಮ್ಮಿಂದ ತರಿಸಿ ಸೇವನೆಯಿಂದ ಗುಣವಾಗಿದ್ದಂದು ಸರ್ಟಿಫಿಕೇಟು ನಮಗೆ ಅಸಲ್ ಬಾಲಾಮಿಸರಿ ಬೇರೆ ದೇಶಗಳ ಫಿಜಿ ಕಲ್ ಏಜಂಟರುಗಳ ಮೂಲಕ ಬರುತ್ತದೆ. ಈ ಮುರಬ್ಬಾ ಬಾಲಾಮಿಸರಿಯಲ್ಲಿ ತಯಾರಾದ್ದಲ್ಲವೆಂದು ವ್ಯಕ್ತಪಡಿಸಿ ನಮ್ಮಿಂದ 50 ಸವರನ್ ಬಹುಮಾನ ಪಡೆಯಬಹುದು. ಇದರ ಪೂರ ಸಮಾಚಾರ ತಿಳಿಯಬೇಕೆಂಬ ಇಚ್ಛೆಯುಳ್ಳವರು ಅರ್ಧಾಣೆ ಸ್ಟಾಂಪು ಕಳುಹಿಸಿ ಕ್ಯಾಟಲಾಗ್ ಪಡೆಯಬಹುದು. 1915 ನೇ ಡಿಸೆಂಬರು ಲಾಗಾಯ್ತು ಫೆಬ್ರವರಿ ಅಮೆರಿಕ ವರಿವಿಗೂ ವಿ. ಪಿ. ಛಾರ್ಜು ಮಾಫ್ ಮಾಡಿರುತ್ತೆ. ಪಾರ್ಸೆಲ್ ಸಂಗಡ ಚಿತ್ರ ಪಟದಿಯೂ, ಅನುಪಾನದ ಪತ್ರಿಕೆಯೂ ಇರುತ್ತೆ. 20 ತೊಲಾ ಉಳ್ಳ ಡಬ್ಬಾ 1 ಕ್ಕೆ ಕ್ರಯ ರೂ. 2.

ಏಜಂಟ್

ಡಿ. ಸೈದ್ ಉಸ್ಮಾನ್ ಅಂಡ್ ಕೊ., ಜನರಲ್ ಮರ್ಚಂಟ್, ದೊಡ್ಡಪೇಟೆ, ಬೆಂಗಳೂರು ಸಿಟಿ (ಅಲ್ಲಿ ಯಾವಾಗಲೂ ಸ್ಟಾಕು ಇರುತ್ತೆ. ತರಿಸಿಕೊಳ್ಳಬಹುದು)	ಟಿ. ಹೆಚ್. ಆಗಾಚ್ ದಾತಾಗಂಜ್ ವೈದ್ಯರು, ಸುತ್ತ ನಾ ಸಾಹೇಬ್ ಮಾರ್ಕೆಟ್ ರೋಡ್, ನಂಬರು 104, ಬೆಂಗಳೂರು ಸಿಟಿ.

[258-10]

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಸೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು……………ರೂ. 4,46,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು. ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ. ಮಿ॥ ಎ. ಎಲ್. ರೆಬೆಲೊ, ಚೀಫ್ ಏಜೆಂಟ್, ಬೆಂಗಳೂರು; ಮ॥ ..೦ ಎಸ್. ಸಂಜಪ್ಪನವರು ಅಥವಾ ಮ॥ ವೆಂಕಟರಮಯ್ಯನವರು, ಕಂಪನಿ ಏಜಂಟರು, ಮೈಸೂರು; ಚೀಫ್ ಬ್ರಾಂಚ್ ಸೆಕ್ರೆಟರಿ, ಮದರಾಸ. [228-20]

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. …… ಯಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡ…ದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ ಕಣ್ಣಿನಲ್ಲಿ ಥಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಳುಬಾಗಿಯೋ ಇಳಿಯುವುದು, ಬಿರಿದೆ ಬ…ಬಳಿ ಬಳಿಕ; ಎದೆ ತಲ್ಲಣಿಸುವುದು; ತಲೆನೋವು; ಗಿಡಿರಿ; ಕೈಕ್ಕೊಳ್ಳು …… ಸುಡಿಕೆ; ಮೈನೋವು; ಕೀಲುನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಅರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು, ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-27]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿರುವುವು



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು …… ಜಿ. ಹಾಲ್ …… ಬೊಂಬಾಯಿ—ಇವರಲ್ಲಿ ದೊರೆಯು…

ಪರೀಕ್ಷೆಗಾಗಿ ಮುಫತ್ತು.

ನಮ್ಮ "ಜೀವಾಕರ" ಎಂಬುವುದು ತಲೆನೋವನ್ನು ತತ್ಕ್ಷಣವೇ ನಿಲ್ಲಿಸುತ್ತದೆ; ಬಹು ಕಾಲದಿಂದಲೂ ಬರ್ಮಾದಲ್ಲಿ ಖ್ಯಾತಿಹೊಂದಿದೆ. ಬಹಳ ಜನಗಳ ಆಶ್ರಯವನ್ನು ಸಂಪಾದಿಸಿಕೊಂಡಿದೆ. ಅದ್ಭುತವಾದದ್ದೆಂದೂ ಎಲ್ಲಾ ತರದ ತಲೆನೋವುಗಳನ್ನು ಉಪಶಮನ ಕ್ಷಣದಲ್ಲೇ ಗುಣಪಡಿಸತಕ್ಕದ್ದೆಂದೂ ಕೀರ್ತಿಯ ಸರ್ಟಿಫಿಕೇಟುಗಳನ್ನು ಅನೇಕವಾಗಿ ಸಂಪಾದಿಸಿಕೊಂಡಿದೆ — ಈ ಔಷಧವನ್ನು ಹಿಂದುಸ್ಥಾನ, ಸಿಲೋನ್ ಮತ್ತು ಇತರ ದೇಶಗಳಲ್ಲಿ ಪ್ರಚಾರಕ್ಕೆ ತರಬೇಕೆಂಬ ಉದ್ದೇಶದಿಂದ ನೀವು ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿಯೂ ಸಂಪೂರ್ಣವಾಗಿಯೂ ನಮಗೆ ತಿಳಿಸಿದರೆ ನಿಮಗೆ ನಾವು ಬಿಟ್ಟಿಯಾಗಿ ಎರಡು ಸಣ್ಣ ಪೊಟ್ಟಣಗಳನ್ನು ಕಳುಹಿಸುವೆವು. ಅವನ್ನು ಉಪಯೋಗಿಸಿದರೆ ಅದರ ಗುಣ ನಿಮಗೇ ಗೊತ್ತಾಗುತ್ತದೆ. ಈ ತಲೆನೋವಿನ ಔಷಧಿಯನ್ನು ದೊಡ್ಡವರಿಗೆ ಉಪಯೋಗಿಸುವವನ್ನು ಯಿಟ್ಟಾಗ ಮಾಡಿಸುವೆ. ಅವನ್ನು ಪೊಟ್ಟಣಗಳಾಗಿಯೂ ಬಿಲ್ಲೆಗಳಾಗಿಯೂ ತಯಾರುಮಾಡಿರುವೆವು. ಅಂಥಾ 12 ಪೊಟ್ಟಣಗಳಾಗಲಿ, 12 ಬಿಲ್ಲೆಗಳುಳ್ಳ ಒಂದು ಸೀಸೆಯಾಗಲಿ ಕ್ರಯ ರೂಪಾಯಿ 1-0-0.

Address—Francis Medical Hall,
Manufacturing Chemists, Myanaung, Burma.

ನಮ್ಮ ವಿಳಾಸ—ಫ್ರಾನ್ಸಿಸ್ ಮೆಡಿಕಲ್ ಹಾಲ್,
ಮಯಾನಾಂಗ್, ಬರ್ಮಾ. [19-6]

ನಿಮಗೆ ನಿಮ್ಮ ರಕ್ತದ ಚಿಂತೆಯುಂಟೇ?

ನಿಮ್ಮ ಆಯುರಾರೋಗ್ಯವು ರಕ್ತವು ಶುದ್ಧವಾಗಿರುವುದು; ನಿಮ್ಮ ರಕ್ತದಿಂದಲೇ ನೀವು ರೋಗಗಳಿಂದ ಪಾರಾಗುವುದು. ರಕ್ತ ಶುದ್ಧವಾಗಿದ್ದರೆ ಆರೋಗ್ಯ, ದೃಢಕಾಯ, ದೀರ್ಘಾಯುಷ್ಯ, ಪೂರ್ಣಸುಖ—ಎಲ್ಲಾ ಉಂಟಾಗುತ್ತೆ. ರಕ್ತ ಕೆಟ್ಟರೆ ಕ್ರಮವಾಗಿ ನಿಮ್ಮ ದೇಹ ಕುಗ್ಗುತ್ತಾ, ಆಯುಷ್ಯ ಕ್ಷಯಿಸುತ್ತಾ, ಜೀವನವೇ ಜುಗುಪ್ಸೆಯಾಗುತ್ತಾ ಬರಬೇಕು. ಇಂಥಾ ಭಯಂಕರವಾದ ಸ್ಥಿತಿಯನ್ನು ತಪ್ಪಿಸಿಕೊಳ್ಳುವುದಕ್ಕೆ ನೀವುಗಳು ಖಂಡಿತವಾಗಿ ಉಪಯೋಗಿಸಬೇಕಾದದ್ದು ಒಂದೇ. ಅದ್ಯಾವುದೆನ್ನುವಿರೋ?

ಸುಧಾಸಾಗರ ಅವಲೇಹ.

ಈ ಅವಲೇಹವು ದೇಹದ ಉಷ್ಣವನ್ನು ಶಮನಮಾಡುತ್ತೆ. ಸಕ್ತಿಯಿಂದ ಜಠರದ ……, ಕೊರತೆಯಿಲ್ಲದಂತೆ ಬಲಪಡಿಸಿ ಬಹಳ ಬೇಗ ಹಸಿವೆಯನ್ನು ವೃದ್ಧಿಗೊಳಿಸುತ್ತದೆ. …… ರಕ್ತದೋಷದಿಂದ ಉಂಟಾಗುವ ಎಲ್ಲಾ ತರದ ರೋಗ…… ನಿಮ್ಮ ಅಂಗದ ರಕ್ತವನ್ನು ಶುದ್ಧಮಾಡಿ ಶುದ್ಧಿಸುವುದು.

ಬಾಟ್ಲಿ ಒಂದರ ಕ್ರಯ ರೂ. 1-8-0 ಮಾತ್ರ.

ನಮ್ಮ ವಿಳಾಸ—ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಕೈನಾಬಜಾರ್ ರೋಡ್, ಮದರಾಸು. [255-14]

ಮೈಸೂರು ಸಂಸ್ಥಾನದಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

11-2-1916 ರಿಂದ 18-2-1916 ವರೆಗೆ

		ಪ್ಲೇಗ್		ಕಾಲರಾ	
		ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು	ಜಿಲ್ಲಾ	7	6	0	0
ಮೈಸೂರು	,,	0	0	0	0
ಬೆಂಗಳೂರು ಸಿವಿಲ್ ಸ್ಟೇಷನ್		19	43	0	0
ಮೈಸೂರು	,,	25	27	0	0
ಕೋಲಾರ	,,	0	0	0	0
ಕೋಲಾರ್ ಚಿನ್ನದ ಗಣಿಗಳು		1	1	0	0
ತುಮಕೂರು ಡಿಸ್ಟ್ರಿಕ್ಟ್		1	0	0	0
ಹಾಸನ	,,	3	2	0	0
ಕಡೂರು	,,	38	25	0	0
ಶಿವಮೊಗ್ಗ	,,	7	7	0	0
ಚಿತ್ರದುರ್ಗ	,,	22	13	0	0
	ಜುಮ್ಲಾ	151	124	0	0

…… 1838 ನೇ ರಾಕ್ಷಸ ಸಂವತ್ಸರ ಉತ್ತರಾಯಣ ಶಿಶಿರಋತು ಮಾಘ ಬಹುಳ ಚತುರ್ದಶಿ ಬುಧವಾರದಿಂದ ಫಾಲ್ಗುಣ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1916 ನೇ ಮಾರ್ಚಿ.

ತಾ.	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಚಾಂದ್ರಮಾನ ತೇದಿ
3	ಗುರು *	ಚತುರ್ದಶಿ	10-16	ಧನಿಷ್ಠ	5-21	21
4	ಶುಕ್ರ	ಅಮಾವಾಸ್ಯೆ	6-25	ಶತಭಿಷ	3-11	22
5	ಭಾನು †	ಪಾಡ್ಯಮಿ	3-30	ಪೂ.ಭಾ	1-58	23
6	ಸೋಮ ‡	ಬಿದಿಗೆ	1-42	ಉ.ಭಾ	1-43	24
7	ಮಂಗಳ	ತದಿಗೆ	1-0	ರೇವತಿ	2-42	25
8	ಬುಧ §	ಚೌತಿ	1-48	ಅಶ್ವಿನಿ	4-57	26
9	ಗುರು ;;	ಪಂಚಮಿ	3-48	ಭರಣಿ	8-30	27

* ಸರ್ವತ್ರ ಅಮಾವಾಸ್ಯೆ, ಮಳೆ ನಕ್ಷತ್ರ—ಪೂರ್ವಾಭಾದ್ರ 1 ನೇ ಪಾದ. † ಚಂದ್ರೋದಯ, ಜಮಾದಿ ಲವಲ್ ಚಂದ್ 1. ‡ ಮಳೆ ನಕ್ಷತ್ರ—ಪೂರ್ವಾಭಾದ್ರ 2 ನೇ ಪಾದ. § ವ್ಯತೀಪಾತಯೋಗ. ;; ಶುಭಪ್ರದ ಗೌರೀ ವ್ರತ.

ಡೋಂಗರೆ ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿಯಾಗೋಣ, ನಗುಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-26]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ವಿ. ಪಿ. ೪ ಆ.

ಕೆ. ಟಿ. ಡೋಂಗರೆ ಎಂಡ್ ಕೊ.,
ಚೌಪಾಟಿ, ಗಿರಗಾಂವ, ಮುಂಬಯಿ.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ? ಆಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಲೆಂಜ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳೆಕೊಂಡರೆ ಕ್ಷಣದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಆಟೋ ಮೋಹಿನಿಯೇ. ನಾವಿರಾರು ಹೊಸ ಪುಷ್ಪಗಳ ಸವಾಲೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕೊಡುವಂಥಾದ್ದು ಆಟೋ ಮೋಹಿನಿಯೇ.

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ.	3—0—0	¼ ,, ,,	0—8—0
1 ಡ್ರಾಮ್ ಕೊಳವೆಗೆ ….	,, 0—12—0	ಸ್ಯಾಂಪಲ್ ದರ್ಜಿಗೆ	13—0

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸೊಂಪಾಗಿ ಬೆಳಸುವಂಥಾದ್ದು. ಕಣ್ಣು ಮತ್ತು ಮೆದುಳಿಗೆ ತಂಪನ್ನು ಕೊಡತಕ್ಕದ್ದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇವೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಯಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಕಾಗಿದೆ [232-12]

ಕ್ರಯ 1 ಬಾಟ್ಲಿಗೆ ರೂ. 1-0-0
,, 3 ,, ,, 2-10-0.

ಸೋಲ್ ಏಜಂಟರು—ನಾ ಭಗವಾನ್ ದಾಸ್ ಚುನಿಲಾಲ್ ಕಂಪನಿ,
177, ಚೈನಾಬಜಾರ್ ರೋಡ್, ಮದರಾಸು.

Printed and Published by the Rev. H. Gulliford, Proprietor and Manager, Wesleyan Mission Press, Mysore. 2/3/1916.

REGISTERED M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸರ್ ೧೯೧೬ ನೇ ಇಸವಿ ಮಾರ್ಚಿ ತಾರೀಖು ೯ ನೇ ಗುರುವಾರ. ಸಂಚಿಕೆ ೪೧

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, [illegible] ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜು [illegible] ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ [illegible] ರೂ. 1-12-0 [168-38]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಪ್ರಶ್ನೋತ್ತರ ಲೇಖ್ಯಬೋಧಿನಿ ಕ್ರಯ ೧-೮-೦

[illegible] ಸಿವಿಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ಸಮಸ್ತ ವಿಚಾರಗಳನ್ನೂ, [illegible] ಬೋಧಕರ ಸಹಾಯವಿಲ್ಲದೆ ತಿಳಿಸುವುದು. ಆರನೆಯ ಮುದ್ರಣ [illegible] ಸುಂದರವಾದ ಪುಸ್ತಕ! ಬೇಗ ಬೇಗ ಬರೆದು ತರಿಸಿಕೊಳ್ಳಿರಿ!!

ಕ್ರಯ ಒಂದು ರೂಪಾಯಿ ಎಂಟಾಣೆ.

ನಮ್ಮ ವಿಳಾಸ:—ಭಾರತಿ ಸಂಪಂಗಿರಾಮು,

[10] 42, ಸಿ. ಪೇಟೆ, ಕೋಟೆ, ಬೆಂಗಳೂರು ಸಿಟಿ.

ಸಂಗೀತ ಪಾರಿಜಾತ

ಮೂರನೆಯ ಮುದ್ರಣ! [illegible] ಕೀರ್ತನೆಗಳು ಮೊದಲಿಗಿಂತ [illegible]. ಬೇಗನೆ [illegible] ಹಾಡು ಮುಂತಾದ ಅನೇಕ ಹಾಡು[illegible] ಕ್ರಯ ೦-೪-೦ ನೂರು ಪ್ರತಿಗೆ [illegible] ತರಿಸಿಕೊಂಡರೆ [illegible] ಕಮಿಷನ್ ಕೊಡುವೆವು

ಶಬ್ದಾದರ್ಶ ನೋಟ್ಸ್.

ಜೂನಿಯರ್ ಸೆಕೆಂಡ್ರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು. ಕ್ರಯ [illegible] ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಸಿಗುತ್ತೆ.

ವಿಳಾಸ—ಇಂಡ್ರಿಕಾ ಬುಕ್ ಸ್ಟಾಲ್, ಮೈಸೂರು.

[37-13] ಸ್ಟೂಡೆಂಟ್ಸ್ ಹಾಲ್, ಮೈಸೂರು.

ಸ್ವಲ್ಪ ಕ್ರಯ! ಪರೀಕ್ಷಿಸಿ ನೋಡಿರಿ!

ಬಿಕ್ಕೇ ಸಮಯವು!

ನೆಪ್‌ಚೂನ್ ಲೇಖಿನಿ.

೫೦೦ ನೇ ನಂಬರ್ ಫೌಂಟನ್ ಪೇನಾ 14 ಕ್ಯಾರೆಟ್ ಗೋಲ್ಡ್ ನಿಬ್ಬು, ಫಿಲ್ಲರ್ ಮತ್ತು ಪೆಟ್ಟಿಗೆ ಸಹಿತ ಕ್ರಯ ರೂ. 1-14-0 ಮಾತ್ರ. ಟಪಾಲ್ ಮತ್ತು ಪ್ಯಾಕಿಂಗ್ ಚಾರ್ಜ್ ಬೇರೆ. ಇದೇ ತಿಂಗಳು ಒಳಗೆ ತರಿಸಿಕೊಳ್ಳುವವರಿಗೆ ಪ್ರತಿ ಒಂದು ಪೇನಾಕ್ಕೂ ಸೊಗಸಾದ ಕ್ಲಿಪ್ಪು ಉಚಿತವಾಗಿ ಕೊಡಲಾಗುತ್ತೆ. ಬೈಸಿಕಲ್‌ಗೆ ಯಾವ ಸಾಮಾನು ಬೇಕಾದರೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತೆ. [279-12]

ವಿಳಾಸ-ದಿ ಸಿಟಿ ಸೈಕಲ್ ಸ್ಟೋರ್ಸ್,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

[illegible]ನ್ ತರಗತಿ ಭೂವಿವರಣೆ.

ಚಿತ್ರಗಳು ಮತ್ತು ಭೂಪಟಗಳೊಡನೆ (ಕ್ರಯ 1 ಆಣೆ).

ಮೈಸೂರು ದೇಶದ ಭೂಪಟಗಳು.

(ಪ್ರಾಕೃತಿಕ ಮತ್ತು ರಾಜಕೀಯ) ಕ್ರಯ 2 ಆಣೆ.

ಹೊಸ ಭೂವಿವರಣೆಗಳು.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯ ಕಾರಣ [illegible]ಡನೆ ರಚಿಸಲ್ಪಟ್ಟಿವೆ.

1. ವಿಶ್ವಾಖಂಡದ ಭೂವಿವರಣೆ ... 0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ ... 0-6-0

ಮೇಲೆ ಕಂಡ ಎರಡೂ ಸೇರಿ ... 0-10-0

[illegible] ಭೂವಿವರಣೆ 2 ಆಣೆ; The English L. S. Text [illegible]miner for 1916 by a Graduate, Price 3 as.

ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ,

[illegible] ಸುಬೋಧ ಗ್ರಂಥಾಲಯ, ಮೈಸೂರು.

FREE! Do you wish to know "How to Make the Best Quality ROSE, JASMINE, LILY, LOTUS & Sweet Scented Hair Oils at a very cheap cost at your own home? *If so, please write us at once and mention this paper.* 263-11

S. PAUL & Co., *Perfumers,*

4, Hospital Street, Dharamtala, **Calcutta.**

ಹರಾಜು ನೋಟೀಸ್.

ಬೆಂಗಳೂರು ತಾಲೂಕು [illegible] ಬೆಂಗಳೂರು [illegible] ಸರ್ವೆ 21 ನೆ ನಂಬರ್ [illegible] ಬಾಗಾಯತು 5 ಎಕರೆ 13 ಗುಂಟೆಗೆ ಅಕಾರ 17 ರೂ. [illegible] 4-12-0 ಆಕಾರದ ಜಮೀನು [illegible] 12-4-0 ರೂ. ಉಳ್ಳ ಆಕಾರದ ಜಮೀನನ್ನು 1916 ನೇ ಇಸವಿ ಮಾರ್ಚಿ 19 ನೇ ತಾರೀಖು ಭಾನುವಾರ ಬೆಳಿಗ್ಗೆ 8 ಗಂಟೆಗೆ ಬಹಿರಂಗವಾಗಿ [illegible] ಹರಾಜು ಹಾಕುತ್ತೇವೆ. ಬೇಕಾದವರು [illegible] ಪಡೆಯಬಹುದು. ಇದರಲ್ಲಿ ಸುಮಾರು 110 [illegible] ಗಿಡಗಳು, [illegible], ಹಲಸಿನಮರ ಮತ್ತು [illegible] ಮರಗಳು ಇರುತ್ತೆ. ಫಲಗಳಲ್ಲಿ ಸುಮಾರು 130 ರೂ. [illegible] ಉತ್ಪತ್ತಿಯಾಗುತ್ತೆ. [illegible] ಬೆಳೆಯು ಆಗುತ್ತೆ. [illegible] [illegible]

ಎಂ. [illegible] & ಕೊ., [illegible],

ಬಸವನಗುಡಿ, ಬೆಂಗಳೂರು ಸಿಟಿ.

VIKATA VINODINI.

An Illustrated Kannada Monthly Journal, Full of Humourous Stories, Witty Sayings, Comic Sketches, Moral Truths, Etc.

Annual subscription (including postage) Re. 1-0-0 only. Sample Copy will be sent free on application.

Address:-**VIKATA VINODINI OFFICE, Cottonpet, Bangalore City.**

ಕನ್ನಡ ಮಾಸಪತ್ರಿಕೆ.

ವಿಕಟ ವಿನೋದಿನಿ.

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಕ್ತಿಗಳಿಂದ ಕೂಡಿರುವ [illegible] ಚಿತ್ರವುಳ್ಳ ಈ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ. ಮಾದರಿ ಪತ್ರಿಕೆ ಉಚಿತವಾಗಿ ಕಳುಹಿಸಲ್ಪಡುವದು

ನಮ್ಮ ವಿಳಾಸ:—"ವಿಕಟವಿನೋದಿನಿ" ಆಫೀಸು,

[48-2] ಅರಳೆಪೇಟೆ, ಬೆಂಗಳೂರು ಸಿಟಿ.

ಮೈಸೂರು ಸ್ಟೇಟ್ ರೈಲ್ವೆಗಳು.

[ಕೋಲಾರ್ ಡಿಸ್ಟ್ರಿಕ್ಟ್ ಮತ್ತು ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ್ ರೈಲ್ವೆಗಳ ಸಹಿತ.]

ನೋಟೀಸ್.

ಕೋಲಾರ ಡಿಸ್ಟ್ರಿಕ್ಟ್ ರೈಲ್ವೆಯಲ್ಲಿ

ಕೋಲಾರ್ ಚಿಂತಾಮಣಿ ಸೆಕ್ಷನ್ನಲ್ಲಿ ಆಮದು ರಫ್ತು ಪ್ರಾರಂಭ.

ಕೋಲಾರ್ ಡಿಸ್ಟ್ರಿಕ್ಟ್ ರೈಲ್ವೆಗೆ ಸಂಬಂಧಪಟ್ಟ ಕೋಲಾರ್-ಚಿಕ್ಕಬಳ್ಳಾಪುರ ಸೆಕ್ಷನ್ ಪೈಕಿ ಜನ್ನಘಟ್ಟ, ದಲಸನೂರು, ಶ್ರೀನಿವಾಸಪುರ, ದೊಡ್ಡನೆಟ್ಟ, ಚಿಂತಾಮಣಿ ಎಂಬೀ ಭಾಗದ ರೈಲ್ವೆ ಕಾಮಗಾರಿಗಳು ಪೂರೈಸಿರೋಣದರಿಂದ ಈ ಭಾಗದಲ್ಲಿ ಪ್ರಯಾಣಿಕರನ್ನೂ ಪಾರ್ಸೆಲ್ ಲಗ್ಗೇಜು ಎಲ್ಲಾ ಬಗೆಯ ವ್ಯಾಪಾರದ ಸರಕುಗಳನ್ನೂ 1916 ನೇ ಇಸವಿ ಮಾರ್ಚಿ ತಾ 6 ನೇ ಸೋಮವಾರದಿಂದ ಆಮದು ರಫ್ತು ಶುರು ಮಾಡಲಾಗುತ್ತದೆ. ಪ್ರಾಣಿಗಳು, ಅಪಾಯಕರವಾದ ಸರಕುಗಳು ಮತ್ತು [illegible] ಉಳಿದ ಎಲ್ಲಾ ಆಮದು ರಫ್ತುಗಳೂ ಅದೇ ತಾರೀಖಿನಿಂದ ಜನ್ನಘಟ್ಟ, ಶ್ರೀನಿವಾಸಪುರ, ಚಿಂತಾಮಣಿ ಸ್ಟೇಷನ್‌ಗಳಿಂದ ಒಳಾಮದಲ್ಲೂ, ಹೊರಗಡೆಗೂ ಸರಕುಗಳನ್ನು ರವಾನೆ ಮಾಡಲ್ಪಡುತ್ತೆ

ಬೌರಿಂಗ್‌ಪೇಟೆ ಚಿಂತಾಮಣಿ ರೈಲ್ ರಸ್ತೆಗಳಲ್ಲಿ ರೈಲ್ವೆ ಗಾಡಿಗಳು ಹೋಗಿ ಬರುವ ಕಾಲಗಳನ್ನು ಕೆಳಗಿನ ಪಟ್ಟಿಯಲ್ಲಿ ಪ್ರಕಟಿಸಲಾಗಿದೆ:—

ಅಪ್ ಟ್ರೇಯಿನ್‌ಗಳು. (ಕೆಳಕ್ಕೆ ಓದಿ) No. 1	No. 3	No. 5		ಸ್ಟೇಷನ್‌ಗಳು.		ಡೌನ್ ಟ್ರೇಯಿನ್‌ಗಳು. (ಮೇಲಕ್ಕೆ ಓದಿ) No. 2	No. 4	No. 6
ಗಂ. ನಿ.	ಗಂ. ನಿ.	ಗಂ. ನಿ.		ಮದರಾಸ್, ದಕ್ಷಿಣ ಮರಾಟಾ ಟ್ರೇಯಿನ್‌ಗಳು.		ಗಂ. ನಿ.	ಗಂ. ನಿ.	ಗಂ. ನಿ.
9-13	13-45	....	ಬರು ಗೆ	ಬೆಂಗಳೂರು ಕಡೆ	ಹೊರ	19-47	8-36	16-39
8-25	13-39	16-18	ಬರು ಗೆ	ಕೋಲಾರ್ ಚಿನ್ನದ ಗಣಿ ರೈಲ್ವೆ ಕಡೆ	ಹೊರ	14-5	8-45	16-41
4-10	13-30	16-29	ಬರು ಗೆ	ಮದರಾಸ್ ಕಡೆ	ಹೊರ	14-0	8-44	22-35
9-36	14-10	16-50	ಹೊರ ಗೆ	ಬೌರಿಂಗ್‌ಪೇಟೆ	ಬರು	12-30	8-6	16-6
10-21	14-56	17-36	ಬರು	ಕೋಲಾರ	ಹೊರ	11-50	7-20	15-[illegible]
10-35			ಹೊರ		ಬರು	11-37		
11-54			ಬರು	ಶ್ರೀನಿವಾಸಪುರ	ಹೊರ	10-18		
12-5			ಹೊರ		ಬರು	10-8		
13-3			ಬರು	ಚಿಂತಾಮಣಿ	ಹೊರ	9-10		

ಎಲ್ಲಾ ಸ್ಟೇಷನ್‌ಗಳಿಂದಲೂ ಹೊರಡುವ ಮತ್ತು ತಲಪುವ ಕಾಲಗಳನ್ನೂ, ಛಾರ್ಜುಗಳ ದರಗಳನ್ನೂ ತಿಳಿಯಬೇಕಾದರೆ ಸ್ಟೇಷನ್‌ಗಳಲ್ಲಿ ಹಚ್ಚಿರುವ ಅಡ್ವರ್ಟೈಸ್‌ಮೆಂಟ್ ನೋಟೀಸುಗಳನ್ನು ನೋಡಿ.

ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಮೇಲೆ ಯಲಹಂಕದಿಂದ ಚಿಕ್ಕಬಳ್ಳಾಪುರಕ್ಕೆ ರೈಲ್ ಗಾಡಿಗಳು ಹೋಗಿ ಬರುವ ಕಾಲಗಳನ್ನು ಮೇಲ್ಕಂಡ ತಾರೀಖಿನಿಂದಲೇ ಸ್ವಲ್ಪ ಮಟ್ಟಿಗೆ ಬದಲಾವಣೆ ಮಾಡಲ್ಪಟ್ಟಿದೆ. ಈ ಸಂಗತಿಯನ್ನು ತಿಳಿಯಬೇಕಾದರೆ ಸ್ಟೇಷನ್‌ಗಳಲ್ಲಿ ಹಚ್ಚಿರುವ ನೋಟೀಸುಗಳನ್ನು ನೋಡತಕ್ಕದ್ದು. [63-1]

ಟೆಲಿಗ್ರಾಫ್ ಆಫೀಸುಗಳು.—ಬೆಂಗಳೂರು-ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ರಸ್ತೆಯಲ್ಲಿ ಯಲಹಂಕ, ದೊಡ್ಡಜಾಲ, ದೇವನಹಳ್ಳಿ, ಆವತಿಹಳ್ಳಿ, ನಂದಿ, ಚಿಕ್ಕಬಳ್ಳಾಪುರ—ಈ ಸ್ಟೇಷನ್‌ಗಳಲ್ಲೂ; ಕೋಲಾರ್ ಡಿಸ್ಟ್ರಿಕ್ಟ್ ರೈಲ್ವೆಗೆ ಸೇರಿದ ಬೌರಿಂಗ್‌ಪೇಟೆ, ಕೋಲಾರ, ಜನ್ನಘಟ್ಟ, ಶ್ರೀನಿವಾಸಪುರ—ಈ ಸ್ಟೇಷನ್‌ಗಳಲ್ಲಿ ಟೆಲಿಗ್ರಾಫ್ ಆಫೀಸುಗಳನ್ನು ಇಟ್ಟಿದೆ. ದಿವಸಾ ಬೆಳಿಗ್ಗೆ 6 ಗಂಟೆ ಮೊದಲುಗೊಂಡು ರಾತ್ರಿ 8 ಗಂಟೆ ವರೆಗೆ ಯಾರು ಬೇಕಾದರೂ ಈ ಆಫೀಸುಗಳಲ್ಲಿ ಬೇಕಾದ ಕಡೆಗಳಿಗೆ ತಂತೀ ವರ್ತಮಾನಗಳನ್ನು ಕೊಟ್ಟು ಕಳುಹಿಸಿಕೊಳ್ಳಬಹುದು. ತಂತೀ ವರ್ತಮಾನಗಳ ಛಾರ್ಜು ಮುಂತಾದ ಸಂಗತಿಗಳನ್ನು ಗವರ್ನ್‌ಮೆಂಟ್ ಟೆಲಿಗ್ರಾಫ್ ಇಲಾಖೆಯಿಂದ ಮೂರು ತಿಂಗಳಿಗೊಂದಾವರ್ತಿ ಪ್ರಕಟಿಸಲ್ಪಡುವ ಇಂಡಿಯನ್ ಟೆಲಿಗ್ರಾಫ್ ಗೈಡ್ ಪುಸ್ತಕವನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಟ್ರಾಫಿಕ್ ಮ್ಯಾನೇಜರವರ ಆಫೀಸ್,
ಬೆಂಗಳೂರು, 29 ನೇ ಫೆಬ್ರವರಿ, 1916.

ಬಿ. ವೆಂಕೋಬರಾವ್,
ಟ್ರಾಫಿಕ್ ಮ್ಯಾನೇಜರ್.

ಬೆಲೆ ಬಹು ಸುಲಭ. ಬೆಲೆ ಬಹು ಸುಲಭ.

ಸೊಗಸಾದ ಗೆಜ್ಜೆಕಟ್ಟಿದ ಭಂಗಾರದ ಗಿಲೀಟಿನ ಡಾಬುಗಳು.

ಅನೇಕರು ಕಳುಹಿಸಿರುವ ಡಾಬುಗಳಂತೆ ಇರುವದಿಲ್ಲ. ಭಂಗಾರದ ಗಿಲೀಟಿನಿಂದ ಪ್ರತ್ಯೇಕವಾಗಿ ಕಂಜಾವೂರ್ ದೇಶದ ಕೆಲಸಗಾರರಿಂದ ಬಹು ಸೊಗಸಾಗಿ ತಯಾರಿಸಿದೆ.

ಡಾಬುಗಳ ವಿಷಯದಲ್ಲಿ ಯಾವ ದೋಷವೂ ಇಲ್ಲ. ಒಂದು ಸಲ ಉಪಯೋಗಿಸಿ ನೋಡಿದರೆ ಮತ್ತೊಬ್ಬರಿಗೆ ಶಿಫಾರಸು ಮಾಡುವಿರಿ.

ಭಂಗಾರದ ಗಿಲೀಟಿನ ಗೆಜ್ಜೆಕಟ್ಟಿದ ಡಾಬುಗಳು 1 ಕ್ಕೆ ರೂ. 2-12-0. ಗೆಜ್ಜೆ ಇಲ್ಲದ ಡಾಬುಗಳು ರೂ. 1-12-0. [63-1]

ರಾಸ್ ವಾಚ್ ಕಂಪನಿ, 3, ಅರುಳಪ್ಪನ ಬೀದಿ, ಮದರಾಸು.

ನಿಮಗೆ ನಿಮ್ಮ ರಕ್ತದ ಚಿಂತೆಯುಂಟೇ?

ನಿಮ್ಮ ರಕ್ತದಿಂದಲೇ ಜೀವ ಸುಖವಾಗಿರುವುದು; ನಿಮ್ಮ ರಕ್ತದಿಂದಲೇ ನೀವು ರೋಗರಹಿತರಾಗಿರುವುದು. ರಕ್ತ ಶುದ್ಧವಾಗಿದ್ದರೆ ಆರೋಗ್ಯ, ದೃಢತೆ, ದೀರ್ಘಾಯುಸ್ಸು ಎಲ್ಲಾ ಉಂಟಾಗುತ್ತೆ. ರಕ್ತ ಕೆಟ್ಟರೆ ಕ್ರಮವಾಗಿ ನಿಮ್ಮ ದೇಹ ಕುಗ್ಗುತ್ತಾ, ಆಯುಸ್ಸು ಕ್ಷಯಿಸುತ್ತಾ, ಜೀವನವೇ ದುಃಖಮಯವಾಗುತ್ತಾ ಬರುವುದು. ಇಂಥಾ ಭಯಂಕರವಾದ ಸ್ಥಿತಿಯನ್ನು ತಪ್ಪಿಸಿಕೊಳ್ಳುವುದಕ್ಕೆ ನೀವು ಮುಖ್ಯವಾಗಿ ಉಪಯೋಗಿಸಬೇಕಾದದ್ದು ಒಂದೇ. ಅದ್ಯಾವುದೆನ್ನುವಿರೋ?

ಸುಧಾಸಾಗರ ಅವಲೇಹ.

ಈ ಅಮೃತವು ದೇಹದ ಉಷ್ಣವನ್ನು ಶಮನಮಾಡುತ್ತೆ. ನಿಶ್ಶಕ್ತಿಯನ್ನು ನಿವಾರಿಸಿ ಬಲವನ್ನು ವೃದ್ಧಿಮಾಡುತ್ತೆ ಮತ್ತು ರಕ್ತದೋಷದಿಂದ ಉಂಟಾಗುವ ಎಲ್ಲಾ ತರದ ರೋಗಗಳನ್ನು ಅಟ್ಟಿಸಿ ರಕ್ತವನ್ನು ಶುದ್ಧಿಮಾಡಿ ಉಕ್ಕಿಸುವುದು.

ಬಾಟ್ಲೆ ಒಂದರ ಕ್ರಯ ರೂ. 1-8-0 ಮಾತ್ರ.

ನಮ್ಮ ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[255-15] ಆಯುರ್ವೇದೋದಯ ಔಷಧಾಲಯ,

20, ಜೈನಾಬಜಾರ್ ರೋಡ್, ಮದರಾಸು.

ಕ್ರಿಸ್ಮಸ್ ಹಬ್ಬದ ವಿಶೇಷ ಮಾರಾಟ! 1916 ನೇ ಜನವರಿ 25 ರ ವರೆಗೆ ಮಾತ್ರ. ತಬಲಾ ಮತ್ತು ಛಾಯಾ ಪೆಟ್ಟಿ.

ಮೂರು ವರ್ಷದ ಜಾಮೀನ್ ಕೊಡುತ್ತೆ.

ನಮ್ಮ ಪ್ರಸಿದ್ಧವಾದ ಫ್ಲೂಟ್ ಹಾರ್ಮೋನಿಯಮ್ ಬಹಳ ಉತ್ತಮವಾದದ್ದು, ಇದಕ್ಕೆ ಸಮಾನವಾದದ್ದು ಯಾವ ಪೆಟ್ಟಿಯೂ ಕಡಿಮೆಯಿಲ್ಲ. ... ಕ್ರಯ ರೂ. 38, 45, 50; ಈಗಿನ ಕ್ರಯ ರೂ. 19, 22-8-0, 25; ... ಕ್ರಯ ರೂ. 65, 70, 80, 90; ಈಗಿನ ಕ್ರಯ ರೂ. 32-8-0, 35, 40, 45; ... ಕ್ರಯ ರೂ. 130; ... ವಿ. ಪಿ. ಮಾಡುತ್ತೆ.

ವಿಳಾಸ—The National Harmonium Co.,

[276-14] SIMLA T.S.O., (E) CALCUTTA.

ಬಿಸಿಲು ಕಾಲಕ್ಕೆ ಮೂರು

ಮಹೌಷಧಗಳು.

ಅಮೃತಾಮಲಕ ತೈಲ.

ಈ ತೈಲವು ಕಣ್ಣು ಕೈಕಾಲುರಿ, ಬಿಸಿಲಿನ ತಲೆನೋವು, ಕೆಮ್ಮು ಮುಂತಾದ ರೋಗಗಳನ್ನು ತಪ್ಪಿಸುವುದು. ಬಿಸಿಲು ಕಾಲಕ್ಕೆ ಇದಕ್ಕಿಂತಲೂ ಉತ್ತಮವಾದುದು ಮತ್ತೊಂದಿಲ್ಲವೆಂಬುದನ್ನು ಅನುಭವದಿಂದ ತಿಳಿಯಿರಿ.

8 ಔನ್ಸಿಗೆ ಆಗುವ ತೈಲ 8 ಆಣೆ.

ಖಂಡಾಮಲಕ ರಸಾಯನ.

ಸಮಸ್ತ ಪಿತ್ತ ವಾತ ವಿಕಾರಗಳನ್ನೂ ಜಾಗ್ರತೆ ಗುಣಮಾಡಿ ಜೀರ್ಣಶಕ್ತಿಯನ್ನು ಹೆಚ್ಚಿಸಿ, ರಾತ್ರಿ ಸುಖನಿದ್ರೆಯನ್ನುಂಟುಮಾಡಿ ಮಲವನ್ನು ಸಡಿಲಮಾಡುವುದು. 15 ದಿನದ ಔಷಧ 12 ಆಣೆ.

ಆಮೋದಿನಿ.

ಬಾಯಿನಾತವನ್ನು ತಪ್ಪಿಸಿ ... ಸುವ ಈ ರತ್ನವನ್ನು ಈಗಲೇ ತರಿಸಿಕೊಳ್ಳಿರಿ. 150 ಮಾತ್ರೆ ಸೀಸೆ 4 ಆಣೆ. [278-13]

ಎರಡು ರೂಪಾಯಿಗೆ ಕಡಮೆ ಇಲ್ಲದೆ ಔಷಧ ತರಿಸಿದರೆ ಟಪಾಲ್ ಮಾಫು.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್, ನಂಜನಗೂಡು.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ. ಹೊಸ ನಮೂನೆ ಗಡಿಯಾರ.

"ಸ್ವಿಸ್ ಪಾಕೆಟ್ ವಾಚ್."

ಸರಪಣಿ ಸಹಿತ ಕ್ರಯ ರೂ. 3-0-0.



ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ಕಳುಹಿಸುತ್ತಾರೆ. ... ಗಂಟೆ ತೋರಿಸುವದರಲ್ಲಿ 1 ನಿಮಿಷವಾದರು ಹೆಚ್ಚು ಕಮ್ಮಿಯಿಲ್ಲದೆ ನಡೆಯುತ್ತದೆ. "ಸ್ವಿಸ್ ಪಾಕೆಟ್ ವಾಚ್" ಎಂಬುದನ್ನು ಗುರ್ತು ನೋಡಿ ಪಡಕೊಳ್ಳಿರಿ. ಜಾಗ್ರತೆ ತರಿಸಿಕೊಳ್ಳುವರಿಗೆ ಮಾತ್ರ ದೊರೆಯುವದು.

ವಿಳಾಸ—ಧೈರ್ಯಲಕ್ಷ್ಮಿ ಅಂಡ್ ಕಂಪನಿ,

[63-1] 3, ಅರುಳಪ್ಪನ ಬೀದಿ, ಮದರಾಸು.

ಬೆಸ್ಟ್ ಸಾಲಾಮಿಸ್ರಿ ಮುರಬ್ಬಾ.

ಈ ಮುಂಬಾಯಿ ಅಸಲ್ ಸಾಲಾಮಿಸ್ರಿಯಲ್ಲಿ ಚಿಕ್ಕ ರೀಮು ಮುಂತಾದ್ದು ಸೇರಿಸಿ ಅತಿ ನಯವಾಗಿ ತಯಾರಿಸಲಾಗಿದೆ. ಈ ಮುರಬ್ಬ ಉಷ್ಣಕಾಲಕ್ಕಿಂದ ಉಂಟಾದ ಅನೇಕ ವ್ಯಾಧಿಗಳಿಗೆ ಸಂಜೀವನವಾಗಿರುತ್ತೆ. ...

... 1915 ನೇ ಡಿಸೆಂಬರು ... ಕ್ರಯ ರೂ. 2.

ಏಜೆಂಟ್

ಡಿ. ಸ್ಪೆನ್ ಉಸ್ಮಾನ್ ಅಂಡ್ ಕೊ., ಜನರಲ್ ಮರ್ಚೆಂಟ್, ಪೇಟ್ಪಸೇಟ್, ಬೆಂಗಳೂರು ಸಿಟಿ. ಟಿ. ಸೇಟ್ ... ನಂಬರು 104, ಬೆಂಗಳೂರು ಸಿಟಿ. [258-11]

ಓರಿಯಂಟಲ್ ಗೌ|| ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು .... ರೂ. 4,46,00,000

ಕಂಪನಿಯಿಂದ ಪಾವತಿ ಆಗಿರುವದು „ 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮಿ|| ಎಂ. ಎಸ್. ರಘುಪತಿ, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ಸಂಪತ್ತಯ್ಯನವರು ಅಥವಾ ಮ|| ವೆಂಕಟೇಶನ್, ಟ್ರಾವೆಲಿಂಗ್, ಮೈಸೂರು; ಅಥವಾ ಬ್ರಾಂಚ್

[222-21] ಸೆಕ್ರೆಟರಿ, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರವನ್ನು ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೆಂದರೆ:— ... ಬೆನ್ನುನೋವು; ... ಕೀಲುನೋವು; ... ಇತ್ಯಾದಿ. ...

ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮತ್ತೆ ಕ್ರಿಯೆಗಳನ್ನು ಸರಿಪಡಿಸಿ, ರಕ್ತದಿಂದ ಮೂತ್ರವನ್ನು ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-28]

ಆರೋಗ್ಯವು ಬೇಕಾದವರು ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುತ್ತವೆ.



ರೂ. 3—0—0; ಅಥವಾ 6 ಡಬ್ಬಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ಪೊ. ಬಾ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಡೋಂಗರೆ ರವರ

ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-27]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,

ಚೌಪಾಟಿ, ಗಿರಗಾಂವ, ಮುಂಬಯಿ.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ಕೋಟೆನ್ನೇ ನಿಮ್ಮ ಜೇಬಿನಲ್ಲಿ ಇಟ್ಟುಕೊಳ್ಳಬಾರದೇ?

ಅಟೋ ಮೋಹಿನಿಯೇ ಅದು.

ಇದಕ್ಕೆ ಹೋಲಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನು, ಹಲವು ಪ್ರದರ್ಶನಗಳಲ್ಲಿ ನಾನಾ ಚಿನ್ನ ಭಂಗಾರದ ಪದಕಗಳನ್ನು ಸಂಪಾದಿಸಿಕೊಂಡಿದೆ. ...

... 100 ರೂಪಾಯಿ ಬಹುಮಾನ ಕೊಡುತ್ತೇವೆಂದು ... ಆಟೋ ಮೋಹಿನಿಯೇ ...

1 ಡ್ರಾಂ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ. 2—0—0	½ „ „	0—8—0
1 ಡ್ರಾಮ್ ಸೀಸೆಗೆ „ 0—12—0	ಶಾಂಪಲ್ ಟ್ಯೂಬ್ ಗೆ	0—12—0

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ... [282-13]

ಕ್ರಯ 1 ಬಾಟ್ಲಿಗೆ ರೂ. 1-0-0

„ 3 „ „ 2-10-0

ಸೋಲ್ ಏಜೆಂಟರು—ಪಾ ಭಗವಾನ್ ದಾಸ್ ಚುನಿಲಾಲ್ ಕಂಪನಿ,

177, ಜೈನಾಬಜಾರ್ ರೋಡ್, ಮದರಾಸು.

ಸ್ವದೇಶ ಕೈಗಾರಿಕೆಗಳು.

ಈ ಸ್ಥಳಗಳಲ್ಲಿ ಕೈಗಾರಿಕೆಗಳ ಕಾರ್ಖಾನೆಗಳನ್ನು, ಬಂಟಾನಾ ಬಡಿ ಗೊಬ್ಬರವನ್ನು ತಯಾರಿಸ ಬಹುದಾದ ಕಾರ್ಖಾನೆಗಳನ್ನು ಏರ್ಪಡಿಸುವ ಉದ್ದೇಶವುಳ್ಳ ನಮ್ಮ ದೇಶಬಾಂಧವರಿಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ ಇದರಲ್ಲಿ ಯಾವುದಾದರೂ ಕೈಗಾರಿಕೆಯನ್ನೇ ಆಗಲಿ, ಗೊಬ್ಬರದ ಕಾರ್ಖಾನೆಯನ್ನೇ ಆಗಲಿ ಇಡಬೇಕೆಂದು ಯಾರಿಗಾದರೂ ತಾತ್ಪರ್ಯವಿದ್ದರೆ ಅಲ್ಲಿನ ಸ್ಥಿತಿಗಳನ್ನು ತಿಳಿದು ಮಾತನಾಡಿಕೊಂಡು ನನಗೆ ತಿಳಿಸಿದರೆ ನಾನು ಬಂದು ಪದಾರ್ಥಗಳನ್ನು ತಯಾರಿಸುವ ರೀತಿಯನ್ನು ತೋರ್ಪಡಿಸಿ ಅನುಭವಪಡಿಸಿ ಕಾರ್ಖಾನೆಯನ್ನು ಏರ್ಪಡಿಸುವೆನು.

ಕೆ. ಆರ್. ಚಕ್ರವರ್ತಿ,

ಏಜೆಂಟ್, ಮೈ. ಸ್ಟೀಂ ಬ್ರಾಂಚ್ ಕಂಪನಿ, ಬೆಂಗಳೂರು ಸಿಟಿ.

ಅರ್ಧಬೆಲೆ! ಒಂದು ತಿಂಗಳು ಮಾತ್ರ!

ಸ್ಪ್ರಿಂಗ್ ರಿಗ್ಯುಲೇಟರ್ ವಾಚ್ ಸರ್ವೋತ್ಕೃಷ್ಟವಾದ ಕಾಲವನ್ನು ತೋರಿಸುತ್ತದೆ. ದೊಡ್ಡ ಮನುಷ್ಯರಿಗೆ ಲಾಯಕಾಗಿದೆ. 3 ವರುಷದ ಜಾಮೀನ್ ಕೊಡುವೆವು. ಕ್ರಯ ರೂ 7-14-0; ರೂ. 9-14-0. ಈಗ ನಾವು ಇಳಿಸುವ ಕ್ರಯ ರೂ. 3-15-0; ರೂ. 4-15-0. ಉತ್ತಮವಾದ ಕೈಗೆ ಕಟ್ಟಿಕೊಳ್ಳುವ ಗಡಿಯಾರ ಚರ್ಮದ ಪಟ್ಟಿ ಸಮೇತ ಕ್ರಯ ರೂ. 10; ಈಗ ಇದನ್ನು ರೂ. 5 ಕ್ಕೆ ಕೊಡುವೆವು. ಬೆಳ್ಳಿ 9 ಕ್ಯಾರೆಟ್ ಚಿನ್ನದ ಗಡಿಯಾರ ಕ್ರಯ ರೂ. 32 ಈಗ ರೂ. 16 ಕ್ಕೆ ಬಿಕರಿ. ಬೆಳ್ಳಿ ಬೆಲ್ಟ್ ವಾಚ್ ಕ್ರಯ ರೂ. 14; ಈಗ ರೂ 7 ಮಾತ್ರ. ಬಲವಾದ ನಂಬಿಕೆಯುಳ್ಳ [illegible] ನಿಕ್ಕಲ್ ವಾಚ್ ರೂ. 9 [illegible] ರೂ. 24; ಈಗಿನ ಕ್ರಯ ರೂ. 12. [illegible] ವಾಚ್ 30; ಈಗಿನ ಬೆಲೆ ರೂ. 15. ಸ್ಪೆಸಲ್ ಬಹುಮಾನ [illegible] ತರಹ ಅಲ್ಲದೆ ಇತರ ತರಹ ಪ್ರತಿ ಒಂದು ವಾಚು ಕೊಂಡವರಿಗೂ ಒಂದು ಸುಂದರ ಸರಪಳಿಯೂ, 6 ವಾಚು ಕೊಳ್ಳುವವರಿಗೆ ಒಂದು ವಾಚು ಇನಾಮು ಕೊಡುವೆವು.

[illegible] ವಿಳಾಸ—The Competition Watch Co.,

[illegible] 25, Madan Mitra Lane, E. Calcutta.

ಬೆಲೆಗಳ ಒಳಗಾಗಿ ತರಿಸಿಕೊಳ್ಳುವವರಿಗೆ 12 ಆಣೆಗೆ ಕೊಡಲ್ಪಡುತ್ತ.

ಸುಂದರವಾದ ಸೋಪಿಂಗು ಬಾಕ್ಸ್ ಒಂದು ಮನ್ಮೂನ ಪೆಟ್ಟಿಗೆ.

ಕೈಚೀಲ | ಕಾಲರ | ಕಾಟು | ಬ್ರಾಸ್ | ಜಾಕೆಟ್ಟು | ಚಿಡ್ಡಿ | ಬರೆಯು | ಬಿಲ್ಲು

ಈ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ತಯಾರಿಸಲ್ಪಟ್ಟು ಸೊಗಸಾಗಿ ಚಿತ್ರ ವಿಚಿತ್ರವಾಗಿ ನೋಡುವವರಿಗೆ ಸಂತೋಷಕರವಾದ ಪೆಟ್ಟಿಗೆ. ಇದರ ಪ್ರಕಾರದ ಬೆಳ್ಳಿ [illegible] ಈ ಪೆಟ್ಟಿಗೆಯಲ್ಲಿ ಹಣವನ್ನಾಗಲಿ, ಚಿಕ್ಕ ವಸ್ತುಗಳನ್ನು ಮುಚ್ಚಿ ಇಡಬಹುದು. ಅನೇಕರು ಇದನ್ನು ಯಾರಾದರೂ ತೆರೆದರೆ ಅದರ [illegible] ವಸ್ತುಗಳು [illegible] ಈ ಪೆಟ್ಟಿಗೆ ಜೇಬಿನಲ್ಲಿ ಇಟ್ಟುಕೊಳ್ಳಬಹುದು. [illegible] ಈ ಪೆಟ್ಟಿಗೆ ಇನ್ನೊಂದು ಪಿಟ್ಟಿದ್ದರೆ 8 [illegible] ಬದಲಿಗೆ [illegible] ಕಳುಹಿಸುವೆವು.

ಈ ಪೆಟ್ಟಿಗೆಯನ್ನು ತರಿಸಿಕೊಳ್ಳುವವರಿಗೆ 1916 ನೇ ಸಂವತ್ಸರದ ಸುಂದರ [illegible] ಕ್ಯಾಲೆಂಡರ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ — ರಾಮಚಂದ್ರ ಅಂಡ್ ಕಂಪನಿ,

[3-1] 16, ತಿರುಪಳ್ಳಿ ಬೀದಿ, ಮದರಾಸು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ ಬನೀನುಗಳನ್ನೂ, ದರಗಳನ್ನೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು

Men's socks, vests and various knitted articles,

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply :—MANAGER, WOOL WORKS,

[188-24] GIRLS' INDUSTRIAL SCHOOL, HASSAN.

USE I. C. O. BRAND

[55-46]

Refined Edible Cotton Seed Oil.

For Cooking and Salads.

An appoved substitute for Ghee in all preparations. Price—

Re. 1-4-0 per tin of 3½ lbs
„ 0-7-0 per „ of 1lb

Liberal Terms to Trade.

The Indian Co-Oporative Stores Co., Ltd.,

159, Kilari Road, Bangalore.

ಹೊಸ ನಮೂನೆ

ಫೌಂಟೆನ್ ಪೇನಾಗಳು.

ಮೈಸೂರು ಲಕ್ಷ್ಮಿ

ಫೌಂಟೆನ್ ಪೇನಾ.



ಈ ನಕ್ಷೆಯಲ್ಲಿ ತೋರಿಸಿರುವ ಹೊಸ ನಮೂನೆ ಫೌಂಟೆನ್ ಪೇನನ್ನು ಇಂಗ್ಲಾಂಡಿನಲ್ಲಿ ಪ್ರಖ್ಯಾತಿ ಹೊಂದಿದ ಕಂಪೆನಿಯಿಂದ ತರಿಸಿರುತ್ತೇವೆ. ಪೆನ್ನು ಮೊಳೆ ನಮ್ಮ ಕಂಪನಿ ಹೆಸರು ಗಿಲಿಟು ಅಕ್ಷರಗಳಿಂದ ಹಾಕಿ ಇರುತ್ತದೆ. ಇದಕ್ಕೆ ಒಂದು ಸಾರಿ ಇಂಕಿಯನ್ನು ಹಾಕಿದರೆ ಅನೇಕ ದಿವಸಗಳು ಬರೆಯಬಹುದು. ಈ ಪೇನಾ ನನಗೆ ಪ್ರತ್ಯೇಕ ನಿಮೆಯಿಂದ ಕಡಗಿನ [illegible] ಕ್ಯಾರೆಟ್ ಚಿನ್ನದ ಮೊಳೆ ಇರುವುದು [illegible] ನೋಡುವುದಕ್ಕೆ ಮನೋಹರವಾಗಿಯೂ, ಬರೆಯುವುದಕ್ಕೆ ಬಹು ಸುಲಭವಾಗಿಯೂ ಇರುತ್ತೆ. ಇದನ್ನು ಒಂದು ಸಲ ಉಪಯೋಗಿಸಿದವರು ಪುನಃ ಯಾವ ಪೇನಾವನ್ನೂ ಉಪಯೋಗಿಸರು.

[63-1]

ಕ್ರಯ 1 ಕ್ಕೆ ರೂ. 0 8-0.

6 ಪೇನಾಗಳು ಒಂದೇ ಸಲ ತರಿಸಿಕೊಳ್ಳುವವರಿಗೆ 1 ಇಂಗ್ಲೀಷ್ ವಾಚ್ ಇನಾಮಾಗಿ ಕಳುಹಿಸುವೆವು.

ವಿಳಾಸ.—ಮೈಸೂರು ಲಕ್ಷ್ಮಿ ಅಂಡ್ ಕಂಪನಿ,

3, ಬಂಡಾರಪ್ಪನ ಬೀದಿ, ಮದರಾಸು.

S. UDIPI NARAYANACHARYA & Co.,

BANARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕಂಪನಿಯಲ್ಲಿ ನೆಯುದು ತಯಾರಾಗಿರುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಶಲ್ಯ, ಪೇಟ, ಕಾಶ್ಮೀರ್ ಶಾಲು, ದುಪ್ಪಟಿ, ಮಗುಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು, ಕೊಣಾರಕು, ಅರಳೆ ಶೇಡಿ, ಧರ್ಮಾವರ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಯೇ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೇಹನತ್ತಿನಿಂದ ತಯಾರಿಸಿರುವೆವು. ಈ ಅನುಕೂಲವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೇಟಲಾಕು ಒಂದು ಕಾಶಿ ಕಾಲಭೈರವರ ದಾರವನ್ನು ಉಚಿತವಾಗಿ ಕಳುಹಿಸಲಾಗುವುದು. [119-34]

ವಿಳಾಸ,—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವೆಯುಳ್ಳ ಕಪ್ಪಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಇವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವುದೋ, ಹಾಗೆಯೇ ಪುರುಷರಿಗೆ ಪರಿಶ್ರಮವನ್ನು ಪಡುವ ಪುರುಷರಿಗೂ ಬಿಡ್ಡೆ



ಧೀಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತಲೆಗೆ ಹಚ್ಚಿಕೊಳ್ಳುತ್ತಲೇ, ಮಸ್ತಕವು ತಂಪೇರುವುದಾಗಿ, ಮೆದುಳು ಉಲ್ಲಾಸವಾಗಿ ಬುದ್ಧಿ ಚುರುಕಾಗುತ್ತದೆ. ಇದರ ಸುವಾಸನೆ ಕೂದಲ ಬುಡಗಳನ್ನು ಬಲಪಡಿಸುತ್ತದೆ; ಅದರಿಂದ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.

ನೀವು ಕೂದಲು ಹಚ್ಚಿಕೊಳ್ಳಬೇಕಾದರೆ ಕೋಡು ಉಪಯೋಗಿಸಿ ನಿಮ್ಮ ತಲೆಯನ್ನು ಕಾಪಾಡಬೇಕಾಗುತ್ತದೆ. ಈ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ನೋಡಿರಿ. ಈ ಎಣ್ಣೆಯು ಪ್ರಖ್ಯಾತಿಯು ದೇಶದಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಅನೇಕರು ಸ್ವಹಸ್ತರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಅನೇಕರಲ್ಲಿ ಒಂದನ್ನೇ ನೋಡಿರಿ: ನೇಟಿವ್ ಸಹಾಯಕರ ಬಂಧುಗಳು, ಬಸವನಗುಡಿ, ಬೆಂಗಳೂರು—ಇವರು ಕೆಲ ತಿಂಗಳ ಹಿಂದೆ ಕೆಲವು ಬಾಟಲಿ "ಕಾಮಿನಿಯಾ" ತೈಲವು ಕೊಂಡ ಬಗೆಯನ್ನು ಬರೆಯುವುದಕ್ಕೆ ಸಂತೋಷಪಟ್ಟ ನಾವೆಂದು ಸಾಧಾರಣವಾಗಿದೆ. ಅದ್ದರಿಂದ ಇನ್ನೊಂದು ಬಾಟಲಿಯನ್ನು ಕಳುಹಿಸಿ ವಿ. ಪಿ. ದ್ವಾರ ಕಳುಹಿಸಬೇಕು. ಒಂದು ಬಾಟಲಿಯ ಕ್ರಯವು ರೂ. 1-0-0 ಅ. ವೆ. 0-4-0 ಬೇರೆ. 3 ಬಾಟಲಿಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

[illegible] ಕಾಮಿನಿಯಾ ಎಣ್ಣೆಯು ಹೆಸರನ್ನು [illegible] ಕೆಲವು ಜನಗಳು ಒಳ್ಳೆಯ ಮತ್ತು ಸ್ವಚ್ಛ ನಮ್ಮ [illegible] ಸರಕಿಯಿಂದ ತಮಗೆ ಲಾಭವನ್ನು ನಡೆಯೇ ಮಾರುತ್ತಿರುವರೆಂದು, ನಮ್ಮ "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವಾಗಿದೆ ಇದು ಇನ್ನು" ಎಂದು ಅವರಿಗೆ ಬಹಳ ಲಾಭ ದೊರೆಯುವ ಕೇಶತೈಲದ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ನೀವು ನೇರವಾಗಿ "ಕಾಮಿನಿಯಾ ಓಯಿಲ್" ಖಾನೆ ಬೇಕೆಂದು ಕೇಳಿರಿ. ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಬೇಕು. ನಮ್ಮ ಮಹಸೂಲು ಕೊಡಿಸಿದ ನಾವು ವಂಚಕರ ಬರೆಯಲ್ಪಟ್ಟ ಸುಳುಕೆಲಸಗಳ ಬರೆಯದ ಅತ್ಯಾವಶ್ಯಕ ಪಟ್ಟಿಯನ್ನು ಕಳುಹಿಸುವೆವು.

ಅತೀ ಮನೋಹರವಾದ ಸುರಭಿಯು!

ಓಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ನುತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ಪಡೆದ ಸೌಗಂಧಿಕ ಪುಷ್ಪಗಳಿಂದ ತಯಾರಿಸುವುದು ಇದರಲ್ಲಿ ಮದ್ಯವು (ಆಲ್ಕೊಹೋಲ್) ಸ್ವಲ್ಪವೂ ಇಲ್ಲವು. ಒಂದೇ ಒಂದು ಸಲ ನಿಮ್ಮ ಕೈಚೌಕದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯ ಸುವಾಸನೆಯು ಪ್ರಸರಿಸುವುದು. ಬೇರೆ ಯಾವ ಸುವಾಸನೆ ದ್ರವ್ಯವು ಇದರ ಸರಿಯಲ್ಲ. ಈ ಒಟ್ಟೋ-ದಿಲ್ ಬಹಾರ್ ಗಂಧವು ಅತ್ಯುತ್ತಮ ನಮ್ಮ ಬಾರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [34-5]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ನಮೂನೆಯು) ಸೀಸೆ ಕ್ಕೆ 0-1-6. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಕಾಮುಗಳು ಕಟ್ಟ್ ಒಂದಕ್ಕೆ 0-12-0.

ಮಾರಿ ಕೊಂಡ ಎಲ್ಲಾ ಸುಗಂಧಗಳು ದೊರೆಯುತ್ತವೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾ ಮಸೀದ್, ಮಾರ್ಕೆಟ್, ಬಾಂಬೆ.

ಏಜೆಂಟ್, ಕೆ. ಉಲ್ಫ್ ಮಾರ್ಟ್, ಮಂಗಳೂರು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರವಾಗಿ ಪರಿಹರಿಸುವುದು. (2) ಊಟವಾದನಂತರ [illegible] ಗುಳಿಗೆಗಳನ್ನು ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಉಪಯೋಗಿಸುತ್ತಾ ಬಂದಲ್ಲಿ ತಿಂದದ್ದೆಲ್ಲವು ಜೀರ್ಣವಾಗುವುದಲ್ಲದೆ ಕಾಲ ಕ್ರಮದಿಂದ ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡುವವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿವೆ. (5) ಬೇಸಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ಆರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ [32-3]

ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
„ „ „ 4 „	200 „ ಟಿನ್ „ 9 „	80 „ „ „ 4 „	1200 „ „ „ 2 „

1 ಡಜನಿಗಿಂತ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಮಾರಾಟಕ್ಕೆ ಇಡಲಾಗಿದೆ. ನಮ್ಮ ದಕ್ಷಿಣ ಕನಡಾ ಏಜಂಟರು—ದಿ ಉಲ್ಫ್ ಮಾರ್ಟ್, ಮಂಗಳೂರು.

ಷಾಪ್ ಸ್ಥಳ ಬದಲಾವಣೆ ನೋಟೀಸ್

ರಾಜಧಾನಿಯ ಸಯ್ಯಾಜಿರಾವ್ ರೋಡ್ ಮುಂಭಾಗದಲ್ಲಿ ಶ್ರೀ ಲಕ್ಷ್ಮೀನಾರಾಯಣ ಷಾಪ್ ಎಂಬ ಚೀಣಾ ಬಜಾರ ಅಂಗಡಿಯನ್ನು ಈಚೆಗೆ ತೆರೆದಿದ್ದೇವೆ. ಈ ಹೊಸ ಅಂಗಡಿಯು ದೇವರಾಜ ಮಾರ್ಕೆಟ್ಟಿನ ಪೂರ್ವ ಪಕ್ಕದಲ್ಲಿರುವ ಮಾರ್ಕೆಟ್ ಲೈನ್ನಲ್ಲಿ ಇರುತ್ತದೆ. [65-1]

ಎಸ್. ಭಗವಂತರಾವ್ ಅಂಡ್ ಆರ್. ಬಾಬ್ರಾವ್, ಪ್ರೊಪ್ರೈಟರ್ಸ್.

ಕಾರ್ಖಾನೆ ಹುಡುಗರು ಬೇಕಾಗಿದೆ.

ಕಂಬಳಿ ಮತ್ತು ಕಲಿಯಲಿಕ್ಕೆ ಸೇರಿ ತಿಂಗಳಿಗೆ 30 ರೂಪಾಯಿಗಿಂತ ಹೆಚ್ಚು ಬರುವಂತೆ ದೊರೆಯುತ್ತೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಅರ್ಜಿ ಬರೆದುಕೊಳ್ಳಬಹುದು. [67-1]

ವಿಳಾಸ.—ಮ್ಯಾನೇಜರ್,

ಸಿಂಗರ್ ಸೂಯಿಂಗ್ ಮೆಷೀನ್ ಕಂಪನಿ,

ಮೈಸೂರು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೬ ನೇ ಇಸವಿ ಮಾರ್ಚ್ ತಾ. ೯ ನೇ ಗುರುವಾರ.

ಕೊಡಗಿನ ಆಳ್ವಿಕೆಯ ರಿಪೋರ್ಟು.

ಕೊಡಗಿನ 1914-15 ನೇ ಸಾಲಿನ ಆಳ್ವಿಕೆಯ ರಿಪೋರ್ಟು ನಮಗೆ ತಲಪಿರುತ್ತದೆ. ಆ ಸೀಮೆಯೇನೋ ಚಿಕ್ಕದಾದರೂ ಅದರ ಆಳ್ವಿಕೆಯನ್ನು ಕುರಿತು ಬರೆಯಲ್ಪಟ್ಟಿರುವ ರಿಪೋರ್ಟು ತಕ್ಕಮಟ್ಟಿಗೆ ದೊಡ್ಡದಾಗಿರುತ್ತದೆ. ಇದರಲ್ಲಿ ಪ್ರಕಾಶಕಾರಗಳ ತಪ್ಪುಗಳು ಬಹಳವಾಗಿರುವವು. ಕೊಡಗು ಸೀಮೆಯಲ್ಲಿ ಸುಮಾರು 1,75,000 ಪ್ರಜೆಗಳಿದ್ದಾರೆ. ಈ ಪ್ರಜೆಗಳೆಲ್ಲಾ ಸಣ್ಣ ಸಣ್ಣ ಗ್ರಾಮಗಳಲ್ಲಿ ಅಷ್ಟಷ್ಟು ಜನರಾಗಿ ಚದರಿದಂತೆ ನೆಲಸಿರುತ್ತಾರೆ. ಆ ಸೀಮೆಗೆ ಮಡಿಕೇರಿಯೇ ದೊಡ್ಡ ಊರು. ಅಲ್ಲಿ 6,270 ಪ್ರಜೆ ಇರುವುದು.

ಅಷ್ಟು ಸಣ್ಣ ಸೀಮೆಗೆ ನೂರಾರು ಕ್ರಿಮಿನಲ್ ಕೇಸುಗಳು ಹೆಚ್ಚಾಗಿ ನಡೆಯುವುದು ಯೋಗ್ಯವೆಂದು ಕಾಣುವುದಿಲ್ಲ. ಕಳೆದ ಸಾಲಿನಲ್ಲಿ 13 ಕೊಲೆಗಳೂ, 370 ದೊಡ್ಡ ತಕ್ಸೀರುಗಳೂ ನಡೆದಿರುವವು. ಸುಳ್ಳು ಫಿರ್ಯಾದುಗಳ ಸಂಖ್ಯೆಯೂ ಹಿಂದಿನ ಸಾಲಿಗಿಂತ ಹೆಚ್ಚಾಯಿತು. ಬಂದೀಖಾನೆಯಲ್ಲಿರುವ ಕೈದಿಗಳು 39 ರಿಂದ 65 ಕ್ಕೆ ಹೆಚ್ಚಿರುತ್ತಾರೆ.

ಕೇಂದ್ರ ಮರಾಮತುಗಳ ಸಂಖ್ಯೆ ಕಳೆದ ಹಿಂದಿನ ಸಾಲಿನಲ್ಲಿ 126 ರಿಂದ 73 ಕ್ಕೆ ಕಡಮೆಯಾಯಿತೆಂದು ಈ ರಿಪೋರ್ಟಿನಿಂದ ತಿಳಿದು ಸಂತೋಷಪಡುತ್ತೇವೆ. ಇದಲ್ಲದೆ ಹೆರಾಯಿ, ಅಫೀಮು, ಗಾಂಜಾ ಎಂಬ ನಿಷಾ ದ್ರವ್ಯಗಳ ಸೇವನೆಯೂ ಕಡಮೆಯಾಗಿರುತ್ತದೆಂಬ ಸಂಗತಿ ಸಂತೋಷಪ್ರದವಾಗಿದೆ. ಎಕ್ಸೈಸ್ ಬಾಬಿನಲ್ಲಿ ರಾಜಾದಾಯವು ಸ್ವಲ್ಪ ಅಂದರೆ 1,800 ರೂಪಾಯಿ ಕಡಮೆಯಾಯಿತು. ಆದರೆ ಒಟ್ಟಿನಲ್ಲಿ ಬರುವ ಹಣವು ಅಂದರೆ 2,03,503 ರೂಪಾಯಿ ತುಂಬಾ ಹೆಚ್ಚೆಂದು ಕಾಣುತ್ತದೆ. ಇದನ್ನು ಹಂಚಿ ನೋಡಿದರೆ ಪ್ರತಿ ಒಬ್ಬ ಪ್ರಜೆಯೂ ಈ ಬಾಬಿಗೆ ರೂ 1-8-0 ವರೆಗೆ ಕೊಡುವಂತೆ ಗೊತ್ತಾಗುತ್ತದೆ. ಮದ್ಯದ ಸೇವನೆಯನ್ನು ಇನ್ನೂ ಕಡಮೆಮಾಡಲವಕಾಶವುಂಟು; ಏಕೆಂದರೆ ಇದರಿಂದ ಕ್ರಿಮಿನಲ್ ಕೇಸುಗಳೂ ಬಹಳ ಮಟ್ಟಿಗೆ ಕಡಮೆಯಾಗಬಹುದು.

ವಿದ್ಯಾ ಪ್ರಚಾರದಲ್ಲಿ ಈ ಸೀಮೆಯು ಹಿಂದುಸ್ಥಾನದ ಇತರ ಕಡೆಗಳಿಗಿಂತ ಅಷ್ಟೇನೂ ಕಡಮೆಯಾಗಿಲ್ಲ. ಆದಾಗ್ಯೂ ಪ್ರತಿ ಒಂದು ಮಗುವಿಗೂ ವಿದ್ಯೆ ಕಲಿಸುವಂತೆ ಮಾಡುವುದಕ್ಕೆ ಇನ್ನೂ ಬಹಳ ಶ್ರಮಪಡಬೇಕಾಗಿದೆ. ಪಾಠಶಾಲೆಗಳಲ್ಲಿ 19,731 ಗಂಡು ಮಕ್ಕಳೂ, 18,342 ಹೆಣ್ಣುಮಕ್ಕಳೂ ವಿದ್ಯೆ ಕಲಿಯುತ್ತಿರಬೇಕು. ಆದರೆ ಹುಡುಗರಲ್ಲಿ 4,878 ಮಂದಿಯೂ, ಹುಡುಗಿಯರಲ್ಲಿ 2,326 ಮಂದಿಯೂ ವಿದ್ಯೆ ಕಲಿಯುತ್ತಿರುವುದು ಬಹಳ ಸ್ವಲ್ಪ. ಹೆಣ್ಣುಮಕ್ಕಳ ವಿದ್ಯಾಭ್ಯಾಸವು ಚೆನ್ನಾಗಿ ನಡೆಯಿತೆಂದು ಓದಲು ನಾವು ಸಂತೋಷಪಡುತ್ತೇವೆ. ಈಗ 11 ಹೆಣ್ಣು ಮಕ್ಕಳು ವಿದ್ಯಾರ್ಥಿನಿಲಯಗಳಲ್ಲಿದ್ದು ಬೋರ್ಡಿಂಗ್ ಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಾರೆಂದು ತಿಳಿದು ಸಂತೋಷಪಡಬೇಕಾಗಿದೆ.

ಬೆಳೆಯ ಸಮಾಚಾರವನ್ನು ಕುರಿತು ನೋಡುವಲ್ಲಿ ಕೆಲವು ಮಳೆಗಳು ಅಕಾಲದಲ್ಲಿ ಬಂದಾಗ್ಯೂ ಫಸಲುಗಳು ಚೆನ್ನಾಗಿದ್ದವೆಂದು ಕಾಣುತ್ತದೆ. ಭತ್ತದ ಬೆಳೆ ಬಹಳ ಚೆನ್ನಾಗಿ ಆಯಿತು. ಕಾಫಿ ಫಸಲು ತಕ್ಕಮಟ್ಟಿಗೆ ಸುಮಾರಾಯಿತು; ಆದರೂ ರೈತರು ನಿರೀಕ್ಷಿಸಿದ್ದಷ್ಟು ಬೆಳೆ ಕೈ ಸೇರಲಿಲ್ಲ. ಕಾಫಿ ಬೆಳೆಗೆ ನಾನಾ ಬಗೆಯ ರೋಗಗಳು ಹಿಡಿಯುತ್ತವೆ. ಈ ರೋಗಗಳನ್ನು ಕಂಡು ಹಿಡಿದು ನಿವಾರಣೆಮಾಡುವ ಭಾಗದಲ್ಲಿ ದೇಶೀಯ ತೋಟಗಾರರು ಅಷ್ಟೇನೂ ಶ್ರಮಪಡುವುದಿಲ್ಲ.

ಕೊಡಗು ಸೀಮೆಯಲ್ಲಿ ಕಳೆದ ವರುಷ 8,27,015 ರೂಪಾಯಿ ಎಲ್ಲಾ ಬಾಬುಗಳಿಂದಲೂ ಹುಟ್ಟುವಳಿ ಆಗಿದೆ. ಆದರೂ ಫಾರೆಸ್ಟ್ ಬಾಬಿನ ಉತ್ಪತ್ತಿಯು ತುಂಬಾ ಕಡಮೆಯಾಯಿತು. ಶ್ರೀಗಂಧವನ್ನು ಬಿಕರಿಮಾಡಲು ಅವಕಾಶವಾಗಲಿಲ್ಲ; ಸಾಗುವಾನಿ ಮೊದಲಾದವುಗಳ ಉತ್ಪತ್ತಿಯು ಅಷ್ಟೇನೂ ಚೆನ್ನಾಗಿರಲಿಲ್ಲ. ಆ ಸಾಲಿನಲ್ಲಿ ಆಳ್ವಿಕೆಯ ಒಟ್ಟು ಖರ್ಚು 3,72,111 ರೂಪಾಯಿ ಆಯಿತು. ಜಮಾಬಂದಿ ಕಂದಾಯದ ವಸೂಲಾತಿಯು ಹಿಂದಿನ ಸಾಲಿನಷ್ಟು ತೃಪ್ತಿಕರವಾಗಿ ನಡೆಯಲಿಲ್ಲ.

ರಸ್ತೆಗಳನ್ನು ದುರಸ್ತುಮಾಡುವುದೇ ಇಂಜನಿಯರ್ ಇಲಾಖೆಯ ಮುಖ್ಯ ಕೆಲಸ. ಮಳೆಗಳು ಹೇರಳವಾಗಿ ನಿಲುಗಡೆ ಇಲ್ಲದೆ ಸುರಿಯುತ್ತಿದ್ದಕಾರಣ ಆ ಇಲಾಖೆಯವರು ಈ ಬಾಬಿಗೆ ವಿಶೇಷ ಗಮನಕೊಡಬೇಕಾಯಿತು. ಹೊಸ ಕಟ್ಟಡಗಳ ಕಾಮಗಾರಿ ಏನೂ ವಿಶೇಷವಾಗಿ ನಡೆಯಲಿಲ್ಲ.

ಕಳೆದ ವರುಷ ಕೊಡಗಿನ ಆಳ್ವಿಕೆಯಲ್ಲಿ ವಿಶೇಷವಾದ ವಿದ್ಯಮಾನಗಳೇನೂ ನಡೆಯಲಿಲ್ಲ; ಸೀಮೆಯು ಕ್ರಮವಾಗಿ ವೃದ್ಧಿಹೊಂದುತ್ತಲಿದೆ. ಕೊಡಗನ್ನು ಇನ್ನೂ ತುಂಬಾ ಅಭಿವೃದ್ಧಿಗೆ ತರಲು ಎಷ್ಟೋ ಅವಕಾಶವುಂಟು. ಕಾಲಕ್ರಮದಲ್ಲಿ ಈ ಸಣ್ಣ ಮಹಲಿ ಸೀಮೆಯು ಶ್ರೇಯಸ್ಸನ್ನು ಹೊಂದುತ್ತಾ ಇರಲೆಂದು ಹಾರೈಸುತ್ತೇವೆ. ಅದು ಅಭಿವೃದ್ಧಿಹೊಂದಬೇಕಾದರೆ ಆ ಸೀಮೆಯಲ್ಲಿ ರೈಲು ರಸ್ತೆಗಳು ಆಗಬೇಕೆಂದು ನಮಗೆ ತೋರುವುದು.

ಪಾಪವೂ ಅದರ ಮೂಲವೂ.

ಒಬ್ಬ ಮನುಷ್ಯನಿಗೆ ಒಬ್ಬನೇ ಮಗನಿದ್ದನು. ತಂದೆಯು ಮಗನನ್ನು ಬಹಳವಾಗಿ ಪ್ರೀತಿಮಾಡುತ್ತಿದ್ದನು. ಆದರೆ ಮಗನು ಮನೆಯಲ್ಲಿ ಸಣ್ಣ ಪುಟ್ಟ ವಸ್ತುಗಳನ್ನು ಕಳುವುಮಾಡುತ್ತಿದ್ದನು. ತಂದೆಯು ಆರಂಭದಲ್ಲಿ ಮಗನ ತಪ್ಪನ್ನು ನೋಡಿ ಅವನಿಗೆ ಪದೇ ಪದೇ ಬುದ್ಧಿ ಹೇಳಿ ಗದರಿಸಿದನು. ಆದರೂ ಆ ಹುಡುಗನು ಈ ದುರಭ್ಯಾಸವನ್ನು ತ್ಯಜಿಸದೆ ದೊಡ್ಡ ದೊಡ್ಡ ವಸ್ತುಗಳನ್ನು ಕದಿಯುವುದಕ್ಕೂ ತಂದೆಯನ್ನು ವಂಚಿಸುವುದಕ್ಕೂ ಯತ್ನಿಸಿದನು. ತಂದೆಯು ಮಗನು ಕೆಟ್ಟುಹೋಗುತ್ತಿದ್ದಾನಲ್ಲಾ ಎಂದು ಚಿಂತಿಸಿ ಅವನನ್ನು ಶಿಕ್ಷಿಸಿದನು. ಕೆಲವು ಸರ್ತಿ ಹೊಟ್ಟೆ ತುಂಬ ಅನ್ನ ಕೊಡಲಿಲ್ಲ. ಆದರೂ ಮಗನು ಕಳುವು ಮಾಡುವ ದುರಭ್ಯಾಸವನ್ನು ಬಿಡದೆ ಸಾಧಿಸುತ್ತಲಿದ್ದನು. ಕಟ್ಟಕಡೆಗೆ ತಂದೆಯು ಒಂದು ಕಬ್ಬಿಣದ ಸರಪಣಿಯನ್ನು ತಂದು ಅದರಿಂದ ಮಗನ ಎರಡು ಕೈಗಳನ್ನು ಅವನ ಬೆನ್ನ ಹಿಂದೆ ಜೋಡಿಸಿ ಬಿಗಿಯಾಗಿ ಕಟ್ಟಿ,—ಈಗ ನನ್ನ ಮಗನು ಕಳ್ಳತನ ಮಾಡುವುದನ್ನು ಬಿಟ್ಟನು. ಅವನು ಇನ್ನೆಂದಿಗೂ ಕಳ್ಳತನ ಮಾಡದ ಹಾಗೆ ತಕ್ಕ ಉಪಾಯವನ್ನು ಕಲ್ಪಿಸಿದ್ದೇನೆ ಅಂದನಂತೆ.

ಕಳ್ಳತನವೆಂಬ ಪಾಪದಿಂದ ಆ ಹುಡುಗನನ್ನು ರಕ್ಷಿಸುವುದಕ್ಕೆ ತಂದೆಯು ಮಾಡಿದ ಉಪಾಯವು ನಿರರ್ಥಕವಾದುದೆಂದು ನಾವು ಸುಲಭವಾಗಿ ಗ್ರಹಿಸುತ್ತೇವಲ್ಲವೇ? ವಸ್ತುಗಳನ್ನು ಅಪಹರಿಸುವುದು ಕೈಗಳಿಂದ ನಡೆಸಿದ ಕೃತ್ಯವೇ ಸರಿ. ಆದರೆ ಕೈಗಳು ಮನಸ್ಸಿನ ಅಥವಾ ಹೃದಯದ ಸೇವಕನಂತೆ ಇರುತ್ತವೆ. ಕದಿಯಬೇಕೆಂಬ ದುರಾಶೆಯು ಹೃದಯದಲ್ಲಿದ್ದುದರಿಂದ ಕೈಗಳು ಆ ಕೆಲಸವನ್ನು ಕಾರ್ಯತಃ ನೆರವೇರಿಸಿದವು. ತಂದೆಯು ಮಗನ ಅಪರಾಧವನ್ನು ಕ್ಷಮಿಸಬಹುದು. ಅಥವಾ ಕಳ್ಳತನ ಮಾಡದ ಹಾಗೆ ಮಗನನ್ನು ಕಟ್ಟಿಹಾಕಬಹುದು. ಸತತವೂ ಕಾವಲಿನಲ್ಲಿಡಬಹುದು. ಆದರೂ ಆ ಮಗನ ಪಾಪಸ್ವಭಾವವುಳ್ಳ ಮನಸ್ಸು ಅಥವಾ ಹೃದಯವು ನೆಟ್ಟಗಾಗಲಿಲ್ಲ.

ಯೇಸು ಕ್ರಿಸ್ತನು ಪಾಪವನ್ನು ಕುರಿತು ಉಪದೇಶಮಾಡುವಾಗ—ಕಳ್ಳತನ ಮಾಡಬೇಡಿರಿ ಸುಳ್ಳು ಹೇಳಬೇಡಿರಿ ಹಾದರ ಮಾಡಬೇಡಿರಿ ನರಹತ್ಯ ಮಾಡಬೇಡಿರಿ ಎಂದು ಬಹಿರಂಗದಲ್ಲಿ ಮನುಷ್ಯರು ನಡಿಸುವ ಪಾಪಕೃತ್ಯಗಳನ್ನು ಖಂಡಿಸದೆ ಪಾಪದ ಮೂಲಕ್ಕೇ ಕೊಡಲಿಯನ್ನು ಹಾಕಿದನು. ಆತನು ಹೇಳಿದ್ದೇನಂದರೆ—ಮುಳ್ಳು ಗಿಡದಲ್ಲಿ ದ್ರಾಕ್ಷಿ ಹಣ್ಣುಗಳೂ ಮುಳ್ಳುಗಳ್ಳಿ ಗಿಡದಲ್ಲಿ ಅಂಜೂರದ ಹಣ್ಣುಗಳೂ ಫಲಿಸುವದುಂಟೇ? ಹಾಗೆಯೇ ಒಳ್ಳೇ ಮರಗಳೆಲ್ಲಾ ಒಳ್ಳೇ ಫಲವನ್ನು ಕೊಡುವವು; ಹುಳುಕು ಮರವು ಕೆಟ್ಟ ಫಲವನ್ನು ಕೊಡುವದು. ಒಳ್ಳೇ ಫಲವನ್ನು ಕೊಡದ ಎಲ್ಲಾ ಮರಗಳನ್ನು ಕಡಿದು ಬೆಂಕಿಯಲ್ಲಿ ಹಾಕುತ್ತಾರೆ. ನರಹತ್ಯ ಮಾಡಬೇಡ; ವ್ಯಭಿಚಾರ ಮಾಡಬೇಡ; ಕದಿಯಬೇಡವೆಂಬ ಇವೇ ಮುಂತಾದ ಕಟ್ಟಳೆಗಳನ್ನು ಧರ್ಮಶಾಸ್ತ್ರಕರ್ತರು ಆಜ್ಞಾಪಿಸಿರುವರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ತನ್ನ ಸಹೋದರನ ಮೇಲೆ ಕೋಪ ಮಾಡುವವನೂ ಪರಸ್ತ್ರೀಯನ್ನು ನೋಡಿ ಮೋಹಿಸುವವನೂ ಪರರ ಸ್ವತ್ತನ್ನು ನೋಡಿ ಆಶಿಸುವವನೂ ಆಗಲೇ ತನ್ನ ಮನಸ್ಸಿನಲ್ಲಿ ಈ ಅಪರಾಧಗಳನ್ನು ಮಾಡಿದ ಹಾಗಾಯಿತು. ಮನುಷ್ಯನ ಹೃದಯದೊಳಗಿಂದ ಹೊಲೆಗಾರಿಕೆ, ಕಳ್ಳತನ, ಕೊಲೆ, ಹಾದರ, ಪ್ರಮಾದ, ಕೆಡುಕುತನ, ಮೋಸ, ಬಂಡತನ, ಹೊಟ್ಟೆಕಿಚ್ಚು, ದೂಷಣೆಗಳು, ಸೊಕ್ಕು ಇವೇ ಮೊದಲಾದ ಕೆಟ್ಟ ಆಲೋಚನೆಗಳು ಹೊರಡುತ್ತವೆ. ಈ ಕೆಟ್ಟ ವಿಷಯಗಳೆಲ್ಲಾ ಒಳಗಿನಿಂದ ಹೊರಡುವಂಥವುಗಳಾಗಿ ಮನುಷ್ಯನನ್ನು ಹೊಲೆ ಮಾಡುತ್ತವೆ ಎಂಬುವದೇ.

ಇವನ್ನೆಲ್ಲಾ ಯೋಚಿಸಿ ನೋಡಿದಾಗ ಪಾಪವು ಎರಡು ವಿಧವಾಗಿರುತ್ತದೆಂದು ಸುಲಭವಾಗಿ ವ್ಯಕ್ತವಾಗುವದು. ಮೊದಲನೆಯದು ಏನಂದರೆ—ಮಾಡಬಾರದ ಕೃತ್ಯಗಳನ್ನು ಮಾಡುವದೂ ಮಾಡಬೇಕಾದ ಕರ್ತವ್ಯಗಳನ್ನು ಮಾಡದೆ ತ್ಯಜಿಸುವದೂ ಇದೇ ಪಾಪವಾಗಿದೆ. ಆದರೆ ಇದು ಪಾಪಾತ್ಮನ ಬಹಿರಂಗದಲ್ಲಿ ಕಾಣುವ ಪಾಪದ ಫಲಗಳೇ ಹೊರತು ಅದರ ಮೂಲವಲ್ಲ. ಎರಡನೆಯದು ಪಾಪಸ್ವಭಾವವುಳ್ಳ ಹೃದಯ. ಇದು ಬಹಿರಂಗದಲ್ಲಿ ಕಾಣುವ ಪಾಪಕೃತ್ಯಗಳ ಮೂಲವೂ ಕಾರಣವೂ ಆಗಿದೆ. ಆದ್ದರಿಂದ ಪಾಪಿಗಳಿಗೆ ಎರಡು ವಿಧವಾದ ಪರಿಹಾರವು ಅಗತ್ಯವಾಗಿ ಬೇಕಾಗಿದೆ. ಮೊದಲು ಕಳ್ಳತನ ಮಾಡಿದ ಮಗನ ಅಪರಾಧವು ಇದೆ. ಅದನ್ನು ತಂದೆಯು ಮಗನ ಪಶ್ಚಾತ್ತಾಪವನ್ನು ನೋಡಿ ಅವನಿಗೆ ಕ್ಷಮಿಸಬಹುದು. ಇದರಿಂದ ಅವನು ಮಾಡಿದ ಕಳುವಿನ ಅಪರಾಧವನ್ನು ತಂದೆಯು ಮನಸ್ಸಿನಲ್ಲಿಟ್ಟುಕೊಂಡು ಸಾಧಿಸದೆ ಅವನ ಅಪರಾಧವನ್ನು ಕ್ಷಮಿಸಿ ಅವನು ಕಳ್ಳತನ ಮಾಡುವದಕ್ಕೆ ಮುಂಚೆ ಅವನನ್ನು ನಿರಪರಾಧಿಯೆಂದು ಎಣಿಸಿ, ನಂಬಿ, ಪ್ರೀತಿಸುತ್ತಿದ್ದ ಹಾಗೆ ಈಗಲೂ ಅವನನ್ನು ನಂಬಿ ಪ್ರೀತಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೆ. ಇದರಿಂದ ತಂದೆಗೂ ಮಗನಿಗೂ ನಡುವೆ ಪ್ರಾಪ್ತವಾಗಿದ್ದ ವಿರೋಧವು ಹೋಗಿ ಎಂದಿನಂತೆ ಪರಸ್ಪರ ಸ್ನೇಹವೂ ಅನ್ಯೋನ್ಯವೂ ಇರುತ್ತವೆಂದು ತಿಳಿಯೋಣ. ಆದರೆ ಈ ಅನ್ಯೋನ್ಯವೂ ಸ್ನೇಹವೂ ಬಹಳ ಕಾಲ ನಿಲ್ಲಲಾರವು. ಯಾಕೆಂದರೆ ಮಗನ ಹೃದಯ ಇನ್ನೂ ಪಾಪಸ್ವಭಾವವುಳ್ಳದ್ದಾಗಿಯೇ ಇದೆ. ಅದು ಹಾಗಿರುವ ವರೆಗೂ ಕಳ್ಳತನವು ಅವನ ಹೃದಯದಲ್ಲಿ ಅಂಕುರಿಸಿ ಮೇಲಕ್ಕೆ ಉಕ್ಕುತ್ತ ಬರುತ್ತಲೇ ಇರುವದು. ಆದ್ದರಿಂದ ಚಿತ್ತಶುದ್ಧಿಯು ಅವನಿಗೆ ಲಭ್ಯವಾಗಬೇಕು. ಇದು ಎರಡನೇ ವಿಧವಾದ ಪರಿಹಾರ. ಇದನ್ನು ಗ್ರಹಿಸುವದಕ್ಕೆ ಕೆಳಗೆ ಹೇಳಿರುವ ದೃಷ್ಟಾಂತವು ಸಹಕಾರಿಯಾಗಿರುವದು.

ಒಬ್ಬ ತಾಯಿಗೆ ಒಬ್ಬ ಮಗಳಿದ್ದಳು. ಆ ಹುಡುಗಿಯು ಎಷ್ಟು ವಿಧಗಳಲ್ಲಿ ಹೇಳಿದರೂ ಕೆಸರಿನಲ್ಲಿ ಆಡಿದು ಬಿದ್ದಾಡಿ ತನ್ನ ಮಡೀ ಬಟ್ಟೆಗಳನ್ನೆಲ್ಲಾ ಸ್ವಲ್ಪ ಹೊತ್ತಿನಲ್ಲಿ ಮೈಲಿಗೆ ಮಾಡಿಕೊಳ್ಳುತ್ತಿದ್ದಳು. ಒಂದು ದಿನ ತಾಯಿಯು ಎಂದಿನಂತೆ ಮಗಳಿಗೆ ಮಡೀ ವಸ್ತ್ರಗಳನ್ನು ತೊಡಿಸಿ ಅವಳಿಗೆ—ಮಗಳೇ, ಈ ದಿನ ನಾವು ಒಬ್ಬ ದೊಡ್ಡ ಮನುಷ್ಯರ ಮನೆಗೆ ಔತಣಕ್ಕೆ ಹೋಗಬೇಕು. ಆದ್ದರಿಂದ ನಿನ್ನ ವಸ್ತ್ರಗಳನ್ನು ಜೋಕೆಯಿಂದ ಮೈಲಿಗೆ ಮಾಡದೆ ಕಾಪಾಡಿಕೋ. ಇಲ್ಲವಿದ್ದರೆ ನೀನು ಔತಣಕ್ಕೆ ಮೈಲಿಗೆ ವಸ್ತ್ರಗಳನ್ನುಟ್ಟುಕೊಂಡು ಬರಕೂಡದೆಂದು ಹೇಳಿದಳು. ಮಗಳು ತಾಯಿಯ ಮಾತನ್ನು ನಂಬಿದರೂ ಎಂದಿನಂತೆ ಕೆಸರಿನಲ್ಲಿ ಆಡಿ ಆ ಬೆಲೆಯುಳ್ಳ ವಸ್ತ್ರಗಳನ್ನು ಮೈಲಿಗೆ ಮಾಡಿಕೊಂಡು ಮನೆಗೆ ಬಂದಳು. ಮತ್ತು ತಾಯಿಯ ಆಜ್ಞೆಯನ್ನು ಜ್ಞಾಪಿಸಿಕೊಂಡು ಬಹಳವಾಗಿ ಅಳುತ್ತಾ ತಾಯಿಗೆ—ಅಮ್ಮಾ ಇದೊಂದು ಸರ್ತಿ ನನಗೆ ಮನ್ನಿಸು. ನಾನು ಇನ್ನೆಂದಿಗೂ ನಿನ್ನ ಆಜ್ಞೆಯನ್ನು ಮೀರುವದಿಲ್ಲವೆಂದು ವಿಜ್ಞಾಪಿಸಿದಳು. ತಾಯಿಯು ಮಗಳ ಮೇಲಣ ಪ್ರೀತಿಯಿಂದಲೂ ಅವಳ ಪಶ್ಚಾತ್ತಾಪವನ್ನು ನೋಡಿದ್ದರಿಂದಲೂ ಮಗಳ ತಪ್ಪನ್ನು ಮನ್ನಿಸಿದಳು. ತಪ್ಪೇನೋ ಮನ್ನಣೆ ಆಯಿತು ಸರಿ. ಆದರೆ ಮಗಳು ಔತಣಕ್ಕೆ ಹೋಗುವದಕ್ಕೆ ತಕ್ಕ ವಸ್ತ್ರಗಳೇ? ಔತಣಕ್ಕೆ ಹೋಗತಕ್ಕವರ ಯೋಗ್ಯತೆಗೆ ತಕ್ಕ ಉಡುಪು ಮೈಲಿಗೆಯಾಗಿ ಬಿದ್ದಿದೆ. ತಾಯಿಯು ಇದನ್ನು ನೋಡಿ—ಬಹಳ ಶ್ರಮಪಟ್ಟು ಆ ಅಮೂಲ್ಯವಾದ ವಸ್ತ್ರಗಳನ್ನು ಒಗೆದು ಶುಚಿಮಾಡಿ ಔತಣದ ಹೊತ್ತಿಗೆ ಎಂದಿನಂತೆ ಶುಚಿಯಾಗಿಯೂ ಅಮೂಲ್ಯವಾಗಿಯೂ ಇದ್ದ ಆ ವಸ್ತ್ರಗಳನ್ನು ಮಗಳಿಗೆ ಉಡಿಸಿ—ಮಗಳೇ, ನೀನು ಈ ಔತಣಕ್ಕೆ ಹೋಗು, ನನ್ನ ನೆಗಡಿ, ಕೆಮ್ಮು, ಶೀತಜ್ವರ ಆರಂಭವಾಗಿದೆಯೆಂದು ಮನೆಯಲ್ಲೇ ನಿಲ್ಲಬೇಕಾಯಿತು. ಮಗಳಿಗೆ ತಾಯಿಯ ಕಷ್ಟವನ್ನು ನೋಡಿ ಸಿಮಿಸಲಾರದಷ್ಟು ದುಃಖವುಂಟಾಗಿ ತನ್ನ ದುರಭ್ಯಾಸಕ್ಕಾಗಿ ಪಶ್ಚಾತ್ತಾಪಪಟ್ಟು ಇನ್ನೆಂದಿಗೂ ತಾಯಿಯ ಮನಸ್ಸನ್ನು ನೋಯಿಸಲಿಲ್ಲ. ಪಾಪಿಯು ಪಾಪಕೃತ್ಯಗಳ ಪರಿಹಾರವನ್ನು ಕ್ಷಮೆಯನ್ನು ಪಡೆಯುವದು ಸಾಲದು. ಅವನ ಮನಸ್ಸು ಬದಲಾಗಿ ಅವನ ದುಸ್ಸ್ವಭಾವವು ಪರಿಶುದ್ಧವಾಗಬೇಕು. ಇಲ್ಲವಿದ್ದರೆ ಎಂದಿನಂತೆ ಪುನಃ ಪುನಃ ಪಾಪಕೃತ್ಯಗಳನ್ನು ಮಾಡುತ್ತಲೇ ಇರುವನು. ಪಾಪಿಗಳ ರಕ್ಷಕನಾದ ಯೇಸು ಕ್ರಿಸ್ತನು—ನಿಮಗೆ ಹೊಸ ಹೃದಯವನ್ನು ಕೊಟ್ಟು, ಹೊಸ ಆತ್ಮವನ್ನು ನಿಮ್ಮೊಳಗೆ ಇಡುವೆನು. ಕಠಿನ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುಹೃದಯವನ್ನು ನಿಮಗೆ ಕೊಡುವೆನು ಎಂದು ವಾಗ್ದತ್ತಮಾಡಿದ್ದಾನೆ. ಈ ನೂತನವಾದ ಶುದ್ಧ ಹೃದಯವು ಯಾರಿಗೆ ಬೇಕೋ ಅವರೆಲ್ಲರೂ ಆತನನ್ನು ಆಶ್ರಯಿಸಬೇಕಾಗಿದೆ.

ಯುದ್ಧದ ಸಮಾಚಾರಗಳು.

ಫ್ರಾನ್ಸಿನಲ್ಲಿ ಘೋರವಾದ ಕದನ.

ಈ ವಾರ ಬಂದಿರುವ ವರ್ತಮಾನಗಳು ಫ್ರಾನ್ಸಿನಲ್ಲಿ ನಡೆದ ದೊಡ್ಡ ಯುದ್ಧದ ವಿಚಾರವನ್ನೇ ಹೆಚ್ಚಾಗಿ ವಿವರಿಸಿರುತ್ತವೆ. ಈ ಯುದ್ಧವು ಇನ್ನೂ ಮುಗಿದಂತೆ ಕಾಣುವುದಿಲ್ಲ. ಇತರ ರಣರಂಗಗಳಿಂದ ಬಂದಿರುವ ಸುದ್ದಿಗಳು ಬಹಳ ಕೊಂಚ.

ಪಶ್ಚಿಮ ರಣರಂಗದಲ್ಲಿ.

ವರ್ಡೂನ್ ಕೋಟೆಯ ಬಳಿ ಇನ್ನೂ ಯುದ್ಧಗಳು ನಡೆಯುತ್ತಲೇ ಇವೆ. ಆದರೂ ಮೊದಲಿನಷ್ಟು ಘೋರವಾಗಿಲ್ಲ. ಕದನಗಳೇನೋ ಹೇರಳವಾಗಿ ಇರುವುದು; ಆದರೆ ನಡೆದಿರುವ ವಿದ್ಯಮಾನಗಳು ಹೀಗೇ ಇದೆ ಎಂದು ವಿವರಿಸಿ ಹೇಳುವುದು ಸುಲಭಸಾಧ್ಯವಲ್ಲ. ಈ ಯುದ್ಧಗಳು ನಡೆದ ಪ್ರದೇಶದಲ್ಲೆಲ್ಲಾ ಗುಡ್ಡಗಳು ಬಹಳವಾಗಿವೆ. ಗುಡ್ಡಗಳಾದರೋ 800 ರಿಂದ 1,200 ಅಡಿಗಳಷ್ಟು ಎತ್ತರವಾಗಿರುವವು. ಮತ್ತು ಅವುಗಳ ಬದಿಯಲ್ಲಿ ಒಂದೊಂದು ಹೊಳೆ ಹರಿಯುತ್ತಿದೆ. ಸುಮಾರು ಹತ್ತಾರು ಮೈಲಿಗಳ ವಿಸ್ತಾರವುಳ್ಳ ಅಂಥಾ ಪ್ರದೇಶದಲ್ಲೇ ಬಹಳ ಘೋರವಾದ ಕದನಗಳು ನಡೆದಿರುವವು. ಈ ಪ್ರದೇಶಕ್ಕೆ ಗುಂಡುಗಳ ಮಳೆ ಸುರಿಸಬೇಕೆಂದು ಜರ್ಮನಿಯವರು ಸಾಧ್ಯವಾದಷ್ಟು ಪಿರಂಗಿಗಳನ್ನು ಅಲ್ಲಿಗೆ ತಂದರು. ನಾನಾ ಜಾತಿಯ ಪಿರಂಗಿಗಳೆಲ್ಲಾ ಸೇರಿ 1,100 ಇದ್ದುವೆಂದು ತಿಳಿಯುತ್ತದೆ. ಆ ಪೈಕಿ ಕೆಲವು ಪಿರಂಗಿಗಳಾದರೋ ಗುಂಡುಗಳನ್ನು ಸುಮಾರು ಇಪ್ಪತ್ತು ಮೈಲಿ ದೂರಕ್ಕೆ ಹೊಡೆಯುವಷ್ಟು ಭಾರಿಯಾಗಿದ್ದವು. ಜರ್ಮನಿಯವರು ಆ ಪಿರಂಗಿಗಳನ್ನು ಎತ್ತಿಟ್ಟು ಕೆಲವು ದಿನಗಳ ತನಕ ಎದುರಿಗಿದ್ದ ಫ್ರೆಂಚ್ ಸೈನ್ಯದ ಸಾಲುಗಳಿಗೆ ಗುಂಡುಗಳನ್ನು ಸುರಿಸಿದರು. ಇದರಿಂದ ಫ್ರೆಂಚ್ ಸೈನಿಕರು ಅವರ ಕಂದಕಗಳೊಳಗೆ ಇರುವುದು ಸಾಧ್ಯವಾಗದೆ ಹೋಯಿತು. ಹೀಗೆ ಗುಂಡುಗಳ ಮಳೆಯನ್ನು ನಿಲುಗಡೆ ಇಲ್ಲದೆ ಸುರಿಸಿದ ಮೇಲೆ ಜರ್ಮನಿಯ ಸೈನಿಕರು ಫ್ರೆಂಚರ ಮೇಲೆ ನುಗ್ಗಿ ಬಂದರು.

ಫ್ರೆಂಚರ ಸೈನಿಕರಲ್ಲಿ ಒಬ್ಬಾತನು ತಾನು ನೋಡಿದ್ದನ್ನು ಹೀಗೆ ವಿವರಿಸಿ ಹೇಳುತ್ತಾನೆ. ನಮ್ಮಗಳ ಸುತ್ತಲೂ ಸಾವಿರಾರು ಮಾನಗಳಷ್ಟು ಸಿಡಿಮದ್ದಿನ ಗುಂಡುಗಳು ಬಿದ್ದವು. ಅದನ್ನು ನೋಡಿದಾಗ ನಮ್ಮ ಪೈಕಿ ಯಾರೊಬ್ಬರೂ ಉಳಿಯಲಾರರೆಂದು ಗೊತ್ತಾಯಿತು. ಬಳಿಕ ದೂರದಲ್ಲಿ ಏನೋ ಸಣ್ಣ ಸಣ್ಣ ಚುಕ್ಕೆಗಳು ಕಾಣಬಂದವು; ತರುವಾಯ ಇವೇ ಜರ್ಮನಿ ಸೈನ್ಯದ ಗುಂಪುಗಳಾಗಿ ಪರಿಣಮಿಸಿದವು. ಕೂಡಲೇ ಫ್ರೆಂಚ್ ಪಿರಂಗಿ ಸಿಪಾಯಿಗಳು ಅಲ್ಲಿಗೆ ಗುಂಡುಗಳನ್ನು ಸುರಿಸಬೇಕೆಂದು ಕಂಡುಕೊಂಡರು. ಒಡನೆಯೇ ಗುಂಡುಗಳ ಮಳೆ ಜರ್ಮನಿ ಸೈನಿಕರ ಮೇಲೆ ಸುರಿಯಲಾರಂಭವಾಯಿತು. ಆದರಿಂದ ಒಬ್ಬೊಬ್ಬರೂ ಹೇಗೋ ಹೀಗೋ ಸಿಪಾಯಿಗಳೆಲ್ಲಾ ಕೆಳಕ್ಕುರುಳಿ ತೀರಿಹೋದರು. ಜರ್ಮನಿ ಸಿಪಾಯಿಗಳು 500 ಗಜದಷ್ಟು ಸಮೀಪಕ್ಕೆ ಬರುವ ತನಕ ಫ್ರೆಂಚರು ಬಂದೂಕಿನಿಂದ ಗುಂಡುಗಳನ್ನು ಹೊಡೆಯಲಿಲ್ಲ. ಕೂಡಲೇ ಫ್ರೆಂಚ್ ಸೈನ್ಯಸಾಲುಗಳಿಂದಲೂ ಮೆಷೀನ್ ಪಿರಂಗಿಗಳಿಂದಲೂ ಮಿಂಚು ಹುಟ್ಟಿ ಗುಂಡುಗಳ ಮಳೆಗರೆಯಲು ಆರಂಭವಾಯಿತು. ಜರ್ಮನಿಯವರು ಮುಂದುವರಿಯದೆ ಹಿಂಜರಿದು ಅದೃಶ್ಯರಾದರು. ಅವರ ಮುಖ್ಯಾಧಿಕಾರಿಗಳು ಅವರನ್ನು ಹಿಂದಕ್ಕೆ ಬನ್ನಿ ಎಂದು ಕೂಗುತ್ತಿದ್ದದ್ದು ಕೇಳಿ ಬಂದಿತು. ಹೀಗೆ ಅವರು ಅನೇಕಸಾರೆ ಮುಂದೆ ಬಂದು ಹಿಮ್ಮೆಟ್ಟಿ ಹೋದರು. ಪ್ರತಿ ಸಲವೂ ಅವರಲ್ಲಿ ಸಾವಿರಾರು ಹತರಾದರು. ಬಳಿಕ ಸ್ವಲ್ಪ ಹೊತ್ತು ವಿರಾಮವಾಯಿತು. ತರುವಾಯ ಜರ್ಮನಿಯ ಪಿರಂಗಿಗಳು ಫ್ರೆಂಚರ ಮೇಲೆ ಮತ್ತೆ ಪಿರಂಗಿ ಗುಂಡುಗಳ ಮಳೆಯನ್ನು ಸುರಿಸಿದರು. ಅನಂತರ ಜರ್ಮನಿ ಕಾಲ್ಬಲದ ಸೈನ್ಯಗಳು ನುಗ್ಗಿ ಬಂದವು. ಅವು ಫ್ರೆಂಚರ ಸಾಲುಗಳ ಸಮೀಪಕ್ಕೆ ಬರುವಲ್ಲಿ ಒಂದು ಭಾಗದವರು ಸ್ವಲ್ಪ ಅನುಮಾನಪಡುತ್ತಿದ್ದರು. ಅದನ್ನು ಕಂಡು ಶತ್ರುವು ಅವರ ಮೇಲೆ ನುಗ್ಗಿಬಿಟ್ಟರು. ಅವರು ಹೀಗೆ 100 ಗಜದಷ್ಟು ದೂರ ನುಗ್ಗಿ ಬರುವಷ್ಟರೊಳಗೆ ಫ್ರೆಂಚರು ಅವರನ್ನು ಅಲ್ಲಿ ತಡೆದುಬಿಟ್ಟರು. ಬಳಿಕ ಫ್ರೆಂಚರು ತಮ್ಮ ಬಂದೂಕುಗಳ ಸಂಗೀನುಗಳನ್ನು ತೋರಿಸುತ್ತಾ ನುಗ್ಗಿ ಜರ್ಮನಿಯವರನ್ನು ಸಂಪೂರ್ಣವಾಗಿ ಸೋಲಿಸಿಬಿಟ್ಟರು. ಅಷ್ಟರೊಳಗೆ ಜರ್ಮನಿಯವರಿಗೆ ಹೊಸ ಸೈನ್ಯಗಳು ಬೆಂಬಲವಾಗಿ ಕಳುಹಲ್ಪಟ್ಟು ಮೋಟಾರ್ ಗಾಡಿಗಳಲ್ಲಿ ಬಂದವು. ತರುವಾಯ ಫ್ರೆಂಚರು ಕ್ರಮೇಣ ಹಿಂದಕ್ಕೆ ಓಡಿಸಲ್ಪಟ್ಟರು. ಅಲ್ಲಿ ನಡೆದ ಕೊಲೆಗಳನ್ನು ವಿವರಿಸುವುದು ಅಸಾಧ್ಯವಾಗಿದೆ.

ಇನ್ನೊಬ್ಬರು ಈ ಯುದ್ಧದ ಕ್ರಮಗಳನ್ನು ವಿವರಿಸಿದ್ದಾರೆ. ಅದೇನೆಂದರೆ ಫ್ರೆಂಚರು—ಜರ್ಮನಿಯವರು ಬಂದು ಬೀಳಲೆಂದು ಒಂದು ಉಪಾಯವನ್ನು ಕಲ್ಪಿಸಿದರು. ಫ್ರೆಂಚರು ಶತ್ರುವನ್ನು ನೋಡಿ ಸ್ವಲ್ಪ ದೂರ ಹಿಮ್ಮೆಟ್ಟಿ ಹೋದರು. ಅವರು ಓಡಿಹೋದರೆಂದು ಸಂತೋಷಪಟ್ಟು ಜರ್ಮನಿ ಸೈನಿಕರಲ್ಲಿ ಸುಮಾರು 1,500 ಮಂದಿ ಸಿಪಾಯಿಗಳು ಒಂದೇ ಸಲ ಅಲ್ಲಿಗೆ ನುಗ್ಗಿಹೋದರು. ಕೂಡಲೇ ಫ್ರೆಂಚರ ಪಿರಂಗಿಗಳು ನಾಲ್ಕು ಕಡೆಗಳಿಂದ ಜರ್ಮನಿಯವರ ಮೇಲೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದರು. ತರುವಾಯ ಫ್ರೆಂಚ್ ಸೈನಿಕರು ಶತ್ರು ಸೈನ್ಯದ ಮೇಲೆ ನುಗ್ಗಿ ಕದನವಾಡಿದ್ದರಲ್ಲಿ ಜರ್ಮನಿಯವರ ಕಡೆ ಎಂಟೇ ಎಂಟು ಜನ ಪ್ರಾಣ ಸಹಿತ ಸಿಕ್ಕಿದರು.

ಆ ಗುಡ್ಡಗಳ ತುಂಬಾ ಹೆಣಗಳು ಬಿದ್ದು ಮುಚ್ಚಿ ಹೋಗಿದ್ದವು. ಅನೇಕ ಹೆಣಗಳು ಹೊಳೆಗಳಲ್ಲಿ ಕೊಚ್ಚಿಕೊಂಡು ಹೋಗಿ ಅಲ್ಲಲ್ಲಿ ರಾಶಿಗಳಾಗಿ ಹೊಳೆಯ ನೀರು ಹರಿಯದಂತೆ ಕಟ್ಟಿಬಿಟ್ಟವು. ಇದರಿಂದ ಆ ಹೊಳೆ ನೀರು ನಿಂತು ಹೆಚ್ಚಿ ನಾಲೆಗಳ ದರಿಯನ್ನು ಒಡೆದು ದಡಗಳ ಮೇಲೆ ಹರಿದು ಅಲ್ಲಿ ರಕ್ತಮಯವಾಗಿ ಬಿದ್ದಿದ್ದ ನೂರಾರು ಹೆಣಗಳನ್ನು ಕೊಚ್ಚಿಬಿಟ್ಟು ಹೊಳೆಯ ನೀರೆಲ್ಲಾ ರಕ್ತಮಯವಾಯಿತು.

ಈ ಯುದ್ಧದ ಪರಿಣಾಮವನ್ನು ಗೊತ್ತುಮಾಡಿ ಹೇಳುವುದು ಸುಲಭಸಾಧ್ಯವಲ್ಲ. ಯಾಕೆಂದರೆ ಅದು ಇನ್ನೂ ಮುಕ್ತಾಯವಾಗದೆ ನಡೆಯುತ್ತಲೇ ಇದೆ ಎಂದು ತಿಳಿಸಲಾಗಿದೆ. ಯುದ್ಧಾರಂಭವಾಗುವುದಕ್ಕೆ ಮೊದಲೇ ವರ್ಡೂನ್ ಕೋಟೆಯಲ್ಲಿದ್ದ ಸಭ್ಯ ಪ್ರಜೆಗಳೆಲ್ಲಾ ಮನೆಮಠಗಳನ್ನು ಬಿಟ್ಟು ಹೊರಟುಹೋದರು. ಜರ್ಮನಿಯವರ ಪಿರಂಗಿಗುಂಡುಗಳು ಆ ಪಟ್ಟಣದೊಳಕ್ಕೆ ಬೀಳಲಾರಂಭಿಸಿದವು. ಫ್ರೆಂಚರು ತಮ್ಮ ಸೈನ್ಯಗಳು ಮೂರು ಮೈಲಿ ದೂರ ಹಿಮ್ಮೆಟ್ಟಿ ಹೋಗುವಂತೆ ಹೇಳಿ ಒಪ್ಪಿಕೊಂಡಿದ್ದಾರೆ. ಅವರ ಸೈನ್ಯದ ಸಾಲುಗಳು ಈಗ ಬಹಳ ಬಲವಾಗಿರುತ್ತವೆ. ಅವರು ಆದರೆ ಹೋಗದೆ ಕ್ರಮವಾಗಿ ಹಿಮ್ಮೆಟ್ಟಿ

...ತು. ಸಿಡಿಮದ್ದಿನ ಗುಂಡುಗಳು ಬಿದ್ದು ಒಡೆದದ್ದರಿಂದ ಆ ಪ್ರದೇಶವೆಲ್ಲಾ ... ಗಿಡಮರಗಳು ಸಮೂಲವಾಗಿ ನಾಶಹೊಂದಿ ಬೈಲಾಯಿತು; ಭಾರಿ ಬಂಡೆ... ಚೂರುಚೂರಾದವು. ಜರ್ಮನಿಯವರ ಕಡೆ ಸುಮಾರಾಗಿ 40,000 ... ಮಡಿದು ಹೋಗಿರಬೇಕೆಂದು ಹೇಳಲಾಗಿದೆ. ಅವರ ಕಡೆ ...ಹೋದವರು, ಗಾಯಪಟ್ಟವರು, ಸಿಕ್ಕಿದ ಇರುವವರು, ಎಲ್ಲಾ ಸೇರಿ ...೦೦ ಸೈನಿಕರೆಂದು ಊಹಿಸಲ್ಪಟ್ಟಿದೆ. ಜರ್ಮನಿಯವರ ಗಾಯಪಟ್ಟ...ನ್ನು ತಾಳ್ಸಕ್ತ್ರಿಂದು ಟ್ರಿಯರ್ ಗಾಡಿಗಳಲ್ಲಿ ಭರ್ತಿಮಾಡಿ ಜರ್ಮನಿಗೆ ...ರು ಒಂದು ತಂತಿವರ್ತಮಾನ ಹೇಳುತ್ತದೆ. ಫ್ರೆಂಚರ ಕಡೆ ಬಹಳ ನಷ್ಟವಾಯಿತು. ಆದರೆ ಜರ್ಮನಿಯವರಷ್ಟು ನಷ್ಟವಾಗಲಿಲ್ಲ.

ಈಗ ಬಂದಿರುವ ತಂತೀ ವರ್ತಮಾನವನ್ನು ನೋಡಿದರೆ ಯುದ್ಧವು ...ಲ್ಲದೆ ಮಹಾ ತೀವ್ರವಾಗಿಯೇ ಇನ್ನೂ ನಡೆಯುತ್ತಲಿದೆ ಎಂದೂ, ...ವರೆಗೆ ಜರ್ಮನಿಯವರಿಗೆ ಸ್ಥಳಕೊಡದೆ ತಮ್ಮ ಠಾಣ್ಯಗಳನ್ನು ಬಹು ...ದಿಂದ ಕಾಪಾಡಿಕೊಳ್ಳುತ್ತಿದ್ದಾರೆಂದೂ ತಿಳಿಯುವುದು. ಮತ್ತು ಫ್ರೆಂ... ಕಳೆದ ಮುಂಭಾಗದಲ್ಲೆಲ್ಲಾ ಜರ್ಮನಿ ಸೈನಿಕರ 51,000 ಹೆಣಗಳು ...ಕ್ಕಿವೆ ಎಂದೂ, ಜರ್ಮನಿಯವರು ಈ ಮಹಾ ಘೋರವಾದ ಯುದ್ಧ... ದಿನ ಒಂದಕ್ಕೆ 4,00,000 ಸಿಡಿಮದ್ದಿನ ಗುಂಡುಗಳ ಪ್ರಕಾರ ಫಿರಂಗಿಗ... ಹಾರಿಸುತ್ತಿದ್ದಾರೆಂದೂ ಗೊತ್ತಾಗುತ್ತದೆ.

ಈಗ ಬಂದಿರುವ ತಂತೀ ವರ್ತಮಾನಗಳು ಜರ್ಮನಿಯವರು ವೆರ್ಡೂನ್ ...ರಕ್ಕೆ ಮತ್ತೆ 3,00,000 ಸೈನ್ಯವನ್ನು ಕಳುಹಿಸುತ್ತಿದ್ದಾರೆಂದೂ, ಆದಾಗ್ಯೂ ...ರು ಅವರಿಗೆ ಸ್ಥಳಕೊಡದೆ ತಮ್ಮ ಠಾಣ್ಯಗಳನ್ನು ಕಾಪಾಡಿಕೊಳ್ಳುತ್ತಿದ್ದಾ...ರು ಹೇಳುವವು.

ಈ ಯುದ್ಧ ಪ್ರಾರಂಭವಾದ ಕೆಲವು ದಿನಗಳಲ್ಲಿ ಫ್ರೆಂಚರ ಕಡೆ 30,000 ...ರು ನಷ್ಟವಾಗಿರುತ್ತಾರೆಂದು ತಿಳಿಯುವುದು.

ಈ ಯುದ್ಧವನ್ನು ಜರ್ಮನಿಯವರು ಫ್ರೆಂಚರ ಮೇಲೆ ನುಗ್ಗಿ ಮಾಡಬೇಕೆಂದು ಊಹಿಸಲ್ಪಟ್ಟಿದೆ. ಇನ್ನು ಒಂದೆರಡು ತಿಂಗಳೊಳಗಾಗಿ ಮಿತ್ರ...ಯವರು ಅವರ ಮೇಲೆ ನುಗ್ಗುವದಕ್ಕೆ ಎಲ್ಲಾ ಸಿದ್ಧಪಡಿಸಿಕೊಳ್ಳುತ್ತಿದ್ದಾ...ರೆ ಜರ್ಮನಿಗೆ ವೇದ್ಯವಾಯಿತು. ಅಲ್ಲಿ ರಷ್ಯಾದವರೂ ನುಗ್ಗಿ ಮೇಲೆ ...ಳನ ಮಾಡುತ್ತಾರೆನ್ನುವುದೂ ಜರ್ಮನಿಗೆ ತಿಳಿಯಿತು. ಹೀಗೆ ನಾವ... ವೆರಡು ಕಡೆಗಳಿಗೂ ಯುದ್ಧಭೂಮಿಗೆ ಕಳುಹಿಸಲು ಜರ್ಮ... ಸಾಲದು. ಆದಕಾರಣ ಮಿತ್ರಮಂಡಲಿಯವರು ಸನ್ನದ್ಧರಾಗುವುದಕ್ಕೆ ...ಲೇ ಅವರ ಮೇಲೆ ಬಿದ್ದು ಅವರ ಸೈನ್ಯ ಸಾಲುಗಳನ್ನು ಒಡೆದು ನುಗ್ಗಿ ...ನುಗ್ಗಿ ಹೋದರೆ ಫ್ರೆಂಚರು ಕದಾರು ಮಾಡಿಕೊಳ್ಳುವಂತಾಗುವುದು ಎಂಬ... ಜರ್ಮನಿಯು ಊಹಿಸಿ ಈ ಯುದ್ಧಕ್ಕೆ ಹೊರಟಿತು. ಜರ್ಮನಿಯ... ಫ್ರೆಂಚ್ ಸೈನಿಕರ ಧೈರ್ಯ ಪರಾಕ್ರಮಗಳನ್ನು ಕೊಂಡಾಡುತ್ತಾ... ಈ ಯುದ್ಧದಲ್ಲಿ ಅವರು 10,000 ಫ್ರೆಂಚ್ ಸೈನಿಕರನ್ನು ಸೆರೆ ಹಿಡಿ... ಹೇಳುತ್ತಾರೆ. ಫ್ರೆಂಚರಾದರೋ ಅದು ನಿಜವಲ್ಲವೆಂದೂ, ಅವರು ...ಸೈನಿಕರನ್ನು ಕೂಡ ಸೆರೆ ಹಿಡಿದಿಲ್ಲವೆಂದೂ ಹೇಳುವರು. ...ಯವರು ಅಪಾರ ಸೈನ್ಯಗಳನ್ನು ಕಳೆದುಕೊಂಡರೆಂದು ಎಲ್ಲರಿಗೂ ...ಯವಾಗಿದೆ.

ಇನ್ನು ಮುಂದೆಯೂ ಜರ್ಮನಿಯವರು ಇನ್ನೊಂದು ಸ್ಥಳದಲ್ಲಿ ಫ್ರೆಂಚರ ...ಸಾಲುಗಳ ಮೇಲೆ ನುಗ್ಗಿ ಭೇದಿಸಬೇಕೆಂದು ಇನ್ನೊಂದು ಸಲ ಬರಬಹುದೆಂದು ಊಹಿಸಲ್ಪಟ್ಟಿದೆ. ಆದರೆ ಮಿತ್ರಮಂಡಲಿಯವರು ಬಹಳ ಜಾಗರೂಕ...ರಿಂದ ಜರ್ಮನಿಯವರು ಅವರ ಕಂದಕಗಳ ಮೇಲೆ ನುಗ್ಗಿ ಬಂದರೂ ...ಹೋಗಲಾರರು.

ಪಶ್ಚಿಮ ರಣರಂಗದ ಯುದ್ಧಸಾಲಿನ ಬೇರೆ ಕೆಲವು ಠಾಣ್ಯಗಳಲ್ಲೂ ಕದನ ...ನಡೆದಿರುವವು. ಬ್ರಿಟಿಷ್ ಸೈನಿಕರಿರುವ ಸಾಲಿನಲ್ಲಿ ಅವರು ನುಗ್ಗಿ ಹೋಗಿ ...ಮನಿಯವರ ಕೆಲವು ಕಂದಕಗಳನ್ನು ಗೆದ್ದು 254 ಮಂದಿ ಸೈನಿಕರನ್ನು ...ಹಿಡಿದು ತಂದಿದ್ದಾರೆ. ಇವರಲ್ಲಿ ಶುದ್ಧರಾದವರು ಐದು ಮಂದಿ ಇದ್ದಾರೆ. ...ರಿಕ್ ದಲದ ಕೆಲವು ಕಾದಾಟಗಳಾದವು. ಎರಡು ಕಡೆಗಳಲ್ಲೂ ...ಗಳು ಸಂಭವಿಸುತ್ತವೆ. ಒಂದಾನೊಂದು ದಿನ ಇಪ್ಪತ್ತು ಸಲ ಅಂತರಿಕ್ಷ ...ಕದನಗಳು ನಡೆದವು. ಬ್ರಿಟಿಷರ ಒಂದು ವಿಮಾನಯಂತ್ರವು ನಷ್ಟವಾಯಿತು ...ಯುದ್ಧಕಾಲದಲ್ಲಿ ಜರ್ಮನಿಯವರು ನಾಲ್ಕು ವಿಮಾನಯಂತ್ರಗಳನ್ನು ...ಕಳಕೊಂಡರು.

ಪೂರ್ವ ರಣರಂಗದಲ್ಲಿ.

ರಷ್ಯಾ ಯುದ್ಧಸಾಲುಗಳಿಂದ ಬಂದಿರುವ ವರ್ತಮಾನ ಬಹಳ ಸ್ವಲ್ಪ. ...ವು ಠಾಣ್ಯಗಳಲ್ಲಿ ಫಿರಂಗಿ ಗುಂಡುಗಳ ಹಾರಾಟಗಳು ನಡೆದವೆಂದೂ, ಜರ್ಮನಿ... ...ನಾ ತೀರಪಟ್ಟಣಕ್ಕೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದರೆಂದೂ ಹೇಳ... ಇನ್ನು ಕೆಲವು ಕಡೆ ಸುರಂಗಗಳಿಗೆ ಮದ್ದು ತುಂಬಿ ಉಡಾಯಿಸಿದರು.

ಇಟಲಿ.

ಇಟಲಿ ಕಡೆಯಿಂದ ವರ್ತಮಾನವೇನೂ ಬಂದಿರುವುದಿಲ್ಲ. ಪರ್ವತ ಪ್ರಾಂತ್ಯಗಳಲ್ಲಿ ಯುದ್ಧ ಕಾರ್ಯಗಳನ್ನು ನಡೆಸುವುದಕ್ಕೆ ಹವಾ ಸ್ಥಿತಿಯು ಅನುಕೂಲವಾಗಿಲ್ಲ. ಇಟಲಿ ಸೈನಿಕರು ಸರ್ಬಿಯಾದವರನ್ನು ಮಾಂಟಿನೀಗ್ರೋ ...ನ್ನು ಸಾಗಿಸುವ ಕೆಲಸದಲ್ಲಿ ಆಲ್ಬೇನಿಯಾದೊಳಗೆ ತುಂಬಾ ಸಹಾಯ ...ಮಾಡುತ್ತಿದ್ದಾರೆ.

ಟರ್ಕಿಯಲ್ಲಿ.

ರಷ್ಯಾದವರು ನಾರ್ ಕೆರೆಯ ಬಳಿ ಇರುವ ಬಿಟ್ಲಿಸ್ ಎಂಬ ಪಟ್ಟಣಕ್ಕೆ ...ಕಿ ನುಗ್ಗಿ ಅದನ್ನು ಸ್ವಾಧೀನಪಡಿಸಿಕೊಂಡರು. ಮತ್ತು ಅಲ್ಲಿ ಟರ್ಕಿ... ಅನೇಕ ಫಿರಂಗಿಗಳನ್ನು ತೆಕ್ಕೊಂಡರು. ಇದೇ ಈ ವಾರದ ವಿಶೇಷ ...ಮಾನ.

ರಷ್ಯಾದವರು ಹಿಮವು ಬಿರುಸಾಗಿ ಬೀಳುತ್ತಿದ್ದಾಗ ಒಂದು ಗುಂಡಾದವರೂ ...ಕತ್ತಲಲ್ಲಿ ಬಿಟ್ಲಿಸ್ ನಗರಕ್ಕೆ ಮುತ್ತಿಗೆ ಹಾಕಿ ಸೇನೆಗಳನ್ನು ...ರು ತಿವಿಯುತ್ತಾ ನುಗ್ಗಿ ಪುರರಕ್ಷಕರನ್ನೆಲ್ಲಾ ಕೊಂದುಹಾಕಿದರು. ಅಲ್ಲಿ ...ದವರಿಗೆ 20 ತೋಪು ಫಿರಂಗಿಗಳೂ, ಅನೇಕ ಸೈನಿಕರೂ ಸೆರೆ ಸಿಕ್ಕಿದರು. ...ಲ್ಲದೆ ಮದ್ದುಗುಂಡೂ ಅಪಾರವಾಗಿ ಸಿಕ್ಕಿತು. ಈಗ ಏಷ್ಯಾದೊಳಗಿರುವ ...ರ್ ವಿಭಾಗದೊಳಗೆ ರಷ್ಯಾ ಸೈನ್ಯಗಳು ಬಹಳ ಭಾಗವನ್ನು ಸ್ವಾಧೀನಪಡಿಸಿ...ಕೊಂಡಿರುತ್ತವೆ.

ಎನ್ವರ್ ಪಾಷಾ ಎಂಬ ಮಂತ್ರಿಯು ಗಾಯಪಟ್ಟನೆಂದೂ, ಆತನನ್ನು ...ಕೊಂದುಹಾಕಬೇಕೆಂದು ಪ್ರಯತ್ನಪಟ್ಟರೆಂದೂ ವರ್ತಮಾನವಿದೆ. ಈತನೇ ...ರ್ಮನಿ ಪಕ್ಷದ ಟರ್ಕಿ ಜನಗಳಲ್ಲಿ ಮುಖಂಡನಾಗಿರುತ್ತಾನೆ.

ರಷ್ಯಾದವರು ಟರ್ಕಿ ಸೈನಿಕರನ್ನು ಕಾಕಸಸ್ ಪರ್ವತ ಪ್ರಾಂತ್ಯದಲ್ಲಿ ...ರಮ್ ನಗರದಿಂದ ಆಚೆಗೆ ಓಡಿಸಿಕೊಂಡು ಹೋಗುತ್ತಲೇ ಇದ್ದಾರೆ. ...ಗಳು ಆಳವಾಗಿ ಸುರಿದಿವೆ. ಟರ್ಕಿಯವರು ತಮ್ಮ ಫಿರಂಗಿಗಳನ್ನು ...ನದೆ ಬಿಟ್ಟು ಹೋಗುವರು. ಟರ್ಕಿಯವರ ಕಡೆ 20,000 ಇದ್ದ... ಈಗ 4-5 ಸಾವಿರಕ್ಕೆ ಇಳಿಯಿತು. ಕೆಲವು ಪಟಾಲಮುಗಳು ಸಂಪೂರ್ಣ... ಕೆಡೆದುಹೋದವು. ಈಗ ರಷ್ಯಾದವರ ವಶದಲ್ಲಿ ಸಾಕಾದಷ್ಟು ಸೈನ್ಯಗಳ... ಅವರು ಟರ್ಕಿಯವರನ್ನು ಅವಿರ್ನಿಯಾದಿಂದ ಓಡಿಸಿಬಿಡಬಹುದು.

ಎರ್ಜೆರಮ್ ಪಟ್ಟಣವನ್ನು ರಷ್ಯಾದವರು ಗೆದ್ದು ಆಕ್ರಮಿಸಿಕೊಂಡ... ಟರ್ಕಿಯವರು 13,000 ಆರ್ಮೇನಿಯಾ ಪ್ರಜೆಗಳನ್ನು ಮುಸ್ ಎಂಬ ...ಕೊಂದುಹಾಕಿದರು ಎಂದು ಒಂದು ತಂತೀ ವರ್ತಮಾನ ಹೇಳುತ್ತದೆ.

ಎರ್ಜೆರಮ್ ಪಟ್ಟಣ ಹೋದ ವರ್ತಮಾನವು ಟರ್ಕಿ ರಾಜಧಾನಿಯಾದ ...ಕಾನ್ಸ್ಟಾಂಟಿನೋಪಲ್ ನಗರದಲ್ಲಿ ತುಂಬಾ ಗಾಬರಿಯನ್ನೂ ಕಳವಳವನ್ನೂ ಉಂಟುಮಾಡಿತು. ಬಲ್ಗೇರಿಯಾ ರಾಜಧಾನಿಯಾದ ಸೋಫಿಯಾ ನಗರದಲ್ಲೂ ಕಳವಳವುಂಟಾಯಿತು.

ಟರ್ಕಿಯವರು ತಮ್ಮ ಸಹಾಯಕ್ಕೆ 1,00,000 ಜರ್ಮನಿ ಸೈನ್ಯ ಬರಬೇಕೆಂದು ಕೇಳುತ್ತಿದ್ದಾರೆಂದೂ, ಜರ್ಮನಿಯವರು ಅಷ್ಟು ಸೈನ್ಯಗಳನ್ನು ಒದಗಿಸಲಾರದೆ ಬಿಂಕಿಸುತ್ತಿದ್ದಾರೆಂದೂ ವರ್ತಮಾನವಿದೆ.

ಮೆಸೊಪೊಟೇಮಿಯಾ ಸೀಮೆಯೊಳಗೆ ಬ್ರಿಟಿಷರು ಟರ್ಕಿ ಸೈನಿಕರನ್ನು ಸಂಧಿಸಿ ಸಣ್ಣಪುಟ್ಟ ಕದನಗಳನ್ನು ನಡಿಸುತ್ತಿದ್ದಾರೆ. ಅವರು ಟರ್ಕಿಯವರ ಕ್ಯಾಂಪುಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. ಇದರಿಂದ ಬಹಳ ನಷ್ಟವಾಯಿತು. ಆದರೆ ಅವರು ಇನ್ನೂ ಕುಟಿಲ್ ಅಮಾರಾ ಎಂಬ ಪಟ್ಟಣವನ್ನು ತಲಪಲಿಲ್ಲ. ಅಲ್ಲಿ ಇನ್ನೊಂದು ಬ್ರಿಟಿಷ್ ಸೈನ್ಯ ಸೇರಿಕೊಂಡಿದೆ. ಕಳೆದ ತಿಂಗಳು ತಾ. 22, 23, 24 ರಲ್ಲಿ ಕದನಗಳು ನಡೆದವು. ಅರಬ್ಬಿಯವರ ಕೆಲವು ಕ್ಯಾಂಪುಗಳನ್ನು ಹಾಳುಮಾಡಿದ್ದಾರೆ.

ಈಜಿಪ್ಟಿನಲ್ಲಿ.

ಫೆಬ್ರವರಿ ತಾ. 26 ರಲ್ಲಿ ನಡೆದ ಕದನದಲ್ಲಿ ಬ್ರಿಟಿಷ್ ಸೈನ್ಯದಲ್ಲಿ ಇಬ್ಬರು ಶುದ್ಧರಾದವರು ಕೊಲ್ಲಲ್ಪಟ್ಟರು; ಆರು ಮಂದಿ ಗಾಯಪಟ್ಟರು. ಶತ್ರು ಸೈನ್ಯದಲ್ಲಿ ಅನೇಕರು ನಷ್ಟವಾದರು; ಇಪ್ಪತ್ತೆಂಟು ಸೈನಿಕರು, ಇವರಲ್ಲಿ ಐದು ಮಂದಿ ರಾಜರು ಸೆರೆಯಾದರು. ಅಲ್ಲದೆ 33,000 ಕೋಟಾಗಳೂ, 50 ಒಂಟೆಗಳೂ ಬ್ರಿಟಿಷರಿಗೆ ಸಿಕ್ಕಿದವು.

ಪರ್ಷಿಯಾದಲ್ಲಿ.

ಇದುವರೆಗೆ ಸಾಹಸಪಟ್ಟದ್ದರಲ್ಲಿ ರಷ್ಯಾದವರು ಪರ್ಷಿಯಾದಲ್ಲಿ ಉಂಟಾಗಿದ್ದ ದಂಗೆಯನ್ನು ಬಹಳ ಮಟ್ಟಿಗೆ ಅಡಗಿಸಿರುವಂತೆ ಕಾಣುತ್ತದೆ. ಈಗ ದಂಗೆಕೋರರನ್ನು ಕೆರ್ಮಾನ್ ಷಾದಿಂದ ಆಚೆಗೆ ಓಡಿಸುವ ಪ್ರಯತ್ನ ನಡೆದಿದೆ. ರಷ್ಯಾದವರು ಅವರ ಬಳಿ ಇದ್ದ ಇನ್ನೆರಡು ಫಿರಂಗಿಗಳನ್ನು ತೆಕ್ಕೊಂಡರು. ಕೆರ್ಮಾನ್ ಷಾ ನಗರವು ಬಾಗ್ದಾದಿಗೆ ಹೋಗುವ ಮಾರ್ಗದಲ್ಲಿದೆ. ರಷ್ಯಾದವರು ಬಲವಾದ ಸೈನ್ಯಗಳನ್ನು ಕಳುಹಿಸಿದರೆ ಅವರು ಟೈಗ್ರಿಸ್ ನದಿ ಹಿಡಿದು ಹೋಗುತ್ತಿರುವ ಬ್ರಿಟಿಷ್ ಸೈನ್ಯಕ್ಕೆ ಬೆಂಬಲಕೊಡಬಹುದು.

ಬಾಲ್ಕನ್ ಸಂಸ್ಥಾನಗಳಲ್ಲಿ.

ಬಾಲ್ಕನ್ ಸಂಸ್ಥಾನಗಳೊಳಗೆ ಯುದ್ಧಕಾರ್ಯಗಳ ಚಟುವಟಿಕೆ ಏನೂ ಕಂಡುಬರುವುದಿಲ್ಲ. ಬಲ್ಗೇರಿಯಾದವರು ಬಹುಶಃ ಗ್ರೀಸಿನೊಳಕ್ಕೆ ನುಗ್ಗಿ ಹೋಗಿ ಸಲೋನಿಕ ತೀರಪಟ್ಟಣಕ್ಕೆ ಮುತ್ತಿಗೆ ಹಾಕುವುದಕ್ಕೆ ಒಪ್ಪುವಂತೆ ಕಾಣುವುದಿಲ್ಲ.

ಆಸ್ಟ್ರಿಯಾದವರು ಕ್ರಮೇಣ ಆಲ್ಬೇನಿಯಾ ರಾಜ್ಯವನ್ನು ಆಕ್ರಮಿಸಿಕೊಂಡು ಅಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸುವಂತೆ ಕಾಣುತ್ತಲಿದೆ. ಆಸ್ಟ್ರಿಯಾದವರು ನುಗ್ಗಿ ಹೋಗಿ ಡೂರಾಜೋ ತೀರಪಟ್ಟಣವನ್ನು ಗೆದ್ದುಕೊಳ್ಳುವುದಕ್ಕೆ ಮೊದಲೇ ಇಟಲಿಯವರು ಅಲ್ಲಿಂದ ಸುಮಾರು 2,00,000 ಸರ್ಬಿಯಾದವರನ್ನು ಸಾಗಿಸಿಬಿಟ್ಟರು. ಈಗ ಇಟಲಿಯವರು ಆಲ್ಬೇನಿಯಾದೊಳಗಿರುವ ವೆಲೋನಾ ಎಂಬ ಇನ್ನೊಂದು ತೀರಪಟ್ಟಣವನ್ನು ಬಲಪಡಿಸಿಕೊಳ್ಳುತ್ತಲಿದ್ದಾರೆ. ಇದು ಸಿದ್ಧವಾದ ಮೇಲೆ ಇಟಲಿಯವರು ಅಲ್ಲಿ ತಮ್ಮ ಸೈನ್ಯಗಳನ್ನು ತಂದಿಟ್ಟುಕೊಂಡು ಇಲ್ಲಿಂದ ನುಗ್ಗಿ ಹೋಗಿ ಆಲ್ಬೇನಿಯಾ ಮತ್ತು ಮಾಂಟಿನೀಗ್ರೋ ಸಂಸ್ಥಾನಗಳನ್ನು ಗೆದ್ದು ಬಿಡಿಸಿಕೊಳ್ಳುವಂತೆ ಕಾಣುತ್ತದೆ.

ಇತರ ವಿಷಯಗಳು.

ಮಲೋಯಾ ಎಂಬ ಬ್ರಿಟಿಷ್ ಹಡಗಿನಲ್ಲಿ ಪ್ರಾಣ ಕಳೆದುಕೊಂಡವರ ಶವಗಳನ್ನು ಸಾಗಿಸಿ ಮಡುವು ಮಾಡಿದಾಗ ಸಾಕ್ಷಿಗಳು ಆ ಹಡಗು ಒಂದು ಮೈನ್ ಎಂಬ ಸಿಡಿಮದ್ದಿನ ಗುಂಡು ಬಡಿದು ಮುಳುಗಿ ಹೋಯಿತೆಂದು ಹೇಳಿದರು. ಅದು ಜರ್ಮನಿಯವರು ಸಮುದ್ರದಲ್ಲಿಟ್ಟಿದ್ದ ಗುಂಡೋ ಅಲ್ಲವೋ ಗೊತ್ತಾಗಲಿಲ್ಲ. ಅದರೊಳಗಿದ್ದ 110 ಪ್ರಯಾಣಿಕರಲ್ಲಿ 84 ಜನರು ಬದುಕಿಕೊಂಡರು. ಒಟ್ಟಾಗಿ 411 ಜನರಿಗೆ 260 ಮಂದಿ ಪ್ರಾಣ ಕಾಪಾಡಿಕೊಂಡರು. ರೆವ್|| ಎ. ಇ. ನೈಟಿಂಗೇಲ್‌ರವರು ಆ ಹಡಗಿನಲ್ಲಿ ಇರಲಿಲ್ಲ. ಅವರು ಮಾರ್ಸೇಲ್ಸ್ ಪಟ್ಟಣದಲ್ಲಿ ಹಡಗು ಹತ್ತಬೇಕೆಂದು ಉದ್ದೇಶಿಸಿದ್ದರು. ಈಗ ಅವರು ಇನ್ನೊಂದು ಹಡಗಿನಲ್ಲಿ ಬರುತ್ತಿದ್ದಾರೆ.

ಜರ್ಮನಿಯವರು ಮಾರ್ಚಿ ತಾ. 1 ರಿಂದ ತಮ್ಮ ಸಬ್‌ಮರೀನುಗಳನ್ನು ಕಳುಹಿಸಿ ಸಮುದ್ರ ಯುದ್ಧವನ್ನು ಪ್ರಾರಂಭಿಸುವುದಾಗಿ ತಿಳಿಸಿದ್ದಾರೆ. ಫಿರಂಗಿಗಳನ್ನುಳ್ಳಂಥಾ ವ್ಯಾಪಾರದ ಹಡಗುಗಳನ್ನೆಲ್ಲಾ ಎಚ್ಚರಿಕೆ ಕೊಡದೇನೇ ಟಾರ್ಪೀಡೋದಿಂದ ಹೊಡೆದು ಮುಳುಗಿಸಬಿಡುತ್ತಾರಂತೆ. ಈ ಮಾತಿನಿಂದ ಅಂಥಾ ಹಡಗುಗಳು ಹಿಂದೆ ಜರ್ಮನಿಯ ಕೆಲವು ಸಬ್‌ಮರೀನುಗಳನ್ನು ನಾಶಮಾಡಿರಬೇಕೆಂದು ಅರ್ಥವಾಗುತ್ತದೆ.—ಈ ವಾರ ಜರ್ಮನಿಯವರು ಸುಮಾರು ಹನ್ನೊಂದು. ಈ ಪ್ರಕಾರ ಸಣ್ಣವೇ ಹೆಚ್ಚು ಹಡಗುಗಳನ್ನು ಮುಳುಗಿಸಿದ್ದಾರೆ. ಅವು ಬ್ರಿಟಿಷ್, ಡಚ್, ಡೆನ್ಮಾರ್ಕ್, ಫ್ರೆಂಚ್, ಇಟಾಲಿಯನ್ ರಾಜ್ಯಗಳಿಗೆ ಸೇರಿದ್ದವು. ಕೆಲವು ಹಡಗುಗಳಲ್ಲಿ ಒಬ್ಬರೂ ಉಳಿಯದಂತೆ ನೀರಿನ ಪಾಲಾದರು.

ಫ್ರೆಂಚರ ಒಂದು ಹಡಗು ಮೆಡಿಟರೇನಿಯನ್ ಕಡಲಿನಲ್ಲಿ ಮುಳುಗಿಹೋಯಿತು. ಬಹಳ ದೊಡ್ಡ ನಷ್ಟ. ಅದು ಸೈನ್ಯಗಳನ್ನು ಸಾಗಿಸುತ್ತಿತ್ತು. ಅದರಲ್ಲಿದ್ದ 1,800 ಜನಗಳ ಪೈಕಿ 870 ಮಂದಿಯನ್ನು ಸಮುದ್ರದಿಂದೆತ್ತಿ ಬದುಕಿಸಿದರು.

ಪೋರ್ಚುಗಲ್ ರಾಜ್ಯಕ್ಕೆ ಸೇರಿದ ಸಮುದ್ರ ತೀರಪಟ್ಟಣಗಳ ಆಶ್ರಯವನ್ನು ಹುಡುಕಿ ಇದ್ದಂಥಾ ಜರ್ಮನಿ ಹಡಗುಗಳನ್ನೆಲ್ಲಾ ಆ ಸರ್ಕಾರದವರು ಹಿಡಿದಿಟ್ಟುಕೊಂಡಿದ್ದಾರೆ. ಪೋರ್ಚುಗಲ್‌ನಲ್ಲಿ ಸುಮಾರು 36 ಹಡಗುಗಳೂ, ಗೋವೆಯಲ್ಲಿ 6 ಹಡಗುಗಳೂ ಇದ್ದವು. ಒಂದು ಸಂದರ್ಭದಲ್ಲಿ ಜರ್ಮನಿಯವರು ತಮ್ಮ ಹಡಗನ್ನು ಒಡೆದುಬಿಡಬೇಕೆಂದು ಪ್ರಯತ್ನಪಟ್ಟರು. ಪೋರ್ಚುಗಲ್ ರಾಜ್ಯದವರು ಜರ್ಮನಿಯವರ ಮೇಲೆ ಯುದ್ಧಕ್ಕೆ ಹೊರಟರೇ ವೆಂದು ಪ್ರಕಟಿಸಿದಾರೆಯೋ ಇಲ್ಲವೋ ತಿಳಿಯಲಿಲ್ಲ. ಆದರೆ ಆ ರಾಜ್ಯವು ಮಿತ್ರಮಂಡಲಿಯವರ ಪಕ್ಷವನ್ನು ವಹಿಸುತ್ತದೆ ಎಂದು ಬಹಳ ಕಾಲದ ಹಿಂದೆಯೇ ತಿಳಿಸಲ್ಪಟ್ಟಿತ್ತು.

ಜರ್ಮನಿಯ ವಿಮಾನಯಂತ್ರವು ಇಂಗ್ಲೆಂಡಿನ ದಕ್ಷಿಣ ಪೂರ್ವ ತೀರದ ಮೇಲೆ ಹಾರಿ ಬಂದು ಸಿಡಿಮದ್ದಿನ ಗುಂಡುಗಳನ್ನು ಹಾಕಿತು. ಒಂದು ಎಳೇ ಮಗು ಮಾತ್ರ ಮೃತಪಟ್ಟಿತು.

ಕಳೆದ ಭಾನುವಾರ ರಾತ್ರಿ ಜರ್ಮನಿಯವರ ಜೆಪ್ಲಿನ್ ಎಂಬ ಭಾರೀ ವಿಮಾನ ಯಂತ್ರಗಳು ಮೂರು ಇಂಗ್ಲೆಂಡಿನ ಮೇಲೆ ಹಾರಿ ಬಂದು ನಾನಾ ಕಡೆಗಳಿಗೆ ಹೋಗಿ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಮೂವರು ಗಂಡಸರು, ನಾಲ್ವರು ಹೆಂಗಸರು, ಐದು ಮಂದಿ ಮಕ್ಕಳು ಮೃತಪಟ್ಟರು; 33 ಜನಗಳಿಗೆ ಗಾಯಗಳಾದವು. ಕಟ್ಟಡ ಆಸ್ತಿಪಾಸ್ತಿಗಳಿಗೆ ವಿಶೇಷ ನಷ್ಟವಾಗಲಿಲ್ಲ.

ಜರ್ಮನಿಯಲ್ಲಿ ಸಕಲ ಪ್ರಜೆಗಳಿಗೂ ಮಾಂಸಾಹಾರ ಪದಾರ್ಥಗಳು ದೊರಕುವುದು ಪ್ರಯಾಸವಾಗಿದೆ ಎಂದೂ, ಅಷ್ಟರಲ್ಲೇ ಅವರೆಲ್ಲಾ ಮಾಂಸಾಭಾವದ ದೆಸೆಯಿಂದ ಸಸ್ಯಾಹಾರಿಗಳಾಗುವ ಸ್ಥಿತಿಗೆ ಬಂದಿದ್ದಾರೆಂದೂ ಹೇಳಲಾಗಿದೆ. ಈಗಾಗಲೇ ಅವರು ವಾರಕ್ಕೆ ನಾಲ್ಕು ದಿನ ಮಾಂಸಾಹಾರ ಬಿಟ್ಟರು.

ಜರ್ಮನಿಯ ಒಂದು ಸಮುದ್ರ ವಿಮಾನವು ನಾಶವಾಯಿತು. ಒಬ್ಬನು ಮುಳುಗಿಹೋದನು. ಇನ್ನೊಬ್ಬನನ್ನು ಸೆರೆ ಹಿಡಿದುಬಿಟ್ಟರು. ಅದು ಇಂಗ್ಲೆಂಡಿನ ಕಡೆಯಿಂದ ವಾಪಸು ಹೋಗುತ್ತಿತ್ತು.

ಫ್ರಾನ್ಸಿನೊಳಗೆ ಮದ್ದು ತಯಾರಾಗುವ ಒಂದಾನೊಂದು ಕಾರ್ಖಾನೆಯಲ್ಲಿ ಬೆಂಕಿ ಹುಟ್ಟಿ ಅನಾಹುತವಾಯಿತು. ಅದರೊಳಗೆ ಕೆಲಸಮಾಡುತ್ತಿದ್ದವರ ಪೈಕಿ 22 ಮಂದಿ ಮೃತಪಟ್ಟರು; 66 ಜನರಿಗೆ ಗಾಯಗಳಾಗಿರುತ್ತವೆ.

ಒಳದೇಶದ ವೃತ್ತಾಂತಗಳು.

ದಾವಣಗೆರೆಯಲ್ಲಿ ಏಪ್ರಿಲ್ ತಾ. 8 ನೇ ಶನಿವಾರ ವಿದ್ಯಾಭ್ಯಾಸ ಪ್ರದರ್ಶನ ಜರುಗುವುದು.

ಗ್ರಾಮಾಭಿವೃದ್ಧಿ ಸಂಘಗಳ ಸಭೆಯು ನಂಜನಗೂಡಿನಲ್ಲಿ ತಾ. 15 ರಲ್ಲೂ ಮೈಸೂರಿನಲ್ಲಿ ಏಪ್ರಿಲ್ ತಾ 5 ರಲ್ಲೂ ನಡೆಯುವಂತೆ ಏರ್ಪಾಡಾಗಿದೆ.

ಬೆಂಗಳೂರು ಸಿಟಿ ಅವೆನ್ಯೂ ರೋಡಿನಲ್ಲಿರುವ ಮ|| ಎಂ. ಸುಬ್ಬರಾಯರು 2 ಆಣೆ ಕ್ರಯದ ಒಂದು ಸುಮಾಸನೂ ಕಾರ್ಡನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ.

ನಾಗಮಂಗಲದಲ್ಲಿರುವ ರೀಡಿಂಗ್ ರೂಮ್ ಫಂಡಿಗೆ ಆ ಪ್ರಾಂತ್ಯದ ಪ್ರಜಾಹಿತ ಚಿಂತಕರು ಇದುವರೆಗೆ 130 ರೂಪಾಯಿ ನಗದು ಚಂದ ಕೊಟ್ಟು ಪ್ರೋತ್ಸಾಹಪಡಿಸಿದ್ದಾರೆ.

ಬೆಂಗಳೂರಿನ ಹತ್ತಿರ ಸ್ಯಾಂಕಿ ಕೆರೆಯ ಸಮೀಪದಲ್ಲಿ ನಮ್ಮ ಸರ್ಕಾರದವರು ಒಂದು ಲಕ್ಷ ರೂಪಾಯಿ ಖರ್ಚಿಟ್ಟು ಗಂಧದ ಎಣ್ಣೆ ತಯಾರಿ ಕಾರ್ಖಾನೆಯನ್ನು ಪರೀಕ್ಷಾರ್ಥವಾಗಿ ಇಡಿಸುವಂತೆ ಏರ್ಪಾಡಾಗಿದೆ.

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ಜಂಬೂರಾ ಪಂದ್ಯಗಳನ್ನು ನಡಿಸಿ ಮ್ಯುನಿಸಿಪಲ್ ಪ್ರೆಸಿಡೆಂಟ್ ಮ|| ಲಕ್ಷ್ಮಣರಾಯರ ಹಸ್ತದಿಂದ ಗೆದ್ದ ಬಾಲಕರುಗಳಿಗೆಲ್ಲಾ ಬೆಳ್ಳಿಯ ಪದಾರ್ಥಗಳನ್ನು ಬಹುಮಾನವಾಗಿ ಕೊಡಿಸಿದರು.

ಮೈಸೂರು ಟ್ರೇನಿಂಗ್ ಕಾಲೇಜು.

ಹೋದ ಮಂಗಳವಾರ ಸಾಯಂಕಾಲ ರಾಜಧಾನಿಯ ಟ್ರೇನಿಂಗ್ ಕಾಲೇಜಿನಲ್ಲಿ ಇಂಗ್ಲೀಷ್ ಉಪಾಧ್ಯಾಯರುಗಳ ಕೂಟವು ಜರುಗಿತು. ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರಾದ ರಾವ್ ಬಹದೂರ್ ಮ|| ಎಂ. ಶಾಮರಾಯರು ದಯಮಾಡಿ ಅಗ್ರಾಸನವನ್ನು ವಹಿಸಿದ್ದರು. ರಾಜಧಾನಿಯಲ್ಲಿರುವ ಪ್ರಜೆಗಳ ಮುಖಂಡರೂ ಅಧಿಕಾರಿಗಳೂ ಸುಮಾರು ಮಂದಿ ದಯಮಾಡಿದ್ದರು. ವೀಣಾ ಗಾನದಿಂದ ಕೂಟವು ಪ್ರಾರಂಭವಾಗಿ ಯುಕ್ತಿಯ ಕೆಲವು ಆಟಗಳು ತೋರಿಸಲ್ಪಟ್ಟ ಬಳಿಕ ಮ್ಯಾಜಿಕ್ ಲ್ಯಾಂಟರ್ನಲ್ಲಿ ಚಿತ್ರಗಳೂ, ಈಗಿನ ಯುದ್ಧದ ಪ್ರಮುಖಪುರುಷರ ಮೊದಲಾದವರ ಭಾವಚಿತ್ರಗಳೂ ಪ್ರದರ್ಶನ ಮಾಡಲ್ಪಟ್ಟವು. ತರುವಾಯ ಕಾಲೇಜ್ ಉಪಾಧ್ಯಾಯರುಗಳ ಕೂಟದ ಸೆಕ್ರೆಟರಿಯವರು ರಿಪೋರ್ಟನ್ನು ಓದಿ ಶಿಕ್ಷಣಭಾಗಗಳ ಪರೀಕ್ಷೆಗಾಗಿ ಉಪಾಧ್ಯಾಯರು ನಡಿಸಿದ ವಿವಾದಗಳ ಮತ್ತು ಉಪನ್ಯಾಸಗಳ ಸಂಕ್ಷೇಪ ವೃತ್ತಾಂತವನ್ನು ತಿಳಿಸಿದರು.

ರಾವ್ ಬಹದೂರ್ ಮ|| ಎಂ. ಸಿ. ರಂಗಯ್ಯಂಗಾರ್ಯರು ಆ ಕಾಲೇಜಿನಲ್ಲಿ ಒಂದು ವರುಷದಿಂದ ಶಿಕ್ಷಣವನ್ನು ಹೊಂದಿ ಉಪಾಧ್ಯಾಯರಾಗಿ ತಮ್ಮ ಸ್ಥಳಗಳಿಗೆ ಹೊರಡುವವರಾಗಿರುವ ವಿದ್ಯಾರ್ಥಿಗಳಿಗೆ ಕೆಲವು ಶ್ರೇಷ್ಠವಾದ ಹಿತೋಕ್ತಿಗಳನ್ನು ಹೇಳಿದರು. ಲೋಕದಲ್ಲಿ ಎಲ್ಲಾ ಉದ್ಯೋಗಗಳಿಗಿಂತಲೂ ಉಪಾಧ್ಯಾಯರಾಗಿದ್ದುಕೊಂಡು ಮಕ್ಕಳನ್ನು ವಿದ್ಯಾವಂತರಾಗಿಯೂ, ಸಚ್ಚರಿತ್ರರನ್ನಾಗಿಯೂ ಮಾಡುವ ಉದ್ಯೋಗವೇ ಪರಮ ಶ್ರೇಷ್ಠವಾದದ್ದು. ಉಪಾಧ್ಯಾಯರು ಸಚ್ಚರಿತ್ರರಾಗಿರುವುದು ಮಾತ್ರವೇ ಸಾಲದು; ಸಚ್ಚರಿತ್ರರೆಂಬ ಕೀರ್ತಿಶಾಲಿಗಳಾಗಿಯೂ ಇರಬೇಕು. ಅವರು ವ್ಯಾಯಾಮಗಳಲ್ಲಿ ಆಸಕ್ತರಾಗಿ ಆರೋಗ್ಯ ಭಾಗ್ಯವನ್ನು ಕಾಪಾಡಿಕೊಳ್ಳಬೇಕು. ಉಪಾಧ್ಯಾಯರು ತರಗತಿಗೆ ಹೊತ್ತಿಗೆ ಸರಿಯಾಗಿ ಹೋಗಿ ನಿಯಮಿತವಾದ ಪಾಠಗಳನ್ನು ಹೇಳಿಕೊಟ್ಟು ಬರುವುದೇ ಸಾಲದು; ಅವರು ಸ್ವತಃ ವ್ಯಾಸಂಗ ಮಾಡುತ್ತಾ ತಮ್ಮ ಬುದ್ಧಿ ಜ್ಞಾನಾದಿಗಳನ್ನು ವೃದ್ಧಿಪಡಿಸಿಕೊಳ್ಳುತ್ತಿರಬೇಕು. ನಾಲ್ಕನೆಯದಾಗಿ ಉಪಾಧ್ಯಾಯರು ವಿಹಿತವಾದ ಸಂಪಾದನೆ ಮತ್ತು ಆಸ್ತಿಯ ವಿಷಯದಲ್ಲಿ ಅನಾಸಕ್ತರಾಗಬಹುದು. ಈ ಭಾಗಗಳನ್ನು ನಮ್ಮ ಉಪಾಧ್ಯಾಯರುಗಳು ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಕರ್ತವ್ಯಗಳನ್ನು ಸಾರ್ಥಕವಾಗಿ ನೆರವೇರಿಸಿ ಕೀರ್ತಿಶಾಲಿಗಳಾಗಬೇಕೆಂದು ಮುಖ್ಯವಾಗಿ ಹೇಳಿದರು.

ರಾವ್ ಬಹದೂರ್ ಮ|| ಎಂ. ಶಾಮರಾಯರು ತಮ್ಮ ಭಾಷಣದಲ್ಲಿ ಇನ್ನು ಕೆಲವಂಶಗಳನ್ನು ಕುರಿತು ಪ್ರಸ್ತಾಪಮಾಡಿದರು. ಈಚೆಗೆ ನಮ್ಮ ಸೀಮೆಯಲ್ಲೂ ಹಿಂದೂಸ್ಥಾನದ ಇತರ ಕಡೆಗಳಲ್ಲೂ ಉಪಾಧ್ಯಾಯರುಗಳು ಅಷ್ಟು ವಿಶೇಷವಾದ ಗೌರವವಾಗಿ ಪಡೆದಿಲ್ಲ. ಪಂಡಿತರಿಗೂ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೂ ಒಂದು ತಾರತಮ್ಯವುಂಟು. ಜನಗಳು ಪಂಡಿತರನ್ನು ಗೌರವದಿಂದ ಕಾಣುವ ರೀತಿ ಬಿ. ಎ. ಪ್ಯಾಸಾದವರನ್ನು ಕಾಣುವುದಿಲ್ಲ. ಯಾಕೆಂದರೆ ಪಂಡಿತರು ವಿದ್ಯಾಪಾರಂಗತರಾಗುವುದರಲ್ಲೇ ಆಸಕ್ತರಾಗಿರುವರು; ಬಿ. ಎ. ಪ್ಯಾಸಾದವರು ಕೂಡ ಉಪಾಧ್ಯಾಯರಾದರೆ ಆ ಉದ್ಯೋಗದಲ್ಲಿ ಅಭಿರುಚಿ ಇಟ್ಟುಕೊಳ್ಳದೆ ಅದನ್ನು ಬಿಟ್ಟು ಬೇರೆ ಕೆಲಸಗಳಿಗೆ ಸೇರಿಕೊಳ್ಳುವ ಅವಕಾಶದಲ್ಲಿರುತ್ತಾರೆ. ತಾಯಿ ತಂದೆಗಳು ತಮ್ಮ ಮಕ್ಕಳು ವಿದ್ಯಾವಂತರಾಗಿ ಅಭಿವೃದ್ಧಿ ಹೊಂದಬೇಕೆಂಬ ಉದ್ದೇಶವನ್ನಿಟ್ಟುಕೊಳ್ಳದೆ, ಅವರು ದೊಡ್ಡ ಪದವಿಗಳಿಗೆ ಹತ್ತಬೇಕೆಂಬ ಕುತೂಹಲ ಪಡುವುದೂ ಒಂದು ಕಾರಣವಾಗಿ ಹೇಳಬೇಕು. ಉಪಾಧ್ಯಾಯರೆಂಬ ಉದ್ಯೋಗಸ್ಥರನ್ನು ಜನಗಳು ವಿಶೇಷ ಗೌರವದಿಂದ ಕಂಡು ಸನ್ಮಾನಿಸಬೇಕು. ಸಂಬಳ ಎಷ್ಟೇ ಕಡಮೆಯಾದರೂ ಅವರು ಮಾಡುವ ಕಾರ್ಯವು ದೇಶೋದ್ಧಾರಕವಾದದ್ದು. ನಮ್ಮ ಸರ್ಕಾರದವರು ಈ ಉದ್ಯೋಗದ ಮಹತ್ವವನ್ನು ಪರಿಗಣಿಸಿ ಈಚೀಚೆಗೆ ಅವರ ಸಂಬಳಗಳನ್ನು ಹೆಚ್ಚಿಸಿರುತ್ತಾರಲ್ಲದೆ ಮುಂದೆ ಇನ್ನೂ ಹೆಚ್ಚು ಮಾಡುವವರಾಗಿದ್ದಾರೆ. ಆದಕಾರಣ ಉಪಾಧ್ಯಾಯರಾಗಿ ಸೇರತಕ್ಕವರು ಆ ಉದ್ಯೋಗದಲ್ಲೇ ಕೃತಾರ್ಥರಾಗಬೇಕೆಂಬ ಘನತರವಾದ ಸಂಕಲ್ಪವನ್ನಿಟ್ಟುಕೊಂಡು ತಮ್ಮ ಕರ್ತವ್ಯವನ್ನು ಸಾರ್ಥಕವಾಗಿ ನಡಿಸುತ್ತಾ ಬರಬೇಕು. ಸರ್ವದಾ ವ್ಯಾಸಂಗದಲ್ಲೇ ಅನುರಕ್ತರಾಗಿ ಪಾಂಡಿತ್ಯವನ್ನು ಸಂಪಾದಿಸಿಕೊಳ್ಳಬೇಕು. ಹೊಸ ಹೊಸ ಗ್ರಂಥಗಳನ್ನು ಓದಿ ಅದರ ವಿಷಯದಲ್ಲಿ ಉಪನ್ಯಾಸಗಳನ್ನು ಮಾಡುತ್ತಿರಬೇಕು. ಹೀಗೆ ಮಾಡುತ್ತಾ ಬಂದಲ್ಲಿ ಉಪಾಧ್ಯಾಯರು ಪ್ರಜೆಗಳಲ್ಲಿ ಪ್ರೀತಿ ಗೌರವಗಳನ್ನು ಪಡೆದು ಕೀರ್ತಿಶಾಲಿಗಳಾಗುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಈ ಉಪಾಧ್ಯಾಯರ ಕಾಲೇಜಿನ ಪ್ರಿನ್ಸಿಪಲ್‌ರವರೂ ಅವರ ಸಹಾಯೋಪಾಧ್ಯಾಯರೂ ಏಕೀಭವಿಸಿ ಮಾಡುವ ಕೃಷಿಯಿಂದ ಇಷ್ಟು ಒಳ್ಳೆಯ ಫಲಿತಾಂಶಗಳನ್ನು ತೋರಿಸಿರುವುದು ತುಂಬಾ ಸಂತೋಷಪ್ರದವಾಗಿದೆ. ಅವರುಗಳು ಈ ಕಾಲೇಜನ್ನು ಹೀಗೆಯೇ ಅಭಿವೃದ್ಧಿಗೆ ತಂದು ಇತರ ಸೀಮೆಯ ಎಲ್ಲಾ ಕಡೆಗಳಿಗೂ ಹರಡುವಂತೆ ಮಾಡುತ್ತಾರೆಂದು ನಿರೀಕ್ಷಿಸಬಹುದಾಗಿದೆ ಎಂಬೀ ರೀತಿ ಭಾಷಣವಾಡಿದರು.

ಕಡೆಯಲ್ಲಿ ಪ್ರಿನ್ಸಿಪಲ್‌ರಾದ ಮ|| ಸಿ. ಆರ್. ನಾರಾಯಣರಾಯರು ತಮ್ಮ ಸಹಾಯೋಪಾಧ್ಯಾಯರು ಕಾಲೇಜಿನ ನಿಮಿತ್ತ ಕೆಲಸಕಾರ್ಯಗಳಲ್ಲಿ ತೋರಿಸುತ್ತಿರುವ ಉತ್ಸಾಹವನ್ನು ಮುಕ್ತಕಂಠದಿಂದ ಕುರಿತು ಪ್ರಶಂಸೆ ಮಾಡಿ ಅವರುಗಳನ್ನು ಕೊಂಡಾಡಿದ್ದಲ್ಲದೆ, ಪ್ರಾಚೀನ ಕಾಲದ ವಿದ್ಯಾಭ್ಯಾಸದ ಪೌರ್ವಕ್ರಮಗಳಿಗೂ, ಈಗಿನ ಪಾಶ್ಚಾತ್ಯ ಕ್ರಮಗಳಿಗೂ ಇರುವ ತಾರತಮ್ಯವನ್ನು ಬಹಳ ಮನೋಜ್ಞವೂ ಸಂತೋಷಪ್ರದವೂ ಆದ ರೀತಿಯಲ್ಲಿ ದೃಷ್ಟಾಂತಗಳನ್ನು ಹೇಳಿ ವಿವರಿಸಿ, ಸಭಾಧ್ಯಕ್ಷರೇ ಮೊದಲಾದವರಿಗೆ ವಂದನೆಗಳನ್ನು ಸಮರ್ಪಿಸಿ ಆ ಸಂತೋಷ ಸಭೆಯನ್ನು ಕೊನೆಗಾಣಿಸಿದರು. ಸಭಿಕರು ಶ್ರೀಮನ್ ಮಹಾರಾಜರವರಿಗೆ ಶ್ರೇಯಸ್ಸನ್ನು ಬಯಸಿ ಜಯಧ್ವನಿಮಾಡುತ್ತಾ ತೆರಳಿದರು.

ಒಂದು ರೀಡಿಂಗ್ ರೂಮಿನ ಪ್ರವೇಶೋತ್ಸವ.

ಚಿತ್ರದುರ್ಗ ತಾಲ್ಲೂಕು ಗೊಡಬನಹಾಳಲ್ಲಿ ಫೆಬ್ರವರಿ 17 ನೇ ತಾ ಪ್ರಾಂತೀಕಾಲ ಗ್ರಾಮಾಭಿವೃದ್ಧಿ ಕಮಿಟಿಯವರಿಂದ ಕಟ್ಟಿಸಲ್ಪಟ್ಟ ರೀಡಿಂಗ್ ರೂಮ್ ಕಟ್ಟಡವು ತಳಿರುತೋರಣಾದಿಗಳಿಂದ ಅಲಂಕರಿಸಲ್ಪಟ್ಟು, ನಮ್ಮ ತಾಲ್ಲೂಕು ಅಮಲ್ದಾರ್ ಮ|| ಕೇಶವಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿತ್ತು. ಸ್ಕೂಲು ಮಾಸ್ತರು ಮ|| ಎಂ. ನರಸಿಂಹಾಚಾರ್ಯರು ರೀಡಿಂಗ್ ರೂಮಿಗೆ ಬರುತ್ತಿರುವ ಎಲ್ಲಾ ಪತ್ರಿಕೆಗಳನ್ನು ಸರಿಯಾದ ಸ್ಥಾನದಲ್ಲಿ ಇಟ್ಟು ನೋಟಕ್ಕೆ ಅಂದ ಕಾಣುವಂತೆ ಮಾಡಿದ್ದರು. ಪತ್ರಿಕೆಗಳ ಇಕ್ಕೆಲಗಳಲ್ಲಿ ಉದಾರ ಮನಸ್ಕರಾದ ಮಹನೀಯರು ಉಚಿತವಾಗಿ ಲೈಬ್ರರಿಗೆ ಕೊಟ್ಟ ಕೆಲವು ಪುಸ್ತಕಗಳು ಒಪ್ಪುತ್ತಿದ್ದುವು. ಇಷ್ಟನ್ನೆಲ್ಲಾ ನಮ್ಮ ಅಮಲ್ದಾರ್ರವರು ನೋಡಿ ಬಹಳ ಆನಂದಪಟ್ಟರು. ಸ್ಕೂಲ್ ಹೆಡ್ ಮಾಸ್ತರು ಮ|| ಬಿ. ರಾಮರಾಯರು ರಿಪೋರ್ಟನ್ನು ಓದಿದರು. ಹಾಲಿ 3 ವಾರ ಪುಸ್ತಕಗಳೂ, 4 ವಾರ ಪತ್ರಿಕೆಗಳೂ ಬರುವುದಾಗಿಯೂ, ಶ್ರೀ ಕೃಷ್ಣಸೂಕ್ತಿ ಉಡುಪಿ, ವಾಗ್ಭೂಷಣ ಧಾರವಾಡ ಪತ್ರಿಕಾಕರ್ತರು ವಿ. ಪಿ. ಹಣವನ್ನು ಸ್ವೀಕರಿಸಿ ಪುಸ್ತಕಗಳನ್ನು ಕಳುಹಿಸದೆ ನಿಲ್ಲಿಸಿರುವದಾಗಿಯೂ, ಮಧುರವಾಣಿ ಮೈಸೂರು ಇದು ಬಹಳ ಸಾವಕಾಶವಾಗಿ ಕೆಲವು ತಿಂಗಳಿಗೊಂದು ಸಾರಿ ಬರುವುದಾಗಿಯೂ ತಿಳಿಸಿದರು. ರೀಡಿಂಗ್ ರೂಮಿಗೆ ಅತ್ಯವಶ್ಯವಾಗಿ ಬೇಕಾಗುವ ಕೆಲವು ಫರ್ನಿಚರು ಸಾಮಾನುಗಳನ್ನು ಸರ್ಕಾರದಿಂದ ಮುಫತ್ತಾಗಿ ಕೊಡಿಸಿಕೊಡಬೇಕೆಂದು ಕೇಳಿಕೊಂಡರು. ಅಮಲ್ದಾರ್ರವರು ಪತ್ರಿಕೆಗಳಿಂದ ಉಂಟಾಗುವ ಪ್ರಯೋಜನಗಳನ್ನು ಕುರಿತು ಒಂದು ಚಿಕ್ಕ ಉಪನ್ಯಾಸವಮಾಡಿ ಗ್ರಾಮ ಸಮಾಜದವರು ಕೆಲವು ಹಣ ಕೊಟ್ಟರೆ ಅಷ್ಟು ಹಣ ಸರ್ಕಾರದಿಂದ ಹಾಕಿ ಫರ್ನಿಚರ್ ಸಾಮಾನು ತರಿಸಿಕೊಡುವುದಾಗಿಯೂ, ಈ ರೀಡಿಂಗ್ ರೂಂ ಇನ್ನು ಮುಂದೆ ಶಾಶ್ವತವಾಗಿ ಜಾರಿಯಲ್ಲಿ ಬರಬೇಕೆಂತಲೂ ಅಪ್ಪಣೆಕೊಡಿಸಿದರು. ಅನಂತರ ಮಹಾರಾಜರವರಿಗೂ, ಚಕ್ರವರ್ತಿ ಸಾರ್ವಭೌಮರವರಿಗೂ ಶ್ರೀಯಃಪ್ರಾರ್ಥನೆಗಳು ನಡೆದು, ಸಭಿಕರಿಗೆ ತಾಂಬೂಲವು ಹಂಚಲ್ಪಟ್ಟು, ಸಭೆಯು ಮುಕ್ತಾಯವಾಯ್ತು.

ಪ್ರತ್ಯಕ್ಷದರ್ಶಿ.

ಮೈಸೂರು ಗೆಜೆಟ್ ಸಂಗ್ರಹ.

ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ ಮ|| ಬಿ. ಎಸ್. ಕೃಷ್ಣಸ್ವಾಮಯ್ಯಂಗಾರ್ರು ನೌಕರಿಯಿಂದ ನಿವೃತ್ತರಾದ ಕಾರಣ ಮುಂದೆ ಹೇಳುವ ಹಂಗಾಮಿ ಏರ್ಪಾಡುಗಳನ್ನು ಮಾರ್ಚಿ ತಾ. 1 ರಿಂದ ಜಾರಿ ಮಾಡಲಾಗಿದೆ—

ಸಬ್ ಜಡ್ಜ್ ಮ|| ಬಿ. ನಾಗಪ್ಪನವರು ಶಿವಮೊಗ್ಗ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿರತಕ್ಕದ್ದು ; ಮ|| ಆರ್. ಬಿ ಸ್ವಾಮಿರಾಯರು ರಜದಿಂದ ವಾಪಸು ಬರುವ ತನಕ ಮ|| ಬಿ ಸುಬ್ಬಣ್ಣನವರು ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿರತಕ್ಕದ್ದು ; ಮುನ್ಸಿಫ್ ಮ|| ಎಸ್. ಕೃಷ್ಣರಾಯರು ಬೆಂಗಳೂರು ಸಬ್ ಜಡ್ಜರಾಗಿರತಕ್ಕದ್ದು : ಮ|| ಟಿ ಕೃಷ್ಣಯ್ಯಂಗಾರ್ರವರು ಮೈಸೂರು ಸಬ್ ಜಡ್ಜರಾಗಿರತಕ್ಕದ್ದು.

ಗವರ್ನ್‌ಮೆಂಟ್ ಅ|| ಸೆಕ್ರೆಟರಿ ಮ|| ಕೆ. ಸುಬ್ಬರಾಯರಿಗೆ ಮಾರ್ಚಿ ತಾ. 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ವೈ. ನರಸಿಂಗರಾಯರು ಅ|| ಸೆಕ್ರೆಟರಿಯಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಸಬ್ ಅ. ಇಂಜನಿಯರ್ ಮ|| ಕೆ. ಆರ್. ವೆಂಕಟಸುಬ್ಬಾಚಾರ್ರನ್ನು ಸೈಲ್ಕಿ ಕಾಮಗಾರಿ ಇಲಾಖೆಗೆ ವರ್ಗಮಾಡಿದೆ.

ಬೆಂಗಳೂರು ಸಬ್ ಜಡ್ಜ್ ಮ|| ಎಸ್. ಕೃಷ್ಣರಾಯರಿಗೆ ಸಾಕ್ಷಿಗಳ ವಾಙ್ಮೂಲವನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳುವ ಅಧಿಕಾರ ವಹಿಸಲ್ಪಟ್ಟಿದೆ.

ದಾವಣಗೆರೆ ಮ್ಯುನಿಸಿಪಲ್ ಸರಹದ್ದಿನೊಳಗೆ ಮಕ್ಕಳಿಗೆ ಬಲಾತ್ಕಾರದ ವಿದ್ಯೆ ನಿಡುವ ಎಪ್ಪಿಸುವ ಕಾನೂನನ್ನು 1916 ನೇ ಮಾರ್ಚಿ ಲಾಗಾಯಿತು ಮೂರು ವರುಷ ಜಾರಿಯಲ್ಲಿ ತರಲ್ಪಟ್ಟಿದೆ.

ಸಿರಾ ತಾಲ್ಲೂಕು ಅಮಲ್ದಾರ್ ಮ ಎನ್. ಶ್ರೀನಿವಾಸರಾಯರಿಗೆ ಮಾರ್ಚಿ ತಾ. 15 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ತುಮಕೂರು ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮ|| ಎಂ. ವೆಂಕಣ್ಣಾಚಾರ್ರು ಆ ಕಾಲದಲ್ಲಿ ಸಿರಾ ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ಅಪೂರ್ವ ನೋಟ.

ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಪಶ್ಚಿಮಕ್ಕೆ ಎರಡು ಮೈಲಿ ಫಾಸಲೆಯಲ್ಲಿ ಹೊಸಗುಡ್ಡವೆಂಬ ಒಂದು ವಿಶೇಷ ಸ್ಥಳವುಂಟು. ಇದು ಸಾಧಾರಣವಾದ ಎತ್ತರವುಳ್ಳ ದೊಡ್ಡ ಬಂಡೆಯಾಗಿರುತ್ತದೆ. ಸುತ್ತಲೂ ಕೋಟೆಯು ಕಟ್ಟಲ್ಪಟ್ಟು ಕೋಟೆಯೊಳಗೆ ಪಶ್ಚಿಮಾಭಿಮುಖವಾಗಿ ಬಂಡೆಯನ್ನೇ ಕೊರೆದು ಒಂದು ವಿಚಿತ್ರವಾದ ದೇವಾಲಯವನ್ನು ನಿರ್ಮಿಸಿರುತ್ತೆ. ಆ ಕೆಲಸವನ್ನು ಕಣ್ಣಿನಿಂದ ನೋಡಿದರೆ ಅದನ್ನು ನಿರ್ಮಿಸಿದ ಶಿಲ್ಪಿಯ ಬುದ್ಧಿ, ಚಾತುರ್ಯಕ್ಕಾಗಿ ಆಶ್ಚರ್ಯಪಡದೆ ಇರಲಾಗದು. ಮೇಲ್ಗಡೆ ಅದೇ ಬಂಡೆಯನ್ನೇ ಕೊರೆದು ಎರಡು ಮನೋಹರವಾದ ಕೊಳಗಳನ್ನು ಮಾಡಿರುತ್ತೆ. ಇದು ಪ್ರೇಕ್ಷಣೀಯ ಪ್ರದೇಶವಾದಾಗ್ಯೂ ಪ್ರೇಕ್ಷಕರು ಸಹಾ ಹೋಗಿ ಬರುತ್ತಲಿರುವರು. ಇದನ್ನು ನಿರ್ಮಿಸಿದ ಕಾಲವು ಪ್ರಾಚೀನವಾದಾಗ್ಯೂ ಕೆಲಸವು ಮಾತ್ರ ಯಾವಾಗಲೂ ಹೊಸದಾಗಿಯೇ ಇರುವುದು. ಆದ್ದರಿಂದಲೇ ಇದರ ಹೆಸರು ಸಹಾ ಹೊಸಗುಡ್ಡವೆಂದು ಕರೆಯಲ್ಪಡುತ್ತಲಿರುವುದು ಇದೀಗ ಸಹಜವಾದ ಅನ್ವರ್ಥನಾಮವು. ಫೆಬ್ರವರಿ ತಾ. 27 ನೇ ಭಾನುವಾರ ಚಿತ್ರದುರ್ಗ ತಾಲ್ಲೂಕು ತುರುವನೂರು ಪೋಲೀಸ್ ಸ್ಟೇಷನ್ ದಫೇದಾರ್ ಮ|| ಸೈಯದು ಹುಸೇನ್ ರವರು ಗ್ರಾಮದ ಕೆಲವು ಮಂದಿ ಮುಖಂಡರೊಡಗೂಡಿ ಮೇಲ್ಕಂಡ ಸ್ಥಳಕ್ಕೆ ಹೋಗಿ ಅಲ್ಲಿಯೇ ಎಲ್ಲರಿಗೂ ಸುಭೋಜನವಾದ ಕೂಡಲೆ ಹಾರ್ಮೋನಿಯಂ ತಬಲಾ ವಗೈರೆ ಜವಾವನೆಯಲ್ಲಿ ಹೊಸದಾಗಿ ತುರುವನೂರು ಹಿಂದೂ ಬಾಯ್ಸ್ ಸ್ಕೂಲಿಗೆ ವರ್ಗವಾಗಿ ಬಂದಿರುವ ಮ|| ಭೀಮರಾಜರವರು ಸಂಗೀತಮಾಡಿ, ಎಲ್ಲರನ್ನೂ "ಸಂಘೇಶಕ್ತಿಃ ಕಲೌ ಯುಗೇ" ಎಂಬ ಅಭಿಯುಕ್ತೋಕ್ತಿಯಂತೆ ಸಮುದಾಯತ್ವೇನ ನಿರ್ವಹಿಸುವ ಕಾರ್ಯವು ಸ್ತೋತ್ರಾರ್ಹವಾದದ್ದು. ಗೃಹಸ್ಥರು ಸರ್ವದಾ ತಮ್ಮ ಮನೆವಾರ್ತೆಯ ಕೆಲಸಗಳಲ್ಲಿಯೇ ಯಾವ ಜೀವಿತ ಕಾಲವನ್ನೂ ಜಿಜ್ಞಾಸೆಯಿಂದ ಕಳೆಯುವುದಕ್ಕಿಂತಲೂ ಈ ರೀತಿಯಾಗಿ ಪ್ರೇಕ್ಷಣೀಯವಾದ ಸ್ಥಳಗಳನ್ನು ಸಂದರ್ಶಿಸುವುದರಿಂದ ಒಂದು ಬಗೆಯ ಕುತೂಹಲವೂ, ಲವಲವಿಕೆಯೂ, ಮನಶ್ಶಾಂತತೆಯೂ ಉಂಟಾಗಿ ಮಹತ್ಕಾರ್ಯಗಳಲ್ಲಿ ಮನಸ್ಸನ್ನು ಪ್ರವೇಶಗೊಳಿಸುವುದು. ದಫೇದಾರ್ ಮ|| ಸೈಯದು ಹುಸೇನ್‌ರವರು ಮಹಮ್ಮದೀಯರಾದರೂ ಹಿಂದೂ ಸಹೋದರರೊಡನೆ ಬೆರೆತು ಆಡೀದ ವೃತ್ತಿಯಿಂದ ಇಂತಹ ಉತ್ತಮಕಾರ್ಯಗಳಿಗೆ ಪ್ರೇರಿಸುವುದು ಸಂತೋಷಪ್ರದವಾಗಿರುತ್ತೆ. ಇದರಂತೆಯೇ ಹಿಂದೂ ಮುಸಲ್ಮಾನರು ಏಕೀಭವಿಸಿ ಪ್ರೀತಿ ವಿಶ್ವಾಸಗಳನ್ನು ಬೆಳಸುತ್ತಿರಬೇಕು. ತುರುವನೂರು ಗ್ರಾಮವು 600-700 ಮನೆಗಳುಳ್ಳದ್ದಾಗಿ ಉತ್ಸಾಹಶಾಲಿಗಳಿಂದ ತುಂಬಿ ವೃದ್ಧಿ ಹೊಂದುತ್ತ ಇತರೇ ಗ್ರಾಮಗಳಿಗೆ ಮೇಲುಪಂಕ್ತಿಯಾಗಿರುವುದೆಂದು ವಗೈರೆ ಮುಖ್ಯನಾಡಿ ಅಲ್ಲಿ ನೋಡಬೇಕಾದ ಸ್ಥಳಗಳನ್ನೆಲ್ಲಾ ನೋಡಿಕೊಂಡು ಸಾಯಂಕಾಲ ತುರುವನೂರಿಗೆ ಎಲ್ಲರೂ ಹಿಂತಿರುಗಿದರು. ಈ ಸಂತೋಷ ಕೂಟದಲ್ಲಿ 70-80 ಜನದ ವರೆಗೂ ಬಡಬಗ್ಗರೆಲ್ಲರಿಗೂ ಸುಭೋಜನವಾಗುವಂತೆ ಏರ್ಪಡಿಸಿದ್ದರು.

ಗೋವಿಂದಯ್ಯ.

ಬೇಲೂರು ಬಕ್ಷಿ ಶ್ರೀನಿವಾಸ ಬಾಲಿಕಾ ಪಾಠಶಾಲೆ.

ಕಳೆದ ಫೆಬ್ರವರಿ ಮಾಹೆ ತಾ. 27 ನೇ ಭಾನುವಾರ ಬೆಳಿಗ್ಗೆ ಸಕಲೇಶಪುರದ ಸಬ್ ಡಿವಿಜನ್ ಆಫೀಸರ್ ಮ|| ಚಕ್ರಪಾಣಿ ಅಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ಈ ನಗರದ ಬಹು ಮಂದಿ ಲೌಕಿಕ ವೈದಿಕ ದೊಡ್ಡಮನುಷ್ಯರುಗಳಿಂದೊಡಗೂಡಿದ ಈ ಪಾಠಶಾಲಾ ವಿದ್ಯಾರ್ಥಿನಿಯರ ಬಹುಮಾನಕೂಟವು ಎ. ವಿ. ಸ್ಕೂಲ್ ಹಾಲಿನಲ್ಲಿ ಜರುಗಿತು. ಪ್ರಾರಂಭದಲ್ಲಿ ಕೆಲವು ಮಂದಿ ಬಾಲಕಿಯರಿಂದ ಶ್ರಾವ್ಯವಾಗಿ ಹಾಡಲ್ಪಟ್ಟ ದೇವರ ಪ್ರಾರ್ಥನೆಯೂ, ಇಬ್ಬರು ಬಾಲಕಿಯರ ತತ್ಸಂಬಂಧವಾದ ಸಂಭಾಷಣೆಯೂ. ನಂತರ ಒಬ್ಬ ಬಾಲಿಕೆಯು ರಸಯುಕ್ತವಾದ ಸ್ತ್ರೀ ವಿದ್ಯಾವಶ್ಯಕತೆ ವಿಷಯಕ ಉಪನ್ಯಾಸವೂ, ಚಿಕ್ಕ ಮಕ್ಕಳು ಅಭಿನಯಿಸಿದ ಆನುಕರಣ ಗೀತಗಳೂ ಸಹ ಸಭಿಕರ ಮನಸ್ಸಿಗೆ ಅತ್ಯಂತ ಸಂತೋಷಪ್ರದವಾಗಿದ್ದವು. ಬಳಿಕ ಶಾಲಾ ಮುಖ್ಯೋಪಾಧ್ಯಾಯರಿಂದ ಸ್ಕೂಲ್ ಸಂಕ್ಷೇಪ ಚರಿತ್ರೆಯೂ, ಸ್ಕೂಲ್ ಪೂರ್ಣಾಭಿವೃದ್ಧಿಗೆ ಆವಶ್ಯಕವಾದ ಸಲಹೆಗಳನ್ನೊಳಗೊಂಡ ರಿಪೋರ್ಟೂ ಓದಲ್ಪಟ್ಟ ಮೇಲೆ ಬಾಲಕಿಯರಿಗೆ ಬಹುಮಾನವು ಹಂಚಲ್ಪಟ್ಟು ಸಭಾಧ್ಯಕ್ಷರು ಸ್ತ್ರೀ ವಿದ್ಯಾಭ್ಯಾಸದ ಮುಖ್ಯಪ್ರಯೋಜನವನ್ನು ಸಭಿಕರೆಲ್ಲರಿಗೂ ವಿಶದಪಡಿಸಿದರು. ಇದೇ ವಿಷಯವನ್ನು ಸಭಿಕರೆಲ್ಲರ ಹೃದಯದಲ್ಲಿ ಇನ್ನೂ ಚೆನ್ನಾಗಿ ನಾಟುವಂತೆ ಇಲ್ಲಿಯ ಕಾಫಿ ಪ್ಲಾಂಟರ್ ಮ|| ಕೆ ಟಿ. ಶೇಷಯ್ಯನವರು ತಕ್ಕ ದೃಷ್ಟಾಂತ ಅನುಭವಗಳಿಂದ ವಿವರಿಸಿದರು. ಅನಂತರ ನಮ್ಮ ಘನವನ್ನೈವಿದ ಚಕ್ರವರ್ತಿ ಸಾರ್ವಭೌಮರವರ, ಶ್ರೀಮನ್ಮಹಾರಾಜರವರ ಶ್ರೀಯಃಪ್ರಾರ್ಥನೆಯು ಮಾಡಲ್ಪಟ್ಟು ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ವಿನಿಯೋಗಿಸಲ್ಪಟ್ಟಿತು.

ಈ ಶಾಲೆಯಲ್ಲಿ 70 ಬಾಲಿಕೆಯರು ಇದ್ದು ಇಬ್ಬರೇ ಉಪಾಧ್ಯಾಯರಿಂದ ಕಾರ್ಯ ನಿರ್ವಹಿಸುತ್ತಿರುವುದೂ, ಬಾಲಕಿಯರು ಇನ್ನೂ ಹೆಚ್ಚಾಗಿ ಸೇರಲು ಕಟ್ಟಡವು ಸಹಾ ಸರಿಯಾಗಿಲ್ಲವಾಗಿ ನ್ಯೂನತೆಗಳು ಮಾತ್ರ ರಿಪೋರ್ಟಿನಿಂದ ತಿಳಿಯಬರುತ್ತೆ. ಇದು ಸಹಜವಾದದ್ದಾಗಿದ್ದರೂ ಅತ್ಯಗತ್ಯವಾಗಿ ಈ ಶಾಲೆಯ ಪೂರ್ಣಾಭಿವೃದ್ಧಿಗೆ ಆವಶ್ಯಕವಾದ ಕೈಕೆಲಸಗಳ (ಹೆಣಿಗೆ, ಹೊಲಿಗೆ), ಶಾಸ್ತ್ರವತ್ತಾದ ಸಂಗೀತ ಪಾಠ ಇವುಗಳ ಬೋಧನೆಗೆ ತಕ್ಕ ಏರ್ಪಾಡು ಅತ್ಯಾವಶ್ಯಕವು. ಇದರಿಂದ ಮಕ್ಕಳಿಗೆ ಪಾಠಶಾಲೆಗೆ ತಪ್ಪದೆ ಹೋಗಬೇಕೆಂಬ ಕುತೂಹಲವೂ ಹೆಚ್ಚುವುದಲ್ಲದೆ ಅವರ ಸಹಜ ಶಕ್ತಿಗಳ ಅಭಿವೃದ್ಧಿಗೆ ತುಂಬಾ ಸಹಾಯವಾಗುವುದು. ಇದರ ಏರ್ಪಾಡಿಗೆ ದ್ರವ್ಯಾಭಾವವೇ ಮುಖ್ಯ ಕೊರತೆಯಾಗಿದೆ.

ನಮ್ಮ ದೇಶದ ಅನೇಕ ಕಡೆಗಳಲ್ಲಿ ಲೋಕೋಪಕಾರ ಧುರಂಧರರಾದ ಐಶ್ವರ್ಯವಂತರು ತಮ್ಮ ಉದಾರವಾದ ಧರ್ಮಸಹಾಯದಿಂದ ಇಂತಹ ಅನೇಕ ದೇಶೋಪಕಾರ ಕಾರ್ಯಗಳನ್ನು ಶಾಶ್ವತಪಡಿಸಿ ಈ ಲೋಕದಲ್ಲಿ ತಮ್ಮ ಜಡದೇಹವನ್ನು ತ್ಯಜಿಸಿದರೂ ಕೀರ್ತಿಶಾಲಿಗಳಾಗಿ ಸನಾದಾ ಸರ್ವಕದೇಗಳಲ್ಲಿ ಸರ್ವರ ಹೃದಯಗಳಲ್ಲಿಯೂ ವಾಸಮಾಡಿಕೊಂಡಿರುವಂತೆ ಇಲ್ಲಿಯ ಧರ್ಮಕಾರ್ಯಾಸಕ್ತರಾದ ಐಶ್ವರ್ಯವಂತರುಗಳೂ ಈ ಶಾಲೆಯ ಸಂಪೂರ್ಣ ಪುರೋಭಿವೃದ್ಧಿ ಕಾರ್ಯಕ್ಕೆ ತಮ್ಮ ಉದಾರವಾದ ಧರ್ಮಸಹಾಯಮಾಡಿ ತಾವೂ ಸಹ ಮೇಲ್ಕಂಡ ಮಹನೀಯರ ಗುಂಪಿನಲ್ಲಿ ಸೇರುವವರಾಗಬೇಕೆಂದು ಕೋರುತ್ತೇನೆ.

ಸ್ತ್ರೀ ವಿದ್ಯಾಭಿಮಾನಿ.

ಇಂಡಸ್ಟ್ರಿಯಲ್ ಸ್ಕೂಲ್ ಸ್ಥಾಪನಾ ಮಹೋತ್ಸವ.

ಚಿಂತಾಮಣಿಯಲ್ಲಿನ ಟವನ್ ಪ್ರೋಗ್ರೆಸ್ ಕಮಿಟಿಯವರು ಕಳೆದ ಫೆಬ್ರವರಿ ತಾ. 26 ನೇ ಶನಿವಾರ ಒಂದು ಇಂಡಸ್ಟ್ರಿಯಲ್ ಸ್ಕೂಲ್ ಏರ್ಪಾಡು ಮಾಡಿದರು. ಈ ಸ್ಕೂಲ್ ಸ್ಥಾಪನೆಗೆ ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮ|| ಬೌರಿಂಗ್ ಸಾಹೇಬರು ದಯಮಾಡಿದ್ದರು. ಸದ್ಯಕ್ಕೆ ಈ ಪಾಠಶಾಲೆಯನ್ನು ದಾದೇರಾಯರ ಛತ್ರದಲ್ಲಿ ನಡೆಯುವಂತೆ ಏರ್ಪಡಿಸಿ, ಆ ದಿನ ಆ ಕಟ್ಟಡವನ್ನು ತಳಿರು ತೋರಣಗಳಿಂದ ಅಲಂಕರಿಸಿದ್ದರು. ಒಳಭಾಗದಲ್ಲಿ ನಮ್ಮ ಟವನ್ ಸ್ಯಾನಿಟರಿ ಇನ್‌ಸ್ಪೆಕ್ಟರು ಸ್ಕೂಲಿಗೆ ಸಂಬಂಧಪಟ್ಟ ಸಾಮಾನುಗಳನ್ನು ನೋಟಕರ ಮನಸ್ಸನ್ನು ಆಕರ್ಷಿಸುವಂತೆ ಏರ್ಪಡಿಸಿದ್ದರು ಈ ಉತ್ಸವವನ್ನು ನೋಡುವುದಕ್ಕಾಗಿ ಊರಿನ ಎಲ್ಲಾ ದೊಡ್ಡಮನುಷ್ಯರೂ, ಸರ್ಕಾರ ಹುದ್ದೇದಾರರುಗಳೂ ಆಹ್ವಾನ ಪತ್ರಿಕೆಯು ಸೆಕ್ರೆಟರಿಯವರಿಂದ ಕಳುಹಲ್ಪಟ್ಟಿತ್ತು.

ಮಧ್ಯಾಹ್ನ 4 ಘಂಟೆಗೆ ಸ್ಕೂಲ್ ಕಟ್ಟಡವು ವಿದ್ಯಾರ್ಥಿಗಳಿಂದಲೂ, ವಿದ್ಯಾರ್ಥಿನಿಗಳಿಂದಲೂ, ಪುರವಾಸಿಗಳಿಂದಲೂ ಕಿಕ್ಕಿರಿದಿತ್ತು. ಕಮಿಟಿ ಪ್ರೆಸಿಡೆಂಟರಾದ ನಮ್ಮ ಅಮಲ್ದಾರ್ರು ಟ್ರಾವಲರ್ಸ್ ಬಂಗಲೆಯಿಂದ ಡೆಪ್ಯುಟಿ ಕಮಿಷನರ್ ಸಾಹೇಬರನ್ನು ಮೋಟಾರಿನಲ್ಲಿ ಕರೆದುಕೊಂಡು ಬಂದರು. ಸ್ಕೂಲನ್ನು ಪ್ರವೇಶಮಾಡುತ್ತಲೇ ಬಾಲಕಿಯರು ಸುಸ್ವಾಗತವನ್ನರುಹುವ ಹಾಡನ್ನು ಬಹು ಇಂಪಾಗಿ ಹಾಡಿದರು. ಸಭಿಕರ ಕೋರಿಕೆಯಂತೆ ಸಾಹೇಬರು ಅಗ್ರಾಸನವನ್ನು ವಹಿಸಿದರು. ತರುವಾಯ ಎ ವಿ ಸ್ಕೂಲ್ ಹೆಡ್ ಮಾಸ್ಟರು ಮ|| ವಿ ಕೃಷ್ಣರಾಯರು ಇಂಗ್ಲಿಷ್‌ನಲ್ಲಿ ಉಪನ್ಯಾಸವನ್ನು ಬಹು ಸ್ವಾರಸ್ಯವಾಗಿ ಮಾಡಿದ ಬಳಿಕ ಕಮಿಟಿ ಸೆಕ್ರೆಟರಿಯವರಾದ ಸಬ್ ರಿಜಿಸ್ಟ್ರಾರ್ ಮ|| ನರಸಿಂಹ ಮೂರ್ತ್ಯಾಚಾರ್ರು ಸ್ಕೂಲ್ ಸ್ಥಾಪನಾ ರಿಪೋರ್ಟನ್ನು ಓದಿ, ಈ ಸ್ಕೂಲಿನಲ್ಲಿ ಮಗ್ಗ ನೆಯ್ಗೆ, ಹೊಲಿಗೆ, ಚಾಪೆ ಹೆಣೆಯುವುದು ಈ ಮೊದಲಾದ ಕೈಗಾರಿಕೆ ಕೆಲಸಗಳನ್ನು ಕಲಿಸಿಕೊಡುತ್ತದೆಂತಲೂ, ಇಲ್ಲಿನ ಮ|| ಗರ್ಲ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮ|| ವೆಂಕಟಾಚಲಯ್ಯನವರು ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆಂತಲೂ ಹೇಳಿ, ಈ ಸ್ಕೂಲ್ ಸ್ಥಾಪನೆಗೆ ನಮ್ಮ ದಯಾಳುಗಳಾದ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸಿದ್ದಕ್ಕಾಗಿ ಕಮಿಟಿ ಪರವಾಗಿ ಅವರನ್ನು ವಂದಿಸಿ ರಿಪೋರ್ಟನ್ನು ಮುಗಿಸಿದರು. ಅನಂತರ ಸಾಹೇಬರವರು ಗಂಭೀರವಾಗಿಯೂ ಹಸನ್ಮುಖಿಗಳಾಗಿಯೂ ನಮ್ಮನ್ನು ಈ ದಿನ ಈ ಸ್ಕೂಲ್ ಸ್ಥಾಪನೆಗೆ ಬರಮಾಡಿಕೊಂಡದ್ದಕ್ಕಾಗಿ ಸಂತೋಷವನ್ನು ಸೂಚಿಸಿದ್ದಲ್ಲದೆ ಈ ಚಿಂತಾಮಣಿಯು ದಿನೇ ದಿನೇ ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ. ಇದು ಈ ಡಿಸ್ಟ್ರಿಕ್ಟಿನಲ್ಲಿ ಮಧ್ಯರಾಷ್ಟ್ರವಾಗಿದೆ. ಈ ಕೈಗಾರಿಕೆ ಸ್ಕೂಲ್ ಅಭಿವೃದ್ಧಿಗೆ ಬರಲಿ ಎಂತ ಭಗವಂತನನ್ನು ಪ್ರಾರ್ಥಿಸುತ್ತೇನೆ ಎಂದು ಹೇಳುತ್ತಲೇ ಸಭಿಕರೆಲ್ಲರೂ ಸಂತೋಷದಿಂದ ಕರತಾಡನ ಮಾಡಿದರು. ತರುವಾಯ ಬಾಲಕಿಯರು ಮಂಗಳವನ್ನೂ, ಚಕ್ರವರ್ತಿಗೇ ಮತ್ತು ಶ್ರೀಮನ್ಮಹಾರಾಜರವರ ಶ್ರೀಯಃಪ್ರಾರ್ಥನಾ ರೂಪವಾದ ಗಾನವನ್ನೂ ಹಾಡಿದರು. ತರುವಾಯ ಸಾಹೇಬರಿಗೂ, ಸಭಿಕರಿಗೂ ಬೇರೆ ಬೇರೆ ಸ್ಥಳಗಳಲ್ಲಿ ಟೀ ಪಾರ್ಟಿಯು ಜರುಗಿತು. ಗಂಧ, ಪುಷ್ಪ, ತಾಂಬೂಲವು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು. ಅನಂತರ ಇಲ್ಲಿನ ಟೆನಿಸ್ ಕ್ಲಬ್ಬಿನವರ ಕೋರಿಕೆಯ ಪ್ರಕಾರ ಸಾಹೇಬರು ಅಲ್ಲಿಗೆ ದಯಮಾಡಿಸಿ ಕೊಂಚ ಕಾಲ ಅಲ್ಲಿದ್ದು ಬಂಗಲೆಗೆ ತೆರಳಿದರು. ಮರು ದಿನವೇ ಇಲ್ಲಿ ಟವನ್ ಇನ್‌ಸ್ಪೆಕ್ಷನ್ ಮಾಡಿ ಶಿಡ್ಲಘಟ್ಟ ತಾಲ್ಲೂಕಿಗೆ ದಯಮಾಡಿಸಿದರು. ಈ ರೀತಿ ಮಹನೀಯರಾದವರು ಎಷ್ಟು ದೊಡ್ಡ ಪದವಿಯಲ್ಲಿದ್ದರೂ ಆಗಾಗ್ಗೆ ಇಂಥಾ ಸಭೆಗಳಿಗೆ ದಯಮಾಡಿಸುವುದರಿಂದ ಜನರಿಗೆ ಪ್ರೋತ್ಸಾಹಿಸಿದಂತೆ ಆಗುವುದಲ್ಲದೆ, ಅವರ ಯಶಸ್ಸು ಮತ್ತಷ್ಟು ಹೆಚ್ಚುವುದು.

ಪ್ರತ್ಯಕ್ಷದರ್ಶಿ.

ಒಬ್ಬ ಸ್ಕೂಲ್ ಮಾಸ್ಟರಿಗೆ ಮಾಡಿದ ಸನ್ಮಾನ.

ಹೊಳಲ್ಕೆರೆ ತಾಲ್ಲೋಕು ರಾಮಗಿರಿ ಎ. ವಿ. ಬಾಯ್ಸ್ ಸ್ಕೂಲಿನಲ್ಲಿ ನಾಲ್ಕು ಜನ ಮಾಸ್ತರುಗಳೂ, 140 ಜನ ಹುಡುಗರೂ ಇರುತ್ತಾರೆ. ಲೋಯರ್ ಸೆಕೆಂಡರಿ ವರೆಗೂ ಕ್ಲಾಸುಗಳಿದ್ದು ಸ್ಕೂಲ್ ತುಂಬಾ ಅಭಿವೃದ್ಧಿಸ್ಥಿತಿಯಲ್ಲಿದೆ. ಈ ಸ್ಕೂಲಿನಲ್ಲಿ ಎಚ್. ಎಸ್. ತಿಪ್ಪಯ್ಯನವರೆಂಬ ಒಬ್ಬ ಮಾಸ್ತರು ತಾ. 29-12-1913 ರಲ್ಲಿ ಅ|| ಮಾಸ್ತರಾಗಿ ಬಂದು ಇದೇ ಸ್ಕೂಲಿನಲ್ಲಿ ಖಾಯಂ ಅ|| ಮಾಸ್ತರಾಗಿದ್ದು ನಂತರ ಆಕ್ಟಿಂಗ್ ಹೆಡ್ ಮಾಸ್ತರಾಗಿ 1½ ವರ್ಷಗಳ ವರೆಗೂ ಕೆಲಸ ಮಾಡುತ್ತಾ, ಸ್ಕೂಲನ್ನು ಬಹಳ ಅಭಿವೃದ್ಧಿಸ್ಥಿತಿಗೆ ತಂದು ಸರ್ಕಾರದವರ ವಿಶ್ವಾಸಕ್ಕೂ, ಗ್ರಾಮಸ್ಥರ ಮತ್ತು ಬಾಲಕರುಗಳ ಪ್ರೀತಿಗೂ ಪಾತ್ರರಾಗಿ ಸ್ಕೂಲ್ ಮತ್ತು ಬಾಲಕರಲ್ಲಿದ್ದ ನ್ಯೂನತೆಗಳನ್ನು ಹೋಗಲಾಡಿಸಿ 5-6 ಬಾಲಕರನ್ನು ಲೋ. ಸೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿಸಿ, ಸದರಿ ಬಾಲಕರಿಗೆ ಸರ್ಕಾರಿ ಉದ್ಯೋಗಗಳ ಮೂಲಕ ಅವರ ಜೀವನಕ್ಕೆ ಅನುಕೂಲಪಡಿಸಿರುತ್ತಾರಲ್ಲದೆ, ಈ ವರ್ಷವೂ 6 ಜನ ಬಾಲಕರನ್ನು ಪರೀಕ್ಷೆಗೆ ಕಳುಹಿಸಿರುತ್ತಾರೆ. ಇವರು ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗಿ ಸ್ಕೂಲಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಳ್ಳುತ್ತಿದ್ದರು. ಈ ರೀತಿ ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ಅನಾರ್ಥಚಿಂತೆಯಿಂದಲೂ ಕೆಲಸ ಮಾಡುತ್ತಾ ಉತ್ತರೋತ್ತರವಾ ಕೊಡ ಸ್ಕೂಲನ್ನು ಅಭಿವೃದ್ಧಿಗೆ ತರುತ್ತಿದ್ದ ಈ ಮಾಸ್ತರನ್ನು ನಮ್ಮ ಸರ್ಕಾರದವರು 2 ರೂ. ಪ್ರಮೋಷನ್ ಕೊಟ್ಟು ಹೊಳಲ್ಕೆರೆ ತಾಲ್ಲೋಕು ರಾಮಪುರದ ಒಂದು ಸ್ಕೂಲ್ ಹೆಡ್ ಮಾಸ್ಟರ್ ಕೆಲಸಕ್ಕೆ ವರ್ಗಾಯಿಸಿದ ವರ್ತಮಾನವನ್ನು ಕೇಳಿ ಗ್ರಾಮದವರೂ, ಸ್ಕೂಲ್ ಮೆಂಬರುಗಳೂ ಮತ್ತು ಪ್ರತ್ಯೇಕವಾಗಿ ಬಾಲಕರುಗಳೂ ಸಹ ಇವರನ್ನು ಬೇರೆ ಕಡೆಗೆ ವರ್ಗಾಯಿಸದೆ ಆರ್ಡರನ್ನು ರದ್ದು ಮಾಡಬೇಕೆಂದು ಹಲವು ವಿಧವಾಗಿ ಇನ್‌ಸ್ಪೆಕ್ಟರುಗಳಿಗಲ್ಲಾ ಅರ್ಜಿಗಳನ್ನು ಹಾಕಿಕೊಂಡಾಗ್ಯೂ, ಇದುವರೆಗೂ ಯಾವ ಅಪ್ಪಣೆಯೂ ಆಗಲಿಲ್ಲ. ಸರ್ಕಾರದ ಅಪ್ಪಣೆಯಂತೆ ನಡೆಯುವುದರಲ್ಲಿ ಬದ್ಧಕಂಕಣರಾದ ತಿಪ್ಪಯ್ಯನವರು ಸ್ಕೂಲ್ ಛಾರ್ಜನ್ನು ಕೊಟ್ಟು ವರ್ಗವಾದ ಸ್ಥಳಕ್ಕೆ ಹೊರಡಲು ಸಿದ್ಧರಾಗಲು, ಕೆಲವು ವರ್ತಕ ಮಹನೀಯರು 4-5 ದಿವಸಗಳ ವರೆಗೂ ಪ್ರತಿ ದಿನವೂ ಒಬ್ಬೊಬ್ಬರು ಎಂಟರ್‌ಟೈನ್‌ಮೆಂಟ್ ಕೊಟ್ಟಿದ್ದಲ್ಲದೆ ತಾ. 26 ನೇ ಶನಿವಾರ ಇವರ ಕಾಲದಲ್ಲೇ ಏರ್ಪಾಡಾದ ಸದ್ಬೋಧ ಬಾಲ ಸಭೆ ಎಂಬ ಮಾಮೂಲ್ ಮೀಟಿಂಗಿನಲ್ಲಿ ಗ್ರಾಮಸ್ಥರೊಡನೆ ಬಾಲಕರು ಸೇರಿ ಸದರಿ ಹೆಡ್ ಮಾಸ್ಟರ್ ತಿಪ್ಪಯ್ಯನವರಿಗೆ ಒಂದು ಅಡ್ರೆಸ್ಸನ್ನು ಕೊಟ್ಟರು. ಸದರಿ ಸಭೆಗೆ ಅಧ್ಯಕ್ಷರಾಗಿದ್ದ ಸ್ಟೇಷನ್ ಮಾಸ್ಟರ್ ಮ|| ರಘುನಾಥಗೋವಿಂದ್ ಪಿಳ್ಳೆರವರೂ, ಹಿಂದೆ ಸ್ಕೂಲ್ ಮಾಸ್ತರಾಗಿದ್ದ ದಾಸಪ್ಪನವರೂ, ಮಹದೇವಪ್ಪನವರೂ, ಆ ದಿನ ಬಂದಿದ್ದ ಬೆಂಗಳೂರಿನ ಒಬ್ಬ ವರ್ತಕರೂ ಸಹ ತಿಪ್ಪಯ್ಯನವರ ಗುಣಕಥನವನ್ನು ಮಾಡಿದ ತರುವಾಯ ಗಂಧ ತಾಂಬೂಲವೂ ಕೆಲವು ಬಹುಮಾನದ ಉಡುಪುಗಳನ್ನೂ ಕೊಡಲ್ಪಟ್ಟವು. ಸರ್ವರಿಗೂ ಸಕ್ಕರೆ ತಾಂಬೂಲ ಹಂಚಲ್ಪಟ್ಟಿತು. ನಂತರ ಪ್ಯಾಸಾಗಿದ್ದ 4 ಜನ ಬಾಲಕರಿಗೆ ಸರ್ಟಿಫಿಕೇಟುಗಳು ಸಭಾಧ್ಯಕ್ಷರ ಕೈಯಿಂದ ಕೊಡಲ್ಪಟ್ಟವು. ಆ ಮೇಲೆ ವರ್ಗವಾಗಿ ಹೋಗುವ ಮ|| ತಿಪ್ಪಯ್ಯನವರ ಶ್ರೇಯೋಭಿವೃದ್ಧಿಯನ್ನು ಕೋರಿ ಮಂಗಳವಾದ ತರುವಾಯ ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು. ಮ|| ತಿಪ್ಪಯ್ಯನವರು ಹೊರಟುಹೋದ ದಿನ ನೂರಾರು ಜನ ಗ್ರಾಮಸ್ಥರೂ ಸ್ಕೂಲ್ ಬಾಲಕರೂ ಒಂದು ಮೈಲಿಯ ವರಿಗೂ ಹೋಗಿ ಅವರ ಅಗಲುವಿಕೆಯಿಂದ ಉಂಟಾದ ದುಃಖವನ್ನು ದಾರಿಯಲ್ಲಿ ಸೂಚಿಸಿಕೊಂಡು ಬಂದದ್ದನ್ನು ನಾನು ಕಣ್ಣಾರ ಕಂಡೆನು. ಗ್ರಾಮಾಂತರದಲ್ಲಿ ಪ್ರಕಾರವಿಲ್ಲದೆ ಗ್ರಾಮಸ್ಥರ ಮತ್ತು ಬಾಲಕರ ಪ್ರೀತಿಗೆ ಪಾತ್ರರಾಗಿ ಸ್ಕೂಲನ್ನು ಅಭಿವೃದ್ಧಿಸ್ಥಿತಿಗೆ ತರತಕ್ಕ ಮಾಸ್ತರೇ ಅಪೂರ್ವ. ಇಂಥಾದ್ದರಲ್ಲಿ ಈ ರೀತಿ ಪದೇ ಪದೇ ವರ್ಗಾಯಿಸಿ ಉತ್ಸಾಹ ಭಂಗ ಮಾಡುವುದರಿಂದ ಸ್ಕೂಲುಗಳ ಅಭಿವೃದ್ಧಿಗೆ ಕುಂದಕವೆಂಬುದನ್ನು ನಮ್ಮ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರು ಚಿತ್ತಕ್ಕೆ ಇನ್ನು ಮೇಲಾದರೂ ತಂದಾರೆಂದು ಕೋರುತ್ತೇನೆ

ಓರ್ವ ಪ್ರತ್ಯಕ್ಷದರ್ಶಿ

ರಾಜಧಾನಿಯ ಟ್ರಸ್ಟ್ ಬೋರ್ಡ್ ಮೀಟಿಂಗು.

ಮೈಸೂರು ನಗರಾಭಿವೃದ್ಧಿಯ ಬೋರ್ಡಿನ ಮೆಂಬರುಗಳು ಹಿಂದಿನ ಸೋಮವಾರ ಬೆಳಿಗ್ಗೆ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಸಿದರು. ಚೇರ್‌ಮನ್ ಮ|| ಡಿ. ಜಿ. ಲಕ್ಷ್ಮೀನಾರಾಯಣ, ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಮ|| ಎಂ ಶ್ರೀನಿವಾಸರಾಯರು, ರಾವ್ ಬಹದ್ದೂರ್ ಮ|| ಎಂ. ಸಿ. ರಂಗಯ್ಯಂಗಾರ್ರು, ವೈಸ್ ಪ್ರೆಸಿಡೆಂಟ್ ಮ|| ಜಿ. ನಾರಾಯಣರಾಯರು, ಮಿ. ಮಹಮುದ್ ಜಾಫರ್ ಸಾಹೇಬರು, ಹೆಲ್ತ್ ಆಫೀಸರ್ ಮ|| ಎ ಕೆ ಪಾಣಿಯವರು ಹಾಜರಾಗಿದ್ದರು. ಮೀಟಿಂಗಿನಲ್ಲಿ ಚರ್ಚೆಯಿಂದ ತೀರ್ಮಾನವಾಪಟ್ಟ ಮುಖ್ಯ ವಿಷಯಗಳೇನೆಂದರೆ—

ಸಯ್ಯಾಜಿರಾವ್ ರಸ್ತೆಯಿಂದ ರೈಲ್ವೆ ಸ್ಟೇಷನ್ನಿಗೆ ತಿರುಗುವ ಮೂಲೆಯಲ್ಲಿರುವ ಜನಾನಾ ಮಿಷನ್ ಸ್ಕೂಲಿಗೆ ಸ್ಥಳ ಸಾಲದೆಂದೂ, ಪಕ್ಕದಲ್ಲಿರುವ ಕೈಲ್ಹಾಲಿ ನಿವೇಶನವನ್ನು ಕೊಡಿಸಬೇಕೆಂದೂ ಸ್ಕೂಲಿನವರು ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಆ ಪ್ರದೇಶವನ್ನು ಖುದ್ದಾಗಿ ನೋಡಿಕೊಂಡು ಬಂದು, ಆ ಸ್ಕೂಲಿಗೆ ಸ್ಥಳ ಬೇಕಾದದ್ದು ಅವಶ್ಯವೆಂದು ಅಭಿಪ್ರಾಯಪಟ್ಟದ್ದರಿಂದ ಮೇಲೆ 60 × 100 ಅಡಿ ಹೊಸ ನಿವೇಶನವನ್ನು ಮುಫತ್ತಾಗಿ ಕೊಡುವಂತೆ ತೀರ್ಮಾನವಾಯಿತು. ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಅಂದವಾದ ಕಟ್ಟಡ ಕಟ್ಟಬೇಕೆಂದೂ, ಎರಡು ತಿಂಗಳೊಳಗೆ ಪ್ಲಾನ್ ಕೊಟ್ಟು ಲೈಸೆನ್ಸ್ ಪಡೆದು ಕಟ್ಟಡವನ್ನು ಒಂದು ವರುಷದಲ್ಲಿ ಪೂರೈಸಬೇಕೆಂದೂ ಷರತ್ತು ಬರಸಿಕೊಳ್ಳುವಂತೆ ಇತ್ಯರ್ಥವಾಗಿದೆ— ಮಂಡಿ ಮತ್ತು ಲಷ್ಕರ್ ಮೊಹಲ್ಲೆಗಳಲ್ಲಿ ಮನೆಗಳನ್ನು ಕಳೆದುಕೊಂಡಿರುವಂಥಾ ಕೆಲವು ಬ್ರಾಹ್ಮಣರಿಗೆ ಪೂರ್ಣಯ್ಯನವರ ನಾಲಾ ಪಕ್ಕದಲ್ಲಿ ಮ|| ಹಂಫಾಕುಸೆನ್ ಸಾಹೇಬರ ಬಂಗಲೆ ಹಿಂದೆ ಇರುವ ನಿವೇಶನವನ್ನು ಹರಾಜು ಹಾಕದೆ ಖರೀದಿ ನಿಷ್ಕರ್ಷೆಮಾಡಿ ಕ್ರಯಮಾಡಬೇಕೆಂದು ಮೆಂಬರುಗಳು ಒಪ್ಪಿಕೊಂಡರು. ಆದರೆ ಆ ಸ್ಥಳದಲ್ಲಿ ವಾಸದ ಮನೆ ಕಟ್ಟುವುದು ಆರೋಗ್ಯಕರವಲ್ಲವಾದ ಕಾರಣ ಅಲ್ಲಿ ಮನೆ ಕಟ್ಟಕೂಡದೆಂದು ಹೆಲ್ತ್ ಆಫೀಸರವರು ಹೇಳಿ ತಮ್ಮ ಅಭಿಪ್ರಾಯವನ್ನು ರಿಕಾರ್ಡು ಮಾಡಿಸಿದರು.—ಕುರುಸಗೆರೆಯಲ್ಲಿ ಹೆಲ್ತ್ ಕ್ಯಾಂಪ್ ಮನೆಗಳನ್ನು ವಿಲಕ್ಷಣವಾಗಿ ಕಟ್ಟುವುದರಿಂದ ತಮ್ಮ ಬಂಗಲೆಗೆ ನಷ್ಟವೆಂದೂ, ತಮ್ಮ ಬಂಗಲೆ ಎದುರು ಪಾರ್ಶ್ವದಲ್ಲಾದರೂ ಹೆಂಚಿನ ಮನೆ ಕಟ್ಟಬೇಕೆಂದೂ ಮಿಸ್ ಮೂರ್‌ಯವರು ಬರೆದುಕೊಂಡಿದ್ದರು. ಮೆಂಬರುಗಳು ಈ ವಿಷಯವನ್ನು ಚರ್ಚೆಮಾಡಿ, ಮಿಸ್ ಮೂರ್‌ಯವರು ಅಪೇಕ್ಷಿಸಿರುವಂತೆ ಅವರ ಬಂಗಲೆಯ ಎದುರು ಭಾಗದಲ್ಲಿ ಮಾತ್ರ ಕೆಲವು ಕ್ಯಾಂಪುಗಳಿಗೆ ಹೆಂಚುಗಳನ್ನು ಹಾಕಿ ಕಟ್ಟಬಹುದೆಂದು ಒಪ್ಪಿಕೊಂಡರು.

ಲಷ್ಕರ್ ಮೊಹಲ್ಲಾ ವೆಲ್ಲಿಂಗ್‌ಟನ್, ಲಾಡ್ಜ್ ಬಂಗಲೆ ಕಾಂಪೌಂಡಿನಲ್ಲಿ ವಿಸ್ತಾರವಾದ ಖಾಲಿ ನಿವೇಶನ ಇರುವುದರಿಂದ ಆ ಪೈಕಿ ಪೂರ್ವ ಮತ್ತು ಉತ್ತರ ಪಾರ್ಶ್ವದ ಕೆಲವು ಭಾಗವನ್ನು ಟ್ರಸ್ಟ್ ಬೋರ್ಡಿಗೆ ತೆಗೆದುಕೊಂಡು ಕೋಟೆಯನ್ನು ಮುಚ್ಚಿ ಕೆಲವು ಬಂಗಲೆಗಳನ್ನು ಕಟ್ಟಿಕೊಳ್ಳುವವರಿಗೆ ಖರೀದಿಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಲಷ್ಕರ್ ಮೊಹಲ್ಲಾದಲ್ಲಿರುವ ಹಾಜಿ ಸಯ್ಯದ್ ಮೈನುದ್ದೀನ್ ಖಾದ್ರಿಯವರಿಗೆ ಅವರ ಮನೆ ಕಾಮಗಾರಿ ಪೂರೈಸುವುದಕ್ಕೆ 500 ರೂಪಾಯಿ ಸಾಲ ಕೊಡಬಹುದೆಂದು ಒಪ್ಪಲಾಯಿತು.—ಕುರುಸಗೆರೆ ಬಾಡಿಗಾರ್ಡ್ ಲೈನ್ ಎದುರಿಗೆ ಟ್ರಸ್ಟ್ ಬೋರ್ಡಿನಿಂದ ಕಟ್ಟಿಸುವ ಮಾದ್ರಿ ಮನೆಯನ್ನು

...ಂದಿಗೆ ಬಾಡಿಗೆ ಮನೆಯವನಿಗೇ ಬಿಡಲಿಕ್ಕಾಗಬೇಕೆಂದೂ, ಖಿಂಡಿ ...ವನ್ನು ಆಕಾರದ ರೂಲ್ಸು ಪ್ರಕಾರ ಕೆಲವು ಮಾರ್ಪಾಟು ಮಾಡಬಹುದು ...ವರ್ತನವಾಯಿತು.—ಪಟ್ಟಣದ ಮುಖ್ಯ ರಸ್ತೆಗಳ ಉದ್ದಕ್ಕೂ ಗಿಡ ...ಹಾಕಿ ಅವುಗಳ ಸಂರಕ್ಷಣೆಗಾಗಿ ಕಬ್ಬಿಣದ ಪಟ್ಟಿಗಳಿಂದ ಕಟಕಟೆಗಳನ್ನು ...ದಾರೆ ಇಂಥಾ ಕಟಕಟೆಗಳಿಗೆ ಮೊದಲು 6 ರೂಪಾಯಿನಂತೆ ಕಂಟ್ರಾಕ್ಟು ...ಗಿತ್ತು. ಕಬ್ಬಿಣದ ಪಟ್ಟಿಗಳ ಬೆಲೆ ಈಗ ಹೆಚ್ಚಿದ್ದರಿಂದ ಕಟಕಟೆ 1 ಕ್ಕೆ ...ರೂಪಾಯಿನಂತೆ ಕೊಟ್ಟು ಮಾಡಿಸಬಹುದೆಂದು ಮೆಂಬರುಗಳು ಸಮ್ಮತಿ ...ದರು.—ದೇವರಾಜ ಮಾರ್ಕೆಟ್ಟಿನ ಚೌಕದಲ್ಲಿ ಕೆಲವು ಅಂಗಡಿ ಮನೆಗಳನ್ನು ...ಕಟ್ಟಿಸಬೇಕೆಂದು ಇಸ್ತಿಹಾರು ಹಾಕಿದ್ದುಯಾಕಂದರೂ, ಕೆಲವು ಮಾಲೀಕ ...ರ ಜವಾಬುಗಳು ಬಂದಿವೆ ಎಂದೂ ಚೇರ್ಮನ್‌ರವರು ಸೂಚಿಸಿದರು. ...ಗಳು ಸರ್ಕಾರದ ಸ್ಯಾಂಕ್ಷನ್ ಬಗ್ಗೆ ಕಳುಹಿಸಬೇಕೆಂದು ಇತ್ಯರ್ಥವಾಯಿತು. ...—ಟಾಮರಾಜ ರೋಡಿನಲ್ಲಿ ಮಸೀತಿಯ ಹಿಂದೆ ಉದ್ದಕ್ಕೂ ಕನ್ಸರ್ವೆನ್ಸಿಗಾಗಿ ಕೆಲವು ನಿವೇಶನಗಳನ್ನು ಕೊಂಡುಕೊಳ್ಳಬಹುದೆಂದೂ, ಚಿಟ್ಟೆ ...ಟಾಗೆಯಲ್ಲಿರುವ ಟ್ರಸ್ಟ್ ಬೋರ್ಡಿನ ಹೆಲ್ತ್ ಕ್ಯಾಂಪ್ ಮನೆಗಳನ್ನು ...ಮೂಹರೆ ಹಾಗೇ ಇಟ್ಟಿದ್ದು, ಮುಂದೆ ಅವಶ್ಯವಾದಾಗ ಸುತ್ತಲೂ ಅವರಣದ ...ಹಾಕಬಹುದೆಂದೂ ಒಪ್ಪಲಾಯಿತು. ಹೊಸ ಮನೆ ಕಟ್ಟುವವರಿಗೆ ಸಾಲ ...ವ ಬಗ್ಗೆ ಸರ್ಕಾರದವರು 20,000 ರೂಪಾಯಿ ಸ್ಯಾಂಕ್ಷನ್ ಮಾಡಿದಾ ...ಮ ಕೇಳಲಾಯಿತು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಡಿಗಾರರಾಗುವುದಿಲ್ಲ ...ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು. ...ಯಾವ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ...ಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ...ಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು. ...ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮ ...ವಾರಕ್ಕಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧ ...ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವ ...ರು ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ...ಹೇಳುತ್ತೇವೆ

ಕರೆಸ್ಪಾಂಡೆನ್ಸ್.

ಸರ್ಕಾರಿ ನೌಕರರು ಕಳೆದ ರಿಕಾರ್ಡಿಗೆ ಜವಾಬ್ದಾರರು ಯಾರು?

ಅಯ್ಯಾ, ಕೆಲವು ತಿಂಗಳಿಗೆ ಮುಂಚೆ ತಮ್ಮ ಪತ್ರಿಕೆಯಲ್ಲಿ ಶ್ರೀರಂಗಪಟ್ಟಣ ಸಬ್ ರಿಜಿಸ್ಟ್ರಾರರ ಆಫೀಸಿನಲ್ಲಿ ರಿಜಿಸ್ಟರು ಬಗ್ಗೆ ಕೊಟ್ಟಿದ್ದ 16 ...ಗಳು ಸ್ಟೇಟ್‌ವಿಟಿ ಆಯಿತೆಂಬ ಉಲ್ಲೇಖವಾಗಿತ್ತು. ಈ ಪತ್ರಗಳು ಹ್ಯಾಗೆ ಗೈರ್ ...ಜರಾಯಿತು? ಈ ಪತ್ರಗಳಿಗಾಗಿ ಯಾರು ಜವಾಬ್ದಾರರು? ಸಬ್ ರಿಜಿಸ್ಟ್ರಾರರೇ? ಅಥವಾ ಸರ್ಕಾರದವರೇ ಜವಾಬ್ದಾರರೆ? ಇವರ ಬಾಬ್ತು ನಷ್ಟವನ್ನು ...ದ ವಕೀಲ್ ಮಾಡಿಕೊಳ್ಳಬೇಕು? ಈ ಸಂಗತಿಗಳನ್ನು ಕುರಿತು ಪಕ್ಷ ...ಕಾರರಾಗಿರುವವರು ಅನೇಕರು ವ್ಯಸನಪಡುತ್ತಿದಾರೆ. ಈ ವಿಚಾರದಲ್ಲಿ ...ರ್ಕಾರಕ್ಕೆ ಅರಿಕೆ ಮಾಡಿದ್ದರೂ, ಅನೇಕ ತಿಂಗಳುಗಳು ಕಳೆದರೂ ವ್ಯವಸ್ಥೆ ...ಯಾಗಲಿಲ್ಲ. ನಮ್ಮ ಸರ್ಕಾರದವರು ಇಂಥಾ ಸಂಗತಿಗಳಿಗೆ ಕೂಡಲೆ ಸಂಪೂರ್ಣ ...ನ ಕೊಟ್ಟು ಜನರಿಗೆ ಅನುಕೂಲ ಕಲ್ಪಿಸಿ ಕೊಡಬೇಕಾಗಿರುತ್ತೆ. ರಿಕಾರ್ಡು ...ಗಳಿಗೆ ನಕಲ್ ಸೈಸಲು ಆಗದೇ ಇರುವದಕ್ಕೆ ಅಡಚಣೆಯೂ, ಕಾರಣವೂ ...ಸಬಹುದು ತಿಳಿಯುವದೇ ಕಷ್ಟವಾಗಿರುತ್ತೆ. ಜವಾಬ್ದಾರಿಯಲ್ಲಿ ಮೈ ತಪ್ಪಿಸಿ ...ದು ತಿರುಗು ಇರುವ ನೌಕರರನ್ನು ಸರಿಯಾಗಿ ಶಿಕ್ಷಿಸದೆ ಅವರುಗಳಿಗೆ ...ಪ್ರೋತ್ಸಾಹ ಕೊಟ್ಟು ಆಶ್ರಯ ಕೊಡುತ್ತಿದ್ದರೆ ಮೇಲಿನ ಅಧಿಕಾರಿಗಳು ...ಈ ಅಕ್ರಮಗಳನ್ನು ತಪ್ಪಿಸಲು ಎಂದಿಗೂ ಆಗುವದಿಲ್ಲ. ಇದಕ್ಕೆ ಮೇಲಿನ ...ಕಾರಿಗಳು ಗಮನ ಕೊಟ್ಟು ನ್ಯಾಯವಾಗಿ ಬೇಗನೇ ಸೈಸಲು ಮಾಡಬೇಕಾ ...ದ್ದು.

ಹಿತೈಷಿ.

ಕಳ್ಳರೂ, ಪತ್ತೆ ಆದ ಮಾಲುಗಳೂ.

ಅಯ್ಯಾ,—ತಮ್ಮ ಮಾರ್ಚಿ ಮಾಹೆ 2 ನೇ ತಾ. ಪತ್ರಿಕೆಯಲ್ಲಿ ರಾಜಧಾನಿ ಪೋಲೀಸಿನವರು ಸುಮಾರು 15 ಕಳ್ಳ ಕೊರಮರನ್ನು ಹಿಡಿದು ಅವರಿಂದ ...ಮಾರು 2 ಗಾಡಿಯಷ್ಟು ಸಾಮಾನನ್ನು ಪತ್ತೆ ಮಾಡಿ ವಿಚಾರಣೆ ಮಾಡುತ್ತಿದ್ದಾ ...ನು ನಗ್ಗಿರೆ ನಮೂದಿಸಿರುತ್ತೆ. ಇದೇ ಗ್ಯಾಂಗಿನವರು ಸುಮಾರು 6 ತಿಂಗಳ ...ಹಿಂದೆ ಮೈಸೂರು ಸಿಟಿಗೆ ಪಕ್ಕದಲ್ಲೇ ಇದ್ದು ಇವರ ವಿಷಯವಾಗಿ ಯಾವ ...ಶೋಧನೆಯೇ ಆಗಲಿ ಅಥವಾ ಯಾವದೊಂದು ಮಾಲನ್ನೇ ಆಗಲೀ ಪತ್ತೆ ...ಮಾಡದೆ ಹೋದರು. ಅವರು ನಂತರ ಅಲ್ಲಿಂದ ಹೊರಟು ಶ್ರೀರಂಗಪಟ್ಟಣಕ್ಕೆ ಬಂದು ಇದ್ದರು. ಇವರು ಅಲ್ಲಿ ನಡೆಸಿದ ಒಂದು ಕೇಸಿನಲ್ಲಿ ಇಲ್ಲೀ ...ಯಬಹುದೆಂದು ನಮ್ಮ ಇನ್ಸ್‌ಪೆಕ್ಟರ್ ಮ॥ ಕೃಷ್ಣರಾಯರು ಪತ್ತೆ ತರ ...ನು ನಡೆಸಿ ಜಯಶೀಲರಾಗಿ ಅನೇಕ ಕೇಸುಗಳಿಗೆ ಸಂಬಂಧಪಟ್ಟ ಮಾಲುಗ ...ಳನ್ನು ಪತ್ತೆ ಅಪರಾಧಿಗಳನ್ನು ಹೊರಬೀಳಿಸಿದರು. ಇದರ ಮೇಲೆ ಬೇರೆ ...ಇನ್ಸ್‌ಪೆಕ್ಟರ್ ಕೊಟ್ಟಿದ್ದರಲ್ಲಿ ಪೇಶ್ಕಾರು ರಾಜಧಾನಿಯ ಪೋಲೀಸಿನ ...ವರು ಇವರನ್ನು ಹಿಡಿದವರು ಶ್ರೀರಂಗಪಟ್ಟಣದ ಪೋಲೀಸ್ ಇನ್ಸ್‌ಪೆಕ್ಟರ್ ಇವರಿಂದ ಮಾಡಿಕವಾಗಿಯೂ ಹಿಡಿಯಲಾಗಲಿಲ್ಲ. ಇದಲ್ಲದೆ ಇನ್ನು ...ನೇಕ ಕೇಸುಗಳಲ್ಲಿ ಇವರು ಮಾಡಿದ ಮೋಸಕ್ಕಾಗಿ ಇವರನ್ನು ಎಷ್ಟು ...ಮಾಡಿದರೂ ಸಾಲದಾಗಿದೆ. ಇವರು ಇಲ್ಲಿಗೆ ಬಂದ ನಂತರ ಅನೇಕ ಕೇಸು ...ಅವರ ಬೇರೆ ಕಡೆಗಳಲ್ಲಿ ನಡಿಸಿ ಆ ಪರಿಪಡಿನ ಪೋಲೀಸಿನವರಿಂದ ಹಿಡಿ ...ಯಾಗದೆ ಇದ್ದ ಅಪರಾಧಿಗಳನ್ನು ಹಿಡಿದು ದಂಡನೆಗೆ ಗುರಿಪಡಿಸುತ್ತಾರೆ. ...ವಾದ ಮೋಸವಲ್ಲದೆ ಇವರ ತಾಲೋಕ್‌ದಾರರುಗಳು ಮಾಡಿದ ಮೋಸಕ್ಕೆ ...ಅನೇಕ ನೇಳೆ ಇನಾಂ ಬಗ್ಗೂ ಮತ್ತು ಒಳ್ಳೇ ನಾರ್ಡ್ಗಳ ಬಗ್ಗೂ ಕಿಫಾ ...ರಸು ಮಾಡುತ್ತಿದಾರೆಯೇ. ಬೇರಿಯು ತಾವು ಮಾಡಿದ ಮೋಸವನ್ನು ಹೊರಪಡಿಸದ ...ಗುಣವನ್ನು ಎಷ್ಟು ತಾನೆ ವರ್ಣಿಸಬಹುದು. ಇವರನ್ನು ಸರ್ಕಾರದವರು ...ಅನೇಕ ಲಾಭ ಇಲ್ಲಿಯೇ ಇಡಬೇಕೆಂದು ಬೇಡುವ

ಶ್ರೀರಂಗಪಟ್ಟಣ ಹಿತಚಿಂತಕ.

ತೀರ್ಥಹಳ್ಳಿ ಎ. ವಿ ಸ್ಕೂಲ್ ವಿದ್ಯಾರ್ಥಿಗಳು ಒಂದು ಸಣ್ಣ ರೀಡಿಂಗ್ ...ಮನ್ನು ಸ್ಥಾಪಿಸಿ ನಡಿಸುತ್ತಿರುವರೆಂದು ಒಂದು ಬಾತ್ಮಿ ಬರೆದು ಬಂದಿದೆ

ಬಿ. ಡಿ. ಎ., ಚಿತ್ರದುರ್ಗ.—ಈ ಬಾತ್ಮಿಯನ್ನು ಪ್ರಕಟಿಸಲಾರೆವು.

ಸಿ. ಎ. ಡಿ., ತುರುವೇಕೆರೆ ತಾ॥ ಅಣ॥ ಕೆಪಕನಕೆರೆ ಗ್ರಾಮ.—ವಿದ್ಯಾ ...ಡಿಗೆ ಬರೆದುಕೊಳ್ಳುವುದು ಉತ್ತಮ.

ಹರೀಕೃಷ್ಣನಲಿಂಗ, ಅನೆಗದ್ದೆ, ಅರನಾಗುವಾಗಡೆ, ನಗರ ತಾಲ್ಲೂಕು.—...ರು ಕೆಲಸದ ರಿಗಟಗೆ, ಪೋಲೀಸ್ ಸುಪರಿಂಟೆಂಡೆಂಟರಿಗೂ ಬರೆದು ರುಜು ...ಕೊಟ್ಟರೆ ಅವರು ತನಿಖೆಯಿಂದ ಕ್ರಮಪಡಿಸುತ್ತಾರೆ

...ರು ಟಿರ್ವ ಊರಿನ ಪೇಟೆಯಲ್ಲಿ ಬೆಳದ ಮಣ್ಣನ್ನು ಎತ್ತಿ ರಸ್ತೆಗೆ ಹಾಕಿ ...ದ ಗಾಡಿ ಮತ್ತು ಜನರ ಸಂಚಾರಕ್ಕೆ ಬಾಧಕವಾಗಿ ಜನಗಳೂ, ಬೀದಿ ...ಯಲ್ಲಿರುವವರೂ ಅನಾರೋಗ್ಯಕ್ಕೆ ಕಾರಣವಾಗಿದೆ ಎಂದು ಮುಂತಾಗಿ ...ಬಾತ್ಮಿದಾರರು ಬರೆದಿದಾರೆ.

—ಎಡಿ]

ತಾಲ್ಲೋಕು ವರ್ತಮಾನಗಳು.

ಅರಸೀಕೆರೆ ತಾಲ್ಲೂಕು ಅರಸೀಕೆರೆ.—ಈ ತಾಲ್ಲೂಕಿಗೆ ಅಮಲ್ದಾರ್ ಮ॥ ಎ. ಜಿ. ದಾಸ್ ಸಾಹೇಬರು ದಯಮಾಡಿಸಿ ಸುಮಾರು 8 ತಿಂಗಳಾಯಿತು. ಇವರು ಗ್ರಾಮಾಭಿವೃದ್ಧಿ ವಿಷಯದಲ್ಲಿ ತುಂಬಾ ಮುತುವರ್ಜಿ ವಹಿಸಿ ಕೆಲಸ ನಡಿಸುತ್ತಿದಾರೆ. ಈ ತಾಲ್ಲೂಕಿನ ಅನೇಕ ಗ್ರಾಮಗಳಿಗೆ ದಯಮಾಡಿಸಿ ನೀರಿಗೆ ಕಷ್ಟವಾಗಿರುವ ಸ್ಥಳಗಳಲ್ಲಿ ಬಾವಿಗಳಿಗೆ ಏರ್ಪಡಿಸಿ ನೀರಿನ ಸೌಕರ್ಯವನ್ನುಂಟುಮಾಡುತ್ತಾ ಇದಾರೆ. ಕಳೆದ ತಿಂಗಳು 27 ನೇ ತಾ. ಈ ಗ್ರಾಮಕ್ಕೆ ದಯಮಾಡಿಸಿದ್ದಾಗ ಅವರು ಅಲ್ಲಿನ ಜನಗಳಿಗೆ ಪರಸ್ಪರ ಸಹಾಯ ಸಂಘದಿಂದುಂಟಾಗುವ ಅನುಕೂಲ್ಯಗಳನ್ನು ತಿಳುವಳಿಕೆ ಕೊಟ್ಟು ಸಂಘ ಒಂದನ್ನು ಸ್ಥಾಪಿಸಿದರು ಆ ದಿವಸವೇ 65 ಷೇರುಗಳ ಮಟ್ಟಿಗೆ ಭರ್ತಿ ಮಾಡಲ್ಪಟ್ಟವು. ಈ ಗ್ರಾಮದ ಶೇಕದಾರ್ ಮ॥ ಕೃಷ್ಣಯ್ಯಂಗಾರ್ರು ಮತ್ತು ಗ್ರಾಮದ ಮುಖ್ಯಸ್ಥರಾದ ಮ॥ ರಾ॥ ವಾಸುದೇವಯ್ಯನವರು, ಮ॥ ರಾ॥ ಸುಬ್ಬರಾಯರು, ಮ॥ ಗಂಗೇಗೌಡರು ಮುಂತಾದವರು ಸಂಘದ ಅಭಿವೃದ್ಧಿ ವಿಷಯದಲ್ಲಿ ತುಂಬಾ ಪ್ರೋತ್ಸಾಹ ಕೊಡುತ್ತಾ ಇರುವುದರಿಂದ ಇನ್ನು ಅನೇಕರು ಷೇರುದಾರರಾಗಲು ಅಪೇಕ್ಷಿಪಡುತ್ತಿದಾರೆ ಇನ್ನು ಸ್ವಲ್ಪ ಕಾಲದಲ್ಲಿಯೇ ಸಂಘವು ಹೆಚ್ಚು ಅಭಿವೃದ್ಧಿಗೆ ಬರುತ್ತೆನ್ನುವುದರಲ್ಲಿ ಸಂಶಯವಿಲ್ಲ. ಅಮಲ್ದಾರ್ರವರು ಪ್ರಾರಂಭಮಾಡಿದ ಈ ಕಾರ್ಯವನ್ನು ಕೋಆಪರೇಟಿವ್ ಸೊಸೈಟಿಯ ಇಲಾಖೆಯವರು ಅಭಿವೃದ್ಧಿಗೆ ತರುವರೆಂದು ನಂಬಿರುತ್ತೇನೆ.

ಯಡತೊರೆ.—ಯಡತೊರೆ ತಾಲ್ಲೂಕು ಮಂಚನಹಳ್ಳಿಯಲ್ಲಿ ತಾ. 3 ನೇ ಶುಕ್ರವಾರ ರಾತ್ರಿ 8 ಘಂಟೆಯಲ್ಲಿ ಭೂಮಿಯು ನಡುಗಿ ಅನೇಕ ಗುಂಡುಗಳನ್ನು ಹೊಡೆದಂತೆ ಮೂರು ಆವರ್ತಿ ಶಬ್ದವಾದದ್ದಲ್ಲದೆ ಮನೆ ಹೆಂಚುಗಳೆಲ್ಲವೂ ಜಲಜಲನೆ ಅಲ್ಲಾಡಿಹೋಯಿತು. ಭೂಮಿಯ ಪೂರ್ವ ಭಾಗದ ಕಡೆಗೆ ಫಿರಂಗಿ ಹೊಡೆದು ಹಾರಿಸಿದಂತೆ ಅಲ್ಲಾಡಿಹೋಯಿತು. ಜನಗಳೆಲ್ಲರೂ ಬಹಳ ಭಯಸ್ಥರಾಗಿ ಮನೆಗಳನ್ನು ಬಿಟ್ಟು ಹೊರಗೆ ಬೈಲಿನಲ್ಲಿ ನಿಂತುಕೊಂಡು ಆಕಾಶವನ್ನೇ ನೋಡುತ್ತಾ ಮನಸ್ಸಿಗೆ ಕಾರಣಗಳನ್ನು ಹೇಳಿಕೊಳ್ಳುತ್ತಿದ್ದರು. ಮತ್ತೆಲ್ಲಾದರೂ ಈ ರೀತಿ ಆಗಿರುತ್ತೆಯೋ ತಿಳಿಯಬೇಕೆಂದು ಜನಗಳು ಅಪೇಕ್ಷೆಪಡುತ್ತಾರೆ.—ಈ ಸಂವತ್ಸರದ ಬೇಸಗೆ ಬಿಸಿಲು ಬಹಳ ಜಾಸ್ತಿಯಾಗಿದೆ. ನಮ್ಮ ಸರ್ಕಾರದವರು ಬೇಕಾದಷ್ಟು ದುಡ್ಡು ಖರ್ಚುಮಾಡಿ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿ ನಮ್ಮಗಳಿಂದ ಅನೇಕ ಜಮೀನ್ ತೆಗೆದುಕೊಂಡಾಗ್ಯೂ ಹಳೇ ನಾಲಾದಲ್ಲಿ ಬೇಸಗೆ ನೀರೂ ಕೊಡಲಿಲ್ಲ ರಿಜರ್ವಾಯರ್‌ನಲ್ಲಿ ಈಗಾಗಲೇ ಬೇಕಾದಷ್ಟು ನೀರು ದಾಸ್ತಾನ್ ಇರುವಂತೆ ಕೇಳುತ್ತೇವೆ ಬೇಸಗೆ ಫಸಲಿಗೆ ನಾಲಾಗಳಲ್ಲಿ ಜೋರಾಗೇ ನೀರು ಕೊಟ್ಟಿದ್ದಲ್ಲಿ ರೈತರಿಗೆ ಬಹಳ ಅನುಕೂಲವಾಗಿರೋ ಟ್ಟಂತೆ ಆಗುತ್ತಿತ್ತು ಕಬ್ಬಿನ ಬೆಳೆ ಮಾಡಿದರೆ ನೀರು ಕೊಡುತ್ತಾರಂತೆ ನೀರು ಕೊಡದೆ ಕಬ್ಬಿನ ಬೆಳೆ ಹ್ಯಾಗೆ ಮಾಡಬಹುದೋ ಗೊತ್ತಾಗುವದಿಲ್ಲ.—ನಮ್ಮ ತಾಲ್ಲೋಕ್ ಅಮಲ್ದಾರರಿಗೆ ಇರಿಗೇಷನ್ ಅಸಿಸ್ಟೆಂಟ್ ಕಮಿಷನರ್ ಕೆಲಸವಾಗುತ್ತೆಂದು ಜನಗಳೆಲ್ಲರೂ ಸಂತೋಷಪಡುತ್ತಿದಾರೆ.

ಶಿವಗಂಗಾ.—ಇಲ್ಲಿಯ ನೆಪರ್ಷನ್ ಜಸ್ಟೀಸರಿಗೆ ಪೆನ್ಷನ್ ಆಯಿತು. ಊರು ಜನಗಳೂ, ನೌಕರರೂ ಸೇರಿ ಹಾರಾ ತುರಾಯಿಗಳಿಂದ ಅವರನ್ನು ಸಂತೋಷಪಡಿಸಿದರು. ಇವರು ಬೆಂಗಳೂರಿಗೆ ಹೊರಟುಹೋದರು. ಇವರ ಬದಲಿಗೆ ಪೂರ್ವದಲ್ಲಿ ಸಬ್ ಜಡ್ಜಿ ರಾಗಿದ್ದ ಮ॥ ನಾಗಪ್ಪನವರು ಬಂದು ಛಾರ್ಜು ವಹಿಸಿದರು.—ಇಲ್ಲಿನ ಅ॥ ಸರ್ಜನ್ ಮ॥ ಕೃಷ್ಣಮೂರ್ತಿರಾಯರಿಗೆ ವರ್ಗವಾದ್ದರಿಂದ ನೆನ್ನೆ ದೊಡ್ಡ ಮನುಷ್ಯರೆಲ್ಲರೂ ಟೌನ್ ಹಾಲಿನಲ್ಲಿ ಸೇರಿ ಅವರನ್ನು ಹಾರಾ ತುರಾಯಿಗಳಿಂದ ಸಂತೋಷಗೊಳಿಸಿದರು. ಇವರು ಜನಗಳಲ್ಲಿ ಬಹಳ ಅನುರಾಗದಿಂದ ಇದ್ದರು.—ಡಿ॥ ಆಫೀಸಿನ ಬಳ ತಕ್ಕಿಗಾರರು ಕೊಡುವ ಬಗ್ಗೆ ಒಂದು ಕಟ್ಟಡ ಕಟ್ಟುತ್ತಾ ಇದಾರೆ. ಪೂರೈಸಿದರೆ ಜನಗಳಿಗೆ ಬಹಳ ಉಪಕಾರವಾದೀತು.—ಹಿರಿಯೂರ ಮಾಗಡಿ ಕಲ್ಲುಹಳ್ಳಿಯ ಹತ್ತಿರ ದಾರಿ ಜಾಘೆ ಬಹಳ ಹಾಗಿದೆ ಸಿರಾ ರಸ್ತೆಯ ಅವರು ಅದನ್ನು ಕೊಂಡರೆ ಜನಗಳಿಗೆ ಬಹಳ ಉಪಕಾರವಾಗುತ್ತದೆ.—ಇದೇ ಊರ ಮುಂದಿನ ಕೆರೆ ಏರಿ ರಿಪೇರಿಯೂ, ಕಟಲಾ ಕ್ಲೀನ್ ಸಹ ಆಗಬೇಕು ಮೇಲ್ಪಟ್ಟ ಆಫೀಸರು ಸಿಗಾ ಕೊಟ್ಟು ಮಾಡಿಸುತ್ತಾರಾಗಿ ನಂಬಿದ್ದೇನೆ.—ಸಕರಲ್ ಇನ್ಸ್‌ಪೆಕ್ಟರ್ ಮ॥ ದಾಸಪ್ಪನವರು ಈ ಊರಿಗೆ ಬಂದಿದ್ದಾರೆ. ನೆನ್ನೆ ಟೌನ್ ಸ್ಕೂಲಿಗೆ ಹೋಗಿದ್ದರು. ಈ ದಿನ ಎ ವಿ. ಸ್ಕೂಲ್, ನಾರ್ಮಲ್ ಸ್ಕೂಲುಗಳಿಗೆ ಹೋಗಿ ತನಿಖೆ ಮಾಡಿಕೊಂಡು ಬಂದರು.—ಪೇಟೆ ಮತ್ತು ದೊಡ್ಡ ಬ್ರಾಹ್ಮಣರ ಕೇರಿಗಳಲ್ಲಿ ಸ್ಥಾಪಿತವಾಗಿರುವ ರೀಡಿಂಗ್ ರೂಮುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸಕ್ರೆಟರಿಗಳು ಸಿಗಾ ಕೊಟ್ಟು ಜನಗಳಿಗೆ ಉಪಕಾರ ಮಾಡದೆ ಇರಲಾರರೆಂದು ನಂಬಿದೇನೆ.

ಮೇಲುಕೋಟೆ.—ಇದೇ ಮಾರ್ಚಿ 15, 16 ನೇ ತಾ. ಗಳಲ್ಲಿ ಮೇಲುಕೋಟೆಯಲ್ಲಿ ಪ್ರೈಬ್ ರಾಜ್ ಸಬ್ ತಾಲ್ಲೂಕು ಪರಸ್ಪರಸಹಾಯ ಸಂಘಗಳ ವಾರ್ಷಿಕ ಮಹಾ ಸಭೆಯೂ, ಕೈಗಾರಿಕೆ ಪ್ರದರ್ಶನವೂ ಮತ್ತು ನೇಯಿಗೆ ಪೋಟೋಪೋಟಿಯೂ ಮೇಲುಕೋಟೆ ನೇಯಿಗೆ ಸೊಸೈಟಿಯವರಿಂದ ನಡಿಸಲ್ಪಡುವವು. ಆ ಕಾಲದಲ್ಲಿ ಮೈಸೂರು ಗೌರ್ನಮೆಂಟ್ ಪರಸ್ಪರಸಹಾಯ ಸಂಘಗಳ ರೆಜಿಸ್ಟ್ರಾರ್ ಸಾಹೇಬರು ದಯಮಾಡಿ ಅಗ್ರಾಸನವನ್ನು ವಹಿಸುವರು, ಸಂಘದ ಧ್ಯೇಯಕ್ಕೆ ಕಾರಣಗಳಾದ ಅನೇಕ ವಿಷಯಗಳು ಚರ್ಚಿಸಲ್ಪಡುವವು. ಸಮಸ್ತರೂ ಇದರ ಫಲವನ್ನು ಹೊಂದಬಹುದಾಗಿದೆ.—ಕಾಲಾನುಗುಣ್ಯವಾಗಿ ನಡತೆಯಲ್ಲಿ ಎಸ್‌, ನಿಸ್ವೆಯಲ್ಲಿಯೂ ಕುಶಲಿಗರು (ನೇಯಿಗೆಯವರು) ವೃದ್ಧಿಗೆ ಬರಲು ತಕ್ಕ ಪ್ರಯತ್ನಗಳನ್ನು ಮಾಡಬೇಕೆಂದು ಮೇಲುಕೋಟೆ, ಹೊಸಹೊಳಲು, ಕಿಕ್ಕೇರಿ, ಹೊಳೇನರಸೀಪುರ, ಬಸವಾಪಟ್ಟಣ ಮುಂತಾದ ಸ್ಥಳಗಳ ಕೆಲವು ಮಹನೀಯರು ಕಳೆದ ವರದಾ ಮಹೋತ್ಸವ ಕಾಲದಲ್ಲಿ ಮೈಸೂರಿನಲ್ಲಿ ಸಭೆ ಸೇರಿ ನಿಷ್ಕಯಿಸಿರುತ್ತಾರೆ ಇದಕ್ಕಾಗಿ ಮಾರ್ಚಿ ತಾ. 15-16-17 ಈ ಮೂರು ದಿವಸಗಳಲ್ಲಿ ಆ ಜನಗಳ ಮೊದಲನೇ ಮಹಾ ಸಭೆಯು ಮೇಲುಕೋಟೆಯಲ್ಲಿ ನಡೆಯುವುದು. ಆ ಕಾಲದಲ್ಲಿ ಸಭೆಯ ಅಗ್ರಾಸನವನ್ನು ಹೊಳಹೊಳಲು ನಾಮ್‌ಕಾರ್ ಮ॥ ವೆಂಕಟಕೃಷ್ಣರವರು ವಹಿಸಲು ದಯವಿಟ್ಟು ಒಪ್ಪಿಕೊಂಡಿರುತ್ತಾರೆ. ಆ ಸಭೆಯಲ್ಲಿ ಚರ್ಚಿಸಲ್ಪಡುವ ವಿಷಯಗಳು—ನೆಯ್ಗೆಯಲ್ಲಿ ಏಕೆಯನ್ನು ಹೆಚ್ಚಿಸುವುದು, ನೆಯಿಗೆ ಕೆಲಸವನ್ನು ನೂತನ ವಿಧಾನದಲ್ಲಿ ವೃದ್ಧಿಗೊಳಿಸುವುದು, ಮುಂದೆ ವ್ಯ ಮೊದಲಾದವುಗಳನ್ನು ಕಡಮೆ ಮಾಡುವುದು, ಮಿತವ್ಯಯವನ್ನು ವೃದ್ಧಿಗೊಳಿಸುವುದು, ಆಚಾರ ವ್ಯವಹಾರ ಮತ್ತು ನೈಮಿತ್ತಿಕ ವಿಚಾರಗಳು, ನೆಯ್ಗೆಯವರ ವ್ಯಾಪಾರಕ್ಕೆ ಉತ್ತೇಜನಕೊಡುವುದು, ನೆಯಿಗೆ ಸೊಸೈಟಿಗಳನ್ನು ವೃದ್ಧಿಗೊಳಿಸುವುದು, ಉಪಸಭೆಗಳನ್ನೂ ಉಪನ್ಯಾಸಕರನ್ನೂ ಏರ್ಪಡಿಸುವುದು. ಮಾಸ ಪತ್ರಿಕೆಯನ್ನು ಪ್ರಕಟಿಸುವುದು, ಮೂಲಧನಕ್ಕೆ ಬೇಕಾದ ಸಹಾಯಗಳು ಮತ್ತು ಇತರ ವಿಷಯಗಳು—ಈ ದೇಶೀಯ ಪಂಚಮಾ ಜನರನ್ನು ಉಭಯ ಶ್ರೇಣಿಯವರನ್ನು ವಿದ್ಯಾಭ್ಯಾಸ, ಕೈಗಾರಿಕೆ ವ್ಯವಸಾಯ, ಮತ್ತು ಪಶುಪಾಲನೆಗಳ ಪೋಷಣೆ, ಈ ವಿಷಯಗಳಲ್ಲಿ ತುಬಿಯತ್ತು ಮಾಡಿ ಅವರಲ್ಲಿ ಭಗವದ್ಭಕ್ತಿಯೂ ಸದ್ವೃತ್ತಿಗಳೂ ನೆಲೆಗೊಳ್ಳುವಂತೆಯೂ, ಮಿತವ್ಯಯವನ್ನೂ ಮುಂಜಾಗರೂಕತೆಯನ್ನೂ ವೃದ್ಧಿಪಡಿಸಿ, ಅವರು ಪ್ರಭುಗಳ ಮತ್ತು ಜನಾಂಗದವರ ವಿಶ್ವಾಸಕ್ಕೆ ಪಾತ್ರರಾಗಿ ಎಲ್ಲ ಪಡೆಯುವಂತೆಯೂ ಸ್ವಸ್ವಯ, ಪರಮಾರ್ಥಗಳ ಮೂಲಕ ವೃದ್ಧಿ ಹೊಂದುವಂತೆ ಆ ಜನಗಳೇ ಸ್ವತಃ ನಿಂತು ತಮ್ಮ ಸಾಮಾಜಿಕ ಕಾರ್ಯಗಳನ್ನು ನಡಿಸಿಕೊಳ್ಳುವ ಭಾವಪತ್ತನ್ನುಂಟುಮಾಡಬೇಕೆಂದೂ ಸಹ ಪ್ರತ್ಯೇಕ ಎಲ್ಲಾ ರಾಜ ರಾಷ್ಟ್ರೀಯರು ಪ್ರವರ್ತಿಸುತ್ತಿದಾರೆ ಹಾಗೆಯೇ ಮೈಸೂರು ಡಿಪ್ರೆಸ್ಡ್ ಕ್ಲಾಸ್ ಎಜ್ಯುಕೇಷನ್ ಮಿಷನ್‌ರವರ ಉದ್ದೇಶ ಸಾಧನಾರ್ಥ ಮೇಲುಕೋಟೆಯಲ್ಲಿ ಈ ಮಾರ್ಚಿ ತಿಂಗಳಲ್ಲಿ ನಡೆಯುವ ವೈರಮುಡಿ ಮಹೋತ್ಸವ ಕಾಲದಲ್ಲಿ ಪಂಚಮರ ಏದನೇ ರಾಷ್ಟ್ರೀಯ ಮಹಾಸಭೆಯೂ, ಮತ್ತು ಇದಕ್ಕೆ ಸಂಬಂಧಪಟ್ಟಂತೆ ಪಂಚಮರ ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆಯ ಮತ್ತು ಜಾನುವಾರುಗಳ ಪ್ರದರ್ಶನವೂ, ನೆಯಿಗೆಯ ಮತ್ತು ಇತರ ಪೋಟಾಪೋಟಿಗಳು ಸಹ ನಡಿಸಲ್ಪಡುವವು. ಇದಕ್ಕೆ ಸಂಬಂಧಪಟ್ಟ ಕಾಲಕ್ರಮಗಳು ಉತ್ಸವಕಾಲದಲ್ಲಿ ಪ್ರಚುರವಾಡಲಾಗುತ್ತೆ. ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಡುವ ವ್ಯವಸಾಯ, ಕೈಗಾರಿಕೆ ಮತ್ತು ವಿದ್ಯಾಭ್ಯಾಸ ಸಂಬಂಧವಾದ ಉತ್ತಮ ವಸ್ತುಗಳಿಗೂ, ಉತ್ಕೃಷ್ಟವಾದ ರಾಸುಗಳಿಗೂ, ಪೋಟಾಪೋಟಿಯಲ್ಲಿ ಉತ್ತೀರ್ಣರಾದವರಿಗೂ ಸಹ ದ್ರವ್ಯರೂಪವಾದ ಬಹುಮಾನಗಳೂ, ಯೋಗ್ಯತಾ ಪತ್ರಿಕೆಗಳೂ ಅನೇಕವಾಗಿ ಕೊಡುವಂತೆ ಏರ್ಪಾಡು ಮಾಡಲ್ಪಟ್ಟಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಮಧುರಾ ನಗರದಲ್ಲಿ ಈ ತಿಂಗಳು ತಾ. 22 ರಿಂದ ಹಿಂದೂಸ್ಥಾನದ ಸನಾತನ ಧರ್ಮ ಮಹಾ ಸಭೆಯು ಪ್ರಾರಂಭವಾಗಿ ನಾಲ್ಕು ದಿನ ನಡೆಯುತ್ತದೆ.

ಪಿಷಾವರ್ ಪಟ್ಟಣದ ಮೈದಾನದಲ್ಲಿ ಸೈನ್ಯದ ಹುದ್ದೇದಾರರು ನೌಷೇರಾದಿಂದ ಎರಡು ವಿಮಾನಗಳಲ್ಲಿ ಕೆಳಕು ಅಂತರಿಕ್ಷದಲ್ಲಿ ಸಂಚಾರ ಮಾಡಿಕೊಂಡು ಬಂದೀದರು. ಸುಮಾರು 10,070 ಪ್ರಜೆಗಳು ನಿಂತು ನೋಡಿ ಆನಂದಪಟ್ಟರು.

ಕೊಚ್ಚಿ ಸಂಸ್ಥಾನದಲ್ಲಿರುವ ಕೆಲವು ಜರ್ಮನ್ ಪ್ರಜೆಗಳನ್ನು ಅವರ ಜನ್ಮಭೂಮಿಗೆ ವಾಪಸು ಕಳುಹಿಸುವಂತೆ ಆ ಸರ್ಕಾರದವರು ತೀರ್ಮಾನಮಾಡಿ, ಅವರು ತಮ್ಮ ಆಸ್ತಿಪಾಸ್ತಿಗಳನ್ನೆಲ್ಲಾ ಇಲ್ಲೇ ಬಿಟ್ಟು ಹೋಗಬೇಕೆಂದು ಹುಕುಂ ಕೊಟ್ಟಿದಾರೆ.

ಪಂಜಾಬ್ ವಿಮಾನ ಯಂತ್ರಗಳ ಚಂದಾ ಫಂಡಿನಿಂದ ಸೆಕ್ರೆಟರಿಗಳು 1,35,0 0 ರೂಪಾಯಿಯನ್ನು ಯುದ್ಧದ ಇಲಾಖೆಗೆ ಕಳುಹಿಸಿದರು. ಇದುವರೆಗೆ ಈ ಫಂಡಿನಿಂದ ಯುದ್ಧದ ಇಲಾಖೆಗೆ 36 ವಿಮಾನ ಯಂತ್ರಗಳು ಒದಗಿಸಲ್ಪಟ್ಟಂತಾಯಿತು.

ಪೂನಾ ಪಟ್ಟಣದಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರು 100 ಮಂದಿ ಸಾಕ್ಷಿಗಳ ಹೇಳಿಕೆಯನ್ನು ಬರೆದುಕೊಂಡು ಹತ್ತು ಮಂದಿ ಅಪರಾಧಿಗಳನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡಿದರು. ಈ ಅಪರಾಧಿಗಳ ಮೇಲೆ ಹತ್ತಾರು ಭಾರಿ ಕಳುವುಗಳ ಅಪರಾಧ ಹೊರಿಸಲ್ಪಟ್ಟಿದೆ.

ಹೊಸ ವೈಸ್‌ರಾಯರಾದ ಲಾರ್ಡ್ ಚೆಮ್ಸ್‌ಫೋರ್ಡ್‌ರವರು ಮೊದಲನೇ ಸಲ ಕಲ್ಕತ್ತೆಗೆ ದಯಮಾಡುವಾಗ್ಗೆ ಆ ಪಟ್ಟಣದ ಪುರಾಧ್ಯಕ್ಷರು ಒಂದು ಅಡ್ರೆಸ್ಸನ್ನು ಒಪ್ಪಿಸಬೇಕೆಂದು ಇತ್ಯರ್ಥ ಮಾಡಿ, ಈ ಅಡ್ರೆಸ್ ಇಡುವ ಪೆಟ್ಟಿಗೆಗಾಗಿ 1 500 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಕಲ್ಕತ್ತಾ ಪಟ್ಟಣದಲ್ಲಿ 1916-17 ನೇ ಸಾಲಿನಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ 117½ ಲಕ್ಷ ರೂಪಾಯಿ ಹುಟ್ಟುವಳಿ ಆಗುವುದೆಂದೂ, ಖರ್ಚು 116 ಲಕ್ಷ ರೂಪಾಯಿ ಆಗಿ ಸಿಲ್ಕು 1½ ಲಕ್ಷ ರೂಪಾಯಿ ಉಳಿಯುವುದೆಂದೂ ಅಂದಾಜು ಪಟ್ಟಿ (ಬಡ್ಜೆಟ್) ತಯಾರಾಗಿದಾರೆ.

ಘವಾಳಲಿಗೆ ಸೇರಿದ ತಿಹರಿ ಸಂಸ್ಥಾನ ನರೇಂದ್ರ ಮಾರವರಿಗೆ ಸಿಂಮ್ಲಾ ಬೆಟ್ಟ ಪ್ರದೇಶದಲ್ಲಿರುವ ಕಿಯೋಂಥಾರ್ ಸಂಸ್ಥಾನದ ರಾಜಕುಮಾರಿಯನ್ನು ಕೊಟ್ಟು ವಿವಾಹ ಮಾಡಿದರು. ಅಗ್ಗೆ ಅನೇಕ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರು ಹೋಗಿದ್ದು ಉತ್ಸವಗಳಲ್ಲಿ ಸೇರಿ ಸಂತೋಷಪಟ್ಟರು.

ಅಂಬಾಲಾ ಪಟ್ಟಣದಲ್ಲಿ ಲಾಲಾ ಬನಾರಸೀದಾಸ್ ಎಂಬೊಬ್ಬ ಹಣಗಾರನು ಲೇಟ್ ಬ್ರಿಟಿಷ್ ದಳಪತಿಯಾದ ಲಾರ್ಡ್ ರಾಬರ್ಟ್ಸ್‌ರವರ ಹೆಸರನ್ನು ಶಾಶ್ವತವಡಿಸುವದಕ್ಕೆ ಒಂದು ಭಾರೀ ಕಟ್ಟಡವನ್ನು ಪ್ರಾರಂಭಿಸಿದಾನೆ. ಈ ಕಟ್ಟಡಕ್ಕೆ ಕರ್ನಲ್ ಪಬ್ಲಾನ್ ರವರು ಕಳೆದ ವಾರ ಅಸ್ತಿಭಾರ ಶಿಲೆಯನ್ನು ಹಾಕಿ ಪ್ರತಿಷ್ಠೆ ಮಾಡಿದರು.

ಪೂರ್ವ ಬಂಗಾಳಕ್ಕೆ ಸೇರಿದ ಬ್ಯಾಂಕುರ, ಮಿತ್ರಪುರ, ಪಬ್ನ, ಫರಿದ್‌ಪುರ, ಮುಲ್ಕ ಎಂಬೀ ಪಟ್ಟಣಗಳಲ್ಲಿ ಕಳೆದ ವಾರ ಎಳೆಂಟು ದರೋಡೆ ಕಳುವುಗಳು ನಡೆದವು. ಪೋಲೀಸಿನವರು ಶೋಧವನ್ನು ದೀರ್ಘ ಮಾಡಿದಾರೆ ಬ್ಯಾಂಕುರಾ ಜಿಲ್ಲೆಯಲ್ಲಿ ಬರಗಾಲ ಪ್ರಾಪ್ತವಾಗಿರೋಣದರಿಂದ ಕಳ್ಳತನ ಹೆಚ್ಚುತ್ತಿರುವಂತೆ ತಿಳಿಸಲ್ಪಟ್ಟಿದೆ.

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರೂ ಇಬ್ಬರು ಕಾನ್‌ಸ್ಟೆಬಲ್‌ರೂ ಸೇರಿ ತಲೆ ತಪ್ಪಿಸಿಕೊಂಡಿದ್ದ ಬಹಾವಾಲಾ ಎಂಬ ಕಳ್ಳರ ಮುಖಂಡನನ್ನು ಸಾಹಸಪಟ್ಟು ಹಿಡಿದರು. ಅವನನ್ನು ಹಿಡಿಯುವವರಿಗೆ 1,000 ರೂಪಾಯಿ ಬಹುಮಾನ ಸಿಕ್ಕುವುದೆಂದು ಸರ್ಕಾರದವರು ಇಸ್ತಿಹಾರು ಹಾಕಿದ್ದರು.

ಯುದ್ಧ ಭೂಮಿಯಿಂದ ಸಾಗಿಸಿಕೊಂಡು ಬರುವ ಗಾಯಪಟ್ಟ ಸೈನಿಕರಿಗೋಸ್ಕರ ಬೊಂಬಾಯಿ ಪಟ್ಟಣದಲ್ಲೂ, ಕರಾಚಿ ನಗರದಲ್ಲೂ ಎಳೆಂಟು ಭಾರೀ ಆಸ್ಪತ್ರೆಗಳನ್ನು ಕಲ್ಪಿಸುತ್ತಿದಾರೆ ದೊಡ್ಡ ದೊಡ್ಡ ಬಂಗಲೆಗಳನ್ನೂ ಕಟ್ಟೋಣ ಕಟ್ಟಡಗಳನ್ನೂ ಬಾಡಿಗೆಗೆ ಕೊಂಡು ಅವುಗಳಲ್ಲಿ ಆಸ್ಪತ್ರೆಗೆ ಅನುಕೂಲಗಳನ್ನು ಮಾಡಿಸುವಂತೆ ಹುಕುಂ ಆಗಿದೆ.

ಇಂಡಿಯಾ ಗವರ್ನ್‌ಮೆಂಟಿನವರು ಕರೆನ್ಸಿ ನೋಟುಗಳು ಚಲಾವಣೆಯಿಂದ ಟಂಕಸಾಲೆಗೆ ವಾಪಸು ಬಂದರೆ ಅವು ಹೊಸದಾಗಿದ್ದರೂ, ಹಳೇದಾಗಿದ್ದರೂ ಲಕ್ಷ್ಯಮಾಡದೆ ಸುಟ್ಟುಬಿಟ್ಟು ಹೊಸ ನೋಟುಗಳನ್ನು ತಯಾರ್ಮಾಡಿ ಚಲಾವಣೆಗೆ ತೊಡತಕ್ಕದ್ದೆಂದು ಹುಕುಂ ಕೊಟ್ಟಿದಾರೆ. ಈ ಹುಕುಮು ಮುಂದಿನ ತಿಂಗಳಿಂದ ಜಾರಿಗೆ ಬರುತ್ತದೆ.

ಕೆಲವು ದಿನಗಳ ಹಿಂದೆ ಡಿಸ್ಟ್ರಿಕ್ಟ್ ಬಂದೀಖಾನೆಗೆ ಪರ್ಯಾಪ್ತಿಯಲ್ಲಿದ್ದ ಇಪ್ಪತ್ತು ಜನ ಕಳ್ಳರು ಜೈಲಿನಿಂದ ತಪ್ಪಿಸಿಕೊಂಡು ಹೋದರು. ಅವರು ತಮ್ಮ ಕೊಠಡಿಯ ಬಾಗಿಲ ಸಲಾಕಿಯನ್ನು ಕಿತ್ತು ಹೊರಗೆ ಬಂದು ಕಾಂಪೌಂಡ್ ಗೋಡೆಯ ಬಳಿ ಇದ್ದ ಕಬ್ಬಿಣದ ಕೋಲುಗಳನ್ನು ಗೋಡೆಗೆ ನಿಲ್ಲಿಸಿ ಬಾಗಿಲಿನ ... ತಮ್ಮ ಬಟ್ಟೆ ಹರಿದು ಕೋಲುಗಳಿಗೆ ಬಿಗಿಯಾಗಿ ಕಟ್ಟಿ ಅದರ ಮೇಲೆ ಹತ್ತಿ ಗೋಡೆ ಹಾರಿ ತಪ್ಪಿಸಿಕೊಂಡು ಹೋದರು

ಟರ್ಕಿ ಮತ್ತು ಜರ್ಮನಿ ಪ್ರಜೆಗಳಾಗಿದ್ದವರನ್ನು ಹಿಡಿದು ಬೊಂಬಾಯಿ ಪಟ್ಟಣ ಒಂದು ಭಾರೀ ಕಟ್ಟಡದಲ್ಲಿ ಇಟ್ಟಿದಾರೆ. ಕಳೆದ ವಾರ ಅವರಲ್ಲಿ ಒಬ್ಬ ಟರ್ಕಿ ಪ್ರಜೆಯ ಜರ್ಮನಿ ಪ್ರಜೆಗೂ ವಾಗ್ವಾದಗಳು ನಡೆದು ಒಬ್ಬನು ಇನ್ನೊಬ್ಬನನ್ನು ಚಾಕುವಿನಿಂದ ತಿವಿದು ಗಾಯಮಾಡಿದನು. ಅಪರಾಧಿಯು ಕೈಯಲ್ಲಿದ್ದ ಚಾಕುವನ್ನು ಇತರ ಜೈದಿಗಳು ಸೇರಿ ಕಿತ್ತುಕೊಂಡರು. ಅಪರಾಧಿಗೆ ಮ್ಯಾಜಿಸ್ಟ್ರೇಟರು ಒಂದು ತಿಂಗಳ ಕಠಿಣ ಸಜಾ ವಿಧಿಸಿದಾರೆ.

ಇಂಗ್ಲಿಷ್ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಸುಮಾರು 40-50 ಮಂದಿ ಚಿಕ್ಕ ಮನುಷ್ಯರನ್ನು ಮದರಾಸ್ ಸರ್ಕಾರದವರು ವೇತನಕೊಟ್ಟು ಕರಸಿಕೊಂಡು ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರರ ಕಾಪಿಯಲ್ಲಿಟ್ಟು, ಪರಸ್ಪರ ಸಹಾಯಕ ಸಂಘಗಳ ಪೂರ್ವೋತ್ತರವನ್ನೆಲ್ಲಾ ಕಲಿ...

ಕೀರ್ತಿ ಹೊಂದುವವರನ್ನು ಆ ಇಲಾಖೆಯಲ್ಲಿ ನೌಕರಿಗೆ ಸೇರಿಸಿಕೊಳ್ಳಬೇಕೆಂದು ರಿಜಿಸ್ಟ್ರಾರವರ ಶಿಫಾರಸ್ಸನ್ನು ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ.

ಮದರಾಸ್ ಅಧಿಕಾರಕ್ಕೆ ಸೇರಿದ ಮ್ಯುನಿಸಿಪಲ್ ಬೋರ್ಡುಗಳ ಚೇರ್ ಮನ್ ರುಗಳೂ, ವೈಸ್ ಪ್ರೆಸಿಡೆಂಟರುಗಳೂ, ಕೆಲಕೆಲವು ಮೆಂಬರುಗಳೂ ಎಲ್ಲಾ ಮದರಾಸ್ ಪಟ್ಟಣದಲ್ಲಿ ಸಭೆ ಸೇರಿ ಒಂದು ಸಮಾಜವನ್ನು ನಡಿಸಬೇಕೆಂದು ತೀರ್ಮಾನವಾಗಿ ಏರ್ಪಾಡು ಆಗುತ್ತಿದೆ. ಈ ಸಮಾಜವು ಮುಂದಿನ ಅಕ್ಟೋಬರ್ ತಿಂಗಳಲ್ಲಿ ಜರುಗುವುದು. ಮ್ಯುನಿಸಿಪಲ್ ಆಡಳಿತಗಳನ್ನು ಚರ್ಚಿಸಿ ಕ್ರಮ ಪಡಿಸಬೇಕೆಂಬುವುದೇ ಈ ಮಹಾ ಸಭೆಯ ಉದ್ದೇಶ. ಸಭೆಯು ಎರಡು ದಿನ ನಡೆಯುವುದು; ಹಲವು ಉಪನ್ಯಾಸಗಳೂ ಭಾಷಣಗಳೂ ಜರುಗುತ್ತವೆ.

ಮಧ್ಯ ಪ್ರಾಂತ್ಯಗಳಿಗೆ ಸೇರಿದ ಚಂದ್ವಾರಾ ಡಿಸ್ಟ್ರಿಕ್ಟಿನಲ್ಲಿ ಧಾಕರ್ ಸಿಂಗ್, ಭಿಕನ್ ಸಾ ಮೊದಲಾದ ಕೆಲವು ಮಂದಿ ಜಹಗೀರುದಾರರು ಸೇರಿಕೊಂಡು ತಮ್ಮ ಜಹಗೀರುಗಳಲ್ಲಿ ಉತ್ಪತ್ತಿಯಾಗುವ ಎಕ್ಸೈಸ್ ಮತ್ತು ದೊಡ್ಡಿ ಹುಟ್ಟುವಳಿ ಹಣವೆಲ್ಲಾ ಪೂರ್ತಿ ತಮಗೆ ಸಲ್ಲಬೇಕೆಂದು ಗವರ್ನ್ಮೆಂಟಿನವರ ಮೇಲೆ ದಾವಾ ಹಂದರು. ಈ ಮೊಕದ್ದಮೆಯು ಮೊದಲನೇ ಕೋರ್ಟಿನಲ್ಲಿ ಜಹಗೀರುದಾರರಿಗೆ ವಿರೋಧವಾಗಿ ತೀರ್ಮಾನವಾಯಿತು. ಈಗ ಅವರು ಅದರ ಮೇಲೆ ಜುಡಿಷಲ್ ಕಮಿಷನರ ಕೋರ್ಟಿನಲ್ಲಿ ಅಪೀಲು ಮಾಡಿಕೊಂಡಿದಾರೆ ಅದು ಮುಂದಿನ ಸೋಮವಾರ ವಿಚಾರಣೆಗೆ ಇಡಲ್ಪಟ್ಟಿದೆ.

ಕಲ್ಕತ್ತಾ ಪಟ್ಟಣದಲ್ಲಿ ಗೋಲಕ್ ಚಂದ್ರ ಮಾಲಿಕ್ ಎಂಬೊಬ್ಬ ಬಂಗಾಳಿಯು ತನ್ನ ಹೆಂಡತಿಯ ಸೀರೆಗೆ ದೀಪದ ಎಣ್ಣೆ ಸುರಿದು ದೀಪ ಹಚ್ಚಿ ಸುಟ್ಟನು ಆ ಹೆಂಡತಿಯು ಮೈಯೆಲ್ಲಾ ಸುಟ್ಟು ಸತ್ತೇ ಹೋದಳು. ಸೆಷನ್ಸ್ ಕೋರ್ಟಿನಲ್ಲಿ ಜೂರಿ ಪಂಚಾಯಿತರು ಈ ಮೊಕದ್ದಮೆಯು ಕೈಫಿಯತ್ತನ್ನು ಕೇಳಿ ಕಡೆಯಲ್ಲಿ ಅಪರಾಧಿಯು ಮೇಲೆ ಕೊಲೆಯ ತಪ್ಪು ರುಜುವಾತಾಗಲಿಲ್ಲವೆಂದೂ, ಗಾಯ ಮಾಡಿದ ಅಪರಾಧ ಮಾತ್ರ ಹೊರುತ್ತೆಂದೂ ತೀರ್ಮಾನ ಹೇಳಿದರು. ಸೆಷನ್ಸ್ ಜಡ್ಜಿಯವರು ಪಂಚಾಯಿತರ ತೀರ್ಮಾನವನ್ನು ತಿರಸ್ಕಾರಮಾಡಿ, ಹೆಂಡತಿಯನ್ನು ಅಷ್ಟು ಕ್ರೂರತನದಿಂದ ಹಿಂಸೆಗೆ ಗುರಿಮಾಡಿದ ಅಪರಾಧಿಯನ್ನು ಶಿಕ್ಷಿಸದೆ ಬಿಡುವುದು ಸರಿಯಲ್ಲವೆಂದು ಅವನಿಗೆ ಮೂರು ವರುಷದ ಕಠಿಣ ಸಜಾ ವಿಧಿಸಿದರು.

ಹಿಂದುಸ್ಥಾನದಿಂದ ಮಕ್ಕಾ ಮದೀನಗಳಿಗೆ ಯಾತ್ರೆ ಹೋಗಿದ್ದ ಮಹಮದೀಯ ಹಾಜಿಗಳ ವಿಷಯವಾಗಿ ಬೊಂಬಾಯಿ ಗವರ್ನ್ಮೆಂಟಿನವರು ತಿಳಿಸಿರುವುದೇನೆಂದರೆ—ಕಳೆದ ವರುಷ ಯಾತ್ರೆ ಹೋಗಿದ್ದ ಹಾಜಿಗಳ ಪೈಕಿ 2,433 ಮಂದಿ ಹಾಜಿಗಳು ಹಿಂದುಸ್ಥಾನಕ್ಕೆ ಹೊರಟು ಬಂದರು 1915 ನೇ ನೊವೆಂಬರ್ ಆಖೈರು ವರೆಗೆ 1,308 ಮಂದಿ ಯಾತ್ರಿಕರು ಹಿಂತಿರುಗಿ ಬಂದರು. ಇನ್ನೂ 1,900 ಮಂದಿ ಹಾಜಿಗಳು ಜಿಡ್ಡಾದಲ್ಲೇ ನಿಂತಿದ್ದಾರೆ. ಕಲ್ಕತ್ತೆಯ ಟರ್ನರ್ ಮಾರಿಸನ್ ಕಂಪನಿಯವರ ಜಹಜು ಜಿಡ್ಡಾ ತೀರಕ್ಕೆ ಹೋಗಿ ಅಲ್ಲಿಂದ ಕಳೆದ ಜನವರಿ ತಿಂಗಳಲ್ಲಿ 1,237 ಹಾಜಿಗಳನ್ನು ಬೊಂಬಾಯಿಗೆ ಕರೆದು ತಂದಿತು. ಈ ಕಂಪನಿಯವರಿಂದ ರಿಟರ್ನ್ ಟಿಕೇಟುಗಳನ್ನು ಪಡೆದುಕೊಂಡು ಹೋಗಿರುವ 1,763 ಹಾಜಿಗಳ ಪೈಕಿ 1,711 ಮಂದಿ ವಾಪಸು ಬಂದಿದ್ದಾಯಿತು.

ಒಬ್ಬಾನೊಬ್ಬ ದೊಡ್ಡ ಮನುಷ್ಯನು ಒಂದು ರೂಪಾಯಿಗೆ ಸ್ಟಾಂಪು ಕೊಂಡು ತರುವಂತೆ ಜವಾನನ ಮೂಲಕ ರೂಪಾಯಿ ಕೊಟ್ಟು ಪೋಸ್ಟ್ ಆಫೀಸಿಗೆ ಕಳುಹಿಸಿದನು. ಜವಾನನು ರೂಪಾಯಿಯನ್ನು ವಾಪಸು ತಂದುಕೊಟ್ಟು ಯಜಮಾನನನ್ನು ಕುರಿತು ಆ ರೂಪಾಯಿ ಖಾರಿಜಿಸಿದರೆ ಕಳ್ ಎಂದು ಸರಿಯಾಗಿ ಶಬ್ದವಾಗುವುದಿಲ್ಲವೆಂದು ಹೇಳಿ ಪೋಸ್ಟ್ ಮಾಸ್ತರು ರೂಪಾಯಿಯನ್ನು ವಾಪಸು ಮಾಡಿದಾರೆ ಎಂದು ತಿಳಿಸಿದನು. ಆಗ ಯಜಮಾನನು ಮತ್ತೆ ಅದೇ ರೂಪಾಯಿಯನ್ನು ಜವಾನನ ಮೂಲಕ ಕಳುಹಿಸಿ ಪೋಸ್ಟ್ ಮಾಸ್ತರು ಅದನ್ನು ಅಂಗೀಕರಿಸದಿದ್ದರೆ ಪೊಲೀಸ್ ಸೂಪರಿಂಟೆಂಡೆಂಟರಿಗೆ ಬರೆಯುತ್ತೇನೆ ಎಂದು ತಿಳಿಸುವಂತೆ ಹೇಳಿ ಕಳುಹಿಸಿದನು. ಆಗ ಪೋಸ್ಟ್ ಮಾಸ್ತರು ಆ ರೂಪಾಯಿ ಅಂಗೀಕರಿಸಿ ಸ್ಟಾಂಪುಗಳನ್ನು ಕೊಟ್ಟು ಕಳುಹಿಸಿದರು. ಅನೇಕ ವೇಳೆ ಶಬ್ದವಾಗದ ರೂಪಾಯಿ ಕೊಟ್ಟರೆ ಖಜಾನೆಯಲ್ಲೂ ಸರ್ಕಾರಿ ಕೋರ್ಟು ಕಚೇರಿಗಳಲ್ಲೂ ರೈಲ್ವೆ ಸ್ಟೇಷನ್ನುಗಳಲ್ಲೂ ತಿರಸ್ಕಾರ ಮಾಡುತ್ತಾರೆ. ಇದರಿಂದ ತಿಳುವಳಿಕೆಯೂ, ದಾಕ್ಷಿಣ್ಯವೂ ಇಲ್ಲದ ಅನೇಕ ಜನರು ವ್ಯರ್ಥ ನಷ್ಟಪಡುವುದುಂಟು. ಇದು ನ್ಯಾಯವೂ ಧರ್ಮವೂ ಅಲ್ಲವಾದ ಕಾರಣ ಗವರ್ನ್ಮೆಂಟಿನವರು ಅಂಥಾ ನಾಣ್ಯಗಳನ್ನು ಅಂಗೀಕರಿಸಬೇಕೆಂದು ಖಜಾನೆಗಳಿಗೆ ತಿಳಿಸಿಕೊಂಡು ಕಳಗಿಸಬೇಕು. ಇಲ್ಲವೇ ಅಂಥವುಗಳನ್ನು ಯಾರೂ ತಿರಸ್ಕರಿಸಕೂಡದೆಂದು ಇಸ್ತಿಹಾರು ಹಾಕಿಸಬೇಕು.

ಲೋವರ್ ಸೆಕೆಂಡರಿ ಪರೀಕ್ಷೆಯ

ಗಣಿತಪ್ರಶ್ನೋತ್ತರಾವಳಿ

ಈ ನವೀನ ಗಣಿತದಲ್ಲಿ ಅನೇಕ ಸುಲಭ ಮಾರ್ಗಗಳೂ ಮತ್ತು 1910–15 ರ ವರೆಗೆ ಪ್ರಶ್ನೆಗಳೂ, ನ್ಯಾಯಸಹಿತವಾದ ಉತ್ತರಗಳೂ ಇರುತ್ತವೆ. ಪರೀಕ್ಷೆಗೆ ಹೋಗಿರುವ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ. ಕ್ರಯ 8 ಆ.; ವಿ. ಪಿ 10 ಆ. ಪುಸ್ತಕಗಳು ದೊರೆಯುವ ಸ್ಥಳಗಳು:—(1) ಬಿ. ಮಹಾಬಲರಾವ್ ಬಿ. ಎ., 691, ಶಿವರಾಂಪೇಟೆ, ಮೈಸೂರು; (2) ಸ್ಟೂಡೆಂಟ್ಸ್ ಹಾಲ್, ಮೈಸೂರು; (3) C. L. S. ಬುಕ್ ಡಿಪೊ, ಮೈಸೂರು: (4) ವಿದ್ಯಾಸಾಗರ ಬುಕ್ ಡಿಪೊ, ಚಿಕ್ಕಪೇಟೆ, ಬೆಂಗಳೂರು ಸಿಟಿ; (5) P. T. I. ಬುಕ್ ಡಿಪೊ, ಮಾಮುಲಪೇಟೆ, ಬೆಂಗಳೂರು ಸಿಟಿ: (6) R. S. ಅಹೋಬಲ್ ಅಂಡ್ ಕೊ., ಅವೆನ್ಯೂ ರೋಡ್, ಬೆಂಗಳೂರು ಸಿಟಿ. [68-1]

ಪರೀಕ್ಷೆಗಾಗಿ ಮುಫತ್ತು.

ನಮ್ಮ "ಜೀವಾಮೃತ" ಎಂಬುವದು ಕಲಿಸೋಪವನ್ನು ಕಳ್ಳಿಯವೇ ನಿಲ್ಲಿಸುತ್ತೆಂದು ಬಹು ಕಾಲದಿಂದಲೂ ಬರ್ಮಾದಲ್ಲಿ ವ್ಯಾಪಿಸಿಕೊಂಡಿದೆ. ಬಹಳ ಜನಗಳ ಆಶ್ರಯವನ್ನು ಸಂಪಾದಿಸಿಕೊಂಡಿದೆ. ಅದು ಹಾಗಾದದ್ದರಿಂದಲೂ ಎಲ್ಲಾ ತರದ ಕಲಿಸೋಪುಗಳನ್ನೂ ಅಲ್ಪ ಕಾಲದಲ್ಲೇ ಗುಣಮಾಡತಕ್ಕದ್ದರಿಂದಲೂ ಕೇಳದೆಯೇ ಸರ್ಟಿಫಿಕೇಟುಗಳನ್ನು ಅನೇಕವಾಗಿ ಸಂಪಾದಿಸಿಕೊಂಡಿದೆ—ಈ ಔಷಧವನ್ನು ಹಿಂದುಸ್ಥಾನ, ಸಿಲೋನ್ ಮತ್ತು ಇತರ ದೇಶಗಳಲ್ಲಿ ಪ್ರಚಾರಕ್ಕೆ ತರಬೇಕೆಂಬ ಉದ್ದೇಶದಿಂದ ನೀವು ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿಯೂ ಸಂಪೂರ್ಣವಾಗಿಯೂ ನಮಗೆ ತಿಳಿಸಿದರೆ ನಮಗೆ ನಾವು ಬಿಟ್ಟಿಯಾಗಿ ಎರಡು ಸಣ್ಣ ಪೊಟ್ಟಣಗಳನ್ನು ಕಳುಹಿಸುವೆವು. ಅದನ್ನು ಉಪಯೋಗಿಸಿದರೆ ಅದರ ಗುಣ ನಿಮಗೇ ಮುಂದಟ್ಟಾಗುತ್ತದೆ.—ಈ ಕಲಿಸೋಪಿನ ಔಷಧಿಯನ್ನು ದೊಡ್ಡವರಿಗೆ ಉಪಯೋಗಿಸುವಷ್ಟು ಹೆಚ್ಚಾಗಿ ಮಾಡಿದೇವೆ. ಅದನ್ನು ಪೊಟ್ಟಣಗಳಾಗಿಯೂ ಬಿಲ್ಲೆಗಳಾಗಿಯೂ ತಯಾರುಮಾಡಿರುವೆವು. ಅಂಥಾ 12 ಪೊಟ್ಟಣಗಳಾಗಲಿ, 12 ಬಿಲ್ಲೆಗಳಿರುವ ಒಂದು ಸೀಸೆಗಾಗಲಿ ಕ್ರಯ ರೂಪಾಯಿ 1-0-0.

Address—Francis Medical Hall,
Manufacturing Chemists, Myanaung, Burma.

ನಮ್ಮ ವಿಳಾಸ—ಫ್ರಾನ್ಸಿಸ್ ಮೆಡಿಕಲ್ ಹಾಲ್,
[19–7] ಮಯಾನಾಂಗ್, ಬರ್ಮಾ.

M. S. RAO & Co., Book Sellers, Bangalore City.

S. T. A. SCENTED SACHETS [As. 2 Each.]

These Perfumery Packets are the latest novelty in the Perfumery World. Their fragrance is not transitory like other Perfumery cards and flower dusts. Please forward us 2½ As. in Postage Stamps; try 1 packet and apply for terms

ನವೀನ ಮಾದರಿಯ ಪರಿಮಳದ ಪಾಕೆಟ್—ಬೆಲೆ 1 ಕ್ಕೆ 2 ಆ. 2½ ಆಣೆ ಸ್ಟಾಂಪು ಕಳಿಸಿ 1 ಪ್ಯಾಕೆಟ್ಟನ್ನು ಪರೀಕ್ಷಿಸಿ. [28-12]

Lower Secondary Text for 1917:—

The King of the Golden River by John Ruskin As. 4 Each.

ವಿಳಾಸ.—ಎಂ. ಎಸ್. ರಾವ್ ಕಂಪೆನಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತುಂಕೂರು 2 ನೇ ಮುನ್ಸಿಫ್ ಕೋರ್ಟಿನಲ್ಲಿ.

1915–16 ನೇ O. S. ನಂ. 182.

ವಾದಿ.—ಗುಬ್ಬಿ ತಾ॥ ಚಟ್ಟನಹಳ್ಳಿ ಸಂ॥ ಮತ್ತಿಕೆರೆ ಗ್ರಾಮದಲ್ಲಿರುವ ಗಂಗಡಿಕಾರ್ ಒಕ್ಕಲಿಗ ಮುದ್ದಗಿರಿಗೌಡನ ಮಗ ಯಾಲಕ್ಕಿಗೌಡ.

ಪ್ರತಿವಾದಿಗಳು—(1) ಡಿಟೊ ಸಂ॥ ಏರೆಣ್ಣನಗುಡಿಯಲ್ಲಿರುವ ಸುಬ್ಬಣ್ಣನ ಮಗ ಇದಗೂರು ಫಿರ್ಕಾ ಶ್ಯಾನುಭೋಗ್ ವೆಂಕಟರಮಣಯ್ಯ.

(2) ಡಿಟೊ ಸಂ॥ ಮತ್ತಿಕೆರೆ ಗ್ರಾಮದಲ್ಲಿರುವ ಗಂಗಡಿಕಾರ ಒಕ್ಕಲಿಗರ ನಂಜೇಗೌಡನ ಮಗ ಬೋರೇಗೌಡ.

(3) ಗಂಗಡಿಕಾರ ಒಕ್ಕಲಿಗರ ಲಿಂಗಣ್ಣನ ಮಗ ಈಗ ಕೀರ್ತಿಗಾರನಾಗಿದ್ದ ಕೆಂಪ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—

ದಾವಾ ಷೆಡ್ಯೂಲು ಮನೆಯು 1 ನೇ ಪ್ರತಿವಾದಿಯಿಂದ ವಾದಿಗೆ 30-6-1915 ರಲ್ಲಿ ಕ್ರಯವಾಗಿರುವದರಿಂದ ಸದರಿ ಮನೆಯನ್ನು ಪ್ರತಿವಾದಿಗಳಿಂದ ವಾದಿ ಸ್ವಾಧೀನಕ್ಕೆ ಬಿಡಿಸಿಕೊಡಬೇಕೆಂತಲೂ, ತಪ್ಪಿದಲ್ಲಿ 1 ನೇ ಪ್ರತಿವಾದಿಯಿಂದ ವಾದಿಗೆ ಷೆಡ್ಯೂಲು ಮನೆಯ ಕ್ರಯದ ಮೊಬಲಗು 150 ರೂಪಾಯಿಗಳನ್ನು ಬಾಕಿ ಬಡ್ಡಿ ಸಹ ವಾಪಸು ಕೊಡಿಸಬೇಕೆಂತಲೂ ವಾದಿಯು ಪ್ರತಿವಾದಿಗಳ ಮೇಲೆ ದಾವಾ ಮಾಡಿರುತ್ತಾನಾಗಿ ಮೇಲ್ಕಂಡ ಮೊಕದ್ದಮೆಯಲ್ಲಿ ವಾದಿ ಯಾ ಪ್ರತಿವಾದಿಯಾಗಿ ಸೇರತಕ್ಕವರೆಲ್ಲರೂ ಈ ಕೋರ್ಟಿನ ರೂಬರೂವಿಗೆ ತಾರೀಖು 31 ನೇ ಮಾರ್ಚಿ 1916 ನೇ ದಿವಸ 11 ಗಂಟೆಗೆ ಹಾಜರಾಗತಕ್ಕದ್ದು. [70-1]

ದಾವಾ ಷೆಡ್ಯೂಲು.

ಗುಬ್ಬಿ ತಾ॥ ಚಟ್ಟನಹಳ್ಳಿ ಸಂ॥ ಮತ್ತಿಕೆರೆ ಗ್ರಾಮದಲ್ಲಿರುವ ವೆಂಕಟಯ್ಯನ ಹೆಸರಿನ ಖಾತೆ. ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ದಾರಿ, ದಕ್ಷಿಣಕ್ಕೆ ಚಂದಯ್ಯನ ಮನೆ. ಈ ಮಧ್ಯೆ ಇರುವ ಮುನಿಸಿಪಾಲಿಟಿ 4 ನೇ ನಂಬರು ವಾರ್ಡಿಗೆ ಸೇರಿದ್ದ ಅಂಕಣ ಕಂಬಸಾಲೆ ಮನೆ ಮತ್ತು ಇದಕ್ಕೆ ಲಗತ್ತಾಗಿರುವ ಹಿಂದುಗಡೆ ಮುಂದುಗಡೆ ಜಮೀನು ಸಹಾ ಕ್ರಯ ರೂ. 150-0-0.

Tumkur,
6-3-1916.

D. ALASINGRACHAR, B.A., B.L.,
Second Munsiff.

ನವರತ್ನ ಪರೀಕ್ಷಾರ್ಥಕ.

ಸತ್ಯಕ್ಕಿಂತಲೂ ಹೆಚ್ಚಿನ ಧರ್ಮವಿಲ್ಲ.

ಪ್ರಕಟನೆಗಳನ್ನು ನಂಬುವದಕ್ಕಿಂತಲೂ ಪರೀಕ್ಷಿಸುವದೇ ಮೇಲು.

ಪ್ರಖ್ಯಾತಿಯನ್ನು ಪಡೆದ ಆರ್. ವಿ. ಪಂಡಿತರವರಿಂದ ತಯಾರಿಸಲ್ಪಟ್ಟ ಅನೇಕ ಔಷಧಗಳಲ್ಲಿ ರತ್ನಕ್ಕೆ ಸಮಾನವಾದ ಗುಣಕೊಡುವ 8 ಔಷಧಗಳನ್ನು ಈ ಕೆಳಗೆ ಸಂಕ್ಷೇಪವಾಗಿ ಪ್ರಕಟಿಸಲ್ಪಟ್ಟಿರುತ್ತೆ. ಅನೇಕ ಸುಳ್ಳು ಪ್ರಕಟನೆಗಳಿಂದ ಜನಗಳಿಗೆ ಔಷಧದಲ್ಲಿ ನಂಬಿಕೆ ತಪ್ಪಿರುವದು ಸಹಜವಾಗಿದೆ. ಆದಕಾರಣ ಈ ಕೆಳಗೆ ಬರೆದಿರುವ ಔಷಧಗಳನ್ನು ಕೋರುವ ದವಾಖಾನೆದಾರರಿಗೆ ಔಷಧಿಯನ್ನು ವಿ. ಪಿ. ಛಾರ್ಜಿ ಮೂಲಕ ಕಳುಹಿಸುವದಲ್ಲದೆ ಪ್ರತ್ಯೇಕವಾಗಿ ಮಾದರಿ ಔಷಧವನ್ನು ಪರೀಕ್ಷಾರ್ಥ ಉಚಿತವಾಗಿ ಕಳುಹಿಸುತ್ತೇವೆ. ಅದನ್ನು ಪರೀಕ್ಷಿಸಿ ನಂತರ ಛಾರ್ಜಿಯನ್ನು ಪಡೆಯಬಹುದು.

1. ಪ್ರಸಿದ್ಧಿಯನ್ನು ಪಡೆದ ಕಸ್ತೂರಿ ಅರಕ್ 6 ಪೌನ್ಸ್ ಸೀಸೆ 1 ಕ್ಕೆ 0-14-0

ಈ ಅರಕ್ಕನ್ನು ಅಭ್ಯಂಗ ಸ್ನಾನ ಮಾಡುವಾಗ ಅವರವರು ಉಪಯೋಗಿಸುವ ಯಾವ ಎಣ್ಣೆಯಲ್ಲಾದರೂ ಸಿರಿ ಅರ್ಧ ರೂಪಾಯಿ ತೂಕದಷ್ಟು ಈ ಅರಕ್ಕನ್ನು ಬಿಟ್ಟು ಚಿರಕಿನಿಂದ ಚೆನ್ನಾಗಿ ಅಡಿಸಿದರೆ ಎಣ್ಣೆಯಲ್ಲವೂ ಹಸುವಿನ ಹಾಲಿನ ಹಾಗೆ ಬೆಳ್ಳಗಾಗುತ್ತೆ. ಅದನ್ನು ತೆಗೆದು ತಲೆಗೂ ಮೈಗೂ ಚೆನ್ನಾಗಿ ಹಚ್ಚಿಕೊಂಡು ಅಭ್ಯಂಗನ ಸ್ನಾನ ಮಾಡುವದರಿಂದ ಗುಣವಾಗುವ ವ್ಯಾಧಿಗಳನ್ನು ಈ ಕೆಳಗೆ ಸಂಕ್ಷೇಪವಾಗಿ ಬರೆಯಲ್ಪಟ್ಟಿರುತ್ತೆ. ತಲೆ ನೋವು, ಅರತಲೆ ನೋವು, ಕಣ್ಣು ನೋವು, ಕಣ್ಣುರಿ, ಇರುಳು ಕಣ್ಣು, ಚಾಳಿಸ್ಯ, ಕಣ್ಣು ಮಂಜು, ಉಷ್ಣ, ಕಾಮಾಲೆ, ಮೊದಲಾದ ಅನೇಕ ವಿಧವಾದ ಶಿರೋ ವ್ಯಾಧಿಗಳು ಮತ್ತು ನೇತ್ರ ವ್ಯಾಧಿಗಳು ತಪ್ಪದೆ ಗುಣವಾಗುತ್ತೆ.

2. ಆರೋಗ್ಯ ವರ್ಧಕ ಜೀವನಂ 40 ರೂ. ತೂಕದ ಡಬ್ಬಿ 1 ಕ್ಕೆ ರೂ. 5-0-0.

ಅನೇಕ ವಿಧ ರೋಗಗಳಿಂದ ಸತ್ವಹೀನವಾದ ನರಗಳಿಗೆ ಬಲಕೊಟ್ಟು ರಕ್ತ ವೃದ್ಧಿಯನ್ನು ಮತ್ತು ವೀರ್ಯ ಪುಷ್ಟಿಯನ್ನುಂಟುಮಾಡಿ ಅಧಿಕ ಬಲವನ್ನು ಕೊಡುತ್ತೆ. ಇದರ ಸೇವನೆಯಿಂದ ಸಕಲ ವಿಧವಾದ ಉಷ್ಣ ಪ್ರಕೋಪಯನ್ನು ಹೋಗಲಾಡಿಸಿ ಮುಖಕ್ಕೆ ತೇಜಸ್ಸನ್ನುಂಟುಮಾಡುತ್ತೆ.

3. ಶ್ವಾಸಕಾಸ ಲೇಹ 40 ರೂ. ತೂಕದ ಡಬ್ಬಿ 1 ಕ್ಕೆ ರೂ. 3-0-0.

ಇದು ಸಕಲ ವಿಧವಾದ ಗೂರ್ಲು ಉಬ್ಬಸ, ಕೆಮ್ಮು, ಕ್ಷಯ, ಮೂಲವ್ಯಾಧಿ ಮೊದಲಾದವುಗಳನ್ನು ಗುಣಪಡಿಸುತ್ತೆ.

4. ಮಹಾಜ್ವರಾಂಕುಶ 100 ಮಾತ್ರೆಯ ಡಬ್ಬಿ 1 ಕ್ಕೆ ರೂ. 1-0-0.

ಚಳಿಜ್ವರ, ಮರಸಿ ಜ್ವರ, ಮಲೆನಾಡು ಜ್ವರ, ಶೀತ ಜ್ವರ, ಬಿಡದೆ ಕಾಯುವ ಜ್ವರ ಮೊದಲಾದ ಎಲ್ಲಾ ಜ್ವರಗಳಿಗೂ ಇದು ಬಹು ಉಪಯೋಗವಾದದು.

5. ಸುಖಭೇದಿ ಮಾತ್ರೆ 100 ಮಾತ್ರೆ ಡಬ್ಬಿ 1 ಕ್ಕೆ ರೂ. 1-0-0.

ಈ ಮಾತ್ರೆಯನ್ನು ಯಾವ ವೇಳೆಯಲ್ಲಾಗಲಿ ಸೇವಿಸಬಹುದು. ದೇಹಕ್ಕೆ ಸ್ವಲ್ಪವೂ ಆಯಾಸವಿಲ್ಲದೆ ಹಾಗು ಸುಖವಾಗಿ ಭೇದಿಯಾಗುತ್ತೆ.

6. ಸೋಪೂಲ್ 2 ಔನ್ಸ್ ಸೀಸೆ 1 ಕ್ಕೆ ರೂ. 1-0-0.

ಕಲಿಸೋಪು, ಒತ್ತರಿಸೋಪು, ಉಳಕು, ಚಳುಕು ಮೊದಲಾದ ಸಕಲ ವಿಧ ನೋವುಗಳಿಗೆಲ್ಲಾ ಇದು ವಜ್ರಾಯುಧ.

7. ಹುಳುಕಡ್ಡಿ ಮುಲಾಮು ಡಬ್ಬಿ 1 ಕ್ಕೆ ರೂ. 0-8-0.

ಇದು ಹುಳುಕಡ್ಡಿ ಮೊದಲಾದ ಸಕಲ ವಿಧ ಚರ್ಮರೋಗಗಳ ಕಡಿತಕ್ಕೆ ಬಹಳ ಮೇಲಾದದ್ದು.

8. ಕೇಶಲೂಯ ಸೀಸೆ 1 ಕ್ಕೆ ರೂ 0-12-0.

ನರೆತ ಕೂದಲುಗಳ ಮೇಲೆ ಇದನ್ನು ಹಚ್ಚಿದರೆ ಕಪ್ಪಗಿನ ಕೂದಲು ಕಪ್ಪಾಗುತ್ತೆ.

ಔಷಧಿಯನ್ನು ಸೇವಿಸುವ ವಿಧಾನವನ್ನು ಪ್ರತಿ 1 ಡಬ್ಬಿಯ ಸಂಗಡಲೂ ಕಳುಹಿಸಲ್ಪಡುತ್ತೆ.

ವಿಳಾಸ—ಆರ್. ವಿ. ಪಂಡಿತ್ ಕಂಪನಿ,
[66–1] ನಂ. 6, ಬಂದರ್ ಬೀದಿ, ಮದರಾಸು.

JUST PUBLISHED.

(1) Aids to Grammatical Analysis, 5 as. (2) English Essays and Letters, 6 as. (3) English Papers, 8 as. (4) Spelling Book, 4 as. (5) L. S. English Notes for 1917 (will be ready soon).

Apply to:—**M. N. SITA RAMA RAO,**
[35-5] **Krishnaraja Mohalla, Mysore.**

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಗೋರೋಚನ ಮಾತ್ರೆ—3-3 ಮಾತ್ರೆಗಳು ಮಕ್ಕಳಿಗೆ ಹಿಂಸೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಆ, 6 ಶೀಸೆಗೆ 1 ರೂಪಾಯಿ.

2. ಜ್ವರದಮಾತ್ರೆ—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ. 24 ಮಾತ್ರೆ 8 ಆ, 6 ಶೀಸೆಗೆ 2½ ರೂ, 12 ಶೀಸೆಗೆ 4½ ರೂ.

3. ಬಾಧಾ ನಿವಾರಿಣಿ—ಎಲ್ಲಾ ವಿಧ ನೋವುಗಳನ್ನು ನಂಬಿಗೆಯಿಂದ ಬೇಗ ಗುಣಮಾಡುತ್ತೆ. ಡಬ್ಬಿಗೆ 4 ಆ, 6 ಕ್ಕೆ 1 ರೂ, 12 ಕ್ಕೆ 2½ ರೂ.

[126-27] ನಮ್ಮ ವಿಳಾಸ.—ಪಂಡಿತ್ ಎಸ್. ಗರಳಪುರಿ, ಮೈಸೂರು.

ಕೆಂಪು ಕಲ್ಲಿನ ಬುಲಾಕು.

ಈ ಬುಲಾಕನ್ನು ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಥಳಥಳಿಸುವದು. ಸವರನ್ ಬಂಗಾರಕ್ಕೆ



ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಲ್ಪಟ್ಟದ್ದು. ಇದನ್ನು ನೋಡುವವರು 200 ರೂ. ಸರಿಯಾಗಿ ಮದಿಪು ಬಾಳುವದೆಂದು ಹೇಳುವರು. ಈಗ ನಮ್ಮ ಕಂಪನಿ ಹೆಸರು ಪ್ರಖ್ಯಾತಿ ಹೊಂದುವದಕ್ಕಾಗಿ 2 ರೂಪಾಯಿಗೆ ವಿಕ್ರಯಮಾಡುವೆವು. ಬೇಗನೆ ತರಿಸಿಕೊಳ್ಳಿ.

[63-1] ನಮ್ಮ ವಿಳಾಸ—

ವಿ. ... ಎಸ್. ಪಾಣಿ, 3, ವಿರುಪಾಕ್ಷಪ್ಪನ ಬೀದಿ, ಮದರಾಸು.

CUDDAPAH STONES.

ನಾವು ಉತ್ತಮವಾದ ಕಡಪ ಕಲ್ಲುಗಳನ್ನು ನಮ್ಮ ಸ್ವಂತ ಗಣಿಯಿಂದ ಬೇಕಾಗುವ ಅಳತೆಗೆ ತಯಾರುಮಾಡಿಸಿ ಸುಲಭ ಬೆಲೆಗೆ ಬಿಕರಿಮಾಡುತ್ತಿರುತ್ತೇವೆ ಅವರ ಕವಿರುವವರು ಬರೆದು ತರಿಸಿಕೊಳ್ಳಬಹುದು ಮತ್ತು ಸರ್ಕಾರಿ ಕಛೇರಿಯಲ್ಲದೆ ದೇವಸ್ಥಾನ, ಛತ್ರ ಮೊದಲಾದುವುಗಳಿಗೆ ಯುಕ್ತ ತೋರುವಷ್ಟು ಉಚಿತವಾಗಿ ನಮ್ಮ ಗಣಿಯಲ್ಲಿ ಕೊಡುತ್ತೇವೆ. ಛಾರ್ಜು ಕೊಟ್ಟು ತರಿಸಿಕೊಳ್ಳಬಹುದು. ಹೆಚ್ಚು ಸಂಗತಿಯನ್ನು ನಮಗೆ ಬರೆದು ತಿಳಿಯಬಹುದು. ನಮ್ಮ ಏಜಂಟರು—ಎ. ಎಸ್. ಕೆ. ಮಂಡರಗಿಯವರು, ದಾವಣಗೆರೆ. [52-3]

ನಮ್ಮ ವಿಳಾಸ—**D. KRISHNA RAO & SONS,**
Yerraguntla, Cuddapah Dist.; or Bangalore City.

ಕರ್ಣಾಟಕ
ಎಗ್ಯು ಮಿಕ್ಶ್ಚರ
ಎಲ್ಲಾ ಜ್ವರಗಳಿಗೂ ಹಿಂತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಪ್ರಾರ್ಥಿಸುತ್ತೇವೆ. [213–22]

ಕ್ರಯ 0–10–0; ಪೋಸ್ಟೇಜ್ 0–4–0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಾಟಕ ಬ್ರದರ್ಸ್,
ಎಗ್ಯು ಮಿಕ್ಶ್ಚರ್ ಡಿಪೊ, ಬೊಂಬಾಯಿ, 4.
KARNIK Bros., BOMBAY, 4.
ನಮ್ಮ ಏಜಂಟರು.—ವಿ ಉಲ್ಮನ್ ವಾಟ್ಸ್, ಮಂಗಳೂರು.

ಊದಬತ್ತಿಗಳು

ಇಂಡಿಯಾ ದೇಶದಲ್ಲಿ ನಡೆದಿರುವ ಎಗ್ಜಿಬಿಷನ್ ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನೂ 32 ಮೆಡಲುಗಳನ್ನೂ ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕ ಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರವನ್ನು ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳದ್ದಾಗಿದೆ.

ಊದಬತ್ತಿಗಳು 24 ರೂ. ತೂಕದ ಸೇರು 1 ಕ್ಕೆ ರೂ. 12, ರೂ. 5, 3, 2-8-0, 1-4-0, 1.

ಅರಗಜ ಮತ್ತು ಬತ್ತಿಗಳು ತೋಲ 1 ಕ್ಕೆ ರೂ. 2, 1, ಆ. 12, 6

ಸುವಾಸನೆ ಸುಣ್ಣ ಸೀಸೆ 1 ಕ್ಕೆ 2 ಆಣೆ

ಈ ಸುಣ್ಣಕ್ಕೆ ಕೇಸರಿ ಪಚ್ಚಕರ್ಪೂರ ಬಾದಾಮಿ ಯೆಸೆನ್ಸ್ ಇವುಗಳನ್ನು ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಯಾರೆ ಅಧಿಕ ವಾಸಿಕೊಳ್ಳುವದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ಸುವಾಸನೆ ಸಾದು ಸೀಸೆ 1 ಕ್ಕೆ 2 ಆಣೆ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[54-2]
ಸುಗಂಧಕಾರಿ, ಮೈಸೂರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಫೆಬ್ರವರಿ 24 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮಾ:—(1) ಷೇರು ಮೊಬಲಗು	ರೂ.	10,00,000
,, (2) ರಿಜರ್ವ್ ಫಂಡು	,,	76,000
,, (3) ಡಿಪಾಜಿಟ್ಟುಗಳು	,,	40,11 967
,, (4) ಇತರೆ	,,	28,543
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	51,16,510

ಖರ್ಚು:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	5,95,173
,, (2) ಜಾಮೀನು ಮತ್ತು ಇತರ ಸಾಲಗಳು	,,	32,08 660
,, (3) ಡಿಸ್ಕೌಂಟುಮಾಡಿದವಾಯಿದೆಹುಂಡಿಗಳು	,,	4,69,813
,, (4) ಇನ್ವೆಸ್ಟ್‌ಮೆಂಟುಗಳು	,,	7,66,822
,, (5) ಏಜೆನ್ಸಿಗಳಲ್ಲಿರುವ ಮೊಬಲಗು	,,	7,679
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	16,494
,, (7) ಇತರೆ	,,	10,969
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	51,16 510

ಪಿ. ರಾಮಸ್ವಾಮಯ್ಯ, ಆ : ಮ್ಯಾನೇಜರ್.

ಇಂಡಿಯಾ ದೇಶದ ವೃತ್ತಾಂತಗಳು.

ಮದರಾಸ್ ಪಟ್ಟಣದ ತಿರುವಲ್ಲಿಕೇಣಿಯ ರೆಡ್ಡಿ ಪತಿ ಸಾಮಿಯರ್ ಎಂಬವನು ಜೋಗಿಯಂತೆ ನಟಿಸಿ ಪಾಡಿ ಭಾಷ್ಯಂ ಅಯ್ಯಂಗಾರಿ ಎಂಬವನ ಹೆಂಡತಿಗೆ ದೈಯ್ಯ ವನ್ನು ಬಿಡಿಸುತ್ತೇನೆಂದು ಭಾಷೆಕೊಟ್ಟು ಹನ್ನೊಂದು ಸವರಿನ್‌ಗಳ ಚಿನ್ನದ ಪಟ್ಟಿಯನ್ನು ಪಡೆದು ತರಿಸಿಟ್ಟುಕೊಂಡು ಏನೇನೋ ಮಂತ್ರಗಳನ್ನು ಹೇಳುತ್ತಿದ್ದು ಆ ಪಟ್ಟಿ ಸಹಿತ ತಪ್ಪಿಸಿಕೊಂಡು ಹೋದನು. ಪೋಲೀಸಿನವರು ಹನ್ನೊಂದು ತಿಂಗಳ ಮೇಲೆ ಆ ಮೋಸಗಾರನನ್ನು ಹಳ್ಳಿಯಲ್ಲಿ ಹಿಡಿದು ತಂದರು. ಕಳೆದ ವಾರ ಮ್ಯಾಜಿಸ್ಟ್ರೇಟರಿಂದ ಅವನಿಗೆ ಆರು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಕಾರಿಗಳ ಬ್ಯಾಂಕುಗಳಿಗೆ ಫೆಬ್ರವರಿ ತಾ. 5 ರ ವರೆಗೆ ಜಾಮತಿಯಾಗಿರುವ ಚಂದಾ ಹಣ ಎಷ್ಟೆಂದರೆ :—

ಸಿಮ್ಲಾ ಅಲ್ಲಿಯನ್ಸ್ ಬ್ಯಾಂಕಿಗೆ	ರೂ. 45,84,668-12-6
ಬಂಗಾಳ ಬ್ಯಾಂಕಿಗೆ	,, 35,82,876- 0-8
ಬೊಂಬಾಯಿ ಬ್ಯಾಂಕಿಗೆ	,, 8,31,931-12-0
ಮದರಾಸ್ ಬ್ಯಾಂಕಿಗೆ	,, 6,70,639- 0-5
ಜುಮ್ಲಾ ರೂಪಾಯಿ	96,70,119- 2-7

ಕಳೆದ 22 ನೇ ತಾ. ಬಂಗಳಾದ ದೆಹಲಿ ಪಟ್ಟಣದಲ್ಲಿ ವೈಸ್‌ರಾಯರವರ ನ್ಯಾಯವಿಧಾಯಕ ಸಭೆಯು ನಡೆಯಿತು. ಅಲ್ಲಿ ಚರ್ಚೆಗಳು ನಡೆಯುವ ವಿಧಾನವನ್ನು ಸಾಕ್ಷಾತ್ತಾಗಿ ನೋಡಬೇಕೆಂದು ಮೈಸೂರು ಸಂಸ್ಥಾನದ ಮಹಾರಾಜರವರೂ, ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ ಡೇಲಿಯವರೂ ಆ ಮಹಾ ಸಭೆಗೆ ದಯಮಾಡಿದ್ದರು. ಒಂದಾನೊಂದು ಪ್ರಶ್ನೆಗೆ ಸರ್ಕಾರದ ಮೆಂಬರು ಕೊಟ್ಟ ಸಮಾಧಾನವೇನೆಂದರೆ —ಕಳೆದ ವರುಷ ಹಿಂದುಸ್ಥಾನದಲ್ಲೆಲ್ಲಾ ಅರು ದೇಶಭಾಷಾ ಪತ್ರಿಕೆಗಳ ಮೇಲೆ ಸರ್ಕಾರದವರು ಕ್ರಮ ನಡೆಸಿದರು. ಏಳು ದೇಶಭಾಷಾ ಪತ್ರಿಕೆಗಳಿಂದ ಹೆಚ್ಚು ಹಣವನ್ನು ಜಾಮೀನು ಇಡಿಸಿಕೊಂಡರು. 30 ವರ್ತಮಾನ ಪತ್ರಿಕೆಗಳು ಕಾರಣಾಂತರಗಳಿಂದ ನಿಂತುಹೋಗಿರುತ್ತವೆ. ಹಾಗೂ ಹಿಂದುಸ್ಥಾನದಲ್ಲೆಲ್ಲಾ 2,000 ಕ್ಕಿಂತಲೂ ಹೆಚ್ಚಾಗಿಯೇ ವರ್ತಮಾನ ಪತ್ರಿಕೆಗಳು ಪ್ರಕಟವಾಗುತ್ತಿರುವವು. ಹಿಂದುಸ್ಥಾನದಲ್ಲಿ ವಿದ್ಯೆ ಕಲಿತಿರುವ ಜನರು 180 ಲಕ್ಷ. ಪ್ರಜೆಗಳಾಗಿರುವುದರಿಂದ 9,000 ಪ್ರಜೆಗಳಿಗೆ ಒಂದು ಪತ್ರಿಕೆಯಂತೆ ಪ್ರಕಟವಾಗುತ್ತಲಿವೆ. ಮದರಾಸ್ ಅಧೀನ. ಒಂದರಲ್ಲೇ 1,800 ಪತ್ರಿಕೆಗಳ ತನಕ ಪ್ರಚಾರವಾಗುವವು.

ಹರ್ಬರ್ಟ್ ಡೆನಿಸಿ ಎಂಬೊಬ್ಬ ಯೂರೋಪಿಯನ್ ಸೈನ್ಯದ ನೌಕರನು ಬೊಂಬಾಯಿ ಪಟ್ಟಣದಲ್ಲಿ ಒಬ್ಬ ಗಾಡಿಯವನನ್ನು ಹಿಡಿದು ಹೊಡೆಯುತ್ತಿದ್ದಾಗ ಒಬ್ಬ ಎಂಬೊಬ್ಬ ಬ್ಯಾರಿಸ್ಟರು ಹೋಗಿ ಅವನಿಗೆ ಬುದ್ಧಿ ಹೇಳಿದನು. ಆ ಸೈನ್ಯದ ನೌಕರನು ಸಿಟ್ಟುಗೊಂಡು ಬ್ಯಾರಿಸ್ಟರನ್ನು ಬೈದು ಹೊಡೆದು ಬಿಟ್ಟನು. ಸಮೀಪದಲ್ಲಿ ನಿಂತಿದ್ದ ಪೋಲೀಸಿನವನಿಗೆ ತಿಳಿಸಿದರೂ ಅವನು ಆ ಸೈನ್ಯದ ನೌಕರನನ್ನು ಹಿಡಿಯಲಿಲ್ಲ. ಬಳಿಕ ಆ ಬ್ಯಾರಿಸ್ಟರು ಪೋಲೀಸ್ ಇನ್ಸ್‌ಪೆಕ್ಟರನ್ನು ಹುಡುಕಿಕೊಂಡು ಹೋಗಿ ಹೇಳಿದಾಗ ಯೂರೋಪಿಯನ್ ಇನ್ಸ್‌ಪೆಕ್ಟರು ಬ್ಯಾರಿಸ್ಟರನ್ನು ಕುರಿತು—ನೀವು ಅವನ ಜಗಳದಲ್ಲಿ ತಲೆಹಾಕಿದಿರಿ; ನಿಮಗೆ ತಕ್ಕದ್ದಾಯಿತು. ಅವನು ನಿಮ್ಮನ್ನು ಹೊಡೆದು ಬೈದದ್ದು ನನಗೆ ಸಂತೋಷವಾಯಿತು ಎಂದು ಹೇಳಿ ಕಳುಹಿಸಿಬಿಟ್ಟನು. ತರುವಾಯ ಬ್ಯಾರಿಸ್ಟರು ಆ ಸೈನ್ಯದ ನೌಕರನ ಮೇಲೆ ಕಾನೇ ವರಿಸಿದ್ದಕ್ಕೆ ವಿಚಾರಿಸಿದನು. ಮ್ಯಾಜಿಸ್ಟ್ರೇಟರು ಅವನಿಗೆ 25 ರೂಪಾಯಿ ಜುಲ್ಮಾನೆ ತಪ್ಪಿದರೆ 15 ದಿನ ಕಠಿಣ ಸಜಾ ಎಂದು ತೀರ್ಪು ಹೇಳಿ, ಮೇಲ್ಕಂಡ ಪೋಲೀಸಿನವರ ನಡವಳಿಕೆ ವಿಷಯದಲ್ಲಿ ಪೋಲೀಸ್ ಕಮಿಷನರಿಗೆ ತಿಳಿಸಬೇಕೆಂದು ಬ್ಯಾರಿಸ್ಟರಿಗೆ ಹೇಳಿ ಕಳುಹಿಸಿದನು.

ಕಲ್ಕತ್ತಾ ಪಟ್ಟಣದಲ್ಲಿ ಲಾರ್ಡ್ ಗೋಖಲೆಯವರ ಜ್ಞಾಪಕಾರ್ಥವಾಗಿ ಒಂದು ಸಂಘವನ್ನು ಪ್ರಾರಂಭಮಾಡಿದರು. ಈ ಸಂಘದ ಉದ್ದೇಶಗಳೇನೆಂದರೆ—ಹಿಂದುಸ್ಥಾನದ ಅಭ್ಯುದಯಕ್ಕೆ ಸಹಕಾರಿಯಾದ ಗ್ರಂಥಗಳನ್ನು ಇಟ್ಟು ಒಂದು ಪುಸ್ತಕಭಂಡಾರವನ್ನು ಕಲ್ಪಿಸುವುದು; (2) ಹಿಂದುಸ್ಥಾನದಲ್ಲಿ ಸಾರ್ವಜನಿಕ ವಾದ ವಿಚಾರಗಳನ್ನು ಚೆನ್ನಾಗಿ ಓದಿ ಪರಿಶ್ರಮಮಾಡಿಕೊಳ್ಳುವವರಿಗೆ ಬಹುಮಾನಗಳನ್ನೂ, ವಿದ್ಯಾಸನಗಳನ್ನೂ ಕೊಡುವುದು; (3) ಸಕಲ ಪ್ರಜೆಗಳಿಗೂ ಐಕ್ಯಮತ್ಯವನ್ನು ಹರಡುವುದು; (4) ಸಾರ್ವಜನಿಕವಾದ ವಿಚಾರಗಳನ್ನು ಕುರಿತ ಉಪನ್ಯಾಸಗಳನ್ನು ಮಾಡುವುದು, ಪುಸ್ತಕ ಹಸ್ತಪತ್ರಗಳೇ ಮೊದಲಾದ ಗ್ರಂಥಗಳನ್ನು ರಚಿಸಿ ಪ್ರಚಾರ ಮಾಡುವುದು; (5) ಪ್ರಜೆಗಳಿಗೆ ನಾನಾ ಭಾಗಗಳಲ್ಲಿ ಸೇವೆಯನ್ನು ಹೇಳಿ ಅಭಿವೃದ್ಧಿಗೆ ಬರುವಂತೆ ಮಾಡುವುದಕ್ಕೆ ವಿದ್ಯಾವಂತರನ್ನು ತಯಾರುಮಾಡಿ ದೇಶದ ಮೇಲೆಲ್ಲಾ ಕಳುಹಿಸಿಕೊಡುವುದು; (6) ಯೋಗ್ಯರಾದ ವಿದ್ಯಾರ್ಥಿಗಳಂಥಾ ಕೆಲಸಗಾರರಿಗೆ ಅಲೋವನ್ಸುಗಳನ್ನು ಕೊಡುವುದು. ಈ ಸಂಘದ ಪುಸ್ತಕ ಭಂಡಾರಕ್ಕೆ 10,000 ರೂಪಾಯಿನ ಗ್ರಂಥಗಳನ್ನು ಸ್ಥಭೀರ ಚಂದ್ರರವರು ಒದಗಿಸುವುದಾಗಿ ಒಪ್ಪಿಕೊಂಡಿದಾರೆ. ಮತ್ತು ಆ ಪಟ್ಟಣದ ದೊಡ್ಡ ಮನುಷ್ಯರಿಂದ 35,000 ರೂಪಾಯಿ ಫಂಡು ಕೊಡುವುದಾಗಿ ವಾಗ್ದಾನವಾಗಿದೆ. ಇನ್ನು ಎರಡು ತಿಂಗಳಲ್ಲೇ ಈ ಸಂಘದವರು ಉದ್ದೇಶ ಕಾರ್ಯಗಳನ್ನು ಪ್ರಾರಂಭ ಮಾಡುವವರಾಗಿದಾರೆ.

ಆಸ್ಟ್ರಿಯಾಕ್ಕೆ ಸೇರಿದ ಟೈರೋಲ್‌ನಲ್ಲಿ ಪರ್ವತಗಳ ಮೇಲಿನಿಂದ ಅಕಸ್ಮಾತ್ತಾಗಿ ಅಧಿಕವಾದ ಹಿಮಗಡ್ಡೆಗಳು ಉರುಳಿಬಂದು ಒಂದು ದೊಡ್ಡ ಮನೆಯನ್ನು ನಾಶಮಾಡಿದವು. 56 ಜನಗಳು ಮೃತಪಟ್ಟರು; 49 ಮಂದಿಗೆ ನಾನಾ ಗಾಯಗಳಾದವು; 30 ಮಂದಿ ಸಿಕ್ಕಿ ಇಲ್ಲ.

ಕೆನಡಾ ಎಂಬ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ಕ್ವಿಬೆಕ್ ಡಿಸ್ಟ್ರಿಕ್ಟಿನಲ್ಲಿ ಅಟ್ಟಾವ ಎಂಬ ಸ್ಥಳದಲ್ಲಿದ್ದ ರೋಮನ್ ಕ್ರೈಸ್ತರ ಪುರಾತನ ದೇವಾಲಯವು ಸುಟ್ಟು ಸುಮಾರು 12,00,000 ರೂಪಾಯಿ ನಷ್ಟವಾಯಿತು. ಜರ್ಮನಿ ದೇಶದವರೇ ಈ ಕೃತ್ಯವನ್ನು ನಡಿಸಿರಬೇಕೆಂದು ಊಹಿಸಲ್ಪಟ್ಟಿದೆ.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5—4—0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-46]

ಅಮೃತಾಂಜನ ಡಿಪೋ,

100, ಫ್ರೇರ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಸೂ. ಕೆ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

THE EMPEROR OF SCENTS.

"OTTO PUSHPALATA."

PERFUME OF SOCIETY.

ಮದುವೆ ಶೋಭನಗಳಲ್ಲಿ ನೀವು ಮುಖ್ಯವಾಗಿ "ಓಟೋ ಪುಷ್ಪಲತಾ" ಎಂಬ ಪರಿಮಳವನ್ನೇ ಉಪಯೋಗಿಸಬೇಕು. ಮಹದೈಶ್ವರ್ಯವಂತರೂ ಪ್ರಭುಗಳೂ ನಮ್ಮನ್ನು ಮೆಚ್ಚಿಕೊಳ್ಳುತ್ತಾರೆನ್ನುವುದಕ್ಕೆ ಸಂದೇಹವಿಲ್ಲ.

ಜಾಜೀ ಪುಷ್ಪಗಳ ವನದಲ್ಲಿ ಕೂಡ ಆ ಪುಷ್ಪಗಳು ಸಂಚಯವಾಗುತ್ತಲೇ ಬಾಡುವವು. ನಮ್ಮ ಈ ಪರಿಮಳದ ಎರಡು ಎರಡು ಬಿಂದುಗಳನ್ನು ಹಾಕಿಕೊಂಡರೆ ಒಂದು ವಾರದ ತನಕ ಅದರ ಸುವಾಸನೆ ಖಂಡಿತವಾಗಿ ಹೋಗದು. ಇದೇ ಮಧುಮಾಸ ಪ್ರವೇಶ; ತರಿಸಿ ಪರೀಕ್ಷಿಸಿ ನೋಡಿ.

ಕ್ರಯ ½ ಔನ್ಸ್ ಸೀಸೆಗೆ	ರೂ. 2 0–0.
,, 1 ಡ್ರಾಮ್ ,,	,, 0–12–0.

ಸರ್ವೋತ್ತಮ ರೋಮಹಾರಿ.

"ರಾಜಾ—ರಾಣಿ ಸೋಪ್."

ಈ ಸಾಬೂನು ಪ್ರಖ್ಯಾತವಾದದ್ದು. ಒಂದೇ ಸಲ ಹಚ್ಚುವುದರಿಂದ ದೇಹದ ಯಾವ ಕಡೆಯ ಕೂದಲಾದರೂ ಸೊಗಸಾಗಿ ಅಚ್ಚುಕಟ್ಟಾಗಿ ಹೋಗಿ ಬಿಡುತ್ತದೆ. ಇದನ್ನು ಹಚ್ಚುವುದರಿಂದ ಸ್ವಲ್ಪವಾದರೂ ಉರಿತವೂ ಬಾಧೆಯೂ ಆಗದು; ಲೇಶಮಾತ್ರವೂ ಕಲೆ ನಿಲ್ಲುವುದಿಲ್ಲ.

ಚರ್ಮಕ್ಕೆ ಸ್ವಭಾವ ಜನ್ಯವಾದ ರಕ್ಷೆ ಮರಗುಗಳನ್ನು ಕೊಡುವ ಗುಣವು ಈ ಸೋಪಿಗೆ ಉಂಟು. ಈ ಸೋಪನ್ನು ವಿಶಾರಿಸುವಂಥಾದ್ದು ಬೇರೊಂದಿಲ್ಲವೆಂದು ವಿಸ್ತಾರವಾದ ಪ್ರಖ್ಯಾತಿಯನ್ನು ಪಡೆದಿದೆ.

ಕ್ರಯ 3 ಬಿಲ್ಲೆ ಇರುವ ಪೆಟ್ಟಿಗೆಗೆ ರೂ. 1-0-0.

ದಯವಿಟ್ಟು ಇಂಗ್ಲಿಷಿನಲ್ಲೇ ನಮಗೆ ಕಾಗದ ಬರೆಯಬೇಕು. [64-1]

Sole Agents T. P. LAL & Co.
Barbhoi Mohalla, Bombay, 3.

ಸೋಲ್ ಏಜಂಟರು ಟಿ. ಪಿ. ಲಾಲ್ ಕಂಪನಿ,
ಬಾರ್ಭಾಯಿ ಮೊಹಲ್ಲಾ, ಬೊಂಬಾಯಿ, 3.

ಜಾಮೀನು ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲು ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.

ಮತ್ತು

ಕೂದಲಿಗೆ ರೇಷ್ಮೆಯಂಥಾ ಹೊಳಪೂ ನುಣುಪೂ ಬರುತ್ತೆ.

ನರೆಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ಪೆಟ್ಟಿಗೆ, ಬ್ರಷ್ ಮತ್ತು ಬಟ್ಟಲು ಸಹಿತ ಕ್ರಯ ರೂ. 1–0–0; ಪೋಸ್ಟೇಜ್ ಬೇರೆ.

ಹೊಸ ನಮೂನೆ ರೋಮಹಾರಿ.

ಇದು ಯಾವ ಶರೀರ ಭಾಗದಲ್ಲಾದರೂ ಹುಟ್ಟಿಗಿರುವ ಕೂದಲನ್ನು ಅಚ್ಚುಕಟ್ಟಾಗಿ ತೆಗೆಯುತ್ತೆ. ನೋಯುವುದಿಲ್ಲ; ಚರ್ಮಕ್ಕೆ ಕೆಡಿಸವಾಗದು. [282-13]

ಪೆಟ್ಟಿಗೆ ಒಂದಕ್ಕೆ ರೂ. 1-0-0. ಪೋಸ್ಟೇಜ್ ಬೇರೆ.

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು:—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
177, ಜೀನಾ ಬಜಾರ್ ರೋಡ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಜಪಾನ್, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ಶಾಶ್ವರ ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಣೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನ ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಬಿ. ಎನ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಸಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ."

[189-26] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ದರ್ಬಾರ್ ಸಾಬೂನು.

ಅಪಾಯವಿಲ್ಲದ ರೋಮಸಂಹಾರಿ.

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು. ಉರಿ, ಸೆಕೆ, ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದವರಿಗೆ ಗೊತ್ತಾಗುವದು. ಮರೆಯಬೇಡಿ. ಏಜಂಟರು ಬೇಕು. [63-1]

೩ ಸಾಬೂನುಗಳಿರುವ ಪೆಟ್ಟಿಗೆ ೧ಕ್ಕೆ ... ರೂ. ೦-೧೪-೦.
೩ ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ. ೧-೧೦-೦
ಅಂಚೆ ಹಾಸಲು ೪ ಆ. ವರ್ತಕರಿಗೆ ಅನುಕೂಲವಾಗಿ ಕೊಡುತ್ತದೆ.

V. A. S. PANI, ವಿಳಾಸ—ವಿ. ಎ. ಎಸ್. ಪಾಣಿ,
Erulappan St., Madras. ನಂ ೩, ಇರುಳಪ್ಪನ ಬೀದಿ, ಮದರಾಸು

ಅಮೇರಿಕನ್ ರೋಮಹರಿ.

ಕ್ರಯ ಡಬ್ಬಿ 1 ಕ್ಕೆ 4 ಆಣೆ, 3 ಡಬ್ಬಿಗಳಿಗೆ 8 ಆಣೆ.

ಇತರರು ರೋಮಹರ ಸೋಪೆಂದು ಮಾರುತ್ತಲಿರುವ ಸೋಪುಗಳಿಗೆ ನಾವು ಕಳುಹಿಸಿರುವ ಅಮೇರಿಕನ್ ರೋಮಹರಾ ಔಷಧವನ್ನು ಹಾಕಿ ಸಿಮೆಂಟನ್ನು, ಎಣ್ಣೆ, ಕರ್ಪೂರ ತೈಲ ಮೊದಲಾದವುಗಳನ್ನು ಸೇರಿಸಿ ಸೋಪಿನ ಹಾಗೆ ಬಿಲ್ಲೆ ಮಾಡಿ ಡಬ್ಬಿಯಲ್ಲಿಟ್ಟು ಮೋಸ ಮಾಡುತ್ತಾರೆ. ನಮ್ಮ ಅಮೇರಿಕನ್ ರೋಮಹರಿಯು ಘಾಟು ಹೋಗದ ಹಾಗೆಯೂ, ಎಣ್ಣೆ, ಸುಣ್ಣ ಕರ್ಪೂರ ತೈಲಗಳಿಂದ ಸೇರದೆಯೂ ಕಯಾರಿಸಿ ತಿರುಪಿನ ಸೀಸೆಯಲ್ಲಿ ಗಟ್ಟಿಯಾಗಿ ಬಿಗಿಸಿರುವದರಿಂದ ಇದನ್ನು ಕೂದಲುಗಳ ಮೇಲೆ ಸವರಿದ ಕ್ಷಣ ಮಾತ್ರದಲ್ಲಿ ರೋಮಗಳು ಉದುರಿ ಆ ಸ್ಥಳವು ನುಣ್ಣಗಾಗುತ್ತೆ. ಪರೀಕ್ಷಿಸಲಪೇಕ್ಷಿಸುವವರು ತರಿಸಿ ಉಪಯೋಗಿಸುವದರಿಂದಲೇ, ಪಾಸಿಸೆಯಿಂದಲೂ ಇದರ ಶಕ್ತಿಯನ್ನು ತಿಳಿಯಬಹುದು.

ಮಾರ್ಚಿ ಮಹೋತ್ಸವದ ಕೈಗಡಿಯಾರ.

ಅರ್ಧ ಕ್ರಯ ರೂ. 1-14-0.



ಅದೇ ಮಾರ್ಚಿ ಹಬ್ಬದ ಮಹೋತ್ಸವಕ್ಕಾಗಿ ಈ ಥಾರಿ ಕ್ರಯದ ಕೈಗಡಿಯಾರವನ್ನು ಡಿಸೆಂಬರ್ ಒಳಗೆ ಕರಿಸಿಕೊಳ್ಳುವರಿಗೆ ರೂ 1-14-ಆಣೆಗೆ ಕೊಡಲ್ಪಡುವುದು. [111-40]

ಮಧುರೆ ಜುನ್ನಡಿ ಅಂಚಿನ ಸೀರೆ ಅಪ್ಪಲ್ ರವಿಂ ರೂ. 3-0-0

ಮಾರ್ಚಿ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಒಂದು ಸಿಂಗಪೂರು ರುಮಾಲೆಯನ್ನು ಪ್ರತಿ ಸೀರೆಗೂ ಇನಾಮಾಗಿ ಕೊಡುತ್ತೇವೆ.

ಇದು ಉಡುವುದಕ್ಕೆ ಧಡೂತಿಯಾಗಿಯೂ ನೋಟಕ್ಕೆ ನಯವಾಗಿಯೂ ಬೆಲೆ ಸುಲಭವಾಗಿಯೂ ಇದೆ. ಬಣ್ಣ ಹೋಗದು ಸೀರೆಯ ಉದ್ದ 18 ಮೊಳ ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ.

ವಿಳಾಸ. ಎ. ಕೆ. ಕಂಪೆನಿ ಅಂಡ್ ಕಂಪನಿ. 24 ವಿನಾಯಕ ಮೇಸ್ತ್ರೀ ಬೀದಿ, ಮದರಾಸು

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-33]

First Valuation Result:—The total liabilities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

"ಈ ವಾಯುವಿನಿಂದ ನಾನು ... ಹೊಂದುವೆನು, ಈ ಕಠಿಣ ರೋಗವನ್ನು ನಿಲ್ಲಿಸುವೆನು, ನಾನು ಆರೋಗ್ಯವಂತನಾಗಿ ... ಜೀವದಲ್ಲಿ ಸಂತೋಷಪಡುವೆನೆಂದು ... ಮನಸ್ಸು ನಿರಾಶೆಗೊಂಡಿದ್ದರು," ... ಪೇಟೆಯಲ್ಲಿ ವಾಸಮಾಡುವ ... ಬರೆಯುವರು ... ಕುರಿತು ಓದು.

"... ವರುಷಗಳ ಕಾಲ ... ವಾಯುವಿನಿಂದ ಕಷ್ಟ ... ನನಗೆ ತಿಳಿದ ಔಷಧವನ್ನೆಲ್ಲಾ ... ನೋಡಿದೆನು. ಉತ್ತಮ ವೈದ್ಯರ ಆಲೋಚನೆಗಾಗಿಯೂ ಔಷಧಗಳಿಗಾಗಿಯೂ 150 ರೂ ... ಗಳನ್ನು ಖರ್ಚುಮಾಡಿದೆನು. ರಾತ್ರಿ ವೇಳೆಗಳಲ್ಲಿನ ನೋವು ಅಧಿಕವಾಗಿದ್ದ ... ನಿದ್ರೆಯೇ ಬರುತ್ತಿರಲಿಲ್ಲ. ... ಡಾ|| ವಿಲಿಯಮ್ಸ್‌ರ ಪಿಂಕ್ ಪಿಲ್ಸ್ ... ಕೊಂಡು ... ನನ್ನನ್ನು ಸಂಪೂರ್ಣವಾಗಿ ... ವಾಸಿಮಾಡಿತು. ... ವರುಷಗಳಲ್ಲಿ ... ಎವರೂ ನನಗೆ ನೋವು ಬರಲಿಲ್ಲ."

ಔಷಧ ... ಮಾರುವವರೆಲ್ಲರಲ್ಲಿಯು ಸೀಸೆ 1ಕ್ಕೆ 1 ರೂಪಾಯಿಯಂತೆ ಮಾರಲ್ಪಡುತ್ತೆ. [81-45]

"ಹನುಮಾನ್"

ಬೋ... ಕ್ಸ... ಬ...

ಹನುಮಾನ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ದೇಹ ಸಂಚೆಯಿಗೆ ಸಮಾನವಾದ ವಸ್ತುಗಳು ಸೇವೆ. ... ಸುಣ್ಣ, ಬಿಚ್ಚ, ತುರಿ ಮೊದಲಾದ ವ್ಯಾಧಿಗಳು ಹನುಮಾನ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುತ್ತವೆ. ಕೂದಲಿಗೆ ನುಣುಪು ಮತ್ತು ಕಳೆಯನ್ನೂ ಕೊಡುವುದರಲ್ಲಿ ಹನುಮಾನ್ ಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾನ್ ಸಾಬೂನಿನಿಂದ ಬೆಳಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ.—ಸ್ತ್ರೀ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ... ಕೃತ್ಯದಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನಿಗೆ ಸಮಾನ ಸಾಬೂನೂ ಇಲ್ಲ.—ಹುಡುಗರು, ಹುಡುಗಿಯರು, ಯೌವನಸ್ಥರು ಮತ್ತು ವೃದ್ಧರ ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾನ್ ಸಾಬೂನನ್ನು ಉಪಯೋಗಿಸಿದವರು ... ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ಹೇಳುತ್ತೇವೆ.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಹರುಗಳಲ್ಲಿ ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾನ್ ಗುರ್ತು ಇರುವದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಶಾ. ಕ:—ಎಲ್ಲರೂ ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆಯಬೇಕು. ಬೆಂಗಳೂರು ಸಿಟಿ ಮೆ|| ಎಚ್. ದಾಸಪ್ಪನವರಲ್ಲಿ ಬಿಕರಿಗೆ ಇಟ್ಟಿದೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್, [211-21] ... ಬಜಾರ್ ರೋಡ್, ಮದರಾಸು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

18 3 – 1916 ರಿಂದ 25 2 1916 ರ ವರೆಗೆ

ಸ್ಥಳ		ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು
ಬೆಂಗಳೂರು	ಪಟ್ಟಣ	3	2	0
ಮೈಸೂರು	,,	0	0	0
ಬೆಂಗಳೂರು ಡಿಸ್ಟ್ರಿಕ್ಟು		20	10	0
ಮೈಸೂರು	,,	36	18	0
ಕೋಲಾರ್	,,	19	11	0
ಕೋಲಾರ್ ಚಿನ್ನದ ಗಣಿಗಳು		7	4	0
ತುಮಕೂರು ಡಿಸ್ಟ್ರಿಕ್ಟು		0	0	0
ಹಾಸನ	,,	6	1	0
ಚಿತ್ರದುರ್ಗ	,,	26	12	0
ಕಡೂರ್	,,	17	10	0
ಶಿವಮೊಗ್ಗ	,,	15	11	0
	ಜುಮ್ಲಾ	119	82	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರದ ಉತ್ತರಾಯಣ ಶಿಶಿರಋತು ಫಾಲ್ಗುಣ ಶುದ್ಧ ಪಕ್ಷ ಶುಕ್ರವಾರದಿಂದ ಫಾಲ್ಗುಣ ಶುದ್ಧ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1916 ನೇ ಮಾರ್ಚ.

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	...
10	ಶುಕ್ರ *	ಷಷ್ಠಿ	7-0	ಕೃತ್ತಿಕೆ	13-6	28
11	ಶನಿ †	ಸಪ್ತಮಿ	11-11	ರೋಹಿಣಿ	18-41	29
12	ಭಾನು ‡	ಅಷ್ಟಮಿ	16-7	ಮೃಗಶಿರ	24-55	30
13	ಸೋಮ ,,	ನವಮಿ	21-26	ಆರಿದ್ರಾ	31-32	1
14	ಮಂಗಳ §	ದಶಮಿ	26-44	ಪುನರ್ವಸು	38-3	2
15	ಬುಧ ::	ಏಕಾದಶಿ	31-29	ಪುಷ್ಯ	44-0	3
16	ಗುರು ;;	ದ್ವಾದಶಿ	35-26	ಆಶ್ಲೇಷ	49-10	4

* ಮಳೆ ನಕ್ಷತ್ರ—ಪೂರ್ವಾಭಾದ್ರ, 3 ನೇ ಪಾದ. † ಮೇಲುಕೋಟೆ ... ಕಲ್ಯಾಣೋತ್ಸವ, ಶ್ರೀರಂಗದಲ್ಲಿ ಬ್ರಂಹ್ಮೋತ್ಸವಾರಂಭ. ‡ ನವಮಿ ... ,, ಶೂನ್ಯತಿಥಿ ಹಡಿಹಿತ ಪುಷ್ಪಶಾಲ, ಕಾರಗಾಲದ ಹಬ್ಬ, ಮಳೆ ನಕ್ಷತ್ರ—ಪೂರ್ವಾಭಾದ್ರ, 4 ನೇ ಪಾದ. § ಸರ್ವತ್ರ ದಶಮಿ ತಿಥಿ, ನಂದನಗಡಿಹಲ್ಲಿ ಶ್ರೀಕಂಠೇಶ್ವರ ... ಉತ್ಸವ. :: ಸರ್ವತ್ರ ಏಕಾದಶಿ, ಮೇಲುಕೋಟೆಯಲ್ಲಿ ವೈರಮುಡಿ ಉತ್ಸವ, ಚೆಲುವರಾಯ ಜಯಂತಿ, ಜಯಲಕ್ಷ್ಮಮ್ಮಣ್ಣಿಯವರ ವರ್ಧಂತಿ. ;; ಚಾಮರಾಜೇಶ್ವರ ರಥ, ಚಂದ್ರಪುರದ ಚಂದ್ರಮೌಳೀಶ್ವರ ರಥ ಮಳೆ ನಕ್ಷತ್ರ—ಉತ್ತರಾಭಾದ್ರ, 1 ನೇ ಪಾದ.

Useful in Peace and War **FIRST AID IN ACCIDENTS,** BY DR. U RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ಗಾಯ, ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ಮಾಡಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು ರಾಮರಾವ್ ಇವರಿಂದ ರಚಿತವಾಗಿ ಮದರಾಸ್ ಕ್ರಿಶ್ಚಿಯನ್ ಕಾಲೇಜು ಪಂಡಿತರಾದ ದೇವಶಿಖಾಮಣಿ ಅಳಸಿಂಗರಾಚಾರ್ಯರಿಂದ ಸುಲಭವಾದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿದು.

DEDICATED TO H. H. THE MAHARAJA OF MYSORE

ಅಪಾಯಕ್ಕೆ ಗುರಿಯಾದ ಮನುಷ್ಯನ ಅದೃಷ್ಟವು, ಮೊದಲು ಅವನು ಯಾರ ಕೈಗೆ ಸಿಕ್ಕಿಬೀಳುವನೋ, ಅವರ ಕಾರ್ಯಗಳಿಗೆ ತಕ್ಕಂತಿರುವುದು. ಸಾಧಾರಣವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಏನಾದರೂ ಅಪಾಯ ಸಂಭವಿಸಿದ ತಕ್ಷಣದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪುಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ಮೊದಲು ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆಯಾ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡಿಸಿದ್ದರೆ, ನಿಸ್ಸಂದೇಹವಾಗಿ ಬದುಕಬಹುದಾಗಿದ್ದ ಪ್ರಾಣವು ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು. ಈ ವಿಧವಾಗಿ ಪ್ರತಿ ವರ್ಷವೂ ಎಷ್ಟೋ ಬೆಲೆಯುಳ್ಳ ಜೀವಗಳು ಮರಣಹೊಂದುತ್ತಿರುವುವು.

ಒಬ್ಬ ಮನುಷ್ಯನಿಗೆ ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯಾಗಲಿ, ಇಲ್ಲವೇ ಯಾವುದಾದರೂ ಅಪಾಯವಾಗಲಿ ಸಂಭವಿಸಿದಾಗ, ಸಮರ್ಥರಾದ ವೈದ್ಯರ ಸಹಾಯವು ಬಂದೊದಗುವುದರೊಳಗಾಗಿ, ತತ್ಕಾಲಕ್ಕೆ ತಮ್ಮ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ವಿಶಿಷ್ಟವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಆದಷ್ಟಾಗಿ ಪ್ರತ್ಯೇಕವಾದ ತಿಳುವಳಿಕೆಯನ್ನು ಹೊಂದಿಯೇ ಲಭಿಸಬೇಕು.

"ಅಲ್ಪಜ್ಞಾನವು ಅಪಾಯಹೇತು" ಎಂಬ ನಾಣ್ಣುಡಿಯು ಲೋಕದಲ್ಲಿ ವಾಡಿಕೆಯಿದ್ದರೂ, ಇತರ ವಿಷಯಗಳಲ್ಲಿ ಇದಕ್ಕೆ ಪ್ರಾಧಾನ್ಯವನ್ನು ಕೊಡಬಹುದೇ ಹೊರತು, ಪ್ರಥಮ ಚಿಕಿತ್ಸೆಯ ವಿಷಯದಲ್ಲಿ ಆ ನಿಯಮವಿಲ್ಲ. ಇದರಲ್ಲಿ ಅತ್ಯಲ್ಪ ಜ್ಞಾನವಿದ್ದರೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ಅತ್ಯಂತವಾದ ವೇದನೆಯನ್ನು ನಿಗ್ರಹಿಸಬಹುದು! ಎಷ್ಟೋ ಪ್ರಾಣಗಳನ್ನು ಉಳಿಸಬಹುದು! ಬಹಳವಾಗಿ ರಕ್ತಸ್ರಾವಕ್ಕೆ ಕಾರಣವಾದ ಮಹಾ ವಿಪತ್ತುಗಳಲ್ಲಿಯೂ ಬೆಂಕಿ ತಗಲುವುದು, ಮೂಳೆ ಮುರಿಯುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ, ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಿಗಳೂ ಕೂಡ, ಸಮರ್ಥರಾದ ವೈದ್ಯರು ಬರುವಷ್ಟರೊಳಗಾಗಿ ಏನು ಮಾಡಬೇಕೆಂಬುದನ್ನು ತಿಳಿಯದೆ ಹೋಗುವುದರಿಂದ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸಾಕ್ರಮದಲ್ಲಿ ಅತ್ಯಲ್ಪ ಜ್ಞಾನವನ್ನು ಪಡೆದು, ಅದನ್ನುಪಯೋಗಿಸುವುದರಿಂದಲೇ ಸಾಯುವ ಸ್ಥಿತಿಯಲ್ಲಿದ್ದ ಸಾವಿರಾರು ಜೀವಗಳು ಬದುಕಿಕೊಂಡಿರುವುವು. [61-2]

ಸಾಮಾನ್ಯವಾಗಿ ಬೀದಿಯಲ್ಲಿಗೆ ಅಪಾಯವುಂಟಾದ ಸಂದರ್ಭವನ್ನು ನೋಡಿದಾಗ, ಅವರಿಗೆ ಸಹಾಯಮಾಡಬೇಕೆಂಬ ಬುದ್ಧಿಯು ಎಲ್ಲರಿಗೂ ಹುಟ್ಟುವುದು ಸಹಜವು. ಆದರೆ ಯಾವ ಸಂದರ್ಭಗಳಲ್ಲಿ ಹೇಗೆ ಮಾಡಬೇಕೆಂದು ತಿಳಿಯದೆ ಅನೇಕ ಜನರು ಈ ವಿಷಯದಲ್ಲಿ ಪ್ರವರ್ತಿಸುತ್ತಲೇ ಹೆದರುವರು. ಹಾವು ಕೈಯಿಡುವುದರಿಂದ ಮೊದಲಿದ್ದು ದಕ್ಕಿಂತಲೂ ಹೆಚ್ಚಾದ ಅಪಾಯಕ್ಕೆ ಕಾರಣವಾಗಬಹುದೆಂಬ ಭಯದಿಂದ ಕೆಲವರು ಹಟಕ್ಕರಾಗುವರು.

ಆದಕಾರಣ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೈಕಾಲುಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ, ಅಗ್ನಿಗಂಡ, ನರಗಳು ಕಡಿಯುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಸೌಕರ್ಯಗಳನ್ನು ಕಲ್ಪಿಸಿಡುವುದು, ಇನ್ನೂ ಇದರಂತೆಯೇ ಅನೇಕ ವಿಷಯಗಳುಂಟು ಇದರಲ್ಲಿ 126 ಚಿತ್ರಪಟಗಳೊಡನೆ ಇಷ್ಟು ವಿಷಯಗಳಿದ್ದರೂ, ಸರ್ವಸಾಮಾನ್ಯವಾಗಿ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆಮಾಡಿರುವೆವು.

ಪುಸ್ತಕದ ಬೆಲೆ 0—8—0, ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣನ್ ಬ್ರದರ್ಸ್, 323, ತಂಬೂಚೆಟ್ಟಿ ಬೀದಿ, ಮದರಾಸು. ಪೋಸ್ಟು ಬಾಕ್ಸ್ 166.

Printed and Published by the Rev. H. Gulliford, Proprietor and Manager, Wesleyan Mission Press, Mysore. 9/3/1916.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ | ಮೈಸೂರು—ಸ್ ೧೯೧೬ ನೇ ಇಸವಿ ಮಾರ್ಚಿ ತಾರೀಖು ೧೬ ನೇ ಗುರುವಾರ. | ಸಂಚಿಕೆ ೪೨

FREE! Do you wish to know "How to Make the Best Quality ROSE, JASMINE, LILY, LOTUS Sweet Scented Hair Oils at a very cheap cost at your own house? If so, please write us at once and mention this paper. [263-12]

S. PAUL & Co., *Perfumers,*
1, Hospital Street, Dharamtola, **Calcutta.**

ಅರೇಬಿಯನ್ ನೈಟ್ಸ್

ಎಂಬ

೧೦೦೧ ವನ ಯಾಮಿನೀ ವಿನೋದ ಕಥೆಗಳು.

[ಕನ್ನಡದಲ್ಲಿ]

ಲೋಕಪ್ರಸಿದ್ಧವಾದ ಈ ಪುಸ್ತಕ ಮೊದಲನೇ ಮುದ್ರಣದ ಪ್ರತಿಗಳೆಲ್ಲಾ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸುತ್ತೇವೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ವಗೈರೆ ಕೆಲಸಗಳು ಮೈಸೂರ್ ಪ್ರೆಸ್ಸಿನಲ್ಲಿ ಬಹು ವಿಶೇಷವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಸ್ವತಃ ಪಂಡಿತರು ಅನುಭವಪೂರ್ವಕವಾಗಿ ಪರಿಶೀಲಿಸಿ ಮಾಡಿ ತಿದ್ದಿ ಬರೆಯುತ್ತಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿರುವುದಲ್ಲದೆ ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ಸಾವಿರಾರು ಪುಟಗಳಿಂದ ಕೂಡಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ಅಂಚೆ ರೂ. 2-4-0 ಮುಂಗಡ ನೋಡಿ. [230-36]

ವಿಳಾಸ—ವಾಣೀವಿಲಾಸ, ಸಿ. ಎಲ್. ಎನ್. ಬುಕ್ ಡಿಪೋ, ಮೈಸೂರು.

"ಸಂಗೀತ ವಿದ್ಯಾದಾಯಿನಿ."

ಕ್ರಯ 12 ಆಣೆ.

ಇದರಿಂದ ಸಹಾಯವಿಲ್ಲದೆ ತಾವಾಗಿಯೇ ಕಲಿತು ಸಂಗೀತಗಾರರಾಗಬೇಕೆಂದರೆ, ಹಾಮೋನಿಯಂ ನುಡಿಸಬೇಕೆಂದೂ ಅಪೇಕ್ಷಿಸುವವರಿಗೆ ಬೇರಾವ ಸಾಧನವನ್ನು ಚೆನ್ನಾಗಿ ಬೋಧಿಸತಕ್ಕ ಗ್ರಂಥವು ಇದೊಂದೇ. ಕಲಿಯುವವರಿಗೆ ಸುಲಭವಾಗಿ ತಿಳಿಯುವಂತೆ ಇದರಲ್ಲಿನ ಗೀತ, ವರ್ಣ, ಕೃತಿಗಳು ಸ್ವರ, ಸಾಹಿತ್ಯ, ತಾಳ ಗುರುತುಗಳಿಂದ ಬರೆಯಲ್ಪಟ್ಟಿವೆ. ತಾವುಗಳಾದರೆ ಬೇಗನೆ ತರಿಸಿಕೊಳ್ಳಿ.

ಸಂಗೀತ ಚಂದ್ರಿಕೆ.—ವರ್ಷದ ಚಂದಾ ರೂ. 3-0-0 [74-1]

ಸಿ. ಪುಟ್ಟಯ್ಯ ಬ್ರದರ್ಸ್, ಜೋಲಾರಪೇಟ್ ರೈಲ್ವೆ ಡಿಪೋ, ಸೇಲಂ ಜಿಲ್ಲೆ.

ಲೋವರ್ ಸೆಕೆಂಡರಿ ಪರೀಕ್ಷೆಯ

ಗಣಿತಪ್ರಶ್ನೋತ್ತರಾವಳಿ

ಈ ಪುಸ್ತಕದಲ್ಲಿ ಅನೇಕ ಸುಲಭ ಮಾರ್ಗಗಳೂ ಮತ್ತು 1910—15 ರ ವರೆಗೆ ಪ್ರಶ್ನೆಗಳೂ, ವ್ಯಾಖ್ಯಸಹಿತವಾದ ಉತ್ತರಗಳೂ ಇರುತ್ತವೆ. ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ. ಕ್ರಯ 8 ಆ.; ವಿ. ಪಿ. 10 ಆ. ಪುಸ್ತಕಗಳು ದೊರೆಯುವ ಸ್ಥಳಗಳು:—(1) ಡಿ. ಮಹಾಬಲರಾವ್ ಬಿ. ಎ., 391, ಶಿವರಾಂಪೇಟೆ, ಮೈಸೂರು; (2) ಸ್ಟೂಡೆಂಟ್ಸ್ ಹಾಲ್, ಮೈಸೂರು; (3) C. L. S. ಬುಕ್ ಡಿಪೋ, ಮೈಸೂರು; (4) ವಿದ್ಯಾಕರ ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ; (5) P. T. I. ಬುಕ್ ಡಿಪೋ, ಚಾಮರಾಜಪೇಟೆ, ಬೆಂಗಳೂರು ಸಿಟಿ; (6) R. S. ಅಂಡ್ ಕೊ, ಅವೆನ್ಯೂ ರೋಡ್, ಬೆಂಗಳೂರು ಸಿಟಿ. [68-2]

ಮೈಸೂರು ಸ್ಟೇಟ್ ರೈಲ್ವೆಗಳು.

[ಕೋಲಾರ್ ಡಿಸ್ಟ್ರಿಕ್ಟು ಮತ್ತು ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ್ ರೈಲ್ವೆಗಳ ಸಹಿತ.]

ನೋಟೀಸ್.

ಕೋಲಾರ್ ಡಿಸ್ಟ್ರಿಕ್ಟು ರೈಲ್ವೆಯಲ್ಲಿ

ಕೋಲಾರ್ ಚಿಂತಾಮಣಿ ಸೆಕ್ಷನ್‌ನಲ್ಲಿ ಆಮದು ರಫ್ತು ಪ್ರಾರಂಭ.

ಕೋಲಾರ್ ಡಿಸ್ಟ್ರಿಕ್ಟ್ ರೈಲ್ವೆಗೆ ಸಂಬಂಧಪಟ್ಟ ಕೋಲಾರ್-ಚಿಕ್ಕಬಳ್ಳಾಪುರ ಸೆಕ್ಷನ್ ಪೈಕಿ ಜನ್ನಘಟ್ಟ, ದಲಸನೂರು, ಶ್ರೀನಿವಾಸಪುರ, ದೊಡ್ಡನೆಟ್ಟ, ಚಿಂತಾಮಣಿ ಎಂಬ ಭಾಗದ ರೈಲ್ವೆ ಕೆಲಸಗಳು ಪೂರೈಸಿರುವುದರಿಂದ ಈ ಭಾಗದಲ್ಲಿ ಪ್ರಯಾಣಿಕರನ್ನೂ ಪಾರ್ಸೆಲ್ ಲಗ್ಗೇಜು ಬಗೆಯ ವ್ಯಾಪಾರದ ಸಾಮಾನುಗಳನ್ನೂ 1916 ನೇ ಇಸವಿ ಮಾರ್ಚ್ ತಾ 6 ನೇ ಸೋಮವಾರದಿಂದ ಆಮದು ರಫ್ತು ಸುರು ಮಾಡಲಾಗುತ್ತದೆ. ಪ್ರಾಣಿಗಳ, ಅಪಾಯಕರವಾದ ಸರಕುಗಳ ಮತ್ತು ಬಿಡಿಯಾದ ಸರಕುಗಳ ಹೊರತು ಉಳಿದ ಎಲ್ಲಾ ಆಮದು ರಫ್ತುಗಳೂ ಅದೇ ತಾರೀಖಿನಿಂದ ಜನ್ನಘಟ್ಟ, ಶ್ರೀನಿವಾಸಪುರ, ಚಿಂತಾಮಣಿ ಸ್ಟೇಷನ್ನುಗಳಿಂದ ಬಳಸಲಾಗುವುದಲ್ಲದೆ, ಬೋರಿಂಗೆ ಸರಕುಗಳನ್ನು ರವಾನೆ ಮಾಡಲ್ಪಡುತ್ತೆ.

ಬೌರಿಂಗ್‌ಪೇಟೆ-ಚಿಂತಾಮಣಿ ರೈಲ್ ರಸ್ತೆಗಳಲ್ಲಿ ರೈಲ್ವೆ ಗಾಡಿಗಳು ಹೋಗಿ ಬರುವ ಕಾಲಗಳನ್ನು ಕೆಳಗಿನ ತಃಖ್ತೆಯಲ್ಲಿ ಪ್ರಕಟಿಸಲಾಗಿದೆ:—

ಅಪ್ ಟ್ರೈಯಿನ್‌ಗಳು. (ಕೆಳಕ್ಕೆ ಓದಿ)			ಸ್ಟೇಷನ್‌ಗಳು.			ಡೌನ್ ಟ್ರೈಯಿನ್‌ಗಳು. (ಮೇಲಕ್ಕೆ ಓದಿ)		
ನಂ. 1	ನಂ. 3	ನಂ. 5				ನಂ. 2	ನಂ. 4	ನಂ. 6
ಗಂ. ನಿ.	ಗಂ. ನಿ.	ಗಂ. ನಿ.		ಮದರಾಸ್ ದಕ್ಷಿಣ ಮರಾಟಾ ಟ್ರೈಯಿನ್‌ಗಳು.		ಗಂ. ನಿ.	ಗಂ. ನಿ.	ಗಂ. ನಿ.
9-18	13-46	...	ಬರು ಗೆ	ಬೆಂಗಳೂರು ಕಡೆ	ಹೊರ	13-47	8-36	16-30
9-25	13-39	16-18	ಬರು ಗೆ	ಕೋಲಾರ್ ಚಿನ್ನದ ಗಣಿ ರೈಲ್ವೆ ಕಡೆ	ಹೊರ	14- 5	8-45	16-41
4-10	13-30	16-20	ಬರು ಗೆ	ಮದರಾಸ್ ಕಡೆ	ಹೊರ	14- 0	8-41	23-35
9-35	14-10	16-50	ಹೊರ ಗೆ	ಬೌರಿಂಗ್‌ಪೇಟೆ	ಬರು	12-30	8- 6	16- 6
10-31	14-56	17-30	ಬರು	ಕೋಲಾರ	ಹೊರ	11-50	7-20	15-20
10-35			ಹೊರ		ಬರು	11-37		
11-54			ಬರು	ಶ್ರೀನಿವಾಸಪುರ	ಹೊರ	10-18		
12- 5			ಹೊರ		ಬರು	10- 8		
12- 3			ಬರು	ಚಿಂತಾಮಣಿ	ಹೊರ	9-10		

ಎಲ್ಲಾ ಸ್ಟೇಷನ್‌ಗಳಿಂದಲೂ ಹೊರಡುವ ಮತ್ತು ತಲಪುವ ಕಾಲಗಳನ್ನೂ, ಛಾರ್ಜುಗಳ ದರಗಳನ್ನೂ ತಿಳಿಯಬೇಕಾದರೆ ಸ್ಟೇಷನ್‌ಗಳಲ್ಲಿ ಅಂಟಿಸಿರುವ ಇಸ್ತಿಹಾರ್ ನೋಟೀಸುಗಳನ್ನು ನೋಡಿ.

ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಮೇಲೆ ಯಲಹಂಕದಿಂದ ಚಿಕ್ಕಬಳ್ಳಾಪುರಕ್ಕೆ ರೈಲ್ ಗಾಡಿಗಳು ಹೋಗಿ ಬರುವ ಕಾಲಗಳನ್ನೂ ಮೊದಲನೇ ತಾರೀಖಿನಿಂದಲೇ ಸ್ವಲ್ಪ ಮಟ್ಟಿಗೆ ಬದಲಾವಣೆ ಮಾಡಲ್ಪಟ್ಟಿದೆ. ಈ ಸಂಗತಿಯನ್ನು ತಿಳಿಯಬೇಕಾದರೆ ಸ್ಟೇಷನ್‌ಗಳಲ್ಲಿ ಅಂಟಿಸಿರುವ ನೋಟೀಸು ನೋಡತಕ್ಕದ್ದು. [62-2]

ಟೆಲಿಗ್ರಾಫ್ ಆಫೀಸುಗಳು.—ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ರಸ್ತೆಯಲ್ಲಿ ಯಲಹಂಕ, ದೊಡ್ಡಜಾಲ, ದೇವನಹಳ್ಳಿ, ಆವತಿಹಳ್ಳಿ, ನಂದಿ, ಚಿಕ್ಕಬಳ್ಳಾಪುರ—ಈ ಸ್ಟೇಷನ್‌ಗಳಲ್ಲೂ; ಕೋಲಾರ್ ಡಿಸ್ಟ್ರಿಕ್ಟ್ ರೈಲ್ವೆಗೆ ಸೇರಿದ ಬೌರಿಂಗ್‌ಪೇಟೆ, ಕೋಲಾರ, ಜನ್ನಘಟ್ಟ, ಶ್ರೀನಿವಾಸಪುರ—ಈ ಸ್ಟೇಷನ್‌ಗಳಲ್ಲೂ ಟೆಲಿಗ್ರಾಫ್ ಆಫೀಸುಗಳನ್ನು ಇಟ್ಟಿದೆ. ದಿನವೂ ಬೆಳಿಗ್ಗೆ 6 ಗಂಟೆ ಮೊದಲುಗೊಂಡು ರಾತ್ರಿ 8 ಗಂಟೆ ವರೆಗೆ ಯಾರು ಬೇಕಾದರೂ ಈ ಆಫೀಸುಗಳಲ್ಲಿ ಟೆಲಿಗ್ರಾಮುಗಳಿಗೆ ತಂತಿ ವರ್ತಮಾನಗಳನ್ನು ಕೊಟ್ಟು ಕಳುಹಿಸಿಕೊಳ್ಳಬಹುದು. ತಂತಿ ವರ್ತಮಾನಗಳ ಛಾರ್ಜು ಮುಂತಾದ ಸಂಗತಿಗಳನ್ನು ಗವರ್ನ್‌ಮೆಂಟ್ ಟೆಲಿಗ್ರಾಫ್ ಇಲಾಖೆಯಿಂದ ಪ್ರಕಟಿಸಲ್ಪಟ್ಟಿರುವ ಇಂಡಿಯನ್ ಟೆಲಿಗ್ರಾಫ್ ಗೈಡ್ ಪುಸ್ತಕವನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಟ್ರಾಫಿಕ್ ಮ್ಯಾನೇಜರವರ ಆಫೀಸ್, ಬೆಂಗಳೂರು, 29 ನೇ ಫೆಬ್ರವರಿ, 1916. | ಬಿ. ವೆಂಕೋಬರಾವ್, ಟ್ರಾಫಿಕ್ ಮ್ಯಾನೇಜರ್.

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಪತ್ರಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜು ಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ ಪ್ರತಿಗೆ ರೂ. 1-12-0 [158-39]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಪ್ರಶ್ನೋತ್ತರ ಲೇಖ್ಯಬೋಧಿನಿ ಕ್ರಯ ೧-೮-೦

ಸಿವಿಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ಸಮಸ್ತ ವಿಚಾರಗಳನ್ನೂ, ವ್ಯವಹಾರಗಳನ್ನೂ, ಬೋಧಕರ ಸಹಾಯವಿಲ್ಲದೆ ತಿಳಿಸುತ್ತದೆ. ಅಂದಿಯ ಮುದ್ರಣ, ಸ್ವಲ್ಪವೇ ಉಳಿದಿರುವ ಪ್ರತಿಗಳು! ಬೇಗ ಬೇಗ ಬರೆದು ತರಿಸಿಕೊಳ್ಳಿರಿ!!

ಕ್ರಯ ಒಂದು ರೂಪಾಯಿ ಎಂಟಾಣೆ.

ನಮ್ಮ ವಿಳಾಸ:—ಭಾರತಿ ಸಂಜೀವರಾಮು,

[4-11] 42, ಸಿ. ಬೀದಿ, ಕೋಟೆ, ಬೆಂಗಳೂರು ಸಿಟಿ.

ಸಂಗೀತ ಪಾರಿಜಾತ

ಮೂರನೇಯ ಮುದ್ರಣ! ಸೀತಾರಾಮಯ್ಯನವರ ಕೀರ್ತನೆಗಳೂ ಮೊದಲುಗೊಂಡು ಹೆಚ್ಚಾಗಿವೆ. ಬೇಗನೆ ಸಂಗೀತ ಅಭ್ಯಾಸಮಾಡುವವರಿಗೆ ಉಪಯುಕ್ತ ಗ್ರಂಥ. ಕ್ರಯ ೦-೮-೦ ನೂರು ಪ್ರತಿಗೆ ಕಮ್ಮಿ ಇಲ್ಲದಂತೆ ತರಿಸಿಕೊಂಡರೆ ಧಾರಾಳವಾದ ಕಮಿಷನ್ ಕೊಡಲಾಗುವುದು.

ಶಬ್ದಾರ್ಥ ನೋಟ್ಸ್.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕವಾದುದು. ಕ್ರಯ ೦-೩-೦ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಸಿಗುತ್ತೆ.

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

[277-14] ಸ್ಟೂಡೆಂಟ್ಸ್ ಹಾಲ್, ಮೈಸೂರು.



ಸ್ವಲ್ಪ ಕ್ರಯ! ಸರಿಯಾದ ಬಾಳಿಕೆ!

ಒಳ್ಳೇ ಸಮಯ!

ನ್ಯೂ ಪೌಂಟನ್ ಪೇನಾ.

200 ನೇ ನಂಬರ್ ಫೌಂಟನ್ ಪೇನಾ 14 ಕ್ಯಾರೆಟ್ ಗೋಲ್ಡು ನಿಬ್ಬು, ಫಿಲ್ಲರ್ ಮತ್ತು ಪೆಟ್ಟಿಗೆ ಸಹಿತ ಕ್ರಯ ರೂ. 1-14-0 ಮಾತ್ರ. ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜ್ ಬೇರೆ. ಇದೇ ತಿಂಗಳು ಒಳಗೆ ತರಿಸಿಕೊಳ್ಳುವವರಿಗೆ ಪ್ರತಿ ಒಂದು ಪೇನಾಕ್ಕೂ ಸೊಗಸಾದ ಕ್ಲಿಪ್ಪು ಉಚಿತವಾಗಿ ಕೊಡಲಾಗುತ್ತೆ. ಬೈಸಿಕಲ್‌ಗೆ ಯಾವ ಸಾಮಾನು ಬೇಕಾದರೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತೆ. [279-13]

ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

2 ನೆ ತರಗತಿ ಭೂವಿವರಣೆ.

ಚಿತ್ರಗಳು ಮತ್ತು ಭೂಪಟಗಳೊಡನೆ (ಕ್ರಯ 4 ಆಣೆ).

ಮೈಸೂರು ದೇಶದ ಭೂಪಟಗಳು.

(ಪ್ರಾಕೃತಿಕ ಮತ್ತು ರಾಜಕೀಯ) ಕ್ರಯ 2 ಆಣೆ.

ಹೊಸ ಭೂವಿವರಣೆಗಳು.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯ ಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ವಿದ್ಯಾಖಂಡದ ಭೂವಿವರಣೆ ... 0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ ... 0-6-0

ಮೇಲೆ ಕಂಡ ಎರಡೂ ಸೇರಿ ... 0-10-0

ಮೈಸೂರು ಭೂವಿವರಣೆ 2 ಆಣೆ; The English L. S. Text Examiner for 1916 by a Graduate, Price 3 as.

ನಮ್ಮ ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ,

[47-4] ಸುಬೋಧ ಗ್ರಂಥಾಲಯ, ಮೈಸೂರು.

S. UDIPI NARAYANACHARYA & Co.,
BANARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕೋಠಿಯಲ್ಲಿ ಕಡಿಮೆ ಕ್ರಯ ದಲ್ಲಿರುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಶಲ್ಯ, ಪೇಟ, ಕಾಶ್ಮೀರ್ ಶಾಲು, ದುಪ್ಪಟಿ, ಮಗುಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು, ಕೊಡಾರಗಳು, ಅರಳಿ ಪೇಟ, ಧರ್ಮಕವರ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೇನತ್ತಿನಿಂದ ತಯಾರಿಸಿರುವೆವು. ಈ ಅಮೂಲ್ಯವಾದ ಸರಕುಗಳ ಕೆಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೆಟಲಾಗು ಒಂದು ಕಾಶಿ ಕಾರಸ್ಥಿವರ ದಾರವನ್ನು ಉಚಿತವಾಗಿ ಕಳುಹಿಸಲಾಗುವುದು. [119-35]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಿಯಿಂದ ಜಿಡಿದಾದ ಕೇಶಾಲಂಕಾರವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯು ಸ್ತ್ರೀಯರಿಗೆ ಒದಗಿಸಿ ಕೊಡಲಾಗಿ ಉಚಿತವೆನಿಸುವುದರೆ?

ಕಾಮಿನಿಯಾ ತೈಲವ್!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡ [illegible] ತೈಲವೋ, ಹಾಗೆಯೇ ಮಾನಸಿಕ ಶಕ್ತಿನುವನ್ನು ಪಡುವ ಪುರುಷರಿಗೂ ವಿಶಿ [illegible]



ಧಿಗಳನೂ ಅಷ್ಟೇ ಅಗತ್ಯವ ಸಹಲಿಲಿ ವಾಗಿರುತ್ತದೆ. ಈ ತೈಲವನ್ನು ಸೂಡಿ ಮಸ್ತಿಕೆಯಕ್ಕಲೇ, ಮಸ್ತಿಸ್ಕದ ಶೇಗೆಯು ಕಡಿಮಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದುಸ್ಸು ಕೊಡೆಯುತ್ತೊಂಗಿರ ಬಳಕ ಎಂದಿಗೂ ಜಗುಳ ಬದ್ದುಹೋಗಲಾರವು; ಅದರ ಅತಿ ಜಟ್ಟಿಯಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ನಿಧಾನ ವು ಮೋಹಕವು ಆಗಿರುವುದು.

ಕೇಶರಾಶರ ಎಲ್ಲ ಗಳನ್ನು ಕೊಂಡು [illegible] ಕೆಲಿಂದು ಉಪಯೋಗಿಸಿ, ನಮ್ಮ ಹಜಾರ ಸ್ಟ್ರ ತಿಳಿಯುವುದು ಕಾಮಿನಿಯಾವುದಕ್ಕೆ ಕ ಒಂದೇಒಂದು ಬಾರಿ ಈ “ಕಾಮಿನಿಯಾ ತೈಲ” ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೇಶದಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವು ಅಲ್ಲಹಾಬಾದಿನ ಪ್ರದರ್ಶನದಲ್ಲಿ “ಸರ್ಟಿಫಿಕೇಟ್ ಆಫ್ ಮೆರಿಟ್” ಅಥವಾ ಯೋಗ್ಯತಾಪತ್ರವೂ, ಅಕರ ಸಹಸ್ರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಐದಗಳಲ್ಲಿ ಒಂದನ್ನೇ ನೋಡಿರಿ; ಸೇಗ ನಹಾರಾಸರ ಬಂಧುಗಳು. ಚಿಕನವಳ್ಳಿ, ಬೆ [illegible] ಕೇವಲ ಈಗಿನ ಹಿಂದೆ ಕರು ಕೊಂಡ “ಕಾಮಿನಿಯಾ” ತೈಲವು ಕೂದಲವನ್ನು ಬೆಳೆಯಿಸುವ ಕಲ್ಲೆ ಸಫಲತೆಯನ್ನು ಸಾಧಿಸಿರುವುದು ಸಾಧನವಾಗಿರುತ್ತದೆ ಲ್ಲನ್ನಿಂದ ಇನ್ನೊಂದು ಸೀಸೆಯನ್ನು ಕಳಿಸಲಿ ಏ. ಪಿ. ಮೂಲಕ ಕಳುಹಿಸುವುದು ಒಂದೊಂದರ ಕ್ರಯ ರೂ. 1-0-0 ಅ. ಸ. 0-4-0 ಬೇರೆ. 3 ಸೀಸೆಗಳ ಕ್ರಯ ರೂ. 3-10-0, ಅ. ಸ. 0-7-0 ಬೇರೆ.

ಸೂಚನೆ.—ಅನೇಕ ದುರ್ಬಲರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತು ಕಳೆಯಿಂದ ಕರುಗೆ ಅಕ್ಕಲ್ಲ ನಕ್ಷಯೇ ದೊರಕುತ್ತದೆಂದು ಹೇಳಿ “ಕಾಮಿನಿಯಾ ತೈಲ” ವನ್ನು ಕೇಳಿದರೆ, “ಇದು ಅದಕ್ಕಿಂತ ಉತ್ತಮವಾಗಿದ್ದು ಇದೆ” ಎಂದು ಅವರಿಗೆ ಬಹಳ ಲಾಭ ದೊಂಕುಕ್ಕೆ ಶೀಸಗಳವ ಬೇರೆ ತೈಲವನ್ನು ನಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದೆಂತೆ “ಕಾಮಿನಿಯಾ ಓಯಿಲ್” ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ. ಮೆಸರ್ಸ್ ಮಾಡಿದ ನಾವು ವಂಚಕರ ಬಲೆಯಲ್ಲಿ ಸಿಲುಕದಿರಿ ಬೇರೆ ಉತ್ತಮ ವಸ್ತುವನ್ನೇ ಪಡೆಯಿರಿ.

ಅತೀ ಮನೋಹರವಾದ ಸುರಭಿಯು!

ಒಟೊ-ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಬೆಣ್ಣಾಗಿ ಪರೀಕ್ಷಿಸಿ ಆಯ್ದು ಹೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು. ಇದರಲ್ಲಿ ಮದ್ಯಸಾರ (ಆಲ್ಕೊಹೋಲ್) ಸಂಸರ್ಗವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವವು ಬಿದ್ದರೆ, ನಿಮ್ಮ ಸುತ್ತಲು ಸ್ವರ್ಗೀಯ ಸುವಾಸನೆ ಹರಡುವುದು. ಬೇರೆ ಯಾವ ಸುಗಂಧದ್ರವ್ಯದ ಗಂಧವು ಹೀಗಿರ ಲಾರದು. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅನೇಕ ಜನರನ್ನು ಮೋಹಿಸಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಯುತ್ತದೆ. ಒಂದು ಸೀಸೆಯನ್ನು ಪರೀಕ್ಷಿಸಿರಿ. [34-6]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ದೊಡ್ಡದು) ಸೀಸೆ 1ಕ್ಕೆ 0-12-0. ಅರ್ಧ ಡ್ರಾಮಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಅಗರುಬತ್ತಿ ಪ್ಯಾಕ್ ಒಂದಕ್ಕೆ 0-13-0.

ಮಾರಿ ಕೊಡುವ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಅಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಸೀದ್, ಮಾರ್ಕೆಟ್, ಬಾಂಬೆ.

ಏಜೆಂಟ್, ಡಿ ಜಾನ್ ಡಾಸೋಜ್, ಮಂಗಳೂರು.

The General Assurance Society, Ltd.,
Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (*one of the most eminent Actuaries in England*). [142-34]

First Valuation Result:—The total liabilities under all Assurances issued up to 31st March 1918, are fully covered by the Society's *Life Assurance Fund* and Paid Capital.

Write for full particulars, Annual valuation Reports to the *Manager, or* Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.



ಲಿಟ್ಲ್ಸ್ ಓರಿಯಂಟಲ್ ಬಾಮ್ ಎಂಬುದು.

ಹಳೇ ನೋವಿದ್ದರೂ, ಊತವೆ ಇದ್ದರೂ, ಯಾವತರದ ಕಷ್ಟವಿದ್ದರೂ ಸ್ವಸ್ಥಪಡಿಸಿ, ಬಿಡುಗಡೆಯ ಅಕ್ಷೀಣಾವಶ್ಯಕ ಉತ್ತದೆ.

ಸ್ಪ್ರಿಂಗ್‌ಫೀಲ್ಡ್ ಹಿಲ್ಸಿನ ಜೆ. ಹ್ಯೂಜೆಸ್ ಬರೆಯುವದು:—“ನನ್ನ ಪತ್ನಿಯ ಲಿಟಲ್ಸ್ ಓರಿಯಂಟಲ್ ಬಾಂ ಎಂಬುದರ 1 ಸೀಸೆಯನ್ನು ನನ್ನ ಕಾಲಿಗೂ, ಮೊಣಕಾಲಿಗೂ ಹಚ್ಚಿದ 10 ನಿಮಿಷಗಳಲ್ಲಿ ನೋವು ಬಿಟ್ಟಿತು. ಮತ್ತೊರಡಾವರ್ತಿ ಉಪಯೋಗಿಸಿದೆನು—ನನಗಿದ್ದ ನೋವು ತಿರಿಗಿ ಬರಲೇ ಇಲ್ಲ. ಆ ತೈಲದಲ್ಲಿ ಸ್ವಸ್ಥ ಅಂಗೈಗೆ ಹಾಕಿಕೊಂಡು ನನ್ನ ಮಗನಗಂಟ್ಟು ನೋವಿಗೆ ಹಚ್ಚಿದೆನು. ಅವನಿಗೆ ಸ್ವಸ್ಥವಾಯಿತು. ಒಬ್ಬ ಹೆಂಗಸಿನ ಕಾಲು 1 ವರುಷದವರೆಗೆ ಬಿಗಿದಾಗಿತ್ತು. ಅದರಿಂದ ಅವಳು ಅಧಿಕ ನೋವನ್ನು ಅನುಭವಿಸಿದಳು. ಲಿಟಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಲು ಹೇಳಿದೆನು. ನನ್ನಲ್ಲಿದ್ದ 1 ಸೀಸೆಯ ತೈಲವನ್ನು ಆಕೆಗೆ ಕೊಟ್ಟೆನು, ಅದರಿಂದಲೇ ಆಕೆಗೆ ಕ್ಷೇಮವಾಯಿತು.”

ಸೀಸೆ 1ಕ್ಕೆ 1 ರೂ. ಮೋರಿಗೆ ಔಷಧಗಾರರಲ್ಲಿಯೂ ಸಿಗುತ್ತೆ. [81-46]

ಊದುಬತ್ತಿಗಳು

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳದ್ದಾಗಿದೆ.

ಕೇಶೋಲ್ಲಾಸಿನಿ ಸೀಸೆ 1ಕ್ಕೆ 8 ಆಣೆ.

ಇದು ಸಲೆ ಕೂದಲಿಗೆ ಹಚ್ಚಿ ಬಾಚುತ್ತಾ ಬಂದಲ್ಲಿ ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಕೂದಲು ಅತಿ ನುಣಪಾಗಿಯೂ ಇರುತ್ತದೆ.

ಸುಗಂಧ ಕಾರ್ಪೂರ 1ಕ್ಕೆ 1 ಆ. ಡಜನ್ 1ಕ್ಕೆ 10 ಆಣೆ.

ಈ ಕಾರ್ಪೂರವನ್ನು ಶರೀರದಲ್ಲಾಗಲೀ ಬಟ್ಟೆಯಲ್ಲಾಗಲೀ ಇಟ್ಟದ್ದೇ ಆದರೆ ಅತ್ಯುತ್ತಮವಾದ ಪುಷ್ಪಗಳ ಸುವಾಸನೆಯಂತೆ ಸುವಾಸನೆಯಾಗಿರುತ್ತೆ.

ಸುವಾಸನೆ ಸುಣ್ಣ ಸೀಸೆ 1ಕ್ಕೆ 2 ಆಣೆ.

ಈ ಸುಣ್ಣಕ್ಕೆ ಕೇಸರೀ ಪಚ್ಚಕರ್ಪೂರ ಏಲಕ್ಕಿ ಮೊದಲಾದ ವಸ್ತುಗಳನ್ನು ಹಾಕಿ ಪನ್ನೀರಿನಲ್ಲಿಯೇ ತೋಯಿಸಿ ಎಲೆ ಅಡಿಕೆ ಹಾಕಿಕೊಳ್ಳುವವರಿಗೆ ಆನಂದ ವಾಗುವಂತೆ ಇಟ್ಟಿರುತ್ತೆ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[54-3]
ಸುಗಂಧಕಾರಿ, ಮೈಸೂರು.

“ಹನುಮಾನ್ ವರ್ಾಕ್” ಬೋರಾಕ್ಸ್ ಸಾಬೂನು.

ಹನುಮಾನ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದು [illegible] ಕಲ್ಲ ಸಂಗೀವನಿಗೆ ಸಮಾನವಾದ ವಸ್ತುಗಳು ಸೇರಿವೆ. [illegible] ಮತ್ತು ಬಿಸಿಲು, ಚಳಿ ಮೊದಲಾದ ವ್ಯಾಧಿಗಳು ಹನುಮಾನ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯಕರವಾಗಿ ಮಾಯವಾಗುತ್ತವೆ. [illegible] ಪ್ರತಿದಿನವೂ ಹನುಮಾನ್ ಸಾಬೂನಿನ ಬೆಳಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟು ಮಾಡುತ್ತೆ. [illegible] ಈ ಸಾಬೂನನ್ನು ಕಲೆಗೆ ಹಾಕಿಕೊಳ್ಳುವುದರಿಂದ ತಲೆಗೆ [illegible] ಈ ಸಾಬೂನು ವಿನಾ ಯಾವ ಸಾಬೂನಿನಲ್ಲೂ [illegible] ಯೌವನಕ್ಕೂ ಮುಖಸ್ವಚ್ಛತೆ [illegible] ಈ ಸಾಬೂನನ್ನು ಉಪಯೋಗಿಸಬಹುದು. ಒಂದು ಸಲ ಹನುಮಾನ್ ಸಾಬೂನನ್ನು ಉಪಯೋಗಿಸಿದ ಮೇಲೆ ಬೇರೆ ಸಾಬೂನನ್ನು ಮುಟ್ಟಲೇ [illegible] ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಲ್ಲೆಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ ಸಣ್ಣ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾನ್ ಗುರುತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಪಿ. ಕೆ :— [illegible] ಕಾಗದ ಬರೆಯಬೇಕು.

ಬೆಂಗಳೂರು ಸಿಟಿ [illegible] ದಾಸಪ್ಪನವರ [illegible] ಸಿಕ್ಕುವದು.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,
[211 22] ಉಪಸಿಂಗ್ ಬಜಾರ್ ರೋಡ್, ಮದರಾಸು.

Useful in Peace and War **FIRST AID IN ACCIDENTS,** BY DR. U. RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ನಡೆಸಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು. ರಾಮರಾವ್ ಇವರಿಂದ ರಚಿತವಾಗಿ ಮದರಾಸ್ ಕ್ರಿಶ್ಚಿಯನ್ ಕಾಲೇಜು ಪಂಡಿತರಾದ ದೇವಪ್ರಿಯ ಅನಂತಾಚಾರ್ಯರಿಂದ ಸುಲಭವಾದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿದೆ.

DEDICATED TO H. H. THE MAHARAJA OF MYSORE

ಅಪಾಯಕ್ಕೆ ಗುರಿಯಾದ ಮನುಷ್ಯನ ಅದೃಷ್ಟವು, ಮೊದಲು ಅವನು ಯಾರ ಕೈಗೆ ಸಿಕ್ಕಬೇಕಾಗುವನೋ, ಅವರ ಕಾರ್ಯಗಳಿಗೆ ತಕ್ಕಂತಿರುವುದು. ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ಪಕ್ಷದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪು ಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ನೊಂದವನಿಗೆ ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆಯಾ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡೆಸಿದ್ದರೆ, ನಿಸ್ಸಂದೇಹವಾಗಿ ಬದುಕಬಹುದಾಗಿದ್ದ ಪ್ರಾಣವೂ ಕೂಡ, ಅಂಥ ಸಹಾಯವಿಲ್ಲದುದರಿಂದ ನಷ್ಟವಾಗುವುದು. ಈ ವಿಧವಾಗಿ ಪ್ರತಿ ವರ್ಷವೂ ಎಷ್ಟೋ ಬೆಲೆಯುಳ್ಳ ಜೀವಗಳು ಮಣ್ಣುಗೂಡುತ್ತಿರುವುವು.

ಒಬ್ಬ ಮನುಷ್ಯನಿಗೆ ಆಕಸ್ಮಾತ್ತಾಗಿ ರೋಗವು ಅತ್ಯಧಿಕವಾದಾಗ, ಇಲ್ಲವೇ ಯಾವುದಾದರೂ ಅಪಾಯವೊದಗಿ ಸಂಭವಿಸಿದಾಗ, ಸಮರ್ಥನಾದ ವೈದ್ಯನ ಸಹಾಯವು ದೊರೆಯುವುದರೊಳಗಾಗಿ, ತತ್ಕಾಲಕ್ಕೆ ತಮ್ಮ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ತೀವ್ರವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿಯೇ ಲಭಿಸಬೇಕು.

“ಅಲ್ಪಜ್ಞಾನವು ಅಪಾಯಕರ” ವೆಂಬ ನಾಣ್ಣುಡಿಯು ಲೋಕದಲ್ಲಿ ಪ್ರಚಲಿತವಾಗಿರುವುದಾದರೂ, ಇಂಥ ವಿಷಯಗಳಲ್ಲಿ ಇದಕ್ಕೆ ಪ್ರಾಧಾನ್ಯವನ್ನು ಕೊಡಬಹುದೇ? ಹೇಗೆಂದರೆ, ಪ್ರಥಮ ಚಿಕಿತ್ಸೆಯ ವಿಷಯದಲ್ಲಿ ಆ ನಿಯಮವಿಲ್ಲ. ಇದರಲ್ಲಿ ಅಲ್ಪಜ್ಞಾನದಿಂದಲೇ ಲೋಕಕ್ಕೆ ಉಪಕಾರವಾಗುವುದು. ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ಕ್ರೂರವಾದ ವೇದನೆಯನ್ನು ನಿಗ್ರಹಿಸಬಹುದು! ಎಷ್ಟೋ ಪ್ರಾಣಿಗಳನ್ನು ಉಳಿಸಬಹುದು! ಬಹಳವಾಗಿ ರಕ್ತ ಹರಿಯುವುದನ್ನು ನಿಲ್ಲಿಸುವುದು, ಮೂಳೆ ಮುರಿದುಹೋಗುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಅನೇಕ ವಿಧವಾದ ಅಪಾಯಗಳಲ್ಲಿಯೂ, ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುವಿಗೆ ಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಿಗಳೂ ಕೂಡ, ಸರಿಯಾದ ಸಹಾಯವಿಲ್ಲದೆ ಮರಣವನ್ನು ಹೊಂದುವರು. ಇದನ್ನು ತಪ್ಪಿಸುವುದಕ್ಕಾಗಿ ಏನು ಮಾಡಬೇಕೆಂದರೆ, ತಿಳಿದವರು ತಿಳಿಯದವರಿಗೆ ಹೇಳಿಕೊಡುವುದರಿಂದ ನಷ್ಟವಾಗಲಾರದು. ಈ ಪ್ರಥಮ ಚಿಕಿತ್ಸಾಕ್ರಮದಲ್ಲಿ ಅಲ್ಪಜ್ಞಾನವನ್ನು ಪಡೆದು, ಅದನ್ನು ಉಪಯೋಗಿಸುವುದರಿಂದಲೇ ಸಾಯುವ ಪ್ರಾಣಿಗಳನ್ನು ಸಹ ಬದುಕಿಸಬಹುದು. [81-3]

ಸಾಮಾನ್ಯವಾಗಿ ಜೀವನದಲ್ಲಿ ಅಪಾಯವುಂಟಾದ ಸಂದರ್ಭವನ್ನು ನೋಡಿದಾಗ, ಅದಕ್ಕೆ ಸಹಾಯ ಮಾಡಬೇಕೆಂಬ ಬುದ್ಧಿಯು ನಮ್ಮಲ್ಲಿ ಹುಟ್ಟುವುದು ಸಹಜವು. ಆದರೆ ಯಾವ ಸಂದರ್ಭಗಳಲ್ಲಿ ಹೇಗೆ ಮಾಡಬೇಕೆಂದು ತಿಳಿಯದೆ ಅನೇಕ ಜನರು ಈ ವಿಷಯದಲ್ಲಿ ಸ್ವಪ್ರವೃತ್ತಿಯಿಂದ ಹಿಡಿಯದೆ ತಾವು ಕೈಯಿಡುವುದರಿಂದ ನೊಂದವರಿಗೆ ಹೆಚ್ಚು ಅಪಾಯಕ್ಕೆ ಕಾರಣವಾಗಬಹುದೆಂಬ ಭಯದಿಂದ ಕೆಲವರು ಕೈಹಾಕದಿರುವರು.

ಅದಕ್ಕಾಗಿ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೈಕಾಲುಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ, ಅಗ್ನಿಗಂಡ, ನಡಗಳು ಕಡಿಯುವುದು, ಚಳಿಜ್ವರ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಬೇಕಾದವುಗಳ ಕಲ್ಪಿಸುವುದು, ಅನ್ನ ಇವರುಗಳೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳಿದ್ದು ಈ ವಿಷಯಗಳನ್ನು ವಿಶದಪಡಿಸಲ್ಪಟ್ಟಿವೆ, ಸರ್ವಸಾಮಾನ್ಯವಾಗಿ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಿಮೆಮಾಡಿರುವುದು.

ಪುಸ್ತಕದ ಬೆಲೆ 0—8—0, ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣ ಬ್ರದರ್ಸ್, 323, ತಂಬುಚೆಟ್ಟಿ ಬೀದಿ, ಮದರಾಸು. ಪೋಸ್ಟು ಬಾಕ್ಸ್ 166.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮೂತನಾದುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಮಾರ್ಚ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ಡಬ್ಬಿಗಳ ಅಮೃತಾಂಜನವನ್ನು ... ಈ ಕ್ಯಾಲೆಂಡರನ್ನು ಉಚಿತವಾಗಿ ... ವಿ. ಪಿ. ಅರ್ಧ ಸೇರ 4 ಆಣೆ; 12 ಕ್ಕೆ ವಿ. ಪಿ. ... ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-47]

ಅಮೃತಾಂಜನ ಡಿಪೋ,

109, ಫ್ರೇರ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಸೂ. ಕೆ.—ಮೇಲ್ಕಂಡ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿದೆ; ... ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ತಿಳಿಸಲ್ಪಟ್ಟಿದೆ.

ಪುಷ್ಪರಾಗದಿಂದ ಕಟ್ಟಿದ ಅಚ್ಚ ಚಿನ್ನದ ಮೂಗುಬಟ್ಟು.

ಕ್ರಯ ರೂ. 7-8-0. ಛಾರ್ಜು ಮಾಫಿ.

... ಅಚ್ಚ ಚಿನ್ನದ ಮೂಗುಬಟ್ಟುಗಳು ನಮ್ಮಲ್ಲಿ ... ಸಿದ್ಧವಾಗಿವೆ ...

... [illegible] ...

[49-3] ನಮ್ಮ ವಿಳಾಸ:—ವಿಕ್ಟೋರಿಯ ಕಂಪೆನಿ, 18, ಸೆಕೆಂಡ್ ಲೈನ್ ಬೀಚ್, ಮದರಾಸು.

THE EMPEROR OF SCENTS.

"OTTO PUSHPALATA."

PERFUME OF SOCIETY.

ಮಹನೀಯರ ಉಪಯೋಗಕ್ಕಾಗಿ "ಓಟೋ ಪುಷ್ಪಲತಾ" ... ಉಪಯೋಗಿಸಬೇಕು. ... ನಿರ್ಮಿಸಲ್ಪಟ್ಟಿದೆ ...

ಕ್ರಯ ½ ಔನ್ಸ್ ಸೀಸೆಗೆ	ರೂ. 2-0-0.
„ 1 ಡ್ರಾಮ್ „	„ 0-12-0.

ಸರ್ವೋತ್ತಮ ರೋಮಹಾರಿ.

"ರಾಜಾ—ರಾಣಿ ಸೋಪ್."

ಈ ಸಾಬೂನು ಪ್ರಖ್ಯಾತವಾದದ್ದು. ಒಂದೇ ಸಲ ಹಚ್ಚುವದರಿಂದ ದೇಹದ ಯಾವ ಕಡೆಯ ಕೂದಲಾದರೂ ಸೊಗಸಾಗಿ ಅಚ್ಚುಕಟ್ಟಾಗಿ ಹೋಗಿ ಬಿಡುತ್ತದೆ. ಇದನ್ನು ಹಚ್ಚುವದರಿಂದ ಸ್ವಲ್ಪವಾದರೂ ಇರಿತವೂ ಬಾಧೆಯೂ ಆಗದು; ಲೇಶವಾದ್ರವೂ ಕಲೆ ನಿಲ್ಲುವದಿಲ್ಲ.

ಚರ್ಮಕ್ಕೆ ಸ್ವಭಾವ ಪುಷ್ಟಿ ಕೊಡುವ ಗುಣವೂ ಈ ಸೋಪಿಗೆ ಉಂಟು. ಈ ಸೋಪನ್ನು ಉಪಯೋಗಿಸಿದಂಥದ್ದು ಬೇರೆಂದಿಲ್ಲ ವೆಂದು ವಿಸ್ತಾರವಾದ ಪ್ರಖ್ಯಾತಿಯನ್ನು ಪಡೆದಿದೆ.

ಕ್ರಯ 3 ಬಿಲ್ಲೆ ಇರುವ ಪೆಟ್ಟಿಗೆಗೆ ರೂ. 1-0-0.

ದಯವಿಟ್ಟು ಇಂಗ್ಲಿಷಿನಲ್ಲೇ ನಮಗೆ ಕಾಗದ ಬರೆಯಬೇಕು. [64-2]

Sole Agents – T. P. LAL & Co., ಸೋಲ್ ಏಜಂಟರು—ಟಿ. ಪಿ. ಲಾಲ್ ಕಂಪನಿ,

Barbhoi Mohalla, Bombay, 3. ಬಾರ್ಭಾಯಿ ಮೊಹಲ್ಲಾ, ಬೊಂಬಾಯಿ, 3.

ಬಿಸಿಲು ರೋಗಕ್ಕೆ ಪರಿಹಾರ.

ಮಹೌಷಧಗಳು.

ಅಮೃತಾಮಲಕ ತೈಲ.

ಈ ತೈಲವು ಕಣ್ಣು ಕೈಕಾಲು, ಉರಿತ ತಲೆನೋವು, ಕಣ್ಣು ಮಂಜು, ಕಣ್ಣು ಕಿಸ್ರಕ್ಕೆ, ... ಅಭ್ಯಂಗದಿಂದಲೇ ... ಶಕ್ತಿಯನ್ನು ... ಅನುಭವದಿಂದ ತಿಳಿವುದು.

8 ಅಭ್ಯಂಗಕ್ಕೆ ಆಗುವ ತೈಲ 8 ಆಣೆ.

ಚಂದ್ರಾಮಲಕ ರಸಾಯನ.

ಸಮಸ್ತ ಪಿತ್ತ ವಾತ ವಿಕಾರಗಳನ್ನು ... ನಿವಾರಿಸುವುದು. ... 15 ದಿನದ ಔಷಧ 12 ಆಣೆ.

ಆನಂದಿನಿ.

... 150 ಮಾತ್ರೆ ಸೀಸೆ 1 ಆಣೆ. [278-11]

... ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್, ನಂಜನಗೂಡು.

ಜಾಹೀರಾ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲ ರಂಗು.

ಬಿಳಿ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.

ಮತ್ತು

ಕೂದಲಿಗೆ ಶೈತ್ಯವೂ ಪುಷ್ಟಿಯೂ ಉಂಟಾಗುತ್ತೆ.

...

100 ರೂಪಾಯಿ ಇನಾಮು ಕೊಡುವೆವು.

ಪೆಟ್ಟಿಗೆ, ಬ್ರಷ್ ಮತ್ತು ಬಟ್ಟಲು ಸಹಿತ ಕ್ರಯ ರೂ. 1-0-0; ಪೋಸ್ಟೇಜ್ ಬೇರೆ.

ಹೊಸ ನಮೂನೆ ರೋಮಹಾರಿ.

... [282-14]

ಪೆಟ್ಟಿಗೆ ಒಂದಕ್ಕೆ ರೂ. 1-0-0; ಪೋಸ್ಟೇಜ್ ಬೇರೆ.

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು:—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

177, ಚೀನಾ ಬಜಾರ್ ರೋಡ್, ಮದರಾಸ್.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಪ್ರೋಟಿಸೋ. ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯ ಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳ ಮೇಲೆ ...

ಅವುಗಳ ನಾಮಗಳು.

ಕ್ಷಯರೋಗ, ಹಡವರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗ, ಚಳಿಜ್ವರ, ವಿಷಮಜ್ವರ ಆನೇಕ ಪ್ರಕಾರದ ಜ್ವರ, ... ಅಡವಿರೋಗ, ಕಪ್ಪ ...

... [44-3]

ಮಹೀನ ಸಾಹೇಬ ಮೋಟೀನ ಸಾಹೇಬ ಮುಲ್ಲಾ, ಅರ್ಕಶಫಾ ಶೋಧಕ, ಹೆಡ್ ಆಫೀಸ ಮುಕ್ಕಾಮ ರಾಮದುರ್ಗ, ಬೆಳಗಾಂವ.

ಬಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಕಾಮಧೇನು ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

... ಶೀತ, ಶೀತವಾಯು, ಅಜೀರ್ಣ, ... 260 ಮಾತ್ರೆಗಳುಳ್ಳ ಸೀಸೆ 1 ಕ್ಕೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ... 12 ಸೀಸೆಗಳಿಗೆ ರೂ. 2-(8-0); 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ... ಬೊಂಬಾಯಿ ...

[100-37] ...

ನಮ್ಮ ವಿಳಾಸ:—ಶ್ರೀ ಸಿಂಹಾದ್ರೀಶ ವೈದ್ಯಶಾಲಾ, ಮೈಸೂರು.

ಷಾಪ್ ಸ್ಥಳ ಬದಲಾವಣೆ ನೋಟೀಸ್

ರಾಜಧಾನಿಯ ಸಯ್ಯಾಜಿರಾವ್ ರೋಡ್ ಮುಂಭಾಗದಲ್ಲಿ ಶ್ರೀ ಲಕ್ಷ್ಮೀ ನಾರಾಯಣ ಹಾಲ್ ಎಂಬ ಚೀಟೀ ಜವಳಿ ಅಂಗಡಿಯನ್ನು ಇಟ್ಟಿದ್ದದ್ದು ಸರಿಯಷ್ಟೆ. ಈಗ ಸದರಿ ಅಂಗಡಿಯು ದೇವರಾಜ ಮಾರ್ಕೆಟ್ಟಿನ ಪೂರ್ವ ದಿಕ್ಕಿನಲ್ಲಿರುವ ಮಾರ್ಕೆಟ್ ಲೈನ್‍ನಲ್ಲಿ ಇಡಲ್ಪಟ್ಟಿದೆ. [೮೧-೨]

ಎಸ್. ಭೀಮಂಕರಾವ್ ಅಂಡ್ ಆರ್ ಸುಬ್ಬರಾವ್, ಪ್ರೊಪ್ರೈಟರ್ಸ್.

ವೃತ್ತಾಂತ ಪತ್ರಿಕೆ.

——:0:——

೪೯ ೧೯೧೬ ನೇ ಇಸವಿ ಮಾರ್ಚಿ ತಾ. ೧೬ ನೇ ಗುರುವಾರ

ಕಸಬು ವಾಣಿಜ್ಯಗಳ ಇಲಾಖೆಯು.

ಮೈಸೂರು ಸಂಸ್ಥಾನದಲ್ಲಿ ಕಸಬುಗಳನ್ನೂ ವ್ಯಾಪಾರಗಳನ್ನೂ ಅಭಿವೃದ್ಧಿಗೆ ತರಬೇಕಾದದ್ದು ಪರಮಾವಶ್ಯಕವೆಂದೂ, ಈ ಭಾಗವು ನಮ್ಮ ಗವರ್ನ್‌ಮೆಂಟಿನವರ ಕರ್ತವ್ಯಾಂಶವೆಂದೂ ನಾವು ಅನೇಕ ಸಂದರ್ಭಗಳಲ್ಲಿ ಹೇಳುತ್ತಾ ಬಂದಿದ್ದೇವೆ. ಆದರೆ ನಮ್ಮ ಗವರ್ನ್‌ಮೆಂಟಿನವರು ಅದಕ್ಕೋಸ್ಕರ ನಡಿಸುತ್ತಿರುವ ಕಾರ್ಯಗಳನ್ನೂ, ಹಿಡಿದಿರುವ ಮಾರ್ಗಗಳನ್ನೂ ಸಾಧುವೂ ಸಾರ್ಥಕವೂ ಆದವುಗಳೆಂದು ನಾವು ಯಾವಾಗಲೂ ಒಪ್ಪಿಕೊಂಡಿರುವುದಿಲ್ಲ. ನಮ್ಮ ಸಂಸ್ಥಾನದಲ್ಲಿ ವ್ಯವಸಾಯವೇ ಪ್ರಧಾನವಾದ ಕಸಬು; ನಮ್ಮ ಗವರ್ನ್‌ಮೆಂಟಿನವರು ವ್ಯವಸಾಯವನ್ನು ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿಗೆ ತರುವಂತೆ ಮೊದಲು ಮಾಡಿ ನೋಡಿಕೊಳ್ಳಬೇಕು. ಗ್ರಾಮಾಂತರದಲ್ಲಿರುವ ರೈತರು ಪುಷ್ಟಿವಂತರಾದರೆ ಸಂಸ್ಥಾನವೆಲ್ಲಾ ಶ್ರೇಯಸ್ಸಿಗೆ ಬಂದಂತಾಗುವುದು. ಇದಕ್ಕೆ ಎದುರುತ್ತರವಿರಲಾರದೆಂದು ನಾವು ನಂಬಿದ್ದೇವೆ. ಆದಾದ ಬಳಿಕ ಕಸಬುಗಳನ್ನೂ ವ್ಯಾಪಾರಗಳನ್ನೂ ಅಭಿವೃದ್ಧಿಗೆ ತರಬೇಕು; ಇದು ನಿಧಾನವಾಗಿ ನಿಲ್ಲಬೇಕಲ್ಲದೆ ಆತುರಪಡುವುದರಲ್ಲಿ ಪ್ರಯೋಜನವಿಲ್ಲ. ನಮ್ಮ ಗವರ್ನ್‌ಮೆಂಟಿನವರಾದರೋ ಬೇಗ ಫಲಿಸಲೆಂದು ಮೇಲೆ ಮೇಲೆ ಒತ್ತಾಯಮಾಡುತ್ತಾ ಇರುವುದರಲ್ಲಿ ದೃಷ್ಟಿ ಇಟ್ಟರು; ಆದರೆ ಹೀಗೆ ಬಲಪಡಿಸುವ ಮಾರ್ಗದಲ್ಲಿ ಜನಗಳು ಅದಕ್ಕೆ ಸಿದ್ಧರಾಗಿಲ್ಲವೆಂಬ ಅಂಶವು ನಮ್ಮ ಸರ್ಕಾರದವರಿಗೆ ಈಗೀಗ ವೇದ್ಯವಾಗುತ್ತಾ ಬಂದಿರುತ್ತದೆ. ಕಸಬಿನ ಬಿನಾಮುಗಳೇ ಕಂಡರಿಯದ ಪ್ರಜೆಗಳನ್ನು ಕಾರ್ಖಾನೆ ಇಡಿ, ಕಸಬು ನಡಿಸಿ ಎಂದು ಒತ್ತಾಯಮಾಡಿದರೆ ಅವರು ಏನುತಾನೇ ಮಾಡಬಲ್ಲರು? ಅದಕ್ಕೆ ತಕ್ಕ ವಿದ್ಯೆಯೂ, ಅನುಭವವೂ, ಬೇಕಾದಷ್ಟು ದ್ರವ್ಯವೂ ಇರಬೇಕಲ್ಲವೇ?

ನಮ್ಮ ಸಂಸ್ಥಾನದ ಕಸಬು ಮತ್ತು ವ್ಯಾಪಾರಗಳ ಇಲಾಖೆಯ ವಾರ್ಷಿಕ ರಿಪೋರ್ಟನ್ನು ಪರಾಂಬರಿಸಿ ವಿಮರ್ಶೆಮಾಡಿರುವುದನ್ನು ಓದಿ ನೋಡಿದರೆ ನಮ್ಮ ಗವರ್ನ್‌ಮೆಂಟಿನವರಿಗೆ ಈ ಬಾಬುಗಳು ಬೇಗಬೇಗನೆ ಫಲಕಾರಿಗಳಾಗಬೇಕೆಂಬ ಕುತೂಹಲವು ವಿಶೇಷವಾಗಿರುವಂತೆಯೂ, ಅವರ ಕುತೂಹಲವು ಕಾರ್ಯತಃ ನೆರವೇರಲಿಲ್ಲವೆಂದೂ ವೇದ್ಯವಾಗುತ್ತದೆ. ಈ ಇಲಾಖೆಯು ತುಂಬಾ ಸಾಹಸ ಪ್ರಯತ್ನಗಳನ್ನು ಮಾಡಿದಾಗ್ಯೂ ಬಹಳ ಸ್ವಲ್ಪವೇ ಪ್ರಯೋಜನವಾಗಿದೆ ಎಂದು ಸರ್ಕಾರದವರು ಇಲಾಖೆಯ ಮೇಲೆ ತಪ್ಪು ಹೊರಿಸುವಂತೆ ಕಾಣುವುದು. ಈ ಇಲಾಖೆಯನ್ನೂ, ಸಂಪದಭಿವೃದ್ಧಿ ಸಮಾಜವನ್ನೂ ನಿರ್ಮಾಣಮಾಡಿ ಅಸಾಧ್ಯವಾದ ಕಾರ್ಯಗಳನ್ನು ಅವುಗಳಿಗೆ ವಹಿಸಿದಾರೆಂಬ ಭಾಗವನ್ನು ನಮ್ಮ ಗವರ್ನ್‌ಮೆಂಟಿನವರು ಮರೆತರೋ ಏನೋ.

ಈ ಇಲಾಖೆಯವರು ನಡಿಸಿರುವ ಕಾರ್ಯಗಳಲ್ಲಿ ಬಹು ಭಾಗವೆಲ್ಲಾ ವ್ಯವಸಾಯಕ್ಕೆ ಸಂಬಂಧಪಟ್ಟದ್ದಾಗಿದೆಯೇ ಹೊರತು ಯಥಾರ್ಥವಾದ ಕಸಬುಗಳಿಗೆ ಸಂಬಂಧಪಟ್ಟದ್ದಾಗಿಲ್ಲ. ನೀರನ್ನು ಎತ್ತಿ ಹಾಯಿಸುವ ಯಂತ್ರವು ವ್ಯವಸಾಯವನ್ನು ಅಭಿವೃದ್ಧಿಪಡಿಸತಕ್ಕದ್ದಾಗಿದೆ. ಭತ್ತ ಕುಟ್ಟುವ ಯಂತ್ರಗಳು, ಎಣ್ಣೆ ತೆಗೆಯುವ ಗಾಣಗಳು, ಕಬ್ಬನ್ನು ಹಿಂಡುವ ಆಲೆ ಯಂತ್ರಗಳು, ಇವೆಲ್ಲಾ ವ್ಯವಸಾಯಕ್ಕೆ ಸಂಬಂಧಪಟ್ಟವುಗಳಾಗಿಯೇ ಇವೆ. ಇಂಥಾ ಯಂತ್ರದ ಕಾರ್ಖಾನೆಗಳು ಅಲ್ಲಲ್ಲಿ ಸ್ಥಾಪನೆಯಾಗಿದ್ದರೂ ಆ ಸ್ಥಿತಿ ಉತ್ತಾಯ ಸ್ಥಿತಿಯಲ್ಲಿರತಕ್ಕವುಗಳು ಬಹಳ ಕೊಂಚ. ಅವುಗಳ ಆದಾಯ ವ್ಯಯಗಳ ತಃಖ್ತೆಗಳನ್ನು ಪ್ರಕಟಮಾಡಿರುವುದಿಲ್ಲ. ಅದಕಾರಣ ಯಾವ ಕಾರ್ಖಾನೆಯಲ್ಲಿ ಲಾಭ ಹುಟ್ಟುವಳಿ ಆಗುತ್ತಿದೆಯೋ, ಯಾವುದು ನಷ್ಟಕರವಾಗಿದೆಯೋ ತಿಳಿಯುವುದು ಕಷ್ಟ. ಡೈರೆಕ್ಟರವರು ಇನ್ನು ಮುಂದಕ್ಕೆ ಇಂಥಾ ಜಮಾ ಖರ್ಚು ಪಟ್ಟಿಗಳನ್ನು ರಿಪೋರ್ಟಿನಲ್ಲಿ ಕಾಣಿಸಬೇಕೆಂದು ಸರ್ಕಾರದವರು ಸೂಚಿಸಿದಾರೆ.

ಕಟ್ಟಡಗಳಿಗೆ ಅವಶ್ಯವಾದ ಸಾಮಾನುಗಳು ಸಿಕ್ಕುವುದು ಬಹಳ ಕಷ್ಟವಾಗಿದೆ. ಎಲ್ಲೆಲ್ಲೂ ಸಂಸ್ಥಾನಾದ್ಯಂತ ಬಗೆಬಗೆಯ ಕಟ್ಟಡಗಳು ಆಗಬೇಕು. ಇವುಗಳಿಗಾಗಿ ಮರದ ಸಾಮಾನು, ಇಟ್ಟಿಗೆ, ಹೆಂಚು ಮೊದಲಾದವುಗಳನ್ನು ಒದಗಿಸುವುದಕ್ಕೆ ಏರ್ಪಾಡಿಟ್ಟು ಸರಿಯಾಗಿ ನಡಿಸಿದ ಪಕ್ಷದಲ್ಲಿ ತುಂಬಾ ಪ್ರಯೋಜನವಾಗುತ್ತೆನ್ನುವುದಕ್ಕೆ ಸಂಶಯವಿಲ್ಲ. “ಈ ಕಸಬನ್ನು ಅಭಿವೃದ್ಧಿಮಾಡಿದ್ದರಲ್ಲಿ ಕಾರ್ಯತಃ ಫಲವೇನೂ ಆಗಲಿಲ್ಲ. ಈ ಸಾಲ್ ಪೂರೈಸುವುದರೊಳಗಾಗಿ ಡೈರೆಕ್ಟರವರು ಅಂಥಾ ಆರು ಕಾರ್ಖಾನೆಗಳನ್ನಾದರೂ ಚೆನ್ನಾಗಿ ನಡೆಯುವಂತೆ ಮಾಡಿಸಬೇಕು” ಎಂಬದಾಗಿ ನಮ್ಮ ಗವರ್ನ್‌ಮೆಂಟಿನವರು ಹೇಳಿದಾರೆ. ಈ ರೀತಿ ಹುಕುಮನ್ನು ಬರೆದಿಡುವುದೇನೋ ಬಹಳ ಸುಲಭ; ಆದರೆ ಮಿ|| ಘಾಟರ್‌ಟನ್ ರವರು ಆ ರೀತಿ ಏರ್ಪಾಡು ಮಾಡಬಲ್ಲರೇ ಎಂದು ಸಂಶಯಪಡುತ್ತೇವೆ. ಅಂಥಾ ಕೆಲಸಗಳನ್ನು ತೃಪ್ತಿಕರವಾಗಿ ಮಾಡತಕ್ಕಂಥಾ ಕಾರೇಗಾರರು ಸಿಕ್ಕುವುದೇ ದುರ್ಲಭ. ಅವರಿಗೆ ಹೇಳಿಕೊಟ್ಟು ಕಲಿಸಬೇಕು; ಇದು ನಿಧಾನ, ಆತುರಕ್ಕೆ ಆಗತಕ್ಕದ್ದಲ್ಲ. ಕಸಬುಗಳ ಬೆಳುವಳಿಗೆಯೇ ಬಹಳ ಸಾವಕಾಶ.

ಅನೇಕ ವಿಚಾರಗಳು ಇನ್ನೂ ಪರೀಕ್ಷೆ, ಪರಿಶೋಧನೆ, ಈ ಸ್ಥಿತಿಯಲ್ಲೇ ಇರುವವು. ಶ್ರೀಗಂಧದಿಂದ ಎಣ್ಣೆ ಮಾಡುವುದು, ನೇಸರಕಡ್ಡಿಗಳ ತಯಾರಿ, ಸಾಬೂನು ಮಾಡುವುದು, ಕಾಗದದ ತೋಳ ರಸವನ್ನು ತಯಾರುಮಾಡುವುದು, ಇವೆಲ್ಲಾ ಪರೀಕ್ಷೆಯಲ್ಲಿರುತ್ತವೆ. ಆದರೆ ಅವು ಅಲ್ಲಿಂದ ಮೇಲಕ್ಕೆ ಹತ್ತುವ ಪ್ರಕರಣವೇನೂ ಕಾಣುವುದಿಲ್ಲ. ಚೆನ್ನಾಗಿ ಪರೀಕ್ಷಿಸಿ ಸಾಧಕ ಬಾಧಕಗಳನ್ನು ಗೊತ್ತುಮಾಡಲ್ಪಡದೆ ಇರುವಂಥಾ ಕಾರ್ಖಾನೆಗಳಿಗೆ ನಮ್ಮ ಪ್ರಜೆಗಳು ಹಣ ಹಾಕುವುದಕ್ಕೆ ಒಪ್ಪುತ್ತಾರೆಯೇ ಎಂದು ಸಂಶಯಪಡುತ್ತೇವೆ. ಸರ್ಕಾರದವರು ಅಂಥಾ ಕಾರ್ಖಾನೆಗಳನ್ನು ಇಟ್ಟು ಅದರಲ್ಲಿ ಲಾಭವುಂಟೆಂಬುವುದನ್ನು ಪ್ರಜೆಗಳಿಗೆ ಸಾಕ್ಷಾತ್ತಾಗಿ ನಡಿಸಿ ತೋರಿಸಬೇಕು. ಬಳಿಕ ಪ್ರಜೆಗಳು ಅಂಥವುಗಳಲ್ಲಿ ಹಣ ಹಾಕಿ ಸಹಾಯ ಮಾಡಿಯಾರೆನ್ನುವುದಕ್ಕೆ ಅನುಮಾನವಿಲ್ಲ.

ಈ ರಿಪೋರ್ಟಿನ ವಿಮರ್ಶೆಯ ಅಂತ್ಯ ಭಾಗದಲ್ಲಿ ನಮ್ಮ ಗವರ್ನ್‌ಮೆಂಟಿನವರು ಬರೆದಿರುವ ಅಭಿಪ್ರಾಯವನ್ನು ಓದಿದಾಗ ನಮಗೆ ವಿಷಾದ ಉಂಟಾಯಿತು. ಅವರು ಬರೆದಿರುವುದೇನೆಂದರೆ—“ವ್ಯಾಪಾರ ಮತ್ತು ವಾಣಿಜ್ಯಗಳ ವಿಚಾರದಲ್ಲಿ ನಡಿಸಲ್ಪಟ್ಟಿರುವ ಕೆಲಸಕಾರ್ಯಗಳು ಮೆಚ್ಚತಕ್ಕವುಗಳಾಗಿಲ್ಲ. ಈ ಇಲಾಖೆಯವರು ಇನ್ನು ಮುಂದಕ್ಕೆ ಬೇರೆ ಮಾರ್ಗಗಳಲ್ಲಿ ಪ್ರವರ್ತಿಸಿ ಕಾರ್ಯಭಾಗವನ್ನು ನಡಿಸಿದರೆ ಗವರ್ನ್‌ಮೆಂಟಿನವರು ಸಂತೋಷಪಟ್ಟಾರು.” ಇದರಿಂದ ನಮ್ಮ ಗವರ್ನ್‌ಮೆಂಟಿನವರ ಉದ್ದೇಶವೂ ಅಭಿಲಾಷೆಯೂ ಏನೆಂಬುವುದು ಅವರಿಗೇ ಸರಿಯಾಗಿ ತಿಳಿದಿಲ್ಲವೆಂದು ಹೇಳಬೇಕಾಗಿದೆ. ನಿಪುಣನೆನಿಸಿದವನನ್ನು ಕರೆತಂದು ನೇಮಿಸಿಕೊಂಡರೆ ಅತನು ಸುಲಭವಾಗಿ ಯಾವ ಕಸಬನ್ನಾದರೂ ಏರ್ಪಾಡು ಮಾಡಬಲ್ಲನೆಂದು ನಮ್ಮ ಸರ್ಕಾರದವರು ನೆನಸುತ್ತಾರೆ. ಆ ನಿಪುಣನಾದವನು ಏನು ಮಾಡುವುದಕ್ಕೂ ಮೊದಲು ದೇಶವನ್ನೂ ಜನಗಳನ್ನೂ ತಿಳಿದುಕೊಳ್ಳಬೇಕು; ಲಾಭಕರವಾದ ಕಸಬನ್ನು ಸ್ಥಾಪಿಸಿ ನಡಿಸುವುದಕ್ಕೆ ಅತನಿಗೆ ಹಲವು ವರುಷಗಳೇ ಹಿಡಿಯಬಹುದು. ಗವರ್ನ್‌ಮೆಂಟಿನವರು ಕೆಲವು ಕಸಬುಗಳನ್ನು ಹಿಡಿದು, ಅವುಗಳ ಸಾಧಕಬಾಧಕ ಫಲಾಫಲಗಳ ವಿಷಯದಲ್ಲಿ ಕೂಲಂಕಷವಾಗಿ ಪರಿಶೋಧನೆ ಮಾಡಬೇಕು. ಹಲವು ವಿಚಾರಗಳನ್ನು ಹಿಡಿದು ಕೊಳ್ಳುತ್ತಿದ್ದರೆ ಒಂದೂ ಸಾರ್ಥಕವಾಗುವುದಿಲ್ಲ. ನಮ್ಮ ಮೈಸೂರು ಸಂಸ್ಥಾನದಲ್ಲಾದರೋ ಪ್ರತಿ ಒಂದು ವಿಷಯದಲ್ಲೂ ಬಿನಾಮು ಮೊದಲುಗೊಂಡು ಕಲಿಯಬೇಕು; ಇನ್ನೊಂದು ಕಷ್ಟವೇನೆಂದರೆ, ಪ್ರಜೆಗಳನ್ನು ಎಷ್ಟು ಎಳೆದರೂ ಮುಂದಕ್ಕೆ ಹೊರಡುವುದರಲ್ಲಿ ಅವರಿಗೆ ಉತ್ಸಾಹವಾಗಲಿ, ಆತುರವಾಗಲಿ ಇಲ್ಲ. ದೇಶದ ಹವಾ ಸ್ಥಿತಿ, ಪ್ರಜೆಗಳ ಗುಣಲಕ್ಷಣಗಳು, ದುಡ್ಡಿನ ವ್ಯವಸ್ಥೆ, ಇವುಗಳನ್ನೆಲ್ಲಾ ನೋಡಿದರೆ ಕಸಬುಗಳಿಗೆ ಬಳಿಗೆ ಏನೂ ಕಾಣುವುದಿಲ್ಲ. ನಮ್ಮ ಗವರ್ನ್‌ಮೆಂಟಿನವರು ಕೂಡ ಇದನ್ನೆಲ್ಲಾ ಸಂಗ್ರಹಿಸಿ ಆತುರಪಡದೆ ನಿಧಾನವಾಗಿಯೂ ತಾಳ್ಮೆಯಿಂದಲೂ ಉಚಿತವಾದ ಮಾರ್ಗಗಳನ್ನು ಹಿಡಿದು ವ್ಯವಸಾಯ ಮಾಡುತ್ತಾ ಬರಬೇಕೆಂದೂ, ಈ ರೀತಿಯಾದ ವರ್ತನೆಯಿಂದ ಹೊರತು ಲಾಭಕರವಾದ ಕಸಬುಗಳು ನಮ್ಮ ನಾಡಿನಲ್ಲಿ ಹುಟ್ಟಿ ಬೆಳೆಯಲಾರವೆಂದೂ ಸೂಚಿಸಬೇಕಾಗಿದೆ.

ಅಪೂರ್ವ ಬೋಧಕನು.

ಕ್ರಿಸ್ತನು ಲೋಕದಲ್ಲಿ ಅವತರಿಸುವುದಕ್ಕಿಂತ ಮುಂಚೆ ಶ್ರೇಷ್ಠರಾದ ಕೆಲವು ಬೋಧಕರಿದ್ದರು. ಬುದ್ಧನು ಕ್ರಿಸ್ತನು ಹುಟ್ಟುವದಕ್ಕಿಂತ ಅನೇಕ ಶತಮಾನಗಳ ಪೂರ್ವದಲ್ಲಿ ಜನಿಸಿದ್ದನು. ಮತ್ತು ದಯೆ, ಸತ್ಯ, ನಿಷ್ಕಾಪಟ್ಯ, ಭಕ್ತಿ ಮುಂತಾದ ಸದ್ಗುಣಗಳನ್ನು ಸಕಲರೂ ಅವಲಂಬಿಸಬೇಕೆಂದು ಬೋಧಿಸಿದನು. “ಪ್ರೀತಿಯಿಂದ ಕೋಪವನ್ನು, ಸತ್ಯದಿಂದ ಅಸತ್ಯವನ್ನೂ, ನಿಷ್ಕೃತ್ಯದಿಂದ ದುಷ್ಕೃತ್ಯವನ್ನೂ ಜಯಿಸಿರಿ” ಎಂದು ಬುದ್ಧನು ಉಪದೇಶಮಾಡಿದನು.

ತಲ್ಮೂದು ಎಂಬುವದು ಯೆಹೂದ್ಯರ ಸಂಪ್ರದಾಯಗಳ ಸಂಗ್ರಹ. ಅದು ಕ್ರಿಸ್ತನ ಜನ್ಮಕ್ಕಿಂತ ಕೆಲವು ಶತಮಾನಗಳ ಪೂರ್ವದಿಂದ ಆ ಜನಾಂಗದವರಲ್ಲಿ ಆಚರಣೆಯಲ್ಲಿದ್ದಿತು. ಅದರಲ್ಲಿ—“ಯಾವನು ಅಪರಾಧವನ್ನು ಕ್ಷಮಿಸುವುದಕ್ಕೆ ಸಿದ್ಧನಾಗಿರುತ್ತಾನೋ ಅಂಥವನ ಪಾಪಗಳು ಕ್ಷಮಿಸಲ್ಪಡುವವು” ಎಂದು ಹೇಳಿದೆ. ಜೊರೋಆಸ್ಟರ್ ಎಂಬ ಪಾರಸೀ ಮತಸ್ಥಾಪಕನು ಸಹ ಕ್ರಿಸ್ತನು ಹುಟ್ಟುವದಕ್ಕಿಂತ ಅನೇಕ ಶತಮಾನಗಳ ಪೂರ್ವದಲ್ಲಿದ್ದನು. ಇವನು—“ಜನರು ನಿನ್ನನ್ನು ಮಾಡಬೇಕೆಂದು ನೀನು ಅಪೇಕ್ಷಿಸುತ್ತೀಯೋ ಅದನ್ನೇ ನೀನು ಅವರಿಗೆ ಮಾಡಿರಿ” ಎಂದು ಸಾರಿದನು. ಕನ್‌ಫ್ಯೂಸಿಯಸೆಂಬ ಮುನಿಶ್ರೇಷ್ಠನು—“ಸಕಲ ಸದ್ಗುಣಗಳಲ್ಲಿ ಪ್ರೀತಿಯೇ ಮುಖ್ಯವಾದದು; ಒಳ್ಳೆಯವನು ಎಲ್ಲರನ್ನೂ ಪ್ರೀತಿಸುವನು” ಎಂದು ಹೇಳಿದನು. ಮತ್ತು ನಮ್ಮ ಭರತಖಂಡದಲ್ಲಿದ್ದ ಅನೇಕ ಮಹರ್ಷಿಗಳು ಇದೇ ತರದ ಶ್ರೇಷ್ಠ ಉಪದೇಶವನ್ನು ನಮಗೆ ಬರೆದು ಕೊಟ್ಟಿದ್ದಾರೆ. ಹೀಗಿರುವಲ್ಲಿ ಕ್ರೈಸ್ತರ ಸತ್ಯವೇದವಾದ ಬೈಬಲಿನಲ್ಲಿ ಕ್ರಿಸ್ತನು ಹೇಳಿರುವ ಸದ್ಬೋಧೆಯೆಲ್ಲವೂ ಆತನಿಗಿಂತ ಯುಗಗಳಿಗೆ ಮುಂಚೆ ಇದ್ದ ಬೋಧಕರು ಕಲಿಸಿದ್ದರು ಎಂಬ ಅಭಿಪ್ರಾಯವು ನಿಜವಾಗಿದೆ. ಹಾಗಾದರೆ ಅದ್ವಿತೀಯ ಬೋಧಕನು, ಸಾಟಿಯಿಲ್ಲದ ಅಸಾಧಾರಣವಾದ ನೀತಿಯನ್ನು ಲೋಕಕ್ಕೆ ತಂದವನು ಎಂದು ಹೇಳುವದು ಸರಿಯೋ? ಆತನೊಬ್ಬನೇ ನೀತಿಯನ್ನೂ ದೇವರ ವಿಷಯವಾಗಿ ತತ್ವಜ್ಞಾನವನ್ನೂ ಲೋಕಕ್ಕೆ ಕೊಟ್ಟವನು ಎಂದು ಲೋಕದಲ್ಲಿದ್ದ ಸಕಲ ಬೋಧಕರಿಗಿಂತ ಆತನನ್ನು ಉತ್ತಮೋತ್ತಮನಾದ ಗುರುವೆಂದು ಸಾಧಿಸುವದಕ್ಕೆ ಕಾರಣವೇನು? ಆತನು ಸ್ಥಾಪಿಸಿದ ಮತವು ಮಾತ್ರ ದೈವಿಕವಾದುದೋ? ವಿಚಾರಿಸೋಣ.

ಈ ವಿಷಯವಾಗಿ ಪ್ರಸ್ತಾಪಿಸುವದಕ್ಕಿಂತ ಮುಂಚೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಅದೇನಂದರೆ—ಕ್ರಿಸ್ತನಿಗೆ ಪೂರ್ವದಲ್ಲಿದ್ದ ಮತಬೋಧಕರು ಅಲ್ಲಲ್ಲಿ ಹೇಳಿರುವ ಬೋಧನೆಯು ಸತ್ಯವಾಗಿದ್ದರೂ ಅದು ಮಹಾ ಗಜಿಬಿಜಿಯಿಂದೊಡಗೂಡಿರುವ ಅಸತ್ಯದಲ್ಲಿ ಮಿಶ್ರವಾಗಿದೆ. ಅವರು ಬೋಧಿಸಿರುವದರಲ್ಲಿ ಪರಸ್ಪರ ವಿರೋಧವಾದ ಅಭಿಪ್ರಾಯಗಳಿರುತ್ತವೆ. ತಮೋರಾಶಿಯಲ್ಲಿ ನುಚ್ಚಾದ ನಕ್ಷತ್ರಗಳು ಅಲ್ಲಲ್ಲಿ ಮಿಣುಗುಟ್ಟುವಂತೆ ಸತ್ಯವಾಕ್ಯಗಳು ಅಸತ್ಯದಲ್ಲಿ ಮಿಶ್ರವಾಗಿ ಇರುತ್ತವೆ. ಅವುಗಳಲ್ಲಿರುವ ಅಸತ್ಯವನ್ನೆಲ್ಲಾ ತೊಳ್ಳೆ ಕೆಡಹಿ ಸತ್ಯವನ್ನೇ ಹುಡುಕಿ ತೆಗೆಯುವದು ಯಾರೋ ವಿದ್ವಾಂಸರೂ ಅನುಕೂಲಸ್ಥರೂ ಆಗಿರುವವರಿಗೆ ಸಾಧ್ಯವೇ ಹೊರತು ಜನಸಾಮಾನ್ಯಕ್ಕೆ ಸಾಧ್ಯವಲ್ಲ. ಕ್ರಿಸ್ತನ ಬೋಧೆಯಲ್ಲಿ ಅಕಳಂಕವಾದ ಸತ್ಯವೇ ಹೊರತು ಅಸತ್ಯವು ಲವಲೇಶವೂ ಇಲ್ಲ. ಪರಸ್ಪರ ವಿರೋಧಾಭಿಪ್ರಾಯಗಳೂ ಅದರಲ್ಲಿ ಸಿಕ್ಕುವದಿಲ್ಲವೆಂದು ಅದನ್ನು ಆಮೂಲಾಗ್ರವಾಗಿ ಶೋಧಿಸುವವರು ಅನುಮಾನವಿಲ್ಲದೆ ಒಪ್ಪುವರು.

ಇದು ಹಾಗಿರಲಿ. ಕ್ರಿಸ್ತನಿಗೆ ಪೂರ್ವದಲ್ಲಿ ಬಂದ ಬೋಧಕರು ಹೇಳಿರುವ ತಪ್ಪು ಬೋಧನೆಗಳನ್ನು ಬಿಟ್ಟು ಅವರು ಹೇಳಿರುವ ಸತ್ಯಬೋಧನೆಯನ್ನೇ ಎತ್ತಿ ಬರೆದರೆ ಕ್ರಿಸ್ತನ ಬೋಧನೆಗೆ ಸಮಾನವಾಗಿ ಅದೂ ಆಗುತ್ತದೆಯಲ್ಲ. ತಪ್ಪುಗಳನ್ನು ಕೊಚ್ಚಿ ಹಿಂಡಿಸುವದಕ್ಕೆ ಬಹಳ ಸಮಯವೂ ವಿದ್ಯೆಯೂ ಬೇಕಾಗಿರುವದು ನಿಜವೇ. ಆದರೇನು? ಕ್ರಿಸ್ತನ ಬೋಧನೆಗೆ ಸಮಾನವಾದ ಸದ್ಬೋಧೆಯು ಇತರ ಬೋಧಕರ ಸಾರಸಂಗ್ರಹದಲ್ಲಿ ಸಿಕ್ಕುವದಾದರೆ ಅವರೆಲ್ಲರನ್ನು ಹಿಂದಕ್ಕಿರಿಸಿ ಕ್ರಿಸ್ತನನ್ನೇ ಪುರಸ್ಕರಿಸುವದೇಕೆ?

ಇತರ ಬೋಧಕರು ದೇವರ ಸಿಜಕ್ಕಿನ ವಿಷಯವಾಗಿಯೂ ಆತನ ಗುಣಲಕ್ಷಣಗಳ ವಿಷಯದಲ್ಲಿಯೂ ಅನುಮಾನಾಸ್ಪದವಾಗಿ ಚರ್ಚಿಸಿ ಹೇಳಿರುವ ಬೋಧನೆಗಳು ತಮಗೂ ಮಬ್ಬಾಗಿ ಮಿಣುಗುಟ್ಟುವ ಬೆಳಕಿನ ಸುಳಿವನ್ನು ಮಾತ್ರ ಸುಮಾರಾಗಿ ಗೋಚರಪಡಿಸುತ್ತವೆ. ಆದರೆ ಕ್ರಿಸ್ತನು ಅನುಮಾನಾಸ್ಪದವಾದ ಚರ್ಚೆಯನ್ನಲ್ಲ, ಉಪದೇಶವನ್ನೂ ಅಲ್ಲ; ಸಾಕ್ಷಾತ್ ದೇವರ ಮನಸ್ಸನ್ನೇ ನಮಗೆ ನಿರ್ದೇಶಪಡಿಸಿ, ನಾವು ಮುಖಾಮುಖಿಯಾಗಿ ಆತನ ದರ್ಶನವನ್ನು ಪಡೆಯುವಂತೆ ಮಾಡುತ್ತಾನೆ. ಭೂಗರ್ಭ ಶಾಸ್ತ್ರವನ್ನು ಶೋಧಿಸಿರುವವರು ಭೂಮಂಡಲದ ಬೇರೆ ಬೇರೆ ಭಾಗಗಳಲ್ಲಿ ತಿರುಗಾಡಿ ಇಂತಿಂತಹ ಕಡೆಗಳಲ್ಲಿ ತಾಮ್ರ, ಸೀಸ, ಬೆಳ್ಳಿ, ಚಿನ್ನಗಳು ಸಿಕ್ಕಬಹುದೆಂದು ಊಹಿಸುತ್ತಾರೆ. ಅವರ ಊಹೆಯು ಕೆಲವು ಸಾರಿ ನಿಜವಾಗಿ ಪರಿಣಮಿಸುತ್ತದೆ. ಅನೇಕ ಸಾರ್ತಿ ಅವರ ಅನುಮಾನದ ಊಹೆಯನ್ನು ನಂಬಿ ಅಗಿದು ನೋಡಿದ ನಂತರ ಅಲ್ಲಿ ಸಿಕ್ಕುವ ಲೋಹವು ಅದನ್ನು ತೆಗೆಯುವದಕ್ಕೆ ಮುಟ್ಟುವ ಕರ್ಚು, ಸಮಯ, ಶ್ರಮಗಳಿಗೆ ತೀರ ಸಾಲದಾಗಿರುತ್ತದೆ. ಕ್ರಿಸ್ತನಾದರೋ ದೇವರೆಂಬ ಚಿನ್ನವನ್ನು ಹುಡುಕುವವರನ್ನು ಮುದ್ದು ಅದರಂಚಿಯ ಗಣಿಗೆ ಸೇರಿಸುತ್ತಾನೆ.

ಕ್ರಿಸ್ತನನ್ನು ಬಿಟ್ಟು ಉಳಿದ ಮತಸ್ಥಾಪಕರು ಸತ್ಯವನ್ನು ಹುಡುಕುವದರಲ್ಲಿಯೂ ದೇವರನ್ನು ತಿಳಿಯುವದರಲ್ಲಿಯೂ ಕೇವಲ ಆಸಕ್ತರಾಗಿದ್ದರು ಸರಿ. ನಮಗೆ ಈ ಪ್ರಪಂಚದ ವಿಷಯಗಳಲ್ಲಿ ಹೆಚ್ಚಾದ ಆಸಕ್ತಿ ಇರುತ್ತದೆ. ಅದೃಶ್ಯವಾದ ಪಾರಮಾರ್ಥಿಕ ವಿಷಯಗಳಲ್ಲಿ ಅಭಿಲಾಷೆಯೂ ರುಚಿಯೂ ಕಡಿಮೆ. ಆದರೆ ಬುದ್ಧ ಕನ್‌ಫ್ಯೂಸಿಯ ಮುಂತಾದ ಮಹರ್ಷಿಗಳು ದೃಶ್ಯವಾದ ಅನಿತ್ಯ ವಸ್ತುಗಳನ್ನು ಲಾಭ ಮಾಡಿಕೊಳ್ಳುವದರಲ್ಲಿ ತೃಪ್ತರಾಗದೆ ಪರಾತ್ಪರನಾದ ಪರವಸ್ತುವನ್ನು ಲಾಭ ಮಾಡಿಕೊಳ್ಳುವದರಲ್ಲಿ ಕಾಂಕ್ಷಿತರಾಗಿದ್ದರು. ಈ ವಿಷಯದಲ್ಲಿ ನಾವು ಅವರ ಮೇಲ್ಪಂಕ್ತಿಯನ್ನು ಹಿಡಿಯಬೇಕಾದ ಅಗತ್ಯವಿದೆ. ಆದರೆ ಕ್ರಿಸ್ತನಿಂದಲ್ಲದೆ ಸತ್ಯವಾವುದು? ದೇವರು ಯಾರು? ಆತನನ್ನು ಸೇರುವ ಮಾರ್ಗವಾವುದು? ಎಂದು ವಿಚಾರಿಸುವ ಮನುಷ್ಯನಾಗಿರಲಿಲ್ಲ. ಆತನ ಶಿಷ್ಯರು ಆತನ ವಿಷಯ ಬರೆದಿರುವದನ್ನು ಕೇಳಿರಿ. ಏನೆಂದರೆ—ಕ್ರಿಸ್ತನು ನೀತಿಯನ್ನೂ ಸತ್ಯವನ್ನೂ ದೇವರನ್ನು ಕುರಿತು ಉಪದೇಶವನ್ನು ಮಾಡುವ ಬರೀ ಬೋಧಕನಲ್ಲ; ಆತನು ಅದೃಶ್ಯನಾದ ದೇವರ ಪ್ರತಿರೂಪ; ಆತನು ಎಲ್ಲಕ್ಕೂ ಮೊದಲು ಇದ್ದವನು; ಸಮಸ್ತಕ್ಕೂ ಆಧಾರಭೂತನು; ಆದಿಸಂಭೂತನು; ಆತನ ಮೂಲಕ ಜಗತ್ತು ಉಂಟಾಯಿತು; ಆತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿದ್ದಾನೆ ಎಂದು ಬರೆದರು.

ಕ್ರಿಸ್ತನು ಸತ್ಯವನ್ನು ಹುಡುಕುವವರನ್ನು ಕಂಡು—ನಾನೇ ಸತ್ಯವುಳ್ಳಯು; ನಾನೇ ಮಾರ್ಗವು; ನನ್ನನ್ನು ಅನುಸರಿಸಿ ನಡೆಯುವವನು ಎಂದಿಗೂ ದಾರಿತಪ್ಪಿ ಹೋಗುವದಿಲ್ಲವೆಂತಲೂ ನಿತ್ಯನಾದ ಪರಲೋಕ ಪದವಿಯನ್ನು ಬಯಸುತ್ತಿದ್ದವರಿಗೆ—ನಾನೇ ನಿತ್ಯಜೀವ, ನಿತ್ಯಜೀವವನ್ನು ಕೊಡುವ ಆಹಾರವೂ ನಾನಷ್ಟೇ ಆಗಿದ್ದೇನೆ. ನನ್ನನ್ನು ತಿನ್ನುವವನು ಸಾಯುವದೇ ಇಲ್ಲವೆಂತಲೂ ಜ್ಞಾನಾರ್ಜನೆಗಾಗಿ ಹುಡುಕುತ್ತಿದ್ದವರಿಗೆ—ನಾನೇ ಲೋಕಕ್ಕೆ ಬೆಳಕಾಗಿದ್ದೇನೆ; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದುವನು ಎಂತಲೂ ಸ್ಪಷ್ಟವಾಗಿ ಹೇಳಿದನು. ಮತ್ತು ದೇವರನ್ನು ಯಾವನಾದರೂ ಎಂದೂ ನೋಡಿದ್ದಿಲ್ಲ. ಆದರೆ ದೇವರು ತಾನೇ ಕಳುಹಿ ಕೊಟ್ಟವನಾದ ನಾನೊಬ್ಬನೇ ಆತನನ್ನು ನೋಡಿದ್ದೇನೆ. ತಂದೆಯಾದ ದೇವರು ತನ್ನ ನಿತ್ಯ ಕುಮಾರನಾದ ನನ್ನನ್ನು ಪ್ರೀತಿಮಾಡಿ ಸಕಲ ಅಧಿಕಾರವನ್ನು ನನಗೆ ಒಪ್ಪಿಸಿದ್ದಾನೆ. ಮಗನಾದ ನಾನೇ ಹೊರತು ತಂದೆಯಾದ ದೇವರನ್ನು ಇನ್ನಾರೂ ತಿಳಿಯಲಿಲ್ಲ. ಮತ್ತು ನಾನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸಾಗಿದ್ದೇನೋ ಅವನು ತಂದೆಯನ್ನು ತಿಳಿಯುವನು. ನಾನೂ ತಂದೆಯೂ ಒಂದೇಯಾಗಿದ್ದೇವೆ. ತಂದೆಯು ನನ್ನಲ್ಲಿಯೂ ನಾನು ತಂದೆಯಲ್ಲಿಯೂ ಅನ್ಯೋನ್ಯರಾಗಿದ್ದೇವೆ. ಇಹದಿಂದ ಪಾಪಿಗಳಿಗೆ ಪಾಪಪರಿಹಾರವನ್ನೂ ಪವಿತ್ರತ್ವವನ್ನೂ ಕೊಡುವ ಅಧಿಕಾರವು ನನಗಿದೆಯೆಂದು ಬೋಧಿಸಿದನು. ಮನುಷ್ಯ ಮಾತ್ರದವನು ಹೀಗೆ ಬೋಧಿಸುವದಕ್ಕೆ ಧೈರ್ಯಪಟ್ಟಾನೋ?

ಯುದ್ಧದ ಸಮಾಚಾರಗಳು.

ವೆರ್ಡೂನ್ನಲ್ಲಿ ಇನ್ನೂ ಕದನ ನಿಂತಿಲ್ಲ.

ಕಳೆದ ವಾರ ಯುದ್ಧ ಭೂಮಿಯಿಂದ ಬಂದಿರುವ ವರ್ತಮಾನಗಳಲ್ಲೆಲ್ಲಾ ವೆರ್ಡೂನ್ ಕೋಟೆಯ ಬಳಿ ನಡೆಯುತ್ತಿರುವ ಘೋರವಾದ ಯುದ್ಧ ವಾರ್ತೆಯೇ ಬಹು ವಿಶೇಷವಾದದ್ದು. ಜರ್ಮನಿಯವರು ನುಗ್ಗಿ ಇನ್ನೂ ಫ್ರೆಂಚರ ಯುದ್ಧ ಸಾಲುಗಳ ಮೇಲೆ ಬಿದ್ದು ಘೋರವಾದ ಕದನಗಳನ್ನು ನಡಿಸುತ್ತಲೇ ಇದ್ದಾರೆ. ಇದರಲ್ಲಿ ಅವರು ಸ್ವಲ್ಪ ಮಟ್ಟಿಗೆ ಮುಂದರಿಸಿ ನುಗ್ಗಿ ಹೋಗಿರುವಂತೆ ಕಾಣುವುದು. ಅಲ್ಲಲ್ಲಿ ಜಯಿಸಿದವರು ಕಷ್ಟ ಕದನ ತೀರದಲ್ಲಿರುವ ತ್ರಿಬಿಜೆಂಡ್ ಎಂಬ ಟರ್ಕಿಯವರ ಪಟ್ಟಣವನ್ನು ಕುರಿತು ನುಗ್ಗಿ ಹೋಗುತ್ತಲಿದ್ದಾರೆ.

ಪಶ್ಚಿಮ ರಣರಂಗದಲ್ಲಿ.

ವೆರ್ಡೂನ್ ನಗರದ ಸುತ್ತಲೂ ನಡೆಯುತ್ತಿರುವ ಯುದ್ಧ ಕ್ರಮವನ್ನು ಸೈನ್ಯಗಳ ಸ್ಥಾನಗಳಿಂದ ತಿಳಿದುಕೊಳ್ಳಬೇಕಾಗಿದೆ. ಫ್ರೆಂಚರ ಯುದ್ಧಸಾಲು ಜರ್ಮನಿಯವರ ಯುದ್ಧಸಾಲಿನೊಳಗೆ ಸ್ವಲ್ಪ ದೂರ ವಕ್ರವಾಗಿ ನುಗ್ಗಿ ಹೋಗಿರುವುದು. ಈ ಸಾಲಿನ ತುದಿ ಮೂಲೆಯ ಮೇಲೆ ಜರ್ಮನಿಯವರು ಮೊದಲು ನುಗ್ಗಿ ಸಾವಿರಾರು ಸೈನಿಕರನ್ನು ತಂದು ಅತ್ಯಂತ ಘೋರವಾಗಿ ಕದನ ಮಾಡಿದರು. ಅಲ್ಲಿ ಅವರಿಗೆ ವಿಶೇಷ ಅನುಕೂಲವೇನೂ ಆಗದೇ ಹೋಯಿತು. ಆ ವಕ್ರಾಕಾರದ ಫ್ರೆಂಚ್ ಸಾಲಿನ ಮೇಲೆ ನುಗ್ಗಿದ್ದು ಮೊದಲನೇ ಪ್ರಯತ್ನವಾಗಿ ಅಸಾಧ್ಯಕರವಾಯಿತು. ಈಗ ಜರ್ಮನಿಯವರು ಫ್ರೆಂಚ್ ಸೈನ್ಯಸಾಲುಗಳ ಆ ವಕ್ರಾಕಾರವಾದ ಉಭಯ ಕೊನೆಗಳ ಮೇಲೂ ನುಗ್ಗಿ ಕದನಮಾಡುತ್ತಿದ್ದಾರೆ. ಫಿರಂಗಿ ಗುಂಡುಗಳ ಹಾರಾಟವು ಅತ್ಯಂತ ಘೋರವಾಗಿ ನಡೆಯುತ್ತಿದೆ. ಜರ್ಮನಿಯವರು ತಮ್ಮ ಫಿರಂಗಿಗಳಿಂದ ಗುಂಡುಗಳ ಮಳೆಗರೆದು ಫ್ರೆಂಚ್ ಸೈನಿಕರಿರುವ ಕಂದಕಗಳನ್ನು ನಾಶಪಡಿಸಬೇಕೆಂದು ಪ್ರಯತ್ನಪಟ್ಟರು. ಫ್ರೆಂಚರಾದರೋ ಜವಾಬಾಗಿ ಗುಂಡುಗಳ ಮಳೆಯನ್ನು ಶತ್ರುವಿನ ಮೇಲೆ ಬಹಳ ರಭಸವಾಗಿ ಸುರಿಸಿದಾರೆ. ಜರ್ಮನಿಯವರು ಅನೇಕಾವರ್ತಿ ಫ್ರೆಂಚರ ಮೇಲೆ ನುಗ್ಗಿ ಕದನ ಮಾಡಿದರು. ಕೆಲವೆಡೆಗಳಲ್ಲಿ ಅವರು ಸ್ವಲ್ಪ ಸ್ವಲ್ಪ ದೂರದ ತನಕ ಫ್ರೆಂಚರನ್ನು ಹಿಮ್ಮೆಟ್ಟಿಸಿರುತ್ತಾರೆಂದು ಕಾಣುವುದು. ಈ ಕದನಗಳಲ್ಲಿ ಜರ್ಮನಿಯವರು ಜ್ವಾಲಾ ದ್ರವ್ಯಗಳನ್ನು ಫ್ರೆಂಚ್ ಸೈನಿಕರ ಮೇಲೆ ಪ್ರಯೋಗಮಾಡಿ, ಅವರನ್ನು ಹಿಂದಕ್ಕೆ ಓಡಿಸಬೇಕೆಂದು ಬಹಳ ಸಾಹಸಪಟ್ಟರು. ಫ್ರೆಂಚರಾದರೋ ಮಹಾ ಪರಾಕ್ರಮದಿಂದ ತಮ್ಮ ಸ್ಥಾನಗಳನ್ನು ಬಿಟ್ಟು ಹಿಮ್ಮೆಟ್ಟದೆ ಯುದ್ಧ ಕೊಡುತ್ತಾ ಕಾಪಾಡಿಕೊಂಡು ಬಂದಿರುವರು.

ಮೊದಲು ಜರ್ಮನಿಯವರು ನಿಲುಗಡೆ ಇಲ್ಲದೆ ತಂಡ ತಂಡವಾಗಿ ನುಗ್ಗಿ ಬರುತ್ತಲೇ ಇದ್ದರು. ಈಗ ಅದು ಸ್ವಲ್ಪ ಕಡಿಮೆಯಾಗಿರುವಂತೆ ಹೇಳಲಾಗಿದೆ. ಜರ್ಮನ್ ಸೈನಿಕರಲ್ಲಿ ಚಿಕ್ಕ ವಯಸ್ಸಿನವರೇ ಈಗ ಹೆಚ್ಚಾಗಿರೋದರಿಂದ

ಯುದ್ಧ ಮಾಡುವುದರಲ್ಲಿ ಇವರಿಗೆ ಧೈರ್ಯವೂ ಸ್ಥೈರ್ಯವೂ ಕಡಮೆ ಎಂದು ತಿಳಿಸಲ್ಪಟ್ಟಿದೆ. ಇದು ಹ್ಯಾಗಾದರೂ ಇರಲಿ, ಜರ್ಮನಿಯವರು ವರ್ದುನ ಮೇಲೆ ಬಿದ್ದು ಕದನ ಮಾಡುವುದು ಇನ್ನೂ ಶಮನವಾಗಲಿಲ್ಲ. ಪ್ರಾರಂಭವಾಗಿ ಸುಮಾರು ಇಪ್ಪತ್ತು ದಿನಗಳ ಮೇಲೆಯೇ ಆಗಿದ್ದಾಗ್ಯೂ ಮುಂದುವರಿಸುತ್ತಿದ್ದಾರೆ. ಈಗ ಹೊಸದಾಗಿ ನಡೆಯುವ ಯುದ್ಧಕ್ಕೆ ಸುಮಾರು ಮತ್ತೆ 1,00,000 ಹೊಸ ಸೈನ್ಯಗಳನ್ನು ಕರೆಸಿ ತಂದಿದಾರೆಂದು ತಿಳಿಸಲ್ಪಟ್ಟಿದೆ.

ಕದನದ ಮೊದಲ ಭಾಗದಲ್ಲಿ ಕೈಸೆರೆ ಸಿಕ್ಕಿರುವಂಥಾ ಜರ್ಮನ ಸೈನಿಕರುಗಳಿಂದ ಅವರು ಬಹಳ ಘೋರವಾದ ಕಷ್ಟಗಳನ್ನು ಅನುಭವಿಸಿರುವುದು ಗೊತ್ತಾಗುವುದು. ಆ ಪೈಕಿ ಒಬ್ಬ ಸೈನಿಕನು—ಫೆಬ್ರವರಿ ತಾ 21 ರಲ್ಲಿ ಕಂಪನಿಯಲ್ಲಿ 200 ಸೈನಿಕರೂ, ನಾಲ್ಕಾರು ಹುದ್ದೇದಾರರೂ ಇದ್ದರು, ತಾ. 22 ರಲ್ಲಿ ನೋಡಿದಾಗ 70 ಮಂದಿ ಸೈನಿಕರೂ ಒಬ್ಬ ಹುದ್ದೇದಾರನು ಮಾತ್ರ ಉಳಿದಿದ್ದರೆಂದೂ ತಿಳಿಸಿದಾನೆ. ಈ ಕದನದ ಮೊದಲ ಭಾಗದಲ್ಲಿ ಜರ್ಮನ ಜನರಲ್‌ಗಳು (ದಳಪತಿಗಳು) ಮಡಿದುಹೋದರೆಂದೂ ಫ್ರೆಂಚರು ವರದಲ್ಲಿ ಅಗಣಿತವಾದ ಮದ್ದುಗುಂಡುಗಳನ್ನು ಕೊಂಡಿದಾರೆ. ಕಣ್ಣಾರ ನೋಡಿದ ಒಬ್ಬ ಪುರುಷನು ಸೈನಿಕರಿಗೆ ಸಾಮಾನುಗಳನ್ನು ಸುಮಾರು 2,000 ಮೋಟಾರುಗಳು ಸಾಗಿಸುತ್ತಿದ್ದದ್ದನ್ನು ರಸ್ತೆಯಲ್ಲಿ ಕಂಡೆನೆಂದು ಹೇಳಿದಾನೆ. ಜರ್ಮನರು ಕೆಲವು ದಿನಗಳೊಳಗಾಗಿ ಫ್ರೆಂಚರ ಅಡಚಣೆಯನ್ನು ತಪ್ಪಿಸಿಕೊಂಡು ಹೋಗಬಹುದಾಗಿ ಸಂಕಲ್ಪ ಮಾಡಿಕೊಂಡಿದ್ದ ಹಾಗೂ, ಅವರ ಆಶೆ ವ್ಯರ್ಥವಾಯಿತೆಂದು ಈಗ ಭಂಗಪಡುತ್ತಿದಾರೆಂದೂ ಹೇಳಲಾಗಿದೆ. ಜರ್ಮನರು ಫ್ರೆಂಚರ ಹಲವು ಠಾಣ್ಯಗಳನ್ನು ಕಿತ್ತುಕೊಂಡಿದೇವೆಂದು ಹೇಳುತ್ತಿದಾರೆಂದು ಕಾಣುತ್ತದೆ. ಫ್ರೆಂಚರು ಅದು ನಿಜವಲ್ಲವೆಂದು ಸಾರುತ್ತಿದ್ದಾರೆ. ಜರ್ಮನಿಯವರು ಫ್ರೆಂಚರೇ ಮೊದಲು ತಮ್ಮ ಮೇಲೆ ನುಗ್ಗಲು ಪ್ರಾರಂಭಿಸಿದರೆಂದೂ ಹೇಳುವರು.

ಈಗ ಬಂದಿರುವ ತಂತಿವರ್ತಮಾನಗಳಿಂದ ಜರ್ಮನಿಯವರು ವೆರ್ದೂನ್ ಅನ್ನು ಗೆದ್ದುಕೊಳ್ಳಬೇಕೆಂದು ಮಾಡಿದ ಸಾಹಸಕಾರ್ಯಗಳೆಲ್ಲಾ ವ್ಯರ್ಥವಾದುವು, ಅವರು ಅದಕ್ಕಾಗಿ ಮುಂದೆ ನುಗ್ಗಿ ಬರುವುದರಲ್ಲಿ ವಿಶೇಷ ನಷ್ಟವನ್ನು ಹೊಂದುವರೆಂದೂ ತಿಳಿಯುವುದು. ಜರ್ಮನಿಯವರು ಬಹಳ ನಷ್ಟಪಟ್ಟಿದಾರೆ. ಇದುವರೆಗೆ ನೋಡುವಲ್ಲಿ ಅವರ ಕಡೆ 2,00,000 ಜನ ನಷ್ಟವಾಗಿರುವಂತೆ ಹೇಳಲಾಗಿದೆ.

ಸಮುದ್ರದಲ್ಲೂ ಅನೇಕ ಕದನಗಳು ನಡೆದಿರುವವು. ಎರಡೇ ಎರಡು ದಿನಗಳಲ್ಲಿ ಜರ್ಮನಿಯವರ ಹದಿನೈದು ವಿಮಾನಯಂತ್ರಗಳು ಸೋಲಿಸಲ್ಪಟ್ಟಂತೆ ತಿಳಿದುಬಂದಿದೆ.—ಸಮುದ್ರದಲ್ಲೂ ಫ್ರೆಂಚರು ಜರ್ಮನಿಯವರ ಒಂದು ಜಲಯಂತ್ರವನ್ನು ಕೆಡವಿಬಿಟ್ಟು ಒಬ್ಬನನ್ನು ಕೈಸೆರೆ ಹಿಡಿದರು; ಇನ್ನೊಬ್ಬನು ಸತ್ತುಹೋದನು.—ಜರ್ಮನಿಯವರು ವೆರ್ದೂನ್ ಕೋಟೆಯ ಬಳಿ ಹೊಸ ವಿಧವಾದ ಸಿಡಿಮದ್ದಿನ ಗುಂಡುಗಳನ್ನು ಬಿಟ್ಟು ಹಾರಿಸುತ್ತಾರೆ. ಆದರೇ ಅವುಗಳಿಂದ ಅಪಾಯ ಸಂಭವಿಸದಂತೆ ಉಪಾಯವಾಗಿ ತಪ್ಪಿಸಿಕೊಂಡರು.

ಪೂರ್ವ ರಣರಂಗದಲ್ಲಿ.

ಈ ರಣರಂಗದಲ್ಲಿ ಪ್ರಕಟನೆಗೆ ಅರ್ಹವಾದಂಥಾ ವಿಶೇಷವಾದ ಕದನ ಯಾವುದೂ ನಡೆದಿಲ್ಲ. ಆದರೂ ಜರ್ಮನಿಯವರು ಕೆಲವು ಠಾಣ್ಯಗಳಲ್ಲಿ ಮುತ್ತಿಗೆ ಹಾಕಿ ಆಕ್ರಮಣವನ್ನು ತೋರಿಸುತ್ತಾರೆ. ಜರ್ಮನಿಯವರು ಡ್ವೀನಾ ಎಂಬ ನದಿಯನ್ನು ದಾಟಿ ಹೋಗಬೇಕೆಂದು ಪ್ರಯತ್ನಪಟ್ಟರು; ಅದು ಅವರಿಂದ ಸಾಧ್ಯವಾಗಲಿಲ್ಲ. ರಷ್ಯದವರು ಅವರನ್ನು ಹಿಂದಕ್ಕೆ ಓಡಿಸಿಬಿಟ್ಟರು. ಅಲ್ಲಿಂದ ಪಶ್ಚಿಮಕ್ಕೆ ಜರ್ಮನರು ಕೆಲವು ಸಾರಿ ರಷ್ಯದವರನ್ನು ಹಿಮ್ಮೆಟ್ಟಿಸಬೇಕೆಂದು ಅವರ ಮೇಲೆ ದಾಳಿಮಾಡಿದರು. ಆದರೆ ರಷ್ಯದವರು ಅವರಿಗೆ ಎದುರುನಿಂತ ಕೂಡಲೆ ಅವರನ್ನು ಓಡಿಸಿದಾರೆ. ಇದರಲ್ಲಿ ಜರ್ಮನಿಯವರ ಕಡೆ ತುಂಬಾ ನಷ್ಟವೂ ಆಯಿತು.

ಇಟಲಿ.

ಈ ಕಡೆಯಿಂದ ಬಂದಿರುವ ತಂತಿವರ್ತಮಾನ ಬಹಳ ಕಡಿಮೆ. ಇಲ್ಲಿ ಹವಾ ಸ್ಥಿತಿಯು ಚೆನ್ನಾಗಿಲ್ಲ. ಮಳೆಯಿಂದಲೂ ಹಿಮದಿಂದಲೂ ನದಿಗಳಲ್ಲಿ ಪ್ರವಾಹ ಬಂದು ಹರಿಯುತ್ತಿದೆ. ಕದನಕಾರ್ಯಗಳು ನಡೆಯುವುದು ಬಹಳ ಕಷ್ಟ. ಇಟಲಿಯವರು ಕೆಲವು ವೇಳೆ ಶತ್ರುವಿನ ಮೇಲೆ ದಾಳಿಮಾಡಿದರು. ಇವರ ದೆಸೆಯಿಂದ ಆಸ್ಟ್ರಿಯಾದವರು ತಮ್ಮ ಸೈನ್ಯಗಳನ್ನು ಕಂದಕಗಳೊಳಗೆ ಸೇರಿಸಿಕೊಳ್ಳುವಂತೆ ಮಾಡಬೇಕಾಯಿತು. ಇಟಲಿಯವರ ಮೇಲೆ ಕಂದಕಗಳಿಗೂ ಫಿರಂಗಿ ಗುಂಡುಗಳನ್ನು ಸುರಿಸಿದರು.

ಟರ್ಕಿಯಲ್ಲಿ.

ರಷ್ಯನವರು ಏಷ್ಯಾ ಮೈನರ್ ಸೀಮೆಯೊಳಗೆ ಮುಂದುಮುಂದಕ್ಕೆ ನುಗ್ಗುತ್ತಿದಾರೆ. ಅವರು ಈಗ ಟ್ರೆಬಿಜಾಂಡ್ ಎಂಬ ತೀರಪಟ್ಟಣವನ್ನು ಹಿಡಿಯಬೇಕೆಂದು ಸಾಹಸಪಡುತ್ತಿರುವರು. ಅದು ಟರ್ಕಿಗೆ ಸೇರಿರುವ ಮುಖ್ಯವಾದ ಪಟ್ಟಣ; ಕಪ್ಪುಕಡಲಿನ ತೀರದಲ್ಲಿದೆ. ಟ್ರೆಬಿಜಾಂಡ್ ನಗರಕ್ಕೆ ಕೆಲವು ಮೈಲಿ ದೂರದಲ್ಲಿ ರಷ್ಯದವರು ಸೈನ್ಯಗಳನ್ನು ಸಾಗಿಸಿ ಇಳಿಸಿದರು. ದಕ್ಷಿಣ ಭಾಗಕ್ಕೆ ಹೋಗಿ ಅಲ್ಲಿದ್ದ ಶತ್ರುಸೈನ್ಯಗಳನ್ನೆಲ್ಲಾ ಓಡಿಸಿ ಸೈನಿಕರನ್ನೂ ಎರಡು ಫಿರಂಗಿಗಳನ್ನೂ ಕೈಸೆರೆ ಹಿಡಿದು ತಂದರು. ಅಲ್ಲಿಂದ ಪಶ್ಚಿಮಭಾಗಕ್ಕೆ ನುಗ್ಗಿ ಹೋಗಿ ಟ್ರೆಬಿಜಾಂಡ್ ನಗರವನ್ನು ಸಮೀಪಿಸುತ್ತಿದಾರೆ. ಈ ನಗರವು ಅಷ್ಟರಲ್ಲೇ ರಷ್ಯದವರ ವಶವಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಎರ್ಜೆರಮ್ ನಗರವು ರಷ್ಯದವರ ಸ್ವಾಧೀನವಾಗುವುದಕ್ಕೆ ಮುಂಚೆ ಅದರಲ್ಲಿ 40,000 ಅರ್ಮೇನಿಯಾ ಜನರಿದ್ದರೆಂದೂ, ರಷ್ಯದವರು ಒಳನುಗ್ಗಿದಾಗ 16 ಮಂದಿ ಮಾತ್ರ ಉಳಿದಿದ್ದರೆಂದೂ ಹೇಳಲಾಗಿದೆ. ಉಳಿದ ಮುಸಲ್ಮಾನರು ಅವರನ್ನೆಲ್ಲಾ ಆ ನಗರದಿಂದ ಹೊರಡಿಸಿಬಿಟ್ಟಿದ್ದರೆಂದು ತಿಳಿಸಲ್ಪಟ್ಟಿದೆ.

ಟರ್ಕಿಯವರು ಕರಾರು ಮಾಡಿಕೊಳ್ಳಬೇಕೆಂದು ಕುತೂಹಲಪಡುತ್ತಿದಾರೆ. ಅವರು ಅದಕ್ಕೋಸ್ಕರ ರಷ್ಯದವರನ್ನು ಪ್ರಶ್ನೆಮಾಡಿದಾರೆಂದೂ ನಾನಾ ವದಂತಿಗಳು ಹುಟ್ಟುತ್ತಿವೆ. ಕರಾರು ಮಾಡಿಕೊಳ್ಳುವುದರಲ್ಲಿ ಟರ್ಕಿಗೆ ಆತುರವೇನೋ ಉಂಟು; ಆದರೆ ಇದಕ್ಕೆ ಮಿತ್ರಮಂಡಲಿಯವರೆಲ್ಲಾ ಒಪ್ಪಬೇಕು. ಇದಲ್ಲದೆ ಜರ್ಮನಿಯು ಟರ್ಕಿಯವರನ್ನು ಸ್ವೇಚ್ಛೆಯಾಗಿ ಬಿಡುವ ಹಾಗೂ ಇಲ್ಲ.

ಈಜಿಪ್ಟಿನ ಮೇಲೆ ಯುದ್ಧಮಾಡುವುದಕ್ಕೆ ಜರ್ಮನಿಯವರು ಈಜಿಪ್ಟಿಗೆ ಬರುವ ಯೋಚನೆ ಮಾಡುವವರಾಗಿರುವಂತೆ ಕಾಣುವುದಿಲ್ಲ. ಬ್ರಿಟಿಷರಾದರೋ ಸೂಯೆಜ್ ಕಾಲುವೆಯ ಮೇಲೆ ಯಾರೂ ನುಗ್ಗಬಾರದೆಂತೆ ಬಹಳ ಬಲವಾದ ಏರ್ಪಾಡುಗಳನ್ನು ಮಾಡಿಟ್ಟಿದಾರೆ. ಟರ್ಕಿಯವರು ನುಗ್ಗಿ ಬರುವುದಾದರೆ ಬ್ರಿಟಿಷರು ಅವರನ್ನು ಸೋಲಿಸಿ ಓಡಿಸುವುದಕ್ಕೆ ಸಿದ್ಧವಾಗಿರುವರು.

ಕಪ್ಪುಕಡಲೊಳಗೆ ಜರ್ಮನಿಯ ಸಬ್‌ಮೆರಿನು ರಷ್ಯದವರ ಒಂದು ಆಸ್ಪತ್ರೆ ದೋಣಿಯನ್ನು ಮುಳುಗಿಸಿತು.

ಇಂಗ್ಲೆಂಡಿನ ಕಡಲಿನೊಳಗೆ ಕಲ್ಲಿದ್ದಲೂ ಮದ್ದುಗುಂಡೂ ಭರ್ತಿಯಾಗಿದ್ದ ಜರ್ಮನಿಯ ನಾಲ್ಕು ಹಡಗುಗಳು ಮುಳುಗಿಸಲ್ಪಟ್ಟಿವೆ.

ಪರ್ಷಿಯಾದಲ್ಲಿ.

ರಷ್ಯದವರು ಪರ್ಷಿಯಾದಲ್ಲಿ ಮುಂದರಿದು ನುಗ್ಗಿ ಹೋಗುತ್ತಿದಾರೆ. ಕೆಲವು ಪಟ್ಟಣಗಳನ್ನು ಗೆದ್ದು ಸ್ವಾಧೀನಪಡಿಸಿಕೊಂಡು, ಬಾಗ್ದಾದಿನಿಂದ 180 ಮೈಲಿ ದೂರದಲ್ಲಿರುವರು. ಅಲ್ಲಿದ್ದ ಜರ್ಮನಿಯವರು ಅಲ್ಲಿಂದ ಹೊರಟು ಹೋಗುತ್ತಿದಾರೆ.

ಆಫ್ರಿಕಾದಲ್ಲಿ.

ಆಫ್ರಿಕಾದ ಉತ್ತರ ಭಾಗದಲ್ಲಿರುವ ಬ್ರಿಟಿಷ್ ಸೀಮೆಯಿಂದ ಜನರಲ್ ಸ್ಮಟ್ಸ್‌ಯವರು ಜರ್ಮನಿಯವರಿಗೆ ಸೇರಿದ ಪೂರ್ವ ಆಫ್ರಿಕಾವಿಗೆ ನುಗ್ಗಿ ಹೋಗುತ್ತಿದಾರೆ. ಈಗಾಗಲೇ ಇವರು ಜರ್ಮನಿಯವರ ಎರಡು ಮೂರು ನಗರಗಳನ್ನು ಸ್ವಾಧೀನ ಪಡಿಸಿಕೊಂಡದ್ದಲ್ಲದೆ ಕೆಲವು ಜರ್ಮನಿ ಸೈನಿಕರನ್ನೂ ಒಂದು ಮಷೀನ್ ಫಿರಂಗಿಯನ್ನೂ ಸೆರೆಹಿಡಿದಿದಾರೆ. ಪೂರ್ವ ಆಫ್ರಿಕಾದಲ್ಲಿ ಜರ್ಮನಿಯವರು ಎಷ್ಟು ಸೈನ್ಯಗಳನ್ನು ಇಟ್ಟುಕೊಂಡಿದಾರೆಯೋ ತಿಳಿಯದು.

ಪೋರ್ಚುಗಲ್ ರಾಜ್ಯ.

ಜರ್ಮನಿಯವರು ಪೋರ್ಚುಗಲ್ ರಾಜ್ಯದ ಮೇಲೆ ಯುದ್ಧಕ್ಕೆ ಹೊರಟರು. ಇದಕ್ಕೆ ಅವರು ಹೇಳುವ ಕಾರಣಗಳೇನೆಂದರೆ—ಯುದ್ಧದಲ್ಲಿ ಯಾವ ಪಕ್ಷಕ್ಕೂ ಸೇರದೆ ಇದ್ದ ಪೋರ್ಚುಗಲ್ ರಾಜ್ಯವು ತನ್ನ ತಟಸ್ಥಭಾವವನ್ನು ಮೀರಿ ನಡೆಯಿತಂತೆ; ಆಫ್ರಿಕಾದಲ್ಲಿ ಬ್ರಿಟಿಷ್ ಸೈನ್ಯಗಳು ಪೋರ್ಚುಗೀಸರ ಸೀಮೆಯನ್ನು ಹಾದು ಹೋಗುವಂತೆ ಅವರು ಅವಕಾಶ ಕೊಟ್ಟರಂತೆ; ಗ್ರೇಟ್ ಬ್ರಿಟನ್ನಿನವರನ್ನು ಸಂತೋಷಪಡಿಸುವುದಕ್ಕೋಸ್ಕರ ಪೋರ್ಚುಗೀಸರು ತಮ್ಮ ರಾಜ್ಯದ ತೀರದಲ್ಲಿದ್ದ ಜರ್ಮನಿಯವರ ಹಡಗುಗಳನ್ನು ಹಿಡಿದು ಇಟ್ಟುಕೊಂಡರಂತೆ. ಶತ್ರುತ್ವವನ್ನು ಸಾರಿದ ಕೂಡಲೆ ಬೆರ್ಲಿನ್‌ನಲ್ಲಿದ್ದ ಪೋರ್ಚುಗೀಸರ ರಾಯಭಾರಿಯು ಅಲ್ಲಿಂದ ವಾಪಸು ಬಂದುಬಿಟ್ಟನು; ಲಿಸ್ಬನ್‌ನಲ್ಲಿದ್ದ ಜರ್ಮನಿಯ ರಾಯಭಾರಿಯು ಪೋರ್ಚುಗಲ್‌ನಿಂದ ವಾಪಸು ಬಂದನು. ಈ ವಿಚಾರದಿಂದ ಈ ಯುದ್ಧದಲ್ಲಿ ವ್ಯತ್ಯಾಸವೇನೂ ಆಗತಕ್ಕದ್ದಾಗಿಲ್ಲ. ಯಾಕೆಂದರೆ ಜರ್ಮನಿಯು ಪೋರ್ಚುಗಲ್ ಮೇಲೆ ಸೈನ್ಯವನ್ನು ಕಳುಹಿಸಿ ಯುದ್ಧ ಮಾಡುವ ಸ್ಥಿತಿಯಲ್ಲಿಲ್ಲ.

ಇತರ ವಿಷಯಗಳು.

ಇನ್ನೊಂದು ಜೆಪ್ಪೆಲಿನ್ ವಿಮಾನಯಂತ್ರವು ಇಂಗ್ಲೆಂಡಿನ ಮೇಲೆ ಹಾರಿ ಬಂದು ದರೋಡೆ ಮಾಡಿತು. ಆಗ ಹಿಮಗಡ್ಡೆಗಳ ಬಿರುಗಾಳಿ ಬೀಸುತ್ತಿದ್ದಿತು. ಆ ವಿಮಾನಯಂತ್ರಗಳು ಬಂದದ್ದು ಗೋಚರವಾಗಲಿಲ್ಲ. ಅವು ಸಿಡಿಮದ್ದಿನ ಗುಂಡುಗಳನ್ನು ಹಾಕಿದ್ದರಿಂದ 62 ಜನರು ನಷ್ಟವಾದರು. ಒಬ್ಬ ಹೆಂಗಸೂ ಆಕೆಯ ನಾಲ್ಕಾರು ಮಕ್ಕಳೂ ಈ ಜನಾಹುತಿಕ್ಕೆ ಸಿಕ್ಕಿದರು. ಯುದ್ಧಾರಂಭದಿಂದ ಇಂಗ್ಲೆಂಡಿನಲ್ಲಿ ಸಭ್ಯ ಪ್ರಜೆಗಳು ಕೊಲೆಯಾದದ್ದು ಎಷ್ಟು ಮಂದಿ ಎಂದರೆ—ಜರ್ಮನಿಯ ಯುದ್ಧದ ಹಡಗುಗಳು ಬಂದು ಫಿರಂಗಿ ಗುಂಡುಗಳನ್ನು ಹೊಡೆದದ್ದರಿಂದ 49 ಗಂಡಸರು, 39 ಹೆಂಗಸರು, 39 ಮಕ್ಕಳು ಕೊಲೆಯಾದರು, ಶತ್ರುವಿನ ವಿಮಾನಯಂತ್ರಗಳು ಸುರಿಸಿದ ಸಿಡಿಮದ್ದಿನ ಗುಂಡುಗಳ ದೆಸೆಯಿಂದ 127 ಗಂಡಸರು, 93 ಹೆಂಗಸರು, 57 ಮಕ್ಕಳು ಮೃತಪಟ್ಟರು; ಹಡಗುಗಳನ್ನು ಮುಳುಗಿಸಿದ್ದರಿಂದ 2,750 ಜನರು ಸಮುದ್ರದ ಪಾಲಾದರು.

ಸಿಡಿಮದ್ದಿನ ಗುಂಡುಗಳಿಗೆ ಬಡಿದು ಇಂಗ್ಲೆಂಡಿನ ಪೂರ್ವ ತೀರದಲ್ಲಿ ಒಂದು ಬ್ರಿಟಿಷ್ ಡಿಸ್ಟ್ರಾಯರೆಂಬ ಹಡಗೂ, ಒಂದು ಟಾರ್ಪೀಡೋ ದೋಣಿಯೂ ಮುಳುಗಿ ಹೋದವು. ಅವುಗಳಲ್ಲಿ 4 ಮಂದಿ ಹುದ್ದೇದಾರರೂ, 41 ಜನರೂ ಕಾಲವಾದರು. ಸಿಡಿಮದ್ದಿನ ಗುಂಡು ಬಡಿದು ಇನ್ನೊಂದು ಹಡಗು ಮುಳುಗಿತು.

ಫ್ರೆಂಚರ ಒಂದು ಪ್ರಯಾಣಿಕರ ಹಡಗು ಮುಳುಗಿಹೋಯಿತು; ಅದರಲ್ಲಿದ್ದವರೆಲ್ಲಾ ಬದುಕಿ ಬಂದಿದಾರೆ.—ಮಾರ್ಚಿ ತಾ. 9 ರಲ್ಲಿ ಜರ್ಮನಿಯವರು ಎಟ್ಲಾಂಟಿಕ್ ಹೇಳವೇನಿಯಾ ನಾರ್ವೆಯವರ ಒಂದು ಹಡಗನ್ನು ಮುಳುಗಿಸಿದರು. ಅದರಲ್ಲಿ ಏಳು ಮಂದಿ ಅಮೇರಿಕದವರಿದ್ದರು. ಇದು ಅಮೇರಿಕಾದಲ್ಲಿ ಆಗ್ರಹವನ್ನು ಉಂಟುಮಾಡಿದೆ.—ಅಮೇರಿಕಾದಲ್ಲಿ ಕೆಲವು ಮೆಕ್ಸಿಕೋದವರು ನುಗ್ಗಿ ಒಂದು ಪಟ್ಟಣವನ್ನು ಪ್ರವೇಶಿಸಿದರು. ಅಮೇರಿಕದವರು ಅವರನ್ನು ಸೋಲಿಸಿ ಓಡಿಸಿದ್ದಾಯಿತು. ಜರ್ಮನಿಯವರು ಮೆಕ್ಸಿಕೋದವರನ್ನು ಪ್ರೇರೇಪಣೆ ಮಾಡಿ ಎತ್ತಿಕಟ್ಟಿದರೆಂದು ಊಹಿಸಲ್ಪಟ್ಟಿದೆ.

ಜರ್ಮನಿಯ ಯುದ್ಧದ ಜಹಜುಗಳು ಉತ್ತರ ಕಡಲಿಗೂ, ಬ್ಯಾಲ್ಟಿಕ್ ಕಡಲಿಗೂ ಬಂದವು. ಯಾಕೆಂದರೆ ಹಿಂತಿರುಗಿ ಕೀಲ್ ಕೆನಾಲ್ ಎಂಬ ಕಾಲುವೆಯೊಳಕ್ಕೆ ಸೇರಿಕೊಂಡವು. ಅವು ಬಹುಶಃ ಅಭ್ಯಾಸಕ್ಕಾಗಿ ಸ್ವಲ್ಪ ಹೊರಗೆ ಬಂದಿರಬೇಕು.—ದಕ್ಷಿಣ ಅಮೇರಿಕದ ಬಳಿ ಕೆಲವು ಬ್ರಿಟಿಷ್ ಜಹಜುಗಳನ್ನು ಓಡಿಸಿ ಜರ್ಮನ ಜಹಜು ಬ್ರಿಟಿಷ್ ಜಹಜುಗಳಿಗೆ ಸಿಕ್ಕದೇನೇ ಹ್ಯಾಗೋ ತಪ್ಪಿಸಿಕೊಂಡು ವಾಪಸು ಜರ್ಮನಿಗೆ ಹೋಗಿ ಸೇರಿತು.

ಬ್ರಿಟಿಷ್ ನಾವೆಯು ಈ ಯುದ್ಧದಲ್ಲಿ ನಡಿಸಿರುವ ಮಹತ್ತರವಾದ ಕಾರ್ಯಗಳನ್ನು ಮಿ॥ ಬಾಲ್ಫರ್‌ಯವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ವಿವರಿಸಿ ಹೇಳಿದರು. ಬ್ರಿಟಿಷ್ ಜಹಜುಗಳು 40,00,000 ಸೈನ್ಯವನ್ನೂ, 10,00,000 ಕುದುರೆಗಳನ್ನೂ, 25,00,000 ಟನ್ನುಗಳ ಸರಕುಗಳನ್ನೂ, 2,50,00,000 ಗ್ಯಾಲನ್ ಎಣ್ಣೆಯನ್ನೂ, ಇನ್ನೂ ಅನೇಕ ಪದಾರ್ಥಗಳನ್ನೂ ಸುರಕ್ಷಿತವಾಗಿ ಸಾಗಿಸಿರುತ್ತವೆ. ಮೊದಲಿಗಿಂತಲೂ ಬ್ರಿಟಿಷ್ ನಾವೆಯು ಈಗ ಬಹಳ ಬಲವಾಗಿರುವದು. ಎಲ್ಲಾ ಜಾತಿಯ ಹೊಸ ಹಡಗುಗಳೂ ಅನೇಕವಾಗಿ ಕಟ್ಟಲ್ಪಟ್ಟಿವೆ. ಫಿರಂಗಿಗಳ ಸಂಖ್ಯೆಯೂ ಹೆಚ್ಚಾಯಿತು. ನಾವಿಕರುಗಳನ್ನೂ ಹೇರಳವಾಗಿ ಕೂಡಿಸಿದಾರೆ. ಗವರ್ನ್‌ಮೆಂಟಿನವರು ಮೊಲ್ಲಿಜ್ಜಾರೆ ಇಟ್ಟು 3,052 ಕಾರ್ಖಾನೆಗಳಲ್ಲಿ ಯುದ್ಧ ಸಾಮಾನುಗಳನ್ನೇ ತಯಾರುಮಾಡಿಸುತ್ತಲಿದಾರೆ.

ವೆರ್ದೂನ್ ಯುದ್ಧದಲ್ಲಿ ಜರ್ಮನಿಯ ಬಹಳ ಸೈನ್ಯ ನಷ್ಟವಾದದ್ದು ಬೆರ್ಲಿನ್ ರಾಜಧಾನಿಯಲ್ಲಿ ಕಳವಳವನ್ನೂ ಗಲಭೆಯನ್ನೂ ಉಂಟುಮಾಡಿದೆ. ಹತ್ತು ಸಾವಿರ ಪ್ರಜೆಗಳು ಬೀದಿಗಳಲ್ಲಿ ಗಲಭೆಮಾಡಿ ರೊಟ್ಟಿ, ಕರಾರು, ಜಯಪ್ರದ ಅವು ಬೇಕು ಎಂದು ಕೂಗಾಡಿದರು. ಜರ್ಮನಿಯ ಕೊಲೋನ್ ಪಟ್ಟಣದಲ್ಲಿ ದೊಂಬಿ ಕಲಹವಾಯಿತೆಂದು ತಿಳಿಸಲ್ಪಟ್ಟಿದೆ.

ಎಡ್ರಿಯನೋಪಲ್ ನಗರವು ರಷ್ಯದವರ ವಶವಾದದ್ದು ಟರ್ಕಿ ರಾಜಧಾನಿಯಲ್ಲಿ ಗಲಭೆಯನ್ನುಂಟುಮಾಡಿತು. ಪ್ರಜೆಗಳು ಕರಾರುಮಾಡಿಕೊಳ್ಳಿ ಎಂದು ಕೂಗುತ್ತಿದಾರೆ. ಜರ್ಮನಿಯವರು ಅವರನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರೋಣದರಿಂದ ಅವರು ಕರಾರು ಮಾಡಿಕೊಳ್ಳುವುದಕ್ಕೆ ಬಿಡುವಹಾಗಿಲ್ಲ.

ರೋಮ್ ನಗರದಲ್ಲಿರುವ ಪೋಪ್ ಸ್ವಾಮಿಯವರು ಕರಾರು ಮಾಡಿಸಬೇಕೆಂದು ಪ್ರಯತ್ನಪಡುತ್ತಿರುವಂತೆ ಪ್ರಕಟವಾಗಿದೆ. ಪ್ರತಿ ಒಂದು ಶಕ್ತಿಯವರೂ ಏನೇನು ಆಗಬೇಕೆಂದು ಅಪೇಕ್ಷಿಸುವರೋ ತಿಳಿಸಬೇಕೆಂದೂ, ಅದು ಗೊತ್ತಾದ ಬಳಿಕ ಕರಾರು ಸಾಧ್ಯವೇ ಎಂದು ಯೋಚಿಸುವುದಾಗಿಯೂ ಆ ಸ್ವಾಮಿಯವರು ತಿಳಿಸಿದಾರೆ.

ಗ್ರೀಸಿಗೆ ಸಮಾಧಾನವಾಗಲಿಲ್ಲವೆಂದೂ, ಅದು ಮಿತ್ರಮಂಡಲಿಯ ಪಕ್ಷವನ್ನು ವಹಿಸುತ್ತೆಂದೂ ವರ್ತಮಾನವಿದೆ. ರೋಮೇನಿಯಾ ರಾಜ್ಯವೂ ಮಿತ್ರಮಂಡಲಿಯವರ ಕಡೆ ಸೇರಿಕೊಳ್ಳುವ ಹಾಗಿದೆಯಂತೆ. ಆದರೆ ಈ ವರ್ತಮಾನಗಳು ನಂಬತಕ್ಕವುಗಳಾಗಿ ಕಾಣುವುದಿಲ್ಲ.

ಗ್ರೇಟ್ ಬ್ರಿಟನ್ನಿನಲ್ಲಿ 13,321 ಜರ್ಮನ ಸೈನಿಕರು ಕೈಸೆರೆಯಾಗಿದಾರೆ; ಇದಲ್ಲದೆ 32,181 ಮಂದಿ ಅನ್ಯದೇಶೀಯರನ್ನು ಬಂಧನದಲ್ಲಿ ಹಾಕಿರುವರು.

ಲಾರ್ಡ್ ಕಿರ್ಚನರ ಮುಂಗೈ ಮೂಳೆ ಮುರಿದು ಹೋಯಿತೆಂದೂ, ಅವರಿಗೆ ವಾಸಿಯಾಗುತ್ತಿದೆ ಎಂದೂ ವರ್ತಮಾನ ಬಂದಿದೆ.

ದಕ್ಷಿಣಾಫ್ರಿಕದಲ್ಲಿ ಇಬ್ಬರು ವರ್ತಕರು ಜರ್ಮನಿಗೆ ಸಹಾಯವನ್ನು ಮಾಡಿದ್ದಕ್ಕಾಗಿ ಅವರಿಗೆ 1,20,000 ರೂಪಾಯಿ ಜುಲ್ಮಾನೆಯಾಯಿತು.

ರೋಮೇನಿಯಾ ಎಲ್ಲೆಕಟ್ಟಿನಲ್ಲಿ ರೋಮೇನಿಯಾದವರಿಗೂ ಬಲ್ಗೇರಿಯಾದರಿಗೂ ಒಂದು ಕದನವಾಯಿತೆಂದೂ, ಎರಡು ಕಡೆಗಳಲ್ಲೂ ಕೆಲಕೆಲವು ಸೈನಿಕರು ಕೊಲೆಯಾದರೆಂದೂ ವರ್ತಮಾನ ಬಂದಿದೆ.

ಒಳದೇಶದ ವೃತ್ತಾಂತಗಳು.

ಕ್ಯಾಪ್ಟನ್—ಸಿ. ಎಚ್. ಸಂಟ್ ಜೆ. ಟುಕರ್‌ಯವರು ಮೈಸೂರು ಸಂಸ್ಥಾನದ ಅಸಿಸ್ಟೆಂಟ್ ರೆಸಿಡೆಂಟರಾಗಿ ನೇಮಕವಾಗಿದಾರೆ.

ಮಹಾಮಾತೃಶ್ರೀ ಮಹಾರಾಣಿಯವರೂ, ಮಹಾರಾಣಿಯವರೂ ಪರಿವಾರ ಸಮೇತ ಮೋಟರುಗಳಲ್ಲಿ ಕಳೆದ ಗುರುವಾರ ಬೆಳಗ್ಗೆ ರಾಜಧಾನಿಗೆ ದಯಮಾಡಿದರು.

ಕೋಲಾರದ ಡಿಸ್ಟ್ರಿಕ್ಟ್ ಪೋಲಿಸ್ ಕಚೇರಿಗೆ ಕಳೆದ ಭಾನುವಾರ ಕಳ್ಳರು ಬಿದ್ದು ಸುಮಾರು 350 ರೂಪಾಯಿಯನ್ನು ಅಪಹರಿಸಿದರೆಂದೂ, ತಕ್ಕ ತನಿಖೆ ನಡೆಯುತ್ತಿರುವಂತೆಯೂ ಪ್ರಕಟವಾಗಿದೆ.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಸದ್ಯಕ್ಕೆ ರೈಲ್ ಮಾರ್ಗಗಳನ್ನು ಕಲ್ಪಿಸುವ ಯೋಚನೆಯೇನೂ ಇಲ್ಲವಾದಕಾರಣ ಅಲ್ಲಿ ರೈಲ್ವೆ ಸೆಸ್ಸನ್ನು ಹಾಕಬೇಕಾದ ಆಗತ್ಯವಿಲ್ಲವೆಂದು ಆ ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನ ಮಾಡಿದಾರೆ.

ಬೆಂಗಳೂರು ಲಂಡನ್ ಮಿಷನ್ ಸ್ಕೂಲ್ ಉಪಾಧ್ಯಾಯನಾಗಿದ್ದು ಆ ಸ್ಕೂಲಿನ ಹಣವನ್ನು ತಿಂದುಹಾಕಿದ ಇ. ಎಂ. ಪಾಲ್ ಎಂಬವನಿಗೆ ಸಿಟಿ ಮ್ಯಾಜಿಸ್ಟ್ರೇಟರು ಕೋರ್ಟು ಏಳುವ ತನಕ ಸಾಧಾ ಸಜವನ್ನೂ, 50 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು.

ರಾಜಧಾನಿಯಿಂದ ಕಾಳನಕೋಟೆಗೆ ನಮ್ಮ ಸರ್ಕಾರದವರು ಟ್ರ್ಯಾಮ್‌ವೇ ಹಾಕುವುದಕ್ಕೆ ಸರ್ವೇ ಮಾಡಿಸಬೇಕೆಂದು ಹುಕುಂ ಕೊಟ್ಟಿದಾರೆ. ಇದಕ್ಕಾಗಿ ಸರ್ವೆ ಮಾಡುವ ಅಧಿಕಾರಿಗಳಿಗೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಅಟೆಂಡೆನ್ಸ್ ಕೊಡಬೇಕೆಂಬ ಇಸ್ತಿಹಾರು ಪ್ರಕಟವಾಗಿದೆ.

ಬ್ರಿಟಿಷ್ ರೆಸಿಡೆಂಟ್ ಪದವಿಯಿಂದ ನಿವೃತ್ತರಾಗಿ ಸೀಮೆಗೆ ದಯಮಾಡುವ ಸರ್ ಹ್ಯೂ ಡೇಲಿ ಯವರಿಗೆ ಬೆಂಗಳೂರು ಪ್ರಜೆಗಳು ಲಾಲ್ ಬಾಗ್ ಉದ್ಯಾನವನದಲ್ಲಿ ಒಂದು ದಿನವೂ, ಸಂದಿನಲ್ಲಿ ಅಲ್ಲಿನ ಪ್ರಜೆಗಳು ಒಂದು ದಿನವೂ ಔತಣ ಮಹೋತ್ಸವಗಳನ್ನು ನಡಿಸುವವರಾಗಿದಾರೆ.

ಕಳೆದ ಭಾನುವಾರ ರಾತ್ರಿ ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಇಂಗ್ಲೀಷ್ ನಾಟಕವನ್ನು ಅಭಿನಯಿಸಿದರು. ಶ್ರೀಮನ್ ಮಹಾರಾಜರವರೂ, ರಾಜಪಿಂಡೆಯವರೂ, ದಿವಾನ್‌ರೇ ಮೊದಲಾದ ಅಧಿಕಾರಿಗಳೂ ನಾಟಕವನ್ನು ನೋಡಿ ಸಂತೋಷಪಟ್ಟುಕೊಂಡರು.

ರಾಜಧಾನಿಯ ರೈಲ್ವೆ ಸ್ಟೇಷನ್ ಆಚೆ ದೋಣಿಕಟ್ಟೆಯ ಹತ್ತಿರ ಒಬ್ಬ ಹೆಂಗಸಿನ ಶವವು ಬಿದ್ದು, ನಾಯಿನರಿಗಳು ಕಿತ್ತು ತಿನ್ನುತ್ತಿವೆ ಎಂದು ಪೋಲೀಸಿಗೆ ತಿಳಿಸಲ್ಪಟ್ಟಿದೆ. ಕಳೆದ ವಾರ ಇಲ್ಲಿನ ದೊಡ್ಡಕೆರೆಯಲ್ಲಿ ಸಣ್ಣವಯಸ್ಸಿನವರಿಬ್ಬರು ಆಕಸ್ಮಾತ್ತಾಗಿ ಬಿದ್ದು ಅಕಾಲಮರಣವನ್ನು ಹೊಂದಿದರು.

ಮಿ॥ ಪಿ.ಬಿ.ಮಜುಂ ರಾಜಕುಮಾರ್ ಬ್ಯಾನರ್ಜಿ, ಬಿ.ಎ., ಐ.ಸಿ.ಎಸ್., ಸಿ.ಐ.ಇ. ಯವರನ್ನು ನಮ್ಮ ಮಹಾರಾಜರವರು ತಮ್ಮ ಕೌನ್ಸಿಲ್ ಮೆಂಬರಾಗಿ ನೇಮಕಮಾಡಿಕೊಂಡಿದಾರೆ. ಇವರು ಪತ್ನಿ ಪುತ್ರಿಯರ ಸಮೇತ ಮೊನ್ನೆ ಮಂಗಳವಾರ ಬೆಳಗ್ಗೆ ಬೆಂಗಳೂರಿಗೆ ಬಂದು ವೆಸ್ಟ್ ಎಂಡ್ ಎಂಬ ಹೋಟೇಲಿನಲ್ಲಿ ಇಳುಕೊಂಡಿದಾರೆ. ಇವರು ಮುಂದಿನ ಮಂಗಳವಾರದ ಅರಾರಾಯಿತು ಕೆಲಸಕ್ಕೆ ದಾಖಲಾಗುವರು.

ಹಿಂದುಸ್ಥಾನದ ಸಂಗೀತ ವಿದ್ಯೆಯನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಬರೋಡೆಯಲ್ಲಿ ಈ ತಿಂಗಳು 20 ನೇ ತಾ. ಸೋಮವಾರ ಒಂದು ಮಹಾಸಭೆ ಪ್ರಾರಂಭವಾಗಿ ಮೂರು ದಿನ ನಡೆಯುವುದು. ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ಶ್ರೇಷ್ಠ ಸಂಗೀತ ವಿದ್ವಾಂಸರು ಅಲ್ಲಿ ಸೇರುವವರಾಗಿದಾರೆ. ಮೈಸೂರಿನಿಂದ ಸಂಗೀತ ಪಂಡಿತರಾದ ಮಿ॥ ಎಚ್. ಪಿ. ಕೃಷ್ಣರಾವ್, ಬಿ.ಎ. ಯವರು ಪ್ರತಿನಿಧಿಯಾಗಿ ಅಲ್ಲಿಗೆ ಪ್ರಯಾಣ ಮಾಡಿರುತ್ತಾರೆ.

ಕಳೆದ ಗುರುವಾರ ಬೆಳಗ್ಗೆ ಪ್ರೊಫೆಸರ್ ರಾಮಮೂರ್ತಿಯವರು ಬೆಂಗಳೂರಿನಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶನ ಮಾಡುವಾಗ್ಗೆ ನೋಟಕರ ಪೈಕಿ ಮಿ॥ ಆಡಂಸ್ ಯವರು ತಂದುಕೊಟ್ಟ ಕಬ್ಬಿಣದ ಸರಪಣಿಯನ್ನು ಎಲ್ಲರ ಎದುರಿನಲ್ಲಿ ಕಿತ್ತು ಮುರಿದುಹಾಕಿದರು. ಅದಕ್ಕಾಗಿ ಅವರು ಪ್ರೊಫೆಸರಿಗೆ ಪಣವಾಗಿಟ್ಟಿದ್ದ 100 ರೂಪಾಯಿಯನ್ನು ಸಂಪಾದಿಸಿದರು. ಪ್ರೊಫೆಸರವರು ನಾಳೆ ಸೋಮವಾರದಿಂದ ರಾಜಧಾನಿಯಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶನಮಾಡುವರು.

ಮಿ॥ ಎಚ್ ವಿ. ಕಾಬ್, ಸಿ ಎಸ್. ಐ. ರವರು ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾಗಿ ನೇಮಕವಾಗಿದಾರೆ. ಇವರು ಏಪ್ರಿಲ್ ತಾ. 1 ರಲ್ಲಿ ಬೆಂಗಳೂರಿನಲ್ಲಿ ಸರ್ ಹ್ಯೂ ಡೇಲಿಯವರಿಂದ ಆ ಪದವಿಯ ಭಾರವನ್ನು ವಹಿಸುವರು. ಮಿ॥ ಕಾಬ್ ರವರು 1893 ರಲ್ಲಿ ಐ. ಸಿ. ಎಸ್. ರಾಗಿದ್ದು, ಈಚೆಗೆ ಬಿತ್ತಿ ಹೊಂದಿ ಆಜ್ಮೀರ್ ಮೇರ್ವಾರಾದಲ್ಲೂ, ಕಾಶ್ಮೀರ, ಜಯಪುರ, ರಾಜಪುಟಾನಾ, ಗ್ವಾಲಿಯರ್‌ಗಳಲ್ಲೂ ಬ್ರಿಟಿಷ್ ರೆಸಿಡೆಂಟರಾಗಿದ್ದು, 1910ರಿಂದ ಬರೋಡೆಯಲ್ಲಿ ಬ್ರಿಟಿಷ್ ರೆಸಿಡೆಂಟರಾಗಿ ಬಂದರು.

ಮೈಸೂರು ಗೆಜೆಟ್ ಸಂಗ್ರಹ.

ಶ್ರೀಮನ್ ಮಹಾರಾಜರವರು ಮೈಸೂರು ಇನ್‌ಫೆಂಟ್ರಿ 3 ನೇ ಬಟಾಲಿಯನ್ ಕಮಾಂಡ್ ರ್‍ಯಾಂಕಿಯಲ್ಲಿ ಮುಂದೆ ಹೇಳುವ ಬಡ್ತಿಗಳನ್ನು ಹುಕುಂ ಮಾಡಿರುತ್ತಾರೆ:—ಸೈಯದ್ ಮಹಮ್ಮದ್‌ಯವರು ಸುಬೇದಾರ್ ಮೇಜರ್ ನಿಂದ ಕಾಮಾಂಡಾಂಟರಾಗಿ, ಗುಲಾಬ್‌ಸಿಂಗ್‌ಯವರು ಸುಬೇದಾರ್ 1ನೇ ಗ್ರೇಡ್, ಚಂದ್ರಮಾನಾಯಕ್‌ಯವರು 2 ನೇ ಗ್ರೇಡ್.

ಶ್ರೀಮನ್ ಮಹಾರಾಜರವರು ಮೈಸೂರು ಇನ್‌ಫೆಂಟ್ರಿ 1 ನೇ ಬಟಾಲಿಯನ್ ಕಮಾಂಡ್ ರ್‍ಯಾಂಕಿಯಲ್ಲಿ ಮುಂದೆ ಹೇಳುವ ಬಡ್ತಿಗಳನ್ನು ಹುಕುಂ ಮಾಡಿರುತ್ತಾರೆ:—ವಿ.ಮಹಮ್ಮದ್ ಅಲ್ಲಿಮುಲ್ಲಾಖಾನ್ ರವರೂ, ಮಹಮ್ಮದ್ ಅಬ್ಬಾಸ್‌ರವರೂ ಸುಬೇದಾರ್ 1 ನೇ ಗ್ರೇಡಿಗೆ; ಗುಲಾಮ್ ಮೊಹಿದೀನ್‌ರವರೂ, ಸಯ್ಯದ್ ಅಬ್ದುಲ್ ಲತೀಫ್ ರವರೂ ಸುಬೇದಾರ್ 2 ನೇ ಗ್ರೇಡಿಗೆ; ಕೃಷ್ಣಸಿಂಗ್‌ರವರೂ, ಇಸಾಕ್‌ರವರೂ, ಮಹಮದ್ ರಜಾಕ್ ಅಲ್ಲಿಖಾನ್‌ರವರೂ ಜಮಾದಾರ್ 1 ನೇ ಗ್ರೇಡಿಗೆ.

ಕೌನ್ಸಿಲ್ ಮೆಂಬರು ಮಿ॥ ಎಂ. ಕಾಂತರಾಜೇ ಅರಸ್ ಸಿ.ಎಸ್.ಐ ರವರಿಗೆ ಮಾರ್ಚಿ ತಾ. 15 ರಿಂದ ಮೂರು ತಿಂಗಳ ಪ್ರಿವಿಲೆಜವನ್ನೂ, ಮೂರು ತಿಂಗಳ ಸ್ವಂತ ಕೆಲಸಕ್ಕಾದ ರಜವನ್ನೂ ಕೊಟ್ಟಿದೆ.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮಿ॥ ಸಿ. ನಾರಾಯಣರಾಯರಿಗೆ ಮಾರ್ಚ ತಾ 8 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಗುಲಾಮ್ ಮೊಹಿದೀನ್ ಮೋಕ್ತಿಯವರು ಅವರ ಕೆಲಸದ ಭಾರವನ್ನೂ ವಹಿಸತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮಿ॥ ಪಿ. ಎಸ್. ಗೋವಿಂದರಾಯರಿಗೆ ಮಾರ್ಚಿ ತಾ. 6 ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಟ್ರೆಜರಿ ಅ॥ ಕಮಿಷನರವರು ಅವರ ಕೆಲಸದ ಭಾರವನ್ನೂ ವಹಿಸತಕ್ಕದ್ದು.

ಮೈಸೂರು—ಆರಸೀಕೆರೆ ರೈಲ್ವೆ ಸಬ್ ಅ॥ ಇಂಜನಿಯರ್ ಮಿ॥ ಎಂ. ರಾಮಸ್ವಾಮಿಯವರಿಗೆ ಮಾರ್ಚಿ ತಾ. 1 ರಿಂದ ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಸೂಪ್ರವೈಸರ್ ಮಿ॥ ಎಂ. ಟಿ. ಸಿಂಗ್ರಾಚಾರ್ಯರು ಅವರ ಕೆಲಸದ ಭಾರವನ್ನು ವಹಿಸತಕ್ಕದ್ದು.

ಕೋಲಾರ ತಾಲ್ಲೂಕು ಅಮಲ್ದಾರ್ ಮಿ॥ ಪಿ. ಎಸ್. ಪೂರ್ಣಯ್ಯನವರಿಗೆ ಮಾರ್ಚಿ ತಾ. 2 ರಿಂದ ಹದಿನೆಂಟು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಶಿರಸ್ತೇದಾರರು ತಾಲ್ಲೂಕ್ ಭಾರವನ್ನು ವಹಿಸತಕ್ಕದ್ದು.

ಶ್ಯಾನುಭೋಗರುಗಳ ಕಾನ್ಫರೆನ್ಸು.

ಮೈಸೂರ್ ಸಂಸ್ಥಾನದ ಶ್ಯಾನುಭೋಗರುಗಳಿಗೆ ಉಂಟಾಗಿರುವ ಕಷ್ಟಗಳನ್ನು ಶ್ರೀಮನ್ಮಹಾರಾಜಾ ಸರ್ಕಾರದಲ್ಲಿ ಬಿಜ್ಞಾಪನೆ ಮಾಡಿಕೊಳ್ಳಬೇಕೆಂದು ದೇವನಹಳ್ಳಿ ತಾಲ್ಲೂಕ್ ಚನ್ನರಾಯಪಟ್ಟಣದ ಹೋಬಳಿ ಶ್ಯಾನುಭೋಗರುಗಳಿಗೆ ಉದ್ದೇಶ್ಯ ಹುಟ್ಟಿ ದೇವನಹಳ್ಳಿ ತಾಲ್ಲೂಕ್ ಎಲ್ಲಾ ಶ್ಯಾನುಭೋಗರುಗಳನ್ನು ಸೇರಿಸಿ ಪ್ರಥಮ ಮೀಟಿಂಗ್ ಮಾಡಿದ್ದರಲ್ಲಿ ಇಂಥಾ ಸಭೆಯನ್ನು ಸೇರಿಸುವದು ಯುಕ್ತವೆಂದು ಹಾಜರಿದ್ದ ಎಲ್ಲಾ ಶ್ಯಾನುಭೋಗರುಗಳೂ ಒಪ್ಪಿ ಈ ಕೆಳಗಿನಂತೆ ರಿಜೊಲ್ಯೂಷನ್ ಪ್ಯಾಸ್ ಮಾಡಿರುತ್ತಾರೆ.

ಈ ಸಭೆಯು ಮೈಸೂರು ಸೀಮೆಯ ಎಲ್ಲಾ ಶ್ಯಾನುಭೋಗರುಗಳಿಗೂ ಅನ್ವಯಿಸತಕ್ಕದ್ದೆಂದು ತೀರ್ಮಾನಿಸಿರುತ್ತೆ. ಈ ಸಭೆಯ ಖರ್ಚಿಗಾಗಿ ದೇವನಹಳ್ಳಿ ತಾಲ್ಲೂಕ್ ಎಲ್ಲಾ ಶ್ಯಾನುಭೋಗರುಗಳೂ ಇಸಂ ಒಂದಕ್ಕೆ 2 ರೂಪಾಯಿ ನಂತೆಯೂ, ಮತ್ತು ಇತರ ತಾಲ್ಲೂಕಿನಿಂದ ಬರತಕ್ಕಂಥಾ ಮೆಂಬರು ಇಸಂ ಒಂದಕ್ಕೆ 2 ರೂಪಾಯಿನಂತೆಯೂ ಫೀ ಕೊಡಬೇಕು. ಮೈಸೂರ್ ಸೀಮೆಯ ಎಲ್ಲಾ ತಾಲ್ಲೂಕಿನ ಪ್ರತಿಯೊಂದು ಹೋಬಳಿಯಿಂದಲೂ ಒಬ್ಬೊಬ್ಬ ಮೆಂಬರಂತೆ ಚುನಾಯಿಸಿ ಕಳುಹಿಸಬೇಕು. ಈ ಸಭೆಯು ಇದೇ ಬರುವ ಏಪ್ರಿಲ್ ತಿಂಗಳು 16 ನೇ ಲಾಗಾಯಿತು 19 ನೇ ತಾ. ವರೆಗೆ ದೇವನಹಳ್ಳಿ ತಾಲ್ಲೂಕ್ ಬೂದಿಗೆರೆ ಗ್ರಾಮದಲ್ಲಿ ನಡೆಸಲು ಏರ್ಪಾಡು ಮಾಡಿರುತ್ತೆ. ಇದಕ್ಕೆ 4 ಮಂದಿ ದೊಡ್ಡ ಮನುಷ್ಯರುಗಳನ್ನು ಈ ಸಭೆಯ ಕಾರ್ಯನಿರ್ವಾಹಕರಾಗಿ ಏರ್ಪಡಿಸಿರುತ್ತೆ. ಸಭೆಗೆ ಬರತಕ್ಕವರುಗಳಿಗೆ ಊಟ ಉಪಚಾರಕ್ಕೂ ಸ್ಥಳವನ್ನೂ ತಕ್ಕ ಏರ್ಪಾಡು ಮಾಡಿರುತ್ತೆ. ಬರತಕ್ಕ ಮೆಂಬರು ಸ್ವಂತ ರೈಲ್ ಛಾರ್ಜು ಇಟ್ಟುಕೊಂಡು ಬರಬೇಕು. ಅಪ್ಲಿಕೇಷನ್‌ಗಳೆಲ್ಲಾ ಸೆಕ್ರೆಟರಿಯವರಲ್ಲಿಗೆ ಕಳುಹಿಸಬೇಕು. ಬರತಕ್ಕ ಮೆಂಬರು ತಾವು ಚರ್ಚಿಸಬೇಕೆಂದಿರುವ ಪ್ರಶ್ನೆಗಳನ್ನು ಬರೆದು ಅಪ್ಲಿಕೇಷನ್ ಜೊತೆಯಲ್ಲಿಯೇ ಸೆಕ್ರೆಟರಿಯವರಲ್ಲಿಗೆ ಕಳುಹಿಸಬೇಕು.

ಹೊಸಕೋಟೆ ತಾಲ್ಲೂಕ್ ವೈಟ್‌ಫೀಲ್ಡ್ ರೈಲ್ವೆ ಸ್ಟೇಷನ್‌ಗಳ ಮತ್ತು ದೇವನಹಳ್ಳಿ ರೈಲ್ವೆ ಸ್ಟೇಷನ್‌ಗೂ ಬಂದಲ್ಲಿ ಅಲ್ಲಿಂದ ಬೂದಿಗೆರೆಗೆ ಬಂದು ಸೇರಲು ನಮ್ಮ ಕಡೆ ಜನಗಳಿದ್ದು ತಕ್ಕ ಸೌಕರ್ಯ ಕಲ್ಪಿಸಿಕೊಡುತ್ತಾರೆ.

ಬೂದಿಗೆರೆ. ಬಿ ಸುಂದರರಾವ್, ಸೆಕ್ರೆಟರಿ.

ಆನೇಕಲ್ಲು ಲಂಡನ್ ಮಿಷನ್ ಸ್ಕೂಲಿನ ಪ್ರತಿಷ್ಠೋತ್ಸವ.

ಕೆಲವು ತಿಂಗಳುಗಳ ಹಿಂದೆ ಸರದಾರ್ ಕಾಂತರಾಜೆ ಅರಸಿನಿಂದ ಅಸ್ತಿಭಾರಶಿಲಾ ಸ್ಥಾಪಿತವಾದ ಲಂಡನ್ ಮಿಷನ್ ಎ ವಿ. ಸ್ಕೂಲ್ ಕಟ್ಟಡವು ಇಳಿದ ವಾರ ಪೂರೈಸಲ್ಪಟ್ಟು ಘನ ಜೆ. ಮಾಥರ್ಸ್ ದೊರೆಯವರಿಂದ ಪ್ರವೇಶೋತ್ಸವವು ಮಾರ್ಚಿ ತಾ. 6 ನೇ ಸೋಮವಾರ ನಡಿಸಲ್ಪಟ್ಟಿತು. ಆಗ ಅಮಲ್ದಾರರೂ, ಪೋಲೀಸ್ ಇನ್ಸ್‌ಪೆಕ್ಟರುಗಳೂ, ಡಾಕ್ಟರು ಮೊದಲಾದ ಅಲ್ಲಿನ ದೊಡ್ಡ ಮನುಷ್ಯರೆಲ್ಲಾ ದಯಮಾಡಿಸಿದ್ದರು. ಘನ ಮಾಥರ್ಸ್ ದೊರೆಯವರು ಅಗ್ರಾಸನವನ್ನು ವಹಿಸಿರುವಾಗ ಅಲ್ಲಿನ ಮಿಷನ್ ಪಾಠಶಾಲೆಗಳ ಮೇಲ್ವಿಚಾರಕರಾದ ಘನ ಎಸ್. ಜಿ ಶಾಸ್ತ್ರಿ ಬೋಧಕರು ಸಭೆಯ ಸನ್ನಿಧಿಯಲ್ಲಿ ಸುಮಾರು ಐವತ್ತು ವರ್ಷಗಳಿಂದಲೂ ಸ್ಥಾಪಿತವಾದ ಅಲ್ಲಿನ ಮಿಷನ್ ಪಾಠಶಾಲೆಯಲ್ಲಿ ನಡೆದ ವಿಶೇಷ ವಿಚಾರಗಳನ್ನೆಲ್ಲಾ ತಿಳಿಸಿದರು. ಕೆಲವು ವರ್ಷಗಳಿಂದ ಮೇಟ ಕನ್ನಡ ಪಾಠಶಾಲೆಯು ಎ. ವಿ ಸ್ಕೂಲಿನ ಸ್ಥಿತಿಗೆ ಅಭಿವೃದ್ಧಿಯಾದ್ದರ ವಿಷಯವಾಗಿಯೂ, ವರ್ಷಕ್ಕೆ ಕೇವಲ 60 ವಿದ್ಯಾರ್ಥಿಗಳು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಿರುವರೆಂದೂ ತಿಳಿಸಿದರು. ಮತ್ತು ಈ ಹೊಸ ಕಟ್ಟಡದ ಕೆಲಸದಲ್ಲಿ ಎ ವಿ ಸ್ಕೂಲ್ ಹೆಡ್ ಮಾಸ್ತರಾದ ಮ|| ಬಿ ಶ್ರೀನಿವಾಸಯ್ಯ ಗಾರ್ರವರೂ, ಕೃಷ್ಣ ಸುವಾರ್ತಿಕರಾದ ಮ|| ಸಿ. ಪಿ ಅಬ್ರಹಾಮಯ್ಯನವರೂ ತುಂಬಾ ಕಷ್ಟಪಟ್ಟು ಮುಖವಜರಾಯಿಂದ ಕಲಸ ಸಾಧಿಸಿದರೆಂದೂ, ಜಿಗಣಿ ರೂ 54—8—0, ಕೊಪ್ಪ ರೂ 30, ಮಾಕನಹಳ್ಳಿ ರೂ. 21—8—0. ಮುದಿಮಂಗಲ ರೂ. 18, ಬಿಸ್ತಮಾನಹಳ್ಳಿ ರೂ. 12, ಸಂಗಸಂದ್ರ ರೂ. 4. ಆನೇಕಲ್ ರೂ. 28, ಈ ರೀತಿಯಾಗಿ ಬಂದ ಒಟ್ಟು ರೂಪಾಯಿ 168 ಕ್ಕಾಗಿ ಅವರು ತುಂಬಾ ಕೃತಜ್ಞರಾಗಿರುವರೆಂತಲೂ, ಮತ್ತು ಇನ್ನೂ ಕೊಡುತ್ತೇವೆಂದು ವಾಗ್ದಾನಮಾಡಿರುವ ರೂ. 110 ಅವರಿಗೆ ಬಹಳ ಸಹಾಯವಾಗಿರುವದೆಂದೂ ತಿಳಿಸಿದರು.

ಅನಂತರ ಆ ಶಾಲೆಯ ವಿದ್ಯಾರ್ಥಿಗಳು ಸಂಭಾಷಣ ಗಾನಾದಿ ವಿನೋದ ಚಾತುರ್ಯಗಳನ್ನು ಸಭೆಯಲ್ಲಿ ಪ್ರಕಟಪಡಿಸಿದ ಮೇಲೆ ಅಕ್ಷರ ವಿದ್ಯೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಅಗ್ರಾಸನರು ತಕ್ಕ ಬಹುಮಾನವನ್ನು ದಯಪಾಲಿಸಿದರು.

ವಾಡಿಕೆಯ ಪ್ರಕಾರ ಅಗ್ರಾಸನರು ನಂಬಿ ಸಭೆಯು ಏಳುವುದಕ್ಕೆ ಮೊದಲು ಈ ಹೊಸ ಕಟ್ಟಡದ ವಿಷಯ ತಮ್ಮ ಸಂತೋಷವನ್ನು ತಿಳಿಸುತ್ತಾ ಅವರು ಒಂದು ಕಾಲದಲ್ಲಿ ಅದೇ ಆನೇಕಲ್ ಮಿಷನ್ ಪಾಠಶಾಲೆಯ ಮೇಲ್ವಿಚಾರಕರಾಗಿರುವಲ್ಲಿ ಅದರ ವಿಷಯವಾಗಿ ಆಗಿದ್ದ ಚಿಂತೆಯನ್ನೂ ಅನುಭವವನ್ನೂ ಸಭೆಯವರಿಗೆ ತಿಳಿಸಿ, ಆ ಪಾಠಶಾಲೆಯ ಈಗಿನ ಸ್ಥಿತಿಯನ್ನು ಕುರಿತು ಸಂತೋಷಪಟ್ಟರು. ಹಾರ ತುರಾಯಿಗಳ. ಮರ್ಯಾದೆಯಿಂದ ಈ ಉತ್ಸವವು ಸಮಾಪ್ತವಾಯಿತು; ಈ ನವೀನ ಪಾಠಶಾಲಾ ಕಟ್ಟಡವನ್ನು ಆನೇಕಲ್ ಪುರವಾಸಿಗಳು ಉಪಯೋಗಿಸಿ ಗೌರವಿಸುವರೆಂದು ಹಾರೈಸುತ್ತೇನೆ. ಪ್ರತ್ಯಕ್ಷದರ್ಶಿ.

ಬೆಂಗಳೂರು ಸಿಟಿ ಸ್ತ್ರೀ ಮಂಡಲಿಗಳು.

ಶ್ರೀನಿವಾಸಮಂದಿರದ ಸ್ತ್ರೀ ಶಾಖೆ —ಇದೇ ತಿಂಗಳು 11 ನೇ ತಾ ಶನಿವಾರ ಶ್ರೀಮತ್ರೇಶರ ಮಂದಿರದಲ್ಲಿ ಮೀಟಿಂಗ್ ಜರುಗಿತು ಸೌ|| ಶ್ರೀರಂಗಮ್ಮ ಬಿ ಎ ಯವರು ಸಭೆಯನ್ನಲಂಕರಿಸಿದ್ದರು. ಸೌ|| ಗಂಗಾಬಾಯಮ್ಮನವರು "ಧರ್ಮಾಧರ್ಮ" ಎಂಬ ವಿಷಯವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸವನ್ನು ಕೊಟ್ಟರು. ಸೌ|| ಶ್ರೀರಂಗಮ್ಮನವರು ಮೈಸೂರಿನಿಂದ ಈ ಕೆಲಸಕ್ಕಾಗಿ ವಿಶೇಷವಾಗಿ ಬಂದಿದ್ದಕ್ಕೂ, ಆ ದಿನ ಅವರು ಇಲ್ಲಿಗೆ ದಯಮಾಡಿದ್ದಕ್ಕೂ ತಮಗೆಲ್ಲರಿಗೂ ಬಹಳ ಸಂತೋಷವಾಯಿತೆಂದು ಮಿಸೆಸ್ ವೆಂಕಟಸಾಮಿನಾಯ್ಡುಯವರು ಸಭಾಧ್ಯಕ್ಷರಿಗೂ ಮತ್ತು ಸಭಿಕರಿಗೂ ವಂದನೆಗಳನ್ನು ತಿಳಿಸಿದರು. ಸೌ|| ಶ್ರೀರಂಗಮ್ಮನವರು ಹೆಣ್ಣು ಮಕ್ಕಳ ವಿದ್ಯಾಭಿವೃದ್ಧಿ, ಕೈಗಾರಿಕೆ ಮೊದಲಾದ ವಿಷಯಗಳನ್ನು ಕುರಿತು ಸ್ವಾರಸ್ಯವಾದ ಕೆಲವು ಮಾತುಗಳನ್ನು ತಿಳಿಸಿ, ತಮ್ಮನ್ನು ಮೀಟಿಂಗಿಗೆ ಬರಮಾಡಿದ್ದಕ್ಕೆ ಬಹಳ ಸಂತೋಷವೆಂದೂ, ತಮ್ಮ ಕೈಲಾದ ಸಹಾಯವನ್ನು ಮಾಡುವೆನೆಂದೂ ತಿಳಿಸಿದರು. ಸೌ|| ಭುವನಸುಂದರಮ್ಮ ಮತ್ತು ಸೌ|| ಸೀತಮ್ಮ ಇವರುಗಳು ವೀಣೆ, ಹಾರ್ಮೋನಿಯಂ, ಇವುಗಳಿಂದಲೂ ಮತ್ತು ಪ್ರಭುಗಳ ಕ್ಷೇಮಪ್ರಾರ್ಥನೆಯಿಂದಲೂ ಸಭೆಯನ್ನು ಮುಕ್ತಾಯಗೊಳಿಸಿದರು

ಮಹಿಳಾ ಸೇವಾ ಸಮಾಜ, ಬೆಂಗಳೂರು —ಕಳೆದ ತಾ 10 ನೇ ಶುಕ್ರವಾರ ಮಧ್ಯಾಹ್ನ ಬಂಗಾಳಾ ಅತಿವೃಷ್ಟಿಗೆ ಸೇರಿದ ಬ್ಯಾಂಕುರಾ ಡಿಸ್ಟ್ರಿಕ್ಟಿನ ಕ್ಷಾಮ ನಿವಾರಣೆಗೋಸ್ಕರ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಬೆಂಗಳೂರು ಸೇವಾ ಸಮಾಜದ ಮಹಿಳೆಯರು ಥಿಯೋಸಾಫಿಕಲ್ ಸೊಸೈಟಿ ಹಾಲ್‌ನಲ್ಲಿ ಸಭೆಯನ್ನು ನಡೆಸಿದರು. ಬಹು ಮಂದಿ ಸ್ತ್ರೀಯರು ಹಾಜರಾಗಿದ್ದರು. ಮಿಸೆಸ್ ಸಿ. ಎಸ್. ಬಾಲಸುಂದರಂ ಅಯ್ಯರವರು ಅಗ್ರಾಸನವನ್ನು ವಹಿಸಿ ಸಭೆಯ ಉದ್ದೇಶವನ್ನು ವಿವರಿಸಿದರು. ಸಮಾಜದ ಜಾಯಿಂಟ್ ಸೆಕ್ರೆಟರಿಯವರಾದ ಮಿಸೆಸ್ ಜಿ. ಅರವಾಮುದು ಅಯ್ಯಂಗಾರ್ರು ಬ್ಯಾಂಕುರಾದಲ್ಲಿ ಪ್ರಜೆಗಳು ಬರಗಾಲದ ದೆಸೆಯಿಂದ ಪಡುತ್ತಿರುವ ಕಷ್ಟ ಸಂಕಟಗಳನ್ನು ಬಹಳ ಕನಿಕರವುಂಟಾಗುವ ರೀತಿ ವಿವರಿಸಿದರು. ಪ್ರೆಸಿಡೆಂಟರಾದ ಮಿಸೆಸ್ ಚಂದ್ರಶೇಖರ ಅಯ್ಯರವರು ಹಿಂದುಸ್ಥಾನದ ಸ್ತ್ರೀಯರಿಗೆ ಕಷ್ಟಪಡುವವರನ್ನು ಕಂಡರೆ ಅತ್ಯಂತ ಕನಿಕರ ಹುಟ್ಟುವುದೆಂದೂ, ನಮ್ಮ ಪವಿತ್ರ ಭೂಮಿಯಲ್ಲಿ ಅನೇಕ ಸ್ತ್ರೀಯರೂ ಅವರ ಮಕ್ಕಳೂ ಆಹಾರವಿಲ್ಲದೆ ವ್ಯಥೆಪಡುತ್ತಿರುವರೆಂದು. ಅವರಿಗೆ ಕೈಲಾದ ಸಹಾಯ ಮಾಡುವುದು ನಮ್ಮ ಧರ್ಮವಾಗಿದೆ ಎಂದೂ, ಒಂದು ರೂಪಾಯಿ ಧರ್ಮ ಕೊಟ್ಟರೂ ಅದರಿಂದ ಒಂದು ತಿಂಗಳ ಕಾಲ ಒಂದು ಪ್ರಾಣವನ್ನು ಕಾಪಾಡಬಹುದಾಗಿದೆ ಎಂದೂ ಹೇಳಿ ಪ್ರತಿ ಒಬ್ಬರೂ ಧನ ಸಹಾಯ ಮಾಡಬೇಕೆಂದು ಕೇಳಿಕೊಂಡರು. ಫಲಿತಾಂಶದಲ್ಲಿ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಾಗಿ ದ್ರವ್ಯ ಸಹಾಯವಾಯಿತು. ಆ ದಿನ ಸಭೆಯಲ್ಲಿ ಹಾಜರಾಗಿದ್ದವರು ಸುಮಾರು 160 ರೂಪಾಯಿ ಹಣ ಅಲ್ಲೇ ಪಾವತಿ ಮಾಡಿದರು ಈ ಹಣವನ್ನು ಕ್ಷಾಮವಿರುವ ಮೇಲ್ಕಂಡ ಸ್ಥಳಕ್ಕೆ ಕಳುಹಿಸಲು ಏರ್ಪಾಡು ಮಾಡಲಾಯಿತು. [ಚಂದಾ ಪಟ್ಟಿಯನ್ನು ಪ್ರಕಟಿಸಲು ಸ್ಥಳ ಸಂಕೋಚವಾಯಿತೆಂದು ವಿಷಾದಿಸುತ್ತೇವೆ.—ಎಡಿ.]

ಒಬ್ಬ ಅಮಲ್ದಾರರ ಚಟುವಟಿಕೆಯು.

ಚನ್ನರಾಯಪಟ್ಟಣದ ತಾಲ್ಲೋಕಿನಲ್ಲೆಲ್ಲಾ ಸಂಚರಿಸಿ ಪರಿಶ್ರಮಪಡುತ್ತಿರುವದರಲ್ಲಿ ಈ ತಾಲ್ಲೋಕಿನ ಅಮಲ್ದಾರ್ರವರು ದೇಶೋನ್ನತಿಗೋಸ್ಕರವೂ, ಪ್ರಜಾಸೌಕರ್ಯಕ್ಕೂ ಆಧಾರಭೂತವಾದ ಅನೇಕ ಕೆಲಸಗಳನ್ನು ಜರುಗಿಸಿರುತ್ತಾರೆ. ಟೌನ್‌ನಲ್ಲಿ ರೀಡಿಂಗ್ ರೂಂ ಕಟ್ಟಿಸಲು ಸ್ವಲ್ಪ ಹಣವನ್ನು ಹಿಂದೆ ಇದ್ದ ಅಮಲ್ದಾರ್ ಮ|| ಸುಂದರರಾಜಯ್ಯಂಗಾರ್ರು ಚಂದಾ ಮೂಲಕದಿಂದ ಡಿಪಾಜಿಟ್ಟು ಮಾಡಿದ್ದರು. ಈ ಹಣವು ವೃಥಾ ಬಿದ್ದಿದ್ದುದನ್ನು ತಿಳಿದ ಈ ಅಮಲ್ದಾರ್ರು ತಾವೂ ಅಭಿಮಾನಿಸಿ ಜಾಸ್ತಿಯಾಗಿ ಹಣವನ್ನು ದೊಡ್ಡ ದೊಡ್ಡ ಮನುಷ್ಯರುಗಳಿಂದ ಚಂದಾ ಹಾಕಿಸಿ 3,000 ರೂಪಾಯಿ ಅಂದಾಜಾ ಉಳ್ಳ ರೀಡಿಂಗ್ ರೂಂ ಕಟ್ಟಡವನ್ನು ಬಹು ಅಂದವಾಗಿ ಕಟ್ಟಿಸುತ್ತಿದಾರೆ. ಈಗಾಗಲೇ ಮುಕ್ಕಾಲು ಭಾಗ ಕೆಲಸ ಮುಗಿದಿರುತ್ತೆ. ಈ ತಾಲ್ಲೋಕಿನ ಎಲ್ಲಾ ರೋಡ್ ಪಕ್ಕದಲ್ಲಿರುವ ಹಳ್ಳಿಗಳಿಗೂ ಹೊಸದಾಗಿ ರಸ್ತೆಯನ್ನು ಹಾಕಿಸಿ ಸಾಲುಮರಗಳನ್ನು ನೆಡಿಸಿದಾರೆ. ಈ ನೈಕಿ ಹಿಂಡಿಕಹಳ್ಳಿ ಮೊದಲಾದ ಊರುಗಳಿಗೆ ಸೊಗಸಾದ ರಸ್ತೆಯನ್ನು ಮಾಡಿಸಿದಾರೆ ಈ ರಸ್ತೆಯಲ್ಲಿ ಮೋಟಾರ್ ಗಾಡಿಗಳು ಕೂಡ ತಿರುಗಾಡಬಹುದು. ಸಾಲುಮರಗಳು ಹೊಸದಾಗಿ ಒಂದುವರೆವರುಷದಿಂದೀಚೆಗೆ ನೆಟ್ಟಿದ್ದಾಗ್ಯೂ ಅಂದಿನಿಂದ ಈಗೀಗ ನೆರಳಿಗೆ ಕೊಂಚ ಆಸರೆಯಾಗಿವೆ. ಈ ರೀತಿಯಾದ ದಾರಿಗಳಲ್ಲಿ ಪ್ರತಿ ಗ್ರಾಮದ ಹತ್ತಿರವೂ ಮತ್ತು ಬೇರೆ ಕಡೆಗೆ ದಾರಿ ಒಡೆಯುವ ಕಡೆಗಳಲ್ಲೂ ದೊಡ್ಡ ಕಲ್ಲು ನೆಡಿಸಿ ಅದರ ಮೇಲೆ ಗ್ರಾಮದ ಹೆಸರು, ಜಮಾಬಂದಿ, ಜನಸಂಖ್ಯೆ ಇಷ್ಟನ್ನು ಬರೆಸಿದಾರೆ ಗ್ರಾಮಗಳ ಗಡಿಗಳಲ್ಲೆಲ್ಲಾ ಕಲ್ಲು ನೆಡಿಸಿ ಗಡಿಯ ಹೆಸರನ್ನು ಬರೆಸಿದಾರೆ. ಈ ಉಪಕಾರವು ಪ್ರಜೆಗಳಿಗೆ ಅಂದರೆ ದೂರಸ್ಥರುಗಳಿಗೆ ಕೂಡ ಬಂಧವಿದೆ. ಆದ್ದರಿಂದ ದಿವಾನ್ ಸಾಹೇಬರ ಸವಾರಿ ಈ ಪ್ರಾಂತ್ಯ ಅಂದರೆ ಹಿರೀಸಾವೆಗೆ ದಯಮಾಡಿದಂದಿನಿಂದೀಚೆಗೆ ಅಪ್ಪಿತಪ್ಪಿ ಬಿಟ್ಟುಹೋಗಿದ್ದ ಕಡೆಗಳಲ್ಲೂ ಕೂಡ ಕಲ್ಲುಗಳನ್ನು ಭದ್ರಮಾಡಿಸಿದಾರೆ ಕೆಲವು ಕಡೆಗಳಲ್ಲಿ ಬೆಲ್ಲದ ಯಂತ್ರವನ್ನು ತರಿಸಲು ಸೈನಿಂದ ಹಣವನ್ನು ಸಹಾಯಿಸಿ ರಿಕಾರ್ಡು ನಡೆಸುತ್ತಾರೆ ದೊಡ್ಡ ದೊಡ್ಡ ಗ್ರಾಮಗಳಲ್ಲೆಲ್ಲಾ ಗ್ರ್ಯಾಂಟ್ ಸ್ಕೂಲ್ ತರಪಲು ಗ್ರಾಮಸ್ಥರಿಂದ ಹಣವನ್ನು ವಸೂಲ್ ಮಾಡಿಸಿಟ್ಟು ರಿಕಾರ್ಡು ನಡೆಸುವುದರ ಸ್ಥಿತಿ ಕೆಲವು ಕಡೆಗಳಿಗೆ ಸ್ಕೂಲ್ ಬಂದಿವೆ. ಇನ್ನು ಕೆಲವು ಕಡೆಗಳಿಗೆ ಬರುವುದರಲ್ಲಿವೆ. ದೊಡ್ಡೇನಹಳ್ಳಿ ವಗೈರೆ ಕಡೆಗಳಲ್ಲಿ ಸ್ಕೂಲಿನ ಉಪಯೋಗಕ್ಕಾಗಿ ಪಟ್ಟಿಗೆ ಗಾರೆಯಿಂದ ಸರಿಸ್ಥಿತವಾದ ಕಟ್ಟಡಗಳನ್ನು ಕಟ್ಟಿಸುತ್ತಿದಾರೆ. ಅನೇಕ ಕಡೆಗಳಲ್ಲಿ ಗ್ರಾಮಗಳನ್ನು ಏರ್ಪಡಿಸಿದಾರೆ ಇನ್ನೂ ಅನೇಕ ವಿಧವಾದ ಸತ್ಕಾರ್ಯಗಳನ್ನು ಮಾಡಿದಾರೆ ಆದರೆ ಇವಿಷ್ಟು ಕಸಬಾ, ಬಾಗೂರು, ಶ್ರವಣಬೆಳಗೊಳ ಹೋಬಳಿಗಳಲ್ಲಿ ಮಾತ್ರ ವಿಶೇಷವಾಗಿ ನಡೆದಿವೆ. ಬಾಕಿ ನಾಲ್ಕು ಹೋಬಳಿ ಮಾತ್ರ ಇಷ್ಟರಮಟ್ಟಿಗೆ ನಡೆದಿಲ್ಲ. ಆದ್ದರಿಂದ ಈ ನಾಲ್ಕು ಹೋಬಳಿಗಳಿಗೂ ರೆಡ್ ಶಾಸ್ತ್ರಿಯರಿಗೆ ಸಹಾಯವಾಗಿ ಆದದ್ದರಿಂದ ಅಮಲ್ದಾರ್ರು ಇದೇ ಮಾದರಿಯಾಗಿ ದಯಮಾಡಿಸಿ ಮೇಲ್ಕಂಡ ಹಾಗೆ ನಡೆಸುವರೆಂಬ ಧೈರ್ಯದಿಂದಲೂ, ಶ್ರದ್ಧೆಯಿಂದಲೂ ಕೆಲಸಮಾಡಲು ಅನುಕೂಲವಾಗಿರುತ್ತೆಂದು ಹೇಳಬಹುದು. ನಿಷ್ಪಕ್ಷಪಾತಿಗಳಾದ ಈ ಅಮಲ್ದಾರ್ರವರು ಇದೇ ರೀತಿ ಬಾಕೀ ನಾಲ್ಕು ಹೋಬಳಿಗಳೂ ತಮ್ಮದೇ ಎಂದು ಭಾವಿಸಿ, ಅಲ್ಲಿನ ನೌಕರರ ಮೂಲಕ ಕೆಲಸಮಾಡಿ ಪ್ರಜಾ ಸೌಕರ್ಯವನ್ನು ಕಲ್ಪಿಸಿಕೊಟ್ಟು ಕೀರ್ತಿಯನ್ನು ಸಂಪಾದಿಸುವರೆಂದು ನಂಬಿದ್ದೇನೆ. ಪ್ರತ್ಯಕ್ಷದರ್ಶಿ.

ಒಬ್ಬ ಡಾಕ್ಟರಿಗಾದ ಸನ್ಮಾನ.

ಸಕಲೇಶಪುರದಲ್ಲಿ 9 ವರುಷದಿಂದ ಅಸಿಸ್ಟೆಂಟ್ ಸರ್ಜನ್‌ರಾಗಿದ್ದ ಡಾಕ್ಟರ್ ಫರ್ನಾಂಡಿಸ್‌ರವರಿಗೆ ಬೆಂಗಳೂರಿಗೆ ಸಿಟಿ ಹೆಲ್ತ್ ಆಫೀಸರಾಗಿ ವರ್ಗವಾಯಿತು. ಇವರು ಇಲ್ಲಿದ್ದ ದೀರ್ಘಕಾಲದಲ್ಲಿ ತಮ್ಮ ಕೆಲಸ ಮಾಡುವಾಗ ನೈಜವಾದ ವಿಶ್ವಾಸವನ್ನು ತೋರಿಸಿದುದಕ್ಕಾಗಿ ಇವರಿಗೆ ಸಲ್ಲಬೇಕಾಗಿರುವ ಮರ್ಯಾದೆಯನ್ನು ತೋರ್ಪಡಿಸುವ ಉದ್ದಿಷ್ಟ ಉದಾರಬುದ್ಧಿಯುಳ್ಳ ಬೇಲ್ಯೂರು ದೇವಪ್ಪಗೌಡರು ಮತ್ತು ಮರಲಿ ವೆಂಕಟರಾಮಯ್ಯನವರು ಐರೋಪಿಯನ್ ಮತ್ತು ದೇಶೀಯ ಕಾಫಿ ಪ್ಲಾಂಟರುಗಳನ್ನ ಬರಮಾಡಿ ಕೆಲವು ಐರೋಪಿಯನ್ ಪ್ಲಾಂಟರುಗಳೂ ದೇಶೀಯ ಪ್ಲಾಂಟರುಗಳು ಮತ್ತು ವ್ಯಾಪಾರಸ್ಥರೂ ದಯಮಾಡಿಸಿ ತಮ್ಮಗಳ ಕೃತಜ್ಞತೆಯನ್ನು ಇವರಿಗೆ ಒಂದು ಟೀ ಪಾರ್ಟಿಯನ್ನು ಕೊಡುವದರಿಂದಲೂ, ಗ್ರೂಪು ಫೋಟೋವನ್ನು ತೆಗೆಸಿಕೊಳ್ಳುವದರಿಂದಲೂ ಮತ್ತು ಟೀ (ಟೀ ಸರ್ವಿಸ್) ಎಂಬ ಪಾತ್ರೆಗಳನ್ನು ಬಹುಮಾನ ರೂಪವಾಗಿ ಕೊಡುವದರಿಂದಲೂ ಸೂಚಿಸಬೇಕೆಂದು ತೀರ್ಮಾನಿಸಿದರು. ಅದರಂತೆ ಮಾರ್ಚಿ 4 ನೇ ತಾ ಅನೇಕ ದೇಶೀಯ ಪ್ಲಾಂಟರುಗಳು, ವ್ಯಾಪಾರಸ್ಥರು, ಕೆಲವು ಐರೋಪಿಯನ್ ಪ್ಲಾಂಟರುಗಳು ಮತ್ತು ಕೆಲವು ಧೀಮಂತರುಗಳು ಸಂತೋಷಯುಕ್ತರಾಗಿ ಸಭೆ ಸೇರಿದರು. ಟೀ ಪಾರ್ಟಿ ಮತ್ತು ಗ್ರೂಪು ಫೋಟೋ ನಡೆದ ನಂತರ ದೊಣಿಗಾಲ್ ನಂಜೇಗೌಡರು ಕನ್ನಡದಲ್ಲಿ ಇವರ ಗುಣಕಥನವನ್ನು ಮಾಡಿದರು. ಮುಖ್ಯವಾಗಿ ರೂಲಿನಲ್ಲಿರುವದಕ್ಕಿಂತ ಜಾಸ್ತಿ ಕಾಲಗಳಲ್ಲಿ ಆಸ್ಪತ್ರೆಯನ್ನು ತೆರೆಯುತ್ತಿದ್ದರೆಂತಲೂ, ರೋಗಿಗಳಿಗೆ ಔಷಧಿ ಜೊತೆಗೆ ಮಧುರವಾಕ್ಯವನ್ನು ಸೇರಿಸಿ ಚಿಕಿತ್ಸೆ ಮಾಡುತ್ತಿದ್ದರೆಂತಲೂ ಹೇಳಿದರು ಪ್ಯಾಸೆಂಜರ್ ಸಲ್ಲಿಯೂ, ಮಲೇರಿಯಾ ಚಿಕಿತ್ಸೆಯಲ್ಲಿಯೂ ಇವರಿಗಿದ್ದ ಉತ್ಸಾಹವು ಸರ್ಕಾರ ರಿಕಾರ್ಡುಗಳಲ್ಲಿ ಗೊತ್ತಾಗುವವು ಎಂದು ತಿಳಿಸಿದರು. ನಾರಾಯಣಸ್ವಾಮಿನಾಯ್ಡುರವರು, ನವೇ ಅಬ್ದುಲ್ ರಹಿಮಾನ್ ಸಾಹೇಬರವರು, ಮಹಮ್ಮದ್ ಪೀರ್ ಸಾಹೇಬರವರು ಸಹಾ ಇವರ ಗುಣಕಥನವನ್ನು ಮಾಡಿದರು. ಅಡ್ವೊಕೇಟ್ ವೆಂಕಟೇಶಯ್ಯನವರು ಇಂಗ್ಲಿಷಿನಲ್ಲಿ ಮಾತನಾಡುವಾಗ ಇವರ ಹಸ್ತಗುಣವನ್ನು ಪ್ರಶಂಸಿಸಿದರು. ದ್ಯಾವಪ್ಪಗೌಡರವರು ಪ್ರಜೆಗಳ ಪರವಾಗಿ ಟೀ ಸರ್ವಿಸನ್ನು ಒಪ್ಪಿಸಿದರು. ಡಾಕ್ಟರ್ ಫರ್ನಾಂಡಿಸ್‌ರವರು ಎದ್ದು ತಾವು ತಮ್ಮ ಕರ್ತವ್ಯವನ್ನು ಮಾಡಿದ್ದಾಗಿಯೂ, ಸರ್ಕಾರಿ ನೌಕರರುಗಳು ವಿಶೇಷವಾಗಿ ವೈದ್ಯರು ಅದರವನ್ನು ತಮ್ಮ ಕೆಲಸದಲ್ಲಿ ತೋರಿಸುವದು ಅವಶ್ಯಕವೆಂತಲೂ, ಪ್ರಜೆಗಳು ಗುಣಗ್ರಾಹಿಗಳಾದ್ದರಿಂದ ತಮ್ಮ ಕರ್ತವ್ಯತೆಯನ್ನು ಕೊಂಡಾಡಿದ್ದಕ್ಕಾಗಿ ಸಂತೋಷಿಸುತ್ತೇನೆಂದೂ ಉತ್ತರ ಕೊಟ್ಟರು. ಛೇರ್ಮನ್ನರಾಗಿದ್ದ ಮಿ|| ಪಿ. ಆರ್. ತಟ್ಟ್ಯ, ಪದರಾಜ್ ಸಾಹೇಬರವರು ಸಮಯೋಚಿತವಾದ ಭಾಷಣವನ್ನು ಮಾಡಿದರು. ಪಾರ್ಟಿ ಮುಗಿದ ನಂತರ ಟೌನ್ ಎಂಬ ಕೆಲವು ಸೀನುಗಳನ್ನು 4 ಜನ ವಿದ್ಯಾರ್ಥಿಗಳು ಮ|| ನರಸಿಂಹರಾಜುಯವರ ಶಿಕ್ಷಣೆಯಿಂದ ಅಭಿನಯಿಸಿದರು. ನರಸಿಂಹರಾಜುಯವರ ಮತ್ತು ಈ ತರುಣರ ಉತ್ಸಾಹವು ಕೊಂಡಾಡತಕ್ಕದ್ದಾಗಿದೆ. ಅಭಿನಯಗಳು ಚೆನ್ನಾಗಿದ್ದವು. ಈ ವಿಜೃಂಭಣೆಯು ನಡೆದ ಗೌ|| ಎ ವಿ. ಸ್ಕೂಲಿನಿಂದ ಡಾಕ್ಟರವರ ಮನೆವರೆಗೆ ಸಾಲು ದೀಪಗಳು ಬೆಳಗುತ್ತಿದ್ದವು ಈ ಸಕಲೇಶಪುರದಲ್ಲಿ ಒಂಬತ್ತು ವರುಷದಿಂದ ಯಾವ ಸ್ತ್ರೀಪುರುಷರಿಗೂ ಆದ ಸಂತೋಷಕೂಟವು ಸೇರಿದ್ದಿಲ್ಲ. ಈ ತರಹ ಸಂತೋಷವನ್ನು ಪ್ರಜೆಗಳಿಗೆ ಕಲ್ಪಿಸಿಕೊಟ್ಟದ್ದಕ್ಕಾಗಿ ಕಾರ್ಯಕರ್ತರುಗಳಾದ ಸಾಹುಕಾರ್ ಬಿ. ದೇವಪ್ಪಗೌಡರಿಗೂ ಮತ್ತು ಮರಲಿ ವೆಂಕಟರಾಮಯ್ಯನವರಿಗೂ ಸಹಾ ಪ್ರಜೆಗಳು ವಂದನೆಗಳನ್ನು ಮಾಡುತ್ತಾರೆ ಪ್ರೇಕ್ಷಕ.

ತುಮಕೂರು ತಾ|| ಕೋರ ಗ್ರಾಮದಲ್ಲಿ ನಡೆದ ಗ್ರಾಮಾಭಿವೃದ್ಧಿ ಸಂಘದ ಜನರಲ್ ಮೀಟಿಂಗು.

ಈ ಗ್ರಾಮಕ್ಕೆ ಫೆಬ್ರವರಿ ತಾ. 27 ನೇ ಭಾನುವಾರ ಈ ತಾಲ್ಲೂಕು ಅಮಲ್ದಾರ್ ಮ|| ಎಸ್. ಸೀತಾರಾಮಯ್ಯನವರು ಸರ್ಕ್ಯೂಟು ದಯಮಾಡಿಸಿದ್ದರು. ಗ್ರಾಮಸ್ಥರಾದ ಮ|| ರಾ|| ಚನ್ನಾಪ್ಪಾಜಿ ಅರಸಿನವರೂ, ತೋಂಟನ್ನ ವೀರಪ್ಪನವರೂ, ಶಿವಗಂಗೆ ಮುಚ್ಚಪ್ಪನವರೂ, ದೊಡ್ಡೇರಿ ರಾಮಯ್ಯನವರೂ, ಪಾಪಣ್ಣನವರೇ ಆದಿಯಾಗಿ ಅಮಲ್ದಾರ್ರವರನ್ನು ಕಂಡು ಗ್ರಾಮಾಭಿವೃದ್ಧಿ ವಿಚಾರಗಳನ್ನು ಅಂಕಿತ ಮಾಡಿದರು. ಅದಕ್ಕೆ ಅವರು ನಿಧಾನವಾಗಿಯೂ ತೃಪ್ತಿಕರವಾಗಿಯೂ ಸದುತ್ತರಗಳನ್ನು ದಯಪಾಲಿಸಿದರು. ಆಗ ಗ್ರಾಮಸ್ಥರು ಮ|| ಎಸ್. ಧರ್ಮರಾಯರಂಥಾ ಧರ್ಮಶೀಲರು ನಮ್ಮ ತಾಲ್ಲೂಕಿಗೆ ದಯಮಾಡಿಸಿದಾರೆ ಸಂತೋಷದಿಂದ ಮೊದಲೇ ಯೋಚಿಸಿಕೊಂಡಿದ್ದ ಪ್ರಕಾರ ಅಮಲ್ದಾರ್ರನ್ನು ರಾತ್ರಿ ನಮ್ಮ ಗ್ರಾಮಾಭಿವೃದ್ಧಿ ಸಂಘದ ಜನರಲ್ ಮೀಟಿಂಗಿಗೆ ದಯಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಅಂಗೀಕಾರದಿಂದ ಒಪ್ಪಿಗೆಯನ್ನು ಹೊಂದಿ ಗ್ರಾಮಸ್ಥರು ಗರ್ಲ್ಸ್ ಸ್ಕೂಲ್ ಕಟ್ಟಡವನ್ನು ತಳಿರುತೋರಣಗಳಿಂದಲೂ ದೀಪಗಳಿಂದಲೂ ಅಲಂಕಾರ ಮಾಡಿ, ರಾತ್ರಿ 8 ಗಂಟೆ ಸುಮಾರಿಗೆ ಗ್ರಾಮದ ಪಟೇಲರೇ ಆದಿಯಾಗಿ ಸರ್ವರೂ ಬಹು ವಿಜೃಂಭಣೆಯಿಂದ ಅಮಲ್ದಾರ್ರನ್ನು ಸ್ಕೂಲಿಗೆ ಕರೆದುಕೊಂಡು ಹೋದರು. ಅಲ್ಲಿಗೆ ಶೇಕದಾರ್ರವರೂ, ಗ್ರಾಮಸ್ಥರೂ, ಇತರೇ ಗ್ರಾಮಸ್ಥರ ಪ್ರಾರ್ಥನೆಯಿಂದ ಅಗ್ರಾಸನವನ್ನು ಅಲಂಕರಿಸಿದರು. ಸ್ಕೂಲ್ ಮಾಸ್ಟರ್ ಬಿ ಎಂ. ರಾಮೇಗೌಡರು ಗ್ರಾಮಾಭಿವೃದ್ಧಿಯಲ್ಲಿ ಈಗ ನಡೆದಿರುವ ಕೆಲಸಗಳನ್ನೂ, ಮುಂದೆ ನಡೆಸಲು ಸರ್ಕಾರದವರಿಂದ ಆಗಬೇಕಾದ ಸಹಾಯವನ್ನೂ ಗ್ರಾಮಸ್ಥರ ಪರವಾಗಿ ಅರಿಕೆ ಮಾಡಿಕೊಂಡರು. ಅಲ್ಲದೆ ಹಿಂದೆ ಈ ತಾಲ್ಲೂಕಿಗೆ ದಯಮಾಡಿಸಿದ್ದ ಮ|| ಧರ್ಮರಾಯರು ಗ್ರಾಮಗಳ ಜನರಿಗೆ ಬುದ್ಧಿವಾದಗಳನ್ನು ಹೇಳಿಕೊಡುತ್ತಾ, ಪ್ರಜೆಗಳ ಪ್ರೀತಿಗೆ ಪಾತ್ರರಾಗಿ ನಿಸ್ಪೃಹತ್ವದಿಂದ ಕೆಲಸ ಮಾಡುತ್ತಿದ್ದ ಮಹನೀಯರು ಕೃಪೆ ಇಟ್ಟಿದ್ದರಿಂದ ಗ್ರಾಮಸ್ಥರಿಗೆ ಈ ತಾಲ್ಲೂಕಿಗೆಲ್ಲಾ ಬಹಳ ಪ್ರಯೋಜನ ಉಂಟಾಗಿತ್ತು. ಈಗಲೂ ಅವರು ಶ್ರೇಷ್ಠನ ಪರವಾಗಿ ಕೆಲಸಕ್ಕೆ ದಯಮಾಡಿದ್ದರಿಂದಲೂ ಸಂತೋಷ ಹೆಚ್ಚುವುದೆಂಬುದಾಗಿ ಅವರ ಗುಣಕಥನವನ್ನು ಮಾಡಿದರು. ಭಕ್ತಿಯುತರಾದ ಗ್ರಾಮಸ್ಥರ ಪರವಾಗಿ ಬೆಂಬಲವನ್ನು ಹೊಂದಿದ ಅಮಲ್ದಾರ್ರು ಗ್ರಾಮಸ್ಥರನ್ನು ಕುರಿತು ನಮ್ಮ ಶ್ರೀಮನ್ ಮಹಾರಾಜರವರೂ, ಶ್ರೀಮನ್ ಯುವರಾಜರವರೂ ತಮ್ಮ ಸಂಸ್ಥಾನದ ಪ್ರಜೆಗಳಲ್ಲಿ ... ಗ್ರಾಮಪದವಿರಾದ ... ಇವರೇ ... ಜಾಗ್ರತೆಯಾಗಿ ನಾಗರಿಕರೆಂದೆನಿಸಲು ಮಾಡಬೇಕೆಂಬ ಉದ್ದೇಶದಿಂದ ... ತಿಳಿಸಿತ್ತಾರೆ ... ಪ್ರಯತ್ನಗಳು ನಡೆಸುತ್ತಾ ಇರುವವು. ಅಲ್ಲದೆ ... ಶ್ರೀಮಾನ್ ದಿವಾನ್ ಸಾಹೇಬರವರು ... ಪ್ರತಿಯೊಬ್ಬರೂ ... ಕೇಳಬೇಕು. ಇಂತಹ ಸುಸಮಯದಲ್ಲಿ ನೀವು ನಿಮ್ಮ ... ನಮ್ಮ ಗ್ರಾಮವನ್ನು ... ಅಭಿವೃದ್ಧಿಯಾಗಬೇಕಲ್ಲದೆ ... ಎಂಬ ... ಎಂದು ... ವಾಗಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಅಪ್ಪಣೆ ಕೊಡಿಸಿ ಗ್ರಾಮಸ್ಥರ ... ಬಹಳ ಕೃತಜ್ಞರಾಗಿದೇವೆ. ಅನಂತರ ಗರ್ಲ್ಸ್ ಸ್ಕೂಲ್ ಮಾಸ್ಟರ್ ಸಿ. ಡಿ. ನರಸಿಂಹಯ್ಯನವರು ... ಇಂದ ಶ್ರೀಮನ್ ಮಹಾರಾಜರವರ, ಶ್ರೀಮನ್ ಯುವರಾಜರವರ ಕ್ಷೇಮ ... ಪ್ರಾರ್ಥನೆಯನ್ನು ಮಾಡಿದರು. ಎಲ್ಲರೂ ಜಯಘೋಷ ಮಾಡಿದರು. ಸಭೆಗೆ ಬಂದವರು ತಾಂಬೂಲ ವಿನಿಯೋಗಿಸಲ್ಪಟ್ಟು ರಾತ್ರಿ 11 ಗಂಟೆಗೆ ಸಭೆ ಮುಕ್ತಾಯವಾಯಿತು. ಎಲ್ಲರೂ ನಮ್ಮ ಅಮಲ್ದಾರ್ರವರನ್ನು ಕೊಂಡಾಡಿ ದೇವರಲ್ಲಿ ಪ್ರಾರ್ಥಿಸಿದರು ಇಂಥಾ ಮಹನೀಯರನ್ನು ನಮ್ಮ ತಾಲ್ಲೂಕಿಗೆ ಪಾಲಿಸಿದ್ದಕ್ಕಾಗಿ ಸ್ತೋತ್ರಮಾಡುತ್ತ ಮನೆಗಳಿಗೆ ತೆರಳಿದರು.

ಸದ್ಭಾವಭವನ.

ಖಾತ್ರಿದಾರರಿಗೆ ನೋಟೀಸು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ತುಮಕೂರು ತಾಲ್ಲೂಕ್ ಕಚೇರಿ ವಿವರ—ಜವಾಬು.

ಅಯ್ಯಾ,—ತಮ್ಮ ಕಳೆದ 2 ನೇ ತಾ ಗುರುವಾರದ ಪತ್ರಿಕೆಯಲ್ಲಿ ತುಮಕೂರು ತಾಲ್ಲೂಕ್ ಕಚೇರಿ ವಿಷಯದಲ್ಲಿ ಇನ್ಸ್‌ಪೆಕ್ಟರ್ ರಾಮಚಂದ್ರ ಎಂಬುವರ ಮೇಲೆ ಇಲ್ಲದ ದೋಷಾರೋಪಣೆಯನ್ನು ಬರೆದು ಸುಳ್ಳು ಅಪವಾದ ಹೊರಿಸಿರುವುದನ್ನು ನೋಡಿದರೆ ಆ ಪುಣ್ಯಾತ್ಮರು ಪಾಪ ಬರುವರೆಂಬ ಸಂಶಯವೂ ಬಿಡುವುದಿಲ್ಲ. ಏಕೆಂದರೆ ಇಂಥಾ ಕಾಲದಲ್ಲಿ 3-5 ರೂಪಾಯಿಗಳು ಲಂಚ ಕೊಡುವುದೆಂದರೇನು? ಅವರು ಕೇಳುವರೇನು? ಇದೆಲ್ಲಾ ನಿಜವೇ? ಎಂಬುದನ್ನು ವಾಚಕರೇ ಊಹಿಸಿಕೊಳ್ಳಬೇಕಾಗಿರುವುದು. ಮೇಲೂ ನಮ್ಮ ಅಮಲ್ದಾರ್ ಮ|| ಧರ್ಮರಾಯರ ಕಾಲದಲ್ಲಿ ಕಚೇರಿಯ ಕಾರುಬಾರುಗಳು ಬಹು ನಿಚ್ಚಳತೆಯಿಂದ ನಡೆಯುತ್ತಿದ್ದು ಈಗಲೂ ಅಂಥಾ ಧರ್ಮಾತ್ಮರೇ ಕಾರುಬಾರು ನಡೆಸುತ್ತಿರುವುದರಿಂದ ಇಂಥಾ ಗಲಭೆಗೆ ಅವಕಾಶವೇ ಇಲ್ಲ. ಅವರ ದ್ವೇಷಿಗಳ್ಯಾರೋ ಈ ರೀತಿ ಮುಂದೆ ಬರುತ್ತಿರುವ ಶ್ಲಾಘನೆಯನ್ನು ದಾರಿ ಬಿಡದಂತೆ ಮಾಡುತ್ತ ಮಾಡಿರುವರು ಇದನ್ನು ಘನತೆಯಿಂದಿರ ಸರ್ಕಾರದವರೂ ಮತ್ತು ನಮ್ಮ ಅಮಲ್ದಾರ್ರವರೂ ನಂಬತಕ್ಕ ವಿಷಯವಲ್ಲ. ಇದನ್ನು ಪ್ರಕಟ ಮಾಡಿದವರು ಅಮಲ್ದಾರರ ಎದುರಿನಲ್ಲಿ ಅರಿಕೆ ಮಾಡಿಕೊಂಡಿದ್ದರೆ ಬಹು ಚೆನ್ನಾಗಿತ್ತು. ಬರೆದು ಒಬ್ಬರ ಮಾನ ತೆಗೆದದ್ದರಿಂದ ಅವರಿಗೆ ಏನು ಲಾಭದಂತಾಯಿತೋ? ಈ ಕಚೇರಿಯಲ್ಲಿ ಇದುವರೆಗೆ ಅಂಥಾ ನಡವಳಿಕೆಗಳು ಇಲ್ಲವೇ ಇಲ್ಲ. ಒಬ್ಬರು ಗ್ರಾಂಟು ಮಾಸ್ಟರಿಗೆ ಸಂಬಳಕ್ಕೆ ಸಂಬಂಧ ಸಿಕ್ಕದಿಲ್ಲವೆಂಬ ದ್ವೇಷದಿಂದ ಅವರ ಮೇಲೆ ಕಳೆದದಂತೆ ತೋರುವುದು. ಡಿ. ಎಂ.

[ಈ ಬಾತ್ಮಿಯನ್ನು ಪ್ರಕಟಿಸಲು ನಮಗೆ ಬಹಳ ಸಂಕೋಚವಾ... ಹೊಸಹಳ್ಳಿ ಗ್ರ್ಯಾಂಟ್ ಮಾಸ್ಟರ್ ಎಚ್. ವೈ. ಶಾಮರಾವ್ ಎಂಬುವರು ...

ಯ, ಸುಳ್ಳು ಹೆಸರು ವಿಳಾಸಗಳನ್ನು ಕೊಟ್ಟು ವೃಥಾ ಆ ಗುಮಾಸ್ತ ರನ್ನೂ ನಮ್ಮ ಪತ್ರಿಕೆಯನ್ನೂ ಕಾರಣವಾಗಿ ಮಾಡಿದರೆಂದೂ, ಇಂಥಾ ಪತ್ರಗಳಿಗೆ ನಮ್ಮ ಪತ್ರಿಕೆಯಲ್ಲಿ ಅವಕಾಶ ಕೊಡ್ಡವಲ್ಲ ಎಂದೂ ತಿಳಿಸುತ್ತೇವೆ. —ಎಡಿ.]

ಒಬ್ಬ ಪಂಡಿತರ ಪ್ರಶಂಸೆ.

ಸ್ವಾಮಿ,—ಮೈಸೂರು ಟ್ರೈನಿಂಗ್ ಕಾಲೇಜಿನಲ್ಲಿ ವಿದ್ವಾಂಸರಾಗಿದ್ದು ಈಗ ಶ್ರೀಮನ್ ಮಹಾರಾಜರವರ ಸಂಸ್ಕೃತ ಕಾಲೇಜಿಗೆ ವಿದ್ವಾಂಸರಾಗಿ ಹೋಗಿರುವ ಬ್ರಂ॥ ಶ್ರೀ ಹಾಸನದ ನರಸಿಂಹ ಶಾಸ್ತ್ರಿಗಳವರು ಈಗ ಅನೇಕ ವರ್ಷದ ನಾರ್ಮಲ್ ಸ್ಕೂಲಿನಲ್ಲಿ ಸಂಸ್ಕೃತ ವಿದ್ವಾಂಸರಾಗಿ ಪ್ರೌಢ ತರಗತಿ ವಿದ್ಯಾರ್ಥಿಗಳಿಗೆ ಚೆನ್ನಾಗಿ ಪಾಠ ಹೇಳತಕ್ಕವರಾಗಿದ್ದರು. ಇವರನ್ನು ಆ ಸ್ಕೂಲಿನಿಂದ ಇಂಗಿಷ್ ಹೈ ಸ್ಕೂಲಿಗೆ ಪಂಡಿತರನ್ನಾಗಿ ವರ್ಗಮಾಡಿ ದಾಗ ನಾರ್ಮಲ್ ಸ್ಕೂಲಿನ ಮೇಲ್ತರಗತಿಗಳ ವಿದ್ಯಾರ್ಥಿಗಳು ಪೇಚಾಡುತ್ತಿದ್ದು ವಿದ್ಯಾ ಇಲಾಖೆಯ ಮೇಲ್ಪಟ್ಟ ಅಧಿಕಾರಿಗಳು ನಾರ್ಮಲ್ ಸ್ಕೂಲು ವಿದ್ವಾಂಸರನ್ನಾಗಿ ಮಾಡಿಯಾರೆಂದು ನಂಬಿದ್ದರು. ನಮ್ಮ ವಿದ್ಯಾಭ್ಯಾಸದ ಕಾಲಗಳಿಗೆ ಇವರ ವಿದ್ವತ್ತೂ ಯೋಗ್ಯತೆಯೂ ಚೆನ್ನಾಗಿ ತಿಳಿದಿತ್ತೇ ತಿಳಿದಿಲ್ಲ ಎಂದು ಸಂಶಯ ಪಡುವಂತಾಯಿತ್ತು. ನಮ್ಮ ಶ್ರೀಮನ್ ಮಹಾರಾಜರು ಇವರನ್ನು ಆಸ್ಥಾನ ಮಹಾ ವಿದ್ವಾಂಸರನ್ನಾಗಿಯೂ, ಸಂಸ್ಕೃತ ಕಾಲೇಜು ವಿದ್ವಾಂಸರನ್ನಾಗಿಯೂ ನಿಯಮಿಸಿಕೊಂಡರೆಂದು ಕೇಳುತ್ತೇವೆ. ಸಮರ್ಥರಾದಂಥ ವಿದ್ವಾಂಸರುಗಳಿಗೆ ಪ್ರೋತ್ಸಾಹ ಕೊಟ್ಟು ಅವರಿಂದ ದೊರೆಯುವ ಪ್ರಯೋಜನವನ್ನು ವಿದ್ಯಾರ್ಥಿಗಳಿಗೆ ಉಂಟುಮಾಡುವದೂ, ಸಮರ್ಥರಾದವರನ್ನು ಆಯಾ ಸ್ಥಳಗಳಲ್ಲಿ ಕಳುಹಿಸಿರುವದೂ ವಿದ್ಯಾ ಇಲಾಖೆಯವರ ಮುಖ್ಯ ಕೆಲಸ ವಾದ್ದರಿಂದ ಮುಂದಾದರೂ ಇಂಥವರ ವಿಷಯದಲ್ಲಿ ಗಮನಕೊಡಬೇಕಾಗಿ ಕೇಳುತ್ತೇವೆ. ಇವರಂಥ ವಿದ್ವಾಂಸರು ಟ್ರೈನಿಂಗ್ ಕಾಲೇಜಿಗೆ ಮುಂದೆ ದೊರೆಯುವದು ದುರ್ಲಭ. ವಿದ್ಯಾಭಿಮಾನಿ.

ರೆವಿನ್ಯೂ ಬಾಬಿನಲ್ಲಿ ಅನ್ಯಾಯವಂತೆ.

ಸ್ವಾಮಿ,—ಅರಕಲಗೂಡು ತಾಲ್ಲೂಕು ಹುಲಿಕಲ್ಲು ಗ್ರಾಮದಲ್ಲಿರುವ ನೀಲು ರಾಮಸ್ವಾಮಯ್ಯಂಗಾರಿಯು ತಿಳಿಸುವುದೇನೆಂದರೆ—ಅರಕಲಗೂಡು ತಾಲ್ಲೂಕು ಮಲ್ಲಿಪಟ್ಟಣದ ಹೋಬಳಿ ಬೆಸಗರಂಗಾಲ ಗ್ರಾಮದಲ್ಲಿ ನನಗೆ ಸೇರಿದ ಜಮೀನು ಇದೆ. ಅದು ಸೈಟೆ ಸರ್ವೆ 72 ನೇ ನಂ ತರೀ ಜಮೀನು ಇದನ್ನು ಸುಮಾರು 12-13 ವರುಷಗಳಲ್ಲಿ ಅದೇ ಗ್ರಾಮದ ಬಸವೇಗೌಡನ ಮಗ ಪುಟ್ಟೇಗೌಡನಿಗೆ ಕೊಟ್ಟೆನು. ಆ ಭಾಗಾಯತು ಅವನು ಕೆಲವು ದಿವಸ ಗೇಣಿ ಕೊಟ್ಟು ಫಸಲನ್ನು ಕಳೆದುಕೊಂಡು ಇದ್ದವನು ಪೌತಿ ಆದನು. ಅವನ ತಮ್ಮನೂ ಸಹಾ ಅದೇ ರೀತಿ ಅನುಭವಿಸಿಕೊಂಡು ಆ ಜಮೀನು ಮೇಲೆ ಭೋಗ್ಯಾದಿಗಳನ್ನು ಮಾಡಿ ಏನು ಲಾಭವಿಲ್ಲದೆ 7-8 ವರುಷ ಗೇಣಿ ಕಂದಾಯ ಕೊಡಲಿಲ್ಲ. ಆ ಕಂದಾಯವನ್ನೇ ಇದುವರೆಗೂ ಸರ್ಕಾರದ ರೆವಿನ್ಯೂ ವಸೂಲ್ ಮಾಡದೆ ಈಗ ನನ್ನ ಸ್ವಾಧೀನಾನುಭವದಲ್ಲಿರುವ ಸರ್ವೆ 10 ನೇ ನಂ. ಜಮೀನನ್ನು ಆ ಕಂದಾಯಕ್ಕೋಸ್ಕರ ಜಪ್ತಿ ಹರಾಜು ವಗೈರೆ ಕ್ರಮ ದಿಂದ ನನ್ನ ಎರಡು ವರುಷದ ಫಸಲನ್ನು ನಷ್ಟಪಡಿಸಿ ಬಲಾತ್ಕಾರದಿಂದ ರೂ. ಬಾಕಿ ಕಂದಾಯವನ್ನು ವಸೂಲ್ ಮಾಡುತ್ತಾರೆ. ಇದಕ್ಕಾಗಿ ತಾಲ್ಲೂಕ್ ಕಛೇರಿಯಲ್ಲಿಯೂ, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ರಲ್ಲಿಯೂ ಎಷ್ಟು ಅರ್ಜಿಗಳನ್ನು ಕೊಟ್ಟರೂ ಕಂದಾಯ ಕೊಡಬೇಕೆಂಬುವುದೇ ಹೊರತು ಇನ್ನೇನೂ ಪ್ರಯೋಜನವಾಗಲಿಲ್ಲ. ಒಂದು ವರುಷದ ಕಂದಾಯವನ್ನು ಆ ಬಿಸ್ತು ಒಳಗೇ ಕಟ್ಟದಿದ್ದರೆ ನೋಟೀಸ್, ಜಪ್ತಿ, ಹರಾಜು ಕ್ರಮವನ್ನು ನಡಸುತ್ತಾರೆ. ಹೀಗಿದ್ದಲ್ಲಿ 8 ವರುಷದ ಕಂದಾಯವನ್ನು ಗರೀಬನಾದ ನನ್ನ ಕುಟುಂಬ ವನ್ನು ಹಾಳುಮಾಡಬೇಕೆಂಬ ಉದ್ದೇಶದಿಂದಲೇ ಈ ಕೆಲಸ ಮಾಡಿದರೆಂದು ತೋರುತ್ತದೆ. ಆದ್ದರಿಂದ ದಯಾಳುವಾದ ಸರ್ಕಾರದವರು ಇಂಥಾ ವಿಷಯ ವನ್ನು ವಿಚಾರಿಸಿ ಬಡ ರೈತರುಗಳನ್ನು ಕಾಪಾಡಿದರೆ ಒಳ್ಳೇ ಕೀರ್ತಿಗೆ ಪಾತ್ರರಾಗುತ್ತಾರೆ. ಇಲ್ಲದೆ ಇದ್ದ ಪಕ್ಷದಲ್ಲಿ ಜಮೀನನ್ನು ತಗದುಕೊಳ್ಳುವದು, ಕೊಡುವದೂ ಮೋಸಕ್ಕೆ ಸ್ಥಳವೇ ಸರಿ.

ನೀಲುವಾಗಿಲು ರಾಮಸ್ವಾಮಯ್ಯಂಗಾರ್.

ಬಡ ಉಪಾಧ್ಯಾಯರ ಗೋಳಾಟ.

ಸ್ವಾಮಿ,—ಎಲ್ಲಾ ಉಪಾಧ್ಯಾಯರುಗಳಿಗೂ ಅನುಕೂಲವಾಗುವಂತೆ ನಮ್ಮ ಶ್ರೀಮನ್ ಮಹಾರಾಜರವರು ಬಹು ಪ್ರಯತ್ನವನ್ನು ಸಂಜನನವು ಮಾಡಿರುವ ಬಡ ಜನರಿಗೂ ವಿದಿತನೇ ಇರುವುದು. ಇಂಥಾ ಎಲ್ಲಾ ಉಪಾಧ್ಯಾಯ ರಿಗೂ ಪ್ರಮೋಷನ್ ಗಳು ದೊರೆತಿಲ್ಲ. ಹತ್ತು ರೂಪಾಯಿನ ಅಲ್ಪ ವೇತನ ವನ್ನು ಪಡೆಯುವ ಬಹು ಮಂದಿ ಉಪಾಧ್ಯಾಯರು ಈಗಲೂ ಇರುವರು. ಇದು ಹೀಗಿರಲಿ. ಈ ಉಪಾಧ್ಯಾಯರುಗಳೆಲ್ಲರೂ ತಿಂಗಳಿನ ಮೂವತ್ತು ದಿನವೂ ತಮ್ಮ ಅಲ್ಪ ವೇತನವನ್ನೇ ಒಂದು ಮಹಾ ನಿಧಿಯಂತೆ ನಿರೀಕ್ಷಿಸಿ, ಎಲ್ಲಾ ಕೆಲಸಗಳಿಗೂ ಅದನ್ನೇ ಗುರಿಯಿಟ್ಟುಕೊಂಡಿರುವರೇ ಆದರೂ ಅವರು ಗಳ ಶಿಕ್ಷಕರುಗಳ ಮುಖಾಂತರ ಸಂಬಳಗಳು ಸಕಾಲಕ್ಕೆ ದೊರೆಯದೆ ಬಹು ಕಷ್ಟಪಡುವರು. ಅದಕ್ಕೆ ತಕ್ಕಂತೆ ಭೂತದಯೆ, ಪರೋಪಕಾರ ಬುದ್ಧಿಗಳ ನ್ನು ಬಿಟ್ಟ ಕೆಲವು ಅತಿ ವಿರಳ ಬಹು ಮಂದಿ ಶಿಕ್ಷಕರು—“ಉಪಾಧ್ಯಾಯರು ಸಂಬಳ ಬೇಕಾದ್ದಿದ್ದರೆ ನಾಳೆ ಬರಬೇಕು, ನಾಳಿದ್ದು ಬರಬೇಕು, ಏನ ಮಾಡಲಿ, ತಾಲ್ಲೂಕ್ ಆಫೀಸಿನಲ್ಲಿಯಾದರೇ— ನಮಗೆ ವಿಶ್ರಾಂತಿ ಇಲ್ಲ, ನಾಳೆ ಬಿಲ್ಲು ಮಾಡೋಣ, ನಾಳಿದ್ದು ಪಾಸ್ ಮಾಡೋಣ” ಎಂದೂ ಕಾಲ ಕಳೆಯುವರು. ಉಪಾಧ್ಯಾಯರೇ ಹೋಗಿ ಕೇಳಿದಲ್ಲಿ—“ಶಿಕ್ಷಕರ ಮೂಲಕ ಕೊಟ್ಟಿದ್ದೇವೆ” ಎಂದು ಹೇಳುವರು. ಇನ್ನು ಶಿಕ್ಷಕರನ್ನು ಹುಡುಕುವದಕ್ಕೆ ಒಂದು ವೇಳೆ ಅವರು ದೊರೆತು ಕೇಳಿದರೂ—“ಜವಾನನು ಹೋಗಿ ದ್ದಾನೆ” ಎಂದು ಜವಾಬ್ ಬರುವುದು. ಉಪಾಧ್ಯಾಯರು ಇನ್ನು ಹೇಗೆ ಕಾಲ ಕಳೆಯಬೇಕು? ಇಲ್ಲಿಂದ ಅಲ್ಲಿ, ಅಲ್ಲಿಂದ ಇಲ್ಲಿ ಸಾಲಗಳು ತರು ವದು, ತಿರುಗುವದು, ಇವೇ ಮೊದಲಾದ ಅನೇಕ ವಿಧಗಳಿಂದ ವ್ಯಥೆಪಡು ವರು. ಅವರ ಬಡತನಕ್ಕೂ ಇದೇ ಕಾರಣ. ಕಾಲಕ್ಕೆ ಮಳೆಯಿಲ್ಲದೆ ಹೋಗುವ ಬೆಳೆಯ ಹಾಗೆ ಕಾಲಕ್ಕೆ ಕಾಣದ ಸಂಬಳ; ಕಾಲಕ್ಕೆ ತಲುಪದೆ ಉಪಾಧ್ಯಾಯರಿಗೆ ಕಷ್ಟ. ಆದ್ದರಿಂದ ಸರ್ಕಾರದವರು ಹಳ್ಳಿ ಮಾಸ್ಟರಿಗೆ ಜಾಗ್ರತೆ ಸಂಬಳ ಪಾವತಿಯಾಗುವ ಹಾಗೆ ಮಾಡಬೇಕೆಂದು ಕೋರಿಕೆ. ಮತ್ತು ಬಿಗರ್ ಇಲಾಖೆಯ ಮೂಲಕ ಸಂಬಳ ಪಾವತಿಯಾಗುವುದು ಸಾಮಾನ್ಯವೇ ಸರಿ. ಇಂಜನೀರ್ ಇಲಾಖೆ ಯ ಕಂಟ್ರಾಕ್ಟುದಾರರುಗಳಿಗೆ ಹಣಕ್ಕೆ ಬದಲು ಬಿಲ್ಲುಗಳನ್ನು ತಯಾರಿಮಾಡಿ ಅವರು ಮಾರಿಕೊಳ್ಳುವ ಹಾಗೆ ಮಾಡುವರು. ಆ ಕಂಟ್ರಾಕ್ಟರು ತಮಗೆ ಬೇಕಾದ ಕಾಲದಲ್ಲಿ ಅವನ್ನು ಟ್ರೆಜರಿಯಲ್ಲಿ ಮುರಿಸಿ ಹಣವನ್ನು ಪಡೆದು, ಕೆಲಸ ಕಾರ್ಯಗಳನ್ನು ನೆರವೇರಿಸಿಕೊಳ್ಳುವರು. ಇದೇ ರೀತಿ ಈ ಉಪಾಧ್ಯಾಯರ ಬಿಲ್ಲುಗಳನ್ನು ತಯಾರುಮಾಡಿ, ತಿಂಗಳಾದಿಯಲ್ಲಿ ಆಯಾ ಉಪಾಧ್ಯಾಯರುಗಳಿಗೆ ಇಲಾಖೆಯ ಮೂಲಕ ಪಾವತಿ ಮಾಡಿಕೊಟ್ಟು ಬಂದಲ್ಲಿ ಶಿಕ್ಷಕರುಗಳ ನಿರ್ಲಕ್ಷ್ಯ, ಗುಮಾಸ್ತರ ಅಲಕ್ಷ್ಯ, ದಲಾಯಿತರ ಅಲಕ್ಷ್ಯ ಇವೇ ಮೊದಲಾದ ತೊಂದರೆಗಳು ತಪ್ಪಿ, ಉಪಾಧ್ಯಾಯರು ಸುಖದಿಂದ ತಮ್ಮ ತಮ್ಮ ಕಾರ್ಯಗಳನ್ನು ನೆರವೇರಿಸಿಕೊಂಡು ಕ್ಷೇಮವಾಗಿರುವ ಕಾಲವು ಕ್ಷಿಪ್ರ ದಲ್ಲಿ ಒದಗೀತೆಂದು ಹಾರೈಸುವ ಒಬ್ಬ ಉಪಾಧ್ಯಾಯ.

[ಸರ್ಕಾರದ ನೌಕರರ ಮತ್ತು ಸಂಬಳಗಳು ಸಕ್ಕಸಂಧರ್ಭ ಇಂಗಿತಜ್ಞರೂ ಆಗಿದ್ದರೆ ಇಂಥಾ ಕಷ್ಟಗಳು ಹುಟ್ಟುವವೇ? —ಎಡಿ.]

ತಾಲ್ಲೂಕು ವರ್ತಮಾನಗಳು.

ಚನ್ನರಾಯಪಟ್ಟಣ.—ಹುಲಿ ರಥೋತ್ಸವವು ಈ ಊರಿನಲ್ಲಿ ನಡೆಯುವ ಕಾಲದಲ್ಲಿ ದನಗಳ ಪ್ರದರ್ಶನವೂ ನಡೆಯಬಹುದೆಂದು ಜನಗಳು ನಂಬಿರುತ್ತಾರೆ. ಇಲ್ಲಿ ಸಂತೆಯಲ್ಲಿ ಥರ್ ಗಾಡಿಗೂ ಬಾರಿ ಗಾಡಿಗೂ ಜಾನುವಾರುಗಳಿಗೂ ಸುಂಕ ವಸೂಲು ಮಾಡುವದು ಜಾರಿಗೆ ಬಂದಿದೆ.—ಕಳೆದ ತಿಂಗಳ ಅಖೈರಿನಲ್ಲಿ ಕೋ ಆಪರೇಟಿವ್ ಸೊಸೈಟಿಗಳ ಅ॥ ರೆಜಿಸ್ಟ್ರಾರ್ ಸಾಹೇಬರು ದಯಮಾಡಿದ್ದರು.— 3-4 ದಿನದಿಂದ ಹುಡುಗರು ಜವಾಬಂದಿ ನಡೆಯುತ್ತಿದೆ.—ಈ ತಿಂಗಳು 6 ನೇ ತಾ. ಭಾನುವಾರ ಕೋಟೆಯಲ್ಲಿರುವ ವಕೀಲ್ ಮ॥ ಲಕ್ಷ್ಮೀನಾರಾಯಣರಾ ಯರು ತಮಗೆ ಪುತ್ರೋತ್ಸವವಾದ ಸಂತೋಷಕ್ಕಾಗಿ ಊರಿನವರಿಗೆಲ್ಲಾ ಬಹು ವಿಜೃಂಭಣೆಯಿಂದ ಒಂದು ಔತಣವನ್ನು ಮಾಡಿಸಿದರು. ಈ ಉತ್ಸವಕ್ಕಾಗಿ ತಾಲ್ಲೂಕು ಕಾವಲಿ ಮುಖಂಡ ಜನರಿಗೆಲ್ಲಾ ಆಹ್ವಾನ ಪತ್ರಿಕೆ ಕಳುಹಿಸಿಕೊಟ್ಟಿದ್ದರು. ಈ ಊರಿನಲ್ಲಿರುವ ಸರ್ವಜನೋಲ್ಲಾಸ ವಿನೋದವರ್ಧಿನಿ ನಾಟಕಸಂಘದವರು ಆ ದಿನ ಸಂಗೀತವನ್ನು ವಕೀಲರ ಮನೆಯಲ್ಲಿ ನಡಿಸಿ ಸಭಿಕರನ್ನು ಆನಂದಗೊಳಿಸಿ ದರು. ಉದಾರಿಗಳಾದ ಈ ವಕೀಲರಿಗೂ ಇವರ ಕುಮಾರನಿಗೂ ದೀರ್ಘಾಯುಸ್ಸೂ ಶ್ರೇಯಸ್ಸೂ ಉಂಟಾಗಲೆಂದು ಹಾರೈಸುತ್ತೇವೆ.

ತಿಪಟೂರು—ಬಿಸಿಲಿನ ತಾಪ ಹೆಚ್ಚು. ಕೆರೆಯಲ್ಲಿದ್ದ ಅಲ್ಪಸ್ವಲ್ಪ ನೀರೆ ಲ್ಲಾ ಬತ್ತಿಹೋಗಿ, ಕೆರೆಯ ಅಂಗಳವೆಲ್ಲಾ ಹಸಿಗೆ ಮಯವಾಗಿದೆ. ಈ ವಿಷಯ ನಮ್ಮ ಸರ್ಕಾರದವರು ಗಮನ ಕೊಡುವರೆಂದು ನಂಬುತ್ತೇವೆ. ದನಕರುಗಳಿಗೆ ನೀರಿ ನ ತೊಂದರೆ ಹೆಚ್ಚು. ಊರಿನಲ್ಲಿರುವ ಭಾವಿಗಳಲ್ಲಿ ಈಗಾಗಲೇ ಬಿಂದಿಗೆ ಮುಳು ಗುವದಿಲ್ಲ. ಬೇಸಿಗೆಯಲ್ಲಿ ನೀರಿನ ತೊಂದರೆ ಹೆಚ್ಚುತ್ತೆಂದು ಎಲ್ಲರೂ ಕಳವಳ ಪಡುತ್ತಿದ್ದಾರೆ. ಸರ್ಕಾರದವರು ತಿಪಟೂರಿನ ನೀರಿನ ಕ್ಷಾಮವನ್ನು ಎಂದಿಗೆ ತಪ್ಪಿ ಸುತ್ತಾರೋ ತಿಳಿಯದು.—ಈ ಊರಿನ ಈಶ್ವರದೇವಸ್ಥಾನದ ಬಳಿ ಗಾರೆ ಅರೆ ಯುವ ದೋಣಿಗೆ 10 ವರ್ಷದ ಒಬ್ಬ ಹುಡುಗನು ಸಿಕ್ಕಿ ತುಂಬಾ ಗಾಯಪಟ್ಟು ಇಲ್ಲಿನ ಸಬ್ ಅ॥ ಸರ್ಜನ್ ರವರಿಂದ ಚಿಕಿತ್ಸೆ ಹೊಂದುತ್ತಿದ್ದಾನೆ.—ಈ ಊರಿಗೆ ಪ್ರೊ॥ ರಾಮಮೂರ್ತಿಯವರು ತಮ್ಮ ಕಂಪನಿಯ ಸಮೇತ ಬಂದು ಆಸ್ಪತ್ರೆ ಬಳಿ ಡೇರೆ ಹಾಕಿ ತಮ್ಮ ಶಕ್ತಿ ಸಾಹಸ ಸಾಮರ್ಥ್ಯಗಳನ್ನು ತೋರ್ಪಡಿಸಿದರು. ಪ್ರೊ॥ ರಾಮಮೂರ್ತಿಯವರಿಗೆ ತಿಪಟೂರಿನ ಪ್ರಜೆಗಳು ಸುಮಾರು 60 ರೂಪಾಯಿನ ಮಡಲನ್ನು ಒಪ್ಪಿಸಿದರು. ಇಂಥಾ ಸಣ್ಣ ಊರಿಗೆ ಅವರು ಬಂದದ್ದು ಎಲ್ಲರಿಗೂ ತುಂಬಾ ಸಂತೋಷವನ್ನುಂಟುಮಾಡಿ ಪ್ರೋತ್ಸಾಹವನ್ನು ಕೊಟ್ಟಂತಾಯಿತ್ತು.— ಇದೇ ಊರಿನ ಶಾಸೀಪತಿ ಶ್ರೀಕಂಠಶೆಟ್ಟರು ಒಂದು ವಿಶೇಷವಾದ ಛತ್ರವನ್ನು ಕಟ್ಟಿಸಿ, ಅದರ ಪ್ರವೇಶೋತ್ಸವವನ್ನು ನಮ್ಮ ಅಮಲ್ದಾರ್ರವರ ಅಧ್ಯಕ್ಷತೆಯಲ್ಲಿ ನೆರವೇರಿಸಿ, ಸಕಲ ಮತದವರಿಗೂ ಭೋಜನಾದಿಗಳನ್ನು ಮಾಡಿಸಿದುದು ತುಂಬಾ ಸ್ತೋತ್ರಾರ್ಹವಾಗಿದೆ. ಈ ಊರಿಗೆ ಕಳೆದ ವಾರ ಡೆಪ್ಯುಟಿ ಕಮಿಷನರು, ಡ॥ ಅಸಿ ಸ್ಟೆಂಟರು, ರೆವಿನ್ಯೂ ಕಮಿಷನರ್ ರು ಅಲ್ಲದೆ, ಡೆಪ್ಯುಟಿ ಇನ್ಸ್ ಪೆಕ್ಟರು, ಅ॥ ಡೆ॥ ಇನ್ಸ್ ಪೆಕ್ಟರು ದಯಮಾಡಿದರು. ಈ ಊರನ್ನು ಒಂದು ಹೆಡ್ ಕ್ವಾರ್ಟರ್ ರಾಗಿ ಮಾಡಿ ಇಲ್ಲಿಟ್ಟಿರು ಅ॥ ಡೆ॥ ಇನ್ಸ್ ಪೆಕ್ಟರನ್ನು ವಿದ್ಯಾಭ್ಯಾಸದ ಇಲಾಖೆಯವರು ನಿಯಮಿಸುತ್ತಾರೆಂದು ಕೇಳಿ ತುಂಬಾ ಸಂತೋಷವಾಯಿತು. ಇದರಿಂದ ತಿಪಟೂರು ಸ್ಕೂಲುಗಳೂ ಹಳ್ಳಿ ಸ್ಕೂಲುಗಳೂ ಅಭಿವೃದ್ಧಿಗೆ ಬರುತ್ತವೆಂಬುದರಲ್ಲಿ ಸಂಶಯವಿಲ್ಲ.—ಈ ತಾಲ್ಲೋಕಿಗೆ ಸೇರಿದ ಹಾಲ್ಕುರಿಕೆಯಲ್ಲಿ ಸಾ॥ ಗುರುತಪ್ಪನ ವರು ತಮ್ಮ ಮಗನ ಉಪನಯನವನ್ನು ರಥೋತ್ಸವನ್ನು ವಿಜೃಂಭಣೆಯಿಂದ ನಡೆಯಿಸಿ ಎಲ್ಲಾ ಮತದವರಿಗೂ ಅನ್ನದಾನಮಾಡಿಸಿದರು.—ಬೋನಿನ ರಸ್ತೆಗಳ ದುರವಸ್ಥೆಯ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ಗಮನ ಕೊಡುತ್ತಾರೆಂದು ನಂಬುತ್ತೇವೆ.

ಸಕಲೇಶಪುರ—ಈ ವರುಷ ಮಂಜರಾಬಾದ್ ತಾಲ್ಲೂಕಿನಲ್ಲಿ ಕಾಫಿ ಫಸಲು ಬಹಳ ಕಡಿಮೆ. ಕಾಫಿ ಧಾರಣೆಯು ಮಂಡಿಗೆ 200 ರಿಂದ 220 ರೂಪಾಯಿ ವರಿಗೂ ಇತ್ತು. ಯೂರೋಪು ಯುದ್ಧದ ಕಾರಣದಿಂದ ಬಹಳ ಕಡಿಮೆ 25 ರಿಂದ 35 ರೂ. ವರಿಗೂ ಮಾಡಿಕ್ಕೆ ಇದೆ. ಮರುಷೇ ಮರುಷ ಕಾಫಿ ಮಾರ್ಕೆಟ್ಟು ಮೆ ಆಪ್ಪರು ವರಿಗಾದರೂ ಪೂರ್ತಿಯಾಗಲಿಲ್ಲ. ಈ ವರುಷವೂ ವರ್ಷ ಮಾರ್ಚ ತಿಂಗಳು ಸುಬ್ಬಿಲ್ಲ, ಆಗಲೇ ವ್ಯಾಪಾರವೆಲ್ಲಾ ಕಲೀಸ್ ಆದಂತೆ ತೋರುತ್ತೆ. ಗ್ರೀನ್ ಬಗ್ ಎಂಬ ಬೆಳೆಗೆ ಬರುವ ರೋಗವನ್ನು ತಡೆಯುವದಕ್ಕೆ ಮೈಸೂರು ಗೌರ್ನಮೆಂಟಿನವರು ಇಲ್ಲಿ ಒಬ್ಬ ಅ॥ ಎಂಟೊಮಾಲಜಿಸ್ಟ್ ನನ್ನು ಇಟ್ಟಿದ್ದಾರೆ. ಇವರು ಮೂರು ತಿಂಗಳ ಕೆಳಗೆ ಬೆಂಗಳೂರಿಗೆ ವಾಪಸು ಹೋದರು. ಬದಲೇ ಇಲ್ಲ. ಮಟ್ಟಿಸಾಗರ ಬೀರೇಗೌಡರ ಎಸ್ಟೇಟಿನಲ್ಲಿ ಬೋರ್ಡ್ ಪರೀಕ್ಷೆ ಮಾಡಲು ಸಾವಿರಾರು ಕೆಜಿ ಮಾಡಿದ್ದಾರೆ. ಬೋರ್ಡ್ ಹಾವಳಿಯು ಹುಟ್ಟಿ ಅದರಿಂದ ಎಲ್ಲಾ ಕಾಫೀ ಪ್ಲಾಂಟರುಗಳೂ ಧನ್ಯರಾಗುವರು. ಇದರ ಬೋರ್ಡ್ ಪರೀಕ್ಷಾ ಫಲವು ಎಷ್ಟರ ಮಟ್ಟಿಗೆ ಸಾರ್ಥಕವಾಯಿತೋ ತಿಳಿಯಲಿಲ್ಲ. ಮ॥ ಬಿ ಸಿ ಶ್ರೀಕಂಠಪ್ಪನವರು ಜಾಗ್ರತೆ ಈ ಕಡೆ ದಯಮಾಡಿ ಈ ವಿಷಯದಲ್ಲಿ ಪ್ಲಾಂಟರುಗಳಿಗೆ ತಿಳುವಳಿಕೆ ಕೊಡುತ್ತಾರೆಂದು ನಂಬಿಕೆಯುಂಟು.—ಇಲ್ಲಿ ಒಂದೇ ಇದ್ದ ಮಂಗಳೂರು ಹೆಂಚಿನ ಕಾರ್ಖಾನೆಯು ಶಿಥಿಲವಾಗಿ ಹೆಂಚು ತಯಾರು ಆಗುವದು ಒಂದೆರಡು ವರುಷದಿಂದ ನಿಂತಿದೆ. ಸರ್ಕಾರದವರು ಈ ಕೆಲಸವನ್ನು ಮುಂದರಿಸಿ ಇಲ್ಲಿನ ಜನರ ಯಜಮಾನರ ಸ್ಥಿತಿಯನ್ನು ಏರಿಗೆ ತರಬೇಕೆಂದು ಯೋಚಿಸಿ ಒಬ್ಬ ಯುರೋಪಿಯನ್ ಸಾಹೇಬರನ್ನು ಇಲ್ಲಿಗೆ ಕಳುಹಿಸಿ ಈ ಸ್ಥಳವು ಮಂಗಳೂರು ಹೆಂಚಿನ ಕಾರ್ಖಾನೆ ಇಡಲು ಅನುಕೂಲವಾದದ್ದೇ ಅಲ್ಲವೇ ಎಂಬುವದನ್ನು ಗೊತ್ತು ಮಾಡಿಸಿದರು. ಈ ದೊರೆಯವರು ಸ್ಥಳೀಯ ಅಮಲ್ದಾರರ ಸಹಾಯ ದಿಂದ ಇಲ್ಲಿಯ ಮಣ್ಣಿನ ಗುಣವನ್ನು ಪರೀಕ್ಷಿಸಿ ವಾಪಸು ಮೈಸೂರಿಗೆ ದಯ ಮಾಡಿಸಿದರು. ಮತ್ತೊಂದಾವರ್ತಿ ಇವರು ಇಲ್ಲಿಗೆ ಬಂದಾಗ ಈ ಕಾರ್ಯವು ನಿಶ್ಚಯಿಸಲ್ಪಡುವದೆಂದು ತೋರುತ್ತೆ. ಹೇಮಾವತಿಯಿಂದ ಹಿಡಿದು ಸಾಕಷ್ಟು ಒದಗುವ ಕಾರ್ಯ ನಡೆಯುವ ಅನುಕೂಲವು ಹೆಚ್ಚುವದು.—ನಮ್ಮ ಅಮಲ್ದಾರ್ ಮ॥ ಶ್ರೀನಿವಾಸಯ್ಯಂಗಾರ್ರು ಈ ಮಲೆನಾಡಿನಲ್ಲಿ 3 ವರುಷಗಳಿಂ ದಲೂ ಮಾಡುತ್ತಾ ಬಂದಿರುವ ಶ್ರದ್ಧಾ ಪೂರಿತವಾದ ಕೆಲಸವನ್ನು ಮೇಲ್ಪಟ್ಟ ಅಧಿಕಾರಿಗಳು ಮೆಚ್ಚಿ ಇವರನ್ನು ಮಲೆನಾಡು ಎಕನಾಮಿಕ್ ಸೂಪರಿಂಟೆಂಡೆಂಟರಾಗಿ ಮಾಡುತ್ತಾರೆಂಬ ವರ್ತಮಾನ ಹುಟ್ಟಿತು. ಇವರ ಕಾಲದಲ್ಲಿ ಅಲ್ಲಲ್ಲಿ ಕೆಲವು ಸ್ಕೂಲುಗಳು ಏರ್ಪಟ್ಟು ಕೆಲಸ ನಡೆಯುತ್ತಿದೆ. ನಾಚಿಕ ರಾಶಿಗಳು ಸಹ ಕೆಲವು ಕಡೆ ಪ್ರಾರಂಭವಾಗುತ್ತಲಿವೆ. ಮಲೆನಾಡಿನ ಜನರ ಅಭಿವೃದ್ಧಿಗೆ ಬರಬೇಕಾ ದರೆ ಪ್ರಜಾ ಹಿತಚಿಂತಕರಾದ ಅಧಿಕಾರಿಗಳು ಇವರಿಗೆ ಸಹಕಾರರಾಗುವ ಈ ಮಲೆನಾಡಿನ ಗೌರವ ಮತ್ತು ಸರ್ಕಾರದ ಬೆಂಬಲವೂ ಕೇವಲ ಆವಶ್ಯಕ.

ಚ ತಾಮನೆ.—ಇದೇ ಮಾರ್ಚಿ 8 ನೇ ತಾ. ಇಲ್ಲಿಗೆ ಬೆಂಗಳೂರಿನಿಂದ ವ್ಯವಸಾಯದ ಡೈರೆಕ್ಟರ್ ಕೋಲ್ ಮನ್ ಸಾಹೇಬರವರು ಮತ್ತು ರೇಷ್ಮೆ ಸೂಪ ರಿಂಟೆಂಡೆಂಟರಾದ ಮ॥ ಎನ್. ರಾಮರಾಯರೂ ದಯ ಮಾಡಿಸಿ, ಇಲ್ಲಿನ ಗರಲ್ಸ್ ಸ್ಕೂಲ್ ಹಾಲಿನಲ್ಲಿ ವ್ಯವಸಾಯ ಮತ್ತು ರೇಷ್ಮೆ ವಿಷಯವಲ್ಲಿ ಉಪ ನ್ಯಾಸ ಮಾಡಿದರು. ಆ ಕಾಲದಲ್ಲಿ ಈ ತಾಲ್ಲೂಕಿನ ಮುಖಂಡರಾದ ಪಟೇಲ್ ಶ್ಯಾನುಭೋಗರು ಬಂದಿದ್ದರು. ಅಲ್ಲದೆ ಊರಿನ ಪ್ರಮುಖರಲ್ಲಿ ಅನೇಕರು ಸೇರಿದ್ದರು.—ಈ ಊರಲ್ಲಿ ಸ್ಕೂಲುಗಳ ಅ॥ ಇನ್ಸ್ ಪೆಕ್ಟರ ಆಫೀಸ್ ಆಗಿರುತ್ತೆ. ಸ್ಕೂಲ್ ಇನ್ಸ್ ಪೆಕ್ಟರ್ ಮ॥ ಬಿ ಹನುಮಂತರಾಯರು ಆಗಲೇ ದಯಮಾಡಿ ರುತ್ತಾರೆ.—ಈ ಊರಿನ ಸಂತೆ ವಿಚಾರವೇನೆಂದರೆ—ಇದು ಬಹು ದೊಡ್ಡ ಸಂತೆ. ಅಪಾರವಾಗಿ ಮಾರಾಟಕ್ಕೆ ದಿನಸಿ ಬರುತ್ತದೆ. ಬಂದಾಗ್ಯೂ ಒಂದೊಂದು ಅಂಗಡಿಗೆ ಒಬ್ಬೊಬ್ಬ ದಳ್ಳಾಳಿಯಂತೆ ಇರುತ್ತಾರೆ. ಇವರು ಪಾಳ್ಯದ ಗಿರಾಕಿ ಗಳಿಗೆ ಒಟ್ಟಿಗೆ ಒಪ್ಪಿ ಕೊಂಡಿರುತ್ತಾರೆ. ಬಡಬಗ್ಗರು ಚಿಲ್ಲರೆಯಾಗಿ ತೆಗೆದು ಕೊಳ್ಳುವವರಿಗೆ ದಿನಸಿ ಸಿಕ್ಕುವುದೇ ಇಲ್ಲ. ಅಲ್ಲದೆ ದಿನಸಿ ಕೊಳ್ಳುವವರು ಪಲ್ಲ 1 ಕ್ಕೆ 1 ಆಣೆಯಂತೆಯೂ, ಕೆಲವು ಸಂದರ್ಭಗಳಲ್ಲಿ ರೂ. 1 ಕ್ಕೆ 3 ಪೈ ಮೇರೆಗೂ ರುಸುಂ ವಸೂಲ್ ಮಾಡುತ್ತಾರೆ. ಮಾರುವುದಕ್ಕೆ ದಿನಸಿ ತಂದಿರುವ ವರು ದಳ್ಳಾಳಿಗಳ ವಿನಹಾ ಮಾರಲಾಗುವುದೇ ಇಲ್ಲ. ಈ ರೀತಿ ಇರುವುದರಿಂದ ಚಿಲ್ಲರೆ ಕೊಳ್ಳುವವರಿಗೆ ಅನುಕೂಲವೇ ಇಲ್ಲ. ಇದರಿಂದ ಬಹು ತೊಂದರೆ ಯಾಗಿದೆ. ಆದ್ದರಿಂದ ಸರ್ಕಾರದವರು ಈ ದಳ್ಳಾಳಿಗಳಿಗೆ ಸರಿಯಾದ ಏರ್ಪಾಡು ಮಾಡಬೇಕು. ಕೊಳ್ಳುವವರಿಂದ ವಸೂಲ್ ಆಗತಕ್ಕ ರುಸುಂ ವಜಾ ಆಗ ಬೇಕು. ಚಿಲ್ಲರೆ ಕೊಳ್ಳುವವರಿಗೆ ದಿನಸಿ ಒದಗುವಂತೆ ಏರ್ಪಾಡು ಮಾಡ ಬೇಕೆಂತ ಬಡವರೆಲ್ಲಾ ಪ್ರಾರ್ಥಿಸುತ್ತಾರೆ.—ಕಳೆದ 6 ನೇ ತಾ. ಸೋಮವಾರ ದಿಂದ ಇಲ್ಲಿಂದ ಕೋಲಾರಕ್ಕೆ ಪ್ರಯಾಣಿಕರಿಗೆ ರೈಲನ್ನು ಬಿಡುತ್ತಿದ್ದಾರೆ.—ಈ ಊರಿನ ಸ್ಥಳವೇದಿಗರಾದ ಮ॥ ಸ್ಕೂಲ್ ಮಾಸ್ಟರ್ ರಾಮಚಂದ್ರರಾಯರು ತಮ್ಮ ಮಗನ ಉಪನಯನವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು. ಬಹಳಬಾಗಿ ಅನ್ನದಾನವನ್ನು ಮಾಡಿ ಬಡವರನ್ನು ಸಂತೋಷಪಡಿಸಿದರು. ಈ ಕಾಲದಲ್ಲಿ ಈ ವಿಧವಾದ ಪಾರಮಾರ್ಥಿಕತೆ ಇರುವುದು ಶ್ಲಾಘನೀಯವಾಗಿ ರುತ್ತೆ.—ಕಳೆದ ತಾ. 11 ನೇ ಸೋಮವಾರ ಮೈಸೂರು ಕುರುಡ ಮೂಕರ ಪಾಠಶಾಲಾ ವಿದ್ಯಾರ್ಥಿಯಾದ ಮ॥ ಎ. ಅಶ್ವತ್ಥನಾರಾಯಣರಾವ್ ಎಂಬವರು ಇಲ್ಲಿನ ಗರಲ್ಸ್ ಸ್ಕೂಲ್ ಹಾಲಿನಲ್ಲಿ ಸಂಗೀತ ಕಛೇರಿಯನ್ನು ನಡಿಸಿದರು. ಇಲ್ಲಿನ ದೊಡ್ಡ ದೊಡ್ಡ ಅಧಿಕಾರಿಗಳೂ, ವರ್ತಕರೂ, ಅಂಬಾದಾರರೂ ಸೇರಿ ದ್ದರು. ಇವರ ಸಂಗೀತವು ಪಂಡಿತ ಪಾಮರರ ಮನಸ್ಸನ್ನು ಆಕರ್ಷಿಸುವಂತೆ ಇತ್ತು. ಸಭಿಕರಿಂದ ಇವರಿಗೆ ಮರ್ಯಾದೆಯೂ ನಡೆಯಿತು. ತರುವಾಯ ನಮ್ಮ ತಾಲ್ಲೂಕ್ ಶಿರಸ್ತೇದಾರ್ರು ನಿಜವಾದ ಸಂಗೀತಗಾರರಿಗೆ ಮುಖ್ಯ ಅಂಗವಾದ ಕಣ್ಣು ಗಳು ಇಲ್ಲದಿದ್ದಾಗ್ಯೂ ಈ ರೀತಿ ಸಂಗೀತದಲ್ಲಿ ನೈಪುಣ್ಯವನ್ನು ತೋರಿಸಿದ್ದಕ್ಕಾಗಿ ಯೂ, ಇವರು ವಿದ್ಯಾಭ್ಯಾಸ ಮಾಡಿದ ಪಾಠಶಾಲೆಯ ಮಹತ್ವಕ್ಕೂ, ಇಂಥಾ ಸಹಾಯಗಳನ್ನು ಒದಗಿಸಿರುತಕ್ಕ ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದವರ ಉತ್ಕೃಷ್ಟವಾದ ಏರ್ಪಾಡುಗಳನ್ನೂ ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ತರುವಾಯ ಎಲ್ಲರೂ ಸಂತೋಷಪಟ್ಟು ತೆರಳಿದರು.

ದೊಡ್ಡ ಬಳ್ಳಾಪುರ—ಈ ಟವನಿನಲ್ಲಿ ಯಥಾಪ್ರಕಾರವಾಗಿ ಇಲ್ಲಿನ ಪ್ರಜೆ ಗಳು ಆರೋಗ್ಯವಾಗಿದ್ದಾರೆ. ಬಿಸಿಲು ಕಾಲವಾದರೂ ಗಾಳಿಯು ಹಗಲು ರಾತ್ರಿ ಬೀಸುವದರಿಂದ ಬಿಸಿಲಿನ ಧಗೆಯು ಅಷ್ಟಾಗಿ ತೋರುವದಿಲ್ಲ. ಆದರೆ ಈ ಟವನಿ ನಲ್ಲಿ ಯಾವ ಗಲಾಟೆಯೂ ಇಲ್ಲದೆ ಇದ್ದಾಗ್ಯೂ ಇದಕ್ಕೆ ಸಮೀಪ ಮೂರು ಮೈಲಿ ಫಾಸಲೆಯಲ್ಲಿರುವ ಗಡ್ಡಹಳ್ಳಿ ಮುಂತಾದ ನಾಲ್ಕೈದು ಗ್ರಾಮಗಳಲ್ಲಿ ಪ್ಲೇಗ್ ತಲೆದೋರಿ ಜನರು ಷೆಡ್ಡುಗಳನ್ನು ಹಾಕಿಕೊಂಡು ವಾಸಮಾಡುತ್ತಿ ದ್ದಾರೆ.—ಈ ಊರು ರೈಲ್ವೆ ಸ್ಟೇಷನ್ ಬಳಿ ಒಂದು ಕುಟುಂಬದವರು ಷೆಡ್ಡನ್ನು ಹಾಕಿಕೊಂಡು ವಾಸಮಾಡುತ್ತಿದ್ದರು. ಕಳೆದ ಮಂಗಳವಾರ ರಾತ್ರಿ ಸುಮಾರು 7 ಗಂಟೆಯಲ್ಲಿ ಆ ಗುಡಿಸಲಿಗೆ ಬೆಂಕಿ ಹತ್ತಿ ಬಿದ್ದು 8 ವರ್ಷದ ಮತ್ತು ಸುಮಾರು 9 ತಿಂಗಳ ಎರಡು ಹೆಣ್ಣು ಮಕ್ಕಳೂ, 6 ರಾಸುಗಳೂ, ಅಲ್ಲದೆ ದವಸ ಧಾನ್ಯ ಮುಂತಾದ ಸಾಮಾನುಗಳೂ ಸುಟ್ಟುಹೋದವು. ಆ ಸಮಯದಲ್ಲಿ ತಾಯಿ ತಂದೆಗಳು ಸ್ಟೇಷನ್ ಗೆ ಹಾಲು ಕೊಡುವುದಕ್ಕೆ ಹೋಗಿದ್ದ ಹಾಗೂ, ತಂದೆಯು ಪೇಟೆ ಕಡೆಗೆ ಅಂಗಡಿಗೆ ಹೋಗಿದ್ದಂತೆಯೂ ಕೇಳುತ್ತೇವೆ. ಆ ಬಡಜನರ ಗೋಳನ್ನೂ, ಸಂಕಟವನ್ನೂ ಹೇಳತೀರದು. ನಮ್ಮ ಅಮಲ್ದಾರ್ರು ತುಂಬಾ ಸಂಕಟಪಟ್ಟು ಅವರಿಗೆ ಧೈರ್ಯ ಹೇಳಿದ್ದಲ್ಲದೆ ಜನಗಳಿಂದ ಚಂದಾ ವಸೂಲ್ ಮಾಡಿಕೊಡುವದಾಗಿಯೂ, ಈ ಊರಿನಲ್ಲಿ ಸುಮಾರು 20 ದಿನಗಳಿಂದ ನಾಟಕ ಆಡುತ್ತಿರುವ ಬೆಂಗಳೂರು ಮುನಿಸ್ವಾಮಪ್ಪನವರ ಕಂಪನಿಯವರೂ ಒಂದು ದಿನದ ಆಟವನ್ನು ಆಡಿ ಬಂದ ಹಣವನ್ನು ಆ ಬಡವನಿಗೆ ಕೊಡುವದಾಗಿಯೂ ಕೇಳಿ ಸಂತೋಷಪಡುತ್ತೇವೆ.—ಕಳೆದ ತಿಂಗಳ ಕೊನೆಯಲ್ಲಿ ಇಲ್ಲಿ ವಿದ್ಯಾಭ್ಯಾ ಸದ ಮತ್ತು ಕೈಗಾರಿಕೆ ಸಂಬಂಧವಾದ ವಸ್ತು ಪ್ರದರ್ಶನವು ಇಲ್ಲಿನ ಗೌರ್ನ ಮೆಂಟ್ ಎ. ವಿ. ಸ್ಕೂಲ್ ಕಟ್ಟಡದಲ್ಲಿ ತುಂಬಾ ತೃಪ್ತಿಕರವಾಗಿ ನಡೆಯಿತು. ಹೆಡ್ ಮಾಸ್ಟರ್ ಮ॥ ಕೊಂಗಾಡಿಯಪ್ಪನವರ ಪ್ರಯಾಸಾಧ್ಯವಾದ ಹಲವು ಪ್ರಯತ್ನದಿಂದ ನಾನಾ ವಸ್ತುಗಳನ್ನು ಶೇಖರಿಸಿ ಕ್ರಮ ಪಡಿಸಿದರು. ಸ್ಕೂಲ್ ಕಟ್ಟಡದ ಮುಂಭಾಗದಲ್ಲಿ ಚಪ್ಪರ ಮುಂತಾದ ಅಲಂಕಾರಗಳನ್ನು ಮಾಡಿಸಿದ್ದ ಲ್ಲದೆ, ಕಟ್ಟಡದ ಹಿಂಭಾಗದಲ್ಲಿ ಒಂದು ದೊಡ್ಡ ದರ್ಬಾರು ಚಪ್ಪರವನ್ನು ಹಾಕಿಸಿದರು. ಅದರ ಒಂದು ಭಾಗದಲ್ಲಿ ನೆಯಿಗೆ ಮುಂತಾದ ಕೈಗಾರಿಕೆ ಕೆಲಸ ಗಳನ್ನು ಮಾಡಿ ತೋರಿಸುವುದಕ್ಕೆ ಏರ್ಪಡಿಸಿತ್ತು. ನಮ್ಮ ಡೆಪ್ಯುಟಿ ಕಮಿಷನರ್ ರು ಮ॥ ಚಾಂಡಿ ಸಾಹೇಬರು ಅಧ್ಯಕ್ಷತೆಯನ್ನು ವಹಿಸಿ ಹಲವು ಉಪನ್ಯಾಸಗಳನ್ನು ಉಪಾಧ್ಯಾಯ ಸಂಘದವರಿಂದ ಕೇಳಿದ್ದಲ್ಲದೆ ಮೇಲ್ತರವಾದ ವಸ್ತುಗಳಿಗೆ ಬೆಳ್ಳಿ ಮುಂತಾದ ಮೆಡಲುಗಳನ್ನು ಕೊಟ್ಟರು. ಮತ್ತು ಇನ್ಸ್ ಪೆಕ್ಟರ್ ಜನರಲ್ ರವ ರಾದ ಮ॥ ರಾಮರಾಯರು ಒಪ್ಪತ್ತು ಬಂದು ಹುಡುಗರಿಗೂ ಹೆಣ್ಣು ಮಕ್ಕ ಳಿಗೂ ಬಹುಮಾನಗಳನ್ನು ಹಂಚಿ ಉಪಯುಕ್ತವಾದ ಕೆಲವು ಬುದ್ಧಿ ಮಾತುಗ ಳನ್ನು ತಿಳಿಸಿದರು. ಮತ್ತೆ ಜಾತ್ರೆ ಕಾಲದಲ್ಲಿ ಬಂದಿದ್ದ ಉತ್ತಮವಾದ ರಾಸುಗ ಳಿಗೆ ಸಹಾ ಬಹುಮಾನಗಳನ್ನು ಅದೇ ಸಮಯದಲ್ಲಿ ಹಂಚಿದರು. ಈ ರೀತಿ ಜನ ಗಳ ವಿದ್ಯಾಭ್ಯಾಸದಲ್ಲಿ ಆಸಕ್ತರಾದ ನಮ್ಮ ಹೆಡ್ ಮಾಸ್ಟರ್ ಮ॥ ಕೊಂಗಾಡಿ ಯಪ್ಪನವರು ವಿದ್ಯಾವಿಹೀನರಾದ ಇಲ್ಲಿನ ಹೆಂಗಸರ ವಿಷಯವಾಗಿ ಜೆಂತಿ ಹೋಮ್ ಎಜ್ಯುಕೇಷನ್ ಕ್ರಮವನ್ನು ಸರ್ಕಾರದವರ ಅನುಮತಿ ಪಡೆದು ಏರ್ಪಾಡು ಮಾಡಬೇಕೆಂಬ ಇರಾದೆಯುಳ್ಳವರಾಗಿರುವಂತೆ ಕೇಳುತ್ತೇವೆ. ಅವರು ಇದನ್ನು ಜಾರಿಗೆ ತರುವುದಾದರೆ ಇಲ್ಲಿನ ಹೆಂಗಸರಿಗೆ ತುಂಬಾ ಪ್ರಯೋ ಜನ ವಾಗುವದೆಂದು ನಿರೀಕ್ಷಿಸಬಹುದಾಗಿದೆ.

ಮುಳವಳ್ಳಿ ತಾ॥ ರಾವಣಿ.—ಈ ಗ್ರಾಮವು 200 ಮನೆಗಳಿಗೆ ಮೇಲ್ಪಟ್ಟಿ ದ್ದಾಗಿರುತ್ತೆ. ರೈತರು ತಮ್ಮ ತಮ್ಮ ಒಕ್ಕಲ ಕೆಲಸಗಳನ್ನು ತೀರಿಸಿಕೊಂಡು ಹರ್ಷಚಿತ್ತರಾಗಿರುತ್ತಾರೆ. ಈ ವರ್ಷದ ಫಸಲಿನಲ್ಲಿ ಹುಲುಸು ಬಹಳ ಸುಟ್ಟಿಗೆ ಕಮ್ಮಿ ಎಂದು ರೈತರು ಮಾತನಾಡಿಕೊಳ್ಳುವರು. ಕಬ್ಬಿನ ಫಸಲನ್ನು ಇಲ್ಲಿಯ ವರು ಅಷ್ಟೇನೂ ಹೇರಳವಾಗಿ ಮಾಡುವದಿಲ್ಲ. ಈ ವಿಚಾರದಲ್ಲಿ ಬೋಧನೆ ಮಾಡಿ ಹೆಚ್ಚು ಬೆಳೆ ಬೆಳೆಯುತ್ತಾರೆನ್ನುವದಕ್ಕೆ ಯಾವ ಅಭ್ಯಂತರವೂ ಇಲ್ಲ. ಈ ಗ್ರಾಮದಲ್ಲಿ ಗಂಗಡಿಕಾರ ಒಕ್ಕಲಿಗರು ಮತ್ತು ಶಿವಭಕ್ತರೂ ಸೇರಿ 100 ಮನೆಕ್ಕೆ ಮೇಲ್ಪಟ್ಟವರಾಗಿಯೇ ಇರುತ್ತೆ. ಇವರುಗಳಲ್ಲಿ ಎಲ್ಲರೂ ಓದುವುದು ಬರೆ ಯುವುದರಲ್ಲಿ ಹಿಂದುಳಿದವರೆಂದೇ ಹೇಳಬೇಕು. ಈ ರೀತಿ ಇರತಕ್ಕವರಲ್ಲಿ ಪಟೇಲ್ ಕೆಂಪೆ ಗೌಡರು, ಚಿಕ್ಕವೀರಪ್ಪನವರ ಮಕ್ಕಳು ಮಹಿದೇವರು, ಚಿಕ್ಕಮಾದೇಗೌಡರ ಮಕ್ಕಳು ಮಾದೇಗೌಡರು, ಈ ಮೂರು ಜನಗಳು ಮಾತ್ರ ಈ ಗ್ರಾಮಕ್ಕೆ ಮುಖ್ಯ ಸ್ಥರಾಗಿಯೂ, ವಿದ್ಯಾವಂತರಾಗಿಯೂ, ಜೀರಾಯಿತ್ತು ಸಾಗುವಳಿಯನ್ನು ಚೆನ್ನಾಗಿಟ್ಟು ಅದ ರಲ್ಲಿ ಅನುಭವದಾರರಾಗಿಯೂ ಇರುವರು. ಇತರರು ನಿರಕ್ಷರಕುಕ್ಷಿಗಳಾಗಿರುವದ ರಿಂದ ವಿದ್ಯಾ ವಿಚಾರದಲ್ಲಿ ಅಭಿವೃದ್ಧಿಯ ಕ್ರಮ ಹೇಳಿದರೆ “ಏಕೆ, ಕಲಿತವರು ಊಟಮಾಡುತ್ತಾರೆ, ನಾವು ಹಸಿದುಕೊಂಡೇ ಇರುತ್ತೇವೆಯೋ” ಎಂದೂ, ಕೃಷಿ ವಿಚಾರದಲ್ಲಿ ಅಂದರೆ ಹೆಬ್ಬಾಳ ಗ್ರಾಮದಲ್ಲಿ ಸರ್ಕಾರದವರು ಮಾಡಿರುವ ವ್ಯವ ಸಾಯ ಕ್ರಮವನ್ನು ಹೇಳಿದರೆ “ಅಷ್ಟು ದುಡ್ಡನ್ನು ನಾವೆಲ್ಲಿಂದ ತರಬೇಕು” ಎಂದೂ ಹೇಳುವರು. ಈ ಭಾಗದ ನಿವಾಸಿಯಾಗಲು ಮೇಲ್ಕಂಡ ಮುಖ್ಯಸ್ಥರು ಒಂದು ರೀಡಿಂಗ್ ರೂಮನ್ನು ಸ್ಥಾಪಿಸಿ, ಆ ಮೂಲಕ ರೈತರೆಲ್ಲರಿಗೂ ವಿದ್ಯಾ ವಿಚಾರದಲ್ಲೂ ಕೃಷಿ ವಿಚಾರದಲ್ಲೂ ಸರಿಯಾಗಿ ಬೋಧಿಸಿದರೆ ರೈತರು ತುಂಬಾ ಉನ್ನತಸ್ಥಿತಿಗೆ ಬರುವದರಲ್ಲಿ ಅಡ್ಡಿಯಿಲ್ಲ. ಮತ್ತು ಇವುಗಳನ್ನೆಲ್ಲಾ ನೆರವೇರಿ ಸುವ ಪಕ್ಷಕ್ಕೆ ಅರ್ಥವು ಸ್ವಲ್ಪಮಟ್ಟಿಗಾದರೂ ಬೇಕು. ಎನ್ನುವ ಭಾಗದಲ್ಲಿ ಸರ್ಕಾರದವರ ಸಹಾಯದಿಂದ ಪರಸ್ಪರ ಸಹಾಯಕ ಸಂಘ ಒಂದನ್ನು ಸ್ಥಾಪಿಸಿ ಆ ಮೂಲಕ ದುಡ್ಡಿನ ಕೊರತೆಯನ್ನು ತಪ್ಪಿಸಿಕೊಳ್ಳಬಹುದು. ಸರ್ಕಾರದವರು

ಈ ಗ್ರಾಮದವರಿಂದ ಒಂದು ಫುಟ್ ರಸ್ತೆಯನ್ನು ಮಾಡಿ ಆ ರಸ್ತೆಯನ್ನು ಕಣಿಗರ ಕೈ ಬೋಟಿಗೆ ಬರುವಂತೆ ಏರ್ಪಾಟು ಮಾಡಿ ಪ್ರತಿ ಸೋಮವಾರವೂ ಇಡೀ ಕೆಲಸವಾದರೂ ಮನೆ ಒಂದಕ್ಕೆ ಒಂದು ಆಳಿನಂತೆ ಹೋಗಿ ಮನಃಪೂರ್ವಕ ಕೆಲಸಮಾಡಿ ಬರುತ್ತಿರುವರು. ಮತ್ತು ಈ ಗ್ರಾಮದ ಪಶ್ಚಿಮ ಭಾಗದಲ್ಲಿ ಒಂದು ಕಟ್ಟೆಯು ತುಂಬಾ ಶಿಥಿಲವಾಗಿತ್ತು. ಅದನ್ನು ಪುನಃ ಜೀರ್ಣೋದ್ಧಾರ ಮಾಡಲು ಪ್ರಯತ್ನಿಸಿ ಕೆಲಸಮಾಡುತ್ತಿರುವರು. ಗ್ರಾಮಾಭಿವೃದ್ಧಿ ಕಾರ್ಯವು ಸಮರ್ಪಕವಾಗಿ ನಡೆಯುತ್ತದೆ. ಈ ರೀತಿ ಕಾರ್ಯ ನಡೆಯಲು ಪಟೇಲರು ತುಂಬಾ ಶ್ರದ್ಧೆ ವಹಿಸಿರುವದೇ ಮುಖ್ಯ ಕಾರಣ. ಮತ್ತು ಈ ಊರಿನ ದಕ್ಷಿಣಭಾಗದಲ್ಲಿ ಅಂದರೆ ಈಗ ಹೊಸದಾಗಿ ಕಟ್ಟಲಾಗುತ್ತಿರುವ ಪಂಚಮರ ಸ್ಕೂಲ್ ಕಟ್ಟಡದ ಪಕ್ಕದಲ್ಲಿ ತುಂಬಾ ಗಲೀಜು ಮಾಡುತ್ತಾ ಇದ್ದರೆ. ಆ ಕಡೆ ಪಟೇಲರ ದೃಷ್ಟಿ ಬಿದ್ದರೆ ಕಾಪಾಡಲಿ ಸಂದಿದ್ದುಕ್ತ.—ಸದರಿ ಪಟೇಲರನ್ನು ಮಳವಳ್ಳಿ ತಾಲ್ಲೂಕ್ ಕಚೇರಿ ಹೋಬಳಿಗೆ ಸೇರಿದ ಗ್ರಾಮದಾಂತರದಲ್ಲಿ ನ್ಯಾಯರು ಇಂಪೀರಿಯಲ್ ಸರ್ವಿಸ್ ಲ್ಯಾಕ್ಟರುಗಳ ಯುದ್ಧದ ಫಂಡಿಗಾಗಿ ಹಣ ಒದಗಿಸಬೇಕೆಂದು ಸರ್ಕಾರದವರು ನೇಮಿಸಿದ್ದಾರೆ. ಅದರಂತೆ ಇವರು ಜನಗಳಿಗೆ ತುಂಬಾ ಪ್ರೋತ್ಸಾಹಕೊಟ್ಟು ಖಿಸ್ತಗೆ 50 ರೂಪಾಯಿಗೆ ಕಮ್ಮಿ ಇಲ್ಲದಂತೆ ವಸೂಲ್ಮಾಡಿ ಎಂಡೋವರ್ ಇರಾದಲು ಮಾಡಿರುವದು ತುಂಬಾ ಸಂತೋಷಪ್ರದವಾಗಿರುತ್ತೆ. ಮೇಲ್ಕಂಡ 3 ಜನ ಮುಖ್ಯಸ್ಥರುಗಳೂ ರೀಡಿಂಗ್ ರೂಮ್ ವಿಚಾರದಲ್ಲಿ ಮೊದಲು ಗಮನಕೊಟ್ಟು ಸ್ಥಾಪಿಸುವದಾದರೆ ನಂತರ ಪರಸ್ಪರ ಸಹಾಯಕ ಸಂಘವನ್ನು ಸ್ಥಾಪಿಸಬಹುದು.

ಗೃಹಕೃತ್ಯದ ನೋಟೀಸು.

ಶ್ರೀರಂಗಪಟ್ಟಣದ ತಾಲ್ಲೂಕು ಕ್ಯಾತನಹಳ್ಳಿ ಗ್ರಾಮದಲ್ಲಿರುವ ಗೋವಿಂದಯ್ಯನ ತಿಮ್ಮಪ್ಪನವರ ಮಗ ಶ್ರೀನಿವಾಸಯ್ಯನು ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—ನನ್ನ ತಂದೆ ತಿಮ್ಮಪ್ಪನವರಿಗೆ 75 ವಯಸ್ಸಾಗಿ, ಒಂದು ವರುಷದ ಹಿಂದೆ ನಮ್ಮ ತಾಯಿಯು ಕಾಲವಾದಾರಭ್ಯ ಬುದ್ಧಿ ಸ್ಥಿಮಿತವಿಲ್ಲದೇನೂ, ಜನಗಳ ದುರ್ಬೋಧನೆಯಿಂದಲೂ ನನ್ನ ಕುಟುಂಬದ ಸ್ಥಿರ ಚರ ಸ್ವತ್ತುಗಳನ್ನು ಹೆಣ್ಣು ಮಕ್ಕಳಿಗೂ ಇತರರಿಗೂ ಪರಭಾರೆ ಮಾಡುವುದರ ಮೂಲಕ ನನಗೆ ಕಷ್ಟನಷ್ಟಗಳನ್ನುಂಟುಮಾಡಬೇಕೆಂಬ ದುರಭಿಸಂಧಿಯಿಂದ 900 ರೂಪಾಯಿನ ನಗ ನಾಣ್ಯವೇ ಚರ ಸ್ವತ್ತುಗಳನ್ನು ನಾಶಪಡಿಸಿದ ಹಾಗೆ ಸೇರಿಮಕೊಂಡು ಎಲ್ಲಿಗೋ ಹೋಗಿರುತ್ತಾರೆ. ಕೆಳಗೆ ಕಂಡ ಸ್ಥಿರ ಸ್ವತ್ತುಗಳ ಪೈಕಿ ನನ್ನ ಮತ್ತು ನನ್ನ ತಂದೆಯವರ ಸಮ್ಮತಿ ರುಜುವಿನಿಂದ 3,000 ರೂಪಾಯಿನ ಸಾಲವಿದೆ. ಇದು ವಿನಹಾ ನಮ್ಮ ಕುಟುಂಬಕ್ಕೆ ಯಾವ ಸಾಲವೂ ಇಲ್ಲ. ಕೆಳಗೆ ಷೆಡ್ಯೂಲ್‌ನಲ್ಲಿ ಕಂಡ ನಮ್ಮ ಕುಟುಂಬದ ಸ್ವತ್ತುಗಳನ್ನು ನನ್ನ ಸಮ್ಮತಿ ರುಜುವಿಲ್ಲದೆ ಯಾರೇ ಆಗಲಿ ನಮ್ಮ ತಂದೆಯವರಿಂದ ಯಾವ ವಿಧವಾಗಿಯಾದರೂ ಪಡೆದುಕೊಂಡರೆ ಅದರಿಂದೂ ಊರ್ಜಿತವಾಗುವುದಿಲ್ಲವೆಂದೂ, ನನ್ನ ಎಲ್ಲಾ ನಷ್ಟಕ್ಕೂ ಗುರಿಯಾಗುತ್ತಾರೆಂದೂ ಈ ಮೂಲಕ ಎಚ್ಚರಿಸುತ್ತೇನೆ. ಇದಲ್ಲದೆ ನಮ್ಮ ತಂದೆಯವರು ಪತ್ರಗಳ ಮೇಲೂ, ಕೈಗಡವಾಗಿಯೂ ಕೂಟ್ಪರರಕ್ಕೆ ಹಣಗಳನ್ನು ಅವರಿಗೆ ಸಾಲದ ಮಾಡದೆ ನನಗೇ ಕೊಟ್ಟು ನನ್ನಿಂದ ರಸೀತಿ ಪಡೆಯಬೇಕೆಂದೂ, ತಪ್ಪಿದರೆ ನನ್ನ ನಷ್ಟಕ್ಕೆ ಗುರಿಯಾಗುತ್ತಾರೆಂದೂ ಎಚ್ಚರಿಸುತ್ತೇನೆ. ಷೆಡ್ಯೂಲ್.—ಶ್ರೀರಂಗಪಟ್ಟಣದ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿಗೆ ಸೇರಿದ ತರಿ ಬಾಗಾಯತು ಖುಷ್ಕಿ ಸರ್ವೆ ನಂಬರುಗಳು—(1) 32, (2) 138-139, (3) 89-90-91, (4) 94, (5) 19 ಬಾಗಾಯ್ತು, (6) 15 ಅಂಕಣದ ಹೆಂಚಿನ ಮನೆ, (7) 20 ಅಂಕಣದ ಹೆಂಚಿನ ಮಹಡಿ ಮನೆ.

[78-1] ಚಿಕ್ಕಿ ಅಂಗಡಿ ತಿಮ್ಮಪ್ಪನವರ ಮಗ ಶ್ರೀನಿವಾಸಯ್ಯ.

ತರಿಸಿ ನೋಡಿರಿ.

1 ಸುಧಾಕರ ಕಸ್ತೂರಿ ಮಾತ್ರೆಗಳು—ಜ್ವರ, ಅಗ್ನಿಮಾಂದ್ಯ, ಕೆಮ್ಮು, ನೆಗಡಿ, ಅತಿಸಾರ, ದೇಶ ಕಾಲ ವ್ಯತ್ಯಾಸಗಳಿಂದುಂಟಾಗುವ ವಿಕಾರಗಳು, ಮಕ್ಕಳ ಎಳವು, ಮಲಬದ್ಧ, ಇವುಗಳನ್ನು ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ 4 ಆಣೆ ಮಾತ್ರ. 6 ಡಬ್ಬಿಗಳಿಗೆ ರೂ. 1-4-0. ಟಪಾಲು ಹಾಸಲು ಪ್ರತ್ಯೇಕ.

2 ಕಮಲಕೇಶ ಘೃತ—ತಲೆಶೂಲೆ ಮೊದಲಾದ ಎಲ್ಲಾ ತರದ ನೋವುಗಳನ್ನೂ ಗುಣಪಡಿಸುವುದು. ಡಬ್ಬಿ 1 ಕ್ಕೆ 8 ಆಣೆ ಮಾತ್ರ.

3 ವಜ್ರದಂತಚೂರ್ಣ—ಇದನ್ನು ಪ್ರತಿ ದಿನವೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವುದರಿಂದ ಎಲ್ಲಾ ವಿಧವಾದ ದಂತ ರೋಗಗಳೂ ವಿಶೇಷವಾಗಿ ಹೋಗಿ ಹಲ್ಲುಗಳು ಮುತ್ತುಗಳಂತೆ ಥಳಥಳಿಸುವವು. ಟಿನ್ 1 ಕ್ಕೆ 2 ಆಣೆ ಮಾತ್ರ.

[71-1] ನಮ್ಮ ವಿಳಾಸ:—ಬಿ. ಎಸ್. ಕೌಶಿಕ, 240, ದಿವಾನರ ರೋಡು, ಮೈಸೂರು.

ಬೆಂಗಳೂರು 2 ನೇ ಮುನ್ಸಿಫ್ ಕೋರ್ಟಿನಲ್ಲಿ.

R. S. No. 38 of 1915-1916.

ವಾದಿ:—ಕಾಕ್ ಕಾಕ್ ಹಳ್ಳಿ ತಾಲ್ಲೂಕು ಕೇಬಾ ಕಾಕ್ ಕಾಕ್ ಹಳ್ಳಿಯಲ್ಲಿರುವ ಮುನಿಲಕ್ಕ್ನವ ಸ್ವಯದ್ ಅತಾವುಲ್ಲ ಸಬ್ಬುಪಟ ಮಗ ಸ್ಟೆದ್ ಅಬ್ದುಲ್‌ಗನ್ನಿ ಸಾಬಿಜುವಾ.

ಪ್ರತಿವಾದಿಗಳು:—1 ಸ್ಟೆದ್ ಹುಸೇನ್ ಸಾಬಿ, 2 ಮ. ಮದಾರ್ ಸಾಬಿ, 3 ಅಬ್ದುಲ್ ನಬಿ ಸಾಬಿ, 4 ಹಾಜಿ ಸ್ಟೆದ್ ಮುಸ್ತಫ್ ಸಾಬಿ, 5 ಮಿಲ್ಲಿ ದಾರ್, 6 ಅಬ್ದುಲ್ ಬಾರಿ ಸಾಬಿ, 7 ಸ್ಟೆದ್ ಅಕರುದ್ ಸಾಬಿ, 8 ಮಹಮ್ಮದ್ ಸಾಬಿ.

ನೋಟೀಸ್.

ಕಾಕ್ ಕಾಕ್ ಹಳ್ಳಿಯಲ್ಲಿ ಮುಸಲ್ಮಾನರು ಅಲ್ಲಿನ ಮಸೀತಿಯಲ್ಲಿ ಕಟ್ಟಿ ಕೊಂಡಿರುವ ಮಡಿಸಬೇಕಾದ ಕೆಲಸಕಾರ್ಯಗಳಿಗಾಗಿ—ಅಂಜುಮಾನ ವೆಹಾಸೀಜು ಮಸ್‌ಜಿದ ಇಸ್ಲಾಂ ಎಂಬ ಹೆಸರುಳ್ಳ ಒಂದು ಸಂಘವನ್ನು ಸ್ಥಾಪಿಸಿ ಮಾಡಿ ಅದಕ್ಕೆ ನಾವಿಯನ್ನು ಸೆಕ್ರೆಟರಿಯಾಗಿ ನೇಮಕ ಮಾಡಿದ್ದರು. ಈಗ ವೈಮನಸ್ಯದಿಂದ ವಾದಿಯನ್ನು ಸೆಕ್ರೆಟರಿ ಕೆಲಸದಿಂದ ನಿವೃತ್ತಿ ಮಾಡಿರುವುದರಿಂದ ನಾಡಿಕೊಂಡಿರುವ ಏರ್ಪಾಟು, ಮತ್ತು ಗೀಗಾಂಜನ್ನು ಹನ್ನೊಳಕ ಪ್ರತಿವಾದಿಗಳಲ್ಲಿ ಪರಿಕಾರಿ 5 ನೇ ಪ್ರತಿವಾದಿ ವಾರಂಟು ಕೊಡುವುದಾಗಿ ವಾದಿಗೆ ಭರವಸೆಪತ್ರ ಕೊಟ್ಟು 5 ನೇ ಪ್ರತಿವಾದಿ ವಶಕ್ಕೆ ಸೇವಿಂಗ್ಸ್ ಬ್ಯಾಂಕಿನ ಪಾಸ್ ಬುಕ್ಕು ಕಾಗದ ಪತ್ರಗಳು ಸ್ಟಾಕ್ ಮುಂತಾದವು ತೆಗೆದುಕೊಂಡಿರುವುದು ನ್ಯಾಯ ವಲ್ಲವೆಂದು ಡಿಕ್ಲೇರ್ ಮಾಡಿ ವಾದಿಯಿಂದ ಬಲಾತ್ಕಾರದಿಂದ ತೆಗೆದುಕೊಂಡಿರುವ ಪಾಸ್ ಬುಕ್ಕು, ಕಾಗದ ಪತ್ರಗಳು, ಸ್ಟಾಕ್ ಸಹಾ ವಾದಿ ವಶಕ್ಕೇನೇ ಕೊಟ್ಟು ಬಿಡಬೇಕೆಂದೂ, ಬ್ಯಾಂಕಿನಿಂದ ಈ ಪ್ರತಿವಾದಿಗಳು ಮೊಬಲಗು ಏನಾದರೂ ತೆಗೆದುಕೊಂಡಿದ್ದ ಪಕ್ಷದಲ್ಲಿ ಅದನ್ನು ಪುನಹ ಬ್ಯಾಂಕಿಗೆ ಭರ್ತಿ ಮಾಡಬೇಕೆಂದೂ ಡಿಕ್ರಿ ಕೊಡಿಸಬೇಕೆಂದೂ ವಾದಿಯು ಮೇಲ್ಕಂಡ ನಂಬರಿನಲ್ಲಿ ದಾವಾ ದಾಖಲ್ ಮಾಡಿರುತ್ತಾನಾಗಿ ಸದರಿ ಸಂಘಕ್ಕೆ ಸಂಬಂಧಪಟ್ಟು ಯಾರಾದರೂ ಸದರಿ ದಾವಾದಲ್ಲಿ ಚಕ್ಕಿಗಾರರಾಗಿ ಸೇರಬೇಕೆಂದು ಇಷ್ಟ ಪಡುವವರು 1916 ನೇ ಇಸವಿ ಮಾರ್ಚಿ 29 ನೇ ತಾರೀಖು ದಿವಸ 11 ಘಂಟೆಗೆ ಈ ಕೋರ್ಟು ದಾಖಲಾಗಬಹುದು ಖುದ್ದಾಗಿ ಆಗಲಿ, ಯಾ ವಕೀಲರ ಮೂಲಕವೇ ಆಗಲಿ ಹಾಜರಾಗತಕ್ಕದ್ದು.

[55-1] M. D. TIRUMALACHAR, B.A., B.L., Second Munsiff.

ಕೆಂಪು ಕಲ್ಲಿನ ಬುಲಾಕು.

ಈ ಬುಲಾಕನ್ನು ಸೀಮೆಯಲ್ಲಿ ತಯಾರಿಸಿ ಕಳುಹಿಸುತ್ತಾರೆ. ಇದು ಕಲ್ಲುಗಳು ಕೊಟ್ಟಕೂದ್ಯಸ್ತ್ರಕಾರಕ್ಕೆ ಥಳಥಳಿಸುವದು. ನವರತ್ನ ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಲ್ಪಟ್ಟದ್ದು. ಇದನ್ನು ನೋಡುವವರು 200 ರೂ. ಕಡಿಮೆಯಿಲ್ಲದ ಬೆಲೆಬಾಳುವದೆಂದು ಹೇಳುವರು. ಈಗ ನಮ್ಮ ಕಂಪನಿಯ ಹೆಸರು ಪ್ರಖ್ಯಾತಿ ಹೊಂದುವದಕ್ಕಾಗಿ 3 ರೂಪಾಯಿಗೆ ವಿಕ್ರಯಮಾಡುವೆವು. ಬೇಗನೆ ತರಿಸಿಕೊಳ್ಳಿ.

[63-2] ನಮ್ಮ ವಿಳಾಸ—

ವಿ. ಎ. ಎಸ್. ಪಾಣಿ, 3, ಇರುಳಪ್ಪನ ಬೀದಿ, ಮದರಾಸು.

M. S. RAO & Co., Book Sellers, Bangalore City.

S. T. A. SCENTED SACHETS [As. 2 Each.]

These Perfumery Packets are the latest novelty in the Perfumery World. Their fragrance is not transitory like other Perfumery cards and flower dusts. Please forward us 2½ As. in Postage Stamps; try 1 packet and apply for terms.

ನವೀನ ಮಾದರಿಯ ಪರಿಮಳದ ಪಾಕೆಟ್—ಬೆಲೆ 1 ಕ್ಕೆ 2 ಆ. 2½ ಆಣೆ ಸ್ಟಾಂಪು ಕಳಿಸಿ 1 ಪ್ಯಾಕೆಟ್ಟನ್ನು ಪರೀಕ್ಷಿಸಿ. [281-13]

Lower Secondary Text for 1917:—

The King of the Golden River—by John Ruskin—As. 4 Each.

ವಿಳಾಸ.—ಎಂ. ಎಸ್. ರಾವ ಕಂಪನಿ, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಪರೀಕ್ಷೆಗಾಗಿ ಮುಫತ್ತು.

ನಮ್ಮ "ಜೀವಾಕಾ" ಎಂಬುವದು ಕಲಿಸೋವನ್ನು ಕರ್ತಿಕ್ಕುವ ಶಕ್ತಿ ಯುಳ್ಳದ್ದೆಂದು ಬಹು ಕಾಲದಿಂದಲೂ ಬಜಾರದಲ್ಲಿ ಖ್ಯಾತಿಹೊಂದಿವೆ. ಬಹಳ ಜನರ ಆಶ್ರಯವನ್ನು ಸಂಪಾದಿಸಿಕೊಂಡಿವೆ. ಅದು ಕಾರಣದಿಂದಲೇ ಎಲ್ಲಾ ಕಡೆ ಸಕಲೋಪಯೋಗಗಳನ್ನು ಉತ್ತಮ ಸ್ಥಿತಿಯಲ್ಲೇ ಗುಣವಾಡತಕ್ಕದ್ದೆಂಬ ಕೀರ್ತಿಯು ಸರ್ಟಿಫಿಕೇಟುಗಳನ್ನು ಅನೇಕವಾಗಿ ಸಂಪಾದಿಸಿಕೊಂಡಿವೆ.—ಈ ಔಷಧವನ್ನು ಹಿಂದುಸ್ಥಾನ, ಸಿಲೋನ್ ಮತ್ತು ಇತರ ದೇಶಗಳಲ್ಲಿ ಪ್ರಸಾರಕ್ಕೆ ತರಬೇಕೆಂಬ ಉದ್ದೇಶದಿಂದ ಈಗ ನಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿಯೂ ಸಂಪೂರ್ಣವಾಗಿಯೂ ನಮಗೆ ತಿಳಿಸಿದರೆ ಅವರಿಗೆ ಸ್ಯಾಂಪಲ್ ಬಟ್ಟಿಯನ್ನು ಎರಡು ಸ್ವಲ್ಪ ಫುಟ್ಟಿಗಳನ್ನು ಕಳುಹಿಸುವೆವು. ಅವನ್ನು ಉಪಯೋಗಿಸಿದ ಅವರ ಗುಣ ಸಿದ್ಧಿಯೊಂದಿದ್ದೇ ತಕ್ಕದ್ದು.— ಈ ಪರೀಕ್ಷೆಗಾಗಿ ಔಷಧಿಯನ್ನು ದೇಹದವರಿಗೆ ಉಚಿತವಾಗಿ ಗುಳಿಗೆಯನ್ನು ಜಪ್ಪಾಗಿ ಮಾಡಿರುವೆವು. ಅವನ್ನು ಫುಟ್ಟಿಗಳಾಗಿ ಬಟ್ಟಿಗಳ ಮೂಲಕ ಖಯಾಸ್ವರ್ಣಿಕಗುವವು. ಅಂಥಾ 12 ಫುಟ್ಟಿಗಳಿಗಾಗಲಿ, 12 ಬಟ್ಟಿಗಳಿಗಾಗಲಿ ಒಂದು ಸೀಸೆಗಾಗಲಿ ಕ್ರಯ ರೂಪಾಯಿ 1-0-0.

Address—Francis Medical Hall, Manufacturing Chemists, Myanaung, Burma.

ನಮ್ಮ ವಿಳಾಸ—ಫ್ರಾನ್ಸಿಸ್ ಮೆಡಿಕಲ್ ಹಾಲ್,

[19-8] ಮಯೊನಾಂಗ್, ಬರ್ಮಾ.

FOUR NIGHTS ONLY! ನಾಲ್ಕು ರಾತ್ರಿ ಮಾತ್ರ!

ಪ್ರಾರಂಭ ದಿನ—ಸೋಮವಾರ ತಾ. 20 ನೇ ಮಾರ್ಚಿ 1916.

PROFESSOR RAMAMURTI

The Indian Hercules

ಇಂಥಾ ಅಪರೂಪವಾದ ಸಮಯವನ್ನು ಕಳೆಯಬೇಡಿ.

ಕಲಿಯುಗದ ಭೀಮನೆಂಬ

ಪ್ರೊಫೆಸರ್ ರಾಮಮೂರ್ತಿಯವರು

ಮೈಸೂರಿಗೆ ಬರುವದು ಇದೇ ಮೊದಲು, ಇದೇ ಕೊನೆ.

ಅವರು ಇಂಗ್ಲೆಂಡ್, ಯೂರೋಪ್. ಪೂರ್ವದಿಗ್ರಾಜ್ಯಗಳಿಗೆಲ್ಲಾ ಹೋಗಿ ಹಿಂದುಸ್ಥಾನಕ್ಕೆ ಶಾಶ್ವತವಾದ ಕೀರ್ತಿ ತಂದಿದಾರೆ. ಅವರ ಟ್ರೂಪಿನಲ್ಲಿ ರಷ್ಯರ್, ಜಪನೀಸ್, ಫಿಲಿಪ್ಪೈನ್, ದೇಶೀಯ ಪೈಲ್ವಾನರುಗಳೂ, ಸ್ಟಾರ್ ಆರ್ಟಿಸ್ಟುಗಳೂ ಇದ್ದು ಅನೇಕ ನವೀನವೂ ಮತ್ತು ವಿಸ್ಮಯವೂ ಆದ ಕಸರತ್ತುಗಳನ್ನು ಮಾಡುವವರಾಗಿದಾರೆ. [77-1]

ಪ್ರೊಫೆಸರ್ ರಾಮಮೂರ್ತಿಯವರ ಅತ್ಯದ್ಭುತವಾದ ಶರೀರದಬಲವು ವಿಸ್ಮಯಕರವಾದದ್ದು.

ಸ್ವಂತ ಭಾರೀ ಡೇರಾದಲ್ಲಿ, ಸವಾರ್ ಲೈನ್ ಎದುರು,

ರೈಲ್‌ವೇ ಸ್ಟೇಷನ್ ರೋಡ್.

ಪ್ರದರ್ಶನದ ವಿವರಣೆಯುಳ್ಳ ನೋಟೀಸುಗಳನ್ನು ಓದಿ ನೋಡಿ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-23]

ಕ್ರಯ 0-10-0; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,

ಎಗ್ಯು ಮಿಕ್ಸ್ಚರ್ ಡಿಪೋ, ಬೊಂಬಾಯಿ, 4.

KARNIK Bros., BOMBAY, 4.

ನಮ್ಮ ಏಜಂಟರು.—ವಿ ಅಬ್‌ಬರ್ಟ್, ಮಂಗಳೂರು.

ದರ್ಬಾರ್ ಸಾಬೂನು.

ಅಪಾಯವಿಲ್ಲದ ರೋಮಸಂಹಾರಿ.

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು. ಉರಿ, ಸೆಕೆ, ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದವರಿಗೆ ಗೊತ್ತಾಗುವದು. ಮರೆಯಬೇಡಿ.



ಏಜಂಟರು ಬೇಕು. [63-2]

೩ ಸಾಬೂನುಗಳಿರುವ ಪೆಟ್ಟಿಗೆ ೧ ಕ್ಕೆ ... ರೂ. ೦-೧೪-೦

೨ ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ. ೦-೧೦-೦

ಅಂಚೆ ಹಾಸಲು ೪ ಆ. ಏಜಂಟರಿಗೆ ಅನುಕೂಲವಾಗಿ ಕೊಡುತ್ತದೆ.

V. A. S. PANI, ವಿಳಾಸ—ವಿ. ಎ. ಎಸ್. ಪಾಣಿ,

Ervlappan St., Madras. ನಂ. ೩, ಇರುಳಪ್ಪನ ಬೀದಿ, ಮದರಾಸು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಫೆಬ್ರವರಿ 29 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮಾ:—(1) ಷೇರು ಮೊಬಲಗು	.... ರೂ.	10,00,000
„ (2) ರಿಜರ್ವ ಫಂಡು	.... „	75,000
„ (3) ಡಿಪಾಜಿಟ್ಟುಗಳು	.... „	49,17,690
„ (4) ಇತರೆ	.... „	30,692
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	61,23,382

ಖರ್ಚು:—(1) ಕೈಯುಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	5,81,608
„ (2) ಖಾತೆ ಮತ್ತು ಇತರ ಸಾಲಗಳು	...... „	33,11,963
„ (3) ಡಿಸ್ಕೌಂಟುಮಾಡಿದವಾಯಿದೆಹುಂಡಿಗಳು	„	4,60,000
„ (4) ಇನ್‌ವೆಸ್ಟ್‌ಮೆಂಟುಗಳು	...... „	7,56,822
„ (5) ಏಜೆನ್ಸಿಗಳಲ್ಲಿರುವ ಮೊಬಲಗು	...... „	2,724
„ (6) ಬ್ಯಾಂಕಿನಲ್ಲಿರುವ ಸಾಮಾನುಗಳು	...... „	16,509
„ (7) ಇತರೆ	.... „	13,646
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ ರೂ.	61,23,382

ವಿ. ರಾಮಸ್ವಾಮಯ್ಯ, ಅ: ಮ್ಯಾನೇಜರ್.

ಮಲೆನಾಡಿನಲ್ಲಿ ರೈತರಿಗೆ ರಿಯಾಯತಿಗಳು.

ಮಲೆನಾಡಿನಲ್ಲಿ ಮಳೆಯು ಯಥೇಚ್ಛವಾಗಿ ಸುರಿದು ಶೀತ ಸ್ವಲ್ಪ ವಾದ ರೂ ಬಹಳ ಅನುಕೂಲವಾಗಿದೆ ಎಂದು ಹೇಳಬೇಕಾದ್ದಿಲ್ಲ. ಸ್ವಲ್ಪ ಪ್ರಯತ್ನ ಪಟ್ಟರೇ ಇಲ್ಲಿ ವಿಶೇಷವಾಗಿ ಭತ್ತವನ್ನು ಬೆಳೆದು ಕೃಷಿಕರು ಧನವಂತರಾಗಬಹುದು. ಇದು ಅಲ್ಲದೆ ಅಡಿಕೆ ಕಬ್ಬು ಮೊದಲಾದ ಇತರೇ ಫಲಗಳನ್ನು ಬೆಳೆಯಲು ಮಲೆನಾಡಿನ ಅನೇಕ ಕಡೆಗಳಲ್ಲಿ ಅನುಕೂಲವುಂಟು. ಹೀಗಿದ್ದರೂ ಕೂಡ ಸಾವಿರಾರು ಎಕರೆ ಅಚ್ಚುಕಟ್ಟಿನ ಜಮೀನುಗಳು ಬಂಜರು ಬಿದ್ದಿರುವದು ಬಹಳ ಶೋಚನೀಯವಾದ ವಿಷಯವಾಗಿದೆ. ಇದಕ್ಕೆ ಏನು ಕಾರಣವಿರಬಹುದೆಂದು ಆಲೋಚಿಸಿ ನೋಡಿದರೆ ನಮ್ಮ ಸೀಮೆಯ ಜನಗಳಲ್ಲಿ ವ್ಯವಸಾಯದಿಂದ ಕೃಷಿಕರಿಗೆ ಉಂಟಾಗಬಹುದಾದ ಪ್ರಯೋಜನಾಂಶಗಳು ಇನ್ನೂ ಚೆನ್ನಾಗಿ ತಿಳಿದು ಬಂದಿಲ್ಲದಿರುವದೇ ಒಂದು ಬಲವತ್ತರವಾದ ಕಾರಣವೆಂದು ಹೇಳಬೇಕು. ಪಾಶ್ಚಿಮಾತ್ಯರು ತಮ್ಮ ದೇಶವನ್ನು ಬಿಟ್ಟು ನಮ್ಮ ಮೈಸೂರು ಸೀಮೆಯ ಘೋರವಾದ ಮಲೆನಾಡು ಕಾಡುಗಳನ್ನು ಪ್ರವೇಶಮಾಡಿ ಅಲ್ಲಿಯೇ ತಮ್ಮ ವಸತಿಗಳನ್ನು ಮಾಡಿಕೊಂಡು ಕಾಫಿ ತೋಟಗಳನ್ನು ಕಲ್ಪಿಸಿಕೊಂಡು ಧನಿಕರಾಗಿದ್ದಾರೆ. ಇದಕ್ಕೆ ಚಿಕ್ಕಮಗಳೂರು, ಬೇಲೂರು, ಮೂಡಿಗೆರೆ, ಕೊಪ್ಪ, ಚಿಕ್ಕಮಗಳೂರು, ಶಿಕಾರಿಪುರ ವಗೈರೆ ಪ್ರಾಂತ್ಯಗಳಲ್ಲಿನ ಕಾಫಿತೋಟಗಳು ದೃಷ್ಟಾಂತಗಳಾಗಿರುವವು. ದೇಶೀಯರೂ ಪಾಶ್ಚಿಮಾತ್ಯರಂತೆ ಕಾಫಿತೋಟಗಳನ್ನು ಮಾಡಿಕೊಂಡಿರುವರು. ಹಲವು ಮಂದಿ ಇದ್ದರೂ ಮಲೆನಾಡಿನಲ್ಲಿರುವ ಅನುಕೂಲಗಳನ್ನರಿತು ಸಾಧ್ಯವಾದ ಬೆಳೆಗಳನ್ನೆಲ್ಲಾ ತೆಗೆಯುವ ವಾಡಿಕೆ ಇದೆಯೆಂದು ಹೇಳಲು ಅಸಾಧ್ಯ. ಎಲ್ಲಿ ನೋಡಿದರೂ ಸರ್ಕಾರಿ ಬಂಜರು ಜಮೀನುಗಳು ಸಾಹುಕಾರಿ ಬಂಜರು ಜಮೀನುಗಳಿಂದಲೂ ಕೂಡಿಕೊಂಡಿದ್ದು ಮಲೆನಾಡಿನ ಸಂಪತ್ತನ್ನೆಲ್ಲಾ ಹಾನಿಮಾಡುವ ಕಾಲ ಒದಗಿದೆ. ವಿದ್ಯಾವಂತರಾದವರು ಸರ್ಕಾರದ ಉದ್ಯೋಗವನ್ನು ಸೇರಬೇಕೆಂತಲಾಗಲೀ ಲಾಯರುಗಳೂ ವರ್ತಕರೂ ಆಗಬೇಕೆಂತಲಾಗಲೀ ಅಭಿಲಾಷೆಯುಳ್ಳವರಾಗಿದ್ದಾರೆಯೇ ಹೊರ್ತು ವ್ಯವಸಾಯದ ಗೌರವವನ್ನು ಅರಿತವರಾಗಿ ಕಾಣುವದಿಲ್ಲ. ಆದರೆ ಎಲ್ಲಾ ಕಸಬುಗಳಿಗಿಂತ ವ್ಯವಸಾಯದ ಕಸಬು ವಿಶೇಷ ಫಾಯಿದೆಕರವಾಗಿಯೂ, ಮರ್ಯಾದೆಯುಳ್ಳದ್ದಾಗಿಯೂ ಇದೆ ಎಂದು ಸಾರಿ ಹೇಳಬೇಕು. ಭೂಮಿಯನ್ನು ಸಿಕ್ಕಿಕೊಂಡು ಚೆನ್ನಾಗಿ ಕೃಷಿಮಾಡಿ ಕಾಲಕ್ಕೆ ಸರಿಯಾಗಿ ಗೊಬ್ಬರವನ್ನು ಹಾಕಿ ಒಳ್ಳೆ ಹೊಸ ಬೀಜವನ್ನು ಬಿತ್ತುವದರ ಮೂಲಕ ಕಷ್ಟಪಟ್ಟರೆ ಮನುಷ್ಯನು ಜೀವಿಸಿಕೊಳ್ಳಲಾರನೆಂದು ಹೇಳಬೇಕಾದ್ದಿಲ್ಲ. ವಿದ್ಯೆಯನ್ನು ಕಲಿತ ಮಾತ್ರಕ್ಕೇ ಕೃಷಿಯನ್ನು ತೊರೆದುಬಿಡಬೇಕಾದ್ದಿಲ್ಲ. ವಿದ್ಯೆಯಿಂದ ಕೃಷಿಯು ಶೋಭಿಸುತ್ತೆ. ವಿದ್ಯಾವಂತನಾದ ರೈತನು ದೇಶಕ್ಕೆ ಮಹೋಪಕಾರಿಯೆಂದು ಎಣಿಸಬೇಕು. ವಿದ್ಯಾವಂತನಿಂದ ಮಾಡಲ್ಪಡುವ ಕೃಷಿಯು ಸುತ್ತಮುತ್ತಿನ ಅನೇಕ ಜನರಿಗೆ ದೃಷ್ಟಾಂತವಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ವಿದ್ಯಾವಂತರು ವಿಶೇಷವಾಗಿ ಕೃಷಿಯನ್ನು ಅವಲಂಬಿಸಬೇಕು. ಹೀಗೆ ಯಾವಾಗ ವಿದ್ಯಾಶಾಲಿಗಳಿಗೆ ಜಮೀನಿನ ವ್ಯವಸಾಯದಲ್ಲಿ ಅಭಿರುಚಿಯು ಹುಟ್ಟಿ ಹೆಚ್ಚುತ್ತದೆಯೋ, ಹಾಗೆಯೇ ವಿಶೇಷವಾಗಿಯೂ ಭೂಮಿಯು ವ್ಯವಸಾಯಕ್ಕೆ ಬಂದು ದೇಶಕ್ಕೆ ಏಳಿಗೆಯಾಗುವುದಲ್ಲದೆ ಈಗ ಬಂಜರಾಗಿ ಬಿದ್ದಿರುವ ಜಮೀನುಗಳೂ ಕೂಡ ಸಾಗಿಗೆ ಬರುವವು. ಕಷ್ಟಪಟ್ಟು ಓದಿ ಚತುರತೆಯನ್ನು ಸಂಪಾದಿಸಿ ಬರಿಕ ಸಣ್ಣ ಹುದ್ದೆಗಳಲ್ಲಿ ಸೇರಿಕೊಂಡು ಕೃತಾರ್ಥರಾಗುವುದಕ್ಕಿಂತ ಕೃಷಿಯೆಂಬುವ ಮಹತ್ಕಸಬನ್ನು ಅವಲಂಬಿಸಿ ಜನರು ಯಶೋವಂತರಾಗಬಹುದಲ್ಲದೆ ಇಂಥಾ ವ್ಯವಸಾಯಗಾರರು ಮಲೆನಾಡಿನ ಅನೇಕ ಕಡೆಗಳಲ್ಲಿ ವೃಥಾ ಬಂಜರಾಗಿ ಬಿದ್ದಿರುವ ಜಮೀನುಗಳನ್ನು ಹಿಡಿದು ಯಂತ್ರಾದಿ ಸಾಧನಗಳಿಂದಾಗಲೀ ಅಥವಾ ಮತ್ತೆ ಯಾವ ಸಹಾಯದಿಂದಲಾಗಲೀ ಜಮೀನನ್ನು ಸಾಗಿಗೆ ತರಬಹುದು. ಸರ್ಕಾರದವರಲ್ಲಿ ಅಪೇಕ್ಷಿಸಿದರೆ ಜಮೀನುಗಳು ವಿಶೇಷ ರಿಯಾಯತಿಗಳೊಡನೆ ಸಿಕ್ಕುತ್ತವೆ. ಮತ್ತು ಮನೆಗಳನ್ನು ಕಟ್ಟಿಕೊಳ್ಳಲು ಮರಮುಟ್ಟು ವಗೈರೆ ಸಾಮಾನುಗಳು ಮುಫತ್ತಾಗಿ ಸಿಕ್ಕುತ್ತವೆ. ಇದೂ ಅಲ್ಲದೆ ಮೈದಾನ ಪ್ರದೇಶಗಳಿಂದಲಾಗಲೀ ಅನೇಕ ಜನರು ನಮ್ಮ ಸೀಮೆಯ ಮಲೆನಾಡು ಪ್ರದೇಶಕ್ಕೆ ಬರಲು ಇಷ್ಟಪಡಬಹುದು. ಅಂಥವರನ್ನು ಬರಮಾಡಿಕೊಂಡು ಅವರನ್ನು ಆದರದಿಂದ ಸಲಹಿ ಅವರ ಸಹಾಯದಿಂದ ಜಮೀನುಗಳನ್ನು ವ್ಯವಸಾಯಮಾಡಬಹುದು. ಪ್ರಕೃತ ಮಲೆನಾಡಿನ ಅಭಿವೃದ್ಧಿಯ ಸಂಘದವರು ಹೊಸದಾಗಿ ನಮ್ಮ ಸೀಮೆಯ ಮಲೆನಾಡಿಗೆ ಬರತಕ್ಕ ರೈತರುಗಳಿಗೆ ಈ ಕೆಳಗೆ ಕಂಡಂತೆ ರಿಯಾಯತಿಯನ್ನು ಕೊಡಬೇಕೆಂದು ನಿಶ್ಚಯಿಸಿಕೊಂಡಿದ್ದಾರೆ.

(1) ಮೂರು ವರ್ಷಗಳ ವರೆವಿಗೂ ಜಮೀನುಗಳ ಮೇಲೆ ಕಂದಾಯವಿಲ್ಲ. (2) 4-5 ನೇ ವರ್ಷಗಳಿಂದ ಅರ್ಧ ಕಂದಾಯ ಕೊಡಬೇಕು. (3) 6 ನೇ ವರ್ಷದಿಂದ ಪೂರಾ ಕಂದಾಯ ಕೊಡತಕ್ಕದ್ದು. (4) ಜಮೀನುಗಳನ್ನೂ, ಮನೆ ಕಟ್ಟುವುದಕ್ಕೆ ಸ್ಥಳಗಳನ್ನೂ ಆಯಾಯ ಕುಟುಂಬದ ಆವಶ್ಯಕತೆಯನ್ನು ಅನುಸರಿಸಿ ಧಾರಾಳವಾಗಿ ಕೊಡುತ್ತಾರೆ. (5) ಮನೆಗಳನ್ನು ಕಟ್ಟಲಿಕ್ಕೆ ಮರ ಮುಟ್ಟುಗಳು ಮುಫತ್ತಾಗಿ ದೊರಕುತ್ತವೆ. (6) ಖಾತರಿಯಾದ ಜಮೀನು ಒದಗಿಸಿ ಕೊಟ್ಟಲ್ಲಿ ಎತ್ತು ಬೀಜ ವಗೈರೆ ಕೊಳ್ಳಲಿಕ್ಕೆ ಹಣದ ಸಾಲವೂ ದೊರಕುತ್ತದೆ. (7) 8-10 ಕುಟುಂಬಗಳು ಒಂದೇ ಕಡೆ ನಿಂತಲ್ಲಿ ಒಂದು ಸೇದುವ ಬಾವಿಯನ್ನು ಸರ್ಕಾರದವರಿಂದ ಮಾಡಲ್ಪಡುತ್ತೆ. (8) ಹೈರೋಡಿನಿಂದ ಹೊಸ ಊರುಗಳಿಗೆ ಅನುಕೂಲವಾದ ಕಡೆಗಳಲ್ಲಿ ರಸ್ತೆಗಳನ್ನು ಸರ್ಕಾರದ ಖರ್ಚಿನಿಂದ ಮಾಡಿಸಿಕೊಡುತ್ತಾರೆ. (9) ವಿಶೇಷ ಸಂದರ್ಭಗಳಲ್ಲಿ ಕೇವಲ ಬಡವರಾದ ರೈತರು ಬಂದು ನೆಲಸಲು ಅಪೇಕ್ಷಿಸಿದಲ್ಲಿ ಅವರುಗಳಿಗೆ ಒಂದು ಪರಸ್ಪರ ಸಹಾಯ ಸಂಘವನ್ನು ಏರ್ಪಡಿಸಿ ಸರ್ಕಾರದಿಂದ ದನ ಬೀಜದ ಭತ್ತ ವಗೈರೆ ಕೊಳ್ಳಲು ಹಣವಿನ ಅನುಕೂಲ ಮಾಡಿಕೊಡಲಾಗುತ್ತದೆ. (10) ಕೇವಲ ಅನಾರೋಗ್ಯ ಸ್ಥಳವಾದಲ್ಲಿ ವೈದ್ಯರ ಚಿಕಿತ್ಸೆಗೂ ಅನುಕೂಲವನ್ನು ಕಲ್ಪಿಸುವ ಏರ್ಪಾಡು ಇದೆಯೆತ್ತೆ.

ಈ ರೀತಿಯಾಗಿ ಉದಾರ ರಿಯಾಯತಿಗಳನ್ನು ತೋರಿಸಿ ಕೃಷಿಕರನ್ನು ಮಲೆನಾಡಿನ ಪ್ರಾಂತ್ಯಕ್ಕೆ ಆಕರ್ಷಿಸಬೇಕೆಂದು ಮಲೆನಾಡಿನ ಅಭಿವೃದ್ಧಿಯ ಹಾದಿಯನ್ನು ಮಾಡುತ್ತಿರುವ ಪ್ರಯತ್ನಗಳು ದೇಶಾಭಿಮಾನಿಗಳಾದ ಸರ್ವರ ಗೋಚರಕ್ಕೆ ಬಿದ್ದು ಕ್ಷೇತ್ರದಲ್ಲಿಯೇ ಕೆಲವು ಒಕ್ಕಲುಗಳಾದರೂ ಈ ರಿಯಾಯತಿಗಳನ್ನು ಹೊಂದಿ ಸುಖಿಗಳಾಗಲೆಂದು ಹಾರೈಸುತ್ತ ಸೇವಕ.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು „ 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್. ರೆಬೆಲೊ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟೇಶನ್, ಟ್ರಾವೆಲಿಂಗ್, ಮೈಸೂರು; ಅಥವಾ ಬ್ರಾಂಚ್ ಸೆಕ್ರೆಟರಿ, ಮದರಾಸ್.

[222-22]

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಲಿ—“ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?” ಎಂದು ನಿನ್ನನ್ನು ನೀನೇ ಕೇಳಿಕೋ; ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದು ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳಲ್ಲಿ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ, ಅಗ್ನಿಮಾಂದ್ಯ; ಗ್ಯಾಸ್; ಅಶಕ್ತಿ ಎದೆಯು ತಲ್ಲಣಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಡಿಯಾರದ ಕಮಾನುಗಳಂತೆ ಯಾರೇ ಆಗಲಿ ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವವು. [175-29]

ಬೆಲೆ ೮ ಆಣೆ, ೧೪ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೮ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೩ ರಷ್ಟು ಹೆಚ್ಚು ಮಾತ್ರೆಗಳಿರುವುವು. ವಿಷವಗಳನ್ನು ಮಾರುವವರ ಬಳಿಯಲ್ಲಾ ದೊರೆಯೂವುದು; ಅಥವಾ ಡೋನ್. ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವದು.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ. ಹೊಸ ನಮೂನೆ ಗಡಿಯಾರ.

“ಸ್ವೀಸ್ ಪಾಕೆಟ್ ವಾಚ್.”

ಸರಪಣಿ ಸಹಿತ ಕ್ರಯ ರೂ. 3-0-0.



ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿ ಇರುತ್ತವೆ. ಇದು ನೋಡುವದಕ್ಕೆ ರಮಣೀಯವಾಗಿಯೂ ಜೇಬಿನಲ್ಲಿ ಇಡುವದಕ್ಕೆ ಅನುಕೂಲವಾಗಿ ಇದೆ. ಗಂಟೆ ತೋರಿಸುವದರಲ್ಲಿ 1 ನಿಮಿಷವಾದರು ಹೆಚ್ಚು ಕಡಿಮೆಯಿಲ್ಲದೆ ನಡೆಯುತ್ತದೆ. “ಸ್ವೀಸ್ ಪಾಕೆಟ್ ವಾಚ್” ಎಂಬುವದು ಗುರ್ತು ನೋಡಿ ಪಡಕೊಳ್ಳಿರಿ. ಜಾಗ್ರತೆ ತರಿಸಿಕೊಳ್ಳುವರಿಗೆ ಮಾತ್ರ ದೊರೆಯುವದು.

ವಿಳಾಸ—ಧೈರ್ಯಲಕ್ಷ್ಮೀ ಅಂಡ್ ಕಂಪೆನಿ,

[63-2] 3, ಅರುಳಪ್ಪನ ಬೀದಿ, ಮದರಾಸು.

ಬೆಸ್ಟ್ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾ ಅಸಲ್ ಸಾಲಾಮಿಸರಿಯಲ್ಲಿ ಬೆಳ್ಳಿ ರೇಖು ಮುಂತಾದ್ದು ಸೇರಿಸಿ ಅತಿ ನಯವಾಗಿ ತಯಾರುಮಾಡಿದೇವೆ. ಈ ಮುರಬ್ಬ ಉಷ್ಣಕಾರಕದಿಂದ ಉಂಟಾದ ಅನೇಕ ವ್ಯಾಧಿಗಳಿಗೆ ಸಂಜೀವನವಾಗಿರುತ್ತೆ. ಈ ಮುರಬ್ಬಾ ನಾವು ಲೋಕೋಪಕಾರಕ್ಕಾಗಿ ಕಾಲಾಂತರದಿಂದ ತಯಾರುಮಾಡುತ್ತೇವೆ. ಅತಿ ಯೋಗ್ಯರು ಈ ಮುರಬ್ಬವನ್ನು ನಮ್ಮಿಂದ ತರಿಸಿ ಸೇವನೆಯಿಂದ ಗುಣವುಳ್ಳದ್ದೆಂದು ನಿಶ್ಚೈಸಿರುತ್ತಾರೆ ನಮಗೆ ಅಸಲ್ ಸಾಲಾಮಿಸರಿ ಬೇರೆ ದೇಶಗಳ ಕಮಿಷನ್ ಏಜೆಂಟರುಗಳ ಮೂಲಕ ಬರುತ್ತದೆ. ಈ ಮುರಬ್ಬಾ ಸಾಲಾಮಿಸರಿಯಲ್ಲಿ ತಯಾರಾದ್ದಲ್ಲವೆಂದು ವ್ಯಕ್ತಪಡಿಸಿ ನಮ್ಮಿಂದ 60 ಸವರನ್ ಬಹುಮಾನ ಪಡೆಯಬಹುದು. ಇದರ ಪೂರ ಸಮಾಚಾರ ತಿಳಿಯಲಪೇಕ್ಷೆಯುಳ್ಳವರು ಅರ್ಧಾಣೆ ಸ್ಟಾಂಪು ಕಳುಹಿಸಿ ಕ್ಯಾಟ್ಲಾಗ್ ಪಡೆಯಬಹುದು. 1915 ನೇ ಡಿಸೆಂಬರು ಜನವರಿ ಫೆಬ್ರವರಿ ಆಖೈರಿನ ವರೆವಿಗೂ ವಿ. ಪಿ. ಛಾರ್ಜು ಮಾಫ್ ಮಾಡಿರುತ್ತೆ. ಪಾರ್ಸಲ್ ಸಂಗಡ ಚಿಕ್ಕ ತಕಡಿಯೂ, ಅನುಪಾನದ ಪತ್ರಿಕೆಯೂ ಇರುತ್ತೆ. 20 ತೊಲಾ ಉಳ್ಳ ಡಬ್ಬಾ 1 ಕ್ಕೆ ಕ್ರಯ ರೂ. 2.

ಏಜೆಂಟ್

ಡಿ. ಸೈದ್ ಉಸ್ಮಾನ್ ಅಂಡ್ ಕೊ., ಜನರಲ್ ಮರ್ಚೆಂಟ್, ದೊಡ್ಡಪೇಟೆ, ಬೆಂಗಳೂರು ಸಿಟಿ (ಇಲ್ಲಿ ಯಾವಾಗ್ಯೂ ಸ್ಟಾಕು ಇರುತ್ತೆ. ತರಿಸಿಕೊಳ್ಳಬಹುದು)	ಟಿ. ಹೆಚ್. ಆಗಾಜ್ ದಾಕಾಗಂಜ್ ವೈದ್ಯರು, ಸುಕ್ತ ನಾ ಸಾಹೇಬ್ ಮಾರ್ಕೆಟ್ ರೋಡ್, ನಂಬರು 104, ಬೆಂಗಳೂರು ಸಿಟಿ.

[258-12]

ಡೋಂಗರೆ ಜ್ವರ

ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಶಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-28]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,

ಚೌಪಾಟಿ, ಗಿರಗಾಂವ, ಮುಂಬಯಿ.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಅಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರದ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಅಟೋ ಮೋಹಿನಿಯೇ ಅನೇಕ ಕಾಲದಿಂದಲೂ ಜಾಹಿರಾತು ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳಕೊಂಡ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಅಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಗಮಲೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾರುವಂಥಾದ್ದು ಅಟೋ ಮೋಹಿನಿಯೇ.

½ ಔನ್ಸ್ ಗಾಜಿನ ಬಿಂಡಿಯುಳ್ಳ ಸೀಸೆಗೆ	ರೂ 2—0—0	½ „ „	0—8—0
1 ಡ್ರಾಮ್ ಕೊಳವೆಗೆ	„ 0—12—0	ಕಾರ್ಡು ಡಜನ್‌ಗೆ	0—12—0

ಕ್ರಯ 1 ಬಾಟ್ಲಿಗೆ ರೂ. 1-0-0
„ 3 „ „ 2-10-0.

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳಸುವಂಥಾದ್ದು. ಕಣ್ಣು ಮತ್ತು ಮಿದುಳಿಗೆ ತಂಪನ್ನು ಕೊಡಬಲ್ಲದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಜಾಹಿರಾತು ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಲದಾಗಿದೆ. [282-14]

ಸೋಲ್ ಏಜಂಟರು—ಷಾ ಭಗವಾನ್ ದಾಸ್ ಚುನಿಲಾಲ್ ಕಂಪನಿ,
177, ಮಿಂಟ್ ಬಜಾರ್ ರೋಡ್, ಮದರಾಸು.

ಸ್ವದೇಶ ಶೃಂಗಾರಿಕೆಗಳು.

[illegible] ವ್ಯಾಪಾರಿಗಳು [illegible] ಒಪ್ಪಿಸುವೆನು. ಕೆ. ಆರ್. [illegible],

[60-4] ಏಜಂಟ್, ಮ್ಯು. [illegible] ಕಂಪನಿ, ಬೆಂಗಳೂರು ಸಿಟಿ.

ಹೊಸ ನಮೂನೆ

ಪೋರ್ಟಿಯ ಪೇನಾಗಳು.

ಧೈರ್ಯಲಕ್ಷ್ಮಿ

ಪೋರ್ಟಿಯ ಪೇನಾ.

ಈ ಚಿತ್ರದಲ್ಲಿ ತೋರಿಸಿರುವ ಹೊಸ ನಮೂನೆ ಫೌಂಟನ್ ಪೇನವನ್ನು ಇಂಗ್ಲಾಂಡಿನಲ್ಲಿ ಪ್ರಖ್ಯಾತಿ ಹೊಂದಿದ ಕಂಪನಿಯಿಂದ ತರಿಸಿರುತ್ತೇವೆ. ಪೆಟ್ಟಿಗೆ ಮೇಲೆ ನಮ್ಮ ಕಂಪನಿ ಹೆಸರು ಗಿಲೀಟು ಅಕ್ಷರಗಳಿಂದ ಹಾಕಿ ತಯಾರಿಸಿರುತ್ತೆ. ಇದಕ್ಕೆ ಒಂದು ಸಾರಿ ಇಂಕಿಯನ್ನು ಹಾಕಿದರೆ ಅನೇಕ ದಿವಸಗಳು ಬರೆಯಬಹುದು. ಈ ಪೇನಾ ನಮಗಾಗಿ ಪ್ರತ್ಯೇಕ ಸೀಮೆಯಿಂದ ತಯಾರಿಸಿ ಕಳುಹಿಸಿರುತ್ತಾರೆ. ಹ್ಯಾರಟ್ ಚಿನ್ನದ ಮುಳ್ಳು ಇರುವದು ಇದು ನೋಡುವದಕ್ಕೆ ಮನೋಹರವಾಗಿಯೂ, ಬರೆಯುವದಕ್ಕೆ ಬಹು ಸುಲಭವಾಗಿಯೂ ಇರುತ್ತೆ. ಇದನ್ನು ಒಂದು ಸಲ ಉಪಯೋಗಿಸಿದವರು ಪುನಹ ಯಾವ ಪೇನಾವನ್ನೂ ಉಪಯೋಗಿಸರು.

[63-3]

ಕ್ರಯ 1 ಕ್ಕೆ ರೂ. 1-8-0.

6 ಪೇನಾಗಳು ಒಂದೇ ಸಲ ತರಿಸಿಕೊಳ್ಳುವರಿಗೆ 1 ಇಂಗ್ಲೀಷ್ ವಾಚ್ ಇನಾಮವಾಗಿ ಕಳುಹಿಸುವೆವು.

ವಿಳಾಸ.—ಧೈರ್ಯಲಕ್ಷ್ಮಿ ಅಂಡ್ ಕಂಪನಿ,

3, ಅರುಣಪ್ಪನ ಬೀದಿ, ಮದರಾಸು.

ಮೋಸ ಹೋಗಬೇಡಿ ! ಮೋಸ ಹೋಗಬೇಡಿ !!

ನಮ್ಮ ಕಂಪನಿಯು ಕಳೆದ ನಾಲ್ಕು ವರುಷಗಳಿಂದಲೂ ಹೆಸರುವಾಸಿ ಪಡೆದಿದೆ. ಪ್ರತಿ ದಿನವೂ ಹೈದ್ರಬಾದ್, ಮದ್ರಾಸ್, ಬೊಂಬೈ, ಕಲ್ಕತ್ತಾ, ರಂಗೂನ್, ಬನಾರ, ಕೊಲಂಬೊ, ಸಿಲೋನ್, ಪೆನ್ನಾಂಗ್ ಮುಂತಾದ ದೇಶಗಳಿಂದ ನಮಗೆ ಆರ್ಡರುಗಳು ಬರುತ್ತಲಿವೆ. ಬಹಳ ಜನಗಳು ನಮ್ಮ ಕಂಪನಿಯ ಔಷಧವನ್ನು ಉಪಯೋಗಿಸಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟಿರುವರು. ಬೇಕಾದವರು ನಮ್ಮ ಕಂಪನಿಗೆ ಬಂದು ನೋಡಬಹುದು.—ಕೆಲವರು ನಮ್ಮ ಕಂಪನಿಯ ಹೆಸರನ್ನು ಹೇಳಿ ಜನರಿಗೆ ನಕ್ಕಲ್ ಮಾಲುಗಳನ್ನು ಕೊಟ್ಟು ಮೋಸಪಡಿಸುತ್ತಿರುವರು. ಆದ್ದರಿಂದ ನಮ್ಮ ಭಾಂಗಿಯನ್ನು ತಗೆದುಕೊಳ್ಳುವಾಗ "ಡಿ. ಮುನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯು ರೋಡ್, ಬೆಂಗಳೂರು ಸಿಟಿ" ಎಂದು ಮತ್ತು ನಿಮ್ಮ ಕಣ್ಣಿನ ಎದುರಿನಲ್ಲಿ ಕಾಣುತ್ತಿರುವ ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಆಗಿರುವ ಟ್ರೇಡ್ ಮಾರ್ಕ ಇರುವುದನ್ನು ನೋಡಿ ತಗೆದುಕೊಳ್ಳಿರಿ ಹಾಗೆ ನೋಡಿ ತೆಗೆದುಕೊಳ್ಳದೆ ಹೋದರೆ ಮೋಸಹೋಗುವಿರಿ ಎಂದು ತಮಗೆಲ್ಲ ಹೊಸದು ಹೇಳುವೆವು.

1000 ರೂ. ಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

Registered.

ಈ "ಸಾಲಾಮಿಸ್ರಿ ಮುರಬ್ಬಾ" ವಿನ ಸೇವನೆಯಿಂದ ಮೂತ್ರಕೋಶ ಸಂಬಂಧದಿಂದ ಉಂಟಾದ ಎಲ್ಲಾ ವ್ಯಾಧಿಗಳನ್ನೂ ಗುಣಮಾಡುವದು. ಮತ್ತು ಕೈಕಾಲು, ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತ ಕೆಟ್ಟುಹೋಗಿದ್ದರೂ ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೆ ಸ್ಥಿತಿಯಲ್ಲಿಡುವುದು ಈ ಮುರಬ್ಬಾ ಸಾಲಾಮಿಸ್ರಿಯಲ್ಲಿ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ 1000 ರೂಪಾಯಿ ಬಹುಮಾನ ಕೊಡಲ್ಪಡುವುದು. [illegible]

ಕ್ರಯ ಡಬ್ಬಿ 1 ಕ್ಕೆ 2-0-0. [illegible] 1 ಡಬ್ಬಿಯಿಂದ 3 ಡಬ್ಬಿವರೆಗೆ 0-6-0. [illegible]

ನಮ್ಮ ವಿಳಾಸ:—ಡಿ. ಮುನ್ನಾಲಾಲ್, ಡೆಲ್ಲಿ ವೈದ್ಯರು,

[73-1] 5 ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬಯಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್. ರೆಡಿ ಬಿ.ಎ., ಚೀಫ್ ಏಜಂಟ್, ಬೆಂಗಳೂರು; ಮ॥ ಎಂ. ಎಸ್. ಸಂಜಪ್ಪನವರು ಅಥವಾ ಮ॥ ವೆಂಕಟೇಶ, ಟ್ರಾವೆಲಿಂಗ್, ಮೈಸೂರು; ಅಥವಾ ಬ್ರಾಂಚ್ ಸೆಕ್ರೆಟರಿ, ಮದರಾಸ್.

[229-23]

ಬೆಡ್ಮ್ಯಾ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾ ಅಸಲ್ ಸಾಲಾಮಿಸ್ರಿಯಲ್ಲಿ ಬೆಳ್ಳಿ ರೇಖು ಮುಂತಾದ್ದು ಸೇರಿಸಿ ಅತಿ ನಯವಾಗಿ ತಯಾರುಮಾಡಿದೇವೆ. ಈ ಮುರಬ್ಬ ಉಷ್ಣ ಕಾರಣದಿಂದ ಉಂಟಾದ ಅನೇಕ ವ್ಯಾಧಿಗಳಿಗೆ ಸಂಜೀವನವಾಗಿರುತ್ತೆ. ಈ ಮುರಬ್ಬಾ ನಾವು ಲೋಕೋಪಕಾರಾರ್ಥವಾಗಿ ಶಾಸ್ತ್ರದಿಂದ ತಯಾರುಮಾಡುತ್ತೇವೆ. ಅತಿ ಯೋಗ್ಯರು ಈ ಮುರಬ್ಬವನ್ನು ನಮ್ಮಿಂದ ತರಿಸಿ ಸೇವನೆಯಿಂದ ಗುಣವುಳ್ಳದ್ದೆಂದು ನಿಶ್ಚಯಿಸಿರುತ್ತಾರೆ. ನಮಗೆ ಅಸಲ್ ಸಾಲಾಮಿಸರಿ ಬೇರೆ ದೇಶಗಳ ಕಮಿಷನ್ ಏಜಂಟರುಗಳ ಮೂಲಕ ಬರುತ್ತದೆ. ಈ ಮುರಬ್ಬಾ ಸಾಲಾಮಿಸರಿಯಲ್ಲಿ ತಯಾರಿಲ್ಲದ್ದಲ್ಲವೆಂದು ವ್ಯಕ್ತಪಡಿಸಿ ನಮ್ಮಿಂದ 50 ರೂಪಾಯಿ ಬಹುಮಾನ ಪಡೆಯಬಹುದು. ಇದರ ಪೂರ ಸಮಾಚಾರ ತಿಳಿಯಬೇಕೆಂದಿರುವವರು ಅರ್ಧಾಣೆ ಸ್ಟಾಂಪು ಕಳುಹಿಸಿ ಕ್ಯಾಟಲಾಗ್ ಪಡೆಯಬಹುದು. 1915 ನೇ ಡಿಸೆಂಬರು ಲಾಗಾಯ್ತು ಫಟ್ರಿನ ಅಷ್ಟರ ವರೆಗೂ ವಿ. ಪಿ. ಛಾರ್ಜ ಮಾಫ್ ಮಾಡಿರುತ್ತೆ. ಸಾರ್ಸಲ್ ಸಂಗಡ ಚಿಕ್ಕ ತಕಡಿಯೂ, ಅನುಪಾನದ ಪತ್ರಿಕೆಯೂ ಇರುತ್ತೆ. 20 ತೊಲಾ ಉಳ್ಳ ಡಬ್ಬಿ 1 ಕ್ಕೆ ಕ್ರಯ ರೂ. 2.

ಏಜಂಟ್

ಡಿ. ಸೈದ್ ಉಸ್ಮಾನ್ ಅಂಡ್ ಕೊ., ಜನರಲ್ ಮರ್ಚಂಟ್, ದೊಡ್ಡಪೇಟೆ, ಬೆಂಗಳೂರು ಸಿಟಿ.

(ಇಲ್ಲಿ ಯಾವಾಗಲೂ ಸ್ಟಾಕು ಇರುತ್ತೆ. ತರಿಸಿಕೊಳ್ಳಬಹುದು.)

ಟಿ. ಹೆಚ್. ಆಗಾಜ್ ಬಾಷಾಸಂಜ್ ವೈದ್ಯರು, ಸಜ್ಜಿ ಷಾ ಸಾಹೇಬ್ ಮಕಾನ್ ರೋಡ್, ನಂಬರು 104, ಬೆಂಗಳೂರು ಸಿಟಿ

[258-13]

ಪರೀಕ್ಷೆಗಾಗಿ ಮುಫತ್ತು.

ನಮ್ಮ "[illegible]" ಎಂಬುವದು [illegible] ಬರ್ಮಾದಲ್ಲಿ ಖ್ಯಾತಿಹೊಂದಿದೆ. [illegible] ಅನೇಕವಾಗಿ ಸಂಪಾದಿಸಿಕೊಂಡಿದೆ.—ಈ [illegible] ಹಿಂದೂಸ್ಥಾನ, ಸಿಲೋನ್ ಮತ್ತು ಇತರ ದೇಶಗಳಲ್ಲಿ ಪ್ರಚಾರಕ್ಕೆ [illegible] ನೀವು ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿಯೂ [illegible] ನಮಗೆ ತಿಳಿಸಿದರೆ ನಿಮಗೆ ನಾವು ಬಿಟ್ಟಿಯಾಗಿ ಎರಡು [illegible] ಗಳನ್ನು ಕಳುಹಿಸುವೆವು. ಅದನ್ನು ಉಪಯೋಗಿಸಿದರೆ ಅದರ ಗುಣ [illegible] ಮುಂದಟ್ಟಾಗುತ್ತದೆ.—ಈ ತಲೆನೋವಿನ ಔಷಧಿಯನ್ನು ದೊಡ್ಡವರಿಗೆ [illegible] ಗಿಸುವದನ್ನು ಹೆಚ್ಚಾಗಿ ಮಾಡಿದೇವೆ. ಅದನ್ನು ಪೊಟ್ಟಣಗಳಾಗಿಯೂ [illegible] ಯೂ ತಯಾರುಮಾಡಿರುವೆವು. ಅಂಥಾ 12 ಪೊಟ್ಟಣಗಳಾಗಲಿ, 12 [illegible] ರುವ ಒಂದು ಸೀಸೆಗಾಗಲಿ ಕ್ರಯ ರೂಪಾಯಿ 1-0-0.

Address—Franci's Medical Hall,

Manufacturing Chemists, Myanaung, Burma.

ನಮ್ಮ ವಿಳಾಸ—ಫ್ರಾನ್ಸಿಸ್ ಮೆಡಿಕಲ್ ಹಾಲ್,

[19-9] ಮಯಾನಾಂಗ್, ಬರ್ಮಾ.

ಎಲ್ಲಾ ಜ್ವರಗಳಿಗೂ ಖಚಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಡೋಸು ತೆಗೆದುಕೊಳ್ಳುವದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-24]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,

ಎಗ್ಸ್ಯು ಮಿಕ್ಸ್ಚರ್ ಡಿಪೋ, ಬೊಂಬಾಯಿ. 4.

KARNIK Bros., BOMBAY, 4.

ನಮ್ಮ ಏಜಂಟರು.—ದಿ ಉಲ್ಕ ಮಾರ್ಟ, ಮಂಗಳೂರು.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಅಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಬೇಕಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನ್ನಣೆಯನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರಗಳ [illegible] ಗಳನ್ನೂ ಸಂಪಾದಿಸಿಕೊಂಡಿದೆ. ಅಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಲೆಂಜ್ ಕೊಡುತ್ತಿರುವುದು. [illegible] ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳೆ[illegible] ವಷ್ಟರಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಅಟೋ ಮೋಹಿನಿಯೇ. [illegible] ರಾಜು ಹೊಸ ಪುಷ್ಪಗಳ ಗಮಾಲೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾಪಾಡುವಂಥಾದ್ದು ಅಟೋ ಮೋಹಿನಿಯೇ.

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ. 2—0—0	¼ ,, ,, ... 0—8—0
1 ಡ್ರಾಮ್ ಸೀಸೆಗೆ ... ,, 0—12—0	[illegible] ಡಜನ್ ಗೆ 0—12—0

ತಲೆಯನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ನೀಟ ಬೆಳಸುವಂಥಾದ್ದು. ಕಣ್ಣು ಮತ್ತು ಮೆದುಳಿಗೆ ತಂಪನ್ನು ಕೊಡತಕ್ಕದ್ದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ [illegible] ಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ [illegible] ಕೂದಲಿಗೆ [illegible] ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಕಾಗಿದೆ. [282-16]

ಕ್ರಯ 1 ಬಾಟ್ಲಿಗೆ ರೂ. 1-0-0

,, 3 ,, ,, 2-10-0

ಸೋಲ್ ಏಜಂಟರು—ಶಾ ಭಗವಾನ್ ದಾಸ್ ಚುನಿಲಾಲ್ ಕಂಪನಿ,

177, ಬೈನಾಬಜಾರ್ ರೋಡ್, ಮದರಾಸು.

THE EMPEROR OF SCENTS.

"OTTO PUSHPALATA."

PERFUME OF SOCIETY.

ಮದುವೆ ಶೋಭನಗಳಲ್ಲಿ ಶೀಘ್ರ ಖಂಡಿತವಾಗಿ "ಓಟೋ ಪುಷ್ಪಲತಾ" ಎಂಬ ಪರಿಮಳವನ್ನೇ ಉಪಯೋಗಿಸಬೇಕು. ಮಹದೈಶ್ವರ್ಯವಂತರೂ ಪುಷ್ಪಶಾಲೆಗಳೂ ನಮ್ಮನ್ನು ಮೆಚ್ಚುತ್ತಾರೆನ್ನುವದಕ್ಕೆ ಸಂಶಯವಿಲ್ಲ.

ಜಾಜೀ ಪುಷ್ಪಗಳ ವಾಸನೆ ಕೇವಲ ಆ ಪುಷ್ಪಗಳು ಸಂಜೆಯಾಗುತ್ತಲೇ ಬಾಡುವವು. ನಮ್ಮ ಈ ಪರಿಮಳದ ಎರಡೇ ಎರಡು ಬೊಟ್ಟುಗಳನ್ನು ಹಾಕಿಕೊಂಡರೆ ಒಂದು ವಾರದ ತನಕ ಅದರ ಘಮಲು ಖಂಡಿತವಾಗಿ ಹೋಗದು. ಇದೇ ಮಧುವನಾಕ ಪ್ರವೇಶ; ತರಿಸಿ ಪರೀಕ್ಷಿಸಿ ನೋಡಿ.

ಕ್ರಯ ½ ಔನ್ಸ್ ಸೀಸೆಗೆ ರೂ. 2-0-0.

,, 1 ಡ್ರಾಮ್ ,, ,, 0-12-0.

ಸರ್ವೋತ್ತಮ ರೋಮಹಾರಿ.

"ರಾಜಾ—ರಾಣಿ ಸೋಪ್."

ಈ ಸಾಬೂನು ಪ್ರಖ್ಯಾತವಾದದ್ದು. ಒಂದೇ ಸಲ ಹಚ್ಚುವದರಿಂದ ದೇಹದ ಯಾವ ಕಡೆಯ ಕೂದಲಾದರೂ ನೊಣಪಾಗಿ ಅಚ್ಚುಕಟ್ಟಾಗಿ ಹೋಗಿಬಿಡುತ್ತದೆ. ಇದನ್ನು ಹಚ್ಚುವದರಿಂದ ಸ್ವಲ್ಪವಾದರೂ ಇರಿತವೂ ಬಾಧೆಯೂ ಆಗದು; ಲೇಶಮಾತ್ರವೂ ಕಲೆ ನಿಲ್ಲುವದಿಲ್ಲ.

ಚರ್ಮಕ್ಕೆ ಸ್ವಭಾವ ಆಸ್ಯವಾದ ರಕ್ಷಾ ಮೆರಗುಗಳನ್ನು ಕೊಡುವ ಗುಣವೂ ಈ ಸೋಪಿಗೆ ಉಂಟು. ಈ ಸೋಪನ್ನು ಬಿಡಲಾರದಂಥಾದ್ದು ಬೇರೊಂದಿಲ್ಲವೆಂದು ವಿಸ್ತಾರವಾದ ಪ್ರಖ್ಯಾತಿಯನ್ನು ಪಡೆದಿದೆ.

ಕ್ರಯ 3 ಬಿಲ್ಲೆ ಇರುವ ಪೆಟ್ಟಿಗೆಗೆ ರೂ. 1-0-0.

ದಯವಿಟ್ಟು ಇಂಗ್ಲಿಷಿನಲ್ಲೇ ನಮಗೆ ಕಾಗದ ಬರೆಯಬೇಕು.

[64-3]

Sole Agents—T. P. LAL & Co.,
Burbhai Mohalla, Bombay, 3.

ಸೋಲ್ ಏಜಂಟರು—ಟಿ. ಪಿ. ಲಾಲ್ ಕಂಪನಿ,
ಬಾಭಾಯಿ ಮೊಹಲ್ಲಾ, ಬೊಂಬಾಯಿ, 3.

... ಬಹು ಸುಲಭ. ಬೆಲೆ ಬಹು ಸುಲಭ.

...ವಾದ ಗೆಜ್ಜೆ ಕಟ್ಟಿದ ಭಂಗಾರು ಗಿಲೀಟಿನ ಡಾಬುಗಳು.

...ಗಳು ಕಳುಹಿಸಿರುವ ಡಾಬುಗಳಂತೆ ಇರುವದಿಲ್ಲ. ಭಂಗಾರು ಗಿಲೀಟು ...ಪ್ರಖ್ಯಾತಿಹೊಂದಿದ ತಂಜಾವೂರ್ ದೇಶದ ಕೆಲಸಗಾರರಿಂದ ಬಹು ಸೊಗ

ಸಾಗಿ ತಯಾರಿಸಿದೆ. ಹಿಂಭಾಗದಲ್ಲಿ ದೊಡ್ಡದು ಚಿಕ್ಕದು ವಹಿಸಿಕೊಳ್ಳುವದಕ್ಕೆ ಚಿಕ್ಕವಾದ ಸುಂಡುಗಳು ಬೆಳ್ಳಿ ಡಾಬುಗಳಂತೆ ಮುಂಭಾಗದಲ್ಲಿ ಕುಣಿಕೆ ಇಟ್ಟು ಸಾಧಾರಣ ಡಾಬುಗಳಂತೆ ತೆಗೆಯುವದಕ್ಕೂ ಹಾಕು... ಕಷ್ಟ ತೋರುವದಿಲ್ಲ. ನೋಟಕ್ಕೆ ಒಂದೇ ತುಂಡಾಗಿಯೇ ಇರುವದು. ...ಕುಸದ ನಾಡಾಕಳು. ಬರವಣಿಗೆಯಿಂದ ಉಪಯೋಗವಿಲ್ಲ. ಚಿನ್ನದ ...ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಒಂದು ಸಲ ಒಟ್ಟರು ತರಿ... ಮತ್ತೊಬ್ಬರಿಗೆ ತಾವಾಗಿಯೇ ಶಿಫಾರಸು ಮಾಡುವರು.

ಭಂಗಾರದ ಗಿಲೀಟಿನ ಗೆಜ್ಜೆ ಕಟ್ಟಿದ ಡಾಬುಗಳು 1 ಕ್ಕೆ ರೂ. 2-12-0.
...ಲ್ಲದ ಡಾಬುಗಳು ರೂ. 1-12-0. [63-3]
...ಗಾಸ್ ವಾಚ್ ಕಂಪನಿ, 3, ತಿರುಳಪ್ಪನ ಬೀದಿ, ಮದರಾಸು.

ನಿಮಗೆ ನಿಮ್ಮ ರಕ್ತದ ಚಿಂತೆಯುಂಟೇ ?

ನಿಮ್ಮ ರಕ್ತದಿಂದಲೇ ನೀವು ಸುಖವಾಗಿರುವುದು; ನಿಮ್ಮ ರಕ್ತದಿಂದಲೇ ...ರೋಗಬಿಟ್ಟದು ಸರಸುವುದು. ರಕ್ತಶುದ್ಧವಾಗಿದ್ದರೆ ಆರೋಗ್ಯ, ದೃಢಕಾ...ಯ, ದೀರ್ಘಾಯುಸ್ಸು, ಪೂರ್ಣಸುಖ—ಎಲ್ಲಾ ಉಂಟಾಗುತ್ತೆ. ರಕ್ತ ಕೆಟ್ಟರೆ ...ವಾಗಿ ನಿಮ್ಮ ದೇಹ ಕುಗ್ಗುತ್ತಾ, ಆಯುಸ್ಸು ಕ್ಷಯಿಸುತ್ತಾ, ಜೀವನವೇ ...ಕೂಲವಾಗುತ್ತಾ ಬಂದೀತು. ಇಂಥಾ ಭಯಂಕರವಾದ ಸ್ಥಿತಿಯನ್ನು ತಪ್ಪಿ...ಸುವದಕ್ಕೆ ನೀವುಗಳು ಖಂಡಿತವಾಗಿ ಉಪಯೋಗಿಸಬೇಕಾದದ್ದು ಒಂದೇ. ...ವದನ್ನು ಏನೆಂದೀರೋ ?

ಸುಧಾಸಾಗರ ಅವಲೇಹ.

ಈ ಅನ್ಯತಮ ದೇಹದ ಉಷ್ಣವನ್ನು ಶಮನಮಾಡುತ್ತೆ. ನಿಶ್ಶಕ್ತಿಯಾದ ...ಕೆಟ್ಟಿರುವ ಜೀರ್ಣಕೋಶವನ್ನು ಬಲಪಡಿಸಿ ಬಹಳ ಬೇಗ ಹಸಿವೆಯನ್ನು ...ವನಮಾಡುತ್ತದೆ ಮತ್ತು ರಕ್ತಕೆಡೋಣದಿಂದ ಉಂಟಾಗುವ ಎಲ್ಲಾ ರೋಗ...ಗಳನ್ನೂ ಓಡಿಸಿ ರಕ್ತವನ್ನು ಶುದ್ಧಿಮಾಡಿ ಉಕ್ಕಿಸುವುದು.

ಬಾಟ್ಲೆ ಒಂದರ ಕ್ರಯ ರೂ. 1-8-0 ಮಾತ್ರ.

ನಮ್ಮ ವಿಳಾಸ—ರಾಜವೈದ್ಯ ನಾರಾಯಣಜಿ ಕೇಶವಜಿ,
[33-17] ಆಯುರ್ವೇದೋದಯ ಔಷಧಾಲಯ,
20, ಕೈನಾಬಜಾರು ರೋಡ್, ಮದರಾಸು.

ಕೆಂಪು ಕಲ್ಲಿನ ಬುಲಾಕು.

ಈ ಬುಲಾಕನ್ನು ಸೀಮೆಯಲ್ಲಿ ತಯಾರಿಸಿ ಕಳುಹಿಸುತ್ತಾರೆ. ಇದರ ಕಲ್ಲುಗಳು ಕೋಹಿನೂರ್ ಪ್ರಕಾಶಕ್ಕೆ ಥಳಥಳಿಸುವವು. ಸವರನ್ ಭಂಗಾರಕ್ಕೆ

ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿರುತ್ತದೆ. ಇದನ್ನು ನೋಡುವವರು 200 ರೂ. ಸರಿಯಾಗಿ ಮಾಡಿಲ್ಲ ಬಾಳುವದೆಂದು ಹೇಳುವರು. ಈಗ ನಮ್ಮ ಕಂಪನಿ ಹೆಸರು ಪ್ರಖ್ಯಾತಿ ಹೊಂದುವದಕ್ಕಾಗಿ 2 ರೂಪಾಯಿಗೆ ವಿಕ್ರಯಮಾಡುವೆವು. ಬೇಗನೆ ತರಿಸಿಕೊಳ್ಳಿ.

[63-3] ನಮ್ಮ ವಿಳಾಸ—
ಎ. ಎ. ಎಸ್. ವಾಣಿ, 3, ತಿರುಳಪ್ಪನ ಬೀದಿ, ಮದರಾಸು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ 12 ಆಣೆಗೆ ಕೊಡಲ್ಪಡುತ್ತೆ.

ಆಶ್ಚರ್ಯವಾದ ಸೇವಿಂಗು ಬಾಕ್ಸು ಎಂಬ ಮರ್ಮದ ಪೆಟ್ಟಿಗೆ.

ಈ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ ಬಹು ಸೊಗಸಾಗಿ ಚಿತ್ರ ವಿಚಿತ್ರ ಕೆಲಸ ಮಾಡಿ ನೋಡುವವರಿಗೆ ಸಂತೋಷಕರವಾದ ಪೆಟ್ಟಿಗೆ. ಇದರ ಪ್ರಕಾಶ ಬೆಳ್ಳಿಯು ಕೂಡ ಹಿಂಬಾಲಿಸುತ್ತದೆ ಈ ಪೆಟ್ಟಿಗೆಯಲ್ಲಿ ಹಣವನ್ನಾಗಲಿ, ಚಿಕ್ಕ ವಸ್ತುಗಳನ್ನು ಇಟ್ಟು ಮುಚ್ಚಿಡಬೇಕು. ಅನಂತರ ಅದನ್ನು ಯಾರಾದರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಮಾಯವಾಗುವವು ಆ ಪದಾರ್ಥಗಳು ಇಟ್ಟವರು ತೆರೆದರೆ ಅವರಲ್ಲಿ ಇರುವ ವಸ್ತುಗಳು ಕಾಣುವವು. ಈ ಪೆಟ್ಟಿಗೆ ಜೇಬಿನಲ್ಲಿ ಕೂಡ ಇಟ್ಟುಕೊಳ್ಳಬಹುದು. ಬೇಗನೆ ತರಿಸಿಕೊಳ್ಳಿ. ಈ ಪೆಟ್ಟಿಗೆ ಇಷ್ಟವಿಲ್ಲದಿದ್ದರೆ 8 ದಿನಗಳೊಳಗೆ ಬರೆದರೆ ತಡಮಾಡದೆ ಹಣವನ್ನು ವಾಪಸ್ ಕಳುಹಿಸುವೆವು.

ನಮ್ಮ ಪೆಟ್ಟಿಗೆಯನ್ನು ತರಿಸಿಕೊಳ್ಳುವರಿಗೆ 1916 ನೇ ಸಂವತ್ಸರದ ಸುಂದರವಾದ ಲೇಡಿ ಕ್ಯಾಲೆಂಡರ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ—ರಾಮಚಂದ್ರ ಅಂಡ್ ಕಂಪನಿ,
[63-3] 16, ತಿರುಪಳ್ಳಿ ಬೀದಿ, ಮದರಾಸು.

ಬಿಸಿಲು ಕಾಲಕ್ಕೆ ಮೂರು

ಮಹೌಷಧಗಳು.

ಅಮೃತಾಮಲಕ ತೈಲ.

ಈ ತೈಲವು ಕಣ್ಣು ಕೈಕಾಲುರಿ, ಪಿತ್ತದ ತಲೆನೋವು, ಕಣ್ಣು ಮಂಜು, ಕಣ್ಣು ಕೆಂಗತ್ತಲೆ, ಮುಂತಾದ್ದನ್ನು 1-2 ಅಭ್ಯಂಗದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ವಿಶೇಷವಾಗಿ ಹೆಚ್ಚಿಸುತ್ತದೆ. ಬಿಸಿಲು ಕಾಲಕ್ಕೆ ಅಭ್ಯಂಗವು ಉತ್ತಮವಾದುದು ಖಂಡಿತವಾಗಿಯೂ ಅಲ್ಲವೆಂಬುದನ್ನು ಅನುಭವದಿಂದ ತಿಳಿಯಿರಿ.

8 ಅಭ್ಯಂಗಕ್ಕೆ ಆಗುವ ತೈಲ 8 ಆಣೆ.

ಖಂಡಾಮಲಕ ರಸಾಯನ.

ಸಮಸ್ತ ಪಿತ್ತ ವಾತ ವಿಕಾರಗಳನ್ನೂ ಜಾಗ್ರತೆ ಗುಣಮಾಡಿ ಜೀರ್ಣಶಕ್ತಿಯನ್ನು ಸರಿಪಡಿಸಿ ರಾತ್ರಿ ಸುಖನಿದ್ರೆಯನ್ನುಂಟುಮಾಡಿ ಮಲವನ್ನು ಸಲೀಸಾಗಿ ಬಾರಿಸುವುದು. ಸೇವಿಸಲು ರುಚಿಯಾಗಿದೆ. 15 ದಿನದ ಔಷಧ 12 ಆಣೆ.

ಆಮೋದಿನಿ.

ಬಾಯಿನಾತವನ್ನು ತಕ್ಷಣ ಅಡಗಿಸಿ-ಅಜೀರ್ಣವನ್ನು ಪರಿಹರಿಸಿ-ಸರ್ವರ ಮನಸ್ಸನ್ನು-ತನ್ನ ಅಮೋಘವಾದ ಗುಣ ಮತ್ತು ಸುವಾಸನೆಗಳಿಂದ ಮೋಹಗೊಳಿಸುವ ಈ ರತ್ನವನ್ನು ಈಗಲೇ ತರಿಸಿಕೊಳ್ಳಿರಿ-ಪೂರ್ವಕ್ಕಿಂತಲೂ ಎಷ್ಟೋ ಮಟ್ಟಿಗೆ ಹೆಚ್ಚಾಗಿ ತಯಾರಿಸಲ್ಪಟ್ಟಿರುವುದು. 150 ಮಾತ್ರೆ ಸೀಸೆ 4 ಆಣೆ. [278-15]

ಎರಡು ರೂಪಾಯಿಗೆ ಕಡಮೆ ಇಲ್ಲದೆ ಔಷಧ ತರಿಸುವರಿಗೆ ಟ.ಕ. ಮಾಫಿ.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್, ನಂಜನಗೂಡು.

ಬ್ಯಾರರ್‌ನ ಮೆಡಿಕೇಟೆಡ್ ಪರಿಮಳ ನಸ್ಯದಪುಡಿ

ಈ ಅದ್ಭುತವಾದ ಪರಿಮಳ ನಸ್ಯದ ಪುಡಿಯನ್ನು ಉಪಯೋಗಿಸುವದರಿಂದ ಪೀನಸ, ತಲೆನೋವು, ನೆಗಡಿ, ಒಂಟಿ ತಲೆನೋವು, ಜಲದೋಷ, ತಲೆಭಾರ

ಮೊದಲಾದ ಅನೇಕ ವಿಧ ವ್ಯಾಧಿಗಳನ್ನು ಹೋಗಲಾಡಿಸಿ ಚಟುವಟಿಕೆಯನ್ನೂ, ಉತ್ಸಾಹವನ್ನೂ ಆನಂದವನ್ನೂ ಉಂಟುಮಾಡುತ್ತದೆ. ಅನೇಕ ಸಾರಿ ಇತರ ನಸ್ಯವನ್ನು ಹಾಕುವವರು ಇದನ್ನು ಒಂದು ಸಾರಿ ಹಾಕಿದರೆ ಸಾಕು. ಈ ನಸ್ಯವನ್ನು ಇತರ ನಸ್ಯದಲ್ಲಿ ಒಂದು ಚಿಟಿಕೆ ಹಾಕಿ ಕಲಸಿದರೆ ನಸ್ಯವೆಲ್ಲಾ ಸುವಾಸನೆಯಾಗುತ್ತೆ. ತಿರುಪಿನ ಗ್ಲಾಸು

ಡಬ್ಬಿ 1 ಕ್ಕೆ ಕ್ರಯ	0-3-0
ಡಜನ್ 12 ಡಬ್ಬಿಗೆ ಕ್ರಯ	2-0-0
1 ನೇ ನಂಬರ್ ಶೀಸೆ 12 ಕ್ಕೆ	1-4-0
2 ನೇ ನಂಬರ್ ಶೀಸೆ 12 ಕ್ಕೆ	0-8-0
3 ನೇ ನಂಬರ್ ಶೀಸೆ 12 ಕ್ಕೆ	0-5-0
9 ತೊಲೆ ಹಿಡಿಯುವ ಪರಿಮಳ ನಸ್ಯದ ಟಿನ್ ಡಬ್ಬಿ 1ಕ್ಕೆ	0-11-0

ಉತ್ತಮ ಮದರಾಸು ಸಾದಾ ನಸ್ಯ 24 ತೂ ಆಸಿಸದ ಸೇರು 1ಕ್ಕೆ 10 ಆಣೆ.

ತಾಕೀತು—ಅನೇಕ ಸುಳ್ಳು ಪ್ರಕಟನೆಗಳಿಂದ ಜನಗಳಿಗೆ ನಂಬಿಕೆ ತಪ್ಪಿರುವದು ಸಹಜವಾಗಿದೆ. ಆದಕಾರಣ ಮೇಲೆ ಕಾಣಿಸಿದ ಸಾಮಾನುಗಳನ್ನು ಕೋರುವ ದರಖಾಸ್ತುದಾರರಿಗೆ ವಿ. ಪಿ. ಛಾರ್ಜಿ ಸಂಗಡಲೇ ಪ್ರತ್ಯೇಕವಾಗಿ ಮಾದ್ರಿಯನ್ನು ಉಚಿತವಾಗಿ ಕಳುಹಿಸುತ್ತೇವೆ. ಅದನ್ನು ಪರೀಕ್ಷಿಸಿದನಂತರ ವಿ. ಪಿ. ಛಾರ್ಜಿ ಪಡೆಯಿರಿ.

ನಮ್ಮ ವಿಳಾಸ :—ಬ್ಯಾರರ್ ಕಂಪನಿ,
[49-4] 18, ಸೆಕೆಂಡ್ ಲೈನ್ ಬೀಚ್, ಮದರಾಸು.

ಡೋಂಗರೆ ಜ್ವರ

ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇವರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-29]

ಕ್ರಯ ಬಾಟ್ಲೆ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,
ಚೌಪಾಟಿ, ಗಿರಗಾಂವ, ಮುಂಬಯಿ.

ಅತ್ಯಾವಶ್ಯಕವಾಗಿ ಜೇಬಿನಲ್ಲಿ ಇಡತಕ್ಕ ಔಷಧವು.

ಸೆಲಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವದು. ಈ ಸೆಲಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವದಲ್ಲದೆ ತಲೆಯ ...ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ...ಕೂಲವನ್ನು ಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಉಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ...ಪ್ರವೃತ್ತಿಯು ಕ್ರಮವಾಗಿ ಜರುಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗ...ಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ಪಷ್ಟಗೊಳಿಸುವುದು. (4) ಹಾಡ...ವವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾ...ಗಿರುವವು. (5) ಬೇಸಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ಅವರ ...ಆರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಲಿಂತಾನದ ...ಡು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ [33-7]

...ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	560 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
... ,, ,, ,, 4 ,,	300 ,, ,, ,, 9 ,,	80 ,, ,, ,, 4 ,,	1300 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಕೊಡುವುದು ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಲಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ...ಗೆ ಇಡಲಾಗಿದೆ. ನಮ್ಮ ದಕ್ಷಿಣ ಕನಡಾ ಏಜಂಟರು—ದಿ ಉರ್ಲ ಮಾರ್ಟ್, ಮಂಗಳೂರು.

ಗಂಟ್ಲಿನ ರೋಗ್ಯ ...

ಸಾಧಾರಣವಾದ ಗಂಟಲುನೋವುಗಳಲ್ಲಿ ...ಓರಿಯಂಟಲ್ ಬಾಂ ಎಂಬುದನ್ನು ಒಂದು ...ವನ ಎರಡಾವರ್ತಿ ಉಪಯೋಗಿಸುವದರಿಂದ ಸುಲಭವಾಗಿ ವಾಸಿಮಾಡುತ್ತೆ. ... ನಿರ್ಲಕ್ಷ್ಯಮಾಡುವದಾದರೆ, ... ನೆಗಡಿಯೂ ಕೆಮ್ಮೂ ಇತರ ... ವಾದ ದೊಡ್ಡರೋಗಗಳು ... ವವು. ಇಷ್ಟು ಸ್ವಲ್ಪ ಬೆಲೆಗೆ ಇಷ್ಟು ... ಭವಾಗಿಯೂ ಖಂಡಿತವಾಗಿಯೂ ... ದೊರಕುವದರಿಂದ ಆಸ್ಪದ ...

ಸಾಧಾರಣ ಗಂಟಲು ನೋವಿ... ಅಥವಾ ಹಾನಿಕರವಾದ ಕೆಮ್ಮುಗಳಿಗೆ ಲಿಟ್ಲ್ಸ್ ಓರಿಯಂಟಲ್ ಬಾಮಿನಷ್ಟು ಖಂಡಿತವಾಗಿಯೂ ವೇಗವಾಗಿಯೂ ವಾಸಿಮಾಡುವಂಥಾದ್ದು ಮತ್ತೊಂದಿಲ್ಲ.

ಉರ್‌ಸೆಸ್ಟರ್‌ಷೈರಿಗೆ ಸೇರಿರುವ ... ಪಟ್ಟಣದ ಮಿ॥ ಎ. ಪ್ರಿಸ್‌ಟೋಲ್ ರವರು ಬರೆಯುವದೇನಂದರೆ :—ನನಗೆ ಕಠಿಣ ಎದೆನೆಗಡಿಯಾಗಿ ಅದರಿಂದ ಕೆಮ್ಮಿಗೆ ಕಾರಣವಾಯಿತು. ಇದರಿಂದ ಯಾವಾಗಲೂ ಗಂಟಲನಲ್ಲಿ ಕಡತವೂ ... ಕೆಮ್ಮೂ ಆಗಿ ರಾತ್ರಿಯಲ್ಲಿ ನಿದ್ರೆ ಇರಲಿಲ್ಲ—ಹೇಳಿದ ಅನೇಕ ಔಷಧಿಗಳನ್ನು ಉಪಯೋಗಿಸಿ ಗುಣ ಕಂಡುಕೊಳ್ಳಲಿಲ್ಲ. ಕಡೆಗೆ ಲಿಟ್ಲ್ಸ್ ಓರಿಯಂಟಲ್ ಬಾಂ ಎಂಬದರಿಂದ ಗುಣವಾಯಿತು.

ಎಲ್ಲಾ ಔಷಧ ಮಾರುವವರಲ್ಲಿಯೂ ಸೀಸೆ 1ಕ್ಕೆ 1 ರೂ. ಮೇರಿಗೆ ಮಾರಲ್ಪಡುತ್ತೆ. [81-17]

ಷಾಪ್ ಸ್ಥಳ ಬದಲಾವಣೆ ನೋಟೀಸ್

ರಾಜಧಾನಿಯ ಅಯ್ಯಾಜಿರಾವ್ ರೋಡ್ ಮುಂಭಾಗದಲ್ಲಿ ಶ್ರೀ ಲಕ್ಷ್ಮೀನಾರಾಯಣ ಹಾಲ್ ಎಂಬ ಶೀಟು ಜವಳಿ ಅಂಗಡಿಯನ್ನು ಇಟ್ಟಿದ್ದೆವು ಶಿರಿಯಷ್ಟೆ. ಈಗ ಸದರಿ ಅಂಗಡಿಯು ದೇವರಾಜ ಮಾರ್ಕೆಟ್ಟಿನ ಪೂರ್ವ ದಿಕ್ಕಿನಲ್ಲಿರುವ ಮಾರ್ಕೆಟ್ ಬ್ಲಾಕ್‌ನಲ್ಲಿ ಇಡಲ್ಪಟ್ಟಿದೆ. [65-3]

ಎನ್. ಭಗವಂತರಾವ್ ಅಂಡ್ ಆರ್. ಸುಬ್ಬರಾವ್, ಪ್ರೊಪ್ರೈಟರ್ಸ್.

ವೃತ್ತಾಂತ ಪತ್ರಿಕೆ.

—:0:—

೧೯೧೬ ನೇ ಇಸವಿ ಮಾರ್ಚಿ ತಾ. ೨೩ ನೇ ಗುರುವಾರ.

ನಮ್ಮ ಗವರ್ನ್‌ಮೆಂಟಿನಲ್ಲಿ ಬದಲಾವಣೆಗಳು.

ಮೈಸೂರು ಸಂಸ್ಥಾನದ ಪ್ರಧಾನಿಯ ಕೌನ್ಸಿಲರಾದ ಸರ್ದಾರ್ ಎಂ. ಕಾಂತರಾಜೆ ಅರಸ್, ಸಿ.ಎಸ್.ಐ. ಯವರು ಆರು ತಿಂಗಳ ರಜಾ ಪಡೆದು ಜನಾರ್ಕ ರಾಷ್ಟ್ರಕ್ಕೆ ಹೋಗಿ ಬರಲು ಕಳೆದ ಸೋಮವಾರ ಬೆಂಗಳೂರಿನಿಂದ ಪ್ರಯಾಣ ಮಾಡಿದರು. ಅವರ ಈ ಪ್ರಯಾಣವು ಸುಖವಾಗಿ ಬೆಳೆಯಲೆಂದೂ, ಈ ದೇಶಾಟನೆಯಿಂದ ಅವರಿಗೂ, ಈ ನಮ್ಮ ಸಂಸ್ಥಾನಕ್ಕೂ ಹೇರಳವಾದ ಶ್ರೇಯಸ್ಸುಂಟಾಗಲೆಂದೂ ಹಾರೈಸುತ್ತೇವೆ.

ಕೊಚ್ಚಿ ಸಂಸ್ಥಾನದಲ್ಲಿ ದಿವಾನಗಿರಿಮಾಡಿದ ಮ|| ಎ. ಆರ್. ಬನರ್ಜೀ, ಸಿ.ಐ.ಇ. ಯವರು ಮ|| ಕಾಂತರಾಜೆ ಅರಸಿನವರ ಬದಲು ಪ್ರಧಾನಿಯ ಕೌನ್ಸಿಲರಾಗಿ ನೇಮಕವಾಗಿ ಬಂದು ಮೊನ್ನೆ ಮಂಗಳವಾರ ಕೆಲಸದ ಛಾರ್ಜನ್ನು ವಹಿಸಿಕೊಂಡಿದ್ದಾರೆ. ಈ ಪ್ರಕಾರ ಹೊಸಬರನ್ನು ಕರೆತರುವುದಕ್ಕೆ ನಮ್ಮ ಗವರ್ನ್‌ಮೆಂಟಿನವರು ಯಾವ ಕಾರಣವನ್ನೂ ಪ್ರಕಟಮಾಡಲಿಲ್ಲ; ಆದರೂ ಅವರು ಕಾರಣಗಳಿಲ್ಲದೆ ಈ ರೀತಿ ಪ್ರವರ್ತಿಸಲಿಲ್ಲವೆಂದು ನೆನೆಸುತ್ತೇವೆ. ಆ ಪದವಿಯು ವಿಶೇಷ ಜವಾಬ್ದಾರಿಯುಳ್ಳದ್ದು; ಮ|| ಬನರ್ಜೀಯವರು ಈ ಅಧಿಕಾರದಲ್ಲಿದ್ದುಕೊಂಡು ನಮ್ಮ ಸಂಸ್ಥಾನವನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ವಿಶೇಷ ಸಾಹಸಪಟ್ಟಾರೆಂದು ನಂಬಿ ನಿರೀಕ್ಷಿಸುತ್ತೇವೆ.

ನಮ್ಮ ಸೀಮೆಯ ಗ್ರಾಮಾಂತರಗಳು.

ಹಳ್ಳಿಗಾಡುಗಳನ್ನು ಅಭಿವೃದ್ಧಿಮಾಡಬೇಕೆಂಬ ಉದ್ದೇಶದಿಂದ ಮೈಸೂರು ಗವರ್ನ್‌ಮೆಂಟಿನವರು ಏರ್ಪಾಡು ಮಾಡಿದ್ದಾರಷ್ಟೆ. ಈ ವಿಚಾರದಲ್ಲಿ ರೆವಿನ್ಯೂ ಕಮಿಷನರ್‌ರವರು ಒದಗಿಸಿರುವ ಕೆಲವು ಸಂಗತಿಗಳನ್ನು ಸರ್ಕಾರದವರು ಪ್ರಕಟಮಾಡಿದ್ದಾರೆ. ಇದರಲ್ಲಿ ಕಾಣಿಸಿರುವ ಲೆಕ್ಕಗಳು ಖಚಿತವಾದವುಗಳೆಂದು ಹೇಳಲು ನಮಗೆ ನಂಬಿಕೆ ಸಾಲದು; ಈ ಲೆಕ್ಕಗಳಿಂದ ಯಥಾರ್ಥವಾಗಿ ಗೊತ್ತಾಗುವ ಗೂಢಾಭಿಪ್ರಾಯಗಳೇನೋ ನಮಗೆ ತಿಳಿಯಲಿಲ್ಲ. ಅವು ಕೆಲವು ವಿಷಯಗಳನ್ನು ಸೂಚಿಸುತ್ತವೆ. ನಮ್ಮ ಗವರ್ನ್‌ಮೆಂಟಿನವರು ಗ್ರಾಮಸ್ಥರಿಗೆ ಸಹಾಯ ಪ್ರೋತ್ಸಾಹಗಳನ್ನು ಒದಗಿಸಬೇಕೆಂಬ ಭಾಗದಲ್ಲಿ ಕುತೂಹಲಪಡುವರು. ಅನೇಕ ಹಳ್ಳಿಗಳಲ್ಲಿರುವ ಪ್ರಜೆಗಳಿಗೆ ಬಿಟ್ಟ ಪಾಠಗಳನ್ನು ಹೇಳುವುದು, ಅವರಲ್ಲಿ ಅನ್ಯೋನ್ಯಪ್ರೀತಿ ಭರವಸೆಗಳು ಹುಟ್ಟುವಂತೆ ಪ್ರೋತ್ಸಾಹಪಡಿಸುವುದು, ಅವರಿಗೆ ಹಿತಕರವಾಗುವಂಥಾ ವಿಚಾರಗಳನ್ನು ತಿಳಿಸಿ ಅಂಥಾ ಕೆಲಸಗಳನ್ನು ಅವರೇ ಮಾಡಿಕೊಳ್ಳುವಂತೆ ವಿವೇಕವನ್ನು ಹೇಳಿಕೊಡುವುದು. ಈ ಭಾಗಗಳಲ್ಲೇನೋ ಕೆಲವು ಮಟ್ಟಿಗೆ ಕೆಲಸಕಾರ್ಯಗಳು ನಡೆದಿರುತ್ತವೆ. ಇಷ್ಟು ಮಟ್ಟಿಗೆ ಎಲ್ಲಾ ಚೆನ್ನಾಗಿದೆ ಎಂದು ಹೇಳಬಹುದು.

ನಮ್ಮ ಗವರ್ನ್‌ಮೆಂಟಿನಲ್ಲಿ ಆತುರವು ವಿಶೇಷವಾಗಿರುವಂತೆ ಕಾಣುತ್ತದೆ. ಅವರು ಉದ್ದೇಶಪಟ್ಟ ಕಾರ್ಯಗಳೆಲ್ಲಾ ಅತ್ಯಲ್ಪ ಕಾಲದೊಳಗಾಗಿ ನೆರವೇರಿ ಎಲ್ಲಾ ಕಳಕಳಿಸುವಂತಾಗಬೇಕೆಂದೂ, ಪ್ರಜೆಗಳು ಸಮ್ಮತಿಪಟ್ಟರೂ ಪಡದೆಹೋದರೂ ಸರ್ಕಾರದವರು ಸೂಚಿಸುವ ಕೆಲಸಕಾರ್ಯಗಳು ಬಲವಂತದಿಂದಾಗಲಾದರೂ ನೆರವೇರಬೇಕೆಂದೂ ನಿರೀಕ್ಷಿಸುವಂತೆ ಕಾಣುತ್ತದೆ. ಗ್ರಾಮದಲ್ಲಿ ಒಂದು ಪಾಠಶಾಲೆಯಾಗುವುದೇನೋ ಒಳ್ಳೇದೇ ಸರಿ; ಆದರೆ ಕನ್ನಡ ಲೋಯರ್ ಸೆಕಂಡರಿ ಪರೀಕ್ಷೆ ಕೊಡದಿದ್ದವನೂ, ಜಗತ್ತಾನೆ ತೇರ್ಗಡೆಹೊಂದದವನೂ ಉಪಾಧ್ಯಾಯನಾದರೆ ಆ ಗ್ರಾಮದ ಮಕ್ಕಳ ವಿದ್ಯಾಭ್ಯಾಸವು ಹುರುಳಿಲ್ಲದ್ದಾಗುತ್ತದೆ. ಗ್ರಾಮಪಾಠಶಾಲೆಗೆ ಅನುಭವವುಳ್ಳವನೇ ಉಪಾಧ್ಯಾಯನಾಗಬೇಕು. ಗ್ರಾಮಗಳಲ್ಲಿ ವಾಚನಶಾಲೆಗಳನ್ನೂ ಪುಸ್ತಕ ಭಂಡಾರಗಳನ್ನೂ ಇಟ್ಟು ನಡಿಸುವುದೂ, ವರ್ತಮಾನ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಗ್ರಾಮಸ್ಥರಿಗೆ ಓದಿ ಹೇಳುವುದೂ ಒಳ್ಳೇದೇ; ಆದರೆ ಗ್ರಾಮಸ್ಥರು ಈ ರೀತಿ ತಿಳಿದುಕೊಳ್ಳುವ ಸಂಗತಿಗಳನ್ನು ಆಚರಣೆಗೆ ತರಬೇಕಾದಲ್ಲಿ ಅವರಿಗೆ ಚೈತನ್ಯವೂ ಬಂಡವಾಳವೂ ಬೇಕಾದೀತು. ಇದರಲ್ಲಿ ಇನ್ನೊಂದು ಕಷ್ಟವಿದೆ. ಪತ್ರಿಕೆಗಳಲ್ಲೂ ಪುಸ್ತಕಗಳಲ್ಲೂ ಅನೇಕ ಸಂಗತಿಗಳು ಪ್ರಕಟವಾಗುವವು. ಇವುಗಳ ಪೈಕಿ ಯಥಾರ್ಥವೂ ಸಮಂಜಸವೂ ಸಾಧ್ಯವೂ ಆದವುಗಳ್ಯಾವವೋ ನಿರ್ಧರಿಸಿ ತಿಳಿದುಕೊಳ್ಳುವುದಕ್ಕೆ ಗ್ರಾಮಸ್ಥನಿಗೆ ಶಕ್ತಿ ಶಕ್ತಿಯಾಗಲಿ ವಿವೇಕವಾಗಲಿ ಇಲ್ಲವಲ್ಲಾ ! ಅವನಿಗೆ ಸಂಗತಿ ಹೀಗಿದೆ ಎಂಬು ಸರಿಯಾಗಿ ಹೇಳಿಕೊಡುವುದಕ್ಕೂ, ಅವನು ತನ್ನನ್ನೂ ತನ್ನ ಸಂಸಾರವನ್ನೂ ತನ್ನ ಜಮೀನು ದನ ಕುರಿಗಳನ್ನೂ ತನ್ನ ಗ್ರಾಮವನ್ನೂ ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಹೀಗೆ ಹೀಗೇ ನಡೆದುಕೊಳ್ಳಬೇಕೆಂದು ಸಾಕ್ಷಾತ್ತಾಗಿ ಕಲಿಸಿಕೊಡುವುದಕ್ಕೂ ಸಾಮರ್ಥ್ಯವನ್ನೂ ಪ್ರೀತಿ ವಿಶ್ವಾಸವನ್ನೂ ದೇಶವಾತ್ಸಲ್ಯವನ್ನೂ ಪಡೆದಿರುವಂಥಾ ಪುರುಷನಾಗಬೇಕು. ಇದೆಲ್ಲಾ ಒದಗುವುದು ನಿದಾನ; ಕಾಲಕ್ರಮದಲ್ಲಿ ಆದೀತು. ಕಡೆಯಲ್ಲಿ ಇದರಿಂದ ಸಕಲರಿಗೂ ಶ್ರೇಯೋಭಿವೃದ್ಧಿಯುಂಟಾಗುವುದು. ಆದಕಾರಣ ಅಸಾಧ್ಯವಾದ ಕಾರ್ಯಗಳನ್ನು ಅಧಿಕಾರಿಗಳಿಗೂ ನೌಕರರಿಗೂ ನಮ್ಮ ಗವರ್ನ್‌ಮೆಂಟಿನವರು ವಹಿಸಬಾರದೆಂದೂ, ಅವು ನೆರವೇರಲಿಲ್ಲವೆಂದು ಆತುರಪಡಬಾರದೆಂದೂ ಹಾರೈಸುತ್ತೇವೆ.

ಮೇಲ್ಕಂಡ ಸರ್ಕಾರಿ ಲೆಕ್ಕಗಳಿಂದ ನಮ್ಮ ಸಂಸ್ಥಾನದಲ್ಲಿ ಒಟ್ಟು 17,682 ಗ್ರಾಮಗಳಿರುವುದಾಗಿಯೂ, ಈ ಪೈಕಿ 8,006 ಗ್ರಾಮಗಳಲ್ಲಿ ಗ್ರಾಮಾಭಿವೃದ್ಧಿ ಸಂಘಗಳು ಏರ್ಪಾಡಾಗಿರುವಂತೆಯೂ ತಿಳಿದುಬರುತ್ತದೆ. ಇದರಲ್ಲೂ 3,483 ಹಳ್ಳಿಗಳ ಸಂಘಗಳು ಯಥಾರ್ಥವಾದ ಕೆಲಸಗಳನ್ನು ಮಾಡುತ್ತಲಿರುವವಂತೆ. ಇದಲ್ಲದೆ 7,371 ಗ್ರಾಮಗಳಲ್ಲಿ ರೈತಪ್ರಜೆಗಳು ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿ ವಾರಕ್ಕೆ ಅರ್ಧ ದಿನದಂತೆ ವಿನಿಯೋಗಿಸುತ್ತೇವೆಂದು ಒಪ್ಪಿಕೊಂಡಿರುವುದಾಗಿಯೂ, ಇದುವರೆಗೆ ಈ ಪ್ರಕಾರ 3,73,134 ರೂಪಾಯಿನ ಕೆಲಸಕಾರ್ಯಗಳು ನಡೆದಿರುವಂತೆಯೂ ಹೇಳಲಾಗಿದೆ. ಆದರೆ ಯಾವ ಯಾವ ಕೆಲಸಗಳಿಗೆ ಇಷ್ಟು ಹಣ ಖರ್ಚಾಗಿದೆಯೋ ತಿಳಿಸಿಲ್ಲ; ತಿಳಿಸಿದ್ದ ಪಕ್ಷದಲ್ಲಿ ಅವುಗಳ ಯೋಗ್ಯತೆ ಗುಣಾವಗುಣಗಳನ್ನು ಅರಿಯಬಹುದಾಗಿತ್ತು. ಹ್ಯಾಗೂ ಈ ಲೆಕ್ಕಗಳನ್ನೆಲ್ಲಾ ನಂಬಬಹುದಾದ ಪಕ್ಷದಲ್ಲಿ ಅಭಿವೃದ್ಧಿಯ ಕಾರ್ಯಗಳು ಪ್ರಾರಂಭವಾಗಿರುತ್ತವೆಂದೂ, ಕಾಲಕ್ರಮೇಣ ಒಳ್ಳೇ ಫಲಗಳು ಲಭ್ಯವಾಗಬಹುದೆಂದೂ ಹೇಳತಕ್ಕದ್ದಾಗಿದೆ.

ಪ್ರತಿ ಒಂದು ತಾಲ್ಲೂಕನ್ನೂ ತೆಗೆದುಕೊಂಡು ಕೆಲಕೆಲವು ಗ್ರಾಮಗಳನ್ನು ಆಬಾದಿಗೆ ತರುವ ಪ್ರಯತ್ನಗಳು ಮುಖವಾಗಿಯಾಗಿ ನಡೆಯುವಂತಾದರೆ ಬಹಳ ಕ್ಷೇಮವಾದೀತು. ಅಮಲ್ದಾರ್ರು, ಸ್ಯಾನಿಟರಿ ಇನ್‌ಸ್ಪೆಕ್ಟರು, ಸ್ಕೂಲ್ ಮಾಸ್ಟರು, ಪಟೇಲ, ಇವರೆಲ್ಲಾ ವಿಶೇಷವಾಗಿ ಸಾಹಸಪಟ್ಟು ಕೆಲವು ಗ್ರಾಮಗಳನ್ನು ಅಚ್ಚುಕಟ್ಟಾಗಿಯೂ, ಆರೋಗ್ಯಜನಕವಾಗಿಯೂ ಮಾಡಿಸಿಟ್ಟರೆ ಉಳಿದ ಗ್ರಾಮಗಳವರೂ ಅವುಗಳನ್ನು ನೋಡಿ ಅದೇ ರೀತಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಉದ್ಯುಕ್ತಪಟ್ಟಾರೆನ್ನುವುದಕ್ಕೆ ಸಂಶಯವಿರಲಾರದು. ಗ್ರಾಮದಲ್ಲಿ ಮನೆಗಳ ರೊಚ್ಚು ನೀರೂ ಮಳೆ ನೀರೂ ಸೇರಿ ಕೇರಿಗಳಲ್ಲೂ ಸಂದಿಗಳಲ್ಲೂ ಹರಿಯದ ಹಾಗೂ, ಪ್ರತಿಯೊಂದು ಮನೆಯೊಳಗೂ ಬೆಳಕು ಗಾಳಿ ಧಾರಾಳವಾಗಿ ಸಂಚರಿಸುವ ಹಾಗೂ, ಮನೆಗಳಿಗೂ ದನಗಳ ಕೊಟ್ಟಿಗೆಗಳಿಗೂ ಸ್ವಲ್ಪವೂ ಸಂಬಂಧವೇ ಇಲ್ಲದ ಹಾಗೂ, ರೈತರಿಗೆಲ್ಲಾ ನಿರ್ಮಲವಾದ ಕುಡಿಯುವ ನೀರು ಒದಗುವ ಹಾಗೂ, ಪ್ರತಿ ಮನೆಯ ಸಮೀಪದಲ್ಲೂ ತರಕಾರಿ ಕೈತೋಟವೂ ಹೂವುಗಳು ಬಿಡುವ ತೋಟವೂ ಇರುವ ಹಾಗೂ, ಗ್ರಾಮದ ಎಲ್ಲಾ ಕಡೆಗಳೂ ನಿರ್ಮಲವಾಗಿಯೂ ಆರೋಗ್ಯಕರವಾಗಿಯೂ ಇರುವ ಹಾಗೂ ಆದದ್ದನ್ನು ನೋಡಬೇಕೆಂದು ಕುತೂಹಲಪಡುತ್ತೇವೆ. ಇಷ್ಟೆಲ್ಲಾ ಆಗುವುದು ಸುಲಭಸಾಧ್ಯವಲ್ಲ; ಇದಕ್ಕೆ ಬಹಳ ಕಾಲ ಹಿಡಿದೀತು. ಆದರೂ ಅಧಿಕಾರಿಗಳೂ ನೌಕರಮಾನ್ಯರುಗಳೂ ಪ್ರಜೆಗಳಿಗೆ ಬಹಳ ಹೇಳಿ ಅವರನ್ನು ಪ್ರೋತ್ಸಾಹಪಡಿಸುತ್ತಾ ಬಂದ ಪಕ್ಷದಲ್ಲಿ ಅನೇಕ ಗ್ರಾಮಗಳ ಸ್ಥಿತಿಗತಿಯೂ ಬಹಳ ಚೆನ್ನಾಗಿಯೂ, ಆರೋಗ್ಯಕರವಾಗಿಯೂ ಆಗುತ್ತದೆ. ಈ ಗ್ರಾಮಾಭಿವೃದ್ಧಿ ಕಾರ್ಯವು ತೃಪ್ತಿಕರವಾಗಿ ನಡೆಯುವುದಕ್ಕೆ ವಿಶೇಷ ಕಷ್ಟಪಡಬೇಕಾಗುವುದು. ಇದಕ್ಕೆ ಪ್ರತಿಯಾಗಿ ಏಕಕಾಲದಲ್ಲಿ 1,000 ಗ್ರಾಮಗಳನ್ನು ಆಬಾದು ಮಾಡುತ್ತೇವೆಂದು ಸಾಹಸಪಡುವುದು ಬರೀ ಉತ್ಸಾಹದಲ್ಲಿ ಸಾಗಾಣಿಕೆಯೊಂದೇ ಹೊರತು ಕೆಲಸಗಳು ಸಾರ್ಥಕವಾಗುವುದಿಲ್ಲ. ಕೆಲವು ಗ್ರಾಮಗಳನ್ನು ಆಬಾದು ಮಾಡಿದ ಪಕ್ಷದಲ್ಲಿ ಉಳಿದ ಗ್ರಾಮಗಳು ಅವುಗಳನ್ನು ನೋಡಿ ಕ್ರಮಪಡುವವು.

ವಿವೇಕವೂ ಬುದ್ಧಿವಂತಿಕೆಯೂ ಕಾಣಬರುವುದೊಂದೇ ದೊಡ್ಡ ಕೊರತೆಯಾಗಿದೆ. ಸ್ಯಾನಿಟೇಷನ್ ಕ್ರಮಗಳನ್ನೂ, ನಿರ್ಮಲವಾದ ಗಾಳಿ ನೀರುಗಳ ಪ್ರಯೋಜನಗಳನ್ನೂ ತಿಳಿದಿರುವವರೇ ಆ ಪ್ರಕಾರ ನಡೆದುಕೊಳ್ಳುವುದಿಲ್ಲ. ವಿದ್ಯಾವಂತರೂ ಬುದ್ಧಿಶಾಲಿಗಳೂ ತಮ್ಮಲ್ಲಿರುವ ಕೆಟ್ಟ ಆಚರಣೆಗಳನ್ನು ವರ್ಜಮಾಡಲಾರದೆ ಹೋದರೆ ಮೌಢ್ಯದಲ್ಲಿ ಬಿದ್ದುಕೊಂಡಿರುವ ಗ್ರಾಮಾಂತರ ಪ್ರಜೆಗಳು ಹೇಗೆತಾನೇ ಬೇಗ ಅಭಿವೃದ್ಧಿಗೆ ಬಂದಾರು ?

ಜಾತಿಯು.

ಜಾತಿಯ ಕಟ್ಟಳೆಗಳನ್ನು ಕೈಕೊಳ್ಳುತ್ತಾ ಬರುವದೇ ಭಾರತೀಯರ ಮತವಾಗಿದೆಯೆಂದು ಹೇಳುವದುಂಟು. ನಾವು ಬೇರೆ ಎಲ್ಲವುಗಳಿಗಿಂತಲೂ ಹೆಚ್ಚಾಗಿ ಜಾತಿಯಿಂದ ಬಂಧಿಸಲ್ಪಟ್ಟಿರುವದು ವಾಸ್ತವವೇ ಆಗಿದೆ. ಹೀಗಿದ್ದರೂ ತಾವು ಒಂದು ಜಾತಿಗೆ ಸೇರಿ ಅದರ ಕಟ್ಟಳೆಗಳನ್ನು ಕೈಕೊಳ್ಳುತ್ತಾ ಬರುವದಕ್ಕೆ ಕಾರಣವೇನೆಂದು ಹೇಳ ಶಕ್ತರಾಗಿರುವವರು ಕೇವಲ ವಿರಳ. ರಾಜಧಾನಿಯ ಓರಿಯಂಟಲ್ ಲೈಬ್ರರಿಯ (ಪೌರಾತ್ಯ ಸಂಸ್ಕೃತಿಭಂಡಾರದ) ಕಾರುಬಾರಿಗಾರರಾಗಿರುವ ಮ|| ಎ. ಮಹಾದೇವಶಾಸ್ತ್ರಿಗಳು "ವೇದಗಳ ಕಾಲದ ಮತವೂ ಜಾತಿಯೂ" ಎಂಬ ನಾಮಾಂಕಿತವುಳ್ಳ ಒಂದು ಚಿಕ್ಕ ಪುಸ್ತಕವನ್ನು ಇಂಗ್ಲಿಷ್ ಭಾಷೆಯಲ್ಲಿ ಕೆಲವು ದಿನಗಳ ಹಿಂದೆ ಪ್ರಕಟಿಸಿರುತ್ತಾರೆ. ಅದು ಕನ್ನಡ ಭಾಷೆಯಲ್ಲಿಯೂ ಪ್ರಕಟಿಸಲ್ಪಟ್ಟರೆ ನಮಗೆ ಬಹಳ ಸಂತೋಷವಾಗುವದು.

ಮ|| ಮಹಾದೇವಶಾಸ್ತ್ರಿಗಳು ಹೇಳುವದೇನಂದರೆ:— ಪ್ರಾರಂಭದಲ್ಲಿ ಸರ್ವರೂ ಬ್ರಾಹ್ಮಣರೆಂಬ ಒಂದೇ ವರ್ಣಕ್ಕೆ ಸೇರಿದವರಾಗಿದ್ದರೆಂದು ವೇದಗಳಿಂದಲೂ ಇತಿಹಾಸಗಳಿಂದಲೂ ತಿಳಿದುಬರುತ್ತದೆ. ಈ ಒಂದೇ ವರ್ಣದವರು ತಮ್ಮ ಕಾರ್ಯಗಳ ಅಥವಾ ವೃತ್ತಿಗಳ ದೆಸೆಯಿಂದ ನಾಲ್ಕು ವರ್ಣಗಳಾಗಿ ವಿಭಾಗವಾದರು. ಕೆಲವರು ಪಾರಮಾರ್ಥಿಕ ವಿಷಯಗಳನ್ನು ಸಂಪೂರ್ಣವಾಗಿ ಅಲಕ್ಷ್ಯಮಾಡಿದ್ದರಿಂದ ಮ್ಲೇಚ್ಛರಾದರು. ಸರ್ವರಿಗೂ ಒಂದೇ ವೇದವೂ ಒಂದೇ ಮತವೂ ಒಂದೇ ವಿಧವಾದ ದೇವಾರಾಧನೆಯೂ ಇದ್ದವು. ಪುರೋಹಿತರೂ ಗುರುಗಳೂ, ಯುದ್ಧಭಟರೂ ದೊರೆಗಳೂ, ಕೃಷಿಮಾಡುವವರೂ ವ್ಯಾಪಾರಿಗಳೂ, ಕೈಗಾರಿಕೆ ಕೆಲಸದವರೂ ಆಳುಗಳೂ ಎಂಬೀ ವೃತ್ತಿಗಳಿಂದ ನಾಲ್ಕು ರಾಶಿಗಳಾಗಿದ್ದವು. ಅವರಲ್ಲಿ ವೃತ್ತಿಭೇದಗಳಿದ್ದಾಗ್ಯೂ ಪಾರಮಾರ್ಥಿಕ ವಿಷಯಗಳಲ್ಲಿ ಅವರೆಲ್ಲರೂ ಸರಿಸಮಾನರಾಗಿಯೂ ಏಕವಾಗಿಯೂ ಒಂದೇ ಧರ್ಮವನ್ನನುಸರಿಸುವವರಾಗಿಯೂ ಇದ್ದರು.

ಯಾವ ಸೂತ್ರವು ಜನಗಳನ್ನು ಒಕ್ಕಟ್ಟಾಗಿ ಮಾಡಿತೋ ಆ ಸೂತ್ರವೇ ಅವರ ಧರ್ಮವಾಗಿತ್ತು. ಈ ವಿಷಯದಲ್ಲಿ ಬ್ರಾಹ್ಮಣನಿಗೂ ಕ್ಷತ್ರಿಯನಿಗೂ ವೈಶ್ಯನಿಗೂ ಶೂದ್ರನಿಗೂ ಯಾವ ಭೇದವಾದರೂ ಇರಲಿಲ್ಲ. ಆದರೆ ಕಾಲಕ್ರಮೇಣ ಅದಾಯದ ಮೇಲಣ ಅಪೇಕ್ಷೆಯು ಧರ್ಮದ ಮೇಲಣ ಪ್ರೇಮವನ್ನು ಹಾಳುಮಾಡಿಬಿಟ್ಟಿತು. ಜನಗಳಲ್ಲಿ ಏಕಮತ್ಯವು ತಪ್ಪಿಹೋಯಿತು. ಆದರೆ ಆ ಕಾಲದಲ್ಲಿ ಒಬ್ಬನು ಒಂದು ವರ್ಣವನ್ನು ಬಿಟ್ಟು ಮತ್ತೊಂದು ವರ್ಣಕ್ಕೆ ಸೇರಿಕೊಳ್ಳುವದು ಸುಲಭಸಾಧ್ಯವಾಗಿತ್ತು. ಅನೇಕರು ಹೀಗೆ ಮಾಡುತ್ತಿದ್ದರು. ಆದರೆ ಆದಾಯದ ಮೇಲಣ ಅಪೇಕ್ಷೆಯು ಹೆಚ್ಚಿದ ಹಾಗೆಲ್ಲಾ ಜಾತಿಗಳೂ ಹೆಚ್ಚಿದವು. ಕೆಲವರು ತಮ್ಮನ್ನು ಇತರರಿಗಿಂತ ಶ್ರೇಷ್ಠರೆಂದು ಭಾವಿಸಿಕೊಂಡರು. ಕಡೆಗೆ ಒಂದು ನಾಯಿಯು ಕುದುರೆಯಾಗುವದು ಎಷ್ಟು ಅಸಾಧ್ಯವೋ ಒಬ್ಬನು ತನ್ನ ಜಾತಿಯನ್ನು ಬಿಟ್ಟು ಮತ್ತೊಂದು ಜಾತಿಗೆ ಸೇರಿಕೊಳ್ಳುವದು ಅಷ್ಟು ಅಸಾಧ್ಯವಾಯಿತು.

ಭಗವದ್ಗೀತೆಯಲ್ಲಿ ಮನುಷ್ಯರು ತಮ್ಮ ಅಭಿಪ್ರಾಯಗಳಲ್ಲಿ ವ್ಯಕ್ತಪಡಿಸುವ ತಮ್ಮ ಸ್ವಾಭಾವಿಕವಾದ ಇಚ್ಛೆಗಳ ಪ್ರಕಾರ ನಾಲ್ಕು ರಾಶಿಗಳಾಗಿ ವಿಭಾಗಿಸಲ್ಪಟ್ಟಿರುತ್ತಾರೆ. ಒಬ್ಬನು ಯತಿಯಾಗಿರುವದಕ್ಕೂ ಮತ್ತೊಬ್ಬನು ಯುದ್ಧಮಾಡುವದಕ್ಕೂ ಮೂರನೆಯವನು ವ್ಯಾಪಾರ ಮಾಡುವದಕ್ಕೂ ನಾಲ್ಕನೆಯವನು ಕೈಗಾರಿಕೆ ಕೆಲಸ ಮಾಡುವದಕ್ಕೂ ಅಪೇಕ್ಷಿಸುತ್ತಾರೆ. ಆದ್ದರಿಂದ ಇವುಗಳು ಮನುಷ್ಯರಲ್ಲಿರುವ ಸ್ವಾಭಾವಿಕವಾದ ರಾಶಿಗಳಾಗುತ್ತವೆ. ಆದರೆ ದೇವರಲ್ಲಿ ಇಡತಕ್ಕ ಭಕ್ತಿಯ ವಿಷಯದಲ್ಲಿ ಎಲ್ಲರೂ ಒಂದೇ ಆಗಿರುತ್ತಾರೆ. ಎಲ್ಲರೂ ಭಕ್ತಿವೃದ್ಧಿ ಮಾಡಿಕೊಳ್ಳಬಹುದು. ಪವಿತ್ರರಾಗುವದೂ ಸತ್ಯಸಂಧರಾಗುವದೂ ಪಾರಮಾರ್ಥಿಗಳಾಗುವದೂ ಸರ್ವರಿಗೂ ಸಾಧ್ಯವಾಗಿದೆ. ಇವರು ಮಾತ್ರ ವಾಸ್ತವವಾದ ಬ್ರಾಹ್ಮಣರು. ಒಬ್ಬನು ಬ್ರಾಹ್ಮಣನ ಕುಟುಂಬದಲ್ಲಿ ಹುಟ್ಟಿ ಆ ಗುಣಗಳನ್ನು ವೃದ್ಧಿಮಾಡಿಕೊಳ್ಳದೆ ಇರುವ ಪಕ್ಷದಲ್ಲಿ ಅಂಥವನನ್ನು ಬ್ರಾಹ್ಮಣನೆಂದು ಕರೆಯಲಾಗದು. ಆದರೆ ಒಬ್ಬನು ಕೀಳುಜಾತಿಯಲ್ಲಿ ಶೂದ್ರನಾಗಿ ಹುಟ್ಟಿದವನಾದಾಗ್ಯೂ ಧರ್ಮಮಾರ್ಗದಲ್ಲಿ ನಡೆಯುವವನಾದರೆ ಅಂಥವನು ಬ್ರಾಹ್ಮಣ ಗುಣಲಕ್ಷಣಗಳನ್ನು ವೃದ್ಧಿಮಾಡಿಕೊಳ್ಳಲು ಬದ್ಧನಾಗಿರುತ್ತಾನೆ. ಅವನು ಅವುಗಳನ್ನು ಬಹುಮಟ್ಟಿಗೆ ವೃದ್ಧಿಮಾಡಿಕೊಂಡರೆ, ಅವನನ್ನು ಜ್ಞಾನಮಾರ್ಗದಲ್ಲಿ ನಡೆಯುವಂತೆಯೂ ಬ್ರಾಹ್ಮಣನೆಂದು ಎಣಿಸಲ್ಪಡದಂತೆಯೂ ಅಡ್ಡಿಪಡಿಸುವಂಥಾದ್ದು ಯಾವದೂ ಇರಲಾರದು. ಒಬ್ಬನನ್ನು ಬ್ರಾಹ್ಮಣನನ್ನಾಗಿ ಮಾಡುವಂಥಾದ್ದು ಅವನ ಜನ್ಮವಲ್ಲ. ಅವನ ಗುಣನಡತೆಗಳೇ ಅವನನ್ನು ಬ್ರಾಹ್ಮಣನನ್ನಾಗಿ ಮಾಡುತ್ತವೆ.

ಮ|| ಮಹಾದೇವಶಾಸ್ತ್ರಿಗಳು ಹೇಳುವದೇನಂದರೆ:— ತಲೆತಲಾಂತರದಿಂದ ಮುಂದಕ್ಕೆ ಬಂದಿರುವ ಈ ಶ್ರೇಷ್ಠ ವರ್ಣಗಳವರು ವಾಸ್ತವವಾದ ಧರ್ಮದ ಪರಿಜ್ಞಾನವಿಲ್ಲದೆ ಜಾತಿಮದದಿಂದ ತುಂಬಿದವರಾಗಿ ತಮ್ಮ ಸ್ವಂತ ದೇಶಬಾಂಧವರಾದ ಇತರ ವರ್ಣಗಳವರನ್ನು ಕನಿಷ್ಠರೆಂದು ಹಿಂದಕ್ಕೆ ತಳ್ಳಿಬಿಟ್ಟಿರುತ್ತಾರೆ. ಇಷ್ಟೇ ಅಲ್ಲ. ಅವರು ವಿವೇಕಿಯಾಗಿದ್ದರೂ, ಅವರ ಗುಣಲಕ್ಷಣಗಳನ್ನಾಗಲಿ ಪಾಂಡಿತ್ಯವನ್ನಾಗಲಿ ಲಕ್ಷ್ಯಕ್ಕೆ ತಾರದೆ, ಹಿಂದುಗಳಲ್ಲಿ ಕನಿಷ್ಠ ಜಾತಿಯವರಿಗಿಂತಲೂ ಅತಿಭ್ರಷ್ಟರಿಗಿಂತಲೂ ಕನಿಷ್ಠರಾಗಿಯೂ ಹೊಕ್ಕುಬಳಕೆಮಾಡುವದಕ್ಕೆ ಅನರ್ಹರಾಗಿಯೂ ಇರುತ್ತಾರೋ ಎಂಬಂತೆ ಭಾವಿಸುತ್ತಾ ಬಂದಿರುತ್ತಾರೆ...... ಹಿಂದುಗಳಲ್ಲಿ ಶ್ರೇಷ್ಠ ವರ್ಣಗಳವರು ಕನಿಷ್ಠ ವರ್ಣಗಳವರ ವಿಷಯದಲ್ಲಿಯೂ ವಿದೇಶೀಯರ ವಿಷಯದಲ್ಲಿಯೂ ಈ ರೀತಿಯಲ್ಲಿ ನಡೆದುಕೊಳ್ಳುತ್ತಾ ಬಂದಿರುವದೂ ಇದಕ್ಕೆ ಸಹಾಯಕವಾಗಿ ಎದುರು ಪಕ್ಷದವರು ಸಹಾಯವಿಲ್ಲದೆ ಮಾಡುತ್ತಾ ಬಂದಿರುವ ಕಾರ್ಯಗಳೂ ಹಿಂದುಗಳ ಐಕ್ಯ ಮತ್ತು ಪಾರಮಾರ್ಥಿಕ ಅಭ್ಯುದಯಕ್ಕೆ ಬಹುಮಟ್ಟಿಗೆ ಪ್ರತಿಬಂಧಕಗಳಾಗಿ ಪರಿಣಮಿಸಿರುತ್ತವೆ.

ಸಹಜವಾದ ಸನಾತನ ಧರ್ಮವಾಗಿರುವ ಭಕ್ತಿಮಾರ್ಗವು ಜಾತಿ, ಬಣ್ಣ, ಮತ, ಲಿಂಗ ಎಂಬೀ ಭೇದಗಳೇನೂ ಇಲ್ಲದೆ ಸರ್ವರಿಗೂ ಸಾಮಾನ್ಯವಾಗಿರುತ್ತದೆ. ಜೈನರು, ಬೌದ್ಧರು, ಪಾರಸಿಗಳು, ಯೆಹೂದರು, ಮಹಮ್ಮದೀಯರು, ಕ್ರೈಸ್ತರು ಇವರನ್ನು ಹಿಂದಕ್ಕೆ ತಳ್ಳಬಾರದೆಂದು ಮ|| ಮಹಾದೇವಶಾಸ್ತ್ರಿಗಳು ಬ್ರಾಹ್ಮಣರಿಗೆ ತಿಳಿಸುತ್ತಾರೆ. ಮತ್ತು ಯೂರೋಪಿಯನ್ನರು ಈ ಭರತ ಖಂಡದಲ್ಲಿ ಮಾಡಿರುವ ಒಳ್ಳೇ ಕಾರ್ಯಗಳನ್ನು ಅವರು ಸ್ಮರಣೆಗೆ ತಂದುಕೊಳ್ಳಬೇಕೆಂದು ಒತ್ತಿ ಹೇಳುತ್ತಾರೆ. ಮ|| ಮಹಾದೇವಶಾಸ್ತ್ರಿಗಳು ಬ್ರಾಹ್ಮಣರನ್ನು ಕುರಿತು—ಪಾಶ್ಚಿಮಾತ್ಯರ ನವನಾಗರಿಕತೆಯು ನಮ್ಮ ದೇಶಕ್ಕೆ ಬಾರದೆ ಇದ್ದ ಪಕ್ಷದಲ್ಲಿ ಅಹಂಕಾರದಿಂದಲೂ ಗಂಡಸರ ಹೆಮ್ಮೆಯಿಂದಲೂ ಕುಂದಿಸ್ತ ನಾವು ನಮ್ಮ ಸ್ತ್ರೀಯರನ್ನು ಅವರು ಎಂದೆ ಇಷ್ಟೊಂದು ಉನ್ನತವಾದ ಸ್ಥಿತಿಯಿಂದ ಎಷ್ಟರ ಮಟ್ಟಿಗೆ ಕೆಳಕ್ಕೆ ದೊಬ್ಬುತ್ತೇವೆಂಬುವದನ್ನೂ ಕೀಳು ಜಾತಿಯವರ ನಾವು ಎಷ್ಟು ಕೇವಲಮಾಡಿದ್ದೇವೆಂಬುವದನ್ನೂ ಈ ನಮ್ಮ ಅಪರಾಧಗಳು ನಮ್ಮ ವರ್ತಮಾನದ ಹೀನಸ್ಥಿತಿಗೆ ಎಷ್ಟರ ಮಟ್ಟಿಗೆ ಕಾರಣಭೂತವಾಗಿವೆಯೆಂಬುವದನ್ನೂ ನಾವೆಂದಿಗೂ ಮುಂದಿಟ್ಟು ಮಾಡಿಕೊಳ್ಳುತ್ತಿರಲಿಲ್ಲ; ಇದನ್ನು ನೀವು ಸ್ಮರಿಸುವದಿಲ್ಲವೇ? ಎಂದು ಕೇಳುತ್ತಾರೆ. ನನ್ನ ದೇಶಬಾಂಧವರೇ, ನಾವು ನಮ್ಮ ಇಂಗ್ಲಿಷ್ ಅಧಿಕಾರಿಗಳನ್ನು ಪ್ರೇಮದಿಂದಲೂ ಭ್ರಾತೃಭಾವದಿಂದಲೂ ಕಾಣಿರಿ. ಅವರು ಎಂದಾದರು ತಪ್ಪು ಮಾಡಿದರೆ ಅಥವಾ ತಪ್ಪು ಮಾಡಿದಂತೆ ನಿಮಗೆ ಕಂಡುಬಂದರೆ ಅವರಿಗೆ ಕ್ಷಮಾಪಣೆಕೊಡಿರಿ. ನಾವು ಅವರ ಯಥಾರ್ಥವಾದ ಉದ್ದೇಶಗಳನ್ನು ತಿಳಿಯದೆ ಅವರ ಕಾರ್ಯಗಳ ವಿಷಯದಲ್ಲಿ ದುರಭಿಪ್ರಾಯಮಾಡಿಕೊಳ್ಳುವದುಂಟು. ಇಂಥಾ ಅನೇಕ ಸಮಯಗಳಲ್ಲಿ ನಮಗೂ ಅವರ ಕ್ಷಮಾಪಣೆಯು ಅವಶ್ಯಕವಾಗಿದೆ. ನೀವು ನಿಮ್ಮನ್ನು ಹೀಗೆ ಕೇಳಿಕೊಳ್ಳುವದು ಅಯುಕ್ತವೋ?

ಮ|| ಮಹಾದೇವಶಾಸ್ತ್ರಿಗಳು ರಚಿಸಿರುವ ಪುಸ್ತಕವನ್ನು ನಮ್ಮ ವಾಚಕ ಮಹನೀಯರುಗಳೆಲ್ಲರೂ ಓದಬೇಕೆಂದು ನಾವು ಅಪೇಕ್ಷಿಸುತ್ತೇವೆ, ಯಾಕೆಂದರೆ ಅವರು ಹೇಳುವ ಪ್ರಕಾರ—ಜಾತಿಭೇದವು ನಮ್ಮ ದೇಶದ ಏಕಮತ್ಯಕ್ಕೂ ಅದರ ಏಳಿಗೆಗೂ ಬಹಳ ಮಟ್ಟಿಗೆ ಪ್ರತಿಬಂಧಕವಾಗಿದೆ ಎಂಬುವದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಸರ್ವರೂ ಪರಮತಂದೆಯಾದ ದೇವರ ಮಕ್ಕಳಾಗಿರುವದರಿಂದ ಸಹೋದರರೇ ಆಗಿರುತ್ತಾರೆ. ಈ ಶ್ರೇಷ್ಠವಾದ ಪಾಠವನ್ನು ನಾವು ಕಲಿಯಬೇಕು. ನಾವು ನಮ್ಮ ದೋಷಗಳನ್ನು ಹಗುರಮಾಡಿ ಬಿಟ್ಟು ಬಿಟ್ಟು, ದೇವರ ಆಜ್ಞೆಗಳನ್ನು ಕೈಕೊಂಡು ಎಲ್ಲರನ್ನೂ ಸಹೋದರರೆಂದು ಭಾವಿಸಿ ಅವರಿಗೆ ಉಪಕಾರ ಮಾಡುತ್ತಾ ಬರುವದರ ಮೂಲಕವಾಗಿ ಆ ಪರಮತಂದೆಯಲ್ಲಿ ನಮಗಿರುವ ಭಕ್ತಿಯನ್ನು ಪ್ರಕಾಶಪಡಿಸಬೇಕು.

ನಮ್ಮ ಚಕ್ರವರ್ತಿಯವರು ಮಹಾರಾಜ್ಞೀಯವರ ಕೂಡ ದಯಮಾಡಿ ತಾ 17 ರಲ್ಲಿ ಐರಿಷ್ ಗಾರ್ಡ್ಸ್ ಎಂಬ ಸೈನಿಕ ದಳವನ್ನು ಪರಾಂಬರಿಸಿದರು. ಚಕ್ರವರ್ತಿಯವರು ಸರಾಗವಾಗಿ ನಡೆಯುತ್ತಿದ್ದದ್ದನ್ನು ನೋಡಿ ಸಕಲರೂ ಜಯಧ್ವನಿ ಮಾಡಿದರು.

ಹಿಂದುಸ್ಥಾನದಲ್ಲಿ ಬೆಳೆ, ಕೈಗಾರಿಕೆ, ಸಣ್ಣ ವೆುದಲಾದ ಗುಪ್ತಧನವನ್ನು ಯುದ್ಧ ಮುಗಿದ ಬಳಿಕ ಅಭಿವೃದ್ಧಿ ಮಾಡುವ ವಿಷಯದಲ್ಲಿ ಚರ್ಚೆ ಮಾಡುವದಕ್ಕಾಗಿ ಬ್ರಿಟಿಷ್ ಗವರ್ನ್‌ಮೆಂಟಿನವರು ಒಂದು ಪಂಚಾಯತಿ (ಕಮಿಷನ್) ನೇಮಕ ಮಾಡುವವರಾಗಿದ್ದಾರೆ. ಈ ಕಮಿಷನ್‌ಗೆ ಮುಖ್ಯಸ್ಥರಾದ ಹಿಂದೂ ಮಹಮ್ಮದೀಯ ಮತ್ತು ಪಾರ್ಸಿ ದೊಡ್ಡ ಮನುಷ್ಯರು ಮೆಂಬರುಗಳಾಗಿ ನೇಮಕರಾಗುವರು. ಈ ಸಂಗತಿಯ ವಿಷಯದಲ್ಲಿ ಮುಂದೆ ದಯಮಾಡುವ ವೈಸ್‌ರಾಯರವರು ಉತ್ತರವಾದಿಗಳಾಗಿರುತ್ತಾರೆ.

ಇಂಗ್ಲೆಂಡಿನ ದಕ್ಷಿಣ ಪೂರ್ವ ಭಾಗದ ಸಮುದ್ರ ತೀರದಲ್ಲಿರುವ ಡೋವರ್ ಮೊದಲಾದ ಪಟ್ಟಣಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಬೇಕೆಂದು ಜರ್ಮನಿಯವರು ಎರಡು ಮೂರು ವೇಳೆ ಪ್ರಯತ್ನಪಟ್ಟರು. ಮೊದಲನೇ ಸಲ ಬ್ರಿಟಿಷರು ಜರ್ಮನಿಯ ಸಮುದ್ರದ ವಿಮಾನವನ್ನು ಸೆರೆಹಿಡಿದರು. ತಾ. 19 ರಲ್ಲಿ ಜರ್ಮನಿಯ ಕೆಲವು ಸಮುದ್ರ ವಿಮಾನಗಳು ಒಟ್ಟಾಗಿ ಬಂದು ಡೋವರ್, ರಾಮ್ಸ್‌ಗೇಟ್ ಮೊದಲಾದ ಕೆಲವು ಪಟ್ಟಣಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದವು. ಬ್ರಿಟಿಷರು ಅವುಗಳನ್ನು ಓಡಿಸಿ ಆ ಪೈಕಿ ಒಂದನ್ನು ನಾಶಮಾಡಿಬಿಟ್ಟರು. ಸಿಡಿಮದ್ದಿನ ಗುಂಡುಗಳ ದೆಸೆಯಿಂದ ಮೂವರು ಗಂಡಸರು, ಒಬ್ಬ ಹೆಂಗಸು, ಐದು ಮಕ್ಕಳು ಕೊಲೆಯಾದರು; ಹದಿನೇಳು ಗಂಡಸರು, ಐದು ಹೆಂಗಸರು, ಒಂಭತ್ತು ಮಕ್ಕಳು ಗಾಯಪಟ್ಟಿದ್ದಾರೆ.

ಯುದ್ಧದ ಸಮಾಚಾರಗಳು.

ವರ್ಡೂನ್‌ನಲ್ಲಿ ಘೋರವಾದ ಯುದ್ಧ.

ಪೂರ್ವ ಆಫ್ರಿಕಾದಲ್ಲಿ ವಿಜಯ.

ಈ ವಾರದ ಯುದ್ಧವಾರ್ತೆಗಳಲ್ಲೆಲ್ಲಾ ವರ್ಡೂನ್ ಬಳಿ ನಡೆಯುತ್ತಿರುವ ಘೋರವಾದ ಕದನಗಳೇ ಮುಖ್ಯವಾದವು. ಅಲ್ಲಿ ಅತ್ಯಂತ ಕಠಿಣವಾದ ಯುದ್ಧ ನಡೆಯುತ್ತಿದೆ. ಆದರೆ ಜರ್ಮನಿಯವರಿಗೆ ಮುಂದರಿಸಿ ನುಗ್ಗಲು ಅವಕಾಶವಾಗಲಿಲ್ಲ. ಪೂರ್ವ ಆಫ್ರಿಕಾದಲ್ಲಿ ಜನರಲ್ ಸ್ಮಟ್ಸ್‌ರವರು ಜರ್ಮನಿಯವರ ಪ್ರಾಂತ್ಯದೊಳಕ್ಕೆ ಬ್ರಿಟಿಷ್ ಸೈನ್ಯವನ್ನು ನುಗ್ಗಿಸಿ ಅವರ ಸೀಮೆಯನ್ನು ಕ್ರಮವಾಗಿ ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆ. ಅಲ್ಲಿದ್ದ ಜರ್ಮನಿಯವರಾದರೋ ಕ್ರಮೇಣ ಹಿಮ್ಮೆಟ್ಟಿ ಹೋಗುತ್ತಲಿರುವರು.

ಪಶ್ಚಿಮ ರಣರಂಗದಲ್ಲಿ.

ವರ್ಡೂನ್ ಕೋಟೆಯ ಬಳಿ ಬಹಳ ಘೋರವಾದ ಕದನಗಳು ನಡೆಯುತ್ತಿವೆ. ಜರ್ಮನಿಯವರು ಮಿತ್ರಮಂಡಲಿಯ ಸೈನಿಕರ ಯುದ್ಧ ಸಾಲುಗಳನ್ನು ಛೇದಿಸಿ ಒಳನುಗ್ಗಲು ಪ್ರಾರಂಭ ಮಾಡಿ ನೆಯಾಗಲಿ ನಿಂಗಡಿ ಮಾಡಲಾಗಲಿ ಎಳ್ಳಷ್ಟೂ ಆಗುತ್ತಿಲ್ಲ. ಕಳೆದ ವಾರವೆಲ್ಲಾ ಅತ್ಯಂತ ಘೋರವಾದ ಫಿರಂಗಿಗುಂಡುಗಳ ಹಾವಳಿಯೇ ಅವಿರತವಾಗಿತ್ತು. ಮತ್ತು ಜರ್ಮನಿಯವರು ಆಗಾಗ್ಗೆ ತಮ್ಮ ದಳಗಳನ್ನು ಫ್ರೆಂಚ್ ಸೈನ್ಯಸಾಲುಗಳ ಮೇಲೆ ನುಗ್ಗಿಸಿದರು. ಆದರೆ ಇದರಲ್ಲಿ ಪ್ರತಿಸಲವೂ ಜರ್ಮನಿಯವರ ಕಡೆ ಅಪಾರವಾದ ನಷ್ಟವನ್ನು ಅನುಭವಿಸಬೇಕಾಯಿತು. ಅವರು ಸೋತು ಅನೇಕ ಸೈನಿಕರನ್ನು ಕಳೆದುಕೊಂಡು ಹಿಮ್ಮೆಟ್ಟಿ ಹೋಗುತ್ತಾರೆ.

ಈ ಘೋರವಾದ ಕದನವು ಪ್ರಾರಂಭವಾಗುವಾಗ್ಗೆ ಜರ್ಮನಿಯವರು ತಮ್ಮ ಫಿರಂಗಿಗಳನ್ನೆಲ್ಲಾ ಒಂದು ಕಡೆ ತಂದಿಟ್ಟುಕೊಂಡು ಏಕತ್ರವಾಗಿ ಗುಂಡುಗಳನ್ನು ವರ್ಡೂನ್ ಕೋಟೆಗಳಿಗೆ ಹೊಡೆದು ಅವುಗಳನ್ನು ಕೆಡವಿ ಪುಡಿಮಾಡುವೆವು ಎಂದು ಆ ರೀತಿ ಏರ್ಪಾಡು ಮಾಡಿಕೊಂಡರಂತೆ. ಈ ಫಿರಂಗಿಗಳ ಸ್ಥಾನವು ಫ್ರೆಂಚರಿಗೆ ಪತ್ತೆ ಆಯಿತು. ಕೂಡಲೇ ಫ್ರೆಂಚರು ತಮ್ಮ ಫಿರಂಗಿಗಳನ್ನು ಎತ್ತಿಕಟ್ಟಿ ಜರ್ಮನಿ ಫಿರಂಗಿಗಳಿದ್ದ ಪ್ರದೇಶದ ಮೇಲೆ ಗುಂಡುಗಳ ಮಳೆಗರೆದರು. ಇದರಿಂದ ಅಪಾರ ನಷ್ಟ ಸಂಭವಿಸಿತು. ಜರ್ಮನಿಯವರು ಬಳಿಕ ತಮ್ಮ ಏರ್ಪಾಡನ್ನು ಬದಲಾವಣೆ ಮಾಡಬೇಕಾಯಿತು. ಜರ್ಮನಿಯವರು ಫ್ರೆಂಚರನ್ನು ಸೋಲಿಸಬೇಕೆಂದು ಏಕಕಾಲದಲ್ಲಿ ಅನೇಕ ಕಡೆಗಳಿಂದ ನುಗ್ಗಿ ಹಾಕಿದರು. ಇದೂ ನಿಷ್ಪ್ರಯೋಜನವಾಯಿತು. ಜರ್ಮನಿಯವರ ಕಡೆ 1ಕ್ಕೆ 10,000 ಸೈನಿಕರಂತೆ ನಷ್ಟವಾಗಿರುವಂತೆಯೂ, ಒಟ್ಟಿನಲ್ಲಿ 2,00,000 ಸೈನ್ಯಗಳಿಗಿಂತಲೂ ಹೆಚ್ಚಾಗಿಯೇ ನಷ್ಟವಾದಂತೆಯೂ ತಿಳಿಸಲ್ಪಟ್ಟಿದೆ.

ಜರ್ಮನಿಯವರು ಸರ್ಬಿಯಾದಲ್ಲಿದ್ದ ತಮ್ಮ ಸಮಸ್ತ ಸೈನ್ಯಗಳನ್ನೂ ತೆಗೆದುಕೊಂಡು ಫ್ರೆಂಚರ ಮೇಲೆ ಯುದ್ಧಕ್ಕಾಗಿ ಕಳುಹಿಸಿದರೆಂದು ತಿಳಿದಿದೆ. ಜರ್ಮನಿಯವರು 24 ಘಂಟೆ ಹೊತ್ತಿನಲ್ಲಿ 130 ಸಲ ರೈಲ್ ಗಾಡಿಗಳನ್ನು ಬಿಟ್ಟು ಅವುಗಳಲ್ಲಿ ತಮ್ಮ ಸೈನ್ಯಗಳನ್ನೂ ಮದ್ದುಗುಂಡು ಮೊದಲಾದವುಗಳನ್ನೂ ಫ್ರಾನ್ಸಿನ ಉತ್ತರಭಾಗದಲ್ಲಿ ಸಾಗಿಸಿಕೊಂಡು ಬಂದರಂತೆ. ಈ ಸೈನ್ಯಗಳನ್ನು ಜಮಾವಣೆ ಮಾಡುತ್ತಿರುವುದನ್ನು ನೋಡಿದರೆ ಅವರು ಬಹು ಘೋರವಾದ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದರೂ ಲಕ್ಷ್ಯಮಾಡದೆ ಇನ್ನೂ ಯುದ್ಧವನ್ನು ನಡೆಸುವವರಾಗಿದ್ದಾರೆಂದು ಹೇಳಬೇಕಾಗುತ್ತದೆ. ಈ ಕದನಗಳಲ್ಲಿ ಇನ್ನು ಘೋರವಾದ ಕೊಲೆಗಳಾಗುವುದೇನೋ ಮುಂದೆ ನೋಡಬೇಕು.

ಅಲ್ಪಸ್ವಲ್ಪವಾಗಿ ಉಳಿದಿದ್ದ ಬೇರೆ ಬೇರೆ ರೆಜಿಮೆಂಟುಗಳ ಸೈನಿಕರನ್ನು ಜರ್ಮನಿಯವರು ಯುದ್ಧಭೂಮಿಯಿಂದ ಬೆಲ್ಜಿಯಮ್‌ಗೆ ವಾಪಸು ಕರೆಸಿದರು. ಜರ್ಮನಿ ಸೈನಿಕರು ರಣರಂಗದಲ್ಲಿ ಅಪಾರವಾದ ಕಷ್ಟಗಳನ್ನು ಅನುಭವಿಸಿದ್ದರಿಂದ ಅನೇಕರು ಈಗ ಸೈನ್ಯದಿಂದ ತಪ್ಪಿಸಿಕೊಂಡು ಹಾಲೆಂಡಿಗೆ ಓಡಿ ಸೇರಿಕೊಳ್ಳುತ್ತಿದ್ದಾರೆ.

ಕಳೆದ ವಾರ ಒಂದಾನೊಂದು ದಿನ ಜರ್ಮನಿಯವರು ಫ್ರೆಂಚರ ಮೇಲೆ ಅಕಸ್ಮಾತ್ತಾಗಿ ನುಗ್ಗಿ ಬಂದು ಮುತ್ತಿಗೆ ಹಾಕಿಕೊಂಡರು. ಫ್ರೆಂಚರು ಅವರನ್ನು ಹಿಮ್ಮೆಟ್ಟಿಸಿ ಅನೇಕರನ್ನು ಕೊಂದು ಓಡಿಸಿದ್ದಾರೆ. ಫ್ರೆಂಚರ ಫಿರಂಗಿಗಳಿಂದಲೂ, ಬಂದೂಕುಗಳಿಂದಲೂ ಸುರಿಸಲ್ಪಟ್ಟ ಗುಂಡುಗಳು ಜರ್ಮನಿಯವರ ದಳವನ್ನು ಛಿದ್ರಮಾಡಿಬಿಟ್ಟುವು. ಸಾವಿರಾರು ಮಂದಿ ಜರ್ಮನಿಯವರು ರಣದಲ್ಲಿ ಮಡಿದು ಬಿದ್ದುಕೊಂಡರು. ಹೆಣಗಳನ್ನೂ ಗಾಯಪಟ್ಟವರನ್ನೂ ಯುದ್ಧಭೂಮಿಯಲ್ಲೇ ಬಿಟ್ಟು ಜರ್ಮನಿಯವರು ಚದರಿಹೋದರು.

ಈ ಕದನದಲ್ಲಿ ಫ್ರೆಂಚರು 84 ಫಿರಂಗಿಗಳನ್ನು ಕಳೆದುಕೊಂಡರು; ಈ ಫಿರಂಗಿಗಳಿಂದ ನಿಷ್ಪ್ರಯೋಜನವಾದವು. ಫ್ರೆಂಚರ ಫಿರಂಗಿ ಗುಂಡುಗಳ ಏಟಿನಿಂದ ಜರ್ಮನಿಯವರ ಅನೇಕ ಫಿರಂಗಿಗಳು ನಾಶವಾಗಿರುತ್ತವೆ. ಜರ್ಮನಿಯವರು ಹೇಗಾದರೂ ಮಾಡಿ ವರ್ಡೂನ್ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಸಾಹಸಪಡುತ್ತಲಿದ್ದಾರೆ. ಈ ಪ್ರಯತ್ನವು ವ್ಯರ್ಥವಾದರೆ ಮಿತ್ರಮಂಡಲಿಯ ಸೈನ್ಯಸಾಲುಗಳನ್ನು ಒಡೆದು ನುಗ್ಗುವುದು ಇನ್ನೆಂದೂ ಸಾಧ್ಯವಲ್ಲವೆಂದು ಅವರು ತಿಳಿದುಕೊಂಡಿದ್ದಾರೆ.

ಫ್ರೆಂಚರು ಕಳೆದುಕೊಂಡಿದ್ದ ಪ್ರದೇಶಗಳಲ್ಲಿ ಕೆಲವು ಭಾಗಗಳನ್ನು ಮತ್ತೆ ಸ್ವಾಧೀನಪಡಿಸಿಕೊಳ್ಳುತ್ತಿರುವರು. ಅವರ ಉತ್ಸಾಹವೂ ನಿರೀಕ್ಷೆಯೂ ಅಪಾರವಾಗಿವೆ. ಜರ್ಮನಿಯವರಾದರೋ ಆಶಾಭಂಗಹೊಂದಿ ಕುಗ್ಗಿಹೋಗಿರುವರೆಂದು ತಿಳಿಸಲ್ಪಟ್ಟಿದೆ.

ಮೂವತ್ತು ದಿನಗಳ ತನಕ ಯುದ್ಧ ನಡೆದ ಬಳಿಕ ಜರ್ಮನಿಯವರಿಗೆ ವರ್ಡೂನ್ ಯುದ್ಧದಲ್ಲಿ ತಮಗೆ ಅಪಜಯವಾಯಿತೆಂದು ತಿಳಿದುಬಂದಿರುತ್ತದೆ. ಈಗೀಗ ಅವರು ಮೇಲೆ ಬಿದ್ದು ನುಗ್ಗಿ ಕದನ ಮಾಡುವುದರ ಬದಲು ಬಹಳ ಮಟ್ಟಿಗೆ ಕಡಿಮೆಯಾಗಿದೆ.

ಬ್ರಿಟಿಷ್, ಫ್ರೆಂಚ್, ಬೆಲ್ಜಿಯನ್ ವಿಮಾನ ಯಂತ್ರಗಳು 60 ರ ತನಕ ಒಟ್ಟಾಗಿ ಸೇರಿಕೊಂಡು ಅಂತರಿಕ್ಷದಲ್ಲಿ ಹೋಗಿ ಬೆಲ್ಜಿಯಮ್‌ನಲ್ಲಿ ಜರ್ಮನಿಯವರು ಇಟ್ಟುಕೊಂಡಿದ್ದ ವಿಮಾನ ಯಂತ್ರಗಳ ಠಾಣ್ಯಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಿ ವಿಶೇಷವಾಗಿ ನಷ್ಟವನ್ನುಂಟುಮಾಡಿದವು. ಬಳಿಕ ವಿಮಾನ ಯಂತ್ರಗಳು ಸುರಕ್ಷಿತವಾಗಿ ವಾಪಸು ಬಂದವು. ಬೆಲ್ಜಿಯಮ್ಮಿನ ಒಬ್ಬ ಹುದ್ದೇದಾರನಿಗೆ ಮಾತ್ರ ಹೆಚ್ಚಾಗಿ ಗಾಯಗಳಾಗಿವೆ.

ಅನೇಕ ಠಾಣ್ಯಗಳಲ್ಲಿ ಸುರಂಗಗಳನ್ನು ಹಾರಿಸಿದರು; ಅಂತರಿಕ್ಷದಲ್ಲಿ ವಿಮಾನಯಂತ್ರಗಳ ಯುದ್ಧವೂ ಆಗಿದೆ. ಇವೆಲ್ಲಾ ಬ್ರಿಟಿಷ್ ಸೈನ್ಯ ಸಾಲುಗಳಲ್ಲಿ ಆಗಿದ್ದಾಗಿ ಆಯಿತು. ಜರ್ಮನಿಯವರ ಅನೇಕ ವಿಮಾನಯಂತ್ರಗಳು ಸೋತು ಹೋದವು. ಮಿತ್ರಮಂಡಲಿಯವರ ವಿಮಾನಯಂತ್ರಗಳು ಹೋಗಿ ಶತ್ರುವಿನ ರೈಲ್ವೆ ಸ್ಟೇಷನ್‌ಗಳಲ್ಲೂ ಸಿಡಿಮದ್ದಿನ ಗುಂಡುಗಳನ್ನು ಹಾಕಿರುತ್ತವೆ. ಒಟ್ಟು ಕೂಡಿಸಿ ನೋಡುವಲ್ಲಿ ಮಿತ್ರಮಂಡಲಿಯವರಿಗೇ ಹೆಚ್ಚು ಮಟ್ಟಿಗೆ ಜಯವುಂಟಾಗಿರುತ್ತದೆ.

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದ ಯುದ್ಧ ಸಾಲುಗಳಲ್ಲೆಲ್ಲಾ ಸಾಮಾನ್ಯವಾಗಿ ಎಲ್ಲಾ ಶಾಂತವಾಗಿದೆ ಎಂದು ಹೇಳಬಹುದು. ಆದರೆ ರೀಗಾ ತೀರಪಟ್ಟಣದ ಹತ್ತಿರ ಫಿರಂಗಿ ಗುಂಡುಗಳ ಹಾರಾಟ ತಪ್ಪಲಿಲ್ಲ.

ಇಟಲಿ.

ಈ ಸ್ಥಿತಿಯು ಪ್ರತಿಕೂಲವಾಗಿದ್ದಾಗ್ಯೂ ಇಟಲಿಯವರು ಲಕ್ಷ್ಯಕ್ಕೆ ತಾರದೆ ಆಸ್ಟ್ರಿಯಾದವರ ಮೇಲೆ ಬಿದ್ದು ಕದನ ಮಾಡುತ್ತಿದ್ದಾರೆ. ಈಗಾಗಲೇ ಇಟಲಿಯವರು ಎರಡು ಕೋಟೆಗಳನ್ನು ಗೆದ್ದುಕೊಂಡರು. ಮತ್ತು 264 ಮಂದಿ ಸೈನಿಕರನ್ನೂ ಎರಡು ಮೆಷೀನ್ ಫಿರಂಗಿಗಳನ್ನೂ ಕೈಸೆರೆ ಹಿಡಿದುಕೊಂಡು ಹೋಗಿದ್ದಾರೆ. ಆಸ್ಟ್ರಿಯಾದವರು ಆ ಕೋಟೆಗಳನ್ನು ಮತ್ತೆ ಗೆದ್ದುಕೊಳ್ಳಬೇಕೆಂದು ಸಾಹಸಪಟ್ಟರು. ಅವರು ಎರಡಾವರ್ತಿ ತುಂಬಾ ಸಾಹಸಪಟ್ಟು ನುಗ್ಗಿ ಹೋಗಿ ಇಟಲಿಯವರ ಕಂದಕಗಳ ಸಮೀಪಕ್ಕೆ ಹೋದಾಗ್ಯೂ ಆ ಕೋಟೆಗಳನ್ನು ಸ್ವಾಧೀನಪಡಿಸಿಕೊಳ್ಳಲಾರದೆ ಹೋದರು. ಅವರು ಕಡೆಗೆ ಹಿಮ್ಮೆಟ್ಟಿ ಹೋಗಬೇಕಾಯಿತು. ಅವರ ಅನೇಕ ಸೈನಿಕರು ಯುದ್ಧಭೂಮಿಯಲ್ಲಿ ಮಡಿದು ಬಿದ್ದಂತೆ ಬಿದ್ದಿದ್ದರು.

ಇಟಲಿಯವರು ವಿಮಾನಯಂತ್ರಗಳಲ್ಲಿ ಟ್ರಿಯೆಸ್ಟ್ ನಗರದ ಮೇಲೆ ಹೋಗಿ ಒಳಕ್ಕೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದರು. ಅದಕ್ಕಾಗಿ ಆಸ್ಟ್ರಿಯಾದವರು ವಿಮಾನಯಂತ್ರಗಳಲ್ಲಿ ಇಟಲಿ ನಗರಗಳ ಮೇಲೆ ಬಂದು ವಿಷಕ್ರಿಮಿಗಳಿರುವ ವಿಷಾಯು ಪದಾರ್ಥಗಳನ್ನು ಸುರಿಸಿ ಹೋಗಿರುವಂತೆ ತಿಳಿಸಲಾಗಿದೆ.

ಸರ್ಬಿಯಾ ಯುವರಾಜರವರು ಇಟಲಿ ಸೈನಿಕರಿರುವ ಯುದ್ಧಸಾಲಿಗೆ ಹೋಗಿರುತ್ತಾರೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಗ್ರೀಸಿನ ಎಲ್ಲೆಕಟ್ಟಿನ ಬಳಿಗೆ ಜರ್ಮನಿಯವರು ನುಗ್ಗಿ ಬಂದದ್ದರಿಂದ ಫ್ರೆಂಚರು ಅವರನ್ನು ಅಲ್ಲಿಂದ ಹಿಂದಕ್ಕೆ ಓಡಿಸುವುದಕ್ಕಾಗಿ ಕೆಲವು ಸೈನ್ಯಗಳನ್ನು ಕಳುಹಿಸಿಕೊಟ್ಟರು. ಫ್ರೆಂಚ್ ಸೈನಿಕರು ಪರಾಕ್ರಮದಿಂದ ಕದನಮಾಡಿ ಜರ್ಮನಿಯವರನ್ನು ಓಡಿಸಿಬಿಟ್ಟರು. ಫ್ರೆಂಚರ ಕಡೆ ಸುಮಾರು ಹನ್ನೆರಡು ಮಂದಿ ನಷ್ಟವಾದರು. ಮಿತ್ರಮಂಡಲಿಯವರೂ ಜರ್ಮನಿಯವರೂ ಈಗ ಸಮೀಪವಾಗಿ ಎದುರುಬದುರಿನಲ್ಲಿ ಠಾಣ್ಯ ಹಾಕಿಕೊಂಡಿದ್ದಾರೆ. ಅಲ್ಲಿ ಇನ್ನು ಮುಂದೆ ಕದನಗಳಾಗುವವೆಂದು ತಿಳಿಯಬಹುದು.

ಟರ್ಕಿಯಲ್ಲಿ.

ಏಷ್ಯಾ ಮೈನರ್ ಸೀಮೆಯಲ್ಲಿ ರಷ್ಯಾದವರು ಟರ್ಕಿಯವರನ್ನು ಹಿಂದು ಹಿಂದಕ್ಕೆ ಓಡಿಸಿಕೊಂಡು ಹೋಗುತ್ತಿದ್ದಾರೆ. ಅವರು ಎರ್ಜೆರೂಮ್ ನಗರದಿಂದ ಪಶ್ಚಿಮಕ್ಕೆ ಸುಮಾರು ಎಪ್ಪತ್ತು ಮೈಲಿ ದೂರ ನುಗ್ಗಿ ಹೋಗಿ ಒಂದು ನಗರವನ್ನು ಗೆದ್ದು ಸ್ವಾಧೀನಪಡಿಸಿಕೊಂಡರು. ಅಲ್ಲಿ ರಷ್ಯಾದವರಿಗೆ 44 ಮಂದಿ ಹುದ್ದೇದಾರರು, 770 ಮಂದಿ ಸೈನಿಕರು, 5 ಫಿರಂಗಿಗಳು, ಅನೇಕ ಮೆಷೀನ್ ಫಿರಂಗಿಗಳು, ಇವೆಲ್ಲಾ ಸೆರೆ ಸಿಕ್ಕಿದವು. ರಷ್ಯಾದವರು ದಕ್ಷಿಣ ದಿಕ್ಕಿನಲ್ಲೂ ಕೂಡ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಲಿದ್ದಾರೆ. ಈಗ ಅವರು ಟೈಗ್ರಿಸ್ ನದಿಯ ತಡಿಯಲ್ಲಿರುವ ಮೊಸುಲ್ ನಗರಕ್ಕೆ ಬಹಳ ಸಮೀಪದ ತನಕ ಹೋಗಿರುವರು — ಇದಲ್ಲದೆ ರಷ್ಯಾದವರು ಕಪ್ಪುಕಡಲ ತೀರದಲ್ಲಿರುವ ಟ್ರೆಬಿಜೊಂಡ್ ಪಟ್ಟಣದ ಸಮೀಪಕ್ಕೆ ಹೋಗಿ ಆ ನಗರವನ್ನು ಘೇರಾಯಿಸಿಕೊಳ್ಳುತ್ತಿರುವಂತೆ ತಿಳಿಯುತ್ತದೆ. ಹೀಗೆ ಜಯಪ್ರದರಾಗಿ ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಾ ಇರುವ ರಷ್ಯಾ ಸೈನಿಕರನ್ನು ತಡೆಯಬೇಕಾದರೆ ಟರ್ಕಿಯವರು ಹೊಸ ಸೈನ್ಯಗಳನ್ನು ಹೆಚ್ಚಾಗಿ ಕೂಡಿಸಿ ಕಳುಹಿಸಬೇಕಾಗಿದೆ.

ಮೆಸೊಪೊಟೇಮಿಯದಿಂದ ಬಂದ ತಂತೀ ವರ್ತಮಾನಗಳು ಸ್ಪಷ್ಟವಾಗಿಲ್ಲ. ಮಾರ್ಚಿ ತಾ 8 ರಲ್ಲಿ ಕುಟ್‌ಎಲ್ ಅಮಾರದಿಂದ ಎಂಟು ಮೈಲಿ ಆಚೆ ಇದ್ದ ಟರ್ಕಿಯವರ ಠಾಣ್ಯಕ್ಕೆ ಬ್ರಿಟಿಷ್ ಸೈನ್ಯಗಳು ನುಗ್ಗಿ ಹೋಗಿ ಮುತ್ತಿಗೆ ಹಾಕಿದವು. ಆದರೆ ಅಲ್ಲಿ ನೀರಿಗೆ ತುಂಬಾ ಕಷ್ಟವಾದಕಾರಣ ಬ್ರಿಟಿಷ್ ಸೈನಿಕರು ಅಲ್ಲಿಂದ ಹಿಂತಿರುಗಿ ಬರಬೇಕಾಯಿತು. ತಾ. 10 ರಲ್ಲಿ ಟರ್ಕಿಯವರು ನುಗ್ಗಿ ಹೋಗಿ ಕೆಲವು ಹೊಸ ಠಾಣ್ಯಗಳನ್ನು ಆಕ್ರಮಿಸಿಕೊಂಡರಂತೆ. ವರ್ತಮಾನ ಬಂತು. ಬ್ರಿಟಿಷ್ ಸೈನ್ಯಗಳು ಅವರ ಮೇಲೆ ನುಗ್ಗಿ ಕದನಮಾಡಿ ಹಲವು ಟರ್ಕಿ ಸೈನಿಕರನ್ನು ಕೊಂದುಹಾಕಿದ್ದಲ್ಲದೆ ಹುದ್ದೇದಾರರಲ್ಲದ ಸೈನಿಕರು 50 ಮಂದಿಯನ್ನೂ ಕೈಸೆರೆ ಹಿಡಿದಿರುತ್ತವೆ.

ಹಿಂದುಸ್ಥಾನದ ಕೆಲವು ಸೈನಿಕರು ಸ್ವಲ್ಪ ಗಲಭೆಮಾಡಿದಂತೆ ಕಂಡಾಗ್ಯೂ ಕೆಲವು ಸವಾರರು ಹುಕುಂ ಕೊಟ್ಟಾಗ ಶತ್ರುವಿನ ಮೇಲೆ ನುಗ್ಗದೆ ಹಿಂಜರಿದರು; ಅದಕ್ಕಾಗಿ ಅವರಲ್ಲಿ ಅನೇಕರನ್ನು ಹಿಡಿದು ಸೆರೆಮನೆಯಲ್ಲಿ ಹಾಕಿದ್ದಾರೆ. ಅವರು ಹಠದ್ವೇಷಿಗಳಲ್ಲ. ಬಹಳ ರಾಜಭಕ್ತಿ ಸಹಿತರಾಗಿದ್ದರು. ಈ ರೀತಿಯಾದ ವಿರೋಧ ಭಾವವು ಸ್ವಾಮಿದ್ರೋಹವನ್ನೂ ಎಲ್ಲಿಯ ತನಕ ಮಾಡಿಕೊಂಡಿದೆಯೋ ನಮಗೆ ತಿಳಿಯಲಿಲ್ಲ. ನಮ್ಮ ಸೈನಿಕರು ಅಷ್ಟು ಚೆನ್ನಾಗಿಯೂ ಅಷ್ಟು ಪರಾಕ್ರಮದಿಂದಲೂ ಕದನ ಮಾಡುತ್ತಾರೆ. ಅವರಲ್ಲಿ ಕೆಲವರು ಸ್ವಾಮಿದ್ರೋಹ ಮಾಡಿದ ಪಕ್ಷದಲ್ಲಿ ನಮ್ಮ ಪರಾಕ್ರಮಿಗಳಾದ ಹಿಂದುಸ್ಥಾನದ ಸೈನಿಕರಿಗೆಲ್ಲಾ ಅಪಯಶಸ್ಸನ್ನು ತರುತ್ತಾರೆ. ಆದಕಾರಣ ಮುಂದೆ ಯಾರೂ ಆ ರೀತಿ ಮಾಡಲಾರರೆಂದು ನಂಬಿದೇವೆ.

ಈಜಿಪ್ಟಿನೊಳಗೆ ವಾಯುವ್ಯ ಪ್ರಾಂತ್ಯದಲ್ಲಿರುವ ಅರಬ್ಬಿ ಜನರಲ್ಲಿ ದ್ವಂದ್ವ ಕಲಹವುಂಟಾಗಿದೆ. ನಮ್ಮ ಸೈನ್ಯಗಳು ನುಗ್ಗಿ ಹೋಗಿ ಅವರ ಠಾಣ್ಯಗಳನ್ನು ಗೆದ್ದುಕೊಂಡವು. ಅರಬ್ಬಿಯವರಲ್ಲಿ 50 ಮಂದಿ ಕೊಲೆಯಾದರು; 30 ಮಂದಿಯನ್ನೂ, ಮೂರು ಫಿರಂಗಿಗಳನ್ನೂ, ಒಂಭತ್ತು ಮೆಷೀನ್ ಫಿರಂಗಿಗಳನ್ನೂ ಬ್ರಿಟಿಷರು ಕೈಸೆರೆ ಹಿಡಿದರು. ಎಂಟು ಮಂದಿ ಹುದ್ದೇದಾರರೂ, 32 ಮಂದಿ ಸೈನಿಕರೂ ಫಿರಂಗಿ ಸಹಿತವಾದ ಮೋಟಾರ್ ಕಾರುಗಳಲ್ಲಿ ಕೂತು ಆ ಅರಬ್ಬಿಯವರ ಮೇಲೆ ನುಗ್ಗಿಹೋಗಿ ಮೊಟ್ಟಮೊದಲು ಕದನವನ್ನು ಮಾಡಿದರು. ಇವರು ಅರಬ್ಬಿಯವರ ಕ್ಯಾಂಪಿನೊಳಕ್ಕೆ ನುಗ್ಗಿ, ಫಿರಂಗಿಗಳಿಗೆ ಗುಂಡು ಹಾಕಿ ಹಾರಿಸುತ್ತಿದ್ದ ಅರಬ್ಬಿಯವರನ್ನು ಕೊಂದು, ಉಳಿದವರನ್ನೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡಿಸಿಬಿಟ್ಟರು. ನಮ್ಮ ಕಡೆ ಒಬ್ಬ ಹುದ್ದೇದಾರನಿಗೆ ಮಾತ್ರ ಸ್ವಲ್ಪ ಗಾಯವಾಗಿದೆ. ಹಡಗುಗಳು ಒಡೆದು ಬದುಕಿ ಬಂದಿದ್ದವರನ್ನು ಅರಬ್ಬಿಯವರು ಹಿಡಿದು ಇಟ್ಟುಕೊಂಡಿದ್ದರು. ನಮ್ಮವರು ಇವರನ್ನೆಲ್ಲಾ ಬಂಧನದಿಂದ ಬಿಡುಗಡೆ ಮಾಡಿದರು. ಈ ಪ್ರಾಂತ್ಯದಲ್ಲಿ ಶತ್ರುವನ್ನು ಸಂಪೂರ್ಣವಾಗಿ ಸೋಲಿಸಿದ್ದಾಯಿತೆಂದು ಹೇಳಬಹುದಾಗಿದೆ.

ಪೂರ್ವ ಆಫ್ರಿಕಾದಲ್ಲಿ.

ಜನರಲ್ ಸ್ಮಟ್ಸ್ ಎಂಬ ಸೇನಾಪತಿಯು ಬ್ರಿಟಿಷ್ ಸೈನ್ಯ ಸಮೇತ ಜರ್ಮನಿಗೆ ಸೇರಿದ ಪೂರ್ವ ಆಫ್ರಿಕಾದೊಳಕ್ಕೆ ನುಗ್ಗಿ ಹೋಗುತ್ತಿದ್ದಾರೆ. ಬ್ರಿಟಿಷ್ ಸೈನ್ಯಗಳು ಮೇಲ್ಗಡೆಯಿಂದ ಎರಡು ಮೂರು ಪಂಗಡಗಳಾಗಿ ಒಡೆದು ನುಗ್ಗಿ ಹೋಗಿರುವವು. ಒಂದು ಠಾಣ್ಯದಲ್ಲಿ ಅನೇಕ ಗಂಟೆಗಳ ಕಾಲ ಘೋರವಾದ ಕದನವಾಯಿತು. ನಮ್ಮ ಸೈನಿಕರು ರಾತ್ರಿ ಹೊತ್ತಿನಲ್ಲಿ ಸಂಗೀನುಗಳನ್ನು ಹಿಡಿದು ತಿವಿಯುತ್ತಾ ನುಗ್ಗಿ ಆ ಠಾಣ್ಯವನ್ನು ಗೆದ್ದುಕೊಂಡರು. ಮಾರನೇ ಬೆಳಗ್ಗೆ ಶತ್ರುಗಳು ದಕ್ಷಿಣ ದಿಕ್ಕಿನಲ್ಲಿ ಜರ್ಮನಿಯವರ ರೈಲ್ವೆ ಕಡೆಗೆ ಹಿಮ್ಮೆಟ್ಟಿ ಹೋಗುತ್ತಿದ್ದರು. ಹೀಗೆ ಹೋಗುವಾಗ್ಗೆ ಅವರು ಒಂದು ಫಿರಂಗಿಯನ್ನೂ, ಮೂರು ಮೆಷೀನ್ ಫಿರಂಗಿಗಳನ್ನೂ, ಹೆಣಗಳನ್ನೂ ರಣರಂಗದಲ್ಲಿ ಬಿಟ್ಟು ಹೋದರು. ಜರ್ಮನಿಯವರು ಹಲವು ನಗರಗಳನ್ನು ತ್ಯಜಿಸಿ ಹೊರಟು ಹೋಗಿದ್ದಾರೆ. ಬ್ರಿಟಿಷ್ ಸೈನಿಕರು ಅವರನ್ನು ಕ್ರಮೇಣ ಹಿಂದುಹಿಂದಕ್ಕೆ ಓಡಿಸಿಕೊಂಡು ಹೋಗುತ್ತಲಿರುವರು.

ಪೋರ್ಚುಗಲ್ ರಾಜ್ಯ.

ಆಸ್ಟ್ರಿಯಾ ರಾಜ್ಯದವರು ಲಿಸ್ಬನ್ ಪಟ್ಟಣದಲ್ಲಿದ್ದ ತಮ್ಮ ರಾಯಭಾರಿಯನ್ನು ಅಲ್ಲಿಂದ ಕರೆಸಿಕೊಂಡು, ತಮ್ಮ ರಾಜಧಾನಿಯಾದ ವಿಯೆನ್ನಾ ನಗರದಲ್ಲಿದ್ದ ಪೋರ್ಚುಗಲ್ ರಾಯಭಾರಿಗೆ ವಾಪಸು ಹೋಗಬಹುದೆಂದು ಅಪ್ಪಣೆ ಚೀಟಿಯನ್ನು ಕೊಟ್ಟುಬಿಟ್ಟರು. ಸರ್ ಎಡ್ವರ್ಡ್ ಗ್ರೇಯವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪೋರ್ಚುಗಲ್ ರಾಜ್ಯಕ್ಕೆ ನಷ್ಟವೇನೂ ಸಂಭವಿಸದಂತೆ ಬ್ರಿಟಿಷ್ ಗವರ್ನ್‌ಮೆಂಟಿನವರು ನೋಡಿಕೊಳ್ಳುವುದಾಗಿ ತಿಳಿಸಿದರು. ಜರ್ಮನಿಯವರೇನೋ ಪೋರ್ಚುಗಲ್ ಮೇಲೆ ಸೈನ್ಯಗಳನ್ನು ಕಳುಹಿಸುವುದು ಸಾಧ್ಯವಲ್ಲ. ಪೋರ್ಚುಗಲ್ ರಾಜ್ಯದ ಮಾಜಿ ದೊರೆಯಾದ ಮ್ಯಾನ್ಯುಯಲ್‌ರವರು ಪೋರ್ಚುಗೀಸ್ ಪ್ರಜೆಗಳು ತಮ್ಮ ಗವರ್ನ್‌ಮೆಂಟಿನಲ್ಲಿ ರಾಜಭಕ್ತಿಯುಳ್ಳವರಾಗಿರಬೇಕೆಂದೂ, ಇದರಿಂದ ಪೋರ್ಚುಗಲ್ ರಾಜ್ಯದವರು ಪೂರ್ತಿ ಧೈರ್ಯದಿಂದ ಮಿತ್ರಮಂಡಲಿಯವರಿಗೆ ಸಹಾಯ ಮಾಡಬಹುದೆಂದೂ ತಿಳಿಸಿದ್ದಾರೆ.

ಇತರ ವಿಷಯಗಳು.

ಕರಾರು ನಡೆಯುವುದು ಸಾಧ್ಯವೇ ಎಂಬುದನ್ನು ವಿಚಾರಿಸಿ ತಿಳಿದು ಬರುವುದಕ್ಕಾಗಿ ಒಬ್ಬ ಅಮೇರಿಕದವನು ಜರ್ಮನಿಗೆ ಹೋಗಿದ್ದನು. ಜರ್ಮನಿಯವರು ಕರಾರು ಮಾಡಿಕೊಳ್ಳುವುದಕ್ಕೆ ಸಮ್ಮತಿಪಡುತ್ತಾರೆಂದು ಆತನು ತಿಳಿಸಿದ್ದಾನೆ. ಈತನ ಹೇಳಿಕೆ ಪ್ರಕಾರ ಜರ್ಮನಿಯವರು ಒಪ್ಪುವ ಕರಾರಿನ ಕಲಮುಗಳೇನೆಂದರೆ—(1) ಜರ್ಮನಿಯವರ ಸ್ವಾಸ್ಥ್ಯಗಳನ್ನೆಲ್ಲಾ ಅವರಿಗೆ ಬಿಟ್ಟುಕೊಡಬೇಕು, (2) ಯಾವ ಪಕ್ಷದವರೂ ಎದುರು ಪಕ್ಷದವರಿಗೆ ಯುದ್ಧದ ನಷ್ಟದ್ರವ್ಯವನ್ನು ಕೊಡದಂತೆ ಆಗಬೇಕು, (3) ಪೋಲೆಂಡನ್ನು ಪ್ರತ್ಯೇಕವಾದ ಸ್ವತಂತ್ರ ರಾಜ್ಯವಾಗಿ ಮಾಡಬೇಕು, (4) ಸರ್ಬಿಯಾ, ಮಾಂಟಿನೀಗ್ರೋ, ಅಲ್ಬೇನಿಯ, ಈ ಮೂರು ದೇಶಗಳನ್ನೂ ಆಸ್ಟ್ರಿಯ ಹಂಗೇರಿಗೂ, ಬಲ್ಗೇರಿಯಾದಿಗೂ ಪಾಲುಮಾಡಿ ಕೊಡಬೇಕು, (5) ಗ್ರೀಸಿನ ಮೇಲೂ, ಟರ್ಕಿಯ ಮೇಲೂ ಬ್ರಿಟಿಷ್ ಅಧಿಕಾರವೇನೂ ಇಲ್ಲದಂತಾಗಬೇಕು. (6) ರಷ್ಯಾದವರು ಪರ್ಷಿಯಾ ರಾಜ್ಯಾಂಶಗಳನ್ನು ನೋಡಿಕೊಳ್ಳುವಂತಾಗಬೇಕು, (7) ಜರ್ಮನಿಯವರು ಬೆಲ್ಜಿಯಮ್ ಮತ್ತು ಫ್ರಾನ್ಸ್ ದೇಶಗಳಿಂದ ಹೊರಟುಹೋಗತಕ್ಕದ್ದು, (8) ಗ್ರೇಟ್ ಬ್ರಿಟನ್ ರಾಜ್ಯಕ್ಕೆ ಈ ಯುದ್ಧದಿಂದ ಲಾಭವಾಗಲಿ ನಷ್ಟವಾಗಲಿ ಉಂಟಾಗಕೂಡದು. ಇಂಥಾ ಕರಾರನ್ನು ಮಿತ್ರಮಂಡಲಿಯವರು ಒಪ್ಪಿಕೊಳ್ಳುವುದಿಲ್ಲವೆಂಬುವುದು ಖಂಡಿತ. ಜರ್ಮನಿಯವರು ಇನ್ನೊಂದಾವರ್ತಿ ಯೋಚಿಸಿ ಹೇಳುವುದು ಒಳ್ಳೇದಾಗಿ ಕಾಣುತ್ತದೆ.

ಜರ್ಮನಿಯ ಹಡಗುಗಳ ಸೈನ್ಯಕ್ಕೆಲ್ಲಾ ಅಧಿಪತಿಯಾಗಿದ್ದ ಅಡ್ಮಿರಲ್ ಟ್ರಿಪಿಟ್ಸ್ ಎಂಬಾತನು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಿಟ್ಟುಬಿಟ್ಟನು. ಆ ಕೆಲಸಕ್ಕೆ ಅಡ್ಮಿರಲ್ ವಾನ್ ಕಪ್ಪೆಲ್ಲೆ ಎಂಬಾತನು ನೇಮಕವಾಗಿರುತ್ತಾನೆ.— ಜರ್ಮನಿಯ ನಾಣ್ಯದ ಬೆಲೆಯು ದಿನಕ್ರಮೇಣ ಕಡಿಮೆಯಾಗುತ್ತಲಿದೆ. ಅಮೇರಿಕದ ರಾಜಧಾನಿಯಾದ ನ್ಯೂ ಯಾರ್ಕ್ ನಗರದಲ್ಲಿ ಜರ್ಮನಿ ನಾಣ್ಯವು ಮುಕ್ಕಾಲು ಬೆಲೆಗಿಂತಲೂ ಕಮ್ಮಿಯಾಗಿ ಇಳಿದುಹೋಗಿದೆ.

ಡಚ್ಚರ ಒಂದು ಭಾರೀ ಹಡಗನ್ನು ಹಾಲೆಂಡಿನ ಹತ್ತಿರ ಟಾರ್ಪೀಡೋ ಬಡಿಸಿ ಮುಳುಗಿಸಿ ಬಿಟ್ಟರು. ಅದರೊಳಗಿದ್ದ ಪ್ರಯಾಣಿಕರೆಲ್ಲಾ—ಇದರಲ್ಲಿ ಅನೇಕರು ಪರರಾಷ್ಟ್ರಗಳವರು—ಬದುಕಿಸಲ್ಪಟ್ಟರು. ಅದಕ್ಕೆ ಮೊದಲೇ ಎಚ್ಚರಿಕೆಯನ್ನು ಕೊಡಲಿಲ್ಲವಂತೆ. ಈ ಹಡಗು ಮುಳುಗಿಸಿದ್ದರಿಂದ ಅಮೇರಿಕಾ ಮತ್ತು ಹಾಲೆಂಡು ರಾಜ್ಯಗಳ ಕಡೆಯಿಂದ ಕಷ್ಟ ಉಂಟಾಗುತ್ತದೆ — 900 ಪ್ರಯಾಣಿಕರಿದ್ದು ಅಮೇರಿಕವನ್ನು ಸೇರಿ ಸಾಗರದ ಮೇಲೆ ಹೋಗುತ್ತಿದ್ದ ಒಂದು ಫ್ರೆಂಚ್ ಹಡಗು ಟಾರ್ಪೀಡೋವಿಗೆ ಸಿಕ್ಕಿದ ಬಹಳ ಸ್ವಲ್ಪದರಲ್ಲೇ ತಪ್ಪಿಸಿಕೊಂಡಿತು. ಟಾರ್ಪೀಡೋ ದೋಣಿಯು ಆ ಹಡಗಿಗೆ ಸುಮಾರು ಇಪ್ಪತ್ತು ಗಜಗಳ ದೂರದಲ್ಲಿ ಹೋಯಿತು. ಅದರೊಳಗೆ ಸುಮಾರು 30 ಮಂದಿ ಅಮೇರಿಕಾದವರಿದ್ದರು.—ಉತ್ತರ ಕಡಲಿನಲ್ಲಿ ಡಚ್ಚರ ಇನ್ನೊಂದು ಹಡಗು ಮುಳುಗಿಸಲ್ಪಟ್ಟಿದೆ. ಅದರಲ್ಲಿದ್ದ ಜನಗಳನ್ನು ಎತ್ತಿ ಬದುಕಿಸಿ ಇಂಗ್ಲೆಂಡಿಗೆ ಕರೆದುಕೊಂಡು ಹೋಗಿದ್ದಾರೆ.

ಲಾರ್ಡ್ ಕರ್ಜನ್ ರವರಿಗೆ ದಿನೇ ದಿನೇ ವಾಸಿಯಾಗುತ್ತಿದೆ. ಮಿ॥ ಆಸ್ಕ್ವಿತ್ ರವರಿಗೆ ಸ್ವಲ್ಪ ಅಸ್ವಸ್ಥವಾಗಿರುವುದು; ಅದೇನೂ ವಿಶೇಷವಾದ ರೋಗವಲ್ಲ.

ಕೆನಡಾ ಎಂಬ ಇಂಗ್ಲಿಷ್ ಸಾಮ್ರಾಜ್ಯದ ಸೈನಿಕರಲ್ಲಿ ಇದುವರೆಗೆ 13,868 ಮಂದಿ ನಷ್ಟಪಟ್ಟಿರುತ್ತಾರೆ.

ನಮ್ಮ ಪ್ರಿನ್ಸ್ ಆಫ್ ವೇಲ್ಸ್ ರವರು ಈಗ ಈಜಿಪ್ಟಿನಲ್ಲಿದ್ದು ಅಲ್ಲಿರುವ ಸೈನ್ಯಾಧಿಪತಿಗಳ ಬಳಿ ಹುದ್ದೆ ಮಾಡುತ್ತಿದ್ದಾರೆ.

ಇಟಲಿಯವರು ತಮ್ಮ ತೀರಪಟ್ಟಣಗಳಲ್ಲಿ ಹಿಡಿದಿಟ್ಟುಕೊಂಡಿದ್ದ 36 ಜರ್ಮನಿ ವ್ಯಾಪಾರದ ಹಡಗುಗಳನ್ನು ತಮ್ಮ ಕೆಲಸಗಳಿಗಾಗಿ ವಿನಿಯೋಗಿಸಿಕೊಳ್ಳುತ್ತಾರೆ.

ಶತ್ರುವಿನ ಸಬ್‌ಮರೀನ್ ದೋಣಿಯಿಂದ ಅಡ್ರಿಯಾಟಿಕ್ ಕಡಲಿನಲ್ಲಿ ಫ್ರೆಂಚರ ಪ್ರೊವೆನ್ಸ್ ಯೆಂಬ ಒಂದು ಯುದ್ಧದ ಹಡಗು ಮುಳುಗಿಹೋಯಿತು. ಮೂವರು ಹುದ್ದೇದಾರರೂ 44 ಸೈನಿಕರೂ ಸಿಕ್ಕಿಲ್ಲ: ಇಬ್ಬರು ಹುದ್ದೇದಾರರನ್ನೂ, 34 ಮಂದಿಯನ್ನೂ ನೀರಿನಿಂದೆತ್ತಿ ಬದುಕಿಸಿರುತ್ತಾರೆ.

ಸ್ವದೇಶದ ವೃತ್ತಾಂತಗಳು.

ಕಳೆದ ವಾರ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಸುಮಾರು 250 ರೂಪಾಯಿನ ಸಾಮಾನುಗಳನ್ನು ಯಾರೋ ಕಳವು ಮಾಡಿದ್ದಾರೆ.

ಬೆಂಗಳೂರು ಸಿಟಿ ಸುಬ್ರಾಯನ ಗಲ್ಲಿಯಲ್ಲಿ ಮ॥ ನರಸಿಂಹಾಚಾರ್ಯ ಮನೆಗೆ ಬೆಂಕಿ ಬಿದ್ದು ಸುಮಾರು 500 ರೂಪಾಯಿನ ಆಸ್ತಿ ಸುಟ್ಟುಹೋಯಿತು.

ಬೆಂಗಳೂರು ಹಳೇ ತರಗಿನ ಮಂಡಿಯಲ್ಲಿ ಅಬ್ದುಲ್ ಅಜೀಜ್ ಎಂಬ ವರ್ತಕನು ಕೇವಲ 90 ರಷ್ಟು ಕೊಬ್ಬು ಬೆರಸಿದ ತುಪ್ಪವನ್ನು ವಿಕ್ರಯಮಾಡಿದನೆಂದು ಚೀಫ್ ಮ್ಯಾಜಿಸ್ಟ್ರೇಟರು ಅವನಿಗೆ 50 ರೂಪಾಯಿ ಜುಲ್ಮಾನೆಯನ್ನು ವಿಧಿಸಿದರು.

ಕಳೆದ ವಾರ ಮೇಲುಕೋಟೆಯಲ್ಲಿ ವೈರಮುಡಿ ಉತ್ಸವಾದಿಗಳೂ, ದನಗಳ ಪ್ರದರ್ಶನವೂ, ಪಂಚಮರ ಕಾನ್ಫರೆನ್ಸೂ, ಕೋಆಪರೇಟಿವ್ ಕಾನ್ಫರೆನ್ಸೂ ನಡೆದವು. ಆ ಜಾತ್ರೆಯ ಕಾಲದಲ್ಲಿ ಸರ್ಕಾರದವರು ಕೆಲವು ಜೂಜಾಟಗಳು ನಡೆಯುವುದಕ್ಕೆ ಅವಕಾಶಕೊಟ್ಟದ್ದು ಯೋಗ್ಯವಲ್ಲವೆಂದು ಒಬ್ಬ ವರ್ತಮಾನದಾರರು ಬರೆಯುತ್ತಾರೆ.

ಸೋಸಲೆಯಲ್ಲಿ ಶ್ರೀ ವ್ಯಾಸರಾಯಮಠದ ಶ್ರೀ ಸ್ವಾಮಿಗಳವರು ಈ ವಾರ ಒಂದು ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭ ಮಾಡುವವರಾಗಿದ್ದಾರೆ. ವೇದ, ಕಾವ್ಯ, ತರ್ಕ, ಸಾಹಿತ್ಯವೇ ಮೊದಲಾದ ಭಾಗಗಳನ್ನು ಅಲ್ಲಿ ವಿದ್ಯಾರ್ಥಿಗಳಿಗೆ ಕಲಿಸುವಂತೆ ಬಹು ಉದಾರವಾದ ಏರ್ಪಾಡುಗಳು ನಡೆದಿರುವವು. ವಿದ್ಯಾರ್ಥಿಗಳಿಗೆ ಕೆಲವು ವೇತನಗಳೂ ಕೊಡಲ್ಪಟ್ಟು ಪ್ರೋತ್ಸಾಹ ಮಾಡಲ್ಪಡುವುದೆಂದು ತಿಳಿಸಲಾಗಿದೆ.

ಹಿಂದುಸ್ಥಾನದ ಭೀಮನೆಂದು ಕೀರ್ತಿ ಪಡೆದಿರುವ ಪ್ರೊಫೆಸರ್ ರಾಮಮೂರ್ತಿಯವರು ಪರಿವಾರ ಸಮೇತ ಮೊನ್ನೆ ಸೋಮವಾರ ರಾಜಧಾನಿಗೆ ಬಂದು ಆಸ್ಪತ್ರೆ ಬಳಿ ಹಾಕಿಕೊಂಡಿರುವ ಅವರ ಡೇರಾದಲ್ಲಿ ಮಂಗಳವಾರ ರಾತ್ರಿಯಿಂದ ತಮ್ಮ ಸಾಮರ್ಥ್ಯವನ್ನು ಪ್ರದರ್ಶನ ಮಾಡುತ್ತಿದ್ದಾರೆ. ಇಂಥಾ ಅಪೂರ್ವವಾದ ದೇಹಶಕ್ತಿ ಪ್ರದರ್ಶನವನ್ನೂ, ಅವರ ಕೂಡ ಬಂದಿರುವ ಚತುರರು ಮಾಡುವ ಅತ್ಯಂತ ಸಾಹಸ ಚಮತ್ಕಾರ ಕಾರ್ಯಗಳನ್ನೂ ಸಾವಿರಾರು ಜನಗಳು ನೋಡಿ ಸಂತೋಷಪಡುತ್ತಿರುವರು.

ಕಳೆದ ಶುಕ್ರವಾರ ನಂಜನಗೂಡಿನಲ್ಲಿ ದೊಡ್ಡ ಜಾತ್ರೆ ನಡೆಯಿತು. ಅನೇಕ ಸಾವಿರ ಪ್ರಜೆಗಳು ಅಲ್ಲಿ ಸೇರಿದ್ದರು. ಶ್ರೀಮನ್ಮಹಾರಾಜಾರವರೂ ಅರಮನೆಯ ರಾಣೀವಾಸದವರೂ ಮಧ್ಯಾಹ್ನ ಸಾಯಂಕಾಲದವರೆಗೆ ಇದ್ದು ವಾಪಸು ಚಿತ್ತೈಸಿದರು. ಆ ದಿನ ಎರಡು ದೊಡ್ಡ ರಥಗಳು ಆರಾಮನೆ ಮುಂಭಾಗದಲ್ಲೇ ತಳ್ಳಿಕ್ಕೆ ಬಿದ್ದು ಅವನ್ನು ಎತ್ತಿ ಸಾಗಿಸಿ ನೆಲೆಗೆ ಸಲ್ಲಿಸುವುದರಲ್ಲಿ ಸಾಯಂಕಾಲವೇ ಆಯಿತು. ಇಂಥಾ ಜಾತ್ರೆ ಕಾಲದಲ್ಲಿ ಸೇರತಕ್ಕ ಪ್ರಜೆಗಳ ಆರೋಗ್ಯವನ್ನು ಕಾಪಾಡುವುದಕ್ಕೆ ಇನ್ನೂ ವಿಶೇಷವಾದ ಸ್ಯಾನಿಟರಿ ಏರ್ಪಾಡುಗಳೂ ಇತರ ಕ್ರಮಗಳೂ ತಾಳಲ್ಪಟ್ಟರೆ ಅನುಕೂಲವಾದೀತು.

ಚಿತ್ರದುರ್ಗ ಡಿಸ್ಟ್ರಿಕ್ಟು ವಿದ್ಯಾಭಿವೃದ್ಧಿ ಸಂಘವು.

ಈ ಸಂಘದ ಮೆಂಬರುಗಳು ಇದೇ ಮಾರ್ಚಿ 12 ನೇ ತಾ. ಭಾನುವಾರ ಮಧ್ಯಾಹ್ನ ಚಿತ್ರದುರ್ಗದ ಎ. ವಿ ಸ್ಕೂಲ್ ಹಾಲಿನಲ್ಲಿ ಸೇರಿ ತಿಂಗಳುಗಟ್ಟಲೆ ವಿಸಿಟಿಂಗನ್ನು ನಡಿಸಿದರು. ಬೇಸಗೆ ಬಿಸಿಲು ಹೆಚ್ಚಾಗಿರುವುದು ಬಿಸಿಲಿನ ದೆಸೆಯಿಂದ ದೂರದ ಹಳ್ಳಿಗಳಿಂದ ಉಪಾಧ್ಯಾಯರುಗಳು ಬರಲು ಅನನುಕೂಲವೆಂದು ತಿಳಿಯಿತು. ಅನೇಕರು ತಿಳಿಸದೆ ನಿಂತುಬಿಡುತ್ತಾರೆ. ಇದರಿಂದ ತೊಂದರೆ ಎಂಬುವುದನ್ನು ಮರೆತಿರಬಾರದು. ಮ|| ಸಂಜೀವಯ್ಯನವರ ಅಗ್ರಾಸನಾಧಿಪತ್ಯದಲ್ಲಿ ವಿಸಿಟಿಂಗಿನ ಕಾರ್ಯಗಳು ಪ್ರಾರಂಭಿಸಲ್ಪಟ್ಟವು. ರೀಡಿಂಗ್ ರೂಮು, ಪುಸ್ತಕ ಭಂಡಾರ, ಇವುಗಳ ವಿಷಯ ಸ್ವಲ್ಪ ಸಂಭಾಷಣೆ ನಡೆಯಿತು. ಭೂಗೋಳ ಪಾಠದ ಬೋಧನ ಕ್ರಮವನ್ನು ಕುರಿತು ಅಗ್ರಾಸನಾಧಿಪತಿಗಳು ದೊಡ್ಡದಾಗಿ ಉಪನ್ಯಾಸ ಮಾಡಿದರು. ಇದರಿಂದ ಹೆಚ್ಚು ಅಂಶಗಳನ್ನು ಗ್ರಹಿಸಲು ಅನುಕೂಲವಾಯಿತು. ಚರಿತ್ರೆಯ ಪಾಠದಲ್ಲಿ ಒಂದು ಪ್ರಾಕ್ಟಿಕಲ್ ಕ್ಲಾಸು ನಡೆಯಿತು. ಈ ವಿಷಯದಲ್ಲಿ ವಾದಶೋಧನೆ ನಡಿಸಿ ಚರ್ಚಿಸಿದರು. ಬೇಸಗೆ ಕಾಲವಾದದರಿಂದ ಏಪ್ರಿಲ್, ಮೇ, ಜೂನ್ ಮೂರು ತಿಂಗಳು ವಿಸಿಟಿಂಗ್ ನಡೆಯತಕ್ಕದ್ದಿಲ್ಲವೆಂದು ತೀರ್ಮಾನಿಸಿ, ಪುನಃ ಜುಲೈ ತಾ. 9 ನೇ ಭಾನುವಾರ ವಿಸಿಟಿಂಗು ನಡೆಯತಕ್ಕದ್ದೆಂದು ಗೊತ್ತುಮಾಡಿದರು ಆ ದಿನದ ಕಾರ್ಯಗಳು ದಿಕಾರ್ಡು ಮಾಡಲ್ಪಟ್ಟವು. ಅಗ್ರಾಸನಾಧಿಪತಿಗಳಿಗೆ ವಂದನೆಗಳನ್ನು ಸಮರ್ಪಿಸಿ ವಿಸಿಟಿಂಗನ್ನು ಮುಕ್ತಾಯ ಮಾಡಿದರು.

ವೀರಭದ್ರಪ್ಪ, ಜಾ. ಸೆಕ್ರೆಟರಿ.

ಒಂದು ಹೊಸ ಆಸ್ಪತ್ರೆ ಏರ್ಪಾಡು.

ಶಿವಮೊಗ್ಗ ಡಿಸ್ಟ್ರಿಕ್ಟು ಹುಮಚದಕಟ್ಟೆ ಡಿಸ್ಪೆನ್ಸರಿಯನ್ನು ಸೇರಿಸಿ ಇಟಿನರೇಟಿಂಗ್ ಡಿಸ್ಪೆನ್ಸರಿಯನ್ನಾಗಿ ಮಾಡಿರುತ್ತೆ. ಈ ಆಸ್ಪತ್ರೆ ಮೆಡಿಕಲ್ ಆಫೀಸರು ಇದಕ್ಕೆ ಸಂಬಂಧಪಟ್ಟಿರುವ ಗ್ರಾಮಗಳಿಗೆ ತಿಂಗಳಿಗೊಂದಾವರ್ತಿ ಜನಗಳ ರೋಗ ಚಿಕಿತ್ಸಾರ್ಥವಾಗಿ ಸಂಚಾರ ಮಾಡುತ್ತಾರೆ. ಈ ದಿಸ್ಪೆನ್ಸರಿ ಸೇರಿದ ಪ್ರದೇಶವನ್ನು ನಾಲ್ಕು ಭಾಗಗಳನ್ನಾಗಿ ಮಾಡಿ, ಆಯಾ ಭಾಗಗಳಲ್ಲಿ ಡಾಕ್ಟರು ಒಂದೊಂದು ಮುಖ್ಯ ಸ್ಥಳದಲ್ಲಿ ಮೊಕ್ಕಾಂ ಮಾಡುತ್ತಾರೆ. ಆ ಮೊಕ್ಕಾಂಗಳಲ್ಲಿ ರೋಗಿಗಳೇ ಆಗಲಿ, ಅವರ ಪರವಾಗಿ ಇತರೆ ಜನಗಳೇ ಆಗಲಿ ಹೋಗಿ ತಕ್ಕ ಔಷಧಿಯನ್ನು ತೆಗೆದುಕೊಳ್ಳಬಹುದು. ಸ್ಥಳದ ದೇಶಮುಖರಾಗಲಿ, ಅಲ್ಲದೆ ಗ್ರಾಮ ನೌಕರರೇ ಆಗಲಿ ಯಾರಾದರೂ ಜನಗಳು ನಮಗೆ ಆಗಮಿಸಬೇಕಾಗಿದ್ದಲ್ಲಿ ತಿಳಿಸಬೇಕೆಂದು ಪ್ರಕಟಿಸಿರುತ್ತದೆ. ಇದಕ್ಕೆ ಸಂಬಂಧಪಟ್ಟ ರೆವಿನ್ಯೂ ಆಫೀಸರುಗಳಿಗೆ (ಶೇಕದಾರ್ರು) ಆಯಾ ತಾಲ್ಲೂಕಿನ ಆಸ್ಪತ್ರೆಗಳು ಪ್ರತ್ಯೇಕವಾಗಿ ಇದಕ್ಕೆ ಸಂಬಂಧಪಟ್ಟ ಅನುಕೂಲಗಳನ್ನು ಮಾಡತಕ್ಕ ಬಗ್ಗೆ ತಿಳಿಸುತ್ತದೆ. ಇದೂ ಅಲ್ಲದೆ ಆರೋಗ್ಯ ಮಾರ್ಗ ವಿಚಾರವಾಗಿಯೂ, ರೋಗಗಳು ಹುಟ್ಟುವ ಬಗೆಯೂ, ಅದಕ್ಕೆ ನಿವಾರಣೆ ಮತ್ತು ಅನುಸರಿಸಬೇಕಾದ ಮಾರ್ಗ ಪರಂಪರೆಯೂ, ಗ್ರಾಮ ಜನಕ್ಕೆ ಸಂಧರ್ಭಗಳಲ್ಲಿ ಪ್ರಯೋಜನವಾಗುವಂತೆ ಅಲ್ಲಲ್ಲಿ ಉಪನ್ಯಾಸ ಮಾಡುತ್ತಾರೆ. ಹೀಗೆ ಪ್ರಜೆಗಳ ರೋಗ ನಿವಾರಣೆಗೋಸ್ಕರ ನಮ್ಮ ಸರ್ಕಾರದವರು ಮಾಡಿರತಕ್ಕಂಥಾ ಈ ಏರ್ಪಾಡುಗಳನ್ನು ಪ್ರಜೆಗಳು ಮನಸ್ಸಿಗೆ ತಂದುಕೊಂಡು ವ್ಯಾಧಿಗ್ರಸ್ತರಿಗೆ ತಕ್ಕ ತಿಳುವಳಿಕೆಗಳನ್ನು ಕೊಟ್ಟು ಪ್ರೋತ್ಸಾಹಪಡಿಸಿ, ಈ ಏರ್ಪಾಟಿನ ಸಂಪೂರ್ಣ ಪ್ರಯೋಜನವನ್ನು ಹೊಂದುತ್ತಾರೆಂದು ನನ್ನ ಪ್ರಾರ್ಥನೆ.

ಹುಮಚದಕಟ್ಟೆ. ಎಚ್. ವರದಯ್ಯಂಗಾರ್, ಮೆಡಿಕಲ್ ಆಫೀಸರ್.

ವ್ಯವಸಾಯ ಮತ್ತು ಗ್ರಾಮಾಭಿವೃದ್ಧಿ.

ತಿಪಟೂರು ತಾಲ್ಲೂಕು ಅಂತರಗಟ್ಟೆಯಲ್ಲಿ ನಡೆದ ಪ್ರಸಿದ್ಧವಾದ ದನಗಳ ಪ್ರದರ್ಶನದ ಸಂಬಂಧದಲ್ಲಿ ಸರ್ಕಾರದವರು ನಡಿಸಿದ ಎಕನಾಮಿಕ್ ಕಾನ್ಫರೆನ್ಸ್ ಸಂಬಂಧವಾದ ಸಭೆಗೆ ಕಡೂರು ಡಿಸ್ಟ್ರಿಕ್ಟಿನ ಸರ್ಕಾರದ ಎಲ್ಲಾ ಇಲಾಖೆಯ ಮುಖ್ಯಾಧಿಕಾರಿಗಳೂ, ಆ ಪ್ರಾಂತದ ಪ್ರಮುಖರೂ ಪ್ರತಿನಿಧಿಗಳೂ ಮೊದಲಾದವರು ಬಂದಿದ್ದರು. ಅಲ್ಲಿ ಕಡೂರು ಡಿಸ್ಟ್ರಿಕ್ಟ್ ಆಫೀಸರವರಾದ ಮ|| ಎಂ. ಜಿ. ವೆಂಕಟಸುಬ್ಬಯ್ಯನವರು ಅಗ್ರಾಸನವನ್ನು ಅಲಂಕರಿಸಿದರು. ಅಲ್ಲಿ ಸೇರಿದ್ದ ರೈತರಿಗೆಲ್ಲಾ ವ್ಯವಸಾಯದ ಕಸುಬಿನ ಮೇಲೆ ಸುಧಾರಣೆಯನ್ನು ಹೇಳುವುದರ ಸಲುವಾಗಿ ಗೌರ್ನಮೆಂಟಿನವರಿಂದ ಬಿಡಲ್ಪಟ್ಟಿದ್ದ ಶ್ರೀರಂಗಪಟ್ಟಣದ ಅಗ್ರಿಕಲ್ಚರಲ್ ಮ|| ಎಕ್ಸಿಬಿಷನ್ ನಮ್ಮ ರೈತರು ಮಾಡುತ್ತಿರುವ ವ್ಯವಸಾಯ ಪದ್ಧತಿಗಳಲ್ಲಿರುವ ಅಭಿವೃದ್ಧಿಗಳನ್ನೂ, ಅದರ ಲೋಪದೋಷಗಳನ್ನೂ, ಇವರ ಕಷ್ಟಗಳಿಗಾಗಿ ಅತ್ಯವಶ್ಯವಾಗಿ ಬರಬೇಕಾದ ಸುಧಾರಣೆಗಳನ್ನೂ, ಪಾಶ್ಚಾತ್ಯ ದೇಶಗಳಲ್ಲಿ ಈ ಕಸುಬು ಹೊಂದಿರುವ ಉಚ್ಛ್ರಾಯ ಸ್ಥಿತಿಯನ್ನೂ ವ್ಯವಸಾಯಶಾಸ್ತ್ರ ಪದ್ಧತಿಗಳಿಗೆ ಎಲ್ಲರಿಗೂ ತಿಳಿಯುವಂತೆ ಹೇಳಿ ಸುಲಭವಾಗಿ ವಿವರಿಸಿ ಬೋಧಿಸಿದ್ದಲ್ಲದೆ, ನಮ್ಮ ರೈತರನ್ನು ಉದ್ಧರಿಸುವುದರ ಸಲುವಾಗಿ ನಮ್ಮ ಸರ್ಕಾರದವರು ಕಲ್ಪಿಸಿ ಕೊಡಬೇಕಾಗಿರುವ ಉದಾರವಾದ ಸೌಲಭ್ಯವಾದ ಅನೇಕ ಸಲಹೆಗಳನ್ನು ಕೂಡ ತಾವು ಸೂಚಿಸಿದರು. ಇದೂ ಅಲ್ಲದೆ ನಮ್ಮ ಪವಿತ್ರವಾದ ಬೇಸಾಯದ ಕಸುಬೇ ನಮ್ಮೆಲ್ಲರ ಪ್ರಾಣಕಳೆಯೂ, ಧನಾಂಗದ ಭಾಗ್ಯೋದಯಕ್ಕೂ, ದೇಶದ ಏಳಿಗೆಗೂ ಮೂಲಾಧಾರವಾಗಿರುವುದರಿಂದ ಎಲ್ಲದಕ್ಕಿಂತಲೂ ಅತಿ ಮುಖ್ಯವಾಗಿ ಈ ಕಸುಬಿನ ಅಭಿವೃದ್ಧಿಯು ನಮ್ಮೆಲ್ಲರ ದಯಾಳು ಗೌರ್ನಮೆಂಟಿನವರಿಂ, ಜನಾಂಗದವರೂ ಹೆಚ್ಚಿನ ಗಮನವನ್ನು ಕೊಟ್ಟು ನೋಡಬೇಕೆಂಬುವ ಬಹಳ ಮುಖ್ಯವಾದ ಸಂಗತಿಯನ್ನು ಅನೇಕ ಮಹನೀಯರು ಇದುವರೆಗೆ ಅಪ್ಪಣೆಕೊಡಿಸಿರುವ ದೊಡ್ಡ ದೊಡ್ಡ ಅಧಿಕಾರಿಗಳು ಅಂದರೆ ಹಿತೋಪದೇಶದ ಉಕ್ತಿಗಳನ್ನು ಅಲ್ಲಲ್ಲೇ ಉದಹರಿಸುತ್ತಾ, ಒಂದು ಗಂಟೆಯ ವರೆಗೂ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿ ಸಭೆಯವರೆಲ್ಲರನ್ನೂ ಸಂತೋಷಗೊಳಿಸಿದರು. ಅನಂತರ ಅಧ್ಯಕ್ಷರು ಮಾಡಿದ ಉಪದೇಶವನ್ನು ನೂರಾರು ವರ್ಷಗಳಿಂದಲೂ ಹಿಂದುಳಿದಿರುವ ರೈತರೆಲ್ಲರೂ ಅವರನ್ನು ಹಿಂಬಾಲಿಸಿ ಹೆಚ್ಚಿನ ಸಂಪತ್ತನ್ನು ಸಂಪಾದಿಸಿ ಅಭಿವೃದ್ಧಿಹೊಂದುವುದರ ಮೂಲಕ ನಮ್ಮ ರಾಜ್ಯದ ಸಂಪತ್ತನ್ನು ಹೆಚ್ಚಿಸಿ, ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಇಷ್ಟಾರ್ಥವನ್ನು ನೆರವೇರಿಸಬೇಕೆಂದು ಬುದ್ಧಿವಾದ ರೂಪವಾದ ಹಿತೋಕ್ತಿಗಳಿಂದ ಆ ದಿನದ ಸಭೆಯನ್ನು ಮುಗಿಸಿದರು.

ಆ ದಿನ ಬೆಳಿಗ್ಗೆ ಮ|| ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡುವುದರ ಸಲುವಾಗಿ ಸಭೆ ಸೇರಿ ಬಹುಮಾನ ವಿನಿಯೋಗವಾದ ನಂತರ ಮಿ|| ಸ್ಲೇಟರವರಿಂದ ಬಹುಮಾನ ಹೊಂದಿದ ರಾಸುಗಳ ಫೋಟೋ ತೆಗೆಯಲಾಯಿತು. ಆ ಮೇಲೆ ಪುನಃ ಸಾಯಂಕಾಲ 4 ಗಂಟೆಗೆ ಧಾನ್ಯಗಳ ಪ್ರದರ್ಶನ ಮಂದಿರದಲ್ಲಿ ಅಂದರೆ ಅಂತರಗಟ್ಟೆ ಸ್ಕೂಲ್ ಕಟ್ಟಡದಲ್ಲಿ ಕೃಷಿ ಲೈವ್ ಸ್ಟಾಕ್ ಆಫೀಸರು ಮ|| ಬಿ. ಟಿ. ಕೇಶವಯ್ಯಂಗಾರ್ರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಮ|| ಶ್ರೀನಿವಾಸರಾಯರೇ ಮೊದಲಾದ ಅಧಿಕಾರಿಗಳೂ, ಮಿ|| ಸ್ಲೇಟರವರೇ ಮೊದಲಾದ ದೊಡ್ಡ ಮನುಷ್ಯರೂ ಸಭಾಲಂಕಾರವಾಗಿದ್ದರು. ಆಗ್ಗೆ ಕಡೂರು ಅಮಲ್ದಾರ್ ಮ|| ವೆಂಕಟರಾಯರು ಆ ಸಭೆಯ ಉದ್ದೇಶ ಮುಂತಾದವುಗಳನ್ನು ಹೇಳಿದರು. ಕಡೂರು ತಾ|| ಗಿರಿಯಾಪುರದ ಸ್ಕೂಲ್ ಹೆಡ್ ಮಾಸ್ಟರ್ ಮ|| ಎಚ್. ಸುಬ್ಬರಾಯರು ಗ್ರಾಮಾಭಿವೃದ್ಧಿಯ ವಿಷಯದಲ್ಲಿ ಬಹಳ ಸರಸವಾದ ಉಪನ್ಯಾಸ ಮಾಡಿದರು. ಗ್ರಾಮಾಭಿವೃದ್ಧಿ ಸಂಘಗಳ ಪ್ರಯೋಜನ, ಅವುಗಳಲ್ಲಿನ ಕೆಲವು ಸಂಘದ ಮೆಂಬರುಗಳು ನಡೆಸತಕ್ಕ ಕೆಲಸಗಳು, ಅದರಿಂದ ಅವರು ಹೊಂದಿರುವ ಉಪಯೋಗಗಳು, ಕೆಲವು ಈ ಸಂಘಗಳನ್ನು ಉದಾಸೀನ ಮನೋಭಾವದಿಂದ ಉಂಟಾಗಿರುವ ತೊಂದರೆಗಳು, ಈ ಸಂಘಗಳಿಂದ ಸಂಪದಭಿವೃದ್ಧಿಯಾಗತಕ್ಕ ರೀತಿ, ಮತ್ತು ಗ್ರಾಮದ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಸಹಕಾರಿಗಳಾದ ಪಾಠಶಾಲೆ, ಸಹಕಾರ ಸಂಘಗಳೂ, ಜನಗಳಲ್ಲಿರಬೇಕಾದ ಪರಸ್ಪರ ಮೈತ್ರೀಭಾವ, ಐಕಮತ್ಯ ಮತ್ತು ಪ್ರತಿಯೊಬ್ಬ ಮನುಷ್ಯನೂ ತನಗೆ ಒದಗಿರುವ ಕಾಲವನ್ನು ಯಥೋಚಿತ ವಿನಿಯೋಗ ಮಾಡುವುದರಿಂದ ಉಂಟಾಗುವ ಪ್ರಯೋಜನಗಳೂ, ಈ ವಿಷಯದಲ್ಲಿ ಪಾಶ್ಚಾತ್ಯರಿಗೂ ನಮಗೂ ಇರತಕ್ಕ ಸಾಮ್ಯ ವಿಷಮಗಳ ಕಾರಣವನ್ನೂ, ಈ ವಿಚಾರದಲ್ಲಿ ಪಾಶ್ಚಾತ್ಯರು ಹೊಂದುತ್ತಿರುವ ಮೇಲ್ಮೆ ಮತ್ತು ಘನತೆಯನ್ನೂ, ಹಿಂದುಳಿದಿರುವ ನಮ್ಮಗಳಿಗೆ ಉಂಟಾಗಿರುವ ಕೊರತೆಗಳನ್ನೂ ಬಹು ಸ್ವಾರಸ್ಯವಾಗಿ ಹಲವು ದೊಡ್ಡ ಉದಾಹರಣೆಗಳಿಂದ ವಿವರಿಸಿದ್ದರಿಂದ ಸಭಿಕರೆಲ್ಲರೂ ತಮ್ಮ ಸಂತೋಷವನ್ನು ಪ್ರದರ್ಶಿಸಿದರು. ಮತ್ತು ವಿದ್ಯಾಭ್ಯಾಸ, ಗ್ರಾಮ ನೈರ್ಮಲ್ಯ, ಗ್ರಾಮ ರಚನೆ, ಇವುಗಳ ವಿಷಯದಲ್ಲಿಯೂ ಬಹು ಚೆನ್ನಾಗಿ ಉಪನ್ಯಾಸಿಸಿ ಎಲ್ಲರ ಮನಸ್ಸನ್ನೂ ಆನಂದಗೊಳಿಸಿದರು. ಅನಂತರ ಅಧ್ಯಕ್ಷರ ಹಿತೋಕ್ತಿಗಳಿಂದ ಸಭಾ ಭಂಗವು ಮಾಡಲಾಯಿತು.

ಪ್ರತ್ಯಕ್ಷದರ್ಶಿ.

ಮಲೆನಾಡು ಅಭಿವೃದ್ಧಿಯು ಹ್ಯಾಗೆ ಸಾಧ್ಯ?

ಮಲೆನಾಡಿನ ಅಭಿವೃದ್ಧಿಯು ಯಾವ ವಿಧದಿಂದ ಸಾಧ್ಯವಾಗಬಹುದೆಂದು ಸರ್ಕಾರದವರ ಮನಸ್ಸಿಗೂ ಪ್ರಜೆಗಳ ಮನಸ್ಸಿಗೂ ಸದಾ ಕಾಲದಲ್ಲಿಯೂ ಒಂದು ಯೋಚನೆಗೆ ಕಾರಣವಾದ ವಿಷಯವಾಗಿರುವದು ಸರಿಯಷ್ಟೆ. ಈ ವಿಚಾರದಲ್ಲಿ ಸ್ವಲ್ಪ ಮಟ್ಟಿಗೆ ತೋರಿಬರುವ ಈ ಅಭಿಪ್ರಾಯಗಳನ್ನು ಈ ಕೆಳಗೆ ವಿವರಿಸಿದೆ. ಮೈಸೂರು ಸೀಮೆಯು ಮೈದಾನ, ಮಲೆನಾಡೆಂದು ಎರಡು ವಿಭಾಗವಾಗಿ ವಿಂಗಡಿಸಲ್ಪಟ್ಟಿದೆ. ಎಲ್ಲಿ ನೋಡಿದರೂ ಗುಡ್ಡಗಳಿಂದಲೂ, ವೃಕ್ಷಗಳಿಂದಲೂ ಕೂಡಿಕೊಂಡು ವಿಪರೀತವಾದ ಮಳೆ ಬಿಸಲುಗಳಿಗೆ ಪಾತ್ರವಾಗಿರುವ ಪ್ರದೇಶವು ಮಲೆನಾಡೆನ್ನಿಸಿಕೊಳ್ಳುತ್ತದೆ. ಮಹತ್ತರವಾದ ಗಿಡ ಮರಗಳಿಂದ ಕೂಡಿದ ಪ್ರದೇಶವು ಸದಾ ಇದೇ ಆಗಿರುತ್ತದೆ. ಅನಾರೋಗ್ಯಕ್ಕೆ ಜನ್ಮಭೂಮಿ ಎನ್ನಿಸಿಕೊಳ್ಳುತ್ತದೆ. ಇಲ್ಲಿನ ಬೆಳೆಯು ಕರಿ, ಬಾಗಾಯ್ತು ವಿಶೇಷವಾಗಿ ಉಳ್ಳದ್ದಾಗಿದೆ. ಇನು ಪ್ರಾಯಃ ಜನಸಂಖ್ಯೆಯಿಲ್ಲದ ಮೈದಾನ ಪ್ರದೇಶಕ್ಕಿಂತಲೂ ಜನ ಬಾಹುಳ್ಯದಲ್ಲಿ ಹಿಂದೆನ್ನಿಸಿಕೊಳ್ಳುತ್ತದೆ. ಇದೂ ಅಲ್ಲದೆ ಮಲೆನಾಡಿನ ಖಾನೇಸುಮಾರಿಯನ್ನು ಪರಿಶೋಧಿಸಿ ನೋಡಿದ್ದರಲ್ಲಿ ಪ್ರಜಾ ಸಂಖ್ಯೆಯು ಕ್ರಮಕ್ರಮೇಣ ಕಡಮೆಯಾಗಿದೆ ಎಂದು ಹೇಳಬೇಕಾಗಿದೆ. ಮುಖ್ಯ ಹೀಗಿರಲು ಕಾರಣವೇನು? ಈ ಪ್ರದೇಶವನ್ನು ಯಾವ ವಿಧದಲ್ಲಿ ಏಳಿಗೆಗೆ ತರಬಹುದು? ಇಲ್ಲಿ ಜನಗಳು ವಾಸಮಾಡಿಕೊಂಡು ಜಮೀನುಗಳನ್ನು ವ್ಯವಸಾಯ ಮಾಡಲಿಕ್ಕೆ ಯಾವ ಉಪಾಯಗಳನ್ನು ಅನುಕೂಲಗಳನ್ನು ಕಲ್ಪಿಸಬೇಕು ಎಂಬೀ ವಿಷಯಗಳನ್ನು ಆಲೋಚಿಸಿ ನೋಡಬೇಕು.

ಪ್ರಕೃತ ಮಲೆನಾಡಿನ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಕೂಲೀ ಜನಗಳು ಬಂದ ಹೊರತು ಸಾಧ್ಯವೇ ಇಲ್ಲ. ಈ ರೀತಿ ಲಕ್ಷಾಂತರ ಪ್ರಜೆಗಳು ಶಿವಮೊಗ್ಗ, ಕಡೂರು ಮತ್ತು ಹಾಸನದ ಡಿಸ್ಟ್ರಿಕ್ಟಿನ ಮಲೆನಾಡು ಪ್ರದೇಶಗಳಿಗೆ ಪ್ರತಿ ವರ್ಷವೂ ಪಟ್ಟಣವನ್ನೇರಿ ಬಂದು ಇಲ್ಲಿ ನವಮಾಸಗಳಿದ್ದು ಕೇವಲ ಮೂರು ತಿಂಗಳುಗಳಿಗೆ ಮಾತ್ರ ತಮ್ಮ ತಮ್ಮ ಊರುಗಳಿಗೆ ತೆರಳಿ ಪುನಃ ಇಲ್ಲಿಗೆ ಹಿಂತಿರುಗಿ ಕೆಲಸಕ್ಕೆ ಬರುತ್ತಾರೆ. ಈ ರೀತಿ ಬಹು ಕಾಲದಿಂದಲೂ ನಡೆದು ಬಂದ ಪದ್ಧತಿಯಾಗಿದೆ. ಹೀಗೆ ಬರುವ ಕೂಲಿಕಾರರುಗಳಿಗೆ ಅವರು ಕೇಳಿದ ದರದಂತೆ ಕೂಲಿಯನ್ನಿತ್ತು ಕೆಲಸವನ್ನು ಮಾಡಿಸಿಕೊಳ್ಳದಿದ್ದರೆ ಮಲೆನಾಡಿನ ಜಮೀನುದಾರರುಗಳ ಜೀವನವೇ ಆಗಲಾರದು. ಮಲೆನಾಡಿನಲ್ಲಿ ಸದಾ ಕಾಲದಲ್ಲಿಯೂ ಇರುವ ಜನಗಳಿಗಾದರೋ ಛಳಿಜ್ವರ, ಹೊಟ್ಟೆಯಲ್ಲಿ ಗಡ್ಡೆ, ನಡುಕು, ಮಕ್ಕಳ ಹೆರಿಗೆಯಲ್ಲಿ ಹೆಂಗಸರ ಸಾವು, ಮಕ್ಕಳ ಸಾವು, ಇವೇ ಮೊದಲಾದ ಅನೇಕ ವ್ಯಾಧಿಗಳ ಬಾಧೆಯು ಯಾವಾಗಲೂ ಒದಗಿ ಕಷ್ಟಪಡುತ್ತಲಿರುವರು. ಇದೂ ಅಲ್ಲದೆ ಮಲೆನಾಡಿನ ಗ್ರಾಮಗಳಿಗೆ ಹೋಗಿ ಬರುವುದಕ್ಕೆ ಅನುಕೂಲಗಳು ಸುತರಾಂ ಇಲ್ಲವೇ ಇಲ್ಲ. ಎಲ್ಲಿ ನೋಡಿದರೂ ಹಳ್ಳಗಳೂ, ನದಿಗಳೂ, ಗುಡ್ಡಗಳೂ, ಕಾಡುಗಳೂ ಈ ರೀತಿ ಸಂಚಾರಕ್ಕೆ ಬಾಧಕಗಳು ಅನಂತವಾಗಿ ಇವೆ. ರಸ್ತೆಗಳ ಸೌಕರ್ಯವು ವಿಶೇಷ ಕಡಮೆ. ಇಂಥಾ ಮಹತ್ತರವಾದ ಅನಾನುಕೂಲಗಳಿಂದ ಕೂಡಿರುವ ಈ ಮಲೆನಾಡನ್ನು ಅಭಿವೃದ್ಧಿಗೆ ತರಬೇಕಾದರೆ ಮೊದಲು ರಸ್ತೆಗಳನ್ನು ಏರ್ಪಡಿಸಬೇಕು. ಅನಂತರ ಪಾಠಶಾಲೆಗಳನ್ನು ಹೆಚ್ಚು ಮಾಡಿ ಗ್ರಾಮಾಂತರಗಳಲ್ಲಿ ವಿದ್ಯೆಗೆ ಸೌಕರ್ಯವನ್ನು ಕಲ್ಪಿಸಬೇಕು. ಈ ವಿದ್ಯೆ ಎಂಬುವ ವಿಷಯ ಮಹತ್ತರವಾದದ್ದೇ. ಎಲ್ಲಾ ಅಭಿವೃದ್ಧಿಗೂ ಮೂಲಾಧಾರವೆನ್ನಿಸಿಕೊಳ್ಳುತ್ತದೆ. ಮಲೆನಾಡಿನಲ್ಲಿ ಯಾದರೋ ಇದು ಅತ್ಯವಶ್ಯಕ. ಯಾಕೆಂದರೆ ಮಲೆನಾಡಿನ ರೈತರು ಕೇವಲ ಕಾಡು ಮನುಷ್ಯರೋಪಾದಿಯಲ್ಲಿ ಮೂಢ ವಿಶ್ವಾಸಗ್ರಸ್ತರಾಗಿ ಕಾಯಿಲೆ ಸಂಭವಿಸಿದಾಗ ಔಷಧವನ್ನು ಕೂಡಾ ಸೇವಿಸದೇನೇ ಸೊಪ್ಪಗಳಂತೆ ಸಾಯುವರು. ಆದುದರಿಂದ ಮಲೆನಾಡಿನಲ್ಲಿ ಬಲಾತ್ಕಾರದಿಂದ ವಿದ್ಯಾ ಪ್ರಚಾರ ಮಾಡಿದರೆ ಯಾವತೊಂದು ಅಭಿವೃದ್ಧಿಯು ಕ್ರಮಪ್ರಾ ಅಷ್ಟು ಶೀಘ್ರವಾಗಿ ಫಲಕಾರಿಯಾಗುತ್ತದೆ ಎಂದು ಹೇಳಲಿಕ್ಕಾಗುವದಿಲ್ಲ. ಮತ್ತು ಯಾವ ಅನಾನುಕೂಲಗಳಿದ್ದರೂ ಅವುಗಳನ್ನು ಲಕ್ಷಿಸದೆ ಮಲೆನಾಡಿನ ವಿದ್ಯಾ ಪ್ರಚಾರಕ್ಕಾಗಿ ಹೆಚ್ಚಾದ ಧನವನ್ನು ಸರ್ಕಾರದವರು ವೆಚ್ಚ ಮಾಡಿ ಪ್ರತಿಯೊಬ್ಬ ಮಲೆನಾಡು ಬಾಲಕ ಬಾಲಕಿಯರನ್ನೂ ವಿದ್ಯಾವಂತರನ್ನಾಗಿ ಮಾಡುವದು ಉತ್ತಮ. ಇದಕ್ಕಾಗಿ ಪ್ರತಿಯೊಂದು ತಾಲ್ಲೂಕಿಗೂ ಒಬ್ಬ ವಿದ್ಯಾಭ್ಯಾಸದ ಆಫೀಸರನ್ನು ನೇಮಿಸಬೇಕು. ಇಂಥಾ ಆಫೀಸರುಗಳಿಗೆ ಈಗಿರುವ ಸ್ಥಾನದ ಮೇಲ್ಪಂಕ್ತಿ ನೋಡುವುದಲ್ಲದೆ ಹೊಸ ಸ್ಕೂಲುಗಳನ್ನು ಏರ್ಪಡಿಸುವ ಕೆಲ ವನ್ನು ವಹಿಸಬೇಕು. ಹೀಗೆ ಮಾಡಿ ಮಲೆನಾಡಿನ ವಿದ್ಯಾ ಪ್ರಚಾರಕ್ಕೆ ಹೆಚ್ಚು ಉತ್ತೇಜನ ಕೊಟ್ಟರೆ ಈಗ ಮಾಡುತ್ತಿರುವ ಮಲೆನಾಡಿನ ಅಭಿವೃದ್ಧಿ ಕ್ರಮವು ಸ್ವಲ್ಪಕಾಲದಲ್ಲಿ ಫಲಕಾರಿಯಾಗುವದೆನ್ನುವದರಲ್ಲಿ ಸಂದೇಹವಿಲ್ಲ.

ಮತ್ತು ಪರಸ್ಪರಸಹಾಯ ಸಂಘಗಳನ್ನು ಮಲೆನಾಡಿನಲ್ಲಿ ವಿಶೇಷವಾಗಿ ಜಾರಿಯಲ್ಲಿ ತರಬೇಕು. ಸಾಧ್ಯವಾದ ಕಡೆಗಳಲ್ಲೆಲ್ಲಾ ಇಂಥಾ ಸಂಘಗಳನ್ನು ಏರ್ಪಡಿಸಬೇಕಲ್ಲದೆ ಕಾಲಕ್ರಮೇಣ ಮಲೆನಾಡಿನ ಎಲ್ಲಾ ಗ್ರಾಮಗಳೂ ಪರಸ್ಪರಸಹಾಯ ಸಂಘಗಳಿಂದ ಕೂಡಿದವುಗಳಾಗಿರುವ ಹಾಗೆ ಈಗಲಿಂದಲೇ ಏರ್ಪಾಡು ಮಾಡಬೇಕು. ಹೀಗೆ ಮಾಡುವುದರಿಂದ ಮಲೆನಾಡು ರೈತನ ಅವಿದ್ಯಾವಾದ ಸಾಲವು ಜಾಗ್ರತೆಯಾಗಿ ಕರಗಿ ಜೀವನ ಏಳಿಗೆಗೆ ಕಾರಣವಾಗುವದು. ಅಲ್ಲದೆ ಹೊರಗಿನಿಂದ ಜನಗಳನ್ನು ಬರಮಾಡಿಕೊಂಡು ಅವರುಗಳಿಗೆ ರಿಯಾಯತಿಗಳನ್ನು ತೋರಿಸಿ ಅವರನ್ನು ಇಲ್ಲಿಯೇ ನೆಲೆಯಾಗಿ ನಿಲ್ಲಿಸುವ ಪ್ರಯತ್ನ ಮಾಡಬೇಕು. ಹಾಗೆ ಮಾಡಿದರೆ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಈಗ ಬರುತ್ತಿರುವ ಕೂಲೀ ಜನಗಳ ಪೈಕಿ ಅನೇಕರು ಇಲ್ಲಿಯೇ ನಿಲ್ಲುವುದರಲ್ಲಿ ಅಡ್ಡಿಯಿಲ್ಲ. ಮುಖ್ಯ ಅವರ ದೇಶದಲ್ಲಿ ತಿನ್ನುವದಕ್ಕೆ ಕೂಡ ಗತಿಯಿಲ್ಲದ ಸಾಲವಂದಿಗರಾಗಿ ಈ ದೇಶಕ್ಕೆ ಬಂದು ದುಡಿದು ಪುನಃ ಮೂರು ತಿಂಗಳು ಮಾತ್ರ ತಮ್ಮ ಊರಿನಲ್ಲಿದ್ದು ಯಥಾಪ್ರಕಾರ ವಾಗಿ ಈ ದೇಶದ ಮಲೆನಾಡು ಪ್ರಾಂತ್ಯಗಳಿಗೆ ಯಾತ್ರೆ ಮಾಡಿ ಹೋಗಿ ಎಂದಿನಂತೆ ಬಡವಾಯಿಯಾಗಿರುವ ಕೂಲಿಗೆ ರಿಯಾಯತಿಗಳನ್ನು ವಿಶೇಷವಾಗಿ ತೋರಿಸಿ ಪ್ರಯತ್ನಪಟ್ಟು ಇಲ್ಲಿಯೇ ನಿಲ್ಲಿಸಿಕೊಳ್ಳಲು ಸಾಧ್ಯವೆನ್ನುವದಕ್ಕೆ ಯಾವ ಸಂದೇಹವೂ ಇಲ್ಲ. ಜಮೀನುದಾರರಾಗಿ ಮನೆ ಮಾಡಿಕೊಂಡು ಗೌರವದೊಂದಿಗೆ ಇರಬೇಕೆನ್ನುವ ಕುತೂಹಲವು ಅನೇಕರಿಗೆ ಇದೆ. ಆದರೆ ದಾರಿದ್ರ್ಯ ದೋಷದಿಂದ ಈ ಮನೋರಥವು ಅವರಿಗೆ ಇದುವರೆಗೂ ಕೈಗೂಡಿಲ್ಲ. ಮಲೆನಾಡಿನಲ್ಲಿ ಸಾವಿರಾರು ಎಕರೆಗಳ ಜಮೀನನ್ನು ಬಂಜರು ಬಿಟ್ಟುಕೊಂಡಿರುವದರಿಂದ ಸರ್ಕಾರದವರಿಗೆ ಈಗ ಸಹಸ್ರಾಂತರ ರೂಪಾಯಿಗಳು ನಷ್ಟವಾಗುತ್ತಿವೆ. ಪ್ರಜಾ ಸಂಖ್ಯೆಯು ಕಮ್ಮಿಯಾಗಿ ಇನ್ನೂ ಅನೇಕ ಜಮೀನುಗಳು ಬೀಳಿಗೆ ಬಂದು ಮತ್ತೂ ಸಹಸ್ರಾಂತರ ರೂಪಾಯಿ ನಷ್ಟವಾಗುವ ಸಂಭವವಿದೆ. ಹೀಗಿರುವಲ್ಲಿ ಎಷ್ಟೇ ಉದಾರವಾದ ರಿಯಾಯತಿಗಳನ್ನಾದರೂ ಕೊಟ್ಟು ಹೊರಗಿನ ಜನಗಳನ್ನು ಇಲ್ಲಿಯೇ ಇಟ್ಟುಕೊಳ್ಳುವದರ ಮೂಲಕವಾಗಲೀ ಅಥವಾ ಹೊರಗಿನಿಂದ ಹೊಸ ಜನಗಳನ್ನು ತಂದು ಇರಿಸುವದರ ಮೂಲಕವಾಗಲೀ ಮಲೆನಾಡಿನ ಪ್ರಜಾ ಸಂಖ್ಯೆಯನ್ನು ಹೆಚ್ಚಿಸಬೇಕು. ಮಲೆನಾಡಿನ ಪುರೋಭಿವೃದ್ಧಿಗೆ ಇದು ಒಂದು ಮಹತ್ತರವಾದ ವಿಷಯವೆಂದು ಗಣನೆಗೆ ತಂದು ಸರ್ಕಾರದವರು ಜಮೀನು ರೂಪವಾಗಿಯೂ ಧನ ರೂಪವಾಗಿಯೂ ಹೊರಗಿನವರಿಗೆ ಸಹಾಯ ಮಾಡಿ ಹೊಸ ಜನಗಳನ್ನು ಹೊರಗಿನಿಂದ ಆಕರ್ಷಣೆ ಮಾಡಬೇಕು. ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ ಆಸ್ಪತ್ರೆಗಳನ್ನು ಬಡಾಯಿಸಿ ವೈದ್ಯಶಾಲೆಗಳ ಮುಖಾಂತರವಾಗಲೀ, ಆಸ್ಪತ್ರೆಗಳ ಮುಖಾಂತರವಾಗಲೀ ಜನಗಳ ಆರೋಗ್ಯಭಾಗ್ಯವನ್ನು ಸರ್ವದಾ ಕಾಪಾಡಬೇಕು. ಮಲೆನಾಡಿನಲ್ಲಿ ಪ್ರತಿಯೊಂದು ಗ್ರಾಮಕ್ಕೂ ಸೇದುವ ಭಾವಿಗಳನ್ನು ಕಲ್ಪಿಸಿಕೊಡಬೇಕು. ಈ ಉದ್ದೇಶಗಳೆಗೆಲ್ಲಾ ಮಲೆನಾಡಿನ ಅಭಿವೃದ್ಧಿಯಲ್ಲಿ ನಿರತರಾದ ಮಹನೀಯರುಗಳು ಸರ್ಕಾರದವರಿಂದಲೇ ಇವೆಲ್ಲಾ ನಡೆಯಬೇಕೆಂದು ಹಟಕ್ಕರಾಗಿರಕೂಡದು. ತಾವುಗಳೂ ಕೂಡ ಕಷ್ಟಪಟ್ಟು ತನು ಮನ ಧನ ವ್ಯಯ ರೂಪವಾದ ಸಹಾಯವನ್ನಿತ್ತು ಸರ್ಕಾರದವರು ಈಗ ನಡಿಸುತ್ತಿರುವ ಮಹದುಪಕಾರವಾದ ಕಾರ್ಯವನ್ನು ಕೈಗೂಡಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುವ

ಸೇವಕ.

ನಂಜನಗೂಡು ತಾಲ್ಲೂಕಿನಲ್ಲಿ ಗ್ರಾಮಾಭಿವೃದ್ಧಿ.

ನಂಜನಗೂಡು ತಾಲ್ಲೂಕು ಗ್ರಾಮಾಭಿವೃದ್ಧಿಯ ಮತ್ತು ಪ್ರೋಗ್ರೆಸ್ ಕಮಿಟಿಯ ಅಧ್ಯಕ್ಷರಾದ ಅಮಲ್ದಾರ್ ಮ|| ಬಿ. ಭೀಮರಾಯರು ಕಳೆದ ವಾರ ಅಲ್ಲಿ ನಡೆದ ಕಾನ್ಫರೆನ್ಸಿನಲ್ಲಿ ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ—

ತಾಲ್ಲೂಕು ಮಾಹಕೂರಿನಲ್ಲಿರತಕ್ಕ 169 ಬರಾಕು ಗ್ರಾಮಗಳ ಪೈಕಿ 144 ಗ್ರಾಮಗಳಲ್ಲಿ 113 ಗ್ರಾಮಾಭಿವೃದ್ಧಿ ಸಂಘಗಳು ಏರ್ಪಾಡಾಗಿರುತ್ತವೆ. ಬಾಕಿ 25 ಗ್ರಾಮಗಳು ಇನಾಂ ಗ್ರಾಮಗಳು. ಈ ಗ್ರಾಮಾಭಿವೃದ್ಧಿ ಸಂಘಗಳು ಏರ್ಪಾಡಾದ ಬಳಿಕ, ಇದುವರೆಗೆ ಆಯಾಯ ಗ್ರಾಮದವರು ತಮ್ಮ ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗತಕ್ಕ ರಸ್ತೆಗಳ ರಿಪೇರಿಯನ್ನೂ, ಗ್ರಾಮದಿಂದ ಪ್ರೈ ರೋಡು ವರಿಗೆ ಅನುಕೂಲವಿರುವ ಕಡೆಗಳಲ್ಲೆಲ್ಲಾ ರಸ್ತೆಗಳನ್ನೂ, ಚಾನಲ್ ಮತ್ತು ಚರಂಡಿಗಳ ರಿಪೇರಿಯನ್ನೂ, ಗೊಬ್ಬರದ ಗುಂಡಿಗಳ ಮುಚ್ಚುವ ಕೆಲಸವನ್ನೂ, ಪಾಪಾಸುಕಳ್ಳಿಯನ್ನು ನಾಶಪಡಿಸುವ ಕೆಲಸವನ್ನೂ ಸಹ ವರ್ಷಕ್ಕೆ ಅರ್ಧ ದಿವಸದಂತೆ ಕೆಲಸ ಮಾಡಬೇಕೆಂದು ವಿಧಾಯಕವಾಗಿರುವಂತೆ ಕೆಲಸ ಮಾಡಿ ಸುಮಾರು 11,200 ರೂಪಾಯಿ ಅಂದಾಜು ಬಾಳಬಹುದಾದ ಕಾಮಗಾರಿಗಳನ್ನು ಮಾಡಿರುತ್ತಾರೆ.—ಕುಡಿಯುವ ನೀರಿನ ಅನುಕೂಲತೆಗೋಸ್ಕರ ಚೀಗುಂಡ, ಮುಳ್ಳೂರು, ಮಂಗಳೂರು, ಹೊಸೂರು, ಬಿಳಿಗೆರೆ ಮತ್ತು ಮಾಳನಪುರ ಈ ಆರು ಗ್ರಾಮಗಳಲ್ಲಿ 2,771 ರೂಪಾಯಿ ಖರ್ಚಿನಿಂದ ನೀರಿನ ಭಾವಿಗಳಿಗೆ ಏರ್ಪಾಡು ಮಾಡಿರುತ್ತೆ. ಈ ಖರ್ಚಿನ ಪೈಕಿ 1,368 ರೂಪಾಯಿಗಳು ಸರ್ಕಾರದಿಂದ ಗ್ರಾಂಟು ಆಗಿರುತ್ತೆ. ಹೆಜ್ಜಿಗೆ, ದೇವರಸನಹಳ್ಳಿ ಮತ್ತು ಹಲ್ಲರೆ ಈ ಮೂರು ಗ್ರಾಮಗಳಲ್ಲಿ 1,000 ರೂಪಾಯಿ ಖರ್ಚಿನಿಂದ ಧರ್ಮಾರ್ಥವಾಗಿ ಭಾವಿ ತೆಗೆಯಿಸಿರುತ್ತಾರೆ. ಇದರಿಂದ ಸದರಿ ಗ್ರಾಮಸ್ಥರಿಗೆ ತುಂಬಾ ಅನುಕೂಲವಾಗಿರುತ್ತೆ.—ಹಲ್ಲರೆ, ಬದನವಾಳು, ಮಂಗಳೂರು ಮತ್ತು ತಂಡ್ಯದ ಗ್ರಾಮಗಳವರು ಹೊಸದಾಗಿ ಚಾವಡಿಯನ್ನು ತಮ್ಮ ತಮ್ಮ ಗ್ರಾಮಗಳಲ್ಲಿ ಕಟ್ಟಲು ಪ್ರಯತ್ನಪಟ್ಟು, ಬದನವಾಳು ಮತ್ತು ಹಲ್ಲರೆಯವರು 400 ರೂಪಾಯಿ ವರೆಗೆ ವಸೂಲು ಮಾಡಿ ಕೆಲಸ ಪೂರೈಸಿರುತ್ತಾರೆ. ಅಲ್ಲದೆ ಮಂಗಳೂರು ಗ್ರಾಮದವರು ಅರ್ಧ ಕೆಲಸವನ್ನು ಪೂರೈಸಿ ಪ್ರಕಾರ ನಡಿಸಿದ್ದರ ಮೇಲೆ ಬಾಕಿ ಕೆಲಸಕ್ಕೆ 267 ರೂಪಾಯಿ ಗ್ರಾಂಟು ಸರ್ಕಾರದಿಂದ ಮಂಜೂರಾಗಿ ಕೆಲಸ ನಡೆಯುತ್ತಾ ಇದೆ. ತಂಡ್ಯದ ಗ್ರಾಮದವರು ಈ ಕೆಲಸಕ್ಕೆ ಮಾಲುಗಳನ್ನು ಜಮಾಯಿಸಿಕೊಂಡಿದ್ದಾರೆ.

ಮಲ್ಲಹಳ್ಳಿ ಗ್ರಾಮದಲ್ಲಿ ಗ್ರಾಮ ಮುನ್ಸಿಫ್ ಕೋರ್ಟು ಸ್ಥಾಪಿತವಾಗಿದೆ. ಅದರಲ್ಲಿ ಇದುವರಿಗೆ ಹಲವು ಮೊಕದ್ದಮೆಗಳು ದಾಖಲಾಗಿ ಫೈಸಲಾಗಿರುವದರಿಂದ ರೈತರುಗಳಿಗೆ ಬಹಳ ಮಟ್ಟಿಗೆ ಅನುಕೂಲವಾಗಿರುತ್ತೆ.—ಕಗ್ಗಲೂರು, ಬಿದರಗೂಡು, ಬದನವಾಳು, ದೇವಳ್ಳಿ ಮತ್ತು ಚಿನ್ನದಗುಡಿಹುಂಡಿ ಈ ಆರು ಗ್ರಾಮಗಳಲ್ಲಿ ರೈತರ ಉಪಯೋಗಕ್ಕೋಸ್ಕರ ಧಾನ್ಯದ ಬ್ಯಾಂಕುಗಳು ಏರ್ಪಾಡಾಗಿರುತ್ತೆ. ಇದರಲ್ಲಿ ಇದುವರಿವಿಗೆ ಸುಮಾರು 3 ಪಲ್ಲಾಗಳಿಗೆ ರಾಗಿ ಇಲ್ಲದೆ ಶೇಖರಿಸಲಾಗಿರುತ್ತೆ. ಉಳಿಕೆ ಮೆಂಬರುಗಳಿಂದ ಬರಬೇಕಾದ ದವಸವನ್ನು ಈ ಸುಗ್ಗಿ ಒಳಗಾಗಿ ವಸೂಲು ಮಾಡಿ ಬಿಸಾಗಿ ತರುವ ಏರ್ಪಾಡು ಇರುತ್ತದೆ.—ಹಲ್ಲರೆ ಮತ್ತು ತುಮ್ಮನೇರಳೆಯವರು ತಮ್ಮ ಗ್ರಾಮದಲ್ಲಿನ ದೇವಸ್ಥಾನಗಳನ್ನು ಸುಮಾರು 4,500 ರೂಪಾಯಿ ಚಂದಾ ವಸೂಲು ಮಾಡಿ ಜೀರ್ಣೋದ್ಧಾರ ಮಾಡಿರುತ್ತಾರಲ್ಲದೆ ಮಹಾಲಕ್ಷ್ಮಮ್ಮನವರ ದೇವಸ್ಥಾನವನ್ನು ಸುಮಾರು 3,000 ರೂಪಾಯಿ ವರಿಗೆ ಮುಟ್ಟಿಸಿ ಜೀರ್ಣೋದ್ಧಾರ ಮಾಡುತ್ತಿದ್ದಾರೆ. ಇದಕ್ಕಾಗಿ ಸರ್ಕಾರದಿಂದ 600 ರೂಪಾಯಿ ಮಟ್ಟಿಗೆ ಕೊಟ್ಟಿರುತ್ತೆ. ಇವರು ಈ ದೇವಸ್ಥಾನಕ್ಕೆ ಸೇರಿದಂತೆ ಧರ್ಮಾರ್ಥವಾಗಿ ಒಂದು ಛತ್ರವನ್ನು ಸಹ ಕಟ್ಟಿಸಿರುತ್ತಾರೆ. ಮತ್ತು ಹಳೇಪುರದ ಪಟೇಲರು ತಮ್ಮ ಗ್ರಾಮದಲ್ಲಿರುವ ದೇವಸ್ಥಾನವನ್ನು ರಿಪೇರಿ ಮಾಡುವದಕ್ಕೆ ಸುಮಾರು 400 ರೂಪಾಯಿ ವರೆಗೆ ಚಂದಾ ವಸೂಲು ಮಾಡಿರುತ್ತಾರೆ.

ತಾಲ್ಲೂಕು ಪ್ರೋಗ್ರೆಸ್ ಕಮಿಟಿ ಏರ್ಪಾಡಾದ 1913 ನೇ ಡಿಸೆಂಬರು ಲಾಗಾಯ್ತು ಜನವರಿ ಮಾರ್ಚಿ 20 ವಿಸಿಟಿಂಗುಗಳನ್ನು ನಡೆಯಿಸಿ ಆ ಕಾಲಗಳಲ್ಲಿ ವಿದ್ಯಾಭಿವೃದ್ಧಿ, ವ್ಯವಸಾಯಾಭಿವೃದ್ಧಿ ಮತ್ತು ಕೈಗಾರಿಕೆ ಅಭಿವೃದ್ಧಿ ವಿಚಾರದಲ್ಲಿ ಚರ್ಚೆಗೆ ಬರುವ ಅಂಶಗಳನ್ನು ಉಪ ಸ್ಥಿತಿಗೆ ತರುವ ಭಾಗದಲ್ಲಿ ಪ್ರಯೋಜನವಾದ ತೀರ್ಮಾನಗಳನ್ನು ಜಾರಿಗೆ ತಂದಿರುತ್ತೆ.

ವಿದ್ಯಾಭಿವೃದ್ಧಿಯನ್ನು ಹೆಚ್ಚಿಸಲು 11 ಗ್ರಾಮಗಳಲ್ಲಿ ಗ್ರಾಂಟ್ ಸ್ಕೂಲುಗಳನ್ನು, 8 ಗ್ರಾಮಗಳಲ್ಲಿ ಸ್ಟೇಟ್ ಸ್ಕೂಲುಗಳನ್ನೂ ಏರ್ಪಡಿಸಿರುತ್ತೆ.—ವರ್ತಮಾನ ಪತ್ರಿಕೆಗಳನ್ನು ತರಿಸಿ ಓದುವುದರಿಂದ ಉಂಟಾಗಬಹುದಾದ ಪ್ರಯೋಜನಗಳನ್ನು ಕುರಿತು ಜನಗಳಿಗೆ ಆಗಾಗ್ಗೆ ತಿಳುವಳಿಕೆ ಕೊಟ್ಟಿದ್ದರ ಮೇಲೆ 60 ಗ್ರಾಮದವರು ಮುಖ್ಯವಾಗಿ ವೃತ್ತಾಂತ ಪತ್ರಿಕೆ, ಒಕ್ಕಲಿಗರ ಪತ್ರಿಕೆ, ಕಂಠೀರವಾಭ್ಯುದಯ ಮತ್ತು ಅರ್ಥಸಾಧಕ ತರಿಸುತ್ತಿರುತ್ತಾರೆ. ಕೆಂಬಲೆ, ಹದಿನಾರು, ಹಗದೂರು ಮತ್ತು ಹುಲ್ಲಹಳ್ಳಿ, ಈ ನಾಲ್ಕು ಗ್ರಾಮಗಳಲ್ಲಿ ವಾಚನಾಲಯಗಳು ಏರ್ಪಾಡಾಗಿರುತ್ತೆ. ಅಲ್ಲದೆ ಈ ಸ್ಥಳಗಳಲ್ಲಿ ಪುಸ್ತಕ ಭಂಡಾರವನ್ನು ಸಹ ಏರ್ಪಡಿಸಲು ತಕ್ಕ ಪ್ರೋತ್ಸಾಹಪಡಿಸಿದ್ದರಲ್ಲಿ ಕೆಂಬಲೆಯಲ್ಲಿ ಇದಕ್ಕಾಗಿ 25 ರೂಪಾಯಿ ಚಂದಾ ವಸೂಲಾಗಿರುತ್ತೆ. ಬಾಕಿ ಗ್ರಾಮದವರು ಕೂಡಲೆ ಏರ್ಪಡಿಸುವಂತೆ ಒಪ್ಪಿದಾರೆ.—1913-14 ನೇ ಸಾಲಿನಲ್ಲಿ ಪಾಠಶಾಲೆಯಲ್ಲಿ ಓದುತ್ತಾ ಇದ್ದ ಬಾಲಕ ಬಾಲಕಿಯರ ಸಂಖ್ಯೆ 2,607 ಇದು ಒಟ್ಟು ಪ್ರಜಾ ಸಂಖ್ಯೆಯಲ್ಲಿ ಶೇಕಡಾ 3·7 ರಂತೆ ಆಗುತ್ತೆ. ಇದನ್ನು ಹೆಚ್ಚಿಸಲು ಈಚೆಗೆ ಸರಿಯಾಗಿ ತಮ್ಮ ತಮ್ಮ ಮಕ್ಕಳುಗಳನ್ನು ಪಾಠಶಾಲೆಗೆ ಕಳುಹಿಸ ದಿದ್ದರಿಂದ ಉಂಟಾಗ ತಕ್ಕ ಪ್ರಯೋಜನಗಳನ್ನು ಕುರಿತು ಜನಗಳಿಗೆ ತಿಳುವಳಿಕೆ ಕೊಟ್ಟಿದ್ದರಿಂದ 1914-15 ನೇ ಸಾಲ್ ಆಖೈರಿಗೆ 563 ಬಾಲಕ ಬಾಲಕಿಯರ ಸಂಖ್ಯೆಯು ಜಾಸ್ತಿಯಾಗಿರುತ್ತೆ. ಆದ್ದರಿಂದ ಶೇಕಡಾ 3·4 ರಂತೆ ಹಾಲಿ ಇರುವದಾಗಿ ಕಂಡ ಬರುತ್ತೆ.

ವ್ಯವಸಾಯ.—ತರೀ ಜಮೀನುಗಳಲ್ಲಿ ಒಂಟಿ ಪೈರು ನಾಟಿ ಹಾಕುವದರಿಂದ ಆಗತಕ್ಕ ಪ್ರಯೋಜನಗಳನ್ನು ಅಜಮಾಯಿಸಿ ನೋಡತಕ್ಕ ಬಗ್ಗೆ ನಲ್ಲೂರು ಪ್ರವಳ್ಳಿ ಮತ್ತು ನಂಜನಗೂಡು ಈ ಮೂರು ಗ್ರಾಮಗಳ ಕೆಲವು ಜಮೀನುಗಳಲ್ಲಿ ಒಂಟಿ ಪೈರು ನಾಟಿ ಹಾಕಿಸಿ ಅದರಿಂದ ಉಂಟಾಗುವ ಪ್ರಯೋಜನವನ್ನು ಜನಗಳಿಗೆ ತೋರಿಸಿದ್ದರಲ್ಲಿ ಹಾಲೀ ಜಾರೀ ಇರುವ ನಾಟೀ ಹಾಕುವ ರೀತಿಯಲ್ಲಿ ಆಗುವ ಫಸಲೂ ಮತ್ತು ಒಂಟಿ ಪೈರು ನಾಟಿ ಹಾಕುವದರಿಂದ ಆಗತಕ್ಕ ಫಸಲೂ ಎರಡೂ ಒಂದೇ ಸಮನಾಗಿರುವದರಿಂದ ಒಂಟಿ ಪೈರು ಹಾಕುವುದು ಮಿತವ್ಯಯವೆಂಬುವುದು ಜನಗಳಿಗೆ ತಿಳಿದು ಬಂದಿರುತ್ತೆ—

[illegible] ಸಸ್ಯ ಗೊಬ್ಬರವನ್ನು ಹಾಕುವುದರಿಂದ ಆಗತಕ್ಕ ಪ್ರಯೋಜನವನ್ನು [illegible] ಜನಗಳಿಗೆ ತಿಳುವಳಿಕೆ ಕೊಟ್ಟದ್ದನ್ನು ಅನುಸರಿಸಿ ಅನೇಕ ಗ್ರಾಮಗಳಲ್ಲಿ [illegible] ಗೊಬ್ಬರದ ಉಪಯೋಗವನ್ನು ಜಾರಿಗೆ ತಂದಿರುತ್ತಾರೆ. ಅಲ್ಲದೆ ವ್ಯವಸಾ[illegible] ಇಲಾಖೆಯಿಂದ 1½ ಟನ್ ಹೊಂಗೇ ಹಿಂಡಿಯನ್ನು ಕರಿಯಬೆಯವರು [illegible] ರೈತರ ಉಪಯೋಗಕ್ಕಾಗಿ ಬಿಕರಿಮಾಡಿದರು.—ಬಿತ್ತನೆಗೆ ಅನುಕೂಲವಾದ [illegible] ತರಹ ಕ್ಯಾಂಬೋಡಿಯಾ ಹತ್ತಿ ಬೀಜವನ್ನು ಸಂಬಂಧಪಟ್ಟ ಇಲಾಖಾ[illegible] ತರಿಸಿ ರೈತರಿಗೆ ಕೊಡಿಸಿರುತ್ತೆ. ಇದನ್ನು ಪರೀಕ್ಷಾರ್ಥವಾಗಿ ದೇವನೂರು, [illegible] ವಗ್ಗೆರೆ ಗ್ರಾಮದ ರೈತರು ತಮ್ಮ ಜಮೀನುಗಳಿಗೆ ಹಾಕಿ ನೋಡಿದ್ದ[illegible] ಲಾಭಕರವೆಂಬುವುದು ಅವರುಗಳಿಗೆ ಕಂಡುಬಂದಿರುತ್ತೆ.

ರೈತರು ಒಳ್ಳೇ ಬೆಳೆಗಳನ್ನು ಹಾಕುವುದರಿಂದ ತಮ್ಮ ವ್ಯವಸಾಯವನ್ನು [illegible] ಸ್ಥಿತಿಯಲ್ಲಿ ಬೆಳಸಲು ಅನುಕೂಲವಾಗುತ್ತೆಂದು ತಿಳಿಸಿ ಇದಕ್ಕಾಗಿ [illegible] ಬೆಳೆಗಳನ್ನು ಹೊಂದಲು ಎರಡು ಅನ್ಯೂತ ಮತಲ್ ಬೀಜದ ಗೂಳಿ[illegible] ಈ ತಾಲ್ಲೂಕಿಗೆ ಸ್ಯಾಂಕ್ಷನ್ ಮಾಡಿಸಿರುತ್ತೆ. ಹೊಸ ನಮೂನೆ ನೇಗಿಲ [illegible]ಯೋಗದಿಂದ ವ್ಯವಸಾಯವನ್ನು ರೈತರು ಎಷ್ಟರಮಟ್ಟಿಗೆ ಉತ್ತಮಸ್ಥಿತಿಗೆ [illegible] ಅನುಕೂಲಿಸುತ್ತೆಂಬುವುದನ್ನು ಕುರಿತು ಜನಗಳಿಗೆ ಆಗಿಂದಾಗ್ಗೆ ತಿಳುವಳಿಕೆ [illegible]ವುದರ ಮೂಲಕ ಈ ಮುಟ್ಟುಗಳ ಉಪಯೋಗವನ್ನು ಪ್ರಚಾರಗೊಳಿಸಿ [illegible] ಉಪಯೋಗದಲ್ಲಿದ್ದ 9 ನೇಗಿಲುಗಳ ಜೊತೆಗೆ 6 ನೇಗಿಲುಗಳನ್ನು ತರಿಸಿ [illegible]ಮಾಡಿರುತ್ತೆ. ಅಲ್ಲದೆ ಈಚೆಗೆ ಜಾರಿಗೆ ತರಲ್ಪಟ್ಟ ಬಾಡಿಗೆ ಕರಾರು[illegible] ಈ ನೇಗಿಲುಗಳಿಗೆ ದರಖಾಸ್ತು ಬಂದು ನಡವಳಿಕೆ ನಡೆಯುತ್ತಿದೆ... [illegible] ತಾಲ್ಲೂಕಿನಲ್ಲಿ ಹಿಪ್ಪನೇರಳೆ ವ್ಯವಸಾಯ ಬಹಳ ಕಡಮೆಯಾಗಿದ್ದದ್ದರಿಂದ [illegible] ಇದರ ಪ್ರಯೋಜನವನ್ನು ಕುರಿತು ತಿಳುವಳಿಕೆ ಕೊಡಲ್ಪಟ್ಟಿತು. [illegible]ದ ವೇಸಲು ಇದ್ದ ದ್ವೈತಲೂ 100 ಎಕರೆ ಜಾಸ್ತಿಯಾಗಿ ವ್ಯವಸಾಯಕ್ಕೆ [illegible]ಟ್ಟಿರುತ್ತೆ.—1913-14 ನೇ ಸಾಲಿನಲ್ಲಿ ಹಿದುವಳಿಯಲ್ಲಿ 1,32,600 ಎಕರೆ [illegible] ಇತ್ತು; 1914-15 ನೇ ಸಾಲಿನಲ್ಲಿ 1,351 ಎಕರೆ ಜಾಸ್ತಿಯಾ[illegible]ಯಲ್ಲದೆ 1913-14 ನೇ ಸಾಲಿನಲ್ಲಿ ಸಾಗುವಳಿಯಲ್ಲಿದ್ದ ವಿಸ್ತೀರ್ಣ[illegible] 14-15 ನೇ ಸಾಲಿನಲ್ಲಿ 1,091 ಎಕರೆ ಜಮೀನು ಜಾಸ್ತಿಯಾಗಿರುತ್ತೆ. [illegible] ಈ ತಾಲ್ಲೂಕಿನಲ್ಲಿ ಸುಮಾರು 500 ಸಾವಿರ ಮರಗಳನ್ನು ಹೊಸ[illegible] ಹಾಕಿಸಿ ಅಭಿವೃದ್ಧಿಪಡಿಸುತ್ತಾ ಇದೆ.—ತೋಪುಗಳನ್ನು ಹಾಕಿಸಿ ವೃದ್ಧಿಪ[illegible] ಬಗ್ಗೆ ಆಸಾಮಿಗಳಿಗೆ ತಿಳುವಳಿಕೆ ಕೊಟ್ಟು ಪ್ರೋತ್ಸಾಹಪಡಿಸಿದೆ.—ಭೂ[illegible] ಆಲೂಗೆಡ್ಡೆ ಮಾತ್ರ ಹಾಕಿ ನೀರನ್ನು ಎತ್ತಿ ಅದರಿಂದ ಈರುಳ್ಳಿ, ಆಲೂ[illegible], ಮೆಣಸು, ತರಕಾರಿ ಮತ್ತು ಹಣ್ಣುಹಂಪಲು ಬೆಳೆಯುವುದನ್ನು ವೃದ್ಧಿ[illegible] ಬಗ್ಗೆ ಜನಗಳಿಗೆ ತಿಳುವಳಿಕೆ ಕೊಟ್ಟು ಪ್ರೋತ್ಸಾಹಪಡಿಸಿದ್ದರಿಂದ [illegible] ಅಲ್ಲಲ್ಲಿ ನಡೆಯಲು ಪ್ರಾರಂಭವಾಗಿರುತ್ತೆ.

ಪತ್ರಿಕಾದಾರರಿಗೆ ನೋಟೀಸು.

ಬಾಹ್ಯದವರು ಬರೆಯುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ[illegible] ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಮೈಸೂರು ಲೈಫ್ ಅಶೂರೆನ್ಸ್ ಕಂಪನಿ

ಅಯ್ಯಾ,—ಮೈಸೂರು ಗವರ್ನಮೆಂಟು ಸೆಕ್ರೆಟರಿ ಲೈಫ್ ಅ[illegible] ಇನ್ಶೂರೆನ್ಸ್ ಅಸೋಸಿಯೇಷನ್ ಕಂಪನಿ ಲಿಮಿಟೆಡ್, ಮೈಸೂರು ಈ ಕಂಪನಿಯ [illegible] ವಿಷಯದಲ್ಲಿ ಜನಗಳು ನಾನಾ ವಿಧವಾಗಿ ಮಾತನಾಡಿಕೊಳ್ಳು[illegible] [illegible] ತಾವು ಫೆಬ್ರವರಿ ತಾ. 17 ತಮ್ಮ ಪತ್ರಿ[illegible] ಪ್ರಕಟಿಸಿರುತ್ತೀರಿ. ಇದಕ್ಕೆ ತಕ್ಕ ಉತ್ತರವನ್ನು ತಾವಾಗಲಿ, ತಮ್ಮ [illegible] ಯಾರೇ ಆಗಲಿ ಇದುವರೆಗೂ ಪ್ರಕಟಿಸುವುದಿಲ್ಲ. [illegible] ಇನ್ನೂ [illegible] ಆಗಲಿ, ಅಥವಾ ಮೇಲ್ಕಂಡ ಕಂಪನಿಯ ವಿಷಯದ[illegible] [illegible] ಯಾರೇ ಆಗಲಿ ಸಾಧ್ಯವಾದಷ್ಟು ಜಾಗ್ರತೆಯಾಗಿ [illegible] ಪ್ರಜೆಗಳಿಗೆ ಸಹಾಯಮಾಡಬೇಕೆಂದು ಪ್ರಾರ್ಥನೆ.

ಪ್ರಜಾ ಹಿತೈಷಿ.

[illegible]

ಅಯ್ಯಾ,—[illegible]

[illegible] ಸ್ಥಳದಲ್ಲಿ [illegible]

[illegible]

ಅಧೀನ ಸಂಸ್ಥಾನಗಳೂ, ಅಧಿಕಾರಿಗಳೂ.

ಅಯ್ಯಾ,—ಸಂಪಾದಕರು ಪತ್ರಿಕೆಯಲ್ಲಿ [illegible] ಬನರ್ಜಿ[illegible]ಯವರನ್ನು ಮೈಸೂರು ಸಂಸ್ಥಾನದ ಕೌನ್ಸಿಲರ್ ಆಗಿ ಪ್ರೀವಿ ಮುಖಾಂತರ [illegible] ಮೈಸೂರು ಸ್ವದೇಶಸ್ಥರಿಗೆ ಬಹಳ ಅಸಮಾಧಾನವೆ[illegible] ಮೈಸೂರು ದೇಶದಲ್ಲಿ [illegible] [illegible] ? ಮಿ|| ಬನರ್ಜಿಯವರನ್ನು ಮೈಸೂರಿಗೆ ಕರೆದದ್ದರಿಂದ ಯಾರಿಗೆ [illegible] ಉನ್ನತ ಪದವಿಗೆ ಬರಲು ಅರ್ಹರಾಗಿರುವರಿಗೆ ಕುಂದಲ ಬಂದಿತು ? [illegible] ಮಾತ್ರ ತಿಳಿಸಲ್ಲ. ಅಲ್ಲದೆ ಮಿ|| ಬನರ್ಜಿಯವರು ರಾಜ್ಯಾಡಳಿತ[illegible] ಅವರಿಗೆ ಶಕ್ತಿ ಇದೆಯೋ ಇಲ್ಲವೋ ಎನ್ನುವ ವಿಷಯ ಚರ್ಚಿಸಲಿಲ್ಲ. ಮಿ|| ಬನರ್ಜಿಯವರು ಕೊಚ್ಚಿ ಸಂಸ್ಥಾನದ ದಿವಾನಗಿರಿ ಮಾಡಿರುವುದು [illegible] ತಿಳಿದಿರಬಹುದು. ಕೊಚ್ಚಿ ಸಂಸ್ಥಾನದ ಅಡ್ಮಿನಿಸ್ಟ್ರೇಷನ್ ರಿಪೋ[illegible] ಅಂದರೆ ಪ್ರತಿ ವರ್ಷವೂ ಪ್ರಚುರಪಡಿಸತಕ್ಕ ಸಂಸ್ಥಾನಾಡಳಿತ ಪುಸ್ತಕ[illegible] ದಿವಾನಗಿರಿ ವಹಿಸುವದಕ್ಕೆ ಮುಂಚೆಯಿಂದ ಅವರು ಆಗುವ ವರೆಗಿನ [illegible] ಚೆನ್ನಾಗಿ ಪರಿಶೀಲಿಸಿ ನೋಡಿದಲ್ಲಿ ಮಿ|| ಬನರ್ಜಿಯವರಿಗೆ ಇರತಕ್ಕ [illegible] ಚೆನ್ನಾಗಿ ವ್ಯಕ್ತವಾಗುತ್ತೆ.

[illegible]ಸ್ಥಾನದ ಆಡಳಿತದ ಶಕ್ತಿ ಎಲ್ಲರಿಗೂ ಇಲ್ಲವೆನ್ನುವ ವಿಷಯ ಜನರಂಜಿತ[illegible] ಕೌನ್ಸಿಲ್ ಮತ್ತು ದಿವಾನಗಿರಿ ಉದ್ಯೋಗಕ್ಕೆ ಎಲ್ಲರೂ

[illegible]ವರಾಗುವದಿಲ್ಲ. ಸಂಸ್ಥಾನಾಡಳಿತೆಯಲ್ಲಿ ಚಿಕ್ಕ ಚಾಕರಿಗೆ ಸೇರಿರುತ್ತಿವೆ ಅಲ್ಲದೆ ಮುಖ್ಯವಾಗಿ ಪೊಲಿಟಿಕಲ್ ಅಂದರೆ ಇಂಡಿಯಾ ಗವರ್ನಮೆಂಟಿಗೂ ಮತ್ತು ತನ್ನ ಸಂಸ್ಥಾನಕ್ಕೂ ಇರತಕ್ಕ ಸಂಬಂಧದ ನಡವಳಿಕೆ ಇರಾಖೆ ಬಹಳ ಮುಖ್ಯವಾದದ್ದು. ಇದಕ್ಕೆ ಎರಡನೆಯದು ಫೈನಾನ್ಷಿಯಲ್ ಅಂದರೆ ಆದಾಯ ವೆಚ್ಚ. ಈ ಎರಡು ಇಲಾಖೆಗಳು ಸರಿಯಾದ ಹತೋಟಿಯಲ್ಲಿ ಇಟ್ಟುಕೊಂಡಿರ ಬೇಕಾದರೆ ಅದ್ಭುತ ನಿರ್ವಾಹಣ ಶಕ್ತಿ ಇರಬೇಕು.

ಇಂಥಾ ಉನ್ನತ ಪದವಿಯು ಹುಟ್ಟಿನ ಮೇಲೆ ಆಗಲಿ, ಅಥವಾ ಸರ್ವೀಸ್ಸಿನ ಮೇಲೆ ಆಗಲಿ ಕೊಡುವುದರಿಂದ ದೇಶದ ಕ್ಷೇಮಕ್ಕೆ ಕುಂದೇ. ಕೊಚ್ಚಿ ಸಂಸ್ಥಾನದ ಆಡಳಿತ ಮತ್ತು ಮದರಾಸ್ ಪ್ರೆಸಿಡೆನ್ಸಿಯಲ್ಲಿ ದೊಡ್ಡದಾದ ಕಡವಾ ಡಿಸ್ಟ್ರಿಕ್ಟು ಆಡಳಿತ ನೋಡಿದವರಿಗೆ ಮಿ|| ಬನರ್ಜಿಯವರು ಜನಗಳ ಮತ್ತು ಸಂಸ್ಥಾನದ ಯೋಗಕ್ಷೇಮಕ್ಕಾಗಿ ಎಷ್ಟು ಶ್ರಮ ತೆಗೆದುಕೊಳ್ಳುತ್ತಾರೆಂಬ ವಿಷಯ ಚೆನ್ನಾಗಿ ವ್ಯಕ್ತವಾಗುತ್ತೆ. ಇಂಥಾ ಉನ್ನತ ಪದವಿಯಲ್ಲಿರತಕ್ಕವರು ಬಡ ಜನಗಳಿಗೆ ಅನುಕೂಲವಾಗಿ, ಸ್ವಾಮಿಕಾರ್ಯ ಧುರಂಧರರಾಗಿ ಯಾರು ಇರುತ್ತಾರೋ ಅವರೇ ಸ್ವದೇಶಸ್ಥರೆಂದು ಭಾವಿಸುವವರಲ್ಲಿ ಸಂದೇಹವೇನು ? ಮಿ|| ಬನರ್ಜಿಯವರು ಕೊಚ್ಚಿ ರಾಜ್ಯ ಬಿಟ್ಟ ಕಾಲದಲ್ಲಿ ಅಲ್ಲಿನ ಜನಗಳು ಮತ್ತು ರಾಜರು ಸಹಾ ಎಷ್ಟು ಅಸಮಾಧಾನಪಟ್ಟರೆಂಬ ವಿಷಯ ಆ ಕಾಲದ ವರ್ತಮಾನ ಪತ್ರಿಕೆಗಳು ನೋಡಿದರೆ ತಿಳಿಯಬರುತ್ತೆ. ಈಗ ಅವರು ಕಡವಾ ಡಿಸ್ಟ್ರಿಕ್ಟು ಬಿಟ್ಟದ್ದರಿಂದ ಜನಗಳು ಎಷ್ಟು ಅಸಮಾಧಾನಪಟ್ಟರೆಂಬ ವಿಷಯ ಮೈಸೂರು ಸೀಮೆಯಿಂದ ಯಾರಾದರೂ ಮೊನ್ನೆ ದಿವಸ ಅಂದರೆ 11 ನೇ ತಾರೀಖಿನ ದಿವಸ ಕಡಪಾಕ್ಕೆ ಹೋಗಿದ್ದರೆ ವೇದ್ಯವಾಗುತ್ತಿತ್ತು. ಮಿ|| ಬನರ್ಜಿಯವರು ಕಡಪಾ ಡಿಸ್ಟ್ರಿಕ್ಟಿನಲ್ಲಿ ಇದ್ದದ್ದು 13 ತಿಂಗಳು ಮಾತ್ರ. ಇಷ್ಟು ಸ್ವಲ್ಪ ಕಾಲವಾದಾಗ್ಯೂ ಆ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಂದ ಜನಗಳು ಕಡಪಾದಲ್ಲಿ ಸೇರಿ ಅವರಿಗೆ ಮರ್ಯಾದೆ ಮಾಡಿದರು.

ಮಿ|| ಬನರ್ಜಿಯವರು ಮೈಸೂರು ಸಂಸ್ಥಾನಕ್ಕೆ ಬಂದದ್ದರಿಂದ ನಮ್ಮ ಸರ್ ವಿಶ್ವೇಶ್ವರಯ್ಯನವರಿಗೆ ಸರಿಯಾದ ಸಹಕಾರಿಗಳಾಗಿಯೂ, ಉತ್ತರೋತ್ತರ ಅವರ ಭಾರ ವಹಿಸುವದಕ್ಕೆ ಶಕ್ತರಾಗಿಯೂ ಇರುತ್ತಾರೆ. ಇವರು ಇಂಡಸ್ಟ್ರಿ ಅಂದರೆ ಕೈಗಾರಿಕೆಯಲ್ಲಿ ಬಹಳ ಉತ್ಸಾಹವಂತರು. ಇದರಿಂದಲೇ ಕೊಚ್ಚಿ ಸಂಸ್ಥಾನಕ್ಕೆ ಇವರು ಹೋಗುವದಕ್ಕೆ ಮುಂಚೆ ಇದ್ದ ಸಾಲಗಳನ್ನು ತೀರಿಸಿ, ಇವರು ದಿವಾನಗಿರಿ ಬಿಡುವಾಗ್ಗೆ ಸಂಸ್ಥಾನದ ಖಜಾನೆಗಳನ್ನು ಭರ್ತಿ ಮಾಡಿ ಬಂದರೆಂಬ ವಿಷಯ ಎಲ್ಲರಿಗೂ ತಿಳಿದಿರಬಹುದು. ಇದೇ ರೀತಿ ಮೈಸೂರು ಸಂಸ್ಥಾನವನ್ನು ಇನ್ನೂ ಅತ್ಯುತ್ತಮ ಸ್ಥಿತಿಗೆ ತರಲು ಭಗವಂತನು ಇವರಿಗೆ ಆಯುರಾರೋಗ್ಯವನ್ನು ದಯಪಾಲಿಸಬೇಕೆಂದು ಮೈಸೂರು ದೇಶಸ್ಥರಾದ ನಾವು ಗಳು ಪ್ರಾರ್ಥಿಸುವಷದಲ್ಲದೆ ನಮಗಿಷ್ಟವುಳ್ಳ ನಮ್ಮ ದೇಶದವರಲ್ಲಿ ಕೆಲವರಿಗೆ ದೊಡ್ಡ ಅಧಿಕಾರಕ್ಕೆ ಬಂದ ಕೂಡಲೆ ಪೂರ್ವಾವಸ್ಥೆ ಮತ್ತು ಉತ್ತರಾವಸ್ಥೆ ಸಹಾ ಸಂಪೂರ್ಣವಾಗಿ ಮರೆತು ತಕ್ಕ ಕಾಲದಲ್ಲಿ ತಾವೇ ದೇವರೆಂಬದಾಗಿಯೂ, ಜನಗಳೂ, ನ್ಯಾಯವೂ ಸಹಾ ತಮಗೆ ಅನುಸರಿಸಿ ಇದೆಯೋ ಹೊರತು ತಾವು ಸರ್ವಾತ್ಮ ಜನಗಳಿಗೆ ಅಧೀನರಲ್ಲವೆಂಬ ಅಹಂಕಾರ ಬರುತ್ತೆ. ಈ ಯೋಗ್ಯತೆ ಮಿ|| ಬನರ್ಜಿಯವರಿಗೆ ಇಲ್ಲವೆಂಬುವದು ಚೆನ್ನಾಗಿ ವೇದ್ಯವಾಗಿದೆ.

ಮೈಸೂರು ದೇಶ ಹಿತಚಿಂತಕ.

ಈ ವಾರ ನಮಗೆ ತಲಪಿರುವ [illegible]ಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ನಮ್ಮ ಪತ್ರಿಕೆಗಳು ತಲಪುವುದಿಲ್ಲವೆಂದೂ, ತಾವಕಾಶವಾಗುತ್ತವೆಂದೂ, 2-3 ವಾರದ ಪತ್ರಿಕೆಗಳು ಒಂದೇ ಸಲ ತಲಪುತ್ತವೆಂದೂ, ಚಂದಾದಾರರು [illegible] ಕೊಟ್ಟಿರತಕ್ಕ ತಾರಂದೂ ನಮಗೆ ಆಕ್ಷೇಪಣೆಯುಳ್ಳ ಕಾಗದಗಳನ್ನು ನಮ್ಮ ಚಂದಾದಾರರು ಬರೆಯುತ್ತಾರೆ. ಅಂಥವುಗಳನ್ನು ಪೋಸ್ಟ್ ಅಧಿಕಾರಿಗೆ [illegible] ನಾವು ಕಳುಹಿಸುತ್ತೇವೆ. [illegible] ಪತ್ರಿಕೆಗಳು ಕ್ರಮವಾಗಿ ತಲಪದೆ ಹೋಗುವ [illegible] —ಎಡಿ.]

ತಾಲ್ಲೂಕಿನ ವರ್ತಮಾನಗಳು.

ಶಿಕಾರಿಪುರ.—ಈ ಊರಿನಲ್ಲಿ [illegible]

[illegible]

ನಮ್ಮ [illegible] ಇದೆ.— [illegible] (ಹೆಸ್ರ, ಕೇರು, ಎಳ್ಳು, ಎಮ್ಮೆ) [illegible] ಜಾನುವಾರುಗಳಿಗೆ ರೋಗ [illegible] ಮತ್ತು ನಮ್ಮ [illegible] (10-5-1) [illegible] ಹಾಕಿರುತ್ತಾರೆ. [illegible] ಬಹಳ ಸಂತೋಷಕರವಾಗುತ್ತೆ.

ತಿಪಟೂರು.—ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಮಿ|| [illegible]ಪ್ಪನವರು [illegible] —ಎ. ವಿ. ಸ್ಕೂಲ್ ಪರೀಕ್ಷೆ ಮಾಡಿದ್ದು [illegible] ಇನ್‌ಸ್ಪೆಕ್ಷನ್ ಕಂಪ್ಲೀಟು. [illegible] 4-5 ದಿನ ಆಗಿ [illegible].—ತಾ. 9 ರಲ್ಲಿ [illegible] ಸ್ಕೂಲಿನಲ್ಲಿ ಹಿಂದು [illegible] ಸ್ಕೂಲ್ [illegible] ಪ್ರಯುಕ್ತ [illegible], ಫಲಪಾಠಾದಿಗಳಿಂದ ಸಂತೋಷಗೊಳಿಸಿದರು.—ತಾ. 10 ನೇ [illegible] ಬೀದಿಯಲ್ಲಿ ಹುಲ್ಲು ಮನೆ ಮಾಡಿಕೊಂಡಿದ್ದ [illegible] ಅಕಸ್ಮಾತ್ತಾಗಿ ಬೆಂಕಿಬಿದ್ದು ಸುಟ್ಟು ಹೋಯಿತೆಂಬ ಸಂಗತಿ ತಿಳಿಸಲು ವ್ಯಸನವಾಗಿದೆ.—ತಾ. 11 ನೇ ಶನಿವಾರ ಸಾಯಂಕಾಲ ನಾರ್ಮಲ್ ಸ್ಕೂಲ್ ಹಾಲಿನಲ್ಲಿ ನಾರ್ಮಲ್ ವಿದ್ಯಾರ್ಥಿಗಳು ಮೀಟಿಂಗ್ ನಡಿಸಿದರು. ಎ. ವಿ. ಸ್ಕೂಲ್ ಹೆಡ್ ಮಾಸ್ಟರು ಅಗ್ರಾಸನ ವಹಿಸಿದ್ದರು. ಮಾನಸಿಕ ಗಣಿತ ವಿಷಯ ಮಿ|| [illegible]ಯರು ಚರ್ಚೆ ನಡಿಸಿದರು. ಹೊಸ ತರಹಾ ಬೋಧಿಸುವ ಮಾರ್ಗವನ್ನು ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರು ಚೆನ್ನಾಗಿ ಹೇಳಿದರು. ಮಿ|| ಸುಬ್ಬರಾಯರೂ ಮಿ|| ರಾಮಕೃಷ್ಣಯ್ಯನವರೂ ಚೆನ್ನಾಗಿ ತಿಳಿಸಿದರು. ಅನಂತರ ಮಿ|| ಟಿ. ಕೆ. ಹನುಮಂತರಾಯರು ಸ್ವತಃ ರಚಿಸಿದ್ದ ಕಿಂಡರ್ ಗಾರ್ಟನ್ ಪಾಠಶಾಲೆ ತೋಟದ ಹಾಡನ್ನು ಹೇಳಿದರು.—ಕೋಳಿ ಹುಣ್ಣಿಮೆ ಪ್ರಾರಂಭವಾಗಿದೆ. ದೊಡ್ಡ ಬ್ರಾಹ್ಮಣರ ಕೇರಿಯಲ್ಲಿ ಬೆಂಗಳೂರಿಂದ ತಾಫೆಯವನ್ನು ತರಿಸಿದಾರೆ. ಬಡಿಗೇರ ಬೀದಿಯಲ್ಲಿ ಯಾವಾಗ್ಗೂ ಆಗದ ಇದ್ದ ತಾಫೆ ಸಂಪ್ರದಾಯ ವನ್ನು ಮಾಡಿಸುತ್ತಾ ಇದಾರೆ. ರಂಗಾರೆ ಬೀದಿಯಲ್ಲಿ ಧ್ರುವ ಚರಿತ್ರೆ ಮುಂತಾದ್ದನ್ನು ದಿನವಹಿ ಆಡುತ್ತಾ ಇದಾರೆ. ಪೇಟೆಯಲ್ಲಿ ತಾಫೆ ನಡೆಯಿತು.

ಕೆಂಬಾರಕೇರಿಯಲ್ಲಿ ಅವರು ತಯಾರಿಸಿದ ಆಟ ಆಡಲು ಏರ್ಪಡಿಸುವರಾ ದಾರೆ. ಇದುವರಿಗೆ ಎಲ್ಲವೂ ಸುಭ ಇಲ್ಲದೆ ನಡೆಯುತ್ತಾ ಇದೆ.—ಮಂಡಿಯಲ್ಲಿ ಕೆಲವು ಮನೆಗಳಿಗೆ ಬೆಂಕಿಬಿದ್ದು ಸುಮಾರು 20 ಮನೆ ಸುಟ್ಟುಹೋಯಿತು. ದನಗಳು ಹುಲ್ಲು ಬಹಳ ನಷ್ಟಿತು. ಮಾಲೀಕರ ನಷ್ಟಕ್ಕೆ ವ್ಯಸನ ಪಡುತ್ತೇವೆ.

ಮಂಡ್ಯ.—ಬಿಸಿಲು ಅಧಿಕವಾಗಿದೆ. ಸೆಕೆಯೂ ಜಾಸ್ತಿ. ಮಂಡ್ಯದ ಸುತ್ತು ಮುತ್ತು ಗ್ರಾಮಗಳಲ್ಲಿ ಸಿಡುಬಿನ ಉಪದ್ರವು ವ್ಯಾಪಿಸಿ ಅನೇಕ ಮಕ್ಕಳು ತೀರಿ ಹೋಗುತ್ತಾ ಇವೆ. ದೇವಿ ಹಾಕಿಸುವದರ ಪ್ರಯೋಜನವನ್ನು ಇನ್ನೂ ಅನೇಕರು ತಿಳಿದಂತೆ ತೋರುವದಿಲ್ಲ. ಸರ್ಕಾರದವರು ಬಲಾತ್ಕರಿಸಿ ದೇವಿ ಹಾಕಿಸುವ ದಿಲ್ಲನ್ನು ಜಾರಿಗೆ ತಂದರೆ ಒಳ್ಳೇದು.—ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿ|| ಎಂ. ವೆಂಕಟಸುಬ್ಬಯ್ಯನವರು ಎಲ್ಲಾ ಪಾಠಶಾಲೆಗಳಲ್ಲಿಯೂ ಆಯಾ ಸ್ಟಾಂಡರ್ಡ್‌ಗಳಿಗೆ ಸರಿಯಾಗಿ ನಾರ್ಮಲ್ ಟ್ರೈನಿಂಗ್ ಸೂತ್ರಗಳನುಸಾರವಾಗಿಯೇ ಪರೀಕ್ಷಿಸಿದ್ದು ಎಲ್ಲಾ ವಿದ್ಯಾರ್ಥಿಗಳಿಗೂ ಪಾಠ್ಯಗಳೂ ಸಮ್ಮತವೂ ಸಂತೋಷವೂ ಆಗಿತ್ತೆಂದು ಹೇಳಬಹುದು. ಮಾತ್ರವಲ್ಲದೆ ಪ್ರತಿಯೊಂದು ಪಾಠಶಾಲೆಯಲ್ಲೂ ವಿದ್ಯಾರ್ಥಿಗಳ ಶಿಕ್ಷಣ ಕ್ರಮ, ಏಳಿಗೆ ಮೊದಲಾದವುಗಳನ್ನು ಚೆನ್ನಾಗಿ ಪರಿಶೀಲಿಸಿ ಇನ್ನೂ ಆಯಾ ಪಾಠಶಾಲೆಗಳಿಗೆ ತಿಳಿಸಬೇಕಾದ ಸಲಹೆಗಳನ್ನು ಸಹ ಕೊಟ್ಟರು. ಮತ್ತು ಕಳೆದ 11 ನೇ ತಾ. ಶನಿವಾರ ಈ ತಾಲ್ಲೂಕಿನ ಸುಮಾರು 80-90 ಮಂದಿ ಉಪಾಧ್ಯಾಯರನ್ನು ಬರಮಾಡಿಕೊಂಡು "ಉಪಾಧ್ಯಾಯ ಸಂಘ" ಎಂಬುದನ್ನು ಏರ್ಪಡಿಸಿಕೊಂಡು ಈ ಮೊದಲಿನ ಮೀಟಿಂಗಿನಲ್ಲಿ ಡಿ|| ಎ|| ಸಿ|| ಮಿ|| ಶ್ರೀ ನರಸಿಂಹಶಾಸ್ತ್ರಿಗಳೂ, ಡಿ|| ಇ|| ಮಿ|| ವೆಂಕಟಸುಬ್ಬಯ್ಯನವರೂ ಕೈಗಾರಿಕೆ, ವಿದ್ಯಾಭ್ಯಾಸ ಮೊದಲಾದ ವಿಷಯಗಳನ್ನು ಬಹು ಸ್ವಾರಸ್ಯವಾಗಿ ತಿಳಿಯಪಡಿಸಿದ್ದರ ಮೇಲೆ ಇಂಥಾ ಉಪಾಧ್ಯಾಯರ ಸಂಘವು ಬಹು ಆವಶ್ಯವೆನ್ನುವಷ್ಟರಮಟ್ಟಿಗೆ ಎಲ್ಲರೂ ಅನುಮೋದಿಸಿದ್ದರ ಮೇಲೆ ಮುಂದಿನ ತಿಂಗಳ ಮೀಟಿಂಗಿನಲ್ಲಿ ಕೈಗಾರಿಕೆ, ಚರಿತ್ರೆ, ಭೂಗೋಳ, ಗದ್ಯ ಇವುಗಳ ವಿಷಯದಲ್ಲಿ ಹೊಸ ನಮೂನೆ ಬೋಧನಾ ಕ್ರಮವನ್ನು ಪ್ರದರ್ಶಿಸುವಂತೆ ತೀರ್ಮಾನ ಮಾಡಲಾಯಿತು. ಈ ಹೊಸ ಕ್ರಮದಿಂದ ನಾರ್ಮಲ್ ಟ್ರೈನಿಂಗ್ ಸೂತ್ರಗಳನ್ನು ಎಂದಿಗಾದರೂ ನೋಡದ ಕೇಳದೆ ಇರತಕ್ಕವರೂ ಅಲ್ಪ ಸ್ವಲ್ಪ ಅನುಭವವನ್ನು ಕ್ರಮೇಣ ಪಡೆಯುವುದಕ್ಕೆ ಮಾರ್ಗವಾಯಿತು.—ಈ ಟವನ್ನಿನ ದೊಡ್ಡ ಬೀದಿಗಳ ಗಲ್ಲಿಗಳು ಸರಿಯಾಗಿ ಸಫಾಯಿದವು. ಅದೇ ರೀತಿ ಸಂದುಗೊಂದುಗಳಲ್ಲಿರತಕ್ಕವುಗಳನ್ನು ಸಹ ರಿಪೇರಿ ಮಾಡಿ ಪಡಿ ಬೇಕು.—ಬಾಲಿಕಾಭ್ಯಾಸದ ವಿದ್ಯಾಭ್ಯಾಸದ ವಿಷಯದಲ್ಲಿ ಸರ್ಕಾರದವರ ಉದ್ದೇಶಗಳು ಎಷ್ಟು ಮಾತ್ರವೂ ಇಲ್ಲಿ ನಡೆಯುತ್ತಾ ಇಲ್ಲವೆಂದು ಹೇಳಬೇಕು. ಇನ್ನು ಮುಂದೆ ಮಿ|| ಜಿ. ವಿ. ನಂಜಪ್ಪನವರು ಡಾಯ್ಸ್, ಕ್ರಮ, ಮುಂತಾದ ಸರ್ಕಾರದ ಉದ್ದೇಶಗಳು ನೆರವೇರಬಹುದೆಂದು ನಂಬಲಾಗಿದೆ.—ಇಲ್ಲಿನ ಕೋಆಪರೇಟಿವ್ ಸೊಸೈಟಿ ದಿನೇ ದಿನೇ ಏಳಿಗೆ ಬರುತ್ತಾ ಇದೆ. ಇನ್ನೂ ಅನೇಕರು ಇದರಲ್ಲಿ ಅಸನಂಬಿಕೆಯನ್ನಿಟ್ಟಿರುವಂತೆ ತೋರುತ್ತದೆ. ಇದಕ್ಕೆ ಸಮರ್ಥರಾದ ಮಿ|| ಜಿ. ವಿ. ನಂಜಪ್ಪಶೆಟ್ಟರು ಸೆಕ್ರೆಟರಿಯಾಗಿ ನಿಂತ ಮೇಲೆ ಈ ಸೊಸೈಟಿ ವಿಷಯದಲ್ಲಿ ಬಂದಿದ್ದ ಎಲ್ಲಾ ಸಂಶಯಗಳನ್ನು ನಿವಾರಣಮಾಡಿ ವೃದ್ಧಿಸ್ಥಿತಿಗೆ ತರುತ್ತಿರುವದು ತುಂಬಾ ಸಂತೋಷಕರವಾಗಿದೆ. ಟವನ್ನಿನಲ್ಲಿರುವ ಎ. ವಿ. ಮತ್ತು ವಿ. ಇ. ಸ್ಕೂಲುಗಳ ವಿದ್ಯಾರ್ಥಿಗಳಿಗೆ ಫುಟ್‌ಬಾಲ್ ಮೊದಲಾದ ಆಟಗಳನ್ನು ಆಯಾ ಸ್ಕೂಲಿನ ಹೆಡ್ ಮಾಸ್ಟರುಗಳೂ ಸಹಾಯಕ ಉಪಾಧ್ಯಾಯರುಗಳೂ ಏರ್ಪಡಿಸಿರುವದಲ್ಲದೆ ಮಿ|| ನಾರಾಯಣಸ್ವಾಮಿ, ಮ|| ನರಸಿಂಹಾಚಾರ್ಯ ಜೊತೆಗೆ ಮುಂತಾದವರ ಸಹಿತ ಅವರೆಲ್ಲಾ ಆಟವನ್ನು ಕಲಿಸುತ್ತಿರುವುದು ಸಂತೋಷಕರವಾಗಿದೆ.—ಕಳೆದ 8, 9, 10 ನೇ ತಾ. ಮೈಸೂರಿಂದ ಮಿಸ್ ಇ. ಪಿ. ಸ್ಟ್ರೆಟ್ ಯವರು ಮಂಡ್ಯದ ಕಡೆ ಬಂದು ಇಲ್ಲಿನ ಗರ್ಲ್ಸ್ ಸ್ಕೂಲ್ ವಿದ್ಯಾಭ್ಯಾಸ ಕ್ರಮ, ಪೇಪರ್ ಫೋಲ್ಡಿಂಗ್, ಕ್ಲೇ ಮಾಡ್ಲಿಂಗ್, ಹೊಲಿಗೆ, ಕಿಂಡರ್ ಗಾರ್ಟನ್, ಮನೆ ಕೆಲಸ, ಡ್ರಾಯಿಂಗ್, ಸಂಗೀತ ಈ ಮೊದಲಾದವುಗಳ ಸ್ಥಿತಿ ನೋಡಿ ಉಪಾಧ್ಯಾಯಿನಿಗಳ ಮೇಲ್ವಿಚಾರಣೆ ಸರಿಯಾಗಿ ನಡೆಸಿ ಅತ್ಯಂತ ಸಂತೋಷ ಹೊಂದಿದರು.—ವೈದ್ಯರು ಪ್ರೈವೇಟ್ [illegible] 1-2-3-4 ನೇ ತರಗತಿ ಬಾಲಿಕೆಯರಿಗೆ ನಿತ್ಯವೂ ಹೊಸ ಪಾಠ [illegible] ಒಂದು ದಿನ ಓದಿದ ಪಾಠಗಳನ್ನು ಪರೀಕ್ಷಿಸಿ ಹೊಸ [illegible] ಅಧಿಕಾರಿಗಳು [illegible] ಸಹಾಯವಾಗುತ್ತೆ.

ಇಂಡಿಯಾ ದೇಶದ ವೃತ್ತಾಂತಗಳು.

ಮ. ಟಿಳಕರಲ್ಲಿ ನಿಯಮಕನಾದರು ಸೇರಿ ಒಂದು ಸಂಘವನ್ನು ಮಾಡಿ[illegible] ಇನ್ನು ಮುಂದೆ ಅವರು ತಮ್ಮ ಆಸ್ತಿಯನ್ನು [illegible] ಎಲ್ಲರೂ [illegible] ಪ್ರಾರಂಭದಲ್ಲಿ ಈ ಸಂಘದ [illegible] ಈ ಸಂಘವು ಪ್ರೋತ್ಸಾಹದಿಂದ ಆಗಲೇ [illegible] ತಮ್ಮ ಮಕ್ಕಳಿಗೆ ಕ್ರಮವಾಗಿ [illegible] ತಿದ್ದರೆಂದು ಪ್ರಕಟವಾಗಿದೆ.

ಪಂಜಾಬ್ ಅಥವಾ [illegible] ಎಂಬ ಊರಿಗೆ ಕರ್ನಲ್ [illegible] ಎಂಬ ಸಾಹುಕಾರನನ್ನು ಕೊಂದುಹಾಕಿದರು. ಈ ಮೊಕದ್ದಮೆಯಲ್ಲಿ 15 ಮಂದಿಯನ್ನು [illegible] ಜಡ್ಜಿಯವರು ದಯಾಶಕ್ತಿಯಿಂದ [illegible] ಬಿಟ್ಟುಬಿಟ್ಟು, ಉಳಿದ ಏಳು ಜನರಲ್ಲಿ ಇಬ್ಬರಿಗೆ ಮರಣದಂಡನೆಯನ್ನು, ಐದು ಮಂದಿಗೆ ಯಾವಜ್ಜೀವಪರ್ಯಂತ ಕೋಲ್ ಶಿಕ್ಷೆಯನ್ನು ವಿಧಿಸಿದರು. [illegible] ಸಿಂಗ್ ಎಂಬ ಅಪರಾಧಿಯು ಇನ್ನೂ 16 ವಯಸ್ಸಿನ ಹುಡುಗನಾಗಿರುವುದರಿಂದ ಅವನಿಗೆ ಗವರ್ನಮೆಂಟಿನವರು ಏನಾದರೂ ರಿಯಾಯಿತಿ ತೋರಿಸಬಹುದೆ ಎಂದು ಜಡ್ಜಿಯವರು ಶಿಫಾರಸು ಮಾಡಿದಾರೆ.

ಸಿಂಧು ದೇಶಕ್ಕೆ ಸೇರಿದ ಸಕ್ಕರ್ ಎಂಬ ಪಟ್ಟಣದಲ್ಲಿ ಮ|| ಗಾಂಧಿಯವರು ಹಿಂದೂ ಮಹಾ ಸಭೆಯಲ್ಲಿ ಕಳೆದ ವಾರ ಉಪನ್ಯಾಸ ಮಾಡುತ್ತಾ, "ಹಿಂದೂಸ್ಥಾನದಲ್ಲಿ ನಾನು ಎರಡು ವರುಷಗಳಿಂದಲೂ ಸಂಚಾರಮಾಡಿ ನೋಡಿದ್ದರಲ್ಲಿ ಈ ರಾಷ್ಟ್ರದ ಪ್ರಜೆಗಳು ದೇವರಿಗೆ ಹೆದರುವುದಿಲ್ಲವೆಂದೂ, ಗುಂಡು ಹಾಕ್ಕುವುದನ್ನು, ಸರ್ಕಾರದ ಅಧಿಕಾರಿಗಳನ್ನು, ನೌಕರರನ್ನು ಕಂಡರೆ ಹೆದರಿಕೊಳ್ಳುವುದೇ ಹೆಚ್ಚಾಗಿದೆ ಎಂದೂ, ಅವರಿಗೆ ಈ ರೀತಿಯಾದ ಭಯ ತಪ್ಪಿದ ಹೊರತು ಸ್ವರಾಜ್ಯ ಸುಖಗಳನ್ನು ಅನುಭವಿಸುವುದಕ್ಕೆ ಅರ್ಹರಾಗಲಾರರೆಂದು ನನಗೆ ಕಂಡು ಬಂದಿದೆ" ಎಂಬದಾಗಿ ತಿಳಿಸಿದರು.

ಕಲ್ಕತ್ತಾ ಪಟ್ಟಣದ ಸಮುದ್ರ ತೀರಕ್ಕೆ ಬಂದು ನಿಂತಿದ್ದ ಜೆಕ್ ಸೋಫ್ ಎಂಬ ಜಹಜಿ ಹಡಗಿನೊಳಗೆ ಬೆಂಕಿ ಹುಟ್ಟಿತು. ಅದರಲ್ಲಿದ್ದ ಜಹಜಿ ಚಂಡಿಕಡ್ಡಿಗಳಿಂದಲೇ ಈ ಬೆಂಕಿ ಹುಟ್ಟಿತೆಂದೂ, ನಾವಿಕರಾದ ಯುರೋಪಿಯನ್ ದೇಶದ ಕಡ್ಡಿಗಳು ಉರಿದುಹೋದವೆಂದೂ ತಿಳಿದು ಬಂದಿದೆ. ಜಹಜಿ ದೀಪದ ಕಡ್ಡಿಗಳನ್ನು ಇಡುವುದು ಕ್ಷೇಮಕರವಲ್ಲವೆಂಬದಕ್ಕೆ ದೃಷ್ಟಾಂತವೇನೆಂದರೆ ಕಲ್ಕತ್ತೆಯಲ್ಲಿ ಒಬ್ಬ ಯುರೋಪಿಯನ್ ತನ್ನ ಜೇಬಿನಲ್ಲಿ ಜಹಜಿ ದೀಪದ ಕಡ್ಡಿ ಪೆಟ್ಟಿಗೆಯನ್ನು ಇಟ್ಟಿದ್ದನು. ಅದು ಅಕ್ಷೇ ಅಕಸ್ಮಾತ್ತಾಗಿ ಹತ್ತಿಕೊಂಡು ಕಡ್ಡಿ ದೀಪ ಹಾರಿತು. ಅವನು ಈ ಸಂಗತಿಯನ್ನು ವ್ಯಾಜಿಸ್ಟ್ರೇಟರಿಗೆ ಹೇಳಿಕೊಂಡನು. ಅವರು ಅವನಿಗೆ ಯಾತ್ರೆರೊಂದು ಪರಿಹಾರವನ್ನು ಕೊಡಿಸಲಾರದೆ ಹೋದರು.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಕಾರಿಗಳ ಬ್ಯಾಂಕುಗಳಿಗೆ ಫೆಬ್ರವರಿ ತಾ. 26 ರ ವರೆಗೆ ಬಾಕಿಯಾಗಿರುವ ಚಂದಾ ಹಣ ಎಷ್ಟೆಂದರೆ :—

ಎಲ್ಲಾ ಅಲೈಯನ್ಸ್ ಬ್ಯಾಂಕಿಗೆ	..... ರೂ.	45,89 088- 0-3
ಬಂಗಾಳ ಬ್ಯಾಂಕಿಗೆ	..... ,,	36,12,913- 3-3
ಬೊಂಬಾಯಿ ಬ್ಯಾಂಕಿಗೆ	.. ,,	8,32,926- 4-9
ಮದರಾಸ್ ಬ್ಯಾಂಕಿಗೆ	.... ,,	6,70,780- 7-0
	ಒಟ್ಟು ರೂಪಾಯಿ	97,16,737-15-3

ಪುದುಕೋಟೆಯಲ್ಲಿ 25 ವಯಸ್ಸಿನ ಒಬ್ಬ ವಿಧವೆಯು ಐಶ್ವರ್ಯವಂತಳಾಗಿದ್ದು ತನ್ನನ್ನು ದುಷ್ಟರು ಪ್ರಾಣಹತ್ಯ ಮಾಡುವವರಾಗಿದ್ದಾರೆಂದು ಮುಂತಾಗಿ ಗಾಬರಿಬಿಟ್ಟು ಪೋಲೀಸ್ ಸುಪರಿಂಟೆಂಡೆಂಟಿಗೆ ಕಾಗದ ಬರೆದು ಎಚ್ಚರಿಸಿದಳು. ಅವರು ಆ ಕಾಗದವನ್ನು ಸಬ್ ಇನ್ಸ್‌ಪೆಕ್ಟರಿಗೆ ಕಳುಹಿಸಿ 8 ದಿನಗಳೊಳಗೆ ತನಿಖೆಯಿಂದ ರಿಪೋರ್ಟು ಕೊಡಬೇಕೆಂದು ಹುಕುಂ ಕೊಟ್ಟರು. ಇನ್ಸ್‌ಪೆಕ್ಟರು ಆ ಅರ್ಜಿಯಲ್ಲಿ ಕಂಡ ವಿಚಾರಗಳಿಗೆ ಗಮನಕೊಡಲಿಲ್ಲ. ಕ್ರಿಮಿನಲ್ ಆ ಹೆಂಗಸನ್ನು ಕೊಂದುಹಾಕಿದರು. ಅಪರಾಧಿಗಳೆಂದು ಹಿಡಿಯಲ್ಪಟ್ಟವರನ್ನು ಸೆಷನ್ಸ್ ಜಡ್ಜರು ಖುಲಾಸ್ ಮಾಡಿ, ಪೋಲೀಸಿನವರ ಮೇಲೆ ಕಠಿಣವಾದ ಆಕ್ಷೇಪಣೆಯುಳ್ಳ ತೀರ್ಮಾನವನ್ನು ಬರೆದಿರುತ್ತಾರೆ.

ಹಿಂದುಸ್ಥಾನದ ಹಲದಯಾಳನು ಇದು ವರೆಗೆ ಅಮೇರಿಕದಲ್ಲಿನ ಬ್ರಿಟಿಷ್ ಗವರ್ನ್‌ಮೆಂಟಿನವರು ಹಿಂದುಸ್ಥಾನವನ್ನು ಧರ್ಮವಾಗಿ ಪರಿಪಾಲಿಸಿ ನಡೆಸಿದುದಿಲ್ಲವೆಂದು ಅಮೇರಿಕದ ಪ್ರಜೆಗಳಲ್ಲಿ ದುರಭಿಪ್ರಾಯಗಳನ್ನು ಉಂಟು ಮಾಡಬೇಕೆಂದು ಪ್ರಯತ್ನಪಟ್ಟನು. ಅದು ಸಾಫಲ್ಯವಾಗಲಿಲ್ಲ. ಈಗ ಹರದಯಾಳನು ಅಮೇರಿಕದಿಂದ ಜರ್ಮನಿಗೆ ಹೋಗಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಸೇರಿಕೊಂಡಿದ್ದಾನೆಂದೂ, ಕೈಸರ್ ಚಕ್ರವರ್ತಿಯು ಅವನಿಗೆ ಜರ್ಮನಿಯವರಾಗಿ ಹಿಂದುಸ್ಥಾನದ ಪ್ರಜೆಗಳನ್ನು ಗವರ್ನ್‌ಮೆಂಟಿನವರ ಮೇಲೆ ತಿರುಗಿಬೀಳುವಂಥಾ ಪುಸ್ತಕ, ಹಸ್ತ ಪತ್ರಗಳನ್ನು ಬರೆಯಲು ಆಜ್ಞೆ ಮಾಡಿರುವುದಾಗಿಯೂ ಅಮೆರಿಕ ದಿನಪತ್ರಿಕೆಯು ತಿಳಿಸುತ್ತದೆ.

ಮದರಾಸ್ ಅಧಿಕಾರದ ಯುದ್ಧದ ಫಂಡಿಗೆ ಬೊಬ್ಬಿಲಿ ಸಂಸ್ಥಾನದ ಮಹಾರಾಜರವರು ಮೊದಲು ಒಂದು ಲಕ್ಷ ರೂಪಾಯಿಗಳನ್ನು, ಕೆಲವು ಕಾಲದ ಬಳಿಕ 25,000 ರೂಪಾಯಿಗಳನ್ನೂ ಚಂದಾ ಕೊಟ್ಟಿದ್ದರು. ಈಗ ಪುನಃ ಅವರು 15,000 ರೂಪಾಯಿ ಕಳುಹಿಸಿ ಕೊಟ್ಟು ಎರಡು ಮೋಟಾರ್ ಅಂಬ್ಯುಲೆನ್ಸ್ (ಗಾಯಪಟ್ಟವರನ್ನು ಸಾಗಿಸುವಂಥಾ) ಗಾಡಿಗಳನ್ನು ಮಾಡಿ ಉಪಯೋಗಿಸಿ ಕೊಳ್ಳಬೇಕೆಂದು ಮದರಾಸ್ ಗವರ್ನರಿಗೆ ಬರೆದರು. ಅದಕ್ಕೆ ಈ ಮಹಾರಾಜರವರ ಔದಾರ್ಯವನ್ನು ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಅರಿಕೆ ಮಾಡಿದ್ದಾಗಿ ಅವರು ಬಹಳ ಆನಂದಪಟ್ಟು ಮಹಾರಾಜರವರ ಔದಾರ್ಯಕ್ಕೆ ಕೃತಜ್ಞರಾಗಿರುತ್ತದೆಂದು ಹೇಳಿಕಳುಹಿಸಿರುವರಾಗಿ ಈ ಸಂಗತಿಯನ್ನು ಮಹಾರಾಜರವರಿಗೆ ತಿಳಿಸಬೇಕೆಂದು ಆಜ್ಞೆ ಮಾಡಿದ್ದಾರೆ.

ಹಿಂದುಸ್ಥಾನದ ದೇಶೀಯ ಸಂಸ್ಥಾನಗಳಲ್ಲಿ ರಾಜರುಗಳು ಸಣ್ಣವರನ್ನು ಉತ್ತರರನ್ನು ಬಿಟ್ಟು ಕಾಲವಾದರೆ ಆ ಮೈನಾರಿಟಿ ಕಾಲದಲ್ಲಿ ಸಂಸ್ಥಾನದ ಆಳ್ವಿಕೆಯು ಯಾವ ರೀತಿ ನಡೆಯಬೇಕೆಂದು ಯೋಚಿಸಿ ರಿಪೋರ್ಟು ಕೊಡಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಒಂದು ಪಂಚಾಯತಿಯನ್ನು ನೇಮಿಸಿ ಮಾಡಿದ್ದಾರೆ. ಈ ಪಂಚಾಯತಿಯಲ್ಲಿ ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರು, ಭೂಪಾಲ್ ಸಂಸ್ಥಾನದ ಬೇಗಮ್ ರಾಣಿ ಸಾಹೇಬರವರು, ಕಾಶ್ಮೀರ ಅಧಿಕಾರಿಗಳೇ ಮೊದಲಾದವರು ಮುಖ್ಯ ಮುಖ್ಯ ಮೆಂಬರುಗಳಾಗಿದ್ದಾರೆ. ಇವರೆಲ್ಲಾ ದಿಲ್ಲಿ ಪಟ್ಟಣದಲ್ಲಿ ಸೇರಿ ಮೇಲ್ಕಂಡ ವಿಚಾರವನ್ನು ಕುರಿತು ಚರ್ಚೆಮಾಡಿ ರಿಪೋರ್ಟನ್ನು ಬರೆದು ಕೊಟ್ಟರು. ಇಂಡಿಯಾ ಗವರ್ನ್‌ಮೆಂಟಿನವರು ಅದನ್ನು ತಮ್ಮ ಸಮಾಲೋಚನೆಗಾಗಿ ಇಟ್ಟುಕೊಂಡಿದ್ದಾರೆ.

ಕೊಡಗು ಅಮ್ಮತ್ತಿಯಲ್ಲಿ ಕೊಡಗು ಮಹಾ ಸಭೆಯೊಂದು ನಡೆಯಿತು. ಶ್ರೀ ಎಂ ಅಯ್ಯಪ್ಪನವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಕೊಡಗರಲ್ಲಿ ಮದುವೆ ಪ್ರಸಂಗಗಳಿಗೆ ಬಹಳ ಹಣ ಖರ್ಚು ಮಾಡಿ ನಷ್ಟಹೊಂದುಬರುವುದು ಮದುವೆ ಮಾಡುವುದು ಬಹಳ ಪ್ರಯಾಸ ; ಆದ್ದರಿಂದ ಮದುವೆಗೆ ಖರ್ಚು ಮಾಡಿ ನಿರ್ಗತಿಕರಾಗುತ್ತಾರೆ. ಆ ಮಹಾ ಸಭೆಯಲ್ಲಿ ಮದುವೆ ಕರ್ಮ ಮಾಡಬೇಕೆಂಬ ವಿಚಾರ ಚರ್ಚೆಯಾಯಿತು. ಮದುವೆ ಕಾಲಗಳಲ್ಲಿ ಮದ್ಯಪ್ರಾಶನಗಳು, ಉಡುಗೆ ಮುಂತಾದ ಕಲ್ಯಾಣದ ಹಣ ಖರ್ಚು ಮಾಡಕೂಡದೆಂತಲೂ, ಗಂಡು ಹೆಣ್ಣುಗಳಿಗೆ ಕೊಡುವ ಉಡುಗೆಗಳನ್ನು ಕಡಮೆ ಮಾಡಬೇಕೆಂತಲೂ ನಿಶ್ಚಯ ಮಾಡಿದರು. ಮುಖ್ಯವಾಗಿ ಇಂಥಾ ದುರ್ವೆಚ್ಚಗಳು ಜನಸಾಮಾನ್ಯದಲ್ಲಿ ತಪ್ಪಬೇಕಾದರೆ ಪ್ರಜೆಗಳು ಮುಖಂಡರೂ, ಭಾಗ್ಯವಂತರೂ ಇದನ್ನು ನಿರ್ಬಂಧವನ್ನು ಕಾರ್ಯತಃ ನಡೆಸಿ ತೋರಿಸಿ ಇತರರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕು.

ಸ್ವತಃ ಹಾರಮೋನಿಯಂ ಕಲಿಯುವ ಪುಸ್ತಕ

ಕ್ರಯ 0-8-0

ಇದು ಪಂಡಿತ ಮಹಾಲೆಂಗರವರಿಂದ ನೂತನವಾಗಿ ಪ್ರಕಟಿಸಲ್ಪಟ್ಟದ್ದು. ಇದರ ಸಹಾಯದಿಂದ ಸ್ವಲ್ಪ ಅಂಗ್ಲೇಯ ಭಾಷಾ ಪರಿಜ್ಞಾನವಿರುವವರೂ ಹಾರಮೋನಿಯಂ ನುಡಿಸುವುದನ್ನು ಇತರರ ಸಹಾಯವಿಲ್ಲದೆ ಸುಲಭವಾಗಿ ಕಲಿಯಬಹುದು. ಇದರಲ್ಲಿ ಅರೋಹಣ ಅವರೋಹಣ ಮತ್ತು ಸೌಖ್ಯ ಗುರುಗಳು ವಿವರವಾಗಿ ಬರೆಯಲ್ಪಟ್ಟಿದೆ. ಈ ಪುಸ್ತಕಗಳು ಸ್ವಲ್ಪವೇ ಇದೆ. ಜಾಗ್ರತೆ ತರಿಸಿಕೊಳ್ಳಿರಿ. ವಿಳಾಸ—ಆರ್. ವಿ. ಪಂಡಿತ್,

[76-1] ನಂ 6, ಬಂದರು ಬೀದಿ, ಮದರಾಸು.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ. ಹೊಸ ನಮೂನೆ ಗಡಿಯಾರ.

"ಸ್ವಿಸ್ ಪಾಕೆಟ್ ವಾಚ್."

ಸರಪಣಿ ಸಹಿತ ಕ್ರಯ ರೂ. 3-0-0.



ಈ ಚಿತ್ರದಲ್ಲಿ ತೋರಿಸಿರುವ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ತರಿಸಿರುತ್ತೇವೆ. ಈ ಗಡಿಯಾರದ ನಮೂನೆಗಳು ಬಹು ದೃಢವಾಗಿ ಇರುತ್ತವೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಮಾರಾಟಿಗೆ ಇರುತ್ತವೆ. ಇದು ನೋಡುವುದಕ್ಕೆ ರಮಣೀಯವಾಗಿಯೂ ಬಾಳ್ವಿಕೆಗೆ ಇರುವುದಕ್ಕೆ ಅನುಕೂಲವಾಗಿ ಇವೆ. ಗಂಟೆ ತೋರಿಸುವುದರಲ್ಲಿ 1 ನಿಮಿಷವಾದರೂ ಹೆಚ್ಚು ಕಮ್ಮಿಯಿಲ್ಲದೆ ನಡೆಯುತ್ತದೆ. "ಸ್ವಿಸ್ ಪಾಕೆಟ್ ವಾಚ್" ಎಂಬುವುದು ಸುಳ್ಳು ನೋಡಿ ತರಿಸಿಕೊಳ್ಳಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವುದು.

ವಿಳಾಸ—ಸ್ವರ್ಣಲಕ್ಷ್ಮಿ ಅಂಡ್ ಕಂಪೆನಿ,

[63-3] 3, ಇರುಳಪ್ಪನ ಬೀದಿ, ಮದರಾಸು.

ಬೇಕಾಗಿದೆ.—ಅಡಿಶನಲ್ ಮಿಡ್ಲ್ ಎ. ವಿ. ಬಾಯ್ಸ್ ಸ್ಕೂಲಿಗೆ ಒಬ್ಬ ಹೆಡ್ ಮಾಸ್ಟರು ಬೇಕು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಅನುಭವದಾರರಾಗಿರತಕ್ಕವರು ಅರ್ಜಿ ಬರೆದುಕೊಳ್ಳತಕ್ಕದ್ದು. ಯೋಗ್ಯತೆಗೆ ತಕ್ಕಂತೆ ಸಂಬಳ ಕೊಡಲಾಗುವುದು.

[79-1] ವಿಳಾಸ—ಸುಪರಿಂಟೆಂಡೆಂಟ್, ಲಂಡನ್ ಮಿಷನ್, ಹೊಸಕೋಟೆ.

ಶ್ರೇಷ್ಠ ಮಹೌಷಧಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

1. ಗೂರಲುಡಾಳ ಮಾತ್ರೆ—2-3 ಮಾತ್ರೆಗಳು ಮುಷ್ಟಿಗೆ ಹಿಂದೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಆ, 6 ಶೀಸೆಗೆ 1 ರೂಪಾಯಿ.

2. ಜ್ವರದ ಮಾತ್ರೆ.—ಎಲ್ಲಾ ಜ್ವರಗಳನ್ನು ತಪ್ಪದೇ ನಿವಾರಿಸುತ್ತೆ. 24 ಮಾತ್ರೆ 8 ಆ, 6 ಶೀಸೆಗೆ $2\frac{1}{2}$ ರೂ., 12 ಶೀಸೆಗೆ $4\frac{1}{2}$ ರೂ.

3. ಬಾಧಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ನಾಲಿಗೆಯಿಂದ ಬೇಗ ಗುಣಪಡಿಸುತ್ತೆ. ಡಬ್ಬಿಗೆ 4 ಆ, 5 ಕ್ಕೆ 1 ರೂ, 12 ಕ್ಕೆ $2\frac{1}{2}$ ರೂ.

[126-29] ನಮ್ಮ ವಿಳಾಸ.—ಪಂಡಿತ್ ಎಸ್, ಗರಳಪುರಿ, ಮೈಸೂರು.

ಇಂಗ್ಲೀಷ್ ಇಂಕ್ (ಶಾಯಿ)

ಜರ್ಮನಿ ದೇಶದಲ್ಲಿ ತಯಾರಾಗಿ ಹಿಂದುಸ್ಥಾನಕ್ಕೆ ಬರುತ್ತಿದ್ದ ಇಂಕಿಯನ್ನು ತಯಾರಿಸುವ ರಂಗುಗಳು ಈಗ ಸಾಕಷ್ಟು ಬರುವುದಿಲ್ಲವಾದ ಕಾರಣ, ಇಂಕಿಯ ಕಲ್ಲು ಮಸಿ ಮುಂತಾದುದಕ್ಕಾಗಿ ಇಂಗ್ಲೀಷ್ ಇಂಕ್ ಡಿಪೋದವರು ಸೂಕ್ಷ್ಮವಾಗಿ ಇಂಕಿಯನ್ನು ತಯಾರಿಸುವುದನ್ನು ಕಂಡುಹಿಡಿದಿರುತ್ತಾರೆ. ಇದರ ಅಕ್ಷರವು ಕೆಡದೆ ಒಂದು ಪಾಲು ಇಂಕಿಗೆ 40 ಪಾಲು ನೀರನ್ನು ಸೇರಿಸಿದರೆ, ಉತ್ತಮ ಇಂಕಿಯಾಗುತ್ತೆ. [76-1]

ಬ್ಲೂ ಬ್ಲ್ಯಾಕ್ ಕಪ್ಪುಶಾಯಿ.		ರೆಡ್ಡ್ ಇಂಕ್ ಕೆಂಪುಶಾಯಿ.	
2 ಡ್ರಾಮ್ ಶೀಸೆಯ ಕ್ರಯ	0-12-0	2 ಡ್ರಾಮ್ ಶೀಸೆಯ ಕ್ರಯ	1-0-0
1 ಡಿಟ್ಟೋ	ಡಿಟ್ಟೋ 0- 6-0	1 ಡಿಟ್ಟೋ	ಡಿಟ್ಟೋ 0-8-0
$\frac{1}{2}$ ಡಿಟ್ಟೋ	ಡಿಟ್ಟೋ 0- 3-0	$\frac{1}{2}$ ಡಿಟ್ಟೋ	ಡಿಟ್ಟೋ 0-4-0

ವಿಳಾಸ—ಟಿ ಆರ್ ದಾಸ್, ಟೆಂಪ್ಲರ್ ಬೀದಿ ಮದರಾಸು.

ಟಿ. ಆರ್. ದಾಸ್‌ರವರ ಪರಿಮಳ ಪೆಪ್ಪರಮೆಂಟು.

ಈ ಪರಿಮಳದ ಪುಡಿಯನ್ನು ಉಪಯೋಗಿಸುವುದರಿಂದ ಹಿಡಿ ಹಲ್ಲು ನೋವು ಸೇರಿ ಹಲವಾರು ಬಾಯಿರೋಗಗಳನ್ನು ತಪ್ಪದೆ ಗುಣಪಡಿಸುತ್ತೆ. ಅನೇಕ ಸಾರಿ ಸಿದ್ಧವನ್ನು ಹಾಕುವವರು ಇದನ್ನು ೧ ಸಾರಿ ಹಾಕಿದರೆ ಸಾಕು. ಇತರ ಸ್ಥಳದಲ್ಲಿ ಇದನ್ನು ೧ ಚಟಿಕೆ ಹಾಕಿದರೆ ಪಕ್ವವಿದ್ದ ಸುವಾಸನೆ ಉಂಟಾಗುತ್ತೆ. ಇದನ್ನು ೧ ರೂ, ೧ ಕಮ್ಮಿ ಇಲ್ಲದೆ ತರಿಸಿಕೊಳ್ಳುವವರಿಗೆ ಪ್ರತಿ ೧ ರೂಪಾಯಿಗೂ ೧ ಅಂದಾಜಿನ ಪೆಟ್ಟಿಗೆಯನ್ನಾಗಲಿ ಅಥವಾ ಜರ್ಮನ್ ಸಿಲ್ವರ್ ಡಬ್ಬಿ ಯಾದರೂ ಉಚಿತವಾಗಿ ಸಹ್ಯದ ಸಂಗಡಲೇ ಕಳುಹಿಸುತ್ತೇವೆ. [76-1]

ತಾಂಬೂಲದ ಡಬ್ಬಿ 1 ಕ್ಕೆ ಕ್ರಯ	0-3-0
ಡಿಟ್ಟೋ 12 ಡಬ್ಬಿಗೆ ಕ್ರಯ	2-0-0
1 ನೇ ನಂಬರ್ ಶೀಸೆ 12 ಕ್ಕೆ	1-4-0
2 ನೇ ನಂಬರ್ ಶೀಸೆ 12 ಕ್ಕೆ	0-8-0
3 ನೇ ನಂಬರ್ ಶೀಸೆ 12 ಕ್ಕೆ	0-5-0
4 ತೊಲೆ ಹಿಡಿಯುವ ಪರಿಮಳ ಪುಡಿಯ ಟಿನ್ ಡಬ್ಬಿ 1 ಕ್ಕೆ	0-9-0

ಉತ್ತಮ ಮದರಾಸು ಶಾಯಿ ಪೆನ್ನು 24 ರೂ. ಕಾಪಿಂಗ್ ಪೇ ೭ 1 ಕ್ಕೆ 11 ಆಣೆ

ವಿಳಾಸ—ಟಿ. ಆರ್. ದಾಸ್, ಟೆಂಪ್ಲರ್ ಬೀದಿ ಮದರಾಸು

ಯೂರೋಪ್ ದೇಶದ ಮಹಾಯುದ್ಧ ಚರಿತ್ರೆ.

ಇದುವರೆಗೆ ಪ್ರಕಟಿಸಲ್ಪಟ್ಟಿರುವ ವಿವರಣೆಯನ್ನು ಪತ್ರಿಕೆಯಲ್ಲಿ ಯುದ್ಧ ಚಿತ್ರಗಳನ್ನು ಹಾಕಿ ಪ್ರಕಟಿಸುತ್ತಲಿವೆ. ಇದರ ಚಂದಾ ಮುಂಗಡ ರೂ 1-0-0 ಬೇಕಾದವರು ಆಗುವವರಿಗೆ ಈ ಕೆಳಗೆ ಬರೆದಿರುವ ಯುದ್ಧ ಚರಿತ್ರೆಯನ್ನು ಉಚಿತವಾಗಿ ಕೊಡಲ್ಪಡುತ್ತೆ.



ಯೂರೋಪು ದೇಶದ ಮಹಾ ಯುದ್ಧ ಚರಿತ್ರೆ ಕ್ರಯ ರೂ 1-0-0. ಇದು ಕನ್ನಡ ಭಾಷೆಯಲ್ಲಿ 14 ಅಧ್ಯಾಯಗಳಾಗಿ ಭಾಗಿಸಿ 30 ಚಿತ್ರಪಟಗಳೊಡನೆ ಪ್ರಕಟಿಸಲ್ಪಟ್ಟಿದೆ. ಇದರಲ್ಲಿ ಎಲ್ಲಾ ರಾಜ್ಯಗಳ ಚರಿತ್ರೆಗಳು ಯುದ್ಧಕ್ಕೆ ಆರಂಭಗಳೂ ಪ್ರತಿ ರಾಜ್ಯದ ರಾಜರುಗಳು ಅವರ ಮಂತ್ರಿಗಳು ಸೇನಾಧ್ಯಕ್ಷರುಗಳು ಇವರಿಂದಿಂದ ಬಂದ ಯುದ್ಧ ಸಮಾಚಾರಗಳು ಮತ್ತು ಮಿಲಿಟರಿಯ ಮೇಲೆ ಜರ್ಮನ್ ಹಡಗಿನಿಂದ ಹೊಡೆದ ಗುಂಡಿನ ವಿವರ ಪೊದಲಾದವುಗಳನ್ನು ವಿಸ್ತಾರವಾಗಿ ಬರೆಯಲ್ಪಟ್ಟಿರುತ್ತೆ. ಪುಸ್ತಕಗಳು ಸ್ವಲ್ಪವೇ ಇರುವುದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬೇಕು.

ವಿಳಾಸ—ಮ್ಯಾನೇಜರ್, ವಿಶಾರದ,

[76-1] ನಂ. 3 ಟೆಂಪ್ಲರ್ ಸ್ಟ್ರೀಟ್, ಮದರಾಸು

2 ನೆ ತರಗತಿ ಭೂವಿವರಣೆ.

ಚಿತ್ರಗಳು ಮತ್ತು ಭೂಪಟಗಳೊಡನೆ (ಕ್ರಯ 1 ಆಣೆ).

ಮೈಸೂರು ದೇಶದ ಭೂಪಟಗಳು.

(ಪ್ರಾಕೃತಿಕ ಮತ್ತು ರಾಜಕೀಯ) ಕ್ರಯ 2 ಆಣೆ.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯ ಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ವಿಶ್ವಾಖಂಡದ ಭೂವಿವರಣೆ	...	0-5-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ	...	0-6-0
ಮೇಲೆ ಕಂಡ ಎರಡೂ ಸೇರಿ	...	0-10-0

ಮಕ್ಕಳ ಭೂವಿವರಣೆ 2 ಆಣೆ ; The English L. S. Text Examiner for 1916 by a Graduate, Price 3 as.

ನಮ್ಮ ವಿಳಾಸ—ಎಂ. ಆರ್. ವೆಂಕಟಸುಬ್ಬಾಚಾರ್ಯ,

[47-5] ಸುಬೋಧ ಗ್ರಂಥಾಲಯ, ಮೈಸೂರು.

S. UDIPI NARAYANACHARYA & Co.

BANARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು

ಈ ನಮ್ಮ ಕಂಪನಿಯಲ್ಲಿ ನೆಯ್ದು ತಯಾರಿಸಿರುವ ಉತ್ತಮವಾದ ಬನಾರಸ್ ಜರಿ ಸೀರೆಗಳು, ಶಾಲು, ಪೇಟ, ಖಾಕ್‌ರಿ ಶಾಲು, ಪಟ್ಟೆ, ಮಗುಟ, ಜನಿವಾರ, ಆಟಿಗೆಗಳು, ಮಡಿಪ್ರಾಣಗಳು, ಕೆಂಪುಗಂಧ, ಅರಿಶಿನ ಪೇಟಿ, ಧರ್ಮಕಾರ್ಯ ಈ ಮುಂತಾದ ಅನೇಕ ತರಹ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ವರುಷ ಲಗ್ನಕ್ಕೆ ಬೇಕಾಗುವವರಿಗಾಗಿ ಅತಿ ಕಡಿಮೆ ಕ್ರಯಕ್ಕೆ ತಯಾರಿಸಿರುತ್ತೇವೆ. ಈ ಅಮೂಲ್ಯವಾದ ಸರಕುಗಳ ಕೆಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೆಟಲಾಗನ್ನು ಒಂದು ಕಾಣಿ ಕಳುಹಿಸಿದವರ ವಿಳಾಸಕ್ಕೆ ಉಚಿತವಾಗಿ ಕಳುಹಿಸಲಾಗುವುದು. [119-36]

ವಿಳಾಸ—ಎಸ್. ಯು. ಎನ್. ಕಂಪೆನಿ, ಚೌಕಂಬಾ, ಕಾಶಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ ಕಪ್ಪಾದ ಕೇಶಪಾಶವನ್ನು ಪಡೆದ ನಾರಿಯು ತಾನೇ ಸುಂದರಳಲ್ಲವೇ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡುವ ಉಪಕರಣವಾವುದು?

ಕಾಮಿನಿಯಾ ತ್ರೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತೆ ಎಂಬುದು ಚಿತ್ರದಲ್ಲಿ ಕಾಣಿಸಿರುವಂತೆ ಪರಿಶ್ರಮವನ್ನು ಪಡದ ಭೂಷಣವಾಗಿ ಬಿಡುವುದು.



ಕೇಶಗಳು ಅಷ್ಟು ಅಗತ್ಯದ ಸೊಗಸುಳ್ಳವುಗಳಾಗುತ್ತವೆ. ಈ ತೈಲವನ್ನು ಹಚ್ಚುವುದರಿಂದ ತಲೆ ತಂಪಾಗಿ ತಲೆನೋವು ಮುಂತಾದ ಬಾಧೆಗಳು ಪರಿಹಾರವಾಗುತ್ತವೆ. ತಲೆಯ ಕೂದಲು ಉದುರುವುದು ನಿಂತು ಹೋಗುತ್ತದೆ ; ಅಲ್ಲದೆ ಇದು ವಾಸನೆಯಲ್ಲಿ ಬಹಳ ಸುವಾಸನೆಯುಳ್ಳದ್ದಾಗಿ ಮನೋರಂಜಕವಾದ ಸುಗಂಧವುಳ್ಳದ್ದಾಗಿರುತ್ತದೆ.

ಕೇಶಪಾಶದ ವಿಷಯಗಳನ್ನು ತಿಳಿಯಬೇಕೆಂದು ಅಪೇಕ್ಷಿಸುವವರು ನಮ್ಮ ಕಂಪನಿಯ ಪುಸ್ತಕವನ್ನು ತರಿಸಿಕೊಳ್ಳಬೇಕು. ಈ ಪುಸ್ತಕ ಉಚಿತವಾಗಿ ಕೊಡಲ್ಪಡುವುದು. ಕಾಮಿನಿಯಾ ತೈಲವನ್ನು ಉಪಯೋಗಿಸಿದ ಅನೇಕರ ಸರ್ಟಿಫಿಕೇಟುಗಳು ಪ್ರಕಟವಾಗಿವೆ. ಇದು ಹಲವು ಉತ್ತಮ ಗುಣಗಳನ್ನುಳ್ಳದ್ದೆಂದು ಸರ್ಟಿಫಿಕೇಟು ಕೊಟ್ಟಿರುತ್ತಾರೆ. ಅಂಥಾ ಯೋಗ್ಯತಾಪತ್ರಗಳು ಇತರ ತೈಲಗಳಿಗೆ ಇಲ್ಲ. ಆದ್ದರಿಂದ ಇದರ ಉತ್ತಮತ್ವವು ತೋರಿಬರುತ್ತದೆ.

ಅತ್ತರುಗಳು, ಸುಗಂಧದ ಸೋಪುಗಳು, ಸೌಂದರ್ಯದ ಸಾಧನಗಳು ಮುಂತಾದ ಅನೇಕ ಸಾಮಾನುಗಳು ದೊರೆಯುತ್ತವೆ. ಕಾಮಿನಿಯಾ ತೈಲದ ಕ್ರಯ ಒಂದು ಶೀಸೆಗೆ ರೂ ... ಉಚಿತವಾಗಿ ವಿವರಗಳನ್ನು ಕಳುಹಿಸುತ್ತೇವೆ. ಒಂದು ಸಾರಿ ಉಪಯೋಗಿಸಿದರೆ ಇದರ ಸೊಗಸು ತಿಳಿಯುವುದು. ಕ್ರಯ 2-10-0, ಆ. ವ. 0-7-0 ಬೇರೆ.

ಸೂಚನೆ.—ಅನೇಕ ದುರಭಿಸಂಧಿಯುಳ್ಳವರು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುವಿನ ಹೆಸರಿನಿಂದ ಕಲಬೆರಕೆ ಸರಕುಗಳನ್ನು ಮಾರುತ್ತಾರೆ. "ಕಾಮಿನಿಯಾ ತೈಲ" ವನ್ನು ಕೊಂಡರೆ, "ಇದು ಅದಕ್ಕಿಂತ ಉತ್ತಮ" ವೆಂದು ಅವರು ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭಗಳಲ್ಲಿ ಮೋಸ ಹೋಗದೆ "ಕಾಮಿನಿಯಾ ಆಯಿಲ್" ತಾನೇ ಬೇಕೆಂದು ಕೇಳಿರಿ. ಅವರು ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದ ಕೊಂಡುಕೊಳ್ಳಿರಿ. ನಮ್ಮ ಮೊಹರು ಟ್ರೇಡ್ ಮಾರ್ಕುಗಳನ್ನು ನೋಡಿ ಸರಿಯಾದ ಉತ್ತಮ ವಸ್ತುವನ್ನೇ ಪಡೆಯಿರಿ.

ಅತೀ ಮನೋಹರವಾದ ಸುರಭಿಯು!

ಒಟೋ-ದಿಲ್ ಬಹಾರ್!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಆಹ್ಲಾದಕರವಾದ ಸುವಾಸನೆಯುಳ್ಳದ್ದು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಪುಷ್ಪಗಳಿಂದ ತಯಾರಿಸಲ್ಪಟ್ಟದ್ದು. ಇದರಲ್ಲಿ ಮದಿರೆಯು (ಆಲ್ಕಹೋಲ್) ಸಂಬಂಧವಿಲ್ಲ. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಒಂದು ತೊಟ್ಟನ್ನು ಹಾಕಿಕೊಂಡರೆ, ನಿಮ್ಮ ಸುತ್ತಲು ಸ್ವರ್ಗೀಯ ಸುಗಂಧವು ತುಂಬಿ ತುಳುಕಾಡುವುದು. ಬೇರೆ ಯಾವ ಪರಿಮಳ ದ್ರವ್ಯ ಗಂಧವೂ ಹೀಗೆ ಇರಲಾರದು. ಈ ಒಟೋ-ದಿಲ್ ಬಹಾರ್ ಗಂಧವು ಅದ್ಭುತವೆನ್ನಿಸುವುದು. ಪರೀಕ್ಷೆಗಾಗಿ ಒಂದು ಶೀಸೆಯನ್ನು ತರಿಸಿಕೊಳ್ಳಿರಿ. [34-7]

ಸಣ್ಣ ಶೀಸೆಯ ಬೆಲೆ ರೂ. 0-8-0. ಒಂದು ಡಜನ್ (ಬಾಕ್ಸ್) ಗೆ 0-12-0. ಅರ್ಧ ಡ್ರಾಮಿನ ದೊಡ್ಡ ಶೀಸೆಯ ಬೆಲೆ ರೂ. 2-0-0. ಅಂಚೆ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಸಾಬೂನಿನ ಬಿಲ್ಲೆ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ನಂ. 155, ಜುಮ್ಮಾಮಸೀದ್, ಮಾರ್ಕೆಟ್, ಬಾಂಬೆ

ಏಜಂಟ್, ಶ್ರೀ ... ಸ್ಟೋರ್, ಬೆಂಗಳೂರು

ಇಂಡಿಯಾ ದೇಶದ ವೃತ್ತಾಂತಗಳು.

ಬರ್ಮಾ ಅಧಿಸಕ್ಕೆ ಸೇರಿದ ಮೌಲ್ಮೀನ್ ಪಟ್ಟಣದಲ್ಲಿ ಕಳೆದ ವಾರ ಬೆಂಕಿ ಬಿದ್ದು ಒಂಭತ್ತು ಮನೆಗಳು ಉರಿದು ಹೋದವು. ಆಸ್ತಿ ಎಷ್ಟು ನಷ್ಟವಾಯಿತೆಂಬುದು ತಿಳಿಸಲ್ಪಟ್ಟಿಲ್ಲ.

ಯುದ್ಧಭೂಮಿಯಲ್ಲಿ ಗಾಯಪಟ್ಟವರಿಗೆ ಪಟ್ಟಿಗಳನ್ನು ಕಟ್ಟುವುದಕ್ಕೋಸ್ಕರ ಬೊಂಬಾಯಿನಲ್ಲಿ ಎರಡು ಗುಂಪುಗಳ ಜನರನ್ನು ಚುನಾಯಿಸಿ ಗೊತ್ತು ಮಾಡಿ ಅವರನ್ನು ತರಬೇತು ಮಾಡಿದಾರೆ. ಇವರನ್ನು ಅಷ್ಟರಲ್ಲೇ ಯುದ್ಧಭೂಮಿಗೆ ರವಾನೆ ಮಾಡುವರು.

ಬಂಗಾಳಾ ಪೋಲೀಸಿನವರು ಕಲ್ಕತ್ತಾ ಪಟ್ಟಣದ ಬೇರೆ ಬೇರೆ ಮೊಹಲ್ಲೆಗಳ ಮನೆಗಳನ್ನು ನುಗ್ಗಿ ಶೋಧನೆಮಾಡಿ ಹತ್ತಾರು ಮಂದಿ ವಿದ್ಯಾರ್ಥಿಗಳನ್ನು ಹಿಡಿದು ಆ ಪೈಕಿ ಕೆಲವರನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು, ಉಳಿದವರನ್ನು ಅವರವರ ಸ್ಥಳಗಳಿಗೆ ರವಾನೆ ಮಾಡಿಬಿಟ್ಟರು.

ದೆಹಲಿ ನಗರದಲ್ಲಿ ಹೊಸದಾಗಿ ರಾಜಧಾನಿಯನ್ನು ಕಟ್ಟುತ್ತಿದ್ದಾರಷ್ಟೆ. ಅದರ ಪೂರ್ವಭಾಗದಲ್ಲಿ 1,100 ಎಕರೆ ಜಮೀನನ್ನೂ, ಪಶ್ಚಿಮದಲ್ಲಿ 900 ಎಕರೆ ಜಮೀನನ್ನು ಖಾಲಿಯಾಗಿ ಬಿಟ್ಟು ಬೆಳೆಯಿಸಬೇಕೆಂದು ಸರ್ಕಾರದವರು ತೀರ್ಮಾನ ಮಾಡಿ, ಅದಕ್ಕಾಗಿ ಮೂರು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಮಿಸ್ ತಾರಾ ಬಾಯಿ ಎಂಬ ಮರಾಟಿ ಸ್ತ್ರೀಯು ಈಗ ತಿರುವಾಂಕೂರು (ತ್ರಿವೇಂಡ್ರಮ) ದಲ್ಲಿ ತನ್ನ ಕಾಯ ಶಕ್ತಿಯನ್ನು ಪ್ರದರ್ಶನಮಾಡುತ್ತಿದ್ದಾಳೆ. ಅವಳು ಸಾಮರ್ಥ್ಯವುಳ್ಳ ಕಾರ್ಯಗಳನ್ನು ನೋಡಿ ಮಹಾರಾಜರವರು ಮೆಚ್ಚಿ ಅವಳಿಗೆ ಅಮೂಲ್ಯವಾದ ಎರಡು ಭಂಗಾರದ ಬಳೆಗಳನ್ನು ಒಂದು ನೂರು ರೂಪಾಯಿಯನ್ನೂ ಇನಾಮು ಕೊಟ್ಟರು.

ನೀಲಗಿರಿ ಬೆಟ್ಟದ ಮೇಲೆ ಪೋಲೀಸ್ ಸೂಪರಿಂಟೆಂಡೆಂಟರವರ ಆಫೀಸ್ ಕಛೇರಿಯಲ್ಲಿ ಕೆಲವು ಸರಕುಗಳು ಕಳುವಾದವು. ಪತ್ತೇ ಹಚ್ಚಿದ ಮೇಲೆ ಇಬ್ಬರು ಪೋಲೀಸಿನವರೇ ಸೇರಿ ಕಳುವು ಮಾಡಿದರೆಂದು ಗೊತ್ತಾಯಿತು. ಮ್ಯಾಜಿಸ್ಟ್ರೇಟರು ಅವರಿಬ್ಬರಿಗೂ ತಲಾ ಆರು ತಿಂಗಳಂತೆ ಕಠಿಣ ಸಜೆಯನ್ನು, ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು.

ಪುದುಕೋಟೆ ಸಂಸ್ಥಾನವು ಮದರಾಸ್ ಗವರ್ನಮೆಂಟಿಗೆ ಸಾಲಿಯಾನಾ ಲಕ್ಷ ರೂಪಾಯಿ ಪೊಗದಿಯನ್ನು ಕೊಡುತ್ತಿದೆ. ಅಲ್ಲಿನ ರಾಜರು ಗವರ್ನಮೆಂಟಿನವರ ಸಹಿತ ಕಳೆದ ವಾರ ಸಿಲೋನ್ (ಲಂಕಾ) ದ್ವೀಪಕ್ಕೆ ಹೋಗಿ ಅಲ್ಲಿ ವಿಜಯಸಿಂಹ ಎಂಬ ದೊಡ್ಡ ಮನುಷ್ಯರ ದಿವ್ಯವಾದ ಭವನದಲ್ಲಿ ಇಳಿದುಕೊಂಡು ಅವರ ಆತಿಥ್ಯವನ್ನು ಸ್ವೀಕರಿಸುತ್ತಿದಾರೆ.

ಕೂಚ್ ಬೇಹಾರ್ ಮಹಾರಾಜರವರು ಪತ್ನಿ ಮತ್ತು ಸಹೋದರರೊಡನೆ ಬೇಟೆಗೆ ಹೋಗಿ ಸಿಕಾರು ಮಾಡಿದರು. ಅವರುಗಳ ಗುಂಡಿನಿಂದ ನಾಲ್ಕು ಚಿರತೆ ಹುಲಿಗಳು, ಆರು ಕಾಡು ಕೋಣಗಳೂ, ಎರಡು ಘೇಂಡಾ ಮೃಗಗಳೂ, ಒಂದು ಕರಡಿಯೂ ಕೊಲ್ಲಲ್ಪಟ್ಟವು. ಮಹಾರಾಣಿಯವರು ಆ ಪೈಕಿ ಒಂದು ಹುಲಿಯನ್ನು, ಒಂದು ಚಿರತೆಯನ್ನೂ ಕೊಂದು ಹಾಕಿದರು.

ಕಳೆದ ಫೆಬ್ರವರಿ ತಾ 27 ರಲ್ಲಿ ಮದರಾಸ್ ಎಂಬ ಆಸ್ಪತ್ರೆ ಹಡಗು ಯುದ್ಧಭೂಮಿಯಿಂದ ಗಾಯಪಟ್ಟ 436 ಮಂದಿ ಯುದ್ಧ ಭಟರನ್ನು ಬೊಂಬಾಯಿಗೆ ತಂದುಬಿಟ್ಟು ಮತ್ತೆ ತಾ. 6 ರಲ್ಲಿ ಬಾಸ್ರಾ ಪ್ರದೇಶಕ್ಕೆ ಪ್ರಯಾಣ ಮಾಡಿತು. ಅವರಲ್ಲಿ ದೇಶೀಯ ಸೈನಿಕರು 416 ಮಂದಿಯೂ, ಹುದ್ದೆದಾರರು ಉಳಿದವರು ಬ್ರಿಟಿಷ್ ಸೈನಿಕರಾಗಿಯೂ ಇದಾರೆ.

ಮಧ್ಯ ಹಿಂದುಸ್ಥಾನಕ್ಕೆ ಸೇರಿದ ರಾಜಗ್ಯಢವೆಂಬ ಸಣ್ಣ ದೇಶೀಯ ಸಂಸ್ಥಾನಕ್ಕೆ ರಾಜಕುಮಾರ ಧೀರೇಂದ್ರ ಸಿಂಗ್ ರವರು ಹಕ್ಕುದಾರರೆಂದು ಇಂಡಿಯಾ ಗವರ್ನಮೆಂಟಿನವರು ಒಪ್ಪಿ ಅವರ ಪಟ್ಟಾಭಿಷೇಕವನ್ನು ಸ್ಯಾಂಕ್ಷನ್ ಮಾಡಿದರು. ಸೆಂಟ್ರಲ್ ಇಂಡಿಯಾ ಏಜಂಟರವರು ಹುಕುಂ ಅನುಸರಿಸಿ ಆ ರಾಜಕುಮಾರನಿಗೆ ಪಟ್ಟಾಭಿಷೇಕವನ್ನು ಮಾಡಿ ಬಂದರು.

ಅಹಮದಾಬಾದ್ ಜಿಲ್ಲೆಗೆ ಸೇರಿದ ಸಂಪರಿಯಾನಾ ಮೊದಲಾದ ಕೆಲವು ಗ್ರಾಮಗಳಲ್ಲಿ ಜನಗಳು ತುಂಟರಾಗಿ ಕಂಡುಬಂದದ್ದರಿಂದ ಬೊಂಬಾಯಿ ಗವರ್ನಮೆಂಟಿನವರು 2,000 ರೂಪಾಯಿ ಕಲಬುಳ್ಳಷ್ಟು ಪೋಲೀಸ್ ಸಿಬ್ಬಂದಿ ಯನ್ನು ಹೆಚ್ಚುವರಿಯಾಗಿ ಆ ಗ್ರಾಮಗಳಿಗೆ ನೇಮಕಮಾಡಿ ಒಂದು ವರುಷ ಕಾಲ ಅವರ ಸೇವೆ ಕೊಡತಕ್ಕದ್ದೆಂದು ಹುಕುಂ ಕೊಟ್ಟಿದಾರೆ.

ಬರ್ಮಾ ಅಧಿಸಕ್ಕೆ ಸೇರಿದ ಮಾಂಡಲೇ ನಗರದಲ್ಲಿ ಹದಿನೇಳು ಮಂದಿ ಜನಗಳು ಕಳೆದ 1911 ನೇ ಇಸವಿ ರಾಜ್ಯಾಯಿತು ಬರ್ಮಾದಲ್ಲೂ, ಇತರ ಪ್ರಜೆಗಳಿಗೆ ಚೇತಾವಣೆ ಮಾಡಿ ಅವರನ್ನು ಗವರ್ನಮೆಂಟಿನವರ ಮೇಲೆ ಬೀಳುವಂತೆ ದುರ್ಬೋಧನೆ ಮಾಡುತ್ತಿದ್ದರೆಂದು ಅವರನ್ನು ಹಿಡಿದು ವಿಚಾರಣೆ ಮಾಡಿದಾರೆ. ಈ ಮೊಕದ್ದಮೆಯು ದಯಾಶಕ್ತಿಯು ಕಳೆದ ವಾರ ಆರಂಭವಾಯಿತು.

ಬರ್ಮಾ ಅಧಿಸಕ್ಕವಲ್ಲಿ ಹುಚ್ಚು ನಾಯಿ ನಾ ಕಚ್ಚಿದವರಿಗೆ ಚಿಕಿತ್ಸೆ ಮಾಡತಕ್ಕ ಕಳೆದ ಜನತ್ತು ತಿಂಗಳಿಂದ ಒಂದು ಹೊಸ ಆಸ್ಪತ್ರೆಯನ್ನಿಟ್ಟಿದ್ದಾರೆ. ಕಳೆದ 8 ತಿಂಗಳಲ್ಲಿ 209 ಮಂದಿ ರೋಗಿಗಳು ಅಲ್ಲಿಗೆ ಚಿಕಿತ್ಸೆಗೆ ಹೋದರು. ರಂಗೂನ್ ಪಟ್ಟಣದವರೇ ಆ ಪೈಕಿ 88 ಮಂದಿ ನಾಯಿ ಕಡಿತಕ್ಕೆ ಚಿಕಿತ್ಸೆ ಮಾಡಿಸಿಕೊಂಡರು. ಒಟ್ಟು 102 ಜನರು ನಾಯಿ ಕಡಿದವರು ಅವರಲ್ಲಿ 63 ಮಂದಿಗೆ ವಾಸಿಯಾಗುತ್ತಿದೆ ಎಂದೂ ತಿಳಿಸಲ್ಪಟ್ಟಿವೆ.

ಕಲ್ಕತ್ತಾ ಪಟ್ಟಣದ ಪೋಲೀಸ್ ಕಮೀಷನರ್‌ರವರು ಅಲ್ಲಿನ ಪೋಲೀಸ್ ನೌಕರರನ್ನು ಕರಸಿಕೊಂಡು ಮುಸೊಪೊಟೇಮಿಯಾಗೆ ಪೋಲೀಸ್ ನೌಕರಿ ಮಾಡುವುದಕ್ಕೆ ಆ ಪೈಕಿ ಹೋಗತಕ್ಕವರಿಗೆ ಅವರ ಈಗಿನ ತಲಬಿಗಿಂತ ಒಂದೂವರೆ ಪಾಲು ಕೊಡಲ್ಪಡುವುದೆಂದು ಮುಂತಾಗಿ ತಿಳಿಸಿ ಕೇಳಿದಾಗ ಆ ಪೈಕಿ ಯಾರೂ ಹೋಗುವುದಾಗಿ ತತ್‌ಕ್ಷಣ ಒಪ್ಪಿಕೊಂಡರು ; ಇನ್ನುಳಿದವರು ಯೋಚಿಸಿ ಬಂದು ಜವಾಬು ಹೇಳುತ್ತೇವೆಂದು ಸ್ವಲ್ಪ ಪುರಸತ್ತು ಕೇಳಿದಾರೆ.

ಕುಂಭಕೋಣ ಎಂಬ ಪಟ್ಟಣದಲ್ಲಿ ಟಿ. ಆರ್. ರಾಮಸ್ವಾಮಿ ಅಯ್ಯರ್ ಎಂಬುವರು ತನ್ನ ಶಕ್ತಿಗಾರನಿಗೆ ಸಲ್ಲಬೇಕಾದ ಹಣವನ್ನು ಕೋರ್ಟಿನಿಂದ ತೆಗೆದುಕೊಂಡು ಮರ್ಕಸಿಘನು ಎಷ್ಟು ಸಲ ತಗಾದೆ ಮಾಡಿದರೂ ಆ ಹಣ ಕೋರ್ಟಿನಿಂದ ಶಕ್ತಿಗಾರನಿಗಾಗಲಿ ಕೊಡದೆ ಕಾಲಹರಣಮಾಡಿದ್ದ ಕಾರಣ ಮೇಲೆ ಮರ್ಕಸಿಘನು ಹೈಕೋರ್ಟಿಗೆ ಬರೆದು ತಿಳಿಸಿದರು. ಜಡ್ಜಿಗಳು ಆ ಲಾಯರನ್ನು ಎರಡು ವರುಷ ಕಾಲ ವಕೀಲಸನ್ನದು ಇಲ್ಲದಂತೆ ಹೀಲ್ಡಿಗೆ ಗುರಿಪಡಿಸಿದಾರೆ.

ಪೂರ್ವ ಬಂಗಾಳಕ್ಕೆ ಸೇರಿದ ಢಕ್ಕಾ ನಗರದಲ್ಲಿ ಪೋಲೀಸಿನವರು ಸಹಾ ಬುದಾವಿನ ಪತ್ರಿಕೆಯ ಛಾಪಖಾನೆಯನ್ನು ಶೋಧನೆ ಮಾಡಿದಾಗ ಮದ್ದುಗುಂಡುಗಳೆಂಬ ಪಿಸ್ತೂಲುಗಳೂ, 400 ತೋಟಾಗಳೂ ಸಿಕ್ಕಿದವು. ಶೋಧನೆ ಮಾಡಿ ಅವನ ಕಾಂತ ದೇವ ಮತ್ತು ಅಶ್ವಿನೀ ಕುಮಾರ ದಾಸ ಎಂಬ ಬಂಗಾಳಿಯವರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ನಡೆಸಿದರು. ಆರ್ಮ್ಸ ಆಕ್ಟ್ ಪ್ರಕಾರ ಅವರಿಬ್ಬರಿಗೂ ಮ್ಯಾಜಿಸ್ಟ್ರೇಟರು ಆರು ತಿಂಗಳ ಕಠಿಣ ಸಜಾ ವಿಧಿಸಿದರು.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾಟಿಗೆ ನಾಲ್ಕು ರೂಪಾಯಿಯ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-48]

ಅಮೃತಾಂಜನ ಡಿಪೋ,

109, ಫ್ರೇರ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಸೂ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್ಸ್, ಗೋವಾ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಔಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮನೆಗೆ ಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮೂರು ಮಾತಿಗೂ ವೈದ್ಯರ ಸಹಾಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ಕಾರ್ಜು ವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಲವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ, ನಿಜಸ್ವಲಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆರಿಸಿ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಲ್. ಎಂ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಎ. ಎಲ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—“ ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಶಕ್ತಿಹೀನತೆ, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಲವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ.” (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—“ ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ.”

[189-28] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅರ್ಧ ಕ್ರಯದ ಮಾರಾಟ!

ವಾಚ್ ಮತ್ತು ತಬಲ ಬಿಟ್ಟಿ!

ಒಂದು ತಿಂಗಳ ತನಕ ಮಾತ್ರ.



ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ ಕಣ್ಣಿನಲ್ಲಿ ಊತಗಳು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ಅಪರೂಪವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು; ತಲೆ ತಿರುಗುವಿಕೆ; ಬೆನ್ನುನೋವು; ಕೀಲುನೋವು; ಮರವು; ನಿದ್ರೆ; ಇವೇ ಮೊದಲಾಗುವವು. ಅಲಕ್ಷ್ಯಮಾಡಿದರೆ ಮೂತ್ರಪ್ರಮೇಹ, ವಾಯು, ನೀರುಬಾವು, ಉರಿಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸಂಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-30]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವುವು



ಶೀ. ೨—೧—೦; ಅಥವಾ ೬ ಬಾಟ್ಲುಗಳಿಗೆ ರೂ. ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಫೋಸ್ಟರ್ ಕಂ. ಬಾಕ್ಸ್ ೨೧. ಬೊಂಬಾಯಿ ಇವರಲ್ಲಿ ದೊರೆಯುವುದು

"ಹನುಮಾರ್ಕ್" ಬೋರಾಕ್ಸ್ ಸಾಬೂನು.

ಹನುಮಾರ್ಕ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ಹುಣ್ಣು, ಇಸ್ಬು, ತುರಿ ಮೊದಲಾದ ವ್ಯಾಧಿಗಳು ಹನುಮಾರ್ಕ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು, ಶರೀರಕ್ಕೆ ಸುವಾಸನೆ ಮತ್ತು ಕಳೆಯನ್ನೂ ಕೊಡುವುದರಲ್ಲಿ ಹನುಮಾರ್ಕ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾರ್ಕ್ ಸಾಬೂನಿನಿಂದ ಬೆಳಿಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡಿಗಿಯರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ಕ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಷಹರುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾರ್ಕ್ ಗುರ್ತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಶ್ರೀ. ಕ:—ಎಲ್ಲರೂ ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆಯಬೇಕು.

ಬೆಂಗಳೂರು ಸಿಟಿ ಮಿ|| ಎಚ್. ದಾಸಪ್ಪನವರಲ್ಲಿ ಬಿಕರಿಗೆ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-23] ಉಪಸಿಂಗ್ ಬಜಾರ್ ರೋಡ್, ಮದರಾಸು.

ತರಿಸಿ ನೋಡಿರಿ.

1 ಸುಧಾಕರ ಕಸ್ತೂರಿ ಮಾತ್ರೆಗಳು—ಜ್ವರ, ಅಗ್ನಿಮಾಂದ್ಯ, ಕೆಮ್ಮು, ನೆಗಡಿ, ಅಶಕ್ತಿ, ದೇಶ ಕಾಲ ವ್ಯತ್ಯಾಸಗಳಿಂದುಂಟಾಗುವ ವಿಕಾರಗಳು, ಮಕ್ಕಳ ಎಳವು, ಮಲಬದ್ಧ, ಇವುಗಳನ್ನು ಗುಣಪಡಿಸುತ್ತದೆ. ಕುಪ್ಪಿ 1 ಕ್ಕೆ 4 ಆಣೆ ಮಾತ್ರ. 6 ಸೀಸೆಗಳಿಗೆ ರೂ. 1-4-0. ಟಪಾಲು ಹಾಸಲು ಪ್ರತ್ಯೇಕ.

2 ಕಮಲಕೇಸರ ಘೃತ—ತಲೆನೋವೇ ಮೊದಲಾದ ಎಲ್ಲಾ ತರದ ನೋವುಗಳನ್ನೂ ಗುಣಪಡಿಸುವುದು. ಕುಪ್ಪಿ 1 ಕ್ಕೆ 8 ಆಣೆ ಮಾತ್ರ.

3 ವಜ್ರದಂತಚೂರ್ಣ—ಇದನ್ನು ಪ್ರತಿ ದಿನವೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವುದರಿಂದ ಎಲ್ಲಾ ವಿಧವಾದ ದಂತ ರೋಗಗಳೂ ವಿಶೇಷವಾಗಿ ಹೋಗಿ ಹಲ್ಲುಗಳು ಮುತ್ತುಗಳಂತೆ ಥಳಥಳಿಸುವವು. ಟಿನ್ 1 ಕ್ಕೆ 2 ಆಣೆ ಮಾತ್ರ.

[71-2] ನಮ್ಮ ವಿಳಾಸ:—ಬಿ. ಎಸ್. ಕೌಶಿಕ,
240, ದಿವಾನರ ರೋಡು, ಮೈಸೂರು.

ದರ್ಬಾರ್ ಸಾಬೂನು.

ಅಪಾಯವಿಲ್ಲದ ರೋಮಸಂಹಾರಿ.

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು. ಉರಿ, ಸೆಕೆ, ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದವರಿಗೆ ಗೊತ್ತಾಗುವದು. ಮರೆಯಬೇಡಿ. ಏಜಂಟರು ಬೇಕು. [63-3]

೩ ಸಾಬೂನುಗಳಿರುವ ಪೆಟ್ಟಿಗೆ ೧ ಕ್ಕೆ ... ರೂ. ೦-೧೪-೦
೨ ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ. ೧-೧೦-೦
ಅಂಚೆ ಹಾಸಲು ೪ ಆ. ವರ್ತಕರಿಗೆ ಅನುಕೂಲವಾಗಿ ಕೊಡುತ್ತೇವೆ.

V. A. S. PANI, ವಿಳಾಸ—ವಿ. ಎ. ಎಸ್. ಪಾಣಿ,
Erulappan St., Madras. ನಂ. ೩, ಇರುಳಪ್ಪನ ಬೀದಿ, ಮದರಾಸು.

ಜಾಮಿನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.
ಮತ್ತು
ಕೂದಲಿಗೆ ರೇಷ್ಮೆಯಂಥಾ ಹೊಳಪೂ ನುಣುಪೂ ಬರುತ್ತೆ.

ನರೆಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂದು ರುಜುವಾತುಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ಪೆಟ್ಟಿಗೆ, ಬ್ರಷ್ ಮತ್ತು ಬಟ್ಲು ಸಹಿತ ಕ್ರಯ ರೂ. 1 0-0; ಪೋಸ್ಟೇಜ್ ಬೇರೆ.

ಹೊಸ ನಮೂನೆ ರೋಮಹಾರಿ.

ಇದು ಯಾವ ಶರೀರ ಭಾಗದಲ್ಲಾದರೂ ಬೆಳೆಯುವ ಕೂದಲನ್ನು ಅಚ್ಚುಕಟ್ಟಾಗಿ ತೆಗೆಯುತ್ತೆ. ನೋಯುವುದಿಲ್ಲ; ಚರ್ಮಕ್ಕೆ ಕೆಡುಕಾಗದು. [282-16]

ಪೆಟ್ಟಿಗೆ ಒಂದಕ್ಕೆ ರೂ. 1 0 0; ಪೋಸ್ಟೇಜ್ ಬೇರೆ.

ದಕ್ಷಿಣ ಹಿಂದುಸ್ತಾನಕ್ಕೆಲ್ಲಾ ಏಜೆಂಟರು:—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
177, ಜನರಲ್ ಬಜಾರ್ ರೋಡ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

3 3—1916 ರಿಂದ 10 3—1916 ರ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಹಿಡಿದದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	4	3	0	0
ಮೈಸೂರು ,,	3	2	0	0
ಬೆಂಗಳೂರು ಡಿಸ್ಟ್ರಿಕ್ಟು	8	9	0	0
ಮೈಸೂರು ,,	17	17	0	0
ಕೋಲಾರ್ ,,	1	2	0	0
ಕೋಲಾರ್ ಚಿನ್ನದ ಗಣಿಗಳು	8	10	0	0
ತುಂಕೂರು ಡಿಸ್ಟ್ರಿಕ್ಟು	9	5	0	0
ಹಾಸನ ,,	2	0	0	0
ಚಿತ್ರದುರ್ಗ ,,	21	9	0	0
ಕಡೂರ್ ,,	13	9	0	0
ಶಿವಮೊಗ್ಗಾ ,,	14	12	0	0
ಒಟ್ಟು......	100	78	0	0

ಶಾಲಿವಾಹನ ಶಕ ವರುಷಂಗಳು 1838 ನೇ ರಾಕ್ಷಸ ಸಂವತ್ಸರೇ ಉತ್ತರಾಯಣೇ ಶಿಶಿರಋತೌ ಫಾಲ್ಗುಣ ಬಹುಳ ಪಂಚಮಿ ಶುಕ್ರವಾರದಿಂದ ಫಾಲ್ಗುಣ ಬಹುಳ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1916 ನೇ ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಸೂರ್ಯೋದಯಾದ ವಿನಾಡಿ (?)
24	ಶುಕ್ರ *	ಪಂಚಮಿ	24-38	ಅನೂರಾಧ	48-57	12
25	ಶನಿ †	ಷಷ್ಠಿ	19-6	ಜ್ಯೇಷ್ಠ	45-0	13
26	ಭಾನು ‡	ಸಪ್ತಮಿ	13-12	ಮೂಲ	40-46	14
27	ಸೋಮ	ಅಷ್ಟಮಿ	7-10	ಪೂರ್ವಾಷಾಢ	36-33	15
28	ಮಂಗಳ	ನವಮಿ	1-14	ಉತ್ತರ	54-4	16
29	ಬುಧ §	ಏಕಾದಶಿ	49-57	ಶ್ರವಣ	28-51	17
30	ಗುರು ;;	ದ್ವಾದಶಿ	45-15	ಧನಿಷ್ಠ	25-44	18

* ಸರ್ವತ್ರ ಪಂಚಮೀ ತಿಥಿ. † ಸರ್ವತ್ರ ತಿಥಿದ್ವಯಂ, ಚಾಮುಂಡಿ ಬೆಟ್ಟದಲ್ಲಿ ಮಹಾಬಲೇಶ್ವರ ರಥ. ‡ ಸರ್ವತ್ರ ಅಷ್ಟಮೀ ತಿಥಿ, ಮಳೆ ನಕ್ಷತ್ರ—ಉತ್ತರಾಭಾದ್ರ 4 ನೇ ಪಾದ. § ಸ್ಮಾರ್ತ ಏಕಾದಶಿ, ಹಿಮವದ್ಗೋಪಾಲಸ್ವಾಮಿ ರಥ. ;; ವೈಷ್ಣವ ಏಕಾದಶಿ, ಹರಿವಾಸರ, ಮಳೆ ನಕ್ಷತ್ರ—ರೇವತಿ 1 ನೇ ಪಾದ.

Useful in Peace and War FIRST AID IN ACCIDENTS, BY DR. U. RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿಯಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ನಡಿಸಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು. ರಾಮರಾವ್ ಇವರಿಂದ ರಚಿತವಾಗಿ ಮದರಾಸ್ ಕ್ರಿಶ್ಚಿಯನ್ ಕಾಲೇಜು ಪಂಡಿತರಾದ ದೇವಶಿಖಾಮಣಿ ಅಳಸಿಂಗರಾಚಾರ್ಯರಿಂದ ಸುಲಭವಾದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿದು.

DEDICATED TO H. H. THE MAHARAJA OF MYSORE.

ಅಪಾಯಕ್ಕೆ ಗುರಿಯಾದ ಮನುಷ್ಯನ ಅದೃಷ್ಟವು, ಮೊದಲು ಅವನು ಯಾರ ಕೈಗೆ ಸಿಕ್ಕಬೇಕಾಗುವನೋ, ಅವರ ಕಾರ್ಯಗಳಿಗೆ ತಕ್ಕಂತಿರುವುದು. ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ಪಕ್ಷದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪುಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ಮೊದಲು ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆಯಾ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡಿಸಿದ್ದರೆ, ನಿಸ್ಸಂದೇಹವಾಗಿ ಬದುಕಬಹುದಾಗಿದ್ದ ಪ್ರಾಣವೂ ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು. ಈ ವಿಧವಾಗಿ ಪ್ರತಿ ವರ್ಷವೂ ಎಷ್ಟೋ ಬೆಲೆಯುಳ್ಳ ಜೀವಗಳು ಮರಣಹೊಂದುತ್ತಿರುವುವು.

ಒಬ್ಬ ಮನುಷ್ಯನಿಗೆ ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯಾಗಲಿ, ಇಲ್ಲವೇ ಯಾವುದಾದರೂ ಅಪಾಯವಾಗಲಿ ಸಂಭವಿಸಿದಾಗ, ಸಮರ್ಥರಾದ ವೈದ್ಯರ ಸಹಾಯವು ಬಂದೊದಗುವುದರೊಳಗಾಗಿ, ತತ್ಕಾಲಕ್ಕೆ ತಮ್ಮ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿಯೇ ಲಭಿಸಬೇಕು.

"ಅಲ್ಪಜ್ಞಾನವು ಅಪಾಯಹೇತು" ಎಂಬ ನಾಣ್ಣುಡಿಯು ಲೋಕದಲ್ಲಿ ವಾಡಿಕೆಯಿದ್ದರೂ, ಇತರ ವಿಷಯಗಳಲ್ಲಿ ಇದಕ್ಕೆ ಪ್ರಾಧಾನ್ಯವನ್ನು ಕೊಡಬಹುದೇ ಹೊರತು, ಪ್ರಥಮ ಚಿಕಿತ್ಸೆಯ ವಿಷಯದಲ್ಲಿ ಆ ನಿಯಮವಿಲ್ಲ. ಇದರಲ್ಲಿ ಅಲ್ಪಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ತೀವ್ರವಾದ ವೇದನೆಯನ್ನು ನೀಗಿಸಬಹುದು! ಎಷ್ಟೋ ಪ್ರಾಣಗಳನ್ನುಳಿಸಬಹುದು! ಬಹಳವಾಗಿ ರಕ್ತಸ್ರಾವಕ್ಕೆ ಕಾರಣವಾದ ಮಹಾ ವಿಪತ್ತುಗಳಲ್ಲಿಯೂ ಬೆಂಕಿ ತಗಲುವುದು, ಮೂಳೆ ಮುರಿಯುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ, ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಗಳೂ ಕೂಡ, ಸಮರ್ಥರಾದ ವೈದ್ಯರು ಬರುವಷ್ಟರೊಳಗಾಗಿ ಏನು ಮಾಡಬೇಕೆಂಬುದನ್ನು ತಿಳಿಯದೆ ಹೋಗುವುದರಿಂದ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸಾಕ್ರಮದಲ್ಲಿ ಅತ್ಯಲ್ಪ ಜ್ಞಾನವನ್ನು ಪಡೆದು, ಅದನ್ನುಪಯೋಗಿಸುವುದರಿಂದಲೇ ಸಾಯುವ ಸ್ಥಿತಿಯಲ್ಲಿದ್ದ ಸಾವಿರಾರು ಜೀವಗಳು ಬದುಕಿಕೊಂಡಿರುವುವು. [61-4]

ಸಾಮಾನ್ಯವಾಗಿ ಬೇರೊಬ್ಬರಿಗೆ ಅಪಾಯವುಂಟಾದ ಸಂದರ್ಭವನ್ನು ನೋಡಿದಾಗ, ಅವರಿಗೆ ಸಹಾಯಮಾಡಬೇಕೆಂಬ ಬುದ್ಧಿಯು ನಮ್ಮೆಲ್ಲರಿಗೂ ಹುಟ್ಟುವುದು ಸಹಜವು. ಆದರೆ ಯಾವ ಸಂದರ್ಭಗಳಲ್ಲಿ ಹೇಗೆ ಮಾಡಬೇಕೆಂದು ತಿಳಿಯದ ಅನೇಕ ಜನರು ಈ ವಿಷಯದಲ್ಲಿ ಪ್ರವರ್ತಿಸುವುದಕ್ಕೆ ಹೆದರುವರು. ತಾವು ಕೈಯಿಡುವುದರಿಂದ ಮೊದಲಿದ್ದಕ್ಕಿಂತಲೂ ಹೆಚ್ಚಾದ ಅಪಾಯಕ್ಕೆ ಕಾರಣವಾಗಬಹುದೆಂಬ ಭಯದಿಂದ ಕೆಲವರು ತಟಸ್ಥರಾಗುವರು.

ಇದಕ್ಕಾಗಿ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೈಕೂಸುಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ ಅಗ್ನಿಗಂಡ, ನರಗಳು ಕದಲುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಸೌಕರ್ಯಗಳನ್ನು ಕಲ್ಪಿಸುವುದು, ಇನ್ನೂ ಇದರಂತೆಯೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳೊಡನೆ ಇಷ್ಟು ವಿಷಯಗಳಿದ್ದರೂ, ಸರ್ವಸಾಮಾನ್ಯವಾಗಿ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆಮಾಡಿರುವೆವು.

ಪುಸ್ತಕದ ಬೆಲೆ 0—8—0, ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣಾ ಬ್ರದರ್ಸ್, 323, ತಂಬೂಚೆಟ್ಟಿ ಬೀದಿ, ಮದರಾಸು. ಪೋಸ್ಟು ಬಾಕ್ಸ್ 166.

Printed and Published by the Rev. H. Gulliford, Proprietor and Manager, Wesleyan Mission Press, Mysore. 23/3/1916.

REGISTERED
M. 90

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸರ್ ೧೯೧೭ ನೇ ಇಸವಿ ಮಾರ್ಚಿ ತಾರೀಖು ೨೨ ನೇ ಗುರುವಾರ. ಸಂಚಿಕೆ ೪೪

ಹೊಸ ವರುಷದ ಯುಗಾದಿ ಬಹುಮಾನ

ಈ ಪತ್ರಿಕೆಯ ಚೆಂದಾದಾರರುಗಳಿಗೂ ಸ್ಕೂಲ್ ಮಾಸ್ಟರ್‌ಗಳಿಗೂ ಸೂಚನೆ.

ಈ ಕೆಳಗೆ ಬರೆದಿರುವ ಪೆನ್‌ಗಳ ಪೈಕಿ ಒಂದೇ ಸಾರಿ 6 ಪೆನ್ ತರಿಸಿಕೊಳ್ಳುವವರಿಗೆ ಒಂದು ಪೆನ್ ಇನಾಂ. ಪೋಸ್ಟೇಜು ಅಲಾಹಿದ.
ಒಂದೇ ಸಾರಿ 12 ಪೆನ್ ತರಿಸಿಕೊಳ್ಳುವವರಿಗೆ 2 ಪೆನ್ ಇನಾಂ ಕೊಡುವುದಲ್ಲದೆ ಪ್ಯಾಕಿಂಗ್ ಪೋಸ್ಟೇಜು ಸಹ ಮಾಫೀ ಮಾಡಲಾಗುತ್ತೆ.
ಫೌಂಟೆನ್ ಪೆನ್‌ಗಳು ಕೆಲವು ಗ್ರೋಸ್ ಮಾತ್ರ ಉಳಿದಿರುವುದರಿಂದ ಜಾಗ್ರತೆ ಆರ್ಡರ್ ಕೊಟ್ಟು ತರಿಸಿಕೊಳ್ಳಿ.
ಶಾಯಿ ತುಂಬಿ ಬರೆಯತಕ್ಕ ಲೇಖಣಿಗಳು.



ಯೂರೋಪಿನಲ್ಲಿ ನಡೆಯುವ ಘೋರವಾದ ಯುದ್ಧದದೆಸೆಯಿಂದ ಸೀಮೆಯಿಂದ ಬರತಕ್ಕ ಪದಾರ್ಥಗಳು ಸಲೀಸು ಬಾರದೆ ಇರುವುದರಿಂದ ಇತರೇ ಅಂಗಡಿಯವರು ನಮ್ಮಲ್ಲಿರುವ ಈ ಪೆನ್‌ಗಳ ಬೆಲೆಯನ್ನು ರೂಪಾಯಿ 1 ಕ್ಕೆ 0-4-0 ರಂತೆಯು ಜಾಸ್ತಿ ಇಟ್ಟು ಮಾರುತ್ತಿದ್ದಾಗ್ಯೂ ನಮ್ಮಲ್ಲಿ ಸೀಮೆಯ ಪದಾರ್ಥಗಳು ಜಾಸ್ತಿಯಾಗಿ ಸ್ಟಾಕಿರುವುದರಿಂದ ನಮಗೆ ಹಿಂದಿನ ಖರೀದಿಯಂತೆಯೇ ರವಾನಿಸುತ್ತೇವೆ ನಮ್ಮಲ್ಲಿರುವ ಸ್ಟಾಕ್ ಮುಗಿಯುವ ತನಕ ಈ ಖರೀದಿಯಂತೆಯೇ ರವಾನಿಸುತ್ತೇವೆಂದು ಮುಂದಾಗಿ ಹೇಳಿರುವೆವು.
ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು

1 ನೇ ನಂಬರ್ ಫೌಂಟೆನ್ ಪೆನ್ 1 ಕ್ಕೆ	ಕ್ರಯ ರೂ. 0– 6–0
2 ನೇ ನಂಬರ್ ಫೌಂಟೆನ್ ಪೆನ್ 1 ಕ್ಕೆ	ಕ್ರಯ ,, 0– 8–0
3 ನೇ ನಂಬರ್ ಫೌಂಟೆನ್ ಪೆನ್ 1 ಕ್ಕೆ	ಕ್ರಯ ,, 0–12–0
4 ನೇ ನಂಬರ್ ಫೌಂಟೆನ್ ಪೆನ್ 1 ಕ್ಕೆ	ಕ್ರಯ ,, 1– 0–0
5 ನೇ ನಂಬರ್ ಫೌಂಟೆನ್ ಪೆನ್ 1 ಕ್ಕೆ	ಕ್ರಯ ,, 1– 8–0

ಪ್ರತಿಯೊಂದು ಪೆನ್ನಿನ ಸಂಗಡಲೂ ಶಾಯಿ ತುಂಬುವ ವಿಧಾನ ಪ್ರಿಂಟಾಗಿರತಕ್ಕ ಚೀಟಿ 1 ನ್ನೂ, ಪೆನ್‌ಗಳಿಗೆ ಶಾಯಿ ತುಂಬುವ ಗಾಜಿನ ಕೊಳವೆಯನ್ನೂ, ಪೆನ್‌ಗಳನ್ನಿಡತಕ್ಕ ಪೆಟ್ಟಿ 1 ನ್ನೂ ಸಹಾ ಫ್ರೀಯಾಗಿ ರವಾನಿಸಲಾಗುತ್ತೆ. [52-2]

ತಾಖೀತು :—ಮೇಲ್ಕಂಡ ಪೆನ್‌ಗಳಿಗೆ ಒಂದರಿಂದ 6 ರ ವರಿಗೂ ಪೋಸ್ಟೇಜು 4 ಆಣೆ ಬೀಳುತ್ತೆ.

ನಮ್ಮ ವಿಳಾಸ :—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಬೇಕಾಗಿವೆ.—ಅನೆಕಲ್ ವಿಷನ್ ಎ. ವಿ. ಸ್ಕೂಲಿಗೆ ಅಸಿಸ್ಟೆಂಟ್ ಮಾಸ್ಟರು ಬೇಕು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಅನುಭವವುಳ್ಳವರಾಗಿರತಕ್ಕವರು ಅರ್ಜಿ ಬರೆದುಕೊಳ್ಳತಕ್ಕದ್ದು. ಯೋಗ್ಯತೆಗೆ ತಕ್ಕಂತೆ ಸಂಬಳ ಕೊಡಲಾಗುವುದು.
[73] ವಿಳಾಸ—ಸುಪರಿಂಟೆಂಡೆಂಟ್, ಲಂಡನ್ ಮಿಷನ್, ಹೊಸೂರು.

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜುಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಕ್ಲೋತ್ ಪ್ರತಿಗೆ ರೂ. 2-8-0; ರಫ್ ಪ್ರತಿಗೆ ರೂ. 1-12-0 [169-41]
ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಸಂಗೀತ ಪಾರಿಜಾತ

ಮೂರನೆಯ ಮುದ್ರಣ ! ಸೀಸಪದ್ಯಗಳೂ ಕೀರ್ತನೆಗಳೂ ಮೊದಲಾಗಿಂತ ಸೇರ್ಚಾಗಿವೆ. ಬೀಗರಹಾಡು ಆರತಿಯೆತ್ತುವ ಹಾಡು ಮುಂತಾದ ಅನೇಕ ಹಾಡುಗಳಿವೆ ಕ್ರಯ ೦-೪-೦ ನೂರು ಪ್ರತಿಗೆ ಕಮ್ಮಿ ಇಲ್ಲದಂತೆ ತರಿಸಿಕೊಂಡರೆ ಧಾರಾಳವಾದ ಕಮಿಷನ್ ಕೊಡುವೆವು

ಶಬ್ದಾದರ್ಶ ನೋಟ್ಸ್.

ಲೋವರ್ ಸೆಕೆಂಡ್ರೀ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದುದು ಕ್ರಯ ೦-೩-೦ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಸಿಗುತ್ತೆ.
ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.
[277–16] ಸ್ಟೂಡೆಂಟ್ಸ್ ಹಾಲ್, ಮೈಸೂರು.

M. S. Rao & Co., Book Sellers, Bangalore City.
Lower Secondary Text for 1917
The King of the Golden River
As. 4 each

1917 ನೇ ಇಸ್ವಿ ಕನ್ನಡ ಲೋ. ಸೆ. ಟೆಕ್ಸ್ಟು	0- 4-6
ಡಿಟ್ಟೋ ಸಂಸ್ಕೃತ ಡಿಟ್ಟೋ	0- 3-0
ಕರ್ಣ ಸಾಮ್ರಾಜ್ಯ, ಜೆ. ಕೃಷ್ಣಶಾಸ್ತ್ರಿಗಳಿಂದ	0- 6-0
ಕಿಂಡರ್‌ಗಾರ್ಟನ್ ಕಥೆಗಳು ಡಿಟೊ ಪ್ರಿ ಮು	0-12-0
ರಸಿಕ ಸಮುಯಸಾರ- ಹೊಸ ಪುಸ್ತಕ	1- 4-0

ನಮ್ಮಲ್ಲಿ ಕನ್ನಡ, ಇಂಗ್ಲಿಷ್ ಸ್ಕೂಲು ಪುಸ್ತಕಗಳೂ, ಎಲ್ಲಾ ಕನ್ನಡ ಪುಸ್ತಕಗಳೂ ದೊರೆಯುತ್ತವೆ [81-2]
ಯಂ. ಯಸ್. ರಾವ್ ಕಂಪೆನಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಸ್ವದೇಶ ಕೈಗಾರಿಕೆಗಳು.

ಅನೇಕ ಸ್ಥಳಗಳಲ್ಲಿ ಕೈಗಾರಿಕೆಗಳ ಕಾರ್ಖಾನೆಗಳನ್ನೂ, ಬಟ್ಟೆಯಿಂದ ಗೊಬ್ಬರವನ್ನು ತಯಾರಿಸ ಬಹುದಾದ ಕಾರ್ಖಾನೆಗಳನ್ನೂ ಏರ್ಪಡಿಸುವ ಉದ್ದೇಶದಿಂದ ನಮ್ಮ ದೇಶಬಾಂಧವರಿಗೆ ಆಸೆ ಮಾಡಿಕೊಳ್ಳುವುದೇನೆಂದರೆ ನಿಮ್ಮ ಸ್ಥಳದಲ್ಲಿ ಯಾವುದಾದರೂ ಕೈಗಾರಿಕೆಯನ್ನೇ ಆಗಲಿ, ಗೊಬ್ಬರದ ಕಾರ್ಖಾನೆಯನ್ನೇ ಆಗಲಿ ಇಡಬೇಕೆಂದು ಯಾರಿಗಾದರೂ ತಾತ್ಪರ್ಯವಿದ್ದರೆ ಅಲ್ಲಿನ ಮುಖಂಡರು ಕಲಿತು ಮಾತನಾಡಿಕೊಂಡು ನನಗೆ ತಿಳಿಸಿದರೆ ನಾನು ಬಂದು ಖರ್ಚನ್ನು ತಯಾರಿಸುವ ರೀತಿಯನ್ನು ತೀರ್ಮಾನಿಸಿ ಅನುಭವಪಡಿಸಿ ಕಾರ್ಖಾನೆಯನ್ನು ಏರ್ಪಡಿಸುವೆನು. ಕೆ. ಆರ್. ಚಕ್ರವರ್ತಿ,
[60-5] ಏಜಂಟ್, ಮೈ. ಸ್ಟೀಂ ಟ್ರಾಂವೆ ಕಂಪನಿ, ಬೆಂಗಳೂರು ಸಿಟಿ.

ಓರಿಯಂಟಲ್ ಗೌ|| ಸೆಕ್ಯೂರಿಟಿ ಲೈಫ್ ಅಸೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000
ಕಂಪನಿಯಿಂದ ಪಾವತಿ ಆಗಿರುವದು ,, 4,00,00,000
ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮ|| ಎಂ. ಎಸ್. ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು ; ಮ|| ಎಂ. ಎಸ್ ನಂಜಪ್ಪನವರು ಅಥವಾ ಮ|| ಎ. ವೆಂಕಟೇಶನ್, ಟ್ರಾವೆಲಿಂಗ್ ಏಜಂಟ್, ಮೈಸೂರು; ಅಥವಾ
[222-24] ಬ್ರಾಂಚ್ ಸೆಕ್ರಿಟರಿ, ಮದರಾಸ್.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

[ಕನ್ನಡದಲ್ಲಿ]

ಲೋಕಪ್ರಸಿದ್ಧವಾದ ಈ ಪುಸ್ತಕ ಮೊದಲನೇ ಮುದ್ರಣವು ಶೀಘ್ರದಲ್ಲಿ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಪ್ರಿಂಟಿಂಗ್ ಮತ್ತು ಬೈಂಡಿಂಗ್ ಮುಂತಾದ ಕೆಲಸಗಳು ವೆಸ್ಲಿಯನ್ ಪ್ರೆಸ್ಸಿನಲ್ಲಿ ಬಹು ಸ್ವಚ್ಛವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆ ಮಾಡಿ ತಿದ್ದಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ತರಿಸಿಕೊಂಡರೆ ರೂ 2-4-0. ಜಾಗ್ರತೆ ನೋಡಿ. [239-37]
ವಿಳಾಸ—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಮೈಸೂರಲ್ಲಿ ಮನೆಗಳ ಬಿಕರಿ ನೋಟೀಸು.

ಮೈಸೂರು ಚಾಮರಾಜ ಮೊಹಲ್ಲಾ ಮರಿಮಲ್ಲಪ್ಪನವರ ಸ್ಕೂಲು ದಿವಾನ್ ರೋಡ್‌ನಲ್ಲಿ ಮ|| ಎಂ. ರಾಮರಾಯರ ಮನೆ ಬಾಜು ದಕ್ಷಿಣದಿಕ್ಕಿನಲ್ಲಿರುವ ಅಕ್ಕಸಾಲಿಗರ ನರಸಿಂಹಯ್ಯನ ಬಾಬತು ಮ|| ಸಾಹು. ಬಸುವಯ್ಯನವರಿಗೆ ಆಧಾರವಾಗಿರುವ ಎರಡು ದೊಡ್ಡ ಮಹಡೀ ಮನೆಗಳನ್ನು ಮೇಲ್ಕಂಡವರ ಸಾಲಾ ತೀರಿಸುವ ಉದ್ದೇಶ್ಯ ಖರೀದಿಗಾಗಲಿ, ಭೋಗ್ಯಕ್ಕಾಗಲಿ, ಕಮ್ಮಿ ಬಡ್ಡಿಗೆ ಆಧಾರಕ್ಕಾಗಲಿ ಕೊಡಲು ಈ ಕೆಳಗೆ ರುಜು ಮಾಡಿದವರು ಇಷ್ಟಪಡುತ್ತಾರೆ. ಬೇಕಾದವರು ಇವರಲ್ಲಿ ಮೊಖ್ತಾ ಬಂದು ನಿಷ್ಕರ್ಷೆಮಾಡಿಕೊಳ್ಳಬಹುದು. [30-2]
20-3-1916. ನ. ನರಸಿಂಹಯ್ಯನ ರುಜು.

USE I. C. O. BRAND

[55-49]



Refined Edible Cotton Seed Oil.

For Cooking and Salads.

An appoved substitute for Ghee in all preparations. Price—

Re. 1-4-0 per tin of 3½ lbs
,, 0-7-0 per ,, of 1lb

Liberal Terms to Trade.

The Indian Co-Operative Stores Co., Ltd.,
150, Kilari Road,
Bangalore.

2 ನ್ ತರಗತಿ ಭೂವಿವರಣೆ.

ಚಿತ್ರಗಳು ಮತ್ತು ಭೂಪಟಗಳೊಡನೆ (ಕ್ರಯ 4 ಆಣೆ).
ಮೈಸೂರು ದೇಶದ ಭೂಪಟಗಳು.
(ಪ್ರಾಕೃತಿಕ ಮತ್ತು ರಾಜಕೀಯ) ಕ್ರಯ 2 ಆಣೆ.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.
ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ.
ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯ ಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ಏಷ್ಯಾಖಂಡದ ಭೂವಿವರಣೆ	...	0–6–0
2. ಪ್ರಾಕೃತಿಕ ಭೂಗೋಳ ಶಾಸ್ತ್ರ	...	0–6–0
ಮೇಲೆ ಕಂಡ ಎರಡೂ ಸೇರಿ	...	0–10–0

ಮೈಸೂರು ಭೂವಿವರಣೆ 2 ಆಣೆ ; The English L. S. Text Examiner for 1916 by a Graduate, Price 3 as.
ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,
[47–6] ಸುಬೋಧ ಗ್ರಂಥಾಲಯ, ಮೈಸೂರು.

ಸ್ವಲ್ಪ ಕ್ರಯ ! ವಿಶೇಷ ಬಾಳಿಕೆ !

ಒಳ್ಳೇ ಸಮಯ !

ನೆಪ್ಚೂನ್ ಲೇಖಣಿ.

200 ನೇ ನಂಬರ್ ಫೌಂಟನ್ ಪೇನಾ 14 ಕ್ಯಾರೆಟ್ ಗೋಲ್ಡ್ ನಿಬ್ಬು, ಫಿಲ್ಲರ್ ಮತ್ತು ಪೆಟ್ಟಿಗೆ ಸಹಿತ ಕ್ರಯ ರೂ. 1–14–0 ಮಾತ್ರ. ಟಪಾಲ್ ಮತ್ತು ಪ್ಯಾಕಿಂಗ್ ಖರ್ಚು ಬೇರೆ. ಇದೇ ತಿಂಗಳು ಒಳಗೆ ತರಿಸಿಕೊಳ್ಳುವವರಿಗೆ ಪ್ರತಿ ಒಂದು ಪೇನಾಕ್ಕೂ ಸೊಗಸಾದ ಕ್ಲಿಪ್ಪು ಉಚಿತವಾಗಿ ಕೊಡಲಾಗುತ್ತೆ. ಬೈಸಿಕಲ್‌ಗೆ ಯಾವ ಸಾಮಾನು ಬೇಕಾದರೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತೆ. [279–15]
ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಮೋಸ ಹೋಗಬೇಡಿ ! ಮೋಸ ಹೋಗಬೇಡಿ !!

ನಮ್ಮ ಕಂಪನಿಯು ಕಳೆದ ನಾಲ್ಕು ವರುಷಗಳಿಂದಲೂ ಹೇರುವಾಸಿ ಪಡೆದಿದೆ. ಶ್ರೀ ನಿಜಾಮ ಹೈದ್ರಬಾದ್, ಮದ್ರಾಸ್, ಬೊಂಬಾಯಿ, ಕಲ್ಕತ್ತಾ, ರಂಗೂನ್, ಬರ್ಮಾ, ಕೊಲಂಬೊ, ಸಿಲೋನ್, ಪೆನ್ಯಾಂಗ್ ಮುಂತಾದ ದೇಶಗಳಿಂದ ನಮಗೆ ಆರ್ಡರುಗಳು ಬರುತ್ತಿವೆ. ಬಹಳ ಜನಗಳು ನಮ್ಮ ಕಂಪನಿಯ ಔಷಧವನ್ನು ಉಪಯೋಗಿಸಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟಿರುವರು. ಬೇಕಾದವರು ನಮ್ಮ ಕಂಪನಿಗೆ ಬಂದು ನೋಡಬಹುದು.—ಕೆಲವರು ನಮ್ಮ ಕಂಪನಿಯ ಹೆಸರನ್ನು ಹೇಳಿ ಜನಗಳಿಗೆ ನಕ್ಲಿ ಮಾಲುಗಳನ್ನು ಕೊಟ್ಟು ಮೋಸಪಡಿಸುತ್ತಿರುವರು. ಆದ್ದರಿಂದ ನಮ್ಮ ಭಾಂಗಿಯನ್ನು ತೆಗೆದುಕೊಳ್ಳುವಾಗ "ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯು ರೋಡ್, ಬೆಂಗಳೂರು ಸಿಟಿ" ಎಂದು ಮತ್ತು ನಮ್ಮ ಡಬ್ಬಿನ ಎದುರಿನಲ್ಲಿ ಕಾಣುತ್ತಿರುವ ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಆಗಿರುವ ಟ್ರೇಡ್ ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿರಿ. ಹಾಗೆ ನೋಡಿ ತೆಗೆದುಕೊಳ್ಳದೆಹೋದರೆ ಮೋಸಹೋಗುವಿರಿ ಎಂದು ಡಂಗೂರ ಹೊಡೆದು ಹೇಳುವೆವು.

1,000 ರೂ. ಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

Registered

ಈ "ಸಾಲಾಮಿಸ್ರಿ ಮುರಬ್ಬ"ವಿನ ಸೇವನೆಯಿಂದ ಮೂತ್ರಕೋಶ ಸಂಬಂಧದಿಂದ ಉಂಟಾದ ಎಲ್ಲಾ ವ್ಯಾಧಿಗಳನ್ನೂ ಗುಣವಾದುವರು ಮತ್ತು ಕೈಕಾಲು, ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತ ಕೆಟ್ಟುಹೋಗಿದ್ದರೂ ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾ ಸಾಲಾಮಿಸ್ರಿಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ 1,000 ರೂಪಾಯಿ ಬಹುಮಾನ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವದು.

ಕ್ರಯ ಡಬ್ಬಿ 1 ಕ್ಕೆ 2-0-0. ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ 0-6-0. ಕೇಟಲಾಗು ಅಪೇಕ್ಷಿಸುವವರಿಗೆ ಪುಗಸಟ್ಟೆ ಕಳಿಸುವೆವು.

ನಮ್ಮ ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,

[73-2] 5 ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಊತದ ನೋವುಗಳು.

ನಿಮಗೆ ಮೈಯಲ್ಲಿ ಊತ ಕಂಡುಕೊಳ್ಳುವ ನೋವಿನಿಂದ ಬಹಳ ದುಃಖಿಗಳಾಗಿಯೂ ಅಸಾಮರ್ಥ್ಯರಾಗಿಯೂ ಇರುತ್ತದೆ. ಮತ್ತು ಅದು ಹಾನಿಕಾರಿಯದ್ದು. ಊತದ ನೋವುಗಳು ಸದಾ ಕಾಡುತ್ತಿರುತ್ತದೆ.

ಫಿಲಡೆಲ್ಫಿಯಾದ, ಎ. ಸಿ. ಟೇಲರ್ ಎಂಬುವರು ಬರೆಯುವುದು:—"ಎರಡು ವರುಷಗಳ ಕಾಲ ಮೊಣಕಾಲಿನ ದೊಡ್ಡ ಊತದ ದೆಸೆಯಿಂದ ನರಳಿಕ್ಕೆ ಗುರಿಯಾಗಿದ್ದೆನು. ವೈದ್ಯರೂ, ತೈಲಗಳೂ ಗುಣಕಾಣಲಿಲ್ಲ. ನಮ್ಮ ನಗರದ ನಾಟ್ಯದ ವೈದ್ಯರಿಂದ ಚಿಕಿತ್ಸೆಗೊಂಡು, ಗುಣಕಾಣದೆ, ಲಿಟಿಲ್'ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸಿ, ಕ್ಷಣದಲ್ಲಿ ಪೂರ್ಣ ಗುಣಹೊಂದಿದೆನು." ಲಿಟಿಲ್'ಸ್ ಓರಿಯಂಟಲ್ ಬಾಂ ಎಂಬುದನ್ನು ಲೇಪಿಸುವುದರಿಂದ ಉಳುಕುಗಳೂ, ಗಾಯಗಳೂ, ಹವಾತವೂ, ವಾಯು ನೋವುಗಳೂ ನಿಸ್ಸಂದೇಹವಾಗಿ ಬೇಗ ವಾಸಿಯಾಗುತ್ತವೆ.

ಇಂಡಿಯದ ಊರುಗಳಲ್ಲಿರುವ ಎಲ್ಲಾ ಔಷಧಗಾರರಲ್ಲಿಯೂ ಸೀಸೆ 1ಕ್ಕೆ 1 ರೂಪಾಯಿಗೆ ಮಾರಲ್ಪಡುತ್ತದೆ.

[61-48]

ಸುಂದರವಾದ 1916 ಕ್ಯಾಲೆಂಡರು

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುತ್ತೇವೆ. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-49]

ಅಮೃತಾಂಜನ ಡಿಪೋ,

109, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಸೂ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಶಾಸ್ತ್ರದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ. ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲಯ ಸ್ಟೇಟ್ಸ್, ಗೋವಾ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಔಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾಸಕ್ಕೆ ಬರುವ ವೈದ್ಯರ ಸಹಾಯವನ್ನು ಕಾದು ನರಳುವುದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾತವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಾಣಂತಿ ಕಟ್ಟುರಾಗ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಜಾಡ್ಯ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇವಲ್ಲದೆ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರ ಪ್ರತಿ ಸೀಸೆಯೊಡನೆಯೂ ಇರುವುದು. 360 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲು ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 6-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಂ. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಬಿ. ಎಲ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್ಸಲ್ಟಿಂಗ್ ಕೆಮಿಸ್ಟ್, ಎಸ್ಪ್ಲನೇಡ್ ನಂ 2, ಬೊಂಬಾಯಿ, ಇವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಪ್ರಮುಖ್ಯವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಿಬರುವ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ಇವುಗಳಿಗೆ ಪ್ರತೀಕ್ಷ್ಯವೂ ಬರುವ ರೋಗಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮಿ॥ ಕೆ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು:—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಶಾಸ್ತ್ರದ ವೆಂಕಟಾಚಲ ಪಂಡಿತರವರಿಂದ ತಯಾರಿಸಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ.

[189-29] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅರ್ಧ ಕ್ರಯದ ಮಾರಾಟ!

ವಾಚ್ ಮತ್ತು ತಬಲ ಬಿಟ್ಟಿ!

ಒಂದು ತಿಂಗಳ ತನಕ ಮಾತ್ರ.



ನಮ್ಮ ಸ್ಟಾಟಸ್‌ಫ್ಯಾಕ್ಷನ್ ಫ್ಲೂಟ್ ಹಾರ್ಮೋನಿಯಂ ಎಲ್ಲಾ ಹವ ಮತ್ತು ಸಂಗೀತಗಳಿಗೆ ಸರ್ವಶ್ರೇಷ್ಠವೂ ಮನೋಹರವೂ ಆಗಿದೆ. ಒಪ್ಪದಿದ್ದರೆ ಒಂದು ವಾರದಲ್ಲಿ ವಾಪಸು ತೆಗೆದುಕೊಳ್ಳಲು ಸಿದ್ಧರಾಗಿದ್ದೇವೆ. ಒಂದೇ ರೀಡ್ ಕ್ರಯ ರೂ. 38, 40, 50; ಅದನ್ನು ಈಗ ರೂ. 19, 20, 25 ಕ್ಕೆ ಕೊಡುತ್ತೇವೆ. ಡಬ್ಬಲ್ ರೀಡ್ ಕ್ರಯ ರೂ. 65, 70, 80, 90; ಈಗಿನ ಕ್ರಯ ರೂ. 32-8, 35, 40, 45. ಕೈ, ಕಾಲಿನಿಂದ ನುಡಿಸುವ ಶ್ರೇಷ್ಠ ಫೋಲ್ಡಿಂಗ್ ಹಾರ್ಮೋನಿಯಂ ಕ್ರಯ ರೂ. 130; ಈಗ ರೂ. 65. ನಮ್ಮ ಕಾಗದದ ಕೂಡ ಐದನೇ ಒಂದು ಭಾಗ ಅಡ್ವಾನ್ಸು ಕಳಿಸಬೇಕು. ಸಿಂಗಲ್ ರೀಡಿನ ಕೂಡ ಒಂದು ವಾಚು, ಡಬ್ಬಲ್ ರೀಡ್ ಮತ್ತು ಫೋಲ್ಡಿಂಗ್ ಹಾರ್ಮೋನಿಯಂ ಜೊತೆಗೆ ತಬಲಾ ಜೊತೆ ಮತ್ತು ಬಾಯಾ ಬಿಟ್ಟಿ ಕೊಡುತ್ತೇವೆ. ವಿಳಾಸ—

NATIONAL HARMONIUM Co.,

[72-2] Simla T.S.O., E, Calcutta.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (One of the most eminent Actuaries in England). [142-36]

First Valuation Result;—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಉಗಾದಿ ಬಹುಮತಿ. ಗಡಿಯಾರ ಇನಾಂ. ಉಗಾದಿ ಬಹುಮತಿ.

ಸುಂದರವಾದ ಅಮೇರಿಕನ್ ವಾಚ್ ರೂ. 3-0-0.

ಈ ಗಡಿಯಾರವನ್ನು ಅಮೇರಿಕಾ ದೇಶದಲ್ಲಿ ಹೊಸದಾಗಿ ತಯಾರಿಸಿ ಕಳು ಹಿಸಿದ್ದಾರೆ. ಈ ಗಡಿಯಾರ ಕಂಪನಿಯ ಬಲಿಷ್ಠವಾದ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಅಮೇರಿಕಾ ದೇಶದ ಕೆಲಸ ಬಹು ನಾಜೂಕಾಗಿ ಕಟ್ಟಿ ಇರುತ್ತೆ. ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಕೊಡಲ್ಲ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಫೌಂಟೇನ್ ಪೇನಾವನ್ನು ನೋಲ್ಯಂಡ ವಾಚ್ ಇನಾಮತಿ ಕಳುಹಿಸುವೆವು.

ವೈಯರ್‌ಲಿಕ್ವಿಡ್ ಫೌಂಟೇನ್ ಪೇನಾ.

ವಾಚ್ ಫೌಂಟೇನ್ ಪೇನಾ ಸೇರಿ ರೂ. 3 ಮಾತ್ರ. ಈ ನಕ್ಷೆಯಲ್ಲಿ ತೋರಿಸಿರುವ ಹೊಸ ನಮೂನೆ ಫೌಂಟೇನ್ ಪೇನಾ ಇಂಗ್ಲೆಂಡಿನಿಂದ ತರಿಸುತ್ತೇವೆ ಪೆಟ್ಟಿಗೆ ಮೇಲೆ ನಮ್ಮ ಕಂಪನಿ ಹೆಸರು ಗಿಲೀಟು ಅಕ್ಷರ ದಿಂದ ಹಾಕಿರುತ್ತದೆ. ಇದಕ್ಕೆ ಒಂದು ಸಾರಿ ಇಂಕಿಯನ್ನು ಹಾಕಿದರೆ ಅನೇಕ ದಿವಸಗಳ ವರೆಗೂ ಬರೆಯಬಹುದು. ಇರಿಡಿಯಮ್ ಚಿನ್ನದ ಮುಳ್ಳು ಹಾಕಿರುತ್ತೆ. ಇದು ಬರೆಯುವದಕ್ಕೆ ಮನೋಹರವಾಗಿಯೂ ಬರೆಯುವದಕ್ಕೆ ಸುಲಭವಾಗಿಯೂ ಇದೆ. ಈ ಪೇನಾವನ್ನು ಬರೆದವರು ಪುನಹ ಯಾವ ಪೇನಾವನ್ನೂ ಉಪಯೋಗಿಸರು. ನಮ್ಮ ಕಂಪನಿ ಪ್ರಖ್ಯಾತಿಯಾಗಬೇಕೆಂಬ ಉದ್ದೇಶದಿಂದ ಬಹು ಕಡಿಮೆ ಕ್ರಯಕ್ಕೆ ಕಳುಹಿಸುತ್ತೇವೆ. ಈ ಲಾಭಕರವಾದ ಸಮಯವನ್ನು ಬಿಟ್ಟರೆ ಇನ್ನು ಸಿಕ್ಕುವದು ದುರ್ಲಭ.

ವಿಳಾಸ.—ವಿ. ಎ. ಎಸ್. ಸಾಣಿ ಅಂಡ್ ಕಂಪನಿ,
[63-4] 3, ಇರುಳಪ್ಪನ ಬೀದಿ, ಮದರಾಸ್.

ಕೆಂಪು ಕಲ್ಲಿನ ಬುಲಾಕು.

ಈ ಬುಲಾಕನ್ನು ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಕಲ್ಲುಗಳು ಕೋಟಿಸೂರ್ಯಪ್ರಕಾಶಕ್ಕೆ ಥಳಥಳಿಸುವದು. ನವರ್ ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಲ್ಪಟ್ಟದ್ದು. ಇದನ್ನು ನೋಡುವವರು 200 ರೂ. ಸರಿಯಾಗಿ ಮಾಡಿಸಿ ಬಾಳುವದೆಂದು ಹೇಳುವರು. ಈಗ ನಮ್ಮ ಕಂಪನಿ ಹೆಸರು ಪ್ರಖ್ಯಾತಿ ಹೊಂದುವದಕ್ಕಾಗಿ 2 ರೂಪಾಯಿಗೆ ವಿಕ್ರಯವಾಗುವವು. ಬೇಗನೆ ತರಿಸಿಕೊಳ್ಳಿ.

[63-4] ನಮ್ಮ ವಿಳಾಸ—

ವಿ. ಎ. ಎಸ್. ಸಾಣಿ, 3, ಇರುಳಪ್ಪನ ಬೀದಿ, ಮದರಾಸು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ 12 ಆಣೆಗೆ ಕೊಡಲ್ಪಡುತ್ತೆ.

ಆಶ್ಚರ್ಯವಾದ ಸೇಫಿಂಗು ಬಾಕ್ಸು ಎಂಬ ಮರ್ಮದ ಪೆಟ್ಟಿಗೆ.

ಈ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ ಬಹು ಸೊಗಸಾಗಿ ಚಿತ್ರ ವಿಚಿತ್ರ ಕೆಲಸ ಮಾಡಿ ನೋಡುವವರಿಗೆ ಸಂತೋಷಕರವಾದ ಪೆಟ್ಟಿಗೆ. ಇದರ ಪ್ರಕಾಶ ಬೆಳ್ಳಿಯು ಕಾಂತಿ ಹಿಂಬಾಲಿಸುತ್ತದೆ ಈ ಪೆಟ್ಟಿಗೆಯಲ್ಲಿ ಹಣವನ್ನಾಗಲಿ, ಚಿಕ್ಕ ವಸ್ತುಗಳನ್ನು ಇಟ್ಟು ಮುಚ್ಚಿಡಬೇಕು. ಅನಂತರ ಅದನ್ನು ಯಾರಾದರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಮಾಯವಾಗುವವು ಆ ಪದಾರ್ಥಗಳು ಇಟ್ಟವರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಕಾಣುವವು. ಈ ಪೆಟ್ಟಿಗೆ ಜೇಬಿನಲ್ಲಿ ಕೂಡ ಇಟ್ಟುಕೊಳ್ಳಬಹುದು. ಬೇಗನೆ ತರಿಸಿಕೊಳ್ಳಿ. ಈ ಪೆಟ್ಟಿಗೆ ಇಷ್ಟವಿಲ್ಲದಿದ್ದರೆ 8 ದಿನಗಳೊಳಗೆ ಬರೆದರೆ ತಡಮಾಡದೆ ಹಣವನ್ನು ವಾಪಸ್ ಕಳುಹಿಸುವೆವು.

ನಮ್ಮ ಪೆಟ್ಟಿಗೆಯನ್ನು ತರಿಸಿಕೊಳ್ಳುವರಿಗೆ 1916 ನೇ ಸಂವತ್ಸರದ ಸುಂದರವಾದ ಲೇಡಿ ಕ್ಯಾಲೆಂಡರ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ—ರಾಮಚಂದ್ರ ಅಂಡ್ ಕಂಪನಿ,
[63-4] 16, ತಿರುಪಳ್ಳಿ ಬೀದಿ, ಮದರಾಸು.

S. UDIPI NARAYANACHARYA & Co.,
BANARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕಂಪನಿಯಲ್ಲಿ ತಯಾರು ಮಾಡಿರುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಕಣ, ಪೇಟ, ಕಾಶ್ಮೀರ್ ಶಾಲು, ದುಪ್ಪಟಿ, ಮುಗುಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು, ಕೊನಾರಿಯು, ಅರಳೆ ಪೇಟ, ಧರ್ಮಾವರ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೇಸ್ತ್ರಿನಿಂದ ತಯಾರಿಸಿರುವೆವು. ಈ ಅಮೂಲ್ಯವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೇಟಲಾಗು ಒಂದು ಕಾಶಿ ಕಾಳಭೈರವ ದಾರವನ್ನು ಇನಾಮಾಗಿ ಕಳುಹಿಸಲಾಗುವದು. [119-37]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ವಿಶಾಲವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾದ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಲಿಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅತ್ಯೇ ಆವಶ್ಯಕ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತಿಕಡೆದುಕೊಳ್ಳುತ್ತಲೇ, ಮಸ್ತಕದ ಬೇಗೆಯು ಕಡಿಮೆಯಾಗಿ, ಮನಸ್ಸು ಉಲ್ಲಸಿತವಾಗಿ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇವರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.



ಪೇಟೆಂಟ್ ಔಷಧ ಮಾರುವವರ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಮ್ಮ ಹಣವನ್ನು ಕಳೆಯುವುದು ಜಾಣತನವಲ್ಲ. ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿ. ಈ ಎಣ್ಣೆಯು ಪ್ರಖ್ಯಾತಿಯ ದೆಸೆಯಿಂದ ವೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ನೂರಾರು ಪುರಸ್ಕಾರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ: ನೀಗಿ ಸಹಕಾರರ ಬಂಧುಗಳು. ಬಾದಾಮಿ—ಕಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವ ಕಲ್ಪ ಸರ್ವೋತ್ಕೃಷ್ಟವಾದದೆಂದು ಸಾಧಕವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ಕಳುಹಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತು ಬಿಕರಿಯಿಂದ ತಮಗೆ ಬಹಳ ಸಹಾಯ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವಾದದ್ದು" ಎಂದು ಅವರಿಗೆ ಬಹಳ ಲಾಭ ದೊರೆಯುವ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳು ವಲ್ಲಿ ಮೊಹರುಮಾರ್ಕ್ ನೋಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಲೊಲ್ಲದೆ ಸರಿಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಓಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಸರ್ಗವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೇ ಇರಲಿ. ಈ ಓಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [34-8]

ಸಣ್ಣ ಸೀಸೆಯ ಬೆಲೆ ರೂ. 0-8-0, ಒಂದು ದ್ರಾಮಿನ (ನಾಡಿಯಂ) ಸೀಸೆ ರೂ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 3-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಓಟೊ-ದಿಲ್ ಬಹಾರ್ ಪರಿಮಳದ ಕಾಡುಗಳು ಡಜನ್ ಒಂದಕ್ಕೆ 0-13-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಅಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
೧೫೫, ಜುಮ್ಮಾಮಸೀದ್, ಮಾರ್ಕೆಟ್, ಬಾಂಬೆ.

ಏಜೆಂಟ್, ಬಿ ಲೂಯಿಸ್ ಮಾರ್ಟಿನ್, ಮಂಗಳೂರು

ಡೋಂಗರೆ ಇವರ
ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿಯಾಗೋಣ, ಸೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-30]

ಕ್ರಯ ಬಾಟ್ಲಿ ೧ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,
ಚೌಪಾಟಿ, ಗಿರಗಾಂವ, ಮುಂಬಯಿ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನು ಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಜಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡುಗಾರರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ಆರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ [32-8]

... ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಆಣೆ	560 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
,, ,, ,, 4 ,,	200 ,, ... ,, 9 ,,	80 ,, ,, ,, 4 ,,	1200 ,, ,, ,, 2 ,,

ಒಂದಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೊಟ್ಟಣಗಳು ಮೊದಲಾದ ಬಿಡಿ ಪ್ರತ್ಯೇಕ ಬೇಳುವುದು ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಸಿಗಿ ಇಡಲಾಗಿದೆ. ನಮ್ಮ ದಕ್ಷಿಣ ಕನಡಾ ಏಜಂಟರು—ದಿ ಉರ್ಲ ಮಾರ್ಟಿನ್, ಮಂಗಳೂರು.

ಷಾಪ್ ಸ್ಥಳ ಬದಲಾವಣೆ ನೋಟೀಸ್

ರಾಜಧಾನಿಯ ಕಮ್ಮಜರಾವ್ ರೋಡ್ ಮುಂಭಾಗದಲ್ಲಿ ಶ್ರೀ ಲಕ್ಷ್ಮೀ ನಾರಾಯಣ ಹಾಲ್ ಎಂಬ ಬೇಗಾ ಜವಳಿ ಅಂಗಡಿಯನ್ನು ಇಟ್ಟದ್ದದ್ದು ಸರಿಯಷ್ಟೆ. ಈಗ ಸದರಿ ಅಂಗಡಿಯು ದೇವರಾಜ ಮಾರ್ಕೆಟ್ಟಿನ ಪೂರ್ವ ದಿಕ್ಕಿನಲ್ಲಿರುವ ಮಾರ್ಕೆಟ್ ಶೃಕ್ಸನಲ್ಲಿ ಇಡಲ್ಪಟ್ಟದೆ. [65-4]

ಎಸ್. ಭಗವಂತರಾವ್ ಅಂಡ್ ಆರ್. ಸುಬ್ರಾವ್, ಪ್ರೊಪ್ರೈಟರ್ಸ್.

ಸವಿನುಡಿ.

ಕನ್ನಡ ನುಡಿಯ ಮಾಸ ಪುಸ್ತಕಾವಳಿ.

ಇದರಲ್ಲಿ—ಚಾರಿತ್ರ್ಯಾತ್ಮಕ, ಸಾಂಸಾರಿಕ, ಸಾಮಯಿಕ, ಸಾಹಸಿಕ, ಪೌರಾಣಿಕ, ನವನ್ಯಾಸ (ನಾವಲುಗಳು), ದೇಶ ಚರಿತ್ರ, ಮಹಾಪುರುಷರ ಜೀವನ ಚರಿತ್ರೆ, ಸಮಯೋಚಿತವಾದ ಉಪನ್ಯಾಸಗಳು, ತಿಂಗಳಿಗೊಂದು ಪುಸ್ತಕದಂತೆ ಪ್ರಕಟವಾಗುವದು. ಪ್ರತಿ ಪುಸ್ತಕದಲ್ಲಿಯೂ ಅಖಂಡವಾದ ಒಂದು ಸಂಗತಿಯು ಮುಗಿದಿರುವುದು ಮಾಸ ಪತ್ರಿಕೆಯಂತೆ ಅನೇಕ ಸಂಗತಿಗಳಿರುವುದಿಲ್ಲ. ಈಗ ಸಂಯುಕ್ತೆ, ಸಾವಿತ್ರೀ, ಸತೀದೇವಿ, ಚಂದ್ರಮತಿ, ಗಾಂಧಾರಿ, ದಮಯಂತಿ ಎಂಬ ಪುಸ್ತಕಗಳು ಸಿದ್ಧವಾಗಿವೆ. ವರುಷ ಚಂದಾ ಅಂಚೆ ವೆಚ್ಚ ಸೇರಿ

ಒಂದು ರೂಪಾಯಿ ಯೆಂಟಾಣೆ.

[4-13] ವಿಳಾಸ:—"ಸವಿನುಡಿ" ಯ ಸಂಪಾದಕ, ಕೋಟೆ, ಬೆಂಗಳೂರು

ಬಿಸಿಲು ಕಾಲಕ್ಕೆ ಮೂರು

ಮಹೌಷಧಗಳು.

ಅಮೃತಾಮಲಕ ತೈಲ.

ಈ ತೈಲವು ಕಣ್ಣು ಕೈಕಾಲುರಿ, ಬಿಸಿಲಿನ ತಲೆನೋವು, ಕಣ್ಣು ಮಂಜು, ಕಣ್ಣು ಕಣ್ಣತ್ತಲೆ, ಮುಂತಾದ್ದನ್ನು 1-2 ಅಭ್ಯಂಗದಿಂದಲೇ ಗುಣಮಾಡಿ ಬುದ್ಧಿ ಶಕ್ತಿಯನ್ನು ವಿಶೇಷವಾಗಿ ಹೆಚ್ಚಿಸುತ್ತದೆ. ಬಿಸಿಲು ಕಾಲಕ್ಕೆ ಇದಕ್ಕಿಂತಲೂ ಉತ್ತಮವಾದುದು ಬಿಂದುಶಸಾಗಿಯೂ ಇಲ್ಲವೆಂಬುದನ್ನು ಅನುಭವದಿಂದ ತಿಳಿಯಿರಿ. 8 ಅಭ್ಯಂಗಕ್ಕೆ ಆಗುವ ತೈಲ 8 ಆಣೆ.

ಖಂಡಾಮಲಕ ರಸಾಯನ.

ಸಮಸ್ತ ಪಿತ್ತ ವಾತ ವಿಕಾರಗಳನ್ನು ಜಾಗ್ರತೆ ಗುಣಮಾಡಿ ಜೀರ್ಣಶಕ್ತಿಯನ್ನು ಸಂಪಾದಿಸಿ ರಾತ್ರಿ ಸುಖನಿದ್ರೆಯನ್ನುಂಟುಮಾಡಿ ಮಲವನ್ನು ಸಲೀಸಾಗಿ ಜಾರಿಸುವುದು. ಸೇವಿಸಲು ರುಚಿಯಾಗಿದೆ. 15 ದಿನದ ಔಷಧ 12 ಆಣೆ

ಆಮೋದಿನಿ.

ಬಾಯಿವಾಸನೆಯನ್ನು ತಕ್ಷಣ ಅಡಗಿಸಿ-ಆಯಾಸವನ್ನು ಪರಿಹರಿಸಿ-ಸರ್ವರ ಮನಸ್ಸನ್ನು-ತನ್ನ ಅಪೇಕ್ಷಿತವಾದ ಗುಣ ಮತ್ತು ಸುವಾಸನೆಗಳಿಂದ ಮೋಹಗೊಳಿಸುವ ಈ ರತ್ನವನ್ನು ಈಗಲೇ ತರಿಸಿಕೊಳ್ಳಿರಿ-ಪೂರ್ವಕ್ಕಿಂತಲೂ ಎಷ್ಟೋ ಸುಲಭ ದರವಾಗಿ ತಯಾರಿಸಲ್ಪಟ್ಟಿರುವುದು. 150 ಮಾತ್ರೆ ಸೀಸೆ 4 ಆಣೆ. [278-16]

ಎರಡು ರೂಪಾಯಿಗೆ ಕಡಮೆ ಇಲ್ಲದೆ ಔಷಧ ತರಿಸಿದರೆ ಟಿ.ಕ. ಮಾಫಿ.

ಆಯುರ್ವೇದ ವಿದ್ವಾನ್ ಪಿ. ವಿ. ಪಂಡಿತ್, ನಂಜನಗೂಡು.

ವೃತ್ತಾಂತ ಪತ್ರಿಕೆ.

—:o:—

ಶಕ ೧೮೩೮ ನೇ ಇಸವಿ ಮಾರ್ಚಿ ತಾ. ೩೦ ನೇ ಗುರುವಾರ

ಮೈಸೂರಿನಲ್ಲಿ ಸಿವಿಲ್ ವ್ಯಾಜ್ಯಗಳು.

ಮದರಾಸ್ ಅಧಿಪತ್ಯದಲ್ಲಿ ೩೫ ಪ್ರಜೆಗಳಿಗೆ ಒಂದರಂತೆ ಸಿವಿಲ್ ವ್ಯಾಜ್ಯ ಕೋರ್ಟಿಗೆ ದಾಖಲಾಗುವುದೆಂದೂ, ಮೈಸೂರು ಸಂಸ್ಥಾನದೊಳಗಾದರೋ 2೩೦ ಪ್ರಜೆಗಳಿಗೆ ಒಂದರಂತೆ ಸಿವಿಲ್ ವ್ಯಾಜ್ಯ ಕೋರ್ಟಿನಲ್ಲಿ ಇತ್ಯರ್ಥಕ್ಕಾಗಿ ಬರುವದೆಂದೂ ತಿಳಿಸಿರುವುದು ಯಥಾರ್ಥವಾಗಿರುವ ಪಕ್ಷಕ್ಕೆ ವ್ಯಾಜ್ಯಗಳನ್ನು ಹೂಡುವುದರಲ್ಲಿ ನಮ್ಮ ಪ್ರಜೆಗಳು ಮದರಾಸ್ ಅಧಿಪತ್ಯದ ಜನರಿಗಿಂತ ಕಡಮೆಯೆಂದೂ, ನಮ್ಮವರಿಗೆ ಕೋರ್ಟಿಗೆ ಹೋಗುವುದರಲ್ಲಿ ಅಭಿಲಾಷೆ ಅಷ್ಟು ಹೆಚ್ಚಾಗಿಲ್ಲವೆಂದೂ ಸ್ಪಷ್ಟವಾಗುತ್ತದೆ. ಅದಾಗ್ಯೂ ತಾವು ತಾವೇ ಸೇರಿ ವ್ಯವಹಾರಗಳನ್ನು ಇತ್ಯರ್ಥ ಮಾಡಿಕೊಳ್ಳುವುದರಲ್ಲಿ ನಮ್ಮ ಪ್ರಜೆಗಳಿಗೆ ಅಭಿಲಾಷೆ ಕಡಮೆಯೆಂದೂ, ಕೋರ್ಟಿಗೆ ಹೋಗುವ ಮನಸ್ಸೇ ಇನ್ನೂ ಹೆಚ್ಚಾಗಿದೆಯೆಂದೂ ನಮಗೆ ತೋರುವುದು. ಹಿಂದಿನ ಸಾಲಿನಲ್ಲಿ ಒಟ್ಟು 25,658 ಸಿವಿಲ್ ವ್ಯಾಜ್ಯಗಳು ಹೊಸದಾಗಿ ದಾಖಲಾದವು: ಹಿಂದಿನ ಸಾಲಿನಲ್ಲಿ ವ್ಯವಸ್ಥೆಯಾಗದೆ ಉಳಿದ ಮೊಕದ್ದಮೆಗಳೂ, ಪುನರ್ವಿಚಾರಣೆಗೆ ಕಳುಹಿಸಲ್ಪಟ್ಟ ಮೊಕದ್ದಮೆಗಳೂ 11,420 ಇದ್ದು, ಗತ ಸಾಲಿನಲ್ಲಿ ವ್ಯವಸ್ಥೆಗೆ ಒಟ್ಟು 37,078 ವ್ಯಾಜ್ಯಗಳು ಏರ್ಪಟ್ಟವು. ಈ ಪೈಕಿ ಗತ ಸಾಲಿನಲ್ಲಿ 26,098 ಮೊಕದ್ದಮೆಗಳು ಫೈಸಲಾಗಿ, 10,980 ಮೊಕದ್ದಮೆಗಳು ಉಳಿದಿರುತ್ತವೆ. ಹೀಗೆ ಉಳಿಕೆಯಾದ ಮೊಕದ್ದಮೆಗಳು ಬಹಳ ಹೆಚ್ಚಾಗಿರೋಣದರಿಂದ ಸಿವಿಲ್ ಕೋರ್ಟುಗಳಲ್ಲಿ ಅಷ್ಟು ದೀರ್ಘಕಾಲ ಅವು ಉಳಿಯದಂತೆ ಬೇಗ ಬೇಗನೆ ವ್ಯವಸ್ಥೆ ಮಾಡುವ ಭಾಗದಲ್ಲಿ ಸರ್ಕಾರದವರು ಹೆಚ್ಚಾದ ಮುತುವರ್ಜಿ ವಹಿಸಿ ಮೇಲ್ವಿಚಾರಣೆ ನೋಡಿಕೊಳ್ಳಬೇಕು. ಕೆಲವು ವ್ಯಾಜ್ಯಗಳು ಎಷ್ಟು ದೀರ್ಘಕಾಲ ನಡೆಯುತ್ತಿದ್ದವೋ ತಿಳಿದು ಹೇಳಲು ಅವಕಾಶವಿಲ್ಲ. ಕೆಲವು ಮೊಕದ್ದಮೆಗಳು ವ್ಯವಸ್ಥೆಯಾಗುವುದಕ್ಕೆ 920 ದಿನಗಳು ಹಿಡಿದವೆಂದು ಹೇಳಿರುವುದನ್ನು ನೋಡಿದರೆ ವರುಷಾಂತರ ಕಳೆದರೂ ಮೊಕದ್ದಮೆಗಳ ಅಂತ್ಯವನ್ನು ಕಾಣುವುದೇ ಪ್ರಯಾಸವೆಂದು ಹೇಳಬೇಕಾಗಿದೆ. ಈ ರೀತಿ ತಾಮಸವಾಗುವುದಕ್ಕೆ ಜಡ್ಜಿಗಳೋ, ಲಾಯರುಗಳೋ, ಇಲ್ಲವೇ ಕಕ್ಷಿಗಾರರೋ ಯಾರೇ ಕಾರಣರಾಗಿದ್ದಾಗ್ಯೂ ಫಲಿತಾಂಶವೇನೋ ತೃಪ್ತಿಕರವಾಗಿಲ್ಲವೆಂದು ಹೇಳಬಹುದು.

ಅನೇಕ ಮೊಕದ್ದಮೆಗಳು ಬಹಳ ಅಲ್ಪವಾದವು. 10 ರೂಪಾಯಿಗೆ ಒಳಪಟ್ಟ ಮೊಕದ್ದಮೆಗಳು 1,471 ಇದ್ದವು: 17,639 ಮೊಕದ್ದಮೆಗಳು 50 ರೂಪಾಯಿಗೆ ಒಳಪಟ್ಟವುಗಳು. ಇಂಥಾ ಸಣ್ಣ ವ್ಯಾಜ್ಯಗಳನ್ನು ಬಹಳ ಬೇಗನೆ ವ್ಯವಸ್ಥೆ ಮಾಡಬೇಕು. ಆದರೆ ನಮ್ಮ ಸಂಸ್ಥಾನದಲ್ಲಿ ನ್ಯಾಯವಿಮರ್ಶಕ ಯಂತ್ರ ನಡೆಯುವುದು ಬಹಳ ತಾಮಸಕ್ಕೆ ಬಿದ್ದಿದೆ. ಕಕ್ಷಿಗಾರರು ಅನೇಕ ಮೊಕದ್ದಮೆಗಳಲ್ಲಿ ಅಪೀಲ್ ಮಾಡುತ್ತಾರೆ. ಹೀಗೆ ಅಪೀಲ್ ಮಾಡಲು ಕಾರಣವೇನೆಂದು ಸರ್ಕಾರದವರು ತಿಳಿಸಿರುವುದಿಲ್ಲ. ಕೋರ್ಟುಗಳಲ್ಲಿ ಸೋಲು ಗೆಲುವುಗಳು ಜೂಜಾಟದಂತೆ ಪರಿಣಮಿಸಿದೆಯೇ? ಕೆಳ ಕೋರ್ಟುಗಳಲ್ಲಿ ನ್ಯಾಯ ಸಿಕ್ಕುವುದಿಲ್ಲವೆಂಬ ಅನುಮಾನ ಹುಟ್ಟಿರುವುದೇ? ಅಥವಾ, ಲಾಯರುಗಳು ಅಪೀಲ್ ಮಾಡಿ ಎಂದು ಕಕ್ಷಿಗಾರರನ್ನು ಎತ್ತಿಕಟ್ಟುತ್ತಾರೆಯೋ? ಹಾಗಿಲ್ಲದಿದ್ದರೆ ಕಕ್ಷಿಗಾರರೇ ಪರಿಣಾಮದ ಮೇಲೆ ದೃಷ್ಟಿಯಿಡದೆ ಒಂದು ಕೋರ್ಟಿನಿಂದ ಇನ್ನೊಂದು ಕೋರ್ಟಿಗೆ ಅಲೆದಾಡುವುದರಲ್ಲಿ ಆಸೆಪಡುತ್ತಾರೆಯೋ? ಹೀಗೆ ಕೆಳ ಕೋರ್ಟಿನ ತೀರ್ಮಾನದ ಮೇಲೆ ಅಪೀಲ್ ಆಗುವುದಕ್ಕೆ ಅವೆಲ್ಲಾ ಸೇರಿ ಕಾರಣಗಳಾಗಿರುವವೋ, ಇಲ್ಲವೇ ಆ ಪೈಕಿ ಯಾವುದಾದರೊಂದು ಕಾರಣವಾಗಿದೆಯೋ ನಮಗೆ ತಿಳಿಯುವುದಿಲ್ಲ.

ಈ ರೀತಿ ಮೊಕದ್ದಮೆಗಳನ್ನು ನಡಿಸುವುದರಲ್ಲಿ ಪ್ರಜೆಗಳು ಅಪಾರ ಹಣವನ್ನು ವರುಷೇ ವರುಷ ಖರ್ಚುಮಾಡುತ್ತಿದ್ದಾರೆ. ಹಿಂದಿನ ಸಾಲಿನಲ್ಲಿ ಕಕ್ಷಿಗಾರರು ಕೋರ್ಟು ಫೀಜಿಗಾಗಿ 1,89,401 ರೂಪಾಯಿ ದಂಡ ಹಾಕಿದರು. ಇದಲ್ಲದೆ ಅವರು ಲಾಯರುಗಳಿಗೆ ಫೀಜು ಕೊಟ್ಟಿದ್ದಾರೆ. ಇತರ ವಿಧದಲ್ಲೂ ಅವರ ಹಣ ವ್ಯರ್ಥವಾಗಿ ಖರ್ಚಾಗಿದೆ. ಕಕ್ಷಿಗಾರರೂ ಸಾಕ್ಷಿಗಳೂ ತಮ್ಮ ಕಾಲವನ್ನೂ ಕೆಲಸ ಕಾರ್ಯಗಳನ್ನೂ ಬಿಟ್ಟು ಕೋರ್ಟುಗಳಿಗೂ ಲಾಯರುಗಳ ಆಫೀಸುಗಳಿಗೂ ಅಲೆಯುತ್ತಿರುವರು. ಇಷ್ಟು ಹಣವನ್ನೂ ಕಾಲವನ್ನೂ ಅವರು ಕಸಬು ವ್ಯಾಪಾರಾದಿಗಳಿಗೆ ವಿನಿಯೋಗಿಸುತಿದ್ದ ಪಕ್ಷದಲ್ಲಿ ಪ್ರಜೆಗಳೂ ನಮ್ಮ ನಾಡೂ ಎಷ್ಟೋ ಅಭಿವೃದ್ಧಿಗೆ ಬರಬಹುದು.

ಕೋರ್ಟುಗಳು ಇರಬೇಕಾದದ್ದು ಆವಶ್ಯಕ; ಆದರೆ ಅವುಗಳಿಂದ ಜನರಿಗೆ ನಷ್ಟವೇ ಹೊರತು ಪ್ರಯೋಜನ ಕಡಮೆ. ಬಹಳ ವಿಶೇಷವಾದ ಮೊಕದ್ದಮೆಗಳನ್ನು ವ್ಯವಸ್ಥೆ ಮಾಡುವುದಕ್ಕೆ ಜಡ್ಜಿಗಳು ವಿದ್ವಾಂಸರೂ, ವಿವೇಕಿಗಳೂ, ಸತ್ಯಸಂಧರೂ ಆಗಿರಬೇಕು. ಸರ್ಕಾರದವರು ಪ್ರಕಟಿಸಿರುವ ಲೆಕ್ಕಗಳನ್ನು ನೋಡಿದರೆ ಹಲವು ಕೋರ್ಟುಗಳಲ್ಲಿ ಜಡ್ಜಿಗಳಿಗೆ ಬಹಳ ಹೆಚ್ಚು ಕೆಲಸವಿದೆ ಎಂದು ಗೊತ್ತಾಗುತ್ತದೆ. ಸರಿಯಾಗಿ ವಿಮರ್ಶೆಮಾಡಿದ ಪಕ್ಷದಲ್ಲಿ ಈ ಭಾಗವು ಎಷ್ಟು ಮಟ್ಟಿಗೆ ನ್ಯಾಯವಾದದ್ದೋ ಅಲ್ಲವೋ ವೇದ್ಯವಾದೀತು. ಹ್ಯಾಗೂ ನಮ್ಮ ಸಿವಿಲ್ ಕೋರ್ಟುಗಳಲ್ಲಿ ಇನ್ನೂ ಬೇಗ ಬೇಗನೆ ಕೆಲಸಗಳು ನಡೆಯುವಂತಾಗಬೇಕೆಂಬುವುದು ಆವಶ್ಯವಾಗಿದೆ.

ಹಿಂದಿನ ಸಾಲಿನಲ್ಲಿ ಕೋರ್ಟುಗಳ ತನಿಖೆಯು ಹೆಸರು ಮಾತ್ರಕ್ಕೆ ನಡೆದದ್ದೋ, ಅಥವಾ ಅದು ತೃಪ್ತಿಕರವಾಗಿಯೂ ನಿದರ್ಶಕ್ಷಣ್ಯವಾಗಿಯೂ ನಡೆಯಿತೋ ರಿಪೋರ್ಟಿನಿಂದ ಗೊತ್ತಾಗುವುದಿಲ್ಲ. ಹ್ಯಾಗೂ ಲೋಪದೋಷಗಳೇನೂ ಇರುವಂತೆ ರಿಪೋರ್ಟಿನಲ್ಲಿ ಕಾಣಿಸಿಲ್ಲ. ಆದಕಾರಣ ಸಿವಿಲ್ ಕೋರ್ಟುಗಳಲ್ಲಿ ಕೆಲಸ ಕಾರ್ಯಗಳು ಚೆನ್ನಾಗಿಯೂ, ಸರಾಗವಾಗಿಯೂ ಜರುಗುತ್ತಿವೆ ಎಂದೇ ರಿಪೋರ್ಟು ಓದುವವರಿಗೆ ಅರ್ಥವಾಗುವುದು. ಕಕ್ಷಿಗಾರರನ್ನೂ ಲಾಯರುಗಳನ್ನೂ ಈ ವಿಚಾರದಲ್ಲಿ ಪ್ರಶ್ನೆ ಮಾಡಿದರೆ ಅವರ ಕಥೆಯೇ ಇನ್ನೊಂದು ರೂಪವಾಗಿದ್ದರೂ ಇರಬಹುದು.

ಇತರರಿಗೆ ಸಲ್ಲಿಸಬೇಕಾದ ನಮ್ಮ ಧರ್ಮ.

ಕಳೆದ ವಾರದಲ್ಲಿ ನಾವು ಮೆ॥ ಮಹಜೀವಶಾಸ್ತ್ರಿಗಳು ಜಾತಿಯನ್ನು ಕುರಿತು ರಚಿಸಿರುವ ಪುಸ್ತಕದಿಂದ ಅನೇಕ ಭಾಗಗಳನ್ನು ಎತ್ತಿ ತೋರಿಸಿದೆವಷ್ಟೆ. ಅನೇಕ ವರುಷಗಳ ಹಿಂದೆ ಈ ನಮ್ಮ ಭರತಖಂಡದಲ್ಲಿ ಸರ್ವರೂ ಒಂದೇ ಜಾತಿಯವರಾಗಿದ್ದರೆಂದು ಅವರು ತಿಳಿಸುತ್ತಾರೆ. ನಾವು ಹಿಂದಿರುಗಿ ಆಂಥಾ ಸ್ಥಿತಿಗೆ ಹೋಗುವದು ಸಾಧ್ಯವಾದರೆ, ಅದು ನಮಗೆ ಎಷ್ಟೋ ಲಾಭಕರವಾಗಿರುವದು. ಆದ್ದರಿಂದ ಮಾನವರೆಲ್ಲರೂ ಅಣ್ಣತಮ್ಮಂದಿರಾಗಿಯೂ ಅಕ್ಕತಂಗಿಯರಾಗಿಯೂ ಇರುತ್ತಾರೆಂಬುವದರ ಅಭಿಪ್ರಾಯವೇನೆಂದು ನಾವು ಮುಂದಿಟ್ಟು ಮಾಡಿಕೊಳ್ಳಬೇಕು.

ಈ ಲೋಕದಲ್ಲಿ ಹುಟ್ಟಿದ ಧರ್ಮೋಪದೇಶಕರುಗಳ ಪೈಕಿ ಅತ್ಯಂತ ಪ್ರಸಿದ್ಧನಾದ ಯೇಸು ಕ್ರಿಸ್ತನು ತನ್ನ ಶಿಷ್ಯಮಂಡಲಿಯವರಿಗೆ ಈ ವಿಷಯದಲ್ಲಿ ಅವರು ಕೈಕೊಳ್ಳಬೇಕಾದ ಧರ್ಮವನ್ನು ಕುರಿತು ಉಪದೇಶಮಾಡಿರುವದೇನೆಂದರೆ:— "ಜನರಿಂದ ನಿಮಗೆ ಏನೇನು ಆಗಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ. ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ" ಎಂಬುವದೇ. ಹೀಗೆ ಹೇಳುವಲ್ಲಿ ತನ್ನ ಅಭಿಪ್ರಾಯವೇನೆಂಬುವದನ್ನು ಈ ಮುಂದಿನ ಮಾತುಗಳಲ್ಲಿ ಸ್ಪಷ್ಟವಾಗಿ ವಿವರಿಸಿರುತ್ತಾನೆ. ಹ್ಯಾಗಂದರೆ:— "ನಿನ್ನ ನೆರೆಯವನನ್ನು ಪ್ರೀತಿಸಬೇಕು; ನಿನ್ನ ವೈರಿಯನ್ನು ಹಗೆಮಾಡಬೇಕೆಂದು ಧರ್ಮಶಾಸ್ತ್ರದಲ್ಲಿ ಹೇಳಿಯದೆ ಎಂಬದಾಗಿ ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ—ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ಪ್ರಾರ್ಥನೆಮಾಡಿರಿ. ಹೀಗೆ ಮಾಡಿದರೆ, ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ. ನಿಮ್ಮನ್ನು ಪ್ರೀತಿಸುವವರನ್ನೇ ನೀವು ಪ್ರೀತಿಸಿದರೆ ನಿಮಗೆ ಫಲವೇನು? ಭ್ರಷ್ಟರೂ ಹಾಗೆ ಮಾಡುವದಿಲ್ಲವೇ? ನಿಮ್ಮ ಸಹೋದರರಿಗೆ ಮಾತ್ರ ನೀವು ವಂದನೆ ಕೊಟ್ಟರೆ ಏನು ಹೆಚ್ಚು ಮಾಡಿದ ಹಾಗಾಯಿತು? ಅನ್ಯಜನಗಳು ಸಹ ಹೀಗೆ ಮಾಡುವದಿಲ್ಲವೇ? ಆದದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ."

ನಾವೆಲ್ಲರೂ ಸಹೋದರರಾಗಬೇಕಾದರೆ, ನಾವು ನಮ್ಮನ್ನು ಅವರ ಸ್ಥಾನದಲ್ಲಿಟ್ಟುಕೊಂಡು—ನಾನು ಅವನ ಸ್ಥಾನದಲ್ಲಿದ್ದರೆ, ಅವನು ನನಗೆ ಏನು ಮಾಡಬೇಕೆಂದು ನಾನು ಅಪೇಕ್ಷಿಸುತ್ತಿದ್ದೆನು? ಎಂಬೀ ಪ್ರಶ್ನೆಯನ್ನು ಕೇಳಿಕೊಂಡು ಅದೇ ರೀತಿಯಲ್ಲಿ ನಾವು ಅವನ ವಿಷಯದಲ್ಲಿ ನಡೆದುಕೊಳ್ಳಬೇಕು.

ನಾವು ನಮ್ಮ ತಂದೆತಾಯಿಗಳನ್ನೂ ಗುರುಹಿರಿಯರನ್ನೂ ನಮಗಿಂತಲೂ ಶ್ರೇಷ್ಠರೆಂದು ಭಾವಿಸಿ ಅವರಿಗೆ ಸಲ್ಲತಕ್ಕ ಮಾನಮರ್ಯಾದೆಗಳನ್ನು ಸಲ್ಲಿಸುತ್ತಾ ಬರಬೇಕು. ನಾವು ನಮಗೆ ಸಮಾನರಾಗಿರುವವರನ್ನು ಕಂಡರೆ ಅವರಿಗೆ ತಕ್ಕ ಮರ್ಯಾದೆಯನ್ನೂ ಉಪಕಾರವನ್ನೂ ಮಾಡಬೇಕು. ನಾವು ಬಡವರನ್ನೂ ಕೀಳುಜಾತಿಯವರನ್ನೂ ಸಹಾಯಹೀನರಾಗಿರುವವರನ್ನೂ ನೋಡಿ ಅವರ ಕಷ್ಟಗಳಲ್ಲಿ ಅವರಿಗೆ ಸಹಾಯ ಮಾಡುವದಕ್ಕೆ ಬದ್ಧಕಂಕಣರಾಗಿರಬೇಕು. ಒಬ್ಬ ಮನುಷ್ಯನು ಎಷ್ಟೇ ಬಡವನಾಗಿದ್ದಾಗ್ಯೂ ಎಷ್ಟೇ ಹೀನವಾದ ಸ್ಥಿತಿಯಲ್ಲಿ ಬಿದ್ದಿದ್ದಾಗ್ಯೂ ನಾವು ಅವನನ್ನು ತಿರಸ್ಕಾರಮಾಡಬಾರದು.

ಅಂಥ ದುರ್ದಸೆಯು ನಮಗೇನೇ ಪ್ರಾಪ್ತವಾಗಿದ್ದ ಪಕ್ಷದಲ್ಲಿ ಇತರರು ನಮ್ಮ ಮೇಲೆ ಅಂತಃಕರಣವಿಟ್ಟು ನಮಗೆ ಉಪಕಾರಮಾಡಬೇಕೆಂದು ನಾವು ಹಾರೈಸುತ್ತಿದ್ದೆವಷ್ಟೆ. ಹಾಗಾದರೆ ಈಗ ನಾವು ಅವರ ಮೇಲೆ ಅಂತಃಕರಣವಿಟ್ಟು ಅವರಿಗೆ ಉಪಕಾರಮಾಡಲು ಬದ್ಧರಾಗಿರುತ್ತೇವೆ.

ದೇವರು ನಮ್ಮ ತಂದೆಯಾಗಿದ್ದಾನೆ; ಆತನೇ ಎಲ್ಲಾ ಮನುಷ್ಯರನ್ನು ಉಂಟುಮಾಡಿದ್ದಾನೆ; ಆತನು ಎಲ್ಲರನ್ನೂ ಪ್ರೀತಿಸುತ್ತಾನೆ, ನಾವು ಪಾಪಕ್ಷಮೆಯನ್ನು ಹೊಂದತಕ್ಕ ಮಾರ್ಗವನ್ನು ಆತನು ನಮಗೆ ಕಲ್ಪಿಸಿಕೊಟ್ಟಿರುತ್ತಾನೆ ಎಂಬೀ ಸಾರಗಳನ್ನು ನಾವು ಮೊಟ್ಟ ಮೊದಲು ಕಲಿಯಬೇಕು. ದೇವರು ನಮಗೂ ಎಲ್ಲಾ ಮನುಷ್ಯರಿಗೂ ತಂದೆಯಾಗಿದ್ದಾನೆಂಬುವದನ್ನು ನಾವು ಮನದಟ್ಟುಮಾಡಿಕೊಂಡ ಮೇಲೆ ನಾವು ಅವರನ್ನು ಪ್ರೀತಿಸಿ ಅವರು ತ್ರಿಕರಣಶುದ್ಧರೂ ಸತ್ಯಸಂಧರೂ ಸತ್ಪುರುಷರೂ ಸಂತೋಷವುಳ್ಳವರೂ ಆಗುವಂತೆ ಮಾಡುವದಕ್ಕೆ ಪ್ರಯತ್ನಪಡತಕ್ಕದ್ದು. ಯೇಸು ಕ್ರಿಸ್ತನು ನಮ್ಮ ಹಿರೀ ಅಣ್ಣನಾಗಿದ್ದಾನೆ. ಆತನು ನಮಗೆ ಒಳ್ಳೇ ಮಾದರಿಯನ್ನು ತೋರಿಸಿಕೊಟ್ಟಿರುತ್ತಾನೆ. ನಾವು ಆತನ ಸಹಾಯವನ್ನು ಬೇಡಿದರೆ ಆತನು ನಮಗೆ ಸಹಾಯಮಾಡ ಪೂರ್ಣ ಮನಸ್ಸುಳ್ಳವನಾಗಿಯೂ ಶಕ್ತನಾಗಿಯೂ ಇರುತ್ತಾನೆ.

ಯುದ್ಧದ ಸಮಾಚಾರಗಳು.

ವೆರ್ಡೂನ್ ಬಳಿ ಇನ್ನೂ ಯುದ್ಧವೇ.

ರಷ್ಯಾದವರ ಜಯಪ್ರದಗಳು.

ಈ ವಾರ ಬಂದಿರುವ ವರ್ತಮಾನಗಳು ವೆರ್ಡೂನ್ ಕೋಟೆಯ ಬಳಿ ನಡೆಯುವ ಯುದ್ಧವನ್ನೇ ವಿಶೇಷವಾಗಿ ವಿವರಿಸುತ್ತವೆ. ಅಲ್ಲಿ ಜರ್ಮನಿಯವರು ಹೇಗಾದರೂ ಫ್ರೆಂಚರ ಸೈನ್ಯಸಾಲುಗಳನ್ನು ಛೇದಿಸಿ ಒಳನುಗ್ಗಬೇಕೆಂದು ಸಂಕಲ್ಪಮಾಡಿಕೊಂಡು ಘೋರವಾಗಿ ಕದನಮಾಡುತ್ತಿದ್ದಾರೆ. ಆದರೆ ಇದುವರೆಗೂ ಅವರು ಪಟ್ಟಿರುವ ಸಾಹಸವೆಲ್ಲಾ ನಿಷ್ಪ್ರಯೋಜನವಾಗಿ ಪರಿಣಮಿಸಿದೆ. ಅತ್ತಲಾಗಿ ರಷ್ಯಾದವರು ಪೂರ್ವ ರಣರಂಗದಲ್ಲಿ ಚಟುವಟಿಕೆಯನು ತೋರಿಸುತ್ತಿದ್ದಾರೆ. ಇವರು ಇದುವರೆಗೆ ಕೆಲವು ಕಡೆ ಮುಂದರಿಸಿ ನುಗ್ಗಿ ಹೋಗಿರುವರೆಂದು ಕಾಣುತ್ತದೆ.

ಪಶ್ಚಿಮ ರಣರಂಗದಲ್ಲಿ.

ವೆರ್ಡೂನ್ ಪಟ್ಟಣದ ಬಳಿ ಸುಮಾರು ಒಂದು ತಿಂಗಳಿಗಿಂತಲೂ ಹೆಚ್ಚಾಗಿಯೇ ಯುದ್ಧಗಳು ನಡೆಯುತ್ತಾ ಬಂದಿವೆ. ಜರ್ಮನಿಯವರು ಇನ್ನೂ ಕೃತಾರ್ಥರಾದಂತೆ ಕಾಣುವುದಿಲ್ಲ. ವೆರ್ಡೂನ್ ಪಶ್ಚಿಮಕ್ಕೆ ಜರ್ಮನಿಯವರು ಒಂದು ಕಡೆ ಸುಮಾರು 800 ಗಜದ ದೂರ ಮುಂದಕ್ಕೆ ನುಗ್ಗಿ ಬಂದರು. ಫ್ರೆಂಚರಾದರೋ ಅವರಿಗೆ ನುಗ್ಗುವುದಕ್ಕೆ ಅವಕಾಶಕೊಡದಂತೆ ತಮ್ಮ ಠಾಣ್ಯಗಳನ್ನು ಬಹು ಬಲವಾಗಿ ಮಾಡಿಟ್ಟು ಕಾಪಾಡಿಕೊಳ್ಳುತ್ತಿದ್ದಾರೆ. ಜರ್ಮನಿಯವರು ಜ್ವಾಲಾದ್ರವ್ಯಗಳನ್ನು ಸುರಿಸಿ ಆ ಪ್ರದೇಶವನ್ನು ಗೆದ್ದುಕೊಂಡರಾದಾಗ್ಯೂ ಅವರ ಕಡೆ ಅನೇಕ ಸೈನಿಕರನ್ನು ಕಳಕೊಂಡರು. ಜರ್ಮನಿಯವರು ಎಂಥಾ ಕ್ರೂರವಾದ ಆಯುಧವನ್ನು ಪ್ರಯೋಗಮಾಡಿ ಎಷ್ಟು ನಷ್ಟಪಡಿಸಿದಾಗ್ಯೂ ಫ್ರೆಂಚರು ಅವರಿಗೆ ದಾರಿ ಸಿಗ್ಗಲಾರದೆಂದು ಸಂಕಲ್ಪಮಾಡಿಕೊಂಡು ಧೈರ್ಯ ಪರಾಕ್ರಮಗಳಿಂದ ಕಾದಿದವರಾಗಿದ್ದಾರೆ. ಅನೇಕವಾಗಿ ಸಣ್ಣಪುಟ್ಟ ಕದನಗಳೂ ನಡೆದು ಫ್ರೆಂಚರು ಶತ್ರುಗಳನ್ನು ಕೈಸೆರೆ ಹಿಡಿದು ತಂದರು.

ಜರ್ಮನಿಯವರು ಅನೇಕವಾಗಿ ಸೈನ್ಯಾದಿಗಳನ್ನು ಕಳೆದುಕೊಂಡಿದ್ದಾರೆ. ಜರ್ಮನಿಯವರು ತಮ್ಮ ಕಡೆ ಸತ್ತ ಸೈನಿಕರ 800 ಹೆಣಗಳನ್ನು ಒಂದು ರೈಲ್ ಗಾಡಿಯಲ್ಲಿ ಯುದ್ಧಭೂಮಿಯಿಂದ ಬೆಲ್ಜಿಯಮ್‌ಗೆ ಸಾಗಿಸಿಕೊಂಡು ಹೋಗಿ ಅಲ್ಲಿ ಸುಟ್ಟುಬಿಟ್ಟರೆಂದು ಒಂದು ತಂತೀ ವರ್ತಮಾನ ಹೇಳುತ್ತದೆ. ಅವರು ಹೀಗೆ ಇದಾರಿಗೂ ಗೊತ್ತಾಗದಂತೆ ತಮ್ಮ ಸೈನಿಕರು ಸತ್ತಿಲ್ಲವೆಂದು ತಮ್ಮ ಪ್ರಜೆಗಳಿಗೆ ತಿಳಿಸುವರು. ಈ ಘೋರಯುದ್ಧದಲ್ಲಿ ಬವೇರಿಯಾ ಸಂಸ್ಥಾನದ ಜರ್ಮನಿ ಸೈನಿಕರೇ ಬಹಳ ವಿಶೇಷವಾಗಿ ಮಡಿದುಹೋದರೆಂದೂ, ಅವರ ಸ್ಥಾನಕ್ಕೆ ಹೊಸಬರನ್ನು ತಂದಿಡಲು ಸೈನಿಕರೇ ಇಲ್ಲವೆಂದೂ ಹೇಳಲಾಗಿದೆ.

ಫ್ರೆಂಚರು ವೆರ್ಡೂನ್ ಪಟ್ಟಣವನ್ನು ಶತ್ರುವಿಗೆ ಬಿಟ್ಟುಕೊಡದೆ ಅತ್ಯಂತ ಪರಾಕ್ರಮದಿಂದ ಕಾದಾಡಿಕೊಂಡು ಬಂದಿದ್ದಾರೆ. ಅವರು ಇಷ್ಟು ಪರಾಕ್ರಮದಿಂದ ಹಿಂದೆ ಯಾವ ಕಾಲದಲ್ಲೂ ಯುದ್ಧಮಾಡಿದ್ದಿಲ್ಲವೆಂದು ಎಣಿಸುತ್ತಾರೆ. ಶತ್ರುವಿನ ಮುತ್ತಿಗೆಗಳನ್ನು ಅವರು ತಪ್ಪಿಸಿಕೊಂಡು ಆ ಸ್ಥಳವನ್ನು ಅತ್ಯಂತ ಜಾಗರೂಕತೆಯಿಂದ ಕಾಪಾಡಿಕೊಂಡಿರುವರು.

ಫ್ರೆಂಚ್ ಸೈನಿಕರಿಂದ ಒಂದು ಸಾಲನ್ನು ಬ್ರಿಟಿಷ್ ಸೈನಿಕರು ವಹಿಸಿಕೊಂಡಿರೋಣದರಿಂದ ಬ್ರಿಟಿಷ್ ಸೈನಿಕರಿರುವ ಯುದ್ಧ ಸಾಲು ಬಹಳ ದೀರ್ಘವಾಗಿರುತ್ತದೆ. ಸಿಡಿಗುಂಡುಗಳ ಹಾರಾಟವೂ, ಸಿಡಿಮದ್ದಿನ ಗುಂಡುಗಳ ಎಸೆದಾಟವೂ, ಸುರಂಗಗಳನ್ನು ಹಾರಿಸುವುದೂ ಬಹಳ ವಿಶೇಷವಾಗಿ ನಡೆದಿದೆ. ಆಗಾಗ್ಗೆ ಬ್ರಿಟಿಷರು ಕೆಲವು ಜರ್ಮನಿ ಸೈನಿಕರನ್ನು ಕೈಸೆರೆ ಹಿಡಿದು ತಂದಿದ್ದಾರೆ.

ಮಿತ್ರಮಂಡಲಿಯವರ ವಿಮಾನ ಯಂತ್ರಗಳು ಹೋಗಿ ಜೀಬ್ರುಗ್ಗೆ ಎಂಬ ಜರ್ಮನಿಯವರ ಸ್ಥಳದಲ್ಲಿ ನಷ್ಟಪಡಿಸಿ ಬಂದವಷ್ಟೆ. ಅದರ ಕೆಲವು ವಿವರಗಳು ಈಗ ಪ್ರಕಟವಾಗಿವೆ. 200 ಜರ್ಮನಿ ಸೈನಿಕರು ಕೊಲೆಯಾದರೆಂದೂ, ಗಾಯಪಟ್ಟ ಸುಮಾರು 350 ಮಂದಿಯನ್ನು ರೈಲ್ ಗಾಡಿಯಲ್ಲಿ ಆ ಪಟ್ಟಣದಿಂದ ಹೊರಕ್ಕೆ ಸಾಗಿಸಿಕೊಂಡು ಹೋದರೆಂದೂ ತಿಳಿಯುವದು. ಪ್ರಯೋಜನಕ್ಕೆ ಬರುವ ಪದಾರ್ಥಗಳೆಲ್ಲಾ ನಾಶಮಾಡಲ್ಪಟ್ಟವು; ತೀರದಲ್ಲಿ ಎರಡು ಸಬ್ ಮೆರೀನುಗಳು ಮುಳುಗಿದವು. ಸಣ್ಣ ಯುದ್ಧದ ಹಡಗುಗಳನ್ನು ತೀರದಿಂದ ಹೊರಕ್ಕೆ ಕಳುಹಿಸಿದರು. ಸಮುದ್ರದ ಮೇಲೆ ಬ್ರಿಟಿಷ್ ಹಡಗುಗಳು ಅವನ್ನು ತಡೆದು ಕೆಲವಕ್ಕೆ ಗುಂಡುಗಳನ್ನು ಹಾಕಿದವು. ಒಂದು ಟಾರ್ಪಿಡೋ ದೋಣಿಯು 6 ಮಂದಿಯನ್ನು ಕೊಂದುಹಾಕಿ, 30 ಮಂದಿಯನ್ನು ಗಾಯಗೊಳಿಸಿರುತ್ತದೆ. ಬ್ರಿಟಿಷರ ಕಡೆ ನಾಲ್ವರು ಮಾತ್ರ ಗಾಯಪಟ್ಟರು.

ಪೂರ್ವ ರಣರಂಗದಲ್ಲಿ.

ಜರ್ಮನಿಯವರು ವೆರ್ಡೂನ್ ಬಳಿ ಯುದ್ಧ ಕಾರ್ಯಗಳನ್ನು ನಡಿಸುವದರಲ್ಲಿ ಆಸಕ್ತರಾಗಿರುವುದು ಮಾತ್ರವಲ್ಲದೆ ಪೂರ್ವ ರಣರಂಗದಲ್ಲಿ ರಷ್ಯಾದವರ ಸೈನ್ಯಗಳ ಸಾಲನ್ನು ಛೇದಿಸಿ ನುಗ್ಗಬೇಕೆಂದು—ಅಂದರೆ ಬಹುಶಃ ರಷ್ಯಾದವರು ತಮ್ಮ ಮೇಲೆ ನುಗ್ಗಿ ಬಾರದಂತೆ ತಡೆಯಬೇಕೆಂಬ ಉದ್ದೇಶದಿಂದ ಸಾಹಸಪಟ್ಟರು. ರಷ್ಯಾದವರೇನೋ ಅಲ್ಲಿ ಬಲಪಡಿಸಿಕೊಂಡು ನುಗ್ಗುವುದಕ್ಕೆ ಸಿದ್ಧರಾಗಿದ್ದಾರೆ. ಮತ್ತು ಅವರ ಸೈನ್ಯಸಾಲಿನ ಉದ್ದಕ್ಕೂ ಕದನಗಳು ನಡೆದಿರುವವು. ಮೂರು ಠಾಣ್ಯಗಳೊಳಗೆ ಅವರು ಜರ್ಮನಿ ಸೈನ್ಯಗಳ ಸಾಲನ್ನು ಒಡೆದು ನುಗ್ಗಿದರು. ಉತ್ತರ ಭಾಗದಲ್ಲಿ ಅಂದರೆ ರೀಗಾ ಬಳಿ ರಷ್ಯಾದವರು ಜರ್ಮನಿಯವರ ಮೇಲೆ ಬಿದ್ದು ಅವರನ್ನು ಹಿಂದಕ್ಕೆ ಓಡಿಸಿದರು. ಯುದ್ಧ ಸಾಲಿನ ಮಧ್ಯಪ್ರದೇಶದಲ್ಲಿ ಒಂದು ಘೋರವಾದ ಕದನವಾಯಿತು. ಇದರಲ್ಲಿ ರಷ್ಯಾದವರು 1,273 ಜರ್ಮನಿಯವರನ್ನು, 18 ಮೆಷೀನ್ ಪಿರಂಗಿ, 39 ಮೋರ್ಟರುಗಳೆಂಬ ಭಾರಿ ಪಿರಂಗಿ ಮತ್ತು ಯುದ್ಧ ಸಾಮಗ್ರಿಗಳನ್ನೂ ಕೈಸೆರೆ ಹಿಡಿದಿರುತ್ತಾರೆ. ಇನ್ನು ಸ್ವಲ್ಪ ದಕ್ಷಿಣ ಭಾಗದಲ್ಲಿ ರಷ್ಯಾದವರು ಆಸ್ಟ್ರಿಯಾದವರ ಮೇಲೆ ನುಗ್ಗಿ ಕದನ ಮಾಡಿ ಹನ್ನೆರಡು ಮೈಲಿ ಅಗಲಕ್ಕೆ ಅವರನ್ನೆಲ್ಲಾ ಹಿಮ್ಮೆಟ್ಟಿಸಿರುತ್ತಾರೆ. ರಷ್ಯಾದವರು ಒಂದು ಸೇತುವೆಯನ್ನು ಗೆದ್ದು ಸ್ವಾಧೀನಪಡಿಸಿಕೊಂಡರು. ಆಸ್ಟ್ರಿಯಾದವರು ನದಿಯನ್ನು ದಾಟಿಕೊಂಡು ಬರಬೇಕೆಂದು ನುಗ್ಗಿದಾಗ ರಷ್ಯಾದವರು ಅವರ ಮೇಲೆ ಗುಂಡುಗಳನ್ನು ಹೊಡೆದು ಅನೇಕ ಸೈನ್ಯವನ್ನು ಹತಮಾಡಿರುತ್ತಾರೆ. ಆಸ್ಟ್ರಿಯಾದವರು ಸೋತು ಹಿಮ್ಮೆಟ್ಟಿದರೆಂದು ಒಪ್ಪಿಕೊಂಡಿದ್ದಾರೆ. ಅಲ್ಲಿ ರಷ್ಯಾದವರು ಎರಡು ಪಿರಂಗಿಗಳನ್ನು ಕಿತ್ತುಕೊಂಡರು. ಅಂತು ಪೂರ್ವ ರಣರಂಗದಲ್ಲಿ ಸೈನ್ಯಗಳು ಕದನ ಕಾರ್ಯಗಳನ್ನು ಬಹಳವಾಗಿ ನಡಿಸುತ್ತಲಿವೆ. ಜರ್ಮನಿಯವರು ವಿಲ್ನ ಪಟ್ಟಣವನ್ನು ಬಿಟ್ಟು

ವಶಪಡಿಸಿಕೊಂಡು, ರಷ್ಯಾದವರು ನುಗ್ಗಿ ಬಂದು ಮುತ್ತಿಗೆ ಹಾಕಿದರೆ ಅಡೆಯುವುದಕ್ಕೋಸ್ಕರ ಆ ನಗರವನ್ನು ಬಲಪಡಿಸಿಕೊಳ್ಳುತ್ತಿರುವರು.

ಇಟಲಿ.

ಇಟಲಿಯವರಿಗೂ ಆಸ್ಟ್ರಿಯದವರಿಗೂ ಕೆಲವು ಕದನಗಳು ನಡೆದರೂ ಒಂದು ರಾಜ್ಯದಲ್ಲಿ ಇಟಲಿಯವರು ಶತ್ರುವಿಗೆ ಸ್ವಲ್ಪ ಪ್ರದೇಶವನ್ನು ಬಿಟ್ಟುಕೊಡಬೇಕಾಯಿತು. ಆದರೂ ಇಟಲಿಯವರು ನಿಧಾನವಾಗಿಯೇ ಮುಂದಕ್ಕೆ ನುಗ್ಗಿ ಹೋಗುತ್ತಲಿರುವರು.

ಟರ್ಕಿಯಲ್ಲಿ.

ಟರ್ಕಿ ಯುದ್ಧ ಭೂಮಿಗಳಿಂದ ವಿಶೇಷ ತಂತೀವರ್ತಮಾನಗಳು ಬಂದಿಲ್ಲ. ರಷ್ಯಾದವರು ಅರ್ಮೀನಿಯದಲ್ಲಿ ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಲ್ಲಿ ನುಗ್ಗುತ್ತಿದ್ದಾರೆ. ಸುತ್ತ ಹಿಮ್ಮೆಟ್ಟಿ ಹೋಗುತ್ತಿರುವ ಟರ್ಕಿಯವರಿಂದ ರಷ್ಯಾದವರು ಇನ್ನೆರಡು ಪಿರಂಗಿಗಳನ್ನು ಕಿತ್ತು ಸ್ವಾಧೀನ ಮಾಡಿಕೊಂಡರು.

ಮೆಸೊಪೊಟೇಮಿಯಾದಲ್ಲಿ ಟರ್ಕಿಯವರಿಗೆ ಸೇರಿದ ಒಂದು ಸಣ್ಣ ದೋಣಿಯನ್ನು ಬ್ರಿಟಿಷರು ಗೆದ್ದುಕೊಂಡರು. ಬ್ರಿಟಿಷರ ಕಡೆ ಈ ಕದನದಲ್ಲಿ ನಾಲ್ವರು ಸತ್ತವರು. ಕುಟೆಲ್ ಅಮಾರಾದೊಳಗೆ ಶತ್ರುವು ವಿಮಾನಯಂತ್ರಗಳಿಂದಲೂ ಪಿರಂಗಿಗಳಿಂದಲೂ ಗುಂಡುಗಳನ್ನು ಸುರಿಸಿದರು. ಇದರಿಂದ ವಿಶೇಷ ನಷ್ಟವೇನೂ ಆಗಲಿಲ್ಲ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಈ ಯುದ್ಧಭೂಮಿಯಿಂದಲೂ ವಿಶೇಷ ಸಮಾಚಾರಗಳೇನೂ ಬಂದಿಲ್ಲ. ಬಲ್ಗೇರಿಯದವರಿಗೂ, ರೂಮೇನಿಯದವರಿಗೂ ಶತ್ರುತ್ವವು ಕ್ರಮೇಣ ಹೆಚ್ಚುತ್ತಿರುವಂತೆ ಕಾಣುವುದು. ಆದರೂ ಅವರವರು ಬಹಿರಂಗವಾಗಿ ಇನ್ನೂ ಯುದ್ಧಕ್ಕೆ ತೊಡಗಿಲ್ಲ.—ಜರ್ಮನಿಯವರು ಸಲೊನೀಕದ ಉತ್ತರ ಭಾಗಕ್ಕೆ ಹೋಗಿ ಫ್ರೆಂಚರ ಮೇಲೆ ನುಗ್ಗಿ ಕದನ ಮಾಡಿದರೆಂದೂ, ಫ್ರೆಂಚರು ಅವರಿಗೆ ಸ್ವಲ್ಪವೂ ಜಯ ದೊರಕದ ಪರಾಕ್ರಮದಿಂದ ತಮ್ಮ ಠಾಣ್ಯಗಳನ್ನು ಕಾಪಾಡಿಕೊಳ್ಳುತ್ತಿದ್ದಾರೆಂದೂ ಹೇಳಲಾಗಿದೆ.

ಪರ್ಷಿಯಾದಲ್ಲಿ.

ಪರ್ಷಿಯಾದಲ್ಲಿ ಜರ್ಮನಿಯವರೂ ಟರ್ಕಿಯವರೂ ಕುಶಲದಿಂದ ಮಾಡುತ್ತಿರುವ ದಂಗೆಯನ್ನು ರಷ್ಯಾದವರು ನುಗ್ಗಿಹೋಗಿ ಸ್ವಲ್ಪ ಸ್ವಲ್ಪವಾಗಿ ಅಡಗಿಸುತ್ತಿದ್ದಾರೆ. ಅಲ್ಲಿ ಒಂದು ಕದನವಾಯಿತು. ರಷ್ಯಾದವರು ಇಸ್ಪಹಾನ್ ಪಟ್ಟಣವನ್ನು ಗೆದ್ದು ಸ್ವಾಧೀನ ಮಾಡಿಕೊಂಡರು. ಇದುವರೆಗೆ ಜರ್ಮನಿಯವರೂ ಟರ್ಕಿಯವರೂ ಒಂದಾಗಿ ಆ ಪಟ್ಟಣದೊಳಗೆ ಬಹಳ ಕಷ್ಟವನ್ನುಂಟುಮಾಡಿದ್ದರು. ಆದಕಾರಣ ಪ್ರಜೆಗಳು ರಷ್ಯಾದವರು ಬಂದದ್ದನ್ನು ನೋಡಿ ಬಹಳ ಸಂತೋಷಪಡುತ್ತಿದ್ದಾರೆ.

ಪಿರ್ಡ ಬಳಿ.

ಪರ್ಡ ಎಂಬ ತೀರಪಟ್ಟಣದಿಂದ ಸುಮಾರು ಹತ್ತು ಮೈಲಿ ದೂರದಲ್ಲಿ ಬಮುದ್ ಎಂಬ ಸ್ಥಳದಲ್ಲಿ ಕೆಲವು ದಿನಗಳ ಹಿಂದೆ ಒಂದು ಕದನವಾಯಿತು. ಟರ್ಕಿಯ ಮುಖ್ಯ ದಾರರು ಟರ್ಕಿ ಸೈನಿಕರನ್ನು ನಡಿಸಿಕೊಂಡು ಬಂದು ಆ ಠಾಣ್ಯಕ್ಕೆ ಮುತ್ತಿಗೆಹಾಕಿದರು. ಬ್ರಿಟಿಷ್ ಸೈನಿಕರು ಕೂಡಲೇ ಅವರನ್ನು ಹಿಂದಕ್ಕೆ ಓಡಿಸುತ್ತಿದ್ದರು. ಬಳಿಕ ಅವರು ಶತ್ರುವನ್ನು ನಾಲ್ಕು ಮೈಲಿಯವರೆಗೆ ಓಡಿಸಿಕೊಂಡು ಹೋಗುವಾಗ್ಗೆ ಶತ್ರು ಪಕ್ಷದ 17 ಹೆಣಗಳು ಬಿದ್ದಿದ್ದವು. ಬ್ರಿಟಿಷರ ಕಡೆ ಒಬ್ಬ ಸೈನಿಕನು ಕೊಲೆಯಾದನು; 17 ಮಂದಿ ಗಾಯಪಟ್ಟರು.

ಪೂರ್ವ ಅಫ್ರಿಕಾದಲ್ಲಿ.

ಜನರಲ್ ಸ್ಮಟ್ಸ್ ಯವರು ಪೂರ್ವ ಅಫ್ರಿಕಾದಲ್ಲಿ ಇನ್ನೊಂದು ಜಯಪ್ರದವನ್ನು ಹೊಂದಿದರು. ಜರ್ಮನಿಯ ಸೈನ್ಯಗಳು ಓಡಿಹೋಗಿ ಒಂದು ನದಿಯ ಆಚೆಯ ಒತ್ತಾದ ಜಂಗಲಿನಲ್ಲಿ ಸೇರಿಕೊಂಡಿದ್ದವು. ಅವರ ಮೇಲೆ ನುಗ್ಗಿ ಹೋಗುವುದು ಬಹಳ ಕಷ್ಟಕರವಾಗಿತ್ತು. ಮಳೆಗಳು ಹಿಡಿದು ಸೈನ್ಯ ಬರುವುದಕ್ಕೆ ಅಡಚಣೆಯಾಗಿತ್ತು. ತಾ. 19 ರಲ್ಲಿ ಗಿಡಗಳ ಮಧ್ಯೆ ಬಹಳ ಕಾದಾಟವಾಯಿತು. ಮರುದಿನ ಜರ್ಮನಿಯವರು ಬ್ರಿಟಿಷ್ ಸೈನ್ಯದ ಮೇಲೆ ನುಗ್ಗಿದರು. ಆದರೆ ನಮ್ಮ ಸೈನಿಕರು ಅವರಲ್ಲಿ ಅನೇಕರನ್ನು ಕೊಂದು ಉಳಿದವರನ್ನು ಹಿಂದಕ್ಕೆ ಓಡಿಸಿಬಿಟ್ಟರು. ಅಷ್ಟರೊಳಗೆ ದಕ್ಷಿಣ ಆಫ್ರಿಕಾ ಸೈನಿಕರು ರಾತ್ರೋರಾತ್ರಿ ನುಗ್ಗಿಹೋಗಿ ಜರ್ಮನಿ ರೈಲ್ ಮಾರ್ಗವನ್ನು ಕಡಿದು ಒಂದು ಸ್ಟೇಷನನ್ನು ಗೆದ್ದು ಸ್ವಾಧೀನಪಡಿಸಿಕೊಂಡರು. ಇಷ್ಟಾಗುವಾಗ್ಗೆ ಜರ್ಮನಿಯವರ ಕಡೆಗೆ ಹೊಸ ಸೈನ್ಯಗಳು ಬಂದು ಸೇರಿಕೊಂಡು ತಮ್ಮ ಕಡೆಯವರ ಬೆಂಬಲಕ್ಕೆ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟವು. ಇದರಲ್ಲಿ ಅವರ ಕಡೆ ಬಹಳ ನಷ್ಟವಾಯಿತು. ತಾ. 21 ನೇ ರಾತ್ರಿ ಜರ್ಮನಿಯವರು ಆ ನದಿಯ ಬಳಿಯ ಠಾಣ್ಯವನ್ನು ತ್ಯಜಿಸಿ ರೈಲ್ ಮಾರ್ಗವನ್ನು ಹಿಡಿದು ದಕ್ಷಿಣಕ್ಕೆ ಹಿಮ್ಮೆಟ್ಟಿದರು. ಬ್ರಿಟಿಷರು ಆ ನದಿಯಲ್ಲಿ ಒಂದು ಜರ್ಮನಿ ಯುದ್ಧದ ಹಡಗನ್ನು ಮುಳುಗಿಸಿದಾಗ ಅದರಲ್ಲಿದ್ದ ಒಂದು ದೊಡ್ಡ ಪಿರಂಗಿಯನ್ನು ಜರ್ಮನಿಯವರು ತೆಗೆದುಕೊಂಡುಹೋಗಿದ್ದು ಈ ಯುದ್ಧದಲ್ಲಿ ಅದನ್ನು ಇಟ್ಟುಕೊಂಡು ಕದನ ಮಾಡಿದರು. ಈಗ ಬ್ರಿಟಿಷರು ಅವರಿಂದ ಈ ಪಿರಂಗಿಯನ್ನು ಕಿತ್ತು ಸ್ವಾಧೀನ ಮಾಡಿಕೊಂಡಿದ್ದಾರೆ. ಆ ಪ್ರದೇಶದಲ್ಲಿ ಯುದ್ಧ ಇನ್ನೂ ನಡೆಯುತ್ತಲೇ ಇದೆ. ಬ್ರಿಟಿಷ್ ಯುದ್ಧದ ಇಲಾಖಾ ಸೆಕ್ರೆಟರಿ ಲಾರ್ಡ್ ಕಿಚ್ನರವರು ಜನರಲ್ ಸ್ಮಟ್ಸ್ ರವರಿಗೆ ತಮ್ಮ ಸಂತೋಷವನ್ನು ತಂತೀವರ್ತಮಾನ ಕೊಟ್ಟು ತಿಳಿಸಿದ್ದಾರೆ.

ಇತರ ವಿಷಯಗಳು.

ಬ್ರಿಟಿಷರು ಉತ್ತರ ಸಮುದ್ರದಲ್ಲಿ ಫೆಬ್ರವರಿ ತಾ. 29 ರಲ್ಲಿ ಹಡಗುಗಳ ಒಂದು ಸಣ್ಣ ಯುದ್ಧವಾಯಿತೆಂದು ತಿಳಿಸಿದ್ದಾರೆ. ಜರ್ಮನಿಯ ಒಂದು ಯುದ್ಧದ ಹಡಗು ನಾರ್ವೆ ವರ್ತಕ ಹಡಗಿನಂತೆ ವೇಷ ಮರೆಸಿಕೊಂಡು ಉತ್ತರ ಸಮುದ್ರವನ್ನು ದಾಟಬೇಕೆಂದು ಪ್ರಯತ್ನಪಟ್ಟಿತು. ಅದನ್ನು ಬ್ರಿಟಿಷರ ಒಂದು ವ್ಯಾಪಾರ ಹಡಗು ಕಂಡಿತು. ಕೂಡಲೆ ಅವೆರಡೂ ಕಲೆತು ಯುದ್ಧಮಾಡಿದವು. ಕಡೆಗೆ ಎರಡೂ ಮುಳುಗಿಹೋದವು. ಜರ್ಮನಿಯ ಟಾರ್ಪಿಡೋ ಬಿದ್ದು ಬ್ರಿಟಿಷ್ ಹಡಗೂ, ಬ್ರಿಟಿಷರ ಪಿರಂಗಿ ಗುಂಡು ಬಿದ್ದು ಜರ್ಮನಿ ಹಡಗೂ ಮುಳುಗಿದವು. ನಮ್ಮ ಹಡಗುಗಳು ಹೋಗಿ ಸಮುದ್ರದಿಂದ 5 ಮಂದಿ ಜರ್ಮನಿ ಅಧಿಕಾರಿಗಳನ್ನೂ 166 ಮಂದಿ ಸೈನಿಕರನ್ನೂ ಎತ್ತಿ ಸೆರೆ ಹಿಡಿದವು. ಉಳಿದ ಸುಮಾರು 130 ಮಂದಿ ಸಮುದ್ರದ ಪಾಲಾದರು. ಬ್ರಿಟಿಷರ ಕಡೆ 5 ಮಂದಿ ಅಧಿಕಾರಿಗಳೂ, 60 ಜನರೂ ನಷ್ಟಹೊಂದಿದರು. ಜರ್ಮನಿಯವರಿಗೆ ತಿಳಿಯದ ಹಾಗೆ ಗುಟ್ಟುಮಾಡಬೇಕೆಂಬ ಉದ್ದೇಶವಿದ್ದದ್ದರಿಂದ ಬ್ರಿಟಿಷರು ಈ ವಿಚಾರವನ್ನು ಮೊದಲೇ ಹೊರಪಡಿಸಲಿಲ್ಲ.

ಮುಂದಿನ ಜೂನ್ ತಿಂಗಳ ವರೆಗೆ ಆಸ್ಟ್ರೇಲಿಯಾದವರು 2,09,000 ತರಬೇತಾದ ಸೈನಿಕರನ್ನು ಯುದ್ಧ ಭೂಮಿಗೆ ಕಳುಹಿಸಿದ್ದಾಗುವುದು. ಇದಲ್ಲದೆ ಇನ್ನೂ ಬೇರೆ 80,000 ಸೈನ್ಯಗಳು ಈಗ ತರಬೇತಾಗುತ್ತವೆ.

ಜರ್ಮನಿಯವರು ಯುದ್ಧವನ್ನು ನಡಿಸುವುದಕ್ಕೆ ಹೆಚ್ಚು ಹೆಚ್ಚಾಗಿ ಹಣವನ್ನು ಸಾಲಮಾಡಬೇಕಾಗಿ ಬಂದಿದೆ. ಜರ್ಮನಿಯ ಶತ್ರುಗಳು ಸೋತಿದ್ದರೂ ಸೋತೆವೆಂದು ಒಪ್ಪುವುದಿಲ್ಲವಾಗಿ ಯುದ್ಧ ನಡಿಸುತ್ತಾ ಬರಬೇಕಾಗಿದೆ ಎಂದೂ ಇದಕ್ಕೋಸ್ಕರ ಹೆಚ್ಚು ಹಣ ಬೇಕಾಗಿದೆ ಎಂದೂ ಅಧಿಕಾರಿಗಳು ಹಣಕ್ಕಾಗಿ ಜರ್ಮನಿಯವರು ಹಣ ಕೊಡುತ್ತಿದ್ದಾರೆ. ಎಲ್ಲರೂ ಹಣ ಕೊಡಬಲ್ಲರೆಂದೂ, ಎಲ್ಲರೂ ಕೊಡಲೇಬೇಕೆಂದೂ ತಿಳಿಸಿದ್ದಾರೆ. ಯುದ್ಧವನ್ನು ಮುಂದರಿಸುವುದಕ್ಕೋಸ್ಕರ ಹೆಂಗಸರು ಮಕ್ಕಳು ಕೂಡ ಹಣವನ್ನು ಕೂಡಿಸಿ ಕೊಡಬೇಕೆಂದು ಆಜ್ಞೆ ಮಾಡಿದ್ದಾರೆ.

ಸರ್ಬಿಯ ಸೈನ್ಯಾಧಿಕಾರಿಯಾದ ಜನರಲ್ ಕಾಡೋರ್ನಾಯವರು ಪಾರಿಸ್ ಮತ್ತು ಲಂಡನ್ ಪಟ್ಟಣಗಳಿಗೆ ಬಂದಿದ್ದರು. ಎರಡು ಕಡೆಗಳಲ್ಲೂ ಅವರಿಗೆ ವಿಶೇಷ ಸನ್ಮಾನಗಳು ನಡೆದವು. ಲಂಡನ್ ಪಟ್ಟಣದಲ್ಲಿ ನಮ್ಮ ಜಾರ್ಜ್ ಸಾರ್ವಭೌಮರವರು ಅವರಿಗೆ ಭೇಟಿ ದಯಪಾಲಿಸಿದರು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಸರ್ ಎಡ್ವರ್ಡ್ ಗ್ರೇಯವರು ಆಡ್ರೆಸ್ ತೀರ್ಮಾನ ಮಾಡುವಾಗ್ಗೆ ಬೆಲ್ಜಿಯಮ್ ರಾಜಪ್ರತಿನಿಧಿಯನ್ನು ಮಂತ್ರಾಲೋಚನಾ ಸಭೆಗೆ ಸೇರಿಸಿಕೊಳ್ಳುವೆವೆಂದೂ, ಬೆಲ್ಜಿಯಮಿಗೆ ಸಂಭವಿಸಿರುವ ನಷ್ಟಗಳಿಗೆ ತಕ್ಕ ಪರಿಹಾರ ದೊರಕುವ ವರೆಗೂ ಯುದ್ಧವನ್ನು ನಿಲ್ಲಿಸುವುದಿಲ್ಲವೆಂದೂ ಹೇಳಿದರು.

ಪೋರ್ಚುಗಲ್ ರಾಜ್ಯದ ಮಾಜಿ ದೊರೆಯಾದ ಮ್ಯಾನ್ಯುಯಲ್‌ಯವರು ಪೋರ್ಚುಗಲ್ ರಾಜ್ಯವು ಯುದ್ಧಕ್ಕೆ ಹೊರಡುವುದಾದರೆ ತಾವೂ ಸಹಾಯ ಮಾಡುವುದಾಗಿ ತಿಳಿಸಿದ್ದಾರೆ.

ಈಚೆಗೆ ಜರ್ಮನಿಯ ಸಬ್‌ಮೆರೀನುಗಳು ಹಲವು ಹಡಗುಗಳನ್ನು ಮುಳುಗಿಸಿರುತ್ತವೆ. ಬ್ರಿಟಿಷರದು ಎಂಟು, ನೋರ್ವೆಯವರದು ಎರಡು, ಗ್ರೀಕರದು ಎರಡು, ಫ್ರೆಂಚರದು ಎರಡು, ಅಂತು 14 ಹಡಗುಗಳನ್ನು ಮುಳುಗಿಸಿದವು. ಜರ್ಮನಿಯವರ ಸಬ್‌ಮೆರೀನುಗಳ ಹಾವಳಿಯನ್ನು ನೋಡಿ ಡಚ್ ನಾವಿಕರು ತಮ್ಮ ಹಡಗುಗಳನ್ನು ಹತ್ತುವುದಿಲ್ಲವೆಂದು ತಿರಸ್ಕಾರಮಾಡಿದ್ದಾರೆ.

ಬ್ರಿಟಿಷರ ಒಂದು ಸಬ್‌ಮೆರೀನು ನೋರ್ವೆಯ ಒಂದು ಹಡಗನ್ನು ಹಿಡಿದು ಅದರಲ್ಲಿ ಆರು ಜನರನ್ನು ಹತ್ತಿಸಿ ಅವರ ಮೂಲಕ ಅದನ್ನು ಇಂಗ್ಲೆಂಡಿಗೆ ಸಾಗಿಸಿಕೊಂಡುಹೋಗುತ್ತಿದ್ದಾರೆ.

ಲಾರ್ಡ್ ಕರ್ಜನ್ ರವರಿಗೆ ಕ್ರಮೇಣ ವಾಸಿಯಾಗುತ್ತಿದೆ. ಆದರೆ ಅವರ ತಂದೆ ಲಾರ್ಡ್ ಸ್ಕಾರ್ಸ್‌ಡೇಲ್ ರವರು ಕಳೆದ ವಾರ ಕಾಲವಾದರು.

ದೆಹಲಿ ನಗರದಲ್ಲಿ ಹಿಂದೂಸ್ಥಾನದ ಸೈನಿಕರಿಬ್ಬರನ್ನು ಹಿಡಿದು ಮಿಲಿಟರಿ ಕೋರ್ಟಿನಲ್ಲಿ ದರ್ಯಾಪ್ತಿ ಮಾಡಿದರು. ರಾಜದ್ರೋಹಕರವಾದ ಒಂದು ಕಾರಿ ನಡೆಯುತ್ತಿದ್ದದ್ದು ಅವರಿಗೆ ತಿಳಿದಿತ್ತೆಂದೂ, ಆದರೆ ಅವರು ಆ ಸಂಗತಿಯನ್ನು ತಮ್ಮ ಉದ್ದೇಶಕರ ತಿಳುವಳಿಕೆಗೆ ತರಲಿಲ್ಲವೆಂದೂ ಅಪರಾಧ ರುಜುವಾತಾಯಿತು. ಆ ವ್ಯಕ್ತಿ ಮೇಲ್ದರ್ಜೆಯವನಾಗಿದ್ದ ಮೊದಲನೇ ಅಪರಾಧಿಗೆ ಮರಣದಂಡನೆಯನ್ನು ವಿಧಿಸಿ, ಎರಡನೆಯವನನ್ನು ಸೀರಿನ ಮೇಲೆ ಸಾಗಿಸಿಬಿಟ್ಟರು.

ಇಂಗ್ಲೆಂಡಿನಿಂದ ಫ್ರಾನ್ಸಿಗೆ ಹಿಂದುಸ್ಥಾನ ಆಂಟಿ ಬತ್ತಿಗಳನ್ನು ಸಾಗಿಸುತ್ತಿದ್ದ ಬ್ರಿಟಿಷ್ ಜಹಜನ್ನು ಟಾರ್ಪಿಡೋ ಬಡಿಸಿ ಹಗಲಿನಲ್ಲೇ ಮುಳುಗಿಸಿದರು. ಆದರೆ ಆ ಜಹಜು ಮುಳುಗಿಹೋಗಲಿಲ್ಲ. ಅದನ್ನು ಸುರಕ್ಷಿತವಾಗಿ ಫ್ರಾನ್ಸಿಗೆ ಸಾಗಿಸಿ ತಂದರು. ಆದರೆ ಅದರೊಳಗಿದ್ದ ಯಂತ್ರಗಳು ಒಡೆದದ್ದರಿಂದ ದೆಸೆಯಿಂದ ಸುಮಾರು ನೂರು ಮಂದಿ ಸತ್ತುಹೋದರು. ಅವರಲ್ಲಿ ಅನೇಕರು ಪ್ರಯಾಣಿಕರಾಗಿದ್ದರು.

ಬ್ರಿಟಿಷ್ ಸಮುದ್ರ ವಿಮಾನಗಳೂ, ಬ್ರಿಟಿಷ್ ಯುದ್ಧದ ಹಡಗುಗಳೂ ನುಗ್ಗಿ ಹೋಗಿ ಜರ್ಮನಿಯವರ ವಿಮಾನ ಯಂತ್ರಗಳಿದ್ದ ಠಾಣ್ಯಗಳನ್ನು ಮುತ್ತಿಗೆ ಹಾಕಿದವು. ಈ ಸಂದರ್ಭದಲ್ಲಿ ಎರಡು ಬ್ರಿಟಿಷ್ ಹಡಗುಗಳು ಎದುರು ಬದುರಾಗಿ ನುಗ್ಗಿ ಒಡೆದಾಡಿದವು. ಬಿರುಗಾಳಿ ಜೋರಾಗಿದ್ದ ಕಾರಣ ಆ ಪೈಕಿ ಒಂದು ಹಡಗು ಮುಳುಗಿಹೋದಂತೆ ಕಾಣುತ್ತದೆ. ಆದರೆ ಅವುಗಳಲ್ಲಿದ್ದವರ ಪ್ರಾಣಕ್ಕೇನೂ ಅಪಾಯ ಸಂಭವಿಸಲಿಲ್ಲ. ನಮ್ಮ ಡಿಸ್ಟ್ರಾಯರುಗಳೆಂಬ ಹಡಗುಗಳು ಜರ್ಮನಿಯವರ ಎರಡು ಹಡಗುಗಳನ್ನು ಮುಳುಗಿಸಿದವು. ಡೆನ್ಮಾರ್ಕಿನ ಪತ್ರಿಕೆಗಳು ಜರ್ಮನಿಯ ವಿಮಾನಯಂತ್ರಗಳ ಠಾಣ್ಯಗಳು ನಾಶವಾಗಲ್ಪಟ್ಟವೆಂದು ತಿಳಿಸಿರುವವು. ನಮ್ಮ ಮೂರು ಸಮುದ್ರ ವಿಮಾನಗಳು ಸಿಕ್ಕಿ ಇಲ್ಲ.

ಒಳದೇಶದ ವೃತ್ತಾಂತಗಳು.

ಮೈಸೂರು ಸಂಪದಭಿವೃದ್ಧಿಯ ಏಳನೇ ಮಹಾ ಸಭೆಯು ರಾಜಧಾನಿಯಲ್ಲಿ ವರ್ಧಂತಿ ಉತ್ಸವಗಳು ಬೆಳೆಯುವಾಗ್ಗೆ ಅಂದರೆ ಜೂನ್ ತಾ. 9 ನೇ ಶುಕ್ರವಾರ ಪ್ರಾರಂಭವಾಗುವುದು.

ಮೈಸೂರು–ಅರಸೀಕೆರೆ ರೈಲ್ ಮಾರ್ಗದಲ್ಲಿರುವ ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿಗೆ ಸೇರಿದ ಬಾಗಡೆ ಎಂಬ ಸ್ಟೇಷನ್ ಹೆಸರನ್ನು ಬಾಗೇಶಪುರವೆಂದು ಬದಲಾವಣೆ ಮಾಡಿದ್ದಾರೆ.

ಚಿತ್ರದುರ್ಗ ಟೌನ್ನಿಗೆ ಕಣ್ಣಹಾಳು ಕೆರೆಯಿಂದ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಖರ್ಚಾಗುವುದೆಂದೂ, ಅದಕ್ಕಾಗಿ ಆ ಮ್ಯುನಿಸಿಪಾಲಿಟಿಯವರು ಪ್ರಜೆಗಳಿಂದ ಸಾಲವನ್ನು ಕೂಡಿಸಬಹುದೆಂದೂ ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಿದ್ದಾರೆ.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಒಂದು ನೂರು ಎ. ವಿ ಸ್ಕೂಲುಗಳನ್ನು ಹೊಸದಾಗಿ ಇಡಬೇಕಾಗಿರುವುದರಿಂದ ಕನ್ನಡದಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆ ಕೊಟ್ಟವರು ಉಪಾಧ್ಯಾಯ ಕೆಲಸದಲ್ಲಿ ಅನುಭವವಿಲ್ಲದಿದ್ದರೂ ಮಾರ್ಚ ತಾ. 20 ರೊಳಗಾಗಿ ಅರ್ಜಿ ಬರೆದುಕೊಳ್ಳಬಹುದೆಂದು ಡೆಪ್ಯುಟಿ ಇನ್ಸ್‌ಪೆಕ್ಟರು ಮಾರ್ಚ 28 ನೇ ತಾ. ಗೆಜೆಟ್ಟಿನಲ್ಲಿ ಪ್ರಕಟ ಮಾಡಿದ್ದಾರೆ.

ನಮ್ಮ ಬ್ರಿಟಿಷ್ ರೆಸಿಡೆಂಟ್ ಸರ್ ಡೇಲಿಯವರು ನಾಳೆ ಸೋಮವಾರ ಆ ಪದವಿಯನ್ನು ಹೊಸ ರೆಸಿಡೆಂಟರಾದ ಮಿ|| ಕಾಬ್‌ಯವರಿಗೆ ವಹಿಸಿ, ಸೀಮೆಗೆ ತೆರಳುವರು. ಇಂಡಿಯಾ ಗವರ್ನ್‌ಮೆಂಟಿನವರು ಇವರನ್ನು ಮತ್ತೆ ಮಿಲಿಟರಿ ಇಲಾಖೆಗೆ ಸೇರಿಸಿಕೊಳ್ಳುವಂತೆ ಪ್ರಕಟವಾಗಿದೆ.

ಮೊದಲನೇ ಕೌನ್ಸಿಲರ್ ಮ|| ಎಚ್. ವಿ. ನಂಜುಂಡಯ್ಯನವರು ನಾಳೆ ತಾರೀಖಿನಿಂದ ಆ ಕೆಲಸದಿಂದ ನಿವೃತ್ತರಾಗುವರೆಂದೂ, ಮ|| ಕಾಂತರಾಜ ಅರಸಿನವರು ಬರುವ ತನಕ ಚೀಫ್ ಕೋರ್ಟ್ ಜಡ್ಜರಾದ ಮ|| ಕೆ. ಎಸ್. ಚಂದ್ರಶೇಖರ ಅಯ್ಯರವರು ಕೌನ್ಸಿಲ್ ಮೆಂಬರಾಗಿ ನೇಮಿಸಲ್ಪಡುವರೆಂದೂ ಪ್ರಕಟವಾಗಿದೆ. ಹೊಸದಾಗಿ ಕೌನ್ಸಿಲ್ ಮೆಂಬರಾಗಿ ನೇಮಕವಾದ ಮ|| ಬನರ್ಜಿಯವರು ಕಳೆದ ವಾರ ಒಂದು ದಿನದ ಮಟ್ಟಿಗೆ ರಾಜಧಾನಿಗೆ ಬಂದಿದ್ದು ಶ್ರೀಮನ್ ಮಹಾರಾಜರವರ ಭೆಟಿ ಮಾಡಿಕೊಂಡು ಬೆಂಗಳೂರಿಗೆ ವಾಪಸು ಹೋದರು.

ಮೈಸೂರು ವೆಸ್ಲಿಯನ್ ಮಿಷನ್ ಹೈ ಸ್ಕೂಲಿನಲ್ಲಿ ಐದು ವರುಷಗಳಿಂದ ಉಪಾಧ್ಯಾಯರಾಗಿದ್ದ ಮ|| ಡಿ. ದೇವಪುತ್ರಯ್ಯನವರು ಸ್ವಂತ ವಿದ್ಯಾಭಿವೃದ್ಧಿಯ ನಿಮಿತ್ತ ಬೆಂಗಳೂರಿಗೆ ಹೋಗುತ್ತಾರಾದ ಕಾರಣ ಸ್ಕೂಲಿನ ವಿದ್ಯಾರ್ಥಿಗಳು ಸೇರಿ ಅವರಿಗೆ ಮೊನ್ನೆ ಮಂಗಳವಾರ ರಾತ್ರಿ ಪ್ರಿನ್ಸಿಪಾಲ್ ರೆವ್|| ಎಚ್. ಸ್ಪೆನ್ಸರ್ ಯವರ ಅಧ್ಯಕ್ಷತೆಯಲ್ಲಿ ಬೀಳ್ಕೊಡುವ ಉತ್ಸವವನ್ನು ನಡಿಸಿದರು. ಸಣ್ಣ ಹುಡುಗರೇ ಸೇರಿಕೊಂಡು ನಡಿಸಿದ ನಾಟಕಾದಿ ಸಂತೋಷಕಾರ್ಯಗಳು ಅವರ ಭಕ್ತಿಪ್ರೀತಿಗಳನ್ನು ಚೆನ್ನಾಗಿ ಪ್ರಕಾಶಪಡಿಸಿದವು. ಮ|| ದೇವಪುತ್ರಯ್ಯನವರ ಶ್ರೇಯಸ್ಸನ್ನು ಬಯಸಿ ಅವರಿಗೆ ಅಡ್ರೆಸ್ಸನ್ನೂ ಬೆಳ್ಳಿ ಕಟ್ಟಿ ಬೆತ್ತವನ್ನೂ ಒಪ್ಪಿಸಿದರು.

ಬಾತ್ಮಿದಾರರುಗಳಿಂದ.—ಏಪ್ರಿಲ್ ತಾ. 2 ಕ್ಕೆ ಇಂಗ್ಲಿಷ್ ಮತ್ತು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯು ಬಾಲಕ ಬಾಲಕಿಯರಿಗೆ ಅಂದರೆ ನಿರಕ್ಷರ ಮತ್ತು ಇತರ ಜನಾಂಗದ ಬಾಲಕರಿಗೂ ಸಹ ತುಮಕೂರು ಟವನ್ನಿನಲ್ಲಿರುವ ಶ್ರೀ ಕರಿಬಸವಸ್ವಾಮಿಗಳ ಮಠದಲ್ಲಿ ಭೋಜನಕ್ಕೆ ಅನುಕೂಲಪಡಿಸಿರುತ್ತೆ. ಬರತಕ್ಕ ಬಾಲಕರು ಮೂರು ದಿವಸ ಮುಂಚಿತವಾಗಿ ಇಷ್ಟು ಜನ ಬರುತ್ತೇವೆಂದು ಮ|| ಬ್ಯಾಟೆ ಶೆಟ್ಟರ ಕರಿಬಸಪ್ಪನವರಿಗೆ ತಿಳಿಸಬೇಕಲ್ಲದೆ ಅವರ ಹಾಸಿಗೆಗಳನ್ನು ತರಬೇಕು.—ಶ್ರೀರಂಗಪಟ್ಟಣದ ಸೆಂಟರಿಗೆ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಬರುವ ವಿದ್ಯಾರ್ಥಿಗಳು ಹಾಸಿಗೆ ಹೊದ್ದಿಕೆಗಳನ್ನು ಮಾತ್ರ ಅವಶ್ಯ ತರಬೇಕಾಗಿ ಸೂಚಿಸಲ್ಪಟ್ಟಿದೆ.

ಒಬ್ಬ ಬಾತ್ಮಿದಾರರಿಂದ.—ನಮ್ಮ ದಿವಾನರವರ ಸ್ವಂತ ಸಿಬ್ಬಂದಿಗೆ ಸೇರಿದ ಡಾ|| ವಿ. ನಂಜಪ್ಪನವರು ಬೆಂಗಳೂರು ಸೇವಾ ಸಮಾಜದ ಮೆಂಬರುಗಳ ಪ್ರಯೋಜನಾರ್ಥವಾಗಿ ಸುಮಾರು ಎರಡು ತಿಂಗಳಿಂದ ಪ್ರತಿ ಭಾನುವಾರವೂ "ಅಪಾಯಗಳಲ್ಲಿ ಪ್ರಾಥಮಿಕ ಸಹಾಯ" ವೆಂಬ ವಿಷಯದಲ್ಲಿ ಬಹಳ ಸ್ವಾರಸ್ಯವಾಗಿ ಉಪನ್ಯಾಸಗಳನ್ನು ಕೊಡುತ್ತಿದ್ದರು. ಜನಗಳಿಗೆ ಸಂಭವಿಸುವ ಅಪಾಯಗಳನ್ನು ವಿವರಿಸಿ ಅಂಥಾ ಕಾಲಗಳಲ್ಲಿ ಕೂಡಲೆ ಮಾಡಬೇಕಾದ ಉಪಾಯಗಳನ್ನೂ ಬಹಳ ಚೆನ್ನಾಗಿ ತಿಳಿಯ ಪಡಿಸಿದರು. ಶರೀರ ಭಾಗಗಳನ್ನು 3-4 ಸಲ ವಿವರಿಸಿ ಅನೇಕ ಭಾಗಗಳನ್ನು ಪಠಗಳ ಮೂಲಕವೂ, ಪದಾರ್ಥಗಳ ಮೂಲಕವೂ ತಿಳಿಸಿದರು. ಡಾ|| ವಿ. ನಂಜಪ್ಪನವರು ಈ ಸಮಾಜದ ಮೇಲೆ ತುಂಬಾ ಅಭಿಮಾನವಿಟ್ಟು ಮೆಂಬರುಗಳಿಗೆ ಈ ಉಪಕಾರವಮಾಡಿ ಅವರ ಅಪಾರವಾದ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಪ್ರೊಫೆಸರ್ ರಾಮಮೂರ್ತಿಯವರು ರಾಜಧಾನಿಯಲ್ಲಿ ದಿನವೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶನ ಮಾಡುತ್ತಿದ್ದಾರೆ. ಶ್ರೀಮನ್ ಮಹಾರಾಜರವರು ಕಳೆದ ಭಾನುವಾರ ರಾತ್ರಿ ಅವರನ್ನು ಬಾಸ್ ಬಂಗಲೆಗೆ ಕರೆಸಿ ಅವರು ನಡಿಸಿದ ಕಾರ್ಯಗಳನ್ನು ಪರಾಂಬರಿಸಿದರು. ಬ್ರಿಟಿಷ್ ರೆಸಿಡೆಂಟರೂ ಆಗ್ಗೆ ದಯಮಾಡಿದ್ದರು. ಶ್ರೀಮನ್ ಮಹಾರಾಜರವರು ಪ್ರೊ. ರಾಮಮೂರ್ತಿಯವರಿಗೆ ಪ್ರತ್ಯೇಕ ಭೇಟಿ ದಯಪಾಲಿಸಿ ಬಹಳ ಹೊತ್ತು ಅವರ ಕೂಡ ಸಂಭಾಷಣೆ ಬೆಳಸಿದರು. ಪ್ರೊಫೆಸರವರ ಕೂಡ ಬಂದಿರುವ ಯೌವನಸ್ಥರು ಬಹು ಸಾಹಸವಾದ ಯುಕ್ತಿಶಕ್ತಿ ಕಾರ್ಯಗಳನ್ನು ಮಾಡುತ್ತಾರೆ. ಫಿಲಿಪ್ಪೈನ್ ರಾಜ್ಯದ ಒಬ್ಬ ಹುಡುಗನು ತಂತಿಯ ಮೇಲೆ ಓಡಾಡುವುದೂ, ತಂತಿಯ ಮೇಲೆ ಬೈಸಿಕಲ್ ಹತ್ತಿ ಓಡಿಸುವುದೂ, ಇನ್ನೂ ಇತರ ಸೂಕ್ಷ್ಮ ಕೆಲಸಗಳನ್ನು ಮಾಡುವುದೂ ವಿಸ್ಮಯಕರವಾಗಿವೆ. ಪ್ರೊಫೆಸರವರು ಮೊನ್ನೆ ಮಂಗಳವಾರ ರಾತ್ರಿ ಉತ್ಪತ್ತಿಯಾದ ಹಣವನ್ನು ರಾಜಧಾನಿಯ ಕೀಳು ಜಾತಿ ಜನರನ್ನು ಉದ್ಧರಿಸುವ ಫಂಡಿಗೆ ಉಚಿತವಾಗಿ ಕೊಟ್ಟು ಸಹಾಯಮಾಡಿದ್ದು ಸ್ತೋತ್ರಾರ್ಹವಾಗಿದೆ.

ಕಳೆದ ಶನಿವಾರ ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು 19 ನೇ ವಾರ್ಷಿಕೋತ್ಸವವನ್ನು ಹಲವು ಸಂತೋಷ ಜನಕವಾದ ಕಾರ್ಯಗಳಿಂದ ಸಂಭ್ರಮವಾಗಿ ನಡಿಸಿದರು. ಸೆಕ್ರೆಟರಿಯವರ ರಿಪೋರ್ಟಿನಿಂದ ಈ ಕ್ಲಬ್ಬು ಉಚ್ಛ್ರಾಯಸ್ಥಿತಿಯಲ್ಲಿರುವುದೆಂದೂ, ಮೆಂಬರುಗಳೇ ಸೇರಿ ಸಾಲದ ಪತ್ರಗಳನ್ನು ಕೊಂಡು ಸ್ವಂತ ಕಟ್ಟಡವನ್ನು ದಿವ್ಯವಾಗಿಯೂ ಅನುಕೂಲವಾಗಿಯೂ ಮಾಡಿಕೊಂಡಿದ್ದಾರೆಂದೂ ತಿಳಿದು ಸಂತೋಷಪಡುತ್ತೇವೆ. ವಿದ್ಯಾವಂತರೂ ಅಧಿಕಾರಿಗಳೂ ಏಕೀಭವಿಸಿ ಸ್ವಲ್ಪ ಹೊತ್ತು ಈ ರೀತಿ ವಿಹರಿಸುವುದು ನಾನಾ ಭಾಗಗಳಲ್ಲಿ ಶ್ರೇಯಸ್ಕರವಾಗಿವೆ. ಮ|| ಎ. ಸುಬ್ರಹ್ಮಣ್ಯ ಅಯ್ಯರವರು ಪ್ರೆಸಿಡೆಂಟರಾಗಿಯೂ, ರಾವ್ ಬಹದೂರ್ ಮ|| ಎಂ. ಸಿ. ರಂಗಯ್ಯಂಗಾರ್ರು ವೈಸ್ ಪ್ರೆಸಿಡೆಂಟರಾಗಿಯೂ, ಮ|| ಡಿ. ವೆಂಕಟರಾಮಯ್ಯನವರೂ, ಮ|| ಎ. ವಿ. ಕರ್ವೆಯವರೂ ಸೆಕ್ರೆಟರಿಗಳಾಗಿಯೂ ಚುನಾಯಿಸಲ್ಪಟ್ಟರು. ಕಳೆದ ವರುಷ ಕ್ಲಬ್ಬಿನ ಕೆಲಸಕಾರ್ಯಗಳನ್ನು ಅಚ್ಚುಕಟ್ಟಾಗಿಯೂ, ಮಿತವ್ಯಯದಿಂದಲೂ ನಡಿಸಿ, ಹಣವನ್ನು ಮಿಗಿಸಿದ್ದಕ್ಕಾಗಿ ಮ|| ಎಸ್. ವೆಂಕಟಕೃಷ್ಣಯ್ಯನವರನ್ನೂ ಮ|| ಎ. ವಿ. ಕರ್ವೆಯವರನ್ನೂ ಮೆಂಬರುಗಳೆಲ್ಲಾ ಸಂತೋಷದಿಂದ ವಂದಿಸಿ ಆ ದಿನ ರಾತ್ರಿ ದಿವ್ಯವಾದ ಭಕ್ಷ್ಯಭೋಜ್ಯಗಳನ್ನು ಮಾಡಿಸಿ ಒಟ್ಟಾಗಿ ಕಲೆತು ಭೋಜನಮಾಡಿದರು.

ಮೈಸೂರು ಗೆಜೆಟ್ ಸಂಗ್ರಹ.

ಸದ್ಯ ಕಸಬು ಮತ್ತು ವಾಣಿಜ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಮ|| ಎಸ್. ರಾಘವೇಂದ್ರರಾಯರನ್ನು ಸಂಸ್ಥಾನದಲ್ಲಿ ಕೆಲವು ದಾರಿ ಸ್ಕೂಲುಗಳನ್ನು ವೃದ್ಧಿಮಾಡಿ ಮೇಲ್ವಿಚಾರಣೆ ನೋಡಿಕೊಳ್ಳುವಂತೆ ತಾತ್ಕಾಲಿಕವಾಗಿ ವಿದ್ಯಾಭ್ಯಾಸದ ಇಲಾಖೆಗೆ ವರ್ಗಮಾಡಿದೆ.

ಮ|| ಕೆ. ಆರ್. ವೆಂಕಟಸುಬ್ಬಾಚಾರ್ರನ್ನು ರೈಲ್ವೆ ಇಲಾಖೆಗೆ ವರ್ಗಮಾಡಿರೋದರಿಂದ ಸಬ್ ಅ|| ಇಂಜನಿಯರ್ ಮ|| ವೈ. ರಾಮಸ್ವಾಮಿಯವರನ್ನು ಕಾವೇರಿ ರಿಸರ್ವಾಯರ್ ಕಾಮಗಾರಿಯಿಂದ ನೀರಿನ ಸರಬರಾಯಿ ಇಲಾಖೆಗೆ ವರ್ಗಮಾಡಿದೆ.

ಅ|| ಇಂಜನಿಯರ್ ಮ|| ಎನ್. ಸುಬ್ಬರಾಯರನ್ನು ಬೆಂಗಳೂರಿನಿಂದ ಕಡೂರಿಗೂ, ಸಬ್ ಅ|| ಇಂಜನಿಯರ್ ಮ|| ಹುಸೇನ್ ಡಿ. ಅಬ್ಬಾಸ್ ಯವರನ್ನು ಕಾವೇರಿ ರಿಸರ್ವಾಯರ್ ಕಾಮಗಾರಿಯಿಂದ ಬೆಂಗಳೂರು ಡಿವಿಜನ್‌ಗೂ ವರ್ಗಮಾಡಿದೆ.

ಮೈಸೂರು ನ್ಯಾಯ ವಿಧಾಯಕ ಸಭೆಗೆ ಮುಂದೆ ಹೇಳುವವರು ಡಿಸ್ಟ್ರಿಕ್ಟುಗಳ ಪರವಾಗಿ ಚುನಾವಣೆ ಮಾಡಲ್ಪಟ್ಟಿದ್ದಾರೆ—ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲರ್ ಮ|| ಬಿ. ಕೆ. ಗರುಡಾಚಾರ್ಯರು, ಮೈಸೂರು ಮ್ಯುನಿಸಿಪಲ್ ಕೌನ್ಸಿಲರ್ ಮ|| ಎಂ. ವೆಂಕಟಕೃಷ್ಣಯ್ಯನವರು, ಚಿತ್ರದುರ್ಗದ ಅಡ್ವೊಕೇಟ್ ಮ|| ಬಿ. ವೆಂಕಟರಾಮಣ್ಣನವರು, ಶಿವಮೊಗ್ಗ ಅಡ್ವೊಕೇಟ್ ಮ|| ಎಸ್. ಸೀತಾರಾಮಯ್ಯನವರು.

ಒಂದು ಮಾದರಿ ಟವನ್.

ತುಮಕೂರು ನೆಲಮಂಗಲದ ತಾಲ್ಲೂಕಿನಲ್ಲಿ ಒಂದು ಮ್ಯುನಿಸಿಪಲ್ ಟೌನ್. ಇದರಲ್ಲಿ 4,000 ಕ್ಕಿಂತಹೆಚ್ಚು ಪ್ರಜೆಗಳಿದ್ದಾರೆ. ಈ ಊರು ಈಚೆಗೆ ನಾಗರೀಕತೆಯಲ್ಲಿ ತುಂಬಾ ಪ್ರಸಿದ್ಧಿಗೆ ಬರುತ್ತಿರುವುದು. ಇಲ್ಲಿ ಒಂದು ಎ. ವಿ. ಸ್ಕೂಲ್, 4 ಹಿಂದೂಸ್ಥಾನಿ ಸ್ಕೂಲುಗಳು ಮಾತ್ರ ಇದ್ದುವು. ಈಚೆಗೆ ಹಿಂದೂ ಗರ್ಲ್ಸ್ ಸ್ಕೂಲು, ಮಾದಿಗರ ಸ್ಕೂಲು, ಹೊಲೆಯರ ಸ್ಕೂಲು, 4 ನೈಟ್ ಸ್ಕೂಲುಗಳು ಏರ್ಪಾಡಾಗಿವೆ. ಹೋಮ್ ಎಜುಕೇಷನ್ ಕ್ಲಾಸಿನಲ್ಲಿ 20 ಬ್ರಾಹ್ಮಣ ಹೆಂಗಸರೂ, 10 ಅಕ್ಕಸಾಲಿ ಸ್ತ್ರೀಯರೂ ವಿದ್ಯಾಭ್ಯಾಸ ಮಾಡುತ್ತಿರುವುದೂ, 18 ಹುಡುಗಿಯರು ಎ. ವಿ ಕ್ಲಾಸಿನಲ್ಲಿ ಇಂಗ್ಲಿಷ್ ಕಲಿಯುತ್ತಿರುವುದೂ ಇಲ್ಲಿಗೆ ಮಾತ್ರವೇ ಅಲ್ಲ, ದೇಶಕ್ಕೇ ಭೂಷಣವಾಗಿದೆ. ವ್ಯವಸಾಯಗಾರರ ಮಕ್ಕಳಿಗೆ ಒಪ್ಪತ್ತು ಮಾತ್ರ ವಿದ್ಯೆ ಕಲಿಸುವ ಮೂರು ಕ್ಲಾಸುಗಳು ಬೇರೆ ಬೇರೆ ಕಡೆಗಳಲ್ಲಿ ಇಟ್ಟಿವೆ. 15 ಮಂದಿ ಮುಸಲ್ಮಾನರ ಹುಡುಗರು ಕನ್ನಡ ಕಲಿಯಲಿಕ್ಕೆ ಬರುತ್ತಾರೆ. ಎ. ವಿ. ಕ್ಲಾಸುಗಳಲ್ಲಿ ಬಡಗಿ ಕೆಲಸ, ಬಿದಿರು ಕೆಲಸ ಕಲಿಸುತ್ತಿದ್ದಾರೆ. ಹೊಲಿಗೆ ಮತ್ತು ನೆಯಿಗೆ ಕಲಿಸಲು ಪ್ರಯತ್ನಿಸಿದೆ. ಎರಡು ವಾಚಕಶಾಲೆಗಳೂ, ಒಂದು ಆರ್ಯಧರ್ಮೋಜ್ಜೀವಿನೀ ಸಭೆಯೂ ಇದೆ. ಈ ಸಭೆಯಲ್ಲಿ ನಿತ್ಯವೂ ಬೆಳಗ್ಗೆ ಭಗವದ್ಗೀತೆ ಮತ್ತು ಉಪನಿಷತ್ತು ಕಲಿಸಲ್ಪಡುವವು. ಪ್ರತಿ ಸಾಯಂಕಾಲವೂ 2 ಘಂಟೆ ಹೊತ್ತು ಪೇಟೆಯ ರೀಡಿಂಗ್ ರೂಂ ಎದುರಿಗೆ ಪೌರಾಣಿಕ ಕಥೆ ನಡೆಯುತ್ತಿರುವುದರಿಂದ ಮುನ್ನೂರು ಮಂದಿಯ ವರೆಗೆ ಕಥೆಯನ್ನು ಕೇಳುವುದಕ್ಕೆ ಬರುತ್ತಿದ್ದಾರೆ. ನಿತ್ಯವೂ ಬೆಳಗ್ಗೆ ಹೂವಿನ ತೋಟದಲ್ಲಿ ಬಂದವರಿಗೆ ಸದಾಚಾರವನ್ನು ಬೋಧಿಸಿ ನೀತಿಯನ್ನು ಕಲಿಸಲು ಏರ್ಪಾಡಾಗಿರುವುದಲ್ಲದೆ ಸಾಯಂಕಾಲ 30 ವೈಶ್ಯರ ಹುಡುಗರಿಗೆ ದೇವರ ಸ್ತೋತ್ರಗಳು ಕಲಿಸಲ್ಪಡುವವು. ಪ್ರತಿ ಭಾನುವಾರವೂ ಹೂವಿನ ತೋಟದಲ್ಲಿ ಹತ್ತೆಂಟು ಮಂದಿ ವೈಶ್ಯರು ಮಂತ್ರಪೂರ್ವಕವಾಗಿ ಸೂರ್ಯ ನಮಸ್ಕಾರ ಮಾಡುತ್ತಿದ್ದಾರೆ. ಇಲ್ಲಿ ಒಂದು ಪರೋಪಕಾರ ಸಂಘವೂ, ಆರೋಗ್ಯ ವ್ಯವಸಾಯ ಸಂಘಗಳೂ ಇಷ್ಟರಲ್ಲಿಯೇ ಏರ್ಪಾಡಾಗುವವು. ಎ. ವಿ. ಸ್ಕೂಲಿನಲ್ಲಿ ಒಂದು ಕೋಆಪರೇಟಿವ್ ಸೊಸೈಟಿ ಸ್ಥಾಪಿಸಲ್ಕೆ ತೀರ್ಮಾನವಾಗಿದೆ. ಇವುಗಳಿಗೆಲ್ಲಾ ಬೇಸರವಿಲ್ಲದೆ ಕೆಲಸಮಾಡುತ್ತಿರುವ ಎ. ವಿ. ಸ್ಕೂಲ್ ಹೆಡ್ ಮಾಸ್ಟರ ಪ್ರಯತ್ನಗಳೂ, ಅಮಲ್ದಾರ್ ಮ|| ಕೃಷ್ಣಸ್ವಾಮಿರಾಯರ ಪ್ರೋತ್ಸಾಹವೂ ಮುಖ್ಯ ಕಾರಣಗಳಾಗಿವೆ. ಇವರ ಸಾಹಸ ಪ್ರಯತ್ನಗಳಿಂದ ಮುಂದೆ ಇನ್ನೂ ಅನೇಕವಾಗಿ ವಿದ್ಯೆ, ವ್ಯಾಪಾರ, ವ್ಯವಸಾಯ ಮೊದಲಾದ ಸಂಪದಭಿವೃದ್ಧಿ ಕಾರ್ಯಗಳು ಪಡೆದು, ಪ್ರಜೆಗಳಿಗೆ ತುಂಬಾ ಸೌಖ್ಯವುಂಟಾಗುವುದೆಂದು ನಂಬುತ್ತೇನೆ. ಇವನ್ನು ಮಾದರಿಯ ಊರೆಂದು ಏಕೆ ಕರೆಯಬಾರದು?

ಯಥಾರ್ಥವಾದಿ.

[ಈ ಊರು ಪ್ರಜೆಗಳ ಆರೋಗ್ಯವನ್ನು ಕಾಪಾಡುವುದಕ್ಕೆ ತಕ್ಕಷ್ಟು ಚೊಕ್ಕಟವಾಗಿರುವುದೇ?—ಎಡಿ.]

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ತಾ 18 ನೇ ಶನಿವಾರ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲಿನಲ್ಲಿ ಸಭೆ ಸೇರಿ ತಿಂಗಳ ಕಟ್ಟಿಯ ಮ್ಯುನಿಸಿಪಲ್ ಮೀಟಿಂಗನ್ನು ನಡೆಸಿದರು. ಅವರ ಖರ್ಚು ಮೊದಲಾದ ಲೆಕ್ಕಗಳನ್ನು ಸಿ ಸಿ ಪ್ಯಾಸ್ ಮಾಡಿದ ಬಳಿಕ ಪ್ರಸ್ತಾಪಿಸಿದ ವಿಷಯಗಳು ಯಾವುವೆಂದರೆ—

ಧರ್ಮ ನಾರಪ್ಪನವರ ಚತ್ರದ ಮಳಿಗೆಗಳಿಗೆ ಅಂಗಡಿ ಕಂದಾಯವನ್ನು ವಸೂಲಿ ಮಾಡಬಹುದೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ—ಆಸ್ಪತ್ರೆಯ ಆಸ್ಪತ್ರೆಗೆ ಎರಡನೇ ಕಂಪೌಂಡರನ್ನು ಇನ್ನೊಂದು ವರುಷದ ತನಕ ನೇಮಿಸಿಕೊಳ್ಳುವಂತೆ ಸ್ಯಾಂಕ್ಷನ್ ಆಗಬೇಕೆಂದು ಮೆಂಬರುಗಳು ಶಿಫಾರಸು ಮಾಡಿದಾರೆ—ಮ್ಯುನಿಸಿಪಲ್ ಇಂಜಿನಿಯರ್ ಮ ಇ ರಾಮಸ್ವಾಮಿ ಅಯ್ಯಂಗಾರರಿಗೆ ಬಂಗಲೆ ಕಟ್ಟಿಕೊಳ್ಳುವುದಕ್ಕೆ ಬೀರು ಮಾಡುವ ನವೀನದಲ್ಲಿ ಇನ್ನು 15 ಅಡಿ ಸ್ಥಳವನ್ನು ಸೇರಿಸಿ ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು— ಮ್ಯುನಿಸಿಪಲ್ ಕಂದಾಯವನ್ನು ವಸೂಲ್ಮಾಡುವುದಕ್ಕೆ ಸ್ವಲ್ಪದಿನ ಮಟ್ಟಿಗೆ ಪ್ರತಿ ತಿಂಗಳ ಕಾಲ 30 ರೂಪಾಯಿ ಸಂಬಳದ ಮೇಲೆ ಒಬ್ಬ ಹಂಗಾಮಿ ರೆವಿನ್ಯೂದಾರರನ್ನು ನೇಮಿಸಿಕೊಳ್ಳಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದರು— ಮ್ಯುನಿಸಿಪಲ್ ಇಂಜಿನಿಯರ್ ಆಫೀಸಿಗೆ ಒಂದು ದೊಡ್ಡ ಮೇಜಿನ ಬೀರುವನ್ನು ಮಾಡಿಸಿಕೊಳ್ಳುವುದಕ್ಕೆ 150 ರೂಪಾಯಿ ಖರ್ಚು ಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು—ಮುದ್ದಪ್ಪ ಪೂರ್ಣಯ್ಯನವರ ತನಕ ಮನೆಗಳಿಗೆ ಹೊಸದಾಗಿ ನೀರಿನ ನಲ್ಲಿ ಇಡಿಸಿಕೊಂಡರೆ ವಾಟರ್ ಎಂಬ ನೀರು ಅಳೆಯುವ ಯಂತ್ರವನ್ನು ಇಡಬೇಕಾದದಿಲ್ಲವೆಂದು ಸರ್ಕಾರದವರು ಹುಕುಂ ಕೊಟ್ಟಿದಾರೆ.

ಮ॥ ಅಂಬಳೆ ಅಣ್ಣಯ್ಯ ಪಂಡಿತರು ಸ್ವಂತ ಖರ್ಚಿನಿಂದ ಒಂದು ಬಾಲಿಕಾ ಪಾಠಶಾಲೆಯನ್ನು ಕಟ್ಟಿಸಿಕೊಡುವುದರಿಂದ ಅದು ಆ ಕಟ್ಟಡಕ್ಕೆ ಉಪಯೋಗಿಸುವ ಮನೆಗೆ ಆಕ್ಟ್ರಾಯ್ ಸುಂಕವನ್ನು ವಸೂಲಿ ಮಾಡಬಾರದೆಂದು ಮೆಂಬರುಗಳು ಒಪ್ಪಿ ಶಿಫಾರಸು ಮಾಡಿದಾರೆ—ಬೆಳಗೊಳದಲ್ಲಿ ನೀರನ್ನು ಎತ್ತಿ ರಾಜಧಾನಿಗೆ ಕಳುಹಿಸುವ ಭಾಗವನ್ನು ಮಾತ್ರ ಸರ್ಕಾರದವರೇ ಇಟ್ಟುಕೊಂಡು ಪಟ್ಟಣದಲ್ಲಿ ನೀರು ಹಂಚಿಕೊಡುವ ಭಾಗವನ್ನು ಮ್ಯುನಿಸಿಪಲ್ ಕೌನ್ಸಿಲಿಗೆ ವಹಿಸಬೇಕೆಂದು ಹಿಂದೆ ಕೌನ್ಸಿಲ್‌ನವರು ತೀರ್ಮಾನಮಾಡಿ ಸರ್ಕಾರದವರನ್ನು ಕೇಳಿಕೊಂಡಿದ್ದರು ಗವರ್ನ್‌ಮೆಂಟಿನವರು ಆಗಿನ ಏರ್ಪಾಡನ್ನು ಬದಲಾಯಿಸುವುದು ಸರಿಯಾಗಿ ತೋರುವುದಿಲ್ಲವಾದ್ದರಿಂದ ಮ್ಯುನಿಸಿಪಾಲಿಟಿಯವರ ಸಲಹೆಯನ್ನು ಅಂಗೀಕರಿಸಲಾಗದೆಂದು ಅಪ್ಪಣೆ ಕೊಟ್ಟಿದಾರೆ—ದೇವರಾಜ ಮಾರ್ಕೆಟ್ಟಿನ ಅಂಗಡಿಗಳಿಗೆ ವಿದ್ಯುಚ್ಛಕ್ತಿ ದೀಪಗಳನ್ನು ಇಡಿಸಿದ್ದಕ್ಕೆ 1,783 ರೂಪಾಯಿ ಖರ್ಚಾಯಿತು ಇದನ್ನು ಸ್ಯಾಂಕ್ಷನ್ ಮಾಡಬೇಕೆಂದು ಮೆಂಬರುಗಳು ಶಿಫಾರಸು ಮಾಡಿದಾರೆ—ಸೂಲಿಗಿತ್ತಿ ತಿಮ್ಮಮ್ಮನವರಿಗೆ ಕೊಡತಕ್ಕ ಅಲೋಯನ್ಸನ್ನು ಸರ್ಕಾರದಿಂದಲೇ ಪಾವತಿ ಮಾಡಬೇಕೆಂದೂ, ಮ್ಯುನಿಸಿಪಾಲಿಟಿಯವರಿಗೆ ವಹಿಸುವುದಿಲ್ಲವೆಂದೂ ಹುಕುಂ ಆಗಿದೆ—ದೇವರಾಜ ಮಾರ್ಕೆಟ್ಟಿನಲ್ಲಿ ಬದಲಾವಣೆಗಳನ್ನು ಮಾಡಿ ಹೊಸ ಕಾಮಗಾರಿ ಮಾಡಿಸುವುದಕ್ಕೆ ಸರ್ಕಾರದವರು 4,18,135 ರೂಪಾಯಿನ ಅಂದಾಜು ಪಟ್ಟಿಯನ್ನು ಸ್ಯಾಂಕ್ಷನ್ ಮಾಡಿದಾರೆ—ಜೀವಣ್ಣ ರಾಯನ ಕಟ್ಟೆ ಬಳಿ ಬಡ ಪ್ರಯಾಣಿಕರು ಇಳುಕೊಳ್ಳುವುದಕ್ಕೆ ಅನುಕೂಲಿಸುವಂಥಾ ಒಂದು ಸತ್ರವನ್ನು ಕಟ್ಟಿಸಿರೊಳ್ಳಬಹುದೆಂದು 4,000 ರೂಪಾಯಿನ ಖರ್ಚು ಪಟ್ಟಿಯನ್ನು ಸರ್ಕಾರದವರು ಒಪ್ಪಿಕೊಂಡರು. ಮ್ಯುನಿಸಿಪಲ್ ಇಂಜಿನಿಯರಿಗೆ 30 ರೂಪಾಯಿ ಅಲೋಯನ್ಸನ್ನು ಕೊಡಬೇಕೆಂದು ಕೌನ್ಸಿಲ್ ನವರು ಶಿಫಾರಸು ಮಾಡಿದ್ದನ್ನು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಲಿಲ್ಲ.

ಚಾಮುಂಡೇಶ್ವರಿ ಗೊಲ್ಲಗೇರಿಯಲ್ಲಿ ಒಂದು ಪಬ್ಲಿಕ್ ಕೊಳಾಯಿ (ಫೌಂಟೆನ್) ಕಟ್ಟಬೇಕಾಗಿರುವುದಕ್ಕೆ ಸ್ವಲ್ಪ ನಿವೇಶನವನ್ನು ಮಾಲೀಕರಿಂದ ಕೊಂಡುಕೊಳ್ಳಬಹುದೆಂದು ಮೆಂಬರುಗಳು ಒಪ್ಪಿಕೊಂಡರು—ಹೊಸದಾಗಿ ಕಟ್ಟುವ ಮ್ಯುನಿಸಿಪಲ್ ಆಫೀಸಿಗೆ ಮ್ಯುನಿಸಿಪಾಲಿಟಿ ಹಣದಿಂದ ಮರುಷಕ್ಕೆ 5,000 ರೂಪಾಯಿನಂತೆ ನಾಲ್ಕು ವರುಷ ಕೊಡುತ್ತಾ ಬರುತ್ತೇವೆಂದು ಮೆಂಬರುಗಳು ಒಪ್ಪಿಕೊಂಡರು—ಮ್ಯುನಿಸಿಪಲ್ ಸರಹದ್ದಿನೊಳಗಿರುವ ಜಮೀನು ಮತ್ತು ತೋಟಗಳ ರೆವಿನ್ಯೂ ಕಂದಾಯವನ್ನು ಸರ್ಕಾರದವರೇ ವಸೂಲಿ ಮಾಡುತ್ತಾರೆ ಈ ಬಾಬನ್ನು ಮ್ಯುನಿಸಿಪಾಲಿಟಿಗೆ ವಹಿಸಬೇಕೆಂದು ಮ್ಯುನಿಸಿಪಾಲಿಟಿಯವರು ಅನೇಕ ವರುಷಗಳಿಂದ ಕೇಳಿಕೊಳ್ಳುತ್ತಾ ಬಂದಿದ್ದರು ಈಗ ಗವರ್ನ್‌ಮೆಂಟಿನವರು ಈ ವಿಚಾರವನ್ನು ಖಂಡಿತವಾಗಿ ಇತ್ಯರ್ಥಪಡಿಸಿ, ಆ ರೆವಿನ್ಯೂ ಕಂದಾಯಗಳನ್ನು ಮ್ಯುನಿಸಿಪಾಲಿಟಿಗೆ ಬಿಟ್ಟುಕೊಡಲಾಗದು ಎಂದು ಹುಕುಂ ಕೊಟ್ಟಿದಾರೆ

ಜಗಳೂರು ತಾಲ್ಲೂಕು ಕಾನ್ಫರೆನ್ಸು.

ನಮ್ಮ ಶಿವಾಲಯದ ಕಚೇರಿ ಮುಂದೆ ಬಯಲಿನಲ್ಲಿ ದೊಡ್ಡ ಚಪ್ಪರವನ್ನು ಅಲಂಕರಿಸಿ ಈ ಮಾಹೆ ತಾ 13-14 ರಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಕಾನ್ಫರೆನ್ಸನ್ನು ನೆರವೇರಿಸಿದರು. ಈ ಸಭೆಗೆ ಅ। ಕಮಿಷನರ್ ಮ॥ ವೆಂಕಟ್ಕೃಷ್ಣನವರು, ಮ॥ ಸಿರಸಿ ಆನಂದರಾಯರು, ಡಿ॥ ಸ್ಯಾನಿಟರಿ ಆಫೀಸರ್ ಡಾ॥ ಸಾಮ್ಯುಯಲ್‌ರವರು ಮುಂತಾದ ಉದ್ಯೋಗಸ್ಥರು ಮತ್ತು ಎಲ್ಲಾ ತಾಲ್ಲೂಕುಗಳ ಅಮಲ್ದಾರರುಗಳು, ಇತರೆ ತಾಲ್ಲೂಕಿನಿಂದ ಕೆಲವು ಜನ ಮೆಂಬರುಗಳು, ಈ ತಾಲ್ಲೂಕಿನಲ್ಲಿರುವ ಮುಖಂಡ ರೈತರು, ಎಲ್ಲಾ ಗ್ರಾಮಗಳ ಪಟೇಲ್ ಶ್ಯಾನುಭೋಗರುಗಳೂ ದಯಮಾಡಿಸಿದ್ದರು ಡೆಪ್ಯುಟಿ ಕಮಿಷನರ್ ಮ॥ ಸಿ. ಎಸ್ ಬಾಲಸುಂದರಂ ಅಯ್ಯರವರು 13 ನೇ ತಾ 10 ಘಂಟೆಗೆ ಚಿತ್ರದುರ್ಗದಿಂದ ಮೋಟಾರ್ ಗಾಡಿಯಲ್ಲಿ ಜಗಳೂರು ಟ್ರಾವೆಲರ್ಸ್ ಬಂಗ್ಲೆಗೆ ದಯಮಾಡಿದರು ಆ ದಿವಸ ಮಧ್ಯಾಹ್ನ 2 ಘಂಟೆಗೆ ಚಪ್ಪರದಲ್ಲಿ ಸಮಸ್ತ ಉದ್ಯೋಗಸ್ಥರೂ, ರೈತಮುಖಂಡರೂ, ಸಮಸ್ತ ಪ್ರಜೆಗಳೂ ಕಿಕ್ಕಿರಿಯುವಂತೆ ಸಭೆ ಸೇರಿರುವಾಗ ಮ॥ ಪಿ ರಾಮಚಂದ್ರರಾಯರು, ಮುನಿಸಿಪಲ್ ಮೆಂಬರುಗಳು, ವರ್ತಕರು ಮುಂತಾದ ದೊಡ್ಡ ಮನುಷ್ಯರು ಸೇರಿ ಟ್ರಾವೆಲರ್ಸ್ ಬಂಗ್ಲೆಯಲ್ಲಿ ಡೆಪ್ಯುಟಿ ಕಮಿಷನರವರನ್ನು ಭೇಟಿ ಮಾಡಿ ಸಭಾ ಮಂಟಪಕ್ಕೆ ಕರೆದುಕೊಂಡು ಬಂದರು ಸಭಾ ಮಂಟಪವನ್ನು ಪ್ರವೇಶಿಸುವಾಗ ಎಕನಾಮಿಕ್ ಕಾನ್ಫರೆನ್ಸು ಡಿ॥ ಕಮಿಟಿ ಮೆಂಬರುಗಳು ಸಾಹು॥ ಬಡೇ ಸಾಹೇಬರು ಸಭಾಧ್ಯಕ್ಷರಿಗೆ ಸುಸ್ವಾಗತವನ್ನು ಬಯಸಿದರು ಅನಂತರ ಮ॥ ಸಿ. ಎಸ್. ಬಾಲಸುಂದರಂ ಅಯ್ಯರವರು ಸಭಾ ಅಗ್ರಾಸನವನ್ನು ಅಲಂಕರಿಸಿ ಸಂಧರ್ಭಾನುಸಾರವಾಗಿ ಸಕಲರಾಗಲೂ ವಿದ್ಯಾಭಿವೃದ್ಧಿ, ವ್ಯವಸಾಯ, ಕೈಗಾರಿಕೆ ಮುಂತಾದ ವಿಷಯಗಳಲ್ಲಿಯೂ, ಗ್ರಾಮಾಭಿವೃದ್ಧಿ ವಿಷಯದಲ್ಲಿಯೂ ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಭಾಷಣಮಾಡಿದರು.

ಅನಂತರ ಅ॥ ಕಮಿಷನರ್ ಮ॥ ಸಿರಸಿ ಆನಂದರಾಯರು ಪಾಶ್ಚಾತ್ಯ ದೇಶದ ನವನಾಗರಿಕತೆಯನ್ನೂ, ಅಲ್ಲಿನ ಸಂಪತ್ತನ್ನೂ, ಈ ದೇಶದ ಹೀನಸ್ಥಿತಿಯನ್ನೂ ಕುರಿತು ವಿವರಿಸಿ, ಈಗ ನಮ್ಮ ದೇಶದ ರೈತರು ಮುಂದಕ್ಕೆ ಬರಬೇಕಾದ ಮಾರ್ಗಗಳನ್ನೂ, ಅವುಗಳ ಸುಧಾರಣೆಯನ್ನೂ ವಿಶದವಾಗಿ ತಿಳಿಸಿದರು ಗ್ರಾಮಾಭಿವೃದ್ಧಿ ಆಡಳಿತದ ರಿಪೋರ್ಟನ್ನೂ, ತಾಲ್ಲೂಕು ಪ್ರೋಗ್ರೆಸ್ ಕಮಿಟಿ ರಿಪೋರ್ಟನ್ನೂ ಅಮಲ್ದಾರರು ಓದಿದರು. ಪರಸ್ಪರ ಸಹಾಯಕ ಸಂಘಗಳ ರಿಪೋರ್ಟನ್ನು ಇನ್ಸ್‌ಪೆಕ್ಟರ್ ಮ॥ ಯಂ. ರಾಮರಾಯರೂ, ಜಗಳೂರು ರೀಡಿಂಗ್ ರೂಮಿನ ರಿಪೋರ್ಟನ್ನು ಮ॥ ಎಚ್. ರಾಮರಾಯರೂ ಓದಿದರು.

ಗ್ರಾಮ ನೈರ್ಮಲ್ಯವನ್ನು ಕುರಿತು ಮ॥ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರ್ ಡಾ॥ ಸಾಮ್ಯುಯಲ್‌ರವರೂ, ಗ್ರಾಮಾರೋಗ್ಯವನ್ನು ಕುರಿತು ಮ॥ ಸೂಯರ್ ನಾರಾಯಣರಾವ್‌ರವರೂ, ಗ್ರಾಮಾಭಿವೃದ್ಧಿ ಸಂಘಗಳ ರಿಪೋರ್ಟುಗಳನ್ನು ಆಯಾ ಕಮಿಟಿಗೆ ಸೆಕ್ರೆಟರಿಗಳೂ, ವ್ಯವಸಾಯದ ಮುಖ್ಯಗಳ ವಿಷಯವಾಗಿ ಮ॥ ಬಡೇ ಸಾಬರೂ, ಮ॥ ಸಣ್ಣಪ್ಪನವರೂ, ಹತ್ತಿ ಸಾಗುವಳಿಯನ್ನು ಮ॥ ಅಶ್ವತ್ಥಪ್ಪನವರು, ಬತ್ತದ ಸಾಗುವಳಿಯನ್ನು ಮ॥ ಶೇಖದಾರ್ ವೆಂಕಟಾಚಾರ್ಯ, ಕಬ್ಬಿನ ಸಾಗುವಳಿ ವಿಷಯವಾಗಿ ಮ॥ ಶ್ಯಾ ರಾಮಚಂದ್ರರಾಯರು, ಸೇಂಗಾಬೀಜವನ್ನು ಮ॥ ಶ್ಯಾ ರಾಘವೇಂದ್ರರಾಯರೂ, ತೆಂಗು ವಿಚಾರವಾಗಿ ಮ॥ ಹೆಚ್. ರಾಮರಾಯರೂ, ಅಡಿಕೆ ವಿಷಯ ಮ॥ ಪಟೇಲ್ ಗುರುಸ್ವಾಮಿನವರೂ, ವಾಳ್ಯದೆಲೆ ವಿಚಾರ ಮ॥ ಸಣ್ಣ ತಿಮ್ಮಯ್ಯನವರೂ, ಜೇನುಗ ಬೆಳೆ ವಿಷಯವಾಗಿ ಮ॥ ಶ್ಯಾ ಸುಬ್ಬರಾಯರೂ ಉಪನ್ಯಾಸಗಳನ್ನು ಓದಿದ ನಂತರ ಸಾಯಂಕಾಲ 6 ಘಂಟೆಗೆ ಮೊದಲನೇ ದಿವಸ ಸಭೆ ಮುಗಿಯಿತು ಆ ರಾತ್ರಿ ಪೆಂಡಾಲಿನಲ್ಲಿ ಏರ್ಪಡಿಸಿದ್ದ ನಾಟಕದ ಅವಲೋಕನವು ಮನೋಹರವಾಗಿದ್ದಿತು

ಮಾರನೆ 14 ನೇ ತಾ. ಜೇಗಿ ಎ ವಿ. ಸ್ಕೂಲ್ ಬಳಿ ವಿದ್ಯಾರ್ಥಿಗಳ ಆಟಪಾಟ ವಿನೋದಗಳು ಉಲ್ಲಾಸಕರವಾಗಿ ನಡೆದವು ಮಧ್ಯಾಹ್ನ 1 ಘಂಟೆಗೆ ಡೆಪ್ಯುಟಿ ಕಮಿಷನರವರು ಮಂಟಪಕ್ಕೆ ದಯಮಾಡಿ ಅಗ್ರಾಸನವನ್ನು ಅಲಂಕರಿಸಿದ ಕೂಡಲೇ ಉಪನ್ಯಾಸಗಳನ್ನು ಓದುವುದಕ್ಕೆ ಪ್ರಾರಂಭಿಸಿದರು. ನೀರಾವರಿ ವ್ಯವಸಾಯವನ್ನು ಕುರಿತು ಮ॥ ರುದ್ರಪ್ಪನವರು, ಪಶುಪೋಷಣೆ ಮ॥ ಬಡೇ ಸಾಬರು, ಕೆರೆಗಳ ಅಚ್ಚುಕಟ್ಟು ವಿಷಯವಾಗಿ ಮ॥ ಶ್ಯಾ ರಂಗರಾಯರು, ಕೆರೆ ಪಂಚಾಯಿತಿ ಮ॥ ಶ್ರೀನಿವಾಸರಾಯರು, ವಿದ್ಯಾಭ್ಯಾಸದ ವಿಷಯವಾಗಿ ಎ. ವಿ. ಸ್ಕೂಲ್ ಹೆಡ್‌ಮಾಸ್ಟರ್ ಮ॥ ವೆಂಕಟಗಿರಿರಾಯರು, ಮ॥ ಸುಬ್ಬಾಶಾಸ್ತ್ರಿಗಳು, ಮ॥ ನರಸಿಂಹಯ್ಯಂಗಾರ್ಯ, ಬೇಲೂರು ವಿನೋದಾಲಯದ ಉಪನ್ಯಾಸಗಳನ್ನು ಓದಿದರು ಮ ಅಕ್ಕಸಾಲೆ ವೀರಾಚಾರಿಯವರು ಯಂತ್ರ ಸಹಾಯದ ವಿಷಯದಲ್ಲಿ ಉಪನ್ಯಾಸವನ್ನು ಓದಿದ್ದಲ್ಲದೆ ತಮ್ಮ ಯಂತ್ರದಲ್ಲಿ ಚೆನ್ನಾದ ತುಂಡನ್ನು ಇಟ್ಟು ತಗಡನ್ನು ಮಾಡಿ ತೋರಿಸಿದರು. ಕಂಬಳಿ ನೇಯಿಗೆ ವಿಷಯದಲ್ಲಿ ಮ ವಿದ್ಯಾಗಿರಿಯಪ್ಪನವರು, ವ್ಯಾಪಾರದ ವಿಷಯದಲ್ಲಿ ಮ ಕಲಿವೀರಪ್ಪನವರು, ಪರಸ್ಪರ ಸಹಾಯ ಸಂಘಗಳ ವಿಷಯದಲ್ಲಿ ಮ ಯಂ. ರಾಮರಾಯರು, ಮಾಲೀನಹಳ್ಳಿ ಧಾನ್ಯದ ಸಂಘದ ವಿಷಯದಲ್ಲಿ ಮ ಬಡೇ ಸಾಹೇಬರವರು, ಮಿತವ್ಯಯದ ವಿಷಯದಲ್ಲಿ ಮ॥ ರಾಮಚಂದ್ರರಾಯರು ಉಪನ್ಯಾಸಗಳನ್ನು ಓದಿದ ನಂತರ ನಮ್ಮ ಏಳಿಗೆಯನ್ನು ನಷ್ಟಮಾಡುವ ನಮ್ಮ ಗುಣದೋಷಗಳನ್ನು ಯಾವ ಮಾರ್ಗದಿಂದ ನಿವೃತ್ತಿ ಮಾಡಿಕೊಳ್ಳಬಹುದು ಎಂಬ ಬಗ್ಗೆ ಮ ಬಡೇ ಸಾಬರು ಒಂದು ಭಾಷಣವನ್ನು ಮಾಡಿದ ಅನಂತರ ಸ್ಕೂಲ್ ಬಾಲಕರಿಂದ ದೇಹಮನಸ್ಸು ಮತ್ತು ಆರೋಗ್ಯ ಮತ್ತು ಮುಖಪರೀಕ್ಷೆ ಮಾಡುವವರ ವಿಷಯವಾಗಿ ನಡೆದ ಸಂಭಾಷಣೆಯು ನೋಟಕರಿಗೆ ಬಹಳ ಆನಂದವಾಗಿಯೂ, ಮನಸ್ಸಿಗೆ ಗ್ರಾಹ್ಯವಾಗಿಯೂ ಇದ್ದಿತು ಬಾಲಕರಿಗೆ ಬಹುಮಾನ ದ್ರವ್ಯವನ್ನು ಹಂಚಿಕೊಟ್ಟ ನಂತರ ಸಭಾಧ್ಯಕ್ಷರು ಎರಡು ದಿವಸಗಳಿಂದಲೂ ನಡೆದ ಉಪನ್ಯಾಸಗಳಲ್ಲಿನ ಮುಖ್ಯಾಂಶಗಳನ್ನು ಕ್ರೋಡೀಕರಿಸಿ ಅಪ್ಪಣೆ ಕೊಡಿಸಿದ ನಂತರ ಮ ಬಡೇಸಾಹೇಬರು ಪ್ರಜೆಗಳ ಪರವಾಗಿ ಸಭಾಧ್ಯಕ್ಷರಿಗೂ ಸಭಿಕರಿಗೂ ವಂದನೆಗಳನ್ನು ಸಮರ್ಪಿಸಿ ಅವರ ಶ್ರೇಯೋಭಿವೃದ್ಧಿಯನ್ನು ಬಯಸಿದರು ಮ॥ ವೆಂಕಟ್ಕೃಷ್ಣನವರು ಅಮಲ್ದಾರರಿಗೂ ಪ್ರೋಗ್ರೆಸ್ ಕಮಿಟಿ ಮೆಂಬರುಗಳಿಗೂ ಪ್ರಜೆಗಳ ಮುಖಂಡರಿಗೂ ವಂದನೆಗಳನ್ನು ಹೇಳಿದ ನಂತರ ಶ್ರೀ ಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಜಯಘೋಷದೊಡನೆ ಸಭೆ ಬರಖಾಸ್ತಾಯಿತು.

ಆ ದಿವಸ ಸಾಯಂಕಾಲ ಮ್ಯಾಜಿಕ್ ಲ್ಯಾಂಟರ್ನ್ ಪ್ರದರ್ಶನವೂ ಆಯಿತು ಪಟ್ಟಣದವರಿಂದ ಒಂದಿಷ್ಟು ಉದ್ಯೋಗಸ್ಥರಿಗೂ ಇತರರಿಗೂ ಇಳುಕೊಳ್ಳುವುದಕ್ಕೆ ವಸತಿಗಳನ್ನು ಮತ್ತು ಊಟ ಉಪಚಾರಗಳಿಗೆ ಬೇಕಾದ ಅನುಕೂಲ್ಯಗಳನ್ನು ಬಹಳ ವಿಶದತೆಯಿಂದ ಏರ್ಪಡಿಸಲ್ಪಟ್ಟಿತ್ತು ಮತ್ತು ಪಟ್ಟಣದ ರೈತಾಪಿ ಜನಗಳಿಗೆ ಎರಡು ದಿನದ ಊಟಕ್ಕೆ ಒಳ್ಳೆ ಅನುಕೂಲತೆಯನ್ನು ಕಲ್ಪಿಸಿದ್ದರು. ಸಾವಿರಾರು ಜನರು ಎರಡು ದಿವಸ ಸುಭೋಜನ ಮಾಡಿ ಸಭೆಯ ಕಾರ್ಯಕಲಾಪಗಳನ್ನು ನೋಡಿ ಆನಂದಪಟ್ಟುಕೊಂಡು ಅಮಲ್ದಾರ್ ಮ. ಸಿ. ರಾಮಚಂದ್ರರಾಯರ ದಯಾದಾಕ್ಷಿಣ್ಯವನ್ನೂ ವಿತರಣೆಯನ್ನೂ ಕೊಂಡಾಡುತ್ತಾ ಅವರವರ ಊರುಗಳಿಗೆ ತೆರಳಿದರು.

ತಮ್ಮ ಚೇ ದಾ ದಾಸ.

ಕಸಬು ಮತ್ತು ಕೈಗಾರಿಕೆಗಳ ಉಪನ್ಯಾಸ.

ಮಿ ಎಚ್. ಜ. ಅಲ್ಬರ್ಟ್ ಸಾಹೇಬರವರ ಅಭಿಪ್ರಾಯ.

ಸಂಬಂಧಿಸಿದ ತಾಲ್ಲೂಕು ಸಂಘವೊಂದರಲ್ಲಿ ಸಮಾಜವು ಕಳೆದ ವಾರ ಜರುಗಿತಷ್ಟೆ ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಸೂಪರಿಂಟೆಂಡೆಂಟ್ ರಾದ ಮಿ॥ ಎಚ್. ಜ. ಅಲ್ಬರ್ಟ್ ಸಾಹೇಬರವರು ಮೇಲ್ಕಂಡ ವಿಷಯದಲ್ಲಿ ತಮ್ಮ ಅಭಿಮತವನ್ನು ಬರೆದು ಆ ಮಹಾ ಸಭೆಯಲ್ಲಿ ಓದಿಸಿದರು ಅವರ ಅಭಿಪ್ರಾಯಗಳು ಸರ್ವತ್ರ ತಿಳಿಯಬೇಕು ಎಂಬ ಉದ್ದೇಶದಿಂದ ಅವುಗಳನ್ನು ಕ್ರೋಢೀಕರಿಸಿ ಇಲ್ಲಿ ತಿಳಿಸುತ್ತೇವೆ.

ಪ್ರತಿ ಒಬ್ಬ ಪುರುಷನೂ ದೇಶಭಕ್ತನಾಗಿರುವನು, ಇಲ್ಲವೆ ಆಗಬೇಕು. ತನ್ನ ಜನ್ಮಭೂಮಿಗೆ ಘನತೆಯೂ ಶ್ರೇಯಸ್ಸೂ ಉಂಟಾಗಬೇಕೆಂಬುವುದೇ ಆತನ ಆಶಯವಾಗಿರತಕ್ಕದ್ದು. ತನ್ನ ದೇಶ ಅಭಿವೃದ್ಧಿಗೆ ಬರಬೇಕು; ತನ್ನ ದೇಶದ ಏಳಿಗೆಯು ಇತರ ಜನಾಂಗಗಳಿಗಿಂತ ಮುಂದಾಗಬೇಕು ಎಂದು ಆತನು ಕುತೂಹಲಪಡುತ್ತಾನೆ. ಇಂಥಾ ಉದ್ದೇಶವೂ ಉತ್ಸಾಹವೂ ಆಕಾಂಕ್ಷೆಯೂ ಯಾವ ದೇಶದ ಪ್ರಜೆಗಳಲ್ಲಿ ತುಂಬಿ ತುಳುಕುತ್ತಿರುವವೋ ಆ ದೇಶವು ಪ್ರಧಾನವಾಗಿ ಕೊಳ್ಳುವುದು. ಈಗ ನಿಮ್ಮ ಸುತ್ತುಮುತ್ತಲೂ ಇರುವ ಸ್ಥಿತಿಗತಿ ಹಾಗಿದೆ ಸ್ವಲ್ಪ ನೋಡಿ; ಇತರ ದೇಶಗಳು ಅಭಿವೃದ್ಧಿಗೆ ಬಂದಿರುವ ಭಾಗವನ್ನು ಕುರಿತು ಯೋಚಿಸಿ ನೋಡಿ ಈಗಿನ ಕಾಲದಲ್ಲಿ ಮುಂದಾಳುಗಳಾಗಿರುವ ಜನಾಂಗಗಳನ್ನು ನೋಡಿ. ಅಂಥಾ ಪ್ರತಿ ಒಂದು ಜನಾಂಗದವರೂ ವಿದ್ಯೆಗಾಗಿ ಸ್ವಲ್ಪವೂ ಸಂಕೋಚವಿಲ್ಲದೆ ಬಹಳ ಹಣವನ್ನು ವಿನಿಯೋಗಿಸಿಯೂ ವಿನಿಯೋಗಿಸುತ್ತಲೂ ಇದಾರೆ. ವಿದ್ಯೆಯೇ ಜನಾಂಗದ ಐಶ್ವರ್ಯ; ವಿದ್ಯೆಗೆ ಖರ್ಚುಮಾಡಿದ ದ್ರವ್ಯವು ವ್ಯಾಪಾರದ ಮೂಲಧನದಂತಾಗಿದೆ. ನಾಣ್ಯರೂಪವಾದ ಲಾಭವನ್ನು ಕೊಡದ ದ್ವಾರವೂ ಆ ಹಣವು ಜನಗಳ ಬುದ್ಧಿ ವಿವೇಕಗಳನ್ನು ವೃದ್ಧಿಪಡಿಸುವುದು. ಅಂಥಾ ಬುದ್ಧಿ ವಿವೇಕಗಳೇ ಐಶ್ವರ್ಯ, ಅವೇ ಅಮೋಘವಾದ ಸಾಮರ್ಥ್ಯ

ನಮ್ಮ ದೇಶವನ್ನು ಸುತ್ತಿ ನೋಡಿದವರಿಗೆ ವಿದ್ಯೆಯ ಆವಶ್ಯಕತೆಯು ಅಪಾರವಾದದ್ದೆಂದು ಬಹಳ ಸುಲಭವಾಗಿ ಗೊತ್ತಾದೀತು ಪುಸ್ತಕದ ವಿದ್ಯೆ ಎಂಬುವುದು ನನ್ನ ಅಭಿಪ್ರಾಯವಲ್ಲ; ಕಾರ್ಯಕಾರಿಯಾದ ಮುಖ್ಯ ಕಲಾಕೌಶಲ್ಯವುಳ್ಳ ವಿದ್ಯೆಯೇ ಈಗ ಬೇಕಾಗಿರುವುದೆಂದು ಹೇಳುತ್ತೇನೆ

ಚಿಕ್ಕವರಿಗೆ ಅಂದರೆ 10 ರಿಂದ 20 ರೊಳಗಿರುವ ವಯಸ್ಸಿನವರಿಗೆ ಕಲಿತದ್ದನ್ನು ಪರಿಶ್ರಮ ಮಾಡಿಕೊಳ್ಳುವುದಕ್ಕೆ ವಿಶೇಷ ಬೈಕನ್ಯವುಂಟು. ಅಂಥವರಿಗೆ ನಮ್ಮಿಂದ ಸಾಧ್ಯವಾಗುವಷ್ಟು ಉತ್ಕೃಷ್ಟವಾದ ವಿದ್ಯೆಯನ್ನು ಕಲಿಸಬೇಕು

ನವೀನ ತರಗತಿಗಳನ್ನು ಏರ್ಪಡಿಸುವ ವಿಷಯದಲ್ಲಿ ನಮ್ಮ ಗವರ್ನ್‌ಮೆಂಟಿನವರಿಗೆ ಅನೇಕ ಸಲಹೆಗಳು ಕೊಡಲ್ಪಟ್ಟಿರುವವು. ಪ್ರತಿ ಒಂದು ತಾಲ್ಲೂಕಿನಿಂದಲೂ ಆದಷ್ಟು ಹೆಚ್ಚು ವಿದ್ಯಾರ್ಥಿಗಳನ್ನು ಕೊಡಿರಿ ಕಳುಹಿಸಿಕೊಡಿರಿ. ಆ ಸಲಹೆಗಳ ಪ್ರಯೋಜನವನ್ನು ಅವರು ಪಡೆಯುವಂತಾಗಲಿ. ಜಪಾನ್ ರಾಜ್ಯವು ಕಳೆದ 30 ವರುಷಗಳಲ್ಲಿ ತುಂಬಾ ಉಚ್ಛ್ರಾಯಸ್ಥಿತಿಗೆ ಬಂದಿರುವುದನ್ನು ನೋಡಿ. ಆ ರಾಜ್ಯವು ಕಸಬು ಕೈಗಾರಿಕೆಗಳನ್ನು ಯಾವ ಪ್ರಕಾರವಾಗಿ ಅಭಿವೃದ್ಧಿಗೆ ತಂದುಕೊಂಡಿತು ಎಂಬುದನ್ನು ವಿಚಾರಮಾಡಿ ತಿಳಿಯಬೇಕೆಂದು ಮಹತ್ತರ ಕಥೆಗಳು ವಿಶೇಷವಾಗಿ ನಡೆಯುತ್ತಲಿವೆ ಅದಕ್ಕಿಂತಲೂ ಆ ರಾಜ್ಯವು ಯಾವ ದೇಶದಿಂದ ಅಷ್ಟನ್ನೆಲ್ಲಾ ಕಲಿತು ಬಂದಿತೋ ಈಗಲೂ ಎಲ್ಲಿಂದ ಕಲಿತು ಬರುತ್ತಿದೆಯೋ ಅಂಥಾ ದೇಶಕ್ಕೆ ವಿದ್ಯಾರ್ಥಿಗಳನ್ನು ಕಳುಹಿಸಿಕೊಡುವುದು ಲಾಭಕರವಲ್ಲವೇ? ಜಪಾನ್ ರಾಜ್ಯವು ಈಗಲೂ ಆ ದೇಶದಿಂದಲೇ ತನಗೆ ಬೇಕಾಗುವ ಮುಟ್ಟುಗಳನ್ನೂ ಯಂತ್ರಗಳನ್ನೂ ತರಿಸಿಕೊಳ್ಳುತ್ತಿರುವುದಲ್ಲಾ! ಯೂರೋಪ್, ಏಷ್ಯಾ, ಆಫ್ರಿಕಾ, ಅಮೆರಿಕಾ, ಆಸ್ಟ್ರೇಲಿಯಾ, ಹಿಂದುಸ್ಥಾನ, ಪ್ರಪಂಚದ ಎಲ್ಲಾ ಭಾಗಗಳಿಂದಲೂ ವಿದ್ಯಾರ್ಥಿಗಳು ಇಂಗ್ಲಾಂಡಿಗೆ ಬಂದು ನನ್ನ ಬಳಿಯಲ್ಲಿ ಕಲಿಯುತ್ತಿದ್ದರು. ಇಂಗ್ಲಿಷ್, ಫ್ರೆಂಚ್, ಬೆಲ್ಜಿಯನ್, ಜರ್ಮನ್, ಅಮೆರಿಕನ್, ಜಾಪನೀಸ್ ಕಾರೀಗಾರರುಗಳನ್ನು ನಾನು ಚೆನ್ನಾಗಿ ಬಲ್ಲೆನು. ನಾನು ಅವರ ಕೂಡ ವಾಸಮಾಡಿದೇನೆ, ಅವರ ಯೋಗ್ಯತೆ ಸಾಮರ್ಥ್ಯಗಳನ್ನು ತಿಳಿದಿರುವೆನು. ಹಿಂದುಸ್ಥಾನದ ಕಾರೀಗಾರರ ವಿಚಾರವು ನನಗೆ ಇನ್ನು ಚೆನ್ನಾಗಿ ತಿಳಿದಿಲ್ಲ. ಅದಕಾರಣ ಇದುವರೆಗೆ ನಾನು ತಿಳಿದಿರುವಷ್ಟನ್ನು ಮಾತ್ರ ಸೂಚಿಸುತ್ತೇನೆ. ಹಿಂದುಸ್ಥಾನದಲ್ಲಿ ಸರ್ವಸಾಧಾರಣವಾದ ಕೆಲಸಗಳನ್ನು ಕೂಡ ಅನೇಕಾನೇಕ ಜನರು ಮಾಡಲಾರರು. ಮುಟ್ಟುಗಳನ್ನು ಹಿಡಿದು ಕೆಲಸ ಮಾಡುವುದರಲ್ಲಿ ಅವರಿಗೆ ಆಸೆಯಾಗಲಿ ಉತ್ಸಾಹವಾಗಲಿ ಕಾಣುವುದಿಲ್ಲ. ಯಾವುದಾದರೊಂದು ಸಂಗತಿಯನ್ನು ನೋಡಿದರೆ ಅದರ ಪ್ರಯೋಜಕತ್ವವೇನೆಂದು ವಿಚಾರವೂ ಮಾಡುವವರಿಲ್ಲ. ಇದಕ್ಕೆ ಒಂದು ದೃಷ್ಟಾಂತವನ್ನು ಹೇಳುತ್ತೇನೆ. ಕೆಲವು ದಿನಗಳ ಹಿಂದೆ ಒಬ್ಬ ಮೇಸ್ತ್ರಿಯನ್ನು—ಇವನು ಒಳ್ಳೇ ಕೆಲಸಗಾರನೇ ಹೌದು—ಅವನ ತರಗತಿಯ ವಿದ್ಯಾರ್ಥಿಗಳಿಗೆ ಮಾಡಿ ತೋರಿಸುವುದಕ್ಕಾಗಿ ಒಂದು ತುಂಡು ಮರಕ್ಕೆ ಮೊಳೆ ಹೊಡೆದು ಜೋಡಿಸು ಎಂದು ಹೇಳಿದೆನು. ಅದಕ್ಕಾತನು—ಸುತ್ತಿಗೆಯನ್ನು ಹಿಡಿಯಲೇ! ನಾನು ಆ ಕೆಲಸ ಮಾಡತಕ್ಕವನಲ್ಲ ಎಂದು ಹೇಳಿಬಿಟ್ಟನು ಮಾಡಿ ನೋಡುವುದಕ್ಕಾಗಲಿ, ಕಲಿಯುವುದಕ್ಕಾಗಲಿ ಅವನಿಗೆ ಆಸೆ ಇಲ್ಲವೆಂದು ಕಾಣುತ್ತದೆ. ಇಂಥಾ ಮನೋವೃತ್ತಿ ಇರುವುದಾದರೆ ನಮ್ಮ ದೇಶವು ಕಸಬು ಕೈಗಾರಿಕೆಗಳಲ್ಲಿ ಶ್ರೇಯಸ್ಸಿಗೆ ಬಂದೀತೇ?

ಸ್ವದೇಶಿ ಪ್ರವಾದವನ್ನು ಕೆಲವು ಕಾಲದ ಹಿಂದೆ ಕೇಳಿದೆನು; ಅದು ಸಂಧರ್ಭಕನಾಗಿ ತೋರಿದ್ದನ್ನೂ ಕೇಳಿದೆನು ಅದು ಸಾರ್ಥಕತೆ ಹೊಂದಬೇಕಾದರೆ ನಿಪುಣರಾದಂಥಾ ಕಾರೀಗಾರರಿದ್ದ ಹೊರತು ಸಾಧ್ಯವಿಲ್ಲ. ನಮ್ಮ ಸೀಮೆಯಲ್ಲಿ - ಅನುಭವವೇ ಕಲಿಸುತ್ತದೆ - ಎಂಬ ನಾಣ್ಣುಡಿಯುಂಟು ಮತ್ತು ಅನುಭವವು ಹೇಳಿಕೊಡುವುದಕ್ಕೆ ಬೇಕಾದಷ್ಟು ಸಿದ್ಧವಾಗಿಯೂ ಇದೆ ಇದರಲ್ಲಿ ಮುಖ್ಯವಾದ ಸಂಗತಿಯೇನೆಂದರೆ —ಆ ಅನುಭವವು ಹೇಳುವುದನ್ನು ತಿಳಿದುಕೊಳ್ಳುವುದಕ್ಕೆ ನಿಮಗೆ ಮನಸ್ಸಿದೆಯೋ? ಕಸಬುಗಳ ವಿಚಾರವಾಗಿ ಬರೇ ಮಾತಿನಲ್ಲಿ ತಿಳಿದುಕೊಳ್ಳುವುದಕ್ಕೆ ಸಭೆಗಳನ್ನು ಕಲ್ಪಿಸಿ ಉಪನ್ಯಾಸಗಳನ್ನು ನಡೆಸಿದಾಗ್ಯೂ ಒಂದು ಸಣ್ಣ ಅಂಶವನ್ನು ಮರೆತುಬಿಡುತ್ತೀರಿ. ಅದು ಬಹಳ ಮುಖ್ಯವಾದ ಸಣ್ಣ ಭಾಗ; ಅದಿಲ್ಲದಿದ್ದರೆ ನಿಮಗೆ ಎಳಷ್ಟೂ ಫಲವುಂಟಾಗುವುದಿಲ್ಲ. ಅದನ್ನು ಹೇಳುತ್ತೇನೆ, ಕೇಳಿ. ಪ್ರತಿ ಮನುಷ್ಯನಲ್ಲಿ ಪ್ರತ್ಯೇಕ ಪ್ರತ್ಯೇಕವಾದ ಎರಡು ಭಾಗಗಳುಂಟು, ಇವೆರಡೂ ಒಂದನ್ನೊಂದು ಹೊಂದುಕೊಂಡು ಕೆಲಸ ನಡೆಸುತ್ತವೆ, ಇಲ್ಲವೇ ಹಾಗೆ ನಡೆಸಬೇಕು. (1) ಕೆಲಸಮಾಡುವ ಅಂಗ—ಇದು ಕಣ್ಣಿಗೆ ಕಾಣುವ ಭಾಗ; (2) ಕಣ್ಣಿಗೆ ಕಾಣದ ಭಾಗವು, ಇದು ಕಾಣದಿದ್ದರೂ ಅದನ್ನು ಇಲ್ಲವೆಂದು ಹೇಳಲಾಗದು; ಅದು ಇದೆ ಇದೆ ಎಂದು ಸಿದ್ಧಾಂತಮಾಡಬಹುದು ಕಣ್ಣಿಗೆ ಕಾಣುವಂಥಾ ಭಾಗವನ್ನು ಶಿಕ್ಷಣದಿಂದಲೂ ಆಹಾರ ಕೊಟ್ಟೂ ಬೆಳೆಸುತ್ತೀರಿ; ಆದರೆ ಎರಡನೇ ಭಾಗವೇ ಬಹಳ ವಿಶೇಷವಾದದ್ದು. ಅದಕ್ಕೆ ನೀವು ಗಮನಕೊಡಬೇಕು. ನಮಗೆ ಬೇಕಾಗುವ ವಿದ್ಯಾರ್ಥಿಗಳನ್ನು ಕೆಲಸಗಾರರನ್ನು ನೀವು ತರಬೇತು ಮಾಡಿಕೊಳ್ಳಬೇಕು; ಅವರು ತಮ್ಮ ಮನಸ್ಸನ್ನು ತಮ್ಮ ಕೆಲಸಕ್ಕೆ ವಿನಿಯೋಗಿಸುವಂತೆ ತರಬೇತಾಗಬೇಕು ಒಂದು ಚಿಟಿಕೆ ಹೊತ್ತು ಮನಸ್ಸಿಟ್ಟು ಕೆಲಸಮಾಡುವುದು, ಮನಸ್ಸಿನ ಶಕ್ತಿಯನ್ನೆಲ್ಲಾ ಆ ಕೆಲಸಕ್ಕೇ ವಿನಿಯೋಗಿಸುವುದು, ಹೊಸ ವಿಚಾರವನ್ನು ಗ್ರಹಿಸಿಕೊಳ್ಳುವುದಕ್ಕೆ ಮನಸ್ಸಾರ ಕುತೂಹಲ ಪಡುವುದು, ಹೀಗೆ ಮಾಡಿದ ಪಕ್ಷದಲ್ಲಿ ಒಂದು ದಿನ ಪೂರ್ತಿ ಕೈಯಿಟ್ಟು ಕೆಲಸಮಾಡಿದರೂ ಆ ಒಂದು ಗಂಟೆಯ ಕೆಲಸಕ್ಕೆ ಸರಿಹೋಲಲಾರದು ಈ ವಿಚಾರವು ನಿಮಗೆ ತಿಳಿಯುವದಿಲ್ಲವೇ; ಅದರಿಂದ ಆ ರೀತಿ ನಡೆಯುತ್ತೀರೋ? ನಿಮ್ಮ ಸ್ಕೂಲುಗಳಿಗೂ, ಕೆಲಸಮಾಡುವ ಕಾರ್ಖಾನೆಗಳಿಗೂ ಹೋಗಿ ನೋಡಿ. ಅಲ್ಲಿ ಪಾಠಗಳನ್ನೂ, ಕೆಲಸಗಳನ್ನೂ ಹೇಳಿಕೊಡತಕ್ಕವರನ್ನು ಪರೀಕ್ಷಿಸಿ ನೋಡಿ.

ಬಂಡಲಿಸುವ ಚಿತ್ತವನ್ನು ಇತರ ಕಡೆಗಳಿಗೆ ಚಲಿಸದಂತೆ ನಿರೋಧ ಮಾಡಿಟ್ಟುಕೊಳ್ಳುವ ಅಭ್ಯಾಸವನ್ನು ಕುರಿತು ಹೇಳಲು ಪುಸ್ತಕವನ್ನು ಹಿಂದು ಸ್ಥಾನದಲ್ಲಿ ಕಲಿಯುವುದು [illegible] ಧ್ಯಾನವನ್ನು ಬಿಟ್ಟರೆ ಇನ್ನೊಂದನ್ನು ನಾನು ಕಾಣಲಿಲ್ಲ ಜರ್ಮನ್ ಕಾರೀಗಾರನಲ್ಲಿ ಈ ಧ್ಯಾನ ಶಕ್ತಿಯು ಯಥಾರ್ಥವಾಗಿ ಇರುತ್ತದೆ ಕೆಲಸವನ್ನು ಮಾಡಿ ಪೂರೈಸುವುದಕ್ಕೆ ಅವನು ಮನಸ್ಸನ್ನೂ ಅಂಗಗಳನ್ನೂ ಏಕ ಪ್ರಕಾರವಾಗಿ ವಿನಿಯೋಗಿಸುತ್ತಾನೆ. ಗಡಿ ಆದೀತೆ, ಮನೆಗೆ ಹೋದೇನೋ ಎಂದು ಅವನು ಎದುರು ನೋಡುವವನಲ್ಲ ಜರ್ಮನ್ ರಾಜ್ಯದ ಶ್ರೇಯೋಭಿವೃದ್ಧಿಗೆ ಇದು

ನಮ್ಮ ಕೆಲಸಗಾರರ ಮನಸ್ಸಿನಲ್ಲಿ ಮನಸ್ಸಿಟ್ಟು, ಅನ್ಯೋನ್ಯ ಭಾವದಿಂದ ಕೆಲಸಮಾಡಿ ಅಭಿವೃದ್ಧಿಗೆ ಬರಬೇಕು ಎಂದು ಕುತೂಹಲವನ್ನು ಹುಟ್ಟಿಸಿದರೆ ಆಗಲೀಗ ನೀವು ಫಲವನ್ನು ಪಡೆಯುವಿರಿ; ನಮ್ಮ ದೇಶವು ಶ್ರೇಯಸ್ಸಿಗೆ ಬಂದೀತು. ಇದು ದೃಷ್ಟಾಂತಕ್ಕೆ ಬರಬೇಕಾದರೆ ನೀವು ಯಾವುದಾದರೂ ಒಂದು ಕಾರ್ಯವನ್ನು ಮನಸ್ಸಿಟ್ಟು ಮಾಡಿ ನೋಡಿದಲ್ಲಿ ನಿಮಗೇ ವೇದ್ಯವಾದೀತು ಈಗ ನಾನು ನಿಮಗೆ ಸೂಚಿಸುವುದೇನೆಂದರೆ—ಮೊದಲು ವಿದ್ಯೆಯನ್ನು ಸರಿಯಾದ ರೀತಿಯಲ್ಲಿ ಅನುಭವವು ತೋರಿಸಿಕೊಡುವಂತೆ ಸಂಪಾದನೆ ಮಾಡಿ ಬಳಿಕ ತಾಲ್ಲೂಕುಗಳಿಂದ ಹೆಚ್ಚು ಹೆಚ್ಚಾಗಿ ವಿದ್ಯಾರ್ಥಿಗಳನ್ನು ಕಸಬುದಾರಿ ಪಾಠಶಾಲೆಗಳಲ್ಲಿ ತರಬೇತಾಗಿ ಬರುವಂತೆ [illegible] ಕಳುಹಿಸಿಕೊಡಿ.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಬಡ ಉಪಾಧ್ಯಾಯರ ಗೋಳಾಟ.

ಅಯ್ಯಾ,—ವೃತ್ತಾಂತ ಪತ್ರಿಕೆಯಲ್ಲಿ ಆಗಾಗ್ಗೆ - ಬಡ ಉಪಾಧ್ಯಾಯರ ಗೋಳಾಟ - ಎಂಬ ವಿಷಯವು ಪ್ರಕಟಿಸಲ್ಪಡುತ್ತಿದೆ ಅನೇಕಾವರ್ತಿ ಓದೇನೆ ಕಳೆದ ವಾರದಲ್ಲಿ ಪ್ರಕಟವಾದ ಉಪಾಧ್ಯಾಯರ ಗೋಳಾಟವನ್ನು ಓದಿ ನನಗೆ ಆಶ್ಚರ್ಯವೇನೂ ತೋರಲಿಲ್ಲ. ಇದಕ್ಕೆ ಸ್ವಂತವಾದ ಅನುಭವವೇ ಕಾರಣ. ಅನೇಕರು ಈ ವಿಷಯವಾಗಿ ಅರ್ಜಿಗಳನ್ನು ಬರೆದುಕೊಂಡೂ, ಹೇಳಿಕೊಂಡೂ ನಿಷ್ಫಲವಾಗಿ, ಇದು ನಮ್ಮ ಪ್ರಾರಬ್ಧವೆಂದು ಸುಮ್ಮನಿರುವರು. ಕೆಲವರು ಪತ್ರಿಕೆಗಳಲ್ಲಿ ಪ್ರಕಟಿಸುವರು. ಕೆಲವರು ಯಾವುದಕ್ಕೂ ಹೆದರಿ ಸುಮ್ಮನಿರುವರು. ಪ್ರಾಯಶಃ ಗ್ರಾಮೋಪಾಧ್ಯಾಯರೆಲ್ಲಾ ಈ ರೀತಿಯಾದ ತೊಂದರೆಗಳನ್ನು ಅನುಭವಿಸುತ್ತಿರಬಹುದು. ವಿದ್ಯಾಭಿವೃದ್ಧಿಯಲ್ಲಿ ಬದ್ಧಾದರರಾದ ನಮ್ಮ ಮೈಸೂರು ಸರ್ಕಾರದವರು ಉಪಾಧ್ಯಾಯರಿಗೆ ಕೇಳದೊರತ ಭರ್ತ್ಯ ಭತ್ಯವನ್ನು ಕಲ್ಪಿಸಿ, ಕಾಲಕಾಲಕ್ಕೆ ವೇತನಗಳನ್ನು ದೊರೆಯುವುದೆಂದು ನಿರೀಕ್ಷಿಸುತ್ತೇನೆ ಅಲ್ಲದೆ ಸ್ಕೂಲ್ ಕಟ್ಟಡ, ಮನೆ, ಸಾಮಿಲ್ಲಾರು, ಉಪಕರಣಗಳು, ಇವುಗಳ ವಿಷಯವಾಗಿ ತೃಪ್ತಿಕರವಾದ ಅನುಕೂಲಗಳನ್ನು ಕಲ್ಪಿಸಿ ಉಪಾಧ್ಯಾಯರ ಗೋಳಾಟವನ್ನು ನಿವಾರಣೆಮಾಡುವರೆಂದು ನಂಬಿರುತ್ತೇನೆ.

ಗ್ರಾಮೋಪಾಧ್ಯಾಯ ಸಹೋದರ

ಮಿಡ್ಲ್ ಸ್ಕೂಲ್ ಇನ್ಸ್‌ಪೆಕ್ಟರ ಕೆಲಸಗಳು

ಅಯ್ಯಾ,—ಬೆಂಗಳೂರು ಡಿಸ್ಟ್ರಿಕ್ಟ್ 2 ನೇ ರೇಂಜ್ ಎಡ್ಯುಕೇಷನ್ ಅ॥ ಇನ್ಸ್‌ಪೆಕ್ಟರಾದ ಮ॥ ಟ. ವಿ. ಕೃಷ್ಣರಾಯರಿಗೆ ಹಾಸನಕ್ಕೆ ವರ್ಗವಾಯಿತು ಇವರು ಈ ರೇಂಜಿನಲ್ಲಿ ಸುಮಾರು 10 ವರ್ಷಗಳಿಂದಲೂ ಕೆಲಸ ಮಾಡಿ ಬಹು ಪ್ರಖ್ಯಾತಿಯನ್ನು ಪಡೆದಿದ್ದರು. ಅಪ್ರಬುದ್ಧರಾದ ಅನೇಕ ಉಪಾಧ್ಯಾಯರುಗಳನ್ನು ನಯ ಭಯದಿಂದ ತಿದ್ದಿ, ಬಹು ಶ್ರಮಪಟ್ಟು ಕ್ರಮಪಡಿಸಿದರು ಇವ

[illegible] ಈ ರೇಂಜಿನಲ್ಲಿ ಅನೇಕ ಸ್ಕೂಲುಗಳು ಹೊಸದಾಗಿ ಸ್ಥಾಪಿತವಾದುವು. [illegible] ಸ್ಕೂಲುಗಳು ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು [illegible] ದೊಡ್ಡವಾದುವು. ವಿದ್ಯಾಭಿವೃದ್ಧಿಗಾಗಿ ಬಹಳ ಪ್ರೋತ್ಸಾಹವನ್ನು ಕೊಡು [illegible]. ಹಗಲೆಲ್ಲಾ ಸ್ಕೂಲ್ ಇನ್ಸ್ಪೆಕ್ಷನ್ ಮಾಡಿ, ರಾತ್ರಿ ಸುಮಾರು 11 [illegible] ವರೆಗೂ ಆಫೀಸಿನ ಕೆಲಸ ಮಾಡಿ ಮುಗಿಸುತ್ತಿದ್ದರು. ಇದಕ್ಕಾಗಿ ಈ [illegible] ಸಮಸ್ತ ಉಪಾಧ್ಯಾಯರೂ, ಪ್ರತಿ ಗ್ರಾಮ ಮುಖಂಡರುಗಳೂ ಇವ [illegible] ಬಹಳ ಗೌರವದಿಂದ ಕಾಣುತ್ತಿದ್ದರು. ನಿಷ್ಪಕ್ಷಪಾತಿಗಳೂ, ಕರ್ತವ್ಯ [illegible] ರಾಗಿಯೂ ಇರುವ ಇವರ ವಿಯೋಗವು ಇಲ್ಲಿನ ಜನರಿಗೆಲ್ಲಾ ಅಪಾರ [illegible] ವ್ಯಸನವನ್ನುಂಟುಮಾಡಿದೆ. ಇವರ ಸ್ಥಾನಕ್ಕೆ ಹೊಸದಾಗಿ ದಯಮಾಡಿಸಿ [illegible] ಮ|| ಲಕ್ಷ್ಮೀನಾರಾಯಣರಾಯರೂ ಪ್ರಜಾ ಹಿತಚಿಂತಕರಾಗಿ ಅಮೋಘ [illegible] ಕೀರ್ತಿಯನ್ನು ಸಂಪಾದಿಸಲೆಂದು ಹಾರೈಸುವ ವಿದ್ಯಾಭಿಮಾನಿ.

ಮಂಡ್ಯದಲ್ಲಿ ಬಲಾತ್ಕಾರ ವಿದ್ಯಾಭ್ಯಾಸ ಕ್ರಮ—ಜಾರಿಲು

ಅಯ್ಯಾ—ಕಳೆದ ವಾರ ಬಲಾತ್ಕಾರ ವಿದ್ಯಾಭ್ಯಾಸ ಕ್ರಮಕ್ಕೆ ಸಂಬಂಧ [illegible] ತಾವು ಪ್ರಕಟಿಸ ಮಾಡಿರುವ ಮಂಡ್ಯದ ತಾಲ್ಲೂಕು ವೃತ್ತಾಂತವನ್ನು [illegible] ನೋಡಿದೆನು. ಈ ಬಾತ್ಮೀದಾರರು "ಸರ್ಕಾರದ ಉದ್ಯೋಗಗಳು ಎಷ್ಟು [illegible] ಇಲ್ಲಿ ನಡೆಯುತ್ತಾ ಇಲ್ಲ" ಎಂದು ಬರೆದಿರುತ್ತಾರೆ. ಇವರು [illegible] ಗಳನ್ನು ತಿಳಿದುಕೊಳ್ಳದೆ ಬರೆಯುದಕ್ಕಾಗಿ ವ್ಯಸನಪಡಬೇಕಾಗಿದೆ. ಬಲಾ [illegible] ವಿದ್ಯಾಭ್ಯಾಸ ಕ್ರಮವು ಜಾರಿಗೆ ಬಂದು ಪ್ರಾರಂಭಿಸಿ ಸುಮಾರು 2 ತಿಂಗ [illegible] ಮಂಡ್ಯದಲ್ಲಿ ಶಾಲೆಗೆ ಹೋಗದೆ ಇರತಕ್ಕ ಹುಡುಗರ ಸಂಖ್ಯೆ [illegible] 60 ಇದೆ. ಇವುಗಳ ಪೈಕಿ 28 ಜನ ಹುಡುಗರು ಶಾಲೆಗೆ ಹೋಗು [illegible] ಬಲಾತ್ಕಾರದಿಲ್ಲದೆ ಶಾಲೆಗೆ ಹೋಗುತ್ತಿದ್ದಾರೆ. ಬಾಕಿ ಇರುವ ಹೀನ ಬಾಲಕ [illegible] ಶಾಲೆಗೆ ಕಳುಹಿಸಲು ಏರ್ಪಾಡು ಮಾಡಿರುತ್ತದೆ. ಈ ಕ್ರಮವು ಈ [illegible]—ಇದಕ್ಕೆ ಪ್ರಾರಂಭವು ಸಂಸ್ಥಾನಕ್ಕೇನೇ ಹೊಸದು. ಕಾನೂನಿಂದ ಆದುದ [illegible] ಕೈಬಿಡದೆ ಕಠಿಣವಾಗಿ ಜನರ ಮೇಲೆ ಪ್ರಯೋಗಿಸಲು ಇನ್ನೂ ಸ್ವಲ್ಪ [illegible] ಕಾಲವು ಬೇಕಾಗಿ ಇರುವುದಲ್ಲದೆ ವಿಧಾನ ತಾಳ್ಮೆ ಇರಬೇಕಾದುದು [illegible] [illegible] [illegible] ದಿನಪ್ರಯೋಗ ಕೆ [illegible] [illegible] [illegible] [illegible] [illegible] ಬಾತ್ಮೀದಾರರಿಗೂ ಈ ವಿಚಾರದಲ್ಲಿ ಅಭಿರುಚಿಯುಳ್ಳ ಜನರಿಗೂ ಈ [illegible] ತಿಳಿಸಲು ಅವಕಾಶ ಕೊಡಬೇಕಾಗಿ ಪ್ರಾರ್ಥನೆ

[illegible] ವಿದ್ಯಾಭ್ಯಾಸದ ಕಮಿಟಿ ಜಿ. ವಿ. ಸಂಜಪ್ಪಶೆಟ್ಟಿ,
ಎಟೆಂಡೆನ್ಸ್ ಆಫೀಸರ್ ಮಂಡ್ಯ.

ಶಿವಮೊಗ್ಗದಲ್ಲಿ ಗಾರೆ ಬವಣೆ.

ಅಯ್ಯಾ.. ದುರ್ಗಿಗುಡಿ ಎಕ್ಸ್‌ಟೆನ್ಷನ್‌ನಲ್ಲಿನ ತೊಂದರೆಗಳಿಗಾಗಿ ಅ [illegible] ಅವಗಾಹನೆಗೆ ತರುತ್ತಾ ಬಂದರೂ ಏನೂ ಉಪಯೋಗವಾಗುತ್ತಿಲ್ಲ. ಪ್ರಭುಗಳು [illegible] ಪಡುತ್ತಿರುವ ಕಷ್ಟವು ತಮಗೆ ತಿಳಿಯಬಂದ ನಂತರವಾದರೂ [illegible] ಮಾಡಬೇಕಾಗಿ [illegible] ಅರಿಕೆ ಮಾಡಿಕೊಳ್ಳುತ್ತೇನೆ. ಈ ದುರ್ಗಿಗುಡಿ ಎಕ್ಸ್‌ಟೆನ್ಷನ್‌ನಲ್ಲಿ [illegible] ಒಂದು ಪ್ರದೇಶವನ್ನು ಪ್ರಯಾಣ [illegible] [illegible] ಮನೆ [illegible] ಇದ್ದು, ಟೌನು ಮನೆ ಬಂಗಲೆ [illegible] ಗಳನ್ನು [illegible] ಬಿಡುವಾಗಲೂ, ಕೆಲವು ಅನುಕೂಲಗಳನ್ನಿತ್ತು ಸಹಾಯ [illegible] ಹೊಸ ನಲ್ಲಿಗಳನ್ನು ಇಡಿಸಿ ಇಲ್ಲಿ ಮನೆಗಳನ್ನು ಕಟ್ಟಿಕೊಳ್ಳಿರೆಂದು [illegible] ನೀರು ವಗೈರೆ ಕೊಡಿಸಿ ಅನುಕೂಲಪಡಿಸುವುದಾಗಿ ಅಪ್ಪ [illegible] ಪ್ರಕಾರ ಕೆಲವು ಜನರು ಆ ಆಸೆಯಿಂದ ಟೌನ್‌ನಲ್ಲಿರತಕ್ಕ [illegible] ನಲ್ಲಿ ವಗೈರೆ ಅನುಕೂಲಗಳನ್ನು ಬಿಟ್ಟು ಸರಕಾರದವರ ಸಹಾಯದಿಂದ [illegible] ಪ್ರಾರ್ಥನೆಯಂತೆ ಸ್ವಂತ ಮನೆಮಾಡಿಕೊಳ್ಳಲು ಸಂಕಲ್ಪ [illegible] ಸ್ಥಳಗಳನ್ನು ಕ್ರಯಕ್ಕೆ ಪಡೆದು ಕೆಲವರು ಮನೆ ಕಟ್ಟಿಸಲು ಪ್ರಾರಂ [illegible] ವಗೈರೆ ದಯಪಾಲಿಸದೇ ಬಿಟ್ಟಿರುವುದೇ ಸಾಲದೆ ಕಟ್ಟ [illegible]. ಕೆಲವು ಮಂದಿ ಕಟ್ಟಿದ ಹಾಗೇ ಇರುತ್ತಾರೆ. ಹಾಲಿ ಇರತಕ್ಕವರಿಗೆ [illegible] ನೀರೂ ಇಲ್ಲ; ನದಿಗೆ ಹೋಗಲು ಒಂದೂವರೆ ಮೈಲು ದೂರ [illegible] ಕೆಲವು ದಿವಸ ನಲ್ಲಿಯ ನೀರು, ಕೆಲವು ದಿವಸ ಬಾವಿಯ ನೀರು [illegible] ಆನಾರೋಗ್ಯ ಹೊಂದಬೇಕಾಗಿದೆ. ದಯಾಳು ಸರಕಾರದವರು ಈ [illegible] ನಿವಾರಣೆ ಮಾಡಬೇಕೆಂಬ ಅಂತ ರಂಗ [illegible] ಈಗಿರತಕ್ಕ [illegible] ಅನುಕೂಲವಾಗಿ ನಲ್ಲಿ ನೀರು ಒದಗಿಸಿಕೊಡುವುದಲ್ಲದೆ, [illegible] ಸೈಟುಗಳನ್ನು ಕೊಂಡುಕೊಂಡಿರುವವರಿಗೆ ಮನೆ ಕಟ್ಟಲು ಪ್ರೋತ್ಸಾಹ [illegible] ಕೂಡಲೆ ನೋಟೀಸ್ ಕೊಡಿಸಬಹುದಾಗಲಿ, ಇನ್ನು ಯಾವ ವಿಧದಿಂದಲಾ [illegible] ಮನೆ ಕಟ್ಟಿಕೊಳ್ಳತಕ್ಕ ಏರ್ಪಾಡು ಇಟ್ಟು, ನೀರಿನ ನಲ್ಲಿಗಳನ್ನೂ ರಾತ್ರಿ [illegible] ಅವಶ್ಯವಾಗಿರುವ ದೀಪ ಹಚ್ಚಲು ಲಾಂದ್ರಗಳನ್ನೂ ಇಡಿಸಿಕೊಟ್ಟು [illegible] ಕಷ್ಟಗಳನ್ನು ನಿವಾರಣೆ ಮಾಡಬೇಕಾಗಿ ಅರಿಕೆ ಪ್ರಜಾ ಹಿತವಾದಿ.

ಜನವಾರ್ತೆ.

ಅಯ್ಯಾ,—ಮೈಸೂರು ಸಂಸ್ಥಾನದಲ್ಲೆಲ್ಲಾ ಪ್ರೈಮರಿ ವಿದ್ಯಾಭ್ಯಾಸವನ್ನು [illegible] (ಮುಫತ್ತಾಗಿ) ಮಾಡಬೇಕೆಂಬುದಾಗಿ ನಮ್ಮ ಘನವಾದ [illegible] ಮಹಾರಾಜಾ ಸಾಹೇಬರವರು ಜನಸಮುದಾಯಕ್ಕೆಲ್ಲಾ ಮಹೋಪಕಾರ [illegible], ಈಗ ಗ್ರಾಮಾಂತರಗಳಲ್ಲಿ ಪ್ರೈಮರಿ ಸ್ಕೂಲುಗಳನ್ನು ಸ್ಥಾಪಿಸ [illegible] ಆಯಾ ಗ್ರಾಮಸ್ಥರಿಂದ ವರ್ಷ 1 ಕ್ಕೆ 36, 60 ರೂಪಾಯಿ [illegible] ಕೊಳ್ಳುತ್ತಲಿರುವುದರಿಂದ ಆ ಮಹತ್ತಾದ ಅನುಭವವು ಹೋಬಳಿ [illegible], ಡಿಸ್ಟ್ರಿಕ್ಟ್ ಬೋರ್ಡಿನ ದೊಡ್ಡ ಗ್ರಾಮ, ಊರು, ಪಟ್ಟಣಗಳ [illegible] ಮಾತ್ರವೇ ಉಂಟಾದಂತಾಯಿತೇ ಹೊರತು ನಮ್ಮ ಸರ್ಕಾರದವರು [illegible] ಜನರ ವಿದ್ಯೆ, ವ್ಯವಸಾಯ, ವಾಣಿಜ್ಯ, ಆರೋಗ್ಯ ಮುಂತಾದುವುಗಳ [illegible] ವೃದ್ಧಿಗಾಗಿ ಹಗಲೂ ಇರುಳೂ ಪ್ರಯಾಸಪಡುತ್ತಿರುವರೋ ಆ ಹಳ್ಳಿ [illegible] ಬಡ ರೈತರಿಗೆ ಅವರಲ್ಲಿಯೂ ಮಲೆನಾಡಿನಲ್ಲಿ ಅತ್ಯಂತ ಹೀನ [illegible] ಯುಳ್ಳ ಜನರಿಗೆ ಲವಲೇಶವಾದರೂ ಆ ಶ್ರೇಷ್ಠ ವರದ ಲಾಭವುಂಟಾಗು [illegible] ವಲ್ಲಾ! ಇದನ್ನು ನಮ್ಮ ಘನ ಸರ್ಕಾರದವರು ತಮ್ಮ ದಿವ್ಯ ಚಿತ್ತಕ್ಕೆ [illegible] ಬೇಕಲ್ಲವೇ?

ತಾಲ್ಲೂಕ್ ಅಮಲ್ದಾರ್ರುಗಳೂ, ಶೇಕ್ದಾರ್ರುಗಳೂ, ಅಲ್ಲಲ್ಲಿನ ಸ್ಕೂಲ್ [illegible] ಗಳೂ, ಡಿಸ್ಟ್ರಿಕ್ಟ್ ಎಜುಕೇಶನಲ್ ಆಫೀಸರುಗಳೂ ತಮ್ಮ ಪ್ರಯಾಣ [illegible] ಗ್ರಾಮಾಂತರದ ರೈತಾಪಿ ಜನಗಳಿಗೆ ವಿದ್ಯೆಯ ಪ್ರಯೋಜನಗಳನ್ನು ತಿಳಿಸಿ, [illegible] ಸ್ಕೂಲ್ ಸ್ಥಾಪಿಸಿಕೊಡುವಂತೆ ಸರ್ಕಾರದ ರೂಲ್ಸ್ ರಿವಾಯತಿಗಳ [illegible] ಅವರಿಗೆ ತಿಳಿಸಿ ಸರ್ಕಾರದ ನಿಯಮದಂತೆ ವರ್ಷ 1 ಕ್ಕೆ 36 ಅಥವಾ [illegible] ಗಳನ್ನು ಗ್ರಾಮಸ್ಥರಿಂದ ವಸೂಲ್ಮಾಡಿ ಆಯಾ ತಾಲ್ಲೂಕ್ ಟ್ರೆಜರಿಗೆ [illegible] ಕಟ್ಟಿಸಿ ಆಗಿದ್ದರೂ, 4-6-8 ತಿಂಗಳ ತನಕ ಗ್ರಾಮಸ್ಥರು ಕಾದು [illegible] ಸಾಕಾದರೂ ಅಂತಹ ಅನೇಕ ಗ್ರಾಮಗಳಿಗೆ ಮೇಲ್ಕಂಡ ಅಧಿಕಾರಿಗಳ [illegible] ಪ್ರಕಾರ ಸ್ಕೂಲ್ ಸ್ಥಾಪನೆಯಾಗದೆ ಹೋಗಿದೆ. ಇದಕ್ಕಾಗಿ ಅಂತಹ ಗ್ರಾಮ [illegible] ಮೇಲ್ಕಂಡ ಅಧಿಕಾರಿಗಳಿಗೆ ಪದೇಪದೇ ತಗಾದೆ ಮಾಡುತ್ತಿದ್ದರೂ, ಅವರ [illegible] ಅಧಿಕಾರಿಗಳು ವಿದ್ಯಾ ಇಲಾಖೆಗೆ ಕೆಲವು ಸಾರಿ ಬರೆಯುಟ್ಟು [illegible] ತ್ತಿದ್ದರೂ ಮೇಲಿನವರು ಲಕ್ಷ್ಯವೇ ಕೊಟ್ಟಂತೆ ಕಂಡುಬರುವುದಿಲ್ಲ [illegible]! ಇದು ಸರಿಯೋ? ಆ ಅಧಿಕಾರಿಗಳ ಮಾತಿನಲ್ಲಿ ಜನರಿಗೆ ಗೌರವ ಉಳಿದೀ [illegible]? ಅವರು ಮುಂದೆ ಜನರಿಗೆ ಈ ವಿಷಯ ಬೋಧಿಸಲು ಧೈರ್ಯಪಟ್ಟಾರೇ? [illegible] ಕೆಲವು ಗ್ರಾಮಗಳಲ್ಲಿ ಗ್ರ್ಯಾಂಟ್ ಸ್ಕೂಲ್ ಸ್ಥಾಪನೆಯಾಗಿ ಮಾಸ್ತರುಗಳು [illegible] ಮಾಡುತ್ತಿದ್ದಾರೆ. ಆದರೆ ಅವರಲ್ಲಿ ಕೆಲವರಿಗೆ 8-7-6-5 ತಿಂಗಳಿಂದಲೂ [illegible] ಗ್ರಾಂಟುಗಳೇ, ಗ್ರಾಮಸ್ಥರ ಕಂಟ್ರಿಬ್ಯೂಷನ್ ಹಣವಾಗಲೀ ಬಂದಿ [illegible] ಇವರು ಜೀವನ ಮಾಡುವುದು ಹೇಗೆ? ಇವರ ಸ್ಥಿತಿಗಳನ್ನು ಮೇಲ್ಪಟ್ಟ ಅಧಿಕಾರಿಗಳು ಗಮನಿಸದಿದ್ದರೆ ಕೇಳುವವರು ಯಾರು? ಈ ಮಾಸ್ತರುಗಳು ಡೆಪ್ಯುಟಿ ಇನ್ಸ್‌ಪೆಕ್ಟರಿಗೂ, ಇನ್|| ಜನರಲ್ ಸಾಹೇಬರವರಿಗೂ ಎಷ್ಟಾದರೂ ಮೊರೆಯಿಟ್ಟರೂ ಉತ್ತರವೇ ಇಲ್ಲದೆ ಹೋಗಿದೆ. ಹೀಗೆ ಇವರು ಪರ್ಮನೆಂಟಿ [illegible] ರಚಿತ್ತದಿಂದ ಕೆಲಸ ಮಾಡುತ್ತಿದ್ದರೂ ಸ್ಕೂಲ್ ಪರೀಕ್ಷೆಗಾದರೂ ಇನ್ಸ್‌ಪೆಕ್ಟರವರು ಬಂದಿಲ್ಲ. ಹೀಗಿರುತ್ತಾ ಬಡ ಮಾಸ್ತರುಗಳು ಯಾವ ಪ್ರೋತ್ಸಾಹದಿಂದ ಆ ಗ್ರಾಮಗಳಲ್ಲಿ ಸ್ಕೂಲ್ ನಡೆಸುತ್ತಾ ನಿಂತಿರಬಹುದು? ವಿದ್ಯಾರ್ಥಿಗಳು ಪರೀಕ್ಷಿಸಲ್ಪಟ್ಟು ಅವರವರ ಯೋಗ್ಯತಾನುಸಾರ ಮೇಲಿನ ತರಗತಿಗೆ ಕಳುಹಿಸಲ್ಪಡದೆ ಇದ್ದರೆ ಮುಂದೆ ಅವರು ಸ್ಕೂಲಿಗೆ ಯಾವ ಆಶೆಯಿಂದ ಬಂದಾರು? ಈ ವಿಷಯ ವನ್ನೆಲ್ಲಾ ನಮ್ಮ ಘನವಾದ ಸರ್ಕಾರದವರು ತಮ್ಮ ದಿವ್ಯ ಚಿತ್ತಕ್ಕೆ ತಂದು ಕೊಂಡು ಎಲ್ಲವನ್ನೂ ಶೀಘ್ರವಾಗಿ ಅನುಕೂಲಪಡಿಸಿ, ತಮ್ಮ ಸದುದ್ದೇಶವನ್ನು ಸಾರ್ಥಕಪಡಿಸಿಕೊಂಡಾರೆಂದು ನಂಬುತ್ತೇನೆ

ಡಿಸ್ಟ್ರಿಕ್ಟ್ ಉಪನ್ಯಾಸಕರು ದೊಡ್ಡ ದೊಡ್ಡ ಗ್ರಾಮಗಳಲ್ಲಿ ಸಂಚರಿಸಿ ಜನಗಳಿಗೆ ವಿದ್ಯೆ, ಬುದ್ಧಿ, ವ್ಯವಸಾಯ, ವ್ಯಾಪಾರ, ಆರೋಗ್ಯ, ಕೈಗಾರಿಕೆ ಮುಂತಾದ ವಿಷಯಗಳನ್ನು ಕುರಿತು ಬೋಧಿಸುತ್ತಾ ಹೋಗುತ್ತಿರುವುದರಿಂದ ಹಳ್ಳಿಗಾಡಿನ ಜನರಿಗೆ ಎಷ್ಟೋ ಪ್ರಯೋಜನವಾಗುತ್ತಲಿದೆ. ಇವರ ಬೋಧನೆಯ ಮೂಲಕ ಅನೇಕ ಕಡೆ ಹಗಲು ಮತ್ತು ರಾತ್ರೀ ಪಾಠಶಾಲೆಗಳು ಏರ್ಪಾಡಾಗಿ ಯೂ ಆಗುತ್ತಲೂ ಇರುವುದಲ್ಲದೆ ಇರುವ ಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಾ ಬರುತ್ತಲಿದೆ. ಅಲ್ಲಲ್ಲಿ ವರ್ತಮಾನ ಪತ್ರಿಕೆಗಳನ್ನು ತರಿಸುವುದು, ನೂತನ ಕ್ರಮದ ವ್ಯವಸಾಯ, ವಾಲೀಗರನ್ನು ತಪ್ಪಿಸಿ ಐಕಮತ್ಯ ದಿಂದಿರುವುದು, ಅನೇಕ ಕಡೆಗಳಲ್ಲಿ ಮದ್ಯಪಾನ ವರ್ಜನ ಸಂಘಗಳ ಸ್ಥಾಪನೆ, ಗ್ರಾಮ ಸ್ವಚ್ಛತೆ, ಕ್ರಮಗಳು ಅತ್ಯಭಿವೃದ್ಧಿ ಹೊಂದುತ್ತಿರುವುದು ಪ್ರಜೆಗಳ ಸೌಭಾಗ್ಯೋನ್ನತಿಗೆ ಪ್ರಮುಖ ಸಹಕಾರಿಗಳೆಂದು ಹೇಳಬೇಕಾದುದೇ ಇಲ್ಲ. ಈ ಶ್ರೇಷ್ಠವಾದ ಏರ್ಪಾಡನ್ನು ನಮ್ಮ ಘನ ಸರ್ಕಾರದವರು ವಿಸ್ತರಿಸಿ ಜನೋಪಕಾರ ಮಾಡುವುದು ನಿಸ್ಸಂದೇಹ. ಪ್ರತಿ ಡಿಸ್ಟ್ರಿಕ್ಟಿಗೂ ರೆವಿನ್ಯೂ ಸಬ್ ಡಿವಿಜನ್‌ಗಳಿರುವಂತೆ ಅಲ್ಲಲ್ಲಿನ ಒಬ್ಬೊಬ್ಬರನ್ನು ನೇಮಿಸುತ್ತಾ ಬಂದರೆ ಶೀಘ್ರೋ ಪಕಾರವಾಗುವುದರಲ್ಲಿ ಸಂದೇಹವಿಲ್ಲ ಪ್ರಜಾಭಿಮಾನಿ

ತಾಲ್ಲೋಕು ವರ್ತಮಾನಗಳು.

<u>ಬೇಲೂರು</u> —ಮುಂದಿನ ಏಪ್ರಿಲ್ ತಾ. ಮಾಸೆಯ 2 ನೇ ವಾರದಿಂದ ಶ್ರೀ ಸೌಮ್ಯಕೇಶವಸ್ವಾಮಿ ರಥೋತ್ಸವ ಕಾರ್ಯಗಳು ಪ್ರಾರಂಭವಾಗಿ ತಾ 14 ನೇ ಶುಕ್ರವಾರ ಪ್ರಸಿದ್ಧ ಗರುಡೋತ್ಸವವೂ, ತಾ. 15 ನೇ ಶನಿವಾರ ರಥೋತ್ಸವವೂ ನಡೆಯುತ್ತದೆ. ಈ ತಾಲ್ಲೂಕ್ ಶಿರಸ್ತೇದಾರ್ ಮ|| ಲಕ್ಷ್ಮೀನರಸಿಂಹಯ್ಯಂಗಾರ್ರು ಇಲ್ಲಿಗೆ ಬಂದಲಾಗಾಯಿತು ಈ ದೇವಾಲಯದ ಕಾರ್ಯಕ್ರಮಗಳನ್ನು ಮುತು [illegible] ಪೂರ್ವಕ ಕ್ರಮಪಡಿಸುತ್ತಾ ಇದ್ದಾರೆ —ರಥೋತ್ಸವ ಕಾಲದಲ್ಲಿ 14 15, 16 ನೇ ತಾರೀಖುಗಳಲ್ಲಿ ಇಲ್ಲಿ ಪರಸ್ಪರ ಸಹಾಯಕ ಸಂಘಗಳ, ಗ್ರಾಮಾಭಿವೃದ್ಧಿ ಸಂಘ ಮತ್ತು ವಿದ್ಯಾಭಿವೃದ್ಧಿ ಸಂಘಗಳ ಸಮ್ಮೇಳನವು ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಅಧ್ಯಕ್ಷತೆಯಲ್ಲಿ ನಡೆಯಲು ನಿಶ್ಚಯವಾ ಗಿದೆ. ಇಂಥಾ ಸಂಘಗಳು ನಮ್ಮ ದೇಶದಲ್ಲಿ ಅಭಿವೃದ್ಧಿಯಾಗುವಷ್ಟು ದೇಶವು ಸಂಪದಭಿವೃದ್ಧಿ ಹೊಂದುವುದು ಸಂದೇಹವಿಲ್ಲ. ಕಳೆದ ಫೆಬ್ರವರಿ ಪ್ರಾರಂಭದಿಂದ ಇಲ್ಲಿಯ ಎ. ವಿ. ಸ್ಕೂಲ್‌ನಲ್ಲಿ ಉಪಾಧ್ಯಾಯ ಸಭೆಯು ನಡೆಯುತ್ತಲಿದೆ [illegible] ದಲ್ಲಿ ಈ ಟವನ್ ಎಲ್ಲಾ ಪಾಠಶಾಲೆಗಳ ಉಪಾಧ್ಯಾಯರುಗಳೂ ಸೇರಿ [illegible] ವಾದ ವಿವಾದ, ಉಪನ್ಯಾಸಗಳನ್ನು ನಡೆಸುತ್ತಾ ಇದ್ದಾರೆ. [illegible] ಈ ತಾಲ್ಲೂಕ್ ಎಲ್ಲಾ ಹೋಬಳಿ ಉಪಾಧ್ಯಾಯರೂ ತಮ್ಮ ಗಮನ ವನ್ನು ಕೊಟ್ಟು ಇದು ಅತ್ಯಭಿವೃದ್ಧಿಯನ್ನು ಹೊಂದುವರೆಂದು ಹಾರೈಸುತ್ತೇವೆ

<u>ಮೊಳಕಾಲ್ಮೂರು</u> —ಈ ಊರಿನಲ್ಲಿ ಹೆರಿಗೆ ಮಾಡುವುದಕ್ಕೆ ಮಾರ್ಗಟ್ಟು ಇಲ್ಲದೆ ಇಲ್ಲಿ ಮುಸ್ಸಿಂ ಪಬ್ಲಿಕ್ ಸಂಸ್ಥೆ ಪಕ್ಕದಲ್ಲಿ ತೊಟ್ಟಿಯನ್ನು ಕಟ್ಟಿಕೊಂಡು ಮಾರುತ್ತಾ ಇದ್ದರು ಇದೇ ಕೆಲಸಕ್ಕಾಗಿ ರೀಡಿಂಗ್ ರೂಮ್ ಪಕ್ಕದಲ್ಲಿ ಒಳ್ಳೇ [illegible] ವನ್ನು ನೋಡಿ ಸರ್ಕಾರದವರು ಒಂದು ಮಾರ್ಕೆಟ್ ಕಟ್ಟಿಸಿದಾರೆ. 1913 ನೇ ಡಿಸೆಂಬರ್‌ನಲ್ಲಿ ಶ್ರೀಮನ್ ಮಹಾರಾಜರವರು ದಯಮಾಡಿಸಿದ್ದರು. ಅಪ್ಪಟಾಗಿ [illegible] ಅಲ್ಲಿ ಹಾಕಿದರು. ಈ ಕಟ್ಟಡದ ಫೌಂಡೇಷನ್ ಕಲ್ಲನ್ನು ಹಾಕಬೇಕೆಂದು ಬಂದು ಪ್ರತಿಷ್ಠೆ ಮಾಡಿದರು ಪ್ರತಿಷ್ಠೆ ಮಾಡಿ ಮೂರು ವರುಷಗಳಾದಾಗ್ಯೂ ಈ ಕಟ್ಟಡದಲ್ಲಿ ಯಾರೂ ಅಂಗಡಿ ಮಾರುವುದಿಲ್ಲ. ಅಕ್ಕಪಕ್ಕದಲ್ಲಿಯೇ ಮಾರು ತ್ತಾರೆ. ಆದಕಾರಣ ಪೋಲೀಸ್ ಇನ್ಸ್‌ಪೆಕ್ಟರು ಪ್ರತಿ ಒಬ್ಬರೂ ಮಾರ್ಕೆಟ್ಟಿನೊ ಳಗೇ ಮಾರುವಂತೆ ಏರ್ಪಾಡು ಮಾಡಬೇಕೆಂದು ಕೋರುತ್ತೇವೆ. ಇಲ್ಲದಿದ್ದರೆ ಕಟ್ಟಡವು ವ್ಯರ್ಥವಾಗಿ ಹೋಗುತ್ತೆ. ಮತ್ತು ಅಲ್ಲಿ ಯಾರೂ ಮಾರುವದಿಲ್ಲವೋ ಅಂಥವರನ್ನು ಸ್ಕೂಲ್ ಪಕ್ಕದಲ್ಲಿ ಮಾರದ ಹಾಗೆ ಅಟ್ಟ ಮಾಡಿದರೆ ಒಳ್ಳೇದು— ಮೊಳಕಾಲ್ಮೂರು ಮುಸಾಫರ್ ಬಂಗಲೆ ಬಹಳ ಒಳ್ಳೇ ಕಟ್ಟಡವಾಗಿದ್ದಾಗ್ಯೂ ನೀರಿ ಲ್ಲದೆ ಪ್ರಯಾಣಿಕರಿಗೆ ತುಂಬಾ ಕಷ್ಟವಾಗಿದೆ. ಇದರಲ್ಲಿ ಒಂದು ಬಾವಿ ತೆಗಿಸಿ ದಾರೆ. 50-60 ಅಡಿ ಇಳಿಸಿದಾರೆ, ನೀರು ಇಲ್ಲ. ದೊಡ್ಡ ಆಫೀಸರು ಬಂದರೆ ದೂರದಿಂದ ಅನುಕೂಲ ಮಾಡಿಕೊಳ್ಳಬಹುದು. ಸಣ್ಣ ಆಫೀಸರು ಬಂದರೆ ನೀರಿಗೆ ತುಂಬಾ ಕಷ್ಟ ಉಂಟು. ಆದಕಾರಣ ಡಿಸ್ಟ್ರಿಕ್ಟ್ ಫಂಡಿನಿಂದ ನೀರಿಗೆ ಅನುಕೂಲವಾದ ಸ್ಥಳದಲ್ಲಿ ಒಂದು ಮುಸಾಫರಿ ಬಂಗಲೆ ಕಟ್ಟಿಸಿದರೆ ತುಂಬಾ ಅನುಕೂಲವಾಗುವುದು

<u>ದೊ. ಬಾಣಾವರ.</u>—ಈ ಊರು ಸುಮಾರು 2,500 ಪ್ರಜಾ ಸಂಖ್ಯೆ ಯುಳ್ಳದ್ದಾಗಿಯೂ, ಆರೋಗ್ಯಕರವಾದ ಸ್ಥಳವಾಗಿಯೂ ಇದೆ. ಈ ಊರಿ ನಲ್ಲಿ ಒಂದು ಎ. ವಿ ಸ್ಕೂಲ್, ಎಲಿಮೆಂಟರಿ ಸ್ಕೂಲ್, ಹಿಂದುಸ್ಥಾನಿ ಸ್ಕೂಲ್ ಮತ್ತು ಗರ್ಲ್ಸ್ ಸ್ಕೂಲುಗಳು ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿಗಾಗಿ ಚೆನ್ನಾಗಿ ನಡೆಯಲ್ಪಡುತ್ತಾ ಇವೆ.—ಇಲ್ಲಿನ ಆಸ್ಪತ್ರೆಯಿಂದ ರೋಗಿಗಳಿಗೆ ತುಂಬಾ ಪ್ರಯೋಜನವಾಗಿದೆ. ಇವರ ಛಾರ್ಜಿನಲ್ಲಿರುವ ವೈದ್ಯ ಪಾಪಯ್ಯನಾಯ್ಡುರವರು ರೋಗಿಗಳ ಮೇಲೆ ಕರುಣಾಶಾಲಿಗಳಾಗಿದಾರೆ. ಈ ಊರಿನ ನಾರೀಮಣಿಗಳ ಪ್ರಸವಕಾಲದಲ್ಲಿ ಸಾಧ್ಯವಾದ ಸಹಾಯ ಕೊಡಬೇಕಾಗಿರುವ ಸೂಲಗಿತ್ತಿಯು ಇಲ್ಲದೆ ಪುರಾತನ ಕಾಲದ ಹಳೆ ಸೂಲಗಿತ್ತಿಯರ ಹಿಂಸೆಗೆ ಸಿಕ್ಕಿ ನರಳುತ್ತಿರುವ ಗರ್ಭಿಣಿ ಗಳ ಪಾಡನ್ನು ಏನೆಂದು ಹೇಳಲಿ. ಸರ್ಕಾರದವರು ಈ ಊರಿನವರಿಗೆ ಒಬ್ಬ ಮಿಡ್‌ವೈಫನ್ನು ಕಳುಹಿಸಿ ಉದ್ಧಾರ ಮಾಡಿ ಕೀರ್ತಿ ಪಡೆಯುವರೆಂದು ಕೋರು ತ್ತೇನೆ.—ಈ ಊರಿನವರಿಗಿರುವ ನೀರಿನ ಕೊರತೆಯನ್ನು ಎಷ್ಟೆಂದು ಹೇಳಿದರೂ ತೀರದು. ಕೆಲವು ಭಾವಿಗಳಲ್ಲಿ ಉದಯದಲ್ಲಿ ಕೆಲವರಿಗೆ ಸಾಕಾದಷ್ಟು ನೀರು ದೊರೆಯುವುದು ಉಳಿದವರಿಗಾದರೋ ಕೊರತೆಯಾಗಿರುವವು. ಎಲ್ಲರೂ ನೀರಿ ಗಾಗಿ ತುಂಬಾ ಶ್ರಮಪಡುತ್ತಾರೆ. ದನಕರುಗಳ ಸ್ಥಿತಿಯಂತೂ ಹೇಳಲು ತೀರದು. ಸಂತೆ ದಿನ ಜನರು ಕುಡಿಯುವುದಕ್ಕೆ ನೀರು ದೊರೆಯದೆ ಕಂಗೆಟ್ಟು ಹೋಗು ತ್ತಾರೆ. ಪುಣ್ಯಾತ್ಮರು ಒಂದು ಅರವಟ್ಟಿಗೆಯನ್ನು ಇಡಿಸಿದರೆ ಜನರು ಅವರ ಉಪ ಕಾರವನ್ನು ಮರೆಯಲಾರರು. ನಮ್ಮ ಸರ್ಕಾರದವರು ಈ ಸಂದರ್ಭದಲ್ಲಿ ಸಹಾಯ ಮಾಡುವರೆಂದು ನಂಬುವೆವು.—ಈ ಗ್ರಾಮದಲ್ಲಿ ಶಿವಭಕ್ತರು ಒಂದು ಕಡೆಯಲ್ಲಿ ಮಾದಿಗರು ಹೊರಗೆಯೂ ವಾಸಮಾಡುತ್ತಿರುವರು. ಕಳೆದ ಶುಕ್ರವಾರ ರಾತ್ರಿ ಮಾದಿಗರ ಹಟ್ಟಿಗೆ ಬೆಂಕಿಬಿದ್ದು ಮಾದಿಗರ ಮನೆಗಳೆಲ್ಲಾ ಸುಟ್ಟು ಭಸ್ಮವಾ ದವು. ಸುಗ್ಗಿಯಲ್ಲಿ ತಮ್ಮ ದವಸ ಧಾನ್ಯಗಳನ್ನೆಲ್ಲಾ ಸೋಗೆಯ ಗುಡ್ಲುಗ ಳಲ್ಲಿ ತುಂಬಿ ಇಟ್ಟುಕೊಂಡಿದ್ದದ್ದರಿಂದ ಅವುಗಳು ನಷ್ಟವಾದವು. ಎರಡು ದನ ಗಳು ಸತ್ತವು. ಪ್ರಾಣಾಪಾಯವೇನೂ ಇಲ್ಲ. ಈ ಬಡಜನಗಳಿಗೆ ಸುತ್ತಲಿರುವ ಗ್ರಾಮಸ್ಥರು ತಮ್ಮ ಉದಾರವಾದ ಸಹಾಯವನ್ನು ಕೊಡುವರೆಂದು ನಂಬುತ್ತೇವೆ.

<u>ಫ್ರೆಂಚ್ ರಾಕ್ಸ್</u> —ಬಿಸಿಲಿನ ತಾಪ ದಿನೇ ದಿನೇ ಹೆಚ್ಚುತ್ತಾ ಸಹಿಸಲು ಅಸಾಧ್ಯವಾಗಿರುತ್ತೆ. ಸದ್ಯ ಈ ವರುಷ ಕೆರೆಯಲ್ಲಿ ನೀರು ಇರುತ್ತೆ. ಅದೇ ಈ ಊರಿನ ಜನಗಳಿಗೆಲ್ಲಾ ಆಧಾರವಾಗಿರುತ್ತೆ. ಇಂಥಾದ್ದರಲ್ಲಿ ದನಗಳನ್ನು ಬಟ್ಟೆಗಳನ್ನು ತೊಳೆದು ನೀರನ್ನು ಕೆಡಿಸುತ್ತಾ ಬರುತ್ತಿರುವದರಿಂದ ಇಲ್ಲಿ ಯಾವಾಗ ಕಾಲರಾ ಜಾಡ್ಯ ಉಂಟಾಗುತ್ತೋ ಎಂದು ಜನಗಳೆಲ್ಲಾ ಗಾಬರಿಪಡುತ್ತಿರುವರು. ಅಲ್ಲದೆ ಊರಿನಲ್ಲಿ ಕತ್ತೆ, ನಾಯಿಗಳ ಕಾಟ ಹೆಚ್ಚಾಗಿ ರಾತ್ರಿ ವೇಳೆ ಜನಗಳು ಓಡಾಡಲು ತುಂಬಾ ಭಯವಾಗಿರುತ್ತೆ. ಈ ವಿಷಯದಲ್ಲಿ ಮೇಲ್ಪಟ್ಟ ಅಧಿಕಾರಿ ಗಳು ಗಮನಿಸಿಕೊಡುತ್ತಾರೆಂದು ನಂಬಿರುತ್ತೇವೆ.—ಇಲ್ಲಿನ ಸೂಲಗಿತ್ತಿಯು ರಜಾ ತೆಗೆದುಕೊಂಡಿರುವದರಿಂದ ಹೆಂಗೆ ಕೆಲಸಗಳಿಗೆ ತುಂಬಾ ತೊಂದರೆಯಾಗಿದೆ. ಸೂಲಗಿತ್ತಿಯನ್ನು ಶ್ರೀರಂಗಪಟ್ಟಣದಿಂದ ಕರೆಸಲು ಅಷ್ಟು ಅನುಕೂಲಸ್ಥರಾದ ವರು ಬಹಳ ವಿರಳ. ಆದ್ದರಿಂದ ನಮ್ಮ ಗೌರ್ನಮೆಂಟಿನವರು ಬಡ ಪ್ರಜೆಗಳ ಮೇಲೆ ತುಂಬಾ ಕೃಪೆಯಿಟ್ಟು ಸೂಲಗಿತ್ತಿಯನ್ನು ಕಳುಹಿಸಿಕೊಟ್ಟು ಕಾಪಾಡು ತ್ತಾರೆಂದು ನಂಬಿರುತ್ತೇವೆ. ಅಲ್ಲದೆ ಇಲ್ಲಿನ ಡಾಕ್ಟರ್ ಲಕ್ಷ್ಮೀನಾರಾಯಣರು ಕೂಡ ರಜಾ ಪಡೆದಿರುತ್ತಾರೆ. ಇವರ ಬದಲಿಗೆ ಮೈಸೂರಿಂದ ಹೊಸಬರು ಬಂದಿದಾರೆ.—ಇದೇ ಮಾಹೆ 20 ನೇ ತಾ. ಸೋಮವಾರ ಇಲ್ಲಿನ ಮಲ್ಲಿಕಾರ್ಜುನೇಶ್ವರ ಬೆಟ್ಟ ದಲ್ಲಿರುವ ಶಂಕರಾನಂದ ಭಾರತಿಯವರು ದೈವಾಧೀನರಾದರೆಂದು ಯಾರೋ ಸುಳ್ಳು ಸಮಾಚಾರ ಹುಟ್ಟಿಸಿ ಸುತ್ತಮುತ್ತಲೂ ಇರುವ ಹಳ್ಳಿ ಜನಗಳಿಗೆಲ್ಲಾ ಹರಡಿದರು. ಕೊಡಲೆ ಗಾಬರಿಯಾದ ಸುಮಾರು 2,000-3,000 ಜನಗಳು ಅಲ್ಲಿಗೆ ಬಂದು ಸೇರಿದರು. ಮಾಮೂಲು ಮೇರೆ ಸ್ವಾಮಿಯವರು ಹೊರಕ್ಕೆ ಬಂದು ಜನಗಳ ಗುಂಪನ್ನು ನೋಡಿ ವಿಷಯ ವಿಚಾರಿಸಿ ತುಂಬಾ ವ್ಯಾಕುಲ ಪಟ್ಟರು. ನಂತರ ಜನಗಳೆಲ್ಲಾ ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗಿದರು. ಅನ್ನ ಪಾನಗಳಿಲ್ಲದೆ ಜನಗಳೆಲ್ಲಾ ತುಂಬಾ ತೊಂದರೆಪಟ್ಟರು. ಇಂಥಾ ಪುಂಡು ಜನ ಗಳನ್ನು ನಮ್ಮ ಸರ್ಕಾರದವರು ಪತ್ತೆಮಾಡಿ ತಕ್ಕ ಶಿಕ್ಷೆ ಮಾಡುತ್ತಾರೆಂದು ನಂಬಿರುತ್ತೇವೆ.—ಶಿವಸಮುದ್ರದಲ್ಲಿ ಮರ್ಹೂಮ್ ಪೀರ್ ಮರ್ದಾನೆ ಗೈಬ್ ಎಂಬವರ ಜ್ಞಾಪಕಾರ್ಥವಾದ ದರ್ಗಕ್ಕೆ ದೇಶಾಂತರಗಳಿಂದ ಅನೇಕ ಜನಗಳು ಯಾತ್ರೆಗೆ ಬರುತ್ತಾರೆ. ಅಗ್ಗ ಅವರುಗಳಿಗೆ ಅಲ್ಲಿ ಇರಲು ಸರಿಯಾದ ಸ್ಥಳವೇ ಇಲ. ಆದ್ದರಿಂದ ಮಹಮ್ಮದೀಯರೆಲ್ಲಾ ಸೇರಿ ಅಲ್ಲಿ ಒಂದು ಛತ್ರವನ್ನು ಕಟ್ಟಿಸಲು ಚಂದಾ ಮೂಲಕ ಧನ ಸಂಗ್ರಹವನ್ನು ಕೊಡಿಸುತ್ತಾ ಇದಾರೆ.

<u>ದೊಡ್ಡಬಳ್ಳಾಪುರ</u> —ಬಿಸಿಲಿನ ಧಗೆಯು ದಿನೇ ದಿನೇ ಹೆಚ್ಚುತ್ತಾ ಬರು ತ್ತದೆ. ಆಜುಬಾಜುದಲ್ಲಿ ಅನೇಕ ಗ್ರಾಮಗಳವರು ಪಟ್ಟಣಗಳಲ್ಲಿ ವಾಸಮಾಡು ತ್ತಿದ್ದಾರೆ. ಈ ಟವನಿನಲ್ಲಿರುವ ಭಾವಿಗಳಲ್ಲಿ ನೀರು ಪಾತಾಳದವರೆಗೂ ಹೋಗಿದೆ. ಕುಡಿಯುವ ನೀರಿಗಂತು ಜನರು ಊರಾಚೆ ಇರುವ ಭಾವಿಗಳಿಗೆ ಹೋಗಿಯೇ ತರಬೇಕಾಗಿದೆ. ಕುಡಿಯುವ ನೀರನ್ನು ನಲ್ಲಿಗಳ ಮೂಲಕ ಈ ಟವನ್ನಿಗೆ ಸರ ಬರಾಯಿ ಮಾಡಿಸಿಕೊಡಬೇಕೆಂದು ಇಲ್ಲಿನ ಪ್ರಜೆಗಳು ಚಂದಾ ಮೂಲಕ ಸುಮಾರು 18-20 ಸಾವಿರ ರೂಪಾಯಿಯನ್ನು ಸರ್ಕಾರದವರ ವಶಮಾಡಿ ಅನೇಕ ವರ್ಷಗಳಾದರೂ ಸರ್ಕಾರದವರು ಈ ಸಹಲ್ ವರಿಗೂ ಯಾವ ಪ್ರಯತ್ನವನ್ನೂ ದಯ ಮಾಡಿರುವ ಹಾಗೆ ಕಾಣುವದಿಲ್ಲ. ಜೀವನಾಧಾರವಾಗಿರುವ ನೀರಿಗೋ ಸ್ಕರ ಜನರು ಪಡುವ ಪ್ರಯಾಸವನ್ನು ಆದಷ್ಟು ಕಡಮೆ ಮಾಡುವರೆಂದು ನಿರೀ ಕ್ಷಿಸುತ್ತೇವೆ.—ಈ ವರ್ಷ ಯುಗಾದಿ ಹಬ್ಬದ ರಾತ್ರಿ ಜನರು ಅನೇಕ ಸಂಸಾರಿಗಳ ಮನೆಯ ಚಿತ್ತಲುಗಳನ್ನು ನುಗ್ಗೆ ಕಡಗಳನ್ನೂ, ಚೌಕಟ್ಟುಗಳನ್ನೂ ಮನೆಗಳಿಗೆ ಹಾಕತಕ್ಕ ಮರ ಮುಟ್ಟುಗಳನ್ನೂ, ಸೇದುವ ಭಾವಿಗಳ ಸಿಲುಬೆಗಳನ್ನೂ, ಗಾಡಿಗಳನ್ನೂ ಕಿತ್ತುಕೊಂಡು ಹೋಗಿ ಕಾಮದಹನದ ಉರಿಯಲ್ಲಿ ಹಾಕಿ ಸುಟ್ಟುಬಿಟ್ಟರೆಂತಲೂ, ಬಹಳ ಜೋಸ್ತಿನವಾಗಿ ಗಲಭೆ ಮಾಡಿಕೊಂಡು ಪ್ರಜೆಗಳ ನೆಮ್ಮದಿಗೆ ಭಂಗವನ್ನುಂಟುಮಾಡಿದರೆಂತಲೂ, ಅನೇಕರು ಈ ವಿಷಯದಲ್ಲಿ ತುಂಬಾ ಅತೃಪ್ತಿ ಅಸಮಾಧಾನಗಳನ್ನು ಪಟ್ಟುಕೊಂಡು ಇರುತ್ತಾರೆಂತಲೂ ತಿಳಿಯಲು ತುಂಬಾ ವ್ಯಸನ ವಾಗುತ್ತದೆ. ಮುಂದೆ ಇಂಥಾ ಅನರ್ಥಗಳಿಗೆ ಕಾರಣವಾಗದಂತೆ ಸರ್ಕಾರದವರು ಪೋಲೀಸ್ ಬಂದೋಬಸ್ತು ಇಟ್ಟು ಜನರ ಸ್ವತ್ತು ನೆಮ್ಮದಿಗಳಿಗೆ ಯಾವ ಕುಂದಕ ವಾಗದಂತೆ ತಕ್ಕ ಬಂದೋಬಸ್ತು ಮಾಡುವರೆಂದು ಪ್ರಕಟಿಸಿದೆ.—ಈ ಮಾಹೆ 24 ನೇ ತಾ. ಸಾಯಂಕಾಲ ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಒಂದು ಸಂತೋಷ ಕೂಟ ಜರುಗಿತು. ಇಲ್ಲಿ ಕೆಲವು ದಿವಸ ಮಾತ್ರ ಇದರ ಸ್ಕೂಲಿನಲ್ಲಿ ಅ|| ಮಾಸ್ಟ ರಾಗಿದ್ದ ಮ|| ರಂಗರಾಯರಿಗೆ ನಂಜನಗೂಡು ಗೌ|| ಕನ್ನಡ ಸ್ಕೂಲ್ ಹೆಡ್ ಮಾಸ್ಟರ್ ಕೆಲಸವಾಗಿ ತೆರಳಬೇಕಾದುದರಿಂದ ಇಲ್ಲಿನ ಮಾಸ್ಟರುಗಳೂ ವಿದ್ಯಾ ರ್ಥಿಗಳೂ ತಮ್ಮ ವಿಶ್ವಾಸ ಪ್ರೀತಿ ಮರ್ಯಾದೆಗಳನ್ನು ತೋರಿಸಲು ಸಿಧ್ಧ ಕೊಡಿಸಿ ದ್ದರು. ಆಗ ನಮ್ಮ ಪ್ರೇಮಪಾತ್ರರಾದ ಅಮಲ್ದಾರ್ ಮ|| ಮಹಮದ್ ಷರೀಫ್ ಸಾಹೇಬರು ಅಗ್ರಾಸನವನ್ನು ವಹಿಸಿದ್ದರು. ಮ|| ವೀಣೆ ಸುಬ್ಬಣ್ಣನ ವರ ವೀಣಾಗಾನವೂ, ಮ|| ವಾಸುದೇವರಾಯರಿಂದ ಪದಿ ಸಂಗೀತಮಯ ಗುಡ [illegible] ಕಥನವೂ ನಡೆದ ನಂತರ ಅಮಲ್ದಾರರು ಸಮಯೋಚಿತವಾದ ಕೆಲವು ಮಾತು ಗಳನ್ನು ಆಡಿದರು. ಕಡೆಯಲ್ಲಿ ಗಂಧ ಪುಷ್ಪ ತಾಂಬೂಲಗಳಿಂದ ಬಂದಿದ್ದ ಸಭಿ ಕರಿಗೆ ಮರ್ಯಾದೆಯನ್ನು ಸಲ್ಲಿಸಿ ಕೂಟವನ್ನು ಮುಕ್ತಾಯ ಮಾಡಿದರು.

<u>ಚಿಂತಾಮಣಿ</u> —ಇಲ್ಲಿಗೆ ಭಾವನಗರದ ಪ್ರೊಫೆಸರ್ ಷಾ ಯವರು ಬಂದು ಯಕ್ಷಿಣಿ, ಮ್ಯಾಜಿಕ್, ಇವುಗಳಲ್ಲಿ ಬಹಳ ಚಮತ್ಕಾರವಾಗಿ ಅನೇಕ ಆಟಗ ಳನ್ನು ತೋರಿಸಿ ಜನಗಳಿಗೆ ನೇತ್ರಾನಂದವನ್ನುಂಟುಮಾಡಿದರು. ಇವರು ಬಂದೂ ಕು ಹಾರಿಸುವುದರಲ್ಲಿ ಬಹಳ ನಿಪುಣರು. ಅನೇಕ ಅಸಾಧ್ಯವಾದ ಮತ್ತು ಸಾಹಸ ಸಂದರ್ಭವಾದ ಕೆಲಸಗಳನ್ನು ನಡಿಸಿದರು. ನೆನ್ನೆ ದಿನವಾದ ಇವರು ಈ ಗ್ರಾ ಮದ ಬಳಿ ಇರುವ ರಾಮಕುಂಟೆಯಲ್ಲಿ ಒಂದು ಮರದ ಚೆಂಡನ್ನು ಹಾಕಿ ಅದನ್ನು ಬಂದೂಕಿನಿಂದ ಗುರಿಹಿಡಿದು ಹೊಡೆದದ್ದಕ್ಕೆ, ನೀರಿನಲ್ಲಿದ್ದ ಗುಂಡು ಸುಮಾರು ಒಂದು ಸಾವಿರ ಅಡಿ ಮೇಲಕ್ಕೆ ಹಾರಿತು. ಈ ಆಶ್ಚರ್ಯವನ್ನು ನೋ ಡಲು ಸಾವಿರಾರು ಜನಗಳು ಬಂದಿದ್ದರು. ಇವರು ಮಾಡಿದ ಆಶ್ಚರ್ಯಕರವಾದ ಕೆಲಸಗಳಿಗಾಗಿ ಈ ಗ್ರಾಮದ ದೊಡ್ಡ ಮನುಷ್ಯರು ಒಂದು ಚಿನ್ನದ ಮೆಡಲನ್ನು ಪ್ರೊಫೆಸರಿಗೆ ಬಹುಮಾನ ಮಾಡಿದರು. ಇದಲ್ಲದೆ ಈ ಮಹನೀಯರಿಗೆ ಅನೇಕ ಮಹಾರಾಜರುಗಳು ಸುಮಾರು 70 ಚಿನ್ನದ ಮೆಡಲುಗಳನ್ನು ಬಹುಮಾನವಾಗಿ ದಯಪಾಲಿಸಿರುತ್ತಾರೆ. ಪ್ರೊಫೆಸರವರು ಇಲ್ಲಿಂದ ನೇರಾ ಕ್ಯಾಲಿಕಟ್ಟಿಗೆ ಪ್ರಯಾಣ ಮಾಡುತ್ತಾರೆ.—(ಇನ್ನೊಬ್ಬ ಬಾತ್ಮೀದಾರರಿಂದ) ನಮ್ಮ ಹೆಡ್ಮಾಸ್ಟರಿಗೆ ಡೆಪ್ಯುಟಿ ಇನ್ಸ್‌ಪೆಕ್ಟರ್ ಕೆಲಸವಾದ್ದರಿಂದ ಇವರಿಗೆ ಎಲ್ಲಾ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ಊರಿನ ಪ್ರಮುಖ ಜನರೊಂದಿಗೆ ಮಧ್ಯಾಹ್ನ ಸಭೆ ಸೇರಿ ದರು. ಸ್ಕೂಲು ಕಟ್ಟಡವು ಅಲಂಕರಿಸಲ್ಪಟ್ಟಿತ್ತು. ಹೆಡ್ಮಾಸ್ತರನ್ನು ಮನೆಯಿಂದ ನೇಟಿವ್ ಬ್ಯಾಂಡ್ ಮಾಡಿಸಿಕೊಂಡು ಮರ್ಯಾದೆಯಿಂದ ಕರೆತಂದರು. ಸಭಾ ಮಂದಿರವನ್ನು ಪ್ರವೇಶವಾಗುತ್ತಲೇ ಎಲ್ಲರಿಗೂ ಟೀ ಪಾರ್ಟಿಯು ಜರುಗಿತು. ಅನಂತರ ನಮ್ಮ ಡಿ. ಪಿ. ಡಬ್ಲ್ಯು. ಆಫೀಸರಾದ ಮ|| ನರಸಿಂಹಯ್ಯಂಗಾರ್ರು ಜನರ ಕೋರಿಕೆ ಮೇರೆಗೆ ಅಗ್ರಾಸನವನ್ನು ಸ್ವೀಕರಿಸಿದರು. ಹೆಡ್ಮಾಸ್ತರವರೂ ಕೂಡ ಪ್ರೀತ್ಯಾಸನವನ್ನು ಅಲಂಕರಿಸುತ್ತಲೇ ಸಭಾಮಂದಿರವು ಜಯಘೋಷ ಮಾಡಿತು. ಗರಲ್ಸ್ ಸ್ಕೂಲ್ ಸಂಗೀತದ ಮಾಸ್ಟರ್ ಮಧ್ವರಾಯರೂ, ಎ. ವಿ. ಸ್ಕೂಲ್ ವಿದ್ಯಾರ್ಥಿಗಳೂ ಸಭಿಕರ ಮನಸ್ಸನ್ನು ಆಕರ್ಷಿಸುವಂತೆ ಗಾನಮಾಡಿ ದರು. ಆ ಮೇಲೆ ಸ್ಕೂಲಿಗೆ ಸೇರಿದ ಅ|| ಮಾಸ್ತರುಗಳೂ, ಹಿಂದೂಸ್ಥಾನಿ ಹೆಡ್ ಮಾಸ್ತರವರೂ, ಸಿರಸ್ತೇದಾರರೂ ಹೆಡ್ಮಾಸ್ತರ ಗುಣ ಕಥನವನ್ನು ಮಾಡಿದರು. ಅಗ್ರಾಸನಾಧಿಪತಿಗಳು ಸಭಿಕರನ್ನು ಕುರಿತು ಈ ಹೆಡ್ಮಾಸ್ತರವರು ಇಲ್ಲಿನ ಜನ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಮತ್ತು ಪಾಪಭೀತರಾಗಿಯೂ, ನಿಸ್ವಾರ್ಥಿಗಳಾಗಿ ಯೂ ಕೆಲಸ ಮಾಡುತ್ತಿದ್ದರೆಂತಲೂ, ಇವರೇ ಇನ್ನು ಕೆಲವು ದಿವಸಗಳು ಇಲ್ಲಿಯೇ ಇದ್ದಿದ್ದರೆ ಚೆನ್ನಾಗಿತ್ತೆಂತಲೂ ತಿಳಿಸಿದ ಮೇಲೆ ಹೆಡ್ಮಾಸ್ಟರವರು ಎದ್ದು ನಿಂತು ತಮಗೆ ಈ ಊರನ್ನು ಬಿಡುವುದು ಇಷ್ಟವಿಲ್ಲವೆಂತಲೂ, ಕಾರಣಾಂ ತರಗಳಿಂದ ಬಿಡಬೇಕಾಯಿತೆಂತಲೂ, ಇದುವರೆಗೆ ತಾವು ಮಾಡಿರತಕ್ಕ ಕೆಲಸ ಗಳಲ್ಲಿ ನ್ಯೂನಾತಿರೇಕಗಳಿದ್ದಲ್ಲಿ ಅದನ್ನು ಮನ್ನಿಸಬೇಕೆಂತಲೂ ಹೇಳಿದರು. ತರು ವಾಯ ಎಲ್ಲರಿಗೂ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಸಂತೋ ಷದಿಂದ ಎಲ್ಲರೂ ಜಯಘೋಷದೊಡನೆ ಅವರವರ ಮನೆಗಳಿಗೆ ತೆರಳಿದರು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತವನ್ನು ಓದಿನೋಡಿರಿ.

ಸ್ವಲ್ಪ ಕ್ರಯ ! ಬಹು ಲಾಭ !

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯ ಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳ ಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ

ದೊಡ್ಡವರಿಗೂ ಸಣ್ಣ ಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದ ಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂತೆ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆ ಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗ, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲಿ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣೊಳಗೆ ಹೂವು ಬೀಳುವದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ವಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರವಲೆಶೂಲಿ, ನಡಶೂಲಿ, ವಾತಶೂಲಿ, ರೇಚಿಜಡ್ಡು, ಗುಧ್ದ್ವಯನ ಬೇನೆ, ತುರಿಕು ಕಜ್ಜಿ, ಗಜಕರ್ಣ, ಶದ್ದ ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರಿಯರ ಮುಟ್ಟಿಶೂಲಿ, ಹಡಪನಂಜು, ಸಣ್ಣಕೂಸುಗಳ ಬಾಲಗ್ರಹ, ತೋಡಗೆಮ್ಮು, ಅರವಿ ಮುಟ್ಟಿದೋಷ ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪವಿಷ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆತಿವೆ. ಈ ಆರೋಗ್ಯಬಿಂದು ತಯಾರಾಗಿ 6 ವರ್ಷಗಳಾಗಿದ್ದರೂ 13,000 ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತವೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉಪ್ಪಿಕ್ಕ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ, ವಿ.ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ ಇದಕ್ಕೆ ವಿ.ಪಿ. ಖರ್ಚು ಐದು ಆಣೆ ಬೀಳುತ್ತವೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲ. ವಿ.ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟ ತೋರಿದರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆ ಭಾಷಿಸಿರುತ್ತದೆ. ಪಸಂದಿಗೆ ಪ್ರಕಾರ ಬಾಟ್ಲಿಯ ಸೋಗಿನ ಸಿಗುವದು. ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ. [44-4]

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ, ಅರ್ಕಶಫಾ ಶೋಧಕ, ಪೋಷ್ಟ ಆಫೀಸ ಮುಕ್ಕಾಮ ಶಾಹಪೂರ, ಬೆಳಗಾಂವ.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಕಾಲುಚೀಲಗಳೂ, ಬನಿಯನುಗಳೂ, ಬರಿಗಳೂ ಮ್ಯಾನೇಜರವರಿಗೆ ಬರೆದು ತರಿಸಿಕೊಳ್ಳಬಹುದು

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ

Apply :—MANAGER, WOOL WORKS,

[188-27] GIRLS' INDUSTRIAL SCHOOL, HASSAN.

NOTICE

Tenders are hereby invited for the exclusive privilege of Establishing Bonded Depots in the Mysore Province and transporting thereto Arrack and other Country Spirits from the Bangalore Government Central *Distillery under bond*. During the period 1st July 1916 to 30th June 1919.

2. Every tender must be accompanied by a deposit of Rs. 600 and should reach the undersigned on or before noon of Monday the 10th April 1916 on which date it will be opened by the Excise Commissioner at 12 noon.

3. The quantity of Arrack and other Country Spirits transported from the Distillery to the Depots is estimated at between four and four and a half lacs of gallons per annum. [85-1]

4. For conditions and further particulars see Notification No. Fl. 4866 S. R. 115-15-2, dated 23-3-1916, published in Part I of the Mysore Gazette.

5. Copy of Notification and form of application may be had on requisition to the undersigned.

Excise Commissioner's Office, Dated, Bangalore, 27th March 1916. P. RAGHAVENDRA RAO, *Excise Commissioner in Mysore.*

NOTICE

Tenders are hereby invited for the exclusive privilege of the manufacture in the Government Central Distillery at Bangalore of Arrack and other Country Spirits for supply throughout the Territories of Mysore and the Civil and Military Station of Bangalore, for a period of three years from 1st July 1916 to 30th June 1919. [86-1]

2. Every tender should be accompained by a deposit of Rs 5,000 in cash or in Government securities duly endorsed in favour of 'The Dewan' of Mysore, and should reach the undersigned on or before noon of Monday the 10th April 1916 on which date it will be opened by the Excise Commissioner at 12 noon.

3. The quantity of arrack required for consumption in the State is estimated at between four and four and a half lacs of gallons per annum.

4. For conditions and further particulars see Notification No. Fl. 4867 S. R. 100-15-3, dated 22nd March 1916 published in Part I of the Mysore Gazette

5 Copy of Notification and form of application may be had on requisition to the undersigned.

Excise Commissioner's Office, Dated, Bangalore, 27th March 1916. P. RAGHAVENDRA RAO, *Excise Commissioner in Mysore.*

ಅತಿ ಸುಗಂಧಮಯವಾದ ನಶ್ಯ.

ನಮ್ಮಲ್ಲಿ ದೊರೆಯುವ ಔಷಧ ಮಿಶ್ರಿತವಾದ ನಶ್ಯವು ಎಲ್ಲಾ ತಂದ ತಲೆನೋವು, ಮೂಗಿನಲ್ಲಿ ನೀರು ಹರಿಯುವುದು, ಪೀನಸ ಕಲಿಸೋವು, ತಲೆ ತಿರುಗುವುದು, ಗೋಯ್ ಎನ್ನುವುದು, ಈ ಮೊದಲಾದ ಬಾಧೆಗಳನ್ನೆಲ್ಲಾ ನಿವಾರಿಸುವದು. ನರಗಳಿಗೆ ಉತ್ತೇಜನ ಕೊಡುತ್ತದೆ. ಕ್ರಯ ಬಾಟ್ಲಿ 1 ಕ್ಕೆ 4 ಆಣೆ, 12 ಬಾಟ್ಲಿಗಳಿಗೆ ರೂ 2-8-0.

ಸಾದಾನಶ್ಯ 1 ನೇ ನಂಬರ್ 24 ತೋಲಾ ಸೇರಿಗೆ ರೂ 0-14-0

" " " " " ರೂ 0-12-0

ಪ್ಯಾಕಿಂಗ್ ಪೋಸ್ಟೇಜ್ ಬೇರೆ.

ನಮ್ಮ ವಿಳಾಸ—ಪ್ಯಾರೀ ಕಂಪನಿ,

[49-5] 18, ಸೆಕೆಂಡ್ ಲೈನ್ ಬೀಚ್, ಮದರಾಸು.

ಉಗಾದಿ ಬಹುಮಾನ. ಹೊಸ ಕಂಪೆನಿ. ಹೊಸ ಸಾಮಾನುಗಳು

ಅಮೇರಿಕ ದೇಶದ ಎಲೆಕ್ಟ್ರಿಕ್ ಮಾಗುಟಪಟ್ಟು 3 ರೂಪಾಯಿ ಬೆಲೆ ಬಾಳತಕ್ಕದ್ದನ್ನು ರೂ. 1-8-0 ಕೊಡುವೆವು ಇದನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಅಮೆರಿಕಾ ದೇಶದಲ್ಲಿ ಕೆಂಡು ಹಿಡಿಯಲ್ಪಟ್ಟು ಇಮಿಟೇಷನ್ ವಜ್ರದ ಅಂದ ತಯಾರಿಸಿ ಕಳುಹಿಸಿ ಇರುತ್ತಾರೆ. ಇವರ ಕಲ್ಲುಗಳು ಕೋಟಿ ಸೂರ್ಯ ಪ್ರಕಾಶಕ್ಕೆ ಥಳಥಳಿಸುವದು ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿ ಇರುತ್ತೆ. ಇವನ್ನು ನೋಡುವವರು ಪುಷ್ಯರಾಗವೆಂದು ಹೇಳುವರು ಅಷ್ಟು ಸೂರ್ಯ ಪ್ರಕಾಶಕ್ಕೆ ಥಳಥಳಿಸುವದು. ಬೇಗಬೇಗನೆ ದರಖಾಸ್ತು ಮಾಡುವವರಿಗೆ ಒಳ್ಳೇ ಫಾಯಿದೆ ಸಿಕ್ಕುವದು

ಮಲ್ಲಿಗೆ ಹೂವಿನ ಸೀರೆ.

ಈ ಸೀರೆಗಳನ್ನು ಉಗಾದಿ ಹಬ್ಬಕ್ಕಾಗಿ ತರಿಸಿ ಇರುತ್ತೇವೆ. ಇದರ ಕ್ರಯ ರೂ. 3 ವಿ. ಪಿ. ಚಾರ್ಜು 0-8-0 ಪ್ರತ್ಯೇಕ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ರೂ 1-0-0 ಮಾಫಿ ಮಾಡಲ್ಪಡುವುದು. ಎಲ್ಲರೂ ವಿಕ್ರಯಿಸಿದ ಸೀರೆಗಳಲ್ಲ. ಭಾರಿ ಕ್ರಯದ ಸೀರೆಗಳು ಇದು ಉಡುವದಕ್ಕೆ ಧರ್ಮಾರ್ಥವಾಗಿಯೂ ನಯವಾಗಿಯೂ ಇದೆ. ಬಣ್ಣ ಗ್ಯಾರಂಟಿ ಕೊಡುವೆವು. ಸೀರೆಯ ಉದ್ದ 16 ಮೊಳ, ಸೊಗಸಾದ ಅಂಚು ಕಟ್ಟು ಇರುತ್ತೆ. ಇದು ಎಲ್ಲರೂ ಉಡುವದಕ್ಕೆ ಲಾಯಖಾದುದು. ಪ್ರತಿ ದಿನ ಸಾವಿರಾರು ಸೀರೆಗಳು ವಿಕ್ರಯಿಸುತ್ತದೆ ದಯಮಾಡಿ 1 ಸೀರೆಯನ್ನು ತರಿಸಿಕೊಂಡು ಅಲಂಕಾರ ಭೂಷಿತರಾಗುವಿರೆಂದು ನಂಬಿ.

ವಿಳಾಸ.—ರತ್ನಂ ಕಂಪನಿ, ಕ್ಲಾತ್ ಮರ್ಚಂಟ್,

[63-4] 3, ಇರುಳಪ್ಪನ ಬೀದಿ, ಮದರಾಸು.

ಕ್ಯಾಕ್ಸ್ಟನ್ ಪ್ರೆಸ್ಸಿನ ಮುದ್ದಾದ ಮುದ್ರಣ.

ಪ್ರಶ್ನೋತ್ತರ ಲೇಖ್ಯಬೋಧಿನಿ.

ಥಳಥಳಿಸುವ ದಪ್ಪ ಕಾಗದ, ಬಹು ಭದ್ರವಾದ ಅಟ್ಟೆ.

ಬಿಕರಿಗೆ ಸಿದ್ಧವಾಗಿದೆ! ಆರನೆಯ ಛಾಪೆ !! ಬಿಕರಿಗೆ ಸಿದ್ಧವಾಗಿದೆ!!!

ಕ್ರಯ ಒಂದು ರೂಪಾಯಿ ನಾಲ್ಕಾಣೆ, ಅಂಚೆಯ ವೆಚ್ಚ ಬೇರೆ.

ಈ ಪುಸ್ತಕದ ಪ್ರಯೋಜನವು ಹೆಚ್ಚೆಂದು ನಾವು ಹೊಗಳಬೇಕಾದುದಿಲ್ಲ. ಅಲ್ಪ ಕಾಲದಲ್ಲಿ ಐದು ಮುದ್ರಣದ ಪುಸ್ತಕಗಳು ಮುಗಿದು ಆರನೆಯ ಸಲ ಅಚ್ಚಾಗಿರುವ ಸಂಗತಿಯೇ ಪುಸ್ತಕವು ಸರ್ವಜನೋಪಯೋಗಿ ಎಂದು ಸಾರುತ್ತಿದೆ. ಒಂದು, ಎರಡು, ಮೂರು, ನಾಲ್ಕು, ಐದನೆಯ ಮುದ್ರಣಗಳ ಪುಸ್ತಕಗಳಿಗಿಂತಲೂ ಆರನೆಯ ಮುದ್ರಣದ ಪುಸ್ತಕವು ಎಲ್ಲಾ ಬಗೆಗಳಲ್ಲಿಯೂ ಅದ್ವಿತೀಯವಾದ ಅನೇಕ ಹೆಚ್ಚು ಸಂಗತಿಗಳು ಸೇರಿ ಬಲು ಅಂದವಾಗಿರುವುದು.—ಕೂಡಲೆ ಹಗಲು ಕೋರ್ಟು ವ್ಯವಹಾರಗಳಲ್ಲಿ ಓಡಾಡುತ್ತಿರುವ ಸಿವಿಲ್, ಕ್ರಿಮಿನಲ್, ರೆವಿನ್ಯು ಮತ್ತು ಇತರ ಅನೇಕ ಆಲೋಚನೆ ತಕ್ಕವನ್ನು ತಿಳಿದುಕೊಳ್ಳಲಿಚ್ಛಿಸುವಂತವರಿಗೆ ಪರಿಷ್ಕರಿಸಲಾಗಿದೆ. ಇದುವರೆಗೆ ಓದುತ್ತ ಅನೇಕರಿಗೆ ಅನುಭವ ವೇದ್ಯವು. ಮುಂದೆ ಓದುವವರಿಗೆ ಅನುಮಾನ ಅಗತ್ಯವಿಲ್ಲ.—ಈ ಪುಸ್ತಕವು 04, 06, 07, 10, 1913 ನೆಯ ವರುಷಗಳಲ್ಲಿ ಅಚ್ಚಾಗಿ ಒಟ್ಟಿನಲ್ಲಿ ಏಳು ಸಾವಿರ ಪುಸ್ತಕಗಳು ಮಾರಿಹೋದವು. ಪ್ರತಿ ಮುದ್ರಣದ ಪುಸ್ತಕವೂ ಮಾರಿಹೋಗಿ ಗ್ರಾಹಕರಿಗೆ ಸಮಯಕ್ಕೆ ಪುಸ್ತಕ ದೊರೆಯದೆ ಪುನಃ ಮುದ್ರಣವಾಗುವ ವರೆಗೆ ಕಾಯಬೇಕಾಗುವದೆ !! ಅಪೇಕ್ಷಿತರು ಅಸಡ್ಡೆ ಮಾಡದಿರುವುದು ಉತ್ತಮ !!!

ಇದರೊಳಗಿರುವ ಸಂಗತಿಗಳನ್ನೋದಿ ನೋಡಿ.

ಕ್ಷೇಮಸಮಾಚಾರ ಕಾಗದಗಳು—ಬರೆಯುವದಕ್ಕೆ ತೊಡಗುವುದು, ಮರ್ಯಾದೆಗಳು, ಬಂಧುಗಳಿಗೆ, ಹಿರಿಯರು ಕಿರಿಯರಿಗೆ, ಕಿರಿಯರು ಹಿರಿಯರಿಗೆ, ಸಮಾನರಿಗೆ, ಐಶ್ವರ್ಯವಂತರು, ಮಠಾಧಿಕಾರಿಗಳು, ಗುರುಗಳು, ಜಗದ್ಗುರುಗಳು ಮುಂತಾದವರಿಗೆ ಆಯಾ ಮತ ಪದ್ಧತಿಯನುಸರಿಸಿ ಬರೆಯುವ ಒಕ್ಕಣೆ, ಮರ್ಯಾದೆಗಳು.—ರೆವಿನ್ಯು ಕೋರ್ಟು.—ದರಖಾಸ್ತು, ರಾಜೀನಾಮೆ, ವರ್ಗಾವರ್ಗಿ, ರಿಪೋರ್ಟು, ಚಿಲ್ಲರೆ ಇತರ ಅನೇಕ ಬಾಬಿನ ಅರ್ಜಿಗಳು, ಲ್ಯಾಂಡ್ ರೆವಿನ್ಯು ರೂಲ್ಸು ಅನುಸರಿಸಿ ರೈತರಿಗೆ ರಿಯಾಯಿತಿ ದೊರೆಯುವ ಬಗೆ ಬಗೆ ಸಂಗತಿಗಳಲ್ಲಿ ಅರ್ಜಿಗಳು.—ಸಿವಿಲ್ ಕೋರ್ಟು—ತಿಳುವಳಿಕೆ ನೋಟೀಸ್, ಬಗೆ ಬಗೆ ದಾವಾ ಅರ್ಜಿಗಳು, ಸಮನ್, ಸಾಕ್ಷಿ, ವಕೀಲ, ಪ್ರತಿವಾದಿಯ ಎದುರುತ್ತರ, ಕರಾರುಗಳು, ವಿಚಾರಣೆ, ತೀರ್ಮಾನ, ಡಿಕ್ರಿ, ಜಡ್ಜಮೆಂಟ್, ಜಾರಿ, ತಕರಾರು, ತೀರ್ಮಾನ, ಅಪೀಲು, ಹರಾಜು, ಸ್ವತ್ತು ಸ್ವಾಧೀನ, ದಿವಾಳಿ, ವಾರಸು, ಮೈನರು, ಗಾರ್ಡಿಯನ್, ದಾಯಭಾಗ, ಮುಂತಾದ ಬಗೆ ಬಗೆ ವಿಷಯಗಳಲ್ಲಿ ನಡೆವಳಿ, ವಿಧಿ, ಸ್ಟಾಂಪು, ತಿಳುವಳಿಕೆ, ಸ್ಮಾಲ್‌ಕಾಜ್, ಒರಿಜಿನಲ್, ಅಪೀಲು, ಸ್ಪೆಷಲ್ ಅಪೀಲು, ರಿವ್ಯೂ ಮುಂತಾದ ವಿಷಯಗಳು ಸ್ಪಷ್ಟವಾಗಿ ಹೇಳಿದೆ.—ಕ್ರಿಮಿನಲ್ ಕೋರ್ಟು—ಪೋಲೀಸು, ಫಿರ್ಯಾದು, ಕಳವು, ಮೋಸ, ವಿಶ್ವಾಸಘಾತುಕತೆ, ಕೊಲೆ, ಅತಿಕ್ರಮಪ್ರವೇಶ, ಅಕ್ರಮ, ತಡೆ, ಜುಲುಮು, ದೊಂಬಿ, ಅಕ್ರಮಕೂಟ, ಮೋಜಸ್ಟ್ರೇಟರವರಲ್ಲಿ ಫಿರ್ಯಾದಿ, ವಿಚಾರಣೆ, ಸಾಕ್ಷಿ, ತೀರ್ಮಾನ, ಪುನರ್ವಿಚಾರಣೆ, ಅಪೀಲು, ಅಪರಾಧಿಗಳಿಗೆ ಸರ್ಕಾರದವರ ಸಹಾಯ, ಇಂಡಿಯನ್ ಪೀನಲ್ ಕೋಡಿನ ಯಾವ ಯಾವ ಸೆಕ್ಷನುಗಳು ಯಾವ ಯಾವ ತಪ್ಪಿತಗಳಿಗೆ ಲಗಾವಾಗುತ್ತವೆ ಎಂಬುವದು, ಯಾವ ಯಾವ ಸೆಕ್ಷನುಗಳ ಸಂಬಂಧವಾದ ತಪ್ಪಿತಗಳನ್ನು ಯಾವ ಯಾವ ಮೇಜಸ್ಟ್ರೇಟರು ವಿಚಾರಿಸಬೇಕು, ಯಾವ ಯಾವ ಕೋರ್ಟಿಗೆ ಎಷ್ಟೆಷ್ಟು ಶಿಕ್ಷೆ ಕೊಡುವ ಅಧಿಕಾರವಿರುತ್ತೆ, ಪೋಲೀಸಿನವರಿಗಿರುವ ಅಧಿಕಾರದ ಪರಿಮಿತಿ ಮುಂತಾದ ಸಂಗತಿಗಳು ವಿವರಿಸಲ್ಪಟ್ಟಿವೆ.—ಇತರ ಇಲಾಖೆಗಳು.—ಇಂಜಿನಿಯರ್, ಫಾರೆಸ್ಟ್, ಎಕ್ಸೈಜ್, ವಿದ್ಯಾಭ್ಯಾಸ, ವ್ಯವಸಾಯ, ಮ್ಯುನಿಸಿಪಲ್ ಮುಂತಾದ ಅನೇಕ ಇಲಾಖೆಗಳಿಗೆ ಬೇರೆ ಬೇರೆ ಅವಶ್ಯ ಬೀಳುವ ಸಂಗತಿಗಳ ಅರ್ಜಿ.—ಪತ್ರಗಳು.—ಲೇವಾದೇವಿ, ರಶೀದಿ, ಹುಂಡಿ, ಆಧಾರ, ಭೋಗ್ಯ, ಕ್ರಯ, ದಾನ, ಪರಿವರ್ತನೆ, ಗೇಣಿ, ಪಾಲು ವ್ಯವಸ್ಥೆ, ಮರಣಶಾಸನ, ತಾರೀಖು ಮುಂತಾದ ಬಗೆ ಬಗೆ ಪತ್ರಗಳು, ಅವುಗಳಿಗೆ ಅಲ್ಲಲ್ಲಿಯೇ ವಿಧಿ, ಸ್ಟಾಂಪು, ರಿಜಿಸ್ಟ್ರೇಷನ್ ನಡವಳಿ, ಅನುಭವ ಮುಂತಾದವುಗಳನ್ನು ವಿವರಿಸಿದೆ.—ವರ್ತಕರ ಲೆಕ್ಕಗಳು.—ರೋಜು ವಹಿ, ಅಮದು ಬುಕ್ಕು, ರಫ್ತು ಬುಕ್ಕು, ಭಂಡಾರದ ಬುಕ್ಕು, ಹುಂಡಿ ಬುಕ್ಕು, ನಗದಿ ಶಿಲ್ಕು ಬುಕ್ಕು, ಕಂಡಲ್ ಬುಕ್ಕು, ಇವುಗಳ ರೀತಿ, ಇವುಗಳ ಪ್ರಯೋಜನ ಮುಂತಾದವುಗಳನ್ನು ಇಂಗ್ಲಿಷ್ ಬುಕ್ ಕೀಪಿಂಗ್ ಪದ್ಧತಿಯನ್ನು ಸಹಜವಾಗಿ ವಿವರಿಸಿದೆ.—ಗ್ರಾಮ ಛಾವಡಿ ಲೆಕ್ಕಗಳು.—ಲ್ಯಾಂಡ್ ರೆವಿನ್ಯು ಕೋಡಿನ ಪ್ರಕಾರ ಶಾನುಭೋಗರು ಬರೆಯುವ ಗ್ರಾಮದ ಲೆಕ್ಕಗಳು ಯಾವುವು? ಅವುಗಳಲ್ಲಿ ಏನನ್ನು ಬರೆಯುವುದು? ಹೇಗೆ ಬರೆಯುವುದೆಂಬುದನ್ನು ವಿವರಿಸಿದೆ.—ಕಾನೂನುಗಳು.—ಸಿವಿಲ್ ಪ್ರೊಸೀಜರ್ ಕೋಡು, ಇಂಡಿಯನ್ ಪೀನಲ್ ಕೋಡು, ಹಿಂದೂ ಲಾ, ಮಹಮ್ಮದೀಯ ಲಾ, ಕಂಟ್ರಾಕ್ಟ್, ಡಾಮೇಜು, ವಾರಸು, ಮೈನರು, ಲಿಮಿಟೇಷನ್, ಸ್ಟಾಂಪು, ಕೋರ್ಟುಫೀಸು, ರಿಜಿಸ್ಟ್ರೇಷನ್, ಸಿವಿಲ್ ಗ್ರಾಮಪೋಲೀಸು, ಹಾಗು ಪೋಲೀಸು, ಸ್ಯಾನಿಟರಿ, ಮ್ಯುನಿಸಿಪಲ್, ಕಂಪೇನೀಸ್ ಆಕ್ಟು, ಫಾರೆಸ್ಟು, ಎಕ್ಸೈಜ್, ರೆವಿನ್ಯು ಕೋಡ್, ರೂಲ್ಸ್, ಲ್ಯಾಂಡ್ ಇಂಪ್ರೂವ್‌ಮೆಂಟು, ಲ್ಯಾಂಡ್ ಅಕ್ವಿಜಿಷನ್, ಬೆಂಡ್ಸ್, ಆರ್ಮ್ಸ್ ಮುಂತಾದ ಉಪಯೋಗವಾದ ಎಲ್ಲಾ ಆಕ್ಟುಗಳ ಸಾರಾಂಶವನ್ನು ಅಡಗಿಸಿದೆ.—ಸ್ವಲ್ಪ ಮಟ್ಟಿಗೆ ಓದುಬರಹ ಬಂದವರೂ ಕೂಡ ಸುಲಭವಾಗಿ ತಿಳಿಯುವ ಹಾಗೆ ಪ್ರಶ್ನೋತ್ತರ ರೀತಿಯಾಗಿ ಬರೆಯಲ್ಪಟ್ಟಿರುವ ಈ ಪುಸ್ತಕದಲ್ಲಿರುವ ಉಪಯೋಗವಾದ ವಿಷಯಗಳೆಷ್ಟೋ ಎಂದು ವಿವರಿಸುವದು ಸಾಧ್ಯವಲ್ಲವಾದರೂ ಸಂಕ್ಷೇಪವಾಗಿ ವಿವರಿಸಿದೆ. ಈ ಅಂಶವು ಇದನ್ನು ಓದಿರುವ ಸಾವಿರಾರು ಮಂದಿಗೆ ಗೊತ್ತಿದೆ ! ಈಗಲೂ ಮೊದಲನೆಯ ಐದು ಛಾಪೆಗಳಿಗಿಂತಲೂ ಈ ಆರನೆಯ ಛಾಪೆಯಲ್ಲಿ ಹೇರಳವಾದ ವಿಷಯಗಳನ್ನು ಸೇರಿಸಿದೆ. ಪ್ರತಿಯೊಂದು ಕುಟುಂಬಕ್ಕೆ ಒಂದರಂತೆ ಈ ಪುಸ್ತಕವನ್ನು ಸಂಗ್ರಹಿಸ ಬೇಕು. ಬರೆಯುವಂತವರು ತಾವಿರುವ ಊರು, ಆ ಊರಿನ ಬಳಿ ಇರುವ ಪೋಸ್ಟಾಫೀಸು, ಅದು ಸೇರಿದ ತಾಲೂಕು, ಜಿಲ್ಲೆಗಳು, ಇವುಗಳೊಂದಿಗೆ ತಮ್ಮ ಹೆಸರುಗಳನ್ನು ಸ್ಪಷ್ಟವಾಗಿ ಇಂಗ್ಲೀಷಿನಲ್ಲಿ ಬರೆಯಲು ಪ್ರಾರ್ಥಿಸಲಾಗಿದೆ. ಕಾಗದದ ಕ್ರಯ ಬಹುವಾಗಿ ಹೆಚ್ಚಿದರೂ, ಪುಸ್ತಕದ ಕ್ರಯವನ್ನು ಹೆಚ್ಚಿಸಲಿಲ್ಲ. ಪ್ರತ್ಯುತ್ತರಾಪೇಕ್ಷಿತರು ರಿಪ್ಲೈ ಕಾರ್ಡು ಬರೆಯಬೇಕು.

[84-1] ಪುಸ್ತಕ ದೊರೆಯುವ ಸ್ಥಳ:—ಭಾರತಿ ಸಂಪಂಗಿರಾಮು, ಸಂಪಾದಕ, "ಸವಿನುಡಿ," ಕೋಟೆ, ಬೆಂಗಳೂರು ಸಿಟಿ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಮಾರ್ಚಿ 16 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮೆ:—(1) ಷೇರು ಮೊಬಲಗು	...	ರೂ. 10,00,000
,, (2) ರಿಜರ್ವ್ ಫಂಡು	,,	75,000
,, (3) ಡಿಪಾಜಿಟ್ಟುಗಳು	,,	39,77,799
,, (4) ಇತರೆ	,,	33,964
(ಅಸಲಿ ಲಾಭ ಬಿಟ್ಟಿರುತ್ತೆ.)	ಜುಮ್ಲಾ	ರೂ. 50,86,763
ಖರ್ಚು:—(1) ಕೈಯಲ್ಲಿ, ಬ್ಯಾಂಕುಗಳಲ್ಲಿರುವ ಹಣ		ರೂ. 4,38,903
,, (2) ಖಾತೆ ಮತ್ತು ಇತರ ಸಾಲಗಳು	,,	33,60,177
,, (3) ಡಿಸ್ಕೌಂಟು ಮಾಡಿದ ಪ್ರಾಮಿಸರಿ ನೋಟುಗಳು	,,	4,82,213
,, (4) ಇನ್ವೆಸ್ಟ್‌ಮೆಂಟುಗಳು	,,	7,56,822
,, (5) ಏಜೆಂಟರುಗಳಲ್ಲಿರುವ ಮೊಬಲಗು	,,	16,357
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	18,236
,, (7) ಇತರೆ	,,	13,965
(ಅಸಲಿ ಲಾಭ ಬಿಟ್ಟಿರುತ್ತೆ.)	ಜುಮ್ಲಾ	ರೂ. 50,86,763

ವಿ. ರಾಮಸ್ವಾಮಯ್ಯ, ಆ| ಮ್ಯಾನೇಜರ್.

ನಂಜನಗೂಡು ತಾಲ್ಲೂಕಿನಲ್ಲಿ ಗ್ರಾಮಾಭಿವೃದ್ಧಿ.

ನಂಜನಗೂಡು ತಾಲ್ಲೂಕು ಗ್ರಾಮಾಭಿವೃದ್ಧಿಯ ಮತ್ತು ಪ್ರೋಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶಿಮುಲ್ಲಾಕ್ ಮ| ಶ್ರೀನಿವಾಸಯ್ಯನವರು ಹೇಳಿದ ಕಾರ್ಯಗಳಲ್ಲಿ ನಡೆದ ಕಾನ್ಫರೆನ್ಸಿನಲ್ಲಿ ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ—

ಕೃಷಿ ರೈತರು ನೇಗಿಲು ಮುಂತಾದ ಕೈಗಾರಿಕೆಗಳನ್ನು ಪ್ರಚುರಪಡಿಸುವುದಕ್ಕೆ ಬಗ್ಗೆ ಬದನವಾಳು, ದೇವನೂರು, ಬೊಕ್ಕಹಳ್ಳಿ ಮತ್ತು ಕೆಲವು ಗ್ರಾಮಗಳಲ್ಲಿ ಕೆಲ್ಸ ಸೇರಿಸಿರುವವರಿಗೆ ಹಾರೋ ಎಂಬ ಯಂತ್ರಗಳ ಉಪಯೋಗವನ್ನು ಮತ್ತು ಅವರ ಅನುಕೂಲತೆಯನ್ನು ಪ್ರದರ್ಶನ ಪೂರ್ವಕ ತೋರಿಸಿ ಆ ಯಂತ್ರಗಳ ಬಗ್ಗೆ ಪ್ರಚಾರಕ್ಕೆ ತಂದಿರುತ್ತೆ.—ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಸೂಪರಿಂಟೆಂಡೆಂಟರಿಂದ ಹಿಪ್ಪುನೇರಳೆ ವ್ಯವಸಾಯಕ್ಕೆ ಬಗ್ಗೆ ಕಲ್ಲು ಒಡೆಯುವ ಯಂತ್ರದ ಉಪಯೋಗದಿಂದ ಜಾಗ್ರತೆಯಾಗಿಯೂ ಮತ್ತು ಸುಲಭವಾಗಿ ಬಾವಿ ತೆಗೆಯುವ ರೀತಿಯನ್ನು ಪ್ರದರ್ಶನದ ಮೂಲಕ ತೋರಿಸಿ ಪ್ರೋತ್ಸಾಹಪಡಿಸಿರುತ್ತೆ. ಅಲ್ಲದೆ ನೂತನ ತರದ ರೇಷ್ಮೆಯಿಂದ ಹಾಲನ್ನು ತೆಗೆಯುವ ಬೆಣ್ಣೆ ತೆಗೆಯುವುದಕ್ಕೆ ವಿಧಾನವನ್ನು ನಂಜನಗೂಡಿನಲ್ಲಿ ರೈತರಿಗೆ ಪ್ರದರ್ಶನದ ಮೂಲಕ ತೋರಿಸಿರುತ್ತೆ.

ಯಂತ್ರದ ಸಹಾಯದಿಂದ ನೀರನ್ನು ಎತ್ತಿ ಜಮೀನುಗಳಿಗೆ ಹಾಯಿಸುವವರಿಗೆ ಅನುಕೂಲಪಡಿಸುವುದಕ್ಕೆ ಬಗ್ಗೆ ಮ|| ವಾಸುದೇವ ಶೆಲಟೀಕರ್ ಎಂಬುವರು ಒಂದು ಯಂತ್ರವನ್ನು ತರಿಸಿರುತ್ತಾರೆ. ಅದನ್ನು ಕೆರೆಯಲ್ಲಿ ತಮ್ಮ ಜಮೀನಿನ ಬಳಿಗೆ ಇಡಿಸಬೇಕೆಂದಿರುತ್ತಾರೆ. ಅಲ್ಲದೆ ಮ|| ಪುರುಷೋತ್ತಮನಂದಗಿರಿ ಗೋಸಾಯಿಯವರು ಯಂತ್ರ ಕೊಳೆಯಿಂದ ನೀರು ಎತ್ತಿ ತಮ್ಮ ಜಮೀನುಗಳನ್ನು ಅಜಮಾಯಿಷಿ ಮಾಡುವುದಕ್ಕೆ ಬಗ್ಗೆ ಇಂಥಾ ಯಂತ್ರ ಒಂದನ್ನು ತರಿಸಲು ತಯಾರಾಗಿರುತ್ತಾರೆ.—ಬಾವಿ, ಕಟ್ಟೆಗೆ ಮತ್ತು ನುಗ್ಗು ಕಟ್ಟೆಗಳ ಸವಾರಿ ವಿಷಯದಲ್ಲಿ ಸಂಬಂಧಪಟ್ಟ ಜನಗಳಿಗೆ ತಿಳಿವಳಿಕೆ ಕೊಟ್ಟು ಪ್ರೋತ್ಸಾಹಪಡಿಸಿ ಸರ್ಕಾರ ಕೈಗಾರಿಕೆಗಳ ಅಭಿವೃದ್ಧಿ ಹೊಂದುವುದಕ್ಕೆ ಭಾಗದಲ್ಲಿ ಸಂಬಂಧ ಏರ್ಪಾಡುಗಳನ್ನು ನಡೆಯುತ್ತಿರುತ್ತೆ.—ಕಮಿಟಿಯವರು ನಡೆಯಿಸುವುದಕ್ಕೆ ಸಂಬಂಧಪಟ್ಟವರು ಕೆಲವರುಗಳೊಸ್ಕರ ಖರ್ಚು ಮೊಬಲಗನ್ನು ಒದಗಿಸಿಕೊಳ್ಳುವುದಕ್ಕೆ ಬಗ್ಗೆ ಸಾಲ್ ಒಂದಕ್ಕೆ 100 ರೂಪಾಯಿನಂತೆ ಮತ್ತು ಆದ 200 ರೂಪಾಯಿ ಜಂಪು ಮೊಬಲಗಿನ ಜೊತೆಗೆ ಸರ್ಕಾರದಿಂದ 200 ರೂಪಾಯಿ ಗ್ರಾಂಟು ಕೊಡಲ್ಪಟ್ಟಿದೆ. ಈ ಸಮಯದಲ್ಲಿ ಪಾಸಾಗಿರುವ ನೈಟ್ ಸ್ಕೂಲುಗಳು, ಕೋ-ಆಪರೇಟಿವ್ ಸೊಸೈಟಿ, ಮುಂತಾದುವುಗಳಲ್ಲಿ ಗ್ರಾಮಗಳ ಮಾಡಿಕ ಸಾಲಗಳ ವಸೂಲಿ ಪ್ರಸ್ತಾಪ ಮಾಡುತ್ತಿರುವುದು ಸುಮಾರು 180 ಜಿಲ್ಲೆ ರೂಪಾಯಿ ಖಾತೆ ಘಟಿಸಲ್ಪಟ್ಟಿರುತ್ತೆ. ಇನ್ನು ಸಹ ಜನ ವರ್ತಮಾನಗಳು ಏರ್ಪಾಡು ಆಗಲಿದೆ.

ಕೋ-ಆಪರೇಟಿವ್ ಕಲೆ ಮತ್ತು ಗಟ್ಟಿ ಮಾಡಿರುವ ಗ್ರಾಮಗಳಲ್ಲಿ ಮ| ಸ್ಟೆಲ್ ಸಾಮು ಸಂಪಾಗರು ಮುಂತಾದ ಪಾಪ ಹಾಡುವ ಸಹಾಯ ಸಂಘಗಳ ಜೊತೆಗೆ ಸೇರುವುದಕ್ಕೆ ಏರ್ಪಾಟಾಗುತ್ತಿದೆ. ಈ ನಾಲ್ಕು ಸಂಘಗಳಲ್ಲಿಯೂ ಒಟ್ಟು 200 ಮೆಂಬರುಗಳಿದ್ದು ಕೂಡಲ್ಪಟ್ಟ 2,400 ರೂಪಾಯಿನ ಷೇರು ಮೊಬಲಗು, 6,000 ರೂಪಾಯಿ ಠೇವಣಿಯನ್ನು ಹೊಂದಿ ಒಳ್ಳೆ ಬಂದೋಬಸ್ತಿನಿಂದ ಕೆಲಸ ನಡೆಯುತ್ತಲಿವೆ. ಇನ್ನು ಇತರ ಕಡೆಗಳಲ್ಲಿ ಇಂಥಾ ಪರಸ್ಪರ ಸಹಾಯಕ ಸಂಘಗಳನ್ನು ಏರ್ಪಡಿಸಿಕೊಳ್ಳುವುದರಿಂದ ಉಂಟಾಗತಕ್ಕ ಪ್ರಯೋಜನವನ್ನು ಕುರಿತು ತಿಳುವಳಿಕೆ ಕೊಟ್ಟು ಪ್ರೋತ್ಸಾಹಪಡಿಸುತ್ತಾ ಬಂತ್ತೆ.

ವಿದ್ಯಾಭ್ಯಾಸ ಅಭಿವೃದ್ಧಿ.—ಗ್ರಾಮಾಭಿವೃದ್ಧಿ ಮತ್ತು ಸಂಪದಭಿವೃದ್ಧಿ ವಿಚಾರವಾಗಿ ಡೆಪ್ಯುಟಿ ಕಮಿಷನರ್ ರವರು ಮತ್ತು ಡಿ| ಎಜುಕೇಷನ್ ಸೂಪರಿಂಟೆಂಡೆಂಟರವರು ಈ ತಾಲ್ಲೂಕಿನಲ್ಲಿ ಸಂಚಾರ ಬಂದಿದ್ದಾಗ ಕೊಡುತ್ತಿರುವ ತಿಳುವಳಿಕೆಗಳ ಪ್ರಕಾರ ಜಾರಿಗೆ ತರುವುದಕ್ಕೆ ಉಂಟಾಗಿರುವುದಕ್ಕೆ ಫಲ ಕಾಣತಕ್ಕಂಥ ಸ್ಥಿತಿಯನ್ನು ಅವಲೋಕಿಸಿ ನೋಡಲು ನಮ್ಮ ವಿದ್ಯಾ ಸಂಘದ ದಿನ ಕಳೆದ ವರ್ಷ 3 ನೇ ತಾರೀಖಿನಲ್ಲಿ ಮಹಾನಾಡಿನಲ್ಲಿ ಈ ತಾಲ್ಲೂಕು ಮೈಸೂರಿನ ಹೆಡಿಯಾಲ, ಬೊಕ್ಕಹಳ್ಳಿ ಮತ್ತು ದೇವನೂರು ಗ್ರಾಮಗಳನ್ನು ಆದ ಪಾಯಿಷಿ ಮಾಡಿ ಆ ಗ್ರಾಮಗಳ ಜನರು ಇದುವರೆಗೆ ನಡೆಸಿದ ಕೆಲಸ ಕೆಲಸಗಳಿಗೆ ತುಂಬಾ ಸಂತೋಷಪಟ್ಟು ಈ ವಿಚಾರದಲ್ಲಿ ಮುಂದೆ ಕ್ರಮ ಪಡಿಸಬೇಕಾಗಿರುವ ಉಪಾಯಗಳನ್ನು ತಿಳಿಸಿ ಆ ಬಗ್ಗೆ ತಕ್ಕ ತಿಳುವಳಿಕೆಯನ್ನು ಕೊಟ್ಟಿರುತ್ತಾರೆ. ಅದರಂತೆ ಜಾರಿಗೆ ತರತಕ್ಕ ಭಾಗದಲ್ಲಿ ಗ್ರಾಮ ಕಮಿಟಿಯವರು ಮುತುವರ್ಜಿ ವಹಿಸಿ ಕೃಷಿ ಮಾಡುವರೆಂದು ನಂಬಿದೇನೆ. ನಮ್ಮ ವಿದ್ಯಾ ಸಾಹೇಬರವರು ಅಪ್ಪಣೆ ಕೊಡಿಸಿರುವ ಮೇರೆಗೆ—(1) ಗ್ರಾಮ ಸ್ಯಾನಿಟರಿ, (2) ಪ್ರಯಾಣ ಸೌಕರ್ಯ, (3) ಜಲಾಶ್ರಯ, (4) ವಿದ್ಯಾ ಪ್ರಚಾರ, (5) ಉಪಕಸುಬುಗಳ ನಿರ್ವಹಣ, ಈ ವಿಷಯಗಳಲ್ಲಿ ಮುಂದಿನ ವರುಷ ಅಭಿವೃದ್ಧಿಯನ್ನು ತೋರಿಸತಕ್ಕ ಬಗ್ಗೆ ಹೆಚ್ಚು ಗಮನಿಸಬೇಕಾಗಿದೆ. ಈ ವಿಚಾರದಲ್ಲಿ ಡಿಸ್ಟ್ರಿಕ್ಟು ಮತ್ತು ಪ್ರೋಗ್ರೆಸ್ ಕಮಿಟಿಯವರು ಕೊಡುವ ಸಲಹೆಯಂತೆ ಏರ್ಪಟ್ಟ ಗ್ರಾಮ ಕಮಿಟಿಯವರ ಜಾರಿಯಲ್ಲಿ ತರಬೇಕಾಗಿ ಬೇಡುತ್ತೇನೆ.

ಶೈನ ಎಂಬ ಊರಿನ ಆಸ್ಪತ್ರೆಗೆ 3-4 ವಯಸ್ಸಿನ ಒಬ್ಬ ಮಹಮದೀಯ ಹೆಣ್ಣು ಮಗುವನ್ನು ಕರೆದುಕೊಂಡುಬಂದರು. ಆ ಮಗು ಆಡುತ್ತಿದ್ದಾಗ ಬಾಯಿಯೊಳಕ್ಕೆ ಒಂದು ವಿಷದ ಹಾವು ಅದರ ಗಂಟಲನ್ನು ಹಿಡುಕೊಂಡಿತು. ಆಸ್ಪತ್ರೆಯವರು ಅದನ್ನು ಕತ್ತು ತೆಗೆಯಬೇಕೆಂದು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಗಿ ಸ್ವಲ್ಪ ಹೊತ್ತಿನೊಳಗೇ ಆ ಮಗು ಸತ್ತುಹೋಯಿತು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುತ್ತದೆ. ದೌರ್ಬಲ್ಯದಿಂದಲೇ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೆ ಬಿಡ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ.. ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬರುವುದು; ಬಿಳಿ ಬಣ್ಣವಾಗಿ ಅಳ್ಳೆ, ಎಡೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮಬ್ಬು; ತಲೆ ಸುತ್ತುವಿಕೆ; ಮೈನೋವು; ಕೀಲುನೋವು; ಮರವು; ಸಕ್ಕರೆ; ಇವೇ ಮೊದಲಾದುವು ಉಲ್ಲಂಘನೆಯಾದರೆ ಮೂತ್ರಪಿಂಡ, ವಾಯು, ಬೈಟಾವ, ಅಂಗಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಎಂದೇಬಾಯಿಸುವುದರ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮುಕ್ಕ್ರಿಯೆಗಳನ್ನು ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-31]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ಡಬ್ಬಿ ೧-೦-೦; ಅಥವಾ ೬ ಡಬ್ಬಿಗಳಿಗೆ ರೂ. ೧೦-೮-೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಫೋಸ್ಟರ್ ಮ್ಯಾಕ್ ಕ್ಲೆಲನ್ ಕಂ., ಬೆಂಗಳೂರು ಕಂಟೋನ್ ರವರಿಂದ ದೊರೆಯುವುವು.

"ಹನುಮಾನ್"

ಬೋರಾಕ್ಸ್ ಸಾಬೂನು.

ಹನುಮಾನ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ತುರಿಕೆ, ಹುಳ್ಳಿ, ಕಜ್ಜಿ, ತುರಿ ಮೊದಲಾದ ವ್ಯಾಧಿಗಳು ಹನುಮಾನ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವುವು. ತೊಗಲಿಗೆ ನುಣುಪು ಮತ್ತು ಕಳೆಯನ್ನೂ ಕೊಡುವುದರಲ್ಲಿ ಹನುಮಾನ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾನ್ ಸಾಬೂನಿನಿಂದ ಬೆಳಿಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆ ಕೂದಲನ್ನು ಕೆಡಿಸುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡಿಗಿಯರು, ಯೌವನಸ್ಥರು ಮತ್ತು ವೃದ್ಧರೂ ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾನ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಶಹರುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾನ್ ಗುರ್ತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ತಾ. ಕ:—ಎಲ್ಲರೂ ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆಯಬೇಕು.

ಬೆಂಗಳೂರು ಸಿಟಿ ಮ|| ಎಚ್. ದಾಸಪ್ಪನವರಲ್ಲಿ ಬಿಕರಿಗೆ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-24] ಷಾವುಕಾರ್‌ಪೇಟೆ ಬಜಾರ್ ರೋಡ್, ಮದರಾಸು.

ಜಾಮೀನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲು ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕರ್‍ರಗೆ ಮಾಡುತ್ತೆ.

ಮತ್ತು

ಕೂದಲಿಗೆ ರೇಷ್ಮೆಯಂಥಾ ಹೊಳಪೂ ನುಣುಪೂ ಬರುತ್ತೆ.

ನರೆಕೂದಲನ್ನು ನಮ್ಮ ರಂಗು ಅಚ್ಚ ಕರ್‍ರಗೆ ಮಾಡುವುದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ಪೆಟ್ಟಿಗೆ, ಬ್ರಷ್ ಮತ್ತು ಬಟ್ಟಲು ಸಹಿತ ಕ್ರಯ ರೂ. 1-0-0; ಪೋಸ್ಟೇಜ್ ಬೇರೆ.

ಹೊಸ ನಮೂನೆ ರೋಮಹಾರಿ.

ಇದು ಬೇಕಾದ ಶರೀರ ಭಾಗಗಳಲ್ಲಾದರೂ ಹೆಚ್ಚಾಗಿರುವ ಕೂದಲನ್ನು ಅಲ್ಪಕಾಲದಲ್ಲಿ ತೆಗೆಯುತ್ತೆ. ನೋವುಂಟುಮಾಡುವುದಿಲ್ಲ; ಚರ್ಮಕ್ಕೆ ಕೆಡುಕಾಗದು. [282-16]

ಪೆಟ್ಟಿಗೆ ಒಂದಕ್ಕೆ ರೂ. 1 0 0; ಪೋಸ್ಟೇಜ್ ಬೇರೆ.

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು:—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

177, ಜೀನಾ ಬಜಾರ್ ರೋಡ್, ಮದರಾಸ್.

Useful in Peace and War **FIRST AID IN ACCIDENTS.** BY DR. U. RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ಮಾಡಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು ರಾಮರಾವ್ ಅವರಿಂದ ಇಂಗ್ಲೀಷಿನಲ್ಲಿ ಬರೆಯಲ್ಪಟ್ಟ ಕೃತಿಯು, ಕಾಲೇಜು ಪಂಡಿತರಾದ ವೇದಿಕಾಚಾರ್ಯರ ಅವರಿಂದ ಸುಲಭವಾದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿದೆ.

DEDICATED TO H. H. THE MAHARAJA OF MYSORE.

ಅಪಾಯಕ್ಕೆ ಗುರಿಯಾದ ಮನುಷ್ಯನ ಅದೃಷ್ಟವು, ಮೊದಲು ಅವನ ಬಳಿ ಕೈಗೆ ಸಿಕ್ಕಿರಬೇಕಾದವನೋ, ಅವರ ಕಾರ್ಯಗಳನ್ನೇ ಅವಲಂಬಿಸಿರುವುದು. ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ಪಕ್ಷದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪುಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನ ಗುಂಪಿನಲ್ಲಿ ಯಾವನಾದರೂ ಒಬ್ಬನು, ಮೊದಲು ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಅವನ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡಿಸಿದ್ದರೆ, ನಿಶ್ಚಯವಾಗಿ ಬದುಕಬಹುದಾಗಿದ್ದ ಪ್ರಾಣವೂ ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು. ಈ ವಿಷಯವಾಗಿ ಪ್ರತಿ ವರ್ಷವೂ ಎಷ್ಟೋ ಜೀವಗಳು ನಷ್ಟವಾಗುತ್ತಿರುವುದು ತಿಳಿಯುವುದು.

ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಬೀದಿಯಲ್ಲಿ ಅಸ್ವಸ್ಥತೆಯಾದರೆ, ಇಲ್ಲವೇ ಯಾವುದಾದರೂ ಅಪಾಯವಾದಾಗ ಸಂಭವಿಸಿದಾಗ, ಸಮರ್ಥರಾದ ವೈದ್ಯರು ಬರುವವರೆಗೆ ಕಾದಿರದೆ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಕೃತಿ ಒಂದು ಕಾಲಕ್ಕೆ ಬೇಕಾದ ಜ್ಞಾನವು ಕೂಡ ಅವರಿಗೆ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿರಬೇಕೆಂಬುದಿಲ್ಲ.

"ಅಲ್ಪಜ್ಞಾನವು ಅಪಾಯಕರ" ಎಂಬ ನಾಣ್ಣುಡಿಯು ಲೋಕದಲ್ಲಿ ವಾಡಿಕೆಯಲ್ಲಿದ್ದರೂ, ಇತರ ವಿಷಯಗಳಲ್ಲಿ ಇದಕ್ಕೆ ಸ್ವಾರಸ್ಯವೇನಿದ್ದರೂ, ಇದು ಪ್ರಥಮ ಚಿಕಿತ್ಸೆಯ ವಿಷಯದಲ್ಲಿ ಈ ನಿಯಮವಿಲ್ಲ. ಇದರಲ್ಲಿ ಅಲ್ಪವಾದ ಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯದಿಂದ ತಪ್ಪಿಸಬಹುದು! ಎಷ್ಟೋ ಕ್ಲೇಶವಾದ ವೇದನೆಯನ್ನು ನೀಗಿಸಬಹುದು! ಎಷ್ಟೋ ಪ್ರಾಣಗಳನ್ನು ಉಳಿಸಬಹುದು! ಆಕಸ್ಮಿಕವಾಗಿ ರಕ್ತಸ್ರಾವಕ್ಕೆ ಸಿಲುಕಿದಾಗ ಮಹಾ ದುಃಖವಾಗಿ ಸಾಯ ಬೇಕಾಗಿ ಬರುವುದು, ನೀರಿನಲ್ಲಿ ಮುಳುಗಿಹೋಗುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣೆ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ, ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಗಳೂ ಕೂಡ, ಸಮರ್ಥರಾದ ವೈದ್ಯರು ಬರುವವರೆಗೆ ಏನು ಮಾಡಬೇಕೆಂಬುದನ್ನು ತಿಳಿಯದ ಜನಗಳಿಂದಲೇ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸಾಕ್ರಮದಲ್ಲಿ ಅಲ್ಪಜ್ಞಾನವನ್ನು ಪಡೆದು, ಅದನ್ನುಪಯೋಗಿಸುವುದರಿಂದ ಸಾವಿರಾರು ಜೀವಗಳು ಬದುಕಿಕೊಳ್ಳುತ್ತಿರುವುವು. [61-5]

ಸಾಮಾನ್ಯವಾಗಿ ಬೀದಿಯಲ್ಲಿ ಅಪಾಯವುಂಟಾದ ಸಂದರ್ಭವನ್ನು ನೋಡಿದಾಗ, ಅವರಿಗೆ ಸಹಾಯಮಾಡಬೇಕೆಂಬ ಬುದ್ಧಿಯು ಎಲ್ಲರಿಗೂ ಹುಟ್ಟುವುದು ಸಹಜವು. ಅದರ ಮುಂದೆ ಸಂದರ್ಭಗಳಲ್ಲಿ ಏನು ಮಾಡಬೇಕೆಂದು ತಿಳಿಯದೆ ಅನೇಕ ಜನರು ಈ ವಿಷಯದಲ್ಲಿ ಪ್ರವರ್ತಿಸುವುದಕ್ಕೆ ಹೆದರುವರು. ತಾವು ಕೈಯಿಡುವುದರಿಂದ ನೊಂದಿರುವ ವ್ಯಕ್ತಿಗಳು ಹೆಚ್ಚಾದ ಅಪಾಯಕ್ಕೆ ಕಾರಣವಾಗಬಹುದೆಂದು ಭಯದಿಂದ ಕೆಲವರು ಹಿಂದೆ ಸರಿಯುವರು.

ಇದಕ್ಕಾಗಿ ಈ ಪುಸ್ತಕದಲ್ಲಿ — ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೈಕಾಲುಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ, ಅಗ್ನಿಗಂಡ, ನರಗಳು ಕಡಿಯುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಸೌಕರ್ಯಗಳನ್ನು ಕಲ್ಪಿಸುವುದು, ಇನ್ನೂ ಇದರಂತೆಯೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳೊಡನೆ ಇವು ವಿಷಯಗಳಲ್ಲದೆ, ಸರ್ವಸಾಮಾನ್ಯವಾಗಿ ಎಲ್ಲರೂ ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆಮಾಡಿರುವೆವು.

ಪುಸ್ತಕದ ಬೆಲೆ 0—8—0, ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣ ಬ್ರದರ್ಸ್, 323, ತಂಬುಚೆಟ್ಟಿ ಬೀದಿ, ಮದರಾಸು, ಪೋಸ್ಟು ಬಾಕ್ಸ್ 168.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ. ಹೊಸ ನಮೂನೆ ಗಡಿಯಾರ.

"ಸ್ವೀಸ್ ಪಾಕೆಟ್ ವಾಚ್."

ಸರಪಣಿ ಸಹಿತ ಕ್ರಯ ರೂ. 3-0-0.



ಈ ಚಿತ್ರದಲ್ಲಿ ತೋರಿಸಿರುವ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ತರಿಸುತ್ತೇವೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಮಾರಾಟಕ್ಕೆ ಇರುತ್ತವೆ. ಇದು ನೋಡುವುದಕ್ಕೆ ರಮಣೀಯವಾಗಿಯೂ ಜೇಬಿನಲ್ಲಿ ಇಡುವುದಕ್ಕೆ ಅನುಕೂಲವಾಗಿ ಇದೆ. ಗಂಟೆ ತೋರಿಸುವುದರಲ್ಲಿ 1 ನಿಮಿಷವಾದರೂ ಹೆಚ್ಚು ಕಡಿಮೆಯಿಲ್ಲದೆ ನಡೆಯುತ್ತದೆ. "ಸ್ವೀಸ್ ಪಾಕೆಟ್ ವಾಚ್" ಎಂಬುವದು ಗುರುತು ನೋಡಿ ಕೊಳ್ಳಿರಿ. ಇಂಗ್ರಜಿ ವಿಳಾಸ ಬರೆದವರಿಗೆ ಮಾತ್ರ ದೊರೆಯುವದು.

ವಿಳಾಸ.—ಪ್ಯೆಯರ್ ಲಕ್ಷ್ಮಿ ಅಂಡ್ ಕಂಪೆನಿ,

[63-4] 3, ಅರುಳಪ್ಪನ ಬೀದಿ, ಮದರಾಸು.

ಶ್ರೇಷ್ಠ ಮಹೌಷಧಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಆರೋಗ್ಯ ಪ್ರಭಾಕರ. (ಟಾನಿಕ್ ಪಿಲ್ಸ್)—ಪಿತ್ತರೋಗ, ಮೈ ನರ [illegible] ಗಳನ್ನು ಪರಿಹರಿಸಿ, ರಕ್ತವೃದ್ಧಿಮಾಡಿ, ನರಗಳಿಗೆ ಬಲಕೊಡುತ್ತೆ. ಬಾಹುಪ್ರಮೇಹ, ಪಿತ್ತಪಾಂಡು, ಕ್ಷಯ, ಬಾಲಂತಿಯರ ಕ್ಷಯ, ಮುಟ್ಟುಕಟ್ಟು, ಕಾರ್ಶ್ಯವಾಯುಗಳನ್ನು ನಿವಾರಿಸುವದರಲ್ಲಿ ಅಸಮಾನವಾದುದು. 48 ಮಾತ್ರೆಗೆ 1 ರೂ, 6 ಶೀಸೆಗೆ 5 ರೂ.

2. ರೋಗನಾಶಿನಿ.— [illegible] ಗ್ರಾಮಗಳಲ್ಲಿರುವ [illegible] ಪ್ರತಿ ಒಬ್ಬರೂ ದಿನವೂ 3-4 ಸಲ 1-2 ಮಾತ್ರೆಯಂತೆ ಸೇವಿಸುವದರಿಂದ ಪ್ರಾಣವನ್ನು ಕಾಪಾಡಿಕೊಳ್ಳಬಹುದು. [illegible] ಇದರ ಗುಣಕ್ಕೆ ನಮಗೆ ಅನೇಕ ಬಹುಮಾನಗಳು ಬಂದಿವೆ. 40 ಮಾತ್ರೆಗೆ 4 ಆ. 6 ಶೀಸೆಗೆ 1 ರೂ, 12 ಕ್ಕೆ 3½ ರೂ.

[126-28] ನಮ್ಮ ವಿಳಾಸ.—ಪಂಡಿತ್ ಎಸ್. ಗೋಪುರಿ, ಮೈಸೂರು

ತರಿಸಿ ನೋಡಿರಿ.

1 ಸುಧಾಕರ ಲೋಹ್ಯ ಮಾತ್ರೆಗಳು—ಜ್ವರ, ಅಗ್ನಿಮಾಂದ್ಯ, ಕೆಮ್ಮು, ನೆಗಡಿ, ಅಶಕ್ತಿ, ದೇಹ ನಾನಾ ವ್ಯಾಧಿಗಳಿಂದುಂಟಾಗುವ ವಿಕಾರಗಳು, [illegible] ಎಳವು, ಮಂಜಾಡ್ಡ, ಇವುಗಳನ್ನು ಗುಣಪಡಿಸುತ್ತದೆ. ಡಪ್ಪಿ 1 ಕ್ಕೆ 4 ಆಣೆ ಮಾತ್ರ. 6 ಸೀಸೆಗಳಿಗೆ ರೂ 1-4-0. ಟಪಾಲು ಹಾಸಲು ಪ್ರತ್ಯೇಕ.

2 ಕಮಲಾಕರ ಘೃತ—ಬಹುಮೂತ್ರ ಮೊದಲಾದ ಎಲ್ಲಾ ತರದ ಮೇಹಗಳನ್ನು ಗುಣಪಡಿಸುವುದು. ಡಪ್ಪಿ 1 ಕ್ಕೆ 8 ಆಣೆ ಮಾತ್ರ.

3 ವಜ್ರದಂತಚೂರ್ಣ—ಇದನ್ನು ಪ್ರತಿ ದಿನವೂ ಹಲ್ಲುಜ್ಜುವದಕ್ಕೆ ಉಪಯೋಗಿಸುವುದರಿಂದ ಎಲ್ಲಾ ವಿಧವಾದ ದಂತ ರೋಗಗಳೂ ನಿಶ್ಶೇಷವಾಗಿ ಹೋಗಿ ಹಲ್ಲುಗಳು ಮುತ್ತುಗಳಂತೆ ಥಳಥಳಿಸುವವು. ಡಬ್ಬಿ 1 ಕ್ಕೆ 2 ಆಣೆ ಮಾತ್ರ.

[71-3] ನಮ್ಮ ವಿಳಾಸ:—ಬಿ. ಎಸ್. ಕಾರ್ತಿಕ,

210, ದಿವಾನರ ರೋಡು, ಮೈಸೂರು.



ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರಿಕ್ಷಿಸಿ ನೋಡಿ ಎಂದು ವಿಜ್ಞೈಸುತ್ತೇವೆ. [213-25]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜೆಂಟರು ಬೇಕು —ವ್ಯಾಪಾರಿಗಳಿಗೆ ಕಂಬಾ ಸವಲತ್ತೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,

ಎಗ್ಯು ಮಿಕ್ಸ್ಚರ್ ಡಿಪೊ, ಬೊಂಬಾಯಿ, 4.

KARNIK Bros., BOMBAY, 4.

ನಮ್ಮ ಏಜಂಟರು.—ವಿ. ಉಲ್ಲಾಳ್ ನಾಯ್ಕ್, ಮಂಗಳೂರು.

ಉದಬತ್ತಿಗಳು

ಕ್ಷಿತ್ತ ತೊಲ 1 ಕ್ಕೆ 1 ರೂಪಾಯಿ.

ಇದು ಅತ್ಯಂತ ಸುವಾಸನೆಯಾಗಿಯೂ ಘಳಘಳಿಸ ಹೊಗೆಯೂ ಬಾಗಿಯೂ ಇದೆ. ಗಂಡಸರ ಬಿಸನೆಯ ಹೆಂಗಸರ ಮುಡಿಗೂ ಇರಲಿ ಸರೆಯ ನೋಡಿ ಇಟ್ಟುಕೊಳ್ಳುತ್ತಾರೆ.

ಭೃಂಗಾಮಲಕತೈಲ ಸೀಸಾ 1 ಕ್ಕೆ 1 ರೂಪಾಯಿ.

ಇದು ಸ್ನಾನದಲ್ಲಿಯಾಗಲೀ ರಾತ್ರಿ ಮಲಗುವಾಗಲಾಗಲೀ ತಲೆಗೆ ಹಚ್ಚಿಕೊಂಡರೆ ಅವರ ತಲೆ ಕೂದಲು ಉದ್ದವಾಗಿ ಬೆಳೆದು ಸುವಾಸನೆ ನಿರ್ಗಮಿಸುತ್ತ.

ಸುವಾಸನೆ ಸಾದು ಸೀಸೆ 1 ಕ್ಕೆ 2 ಆಣೆ.

ಇದನ್ನು ನಮ್ಮ ಆಯುರ್ವೇದರಿಗೆ [illegible] ಉತ್ತಮವಾದ ಅತ್ತರುಗಳನ್ನು ಸೇರಿಸಿ ಹಣೆಗೆ ಇಟ್ಟುಕೊಳ್ಳುವದಕ್ಕೆ ಅನುಕೂಲವಾಗಿ ತಯಾರಿಸಿದೆ. ಅತ್ಯಂತ ಸುವಾಸನೆಯುಳ್ಳದ್ದು ಇದೆ. ಇಂಥಾ ಅನುಕೂಲ್ಯವಾದ ಈ ಎರಡು ಪದಾರ್ಥಗಳನ್ನು ನೋಡಿರುವದಿಲ್ಲ.

ವಿಳಾಸ.—ಶಿ. ಎಲ್. ಉಪಾಧ್ಯಾಯ,

[54-5] ಸುಗಂಧಕಾರಿ, ಮೈಸೂರು.

ನಿಮಗೆ ನಿಮ್ಮ ರಕ್ತದ ಚಿಂತೆಯುಂಟೇ?

ನಿಮ್ಮ ರಕ್ತದಿಂದಲೇ ನೀವು ಜೀವಿಸುತ್ತೀರಿ; ನಿಮ್ಮ ರಕ್ತದಿಂದಲೇ ನೀವು ರೋಗದಿಂದ ಪಾರಾಗುತ್ತೀರಿ. ರಕ್ತ ಶುದ್ಧವಾಗಿದ್ದರೆ ಆರೋಗ್ಯ, ದೃಢತೆ, ದೀರ್ಘಾಯುಸ್ಸು, ಪೂರ್ಣಸುಖ—ಎಲ್ಲಾ ಉಂಟಾಗುತ್ತೆ. ರಕ್ತ ಕೆಟ್ಟರೆ ಕ್ರಮವಾಗಿ ನಿಮ್ಮ ದೇಹ ಕೃಶವಾಗುತ್ತೆ, ಆಯುಸ್ಸು ಕ್ಷೀಣಿಸುತ್ತೆ, ನಿಮ್ಮನ್ನು [illegible] ಕಷ್ಟಕರವಾದ ಸ್ಥಿತಿಯನ್ನು ತಪ್ಪಿಸಿಕೊಳ್ಳುವದಕ್ಕೆ ನೀವುಗಳು ಖಂಡಿತವಾಗಿ ಉಪಯೋಗಿಸಬೇಕಾದದ್ದು ಒಂದೇ. ಅದ್ಯಾವದೆಂದರೆ?

ಸುಧಾಸಾಗರ ಅವಲೇಹ.

ಈ ಅವಲೇಹವು ದೇಹದ ಎಲ್ಲಾ ನಿಮ್ಮ ಶರೀರವಾದುತ್ತೆ. ನಿಶ್ಶಕ್ತಿಯಾದ ಅಥವಾ ಕೆಟ್ಟುಹೋದ ರಕ್ತಕಣಗಳನ್ನು ಬಲಪಡಿಸಿ ಬಹಳ ಬೇಗ ಹೊಸದನ್ನು ವೃದ್ಧಿಮಾಡುತ್ತದೆ. ಮತ್ತು ರಕ್ತಕೆಡುವುದರಿಂದ ಉಂಟಾಗುವ ಎಲ್ಲಾ ತರದ ರೋಗಗಳನ್ನು ಅಳಿಸಿ ರಕ್ತವನ್ನು ಶುದ್ಧಿಮಾಡಿ ಪುಷ್ಟಿಗೊಳಿಸುವುದು.

ಬಾಟ್ಲೆ ಒಂದರ ಕ್ರಯ ರೂ. 1-8-0 ಮಾತ್ರ.

ನಮ್ಮ ವಿಳಾಸ—ರಾಜವೈದ್ಯ ನಾರಾಯಣಜಿ ಕೇಶವಜಿ,

[255-18] ಆಯುರ್ವೇದೋದಯ ಔಷಧಾಲಯ,

20, ಪೈನಾಬಜಾರ್ ರೋಡ್, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

10—3—1916 ರಿಂದ 17—3—1916 ವರೆಗೆ

ಸ್ಥಳ	ಪ್ಲೇಗ್: ಹೊಸ ವ್ಯಾಧಿ	ಪ್ಲೇಗ್: ಮೃತ್ಯು	ಕಾಲರಾ: ಹೊಸ ವ್ಯಾಧಿ	ಕಾಲರಾ: ಮೃತ್ಯು
ಬೆಂಗಳೂರು ಜಿಲ್ಲೆ	1	1	0	0
ಮೈಸೂರು	1	0	0	0
ಕೋಲಾರದ ಜಿಲ್ಲೆ	2	2	0	0
[illegible] ,,	10	8	0	0
ಹಾಸನ? ,,	1	0	0	0
[illegible] ಜಿಲ್ಲೆ	0	0	0	0
[illegible] ಜಿಲ್ಲೆ	0	0	0	0
[illegible] ,,	0	0	0	0
ಚಿತ್ರದುರ್ಗ ,,	19	15	0	0
[illegible] ,,	2	1	0	0
[illegible] ,,	4	4	0	0
ಒಟ್ಟು.....	40	31	0	0

ಶಾಲಿವಾಹನ ಶಕ ವರ್ಷಂಗಳು 1838 ನೇ ರಾಕ್ಷಸ ಸಂವತ್ಸರದ ಫಾಲ್ಗುಣ ಬಹುಳ ತ್ರಯೋದಶಿ ಶುಕ್ರವಾರದಿಂದ ಶಾಲಿವಾಹನಶಕ ವರ್ಷಂಗಳು 1839 ನೇ ನಳ ಸಂವತ್ಸರದ ಚೈತ್ರ ಶುದ್ಧ ಚೌತಿ ಗುರುವಾರದ ವರೆಗಿನ ಒಂದು ವಾರ ಪಂಚಾಂಗ

1916 ನೇ ಮಾರ್ಚಿ—ಏಪ್ರಿಲ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಾಸ ವಾಸರ ತೇದಿ
31	ಶುಕ್ರ *	ತ್ರಯೋದಶಿ	41-18	ಶತಭಿಷ	23-21	19
1	ಶನಿ †	ಚತುರ್ದಶಿ	38-19	ಪೂಭಾ	21-51	20
2	ಭಾನು ‡	ಅಮಾವಾಸ್ಯೆ	36-32	ಉತ್ತರಾಭಾ	21-24	21
3	ಸೋಮ ::	ಪಾಡ್ಯಮಿ	36-12	ರೇವತಿ	22-44	22
4	ಮಂಗಳ §	ಬಿದಿಗೆ	36-58	ಅಶ್ವಿನಿ	24-38	23
5	ಬುಧ ;;	ತದಿಗೆ	39-2	ಭರಣಿ	27-58	24
6	ಗುರು	ಚೌತಿ	42-26	ಕೃತ್ತಿಕೆ	32-20	25

* ಮಾಸಶಿವರಾತ್ರಿ, ಪ್ರದೋಷ. † ಗಾಧಾಸ್ತಂಗತ ಗುರು. ‡ ಸರ್ವತ್ರ ಅಮಾವಾಸ್ಯೆ, ಮಳೆ ನಕ್ಷತ್ರ—ರೇವತಿ 2 ನೇ ಪಾದ. :: ಚಾಂದ್ರವತ್ಸರಾರಂಭ, [illegible] ಭಕ್ಷಣಂ, ಆರೋಗ್ಯಪ್ರತಿಪತ್. § ಚಂದ್ರೋದಯ. ;; ಜಮದಗ್ನಿ ಜಯಂತಿ [illegible]

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಆಟೋಮೋಹಿನಿಯೇ ಅದು.

ಇದಕ್ಕೆ ಹೋಲಿಕೆಯೇ ಇಲ್ಲವಲ್ಲ. ಇದು ಅನೇಕ ಮಹಾಜನಗಳ ಮನಸ್ಸನ್ನು, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಬಂಗಾರದ ಪದಕಗಳನ್ನು ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ [illegible] ಕೊಡುತ್ತಿರುತ್ತೇವೆ. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳೆಯುವ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇವೆಂದು ಸವಾಲ್ ಹಾಕಿರುವದು ಆಟೋ ಮೋಹಿನಿಯೇ. [illegible] ಹೊಸ ಪುಷ್ಪಗಳ ಗಮಲು ಎಲ್ಲಾ ವಿಧವೂ ಹರಡುವ ಉತ್ತಮವಾದ [illegible] ಆಟೋ ಮೋಹಿನಿಯೇ

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆ ರೂ	2—0—0	¼ ,, ,,	0—8—0
1 ಡ್ರಾಮ್ ಶೋಕಿನಿ	,, 0—12—0	ಕಾರ್ಡು ಡಜನ್‌ಗೆ	0—12—

ಕೂದಲನ್ನು ಬೆಳೆಸುವದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಚಲಿಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಫ್ ಬೆಳಸುವಂಥಾದ್ದು. ಕಣ್ಣು ಮತ್ತು ಮೆದುಳಿಗೆ ತಂಪನ್ನು ಕೊಡತಕ್ಕದ್ದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ನಿರೂಪಿಸಿ ಮಾಡಿದವನಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಜಾಮೀನ್ ಕೊಟ್ಟಿರುವುದುಂಟೇ? ಇದೇನೆಂದು ವೃತ್ತಾಂತವೇ ಸಾರಿಗೆ. [282-16]

ಕ್ರಯ 1 ಬಾಟ್ಲಿಗೆ ರೂ. 1-0-0

,, 3 ,, ,, 2-10-0

ಸೋಲ್ ಏಜಂಟರು—ಎಸ್. ಭಗವಾನ್ ದಾಸ್ ಚತುರ್ಭುಜ್ ಕಂಪನಿ,

177, ಪೈನಾಪಬಜಾರ್ ಸ್ಟ್ರೀಟ್, ಮದರಾಸು.

THE EMPEROR OF SCENTS.

"OTTO PUSHPALATA."

PERFUME OF SOCIETY.

ಮದುವೆ ಶೋಭನಗಳಲ್ಲಿ ನೀವು ಖಂಡಿತವಾಗಿ "ಓಟೋ ಪುಷ್ಪಲತಾ" ಎಂಬ ಪರಿಮಳವನ್ನೇ ಉಪಯೋಗಿಸಬೇಕು. ಸುಹೃತ್ಸಂಘದಲ್ಲಿ ಸಂತೋಷವನ್ನು ಕಾಪಾಡುವ ನಿಮ್ಮನ್ನು ತೋಟದಂತಿರಿಸುವುದಕ್ಕೆ ಸಂದೇಹವಿಲ್ಲ.

ಬಾಜಾರ ಪುಷ್ಪಗಳ ವನದಲ್ಲಿ ಇರುವ ಆ ಪುಷ್ಪಗಳು ಸಂಪೆಯಾಗುತ್ತಲೇ ಬಾಡುವವು. ನಮ್ಮ ಈ ಪರಿಮಳದ ಎಂಟೇ [illegible] ತೊಟ್ಟುಗಳನ್ನು ಹಾಕಿ ಕೊಂಡರೆ ಒಂದು ವಾರದ ತನಕ ಅದರ ಘಮಲು ಖಂಡಿತವಾಗಿ ಹೋಗದು. ಇದೇ ಮಧುಮಾಸದ ಪ್ರವೇಶ; ತರಿಸಿ ಪರೀಕ್ಷಿಸಿ ನೋಡಿ.

ಕ್ರಯ ½ ಔನ್ಸ್ ಸೀಸೆಗೆ ರೂ. 2-0-0.

,, 1 ಡ್ರಾಮ್ ,, ,, 0-12-0.

ಸರ್ವೋತ್ತಮ ರೋಮಹಾರಿ.

"ರಾಜಾ—ರಾಣಿ ಸೋಪ್"

ಈ ಸಾಬೂನು ಪ್ರಖ್ಯಾತವಾದದ್ದು. ಒಂದೇ ಸಲ ಹಚ್ಚುವದರಿಂದ ದೇಹದ ರೋಮ ಎಲ್ಲವನ್ನೂ ಸುಲಭವಾಗಿ ಬೇಗನೆ ಹೋಗಿ ಬಿಡುತ್ತದೆ. ಇದನ್ನು ಹಚ್ಚುವದರಿಂದ ಸ್ವಲ್ಪವಾದರೂ ಉರಿಯಾಗಲಿ ಬಾಧೆಯಾಗಲಿ ಆಗದು; ಲೇಪನಾನಂತರವು ಕಲೆ ಇಲ್ಲವಿಲ್ಲ.

ಚರ್ಮಕ್ಕೆ ಸ್ವಭಾವ ಇದ್ದ ಕಾಂತಿ ರಕ್ತ ಮೇರೆಗಳನ್ನು ಕೊಡುವ ಗುಣವು ಈ ಸೋಪಿಗೆ ಉಂಟು. ಈ ಸೋಪನ್ನು ಉಪಯೋಗಿಸುವಂಥಾದ್ದು ಬೇರೊಂದಿಲ್ಲ ವೆಂದು ನಿಸ್ಸಂದೇಹವಾದ ಪ್ರಖ್ಯಾತಿಯನ್ನು ಪಡೆದಿದೆ.

ಕ್ರಯ 3 ಬಿಲ್ಲೆ ಇರುವ ಪೆಟ್ಟಿಗೆಗೆ ರೂ. 1-0-0.

ದಯವಿಟ್ಟು ಇಂಗ್ಲಿಷಿನಲ್ಲೇ ನಮಗೆ ಕಾಗದ ಬರೆಯಬೇಕು.

[64-4]

Sole Agents—T. P. LAL & Co.,

Barbhoi Mohalla, Bombay, 3.

ಸೋಲ್ ಏಜಂಟರು—ಟಿ. ಪಿ. ಲಾಲ್ ಕಂಪನಿ,

ಬಾರ್‌ಭಾಯಿ ಮೊಹಲ್ಲಾ, ಬೊಂಬಾಯಿ, 3.

Printed and Published by the Rev. H. Gulliford, Proprietor and Manager, Wesleyan Mission Press, Mysore. 30/3/1916.

REGISTERED
M. 30

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸನ್ ೧೯೧೬ ನೇ ಇಸವಿ ಏಪ್ರಿಲ್ ತಾರೀಖು ೬ ನೇ ಗುರುವಾರ. ಸಂಚಿಕೆ ೪೫

ಹೊಸ ವರುಷದ ಯುಗಾದಿ ಬಹುಮಾನ.

ಈ ಪತ್ರಿಕೆಯ ಚಂದಾದಾರರುಗಳಿಗೂ ಸ್ಕೂಲ್ ಮಾಸ್ಟರ್‌ಗಳಿಗೂ ಸೂಚನೆ.

ಈ ಕೆಳಗೆ ವಿವರಿಸಿರುವ ಪೆನ್‌ಗಳ ಪೈಕಿ ಒಂದೇ ಸಾರಿ 6 ಪೆನ್ ತರಿಸಿಕೊಳ್ಳುವವರಿಗೆ ಒಂದು ಪೆನ್ ಇನಾಂ. ಪೋಸ್ಟೇಜು ಅಲಾಹಿದ.

ಒಂದೇ ಸಾರಿ 12 ಪೆನ್ ತರಿಸಿಕೊಳ್ಳುವವರಿಗೆ 2 ಪೆನ್ ಇನಾಂ ಕೊಡುವುದಲ್ಲದೆ ಪ್ಯಾಕಿಂಗ್ ಪೋಸ್ಟೇಜು ಸಹ ಮಾಫೀ ಮಾಡಲಾಗುತ್ತೆ.

ಫೌಂಟನ್ ಪೆನ್‌ಗಳು ಕೆಲವು ಗ್ರೋಸ್ ಮಾತ್ರ ಉಳಿದಿರುವುದರಿಂದ ಜಾಗ್ರತೆ ಆರ್ಡರ್ ಕೊಟ್ಟು ತರಿಸಿಕೊಳ್ಳಿ.

ಶಾಯಿ ತುಂಬ ಬರೆಯುತಕ್ಕ ಲೇಖನಿಗಳು.

1 ನೇ ನಂಬರ್ ಫೌಂಟನ್ ಪೆನ್ 1 ಕ್ಕೆ	ಕ್ರಯ ರೂ. 0—6—0
2 ನೇ ನಂಬರ್ ಫೌಂಟನ್ ಪೆನ್ 1 ಕ್ಕೆ	ಕ್ರಯ ,, 0—8—0
3 ನೇ ನಂಬರ್ ಫೌಂಟನ್ ಪೆನ್ 1 ಕ್ಕೆ	ಕ್ರಯ ,, 0—12—0
4 ನೇ ನಂಬರ್ ಫೌಂಟನ್ ಪೆನ್ 1 ಕ್ಕೆ	ಕ್ರಯ ,, 1—0—0
5 ನೇ ನಂಬರ್ ಫೌಂಟನ್ ಪೆನ್ 1 ಕ್ಕೆ	ಕ್ರಯ ,, 1—8—0

ಪ್ರತಿಯೊಂದು ಪೆನ್ನಿನ ಸಂಗಡಲೂ ಶಾಯಿ ತುಂಬುವ ವಿಧಾನ ಪ್ರಿಂಟಾಗಿರತಕ್ಕ ಚೀಟಿ 1 ನ್ನೂ, ಪೆನ್‌ಗಳಿಗೆ ಶಾಯಿ ತುಂಬುವ ಗಾಜಿನ ಕೊಳವೆಯನ್ನೂ, ಪೆನ್‌ಗಳನ್ನಿಡತಕ್ಕ ಪೆಟ್ಟಿ 1 ನ್ನು ಸಹಾ ಫ್ರೀಯಾಗಿ ರವಾನಿಸಲಾಗುತ್ತೆ. [82-3]

ತಾಕೀತು:—ಮೇಲ್ಕಂಡ ಪೆನ್‌ಗಳಿಗೆ ಒಂದರಿಂದ 6 ರ ವರಿಗೂ ಪೋಸ್ಟೇಜು 4 ಆಣೆ ಹಿಡಿಯುತ್ತೆ.

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಹೊಸ ನಮೂನೆ ಪರಿಮಳ ಕಾರ್ಡುಗಳು.

ಈ ಕಾರ್ಡುಗಳು ಅನೇಕ ಆಕಾರಗಳುಳ್ಳ ಹೂವುಗಳು ಇರುವ ಚಿತ್ರಗಳುಳ್ಳ ಆಕರ್ಷಕವಾದ ಸುವಾಸನೆಯನ್ನು ಹೊಂದಿರುವುದರಿಂದ ಪತ್ರಗಳ ಒಳಗೆ ಇಟ್ಟು ಕಳುಹಿಸಬಹುದು.

ಪರಿಮಳಕಾರ್ಡು 1 ಕ್ಕೆ 0—1—0, 12 ಕ್ಕೆ 0—10—0.

ಟ. ಖ. 2 ಆಣೆ.

ವಿಳಾಸ—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,

ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಸಂಗೀತ ಪಾರಿಜಾತ

ಐದನೆಯ ಮುದ್ರಣ! ಸೀತಕಲ್ಯಾಣ ಕೀರ್ತನೆಗಳು ಮೊದಲಾಗಿ ಅನೇಕ ಹೊಸ ಹಾಡುಗಳು ಸೇರಿಸಲ್ಪಟ್ಟಿವೆ. ಕ್ರಯ ೦-೯-೦ ನೂರು ಪ್ರತಿಗೆ ಕಮ್ಮಿ ಅಲ್ಲದಂತೆ ತರಿಸಿಕೊಂಡರೆ ಧಾರಾಳ ಕಮೀಷನ್ ಕೊಡುವೆವು.

ಶಬ್ದಾದರ್ಶ ನೋಟ್ಸ್.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದುದು ಕ್ರಯ. ೦-೩ ವ್ಯಾಪಾರಿಗಳಿಗೆ ಧಾರಾಳವಾದ ಕಮೀಷನ್ ಸಿಗುತ್ತೆ.

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

[277-17] ಸ್ಟೂಡೆಂಟ್ಸ್ ಹಾಲ್, ಮೈಸೂರು.

ಮ್ಯುಚುಯಲ್ ಗ್ಯಾ॥ ಸೆಕ್ಯೂರಿಟಿ ಲೈಫ್ ಅಸ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ. ಎಸ್. ರೆಸಿಡೆಂಟ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ... ಮ॥ ವಿ. ವೆಂಕಟೇಶನ್, ಟ್ರಾವೆಲಿಂಗ್ ಏಜೆಂಟ್, ಮೈಸೂರು; ಅಥವಾ [... 33] ಬ್ರಾಂಚ್ ಸೆಕ್ರೆಟರಿ, ಮದರಾಸ್.

M. S. Rao & Co., Book Sellers, Bangalore City.

Lower Secondary Texts (1) for 1917. The King of the Golden River As. 4 each. (2) Granny's Wonderful Chair As. 4½.

1917 ನೇ ಇಸ್ವಿ ಕನ್ನಡ ಲೋವರ್ ಸೆಕೆಂಡರಿ ಟೆಕ್ಸ್ಟ್ ...	0- 4-6
ಡಿಟೊ ಸಂಸ್ಕೃತ ಡಿಟೊ ...	0- 3-0
ಜನಾರ್ದನ ಸಾವಿತ್ರ್ಯು—ಡಿ ಕೃಷ್ಣಶಾಸ್ತ್ರಿಗಳಿಂದ ...	0- 6-0
ಕಿಂಡರ್‌ಗಾರ್ಟನ್ ಕಥೆಗಳು ಡಿಟೊ—2॥ ಮುದ್ರಣ ...	0-12-0

ನಮ್ಮಲ್ಲಿ ಕನ್ನಡ, ಇಂಗ್ಲಿಷ್ ಸ್ಕೂಲು ಪುಸ್ತಕಗಳೂ, ಎಲ್ಲಾ ಕನ್ನಡ ಗ್ರಂಥಗಳೂ ದೊರೆಯುತ್ತವೆ. [81-3]

ಯಂ. ಯಸ್. ರಾವ್ ಕಂಪನಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

USE I. C. O. BRAND

[55-50]

Refined Edible Cotton Seed Oil.

For Cooking and Salads.

An appoved substitute for Ghee in all preparations. Price—

Re. 1-4-0 per tin of 3½lbs
,, 0-7-0 per ,, of 1lb

Liberal Terms to Trade.

The Indian Co-Operative Stores Co., Ltd., 159, Kilari Road, Bangalore.

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ಕೇಸುಗಳ ವ್ಯವಹಾರಗಳ ರೀತಿಯನ್ನೂ ತಿಳಿಸುವ 616 ಪೇಜುಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 3-8-0; ರಫ್ ಪ್ರತಿಗೆ ರೂ. 1-12-0. [168-42]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

ಮೈಸೂರಲ್ಲಿ ಮನೆಗಳ ವಿಕರಿ ನೋಟೀಸು.

ಮೈಸೂರು ಚಾಮರಾಜ ಮೊಹಲ್ಲಾ ಮರಿಮಲ್ಲಪ್ಪನವರ ಸ್ಕೂಲು ದಿವಾನ್ ರೋಡ್‌ನಲ್ಲಿ ಮ॥ ಎಂ. ರಾಮರಾಯರ ಮನೆ ಬಾಜು ಪಶ್ಚಿಮದಿಕ್ಕಿನಲ್ಲಿರುವ ಅಕ್ಕಸಾಲಿಗರ ನರಸಿಂಹಯ್ಯನ ಬಾಬತು ಮ॥ ಸಾಹು. ಬಸುಮಯ್ಯನವರಿಗೆ ಆಧೀನವಾಗಿರುವ ಎರಡು ದೊಡ್ಡ ಮಹಡೀ ಮನೆಗಳನ್ನು ಮೇಲ್ಕಂಡವರ ಸಾಲಾ ತೀರಿಸುವ ಉದ್ದೇಶ್ಯ ಖರೀದಿಗಾಗಲಿ, ಭೋಗ್ಯಕ್ಕಾಗಲಿ, ಕಮ್ಮಿ ಬಡ್ಡಿಗೆ ಆಧಾರಕ್ಕಾಗಲಿ ಕೊಡಲು ಈ ಕೆಳಗೆ ರುಜು ಮಾಡಿದವರು ಇಷ್ಟಪಡುತ್ತಾರೆ. ಬೇಕಾದವರು ಇವರಲ್ಲಿ ಮೊಖ್ತಾ ಬಂದು ನಿಶ್ಚಯಮಾಡಿಕೊಳ್ಳಬಹುದು. [80-3]

20-3-1916. ಸ. ನರಸಿಂಹಯ್ಯನ ರುಜು.

ಸ್ವದೇಶ ಕೈಗಾರಿಕೆಗಳು.

ಅನೇಕ ಸ್ಥಳಗಳಲ್ಲಿ ಕೈಗಾರಿಕೆಗಳ ಕಾರ್ಖಾನೆಗಳನ್ನೂ, ಬಂಡವಾಳ ಬಹಳ ಮುಂದ ಗೊಟ್ಟುವುದನ್ನು ತಯಾರಿಕ ಉತ್ತಮವಾದ ಕಾರ್ಖಾನೆಗಳನ್ನು ಏರ್ಪಡಿಸುವ ಉದ್ದೇಶದಿಂದ ನಮ್ಮ ದೇಶದಾಂಧವರಿಗೆ ಅರಿಕೆ ಮಾಡಿಕೊಳ್ಳುವುದೇನಂದರೆ ನಮ್ಮ ಸ್ಥಳದಲ್ಲಿ ... ಕೈಗಾರಿಕೆಯನ್ನೇ ಆಗಲಿ, ಗೊಲ್ಲಂದ ಕಾರ್ಖಾನೆಯನ್ನೇ ಆಗಲಿ ಇಡಬೇಕೆಂದು ಯಾರಿಗಾದರೂ ತಾತ್ಪರ್ಯವಿದ್ದರೆ ಅಲ್ಲಿನ ಮುಖಾಂತರ ಕಳಿಸು ಮಾಹಿತಾಡಿಕೊಂಡು ನನಗೆ ತಿಳಿಸಿದರೆ ನಾನು ಒಂದು ಪಡಾ ಕರವನ್ನು ತಯಾರಿಸುವ ರೀತಿಯನ್ನು ತಿಳಿಸಿ ಅನುಭವಪೂರ್ವಕ ಕಾರ್ಖಾನೆಯನ್ನು ಏರ್ಪಡಿಸುವೆನು. ಕೆ. ಆರ್. ಚಕ್ರವರ್ತಿ,

[80-6] ಏಜಂಟ್, ನ್ಯೂ. ಸ್ಟೀಂ ಟ್ರ್ಯಾಂವೆ ಕಂಪನಿ, ಬೆಂಗಳೂರು ಸಿಟಿ.

ಸ್ವಲ್ಪ ಕ್ರಯ! ವಿಶೇಷ ಬಾಳಿಕೆ!

ಒಳ್ಳೇ ಸಮಯ!

ನೆಪ್‌ಚೂನ್ ಲೇಖಿನಿ.

200 ನೇ ನಂಬರ್ ಫೌಂಟನ್ ಪೇನಾ 14 ಕ್ಯಾರೆಟ್ ಗೋಲ್ಡ್ ನಿಬ್ಬು, ಫಿಲ್ಲರ್ ಮತ್ತು ಪೆಟ್ಟಿಗೆ ಸಹಿತ ಕ್ರಯ ರೂ. 1—14—0 ಮಾತ್ರ. ಟಪಾಲ್ ಮತ್ತು ಪ್ಯಾಕಿಂಗ್ ಖರ್ಚು ಬೇರೆ. ಇದೇ ತಿಂಗಳು ಒಳಗೆ ತರಿಸಿಕೊಳ್ಳುವವರಿಗೆ ಪ್ರತಿ ಒಂದು ಪೇನಾಕ್ಕೂ ಸೊಗಸಾದ ಕ್ಲಿಪ್ಪು ಉಚಿತವಾಗಿ ಕೊಡಲಾಗುತ್ತೆ. ಬೈಸಿಕಲ್‌ಗೆ ಯಾವ ಸಾಮಾನು ಬೇಕಾದರೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತೆ. [279—16]

ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

NOTICE

Tenders are hereby invited for the exclusive privilege of the manufacture in the Government Central Distillery at Bangalore of Arrack and other Country Spirits for supply throughout the Territories of Mysore and the Civil and Military Station of Bangalore, for a period of three years from 1st July 1916 to 30th June 1919. [86-2]

2. Every tender should be accompained by a deposit of Rs 5,000 in cash or in Government securities duly endorsed in favour of 'The Dewan' of Mysore, and should reach the undersigned on or before noon of Monday the 10th April 1916 on which date it will be opened by the Excise Commissioner at 12 noon.

3. The quantity of arrack required for consumption in the State is estimated at between four and four and a half lacs of gallons per annum.

4. For conditions and further particulars see Notification No. Fl. 4867 S. R. 100-15-3, dated 22nd March 1916 published in Part I of the Mysore Gazette.

5. Copy of Notification and form of application may be had on requisition to the undersigned.

Excise Commissioner's Office, Dated, Bangalore, 27th March 1916. P. RAGHAVENDRA RAO, *Excise Commissioner in Mysore.*

2 ನ್ ತರಗತಿ ಭೂವಿವರಣೆ.

ಚಿತ್ರಗಳು ಮತ್ತು ಭೂಪಟಗಳೊಡನೆ (ಕ್ರಯ 4 ಆಣೆ).

ಮೈಸೂರು ದೇಶದ ಭೂಪಟಗಳು.

(ಪ್ರಾಕೃತಿಕ ಮತ್ತು ರಾಜಕೀಯ) ಕ್ರಯ 2 ಆಣೆ.

ಹೊಸ ಭೂವಿವರಣೆಗಳು.

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ. ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯಕಾರಿ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ವಿಶ್ವಾಖಂಡದ ಭೂವಿವರಣೆ	...	0—5—0
2. ಪ್ರಾಕೃತಿಕ ಭೂಗೋಳ ಶಾಸ್ತ್ರ	...	0—6—0
ಮೇಲೆ ಕಂಡ ಎರಡೂ ಸೇರಿ	...	0—10—0

ಮೈಸೂರು ಭೂವಿವರಣೆ 3 ಆಣೆ; The English L. S. Text Examiner for 1916 by a Graduate, Price 3 as.

ನಮ್ಮ ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯರ್,

[47—7] ಸುಬೋಧ ಗ್ರಂಥಾಲಯ, ಮೈಸೂರು.

S. UDIPI NARAYANACHARYA & Co.,
BANARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕಂಪೆನಿಯಲ್ಲಿ ಕೆಯಿಂದ ತಯಾರಿಸಿರುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಶಲ, ಪೇಟ, ಕಾಶ್ಮೀರ್ ಶಾಲು, ದುಪ್ಪಟಿ, ಮಗುಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು, ಕೊಣಾರದು, ಅರಳೆ ಪೇಟ, ಧರ್ಮಾವರ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೋನತ್ತಿನಿಂದ ತಯಾರಿಸಿರುವೆವು. ಈ ಅಮೂಲ್ಯವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಛಟಗಳುಳ್ಳ ಒಂದು ಕೇಟಲಾಗು ಒಂದು ಕಾಶಿ ಕಾಲಭೈರವನ ದಾರವನ್ನು ಧನಾವಾಗಿ ಕಳುಹಿಸಲಾದೀತು. [119-38]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಸ್ತ್ರೀಯರ ಭೂಷಣವು!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು! ಅಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೆನ್ನಿ?

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ನೀಗಿ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಾಯಕವಾಗಿರುತ್ತದೆ.

ಈ ತೈಲವನ್ನು ಉಪಯೋಗಿಸುತ್ತಲೇ, ಮಸ್ತಿಷ್ಕದ ಕಾವು ಶಾಂತವಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ಕೂಡಿಯುತ್ತಿರುವ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಅವರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.

ನೀವು ನಿಮ್ಮ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೀಗಿ ಸಹಾರಕರ ಬಂಧುಗಳು. ಬನವನಗಳ್ಳಿ, ಬೆಳಗಾಂವ್-ಕಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದುದೆಂದು ಸಾಧನವಾಗಿರುತ್ತದೆ. ಅದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ಕಳುಹಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತು ಬೆಳೆಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವು ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರೆಯತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದನ್ನು ಮರೆಯಬಾರದು. ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕದೇ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲ. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೇ ಇರಲಿ, ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದೇ ಒಂದು ಸೀಸೆಯನ್ನು ಖರೀದಿಸಿರಿ. [34-9]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಧ್ಯಮ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಕಾಡಿಗೆಗಳು ಡಜನ್ ಒಂದಕ್ಕೆ 0-12-0.

ಬೇಕಾದ ಕಡೆ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

೧೫೫, ಜುಮ್ಮಾಮಸಜಿದ್, ಮಾರ್ಕೆಟ್, ಬಾಂಬೆ.

ಏಜಂಟ್, ೮ ಬಜಾರ್ ಸ್ಟ್ರೀಟ್, ಬೆಂಗಳೂರು

ತರಿಸಿ ನೋಡಿರಿ.

1 ಸುಧಾಕರ ಕಸ್ತೂರಿ ಮಾತ್ರೆಗಳು—ಜ್ವರ, ಅಗ್ನಿಮಾಂದ್ಯ, ಕೆಮ್ಮು, ನೆಗಡಿ, ಅತಿಸಾರ, ದೇಹ ಶೀತ ವ್ಯಾಧಿಗಳಿಂದುಂಟಾಗುವ ವಿಕಾರಗಳು, ಮಕ್ಕಳ ಎಳವು, ಮಲಬದ್ಧ, ಇವುಗಳನ್ನು ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ 4 ಆಣೆ ಮಾತ್ರ. 6 ಸೀಸೆಗಳಿಗೆ ರೂ 1-4-0. ಟಪಾಲು ಹಾಸಲು ಪ್ರತ್ಯೇಕ.

2 ಕಮಲಕೇಸರ ಘೃತ—ಕಲಿಸೋನೇ ಮೊದಲಾದ ಎಲ್ಲಾ ತರದ ಸೋರುವಿಕೆಗಳನ್ನೂ ಗುಣಪಡಿಸುವುದು. ಡಬ್ಬಿ 1 ಕ್ಕೆ 8 ಆಣೆ ಮಾತ್ರ.

3 ವಜ್ರದಂತಚೂರ್ಣ—ಇದನ್ನು ಪ್ರತಿ ದಿನವೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವುದರಿಂದ ಎಲ್ಲಾ ವಿಧವಾದ ದಂತ ರೋಗಗಳೂ ವಿಶೇಷವಾಗಿ ಹೋಗಿ ಹಲ್ಲುಗಳು ಮುತ್ತುಗಳಂತೆ ಥಳಥಳಿಸುವವು. ಟಿನ್ 1 ಕ್ಕೆ 2 ಆಣೆ ಮಾತ್ರ.

[71-4] ನಮ್ಮ ವಿಳಾಸ:—ಬಿ. ಎಸ್. ಕೌಶಿಕ, 240, ದಿವಾನರ ರೋಡು, ಮೈಸೂರು.

ನಿಮಗೆ ನಿಮ್ಮ ರಕ್ತದ ಚಿಂತೆಯುಂಟೇ?

ನಿಮ್ಮ ರಕ್ತದಿಂದಲೇ ನೀವು ಸುಖವಾಗಿರುವುದು; ನಿಮ್ಮ ರಕ್ತದಿಂದಲೇ ನೀವು ರೋಗಬಾಧಿತರಾಗುವುದು. ರಕ್ತಶುದ್ಧವಾಗಿದ್ದರೆ ಆರೋಗ್ಯ, ದೃಢಕಾಯ, ದೀರ್ಘಾಯುಸ್ಸು, ಪೂರ್ಣಸುಖ—ಎಲ್ಲಾ ಉಂಟಾಗುತ್ತೆ. ರಕ್ತ ಕೆಟ್ಟರೆ ಕ್ರಮವಾಗಿ ನಿಮ್ಮ ದೇಹ ಕುಗ್ಗುತ್ತಾ, ಆಯುಸ್ಸು ಕ್ಷಯಿಸುತ್ತಾ, ಜೀವನವೇ ಜುಗುಪ್ಸೆಯಾಗುತ್ತಾ ಬರುವದು. ಇಂಥಾ ಭಯಂಕರವಾದ ಸ್ಥಿತಿಯನ್ನು ತಪ್ಪಿಸಿಕೊಳ್ಳುವುದಕ್ಕೆ ನೀವುಗಳು ಖಂಡಿತವಾಗಿ ಉಪಯೋಗಿಸಬೇಕಾದದ್ದು ಒಂದೇ. ಅದ್ಯಾವುದೆನ್ನುವಿರೋ?

ಸುಧಾಸಾಗರ ಅವಲೇಹ.

ಈ ಅಮೃತವು ದೇಹದ ಉಷ್ಣವನ್ನು ಶಮನಮಾಡುತ್ತೆ. ನಿಶ್ಶಕ್ತಿಯಾದ ಅಥವಾ ಕೆಟ್ಟಿರುವ ಜೀರ್ಣಕೋಶವನ್ನು ಬಲಪಡಿಸಿ ಬಹಳ ಬೇಗ ಹಸಿವೆಯನ್ನು ವೃದ್ಧಿಮಾಡುತ್ತದೆ ಮತ್ತು ರಕ್ತದೋಷದಿಂದ ಉಂಟಾಗುವ ಎಲ್ಲಾ ತರದ ರೋಗಗಳನ್ನು ಅಡಗಿಸಿ ರಕ್ತವನ್ನು ಶುದ್ಧಮಾಡಿ ಉಕ್ಕಿಸುವುದು.

ಬಾಟ್ಲಿ ಒಂದರ ಕ್ರಯ ರೂ. 1-8-0 ಮಾತ್ರ.

ನಮ್ಮ ವಿಳಾಸ—ರಾಜವೈದ್ಯ ನಾರಾಯಣಜಿ ಕೇಶವಜಿ,

[295-10] ಆಯುರ್ವೇದೋದಯ ಔಷಧಾಲಯ,

20, ಬ್ರಾಡ್ವೇ ಬಜಾರ್ ರೋಡ್, ಮದರಾಸು.

ನವಿನುಡಿ.

ಕನ್ನಡ ನುಡಿಯ ಮಾಸ ಪುಸ್ತಕಾವಳಿ.

ಇದರಲ್ಲಿ—ಚರಿತ್ರಾವೃತ್ತ, ಸಾಂಸಾರಿಕ, ಸಾಮಯಿಕ, ಸಾಹಸ, ಪೌರಾಣಿಕ, ಕಾದಂಬರಿ (ನಾವೆಲುಗಳು), ದೇಶ ಚರಿತ್ರೆ, ಮಹಾಪುರುಷರ ಜೀವನ ಚರಿತ್ರೆ, ಸಮಯೋಚಿತವಾದ ಉಪನ್ಯಾಸಗಳು, ತಿಂಗಳಿಗೊಂದು ಪುಸ್ತಕದಂತೆ ಪ್ರಕಟವಾಗುವದು. ಪ್ರತಿ ಪುಸ್ತಕದಲ್ಲಿಯೂ ಅಖಂಡವಾದ ಒಂದು ಸಂಗತಿಯು ಮುಗಿದಿರುವುದು. ಮಾಸ ಪತ್ರಿಕೆಯಂತೆ ಅನೇಕ ಸಂಗತಿಗಳಿರುವದಿಲ್ಲ. ಈಗ ಸಂಯುಕ್ತೆ, ಸಾವಿತ್ರೀ, ಸೀತಾದೇವಿ, ಚಂದ್ರಮತಿ, ಗಾಂಧಾರಿ, ದಮಯಂತಿ ಎಂಬ ಪುಸ್ತಕಗಳು ಸಿದ್ಧವಾಗಿವೆ. ಅಂಚೆ ಸಹಾ ವಾರ್ಷಿಕ ಚಂದಾ ಒಂದು ರೂಪಾಯಿ ಎಂಟಾಣೆ.

[4-14] ವಿಳಾಸ:—"ನವಿನುಡಿ"ಯ ಸಂಪಾದಕ, ಕೋಟೆ, ಬೆಂಗಳೂರು.

ಬಿಸಿಲು ಕಾಲಕ್ಕೆ ಮೂರು

ಮಹೌಷಧಗಳು.

ಅಮೃತಾಮಲಕ ತೈಲ.

ಈ ತೈಲವು ಕಣ್ಣು ಕೈಕಾಲುಉರಿ, ಬಿಸಿಲಿನ ತಲೆನೋವು, ಕಣ್ಣು ಮಂಜು, ಕಣ್ಣು ಕಗ್ಗತ್ತಲೆ, ಮುಂತಾದ್ದನ್ನು 1-2 ಅಭ್ಯಂಗದಿಂದಲೇ ಗುಣಮಾಡಿ ಬುದ್ಧಿ ಶಕ್ತಿಯನ್ನು ವಿಶೇಷವಾಗಿ ಹೆಚ್ಚಿಸುತ್ತದೆ. ಬಿಸಿಲು ಕಾಲಕ್ಕೆ ಇದಕ್ಕಿಂತಲೂ ಉತ್ತಮವಾದುದು ಖಂಡಿತವಾಗಿಯೂ ಇಲ್ಲವೆಂಬುದನ್ನು ಅನುಭವದಿಂದ ತಿಳಿಯಿರಿ.

8 ಅಭ್ಯಂಗಕ್ಕೆ ಆಗುವ ತೈಲ 8 ಆಣೆ.

ಖಂಡಾಮಲಕ ರಸಾಯನ.

ಸಮಸ್ತ ಪಿತ್ತ ವಾತ ವಿಕಾರಗಳನ್ನು ಜಾಗ್ರತೆ ಗುಣಮಾಡಿ ಜೀರ್ಣಶಕ್ತಿಯನ್ನು ಸರಿಪಡಿಸಿ ರಾತ್ರಿ ಸುಖನಿದ್ರೆಯನ್ನುಂಟುಮಾಡಿ ಮಲವನ್ನು ಸಲೀಸಾಗಿ ಬಿಡಿಸುವುದು. ಸೇವಿಸಲು ರುಚಿಯಾಗಿದೆ. 15 ದಿನದ ಔಷಧ 12 ಆಣೆ.

ಆಮೋದಿನಿ.

ಬಾಯಾರಿಕೆಯನ್ನು ತಕ್ಷಣ ಅಡಗಿಸಿ-ಆಯಾಸವನ್ನು ಪರಿಹರಿಸಿ-ಸಂತೋಷವನ್ನು ತನ್ನ ಅಮೋಘವಾದ ಗುಣ ಮತ್ತು ಸುವಾಸನೆಗಳಿಂದ ಮೋಹಗೊಳಿಸುವ ಈ ರತ್ನವನ್ನು ಈಗಲೇ ತರಿಸಿಕೊಳ್ಳಿರಿ-ಪೂರ್ವಕ್ಕಿಂತಲೂ ಎಷ್ಟೋ ಮಟ್ಟಿಗೆ ಹರವಾಗಿ ತಯಾರಿಸಲ್ಪಟ್ಟಿರುವುದು 150 ಮಾತ್ರೆ ಸೀಸೆ 4 ಆಣೆ. [278-17]

ಎರಡು ರೂಪಾಯಿಗೆ ಕಡಮೆ ಇಲ್ಲದೆ ಔಷಧ ತರಿಸಿದರೆ ಟಿ.ಕ. ಮುಫತ್ತು.

ಆಯುರ್ವೇದ ವಿದ್ವಾನ್ ಬಿ. ಪಿ. ಪಂಡಿತ್, ನಂಜನಗೂಡು.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಆಟೋ-ಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಭಂಗಾರದ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ ಜಾಮೀನ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳೆದರೆ ಸಹ್ಯದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಆಟೋ ಮೋಹಿನಿಯೇ. ಬೇರೆ ಯಾವುದೊಂದು ಹೊಸ ಪುಷ್ಪಸಾರದ ಗಮಲೂ ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾಯುವಂಥವಲ್ಲ ಆಟೋ ಮೋಹಿನಿ.

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ 2—0—0		¼ ,, ,,	0—8—
1 ಡ್ರಾಮ್ ಕೊರವೆಗೆ ...	,, 0—12—0	ಕಾರ್ಡು ಡಜನ್‌ಗೆ	0—12—

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ನಾಕಿ ಬೆಳಸುವಂಥದು. ಕಣ್ಣು ಮತ್ತು ಮೆದುಳಿಗೆ ತಂಪನ್ನು ಕೊಡತಕ್ಕದ್ದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೆಡುಕು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಜಾಮೀನ್ ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಕಾಗಿದೆ. [289-17]

ಕ್ರಯ 1 ಬಾಟ್ಲಿಗೆ ರೂ. 1-0-0.
,, 3 ,, ,, 2-10-0.

ಸೋಲ್ ಏಜಂಟರು—ಷಾ ಭಗವಾನ್ ದಾಸ್ ಚುನಿಲಾಲ್ ಕಂಪನಿ,

177, ಬ್ರಾಡ್ವೇ ಬಜಾರ್ ರೋಡ್, ಮದರಾಸು.

Useful in Peace and War **FIRST AID IN ACCIDENTS,** BY DR. U. RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ಮಾಡಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೆಬ್ ಡಾಕ್ಟರ್ ಯು. ರಾಮರಾವ್ ಇವರಿಂದ ರಚಿತವಾದುದು.

DEDICATED TO H. H. THE MAHARAJA OF MYSORE.

ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ಪಕ್ಷದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪುಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ಮೊದಲು ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆಯಾ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡಿಸಿದ್ದರೆ, ನಿಸ್ಸಂದೇಹವಾಗಿ ಬದುಕಬಹುದಾಗಿದ್ದ ಪ್ರಾಣವು ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು.

ಒಬ್ಬ ಮನುಷ್ಯನಿಗೆ ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯಾಗಲಿ, ಇಲ್ಲವೇ ಯಾವುದಾದರೂ ಅಪಾಯವಾಗಲಿ ಸಂಭವಿಸಿದಾಗ, ಸಮರ್ಥರಾದ ವೈದ್ಯ ಸಹಾಯವು ಬಂದೊದಗುವುದರೊಳಗಾಗಿ, ತತ್ಕಾಲಕ್ಕೆ ತಮ್ಮ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿಯೇ ಲಭಿಸಬೇಕು.

ಇದರಲ್ಲಿ ಅಲ್ಪಸ್ವಲ್ಪ ಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ಕ್ರೂರ ವೇದನೆಯನ್ನು ನೀಗಿಸಬಹುದು! ಎಷ್ಟೋ ಪ್ರಾಣಗಳನ್ನು ಉಳಿಸಬಹುದು! ಬಹಳವಾಗಿ ರಕ್ತಸ್ರಾವಕ್ಕೆ ಕಾರಣವಾದ ಮಹಾ ವಿಪತ್ತುಗಳಲ್ಲಿಯೂ ಬೆಂಕಿ ತಗಲುವ, ಮೂಳೆ ಮುರಿಯುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ, ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾದ ಪ್ರಾಣಗಳೂ ಕೂಡ, ಸಮರ್ಥರಾದ ವೈದ್ಯರು ಬರುವಷ್ಟರೊಳಗಾಗಿ ಏನು ಮಾಡಬೇಕೆಂಬುದನ್ನು ತಿಳಿಯದೆ ಹೋಗುವುದರಿಂದ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸಾಕ್ರಮದಲ್ಲಿ ಅಲ್ಪಸ್ವಲ್ಪ ಜ್ಞಾನವನ್ನು ಪಡೆದು, ಅದನ್ನು ಉಪಯೋಗಿಸುವುದರಿಂದಲೇ ಸಾಯುವ ಸ್ಥಿತಿಯಲ್ಲಿದ್ದ ಸಾವಿರಾರು ಜೀವಗಳು ಬದುಕಿಕೊಂಡಿರುವುವು.

ಅದಕ್ಕಾಗಿ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೈಕಾಲುಗಳು, ಮೂಳೆ ಮುರಿಯುವುದು, ಉಸಿರುಕಟ್ಟುವಿಕೆ, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ ಅಗ್ನಿಗಂಡ, ನರಗಳು ಕದಲುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಸೌಕರ್ಯ ಕಲ್ಪಿಸುವುದು, ಇನ್ನೂ ಇವುಗಳಂತೆಯೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳೊಡನೆ ಇಷ್ಟು ವಿಷಯಗಳಿದ್ದರೂ, ಸರ್ವಸಾಮಾನ್ಯ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆಮಾಡಿರುವೆವು. [61-4]

ಪುಸ್ತಕದ ಬೆಲೆ 0—8—0, ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣನ್ ಬ್ರದರ್ಸ್, 323, ತಂಬೂಚೆಟ್ಟಿ ಬೀದಿ, ಮದರಾಸು. ಪೋಸ್ಟು ಬಾಕ್ಸ್ 100.

"ಹನುಮಾನ್" ಬೋರಾಕ್ಸ್ ಸಾಬೂನು.

ಹನುಮಾರ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧ ಮಾಡಿದ್ದು. ಇದರಿಂದ ಸವಾನವಾದ ವಸ್ತುಗಳು ಸಿಗವು. ಚೆಲ್ವಿ ಸಂಬಂಧವಾದ ... ತಿಳ್ಳ, ಹುರಿ ಮೊದಲಾದ ವ್ಯಾಧಿಗಳು ಹನುಮಾರ್ ಸಾಬೂನನ್ನು ... ಉಪಯೋಗಿಸುವುದರಿಂದ ಆಶ್ಚರ್ಯವಾಗಿ ವಾಸಿಯಾಗುವವು. ... ಹನುಮಾರ್ ಸಾಬೂನು ... ದಿನವೂ ಹನುಮಾರ್ ... ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖ ಸೌಂದರ್ಯವನ್ನು, ತೇಜಸ್ಸನ್ನು ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟು ಮಾಡುವುದು. ... ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವುದೂ ಇಲ್ಲ.—ಹುಡುಗರು, ಹುಡುಗಿಯರು, ಯೌವನಸ್ಥರು ಮತ್ತು ವೃದ್ಧರಿವರೆಲ್ಲರೂ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ ಸಾಬೂನನ್ನು ಉಪಯೋಗಿಸಿದ ತರುವಾಯ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಬೇಕು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ನಗರಗಳಲ್ಲಿಯೂ, ಗ್ರಾಮಗಳಲ್ಲಿಯೂ, ಚಿಕ್ಕ ಗ್ರಾಮಗಳಲ್ಲಿಯೂ ದೊರೆಯುತ್ತೆ.—ಪ್ರತಿ ಸಾಬೂನು ಬಿಲ್ಲೆಯ ಮೇಲೆ ಹನುಮಾರ್ ಗುರ್ತು ಇರುವುದನ್ನು ಜಾಗರೂಕತೆಯಿಂದ ನೋಡಬೇಕು.

ವಿ. ಕ:—ಎಲ್ಲರೂ ನಮಗೆ ಇಂಗ್ಲಿಷಿನಲ್ಲೇ ಕಾಗದ ಬರೆಯಬೇಕು. ... ಬಿಕರಿಗೆ ಇಟ್ಟಿದೇವೆ.

ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,
[11-25] ಅಪ್ಪಿಸಿಂಗ್ ಬಜಾರ್ ರೋಡ್, ಮದರಾಸು.

ನಿನಗೆ ಸ್ವಸ್ಥವಿಲ್ಲವೋ?

ನನಗೆ ಸ್ವಸ್ಥವಿಲ್ಲವೆಂದು ತೋರುವುದು—ಎಂದರೆ, ನನಗೆ ಯಾವ ನೋವೇ ... ನನಗೆ ದಿನಕ್ಕೆ ಒಂದು ... ಎಂದು ನಿಮ್ಮ ... ಹಾಗೆ ...

(೧೨ ಅಡಿ ಬುಡ್ಡಿ ಪರಿಮಾಣ)

... ಈ ವಿಷಯ ಪ್ರಪಂಚದ ... ರೋಗಗಳಲ್ಲಿ ... ಅಜೀರ್ಣ, ... ತಲೆನೋವು; ... ಗಂಡಕರವಾಗಿ ... ಮಲಬದ್ಧತೆ ... [176-32]

... ಬುಡ್ಡಿ ... ದೊರೆಯುವುದು.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ. ಹೊಸ ನಮೂನೆ ಗಡಿಯಾರ.

"ಸ್ವಿಸ್ ಪಾಕೆಟ್ ವಾಚ್."

ಸರಪಣಿ ಸಹಿತ ಕ್ರಯ ರೂ. 3-0-0.



ಈ ಚಿತ್ರದಲ್ಲಿ ತೋರಿಸಿರುವ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇರೆ ಸ್ವೀಡಿನ್ಯಲ್ಲಿ ... ಈ ಗಡಿಯಾರದ ಸಾಮಾನು ... ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ... ಗಂಟೆ ತೋರಿಸುವುದರಲ್ಲಿ 1 ನಿಮಿಷವಾದರೂ ಹೆಚ್ಚು ಕಮ್ಮಿಯಿಲ್ಲದೆ ನಡೆಯುತ್ತದೆ. "ಸ್ವಿಸ್ ಪಾಕೆಟ್ ವಾಚ್" ಎಂಬುವದು ಗುರ್ತು ನೋಡಿ ಪಡೆಕೊಳ್ಳಿರಿ. ಅವಸ್ತರ ತರಿಸಿಕೊಳ್ಳುವರಿಗೆ ಮಾತ್ರ ದೊರೆಯುವುದು.

ವಿಳಾಸ.—ಧೈರ್ಯಲಕ್ಷ್ಮಿ ಅಂಡ್ ಕಂಪೆನಿ,
[63-5] 3, ಇರುಳಪ್ಪನ ಬೀದಿ, ಮದರಾಸು.

ಅರ್ಧಬೆಲೆ! ಒಂದು ತಿಂಗಳು ಮಾತ್ರ!

ನಮ್ಮ ಕ್ರಿಸ್ಟಲ್ ಗಿಲ್ಟ್ ಲೀವರ್ ವಾಚ್ ಸರ್ವೋತ್ಕೃಷ್ಟವಾದ ... 3 ವರುಷದ ಜವಾಬ್ ಕೊಡುವೆವು. ಕ್ರಯ ರೂ 7-14-0; ರೂ. 9-14-0 ಈಗ ನಾವು ಇಟ್ಟಿರುವ ಕ್ರಯ ರೂ. 3-15-0; ರೂ. 4-15-0. ...



... ರೂ. 10; ಈಗ ಇದನ್ನು ರೂ 5 ಕ್ಕೆ ಕೊಡುವೆವು. ... 9 ಕ್ಯಾರೆಟ್ ಚಿನ್ನದ ಗಡಿಯಾರ ಕ್ರಯ ರೂ. 32 ಈಗ ರೂ. 16 ಕ್ಕೆ ... ಬೆಳ್ಳಿ ವಾಚ್ ಕ್ರಯ ರೂ. 14; ಈಗ ರೂ 7 ಮಾತ್ರ ... ರೂ. 18; ಈಗ ರೂ 9 ... ರೂ. 24; ಈಗಿನ ಕ್ರಯ ರೂ 12. ... ರೂ. 15. ... 6 ವಾಚು ...

ನಮ್ಮ ವಿಳಾಸ—The Competition Watch Co.,
[276-14] 25, Madan Mitra Lane, E. Calcutta.



ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಪೊಟ್ಟಣ ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತವೆ. ಪರೀಕ್ಷಿಸಿ ನೋಡಿ ಎಂದು ವಿಜ್ಞಾಪಿಸುತ್ತೇವೆ. [213-25]

ಕ್ರಯ 0-10-0; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ... ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,
ಎಗ್ಜ್ ಮಿಕ್ಸ್ಚರ್ ಡಿಪೋ, ಬೊಂಬಾಯಿ, 4.
KARNIK Bros., BOMBAY, 4.

ನಮ್ಮ ಏಜಂಟರು.—ದಿ ... ಮಂಗಳೂರು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳು, ... ಬರೆದು ತರಿಸಿಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—MANAGER, WOOL WORKS,
[188-28] GIRLS' INDUSTRIAL SCHOOL, HASSAN.

ಪುಷ್ಪರಾಗದಿಂದ ಕಟ್ಟಿದ ಅಚ್ಚ ಚಿನ್ನದ ಮೂಗುಬಟ್ಟು.

ಕ್ರಯ ರೂ. 7-8-0. ಛಾಂಗಿ ಛಾರ್ಜು ಮಾಫಿ.

ವಜ್ರದಂತೆ ಥಳಥಳಿಸುವ ಉತ್ತಮ ಜಾತಿಯ ಪುಷ್ಪರಾಗದಿಂದ ಕಟ್ಟಲ್ಪಟ್ಟ ಅಚ್ಚ ಚಿನ್ನದ ಮೂಗುಬಟ್ಟುಗಳು ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುತ್ತೆ. ...

... [49-6] ನಮ್ಮ ವಿಳಾಸ:—ಪಿಕಾಂಬರ್ ಕಂಪನಿ,
18, ಸೆಕೆಂಡ್ ಲೈನ್ ಬೀಚ್, ಮದರಾಸು.

ಉಗಾದಿ ಬಹುಮತಿ ಗಡಿಯಾರ.

50 ಸಾಮಾನುಗಳ ಸಹಿತ ಕ್ರಯ ರೂ. 3-15-0.



ಉಗಾದಿ ಬಹುಮತಿಗಾಗಿ ತರಿಸಿಕೊಳ್ಳುವವರಿಗೆ ಈ 7 ... ರೂ. 3-15-0 ... (1) ವಾಚ್ ... (2) ... (3) ... (4) ... (5) ... (6) ... (7) ... 25, ... 18, (8) ... ಪೋಸ್ಟೇಜು ಬೇರೆ.

ಚಿನ್ನದ ಗಿಲ್ಟು ಬೆಳ್ಳಿ ನಮೂನೆ ಗೆಜ್ಜೆ ಡಾಬು.

ಚಿನ್ನದ ಡಾಬು	ಬೆಲೆ ರೂ.	4-0-0	ಪೋಸ್ಟೇಜು
2 ನೇ ನಂ ಗಿಲ್ಟು ಡಾಬು	,,	2-8 0	ಬೇರೆ.

ಈ ಡಾಬನ್ನು ಚಿಕ್ಕವರು ದೊಡ್ಡವರು ... 15 ... ಕ್ರಯ ರೂ. 4-0-0.

ಬಿಳಿ ... ಉಪನೇತ್ರ. ಕ್ರಯ ರೂ. 2 8-0

ಸ್ಫಟಿಕದ ಉಪನೇತ್ರವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ. ನಮ್ಮಲ್ಲಿ ಸ್ಫಟಿಕದ ಉಪನೇತ್ರಗಳು ಕ್ರಮಕ್ಕೆ ದೊರೆಯುತ್ತವೆ. ...

ಸುಂದರವಾದ ಕಾಲು ಕಡಗ.

ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-8-0	1-3-0	0-14-0	0-10-0

ಅಂದವಾದ ಡಾಬು (ಒಡ್ಯಾಣ).



ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗಿಯರಿಗೆ
1-6-0	1-4-0	0-15-0

ಅಂದವಾದ ವ್ರಜುವೇರು ರುಳಿ (ಕಾಲುಗೊಲಸು).



ದೊಡ್ಡವರಿಗೆ	ಚಿಕ್ಕವರಿಗೆ	ಹುಡುಗರಿಗೆ	ಮಕ್ಕಳಿಗೆ
1-4-0	1-10-0	1-6-0	1-4-0

ಪೋಸ್ಟೇಜು ಬೇರೆ.



ತಂಜಾವೂರು ಗೆಜ್ಜೆ ಅಟ್ಟಿಗೆ.
[10-3] ಕ್ರಯ 0-7-0

ನಮ್ಮ ವಿಳಾಸ—ಕೆ. ಕೆ. ಮೂರ್ತಿ,
2-18 ತೇರು ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

ಜಾಮೀನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.
ಮತ್ತು
ಕೂದಲಿಗೆ ಠೀಕ್ಷ್ಣವಾದ ಹೊಳಪೂ ನುಣುಪೂ ಬರುತ್ತೆ.
... ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂದು ರುಜುವಾತುಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ಪೆಟ್ಟಿಗೆ, ಬ್ರಷ್ ಮತ್ತು ಬಟ್ಟಲು ಸಹಿತ ಕ್ರಯ ರೂ. 1-0-0; ಪೋಸ್ಟೇಜ್ ಬೇರೆ.

ಹೊಸ ನಮೂನೆ ರೋಮಹಾರಿ.

... ಕೂದಲನ್ನು ... ತೆಗೆಯುವುದು ... [282-17]

ಪೆಟ್ಟಿಗೆ ಒಂದಕ್ಕೆ ರೂ. 1-0-0; ಪೋಸ್ಟೇಜ್ ಬೇರೆ.

ದಕ್ಷಿಣ ಹಿಂದೂಸ್ಥಾನಕ್ಕೆಲ್ಲಾ ಏಜಂಟರು:—

ಷಾ ಬಗವಾನ್‌ದಾಸ್ ಚೂನಿಲಾಲ್ ಕಂಪನಿ,
177, ಚೀನಾ ಬಜಾರ್ ರೋಡ್, ಮದರಾಸ್.

ಷಾಪ್ ಸ್ಥಳ ಬದಲಾವಣೆ ನೋಟೀಸ್

ಬೆಂಗಳೂರಿನ ಚಿಕ್ಕಪೇಟೆ ರೋಡ್ ಮುಂಭಾಗದಲ್ಲಿ ಶ್ರೀ ಲಕ್ಷ್ಮೀ ನಾರಾಯಣ ಹಾಲ್ ಎಂಬ ಹೆಸರಿನ ನಮ್ಮ ಅಂಗಡಿಯನ್ನು ಇಟ್ಟಿದ್ದೆವು. ಈಗ ಸದರಿ ಅಂಗಡಿಯು ದೇವರಾಜ ಮಾರ್ಕೆಟ್ಟಿನ ಪೂರ್ವ ದಿಕ್ಕಿನಲ್ಲಿರುವ ಮಾರ್ಕೆಟ್ ಲೈನಿನಲ್ಲಿ ಇಡಲ್ಪಟ್ಟಿದೆ. [65-4]

ಎಸ್. ಭಗವಂತರಾವ್ ಅಂಡ್ ಬ್ರದರ್, ಬುಕ್ಸೆಲ್ಲರ್ಸ್, ಪ್ರೊಪ್ರೈಟರ್ಸ್.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೬ನೇ ಇಸವಿ ಏಪ್ರಿಲ್ ತಾ. ೬ನೇ ಗುರುವಾರ.

ಮೈಸೂರಿಗೆ ಒಂದು ವಿಶ್ವವಿದ್ಯಾನಿಲಯ.

ಮೈಸೂರು ಸಂಸ್ಥಾನಕ್ಕೆ ಒಂದು ವಿಶ್ವವಿದ್ಯಾಲಯ (ಯೂನಿವರ್ಸಿಟಿ) ವನ್ನು ಸ್ಥಾಪನೆ ಮಾಡುವ ವಿಷಯದಲ್ಲಿ ನಮ್ಮ ಗವರ್ನಮೆಂಟಿನವರು ಒಂದು ಮುಸೂದೆ ಪುಸ್ತಕವನ್ನು ಪ್ರಕಟ ಮಾಡಿದ್ದಾರೆ. ಈ ವಿಚಾರವಾಗಿ ಮೈಸೂರು ಗವರ್ನಮೆಂಟಿನವರು ಪ್ರಸಿದ್ಧಮಾಡಿರುವ ಸಲಹೆಗಳನ್ನೂ ನಿರ್ಬಂಧಗಳನ್ನೂ ನಾವು ಇನ್ನೂ ಸಂಪೂರ್ಣವಾಗಿ ನೋಡಲಿಲ್ಲ. ಆದರೂ ಇದುವರೆಗೆ ನಮಗೆ ತಿಳಿದು ಬಂದಿರುವ ವಿಷಯಗಳೇನೆಂದರೆ— ಮೊದಲನೆಯದಾಗಿ ಈಗ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ವಿದ್ಯಾರ್ಥಿಗಳ ಪೈಕಿ ಯೂನಿವರ್ಸಿಟಿ ಶಿಕ್ಷಣಕ್ಕೆ ಹೋಗಬೇಕೆಂಬುವರಿಗೆ ಕೆಲವು ಹೈಸ್ಕೂಲುಗಳಲ್ಲಿ ಒಂದು ಸ್ಪೆಷಲ್ ತರಗತಿಯನ್ನು ಕಲ್ಪಿಸುತ್ತಾರೆ. ಆ ತರಗತಿಯಲ್ಲಿ ಒಂದು ವರುಷ ಓದಿ ಪರೀಕ್ಷೆಯಲ್ಲಿ ಪ್ಯಾಸಾದರೆ ಅಂಥವರನ್ನು ಯೂನಿವರ್ಸಿಟಿ ಶಿಕ್ಷಣಕ್ಕೆ ಸೇರಿಸಿಕೊಳ್ಳುವರು.

ಬೆಂಗಳೂರು ಸೆಂಟ್ರಲ್ ಕಾಲೇಜು, ಮೈಸೂರು ಮಹಾರಾಜಾ ಕಾಲೇಜು, ಇವೆರಡೂ ಸೇರಿ ಮೈಸೂರು ಯೂನಿವರ್ಸಿಟಿ ಎನಿಸಿಕೊಳ್ಳುತ್ತದೆ. ಸೆನೆಟ್ ಹೌಸ್ ಮತ್ತು ಯೂನಿವರ್ಸಿಟಿ ಕಟ್ಟಡಗಳನ್ನು ಮೈಸೂರು ಪಟ್ಟಣದಲ್ಲಿ ರಚಿಸುವುದರಿಂದ ರಾಜಧಾನಿಯು ವಿಶ್ವವಿದ್ಯಾನಿಲಯ ಸ್ಥಾನವಾಗುತ್ತದೆ.

ಈ ವಿಶ್ವವಿದ್ಯಾನಿಲಯದಲ್ಲಿ ಸದ್ಯಕ್ಕೆ ಭಾಷೆಗಳಲ್ಲೂ, ಶಾಸ್ತ್ರಗಳಲ್ಲೂ, ಉಪಾಧ್ಯಾಯರಿಗೂ ಡಿಗ್ರಿಗಳನ್ನು ಕೊಡುವಂತೆ ಏರ್ಪಾಡು ಮಾಡುತ್ತಾರೆ. ಈ ಡಿಗ್ರಿಗಳನ್ನು ಸಂಪಾದಿಸಿಕೊಳ್ಳುವುದಕ್ಕೆ ಈ ಕಾಲೇಜುಗಳಲ್ಲಿ ಸಾಮಾನ್ಯವಾಗಿ ಮೂರು ವರುಷ ವಿದ್ಯಾಭ್ಯಾಸ ಮಾಡಬೇಕಾಗಿದೆ. ಮೊದಲನೆಯ ವರುಷಾಂತ್ಯದಲ್ಲಿ ನಡೆಯುವಂಥಾ ಪರೀಕ್ಷೆಯೊಳಗೆ ತೇರ್ಗಡೆಹೊಂದಿದ ವಿದ್ಯಾರ್ಥಿಗಳು ಮೊದಲಿದ್ದ ಎಫ್.ಎ. ಪರೀಕ್ಷೆ ಪ್ಯಾಸಾದವರಂತೆ ಎಣಿಸಲ್ಪಡುತ್ತಾರೆ. ಮೂರನೆಯ ಸಂವತ್ಸರದ ಕೊನೆಯಲ್ಲಿ ನಡೆಯುವ ಪರೀಕ್ಷೆಯೇ ಡಿಗ್ರಿ ಪರೀಕ್ಷೆಯಾಗಿರುವುದು.

ಈ ನಮ್ಮ ಮೈಸೂರು ಯೂನಿವರ್ಸಿಟಿಯು 1916 ನೇ ಜೂಲೈ ತಿಂಗಳಿಂದ ಪ್ರಾರಂಭವಾಗುತ್ತದೆ. ಆ ಕಾಲದಿಂದ ಮೂರು ವರುಷದ ತನಕ ಈಗಿನಂತೆ ಶಿಕ್ಷಣಕ್ಕೂ, ಹೊಸ ಶಿಕ್ಷಣದ ತರಗತಿಗಳೂ ನಡೆಸಲ್ಪಡುವುವು. ಇದನ್ನು ನೋಡಿದರೆ ನಮ್ಮ ಯೂನಿವರ್ಸಿಟಿಯನ್ನು ಮುಂದಿನ ಜೂಲೈ ತಿಂಗಳಿಂದ ಪ್ರಾರಂಭಿಸಲು ವ್ಯವಧಾನ ಸಾಲದೆಂದು ತೋರುತ್ತದೆ. ನ್ಯಾಯವಿಧಾಯಕ ಸಭೆಯಲ್ಲಿ ನಮ್ಮ ಸರ್ಕಾರದವರು ರಚಿಸಿರುವ ಮುಸೂದೆಯ ರೆಗ್ಯುಲೇಷನನ್ನು ಚರ್ಚೆಮಾಡಿ ಪ್ಯಾಸ್ ಮಾಡಬೇಕಾಗುತ್ತದೆ. ಮೆಂಬರುಗಳು ಮೂರು ತಿಂಗಳೊಳಗಾಗಿ ಅದರ ಅಭಿಪ್ರಾಯ ಸಾಧಕ ಬಾಧಕಗಳನ್ನೆಲ್ಲಾ ಸಮಗ್ರವಾಗಿ ಗ್ರಹಿಸಿಕೊಂಡು ಅವಶ್ಯವಾದ ಬದಲಾವಣೆಗಳಿಂದ ಅದನ್ನು ಪ್ಯಾಸ್ ಮಾಡುವುದು ಹೇಗೆ ಸಾಧ್ಯವೋ ನಮಗೆ ತಿಳಿಯುವುದಿಲ್ಲ. ಈ ವ್ಯವಧಾನಕಾಲದಲ್ಲಿ ಹೈಸ್ಕೂಲ್ ಮತ್ತು ಕಾಲೇಜುಗಳಿಗೆ ಬೇಸಗೆಯ ರಜಾ ಇರುತ್ತದೆ. ಅವು ರಜಾ ಮುಗಿಸಿದ ಮೇಲೆ ಹೊಸ ಏರ್ಪಾಡುಗಳನ್ನು ಕಲ್ಪಿಸಿಕೊಂಡು ಓದಿಸಲಾರಂಭಿಸುವುದಕ್ಕೆ ತುಂಬಾ ಪ್ರಯಾಸವಾಗುವುದು.

ಈ ವಿಶ್ವವಿದ್ಯಾನಿಲಯದ ವಿಚಾರಗಳು ನಮಗೆ ಮಾತ್ರವೇ ಸಂಬಂಧಪಟ್ಟವುಗಳೆಂದು ಎಣಿಸಿ ಆತುರ ಪಡಬಾರದು. ಆ ವಿಚಾರಗಳು ನಮ್ಮ ಸಂಸ್ಥಾನದ ಮೇಲ್ತರದ ವಿದ್ಯಾ ಶಿಕ್ಷಣಗಳನ್ನೆಲ್ಲಾ ರೂಪಾಂತರ ಮಾಡತಕ್ಕವುಗಳಾಗಿರೋಣದರಿಂದ ಈ ಮುಸೂದೆಯ ವಿಷಯದಲ್ಲಿ ಪ್ರಜೆಗಳು ಚೆನ್ನಾಗಿ ಆಲೋಚನೆ ಮಾಡಿ ತಮ್ಮ ಅಭಿಮತವನ್ನು ತಿಳಿಯಪಡಿಸುವುದಕ್ಕೆ ಸರ್ಕಾರದವರು ಕೊಟ್ಟಿರುವ ಈ ಮೂರು ತಿಂಗಳ ಅವಧಿಯು ಸಾಲದೆಂದು ನಾವು ಅಭಿಪ್ರಾಯಪಡುತ್ತೇವೆ.

ಸರ್ಕಾರದವರು ಈ ಮುಸೂದೆಯಲ್ಲಿ ಸೂಚಿಸಿರುವ ಬೇರೆ ಬೇರೆ ಏರ್ಪಾಡು ಯಾನೆ ಸಲಹೆಗಳಿಂದ ನಮ್ಮ ಸಂಸ್ಥಾನಕ್ಕೆ ಯಾವ ಯಾವ ವಿಧದಲ್ಲಿ ಫಲವುಂಟಾಗಬಹುದೆಂದು ಪರಿಶೋಧನೆ ಮಾಡುವುದಕ್ಕೆ ಕುಶಲಬುದ್ಧಿಯೂ ವ್ಯವಧಾನವೂ ಅವಶ್ಯಕ. ಸದ್ಯದಲ್ಲಿ ಈ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡೋಣದರಿಂದ ನಮ್ಮ ಸೀಮೆಗೆ ಯಥಾರ್ಥವಾದ ಪ್ರಯೋಜನವೇನೂ ಆಗುವಂತೆ ಕಂಡು ಬರುವುದಿಲ್ಲ. ಈಗ ನಡೆಯುತ್ತಿರುವ ವಿದ್ಯಾಪ್ರಚಾರಣೆಯ ಪ್ರಮಾಣದ ಮಟ್ಟವನ್ನು ಕ್ರಮಪಡಿಸಿ ಅಭಿವೃದ್ಧಿಗೆ ತರುವುದಕ್ಕೆ ಪ್ರತಿಯಾಗಿ ಈ ಹೊಸ ಏರ್ಪಾಡು ಅದನ್ನು ಬದಲಾವಣೆ ಮಾಡುವುದಾಗಬಹುದು. ಹೊಸ ಯೂನಿವರ್ಸಿಟಿಯು ಮೇಲ್ತರದ ವಿದ್ಯಾಪ್ರಚಾರವನ್ನು ಇನ್ನೂ ಚೆನ್ನಾಗಿ ಜರುಗುವಂತೆ ಮಾಡಿಟ್ಟ ಹೊರತು ಈ ವಿಚಾರಕ್ಕಾಗಿ ಖರ್ಚು ಬಾಬನ್ನು ಅಷ್ಟು ವಿಶೇಷವಾಗಿ ಹೆಚ್ಚು ಮಾಡುವುದು ನ್ಯಾಯವೆನಿಸಿಕೊಳ್ಳಲಾರದೆಂದು ನೆನಸುತ್ತೇವೆ. ನಮ್ಮ ನ್ಯಾಯವಿಧಾಯಕ ಸಭಾ ಮೆಂಬರುಗಳೂ ಸಕಲ ಪ್ರಜೆಗಳೂ ಈ ವಿಚಾರವನ್ನು ಚೆನ್ನಾಗಿ ಪರಿಶೋಧನೆ ಮಾಡಿ ತಮ್ಮ ಅಭಿಪ್ರಾಯಗಳನ್ನು ಗವರ್ನಮೆಂಟಿಗೆ ಅರಿಕೆ ಮಾಡಬೇಕೆಂದು ನಂಬಿ ನಿರೀಕ್ಷಿಸುತ್ತೇವೆ. ಈ ವಿಶ್ವವಿದ್ಯಾನಿಲಯದ ನಿರ್ಮಾಣದಿಂದ ನಮ್ಮ ಸಂಸ್ಥಾನಕ್ಕೆ ಶ್ರೇಯೋಭಿವೃದ್ಧಿಗಳು ಲಭ್ಯವಾಗಬಹುದಾದ ಎಲ್ಲರ ಸಲಹೆಗಳನ್ನೂ ಅಭಿಪ್ರಾಯಗಳನ್ನೂ ನಮ್ಮ ಗವರ್ನಮೆಂಟಿನವರು ಸಂತೋಷದಿಂದ ಅಂಗೀಕರಿಸಿ ಪರ್ಯಾಲೋಚಿಸಲು ಸಿದ್ಧರಾಗಿರುತ್ತಾರೆಂದು ನಂಬಿದ್ದೇವೆ.

ದೇವರಲ್ಲಿ ಪಾಪಕ್ಷಮೆಯನ್ನು ಬೇಡುವುದು.

ಪಾಪವನ್ನು ಕುರಿತು ಜನರು ನಾನಾ ತರದ ಅಭಿಪ್ರಾಯಗಳನ್ನು ಮಾಡಿಕೊಂಡಿರುತ್ತಾರೆ. ಕೆಲವರು—ಪಾಪವೆಂಬುವದು ಬರೀ ಭ್ರಮೆ ಕಲ್ಪಿತವೇ ಹೊರತು ಅದು ಸತ್ಯವಾಗಿ ಇರುವಂಥಾದ್ದಲ್ಲ; ಮನುಷ್ಯನನ್ನು ಪಾಪವೆಂದು ಕರೆಯುವಂಥಾದ್ದು ಕೇವಲ ಅಜ್ಞಾನ ಎಂದು ಅಭಿಪ್ರಾಯಪಡುತ್ತಾರೆ. ಇನ್ನು ಕೆಲವರು—ಪಾಪವು ದೇಹಕ್ಕೆ ಸಂಬಂಧಪಟ್ಟದ್ದೇ ಹೊರತು ಆತ್ಮಕ್ಕೆ ಸಂಬಂಧಪಟ್ಟದ್ದಲ್ಲ; ಮನುಷ್ಯನು ತನ್ನ ದೇಹದ ಅವಯವಗಳ ಮೂಲಕವಾಗಿ ನಡಿಸುವ ಯಾವ ಕಾರ್ಯವಾದರೂ ಅವನ ಅಂತರಾತ್ಮಕ್ಕೆ ಬಾಧಕವನ್ನುಂಟುಮಾಡಲಾರದೆಂದು ಹೇಳುತ್ತಾರೆ. ಬೇರೆ ಕೆಲವರು—ಪಾಪವನ್ನು ಮಾಡುವದಕ್ಕಾದರೂ ಮಾಡದೆ ಇರುವದಕ್ಕಾದರೂ ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲ; ಪ್ರತಿಯೊಬ್ಬರೂ ತನ್ನ ತನ್ನ ಹಣೆಬರಹ ಇದ್ದಂತೆ ನಡಕೊಳ್ಳಲೇ ಬೇಕು; ಪಾಪಕ್ಕೆ ದೇವರೇ ಕಾರಣನಾಗಿದ್ದಾನೆ ಎಂದು ನೆನಸುವರು. ಮತ್ತೆ ಕೆಲವರು—ಪಾಪವಾದುವದು ಮನುಷ್ಯನಿಗೆ ಅವಶ್ಯವೆಂದು ಅಭಿಪ್ರಾಯಪಡುವರು. ಇಂಥ ಅಭಿಪ್ರಾಯಗಳುಳ್ಳವರು ಪಾಪವನ್ನು ಸಂಪೂರ್ಣವಾಗಿ ಹಗೆಮಾಡಿ ಬಿಟ್ಟುಬಿಟ್ಟು ಪಾಪಭೀರುಗಳಾಗಿಯೂ ತ್ರಿಕರಣಶುದ್ಧರಾಗಿಯೂ ಜೀವಿಸುವದಕ್ಕಾದೀತೇ?

ದಾವೀದನೆಂಬ ಅರಸನು ಒಂದು ಭಯಂಕರವಾದ ಪಾಪದಲ್ಲಿ ಬಿದ್ದು ಕೊನೆಯ ತರುವಾಯ ತನ್ನ ಪಾಪವನ್ನು ತಿಳಿದುಕೊಂಡು ಅದಕ್ಕಾಗಿ ಮನಃಪೂರ್ವಕವಾಗಿ ಪಶ್ಚಾತ್ತಾಪಪಟ್ಟು ತನಗೆ ಪಾಪಕ್ಷಮೆಯನ್ನನುಗ್ರಹಿಸಬೇಕೆಂದು ದೇವರಿಗೆ ಹೀಗೆ ಪ್ರಾರ್ಥನೆಮಾಡಿದನು:—

"ಪ್ರೀತಿಸ್ವರೂಪನಾದ ದೇವರೇ, ನನ್ನನ್ನು ಕರುಣಿಸು;
ಕರುಣಾನಿಧಿಯೇ, ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು.
ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದುಬಿಡು;
ನನ್ನ ದೋಷವನ್ನು ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು.
ನಾನು ದ್ರೋಹಿ ಎಂದು ನಾನೇ ಒಪ್ಪಿಕೊಂಡಿದ್ದೇನೆ;
ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ.
ನಿನಗೇ ಕೇವಲ ನಿನಗೇ ತಪ್ಪುಮಾಡಿದ್ದೇನೆ;
ನಿನ್ನ ದೃಷ್ಟಿಗೆ ಕೆಟ್ಟದಾಗಿರುವದನ್ನೇ ಮಾಡಿದ್ದೇನೆ.
ನಿನ್ನ ನಿರ್ಣಯ ನಿರ್ದೋಷವಾಗಿಯೂ ನಿನ್ನ ತೀರ್ಪು ನಿಷ್ಕಳಂಕವಾಗಿಯೂ ಇರುತ್ತದಲ್ಲಾ.
ಹುಟ್ಟಿದಂದಿನಿಂದ ನಾನು ಪಾಪಿಯೇ;
ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ.
ಯಥಾರ್ಥಚಿತ್ತವೇ ನಿನಗೆ ಸಂತೋಷ;
ಜ್ಞಾನದ ರಹಸ್ಯಗಳನ್ನು ನನಗೆ ತಿಳಿಯಪಡಿಸು.
ಹಿಸ್ಸೋಪ್ ಗಿಡದ ಬರಲಿನಿಂದ ನೀರನ್ನು ಚಿಮುಕಿಸಿಯೋ ಎಂಬಂತೆ
ನನ್ನ ಅಶುದ್ಧತ್ವವನ್ನು ತೆಗೆದುಬಿಡು, ಆಗ ಶುದ್ಧನಾಗಿರುವೆನು;
ನನ್ನನ್ನು ತೊಳೆ, ಆಗ ಹಿಮಕ್ಕಿಂತಲೂ ಬೆಳ್ಳಗಾಗುವೆನು.
ನನ್ನಲ್ಲಿ ಸಂಭ್ರಮಸಂತೋಷವನ್ನುಂಟಾಗುವಂತೆ ಮಾಡು;
ಆಗ ನೀನು ಜಜ್ಜಿದ ಎಲುಬುಗಳು ಆನಂದಪಡುವವು.
ನನ್ನ ದೋಷಕ್ಕೆ ವಿಮುಖನಾಗು;
ನನ್ನ ಪಾಪಗಳನ್ನೆಲ್ಲಾ ಅಳಿಸಿಬಿಡು.
ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು;
ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು.
ನಿನ್ನ ಸನ್ನಿಧಿಯಿಂದ ನನ್ನನ್ನು ತಳ್ಳಬೇಡ;
ನಿನ್ನ ಪರಿಶುದ್ಧಾತ್ಮವನ್ನು ನನ್ನಿಂದ ತೆಗೆಯಬೇಡ.
ನಿನ್ನ ರಕ್ಷಣಾನಂದವನ್ನು ನಾನು ತಿರಿಗಿ ಅನುಭವಿಸುವಂತೆ ಮಾಡು;
ನನ್ನಲ್ಲಿ ಸಿದ್ಧಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು.
ಆಗ ನಿನ್ನ ಮಾರ್ಗವನ್ನು ದ್ರೋಹಿಗಳಿಗೆ ಬೋಧಿಸುವೆನು,
ಪಾಪಿಗಳು ನಿನ್ನ ಕಡೆಗೆ ತಿರುಗಿಕೊಳ್ಳುವರು.
ದೇವರೇ, ನನ್ನ ರಕ್ಷಣಾಕರ್ತನೇ, ಪ್ರಾಣಹತ್ಯಾಪರಾಧದಿಂದ ನನ್ನನ್ನು ಬಿಡಿಸು;
ಆಗ ನನ್ನ ನಾಲಿಗೆಯು ಉತ್ಸಾಹದಿಂದ ನಿನ್ನ ರಕ್ಷಣೆಯನ್ನು ಕೊಂಡಾಡುವದು;
ಕರ್ತನೇ, ನನ್ನ ಬಾಯಿ ನಿನ್ನನ್ನು ಸ್ತೋತ್ರಮಾಡುವಂತೆ
ನನ್ನ ತುಟಿಗಳನ್ನು ತೆರೆಯುವವನಾಗು.
ನಿನಗೆ ಯಜ್ಞದಲ್ಲಿ ಅಪೇಕ್ಷೆಯಿಲ್ಲ, ಇದ್ದರೆ ಸಮರ್ಪಿಸೇನು;
ಸರ್ವಾಂಗಹೋಮಗಳಲ್ಲಿ ನಿನಗೆ ಸಂತೋಷವಿಲ್ಲ.
ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ;
ದೇವರೇ ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ.
ಚಿಯೋನ್ ಪಟ್ಟಣವನ್ನು ಕಟಾಕ್ಷಿಸಿ ಅದಕ್ಕೆ ಶುಭವನ್ನುಂಟುಮಾಡು,
ಯೆರೂಸಲೇಮಿನ ಪೌಳಿಗೋಡೆಯನ್ನು ತಿರಿಗಿ ಕಟ್ಟಿಸು.
ಜನರು ನ್ಯಾಯವಾದ ಯಜ್ಞಗಳನ್ನು ಸರ್ವಾಂಗಹೋಮಗಳನ್ನೂ ಸಮರ್ಪಿಸಿ ನಿನಗೆ ಸಂತೋಷವನ್ನುಂಟುಮಾಡುವರು.
ನಿನ್ನ ಯಜ್ಞವೇದಿಯ ಮೇಲೆ ಹೋರಿಗಳನ್ನು ಸಮರ್ಪಿಸುವರು"

ಪಾಪವು ದೇವರಿಗೆ ವಿರೋಧವಾದ ದ್ರೋಹವಾಗಿದೆಯೆಂದೂ ದೇವರು ಪಾಪವನ್ನು ಹಗೆಮಾಡುವವನಾದಾಗ್ಯೂ ಪಾಪಿಗೆ ದಯೆ ತೋರಿಸುವ ಪ್ರೀತಿಸ್ವರೂಪನಾದ ತಂದೆಯಾಗಿದ್ದಾನೆಂದೂ ತನ್ನ ಪಾಪಕ್ಕಾಗಿ ಯಥಾರ್ಥವಾಗಿ ಪಶ್ಚಾತ್ತಾಪಪಟ್ಟು ಕ್ಷಮಾಪಣೆಯನ್ನು ಬೇಡುವ ಎಂಥಾ ಪಾಪಿಯನ್ನಾದರೂ ದೇವರು ತಿರಸ್ಕರಿಸುವದಿಲ್ಲವೆಂದೂ ದೇವರು ಹಿಂದಿನ ಅಪರಾಧಗಳನ್ನೆಲ್ಲಾ ಕ್ಷಮಿಸಿ ಬಿಡುವದಲ್ಲದೆ ಮುಂದೆ ಪಾಪರಹಿತನಾಗಿ ಜೀವಿಸುವದಕ್ಕೆ ಆವಶ್ಯಕವಾದ ಮನಶ್ಶುದ್ಧಿಯನ್ನು ದಯಪಾಲಿಸುತ್ತಾನೆಂದೂ ಕ್ರೈಸ್ತಮತವು ಬೋಧಿಸುತ್ತದೆ.

ಜರ್ಮನಿಯವರು ಎಷ್ಟೇ ಆತುರವೇನೇ ಹಡಗುಗಳನ್ನು ಮುಳುಗಿಸುತ್ತಿರುವದನ್ನು ನೋಡಿ ಅಮೇರಿಕದವರಲ್ಲಿ ಕೆಲವರಿಗುಂಟಾಗಿ ಚರ್ಚಾಸಭೆಗಳು ನಡೆಯುತ್ತಿವೆ. ಆದರೆ ಇದರಿಂದ ಫಲವೇನೂ ಆಗುವ ಹಾಗಿಲ್ಲ.

ಕೆಲವು ಜಪ್ಪೆಲಿನ್ ಜರ್ಮನ ವಿಮಾನಯಂತ್ರಗಳು ಎರಡು ವೇಳೆ ಇಂಗ್ಲೆಂಡಿನ ಮೇಲೆ ಹಾರಿ ಬಂದು ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. 33 ಮಂದಿ ಕೊಲೆಯಾದರು; 69 ಮಂದಿ ಗಾಯಪಟ್ಟರು. ಅನ್ನಿಯರು ಸಿಡಿಮದ್ದಿನ ಗುಂಡುಗಳು ಬಿದ್ದು ಒಂದು ದೇವಾಲಯ, ಮೂರು ದಾಸರ ಮನೆಗಳು, ಎರಡು ಕಾಟೇಜ್ ಮನೆಗಳು ಹಾಳಾದವು; ನಾಲ್ಕು ಮಾಳದ ಮನೆಗಳೂ, 35 ಕಾಟೇಜ್ ಮನೆಗಳೂ, ಒಂದು ಟ್ರಾಮ್ ಗಾಡಿಗಳೂ ಸ್ವಲ್ಪಸ್ವಲ್ಪ ನಷ್ಟವುಂಟಾಯಿತು. ಬ್ರಿಟಿಷರು ಒಂದು ಜಪ್ಪೆಲಿನ್ ಯಂತ್ರವನ್ನು ಗುಂಡುಹೊಡೆದು ಉರುಳಿಸಿಕೊಂಡರು. ಅದು ಒಡೆದು ಬಿದ್ದುಹೋಯಿತು. ಅದರೊಳಗಿದ್ದ ಜರ್ಮನಿಯವರನ್ನೆಲ್ಲಾ ಅಂದರೆ ಸುಮಾರು 20 ಮಂದಿಯನ್ನು ಸೆರೆ ಹಿಡಿದಿದ್ದಾರೆ.

ಯುದ್ಧದ ಸಮಾಚಾರಗಳು.

ವೆರ್ಡೂನ್ ಬಳಿ ಇನ್ನೂ ಘೋರಯುದ್ಧವೇ.

ರಷ್ಯಾದವರು ಚುರುಕಾಗಿದ್ದಾರೆ.

ಹವಾ ಸ್ಥಿತಿಯು ಕೆಟ್ಟದ್ದಾಗಿದ್ದರೂ ಪಶ್ಚಿಮ, ಪೂರ್ವ ಮತ್ತು ದಕ್ಷಿಣ ರಣರಂಗಗಳಲ್ಲಿ ಯುದ್ಧಕಾರ್ಯಗಳು ವಿಶೇಷವಾಗಿ ನಡೆದಿರುತ್ತವೆ. ಆ ಪೈಕಿ ಕೆಲವು ಕದನಗಳು ಬಹಳ ಘೋರವಾಗಿದ್ದವೆಂದು ತಿಳಿದುಬಂದಿದೆ. ಜರ್ಮನಿಯವರು ತುರುಕರ ಯುದ್ಧ ಪರಾಕ್ರಮದಿಂದಲೂ, ಮುಂದಕ್ಕೆ ನುಗ್ಗುತ್ತಲೂ ಇದ್ದಾಗ್ಯೂ ಅವರು ವಿಶೇಷವಾಗಿ ನುಗ್ಗಿ ಹೋಗಲು ಅವಕಾಶವಾಗದೆ ಹಲವು ರಾಜ್ಯಗಳಲ್ಲಿ ಇದ್ದ ತಮ್ಮ ಸ್ಥಾನಗಳನ್ನು ಬಿಟ್ಟುಕೊಡಬೇಕಾಯಿತು.

ಪಶ್ಚಿಮ ರಣರಂಗದಲ್ಲಿ.

ಬೆಲ್ಜಿಯಮ್ ಮತ್ತು ಫ್ರಾನ್ಸ್ ರಾಜ್ಯಗಳಲ್ಲಿರುವ ಯುದ್ಧಸಾಲಿನ ಪೈಕಿ ನಾಲ್ಕನೇ ಒಂದು ಪಾಲನ್ನು ಪ್ರದೇಶವನ್ನು ಬ್ರಿಟಿಷ್ ಸೈನ್ಯಗಳು ವಹಿಸಿಕೊಂಡಿರುತ್ತವೆ. ಆಪಾರವಾಗಿ ಫಿರಂಗಿ ಗುಂಡುಗಳ ಮಳೆ ಸುರಿಸಿ ಬಳಿಕ ಬ್ರಿಟಿಷ್ ಸೈನಿಕರು ನುಗ್ಗಿ ಹೋಗಿ ಸುಮಾರು (6) ಗಜಗಳ ಉದ್ದಕ್ಕೂ ಜರ್ಮನಿಯವರ ಮೊದಲನೇ, ಎರಡನೇ ಸಾಲುಗಳ ಕಂದಕಗಳನ್ನು ಸ್ವಾಧೀನಪಡಿಸಿಕೊಂಡರು. ಅಲ್ಲದೆ ಶತ್ರು ಸೈನಿಕರಲ್ಲಿ 5 ಮಂದಿ ಉದ್ಯೋಗಸ್ಥರೂ, 195 ಮಂದಿ ಯುದ್ಧಭಟರೂ ಸೆರೆ ಸಿಕ್ಕಿದರು. ಬಳಿಕ ಜರ್ಮನಿಯವರು ಪದೇ ಪದೇ ನುಗ್ಗಿಬಂದು ಆ ಪ್ರದೇಶವನ್ನು ಗೆದ್ದುಕೊಳ್ಳಬೇಕೆಂದು ಎಷ್ಟು ಸಾಹಸಪಟ್ಟರೂ ಬ್ರಿಟಿಷರು ಅವರಿಗೆ ಅವಕಾಶಕೊಡದೆ ಗೆದ್ದ ರಾಜ್ಯವನ್ನು ಬಹು ವಾಗಿಯೂ ಪರಾಕ್ರಮದಿಂದಲೂ ಉಳಿಸಿಕೊಂಡು ಬಂದಿದ್ದಾರೆ—ಬೆಂಗಳೂರಿನಲ್ಲಿಯೂ ವಿಮಾನಗಳ ಯುದ್ಧ ನಡೆಯಿತು. ಬ್ರಿಟಿಷರ ಒಂದು ಜಲವಿಮಾನಯಂತ್ರ ನಷ್ಟವಾಗಿರುತ್ತದೆ.

ವೆರ್ಡೂನ್ ಸುತ್ತುಮುತ್ತಿನಲ್ಲಿ ಘೋರವಾದ ಕದನಗಳು ನಡೆಯುತ್ತಲಿವೆ. ಅಲ್ಲಿ ಜರ್ಮನಿಯವರೂ ಫ್ರೆಂಚರೂ ಒಬ್ಬರ ಮೇಲೊಬ್ಬರು ನುಗ್ಗಿ ಯುದ್ಧ ಮಾಡಿದರು. ಜರ್ಮನಿಯವರು ಜ್ವಾಲಾದ್ರವ್ಯಗಳನ್ನು ಪ್ರಯೋಗ ಮಾಡಿ ವೆರ್ಡೂನ್ ಪಶ್ಚಿಮಕ್ಕೆ ಹೋಗಿ ಒಂದು ಸಣ್ಣ ಗ್ರಾಮವನ್ನು ಸ್ವಾಧೀನ ಮಾಡಿಕೊಂಡರು. ಆದರೆ ಅವರು ಅಲ್ಲಿಂದ ಮುಂದಕ್ಕೆ ನುಗ್ಗಿ ಹೋಗದಂತೆ ತಡೆಯಲ್ಪಟ್ಟರು. ಆ ಗ್ರಾಮವನ್ನು ಗೆದ್ದುಕೊಳ್ಳುವದಕ್ಕೂ ಜರ್ಮನಿಯವರು ಅನೇಕ ಸೈನ್ಯಗಳನ್ನು ಕಳೆದುಕೊಳ್ಳಬೇಕಾಯಿತು—ಇನ್ನೊಂದು ಜಾಗದಲ್ಲಿ ಫ್ರೆಂಚರು ನುಗ್ಗಿ ಹೋಗಿ ಜರ್ಮನಿಯವರ ಮೇಲೆ ಬಿದ್ದು ಕದನಮಾಡಿ ಒಂದು ಕಾಡಿನಲ್ಲಿ ಸ್ವಲ್ಪ ಭಾಗವನ್ನೂ, ಒಂದು ಕೋಟೆಯನ್ನೂ ಗೆದ್ದುಕೊಂಡದ್ದಲ್ಲದೆ ಹಲವು ಮಂದಿಯನ್ನು ಸೆರೆ ಹಿಡಿದರು. ಫಿರಂಗಿ ಗುಂಡುಗಳು ಅತ್ಯಂತ ರಭಸವಾಗಿ ಹಾರುತ್ತಿದ್ದರೂ, ರಾಜ್ಯಲಕ್ಷ್ಮಿಯರು ನುಗ್ಗಿ ಕದನಗಳನ್ನು ನಡೆಸುತ್ತಿದ್ದರೂ ಉಭಯ ಕಡೆಯವರಿಗೂ ಪ್ರಯೋಜನವಾಗಿ ಇಲ್ಲ.

ಅಂತರಿಕ್ಷದಲ್ಲಿ ಅನೇಕ ವಿಮಾನಯಂತ್ರಗಳ ಯುದ್ಧ ನಡೆಯಿತು. ಫ್ರೆಂಚರು ವೆರ್ಡೂನ್ ಬಳಿ ಜರ್ಮನಿಯವರ ಐದು ವಿಮಾನಯಂತ್ರಗಳನ್ನೂ, ಇತರ ಕಡೆಗಳಲ್ಲಿ ಮೂರು ವಿಮಾನಯಂತ್ರಗಳನ್ನೂ ನಾಶಪಡಿಸಿ ಕೆಳಗೆ ಉರುಳಿಸಿಕೊಂಡಿರುತ್ತಾರೆ.

ವೆರ್ಡೂನ್ ಬಳಿ ನಡೆದ ಯುದ್ಧಗಳಲ್ಲಿ ಜರ್ಮನಿಯವರ ಕಡೆ ಅಪಾರ ನಷ್ಟವಾಗಿರುವುದೆಂದು ತಂತಿವರ್ತಮಾನಗಳು ತಿಳಿಸುವವು. ಒಂದು ತಂತಿವರ್ತಮಾನವು 1,50,000 ಜರ್ಮನ ಸೈನಿಕರು ಮಡಿದರೆಂದು ಹೇಳುತ್ತದೆ; ಇನ್ನೊಂದು ಸೈನ್ಯ ನಷ್ಟವಾಗಿರಲಾರದೆಂದು ತೋರುವುದು. ಫಿರಂಗಿ ಗುಂಡುಗಳ ಭಯಂಕರವಾದ ಸಿಡಿತದ ಆಘಾತದಲ್ಲಿ ಸಿಕ್ಕಿ ಕೆಟ್ಟು ಹುಚ್ಚರಾದ 1,500 ಜರ್ಮನ ಸೈನಿಕರನ್ನು ಯುದ್ಧಭೂಮಿಯಿಂದ ಅವರು ಸಾಗಿಸಿಕೊಂಡು ಹೋದರೆಂದು ಇನ್ನೊಂದು ತಂತಿವರ್ತಮಾನ ಹೇಳುವುದು. ಸೈನಿಕರು ಅನೇಕ ಮಂದಿ ನಷ್ಟಪಟ್ಟ ಕಾರಣ ಜರ್ಮನಿಯವರು 27 ಡಿವಿಷನ್ ಸೈನ್ಯಗಳನ್ನು ಬದಲಾವಣೆ ಮಾಡಿ ಹೊಸಬರನ್ನು ತಂದು ಭರ್ತಿ ಮಾಡಬೇಕಾಯಿತೆಂದೂ, ಎಷ್ಟು ಜನರನ್ನು ಈ ಪ್ರಕಾರ ಬಲಿ ಬಿದ್ದ ಸ್ಥಾನಗಳಿಗೆ ಸೇರಿಸಿಕೊಂಡರೆಂದೂ ತಿಳಿಸಲ್ಪಟ್ಟಿದೆ. ಆದರೂ ಜರ್ಮನಿಯವರು ವೆರ್ಡೂನ್ ಕೋಟೆಯನ್ನು ಗೆದ್ದುಕೊಂಡೇ ತೀರಬೇಕೆಂದು ಸಂಕಲ್ಪ ಮಾಡಿಕೊಂಡಿರುವಂತೆಯೂ, ಜರ್ಮನಿಯವರಿಗೆ ಆ ಕೋಟೆಯನ್ನು ಒಪ್ಪಿಸುವುದೇ ಇಲ್ಲವೆಂದು ಫ್ರೆಂಚರು ನಿರ್ಧಾರ ಮಾಡಿಕೊಂಡಿರುವಂತೆಯೂ ತೋರುವುದು.

ಸಮುದ್ರದ ಮೇಲೆ ಯುದ್ಧ.

ಉತ್ತರ ಕಡಲಿನಲ್ಲಿ ಈಚೆಗೆ ನಡೆದ ಸಮುದ್ರ ಯುದ್ಧದ ವಿಷಯದಲ್ಲಿ ನಾನಾ ವಿವರಗಳು ಪ್ರಕಟವಾಗಿರುತ್ತವೆ. ಬ್ರಿಟಿಷರು ಜರ್ಮನಿಯವರ ವಿಮಾನಯಂತ್ರಗಳಿರುವ ಸ್ಥಾನಗಳನ್ನು ನಾಶಮಾಡಬೇಕೆಂದು ಸಮುದ್ರದ ಮೇಲೆ ತರಗಿನಂತೆಯೂ ಸಂಚರಿಸಬಲ್ಲ ಹಲವು ವಿಮಾನಯಂತ್ರಗಳನ್ನು ಕಳುಹಿಕೊಟ್ಟರು. ಅವುಗಳ ಬೆಂಬಲಕ್ಕಾಗಿ ಕೆಲವು ಬ್ರಿಟಿಷ್ ಯುದ್ಧದ ಹಡಗುಗಳೂ ಹೋದವು. ಸಮುದ್ರದ ಮೇಲೆ ಬಹಳ ಬಲವಾದ ಹಿಮಗಡ್ಡೆಗಳ ಬಿರುಗಾಳಿ ಮಳೆ ಸಂಭವಿಸಿದ್ದರಿಂದ ಸ್ವಲ್ಪ ದೂರದಿಂದಾಚೆಗೆ ಏನೂ ಗೋಚರವಾಗಲಿಲ್ಲ. ಸಮುದ್ರ ವಿಮಾನಯಂತ್ರಗಳು ತಮ್ಮ ಉದ್ದೇಶಿತ ರಾಜ್ಯಗಳ ಮೇಲೆ ಹೋಗಿ ಶತ್ರುವಿನ ಅನೇಕ ಕಟ್ಟಡಗಳನ್ನು ನಾಶಮಾಡಿದವು. ಆದರೆ ಅಷ್ಟರೊಳಗೇ ಜರ್ಮನಿಯವರು ಫಿರಂಗಿಗಳನ್ನು ಎತ್ತಿಕಟ್ಟಿ ಗುಂಡುಗಳನ್ನು ಹೊಡೆದದ್ದರಿಂದ ಆ ಪೈಕಿ ಮೂರು ಸಮುದ್ರ ವಿಮಾನಗಳು ವಾಪಸು ಬರಲಾರದೆ ಹೋದವು. ಜರ್ಮನಿಯವರು ಆ ಸಂದರ್ಭದಲ್ಲಿ ಐದು ಮಂದಿ ಬ್ರಿಟಿಷರನ್ನು ಸೆರೆ ಹಿಡಿದುಕೊಂಡರು.

ಜರ್ಮನಿಯ ಯುದ್ಧದ ಹಡಗುಗಳು ತಮ್ಮ ರೇವು ಸ್ಥಳಗಳಿಂದ ಹೊರಕ್ಕೆ ಬಂದವು. ಸಮುದ್ರದ ಮೇಲೆ ಹಡಗುಗಳ ಯುದ್ಧವಾಯಿತು. ಜರ್ಮನಿಯವರ ಎರಡು ಸಣ್ಣ ಹಡಗುಗಳು ನಾಶವಾದಲ್ಲವು. ಒಂದರಲ್ಲಿ ನಾಲ್ಕು ಮಂದಿಯನ್ನೂ, ಇನ್ನೊಂದರಲ್ಲಿ ಹದಿನೇಳು ಮಂದಿಯನ್ನೂ ಬ್ರಿಟಿಷರು ಸೆರೆಹಿಡಿದು ತಂದರು. ಬ್ರಿಟಿಷ್ ಯುದ್ಧದ ಹಡಗುಗಳು ಜರ್ಮನಿಯ ಟಾರ್ಪಿಡೋ ಹಡಗನ್ನು ತಮ್ಮ ಮಧ್ಯೆ ಸಿಕ್ಕಿಸಿಕೊಂಡು ಒತ್ತಿ ಮುಳುಗಿಸಿ ಅದರೊಳಗಿದ್ದವರನ್ನೆಲ್ಲಾ ನೀರಿನಿಂದೆತ್ತಿ ಬದುಕಿಸಿರುತ್ತವೆ. ಹವೆಯು ಸ್ವಲ್ಪವೂ ಅನುಕೂಲವಾಗಿರಲಿಲ್ಲ. ಆದಾಗ್ಯೂ ಜರ್ಮನಿಯವರಿಗೆ ಬಹಳ ನಷ್ಟವನ್ನುಂಟುಮಾಡಿದರು. ಒಂದು ವಿನಾ ಉಳಿದ ಬ್ರಿಟಿಷ್ ಹಡಗುಗಳೆಲ್ಲಾ ಸುರಕ್ಷಿತವಾಗಿ ಹಿಂತಿರುಗಿ ಬಂದಿರುತ್ತವೆ.

ಪೂರ್ವ ರಣರಂಗದಲ್ಲಿ.

ರಷ್ಯಾದವರೂ ಜರ್ಮನಿಯವರೂ ಪೂರ್ವ ಯುದ್ಧಭೂಮಿಯಲ್ಲಿ ವಿಶೇಷ ಕದನ ಕಾರ್ಯಗಳನ್ನು ನಡಿಸಿದಾರೆ. ಅದರಲ್ಲೆಲ್ಲಾ ಆ ಯುದ್ಧಸಾಲಿನ ಮಧ್ಯ ಪ್ರದೇಶದಲ್ಲಿ ನಡೆದ ಕಾರ್ಯಗಳೇ ಬಹು ವಿಶೇಷವಾಗಿರುತ್ತವೆ. ರಷ್ಯರವರು ಬಹಳ ಹೆಚ್ಚು ಸೈನ್ಯಗಳನ್ನು ತಂದು ನುಗ್ಗುತ್ತಿದ್ದಾರೆಂದು ಜರ್ಮನಿಯವರೇ ಒಪ್ಪಿ ಹೇಳಿರುವರು. ರಷ್ಯಾದವರು ನುಗ್ಗಿ ಜರ್ಮನಿಯವರನ್ನು ಹಿಂದಕ್ಕೆ ಓಡಿಸಿ ಎರಡು ಮೂರು ರಾಜ್ಯಗಳಲ್ಲಿ ಅವರ ಕಂದಕಗಳನ್ನು ಗೆದ್ದುಕೊಂಡಿದ್ದಾರೆ. ಆ ರಣರಂಗದಲ್ಲೂ ಹವಾ ಸ್ಥಿತಿಯು ಕೆಟ್ಟುಹೋಗಿರುವುದು. ಹಿಮಕರಗುವಿಕೆ ಆರಂಭವಾಗಿದೆ. ಇದರಿಂದ ಭೂಮಿಯು ಕೆಟ್ಟುಹೋಗಿ ಫಿರಂಗಿಗಳನ್ನೂ ಸೈನ್ಯಗಳನ್ನೂ ಸಾಗಿಸುವುದು ಬಹಳ ಪ್ರಯಾಸವಾಗಿರುವುದು. ರಷ್ಯಾದವರು ಒಳ್ಳೆ ರಾಜ್ಯಗಳಲ್ಲಿ ನಿಂತು ಸಮಯ ಒದಗಿದಾಗ ಶತ್ರುವಿನ ಮೇಲೆ ನುಗ್ಗಿ ಹೋ

...ಕ್ಕೆ ಅನುಕೂಲವಾಗಿ ಕೊಟ್ಟಿದ್ದಾರೆ. ಒಂದು ರಂಗ್ಯದಲ್ಲಿ ರಷ್ಯಾದವರು [illegible] ಸಮಯದಲ್ಲಿ ಹುಮಾಸಿರು ಆದೆ ಸುರಂಗಗಳನ್ನು ಹಾರಿಸಿ ಬಹಳ ಶತ್ರು[illegible] ಮೇಲೆ ನುಗ್ಗಿ ಹೋದರು. ಈ ಅವಸರವಾದದ್ದರಲ್ಲಿ ಜರ್ಮನಿಯವರು [illegible] ಮುಂಭಾಗದ ಎರಡು ಸಾಲು ಕಂದಕಗಳನ್ನು ರಷ್ಯಾದವರಿಗೆ ಒಪ್ಪಿಸಿ ಬಿಟ್ಟುಬಿಡಬೇಕಾಯಿತು. ಜರ್ಮನಿಯವರು ತಮ್ಮ ರಾಜ್ಯಗಳನ್ನು ಬಹಳ ಪರಿಶ್ರಮದಿಂದ ಕಾಪಾಡಿಕೊಳ್ಳುತ್ತಿದ್ದಾರೆಂದು ರಷ್ಯದವರು ಹೇಳಿ ಒಪ್ಪಿಕೊಂಡಿದ್ದಾರೆ.

ಇಟಲಿ.

ಆಸ್ಟ್ರಿಯಾದವರಿಗೂ ಇಟಲಿಯವರಿಗೂ ಒಂದು ರಾಜ್ಯದಲ್ಲಿ ನಾಲ್ಕು [illegible] ಹೊತ್ತು ಬಹು ಅತ್ಯುಗ್ರವಾದ ಕದನ ನಡೆಯಿತು. ಆಸ್ಟ್ರಿಯಾದವರು [illegible] ಇಟಲಿಯವರ ಮೇಲೆ ಬಿದ್ದು ಕದನಮಾಡಿ ಇಟಲಿಯವರನ್ನು ಕೆಲವು [illegible] ಹಿಂದಕ್ಕೆ ಓಡಿಸಿ 30 ಮಂದಿಯನ್ನು ಕೈಸೆರೆ ಹಿಡಿದುಕೊಂಡರು. [illegible] ಇಟಲಿಯವರು ಅನಂತರ ಆಸ್ಟ್ರಿಯಾದವರ ಮೇಲೆ ನುಗ್ಗಿ [illegible] ಕಡೆಯಲ್ಲಿ ಆಸ್ಟ್ರಿಯಾದವರನ್ನು ಹಿಂದಕ್ಕೆ ಓಡಿಸಿ, ಅವರಲ್ಲಿ 400 ಮಂದಿಯನ್ನು ಕೈಸೆರೆ ಹಿಡಿದು ತಂದರು. ಯುದ್ಧ ಭೂಮಿಯಲ್ಲಿ ಆಸ್ಟ್ರಿಯಾದವರ ನೂರಾರು ಹೆಣಗಳು ಎಗಚೆದಂತೆ ಬಿದ್ದಿದ್ದುವು.

ಇಟಲಿಯವರು ನಾಶಪಡಿಸಲ್ಪಟ್ಟ ಆಸ್ಟ್ರಿಯಾದವರ ಮೂರು ವಿಮಾನ ಯಂತ್ರಗಳನ್ನು ಹೊಡೆದು ಕೆಳಕ್ಕೆ ಇಳಿಸಿಕೊಂಡರು. ಒಬ್ಬ ಹುದ್ದೆದಾರನನ್ನೂ [illegible] ಐದು ಮಂದಿಯನ್ನು ಕೈಸೆರೆ ಹಿಡಿದುಕೊಂಡರು. ಆಸ್ಟ್ರಿಯಾದವರು ವೆನ್ನಿಸ್ ಎಂಬ ಪಟ್ಟಣದ ಮೇಲೆ ಹೋಗಬೇಕೆಂದು ಪ್ರಯತ್ನಪಟ್ಟರು. [illegible] ಇಟಲಿಯವರು ಆ ವಿಮಾನ ಯಂತ್ರಗಳನ್ನು ಓಡಿಸುತ್ತಾರೆ. ಈ ಸಂದರ್ಭದಲ್ಲಿ ಆಸ್ಟ್ರಿಯಾದವರು 17 ವಿಮಾನ ಯಂತ್ರಗಳನ್ನೂ 13 ಸಮುದ್ರ ವಿಮಾನಗಳನ್ನೂ ತೆಗೆದುಕೊಂಡು ಬಂದಿದ್ದರು. ಆ ಪೈಕಿ ನಾಲ್ಕು ನಾಶವಾದುವು; [illegible] ಮಂದಿ ಇಟಲಿಯವರಿಗೆ ಕೈಸೆರೆ ಸಿಕ್ಕಿದ್ದರು. ಕೆಲವು ವಿಮಾನ ವೆನ್ನಿಸ್ ಪಟ್ಟಣದ ಮೇಲೆ ಹೋಗಿ ಸಿಡಿಮದ್ದಿನ ಗುಂಡುಗಳನ್ನು ಹಾಕಿದುವು [illegible] ಆರು ಮಂದಿ ಸಭ್ಯ ಪ್ರಜೆಗಳು ಗಾಯಪಟ್ಟರು.

ಟರ್ಕಿಯಲ್ಲಿ.

ರಷ್ಯಾದವರು ಟ್ರೆಬಿಜಾಂಡ್ ಪಟ್ಟಣದ ಕಡೆ ನುಗ್ಗಿ ಹೋಗುತ್ತಿದ್ದಾರೆ. ಟರ್ಕಿಯವರು ಅವರನ್ನು ಅಡ್ಡಹಾಕುತ್ತಿರುವಂತೆ ಕಾಣುತ್ತದೆ. ಒಂದು ಕಡೆ [illegible] ರಷ್ಯಾದವರನ್ನು ತಡೆಯಲು ಯುದ್ಧ ನಡೆಯಿತು. ಆದರೆ ಅವರು ಸಂಪೂರ್ಣ [illegible] ಹಿಂದಕ್ಕೆ ಹೋಗಬೇಕಾಯಿತು. ರಷ್ಯಾದವರು ಟ್ರೆಬಿಜಾಂಡ್ ಪೂರ್ವಕ್ಕೆ 30 ಮೈಲಿ ದೂರದಲ್ಲಿರುವ ಒಂದು ಪಟ್ಟಣವನ್ನು ಗೆದ್ದುಕೊಂಡರು. ಕಾಕಸಸ್ ಪರ್ವತ ಪ್ರಾಂತ್ಯದಲ್ಲಿ ರಷ್ಯಾದವರು ಜರ್ಮನ ಹುದ್ದೆದಾರರ ಕೈಕೆಳಗಿದ್ದ 400 ಮಂದಿ ಟರ್ಕಿ ಸೈನಿಕರನ್ನು ಕೈಸೆರೆ ಹಿಡಿದರು. ಆ [illegible] ಗಲ್ಲಿಪೋಲಿಯಲ್ಲಿ ಯುದ್ಧಕ್ಕೆ ಬಂದಿದ್ದನು. ರಷ್ಯಾದವರು [illegible] ಭಾಗದಲ್ಲಿ ಬಾಗ್ದಾದು ನಗರದ ಕಡೆ ನುಗ್ಗಿ ಹೋಗುತ್ತಿದ್ದಾರೆ.

ಬ್ರಿಟಿಷ್ ಯುದ್ಧದ ಜಹಜುಗಳು [illegible] ಗುಂಡುಗಳನ್ನು ಸುರಿಸಿ ಸ್ಮರ್ನಾ ಪಟ್ಟಣದ [illegible] ಕೋಟೆಯನ್ನು ಒಡೆದು ಹಾಳುಮಾಡಿದರೆಂದು ತಿಳಿದುಬಂದಿದೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಗ್ರೀಸಿನ ಎಲ್ಲೆಕಟ್ಟಿನಲ್ಲಿ ಗ್ರೀಕರಿಗೂ ಬಲ್ಗೇರಿಯಾದವರಿಗೂ [illegible] ಕದನವು. ಜರ್ಮನಿಯವರು ಹೋಗಿ ಗ್ರೀಸಿಗೆ ಸೇರಿದ ಒಂದು ಗ್ರಾಮವನ್ನು ಆಕ್ರಮಿಸಿಕೊಂಡು ಅಲ್ಲಿ ತಮ್ಮ ಸೈನ್ಯಗಳನ್ನಿಟ್ಟರು. ಆಗ ಫ್ರೆಂಚರು ನುಗ್ಗಿ ಹೋಗಿ ಅವರನ್ನು ಆ ಗ್ರಾಮದಿಂದ ಹೊರಡಿಸಿದರು. ಆ ಎಲ್ಲೆಕಟ್ಟಿನ ಪ್ರದೇಶಗಳಲ್ಲಿ ಫಿರಂಗಿಗುಂಡುಗಳ ಹಾರಾಟವೂ ವಿಮಾನ ಯಂತ್ರಗಳ ಕದನವೂ ನಡೆಯುತ್ತಲಿದೆ. ಈ ಕಾರ್ಯಗಳಲ್ಲಿ ವಿಶೇಷ [illegible] ಜರ್ಮನಿಯವರು ಸಲೋನಿಕಾ ಪಟ್ಟಣಕ್ಕೆ ಗುಂಡುಗಳನ್ನು ಹಾಕಬೇಕೆಂದು ಹಲವು ವೇಳೆ ತಮ್ಮ ವಿಮಾನಯಂತ್ರಗಳನ್ನು ಕಳುಹಿಸಿದರು. ಜರ್ಮನಿಯ ಆ ವಿಮಾನಯಂತ್ರಗಳು ಸಿಡಿಮದ್ದಿನ ಗುಂಡುಗಳನ್ನು [illegible]. ಸಭ್ಯಪ್ರಜೆಗಳಲ್ಲಿ ಗ್ರೀಕರೇ ವಿಶೇಷ 20 ಮಂದಿ ಕೊಲೆಯಾದರು. ಬಲ್ಗೇರಿಯಾದೊಳಗೆ ಮದ್ದುಗುಂಡು ಭರ್ತಿಯಾಗಿದ್ದ ಒಂದು ಉಗ್ರಾಣದ [illegible] ಬೆಂಕಿ ಹುಟ್ಟಿ ಮಹಾ ಶಬ್ದದೊಡನೆ ಹಾರಿ ಎಲ್ಲಾ ನಾಶವಾಯಿತು. [illegible] ಮಂದಿ ಮೃತಪಟ್ಟರೆಂದೂ, 150 ಜನಗಳು ಗಾಯಪಟ್ಟರೆಂದೂ ಪ್ರಕಟವಾಗಿದೆ.

ಈಜಿಪ್ಟಿನಲ್ಲಿ.

ಬ್ರಿಟಿಷರ ಕೆಲವು ವಿಮಾನಯಂತ್ರಗಳು ಆಕಾಶದಲ್ಲಿ ಹೋಗಿ ಸೂಯೆಸ್ ಕಾಲುವೆಯ ಪೂರ್ವ ದಿಕ್ಕಿನಲ್ಲಿ ಸುಮಾರು 100 ಮೈಲಿ ದೂರದಲ್ಲಿದ್ದ [illegible] ಸೈನ್ಯದ ಠಾಣ್ಯಕ್ಕೆ ಮುತ್ತಿಗೆಹಾಕಿಕೊಂಡು ಸಿಡಿಮದ್ದಿನ ಗುಂಡುಗಳನ್ನು [illegible]. ಅವರ ಠಾಣ್ಯವು ನಾಶವಾಯಿತು; ಅವರು ನೀರು ಒದಗಿಸಿಕೊಳ್ಳುವುದಕ್ಕೆ ಮಾಡಿಕೊಂಡಿದ್ದ ಜಲಾಶಯವು ಹಾಳಾಯಿತು; ಮತ್ತು ಆ ಠಾಣ್ಯದಲ್ಲಿದ್ದ ಸೈನಿಕರೆಲ್ಲಾ ಗಾಬರಿಯುಳ್ಳವರಾಗಿ ಚೆಲ್ಲಾಪಿಲ್ಲಿಯಾದರು.

ಬ್ರಿಟಿಷ್ ಯುವರಾಜರಾದ ನಮ್ಮ ಪ್ರಿನ್ಸ್ ಆಫ್ ವೇಲ್ಸ್ ರವರು ಈಗ ಈಜಿಪ್ಟಿನಲ್ಲಿದ್ದುಕೊಂಡು, ಅಲ್ಲಿರುವ ನಮ್ಮ ಅನೇಕ ಸೈನ್ಯಗಳನ್ನೂ ಆಸ್ಟ್ರೇಲಿಯಾ ಸೈನ್ಯಗಳನ್ನೂ ತನಿಖೆ ಮಾಡಿದರು.

ಅರಬ್ಬಿಯವರು ಕೈಸೆರೆ ಹಿಡಿದಿಟ್ಟುಕೊಂಡಿದ್ದ ಬ್ರಿಟಿಷ್ ಸೈನಿಕರನ್ನೆಲ್ಲಾ [illegible]ದಿಂದ ಬಿಡುಗಡೆ ಮಾಡಿದ್ದಾಯಿತು.

ಇತರ ವಿಷಯಗಳು.

ಫ್ರಾನ್ಸಿನ ರಾಜಧಾನಿಯಾದ ಪಾರಿಸ್ ನಗರದಲ್ಲಿ ಒಂದು ವಿಶೇಷವಾದ ಕಾನ್ಫರೆನ್ಸು ನಡೆಯಿತು. ಮಿತ್ರಮಂಡಲಿಯ ರಾಜ್ಯಗಳ ಪ್ರತಿನಿಧಿಗಳೆಲ್ಲಾ ಅದರಲ್ಲಿ ಹಾಜರಾಗಿದ್ದು ಜರ್ಮನಿಯವರ ಮೇಲೆ ಸಂಪೂರ್ಣವಾದ ಜಯವನ್ನು ಪಡೆಯುವ ತನಕ ಎಲ್ಲರೂ ಐಕ್ಯಭಾವಿಸಿ ಯುದ್ಧಕಾರ್ಯಗಳನ್ನು ನಡೆಸಬೇಕೆಂದು ನಿರ್ಧಾರ ಮಾಡಿಕೊಂಡರು. ಅವರು ಮುಂದಿನ ನಡವಳಿಕೆಗಳನ್ನು [illegible] ಸಮಯ ಒದಗಿದಾಗ ಆ ರೀತಿ ನಡೆಯಬೇಕೆಂದು ಅಭಿಪ್ರಾಯಪಟ್ಟರು. ಇದಲ್ಲದೆ ಯುದ್ಧವನ್ನು ನಡೆಸುವುದಕ್ಕೆ ಅವಶ್ಯವಾದ ಹಣವನ್ನು [illegible] ವಿಚಾರವನ್ನೂ ಅವರು ವ್ಯವಸ್ಥೆ ಮಾಡಿಕೊಂಡರು. ಯುದ್ಧದ [illegible] ಅಧಿಕವಾಗಿರುತ್ತದೆ. ಆದಾಗ್ಯೂ ಬೇಕಾಗುವಷ್ಟು ದ್ರವ್ಯವನ್ನು [illegible] ಮಿತ್ರಮಂಡಲಿಯವರು ಒಪ್ಪಿಕೊಂಡಿದ್ದಾರೆ. ಈ ಕಾನ್ಫರೆನ್ಸಿನಿಂದ ಬಹಳ ಪ್ರಯೋಜನವಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಜರ್ಮನಿಯ ಸಬ್‌ಮೆರೀನುಗಳು ಕಳೆದ ವಾರ ಬಹಳ ಚಟುವಟಿಕೆಯನ್ನು [illegible]. ಅವುಗಳಿಂದ ಸುಮಾರಾಗಿ ಹದಿನಾಲ್ಕು ಹಡಗುಗಳು ಮುಳುಗಿಸಲ್ಪಟ್ಟವು. ಈ ಪೈಕಿ ಬ್ರಿಟಿಷರ ಹಡಗುಗಳೇ ಹೆಚ್ಚು. ಹಲವು ಹಡಗುಗಳಲ್ಲಿದ್ದ [illegible] ಜನರು ಬದುಕಿಕೊಂಡರು.

ಹಿಂದೂಸ್ಥಾನದ ಅಂಚೆ ಟಪ್ಪಾಲುಗಳನ್ನು ಸಾಗಿಸುತ್ತಿದ್ದ ಸಸ್ಸೆಕ್ಸ್ ಎಂಬ [illegible] ಇಂಗ್ಲೆಂಡಿನಿಂದ ಫ್ರಾನ್ಸಿಗೆ [illegible] ಮುಳುಗಿ ಹೋಯಿತು. ಅದು ಮುಳುಗಿದ ವಿಷಯದಲ್ಲಿ ಸರಿಯಾದ ವರ್ತಮಾನವೇನೋ ತಿಳಿಯಲಿಲ್ಲ. ಅದರೊಳಗೆ ಅನೇಕರು ಮುಳುಗಿ ಹೋದರೆಂದು ಒಂದು ವರ್ತಮಾನ[illegible] ಕೆಲವರು ಮಾತ್ರ ಪ್ರಾಣ ಉಳಿಸಿಕೊಂಡರೆಂದು ಇನ್ನೊಂದು ಸುದ್ದಿಯಿಂದ ತಿಳಿದಿದೆ. ಆ ಹಡಗಿನಿಂದ 800 ಅಂಚೆ ಟಪ್ಪಾಲುಗಳನ್ನು ತೆಗೆದು ಮುಂದಕ್ಕೆ [illegible], 1,000 ಟಪ್ಪಾಲುಗಳ ವರೆಗೂ ಸಮುದ್ರದ ಪಾಲಾದವೆಂದೂ ತಿಳಿದಿದೆ.

ಇಂಗ್ಲೆಂಡಿನಲ್ಲಿ ಹಿಮಗಡ್ಡೆಗಳ ಅಪೂರ್ವವಾದ ಮಳೆ ಸುರಿಯಿತು. ಅದರಿಂದ ಅನೇಕ ಕಷ್ಟನಷ್ಟಗಳು ಸಂಭವಿಸುತ್ತವೆ. ಕೆಲವು ಭಾಗಗಳಲ್ಲಿ ಹಿಮಗಡ್ಡೆಗಳು ಭೂಮಿಯ ಮೇಲೆ ಹತ್ತು ಅಂಗುಲ ಪ್ರಮಾಣಕ್ಕೆ ಬಿದ್ದಿದ್ದುವು.

ಸೆರ್ಬಿಯಾ ಯುವರಾಜರು ಲಂಡನ್ ಪಟ್ಟಣಕ್ಕೆ ಹೋದರು. ಅಲ್ಲಿ ಅವರಿಗೆ ಅನೇಕ ವಿಜಯೋತ್ಸವಗಳು ನಡೆದು ಪ್ರಜೆಗಳು ಅವರನ್ನು ಅತ್ಯಂತ ಉತ್ಸಾಹದಿಂದ ಸತ್ಕರಿಸಿದರು.

ಒಳದೇಶದ ವೃತ್ತಾಂತಗಳು.

[illegible] ಸುತ್ತ ಮುತ್ತಿನಲ್ಲಿ ಒಂದು ಚಿರತೆಯು ಸೇರಿಕೊಂಡು ಅನೇಕರ [illegible]ಗಳನ್ನೂ ಮೇಕೆಗಳನ್ನೂ ಹಿಡಿಯುತ್ತಿದೆ ಎಂದು ಪ್ರಕಟವಾಗಿದೆ.

ಅಮಲ್ದಾರ್ ಮ|| ಎಸ್. ವೆಂಕಟರಮಣಶಾಸ್ತ್ರಿಯವರು ಕಳೆದ ಕೆಲವಾರ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದು ಗುಣವಾಗದೆ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

ತುಮಕೂರು ಡಿಸ್ಟ್ರಿಕ್ಟು ಬೋರ್ಡಿನವರು ತಮ್ಮ ಬೋರ್ಡಿನ ವೈಸ್ ಪ್ರೆಸಿಡೆಂಟ್ ಕೆಲಸಕ್ಕೆ ತಮಗೆ ಬೇಕಾದವರನ್ನು ತಮ್ಮಿಂದಲೇ ಚುನಾಯಿಸಿಕೊಳ್ಳುವ ಅಧಿಕಾರ ಪಡೆಯಬೇಕೆಂದು ಸರ್ಕಾರದವರನ್ನು ಕೇಳಿಕೊಂಡಿದ್ದಾರೆ.

ಶ್ರೀಮನ್ ಮಹಾರಾಜರವರು ಪರಿವಾರ ಸಮೇತ ಮುಂದಿನ ಮಂಗಳವಾರ ರಾಜಧಾನಿಯಿಂದ ನೀಲಗಿರಿಗೆ ದಯಮಾಡಿಸುವರು. [illegible] ಬ್ರಿಟಿಷ್ ರೆಸಿಡೆಂಟು [illegible].

ನಾಳೆ ಮಧ್ಯಾಹ್ನ ರಾಜಧಾನಿಯ ತಾಲ್ಲೂಕ್ ಕಛೇರಿ ಕಟ್ಟಡದಲ್ಲಿ ಮೈಸೂರು ತಾಲ್ಲೂಕು ಗ್ರಾಮಾಭಿವೃದ್ಧಿ ಸಂಘದ ವಾರ್ಷಿಕ ಕೂಟವು ಡೆಪ್ಯುಟಿ ಕಮಿಷನರ್ ಮ|| ಎ. ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ಜರುಗುವುದು.

ಪೋಸ್ಟಲ್ ಅಧಿಕಾರಿಯಾದ ಮಿ|| [illegible] ರವರು ಕಳೆದ ಬುಧವಾರ [illegible]ಯಿಂದ [illegible]ಕ್ಕೆ ಪ್ರಯಾಣ ಮಾಡುತ್ತಾ ದಾರಿಯಲ್ಲಿ ಒಂದು ಚಿರತೆಯನ್ನು [illegible] ಗ್ರಾಮಸ್ಥರನ್ನು ಬಹಳವಾಗಿ ಸಂತೋಷಪಡಿಸಿದರು.

ಮೊನ್ನೆ ಸೋಮವಾರ ಸಾಯಂಕಾಲ ನಮ್ಮ ದಿವಾನರವರು ಬ್ರಿಟಿಷ್ ರೆಸಿಡೆಂಟರಿಗೂ ಅವರ ಪತ್ನಿಯವರಿಗೂ ತಮ್ಮ ಬಂಗಲೆಯಲ್ಲಿ ದಿವ್ಯವಾದ ಭೋಜನವನ್ನು ಮಾಡಿಸಿದರು. ಆ ಸಮಯದಲ್ಲಿ ಬೆಂಗಳೂರು ಮತ್ತು ದಂಡಿನ ದೊಡ್ಡ ದೊಡ್ಡ ಅಧಿಕಾರಿಗಳೂ ಕರೆಸಲ್ಪಟ್ಟಿದ್ದರು.

ಮ|| ಎಂ. ಪಿ. ಸುಬ್ರಹ್ಮಣ್ಯರ [illegible], ಜನರಲ್ ಏಜನ್ಸಿಯ ಮ|| ರಾಮಚಂದ್ರರಾಯರೂ, ಮ|| ಎಸ್. ಕೃಷ್ಣರಾವ್ ಬ್ರದರ್ಸ್‌ಯವರೂ ನೂತನ ಸಂವತ್ಸರದ ಯುಗಾದಿ ಹಬ್ಬದ ನಿಮಿತ್ತವಾಗಿ ಪಂಚಾಂಗಗಳನ್ನು ನಮಗೆ ಕಳುಹಿಸಿದ್ದಾರೆ. ಅವರ್ಕಾಗಿ ವಂದನೆಗಳನ್ನು ಸಮರ್ಪಿಸುತ್ತೇವೆ.

ಒಬ್ಬ ವರ್ತಮಾನದಾರರಿಂದ—ಬೆಂಗಳೂರು ಮಹಿಳಾ ಸೇವಾ ಸಮಾಜದಲ್ಲಿ ಹೆಂಗಸರಿಗೆ ಚಿತ್ರದ ಕೈಗಾರಿಕೆಯನ್ನು ವಿಶೇಷವಾಗಿ ಕಲಿಸುವುದಕ್ಕೆ ಏರ್ಪಾಟು ಮಾಡಿದೆ. ಇದಕ್ಕೆ ಸೋಮವಾರ, ಬುಧವಾರ, ಶುಕ್ರವಾರ ಮಧ್ಯಾಹ್ನ 2 ರಿಂದ 5½ ಘಂಟೆ ತನಕ ಕಲಿಸುತ್ತಾರೆ. ಯಾವ ಜಾತಿಯವರಾದರೂ ಸೇರಬಹುದು.

ಮನೆಗಳಲ್ಲಿರುವ ಹೆಂಗಸರಿಗೆ ವಿದ್ಯೆ, ಶಿಲ್ಪ, ಗೃಹಕಾರ್ಯ ವೊದಲಾದ ವಿಷಯಗಳನ್ನು ಕಲಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಸರ್ಕಾರದವರು 10,000 ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ವಿದ್ಯಾಭ್ಯಾಸದ ಡಿಸ್ಟ್ರಿಕ್ಟ್ ಕಮಿಟಿಯವರು ಸರ್ಕಾರದ ಈ ಉದ್ದೇಶವನ್ನು ಕಾರ್ಯಗತಕ್ಕೆ ತರಬೇಕಾಗಿದೆ.

ಡಾಕ್ಟರ್ ಎಸ್. ಜಿ. [illegible] ಯವರಿಗೆ ಹಾಸನದ ಪ್ರಜೆಗಳು ಕಳೆದ ವಾರ ದಿವ್ಯವಾದ ಬೀಳ್ಕೊಡುಗೆಯನ್ನು ಮಾಡಿ ಅವರ ಗುಣಾತಿಶಯಗಳನ್ನು ಕೊಂಡಾಡಿ ಒಂದು ಬಂಗಾರದ ಗಡಿಯಾರವನ್ನು ಒಪ್ಪಿಸಿ ಸಾಗ ಕಳುಹಿಸಿದರು. ಅವರಿಗೆ ಹಾಸನದಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗವಾಗಿರುವುದು.

ಸಣ್ಣ ಮಕ್ಕಳು ಓದಿಕೊಳ್ಳುವಂಥಾ ವಾಚನಪುಸ್ತಕವನ್ನು ಕನ್ನಡದಲ್ಲಿ ರಚಿಸಿ ಪ್ರಚುರಮಾಡಬೇಕೆಂದು ಮೈಸೂರು ಸರ್ಕಾರದವರು ಯೋಚಿಸಿದ್ದರಷ್ಟೆ. ವಿದ್ಯಾಸಂಘದವರು ಅದನ್ನು ಸರ್ಕಾರಿಯಾಗಿ ನಡಿಸುವುದು ಸರಿಯಲ್ಲವೆಂದೂ, ಇನ್ನು ಕೆಲವು ಕಾಲದವರೆಗೆ ಈ ವಿಚಾರವನ್ನು [illegible] ಮಾಡಬೇಕೆಂದೂ ತೀರ್ಮಾನ ಮಾಡಿದ್ದಾರೆ.

ರಾಜಧಾನಿಯ ಚಾಮರಾಜ ಛತ್ರದಲ್ಲಿದ್ದ ವೇ|| ಕನಕಭಟ್ಟರು ಕಳೆದ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಹಿಂದೆ ಶೃಂಗೇರಿ ಮಠದ ಅಧಿಕಾರಿಗಳಾಗಿದ್ದು ರಾಜಧಾನಿಯಲ್ಲಿ ಪ್ಲೇಗಿನ ಹಾವಳಿ ಭಯಂಕರವಾಗಿದ್ದಾಗ ದಾ|| ಅಪ್ಪಾಜಿರಾಯರ ಕೂಡ ಬಹಳ ಸಾಹಸಪಟ್ಟು ಶುಶ್ರೂಷೆ ಕಾರ್ಯಗಳನ್ನು ನಡಿಸಿ ಸತ್ತವರ ಶವಗಳನ್ನು ಸಾಗಿಸಿ ದಹನಾದಿಗಳನ್ನು ಮಾಡಿಸುವುದರಲ್ಲಿ ತುಂಬಾ ಯಶಸ್ಸನ್ನು ಸಂಪಾದಿಸಿಕೊಂಡಿದ್ದರು.

ಹೆಡ್ ಮಾಸ್ಟರ್ ಮ|| ಎನ್. ಕೃಷ್ಣರಾಯರು ಬರೆಯುವುದು—ದಳವಾಯಿ ಸ್ಕೂಲ್ ಕಟ್ಟಡದ ಸಹಾಯಕ್ಕಾಗಿ ಪ್ರೊಫೆಸರ್ ರಾಮಮೂರ್ತಿಯವರು ಈ 3 ರಲ್ಲಿ ಆಡಿ, ಒಟ್ಟು ಉತ್ಪತ್ತಿ ರೂ. 114-11-0 ಪೈಕಿ ಅವರ ಖರ್ಚು ಹೋಗಿ ಉಳಿದಿದ್ದಲ್ಲಿ ಅರ್ಧ ರೂ. 27-8-0 ನ್ನು ಸ್ಕೂಲಿಗೆ ಧನಸಹಾಯವಾಗಿ ಕೊಟ್ಟಿರುತ್ತಾರೆ. [illegible] ಅವರ ಸಹಾಯಕ್ಕಾಗಿ ಅವರನ್ನು ವಂದಿಸುತ್ತೇವೆ.

ಚಕ್ಕಳ, ತೊಗಲುಗಳ ವ್ಯಾಪಾರ ವಿಶೇಷವಾಗಿ ನಡೆಯೋದರಿಂದ ಅವುಗಳ ಮೇಲೆ ಸುಂಕ ಅಥವಾ ತೆರಿಗೆ ಹಾಕಿ ವಸೂಲ್ಮಾಡುವ ಹಕ್ಕನ್ನು ಐದು ವರುಷ ಕಾಲ ತನಗೆ ಕೊಟ್ಟರೆ ವರ್ಷ 25,000 ರೂಪಾಯಿ ಕೊಡುತ್ತೇನೆಂದು ಮ|| ಮಾಣಿಕ್ಯವೇಲು ಮುದಲಿಯಾರ್ರು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಬರೆದುಕೊಂಡಿದ್ದರು. ಅದರ ಮೇಲೆ ಡಿಸ್ಟ್ರಿಕ್ಟ್ ಬೋರ್ಡಿನವರು ಚಕ್ಕಳದ ವ್ಯಾಪಾರಗಳಿಂದ ಆದಾಯದ ಮೇಲೆ ತೆರಿಗೆಯನ್ನೋ, ಅಲ್ಲವೇ ಚಕ್ಕಳಕ್ಕೆ [illegible] ತೆರಿಗೆಯನ್ನೋ ಹಾಕಿ ವಸೂಲ್ಮಾಡುವುದಕ್ಕೆ ಅಧಿಕಾರ ಕೊಡಬೇಕೆಂದು ಗವರ್ನ್‌ಮೆಂಟಿಗೆ ಶಿಫಾರಸುಮಾಡಿದ್ದಾರೆ.

ಕಳೆದ 26 ನೇ ಭಾನುವಾರ ರಾಜಧಾನಿಯ [illegible] ಸಂಘದವರು ಆ ಸಂಘದ ವಾರ್ಷಿಕ ಕೂಟವನ್ನು ಬಹಳ ಸಂಭ್ರಮ ಯುಕ್ತವಾಗಿ ನಡಿಸಿದರು. ಮ|| ಎ. ಕೃಷ್ಣರಾಯರೂ ಮ|| ಎಂ. ಎಸ್. ರಾಮರಾಯರೂ [illegible] ಸಾಲಿಗೆ ಸೆಕ್ರೆಟರಿಗಳಾಗಿ ಚುನಾಯಿಸಲ್ಪಟ್ಟರು. ಮಧ್ಯಾಹ್ನ ಜಡ್ಜಿಗಳೇ ವೊದಲಾದವರನ್ನು ಕರಸಿಕೊಂಡು ಸವಿಯಾದ ಫಲಾಹಾರಗಳಿಂದ ಸಂತೋಷ ಪಡಿಸಿದರು. [illegible] ಮ|| [illegible]ನವರ ಮನೋಹರವಾದ ವೀಣಾಗಾನವು ಆದ ಬಳಿಕ ಮ|| ಬಿ. ರಾಮಣ್ಣನವರು ಡೆಪ್ಯುಟಿ ಕಮಿಷನರು ಮ|| ಎ. ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಓದಿ ಸರ್ಕಾರದವರು ಪ್ರಜೆಗಳ ಆಚಾರ ವ್ಯವಹಾರಗಳನ್ನು [illegible] ಶಾಸನದ ನಿರ್ಬಂಧಗಳನ್ನು ಕಲ್ಪಿಸಿದಾಗ್ಯೂ ಫಲಕಾರಿಗಳಾಗುವುದಿಲ್ಲವೆಂದು ದೃಷ್ಟಾಂತ ಪಡಿಸಿದರು.

ಮ|| ಎಚ್. ಬಿ. ಸಂಜೀವಯ್ಯನವರಿಗೆ ಈ ತಿಂಗಳ ಪ್ರಾರಂಭದಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲಾಗಿದೆ. ಬಳಿಕ ಅವರು ಕೆಲಸದಿಂದ ನಿವೃತ್ತರಾಗುತ್ತಾರೆ. ಇವರು ಬಹಳ ಸಣ್ಣ ಕೆಲಸದಿಂದ ಈ ಸಂಸ್ಥಾನದಲ್ಲಿ ಅತ್ಯಂತ ಶ್ರೇಷ್ಠವಾದ ಪದವಿಗೆ ಏರಿದವರು. ಕೆಲವು ವೇಳೆ ದಿವಾನ್‌ಗಿರಿಯ ಭಾರವನ್ನೂ ವಹಿಸಿದ್ದರು. ಅವರ ವಿದ್ಯೆ, ಸದ್ಗುಣ ಸಚ್ಛೀಲಗಳೂ, ಕಾರ್ಯನಿರ್ವಾಹಕಶಕ್ತಿಯೂ, ಅಪ್ರತಿಮ [illegible], ಸ್ವದೇಶಾಭಿಮಾನವೂ, ಧೈರ್ಯಸ್ಥೈರ್ಯ ವೊದಲಾದ ಸದ್ಗುಣಗಳೂ ನಮ್ಮ ಮಹಾರಾಜರವರ, ಇಂಡಿಯಾ ಗವರ್ನ್‌ಮೆಂಟಿನವರ ಪ್ರೀತಿಯನ್ನು ಸಂಪಾದಿಸಿಕೊಟ್ಟವು. ಇವರು ಕೆಲಸದಿಂದ ನಿವೃತ್ತರಾದ ಬಳಿಕ ಮೈಸೂರು ಯೂನಿವರ್ಸಿಟಿಯ ವೈಸ್ ಛಾನ್ಸಲರಾಗಿ ನೇಮಕವಾಗಿರುವುದರಿಂದ ಅವರ ಸಾಮರ್ಥ್ಯವೂ ಅನುಭವವೂ ಈ ಸಂಸ್ಥಾನಕ್ಕೆ ಇನ್ನೂ ವಿಶೇಷ ಪ್ರಯೋಜನಕಾರಿಗಳಾಗುವಂತೆ ಪರಿಣಮಿಸಲೆಂದು ಹಾರೈಸುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಮ|| ಜಿ. [illegible] ಅಯ್ಯಂಗಾರ್ರನ್ನು ಮುಜರಾಯಿ ಸೂಪರಿಂಟೆಂಡೆಂಟ್ ಕೆಲಸದಲ್ಲಿ ಖಾಯಂ ಮಾಡಿದೆ.

ಕಾನಕಾನಹಳ್ಳಿ ತಾಲ್ಲೂಕ್ ಅಮಲ್ದಾರ್ ಮ|| ಸಿ. ಬಿ. ರಾಮರಾಯರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ.

ಮೈಸೂರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನ [illegible] ರ್ಯಾಂಕಿನಲ್ಲಿ ಮುಂದೆ ಹೇಳುವ ಬಡ್ತಿಗಳು ಹುಕುಂ ಆಗಿರುತ್ತವೆ— ಕ್ವಾರ್ಟರ್‌ಮಾಸ್ಟರು ಕಾಮೆಂಡಾಂಟರಾಗಿ; ಎ. ಟಿ. [illegible]ರಾಜರು ಮತ್ತು [illegible] ಕ್ವಾರ್ಟರ್‌ಮಾಸ್ಟರ್‌ರಾಗಿ; ಮಹಮದ್ ಅಜಂಬಾರ್ರು, ಗುಲಾಂಮುರ್ತುಜಾಬೇಗರು, ವೆಂಕಟರಾಮರು ಮತ್ತು [illegible] ಸುಬೇದಾರರಾಗಿ; ಆರ್. ಹಿರೇಸಿಂಗರು, ಮಹಮದ್ ಅಬ್ದುಲ್ಲಾ [illegible], ಹನುಮಂತರಾಯರು, ಟಿ. ವಿ. ಮಹಾದೇವರಾಜರು ಮತ್ತು [illegible] ಜಮೇದಾರರಾಗಿ.

ಮುಂದೆ ಹೇಳುವ ಪ್ರೊಬೇಷನರ್ ಅ|| ಕಮಿಷನರುಗಳನ್ನು [illegible] ಡೆಪ್ಯುಟಿ ಕಮಿಷನರುಗಳಲ್ಲಿ ಕೆಲಸ ಕಲಿಯಲು ನೇಮಕ ಮಾಡಿದೆ— ಮ|| ಗಳಾದ ಎಂ. ಶೇಷಾದ್ರಿಯವರು ಶಿವಮೊಗ್ಗೆಗೆ, ಪಿ. ಎಚ್. ಕೃಷ್ಣರಾಯರು ತುಮಕೂರಿಗೆ, ಎನ್. ಸುಂದರರಾಜಯ್ಯಂಗಾರ್ರು ಬೆಂಗಳೂರಿಗೆ, ಎಂ. ಚನ್ನರಾಜೆ ಅರಸಿನವರು ಮೈಸೂರಿಗೆ.

ಅ|| ಸರ್ಜನ್ ಮ|| ಎಸ್. ಕೆ. ಹನುಮಂತರಾಯರಿಗೆ ಈಗ ಕೊಟ್ಟಿರುವ ಪ್ರಿವಿಲೇಜ್ ರಜಾ ಜೊತೆಗೆ ಮೂರು ತಿಂಗಳು [illegible] ದಿನಗಳ ಕಾಯಿಲೆ ರಜಾ ಕೊಟ್ಟಿದೆ.

ಮಿ|| ಅಲ್ಬಿಯನ್ ರಾಜಕುಮಾರ್ ಬ್ಯಾನರ್ಜಿ, ಸಿ.ಐ.ಇ., ಎಂ.ಎ., ಐ.ಸಿ.ಎಸ್. ರವರು ಮಾರ್ಚಿ ತಾ. 31ರಲ್ಲಿ ಕೌನ್ಸಿಲ್ ಮೆಂಬರ್ ಕೆಲಸದ ಭಾರವನ್ನು ವಹಿಸಿಕೊಂಡಿದ್ದಾರೆ.

ಕೋಲಾರ್ ಡಿ|| ಪ್ರೊಬೇಷನರಿ ಅ|| ಕಮಿಷನರ್ ಮ|| ಎಂ. ವೆಂಕಟೇಶ ಅಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಆರು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಹಾಸನದ ಅಮಲ್ದಾರ್ ಮ|| ಸಿ. ಆರ್. ಶಿವರಾಮಸ್ವಾಮಿ ಮುದಲಿಯಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಹಾಸನದ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಮ|| ಕೆ. [illegible]ನವರು ಅಮಲ್ದಾರ್ ಮತ್ತು 3ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಮುಂದೆ ಹೇಳುವ ಅಮಲ್ದಾರರ ವರ್ಗಾವರ್ಗಿ ಹುಕುಂ ಮಾಡಿದೆ— ಮ|| ಗಳಾದ ಬಿ. ಭೀಮರಾಯರು ನಂಜನಗೂಡಿನಿಂದ [illegible]ಗೆ, ಕೆ. ನಾರಾಯಣಯ್ಯನವರು [illegible]ಯಿಂದ [illegible]ಗೆ, ಟಿ. ಟಿ. ರಾಮಚಂದ್ರರಾಯರು [illegible]ನಿಂದ ಕೊಪ್ಪಕ್ಕೆ, ಅಬ್ದುಲ್ ಹಕೀಂರವರು ಕೊಪ್ಪದಿಂದ ಟಿ. ನರಸೀಪುರಕ್ಕೆ, ವಿ. ಗೋಪಾಲರಾಯರು [illegible]ದಿಂದ ನಂಜನಗೂಡಿಗೆ, ಟಿ. ಹನುಮಂತರಾಯರು ಕೋಲಾರಕ್ಕೆ.

ಮ|| ಎ. ಆರ್. ಬ್ಯಾನರ್ಜಿಯವರು ಸಂಪದಭ್ಯುದಯ ಸಮಾಜದ ಕೈಗಾರಿಕೆ ಮತ್ತು ವಾಣಿಜ್ಯ ಕಮಿಟಿ ಚೇರ್‌ಮನ್ನರಾಗಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರು ತಾಲ್ಲೂಕು ಅಮಲ್ದಾರ್ ಮ|| ಎಸ್. ಧರ್ಮರಾಯರನ್ನು ಹಾಸನದ ಡಿಸ್ಟ್ರಿಕ್ಟ್ ಎಕ್ಸೈಸ್ ಸೂಪರಿಂಟೆಂಡೆಂಟರಾಗಿ ನೇಮಕ ಮಾಡಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜ್ ಅ|| ಪ್ರೊಫೆಸರ್ ಮ|| ಎಂ. ಟಿ. ನರಸಿಂಹಯ್ಯಂಗಾರ್ರಿಗೆ ಕೊಟ್ಟಿರುವ ಆರು ತಿಂಗಳ ಫರ್ಲೋ ರಜವನ್ನು ಇನ್ನೂ ಆರು ತಿಂಗಳು ಜಾಸ್ತಿ ಮಾಡಿದೆ.

ಮ|| ಆರ್. ಎ. ಸುಂದರಂ ಅಯ್ಯರನ್ನು ಅ|| ಡೆಪ್ಯುಟಿ ಚೀಫ್ ಇಂಜನಿಯರ್ ಮತ್ತು ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿಯಾಗಿ ನೇಮಕ ಮಾಡಿದೆ.

ಚಿತ್ರದುರ್ಗ ಡಿವಿಜನ್ ಎಗ್ಸಿಕ್ಯುಟಿವ್ ಇಂಜಿನಿಯರ್ ಮ|| ಆರ್. ಎಸ್. ನವರತ್ನರವರಿಗೆ ಮೂರು ತಿಂಗಳ ಪ್ರಿವಿಲೇಜ್ ರಜವನ್ನೂ ಒಂದು ವರುಷ ಮೂರು ತಿಂಗಳು ಇಪ್ಪತ್ತೊಂಭತ್ತು ದಿನಗಳ ಫರ್ಲೋ ರಜವನ್ನೂ ಕೊಟ್ಟಿದೆ.

[illegible] ಪಟೇಲ್ ಮತ್ತು ಕಾಫಿ ಪ್ಲಾಂಟರ್ ಮ|| ಅಣ್ಣೇಗೌಡರನ್ನು ಮಂಜರಾಬಾದ್ ತಾಲ್ಲೂಕ್ ಬೋರ್ಡ್ ಮೆಂಬರಾಗಿ ನೇಮಕ ಮಾಡಿದೆ.

ಮ್ಯುನಿಸಿಪಲ್ ಕೌನ್ಸಿಲರ್ ಮ|| ಕೆ. ವೆಂಕಟಸಾಮಯ್ಯನವರನ್ನು 19 7 ನೇ ಇಸವಿ ಅಕ್ಟೋಬರ್ ವರೆಗೆ ನಂಜನಗೂಡು ಮ್ಯುನಿಸಿಪಲ್ ಕೌನ್ಸಿಲ್ ವೈಸ್ ಪ್ರೆಸಿಡೆಂಟರಾಗಿ ನೇಮಕ ಮಾಡಿದೆ.

ಯಡತೊರೆ ತಾಲ್ಲೂಕು ಸ್ಪೆಷಲ್ ಡೆಪ್ಯುಟಿ ಅಮಲ್ದಾರ್ ಮ|| ಎಸ್. ಶ್ರೀನಿವಾಸಮೂರ್ತಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಯಡತೊರೆ ಅಮಲ್ದಾರ್ರು ಅವರ ಕೆಲಸದ ಭಾರವನ್ನು ವಹಿಸಿರತಕ್ಕದ್ದು.

ಮ|| ಡಿ. ದೇವರಾಯರನ್ನು ಎರಡನೇ ಕೌನ್ಸಿಲರವರ ಪರ್ಸನಲ್ ಅಸಿಸ್ಟೆಂಟಾಗಿ ನೇಮಕ ಮಾಡಿದೆ.

ಗವರ್ನ್‌ಮೆಂಟ್ ರೆವಿನ್ಯೂ ಸೆಕ್ರೆಟರಿ ಮ|| ಪಿ. ಆರ್. ತ್ಯಾಗರಾಜ ಅಯ್ಯರವರಿಗೆ ಮಾರ್ಚಿ ತಾ. 20 ರಿಂದ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಸರ್ಜನ್ ಮ|| ಟಿ. ಎಸ್. ನಂಜಪ್ಪನವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ಮೂರು ವಾರ ಜಾಸ್ತಿ ಮಾಡಿದೆ.

ನಂಜನಗೂಡು ಸಬ್ ಡಿವಿಜನ್ ಆಫೀಸರ್ ಮ|| ಟಿ. ರಾಮಯ್ಯ ಚೆಟ್ಟಿಯವರಿಗೆ ಏಪ್ರಿಲ್ ತಾ 6 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕೃಷ್ಣರಾಜಪೇಟೆ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುವ ಅಮಲ್ದಾರ್ ಮ|| ಎಂ. ಎಸ್. ಹಯಗ್ರೀವರಾಯರಿಗೆ ಏಪ್ರಿಲ್ ತಾ. 1 ರಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕರ್ಣಾಟಕ ಸಾಹಿತ್ಯ ಪರಿಷತ್ತು.

ಪರಿಷತ್ತಿಗೆ ಸೇರಿರುವ ಸದಸ್ಯರಿಂದ ಈ ಕೆಳಗೆ ಕಂಡಂತೆ ಚಂದಾ ಹಣವು ವಸೂಲಾಗಿದೆ. ಕರ್ಣಾಟಕ ಭಾಷಾಭಿಮಾನಿಗಳ ತಿಳುವಳಿಕೆಗಾಗಿ ಈ ವಿಷಯವನ್ನು ಪ್ರಕಟಿಸಬೇಕೆಂದು ಕೋರುತ್ತೇನೆ. 1916 ನೆಯ ಫೆಬ್ರುವರಿ ತಿಂಗಳ ಪ್ರಾರಂಭದ ವರೆಗೆ ವಸೂಲಾಗಿದ್ದ ಒಟ್ಟು ಚಂದಾ—ರೂ. 635–3–6.

1916 ನೆಯ ಮಾರ್ಚಿ ತಿಂಗಳ ಕೊನೆಯ ವರೆಗೆ ವಸೂಲಾಗಿರುವ ಚಂದಾ ವಿವರ:—ಟಿ. ವೆಂಕಟಾಚಾರ್, ಬಿ. ಎ., ಮೈಸೂರು ರೂ. 8, ಬಿ. ಎಸ್. ಟಟ್ಟಿಗೆರಿ, ಬೆಳಗಾವಿ ರೂ. 5, ಎಚ್. ಚೆನ್ನಕೇಶವಯ್ಯಂಗಾರ್, ಬೆಂಗಳೂರು ರೂ. 5, ಎಂ. ಎ. ರಾಮಾನುಜಯ್ಯಂಗಾರ್, ಮೈಸೂರು ರೂ. 10, ಇದುವರೆಗೆ ವಸೂಲಾಗಿರುವ ಒಟ್ಟು ಮೊಬಲಗು ರೂ. 663–9–5.

ಬೆಂಗಳೂರು, ಬಿ. ಕೃಷ್ಣಪ್ಪ,
2 ನೇ ಏಪ್ರಿಲ್, 1916. ಸ|| ಕಾರ್ಯದರ್ಶಿ.

ಹಿಂದೂ ಯುನಾನಿ ವೈದ್ಯ ವಿದ್ಯಾಶಾಲೆ.

ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ರವರು ಕಳೆದ ಬುಧವಾರ ದೆಹಲಿ ಪಟ್ಟಣದಲ್ಲಿ ಆಯುರ್ವೇದ ಮತ್ತು ಯುನಾನಿ ಕಾಲೇಜ್ (ವಿದ್ಯಾಶಾಲೆ) ಕಟ್ಟಡಕ್ಕೆ ಅಸ್ತಿಭಾರ ಶಿಲೆಯನ್ನು ಹಾಕಿ ಕಟ್ಟಡವನ್ನು ಪ್ರಾರಂಭ ಮಾಡಿದರು. ಈ ಕಾಲೇಜಿನಲ್ಲಿ ಹಿಂದುಸ್ಥಾನದ ಹಿಂದೂ ಯುನಾನಿ ವೈದ್ಯ ವಿದ್ಯೆಯನ್ನೂ ದೇಹ ಶಾಸ್ತ್ರವನ್ನೂ ಕಲಿಸುವುದಕ್ಕೆ ಏರ್ಪಾಡು ಮಾಡಲ್ಪಡುತ್ತದೆ. ಈ ಕಟ್ಟಡಕ್ಕೂ ವಿದ್ಯಾಶಾಲೆಯನ್ನು ನಡಿಸುವುದಕ್ಕೂ ಒಂದು ಫಂಡು ಕೂಡಿಸಲ್ಪಡುತ್ತಿದೆ. ರಾಮಪುರದ ನವಾಬರವರು 50,000 ರೂಪಾಯಿ, ಟಾಂಕ್ ನವಾಬರವರು 40,000 ರೂಪಾಯಿ, ಪಾಟಿಯಾಲಾ-ಭೂಪಾಲ್-ಗ್ವಾಲಿಯರ್ ಮಹಾರಾಜರುಗಳೂ ಬೇಗಂರವರೂ ತಲಾ 25,000 ರೂಪಾಯಿ, ಇಂಡೋರ್ ಮಹಾರಾಜರವರು 10,000 ರೂಪಾಯಿ, ಈ ಪ್ರಕಾರ ಚಂದಾ ಕೊಟ್ಟಿದ್ದಾರೆ. ಅಸ್ತಿಭಾರ ಶಿಲೆಯನ್ನು ಹಾಕಿ ಪ್ರತಿಷ್ಠೆ ಮಾಡಿದಾಗ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಹೇಳಿದ ಅಭಿಪ್ರಾಯಗಳೇನೆಂದರೆ—

ಹಕೀಮ್ ಅಜಮಲ್ ಖಾನ್ ಖಾಜಿ ಕುಬ್‌ಮುಲ್ಕ್ ರವರು ಈ ಕಟ್ಟಡಕ್ಕೆ ಅಸ್ತಿಭಾರ ಶಿಲೆಯನ್ನು ಹಾಕಿ ಪ್ರತಿಷ್ಠೆ ಮಾಡಬೇಕೆಂದು ಸುಮಾರು ನಾಲ್ಕು ವರುಷಗಳ ಹಿಂದೆ ನನ್ನನ್ನು ಕೇಳಿದಾಗ ನನಗೆ ಪಾಶ್ಚಾತ್ಯ ವೈದ್ಯದಲ್ಲಿ ಅಭಿರುಚಿಯೂ ನಂಬಿಕೆಯೂ ಇರುವ ಕಾರಣ ಈ ಹಿಂದೂ ಯುನಾನಿ ವೈದ್ಯದ ಪಾಠಶಾಲೆಗೆ ನಾನು ಸಹಾಯ ಮಾಡುವುದು ಸರಿಯಾದದ್ದೇ? ಎಂದು ಸಂಶಯ ಪಟ್ಟೆನು. ಗವರ್ನ್‌ಮೆಂಟಿನವರೇನೋ ಪಾಶ್ಚಾತ್ಯ ವೈದ್ಯಶಾಲೆ ಮತ್ತು ವೈದ್ಯ ವಿದ್ಯಾಶಾಲೆಯನ್ನು ಇಟ್ಟು ನಡಿಸುತ್ತ ಬಂದಿರುವರು. ಈಚೆಗೆ ಆಲೋಚನೆ ಮಾಡುತ್ತ ಬಂದದ್ದರಲ್ಲಿ ಇಂಗ್ಲಿಷ್ ವೈದ್ಯಶಾಸ್ತ್ರವೂ ಅಷ್ಟೇನೂ ಪೂರ್ಣವಾದದ್ದಲ್ಲವೆಂದೂ, ಪ್ಲೇಗ್-ಕಾಂತಿಭೇದಿ-ಮಲೇರಿಯಾ ಮೊದಲಾದ ರೋಗಗಳ ಚಿಕಿತ್ಸೆಯ ವಿಷಯದಲ್ಲಿ ಇನ್ನೂ ಸರಿಯಾದ ತಿಳುವಳಿಕೆಯುಂಟಾಗಲಿಲ್ಲವೆಂದೂ, ಹಿಂದೂ ಯುನಾನಿ ವೈದ್ಯದಲ್ಲೂ ಅನೇಕ ಮುಖ್ಯವಾದ ಮೂಲಿಕೆಗಳು ಪಾಶ್ಚಾತ್ಯ ವೈದ್ಯಕ್ಕೆ ತುಂಬಾ ಸಹಾಯಕಗಳಾಗಿವೆ ಎಂದೂ, ಎಷ್ಟು ಶ್ರಮಪಟ್ಟು ಎಷ್ಟು ಹಣವನ್ನು ಖರ್ಚು ಮಾಡಿದಾಗ್ಯೂ ಪಾಶ್ಚಾತ್ಯ ವೈದ್ಯಶಾಲೆಗಳನ್ನೂ ಪಂಡಿತರನ್ನೂ ಈ ವಿಸ್ತಾರವಾದ ರಾಷ್ಟ್ರಕ್ಕೆಲ್ಲಾ ಒದಗಿಸುವುದು ಸಾಧ್ಯವಲ್ಲವೆಂದೂ, ಇಲ್ಲಿನ ಪ್ರಜೆಗಳಿಗೆ ದೇಶೀಯ ಔಷಧಗಳ ಮೇಲೆ ವಿಶೇಷ ಅಭಿಮಾನವಿದ್ದು ಅದನ್ನೇ ಅವರು ವಿಶೇಷವಾಗಿ ಉಪಯೋಗಿಸುತ್ತಿದ್ದಾರೆಂದೂ, ಆದಕಾರಣ ಇಂಥಾ ವೈದ್ಯಶಾಸ್ತ್ರಾಭ್ಯಾಸವನ್ನು ಹರಡುವುದೂ, ಇದರಿಂದ ಅರೆಬರೆಯ ಪಂಡಿತರ ಹಾವಳಿಯನ್ನು ಕಡಮೆ ಮಾಡುವುದೂ ಒಳ್ಳೇದೆಂದೂ ಗೊತ್ತಾಯಿತು. ಆಗ ನಾನು ಹಕೀಮರನ್ನು ಕಂಡು ಇದಕ್ಕೆ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠೆ ಮಾಡುತ್ತೇನೆಂದು ಮಾತುಕೊಟ್ಟು, ಕಟ್ಟಡ ಮುಂತಾದದ್ದಕ್ಕೆ ಹಣ ಒದಗಿಸಿಕೊಳ್ಳುವಂತೆ ತಿಳಿಸಿದೆನು. ಈ ಕಟ್ಟಡದಲ್ಲಿ ತಯಾರಾಗುವ ಪಂಡಿತರಿಗೆ ಹಕೀಮರುಗಳು ಶರೀರಶಾಸ್ತ್ರವನ್ನು ಮೊದಲು ಚೆನ್ನಾಗಿ ಕಲಿಸಿಕೊಡುವಂತೆ ಕಮಿಟಿಯವರು ಒಪ್ಪಿಕೊಂಡಿದ್ದಾರೆ. ಅವರ ಈ ಉದ್ದೇಶವು ಸಾರ್ಥಕವಾಗಿ ನೆರವೇರಿ ಈ ರಾಷ್ಟ್ರದ ಪ್ರಜಾಕೋಟಿಗಳಿಗೆ ಸುಲಭ ರೀತಿಯಲ್ಲಿ ದೇಶೀಯ ಚಿಕಿತ್ಸೆಗಳು ಒದಗುವಂತೆ ಪ್ರೋತ್ಸಾಹವಾಗಬೇಕೆಂದು ನಂಬಿ ಈಗ ಅಸ್ತಿಭಾರ ಶಿಲೆಯನ್ನು ಹಾಕಿ ಪ್ರತಿಷ್ಠೆ ಮಾಡುತ್ತೇನೆ ಎಂದರು.

ರಾಜಧಾನಿಯ ಟ್ರಸ್ಟ್ ಬೋರ್ಡ್ ಮೀಟಿಂಗು.

ಕಳೆದ ತಾ. 27 ನೇ ಸೋಮವಾರ ಬೆಳಗ್ಗೆ ಮೈಸೂರು ನಗರಾಭಿವೃದ್ಧಿಯ ಬೋರ್ಡ್ ಮೆಂಬರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳುಗಟ್ಟಲೆಯ ಮೀಟಿಂಗನ್ನು ನಡಿಸಿದರು. ಆ ಮೀಟಿಂಗಿನಲ್ಲಿ ಹಾಜರಾಗಿದ್ದ ಮೆಂಬರುಗಳ್ಯಾರೆಂದರೆ—ಮ|| ಟಿ. ಜಿ. ಲಕ್ಷ್ಮೀನಾರಾಯಣ, ರಾವ್ ಬಹದ್ದೂರ್ ಎಂ. ಸಿ. ರಂಗಯ್ಯಂಗಾರ್ರು, ಮ|| ಜಿ. ನಾರಾಯಣರಾಯರು, ಮಿ|| ಮಹಮದ್ ಜಾಫರ್ ಸಾಹೇಬರು, ಮ|| ಎಂ. ವೆಂಕಟಕೃಷ್ಣಯ್ಯನವರು, ಮಿ|| ಎ. ಕೆ. ಖಾಜೆ ಯವರು, ಮಿ|| ಮೇಜರ್ ಎಂ. ಇಸ್ಮೈಲ್ ರವರು. ಇವರು ತೀರ್ಮಾನ ಮಾಡಿದ ಮುಖ್ಯ ವಿಚಾರಗಳೇನೆಂದರೆ—

ಈರನಗೆರೆ ಪೋಲೀಸ್ ಸ್ಟೇಷನ್ ಹಿಂಭಾಗದಲ್ಲಿ ಪೋಲೀಸಿನವರು ಸಣ್ಣ ಹೂವಿನ ತೋಟವನ್ನು ಮಾಡಿಕೊಳ್ಳುವುದಕ್ಕೆ ರೋಮನ್ ಕ್ರೈಸ್ತ ದೇವಾಲಯದ ಕಾಂಪೌಂಡಿನಲ್ಲಿ ಕೆಲವು ಖಾಲೀ ನಿವೇಶನವನ್ನು ಅವರಿಗೆ ಸೇರಿಸಿ ಕೊಡುವ ವಿಚಾರ ಚರ್ಚಿಸಲಾಯಿತು. ದೇವಾಲಯದ ಆವರಣ ಗೋಡೆಯನ್ನು ಟ್ರಸ್ಟ್ ಬೋರ್ಡಿನಿಂದ ಹೊಸದಾಗಿ ಹಾಕಿಸಿಕೊಟ್ಟು, ಅವರಿಂದ ಪಡೆಯುವ ನಿವೇಶನಕ್ಕೆ ಬದಲು ಗಜಕ್ಕೆ 4 ಆಣೆಯಂತೆ ಪ್ರತಿಫಲ ಕೊಡಬೇಕೆಂದೂ, ದೇವಾಲಯದವರು ಕೇಳುವ ಹೊಸ ನಿವೇಶನವನ್ನು 4 ಆಣೆ ದಂತೆ ಅವರಿಗೆ ಖರೀದಿ ಮಾಡಬಹುದೆಂದೂ. ಈ ವಿಚಾರವನ್ನು ದೇವಾಲಯದವರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ತಿಳಿಯಬೇಕೆಂದೂ ಇತ್ಯರ್ಥವಾಯಿತು.—ರಾಜಧಾನಿಯ ಎಲ್ಲಾ ಮೊಹಲ್ಲೆಗಳಲ್ಲೂ ಸಂಚಾರ ಮಾಡಿ ಗಿಡಗೆಂಡೆಗಳೂ ಹಳ್ಳಕೊಳ್ಳಗಳೂ ಇಲ್ಲದಂತೆ ಕಡಿಸಿ ಸಮನಾಗಿ ಮಾಡುವುದಕ್ಕೆ ಟ್ರಸ್ಟ್ ಬೋರ್ಡಿನ ಮತ್ತು ಮ್ಯುನಿಸಿಪಲ್ ಕೌನ್ಸಿಲ್ಲಿನ ಕೆಲವು ಮೆಂಬರುಗಳು ಏಕೀಭವಿಸಿ ಕ್ರಮವಾಗಿ ಒಂದು ಕಮಿಟಿಯಿಂದ ಕೆಲಸ ಮಾಡಬೇಕೆಂದು ಏರ್ಪಾಡಾಯಿತು.—ರಸ್ತೆಗಳ ಎಡಬಲಗಳಲ್ಲೂ ನೆಡಿಸಿರುವ ಸಾಲು ಗಿಡಗಳನ್ನು ಸಾಕಿ ಬೆಳಸುವುದಕ್ಕೆ ಅಲ್ಲಲ್ಲಿ ನಲ್ಲಿಗಳಿಂದ ಹೈಡ್ರೆಂಟುಗಳನ್ನಿಟ್ಟು ವಾಟರ್ ಕಾರ್ಟ್ ನೀರು ತೆಗೆದುಕೊಳ್ಳುವ ಕಾರಣಗಳಿಗೆ 3,800 ರೂಪಾಯಿ ಬೇಕಾಗುವುದೆಂದು ನೀರಿನ ಇಲಾಖೆಯವರು ತಿಳಿಸಿದರು. ಸದ್ಯ ವಾಟರ್ ಸಿಕ್ಕುವುದಿಲ್ಲವಾಗಿ ಬಾಕಿ ಕಾಮಗಾರಿ ಮಾಡಿ ನೀರು ಒದಗಿಸಬೇಕೆಂದು ಇತ್ಯರ್ಥ ಮಾಡಲಾಯಿತು.

ಇಟ್ಟಿಗೆಗೂಡಿಗೆ ಸೇರಿದ ದೊಡ್ಡಕೆರೆ ಅಂಗಳದ ಬಳಿ ಇರುವ ಕೆಲವು ನಿವೇಶನಗಳನ್ನೂ ಮನೆಗಳನ್ನೂ ತೋಟಗಳನ್ನೂ ನಗರಾಭಿವೃದ್ಧಿಗೋಸ್ಕರ ಕೊಂಡುಕೊಳ್ಳಬೇಕೆಂದು ಸರ್ಕಾರದವರು ಟ್ರಸ್ಟ್ ಬೋರ್ಡಿನವರ ಶಿಫಾರಸನ್ನು ಒಪ್ಪಿ ಸ್ಯಾಂಕ್ಷನ್ ಮಾಡಿದ್ದಾರೆ.—ರೆಸಿಡೆನ್ಸಿ ಬಂಗಲೆಯ ಉತ್ತರ ಕಮಾನು ಬಾಗಿಲ ಎದುರಿಗೆ ಮಿ|| ಮಹಮದ್ ಸೇಟನ ಮನೆ ಬಳಿ ಇರುವ ಎರಡು ಸಣ್ಣ ಗಲ್ಲಿಗಳನ್ನು ಮುಚ್ಚಿ ಆ ಪೈಕಿ ಕೆಲವು ಭಾಗವನ್ನು ಆ ಸೇಟರಿಗೆ ಅವರ ಮನೆಯ ಉತ್ತಾಹಣೆಗಾಗಿ ಬಳಕೆ ಮಾಡಬಹುದೆಂದು ಇತ್ಯರ್ಥವಾಯಿತು.—ಅರಮನೆ ಇನ್ ಜನಿಯರಾದ ಮ|| ಲಕ್ಷ್ಮೀನರಸಪ್ಪನವರು ಕೋಟೆ ಆವರಣದ ಗೋಡೆಗಳ ಮೇಲೆ ಕೆಲವು ರಿಪೇರಿಗಳನ್ನು ಮಾಡಿಸುವುದಕ್ಕೆ 2,000 ರೂಪಾಯಿನ ಅಂದಾಜು ಪಟ್ಟಿಯನ್ನು ತಯಾರುಮಾಡಿ ಕಳುಹಿಸಿದ್ದರು. ಕೋಟೆ ಗೋಡೆಯ ಮೇಲೆ ಬೆಳೆದಿರುವ ಗಿಡಗಳನ್ನು ಕತ್ತರಿಸುವುದಕ್ಕೆ ಹಿಂದೆಯೇ ಏರ್ಪಾಡು ಮಾಡಿ ಅದಕ್ಕಾಗಿ 600 ರೂಪಾಯಿ ಸ್ಯಾಂಕ್ಷನ್ ಮಾಡಿರೋಣವರಿಂದ ಈಗ 1,700 ರೂಪಾಯಿ ಸ್ಯಾಂಕ್ಷನ್ ಮಾಡಿದರೆ ಸಾಕಾಗಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಟ್ರಸ್ಟ್ ಬೋರ್ಡ್ ಮೀಟಿಂಗುಗಳನ್ನು ನಡಿಸುವಾಗ್ಗೆ ಡೆಪ್ಯುಟಿ ಕಮಿಷನರ್‌ರವರ ಹಾಜರಾತಿಯು ಅವಶ್ಯವಿಲ್ಲವೆಂದು ಸರ್ಕಾರದವರು ಹುಕುಂ ಕೊಟ್ಟರು. ಇದರಿಂದ ಟ್ರಸ್ಟ್ ಬೋರ್ಡಿನ ಕಾನೂನನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗುವುದೆಂದು ಮೆಂಬರುಗಳು ಅಭಿಪ್ರಾಯಪಟ್ಟರು.

ಗೊಬ್ಬಳಿಕಟ್ಟೆ ಕೆರೆಯಿಂದ ದೊಡ್ಡಕೆರೆಗೆ ನೀರು ಬರುವ ನಾಲೆಯನ್ನು ಚೆನ್ನಾಗಿ ದುರಸ್ತು ಮಾಡುವದಕ್ಕೆ 630 ರೂಪಾಯಿ ಖರ್ಚು ಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಅಗ್ರಹಾರದ ಮ|| ರಜಿಸ್ಟ್ರಾರ್ ಕೃಷ್ಣರಾಯರ ಆಸ್ಪತ್ರೆ ಬಳಿ ನಾಲೆಯನ್ನು ಬೇರೆ ಕಡೆಗೆ ತಿರುಗಿಸಿ ಅಲ್ಲಿರುವ ಮನೆಗಳಿಗೆ ಅನುಕೂಲಪಡಿಸುವುದಕ್ಕೆ 200 ರೂಪಾಯಿ ಖರ್ಚು ಮಾಡಬಹುದೆಂದು ಒಪ್ಪಲಾಯಿತು.—ಅದರ ಸಮೀಪದಲ್ಲೇ ಮ|| ಅಂಬಳೆ ಪಂಡಿತರವರು ಧರ್ಮಾರ್ಥವಾಗಿ ಕಟ್ಟಿಸುತ್ತಿರುವ ಗರಲ್ಸ್ ಸ್ಕೂಲ್ ಬಳಿ ದೊಡ್ಡ ಚರಂಡಿಯನ್ನು ಸುಮಾರು 98 ಅಡಿ ದೂರದ ತನಕ ಚಪ್ಪಡಿ ಹಾಸಿ ಮುಚ್ಚುವುದಕ್ಕೆ 1,258 ರೂಪಾಯಿನ ಖರ್ಚು ಪಟ್ಟಿಯನ್ನು ಮೆಂಬರುಗಳು ಅಂಗೀಕರಿಸಿದರು.—ರೈಲ್ವೆ ಸ್ಟೇಷನ್ ಬಾಗಿಲ ಎದುರು ಪಾರ್ಶ್ವದಲ್ಲಿ ಸೂಚಿಸಲ್ಪಟ್ಟಿರುವ ಬದಲಾವಣೆಗಳನ್ನೂ ಕಾಮಗಾರಿಯನ್ನು ಮಾಡಿಸಬೇಕೆಂದು ಸರ್ಕಾರದ ಸ್ಯಾಂಕ್ಷನ್ ಆಗಿದೆ.

ದೇವರಾಜ ಮಾರ್ಕೆಟ್ಟನ್ನು ಹೊಸದಾಗಿ ಕಟ್ಟುವುದಕ್ಕೆ ಮೋಲ್ದಾವಣಿ ಹಾಕುವ ಕಬ್ಬಿಣ ತೊಲೆಗಳ ಬೆಲೆಯು ಯುದ್ಧದ ದೆಸೆಯಿಂದ ಹೆಚ್ಚಿರೋಣವರಿಂದ ಕಂಟ್ರಾಕ್ಟರು ಕೇಳುವ ಜಾಸ್ತಿ 4,000 ರೂಪಾಯನ್ನು ಬಡ್ಜೆಟ್ಟಿಗೆ ದಾಖಲ್ ಮಾಡಬಹುದೆಂದು ಮೆಂಬರುಗಳು ಅನುಮೋದಿಸಿರುತ್ತಾರೆ.—ಹಳೆ ಅಗ್ರಹಾರದ ಬಡಾವಣೆಗೆ ಸುಮಾರು 610 ಮನೆಗಳನ್ನು ಕೊಂಡು ಒಡೆದು ಹಾಕಬೇಕಾಗುವುದೆಂದೂ, ಸುಮಾರು 30 ಮಂದಿ ಮನೆ ಮಾಲೀಕರು ಜವಾಬು ಕೊಟ್ಟು ಇದಾರೆಂದೂ, ಆ ಪೈಕಿ 5 ಜನರು ತಮ್ಮ ಮನೆಗಳನ್ನು ಕೊಟ್ಟುಬಿಡಲು ಒಪ್ಪಿಕೊಂಡಿರುವುದಾಗಿಯೂ ಚೇರ್‌ಮನ್‌ರವರು ಸೂಚಿಸಿದರು. ಆ ಭಾಗವನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರದವರ ಸ್ಯಾಂಕ್ಷನ್ ಪಡೆಯಬಹುದೆಂದು ಮೆಂಬರುಗಳು ಅಭಿಪ್ರಾಯಪಟ್ಟರು. ಆ ಸಮಯದಲ್ಲಿ ರಾವ್ ಬಹದ್ದೂರ್ ಮ|| ರಂಗಯ್ಯಂಗಾರ್ರು ಸೂಚಿಸಿದ್ದೇನೆಂದರೆ—ಅಷ್ಟೊಂದು ಸಂಸಾರಗಳನ್ನು ಅವರ ಮನೆ ಬಿಡಿಸಿದರೆ ಪ್ರಜೆಗಳಿಗೆ ಬಹಳ ಕಷ್ಟವುಂಟಾಗುತ್ತದೆ. ಅವರು ಹೊಸ ಮನೆಗಳಲ್ಲಿ ವಾಸಮಾಡುವ ಬಗೆ ಹೇಗೆ? ಮೊದಲು ಅವರಿಗೆ ಹೊಸ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟು ಮನೆಗಳು ತಯಾರಾದ ಮೇಲೆ ಅವರ ಹಳೇ ಮನೆಗಳನ್ನು ಒಡಿಸಬೇಕು. ಈಗಲೇ ಪಟ್ಟಣದಲ್ಲಿ ಸಾಕಾದಷ್ಟು ಮನೆಗಳಿಲ್ಲದೆ ನಾನಾ ಕಷ್ಟಗಳುಂಟಾಗಿವೆ. ಬೋರ್ಡಿನವರು ಸಮರ್ಪಕವಾದ ಏರ್ಪಾಡು ಮಾಡದೆ ಮನೆಗಳನ್ನು ಒಡೆಯುವುದು ಸರಿಯಲ್ಲ ಎಂದು ಹೇಳಿದರು. ಚೇರ್‌ಮನ್‌ರವರು ಅಂಥಾ ಕಷ್ಟಗಳು ಸಂಭವಿಸದಂತೆ ಬೋರ್ಡಿನವರು ಸೂಚಿಸುವಂಥಾ ಅನುಕೂಲಗಳನ್ನು ಕಲ್ಪಿಸಬಹುದಾಗಿದೆ ಎಂದು ತಿಳಿಸಿದರು. ಬನ್ನೂರು ರೋಡನ್ನು ಸಾಗಿಸುವುದಕ್ಕೆ ನಲ್ಲಿಗಳನ್ನು ಹಾಕಬೇಕಾಗಿರುವುದರಿಂದ ಯಾವ ಯಾವ ಮನೆಗಳನ್ನು ಕೊಂಡು ಒಡೆಯಬೇಕಾಗುವುದೋ ಆ ಮನೆಗಳ ಪಟ್ಟಿಯನ್ನು ತಯಾರುಮಾಡಿಸಿಕೊಡಬೇಕೆಂದು ಮ|| ರಂಗಯ್ಯಂಗಾರ್ರು ಕೇಳಿದ್ದನ್ನು ಚೇರ್‌ಮನ್‌ರವರು ಮಾಡಿಸಿಕೊಡುವುದಾಗಿ ಒಪ್ಪಿಕೊಂಡಿದ್ದಾರೆ.—ಹೊಸ ದೇವರಾಜ ಮಾರ್ಕೆಟ್ಟಿನ ಹಿಂಭಾಗದಲ್ಲಿ ಮೀನು ಮತ್ತು ಮಾಂಸದ ಅಂಗಡಿಗಳನ್ನು ಇಡಕೂಡದೆಂದೂ, ಅದರಿಂದ ಹೊಸ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ತೊಂದರೆಯಾಗುವುದೆಂದೂ ಡಾಕ್ಟರ್ ಎಂ. ಆರ್ಮಿಟೇಜ್ ರವರು ಬರೆದಿದ್ದರು. ಈ ವಿಚಾರದಲ್ಲಿ ಸಿವಿಲ್ ಸರ್ಜನ್‌ರನ್ನು ಕರೆದು ಕೇಳಿ ಅವರ ಅಭಿಪ್ರಾಯವನ್ನು ತಿಳಿಯಬೇಕೆಂದು ಮೆಂಬರುಗಳು ಇತ್ಯರ್ಥ ಮಾಡಿದರು.—ಲ್ಯಾನ್ಸ್‌ಡೌನ್ ಬಜಾರ್ ಉತ್ತರಕ್ಕೆ ಇರುವ ವಿಕ್ಟೋರಿಯಾ ಪಾಠಶಾಲೆಗೆ ಆ ಸ್ಥಳ ಸಾಲದೆಂದೂ, ಬೇರೆ ಸ್ಥಳ ಕೊಡಿಸಿದರೆ ಸುಮಾರು 10-15 ಸಾವಿರ ರೂಪಾಯಿನ ಕಟ್ಟಡವನ್ನು ಪ್ರತ್ಯೇಕವಾಗಿ ಕಟ್ಟಿಕೊಳ್ಳುವುದಾಗಿಯೂ ಮ|| ವೆಂಕಟಕೃಷ್ಣಯ್ಯನವರು ಸೂಚಿಸಿದ್ದರಿಂದ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿಗೆ ಉತ್ತರ ಪಾರ್ಶ್ವದಲ್ಲಿರುವ ನಿವೇಶನವನ್ನು ಆ ಸ್ಕೂಲು ಕಟ್ಟುವುದಕ್ಕೆ ಕೊಡಬಹುದೆಂದು ಮೆಂಬರುಗಳು ಅಭಿಪ್ರಾಯಪಟ್ಟರು.—ರೈಲ್ವೆ ಸ್ಟೇಷನ್ ಹಿಂಭಾಗದಲ್ಲಿರುವ ನಾಲಾ ಪ್ರದೇಶವನ್ನು ಮುಫತ್ತಾಗಿ ಕೊಡಿಸಿದರೆ ನಾಲೆಯನ್ನು ಹಾತ್ ಲಾಗೋಡಿನಿಂದ ಮುಚ್ಚಿಸಿ ಅಲ್ಲಿ ಮರ ಕೊಯ್ಯುವ ಕಾರ್ಖಾನೆಯನ್ನು ಇಟ್ಟುಕೊಳ್ಳುವುದಾಗಿ ಮ|| ನರಸಿಂಗರಾವ್ ಸಿಂಧೆಯವರು ಕೇಳಿದ್ದರು. ಮೆಂಬರುಗಳು ಆ ಪ್ರದೇಶವನ್ನು ಹಾಗೆ ಕೊಡಕೂಡದೆಂದೂ, ಕೆಲವು ಕಾಲದ ವಾಯಿದೆ ಕಟ್ಟಿ ಅವರಿಗೆ ವಹಿಸಬಹುದೆಂದೂ ಅಭಿಪ್ರಾಯಪಟ್ಟರು.

ಮೇಲುಕೋಟೆ ವೈರಮುಡಿ ಮಹೋತ್ಸವವು.

ಶ್ರೀ ವೈರಮುಡಿ ಜಾತ್ರೆ.—ಈ ಜಾತ್ರೆಯು ಕಳೆದ ಮಾರ್ಚಿ ತಾ. 19ರಿಂದ 22 ರವರೆಗೆ ನಡೆಯಿತು. ಮದರಾಸ್ ಮುಂತಾದ ಅನೇಕ ಕಡೆಗಳಿಂದ ಸುಮಾರು 50 ಸಾವಿರ ಭಕ್ತಾದಿಗಳು ಬಂದಿದ್ದರು. ಉತ್ಸವಗಳೆಲ್ಲಾ ಬಹಳ ಸಂಭ್ರಮದಿಂದ ನೆರವೇರಿದವು. ರಥೋತ್ಸವವು ಕಾಲವಿಳಂಬದವೂ ಸಬ್ ಡಿವಿಜನ್ ಸಾಹೇಬರ ಆಸಕ್ತಿಯಿಂದ ಅವರೋಹಣಾ ಕಾಲದಲ್ಲಿ ನೆರವೇರಿತು. ಧರ್ಮದರ್ಶಿಗಳಲ್ಲಿ ದೇವರ ಕಾರ್ಯವನ್ನು ಸಾಂಗವಾಗಿ ನೆರವೇರಿಸಬೇಕೆಂದು ಪ್ರಯತ್ನಪಟ್ಟ ಶ್ರೀಮಾನ್ ಕೃಷ್ಣಯ್ಯಂಗಾರ್ರು ಸುಬ್ರಹ್ಮಣ್ಯಯ್ಯನವರೂ ಉತ್ಸವಗಳು ಜಾಗ್ರತೆಯಾಗಿ ನಡೆಯಲು ಬಹಳ ಮೇಲ್ವಿಚಾರಣೆ ಮಾಡಿದರು. ಭಕ್ತಾದಿಗಳಿಗೆ ಕ್ರಮವಾಗಿ ದೇವರ ಸೇವೆಯೂ, ರಥೋತ್ಸವದ ದಿವಸ ತೀರ್ಥ ವಿನಿಯೋಗವೂ, ಮೂರು ದಿವಸ ದೇವರ ಪ್ರಸಾದ ವಿನಿಯೋಗವೂ ಇದು ಮುಂದಿನ ವರುಷಕ್ಕೆ ದೇವರ ಕ್ರಮ ನಡೆಯುವಂತೆ ನಮ್ಮ ಸರ್ಕಾರದವರು ಮಾಡುವರೆಂದು ಭಾವಿಸಬೇಕಾಗಿದೆ. ಈ ಸಲ ಮದರಾಸ್ ಪ್ರಾಂತ್ಯದ ಜನರಿಂದಲೂ, ರಾವ್ ಬಹದ್ದೂರ್ ಮ|| ರಾಮಾನುಜಂಚೆಟ್ಟಿಯವರಿಂದಲೂ ಬಹುಮೂಲ್ಯವಾದ ವಸ್ತ್ರಗಳು ಶ್ರೀಮಾನ್ ಮಾಳದ ಶ್ರೀನಿವಾಸಯ್ಯಂಗಾರ್ರು ಪ್ರೋತ್ಸಾಹದಿಂದ ದೇವರಿಗೆ ಸಮರ್ಪಿಸಲ್ಪಟ್ಟವು.

ದನಕರುಗಳ ಪ್ರದರ್ಶನ.—ಈ ಸಾರಿ ತಾ. 10 ರಿಂದ 16 ರ ವರೆಗೆ ದನಕರುಗಳ ಪ್ರದರ್ಶನವು ನಡೆಯಿತು. ಸುಮಾರು 500 ರಾಸುಗಳು ಸೇರಿದ್ದವು. ನಮ್ಮ ಕಸಬಾ ಶೇಕ್‌ದಾರ್ರು ಮ|| ನಾರಣಪ್ಪನವರು ಮತ್ತು ಕೋಡನಹಳ್ಳಿ ಬೋರೇಗೌಡರು ಸಹ ಬಹಳ ಮೇಲ್ವಿಚಾರಣೆ ಮಾಡಿದರು. ಉತ್ತಮವಾದ ರಾಸುಗಳಿಗೆ ಬಹುಮಾನಗಳು ಕೊಡಲ್ಪಟ್ಟವು.

ತಾಲ್ಲೂಕ್ ಕಾನ್ಫರೆನ್ಸ್.—ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫೀಸರ್ ಮ|| ಬಿ. ಕೆ. ಕೃಷ್ಣಶಾಸ್ತ್ರಿಗಳವರ ಅಧ್ಯಕ್ಷತೆಯಿಂದ ಈ ಕಾನ್ಫರೆನ್ಸು ನಡಿಸಲ್ಪಟ್ಟಿತು. ಮ|| ಶ್ರೀನರಸಿಂಹ ಶಾಸ್ತ್ರಿಗಳೂ, ಡಿ. ಎ. ಮ|| ಎಂ. ವೆಂಕಟಕೃಷ್ಣನವರೇ ಆದಿಯಾದ ಅಧಿಕಾರಿಗಳೂ, ತಾಲ್ಲೂಕ್ ಆಮಲೆ ವಿಲೇಜ್ ಕಮಿಟಿ ಮೆಂಬರುಗಳೂ, ಇತರರೂ ಸಹ ಸೇರಿದ್ದರು. ಗ್ರಾಮಾಭಿವೃದ್ಧಿಗೆ ಅವಶ್ಯವಾದ ವಿಷಯಗಳನ್ನು ಕುರಿತು ಡೆಪ್ಯುಟಿ ಅಮಲ್ದಾರ್ರು ರಿಪೋರ್ಟನ್ನು ಓದಿದರು. ಮ|| ಶ್ರೀ ನರಸಿಂಹ ಶಾಸ್ತ್ರಿಗಳವರು ಸಂಪದಭ್ಯುದಯಕ್ಕೆ ಸಾಧಕಗಳಾದ ವ್ಯವಸಾಯ, ವಿದ್ಯೆ, ಕೈಗಾರಿಕೆ, ವಾಣಿಜ್ಯ, ಪರಸ್ಪರಸಹಾಯ, ಇವೇ ಮೊದಲಾದ ವಿಷಯಗಳ ಮೇಲೆ ರೈತರಿಗೆಲ್ಲಾ ಚೆನ್ನಾಗಿ ತಿಳಿಯುವಂತೆ ದೀರ್ಘವಾದ ಉಪನ್ಯಾಸವನ್ನು ಮಾಡಿದರು. ನಂತರ ಸ್ಕೂಲು, ಚಾವಡಿ ಮನೆಗಳನ್ನು ಕಟ್ಟಿಸಲು ಒಪ್ಪಿಕೊಂಡ ಗ್ರಾಮಸ್ಥರ ಹೆಸರುಗಳನ್ನು ಬರೆದುಕೊಂಡು, ಪ್ರಕೃತ ಮೇಲುಕೋಟೆಯಲ್ಲಿ ಸರ್ವಜನ ಉಪಯುಕ್ತವಾದ ಒಂದು ರೀಡಿಂಗ್ ರೂಂ ಮತ್ತು ಲೈಬ್ರೆರಿಯನ್ನು ಸ್ಥಾಪಿಸಬೇಕೆಂದು ಹೇಳಿ ಇದಕ್ಕೆ ಬೇಕಾದ ಸಹಾಯವನ್ನು ಮಾಡುವದಾಗಿ ತಿಳಿಸಿದರು. ಆಗ ಸ್ಕೂಲ್ ಮಾಸ್ಟರ್ ಮ|| ಎಂ. ಎ. ಶ್ರೀನಿವಾಸಾಚಾರ್ರು ಸದಾನಂದ ನಧಿಗಿನ ಸಭೆಯ ರೀಡಿಂಗ್ ರೂಂ ಮತ್ತು ಲೈಬ್ರೆರಿ ಇದೆ ಎಂತಲೂ, ಅದಕ್ಕೆ ಸಹಾಯ ಮಾಡಬಹುದೆಂತಲೂ ಹೇಳಿದರು. ಪ್ರೆಸಿಡೆಂಟರು ಪ್ರೈವೇಟ್ ರೀಡಿಂಗ್ ರೂಂಗೆ ಸಹಾಯ ಮಾಡಲಾಗದೆಂದು ಅಪ್ಪಣೆ ಕೊಡಿಸಿದರು. ಮ|| ಎಸ್. ರಾಮಯ್ಯಂಗಾರ್ರು ಆ ಲೈಬ್ರೆರಿ ಮತ್ತು ರೀಡಿಂಗ್ ರೂಂಗಳನ್ನು ಸಕ್ರಮವಾಗಿ ನಡಿಸಲು ಭರವಸೆ ಉಂಟಾದರೆ ಸಭೆಯವರು ವಹಿಸಲು ಸಿದ್ಧವಾಗಿರುವರೆಂದು ಮತ್ತೆ ಹೇಳಿದರು. ಆಗ ಡೆಪ್ಯುಟಿ ಅಮಲ್ದಾರ್ರು ಸೂಚಿಸಿದ ಪ್ರಕಾರ ಮ|| ರಂಗಸ್ವಾಮಯ್ಯಂಗಾರ್ರಿಗೆ ಖಾಲಿ ನಿವೇಶನವನ್ನು ಕೊಡಿಸಿ, ಅವರು ಒಪ್ಪಿಕೊಂಡಂತೆ ಕಟ್ಟಡವನ್ನು ಕಟ್ಟಿಸಿ ರೀಡಿಂಗ್ ರೂಮ್ ಇಡುವುದು ಸುಖವೆಂದು ನಿರ್ಧಾರ ಮಾಡಲಾಯ್ತು. ಹೊಸದಾಗಿ ಸ್ಥಾಪಿಸುವದಕ್ಕಿಂತಲೂ ಇರತಕ್ಕದ್ದನ್ನು ಅಭಿವೃದ್ಧಿಗೆ ತರತಕ್ಕದ್ದು ಉತ್ತಮವಾಗಿರುತ್ತೆ. ಈ ರೀತಿ ವಿಷಯಗಳು ಚರ್ಚಿಸಿದ ನಂತರ ಸಬ್ ಡಿವಿಜನ್ ಸಾಹೇಬರು ಈ ತಾಲ್ಲೂಕಿನಲ್ಲಿ ಗ್ರಾಮಾಭಿವೃದ್ಧಿಯು ತೃಪ್ತಿಕರವಾಗಿಲ್ಲವೆಂದೂ, ಮುಂದೆ ಶ್ರಮಪಡಿಸಿ ಸಮಸ್ತರೂ ಅದರ ಪ್ರಯೋಜನವನ್ನು ಪಡೆಯಬೇಕೆಂದೂ, ಪ್ರೋಗ್ರೆಸ್ ಕಮಿಟಿಯವರು ಮುಖ್ಯ ವರ್ಜಿ ವಹಿಸಬೇಕೆಂದೂ ಹೃದಯಂಗಮವಾಗಿ ಅಪ್ಪಣೆ ಕೊಟ್ಟರು. ನಂತರ ಕಮಿಟಿ ಪರವಾಗಿ ಮ|| ವೈ. ನಾರಾಯಣರಾಯರು ಪ್ರೆಸಿಡೆಂಟರಿಗೂ ಪ್ರತಿನಿಧಿಗಳಿಗೂ ವಂದನೆಯನ್ನು ಅರ್ಪಿಸಿದ ಬಳಿಕ ಗಂಧ, ಪುಷ್ಪ, ತಾಂಬೂಲಾದಿಗಳೊಡನೆ ಸಭೆಯು ಮುಕ್ತಾಯವಾಯ್ತು.

ಶ್ರೀ ಅಹೋಬಲ ಸ್ವಾಮಿಗಳವರ ಆಗಮನ.—ಮಾರ್ಚಿ ತಾ. 13 ರಲ್ಲಿ ಸ್ವಾಮಿಗಳವರ ಸವಾರಿಯು ಇಲ್ಲಿಗೆ ಚಿತ್ತೈಸಿತು. ಇಲ್ಲಿನ ವೈದಿಕರು ಮತ್ತು ಲೌಕಿಕರು ಸ್ವಾಮಿಯವರನ್ನು ಬಹಳ ಆದರದಿಂದ ಬರಮಾಡಿಕೊಂಡು ತಕ್ಕ ಮರ್ಯಾದೆಗಳನ್ನು ಕಲ್ಪಿಸಿದರು. ಇವರು ದೇವರ ಸಂದರ್ಶನಾದಿ ಕಾರ್ಯಗಳನ್ನು ಮುಗಿಸಿಕೊಂಡು ಯೋಗ್ಯವಾದ ಪಡೆದಿರತಕ್ಕ ವಿದ್ವನ್ಮಂಡಲಿಯವರಿಗೂ, ದೇವಾಲಯದ ಮುಖ್ಯ ನೌಕರರಿಗೂ ಯಥೋಚಿತ ಮರ್ಯಾದೆಗಳನ್ನು ಮಾಡಿ ತಾ. 21ನೇ ಮಂಗಳವಾರ ತೊಣ್ಣೂರು ಮಾರ್ಗವಾಗಿ ಮುಂದಕ್ಕೆ ಪ್ರಯಾಣ ಬೆಳಸಿದರು. ಈ ಸ್ವಾಮಿಯವರು ಬಹಳ ಶಾಂತಚಿತ್ತರಾಗಿ ಶಿಷ್ಯವರ್ಗದ ಅಭಿವೃದ್ಧಿ ಪ್ರೋತ್ಸಾಹ ಕೊಡುತ್ತಾರೆ.

ಪರಸ್ಪರ ಸಹಾಯ ಸಂಘಗಳ 2 ನೇ ಮಹಾಸಭೆ.—ಮಾರ್ಚಿ ತಾ. 16ನೇ ಬುಧವಾರ 1 ಘಂಟೆಗೆ ಈ ಸಭೆಯು ಉಪಕ್ರಮವಾಯ್ತು. ಪರಸ್ಪರ ಸಹಾಯ ಸಂಘಗಳ ರೆಜಿಸ್ಟ್ರಾರ್ ಮ|| ಎಂ. ಎ. ನಾರಣಯ್ಯಂಗಾರ್ರು ಅಗ್ರಾಸನವನ್ನು ವಹಿಸಿದ್ದರು. ವೈರಮುಡಿ ಜಾತ್ರೆ ಕಾಲವಾದದ್ದರಿಂದ ಸಂಘಗಳ ಪ್ರತಿನಿಧಿಗಳು ಮಾತ್ರವಲ್ಲದೆ ಅನ್ಯೋನ್ಯ ಸಹಾಯವನ್ನು ಅಭಿವೃದ್ಧಿಗೊಳಿಸುವದರಲ್ಲಿ ಆಸಕ್ತರಾದ ಅನೇಕ ಸ್ಥಳ ಪರಸ್ಥಳದ ಮಹನೀಯರು ದಯಮಾಡಿಸಿದ್ದರು. ಅಲ್ಲದೆ ಮ|| ಗಳಾದ ಬಿ. ಸಿ. ಕೃಷ್ಣಶಾಸ್ತ್ರಿಗಳು, ವೆಂಕಟಪ್ಪನವರು, ಕೆಚ್. ರಾಮಸ್ವಾಮಯ್ಯಂಗಾರ್ರು, ಎಂ. ಎ. ಶ್ರೀನಿವಾಸಾಚಾರ್ರು, ಎಂ. ಎ. ತಿರುನಾರಾಯಣಾಚಾರ್ರು, ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು, ಎಸ್. ನಂಜಪ್ಪನವರು, ವೈ. ನಾರಾಯಣಯ್ಯಂಗಾರ್ರು, ಎಂ. ಜಿ. ರಾಮಯ್ಯಂಗಾರ್ರು, ಎಂ. ಶ್ರೀನಿವಾಸಾಚಾರ್ರು, ಬಿ. ವಿ. ರಂಗಯ್ಯನವರು ವಗೈರೆ ಲೌಕಿಕ ಮಹನೀಯರು ಸಭೆಯನ್ನು ಅಲಂಕರಿಸಿದ್ದರು. ಫ್ರೆಂಚ್ ರಾಕ್ಸ್ ಡೆಪ್ಯುಟಿ ಅಮಲ್ದಾರ್ರು ಪ್ರೆಸಿಡೆಂಟರಿಗೂ, ಪ್ರತಿನಿಧಿಗಳಿಗೂ ಸುಸ್ವಾಗತವನ್ನು ಬಯಸಿದ ನಂತರ ಸಂಘಗಳ ಪ್ರತಿನಿಧಿಗಳು ತಮ್ಮ ಸಂತೋಷವನ್ನು, ಕೃತಜ್ಞತೆಯನ್ನೂ ಉಪನ್ಯಾಸಗಳ ಮೂಲಕ ವ್ಯಕ್ತಪಡಿಸಿದರು. ಪ್ರೆಸಿಡೆಂಟರು ಪರಸ್ಪರ ಸಹಾಯ ಸಂಘಗಳ ಪ್ರಯೋಜನಗಳನ್ನು ಕುರಿತು ಬಹಳ ಮೃದುವಾಗಿ ಸಕಲರಿಗೂ ತಿಳಿಯುವಂತೆ ಉಪನ್ಯಾಸ ಮಾಡಿದರು. ರಾಮಪುರದ ಮತ್ತು ರಾಮಶೆಟ್ಟಿ ಎಂಬ ವಿದ್ಯಾರ್ಥಿಗಳ ಸಮಯೋಚಿತ ಸಂಭಾಷಣೆಯು ಸಭಿಕರ ಮನಸ್ಸಿಗೆ ಬಹಳ ಸಂತೋಷವನ್ನುಂಟುಮಾಡಿತು. ಆಹ್ವಾನ ಪತ್ರಿಕೆಯಲ್ಲಿ ಕಂಡ ವಿಷಯಗಳು ಪ್ರತಿನಿಧಿಗಳಿಂದ ಚರ್ಚಿಸಲ್ಪಟ್ಟು ತಕ್ಕ ರೆಜಲ್ಯೂಷನ್‌ಗಳು ಪಾಸಾದವು. ಮೈಸೂರು ಪ್ರಾವಿನ್ಷಿಯಲ್ ಬ್ಯಾಂಕ್ ಡೈರೆಕ್ಟರಾದ ಮ|| ಎ. ಎಸ್. ಶ್ರೀನಿವಾಸಾಚಾರ್ರು ಕ್ಯಾಷ್ ಕ್ರೆಡಿಟ್ ಮತ್ತು ಪ್ರಾವಿನ್ಷಿಯಲ್ ಬ್ಯಾಂಕಿನ ವಿಚಾರವಾಗಿ ಸಮಸ್ತರಿಗೂ ತಿಳುವಳಿಕೆಯುಂಟಾಗುವಂತೆ ವಿವರಿಸಿದರು. ಮ|| ಎಸ್. ನಂಜಪ್ಪನವರು ತಾಲ್ಲೂಕಿನಲ್ಲಿ ಪ್ರಚಾರದಲ್ಲಿರುವ ಪರಸ್ಪರಸಹಾಯ ಕ್ರಮಗಳನ್ನೂ, ಮ|| ಎಂ. ಜಿ. ರಾಮಯ್ಯಂಗಾರ್ರು ಪ್ರೋಗ್ರೆಸ್ ಕಮಿಟಿಗಳ ಕರ್ತವ್ಯಗಳನ್ನೂ ಕುರಿತು ವಿವರಿಸಿದರು. ಈ ಕಾನ್ಫರೆನ್ಸು ನಡಿಸಿದ ಪ್ರತಿನಿಧಿಗಳ ಚಾಕಚಕ್ಯತೆ ಮತ್ತು ದೇಶಾಭಿಮಾನದ ವಿಷಯದಲ್ಲಿ ಇದಕ್ಕೆ ಆಸಕ್ತಿ ಇರುವರನ್ನು ಕುರಿತು ಮ|| ಬಿ. ಸಿ. ಕೃಷ್ಣಶಾಸ್ತ್ರಿಗಳವರು ಬಹಳ ಚೆನ್ನಾಗಿ ಉಪನ್ಯಾಸ ಮಾಡಿದರು. ಅನಂತರ ಪ್ರೆಸಿಡೆಂಟರು ಡಿಪಾಜಿಟ್ಟನ್ನು ಮಳ್ಳರಿಂದ ಆಕರ್ಷಿಸುವ ವಿಧಾನ ಮತ್ತು ಮೆಂಬರುಗಳು ಸಾಲವನ್ನು ಸಕಾಲಕ್ಕೆ ಹಿಂದಿರುಗಿಸುವುದರ ಆವಶ್ಯಕತೆ ಇವುಗಳ ವಿಷಯವಾಗಿ ಸುಲಭವಾದ ಶೈಲಿಯಲ್ಲಿ ಸಭಿಕರ ಮನೋರಂಜಕವಾಗುವಂತೆ ಉಪನ್ಯಾಸ ಮಾಡಿದರು. ಕೊನೆಯಲ್ಲಿ ಪ್ರತಿನಿಧಿಗಳ ಪರವಾಗಿ ಮ|| ಎಸ್. ರಾಮಯ್ಯಂಗಾರ್ರು ಶ್ರೀಮನ್ಮಹಾರಾಜರವರಿಗೂ, ಯುವರಾಜರವರಿಗೂ, ದಿವಾನ್ ಸಾಹೇಬರಿಗೂ, ಪ್ರೆಸಿಡೆಂಟರಿಗೂ ವಂದನೆಗಳನ್ನು ಅರ್ಪಿಸಿದ ನಂತರ ಗಂಧ ಪುಷ್ಪ ತಾಂಬೂಲಾದಿಗಳೊಡನೆ ಸಭೆಯು ಮುಕ್ತಾಯವಾಯ್ತು. ಮ|| ಎಸ್. ರಾಮಯ್ಯಂಗಾರ್ರು, ಕೆ. ವೆಂಕಟರಮಣಶೆಟ್ಟರು, ಪಿ. ಸಂಪತ್ತಯ್ಯಂಗಾರ್ರು, ಮತ್ತು ಸಿ. ನರಸಿಂಹಾಚಾರ್ರು ಇವರುಗಳು ಸಭಾ ಕಾರ್ಯ ನಡೆಯಲು ಮಾಡಿದ್ದ ಏರ್ಪಾಡುಗಳು ಬಹಳ ತೃಪ್ತಿಕರವಾಗಿದ್ದವು.

ಕೈಗಾರಿಕೆ ಪ್ರದರ್ಶನ ಮತ್ತು ಸೀಮೆಗೆ ಪೋಟಾಪೋಟಿ.—ಮೇಲ್ಕಂಡ ಕಾನ್ಫರೆನ್ಸಿನ ಕಾಲದಲ್ಲಿ ಸೀಮೆಗೆ ಸಂಸ್ಕೃತ ಪಾಠಶಾಲೆಯ ಕಟ್ಟಡದಲ್ಲಿ ಪ್ರದರ್ಶನ ಮತ್ತು ಪೋಟಾಪೋಟಿ ನಡೆಯುವಂತೆ ಏರ್ಪಾಡು ಮಾಡಿದ್ದರು. ಪ್ರದರ್ಶನಕ್ಕೆ ಅಮೂಲ್ಯವಾದ ಪದಾರ್ಥಗಳು ಬಂದಿದ್ದವು. ರೆಜಿಸ್ಟ್ರಾರ್ ಸಾಹೇಬರು ಅಗ್ರಾಸನವನ್ನು ವಹಿಸಿ ಪ್ರಾರಂಭೋತ್ಸವವನ್ನು ಮಾಡಿದರು. ಉತ್ತಮವಾದ ಪದಾರ್ಥಗಳಿಗೂ ಪೋಟಾಪೋಟಿಯಲ್ಲಿ ಗೆದ್ದವರಿಗೂ ಬಹುಮಾನಗಳು ಕೊಡಲ್ಪಟ್ಟವು. ಪ್ರದರ್ಶನದ ಏರ್ಪಾಡು ಬಹಳ ಸ್ತುತ್ಯವಾಗಿತ್ತು. ಮ|| ಮಲ್ಲಶೆಟ್ಟಿ, ಜಿ. ಲಿಂಗಪ್ಪಶೆಟ್ಟಿ, ಸಿ. ಗಂಗಣ್ಣಶೆಟ್ಟಿ, ತಿಮ್ಮಣ್ಣಶೆಟ್ಟಿ ಇವರುಗಳು ಮುಂದಾಳಾಗಿ ನಿಂತು ಪ್ರದರ್ಶನ ವಗೈರೆ ಕೆಲಸಗಳನ್ನು ಬಹಳ ತೃಪ್ತಿಕರವಾಗಿ ನಡಿಸಿರುವದರಿಂದ ಸಂಘದ ಮೆಂಬರುಗಳ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ.

ಹಿರೆಕೆರೂರಿನ ಮೊದಲನೇ ಮಹಾಸಭೆ.—ಈ ಸಭೆಯು ತಾ. 15ರಲ್ಲಿ ಪ್ರಾರಂಭವಾಗಿ 4 ದಿವಸಗಳು ನಡೆಯಿತು. ಸಭೆಯ ಕಾರ್ಯವನ್ನು ಮ|| ಎಂ. ಎ. ನಾರಣಯ್ಯಂಗಾರ್ರು ಪ್ರಾರಂಭಿಸಿದರು. ಇತರ ಕಾರ್ಯಗಳನ್ನು ಚರ್ಚಿಸಿ ನಿರ್ಧರಿಸಲು ಮ|| ವೆಂಕಟಪತಿಶೆಟ್ಟರು ಅಗ್ರಾಸನವನ್ನು ವಹಿಸಿದ್ದರು. ಹಿರೆಕೆರೂರಿನ ಪರ ಅಭಿವೃದ್ಧಿಗಾಗಿ ವಿಷಯಗಳು ಚರ್ಚಿಸಲ್ಪಟ್ಟು ರೆಜಲ್ಯೂಷನ್‌ಗಳು ಪಾಸಾದವು. ಮಿತವ್ಯಯ, ವಿದ್ಯೆ, ಪರಸ್ಪರಸಹಾಯ, ಇವುಗಳ ವಿಚಾರವಾಗಿ ಸಭೆಗೆ ದಯಮಾಡಿಸಿದ್ದ ಪ್ರತಿನಿಧಿಗಳಿಂದ ಉಪನ್ಯಾಸಗಳು ಹೇಳಲ್ಪಟ್ಟವು. ತಿಕ್ಕೇರಿ, ಹೊಸಕೊಳಲು, ನಾಗಪುರ, ಬಸವಾಪಟ್ಟಣ ಮುಂತಾದ ಸ್ಥಳಗಳಿಂದ ಅನೇಕ ಪ್ರತಿನಿಧಿಗಳು ದಯಮಾಡಿಸಿದ್ದರು. ಈ ಸಭೆಯು ಮುಂದೆ ಅಭಿವೃದ್ಧಿಯಾಗುವದರಲ್ಲಿ ಸಂದೇಹವಿಲ್ಲ. ಮ|| ಕೆ. ವೆಂಕಟರಮಣಶೆಟ್ಟರು ತಮ್ಮ ಜನಗಳಲ್ಲಿ

ಪ್ರೀತಿ ಉಂಟಾಗಿ ವಿದ್ಯೆಯು ಹರಡುವುದಕ್ಕಾಗಿ ಈ ಪ್ರಯತ್ನಗಳನ್ನು ಮಾಡುತ್ತಾ ಸಾಹಸಪಡುತ್ತಿದ್ದಾರೆ. ಇದು ಸಂತೋಷಕರವಾಗಿದೆ.

ಪಂಚಮರ 5 ನೇ ಮಹಾಸಭೆ.—ಈ ಸಭೆಯು ತಾ 18 ರಲ್ಲಿ ಮ|| ವಿ ಪ್. ನರಸಿಂಹಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸೆಕ್ರೆಟರಿ ಮ|| ಎಂ. ಜಿ. ರಾಮಯ್ಯಂಗಾರ್ರು ಗತ ಸಾಲಿನ ಚರಿತ್ರೆಯನ್ನು ಓದಿದರು. ನಂತರ ಪ್ರೆಸಿಡೆಂಟರು ಪಂಚಮರನ್ನು ಅತ್ಯಂತ ವಾತ್ಸಲ್ಯದಿಂದ ಸಂಬೋಧಿಸಿ, ಕಳೆದ 5 ವರ್ಷಗಳಿಂದ ನಾಡಿದ ಧನವ್ಯಯದಿಂದಲೂ, ಪ್ರಯತ್ನದಿಂದಲೂ ಇತರ ಪಂಗಡಗಳ ಜನರಂತೆ ಯಾರೂ ಮುಂದಾಳಾಗಿ ಬರಲಿಲ್ಲವೆಂದೂ, ಪಂಚಮರು ತಮ್ಮ ದುಸ್ವಭಾವಗಳನ್ನು ಬಿಡಲಿಲ್ಲವೆಂದೂ, ಯಾವ ಅಭಿವೃದ್ಧಿಯನ್ನೂ ತೋರಿಸಲಿಲ್ಲವೆಂದೂ, ಇನ್ನು ಮುಂದಾದರೂ ವಿದ್ಯೆ ವಿನಯಾದಿ ಸದ್ಗುಣಗಳನ್ನು ಸಂಪಾದಿಸಲು ಪ್ರಯತ್ನಪಡತಕ್ಕದ್ದೆಂದು ವಗೈರೆ ಬುದ್ಧಿವಾದಗಳನ್ನು ಹೇಳಿದರು. ರಿಜಿಸ್ಟ್ರಾರ್ ಸಾಹೇಬರು ಪಂಚಮಾ ಕಾನ್ಫರೆನ್ಸಿಗೆ ಕಳೆದ ವರ್ಷ ಸಾವಿರ ರೂಪಾಯಿ ತನಕ ಖರ್ಚಾಗಿದ್ದರೂ ಪಂಚಮರು ತಮ್ಮ ಏಳಿಗೆಗೆ ಪ್ರಯತ್ನಪಡದಿರುವುದು ತುಂಬಾ ವಿಷಾದಕರವಾಗಿದೆ ಎಂದೂ, ವಿದ್ಯೆ ಸಂಪತ್ತನ್ನು ವೃದ್ಧಿಗೊಳಿಸಲು ಪ್ರಯತ್ನಪಡತಕ್ಕದ್ದೆಂದೂ ಸ್ವಾರಸ್ಯವಾದ ಉಪನ್ಯಾಸವಾಡಿದರು. ಈ ಕಾನ್ಫರೆನ್ಸಿಗೆ ವೈಸರಾಯ್ ಪಂಚಮಾ ಬೋರ್ಡಿಂಗ್ ಸ್ಕೂಲ್ ಬಾಲಕಬಾಲಿಕೆಯರೂ, ಕೆಲವು ಪಂಚಮಾ ಪ್ರತಿನಿಧಿಗಳೂ ಬಂದಿದ್ದರು. ಈ ಸಲ ಕಾರಣಾಂತರದಿಂದ ಪಂಚಮರ ಪ್ರದರ್ಶನಕ್ಕೆ ವಿಶೇಷ ಪದಾರ್ಥಗಳು ಬಂದಿದ್ದಂತೆ ತೋರಲಿಲ್ಲ. ಆದರೆ ನಮ್ಮ ಹೆಡ್ ಮಾಸ್ಟರು ಮ|| ಎಂ. ಜಿ. ರಾಮಯ್ಯಂಗಾರ್ರು ಪಂಚಮರ ಏಳಿಗೆಗೆ ಬಹಳ ಪ್ರಯತ್ನಪಡುತ್ತಿದ್ದಾರೆ. ಇವರ ಪ್ರಯತ್ನವು ಸಫಲವಾಗಿ, ಪಂಚಮರಲ್ಲಿ ವಿದ್ಯೆಯು ಹರಡಲು ತಕ್ಕ ಏರ್ಪಾಡಾದರೆ ಈ ಕಾನ್ಫರೆನ್ಸಿನ ಉದ್ದೇಶವು ಸಿದ್ಧಿಸಿದಂತೆ ಆಗುತ್ತೆ. ನಮ್ಮ ಹೆಡ್ ಮಾಸ್ಟರು ಈ ಸಲ ಕಾನ್ಫರೆನ್ಸಿಗಾಗಿ ಬಹಳ ಏರ್ಪಾಡುಗಳನ್ನು ಮಾಡಿದ್ದಲ್ಲದೆ ಚಪ್ಪರವನ್ನು ಬಹಳ ಅಂದವಾಗಿ ಅಲಂಕರಿಸಿದ್ದರು. ಇವರ ಪ್ರಯತ್ನವು ಸಫಲವಾಗಲೆಂದು ಹಾರೈಸುತ್ತೇವೆ.

ಇತರ ವಿಷಯಗಳು.—ಈ ಸಲದ ಉತ್ಸವ ಕಾಲದಲ್ಲಿ ಯಾತ್ರಿಕರಿಗೆ ಶ್ರೀ ಯತಿರಾಜ ಮಠದಲ್ಲಿ ಊಟ ಉಪಚಾರಗಳು ಬಹಳ ವಿಶ್ವಾಸದಿಂದ ನಡೆಸಲ್ಪಟ್ಟವು. ಶ್ರೀಮಾನ್ ಎಂ. ಟಿ. ತಿರುಮಲಾಚಾರ್ರು ಅಸಾಧಾರಣವಾದ ಏರ್ಪಾಡುಗಳೇ ಇದಕ್ಕೆ ಮುಖ್ಯಕಾರಣವು. ಕಳೆದ ವರುಷದಂತೆ ಈ ಸಾರಿ ಅನ್ನ ಕೂಟ ಮಹೋತ್ಸವವು ತಾ 22 ರಲ್ಲಿ ಬಹಳ ಸಂಭ್ರಮದಿಂದ ನಡೆಸಲ್ಪಟ್ಟಿತು. ಶ್ರೀಮಾನ್ ರಾ ನರಸಿಂಹಾಚಾರ್, ರಾಮೇಶ್ವರಾಚಾರ್, ದೇಶಿಕಾಚಾರ್, ಮತ್ತು ಎಂ ಎ ತಿರುಮಲಾಚಾರ್ ವಗೈರೆ ಮಹನೀಯರು ಚಂದಾ ಮೂಲಕ ಈ ಕಾರ್ಯವನ್ನು ಫಲಾಪೇಕ್ಷೆಯಿಲ್ಲದೆ ನಡೆಸುವುದು ತುಂಬಾ ಸಂತೋಷಕರವಾಗಿದೆ.—ಇಲ್ಲಿನ ನಾಟಕ ಸಂಘದವರು ಕಳೆದ ವಾರದಿಂದ ನಾಟಕಗಳನ್ನು ಬಹಳ ಚೆನ್ನಾಗಿ ಅಭಿನಯಿಸುತ್ತಾರೆ. ಇವರು ಸ್ಥಳದವರಾಗಿರುವುದರಿಂದ ಇಲ್ಲಿನ ಮಹನೀಯರು ಪ್ರೋತ್ಸಾಹಿಸಲು ಸಂತೋಷಪಡುತ್ತಾರೆ.—ಈ ಸಾರಿ ಭಗವದನುಗ್ರಹದಿಂದ ರೋಗಾದಿ ಉಪದ್ರವಗಳು ಕಾಣಿಸಲಿಲ್ಲ. ಸ್ಯಾನಿಟರಿ ಏರ್ಪಾಡುಗಳು ಸಾಮಾನ್ಯವಾಗಿತ್ತು. ನಮ್ಮ ಡೆಪ್ಯುಟಿ ಅಮಲ್ದಾರ್ರು ಮ|| ಎಂ ಶಂಕರಪ್ಪನವರು ಹೊಸಬರಾದಾಗ್ಯೂ ಮೇಲೆ ಕಂಡ ಕಾನ್ಫರೆನ್ಸು, ಪ್ರದರ್ಶನ ವಗೈರೆಗಳಿಗೆ ತಕ್ಕ ಪ್ರೋತ್ಸಾಹವನ್ನೂ ಸಲಹೆಯನ್ನೂ ಕೊಟ್ಟು ಹೆಚ್ಚು ಶ್ರಮವನ್ನು ತೆಗೆದುಕೊಂಡು ಉತ್ಸವಗಳನ್ನು ನಿರ್ವಿಘ್ನವಾಗಿ ನೆರವೇರಿಸಿದ್ದಕ್ಕಾಗಿ ಸಮಸ್ತರ ಶ್ಲಾಘನೆಗೂ ಪಾತ್ರರಾಗಿರುತ್ತಾರೆ. ಇದು ಪ್ರಶಂಸನೀಯವಾಗಿದೆ.

ನಿಮ್ಮ ವಾಚಕ.

ಬಾತ್ಮೀದಾರರಿಗೆ ನೋಟೀಸು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬಂದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಅಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕೊಡೆವು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ. —ಎಡಿ.]

ಕರೆಸ್ಪಾಂಡೆನ್ಸ್.

ಮೋಸವಾಡಿದರಂತೆ

ಅಯ್ಯಾ.—ಮದರಾಸಿನಲ್ಲಿ ಪ್ರಕಟವಾಗತಕ್ಕ ಮೀರಕೇಸರಿ ಆಫೀಸಿಗೆ ಒಂದು ವರ್ಷದ ಚಂದಾಕ್ಕಾಗಿ ವಿ. ಪಿ. ಮೂಲಕ ಪತ್ರಿಕೆಯನ್ನು ರವಾನೆ ಮಾಡುವಂತೆ ಕಾಗದ ಬರೆಯಲಾಗಿ ಅವರು ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಮಾಡಿದ ರೀತಿ ನಡೆಯದೆ ಖಾಲಿ ಒಂದು ಪತ್ರಿಕೆಯನ್ನು ಮಾತ್ರ ಕಳುಹಿಸಿದರು. ಅದಕ್ಕೆ ಕೊಡಬೇಕಾದ 1 ರೂ ಕೊಟ್ಟು ಪೇಪರನ್ನು ತೆಗೆದು ಒಡೆದು ನೋಡಲಾಗಿ ಖಾಲಿ ಪತ್ರಿಕೆ ಇತ್ತು ಯೂರೋಪ ದೇಶದ ಯುದ್ಧ ಪಟವನ್ನು ಬೇರೆ ಬರುತ್ತದೆ ಎಂದು ಊಹಿಸಿದ್ದೆನು. ತಾ. 9–3–16 ರ ವರೆಗೂ ನಿರೀಕ್ಷಿಸಿ ಈ ವಿಚಾರವಾಗಿ ಅವರ ಆಫೀಸಿಗೆ ಬರೆದಾಗ್ಯೂ ಈ ತನಕ ಪೇಪರುಗಳು, ಪ್ರತ್ಯುತ್ತರವಾಗಲಿ ಯಾವದೂ ಬಂದಿರುವದಿಲ್ಲ. ಆದ್ದರಿಂದ ಇನ್ನು ಮೇಲೆ ಈ ಮದರಾಸ್ ಪತ್ರಿಕೆಗೆ ಚಂದಾದಾರರಾಗತಕ್ಕವರೆಲ್ಲರೂ ಬಹಳ ಜಾಗರೂಕರಾಗಿರಬೇಕು.

3–3–1916 ಕೆ. ರಾಮಸ್ವಾಮಿ ಶಾಸ್ತ್ರಿ,
ಬಾಂಡ್ ಬೋರ್ಡು, ಗದಗು

ತಾಲ್ಲೂಕು ವರ್ತಮಾನಗಳು.

ಬೆಂಗಳೂರು ತಾ|| ಯಲಹಂಕ.—ಬಿಸಲಿನ ತಾಪವು ಈಗಾಗಲೇ ಸಹಿಸಲು ಅಸಾಧ್ಯವಾಗಿರುವುದು. ಈ ಟವನ್ನಿನಲ್ಲಿರುವ ಕೆಲವು ಭಾವಿಗಳಲ್ಲಿ ಆಗಲೇ ನೀರು ಪೂರಾ ಒಣಗಿಹೋಗಿವೆ. ಆದರೆ ಕೆರೆಯಲ್ಲಿ ಇನ್ನೂ ಸ್ವಲ್ಪ ನೀರು ಇರುವುದರಿಂದ ದನಕರುಗಳಿಗೆ ಸುಖವಾಗಿದೆ. ಅದನ್ನು ಬೇಸಾಯಕ್ಕೆ ಉಪಯೋಗಿಸಿಕೊಳ್ಳದೆ ದನಕರುಗಳ ಉಪಯೋಗಕ್ಕಾಗಿಯೇ ಬಿಡಿಸಿದಲ್ಲಿ ಅನುಕೂಲ.—ಇಲ್ಲಿ ಬಹಳ ದಿನಗಳಿಂದಲೂ ಇದ್ದ ಶ್ರೀವೇಣುಗೋಪಾಲಸ್ವಾಮಿ ಪ್ರಸನ್ನ ನಾಟಕ ಸಭಾ ಮೂರು ವರ್ಷಗಳಿಂದ ನಿಲ್ಲಿಸಿಬಿಟ್ಟರು. ಅದನ್ನು ಈಗ 3 ತಿಂಗಳಿಂದೀಚೆ ಆ ಕಂಪನಿಗೆ ಸೇರಿದ್ದ ಮೆಂಬರುಗಳೇ ಜೀರ್ಣೋದ್ಧಾರ ಮಾಡಿ ಮೊನ್ನೆ ಬುಧವಾರ ಸತ್ಯ ಹರಿಶ್ಚಂದ್ರ ನಾಟಕವನ್ನು ಅಭಿನಯಿಸಿ ಸಭಾಸದರ ಮನಸ್ಸನ್ನು ಸಂತೋಷಪಡಿಸಿದರು.

ತಿಂಡಾಮಣಿ.—ಇಲ್ಲಿನ ಎ ವಿ. ಸ್ಕೂಲ್ ಹೆಡ್ ಮಾಸ್ಟರ ವರ್ಗದ ಸಂದರ್ಭದಲ್ಲಿ ಖಾಲಿ ಬಿದ್ದ 20 ರೂಪಾಯಿ ಕೆಲಸಕ್ಕೆ ಬೆಂಗಳೂರಿನಿಂದ ಬಂದಿದ್ದಾರೆ. ಆದರೆ ಈ ಕೆಲಸವನ್ನು ಇದೇ ಸ್ಕೂಲಿನಲ್ಲಿ ಯೋಗ್ಯರಾಗಿಯೂ, ಸರ್ವೀಸುದಾರರಾಗಿಯೂ ಇರತಕ್ಕ ಮಾಸ್ತರುಗಳಿಗೆ ಕೊಡಲಾಗುದಾಗಿತ್ತು. ಇಲಾಖಾದವರು ಏಕೆ ಹೀಗೆ ಮಾಡಿದರೋ ತಿಳಿಯದು. ಈ ಸಂಗತಿಯು ಇಲ್ಲಿನ ಮಾಸ್ತರುಗಳಲ್ಲಿ ಕಳವಳವನ್ನುಂಟುಮಾಡಿರುತ್ತೆ.—ಮಾರ್ಚಿ ತಾ. 29 ರಲ್ಲಿ ಬೆಂಗಳೂರಿನಿಂದ ಸ್ಕೂಲ್ ಇಲಾಖಾ ಸ್ಲಾಯಿಡ್ ಸೂಪರವೈಸರ್ ಮ|| ಆದಿನಾರಾಯಣನವರು ಇಲ್ಲಿಗೆ ಬಂದು ಎ. ವಿ ಸ್ಕೂಲಿನಲ್ಲಿ ಸ್ಲಾಯಿಡ್ ಕ್ಲಾಸುಗಳನ್ನು ಪರೀಕ್ಷಿಸಿ ತುಂಬಾ ಸಂತೋಷಿಸಿದ್ದಲ್ಲದೆ ಈ ದಿನ ರಾತ್ರಿ ಎ ವಿ. ಸ್ಕೂಲ್ ಹಾಲಿನಲ್ಲಿ ಒಂದು ಘಂಟೆಯವರೆಗೂ ಮ್ಯಾನ್ಯುಯಲ್ ಟ್ರೈನಿಂಗ್ ವಿಚಾರದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವಾಡಿದರು ಆ ಕಾಲದಲ್ಲಿ ನಮ್ಮ ತಾಲ್ಲೂಕ್ ಶಿರಸ್ತೇದಾರ್ರು ಅಗ್ರಾಸನವನ್ನು ವಹಿಸಿದ್ದರು. ಎ. ವಿ ಸ್ಕೂಲ್ ಎಲ್ಲಾ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ಹಾಜರಾಗಿದ್ದರು. ಇನ್ಸ್ಪೆಕ್ಟಿಂಗ್ ಆಫೀಸರುಗಳು ಈ ರೀತಿ ಸರ್ಕೀಟು ಬಂದಕಾಲದಲ್ಲಿ ಆಯಾ ಇಲಾಖಾದವರನ್ನೂ ಪಬ್ಲಿಕ್ ಜನರನ್ನೂ ಸೇರಿಸಿ ಉಪನ್ಯಾಸ ಮಾಡತಕ್ಕದ್ದು ತುಂಬಾ ಸಂತೋಷಕರವಾಗಿರುತ್ತೆ.

ಮಾಗಡಿ.—ನೀರಿನ ಹಾಹಾಕಾರ ವರ್ಣನಾತೀತವು.—ಇಲ್ಲಿಗೆ ವಿದ್ಯಾಭ್ಯಾಸದ ಇನ್ಸ್ಪೆಕ್ಟರ್ ಜನರಲ್ ಸಾಹೇಬರು ಕಳೆದ ತಾ. 30 ನೇ ಗುರುವಾರ ಸರ್ಕಲ್ ಇನ್ಸ್ಪೆಕ್ಟರವರೂ, ಮತ್ತು ಎಕನಾಮಿಕ್ ಸೂಪರಿಂಟೆಂಡೆಂಟರವರಿಂದಲೂ ಡಗೂಡಿ ಮೋಟಾರಿನಲ್ಲಿ ಪ್ರಾತಃಕಾಲ 9 ಗಂಟೆಗೆ ಚಿತ್ತೈಸಿದರು. ಆ ವೇಳೆಗೆ ಎಲ್ಲಾ ಪಾಠಶಾಲೆಗಳೂ ತಳಿರು ತೋರಣಗಳಿಂದಲೂ, ಕದಳೀ ಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದವು. ಅಮಲ್ದಾರರೂ, ಇತರ ಅಧಿಕಾರಿಗಳೂ, ಪುರಜನರೂ ಸಾಹೇಬರನ್ನು ಎದುರುಗೊಂಡರು ಇಲ್ಲಿನ ಎ. ವಿ. ಸ್ಕೂಲನ್ನೂ, ಗರಲ್ಸ್ ಸ್ಕೂಲನ್ನೂ, ಹಿಂದಿ ಗರಲ್ಸ್ ಸ್ಕೂಲು, ಬಾಯ್ಸ್ ಸ್ಕೂಲನ್ನು, ನೇಯ್ಗೆ, ಬಡಗಿಯ ಸ್ಕೂಲನ್ನು, ಮತ್ತು ಹಿಸ್ಸಾಳಿಯ ಕಾರ್ಖಾನೆಯನ್ನೂ ನೋಡಿಕೊಂಡು ಟ್ರಾವಲರ್ಸ್ ಬಂಗಲೆಯಲ್ಲಿ ಫಲಾಹಾರವನ್ನು ಸ್ವೀಕರಿಸಿ 11 ಗಂಟೆಗೆ ವಾಪಸು ಚಿತ್ತೈಸಿದರು.—ಬೆಂಗಳೂರಿನಿಂದ ಕುಣಿಗಲಿಗೆ ಹಾಕುವ ರೈಲ್ವೆಗಾಗಿ ಇಲ್ಲಿಂದ ಪೇರುಗಳನ್ನು ಆ ಕಂಪನಿ ಏಜೆಂಟರಾದ ಮ|| ಚಕ್ರವರ್ತಿ ಅಯ್ಯಂಗಾರ್ಯರು ವಸೂಲ್ ಮಾಡಿಕೊಂಡು ಹೋದರು.—ಇಲ್ಲಿ ಜನಾನುರಾಗಿಗಳಾಗಿದ್ದ ಎಕ್ಸೈಸ್ ಇನ್ಸ್ಪೆಕ್ಟರ್ ಮ|| ಶ್ರೀನಿವಾಸಯ್ಯಂಗಾರ್ಯರಿಗೆ ಮಾಗಡಿಗೆರೆಗೆ ವರ್ಗವಾಯಿತು. ಇಲ್ಲಿನ ಉಪಾಧ್ಯಾಯ ಸಂಘವು ಅಭಿವೃದ್ಧಿಸ್ಥಿತಿಯಲ್ಲಿ ನಡೆಯುತ್ತಾ ಇದೆ ಉಪಾಧ್ಯಾಯರ ಕಾನ್ಫರೆನ್ಸೂ ವಿದ್ಯಾಪ್ರದರ್ಶನವೂ ಮುಂದಿನ ಜೂನ್ ತಿಂಗಳಲ್ಲಿ ನಡೆಯುವದಾಗಿ ಕೇಳುತ್ತೇನೆ.—ರಂಗನಾಥಸ್ವಾಮಿ ರಥೋತ್ಸವವು ಈ ತಿಂಗಳು 18 ನೇ ಭಾನುವಾರ ನಡೆಯುತ್ತೆ. ಅಗ್ಗ ಅನೇಕ ರಾಸುಗಳೂ ಜನಗಳೂ ಸೇರುತ್ತಾರೆ. ಅಗ್ಗ ದನಕರುಗಳ ಪ್ರದರ್ಶನವನ್ನೂ, ತಾಲ್ಲೂಕು ಕಾನ್ಫರೆನ್ಸನ್ನೂ ನಡೆಸಲಿಕ್ಕೆ ಇಲ್ಲಿನ ಅಮಲ್ದಾರರು ಪ್ರಯತ್ನಮಾಡುತ್ತಿದ್ದಾರೆಂದು ಕೇಳುತ್ತೇನೆ ಇಲ್ಲಿನ ಫೆಡರಲ್ ಬ್ಯಾಂಕೂ, ಫುಟ್‌ಬಾಲ್ ಕ್ಲಬ್, ಸ್ಟೇಟ್ ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿವೆ. ಇಲ್ಲಿ ಬಲಾತ್ಕಾರ ವಿದ್ಯಾಭ್ಯಾಸವನ್ನು ಜಾರಿಗೆ ತಂದರೆ ಈ ಊರು ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ.

ಬೇಲೂರು.—ಕಳೆದ ತಾ|| 21 ರಿಂದಾಗಾಯ್ತು ಈ ತಾಲ್ಲೂಕಿನ ಸರ್ವೇ ಪಮಾಷಿಂದ ನಡೆಯುತ್ತಾ ಇದೆ. ರೈತರು ಮೊದಲಿಗಿಂತಲೂ ಮುಂದೆ ಕಂದಾಯ ಹೆಚ್ಚಾಗುತ್ತದೆಂದೂ, ಮುಂದಿನ ವರ್ಷದ ಲಾಗಾಯ್ತು ಹೆಚ್ಚಿನ ಕಂದಾಯ ತೆರಬೇಕಲ್ಲದೆ ಈಗ ರೂಪಾಯಿಗೆ 1 ಆಣೆಯಂತೆ ಕೊಡುತ್ತಿರುವ ಲೋಕಲ್ ಫಂಡ್ ತೆರಿಗೆಯನ್ನು 2 ಆಣೆಗೆ ಹೆಚ್ಚಿಸಲ್ಪಟ್ಟಿದೆ ಎಂದು ಮುಂದಾಗಿ ವ್ಯಸನಪಡುತ್ತಿದ್ದಾರೆ. ಬಡರೈತರಿಗೆ ಇದು ತುಂಬಾ ತೊಂದರೆಯೆಂದು ಹೇಳಬೇಕಾದುದೇ ಇಲ್ಲ. ಕಾಲಕಾಲಕ್ಕೆ ಮಳೆಯಾಗದೆ ಹೊಟ್ಟೆಗಿಲ್ಲದೆ ದುಃಖಪಡುವುದರ ಜೊತೆಗೆ ನಾನಾತರ ತೆರಿಗೆಗಳು ಹೊರಿಸಲ್ಪಟ್ಟರೆ ನಮ್ಮ ದೇಶದ ಬಡಪ್ರಜೆಗಳ ಸೌಭಾಗ್ಯಾಭಿವೃದ್ಧಿಯನ್ನೇ ಪ್ರಮುಖ್ಯವಾಗಿ ಗಮನಿಸುತ್ತೇವೆಂಬ ನಮ್ಮ ಘನ ಸರ್ಕಾರದವರ ಸದುದ್ದೇಶವು ಹೇಗೆ ಸಾರ್ಥಕವಾಯಿತು? ದಿನ ಬೆಳಗಾದರೆ ಈ ಬಡಪ್ರಜೆಗಳ ಮೇಲೆ ಇದೇನು ಕಾರೊನೇಷನ್ ಚಂದಾ, ಯುದ್ಧದ ರಿಲೀಫ್ ಫಂಡ್ ಚಂದಾ, ಸ್ಕೂಲುಗಳ ಕಂಟ್ರಿಬ್ಯೂಷನ್ ಚಂದಾ, ಈ ಮಧ್ಯೆ ಇತರೆ ಚಿಲ್ಲರೆ ಚಂದಾಗಳು, ಸರ್ಕಾರದ ಶೋಲ್ಕಂಡ ತೆರಿಗೆಗಳು ಇವುಗಳೆಲ್ಲವೂ ತಪ್ಪದೆ ಅಧಿಕಾರಿಗಳ ನಿರ್ಬಂಧದಿಂದಲೂ ತೆರಲು ತಕ್ಕ ಉಪಪತ್ತಿ ಇಲ್ಲದಿದ್ದರೂ ಮೊಲ್ಕಂಡವರ ಅಪ್ಪಣೆಗೆ ಭೀತರಾಗಿ ತಮತಮಗೆ ಅಲ್ಪಸ್ವಲ್ಪವಾಗಿರುವ ಆಸ್ತಿಗಳನ್ನೂ ಅಡವು ಭೋಗ್ಯ ಮಾಡಿ ತೆರುತ್ತಿರುವುದು ತುಂಬಾ ಶೋಚನೀಯವಾಗಿದೆ. ಇವರ ಮೊರೆಯನ್ನು ನಮ್ಮ ಘನ ಸರ್ಕಾರದವರೇ ಪರಿಗಣಿಸುವರಾಗಿ ನಂಬುತ್ತೇನೆ.—ಈ ಮಾಹೆ ತಾ. 15 ನೇ ಶನಿವಾರ ಬೆಳಗ್ಗೆ ನಮ್ಮ ದಿವಾನ್ ಸಾಹೇಬರವರು ಈ ಊರಿಗೆ ದಯಮಾಡಿಸುವುದಾಗಿ ಗೊತ್ತಾಗಿದೆ ತಾ. 7 ರಿಂದ ಶ್ರೀಯವರ ರಥೋತ್ಸವ ಸಂಬಂಧದ ಉತ್ಸವ ಪ್ರಾರಂಭವಾಗಿ ತಾ. 15 ರಲ್ಲೇ ರಥೋತ್ಸವವು ನಡೆಯುವುದರಿಂದ ಈ ವಿಷಯದಲ್ಲಿ ಕ್ರಮವಾಗಿ ಸಕಾಲದಲ್ಲಿ ಆಯಾ ಉತ್ಸವಗಳು ನೆರವೇರುವಂತೆ ನಮ್ಮ ಅಮಲ್ದಾರ್ರು ಏರ್ಪಾಡು ಮಾಡಿ ಇದಕ್ಕೋಸ್ಕರ ದೂರ ಸ್ಥಳಗಳಿಂದ ಬರತಕ್ಕ ಸಾವಿರಾರು ಮಂದಿ ಭಕ್ತಾದಿಗಳ ಮನೋಭೀಷ್ಟಕ್ಕೆ ತಕ್ಕ ಪ್ರೋತ್ಸಾಹವನ್ನುಂಟುಮಾಡುವರೆಂದು ಹಾರೈಸುತ್ತೇನೆ.

ಟಿ. ನರಸೀಪುರ ತಾ|| ತಲಕಾಡು.—ಇಲ್ಲಿ ಆರೋಗ್ಯ ಚೆನ್ನಾಗಿದೆ ದನಕರುಗಳಿಗೆ ಕುಡಿಯುವ ನೀರಿಗೆ ತುಂಬಾ ಶ್ರಮವಾಗಿದೆ. ಈ ಗ್ರಾಮಕ್ಕೆ ಒಂದು ಮೈಲಿ ಫಾಸಲೆಯಲ್ಲಿ ಮಾಧವಮಂತ್ರಿ ಅಣೆಕಟ್ಟಿನಲ್ಲಿ ಪ್ರವಾಹಕಾಲದೋಪಾದಿಯಲ್ಲಿ ನೀರು ತುಂಬಿರುತ್ತೆ ಅಲ್ಲದೆ ಜನ್ನ್ಯಾಡಿಯಲ್ಲಿ ಹತ್ತು ಇಪ್ಪತ್ತು ಅಡಿಗಳ ನೀರನ್ನು ಕಡೆದು ಸಮುದ್ರಪ್ರಾಯವಾಗಿದೆ ನಮ್ಮ ಮೈಸೂರು ದೇಶದಲ್ಲಿ ಕಾವೇರಿ ನದಿಯ ಆಶ್ರಯ ಎಷ್ಟು ಇದ್ದಾಗ್ಯೂ ತಲಕಾಡು ಗ್ರಾಮದಲ್ಲಿ ಗ್ರಾಮಸ್ಥರಿಗೂ ದನಕರುಗಳಿಗೂ ನೀರಿನ ದುರ್ಭಿಕ್ಷವನ್ನು ಹೇಳತೀರದು. ಮಾಧವ ಮಂತ್ರಿ ಅಣೆಕಟ್ಟಿನಿಂದ ಶಿವಸಮುದ್ರಕ್ಕೆ ಬಡಗಂಡಿಯಿಂದ ಬೇಕಾದಷ್ಟು ನೀರು ಬಿಟ್ಟುಕೊಳ್ಳುತ್ತಾರೆ. ಇಲ್ಲಿ ನಾಲೆಗಳಿಗೆ ನೀರು ಬಾರದಂತೆ ಬಂದು ಮಾಡಿರುತ್ತಾರೆ ಈ ಬಾಗಿಲುಗಳ ಸಂದಿಯಲ್ಲಿ ಬೀಳುವ ಸೋರುನೀರನ್ನು ನಾಲೆಯಲ್ಲಿ ಬಿಟ್ಟುಕೊಟ್ಟರೆ ಜನಗಳಿಗೂ ದನಗಳಿಗೂ ನೀರಿನ ಕಷ್ಟ ಹೋಗಲಾಡಿಸಿದಂತೆ ಆಗುತ್ತದೆ ಈ ವಿಷಯವನ್ನು ಮ್ಯುನಿಸಿಪಲ್ ಮೀಟಿಂಗಿನಲ್ಲಿ ಚರ್ಚೆ ಮಾಡಿ ಒಂದು ಅಡಿ ನೀರನ್ನು ಬಿಡಿಸಿಕೊಡಬೇಕೆಂದು ನಿವೇದಿಸಿದ ನಡೆಸಿಯೂ ಯಾವ ಫಲವನ್ನೂ ಹೊಂದಲಿಲ್ಲ. ಈ ನಾಲೆಯಲ್ಲಿ ಒಂದು ಮೈಲಿಯಲ್ಲಿ ಪಡಿಗೆ ನೀರು ಬೀಳುವುದಕ್ಕೆ ಅನುಕೂಲವಿದ್ದರೂ ಈ ನೀರನ್ನು ಫಸಲಿಗೆ ಉಪಯೋಗಪಡಿಸುವುದಕ್ಕೆ ಅನುಕೂಲವಿಲ್ಲವಾದ್ದರಿಂದ ಕೇವಲ ದನಕರುಗಳಿಗೂ ಜನಗಳಿಗೂ ಅನುಕೂಲವಾಗಿ ಹೊಳೆಗೆ ನೀರು ಬಿದ್ದು ಹೋಗುವುದರಿಂದ ಈ ಮಾರ್ಗವಾಗಿ ನೀರನ್ನು ಬಿಟ್ಟುಕೊಟ್ಟಲ್ಲಿ ಸರ್ಕಾರದವರಿಗೆ ಬ್ಲಫ್ ಯಂತ್ರಕ್ಕೆ ನೀರಿಗೆ ಏನೂ ತೊಂದರೆಯಾಗುವುದಿಲ್ಲ. ಈ ಕಾರಣಗಳಿಂದ ಈಗಲಾದರೂ ಗೌರ್ನಮೆಂಟಿನವರು ದಯವಿಟ್ಟು ನಾಲೆಯಲ್ಲಿ ನೀರನ್ನು ಬಿಟ್ಟುಕೊಟ್ಟಲ್ಲಿ ನೀರಿನ ಕಷ್ಟ ಪರಿಹಾರವಾಗುತ್ತದೆ.—ಈ ತಲಕಾಡು ಭಾರಿ ಮ್ಯುನಿಸಿಪಾಲಿಟಿಯಾಗಿರುತ್ತದೆ. ಇಲ್ಲಿ ಲಾಂದ್ರ ಕಂಭಗಳನ್ನು ರಾತ್ರಿ 8 ಗಂಟೆಗೆ ಹಚ್ಚುತ್ತಾರೆ ಅವು 9-10 ಗಂಟೆಗೆ ಆರಿಹೋಗುತ್ತವೆ.—ಈ ಗ್ರಾಮದಲ್ಲಿ ಈಗಾಗಲೇ ಕನ್ನ ಕಳುವಿಗೆ ಆರಂಭವಾಗಿದೆ ಈ ವಿಷಯದಲ್ಲಿ ಪೋಲೀಸಿನವರು ಮುತುವರ್ಜಿ ವಹಿಸುತ್ತಾರೆಂದು ನಂಬಿದೇನೆ.—ಈ ಊರಲ್ಲಿ ಒಂದು ಪೋಸ್ಟ್ ಆಫೀಸು ಇದೆ ಪತ್ರಿಕೆಗಳೂ ಕಾಗದಗಳೂ ಸರಿಯಾಗಿ ಸ್ಥಳದವರಿಗೆ ಕಾಲ ಕಾಲಕ್ಕೆ ಡಲಿವರಿಯಾಗದೆ ಬಹಳ ತೊಂದರೆಯಾಗಿದೆ. ಈ ವಿಷಯವನ್ನು ಪೋಸ್ಟ್ ಮಾಸ್ಟರ್ ಜನರಲ್ ರವರಿಗೆ ಅರ್ಜಿ ಮೂಲಕ ಗುಜರಾಯಿಸಿಕೊಂಡಾಗ್ಯೂ ಇನ್ನೂ ಯಾವ ಸೌಕರ್ಯವೂ ನಡೆಯಲಿಲ್ಲ. ಇನ್ನು ಮೇಲಾದರೂ ನಮ್ಮ ಮೈಸೂರು ದೇಶದ ಪೋಸ್ಟು ಸೂಪರಿಂಟ್ ರವರು ಜನಗಳ ಕಷ್ಟವನ್ನು ತಪ್ಪಿಸಿ ಕಾಲಕ್ಕೆ ಸರಿಯಾಗಿ ಕಾಗದಗಳೂ ಪತ್ರಿಕೆಗಳೂ ಡಲಿವರಿ ಆಗುವಂತೆ ಮಾಡುವ ಭಾಗದಲ್ಲಿ ಗಮನಕೊಡುವರೆಂಬುದಾಗಿ ನಂಬಿರುತ್ತೇನೆ.

ಚಿತ್ರದುರ್ಗ.—ಬಿಸಿಲು ಜೋರಾಗಿ ತಾಪ ತಡೆಯುವದು ಅಸಾಧ್ಯ. ಜನಗಳಿಗೆ ಆಹಾರ ಪದಾರ್ಥ ಸಾಮಗ್ರಿಗಳೂ ದನಗಳಿಗೆ ಮೇವು ಸಹ ಸಿಗುತ್ತೆ. ಈ ಡಿಸ್ಟ್ರಿಕ್ಟಿನ ಕೆಲವು ಗ್ರಾಮಾಂತರಗಳಲ್ಲಿ ದನಗಳಿಗೆ ದೊಡ್ಡ ಜಾಡ್ಯ ವ್ಯಾಪಿಸಿ ಸಾವಿರಾರು ಜಾನುವಾರುಗಳು ಮೃತಪಟ್ಟು ಹೋದವು. ಈ ಟವನ್ನಲ್ಲಿ 1-2 ವಾರಗಳಿಂದ ಆ ಜಾಡ್ಯ ದನಗಳಿಗೆ ತಗಲುತ್ತಿದೆ.—ಅನೇಕ ವರುಷಗಳಿಂದ ಇರುವ ಈ ಟವನ್ನಿಗಿದ್ದ ನೀರಿನ ತೊಂದರೆ ತಪ್ಪಿಸಲು ನಮ್ಮ ಡೆ|| ಕ|| ಮ|| ಸಿ. ಎಸ್. ಬಾಲಸುಂದರಂ ಅಯ್ಯರವರು ಕಾತರಹಾಳ್ ಕೆರೆಯಿಂದ ನೀರು ಸರಬರಾಯಿ ಮಾಡಬೇಕೆಂದು ಗೌರ್ನಮೆಂಟಿಗೆ ಸಲಹೆಕೊಟ್ಟು ಮಂಜೂರು ಮಾಡಿಸಿದ್ದಕ್ಕಾಗಿ ಪ್ರಜೆಗಳೆಲ್ಲರೂ ಕೃತಜ್ಞರಾಗಿದ್ದಾರೆ. ಆದರೆ ಆ ಕಾಮಗಾರಿ ಜಾಗ್ರತೆ ಪೂರೈಸಿ ಈ ವರುಷವೇ ನೀರಿನ ಕಷ್ಟ ನಿವಾರಿಸಬೇಕಾಗಿ ಪ್ರಾರ್ಥಿಸುತ್ತಾರೆ. [ಹಣಗಾರರು ಮ್ಯುನಿಸಿಪಾಲಿಟಿಗೆ ಸಾಲವನ್ನು ಬೇಗ ಒದಗಿಸಿಕೊಟ್ಟರೆ ತಮ್ಮ ಹಣಕ್ಕೆ ಬಡ್ಡಿಯೂ, ಊರಿಗೆ ನೀರಿನ ಸರಬರಾಯಿಯೂ ದೊರಕೀತು. ಹಣವನ್ನು ಎಷ್ಟು ಬೇಗ ಒದಗಿಸಿದರೆ ಕಾಮಗಾರಿ ಅಷ್ಟು ಬೇಗ ನಡೆದೀತು —ಎಡಿ] ನಮ್ಮ ಡೆ|| ಕ|| ಸಾಹೇಬರು ಹರಿಹರದ ಕಾನ್ಫರೆನ್ಸು ಪೂರೈಸಿಕೊಂಡು ವಾಪಸು ದಯಮಾಡಿದರು. ಪುನಃ ಇಷ್ಟರಲ್ಲಿಯೇ ದಾವಣಗೆರೆ ಕಾನ್ಫರೆನ್ಸಿಗೆ ಹೋಗುವವರಾಗಿದ್ದಾರೆ.—ಕಳೆದ ವಾರ ಹೊಸ ಸೆಷನ್ಸ್ ಜಡ್ಜಾದ ಮ|| ಬಿ. ನಾಗಪ್ಪನವರು ಕುಟುಂಬ ಸಹಿತ ಇಲ್ಲಿಗೆ ಬಂದು 8 ದಿವಸ ಇದ್ದು ಕೇಸುಗಳ ವಿಚಾರಮಾಡಿದರು. ಎಲ್ಲಾ ಕೇಸುಗಳಲ್ಲಿಯೂ ಅಪರಾಧಿಗಳಿಗೆ ಶಿಕ್ಷೆ ವಿಧಿಸಿದರು. ಇವರು ದುಷ್ಟನಿಗ್ರಹ ಶಿಷ್ಟಪರಿಪಾಲನಾಶಕ್ತಿಯು, ಸತ್ಯ ನ್ಯಾಯ ದಯ ಮುಂತಾದ ಗುಣಾತಿಶಯಗಳುಳ್ಳ ವಿದ್ಯಾವಂತರೆಂದು ಪ್ರಜೆಗಳು ಹೇಳುತ್ತಾ ಇದ್ದಾರೆ. ಇವರು ಚಿಕ್ಕಮಗಳೂರಿಗೆ ಹೋಗುವ ದಿವಸ ಇಲ್ಲಿನ ಆಯರ್ನ್ ಸ್ಟುಡೆಂಟ್ಸ್ ಹೋಮಿಗೆ ಹೋಗಿ ಅದರ ಚರಿತ್ರೆಯನ್ನು ಸಾಂಗವಾಗಿ ಕೇಳಿ ಅಲ್ಲಿನ ಬಡವಿದ್ಯಾರ್ಥಿಗಳನ್ನು ಪರಾಂಬರಿಸಿ ಸಂತೋಷಪಟ್ಟು, ಆ ಹೋಮಿನ ಉಪಯೋಗಕ್ಕಾಗಿ ತಾವು ಒಂದು ಕಟ್ಟಡ ಕಟ್ಟಿಸಿಕೊಡುವದಾಗಿ ಅಪ್ಪಣೆಕೊಡಿಸಿದರೆಂದು ತಿಳಿಯಬರುತ್ತೆ.—ಇಲ್ಲಿನ ಕೋಆಪರೆಟಿವ್ ಸೊಸೈಟಿಯಲ್ಲಿ ಬ್ರಾಹ್ಮಣೇತರ ಷೇರುದಾರರುಗಳಿಗೆ ಸಾಲಸೋಲಗಳು ಲಭಿಸುವದು ತುಂಬಾ ಕಷ್ಟವೆಂದೂ ಮತ್ತು ಕೆಲಸವಿಲ್ಲದವರು ಸೊಸೈಟಿಯ ಆಫೀಸ್ ಮನೆಯಲ್ಲಿ 7-8 ಜನ ಮಾತುಕಥೆಗಳಾಡುತ್ತಾ ಕಾಲಕಳೆಯುತ್ತಾ ಯಾವಾಗಲೂ ಕೂತಿರುವದು ಲೇವಾದೇವಿಗೆ ತುಂಬಾ ಅಡಚಣೆಯಾಗಿದೆ ಎಂತಲೂ ತಿಳಿಯಬರುತ್ತೆ.—ಒಬ್ಬ ಬ್ರಾಹ್ಮಣನು ತಾನು ಅ|| ಡೆಪ್ಯುಟಿ ಇನ್ಸ್ಪೆಕ್ಟರೆಂದೂ, ಸ್ಕೂಲ್ ಇನ್ಸ್ಪೆಕ್ಟರ ಹೆಡ್ ಗುಮಾಸ್ತರೆಂತಲೂ ಹೇಳಿಕೊಂಡು ಈ ಡಿಸ್ಟ್ರಿಕ್ಟಿನ ಕೆಲವು ಗ್ರಾಮಗಳಲ್ಲಿ ಸಂಚರಿಸಿ ವಿಲೇಜ್ ಎಲಿಮೆಂಟರಿ ಸ್ಕೂಲುಗಳನ್ನು ವಿಜಿಟ್ ಮಾಡಿ ಸರಬರಾಯಿ ಮುಂತಾದ್ದು ತೆಗೆದುಕೊಂಡು ಇರುತ್ತಾನೆಂತಲೂ, ಈಗ ಆ ಸುಳ್ಳು ನೌಕರನು ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸಿಕ್ಕಿ ಇರುವನಾಗಿಯೂ ತಿಳಿಯಬರುತ್ತೆ.—ರೆವ್. ಟಾಂಲಿನ್ಸನ್ ಸಾಹೇಬರು ನೊನ್ನೆ ದಿವಸ ಈ ಮಾರ್ಗವಾಗಿ ಜಗಲೂರು ತಾಲ್ಲೂಕಿಗೆ ದಯಮಾಡಿಸಿದರು. ಇವರು 15 ದಿವಸ ಆ ತಾಲ್ಲೂಕು ಗ್ರಾಮಾಂತರಗಳಲ್ಲಿ ಸಂಚರಿಸಿ, ಪ್ರಸಂಗವನ್ನು ಮಾಡುವವರಾಗಿದ್ದಾರೆ.—ಈ ಟವನ್ ವಾಸಿಯಾದ ಗುಜ್ಜಾರಿ ತಿಪ್ಪಯ್ಯನೆಂಬ ಯೌವನಸ್ಥನು ನೆನ್ನೇ ದಿವಸ ಇಲ್ಲಿನ ಬೆಟ್ಟದ ಮೇಲಿರುವ ಗೋಪಾಲಸ್ವಾಮಿ ಹೊಂಡಕ್ಕೆ ಬಟ್ಟೆಗಳು ಒಗೆಯುವದಕ್ಕಾಗಿ ಹೋಗಿ ಆ ಹೊಂಡದಲ್ಲಿ ಬಿದ್ದು ಪ್ರಾಣಬಿಟ್ಟನು ಆತನಿಗೆ ಈ ತಿಂಗಳಲ್ಲಿಯೇ ವಿವಾಹ ನಿಶ್ಚಯವಾಗಿದ್ದಂತೆಯೂ, ಈಜು ಬರುತ್ತಿರಲಿಲ್ಲವೆಂತಲೂ ತಿಳಿಯಬರುತ್ತೆ. ಈಜು ಬಾರದ ಯೌವನಸ್ಥರಾದ ವಿದ್ಯಾರ್ಥಿಗಳೆಲ್ಲಾ ಈ ಬೇಸಿಗೆ ಕಾಲದ ರಜಾ ದಿವಸಗಳಲ್ಲಿ ಈಜು ಕಲಿಯುವದು ಒಂದು ಪಾಠವಾಗಿರುವದಲ್ಲವೇ ?

ಇಂಡಿಯಾ ದೇಶದ ವೃತ್ತಾಂತಗಳು.

ಪುದುಕೋಟೆಯ ರಾಜರು ರಾಣೀರ ಸಹಿತ ಆಸ್ಟ್ರೇಲಿಯಾಕ್ಕೆ ಪ್ರಯಾಣಮಾಡುವವರಾಗಿದ್ದಾರೆ. ರಾಣಿಯ ಜನ್ಮಭೂಮಿಯು ಆಸ್ಟ್ರೇಲಿಯಾ ದ್ವೀಪ.

ಬೊಂಬಾಯಿ ಪಟ್ಟಣದಲ್ಲಿ ಕಳೆದ ತಾ 20 ರಲ್ಲಿ ಜೈನ ಪ್ರಜಾ ಮುಖಂಡರು ಸೇರಿ ಒಂದು ಸಭೆಯನ್ನು ನಡೆಸಿ 10 ನೇ ಜೈನ ಶ್ವೇತಾಂಬರ ಮಹಾಸಭೆಯು ಬೊಂಬಾಯಿ ಪಟ್ಟಣದಲ್ಲೇ ನಡೆಯುವಂತೆ ತೀರ್ಮಾನ ಮಾಡಿದ್ದಾರೆ.

ಪಂಚಮರನ್ನು ಉದ್ಧರಿಸುವ ಸಭೆಗಳು ಕಳೆದ ತಿಂಗಳ ಕೊನೇ ವಾರದಲ್ಲಿ ದಕ್ಷಿಣ ಆರ್ಕಾಟು ಮತ್ತು ತಂಜಾವೂರು ಜಿಲ್ಲೆಗಳಲ್ಲಿ ಐದು ಕಡೆ ನಡೆದವು. ಈ ಜನರ ಆರನೇ ಮಹಾಸಭೆಯು ಮದರಾಸ್ ಪಟ್ಟಣದಲ್ಲಿ ಮುಂದಿನ ತಿಂಗಳು ಜರುಗುವುದಾಗಿದೆ.

ಪಾಂಡಿಚೆರಿಯಲ್ಲಿರುವ ಫ್ರೆಂಚ್ ಪ್ರಜೆಗಳನ್ನು ಫ್ರೆಂಚರು ಸೈನ್ಯಕ್ಕೆ ಸೇರಿಸಿಕೊಂಡು ಕವಾಯಿತು ಮಾಡುತ್ತಿದ್ದಾರೆ. ಅವರ ಅಭ್ಯಾಸಕ್ಕಾಗಿ 500 ಬಂದೂಕುಗಳೂ, 1,00,000 ತೋಟಾಗಳೂ ಫ್ರಾನ್ಸಿನಿಂದ ಜಹಜಿನ ಮೇಲೆ ಕಳೆದ ವಾರ ಬಂದಿರುತ್ತವೆ.

ಪಂಜಾಬ್ ಅಧಿಪತ್ಯದಲ್ಲಿ ಪ್ರಜೆಗಳು ಯುದ್ಧದ ನಿಮಿತ್ತ ಚಂದಾ ಹಣಗಳನ್ನು 14½ ಲಕ್ಷ ರೂಪಾಯಿ ತನಕ ಕೂಡಿಸಿ ಅದರಿಂದ 43 ಯುದ್ಧದ ವಿಮಾನ ಯಂತ್ರಗಳನ್ನು ಕೊಂಡು ಉಪಯೋಗಿಸಿಕೊಳ್ಳುವಂತೆ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಒಪ್ಪಿಸಿದರು.

ದಕ್ಷಿಣ ಮಹಾರಾಷ್ಟ್ರ ಸೀಮೆಗೆ ಸೇರಿದ ಮುಧೋಳ್ ಸಂಸ್ಥಾನದ ರಾಜಾ ಸಾಹೇಬರವರು ತಮ್ಮನ್ನು ಯುದ್ಧಭೂಮಿಗೆ ಕಳುಹಿಸಿಕೊಡಬೇಕೆಂದು ಬಹಳವಾಗಿ ಕೇಳಿಕೊಂಡದ್ದರಿಂದ ಇಂಡಿಯಾ ಗವರ್ನ್‌ಮೆಂಟಿನವರು ಒಪ್ಪಿಕೊಂಡು ಹೊರಡುವುದಕ್ಕೆ ಸಿದ್ಧವಾಗಿರಿ ಎಂದು ಅವರಿಗೆ ಅಪ್ಪಣೆ ಕೊಟ್ಟಿದ್ದಾರೆ.

ಕಾಲಶ್ ಎಂಬ ಸಂಸ್ಥಾನದ ಪಾರ್ ರವರು ತಮ್ಮ ಹೆಸರಿನಲ್ಲಿ ಫಿರಂಗಿಗಳ ಸಹಿತವಾದ ಒಂದು ವಿಮಾನಯಂತ್ರವನ್ನು ಮಾಡಿಸಿ ಯುದ್ಧದಲ್ಲಿ ಉಪಯೋಗಿಸಬೇಕೆಂದು ಅದರ ಖರ್ಚಿಗಾಗಿ 33,750 ರೂಪಾಯಿ ಕೊಟ್ಟರು. ಇದನ್ನು ಬ್ರಿಟಿಷ್ ಯುದ್ಧದ ಇಲಾಖೆಯವರು ಸ್ವೀಕರಿಸಿ ಪಾರ್ ರವರ ರಾಜಭಕ್ತಿಯನ್ನು ಕೊಂಡಾಡಿದರು.

ಡೆಹಲಿ ನಗರದಲ್ಲಿ ಏರ್ಪಾಡಾಗುವ ಸ್ತ್ರೀಯರ ವೈದ್ಯ ವಿದ್ಯಾಶಾಲೆ ಮತ್ತು ಆಸ್ಪತ್ರೆ ಫಂಡಿಗೆ ಕೋಟಾ ಮಹಾರಾಜರು 10,000 ರೂಪಾಯನ್ನೂ, ಆ ಸಂಸ್ಥಾನದ ಮಹಾರಾಣೀರುಗಳು 5,000 ರೂಪಾಯನ್ನೂ ಚಂದಾ ಕಳುಹಿಸಿದರು. ವೈಸ್‌ರಾಯರವರು ಅದನ್ನು ಸಂತೋಷದಿಂದ ಸ್ವೀಕರಿಸಿ ಅವರುಗಳನ್ನು ವಂದಿಸಿರುತ್ತಾರೆ.

ಟಿಪ್ಪೇರಾ ಡಿಸ್ಟ್ರಿಕ್ಟಿಗೆ ಸೇರಿದ ಮೊರಾದ್‌ನಗರದ ಪೋಲೀಸ್ ಸ್ಟೇಷನ್ ಸರಹದ್ದಿನೊಳಗೆ ಸುಮಾರು 20 ಮಂದಿ ಬಂಗಾಳಿ ಯೌವನಸ್ಥರು ಸೇರಿ ನಾರಿನ ಭಾರೀ ವರ್ತಕನಾದ ಸೂರ್ಯಚಂದ್ರದಾಸನ ಮನೆಗೆ ನುಗ್ಗಿ ಬಂದೂಕುಗಳನ್ನು ಹಿಡಿದು ಮನೆಯವರನ್ನು ಗಾಬರಿಪಡಿಸಿ ಕಬ್ಬಿಣದ ಪೆಟ್ಟಿಗೆಯ ಬೀಗದ ಕೈಯನ್ನು ಯಜಮಾನನಿಂದ ಬಲಾತ್ಕಾರವಾಗಿ ತೆಗೆದುಕೊಂಡು ನಗದು 11,000 ರೂಪಾಯನ್ನೂ, 1,000 ರೂಪಾಯಿನ ಕರೆನ್ಸಿ ನೋಟುಗಳನ್ನೂ ಕದ್ದುಕೊಂಡು ಹೋದರು.

ರಾಜಪುಟಾನಾಕ್ಕೆ ಸೇರಿದ ಹತ್ತೊಂಭತ್ತು ಸಂಸ್ಥಾನಗಳಲ್ಲಿ ರಾಜಭಕ್ತಿ ಹಿತಕಾರಿಣಿ ಸಭೆಗಳು ಏರ್ಪಾಡಾಗಿವೆ. ಈ ಸಭೆಯವರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಸಹಿತ ಸುಮಾರು ನಾಲ್ಕು ಸಾವಿರ ಮಹಾಸಭೆಗಳಲ್ಲಿ, ಉತ್ತಮ ಕ್ರಿಯಾದಿಗಳಲ್ಲಿ ಸಭೆಯ ಸಂಬಂಧಿಸಿದ ಪ್ರಕಾರ ಬಹಳ ಮಹತ್ವಯುತವಾದ ಸೇವೆಗೈದಿರುತ್ತಾರೆಂದು ವಾರ್ಷಿಕ ರಿಪೋರ್ಟಿನಿಂದ ತಿಳಿದು ಬರುತ್ತದೆ.

ಮದರಾಸಿನ ಪೋರ್ಟ್ ಹೆಲ್ತ್ ಆಫೀಸರಾದ ಡಾಕ್ಟರ್ ಬಿ. ರಾಘವೇಂದ್ರರಾಯರು ಉತಪ ಟವರ್ನಲ್ಲಿ 3,00 ರೂಪಾಯಿನ 8 ಎಕರೆ ಜಮೀನನ್ನು ಕೊಂಡು ಅದನ್ನು ಉದ್ಧರಿಸುವ ಕಾರ್ಯಕ್ಕೆ ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ. ಅಲ್ಲಿ ವಾಸಿಸುವ ಬಡ ಜನರಿಗೆ ಮನೆಗಳನ್ನು ಕಟ್ಟಿಸಿ ಕೊಟ್ಟು ಅವರಿಗೆ ವಿಸ್ತೀರ್ಣ ಬೀದಿಗಳನ್ನು ಕಲಿಸಿ ಅವರನ್ನು ಅಭಿವೃದ್ಧಿಗೆ ತರುವಂತೆ ಏರ್ಪಾಡಾಗಿದೆ

ಶತ್ರು ರಾಜ್ಯಗಳಿಗೆ ಸೇರಿದ ಪ್ರಜೆಗಳನ್ನು ಇಂಡಿಯಾ ಗವರ್ನ್ಮೆಂಟಿನವರು ಹಿಡಿದು ಆಯಾ ಅಧಿಕಾರಿಗಳಲ್ಲಿ ಬಂಧನದಲ್ಲಿಟ್ಟಿದ್ದಾರೆ. ಆ ಪೈಕಿ ಸುಮಾರು 400 ಮಂದಿಯನ್ನು ಗೋಲ್ಕೊಂಡೆ ಎಂಬ ಹಡಗಿಗೆ ಹತ್ತಿಸಿ ಹಾಲೆಂಡಿಗೆ ರವಾನೆ ಮಾಡಿದರು. ಮದರಾಸ್ ಅಧಿಕಾರದಲ್ಲಿದ್ದವರು ಸುಮಾರು 10 ಮಂದಿ, ಬಂಗಾಳದವರು 200 ಮಂದಿ, ಉಳಿದವರು ಬೊಂಬಾಯಿ ಅಧಿಕಾರದಲ್ಲಿದ್ದವರು.

ಕಲ್ಕತ್ತ ಪಟ್ಟಣದ ಮಹೇಂದ್ರಮಿತ್ರ ಎಂಬ ಬೀದಿಯಲ್ಲಿದ್ದ ಒಂದು ಮನೆಯಲ್ಲಿ ಒಬ್ಬ ಕುಲೀನ ಬಂಗಾಳಿ ಯೌವನವತಿಯು ಸೀಮೆಎಣ್ಣೆಯಿಂದ ಮೃತಳಾದಳು. ಆಕೆಯ ಗಂಡನು ಎಷ್ಟು ಪ್ರಯತ್ನ ಮಾಡಿದರೂ ಅವನಿಗೆ ಎಲ್ಲೂ ನೌಕರಿ ದೊರಕದೆ ಹೋಗಿ ಅವರು ಸಂಸಾರದಲ್ಲಿ ಜೀವನ ನಡೆಯುವುದೇ ಬಹಳ ಪ್ರಯಾಸವಾಗಿತ್ತೆಂದೂ, ಬಡತನದ ಸಂಕಟವನ್ನು ಸಹಿಸಲಾರದೆ ಆಕೆ ಆ ಕೃತ್ಯವನ್ನು ಮಾಡಿದಳೆಂದೂ ಪ್ರಕಟವಾಗಿದೆ.

ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳನ್ನು ಸೀಮೆಗೆ ಸಾಗ ಕಳುಹಿಸುತ್ತಿದಲ್ಲೂ, ಹೊಸ ವೈಸ್‌ರಾಯಿಯಾದ ಲಾರ್ಡ್ ಚೆಲ್ಮ್ಸ್‌ಫೋರ್ಡ್‌ರವರನ್ನು ಭೇಟಿಮಾಡಿ ಅವರಿಗೆ ಸ್ವಾಗತವನ್ನು ಬಯಸುತ್ತಲೂ ಬೊಂಬಾಯಿಗೆ ಹೋಗಿರುವವರು ಯಾರೆಂದರೆ—ಹೈದರಾಬಾದ್ ನೈಜಾಮರು, ಕಾಶ್ಮೀರ ಮತ್ತು ಗ್ವಾಲಿಯರ್ ಮಹಾರಾಜರುಗಳು, ಕಚ್ ಮಹಾರಾವ್, ಕೋಟಾ-ಧಾರ್-ರಾಜಗೃಹ ಸಂಸ್ಥಾನಗಳ ರಾಜರುಗಳು.

ಮೆಸೊಪೊಟೇಮಿಯಾ ಯುದ್ಧಭೂಮಿಯಿಂದ ಗಾಯಪಟ್ಟು ಕಲ್ಕತ್ತೆ ಶಾಯಿಲಿಯಾಗಿ ಬಂದ ಬರುವ ಹಿಂದೂಸ್ಥಾನದ ಸೈನಿಕರ ಚಿಕಿತ್ಸೆ ಮತ್ತು ಉಪಚಾರಗಳಿಗೋಸ್ಕರ ಅಲ್ಲಿ ಬಿಟ್ಟಿದ ನೋಟ್ ಸರ್ಕಾರದವರು ತಮ್ಮ ಅರಮನೆಯನ್ನು ಬಿಟ್ಟುಕೊಟ್ಟು, ಅದಕ್ಕೆ ಅವಶ್ಯವಾದ ಸಮಸ್ತ ಪದಾರ್ಥಗಳನ್ನೂ ಒದಗಿಸಿಕೊಡುತ್ತೇವೆಂದು ಉದಾರವಾದ ಸಹಾಯವನ್ನು ಮಾಡಿದರು. ವೈಸ್‌ರಾಯರವರು ಒಪ್ಪಿ ಅವರ ಔದಾರ್ಯವನ್ನು ಕೊಂಡಾಡಿದರು.

ಕೊಚ್ಚಿ ರಾಜಕುಮಾರನು ಜರ್ಮನಿಯಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದನು. ಯುದ್ಧಾರಂಭವಾದ ಮೇಲೆ ಜರ್ಮನಿಯವರು ಆ ರಾಜಕುಮಾರನನ್ನು ಹಿಡಿದು ಬಂಧನದಲ್ಲಿ ಹಾಕಿದರು. ಕೊಚ್ಚಿ ರಾಜರು ಮಹಾರಾಣಿಯವರ ಭಕ್ತರೆಂದೂ ರಾಜಕುಮಾರನನ್ನು ಕಳುಹಿಸಬೇಕೆಂದು ಅವರ ಕಡೆ ಹೇಳಿದ್ದರ ಮೇಲೆ ಜರ್ಮನಿಯವರಿಗೆ ಬಾಗದ ಬರೆದು ಏರ್ಪಾಡುಮಾಡಿದ್ದರಿಂದ ಈಗ ಆ ರಾಜಕುಮಾರನು ಬಿಡುಗಡೆ ಹೊಂದಿ ಅಲ್ಲಿಂದ ಬರುತ್ತಿದ್ದಾನೆಂದು ಪ್ರಕಟವಾಗಿದೆ.

ಲಾಹೋರ್ ದಂಗೆ ಮೊಕದ್ದಮೆಯಲ್ಲಿ ಸ್ಪೆಷಲ್ ಕೋರ್ಟಿನವರು ಕಳೆದ ವಾರ ತೀರ್ಪು ಕೊಟ್ಟರು. ಈ ಮೊಕದ್ದಮೆಯಲ್ಲಿ 74 ಮಂದಿ ಆಪಾದಿತರಿದ್ದರು. ಆ ಪೈಕಿ ಆರು ಮಂದಿಗೆ ಮರಣದಂಡನೆಯೂ, 45 ಮಂದಿಗೆ ಅಂಡಮಾನ್ ತೀರ್ಥಯಾತ್ರೆಯೂ, 8 ಮಂದಿಗೆ 4 ರಿಂದ 6 ವರ್ಷದ ವರೆಗೆ ಕಠಿಣಶಿಕ್ಷೆಯೂ ವಿಧಿಸಲ್ಪಟ್ಟಿತು. 15 ಮಂದಿಯನ್ನು ಬಿಡುಗಡೆಮಾಡಿದರು. ಮರಣದಂಡನೆಗೊ ಅಂಡಮಾನ್ ತೀರ್ಥ ಗುರಿಯಾದವರ ಆಸ್ತಿಯನ್ನೆಲ್ಲಾ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ತೀರ್ಮಾನವಾಗಿದೆ.

ಬೆಳಗಾವಿಯಲ್ಲಿ ಒಬ್ಬ ಹೆಂಗಸು ತನ್ನ ತಂದೆಯ ಮನೆಯಲ್ಲಿದ್ದಾಗ ಅವಳನ್ನು ಒಬ್ಬ ಬಾಲಕನು ಎತ್ತಿಕೊಂಡು ಹೋದನು. ಅವಳ ತಂದೆ ಆ ಬಾಲಕನ ಮೇಲೆ ಫಿರ್ಯಾದು ಮಾಡಿದನು. ತಂದೆ ಫಿರ್ಯಾದು ತಂದದ್ದನ್ನು ಒಪ್ಪದೆ, ಅವಳ ಗಂಡನು ಫಿರ್ಯಾದು ಮಾಡಬೇಕಾಗಿತ್ತೆಂದೂ ಅಲ್ಲಿಯ ಕೆಳಗಿನ ಕೋರ್ಟಿನವರು ತೀರ್ಮಾನಿಸಿದ್ದಕ್ಕೆ, ಮುಂಬಾಯಿ ಹೈಕೋರ್ಟಿನ ಜಡ್ಜಿಯವರು ಗಂಡ ಫಿರ್ಯಾದು ಮಾಡಬೇಕಾದ ಅಗತ್ಯವಿಲ್ಲವೆಂದೂ, ಅವಳು ತಂದೆಯ ಮನೆಯಲ್ಲಿದ್ದದ್ದರಿಂದ ತಂದೆ ಫಿರ್ಯಾದು ಮಾಡಬಹುದೆಂದೂ ತೀರ್ಮಾನಮಾಡಿದರು

ಕಳೆದ ತಾ. 21 ಕ್ಕೆ ಮುಗಿದ ವಾರದಲ್ಲಿ ಹಿಂದೂಸ್ಥಾನದೊಳಗೆ ಪ್ಲೇಗ್ ಉಪದ್ರವ ಒಟ್ಟು 7,565 ಮಂದಿಗೆ ತಗಲಿತು; 8,756 ಮಂದಿ ಪ್ಲೇಗಿನಿಂದ ತೀರಿಕೊಂಡರು. ಈ ಮರಣ ಸಂಖ್ಯೆಯ ವಿವರ ಹ್ಯಾಗೆಂದರೆ—ದೆಹಲಿ 4, ಬೊಂಬಾಯಿ ಅಧಿಕಾರ ಮತ್ತು ಸಿಂಧ್‌ದೇಶ 816, ಮದರಾಸ್ 73, ಬಂಗಾಳ 4, ಬಿಹಾರ್ ಮತ್ತು ಒರಿಸ್ಸಾ 1,927, ಸಂಯುಕ್ತ ಅಧಿಕಾರಗಳು 3,496, ಪಂಜಾಬ್ 224, ಬರ್ಮಾ 388, ಮಧ್ಯ ಪ್ರಾಂತ್ಯಗಳು 521, ಮೈಸೂರು ಸಂಸ್ಥಾನ 41, ಹೈದರಾಬಾದ್ 1,314, ಮಧ್ಯ ಇಂಡಿಯಾ 20, ಕಾಶ್ಮೀರ 3.

ಬರಹಾಂಪುರದಲ್ಲಿ ಅಕ್ಬರ್ ಅಲಿ ಎಂಬ 14 ವರುಷದ ಒಬ್ಬ ಹುಡುಗನು 6 ವರುಷದ ಹುಡುಗನ ಕತ್ತಿನಲ್ಲಿದ್ದ ಪದಕವನ್ನು ಅಪಹರಿಸಿದ್ದಕ್ಕೆ ಮ್ಯಾಜಿಸ್ಟ್ರೇಟರು ಹಾಲುವಿಗೆ ಆರು ವಾರ ಶಿಕ್ಷೆ ವಿಧಿಸಿದರು. ಹುಡುಗನಿಗೆ ಅಷ್ಟು ದೀರ್ಘವಾದ ಶಿಕ್ಷೆ ವಿಧಿಸಕೂಡದೆಂದು ಮದರಾಸ್ ಹೈಕೋರ್ಟಿನಲ್ಲಿ ಅಪೀಲ್ ಮಾಡಿದಾಗ ಅದು ಮೊದಲನೇ ಅಪರಾಧವಾದ್ದರಿಂದ ಅವನನ್ನು ಜೈಲಿಗೆ ಕಳುಹಿಸಬಾರದೆಂದು ಹೈಕೋರ್ಟು ಜಡ್ಜಿಗಳು ಅಭಿಪ್ರಾಯಪಟ್ಟು, ಅವನನ್ನು ಸೆರೆಮನೆಯಿಂದ ಬಿಡುಗಡೆಮಾಡಿ ಅವನ ತಂದೆಯ ವಶಕ್ಕೆ ಒಪ್ಪಿಸಿ ಒಂದು ವರುಷದ ನೇಕ್ ಚಾಲ್ ಜಾಮೀನು ತೆಗೆದುಕೊಳ್ಳತಕ್ಕದ್ದೆಂದು ತೀರ್ಮಾನವಿತ್ತಿದ್ದಾರೆ.

ಹಿಂದೂಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಕಾರಗಳ ಬ್ಯಾಂಕುಗಳಿಗೆ ಮಾರ್ಚಿ ತಾ. 18 ರ ವರೆಗೆ ಜಮೆಯಾಗಿರುವ ಚಂದಾ ಹಣ ಎಷ್ಟೆಂದರೆ:—

ಅಲಹಾಬಾದ್ ಅಲ್ಲಯನ್ಸ್ ಬ್ಯಾಂಕಿಗೆ	ರೂ. 46,55 683- 2-3
ಬಂಗಾಳ ಬ್ಯಾಂಕಿಗೆ	,, 36 29,978-13-4
ಬೊಂಬಾಯಿ ಬ್ಯಾಂಕಿಗೆ	,, 8,34,819- 2-9
ಮದರಾಸ್ ಬ್ಯಾಂಕಿಗೆ	,, 6.73.281-14-9
ಒಟ್ಟು ರೂಪಾಯಿ	97,93,763-11-1

ಮುಲ್ತಾನ್ ಪಟ್ಟಣದಲ್ಲಿ ದೊಡ್ಡ ಮನುಷ್ಯರೆಂದು ನಟಿಸಿ ಬ್ಯಾಂಕುಗಳನ್ನು ಬಿಟ್ಟು ಜನರಿಂದ ಷೇರ್ ಹಣಗಳನ್ನು ಎತ್ತಿಕೊಂಡು ಸುಳ್ಳು ಲೆಕ್ಕಗಳನ್ನು ಬಿಟ್ಟು ಹಣವನ್ನು ಕಂಡುಹಾಕಿ ಬ್ಯಾಂಕುಗಳು ದಿವಾಳಿಯಾಗುವಂತೆ ಮಾಡಿದ ಹಿಂದೂಸ್ಥಾನ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರು ಧೌಲತ್ ರಾಮ್.ನಿ, ಪಿಷಾವರ್ ಬ್ಯಾಂಕಿನ ಜನರಲ್ ಮ್ಯಾನೇಜರ್ ಹರದಾಸನಂದರೂ ಈಗ ತಲಾ ನಾಲ್ಕು ವರುಷದಂತೆ ಕಠಿಣ ಶಿಕ್ಷೆ ಅನುಭವಿಸುತ್ತಿದ್ದಾರೆ. ಇದಲ್ಲದೆ ನವಾಬ್ ಬ್ಯಾಂಕಿನಲ್ಲಿ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದ ಧೋಳಾರಾಮನ ಎಂಬಾತನಿಗೆ ಅದೇ ಅಪರಾಧಕ್ಕೋಸ್ಕರ ಕಳೆದ ವಾರ ನಾಲ್ಕು ವರುಷದ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು

ವಿದೇಶದ ವೃತ್ತಾಂತಗಳು.

ರಷ್ಯ ರಾಜ್ಯದ ಖಜಾನಾ ಮಂತ್ರಿಯು ಯುದ್ಧದ ಖರ್ಚಿಗಾಗಿ 300 ಕೋಟಿ ರೂಪಾಯಿ ಸಾಲ ಮಾಡುವರು. ರಷ್ಯಾದವರು ಹಿಂದೆ ಯಾವ ಕಾಲದಲ್ಲೂ ಇಷ್ಟು ಹೆಚ್ಚು ಹಣ ಸಾಲ ಮಾಡಿದ್ದಿಲ್ಲ.

ಬ್ರಿಟಿಷ್ ಸೈನಿಕರು ಯುದ್ಧ ಭೂಮಿಯಿಂದ ಸೆರೆ ಹಿಡಿದು ಕಳುಹಿಸಿರುವ ಜರ್ಮನಿ ಸೈನಿಕರು 13,821 ಮಂದಿ ಈಗ ಇಂಗ್ಲೆಂಡಿನಲ್ಲಿರುತ್ತಾರೆಂದೂ, ಈ ಪೈಕಿ ಕೆಲವರನ್ನು ಆ ದೇಶದ ಅಲ್ಪವಾದ ಕೆಲಸಗಳ ಕಡೆಗೆ ನೇಮಿಸಿ ಮಾಡಿಸುತ್ತಿರುವರೆಂದೂ, ಅನೇಕ ಮಂದಿಯನ್ನು ಕಾಡುಗಳಿಗೆ ಬಿಟ್ಟು ಗಿಡಗಳನ್ನು ಕಡಿಸಿ ಸೌದೆ ಮಾಡುವ ಕೆಲಸಕ್ಕೆ ಬಿಡುತ್ತಾರೆಂದೂ ಪೋಸ್ಟ್ ಮಾಸ್ಟರ್ ಜನರಲ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿದಾರೆ.

“ಸ್ಕೂಲ್ ಮಾಸ್ಟರ್” ಎಂಬ ಪತ್ರಿಕೆಯು ತಿಳಿಸುವುದೇನೆಂದರೆ—ಗ್ರೇಟ್ ಬ್ರಿಟನ್ನಲ್ಲಿ ಸ್ಕೂಲ್ ಮಾಸ್ತರುಗಳಾಗಿದ್ದ 11,400 ಜನರು ಸೈನ್ಯಕ್ಕೆ ಸೇರಿಕೊಂಡು ಯುದ್ಧಭೂಮಿಗೆ ಹೋದರು. ಮುಖ್ಯವಾಗಿ ಸಂಕ್ರಾಂತಿ ಮಾಡಿಕೊಂಡಿರುವ 9,000 ಮಂದಿ ಉಪಾಧ್ಯಾಯರು ಯುದ್ಧಕ್ಕೆ ಹೊರಡಲು ತಮ್ಮ ಹೆಸರುಗಳನ್ನು ಬರೆಸಿರುತ್ತಾರೆ. ಅವರಲ್ಲಿ 147 ಮಂದಿ ಉಪಾಧ್ಯಾಯರು ನಾವ ಸೈನ್ಯದಲ್ಲಿ ಕೆಲಸ ಮಾಡುತ್ತಿದಾರೆ. ಐದು ಮಂದಿ ಶೌರ್ಯಪ್ರದವಾದ ಯುದ್ಧಕಾರ್ಯಗಳನ್ನು ನಡೆಸಿ ಬಿರುದು ಸಂಪಾದಿಸಿಕೊಂಡಿದಾರೆ. 243 ಮಂದಿ ಉಪಾಧ್ಯಾಯರು ಯುದ್ಧದಲ್ಲಿ ಮಡಿದರು. 1.8 ಮಂದಿ ಗಾಯಪಟ್ಟಿದಾರೆ. 9 ಮಂದಿ ಸಿಕ್ಕ ಇಲ್ಲ.

ರಷ್ಯ ಯುದ್ಧಭೂಮಿಯಿಂದ ರಷ್ಯ ಸೈನ್ಯಗಳ ವಿಷ್ಯಾನಿಲ್ಲ ದಂಡನೆಯು ಬರೆಯುವುದೇನೆಂದರೆ—ಒಂದು ಸ್ಥಳದಲ್ಲಿ ಜರ್ಮನಿಯವರು ಸೆರೆ ಹಿಡಿದಿದ್ದ ರಷ್ಯ ಸೈನಿಕರಲ್ಲಿ 500 ಮಂದಿಯನ್ನು ಕರೆದುಕೊಂಡು ಒಂದು ಕಂದಕವನ್ನು ತೋಡುವಂತೆ ಆಜ್ಞೆ ಮಾಡಿದಾಗ ರಷ್ಯನವರು ಆಗಿಯದೆ ತಿರಸ್ಕಾರ ಮಾಡಿದರು. ಆಗ ಜರ್ಮನಿಯವರು ಮಿಲಿಟರಿ ಕೋರ್ಟಿನಲ್ಲಿ ಅವರನ್ನೆಲ್ಲಾ ವಿಚಾರಣೆ ಮಾಡಿ ಆ ಪೈಕಿ 50 ಮಂದಿಗೆ ಮರಣದಂಡನೆಯನ್ನು ವಿಧಿಸಿದ್ದಲ್ಲದೆ ಉಳಿದವರನ್ನು ಬಂದೀಖಾನೆಗೆ ಕಳುಹಿಸಿದರು. ಒಬ್ಬ ಪಾದ್ರಿಯವರನ್ನು ಮರಕ್ಕೆ ಕಟ್ಟಿ ಕಟ್ಟಿದ್ದ ಹಗ್ಗಗಳನ್ನು ಅವನ ದೇಹಕ್ಕೆ ಬಿಗಿದು ಕೊಂದುಹಾಕಿದರು. ಆ 50 ಮಂದಿಯನ್ನು ಸಾಲಾಗಿ ನಿಲ್ಲಿಸಿ ಸೈನಿಕರಿಂದ ಗುಂಡಿನಿಂದ ಹೊಡಿಸಿ ಕೊಂದುಬಿಟ್ಟರು

ಚೀನಾ ಚಕ್ರಾಧಿಪತ್ಯದಲ್ಲಿ ಯುವಾನ್ ಷಿಕಾಯಿ ಯವರು ಪ್ರಜಾಪ್ರಭುತ್ವವನ್ನು ಸ್ಥಾಪನೆಮಾಡಿ ಇದುವರೆಗೆ ತಾವೇ ಪ್ರೆಸಿಡೆಂಟಾಗಿ ರಾಜ್ಯಭಾರವನ್ನು ನಡೆಸುತ್ತಾ ಬಂದಿದಾರೆ. ಇವರು ತಾವೇ ಚಕ್ರವರ್ತಿಯಾಗಬೇಕೆಂದು ಈಚೆಗೆ ಪ್ರಯತ್ನಪಟ್ಟದ್ದರಿಂದ ಆಸೆ ಈ ಅಧಿಕಾರಗಳ ಪ್ರಜೆಗಳಿಗೆ ಇದು ಸಮ್ಮತವಾಗಲಿಲ್ಲ. ಆಗ ಅವರೆಲ್ಲಾ ದಂಗೆ ಎದ್ದರು. ಈಗ ರಾಜ್ಯದ ಶಾಂತಿ ಸಮಾಧಾನ ಬಂದಿಲ್ಲ. ಯುವಾನ್ ಷಿಕಾಯಿ ಯವರು ತಾವು ಚಕ್ರವರ್ತಿಯಾಗುವುದಿಲ್ಲವೆಂದು ಸಾರಿಸಿದಾಗ್ಯೂ ಪ್ರಜೆಗಳು ಸಮಾಧಾನಪಡದೆ ಅವರು ಪ್ರೆಸಿಡೆಂಟ್ ಸ್ಥಾನವನ್ನೂ ಬಿಟ್ಟು ಬಿಡಬೇಕೆಂದೂ, ಇಲ್ಲವಾದರೆ ದಂಗೆ ಕೃತ್ಯಗಳು ಶಮನವಾಗುವುದಿಲ್ಲವೆಂದೂ ಕೇಳುತ್ತಿದಾರೆ. ಇದರಂತೆ ಯುವಾನ್ ಷಿಕಾಯಿಯವರು ಆ ಅಧಿಕಾರವನ್ನು ತ್ಯಜಿಸುವುದಾಗಿಯೂ ಅವರ ಬಳಿ ವೈಸ್ ಪ್ರೆಸಿಡೆಂಟರಾಗಿರುವ ಲಿಯಾ ಅನ್ ಹಂಗ್ ಯವರು ಅವರ ಸ್ಥಾನವನ್ನು ಅಲಂಕರಿಸಬೇಕೆಂದೂ ತಂತೀವರ್ತಮಾನ ಬಂದಿದೆ

ಶ್ರೇಷ್ಠ ಔಷಧಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಗೋರೋಚನ ಮಾತ್ರೆ—2-3 ಮಾತ್ರೆಗಳು ಮಕ್ಕಳಿಗೆ ಹಿಂಸೆಯಿಲ್ಲದೆ ಸುಖಭೇದಿ ಮಾಡಿಸುತ್ತೆ. 75 ಮಾತ್ರೆಗೆ 4 ಆ, 5 ಡಿಸೆಗೆ 1 ರೂಪಾಯಿ.

2. ಜ್ವರದಮಾತ್ರೆ.—ಎಲ್ಲಾ ಜ್ವರಗಳನ್ನೂ ತಕ್ಷಣವೇ ನಿವಾರಿಸುತ್ತೆ. 20 ಮಾತ್ರೆ 8 ಆ, 6 ಡಿಸೆಗೆ 2½ ರೂ, 12 ಡಿಸೆಗೆ 4½ ರೂ.

3. ಬಂಘಾ ನಿವಾರಿಣಿ.—ಎಲ್ಲಾ ವಿಧ ನೋವುಗಳನ್ನು ನಿಮಿಷದಿಂದ ಬೇಗ ಗುಣಪಡಿಸುತ್ತೆ. ಡಬ್ಬಿಗೆ 4 ಆ, 5 ಕ್ಕೆ 1 ರೂ, 12 ಕ್ಕೆ 2½ ರೂ.

[126-19] ನಮ್ಮ ವಿಳಾಸ—ಪಂಡಿತ್ ಎಸ್. ಗರಳಪುರಿ, ಮೈಸೂರು

ಮೇಲ್ ಕೂಡಲೇ . ಕ್ಯಾಟಲಾಗ್ ಇನಾಂ. ಔಷಧವನ್ನು ಬರೆಯಿರಿ.

ಕಾಶೀ ಪಟ್ಟೆ ಪೀತಾಂಬರ

ಕಾಶೀಯಲ್ಲಿ ನಮ್ಮಲ್ಲಿ ಅನೇಕ ಜಾತಿ ವ್ಯಾಪಾರಗಳು ಸಾಮಾನುಗಳನ್ನು ತೆಗೆದುಕೊಂಡು ದೊಡ್ಡದಾಗಿ ಉತ್ಪತ್ತಿ ಮಾಡಿ ಬಹಳ ಹೆಚ್ಚು ಮಾರಾಟಗೆ ಮಾಡುತ್ತಾ ಇರುತ್ತೇವೆ. ಇನ್ನು ಮೇಲಾದರೂ ನಮ್ಮಲ್ಲಿ ತಯಾರಾಗುವ ಜರಿ ಶಾಲು, ಕಾಟ, ಜಮಖಾನ, ರುಮಾಲು, ದುಪ್ಪಟ್ಟಿ, ನಾನಾ ರುಮಾಲು, ಉದ್ಯಾನ ರುದ್ರಾಕ್ಷಿ, ಗಮಛಾ ಕೇತ್ರಗಳು ಬಹಳ ಸುಲಭ ಕ್ರಯಕ್ಕೆ ತೆಗೆದು ಲಾಭವನ್ನು ಹೊಂದಬೇಕಾಗಿ ಕೋರುತ್ತೇವೆ. ಇಂಗ್ಲೀಷಿನಲ್ಲೇ ಕಾಗದ ಬರೆಯಿರಿ.

[83 1] ನಮ್ಮ ವಿಳಾಸ—ಜಿ ಆರ್. ಕಂಪನಿ, ಕಾಶಿ

ನಿಮ್ಮ ಮನೆ ಬಳಿ ಕಾಶೀ ಕ್ಷೇತ್ರವಿದೆ.

ಕಾಶಿ ಕ್ಷೇತ್ರದಲ್ಲಿ ತಯಾರಾದ ದಸ್ತು ಮಾಲುಗಳನ್ನು ಅಂದರೆ—ರೇಷ್ಮೆ ಕೋಟ್ ಥಾನುಗಳು, ಸೀರೆಗಳು, ರವಿಕೆಗಳು, ದುಪಟಿಗಳು, ಇವೆಲ್ಲಾ ನಮ್ಮ ಖುದ್ದು ಸ್ವಂತ ಸ್ಪೆಷಲ್ ಮಗ್ಗಗಳಲ್ಲಿ ತಯಾರಾದವನ್ನು ಕಳುಹಿಸುತ್ತೇವೆ. ನಮ್ಮಿಂದ ತರಿಸಿ ಕೊಂಡರೆ ನಿಮ್ಮ ಉಡುಪುಗಳಿಗೆ ಹಾಕುವ ಹಣದಲ್ಲಿ ಶೇಕಡ 25 ರಷ್ಟು ಮಿಗಿಸುತ್ತೀರಿ. ಯಾಕೆಂದರೆ ದಳ್ಳಾಳಿಗಳಿಲ್ಲ; ನಾವ ಸ್ವಂತವಾಗಿ ತಯಾರ್ಮಾಡುತ್ತೇವೆ. ರೇಷ್ಮೆ ಮತ್ತು ಜರತಾರಿ ಅಂಚಿನ ಎಲ್ಲಾ ವಸ್ತುಗಳನ್ನೂ ನ್ಯಾಯವಾದ ಕ್ರಯಕ್ಕೆ ಮಾರುವೆವು. ಮುರ್ಷಿದಾಬಾದ್, ಭಾಗಲ್ಪುರ, ಅಸ್ಸಾಂ, ಟಸಾರ ರೇಷ್ಮೆ ಬಟ್ಟೆಗಳನ್ನು ಯಾವಾಗಲೂ ನಮಲ್ಲಿ ಬಿಕರಿಗೆ ಇಟ್ಟಿದೇವೆ. ಇದಲ್ಲದೆ ಬನಾರಸ್ ತಯಾರಿ ಯಾವ ಮಾಲುಗಳಾಗಲಿ ಶಾಲ್, ಕಂಚಿನ ಪದಾರ್ಥ, ಮರದ ಆಟದ ಸಾಮಾನ್, ರುದ್ರಾಕ್ಷಿಮಾಲೆ, ಸ್ಪಷ್ಟ ಪುನಗು, ಎಸ್ಸೆನ್ಸ್ ಸುಲಭ ಕ್ರಯಕ್ಕೆ ಕೊಡುತ್ತೇವೆ. 100 ರೂಪಾಯಿ ಮಾಲು ಕೊಳ್ಳುವವರಿಗೆ 6¼ ರಂತೆ ಡಿಸ್ಕಾಂಟು ಬಿಡುವೆವು. ವಿ. ಪಿ. ಇಂದಲೂ ತರಿಸಿಕೊಳ್ಳಬಹುದು. ನಮಗೆ ಇಂಗ್ಲೀಷಿನಲ್ಲೇ ಬರೆಯಬೇಕು.

ನಮ್ಮ ವಿಳಾಸ—ಶಾಳಮುಲ್ ವೇಣಿಪ್ರಸಾದ್,

[99-1] ರಾಣೀಕುವಾ, ಬನಾರಸ್ ಸಿಟಿ.

ಸಂಗೀತ ವಿದ್ಯಾದಾಯಿನಿ—ಕ್ರಯ ೧೨ ಆಣೆ.

ಇತರರ ಸಹಾಯವಿಲ್ಲದೆ ಅನಾಯಾಸವಾಗಿ ಸಂಗೀತ ಸಾಧಿಸಬೇಕೆಂದೂ, ನಾನಾ ಸ್ಥಳಗಳಲ್ಲಿ ಸಂಬಳದಿಂದ ಅಪೇಕ್ಷಿಸುವವರಿಗೆ ಬೇಕಾದ ವಿಷಯವನ್ನು ಚೆನ್ನಾಗಿ ಬೋಧಿಸತಕ್ಕ ಗ್ರಂಥವು ಇದೆಂದೇ. ಕಲಿಯುವವರಿಗೆ ಸುಲಭವಾಗಿ ತಿಳಿಯುವಂತೆ ಇದರಲ್ಲಿ ಗೀತ, ವರ್ಣ, ಕೃತಿಗಳು, ಸ್ವರ, ಸಾಹಿತ್ಯ, ತಾಳ ಗುರ್ತಿನಿಂದ ಬರೆಯಲ್ಪಟ್ಟಿವೆ. ಕಾವುಸವರಿದ ಬೇಗನೆ ತರಿಸಿರಿ.

ಸಂಗೀತ ಚಂದ್ರಿಕೆ.—ವರ್ಷದ ಚಂದಾ ರೂ. 3-0-0. ಮಾದರಿಗಳನ್ನು ರಿಜಿಸ್ಟರ್ ಮಾಡಿಸಿ. [90-1]

ಸಿ. ಪುಟ್ಟಯ್ಯ ಬ್ರದರ್ಸ್, ಹೊಸೂರು ರೋಡ್ ಆಫೀಸು, ಸೇಲಂ ಜಿಲ್ಲೆ.

ಊದಬತ್ತಿಗಳು

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳದ್ದಾಗಿದೆ.

ಕೇಶೋಲ್ಲಾಸಿನಿ ಸೀಸಾ 1 ಕ್ಕೆ 8 ಆಣೆ.

ಇದು ತಲೆ ಕೂದಲಿಗೆ ಹಚ್ಚಿ ಬಾಚುತ್ತಾ ಬಂದಲ್ಲಿ ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಕೂದಲು ಅತಿ ನುಣುಪಾಗಿಯೂ ಇರುತ್ತದೆ.

ಸುಗಂಧ ಕಾರ್ಪೂರ 1 ಕ್ಕೆ 1 ಆ. ಡಜನ್ 1 ಕ್ಕೆ 10 ಆಣೆ.

ಈ ಕಾರ್ಪೂರವನ್ನು ದೇವರ ಪೂಜೆಗೂ ಬಟ್ಟೆಯಲ್ಲಾಗಲೀ ಇಟ್ಟರೆ ಅದರ ಉತ್ತಮವಾದ ಸುವಾಸನೆಯಿಂದ ಸುವಾಸಿಸುತ್ತಿರುತ್ತೆ.

ಸುವಾಸನೆ ಸಾದು ಸೀಸೆ 1 ಕ್ಕೆ 2 ಆಣೆ

ಇದನ್ನು ನಮ್ಮ ಆಯುರ್ವೇದವನ್ನನುಸರಿಸಿ ಉತ್ತಮವಾದ ಅತ್ತರುಗಳನ್ನೂ ಸೇರಿಸಿ ಹಣೆಗೆ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗಿ ತಯಾರಿಸಿದೆ. ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಇದೆ. ಇಂಥಾ ಅಮೂಲ್ಯವಾದ ಈ ಎರಡು ಪದಾರ್ಥಗಳನ್ನು ನೋಡಿರುವದಿಲ್ಲ.

ವಿಳಾಸ—ಶಿ. ಎಲ್. ಉಪಾಧ್ಯಾಯ,

[54-6] ಸುಗಂಧಕಾರಿ, ಮೈಸೂರು.

IN THE COURT OF THE DISTRICT JUDGE BANGALORE DIVISION.

Miscellaneous Case No. 47 of 1915-16.

Before R. B. PLUMER Esquire, Bar-at-Law, District Judge.

(1) Mr. D. Appu Rao, Retired Superintendent of Survey, No. V Main Road, Chamarajapet, Bangalore City, Honorary President.

(2) Mr. Chengayyachetty, Retired Deputy Commissioner, Bull Temple Road, Chamarajapet, Bangalore City.

The petitioners above-named have made an application to this Court under Section 243 of the Mysore Company Regulation, praying for an order being passed for the winding up of the Bangalore Hindu Family Pension Fund, established in 1851, and do all that is necessary for the winding up of the said Fund.

Notice is hereby given that Thursday the 18th May 1916 is fixed for the hearing of this application, and that all persons having any interest in the said Fund are hereby required to appear in Person or by Pleader on the said date and show cause against the said application.

Given under my hand and the seal of the court this 27th day of March 1916.

'18-1 **R. B. PLUMER,**
Bar-at-Law,
B.S. *District Judge*

N. Rao, 64, Sydenham's Road, P. T., Madras.

(1) ಅಸ್ಸಲ್ ಮದ್ರಾಸ್ ಪರಿಮಳ ನಶ್ಯ; ಶಿರೋಭಾರ, ನೆಗಡಿ, ತಲೆನೋವು, ಪೀನಸಗಳನ್ನು ಹರಿಸುತ್ತೆ. ಕಿರುಪು ಡಿಸೆ 3 ಆ, ಡಜನ್ ರೂ 2.



ಎಂಟು ತೊಲೆ ಟಿನ್ 8 ಆ. ಮಾದ್ರಿ ಡಿಸೆಗೆ 1 ಆ. ಅಸಲ್ ಮದ್ರಾಸ್ ಸಾದಾ ನಶ್ಯ 8 ತೊಲೆ ಟಿನ್ 4 ಆ. ಸೇರಿಗೆ 11 ಆ ಬೀತ್ರಗೆ ಪಂಚೇರು ರೂ 3-2 ಆ—(2) ಬೇಕಾದ ಭಾಷೆ, ನಮೂನೆಗಳ ರಬ್ಬರ್ ಸ್ಟಾಂಪು. ಉತ್ತಮ ರೂ 2—(3) ಸ್ಟೀಲ್, ಪಾಕೆಟ್ ಎವರ್ ಸ್ಟೀಲ್ ವಾಚ್ ನಮೂನೆ ಸಹ ರೂ. 2-8 ಆ. ಮುಂಗೈಗೆ ಕಟ್ಟಿಕೊಳ್ಳುವ ರಿಸ್ಟ್ ವಾಚ್ ರೂ 5; 8 ದಿನಕ್ಕೊಮ್ಮೆ ಕೀ ಕೊಡುವ ಕೀಲು ಗಡಿಯಾರ ರೂ. 8 8 ದಿನಕ್ಕೆ ಕೀ ಕೊಡುವ ದೊಡ್ಡ ವಾಲ್ ಕ್ಲಾಕ್ ಆಫೀಸ್ ಗಡಿಯಾರ ರೂ. 5; ಅಲ್ಲ ಬ ಟೈಂಪೀಸು ರೂ. 2—(4) ಸುಂದರವಾದ ಚಿನ್ನದ ಗಿಲ್ಟಿನ ಗೆಜ್ಜೆ ಡಾಬು ರೂ 2-8 ಆ. ಸಾದಾ ರೂ. 1-8 ಆ.—(5) ಸಾವಿರಾ 14 ಕ್ಯಾರೆಟ್ ಚಿನ್ನದ ಕಟ್ಟಿನ ಫೌಂಟೆನ್ ಪೆನ್ನು ರೂ 2-8. ದುಯಂ ರೂ. 1 16 ಆ. ಪ್ರತಿಷ್ಠ ಸ್ಟೀಲ್ ಪೆನ್ನು ರೂ. 7—(6) ರೇಷ್ಮೆಯಂತಿರುವ ಅಸಲ್ ಹಾಲೆಂಡ್ ಚೀಲ್ ರೂ 1-8 ಆ—(7) ಮೃದುವಾದ ಟವಲ್ ಸರ್ಜು ಅಸ್ಸಲ್ ರೂ. 1-4 ಆ. ದುಯಂ ರೂ 1—(8) ಮುಂಚೈ ಅಂಚಿನ ಉಡುವ 7 ಮೊಳದ ಸಂಚೆ ಜೋಡಿ ರೂ. 2-8 ಆ. 8 ಮೊಳದ್ದು ರೂ 3—(9) 18 ಮೊಳ ಗಟ್ಟಿ ಅಂಚು ಮುಂಚೈ ಸೇಲು ಸೀರೆ ರೂ 3-4 ಆ. 16 ಮೊಳದ್ದು ರೂ. 3.—(10) ಅಚ್ಚ ಉಣ್ಣೆ 6 ಮೊಳದ ಶಾಲು ರೂ. 6. ದಪ್ಪ ಉಣ್ಣೆ ಅಲ್ಪದ ಬಾನ್ಯನ್ ರೂ 4. ಒಳ್ಳೆದ ಬಾನ್ಯನ್ ರೂ 5—(11) “ಕಾಮಿನಿಯಾ” ಹೇರಾಯಿಲ್ ಸೀಸೆ ರೂ. 1, ಮೂರು ಸೀಸೆ ರೂ. 2-10.—(12) “ಓಟೋಪೇಟೆಂಟು” “ಓಟೋಡಿಲ್ ಬಹಾರ್” ಸೆಂಟ್ ಸೀಸೆ 6 ಆ—(13) “ಅಮೃತಾಂಜನ” ತಲೆನೋವಿನ ಸಂಜೀವಿ 8 ಆ. “ಅಮೃತಮೂಲಕ ತೈಲ” ಅಜೀರ್ಣಕ್ಕೆ ಸೀಸೆ 8 ಆ. “ಸುಧಾರಸ” ಉಷ್ಣ ಹಾನಿ ಹೋಗ ಹೊಟ್ಟೆ ನೋವು ವೃದ್ಧಿಮಾಡುತ್ತೆ. ಸೀಸೆ 8 ಆ—(14) ಅಂಚೆಯಿಂದ ½ ಡಿ. ಸೀಸೆ 3 ಆ. ಯೂರೋಪ್ ದೇಶದ ಯುದ್ಧ ಚಿತ್ರ 30 ಚಿತ್ರ ಸಹಿತ ರೂ. 1.

ವಿಳಾಸ—ಎನ್. ರಾವ್, 64, ಸೈಡೆನ್‌ಹಾಂ ರೋಡ್,

[87-1] ಪಾರ್ಕ್‌ಟೌನ್, ಮದ್ರಾಸು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

೧೯೧೬ ನೇ ಇಸವಿ ಮಾರ್ಚಿ 23 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಬಾಕಿ—(1) ಷೇರು ಮೊಬಲಗು	ರೂ.	10,00,000
(2) ರಿಜರ್ವ್ ಫಂಡು	,,	75,000
(3) ಠೇವಣಿಗಳು	,,	39 63 273
(4) ಇತರೆ	,,	35,556
(ಸಾ ಲಾಭ ಬಿಟ್ಟಿರುತ್ತೆ.) ಜುಮ್ಲಾ	ರೂ.	50,73,829
ಜಮಾ—(1) ಕೈಯಲ್ಲಿ, ಬ್ಯಾಂಕುಗಳಲ್ಲಿರುವ ಹಣ	ರೂ.	4 38.545
(2) ಸಾಲ ಮತ್ತು ಇತರ ಸಾಲಗಳು	,,	34,35 215
(3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	4,83,329
(4) ಇನ್ವೆಸ್ಟ್‌ಮೆಂಟುಗಳು	,,	6,71.822
(5) ಏಜೆಂಟರುಗಳಲ್ಲಿರುವ ಮೊಬಲಗು	,,	12.617
(6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	18 271
(7) ಇತರೆ	,,	14,070
(ಸಾ, ಲಾಭ ಬಿಟ್ಟಿರುತ್ತೆ.) ಜುಮ್ಲಾ	ರೂ.	50,73,829

ವಿ. ರಾಮಸ್ವಾಮಯ್ಯ, ಆ : ಮ್ಯಾನೇಜರ್.

ಮೈಸೂರು ವ್ಯವಸಾಯದ ಇಲಾಖಾ.

ಈ ಗಿಡಕ್ಕೆ ಬೀಳುವ ಹುಳುವು ತಿಗಣೆಯ ಜಾತಿಯನ್ನು ಸೇರಿದೆ. ಈ ಹುಳುವಿನಿಂದ ಪ್ಲಾಂಟರುಗಳಿಗೆ ಬೇಕಾದ ಸಹಾಯವನ್ನು ಕೊಡತಕ್ಕ ವ್ಯವಸಾಯದ ಇಲಾಖೆಯ ಅಧಿಕಾರಿಗಳು ಚಿಕ್ಕಮಗಳೂರಿನಲ್ಲಿಯೂ ... ಈ ಹುಳುಗಳು ಬಿದ್ದಿರುವ ತೋಟಗಳಲ್ಲಿ ... ಹುಳುಗಳ ಔಷಧಿ ... [illegible] ... ಪ್ಲಾಂಟರುಗಳು ಸಂಘದ ಸೆಕ್ರೆಟರಿಯವರಲ್ಲಿಯೂ ಈ ಯಂತ್ರಗಳು ... ಶಿಕ್ಷಣ ... ಈ ಕೆಲಸದಿಂದ ಸಂಪೂರ್ಣ ಪ್ರಯೋಜನವನ್ನು ಹೊಂದಬೇಕಾದರೆ ಒಂದು ಪ್ರದೇಶದಲ್ಲಿರುವ ಪ್ಲಾಂಟರುಗಳು ಒಟ್ಟಾಗಿ ಸೇರಿ ತಿಗಣೆಗಳು ಬಿದ್ದಿರುವ ತೋಟಗಳನ್ನೆಲ್ಲಾ ದ್ರಾವಕ ಹಾಕಿ ಚಿಮುಕಿಸಬೇಕು.

ಈಗ ಯುರೋಪಿನಲ್ಲಿ ಯುದ್ಧ ನಡೆಯುತ್ತಿರುವುದರಿಂದ ಇದುವರೆಗೆ ... ಯಂತ್ರಗಳು ಬರುವದಿಲ್ಲವಾದ್ದರಿಂದ ಕೆಲವು ... ಒಂದೊಂದರಲ್ಲಿ 2 ಗ್ಯಾಲನ್ ದ್ರಾವಕ ಹಿಡಿಯುವುದು. ಒಂದೊಂದು ... ಬೇಕಾದವರು ಬೆಂಗಳೂರಿನಲ್ಲಿರುವ ... ಅಧಿಕಾರಿಗಳಿಗೆ, ಸಕಲೇಶಪುರದಲ್ಲಿಯೂ ಚಿಕ್ಕಮಗಳೂರಿನಲ್ಲಿಯೂ ಇರುವ ಅಸಿಸ್ಟೆಂಟ್ ಎಂಟಮಾಲಜಿಸ್ಟರಿಗೂ ಬರೆಯಬಹುದು.

ಲೆ. ಸಿ. ಕೋಲ್‌ಮನ್,
ವ್ಯವಸಾಯದ ಇಲಾಖಾ ಡೈರೆಕ್ಟರ್.

ಮಲೆನಾಡಿನ ವೈದ್ಯರು ಮತ್ತು ಜ್ವರದ ಕೆಲಸ.

ಮಲೆನಾಡಿನ ಜನಗಳ ಉಪಯೋಗಕ್ಕಾಗಿ ಸರ್ಕಾರದವರು ಅನೇಕ ಅನುಕೂಲಗಳನ್ನು ಕಲ್ಪಿಸುತ್ತಿರುವುದು ಸರ್ವಜನ ತಿಳಿದ ವಿಷಯವಾಗಿದೆ. ರೋಗದ ... ಮಲೆನಾಡಿನ ಕ್ಷೀಣತೆಗೆ ಒಂದು ಬಲವಾದ ಕಾರಣವೆಂದು ... ಜನಗಳಿಗೆ ಚಿಕಿತ್ಸೆಯನ್ನು ಕಲ್ಪಿಸಿಕೊಡಬೇಕೆನ್ನುವ ... ಆಸ್ಪತ್ರೆಗಳೆಂತಲೂ ... ಆಸ್ಪತ್ರೆಗಳೆಂತಲೂ ವಿಭಾಗಿಸಬೇಕೆಂದು ಉದ್ದೇಶಿಸಿ ... ತೀರ್ಥಹಳ್ಳಿ, ಹುಮಚದಕಟ್ಟೆ, ಆನಂದಪುರ, ... ಆಸ್ಪತ್ರೆಗಳನ್ನು ಅರ್ಧ ಸಂಚಾರಕ್ಕಾಗಿ ಮಾಡಿದ್ದಾರೆ. ... ವಿದ್ಯಾವಂತರಾದ ಮತ್ತು ನಿಪುಣರಾದ ವೈದ್ಯರನ್ನು ನೇಮಿಸಿ ... ಸಂಚರಿಸಲು ಆರಂಭಿಸಿದಾರೆ. ಪ್ರತಿಯೊಂದು ಆಸ್ಪತ್ರೆಗೆ 6 ಮೈಲಿ ... ಗ್ರಾಮಗಳು ಈ ವೈದ್ಯರುಗಳ ಅಧೀನಕ್ಕೆ ಒಳಪಟ್ಟಿವೆ. ... ಸಂಚರಿಸುವದಕ್ಕೆ ಅನುಕೂಲಗಳು ... ಸರ್ಕಾರದವರಿಂದಲೇ ಒದಗಿಸಲ್ಪಡುವುದು ... ಕಲ್ಪಿಸಿ ... ಅಲ್ಲದೆ ವೈದ್ಯರು ಬಂದನಂತರ ... ಸೇವನೆ ಮಾಡಬೇಕು. ... ಪ್ರಜೆಗಳ ರೋಗಗಳನ್ನು ನಿವಾರಿಸುವ ... ಧನವ್ಯಯವಿಲ್ಲದೆ ಚಿಕಿತ್ಸೆ ... ಫಲವನ್ನು ಹೊಂದಲು ಮಲೆನಾಡಿನ ಪ್ರಜೆಗಳು ಪ್ರಯತ್ನ ... ತಿಂಗಳಿಗೆ ಒಂದು ಸಾರಿಯಾದರೂ ವೈದ್ಯರು ಬಂದು ಗ್ರಾಮದ ... ವೈದ್ಯರು ... ಅವರನ್ನು ... ಅಲ್ಲದೆ ಈ ವೈದ್ಯ ಮಹಾಶಯರಿಂದ ಸಾಧ್ಯವಾದಷ್ಟು ಸಂಪೂರ್ಣ ... ಆರೋಗ್ಯಭಾಗ್ಯದ ಮೇಲೆ ಉಪನ್ಯಾಸ ... ಅನುಗುಣವಾಗಿ ... ಮುಖ್ಯವಾಗಿ ಮಲೆನಾಡಿನ ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ಸರ್ಕಾರದವರು ... ಈ ಮಹದುಪಯೋಗವಾದ ಏರ್ಪಾಡಿನಿಂದ ಸಂಪೂರ್ಣ ಪ್ರಯೋಜನವನ್ನು ಹೊಂದಿ ಸರ್ಕಾರದವರ ಉದ್ದೇಶಗಳನ್ನು ಸಫಲಗೊಳಿಸುವಂತೆ ... ಬೇಡುವ ... ಸೇವಕ.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142 87]

First Valuation Result :—The total liablities under all Assurances issued up to 31st March 1918, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಉಗಾದಿ ಬಹುಮತಿ. ಗಡಿಯಾರದ ಇನಾಂ. ಉಗಾದಿ ಬಹುಮತಿ.

ಸುಂದರವಾದ ಅಮೇರಿಕನ್ ವಾಚ್ ರೂ. 3-0-0.

ಈ ಗಡಿಯಾರವನ್ನು ಅಮೆರಿಕಾ ದೇಶದಲ್ಲಿ ಹೊಸದಾಗಿ ತಯಾರಿಸಿ ಕಳುಹಿಸುತ್ತಾರೆ. ಈ ಗಡಿಯಾರ ಕೇಸ್ ಬಹಿಷ್ಕೃತದ ಸಾಮಾನುಗಳಿಂದಲೂ ತಯಾರಾಗಿ ಅಂದವಾಗಿರುತ್ತೆ. ಅಮೆರಿಕಾ ದೇಶದ ಹೊಸ ಮತ್ತು ನಾಜೂಕಾಗಿ ಕಟ್ಟಿ ಇರುತ್ತೆ. ಈ ನೋಡತಕ್ಕ ಗಡಿಯಾರವನ್ನು ತರಿಸಿಕೊಂಡು ನೋಡಿ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಫೌಂಟನ್ ಪೆನ್ನನ್ನು ಮತ್ತು ಚೈನ್ ವಾಚ್ ಇನಾಮು ಕಳುಹಿಸುವೆವು.



ಧೈರ್ಯಲಕ್ಷ್ಮಿ ಫೌಂಟನ್ ಪೇನಾ.

ವಾಚ್ ಫೌಂಟನ್ ಪೇನಾ ಸೇರಿ ರೂ 3 ಮಾತ್ರ. ಈ ನಕ್ಷೆಯಲ್ಲಿ ತೋರಿಸಿರುವ ಹೊಸ ಸಮೂನೆ ಫೌಂಟನ್ ಪೇನಾ ಇಂಗ್ಲೆಂಡಿನಿಂದ ತರಿಸುತ್ತೇವೆ. ಪೆಟ್ಟಿಗೆ ಮೇಲೆ ನಮ್ಮ ಕಂಪನಿ ಹೆಸರು ಗಿಲೀಟು ಅಕ್ಷರಗಳಿಂದ ಹಾಕಿರುತ್ತದೆ. ಇದಕ್ಕೆ ಒಂದು ಸಾರಿ ಇಂಕಿಯನ್ನು ಹಾಕಿದರೆ ಅನೇಕ ದಿವಸಗಳವರೆಗು ಬರೆಯಬಹುದು. ಪ್ಯಾಟೆಂಟ್ ಚಿನ್ನದ ಮುಳ್ಳು ಹಾಕಿರುತ್ತೆ. ಇದು ನೋಡುವುದಕ್ಕೆ ಮನೋಹರವಾಗಿಯೂ ಬರೆಯುವದಕ್ಕೆ ಸುಲಭವಾಗಿಯೂ ಇದೆ. 1 ಸಲ ಈ ಪೇನಾವನ್ನು ಬರೆದರೆ ಪುನಃ ಯಾವ ಪೇನಾವನ್ನೂ ಉಪಯೋಗಿಸಲಾರರು. ನಮ್ಮ ಕಂಪನಿ ಪ್ರಖ್ಯಾತಿಯಾಗಬೇಕೆಂಬ ಉದ್ದೇಶದಿಂದ ಬಹು ಮಿತ ಕ್ರಯಕ್ಕೆ ಕಳುಹಿಸುತ್ತೇವೆ. ಈ ಅಪೂರ್ವವಾದ ಸಮಯವನ್ನು ಬಿಟ್ಟರೆ ಮರಳಿ ದೊರೆಯದು.

ವಿಳಾಸ.—ಡಿ. ಎ. ಎಸ್. ಪಾಣಿ ಅಂಡ್ ಕಂಪನಿ,
[63—5] 3, ಅರುಳಪ್ಪನ ಬೀದಿ, ಮದರಾಸ್.

ಕೆಂಪು ಕಲ್ಲಿನ ಬುಲಾಕು.

ಈ ಬುಲಾಕನ್ನು ಸೀಮೆಯಲ್ಲಿ ತಯಾರಿಸಿ ಕಳುಹಿಸುತ್ತಾರೆ. ಇದು ಕಲ್ಲುಗಳು ಕೆಂಪುಗಳ ಪ್ರಕಾಶಕ್ಕೆ ಥಳಥಳಿಸುವದು. ನವರ್ಣ ಧಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಲ್ಪಟ್ಟಿದ್ದು. ಇದನ್ನು ನೋಡುವವರು 200 ರೂ. ಸರಿಯಾಗಿ ಬೆಲೆ ಬಾಳುವದೆಂದು ಹೇಳುವರು. ಈಗ ನಮ್ಮ ಕಂಪನಿ ಹೆಸರು ಪ್ರಖ್ಯಾತಿ ಹೊಂದುವದಕ್ಕಾಗಿ 2 ರೂಪಾಯಿಗೆ ವಿಕ್ರಯಿಸುವೆವು. ಬೇಗನೆ ತರಿಸಿಕೊಳ್ಳಿ.

[63-5] ನಮ್ಮ ವಿಳಾಸ—
ಡಿ. ಎ. ಎಸ್. ಪಾಣಿ, 3, ಅರುಳಪ್ಪನ ಬೀದಿ, ಮದರಾಸು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ 12 ಆಣೆಗೆ ಕೊಡಲ್ಪಡುತ್ತೆ.

ಆಶ್ಚರ್ಯವಾದ ಸೇವಿಂಗು ಬಾಕ್ಸು ಎಂಬ ಮರ್ಮದ ಪೆಟ್ಟಿಗೆ.

ಈ ಪೆಟ್ಟಿಗೆ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ ಬಹು ಸೊಗಸಾಗಿ ಚಿತ್ರ ವಿಚಿತ್ರ ಕೆಲಸ ಮಾಡಿ ನೋಡುವವರಿಗೆ ಸಂತೋಷಕರವಾದ ಪೆಟ್ಟಿಗೆ. ಇದರ ಪ್ರಕಾಶ ಬೆಳ್ಳಿಯ ಹಾಗೆ ಹೊಳೆಯುತ್ತದೆ. ಈ ಪೆಟ್ಟಿಗೆಯಲ್ಲಿ ಹಣವನ್ನಾಗಲಿ, ಬೆಳ್ಳಿ ವಸ್ತುಗಳನ್ನು ಇಟ್ಟು ಮುಚ್ಚಿಬಿಡಿರಿ. ಅನಂತರ ಅದನ್ನು ಯಾರಾದರೂ ತೆರೆದರೆ ಅದರಲ್ಲಿ ಇರುವ ವಸ್ತುಗಳು ಮಾಯವಾಗುವವು. ಆ ಪದಾರ್ಥಗಳು ಇಟ್ಟವರು ತೆರೆದರೆ ಅದರಲ್ಲಿ ಇರುವ ವಸ್ತುಗಳು ಕಾಣುವವು. ಈ ಪೆಟ್ಟಿಗೆ ಜೇಬಿನಲ್ಲಿ ಕೂಡ ಇಟ್ಟುಕೊಳ್ಳಬಹುದು. ಬೇಗನೆ ತರಿಸಿಕೊಳ್ಳಿ. ಈ ಪೆಟ್ಟಿಗೆ ಇಷ್ಟವಿಲ್ಲದಿದ್ದರೆ 8 ದಿನಗಳೊಳಗೆ ಬರೆದರೆ ತರವಾದ ಹಣವನ್ನು ವಾಪಸ್ ಕಳುಹಿಸುವೆವು.

ನಮ್ಮ ಪೆಟ್ಟಿಗೆಯನ್ನು ತರಿಸಿಕೊಳ್ಳುವರಿಗೆ 1916 ನೇ ಸಂವತ್ಸರದ ಸುಂದರವಾದ ಟೇಬಿ ಕ್ಯಾಲೆಂಡರ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ—ರಾಮಚಂದ್ರ ಅಂಡ್ ಕಂಪನಿ,
[63-5] 16, ತಿರುಪಳ್ಳಿ ಬೀದಿ, ಮದರಾಸು.

ಡೋಂಗರೆ ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿದಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177—31]

ಕ್ರಯ ಬಾಟ್ಲಿ ೧ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,
ಚೌಪಾಟಿ, ಗಿರಗಾಂವ, ಮುಂಬಯಿ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸಿಂತಾಲ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸಿಂತಾಲನ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ನೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಕಾಲಕ್ಷೇಪಕರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲಾ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸಿಂತಾಲನ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ [33 9]

40 ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ
95 ,, ,, ,, 4 ,,	300 ,, ,, ,, 9 ,,	80 ,, ,, ,, 4 ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳಿಸಲ್ಪಡುವದಿಲ್ಲವು. ಮತ್ತು ಪೋಸ್ಟೇಜು ವಗೈರಾದ ಖರ್ಚು ಪ್ರತ್ಯೇಕ ಬೀಳುವುದು. ವಿಳಾಸಗಳು.—

ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ.

ಸೋಲ್ ಏಜೆಂಟರು—ಸಿಂತಾಲ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ. ನಮ್ಮ ದಕ್ಷಿಣ ಕನಡಾ ಏಜಂಟರು—ದಿ ಉಲ್ಲ ಸ್ಟೋರ್ಸ್, ಮಂಗಳೂರು.

ಮೋಸ ಹೋಗಬೇಡಿ ! ಮೋಸ ಹೋಗಬೇಡಿ !!

ನಮ್ಮ ಕಂಪನಿಯು ಕಳೆದ ನಾಲ್ಕು ವರುಷಗಳಿಂದಲೂ ಹೆಸರುವಾಸಿ ಪಡೆದಿದೆ. ಪ್ರತಿ ದಿನವೂ ಹೈದ್ರಬಾದ್, ಮದ್ರಾಸ್, ಬೊಂಬಾಯಿ, ಕಲ್ಕತ್ತಾ, ರಂಗೂನ್, ಬರ್ಮಾ, ಕೊಲಂಬೊ, ಸಿಲೋನ್, ಪೆನ್ನಾಂಗ್ ಮುಂತಾದ ದೇಶಗಳಿಂದ ನಮಗೆ ಆರ್ಡರುಗಳು ಬರುತ್ತಲಿವೆ. ಬಹಳ ಜನಗಳು ನಮ್ಮ ಕಂಪನಿಯ ಔಷಧವನ್ನು ಉಪಯೋಗಿಸಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟಿರುವರು. ಬೇಕಾದವರು ನಮ್ಮ ಕಂಪನಿಗೆ ಬಂದು ನೋಡಬಹುದು.—ಕೆಲವರು ನಮ್ಮ ಕಂಪನಿಯ ಹೆಸರನ್ನು ಹೇಳಿ ಜನಗಳಿಗೆ ನಕ್ಲಿ ಸಾಮಾನುಗಳನ್ನು ಕೊಟ್ಟು ಮೋಸಪಡಿಸುತ್ತಿರುವರು. ಆದ್ದರಿಂದ ನಮ್ಮ ಭಾಂಗಿಯನ್ನು ತೆಗೆದುಕೊಳ್ಳುವಾಗ "ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯೂ ರೋಡ್, ಬೆಂಗಳೂರು ಸಿಟಿ" ಎಂದು ಮತ್ತು ನಮ್ಮ ಕಣ್ಣಿನ ಎದುರಿನಲ್ಲಿ ಕಾಣುತ್ತಿರುವ ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಆಗಿರುವ ಟ್ರೇಡ್ ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿರಿ. ಹಾಗೆ ನೋಡಿ ತೆಗೆದುಕೊಳ್ಳದೆಹೋದರೆ ಮೋಸಹೋಗುವಿರಿ ಎಂದು ತಮಗೆ ತಿಳಿಸುತ್ತೇವೆ.

1,000 ರೂ. ಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಬಾಮಿಸ್ರಿ ಮುರಬ್ಬಾ ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

Registered

ಈ "ಸಾಬಾಮಿಸ್ರಿ ಮುರಬ್ಬಾ" ವಿನ ಸೇವನೆಯಿಂದ ವೀರ್ಯನಷ್ಟದಿಂದ ಉಂಟಾದ ಎಲ್ಲಾ ವ್ಯಾಧಿಗಳನ್ನೂ ಗುಣಮಾಡುವುದು ಮತ್ತು ಕೈಕಾಲು, ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆ ಸರಿಯಾಗಿ ಆಗದಿದ್ದರೂ, ದೇಹದಲ್ಲಿ ರಕ್ತ ಕೆಟ್ಟು ಹೋಗಿದ್ದರೂ ಈ ಸಾಬಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ದೇಹವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾ ಸಾಬಾಮಿಸ್ರಿಯಲ್ಲ ತಯಾರಿಸಲ್ಪಟ್ಟಿಲ್ಲವೆಂದು ವ್ಯಕ್ತಪಡಿಸುವವರಿಗೆ 1,000 ರೂಪಾಯಿ ಬಹುಮಾನ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ಪಡೆಯಬಹುದು. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ ಡಬ್ಬಿ 1 ಕ್ಕೆ 2-0-0. ಟಪಾಲು ಮಾರ್ಗ 1 ಡಬ್ಬಾದಿಂದ 3 ಡಬ್ಬಿವರೆಗೆ 0-6-0. ಕೇಟಲಾಗು ಅಪೇಕ್ಷಿಸುವವರಿಗೆ ಪುಗಸಟ್ಟೆ ಕಳಿಸುವೆವು.

ನಮ್ಮ ವಿಳಾಸ:—ಡಿ ಮನ್ನಾಲಾಲ್, ಡೆಲ್ಲಿ ವೈದ್ಯರು, 5 ಅವೆನ್ಯೂ ರೋಡ್, ಬೆಂಗಳೂರು ಸಿಟಿ.

[79—8]

NOTICE

Tenders are hereby invited for the exclusive privilege of Establishing Bonded Depots in the Mysore Province and transporting thereto Arrack and other Country Spirits *from the Bangalore Government Central Distillery under bond.* During the period 1st July 1916 to 30th June 1919.

2. Every tender must be accompanied by a deposit of Rs. 600 and should reach the undersigned *on or before noon* of Monday the 10th April 1916 on which date it will be opened by the Excise Commissioner at 12 noon.

3. The quantity of Arrack and other Country Spirits *transported from the Distillery to the Depots is estimated* at between four and four and a half lacs of gallons per annum. [85-2]

4. For conditions and further particulars see Notification No. Fl. 4866 S. R. 115-15-2, dated 22-3-1916, published in Part I of the Mysore Gazette.

5. Copy of Notification and form of application may be had on requisition to the undersigned.

Excise Commissioner's Office, Dated, Bangalore, 27th March 1916.

P. RAGHAVENDRA RAO, *Excise Commissioner in Mysore.*

ಉಣಾಂ ಬಹುಮಾನ. ಹೊಸ ಕಂಪೆನಿ. ಹೊಸ ಸಾಕಲುಗಳು

ಅಮೇರಿಕ ದೇಶದ ಎಲೆಕ್ಟ್ರಿಕ್ ಮೂಲಕ ಮಾಡಲ್ಪಟ್ಟ 3 ರೂಪಾಯಿ ಬೆಲೆಬಾಳತಕ್ಕದ್ದನ್ನು ರೂ. 1-8-0 ಕೊಡುವೆವು. ಇದನ್ನು ನಮ್ಮ ಸ್ವಂತ ಆರ್ಡರ್ ಮೇರೆ ಅಮೇರಿಕಾ ದೇಶದಲ್ಲಿ ಕಂಚು ಹಿತ್ತಾಳೆಯಲ್ಲಿ ಮಾಡಿಸಿದೆ.

ಪಕ್ಕದ ಚಿತ್ರದ ಹಾಗೆ ಇರುತ್ತದೆ. ಇದರ ಆಲ್ಲಿಗಳು ಕೋಟಿ ಸೂರ್ಯಪ್ರಕಾಶಕ್ಕೆ ಥಳಥಳಿಸುವವು. ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿ ಇರುತ್ತೆ. ಇದನ್ನು ನೋಡುವವರು ಪುಷ್ಪಹಾರವೆಂದು ಹೇಳುವರು. ಅಷ್ಟು ಸೂರ್ಯಪ್ರಕಾಶಕ್ಕೆ ಥಳಥಳಿಸುವವು. ಬೇಗಬೇಗನೆ ವಿದಾಯವನ್ನು ಮಾಡುವವರಿಗೆ ಒಳ್ಳೇ ಛಾಯೆಯ ಸಿಕ್ಕುವವು.

ಮಲ್ಲಿಗೆ ಹೂವಿನ ಸೀರೆ.

ಈ ಸೀರೆಗಳನ್ನು ಉಚಿತ ಹಣಕ್ಕಾಗಿ ಮಾರಿ ಬಿಡುತ್ತೇವೆ. ಇವರ ಕ್ರಯ ರೂ 3 ವಿ. ಪಿ. ಚಾರ್ಜು 0-8-0 ಪ್ರತ್ಯೇಕ. ಇದೇ ಸೀರೆ ಒಳಗಾಗಿ ತಾರುಕೊಳ್ಳುವರಿಗೆ ರೂ 1-0-0 ಬಹುಮಾನಕೊಟ್ಟು ಇನ್ನೂ ಎಲ್ಲರೂ ವಿಕ್ರಯಿಸುವ ಸೀರೆಗಳಲ್ಲಿ ಭಾರಿ ಕೃಮದ ಸೀರೆಗಳು ಇವು. ಇದು ಪದಕ್ಕೆ ಹೊಸಬೆದುವಣಿಗೆಯೂ ನವನವಾದ ಮಾತು ಇದೆ. ಒಟ್ಟ ಗ್ಯಾರಂಟಿ ಕೊಡುವೆವು. ಸೀರೆಯು ಉದ್ದ 16 ಮೊಳ, ಸೊಗಸಾದ ಅಂಚು ಕಟ್ಟಿ ಇರುತ್ತೆ. ಇದು ಎಲ್ಲರೂ ಉಡುವದಕ್ಕೆ ಅನುಕೂಲವಾದುದು. ಪ್ರತಿದಿನ ನಾವಿರಾರು ಸೀರೆಗಳು ವಿಕ್ರಯಿಸುತ್ತದೆ. ದಯವಿಟ್ಟು 1 ಸೀರೆಯನ್ನು ತರಿಸಿಕೊಂಡು ಅಲಂಕಾರ ಭೂಷಿತರಾಗುವಿರೆಂದು ನಂಬಿ.

ವಿಳಾಸ.—ರತ್ನಂ ಕಂಪೆನಿ, ಕ್ಲಾತ್ ಮರ್ಚೆಂಟ್, 3, ಐಯನ್ನಪ್ಪನ ಬೀದಿ, ಮದರಾಸು.

[83—5]

ರೊಂಡಿನೋವನ್ನು "ಸ್ನೇಹಿತರಿಂದ ಹಿಂಸೆಪಡುವವರು" ಸಮಾನವಾಗಿ ಒಪ್ಪುವ ಪ್ರಖ್ಯಾತ ಬರವಣಿಗೆಗಾರರು ವಿವರಿಸಿ ಬರೆದಿದ್ದಾರೆ. ವಿಲಿಯಮ್ಸ್ ಪಿಂಕ್ ಪಿಲ್ಸ್ ಎಂಬುವ ಔಷಧವನ್ನು ಅದ್ಭುತರೀತಿಯಲ್ಲಿ ಮಾಡಿ ನಮಗಿತ್ತು.

ಅಲ್ಲಿಂದ ಜನರ ಪೈಕಿ ಕೆಲವರು ನಂಬಿಕೆಯಿಂದಲೂ, ಕೆಲವರು ಬಿರವಸದಿಂದಲೂ, ಕೆಲವರು ಅನುಭವದಿಂದಲೂ ಉಪಯೋಗಿಸುತ್ತಾರೆ. ಆದರೆ ರೋಗಿನ ಜಿಡುಗಿದವೊದಗ, ನಿಷ್ಠೂರತೆಯೇ ಎಲ್ಲರೂ, "ರೊಂಡಿನೋವಿಗೆ ಇದೊಂದೇ ಕೈಕಂಡ ಔಷಧವೆಂದು" ಹೇಳುವರು.

ಬಾತ್ ನಗರದ ಟ್ಯುನಿಟ್ ಬೀದಿಯಲ್ಲಿರುವ ಮಿ॥ ಹೆಚ್ಲ್ಯಾ. ನಾಲ್ಸ್ ಬರೆಯುವುದು:—"5 ವರುಷಗಳ ಹಿಂದೆ ನಾನು ರೊಂಡಿನೋವಿನಿಂದ ಬೋಳುಬಿದ್ದೆ. ನನ್ನ ಬಲ ತೋಳಿಯಿಂದ ಆಂಗಾಲಿನವರೆಗೆ ವಾಯುವಿನ ಯಾತನೆಯಿಂದ ರಾತ್ರೀ ಹಗಲು ಕಷ್ಟಪಟ್ಟೆನು. ರಾತ್ರಿಯಲ್ಲಿ ನೋವಿನ ಹಿಸೆಯಿಂದ ಎಚ್ಚರವಾಗಿ, ನಿದ್ದೆಯೇ ಬರುತ್ತಿರಲಿಲ್ಲ. "ವಿಲಿಯಮ್ಸ್ ಪಿಂಕ್ ಪಿಲ್ಸ್ ಎಂಬುವನ್ನು ಒಂದು ಸಲ ಉಪಯೋಗಿಸಿ ಪೂರ್ಣ ಸೌಖ್ಯ ಹೊಂದಿದೆನು."

ಸೀಸೆ 1 ಕ್ಕೆ 1 ರೂಪಾಯಿಯಂತೆ ಎಲ್ಲಾ ಔಷಧಗಾರರಿಂದಲೂ ದೊರಕಲ್ಪಡುತ್ತೆ.

[61-48]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

17—3—1916 ರಿಂದ 21—3—1916 ರ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	3	3	0	0
ಬೆಂಗಳೂರು ಡಿಸ್ಟ್ರಿಕ್ಟು	8	5	0	0
ಮೈಸೂರು ,,	17	8	0	0
ಕೋಲಾರ್ ,,	4	2	0	0
ಕೋಲಾರ್ ಚಿನ್ನದ ಗಣಿಗಳು	1	1	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	1	0	0	0
ಚಿತ್ರದುರ್ಗ ,,	1	4	0	0
ಕಡೂರ್ ,,	0	0	0	0
ಶಿವಮೊಗ್ಗ	13	6	0	0
ಜಮೆ...	48	29	0	0

ಶಾಲಿವಾಹನ ಶಕ ವರುಷಂಗಳು 1839 ನೇ ನಳ ಸಂವತ್ಸರದ ಉತ್ತರಾಯಣ ವಸಂತ ಋತು ಚೈತ್ರ ಶುದ್ಧ ಪಂಚಮಿ ಶುಕ್ರವಾರದಿಂದ ಚೈತ್ರ ಶುದ್ಧ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1916 ನೇ ಏಪ್ರಿಲ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ವಿಶಾ ಮಾಸ ಕೆಗ
7	ಶುಕ್ರ *	ಪಂಚಮಿ	45-46	ರೋಹಿಣಿ	37-4	26
8	ಶನಿ	ಷಷ್ಠಿ	50-38	ಮೃಗಶಿರ	43-12	27
9	ಭಾನು ‡	ಸಪ್ತಮಿ	55-59	ಆರ್ದ್ರಾ	49-50	28
10	ಸೋಮ †	ಅಷ್ಟಮಿ	60-0	ಪುನರ್ವಸು	56-28	29
11	ಮಂಗಳ §	ಅಷ್ಟಮಿ	1-11	ಪುಷ್ಯ	60-0	30
12	ಬುಧ ;;	ನವಮಿ	5-49	ಪುಷ್ಯ	2-28	31
13	ಗುರು	ದಶಮಿ	9-37	ಆಶ್ಲೇಷ	7-41	1

* ಲಕ್ಷ್ಮೀಪಂಚಮಿ. † ಸಂತಾನಸಪ್ತಮಿ, ಮಳೆ ನಕ್ಷತ್ರ—ರೇವತಿ 4 ಪಾದ. † ಅಶೋಕಾಷ್ಟಮಿ § ಸ್ಮಾರ್ತ ಶ್ರೀರಾಮನವಮಿ. ;; ವೈಷ್ಣವ ಶ್ರೀರಾಮನವಮಿ, ಮಳೆ ನಕ್ಷತ್ರ—ಅಶ್ವಿನಿ 1 ನೇ ಪಾದ.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ಡಜಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಫೋಟೋಜಿಗೆ ಒಂದಾನೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 3 ಆಣೆ; 12 ಡಬ್ಬಿಗಳಿಗೆ 2-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ ಅನೇಕ ಕಡೆಗಳಲ್ಲಿ ವಿಕ್ರಯಿಸುತ್ತಿದೆ. [64-50]

ಅಮೃತಾಂಜನ ಡಿಪೋ,

109, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಸೂ. ಟ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆರಂಭಿಸಿದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಸಾಳ್ವದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಜಪಾನ್, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಔಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಮ್ಮ ಮನೆಯಲ್ಲಿದ್ದರೆ ಮಾತ್ರ. ರಾತ್ರಿಯೂ ವೈದ್ಯರ ಸಹಾಯವನ್ನು ಕಾದು ನೋಡಿಯುವದು ಅನಾವಶ್ಯಕವಾಗುವುದು. ಶೀತ, ಶೀತವಾಯು, ಅಜೀರ್ಣ, ವಾತವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ನಗೆಬೇನೆ, ಬಲಹೀನತೆ ಕೆಟ್ಟ ಸ್ವಪ್ನ, ಮತ್ತು ಕೆಡುಕಾದ ಶರೀರಸಂಬಂಧವಾಗುವ ವಿಕಾರ ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಅತ್ಯಲ್ಪಕಾಲದಲ್ಲಿ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಉಪಯೋಗಿಸತಕ್ಕ ಕ್ರಮ ಸೀಸೆಯೊಡನೆಯೇ ಇರುವುದು. 360 ಮಾತ್ರೆಗಳುಳ್ಳ ಸೀಸೆಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸುವ ಟಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 6-0-0.



ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫಿಲಿಪ್ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಚ್. ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ಐ. ಎಚ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಡ್ವರ್ಡ್ ರೋಡ್ ನಂ 2, ಬೊಂಬಾಯಿ, ಇವರು ಬರೆಯುವುದು:—"ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಕ್ರಮವಾಗಿ ಸ್ಯಾಕಿಂಪ್ಯಾಸಗಳ ವ್ಯಾಸ, ಅಜೀರ್ಣ, ಮಲಬದ್ಧತೆ, ವಕ್ಕೆಯನೋವು, ಹೊಟ್ಟೆನೋವು, ದಿನಕಟ್ಟೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ॥ ವಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು:—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಸಾಳ್ವದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮಾತ್ರೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ."

[189-30] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Printed and Published by the Rev. H. Gulliford, Proprietor and Manager, Wesleyan Mission Press, Mysore. 6/4/1916.

REGISTERED
M. 30

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸನ್ ೧೯೧೬ ನೇ ಇಸವಿ ಏಪ್ರಿಲ್ ತಾರೀಖು ೧೩ ನೇ ಗುರುವಾರ. ಸಂಚಿಕೆ ೪೬

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ಶೋಭಿತವಾದ [illegible]ಮುವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಅಂತಹ ಕೇಶ [illegible]ವನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು [illegible], ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿಶ್ರಾಂತಿಗಳನ್ನೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಸೇವಿಸುವವರ [illegible] ದುಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ತಣ್ಣಗಾಗಿ, ಮನಸ್ಸು ಉತ್ಸಾಹದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಕೊಡೆಯತಕ್ಕದಾಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು ; ಅವರ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.



ಶೀಲಭಂಗದ ಎಣ್ಣೆಗಳನ್ನು ಕೊಂಡು [illegible] ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಒಂದು ಬಾರಿ ಈ “ಕಾಮಿನಿಯಾ ತೈಲ” ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ “ಸರ್ಟಿಫಿಕೇಟ್ ಆಫ್ ಮೆರಿಟ್” ಅಥವಾ ಯೋಗ್ಯತಾಪತ್ರವೂ, ಇತರ ಕಡೆ [illegible] ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿ [illegible] ಬಂಧುಗಳು. ಬನವಸಿ [illegible], ಶಿರನಾಂವ—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ “ಕಾಮಿನಿಯಾ” ತೈಲವು ಕೂದ[ಲು]ಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ [illegible] ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ಮೂಲಕ ಕಳುಹಿಸುವುದು. [illegible]ಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಬುದ್ಧಿಗಳಾದ ವ್ಯಾಪಾರಿಗಳು ಒಳ್ಳೆಯ ವಸ್ತು [illegible] ಬಳಕೆಯಿಂದ ತಮಗೆ ಸ್ವಲ್ಪ ಸಹಾಯ ದೊರಕುತ್ತದೆಂದು [illegible] “ಕಾಮಿನಿಯಾ ತೈಲ” ವನ್ನು ಕೇಳಿದರೆ, “ಇದು ಅದಕ್ಕಿಂತ ಉತ್ತಮವು [illegible] ಇದೆ” ಎಂದು ಅವರಿಗೆ ಬಹಳ ಲಾಭ ದೊರೆಯುವ ಕೀಳುತರದ ಬೇರೆ [illegible]ವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ [illegible] “ಕಾಮಿನಿಯಾ ಆಯಿಲ್” ನಾನೇ ಬೇಕೆಂದು ಕೇಳಿರಿ; ಅವರಲ್ಲಿ [illegible] ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳ[ಲು] [illegible] ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ [illegible] ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮ. [illegible] ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ [illegible]ಮಾಡುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು [illegible] ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ [illegible] ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸೈನಗಳಿಗೆ [illegible] ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯ [illegible] ಇಲ್ಲ. ಈ ಒಟ್ಟೋ-ದಿಲ್ ಬಹಾರಿನ ಗಂಧವು [illegible] ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದು [illegible] ಸೀಸೆಯನ್ನು ತರಿಸಿ ನೋಡಿರಿ. [34-10]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಶಿಶೆ) [illegible] 10, 0-12-0. ಅರ್ಧ [illegible] ದೊಡ್ಡ ಸೀಸೆಯ ಬೆಲೆ ರೂ. 2-0-0. [illegible] ಬೆಲೆ ರೂ. 0-4-0. ಒಟ್ಟೋ-ದಿಲ್ ಬಹಾರ್ [illegible] 0-12-0.

[illegible] ಎಲ್ಲಾ ಸುಗಂಧ [illegible]:—

[illegible]—[illegible] ಡ್ರಗ್ ಕೆಮಿಕಲ್ ಕಂಪನಿ,

[illegible], ಜುಮ್ಮಾಮಸೀದ್, ಮಾರ್ಕೆಟ್, ಬಾಂಬೆ.

[illegible]

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ಲಿಖಿತ, ವ್ಯವಹಾರಗಳ ರೀತಿಯನ್ನೂ ತಿಳಿಸುವ 616 ಪೇಜು ಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಕ್ಲೋತ್ ಪ್ರತಿಗೆ ರೂ. 2-8-0; ರಫ್ ಪ್ರತಿಗೆ ರೂ. 1-12-0. [168-43]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

The General Assurance Society, Ltd.,
Ajmer.

(A Popular Life Office.)

Before insuring or taking Agency elsewhere, it would be to your interst to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-38]

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

[ಕನ್ನಡದಲ್ಲಿ]

ಬಹುಕಪ್ರಸಿದ್ಧವಾದ ಈ ಗ್ರಂಥದ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದು ಪ್ರಿಂಟಿಂಗ್ ಮತ್ತು ಬೈಂಡಿಂಗ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಅಚ್ಚುಕಟ್ಟಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆ ಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತದೆ. ಪುಸ್ತಕವು ನಾನೂರು ಪುಟಗಳಿಂದ ಕೂಡಿದ್ದಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಪಿ ಮೂಲಕ ತರಿಸಿಕೊಂಡರೆ ರೂ 2-1-0. ಜಾಗ್ರತೆ ನೋಡಿ. [239-35]

ವಿಳಾಸ—ಮ್ಯಾನೇಜರ್, ಪಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

USE I. C. O. BRAND

[65-61]

Refined Edible Cotton Seed Oil.

For Cooking and Salads.

An appoved substitute for Ghee in all preparations. Price—

Re. 1-4-0 per tin of 3½lbs
„ 0-7-0 per „ of 1lb

Liberal Terms to Trade.

The Indian Co-Operative Stores Co., Ltd., 159, Kilari Road, Bangalore.

ಹೊಸ ಪುಸ್ತಕ ! **ಸ್ವಕರ್ತವ್ಯಸಿದ್ಧಾಂತ.** ಹೊಸ ಪುಸ್ತಕ !

ಸ್ವಲ್ಪ ಪ್ರತಿಗಳಿವೆ. ಜಾಗ್ರತೆ ತರಿಸಿಕೊಳ್ಳಿರಿ.

ಈ ಪುಸ್ತಕದ ವಿಷಯವಾಗಿ ಅನೇಕ ವಿದ್ವಾಂಸರು ಪಟ್ಟಿರುವ ಅಭಿಪ್ರಾಯಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ವಿವರಿಸಿದೆ.

ಮೈಸೂರು ವಿದ್ಯಾಶಾಖೆಯ ಮುಖ್ಯಾಧಿಕಾರಿಗಳವರಾದ ಶ್ರೀಮಾನ್ ರಾವಬಹದ್ದೂರ್ ಎಂ. ಶಾಮರಾವ್, ಎಂ.ಎ. ರವರು ಈ ಪುಸ್ತಕದ ೨೫ ಪ್ರತಿಗಳನ್ನು ವಿದ್ಯಾಶಾಖೆಗಾಗಿ ತರಿಸಿಕೊಂಡು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ.

ಅರ್ಥಸಾಧಕ ಪತ್ರಿಕೆಯು ಹೇಳುವುದೇನೆಂದರೆ—“ ಮುಖ್ಯ ಪ್ರಜಾ ಧರ್ಮವನ್ನು ಒಳಕೊಂಡ ಈ ಪುಸ್ತಕವನ್ನು ಆಬಾಲವೃದ್ಧರೂ ಓದಿ ಅದರಂತೆ ಸ್ವಲ್ಪವಾದರೂ ಆಚರಿಸುವುದಕ್ಕೆ ಪ್ರಯತ್ನಿಸಿ ಪ್ರಯೋಜನಹೊಂದುವರೆಂದು ನಂಬುತ್ತೇವೆ.”

ಶ್ರೀಯುತ ಆರ್. ಎ. ಕುಲಕರಣಿ, ಬಿ.ಎ., ಎಲ್.ಎಲ್.ಬಿ., ಅಥಣಿ, ಇವರು ಹೇಳುವುದೇನೆಂದರೆ—“ ಸದ್ವಿಚಾರಗಳಿಂದ ಪರಿಪೂರಿತವಾದ ಈ ಪುಸ್ತಕವನ್ನು ಪ್ರತಿಯೊಬ್ಬರೂ ಓದಿ ಮನನಮಾಡಬೇಕು.” [94-1]

ಬೆಲೆ ೪ ಆಣೆ.

ವಿಳಾಸ—“ ಧನುರ್ಧಾರಿ ” ಆಫೀಸ್, ದಾವಣಗೆರೆ.

ಸಂಗೀತ ಪಾರಿಜಾತ

ಮೂರನೆಯ ಮುದ್ರಣ ! ಸೀನರಿಗಳೂ ಕೀರ್ತನೆಗಳೂ ಮೊದಲಿಗಿಂತ ಹೆಚ್ಚಾಗಿವೆ. ಬೀದಿಯಹಾಡು ಆರತಿಯೆತ್ತುವ ಹಾಡು ಮುಂತಾದ ಅನೇಕ ಹಾಡುಗಳಿವೆ ಕ್ರಯ ೦-೪-೦ ನೂರು ಪ್ರತಿಗೆ ಕಮ್ಮಿ ಇಲ್ಲದಂತೆ ತರಿಸಿಕೊಂಡರೆ ಧಾರಾಳವಾದ ಕಮಿಷನ್ ಕೊಡುವೆವು

ಕಟ್ಟಾದರ್ಶ ನೋಟ್ಸ್.

ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದುದು. ಕ್ರಯ ೦-೩-೦ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಸಿಗುತ್ತೆ.

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.
[277-18] ಸ್ಟೂಡೆಂಟ್ಸ್ ಹಾಲ್, ಮೈಸೂರು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರಬಿರೊ, ಚೀಫ್ ಏಜೆಂಟ್, ಬೆಂಗಳೂರು ; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವಿ. ವೆಂಕಟೇಶನ್, ಟ್ರಾವೆಲಿಂಗ್ ಏಜಂಟ್, ಮೈಸೂರು; ಅಥವಾ

[222-26] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಸ್ವಲ್ಪ ಕ್ರಯ ! ವಿಶೇಷ ಬಾಳಿಕೆ !

ಒಳ್ಳೇ ಸಮಯ !

ನಿಪ್‌ಚೂನ್ ಲೇಖಿನಿ.

200 ನೇ ನಂಬರ್ ಫೌಂಟೇನ್ ಪೆನ್ನಾ 14 ಕ್ಯಾರೆಟ್ ಗೋಲ್ಡ್ ನಿಬ್ಬು, ಫಿಲ್ಲರ್ ಮತ್ತು ಪೆಟ್ಟಿಗೆ ಸಹಿತ ಕ್ರಯ ರೂ. 1-14-0 ಮಾತ್ರ. ಟಪಾಲ್ ಮತ್ತು ಪ್ಯಾಕಿಂಗ್ ಖರ್ಚು ಬೇರೆ. ಇದೇ ತಿಂಗಳು ಒಳಗೆ ತರಿಸಿಕೊಳ್ಳುವವರಿಗೆ ಪ್ರತಿ ಒಂದು ಪೆನ್ನಾಕ್ಕೂ ಸೊಗಸಾದ ಕ್ಲಿಪ್ಪು ಉಚಿತವಾಗಿ ಕೊಡಲಾಗುತ್ತೆ. ಬೈಸಿಕಲ್‌ಗೆ ಯಾವ ಸಾಮಾನು ಬೇಕಾದರೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತೆ. [279-17]

ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ನಿಮ್ಮ ಮನೆ ಬಳಿ ಕಾಶೀ ಕ್ಷೇತ್ರವಿದೆ.

ಕಾಶಿ ಕ್ಷೇತ್ರದಲ್ಲಿ ತಯಾರಾದ ವಿಸ್ಮ ಮಾಲುಗಳನ್ನು ಅಂದರೆ—ರೇಷ್ಮೆ ಕೋಟ್ ಥಾನುಗಳು, ಸೀರೆಗಳು, ರವಿಕೆಗಳು, ಮರಾಣಿಗಳು, ಇವೆಲ್ಲಾ ನಮ್ಮ ಖುದ್ದು ಸ್ವಂತ ಸ್ಪೆಷಲ್ ಮಗ್ಗಗಳಲ್ಲಿ ತಯಾರಾದವನ್ನು ಕಳುಹಿಸುತ್ತೇವೆ. ನಮ್ಮಿಂದ ತರಿಸಿಕೊಂಡರೆ ನಿಮ್ಮ ಉಡುಪುಗಳಿಗೆ ಹಾಕುವ ಹಣದಲ್ಲಿ ಶೇಕಡ 25 ರಷ್ಟು ಮಿಗಿಸುತ್ತೀರಿ. ಯಾಕೆಂದರೆ ದಲ್ಲಾಳಿಗಳಿಲ್ಲ; ನಾವು ಸ್ವಂತವಾಗಿ ತಯಾರ್ಮಾಡುತ್ತೇವೆ. ರೇಷ್ಮೆ ಮತ್ತು ಜರತಾರಿ ಅಂಚಿನ ಎಲ್ಲಾ ವಸ್ತುಗಳನ್ನೂ ನ್ಯಾಯವಾದ ಕ್ರಯಕ್ಕೆ ಮಾರುವೆವು. ಮುರ್ಷದಾಬಾದ್, ಭಾಗಲ್ಪುರ, ಅಸ್ಸಾಂ, ಟಸ್ಸಾ ರೇಷ್ಮೆ ಬಟ್ಟೆಗಳನ್ನು ಯಾವಾಗಲೂ ನಮಲ್ಲಿ ಬಿಕರಿಗೆ ಇಟ್ಟಿದೇವೆ. ಇದಲ್ಲದೆ ಬನಾರಸ್ ತಯಾರಿ ಯಾವ ಮಾಲುಗಳಾಗಲಿ ಪಾಲ್, ಕಂಚಿನ ಪದಾರ್ಥ, ಮರದ ಆಟದ ಸಾಮಾನ್, ರುದ್ರಾಕ್ಷಿಮಾಲೆ, ಸ್ಪಷ್ಟ ಪುನಗು, ಎಸ್ಸೆನ್ಸ್ ಸುಲಭ ಕ್ರಯಕ್ಕೆ ಕೊಡುತ್ತೇವೆ. 100 ರೂಪಾಯಿ ಮಾಲು ಕೊಳ್ಳುವವರಿಗೆ 6¼ ರಂತೆ ಡಿಸ್ಕೌಂಟು ಬಿಡುವೆವು. ವಿ. ಪಿ. ಇಂದಲೂ ತರಿಸಿಕೊಳ್ಳಬಹುದು. ನಮಗೆ ಇಂಗ್ಲೀಷಿನಲ್ಲೇ ಬರೆಯಬೇಕು.

ನಮ್ಮ ವಿಳಾಸ—ಕಾಶಮುಲ್ ವೇಣಿಪ್ರಸಾದ್,
[89-2] ಠಾಣೆಕುವಾ, ಬನಾರಸ್ ಸಿಟಿ.

ಅರ್ಧಬೆಲೆ! ಒಂದು ತಿಂಗಳು ಮಾತ್ರ!

ನಮ್ಮ ಶ್ರೀಮತ್ ರೆಗ್ಯುಲೇಟರ್ ವಾಚ್ ಸರ್ವೋತ್ಕೃಷ್ಟವಾದ ಕಾಲವನ್ನು ತೋರಿಸುತ್ತದೆ. ದೊಡ್ಡ ಮನುಷ್ಯರಿಗೆ ಲಾಯಖಾಗಿದೆ. 3 ವರುಷದ ಜಾಮೀನ್ ಕೊಡುವೆವು. ಕ್ರಯ ರೂ. 7-14-0; ರೂ. 9-14-0. ಈಗ ಸಾಕ್ಷಿ ಇಟ್ಟಿರುವ ಕ್ರಯ ರೂ. 3-15-0; ರೂ. 4-15-0. ಉತ್ತಮವಾದ ಕೈಗೆ ಕಟ್ಟಿಕೊಳ್ಳುವ ಗಡಿಯಾರ ಚರ್ಮದ ಪಟ್ಟಿ ಸಮೇತ ಕ್ರಯ ರೂ. 10; ಈಗ ಅದನ್ನು ರೂ. 5 ಕ್ಕೆ ಕೊಡುವೆವು. ಲೇಡಿ 9 ಕ್ಯಾರೇಟ್ ಚಿನ್ನದ ಗಡಿಯಾರ ಕ್ರಯ ರೂ. 32, ಈಗ ರೂ. 16 ಕ್ಕೆ ಕೊಡುವೆವು. ಲೇಡಿ ಬೆಳ್ಳಿ ವಾಚ್ ಕ್ರಯ ರೂ. 14; ಈಗ ರೂ. 7 ಮಾತ್ರ. ಬಲವಾದ ಪಂಚಕೋಯುಳ್ಳ 8 ದಿನದ ಸಿಲ್ವರ್ ವಾಚ್ ರೂ. 18; ಈಗ ರೂ. 9. ಅದೇ ಬೆಳ್ಳಿಯದು ರೂ. 24; ಈಗಿನ ಕ್ರಯ ರೂ. 12. ಅದೇ ಬೆಳ್ಳಿ ಹಂಟಿಂಗ್ ವಾಚ್ 30; ಈಗಿನ ಬೆಲೆ ರೂ. 15. ಸ್ಪೆಷಲ್ ಬಹುಮಾನ ಕೈಗೆ ಕಟ್ಟುವ ತರಹಾ ಅಲ್ಲದೆ ಇತರ ತರಹಾ ಪ್ರತಿ ಒಂದು ವಾಚು ಕೊಂಡು ಕೊಳ್ಳುವವರಿಗೂ ಒಂದು ಸುಂದರ ಸರಪಣಿಯೂ, 6 ವಾಚು ಕೊಳ್ಳುವವರಿಗೆ ಒಂದು ಬೆಳ್ಳಿ ವಾಚೂ ಇನಾಮು ಕೊಡುವೆವು.

ನಮ್ಮ ವಿಳಾಸ—The Competition Watch Co.,
[276-15] 25, Madan Mitra Lane, E. Calcutta.

ಊದಬತ್ತಿಗಳು

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳದ್ದಾಗಿದೆ.

ಸುವಾಸನೆ ಸುಂಣ ಸೀಸೆ 1 ಕ್ಕೆ 2 ಆಣೆ.

ಈ ಸುಣ್ಣಕ್ಕೆ ಕೇಸರೀ ಪಚ್ಚಕರ್ಪೂರ ಬಾದಾಮಿ ಯಿಸೆನ್ಸ್ ಇವುಗಳನ್ನು ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಯಲೆ ಅಡಿಕೆ ಹಾಕಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ಬಾಲಗ್ರಹಧೂಪ ಟಿನ್ 1 ಕ್ಕೆ 8 ಆಣೆ.

ಮಕ್ಕಳಿಗೆ ಬರತಕ್ಕ ಬಾಲಗ್ರಹಕ್ಕೆ ಈ ಧೂಪವನ್ನು ಹಾಕಿದ ಕೂಡಲೇ ಬಾಲಗ್ರಹ ಚೇಷ್ಟೆಯು ಖಂಡಿತವಾಗಿಯೂ ಗುಣವಾಗುತ್ತೆ.

ಸುವಾಸನೆ ಸಾದು ಸೀಸೆ 1 ಕ್ಕೆ 2 ಆಣೆ.

ಇದನ್ನು ನಮ್ಮ ಆಯುರ್ವೇದವನ್ನನುಸರಿಸಿ ಉತ್ತಮವಾದ ಅತ್ತರುಗಳನ್ನು ಸಹಾ ಸೇರಿಸಿ ಹಣೆಗೆ ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗಿ ತಯಾರಿಸಿದೆ. ಅತ್ಯಂತ ಸುವಾಸನೆಯುಳ್ಳದಾಗಿಯೂ ಇದೆ. ಇಂಥಾ ಅಮೂಲ್ಯವಾದ ಈ ಎರಡು ಪದಾರ್ಥಗಳನ್ನು ನೋಡಿರುವದಿಲ್ಲ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[54-7]
ಸುಗಂಧಕಾರಿ, ಮೈಸೂರು.

ಒಂದು ಬುದ್ಧಿಮಾತು.

ನೀವು ಸದಾ ವಾಯುವಿನಿಂದ ಕಷ್ಟಪಟ್ಟು ಹಾಸಿಗೆಯ ಮೇಲೆಯೇ ಇದ್ದು, ವಾತರೋಗದಿಂದ ಪೀಡಿತರಾಗಿ ಔಷಧಗಳಿಂದಲೂ ಆಸ್ಪತ್ರೆಗಳ ಸಹಾಯಗಳಿಂದಲೂ ಗುಣ ಹೊಂದದೆ ಇದ್ದರೆ, ಟಿಟ್ಲೆಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸುವದರಿಂದ ನಿಜವಾಗಿ ಗುಣ ಹೊಂದುವಿರಿ.

ಕೆರ್ರಿ ಪಟ್ಟಣದ ರತ್ಕ್ಲಿಫ್ ಕಂಪನಿಯಲ್ಲಿ 16 ವರುಷದಿಂದ ಹಾಸಿಗೆಯ ಮೇಲೆ ಬಿದ್ದಿದ್ದ ಒಬ್ಬ ಅಂಗಡಿಯವನಿಗೆ ಗುಣವಾಯಿತು. ಯೋರ್ಕ್ ನಗರದ ಪಿಟ್ಸ್‌ಡಿಯಲ್ಲಿ 20 ವರುಷಗಳಿಂದ ಕಷ್ಟಪಡುತ್ತಿದ್ದವನು ವಾಸಿಯಾದನು. ಬ್ರಿಕ್ಸ್ಟನ್ ಪಟ್ಟಣದಲ್ಲಿ 40 ವರುಷಗಳಿಂದ ಕಷ್ಟಪಟ್ಟವನೊಬ್ಬನು ಸ್ವಸ್ಥನಾದನು. ಚೆಸ್ಟರ್ ನಗರದಲ್ಲಿ 80 ವಯಸ್ಸಿನ ಎ. ಬಾತ್ ಎಂಬಾತನು ಹೇಳುವದು:—

"ವಾಯುವಿನಿಂದ ಅಂಗಹೀನನಾಗಿ ಭಯಂಕರವಾದ ಸ್ಥಿತಿಯಲ್ಲಿದ್ದೆ. ಎಲ್ಲಾ ವಿಧವಾದ ಔಷಧಗಳನ್ನೂ ವೈದ್ಯರನ್ನೂ ಪರೀಕ್ಷಿಸಿ, ಉತ್ತಮ ಆಸ್ಪತ್ರೆಗೂ ಹೋದೆನು. ಆದರೆ ಅವುಗಳಿಂದ ಏನೂ ಮೇಲಾಗಲಿಲ್ಲ. ಟಿಟ್ಲೆಸ್ ಓರಿಯಂಟಲ್ ಬಾಂ ಎಂಬದರಲ್ಲಿ 2 ಸೀಸೆಗಳನ್ನು ಉಪಯೋಗಿಸಿದ್ದರಿಂದ ಪೂರ್ಣ ಸ್ವಸ್ಥನಾದೆನು. ವಾಯುನೋವಿಗೆ ಕೈಕಂಡ ಔಷಧಿಯಾದ ಟಿಟ್ಲೆಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಿರಿ."

ಸೀಸೆ 1 ಕ್ಕೆ 1 ರೂ. ಮೋರೆಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

[81-50]

ಸುಂದರವಾದ 1916 ಕ್ಯಾಲೆಂಡರು

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸಹ 4 ಆಣೆ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಅಂಗಡಿಗಳಲ್ಲಿ ಬಿಕರಿಗೆ ಇಟ್ಟಿದೆ. [54-41]

ಅಮೃತಾಂಜನ ಡಿಪೋ,
109, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ಸೂ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಅಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಔಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾಸಿ ಮಾಡಿಸಲು ವೈದ್ಯರ ಸಮಯವನ್ನು ಕಾದು ನೋಡುವದು ನಿಜವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ದುಂಡ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 6-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫರೀಡ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಎ. ಎಸ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಇವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಹಳ್ಳೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮ ಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಬಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಾಗಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಾರೆ."

[189-31] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೋಸಹೋಗಬೇಡಿ! 1,000 ರೂಪಾಯಿಗಳ ಬಹುಮಾನ. ಮೋಸಹೋಗಬೇಡಿ!!

ಕೆಲವರು ನಮ್ಮ ಕಂಪನಿಯ ಹೆಸರನ್ನು ಹೇಳಿ ಜನಗಳಿಗೆ ಮೋಸಪಡಿಸುತ್ತಿದಾರೆ. ಆದ್ದರಿಂದ ನಮ್ಮ ಭಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯೂ ರೋಡ್, ಬೆಂಗಳೂರು ಸಿಟಿ, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರು ಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಗೆಡ್ಡೆಯಾಗಿರುತ್ತದೆ. ಕಾಬೂಲು, ಕಾಂದಹಾರ್ ದೇಶಗಳಲ್ಲಿ ಅದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಗಡ್ಡೆನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಅನೇಕರು ಊರುಗಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದು ಬರುತ್ತದೆ.

ರಿಜಿಸ್ಟರ್ ಟ್ರೇಡ್ ಮಾರ್ಕ್.

ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿಯೂ ನಿದ್ರೆಯಲ್ಲಿಯೂ ಧಾತುವು ಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ತಲೆ ತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರ ಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ ಮತ್ತು ಭಂಗಾರದ ಭಸ್ಮಕ್ಕಿಂತಲೂ ಉತ್ತಮವಾದದ್ದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಕಾಸ ರೋಗಗಳನ್ನು ನಾಶಪಡಿಸುವದು.

ಈ ಮುರಬ್ಬಾದೊಂದಿಗೆ ಬಲ ಬರುವಂಥಾ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವದರಿಂದ ಪೂರಾ ಗುಣ ಕೊಡುತ್ತದೆ. 2-3 ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತ್ಯದ ವರೆಗೂ ಗುಣ ಕೊಡುತ್ತೆ.

ಈ ಮುರಬ್ಬಾವು ಸಾಲಾಮಿಸ್ರಿಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ 1,000 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಡಬ್ಬಿ 1 ಕ್ಕೆ ರೂ. 3-0-0. ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳ ವರೆಗೆ 6 ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ನಮ್ಮ ವಿಳಾಸ:—ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
[93-1] 5, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

S. Rao & Co., Book Sellers, Bangalore City.

Lower Secondary Texts for 1917. (1) The King of the Golden River As. 3½ each. (2) Granny's Wonderful Chair As. 4½. Notes for both books 4 As.

1917 ನೇ ಇಸ್ವಿ ಕನ್ನಡ ಲೋಯರ್ ಸೆಕೆಂಡರಿ ಟೆಕ್ಸ್ಟ್ 0- 4-6
ಡಿಟೋ ಸಂಸ್ಕೃತ ಡಿಟೋ 0- 3-0
ಹಾವ್ಯಾಧ್ಯ—ಜೆ. ಕೃಷ್ಣಶಾಸ್ತ್ರಿಗಳಿಂದ 0- 6-0
ಕಥೆಗಳು—ಡಿಟೋ—ದ್ವಿ| ಮುದ್ರಣ 0-12-0

ನಮ್ಮಲ್ಲಿ ಕನ್ನಡ, ಇಂಗ್ಲಿಷ್ ಸ್ಕೂಲು ಪುಸ್ತಕಗಳೂ, ಎಲ್ಲಾ ಕನ್ನಡ ಪುಸ್ತಕಗಳೂ ದೊರೆಯುತ್ತವೆ. [81-½]

ಎಂ. ಯಸ್. ರಾವ್ ಕಂಪೆನಿ, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರವನ್ನು ವಿಸರ್ಜಿಸುವ ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯ ಅಥವಾ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೇ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನು ನೋವು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ಹೆಚ್ಚಾಗಿಯೋ ಬರುವುದು; ಪದೇ ಪದೇ ಬಾಯಾರಿಕೆ; ತಲೆ ಸುತ್ತುವುದು; ತಲೆನೋವು; ಗಾಬರಿ; ಕಣ್ಣು ಮಂಜು; ಕೀಲು ನೋವು; ಮರವು; ನಿಶ್ಶಕ್ತಿ; ಇವೇ ಮೊದಲಾದವು. ಅನೇಕ ವಿಧವಾದ ಮೂತ್ರಕೋಶದ ರೋಗಗಳು, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶದ ಕ್ಷಯ, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳು ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಶುದ್ಧಿಪಡಿಸಿ, ರಕ್ತದಿಂದ ಮೂತ್ರವನ್ನು ವಿಸರ್ಜಿಸಿ ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-31]

ಬೇರೆಯವರ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುತ್ತವೆ.



ಕ್ರಯ ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿ ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್ ... ೩೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಮೋಸ ಹೋಗಬೇಡಿರಿ. ಪ್ರೈಸ್‌ಲಿಸ್ಟ್ ಇನಾಂ. ಲಾಭವನ್ನು ಪಡೆಯಿರಿ.

ಕಾಶೀ ಪಟ್ಟೆ ಪೀತಾಂಬರ

ಕಾಶಿಯಲ್ಲಿ ನಮ್ಮಲ್ಲಿ ಅನೇಕ ಬಗ್ಗೆ ವ್ಯಾಪಾರಿಗಳು ಸಾಮಾನುಗಳನ್ನು ತೆಗೆದುಕೊಂಡು ದೊಡ್ಡದಾಗಿ ಉತ್ಪತ್ತಿ ಮಾಡಿ ಬಹಳ ಹೆಚ್ಚು ಖರೀದಿಗೆ ಮಾರುತ್ತಾ ಇರುತ್ತಾರೆ. ಇನ್ನು ಮೇಲಾದರೂ ನಮ್ಮಲ್ಲಿ ತಯಾರಾಗುವ ಜರಿಗೆ ಸೀರೆ, ಶಾಲು, ಕಾಶ್ಮೀರ್ ಶಾಲು, ದುಪ್ಪಟ್ಟೆ, ಶಾಲು ರುಮಾಲು, ಬಟ್ಟೆಗಳು, ರುದ್ರಾಕ್ಷಿ, ರಜಂವಾರ್ ಆಭರಣಗಳು ಬಹಳ ಸುಲಭ ಕ್ರಯಕ್ಕೆ ತೆಗೆದು ಲಾಭವನ್ನು ಹೊಂದಬೇಕಾಗಿ ಕೋರುತ್ತೇವೆ. ಇಂಗ್ಲಿಷಿನಲ್ಲೇ ಕಾಗದ ಬರೆಯಿರಿ.

[83-2] ನಮ್ಮ ವಿಳಾಸ—ಜಿ. ಆರ್. ಕಂಪೆನಿ, ಕಾಶಿ.

ಅತಿ ಸುಗಂಧಮಯವಾದ ನಸ್ಯ.

ನಮ್ಮಲ್ಲಿ ದೊರೆಯುವ ವಿಶಿಷ್ಟ ಪ್ರಯುಕವಾದ ನಸ್ಯವು ಎಲ್ಲಾ ತರದ ಶೀತ ನೆಗಡಿ, ಮೂಗಿನಲ್ಲಿ ನೀರು ಹರಿಯುವುದು, ಪಾರ್ಶ್ವ ತಲೆನೋವು, ತಲೆ ತಿರುಗುವುದು, ಗೋಯ್ ಎನ್ನುವುದು, ಈ ಮೊದಲಾದ ಬಾಧೆಗಳನ್ನೆಲ್ಲಾ ನಿವಾರಣೆ ಮಾಡುತ್ತದೆ, ನರಗಳಿಗೆ ಉತ್ತೇಜನ ಕೊಡುತ್ತದೆ, ಕ್ರಯ ಬಾಟ್ಲಿ 1 ಕ್ಕೆ 4 ಆಣೆ. 12 ಬಾಟ್ಲಿಗಳಿಗೆ ರೂ 2-8-0.

ಸಾದಾ ನಸ್ಯ 1ನೇ ನಂಬರ್ 24 ತೋಲಾ ಸೇರಿಗೆ ರೂ 0—14—0
,, ,, ,, ,, ರೂ 0—12—0

ಪ್ಯಾಕಿಂಗ್ ಪೋಸ್ಟೇಜ್ ಬೇರೆ

ನಮ್ಮ ವಿಳಾಸ—ಬ್ಯಾರಕ್ ಕಂಪೆನಿ,
[40-7] 18, ಸೆಕೆಂಡ್ ಲೈನ್ ಬೀಚ್, ಮದರಾಸು.

ಉಗಾದಿ ಬಹುಮಾನ. ಹೊಸ ಕಂಪೆನಿ. ಹೊಸ ಸರಕುಗಳು.

ಅಮೇರಿಕ ದೇಶದ ಎಲೆಕ್ಟ್ರಿಕ್ ಮೂಗುಬೊಟ್ಟು 3 ರೂಪಾಯಿ ಬೆಲೆ ಬಾಳತಕ್ಕದ್ದನ್ನು ರೂ. 1-8-0 ಕೊಡುತ್ತೇವೆ. ಇದನ್ನು ನಮ್ಮ ಸ್ವಂತ ಆಳುಗಳು

ಮೇಲೆ ಅಮೇರಿಕ ದೇಶದಲ್ಲಿ ಕಂಪನಿಯಿಂದ ಇಲ್ಲಿಗೆ 'ಇಮಿಟೇಷನ್' ವಜ್ರಗಳಿಂದ ತಯಾರಿಸಿ ಕಳುಹಿಸುತ್ತಾರೆ. ಇದರ ಕಲ್ಲುಗಳು ಕೋಟಿಸೂರ್ಯ ಪ್ರಕಾಶಕ್ಕೆ ಥಳಥಳಿಸುವುವು. ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿ ಇರುತ್ತೆ. ಇದನ್ನು ನೋಡುವವರು ಪುಷ್ಪರಾಗವೆಂದು ಹೇಳುವರು. ಅತ್ಯ ಸೂರ್ಯ ಪ್ರಕಾಶಕ್ಕೆ ಥಳಥಳಿಸುವುವು. ಬೇಗನೆಯೇ ದರಖಾಸ್ತು ಮಾಡುವವರಿಗೆ ಒಳ್ಳೇ ಫಾಯಿದೆ ದೊರಕುವುದು.

ಇದೇ ತಿಂಗಳ ಒಳಗಾಗಿ ಈ ಸೀರೆ ತರಿಸಿಕೊಳ್ಳುವವರಿಗೆ ಈ ಮೇಲ್ಕಂಡ ರೂ. 1-8-0 ರ ಬಾಬಿಯನ ಮೂಗುಬೊಟ್ಟು ಇನಾಂ ಕಳುಹಿಸುವೆವು.

ಮಲ್ಲಿಗೆ ಹೂವಿನ ಸೀರೆ.

ಈ ಸೀರೆಗಳನ್ನು ಯುಗಾದಿ ಹಬ್ಬಕ್ಕಾಗಿ ತರಿಸಿ ಇರುತ್ತೇವೆ. ಇದರ ಕ್ರಯ ರೂ. 3 ವಿ. ಪಿ. ಚಾರ್ಜು 0-8-0 ಪ್ರತ್ಯೇಕ. ಮೇಲ್ಕಂಡ ಮೂಗುಬೊಟ್ಟು ಇನಾಂ. ಎಲ್ಲರೂ ವಿಕ್ರಯಿಸುವ ಮಧುರೆ ಹವಳದ ಬಣ್ಣಗಳಲ್ಲ. ಭಾರಿ ಕ್ರಯದ ಸೀರೆಗಳು. ಇದು ಉಡುವವರಿಕ್ಕೆ ಧಡೂತಿ ಆಗಿಯೂ ನೋಡುವವರಿಗೆ ಸೊಗಸಾಗಿಯೂ ಇದೆ. ಬಣ್ಣಕ್ಕೆ ಗ್ಯಾರಂಟಿ ಕೊಡುವೆವು. ಸೀರೆಯು ಉದ್ದ 16 ಮೊಳ. ಸೊಗಸಾದ ಅಂಚು ಕಟ್ಟಿ ಇರುತ್ತೆ. ಇದು ಎಲ್ಲರೂ ಉಡುವದಕ್ಕೆ ಲಾಯಖಾದದ್ದು. ಪ್ರತಿ ದಿನ ಸಾವಿರಾರು ಸೀರೆಗಳು ವಿಕ್ರಯಿಸುತ್ತವೆ. ದಯಮಾಡಿ 1 ಸೀರೆಯನ್ನು ತರಿಸಿಕೊಂಡು ಅಖಂಡ ಕಾರಭೂಷಿತರಾಗಿ ಇರುವರೆಂದು ನಂಬಿದ್ದೇವೆ. ನಮ್ಮ ಕಂಪೆನಿಯಲ್ಲಿ ಅನೇಕ ತರದ ಜವಳಿ ದಿನಸುಗಳು ಸಿಕ್ಕುತ್ತವೆ.

ವಿಳಾಸ.—ರತ್ನಂ ಕಂಪೆನಿ, ಕ್ಲೋತ್ ಮರ್ಚಂಟ್,
[63-5] 3, ಇರುಳಪ್ಪನ ಬೀದಿ, ಮದರಾಸು.

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-32]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,
ಚೌಪಾಟಿ, ಗಿರಗಾಂವ, ಮುಂಬಯಿ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ಶಾಸಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ (1) ಇದು ಶಕ್ತಿಯನ್ನು ವೃದ್ಧಿ ಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ಊಟದೊಳಗೆ ಇದನ್ನು ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಉಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡುವವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದುಡ್ಡುಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುವು (6) ಪ್ರಯಾಣಿಕರಿಗೆ ಆನಂದ ಆರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ [32 10]

8 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ	
,, ,, ,, 4 ,,	300 ,, ,, ,, 9 ,,	30 ,, ,, 1 ,,	1200 ,, ,, ,, 2	

1. ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು. —

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಬೊಂಬಾಯಿ, 2.

ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ಮಾರಾಟಕ್ಕೆ ಇಡಲಾಗಿದೆ. ನಮ್ಮ ದಕ್ಷಿಣ ಕನಡಾ ಏಜೆಂಟರು—ದಿ ಉರ್ಲ ಮಾರ್ಟ್, ಮಂಗಳೂರು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತವನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕುಶಫಾ ಅಂದರೆ ಆರೋಗ್ಯ ಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳ ಮೇಲೆ ನಡೆಯುತ್ತಿದೆ. ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣ ಹುಡುಗರಿಗೂ ಕೊಟ್ಟು ಖಾತ್ರಿಪಡಿಸಿಕೊಂಡು ಅವರ ಆಗ್ರಹದ ಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು.

ಇದು ಅಮೃತದಂತೆ ಗುಣಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆ ಬೇರೆ ಔಷಧಗಳ ಉಪಯೋಗ ಮಾಡುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳ ಪರಿಹಾರವಾಗುತ್ತದೆ.

ಅವುಗಳ ನಾಮುಗಳು.

ಕ್ಷಯರೋಗ, ಹಡಪರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗ, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಿಸ ಮೊದಲಾದ ರೋಗವು, ಕಣ್ಣೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅರ್ಧ್ಯೆ ಇಪ್ಪಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ಬೆಲ್ಲಿ ಜತ್ತು, ಗುದ್ದಪ್ಪನ ಬೇನೆ, ಹುರುಕು ಕಜ್ಜಿ, ಗಜಕರ್ಣ, ತಮ್ಮ ಇಸಬು, ಘಾಯವಾಗ್ರಹ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡತನನುನು, ಸಣ್ಣಕೂಸುಗಳ ಬಾಲಗ್ರಹ, ತೊದಲೆನ್ನು, ಅರು ಮುಟ್ಟ ದೋಷ ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಜಾಲವ್ಯ, ದೃಷ್ಟಿರೋಗ ವೃದ್ಧರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದ ವಿಷ ಇವರ ಹೊರತಾಗಿ ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಹೊಂದಿದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆತಿವೆ. ಈ ಆರೋಗ್ಯಬಿಂದು ಶಬಾಸ್ಮಾರ್ಗವಾಗಿ 6 ವರ್ಷಗಳಾಗಿದ್ದ ರೂ 13,000 ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಬಟ್ಟೆದೋಲ ಬಾಟಲಿ ಒಂದಕ್ಕೆ 3 ರೂಪಾಯಿ. ನಮೂನೆ ಉದ್ದೇಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ, ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ. ವಿ. ಪಿ. ಖರ್ಚು, ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಮೊಟೆ ಹೊರಟರೆ ವಸತಿ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ. [44-5]

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ, ಅರ್ಕುಶಫಾ ಶೋಧಕ, ಪೋಸ್ಟ್ ಆಫೀಸ ಮುಕ್ಕಾಮು ಶಾಹಪೂರ, ಬೆಳಗಾಂವ.

ವೃತ್ತಾಂತ ಪತ್ರಿಕೆ.

—:o:—

೧೯೧೬ ನೇ ಇಸವಿ ಏಪ್ರಿಲ್ ತಾ. ೧೩ ನೇ ಗುರುವಾರ

ಮೈಸೂರಿಗೆ ಒಂದು ವಿಶ್ವವಿದ್ಯಾನಿಲಯ.

ಕಳೆದ ವಾರದ ಪತ್ರಿಕೆಯಲ್ಲಿ ಈ ವಿಷಯವನ್ನು ಸಾಮಾನ್ಯವಾಗಿ ಸೂಚನೆ ಮಾಡಿದೆವು. ಈ ನಮ್ಮ ವಿಶ್ವವಿದ್ಯಾನಿಲಯವನ್ನು (ಯೂನಿವರ್ಸಿಟಿ) ಸಾರ್ಥಕವಾಗಿ ನಡಿಸುವ ವಿಚಾರವಾಗಿ ನಮಗೆ ತೋರಿಬರುವ ಕೆಲವು ಅಂಶಗಳನ್ನು ಈಗ ಸೂಚಿಸಲಪೇಕ್ಷಿಸುತ್ತೇನೆ. ಯೂನಿವರ್ಸಿಟಿಯು ನಮ್ಮ ಸಂಸ್ಥಾನದಲ್ಲಿ ಸ್ಥಾಪಿಸಲ್ಪಡುವುದೇನೋ ಖಚಿತವಾಯಿತು. ಅದಕಾರಣ ಅಪಾರವಾದಷ್ಟು ಹಣವನ್ನು ಖರ್ಚು ಮಾಡಬೇಕಾಗಿರುವ ಈ ಏರ್ಪಾಟು ನಮ್ಮ ಸಂಸ್ಥಾನಕ್ಕೆ ಸದ್ಯದಲ್ಲಿ ಅವಶ್ಯವೇ ಅಲ್ಲವೇ ಎಂಬುವುದನ್ನು ಕುರಿತು ಈಗ ಚರ್ಚೆಮಾಡೋಣದರಿಂದ ಪ್ರಯೋಜನವಿಲ್ಲ.

ಈ ವಿಶ್ವವಿದ್ಯಾನಿಲಯದ ರಚನಾ ಕ್ರಮಗಳನ್ನು ವಿವರಿಸುವ ಪುಸ್ತಕವನ್ನು ಸಾಂಗವಾಗಿ ಓದಿ ನೋಡಿದ್ದರಲ್ಲಿ ನಮಗೆ ಕಂಡು ಬರುವುದೇನೆಂದರೆ, ಯೂನಿವರ್ಸಿಟಿಗೆ ಸೇರಬೇಕೆಂದು ಅಪೇಕ್ಷಿಸುವಂಥಾ ಪ್ರತಿ ಒಬ್ಬ ವಿದ್ಯಾರ್ಥಿಯೂ ಮೊದಲೇ ವಿಧಾಯಕ ಮಾಡಲ್ಪಡುವ ಯಾವುದಾದರೊಂದು ಹೈಸ್ಕೂಲಿನಲ್ಲಿ ಒಂದು ವರುಷ ಕಾಲ ವಿದ್ಯಾಭ್ಯಾಸ ಮಾಡಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು. ಇಂಥಾ ಸ್ಪೆಷಲ್ ತರಗತಿಯನ್ನು ಯೂನಿವರ್ಸಿಟಿಯವರು ಹ್ಯಾಗೋ ಏರ್ಪಡಿಸಿ, ಮೇಲ್ವಿಚಾರಣೆ ನೋಡಿಕೊಳ್ಳುವರಂತೆ. ಆದರೂ ಹೈಸ್ಕೂಲ್ ತರಗತಿಗಳಲ್ಲಿ ನಡೆಯುವ ಶಿಕ್ಷಣ ಕ್ರಮಗಳನ್ನು ಯೂನಿವರ್ಸಿಟಿಯವರು ಪರೀಕ್ಷಣೆಯಾಗಿಯೂ ತೃಪ್ತಿಕರವಾಗಿಯೂ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುವಂಥಾ ವಿಚಾರವೇನೂ ಕಂಡುಬರುವುದಿಲ್ಲ. ಇದಲ್ಲದೆ ಹೈಸ್ಕೂಲುಗಳ ಮೇಲೆ ಅಧಿಕಾರ ನಡಿಸತಕ್ಕವರು ಇನ್ನು ಬಾವಂತಾಗಿದೆ. ಸ್ಕೂಲಿನ ಹೆಡ್ ಮಾಸ್ಟರು ಒಬ್ಬರೆ; ಯೂನಿವರ್ಸಿಟಿಯ ವೈಸ್‌ಛಾನ್ಸೆಲರು ಬೇರೆಯವರು. ಇವರಿಬ್ಬರ ಹಕ್ಕುಗಳನ್ನೂ ಇಷ್ಟಿಷ್ಟೇ ಎಂದು ನಿರ್ಧರಿಸಬೇಕಾದದ್ದು ಅವಶ್ಯಕ.

ವಿದ್ಯಾರ್ಥಿಗಳನ್ನು ಯೂನಿವರ್ಸಿಟಿಗೆ ತಯಾರು ಮಾಡುವಂಥಾ ತರಗತಿಗಳು ಕೆಲವು ಸರ್ಕಾರಿ ಹೈಸ್ಕೂಲುಗಳಲ್ಲಿ ಮಾತ್ರ ಏರ್ಪಡಿಸಲಾಗುತ್ತವೆಂದು ತಿಳಿಸಲ್ಪಟ್ಟಿದೆ. ನಮ್ಮ ಸಂಸ್ಥಾನದಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಕವಾದ ಕ್ರಮಗಳಲ್ಲಿ ತಯಾರು ಮಾಡಿಯೂ ಮಾಡುತ್ತಲೂ ಇರುವಂಥಾ ಹೈಸ್ಕೂಲುಗಳು ಹಲವು ಇರುತ್ತವೆ. ಇಂಥಾ ಸ್ಕೂಲುಗಳ ಪೈಕಿ ಕೆಲವುದರಲ್ಲಾದರೂ ಯೂನಿವರ್ಸಿಟಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವುದಕ್ಕೆ ಅನುಕೂಲಿಸುವಂತೆ ನಮ್ಮ ಸರ್ಕಾರದವರು ಸಹಾಯ ಪ್ರೋತ್ಸಾಹಗಳನ್ನು ಒದಗಿಸಿಕೊಡಬೇಕಾದದ್ದು ಪರಮಾವಶ್ಯಕವೆಂದು ನಮಗೆ ತೋರುತ್ತದೆ. ರಾಜಧಾನಿಯಲ್ಲಿ ಅಂಥಾ ಒಂದು ಹೈಸ್ಕೂಲಿಗೂ, ಬೆಂಗಳೂರಿನಲ್ಲಿ ಒಂದಕ್ಕೂ ಅಂಥಾ ಸಹಾಯ ಸಂಪತ್ತುಗಳನ್ನು ಒದಗಿಸುವುದು ಸಹಜವೂ ನ್ಯಾಯವೂ ಆಗಿರುವುದು. ಈ ಹೊಸ ತರಗತಿಗಳನ್ನು ಮುಂದಿನ ಜೂನ್ಯೆ ಲಾಗಾಯಿತು ಪ್ರಾರಂಭಮಾಡಬೇಕು. ಅಷ್ಟರೊಳಗಾಗಿ ಅದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಡುವ ಭಾಗದಲ್ಲಿ ನಮ್ಮ ಗವರ್ನ್‌ಮೆಂಟಿನವರಿಗೂ, ಹೈಸ್ಕೂಲುಗಳ ಮ್ಯಾನೇಜರುಗಳಿಗೂ, ವೈಸ್‌ಛಾನ್ಸೆಲರವರಿಗೂ ಸ್ವಲ್ಪವಾದರೂ ಕಾಲವಿಲ್ಲ ಎಂದು ಸಂಶಯಪಡುತ್ತೇವೆ. ಅದಕಾರಣ ಎಲ್ಲಾ ವಿಚಾರಗಳನ್ನೂ ಪರಿಷ್ಕಾರವಾಗಿ ಯೋಚಿಸಿ ಇತ್ಯರ್ಥ ಮಾಡುವುದಕ್ಕೋಸ್ಕರ ಹೊಸ ತರಗತಿಗಳನ್ನು ಆರು ತಿಂಗಳು ಪ್ರಾರಂಭಿಸದೆ ಸ್ವಲ್ಪ ನಿದಾನ ಮಾಡುವುದು ಶ್ರೇಯಸ್ಕರವೆಂದು ಸೂಚಿಸಲಪೇಕ್ಷಿಸುತ್ತೇವೆ.

ಇತ್ತಲಾಗಿ ಒಂದು ಕಾನೂನು ನಮ್ಮ ನ್ಯಾಯವಿಧಾಯಕ ಸಭೆಯಲ್ಲಿ ಸ್ವೀಕಾರವಾದ ಮೇಲೆ ಈ ಯೂನಿವರ್ಸಿಟಿಯು ಸ್ಥಾಪಿಸಲ್ಪಡಬೇಕು. ಅದಕ್ಕೋಸ್ಕರ ನಮ್ಮ ಸರ್ಕಾರದವರು ಅಂಥಾ ಕಾನೂನಿನ ಮಸೂದೆಯನ್ನು ರಚಿಸಿ ಪ್ರಕಟ ಮಾಡಿರುತ್ತಾರೆ. ಇದು ಬಹಳ ಹೊಸದಾಗಿ ರಚಿಸಲ್ಪಟ್ಟಿದೆ; ಅದರ ಕಲಮುಗಳನ್ನೂ ಅವುಗಳ ವ್ಯಾಪನೆಯನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳುವುದಕ್ಕೂ, ಅವುಗಳ ಸಾಧಕ ಬಾಧಕಗಳನ್ನೂ ನ್ಯೂನಾತಿರಿಕ್ತಗಳನ್ನೂ ಪರಿಶೀಲನೆ ಮಾಡಿಕೊಳ್ಳುವುದಕ್ಕೂ ಮೆಂಬರುಗಳಿಗೆ ವ್ಯವಧಾನ ಬೇಕೇ ಬೇಕು. ಹೊಸದಾಗಿ ರಚಿಸಲ್ಪಡುವ ಕಾನೂನು ಪ್ರಕಾರ ನಮ್ಮ ಯೂನಿವರ್ಸಿಟಿ ಏರ್ಪಾಡಾಗಿ ನಡೆಯತಕ್ಕದ್ದಾಗಿದ್ದರೂ ಕಾರ್ಯತಃ ಈ ಯೂನಿವರ್ಸಿಟಿಯು ಸರ್ಕಾರದವರ ಅಧಿಕಾರಕ್ಕೆ ಒಳಪಟ್ಟೇ ಇದ್ದೀತು; ಅದರ ಆದಾಯವ್ಯಯಗಳನ್ನು ವಿಮರ್ಶಮಾಡಿ ಕ್ರಮಪಡಿಸುವ ಅಧಿಕಾರವನ್ನು ನಮ್ಮ ಗವರ್ನ್‌ಮೆಂಟಿನವರೇ ಇಟ್ಟುಕೊಳ್ಳುವರು.

ಯೂನಿವರ್ಸಿಟಿಯ ಅಧಿಕಾರಿಗಳು ನಡಿಸತಕ್ಕ ಕಾರ್ಯಕ್ರಮಗಳ ವಿಷಯದಲ್ಲಿ ನಮ್ಮ ಸರ್ಕಾರದವರು ರಚಿಸಿರುವ ಆರ್ಡಿನೆನ್ಸಸ್ ಎಂಬ ಆಚರಣೆಗಳು ಸರಿಯಾಗಿ ಅರ್ಥವಾಗುವ ಹಾಗಿಲ್ಲ. ಅವನ್ನು ಇನ್ನೂ ಚೆನ್ನಾಗಿ ಯೋಚಿಸಿ ಸೆನೆಟ್ಟಿನ ಕಾರ್ಯಗಳಿಗೂ ಕೌನ್ಸಿಲ್ಲಿನ ನಡವಳಿಕೆಗೂ ಸಂಬಂಧ ವಿರೋಧಗಳು ಉಂಟಾಗದಂತೆ ರಚಿಸಬೇಕಾಗಿದೆ. ಈ ಆಚರಣೆಗಳಲ್ಲಿ ಹಲವು ಭಾಗಗಳನ್ನು ರೆಗ್ಯುಲೇಷನ್ಸ ಎರಡನೇ ಷೆಡ್ಯೂಲಿನಲ್ಲಿ ಒಳಪಡಿಸಿದರಾಯಿತೆ; ಇದಲ್ಲದೆ ಇತರ ಆಚರಣೆಗಳನ್ನು ರಚಿಸಿಕೊಳ್ಳುವಂತೆ ಸೆನೆಟ್ಟಿಗೆ ಅಧಿಕಾರ ವಹಿಸುವಂತೆಯೂ ಕಾಣುವುದು. ಇದನ್ನೆಲ್ಲಾ ಸಮಗ್ರವಾಗಿ ಪರ್ಯಾಲೋಚನೆಯಿಂದ ಸರಿಪಡಿಸಿ ಯೂನಿವರ್ಸಿಟಿ ಅಧಿಕಾರಿಗಳ ಮತ್ತೂ ಮೇಲ್ವಿಚಾರಣಾ ಸಭೆಗಳ ಕರ್ತವ್ಯಾಂಶಗಳನ್ನು ಪರಿಷ್ಕಾರವಾಗಿ ರೂಪಿಸುವುದಕ್ಕೆ ಅವಕಾಶ ಬೇಕೆಂದು ಅಭಿಪ್ರಾಯಪಡುತ್ತೇವೆ. ಈ ಭಾಗವನ್ನು ಸುಲಭವಾಗಿ ತಿಳಿಯುವಂತೆ ಕನ್ನಡದಲ್ಲಿ ವಿವರಿಸಿ ಹೇಳುವುದು ಪ್ರಯಾಸ. ಚೆನ್ನಾಗಿ ತಿಳಿಸಬೇಕಾದರೆ ಇಂಗ್ಲಿಷ್‌ಭಾಷೆಯನ್ನೇ ಪ್ರಯೋಗಮಾಡಬೇಕಾಗುತ್ತದೆ. ನಮ್ಮ ನ್ಯಾಯವಿಧಾಯಕ ಸಭೆಯ ಮೆಂಬರುಗಳು ಈ ವಿಚಾರಕ್ಕೆ ಬಹು ವಿಶೇಷವಾದ ಗಮನವನ್ನಿತ್ತು, ನಮ್ಮ ಯೂನಿವರ್ಸಿಟಿಯನ್ನು ತೃಪ್ತಿಕರವಾಗಿಯೂ ಸಾರ್ಥಕವಾಗಿಯೂ ನಡೆದು ಬರುವಂತೆ ರಚಿಸುವ ಭಾಗದಲ್ಲಿ ಸಾಹಸಪಟ್ಟಾರೆಂದು ನಂಬಿ ನಿರೀಕ್ಷಿಸುತ್ತೇವೆ.

ಬಾಹ್ಯಾಚಾರವೂ ಆಂತರಿಕ ಭಕ್ತಿಯೂ.

ದೇವರು ಒಬ್ಬನು ಇದ್ದಾನೆ; ನಾನು ನಡಿಸುವ ಕಾರ್ಯಾಕಾರ್ಯಗಳಿಗೆ ಆತನಿಗೆ ಉತ್ತರವಾದಿಯಾಗಿದ್ದೇನೆ ಎಂದು ನಂಬುವಂಥ ಪ್ರತಿಯೊಬ್ಬನೂ ಯಾವದಾದರೊಂದು ಮತವನ್ನು ಕೈಕೊಂಡಿರುತ್ತಾನೆ. ದೇವಭಕ್ತಿಯು ಹುಟ್ಟಿ ಮೊದಲು ಮನುಷ್ಯನ ಮನಸ್ಸಿನಲ್ಲಿರಬೇಕು. ನಂತರ ಅದು ಅವನು ನಡಿಸುವ ಕಾರ್ಯಗಳ ಮೂಲಕವಾಗಿ ತೋರಿಬರಬೇಕು. ಆದರೆ ಅನೇಕ ಸಂದರ್ಭಗಳಲ್ಲಿ ಮಕ್ಕಳು ಮತದ ಬಾಹ್ಯಾಚಾರಗಳನ್ನು ಮೊದಲು ಕಲಿತುಕೊಳ್ಳುತ್ತಾರೆ ಹೊರತು ಅದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದ ಆಂತರಿಕ ದೇವಭಕ್ತಿಯನ್ನು ಕುರಿತು ಅವರು ಯೋಚನೆಮಾಡುವದಿಲ್ಲ.

ಬಾಹ್ಯಾಚಾರವೆಂದರೆ ಏನು ಎಂಬುವದನ್ನು ವಿವರಿಸುವದು ಕಷ್ಟವಲ್ಲ. ಹಿಂದುವು ಸ್ನಾನ, ಮಡಿ, ಸಂಧ್ಯಾವಂದನೆಗಳನ್ನು ಮಾಡುತ್ತಾನೆ. ದೇವಸ್ಥಾನಕ್ಕೆ ಹೋಗಿ ಅಲ್ಲಿರುವ ವಿಗ್ರಹಕ್ಕೆ ಪೂಜಾರಿಯ ಮೂಲಕವಾಗಿ ಹಣ್ಣು, ಕಾಯಿ, ಹೂವುಗಳನ್ನು ಅರ್ಪಿಸುತ್ತಾನೆ. ಮಹಮ್ಮದೀಯನು ತನ್ನ ಗುರುಗಳು ಕಲಿಸಿಕೊಟ್ಟಿರುವ ಪ್ರಕಾರವಾಗಿ ಪ್ರತಿ ದಿನವೂ ಪ್ರಾರ್ಥನೆಮಾಡುತ್ತಾ ಬರುತ್ತಾನೆ. ಶುಕ್ರವಾರಗಳಲ್ಲಿ ಮಸೀದಿಗೆ ಹೋಗಿ ಧರ್ಮೋಪದೇಶವನ್ನು ಕೇಳುತ್ತಾನೆ. ಕ್ರೈಸ್ತನು ಪ್ರತಿ ದಿನವೂ ತನ್ನ ಮನೆಯಲ್ಲಿ ಪ್ರಾರ್ಥನೆಮಾಡುತ್ತಾನೆ. ಭಾನುವಾರಗಳಲ್ಲಿಯೂ ಬೇರೆ ದಿನಗಳಲ್ಲಿಯೂ ದೇವರನ್ನು ಆರಾಧಿಸುವದಕ್ಕೂ ಧರ್ಮೋಪದೇಶವನ್ನು ಕೇಳುವದಕ್ಕೂ ದೇವಸ್ಥಾನಕ್ಕೆ ಹೋಗುತ್ತಾನೆ. ಇವೆಲ್ಲಾ ಬಾಹ್ಯಾಚಾರವಾಗಿವೆ. ಒಬ್ಬನು ಈ ಬಾಹ್ಯಾಚಾರಗಳನ್ನೆಲ್ಲಾ ಎಳ್ಳಷ್ಟಾದರೂ ಲೋಪವಿಲ್ಲದೆ ಪರಿಪೂರ್ಣವಾಗಿ ಕೈಕೊಂಡು ನಡೆಯುತ್ತಾ ಬರುವವನಾದಾಗ್ಯೂ ತನ್ನಲ್ಲಿ ಯಥಾರ್ಥವಾದ ಆಂತರಿಕ ಭಕ್ತಿಯಿಲ್ಲದವನಾಗಿರಬಹುದು. ತುಂಬಾ ಯೋಚನೆಯಾದರೂ ವಿವೇಕವಾದರೂ ಇಲ್ಲದೆ ಕೇವಲ ರೂಢಿಯಾಗಿರುವ ಪ್ರತಿ ದಿನದ ಕೆಲಸವನ್ನಾಗಲಿ ಊಟವನ್ನಾಗಲಿ ಮಾಡುವದು ಒಬ್ಬ ಮನುಷ್ಯನಿಗೆ ಹ್ಯಾಗೆ ಸಾಧ್ಯವಾಗಿದೆಯೋ ಹಾಗೆಯೇ ಮತದ ಬಾಹ್ಯಾಚಾರಗಳನ್ನೂ ಕೂಡ ಕೈಕೊಂಡು ನಡೆಯುತ್ತಾ ಬರುವದು ಅವನಿಗೆ ಸಾಧ್ಯವಾಗಿರುತ್ತದೆ.

ಆಂತರಿಕ ದೇವಭಕ್ತಿಯು ಅತ್ಯಂತ ಪ್ರಾಮುಖ್ಯವಾದದ್ದು. ಅನೇಕರು ಈ ವಿಷಯದಲ್ಲಿ ಕೇವಲ ನಿಶ್ಚಿಂತರಾಗಿರುತ್ತಾರೆ. ಒಬ್ಬನು ಯಥಾರ್ಥವಾಗಿ ಮತಾಸಕ್ತನಾಗಿದ್ದರೆ, ಅಂಥವನು ತನ್ನ ಮತವನ್ನು ಕುರಿತು ವಿವೇಕದಿಂದಲೂ ಜಾಗರೂಕತೆಯಿಂದಲೂ ವಿಚಾರಮಾಡುತ್ತಾ ಬರಬೇಕು. ಅವನು ಯಥಾರ್ಥವಾಗಿ ಹೀಗೆ ವಿಚಾರಮಾಡುತ್ತಾ ಬರುವವನಾದರೆ, ದೇವರು ನನಗೆ ಎಂಥವನಾಗಿದ್ದಾನೆ? ಆತನನ್ನು ಮೆಚ್ಚಿಸುವದಕ್ಕಾಗಿ ನಾನು ಏನು ಮಾಡುತ್ತಾ ಇದ್ದೇನೆ? ಎಂಬ ಯೋಚನೆಗಳು ಅವನಲ್ಲಿ ಮೊದಲು ಹುಟ್ಟುವವು. ಈ ಪ್ರಶ್ನೆಗಳು ವಾಸ್ತವವಾದ ಎಲ್ಲಾ ಮತಗಳಿಗೆ ಮೂಲವಾಗಿರುತ್ತವೆ.

ದೇವರು ನನಗೆ ಎಂಥವನಾಗಿದ್ದಾನೆ? ಆತನು ನನಗೆ, ನಾನು ಉಚ್ಚರಿಸತಕ್ಕ ಒಂದು ನಾಮವಾಗಿ ಮಾತ್ರ ಇರುತ್ತಾನೋ? ಅಥವಾ ಆತನು ನನ್ನ ಸೃಷ್ಟಿಕರ್ತನಾಗಿಯೂ ಪರಿಪಾಲಕನಾಗಿಯೂ ಯಾವಾತನಿಗೆ ನಾನು ಉತ್ತರವಾದಿಯಾಗಿರಬೇಕೋ ಅಂಥವನಾಗಿಯೂ ಇರುತ್ತಾನೋ? ಆತನು ನನ್ನ ಮನಸ್ಸಿನ ಯೋಚನೆಗಳನ್ನೂ ನಾನು ಆಡುವ ಮಾತುಗಳನ್ನೂ ನಡಿಸುವ ಕಾರ್ಯಗಳನ್ನೂ ಲಕ್ಷ್ಯವಿಟ್ಟು ನೋಡಿ ನನ್ನನ್ನು ಸಂಪೂರ್ಣವಾಗಿ ತಿಳಿದುಕೊಳ್ಳುತ್ತಾನೋ? ಆತನು ನನ್ನ ವಿಷಯದಲ್ಲಿ ಚಿಂತಿಸಿದೆ, ನನ್ನನ್ನು ಪರಿಪಾಲಿಸದೆ ನನಗೆ ಬಹಳ ದೂರಸ್ಥನಾಗಿರುತ್ತಾನೋ? ಅಥವಾ ಆತನು ನನಗೆ ಕೇವಲ ಸಮೀಪಸ್ಥನಾಗಿದ್ದು ನನ್ನ ಮಾತುಗಳನ್ನೂ ಕಾರ್ಯಗಳನ್ನೂ ಮಾತ್ರವೇ ಅಲ್ಲ ನನ್ನ ಅಂತರ್ಯದ ಯೋಚನೆಗಳನ್ನೂ ಕೂಡ ಮುಂದಿಟ್ಟು ಮಾಡಿಕೊಳ್ಳುವಾತನಾಗಿದ್ದಾನೋ? ದೇವರು, ನಾನು ಯಾರ ಸಂಗಡ ಮಾತನಾಡಬಹುದೋ ಯಾರ ಸಂಗಡ ಅನ್ಯೋನ್ಯವಾಗಿರಬಹುದೋ ಅಂಥ, ಸುಗುಣನಾಗಿದ್ದಾನೋ? ಅಥವಾ ಆತನು ಪಾಪಕರ್ತರುಗಳಿಗೆ ನಿಲುಕದಷ್ಟು ಉನ್ನತವಾದ ಪದವಿಯಲ್ಲಿರುವಂಥ ಪರಬ್ರಹ್ಮನಾಗಿರುತ್ತಾನೋ? ಯಥಾರ್ಥವಾಗಿ ಮತಾಸಕ್ತನಾಗಿರುವವನು ಇಂಥ ಪ್ರಶ್ನೆಗಳಿಗೆ ಉತ್ತರವನ್ನು ಹೇಳಬೇಕು.

ದೇವರು ನನಗೆ ಎಂಥವನಾಗಿದ್ದಾನೆ? ಎಂಬ ಪ್ರಶ್ನೆಗೆ ಸಿಕ್ಕತಕ್ಕ ಉತ್ತರವು ಒಬ್ಬ ಮನುಷ್ಯನ ಮತವು ಎಂಥಾದ್ದಾಗಿದೆ ಎಂಬುವದನ್ನು ನಿರ್ಧರಿಸುತ್ತದೆ. ದೇವರು ನನ್ನ ವಿಷಯದಲ್ಲಿ ಚಿಂತಿಸದವನಾಗಿರುವ ಪಕ್ಷದಲ್ಲಿ ನಾನು ವಾಸ್ತವವಾಗಿ ಆತನನ್ನು ಆರಾಧಿಸಿ ಆತನ ಸೇವೆಯನ್ನು ಮಾಡುವದು ನನಗೆ ಅಸಾಧ್ಯವಾಗಿರುವದು. ಆದರೆ ಆತನು ನನ್ನ ವಿಷಯದಲ್ಲಿ ಚಿಂತಿಸುವವನಾಗಿಯೂ ತಂದೆಯಂತೆ ನನ್ನನ್ನು ಪ್ರೀತಿಸುವವನಾಗಿಯೂ ನಾನು ಆತನಿಗೆ ಪವಿತ್ರನೂ ಉತ್ತಮನೂ ವಿಧೇಯನೂ ಆಗಿರುವ ಮಗನಾಗಬೇಕೆಂದು ಕೋರುವವನಾಗಿಯೂ ಇದ್ದರೆ, ಆತನಿಗೆ ಪ್ರಾರ್ಥನೆಮಾಡುವದೂ ಯಾವಾಗಲೂ ಆತನ ಸಮೀಪದಲ್ಲಿರುವದೂ ಆತನನ್ನು ಮೆಚ್ಚಿಸಿ ಆತನಿಗೆ ಸೇವೆಮಾಡುವದಕ್ಕೆ ಪ್ರಯತ್ನಿಸುವದೂ ನನಗೆ ಸಾಧ್ಯವಾಗಿರುತ್ತದೆ. ಕ್ರೈಸ್ತ ಮತವು ಮಾತ್ರ ದೇವರ ವಿಷಯದಲ್ಲಿ ನಮಗೆ ಇಂಥ ಉತ್ಕೃಷ್ಟವಾದ ಬೋಧನೆಯನ್ನು ಕೊಡುತ್ತದೆ.

ದೇವರು ನಮ್ಮ ತಂದೆಯಾಗಿದ್ದು ನಮ್ಮನ್ನು ಪ್ರೀತಿಸುತ್ತಾ ಬರುವಾತನಾದರೆ, ಅಂಥ ದೇವರನ್ನು ಮೆಚ್ಚಿಸುವದಕ್ಕಾಗಿ ನಾನು ಏನು ಮಾಡುತ್ತಾ ಇದ್ದೇನೆ? ಎಂಬ ಎರಡನೇ ಪ್ರಶ್ನೆಗೂ ಕೂಡ ನಾವು ಉತ್ತರವನ್ನು ಕೊಡಬೇಕಾಗಿದೆ. ದೇವರನ್ನು ಮೆಚ್ಚಿಸಬೇಕಾದರೆ, ಮತದ ಬಾಹ್ಯಾಚಾರಗಳನ್ನು ಮಾತ್ರ ಕೈಕೊಳ್ಳುತ್ತಾ ಬರುವದು ಸಾಲದು. ನಾವು ಪ್ರತಿ ಕ್ಷಣದಲ್ಲಿಯೂ ನಮ್ಮ ಮನೋವಾಕ್ಕಾಯಗಳಲ್ಲಿ ದೇವರು ಮೆಚ್ಚುವ ರೀತಿಯಲ್ಲಿ ನಡೆದುಕೊಳ್ಳುತ್ತಾ ಬರುವದು ಪರಮಾವಶ್ಯಕವು. ದೇವರು ಮಹಾ ಪವಿತ್ರನಾಗಿದ್ದಾನೆಂಬುವದು ನಮಗೆ ಗೊತ್ತದೆ. ಅದಕಾರಣ ನಮ್ಮ ಮನಸ್ಸಿನಲ್ಲಿ ಶುದ್ಧವಾದ ಯೋಚನೆಗಳನ್ನು ಯೋಚಿಸಬೇಕು. ನಮ್ಮ ಬಾಯಿಯಿಂದ ಸತ್ಯವಾದ ಮಾತುಗಳನ್ನಾಡಬೇಕು. ನಮ್ಮ ಕೈಕಾಲುಗಳಿಂದ ನ್ಯಾಯವಾದ ಕಾರ್ಯಗಳನ್ನು ಮಾಡಬೇಕು. ಈ ರೀತಿಯಲ್ಲಿ ನಾವು ದೇವರನ್ನು ಮೆಚ್ಚಿಸಬೇಕು. ಇದೊಂದೇ ದೇವರು ಮೆಚ್ಚುವ ಮಾರ್ಗವಾಗಿದೆ. ನಾವು ದೇವಸ್ಥಾನಗಳನ್ನೂ ಅನ್ನಛತ್ರಗಳನ್ನೂ ಜಲಾಶ್ರಯಗಳನ್ನೂ ಕಟ್ಟಿಸಿದಾಗ್ಯೂ ಬೇಕಾದಷ್ಟು ಹಣವನ್ನು ದಾನಧರ್ಮಮಾಡಿದಾಗ್ಯೂ ಮನಶ್ಶುದ್ಧಿಯಿಲ್ಲದವರಾಗಿದ್ದರೆ ಇವೆಲ್ಲವುಗಳಿಂದ ಯಾವ ಪ್ರಯೋಜನವಾದರೂ ಉಂಟಾಗಲಾರದು. ಆದಕಾರಣ ನಮ್ಮಲ್ಲಿ ಆಂತರಿಕ ಭಕ್ತಿಯೂ ದೇವರ ಮೇಲಣ ಪ್ರೀತಿಯೂ ಇರಬೇಕು. ಇದರಿಂದ ನಮ್ಮ ಮನಸ್ಸಿಗೆ ಸಮಾಧಾನವೂ ಆನಂದವೂ ಉಂಟಾಗುವುದು.

ಬ್ರಿಟಿಷ್ ಗವರ್ನ್‌ಮೆಂಟಿನ ಮಂತ್ರಿಶ್ರೇಷ್ಠರಾದ ಮಿ|| ಅಸ್ಕ್ವಿತ್‌ರವರು ಇಟಲಿ ರಾಜ್ಯಕ್ಕೆ ಹೋಗಿದ್ದು ಬಂದರು. ಅವರು ರೋಮ್ ಪಟ್ಟಣಕ್ಕೆ ಹೋದಾಗ ಅಲ್ಲಿನವರು ಅವರನ್ನು ಎಷ್ಟೋ ಸಂಭ್ರಮದಿಂದ ಸತ್ಕಾರಮಾಡಿದರು. ಅವರು ಅಲ್ಲಿ ಯುದ್ಧದ ಸಾಲಿಗೂ ಹೋಗಿದ್ದರು. ಇಟಲಿಯ ದೊರೆಯವರೇ ಅವರನ್ನು ಕರೆದುಕೊಂಡುಹೋಗಿ ಸ್ಥಳಗಳನ್ನೆಲ್ಲಾ ತೋರಿಸಿದರು. ಮಿ|| ಅಸ್ಕ್ವಿತ್‌ರವರು ಇಟಲಿ ಸೈನ್ಯಗಳನ್ನು ನೋಡಿ ಬಹಳ ತೃಪ್ತಿಪಟ್ಟುಕೊಂಡು ಬಂದಿದಾರೆ.

ಯುದ್ಧದ ಸಮಾಚಾರಗಳು.

ವೆರ್ಡೂನ್‌ನಲ್ಲಿ ಇನ್ನೂ ಯುದ್ಧವೇ.

ಬ್ರಿಟನ್ ಮೇಲೆ ವಿಮಾನ ದಾಳಿಗಳು.

ಅಗಾಧವಾದ ಯುದ್ಧಭೂಮಿಯ ಎಲ್ಲಾ ರಣರಂಗಗಳಲ್ಲೂ ಬಹಳವಾಗಿ ಕದನಗಳು ನಡೆಯುತ್ತಲಿರುವುದಾಗಿ ಈ ವಾರದ ತಂತಿವರ್ತಮಾನಗಳಿಂದ ಗೊತ್ತಾಗುತ್ತದೆ. ವಿಶೇಷವಾಗಿ ಇಟಲಿಯವರು ತಮ್ಮ ಶೌರ್ಯವನ್ನು ಪ್ರಕಟಪಡಿಸಿದಾರೆ. ಖಚಿತವಾದ ಇತ್ಯರ್ಥಗಳೇನೂ ಆಗಿ ಇಲ್ಲವಾದಾಗ್ಯೂ ಸಾವಕಾಶವಾಗಿ ಮಿತ್ರಮಂಡಲಿಯವರಿಗೆ ಅನುಕೂಲವಾಗಿರುವಂತೆ ಗೊತ್ತಾಗುವುದು.

ಪಶ್ಚಿಮ ರಣರಂಗದಲ್ಲಿ.

ವೆರ್ಡೂನ್ ಕೋಟೆಯ ಸುತ್ತಲೂ ಜರ್ಮನಿಯವರು ಹಲವು ವೇಳೆ ತಮ್ಮ ಸೈನ್ಯಗಳನ್ನು ಬಹು ರಭಸದಿಂದ ನುಗ್ಗಿಸಿ ಕದನಮಾಡಿದರು. ಆದರೆ ಒಂದು ತಡವೆ ಹೊರತಾಗಿ ಅವರಿಗೆ ಎಲ್ಲೂ ಹೊಸ ಪ್ರದೇಶಗಳು ಸ್ವಾಧೀನವಾಗದೆ ಹೋಯಿತು. ಇತರ ತಾಣ್ಯಗಳಲ್ಲೆಲ್ಲಾ ಫ್ರೆಂಚರು ನುಗ್ಗಿ ಕದನಮಾಡಿ ಜರ್ಮನಿಯವರನ್ನು ಹಿಂದಕ್ಕೆ ಓಡಿಸಿದ್ದಲ್ಲದೆ ಹಲವರನ್ನು ಸೆರೆ ಹಿಡಿದಿರುತ್ತಾರೆ. ಜರ್ಮನಿಯವರು ಮುತ್ತಿಗೆ ಹಾಕುವುದರಲ್ಲಿ ಮೊದಲು ಸ್ವಲ್ಪ ಕಂದಕಗಳ ಸೈನಿಕರನ್ನು ಮುಂಬರಕ್ಕೆ ನುಗ್ಗಿಸುವರು. ಅವರು ಒಟ್ಟಿಟ್ಟಾಗಿ ನುಗ್ಗಿ ಹೋಗುವರು. ಫ್ರೆಂಚರ ಮೆಷೀನ್ ಪಿರಂಗಿ ಗುಂಡುಗಳು ಅವರನ್ನೆಲ್ಲಾ ಕತ್ತರಿಸಿ ಕೊಲ್ಲುವುವು. ಬಳಿಕ ಅವರಿಗಿಂತ ಶೂರರಾದ ಸೈನಿಕರು ಹಿಂದಿನಿಂದ ನುಗ್ಗಿ ಬರುವರು. ಇವರು ಫ್ರೆಂಚರ ಸೈನ್ಯ ಸಾಲುಗಳನ್ನು ಭೇದಿಸುವುದಕ್ಕೆ ಸಾಹಸಪಡುವರು. ಫ್ರೆಂಚರು ಇವರನ್ನು ಕೂಡ ನಾಶಮಾಡುವುದು ಇಲ್ಲವೇ ಸೋಲಿಸಿ ಹಿಂದಕ್ಕೆ ಓಡಿಸುವುದು, ಈ ರೀತಿ ನಡೆಯುತ್ತಾ ಬಂದಿದೆ. ಜರ್ಮನಿಯವರು ಅಲ್ಲಿಗೆ ಸುಮಾರು ಆರು ವಾರಗಳ ಲಾಗಾಯಿತು ವೆರ್ಡೂನ್ ಕೋಟೆಯ ಮೇಲೆ ನುಗ್ಗಿ ಬಂದು ಅದನ್ನು ಫ್ರೆಂಚರಿಂದ ಕಿತ್ತುಕೊಳ್ಳಬೇಕೆಂದು ಕದನಮಾಡುತ್ತಲೇ ಇದಾರೆ. ಈಗಲಾದರೋ ಅವರು ಆ ಪಟ್ಟಣದಿಂದ ಹೊರಪಾರ್ಶ್ವಗಳಲ್ಲಿರುವ ಕೋಟೆಕೊತ್ತಲಗಳನ್ನು ಕೂಡ ಗೆದ್ದುಕೊಂಡಿಲ್ಲ.

ಫ್ರೆಂಚರ ವಿಮಾನಯಂತ್ರಗಳು ಕಳೆದ ವಾರ ಅನೇಕ ಚುರುಕಾದ ಕಾರ್ಯಗಳನ್ನು ನಡಿಸಿರುತ್ತವೆ. ಅವು ಕಳೆದ ಮಾರ್ಚ್ ತಿಂಗಳಲ್ಲಿ ಜರ್ಮನಿಯವರಿಗೆ ಸೇರಿದ 31 ವಿಮಾನಯಂತ್ರಗಳನ್ನು ನಾಶಪಡಿಸಿರುತ್ತವೆ. ಆ ಪೈಕಿ 9 ಯಂತ್ರಗಳು ಕೆಳಗಿಳಿದು ಫ್ರೆಂಚರ ವಶಕ್ಕೆ ಬಿದ್ದುಕೊಂಡವು. ಇದಲ್ಲದೆ ಪಿರಂಗಿಗಳನ್ನು ಎತ್ತಿಕಟ್ಟಿ ಗುಂಡುಗಳನ್ನು ಹೊಡೆದು ಬೇರೆ ನಾಲ್ಕು ವಿಮಾನಯಂತ್ರಗಳನ್ನು ನಾಶಮಾಡಿದಾರೆ. ಜರ್ಮನಿಯವರಾದರೋ ಫ್ರೆಂಚರ 13 ವಿಮಾನಯಂತ್ರಗಳನ್ನು ನಾಶಪಡಿಸಿದರು. ಆ ಪೈಕಿ 12 ಯಂತ್ರಗಳು ಕೆಳಕ್ಕಿಳಿದು ಜರ್ಮನಿಯವರ ವಶಕ್ಕೆ ಬಿದ್ದುಕೊಂಡವು.

ವೆರ್ಡೂನ್‌ನಲ್ಲಿ ಈಗ ಫ್ರೆಂಚರು ತಮ್ಮ ಕಂದಕಗಳನ್ನು ಬಿಟ್ಟು ಶತ್ರು ಸೈನ್ಯದ ಮೇಲೆ ನುಗ್ಗುವುದಕ್ಕೆ ಸಿದ್ಧರಾಗಿದಾರೆ. ಜರ್ಮನಿಯ ಸೈನಿಕರಿಗೆ ಅಪಾರವಾದ ನಷ್ಟಗಳುಂಟಾದವು.

ಬ್ರಿಟಿಷ್ ಸೈನ್ಯಗಳು ಕಾವಲಿಟ್ಟುಕೊಂಡಿರುವ ಯುದ್ಧಸಾಲಿನ ಭಾಗದಲ್ಲಿ ಎರಡು ಕಡೆಗಳಲ್ಲಿ ವಿಶೇಷ ಪಿರಂಗಿ ಗುಂಡುಗಳ ಹೊಡೆದಾಟ ನಡೆಯುತ್ತಲಿದೆ. ಜರ್ಮನಿಯವರು ಕಳೆದುಕೊಂಡಿದ್ದ ಕಂದಕಗಳನ್ನು ಮತ್ತೆ ಗೆದ್ದುಕೊಳ್ಳಬೇಕೆಂದು ಬಹಳ ಸಾಹಸಪ್ರಯತ್ನಗಳನ್ನು ಮಾಡಿದಾಗ್ಯೂ ಅದು ಅವರಿಗೆ ಸಾಧ್ಯವಾಗದೆ ಹೋಯಿತು. ಒಂದು ಕಡೆ ಸುರಂಗ ಹಾರಿ ಹಳ್ಳ ಬಿದ್ದ ಭಾಗವನ್ನು ಬ್ರಿಟಿಷರು ನುಗ್ಗಿ ಆಕ್ರಮಿಸಿಕೊಂಡರು. ಇದಲ್ಲದೆ ಅವರು ಶತ್ರು ಸೈನಿಕರಲ್ಲಿ 4 ಮಂದಿ ಸುಬೇದಾರರನ್ನೂ 80 ಮಂದಿ ಭಟರನ್ನೂ ಸೆರೆ ಹಿಡಿದಿರುತ್ತಾರೆ. ಜರ್ಮನಿಯವರು ಬ್ರಿಟಿಷರ ಮೇಲೆ ನುಗ್ಗಿ ಹೋಗಿ ಒಂದು ದಿವಸೆಲ್ಲಾ ಕದನಮಾಡಿದರು.- ಬ್ರಿಟಿಷರ ವಿಮಾನಯಂತ್ರಗಳು ಬಹಳ ಚುರುಕಾಗಿ ಕಾರ್ಯಗಳನ್ನು ನಡಿಸುತ್ತವೆ. ಅವುಗಳ ಹಾವಳಿಯಿಂದ ಜರ್ಮನಿಯವರ ಅನೇಕ ವಿಮಾನಯಂತ್ರಗಳು ನಾಶವಾದವು; ಬ್ರಿಟಿಷರ ವಿಮಾನಗಳೂ ಹಲವು ನಷ್ಟವಾಗಿರುತ್ತವೆ.

ಬ್ರಿಟನ್ ಮೇಲೆ ವಿಮಾನ ದಾಳಿಗಳು.

ಕಳೆದ ವಾರ ಸುಮಾರಾಗಿ ಪ್ರತಿ ದಿನವೂ ರಾತ್ರಿ ಹೊತ್ತು ಜರ್ಮನಿಯವರು ಜೆಪ್ಪೆಲಿನ್ ಎಂಬ ಭಾರೀ ವಿಮಾನ ಯಂತ್ರಗಳಲ್ಲಿ ಬ್ರಿಟನ್ ಮೇಲೆ ಹಾರಿ ಬಂದು ಕಳ್ಳರಂತೆ ದಾಳಿ ನಡಿಸಿದರು. ಈ ದೊಡ್ಡ ವಿಮಾನ ಯಂತ್ರಗಳು ಇಂಗ್ಲೆಂಡಿನ ಪೂರ್ವ ತೀರದ ಮೇಲೂ, ಉತ್ತರ ಪೂರ್ವ ಭಾಗಕ್ಕೂ, ಸ್ಕಾಟ್ಲೆಂಡಿನ ದಕ್ಷಿಣ ಭಾಗಕ್ಕೂ ಬಂದಿದ್ದವು. ಏಪ್ರಿಲ್ ತಾ. 1 ರಲ್ಲಿ ಜೆಪ್ಪೆಲಿನ್‌ಗಳು ಐದು ಬಂದವು. ಅವುಗಳಿಂದ ಸಿಡಿಮದ್ದಿನ ಗುಂಡುಗಳು ಬೀಳುತ್ತಿದ್ದ ವೇಳೆಯಲ್ಲೇ ಆ ಪೈಕಿ ಒಂದು ಯಂತ್ರವನ್ನು ಬ್ರಿಟಿಷ್ ಗುಂಡುಗಳು ಬಡಿದು ಮಧ್ಯಕ್ಕೆ ಎರಡಾಗಿ ಒಡೆದುಬಿಟ್ಟದ್ದರಿಂದ ಅದು ಸಮುದ್ರದೊಳಕ್ಕೆ ಮುಳುಗಿ ಹೋಯಿತು. ಅದರೊಳಗಿದ್ದ ಜೆಪ್ಪೆಲಿನ್‌ದಾರರು, 16 ಜನಗಳೂ ನೀರಿನಿಂದ ಎತ್ತಲ್ಪಟ್ಟು ಸೆರೆ ಹಿಡಿಯಲ್ಪಟ್ಟರು. ಹಲವು ಸ್ಥಳಗಳಲ್ಲಿ ಸುಮಾರು 80 ಸಿಡಿಮದ್ದಿನ ಗುಂಡುಗಳು ಬಿದ್ದವು. ಇದರಿಂದ 43 ಜನರು ಕೊಲೆಯಾದರು; 66 ಮಂದಿಗೆ ಗಾಯಗಳಾದವು. ಸೈನ್ಯದ ಠಾಣ್ಯಗಳಿಗೆ ಯಾವ ವಿಧವಾದ ನಷ್ಟವೂ ಉಂಟಾಗಲಿಲ್ಲ. ಆದರೆ ಒಂದು ದೇವಾಲಯವೂ, ಐದು ವಾಸದ ಮನೆಗಳೂ ಸಂಪೂರ್ಣವಾಗಿಯೂ, 39 ಮನೆಗಳು ಅಲ್ಪಸ್ವಲ್ಪವಾಗಿಯೂ ನಾಶ ಹೊಂದಿದವು. ಏಪ್ರಿಲ್ ತಾ. 2 ರಲ್ಲಿ ಎರಡು ಜೆಪ್ಪೆಲಿನ್‌ಗಳು ಇಂಗ್ಲೆಂಡಿಗೆ ಬಂದವು; ಆ ಪೈಕಿ ಒಂದನ್ನು ಬ್ರಿಟಿಷರು ಓಡಿಸಿಬಿಟ್ಟರು. ಇನ್ನೊಂದು ಸ್ಕಾಟ್‌ಲೆಂಡಿನಲ್ಲಿ ಸಿಡಿಮದ್ದಿನ ಗುಂಡುಗಳನ್ನು ಹಾಕಿತು. 16 ಜನರು ಕೊಲೆಯಾದರು; 100 ಜನರಿಗೆ ಗಾಯಗಳಾದವು. ಮತ್ತು ಎಂಟು ವಾಸದ ಮನೆಗಳು ನಾಶಮಾಡಲ್ಪಟ್ಟವು. ಮಾರನೇ ದಿನ ರಾತ್ರಿ ಮೂರು ಜೆಪ್ಪೆಲಿನ್‌ಗಳು ಹಾರಿ ಬಂದು ಸುಮಾರು 200 ಮಂದಿಗೂ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದ್ದರಿಂದ ವಿಶೇಷ ನಷ್ಟವೇನೂ ಆಗದಿದ್ದರೂ ಗಂಡಸರು 7 ಮಂದಿಯನ್ನೂ ಮೂರು ಮಂದಿ ಮಕ್ಕಳನ್ನೂ ಕೊಂದುಹಾಕಿ ಹನ್ನೊಂದು ಜನರನ್ನು ಗಾಯಗೊಳಿಸಿದವು. ಏಪ್ರಿಲ್ ತಾ. 4 ನೇ ರಾತ್ರಿ, ಒಂದು ಜೆಪ್ಪೆಲಿನ್ ಹಾರಿಬಂದಿತು; ಅದರಿಂದ ನಷ್ಟವೇನೂ ಸಂಭವಿಸಲಿಲ್ಲ. ಬ್ರಿಟಿಷ್ ಪಿರಂಗಿ ಗುಂಡುಗಳು ಅದನ್ನು ಹಿಂದಕ್ಕೆ ಓಡಿಸಿಬಿಟ್ಟವು. ಮರುದಿನ ರಾತ್ರಿ ಮೂರು ಜೆಪ್ಪೆಲಿನ್‌ಗಳು ಇಂಗ್ಲೆಂಡಿಗೆ ಬಂದವು. ಆ ಪೈಕಿ ಒಂದರಿಂದ ಐದು ಸಿಡಿಮದ್ದಿನ ಗುಂಡುಗಳು ಬಿದ್ದವು. ನಷ್ಟವೇನೂ ಆಗಲಿಲ್ಲ. ಅದನ್ನು ಓಡಿಸಿಬಿಟ್ಟರು. ಎರಡನೆಯದು ಸಿಡಿಮದ್ದಿನ ಗುಂಡು ಹಾಕುವಷ್ಟರೊಳಗಾಗಿ ಅದನ್ನೂ ಹಿಂದಕ್ಕೆ ಓಡಿಸಿದರು. ಮೂರನೆಯದಾದರೋ 48 ಸಿಡಿಮದ್ದಿನ ಗುಂಡುಗಳನ್ನು ಸುರಿಸಿತು. ಒಂದು ಮಗು, ಗಂಡಸರಿಬ್ಬರು, ಹೆಂಗಸರಿಬ್ಬರು ಅಂತು ಐದು ಮಂದಿ ಮೃತಪಟ್ಟರು; ಐದು ಮಂದಿ ಮಕ್ಕಳು ಗಾಯಪಟ್ಟರು. ಇನ್ನು ಕೆಲವು ವಿಮಾನ ಯಂತ್ರಗಳು ಬಂದಿದ್ದು ಹಾಗೂ, ಅವುಗಳ ದೆಸೆಯಿಂದ ಕೆಡಕೇನೂ ಆಗುವುದಕ್ಕೆ ಮೊದಲೇ ಅವುಗಳನ್ನೆಲ್ಲಾ ಓಡಿಸಿಬಿಟ್ಟಿರುವ ಹಾಗೂ ವರ್ತಮಾನವಿದೆ.

ಸಮುದ್ರದ ಮೇಲೆ.

ಡೆನ್ಮಾರ್ಕ್ ಸಮೀಪದಲ್ಲಿ ಒಂದು ಸಮುದ್ರ ಯುದ್ಧವಾದಂತೆ ಸಮಾಚಾರ ಬಂದಿದೆ. ಅದರಲ್ಲಿ ಜರ್ಮನಿಯವರ ಹಿಸ್ಪ್ರಿಯದಿಂದ ಬಹಳ ನಷ್ಟ ಹೊಂದಿತು. ಜರ್ಮನಿಯ ಒಂದು ಸಬ್‌ಮೆರೀನನ್ನು ಮುಳುಗಿಸಿ ಅದರಲ್ಲಿದ್ದವರನ್ನು ನೀರಿನಿಂದೆತ್ತಿ ಸೆರೆ ಹಿಡಿದುಕೊಂಡರು.

ಕಳೆದ ವಾರ ಹಡಗುಗಳು ತುಂಬಾ ನಷ್ಟವಾಗಿರುತ್ತವೆ. ಜರ್ಮನಿಯ ಸಬ್‌ಮೆರೀನುಗಳು ಬಹಳ ಹಡಗುಗಳನ್ನು ಅನೇಕ ಹಡಗುಗಳನ್ನು ಮುಳುಗಿಸಿ

[illegible] ಬ್ರಿಟಿಷರದು ಎಂಟು, ನಾರ್ವೆಯವರದು ಏಳು, ಸ್ವೀಡ್ ನವರದು, [illegible] ಸ್ವಿಯರ್ಲೆಂಡಿನವರದು ಒಂದು, ಡಚ್ಚರದು ಒಂದು, ಒಟ್ಟು ಹದಿನೆಂಟು [illegible] ಮುಳುಗಿ ನಷ್ಟವಾದವು. ಅವುಗಳಲ್ಲಿ ಚಿಕ್ಕವುಗಳಾಗಿದ್ದವುಗಳೇ [illegible] ಸುಮಾರು 73 ಮಂದಿ ನಾವಿಕರು ನಷ್ಟವಾದಂತೆ ತಿಳಿಸಲ್ಪಟ್ಟಿದೆ. ಜರ್ಮ[illegible] ಹಡಗನ್ನು ಎಚ್ಚರಿಕೆ ಕೊಡದೇನೇ ಮುಳುಗಿಸಿಬಿಟ್ಟಿದಾರೆ.

[illegible] ಕಡಲಿನಲ್ಲಿ ಟರ್ಕಿಯವರು ಒಂದು ಆಸ್ಪತ್ರೆ ಹಡಗನ್ನು ಮುಳುಗಿಸಿ[illegible] ಮಹಾ ಅಕ್ರಮಕೃತ್ಯವಾಗಿರುತ್ತದೆ. ರಷ್ಯಾದವರು ಅದರಲ್ಲಿ ಗಾಯಪಟ್ಟು [illegible] ಮಲಗಿದ್ದ ಸೈನಿಕರನ್ನು ಸಾಗಿಸಿಕೊಂಡುಹೋಗುತ್ತಿದ್ದರು. ಟರ್ಕಿ[illegible] ಆ ಹಡಗು ಮುಳುಗಿಹೋಯಿತಾದ್ದರಿಂದ 115 ಮಂದಿ ಸಮುದ್ರದ[illegible]. ಅವರಲ್ಲಿ ನರ್ಸ್ ಎಂಬ ಸೇವಾ ಸ್ತ್ರೀಯರು 15 ಮಂದಿಯೂ, [illegible] 60 ಮಂದಿಯೂ ಇದ್ದರೆಂದು ತಿಳಿಯಬರುತ್ತದೆ. ಇವರು ಕೂಡ [illegible]ದರು. ಆ ಹಡಗಿನ ಮೇಲೆ ಹೊರಪಾರ್ಶ್ವದಲ್ಲಿ ಸ್ಪಷ್ಟವಾದ ಗುರು[illegible]. ಬೇಕೆಂದು ಆ ಹಡಗನ್ನು ಮುಳುಗಿಸಿದಂತೆ ತೋರುತ್ತದೆ.

ಪೂರ್ವ ರಣರಂಗದಲ್ಲಿ.

[illegible] ಮೇಲೆ ಸೇರ್ಪಡೆ ಕಟ್ಟಿಕೊಂಡಿದ್ದ ಹಿಮಗಡ್ಡೆಗಳು ಕರಗಿ ಪ್ರವಾಹ[illegible] ಅಕ್ಕಪಕ್ಕದ ಗ್ರಾಮ ಭೂಮಿಗಳ ಮೇಲೆ ಹರಿಯುತ್ತಿದೆ. ಈ ರಣರಂಗ[illegible] ವಿಶೇಷ ಕದನಗಳೇನೂ ಆದಂತೆ ಕಂಡುಬರುವುದಿಲ್ಲ. ಪ್ರವಾಹಗಳ ದೆಸೆ[illegible] ಕೆಲವು ಕಡೆ ಜರ್ಮನ ಸೈನಿಕರು ತಮ್ಮ ಕಂದಕಗಳನ್ನು ತ್ಯಜಿಸಿ ಹೊರ[illegible]ರು. ರಷ್ಯಾದವರು ಕೂಡಲೇ ಅವರ ಮೇಲೆ ಗುಂಡುಗಳ ಮಳೆಗರೆದು [illegible] ಓಡಿಹೋಗುವಂತೆ ಮಾಡಿಬಿಟ್ಟರು.

[illegible] ಪ್ರಾಂತ್ಯದಲ್ಲಿ ಆಸ್ಟ್ರಿಯಾದವರು ರಷ್ಯಾದವರ ಮೇಲೆ ನುಗ್ಗಿ[illegible]. ರಷ್ಯಾದವರು ಘೋರವಾಗಿ ಯುದ್ಧ ನಡಿಸಿ ಅವರನ್ನೆಲ್ಲಾ [illegible] ಓಡಿಸಿದ್ದಾಯಿತು.

ಇಟಲಿ.

[illegible]ಯವರ ಯುದ್ಧಸಾಲಿನ ಉದ್ದಕ್ಕೂ ಅನೇಕ ಚುರುಕಾದ ಕಾರ್ಯ[illegible] ನಡೆದುವು. ಕೆಲವು ಠಾಣ್ಯಗಳಲ್ಲಿ ಇಟಲಿಯವರು ವಿಶೇಷವಾಗಿ ನುಗ್ಗಿ[illegible]ರೆ. ಉತ್ತರ ಭಾಗದಲ್ಲಿ ಅವರು ಹತ್ತೊಂಭತ್ತು ಮೈಲಿ ಉದ್ದ [illegible] ನುಗ್ಗಿ ಹೋಗಿ ಎರಡುವರೆ ಮೈಲಿ ದೂರದಷ್ಟು ಪ್ರದೇಶವನ್ನು ಆಸ್ಟ್ರಿಯಾ[illegible] ವಶಪಡಿಸಿಕೊಂಡಿದಾರೆ. ಇತರ ಠಾಣ್ಯಗಳಲ್ಲೂ ಇಟಲಿಯವರು [illegible]ಮುಂದಕ್ಕೆ ನುಗ್ಗಿಹೋಗಿರುವುದಲ್ಲದೆ ಕೆಲವು ಸಣ್ಣ ಕೋಟೆಗಳನ್ನು [illegible]ಕೊಂಡು, ಶತ್ರು ಸೈನಿಕರನ್ನು ಕೈಸೆರೆ ಹಿಡಿದಿರುವರು. ಇಷ್ಟೇ[illegible] ಇಟಲಿಯವರು ವಿಮಾನಯಂತ್ರಗಳಲ್ಲಿ ಹಾರಿಹೋಗಿ ಆಸ್ಟ್ರಿಯಾ[illegible] ರೈಲ್ವೆ ಸ್ಟೇಷನ್ ಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿ ನಷ್ಟ[illegible]ರೆ.

[illegible]ಗಾಗಿ ಆಸ್ಟ್ರಿಯಾದವರು ಕೆಲವು ವಿಮಾನ ಯಂತ್ರಗಳಲ್ಲಿ ಇಟಲಿಯ[illegible] ಹಾರಿಬಂದು ಪರಿಪರಿ ಕೃತ್ಯಗಳನ್ನು ನಡಿಸಿದರು. ಆಸ್ಟ್ರಿಯಾದ [illegible] ಸಮುದ್ರ ವಿಮಾನಗಳ ಸಮೇತ ಇಟಲಿಯ ಪೂರ್ವ ದಿಕ್ಕಿನಲ್ಲಿರುವ [illegible] ಹರಡಿದ್ದ ಪಟ್ಟಣಕ್ಕೆ ಬಂದವು. ಈ ಪೈಕಿ ಮೂರನ್ನು ಇಟಲಿ[illegible]ಯವರು ಹೊಡೆದುರುಳಿಸಿ, ಒಂದನ್ನು ಹಿಡಿದುಕೊಂಡರು. ವಿಶೇಷ ನಷ್ಟವೇನೂ [illegible]. ಅವರೂ ಮೂರು ಮಂದಿ ಕೊಲೆಯಾದರು ; ಹನ್ನೊಂದು ಜನ [illegible] ಗಾಯಗಳಾಗಿವೆ. ಆಸ್ಟ್ರಿಯಾದವರು ವಿಮಾನ ಯಂತ್ರಗಳಲ್ಲಿ ಬಂದು [illegible] ನಗರಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಹಾಕಬೇಕೆಂದು ಪ್ರಯ[illegible]. ಆದರೆ ಇಟಲಿಯವರು ಅವರನ್ನೆಲ್ಲಾ ಹಿಂದಕ್ಕೆ ಓಡಿಸಿರುತ್ತಾರೆ.

ಟರ್ಕಿಯಲ್ಲಿ.

[illegible]ಮಿಯಾದಲ್ಲಿ ಬ್ರಿಟಿಷರು ಸ್ವಲ್ಪ ಮಟ್ಟಿಗೆ ನುಗ್ಗಿಹೋಗಿ [illegible] ಕೆಲವು ಠಾಣ್ಯಗಳನ್ನು ಸ್ವಾಧೀನ ಪಡಿಸಿಕೊಂಡಿದಾರೆ. ಇನ್ನೂ [illegible]ವರಿಗೆ ನಮ್ಮ ಚಕ್ರವರ್ತಿ ಸಾರ್ವಭೌಮರವರು ಹಿಂದೆ[illegible] [illegible] ಅವರು ತಮ್ಮ ಠಾಣ್ಯವನ್ನು ಶತ್ರುಗಳಿಗೆ ಬಿಟ್ಟುಕೊಡದೆ [illegible] ಧೈರ್ಯದಿಂದ ಕಾಪಾಡಿಕೊಂಡು ಬಂದಿರುವುದು ಸಂತೋಷಕರವಾಗಿದೆ [illegible] ಅವರ ಸಹಾಯಕ್ಕೆ ಹೊಸದಾಗಿ ಸೈನ್ಯಗಳು ಕಳುಹಿಸಲ್ಪಡುತ್ತಿರುವವೆಂದೂ [illegible].

[illegible]ದಲ್ಲಿ ರಷ್ಯಾದವರು ದಂಗೆಕೋರರನ್ನು ಸೋಲಿಸಿ ಬಾಗ್ದಾದಿನ [illegible] ನುಗ್ಗಿಹೋಗುತ್ತಲಿದಾರೆ.

[illegible] ಪರ್ವತ ಶ್ರೇಣಿಯಲ್ಲಿ ರಷ್ಯಾದವರು ಮುಂದುಮುಂದಕ್ಕೆ [illegible]ಹೋಗುತ್ತಲೇ ಇದಾರೆ. ಕ್ರಿಮಿಯಾದಿಂದ ಬಂದ ಟರ್ಕಿಯವರು ರಷ್ಯಾದವರ [illegible] ನುಗ್ಗಿ ಕದನವಾಡಿದರು. ಸಮುದ್ರದ ಕಡೆಯಿಂದ ಟ್ರೆಬಿಜಾಂಡ್ ಎಂಬ [illegible] ಟರ್ಕಿಯವರಿಗೆ ಸಹಾಯವಾಗುತ್ತಿತ್ತು. ಅಷ್ಟಾದರೂ ಟರ್ಕಿ[illegible] ಸೋಲಿಸಲ್ಪಟ್ಟರು. ರಷ್ಯಾದವರು ಮುಂದಕ್ಕೆ ನುಗ್ಗಿ ಹೋಗುತ್ತಲಿದಾರೆ. [illegible]ದವರ ಒಂದು ಯುದ್ಧದ ಹಡಗು ಟ್ರೆಬಿಜಾಂಡ್ ಎಂಬ ಯುದ್ಧದ ಹಡಗಿನ [illegible] ನುಗ್ಗಿ ಹೋದಾಗ ಆ ಹಡಗು ತಪ್ಪಿಸಿಕೊಂಡು ಓಡಿಹೋಯಿತು. ರಷ್ಯಾ[illegible] ಟರ್ಕಿ ಸೈನಿಕರನ್ನು ಕೈಸೆರೆ ಹಿಡಿದುಕೊಂಡರು. ಇದಲ್ಲದೆ ರಷ್ಯಾದವರು [illegible]ದಲ್ಲಿ ಕಲ್ಲಿದ್ದಲು ಭರ್ತಿಮಾಡಿಕೊಂಡು ಹೋಗುತ್ತಿದ್ದ ಟರ್ಕಿಯವರ [illegible]ಗಳನ್ನು ಮುಳುಗಿಸಿರುತ್ತಾರೆ.

ಬ್ರಿಟಿಷ್ ಯುದ್ಧದ ಹಡಗುಗಳು ಫಿರಂಗಿ ಗುಂಡುಗಳನ್ನು ಸುರಿಸಿ [illegible] ಕೋಟೆಯನ್ನು ನಾಶಮಾಡಿರುತ್ತವೆ.

[illegible]ಕ್ಕೆ ಪಶ್ಚಿಮ ಭಾಗದಲ್ಲಿರುವ ಅರಬ್ಬಿಯವರು ಬ್ರಿಟಿಷರಿಗೆ [illegible]ದರು. ಇದರಿಂದ ಆ ಪ್ರಾಂತ್ಯದಲ್ಲಿ ಇನ್ನೇನೂ ಕದನಗಳು ನಡೆ[illegible] ಕಾಣುವುದಿಲ್ಲ.

ಇತರ ವಿಷಯಗಳು.

[illegible]ದಿಂದ ಈ ವಾರ ವರ್ತಮಾನವೇನೂ ಬಂದಿರುವುದಿಲ್ಲ.—[illegible] [illegible] ಹತ್ತಿರ ಬ್ರಿಟಿಷರ ಒಂದು ಸಮುದ್ರ ವಿಮಾನವು ಶಕ್ತಿ ಕುಂದಿ ಬಿದ್ದು[illegible]ದಿಂದ ಅದರಲ್ಲಿದ್ದ ಮೂರು ಮಂದಿಯೂ ಡೇನರಿಗೆ ಶರಣಾಗತರಾದರು.

[illegible]ನಿಯವರು ಹೊಲ್ಯಾಂಡಿನ ಹಡಗುಗಳನ್ನು ಸಿಕ್ಕಿದ ಕಡೆ ಮುಳುಗಿ[illegible]ವುದನ್ನು ನೋಡಿ ಅಲ್ಲಿನ ಜನರು ಕಳವಳಪಡುತ್ತಿದಾರೆ. ಅವರೀಗ [illegible] ಹೊರಡುವುದಕ್ಕೆ ಸಿದ್ಧಪಡಿಸಿಕೊಂಡಿದಾರೆಂದು ತಿಳಿಸಲ್ಪಟ್ಟಿತು.

ಬ್ರಿಟಿಷ್ ರಾಜ್ಯದ ಮುಂದಿನ ಸಾಲಿನ ಜಮಾಖರ್ಚಿನ ಅಂದಾಜು ಪಟ್ಟಿಗಳ [illegible] ಪಾರ್ಲಿಮೆಂಟಿನಲ್ಲಿ ಚರ್ಚೆಗಳು ನಡೆದವು. ಜಾರ್ಜ್ ಸಾರ್ವ[illegible]ರವರು ತಮ್ಮ ಸ್ವಂತ ಆಸ್ತಿಯಿಂದ ಒಂದು ಲಕ್ಷ ಪೌಂಡುಗಳನ್ನು ಗವರ್ನ[illegible]ಗೆ ಕೊಟ್ಟುಬಿಟ್ಟು, ಗವರ್ನಮೆಂಟಿನವರಿಗೆ ಸೇರತಕ್ಕದ್ದೆಂದು ತೋರುವ [illegible] ವಿನಿಯೋಗಿಸಿಕೊಳ್ಳಬಹುದೆಂದು ಅಪ್ಪಣೆಕೊಡಿಸಿದಾರೆ. ಅವರಿಗೆ ಪಾರ್ಲಿ[illegible]ದ ಸ್ಕಾಂಡಿನೇವಿಯನ್ ಆಗುವ ವರಮಾನದಲ್ಲಿ ಬಹಳ ಹೆಚ್ಚಾದ ಭಾಗವನ್ನು [illegible] ಈ ರೀತಿ ಕಡಿಮೆಮಾಡಿಸಿರುವರು. ಬ್ರಿಟಿಷ್ ಗವರ್ನಮೆಂಟಿಗೆ ಕಳೆದ [illegible] 156,90,00,000 ಪೌಂಡು ಖರ್ಚಾಯಿತು. ಈ ಪೈಕಿ 31,60,00,000 [illegible]ನ್ನು ಮಿತ್ರಮಂಡಲಿಯವರಿಗೂ ಬ್ರಿಟಿಷ್ ಸಾಮ್ರಾಜ್ಯಗಳಿಗೂ ಸಾಲವಾಗಿ [illegible]. ಕಳೆದ ಸಾಲಿನಲ್ಲಿ 33,70,00,000 ಪೌಂಡು ಹುಟ್ಟುವಳಿ [illegible]. ಉಳಿದ ಹಣವನ್ನೆಲ್ಲಾ ಗವರ್ನಮೆಂಟಿನವರು ಸಾಲವಾಗಿ [illegible] [illegible] ಸಾಲಿನಲ್ಲಿ 182,50,00,000 ಪೌಂಡು ಖರ್ಚಾಗಬಹುದೆಂದೂ, [illegible] 115,00,00,000 ಪೌಂಡು ಯುದ್ಧಕಾರ್ಯಕ್ಕೆ ವಿನಿಯೋಗಿಸಲ್ಪಡು[illegible] ಅಂದಾಜು ಮಾಡಲಾಗಿದೆ. [illegible] ಸಾಲಿನಲ್ಲಿ ಬ್ರಿಟಿಷ್ ಗವರ್ನ[illegible] [illegible],30,00,000 ಪೌಂಡು ಹುಟ್ಟುವಳಿ [illegible]. ಆದ ಹಣಕ್ಕೆ [illegible]

[illegible]ವಾಗುವುದಿಲ್ಲವಾಗಿ ಉಳಿದ ಹಣವನ್ನೆಲ್ಲಾ ಸಾಲವಾಗಿ ಪಡೆಯಬೇಕೆಂದು ನಿಶ್ಚಯ[illegible]ವಾಗಿರುತ್ತದೆ. ಯುದ್ಧಕಾರ್ಯಕ್ಕಾಗಿ ಈಗ ಬ್ರಿಟಿಷ್ ಗವರ್ನಮೆಂಟಿನವರಿಗೆ ದಿನ ಒಂದಕ್ಕೆ 50,00,000 ಪೌಂಡಿನಂತೆ ಖರ್ಚಾಗುತ್ತಿದೆ. ಯುದ್ಧಕ್ಕೆ ಮೊದಲು ಬ್ರಿಟಿಷ್ ಗವರ್ನಮೆಂಟಿಗೆ 65,10,00,000 ಪೌಂಡು ಸಾಲವಿದ್ದಿತು. ಕಳೆದ ಮಾರ್ಚಿ ತಾ. 31 ರಲ್ಲಿ ಸಾಲವು 214,00,00,000 ಪೌಂಡಿಗೆ ಹೆಚ್ಚಿತು. ಮುಂದಿನ ಮಾರ್ಚಿ ಅಖೈರಿನಲ್ಲಿ ಸಾಲವು 264,00,00,000 ಪೌಂಡಿನಷ್ಟಾಗು[illegible]ತ್ತದೆ. ಈ ಹಣ ಅಪರಿಮಿತವಾದದ್ದು. ಇದನ್ನು ಗ್ರಹಿಸಿಕೊಳ್ಳುವುದೇ ಅಸಾಧ್ಯವಾಗಿದೆ. ರೈಲ್ವೆ ಟಿಕೇಟುಗಳ ಮೇಲೂ, ದೀಪದಕಡ್ಡಿಗಳ ಮೇಲೂ, ಸಂತೋಷಕೂಟ ನಾಟಕ ವಗೈರೆಗಳ ಮೇಲೂ ತೆರಿಗೆಗಳನ್ನು ಹಾಕಿರುತ್ತಾರಲ್ಲದೆ ಕೆಲವು ಬಾಬುಗಳ ತೆರಿಗೆಗಳನ್ನು ಹೆಚ್ಚು ಮಾಡಿರುತ್ತಾರೆ.

ಈಗ ಬ್ರಿಟನ್ನಿನಲ್ಲಿ 1,95,000 ಮಂದಿ ಹೆಂಗಸರು ಮದ್ದುಗುಂಡುಗಳ ಕಾರ್ಖಾನೆಗಳಲ್ಲಿ ಸೇರಿಕೊಂಡು ಯುದ್ಧ ಸಾಮಗ್ರಿಗಳನ್ನು ಮಾಡಿ ಒದಗಿಸುವರು, ದಾರೆ.

ಕೆಂಟ್ ಎಂಬ ಸ್ಥಳದಲ್ಲಿ ಮದ್ದು ತಯಾರಾಗುವ ಕಾರ್ಖಾನೆಯೊಳಗೆ ಆಕಸ್ಮಿಕವಾಗಿ ಮದ್ದು ಹತ್ತಿಕೊಂಡು ಮಹಾಶಬ್ದದೊಡನೆ ಸಿಡಿದು ಅನಾಹುತವಾಗಿ ಸುಮಾರು ಇನ್ನೂರು ಜನಗಳ ಜನ ನಷ್ಟಪಟ್ಟರೆಂದು ತಿಳಿಸಲ್ಪಟ್ಟಿದೆ.

ಶತ್ರು ರಾಜ್ಯಗಳಿಗೆ ಸೇರಿದ 32,149 ಮಂದಿ ಸಭ್ಯಪ್ರಜೆಗಳನ್ನು ಗ್ರೇಟ್ ಬ್ರಿಟನ್ನಿನಲ್ಲಿ ಸರ್ಕಾರದವರು ಹಿಡಿದು ಬಂಧನದಲ್ಲಿಟ್ಟಿದಾರೆ.

ಜರ್ಮನಿ ಸೈನ್ಯಕ್ಕೆ ಕಳೆದ ತಿಂಗಳು ಅತ್ಯಂತ ಕೇಡುಕಾಲವಾಗಿ ಪರಿಣಮಿಸಿತ್ತೆಂದು ತಿಳಿಸಲಾಗಿದೆ. ಸುಮಾರು 5,00,000 ಸೈನ್ಯಗಳು ಅವರ ಕಡೆ ನಷ್ಟವಾಗಿರುವವು. ಈ ಪೈಕಿ ಅರ್ಧಭಾಗದ ಸೈನಿಕರು ವೆರ್ಡನ್ ಕೋಟೆಯ ಬಳಿ ನಡೆದ ಯುದ್ಧಗಳಲ್ಲಿ ನಷ್ಟವಾದರು. ಆಸ್ಟ್ರಿಯಾದವರ ಕಡೆ 1,00,000 ಸೈನ್ಯ ನಷ್ಟವಾಗಿರಬಹುದೆಂದು ಹೇಳಲಾಗಿದೆ.

ಒಳದೇಶದ ವೃತ್ತಾಂತಗಳು.

ನಮ್ಮ ಮಹಾರಾಜರವರು ನಾಳೆ ಭಾನುವಾರ ರಾಜಧಾನಿಯಿಂದ ಬೇಸಗೆಯ ನಿಮಿತ್ತ ಹಂಪಾಪುರ ಸಮೇತ ನೀಲಗಿರಿಗೆ ಚಿತ್ತೈಸುವವರಾಗಿದಾರೆ.

ಬೆಂಗಳೂರು ಬಸವನ ಗುಡಿಯ ಹುಚ್ಚಪ್ಪನೆಂಬ ವ್ಯಾಪಾರಿಯು ಕೆಟ್ಟ ತುಪ್ಪವನ್ನು ಬಿಕರಿಮಾಡಿದನೆಂದು ಅಲ್ಲಿನ ಬೆಂಚ್ ಮ್ಯಾಜಿಸ್ಟ್ರೇಟರು ಆ ವ್ಯಾಪಾರಿಗೆ 15 ರೂಪಾಯಿ ಜುಲ್ಮಾನೆಹಾಕಿದರು.

ಶ್ರೀ ಶೃಂಗೇರಿ ಮಠದಲ್ಲಿ ಬರುವ ತಿಂಗಳ ಮೊದಲನೇ ವಾರ ಬಹು ವಿಶೇಷವಾದ ಉತ್ಸವಾದಿಗಳು ಜರುಗುವುದರಿಂದ ಅಗ್ಗೆ ನಮ್ಮ ಮಹಾರಾಜರವರು ಅಲ್ಲಿಗೆ ಚಿತ್ತೈಸುವರೆಂಬ ವರ್ತಮಾನವಿದೆ.

ಮುಂದಿನ ಭಾನುವಾರ (ತಾ. 16) ದೇವನಹಳ್ಳಿ ತಾಲ್ಲೂಕು ಬೂದಿಗೆರೆಯಲ್ಲಿ ಸ್ವಾಮಿಭಾಗಿರುಗಳ ಕಾನ್ ಫರೆನ್ಸು ನಡೆಯುತ್ತದೆ. ರಿಟೈರ್ಡ್ ಅಂಡರ್ ಸೆಕ್ರೆಟರಿ ಮ|| ಎಚ್. ರಾಮಯ್ಯನವರು ಸಭೆಯ ಅಗ್ರಾಸನವನ್ನು ವಹಿಸುವರಾಗಿದಾರೆ.

ಹೋದ ಭಾನುವಾರ ಸಾಯಂಕಾಲ ಚಾಮುಂಡಿ ಬೆಟ್ಟದ ಮೇಲಣ ಬಂಗಲೆ ಬಳಿಗೆ ದೀಪ ಹಚ್ಚುತ್ತಿದ್ದಾಗ ಸಿಡಿಲು ಬಡಿದಂತಾಗಿ ಮೂರು ಮಂದಿ ಸ್ವಲ್ಪ ಹೊತ್ತು ಸ್ಮರಣೆತಪ್ಪಿ ಬಿದ್ದಿದ್ದು ಎಚ್ಚೆತ್ತುಕೊಂಡರು. ಸ್ವಲ್ಪ ಮಳೆಯೂ ಆ ದಿವ ಸುರಿಯಿತು. ಸಾಯಂಕಾಲ ದಿನವೂ ಮೋಡ ಕವಿದು ಮಳೆ ಬರುವ ಸೂಚನೆಯುಂಟಾಗುತ್ತಿದೆ.

ಮಿ|| ಎಚ್. ವಿ. ಕಾಬ್, ಐ.ಸಿ.ಎಸ್. ರವರು ಕಳೆದ ವಾರ ಬೆಂಗಳೂರಿಗೆ ಬಯುವಾಗಿ ರೆಸಿಡೆಂಟ್ ಪದವಿಯ ಭಾರವನ್ನು ಸ್ವೀಕರಿಸಿ, ತಮ್ಮ ಅ|| ರೆಸಿಡೆಂಟರಾದ ಮೇಜರ್ ಟಿ. ಎಚ್. ಟೆಲರ್ ಯವರೊಡನೆ ರಾಜಧಾನಿಗೆ ಬಂದು ನಮ್ಮ ಮಹಾರಾಜರವರ ಭೇಟಿ ಮಾಡಿಕೊಂಡು ತೆರಳಿದರು. ಗೌರವಾರ್ಥವಾದ 13 ತೋಪುಗಳು ಹಾರಿಸಲ್ಪಟ್ಟವು.

ತಮ್ಮ ಸಂಸ್ಥಾನದ ಏಳಿಗೆಗಾಗಿ ಶ್ರೀಮನ್ ಮಹಾರಾಜರವರೂ ದಿವಾನರವರೂ ನಾನಾ ಪ್ರಯತ್ನಗಳನ್ನು ಮಾಡಿ ಯೂನಿವರ್ಸಿಟಿ ಏರ್ಪಾಡನ್ನೂ, ಕನ್ನಂಬಾಡಿ ಕಟ್ಟೆಯ ಎರಡನೇ ಭಾಗವನ್ನೂ ಸಾಧಿಸಿದ್ದಕ್ಕಾಗಿ ರಾಜಧಾನಿಯ ಪ್ರಜೆಗಳು ಕಳೆದ ಸೋಮವಾರ ಬೆಳಿಗ್ಗೆ ಒಂದು ಸಭೆ ನಡಿಸಿ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅವರುಗಳಿಗೆ ಸಲ್ಲಿಸಿರುತ್ತಾರೆ.

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಮೈಸೂರ್ ಮೈನ್ ಎಂಬ ಗಣಿಯಲ್ಲಿ ಬೆಂಕಿಯ ಅನಾಹುತಕ್ಕೆ ಸಿಕ್ಕಿ ಮೃತಪಟ್ಟಿದ್ದ ಮೂರು ಮಂದಿಯ ಶವಗಳನ್ನು ಬಹಳ ಸಾಹಸಪಟ್ಟು ತೆಗೆದರು. ಈಚೆಗೆ ಛಾಂಪಿಯನ್ ರೀಫ್ಸ್ ಎಂಬ ಗಣಿಯೊಳಗೆ ಗಾಳಿಯು ಸಿಡಿತವಂಟ ಅನಾಹುತ ಸಂಭವಿಸಿತು. ಮೇಸ್ತ್ರಿಗಳಿಬ್ಬರೂ, 14 ಮಂದಿ ಕೂಲಿಯವರೂ ಅದಕ್ಕೆ ಸಿಕ್ಕಿದರು. ಇಬ್ಬರನ್ನು ಬದುಕಿಸಿ ಹೊರಕ್ಕೆ ತಂದದ್ದಾಯಿತು. ಆರು ಶವಗಳು ಸಿಕ್ಕಿರುತ್ತವೆ. ಉಳಿದವರೇನಾದರೆಂದು ಶೋಧನೆ ಮಾಡುತ್ತಿದಾರೆ.

ಒಬ್ಬ ಬಾತ್ಮೀದಾರರಿಂದ.—ಕಡೂರು ತಾಲ್ಲೂಕು ಮಹಾಜನಗಳ ಸಹಾಯದಿಂದ ಕಟ್ಟಿರುವ ಟೌನ್ ಹಾಲಿನ ಪ್ರವೇಶೋತ್ಸವವನ್ನೂ, ಈ ತಾಲ್ಲೂಕಿನ ಮತ್ತು ಕಡೂರು ಹಾರೀಕೆರೆ ತಾಲ್ಲೂಕುಗಳ ಪರಸ್ಪರ ಸಹಾಯ ಸಂಘಗಳ, ವಿದ್ಯಾಭ್ಯಾಸದ ಮೊದಲನೇ ಮಹಾ ಸಭೆಯನ್ನೂ, ವಸ್ತು ಪ್ರದರ್ಶನವನ್ನೂ ಸಹ ಈ ತಿಂಗಳು ತಾ. 24-25 ರಲ್ಲಿ ಕಡೂರು ಡೆಪ್ಯುಟಿ ಕಮಿಷನರ್ ಮ|| ಕೆ. ಕೃಷ್ಣಅಯ್ಯರವರ ಅಧ್ಯಕ್ಷತೆಯಲ್ಲಿ ನಡಿಸಲು ನಿಶ್ಚಯಿಸಿ ಇರುವುದರಿಂದ ಅಭಿಮಾನಶಾಲಿಗಳು ದಯಮಾಡಿಸಬೇಕಾಗಿ ಅಪೇಕ್ಷಿಸಿದೆ.

ಪಂಜಾಬಿಗೆ ಸೇರಿದ ಅಲೀಪುರದ ಮೌಲಾನಾ ಸೈಯದ್ ಜಮಾಲ್ ಅಲೀಸಾಹೇಬರೆಂಬ ಮಹಮದೀಯ ಗುರುಗಳು ರಾಜಧಾನಿಗೆ ದಯಮಾಡಿ ಸುಮಾರು ಮೂರು ವಾರ ಇದ್ದರು. ಇಲ್ಲಿನ ಮುಸಲ್ಮಾನ್ ಪ್ರಜೆಗಳೆಲ್ಲಾ ಸೇರಿ ಕಳೆದ ಭಾನುವಾರ ರಾತ್ರಿ ಟೌನ್ ಹಾಲ್ ಬಂಗಲೆಯಲ್ಲಿ ಆ ಗುರುವಿಗೆ ವಿಶೇಷವಾದ ಸನ್ಮಾನಗಳನ್ನು ನಡಿಸಿ ಅಡ್ರೆಸ್ಸನ್ನು ಒಪ್ಪಿಸಿದರು. ಆ ದಿನ ಟೌನ್ ಹಾಲಿನಲ್ಲಿ ಸೇರಿದ್ದಂಥಾ ಮಹಾ ಸಭೆಯನ್ನು ಹಿಂದೆ ನೋಡಿದ್ದು ಅಪರೂಪವೆನ್ನಬಹುದು. ಗುರುಗಳು ಪ್ರತ್ಯುತ್ತರವಾಗಿ ಮಹಮದೀಯರಿಗೆ ಅಪ್ಪಣೆ ಮಾಡಿದ್ದೇನೆಂದರೆ—ಗೋರಕ್ಷಿಯಿಗಳನ್ನು ಸಂರಕ್ಷಿಸಿ. ಇತರ ಜನಗಳ ಕೂಡ ಸ್ನೇಹವನ್ನು ಬೆಳಸಿ. ಒಂದು ಇರುವೆಯನ್ನಾದರೂ ಹಿಂಸೆ ಅಥವಾ ಸಂಕಟಪಡಿಸಬಾರದೆಂದು ನಮ್ಮ ಪ್ರವಾದಿಯ ಆಜ್ಞೆ. ನಿಮಗೆ ಸ್ವಾತಂತ್ರ್ಯ ದೊರಕಿರೋಣದರಿಂದ ನಿಮ್ಮ ಮತವನ್ನು ಭದ್ರಮಾಡಿಕೊಳ್ಳಿ. ಮಹಮದೀಯ ಬಾಲಕರುಗಳೆಲ್ಲಾ, ನೀವು ವಿದ್ಯೆಯಲ್ಲಿ ಗಟ್ಟಿಗರಾಗಬೇಕು. ನಿಮ್ಮ ಮತಗ್ರಂಥಗಳನ್ನು ಚೆನ್ನಾಗಿ ಅಭ್ಯಾಸಮಾಡಿ. ಸಕ್ಕಾಲಕ್ಕೆ ಸಕಾಲದಲ್ಲಿ ಹೋಗುವಂತೆ ದೇವರ ಪ್ರಾರ್ಥನೆಗೂ ಮಸೀದಿಯಲ್ಲಿ ಹಾಜರಾಗಿ ನಮಾಜು ಮಾಡಲೂ, ಬೇರೆ ಕಡೆಯಲ್ಲೂ ಪ್ರಾರ್ಥನೆಯನ್ನು ಸಲ್ಲಿಸುವುದು ಬಹಳ ಸುಲಭ. ಈ ಪ್ರಪಂಚವೇ ನಿಮ್ಮ ಮಸೀದಿಯೆಂದು ತಿಳಿಯಿರಿ. ನಿಮಗೆಲ್ಲಾ ದೇವರು ಶ್ರೇಷ್ಠವಾದ ವರಪ್ರಸಾದಗಳನ್ನು ದಯಪಾಲಿಸಲಿ. ಈ ಗುರುವು ರಾಜಧಾನಿಯಿಂದ ಮಾರನೆದಿನ ಬೆಂಗಳೂರಿಗೆ ಪ್ರಯಾಣಮಾಡಿದರು. ಅಲ್ಲಿರುವ ಮಹಮದೀಯರು ಸೇರಿ ಅವರನ್ನು ನಾನಾ ಪ್ರಕಾರವಾಗಿ ಸತ್ಕಾರಮಾಡುತ್ತಿದಾರೆ.

ಒಬ್ಬ ಬಾತ್ಮೀದಾರರು ಬರೆಯುವುದು.—ದೊಡ್ಡಬಳ್ಳಾಪುರ ತಾಲ್ಲೂಕು [illegible]ದಲ್ಲಿ ಮಠದ ಒಕ್ಕಲಿಗನಾದ ಸಂಜೀವ [illegible]ನನ್ನು ಯಾರೋ [illegible] 9-11-15 ರಲ್ಲಿ ಅವನ ಸವಹ ಊರು ಮುಂದಿನ [illegible] [illegible]. ಈಚೆಗೆ [illegible] ವಿಚಾರದಲ್ಲಿ [illegible], [illegible] ಎಂಬ [illegible]ಗಳನ್ನು [illegible]

ಹಿಡಿದು ವಿಚಾರಣೆಗೆ ಗುರಿಮಾಡಿದರು. ದೊಡ್ಡಬಳ್ಳಾಪುರದ ಸಬ್ ಡಿವಿಷನ್ ಮ್ಯಾಜಿಸ್ಟ್ರೇಟರೂ ಸಾಯಂಕಾಲ ವಿಚಾರಣೆ ನಡದು ಮೂವರ ಮೇಲೂ ಸಹ ಸಂಶಯಪಟ್ಟನ್ನು ಖುದ್ ಮಾಡಿದರೆಂದು ಭಾರವಾದ ಸೆಷನ್ ಕೋರ್ಟಿಗೆ ವಿಚಾರಣೆ ಬಗ್ಗೆ ಮೊಕದ್ದಮೆಯನ್ನು ಕಳುಹಿಸಿದರು. ಅಲ್ಲಿ ವಿಚಾರಣೆ ನಡೆದಾಗ ಪಂಚಾಯಿತರು ತಪ್ಪಿತಸ್ಥರಲ್ಲವೆಂಬ ಅಭಿಪ್ರಾಯವನ್ನು ಕೊಟ್ಟರು. ಆದಾಗ್ಯೂ ಒಪ್ಪದೆ ಸೆಷನ್ಸ್ ಜಡ್ಜಿಯವರಾದ ಮ|| ನಾಗಪ್ಪನವರು ಮೂರು ಜನ ಅಪರಾಧಿಗಳನ್ನೂ ತಪ್ಪಿತಸ್ಥರೆಂದು ಭಾವಿಸಿ ಅವರನ್ನು ಯಾವಜ್ಜೀವವೂ ಕರಿನ ಸಜಾ ಅನುಭವಿಸುವಂತೆ ಶಿಕ್ಷೆ ವಿಧಿಸಿದರು. ಆದರೆ ಕಳೆದ ತಿಂಗಳು 24 ನೇ ತಾ. ಚೀಫ್ ಕೋರ್ಟಿನ ಜಡ್ಜಿಗಳು ಸೆಷನ್ ಜಡ್ಜರವರ ಅಭಿಪ್ರಾಯವನ್ನು ಅನುಮೋದಿಸದೆ ಅಪರಾಧಿಗಳ ಮೇಲೆ ತಪ್ಪಿತವನ್ನು ಹೊರಿಸುವಷ್ಟು ಸಾಕಾದ ರುಜುವಾತು ಇಲ್ಲವೆಂದು ಅಭಿಪ್ರಾಯಪಟ್ಟು ಶಿಕ್ಷೆಯ ತೀರ್ಮಾನವನ್ನು ರದ್ದುಮಾಡಿ ಮೂರು ಜನ ಅಪರಾಧಿಗಳನ್ನೂ ಬಿಡುಗಡೆಮಾಡುವಂತೆ ಹುಕುಂ ದಯಪಾಲಿಸಿದರು. ಮೊದಲಿನಿಂದಲೂ ಅಪರಾಧಿಗಳ ಪರ ಅಡ್ವೊಕೇಟ್ಸ್ ಮೆಸರ್ಸ್ ಮಲ್ಲಗುಂಡಿ ರಾಮಚಂದ್ರರಾಯರೂ, ಕೃಷ್ಣಮೂರ್ತಿರಾಯರೂ ಜಯಶಾಲಿಯಾಗಿ ವಾದಿಸಿ ಕೀರ್ತಿಯನ್ನು ಪಡೆದರು.

ಮೈಸೂರು ಗೆಜೆಟ್ ಸಂಗ್ರಹ.

ಗಣಿಗಳ ಮತ್ತು ಭೂಗರ್ಭಶೋಧನಾ ಇಲಾಖೆ ಡೈರೆಕ್ಟರವರ ಆಫೀಸ್ ಹೆಡ್ ಕ್ಲಾರ್ಕ್ ಮ|| ಎಂ. ವರದಯ್ಯನವರನ್ನು ಅದೇ ಇಲಾಖೆಯ ರಿಜಿಸ್ಟ್ರಾರಾಗಿ ಮಾರ್ಚಿ ತಾ. 15 ರಿಂದ ನೇಮಕಮಾಡಿದೆ.

ಮ|| ಎಂ. ಕಾಂತರಾಜೆ ಅರಸಿನವರು ರಜದ ಮೇಲಿರುವಾಗ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಚೀಫ್ ಕೋರ್ಟ್ ಜಡ್ಜ್ ಮ|| ಕೆ. ಎಸ್. ಚಂದ್ರಶೇಖರ ಅಯ್ಯರವರನ್ನು ಕೌನ್ಸಿಲ್ ಮೆಂಬರಾಗಿ ನೇಮಕಮಾಡಿದೆ.

ಅ|| ಕಮಿಷನರ್ ರುಗಳಾದ ಮ|| ಎಂ. ಜಿ. ಕೃಷ್ಣಸ್ವಾಮಿರಾಯರು ಜನವರಿ ತಾ. 1 ರಿಂದ 2 ನೇ ಕ್ಲಾಸಿಗೂ, ಮ|| ಎ. ಕೃಷ್ಣಸ್ವಾಮಿ ಅಯ್ಯಂಗಾರ್ರನ್ನು ಜನವರಿ ತಾ. 5 ರಿಂದ 3 ನೇ ಕ್ಲಾಸಿಗೂ, ಮ|| ಸಿ. ವೆಂಕಟರಾಯರನ್ನು ಜನವರಿ ತಾ. 6 ರಿಂದ 4 ನೇ ಕ್ಲಾಸಿಗೂ ಬಡ್ತಿಮಾಡಿದೆ.

ರಾಜಮಂತ್ರಪ್ರವೀಣ ಮ|| ಎಚ್. ವಿ. ನಂಜುಂಡಯ್ಯ, ಸಿ.ಐ.ಇ. ಯವರಿಗೆ ಏಪ್ರಿಲ್ ತಾ. 1 ರಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ; ಅದು ಪೂರೈಸಿದ ಬಳಿಕ ಅವರು ಕೆಲಸದಿಂದ ನಿವೃತ್ತಿಹೊಂದತಕ್ಕದ್ದು.

ಎರಡನೇ ಕೌನ್ಸಿಲರ್ ಮ|| ಎಂ. ಕಾಂತರಾಜೇ ಅರಸಿನವರು ಮಾರ್ಚಿ ತಾ. 15 ರಿಂದ ರಜಾ ಉಪಯೋಗಿಸಿಕೊಂಡಿದಾರೆ.

ಸೀನಿಯರ್ ಕೌನ್ಸಿಲರ ಬಳಿ ಪರ್ಸನಲ್ ಅಸಿಸ್ಟೆಂಟರಾಗಿದ್ದ ಮ|| ಸಿ. ಸತ್ಯನಾರಾಯಣ ಶಾಸ್ತ್ರಿಯವರನ್ನು ಬೆಂಗಳೂರು ಡಿಸ್ಟ್ರಿಕ್ಟ್ ಅಮಲ್ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಕಮಾಡಿದೆ.

ನಾಗಮಂಗಲದ ತಾಲ್ಲೂಕು ಅಮಲ್ದಾರ್ ಮ|| ಜಿ. ಎಸ್. ರಾಮಸ್ವಾಮಿ ಅಯ್ಯಂಗಾರ್ರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನು [illegible] ದಿನ ಜಾಸ್ತಿ ಮಾಡಿದೆ.

ಚೀಫ್ ಎಲೆಕ್ಟ್ರಿಕಲ್ ಇಂಜಿನಿಯರ್ ಮಿ|| ಎಸ್. ಜಿ. ಫೋರ್ಬ್ಸ್ ಯವರಿಗೆ ಮಾರ್ಚಿ ತಾ. 18 ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು–ಅರಸೀಕೆರೆ ರೈಲ್ವೆ 1 ನೇ ಡಿವಿಜನ್ ಎಗ್ಜಿಕ್ಯುಟಿವ್ ಇಂಜಿನಿಯರ್ ಮಿ|| ಎಚ್. ಓ. ಕ್ರಿಸ್ ಯವರಿಗೆ ಏಪ್ರಿಲ್ ತಾ. 26 ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕೋಲಾರ್–ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಎಗ್ಜಿಕ್ಯುಟಿವ್ ಇಂಜಿನಿಯರ್ ಮ|| ಟಿ. ಎಸ್. ರಾಘವಾಚಾರ್ರಿ ಅವರ ಕೆಲಸದ ಭಾರವನ್ನು ವಹಿಸತಕ್ಕದ್ದು.

ಅತವಾಸ್ಪಯ ಮ|| ನಾರಾಯಣ ಸ್ವಾಮಿಯವರು ಸೊರಬದ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ಚುನಾಯಿಸಲ್ಪಟ್ಟಿದಾರೆ.

ಮೈಸೂರು ಕೋಆಪರೇಟಿವ್ ಸೊಸೈಟಿ.

ಕಳೆದ ಭಾನುವಾರ ಬೆಳಗ್ಗೆ ರಾಜಧಾನಿಯ ಕೋಆಪರೇಟಿವ್ ಸೊಸೈಟಿಯ 1914 ನೇ ಮೇ ಆರಾಯಿತು 1915 ನೇ ಡಿಸೆಂಬರ್ ಅಖೈರು ವರೆಗಿನ 20 ತಿಂಗಳ ಮೀಟಿಂಗು ಲೋಕಹಿತೈಷಿ ಮ|| ಎಚ್. ನಂಜುಂಡರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕ್ಷಣಾಹಾರವಾದ ಬಳಿಕ ಸೆಕ್ರೆಟರಿಗಳ ರಿಪೋರ್ಟನ್ನು ಮ|| ಬಿ. ರಘುನಾಥಯ್ಯಂಗಾರ್ರು ಓದಿ ಹೇಳಿದರು. ಅದರ ಮುಖ್ಯಾಂಶಗಳೇನೆಂದರೆ—ಈ ಸಂಘದಲ್ಲಿ 10 ರೂಪಾಯಿನ 5,000 ಷೇರುಗಳಿರುತ್ತವೆ. 537 ಜನಗಳು 4,455 ಷೇರುಗಳನ್ನು ಪಡೆದು 34,350 ರೂಪಾಯಿ ಪಾವತಿ ಮಾಡಿದಾರೆ. ಆ ಪೈಕಿ 274 ಮಂದಿ ಮಾತ್ರ ತಮ್ಮ ಷೇರುಗಳನ್ನು ಭರ್ತಿಮಾಡಿರುವರು.—123 ಮಂದಿ ಪ್ರಾವಿಡೆಂಟ್ ಪತ್ರಗಳನ್ನು ಪಡೆದು ಅದಕ್ಕಾಗಿ 6,712 ರೂಪಾಯಿ ಪಾವತಿ ಮಾಡಿದಾರೆ. ಕರೆಂಟ್ ಡಿಪಾಜಿಟ್ಟು 998 ರೂಪಾಯಿ ಮತ್ತು ಫಿಕ್ಸೆಡ್ ಡಿಪಾಜಿಟ್ಟು 11,368½ ರೂಪಾಯಿ ತೆಗೆದುಕೊಂಡಿವೆ. ಅಂತು ಒಟ್ಟು 50,624 ರೂಪಾಯಿ ಪೈಕಿ 31,443 ರೂಪಾಯಿಯು ಲೇವಾದೇವಿಗೂ, 19,257 ರೂಪಾಯಿ ವ್ಯಾಪಾರಕ್ಕೂ ವಿನಿಯೋಗಿಸಿದೆ. ಲೇವಾದೇವಿಯಿಂದ ಶೇಕಡ 11 ರಂತೆಯೂ, ವ್ಯಾಪಾರದಿಂದ ಶೇಕಡ 16 ರಂತೆಯೂ ನಫೆ ಉತ್ಪತ್ತಿಯಾಗಿದೆ; ಅಂದರೆ, ಸೊಸೈಟಿಗೆ ಸಿಬ್ಬಂದಿ ಮೊದಲಾದ ಖರ್ಚು ಕಳೆದು ಈ 20 ತಿಂಗಳಲ್ಲಿ ಒಟ್ಟು 6,820 ಚಿಲ್ಲರೆ ರೂಪಾಯಿ ನಫೆ ಕೇಳಿರುವುದು. ಷೇರುದಾರರಿಗೆ ಶೇಕಡ ವಾರ್ಷಿಕ 1 ಕ್ಕೆ 8 ಆಣೆ 4 ಪೈ ಮೇರೆ ಬಡ್ಡಿಯನ್ನೂ, ಅವರು ಸೊಸೈಟಿಯಲ್ಲಿ ವ್ಯಾಪಾರ ಮಾಡಿರುವ ಹಣಕ್ಕೆ ರೂಪಾಯಿಗೆ 3 ಪೈನಂತೆ ರಿಬೇಟನ್ನೂ ಕೊಡತಕ್ಕದ್ದೆಂದು ಇತ್ಯರ್ಥವಾಯಿತು. ರಿಜರ್ವ್ ಫಂಡನ್ನು ಈಗ 5,434 ರೂಪಾಯಿಗೆ ಹೆಚ್ಚಿಸಲಾಗಿದೆ. ಸೆಕ್ರೆಟರಿ ಮತ್ತು ಟ್ರೆಜರರಿಗೆ 687 ರೂಪಾಯಿ ಬಹುಮಾನವೂ, ಆಡಿಟರುಗಳಿಗೆ 200 ರೂ. ಪ್ರತಿಫಲವೂ, ಸೊಸೈಟಿ ಸಿಬ್ಬಂದಿಗೆ 160 ರೂಪಾಯಿ ಬೋನಸ್ಸೂ ತೆಗೆದಿಡಲಾಗಿದೆ. ಇದುವರೆಗೆ ಸೊಸೈಟಿ ಕಾರ್ಯಗಳನ್ನು ಅಭಿವೃದ್ಧಿಗೆ ತಂದಿರುವ ಸೆಕ್ರೆಟರಿಗಳಿಗೂ, ಆಡಿಟರುಗಳಿಗೂ, ಕೃತಜ್ಞತಾ ಪೂರ್ವಕವಾಗಿ ವಂದನೆಗಳನ್ನು ಸಮರ್ಪಿಸಿದ್ದಲ್ಲದೆ, ಸೊಸೈಟಿಯ ಮ್ಯಾನೇಜರಾದಿಯರಾಗಿ ಎಲ್ಲರೂ ಬಹಳ ಮುತುವರ್ಜಿಯಿಂದ ಕೆಲಸಗಳನ್ನು ಮಾಡಿರುತ್ತಾರೆಂದು ಸಂತೋಷದಿಂದ ಮೆಚ್ಚಿಕೊಂಡರು

ಬಳಿಕ ಮೆಂಬರುಗಳು ಚರ್ಚೆಮಾಡಿ ತೀರ್ಮಾನಿಸಿದ ವಿಷಯಗಳೇನೆಂದರೆ—(1) ಷೇರು ಒಂದಕ್ಕೆ ತಿಂಗಳಿಗೆ 4 ಆಣೆಯಂತೆ ಮೊದಲಿದ್ದ ಪ್ರಕಾರ ಕಂತು ತೆಗೆದುಕೊಳ್ಳತಕ್ಕದ್ದು. (2) ಸಾಲ ಪಡೆದುಕೊಂಡವರು ವಾಯಿದೆಗೆ ಮುಂಚೆ ಪೂರಾ ಹಣ ಪಾವತಿಮಾಡಿದರೆ ಆ ತಾರೀಖಿನ ವರೆಗೆ ಮಾತ್ರ ಲೆಕ್ಕಮಾಡಿ ಅವರಿಂದ ಮೊದಲೇ ವಸೂಲಾಗಿರುವ ಬಡ್ಡಿ ಬಾಕಿಯನ್ನು ವಾಪಸ್ಸು ಕೊಡಬೇಕು. (3) ಕರೆಂಟ್ ಡಿಪಾಜಿಟ್ಟಿಗೆ ಶೇಕಡಾ 2 ರೂಪಾಯಿಗೆ ಮೀರದಂತೆ ಬಡ್ಡಿ ಕೊಡಬಹುದು. (4) ಸೊಸೈಟಿಗೆ 6,200 ರೂಪಾಯಿಗೆ ಕೊಂಡಿಟ್ಟುಕೊಂಡಿರುವ ಕಟ್ಟಡವನ್ನು ಬಿಕರಿಮಾಡದೆ ಇಟ್ಟುಕೊಳ್ಳಬೇಕು. (5) ಸೊಸೈಟಿಗೆ ಸಂಬಳಗಾರನಾದ ಕಾರ್ಯಾಧಿಕಾರಿಯನ್ನು ನೇಮಕಮಾಡಬೇಕಾದ ಅವಶ್ಯವಿಲ್ಲ. ಈ ತೀರ್ಮಾನಗಳಾದ ಮೇಲೆ ಮ|| ವಿ. ಬಾಲಾಜಿರಾಯರನ್ನೂ, ಮ|| [illegible]. ಕೃಷ್ಣರಾಯರನ್ನೂ ಜಾಲ್ತಿ ಸಾಲಿನ ಸೆಕ್ರೆಟರಿಗಳಾಗಿ ಬಹುಮತದಿಂದ [illegible], ಕೆಲವರನ್ನು ಹೊಸದಾಗಿ ಮೆಂಬರುಗಳಾಗಿ ಸೇರಿಸಿ, ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ಅಂದಿನ ಮೀಟಿಂಗನ್ನು ಮುಕ್ತಾಯಗೊಳಿಸಿದರು.

ಒಂದು ಕೋಆಪರೆಟಿವ್ ಸಂಘ ಸ್ಥಾಪನೆ.

ಚಿಕ್ಕಬಳ್ಳಾಪುರದ ತಾಲ್ಲೂಕು ಚೀಡಿ ಅಂದಾರಲಹಳ್ಳಿ ಎಂಬೀ ಗ್ರಾಮಕ್ಕೆ ಚಿಕ್ಕಬಳ್ಳಾಪುರದ ತಾಲ್ಲೂಕು ಕೋಆಪರೆಟಿವ್ ಸೊಸೈಟಿಗಳ ಸೂಪರವೈಜರ್ ಮ॥ ಸುಬ್ಬರಾಯರು ಫೆಬ್ರವರಿ ತಾ. 13-14 ರಲ್ಲು ಮತ್ತು 16-17 ರಲ್ಲು ಈ ಗ್ರಾಮಕ್ಕೆ ದಯಮಾಡಿ ಕ್ಯಾಂಪು ಮಾಡಿ ಒಂದು ವರ್ಷದಿಂದಲೂ ಸ್ಥಾಪನೆಯಾಗದೆ ರೆಜಿಸ್ಟ್ರರಾಗಿ ನಿಂತಿದ್ದ ಸೊಸೈಟಿಯನ್ನು ತಾ. 17 ರಲ್ಲು ಜನರಲ್ ಮೀಟಿಂಗ್ ನಡಿಸಿ ಮೆಂಬರುಗಳಿಗೆಲ್ಲಾ ಸೊಸೈಟಿಗಳ ಉಪಯೋಗವನ್ನು ತಿಳಿಯಪಡಿಸಿ ಸರ್ಕಾರದವರು ಕೊಟ್ಟಿರುವ ರಿಯಾಯತಿಗಳನ್ನು ವಿಶದವಾಗಿ ಎಲ್ಲರಿಗೂ ವಿಶದಪಡಿಸಿ ಸುಮಾರು 80 ಷೇರುಗಳನ್ನು ಮಾರಲು ಮಾಡಿ ಆ ದಿನವೇ ಲೇವಾದೇವಿ ಶುರು ಮಾಡಿಸಿದರು. ಮುಂದೆಯೂ ಆಗಾಗ್ಗೆ ಈ ಸೊಸೈಟಿಯನ್ನು ತನಿಖೆ ಮಾಡುತ್ತಾ, ನಮ್ಮಗಳಿಗೆ ತಕ್ಕ ತಿಳುವಳಿಕೆಯನ್ನು ಕೊಟ್ಟು ನಮ್ಮ ಸೊಸೈಟಿಯನ್ನು ಅಭಿವೃದ್ಧಿಸ್ಥಿತಿಗೆ ಬರುವಂತೆ ಮಾಡುತ್ತಾರೆಂದು ಕೋರುತ್ತೇನೆ.

ಜಿ. ಹನುಮಯ್ಯ.

ಕಡೂರು ಡಿಸ್ಟ್ರಿಕ್ಟ್ ಕಾನ್ಫರೆನ್ಸು.

ಈ ಮಹಾ ಸಭೆಯು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರು ಟವರ್ ಹಾಲಿನಲ್ಲಿ ಕಳೆದ ತಿಂಗಳು 26, 27, 28 ನೇ ತಾರೀಖುಗಳಲ್ಲಿ ಬಹು ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಈ ಮಹೋತ್ಸವದ ಬಗ್ಗೆ ಮಿ॥ ಡಿಸೋಜಾ ಸಾಹೇಬರು, ಮ॥ ಸಿ. ಕೃಷ್ಣರಾಯರು, ರಿಜಿಸ್ಟ್ರಾರ್ ಸಾಹೇಬರವರು ದಯಮಾಡಿಸಿದ್ದುದಲ್ಲದೆ ಡಿಸ್ಟ್ರಿಕ್ಟ್ ಅಧಿಕಾರಿಗಳೂ, ಎಲ್ಲಾ ತಾಲ್ಲೂಕು ಅಮಲ್ದಾರ್ರುಗಳೂ, ಕೋಆಪರೆಟಿವ್ ಸೊಸೈಟಿಗಳ ಡೆಲಿಗೇಟುಗಳೂ, ವಿಜಿಟರುಗಳೂ, ಮೆಂಬರುಗಳೂ, ಸ್ಕೂಲ್ ಮಾಷ್ಟರುಗಳೂ ಕೂಡ ದಯಮಾಡಿದ್ದರು. ಸಭೆಯು ಮನೋಹರವಾದ ಅಲಂಕಾರಗಳಿಂದ ಪ್ರಕಾಶಿಸುತ್ತಿತ್ತು. ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರಿಂದ ತಯಾರಿಸಲ್ಪಟ್ಟ ಬಗೆಬಗೆಯ ವಸ್ತುಗಳು ಒಂದು ಕಡೆ ಪ್ರದರ್ಶಿಸಲ್ಪಟ್ಟವು. ರಿಜಿಸ್ಟ್ರಾರ್ ಕಮಿಟಿ ಸೆಕ್ರೆಟರಿಯವರ ರಿಪೋರ್ಟು ಓದಿ ಅಧ್ಯಕ್ಷರ ಭಾಷಣವಾದೊಡನೆಯೇ ಸಭಾ ಕಾರ್ಯಗಳು ಕ್ರಮವಾಗಿ ನೆರವೇರಿದವು. ಪಂಡಿತರುಗಳಿಂದ ಅತ್ಯುತ್ತಮವಾದ ಉಪನ್ಯಾಸಗಳು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನಡಿಸಲ್ಪಟ್ಟವು. ಡೆಲಿಗೇಟುಗಳ ರಿಪೋರ್ಟುಗಳು ಓದಲ್ಪಟ್ಟು, ಕಂಡು ಬಂದ ಲೋಪದೋಷಗಳನ್ನು ನಿವಾರಿಸುವ ಸೊಸೈಟಿಗಳ ಏಳಿಗೆಯ ಉಪಾಯಗಳು ಚರ್ಚಿತವಾಗಿ ನಿಶ್ಚಯಿಸಲ್ಪಟ್ಟವು. ಮತ್ತು ರೆಜಿಸ್ಟ್ರಾರ್ ಸಾಹೇಬರ ಅತ್ಯುತ್ತಮವಾದ ಹಿತೋಕ್ತಿಗಳು ಸರ್ವರಿಗೂ ಆನಂದವನ್ನುಂಟುಮಾಡಿದವು. ಮ॥ ಸಿ. ಕೃಷ್ಣರಾಯರು ವಿದ್ಯಾಭ್ಯಾಸದ ವಿಚಾರದಲ್ಲಿ ಅನುಕರಣೀಯವಾದ ಕೆಲವು ಉತ್ತಮ ಸಲಹೆಗಳನ್ನು ವಿವರಿಸಿದರು. ವಿದ್ಯಾರ್ಥಿನಿಯರ ಮನೋಹರವಾದ ನವೀನ ವಿದ್ಯಾಭ್ಯಾಸ ಕ್ರಮಗಳು ಎಲೆ ಹಸ್ತ ಪಿಕೆ, ಹೂ ಕಟ್ಟುವಿಕೆ, ಸಂಗೀತ, ಭಾಷಣಗಳು ಸಹ ಅತ್ಯುತ್ತಮತೆಯಿಂದ ಸರಳವಾಗಿ ನಡೆದು ಬಹುಮಾನಗಳು ವಿನಿಯೋಗವಾಗಿ ಸಂತೋಷದಿಂದ ಶ್ರೀಮನ್ ಮಹಾರಾಜರವರ, ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನಾ ಮೂಲಕ ಸಭೆಯು ಪೂರ್ಣವಾಯಿತು.

ಪ್ರತ್ಯಕ್ಷದರ್ಶಿ.

ಹೊಸಕೋಟೆ ತಾಲ್ಲೂಕು ಗ್ರಾಮಾಭಿವೃದ್ಧಿ ಕಾನ್ಫರೆನ್ಸು.

ಈ ಊರಿನಲ್ಲಿ ಏಪ್ರಿಲ್ ತಾ. 4 ನೇ ಮಂಗಳವಾರ ತಾಲ್ಲೂಕು ಕಚೇರಿ ಎದುರಿನಲ್ಲಿರುವ ಮ್ಯುನಿಸಿಪಲ್ ಉದ್ಯಾನದ ಬ್ಯಾಂಡ್ ಕಟ್ಟಡದ ಸುತ್ತಲೂ ಬಹಳ ನೇತ್ರಾನಂದಕರವಾದ ಚಪ್ಪರವನ್ನು ಸುಮಾರು 4,000 ಜನರು ಕೂತುಕೊಳ್ಳುವಷ್ಟು ನಮ್ಮ ಅಮಲ್ದಾರ್ ಮ॥ ಶ್ರೀನಿವಾಸಯ್ಯಂಗಾರ್ರು ಸಿದ್ಧಪಡಿಸಿದ್ದರು. ಮಧ್ಯಾಹ್ನ 12 ಗಂಟೆಗೆ ಅಮಲ್ದಾರ್ರು ಊರಿನ ದೊಡ್ಡಮನುಷ್ಯರೂ ಮೆಂಬರುಗಳೂ ತಾಲ್ಲೂಕಿನ ಎಲ್ಲಾ ದೊಡ್ಡಮನುಷ್ಯರೂ ಹಾಜರಾಗಿದ್ದರು. ಸರ್ಕಾರಿ ಉದ್ಯೋಗಸ್ಥರಲ್ಲಿ ಸಬ್ ಡಿವಿಜನ್ ಸಾಹೇಬರು, ಇಂಜನಿಯರ್ ಸಾಹೇಬರು, ಪೊಲೀಸ್ ಸೂಪರೆಂಟರು, ಸೊಸೈಟಿಯ ಇನ್ಸ್‌ಪೆಕ್ಟರು, ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರು, ವ್ಯವಸಾಯದ ಇನ್ಸ್‌ಪೆಕ್ಟರು, ಮೆಡಿಕಲ್ ಆಫೀಸರು ಹಾಜರಾಗಿದ್ದರು. ಸುಮಾರು 2 ಗಂಟೆಗೆ ಮೋಟರಿನಲ್ಲಿ ದಯಮಾಡಿದ ಡೆಪ್ಯುಟಿ ಕಮಿಷನರ್ ಮಿ॥ ಟಾಂಡಿ ಸಾಹೇಬರನ್ನು ಇಂಪಾದ ಬ್ಯಾಂಡ್ ವಾದ್ಯಸಮೇತ ನಮ್ಮ ಅಮಲ್ದಾರ್ರೇ ಮುಂತಾದ ಅಧಿಕಾರಿಗಳು ಹೋಗಿ ಕಂಡು ಕರೆದುತಂದರು. ಹೆಣ್ಣುಮಕ್ಕಳು ಇಂಪಾದ ಸಂಗೀತವನ್ನು ಹಾರ್ಮೋನಿಯಂ ಸಂಗಡ ಹಾಡಿದರು. ಕೂಡಲೆ ಅರಮನೆ ವಿದ್ವಾನ್ ಹೊಸಕೋಟೆ ವೆಂಕಟರಾಮಶಾಸ್ತ್ರಿಯವರು ಒಂದು ಉಪನ್ಯಾಸಮಾಡಿದರು. ಲೋಕದಲ್ಲಿ ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ವಿದ್ಯಾಭಿವೃದ್ಧಿಯನ್ನೂ ಬಗೆಬಗೆಯಾದ ಅಭಿವೃದ್ಧಿ ವಿಷಯಗಳನ್ನೂ ಬೋಧಿಸಿ ಅವರ ಅಭಿವೃದ್ಧಿ ಸ್ಥಿತಿಯನ್ನು ನೋಡಿ ಸಂತೋಷಪಡುವುದು ಸ್ವಾಭಾವಿಕವಾಗಿದೆ. ಎಲ್ಲಾ ಅಭಿವೃದ್ಧಿಗೂ ಮುಖ್ಯ ಸಾಧಕವಾದದ್ದು ವಿದ್ಯೆ. ವಿದ್ಯೆಯಿಂದ ವಿನಯವೂ, ವಿನಯದಿಂದ ಅರ್ಹತೆಯೂ, ಅರ್ಹತೆಯಿಂದ ದ್ರವ್ಯಸಂಪಾದನೆಯೂ, ದ್ರವ್ಯದಿಂದ ಧರ್ಮವೂ ಇಹಪರ ಸುಖಗಳೂ ಉಂಟಾಗುತ್ತವೆ. ಆದದ್ದರಿಂದ ವಿದ್ಯೆಗೆ ಮುಖ್ಯ ಗಮನವನ್ನು ಕೊಡಬೇಕು. ದೈವಾಂಶದಿಂದಲೇ ಅವತರಿಸಿದವರು ನಮ್ಮ ಮಹಾರಾಜರವರು. ಅವರಿಗೆ ನಾವೆಲ್ಲರೂ ಮಕ್ಕಳಾಗಿರುವ ಕಾರಣ ವಿದ್ಯಾಭಿವೃದ್ಧಿ, ವ್ಯವಸಾಯ, ಕೈಗಾರಿಕೆ ಕೆಲಸಗಳನ್ನು ಕಲಿಸಬೇಕೆಂದು ನಮ್ಮ ದಿವಾನ್ ಸಾಹೇಬರು ಅಪ್ಪಣೆಕೊಟ್ಟು ತಕ್ಕ ಏರ್ಪಾಟು ಮಾಡಿರುತ್ತಾರೆ. ಆದಕಾರಣ ನಾವೆಲ್ಲರೂ ಅಭಿವೃದ್ಧಿ ಹೊಂದಬೇಕೆಂದು ಬಹಳ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ತರುವಾಯ ನಮ್ಮ ಅಮಲ್ದಾರ್ ಮ॥ ಎಂ. ಎನ್. ಶ್ರೀನಿವಾಸಯ್ಯಂಗಾರ್ರು ಗ್ರಾಮಾಭಿವೃದ್ಧಿ ವಿಷಯದಲ್ಲಿ ನಡೆದಿರತಕ್ಕ ಕಾರ್ಯಗಳ ತಪಶೀಲಾದ ಮತ್ತು ಬಹಳ ಸ್ವಾರಸ್ಯವಾದ ರಿಪೋರ್ಟನ್ನು ಓದಿದರು. ಈ ರಿಪೋರ್ಟಿನಿಂದ 38 ಭಾವಿಗಳು, 3 ಕಾಂಟೆಗಳು, 7 ಸ್ಕೂಲುಗಳು, ಒಂದು ರೆಸ್ಟ್ ಹೌಸ್, ಇವುಗಳು ಸರ್ಕಾರಿ ಸಹಾಯದಿಂದಲೂ ಮತ್ತು ಸರ್ಕಾರಿ ಸಹಾಯವಿಲ್ಲದೆ ಇತರ ಅನೇಕ ಚಿಲ್ಲರೆ ಕೆಲಸಗಳು ನಡೆದಿರುವಂತೆ ತಿಳಿಯಬಂತು. ಮೇಲ್ಕಂಡ ಕೆಲಸಗಳಿಗಾಗಿ ಗ್ರಾಮಸ್ಥರಿಂದಲೇ 12,000 ರೂಪಾಯಿಗೆ ಮೇಲ್ಪಟ್ಟು ಹಣ ಖರ್ಚಾಗಿರುವಂತೆ ತಿಳಿಯಬಂತು. ವೃತ್ತಾಂತ ಪತ್ರಿಕೆ ಮತ್ತು ಅರ್ಥಸಾಧಕ ಪತ್ರಿಕೆಗಳನ್ನು 112 ಗ್ರಾಮ ಕಮಿಟಿಯವರು ತರಿಸುತ್ತಾ ಇರುವದಾಗಿ ಹೇಳಿದರು. ಗ್ರಾಂಟ್ ಸ್ಕೂಲುಗಳನ್ನು 27 ಕಡೆ ಸ್ಥಾಪಿಸಿದಂತೆ ತಿಳಿಯಲಾಯಿತು. ರಿಪೋರ್ಟು ಬಹಳ ದೀರ್ಘವಾಗಿದ್ದದರಿಂದ ಎಲ್ಲಾ ಸಂಗತಿಗಳನ್ನೂ ಇಲ್ಲಿ ಬರೆಯಲು ಸಾಧ್ಯವಲ್ಲ. ಮುಖ್ಯಾಂಶಗಳನ್ನು ಮಾತ್ರ ತಿಳಿಸಿರುತ್ತೇವೆ. ಅಮಲ್ದಾರ್ರು ಮುಗಿಸಿದ ಕೂಡಲೇ ಡೆಪ್ಯುಟಿ ಕಮಿಷನರವರು ಈ ರಿಪೋರ್ಟು ಬಹಳ ಚೆನ್ನಾಗಿದೆ ಎಂದೂ, ಅಮಲ್ದಾರರೂ ಅಧಿಕಾರಿಗಳೂ ಬಹಳ ಕೆಲಸಮಾಡಿರುತ್ತಾರೆಂದೂ ಸಣ್ಣ ಉಪನ್ಯಾಸಮಾಡಿ ಮುಗಿಸಿದರು. ಕೂಡಲೇ ಮ॥ ಯಜ್ಞನಾರಾಯಣಯ್ಯನವರು ವ್ಯವಸಾಯ ಸಂಬಂಧವಾದ ಉಪನ್ಯಾಸಮಾಡಿದರು. ಕೆ. ಇಂಜನೀರು ಕೆರೆಗಳ ಪಂಚಾಯಿತಿ ವಿಷಯದಲ್ಲಿ ಒಂದು ಉಪನ್ಯಾಸಕೊಟ್ಟರು. ಅನಂತರ ಹೊಸಕೋಟೆ ಮುನಿಸ್ವಾಮಪ್ಪನವರು ಉಣಗನ್ನೆ ಬೇಸಾಯ ಮತ್ತು ಅದಕ್ಕೆ ತಗಲುವ ರೋಗದ ವಿಷಯದಲ್ಲಿ ಸ್ವಾರಸ್ಯವಾದ ಭಾಷಣಮಾಡಿದರು. ಕಡೆಯಲ್ಲಿ ಮಹಾರಾಜರವರ ಶ್ರೇಯಃಪ್ರಾರ್ಥನೆಮಾಡಿ ಕಾನ್ಫರೆನ್ಸು ಬರಖಾಸ್ತು ಮಾಡಲ್ಪಟ್ಟಿತು. ಈ ಕಾನ್ಫರೆನ್ಸಿಗೋಸ್ಕರ ನಮ್ಮ ಅಮಲ್ದಾರ್ರು ಮತ್ತು ಇತರ ನೌಕರರು ಮೆಹನತ್ತುಮಾಡಿದ್ದರಿಂದ ಎಲ್ಲಾ ಕೆಲಸಗಳೂ ಅನುಕೂಲವಾಗಿ ಜರುಗಿದವು.

ನಿಮ್ಮ ವಾಚಕ,

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಶಾಖೆ.

ಕಳೆದ 4 ನೇ ತಾ. ಮಂಗಳವಾರ ಬ್ರಿಟಿಷ್ ರೆಸಿಡೆಂಟರ ಪತ್ನಿಯರಾದ ಲೇಡಿ ಡೇಲಿಯವರಿಗೆ ಮೇಲ್ಕಂಡ ಶಾಖೆಯ ಪರವಾಗಿ ಒಂದು ಅಡ್ರೆಸ್ ಕೊಡಲ್ಪಟ್ಟಿತು. ಅದರ ಅಭಿಪ್ರಾಯವೇನೆಂದರೆ—ಶ್ರೀ ಲೇಡಿ ಡೇಲಿಯವರ ದಿವ್ಯ ಸನ್ನಿಧಿಯಲ್ಲಿ ಪ್ರಿಯರಾದ ಮತ್ತೂ ಗೌರವಪಾತ್ರರಾದ ಮಾತೃಶ್ರೀಯವರೇ—ಸ್ನೇಹಿತರಿಂದ ಮತ್ತು ಹಿತಚಿಂತಕರಿಂದ ಅಗಲುವಿಕೆ ಎನ್ನುವುದು ಯಾವಾಗಲೂ ಕಠಿಣವಾದದ್ದು. ಆ ಸಮಯದಲ್ಲಿ ಸ್ವಸ್ತಿವಚನ ಹೇಳುವಾಗ ಮನಸ್ಸಿನಲ್ಲಿ ಸುಖದುಃಖವನ್ನುಂಟುಮಾಡುವ ವಿಚಾರಗಳು ಉದ್ಭವಿಸುವವು. ಈಗ ನಮ್ಮಗಳ ಆಗಲುವಿಕೆ ಪ್ರಾಪ್ತಿಸಿರುವುದು. ನಮ್ಮ ಇಂಡಿಯಾ ದೇಶದ ಸೇವೆಗಾಗಿ ಮತ್ತು ಅದರ ಆಡಳಿತದ ಕೆಲಸಕ್ಕೆ ಬಂದಿರತಕ್ಕ ಮತ್ತು ಇನ್ನು ಮುಂದೆ ಬರುವ ಇಂಗ್ಲಿಷ್ ಉದ್ಯೋಗಸ್ಥರ ವಿಷಯದಲ್ಲಿ ಈ ವಿಧದ ಅಗಲುವಿಕೆ ತಪ್ಪಿದ್ದೇ ಅಲ್ಲ. ತಮ್ಮ ಯಜಮಾನರಾದ ಕರ್ನಲ್ ಹ್ಯೂ ಡೇಲಿಯವರು ನಮ್ಮ ದೇಶಕ್ಕೆ ಮಹೋನ್ನತವಾದ ಮತ್ತು ಯಶಸ್ಕರವಾದ ಉಪಕಾರ ಮಾಡಿರುವುದೇ ಅಲ್ಲದೆ ನಮ್ಮಗಳ ಕೃತಜ್ಞತೆಗೂ ಪ್ರೀತಿಗೂ ಪಾತ್ರರೂ ಆಗಿರುವರು. ಅವರು ಇಂಡಿಯಾಕ್ಕೆ ದಯಮಾಡಿದಾಗ್ಗೆ ಇದ್ದ ಈ ದೇಶದ ಸ್ಥಿತಿಯು ಈಗ ಅವರು ತೆರಳುವಾಗ ಉತ್ತಮದಲ್ಲಿರುವುದು ಅವರ ಮನಸ್ಸಿಗೆ ಸಮಾಧಾನವೇ ಇದ್ದೀತು. ತಾವು ತಮ್ಮ ಭರ್ತರ ಕೆಲಸ ಕಾರ್ಯಗಳಲ್ಲಿ ಸಹಾಯಕಾರಿಗಳಾಗಿ ವರ್ತಿಸಿರುವುದು ಸಹ ನಮಗೆಲ್ಲಾ ವೇದ್ಯವೇ ಇದೆ. ಸಮಾಜದ ಅಭಿವೃದ್ಧಿ ವಿಚಾರದಲ್ಲಿಯೂ ಮತ್ತು ಅವರು ಮತ್ತು ನಮ್ಮಗಳ ಉಭಯತ್ರರ ಸ್ನೇಹ ಬೆಳಸುವಿಕೆಯಲ್ಲಿ ತಾವು ಅವರಿಗೆ ತುಂಬಾ ಸಹಾಯಕರಾಗಿ ಪ್ರವರ್ತಿಸಿರುವಿರಿ. ಕರ್ನಲ್‌ರವರು ಮಾಡಿದ ಉಪಕಾರಗಳನ್ನೆಲ್ಲಾ ಇಲ್ಲಿ ಹೇಳತೀರದು. 1913 ನೇ ಇಸವಿ ನವೆಂಬರ್ ಮಾಹೆಯಲ್ಲಿ ಗತಿಸಿದ ಲೇಡಿ ಹಾರ್ಡಿಂಗ್‌ಯವರು ಇಲ್ಲಿಗೆ ದಯಮಾಡಿಸಿದ್ದ ವೇಳೆ ತಮ್ಮ ಮುಖಾಂತರ ಕರ್ನಲ್‌ರವರು ನಮಗೆ ಅವರ ಸಂದರ್ಶನದ ಭೇಟಿ ದೊರೆಕಿಸಿಕೊಟ್ಟದ್ದು ನಮಗೂ ಕಂಡಿರುವುದು. ಮಾತೃಶ್ರೀ ಸೌ॥ ಟಿ. ಆನಂದರಾವ್ ಸುಂದರಾಬಾಯಮ್ಮನವರು ಮಂದಿರಕ್ಕೆ ಉಚಿತವಾಗಿ ಪಾಲಿಸಿಕೊಟ್ಟ ವಿದ್ಯುಚ್ಛಕ್ತಿ ದೀಪಗಳನ್ನು ಈ ಮಂದಿರದ ನಮ್ಮ ಕಾರ್ಯದಲ್ಲಿ ಅಭಿಮಾನ ತೋರಿಸಿ ದಯಮಾಡಿ ಬಂದು ತಾವು ತಮ್ಮ ದಿವ್ಯ ಹಸ್ತದಿಂದ ಪ್ರಜ್ವಲಿಸುವಂತೆ ಮಾಡಿದ ತಮ್ಮ ಉತ್ಕೃಷ್ಟವಾದ ಕೆಲಸವನ್ನೂ ಸಹ ನಮಗಿದು ಮಾಡಿರುವೆವು. ಉಪಕಾರಗಳಾದ, ಗುಣವತಿಯರಾದ ತಾವು ಮತ್ತು ಮಾನ್ಯರಾದ ತಮ್ಮ ಭರ್ತರೂ ನಮ್ಮಗಳ ಸ್ನೇಹಭಕ್ತಿ ವಿಶ್ವಾಸಗಳನ್ನು ಸಂಪಾದಿಸಿರುವಿರಿ. ಈಗ ದೇಹಃಪೂರ್ವವಾಗಿ ಅಗಲಿ ಹೋದರೂ ಮನಸಾ ಸದಾ ಏಕೀಭವಿಸಿ ಇರುವುದಾಗಿ ನಾವು ತಿಳಿದಿರುವೆವು. ತಾವು ದಂಪತಿಗಳೂ ಸುಖಯಾನದಿಂದ ಕ್ಷೇಮವಲ್ಲಿ ತಮ್ಮ ಮಾತೃ ದೇಶವನ್ನು ಸೇರಬೇಕೆಂದು ನಾವೆಲ್ಲಾ ಪ್ರಾರ್ಥಿಸುವೆವು. ಈ ಶ್ರೀನಿವಾಸ ಮಂದಿರದ ಸ್ತ್ರೀ ಶಾಖೆ ಮೆಂಬರುಗಳ ಜ್ಞಾಪಕಾರ್ಥವಾಗಿ ನಮ್ಮ ವಿನಯ ವಿಶ್ವಾಸದಿಂದ ಅರ್ಪಿಸುವ ಈ ಶ್ರೀಗಂಧದ ಪೆಟ್ಟಿಗೆಯನ್ನು ತಾವು ದೊಡ್ಡ ಮಾನಸ್ಸುಮಾಡಿ ಸ್ವೀಕರಿಸಬೇಕೆಂದು ಬೇಡುತ್ತೇವೆ.

ಲೇಡಿ ಡೇಲಿಯವರ ಪ್ರತ್ಯುತ್ತರ:—"ಈ ಶಾಖೆಯ ಪ್ರೆಸಿಡೆಂಟರಾದ ಮಾತೃಶ್ರೀ ಸುಂದರಾಬಾಯಮ್ಮನವರು ಮತ್ತು ಮೆಂಬರುಗಳೂ ವಿಶ್ವಾಸಪೂರ್ವಕವಾಗಿ ಕೊಟ್ಟಂಥಾ ಈ ಶ್ರೀಗಂಧದ ಪೆಟ್ಟಿಗೆಯನ್ನು ಸ್ವೀಕರಿಸಲು ಬಹಳ ಸಂತೋಷವುಳ್ಳವಳಾಗಿದೇನೆ. ಮತ್ತು ಇವರುಗಳಿಗೆ ನನ್ನನ್ನು ಅಗಲಲು ಯಾವ ವಿಷಾದವಿರುತ್ತದೆಯೋ ಅದೇ ಪ್ರಕಾರ ನನಗೂ ತುಂಬಾ ವಿಷಾದವಾಗುತ್ತದೆ. ಆದರೆ ಇವರು ಕೊಟ್ಟಿರುವ ಈ ಶ್ರೀಗಂಧದ ಪೆಟ್ಟಿಗೆಯನ್ನು ಇವರ ಜ್ಞಾಪಕಾರ್ಥವಾಗಿ ನಾನೆಲ್ಲಿಗೆ ಹೋದರೂ ನನ್ನ ಜೊತೆಯಲ್ಲಿಯೇ ಇಟ್ಟುಕೊಂಡಿರುವೆನು."

ಅನಂತರ ಸೌ॥ ಎಸ್. ಸುಬ್ಬಮ್ಮನವರು ಲೇಡಿ ಡೇಲಿಯವರ ಸುಗುಣವನ್ನು ತೋರ್ಪಡಿಸತಕ್ಕ ಒಂದು ಹಾಡನ್ನು ರಚಿಸಿ ಹೇಳಿದರು. ಸಳ ಸಂವತ್ಸರದ ಪ್ರಮೋದ ಪತ್ರಿಕೆಯು ಓದಲ್ಪಟ್ಟು ಅದರ ತಾತ್ಪರ್ಯವನ್ನು ಸೌ॥ ಶ್ರೀರಂಗಮ್ಮ, ಬಿ.ಎ. ಯವರು ಇಂಗ್ಲೀಷಿನಲ್ಲಿ ಲೇಡಿ ಡೇಲಿಯವರಿಗೆ ತಿಳಿಸಿದರು. ಪ್ರತಿ ವರ್ಷದಲ್ಲಿಯೂ ಚಕ್ರವರ್ತಿ ಮೊದಲಾದವರ ಶ್ರೇಯಃಪ್ರಾರ್ಥನೆಯು ಜರುಗುವುದು ಬಹಳ ಸಂತೋಷವೆಂದು ಲೇಡಿ ಡೇಲಿಯವರು ತಿಳಿಸಿದರು. ಮಂಗಳದ್ರವ್ಯಗಳನ್ನು ಹಂಚಿದ ನಂತರ ಸಭೆಯು ಮುಕ್ತಾಯವಾಯಿತು.

ಕಳೆದ 8 ನೇ ತಾ. ಶನಿವಾರ ಬಳ್ಳಾರಿಯಿಂದ ಬಂದ ಮಿತ್ರರೊಬ್ಬರು ಬಹಳ ಶ್ರಾವ್ಯವಾಗಿ ವೀಣೆ, ಹಾರ್ಮೋನಿಯಂ ಮೊದಲಾದವುಗಳಿಂದ ಸಭಿಕರಿಗೆ ಆನಂದಗೊಳಿಸಿದರು.

ಎ. ಎಸ್.

ಮೈಸೂರು ತಾಲ್ಲೂಕು ಗ್ರಾಮಾಭಿವೃದ್ಧಿ ಸಂಘಗಳ ಮೊದಲನೆಯ ಕಾನ್ಫರೆನ್ಸು.

ಕಳೆದ ತಾ. 7 ನೇ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಮೈಸೂರು ತಾಲ್ಲೂಕಿಗೆ ಸೇರಿದ ಗ್ರಾಮಾಭಿವೃದ್ಧಿ ಸಂಘಗಳ ಮೊದಲನೇ ವರುಷದ ಕಾನ್ಫರೆನ್ಸು ರಾಜಧಾನಿಯಲ್ಲಿ ತಾಲ್ಲೂಕ್ ಕಛೇರಿ ಕಟ್ಟಡದ ಮುಂಭಾಗದಲ್ಲಿ ಹಾಕಿದ್ದ ವಿನ್ಯಾಸವಾದ ಡೇರಾದಲ್ಲಿ ನಡೀಲ್ಪಟ್ಟಿತು. ಸುತ್ತಲೂ ಮನೋಹರವಾದ ಗಿಡಗಳಿಂದಲೂ, ಹಸರುಗಳಿಂದಲೂ ಡೇರಾವನ್ನು ಅಲಂಕರಿಸಿದ್ದರು. ರಾಜಧಾನಿಯಲ್ಲಿರುವ ಎಲ್ಲಾ ಕೋಮುಗಳ ಮತ್ತೂ ಕಸಬುಗಳ ಪ್ರತಿನಿಧಿಗಳೂ ದೊಡ್ಡಮನುಷ್ಯರೂ ಅಧಿಕಾರಿಗಳೂ ಕರಸಲ್ಪಟ್ಟು ನೂರಾರು ಮಂದಿಯವರೆಗೆ ಹಾಜರಾಗಿದ್ದರು. ಗ್ರಾಮಾಂತರಗಳ ಪ್ರತಿನಿಧಿಗಳು ಸುಮಾರು 250 ಜನರು ಸಭೆಯಲ್ಲಿ ಕೂಡಿದ್ದರು. ರಿಸೆಪ್ಷನ್ ಕಮಿಟಿಯ ಅಧ್ಯಕ್ಷರಾದ ಅಮಲ್ದಾರ್ ಮ॥ ಆರ್. ಎ. ನರಸಿಂಹಯ್ಯಂಗಾರ್ರು, ಸಾಹುಕಾರ್ ವರ್ಧಮಾನಯ್ಯನವರೇ ಮೊದಲಾದ ರೂ ಮೋಟರಿನಲ್ಲಿ ದಯಮಾಡಿದ ಡೆಪ್ಯುಟಿ ಕಮಿಷನರ್ ಮ॥ ಎ. ಸುಬ್ರಹ್ಮಣ್ಯ ಅಯ್ಯರವರನ್ನು ಬ್ಯಾಂಡ್ ವಾದ್ಯವಾಗುತ್ತಿರುವಲ್ಲಿ ಎದುರುಗೊಂಡು ಕಾನ್ಫರೆನ್ಸ್ ಮಂಟಪಕ್ಕೆ ಕರೆದುತಂದರು.

ವೇ॥ ಯಳಂದೂರು ಶ್ರೀಕಂಠಶಾಸ್ತ್ರಿಗಳು ಕಾನ್ಫರೆನ್ಸಿನ ಕಾರ್ಯಗಳಿಗೂ ಶ್ರೀಮನ್ ಮಹಾರಾಜರೇ ಮೊದಲಾದವರಿಗೂ ಶ್ರೇಯಸ್ಸನ್ನು ಬಯಸುವ ಅಭಿಪ್ರಾಯವುಳ್ಳ ಲಲಿತವಾದ ಸಂಸ್ಕೃತ ಕವನಶ್ಲೋಕಗಳನ್ನು ಬಹು ಆಹ್ಲಾದಕರವಾಗಿ ಓದಿ ಪ್ರಾರ್ಥನೆಯನ್ನು ಸಲ್ಲಿಸಿದರು. ಸಾಹುಕಾರ್ ವೇ॥ ಎಂ. ಎಲ್. ವರ್ಧಮಾನಯ್ಯನವರು ಕಮಿಟಿ ಮೆಂಬರುಗಳ ಪರವಾಗಿ ಪ್ರತಿನಿಧಿಗಳಿಗೂ, ಸಭಾಸದರಿಗೂ ಸುಸ್ವಾಗತವನ್ನು ಬಯಸಿ, ಗ್ರಾಮಾಂತರಗಳ ಶ್ರೇಯಸ್ಸಿಗೆ ಆವಶ್ಯಕಗಳಾದ ಸ್ಯಾನಿಟೇಷನ್, ವಿದ್ಯಾಭ್ಯಾಸ, ವ್ಯವಸಾಯ, ಸಣ್ಣ ಕೈಗಾರಿಕೆಗಳು, ಈ ಮೊದಲಾದ ವಿಚಾರಗಳಲ್ಲಿ ಸರ್ಕಾರದವರು ಈಚಿಗೆ ನಡೆಸುತ್ತಿರುವ ಕಾರ್ಯಗಳನ್ನೂ, ಅವರು ಮಾಡುತ್ತಿರುವ ಪ್ರೋತ್ಸಾಹಗಳನ್ನೂ, ಅವುಗಳಲ್ಲಿ ಕಂಡುಬರುವ ನ್ಯೂನಾತಿರೇಕಗಳನ್ನೂ ವಿವರಿಸಿ ದೀರ್ಘವಾದರೂ ಸ್ವಾರಸ್ಯವಾದ ಭಾಷಣವನ್ನು ಮಾಡಿ, ಆ ವಾರ್ಷಿಕ ಕೂಟದಲ್ಲಿ ಡೆಪ್ಯುಟಿ ಕಮಿಷನರವರು ಅಗ್ರಾಸನವನ್ನು ವಹಿಸಿ ಸಭೆಯ ಕಾರ್ಯಗಳನ್ನು ಆಗಮಾಡಿಸಿ ಹಿತೋಕ್ತಿಗಳನ್ನು ಹೇಳಿಕೊಡಬೇಕೆಂದು ಸೂಚಿಸಿದರು. ಸಭಾಸದರೆಲ್ಲಾ ಏಕವಾಕ್ಯತೆಯಿಂದ ಅನುಮೋದಿಸಿದ ಕಾರಣ ಮ॥ ಎ. ಸುಬ್ರಹ್ಮಣ್ಯ ಅಯ್ಯರವರು ಸಭೆಯ ಅಗ್ರಪೀಠವನ್ನು ಅಲಂಕರಿಸಿ, ಸಭಿಕರನ್ನು ಕುರಿತು ದೀರ್ಘವಾದ ಭಾಷಣವನ್ನು ಮಾಡಿದರು. ಅದರ ಸಾರಾಂಶವೇನೆಂದರೆ—ಗ್ರಾಮಗಳಲ್ಲಿ ವಾಸಮಾಡತಕ್ಕವರು ಇತರ ಡಿಸ್ಟ್ರಿಕ್ಟುಗಳಲ್ಲಿ ಮಾಡಿಕೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಮೈಸೂರು ತಾಲ್ಲೂಕಿನವರು ಮಾಡಿಕೊಂಡಿಲ್ಲ. ಇದು ಶೋಚನೀಯವಾಗಿದೆ. ರಾಜಧಾನಿಯ ಸುತ್ತಲೂ ಇರುವ ಈ ತಾಲ್ಲೂಕು ಎಲ್ಲಾ ಭಾಗಗಳಲ್ಲೂ ಬಹಳ ಹಿಂದಾಗಿದೆ. ಇದಕ್ಕೆ ಜನಗಳಲ್ಲಿ ಐಕಮತ್ಯವೂ, ಸೌಧೈರ್ಯವೂ, ಪೂರ್ಣತೃಪ್ತಿಯೂ, ಸೋಮಾರಿತನವೂ ಇರುವುದೇ ಮುಖ್ಯಕಾರಣಗಳು. ಗ್ರಾಮಸ್ಥರು ಮನೆಮಠಗಳನ್ನು ಆರೋಗ್ಯಕರವಾಗಿ ಕಟ್ಟಿಕೊಳ್ಳಬೇಕು; ಗೋಶಾಲೆಗಳನ್ನು ವಾಸದ ಮನೆಯಿಂದ ಹೊರಗೆ ಕಟ್ಟಬೇಕು; ಮನೆಯ ಬಚ್ಚಲ ರೊಚ್ಚು ಬೀದಿಗಳಿಗೆ ಬಂದು ರೋಗವನ್ನು ಹುಟ್ಟಿಸದಂತೆ ಕಟ್ಟಿ ಅಥವಾ ಬಾನಗಳಲ್ಲಿ ಕೂಡಿಸಿ ಗೊಬ್ಬರದ ಗುಂಡಿಗಳಿಗೆ ಸಾಗಿಸಬೇಕು; ಗೊಬ್ಬರವನ್ನು ಸಾರಕೆಡದಂತೆ ಸುರಕ್ಷಿತವಾಗಿ ಹೊರಗಡೆ ಕೂಡಿಡಬೇಕು. ಕುಡಿಯುವ ನೀರನ್ನು ಕೆಡಿಸದಂತೆ ಸಂರಕ್ಷಿಸಬೇಕು. ವಿಷ್ಯಕರಿತು ವರ್ತಮಾನ ಪತ್ರಿಕೆಗಳನ್ನೋದಿ ವಿವೇಕಿಗಳಾಗಬೇಕು; ಸಣ್ಣ ಕೈಗಾರಿಕೆಗಳನ್ನು ಹಿಡಿದು ವ್ಯವಧಾನಕಾಲದಲ್ಲಿ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಬೇಕು. ಇವೇ ಮೊದಲಾದ ನಾನಾ ವಿಚಾರಗಳನ್ನು ಕುರಿತು ಭಾಷಣಮಾಡಿ, ಪಾಶ್ಚಾತ್ಯದೇಶೀಯರ ನಡವಳಿಕೆಯನ್ನು ಸಂದರ್ಭಾನುಸಾರ ಉದಾಹರಿಸಿ ತಿಳಿಯಪಡಿಸಿದರು.

ಮ॥ ಅಂಟಳೆ ಅಣ್ಣಯ್ಯಪಂಡಿತರವರು ಗ್ರಾಮಗಳಿಂದ ಬಂದಿದ್ದ ಪ್ರತಿನಿಧಿಗಳನ್ನು ಕುರಿತು—ಐಕಮತ್ಯದಿಂದಿರಿ; ಪಾರ್ಟಿಗಳನ್ನು ಬಿಟ್ಟು ವ್ಯವಹಾರಗಳನ್ನು ನಿಮ್ಮ ಗ್ರಾಮಗಳಲ್ಲೇ ಫೈಸಲ್ ಮಾಡಿಕೊಳ್ಳಿ. ಲಾಯರುಗಳಿಗೂ ಕೋರ್ಟುಗಳಿಗೂ ಹಣ ಸುರಿಯುವುದನ್ನು ಬಿಟ್ಟುಬಿಡಿ. ವಿದ್ಯೆ ಕಲಿಯುವುದಕ್ಕಿಂತ ಮೊದಲು ಸದ್ಗುಣಿಗಳಾಗಿ. ಜಾತಿ ಕುಲಗಳ ವೈರಗಳನ್ನು ತ್ಯಜಿಸಿರಿ. ಇಷ್ಟು ಮಾಡಿದರೆ ನೀವುಗಳು ಫಲಿಸುವ ಹಣ ನಿಮ್ಮಲ್ಲೇ ಉಳಿದು ಪುಣ್ಯವಂತರಾಗುವಿರಿ ಎಂದು ಮೊದಲಾಗಿ ವಿವೇಕವನ್ನು ಹೇಳಿದರು.

ಅಮಲ್ದಾರ್ ಮ॥ ನರಸಿಂಹಯ್ಯಂಗಾರ್ರು ತಾಲ್ಲೂಕಿನಲ್ಲಿ ಗ್ರಾಮಾಭಿವೃದ್ಧಿ ಕಾರ್ಯಗಳು ನಡೆದಿರುವುದನ್ನು ಕುರಿತು ಒಂದು ಸ್ವಾರಸ್ಯವಾದ ರಿಪೋರ್ಟು ಓದಿದರು. [ಇದನ್ನು ಮುಂದೆ ತಿಳಿಸುವೆವು—ಎಡಿ.] ತರುವಾಯ ಎಲ್ಲರಿಗೂ ದಿವ್ಯವಾದ ಫಲಾಹಾರಗಳು ಕೋಮುವಾರು ವಿಂಗಡನೆಯಾಗಿ ಕೊಡಲ್ಪಟ್ಟವು.

ಮತ್ತೆ 4 ಗಂಟೆ ವೇಳೆಗೆ ಪುನಃ ಸಭೆ ಸೇರಿದಾಗ ಸಬ್ ಡಿವಿಜನ್ ಆಫೀಸರ್ ಮ॥ ಸಿ. ಎಸ್. ರಾಮಸ್ವಾಮಯ್ಯಂಗಾರ್ರು ಗ್ರಾಮಗಳಲ್ಲಿ ರೈತರಿಗೂ, ಅವರ ಗೋಶಾಲೆಗಳಿಗೂ, ಅವರ ದನಗಳಿಗೂ ಅನುಕೂಲವಾದ ಕಟ್ಟಡವನ್ನು ಬಹಳ ಸುಲಭ ಕ್ರಯದಲ್ಲಿ ಕಟ್ಟಿಕೊಳ್ಳುವುದಕ್ಕೆ ಅನುಕೂಲವಾಗುವಂಥಾ ಪ್ಲಾನ್ (ನಕ್ಷೆ) ಯನ್ನು ಮೆಂಬರುಗಳಿಗೆಲ್ಲಾ ತೋರಿಸಿ ಆ ರೀತಿ ಕಟ್ಟಿಕೊಳ್ಳಬೇಕೆಂದು ಉಪನ್ಯಾಸದ ಮೂಲಕ ಪ್ರೋತ್ಸಾಹಿಸಿದರು. ಗ್ರಾಮದೇವತೆಗಳ ಸುತ್ತಲೂ ಇಲ್ಲವೇ ಚಾವಡಿಯ ಮುಂದೆಯೂ ಹೂವಿನ ಗಿಡಗಳನ್ನು ಹಾಕಿ ರಮ್ಯವಾಗಿರುವಂತೆ ಮಾಡಬೇಕೆಂದು ಸೂಚಿಸಿದರು. ಇದೇ ಪ್ರಕಾರ ಮಾಡಿಸುವುದಾಗಿ ಕೆಲವು ರೈತರು ಒಪ್ಪಿಕೊಂಡರು. ಗ್ರಾಮದಲ್ಲಿ ಪ್ರತಿ ಒಬ್ಬನೂ ಬೆಳೆದ ದವಸ, ಒಕ್ಕಲಿನ ವರಮಾನ, ಇವನ್ನು ಲೆಕ್ಕ ಬರೆದಿಡಬೇಕೆಂದೂ, ಇದರಿಂದ ಪ್ರಯೋಜನವಿದೆ ಎಂದೂ ಹೇಳಿ ವಿವರಿಸಿದಾಗ ಕೆಲವರು ಬರೆದಿಡುತ್ತೇವೆಂದು ತಿಳಿಸಿದರು. ಗ್ರಾಮಾಭಿವೃದ್ಧಿಯ ಕೆಲಸಗಳಿಗೆ ಕುಳಗಳಿಂದ ಕೆಲವು ಚಂದಾ ಎತ್ತಿ 50 ರೂಪಾಯಿನಂತೆ ಕೊಡುತ್ತೇವೆಂದೂ ಕೆಲವರು ಅಂಗೀಕಾರ ಮಾಡಿದರು. ಕೆಲವರು ವ್ಯವಸಾಯದ ಮಾದರಿ ಕ್ಷೇತ್ರಗಳನ್ನು ಮಾಡುತ್ತೇವೆಂದು ಮಾತುಕೊಟ್ಟರು.

ಕೋಆಪರೆಟಿವ್ ಸೊಸೈಟಿ ಇನ್ಸ್‌ಪೆಕ್ಟರ್ ಮ॥ ಸೂರಪ್ಪನವರು ಧಾನ್ಯಗಳ ನಿಧಿಗಳನ್ನೂ, ಪರಸ್ಪರ ಸಹಾಯಕ ಸಂಘಗಳನ್ನೂ ಮಾಡಿಕೊಳ್ಳಬೇಕೆಂದು ತಿಳಿಸಿ ಅವುಗಳ ಫಲಪ್ರಯೋಜನಾದಿಗಳನ್ನು ವಿವರಿಸಿದಾಗ 3-4 ಗ್ರಾಮಸ್ಥರು ಆ ರೀತಿ ನಡೆಸುಕೊಳ್ಳುವುದಾಗಿ ತಿಳಿಸಿ ತಮ್ಮ ಹೆಸರು ಬರಸಿದರು. ಕಬ್ಬಿಣದ ಹೊಸ ನೇಗಿಲುಗಳನ್ನು ಕೊಂಡು ಉಪಯೋಗಿಸುತ್ತೇವೆಂದೂ, ಯಾತ ಅಥವಾ ಕಪಿಲೆ ಮೂಲಕ ನೀರು ಎತ್ತಿ ಹೆಚ್ಚು ಫಾಯಿದೆಯುಳ್ಳ ಬೆಳೆಗಳನ್ನು ಇಡುವುದಾಗಿಯೂ, ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುತ್ತೇವೆಂದೂ ಹಲವರು ಒಪ್ಪಿಕೊಂಡರು. ಸಣ್ಣ ಕೈಗಾರಿಕೆಗಳನ್ನು ಮಾಡಿ ಸುಖಜೀವನವನ್ನು ಸಂಪಾದಿಸಿಕೊಳ್ಳುವ ಬಾಬುಗಳನ್ನು ಕುರಿತು ಮ॥ ಶ್ರೀನರಸಿಂಹಶಾಸ್ತ್ರಿಗಳು ಬಹಳ ದೀರ್ಘವಾಗಿಯೂ, ಎಲ್ಲರ ಮನಸ್ಸಿಗೂ ಸೆಳೆಯುವಂತೆಯೂ ಭಾಷಣಮಾಡಿದರು. ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು ಮ॥ ಎಂ. ವೆಂಕಟಸುಬ್ಬಯ್ಯನವರು ಗ್ರಾಮಾಂತರಗಳಲ್ಲಿ ಸ್ಕೂಲ್ ಮನೆಗಳನ್ನೂ, ವ್ಯವಸಾಯದ ಕ್ಷೇತ್ರಗಳನ್ನೂ ಕಲ್ಪಿಸಿ ಕೊಟ್ಟು ಮಕ್ಕಳ ವಿದ್ಯಾಭಿವೃದ್ಧಿಗೂ, ದೊಡ್ಡವರ ವಿದ್ಯಾಶಿಕ್ಷಣಕ್ಕೂ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಬಹಳ ಸ್ತೋತ್ರಾರ್ಹವಾಗಿ ತಿಳಿಸಿದರು. ಮ॥ ಸುಬ್ಬರಾಯರು ಸಣ್ಣಪುಟ್ಟ ಕೈಗಾರಿಕೆಗಳನ್ನು ಗ್ರಾಮಸ್ಥರು ತಮ್ಮ ಮನೆಗಳಲ್ಲಿ ಮಾಡಿ ಹೆಚ್ಚು ಸಂಪಾದನೆ ಮಾಡಬಹುದಾದ ವಿಧಾನಗಳನ್ನು ಸರಳವಾಗಿ ವಿವರಿಸಿದರು.

ಕಡೆಯಲ್ಲಿ ಅಗ್ರಾಸನಾಧಿಪತಿಗಳು ಸಮಯೋಚಿತ ವಾಕ್ಯಗಳನ್ನು ಅಪ್ಪಣೆಕೊಡಿಸಿ ಮುಂದಿನ ವರುಷದ ಕಾನ್ಫರೆನ್ಸಿನಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯುವಂಥಾ ರಿಪೋರ್ಟು ಕೇಳುವಂತೆ ಗ್ರಾಮಸ್ಥರು ಸಾಹಸಪಡಬೇಕೆಂದು ಸೂಚಿಸಿ ಸಭೆಯನ್ನು ಮುಕ್ತಾಯ ಮಾಡಿದರು. ಶ್ರೀಮನ್ ಮಹಾರಾಜರವರ ಶ್ರೇಯಸ್ಸನ್ನು ಬಯಸುತ್ತಾ ಎಲ್ಲರೂ ತೆರಳಿದರು. ಈ ಕಾನ್ಫರೆನ್ಸಿನ ಏರ್ಪಾಡುಗಳೆಲ್ಲಾ ಬಹಳ ತೃಪ್ತಿಕರವಾಗಿ ಮಾಡಲ್ಪಟ್ಟಿದ್ದವು. ಸಭೆಯನ್ನು ಇಷ್ಟು ವಿಶದವಾಗಿ ನಡಿಸಿದ್ದಕ್ಕಾಗಿ ಅಮಲ್ದಾರ್ ಮ॥ ನರಸಿಂಹಯ್ಯಂಗಾರ್ರನ್ನೂ ಅವರಿಗೆ ಸಹಾಯಕರಾಗಿದ್ದ ಕಮಿಟಿ ಮೆಂಬರುಗಳನ್ನೂ ವಂದಿಸತಕ್ಕದ್ದಾಗಿದೆ.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ವಿದ್ಯಾಭಿವೃದ್ಧಿಯು.

ಸ್ಕೂಲುಗಳುಳ್ಳ ಗ್ರಾಮಗಳು.—ಮೈಸೂರು ಈ ಡಿಸ್ಟ್ರಿಕ್ಟಿನಲ್ಲಿ 2,744 ಗ್ರಾಮಗಳಿವೆ. ಈ ಪೈಕಿ 1913-14 ನೇ ಇಸವಿಯಲ್ಲಿ 345 ಗ್ರಾಮಗಳಲ್ಲಿ ಮಾತ್ರ ಸ್ಕೂಲುಗಳಿದ್ದವು. ಕಳೆದ ಸಾಲಿನಲ್ಲಿ 192 ಗ್ರಾಮಗಳಲ್ಲಿ ಸ್ಕೂಲುಗಳು ಹೊಸದಾಗಿ ಸ್ಥಾಪಿಸಲ್ಪಟ್ಟವು. ಇವೆಲ್ಲಾ ಸೇರಿ ಒಟ್ಟಿಗೆ 537 ಗ್ರಾಮಗಳಿಗೆ ಸ್ಕೂಲುಗಳನ್ನು ಕೊಟ್ಟ ಹಾಯಿತು. ಉಳಿಕೆ 2,207 ಗ್ರಾಮಗಳಲ್ಲಿ ಸ್ಕೂಲುಗಳು ಸ್ಥಾಪನೆಯಾಗಬೇಕಾಗಿದೆ. ಇದಕ್ಕೆ ಗ್ರಾಮಸ್ಥರ ಸಹಾಯವು ಆವಶ್ಯಕ.

ವಿದ್ಯಾರ್ಥಿಗಳು.—1913-14 ನೇ ಸಾಲ್ ಆಖೈರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ 21,039 ವಿದ್ಯಾರ್ಥಿಗಳ ಸಂಖ್ಯೆಯನ್ನು 1914-15 ರಲ್ಲಿ 27,556 ರವರೆಗೂ ಹೆಚ್ಚಿಸಿದೆ. ಈ ಡಿಸ್ಟ್ರಿಕ್ಟಿನ ಒಟ್ಟು ಪ್ರಜಾ ಸಂಖ್ಯೆಯ ಪೈಕಿ 3,60,000 ಜನ ಸ್ಕೂಲಿಗೆ ಹೋಗುವ ವಯಸ್ಸಿನ ಹುಡುಗರಿರುತ್ತಾರೆ. ಈ ಪೈಕಿ ಹಾಲಿ ಸ್ಕೂಲಿಗೆ ಹೋಗುತ್ತಿರುವವರ ಸಂಖ್ಯೆಯು ಒಟ್ಟು ಪ್ರಜಾ ಸಂಖ್ಯೆಯಲ್ಲಿ ಶೇಕಡ 2½ ರಂತೆ ಆಗಿರುವುದು. ಇದು ಅಷ್ಟು ತೃಪ್ತಿಕರವಾಗಿಲ್ಲ. ಈ ಸಂಖ್ಯೆಯನ್ನು ಶೇಕಡ 15 ಕ್ಕೆ ಹೆಚ್ಚಿಸಲು ಹವಣಂದೂರು ನಡೆಯಬೇಕಾಗಿದೆ. ಈ ಕೆಲಸವು ಪ್ರಜೆಗಳ ಸಹಾಯದಿಂದಲ್ಲದೆ ಅನ್ಯಥಾ ಸಾಧ್ಯವಾಗಲಾರದು.

ಸ್ಕೂಲು ಕಟ್ಟಡಗಳು.—ಈ ಮೊದಲೇ ಸ್ಥಾಪಿಸಲ್ಪಟ್ಟಿರುವ ಸ್ಕೂಲುಗಳಿಗೂ, ಇನ್ನು ಮೇಲೆ ಸ್ಥಾಪಿತವಾಗಬೇಕಾದ ಸ್ಕೂಲುಗಳಿಗೂ ಕಟ್ಟಡಗಳನ್ನು ಒದಗಿಸುವುದು ಸುಲಭವಾದ ಕೆಲಸವಲ್ಲ. ಸರ್ಕಾರದವರು ಗ್ರಾಮಾಭಿವೃದ್ಧಿ ಏರ್ಪಾಡು ಅನುಸರಿಸಿ ಕೊಡುತ್ತಲಿರುವ ಸಹಾಯ ದ್ರವ್ಯವನ್ನು ಉಪಯೋಗಿಸಿಕೊಳ್ಳಬೇಕೆಂದು ಇಲಾಖೆಯವರ ಪ್ರೋತ್ಸಾಹದ ಮೇಲೆ ಅನೇಕ ಗ್ರಾಮಸ್ಥರು ಮುಂದರಿದು ಬಂದು ರೂಲ್ಸ್ ಅನುಸರಿಸಿ ಈ ಕೆಲಸಕ್ಕೆ ತಗಲುವ ಖರ್ಚಿನ ಪೈಕಿ ಅರ್ಧ ಹಣವನ್ನು ಜಮಾಯಿಸಿ ಕಟ್ಟಡಗಳನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ. ಗ್ರಾಮಸ್ಥರು ಈ ಬಾಬಿನಲ್ಲಿ 1914-15 ನೇ ಸಾಲಿನಲ್ಲಿ 4,600 ರೂಪಾಯಿ ಒದಗಿಸಿರುತ್ತಾರೆ. ಚಾಲ್ತಿ ಸಾಲಿನಲ್ಲಿ ಇದುವರೆಗೆ 6,100 ರೂಪಾಯಿ ಜಮಾಯಿಸಿರುವರು.

ಗ್ರಾಂಟ್ ಸ್ಕೂಲುಗಳು.—ಕಳೆದ ಸಾಲಾಖೈರು ವರಿಗೆ ಒಟ್ಟಿಗೆ 373 ಗ್ರಾಂಟ್ ಸ್ಕೂಲುಗಳು ಸ್ಥಾಪಿಸಲ್ಪಟ್ಟವು. ಈ ರೀತಿ ಸ್ಥಾಪಿಸಲ್ಪಟ್ಟ ಸ್ಕೂಲುಗಳ ಉಪಾಧ್ಯಾಯರ ಸಂಬಳಗಳಿಗಾಗಿ ರೈತರಿಂದ ಕಳೆದ ಸಾಲಿನಲ್ಲಿ 1,236 ರೂಪಾಯಿ

ಸ್ಕೂಲಿನಲ್ಲಿ ಒದಗಿದೆ. ಚಾಲ್ತಿ ಸಾಲಿನಲ್ಲಿ ಇದುವರೆಗೆ ಸುಮಾರು 600 ರೂಪಾಯಿ ವರೆಗೂ ವಸೂಲಾಗಿದೆ.

ಪ್ರದರ್ಶನಗಳು.—ವಿದ್ಯಾರ್ಥಿಗಳಿಂದ ಮಾಡಲ್ಪಡುವ ವಸ್ತುಗಳ ಪ್ರದರ್ಶನದಿಂದುಂಟಾಗುವ ಫಲವೇನೆಂಬುವ ವಿಷಯವು 1913-14 ನೇ ಸಾಲಿನಲ್ಲಿ ಶ್ರೀಮತ್ ಇನ್ಸ್‌ಪೆಕ್ಟರ್ ಸಾಹೇಬರವರು ಅಪ್ಪಣೆಕೊಡಿಸಿದ ವಾಕ್ಯಗಳಿಂದ ಎಲ್ಲರ ಹೃದಯದಲ್ಲೂ ಬೇರೂರಿರಬಹುದು. ಅವರು ಅಪ್ಪಣೆಕೊಡಿಸಿದ ಬುದ್ಧಿವಾದವನ್ನನುಸರಿಸಿ ಕಳೆದ ಸಾಲಿನಲ್ಲಿ ಚಾಮರಾಜನಗರದಲ್ಲಿ ನಡೆದ ವ್ಯವಸಾಯ ಮತ್ತು ಕೈಗಾರಿಕೆ ವಸ್ತುಪ್ರದರ್ಶನದಲ್ಲೂ ಮತ್ತು ಮೈಸೂರು ಉಪಾಧ್ಯಾಯ ಸಂಘದ ಸಮ್ಮೇಳನದಲ್ಲಿಯೂ ಇಂಥಾ ವಸ್ತುಗಳು ಪ್ರದರ್ಶಿಸಲ್ಪಟ್ಟದ್ದಲ್ಲದೆ ಈಚೆಗೆ ನಂಜನಗೂಡಿನ ಜಾತ್ರೆಯಲ್ಲಿಯೂ ಒಂದು ಪ್ರದರ್ಶನ ನಡೆಸಲ್ಪಟ್ಟಿದೆ. ಇವುಗಳನ್ನು ನೋಡಿದವರಿಗೆ ಈ ಮುಖ್ಯ ವಿಷಯವು ಕ್ರಮೇಣ ಎಷ್ಟು ಮಟ್ಟಿಗೆ ವೃದ್ಧಿಯಾಗುತ್ತಿದೆ ಎಂಬುವದು ವ್ಯಕ್ತವಾಗುತ್ತಲಿದೆ.

ಹಳ್ಳಿಯ ಸ್ಕೂಲ್ ಕಮಿಟಿಗಳು.—ಗ್ರಾಮಾಭಿವೃದ್ಧಿ ಏರ್ಪಾಡು ವಿಚಾರವಾಗಿ ಕರೆಯಲ್ಪಟ್ಟ ಸಮಾಜಗಳ ಪೈಕಿ ಕೆಲವು ಸಮಾಜದವರು ಹೊಸದಾಗಿ ಸ್ಕೂಲುಗಳನ್ನು ಸ್ಥಾಪಿಸುವದರಲ್ಲಿಯೂ, ಸ್ಥಾಪಿಸಲ್ಪಟ್ಟ ಸ್ಕೂಲುಗಳನ್ನು ವೃದ್ಧಿಪಡಿಸುವದರಲ್ಲಿಯೂ ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಲಿರುವರು. ಇವರೆಲ್ಲರೂ ಉಳಿದ ಸಮಾಜದ ಮೆಂಬರುಗಳೂ ಸಹಾಯ ಮಾಡುತ್ತಾ ಬಂದಲ್ಲಿ ಡಿಸ್ಟ್ರಿಕ್ಟಿನಲ್ಲಿ ವಿದ್ಯೆಯು ತೃಪ್ತಿಕರವಾಗಿ ಹರಡುವದರಲ್ಲಿ ಸಂಶಯವಿಲ್ಲ.

ಲೋವರ್ ಸೆಕೆಂಡರಿ ಪರೀಕ್ಷೆ.—ಈ ಪರೀಕ್ಷೆಗಾಗಿ ದರಖಾಸ್ತು ಮಾಡುವ ವಿದ್ಯಾರ್ಥಿಗಳ ಸಂಖ್ಯೆಯು ವರ್ಷೇವರ್ಷೇ ಅಧಿಕವಾಗುತ್ತಲಿದೆ. ಈ ವರ್ಷ ಇವರ ಸಂಖ್ಯೆಯು ವಿಶೇಷವಾಗಿರುವದೆಂದು ತಿಳಿಯಬರುವುದು. ಗ್ರಾಂಟ್ ಸ್ಕೂಲುಗಳ ವಿಚಾರದಲ್ಲಿ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರಿಗೆ 7 ರೂಪಾಯಿಯೂ, ತೇರ್ಗಡೆಯಾಗದಿರುವವರಿಗೆ 6 ರೂಪಾಯಿಯಂತೆಯೂ ಗ್ರಾಂಟು ಕೊಡತಕ್ಕದಾಗಿ ಇನ್ಸ್‌ಪೆಕ್ಟರ್ ಜನರಲ್ ರವರಿಂದ ಸಾದರಾಗಿರುವ ಆರ್ಡರಿನಿಂದ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗುವುದಕ್ಕೆ ಅವಕಾಶವಾಗಿದೆ.

ರಾತ್ರಿ ಸ್ಕೂಲುಗಳು.—ಪ್ರಜೆಗಳ ಸಂಪಾದನಾ ಶಕ್ತಿಯು ಹೆಚ್ಚಬೇಕಾದರೆ ದೇಶದಲ್ಲಿರುವ ಎಲ್ಲಾ ವಯಸ್ಸಿನ ಪ್ರಜೆಗಳೂ ವಿದ್ಯಾವಂತರಾಗಬೇಕಾದದ್ದು ಅವಶ್ಯ. ಇದಕ್ಕೆ ಅವಕಾಶವಾಗುವಂತೆ ಹಗಲುವೇಳೆ ಜೀವನೋಪಾಯಗಳಲ್ಲಿ ತೊಡಗಿರುವ ವಯಸ್ಕರಾಗಿರುವವರಿಗೆ ವಿದ್ಯಾಭ್ಯಾಸ ಮಾಡಲು ರಾತ್ರಿವೇಳೆ ಪಾಠಶಾಲೆಗಳನ್ನು ಏರ್ಪಡಿಸಬೇಕೆಂಬುದಾಗಿ ಸಾದರಾದ ಗವರ್ನಮೆಂಟು ಆರ್ಡರು ಪ್ರಕಾರ ಕಳೆದ ಸಾಲ್ ಅಖೈರ್ ವರೆಗೆ 42 ರಾತ್ರೀ ಪಾಠಶಾಲೆಗಳು ಸ್ಥಾಪಿತವಾಗಿದ್ದವು. ಈಚೆಗೆ ಇನ್ನೂ ಅನೇಕ ಪಾಠಶಾಲೆಗಳು ಸ್ಥಾಪಿತವಾಗಿವೆ. ಈ ರೀತಿ ನಡೆಯುತ್ತಿರುವ ಪಾಠಶಾಲೆಗಳಿಗೆ ವಯಸ್ಕರಾದವರೆಲ್ಲರೂ ಹೋಗಿ ವಿದ್ಯಾಭ್ಯಾಸ ಮಾಡುವಂತೆ ಗ್ರಾಮ ಸಮಾಜಗಳವರು ಪ್ರೋತ್ಸಾಹಪಡಿಸಿದ ಹೊರತು ಉದ್ದೇಶವು ತೃಪ್ತಿಕರವಾಗಿ ನೆರವೇರಲಾರದು.

ಕೈಗಾರಿಕೆ ಪಾಠಶಾಲೆಗಳು.—ವೈಸರಾಯ್ ಸಿಟಿ ಹೊರತು ಈ ಡಿಸ್ಟ್ರಿಕ್ಟಿನ ಮೇಲುಕೋಟೆಯಲ್ಲಿ ಮರಗೆಲಸ, ನೆಯ್ಗೆ ಕೆಲಸ, ದರ್ಜಿ ಕೆಲಸ, ಡ್ರಾಯಿಂಗ್, ಈ ಕೈಗಾರಿಕೆಗಳನ್ನು ಕಲಿಸಲು ಒಂದು ಸ್ಕೂಲು ಮಾಟ್ಟಿಗೆ ಸ್ಥಾಪಿಸಿ ಸುಮಾರು 25 ವರ್ಷಗಳಾದವು. ಈ ಸ್ಕೂಲಿನಿಂದ ಮೇಲುಕೋಟೆ ಮತ್ತು ಅದರ ಅಕ್ಕಪಕ್ಕ ಗ್ರಾಮಗಳ ಹೊರತು ಉಳಿದ ಗ್ರಾಮಗಳಿಗೆ ಯಾವ ಪ್ರಯೋಜನವೂ ಆಗಲಿಲ್ಲ. ಆದ್ದರಿಂದ ಇಂಥಾ ಕೈಗಾರಿಕೆ ಪಾಠಶಾಲೆಗಳನ್ನು ಡಿಸ್ಟ್ರಿಕ್ಟಿನ ಪೈಕಿ ಸಾಧ್ಯವಾದಷ್ಟು ಭಾಗಗಳಲ್ಲಿ ಅಲ್ಲಲ್ಲಿ ದೊರೆಯುವ ಸಾಮಗ್ರಿಗಳನುಕೂಲವಾಗಿ ಸ್ಥಾಪಿಸಬೇಕೆಂದು ಏರ್ಪಾಡಾಗಿ ಈಗ ಐದು ಸ್ಥಳಗಳಲ್ಲಿ ಮರಗೆಲಸದ ಪಾಠಶಾಲೆಗಳು ಸ್ಥಾಪಿತವಾಗಿವೆ. ಇನ್ನೂ ಕೆಲವು ಸ್ಥಳಗಳಲ್ಲಿ ನೆಯ್ಗೆ, ರೇಷ್ಮೆ ತಯಾರಿ, ಎರಕದ ಕೆಲಸ, ತೋಟದ ಕೆಲಸ, ಬಡಗಿ ಕೆಲಸ ಮತ್ತು ವ್ಯವಸಾಯದ ಕೆಲಸಗಳನ್ನು ಕಲಿಸುವ ಪಾಠಶಾಲೆಗಳನ್ನು ಸ್ಥಾಪಿಸುವ ಪ್ರಯತ್ನ ನಡೆಯುತ್ತಲಿದೆ.

ಪಂಚಮ ಸ್ಕೂಲ್.—ಈ ಡಿಸ್ಟ್ರಿಕ್ಟಿನ ಪ್ರಜಾ ಸಂಖ್ಯೆಯ ಪೈಕಿ ಆರರಲ್ಲೊಂದು ಭಾಗವನ್ನು ಆಕ್ರಮಿಸಿಕೊಂಡಿರುವ ಪಂಚಮರಿಗಾಗಿ 80 ಸ್ಕೂಲುಗಳು ಸ್ಥಾಪಿಸಲ್ಪಟ್ಟು 3,200 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಲಿದ್ದಾರೆ. ಈ ಜನರಿಗೆ ಕೊಡುವ ವಿದ್ಯಾಭ್ಯಾಸವು ಯಾವ ರೀತಿಯಲ್ಲಿರಬೇಕೆಂಬುವದು ಮೈಸೂರು ಸಿಟಿ ಪಂಚಮ ಬೋರ್ಡಿಂಗ್ ಸ್ಕೂಲಿನಲ್ಲಿ ಅದನ್ನು ಪರೀಕ್ಷೆ ಮಾಡಿ ನಿರ್ಧರವಾಗಿದೆ. ಅಲ್ಲಿನ ಪದ್ಧತಿಗಳನ್ನನುಸರಿಸಿ ಎಲ್ಲಾ ಸ್ಕೂಲುಗಳಲ್ಲೂ ಇದೇ ಕ್ರಮಗಳನ್ನು ಜಾರಿಯಲ್ಲಿ ತರಲು ಕರಡು ನಡೆಯುತ್ತಲಿದೆ.

ಕಿವುಡ ಮತ್ತು ಕಿವುಡ ಮೂಕರ ಪಾಠಶಾಲೆಗಳು.—ಈ ಸೀಮೆಯ ಜನರ ಪೈಕಿ ಕಿವುಡ ಮೂಕರು, ಕುರುಡರು ಮತ್ತು ಅಂಗಹೀನರಾಗಿರುವವರ ವಿದ್ಯಾಭ್ಯಾಸಕ್ಕಾಗಿ ಮೈಸೂರು ಸಿಟಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಸ್ಕೂಲಿನಲ್ಲಿ ಈಗ 40 ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಲಿದ್ದಾರೆ. ಈ ಪೈಕಿ ಹಲವರು ಈ ಡಿಸ್ಟ್ರಿಕ್ಟಿನ ಗ್ರಾಮಾಂತರಗಳಿಂದ ಬಂದವರಾಗಿರುತ್ತಾರೆ. ಈ ಸ್ಕೂಲಿನ ಕೆಲಸದಿಂದ ಇಂಥವರ ಸ್ಥಿತಿಯು ಬಹಳ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ಸರ್ವರಿಗೂ ತಿಳಿದ ವಿಷಯವಾಗಿದೆ. ಈ ಸ್ಕೂಲಿನ ವಿದ್ಯಾರ್ಥಿಗಳ ಸೌಕರ್ಯವನ್ನು ಕಲ್ಪಿಸಿಕೊಡಲು ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಈ ಸಾಲಿನಲ್ಲಿ ಮಾಹೆಯಾನಾ 25 ರೂಪಾಯಿ ಗ್ರಾಂಟು ಮಂಜೂರು ಮಾಡಿರುತ್ತಾರೆ.

ಬಾಲಿಕಾ ಪಾಠಶಾಲೆಗಳು.—ಸಂಪದಭ್ಯುದಯಕ್ಕೆ ಅತ್ಯಾವಶ್ಯಕವಾಗಿರುವ ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚಾದ ಗಮನವು ಕೊಡಲ್ಪಡುತ್ತಲಿದೆ. ಇಂದಿನ ವರೆಗೆ ಡಿಸ್ಟ್ರಿಕ್ಟಿನಲ್ಲಿ ಸುಮಾರು ನಾಲ್ಕು ಸಾವಿರ ಬಾಲಿಕೆಯರು ವಿದ್ಯಾಭ್ಯಾಸ ಮಾಡುತ್ತಲಿದ್ದಾರೆ. ಇದೂ ಅಲ್ಲದೆ ಅನೇಕ ಬಾಲಕರ ಪಾಠಶಾಲೆಗಳಿಗೂ ಬಾಲಿಕೆಯರು ಹೋಗಿ ವಿದ್ಯಾಭ್ಯಾಸ ಮಾಡುತ್ತಲಿದ್ದಾರೆ. ಇದರ ಜೊತೆಗೆ 1,000 ಜನಕ್ಕೆ ಮೇಲ್ಪಟ್ಟ ಗ್ರಾಮಗಳಲ್ಲೆಲ್ಲಾ ಬಾಲಿಕಾ ಪಾಠಶಾಲೆಗಳನ್ನು ಸ್ಥಾಪಿಸುವ ಪ್ರಯತ್ನವು ನಡೆಯುತ್ತಲಿದೆ.

ಮಹಮ್ಮದೀಯ ಪಾಠಶಾಲೆಗಳು.—ಮಹಮ್ಮದೀಯರಿಗಾಗಿ ಒಟ್ಟು 62 ಸ್ಕೂಲುಗಳು ಸ್ಥಾಪಿತವಾಗಿವೆ. ಇವುಗಳಲ್ಲಿ ಬಾಲಕರೂ, ಬಾಲಿಕೆಯರೂ ಸೇರಿ 2,000 ಜನಗಳು ವಿದ್ಯಾಭ್ಯಾಸಮಾಡುವರು. ಅನೇಕ ಸ್ಥಳಗಳಲ್ಲಿ ಇಂಥಾ ಪಾಠಶಾಲೆಗಳ ಸ್ಥಾಪನೆ ಬಗ್ಗೆ ದರಖಾಸ್ತು ಮಾಡಲ್ಪಟ್ಟಿದೆ.

ಕಾಡು ಜನಗಳ ವಿದ್ಯಾಭ್ಯಾಸ.—ಈ ಡಿಸ್ಟ್ರಿಕ್ಟಿನಲ್ಲಿರುವ ಕಾಡು ಕುರುಬರ ವಿದ್ಯಾಭ್ಯಾಸಕ್ಕಾಗಿ ಹೊಸಹಳ್ಳಿ, ಮದ್ದೂರು ಮತ್ತು ಬ್ಯಾನಕುಪ್ಪೆ, ಈ ಗ್ರಾಮಗಳಲ್ಲಿ ಸ್ಕೂಲುಗಳು ಸ್ಥಾಪಿಸಲ್ಪಟ್ಟಿವೆ. ಈ ಸ್ಕೂಲುಗಳಲ್ಲಿ ವಿದ್ಯಾಭ್ಯಾಸಮಾಡುವವರ ಪೈಕಿ ಅರ್ಹರಾದವರಿಗೆ ಡಿಸ್ಟ್ರಿಕ್ಟ್ ಬೋರ್ಡಿನವರು ವೇತನಗಳನ್ನು ಕೊಡುತ್ತಲಿದ್ದಾರೆ.—ಈ ಡಿಸ್ಟ್ರಿಕ್ಟಿನಲ್ಲಿ ಬಹುಮಟ್ಟಿಗೆ ವಾಸವಾಗಿರುವ ಕ್ರಿಮಿನಲ್ ಟ್ರೈಬ್ಸ್ ಜಾತಿಯವರ ಮತ್ತು ಪೂರ್ವ ಸಜಾ ಪಡೆದವರ ದೆಸೆಯಿಂದ ಪ್ರಜೆಗಳಿಗೆ ಉಂಟಾಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡಲು ನಡೆಯುತ್ತಲಿರುವ ಪೋಲೀಸು ಏರ್ಪಾಡಿನ ಜೊತೆಗೆ ಅಂಥಾ ಜನಗಳಿಗೆ ವಿದ್ಯಾಭ್ಯಾಸಮಾಡಿಸಿ ಅವರನ್ನು ಕೈಗಾರಿಕೆ ಕಸಬುಗಳಲ್ಲಿ ನಿರತರಾಗುವಂತೆ ಮಾಡಿ ಸದ್ವೃತ್ತಿಯಲ್ಲಿ ನಡೆಯುವಂತೆ ಪ್ರೇರೇಪಿಸಲು ಡಿಸ್ಟ್ರಿಕ್ಟ್ ಕಮಿಟಿಯವರು ಪ್ರಯತ್ನಪಡುತ್ತಲಿದ್ದಾರೆ. ಈ ವಿಚಾರದಲ್ಲಿ ಅವರ ಸಲಹೆಗಳು ಶಕ್ಯವಾದ ಕೂಡಲೆ ಈ ತರಗತಿಯವರಿಗೆ ಸ್ಪೆಷಲ್ ಸ್ಕೂಲುಗಳನ್ನು ಸ್ಥಾಪಿಸಲು ಏರ್ಪಾಡು ಮಾಡಲಾಗುವದು.

ಈ ರೀತಿ ಮೇಲೆ ವಿವರಿಸಿರುವ ಅಂಕಗಳಿಂದ ಸ್ಕೂಲಿಗೆ ಹೋಗುವ ವಯಸ್ಸಿನವರ ಪೈಕಿ ಅಕ್ಕಲ್ಲ ಮಂದಿ ಮಾತ್ರ ವಿದ್ಯಾಭ್ಯಾಸ ಹೊಂದುತ್ತಲಿದ್ದಾರೆಂಬುದು ವ್ಯಕ್ತವಾಗುವದು. ನಮ್ಮ ದೇಶದ ಅಭಿವೃದ್ಧಿಗೆ ಈ ಸಂಖ್ಯೆಯನ್ನು ಹೆಚ್ಚಿಸುವುದು ಮುಖ್ಯವಾದ ಕೆಲಸ. ಆದರೆ ಈ ಕೆಲಸಕ್ಕಿಂತಲೂ ನಮ್ಮ ಬಾಲಕರಿಗೆ ಜೀವನೋಪಾಯಕ್ಕಿರುವ ಮಾರ್ಗಗಳನ್ನು ಹೆಚ್ಚಿಸುವದಕ್ಕಾಗಿ ಸ್ಕೂಲುಗಳಲ್ಲಿ ನಡೆಯುವ ವಿದ್ಯಾಭ್ಯಾಸದ ಕ್ರಮವನ್ನು ಬದಲಾಯಿಸುವುದು ಇನ್ನೂ ಅವಶ್ಯಕ. ಹೊಲದಲ್ಲಿ ಕೆಲಸ ಮಾಡುವ ರೈತರಿಗೂ, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕೈಗಾರಿಕೆಯವರಿಗೂ, ಹೀಗೆಯೇ ಇನ್ನೂ ಅನೇಕ ಕಸಬುಗಳನ್ನು ಅವಲಂಬಿಸುವ ಬಾಲಕರಿಗೂ ನಮ್ಮ ಪಾಠಶಾಲೆಗಳಿಂದ ಸರಿಯಾದ ಶಿಕ್ಷಣವು ದೊರೆಯಬೇಕು. ಈ ವಿಧವಾದ ವಿದ್ಯಾಭ್ಯಾಸದ ಮಾರ್ಗಗಳನ್ನು ಪ್ರಜೆಗಳು ಸಭೆಗಳಲ್ಲಿ ಚರ್ಚಿಸಿ ಪಾಠಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದರ ಜೊತೆಗೆ ಇವುಗಳಲ್ಲಿ ತೃಪ್ತಿಕರವಾಗಿ ಕೆಲಸ ಮಾಡುವ ಸುಶಿಕ್ಷಿತರಾದ ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸುವುದು ಅತ್ಯಾವಶ್ಯಕ. ಇದಕ್ಕಾಗಿ ಸರ್ಕಾರದವರು ಈಗ ಏರ್ಪಡಿಸಿರುವ ನಾರ್ಮಲ್ ಸ್ಕೂಲುಗಳಿಂದ ಬೇಕಾದಷ್ಟು ಮಂದಿ ಉಪಾಧ್ಯಾಯರು ಒದಗುತ್ತಿಲ್ಲ. ಆದುದರಿಂದ ಸರ್ಕಾರದವರ ಈ ಪ್ರಯತ್ನದ ಜೊತೆಗೆ ಮತ್ತಾವ ಪ್ರಯತ್ನಗಳನ್ನು ಮಾಡುವುದರಿಂದ ಇಂಥಾ ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸಬಹುದೆಂಬುದನ್ನು ಮಹಾ ಸಭೆಗಳವರು ನಿರ್ಣಯಿಸಬೇಕಾಗಿರುವದು.

ಮ. ವ.

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿ.]

ಕರೆಸ್‌ಪಾಂಡೆನ್ಸ್.

ಐಶ್ವರ್ಯವು ಕಾರಣವಂತೆ.

ಅಯ್ಯಾ,—ಅಕ್ರಮ ಬೈದು ಮತ್ತು ಅವಮಾನ ಕೃತ್ಯ ನಡೆಸಿದ ಒಂದು ಮೊಕದ್ದಮೆಯು ಶಿವಮೊಗ್ಗ ಟ್ರೆಜರಿ ಅ|| ಕಮಿಷನರಾದ ಮ|| ಸಿ. ಗೋಪಾಲಾಚಾರ್ಯರ ಮುಂದೆ ಫೆಬ್ರವರಿ ತಾ. 14 ರಲ್ಲಿ ಫಿರ್ಯಾದಿ ಪರವಾಗಿ ಅಡ್ವೊಕೇಟ್ ಮ|| ಸೀತಾರಾಮಯ್ಯನವರಿಂದಲೂ, ಅಪರಾಧಿ ಪರವಾಗಿ ಅಡ್ವೊಕೇಟ್ ಮ|| ಬಾಲಕೃಷ್ಣರಾಯರವರ ತಿರುವಳಿಯಂತೆ ಅಡ್ವೋಕೇಟ್ ಮ|| ಸಿ. ಸುಬ್ಬರಾಯರಿಂದಲೂ ವಾದಿಸಲ್ಪಟ್ಟಿತು. ಮೈಸೂರಲ್ಲಿರುವ ಸುಗಂಧಕಾರಿ ಮ|| ಬಿ. ಎಲ್. ಉಪಾಧ್ಯಾಯರ ಸಹೋದರಿ 1 ನೇ ಅಪರಾಧಿ ಪರಮೇಶ್ವರಭಟ್ಟರ ಖಾಸಾ ತಮ್ಮ ಕೃಷ್ಣಭಟ್ಟರ ಹೆಂಡತಿ ಗಂಗಮ್ಮನು ಶಿರನಹಳ್ಳಿ, ಮೋಹರಹಳ್ಳಿ ಮತ್ತು ತೀರ್ಥಹಳ್ಳಿ ಈ ಸ್ಥಳಗಳಲ್ಲಿ ತನ್ನ ಭಾವ ಧನವಂತನಾದ ಪರಮೇಶ್ವರಭಟ್ಟರಿಂದಲೂ ಮತ್ತು ಶ್ಯಾಮಭಟ್ಟರು, ಶೇಷಭಟ್ಟರು, ಪುಟ್ಟಭಟ್ಟರು, ತಿಮ್ಮಣ್ಣಭಟ್ಟರು, ಈ ನಾಲ್ಕು ಜನ ಸಮೀಪ ಬಂಧುಗಳಿಂದಲೂ ಅಕ್ರಮ ಬೈದು ಮಾತಲ್ಪಟ್ಟರೆಂದು ಫಿರ್ಯಾದಿ ಅರ್ಜಿ ಹೇಳಿಕೆ. ಫಿರ್ಯಾದಿಗೆ ಜೀವನಾಂಶ ವಗೈರೆ ಹಕ್ಕನ್ನು ತಪ್ಪಿಸಬೇಕೆಂಬುದೇ ಇದಕ್ಕೆ ಮುಖ್ಯಕಾರಣವಂತೆ. ಫಿರ್ಯಾದಿಯು ಸುಳ್ಳು ಅಪವಾದವನ್ನು ಒಪ್ಪಿಕೊಳ್ಳಲು ನಿರ್ಬಂಧಿಸಿದರೆಂದೂ, ಫಿರ್ಯಾದಿಯು ತಿರಸ್ಕರಿಸಿದಳೆಂದೂ, ಅದಕ್ಕಾಗಿ ಫಿರ್ಯಾದಿಯನ್ನು ಕೋಣೆಯಲ್ಲಿ ಕೂಡಿಬಿಟ್ಟು ಒಬ್ಬ ಹೆಂಗಸನ್ನು ಕಾವಲಾಗಿ ಇಟ್ಟರೆಂದೂ, ಫಿರ್ಯಾದಿ ಸಹೋದರರಿಂದ ಡೆಪ್ಯುಟಿ ಕಮಿಷನರವರಿಗೆ ಅರ್ಜಿ ಕೊಟ್ಟ ಪ್ರಕಾರ ಪೋಲೀಸ್ ಜಮಾದಾರ್ರು ಮಹಜರು ಮಾಡಿ ಫಿರ್ಯಾದಿಯು ಸ್ವತಂತ್ರ ಹೊಂದಿದಳೆಂದೂ ತನ್ನ ಸ್ಟೇಟ್‌ಮೆಂಟಿನಲ್ಲಿ ಹೇಳಲಾಗಿದೆ. ಫಿರ್ಯಾದಿಯು ದಿಕ್ಕಿಲ್ಲದ ವಿಧವೆಯಾಗಿರುತ್ತಾಳಾದ್ದರಿಂದ ಫಿರ್ಯಾದಿಯ ಉತ್ತರ ವಾರಸುದಾರನಾದ 1 ನೇ ಅಪರಾಧಿಯು ಫಿರ್ಯಾದಿಗೆ ಜೀವನಾಂಶ ವಗೈರೆ ಹಕ್ಕನ್ನು ನಿವೃತ್ತಿಮಾಡಲು ಗರ್ಭಿಣಿಯಾಗಿರುವಳೆಂಬ ಸುಳ್ಳು ಅಪವಾದವನ್ನು ಒಪ್ಪಿಕೊಳ್ಳಲು ನಿರ್ಬಂಧಪಡಿಸಿದ್ದನ್ನು ಫಿರ್ಯಾದಿಯು ತಿರಸ್ಕರಿಸಿದಳು. ಕೂಡಲೇ ಮೊದಲಾಗಿ ಅಪರಾಧಿಗಳೆಲ್ಲರೂ ಮನಸ್ಸಿಗೆ ತೋರಿದಂತೆ ಪ್ರವರ್ತಿಸುವದಕ್ಕೆ ತುಂಬಾ ಶಕ್ತರು. ಫಿರ್ಯಾದಿಯ ಸಹೋದರರಿಗಾದರೂ ಈ ವಿಷಯವೇ ತಿಳಿಯದು. ಶ್ರೀಮಠದವರ ಎದುರಿಗೆ ಫಿರ್ಯಾದಿಯು ಪಾಂಗಿತ್ಯಲವನ್ನು ರೀತ್ಯರ್ಥ ಮಾಡಿಸಬೇಕೆಂದು ಅಪರಾಧಿಗಳು ಪ್ರಯತ್ನಪಟ್ಟಾಗ್ಯೂ ವ್ಯರ್ಥವಾಯಿತು. ತರುವಾಯ ಪೋಲೀಸ್ ಇನ್ಸ್‌ಪೆಕ್ಟರಿಗೆ ಒಂದು ಮೂಗು ಅರ್ಜಿ ಬರೆದರು ಎಂದು ಫಿರ್ಯಾದಿ ಪರ ಹೇಳಿದರು. ಅಪರಾಧಿ ಪರ ಹೇಳಿದ್ದು—ಮ|| ಸೀತಾರಾಮಯ್ಯನವರು ತೋರಿಸಿಕೊಟ್ಟಂತೆ ಕಾರಣಗಳು ಒಪ್ಪತಕ್ಕದ್ದಲ್ಲವೆಂದೂ, ಫಿರ್ಯಾದು ಸಾವಕಾಶವಾಗಿ ದಾಖಲಾಯಿತೆಂದೂ, ಫಿರ್ಯಾದಿಯ ಸಹೋದರರು ಸ್ವಪ್ರಯೋಜನಕ್ಕಾಗಿ ಹೊಟ್ಟೆಕಿಚ್ಚಿನಿಂದ ಫಿರ್ಯಾದು ತಂದಿರುತ್ತಾರೆಂದೂ, ಆದಕಾರಣ ಅಪರಾಧಿಗಳಿಗೆ ಬಿಡುಗಡೆ ಆಗಬೇಕೆಂದೂ ವಾದಿಸಿದರು. ತಾ. 20 ರಲ್ಲಿ ನ್ಯಾಯಾಧೀಶರು ತಿಮ್ಮಣ್ಣಭಟ್ಟನನ್ನು ಖುಲಾಸ್ ಮಾಡಿ ಉಳಿದ ಅಪರಾಧಿಗಳ ಮೇಲೆ ಛಾರ್ಜ್ ಮಾಡಿರುತ್ತಾರೆ.

ನಿಮ್ಮ ಪತ್ರಿಕಾ ವಾಚಕ.

ಗುಂಡ್ಲುಪೇಟೆಯ ಪ್ರಸ್ತುತ ಸ್ಥಿತಿ.

ಅಯ್ಯಾ,—ಇಲ್ಲಿನ ಜನಗಳು ಪ್ಲೇಗ್ ಗಲಾಟೆಯಿಂದ ಹೊರಗೆ ಗುಡಿಸಲುಗಳಲ್ಲಿ ವಾಸವಾಗಿದ್ದು ನಾನಾ ತೊಂದರೆಗಳನ್ನನುಭವಿಸಿ ಮೊನ್ನೆ ತಾನೇ ಊರಿಗೆ ಬಂದು ಸೇರಿ ನೆಮ್ಮದಿಯಾಗಿದ್ದಾರೆ. ಇಲ್ಲಿ ಬಿಸಿಲಿನ ಬೇಗೆಯು ಬಹು ಜಾಸ್ತಿಯಾಗಿದೆ. ಮಳೆ ಬರುವ ಸೂಚನೆಗಳು ತೋರುತ್ತವೆ. ಬಜಾರಿನಲ್ಲಿ ಆಹಾರ ಸಾಮಗ್ರಿಗಳ ಧಾರಣೆಗಳು ತಕ್ಕ ಮಟ್ಟಿಗೆ ಅನುಕೂಲವಾಗಿಯೇ ಇರುತ್ತವೆ. ಆದರೆ ವರ್ತಕರು ಇಟ್ಟದ್ದೇ ಬೆಲೆ, ಅಳೆದದ್ದೇ ಸೇರು, ಹೇಳಿದ್ದೇ ಬೆಲೆಯಾಗಿರುತ್ತೆ. ತಿಳುವಳಿಕೆಯಿಲ್ಲದ ಜನಗಳಾಗಲಿ, ಹುಡುಗರು ಮಕ್ಕಳಾಗಲಿ ವ್ಯಾಪಾರಕ್ಕೆ ಹೋದರೆ ಕಾಸು ಬಾಳುವ ಪದಾರ್ಥಕ್ಕೆ ದುಡ್ಡನ್ನೇ ಸೆಳೆದುಬಿಡುತ್ತಾರೆ. ಬಟ್ಟೆ ಅಂಗಡಿಗಳಲ್ಲಿ ಬಟ್ಟೆಗಳ ಬೆಲೆಯು ತುಂಬಾ ಜಾಸ್ತಿಯಾಗಿರುತ್ತೆ. ಈ ಅಂಗಡಿಯವರು ಅಷ್ಟದ ಬಟ್ಟೆಗೆ ಹಣವನ್ನೇ ಕಸಿದುಕೊಳ್ಳುತ್ತಾರೆ. ಅಂಗಡಿ ಬೀದಿಯಲ್ಲಿ ಮೋಟರ್ ಪೋಲೀಸ್ ಠಾಣ್ಯವಿದ್ದಾಗ್ಯೂ ಇಸ್ಪೀಟ್ ಮೊದಲಾದ ಜೂಜಾಟಗಳು ಬಹು ಮಟ್ಟಿಗೆ ಕಡಮೆಯಾಗಿದ್ದು ಈಗ ಅಲ್ಲಲ್ಲಿ ಗುಪ್ತವಾಗಿ ನಡೆಯುತ್ತಿರುವಂತೆ ವರ್ತಮಾನವಿದೆ. ದೊಡ್ಡವರನ್ನು ನೋಡಿ ಚಿಕ್ಕ ಪುಟ್ಟ ಹುಡುಗರೂ ಸಹ ವಿಧವಿಧವಾದ ಜೂಜಾಟಗಳಲ್ಲಿ ನಿಗ್ನರಾಗುತ್ತಿದ್ದಾರೆ. ಊರು ಸುತ್ತಲೂ ಅಲ್ಲಲ್ಲಿ ಪಾಪಾಸುಕಳ್ಳಿಯು ಬೆಳೆದು ವೃದ್ಧಿಗೆ ಬರುತ್ತಿರುವವು. ಟವರ್ ಮ್ಯುನಿಸಿಪಾಲಿಟಿಯ ಸಾಕೀಜಾ ಸರಿಯಾಗಿಲ್ಲ. ಕೆಲವೆಡೆಗಳಲ್ಲಿ ಕಸ್ಕಲವು ತುಂಬಿರುತ್ತೆ. ಸಂಜೆ ದೀಪಗಳು ಕ್ರಮವಾಗಿ ಹಚ್ಚಲ್ಪಡುವುದಿಲ್ಲ. ಸ್ಯಾನಿಟೇಷನ್ ತೃಪ್ತಿಕರವಾಗಿಲ್ಲ. ಭಾವಿ ಮೊದಲಾದ ಜಲಾಶಯಗಳಲ್ಲಿ ನೀರು ಕಡಮೆಯಾಗುತ್ತಿದೆ. ಇಲ್ಲಿನ ಪ್ರಸಿದ್ಧವಾದ ಪಿಚ್ಚಾಯಪುರದ ಮೋಹರ್ ಮತ್ತು ವ್ಯಾನರ್ ಕಾಲುವೆಗಳಲ್ಲಿ ಹೆಚ್ಚು ನೀರಿದ್ದಾಗ್ಯೂ ಅದಕ್ಕೆ ತೂಬಿಲ್ಲ, ಇತರ ಕಡೆಗಳಲ್ಲೂ ಮಹಾಕ ನೀರು ಹರಿದು ವ್ಯರ್ಥವಾಗುತ್ತಿದೆ. ಇದನ್ನು ಕಟ್ಟಿ ದಾಸ್ತಾನಿಟ್ಟುಕೊಂಡಲ್ಲಿ ಜನಗಳಿಗೂ, ಜಾನುವಾರುಗಳಿಗೂ ತುಂಬಾ ಅನುಕೂಲವಾದೀತು. ಹೆಡ್ ಮಾಸ್ಟರ್ ಮ|| ನಾರಾಯಣಾಚಾರ್ಯರ ಶ್ರದ್ಧೆಯಿಂದಲೂ, ಮಮತೆಯಿಂದಲೂ ವಿದ್ಯಾರ್ಥಿಗಳಿಗೆ ತಕ್ಕ ಮಟ್ಟಿಗೆ ಪಾಠಪ್ರವಚನಗಳು ನಡೆಯುತ್ತಿವೆ. ಇವರಂತೆಯೇ ಮಾಸ್ಟರುಗಳೂ ನಡೆದುಕೊಂಡಲ್ಲಿ ಸ್ಕೂಲಿನ ನ್ಯೂನಾತಿರಿಕ್ತಗಳು ಪರಿಹಾರವಾಗಿ ವಿದ್ಯಾರ್ಥಿಗಳು ಬಹು ಮಟ್ಟಿಗೆ ಪ್ರವರ್ಧಮಾನರಾಗಬಹುದು. ಗರ್ಲ್ಸ್ ಸ್ಕೂಲ್ ಸ್ಥಾಪಿತವಾಗಿ ಸುಮಾರು 30 ವರುಷಗಳ ಮೇಲಾಗಿರಬಹುದು. ಒಬ್ಬ ಕನ್ಯಾಮಣಿಯಾದರೂ ಪ್ಯಾಸ್ ಮಾಡಿ ಸರಿಯಾದ ವಿದ್ಯಾವತಿಯಾಗಲಿಲ್ಲ. ಇಲ್ಲಿನ ಶ್ರೀನಿವಾಸಸ್ವಾಮಿ ಬ್ಯಾಂಕಿನ ವಿಷಯದಲ್ಲಿ ಪ್ರೆಸಿಡೆಂಟರಿಗೂ, ಡೈರೆಕ್ಟರುಗಳಿಗೂ, ಷೇರುದಾರರುಗಳಿಗೂ ಮನಸ್ತಾಪಗಳುಂಟಾಗಿ ಮೊನ್ನೆ ಕೂಡಿದ್ದ ಸಾಮಾನ್ಯ ಜನರಲ್ ಮೀಟಿಂಗಿನಲ್ಲಿ ರಿಪೋರ್ಟ್ ಮೊದಲಾದ ರಿಜಿಸ್ಟರುಗಳಿಂದ ವ್ಯವಸ್ಥೆಯಾಗಿ ಸಮಾಧಾನ ಸ್ಥಿತಿಗೆ ಬಂದದ್ದು ತುಂಬಾ ಸಂತೋಷಕರವಾಗಿರುತ್ತೆ. ಇಲ್ಲಿನ ಕಛೇರಿ ಅಧಿಕಾರಿಗಳ ಪೈಕಿ ಕೆಲವರು ತಮ್ಮ ಮನಸ್ಸಾಕ್ಷಿಗೆ ಅನುಸಾರವಾಗಿ ಕೆಲಸಮಾಡತಕ್ಕವರಾಗಿಲ್ಲ. ಇದಕ್ಕೆ ಪ್ರಧಾನಾಧಿಕಾರಿಗಳು ಗಮನ ಕೊಡುವದು ಒಳ್ಳೇದು. ಇಲ್ಲಿ ಪೋಸ್ಟ್ ಮಾಸ್ಟರಾಗಿದ್ದ ಮ|| ಆರ್. ವೆಂಕಟಾಚಲಶಾಸ್ತ್ರಿಗಳು ಕಳಲೇಪುರಕ್ಕೆ ವರ್ಗವಾಗಿ ಹೊರಟುಹೋದರು. ಇವರು 6 ವರ್ಷಗಳಿಂದ ಇಲ್ಲಿ ಕಾರ್ಯನಿರ್ವಹಣೆಯಲ್ಲಿ ಯೋಗ್ಯರಾಗಿ ಜನಾನುರಾಗಿಗಳಾಗಿದ್ದರು. ಇವರ ಸ್ಥಾನಕ್ಕೆ ಮ|| ವೆಂಕಟಸುಬ್ಬಯ್ಯನವರು ಬಂದಿರುತ್ತಾರೆ. ಇವರಿಗೆ ಪೋಸ್ಟ್ ಮತ್ತು ಟೆಲಿಗ್ರಾಂ ಕೆಲಸಗಳೆರಡರ ಗಲಾಟೆಗಳು ಜಾಸ್ತಿಯಾಗಿರುವಂತೆ ಕಾಣುತ್ತೆ. ಆಫೀಸ್ ಕೆಲಸಗಳು ಪ್ರಜೆಗಳಿಗೆ ತೃಪ್ತಿಕರವಾಗಿ ನಡೆಯುವದಿಲ್ಲ. ಜನಗಳು ತಮ್ಮ ಕೆಲಸಕ್ಕೆ ತುಂಬಾ ಕಾಯಬೇಕಾಗಿದೆ. ಅಧಿಕಾರಿಗೆ ಅಗರ ವಿದ್ಯೆಕ್ಕೆ ತಕ್ಕ ವಿನಯವೂ, ಅದಕ್ಕೆ ತಕ್ಕ ಪಾತ್ರಾಪಾತ್ರವೂ, ಸರ್ವರ್ಕ್ಕೂ ಸಮದರ್ಶಿಗಳಾಗಿಯೂ ಇರಬೇಕೆಂದು ಪ್ರಾರ್ಥನೆ.

ಶ್ರೋತೃ.

ಹಳ್ಳೀಯ ವರ್ತಮಾನಗಳು.

ಶಿವಮೊಗ್ಗ.—ಸರ್ಕಾರದವರು ಶಿವಮೊಗ್ಗ ಪ್ರಜೆಗಳಿಗೆ ಶುದ್ಧವಾದ ನೀರನ್ನು ನಲ್ಲಿಗಳನ್ನಿಡಿಸಿ ಒದಗಿಸಿರುತ್ತಾರಷ್ಟೆ. ಈ ಏರ್ಪಾಡು ಇದ್ದ ಮಟ್ಟಿಗಾದರೂ ಸರಿಯಾಗಿ ನಡೆಯುತ್ತೋ ಇಲ್ಲವೋ ಎಂದು ಹೆಚ್ಚು ಗಮನದಿಂದ ನೋಡುವಂತೆ ಕಾಣುವದಿಲ್ಲ. ಕೆಲವು ಮುಖ್ಯ ಸ್ಥಳಗಳು ಹೊರತು ಇತರ ಸ್ಥಳಗಳಲ್ಲಿ ಸಾಧಾರಣ ದಿವಸಗಳಲ್ಲಿಯೂ ದೊಡ್ಡ ದೊಡ್ಡ ಹಬ್ಬಗಳಲ್ಲಿಯೂ ನಲ್ಲಿಗಳಲ್ಲಿ ನೀರೇ ಬರುವದಿಲ್ಲ. ಇದನ್ನೇ ನಂಬಿಕೊಂಡಿರುವವರು ನಿರಾಶೆಯಾಗಿ ಭಾವಿ ಕೆರೆ ನದಿಗಳಿಂದ ನೀರು ತಂದುಕೊಳ್ಳುತ್ತಾ ವ್ಯಥೆಪಡುತ್ತಿದ್ದಾರೆ. ಅಧಿಕಾರಿಗಳು ಇದನ್ನು ಕ್ರಮಪಡಿಸುವರೆಂದು ಹಾರೈಸುತ್ತೇನೆ. ಇದಲ್ಲದೆ ನಲ್ಲಿಗಳನ್ನು ಹೆಚ್ಚಿಸಿ ಪ್ರಜೆಗಳಿಗೆ ಉಂಟಾಗಿರತಕ್ಕ ಕಷ್ಟಗಳನ್ನು ಶೀಘ್ರವಾಗಿ ಪರಿಹರಿಸಬೇಕಾಗಿ ಪ್ರಾರ್ಥನೆ. ಇಲ್ಲಿಗೆ ಪರೀಕ್ಷೆಗೆ ಬಂದ ವಿದ್ಯಾರ್ಥಿಗಳಿಗೆ ನಮ್ಮ ಹೋಟೆಲ್ ಕೀಪರ್ ಮ|| ನಾರಣಪ್ಪನವರು ಕೆಲವು ದೊಡ್ಡ ಮನುಷ್ಯರುಗಳ ಅಲ್ಪಸ್ವಲ್ಪ ಸಹಾಯದಿಂದ ಸುಮಾರು 200 ಜನ ವಿದ್ಯಾರ್ಥಿಗಳಿಗೂ ಅವರ ಪೋಷಕರಿಗೂ ತಾ. 4 ನೇ ಮಂಗಳವಾರದಿಂದ ಶನಿವಾರದ ವರೆಗೆ ವಿಶ್ವವು ಸುಭೋಜನಾದಿಗಳನ್ನು ಸ್ಟುಡೆಂಟ್ಸ್ ಹೋಮಿನಲ್ಲಿ ಜರುಗಿಸಿದ್ದು ಸ್ತೋತ್ರಾರ್ಹವಾಗಿದೆ.

ಚಿತ್ರದುರ್ಗ.—ಬೇಸಗೆ ಕಾಲದ ರಜಾಕ್ಕಾಗಿ ಕಳೆದ 4 ನೇ ತಾರೀಖಿನಿಂದ ಈ ಊರು ಮುನಿಸಿಪಲ್ ಕೋರ್ಟು ಮುಚ್ಚಲ್ಪಟ್ಟಿದೆ. 10-11 ನೇ ತಾ. ನಿಂದ ಇಲ್ಲಿನ ಎಲ್ಲಾ ಸ್ಕೂಲುಗಳೂ ಮುಚ್ಚಲ್ಪಡುವವು. ಅಕಸ್ಮಾತ್ ಮಳೆ ಬಾರದೆ ಹೋದರೆ ಈ ವರುಷದ ಬೇಸಗೆ ಬಿಸಿಲು ಸಹಿಸುವುದು ಕಷ್ಟ. ಇಲ್ಲಿನ ಹೈಸ್ಕೂಲಿನಲ್ಲಿ 4 ನೇ ತಾ. ನಿಂದ 8 ರ ವರೆಗೆ ಲೋವರ್ ಸೆಕೆಂಡರಿ ಪರೀಕ್ಷೆ ನಡೆಯಿತು. ಸುಮಾರು 200 ಜನದ ವರೆಗೂ ವಿದ್ಯಾರ್ಥಿಗಳು ಸೇರಿದ್ದರು. ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಮ|| ಚನ್ನಕೇಶವಯ್ಯನವರ ಧರ್ಮಶಾಲೆಯಲ್ಲಿ ಹುಲ್ಲೂರು ಶ್ರೀ|| ಮ|| ಸಂಜೀವರಾಯರು ಭೋಜನಮಾಡಿಸಿದರು. ವೀರಶೈವರು ಮತ್ತು ಅವರಲ್ಲಿ ಊಟಮಾಡತಕ್ಕ ವಿದ್ಯಾರ್ಥಿಗಳು ಸೇರಿ ಸುಮಾರು ನೂರಾರು ಜನರಿಗೆ ಅವರ ಬೋರ್ಡಿಂಗ್ ಹೋಮಿನಲ್ಲಿ 6 ದಿವಸ ಶ್ರೀಸ್ವಾಮಿಗಳವರು ಸುಭೋಜನ ಮಾಡಿಸಿದ್ದಲ್ಲದೆ ಆರ್ಯನ್ ಸ್ಟುಡೆಂಟ್ಸ್ ಹೋಮಿನಲ್ಲಿ ರೋಜಾನಾ ಮಧ್ಯಾಹ್ನ ವಿದ್ಯಾರ್ಥಿಗಳಿಗೂ, ಬಂದ ಜನರಿಗೂ ಫಲಾಹಾರದ ಏರ್ಪಾಡು ಮಾಡಿಸಿದ್ದರು. ನೊಣಬನವರು ಪಟೇಲರು ಸಿರಿಗೆರೆ ಮಠದಲ್ಲಿ 20-25 ಜನ ವಿದ್ಯಾರ್ಥಿಗಳ ವರೆಗೂ ಊಟಮಾಡಿಸಿದರು.

ಬೇಲೂರು.—ಬೇಲೂರು ದೊಡ್ಡ ಹೊಲಗೇರಿಯ ಕೆಲವರಿಂದ ಸ್ಕೂಲ್ ಕಟ್ಟಡವು ಕಟ್ಟಲ್ಪಟ್ಟಿದ್ದು ತಾ. 5 ನೇ ಬುಧವಾರ ಬೆಳಗ್ಗೆ ಈ ಹೊಸ ಕಟ್ಟಡದಲ್ಲಿ ಸ್ಕೂಲ್ ಪ್ರಾರಂಭಿಸಲ್ಪಟ್ಟಿತು. ಈ ಹೊಸ ಶಾಲೆಗೆ ಈ ಊರಿನ ಕೆಲವು ಮಂದಿ ದೊಡ್ಡ ಮನುಷ್ಯರುಗಳೂ ಸರ್ಕಾರಿ ಅಧಿಕಾರಿಗಳೂ ದಯಮಾಡಿಸಿದ್ದರು. ಕಾಫಿ ಪ್ಲಾಂಟರ್ ಮ|| ಕೆ. ತಮ್ಮಯ್ಯನವರು ಸಭಾಧ್ಯಕ್ಷತೆಯನ್ನು ಅಂಗೀಕರಿಸಿದರು. ಆ ಸಭೆಯಲ್ಲಿ ನಮ್ಮ ಸಂಸ್ಥಾನ ಸರ್ವೆ ಅ|| ಸೂ|| ಮ|| ರಂಗಗೋಪಾಲಾಚಾರ್ಯ, ರೆ|| ಅ|| ಮ|| ಕೃಷ್ಣಯ್ಯಂಗಾರ್‌ರವರೂ, ಅಮಲ್ದಾರ್ ಮ|| ಎಂ. ಶ್ರೀನಿವಾಸಯ್ಯಂಗಾರ್ಯರವರೂ, ಡಾ|| ಜಾನಕೀರಾಮ್‌ರವರೂ, ಪಂಡಿತ್ ಆರ್. ನರಸಪ್ಪನವರೂ, ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮುಳಬಾಗಿಲು ಮಣಿಯ್ಯನವರೂ ಮುಂತಾದ ಬಹು ಮಂದಿ ಹಾಜರಾಗಿದ್ದರು. ಬಾಲ ಬಾಲಿಕೆಯರಿಂದ ದೇವರ ಪ್ರಾರ್ಥನೆ ಬಳಿಕ ಮೇಲೆ ಸ್ಕೂಲ್ ಮಾಸ್ಟರು ಸ್ಕೂಲ್ ರಿಪೋರ್ಟ್ ಓದಿದರು. ಸಭಾಧ್ಯಕ್ಷರು ತುಂಬಾ ಅನಾಗರಿಕರಾಗಿ ಅವಿದ್ಯಾವಂತರಾಗಿರುವ ಪಂಚಮರ ಏಳಿಗೆಗೆ ಮುಖ್ಯ ಸಹಕಾರಿಗಳಾದ ಹಿತೋಕ್ತಿಗಳನ್ನು ಸೂಚಿಸಿದ ಬಳಿಕ ಚಕ್ರವರ್ತಿ ಸಾರ್ವಭೌಮರವರ, ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟು ಸಭೆಯು ಮುಕ್ತಾಯಮಾಡಲ್ಪಟ್ಟಿತು.—ಮೈಸೂರ್ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರುಗಳ ಯುದ್ಧದ ಫಂಡಿಗೆ ಯಮಸಂಧಿ ಶ್ಯಾ|| ಸೀತಾರಾಮಯ್ಯನವರ ಪ್ರೋತ್ಸಾಹದಿಂದ ರೂ. 8-4-0 ಸಹಾಯದ್ರವ್ಯವು ವಸೂಲಾಗಿಲ್ಪಟ್ಟು ಖಜಾನೆಗೆ ಜಮಾ ಆಗಿರುತ್ತದೆ.

ಕುಣಿಗಲು.—ಬಿಸಿಲಿನ ತಾಪವು ಸಹಿಸಲು ಕಷ್ಟ. ಈ ಟವನ್ನಿನ ಕೆಲವು ಭಾವಿಗಳಲ್ಲಿ ಆಗಲೆ ನೀರು ಇಲ್ಲದೆ ಒಣಗಿಹೋಗಿದೆ. ದೊಡ್ಡಕೆರೆಯಲ್ಲಿ ಕಾಲುವಾಲಿಗೂ ಕೆಳಮಟ್ಟಯಾಗಿ ನೀರಿದೆ. ಈ ಟವನ್ನಿನ ಮುಕ್ಕಾಲು ಭಾಗ ಜನರಿಗೂ, ಜಾನುವಾರುಗಳಿಗೂ ಸ್ನಾನಪಾನಾದಿಗಳಿಗೆ ಅನುಕೂಲವಾಗಿದ್ದ ಚಿಕ್ಕಕೆರೆಯ ನೀರು ಕೇವಲ ಕಡಮೆಯಾಗಿರುತ್ತೆ. ಆದಾಗ್ಯೂ ಒಂದೆರಡು ತಿಂಗಳು ಕೆರೆಯಲ್ಲಿ ನೀರು ಇರುತ್ತೆಂಬ ಭರವಸೆಯಿದ್ದಾಗ್ಯೂ ರಾತ್ರಿ ಕಾಲದಲ್ಲಿ ಅನೇಕರು ಬಲೆಗಳನ್ನು ಹಾಕಿ ಮೀನು ಹಿಡಿಯುವುದರಿಂದ ನೀರೆಲ್ಲಾ ಕೆಸರಿನೊಡನೆ ಕೊಳೆತು ಕೆಡುತ್ತಾ ಇದೆ. ಆದರಿಂದ ಜನಗಳಿಗೂ, ಜಾನುವಾರುಗಳಿಗೂ ನೀರಿನ ತೊಂದರೆ ತುಂಬಾ ಉಂಟಾಗಿರುತ್ತೆ. ಇನ್ನೂ ಅನೇಕರು ಈ ನೀರನ್ನೇ ತೆಗೆದುಕೊಂಡು ಬಂದು ಉಪಯೋಗಿಸುತ್ತಾ ಇದ್ದಾರೆ. ಇದರಿಂದ ಇಲ್ಲಿ ಯಾವಾಗ ಸಾಂಕ್ರಾಮಿಕ ಜಾಡ್ಯ ಹುಟ್ಟುವದೋ ಎಂದು ಕೆಲವರು ಕಳವಳಪಡುತ್ತಿದ್ದಾರೆ.—ಊರಿನಲ್ಲಿ ಮ್ಯುನಿಸಿಪಲ್ ಲಾಂದ್ರಗಳು ಕೆಲವು ಬರೀ ಕಂಭಗಳೇ ನಿಂತಿರುತ್ತವೆ. ಲಾಂದ್ರಗಳಿರುವ ಪೈಕಿ ಕೆಲವು ಯಾವಾಗಲೂ ಇದ್ದ ಹಾಗೆಯೋ ಇರುತ್ತವೆಯೋ ಹೊರತು ಬೆಳಕು ಮಾತ್ರ ಕಾಣುವದಿಲ್ಲ. ಕೆಲವು ಮಾತ್ರ ನಿಯಮಿತ ಕಾಲಗಳಲ್ಲಿ ಹೊತ್ತಿಸೊಡನೆ ಕೂಡಿರುತ್ತವೆ.—ಟವನ್ನಿನ ಪಾಳು ನಿವೇಶನದಲ್ಲಿ ಎಲ್ಲಿ ನೋಡಿದರೂ ಹೇಸಿಗೆಯೇ ತುಂಬಿರುತ್ತೆ. ಈ ದೆಸೆಯಿಂದ ಹವಾ ಕೆಟ್ಟು ಕೆಲವು ಜನರಿಗೆ ಆಮಶಂಕೆ ವಗೈರೆ ಕಾಯಿಲೆ ಉಂಟಾಗಿರುತ್ತದೆ. ಈ ವಿಷಯಗಳನ್ನು ಮೇಲ್ಪಟ್ಟ ಅಧಿಕಾರಿಗಳು ಗಮನಕ್ಕೆ ತೆಗೆದುಕೊಳ್ಳುತ್ತಾರೆಂದು ನಂಬಿರುತ್ತೇನೆ.—ನಮ್ಮ ಅಮಲ್ದಾರರು ಗ್ರಾಮಾಭಿವೃದ್ಧಿಯ ವಿಷಯದಲ್ಲಿ ಬಹು ಮುತುವರ್ಜಿ ವಹಿಸುತ್ತಿದ್ದಾರೆ. ಅವರು ಪ್ರತಿ ಗ್ರಾಮಕ್ಕೂ ದಯಮಾಡಿಸಿ ರೈತರನ್ನೆಲ್ಲಾ ಬರಮಾಡಿಕೊಂಡು ಅವರ ತೊಂದರೆಗಳನ್ನೆಲ್ಲಾ ಕೈಗಾರಿಕೆ ವ್ಯವಸಾಯ ವಗೈರೆ ವಿಚಾರದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸದಿಂದ ಹೋಗಲಾಡಿಸಿ ರೈತರ ಏಳಿಗೆಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುತ್ತಾ ಇದ್ದಾರೆ. ರೈತ ಪ್ರಜೆಗಳ ಮೇಲೆ ಇವರಿಗಿರುವ ದಯೆಯು ಸ್ತೋತ್ರಾರ್ಹವಾಗಿರುತ್ತೆ.—ಸಂತೆಯ ದಿನ ಜನರು ಕುಡಿಯುವದಕ್ಕೆ ನೀರು ದೊರಕದೆ ಕಂಗೆಡುತ್ತಿದ್ದರು. ಮ|| ರಾಮಣ್ಣನವರು ಪೇಟೆಯಲ್ಲಿ ಒಂದು ನೀರಿನ ಅರವಟ್ಟಿಗೆಯನ್ನಿಡಿಸಿ ಪ್ರತಿ ಸಂತೆಯಲ್ಲೂ ಜನರಿಗೆ ನೀರು ಒದಗಿಸುತ್ತಿದ್ದಾರೆ. ಇವರ ಉಪಕಾರವನ್ನು ಮರೆಯಲಾಗದು.

ಈಗತಾನೇ ಬಂದಿರುತ್ತೆ.

ಬೆಸ್ಟ್ ಲೀವರ್ ವಾಚ್.

ಈ ನವೀನವಾದ ಹೆಸರುಳ್ಳ ರವ. ಜೇಯುವಾದ ವಾಚ್ ಪ್ರಸಿದ್ಧಿ ಹೊಂದಿದ ಲೀವರ್ ಕೆಲಸಗಳಿಂದ ತಯಾರಿಸಿದದ್ದು. ಕಲೆಯಲ್ಲಿ ಬೀಗವುಳ್ಳದ್ದು. ಮುಳ್ಳ



ಗಳು ಕೇಡಾವದಕ್ಕೆ ಅವಕಾಶವಿಲ್ಲದಂತೆ ಒಳಗೆ ಗ್ಲಾಸ್ ಡೋಮ್ ಅಂದರೆ ಕನ್ನಡಿ ಮುಚ್ಚಳದಿಂದ ಮುಚ್ಚಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಬಹು ಸುಂದರವಾದ ಮತ್ತು ರವಾಣೆಯಾದ ವಾಚ್. ಸುಲಭಕ್ರಯದಲ್ಲಿ ಉತ್ತಮವಾದ ವಾಚ್ ಇದೇ. ಸುಂದರವಾದ ವಾಚ್ ಪೆಟ್ಟಿಗೆ ಮತ್ತು ವಾಚ್ ಚರಣಿ ಸಮೇತ

ಕ್ರಯ ರೂ. 2-15-0

ವಿಳಾಸ — ಪಿ. ಆರ್. ವೆಂಕಟರಮಣ ಕಂಪೆನಿ,

ನಂ. 7, ಕೋಪ್ ಪೆಂಟಟಾಚಲಯ್ಯರ್ ಲೇನು, ಮದರಾಸು.

ಸೂಚನೆ:—ವರ್ತಕರು ಬೇಕಾದ ಮಾಲುಗಳಿಗೆ ಕಾಗದ ಬರೆದು ಸ್ಪೆಷಲ್ ದರಗಳನ್ನು ತಿಳಿದುಕೊಳ್ಳಬಹುದು. [96-1]

ಗೃಹಕೃತ್ಯದ ನೋಟೀಸು.

ಕುಣಿಗಲ್ ತಾ|| ಕೊತ್ತಗೆರೆ ಹೋ|| ಜಾಣಗೆರೆಯಲ್ಲಿರುವ ಕಳಸೇಗೌಡನ ಮಗ ಪಾಳ್ಯದ ಕಳಸೇಗೌಡನ ಹೆಂಡತಿ ಕೆಂಪಮ್ಮನಾದ ನಾನು ಮೇಲ್ಕಂಡ ಕಳಸೇಗೌಡನಿಗೆ ಧರ್ಮಪತ್ನಿಯಾಗಿ 16 ವರುಷ, 12 ವರುಷಗಳ ಇಬ್ಬರು ಗಂಡು ಮಕ್ಕಳನ್ನು—14 ವರುಷ, 8 ವರುಷ, 6 ವರುಷಗಳ 3 ಹೆಣ್ಣು ಮಕ್ಕಳನ್ನು ಪಡೆದೆನು. ಕೆಲವು ದಿವಸಗಳಿಂದ ನನ್ನ ಗಂಡನು ಬುದ್ಧಿ ಸ್ವಿಮಿತವಿಲ್ಲದೆ ಇತರರ ದುರ್ಬೋಧನೆಗೆ ಒಳಗಾಗಿ ಇದೇ ಗ್ರಾಮದಲ್ಲಿ ಪಿತಾರ್ಜಿತವಾಗಿ ಬಂದ ಸೊತ್ತುಗಳನ್ನು ಅಂದರೆ ಹೊಲ ಸರ್ವೆ ನಂ. 1 ನೇ ಖುಷ್ಕಿ 10 ಎಕರೆ ಅಕಾರ 11 ರೂಪಾಯಿ ಉಳ್ಳದ್ದರಲ್ಲಿ 4 ಆಣೆ ಕಂದಾಯ ಉಳ್ಳದ್ದು, ಸರ್ವೆ ನಂ. 10 ನೇ ಖುಷ್ಕಿ 5 ಎಕರೆ 33 ಗುಂಟೆ ಅಕಾರ 6 ರೂಪಾಯಿ ಉಳ್ಳದ್ದರಲ್ಲಿ ಕಾಲು ಭಾಗ, ಸರ್ವೆ ನಂ. 3 ನೇ ಖುಷ್ಕಿ 20 ಗುಂಟೆ ಅಕಾರ 4 ಆಣೆ ಉಳ್ಳದ್ದರಲ್ಲಿ ಕಾಲು ಭಾಗ, ಸರ್ವೆ 17 ನೇ ನಂ. ಖುಷ್ಕಿ 1 ಎಕರೆ 33 ಗುಂಟೆ ಅಕಾರ 1½ ರೂಪಾಯಿ ಉಳ್ಳದ್ದರಲ್ಲಿ ಅರ್ಧ ಭಾಗ, ಸರ್ವೆ ನಂ. 42 ನೇ ಖುಷ್ಕಿ 15 ಎಕರೆ 7 ಗುಂಟೆ ಅಕಾರ 14 ರೂಪಾಯಿ ಉಳ್ಳದ್ದರಲ್ಲಿ ಕಾಲು ಭಾಗ, ಸರ್ವೆ 44 ನೇ ಖುಷ್ಕಿ 9 ಎಕರೆ 2 ಗುಂಟೆ ಅಕಾರ 9 ರೂಪಾಯಿ ಉಳ್ಳದ್ದರಲ್ಲಿ ಕಾಲು ಭಾಗ, ಸರ್ವೆ 64 ನೇ ಖುಷ್ಕಿ 35 ಗುಂಟೆ ಅಕಾರ 1 ರೂಪಾಯಿ ಉಳ್ಳದ್ದು ಪೂರಾ, ಸರ್ವೆ 67 ನೇ ಖುಷ್ಕಿ 1 ಎಕರೆ 3 ಗುಂಟೆ ಅಕಾರ 1 ರೂಪಾಯಿ ಉಳ್ಳದ್ದರಲ್ಲಿ ಕಾಲು ಭಾಗ, ಸದರಿ ಗ್ರಾಮದ ಖಾನೇಸುಮಾರಿ 9 ನೇ ನಂ. ಮೈಕಿ ಮನೆಗೆ ಮೂದಲು ಬಾಬ್ತು ಅಂಕಣ 10 ಕಲ್ಲು ಅಂಕಣ 14 ಈ ಮನೆಗೆ ಸೇರಿದ ಹಿತ್ತಲ ಜಮೀನು ಸಹ—ಇವುಗಳನ್ನು ಪರಭಾರೆ ಮಾಡುತ್ತಿರುವಂತೆ ಕೇಳುತ್ತೇನೆ. ಆದ್ದರಿಂದ ಮೇಲ್ಕಂಡ ಸೊತ್ತುಗಳನ್ನು ನನ್ನ ಅನುಮತಿ ಇಲ್ಲದೆ ಯಾರಾದರೂ ಆತನಿಂದ ಕ್ರಯ ಭೋಗ್ಯ ಆಧಾರ ವಗೈರೆ ಮಾಡಿಸಿಕೊಂಡರೆ ಊರ್ಜಿತವಾಗದೆ ನನ್ನ ವಿಶ್ವಾಸ ನಷ್ಟಕ್ಕೂ ಗುರಿಯಾಗಬೇಕಾದೀತು. ನಮಗೆ ಜೀವನಕ್ಕಿಂದು ನಾಲ್ಕೂ ಇಲ್ಲ.

[98-1] ಕೆಂಪಮ್ಮನ ಎಡಗೈ ಹೆಬ್ಬೆಟ್ಟಿನ ಗುರ್ತಿನ ರುಜು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ದೇಹದಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡಲಿಕ್ಕೆ ಸಾಧನವಾಗಿಲ್ಲ ಅತ್ಯುತ್ತಮವಾದದ್ದೆಂದು ಒಪ್ಪಿದಾರೆ.



ನಮಗೆ ಮಾತ್ರವೇ ಗೊತ್ತಿರುವ ಸಾಕು ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಅಚ್ಚಿಸಿ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಧನಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡವಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಪ ಇದು ಸಾಬೂನುಗಳುಳ್ಳ ಪೆಟ್ಟಿಗೆಗೆ 0-11-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0 ಟಪಾಲು ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ. ಬೇಗನೆ ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಕೌಂಡಿ,

[63-6] 3, ಇರುಳಪ್ಪನ ಬೀದಿ, ಮದ್ರಾಸು.

S. UDIPI NARAYANACHARYA & Co.,
BANARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕಂಪನಿಯಲ್ಲಿ ನೆಯುದು ತಯಾರಿಸುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಕಣ, ಪೇಟ, ಶಾಲ್ಸ್ ಸಾಲು, ಧೋತ್ರ, ಮುಗುಟ, ಜಗನ್ನಾಥ ಚೀಗಂಟಿಗಳು. ರುದ್ರಾಕ್ಷಿಗಳು, ಕೊನಾರ್ಡು, ಆಟದ ಪೇಟಿ, ಧನರ್ಮದ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೋಸ್ತರಿನಿಂದ ತಯಾರಿಸಿರುವೆವು. ಈ ಲಭ್ಯವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೇಟಲಾಗು ಒಂದು ಕಾಶಿ ಕಾಲಭೈರವರ ದಾರವನ್ನು ಉಚಿತವಾಗಿ ಕಳುಹಿಸಲಾಗುವುದು. [119-39]

ವಿಳಾಸ.—ಎಸ್. ಯು. ಎನ್. ಕಂಪೆನಿ, ಚೌಖಾಂಬಾ, ಕಾಶಿ.

ಮೈಸೂರು ಸರ್ಕಾರಿ ಪ್ರಕಟನೆ.

ಕಾರ್ಖಾನೆಗಳಲ್ಲಿ ಅಥವಾ ವರ್ಕ್‌ಶಾಪುಗಳಲ್ಲಿ ಪ್ರಾಥಮಿಕವಾಗಿ (ಸ್ವಂತವಾಗಿ ಕೆಲಸಮಾಡುವುದರಲ್ಲಿ) ತರಪೇತನ್ನು ಪಡೆಯಬೇಕೆಂಬ ಕುತೂಹಲವುಳ್ಳವರು ವಿದ್ಯಾರ್ಥಿ ವೇತನಗಳಿಗಾಗಿ ದರಖಾಸ್ತು ಮಾಡಿಕೊಳ್ಳತಕ್ಕದ್ದೆಂದು ಕೋರಿದೆ. ಅಂಥವರು ತಮ್ಮ ಯೋಗ್ಯತಾ ಪತ್ರಗಳ ವಿಷಯವಾಗಿ ತಿಳಿಸಲು ಬೆಂಗಳೂರು ಕ್ರೆಸೆಂಟಿನಲ್ಲಿರುವ "ಬೆಡ್‌ಫರ್ಡ್ ಹೌಸ್" ಎಂಬ ಬಂಗಲೆಯಲ್ಲಿ ಆಫೀಸು ಮಾಡಿಕೊಂಡಿರುವ ಕೈಗಾರಿಕೆಗಳ ಮತ್ತು ವ್ಯಾಪಾರದ ಕಮಿಟಿ ಸೆಕ್ರೆಟರಿಯವರಿಗೆ ದರಖಾಸ್ತು ಮಾಡಿಕೊಳ್ಳತಕ್ಕದ್ದು.

ಸಿ. ರಂಗನಾಥರಾವ್ ಸಾಹೇಬ್,

ಸೆಕ್ರೆಟರಿ.

ಮೈಸೂರು ಸಂಪದಭಿವೃದ್ಧಿ ಸಮಾಜ.

ಕೈಗಾರಿಕೆ ಮತ್ತು ವ್ಯಾಪಾರದ ಕಮಿಟಿಯಿಂದ.

ಕೈಗಾರಿಕೆಗಳಿಗೆ ಅಥವಾ ವ್ಯಾಪಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ತಿಳುವಳಿಕೆಯನ್ನು ಪಡೆಯುವ ಉದ್ದೇಶದಿಂದ ಅನ್ಯದೇಶಗಳಿಗೆ ಹೋಗ ಬಯಸುವರು ದರಖಾಸ್ತು ಮಾಡಿಕೊಳ್ಳತಕ್ಕದ್ದೆಂದು ಅಪೇಕ್ಷಿಸುತ್ತೇವೆ.

ಅನ್ಯದೇಶಗಳಿಗೆ ಪ್ರಯಾಣಮಾಡುವಂತೆ ಜನಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಸರ್ಕಾರದವರು ಮಂಜೂರುಮಾಡಿರುವ ರಿಯಾಯಿತಿಗಳನ್ನು ಇತರ ತಿಳುವಳಿಕೆಗಳನ್ನು ಕೈಗಾರಿಕೆಗಳ ಮತ್ತು ವ್ಯಾಪಾರದ ಕಮಿಟಿಯ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು. ಅವರ ವಿಳಾಸವೇನೆಂದರೆ—

ಕೈಗಾರಿಕೆಗಳ ಮತ್ತು ವ್ಯಾಪಾರದ ಕಮಿಟಿಯ ಸೆಕ್ರೆಟರಿ,

[97-1] "ಬೆಡ್‌ಫರ್ಡ್ ಹೌಸ್," ಬೆಂಗಳೂರು.

ಇವನ್ನು ತರಿಸಿಕೊಳ್ಳುವವರಿಗೆ ಶೀಘ್ರ 1916 ರ ಕ್ಯಾಲೆಂಡರ್ ಇನಾಮು

ವಿಚಿತ್ರ ಗೋಲ್ಡ್ ಪಾಕೆಟ್ ದೀಪ.

ಕ್ರಯ ರೂ. 2-0-0 ಮಾತ್ರ.

ಈ ವಿಚಿತ್ರ ಜೇಬು ದೀಪಗಳು ಇಂಗ್ಲಾಂಡ್ ದೇಶದ ಶಾಸ್ತ್ರಜ್ಞರಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟು ಈಗತಾನೇ ನಮ್ಮ ಹಿಂದೂ ದೇಶಕ್ಕೆ ಕಳುಹಿಸಿರುತ್ತಾರೆ.

ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಪ್ರಕಾಶವಾಗುವ ಸಾಧನವಾಗಿರುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿ ಕಡ್ಡಿ, ಎಣ್ಣೆ, ಯಾವದೂ ಅವಶ್ಯಕವಿಲ್ಲ. ದಿವಸದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ಹತ್ತಿಕೊಳ್ಳುತ್ತೆ. ಅದನ್ನು ಮುಚ್ಚಿದರೆ ತಾನೇ ಆರುತ್ತದೆ. ಈ ದೀಪ ಒಂದನ್ನು ತರಿಸಿಕೊಂಡರೆ ಜಾಮದಾಗ ವಿಶೇಷ ಅವರ ಕವರ್ ಬರುವುದಿಲ್ಲ. ಸರ್ವರಿಗೂ ಇದು ಬಹಳ ಉಪಯೋಗ. ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿ ಇರಬೇಕು. [63-6]

ಈ ಕೆಳಗೆ ಕಂಡ ನಗಗಳು ಆಸ್ಟ್ರೇಲಿಯಾ ಚಿನ್ನ ಗಿಲ್ಟ್ ಮಾಡಿದವು. ಇವು ಎಂದಿಗೂ ಕೆಡುವುದಿಲ್ಲ. ಅವು ಎಲ್ಲರೂ ಧರಿಸಿಕೊಳ್ಳಬಹುದು.

ಸುಂದರವಾದ ಕಾಲು ಕಡಗ.

ದೊಡ್ಡವರಿಗೆ ಚಿಕ್ಕವರಿಗೆ ಹುಡುಗರಿಗೆ ಮಕ್ಕಳಿಗೆ

1-8-0 1-3-0 0-14-0 0-10-0



ಸೊಗಸಾದ ಎಲೆಕ್ಟ್ರೋ ಪ್ಲೇಟ್ ಬಲವಾದ ತಂಚಾವೂರು ಗೆಜ್ಜೆ ಅಡ್ಡಿಗೆ. ಇದು ಚಿಕ್ಕವ ನಾಗರಿ ದೊಡ್ಡವರಿಗಾಗಲಿ ಹಿತಕರವಾಗಿರುತ್ತೆ. ಕ್ರಯ 0-8-0.

ವಿಳಾಸ—ರಾಮಚಂದ್ರ ಅಂಡ್ ಕಂಪೆನಿ,

16, ತಿರುಪಳ್ಳಿ ಬೀದಿ, ಮದರಾಸು.

ಮೈಸೂರು ಸರ್ಕಾರಿ ಪ್ರಕಟನೆ.

ಸನ್ 1916 ನೇ ಇಸವಿ ಏಪ್ರಿಲ್ ಗುರ್ತಿ ಲಾಗಾಯ್ತು ಬೆಂಗಳೂರಿನಲ್ಲಿರುವ ಮೈಸೂರು ಸರ್ಕಾರು ಸರ್ವ ವಸ್ತು ಪ್ರದರ್ಶನ ಶಾಲೆಯು [ಮ್ಯೂಜಿಯಂ-ತಮಾಷ ಬಂಗಲೆಯು] ನೋಟಕರ ಸೌಕರ್ಯಕ್ಕೋಸ್ಕರ ಪ್ರತಿ ಭಾನುವಾರವೂ ತೆರೆಯಲ್ಪಡುತ್ತದೆ. ಇದಕ್ಕೆ ಬದಲಾಗಿ ಪ್ರತಿ ಬುಧವಾರವೂ ಮುಚ್ಚಲ್ಪಡುತ್ತದೆ.

ಬೆಂಗಳೂರು, ಎಲ್. ಬಿಷ್ಟೋಪಂತ್ ಬಾದಾಮಿ,

ತಾ|| 28-3 1916. ಆಕ್ಟಿಂಗ್ ಸೂಪರಿಂಟೆಂಡೆಂಟ್,

[95-1] ಮೈಸೂರು ಗೌರ್ನಮೆಂಟ್ ಮ್ಯೂಜಿಯಂ.

ಉಗಾದಿ ಬಹುಮಾನ. ಗಡಿಯಾರ ಇನಾಂ. ಉಗಾದಿ ಬಹುಮಾನ.

ಸುಂದರವಾದ ಅಮೇರಿಕನ್ ವಾಚ್.

ಕ್ರಯ ರೂಪಾಯಿ 3-0-0.

ಈ ಗಡಿಯಾರವನ್ನು ಅಮೇರಿಕಾ ದೇಶದಲ್ಲಿ ಹೊಸದಾಗಿ ತಯಾರಿಸಿ ಕಳುಹಿಸುತ್ತಾರೆ. ಈ ಗಡಿಯಾರ ಅಂದರ್ ಕೇಸ್ ಬಲಿಷ್ಠವಾದ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಅಮೇರಿಕಾ ದೇಶದ

ಕೆಲಸವು ಬಹು ನಾಜೂಕಾಗಿ ಮಾಡಲ್ಪಟ್ಟಿದೆ. ಈ ಸೊಗಸಾದ ಗಡಿಯಾರವನ್ನು ಕೊಂಡು ಸಂತೋಷಪಡಬಹುದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಫೌಂಟನ್ ಪೆನ್ನನ್ನು ಮೇಲ್ಕಂಡ ವಾಚ್‌ಗೆ ಇನಾಮು ಕಳುಹಿಸುವೆವು.

ಫೈಯರ್‌ಲೆಸ್ ಫೌಂಟನ್ ಪೆನ್

ವಾಚ್ ಫೌಂಟನ್ ಪೆನ್ ಸೇರಿ

ಕ್ರಯ ರೂ. 3 ಮಾತ್ರ.

ಈ ಸಣ್ಣಯಲ್ಲಿ ತೋರಿಸಿರುವ ಹೊಸ ನಮೂನೆ ಫೌಂಟನ್ ಪೆನ್ ಇಂಗ್ಲೆಂಡಿನಿಂದ ತರಿಸುತ್ತೇವೆ. ಪೆಟ್ಟಿಗೆಯ ಮೇಲೆ ನಮ್ಮ ಕಂಪನಿ ಹೆಸರು ಗಿಲೀಟು ಅಕ್ಷರಗಳಿಂದ ಹಾಕಿರುತ್ತೆ. ಇದಕ್ಕೆ ಒಂದು ಸಾರಿ ಇಂಕಿಯನ್ನು ಹಾಕಿದರೆ ಅನೇಕ ದಿವಸಗಳವರೆಗೂ ಬರೆಯಬಹುದು. ಕ್ಯಾಪ್ ಟಿನ್ನಿನ ಮುಳ್ಳು ಹಾಕಿರುತ್ತೆ. ಇದು ನೋಡುವದಕ್ಕೆ ಹೊಸ ನಮೂನೆಯಾಗಿಯೂ ಬರೆಯುವದಕ್ಕೆ ಸುಲಭವಾಗಿಯೂ ಇದೆ. 1 ಸಲ ಈ ಪೆನ್ನನ್ನು ಬರೆದವರು ಪುನಃ ಯಾವ ಪೆನ್ನನ್ನೂ ಉಪಯೋಗಿಸಲಾರರು. ನಮ್ಮ ಕಂಪೆನಿ ಪ್ರತ್ಯೇಕವಾಗಿ ಬೇಕೆಂಬ ಉದ್ದೇಶದಿಂದ ಬಹುಮಾನ ಸಹಿತ ಕಳುಹಿಸುತ್ತೇವೆ. ಈ ಲಾಭಕರವಾದ ಸಮಯವನ್ನು ಬಿಟ್ಟರೆ ಮರುಸಮಯ ಸಿಕ್ಕುವದು ಕಷ್ಟ.

ವಿಳಾಸ.—ವಿ. ಎ. ಎಸ್. ಪಾಣಿ ಅಂಡ್ ಕಂಪೆನಿ,

[63-6] 3, ಇರುಳಪ್ಪನ ಬೀದಿ, ಮದರಾಸ್.

"ಹನುಮಾರ್" ಬೋರಾಕ್ಸ್ ... ಬೂನು.

ಹನುಮಾರ್ ಬೋರಾಕ್ಸ್ ಸಾಬೂನು ಬೋರಾಕ್ಸ್‌ನಿಂದ ಮಾಡಲ್ಪಟ್ಟಿರುವುದರಿಂದ ಸಂಜೀವಿನಿಗೆ ಸಮಾನವಾದ ಪತ್ರಗಳು ಸೇರಿವೆ. ಚರ್ಮ ಸಂಬಂಧವಾದ ತುರಿಕೆ, ಕಜ್ಜಿ, ಹುರಿ ಮೊದಲಾದ ವ್ಯಾಧಿಗಳು ಹನುಮಾರ್ ಸಾಬೂನನ್ನು ಪ್ರತಿ ದಿವಸವೂ ಉಪಯೋಗಿಸುವುದರಿಂದ ಆಶ್ಚರ್ಯಕರವಾಗಿ ಗುಣವಾಗುವುವು. ಕೂದಲಿಗೆ ನುಣುಪು ಮತ್ತು ಕಳೆಯನ್ನು ಕೊಡುವುದರಲ್ಲಿ ಹನುಮಾರ್ ಸಾಬೂನಿಗೆ ಸಮಾನವಾದುದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾರ್ ಸಾಬೂನಿನಿಂದ ಬೆಳಿಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನು ತೇಜಸ್ಸನ್ನು ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟು ಮಾಡುತ್ತೆ.—ಕ್ಷೌರ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಚ್ಚುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ಎಣೆಯಿಲ್ಲದ ಸಾಬೂನೂ ಇಲ್ಲ.—ಹುಡುಗರು, ಹುಡುಗಿಯರು, ಯೌವನಸ್ಥರು ಮತ್ತು ವೃದ್ಧರು ಭೇದವಿಲ್ಲದಂತೆ ಸದಾಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ ಸಾಬೂನನ್ನು ಉಪಯೋಗಿಸಿದರೆ ಯಾವ ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ಹೇಳಬಹುದು.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಹಣುಗಳಲ್ಲಿಯೂ ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾರ್ ಗುರ್ತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಸೂ. ಕ:—ಎಲ್ಲರೂ ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆಯಬೇಕು. ಬೆಂಗಳೂರು ಸಿಟಿ ಪೇ|| ಎಚ್. ರಾಮಣ್ಣನವರಲ್ಲಿ ವಿಕರಿಗೆ ಇಟ್ಟಿದೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-26] ಈವನಿಂಗ್ ಬಜಾರ್ ರೋಡ್, ಮದರಾಸ್.

ಆಕಾರದಲ್ಲಿ ಅಂದ! ನೋಟಕ್ಕೆ ಚಂದ! ಮನಸ್ಸಿಗೆ ಆನಂದ! ಸಾವಿರಾರು ವಿಕ್ರಯ

ಕ್ಯಾರಟ್ ಗಿಲ್ಟ್ ಮಾಡಿದ ನಿಬ್ಬು ಹಾಕಿರತಕ್ಕ ಶಾಯಿತುಂಬಿ ಬರೆಯುವ ಲೇಖಣಿಗಳು.

1 ನೇ ನಂಬರ್ ಫೌಂಟನ್ ಪೆನ್ 1 ಕ್ಕೆ	ಕ್ರಯ	ರೂ. 0– 6–0
2 ನೇ ನಂಬರ್ ಫೌಂಟನ್ ಪೆನ್ 1 ಕ್ಕೆ	ಕ್ರಯ	,, 0– 8–0
3 ನೇ ನಂಬರ್ ಫೌಂಟನ್ ಪೆನ್ 1 ಕ್ಕೆ	ಕ್ರಯ	,, 0–12–0
4 ನೇ ನಂಬರ್ ಫೌಂಟನ್ ಪೆನ್ 1 ಕ್ಕೆ	ಕ್ರಯ	,, 1– 0–0
5 ನೇ ನಂಬರ್ ಫೌಂಟನ್ ಪೆನ್ 1 ಕ್ಕೆ	ಕ್ರಯ	,, 1– 8–0
6 ಪೆನ್‌ಗಳು ಜೇಬಿನಿಂದ ಬೀಳದಂತೆ ಕಾಪಾಡುವ ನಿಕ್ಕಲ್ ಕ್ಲಿಪ್ 1 ಕ್ಕೆ	ಕ್ರಯ	,, 0– 2–0

ಮೇಲ್ಕಂಡ ಪೆನ್‌ಗಳಲ್ಲಿ 6 ಪೆನ್ ತರಿಸಿಕೊಳ್ಳುವರಿಗೆ 1 ಪೆನ್ ಇನಾಂ. ಮೇಲ್ಕಂಡ ಪೆನ್‌ಗಳಿಗೆ 1 ರಿಂದ 6 ರವರೆಗೂ ಪೋಸ್ಟೇಜು 4 ಆಣೆ ಬೀಳುತ್ತೆ. 12 ಪೆನ್ ಒಂದೇ ಸಾರಿ ತರಿಸಿಕೊಳ್ಳುವವರಿಗೆ 2 ಪೆನ್ ಇನಾಂ ಕೊಡುವುದಲ್ಲದೆ ಪ್ಯಾಕಿಂಗ್ ಪೋಸ್ಟೇಜು ಸಹಾ ಮಾಫೀ ಮಾಡಿದೇವೆ.

14 ಕ್ಯಾರಟ್ ಬಂಗಾರದ ನಿಬ್ಬು ಹಾಕಿರುವ ಶಾಯಿತುಂಬಿ ಬರೆಯುವ ಲೇಖಣಿಗಳು.

200 ನೇ ನಂಬರ್ ನೆಪ್ಚೂನ್ ಫೌಂಟನ್ ಪೆನ್ 1 ಕ್ಕೆ	ಕ್ರಯ	ರೂ. 1–14...
205 ನೇ ನಂಬರ್ ನೆಪ್ಚೂನ್ ಫೌಂಟನ್ ಪೆನ್ 1 ಕ್ಕೆ	ಕ್ರಯ	,, 2–10...
210 ನೇ ನಂಬರ್ ನೆಪ್ಚೂನ್ ಫೌಂಟನ್ ಪೆನ್ 1 ಕ್ಕೆ	ಕ್ರಯ	,, 4– 8...
ವಾಟರ್‌ಮೆನ್ ಐಡಿಯಲ್ ಫೌಂಟನ್ ಪೆನ್‌ಗಳಲ್ಲಿ 2-17-22ನೇ ಯಾವ ನಂಬರ್ ಪೆನ್ ಬೇಕಾದರೂ		,, 7–14...
ಸ್ವಾನ್ ಕಂಪೆನಿಯವರಿಂದ ತಯಾರಿಸಲ್ಪಟ್ಟ ಬ್ಲಾಕ್ ಬರ್ಡ್ ಫೌಂಟನ್ ಪೆನ್ 1 ಕ್ಕೆ	ಕ್ರಯ	,, 3–12...
ಸ್ವಾನ್ ಫೌಂಟನ್ ಪೆನ್ 1 ಕ್ಕೆ	ಕ್ರಯ	,, 7–14...
ಸ್ವಾನ್ ಸೇಫ್ಟೀ ಫೌಂಟನ್ ಪೆನ್ 1 ಕ್ಕೆ	ಕ್ರಯ	,, 9– 8...
ಆಟೋಮೆಟಿಕ್ ಸೆಲ್ಫ್ ಫಿಲ್ಲಿಂಗ್ ಫೌಂಟನ್ ಪೆನ್ 1 ಕ್ಕೆ	ಕ್ರಯ	,, 15–12...

ಈ ಪೆನ್‌ಗಳ ಪೈಕಿ ಯಾವುದನ್ನು ತರಿಸಿಕೊಂಡರೂ ನಿಕ್ಕಲ್ ಕ್ಲಿಪ್ ಒಂದನ್ನು ಬಹುಮಾನವಾಗಿ ...

[83-6] ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು

ಒಂದು ರೀಡಿಂಗ್ ರೂಮ್ ಏರ್ಪಾಡು.

ಬೆಳ್ತಂಗಡಿ ತಾಲ್ಲೂಕು ದೇವನಸಮುದ್ರದ ಸಮ್ಮತು ನುಡುವಡಿ ಗ್ರಾಮದಲ್ಲಿ ನಮ್ಮ ಅಮಲ್ದಾರ್ ಮ|| ಜಿ. ಮುರುಡಯ್ಯನವರ ಪ್ರೋತ್ಸಾಹದಿಂದ ಗ್ರಾಮಾಭಿವೃದ್ಧಿಯ ಏರ್ಪಾಡಿನಲ್ಲೊಂದಾದ ರೀಡಿಂಗ್ ರೂಂ ವಾಚಕಮಂದಿರವು ಈ ಗ್ರಾಮದ ಏ. ವಿ. ಸ್ಕೂಲ್ ಕಟ್ಟಡದಲ್ಲಿ ಮಾರ್ಚಿ ತಾ. 30 ನೇ ಗುರುವಾರ ಹಗಲು 7 ಘಂಟೆಯಲ್ಲಿ ನೂತನ ಪ್ರಾರಂಭೋತ್ಸವವು ಇಲ್ಲಿಗೆ ದಯಮಾಡಿಸಿದ್ದ ನಮ್ಮ ವಿದ್ಯಾಭಿಮಾನಿಗಳಾದ ಮ|| ಪಿ. ವೆಂಕಟರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಹಾಲಿ ಬೇರೆ ಕಟ್ಟಡವು ಇಲ್ಲದಿರುವುದರಿಂದ ಈ ವಾಚಕಶಾಲೆಯನ್ನು ಸ್ಕೂಲಿನಲ್ಲಿಯೇ ಮಾಡಿದೆ. ಆ ದಿನ ಕಟ್ಟಡವು ಸ್ಕೂಲ್ ಬಾಲಕಬಾಲಿಕೆಯರುಗಳಿಂದಲೂ ತಳಿರುತೋರಣಗಳಿಂದಲೂ ಅಲಂಕೃತವಾಗಿ ಈ ಗ್ರಾಮದ ರೈತಮಂಡಲಿಯವರೂ ವರ್ತಕರೂ ಸೇರಿ ಪ್ರಾರಂಭದಲ್ಲಿ ದೇವರ ಪ್ರಾರ್ಥನೆಮಾಡಿದರು. ಮ|| ವೆಂಕಟರಾಯರು ಈ ವಾಚಕಶಾಲೆಯ ಪ್ರಯೋಜನವನ್ನು ಕುರಿತು ಸಮ್ಮಗಳಿಗೆ ತಿಳಿಯುವಂತೆ ಚೆನ್ನಾಗಿ ಗಂಭೀರ ವಾಕ್ಯಗಳಿಂದ ಉಪನ್ಯಾಸಮಾಡಿದರು. ರೈತರೇ ಮೊದಲಾದ ಸರ್ವರೂ ಬಿಡುವು ಕಾಲಗಳಲ್ಲಿ ಇಂಥಾ ವಾಚಕಮಂದಿರಕ್ಕೆ ಸೇರಿ ಪರಸ್ಪರ ಸಹಾಯಕರಾಗಿ ಗ್ರಾಮಾಭಿವೃದ್ಧಿ ವಿಚಾರದಲ್ಲೂ ವಿದ್ಯಾಭ್ಯಾಸದ ವಿಚಾರದಲ್ಲೂ ಸಂಭಾಷಣೆ ಬೆಳಸುವುದರ ಮೂಲಕ ತಮ್ಮಗಳಿಗುಂಟಾಗಿರುವ ಬೇನೆಯನ್ನು ಕಳೆದುಕೊಳ್ಳುತ್ತಾ ಸದ್ವ್ಯಾಪಾರದಲ್ಲಿರಬೇಕೆಂಬುವುದೇ ಈ ಸಂಘದ ಮುಖ್ಯೋದ್ದೇಶವಾಗಿರುತ್ತೆ.

ಸಿ. ನರಸಿಂಗರಾವ್, ಗೌ. ಸೆಕ್ರೆಟರಿ.

ಮಲೆನಾಡಿನ ದೀನಜನ ಸೇವಾ ಸಂಘಗಳಿಗೆ ಪ್ರಜೆಗಳ ಸಹಾಯ ಬೇಕು.

ಮಲೆನಾಡಿನಲ್ಲಿ ಮಲೇರಿಯಾ ಜ್ವರದ ಹಾವಳಿಯು ಜಾಸ್ತಿಯಾಗಿರುವದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಈ ರೋಗದಿಂದ ಬಹು ಮಂದಿ ಪ್ರಜೆಗಳು ಮೃತಪಟ್ಟು, ಮಲೆನಾಡಿನ ಕ್ಷೀಣತೆಗೆ ಇದೊಂದು ಮುಖ್ಯ ಕಾರಣವೆಂದು ಹೇಳಬಹುದು. ಈ ಜ್ವರದ ನಿವಾರಣೆಗಾಗಿ ಅನೇಕ ಕಡೆಗಳಲ್ಲಿ ಸರ್ಕಾರದ ಮೂಲಕವಾಗಿ ಕ್ವಿನೈನ್ ಎನ್ನುವ ಔಷಧಿಯನ್ನು ಹಂಚುತ್ತಿದ್ದಾರೆ. ಮಲೆನಾಡಿನ ಅಭಿವೃದ್ಧಿಯ ಶಾಖೆಯವರು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಈ ಕೆಲಸಕ್ಕೆ ಮಾತ್ರವೇ ಎರಡು ಸಾವಿರ ರೂಪಾಯಿಗಳ ನೆರವಿನಿಂದ ಖರ್ಚು ಮಾಡುತ್ತಿದ್ದಾರೆ. ಆದರೆ ಎಲ್ಲಾ ಗ್ರಾಮಗಳಲ್ಲಿಯೂ ಈ ಔಷಧಿಯು ರೈತರ ಕೈಸೇರುತ್ತದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಪ್ರಕೃತ ಅಮಲ್ದಾರರ ಮುಖಾಂತರ ಈ ಔಷಧಿಯು ಹೆಚ್ಚಾಗಿ ಹಂಚಲ್ಪಡುತ್ತಿದೆ ಈ ಉದ್ದೇಶದಿಂದಲೇ ಅವರು ಕೈ ಕೆಳಗಿನ ಉದ್ಯೋಗಸ್ಥರ ಮುಖೇನವಾಗಲೀ, ಗ್ರಾಮಾಂತರಗಳ ಪಟೇಲ ಶ್ಯಾನುಭೋಗರ ಮುಖೇನವಾಗಲೀ ಔಷಧವನ್ನು ಹಂಚುತ್ತಿದ್ದಾರೆ. ಕೇವಲ ಬಡವರಿಗಾಗಿ ಈ ಔಷಧವನ್ನು ಉದ್ದೇಶಿಸಿದ್ದರೂ ಕೆಲವು ಇದು ಅಂಥವರ ಕೈಸೇರವಾಗುತ್ತದೆಯೋ, ಅಥವಾ ಕೇವಲ ಬಲಾತ್ಕಾರರೂ ಧನಿಕರೂ ಆದವರ ಪಾಲಾಗುತ್ತದೆಯೋ ಎನ್ನುವದು ಒಂದು ದೊಡ್ಡ ಸಂದೇಹಕ್ಕೆ ಕಾರಣವನ್ನುಂಟುಮಾಡಿರುತ್ತದೆ. ಕ್ವಿನೈನ್ ಮಾತ್ರೆಗಳಿಗಾಗಿ ಬಂದವರನ್ನು "ಸ್ವಲ್ಪ ನಿಲ್ಲು" "ಪುನಃ ಬಾ" "ಈಗ ಪುರಸತ್ತಿಲ್ಲ" "ಸ್ವಲ್ಪ ಕೆಲಸ ಮಾಡಿ ಹೋಗು" ಎಂದು ಹೇಳಿ ಕಾಲವಿಳಂಬದಿಂದ ರೋಗಿ ಹಸ್ತನನ್ನಾಗಿ ಕಳುಹಿಸುವದರಿಂದ ಉಂಟಾಗುವ ಹಾನಿಯನ್ನು ಗ್ರಾಮಾಂತರಗಳಲ್ಲಿ ಅನೇಕ ಕಡೆ ಜನಗಳು ಅರಿತಂತೆ ತೋರುವದಿಲ್ಲ. ಇದಲ್ಲದೆ ಔಷಧದಿಂದ ಉಂಟಾಗಬಹುದಾದ ಮಹತ್ತರವಾದ ಗುಣವನ್ನು ಸರ್ವರೂ ಅರಿತಂತೆಯೂ ತೋರುವದಿಲ್ಲ; ಅರಿತವರಿಗೂ ಸುಲಭವಾಗಿ ಈ ಔಷಧವು ದೊರಕುವದು ದುರ್ಲಭ. ಈ ಅನಾನುಕೂಲಗಳನ್ನು ನಿವಾರಣೆ ಮಾಡಲಿಕ್ಕೆ ಕೆಲವು ಉಪಾಯಗಳನ್ನು ಹುಡುಕಬೇಕಾಗಿದೆಯಲ್ಲವೇ? ಸರ್ಕಾರದ ಸದುದ್ದೇಶಗಳು ಪ್ರಜೆಗಳ ಸಹಾಯವಿಲ್ಲದೆ ಎಂದಿಗೂ ಫಲಕಾರಿಯಾಗಲಾರವು. ತತ್ರಾಪಿ ಸರ್ಕಾರದಿಂದ ನಡೆಯಲ್ಪಡುತ್ತಿರುವ ವಿಶೇಷ ಏರ್ಪಾಡುಗಳಿಗೆ ಪ್ರಜೆಗಳ ವಿಶೇಷ ಸಹಾಯವು ಬೇಕಾಗಿಯೇ ಇರಬೇಕು. ಅದಕ್ಕೋಸ್ಕರ ಮಹನೀಯರಾದ ಪ್ರಜಾಭಿಮಾನಿಗಳು ಬಡವರಿಗಾಗಿ ಸ್ವಲ್ಪ ದೇಹಶ್ರಮವಾದರೂ ಲಕ್ಷ್ಯವಿಡದೆ ತಮ್ಮ ತಮ್ಮ ಎಡೆ ಬಲ ಗ್ರಾಮಗಳಲ್ಲಿ ಕ್ವಿನೈನ್ ಮಾತ್ರೆಗಳನ್ನು ಹಂಚುವ ಭಾರವನ್ನು ವಹಿಸಿಕೊಳ್ಳಬೇಕಲ್ಲದೆ ಹೀಗೆ ಹಂಚಿದ ಮಾತ್ರೆಗಳ ಸಂಖ್ಯೆ, ಪಡೆದ ಜನಗಳ ಸಂಖ್ಯೆ, ಕಾಯಿಲೆ ಗುಣವಾದ ಪಕ್ಷದಲ್ಲಿ ಅದರ ತಪಸೀಲು, ಇವೆಲ್ಲವನ್ನೂ ಸರ್ಕಾರದವರಿಗೆ ಆಗಾಗ ಒಂದು ಪಟ್ಟಿಯ ರೂಪವಾಗಿ ತಯಾರು ಮಾಡಿ ಕಳುಹಿಸಬೇಕು. ಇದು ಸ್ವಲ್ಪ ಶ್ರಮಕ್ಕೆ ಕಾರಣವಾದೀತು. ಆದರೆ ದೇಶೀಯರಾದ ಮಹಾಶಯರು ಇಂಥಾ ಶ್ರಮವನ್ನು ಲಕ್ಷ್ಯಕ್ಕೆ ತಾರದೆ ಈ ಮಹದುಪಕಾರವಾದ ಕಾರ್ಯವನ್ನು ತಾವಾಗಿಯೇ ವಹಿಸಿಕೊಳ್ಳಬೇಕು. ಸುಮ್ಮನೆ ತಾತ್ಕಾಲಿಕ ಉಪಕಾರಕ್ಕಾಗಿ ಪಡೆದುಕೊಳ್ಳುವುದರಿಂದ ಪ್ರಜೆಗಳಿಗೆ ಪ್ರಯೋಜನ ಉಂಟಾಗದಿದ್ದರೆ ಸಮರ್ಪಕವೆನ್ನಿಸಿಕೊಳ್ಳುವದಿಲ್ಲ. ಮುಖ್ಯ ಪರೋಪಕಾರ ನಿರತರಾಗಿ ತಮ್ಮ ತನು ಮನ ಶ್ರಮವನ್ನು ಲಕ್ಷ್ಯಿಸದೆ ಇದೊಂದು ಮಹತ್ತರವಾದ ಮತ್ತು ಗೌರವವಾದ ಕೆಲಸವೆಂದೆಣಿಸಿ ಕೆಲವು ಮಲೆನಾಡಿನ ಕಡೆಗಳಲ್ಲಿ ಯಾದರೂ ಪುಣ್ಯಾತ್ಮರು ಮುಂದರಿದು ಬಂದಲ್ಲಿ ಮಲೆನಾಡಿನ ಬಡ ಪ್ರಜೆಗಳ ಏಳಿಗೆಗೆ ಸರ್ಕಾರದವರು ಮಾಡುತ್ತಿರುವ ವಿಶೇಷ ಪ್ರಯತ್ನಗಳು ಫಲಕಾರಿಗಳಾಗುವವು. ಅದಕ್ಕಾಗಿ ಅಲ್ಲಲ್ಲಿಯೇ ಮಲೆನಾಡು ಗ್ರಾಮಾಂತರಗಳಲ್ಲಿ ಮಲೇರಿಯ ಸಂಹಾರಕ ಸಂಘಗಳೆಂತಾಗಲಿ ಅಥವಾ ದೀನ ಜನ ಸೇವಾ ಸಂಘಗಳೆಂತಾಗಲಿ ಕಲ್ಪಿಸಿಕೊಂಡರೆ ಉತ್ತಮ. ಇಂಥಾ ಸಂಘಗಳ ಮೆಂಬರುಗಳು ಪ್ರತಿಯೊಬ್ಬರೂ ಹಲವು ಗ್ರಾಮಗಳಿಗೆ ತಪ್ಪದೆ ವಾರಕ್ಕೊಮ್ಮೆ ಹೋಗಿ ಅಲ್ಲಿನ ಜನಗಳ ಆರೋಗ್ಯಭಾಗ್ಯವನ್ನು ವಿಚಾರಿಸಿಕೊಂಡು ರೋಗಗ್ರಸ್ತರಾದವರಿಗೆ ಔಷಧವನ್ನಿತ್ತು ಉಪಚರಿಸಿ ಧನ್ಯಾತ್ಮರಾಗಬೇಕು. ಹಾಗಲ್ಲದಿದ್ದರೆ ಸರದಿಯ ಮೇಲೆ ಪ್ರತಿಯೊಬ್ಬ ಮೆಂಬರೂ ವಾರಕ್ಕೊಮ್ಮೆ ಒಂದು ಗ್ರಾಮಕ್ಕಾದರೂ ಹೋಗಿ ಅಲ್ಲಿನ ಪ್ರಜೆಗಳಿಗೆ ಔಷಧವನ್ನು ಹಂಚುವ ಭಾರವನ್ನು ವಹಿಸಿಕೊಂಡರೂ ಸಾಕು. ಅಂತು ಕೇವಲ ಸರ್ಕಾರದವರಿಂದಲೇ ಯಾವ ಕೆಲಸವೂ ನಡೆಯಬೇಕೆನ್ನುವ ದುರಭಿಪ್ರಾಯವನ್ನು ತೊರೆದು ದೇಶದ ಉನ್ನತಿಯ ಮೇಲೆ ಗಮನಕೊಟ್ಟು ಸರ್ಕಾರದ ಸದುದ್ದೇಶಗಳನ್ನು ಸಫಲಮಾಡಿದರೆ ಸಾಕಲ್ಲವೇ? ಕ್ಷಿಪ್ರದಲ್ಲಿಯೇ ಇಂಥಾ ಸಂಘಗಳು ಮಲೆನಾಡಿನ ಕೆಲವು ಕಡೆಗಳಲ್ಲಿ ಯಾವದಾದರೂ ಏರ್ಪಾಡಾದರೆ ಈ ಮಲೆನಾಡು ಪ್ರದೇಶವು ಸ್ವಲ್ಪವಾದರೂ ಉತ್ತಮ ಸ್ಥಿತಿಗೆ ಬರುತ್ತದೆ ಎನ್ನುವದರಲ್ಲಿ ಸಂದೇಹವಿಲ್ಲ. ಸರ್ಕಾರದವರಿಗೆ ಇಂಥಾ ಪರೋಪಕಾರಿಗಳ ಸಹಾಯವಾಗಬೇಕು. ತಾವಾಗಿಯೇ ಸೇರಿ ಸಂಘಗಳನ್ನು ಏರ್ಪಡಿಸಲಿಕ್ಕೆ ಸಾಧ್ಯವಿಲ್ಲದಿದ್ದರೆ ಒಬ್ಬೊಬ್ಬ ಮಹನೀಯರಾದರೂ ಅಲ್ಲಲ್ಲಿ ಮುಂದರಿದು ನಿಂತು ಸ್ವಲ್ಪ ಕಾಲವಾದರೂ ಈ ವಿಚಾರದಲ್ಲಿ ಪ್ರಯತ್ನಪಟ್ಟರಾದರೂ ಸಾಕು. ಈಶ್ವರನು ತನ್ನನ್ನೂ ತಮ್ಮ ಮನೋಭಾವವನ್ನೂ ನೋಡುತ್ತಿದ್ದಾನೆಂದು ಅರಿತು ಪರೋಪಕಾರಕ್ಕಾಗಿ ಸಹಿಸಿ ಮತ್ತು ವಹಿಸಿಕೊಂಡಿರುವ ಕೆಲಸವನ್ನು ತಮ್ಮ ಸ್ವಂತ ಕೆಲಸಕ್ಕಿಂತಲೂ ಹೆಚ್ಚಾದ ಶ್ರದ್ಧೆಯಿಂದ ನೋಡುವದು. ಮಹನೀಯರು ಮಲೆನಾಡಿನ ಅಭಿವೃದ್ಧಿಯ ಶಾಖೆಯ ಅಧಿಕಾರಿಗಳಾಗಲೀ, ಅಮಲ್ದಾರರುಗಳಿಗಾಗಲೀ ಕೇಳಿ ಈ ಮಾತ್ರೆಗಳನ್ನು ಮತ್ತು ಸಾಧ್ಯವಾದರೆ ಇತರ ಔಷಧಗಳನ್ನೂ ತರಿಸಿ ಪುಣ್ಯಭಾಗಿಗಳಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವ

ಸೇವಕ.



ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-26]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,

ಎಗ್ಜ್ಯು ಮಿಕ್ಸ್ಚರ್ ಡಿಪೋ, ಬೊಂಬಾಯಿ. 4.

KARNIK Bros., BOMBAY, 4.

ನಮ್ಮ ಏಜಂಟರು.—ದಿ ಆಲ್ಬರ್ಟ್ ಮಾರ್ಟ್, ಮಂಗಳೂರು.

2 ನೇ ತರಗತಿ ಭೂವಿವರಣೆ.

ಚಿತ್ರಗಳು ಮತ್ತು ಭೂಪಟಗಳೊಡನೆ (ಕ್ರಯ 4 ಆಣೆ).

ಮೈಸೂರು ದೇಶದ ಭೂಪಟಗಳು.

(ಪ್ರಾಕೃತಿಕ ಮತ್ತು ರಾಜಕೀಯ) ಕ್ರಯ 2 ಆಣೆ.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ.

ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯ ಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ವಿಶ್ವಮಂಡಲದ ಭೂವಿವರಣೆ	...	0-6-0
2. ಪ್ರಾಕೃತಿಕ ಭೂಗೋಳ ಶಾಸ್ತ್ರ	...	0-6-0
ಮೇಲೆ ಕಂಡ ಎರಡೂ ಸೇರಿ	...	0-10-0

ಮೈಸೂರು ಭೂವಿವರಣೆ 2 ಆಣೆ ; The English L. S. Text Examiner for 1916 by a Graduate, Price 3 as.

ನಮ್ಮ ವಿಳಾಸ—ಎಸ್. ಆರ್. ವೆಂಕಟಸುಬ್ಬಾಚಾರ್ಯ,

[47-8] ಸುಬೋಧ ಗ್ರಂಥಾಲಯ, ಮೈಸೂರು.

ಜಾಮೀನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲ ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.

ಮತ್ತು

ಕೂದಲಿಗೆ ರೇಷ್ಮೆಯಂಥಾ ಹೊಳಪೂ ನುಣುಪೂ ಬರುತ್ತೆ.

ಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ಪೆಟ್ಟಿಗೆ, ಬ್ರಷ್ ಮತ್ತು ಬಟ್ಟಲು ಸಹಿತ ಕ್ರಯ ರೂ. 1-0-0; ಪೋಸ್ಟೇಜ್ ಬೇರೆ.

ಹೊಸ ನಮೂನೆ ರೋಮಹಾರಿ.

ಇದು ಬೇಡದ ಶರೀರ ಭಾಗದಲ್ಲಿ ಬೆಳೆದಿರುವ ಕೂದಲನ್ನು ಅಚ್ಚುಕಟ್ಟಾಗಿ ತೆಗೆಯುತ್ತೆ. ನೋಯುವುದಿಲ್ಲ; ಚರ್ಮಕ್ಕೆ ಕೆಡುಕಾಗದು. [282-18]

ಪೆಟ್ಟಿಗೆ ಒಂದಕ್ಕೆ ರೂ. 1-0-0 ; ಪೋಸ್ಟೇಜ್ ಬೇರೆ.

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು :—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,

177, ಚೀನಾ ಬಜಾರ್ ರೋಡ್, ಮದರಾಸ್.

ಅರ್ಧ ಕ್ರಯದ ಮಾರಾಟ!

ವಾಚ್ ಮತ್ತು ತಬಲ ಬಿಟ್ಟಿ!

ಒಂದು ತಿಂಗಳ ತನಕ ಮಾತ್ರ.



ತರಿಸಿ ನೋಡಿರಿ.

1 ಸುಧಾಕರ ಕಸ್ತೂರಿ ಮಾತ್ರೆಗಳು—ಜ್ವರ, ಅಗ್ನಿಮಾಂದ್ಯ, ಕೆಮ್ಮು, ಸೀತ, ಅಜೀರ್ಣ, ದೇಶ ಕಾಲ ವ್ಯತ್ಯಾಸಗಳಿಂದುಂಟಾಗುವ ವಿಕಾರಗಳು, ಮಕ್ಕಳ ಏಳತ, ಮಲಬದ್ಧ, ಇವುಗಳನ್ನು ಗುಣಪಡಿಸುತ್ತದೆ. ಡಪ್ಪಿ 1 ಕ್ಕೆ 4 ಆಣೆ ಮಾತ್ರ. 6 ಡಪ್ಪಿಗಳಿಗೆ ರೂ. 1-4-0. ಟಪಾಲು ಹಾಸಲು ಪ್ರತ್ಯೇಕ.

2 ಕಮಲಕೇಸರ ಘೃತ—ತಲೆನೋವೇ ಮೊದಲಾದ ಎಲ್ಲಾ ತರದ ನೋವುಗಳನ್ನೂ ಗುಣಪಡಿಸುವುದು. ಡಪ್ಪಿ 1 ಕ್ಕೆ 8 ಆಣೆ ಮಾತ್ರ.

3 ವಜ್ರದಂತಚೂರ್ಣ—ಇದನ್ನು ಪ್ರತಿ ದಿನವೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವುದರಿಂದ ಎಲ್ಲಾ ವಿಧವಾದ ದಂತ ರೋಗಗಳೂ ವಿಶೇಷವಾಗಿ ಹೋಗಿ ಹಲ್ಲುಗಳು ಮುತ್ತುಗಳಂತೆ ಥಳಥಳಿಸುವವು. ಟಿನ್ 1 ಕ್ಕೆ 2 ಆಣೆ ಮಾತ್ರ.

[71-5] ನಮ್ಮ ವಿಳಾಸ:—ಬಿ. ಎಸ್. ಕೌಶಿಕ,
240, ದಿವಾನರ ರೋಡು, ಮೈಸೂರು.

ನಿಮಗೆ ನಿಮ್ಮ ರಕ್ತದ ಚಿಂತೆಯುಂಟೇ?

ನಿಮ್ಮ ರಕ್ತದಿಂದಲೇ ನೀವು ಸುಖವಾಗಿರುವುದು; ನಿಮ್ಮ ರಕ್ತದಿಂದಲೇ ನೀವು ರೋಗಪೀಡಿತರಾಗಿ ನರಳುವುದು. ರಕ್ತಶುದ್ಧವಾಗಿದ್ದರೆ ಆರೋಗ್ಯ, ದೃಢತಾ ಯು, ದೀರ್ಘಾಯುಸ್ಸು, ಪೂರ್ಣಸುಖ—ಎಲ್ಲಾ ಉಂಟಾಗುತ್ತೆ. ರಕ್ತ ಕೆಟ್ಟರೆ ಕ್ರಮವಾಗಿ ನಿಮ್ಮ ದೇಹ ಕುಗ್ಗುತ್ತಾ, ಆಯುಸ್ಸು ಕ್ಷಯಿಸುತ್ತಾ, ಜೀವನವೇ ಅಸುಖವಾಗುತ್ತಾ ಬಂದೀತು. ಇಂಥಾ ಭಯಂಕರವಾದ ಸ್ಥಿತಿಯನ್ನು ತಪ್ಪಿಸಿಕೊಳ್ಳುವುದಕ್ಕೆ ನೀವುಗಳು ಖಂಡಿತವಾಗಿ ಉಪಯೋಗಿಸಬೇಕಾದದ್ದು ಒಂದೇ. ಅದ್ಯಾವುದೆನ್ನುವಿರೋ?

ಸುಧಾಸಾಗರ ಅವಲೇಹ.

ಈ ಅದ್ಭುತವು ದೇಹದ ಉಷ್ಣವನ್ನು ಶಮನಮಾಡುತ್ತೆ. ನಿಶ್ಶಕ್ತಿಯಾದ ಅಥವಾ ಕೆಟ್ಟರುವ ಜೀರ್ಣಕೋಶವನ್ನು ಬಲಪಡಿಸಿ ಬಹಳ ಬೇಗ ಹಸಿವೆಯನ್ನು ವೃದ್ಧಿಮಾಡುತ್ತದೆ. ಮತ್ತು ರಕ್ತಕೆಡೋಣದರಿಂದ ಉಂಟಾಗುವ ಎಲ್ಲಾ ತರದ ರೋಗಗಳನ್ನು ಅಡಗಿಸಿ ರಕ್ತವನ್ನು ಶುದ್ಧಿಮಾಡಿ ಉತ್ಕೃಷ್ಟವುದು.

ಬಾಟ್ಲಿ ಒಂದರ ಕ್ರಯ ರೂ. 1-8-0 ಮಾತ್ರ.

ನಮ್ಮ ವಿಳಾಸ—ರಾಜವೈದ್ಯ ನಾರಾಯಣಜಿ ಕೇಶವಜಿ,
[266-20] ಆಯುರ್ವೇದೋದಯ ಔಷಧಾಲಯ,
20, ಜೈನಾಬಜಾರ್ ರೋಡ್, ಮದರಾಸು.

ಸವಿನುಡಿ.

ಕನ್ನಡ ನುಡಿಯ ಮಾಸ ಪುಸ್ತಕಾವಳಿ.

ಇದರಲ್ಲಿ—ಚರಿತ್ರಾಮೃತ, ಸಾಂಸಾರಿಕ, ನೀತಿಮಯಿಕ, ಸಾಹಸಿಕ, ಪೌರಾಣಿಕ, ನವನ್ಯಾಸ (ನಾವಲುಗಳು), ದೇಶ ಚರಿತ್ರೆ, ಮಹಾಪುರುಷರ ಜೀವನ ಚರಿತ್ರೆ, ಸಮಯೋಚಿತವಾದ ಉಪನ್ಯಾಸಗಳು, ತಿಂಗಳಿಗೊಂದು ಪುಸ್ತಕದಂತೆ ಪ್ರಕಟವಾಗುವದು. ಪ್ರತಿ ಪುಸ್ತಕದಲ್ಲಿಯೂ ಆನಂದವಾದ ಒಂದು ಸಂಗತಿಯು ಮುಗಿದಿರುವುದು. ಮಾಸ ಪತ್ರಿಕೆಯಂತೆ ಅನೇಕ ಸಂಗತಿಗಳಿರುವುದಿಲ್ಲ. ಈಗ ಸಂಯುಕ್ತಾ, ಸಾವಿತ್ರೀ, ಸತೀದೇವಿ, ಚಂದ್ರಮತಿ, ಗಾಂಧಾರಿ, ದಮಯಂತಿ ಎಂಬ ಪುಸ್ತಕಗಳು ಸಿದ್ಧವಾಗಿವೆ. ವರುಷ ಚಂದಾ ಅಂಚೆ ವೆಚ್ಚ ಸೇರಿ

ಒಂದು ರೂಪಾಯಿ ಯೆಂಟಾಣೆ.

[4-15] ವಿಳಾಸ:—"ಸವಿನುಡಿ"ಯ ಸಂಪಾದಕ, ಕೋಟೆ, ಬೆಂಗಳೂರು

ಬಿಸಿಲು ಕಾಲಕ್ಕೆ ಮೂರು

ಮಹೌಷಧಗಳು.

ಅಮೃತಾಮಲಕ ತೈಲ.

ಈ ತೈಲವು ಕಣ್ಣು ಕೈಕಾಲುರಿ, ಬಿಸಿಲಿನ ತಲೆನೋವು, ಕಣ್ಣು ಮಂಜು, ಕಣ್ಣು ಕೆಂಗಣ್ಣು, ಮುಂತಾದ್ದನ್ನು 1-2 ಅಭ್ಯಂಗದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ವಿಶೇಷವಾಗಿ ಹೆಚ್ಚಿಸುತ್ತದೆ. ಬಿಸಿಲು ಕಾಲಕ್ಕೆ ಇದಕ್ಕಿಂತಲೂ ಉತ್ತಮವಾದುದು ಖಂಡಿತವಾಗಿಯೂ ಇಲ್ಲವೆಂಬುದನ್ನು ಅನುಭವದಿಂದ ತಿಳಿಯಿರಿ.

8 ಅಭ್ಯಂಗಕ್ಕೆ ಆಗುವ ತೈಲ 8 ಆಣೆ.

ಖಂಡಾಮಲಕ ರಸಾಯನ.

ಸಮಸ್ತ ಪಿತ್ತ ವಾತ ವಿಕಾರಗಳನ್ನೂ ತ್ವರಿತ ಗುಣಮಾಡಿ ಜೀರ್ಣಶಕ್ತಿಯನ್ನು ಸರಿಪಡಿಸಿ ರಾತ್ರಿ ಸುಖನಿದ್ರೆಯನ್ನುಂಟುಮಾಡಿ ಮಲವನ್ನು ಸಲೀಸಾಗಿ ಜಾರಿಸುವುದು. ಸೇವಿಸಲು ರುಚಿಯಾಗಿದೆ. 15 ದಿನದ ಔಷಧ 12 ಆಣೆ.

ಅಮೋದಿನಿ.

ಬಾಯಾಸಿಕೆಯನ್ನು ತಕ್ಷಣ ಅಡಗಿಸಿ-ಆಯಾಸವನ್ನು ಪರಿಹರಿಸಿ-ಸರ್ವರ ಮನಸ್ಸನ್ನು-ತನ್ನ ಅಪೇಕ್ಷಣವಾದ ಗುಣ ಮತ್ತು ಸುವಾಸನೆಗಳಿಂದ ಮೋಹಗೊಳಿಸುವ ಈ ರಸವನ್ನು ಈಗಲೇ ತರಿಸಿಕೊಳ್ಳಿರಿ-ಪೂರ್ವಕ್ಕಿಂತಲೂ ಎಷ್ಟೋ ಮನೋಹರವಾಗಿ ತಯಾರಿಸಲ್ಪಟ್ಟಿರುವುದು. 150 ಮಾತ್ರೆ ಸೀಸೆ 4 ಆಣೆ. [278-18]

ಎರಡು ರೂಪಾಯಿಗೆ ಕಡಮೆ ಇಲ್ಲದ ಔಷಧ ತರಿಸಿದರೆ ಟ.ಕ. ಮುಫತ್ತು.
ಆಯುರ್ವೇದ ವಿದ್ವಾನ್ ಬಿ. ಪಿ. ಪಂಡಿತ್, ನಂಜನಗೂಡು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನುಗಳನ್ನೂ, ಕಾಲುಚೀಲಗಳನ್ನೂ, ಬನೀನುಗಳನ್ನೂ ಮ್ಯಾನೇಜರವರಿಗೆ ಬರೆದು ತರಿಸಿಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[188-29] GIRLS' INDUSTRIAL SCHOOL, HASSAN.

ಸ್ವದೇಶ ಕೈಗಾರಿಕೆಗಳು.

ಅನೇಕ ಸ್ಥಳಗಳಲ್ಲಿ ಕೈಗಾರಿಕೆಗಳ ಕಾರ್ಖಾನೆಗಳನ್ನೂ, ಉಗಿಯಂತ್ರ ಶಕ್ತಿಯಿಂದ ಗೊಬ್ಬರವನ್ನು ತಯಾರಿಸ ಬಹುದಾದ ಕಾರ್ಖಾನೆಗಳನ್ನೂ ಏರ್ಪಡಿಸುವ ಉದ್ದೇಶದಿಂದ ನನ್ನ ದೇಶಬಾಂಧವರಿಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ ನಿಮ್ಮ ಸ್ಥಳದಲ್ಲಿ ಯಾವುದಾದರೂ ಕೈಗಾರಿಕೆಯನ್ನೇ ಆಗಲಿ, ಗೊಬ್ಬರದ ಕಾರ್ಖಾನೆಯನ್ನೇ ಆಗಲಿ ಇಡಬೇಕೆಂಬ ಯಾರಿಗಾದರೂ ತಾತ್ಪರ್ಯವಿದ್ದರೆ ಅಲ್ಲಿನ ಮುಖಂಡರು ಕಲೆತು ಮಾತನಾಡಿಕೊಂಡು ನನಗೆ ತಿಳಿಸಿದರೆ ನಾನು ಬಂದು ಗೊಬ್ಬರವನ್ನು ತಯಾರಿಸುವ ರೀತಿಯನ್ನು ತೋರಿಸಿ ಅನುಭವಪಡಿಸಿ ಕಾರ್ಖಾನೆಯನ್ನು ಏರ್ಪಡಿಸುವೆನು. ಕೆ. ಆರ್. ಚಕ್ರವರ್ತಿ,

[80-7] ಏಜಂಟ್, ವ್ಯಾ. ಸ್ಟೀಂ ಟ್ರಾಂವೆ ಕಂಪನಿ, ಬೆಂಗಳೂರು ಸಿಟಿ.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

1. ಆರೋಗ್ಯ ಪ್ರಭಾಕರ. (ಟಾನಿಕ್ ಪಿಲ್ಸ್)—ಪಿತ್ತಕೋಶ, ಜ್ವಾಸಕೋಶಗಳನ್ನು ಸರಿಪಡಿಸಿ, ರಕ್ತವೃದ್ಧಿ ಮಾಡಿ, ನರಗಳಿಗೆ ಬಲಕೊಡುತ್ತೆ. ಚಾತುರ್ಥಿಕ, ಪಿತ್ಥ ಪಾಂಡು, ಕ್ಷಯ, ಧಾತುಗಳ ಕ್ಷಯ, ಮುಟ್ಟುಕಟ್ಟು, ಪಾರ್ಶ್ವವಾಯುಗಳನ್ನು ನಿವಾರಿಸುವದರಲ್ಲಿ ಅಸಮಾನವಾದುದು. 48 ಮಾತ್ರೆಗೆ 1 ರೂ. 6 ಶೀಸೆಗೆ 5 ರೂ.

2. ರೋಗನಾಶಿನಿ.—ಪ್ಲೇಗುಮೊದಲಾದ ಅಂಟುಜಾಡ್ಯ ಗ್ರಾಮಗಳಲ್ಲಿರುವಾಗಲೇ ಪ್ರತಿ ಒಬ್ಬರೂ ದಿನವೂ 3-4 ಸಲ 1-2 ಮಾತ್ರೆಯಂತೆ ಸೇವಿಸುವದರಿಂದ ಪ್ರಾಣವನ್ನು ಉಳಿಸಿಕೊಳ್ಳಬಹುದು. ಜನೋಪಕಾರಕ್ಕೋಸ್ಕರ ಬೆಲೆ ಸುಲಭವಿದ್ದಿದೆ. ಇದರ ಗುಣಕ್ಕೆ ನಮಗೆ ಅನೇಕ ಬಹುಮಾನಗಳು ಬಂದಿವೆ. 40 ಮಾತ್ರೆಗೆ 4 ಆ, 6 ಶೀಸೆಗೆ 1 ರೂ, 12 ಕ್ಕೆ 2½ ರೂ.

[126-30] ನಮ್ಮ ವಿಳಾಸ.—ಪಂಡಿತ್ ಎಸ್. ಗಂಗಾಧರ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—3—1916 ರಿಂದ 31—3—1916 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	2	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	10	6	0	0
ಮೈಸೂರು ,,	12	15	0	0
ಕೋಲಾರ್ ,,	3	3	0	0
ಕೋಲಾರ್ ಚಿನ್ನದ ಗಣಿಗಳು	0	1	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	4	1	0	0
ಕಡೂರ್ ,,	12	5	0	0
ಶಿವಮೊಗ್ಗ ,,	8	5	0	0
ಜುಮ್ಲಾ	51	37	0	0

ಶಾಲಿವಾಹನ ಶಕ ವರುಷಂಗಳು 1839 ನೇ ನಳ ಸಂವತ್ಸರೇ ಉತ್ತರಾಯಣೇ ವಸಂತಋತೌ ಚೈತ್ರ ಶುದ್ಧ ಏಕಾದಶಿ ಶುಕ್ರವಾರದಿಂದ ಚೈತ್ರ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1916 ನೇ ಏಪ್ರಿಲ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ವಿಶಾನ ಮಾಸ ತಾರೀ.
14	ಶುಕ್ರ *	ಏಕಾದಶಿ	12-30	ಮಘಾ	11-57	2
15	ಶನಿ ::	ದ್ವಾದಶಿ	13-47	ಪುಬ್ಬಾ	14-59	3
16	ಭಾನು †	ತ್ರಯೋದಶಿ	14-0	ಉತ್ತರಾ	16-47	4
17	ಸೋಮ †	ಚತುರ್ದಶಿ	12-53	ಹಸ್ತ	17-21	5
18	ಮಂಗಳ §	ಪೌರ್ಣಮಿ	10-36	ಚಿತ್ತ	16-46	6
19	ಬುಧ ,,	ಪಾಡ್ಯಮಿ	7-20	ಸ್ವಾತಿ	15-8	7
20	ಗುರು ;;	ಬಿದಿಗೆ	3-2	ವಿಶಾಖ	55-25	8

* ಸರ್ವತ್ರ ಏಕಾದಶಿ, ಬೇಲೂರು ಕೇಶವಸ್ವಾಮಿ ಗರುಡೋತ್ಸವ. :: ಶನಿ ಪ್ರದೋಷ, ಬೇಲೂರು ಕೇಶವಸ್ವಾಮಿ ರಥ, ಮಂಡ್ಯದ ಜನಾರ್ದನಸ್ವಾಮಿ ರಥ. ‡ ಅನಂಗ ತ್ರಯೋದಶಿ, ಮಾಗಡಿ ರಂಗಸ್ವಾಮಿ ರಥ, ತೊಂಡನೂರು ನಾರಾಯಣ ಸ್ವಾಮಿ ರಥ, ಮಳೆ ನಕ್ಷತ್ರ—ಅಶ್ವಿನಿ 2 ನೇ ಪಾದ. † ಮೇಲುಕೋಟೆ ಅಪ್ಪಮೇಯ ಸ್ವಾಮಿ ರಥ. § ಚಿತ್ರಾಪೌರ್ಣಮಿ, ಬಿಳಿಗಿರಿರಂಗಸ್ವಾಮಿ ರಥ, ಹಿರೇ ಎಳತ ದಲ್ಲಿ ರಥ. ,, ಮಳೆ ನಕ್ಷತ್ರ—ಅಶ್ವಿನಿ 3 ನೇ ಪಾದ. ;; ಸುಬ್ರಹ್ಮಣ್ಯೋತ್ಸವ.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ಸೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಅಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನೂ, ಸಕಲ ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಬಂಗಾರಗಳ ಪದಕಗಳನ್ನೂ ಸಂಪಾದಿಸಿಕೊಂಡಿದೆ. ಅಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಂಪಿಯನ್ ಆಗಿದ್ದುಕೊಂಡಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳೆಕೊಂಡ

ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಅಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಸಮಾಜ ಅತ್ಯಾದರವೂ ಹರ್ಷವೂ ಉಳ್ಳ ಪರಿಮಳವನ್ನು ಅರುವಂತಹಾದ್ದು ಅಟೋ ಮೋಹಿನಿಯೇ.

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ 2—0—0 | ⅛ ,, ,, ... 0—8—0
1 ಡ್ರಾಮ್ ಶೀಸೆಗೆ ...... ,, 0—12—0 | ಶಾರ್ಡ ದರ್ಜೆಗೆ ... 0—12—0

ಕೂದಲನ್ನು ಬೆಳಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಾಕರ ಕೊಬ್ಬರಿಎಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳಸುವಂತಹಾದ್ದು. ಕಣ್ಣು ಮತ್ತು ಮಿದುಳಿಗೆ ತಂಪನ್ನೂ ಕೊಡತಕ್ಕದ್ದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಅತಿರುವ ಹೇಳುವಂತಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೆಡುಕು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಕಾಗಿದೆ.

[262-18]

ಕ್ರಯ 1 ಬಾಟ್ಲಿಗೆ ರೂ 1-0-0 ಸೋಲ್ ಏಜಂಟರು—ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
,, 3 ,, ,, 2-10-0 177, ಜೈನಾಬಜಾರ್ ರೋಡ್, ಮದರಾಸು.

Useful in Peace and War **FIRST AID IN ACCIDENTS,** BY DR. U. RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ನಡೆಯಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು. ರಾಮರಾವ್ ಇವರಿಂದ ರಚಿತವಾದುದು

DEDICATED TO H. H. THE MAHARAJA OF MYSORE

ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ಪಕ್ಷದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪುಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ಮೊದಲು ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆಯಾ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡಿಸಿದ್ದರೆ, ನಿಸ್ಸಂದೇಹವಾಗಿ ಬದುಕಬಹುದಾಗಿದ್ದ ಪ್ರಾಣವು ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು.

ಒಬ್ಬ ಮನುಷ್ಯನಿಗೆ ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯಾಗಲಿ, ಅಲ್ಲವೇ ಯಾವುದಾದರೂ ಅಪಾಯವಾಗಲಿ ಸಂಭವಿಸಿದಾಗ, ಸಮರ್ಥರಾದ ವೈದ್ಯರ ಸಹಾಯವು ಬಂದೊದಗುವುದರೊಳಗಾಗಿ, ತತ್ಕಾಲಕ್ಕೆ ತಮ್ಮ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿಯೇ ಲಭಿಸಬೇಕು.

ಇದರಲ್ಲಿ ಅಲ್ಪಸ್ವಲ್ಪ ಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ಕ್ರೂರವಾದ ವೇದನೆಯನ್ನೂ ನೀಗಿಸಬಹುದು! ಎಷ್ಟೋ ಪ್ರಾಣಗಳನ್ನು ಉಳಿಸಬಹುದು! ಬಹಳವಾಗಿ ರಕ್ತಸ್ರಾವಕ್ಕೆ ಕಾರಣವಾದ ಮಹಾ ಏಟುಗಳಲ್ಲಿಯೂ ಬೆಂಕಿ ಹಿಡಿಯುವುದು, ಮಾಳಿಗೆ ಮುರಿಯುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ; ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಗಳೂ ಕೂಡ, ಸಮರ್ಥರಾದ ವೈದ್ಯರು ಬರುವಷ್ಟರೊಳಗಾಗಿ ಏನು ಮಾಡಬೇಕೆಂಬುದನ್ನು ತಿಳಿಯದೆ ಹೋಗುವುದರಿಂದ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸಾಕ್ರಮದಲ್ಲಿ ಅಲ್ಪಸ್ವಲ್ಪ ಜ್ಞಾನವನ್ನು ಪಡೆದು, ಅದನ್ನು ಪ್ರಯೋಗಿಸುವುದರಿಂದಲೇ ಸಾಯುವ ಸ್ಥಿತಿಯಲ್ಲಿದ್ದ ಸಾವಿರಾರು ಜೀವಗಳು ಬದುಕಿಕೊಂಡಿರುವುವು.

ಆದಕಾರಣ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೈಕಾಲುಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ, ಅಗ್ನಿಗಂಡ, ನರಗಳು ಕದಲುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಣ್ಣುವ, ಹಾಸಿಗೆ, ಮುಂತಾದ ಸೌಕರ್ಯಗಳನ್ನು ಕಲ್ಪಿಸಿಕೊಡುವುದು, ಇನ್ನೂ ಇದರಂತೆಯೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳಿಂದಲೂ ಇತ್ತು ವಿಷಯಗಳಿದ್ದರೂ, ಸರ್ವಸಾಮಾನ್ಯವಾಗಿ ಎಲ್ಲರೂ ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆಮಾಡಿರುವೆವು.

[92-2]

ಪುಸ್ತಕದ ಬೆಲೆ 0—8—0, ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣ ಬ್ರದರ್ಸ್, 323, ತಂಬುಚೆಟ್ಟಿ ಬೀದಿ, ಮದರಾಸು. ಪೋಸ್ಟು ಬಾಕ್ಸ್ 166.

Printed and Published by the Rev. H. Gulliford, Proprietor and Manager, Wesleyan Mission Press, Mysore. 13/4/1916.

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು-ಸನ್ ೧೯೧೬ ನೇ ಇಸವಿ ಏಪ್ರಿಲ್ ತಾರೀಖು ೨೦ ನೇ ಗುರುವಾರ. ಸಂಚಿಕೆ ೪೭

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನು, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನು ತಿಳಿಸುವ 615 ಪೇಜು ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ ರೂ. 1-12-0 [158-44]

ವಿಳಾಸ— ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). 142-39]

First Valuation Result: The total liablities under all assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ನವಿನುತಿ.

ಕನ್ನಡ ನುಡಿಯ ಮಾಸ ಪುಸ್ತಕಾವಳಿ.

ಇದರಲ್ಲಿ—ಚಾರಿತ್ರ್ಯಾತ್ಮಕ, ಸಾಂಸಾರಿಕ, ನಾಟಕ, ಸಾಹಸಿಕ, ಕಾದಂಬರಿ, ನವನ್ಯಾಸ (ನಾವೆಲುಗಳು), ದೇಶ ಚರಿತ್ರೆ, ಮಹಾಪುರುಷರ ಜೀವ ಚರಿತ್ರೆ, ಮನೋರಂಜಕವಾದ ಉಪನ್ಯಾಸಗಳು, ತಿಂಗಳಿಗೊಂದು ಪುಸ್ತಕ ಪ್ರಕಟವಾಗುವದು ಪ್ರತಿ ಪುಸ್ತಕದಲ್ಲಿಯೂ ಅಚಿಂತನೀಯ ಚಿತ್ರಗಳು ... ವಾಚಕ ಪತ್ರಿಕೆಯಂತೆ ಅನೇಕ ಸಂಗತಿಗಳು ... ಈಗ ಸಂಯುಕ್ತೆ, ಸಾವಿತ್ರೀ, ಸತೀದೇವಿ, ಚಂದ್ರಮತಿ, ಗಾಂಧಾರಿ, ಮದಾಲಸೆ ಎಂಬ ಪುಸ್ತಕಗಳು ಸಿದ್ಧವಾಗಿವೆ ವಾರ್ಷಿಕ ಚಂದಾ ಅಂಚೆ ವೆಚ್ಚ ಸಹ

ಒಂದು ರೂಪಾಯಿ ಯೆಂಟಾಣೆ.

[4-16] ವಿಳಾಸ:— "ನವನುಡಿ" ಯ ಸಂಪಾದಕ, ಕೋಟೆ, ಬೆಂಗಳೂರು

USE I. C. O. BRAND

[33-52]



Refined Edible Cotton Seed Oil.

For Cooking and Salads.

An approved substitute for Ghee in all preparations. Price—

Re 1-4-0 per tin of 3½lbs.
.. 0-7-0 per .. of 1lb

Liberal Terms to Trade.

The Indian Co-Operative Stores Co., Ltd., 159, Kilari Road, Bangalore

ಮೈಸೂರು ಸರ್ಕಾರಿ ಪ್ರಕಟನೆ.

ಕಾರ್ಖಾನೆಗಳಲ್ಲಿ ಅಥವಾ ವರ್ಕ್‌ಷಾಪುಗಳಲ್ಲಿ ಶಿಕ್ಷಾಭಾಗದಲ್ಲಿ (ಸ್ವಂತ ಖರ್ಚಿನಲ್ಲಿ ಕಲಿಯುವವರು) ತರಪೇತನ್ನು ಪಡೆಯಬೇಕೆಂಬ ಕುತೂಹಲವುಳ್ಳವರು ವಿದ್ಯಾರ್ಥಿ ವೇತನಗಳಿಗಾಗಿ ದರಖಾಸ್ತು ಮಾಡಿಕೊಳ್ಳತಕ್ಕದ್ದೆಂದು ಕೋರಲಾಗಿದೆ. ಅಂಥವರು ತಮ್ಮ ಯೋಗ್ಯತಾ ಪತ್ರಗಳ ವಿಷಯವಾಗಿ ತಪಶೀಲುಗಳೊಡನೆ ಬೆಂಗಳೂರು ಹೈ ಗ್ರೌಂಡಿನಲ್ಲಿರುವ "ಬೆಡ್‌ಫರ್ಡ್ ಹೌಸ್" ಎಂಬ ಕಟ್ಟಡದಲ್ಲಿ ಆಫೀಸು ಮಾಡಿಕೊಂಡಿರುವ ಕೈಗಾರಿಕೆಗಳ ಮತ್ತು ವ್ಯಾಪಾರದ ಕಮಿಟಿಯ ಸೆಕ್ರಿಟರಿಯವರಿಗೆ ದರಖಾಸ್ತು ಮಾಡಿಕೊಳ್ಳತಕ್ಕದ್ದು.

ಸಿ. ರಂಗನಾಥರಾವ್ ಸಾಹೇಬ್,
ಸೆಕ್ರೆಟರಿ.

ಮೈಸೂರು ಸಂಪದಭಿವೃದ್ಧಿ ಸಮಾಜ.

ಕೈಗಾರಿಕೆ ಮತ್ತು ವ್ಯಾಪಾರದ ಕಮಿಟಿಯಿಂದ.

ಕೈಗಾರಿಕೆಗಳಿಗೆ ಅಥವಾ ವ್ಯಾಪಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ತರಪೇತಿಯನ್ನು ಪಡೆಯುವ ಉದ್ದೇಶದಿಂದ ಅನ್ಯದೇಶಗಳಿಗೆ ಹೋಗಿ ಬರಬೇಕೆನ್ನುವವರು ದರಖಾಸ್ತು ಮಾಡಿಕೊಳ್ಳತಕ್ಕದ್ದೆಂದು ಅಪೇಕ್ಷಿಸುತ್ತೇವೆ.

ಅನ್ಯದೇಶಗಳಿಗೆ ಪ್ರಯಾಣಮಾಡುವಂತೆ ಜನಗಳನ್ನು ಪ್ರೋತ್ಸಾಹಿಸುವುದಕ್ಕೆ ಸರ್ಕಾರದವರು ಮಂಜೂರುಮಾಡಿರುವ ರಿಯಾಯಿತಿಗಳನ್ನು ಅವರ ವಿವರಗಳನ್ನು ಕೈಗಾರಿಕೆಗಳ ಮತ್ತು ವ್ಯಾಪಾರದ ಕಮಿಟಿಯ ಸೆಕ್ರೆಟರಿಯವರಿಂದ ತಿಳಿದುಕೊಳ್ಳಬಹುದು. ಅವರ ವಿಳಾಸವೇನೆಂದರೆ—

ಕೈಗಾರಿಕೆಗಳ ಮತ್ತು ವ್ಯಾಪಾರದ ಕಮಿಟಿಯ ಸೆಕ್ರಿಟರಿ,
[7-8] "ಬೆಡ್‌ಫರ್ಡ್ ಹೌಸ್," ಬೆಂಗಳೂರು.

M. S. Rao & Co., Book Sellers, Bangalore City.

Lower Secondary Texts for 1917. (1) The King of the Golden River As. 3½ each. (2) Granny's Wonderful Chair As. 4½. Notes for both books 4 As.

1917 ನೇ ಇಸ್ವಿ ಕನ್ನಡ ಲೋಯರ್ ಸೆಕೆಂಡರಿ ಟೆಕ್ಸ್ಟು	0- 4-6
ಡಿಟೋ ಸಂಸ್ಕೃತ ಡಿಟೋ	0- 3-0
ಜವಾಬ್ ಸಾವಿತ್ರ್ಯ- ಜಿ. ಕೃಷ್ಣಶಾಸ್ತ್ರಿಗಳಿಂದ	0- 6-0
ಕಿಂಡರ್ ಗಾರ್ಟನ್ ಕಥೆಗಳು—ಡಿಟೋ—ದ್ವಿ. ಮುದ್ರಣ	0-12-0

ನಮ್ಮಲ್ಲಿ ಕನ್ನಡ, ಇಂಗ್ಲಿಷ್ ಸ್ಕೂಲು ಪುಸ್ತಕಗಳೂ, ಎಲ್ಲಾ ಕನ್ನಡ ಕಾದಂಬರಿಗಳೂ ದೊರೆಯುತ್ತವೆ. [81-5]

ಯಂ. ಯಸ್. ರಾವ್ ಕಂಪೆನಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಸಂಗೀತ ಪಾರಿಜಾತ

ಮೂರನೆಯ ಮುದ್ರಣ! ಸೀಸಪದ್ಯಗಳೂ ಕೀರ್ತನೆಗಳೂ ಮೊದಲಿಗಿಂತ ಹೆಚ್ಚಿಗಿವೆ. ಬೇಗನೆ ... ಅನೇಕ ಹಾಡುಗಳಿವೆ ಕ್ರಯ ೦-೪-೦ ನೂರು ಪ್ರತಿಗೆ ಕಮ್ಮಿ ಇಲ್ಲದಂತೆ ತರಿಸಿಕೊಂಡರೆ ಧಾರಾಳವಾದ ಕಮಿಷನ್ ಕೊಡುವೆವು

ಶಬ್ದಾದರ್ಶ ನೋಟ್ಸ್.

ಲೋಯರ್ ಸೆಕೆಂಡ್ರೀ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದುದು ಕ್ರಯ ೦-೩-೦ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಸಿಗುತ್ತೆ.

ವಿಳಾಸ.—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

[277 19] ಸ್ಟೂಡೆಂಟ್ಸ್ ಹಾಲ್, ಮೈಸೂರು.

Notice of date fixed for hearing probate of letters of Administration cases.

IN THE COURT OF THE DISTRICT JUDGE, BANGALORE DIVISION, AT BANGALORE.

Before R. B. PLUMER Esquire, Bar-at-Law, District Judge.

Miscellaneous Case No. 45 of 1915.1916.

PETITIONER: Komarappa, son of Shroff Chickkanna, residing in Devandahalli, Bangalore District.

Whereas an application under Section 61 of the Probate and Administration Regulation VI of 1914 for grant of probate of the Will of the deceased Giddanna *alias* Doddappa, has been made by the petitioner above named, and whereas the 18th day of May 1916 has been fixed for the hearing of the case.

2. Notice is hereby given that any person having any interest in the Administration of the Estate of the said deceased may, if he desire, appear in this Court on the said 18th day of May 1916 and see the proceedings before the grant of probate.

Given under my hand and the seal of the Court this 4th day of April 1916.

102-1 **R. B. PLUMER,**
Bar-at-Law,
B.S. *District Judge.*

IN THE COURT OF THE DISTRICT JUDGE, BANGALORE DIVISION.

Miscellaneous Case No. 47 of 1915-16.

Before R. B. PLUMER Esquire, Bar-at-Law, District Judge.

1. Mr. D. Appu Rao, Retired Superintendent of Survey, No. V Main Road, Chamarajapet, Bangalore City, Honorary President.

2. Mr. Chengalyachetty, Retired Deputy Commissioner, Bull Temple Road, Chamarajapet, Bangalore City.

The petitioners above-named have made an application to this Court under Section 213 of the Mysore Company Regulation, praying for an order being passed for the winding up of the Bangalore Hindu Family Pension Fund, established in 1851, and do all that is necessary for the winding up of the said Fund.

Notice is hereby given that Thursday the 18th May 1916 is fixed for the hearing of this application, and that all persons having any interest in the said Fund are hereby required to appear in Person or by Pleader on the said date and show cause against the said application.

Given under my hand and the seal of the Court this 27th day of March 1916.

[18-2] **R. B. PLUMER,**
Bar-at-Law,
B.S. *District Judge.*

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲಿಕ್ಕಿಲ್ಲ? ಇಂಥಾ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವೆಂದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ಬಹಳ ಅರ್ಥಗಳೇನೂ ಅಷ್ಟೇ ಅಗತ್ಯದ ಪದಾರ್ಥವಾಗಿರುತ್ತದೆ. ಈ ತೈಲವನ್ನು ಸವರಿಕೊಳ್ಳುತ್ತಲೇ, ಮಸ್ತಿಷ್ಕದ ಬೇಗೆಯು ಕಡಿಮೆಯಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿಕೊಂಡ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.



ಕೇಶವರ್ಧಕ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಕಳೆಯುವುದು ಹಾಳುಮಾಡುವುದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ನೋಡಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಾಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ: ಸೇಗಿ ನವಾಳಕರ ಬಂಧುಗಳು. ಬಸವನಕಲ್ಲು, ಈಗನಾಂವ—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದದೆಂದು ಸಾಧಿತವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ. 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಲಾಭವಿಲ್ಲ ... ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವು ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರೆಯುವ ಕೇಶವರ್ಧಕ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿರಿ ನಮ್ಮ ಮೊಹರುಛಾಪ್ ನೋಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಉದ್ಯಾನವಿದೆಯೋ ಎಂಬಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಬೇಗನೆ ಆರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವಲ್ಪವಾಗಿ ನಿಮ್ಮ ವಿಚಾರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [34-11]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಧ್ಯಮ) ಸೀಸೆಗೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ವೆಚ್ಚ ಬೇರೆ ರೂ. 0-4-0. ಒಟ್ಟೋ-ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಮೇಲೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಪತ್ತೆ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಗಳಿಗೆ, ಜುಮ್ಮಾಮಸೀದ್, ಮಾರ್ಕೆಟ್, ಬಾಂಬೆ.
ಏಜೆಂಟ್, ... ಮಾರ್ಕೆಟ್, ಮಂಗಳೂರು.

ತರಿಸಿ ನೋಡಿರಿ.

1 ಸುಧಾಕರ ಕಸ್ತೂರಿ ಮಾತ್ರೆಗಳು—ಜ್ವರ, ಅಗ್ನಿಮಾಂದ್ಯ, ಕೆಮ್ಮು, ನೆಗಡಿ, ಅತಿಸ್ರಾವ, ದೇಶ ಕಾಲ ವ್ಯತ್ಯಾಸಗಳಿಂದುಂಟಾಗುವ ವಿಕಾರಗಳು, ಮಕ್ಕಳ ಎಳವು, ಮಲಬದ್ಧ, ಇವುಗಳನ್ನು ಗುಣಪಡಿಸುತ್ತದೆ. ಡಪ್ಪಿ 1 ಕ್ಕೆ 4 ಆಣೆ ಮಾತ್ರ. 6 ಡಪ್ಪಿಗಳಿಗೆ ರೂ 1-4-0. ಟಪಾಲು ಹಾಕಲು ಪ್ರತ್ಯೇಕ.

2 ಕಮಲಕೇಸರ ಘೃತ—ತಲೆನೋವೇ ಮೊದಲಾದ ಎಲ್ಲಾ ತರದ ನೋವುಗಳನ್ನೂ ಗುಣಪಡಿಸುವುದು. ಡಪ್ಪಿ 1 ಕ್ಕೆ 8 ಆಣೆ ಮಾತ್ರ.

3 ವಜ್ರದಂತಚೂರ್ಣ—ಇದನ್ನು ಪ್ರತಿ ದಿನವೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವುದರಿಂದ ಎಲ್ಲಾ ವಿಧವಾದ ದಂತ ರೋಗಗಳೂ ವಿಶೇಷವಾಗಿ ಹೋಗಿ ಹಲ್ಲುಗಳು ಮುತ್ತುಗಳಂತೆ ಥಳಥಳಿಸುವವು. ಟಿನ್ 1 ಕ್ಕೆ 2 ಆಣೆ ಮಾತ್ರ.

[71—6] ನಮ್ಮ ವಿಳಾಸ:—ಬಿ. ಎಸ್. ಕೌಶಿಕ,
240, ದಿವಾನರ ರೋಡು, ಮೈಸೂರು.

ನಿಮಗೆ ನಿಮ್ಮ ರಕ್ತದ ಚಿಂತೆಯುಂಟೇ?

ನಿಮ್ಮ ರಕ್ತದಿಂದಲೇ ನೀವು ಸುಖವಾಗಿರುವುದು; ನಿಮ್ಮ ರಕ್ತದಿಂದಲೇ ನೀವು ರೋಗಹಿಡಿದು ನರಳುವುದು. ರಕ್ತಶುದ್ಧವಾಗಿದ್ದರೆ ಆರೋಗ್ಯ, ದೃಢತಾಯು, ದೀರ್ಘಾಯುಸ್ಸು, ಪೂರ್ಣಸುಖ—ಎಲ್ಲಾ ಉಂಟಾಗುತ್ತೆ. ರಕ್ತ ಕೆಟ್ಟರೆ ಕ್ರಮವಾಗಿ ನಿಮ್ಮ ದೇಹ ಕುಗ್ಗುತ್ತಾ, ಆಯುಸ್ಸು ಕ್ಷಯಿಸುತ್ತಾ, ಜೀವನವೇ ಜುಗುಪ್ಸೆಯಾಗುತ್ತಾ ಬಂದೀತು. ಇಂಥಾ ಭಯಂಕರವಾದ ಸ್ಥಿತಿಯನ್ನು ತಪ್ಪಿಸಿಕೊಳ್ಳುವುದಕ್ಕೆ ನೀವುಗಳು ಖಂಡಿತವಾಗಿ ಉಪಯೋಗಿಸಬೇಕಾದದ್ದು ಒಂದೇ. ಅದ್ಯಾವದೆನ್ನುವಿರೋ?

ಸುಧಾಸಾಗರ ಅವಲೇಹ.

ಈ ಅಮೃತವು ದೇಹದ ಉಷ್ಣವನ್ನು ಶಮನಮಾಡುತ್ತೆ. ನಿಶ್ಶಕ್ತಿಯಾದ ಅಥವಾ ಕೆಟ್ಟಿರುವ ಜೀರ್ಣಕೋಶವನ್ನು ಬಲಪಡಿಸಿ ಬಹಳ ಬೇಗ ಹಸಿವೆಯನ್ನು ವೃದ್ಧಿಮಾಡುತ್ತದೆ. ಮತ್ತು ರಕ್ತಕೆಡೋಣದರಿಂದ ಉಂಟಾಗುವ ಎಲ್ಲಾ ತರದ ರೋಗಗಳನ್ನು ಬಡಗಿನ ರಕ್ತವನ್ನು ಶುದ್ಧಮಾಡಿ ಉಕ್ಕಿಸುವುದು.

ಬಾಟ್ಲ ಒಂದರ ಕ್ರಯ ರೂ. 1–8–0 ಮಾತ್ರ.

ನಮ್ಮ ವಿಳಾಸ—ರಾಜವೈದ್ಯ ನಾರಾಯಣಜಿ ಕೇಶವಜಿ,
[255—21] ಆಯುರ್ವೇದೋದಯ ಔಷಧಾಲಯ,
20, ಪೈನಾಬಜಾರ್ ರೋಡ್, ಮದರಾಸು.

ಬಿಸಿಲು ಕಾಲಕ್ಕೆ ಮೂರು

ಮಹೌಷಧಗಳು.

ಅಮೃತಾಮಲಕ ತೈಲ.

ಈ ತೈಲವು ಕಣ್ಣು ಕೈಕಾಲುರಿ, ಬಿಸಿಲಿನ ತಲೆನೋವು, ಕಣ್ಣು ಮಂಜು, ಕಣ್ಣು ಕಗ್ಗತ್ತಲೆ, ಮುಂತಾದ್ದನ್ನು 1-2 ಅಭ್ಯಂಗದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ವಿಶೇಷವಾಗಿ ಹೆಚ್ಚಿಸುತ್ತದೆ. ಬಿಸಿಲು ಕಾಲಕ್ಕೆ ಇದಕ್ಕಿಂತಲೂ ಉತ್ತಮವಾದುದು ಖಂಡಿತವಾಗಿಯೂ ಇಲ್ಲವೆಂಬುದನ್ನು ಅನುಭವದಿಂದ ತಿಳಿಯಿರಿ.

8 ಅಭ್ಯಂಗಕ್ಕೆ ಆಗುವ ತೈಲ 8 ಆಣೆ.

ಖಂಡಾಮಲಕ ರಸಾಯನ.

ಸಮಸ್ತ ಪಿತ್ತ ವಾತ ವಿಕಾರಗಳನ್ನೂ ಜಾಗ್ರತೆ ಗುಣಮಾಡಿ ಜೀರ್ಣಶಕ್ತಿಯನ್ನು ಸರಿಪಡಿಸಿ ರಾತ್ರಿ ಸುಖನಿದ್ರೆಯನ್ನುಂಟುಮಾಡಿ ಮಲವನ್ನು ಸಲೀಸಾಗಿ ಜಾರಿಸುವುದು. ಸೇವಿಸಲು ರುಚಿಯಾಗಿದೆ. 15 ದಿನದ ಔಷಧ 12 ಆಣೆ.

ಆಮೋದಿನಿ.

ಬಾಯನಾತೆಯನ್ನು ತಕ್ಷಣ ಅಡಗಿಸಿ-ಆಯಾಸವನ್ನು ಪರಿಹರಿಸಿ-ಸರ್ವರ ಮನಸ್ಸನ್ನು-ತನ್ನ ಅಪೂರ್ವವಾದ ಗುಣ ಮತ್ತು ಸುವಾಸನೆಗಳಿಂದ ಮೋಹಗೊಳಿಸುವ ಈ ರತ್ನವನ್ನು ಈಗಲೇ ತರಿಸಿಕೊಳ್ಳಿರಿ.-ಪೂರ್ವಕ್ಕಿಂತಲೂ ಎಷ್ಟೋ ಮನೋಹರವಾಗಿ ತಯಾರಿಸಲ್ಪಟ್ಟಿರುವುದು. 150 ಮಾತ್ರೆ ಸೀಸೆ 4 ಆಣೆ. [278-19]

ಎರಡು ರೂಪಾಯಿಗೆ ಕಡಮೆ ಇಲ್ಲದೆ ಔಷಧ ತರಿಸಿದರೆ ಟಿ.ಕ. ಸ್ವಂತಖರ್ಚು.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್, ನಂಜನಗೂಡು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡುವುದಕ್ಕೆ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಒಪ್ಪಿದ್ದಾರೆ. ನಿಮಿಷ ಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿರುವಂತೆ ಗುಣಕಾರಿ

ಯಲ್ಲವೆಂದು ಯಾರಾದರೂ ಸಾವೇ ಉಪಯೋಗಿಸಿ ನಮಗೆ ಬರೆದರೆ ತಪ್ಪದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0-14-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0 ಟಪಾಲು ಹಾಕಲು ಬೇರೆ ಬೇಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ. ಬೇಗನೆ ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ದಾಸ್,
[63—7] 1941 3, ಇರುಳಪ್ಪನ ಬೀದಿ, ಮದ್ರಾಸು.

ಕರ್ಣಿಕ ಎಗ್ಯು ಮಿಕ್ಸ್ಚರ

ಎಲ್ಲಾ ಜ್ವರಗಳಿಗೂ ಖಂಡಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213—27]

ಕ್ರಯ 0—10—0 ; ಪೋಸ್ಟೇಜ್ 0—4—0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,
ಎಗ್ಯು ಮಿಕ್ಸ್ಚರ್ ಡಿಪೋ, ಬೊಂಬಾಯಿ, 4.
KARNIK Bros., BOMBAY, 4.
ನಮ್ಮ ಏಜಂಟರು.—ದಿ ಬುಲ್ ವರ್ಕ್ಸ್, ಮಂಗಳೂರು.

2 ನೆ ತರಗತಿ ಭೂವಿವರಣೆ.

ಚಿತ್ರಗಳು ಮತ್ತು ಭೂಪಟಗಳೊಡನೆ (ಕ್ರಯ 4 ಆಣೆ).

ಮೈಸೂರು ದೇಶದ ಭೂಪಟಗಳು.

(ಪ್ರಾಕೃತಿಕ ಮತ್ತು ರಾಜಕೀಯ) ಕ್ರಯ 2 ಆಣೆ.

ಹೊಸ ಭೂವಿವರಣೆಗಳು.

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ.

ಇಂಥ ಭೂವಿವರಣೆಗಳು ಇದುವರೆಗೆ ಕನ್ನಡದಲ್ಲಿ ಇರಲಿಲ್ಲ.

ಈಗಿನ ಹೊಸ ಪದ್ಧತಿಗೆ ಅನುಸಾರವಾಗಿ ಕಾರ್ಯ ಕಾರಣ ವಿಧಿಗಳೊಡನೆ ರಚಿಸಲ್ಪಟ್ಟಿವೆ.

1. ವಿಶ್ವಾಖಂಡದ ಭೂವಿವರಣೆ	...	0—6—0
2. ಪ್ರಾಕೃತಿಕ ಭೂಗೋಳ ಶಾಸ್ತ್ರ	...	0—6—0
ಮೇಲೆ ಕಂಡ ಎರಡೂ ಸೇರಿ	...	0—10—0

ಮಕ್ಕಳ ಭೂವಿವರಣೆ 2 ಆಣೆ ; The English L. S. Text Examiner for 1916 by a Graduate, Price 3 as.

ನಮ್ಮ ವಿಳಾಸ—ಎನ್. ಆರ್. ವೆಂಕಟಸುಬ್ಬಾಚಾರ್ಯ,
[47—9] ಸುಬೋಧ ಗ್ರಂಥಾಲಯ, ಮೈಸೂರು.

ಜಾಮೀನ್ ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತನ್‌ಜೋತಿ ಕೂದಲು ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕಪ್ಪಗೆ ಮಾಡುತ್ತೆ.
ಮತ್ತು
ಕೂದಲಿಗೆ ರೇಷ್ಮೆಯಂಥಾ ಹೊಳಪೂ ನುಣುಪೂ ಬರುತ್ತೆ.

ನರೆಕೂದಲನ್ನು ನಮ್ಮ ರಂಗು ಅಚ್ಚ ಕಪ್ಪಗೆ ಮಾಡುವುದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ಪೆಟ್ಟಿಗೆ, ಬ್ರಷ್ ಮತ್ತು ಬಟ್ಲು ಸಹಿತ ಕ್ರಯ ರೂ. 1—0—0; ಪೋಸ್ಟೇಜ್ ಬೇರೆ.

ಹೊಸ ನಮೂನೆ ರೋಮಹಾರಿ.

ಇದು ಯಾವ ಶರೀರ ಭಾಗದಲ್ಲಾದರೂ ಹೆಚ್ಚಾಗಿರುವ ಕೂದಲನ್ನು ಅಚ್ಚುಕಟ್ಟಾಗಿ ತೆಗೆಯುತ್ತೆ. ನೋಯುವುದಿಲ್ಲ; ಚರ್ಮಕ್ಕೆ ಕಲೆಯಾಗದು. [282-19]

ಪೆಟ್ಟಿಗೆ ಒಂದಕ್ಕೆ ರೂ. 1—0—0 ; ಪೋಸ್ಟೇಜ್ ಬೇರೆ.

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು :—

ಷಾ ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
177, ಚೀನಾ ಬಜಾರ್ ರೋಡ್, ಮದರಾಸ್.

ಅರ್ಧ ಕ್ರಯದ ಮಾರಾಟ!

ಹಾರ್ಮೋನಿಯಂ ಮತ್ತು ತಬಲ ಬಿಟ್ಟಿ!

ಒಂದು ತಿಂಗಳ ತನಕ ಮಾತ್ರ.



ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ಸಕಲ ತರಹ ಉಣ್ಣೆ ದಾರದಿಂದ ತಯಾರಿಸಲ್ಪಡುವ ಸಾಮಾನುಗಳಿಗೂ, ದರಗಳಿಗೂ ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,

[188-30] GIRLS' INDUSTRIAL SCHOOL, HASSAN.

ಊದಬತ್ತಿಗಳು

ಸುಗಂಧಿ ಕಾದರ್ 1 ಕ್ಕೆ 1 ಆ. ಡಜನ್ 1 ಕ್ಕೆ 10 ಆಣೆ.

ಈ ಬತ್ತಿಗಳನ್ನು ಶರೀರದಲ್ಲಾಗಲಿ ಬಟ್ಟೆಯಲ್ಲಾಗಲಿ ಇಟ್ಟರೆ ಅದರ ಚಟ್ಟ ... ಉತ್ತಮವಾದ ಹೂಗಳ ಸುವಾಸನೆಯಂತೆ ಸುವಾಸನೆಯಾಗಿರುತ್ತೆ.

ಶೋಲ್ಲಾಸಿನಿ ಸೀಸಾ 1 ಕ್ಕೆ 8 ಆಣೆ.

ಇದು ತಲೆ ಕೂದಲಿಗೆ ಹಚ್ಚಿ ಬಾಚುತ್ತಾ ಬಂದರೆ ಅತ್ಯಂತ ಸುವಾಸನೆ ... ಕೂದಲು ಅತಿ ನುಣುಪಾಗಿಯೂ ಇರುತ್ತದೆ.

ಕಸ್ತೂರಿಮಾತ್ರೆ ಸೀಸಾ 1 ಕ್ಕೆ 4 ಆಣೆ.

ಈ ಮಾತ್ರೆಯನ್ನು ಬಾಯಿಗೆ ಹಾಕಿಕೊಂಡದ್ದೇ ಆದರೆ ಅಜೀರ್ಣವನ್ನೂ ... ಸಹಾ ನಾಶವಾಗಿ ಬಾಯಿಯು ಅತ್ಯಂತ ಸುವಾಸನೆಯಾ... ಇರುತ್ತದೆ.

ಸುವಾಸನ ಸಾದು ಸೀಸೆ 1 ಕ್ಕೆ 2 ಆಣೆ.

ಇನ್ನೂ ನಮ್ಮ ಅಂಗಡಿಯಲ್ಲಿ ಉತ್ತಮವಾದ ಅತ್ತರುಗಳನ್ನೂ ... ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗಿ ತಯಾರಿಸಿದೆ. ... ಇದೆ. ಇಂಥಾ ಅಮೂಲ್ಯವಾದ ಈ ಎರಡು ... ನೋಡಿರಿ.

ವಿಳಾಸ.—ಟಿ. ಎಲ್. ಉಪಾಧ್ಯಾಯ,

[51-8] ಸುಗಂಧಕಾರಿ, ಮೈಸೂರು. [101-1]

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು..............ರೂ. 4,45,00,000

ಕಂಪನಿಯಿಂದ ಪಾವತಿ ಆಗಿರುವದು ,, 4,00,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ... ಚೀಫ್ ಏಜೆಂಟ್, ಬೆಂಗಳೂರು; ಮಿ॥ ಎಂ ಎಸ್ ನಂಜಪ್ಪನವರು ... ಮಿ॥ ವಿ. ವೆಂಕಟೇಶರ್, ಟ್ರಾವೆಲಿಂಗ್ ಏಜೆಂಟ್, ಮೈಸೂರು; ಅಥವಾ

[222-27] ಬ್ರಾಂಚ್ ಸೆಕ್ರಟರಿ, ಮದರಾಸ್

"ಅಮೆರಿಕಾ ಹೇರ್ ಡೈ" ಎಂಬ ಕೂದಲ ರಂಗು.

ಬಾಟ್ಲಿ 1 ಕ್ಕೆ ರೂ. 1, 12 ಕ್ಕೆ ರೂ. 9.

ಹಚ್ಚಿದ ತಕ್ಷಣವೇ ಬಣ್ಣವನ್ನು ಬದಲಾಯಿಸುತ್ತದೆ. ನರೆತು (ಬೆಳ್ಳಗಾಯ್ತು) ಹೋದ ಕೂದಲು ಅಚ್ಚ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಅಪಾಯಕರವ ಮತ್ತು ಅಶ್ವಾಸ್ಥ್ಯಕರವಾದ ಪದಾರ್ಥ ಸುಜಿದ್ದು. ಇದು ಪ್ರಪಂಚದಲ್ಲಿರತಕ್ಕ ಕೂದಲು ರಂಗುಗಳಲ್ಲಿ ಯಾವದಕ್ಕೂ ಕೀಳಾದದ್ದಲ್ಲ.

ನಮ್ಮ ವಿಳಾಸ.—

ಜೆ. ಪಾಂಪೆ ಅಂಡು ಕಂಪೆನಿ,

ಜಿಂತಾದ್ರಿ ಪೇಟೆ, ಮದ್ರಾಸು.

ಮೈಸೂರು ಸರ್ಕಾರಿ ಪ್ರಕಟನೆ.

ಸನ್ 1916 ನೇ ಇಸವಿ ಏಪ್ರಿಲ್ ಗುರ್ರೆ ಅಗಾಯ್ತು ಬೆಂಗಳೂರಿನಲ್ಲಿರುವ ಮೈಸೂರು ಸರ್ಕಾರಿ ಸರ್ವ ವಸ್ತುಪ್ರದರ್ಶನ ಶಾಲೆಯು [ಮ್ಯೂಜಿಯಂ-ತವಾಷಿ ಬಂಗಲೆಯು] ನೋಟಕರ ಸೌಕರ್ಯಕ್ಕೋಸ್ಕರ ಪ್ರತಿ ಭಾನುವಾರವೂ ತೆರೆಯಲ್ಪಡುತ್ತದೆ. ಇದಕ್ಕೆ ಬದಲಾಗಿ ಪ್ರತಿ ಬುಧವಾರವೂ ಮುಚ್ಚಲ್ಪಡುತ್ತದೆ.

ಬೆಂಗಳೂರು, ಎಲ್. ವಿಶ್ವೇಶ್ವರಂತ್ ಬಾದಾಮಿ,

ತಾ॥ 28-3-1916. ಆಕ್ಟಿಂಗ್ ಸೂಪರಿಂಟೆಂಡೆಂಟ್,

[95-2] ಮೈಸೂರು ಗೌರ್ನಮೆಂಟ್ ಮ್ಯೂಜಿಯಂ.

S. UDIPI NARAYANACHARYA & Co.,

BANARES CITY, U. P.

ಯೋಗ್ಯವಾದ ಕ್ರಯ. ಸೊಗಸಾದ ಸರಕುಗಳು.

ಈ ನಮ್ಮ ಕಂಪನಿಯಲ್ಲಿ ನೆಯಿದು ತಯಾರಿಸಿರುವ ಉತ್ತಮವಾದ ಬನಾರಸೀ ಜರಿ ಸೀರೆಗಳು, ಕಣ, ಪೇಟ, ಕಾಶ್ಮೀರ್ ಶಾಲು, ದುಪ್ಪಟಿ, ಮುಗುಟ, ಅಗಸ್ವಾಫ ಜಗುಟಗಳು, ರುಮಾಲುಗಳು, ಕೊನಾರು, ಅಂಚಿ ಪೇಟ, ಥವಳಗರ ಈ ಮುಂತಾದ ಅನೇಕ ಹೊಸ ನಮೂನೆ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ತರಹ ... ಸಿಗುವ ಅತಿ ಮೇನ್ತ ನಿಂದ ತಯಾರಿಸಿರುವೆವು. ಈ ಅಮೂಲ್ಯವಾದ ಸರಕುಗಳ ಕೇಟಲಾಗನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಒಂದು ಕೇಟಲಾಗು ಒಂದು ... ವಾಗಿ ಕಳುಹಿಸಲಾಗುವುದು. [119-40]

ವಿಳಾಸ.—ಎಸ್. ಯು. ಎನ್. ಕಂಪನಿ, ಚೌಖಂಬಾ, ಕಾಶಿ.

ಇನಾಮು. ಇನಾಮು.

ಸುಂದರವಾದ ಒಂದು ಬೆಳ್ಳಿ ಗಡಿಯಾರ ಇನಾಮು.

ಪೂರ್ವದ ಕ್ರಯ 10 ರೂಪಾಯಿ ಬೆಲೆಯುಳ್ಳದ್ದು.

ಪ್ರಖ್ಯಾತಿಯನ್ನು ಪಡೆದ ಕಂಪನಿಯವರಿಂದ ಕೆಲವು ಕಾಲದ ವರೆಗೆ ಮಾತ್ರವೇ ಕೊಡಲ್ಪಡುತ್ತೆ. ಇಂಡಿಯಾ, ಬರ್ಮ, ಸಿಲೋನ್, ಮೊದಲಾದ ಸ್ಥಳಗಳಲ್ಲಿ ಈ ಗಡಿಯಾರವನ್ನು ಅನೇಕರು ಹೊಂದಿರುತ್ತಾರೆ. ನೀವು ಸಹ ಈ ಬಹುಮತಿಯನ್ನು ಪಡೆಯಲು ಇದೇ ಸಮಯ. ರೂ. 1-6-0 ಯನ್ನು ಮನೀಆರ್ಡರು ಮೂಲಕ ವಾಗಿಯಾಗಲಿ, ಅಥವ ಟಪ್ಪಾಲು ಸ್ಟಾಂಪನ್ನು ಕವರಿನಲ್ಲಿಟ್ಟಾಗಲಿ ಕಳುಹಿಸಿ ಈಗ ನಾವು ವಿಕ್ರಯಿಸುತ್ತಲಿರುವ ಪ್ರಸಿದ್ಧಿಯನ್ನು ಪಡೆದ ಫೌಂಟನ್ ಪೆನ್ನಾಸಿನೊಡನೆ ಗಡಿಯಾರದ ಒಪಂಬಡಿಕೆಯನ್ನು ಪಡೆಯಿರಿ. ಮತ್ತು ನಾವು ಕಳುಹಿಸುವ ಪೆನ್ನಾಸನ್ನು ನಿಮ್ಮ ಮಿತ್ರಮಂಡಲಿಯವರುಗಳಿಗೆ ತೋರಿಸಿ, ಅವರುಗಳಲ್ಲಿ ೬ ಜನಗಳಿಗೆ ಶಿಫಾರಸು ಮಾಡುವುದೂ ಅಲ್ಲದೆ, ನೀವು ಪಡೆಯುವ ಬಹುಮತಿ ಗಡಿಯಾರವನ್ನು ಸಹ ಅವರುಗಳಿಗೆ ತೋರಿಸುವೆನೆಂದು ನಂಬುತ್ತೇವೆ. ರೂ. 1-6-0 ನ್ನು ಕಳುಹಿಸಿ ಈ ಗಡಿಯಾರವನ್ನು ತ್ವರಿತವಾಗಿ ಹೊಂದುವದಕ್ಕೆ ಪ್ರಯತ್ನಿಸಿರಿ. [100-1]

ವಿಳಾಸ. —ಗುಡ್ ಹೋಪ್ ಕಂಪೆನಿ,

ನಂ. 111, ಮಿಂಟ್ ಸ್ಟ್ರೀಟ್, ಪಾರ್ಕ್ ಟವನ್, ಮದರಾಸು.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ಕೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಆಟೋಮೋಹಿನಿಯೇ ಅದು.



ಇದಕ್ಕೆ ... ಆವಶ್ಯಕವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನ್ನಣೆಯನ್ನು ಹೊಂದಿ ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ, ಭಂಗಾರಗಳ ಪದಕ ... ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯು ಅನೇಕ ಕಾಲದಿಂದಲೂ ಜಾಹೀರ್ ಮಾಡುತ್ತಿರುವೆವು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳೆಕೊಂಡ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇವೆಂದು ಸವಾಲ್ ಹಾಕುತ್ತೇವೆ. ಆಟೋ ಮೋಹಿನಿಯ ... ಹೊಸ ಪುಷ್ಪಗಳ ನವನವೀನ ಆಹ್ಲಾದವೂ ಹರ್ಷವೂ ... ಆಟೋ ಮೋಹಿನಿಯ

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ 2-0-0	¼ ,, ,,	..	0-8-0
1 ಡ್ರಾಮ್ ಕೊಳವೆಗೆ ,, 0-12-0	ಅಂಚೆ ಖರ್ಚಿಗೆ	..	0-12-0

ಕೂದಲನ್ನು ಬೆಳೆಯಿಸುವದಕ್ಕೆ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕೇಶ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬಿಲಿಯೋ ವನೌಷಧಗಳಿಂದ ಮಾಡಿದ್ದು. ... ಕೂದಲನ್ನು ನಾಶ ಬೆಳೆಸುವಂಥಾದ್ದು ... ಕಣ್ಣುಗಳು ವಿದ್ಯಾರ್ಥಿಗಳಿಗೆ ಅತ್ಯಂತ ಫಲಕಾರಿಯಾದದ್ದು. ಇದು ಇನ್ನುಳಿದ ಹೇರಾಯಿಲುಗಳಂತೆ ಎಣ್ಣೆಯುಳ್ಳದ್ದಲ್ಲ ... ಸ್ಪಿರಿಟ್ ಮಿಶ್ರಿತವಾದವುಗಳು ... ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ... ಇಂಥಾ ಜಾಹೀರ್ ಕೊಟ್ಟಿರುವುದುಂಟೇ! ... ಸಾಕಾಗಿದೆ. [283-19]

ಸೀಸೆ 1 ಬಾಟ್ಲಿಗೆ ರೂ 1-0-0

,, 3 ,, ,, 2-10-0

ಸೋಲ್ ಏಜೆಂಟರು.—ಸಾ॥ ಭಗವಾನ್ ದಾಸ್ ಚುನಿಲಾಲ್ ಕಂಪನಿ,

177, ಬ್ರಾಡ್ವೇ ರೋಡ್, ಮದರಾಸು.

ಉಗಾದಿ ಬಹುಮಾನ. ಹೊಸ ಕಂಪನಿ. ಹೊಸ ಸರಕುಗಳು.

ಅಮೇರಿಕ ದೇಶದ ಎಲೆಕ್ಟ್ರಿಕ್ ಮೂಗುಬೊಟ್ಟು 3 ರೂಪಾಯಿ ಬೆಲೆ ಬಾಳತಕ್ಕದ್ದನ್ನು ರೂ 1-8-0 ಕೊಡುತ್ತೇವೆ. ಇದನ್ನು ನಮ್ಮ ಸ್ವಂತ ಅಡರಸ ಮೇಲೆ ಅಮೇರಿಕ ದೇಶದಲ್ಲಿ ಕಂಡುಹಿಡಿಯಲ್ಪಟ್ಟು ಇಮಿಟೇಷನ್ ... ತಯಾರಿಸಿ ಕಳುಹಿಸುತ್ತಾರೆ ... ಶೋಭಿತವಾಗಿ ಪ್ರಕಾಶಕ್ಕೆ ಥಳಥಳಿಸುವದು. ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿ ... ಇದನ್ನು ನೋಡುವವರು ವಜ್ರವಾಗೆಂದು ಹೇಳುವರು. ಅಷ್ಟು ಸೂರ್ಯಪ್ರಕಾಶಕ್ಕೆ ಥಳಥಳಿಸುವದು. ಜಾಗ್ರತೆಗನೆ ಬರೆಬಾಸ್ತು ಮಾಡಿದವರಿಗೆ ಒಳ್ಳೇ ಘಾಯದೆ ದೊರಕುವದು.

ಇದೇ ತಿಂಗಳ ಒಳಗಾಗಿ ಈ ಸರಿ ತರಿಸಿಕೊಳ್ಳುವವರಿಗೆ ಈ ಮೇಲ್ಕಂಡ ರೂ. 1-8-0 ರೂಪಾಯಿನ ಮೂಗುಬೊಟ್ಟು ಇನಾಮ ಕಳುಹಿಸುವೆವು.

ಮಲ್ಲಿಗೆ ಹುವ್ವಿನ ಸೀರೆ.

ಈ ಸೀರೆಗಳನ್ನು ಯುಗಾದಿ ಹಬ್ಬಕ್ಕಾಗಿ ತರಿಸಿ ಇರುತ್ತೇವೆ. ಇದರ ಕ್ರಯ ರೂ 3 ವಿ ಪಿ. ಚಾರ್ಜು 0-8-0 ಪ್ರತ್ಯೇಕ. ಮೇಲ್ಕಂಡ ಮೂಗುಬೊಟ್ಟು ಇನಾಮು.

ಎಲ್ಲರೂ ವಿಕ್ರಯಿಸುವ ಮಧುರೆ ಹವಳದ ಬಳ್ಳಿಗಳಲ್ಲ. ಭಾರಿ ಕ್ರಯದ ಸೀರೆಗಳು. ಇದು ಉಡುವುದಕ್ಕೆ ಧಡುತೆ ಆಗಿಯೂ ನೋಡುವದಕ್ಕೆ ಸೊಗಸಾಗಿಯೂ ಇದೆ. ಬಣ್ಣಕ್ಕೆ ಗ್ಯಾರಂಟಿ ಕೊಡುವೆವು. ಸೀರೆಯ ಉದ್ದ 16 ಮೊಳ. ಸೊಗಸಾದ ಅಂಚು ಕಟ್ಟಿ ಇರುತ್ತೆ. ಇದು ಎಲ್ಲರೂ ಉಡುವದಕ್ಕೆ ಲಾಯಖಾದದ್ದು, ಪ್ರತಿ ದಿವಸ ಸಾವಿರಾರು ಸೀರೆಗಳು ವಿಕ್ರಯಿಸುತ್ತವೆ ದಯಮಾಡಿ 1 ಸೀರೆಯನ್ನು ತರಿಸಿಕೊಂಡು ಅಲಂಕಾರಭೂಷಿತರಾಗಿ ಇರುವರೆಂದು ನಂಬಿದ್ದೇವೆ. ನಮ್ಮ ಕಂಪನಿಯಲ್ಲಿ ಅನೇಕ ತರದ ಜವಳಿ ದಿನಸುಗಳು ಸಿಕ್ಕುತ್ತವೆ.

ವಿಳಾಸ.—ರತ್ನಂ ಕಂಪೆನಿ, ಕ್ಲಾತ್ ಮರ್ಚೆಂಟ್,

[63-7] 3, ಇರುಳಪ್ಪನ ವೀದಿ, ಮದರಾಸು.

Useful in Peace and War FIRST AID IN ACCIDENTS, BY DR. U. RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದುಕೊಳ್ಳಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ... ಅಪಾಯಗಳಿಗೆ ತಾತ್ಕಾಲಿಕವಾಗಿ ನಡೆಸಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು ರಾಮರಾವ್ ಅವರಿಂದ ರಚಿಸಲ್ಪಟ್ಟದ್ದು.

DEDICATED TO H. H. THE MAHARAJA OF MYSORE

ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯ ... ವಿಪತ್ತು ಸಂಭವಿಸಿದರೆ ... ಇತರ ಜನರು ನಾಲ್ಕಾರು ಕಡೆಯಿಂದ ... ನೋಡುತ್ತಾ ನಿಲ್ಲುವರು ... ಈ ಜನರ ಗುಂಪಿನಲ್ಲಿ ... ಮೊದಲು ಮಾಡಬೇಕಾದ ಚಿಕಿತ್ಸೆಯನ್ನು ... ಒದಗಿಸುವುದಿಲ್ಲ ... ವೈದ್ಯರನ್ನು ಕರೆತರಲು ... ಇವರ ಚಿಕಿತ್ಸೆ ... ದುರದೃಷ್ಟವಾಗಿ ... ಪ್ರಾಣವೂ ... ಅಲಕ್ಷ್ಯದಿಂದ ನಷ್ಟವಾಗುವದು.

ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಬೇರೆಯಲ್ಲಿ ಆಸ್ಪತ್ರೆಯಾಗಲಿ ... ಯಾವುದಾದರೂ ಅಪಾಯಗಳು ಸಂಭವಿಸಿದಾಗ, ಸಮರ್ಥರಾದ ವೈದ್ಯರು ಬಂದುಸೇರುವವರೆಗಾದರೂ, ತಕ್ಕೊಳ್ಳಬೇಕಾದ ಕೈಗುಣ ಚಿಕಿತ್ಸೆ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ... ಚಿಕಿತ್ಸೆಯನ್ನು ಮಾಡುವದೇ ... ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿರಬೇಕು ...

ಇದರಲ್ಲಿ ಅಲ್ಪಸ್ವಲ್ಪ ಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ಕಷ್ಟಕರವಾದ ... ನಿಗ್ರಹಿಸಬಹುದು! ಎಷ್ಟೋ ಪ್ರಾಣಗಳನ್ನು ಉಳಿಸಬಹುದು! ... ರಕ್ತಸ್ರಾವಕ್ಕೆ ... ಜೀವ ತೆಗೆಯುವುದು, ... ಮುಳುಗುವುದು, ನೀರಿನಲ್ಲಿ ಬಿದ್ದು ... ಉಸಿರು ಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿ ... ತಕ್ಕ ಚಿಕಿತ್ಸೆಯನ್ನು ... ಮೃತ್ಯು ... ಈ ಪ್ರಥಮ ಚಿಕಿತ್ಸೆಯನ್ನು ... ಈ ಪ್ರಥಮ ಚಿಕಿತ್ಸೆಯಲ್ಲಿ ಅಲ್ಪಸ್ವಲ್ಪ ಜ್ಞಾನವನ್ನು ಪಡೆದು, ... ಸಾವಿರಾರು ಜನಗಳು ಬದುಕಿಕೊಂಡಿರುವರು.

ಇದಕ್ಕಾಗಿ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೃತಕಾಂಗಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ... ಕೊಟ್ಟಿಗೆ ಸೇರುವುದು, ಜಲಗಂಡ, ಅಗ್ನಿಗಂಡ, ನಾಯಿ ಕಚ್ಚುವುದು, ವಿಷಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ... ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಸೌಕರ್ಯಗಳನ್ನು ... ಇನ್ನೂ ಇವರಂತೆಯೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳೊಡನೆ ಅಷ್ಟು ವಿಷಯಗಳಿದ್ದರೂ, ಸರ್ವಸಾಮಾನ್ಯವಾಗಿ ... ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆಮಾಡಿರುವೆವು. [92-3]

ಪ್ರತಿ 1 ಕ್ಕೆ ಬೆಲೆ 0—8—0, ಟಪಾಲ್ ಹಾಸಿಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣ ಬ್ರದರ್ಸ್, 323, ತಂಬೂಚೆಟ್ಟಿ ಬೀದಿ, ದಮರಾಸು. ಪೋಸ್ಟು ಬಾಕ್ಸು 166.

ಸ್ವದೇಶ ಕೈಗಾರಿಕೆಗಳು.

ಅನೇಕ ಸ್ಥಳಗಳಲ್ಲಿ ಕೈಗಾರಿಕೆಗಳ ಕಾರ್ಖಾನೆಗಳನ್ನು, ಬಂಡವಾಳ ಬಹಳ ಯಿಂದ ಗೊಬ್ಬರವನ್ನು ತಯಾರಿಸ ಬಹುವಾದ ಕಾರ್ಖಾನೆಗಳನ್ನೂ ಏರ್ಪಡಿಸುವ ಉದ್ದೇಶದಿಂದ ನನ್ನ ದೇಶಬಾಂಧವರಿಗೆ ಅಂಕೆ ಮಾಡಿಕೊಳ್ಳುವುದೇನೆಂದರೆ ತಮ್ಮ ಸ್ಥಳದಲ್ಲಿ ಯಾವುದಾದರೂ ಕೈಗಾರಿಕೆಯನ್ನೇ ಆಗಲಿ, ಗೊಬ್ಬರದ ಕಾರ್ಖಾನೆಯನ್ನೇ ಆಗಲಿ ಇಡಬೇಕೆಂದು ಯಾರಿಗಾದರೂ ತಾತ್ಪರ್ಯವಿದ್ದರೆ ಅಲ್ಲಿನ ಮುಖಂಡರು ಕಲೆತು ಮಾತನಾಡಿಕೊಂಡು ನನಗೆ ತಿಳಿಸಿದರೆ ನಾನು ಬಂದು ಪದಾರ್ಥವನ್ನು ತಯಾರಿಸುವ ರೀತಿಯನ್ನು ತೋರ್ಪಡಿಸಿ ಅನುಭವಪಡಿಸಿ ಕಾರ್ಖಾನೆಯನ್ನು ಏರ್ಪಡಿಸುವೆನು. ಕೆ. ಆರ್. ಚಕ್ರವರ್ತಿ,

[66-8] ಏಜಂಟ್, ಮೈ. ಸ್ಟೀಂ ಟ್ರಾಂವೆ ಕಂಪನಿ, ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ.

—:o:—

ಕ್ರಿ. ೧೯೧೬ ನೇ ಇಸವಿ ಏಪ್ರಿಲ್ ತಾ. ೨೦ ನೇ ಗುರುವಾರ

ಮೈಸೂರು ಸೀಮೆಯ ಆರೋಗ್ಯ ವಿಚಾರ.

ಮೇಲ್ಕಂಡ ವಿಚಾರವಾದ 1914 ನೇ ಇಸವಿಯ ವಾರ್ಷಿಕ ರಿಪೋರ್ಟಿನ ಮೇಲೆ 1915 ನೇ ನೊವೆಂಬರ್ ತಾ. 17 ರಲ್ಲಿ ಸರ್ಕಾರದವರು ತಮ್ಮ ಅಭಿಪ್ರಾಯಗಳನ್ನು ಬರೆದು ಈಗತಾನೇ ಪ್ರಕಟಮಾಡಿದಾರೆ. ರಿಪೋರ್ಟಿನಲ್ಲಿ ಕಂಡ ಸಂಗತಿಗಳು ನಡೆದು ಎಷ್ಟೋ ಕಾಲವಾದ ಮೇಲೆ ಅವುಗಳನ್ನು ಈಗ ಪ್ರಕಟಮಾಡೋಣದರಿಂದ ಬರೀ ಹಣದ ಖರ್ಚಲ್ಲದೇ ಅಷ್ಟಲ್ಲದೆ ಇನ್ನೇನೂ ಪ್ರಯೋಜನ ಕಾಣುವುದಿಲ್ಲ. ಜನನ ಮರಣಗಳನ್ನು ಗೊತ್ತುಮಾಡಿ ಬರೆದಿಡುವ ಕ್ರಮಗಳು ಕಟ್ಟುನಿಟ್ಟಾಗಿಯೂ ತೃಪ್ತಿಕರವಾಗಿಯೂ ರೂಢಿಸದಿರೋಣದರಿಂದ ಈ ರಿಪೋರ್ಟಿನಲ್ಲಿ ಕಾಣಿಸಿರುವ ಲೆಕ್ಕಗಳಷ್ಟೇ ಹುಟ್ಟೂ ಸಾವೂ ನಡೆದಿವೆ ಎಂದು ನಂಬಲಾಗದು. ಹೀಗಿರುವಲ್ಲಿ ಈ ಲೆಕ್ಕಗಳ ಮೇಲೆ ಯಾವ ಅಭಿಪ್ರಾಯಗಳನ್ನೂ ಹೇಳುವುದು ನಿಷ್ಪ್ರಯೋಜನವೆಂದು ಭಾವಿಸುತ್ತೇವೆ. ಸರ್ವಸಾಮಾನ್ಯವಾದ ಸಂಗತಿಗಳನ್ನು ಮಾತ್ರ ಸೂಚಿಸಬಹುದಾಗಿದೆ.

ಕಳೆದ 1914 ನೇ ವರುಷದಲ್ಲಿ ಮಕ್ಕಳ ಸಾವು ಬಹಳ ಹೆಚ್ಚಾಯಿತು. ಅನೇಕರು ಸಿಡುಬು ಎದ್ದು ತೀರಿಹೋಗಿರುತ್ತಾರೆ. ಪ್ಲೇಗ್ ಉಪದ್ರದ ದೆಸೆಯಿಂದಲೂ ಅನೇಕ ಮರಣಗಳಾಗಿವೆ. ವಾಂತಿಭೇದಿ ಉಪದ್ರದಿಂದಾದ ಮರಣಗಳು ಸ್ವಲ್ಪ ಕಡಮೆಯಾದವು.

ನಮ್ಮ ಸಂಸ್ಥಾನದಲ್ಲಿ ಗವರ್ನಮೆಂಟಿನವರು ಪಟ್ಟಣಗಳ ಮತ್ತೂ ಗ್ರಾಮಾಂತರಗಳ ಆರೋಗ್ಯ ಸ್ಥಿತಿಯನ್ನು ಕ್ರಮಪಡಿಸಿ ಅಭಿವೃದ್ಧಿಪಡಿಸುವುದಕ್ಕೆ ಅಷ್ಟೊಂದು ಹಣವನ್ನು ಖರ್ಚುಮಾಡುತ್ತಿದ್ದಾಗ್ಯೂ ಅಭಿವೃದ್ಧಿಯೇನೋ ಅಷ್ಟು ಸ್ಪಷ್ಟವಾಗಿ ಆಗಿರುವಂತೆ ಕಂಡುಬರುವುದಿಲ್ಲ. ಹೆಲ್ತ್ ಆಫೀಸರುಗಳಿಗೂ, ಸ್ಯಾನಿಟರಿ ಇನ್ಸ್‌ಪೆಕ್ಟರುಗಳಿಗೂ ಸಂಬಳ ಮೊದಲಾದ ರೂಪದಲ್ಲಿ ಅನೇಕ ಹಣ ಖರ್ಚಾಗುತ್ತಿದೆ. ಆದರೆ ಆ ಖರ್ಚಿಗೆ ತಕ್ಕಷ್ಟು ಅಭಿವೃದ್ಧಿಯು ಕಣ್ಣಿಗೆ ಕಾಣುವುದಿಲ್ಲ. ಇದರಿಂದ ಗ್ರಾಮಾಂತರಗಳನ್ನು ಅಭಿವೃದ್ಧಿಗೆ ತರುವ ಕಾರ್ಯಗಳಿಗೆ ನಮ್ಮ ಗವರ್ನಮೆಂಟಿನವರು ನೇಮಕಮಾಡಿರುವ ಅಧಿಕಾರಿಗಳು ಲಾಯಖಾದವರೇ ಎಂದು ಸಂಶಯಪಡುತ್ತೇವೆ. ಅವರು ಅನೇಕ ಒಳ್ಳೇ ಪುಸ್ತಕಗಳನ್ನು ಓದಿ ಕಠಿಣವಾದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಾಗಿರಬಹುದು; ಅವರು ಸಂಚಾರಮಾಡಿ ಹೀಗೆ ಹೀಗೆ ಆಗಬೇಕೆಂದು ಸಲಹೆ ಕೊಡೋಣದರಿಂದಲೇ ಫಲವೇನೂ ಆಗುವುದಿಲ್ಲ. ಅವರು ಗ್ರಾಮಾಂತರಗಳಲ್ಲಿ ಪ್ರಜೆಗಳ ಪ್ರೀತಿವಿಶ್ವಾಸ ಭಕ್ತಿಭರವಸೆಗಳನ್ನು ಸಂಪಾದಿಸಿಕೊಂಡು, ಕೊಳಕು ನೀರುವುದರಿಂದ ಉಂಟಾಗುವ ಕೇಡುಗಳನ್ನು ಅವರಿಗೆಲ್ಲಾ ತಿಳಿಸಬೇಕಲ್ಲದೆ ಪಟ್ಟಣ ಊರು ಗ್ರಾಮಗಳನ್ನು ಚೊಕ್ಕಟವಾಗಿ ಇಟ್ಟುಕೊಳ್ಳುವ ವಿಧಾನಗಳನ್ನು ಹೇಳಿ ಕಲಿಸಿಕೊಡುತ್ತಾ ಬರಬೇಕಾಗಿದೆ. ಅವರು ಸ್ಥಳೀಯ ಅಧಿಕಾರಿಗಳೊಡನೆ ಕಲೆತು ಕಾರ್ಯಗಳು ಸಮಂಜಸವಾಗಿ ನಡೆಯುವಂತೆ ವರ್ತಿಸಬೇಕು. ಸ್ಯಾನಿಟರಿ ಇನ್ಸ್‌ಪೆಕ್ಟರಾದವನು ಕೆಲವು ದಿನಗಳ ತನಕ ಒಂದೇ ಗ್ರಾಮದಲ್ಲಿ ನಿಂತು ಪ್ರಜೆಗಳಿಗೆ ವಿವೇಕವನ್ನು ಕಲಿಸಬೇಕಲ್ಲದೆ ಗ್ರಾಮಪಂಚಾಯಿತಿ ನಡೆಯುವ ಕಾಲಗಳಲ್ಲಿ ಆಗಿಂದಾಗ್ಗೆ ಗ್ರಾಮಕ್ಕೆ ಹೋಗಿ ಜನರಿಗೆ ಅವಶ್ಯವಾದ ಸಲಹೆಗಳನ್ನು ಕೊಟ್ಟು ಪ್ರೋತ್ಸಾಹಪಡಿಸಬೇಕು. ನಮ್ಮ ಸೀಮೆಯ ಗ್ರಾಮ ಊರು ಕೇರಿಗಳು ನಿರ್ಮಲವಾಗಿಯೂ ಆರೋಗ್ಯಕರವಾಗಿಯೂ ಆಗುವುದೇನೋ ಬಹಳ ಸಾವಕಾಶವೇ ಸರಿ. ಆದರೆ ಗವರ್ನಮೆಂಟಿನವರು ಪ್ರಜೆಗಳ ಮೇಲೆ ವಿಶ್ವಾಸವನ್ನಿಟ್ಟುಕೊಂಡಿರುವಂಥಾ ಉತ್ಸಾಹಶಾಲಿಗಳನ್ನೇ ಸ್ಯಾನಿಟರಿ ಇಲಾಖೆಯ ನೌಕರರನ್ನಾಗಿ ನೇಮಿಸಬೇಕಲ್ಲದೆ ಅವರು ಅವಶ್ಯವಾದ ಅಭಿವೃದ್ಧಿ ಕಾರ್ಯಗಳನ್ನು ನಡಿಸುವುದಕ್ಕೆ ಅನುಕೂಲಿಸುವಂತೆ ಅವರಿಗೆ ದ್ರವ್ಯಸಹಾಯವನ್ನು ಒದಗಿಸಿಕೊಡಬೇಕು.

ಸ್ಯಾನಿಟರಿ ಬೋರ್ಡಿನವರು ವಿಶೇಷ ಕೆಲಸ ಕಾರ್ಯಗಳೇನೂ ಮಾಡಿರುವಂತೆ ಕಾಣುವುದಿಲ್ಲ. ಗ್ರಾಮಾಂತರಗಳಲ್ಲಿ ಅಲ್ಪ ಸ್ವಲ್ಪ ಆರೋಗ್ಯಾಭಿವೃದ್ಧಿಯ ಕಾರ್ಯಗಳು ನಡೆದಿರುತ್ತವೆ. ಆದರೂ ಇಂಥಿಂಥಾ ಕಾರ್ಯಗಳು ನಡೆದಿರುತ್ತವೆ ಎನ್ನುವುದು ಗೊತ್ತಾಗುವುದಿಲ್ಲ. ಸರ್ಕಾರದವರು ರಿಪೋರ್ಟಿನಲ್ಲಿ ಉಚಿತವಾದ ವಿದ್ಯಮಾನಗಳನ್ನು ತಿಳಿಸಬೇಕಾದದ್ದು ಅವಶ್ಯಕ. ಸ್ಕೂಲುಗಳಲ್ಲಿ ಓದುವ ವಿದ್ಯಾರ್ಥಿಗಳ ದೇಹಸ್ಥಿತಿ ಆರೋಗ್ಯವಿಚಾರಗಳ ಅಜಮಾಯಿಷಿಯು ಕೆಲವು ಮಟ್ಟಿಗೆ ಜರುಗಿದೆ. ಆ ವರುಷ ವೈದ್ಯರು 95,793 ಮಕ್ಕಳನ್ನು ಪರೀಕ್ಷಿಸಿರುವಂತೆ ಪ್ರಕಟವಾಗಿರುವುದು. ಈ ಕೆಲಸವು ಸಾರ್ಥಕವಾಗಿಯೂ ಸಮರ್ಪಕವಾಗಿಯೂ ನಡೆಯಬೇಕಾದ ಪಕ್ಷದಲ್ಲಿ ಸ್ತ್ರೀ ಪುರುಷ ವೈದ್ಯರುಗಳ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬೇಕಾಗುತ್ತದೆ.

ಮಲೆನಾಡು ಪ್ರದೇಶಗಳಲ್ಲಿ ನಡೆದಿರುವ ಕಾರ್ಯಗಳ ವಿಷಯದಲ್ಲಿ ಏನೇನೋ ಮಾಡುತ್ತಿರುವುದಾಗಿ ರಿಪೋರ್ಟಿನಲ್ಲಿ ನಮೂದುಮಾಡಲ್ಪಟ್ಟಿದೆ. ಆದರೆ ಮಲೆನಾಡಿನ ಕಷ್ಟಗಳನ್ನು ಪರಿಹಾರಮಾಡುವುದಕ್ಕೆ ಉಚಿತವಾದ ಕಾರ್ಯಗಳೇನೂ ಮುತುವರ್ಜಿಯಾಗಿ ನಡೆದಿರುವಂತೆ ಕಾಣಬರುವುದಿಲ್ಲ. ಕಮಿಟಿಗಳೇನೋ ಏರ್ಪಾಡಾಗಿರುತ್ತವೆ. ಮೆಂಬರುಗಳು ಸೇರಿ ಚರ್ಚೆಗಳನ್ನು ನಡಿಸಿ ಹೀಗೆ ಹೀಗೆ ಆಗಬೇಕೆಂದು ಸಲಹೆಗಳನ್ನು ಕೊಡುವರು. ಆದರೆ ನಡೆಯುವುದೇನೋ ಕಾರ್ಯತಃ ಬಹಳ ಸ್ವಲ್ಪವಾಗಿದೆ.

ಈಗಿನ ಕಾಲದ ಸ್ಯಾನಿಟೇಷನ್ ಕ್ರಮಗಳು ನಮ್ಮ ಜನರಿಗೆ ರುಚಿಸುವುದಿಲ್ಲ. ಜನಗಳಿಗೆ ಅವುಗಳ ವಿಷಯದಲ್ಲಿ ಅಷ್ಟೇನೂ ಅಭಿಮಾನವಿರುವಂತೆ ಕಾಣುವುದಿಲ್ಲ. ಏನಾಗಲಿ ಕೊಳಕಿಲ್ಲದ ನಿರ್ಮಲವಾದ ನೀರನ್ನು ಉಪಯೋಗಿಸಬೇಕೆಂದೂ, ದುರ್ವಾಸನೆ ಇಲ್ಲದಂಥಾ ಶುದ್ಧವಾದ ಗಾಳಿ ಇರುವ ಕಡೆ ಸಂಚಾರ ಮಾಡಬೇಕೆಂದೂ, ಕಸ ರೊಜ್ಜು ಮೊದಲಾದದ್ದೇನೂ ಇಲ್ಲದೆ ಚೊಕ್ಕಟವಾಗಿರುವ ಮನೆಗಳಲ್ಲಿ ವಾಸಮಾಡಬೇಕೆಂದೂ ಜನಗಳಿಗೆ ಒತ್ತಿ ಹೇಳುತ್ತಾ ಬಂದರೆ ಇದರಿಂದ ಎಷ್ಟೋ ಮೇಲಾದೀತೆಂದು ಧಾರಾಳವಾಗಿ ಹೇಳುತ್ತೇವೆ. ಸ್ಕೂಲುಗಳಲ್ಲಿ ವಿದ್ಯೆ ಕಲಿಯುವ ಮಕ್ಕಳಿಗೆ ಸಿಡುಬು, ವಾಂತಿಭೇದಿ, ಪ್ಲೇಗ್, ಈ ಮೊದಲಾದ ಅಂಟು ರೋಗಗಳು ಬಾರದಿರುವುದಕ್ಕೆ ಹೇಗೆ ಮುಂಜಾಗ್ರತೆಯಾಗಿರಬೇಕೆಂಬುದನ್ನು ಕಾಲಾನುಗುಣ್ಯವಾಗಿ ಹೇಳಿಕೊಟ್ಟು ಕಲಿಸುತ್ತಾ ಬರಬೇಕು. ಮಕ್ಕಳು ದೊಡ್ಡವರಾಗುತ್ತಾ ಬಂದನಾಗೆ ತಾವು ಕಲಿತದ್ದನ್ನು ಆಚರಣೆಗೆ ತರಲು ಎಷ್ಟೋ ಪ್ರೋತ್ಸಾಹವಾದೀತು. ಒಳ್ಳೆ ಗಾಳಿ ಬೆಳಕು ಬರುವುದಕ್ಕೂ ಚೊಕ್ಕಟವಾಗಿರುವುದಕ್ಕೂ ಸಹಾಯವಾಗುವ ಮನೆಗಳನ್ನು ಹೇಗೆ ಕಟ್ಟಬೇಕೆಂಬ ವಿಷಯದಲ್ಲಿ ಜನಗಳಿಗೆ ಪದೇ ಪದೇ ಒತ್ತಿಹೇಳುತ್ತಾ ಬರಬೇಕಾಗಿದೆ. ಗ್ರಾಮಸ್ಥರು ತಮ್ಮ ಮನೆಗಳೊಳಗೇ ತಮ್ಮ ಗೋಕಾಯಿಗಳನ್ನು ಕಟ್ಟಿಕೊಳ್ಳದೆ ದೂರ ಸ್ಥಳದಲ್ಲಿ ಕಟ್ಟಬೇಕೆಂದೂ, ತಮ್ಮ ಗೊಬ್ಬರ ಗೋದನ್ನು ಗ್ರಾಮದ ಹೊರಪಾರ್ಶ್ವದಲ್ಲಿ ಶೇಖರಮಾಡಬೇಕೆಂದೂ ಆಗಾಗ್ಗೆ ಹೇಳಿ ಆ ರೀತಿ ಅವರುಗಳಿಂದ ಮಾಡಿಸುತ್ತಾ ಬರಬೇಕು. ಕುಡಿಯುವುದಕ್ಕೆ ನಿರ್ಮಲವಾದ ನೀರನ್ನು ಒದಗಿಸಿಕೊಳ್ಳುವಂತಾಗಬೇಕು; ಇಲ್ಲವಾದರೆ ಕೊಳಕಾದ ನೀರನ್ನು ಕುಡಿಯೋಣದರಿಂದ ಅನೇಕ ವೇಳೆ ನಾನಾ ರೋಗಗಳು ಹುಟ್ಟುತ್ತವೆ. ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಇಷ್ಟು ಸುಲಭವಾಗಿರುವ ಮೇಲ್ಕಂಡ ಕ್ರಮಗಳನ್ನು ಅನುಸರಿಸಿದ ಪಕ್ಷದಲ್ಲಿ ಮೃತಪಡುವವರ ಸಂಖ್ಯೆಯೂ, ಕಾಯಿಲೆಕಸಾಲೆಗಳನ್ನು ಅನುಭವಿಸುವವರ ಸಂಖ್ಯೆಯೂ ದಿನಕ್ರಮೇಣ ಬಹಳ ಮಟ್ಟಿಗೂ ಕಡಮೆಯಾಗುವುದರಲ್ಲಿ ಸಂಶಯವಿಲ್ಲ.

ನನ್ನ ಧರ್ಮವೇನೆಂದು ತಿಳುಕೊಳ್ಳುವದು ಹ್ಯಾಗೆ ?

ಈ ನವನಾಗರಿಕತೆಯ ಕಾಲದಲ್ಲಿ ನಮ್ಮ ಜನಗಳು ಹೊಸ ಹೊಸ ವಿಷಯಗಳನ್ನು ಕಲಿತುಕೊಳ್ಳುತ್ತಿದ್ದಾರೆ. ಅನಾದಿಯಿಂದಲೂ ಬಂದಿರುವ ನಮ್ಮ ಪದ್ಧತಿಗಳು ಬದಲಾಗುತ್ತವೆ. ನಮ್ಮ ತಂದೆಗಳು ಮಾಡುತ್ತಿದ್ದ ಅನೇಕ ಕಾರ್ಯಗಳನ್ನು ಈಗ ಜನರು ಮಾಡುವದಿಲ್ಲ. ಅವರು ಕಟಾಕ್ಷದಿಂದ ಮಾಡದೆ ಬಿಟ್ಟಿದ್ದ ಅನೇಕ ಕಾರ್ಯಗಳನ್ನು ಈಗ ಬಹಳ ಮಂದಿ ಬಹಿರಂಗವಾಗಿ ಮಾಡುತ್ತಿದ್ದಾರೆ. ಜಾತಿಯ ಕಟ್ಟಳೆಗಳು ಜನಗಳನ್ನು ಬಹು ಕ್ರಮದಲ್ಲಿ ಇಟ್ಟಿದ್ದವು. ಆದರೆ ಈಗ ಜನಗಳು ಇಂಥ ಅನೇಕ ಕಟ್ಟಳೆಗಳನ್ನು ಮೀರಿ ನಡೆಯುತ್ತಾರೆ. ಇದರ ವಿಷಯದಲ್ಲಿ ಯಾರೂ ಲಕ್ಷ್ಯಕೊಡುವದಿಲ್ಲ. ಇಂಥ ಬದಲಾವಣೆಗಳು ಆಗುತ್ತಿರುವ ಕಾಲದಲ್ಲಿ ನಾನು ನನ್ನ ಧರ್ಮವೇನೆಂದು ತಿಳುಕೊಳ್ಳುವದು ಹ್ಯಾಗೆ ?

ನಮ್ಮಲ್ಲಿ ಪ್ರತಿಯೊಬ್ಬರೂ ಒಂದೊಂದು ಜಾತಿಗೆ ಸೇರಿದವರಾಗಿದ್ದೇವೆ. ಆದರೆ ಈಗಿನ ಕಾಲದಲ್ಲಿ ಜಾತಿಯ ಕಟ್ಟಳೆಗಳನ್ನು ಯಾರೂ ಲಕ್ಷ್ಯಮಾಡುವದಿಲ್ಲ. ನನ್ನ ಜಾತಿಗೆ ಸೇರುವ ಇತರರು ನಡೆಯುವಂತೆ ನಾನೂ ನಡೆಯುತ್ತಾ ಬಂದರೆ, ನನ್ನ ನಡತೆಯು ಜಾತಿಯ ಕಟ್ಟಳೆಗೆ ವಿರೋಧವಾಗಿದ್ದಾಗ್ಯೂ, ಯಾರೂ ನನ್ನ ಮೇಲೆ ತಪ್ಪುಹೊರಿಸುವದಿಲ್ಲ. ಆದರೆ ನಾನೊಬ್ಬನು ಮಾತ್ರ ನನ್ನ ಜಾತಿಯವರನ್ನು ಬಿಟ್ಟು ನನ್ನ ಮನಸ್ಸಿಗೆ ಒಪ್ಪಿಗೆಯಾದ ಬೇರೊಂದು ರೀತಿಯಲ್ಲಿ ನಡೆದರೆ, ಆಗ ಅವರು ನನ್ನ ಮೇಲೆ ಅಪರಾಧ ಹೊರಿಸಿ ನನಗೆ ತೊಂದರೆಯನ್ನುಂಟುಮಾಡುತ್ತಾರೆ. ಇಂಥ ಸಂದರ್ಭದಲ್ಲಿ ನಾನು ಮಾಡತಕ್ಕದ್ದೇನು ?

ನಾನು ನನ್ನ ಮತದ ಧರ್ಮವನ್ನು ಚೆನ್ನಾಗಿ ಓದಿ ಮನದಟ್ಟುಮಾಡಿಕೊಂಡು ಅದರ ಪ್ರಕಾರ ನಡೆಯುವದಕ್ಕೆ ಪ್ರಯತ್ನಪಟ್ಟರೆ, ಜನರು ನನ್ನನ್ನು ನೋಡಿ ನಗುತ್ತಾರೆ. ಧರ್ಮಶಾಸ್ತ್ರದ ವಿಧಿಗೆ ಅನುಗುಣವಾಗಿಯೂ ನಮ್ಮ ತಂದೆಗಳು ಹೋದ ಮಾರ್ಗದಲ್ಲಿಯೂ ನಡೆಯುವದಕ್ಕೆ ಪ್ರಯತ್ನಪಡುತ್ತೇನೆಂದು ನಾನು ಜನಗಳಿಗೆ ತೋರಿಸಿಕೊಟ್ಟರೆ, ಅವರಲ್ಲಿ ಒಬ್ಬರಾದರೂ ನನ್ನ ನಡತೆಗೆ ಮೆಚ್ಚುವದಿಲ್ಲ. ನಾನು ನನ್ನ ಮತವನ್ನು ಸಂಪೂರ್ಣವಾಗಿ ವಿಸರ್ಜಿಸಿ ಮತ್ತೊಂದನ್ನು ಅವಲಂಬಿಸಿದರೆ, ಜನರು ನನ್ನನ್ನು ದೂಷಣೆಮಾಡುತ್ತಾರೆ. ನಾನೇನು ಮಾಡಲಿ ?

ಈಗಿನ ಕಾಲದಲ್ಲಿ ಅನೇಕ ಮಂದಿ ಇಂಥ ಸ್ಥಿತಿಯಲ್ಲಿದ್ದಾರೆ. ಒಳ್ಳೆಯವರಾಗಿ ಬದುಕುವದು ಅವರಿಗೆ ಬಹಳ ಕಷ್ಟಕರವಾಗಿದೆ. ಜನಗಳು ಅನಾದಿಯಿಂದ ಬಂದಿರುವ ಪದ್ಧತಿಗಳನ್ನೂ ಕ್ರಮಗಳನ್ನೂ ಉದಾಸೀನಮಾಡುತ್ತಾರೆ. ನವೀನವಾದ ಪದ್ಧತಿಗಳನ್ನು ಅನುಸರಿಸುತ್ತಾರೆ. ಆದರೆ ಯಾವನಾದರೂ ತನ್ನ ಜಾತಿಯನ್ನು ಬಿಟ್ಟು ಮತಾಂತರ ಹೊಂದಬಾರದು. ಇಂಥ ಕಾಲದಲ್ಲಿ ಅನೇಕ ಮಂದಿ ಮತ ವಿಷಯದಲ್ಲಿ ಕೇವಲ ಅಲಕ್ಷ್ಯಭಾವದಿಂದಲೂ ನಿಶ್ಚಿಂತೆಯಿಂದಲೂ ಇರುತ್ತಾರೆ. ಹಿಂದೂ ಮುಂದೂ ಯೋಚಿಸದೆ ಇತರರು ನಡೆಯುವಂತೆ ತಾವೂ ನಡೆಯುತ್ತಾರೆ. ವಿವೇಕಿಗಳು ನಡೆಯತಕ್ಕಂಥ ರೀತಿಯು ಇದಲ್ಲ.

ಪ್ರತಿಯೊಬ್ಬ ಯುವಕನೂ ಯುವತಿಯೂ—ಇದು ನಮ್ಮ ಪದ್ಧತಿ, ನಮ್ಮ ಜನಗಳು ಹೀಗೆ ಮಾಡುತ್ತಾರೆ, ಆದಕಾರಣ ನಾನೇನು ಮಾಡಲಿ ? ಎಂದು ನೆವವನ್ನು ಕಲ್ಪಿಸದೆ ತನ್ನ ನಡತೆಗೆ ತಕ್ಕ ಕಾರಣವನ್ನು ಹೇಳ ಶಕ್ತನಾಗಿಯೂ ಶಕ್ತಳಾಗಿಯೂ ಇರಬೇಕು. ದೇವರು ನಮ್ಮಲ್ಲಿ ಪ್ರತಿಯೊಬ್ಬರಿಗೂ ಬುದ್ಧಿಯನ್ನೂ ಮನಸ್ಸಾಕ್ಷಿಯನ್ನೂ ದಯಪಾಲಿಸಿರುತ್ತಾನೆ. ಇವುಗಳನ್ನು ನಾವು ಉಪಯೋಗಿಸಿ ನಮ್ಮ ನಮ್ಮ ಮತಗಳನ್ನೂ ಮತಾಚಾರಗಳನ್ನೂ ಪರಿಶೋಧನೆಮಾಡಿ ಅವುಗಳು ನ್ಯಾಯವಾದವುಗಳೋ ಅಲ್ಲವೋ ಎಂಬುವದನ್ನು ಉಚಿತವಾಗಿ ಮನದಟ್ಟುಮಾಡಿಕೊಳ್ಳಬೇಕು. ಒಂದು ಕಾರ್ಯವು ನ್ಯಾಯವಾದದ್ದೆಂದು ತೋರದಿದ್ದರೆ, ಅಥವಾ ಅದು ನಿಷ್ಪ್ರಯೋಜನವಾದದ್ದಾಗಿದ್ದರೆ, ಇತರರು ಅದನ್ನು ಮಾಡುತ್ತಿರುವ ಅಥವಾ ಅದು ಪದ್ಧತಿಯಾಗಿರುವ ಮಾತ್ರಕ್ಕೇನೇ ನಾವು ಯಾಕೆ ಸುಮ್ಮನೆ ಅದನ್ನು ಮಾಡಬೇಕು ? ವಿದ್ಯಾವಂತರೂ ವಿವೇಕಿಗಳೂ ಆಗಿರುವವರು ಕಾರ್ಯಾಕಾರ್ಯಗಳನ್ನು ವಿಚಾರದಿಂದ ಪರೀಕ್ಷಿಸಿ ಮನದಟ್ಟುಮಾಡಿಕೊಳ್ಳುವರು. ಅದು ವ್ಯರ್ಥವಾದದ್ದೆಂದು ಕಂಡುಬಂದಲ್ಲಿ ಅದನ್ನು ಬಿಟ್ಟುಬಿಡುವರು. ಒಂದು ಹೊಸ ಪದ್ಧತಿಯು ನ್ಯಾಯವಾದದ್ದಾಗಿಯೂ ಪ್ರಯೋಜನಕಾರಿಯಾಗಿಯೂ ಕಂಡುಬಂದರೆ, ಬುದ್ಧಿವಂತರು ಅದನ್ನು ಕೈಕೊಳ್ಳುವರು. ಅವರ ಬಂಧುಮಿತ್ರರು ಅವರ ವಿಷಯದಲ್ಲಿ ಏನು ಹೇಳಿದಾಗ್ಯೂ ಲಕ್ಷ್ಯಮಾಡುವದಿಲ್ಲ.

ಮತ ವಿಚಾರದಲ್ಲಿಯೂ ಹೀಗೆಯೇ ಇರಬೇಕು. ನಾವು ಅವನ್ನು ಪರಿಶೋಧಿಸಿ ನಾವು ಒಳ್ಳೆಯವರಾಗುವದಕ್ಕೂ ಒಳ್ಳೆಯ ಕಾರ್ಯಗಳನ್ನು ಮಾಡುವದಕ್ಕೂ ಅದು ನಮಗೆ ವಾಸ್ತವವಾಗಿ ಸಹಾಯಮಾಡುತ್ತದೋ ಎಂದು ನೋಡತಕ್ಕದ್ದು. ದೇವರು ನಮ್ಮಲ್ಲಿ ಪ್ರತಿಯೊಬ್ಬರಿಗೂ ಕರ್ತವ್ಯಾಕರ್ತವ್ಯಗಳ ವಿಮರ್ಶಾಜ್ಞಾನವನ್ನು ದಯಪಾಲಿಸಿದ್ದಾನೆ. ಇದರಿಂದ ಧರ್ಮವು ಯಾವದು ಅಧರ್ಮವು ಯಾವದೆಂದು ನಾವು ಹೇಳಬಲ್ಲೆವು. ನಾವು ಒಂದು ಕಾರ್ಯವನ್ನು ಪರೀಕ್ಷಿಸಿದ ಮೇಲೆ ಅದು ನಿಷ್ಪ್ರಯೋಜನವಾದದ್ದೆಂದು ನಮಗೆ ತೋರಿಬಂದರೆ, ಅಥವಾ ಅದನ್ನು ಮಾಡಬಾರದೆಂದು ನಮ್ಮ ಮನಸ್ಸಾಕ್ಷಿಯು ಹೇಳಿದರೆ, ಅಂಥ ಕಾರ್ಯವನ್ನು ನಾವು ಬಿಟ್ಟುಬಿಡಬೇಕು. ನವೀನವಾದ ಒಂದು ಕಾರ್ಯವು ನಮಗೆ ಪ್ರಯೋಜನಕರವಾದದ್ದೆಂದೂ ದೇವರನ್ನು ತಿಳಿಯುವದಕ್ಕೆ ಅದು ಸಹಕಾರಿಯಾಗಿದೆಯೆಂದೂ ನಮಗೆ ಕಂಡುಬಂದರೆ, ಅಥವಾ ಅದು ಒಳ್ಳೆಯದೆಂದು ನಮ್ಮ ಮನಸ್ಸಾಕ್ಷಿಯು ಹೇಳಿದರೆ, ನಾವು ಅದನ್ನು ಮಾಡಬೇಕು. ಇಂಥ ಸಂದರ್ಭದಲ್ಲಿ ನಮ್ಮ ಬಂಧುಮಿತ್ರರು ಇದಕ್ಕೆ ಆಕ್ಷೇಪಿಸಬಹುದು. ಆದರೆ ನಾವು ದೇವರು ನಮಗೆ ದಯಪಾಲಿಸಿರುವ ತಿಳುವಳಿಕೆಗೂ ಮನಸ್ಸಾಕ್ಷಿಗೂ ಅನುಗುಣವಾಗಿ ನಡೆದುಕೊಳ್ಳಬೇಕೇ ಹೊರತು ವ್ಯರ್ಥವಾದ ಪದ್ಧತಿಗಳನ್ನು ಸುಮ್ಮನೆ ಕೈಕೊಳ್ಳುತ್ತಾ ಬರಬಾರದು. ವಿವೇಕಿಗಳಲ್ಲಿ ಪ್ರತಿಯೊಬ್ಬನೂ ಪರೀಕ್ಷೆಮಾಡುವದಕ್ಕೆ ತನ್ನ ಬುದ್ಧಿಯನ್ನು ಉಪಯೋಗಿಸಿ ತಾನು ಮಾಡುವ ಕಾರ್ಯವು ಧರ್ಮವೋ ಅಧರ್ಮವೋ ಎಂದು ತಿಳಿಯುವದಕ್ಕಾಗಿ ತನ್ನ ಮನಸ್ಸಾಕ್ಷಿಯನ್ನು ಕೇಳುವನು. ಅವನ ಬುದ್ಧಿಯೂ ಮನಸ್ಸಾಕ್ಷಿಯೂ—ಹಳೆಯದು ಪ್ರಯೋಜನಕಾರಿಯಲ್ಲ; ಹೊಸದು ಒಳ್ಳೆಯದು ಎಂದು ಹೇಳಿದರೆ, ಅವನು ಹಳೆಯದನ್ನು ವಿಸರ್ಜಿಸಿಬಿಟ್ಟು ಹೊಸದನ್ನು ಕೈಕೊಳ್ಳುವನು. ಇದರ ದೆಸೆಯಿಂದ ಏನೇ ಸಂಭವಿಸಿದಾಗ್ಯೂ ಅವನು ಲಕ್ಷ್ಯಮಾಡುವದಿಲ್ಲ.

ಅವನು ಯಾವಾಗಲೂ ದೇವರು ತನಗೆ ಸಹಾಯಮಾಡಿ ತನ್ನನ್ನು ನಡಿಸುತ್ತಾ ಬರಬೇಕೆಂದು ಆತನಿಗೆ ಪ್ರಾರ್ಥನೆಮಾಡುವನು. ಅವನು ಯಥಾರ್ಥ ಮನಸ್ಸಿನಿಂದ ಪ್ರಾರ್ಥಿಸಿದರೆ, ದೇವರು ಅವನಿಗೆ ಶ್ರೇಷ್ಠ ಜ್ಞಾನವನ್ನು ದಯಪಾಲಿಸಿ ಸಹಾಯಮಾಡುವನು. ಈ ರೀತಿಯಲ್ಲಿ ಯಥಾರ್ಥವಂತನು ತನ್ನ ಸುತ್ತುಮುತ್ತಲೂ ಎಷ್ಟೋ ಬದಲಾವಣೆಗಳಾಗುತ್ತಿದ್ದಾಗ್ಯೂ, ತಾನು ಕೈಕೊಳ್ಳಬೇಕಾದ ಧರ್ಮವೇನೆಂಬುವದನ್ನು ಉಚಿತವಾಗಿ ಮನದಟ್ಟುಮಾಡಿಕೊಳ್ಳುವನು.

ಯುದ್ಧದ ಸಮಾಚಾರಗಳು.

ವೆರ್ಡೂನ್ನಲ್ಲಿ ಘೋರವಾದ ಕದನಗಳು.

ಮೆಸೊಪೊಟೇಮಿಯಾದಲ್ಲಿ ಬ್ರಿಟಿಷರ ಜಯ.

ಕಳೆದ ವಾರ ಬಂದಿರುವ ತಂತಿವರ್ತಮಾನಗಳು ವೆರ್ಡೂನ್ ಬಳಿ ನಡೆದ ಘೋರವಾದ ಕದನಗಳ ವೃತ್ತಾಂತವನ್ನೇ ವಿಶೇಷವಾಗಿ ಹೇಳುವವು. ಅಲ್ಲದೆ ಮೆಸೊಪೊಟೇಮಿಯ, ಪೂರ್ವ ಆಫ್ರಿಕಾ ಮುಂತಾದ ಕಡೆಗಳಲ್ಲಿ ನಮ್ಮ ಕಡೆಯವರು ಮುಂದರಿಸಿ ನುಗ್ಗಿ ಹೋಗಿರುತ್ತಾರೆ.

ಪಶ್ಚಿಮ ರಣರಂಗದಲ್ಲಿ.

ಬ್ರಿಟಿಷ್ ಸೈನಿಕರು ಕಾಪಾಡಿಕೊಂಡಿರುವ ಯುದ್ಧದ ಸಾಲಿನಲ್ಲೇ ಅಪಾರ ಕದನಗಳಾಗಿರುತ್ತವೆ. ಫಿರಂಗಿ ಗುಂಡುಗಳ ಹಾರಾಟವೂ, ಸುರಂಗಗಳನ್ನು ಹಾರಿಸುವುದೂ ಹೆಚ್ಚಾಗಿತ್ತು. ಜರ್ಮನಿಯವರು ನುಗ್ಗಿಬಂದು ಆಕ್ರಮಿಸಿಕೊಂಡಿದ್ದ ಕಂದಕಗಳನ್ನು ಬ್ರಿಟಿಷರು ಮತ್ತೆ ಗೆದ್ದು ಸ್ವಾಧೀನಪಡಿಸಿಕೊಂಡರು. ಬ್ರಿಟಿಷರು ಜರ್ಮನಿಯವರಿದ್ದ ಒಂದು ಕಂದಕದೊಳಕ್ಕೆ ನುಗ್ಗಿ ಹತ್ತು ಮಂದಿ ಯುದ್ಧಭಟರನ್ನು ಕೊಂದುಹಾಕಿದರು. ಜರ್ಮನಿಯವರು ಒಂದು ತರದ ಗುಂಡನ್ನು ಹೊಡೆದರು. ಅದು ಒಡೆದ ಕೂಡಲೆ ಕರಕೇವಾರಿ ವಾಯುಗಳು ಕರಡಿಕೊಂಡು ಸೈನಿಕರಿಗೆ ಬಡಿದು ಅವರನ್ನು ಗೋಳೋ ಎಂದು ಅಳುವಂತೆ ಮಾಡುತ್ತದೆ. ಅನೇಕ ಸೈನಿಕರು ಗುಂಡು ಹೊಡೆಯಲಾರರು. ಅಂಥಾ ಸಮಯದಲ್ಲಿ ಜರ್ಮನಿಯವರು ಮೂರು ಸಲ ಅವರ ಮೇಲೆ ನುಗ್ಗಿ ಕದನಮಾಡಿದರು. ಒಂದು ಸಲ ನುಗ್ಗಿ ಬಂದಾಗ ಅವರು ಬ್ರಿಟಿಷರ ಕಂದಕಗಳೊಳಕ್ಕೆ ಪ್ರವೇಶಮಾಡಿದರು. ಆದರೇನು ? ಬ್ರಿಟಿಷರು ಕೂಡಲೇ ಅವರನ್ನು ಹಿಂದಕ್ಕೆ ಓಡಿಸಿಬಿಟ್ಟರು. 25 ಶವಗಳು ಬಿದ್ದವು, ಹಲವರನ್ನು ಬ್ರಿಟಿಷರು ಸೆರೆಹಿಡಿದರು. ಈ ಕದನದಲ್ಲಿ ಬ್ರಿಟಿಷರ ಕಡೆ ಕೆಲವರನ್ನು ಶತ್ರುಗಳು ಸೆರೆಹಿಡಿದರು. ಈ ಕದನಗಳು ಬಹಳ ಸಣ್ಣವು; ಇವುಗಳಿಂದ ಜಯಾಪಜಯಗಳೇನೂ ನಿರ್ಧಾರವಾಗುವುದಿಲ್ಲ.

ಕಳೆದ ವಾರವೆಲ್ಲಾ ಜರ್ಮನಿಯವರು ವೆರ್ಡೂನ್ ಬಳಿ ಯುದ್ಧಮಾಡುತ್ತಲೇ ಬಂದಿದ್ದಾರೆ. ಕೆಲವು ದಿನಗಳಲ್ಲಿ ಅವರು ಬಹಳ ರೋಷಾವೇಶದಿಂದ ನುಗ್ಗಿ ಕದನ ಮಾಡಿದರು. ವೆರ್ಡೂನಿನ ಸುತ್ತಲೂ ಸುಮಾರು 5,00,000 ಸೈನ್ಯವನ್ನು ತಂದಿಟ್ಟಿದ್ದಾರೆ. ಇವರಲ್ಲಿ ಜರ್ಮನಿಯ ಅತ್ಯಂತ ಪರಾಕ್ರಮವುಳ್ಳ ಸೈನಿಕರೂ ಸೇರಿರುವರು. ಇವರೆಲ್ಲಾ 25 ರಿಂದ 31 ವರುಷ ವಯಸ್ಸಿನವರು. ಇವರು ಬಹಳ ಶೌರ್ಯವನ್ನು ತೋರಿಸಿ ಯುದ್ಧಮಾಡಿದಾರೆ. ಆದಾಗ್ಯೂ ಅವರು ಭೂಪ್ರದೇಶವನ್ನು ಗೆದ್ದುಕೊಳ್ಳಲಾರದೆ ಹೋದರು. ಯುದ್ಧಸಾಲಿನ ಒಂದು ಕಡೆ ಅವರು ಫ್ರೆಂಚರ ಕೆಲವು ಕಂದಕಗಳನ್ನು ಗೆದ್ದು ಆಕ್ರಮಿಸಿಕೊಂಡರು. ಆದರೆ ಅತ್ಯಂತ ಪ್ರಮುಖವಾದ ಯುದ್ಧಸಾಲಿನಲ್ಲಿ ಫ್ರೆಂಚರು ಜರ್ಮನಿಯವರ ಕೆಲವು ಕಂದಕಗಳನ್ನು ಗೆದ್ದುಕೊಂಡಿರುವರು. ಕಳೆದ ವಾರ ಜರ್ಮನಿಯವರು ಅಪಾರ ನಷ್ಟವನ್ನು ಅನುಭವಿಸಿದರು; ಅವರು ಗೆದ್ದದ್ದೇನೋ ಬಹಳ ಸ್ವಲ್ಪ.

ಬಹಳ ಸೂಕ್ಷ್ಮವಾಗಿ ಲೆಕ್ಕಾಚಾರ ಮಾಡಿದ್ದರಲ್ಲಿ ಏಪ್ರಿಲ್ ತಾ. 1 ರ ವರೆಗೆ ಜರ್ಮನಿಯವರ ಕಡೆ 2,00,000 ಸೈನ್ಯ ನಷ್ಟವಾಯಿತೆಂದೂ, ಆ ಪೈಕಿ ಅವರು ಫ್ರೆಂಚರ ಮೇಲೆ ನುಗ್ಗಿ ಕದನ ಮಾಡಿದ್ದರಲ್ಲಿ 1,50,000 ಯುದ್ಧಭಟರನ್ನು ಕಳೆದುಕೊಂಡರೆಂದೂ, ಉಳಿದವರು ಫಿರಂಗಿ ಸೈನಿಕರಲ್ಲೂ ರಿಜರ್ವ್ ನಲ್ಲೂ ಇದ್ದವರೆಂದೂ ಗೋಚರವಾಗುವುದು. ಫ್ರೆಂಚರ ಕಡೆಯೂ ಬಹಳ ಸೈನ್ಯ ನಷ್ಟವಾಗಿದೆ; ಅದು ಜರ್ಮನಿಯವರ ನಷ್ಟದಲ್ಲಿ ಮೂರನೇ ಒಂದು ಅಥವಾ ನಾಲ್ಕನೇ ಒಂದು ಅಂಶವಾಗಬಹುದು. ಜರ್ಮನಿಯವರ ಕಡೆ ಅಪಾರ ಸೈನ್ಯಗಳು ನಷ್ಟವಾದದ್ದರಿಂದ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಹೊಸ ಸೈನಿಕರನ್ನು ತಂದು ಭರ್ತಿಮಾಡಿಕೊಳ್ಳಲಾರದೆ ಹೋಗಿರುತ್ತಾರೆ. ಈಗ ಹೊಸದಾಗಿ ಭರ್ತಿಯಾಗುತ್ತಿರುವ 18 ವಯಸ್ಸಿನ ಹುಡುಗರನ್ನು ಒಡ್ಡುತ್ತಿರುವರು. ಕೆಲವು ಸೈನಿಕರು ಯುದ್ಧ ಸಾಲಿಗೆ ಹೋಗುವುದಿಲ್ಲವೆಂದು ತಿರಸ್ಕಾರ ಮಾಡಿಬಿಟ್ಟರು. ಇದಕ್ಕೋಸ್ಕರ ಸುಮಾರು ನಾಲ್ವತ್ತು ಮಂದಿಯನ್ನು ಗುಂಡು ಹೊಡೆದು ಕೊಲ್ಲಿಸಿದರೆಂದು ಹೇಳಲಾಗಿದೆ.

ಎರಡು ಕಡೆಗಳಲ್ಲೂ ವಿಮಾನಯಂತ್ರಗಳು ಬಹಳ ಚಟುವಟಿಕೆಯಾಗಿ ಕಾರ್ಯಗಳನ್ನು ನಡಿಸಿರುವವು. ಎರಡು ಕಡೆಗಳಲ್ಲೂ ನಷ್ಟಗಳು ಸಂಭವಿಸಿರುತ್ತವೆ. ಜರ್ಮನಿಯವರ ಅತಿ ವೇಗವುಳ್ಳ ನಾಲ್ಕು ವಿಮಾನಯಂತ್ರಗಳನ್ನು ನಮ್ಮ ಕಡೆಯವರು ನಾಶಮಾಡಿದರು, ಇಲ್ಲವೇ ಕಿತ್ತುಕೊಂಡರು.

ಜರ್ಮನಿಯವರು ವೆರ್ಡೂನ್ ಕೋಟೆಯನ್ನು ಗೆಲ್ಲುವುದಕ್ಕೆ ಸುಮಾರು 2,00,000 ಸೈನ್ಯ ಬೇಕಾದೀತೆಂದು ಲೆಕ್ಕ ಹಾಕಿಕೊಂಡಿದ್ದರು. ಈಗ ಅವರ ಕಡೆ ಅದಕ್ಕಿಂತಲೂ ಹೆಚ್ಚು ಸೈನ್ಯ ನಷ್ಟವಾಗಿ ಹೋಯಿತು. ಐವತ್ತು ದಿನಗಳಿಗಿಂತಲೂ ಹೆಚ್ಚಾದರೂ ಯುದ್ಧ ಬೇರೆ ಕೊನೆಮುಟ್ಟಲಿಲ್ಲ. ಈಗ ನೋಡುವುದರಲ್ಲಿ ಅವರಿಗೆ ಫ್ರೆಂಚರ ಮುಂಭಾಗದ ಕಂದಕಗಳ ಸಾಲು ಮಾತ್ರವಲ್ಲದೆ ಹೆಚ್ಚೇನೂ ಲಭ್ಯವಾಗದೆ ಹೋಗಿರುವುದು. ಫ್ರೆಂಚರದರೋ ಶತ್ರುವಿನ ಮುತ್ತಿಗೆಗಳು ಎಷ್ಟೇ ಜೋರಾದಾಗ್ಯೂ ತಾವು ಬೇರೆ ಅವರಿಗೆ ಸಿಕ್ಕುವುದಿಲ್ಲವೆಂದು ಧೈರ್ಯಮಾಡಿಕೊಂಡಿದಾರೆ.

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದಲ್ಲಿ ವಿಶೇಷ ಯುದ್ಧಕಾರ್ಯಗಳಿಗೆ ಅವಕಾಶವಾಗ ದಂತೆ ಸ್ಥಿತಿಯು ಕೆಟ್ಟಿರುವುದು. ಹಲವು ಠಾಣ್ಯಗಳಲ್ಲಿ ಫಿರಂಗಿ ಗುಂಡುಗಳ ಪ್ರಯೋಗವು ಮುಂದೆ ಹೋಗುತ್ತಿದೆ. ಜರ್ಮನಿಯವರ ಕಂದಕಗಳಿಗೆ ಪ್ರವಾಹ ನುಗ್ಗುತ್ತಿರುವುದರಿಂದ ಕೆಲವು ಸೈನಿಕರು ಸೆರೆಸಿಕ್ಕಿ ಪತ್ರ ಬಿಟ್ಟರು. ರಷ್ಯನರು ಆಸ್ಟ್ರಿಯಾದವರ ಸೈನ್ಯದ ಮೇಲೆ ನುಗ್ಗಿ ಬಂದಾಗ ಅದನ್ನು ಹಿಮ್ಮೆಟ್ಟಿಸಿದರು. ಕದನಗಳು ಅಷ್ಟು ದೊಡ್ಡವಾಗಿ ನಡೆಯುತ್ತಾ ಇಲ್ಲ.

ಇಟಲಿ.

ಈ ಯುದ್ಧ ಸಾಲಿನಲ್ಲಿ ಫಿರಂಗಿ ಗುಂಡುಗಳ ಹೊಡೆದಾಟವು ಉದ್ದಕ್ಕೂ ಇದೆ. ಇಟಲಿಯವರು ಮುಂದಕ್ಕೆ ನುಗ್ಗಿ ಹೋಗುತ್ತಿರುವಂತೆ ಕಾಣು ತ್ತದೆ. ಒಂದು ಠಾಣ್ಯದಲ್ಲಿ ಇಟಲಿಯವರು 76 ಮಂದಿಯನ್ನೂ, ಇನ್ನೊಂದು ಕಡೆ ... ಮಂದಿಯನ್ನೂ ಸೆರೆ ಹಿಡಿದಿರುತ್ತಾರೆ.

ಇಟಲಿಯವರ ನಾಲ್ಕು ಸಮುದ್ರ ವಿಮಾನಗಳು—ಇವು ಸಮುದ್ರದ ಮೇಲೂ, ಭೂಮಿಯ ಮೇಲೂ ಸಂಚರಿಸಬಲ್ಲವು—ಸಮುದ್ರ ತೀರದಲ್ಲಿರುವ ಆಸ್ಟ್ರಿಯಾ ದವರ ಮುತ್ತಿಗೆಹಾಕಿದವು. ಅವು ನೀರಿನ ಮೇಲೆ ನಿಂತುಕೊಂಡಾಗ ಒಳಗಿದ್ದ ಸೈನಿಕರು ದಡದ ಮೇಲೆ ಹತ್ತಿದರು. ಇವರು ಅಲ್ಲಿದ್ದ ಒಂದು ಸೌಚ್ಛಾಸ್ತಂಭ ವನ್ನು ಕೆಡಿಸಿಬಿಟ್ಟು, ತಂತೀ ಕಂಭಗಳನ್ನೂ ತಂತಿಗಳನ್ನೂ ನಾಶಮಾಡಿ, ಒಂದು ಸೈನಿಕನನ್ನು ಹತ್ತಿಸಿ ಉರಿಸಿಬಿಟ್ಟು, ಹಡಗು ನಿಲ್ಲುವ ಸಮುದ್ರ ಭಾಗದ ಕಟ್ಟಡವನ್ನು ಹಾಳುಮಾಡಿ, ಕಡೆಗೆ ಎಲ್ಲರೂ ಸುರಕ್ಷಿತವಾಗಿ ವಾಪಸು ಬಂದರು.

ಟರ್ಕಿಯಲ್ಲಿ.

ಮೆಸೊಪೊಟೇಮಿಯಾದಲ್ಲಿ ಹವಾ ಸ್ಥಿತಿ ಕೆಟ್ಟಿದ್ದರೂ ಪ್ರವಾಹಗಳು ಹೆಚ್ಚಾ ಗಿದ್ದರೂ ಬ್ರಿಟಿಷರು ಮುಂದೆ ನುಗ್ಗಿ ಹೋಗುತ್ತಿದ್ದಾರೆ. ಟರ್ಕಿಯವರು ಒಂಭತ್ತು ಸಾಲಾದ ಕಂದಕಗಳನ್ನು ಒಂದರ ಹಿಂದೊಂದರಂತೆ ಒಂದೂವರೆ ಮೈಲಿ ದೂರದವರೆಗೆ ತೋಡಿಕೊಂಡಿದ್ದರು. ಅವರವರ ಮಧ್ಯೆ ನೂರು ಗಜಗಳ ಅಂತರವಿ ದ್ದಿತು. ಬ್ರಿಟಿಷರು ಬೆಳಕು ಹರಿಯುವುದಕ್ಕೆ ಮುಂಚೆಯೇ ತಮ್ಮ ಕಂದಕಗ ಳನ್ನು ಬಿಟ್ಟು ಹೊರಕ್ಕೆ ಬಂದು ನುಗ್ಗಿ ಸ್ವಲ್ಪ ಹೊತ್ತಿನೊಳಗಾಗಿ ಟರ್ಕಿಯವರ ಮೊದಲನೇ ಸಾಲಿನ ಕಂದಕಗಳನ್ನು ಗೆದ್ದು ಸ್ವಾಧೀನ ಪಡಿಸಿಕೊಂಡರು. ಬಳಿಕ ಟರ್ಕಿಯವರನ್ನು ಒಂದಾದ ಮೇಲೆ ಒಂದರಂತೆ ಅವರದ್ದು ಕಂದಕಗಳಿಂದ ಹೊರಕ್ಕೆ ಅಟ್ಟಿಸಿಕೊಂಡು ಅವರನ್ನು ಓಡಿಸಿ ಬಿಟ್ಟರು. ಅಲ್ಲಿ ಯುದ್ಧವು ಅಷ್ಟು ಘೋರವಾಗಿಯೇ ನಡೆಯಲಿಲ್ಲವಾದರೂ ಬ್ರಿಟಿಷರ ಕಡೆ ವಿಶೇಷ ನಷ್ಟ ಆಗಲಿಲ್ಲ. ಅಲ್ಲಿಂದ ಮುಂದಕ್ಕೆ ನುಗ್ಗಿ ಹೋಗುವುದಕ್ಕೆ ಪ್ರವಾ ಹಗಳು ಅಡಚಣೆ ಮಾಡಿರುವವು.

ಕಾಕಸ್ ಪರ್ವತ ಪ್ರಾಂತ್ಯದಲ್ಲಿ ಟ್ರೆಬಿಜೊಂಡಿನ ಪೂರ್ವಕ್ಕೆ ಟರ್ಕಿಯ ರು ರಷ್ಯಾದವರ ಮೇಲೆ ನುಗ್ಗಿ ಹೋಗಿ ಕದನವಾಡಿದರು. ಅವರಿಗೇ ಸೋಲು ಹಿಮ್ಮೆಟ್ಟಬೇಕಾಯಿತು. ರಷ್ಯಾದವರು ಅವರಿಗೆ ಸಿಗ ದಂತೆ ಠಾಣ್ಯಗಳಲ್ಲಿ ರಷ್ಯದವರು ಕ್ರಮವಾಗಿ ನುಗ್ಗಿ ಹೋಗುತ್ತಲಿದ್ದಾರೆ. ಟರ್ಕಿಯವರು ಹೊಸ ಸೈನ್ಯಗಳನ್ನು ಅಲ್ಲಿರುವವರ ಸಹಾಯಕ್ಕೆ ಕಳಿಸಿಕೊಡು ವರು. ಆದರೆ ಅವರಲ್ಲಿ ಹೆಚ್ಚು ಸೈನ್ಯ ಒದಗುವುದು ಪ್ರಯಾಸವಾಗಿದೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಸೆಲೋನಿಕಾ ಠಾಣ್ಯಗಳಲ್ಲಿ ಮಿತ್ರಮಂಡಲಿಯವರು ಬಲ್ಗೇರಿಯಾದವರ ಮೇಲೂ, ಬಲ್ಗೇರಿಯಾದವರು ಮಿತ್ರಮಂಡಲಿಯವರ ಮೇಲೂ ಫಿರಂಗಿ ಗುಂಡುಗಳನ್ನು ಹಾರಿಸುತ್ತಿರುವಂತೆ ಕಾಣುತ್ತದೆ. ಆದರೆ ಯಾವ ಪಕ್ಷದವರೂ ಮುಂದಕ್ಕೆ ನುಗ್ಗಿ ಹೋಗಲಿಲ್ಲ. ಬಹುಶಃ ಮಿತ್ರಮಂಡಲಿಯವರು ಸಮಯ ಒದಗಿದಾಗ ಏಕಕಾಲ ದಲ್ಲಿ ಸೈನ್ಯಗಳನ್ನು ನುಗ್ಗಿಸಬೇಕೆಂದು ಎದುರುನೋಡುತ್ತಿದ್ದಾರೆಂದು ತೋರುತ್ತದೆ.

ಈಚೆಗೆ ಕೆಲವು ಕಡೆ ಟರ್ಕಿಯವರಿಗೂ ಹಂಗೇರಿಯವರಿಗೂ, ಇನ್ನೊಂದು ಕಡೆ ಜರ್ಮನಿಯವರಿಗೂ ಬಲ್ಗೇರಿಯಾದವರಿಗೂ ಮನಸ್ತಾಪಗಳು ಹುಟ್ಟಿರುವಂತೆ ಹೇಳ ಲ್ಪಡುತ್ತದೆ. ಆಸ್ಟ್ರಿಯಾದವರು ಕೆಲವು ದಿನಗಳೊಳಗೆ ವೆರ್ಡನ್ ಪಟ್ಟಣ ಸ್ವಾಧೀನ ವಾಗುವುದೆಂದೂ, ಆಗ ಈ ಯುದ್ಧವೇ ಮುಕ್ತಾಯವಾಗುವುದೆಂದೂ ಹೇಳಿ ದ್ದರು. ಈಗ ನೋಡಿದರೆ ಅಲ್ಲಿ ಯುದ್ಧ ಪ್ರಾರಂಭವಾಗಿ ಐವತ್ತು ದಿನಗಳಿಂತ ಲೂ ಹೆಚ್ಚಾಗುತ್ತಿದ್ದರೂ ವೆರ್ಡನ್ ಜರ್ಮನಿಯವರ ಸ್ವಾಧೀನ ವಾಗಲಿಲ್ಲ. ಇದನ್ನು ನೋಡಿ ಬಲ್ಗೇರಿಯದವರಿಗೂ ಟರ್ಕಿಯವರಿಗೂ ಕಳವಳ ವಾಗುತ್ತಿದೆ.

ಪೂರ್ವ ಆಫ್ರಿಕಾದಲ್ಲಿ.

ಪೂರ್ವ ಆಫ್ರಿಕಾ ಒಂದು ಠಾಣ್ಯದಲ್ಲಿ ಶತ್ರುಪಕ್ಷದ ಒಂದು ಸಣ್ಣ ಸೈನ್ಯವನ್ನು ಬ್ರಿಟಿಷರು ಮುತ್ತಿಗೆಹಾಕಿಕೊಂಡು 17 ಮಂದಿ ಜರ್ಮನಿಯವರನ್ನೂ 400 ಮಂದಿ ದೇಶೀಯ ಸೈನಿಕರನ್ನೂ ಮೆಷೀನ್ ಫಿರಂಗಿಗಳ ಮತ್ತು ಮದ್ದು ಗುಂಡು ಗಳ ಸಹಿತ ಸೆರೆ ಹಿಡಿದುಕೊಂಡರು. ದಕ್ಷಿಣದಿಕ್ಕಿನಿಂದ ಪೋರ್ಚುಗೀಸರು ಜರ್ಮನಿಯವರ ಪೂರ್ವ ಆಫ್ರಿಕಾ ಎಂಬ ಸ್ವಾಸ್ಥ್ಯದೊಳಕ್ಕೆ ನುಗ್ಗಿ ಹೋಗಿ ಒಂದು ಪ್ರದೇಶವನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

ಜನರಲ್ ಸ್ಮಟ್ಸ್‌ಯವರು ಜರ್ಮನಿಯವರ ಸರ್ಕಾರಿ ಕಾಗದಪತ್ರಗಳನ್ನು ಪರಿಶೋಧಿಸಿದಾಗ ಅವುಗಳಲ್ಲಿ ಒಂದು ಹುಕುಮು ಸಿಕ್ಕಿದೆ. ಯುದ್ಧವು ಪ್ರಾರಂಭವಾಗುವುದಕ್ಕಿಂತ ಮೊದಲೇ ಈ ಕಾಗದ ಬರೆದದ್ದು. ಅದರಲ್ಲಿ ಜರ್ಮನಿಯ ಚಕ್ರವರ್ತಿಯವರು ಮಹಮ್ಮದೀಯರ ಮತ ಹರಡುವಂತೆ ಕಡೆಯ ಹುಕುಂ ಮಾಡಿದ್ದಾರೆ. ಅದರಲ್ಲಿ ಬರೆದಿರುವುದೇನೆಂದರೆ—ಅಧಿಕಾರ ದಲ್ಲಿರುವ ಅಧಿಕಾರದವನು ಮಹಮ್ಮದೀಯನಾಗಿರತಕ್ಕದ್ದು. ಮಸೀದಿಗಳೆಲ್ಲಾ ಸರ್ಕಾ ರದಿಂದ ಕಟ್ಟಿಸಲ್ಪಡಬೇಕು. ಸರ್ಕಾರದಿಂದ ಕ್ರಿಶ್ಚನರು ಪಡೆದವರಲ್ಲದೆ ಇತರ ರು ಪಾದ್ರಿ ವೃತ್ತಿಯನ್ನು ಮಾಡಕೂಡದು. ಹಂದಿಗಳನ್ನು ಹೆಚ್ಚಾಗಿ ಸಾಕಿ ಅಭಿ ವೃದ್ಧಿ ಮಾಡುವಂತೆ ಪ್ರೋತ್ಸಾಹಿಸಬೇಕು. ಜರ್ಮನಿಯವರು ಮುಸಲ್ಮಾನರ ಸ್ನೇಹಿತರೆಂದು ನಟನೆ ಮಾಡುವರು. ಪೂರ್ವ ಆಫ್ರಿಕದಲ್ಲಿ ನೋಡಿದರೆ ಜರ್ಮ ನಿಯವರು ಅವರನ್ನು ತಲೆಯೆತ್ತದಂತೆ ಅಡಗಿಸುತ್ತಿರುವರು.

ಇತರ ವಿಷಯಗಳು.

ಪ್ಯಾರಿಸ್ ಪಟ್ಟಣದಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಪಾರ್ಲಿಮೆಂಟ್ ಮೆಂಬರು ಗಳು ಒಂದು ಕಾನ್ಫರೆನ್ಸನ್ನು ನಡಿಸಿದರು. ಫ್ರೆಂಚ್ ಮೆಂಬರುಗಳನ್ನು ಬ್ರಿಟಿಷ್ ಸಾರ್ವಭೌಮರವರು ತಮ್ಮ ರಾಜಭವನಕ್ಕೆ ಕರಸಿಕೊಂಡು ಅವರಿಗೆ ಭೇಟಿ ದಯಪಾಲಿಸಿ ಅವರನ್ನು ಕುರಿತು—ಫ್ರೆಂಚರು ಈಗ ಇಲ್ಲಿಗೆ ಬಂದಿರುವುದರಿಂದ ಉಭಯ ಜನಾಂಗಗಳ ಅನ್ಯೋನ್ಯಾನುರಾಗಗಳು ವೃದ್ಧಿಯಾ ಗುವುದಕ್ಕೆ ಸಹಾಯವಾಗುತ್ತದೆಂದು ಅಪ್ಪಣೆ ಕೊಡಿಸಿದರು. ಯುದ್ಧವನ್ನು ಕೊನೆಯವರೆಗೂ ನಡಿಸುತ್ತಾ ಬರುವುದಕ್ಕೆ ಬ್ರಿಟಿಷರು ಮಾಡಿರುವ ಏರ್ಪಾಡುಗ ಳನ್ನು ಪ್ರಶಂಸೆ ಮಾಡಿದರು. ಮತ್ತು ಜರ್ಮನಿಯವರು ಫ್ರೆಂಚರ ರಾಜ್ಯದೊಳಕ್ಕೆ ನುಗ್ಗಿ ಧಾಂಧಲೆ ನಡಿಸಿದ್ದು ತಮಗೆ ಬಹಳ ದುಃಖವನ್ನುಂಟುಮಾಡಿದೆ ಎಂದೂ, ಜರ್ಮನಿಯವರಿಂದ ಇನ್ನು ಯಾವ ಅಪಾಯವೂ ಸಂಭವಿಸುವಹಾಗಿಲ್ಲವೆನ್ನುವುದು ಖಚಿತವಾಗುವ ತನಕ ಈ ಯುದ್ಧವನ್ನು ನಡಿಸುತ್ತಲೇ ಬರುತ್ತೀವೆಂದೂ, ಬ್ರಿಟಿಷರೂ ಫ್ರೆಂಚರೂ ಪ್ರಜಾಸ್ವಾತಂತ್ರ್ಯ ಮತ್ತು ಸೌಕರ್ಯಗಳಿಗಾಗಿಯೇ ಹೋರಾಡುತ್ತಾ ಬಂದಿದ್ದಾರೆಂದೂ, ದಿನಕ್ರಮೇಣ ಜಯಪ್ರದವು ತಮ್ಮಗಳನ್ನೇ ಸಮೀಪಿಸುತ್ತಿರುವ ಸಂಗತಿ ಸ್ಪಷ್ಟವಾಗಿ ಗೋಚರವಾಗುತ್ತಿದೆ ಎಂದೂ ಸಾರ್ವಭೌಮರವರು ಅಪ್ಪಣೆಕೊಡಿಸಿದರು.—ಔತಣ ಸಮಯದಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಯಾದ ಮಿ|| ಆಸ್ಕ್ವಿತ್‌ರವರು ಫ್ರೆಂಚ್ ಪಾರ್ಲಿಮೆಂಟಿನ ಮೆಂಬರು ಗಳನ್ನು ಕುರಿತು ಹೇಳಿದ ಅಭಿಪ್ರಾಯಗಳೇನೆಂದರೆ—ಮಿತ್ರಮಂಡಲಿಯವರು ಒಟ್ಟಾಗಿ ಸೇರಿ ಕೆಲಸವನ್ನು ನಿಟ್ಟಿಸಿಕೊಂಡು ಆಯುಧಗಳಿಗೆ ಕೈಹಾಕಿದ್ದಾರೆಯೋ ಆ ಉದ್ದೇಶವು ನೆರವೇರುವ ತನಕ ಕೆಳಗಿಡಲು ಒಪ್ಪುವುದಿಲ್ಲ. ಆ ಉದ್ದೇಶಗಳ್ಯಾವ ವೆಂದರೆ, ಸಕಲ ನಾಗರಿಕ ಜನಾಂಗಗಳ ಹಕ್ಕು ಸ್ವಾತಂತ್ರ್ಯಗಳೂ ಬೇರು ಪೇರಿಲ್ಲದೆ ಒಂದೇ ಸಮನಾಗಿರಬೇಕು; ರಾಜ್ಯ ರಾಜ್ಯಗಳ ಮಧ್ಯೆ ಹುಟ್ಟುವ ವಿಚಾರಗಳನ್ನು ವ್ಯವಸ್ಥೆ ಮಾಡುವುದಕ್ಕೆ ಮಿಲಿಟೇರಿಯನಿಜ ತಲೆ ಹಾಕದಂತಾಗ ಬೇಕು; ಮತ್ತು ಬೆಲ್ಜಿಯಮ್ ರಾಜ್ಯದ ಸ್ಥಿತಿಗತಿಯು ಮೊದಲಿದ್ದಂತೆ ಆಗ ಬೇಕು ಎಂಬುವುದನ್ನು ನೋಡಬೇಕು ಎಂಬುವುದು.

ಜರ್ಮನಿಯವರ ಸಬ್‌ಮೆರೀನುಗಳು ಕಳೆದ ವಾರವೂ ತಮ್ಮ ವಿನಾಶಕರ ವಾದ ಕಾರ್ಯಗಳಲ್ಲಿ ಮಗ್ನವಾಗಿದ್ದವು. ಅವು ಕಳೆದ ವಾರ ಇಪ್ಪತ್ತಾರು ಹಡಗುಗಳನ್ನು ಮುಳುಗಿಸಿರುತ್ತವೆ. ಈ ಪೈಕಿ ಬ್ರಿಟೀಷರದು ಹದಿನೇಳು, ಡೇನಿ ಷರದು ಮೂರು, ಫ್ರಾನ್ಸ್, ನಾರ್ವೆ, ಸ್ಪೈಯಿನ್, ಇಟಲಿ, ರಷ್ಯ, ಸ್ವೀಡನ್ ಈ ರಾಜ್ಯಗಳದು ಒಂದೊಂದು. ಫ್ರೆಂಚರ ಒಂದು ಸಬ್‌ಮೆರಿನು ಆಸ್ಟ್ರಿಯಾ ದವರ ಸೈನ್ಯಗಳನ್ನು ಸಾಗಿಸುವಂಥಾ ಜಹಜನ್ನು ಮುಳುಗಿಸಿರುತ್ತದೆ. ರಷ್ಯಾದ ವರ ಡಿಸ್ಟ್ರಾಯರೆಂಬ ಹಡಗು ಕಪ್ಪುಕಡಲಿನಲ್ಲಿ ಒಂದು ಸಬ್‌ಮೆರಿನನ್ನು ಅದುಕಿ ಮುಳುಗಿಸಿಬಿಟ್ಟಿತು.

ಮಿತ್ರಮಂಡಲಿಯವರು ಗ್ರೀಸಿಗೆ ಸೇರಿದ ಇನ್ನೊಂದು ದ್ವೀಪವನ್ನು ಆಕ್ರ ಮಿಸಿಕೊಂಡಿದ್ದಾರೆ. ಇದಕ್ಕೆ ಗ್ರೀಕ್ ಗವರ್ನಮೆಂಟಿನವರು ಒಪ್ಪದೆ ಪ್ರತಿಭಟಿ ಸಿರುವರು.

ಸರ್ಬಿಯಾ ಯುವರಾಜನಿಗೆ ಇಂಗ್ಲೆಂಡಿನಲ್ಲಿ ವಿಶೇಷವಾದ ಸತ್ಕಾರಗಳು ನಡೆದು ಈಗ ಆತನು ಅಲ್ಲಿಂದ ಹಿಂತಿರುಗಿದನು.

ಬ್ರಿಟಿಷರು ಹೊಲ್ಲಾಂಡಿನ ಮೇಲೆ ಸೈನ್ಯವನ್ನು ಕಳುಹಿಸುತ್ತಾರೆಂದು ಜರ್ಮನಿಯವರು ಹುಟ್ಟಿಸಿದ್ದರಿಂದ ಹೊಲ್ಲಾಂಡಿನಲ್ಲಿ ವಿಶೇಷ ಕಳವಳ ಉಂಟಾ ಯಿತು. ಆ ವರ್ತಮಾನದಲ್ಲಿ ನಿಜವೇನೂ ಇಲ್ಲವೆಂದು ತಿಳಿಸಲ್ಪಟ್ಟಿದೆ.

ಜರ್ಮನಿಯೊಳಗೆ ಕಾಫಿ ಮತ್ತು ಟೀ ಎಲ್ಲಾ ಮುಗಿಯುತ್ತಾ ಬಂದದ್ದನ್ನು ನೋಡಿ ಜರ್ಮನಿ ಸರ್ಕಾರದವರು ಹುಕುಂ ಕೊಟ್ಟು ವರ್ತಕರೇ ಮೊದಲಾದ ವರ ಬಳಿ ಇದ್ದ ಕಾಫಿ, ಟೀ ಗಳನ್ನು ಬಲಾತ್ಕಾರದಿಂದ ತರಿಸಿಟ್ಟುಕೊಂಡರಂತೆ

ಕಳೆದ ವಾರ ಇಂಗ್ಲೆಂಡಿನಲ್ಲಿ ಗಡಿಬಿಡಿಯನ್ನುಂಟುಮಾಡಿದ ... ಒಬ್ಬನನ್ನು ಸರ್ಕಾರದವರು ಹಿಡಿದು ಗುಂಡಿನಿಂದ ಹೊಡಿಸಿ ಕೊಲ್ಲಿಸಿದರು.

ಜರ್ಮನಿಯಲ್ಲಿ ಸೆರೆಯಾಗಿ ಹಿಡಿದಿಟ್ಟುಕೊಂಡಿರುವ ಯುದ್ಧಭಟರ ವಿಷ ಯದಲ್ಲಿ ಜರ್ಮನಿಯವರು ಒಂದು ಸರ್ಕಾರಿ ರಿಪೋರ್ಟನ್ನು ಪ್ರಕಟ ಮಾಡಿ ದಾರೆ. ಯುದ್ಧಾರಂಭದಲ್ಲಿ ಅವರು ಅಂಥಾ 17,000 ಸೈನಿಕರನ್ನು 10½ ಎಕರೆ ಯಷ್ಟು ವಿಸ್ತಾರವಾದ ಪ್ರದೇಶದಲ್ಲಿ ಬಂಧನದಲ್ಲಿ ಹಾಕಿದ್ದರು. ಆ ಸೈನಿಕರಿ ಗೆ ವಿಷಮಶೀತಜ್ವರ ಹುಟ್ಟಿತು. ಕೂಡಲೆ ಕಾವಲಿದ್ದ ಜರ್ಮನಿಯವರೆಲ್ಲಾ ಆ ಕ್ಯಾಂಪನ್ನು ತ್ಯಜಿಸಿ ಹೊರಟುಹೋದರು. ಅವರಾದ ಸುತ್ತಲೂ ಇದ್ದ ತಂತಿ ಗಳ ಬೇಲಿ ಹೊರಗಿನಿಂದ ಕ್ಯಾಂಪಿನಲ್ಲಿದ್ದ ಸೈನಿಕರಿಗೆ ಆಹಾರ ಪದಾರ್ಥಗಳನ್ನು ಕೊಳವೆಗಳಲ್ಲಿ ಹಾಕಿ ತಳ್ಳಿ ಕೊಡುತ್ತಿದ್ದರು. ಆರು ಮಂದಿ ಬ್ರಿಟಿಷ್ ಡಾಕ್ಟ ರುಗಳು ಕಾಯಿಲೆಯವರಿಗೆ ಚಿಕಿತ್ಸೆ ಮಾಡುತ್ತೇವೆಂದು ತಾವಾಗಿಯೇ ಒಪ್ಪಿ ಕೊಂಡು ಹೋದರು. ಕೆಲವು ಕಾಲದ ಮೇಲೆ ಆ ಪೈಕಿ ಮೂವರು ಡಾಕ್ಟರು ಗಳಿಗೆ ಅದೇ ರೋಗ ತಗಲಿ ಮೃತಪಟ್ಟರೆಂದು ತಿಳಿದುಬಂದಿದೆ

ಒಳದೇಶದ ವೃತ್ತಾಂತಗಳು.

ಮೊನ್ನೆ ಮಂಗಳವಾರ ರಾತ್ರಿ ರಾಜಧಾನಿಯಲ್ಲಿ ಒಂದು ಹದ ಒಳ್ಳೇ ಮಳೆ ಸುರಿಯಿತು.

ಬೆಂಗಳೂರು ಕೋಆಪರೇಟಿವ್ ಬ್ಯಾಂಕಿನಲ್ಲಿ ಗುಮಾಸ್ತೆಯಾಗಿದ್ದ ಸುಮಾರು 21 ವಯಸ್ಸಿನ ಮ|| ನರಸಿಂಹಯ್ಯಂಗಾರ್ರು ಕೊಳದಲ್ಲಿ ಬಿದ್ದು ಕಾಲವಾದರು.

ಕಳೆದ ಭಾನುವಾರ ನಮ್ಮ ಶ್ರೀಮನ್ ಮಹಾರಾಜರವರು ಅರಮನೆಯ ರಾಣಿ ವಾಸದವರ ಸಮೇತ ರಾಜಧಾನಿಯಿಂದ ಮೋಟಾರುಗಳಲ್ಲಿ ನೀಲಗಿರಿಗೆ ಚಿತ್ತೈಸಿ ದರು. ಮರುದಿನ ಬೆಳಿಗ್ಗೆ ಶ್ರೀಮದ್ಯುವರಾಜರವರು ಅಲ್ಲಿಗೆ ದಯಮಾಡಿದರು.

ಬೆಂಗಳೂರು ದೊಡ್ಡಪೇಟೆಯಲ್ಲಿ ರಾಮಶೆಟ್ಟಿ ಎಂಬ ವರ್ತಕನು ಕೊಬ್ಬು ಮಿಶ್ರವಾದ ತುಪ್ಪವನ್ನು ಒಳ್ಳೇ ತುಪ್ಪವೆಂದು ಮೋಸಪಡಿಸುವುದಾಗಿ ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಯಾರ್ಸ್ತಿ ನಡೆದು ಅವನಿಗೆ 15 ರೂಪಾಯಿ ಜುಲ್ಮಾನೆ ಆಗಿರುತ್ತದೆ

ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿರುವ ಹೈ ಸ್ಕೂಲ್ ತರಗತಿ ಗಳನ್ನು ಹೊಸ ಕಟ್ಟಡ ತಯಾರಾಗುವ ತನಕ ಅಂದರೆ ಸುಮಾರು 18-20 ತಿಂಗಳ ಕಾಲ ಹೊಸ ಆಸ್ಪತ್ರೆ ಕಟ್ಟಡದಲ್ಲಿ ಮಾಡತಕ್ಕದ್ದೆಂದು ಸರ್ಕಾರದವರು ಗೊತ್ತು ಮಾಡಿದ್ದಾರೆಂದು ಕೇಳುತ್ತೇವೆ

ಅರಮನೆ ಹುಜೂರ್ ಸೆಕ್ರಿಟರಿಯವರ ಆಫೀಸಿನಲ್ಲಿ ನಡೆದಿದ್ದ ಕಳುವನ್ನು ಪತ್ತೆಮಾಡುವುದರಲ್ಲಿ ತುಂಬಾ ಮೆಹನತ್ತು ಮಾಡಿದ್ದಾರೆಂದು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಬೆಂಗಳೂರು ಸಿಟಿ ಪೋಲೀಸ್ ಇನ್ಸ್‌ಪೆಕ್ಟರಾದ ಮ|| ಎಸ್. ಕೇಶವರಾಯರಿಗೆ ಕೈಗೆ ಕಟ್ಟಿಕೊಳ್ಳುವ ಬೆಳ್ಳಿಗಡಿಯಾರವನ್ನು ಬಹುಮಾನ ವಾಗಿ ಕಳುಹಿಸಿದಾರೆ.

ಮಧ್ಯ ಹಿಂದುಸ್ಥಾನಕ್ಕೆ ಸೇರಿದ ಓರ್ಛಾ ಎಂಬ ದೇಶೀಯ ಸಂಸ್ಥಾನದ ಮಹಾರಾಜರವರು ಜನಾನಾ ಕೂಡ ರಾಮೇಶ್ವರದ ಯಾತ್ರೆಗೆ ಹೋಗಿದ್ದು ನೆನ್ನೆ ಬೆಳಿಗ್ಗೆ ಬೆಂಗಳೂರಿಗೆ ಬಂದು ಅಲ್ಲಿನ ಅರಮನೆಯಲ್ಲಿ ನಮ್ಮ ಮಹಾರಾಜರವರ ಅತಿಥಿಗಳಾಗಿದಾರೆ. ಅವರು ನಾಳೆ ಅಲ್ಲಿಂದ ಪ್ರಯಾಣಮಾಡುವರು. ಅವರ ಪರಿ ವಾರದವರು ಸುಮಾರು 200 ಜನ ಬಂದಿದಾರೆ.

ಕಾಶೀ ಪಟ್ಟಣದಲ್ಲಿ ಸ್ಥಾಪಿಸಲ್ಪಡುವ ಹಿಂದೂ ಯೂನಿವರ್ಸಿಟಿ ಎಂಬ ವಿಶ್ವವಿದ್ಯಾನಿಲಯಕ್ಕೆ ನಮ್ಮ ಮಹಾರಾಜರವರನ್ನು ಚಾನ್ಸೆಲರಾಗಿಯೂ, ಗ್ವಾಲಿ ಯರ್ ಮಹಾರಾಜರವರನ್ನು ಪ್ರೋ-ಚಾನ್ಸೆಲರಾಗಿಯೂ, ಡಾ|| ಸುಂದರ ಲಾಲ್ ರಾಯ್ ಬಹದೂರ್ ಇವರನ್ನು ವೈಸ್ ಚಾನ್ಸೆಲರಾಗಿಯೂ ಇರುವಂತೆ ಗವರ್ನರ್ ಜನರಲ್ ರವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಜಪಾನ್ ರಾಜ್ಯಕ್ಕೆ ಪ್ರಯಾಣ ಮಾಡಿರುವ ಸರ್ದಾರ್ ಎಂ ಕಾಂತರಾಜ ಅರಸ್, ಸಿ ಎಸ್.ಐ. ರವರು ಮೊನ್ನೆ ತಾ 16 ನೇ ಭಾನುವಾರ ಕೋಬಿ ಎಂಬ ತೀರಪಟ್ಟಣದಲ್ಲಿ ಜಹಜಿನಿಂದಿಳಿದು ಜಪಾನ್ ರಾಜ್ಯವನ್ನು ಸುರಕ್ಷಿತರಾಗಿ ತಲಪಿದರೆಂದೂ, ಅವರು ಹಾಂಕಾಂಗ್ ತೀರಪಟ್ಟಣದಲ್ಲಿ ಕಳೆದ 6 ನೇ ತಾ. ನಿಂದ ಮೂರು ದಿನ ತಂಗಿದ್ದರೆಂದೂ ತಿಳಿಸಲು ಸಂತೋಷಪಡುತ್ತೇವೆ.

ನಮ್ಮ ವೃತ್ತಾಂತ ಪತ್ರಿಕೆ ಆಫೀಸಿನಲ್ಲಿ ಸುಮಾರು ಎರಡು ತಿಂಗಳಿಂದ ಮೊಳೆ ಜೋಡಿಸುವ ಕೆಲಸ ಮಾಡುತ್ತಿದ್ದ ಚಿದಂಬರಂ ಎಂಬವನು ಅಲ್ಲಿನ ಅಪ್ಪೇಗೌಡಿನಲ್ಲಿ ವಾಸಮಾಡಿಕೊಂಡಿದ್ದನು. ಇವನು ಹಾಸಿಗೆ ದ್ರೋಹಮಾಡಿದ ನೆಂದು ಅಲ್ಲಿನ ಕಮ್ಮಾರನೊಬ್ಬನು ಹಾರೆಯಿಂದ ಬುರುಡೆಗೆ ಹೊಡೆದು ಚಿದಂಬರ ನನ್ನು ಕೊಂದುಹಾಕಿ ತಾನಾಗಿಯೇ ಪೋಲೀಸ್ ಸ್ಟೇಷನ್‌ಗೆ ಹೋಗಿ ತಾನು ನಡಿಸಿದ ಕೃತ್ಯವನ್ನು ಹೇಳಿ ಅವರ ವಶವಾದನು.

ಮೈಸೂರು ಸವಾರ್ ಇಲಾಖೆಯಲ್ಲಿ ಸರ್‌ಪೇಷ್ಕಾರರಾಗಿದ್ದ ವೆಂಕಟರಾ ಯರು ಸರ್ಕಾರಿ ಲೆಕ್ಕಗಳನ್ನು ತಿದ್ದಿ ಹಣವನ್ನು ದುರುಪಯೋಗ ನಡಿಸಿದರೆಂದು ಅವರ ಮೇಲೆ ಮೊಕದ್ದಮೆ ಆಯಿತು. ಹಿಂದಿನ ವಾರ ಅ|| ಸೆಷನ್ಸ್ ಜಡ್ಜರು ಅಪರಾಧ ರುಜುವಾತಾಯಿತೆಂದು ಅಪರಾಧಿಗೆ ಎರಡು ವರುಷ ಕಠಿಣ ಸಜಾ ವಿಧಿಸಿದರು. ಅದೇ ಜಾತಿಯ ಇನ್ನೊಂದು ಮೊಕದ್ದಮೆಯಲ್ಲಿ ರುಜುವಾತು ಬರಲಿಲ್ಲವೆಂದು ಅಪರಾಧಿಯನ್ನು ಬಿಡುಗಡೆಮಾಡಿದರು. ಈಚೆಗೆ ಸೆಷನ್ಸ್ ಜಡ್ಜಿಯವರು ಅಪೀಲ್ ಹಿಡಿದು ವೆಂಕಟರಾಯರನ್ನು ಜಾಮೀನಿನ ಮೇಲೆ ಬಿಡಿಸಿರುತ್ತಾರೆ.

ಬೆಂಗಳೂರಿನಲ್ಲಿ ಪ್ರಸಿದ್ಧ ಚಿತ್ರಗಾರರಾದ ಮ|| ಮುದ್ದಯ್ಯನವರು ಶ್ರೀ ಶೃಂಗೇರಿ ಮಠದ ಶಾರದಾ ಚಿತ್ರಪಟವನ್ನು 14 × 20 ಆಕಾರದಲ್ಲಿ ಬಹಳ ನೇತ್ರಾನಂದಕರವಾದ ಬಣ್ಣಗಳಲ್ಲಿ ಬರೆದು ಇದ್ದಾರೆ. ಇದನ್ನು ಬೆಂಗಳೂರು ಚಿಕ್ಕಪೇಟೆ ಛಾರೀ ವರ್ತಕರಾದ ಮಿ|| ಎಲ್. ಎ ಬೌವಾರ್ಡ್‌ರವರು ಪ್ರತಿ ಒಂದಕ್ಕೆ ರೂ. 1-8-0 ಗೆ ಬಿಕರಿಮಾಡುತ್ತಿರುವರು. ಅವರು ನಮಗೆ ಕಳುಹಿಸಿ ರುವ ಒಂದು ಪ್ರತಿಯನ್ನು ಆದರದಿಂದ ಸ್ವೀಕರಿಸಿರುವೆವು.

ಕಳೆದ ವಾರ ಮದರಾಸ್ ಪಟ್ಟಣದಲ್ಲಿ ಆಯುರ್ವೇದ ವಿದ್ಯಾಶಾಲೆಯ ವಿದ್ಯಾರ್ಥಿಗಳಿಗೆ ಮ|| ಕೆ. ಶ್ರೀನಿವಾಸಯ್ಯಂಗಾರ್ರು ಸಭೆಯ ಅಗ್ರಾಸನವನ್ನು ವಹಿಸಿ ವಾರ್ಷಿಕ ಬಹುಮಾನಗಳನ್ನು ಕೊಟ್ಟರು. ಆ ಸಂದರ್ಭದಲ್ಲಿ ಸರ್ ಎಸ್. ಸುಬ್ರಹ್ಮಣ್ಯ ಅಯ್ಯರವರು ಆ ಸಭಿಕರನ್ನು ಕುರಿತು—ಮೈಸೂರು ಶ್ರೀ ಮನ್ ಮಹಾರಾಜರವರು ತಮ್ಮ ಸಂಸ್ಥಾನಕ್ಕೆ ಪ್ರತ್ಯೇಕವಾದ ವಿದ್ಯಾನಿಲಯ ವನ್ನು ಸ್ಥಾಪಿಸಿಕೊಳ್ಳುವಂತೆ ಅನುಜ್ಞೆಯನ್ನು ಸಂಪಾದಿಸಿಕೊಂಡಿದಾರೆ. ಅವರು ಆಯುರ್ವೇದದ ಪ್ರಚಾರಕ್ಕೆ ಮಠಗಳ ದ್ರವ್ಯದ ಕೆಲವು ಭಾಗವನ್ನು ವಿನಿ ಯೋಗಿಸುವಂತೆ ಆ ಸಂಸ್ಥಾನದಲ್ಲಿ ಮಾಡಿಟ್ಟು ಇತರ ಸೀಮೆಯವರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕಾದ ಕಾಲಕ್ರಮದಲ್ಲಿ ಹಿಂದೂ ಯುನಾನಿ ವೈದ್ಯ ಭಾಗಗಳು ಈ ರಾಷ್ಟ್ರದಲ್ಲಿ ಹೆಚ್ಚು ಹೆಚ್ಚಾಗಿ ಪ್ರಚಾರವಾಗುವುದರಲ್ಲಿ ಸಂಶಯವಿಲ್ಲ.

ಶಿವಮೊಗ್ಗೆಯ ಅಡ್ವೊಕೇಟ್ ಮ|| ಬಿ. ಗರುಡಾಚಾರ್ರು ಮಂಜನೆಂಬ ಕಳ್ಳನಿಂದ ಅವನು ಕಳವುಮಾಡಿದ್ದ ಹಣದ ಪೈಕಿ 60 ರೂಪಾಯನ್ನು ಅವನ ಪರ ಅರ್ಜಿ ಬರೆದು ಕೊಟ್ಟು ಮೊಕದ್ದಮೆ ನಡಿಸುವುದಕ್ಕಾಗಿ ತೆಗೆದುಕೊಂಡ ರೆಂದು ಶಿವಮೊಗ್ಗೆಯ ಪೋಲೀಸಿನವರು ಅವರ ಮೇಲೆ ಮೊಕದ್ದಮೆ ಮಾಡಿದಾರೆ. ಈ ಮೊಕದ್ದಮೆಯನ್ನು ಶಿವಮೊಗ್ಗಾ ಮ್ಯಾಜಿಸ್ಟ್ರೇಟರುಗಳಲ್ಲದೆ ಇತರ ಕಡೆಯ ಮ್ಯಾಜಿಸ್ಟ್ರೇಟರ ವಿಚಾರಣೆಗೆ ವರ್ಗಮಾಡಬೇಕೆಂದು ಮೊನ್ನೆ ಸೋಮವಾರ ಅಡ್ವೊಕೇಟರುಗಳಾದ ಮ|| ಎಂ. ಸಿ. ರಂಗಯ್ಯಂಗಾರ್ರು, ಮ|| ಕೆ. ರಾಮಸ್ವಾ ಮಯ್ಯಂಗಾರ್ರು ಮ|| ಗರುಡಾಚಾರ್ರ ಪರವಾಗಿ ಬೆಂಗಳೂರು ಚೀಫ್ ಕೋರ್ಟಿನಲ್ಲಿ ಅರ್ಜಿ ಕೊಟ್ಟು ವಾದಿಸಿದರು. ಚೀಫ್ ಕೋರ್ಟ್ ಜಡ್ಜಿಯವರು ಕೆಳಕೋರ್ಟಿನ ರಿಕಾರ್ಡುಗಳಿಗೆ ಹುಕುಂ ಕೊಟ್ಟು, ಮುಂದಿನ ಬುಧವಾರ ಹಿಯರಿಂಗ್ ಇಟ್ಟಿದಾರೆ.

ಒಬ್ಬ ಬಾತ್ಮೀದಾರರಿಂದ.—ಶ್ರೀ ಅಹೋಬಲ ಮಠದ ಶ್ರೀಸ್ವಾಮಿಗಳವರು ಬೆಂಗಳೂರಿಗೆ ದಯಮಾಡಿಸಿದರು. ಇಲ್ಲಿನ ಅಧಿಕಾರಿಗಳೂ ವಿದ್ವಾಂಸರೂ ಇನ್ನೂ ಕೆಲವು ದೊಡ್ಡಮನುಷ್ಯರೂ ಒಟ್ಟಿಗೆ ಬೆಂಗಳೂರು ಕೋಟೆ ಸಂಸ್ಕೃತ ಪಾಠಶಾಲೆ ಯ ಬಳಿ ಮ್ಯುನಿಸಿಪಾಲಿಟಿಯವರಿಂದ ಹಾಕಿಸಲ್ಪಟ್ಟ ಚಪ್ಪರದಲ್ಲಿ ಶ್ರೀಗಳವರ ಸುಬಾಗಮನವನ್ನು ಪ್ರಾರ್ಥಿಸಿ ಫಲಗಳನ್ನು ಒಪ್ಪಿಸಿದರು. ಶ್ರೀಗಳವರು ಅವರು ಗಳ ಯೋಗಕ್ಷೇಮವನ್ನು ಬಹಳ ನಿಧಾನವಾಗಿ ವಿಚಾರಿಸಿ ಅಲ್ಲಿಂದ ಬಹಳ ವಿಜೃಂಭಣೆಯೊಡನೆ ತುಲಸಿ ತೋಟಕ್ಕೆ ಬಿಜಯಮಾಡಿಸಿ ಅಲ್ಲಿ ದೇವಸ್ಥಾನದಲ್ಲಿ ಶ್ರೀಗಳವರು ಎಲ್ಲರಿಗೂ ಫಲಮಂತ್ರಾಕ್ಷತೆ ಅನುಗ್ರಹಿಸಿ ಆಶೀರ್ವದಿಸಿದರು. ತಾ 9 ಮತ್ತು 13 ರಲ್ಲಿ ಶ್ರೀಗಳವರು ಶ್ರೀ ಪಾಂಚರಾತ್ರಾಗಮವನ್ನು ಉಪ ನ್ಯಾಸಮಾಡಿದರು. ಅನೇಕ ದೊಡ್ಡಮನುಷ್ಯರುಗಳೂ ವಿದ್ವಾಂಸರುಗಳೂ ಅಧಿಕಾರಿ ಗಳು ಸಹ ದಯಮಾಡಿಸಿದ್ದರು. ಶ್ರೀಗಳವರು ಇನ್ನೂ ಒಂದು ವಾರದ ಮಟ್ಟಿಗೆ ಇಲ್ಲೇ ದಯಮಾಡಿಸಿದ್ದು ಮುಂದೆ ಆನೇಕಲ್ಲಿಗೆ ಚಿತ್ತೈಸುವರು.

ಮೈಸೂರು ಗೆಜೆಟ್ ಸಂಗ್ರಹ.

ಶ್ರೀಮನ್ ಮಹಾರಾಜರವರು ಮ|| ಸಿ. ರಂಗಸ್ವಾಮಿ, ಬಿ.ಎ. ಯವರನ್ನು ಮೈಸೂರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನಲ್ಲಿ 2 ನೇ ಗ್ರೇಡ್ ಜಮಾದಾರರಾಗಿ ನೇಮಕ ಮಾಡಿರುತ್ತಾರೆ.

ಸೆಕ್ರಿಟೇರಿಯಟ್ ಆಫೀಸಿನಲ್ಲಿ ಅ|| ಸೂಪರಿಂಟೆಂಡೆಂಟರಾಗಿರುವ ಮ|| ಬಿ. ರಾಮಯ್ಯನವರನ್ನು ಏಪ್ರಿಲ್ ತಾ. 1 ರಿಂದ 2 ನೇ ಕೌನ್ಸಿಲರವರ ಪರ್ಸ ನಲ್ ಅಸಿಸ್ಟೆಂಟರಾಗಿ ನೇಮಕಮಾಡಿದೆ.

ಶ್ರೀಮನ್ ಮಹಾರಾಜರವರು ಮ|| ಎನ್. ಲಿಂಗಯ್ಯನವರನ್ನು ಮೈಸೂರು ಇನ್‌ಫೆಂಟ್ರಿ 1 ನೇ ಬಟಾಲಿಯನ್‌ನಲ್ಲಿ 2 ನೇ ಗ್ರೇಡ್ ಜಮೇದಾರರಾಗಿ ನೇಮಕ ಮಾಡಿ, ಮುಂದೆ ಹೇಳುವ ಬಡ್ತಿಗಳನ್ನು ಹುಕುಂ ಮಾಡಿರುವರು:—ಅಬ್ದುಲ್ ಜಲೀಲ್ I ನೇ ಗ್ರೇಡ್ ಸುಬೇದಾರಿಗೆ; ವೆಂಕೋಬರಾವ್ 1 ನೇ ಗ್ರೇಡ್ ಜಮಾದಾರಿಗೆ; ಬಾದರ್ ಹುಸ್ಸೇನ್, ಸಯ್ಯದ್ ಅಹಮದ್, ಸಿಂಗರಯ್ಯ, ಅಬ್ದುಲ್ ಹಾಮಿದ್, ಸಿ ಸುಬ್ರಹ್ಮಣ್ಯಂ, ಇವರನ್ನು 2 ನೇ ಗ್ರೇಡ್ ಜಮಾ ದಾರಿಗೆ.

ಶ್ರೀಮನ್ ಮಹಾರಾಜರವರು ಮೈಸೂರು ಇನ್‌ಫೆಂಟ್ರಿ 3 ನೇ ಬಟಾಲಿ ಯನ್‌ನಲ್ಲಿ ಜಮಾದಾರ್ ರಾಮಚಂದ್ರರಾಯರನ್ನು I ನೇ ಗ್ರೇಡಿಗೆ ಬಡ್ತಿಮಾ ಡಿದಾರೆ.

ಅ|| ಜಯಾಲಜಿಸ್ಟ್ ಮ|| ಪಿ. ಸಂಪತ್ತಯ್ಯಂಗಾರ್ರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ನಾಲ್ಕು ತಿಂಗಳು ಜಾಸ್ತಿ ಮಾಡಿದೆ

ಶ್ರೀಮದ್ಯುವರಾಜರವರ ಪರ್ಸನಲ್ ಅ|| ಮ|| ಎಂ. ಎ. ಸಿಂಗ್ರಾಚಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂವತ್ತೈದು ದಿನಗಳ ಪ್ರಿವಿ ಲೆಜ್ ರಜಾ ಕೊಟ್ಟಿದೆ.

ಗವರ್ನ್‌ಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್ ಮಿ|| ಸಿ. ಎಚ್. ಯೇಟ್ಸ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ಡಿ. ಬಿ. ರಾಮಚಂದ್ರ ಮೊದಲಿಯಾರ್ರು ಅವರ ಕೆಲಸವನ್ನು ಬದಲಿ ನೋಡತಕ್ಕದ್ದು

ಮ ಜಿ. ಎಸ್. ಚಕ್ರವರ್ತಿಯವರು, ಮ|| ಸಿ. ರಾಘವೇಂದ್ರರಾಯರು, ಮ|| ಸಿ. ಎಸ್. ಬಾಲಸುಂದರಂ ಅಯ್ಯರವರು, ಇವರನ್ನು ಮೈಸೂರು ನ್ಯಾಯ ವಿಧಾಯಕ ಸಭೆಯ ಮೆಂಬರಾಗಿ ನೇಮಿಸಿದೆ.

ಮ|| ಅಂಗಡಿ ಶಿವರುದ್ರಪ್ಪನವರನ್ನು ದಾವಣಗೆರೆ ತಾಲ್ಲೂಕು ಮಾಯ ಕೊಂಡ ಗ್ರಾಮ ಕೋರ್ಟಿನ ಗ್ರಾಮ ಮುನ್ಸಿಫರಾಗಿ ನೇಮಿಸಿದೆ.

ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮಿ|| ಮೀರ್ ಹಂಜಾ ಹುಸೇನ್ ರನ್ನು ಜನವರಿ ತಾ. 3 ರಿಂದ 1 ನೇ ಕ್ಲಾಸಿಗೂ, ಮ|| ಬಿ. ಎಸ್. ಕೃಷ್ಣಸ್ವಾ ಮಿ ಅಯ್ಯಂಗಾರ್ರನ್ನು 2 ನೇ ಕ್ಲಾಸಿಗೂ ಹಂಗಾಮಿ ಬಡ್ತಿಮಾಡಿದೆ.

ಅ|| ಸರ್ಜನ್ ಮ|| ಟಿ. ಎಸ್. ಸಿದ್ದಪ್ಪನವರು ಜನವರಿ ತಾ. 27 ರಿಂದ ಫೆಬ್ರವರಿ ತಾ. 4 ರ ವರೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸ್ಯಾನಿಟರಿ ಆಫೀಸ್ ಛಾರ್ಜು ವಹಿಸಿದ್ದರು.

ಮಂಜರಾಬಾದ್ ತಾಲ್ಲೂಕು ಅಮಲ್ದಾರ್ ಮ|| ಆರ್. ತಿರುವಾರಣ ಯ್ಯಂಗಾರಿಗೆ ಏಪ್ರಿಲ್ ತಾ. 5 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಶಿರಸ್ತೇದಾರರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಮದರಾಸ್ ಪಟ್ಟಣದಲ್ಲಿ ಕೆ. ಎನ್. ಗೋಪಾಲಪಿಳ್ಳೆ ಎಂಬ ಬ್ಯಾರಿಸ್ಟರು ತನ್ನ ಕಕ್ಷಿಗಾರನಿಂದ ಅಪೀಲ್ ಸ್ಟ್ಯಾಂಪಿಗೆಂದು 145 ರೂಪಾಯಿ ತೆಗೆದುಕೊಂಡು ಅಪೀಲ್ ಅರ್ಜಿಗೆ 2 ರೂಪಾಯಿನ ಸ್ಟ್ಯಾಂಪನ್ನು ಹಚ್ಚಿ ಕೋರ್ಟಿಗೆ ದಾಖಲ್ ಮಾಡಿದನು. ಸ್ಟ್ಯಾಂಪು ಕಡಮೆ ಎಂಬ ಕಾರಣದ ಮೇಲೆ ಕೋರ್ಟಿನವರು ಅಪೀ ಲನ್ನು ಹಿಡಿಯದೆ ತಿರಸ್ಕಾರ ಮಾಡಿದರು. ಕಕ್ಷಿಗಾರನು ಕೋರ್ಟಿಗೆ ಅರ್ಜಿ ಕೊಟ್ಟು ಹೇಳಿಕೊಂಡಾಗ ಅವನು ಬ್ಯಾರಿಸ್ಟರಿಗೆ 145 ರೂಪಾಯಿ ಕೊಟ್ಟದ್ದು ರುಜುವಾಯಿತು. ಆಗ ಬ್ಯಾರಿಸ್ಟರು ತನ್ನಿಂದ ತಪ್ಪಾಯಿತೆಂದೂ, ಕ್ಷಮಿಸಬೇ ಕೆಂದೂ ಕೇಳಿಕೊಂಡನು. ಮೂರು ಮಂದಿ ಹೈ ಕೋರ್ಟ್ ಜಡ್ಜಿಗಳು ಆತನ ನಡತೆಯ ವಿಷಯದಲ್ಲಿ ಅನುಮಾನಪಟ್ಟು ಆತನನ್ನು ಇನ್ನು ಮೇಲೆ ಮೊಕದ್ದಮೆ ಹಿಡಿದು ವಾದಿಸಕೂಡದೆಂಬ ಶಿಕ್ಷೆ ವಿಧಿಸಿದರು.

ಅಪೂರ್ವ ಆನೆಕಲ್ಲಿನ ಮಳೆ.

ಬೇಲೂರು ತಾಲ್ಲೂಕು ಅರೇಹಳ್ಳಿ ಗ್ರಾಮದಲ್ಲಿ ಕಳೆದ ತಾ. 11 ನೇ ಮಂಗಳವಾರ ಬಿದ್ದ ಬಿರುಗಾಳಿಯಿಂದ ಕೂಡಿದ ಆನೆಕಲ್ಲಿನ ಮಳೆಯನ್ನು ವರ್ಣಿಸಲು ಸಾಧ್ಯವಿಲ್ಲ. ಅಲ್ಲಿನ 70-80 ವಯಸ್ಸಿಗೆ ಮೇಲ್ಪಟ್ಟವರು ಇಂತಹ ಕಲ್ಲಿನ ಮಳೆಯನ್ನು ಅವರ ವಯಸಿನಲ್ಲಿ ಕಂಡಿಲ್ಲವೆಂತ ಹೇಳುತ್ತಾರೆ. ಆ ದಿನ ಮಧ್ಯಾಹ್ನ 3 ಘಂಟೆಗೆ ಶುರುವಾಗಿ 3 ಘಂಟೆ 20 ನಿಮಿಷಕ್ಕೆ ನಿಂತಿತು. ಆನೆ ಕಲ್ಲುಗಳು ಬಾದಾಮಿಯಷ್ಟು ಗಾತ್ರದಿಂದ ಟೆನ್ನಿಸ್ ಚೆಂಡಿನ ಪರಿಮಾಣದ ವರೆಗೂ ದಪ್ಪವಾಗಿದ್ದವು. ಬರೀ ಕಲ್ಲುಗಳು ಮಾತ್ರ ನೆಲದ ಮೇಲೆ ಬಿದ್ದವೆ! ಹೊರತು ನೀರಾಗಿ ಬೀಳಲಿಲ್ಲ. ಅರೇಹಳ್ಳಿಯಿಂದ ಸುಮಾರು 2 ಮೈಲಿ ಫಾಸಲೆ ವರೆವಿಗೂ ರಸ್ತೆಗೆ ಜಲ್ಲಿ ಹಾಕಿದ ಹಾಗೆ ಸರಾಸರಿ ಅರ್ಧ ಅಡಿ ಎತ್ತರವುಳ್ಳ ಆನೆಕಲ್ಲುಗಳು ಮಳೆಯು ನಿಂತ ಕಾಲು ಘಂಟೆ ವರೆವಿಗೂ ನಿಂತಿತ್ತು. ಈ ಕಲ್ಲುಗಳು ಬೀಳುವಾಗ ಮಧ್ಯೆ ರಸ್ತೆಯಲ್ಲಿ ಒಂದು ಗಾಡಿಯನ್ನು ಇಟ್ಟು ನೋಡಿದ್ದರಲ್ಲಿ ಆ ಗಾಡಿ ತುಂಬ ಕಲ್ಲುಗಳು ಕೆಳಕ್ಕೆ ಬೀಳುತ್ತಿದ್ದವು. ಇಲ್ಲಿಯ ರೇಂಗೇಜಿನ ಫನಲ್‌ನಲ್ಲಿ ಈ ಕಲ್ಲುಗಳು ತುಂಬಿಕೊಂಡು ರಿಸೀವರಿನೊಳಕ್ಕೆ ಹೋಗುವುದಕ್ಕೆ ಅವಕಾಶವಿಲ್ಲದೆ ಕೆಳಕ್ಕೆ ಸುರಿದುಹೋಯಿತು. ಹಾಗಿದ್ದರೂ ಎರಡೂವರೆ ಇಂಚು ಅಳತೆಗೆ ಸಿಕ್ಕಿರುತ್ತೆ. ಅನೇಕ ಕಡೆಗಳಲ್ಲಿ ಸ್ವಲ್ಪ ಮಟ್ಟಿಗೂ ಸೀಳವಿದ್ದ ಜಾಗಗಳಲ್ಲಿ ಒಂದೂವರೆ ಅಡಿಯಷ್ಟು ಎತ್ತರವುಳ್ಳ ರಾಶಿಯಾಗಿ ನಿಂತಿತ್ತು. ತಾ. 11 ರಲ್ಲಿ ಬಿದ್ದ ಕಲ್ಲುಗಳು 12 ಮತ್ತು 13 ನೇ ತಾ. ಗಳಲ್ಲಿ ಬಿಸಿಲಿನ ಶಾಖ ಜಾಸ್ತಿಯಾಗಿದ್ದಾಗ್ಯೂ 13 ನೇ ತಾ. ಸಾಯಂಕಾಲದ ವರೆವಿಗೂ ಕರಗಿರಲಿಲ್ಲ. ಅನೇಕ ಮನೆಗಳಲ್ಲಿಯೂ ಮತ್ತು ಮುಸಾಫರ್ ಬಂಗಲೆಯಲ್ಲಿಯೂ ಮಂಗಳೂರಿನ ಹೆಂಚುಗಳು ತೂತುಬಿದ್ದು ಚೂರುಚೂರಾಗಿ ಹೋಗಿರುತ್ತವೆ. ಪ್ರಜೆಗಳು ಮನೆಗಳಲ್ಲಿರುವದಕ್ಕೆ ಭಯಸ್ಥರಾಗಿ ಮನೆಯ ಭದ್ರವಾದ ಜಾಗಗಳಲ್ಲಿ ಅಡಗಿಕೊಂಡಿದ್ದರು. ಮನೆಗಳಲ್ಲಿ ವಿಪರೀತ ನೀರು ಸೋರಿದ್ದಲ್ಲದೆ ಕಲ್ಲುಗಳೂ ಸಹ ಹೆಂಚಿನ ಕಿಂಡಿಗಳಲ್ಲಿ ನುಗ್ಗುತ್ತಿದ್ದವು. ಇದೇ ರೀತಿಯಾಗಿ ಇನ್ನೂ ಕಾಲು ಘಂಟೆ ಜಾಸ್ತಿಯಾಗಿ ಬಿದ್ದಿದ್ದರೆ ನಮ್ಮಗಳ ಗತಿ ಏನಾಗುತ್ತಿತ್ತೋ ಹೇಳಲಸಾಧ್ಯ. ಭತ್ತ, ರಾಗಿ ವಗೈರೆ ಫಸಲುಗಳು ಆಕಾರವಾಗಿ ಒಕ್ಕಿ ಪೂರೈಸಿದ ಈ ಕಾಲದಲ್ಲಿ ಏನು ಹಾನೀ ಉಂಟಾಗಿರಬಹುದೆಂದು ಯೋಚಿಸಬಹುದು. ಆದರೆ ಮಲೆನಾಡಿನ ಮುಖ್ಯ ಬೆಳೆ ಅಂದರೆ ಕಾಫಿ ಬೆಳೆ ಹಾಳಾಯಿತು. ಸುಮಾರು ಒಂದೂ ಅಥವಾ ಎರಡು ಲಕ್ಷ ರೂಪಾಯಿನ ವರೆವಿಗೂ ನುಕ್ಸಾನಾಗಿರಬಹುದೆಂದು ದೃಢವಾಗಿ ಹೇಳಬಹುದು. ಕಳೆದ ಎರಡು ವರ್ಷಗಳಿಂದ ಫಸಲಿಲ್ಲದೆ ಅಲ್ಲಿನ ಕಾಫಿ ಪ್ಲಾಂಟರುಗಳು ನಷ್ಟಪಟ್ಟು, ತೋಟದ ಕೆಲಸಗಳನ್ನು ನಡಿಸುತ್ತಿದ್ದರು. ಈ ವರ್ಷ ಕಾಫಿ ಗಿಡಗಳಲ್ಲಿ ಮೊಗ್ಗುಗಳು ಉಬಾಯಿಸಿಕೊಂಡು ಪೂರಾ ಫಲವನ್ನು ಕೊಡುವ ಹಾಗೆ ತೋರ್ಪಟ್ಟಿದ್ದವು. ಈ ಸಂಕಟದಿಂದ ಈಗಿನ ಫಸಲು ನಾಶವಾದದ್ದಲ್ಲದೆ ಕಲ್ಲುಗಳ ಹೊಡೆತದ ದೆಸೆಯಿಂದ ರೆಕ್ಕೆಗಳು ಗಾಯಪಟ್ಟು, ಇನ್ನೂ ಎರಡು ವರ್ಷಗಳ ವರೆವಿಗೂ ಚೇತರಿಸಿಕೊಳ್ಳುವಹಾಗೆ ಆಗುವುದಿಲ್ಲ. ಈ ಕಾಫಿ ಫಸಲು ಒಂದು ನಾಶವಾದದ್ದಲ್ಲದೆ ಯಾಲಕ್ಕಿ, ಮೆಣಸು, ಕಿತ್ತಳೆ, ಬಾಳೆ ಮುಂತಾದವುಗಳಿಗೂ ಅನೇಕ ತರವಾಗಿ ನಷ್ಟವಾಗಿರುತ್ತದೆ. ಕಾಫಿ ಫಸಲನ್ನು ನಂಬಿಕೊಂಡು ಈ ಅನಾರೋಗ್ಯಕರವಾದ ಮಲೆನಾಡಿನಲ್ಲಿ ಅನೇಕರು ವಾಸವಾಗಿರುತ್ತಾರೆ. ಈಗ ಒಂದೇ ರೀತಿಯಾಗಿ ಮೂರು ವರ್ಷಗಳಿಂದಲೂ ಫಸಲಿಲ್ಲದೆ ಜನಗಳು ಪೂರಾ ಎದೆಗುಂದಿರುವರು. ಈ ಸಂಕಟಕರವಾದ ಕಾಲದಲ್ಲಿ ಸರ್ಕಾರದವರು ಸಹಸ್ಥರಾಗಿ ಪ್ರಜೆಗಳಿಗೆ ಯಾವ ತರವಾದ ಉಪಕಾರವೂ ಮಾಡದ ಪಕ್ಷಕ್ಕೆ ಜನಕೋಟಿಯು ಚೇತರಿಸಿಕೊಳ್ಳಲು ಯಾವ ಸಂಶಯವೂ ಇರುವುದಿಲ್ಲ.

ತಾ. 14-4-16. ಅರೇಹಳ್ಳಿ, ಕಾಫಿ ಪ್ಲಾಂಟರ್.

ದಿವಾನರವರ ಸರ್ಕೀಟು.

ಅರಸೀಕೆರೆಯಲ್ಲಿ ಕಳೆದ ಗುರುವಾರ ಸಾಯಂಕಾಲ ಎರಡು ಅಂಗುಲ ಮಳೆ ಬಂದಾಗ್ಯೂ ಬಿಸಿಲು ಇನ್ನೂ ತೀಕ್ಷ್ಣವಾಗಿಯೇ ಇದೆ. ಸೆಕೆ ಬಹಳ. ನೀರಿನ ತೊಂದರೆಯಂತೂ ಹೇಳತೀರದು. ಕಳೆದ ಗುರುವಾರ ರಾತ್ರಿ 3½ ಗಂಟೆಗೆ ಮೆಯಿಲ್ ಗಾಡಿಯಲ್ಲಿ ನಮ್ಮ ದಿವಾನ್ ಸಾಹೇಬರು ಪ್ರೈವೆಟ್ ಸೆಕ್ರೆಟರಿಯವರೊಂದಿಗೆ ಬೆಂಗಳೂರಿಂದ ಇಲ್ಲಿಗೆ ದಯಮಾಡಿದರು. ಅವರ ಆಗಮನಕ್ಕಾಗಿ ಟ್ರಾವಲರ್ಸ್ ಬಂಗ್ಲೆ, ತಾಲ್ಲೂಕು ಕಚೇರಿ, ಸರ್ಕಾರಿ ಹಿಂದುಸ್ಥಾನಿ ಸ್ಕೂಲಿನ ಮುಂದುಗಡೆ ಮತ್ತು ಪಂಚಮ ಸ್ಕೂಲಿನ ಮುಂಭಾಗದಲ್ಲಿಯೂ ಚಪ್ಪರಗಳನ್ನು ಹಾಕಿಸಿ ಬಾಳೆಕಂಬ ನಾನಾ ತೋರಣಗಳನ್ನು ಕಟ್ಟಿ ಬಾವುಟಾಗಳನ್ನು ನಿಲ್ಲಿಸಿ ಬಹಳ ಶೋಭಾಯಮಾನವಾಗಿ ಊರನ್ನು ಅಲಂಕರಿಸಿದ್ದರು. ಹಾಸನದ ಡೆಪ್ಯುಟಿ ಕಮೀಷನರೇ ಮೊದಲಾದ ಎಲ್ಲಾ ಇಲಾಖೆಗಳ ಆಫೀಸರುಗಳೆಲ್ಲಾ ಕಾಲಕ್ಕೆ ಮುಂಚಿತವಾಗಿಯೇ ಹಾಜರಾಗಿದ್ದರು. ದಿವಾನರು ಶುಕ್ರವಾರ ಬೆಳಿಗ್ಗೆ ಗ್ರಾಮಗಳ ಇನ್‌ಸ್ಪೆಕ್ಷನ್ ಬಗ್ಗೆ ಮೋಟಾರುಗಳಲ್ಲಿ ಹಲಕೂರು ಗ್ರಾಮಕ್ಕೆ ದಯಮಾಡಿದಾಗ ಬೂವ್ಮನಹಳ್ಳಿ ಗ್ರಾಮಸ್ಥರಾದ ಯಜಮಾನ್ ಕೋಳಿಗೌಡರು, ಪಟೇಲ್ ಗಂಗಪ್ಪನವರು, ಶಾನುಭೋಗ ನಂಗಪ್ಪ ಮುಂತಾದವರು ನಮ್ಮ ದಿವಾನ್ ಸಾಹೇಬರವರ ಆಗಮನಕ್ಕಾಗಿ ಗ್ರಾಮದ ಮುಂಭಾಗದಲ್ಲಿ ಒಂದು ಭುವನೇಶ್ವರಿ ಕಟ್ಟಿಸಿ ಹಾರ ತುರಾಯಿಗಳನ್ನು ಒಪ್ಪಿಸಿ ಸತ್ಕಾರ ಮಾಡಿದರು. ಗ್ರಾಮವಾತಾವರಣ ಚೆನ್ನಾಗಿತ್ತು. ಅಲ್ಲಿಂದ ಮುಂದೆ ಆಗುಂದಕ್ಕೆ ಹೋದಾಗ ತಳ್ಳವೇ ಮೋಟಾರಿನಿಂದ ಇಳಿದು ಗ್ರಾಮದ ಪ್ರವೇಶವಾದೊಡನೆ ಎಲ್ಲಾ ಕಡೆಯಲ್ಲಿಯೂ ಇನ್‌ಸ್ಪೆಕ್ಷನ್ ಮಾಡಿ ಗ್ರಾಮದ ಅಭಿವೃದ್ಧಿ ಮತ್ತು ವಾಸೀಸ ಮುಂತಾದವುಗಳನ್ನು ಪರಾಂಬರಿಸಿ ಸಂತೋಷಪಟ್ಟು ತೆರಳಿದರು. ವಾಪಸು ಬರುವಾಗ ಶೋಭಿಯಾಗಿ ತೋರುತಕ್ಕ ಭಾವಿಯನ್ನೂ ಹುಳ್ಳ ಭಾವಿಯನ್ನೂ ಪರಾಂಬರಿಸಿ ಜನರ ಉಪಯೋಗಾರ್ಥವಾಗಿ ಮ|| ಕೃಷ್ಣಾಜಂರಾಯರು ಹೊಸದಾಗಿ ಕಟ್ಟಿರುವ ಬಿಟ್ಟಿನ ಮಿಲ್ ಕಾರಖಾನೆಯನ್ನು ನೋಡಿದ್ದಲ್ಲದೆ ಮ್ಯುನಿಸಿಪಲ್ ಮೆಂಬರು ಮತ್ತು ಸಾಹುಕಾರ್ ಮ|| ಚೌಡಯ್ಯನವರು ಪಂಚಮರಿಗೋಸ್ಕರ ಕಟ್ಟಿಸಿರುವ ಸ್ಕೂಲಿನ ಬಾಗಿಲನ್ನು ತೆರೆದು ಪ್ರತಿಷ್ಠಿಸಿ ಪಂಚಮರ ವಿಷಯದಲ್ಲಿ ಎಲ್ಲವನ್ನೂ ಮ|| ಚೌಡಯ್ಯನವರಿಂದ ತಿಳಿದು ಸಂತೋಷಪಟ್ಟು ಪಂಚಮರಿಗಾಗಿ ಸ್ಕೂಲಿನೊಂದಿಗೆ ಕೈಗಾರಿಕೆ ಏರ್ಪಾಡು ಮಾಡುವ ಹಾಗೆ ಅಪ್ಪಣೆಕೊಟ್ಟರು. ಮುಂದಕ್ಕೆ ಹಿಂದುಸ್ಥಾನಿ ಸ್ಕೂಲಿನ ಹತ್ತಿರ ಕಟ್ಟಿಸಿರುವ ಚಪ್ಪರದ ಬಳಿ ಮೋಟರನ್ನು ನಿಲ್ಲಿಸಿ ಹಾರ ತುರಾಯಿಗಳನ್ನು ಅಂಗೀಕರಿಸಿ ನಡುಬೀದಿಯ ಚಪ್ಪರಕ್ಕೆ ಬಂದಾಗ ಮ್ಯುನಿಸಿಪಲ್ ಮೆಂಬರುಗಳಿಂದ ಒಪ್ಪಿಸಲ್ಪಟ್ಟ ಹಾರತುರಾಯಿಗಳನ್ನು ಸ್ವೀಕರಿಸಿ ನೆಟ್ಟಗೆ ತಾಲ್ಲೂಕ್ ಕಚೇರಿಗೆ ದಯಮಾಡಿ ಮುಂಭಾಗದಲ್ಲಿ ಕಟ್ಟಿರುವ ಚಪ್ಪರದಲ್ಲಿ ದರ್ಬಾರು ನಡಿಸಿದರು. ಅಲ್ಲಿ ಮ್ಯುನಿಸಿಪಲ್ ಮೆಂಬರುಗಳು ಅಡ್ರೆಸ್ಸನ್ನು ಓದಿದರು. ತಾಲ್ಲೂಕಿನ ಎಲ್ಲಾ ಕುಂದುಕೊರತೆಗಳನ್ನು ಒಂದೊಂದಾಗಿ ವಿಚಾರಿಸಿದರು. ನೀರಿನ ಸರಬರಾಯಿ ವಿಷಯದಲ್ಲಿ ನಕ್ಷೆಗಳನ್ನು ಇಟ್ಟು ಸ್ವಲ್ಪ ಹೊತ್ತಿನವರೆಗೂ ಚರ್ಚೆ ನಡೆಯಿತು. ವಿದ್ಯಾಭ್ಯಾಸ ಶೇಕಡಾ 6 ರಂತೆ ಇರುವುದು ಬಹಳ ಹೀನಸ್ಥಿತಿಯಲ್ಲದೆ ಎಂತಲೂ, ಆಗಾಗ್ಗೆ ಪ್ರೋಗ್ರೆಸ್ ಕಮಿಟಿಗಳನ್ನು ನಡಿಸಿ ಅಭಿವೃದ್ಧಿಗೆ ತರಬೇಕೆಂತಲೂ ಸಂತೆ ಮಾಳದಲ್ಲಿ ನಿವೇಶನಗಳನ್ನು ಕಟ್ಟಿಸುವ ಹಾಗೂ, ಒಡಾವಣೆಯಲ್ಲಿ ಬಡಬಗ್ಗರಿಗಾಗಿ ನಿವೇಶನಗಳನ್ನು ಹರಾಜು ಮೂಲಕ ಕೊಡುವ ಹಾಗೂ, ಕೆಲವರಿಗೆ ಮ್ಯುನಿಸಿಪಲ್ ರೇಟಿನ ಪ್ರಕಾರ ಕೊಡುವ ಹಾಗೂ, ಯಾವ ದಾವೆಲೊಂದು ಕಾರ್ಖಾನೆಯನ್ನು ಬೇಗನೆ ಏರ್ಪಾಡು ಮಾಡಬೇಕೆಂದೂ ಅಪ್ಪಣೆಕೊಡಿಸಿದರು. ಮಧ್ಯಾಹ್ನ ತಾಲ್ಲೂಕ್ ಆಫೀಸ್ ಮುಂತಾದವುಗಳನ್ನು ಇನ್‌ಸ್ಪೆಕ್ಷನ್ ನಡಿಸಿ ಹೊಸ ರೈಲ್ವೆ ಕಾಮಗಾರಿಯನ್ನು ಪರಾಂಬರಿಸಿ ಸಾಯಂಕಾಲ ಪರಿವಾರ ಸಹಿತ ಮೋಟಾರುಗಳಲ್ಲಿ ಹಾಸನಕ್ಕೆ ದಯಮಾಡಿದರು. ನಮ್ಮ ಅಮಲ್ದಾರರವರು ಎಲ್ಲಾ ಸಮಯಗಳಲ್ಲಿಯೂ ಇತರ ಎಲ್ಲಾ ಕಾರ್ಯಗಳಲ್ಲಿಯೂ ಮುಂದಾಳಾಗಿ ನಿಂತು ಏನೊಂದು ನ್ಯೂನತೆಯೂ ಬಾರದಂತೆ ಶ್ರಮಪಟ್ಟಿದ್ದಾರೆ.

ಮೈಸೂರು ತಾಲ್ಲೂಕು ಗ್ರಾಮಗಳ ಅಭಿವೃದ್ಧಿ.

ಮೈಸೂರು ತಾಲ್ಲೂಕಿನಲ್ಲಿರುವ 101 ಸರ್ಕಾರಿ ಬರಾಕ್ತು ಗ್ರಾಮಗಳಿಗೂ 68 ಗ್ರಾಮಾಭಿವೃದ್ಧಿ ಕಮಿಟಿಗಳು ಏರ್ಪಾಡಾಗಿವೆ. ಒಂದು ಇನಾಂ ಗ್ರಾಮಕ್ಕೂ ಅಂಥಾ ಕಮಿಟಿ ಏರ್ಪಾಡಾಗಿದೆ. ಬಾಕಿ 34 ಇನಾಂ ಗ್ರಾಮಗಳಲ್ಲಿ ಕಮಿಟಿಗಳು ಇಲ್ಲ. ಈ ತಾಲ್ಲೂಕಿಗೆ ಒಂದು ಪ್ರೋಗ್ರೆಸ್ ಕಮಿಟಿ ಏರ್ಪಾಡಾಗಿದೆ. ಈ ಕಮಿಟಿಯವರು ಕೆಲಸ ಕಾರ್ಯಗಳನ್ನು ನೆರವೇರಿಸಲು ಚಂದಾ ಮೂಲಕ 145 ರೂ. ಶೇಖರಿಸಿ ಸರ್ಕಾರದಿಂದ 100 ರೂ. ಗ್ರಾಂಟನ್ನು ಪಡೆದರು. ಈ ಕಮಿಟಿಯು ತಿಂಗಳಿಗೊಂದಾವರ್ತಿ ತಾಲ್ಲೂಕ್ ಕಛೇರಿಯಲ್ಲಿ ಮೀಟಿಂಗ್ ನಡಿಸಿ ಅನೇಕ ಸಲಹೆಗಳನ್ನು ಆಚರಣೆಗೆ ತರಬೇಕೆಂದು ತೀರ್ಮಾನಿಸಿ ಗ್ರಾಮಾಂತರಗಳಲ್ಲಿ ಕಮಿಟಿ ಮೆಂಬರುಗಳ ಮೂಲಕ ಪ್ರೇರೇಪಿಸುತ್ತಿದ್ದಾರೆ—ಕಮಿಟಿಯ ದುಡ್ಡಿನಿಂದ ಕಬ್ಬಿಣದ ಕೆಲವು ನೇಗಿಲುಗಳನ್ನು ಕೊಂಡು ಅವುಗಳ ಉಪಯೋಗವು ಜನಗಳಿಗೆ ತಿಳಿಯುವಂತೆ ಗ್ರಾಮಾಂತರಗಳಲ್ಲಿ ಇಲಾಖೆಯಿಂದ ಡಿಮಾನ್‌ಸ್ಟ್ರೇಷನ್ ಮಾಡಿ 5 ನೇಗಿಲುಗಳನ್ನು ಬಿಕರಿ ಮಾಡಿದ್ದಾಗಿದೆ. ಈಚೆಗೆ ಈ ನೇಗಿಲುಗಳ ಪ್ರಯೋಜನವು ತಿಳಿದು 11 ಹೊಸ ನಮೂನೆ ನೇಗಿಲುಗಳನ್ನು ತರಿಸಿದ್ದಾರೆ.—ಗ್ರಾಮಾಭಿವೃದ್ಧಿ ಕಮಿಟಿಗಳು ತಮ್ಮ ಗ್ರಾಮಸ್ಥರಿಂದ ವಾರಕ್ಕೊಂದಾವರ್ತಿ ಗ್ರಾಮದ ಒಟ್ಟಿನ ಕೆಲಸಗಳನ್ನು ಕುರಿತು ಒಂದು ಗಂಡು ಆಳಿನಂತೆ ಒಪ್ಪತ್ತು ಮಾಡಿಸುತ್ತಿದ್ದಾರೆ. ಅವುಗಳು ಯಾವವೆಂದರೆ—ಗ್ರಾಮದಿಂದ ಬಾಜೂ ಗ್ರಾಮಗಳಿಗೆ ಮಾರ್ಗವನ್ನು ಸರಿಪಡಿಸುವುದು, ಗ್ರಾಮದಿಂದ ನೀರಿರುವ ಕೊಳಕ್ಕೆ ಅಥವಾ ಕಟ್ಟೆಗೆ ಹೋಗುವ ಓಣಿಯನ್ನು ದುರಸ್ತು ಮಾಡುವುದು, ಗ್ರಾಮಗಳಲ್ಲಿ ರಕ್ಕಸ ರಸ್ತೆಗಳನ್ನು ಮಗ್ಗುಲು ಚರಂಡಿಕೊಟ್ಟು ಮಧ್ಯೆ ಉಬ್ಬು ಮಾಡಿ ದುರಸ್ತು ಮಾಡುವುದು. ಗ್ರಾಮ ಠಾಣೆಯಲ್ಲಿರತಕ್ಕ ಹಳ್ಳಕೊಳ್ಳಗಳನ್ನು ಮುಚ್ಚುವುದು, ಗ್ರಾಮ ಠಾಣದಲ್ಲಿ ಬೆಳೆದಿರುವ ಪಾಪಾಸ್‌ಕಳ್ಳಿ ಮತ್ತು ಕಟಬಾ ಗಿಡಗಳನ್ನು ನಿವೃತ್ತಿಮಾಡುವುದು, ಕೊಳಗಳು ಅಥವಾ ಕುಡಿಯುವ ಭಾವಿಗಳು ಇದ್ದ ಕಡೆಗಳಲ್ಲಿ ಅವುಗಳ ಮಧ್ಯೆ ಬೆಳೆದ ಕಟಬಾ ಗಿಡಗಳನ್ನು ನಿವೃತ್ತಿಮಾಡುವುದು, ಕೊಳಗಳ ಬದಿಯನ್ನು ಎತ್ತುವುದು, ಕೆರೆಗಳಿದ್ದ ಕಡೆ ಬೇಸಿಗೆ ಕಾಲದಲ್ಲಿ ಮಟ್ಟೀ ಕಾಮಗಾರಿ ಮಾಡುವದು, ಇವೇ ಮೊದಲಾದ ಸುಮಾರು 13,000 ರೂ. ಅಂದಾಜು ಉಳ್ಳ ಕಾಮಗಾರಿಯನ್ನು ಮಾಡಿರುತ್ತಾರೆ. 6 ಗ್ರಾಮಗಳಲ್ಲಿ ಚಾವಡಿಗಳನ್ನು ದುರಸ್ತು ಮಾಡುವುದಕ್ಕೆ 478 ರೂ. ಕೆಲಸಗಳನ್ನು ಮಾಡಿದ್ದಾರೆ. 9 ಗ್ರಾಮಗಳಲ್ಲಿ ಹೊಸ ದೇವಾಲಯಗಳನ್ನು ಕಟ್ಟಿದ್ದಾರೆ. ಬಸ್ಸಳ್ಳಿ ಗ್ರಾಮಸ್ಥರು ತಮ್ಮ ಗ್ರಾಮಗಳಲ್ಲಿ 2 ಭಾವಿ ತೆಗೆಸಲು 400 ರೂ. ಕೊಡಿಸಿ ಸರ್ಕಾರದಿಂದ 400 ರೂ. ಗ್ರಾಂಟು ಪಡೆದು ಭಾವಿಗಳು ತೆಗೆಸುತ್ತಾ ಇದ್ದಾರೆ. ಅಲ್ಲಹಳ್ಳಿಯಲ್ಲಿ ಹೊಲೆಯರು ಒಂದು ಭಾವಿಯನ್ನು ತೆಗೆದಿದ್ದಾರೆ. ಕಡಕೊಳದ ಹೋಬಳಿ ಆಯರಹಳ್ಳಿ ಗ್ರಾಮದ ಪರಿವಾರದವರು ಗ್ರಾಮದ ಒಟ್ಟಿನಿಂದ ತಮ್ಮ ತೋಪಿನ ಉಪಯೋಗಕ್ಕಾಗಿ ಒಂದು ಭಾವಿಯನ್ನು ತೆಗೆಸಿದ್ದಾರೆ. ಸಿಂಧೂರಿನಲ್ಲಿ ಉತ್ತಮರ ಭಾವಿಯನ್ನು ಆಳಪಡಿಸಲು ಗ್ರಾಮಸ್ಥರು 20 ರೂ. ಕೊಡಿಸಿದ್ದರ ಮೇಲೆ ಸರ್ಕಾರದಿಂದ ಗ್ರಾಂಟು ಸ್ಯಾಂಕ್ಷನ್ ಆಗಿ ಭಾವಿ ಆಳಪಡಿಸಿದ್ದಾಯಿತು. ಅದೇ ಗ್ರಾಮದಲ್ಲಿ ಹೊಲೆಯರಿಗಾಗಿ ಒಂದು ಭಾವಿ ಬೇಕೆಂದು ಅಪೇಕ್ಷಿಸಿ ಅಂದಾಜಿನಲ್ಲಿ 3 ರಲ್ಲಿ ಒಂದು ಭಾಗವಾದ ರೂ. 122-10-8 ಅವರು ಹಾಜರು ಮಾಡಿದ್ದರ ಮೇಲೆ ಡೆಪ್ಯುಟಿ ಕಮೀಷನರು ಹೊಲೆಯರಿಗಾಗಿ ಬಾಕಿ ತೆರಬಲನ್ನು ಗ್ರಾಂಟಾಗಿ ದಯಪಾಲಿಸಿದರು. ಕೆಲಸವು ನಡೆಯುತ್ತಾ ಇದೆ. ಇಲವಾಲದ ಹೋ|| ವಲಚಹಳ್ಳಿ ಗ್ರಾಮಸ್ಥರು 57½ ರೂ. ಕೊಡಿಸಿದ್ದಕ್ಕೆ ಸರ್ಕಾರದವರು ಗ್ರಾಂಟು ದಯಪಾಲಿಸಿ ಭಾವಿ ಕಾಮಗಾರಿ ಮಾಡಿಸಿದರು. ಕಲಸ್ತವಾಡಿ ಗ್ರಾಮದಲ್ಲಿರುವ ಶಾನುಭೋಗ ಸುಬ್ಬಣ್ಣನೆಂಬುವರು ಧರ್ಮಾರ್ಥವಾಗಿ ಒಂದು ಭಾವಿಯನ್ನು ಸರ್ಕಾರಿ ಜಾಗದಲ್ಲಿ ತೆಗೆಸಿದ್ದಾರೆ. ಗುಂಗ್ರಾಲು ಛತ್ರದ ದಾವಿಲೆ ದೊಡ್ಡ ಗೌಡ್ನಕೊಪ್ಪಿನಲ್ಲಿರತಕ್ಕ ಒಂದು ಭಾವಿ ಕಲ್ಲುಕಟ್ಟಡವು ಕುಸಿದುಹೋಗಿ ಕೃಷಿಡಿಗೋಡೆ, ರಾಟೆ ಮುಂತಾದ್ದು ಇಲ್ಲದೆ ಇದ್ದದ್ದರ ದೆಸೆಯಿಂದ ಅದನ್ನು ದುರುಸ್ತು ಮಾಡಿಸುವ ಏರ್ಪಾಡು ನಡೆಯುತ್ತದೆ. ವರಕೋಡು ದಾಮಿಲೆ ಮೂಡ್ಲುಕೊಪ್ಪಲಿನಲ್ಲಿ ಒಂದು ಭಾವಿ ಬೇಕೆಂದು ಅರ್ಧ ಹಣ ಕೊಡುವದಾಗಿ ಗ್ರಾಮಸ್ಥರು ಒಪ್ಪಿದ್ದಾರೆ. ಈ ತಾಲ್ಲೂಕಿನಲ್ಲಿ ಇರತಕ್ಕ ಮೈನರು ಕೆರೆಗಳು ಪೈಕಿ 6 ಕೆರೆಗಳನ್ನು ದುರುಸ್ತು ಮಾಡಲು ಅಂದಾಜು ಆಗಿ ಗ್ರಾಮಸ್ಥರು ಅವರ ಹಿಸ್ಸೆ ಹಣವನ್ನು ಕೊಡಲು ಒಪ್ಪಿರುತ್ತಾರೆ. ಹೀಗೆ ಈ ತಾಲ್ಲೂಕಿನಲ್ಲಿ ಜಲಮಾರ್ಗ ಕಲ್ಪನೆ ಬಗ್ಗೆ ಚಾಲ್ತಿ ಸಾಲಿನಲ್ಲಿ ಗ್ರಾಮಸ್ಥರಿಂದ 1,059 ರೂ. ಒದಗಿದೆ. ಸರ್ಕಾರದಿಂದ 1,271 ರೂ. ಗ್ರಾಂಟು ಒದಗಿದಂತಾಗಿದೆ.

ವಿದ್ಯಾಭ್ಯಾಸ.—ಇಲವಾಲದಲ್ಲಿ ಗ್ರಾಮಸ್ಥರು 300 ರೂ. ಹಾಜರುಮಾಡಿದ್ದರ ಮೇಲೆ 800 ರೂ. ಗೆ ಒಂದು ಸ್ಕೂಲ್ ಕಟ್ಟಡವು ತಯಾರಾಗಿ 4 ತಿಂಗಳಿಂದ ಆ ಕಟ್ಟಡದಲ್ಲಿ ಸ್ಕೂಲು ನಡೆಯುತ್ತಿದೆ. ವಾಜಮಂಗಲದಲ್ಲಿ ಗ್ರಾಮಸ್ಥರು 150 ರೂ. ಹಾಜರುಮಾಡಿ ಗ್ರಾಂಟು 150 ರೂ. ಸ್ಯಾಂಕ್ಷನ್ ಆಗಿ ಸ್ಕೂಲ್ ಮನೆ ತಯಾರಾಗಿದೆ. ಮೆಳ್ಳಳ್ಳಿ ಗ್ರಾಮದಲ್ಲಿರುವ ಸ್ಕೂಲಿಗಾಗಿ ಗ್ರಾಮಸ್ಥರು 273 ರೂಪಾಯಿ ಕೊಡಿಸಿ ಸ್ಕೂಲಿಗೂ ಮಾಸ್ಟರ ವಾಸಕ್ಕೂ ಪ್ರತ್ಯೇಕ ಕಟ್ಟಡಗಳನ್ನು ಕಟ್ಟಲು 199 ರೂ. ಗ್ರಾಂಟು ದೊರೆತು ಸ್ಕೂಲ್ ಕಟ್ಟಡ ಪೂರ್ತಿಯಾಗಿದೆ. ಮಾಸ್ಟರ ವಾಸದ ಮನೆ ಪೂರೈಸಿಲ್ಲ. ವರುಣದಲ್ಲಿ ಗ್ರಾಮಾಭಿವೃದ್ಧಿ ಕಮಿಟಿ ಮೆಂಬರುಗಳಿಗೂ ಮುಖಂಡರಾದ ಗ್ರಾಮಸ್ಥರಿಗೂ ಪ್ರೋತ್ಸಾಹಿಸಿದ್ದರಲ್ಲಿ ಗ್ರಾಮಸ್ಥರು 225 ರೂ. ಚಂದಾ ಕೊಡಿಸಿದರು. ಸರ್ಕಾರದ ಗ್ರಾಂಟು 225 ರೂ. ಮಂಜೂರಾಗಿ ಮಾದಯ್ಯನವರಿಗೆ ಕಂಟ್ರ್ಯಾಕ್ಟು ಕೊಟ್ಟಿದೆ. ಮೊಳಕೋಡು ಗ್ರಾಮಸ್ಥರು ತಮ್ಮ ಗ್ರಾಮದಲ್ಲಿ ಸ್ಕೂಲ್ ಕಟ್ಟಡ ಬೇಕೆಂದು 250 ರೂ. ಶೇಖರಿಸಿದ್ದಾರೆ. ಸಣ್ಣಳ್ಳಿ ಉತ್ತನಹಳ್ಳಿ ಗ್ರಾಮಗಳಲ್ಲೂ ಸ್ಕೂಲ್ ಕಟ್ಟಿಸಲು ಚಂದಾ ಎತ್ತುತ್ತಿದ್ದಾರೆ. ಕ್ಯಾತ್ಮನಹಳ್ಳಿ ಗ್ರಾಮದಲ್ಲಿ ಒಂದು ಸ್ಕೂಲ್ ಮನೆಯನ್ನು ಕಟ್ಟಬೇಕೆಂದು ಗ್ರಾಮಸ್ಥರು ಉದ್ದೇಶಿಸಿ ಸಾಮಗ್ರಿಗಳನ್ನು ಒದಗಿಸಿಕೊಳ್ಳುತ್ತಾ ಇದ್ದಾರೆ. ಹೀಗೆ ಸ್ಕೂಲ್ ಕಟ್ಟಡಗಳು ಕಟ್ಟತಕ್ಕ ಬಗ್ಗೆ ಗ್ರಾಮಸ್ಥರಿಂದ 948 ರೂ. ಒದಗಿಸಿ ಸರ್ಕಾರದಿಂದ 874 ರೂ. ಗ್ರಾಂಟು ಸ್ಯಾಂಕ್ಷನ್ ಆಗಿದೆ.—ಗ್ರಾಮಾಭಿವೃದ್ಧಿ ಸಂಘಗಳು ಏರ್ಪಾಡಾದ ಮೇಲೆ ಈ ತಾಲ್ಲೂಕಿನಲ್ಲಿ 7 ಗ್ರಾಂಟು ನೇಡು ಸ್ಕೂಲುಗಳು ಹುಟ್ಟಿ ಬಾಲಕರ ವಿದ್ಯಾಭ್ಯಾಸವು ನಡೆಯುತ್ತಾ ಇದೆ. ಪಂಚಮರಿಗಾಗಿ ಕುಪ್ಪೆಗಾಲ ಗ್ರಾಮದಲ್ಲಿ ಸ್ಕೂಲ್ ಏರ್ಪಾಡಾಗಿದೆ. ಉತ್ತನಹಳ್ಳಿ, ಸಣ್ಣಹಳ್ಳಿ, ಗುಡಿಮಾದನಹಳ್ಳಿ ಈ ಗ್ರಾಮಗಳನ್ನು ಒಂದು ಸ್ಕೀಲಾಗಿ ಮಾಡಿ ಅದಕ್ಕೆ ಒಬ್ಬ ಸಂಚರಿಸುವ ಉಪಾಧ್ಯಾಯರನ್ನೂ; ಹಂಚ್ಯ, ರಮ್ಮನಹಳ್ಳಿ, ಸಾತಗಳ್ಳಿ ಗ್ರಾಮಗಳನ್ನು ಸೇರಿಸಿ ಒಬ್ಬ ಸಂಚರಿಸುವ ಉಪಾಧ್ಯಾಯರನ್ನೂ ನೇಮಕ ಮಾಡಿರುವದರಿಂದ ಆ ಗ್ರಾಮಗಳ ಬಾಲಕರ ವಿದ್ಯಾಭ್ಯಾಸಕ್ಕೆ ಬಹಳ ಅನುಕೂಲ ಉಂಟಾಗಿದೆ—ಚೈತ್ರವೇ ತಿಂಗಳ ಆಗಾಯ್ತು ರೈತರಿಗೆ ಬೇಸಾಯಕ್ಕೆ ಅರಂಟು ಕೆಲಸದಲ್ಲಿ ವಿರಾಮವಿರುವುದರಿಂದ ಆ ಕಾಲದಲ್ಲಿ ಪ್ರಾಯಸ್ಥರಿಗೆ ವಿದ್ಯಾಭ್ಯಾಸದ ಅನುಕೂಲತೆಯನ್ನು ಒದಗಿಸಿಕೊಡಬೇಕೆಂಬ ಉದ್ದೇಶದಿಂದ ಡೆಪ್ಯುಟಿ ಕಮೀಷನರು ಅಡವಾಯಿಸಿ ತರೀಪು ಒಂದು ಗ್ರಾಮವನ್ನು ಚುನಾಯಿಸಿ ಒಬ್ಬ ಮಾಸ್ಟರನ್ನು ನೇಮಿಸಿರುವ ಪಾಡಿ ಆತನು ಗ್ರಾಮಸ್ಥರಿಗೆ ಪುರಸತ್ತು ಇದ್ದ ಹಾಗೆಲ್ಲಾ 2 ಘಂಟೆ ಕಾಲಕ್ಕೆ ಒಂದು ಗುಂಪಿನಂತೆ ಓದುಬರಹ ಕಲಿಸಬೇಕೆಂದು ಅಪ್ಪಣೆ ಕೊಡಿಸಿದ್ದರ ಮೇರೆಗೆ ಈ ರೀತಿ ಸ್ಕೂಲನ್ನು ಮೆಳ್ಳಳ್ಳಿ ಗ್ರಾಮದಲ್ಲಿ ಇಡಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೊಂದಿಗೂ ಮತ್ತು ಮ|| ಟಿ. ಕೆ. ಸುಂದರರಾಜಯ್ಯಂಗಾರ್ಯರೊಂದಿಗೂ ಆ ಗ್ರಾಮಕ್ಕೆ ಹೋಗಿ ಗ್ರಾಮದ ಮುಖಂಡರನ್ನು ಕರಸಿ ಈ ವಿಚಾರವನ್ನು ಪ್ರೋತ್ಸಾಹ ರೂಪವಾಗಿ ತಿಳಿಸಲು ಅವರು ಕೆಲವು ಪುಂಡರ ಮಾತನ್ನು ಕೇಳಿಕೊಂಡು ತಮ್ಮನ್ನು ಓದುಬರಹ ಕಲಿಸುವ ನೆಪದಿಂದ ಹಾಲಿ ನಡೆಯುತ್ತಿರುವ ಯುದ್ಧಕ್ಕೆ ಸರ್ಕಾರದವರು ಎಳೆಯುವರೆಂಬ ದುರಭಿಪ್ರಾಯವನ್ನಿಟ್ಟುಕೊಂಡು ಎಷ್ಟು ಪ್ರೋತ್ಸಾಹ ಕೊಟ್ಟರೂ ಗಮನ ಕೊಡಲಿಲ್ಲ. ಕೊನೆಗೆ ಒಬ್ಬ ರೈತನು ಮಾತ್ರ ತಮಗೆ ಉಂಟಾದ ಭೀತಿಯನ್ನು ತಿಳಿಸಿದನು. ಅದರ ಮೇಲೆ ಅವರಿಗೆ ಅಂಥಾ ದುರಭಿಪ್ರಾಯವನ್ನು ಬಿಡಬೇಕೆಂದು ಎಷ್ಟು ಸಮಾಧಾನೋಕ್ತಿಗಳನ್ನು ಹೇಳಿದಾಗ್ಯೂ ಫಲಕಾರಿಯಾಗಲಿಲ್ಲ. ಆ ದಿವಸ ಸ್ಕೂಲ್ ಮಾಸ್ಟರನ್ನು ಅಲ್ಲೇ ಬಿಟ್ಟು ಇನ್ನು 2-3 ದಿವಸಗಳು ಪ್ರಯತ್ನಪಡುವಂತೆ ಹೇಳಿದ್ದಾಯಿತು. 4 ದಿವಸಗಳ ಮೇಲೆ ಮಾಸ್ಟರು ವಾಪಸು ಬಂದು ಗ್ರಾಮಸ್ಥರು ಎಷ್ಟು ತಿಳುವಳಿಕೆ ಹೇಳಿದರೂ ಒಪ್ಪಲಿಲ್ಲವೆಂದು ಹೇಳಿದರು. ತರುವಾಯ ಮೈಸೂರಿಗೆ ಸಮೀಪದಲ್ಲಿರುವ ಕ್ಯಾತ್ಮನಹಳ್ಳಿ ಗ್ರಾಮದ ಮುಖಂಡ ರೈತರು ತಮ್ಮ ಗ್ರಾಮಗಳಲ್ಲಿ 60 ಜನ ಪ್ರಾಯಕ ರೈತರನ್ನು ವಿದ್ಯೆ ಕಲಿಸಲು ಒದಗಿಸುವುದಾಗಿ ತಿಳಿಸಿದರು. ಅದರ ಮೇಲೆ ಮಾರನೇ ದಿವಸವೇ ಆ ಗ್ರಾಮಕ್ಕೆ ಹೋಗಿ ಗ್ರಾಮಸ್ಥರನ್ನೆಲ್ಲಾ ಸೇರಿಸಿ ಸ್ಕೂಲಿನ ಉದ್ದೇಶವನ್ನು ತಿಳಿಸಲು 60 ಜನಗಳು ವಿದ್ಯೆಯನ್ನು ಕಲಿಯುವುದಾಗಿ ಒಪ್ಪಿಕೊಂಡರು. ಇವರ ನಂಬಿಕೆ ಮೇಲೆ ಮಾಸ್ಟರನ್ನು ಇಲ್ಲಿ ಕೆಲಸ ಮಾಡಲು ನೇಮಿಸಿತು, ಕೊಂಚಕಾಲವಾದ ಮೇಲೆ ಒಬ್ಬೊಬ್ಬರಾಗಿ ಸಡಲಿದರು. ಗ್ರಾಮದಲ್ಲಿ ಪರಿವಾರದವರಲ್ಲಿ ಪಂಗಡವು ಹುಟ್ಟಿತು. ಅದರಿಂದ ಕೊಂಚ ಮಟ್ಟಿಗೆ ಸ್ಕೂಲಿಗೆ ಬರತಕ್ಕವರ ಸಂಖ್ಯೆ ಕಡಮೆಯಾಯಿತು. ಕಾಡ್ಲೆ ಮಹದೇಶ್ವರ ಬೆಟ್ಟದ ಜಾತ್ರೆಗೆ ಅನೇಕರು ಹೊರಟುಹೋದರು. ಈ ಮಧ್ಯೆ ಮೆಳ್ಳಳ್ಳಿಯಲ್ಲಿ ಹುಟ್ಟಿಸಿದಂಥಾ ಸುಳ್ಳು ವರ್ತಮಾನವನ್ನು ಈ ಗ್ರಾಮದಲ್ಲೂ ಕೆಲವರು ಪುಂಡರು ಹುಟ್ಟಿಸಿದ್ದದ್ದನ್ನು ಕೇವಲ ತಿಳುವಳಿಕೆಯಿಲ್ಲದ ಪಶುಪ್ರಾಣಿಗಳಾಗಿರುವ ರೈತರು ನಂಬಿ ಅದರಿಂದಲೂ ಸ್ಕೂಲಿಗೆ ಬರತಕ್ಕವರ ಸಂಖ್ಯೆ ಇನ್ನೂ ಕಮ್ಮಿಯಾಯಿತು. ಪದೇಪದೇ ಅವರಿಗೆ ಅನೇಕ ಬುದ್ಧಿವಚನಗಳನ್ನು ಹೇಳಿದ್ದರಲ್ಲಿ ಈಚೆಗೆ 25 ಜನಗಳ ವರೆಗೂ ವಿದ್ಯಾವ್ಯಾಸಂಗ ಮಾಡುತ್ತಿದ್ದಾರೆ. ಇವರ ಪೈಕಿ 8 ಜನಗಳಿಗೆ ಓದುಬರಹ ಸುಮಾರಾಗಿ ಬಂದಿದೆ. ಗ್ರಾಮಾಂತ್ರಗಳಲ್ಲಿ ಬಹು ಕಾಲದಿಂದಲೂ ನೆಲಗೊಂಡಿರತಕ್ಕಂಥಾ ಮೌಢ್ಯವೇ ಈ ರೀತಿಯ ಆಚರಣೆಗೆ ಮುಖ್ಯ ಕಾರಣವಾಗಿದೆ. ಇದನ್ನು ಹೋಗಲಾಡಿಸುವುದು ಗ್ರಾಮಗಳ ಪ್ರತಿನಿಧಿಗಳ ಮುಖ್ಯ ಕರ್ತವ್ಯವಾಗಿದೆ. ತಮ್ಮ ತಾಲ್ಲೂಕಿನಲ್ಲಿ ರಾಜಧಾನಿ ಇದ್ದಾಗ್ಯೂ ಇತರ ತಾಲ್ಲೂಕುಗಳಿಂತ ವಿದ್ಯಾಭ್ಯಾಸದ ವಿಷಯದಲ್ಲಿ ಇದು ಬಹಳ ಹೀನಸ್ಥಿತಿಯಲ್ಲಿದೆ. ಈ ತಾಲ್ಲೂಕಿನ ಪ್ರಜಾ ಸಂಖ್ಯೆ 64,872; ಈ ಪೈಕಿ ಸ್ಕೂಲಿಗೆ ಹೋಗಬಹುದಾದ ವಯಸ್ಸಿನವರು 13,310 ಜನ. ಆದರೆ ಈ ಪೈಕಿ 916 ಜನ ಮಾತ್ರ ಸ್ಕೂಲಿಗೆ ಹೋಗುತ್ತಿದ್ದಾರೆ. ಪಾಶ್ಚಾತ್ಯ ಮತ್ತು ಜಪಾನ್ ದೇಶಗಳಲ್ಲಿ ವಿದ್ಯಾವಂತರ ಸಂಖ್ಯೆಯು ಶೇಕಡಾ 10 ರಂತೆ ಇರುವಾಗ್ಗೆ ಈ ತಾಲ್ಲೂಕಿನ ವಿದ್ಯಾವಂತರ ಸಂಖ್ಯೆ ಶೇಕಡಾ 8 ರಂತೆ ಇರುವುದು ಬಹಳ ಶೋಚನೀಯವಾಗಿದೆ. ಈ ಸ್ಥಿತಿಯನ್ನು ತಪ್ಪಿಸಿ ಈ ದೇಶಕ್ಕೆ ರಾಜಧಾನಿಯು ಹೇಗೆ ಮುಖ್ಯ ಲಕ್ಷಣವನ್ನಿಸಿಕೊಂಡಿದೆಯೋ ಅದೇ ರೀತಿ ಈ ತಾಲ್ಲೂಕು ವಿದ್ಯಾಭ್ಯಾಸದಲ್ಲಿ ಕ್ಷೇತ್ರದಲ್ಲೇ ಉತ್ತಮ ಸ್ಥಿತಿಯನ್ನು ಹೊಂದಲು ಸರ್ವರೂ ಪ್ರಯತ್ನಿಸಬೇಕು. ಹೋದ ತಿಂಗಳಲ್ಲಿ ದಿವಾನ್ ಸಾಹೇಬರು ದಯಮಾಡಿ ಕೆಲವು ಗ್ರಾಮಗಳನ್ನು ಇನ್‌ಸ್ಪೆಕ್ಷನ್ ಮಾಡಿ "ಸೂರ್ಯನ ಕೆಳಗೆ ಕತ್ತಲೆ" ಎಂಬ ಗಾದೆಯು ವಿದ್ಯಾಭ್ಯಾಸದ ವಿಷಯದಲ್ಲಿ ಈ ತಾಲ್ಲೂಕಿಗೆ ಚೆನ್ನಾಗಿ ಅನ್ವಯಿಸುತ್ತದೆ ಎಂದೂ, ಈ ಅಪಮಾನ ತಪ್ಪಿಸಿಕೊಳ್ಳಬೇಕೆಂದೂ ಅಪ್ಪಣೆ ಕೊಡಿಸಿದರು. ನಮ್ಮ ದೇಶದ ಏಳಿಗೆಗೆ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸಿದ್ದಾರೆ. ಈ ವಿದ್ಯಾನಿಲಯಕ್ಕೆ ಕೇವಲ ಸಮೀಪದಲ್ಲಿರುವ ಗ್ರಾಮಾಂತ್ರಗಳಲ್ಲಿ ಇಷ್ಟು ಮೌಢ್ಯವಿರುವುದು ಸರಿಯಲ್ಲ. ಇದನ್ನು ನೀಗಿಸಿಕೊಳ್ಳಲು ಸರ್ವರೂ ಪ್ರಯತ್ನಪಡಬೇಕು.

ವಾಚಕಶಾಲೆಗಳು ಮತ್ತು ಪುಸ್ತಕ ಭಂಡಾರಗಳು.—ಕಳೆದ ಸಾಲಿನಲ್ಲಿ ಈ ತಾಲ್ಲೂಕಿನಲ್ಲಿ 20 ವಾಚಕಶಾಲೆಗಳಿದ್ದು 16 ನ್ಯೂಸ್‌ಪೇಪರುಗಳು ಬರುತ್ತಿದ್ದವು. ಚಾಲ್ತಿ ಸಾಲಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ವಾಚಕ ಶಾಲೆಗಳು ಸೇರಿಕೊಂಡು 49 ಪೇಪರ್‌ಗಳನ್ನು ತರಿಸುವ 33 ವಾಚಕಶಾಲೆಗಳಿವೆ. ಈಚೆಗೆ ಗೌರ್ನಮೆಂಟಿನಿಂದ ಮಂಜೂರಾದ ರಿಯಾಯಿತಿಗಳನ್ನು ಕೇಳಿ ಗ್ರಾಮದವರು ಪುಸ್ತಕ ಭಂಡಾರವನ್ನು ಸ್ಥಾಪಿಸಲು ಮೊದಲಾದ ಜವಾಬ್ದಾರಿ ಮಾಡುವದಾಗಿ ಒಪ್ಪಿಕೊಂಡಿದ್ದಾರೆ. [ಶೇಷ]

ಬಾತ್ಮೀದಾರರಿಗೆ ನೋಟೀಸ್.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. - ಎಡಿ.]

ಕರೆಸ್ಪಾಂಡೆನ್ಸ್.

ಗುಂಡ್ಲುಪೇಟೆಯ ಪ್ರಕೃತ ಸ್ಥಿತಿ.—ಜವಾಬು.

ಅಯ್ಯಾ,—ನಮ್ಮ 13 ನೇ ತಾ. ಪತ್ರಿಕೆಯಲ್ಲಿ ಪ್ರಕಟಿಸಿರುವ ಮೇಲ್ಕಂಡ ಬಾತ್ಮಿಯಲ್ಲಿ ವಿಷಯಗಳು ಅವುಗಳ ನಿಜರೂಪದಲ್ಲಿರುವಂತೆ ತೋರುವುದಿಲ್ಲ. ಇಲ್ಲಿನ ಎ. ವಿ. ಸ್ಕೂಲು ಅಭಿವೃದ್ಧಿ ಸ್ಥಿತಿಯಲ್ಲಿದೆ. ಎಲ್ಲಾ ತರಗತಿಗಳೂ ಚೆನ್ನಾಗಿವೆ. ಹುಡುಗರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಆ ಮಾಸ್ಟರುಗಳ ಮುತುವರ್ಜಿ ಇಲ್ಲದೆ ಇಷ್ಟು ಅಭಿವೃದ್ಧಿ ಸ್ಥಿತಿಯಲ್ಲಿದೆ ಎಂದು ಹೇಳಲಾಗುವುದಿಲ್ಲ. ಇಲ್ಲಿನ ಗರಲ್ಸ್ ಸ್ಕೂಲ್ ಮೊದಲಿಗಿಂತ ಅಭಿವೃದ್ಧಿ ಸ್ಥಿತಿಯಲ್ಲಿದೆ. ಆದರೆ ಲೋಅರ್ ಸೆಕೆಂಡರಿ ಪರೀಕ್ಷೆಯ ತರಗತಿಯೇ ಇಲ್ಲದಿರುವಾಗ ನಾಂದಿ ಮಿಡ್ಲ್ ಸ್ಕೂಲ್ ಯಾರು ಪ್ಯಾಸ್ ಮಾಡುವುದು ಹೇಗೆ? ಮತ್ತು ಸಾಧಾರಣವಾಗಿ ಹುಡುಗಿಯರನ್ನು 12 ವರ್ಷವಾಗುತ್ತಲೇ ಸ್ಕೂಲಿಗೆ ಕಳುಹಿಸಲು ಅವರ ತಾಯಿ ತಂದೆಗಳು ಇಷ್ಟಪಡುವುದಿಲ್ಲ. ಇಲ್ಲಿನ ಶ್ರೀನಿವಾಸಸ್ವಾಮಿ ಬ್ಯಾಂಕಿನಲ್ಲಿ ಯಾವ ನೂತನತೆಯೂ, ಮನಸ್ತಾಪವೂ ಕಾಣಬರಲಿಲ್ಲ. ಬ್ಯಾಂಕ್ ಸರಿಯಾದ ಸ್ಥಿತಿಯಲ್ಲಿದೆ. ಇಲ್ಲಿ ಪೋಸ್ಟ್ ಮಾಸ್ಟರಾಗಿದ್ದ ಮ|| ವೆಂಕಟಾಚಲಶಾಸ್ತ್ರಿಗಳು ಇಲ್ಲಿ ಬಹಳ ದಿವಸ ಇದ್ದು ಜನರಲ್ಲಿ ನಂಬಿಕೆಯಿಂದ ಸ್ನೇಹಬೆಳಸಲು ಕಠಿಣವಾದ ಕಟ್ಟಳೆಗಳಿಗೆ ವಿಶೇಷ ಗಮನ ಕೊಡದೇ ಇರಬಹುದು. ಆದರೆ ಮ|| ವೆಂಕಟಸುಬ್ಬಯ್ಯನವರು ಹೊಸದಾಗಿ ಇಲ್ಲಿಗೆ ಬಂದಿರುವುದರಿಂದ ಜನರಲ್ಲಿ ಇನ್ನೂ ವಿಶೇಷ ಸ್ನೇಹವಿಲ್ಲ. ಕಠಿಣವಾದ ಅವರ ಡಿಪಾರ್ಟ್‌ಮೆಂಟಿನ ಕಟ್ಟಳೆಗಳನ್ನು ಅನುಸರಿಸುತ್ತಿದ್ದಾರೆ. ಇದನ್ನು ಜನರು ವಿರೋಧವಾಗಿ ಭಾವಿಸಬಹುದು. ಪ್ರತ್ಯಕ್ಷದರ್ಶಿ.

ಚಿತ್ರದುರ್ಗದ ವಿಚಾರಗಳು.

ಅಯ್ಯಾ,—ಹೋದ ಮತ್ತು ಆಚೇ ವಾರಗಳಲ್ಲಿನ ಪತ್ರಿಕೆಯಲ್ಲಿ ಕಾತರಹಾಳು ಕೆರೆಯಿಂದ ನೀರು ಟವನ್‌ಗೆ ಸಪ್ಲೈಮಾಡತಕ್ಕ ವಿಚಾರದಲ್ಲಿ ಡೆ|| ಕ|| ಸಾ|| ರವರ ಸಲಹೆಯಿಂದ ಗ್ರಾ|| ನಿಂದ ಸ್ಯಾಂಕ್ಷನ್ ಆಗುತ್ತೆಂದು ವಗೈರೆ ಬರೆಯಲ್ಪಟ್ಟಿತ್ತು. ಆದರೆ ಕಾತರಹಾಳು ಕೆರೆಯು ತುಂಬಿದ ಆ ಕೆರೆಯ ಹಿಂದೆ ಸಾಗುವಳಿಯಾಗತಕ್ಕ ವರಿ ಫಸಲಿನ 2 ಫಸಲಿಗೆ ಸಾಕಾಗುವುದು ಕಷ್ಟವೆಂದೂ, ಆದರೆ ಹಿಂದೆ ತರೀ ಜಮೀನು ಇರುವದೂ ಇಲ್ಲ ಕೊಂಚವೆಂದೂ ತಿಳಿಯುತ್ತದಲ್ಲದೆ ಆ ಕೆರೆಯಲ್ಲಿ ಒಂದು ಮಡುವು ಇರುವುದಾಗಿಯೂ, ಅಲ್ಲಿ ಊಟೆ ಇರುವುದಾಗಿಯೂ, ಆ ನೀರು ಟವನ್‌ಗೆ ಸಾಕಾಗುತ್ತೆಂದೂ ಇನ್‌ಜನಿಯರ್ ಇಲಾಖೆಯವರು ಅಭಿಪ್ರಾಯ ಪಟ್ಟನಂತರ ಡೆ|| ಕ|| ರು ಸಲಹೆ ಕೊಟ್ಟಹಾಗೆ ತಿಳಿಯಬರುತ್ತೆ. ಹಿಂದೆ ಇಲ್ಲಿನ ಸೀನೀರು ಹೊಂಡದಲ್ಲಿನ ಭಾವಿಯು ಬೇಕಾದಷ್ಟು ಜಲಾಧಾರವಿರುವುದರಿಂದ ಟವನ್‌ಗೆಲ್ಲಾ ಸಪ್ಲೈಮಾಡುತ್ತಾಗಿ ಇನ್‌ಜನಿಯರವರು ಅಭಿಪ್ರಾಯ ಪಟ್ಟನಂತರ ಆಯಿಲ್ ಎಂಜಿನ್, ಪೈಪು, ಟ್ಯಾಂಕ್ ಗಳು ತರಿಸಲಾಯ್ತು. ಇಂಜಿನ್ ಒಂದು ದಿವಸ ಕೆಲಸಮಾಡಲಾಗಿ ಇವರ ಉದ್ದೇಶ ನೆರವೇರಲಾರದೆ 5-6 ಸಾವಿರ ರೂಪಾಯಿ ನಷ್ಟವಾಯಿತು. ಇದನ್ನು ಈಗ ಮ್ಯುನಿಸಿಪಾಲಿಟಿಯವರು ಸಾಲಮಾಡಬೇಕೆಂದು ಇರುತ್ತಾರೆ. ಮುಂದೆ ಈ ಟವನ್ ರೈಲ್ವೆ ಬರಾವರ ಆದನಂತರ ನಾಲ್ಕು ಅಕ್ಕಗಳಲ್ಲಿಯೂ ವಿಸ್ತಾರವಾಗುತ್ತೆ. ಹಾಗೆ ಆದನಂತರ ಈಗಿನ ನೀರಿನ ಕ್ಷಾಮವನ್ನು ಅಗ್ಗ ಹೆಚ್ಚು ಜನಗಳು ಅನುಭವಿಸುವುದಕ್ಕಿಂತಲೂ ಈಗಲೇ ಮುಂದಿನ ಲಕ್ಷ್ಯದ ಮೇಲೆ

ಮತ್ತು ನಿರಂತರವಾದ ಜಲಾಧಾರವನ್ನು ತೆಗೆದುಕೊಂಡು ಬರಲಿಕ್ಕೆ ಪ್ರಯತ್ನಿಸಿ ಅತ್ಯಗತ್ಯವು. ಹಿಂದೆ ಮ|| ಚಂಗಯ್ಯಶೆಟ್ಟರು ತುಂಗಭದ್ರಾ ನದಿಯಿಂದಾದರೂ, ವರ್ತಿಕೆರೆಯ ನೀರನ್ನಾದರೂ ತರಲು ಶ್ರಮಪಟ್ಟಿದ್ದರು. ಅನ್ಯ ಕಾರಣದಿಂದ ಆ ಉದ್ದೇಶ ಈಡೇರಲಿಲ್ಲ. ಈಗಲಾದರೂ ಆ ಎರಡು ಸ್ಥಳಗಳ ಪೈಕಿ ಒಂದರಿಂದ ನೀರು ತರಲು ಪ್ರಯತ್ನಿಸಿದರೆ ನೀರಿನ ಕ್ಷಾಮ ಎಂದೆಂದಿಗೂ ತಲೆ ಹಾಕದೆ ಅನೇಕ ಫಾಯಿದೆಯೂ ಆಗುವುದು. ಮೇಲ್ಕಂಡ ಕಾಕರಹಾಳು ಕೆರೆಯನ್ನು ಮೆಂಬರುಗಳ್ಯಾರೂ ಪರೀಕ್ಷಿಸಲಿಲ್ಲವೆಂದು ತಿಳಿಯಬರುತ್ತೆ. ಈ ಟೌನ್ ನೀರಿನ ವಿಚಾರದಲ್ಲಿ ಮೆಂಬರ್‌ಗಳು ಆಲೋಚಿಸತಕ್ಕದ್ದಾಗಿರುತ್ತೆ.

ಇಲ್ಲಿಗೆ ಅಮಲ್ದಾರ್, ಸೂಪರಿಂಟೆಂಡ್, ಹೆಡ್ ಕ್ವಾರ್ಟರ್ ಇನ್‌ಸ್ಪೆಕ್ಟರ್, ಶಿರಸ್ತೇದಾರ್, ದಫೇದಾರ್, ಇನ್‌ಸ್ಪೆಕ್ಟರ್, ಮತ್ತು ಕೆಲವು ರೆವಿನ್ಯೂ ಆಫೀಸ್ ಗುಮಾಸ್ತರು ಮುನಸಿಗಳೂ ಬಂದು ಮೂರು ನಾಲ್ಕು ವರುಷವಾಯಿತು. ಇವರನ್ನು ಮೇಲ್ಪಟ್ಟ ಅಧಿಕಾರಿಗಳು ಉಳಿಸಿಕೊಂಡರು. ಅವರಲ್ಲಿ ಏನು ಮುಖ್ಯವಿರುತ್ತೋ ತಿಳಿಯದು. ಮೇಲ್ಕಂಡ ಇನ್ನು ಇರತಕ್ಕ ನೌಕರರನ್ನು ಪ್ರಜಾ ಸೌಕರ್ಯಕ್ಕಾಗಿ ಬೇರೆ ಬೇರೆ ಕಡೆ ವರ್ಗಮಾಡಿದರೆ ನಮ್ಮ ಟೌನ್ ಪ್ರಜೆಗಳಾದ ಎಲ್ಲರೂ ಇವರುಗಳಿಂದ ಆಗತಕ್ಕ ಸುಖದುಃಖವನ್ನು ಅನುಭವಿಸಿ ಈ ವಿಚಾರದಲ್ಲಿ ನಮ್ಮ ಪ್ರಭುಗಳು ನಮ್ಮ ದಿವಾನ್ ಸಾಹೇಬರು ಪೂರ್ವವಾಗಿ ಚಿತ್ತಕ್ಕೆ ತಂದಲ್ಲಿ ಇಲ್ಲಿನ ಪ್ರಜೆಗಳು ಧನ್ಯರಾಗುತ್ತೇವೆ. ಎಷಿಸೆಕ್ಷ ಆಫೀಸಿನ ಒಂದು ಶಾಖೆಯನ್ನು ಈ ಡಿಸ್ಟ್ರಿಕ್ಟಿನಲ್ಲಿ ಸ್ಥಾಪಿಸಿದಲ್ಲಿ ಇಲ್ಲಿನ ಪ್ರಜೆಗಳು ಧನ್ಯರಾದೇವೆಂದು ಕೋರುತ್ತೇವೆ.

ಚಂದಾದಾರ್.

ತಾಲ್ಲೋಕು ವರ್ತಮಾನಗಳು.

ಬೀರೂರು.—ಉದಾರಿಗಳಾದ ಬೀರೂರು ಸಾಹುಕಾರರಲ್ಲಿ ಕೆಲವರು ವಿದ್ಯಾಭಿವೃದ್ಧಿಗೆ ಪ್ರೋತ್ಸಾಹ ಕೊಡುತ್ತಿದ್ದಲ್ಲಿ ತುಂಬಾ ಆಸಕ್ತಿಯುಳ್ಳವರಾಗಿರುವುದು ಕೇಳಲು ತುಂಬಾ ಸಂತೋಷವಾಗುತ್ತದೆ. ಪ್ರಕೃತ ಈ ತಿಂಗಳು ಇಲ್ಲಿ ನಡೆದ ಲೋವರ್ ಸೆಕೆಂಡರಿ ಪರೀಕ್ಷೆಗೆ ಬಂದಿದ್ದ ಸುಮಾರು ನೂರು ಜನ ವಿದ್ಯಾರ್ಥಿಗಳಿಗೂ ಇತರ ಪೋಷಣೆಗೆ ಬಂದಿದ್ದವರಿಗೂ ಕಾಲಕ್ಕೆ ಸರಿಯಾಗಿ ಊಟ ಉಪಚಾರಗಳು ಬಹು ವಿಶ್ವಾಸದಿಂದ ಬ್ರಾಹ್ಮಣರಿಗೂ ಮತ್ತು ಛತ್ರದಲ್ಲಿ ಊಟಮಾಡುವ ಇತರ ಮತಸ್ಥರಿಗೂ ಸಾ|| ಮ|| ಶಿವಲಿಂಗಪ್ಪ ನವರಿಂದ ನಡೆಸಲ್ಪಟ್ಟವು. ಮ|| ಮಂಜನಾಥ ಅನಾಥಾಲಯದ ಮ್ಯಾನೇಜರ್ ಶ್ರೀನಿವಾಸಶೆಟ್ಟರು ಪರೀಕ್ಷೆಗೆ ಹೋಗಿದ್ದ ಆಲಯದ ಬಾಲಕರಿಗೆ ಮಠದಲ್ಲಿ ಪ್ರತ್ಯೇಕವಾಗಿಯೇ ಊಟ ಉಪಚಾರಗಳಿಗೆ ಸೌಕರ್ಯವನ್ನು ಮಾಡಿದ್ದರು.

ಮಲ್ಲಾಪುರ.—ಈ ಗ್ರಾಮದ ಬಾಯ್ಸ್ ಸ್ಕೂಲಿಗೆ ಮ|| ವಿ. ನಾಗೇಶರಾಯರು 6 ವರ್ಷಗಳ ಕೆಳಗೆ ಹೆಡ್ ಮಾಸ್ಟರಾಗಿ ಬಂದ ಮೇಲೆ ಸ್ಕೂಲಿನಲ್ಲಿ ವಿದ್ಯಾರ್ಥಿಗಳು 70 ರಿಂದ 125 ಕ್ಕೂ, ಮಾಸ್ಟರುಗಳ ಸಂಖ್ಯೆ 3 ರಿಂದ 5 ಕ್ಕೂ ಏರಿದ್ದಲ್ಲದೆ ಅನೇಕ ಹುಡುಗರು ಲೋವರ್ ಸೆಕೆಂಡರಿ ಪ್ಯಾಸಾಗುವುದರಿಂದ ಈ ಸ್ಕೂಲನ್ನು ದಿನೇ ದಿನೇ ಬಹಳ ಅಭಿವೃದ್ಧಿಗೆ ತಂದಿದ್ದಾರೆ. ಅಲ್ಲದೆ ಇವರ ನಡತೆಯಿಂದ ಎಲ್ಲಾ ಜನರಲ್ಲಿಯೂ ವಿಶೇಷ ಗೌರವವನ್ನು ಸಂಪಾದಿಸಿದ್ದರು. ಇವರು ಈಗ ಅಕ್ಕಿಹೆಬ್ಬಾಳು ಸ್ಕೂಲಿಗೆ ವರ್ಗಮಾಡಲ್ಪಟ್ಟಿರುತ್ತಾರೆ. ಇವರು ಇಲ್ಲಿಂದ ಹೊರಡುವುದರಿಂದ ಇಲ್ಲಿನ ಜನರೆಲ್ಲರೂ ಬಹಳ ವ್ಯಸನಪಡುತ್ತಾರೆ. ಇವರು ಹೋಗತಕ್ಕ ಸ್ಥಳದಲ್ಲಿಯೂ ಇದೇ ರೀತಿ ಕೀರ್ತಿ ಪಡೆಯಲೆಂದು ಆಶಿಸುತ್ತೇವೆ. ಇಲ್ಲಿಗೆ ಹಾಲಿ ಬಂದಿರುವ ಮ|| ಕೆ. ರಾಮಣ್ಣನವರು ಸಹ ಇದರಂತೆ ಸ್ಕೂಲನ್ನು ಅಭಿವೃದ್ಧಿಗೆ ತಂದಾರೆಂದು ನಂಬಿದ್ದೇವೆ. ಮ|| ನಾಗೇಶರಾಯರಿಗೆ ಮತ್ತು ವಿದ್ಯಾರ್ಥಿಗಳು ಸ್ಕೂಲ್ ಹಾಲಿನಲ್ಲಿ 12 ನೇ ತಾ. ಸಾಯಂಕಾಲ ಟೀಪಾರ್ಟಿ ಕೊಟ್ಟರು.

ಕೃಷ್ಣರಾಜಪೇಟೆ.—ಇಲ್ಲಿನ ಜನಗಳೆಲ್ಲರೂ ಪ್ಲೇಗಿನ ಬೇನೆಯಿಂದ ಬಹಳ ಕಷ್ಟಪಡುತ್ತಿದ್ದಾರೆ. ಈಗ ಸುಮಾರು 5-6 ವಾರಗಳಾಗುತ್ತಾ ಬಂತು. ಗುಡಿಸಲುಗಳಲ್ಲಿಯೂ ಕೂಡ ಕೆಲವು ಕೇಸುಗಳೂ ಮತ್ತು ಒಂದೆರಡು ಮರಣಗಳೂ ಆಗಿರುತ್ತವೆ. ಈಚೆಗೆ ಶಮನಹೊಂದಿರುವುದರಿಂದ ಪ್ರಜೆಗಳೆಲ್ಲರೂ ಸ್ವಲ್ಪ ಸಂತೋಷಿಸುತ್ತಾರೆ.— ಈ ಊರಿನಲ್ಲಿ ರಾತ್ರಿಯ ಕಾಲದಲ್ಲಿ ಬೀದಿ ದೀಪಗಳಿಲ್ಲ. ಮತ್ತು ಮ್ಯುನಿಸಿಪಲ್ ಲಾಂದ್ರಗಳೂ ಉರಿಯುವುದಿಲ್ಲ. ಸ್ವಲ್ಪ ನಮ್ಮ ಮನೆಗಳಲ್ಲಿ ಸಾಮಾನುಗಳನ್ನೂ ದವಸಧಾನ್ಯಾದಿಗಳನ್ನೂ ಬಿಟ್ಟು ಹೋಗಿರುವುದರಿಂದ ರಾತ್ರಿ ಕಳ್ಳರಿಗೆ ಬಹಳ ಅನುಕೂಲವಾದಂತಾಗಿದೆ. ಮೇಲ್ಪಟ್ಟ ಅಧಿಕಾರಿಗಳು ಈ ಲೋಪಗಳನ್ನು ಹೋಗಲಾಡಿಸ ತಕ್ಕ ಮಾರ್ಗಗಳನ್ನು ಮಾಡುವರೆಂದು ನಂಬುತ್ತೇನೆ.—ಮತ್ತು ಗ್ರಾಮ ನಿವಾಸಿಗಳು ಆದಷ್ಟು ಬೇಗನೆ ಗುಡಿಸಲುಗಳಿಂದ ಮನೆಗಳಿಗೆ ಬರಬೇಕೆಂಬ ಕುತೂಹಲವುಳ್ಳವರಾಗಿ ಪ್ಲೇಗಿನ ಸೋಂಕು ಸಂಪೂರ್ಣವಾಗಿ ನಿಲ್ಲುವ ಪರಿಯಂತರವಾದರೂ ಗುಡಿಸಲುಗಳನ್ನು ಬಿಡದಿರಲಿ. ಬಾರದಂತೆ ತಕ್ಕ ಏರ್ಪಾಡುಗಳನ್ನು ನಮ್ಮ ಅಮಲ್ದಾರರೂ ವಹಿಸಿಕೊಂಡು ಶ್ರಮಪಡುತ್ತಿರೆಂದು ನಂಬುತ್ತೇವೆ.—ಇಲ್ಲಿನ ಡಾಕ್ಟರ್ ಬಿಲ್ ಸೀಟಾರಾಮಯ್ಯನವರು ಪ್ಲೇಗಿನ ಕಾಲದಲ್ಲಿ ರೋಗಿಗಳನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಲೂ, ಚಿಕಿತ್ಸೆ ಮಾಡುತ್ತಲೂ ಬಂದ ದ್ದರಿಂದ ಇಲ್ಲಿನವರೆಲ್ಲರೂ ಇವರ ವಿಷಯದಲ್ಲಿ ತುಂಬಾ ಪ್ರೀತಿಯುಳ್ಳವರಾಗಿದ್ದಾರೆ. ಕಳೆದ ತಿಂಗಳು ತಾ. 17 ರಲ್ಲಿ ಡೆಪ್ಯುಟಿ ಸ್ಯಾನಿಟರಿ ಕಮಿಷನರ್‌ರವರು ಬಂದು ಟೌನ್ ಇನ್‌ಸ್ಪೆಕ್ಷನ್ ಮಾಡಿಕೊಂಡು ಹೋದರು.

ಅರಸೀಕೆರೆ.—ಬಿಸಿಲಿನ ಕಾವು ಹೆಚ್ಚು. ಆಗಾಗ್ಗೆ ಮೋಡವಾಡುತ್ತಾ ಇದ್ದು ಸ್ವಲ್ಪ ಸೋನೆ ಮಳೆಯೂ ಬಂತು. ನೀರಿನ ತೊಂದರೆ ಹೇಳಲೇ ತೀರದು. ಈ ಬಾರಿಗೆ ಸರ್ಕಾರದವರು ಇಲ್ಲಿ ಹಾಕಿರುವದಕ್ಕೆ ಪ್ರಜೆಗಳಿಂದ ಹಣ ವಸೂಲಾಗಿ ಅನೇಕ ದಿನಗಳಾದಾಗ್ಯೂ, ಅದರ ಸುದ್ದಿಯೇ ಇಲ್ಲದಂತಾಗಿದೆ. ಈಚೆಗೆ ಪ್ರಾಂತದಲ್ಲಿ 2-3 ದೊಡ್ಡ ಬಾವಿಗಳನ್ನು ತೋಡಿಸುತ್ತಾರೆಂಬ ಸುದ್ದಿಯು ಹಬ್ಬಿದ್ದು ಬಾವಿ ಏರ್ಪಾಡೂ ಇಲ್ಲದಂತಾಗಿ ಪ್ರಜೆಗಳಿಗೂ ಜಾನುವಾರುಗಳಿಗೂ ಬಹಳ ತೊಂದರೆಯುಂಟಾಗಿದೆ. ನಮ್ಮ ಅಮಲ್ದಾರ್ರು ತಿಪ್ಟೂರಿನ ಪ್ರಜೆಗಳ ಪರವಾಗಿ ಈ ಟೌನಿಗೆ ಸಂಭವಿಸಿರುವ ನೀರಿನ ತೊಂದರೆಯನ್ನು ನಮ್ಮ ದಿವಾನ್ ಸಾಹೇಬರವರ ಸಮಕ್ಷಮದಲ್ಲಿ ಅರಿಕೆ ಮಾಡುವುದಾದರೆ ನಮ್ಮ ಮಂತ್ರಿಶ್ರೇಷ್ಠರು ಈ ಟೌನಿಗೋಸ್ಕರ ತುರ್ತಾಗಿ ಅನೇಕ ಸಂವತ್ಸರಗಳಿಂದ ಸಂಭವಿಸಿರುವ ನೀರಿನ ಕಷ್ಟವನ್ನು ತಪ್ಪಿಸುವ ಪ್ರಯತ್ನಮಾಡುವರೆಂಬುವದರಲ್ಲಿ ಏನೇನೂ ಸಂಶಯವಿಲ್ಲ.— ಸೋಮವಾರ ನಮ್ಮ ದಿವಾನ್‌ರವರ ಸವಾರಿಯು ಈ ಊರಿಗೆ ದಯಮಾಡಿಸಲಿದೆ. ಆಗ್ಗೆ ತಾಲೂಕ್ ಕಾನ್‌ಫರೆನ್ಸು ನಡೆಯುತ್ತೆ. ಅದಕ್ಕಾಗಿ ಬೇರೆ ಕಡೆಯಿಂದ ಆಫೀಸರರು ದಯಮಾಡುವವರಾಗಿದಾರೆ.—ಕೆಲವು ದಿನಗಳ ಹಿಂದೆ ಈ ತಾಲ್ಲೂಕಿಗೆ ಸೇರಿದ ನಾಗರಗಟ್ಟವೆಂಬ ಗ್ರಾಮದ ಪ|| ಸಿದ್ದೇಗೌಡರನ್ನು ಕೊಲೆ ಮಾಡಿದವನೂ ಮತ್ತು ಇಬ್ಬರೂ ಸೇರಿ ಖೂನ್ ಮಾಡಿದ್ದು ಪತ್ತೆ ಆಗಿ ಅಪರಾಧಿಗಳು ಸಿಕ್ಕಿ ಸೆಷನ್ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಾ ಇದೆ.—ಈ ಊರಿನಲ್ಲಿ ವೇದಮೂರ್ತಿಗಳ ಪ್ರಕಾರ ಬ್ರಾಹ್ಮಣರು, ವೈಶ್ಯರು ರಾಮನವಮಿಯನ್ನು ನೆರವೇರಿಸಿದರು.—ಈ ಟೌನಿನ ಕಾಮಗಾರಿಯು ಸರಿಯಾಗಿ ನಡೆಯುತ್ತಿಲ್ಲ. ಮೆಣಸಿನಕಾಯಿ ಅಂಗಡಿಯಿಂದ ಆಸ್ಪತ್ರೆಗೆ ಹೋಗುವ ರಸ್ತೆಯೂ, ಛತ್ರದಿಂದ ಮೆಣಸಿನಕಾಯಿ ಅಂಗಡಿಗೆ ಹೋಗುವ ಬೀದಿ ರಸ್ತೆಯೂ ಕಲ್ಲುಗಳಿಂದಲೂ ಹಳ್ಳಗಳಿಂದಲೂ ತುಂಬಿ, ಸಂಚಾರಕ್ಕೆ ಬಹಳ ಅಡಚಣೆಯಾಗಿದೆ. ಮ್ಯುನಿಸಿಪಾಲಿಟಿಯವರು ಬೇಗ ಕೊಡುವುದು ಅವಶ್ಯಕ.

ದೇವನಹಳ್ಳಿ.—ಮಳೆ ಬಾರದೆ ಒಣಗಿಯಿರುವ ನೀರಿಗೆ ತುಂಬಾ ಪ್ರಜೆಗಳು ಅವಸ್ಥೆಪಡುತ್ತಿರುವದು ತುಂಬಾ ಸಂಕಟಕರವಾಗಿದೆ. ಇದಕ್ಕೆ ಸರ್ಕಾರದವರು ಸಹಾಯ ಮಾಡುವರೆಂದು ನಂಬಿದೇನೆ. ಇಲ್ಲಿನ ಡಾಕ್ಟರವರು ಪ್ರಜೆಗಳ ವಿಷಯದಲ್ಲಿ ತುಂಬಾ ಮೋಹನತ್ತ ವಹಿಸಿ ಕೆಲಸಮಾಡುತ್ತಿರುವದು ಸಂತೋಷಕರವಾಗಿದೆ.—ಕೋಟೆಯಿಂದ ಪಬ್ಲಿಕ್ ಪೇಟೆಗೆ ಕೋಆಪರೇಟಿವ್ ಸೊಸೈಟಿ ಬಂದ ಲಾಗಾಯಿತು ತುಂಬಾ ಲಾಭಕರವಾದ ಲೇವಾದೇವಿಗಳು ಚಟುವಟಿಕೆಯಿಂದ ನಡೆಯುತ್ತಿವೆ ಎಂದು ಕೇಳಿ ಸಂತೋಷಿಸುತ್ತೇನೆ.—ನಮ್ಮ ಸಬ್ ಪೋಸ್ಟ್ ಮಾಸ್ಟರಾಗಿದ್ದ ಪಿ. ಗೋಪಾಲಯ್ಯನವರು ಮುಂದಕ್ಕೆ ವರ್ಗಹೊಂದಿ ಹೊರಟು ಹೋದಂತೆಯೂ ಇವರಿಗೆ ಬದಲಾಗಿ ಬಂದಿರುವ ಪೋಸ್ಟ್ ಮಾಸ್ಟರು ಹಿಂದಿನವರಂತೆ ಕೆಲಸಗಳನ್ನು ನಡಿಸಿ ಹೆಸರು ಪಡೆಯುವರೆಂದು ನಂಬಿದೇನೆ.—ಇಲ್ಲಿ ಹೆಡ್ ಗುಮಾಸ್ತರಾಗಿಯೂ ಸೊಸೈಟಿಯ ಡೈರೆಕ್ಟರಾಗಿಯೂ ಇದ್ದ ಡಿ. ವೆಂಕಟಾಚಲಯ್ಯನವರಿಗೆ ಬೆಂಗಳೂರಿಗೆ ವರ್ಗವಾದಂತೆ ಕೇಳುತ್ತೇನೆ. ಇವರು ಪ್ರಜೆಗಳಲ್ಲಿ ಮತ್ತು ಇತರ ವಿಧವಾದ ಸರ್ಕಾರಿ ಕೆಲಸದಲ್ಲಿ ತುಂಬಾ ನಿಷ್ಠೆಯಾಗಿ ಕೆಲಸ ಮಾಡಿರುತ್ತಾರೆ. ಇವರಿಗೆ ತಾ. 13 ರಲ್ಲಿ ವಡಿಗೇನಹಳ್ಳಿಯಲ್ಲಿ ಔತನಾದಿಗಳು ಸಂತೋಷಕರವಾಗಿ ನಡೆದಂತೆ ಕೇಳುತ್ತೇನೆ.—ಮ್ಯುನಿಸಿಪಲ್ ಲಾಂದ್ರಗಳ ವಿಷಯ ಕಸಲ್ ಟಸಿನ ಆಫೀಸರ ನಿಗಾ ಇಲ್ಲದೆ ಇರುವದಕ್ಕಾಗಿ ತುಂಬಾ ಸಂಕಟ ಪಡುತ್ತೇನೆ.—ಸಂತೇಲಿ ಅಳತೆ ಮತ್ತು ತೂಕದ ಬಟ್ಟುಗಳ ವಿಷಯಕ್ಕೆ ಪೋಲೀಸ್ ಇಲಾಖೆಯವರು ಸುತರಾಂ ನಿಗಾ ಕೊಡುವಂತೆ ಕಾಣುವದಿಲ್ಲ. ಮಾಂಸದ ಅಂಗಡಿಗಳನ್ನು ಊರಿಂದ ಆಚೆ ಸರ್ಕಾರದವರು ಇಡಿಸಿದರೆ ಪ್ರಜೆಗಳಿಗೆ ತುಂಬಾ ಸಹಾಯ ಮಾಡಿದಂತೆ ಆಗುತ್ತದೆ.—ತಾ. 14 ಬಿ. ಸಿ. ಯಲ್. ರೈಲಿನಲ್ಲಿ ಪ್ರಯಾಣಿಕರನ್ನು ಕೂರಿಸಿಕೊಂಡು ದೇವನಹಳ್ಳಿ ಮರಿವಿಗೆ ಬಂದಂತೆಯೂ ಇಂಜಿನ್ ಕೆಟ್ಟುಹೋದ ಕಾರಣ, ಎರಡು ಗಂಟೆ ಹೊತ್ತು ಇಲ್ಲೇ ನಿಧಾನವಾದ ಹಾಗೂ ಕೇಳುತ್ತೇನೆ. ಈ ವಿಷಯ ರೈಲ್ವೆ ಇಲಾಖೆಯವರು ಕೂಡಿದ ಮಟ್ಟಿಗೂ ಸರಿಪಡಿಸ್ಯಾರೆಂದೂ ಗೊಣಗುಟ್ಟಿಕೊಳ್ಳುತ್ತಾರೆ.

ದೊಡ್ಡಬಳ್ಳಾಪುರ.—ಬಿಸಿಲಿನ ಝಳ ಜಾಸ್ತಿ. ನೀರಿನ ಅನುಕೂಲವಿಲ್ಲದೆ ಬಹಳ ತೊಂದರೆಯಾಗಿವೆ. ಕೊಳಾಯಿಗಳು ಆಗುವದಲ್ಲೇ ಇದೆ. ಸಾಧ್ಯವಾದ ಮಟ್ಟಿಗೂ ನಮ್ಮ ಸರಕಾರದವರು ಕೊಳಾಯಿಗಳು ಆಗತಕ್ಕ ತರುವದೂರು ಜಾಗ್ರತೆ ಆಗುವಂತೆ ಮಾಡಬೇಕು.—ಕಾರೊನೆಷನ್ ಪಾರ್ಕಿನ ಪಾಲಿನ ಕೊಳಗಳು ಬಿಚಾವೇಳದೆ ಎಂದು ಹಿಂದೆ ಒಂದು ಪೇಪರಿನಲ್ಲಿ ಹಾಕಿತ್ತು. ಅಷ್ಟೇ ಶಿವಾಯಿ ಕಾಲ್ ಮಾತ್ರ ಆಗಲಿಲ್ಲ. ಎಂದಿಗೆ ಆಗುತ್ತೋ ನೋಡಬೇಕು.—ಈಗ ಬಂದಿರುವ ಸ್ಯಾನಿಟರಿ ಇನ್‌ಸ್ಪೆಕ್ಟರು ಚಟುವಟಿಕೆಯಿಂದ ಕೆಲಸ ಮಾಡುತ್ತಿರುವ ಕಾರಣ ಟೌನ್ ಚೊಕ್ಕಟಾಗುವದರಲ್ಲಿದೆ. ಲಾಂದ್ರಗಳು ಮಾತ್ರ ನಿದ್ರೆಯಿಂದ ಎಚ್ಚರಿಕೆ ಹೊಂದಲಿಲ್ಲ.—ಟೌನ್ ಪೋಲೀಸ್ ಜವಾನರು, ಮ|| ಅರ್ದಲ್ ಸುಬ್ಬಣ್ಣ ಸಾಹೇಬರವರಿಗೆ ವರ್ಗವಾದದ್ದು ಈ ಊರಿನವರಿಗೆಲ್ಲಾ ಬಹು ಖೇದವನ್ನುಂಟುಮಾಡಿದೆ. ಇವರು ಚಿಕ್ಕ ವಯಸ್ಸಿನವರಾದಾಗ್ಯೂ ಸರ್ಕಾರಿ ಕೆಲಸ ಮೆಹನತ್ತಿನಿಂದ ಮಾಡುತ್ತಾ, ಪ್ರಜೆಗಳಲ್ಲಿ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿದ್ದರು. ಹೋದ ಸ್ಥಳದಲ್ಲಿ ಕೀರ್ತಿಹೊಂದಿ ಅಭಿವೃದ್ಧಿಗೆ ಬರಲೆಂದು ಕೋರುತ್ತೇವೆ. 12 ನೇ ತಾ. ಈ ಊರಿನ ದೊಡ್ಡ ಮನುಷ್ಯರೆಲ್ಲಾ ಸೇರಿ ಇವರ ವರ್ಗದ ವಿಚಾರಕ್ಕೆ ಇವರ ಗುಣಾತಿಶಯಗಳನ್ನು ಕುರಿತು ಒಂದು ಸಂತೋಷ ಕೂಟವನ್ನು ನಡಿಸಲಾಯಿತು.—ಈ ಊರಲ್ಲಿ ಚೌಡೇಶ್ವರಿ ಉತ್ಸವವನ್ನು ದೇವಾಂಗದ ಜನರು ಬಹು ವಿಜೃಂಭಣೆಯಿಂದ ನಡಿಸಿದರು. ವಿಶೇಷ ಕರ್ಪೂರದಿಂದ ಬಾಣ ಬಿರುಸು ವಗೈರೆ ಹಚ್ಚುವದರಿಂದಲೂ, ಗಂಟೆ ನಾಗಸರ ವಾದ್ಯದಿಂದಲೂ, ಅಲಂಕಾರಾದಿಗಳಿಂದಲೂ, ಸಾವಿರಾರು ಪ್ರಜೆಗಳ ಆಗಮನದಿಂದಲೂ ಉತ್ಸವ ನಡಿಸಲಾಯಿತು. ಈ ಜನಗಳು ಒಗ್ಗಟ್ಟಾಗಿ ಸೇರಿ ಇಂಥಾ ಕಾರ್ಯ ನಡಿಸುವದು ಸ್ತೋತ್ರಾರ್ಹವಾಗಿರುತ್ತೆ. ಈ ಉತ್ಸವಕ್ಕೆ ಮ|| ಅಮಾನಿ ನಂಜುಂಡಪ್ಪನವರು ಮುಖಂಡರಾಗಿ ನಿಂತಿದ್ದರು. ಬೆಂಗಳೂರಿಂದ ಮ|| ಡಿ. ಆದೆಪ್ಪನವರೂ ದಯಮಾಡಿಸಿದ್ದರು.

ಚನ್ನರಾಯಪಟ್ಟಣ.—ಆಗಾಗ್ಗೆ ಮೋಡವಾಡುತ್ತಿದೆ. ಹವಾ ಆರೋಗ್ಯವಾಗಿದೆ.—ಇಲ್ಲಿಗೆ ಈ ತಿಂಗಳು 21 ನೇ ತಾ. ದಿವಾನ್ ಸಾಹೇಬರ ಸವಾರಿ ಚಿತ್ತೈಸುವದಾಗಿ ವರ್ತಮಾನವಿದೆ. ಟೌನ್ ಬಹಳ ಚೊಕ್ಕಟವಾಗಿದೆ. ಮನೆಗಳ ಹತ್ತಿರ ಅಜೂಬಾಜೂದಲ್ಲಿದ್ದ ಗೊಬ್ಬರ-ಕಸ-ಕಸ್ತಿಗಳು ಇಂಥಾ ಕೊಳಕೆಲ್ಲಾ ದೂರವಾಗಿ ಸಾಗಿಸಲ್ಪಟ್ಟಿವೆ. ಈ ಊರಿನಲ್ಲಿಯೂ ದನಗಳ ಪ್ರದರ್ಶನವನ್ನು ನಡೆಯಿಸಲು ಅಪ್ಪಣೆಕೊಡುವದಾಗಿ ಡೆಪ್ಯುಟಿ ಕಮಿಷನರ್ ಸಾಹೇಬರು ಅಪ್ಪಣೆ ಮಾಡಿದಾರೆ. ಇಲ್ಲಿಗೆ ಹೊಸ ರಥವು ಬಂದಿರುತ್ತೆ. ನಾಟಕದ ಕಂಪನಿಯವರು ಕಳೆದ ಶನಿವಾರ ಸೀತಾ ಸ್ವಯಂವರವಂ ಅಭಿನಯಿಸಿದರು. ತಾಲ್ಲೋಕ್ ಆಫೀಸು ಬಹಳ ನೀಟಾಗಿ ಇರಿಸಲ್ಪಟ್ಟಿದೆ. ಪ್ರತಿ ಗುಮಾಸ್ತರ ಟೇಬ್ಲುಗಳು, ಸೀಟುಗಳು ವಗೈರೆ ಕ್ರಮವಾಗಿಯೂ, ಕೊಳಕು ಇಲ್ಲದಂತೆಯೂ, ಹೊಸಬರಿಗೂ ತಕ್ಷಣ ತಿಳಿವಂತೆಯೂ ಆದರ್ಶರಾಗಿ ಇರಿಸಲ್ಪಟ್ಟಿವೆ. ಪ್ರತಿ ಡಿಪಾರ್ಟ್‌ಮೆಂಟಿಗೂ ಸುಂದರವಾದ ಬೋರ್ಡ್ ಬರೆಯಿಸಿ ಹಾಕಿಸಿರುತ್ತದೆ. ತಾಲ್ಲೋಕ್ ಆಫೀಸಿನ ಪ್ರತಿ ಒಂದು ಕೊಠಡಿಯೂ ಬಹಳ ಶುಚಿಯಾಗಿ ಕನ್ನಡಿಯೋಪಾದಿಯಲ್ಲಿದೆ. ಪೋಲೀಸ್ ಆಫೀಸೂ, ಮುನ್ಸೀಫ್ ಆಫೀಸೂ ಎಲೆಕ್ಟ್ರಿಕ್ ಮೂಲಕ ಸೌಕರ್ಯ ಪಡಿಸಲ್ಪಟ್ಟಿವೆ. ರೀಡಿಂಗ್ ರೂಂ ಕಟ್ಟಡವು ದಿವಾನ್ ಸಾಹೇಬರ ಸವಾರಿ ದಯಮಾಡಿಸುವವರೊಳಗೆ ಪೂರೈಸಲ್ಪಡತಕ್ಕದಾಗಿ ಕಾಣುತ್ತೆ. ಇಂಟು ಹೊಡೆಸಿ ಮುಗಿದೇ ಇದೆ.—ಈಗ ಟೌನ್‌ನಲ್ಲಿ ರಥೋತ್ಸವವು ಮುಂಚೆಯಾಗಿ ಕೇಶವ ದೇವರಿಗೆ ನಡೆಯಬೇಕೆಂದು ಕೆಲವರೂ, ರಾಮೇಶ್ವರ ದೇವರಿಗೆ ಮುಂಚೆ ನಡೆಯಬೇಕೆಂದು ಕೆಲವರೂ ಅಭಿಪ್ರಾಯ ಪಟ್ಟು ಗುಜುಗುಜು ನಡೆಯುತ್ತಿದೆ.—ಈ ಕಸಬಾ ಸ್ಟೇಷನ್‌ಗೆ ಇವರ ದಾಸ್ಯ ಅಕ್ಕಿಂಗ್ ಹೊಸದಾಗಿ ರಿಜರ್ವ್ ಪೋಲೀಸ್ ಆಫೀಸಿನಿಂದ ನೇಮಿತವಾಗಿದ್ದ ಮ|| ಕೆ. ನಾರಾಯಣಸ್ವಾಮಿ ಅಯ್ಯರು ವಾಪಸು ಹಾಸನಕ್ಕೆ ಹೋದರು. ಇವರು ಇಲ್ಲಿರುವ ವರಿವಿಗೂ ರಾತ್ರಿ ಕಾನ್‌ಸ್ಟೇಬಲ್‌ಗಳನ್ನು 2-3 ಸಾರಿ ಗಸ್ತಿಗೆ ಕಳುಹಿಸುತ್ತಿದ್ದರು. ತಾವೂ ಅಜಮಾಯಿಷಿ ಮಾಡಿ ನೋಡುತ್ತಿದ್ದರು. ಮತ್ತು ಅಲ್ಲಲ್ಲಿ ಹೆಚ್ಚು ಸಂಗತಿಗಳನ್ನು ಗ್ರಹಿಸುತ್ತಿದ್ದರು. ಮತ್ತು ಕಳವು ಕನ್ನ ವಗೈರೆ ನಡೆಯುವ ಹಾಗೆ ತಕ್ಕ ಏರ್ಪಾಡು ಮಾಡುವದೇ ಇವರ ಕೆಲಸವಾಗಿರಲಿಲ್ಲ. ಹಾಗೆ ನಡೆದರೆ ತಮಗ್ ಎಲ್ಲಿ ಕೆಟ್ಟ ಹೆಸರು ಬಂದೀತೋ ಎಂದು ಭಯಸ್ಥರಾಗಿ ಕೂಡ ಇದ್ದರು. ಪೋಲೀಸ್ ಆಫೀಸರು ಮನಃಪೂರ್ವಕವಾಗಿ ಭಯಭಕ್ತಿಯಿಂದ ಗಮನಕೊಡುತ್ತಿದ್ದರೆ ಕನ್ನ ಕಳವು ವಗೈರೆ ಕಡಮೆಯಾಗಿ ಪ್ರಜೆಗಳ ನೆಮ್ಮದಿಗೆ ಅನುಕೂಲ ಉಂಟಾಗುವದರಲ್ಲಿ ಸಂದೇಹವಿಲ್ಲ.

ಚಿಂತಾಮಣಿ.—ಚಿಂತಾಮಣಿ ಗರ್ಲ್ಸ್ ಸ್ಕೂಲಿನ ಸ್ಥಿತಿಯು ಕಮಿಟಿ ಆದ ಲಾಗಾಯಿತು ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿರುತ್ತೆ. ಸೆಕ್ರೆಟರಿಯವರಾದ ಮ|| ಲಾಯರ್ ಶೇಷಗಿರಿರಾಯರು ತುಂಬಾ ಮುತುವರ್ಜಿ ತೆಗೆದುಕೊಳ್ಳುತ್ತಾರೆ. ಈಚೆಗೆ ಸ್ಕೂಲಿನಲ್ಲಿ ವಾರಕ್ಕೊಂದು ಸಲ ವಿದ್ಯಾರ್ಥಿನಿಯರು ಸೇರಿ ಉಪನ್ಯಾಸಗಳು ಕೊಡುವಂತೆ ಸೆಕ್ರೆಟರಿಯವರು ಏರ್ಪಾಟು ಮಾಡಿದಾರೆ. ಅದರಂತೆ ಸ್ಕೂ|| ಸಿ. ಕೃಷ್ಣಮ್ಮನವರು ಬಹಳ ಮುತುವರ್ಜಿ ವಹಿಸಿ ಉಪನ್ಯಾಸಗಳನ್ನು ಕೊಡುತ್ತಲೂ, ವಿದ್ಯಾರ್ಥಿನಿಯರಿಂದ ಕೊಡಿಸುತ್ತಲೂ ಇದಾರೆ. ಶಿವಾಯಿ ಈಕೆಯು ನೆನ್ನೆ ಶುಕ್ರವಾರ ದಿವಸ ಈ ಊರಿನ ಆಫೀಸರುಗಳ ಮನೆ ಹೆಂಗಸರನ್ನು ಬರಮಾಡಿಕೊಂಡು ಪಾತಿವ್ರತ್ಯ ವಿಷಯದಲ್ಲಿ ಸ್ವಾರಸ್ಯವಾದ ಉಪನ್ಯಾಸ ಕೊಟ್ಟರು. ಆಗ್ಗೆ ಮಿಸೆಸ್ ಲಿಂಗೋಪಂತ್ ಬಾದಾಮಿಯವರು, ಮಿಸೆಸ್ ಶೇಷಗಿರಿರಾಯರು, ಮಿಸೆಸ್ ನರಸಿಂಹಯ್ಯಂಗಾರ್ರು ಮತ್ತು ಕೆಲವು ಜನ ವಿದ್ಯಾರ್ಥಿನಿಯರು ಬಂದಿದ್ದರು. ಮಿಸೆಸ್ ಲಿಂಗೋಪಂತ್ ಬಾದಾಮಿಯವರು ಅಗ್ರಾಸನವನ್ನು ವಹಿಸಿದ್ದರು. ಈ ಸ್ಕೂಲ್ ವಿದ್ಯಾರ್ಥಿನಿಯು ಪ್ರಾರ್ಥನೆಯನ್ನು ಹಾಡಿದ ನಂತರ ಉಪನ್ಯಾಸ ನಡೆಯಿತು. ಮಿಸೆಸ್ ಲಿಂಗೋಪಂತ್ ಬಾದಾಮಿಯವರು ಪಾತಿವ್ರತ್ಯ ವಿಷಯದಲ್ಲಿ ಅನೇಕ ವಿಷಯಗಳು ಉಪನ್ಯಾಸ ಮಾಡಿದ್ದಲ್ಲದೆ ಇದೇ ರೀತಿ ಉಪನ್ಯಾಸಗಳು ಕೊಡಬೇಕೆಂತಲೂ, ಹೀಗೆ ಎಲ್ಲರೂ ಸೇರೋಣದರಿಂದ ಬುದ್ಧಿಕುಶಲತೆ ಹೆಚ್ಚುತ್ತೆಂತಲೂ ಹೇಳಿ ಮುಂದಿನ ಶುಕ್ರವಾರ ನಾವೇ ಸ್ತ್ರೀ ವಿದ್ಯಾಭ್ಯಾಸ ವಿಷಯದಲ್ಲಿ ಉಪನ್ಯಾಸ ಕೊಡುವದಾಗಿ ಹೇಳಿದರು. ಕಡೆಯಲ್ಲಿ ಮಂಗಳವನ್ನು ಹಾಡಿ ತಾಂಬೂಲ ಪುಷ್ಪಾದಿಗಳನ್ನು ಕೊಟ್ಟು ಮುಕ್ತಾಯ ಮಾಡಿದರು.—ಈ ಟೌನ್‌ನಲ್ಲಿ ತಾಲ್ಲೂಕು ಕಾನ್‌ಫರೆನ್ಸು 19 ನೇ ತಾ. ನಡೆಯುತ್ತೆ. ಅಮಲ್ದಾರ್ ಮ|| ಲಿಂಗೋಪಂತ್ ಬಾದಾಮಿಯವರು ತುಂಬಾ ಮುತುವರ್ಜಿ ವಹಿಸಿರುತ್ತಾರೆ. ಈ ಕಾನ್‌ಫರೆನ್ಸಿನಲ್ಲಿ ಯುಗಾದಿ ಭಿಕ್ಷ ಸಹ ನಡೆಯುತ್ತೆ. ಡೆಪ್ಯುಟಿ ಕಮಿಷನರ್ ಸಾಹೇಬರು, ಮೂರು ಸಬ್ ಡಿವಿಷನ್ ಸಾಹೇಬರು ಮತ್ತು ಇನ್ನೂ ಅನೇಕ ಆಫೀಸರುಗಳು ಬರುತ್ತಾರೆ. ಇವರುಗಳು ಇಳುಕೊಳ್ಳುವದಕ್ಕೆ ತಕ್ಕ ಏರ್ಪಾಟುಗಳು ಸಹ ಮಾಡಿರುತ್ತಾರೆ. ಅಲ್ಲದೆ ವಿದ್ಯಾಭ್ಯಾಸದ ಕಾನ್‌ಫರೆನ್ಸೂ ನಡೆಯುತ್ತೆ. ತಾಲ್ಲೂಕಿನಲ್ಲಿ ಎಲ್ಲಾ ಮಾಸ್ತರುಗಳೂ ಬರುತ್ತಾರೆ. ಇವರುಗಳು ಇಳಿದುಕೊಳ್ಳುವದಕ್ಕೂ ಮತ್ತು ಇವರುಗಳ ಊಟ ಉಪಚಾರಗಳಿಗೂ ಛತ್ರಗಳಲ್ಲಿ ಏರ್ಪಾಟು ಮಾಡಿರುತ್ತೆ.

ಇಂಡಿಯಾ ದೇಶದ ವೃತ್ತಾಂತಗಳು.

ಕೊಚ್ಚಿ ಸಂಸ್ಥಾನದ ರಾಜಕುಮಾರನನ್ನು ಜರ್ಮನಿಯಿಂದ ಬಿಡುಗಡೆ ಮಾಡಿಸಿದರು. ಅದರ ಆತನು ವಿದ್ಯಾಭ್ಯಾಸ ಪೂರೈಸುವ ತನಕ ಇಂಗ್ಲೆಂಡಿನಲ್ಲೇ ಇರುತ್ತಾನೆ.

ಯುದ್ಧವು ಸಮಾಪ್ತಿಯಾಗುವ ವರೆಗೆ ಹಿಂದುಸ್ಥಾನದ ಸರ್ವಸೇನಾಪತಿಯು ಅಪ್ಪಣೆ ಪಡೆಯದೆ ಹೆಂಗಸರ್ಯಾರೂ ಐರ್ಲ್ಯಾಂಡ್ ಪಟ್ಟಣದಲ್ಲಿ ಇಳಿಯ ಕೂಡದೆಂದು ಪ್ರಕಟವಾಗಿದೆ.

ಸಿಲೋನ್ (ಲಂಕಾ) ದ್ವೀಪದ ಹೊಸ ಗವರ್ನರಾದ ಸರ್ ಜಾನ್ ಆಂಡರ್ಸನ್‌ರವರು ಕಳೆದ ಶನಿವಾರ ಸೀಮೆಯಿಂದ ಹೋಗಿ ಆ ಅಧಿಕಾರದ ಅಧಿಕಾರವನ್ನು ವಹಿಸಿಕೊಂಡರು.

ಮಲಬಾರಿಗೆ ಸೇರಿದ ನೀಲಂಬೂರಿನಲ್ಲಿ ವೀರನಪುಟ್ಟ ಎಂಬ ಮಾಪಿಳ್ಳೆಯು ತನ್ನ ಹೆಂಡತಿಯ ಕಿವಿಗಳನ್ನು ಕತ್ತರಿಸಿ ಹಾಕಿದ್ದರಿಂದ ಅವನಿಗೆ 18 ತಿಂಗಳ ಕಠಿಣ ಸಜಾ ಆಯಿತು.

ಚೋಟಾನಾಗಪುರಕ್ಕೆ ಸೇರಿದ ಉರಾವನ್ ಡಿಸ್ಟ್ರಿಕ್ಟಿನಲ್ಲಿ ವಿಶೇಷ ದೊಂಬೀ ಕಲಹಗಳನ್ನು ನಡಿಸಿ ಪ್ರಜಾ ನೆಮ್ಮದಿಗೆ ಭಂಗವನ್ನುಂಟುಮಾಡಿದ ಒಂಭತ್ತು ಮಂದಿ ಮುಖಂಡರನ್ನು ದಸ್ತಗಿರಿ ಮಾಡಿದಾರೆ.

ಬರ್ದವಾನ್ ಡಿಸ್ಟ್ರಿಕ್ಟಿಗೆ ಸೇರಿದ ಬೋಂಜಿಮಾರಿ ಎಂಬ ಕಲ್ಲಿದ್ದಲ ಗಣಿಗಳಲ್ಲಿ ಅಪಾರವಾದ ಸಿಡಿಮದ್ದು ಮತ್ತು ಬತ್ತಿಗಳು ಕಳುವಾದವು. ಬಂಗಾಳಾ ಪೋಲೀಸಿನವರು ಗೋಪ್ಯವಾಗಿ ಪತ್ತೇ ತರದೂದು ನಡಿಸುತ್ತಿದಾರೆ.

ಕಾಶೀ ಪಟ್ಟಣದಲ್ಲಿ ಬದ್ರಿಪ್ರಸಾದನೆಂಬ ಪೋಸ್ಟ್ ಜವಾನನನ್ನು ಯಾರೋ ಕೊಂದು ಹಾಕಿ ಕೈಕಾಲುಗಳನ್ನು ಕತ್ತರಿಸಿ ಮೂಟೆ ಕಟ್ಟಿ ಸಾಗಿಸಿದ್ದದ್ದು ಸಿಕ್ಕಿದೆ. ಕಳವಾಗಲಿ ಮುಂದಾಗಲಿ ಅಪರಾಧಿಗಳಾಗಲಿ ಸಿಕ್ಕಿ ಇಲ್ಲ.

ಎರಡನೇ ವಿಶ್ವಕರ್ಮ ಮಹಾಜನ ಸಭೆಯು ತಂಜಾವೂರಿನಲ್ಲಿ ಮುಂದಿನ ಶನಿವಾರ ಪ್ರಾರಂಭವಾಗಿ ಎರಡು ದಿನ ಜರುಗುವುದೆಂದೂ, ಮ|| ಎನ್. ದೊರೈಸ್ವಾಮಿ ಆಚಾರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸುವರೆಂದೂ ಪ್ರಕಟವಾಗಿದೆ.

ದೆಹಲಿ ನಗರದಲ್ಲಿ ಏರ್ಪಾಡಾಗುತ್ತಿರುವ ಹಾರ್ಡಿಂಗ್ ಸ್ತ್ರೀಯರ ವೈದ್ಯ ವಿದ್ಯಾಶಾಲೆಯ ಮೂಲಧನಕ್ಕೆ ಬೊಂಬಾಯಿನಲ್ಲಿ ಸರ್ಕಾರಿ ಪ್ರಿನ್ಸೆಸ್‌ದಾರರು ಮೊದಲು 62,000 ರೂಪಾಯಿ ಚಂದಾ ಕೊಟ್ಟಿದ್ದರು. ಅವರೀಗ ಮತ್ತೆ ಅದಕ್ಕೆ 21,000 ರೂಪಾಯಿ ಕಳುಹಿಸಿಕೊಟ್ಟಿದಾರೆ.

ಲಯಲ್‌ಪುರದ ಸಬ್ ಜಡ್ಜರಾಗಿದ್ದ ಮುನ್ಷಿ ಫಿರಮತ್ ಅಲಿಯವರು ಎರಡು ಮೊಕದ್ದಮೆಗಳಲ್ಲಿ 4.0 ರೂಪಾಯಿ ಲಂಚ ತೆಗೆದುಕೊಂಡಿದ್ದು ರುಜು ವಾತಾದ್ದರಿಂದ ಅವರಿಗೆ ಕಳೆದ ವಾರ ಎರಡು ವರುಷ ಕಠಿಣ ಸಜಾವೂ, 450 ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿದೆ.

ಬರ್ಮಾ ಆಧಿಪತ್ಯಕ್ಕೆ ಸೇರಿದ ಟೇವಾಯ್ ಡಿಸ್ಟ್ರಿಕ್ಟಿನಲ್ಲಿ ಕೂಲಿ ಕೆಲಸಗಳನ್ನು ಮಾಡಿಕೊಂಡಿದ್ದ ಐದು ಮಂದಿ ಚೀಣಿಯವರು ನಾನಾ ಫಿತೂರಿಗಳನ್ನು ನಡಿಸುತ್ತಿದ್ದದ್ದು ತಿಳಿದುಬಂದದ್ದರ ಮೇಲೆ ಗವರ್ನ್‌ಮೆಂಟಿನವರು ಅವರನ್ನು ಹಿಡಿದು ಜಹಜಿನ ಮೇಲೆ ಹತ್ತಿಸಿ ಗಡೀಪಾರು ಮಾಡಿಸಿರುತ್ತಾರೆ.

ಅವಧ್ ಬಿಹಾರಿ ಛೇಲರಾಜ ಮತ್ತು ಪರಮಾನಂದ ಎಂಬಿಬ್ಬರು ವಿದ್ವಾಂಸರು ದೆಹಲಿ ಮತ್ತು ಲಾಹೋರ್ ಫಿತೂರಿ ಮೊಕದ್ದಮೆಗಳಲ್ಲಿ ಸಿಕ್ಕಿಬಿದ್ದು ಸಜಾ ವಿಧಿಸಲ್ಪಟ್ಟುಹೋದದ್ದರಿಂದ ಪಂಜಾಬ್ ಯೂನಿವರ್ಸಿಟಿಯವರು ಅವರಿಬ್ಬರ ಬಿ.ಎ., ಎಂ.ಎ. ಎಂಬ ಪ್ರಶಸ್ತಿ (ಡಿಗ್ರಿ) ಗಳನ್ನು ರದ್ದು ಮಾಡಿದಾರೆ.

ಲಾರ್ಡ್ ಚೆಲ್ಮ್ಸ್‌ಫೋರ್ಡ್‌ರವರು ಸಂಸಾರ ಸಮೇತ ಬೊಂಬಾಯಿಗೆ ದಯಮಾಡಿ ಹಿಂದುಸ್ಥಾನದ ವೈಸ್‌ರಾಯ್ ಪದವಿಯ ಛಾರ್ಜನ್ನು ವಹಿಸಿಕೊಂಡು ಅಲ್ಲಿಂದ ನೆಟ್ಟಗೆ ಕಲ್ಕತ್ತಾ ಪಟ್ಟಣಕ್ಕೆ ಚಿತ್ತೈಸಿದರು. ಆಲ್ಲೂ ಬೊಂಬಾಯಿ ಪಟ್ಟಣದಲ್ಲಿ ನಡೆದಂತೆ ನಾನಾ ಸಂತೋಷಮಹೋತ್ಸವಗಳೂ ಸತ್ಕಾರಗಳೂ ನಡೆದವು.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಖ್ಯಾಂಕೂರಾದಲ್ಲೂ ಆ ಸುತ್ತುಮುತ್ತಲೂ ಕಳೆದ ಗುರುವಾರ ಮಧ್ಯಾಹ್ನ ಅಪಾರವಾದ ಸುಂಟರಗಾಳಿಯೂ, ಅನೇಕಲ್ಲಿನ ಮಳೆಯೂ ಪ್ರಾಪ್ತವಾದವು. ಅನೇಕ ಮರಗಳೂ, ಮನೆಗಳೂ, ಗುಡಿಸಲುಗಳೂ ಬಿದ್ದು ತುಂಬಾ ನಷ್ಟವಾಯಿತು. ಹಲವು ಗೋಕಾಯಿಗಳು ನಾಶವಾದವು. ಅನೇಕ ಜನಗಳಿಗೂ ಗಾಯಗಳಾಗಿರುತ್ತವೆ.

ಕಲ್ಕತ್ತಾ ಪಟ್ಟಣದಲ್ಲಿ ವಿದ್ಯೆಯ ಜೊತೆಗೆ ಬಾಲಕರಿಗೆ ಬೇರೆ ಬೇರೆ ಕೈಗಾರಿಕೆಗಳನ್ನು ಸಾಕ್ಷಾತ್ತಾಗಿ ಕಲಿಯುವಾರನ್ನಿಟ್ಟು ಕಲಿಸಿ, ವಿದ್ಯಾರ್ಥಿಗಳು ಸ್ಕೂಲಿನಿಂದ ತೇರ್ಗಡೆಯಾದ ಕೂಡಲೇ ಕಸಬುಗಳನ್ನು ಅವಲಂಬಿಸಿ ಜೀವನಮಾಡಿಕೊಳ್ಳುವುದಕ್ಕೆ ಅನುಕೂಲಿಸುವಂಥಾ ಸ್ಕೂಲನ್ನು ಕಾಸಿಂಬಜಾರ್ ಮಹಾರಾಜರವರು ಏರ್ಪಾಡು ಮಾಡುತ್ತಿದಾರೆ.

ಪೂನಾ ಪಟ್ಟಣದ ವಿಠೋಬ ದೇವಸ್ಥಾನದಲ್ಲಿ ಒಂದು ಕಡೆ ತಾರಸಿಯು ಕುಸಿದು ಬಿದ್ದು ಅದರ ಕೆಳಗೆ ಗಣಪತಿ ವಿಠೋಬ ಲಿಂಬಾಳಕರ ಎಂಬ ಹಿಂದೂ ಗುರುವು ಸಿಕ್ಕಿ ಅಕಾಲ ಮರಣ ಹೊಂದಿದನು. ಬೊಂಬಾಯಿನಲ್ಲೂ ಪೂನಾದಲ್ಲೂ ಈ ಗುರುವಿನ ಶಿಷ್ಯರು ಅನೇಕರಿದ್ದು, ಇಂಥಾ ಆಕಸ್ಮಿಕವಾದ ಮರಣ ಪ್ರಾಪ್ತವಾದದ್ದಕ್ಕಾಗಿ ವಿಷಾದಪಡುತ್ತಾರೆ.

ಕಳೆದ ಭಾನುವಾರ ಬೊಂಬಾಯಿನಲ್ಲಿ ಜಮ್ನಾಬಾಯಿ ಸಕ್ಕಾಯಿ ಎಂಬ ಪುಣ್ಯವತಿಯು ಕಾಲವಾದಳು. ಈ ಗುಜರಾತಿ ಸ್ತ್ರೀಯು ಕಳೆದ 1903 ನೇ ಇಸವಿ ಲಾಗಾಯಿತು ಅನೇಕ ಪರಹಿತ ಕಾರ್ಯಗಳನ್ನು ಮಾಡುತ್ತಾ ಬಂದಿದ್ದಳು. ಈಕೆ ಗುಜರಾತಿ ಸ್ತ್ರೀಯರ ಅಭಿವೃದ್ಧಿಗೋಸ್ಕರ ತನ್ನ ಆಸ್ತಿಯಲ್ಲಿ 17,500 ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿದಾಳೆ.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಆಧಿಪತ್ಯಗಳ ಬ್ಯಾಂಕುಗಳಿಗೆ ಮಾರ್ಚಿ ತಾ. 25 ರ ವರೆಗೆ ಪಾವತಿಯಾಗಿರುವ ಚಂದಾ ಹಣ ಎಷ್ಟೆಂದರೆ :—

ಸಿಮ್ಲಾ ಅಲ್ಲಯನ್ಸ್ ಬ್ಯಾಂಕಿಗೆ	....	ರೂ. 46,85,731- 3-0
ಬಂಗಾಳ ಬ್ಯಾಂಕಿಗೆ	......	,, 36,31,657- 9-6
ಬೊಂಬಾಯಿ ಬ್ಯಾಂಕಿಗೆ	......	,, 8,37,319-12-9
ಮದರಾಸ್ ಬ್ಯಾಂಕಿಗೆ	......	,, 6,73,281-14-9
	ಜುಮ್ಲಾ ರೂಪಾಯಿ	98,27,990- 8-0

ಬರ್ಮಾ ಅಧಿಪತ್ಯಕ್ಕೆ ಸೇರಿದ ತೂಕ್ಯಾಕು ಪಟ್ಟಣದಲ್ಲಿ ಅಪೂರ್ವವಾದ ಬೆಂಕಿ ಹತ್ತಿ ಊರಿನ ಮೂರನೇ ಎರಡು ಭಾಗವೆಲ್ಲಾ ಉರಿದು ಅನೇಕ ಲಕ್ಷ ರೂಪಾಯಿಗಳ ಆಸ್ತಿಪಾಸ್ತಿಗಳು ನಶವಾದವು, ಸಾವಿರಾರು ಪ್ರಜೆಗಳು ನಿರ್ಗತಿಕರಾಗಿ ಸಂಕಟಪಡುತ್ತಿದ್ದಾರೆ. ಅವರ ಕಷ್ಟಪರಿಹಾರಕ್ಕಾಗಿ ಹಲವು ನಗರಗಳಲ್ಲಿ ರಿಲೀಫ್ ಫಂಡುಗಳು ಏರ್ಪಾಡಾಗಿ ಚಂದಾ ಕೊಡುತ್ತಿದೆ.

ಅಮೃತಸರ ಪಟ್ಟಣದಲ್ಲಿ ಸ್ಕೂಲ್ ಹುಡುಗರು ಎರಡು ತಂಗಡವಾಗಿ ಕ್ರಿಕೆಟ್ ಪಂದ್ಯವನ್ನು ಆಡುತ್ತಿದ್ದಾಗ ಹಿಂದೂ ಮಹಮದೀಯ ಹುಡುಗರಿಗೆ ಪರಸ್ಪರ ವ್ಯಾಜ್ಯವುಂಟಾಗಿ ಆಟದ ದೊಣ್ಣೆಗಳನ್ನು ಹಿಡಿದು ಹೊಡೆದಾಡಿದರು. ಹಿಂದುಗಳಲ್ಲಿ ಒಬ್ಬನು ಸತ್ತುಹೋದನು. ಇನ್ನೊಬ್ಬನು ಪ್ರಾಣ ಸಂಕಟದಲ್ಲಿ ಬಿದ್ದಿದ್ದಾನೆ. ಅನೇಕ ಹುಡುಗರಿಗೆ ನಾನಾ ಗಾಯಗಳಾಗಿವೆ. ಪೋಲೀಸಿನವರು ತನಿಖೆಮಾಡುತ್ತಲಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಕಟ್ಟುತ್ತಿರುವ ವಿಕ್ಟೋರಿಯಾ ಮೆಮೋರಿಯಲ್ ಹಾಲಿನ ಫಂಡಿಗೆ 74,94,247 ರೂಪಾಯಿ ಚಂದಾ ಕೂಡಿದೆ. ಈ ಕಟ್ಟಡದ ಕಾಮಗಾರಿ ಮುಂತಾದದ್ದಕ್ಕೆ ಇದುವರೆಗೆ 37,21 118 ರೂಪಾಯಿ ಖರ್ಚಾಗಿರುವುದು. ಈಗ ಈ ಫಂಡಿನಲ್ಲಿ 40,77,136 ರೂಪಾಯಿ ಉಳಿದಿದೆ ಎಂದೂ, ಇನ್ನೂ 95,090 ರೂಪಾಯಿ ಚಂದಾ ವಸೂಲಾಗತಕ್ಕದ್ದಿದೆ ಎಂದೂ ಕಮಿಟಿಯವರು ಪ್ರಕಟಿಸಿದ್ದಾರೆ.

ಪಾಟ್ನಾ ಮತ್ತು ದತಿಯಾ ಮಹಾರಾಜರುಗಳು ದಾತೃತ್ವದಲ್ಲಿ ಯುದ್ಧಭೂಮಿಯಿಂದ ಕಳುಹಿಸಲ್ಪಡುವ ಗಾಯಪಟ್ಟ ಹಿಂದೂಸ್ಥಾನದ ಸೈನಿಕರಲ್ಲಿ ಸರ್ವದಾ 100 ಮಂದಿಗೆ ಚಿಕಿತ್ಸೆ ಮತ್ತು ಆರೈಕೆಗಳು ನಡೆಯುವಂತೆ ಒಂದು ಆಸ್ಪತ್ರೆಯನ್ನು ಇಟ್ಟು ತಮ್ಮ ಸ್ವಂತ ಖರ್ಚಿನಿಂದ ನಡಿಸುತ್ತೇವೆಂದು ತಿಳಿಸಿದರು. ಇಂಡಿಯಾ ಗವರ್ನ್‌ಮೆಂಟಿನವರು ಅದರಂತೆ ಒಪ್ಪಿಕೊಂಡು, ಆ ಮಹಾರಾಜರುಗಳ ಔದಾರ್ಯವನ್ನು ಕೊಂಡಾಡಿದ್ದಾರೆ.

ಮಹಮ್ಮದೀಯ ಪ್ರಜೆಗಳ ಗುರುವಾಗಿಯೂ, ತುಂಬಾ ಗೌರವವನ್ನು ಪಡೆದವರಾಗಿಯೂ, ಮಿತ್ರಮಂಡಲಿಯವರಿಗೆ ತುಂಬಾ ಸಹಾಯಕರಾಗಿಯೂ ಇರುವ ಭೋಪಾಲಿನ ಘನವೆತ್ತವಿದ ಆಗಾಖಾನರವರಿಗೆ ನಮ್ಮ ಚಕ್ರವರ್ತಿ ಸಾರ್ವಭೌಮರವರು ಕಳೆದ ವಾರ ಅವರು ಹೊಸ ಕಡೆ ಗೌರವಾರ್ಥವಾದ ಹನ್ನೊಂದು ತೋಪುಗಳು ಹಾಕಬೇಕೆಂಬ ಬಿರುದನ್ನು ದಯಪಾಲಿಸಿರುತ್ತಾರೆ. ಮಹಮ್ಮದೀಯ ಪ್ರಜೆಗಳೆಲ್ಲಾ ಈ ಸುದ್ದಿಯನ್ನು ಕೇಳಿ ಆನಂದಪಟ್ಟಿರಬಹುದೆಂಬುದಕ್ಕೆ ಸಂಶಯವಿಲ್ಲ.

ಪೂನಾ ಪಟ್ಟಣದಲ್ಲಿ ಆಯುರ್ವೇದ ಪಂಡಿತರುಗಳ ಎಂಟನೇ ಮಹಾಸಭೆಯು ನವೆಂಬರ್ ತಿಂಗಳಲ್ಲಿ ಜರುಗುವಂತೆ ತೀರ್ಮಾನವಾಗಿದೆ. ಡಾ|| ಅಣ್ಣಾಸಾಹೇಬ್ ಪಟ್ಟವರ್ಧನರವರು ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರಾಗಿಯೂ; ಡಾ|| ಎನ್. ಜಿ. ಸರ್ದೇಸಾಯಿಯವರೂ, ಡಾ|| ಆರ್. ಜಿ. ವಜೆಯವರೂ, ಮ|| ಕೃಷ್ಣಶಾಸ್ತ್ರಿ ಕಾವ್ತೆಯವರೂ ಗೌರವ ಸೆಕ್ರೆಟರಿಗಳಾಗಿಯೂ ನೇಮಕ ಮಾಡಲ್ಪಟ್ಟಿದ್ದಾರೆ. ಇದಕ್ಕೋಸ್ಕರ ಕಳೆದ ವಾರ ಇಲ್ಲಿ ಒಂದು ಸಭಾ ಸಭೆ ಜರುಗಿತು.

ಬರ್ಮಾ ಅಧಿಪತ್ಯಕ್ಕೆ ಸೇರಿದ ಮೌಲ್ಮೇನ್ ಪಟ್ಟಣದಲ್ಲಿ ಫಿಲಿಪ್ ಸರ್ಕಸ್ ಡೇರಾವಿಗೆ ಬೆಂಕಿ ಹಾಕಿದನೆಂದು ನಗಾಬಿನ್ ಎಂಬ ಬರ್ಮಾಯನ ಮೇಲೆ ಮೊಕದ್ದಮೆ ಹುಟ್ಟಿ ಮ್ಯಾಜಿಸ್ಟ್ರೇಟರು ಅವನಿಗೆ 5 ವರುಷ ಕಠಿಣ ಸಜಾವಿಧಿಸಿದ್ದರು. ಚೀಫ್ ಕೋರ್ಟಿನಲ್ಲಿ ಅವನು ಅಪೀಲ್ ಮಾಡಿಕೊಂಡಾಗ ಅವನ ಮೇಲೆ ವಿಶೇಷ ಸಂಶಯವಿರುವಂತೆ ಕಾಣಬರುತ್ತದೆಯೋ ಹೊರತು ಅವನೇ ಬೆಂಕಿಹಾಕಿದನೆನ್ನುವುದಕ್ಕೆ ರುಜುವಾತು ಸಾಲದೆಂದು ಜಡ್ಜಿಗಳು ತೀರ್ಮಾನಮಾಡಿ ಅವನನ್ನು ಖುಲಾಸ್ ಮಾಡಿರುತ್ತಾರೆ.

ಕಳೆದ 8 ನೇ ತಾ. ಗೆ ಆಖೈರಾದ ಒಂದು ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ಒಟ್ಟು 5,863 ಜನರಿಗೆ ಪ್ಲೇಗ್ ತಗಲಿತು; 4,963 ಜನಗಳು ಆ ರೋಗದಿಂದ ಕಾಲವಾದರು. ಈ ಮರಣಸಂಖ್ಯೆಯ ಹಂಚಿಕೆ ಹ್ಯಾಗೆಂದರೆ—ದೆಹಲಿ 3, ಬೊಂಬಾಯಿ ಮತ್ತು ಸಿಂಧುದೇಶ 589, ಮದರಾಸ್ ಅಧಿಪತ್ಯದ 53, ಬಂಗಾಳ 10, ಬೀಹಾರ್ ಮತ್ತು ಒರಿಸ್ಸಾ 809, ಸಂಯುಕ್ತ ಅಧಿಪತ್ಯಗಳು 1,756, ಪಂಜಾಬ್ 243, ಬರ್ಮಾ 231, ಮಧ್ಯ ಪ್ರಾಂತ್ಯಗಳು 170, ಮೈಸೂರು 411, ಹೈದರಾಬಾದ್ 1,114, ಮಧ್ಯ ಇಂಡಿಯಾ 21, ಕಾಶ್ಮೀರ 1.

ಲಾಹೋರ್ ಪಟ್ಟಣದಲ್ಲಿ ಸನಾತನ ಧರ್ಮ ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ಕಳೆದ ಶುಕ್ರವಾರ ಒಂದು ಮಹಾಜನ ಸಭೆ ನಡೆಯಿತು. ಕಾಶ್ಮೀರದ ಮಹಾರಾಜರವರು ಸಭೆಯ ಅಗ್ರಾಸನವನ್ನು ವಹಿಸಿ ಸರ್ ಪಿ. ಸಿ. ಛಟ್ಟರ್ಜಿಯವರು ಈ ವಿದ್ಯಾಶಾಲೆಯನ್ನು ನಡಿಸುವ ವಿಷಯದಲ್ಲಿ ಅವಶ್ಯವಾದ ಏರ್ಪಾಡುಗಳನ್ನು ಮಾಡಿಕೊಟ್ಟಿರುವುದಾಗಿ ತಿಳಿಸಿದರು. ಈ ವಿದ್ಯಾಶಾಲೆಯ ಫಂಡಿಗೆ ಮಹಾರಾಜರವರು 5,000 ರೂಪಾಯಿ ಕೊಟ್ಟಿರುವುದಲ್ಲದೆ ತಿಂಗಳಿಗೆ 1 000 ರೂಪಾಯಿನಂತೆ ಕೊಡುತ್ತಾ ಬರುವುದಾಗಿ ಅಪ್ಪಣೆಕೊಡಿಸಿದರು. ಇದಲ್ಲದೆ ದರ್ಭಾಂಗದ ಮಹಾರಾಜರವರೂ, ಘನವೆತ್ತವಿದ ರಾಮಚರಣದಾಸ್‌ರವರೂ, ಕಪೂರ್ತಲದ ರಾಜರವರೂ ತಲಾ 5,000 ರೂಪಾಯಿನಂತೆ ಈ ಫಂಡಿಗೆ ಪಾವತಿ ಮಾಡಿರುತ್ತಾರೆ.

ಪರೀಕ್ಷಿಸದ ಆರ್ಡರುಗಳು ಈ ತಿಂಗಳ ಕೊನೇ ವರೆಗೆ ಮಾತ್ರ ನಡಿಸಲ್ಪಡುತ್ತೆ.

ಮೋಸಹೋಗುವವೆಂಬ ಭಯವಿಲ್ಲ.

"ನಾನು ಖಾತ್ರಿಯಿಂದ ಬರೆದು ತಿಳಿಸುವದೇನಂದರೆ:—ನಿಮ್ಮಿಂದ ನಾನು ತರಿಸಿಕೊಂಡ ಗಡಿಯಾರವು ಉಪಯೋಗಕ್ಕೆ ಬಹಳ ಶ್ರೇಷ್ಠವಾದ್ದಾಗಿದೆ. ಗಂಟೆಯನ್ನು ತೋರಿಸುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇಲ್ಲ. ಮೆಸೀನರಿ ಸಾಟಾ ಬನಾವಟ್ಟು ಮತ್ತು ಮಜಬೂತಾಗಿಯೂ ಬಹಳ ದಿನ ಬಾಳಿಕೆ ಬರುವದಾಗಿಯೂ ಇದೆ. ಬಹಳ ಮನೋಹರವಾಗಿಯೂ ಇದೆ. ಇತರ ಕಂಪನಿಯವರು ಇಷ್ಟು ಅಗ್ಗದಿಂದ ಕೊಡುವದಿಲ್ಲ. ಮತ್ತೊಂದು ಡಜನ್ ವಿ. ಪಿ. ಮೂಲಕ ಕಳುಹಿಸಿಕೊಡಿ."—ಕೆ. ರಾಮಸ್ವಾಮಿ, ಪಲಿಪ್ಪಿನ-ಕಿಲ-ಸಿಟಿಯನ, 20-2-15.

ಅರ್ಧ ಬೆಲೆ ಮಾತ್ರ.

ನಿರಾಶರಾದ ನಮ್ಮ ಮಾನವಂತ ಗಿರಾಕಿಗಳಿಗಾಗಿ ಗಡುವನ್ನು ಹೆಚ್ಚಿಸಿದೇವೆ. ಆದ್ದರಿಂದ ಜಾಗ್ರತೆಮಾಡಿ ತರಿಸಿಕೊಳ್ಳಿರಿ.



ಎರಡು ನಾಲ್ಕು ರೂಪಾಯಿನ ಗೊಂಬೆ ಆಟದ ಗಡಿಯಾರಗಳನ್ನು ಕೊಂಡು ಉಪಯೋಗಿಸಿ ನಿರಾಶರಾದವರಿಗೆ ಇದೊಂದು ಉತ್ತಮ ಸಮಯ! ಈ ಎಂಟು ದಿವಸಕ್ಕೊಂದು ಸಲ ಕೀ ಕೊಡಲ್ಪಡುವ ನಿಕ್ಕಲ್ ಬೆಳ್ಳಿ ಗಡಿಯಾರವು ಮಜಬೂತಾಗಿಯೂ ಬಹಳ ದಿವಸ ಬಾಳಿಕೆ ಬರುವದಾಗಿಯೂ ಇದೆ. ನಡೆಯುವದರಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವೂ ಇರುವದಿಲ್ಲ. ಮತ್ತು ಕೆಡುವ ಸಂಭವವು ಬಹಳ ಕಾಲದ ವರೆಗೆ ಇರುವದಿಲ್ಲ. ಒಂದು ಸಲ ಕೀ ಕೊಟ್ಟರೆ ಎಂಟು ದಿವಸದ ವರೆಗೆ ಪುನಃ ಕೊಡಬೇಕಾದ ಅವಶ್ಯಕವಿಲ್ಲ. ಮೊದಲಿನ ಬೆಲೆ ರೂ. 16-0-0, ಇನ್ನು ಸ್ವಲ್ಪ ಕಾಲದ ವರೆಗೆ ವಿ. ಪಿ. ಖರ್ಚು ಸಹ ರೂ. 8-0-0, ಗ್ಯಾರಂಟಿ 10 ವರ್ಷಗಳು. ಕರೆಸ್ಪಾಂಡೆನ್ಸು ಇಂಗ್ಲಿಷಿನಲ್ಲಿ, ಕ್ಯಾಟಲಾಗು ತಯಾರು ಇಲ್ಲ. ವಿಶೇಷ ಮಾಹಿತಿ ಬಗ್ಗೆ ರಿಪ್ಲೈ ಕಾರ್ಡು ಬರೆಯಬೇಕು.

ನಮ್ಮ ವಿಳಾಸ:—ದಿ ಮಾರುತಿ ಏಜನ್ಸಿ,

[266–16] ಯಂ. ವಿ., ಪಿ. ಓ. ಬಾಕ್ಸ್ 330, ಬೊಂಬಾಯಿ,

ಬ್ರಾಂಚ್ ಆಫೀಸು—124, ಇಬ್ರಾಹಿಂ ಬೀದಿ, ಬೆಂಗಳೂರು ದಂಡು.

ಕಪ್ಪು ಕಾಯಿ ಪುಡಿ.

1 ಕಾಸು ತೂಕದ ಪುಡಿಯಲ್ಲಿ 1 ಕಪ್ಪು ಮಸಿಯಾಗುತ್ತೆ. ವಿ. ಪಿ. ಯಲ್ಲಿ ತರಿಸುವರು ಲಾಭ. ಸುಲಭ ದರ. ¼ ಪೌಂಡ್ ಡಬ್ಬಿಗೆ 12 ಆಣೆ 5 ಡಬ್ಬಿ ರೂ. 3 10 ಡಬ್ಬಿ ರೂ. 5 ಅಂಚೆ ಬೇರೆ! ಭಾಂಗಿ ಸಂಗಡ ವಾಲ್ ಕ್ಯಾಲೆಂಡರ್ ಉಚಿತ

[103-1] ವಿಳಾಸ.—ವಿ. ಪಿ. ಡಿಪೋ, ಕೋಲಾರ.

ನಿಮ್ಮ ಮನೆ ಬಳಿ ಕಾಶೀ ಕ್ಷೇತ್ರವಿದೆ.

ಕಾಶೀ ಕ್ಷೇತ್ರದಲ್ಲಿ ತಯಾರಾದ ದಿವ್ಯ ಮಾಲುಗಳನ್ನು ಅಂದರೆ—ರೇಷ್ಮೆ ಕೋಟ್ ಥಾನುಗಳು, ಸೀರೆಗಳು, ರವಿಕೆಗಳು, ದುಪಟ್ಟಿಗಳು, ಇವೆಲ್ಲಾ ನಮ್ಮ ಖುದ್ದು ಸ್ವಂತ ಸ್ಪೆಷಲ್ ಮಗ್ಗಗಳಲ್ಲಿ ತಯಾರಾದವನ್ನು ಕಳುಹಿಸುತ್ತೇವೆ. ನಮ್ಮಿಂದ ತರಿಸಿಕೊಂಡರೆ ನಿಮ್ಮ ಉಡುಪುಗಳಿಗೆ ಹಾಕುವ ಹಣದಲ್ಲಿ ಶೇಕಡ 25 ರಷ್ಟು ಮಿಗಿಸುತ್ತೀರಿ. ಯಾಕೆಂದರೆ ದಲ್ಲಾಳಿಗಳಿಲ್ಲ; ನಾವು ಸ್ವಂತವಾಗಿ ತಯಾರುಮಾಡುತ್ತೇವೆ. ರೇಷ್ಮೆ ಮತ್ತು ಜರತಾರಿ ಅಂಚಿನ ಎಲ್ಲಾ ವಸ್ತ್ರಗಳನ್ನೂ ನ್ಯಾಯವಾದ ಕ್ರಯಕ್ಕೆ ಮಾರುವೆವು. ಮುರ್ಶಿದಾಬಾದ್, ಭಾಗಲ್ಪುರ, ಅಸ್ಸಾಂ ಟಾಸರ ರೇಷ್ಮೆ ಬಟ್ಟೆಗಳನ್ನು ಯಾವಾಗಲೂ ನಮ್ಮಲ್ಲಿ ಬಿಕರಿಗೆ ಇಟ್ಟಿದೇವೆ. ಇದಲ್ಲದೆ ಬನಾರಸ್ ತಯಾರಿ ಯಾವ ಮಾಲುಗಳಾಗಲಿ ಷಾಲ್, ಕಂಚಿನ ಪದಾರ್ಥ, ಮರದ ಆಟದ ಸಾಮಾನ್, ರುದ್ರಾಕ್ಷಿಮಾಲೆ, ಸ್ಪಟಿಕ ಪೂಸುಗು, ಎಸ್ಸೆನ್ಸ್ ಸುಲಭ ಕ್ರಯಕ್ಕೆ ಕೊಡುತ್ತೇವೆ. 100 ರೂಪಾಯಿ ಮೇಲು ಕೊಳ್ಳುವರಿಗೆ 6¼ ರಂತೆ ಡಿಸ್ಕೌಂಟು ಬಿಡುವೆವು. ವಿ. ಪಿ. ಇಂದಲೂ ತರಿಸಿಕೊಳ್ಳಬಹುದು.

ನಮಗೆ ಇಂಗ್ಲೀಷಿನಲ್ಲಿ ಬರೆಯಬೇಕು.

Address **KAKAMULL BENI PRASAD,**
Ranikuva, Banares City.

ನಮ್ಮ ವಿಳಾಸ—ಕಾಕಮುಲ್ ಬೇಣಿಪ್ರಸಾದ್,

[89–3] ರಾಣಿಕುವಾ, ಬನಾರಸ್ ಸಿಟಿ.

ಸ್ವಲ್ಪ ಕ್ರಯ! ವಿಶೇಷ ಬಾಳಿಕೆ!

ಒಳ್ಳೇ ಸಮಯ!

ನ್ಯಾಷನಲ್ ಲೇಖಿನಿ.

200 ನೇ ನಂಬರ್ ಫೌಂಟನ್ ಪೆನ್ನಾ 14 ಕ್ಯಾರೆಟ್ ಗೋಲ್ಡ್ ನಿಬ್ಬು, ಫಿಲ್ಲರ್ ಮತ್ತು ಪೆಟ್ಟಿಗೆ ಸಮೇತ ಕ್ರಯ ರೂ. 1–14–0 ಮಾತ್ರ. ಟಪಾಲ್ ಮತ್ತು ಪ್ಯಾಕಿಂಗ್ ಖರ್ಚು ಬೇರೆ. ಇದೇ ತಿಂಗಳು ಒಳಗೆ ತರಿಸಿಕೊಳ್ಳುವವರಿಗೆ ಪ್ರತಿ ಒಂದು ಪೆನ್ನಾಕ್ಕೂ ಸೊಗಸಾದ ಕ್ಲಿಪ್ಪು ಉಚಿತವಾಗಿ ಕೊಡಲಾಗುತ್ತೆ. ಪೈಸಿಕಲ್‌ಗೆ ಯಾವ ಸಾಮಾನು ಬೇಕಾದರೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತೆ. [279–18]

ವಿಳಾಸ—ದಿ ಸಿಟಿ ಸೈಕಲ್ ಸ್ಟೋರ್ಸ್,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

THE MYSORE DASARA INDUSTRIAL AND AGRICULTURAL EXHIBITION.

The next Dasara Industrial and Agricultural Exhibition will be opened at Mysore on or about the 3rd October 1916.

It is contemplated to have a large exhibit of Industrial machinery in motion for which special accommodation has been provided and supply of power will if desired be arranged for.

The latest date for the receipt of applications for space and of exhibits at the exhibition is 1st and 15th September 1916, respectively. The prospectus is in print and will issue shortly.

The Exhibition Committee invite the cordial co-operation of every one interested in the agricultural and industrial development of the country in their endeavours to make the exhibition fruitful of results. [99-1]

Apply to the Secretary, Dasara Exhibition, Mysore, for further particulars.

Bangalore, (*Sd.*) C. RANGANATHA RAO, SAHIB,
29th March, 1916. *Secretary to the Exhibition.*

ಹೊಸ ಪುಸ್ತಕ! ಹೊಸ ಪುಸ್ತಕ!

ಸ್ವಾತಂತ್ರ್ಯಸಿದ್ಧಾಂತ.

ಸ್ವಲ್ಪ ಪ್ರತಿಗಳಿವೆ. ಜಾಗ್ರತೆ ತರಿಸಿಕೊಳ್ಳಿರಿ.

ಈ ಪುಸ್ತಕದ ವಿಷಯವಾಗಿ ಅನೇಕ ವಿದ್ವಾಂಸರು ಪಟ್ಟಿರುವ ಅಭಿಪ್ರಾಯಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ವಿವರಿಸಿದೆ.

ಮೈಸೂರು ವಿದ್ಯಾಶಾಖೆಯ ಮುಖ್ಯಾಧಿಕಾರಿಗಳವರಾದ ಶ್ರೀಮಾನ್ ರಾಯಬಹದ್ದೂರ್ ಎಂ. ರಾಮರಾವ್, ಎಂ. ಎ. ರವರು ಈ ಪುಸ್ತಕದ 25 ಪ್ರತಿಗಳನ್ನು ವಿದ್ಯಾಶಾಖೆಗಾಗಿ ತರಿಸಿಕೊಂಡು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ.

ಅರ್ಥಸಾಧಕಪತ್ರಿಕೆಯು ಹೇಳುವುದೇನಂದರೆ—"ಮುಖ್ಯ ಪ್ರತಿಪಾದ್ಯವನ್ನು ಒಳಕೊಂಡ ಈ ಪುಸ್ತಕವನ್ನು ಆಬಾಲವೃದ್ಧರೂ ಓದಿ ಅದರಂತೆ ಸ್ವಲ್ಪವಾದರೂ ಆಚರಿಸುವುದಕ್ಕೆ ಪ್ರಯತ್ನಿಸಿ ಪ್ರಯೋಜನಹೊಂದುವರೆಂದು ನಂಬುತ್ತೇವೆ."

ಶ್ರೀಯುತ ಆರ್. ಎ. ಕುಲಕರ್ಣಿ, ಬಿ. ಎ., ಎಲ್. ಎಲ್. ಬಿ., ಅವರು ಹೇಳುವದೇನಂದರೆ—"ಸದ್ವಿಚಾರಗಳಿಂದ ಕೂಡಿದ ಈ ಪುಸ್ತಕವನ್ನು ಪ್ರತಿಯೊಬ್ಬರೂ ಓದಿ ಮನನಮಾಡಬೇಕು." [94-2]

ಬೆಲೆ ೪ ಆಣೆ.

ವಿಳಾಸ "ಧನುರ್ಧಾರಿ" ಆಫೀಸ್, ದಾವಣಗೆರೆ.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ; 12 ಕ್ಕೆ ವಿ. ಪಿ. ಖರ್ಚು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5–4–0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [64-62]

ಅಮೃತಾಂಜನ ಡಿಪೋ,

109, ಫ್ರೇರ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್,

ಸೂ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಶಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಜರ್ಮನ್, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿ ಐಲೆಂಡ್, ಈಸ್ಟ್‌ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಾಡು ವೈದ್ಯರ ವೈದ್ಯದ ಸಮಯವನ್ನು ಕಾದು ನೋಡುವುದು ಕಿಲವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ಶಾರ್ದವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ನಗೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರಿಕೆ ಪ್ರತಿ ಸೀಸೆಯೊಡನೆಯೂ ಇರುವುದು. 360 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-12-0; 25 ಸೀಸೆಗಳಿಗೆ ರೂ. 5-0-0.



ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಐ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಲೇನ್ ನಂ 2, ಬೊಂಬಾಯಿ, ಅವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಕ್ರಮಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಅವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಶಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರುಮಾಡಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ."

[189-32] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಏಪ್ರಿಲ್ ೮ ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಸಾಲ—(1)	ಷೇರು ಮೊಬಲಗು	ರೂ.	10,00,000
,, (2)	ರಿಜರ್ವ್ ಫಂಡು	,,	75,000
,, (3)	ಡಿಪಾಜಿಟ್ಟುಗಳು	,,	40,41,639
,, (4)	ಇತರೆ	,,	86,359
	(ಆಣೆ ಕಾಸು ಬಿಟ್ಟಿರುತ್ತೆ.) ಒಟ್ಟು	ರೂ.	52,02,998
ಜಮಾ—(1)	ಕೈಯಲ್ಲಿ, ಬ್ಯಾಂಕುಗಳಲ್ಲಿರುವ ಹಣ	ರೂ.	5,44,237
,, (2)	ಬಾಕೀ ಮತ್ತು ಇತರ ಸಾಲಗಳು	,,	31,87,629
,, (3)	ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು	,,	5,18,000
,, (4)	ಇನ್ವೆಸ್ಟ್‌ಮೆಂಟುಗಳು	,,	6,06,002
,, (5)	ಏಜೆಂಸಿಗಳಲ್ಲಿರುವ ಮೊಬಲಗು	,,	11,776
,, (6)	ಬ್ಯಾಂಕಿನಲ್ಲಿರುವ ಸಾಮಾನುಗಳು	,,	18,362
,, (7)	ಇತರೆ	,,	16,992
	(ಆಣೆ, ಕಾಸು ಬಿಟ್ಟಿರುತ್ತೆ.) ಒಟ್ಟು	ರೂ.	52,02,998

ಪಿ. ರಾಮಸ್ವಾಮಯ್ಯ, ಆ : ಮ್ಯಾನೇಜರ್.

ಮಲೆನಾಡಿನ ವಿದ್ಯಾಭಿವೃದ್ಧಿಗೋಸ್ಕರ ಸರ್ಕಾರದವರು ಮತ್ತು ಪ್ರಜೆಗಳು ಮಾಡಬೇಕಾದ ಕಾರ್ಯಗಳು.

ಮಲೆನಾಡಿನಲ್ಲಿ ವಿದ್ಯಾಭ್ಯಾಸ ಹರಡುವುದಕ್ಕೆ ಸರ್ಕಾರದವರಿಂದ ನಡೆಸಲ್ಪಡುತ್ತಿರುವ ಕ್ರಮಗಳು ಇತರೆಯ ಸಾಲವು. ಸರ್ಕಾರದ ವಿದ್ಯಾಭ್ಯಾಸದ [illegible] ಇಷ್ಟು ದಿನಗಳಲ್ಲಿ ಎನ್ನುವ ನಿಬಂಧನೆಗಳು ಮೈಸೂರು [illegible] ಸರ್ವಸಾಮಾನ್ಯವಾಗಿ ಅನ್ವಯಿಸುವದರಿಂದ ಈ ನಿಬಂಧನೆಗಳಿಗೆ ಸರಿಯಾಗಿ ನಡೆಯದೆ ಇರುವ ಕಡೆಗಳಲ್ಲಿ ಪಾಠಶಾಲೆಗಳು ನಿರ್ಮಿತವಾಗುವದಾಗಲೀ, ಸರ್ಕಾರದ ಸಹಾಯದಿಂದ ವಿದ್ಯಾಪ್ರಚಾರವಾಗುವದಾಗಲೀ ಸಾಧ್ಯವಲ್ಲ. [illegible] ಆಲೋಚನೆಗೆ ತರತಕ್ಕ ವಿಷಯವಾಗಿದೆ. ಮೈಸೂರು ಸೀಮೆಯಲ್ಲಿ ಮಲೆನಾಡು—ಮೈದಾನವೆಂದು ವಿಭಾಗವಾಗಿ ಎರಡು ತರಹವಾಗಿರುವದರಿಂದ ಯಾವ [illegible] ಎಲ್ಲಾ ಕಡೆಗಳ ಪ್ರಜೆಗಳ ಅನುಕೂಲಕ್ಕೆ ತಕ್ಕ [illegible] ಹೀಗೆ ಒಂದು ವೇಳೆ ಸ್ಥಳವಿಶೇಷ [illegible] ನಿಬಂಧನೆಗಳನ್ನು ಬದಲಾಯಿಸಬೇಕಾಗಿದ್ದ [illegible] ಅವನ್ನು ತಿಳಿಸಬೇಕು.

... ದಿಂದ ಆಸ್ಟ್ರಿಯಾದವರು ತಮ್ಮ ಬಂದೂಕಗಳನ್ನು ಬಿಸಾಟು ... ರಣಾಗತರಾಗುತ್ತೇವೆಂದು ಹೇಳಿಕೊಂಡರು. ಇವರ ಮಾತನ್ನು ... ರಷ್ಯಾದವರು ಇವರನ್ನು ಹಿಡಿಯುವದಕ್ಕೆ ಹೋದಾಗ ಅವರು ... ಗನ್ನು ತೆಗೆದುಕೊಂಡು ರಷ್ಯಾದವರ ಮೇಲೆ ಬಿದ್ದರು. ಆದರೇನು? ... ನಂಬಿಕೆದ್ರೋಹಕ್ಕೆ ಅವರಿಗೆ ತಕ್ಕ ಪ್ರಾಯಶ್ಚಿತ್ತವಾಯಿತು

ಇಟಲಿ.

...ಯವರು ನ್ಯೂನ್ಯತೆಯಿಂದ ಯುದ್ಧಕಾರ್ಯಗಳನ್ನು ಪ್ರಾರಂಭಿಸಿರು ... ಯುದ್ಧದ ಸಾಲಿನ ಉದ್ದಕ್ಕೂ ಇವರೇ ಶತ್ರುಗಳ ಮೇಲೆ ಹೋಗಿ ... ವನ್ನು ಹಿಂದು ಹಿಂದಕ್ಕೆ ಅಟ್ಟುತ್ತಲಿದ್ದಾರೆ. ಉತ್ತರ ದಿಕ್ಕಿನಲ್ಲಿ ... ಮೈಲುಗಳ ವರೆಗೂ ಮುಂದರಿದು ಹೋಗಿ ಅನೇಕರು ಗ್ರಾಮ ... ಸ್ವಾಧೀನಪಡಿಸಿಕೊಂಡಿರುತ್ತಾರೆ. ಮತ್ತು ಪ್ರಾಮುಖ್ಯವಾದ ಎರಡು ... ಸ್ವಲ್ಪ ಕಡಿಮೆ ಎಲ್ಲಾ ಭಾಗಗಳನ್ನೂ ಸುತ್ತಿಕೊಂಡಿರುತ್ತಾರೆ ... ಗುಡ್ಡಗಳಲ್ಲಿ ಯುದ್ಧ ನಡೆಯಬೇಕಾಗಿದೆ. ಇನ್ನು ಸುಲಭಸಾಧ್ಯವಾದ ... ರುವವರು ಶತ್ರುಗಳಾದ ಆಸ್ಟ್ರಿಯಾದವರನ್ನು ಓಡಿಸುವದಕ್ಕಾಗಿ ... ಷ್ಟು ಎತ್ತರವಾದ ಬೆಟ್ಟಗಳನ್ನು ಕೆಲವು ಸಮಯಗಳಲ್ಲಿ ಹತ್ತ ... ಒಂದು ಸ್ಥಳದಲ್ಲಿ ಇಟಲಿಯವರು 7,100 ಗಜ ಉದ್ದವಾದ ... ಬೆಟ್ಟದ ಒಂದು ಭಾಗವನ್ನು ಹಾರಿಸಿಬಿಟ್ಟರು. ಅವರು ... ಅನೇಕ ಕಂದಕಗಳನ್ನು ಕೈವಶಮಾಡಿಕೊಂಡು 400 ... ಸೆರೆಯಾಗಿ ಹಿಡಿದುಕೊಂಡರು. ಬೆಟ್ಟ ಪ್ರದೇಶದ ಮಧ್ಯದಲ್ಲಿ ... ಯವರಿಗೆ 80 ಮಂದಿ ಸೆರೆಯಾದರು. ಫಿರಂಗಿ ಯಂತ್ರಗಳೂ ಸಿಕ್ಕಿ ... ಯವರೂ ಕೆಲವು ಆಕಾಶವಿಮಾನಗಳನ್ನು ಟ್ರಿಯೆಸ್ಟ್‌ಗೆ ಕಳುಹಿಸಿ ... ಕಳುಹಿ ಅಲ್ಲಿಗಳ ಮೇಲೆ ಸಿಡಿಮದ್ದಿನ ಗುಂಡುಗಳನ್ನು ... ಆಸ್ಟ್ರಿಯದವರು ಅನೇಕ ವಿಮಾನಗಳಲ್ಲಿ ಹೋಗಿ ವೆನಿಸ ... ವಿನ ಗುಂಡುಗಳನ್ನು ಹಾಕಬೇಕೆಂದು ಪ್ರಯತ್ನಪಟ್ಟರು. ಆದರೆ ... ವೆನಿಸಿನವರು ಹಿಂದಕ್ಕೆ ಓಡಿಸಲ್ಪಟ್ಟರು. ಆಸ್ಟ್ರಿಯಾದವರು ... ದಲ್ಲಿ ಹತ್ತು ಆಕಾಶವಿಮಾನಗಳನ್ನು ಕಳೆದುಕೊಂಡರು. ತಾವು ... ಆಸ್ಟ್ರಿಯಾದವರು ಆಸ್ಟ್ರಿಯಾದವರಿಗೆ ಒಪ್ಪಿಕೊಂಡ ... ವರು ಸೆರ್ಬಿಯದವರಿಗಾಗಿ ನಾಲಾಯದ ಟರ್ಕಿ ಸೇನೆಗಳನ್ನು ... ಯಲ್ಲಿ ನಾಶಕಿಸಲ್ಪಟ್ಟರುವದಲ್ಲದೆ 2,00,000 ಸೆರ್ಬಿಯದವರ 10,000 ಕುದುರೆಗಳನ್ನು ಸಮುದ್ರದಿಂದಾಚೆಗೆ ರವಾನಿಸಿರುತ್ತಾರೆ. ... ಓಡಿದ ಎಲ್ಲಾ ಕಾಲಕ್ಕಿಂತ ಈಗ ಹೆಚ್ಚಿನ ಜಯವಾಗುತ್ತಾ ... ನಿಶ್ಚಯವಾಗುತ್ತದೆ.

ಟರ್ಕಿಯಲ್ಲಿ.

...ಗದ ಯುದ್ಧವು ಚಿಕ್ಕ ಅವ್ಯವಸ್ಥೆಯಲ್ಲಿ ನಡೆಯುತ್ತಿದೆ. ರಷ್ಯಾದವರು ... ಬಹಳ ಕಷ್ಟದಿಂದಿಗೆ ನುಗ್ಗಿ ಹೋಗಿ ಬಹು ಧೈರ್ಯವಾಗಿ ಎದು ... ಯವರನ್ನು ಹಿಂದಕ್ಕೆ ಓಡಿಸಿಬಿಡುತ್ತಾರೆ. ರಷ್ಯಾದವರ ಯುದ್ಧ ... ಈ ಪಟ್ಟಣವನ್ನು ಸಮುದ್ರದ ಕಡೆಯಿಂದ ಮುತ್ತಿಗೆಹಾಕಿದವು. ... ನ್ನು ಸಹ ಕಬ್ಬಾ ಇಕಿಸಿದರು. ಹೀಗೆ ಏಪ್ರಿಲ್ 18 ರಲ್ಲಿ ರಷ್ಯಾ ... ಪಟ್ಟಣವನ್ನು ಸ್ವಾಧೀನಪಡಿಸಿಕೊಂಡರು. ಟ್ರೆಬಿಜಾಂಡ್ ಕಪ್ಪು ... ದಡದಲ್ಲಿರುವ ಅತ್ಯಂತ ಪ್ರಾಮುಖ್ಯವಾದ ರೇವು ಪಟ್ಟಣವಾಗಿ ... ಘರ್ ದಕ್ಕಿಗೆ ಪ್ರಯಾಣ ಬೇಕಾಗಿದೆ ... ಈ ಸ್ಥಳದಿಂದ ಹೊರಡು ... ಈ ಪ್ರಾಮುಖ್ಯತೆಯುಳ್ಳ ಎಲ್ಲಾ ಜನರಿಗೆ ಎಚರಿಕೆ ಮಾಡಿದೆ. ಇದನ್ನು ... ನ್ನು ಟರ್ಕಿಯವರಿಗೆ ದೊಡ್ಡ ನಷ್ಟವಾಗಿರುವದು.

...ರೋಮಿಗೆ ಪಶ್ಚಿಮ ದಿಕ್ಕಿನಲ್ಲಿ ಆರು ದಿನಗಳ ವರೆಗೆ ನಡೆದ ಒಂದು ... ಯುದ್ಧದಲ್ಲಿಯೂ ಕೂಡ ರಷ್ಯಾದವರು ಟರ್ಕಿಯವರನ್ನು ಸೋಲಿಸಿರು ... ಟರ್ಕಿಯವರು ಬಹಳ ನಷ್ಟಪಟ್ಟು ಓಡಿಹೋಗುತ್ತಲಿದ್ದಾರೆ. ರಷ್ಯಾದ ... ವನ್ನು ಹಿಂದಟ್ಟುತ್ತಿದ್ದಾರೆ.

... ದಕ್ಷಿಣಕ್ಕೆ ಅಂದರೆ ಬ್ರಿಟಿಷ್ ಬಳಿಯಲ್ಲಿ ರಷ್ಯಾದವರು ಟರ್ಕಿಯ ... ಸೋಲಿಸುತ್ತಾ ಬಂದಿದ್ದಾರೆ. ಈ ಸ್ಥಳದಲ್ಲಿ ಟರ್ಕಿಯವರು ಕಾನ್ಸ್ಟಾಂಟಿನೋಪಲಿ ... ಹೋದಾಗ ಸೈನ್ಯವನ್ನು ತಂದುಕೊಂಡು ತಮ್ಮನ್ನು ಬಲಪಡಿಸಿ ...

... ವಾದ ಪಾಠವಿಭಾಗಿಸಲ್ಪಟ್ಟು ಟರ್ಕಿಯವರ ಸೈನಿಕರು ದುರ್ಬಾ ... ರೆಂದು ಹೇಳಲಾಗಿದೆ.

... ಆಕಾಶವಿಮಾನಗಳು ಕಾನ್ಸ್ಟಾಂಟಿನೋಪಲ್ ಮೇಲೆ ಬಂದು ... ಸಿಡಿಮದ್ದಿನ ಕಾರ್ಖಾನೆಯ ಮೇಲೆಯೂ ಆಕಾಶವಿಮಾನಗಳ ಕಚೇರಿಯ ... ಸಿಡಿಮದ್ದಿನ ಗುಂಡುಗಳನ್ನು ಹಾಕಿಬಿಟ್ಟವು. ಮತ್ತು ಅಧಿಗಳು ... ಮೇಲೆಯೂ ಬಾಂಬುಗಳನ್ನು ಹಾಕಿರುತ್ತವೆ. ಈ ವಿಮಾನಗಳು ... ದೇವರ ಹೋದ್ದು ಸುರಕ್ಷಿತವಾಗಿ ಬಂದು ಸೇರಿವೆ.

...ಯವರು ಎಡ್ರಿಯಾನೋಪಲ್‌ನಲ್ಲಿರುವ ಗ್ರೀಕರನ್ನು ಕೊಲ್ಲುತ್ತಿ ... ವರೆಂಬುದು ಇದೆ.

ಮೆಸೊಪೊಟೇಮಿಯದಲ್ಲಿ.

...ಪೊಟೇಮಿಯದಲ್ಲಿ ಬ್ರಿಟಿಷರಿಗೂ ಟರ್ಕಿಯವರಿಗೂ ಯುದ್ಧವು ಬಹಳ ... ವಾಗಿ ಇದೆ. ಟೈಗ್ರಿಸ್ ನದಿಯಲ್ಲಿ ಪ್ರವಾಹವು ಬಂದು ಹದ ಕೆಟ್ಟು ... ದರಿಂದ ಈ ಕಾಲದಲ್ಲಿ ಯುದ್ಧ ನಡೆಸುವದು ಬಹಳ ಕಷ್ಟಕರವಾ ... ದಕ್ಷಿಣ ದಿಕ್ಕಿನಲ್ಲಿ ಪ್ರಾಮುಖ್ಯವಾದ ಯುದ್ಧವು ನಡೆಯುತ್ತಾ ... ಸ್ಥಳದಲ್ಲಿ ಬ್ರಿಟಿಷರು ಟರ್ಕಿಯವರನ್ನು ಅವರ ಕೆಲವು ಕಂದಕಗ ... ದ ಅಧೀನಗಳನ್ನು ಆಕ್ರಮಿಸಿಕೊಂಡಿದ್ದಾರೆ. ಏಪ್ರಿಲ್ 12 ನೇ ... ಟರ್ಕಿಯವರು ಒಂದುವರೆಯಿಂದ ಮೂರು ಮೈಲುಗಳ ದೂರದ ... ಹಿಂದಕ್ಕೆ ಓಡಿಸಲ್ಪಟ್ಟರು. 15 ನೇ ತಾರೀಖಿನಲ್ಲಿ ಬ್ರಿಟಿಷರು ಅವರನ್ನು ... ಹಿಂದಕ್ಕೆ ಓಡಿಸಿ ಅವರ ಕಂದಕಗಳನ್ನು ಆಕ್ರಮಿಸಿಕೊಂಡರು. ಟರ್ಕಿ ... ಯಲ್ಲಿ ಸುಮಾರು 200-300 ಸೈನಿಕರು ಕೊಲ್ಲಲ್ಪಟ್ಟರು. ಅನೇಕರು ... ಸಿಕ್ಕಿಬಿದ್ದರು. 17 ನೇ ತಾರೀಖಿನಲ್ಲಿ ಟರ್ಕಿಯವರು ಬ್ರಿಟಿಷರನ್ನು ... ಮೈಲಿ ಘಾತಲೇ ಹಿಂದಕ್ಕೆ ಓಡಿಸಿದರು. ಬ್ರಿಟಿಷರು ಜನರಲ್ ... ರವರು ಇರುವ ಸ್ಥಳವಾದ ಕತ್‌ಗೆ ದೂರವಾಗಿಲ್ಲದೆ ಇದ್ದಾಗ್ಯೂ ... ಅಲ್ಲಿಯವರೆಗೂ ನುಗ್ಗಿ ಹೋಗುವದು ಪ್ರಯಾಸವಾಗಿದೆ. ... ದಿಂದ ಯುದ್ಧವು ಕಷ್ಟಕರವಾಗಿದೆ.

... ಹೋಗಿ ಟಂಟ್ ಹೊರಿಗೆ ದಿನಗಳ ಪ್ರತಿಯಾಗಿ ಒಂದು ಉತ್ತರವ ... ಆದರೆ ... ಜೋಡಿಸದೆಂದರೆ— ... ದಿಂದಲ ಸೈನಿಕರೆಲ್ಲಾ ... ಧೈರ್ಯಗೊಂಡರು ಎಂಬುವದೇ.

ಈಜಿಪ್ಟಿನಲ್ಲಿ.

ಈಜಿಪ್ಟಿನಲ್ಲಿದ್ದ ಆಸ್ಟ್ರೇಲಿಯದವರು ಸೂಯೆಜ್ ಕಾಲುವೆಗೆ ಪೂರ್ವ ದಿಕ್ಕಿನಲ್ಲಿ ನಾಲವತ್ತು ಮೈಲುಗಳ ದೂರದಲ್ಲಿದ್ದ ಟರ್ಕಿಯರ ಪಾಳಯದ ಮೇಲೆ ಬಂದು ಬಿದ್ದರು. ಈ ಪಾಳೆಯವು ಹಾಳುಗೆಡವಲ್ಪಟ್ಟಿತು. ಶತ್ರುಗಳ ಕಡೆಯಲ್ಲಿ ಆರು ಮಂದಿ ಸತ್ತರು. ಐದು ಮಂದಿ ಗಾಯಪಟ್ಟರು. ಒಬ್ಬ ಆಸ್ಟ್ರಿಯದ ಅಧಿಕಾರಿಯ 33 ಮಂದಿ ಟರ್ಕಿಯವರು ಸೆರೆಯಾಗಿ ಸಿಕ್ಕಿಬಿದ್ದರು ಆಸ್ಟ್ರೇಲಿಯದವರ ಕಡೆ ಒಬ್ಬನು ಕೊಲ್ಲಲ್ಪಟ್ಟನು. ಒಂದು ದೇಶದ ಅನೇಕ ಸೈನ್ಯಗಳು ಈ ವರೆಗೂ ಈಜಿಪ್ಟಿನಲ್ಲೇ ಇರುತ್ತವೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಸಲೋನಿಕದಲ್ಲಿ ಸಮಾಚಾರವೇನೂ ಹೆಚ್ಚಾಗಿರುವದಿಲ್ಲ. ಆದರೆ ಗ್ರೀಕರು ತುಂಬಾ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದಿರುತ್ತಾರೆ. ಅವರು ತಟಸ್ಥರಾಗಿರುವದು ಅಸಾಧ್ಯ. ಯುದ್ಧ ಮಾಡುವದಕ್ಕೆ ಅವರಿಗೆ ಮನಸ್ಸಿಲ್ಲ.

ಎಡ್ರಿಯಾಟಿಕ್ ಕಡಲಿನ ಉತ್ತರಭಾಗದಲ್ಲಿರುವ ಪಟ್ಟಣ ಎಂಬ ಸ್ಥಳದಲ್ಲಿ ಇಟಲಿಯವರ ಒಂದು ಸೈನ್ಯವಿದೆ. ಇವರು ಅಲ್ಬೇನಿಯ ಮಾರ್ಗವಾಗಿ ಸೆರ್ಬಿಯಕ್ಕೆ ಹೋಗುವದಕ್ಕೆ ಸಿದ್ಧರಾಗಿದ್ದಾರೆ. ಸೆರ್ಬಿಯದವರ ಸೈನ್ಯವು ಫ್ರಾನ್ಸಿನಿಂದ ಪುನಃ ಏರ್ಪಾಡಾಗಿದೆ. ಅದು ಯುದ್ಧಕ್ಕೆ ಹೋಗಲು ಬೇಗ ಸಿದ್ಧವಾಗುವದು.

ಇತರ ವಿಷಯಗಳು.

ಬ್ರಿಟಿಷ್ ಸೈನ್ಯದ ಶಕ್ತಿಯನ್ನು ಕಾಪಾಡುವ ಅತ್ಯುತ್ತಮವಾದ ಮಾರ್ಗವು ಯಾವದು ಎಂಬ ವಿಷಯದಲ್ಲಿ ಬ್ರಿಟನ್ನಿನಲ್ಲಿ ಬಹಳ ಚರ್ಚೆಯು ನಡೆಯುತ್ತಾ ಇದೆ. ಈಗ ಸುಮಾರು 30,00,000 ಮಂದಿ ಯುದ್ಧ ಸನ್ನದ್ಧರಾಗಿದ್ದಾರೆ. ಪ್ರತಿ ತಿಂಗಳಲ್ಲಿ ಅನೇಕಮಂದಿ ಕೊಲ್ಲಲ್ಪಡುತ್ತಾರೆ, ಗಾಯಪಡುತ್ತಾರೆ ಅಥವಾ ಕಾಯಿಲೆ ಬೀಳುತ್ತಾರೆ. ಇವರ ಸ್ಥಾನಕ್ಕೆ ಬೇರೆಯವರನ್ನು ಸೇರಿಸಬೇಕು. ಇದಕ್ಕಾಗಿ ಪ್ರತಿ ತಿಂಗಳಲ್ಲಿಯೂ 15,000 ಮಂದಿ ಬೇಕಾಗಿದೆಯೆಂದು ಹೇಳುತ್ತಾರೆ. ಇಷ್ಟುಮಂದಿಯನ್ನು ದೊರಕಿಸುವದು ಹ್ಯಾಗೆ? ಎಂಬುವದೇ ಇತ್ಯರ್ಥ ಮಾಡಬೇಕಾದ ವಿಷಯವಾಗಿದೆ. ಪಾರ್ಲಿಮೆಂಟಿನವರು ಅಂತರ್ಯದಲ್ಲಿ ಒಂದು ಸಭೆಯನ್ನು ನಡಸಿ ಈ ವಿಷಯವನ್ನು ಕುರಿತು ಆಲೋಚನೆಯಾಗಿ ಚರ್ಚಿಸಬೇಕೆಂದಿರುತ್ತಾರೆ. ಅಲ್ಲಿ ಚರ್ಚೆಯಾಗುವ ಎಲ್ಲಾ ವಿಷಯಗಳನ್ನು ಪ್ರಕಟಿಸಲಾಗದು. ಹಾಗೆ ಮಾಡಿದಲ್ಲಿ ಶತ್ರುವಿಗೆ ಪ್ರಾಮುಖ್ಯವಾದ ವಿಷಯವು ತಿಳಿಸಿದಂತಾಗುವದು. ಬ್ರಿಟನ್ನಿನಲ್ಲಿ ಒಂದೊಂದು ಅಭಿಪ್ರಾಯವು ಇರುತ್ತದೆ. ಅದೇನೆಂದರೆ—ಗವರ್ನ್ಮೆಂಟ್ ಅಂತಃಕಲಹ ಸಾಮರ್ಥ್ಯವನ್ನು ವಿನಿಯೋಗಿಸ ಸಾಧ್ಯವಾದಷ್ಟು ಬೇಗ ಈ ಯುದ್ಧದಲ್ಲಿ ಜಯವನ್ನು ಹೊಂದಬೇಕೆಂಬುವದೇ. ಗವರ್ನ್ಮೆಂಟ್ ವಿಭಾಗವಾಗುವ ಸಂಭವವಿತ್ತು. ಆದರೆ ಈಗ ಎಲ್ಲಾ ಪಕ್ಷಗಳನ್ನು ಸಮಾಧಾನಪಡಿಸುವ ಒಂದು ಏರ್ಪಾಟನ್ನು ಕಂಡುಹಿಡಿಯಲಾಗಿದೆ.

ಜರ್ಮನಿಯವರ ಸಬ್‌ಮೆರೀನುಗಳು ಪ್ರಯಾಣಿಕರ ಹಡಗುಗಳ ಮೇಲೆ ಬಿದ್ದು ಅವುಗಳಲ್ಲಿರುವ ಅಮೆರಿಕದ ಮತ್ತು ಇತರ ದೇಶಗಳ ಸಾಧುಪ್ರಜೆಗಳನ್ನು ಕೊಲ್ಲುವದರ ವಿಷಯದಲ್ಲಿ ಅಮೇರಿಕದ ಗವರ್ನ್ಮೆಂಟಿನವರು ಜರ್ಮನಿ ಗವರ್ನ್ಮೆಂಟಿಗೆ ಒಂದು ಮುಖ್ಯವಾದ ಕಾಗದವನ್ನು ಬರೆದಿರುತ್ತಾರೆ. ಇಂಥ ಪದ್ಧತಿಯನ್ನು ಬಿಟ್ಟುಬಿಡಬೇಕೆಂದು ಅಮೆರಿಕದ ಗವರ್ನ್ಮೆಂಟ್ ಒತ್ತಾಯಮಾಡುತ್ತದೆ. ಈ ಪದ್ಧತಿಯನ್ನು ಬಿಡದಿದ್ದ ಪಕ್ಷದಲ್ಲಿ ಅಮೆರಿಕದವರು ಜರ್ಮನಿಯವರ ಸ್ನೇಹವನ್ನು ಕಡಿದುಬಿಡಬೇಕಾಗುವದು. ಅಂದರೆ ಅಮೆರಿಕದ ರಾಯಭಾರಿಯನ್ನು ಜರ್ಮನಿಯಿಂದಲೂ ಜರ್ಮನಿಯ ರಾಯಭಾರಿಯನ್ನು ಅಮೆರಿಕದಿಂದಲೂ ಹಿಂತೆಗೆದುಬಿಡಬೇಕಾಗುವದು. ಇದರ ಬೆನ್ನಿಂದ ಅಮೆರಿಕಕ್ಕೂ ಜರ್ಮನಿಗೂ ಯುದ್ಧವು ಪ್ರಾರಂಭವಾಗುವದೋ ಏನೋ ತಿಳಿಯದು. ಅಮೆರಿಕದವರಿಗೆ ಜರ್ಮನಿಯವರ ವಿಷಯದಲ್ಲಿ ಆಕ್ರೋಶ ಹುಟ್ಟಿದೆ.

ಬ್ರಿಟನ ಸಾಧುಪ್ರಜೆಗಳಲ್ಲಿ 3,117 ಮಂದಿ ಜರ್ಮನಿಯವರ ಸಬ್‌ಮೆರೀನುಗಳಿಂದಲೂ ಸಿಡಿಮದ್ದುಗಳಿಂದಲೂ ಕೊಲ್ಲಲ್ಪಟ್ಟಿದ್ದಾರೆಂದೂ ಇವರ ಪೈಕಿ 1,175 ಮಂದಿ ಹಡಗುಗಳಲ್ಲಿ ಪ್ರಯಾಣಮಾಡುತ್ತಿದವರೆಂದೂ ಹೇಳಲಾಗಿದೆ.

ಕಳೆದ ವಾರದಲ್ಲಿ ಬ್ರಿಟಿಷರ ಹಡಗುಗಳು ಏಳು, ನಾರ್ವೇಜಿಯನವರು ಮೂರು, ಡಚ್ಚರದು ಒಂದು, ಡೇನಿಷರದು ಒಂದು, ಜರ್ಮನಿಯವರದು ಒಂದು ಸಬ್‌ಮೆರೀನುಗಳಿಂದ ಮುಳುಗಿಸಲ್ಪಟ್ಟವೆಂದೂ ಇವುಗಳಲ್ಲಿದ್ದ ಜನಗಳ ಪೈಕಿ 7 ಮಂದಿ ಗಾಯ ಪಾಲಾದವರೆಂದೂ ವಿಧಿತವಾಗಿದೆ.

ಬ್ರಿಟನ ಸಬ್‌ಮೆರೀನುಗಳು ಒಳಗೆ ಬಾರದಂತೆ ಅವುಗಳನ್ನು ತಡೆಯುವದಕ್ಕಾಗಿ ಬಾಲ್ಟಿಕ್ ಕಡಲಿನ ಪ್ರವೇಶದಲ್ಲಿ ಜರ್ಮನಿಯವರು ಒಂದು ಉಕ್ಕಿನ ಬಲೆಯನ್ನು ಹಾಕಿದ್ದಾರೆಂದು ಹೇಳಲಾಗಿದೆ.

ಫ್ರಾನ್ಸಿನ ಒಂದು ಆಕಾಶವಿಮಾನವು ಉತ್ತರಸಾಗರದಲ್ಲಿದ್ದ ಜರ್ಮನಿಯವರ ಒಂದು ಯುದ್ಧದ ಹಡಗಿನ ಮೇಲೆ 16 ಬಾಂಬುಗಳನ್ನು ಇಳಿಬಿಟ್ಟಿತು.

ವಿಲ್ಹೆಲ್ಮ್‌ಹಾವೆನ್ ಎಂಬಲ್ಲಿ ಇದ್ದ ಜರ್ಮನಿಯವರ ಟಾರ್ಪೆಡೋ ಕಾರ್ಖಾನೆಗೆ ಹ್ಯಾಗೋ ಬೆಂಕಿತಗಲಿ ಹಾನಿಯು ... ಅನೇಕರು ಸತ್ತುಹೋದರು. ಇನ್ನೂ ಅನೇಕರಿಗೆ ಗಾಯಗಳಾಗಿವೆ.

ಸಮುದ್ರದಿಂದ ತಪ್ಪಿಸಿಕೊಂಡು ಒಂದು ದೋಣಿಯಲ್ಲಿ ಹೋಗುತ್ತಿದ್ದ ಇಬ್ಬರು ಜರ್ಮನಿಯ ಪ್ರಜೆಗಳನ್ನು ಇಂಗ್ಲೆಂಡಿನ ಸಮೀಪದಲ್ಲಿ ಹಿಡಿದರು. ಇವರ ಪೈಕಿ ಒಬ್ಬನು ಮತ್ತಾರಿಗೆ ಗುಂಡುಗಳನ್ನು ಎಸೆದ ಎಂಡೆನ್ ಎಂಬ ಹಡಗಿನ ಒಬ್ಬ ಅಧಿಕಾರಿಯಿದ್ದನೆಂದು ಹೇಳಲ್ಪಟ್ಟಿದೆ.

ಗಾಯಪಟ್ಟವರನ್ನು ಸಂರಕ್ಷಿಸುವದರಲ್ಲಿ ತುಂಬಾ ಧೈರ್ಯವನ್ನು ತೋರಿಸಿದ ಒಬ್ಬ ಬ್ರಿಟಿಷ್ ಸಿಪಾಯಿಯವರಿಗೆ ವಿಕ್ಟೋರಿಯಾ ಕ್ರಾಸ್ ಎಂಬ ಘನತರವಾದ ಬಿರುದು ಕೊಡಲ್ಪಟ್ಟಿದೆ. ಇವರು ಮೊದಲನೇ ದಿನ ತಮ್ಮ ಸುತ್ತ ಮುತ್ತಲೂ ಗುಂಡುಗಳೂ ಸಿಡಿಮದ್ದಿನ ಗುಂಡುಗಳೂ ಹಾರುತ್ತಾ ಇದ್ದಾಗ್ಯೂ ಗಾಯಪಟ್ಟ ಹನ್ನೆರಡುಮಂದಿಯನ್ನು ಹೊತ್ತುಕೊಂಡು ಬಂದರು. ಅವರ ಗಾಯಗಳನ್ನು ಕಟ್ಟುತ್ತಿರುವಲ್ಲೇ ಅವರಲ್ಲಿ ಮೂವರು ಕೊಲ್ಲಲ್ಪಟ್ಟರು. ಎರಡನೇ ದಿನ ಅವರು ಇನ್ನೂ ಹನ್ನೆರಡು ಮಂದಿಯನ್ನು ತಂದರು. ಮೂರನೇ ದಿನ ಬಾಲಂಟಿಯರುಗಳ ಸಹಾಯದಿಂದ ಉಳಿದವರನ್ನೆಲ್ಲಾ ತಂದಿಸಿದರು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಸಿಟಿ ಪಾರ್ಸಲ್ ಪೇಟೆ ಮರಿಯಪ್ಪನ ಮಗ ಇಪ್ಪತ್ತು ವಯಸ್ಸಿನ ಜೀವನ್ ಎಂಬುವನು ಧರ್ಮಾಂಬುಧಿ ಕೆರೆಗೆ ಸ್ನಾನಕ್ಕೆ ಹೋಗಿ ಮುಳುಗಿ ಸತ್ತನು.

ಕಡೂರಿನಲ್ಲಿ ಈ ತಿಂಗಳು ಇಪ್ಪತ್ತನಾಲ್ಕರಲ್ಲಿ ಡ್ರಿ|| ಇನ್ಸ್‌ಪೆಕ್ಟರ್ ಮ|| ಕೆ. ಕೃಷ್ಣ ಅಯ್ಯಂಗಾರರು ಒಂದು ಕೈಗಾರಿಕೆ ಪ್ರದರ್ಶನವನ್ನು ನಡೆಸಿದರು. ಆ ಊರಿನಲ್ಲಿ ನಡೆದ ಪ್ರದರ್ಶನವು ಇದೇ ಮೊದಲನೇದು.

ಕೆಲವು ದಿನಗಳ ಕೆಳಗೆ ತುಮಕೂರಿಗೆ ಹೋಗತಕ್ಕ ಪ್ರಯಾಣಿಕನೊಬ್ಬನು ಬೆಂಗಳೂರು ಸಿಟಿ ಸ್ಟೇಷನ್‌ನಲ್ಲಿ ಟಿಕೆಟ್ ತೆಗೆದುಕೊಳ್ಳುತ್ತಿರುವಾಗ ಅವನ ಜೇಬಿನಲ್ಲಿದ್ದ ಹಣವನ್ನು ಕದ್ದ ದಾಸಪ್ಪನೆಂಬುವನಿಗೆ ರೈಲ್ವೆ ಮ್ಯಾಜಿಸ್ಟ್ರೇಟರು ಒಂದು ತಿಂಗಳ ಕಠಿಣ ಸಜವನ್ನು ವಿಧಿಸಿದ್ದಾರೆ.

ಇದೇ ತಿಂಗಳು 26 ನೇ ತಾ. ನಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ಒಂದು ತಾಲ್ಲೋಕು ಕಾನ್ಫರೆನ್ಸು ಡಿಪ್ಯುಟಿ ಕಮೀಷನರ ಅಧ್ಯಕ್ಷತೆಯಲ್ಲಿ ನಡೆಯುವದು. ಹಾಗೆಯೇ 23 ನೇ ತಾ. ನಲ್ಲಿ ಚಿಕ್ಕತೊರೂರು ಮತ್ತು ತುರುವೇಕೆರೆ ತಾಲ್ಲೋಕು ಕಾನ್ಫರೆನ್ಸುಗಳೂ ಜರುಗುವುವೆಂದು ... ಪ್ರದರ್ಶನವು ಜರುಗುವದೆಂದು ಗೊತ್ತಾಗುತ್ತದೆ.

ತಾ 23 ರಲ್ಲಿ ಮಹಾರಾಜರವರು ಬೆಂಗಳೂರು ಸಂಸ್ಕೃತ ಪಾಠಶಾಲೆಯಲ್ಲಿ ತಾ. 23 ರಲ್ಲಿ ... ಮೈಸೂರು ... ಸ್ವೀಕರಿಸಿ ... ಬೆಂಗಳೂರು ಹಂದು ... ಕುರಿತು ಸಮ್ಮ ... ಸಂತೋಷವನ್ನು ತೋರಿಸುವದಕ್ಕಾಗಿ ಸಭೆಸೇರಿದ್ದರು.

ಚಿಕ್ಕಬಳ್ಳಾಪುರ ವ್ಯವಸಾಯದ ಸ್ಕೂಲಿನಲ್ಲಿ ... ಗುವ ವಿದ್ಯಾರ್ಥಿಗಳಿಗೆ ಬೆಂಗಳೂರು ಗವರ್ನ್ಮೆಂಟ್ ಹೈಸ್ಕೂಲಿನಲ್ಲಿ ಮುಂದಿನ ಶನಿವಾರ ಮ|| ಎ. ಆರ್. ಬ್ಯಾನರ್ಜಿ ಯವರ ಅಧ್ಯಕ್ಷತೆಯಲ್ಲಿ ಬಹುಮಾನಗಳನ್ನು ಹಂಚುವರು. ಶುಕ್ರವಾರ ದಿವಸ ಅಗ್ರಿಕಲ್ಚರಲ್ ಡೈರೆಕ್ಟರವರು ... ಆಕೋರ್ಸಿನಲ್ಲಿ ... ತಮ್ಮ ಬಂಗಲೆಯಲ್ಲಿ ಅವರುಗಳಿಗೆ ... ಮಾಡುವರು.

ಶೃಂಗೇರಿ ಮಠದ ಏಜೆಂಟರು ಬರೆಯುವದು—ಶ್ರೀ ಶಾರದಾ ಮತ್ತು ಶ್ರೀ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳ ಪ್ರತಿಷ್ಠೆಯನ್ನು ಸ್ಥಾಪಿಸತಕ್ಕ ದೇವಾಲಯಗಳ ಕುಂಭಾಭಿಷೇಕವು ಮುಂದಿನ ಮೇ ತಿಂಗಳು ಹದಿನೆಂಟನೇ ಗುರುವಾರ ನಡೆಯುತ್ತದೆ. ಈ ಮಹೋತ್ಸವವನ್ನು ದರ್ಶನಮಾಡ ಇಚ್ಛಿಸತಕ್ಕವರು ಸಂಪಾದಿಸತಕ್ಕವರು ಹದಿನೈದು ದಿನಗಳಿಗೆ ಮುಂಚೆ ಶ್ರೀ ಮಠದ ಅಧಿಕಾರಿಗಳಿಗೆ ಸೂಚನೆ ಕೊಟ್ಟರೆ ಸಾಧ್ಯವಾದ ಮಟ್ಟಿಗೆ ಅನುಕೂಲವಾದ ಸ್ಥಳವನ್ನು ಏರ್ಪಾಡು ಮಾಡಲಾಗುವದು.

ಬೆಂಗಳೂರು ಬ್ರಾಡ್‌ವೇ ರೋಡಿನಲ್ಲಿ ಹೋಟೆಲ್‌ಕೀಪರ್ ಮುನಿಸಾಮಿ ನಾಯುಡುವಿನ ಸಂಸಾರ ನಾನೂರು ರೂಪಾಯಿ ಬೆಲೆಯುಳ್ಳ ಒಡವೆಗಳನ್ನು ಆತನ ಬಲ ಮಗ್ಗುಲಿನ ಇಬ್ಬರು ಹೆಂಗಸರಲ್ಲಿ ಒಬ್ಬಳು ಅಲಂಕಾರದ ... ಮನೆಯಲ್ಲಿ ಇಟ್ಟು ಪರಸ್ಥಳಕ್ಕೆ ಹೋಗಿರುವ ಕಾಲದಲ್ಲಿ ತಮ್ಮ ಜೊತೆಯಲ್ಲಿ ... ದರಿಂದ ... ಅಪಹರಿಸಿಕೊಂಡು ... ಊರಿಗೆ ಹೊರಟು ಹೋಗಿದ್ದಾನ್ನೂ, ಪೋಲೀಸಿನವರು ಅವರನ್ನು ಪತ್ತೆ ಹಚ್ಚಿ ... ನಡಿಸಿ ಕೊಂಡ ಮಾಲುಸಹಿತ ಅಪರಾಧಿಗಳನ್ನು ವಿಚಾರಣೆಗೆ ಒಳಪಡಿಸಿರುವರು.

ಒಬ್ಬ ಬಾತ್ಮೀದಾರರು ಬರೆಯುವದು—ತಾ. ಹನ್ನೊಂದರಲ್ಲಿ ಮಧ್ಯಾಹ್ನ ಎರಡು ಗಂಟೆಗೆ ಮಳೆ ಪ್ರಾರಂಭವಾಗಿ ಮೂರುವರೆ ಗಂಟೆ ವರೆಗೂ ಬಹಳ ಗಾತ್ರವಾದ ಆನೆಕಲ್‌ಮಳೆ ಬಿದ್ದು ಬೇಲೂರು ತಾಲ್ಲೂಕು ಅರೇಹಳ್ಳಿ ಕಸಬಾ ಗ್ರಾಮಕ್ಕೆ ಸೇರಿದ ಹಿರೇಗರ್ಜೆ, ಕಡೇಗರ್ಜೆ, ಸಂಗಾಪುರ, ಹೆಬ್ಬಾಳ, ಬಾಳಗಾಲು, ಪುಷ್ಪಗಿರಿಯಲು, ಸುರಗಿಹಳ್ಳಿ, ಕೆತ್ತಾಪಾರ ಈ ಎಸ್ಟೇಟುಗಳಲ್ಲಿಯೂ ಇನ್ನೂ ಸಣ್ಣ ಸಣ್ಣ ಕಾಫಿ ತೋಟಗಳಲ್ಲಿಯೂ ಇರುವ ಕಾಫಿ ಫಸಲುಗಳನ್ನು ಹಾಳುಮಾಡಿರುವದಲ್ಲದೆ ಮುಂದಿನ ವರ್ಷದ ಹೊಸ ರೆಕ್ಕೆಗಳನ್ನೂ ಉದುರಿಸಿ ಇನ್ನೂ ಅನೇಕ ವಿಧವಾದ ಫಸಲುಗಳನ್ನು ಹಾಳುಮಾಡಿರುತ್ತದೆ.

ಮೈಸೂರು ಗೆಜೆಟ್ ಸಂಗ್ರಹ.

ಕೊರಟಗೆರೆಯ ತಾಲ್ಲೂಕಿನ ಅಮಲ್ದಾರ್ ಮ|| ಎ. ಶ್ರೀನಿವಾಸಯ್ಯಂಗಾರ್ಯರನ್ನು 3 ನೇ ತರಗತಿಯಿಂದ 2 ನೇ ತರಗತಿಯ ಮ್ಯಾಜಿಸ್ಟ್ರೇಟರನ್ನಾಗಿ ಮಾಡಲಾಗಿದೆ.

ಕೊಪ್ಪದ ತಾಲ್ಲೋಕು ಬದಲಿ ಅಮಲ್ದಾರ್ ಮ|| ಟಿ. ಕೆ. ರಾಮಚಂದ್ರರಾವ್ ಬಿ. ಎ. ಯವರನ್ನು 3 ನೇ ತರಗತಿಯಿಂದ 2 ನೇ ತರಗತಿಯ ಮ್ಯಾಜಿಸ್ಟ್ರೇಟರನ್ನಾಗಿ ಮಾಡಲಾಗಿದೆ. ಮತ್ತು ಇವರಿಗೆ ಬ್ರೀಚ್ ಆಫ್ ಕಾಂಟ್ರಾಕ್ಟಿಗೆ ಒಳಪಟ್ಟು ಬರುವ ಮೊಕದ್ದಮೆಗಳನ್ನು ವಿಚಾರಿಸಲು ಅಧಿಕಾರವು ಕೊಡಲ್ಪಟ್ಟಿದೆ.

ಹಾಸನ ಜಿಲ್ಲೆ ಸ್ಪೆಷಲ್ ಡೆ|| ಅಮಲ್ದಾರ್ ಮ|| ಟಿ. ನರಸಿಂಗರಾಯರನ್ನು 3 ನೇ ತರಗತಿಯ ಮ್ಯಾಜಿಸ್ಟ್ರೇಟರನ್ನಾಗಿ ಮಾಡಲಾಗಿದೆ.

ಫ್ರೆಂಚ್‌ರಾಕ್ಸ್ ಸರ್ಕಲಿನ ಪೋಲೀಸ್ ಸುಪರಿಂಟೆಂಡೆಂಟ್ ಮ|| ವಾಜ್ ಪೈಜ್ ಬಿಟಿಯವರಿಗೆ ಯವರಿಗೆ ಏಪ್ರಿಲ್ 15 ರ ಆರಭ್ಯ 28 ದಿನಗಳ ಪ್ರಿವಿಲೇಜ್ ರಜಾ ಕೊಡಲಾಗಿದೆ. ಇವರ ಗೈರ್ಹಾಜರಿಯಲ್ಲಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅಧಿಕಾರವರೇ ಫ್ರೆಂಚ್‌ರಾಕ್ಸ್ ಸರ್ಕಲ್ ಪೋಲೀಸ್ ಆಫೀಸಿನ ಚಾರ್ಜನಲ್ಲಿರತಕ್ಕದ್ದು.

ಆಫೀಸಿಯೇಟಿಂಗ್ ಡೆ|| ಕ|| ಮ|| ನಗರದ ಸುಬ್ಬರಾಯರು ಏಪ್ರಿಲ್ 6 ನೇ ತಾರೀಖಿನಲ್ಲಿ ಡೆ|| ಕ|| ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ಯರವರಿಗೆ ತುಮಕೂರು ಡಿಸ್ಟ್ರಿಕ್ಟಿನ ಮತ್ತು ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜನ್ನು ಕೊಟ್ಟರು.

ಹಿರಿಯೂರು ತಾಲ್ಲೂಕಿನ ಸಬ್‌ರಿಜಿಸ್ಟ್ರಾರ್ ಮ|| ಕೆ. ಸುಬ್ಬರಾವ್, ಬಿ. ಎ. ಯವರು ಚಳ್ಳಕೆರೆ ತಾಲ್ಲೂಕಿನ ಅಮಲ್ದಾರ್ ಮತ್ತು 3 ನೇ ತರಗತಿಯ ಮ್ಯಾಜಿಸ್ಟ್ರೇಟರಾಗಿ ಬದಲಿ ಕೆಲಸ ನೋಡುವಂತೆ ನಿಯಮಿಸಲಾಗಿದೆ.

ಹಾಸನದ ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜಿನಲ್ಲಿರುವ ಪ್ರೊ|| ಅ|| ಕ|| ಮ|| ಜಿ. ರುದ್ರಪ್ಪನವರಿಗೆ ಫೆಬ್ರವರಿ 14 ರ ಆರಭ್ಯವಾಗಿ 10 ದಿನಗಳ ಪ್ರಿವಿಲೇಜ್ ರಜ ಕೊಡಲ್ಪಟ್ಟಿದೆ.

ಮೈಸೂರು ರೆವೆನ್ಯು ಕಮೀಷನರಿಗೆ ಮೊದಲನೇ ಅಸಿಸ್ಟೆಂಟರಾದ ಮ|| ಟಿ. ಕೆ. ಜಯರಾಮಯ್ಯರ್ ಬಿ. ಎ., ಬಿ. ಎಲ್. ಯವರಿಗೆ ಅವರು ಉಪಯೋಗಿಸಿಕೊಳ್ಳುವ ಆರಂಭದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲಾಗಿದೆ.

ಡೆ|| ಕ|| ಗಳಾದ ಮ|| ಪಿ. ಎಫ್. ಬೌಲಿಂಗ್ ಮತ್ತು ಮ|| ಸಿ. ಎಸ್. ಬಾಲಸುಂದರಂ ಅಯ್ಯರ್ ಅವರುಗಳಿಗೆ 3 ನೇ ತರಗತಿಯಿಂದ 2 ನೇ ತರಗತಿ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಕೊಡಲಾಗಿದೆ.

ರೆವಿನ್ಯೂ ಕಮೀಷನರವರ ಮ|| ಎಚ್. ವಿ. ನಂಜುಂಡಯ್ಯ ಎಂ. ಎ., ಎಂ. ಎಲ್., ಸಿ. ಐ. ಇ. ಯವರಿಗೆ ಬದಲಾಗಿ ದಿವಾನ್ ಬಹದ್ದೂರ್, ರಾಜಮಂತ್ರಪ್ರವೀಣ ಮ|| ಜೆ. ಎಸ್. ಚಕ್ರವರ್ತಿ ಎಂ. ಎ. ಯವರನ್ನು ಎಕನಾಮಿಕ್ ಕಾನ್ಫರೆನ್ಸಿನ ಎಜ್ಯುಕೇಷನ್ ಕಮಿಟಿಯ ಚೇರ್ಮನ್‌ರಾಗಿ ನಿಯಾಮಕ ಮಾಡಲಾಗಿದೆ.

ಪಶ್ಚಿಮ ಸರ್ಕಲ್ ಹಿಂದೂಸ್ತಾನಿ ಸ್ಕೂಲುಗಳ ಅ|| ಇ|| ಮ|| ಮಹಮ್ಮದ್ ದಾವೂದ್ ಬಿ. ಎ. ಯವರನ್ನು ಹಿಂದೂಸ್ತಾನಿ ಸ್ಕೂಲುಗಳ ಡಿ|| ಇ|| ರಾಗಿ ಮೈಸೂರು ಸರ್ಕಲಿಗೆ ವರ್ಗಮಾಡಿದೆ.

ಬೆಂಗಳೂರು ಡಿವಿಜನ್‌ಗೆ ಸೇರಿದ ಅ|| ಇಂಜಿನೀಯರ್ ಮ|| ಎಂ. ಎ. ಶ್ರೀನಿವಾಸಾಚಾರ್ ಎಲ್. ಸಿ. ಇ. ಯವರಿಗೆ ಏಪ್ರಿಲ್ 20 ಆರಭ್ಯವಾಗಿ ಒಂದುವರೆ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಈ ಕೆಳಗೆ ನಮೂದಾಗಿರತಕ್ಕ ಸ್ಥಳಗಳಲ್ಲಿರುವ ಗಂಡು ಹುಡುಗರ ತಂದೆ ತಾಯಿಗಳು ಅಥವಾ ಪೋಷಕರು ತಮ್ಮ ಹುಡುಗರನ್ನು 7 ರಿಂದ 11 ವರುಷ ವಯಸ್ಸು ಪೂರೈಸಿಯಾಗುವ ವರೆಗೆ ಸರ್ಕಾರದಿಂದ ಅಂಗೀಕರಿಸಲ್ಪಟ್ಟಿರುವ ಯಾವ ಪಾಠಶಾಲೆಯಲ್ಲಾದರೂ ಸ್ಕೂಲಿಗೆ ಕಳುಹಿಸಲೇಬೇಕೆಂದೂ ಹಾಗೆ ಮಾಡದೆ ತಪ್ಪುವ ತಂದೆ ತಾಯಿಗಳಾದರೂ ಪೋಷಕರಾದರೂ ಪ್ರಾಥಮಿಕ ವಿದ್ಯಾಭ್ಯಾಸದ ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಯಾಗಬೇಕಾಗುವದೆಂದೂ ಈ ಮೂಲಕ ಎಚ್ಚರಿಸಿದೆ. ಬೆಂಗಳೂರು ಡಿ|| ನಲ್ಲಿ—ಬೆಂಗಳೂರು ಸಿಟಿ, ದೊಡ್ಡಬಳ್ಳಾಪುರ, ಚನ್ನಪಟ್ಟಣ; ಮೈಸೂರು ಡಿ|| ನಲ್ಲಿ—ಮೈಸೂರು ಸಿಟಿ, ನಂಜನಗೂಡು, ಶ್ರೀರಂಗಪಟ್ಟಣ, ಗುಂಡ್ಲುಪೇಟೆ, ಮಂಡ್ಯ; ಹಾಸನ ಡಿ|| ನಲ್ಲಿ—ಹಾಸನ, ಹೊಳೆನರಸೀಪುರ, ಅರಸೀಕೆರೆ, ಸಕಲೇಶಪುರ; ಶಿವಮೊಗ್ಗ ಡಿ|| ನಲ್ಲಿ—ಶಿವಮೊಗ್ಗ, ತೀರ್ಥಹಳ್ಳಿ, ಸಾಗರ; ಕಡೂರು ಡಿ|| ನಲ್ಲಿ—ಚಿಕ್ಕಮಗಳೂರು, ತರೀಕೆರೆ, ಬೀರೂರು; ತುಮಕೂರು ಡಿ|| ನಲ್ಲಿ—ತುಮಕೂರು, ಮಧುಗಿರಿ, ತಿಪಟೂರು; ಚಿತ್ರದುರ್ಗ ಡಿ|| ನಲ್ಲಿ—ಚಿತ್ರದುರ್ಗ, ದಾವಣಗೆರೆ, ಹರಿಹರ; ಕೋಲಾರ ಡಿ|| ನಲ್ಲಿ—ಕೋಲಾರ, ಚಿಕ್ಕಬಳ್ಳಾಪುರ, ಮಾಲೂರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಏಪ್ರಿಲ್ 12 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ಜಮೆ:—(1) ಷೇರು ಬಂಡವಾಳ		ರೂ. 10,00,000
,, (2) ರಿಜರ್ವ್ ಫಂಡು		,, 75,000
,, (3) ಡಿಪಾಜಿಟ್ಟುಗಳು		,, 40,24,063
,, (4) ಇತರೆ		,, 86,339
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 51,85,402
ಖರ್ಚು:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 4,66,175
,, (2) ಖಾತೆ ಮತ್ತು ಇತರ ಸಾಲಗಳು		,, 36,75,044
,, (3) ಡಿಸ್ಕೌಂಟುಮಾಡಿದವಾಯಿದೆಹುಂಡಿಗಳು		,, 4,91,411
,, (4) ಇನ್‌ವೆಸ್ಟ್‌ಮೆಂಟುಗಳು		,, 5,95,160
,, (5) ಏಜನ್ಸಿಗಳಲ್ಲಿರುವ ಬಂಡವಾಳ		,, 21,380
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು		,, 18,472
,, (7) ಇತರೆ		,, 17,760
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 51,85,402

ವಿ. ರಾಮಸ್ವಾಮಯ್ಯ, ಆ: ಮ್ಯಾನೇಜರ್.

ವೃತ್ತಾಂತ ಪತ್ರಿಕೆಗಳನ್ನು ಓದುವದರ ಪ್ರಯೋಜನಗಳು.

ಹಿಂದಿನ ಕಾಲದ ಚರಿತ್ರೆಗಳು ಆಯಾಯ ದೇಶಗಳಲ್ಲಿ ನಡೆದ ಪೂರ್ವಕಾಲದ ವೃತ್ತಾಂತವನ್ನು ತಿಳಿಸುತ್ತವೆ ಎಂಬುವದು ಎಲ್ಲರಿಗೂ ತಿಳಿದಿರುವದು ಸರಿಯಷ್ಟೆ. ಆದರೆ ವೃತ್ತಾಂತ ಪತ್ರಿಕೆಗಳಿಲ್ಲದಿದ್ದರೆ ನಮ್ಮ ಕಾಲದಲ್ಲಿ ಏನೇನು ನಡೆಯುವದೋ ನಮಗೆ ತಿಳಿಯದೆಯೇ ಹೋಗುತ್ತಿತ್ತು. ಯಾಕೆಂದರೆ ವೃತ್ತಾಂತ ಪತ್ರಿಕೆಗಳು ತತ್ಕಾಲದಲ್ಲಿ ನಡೆಯುವ ಸಂಗತಿಗಳನ್ನು ತಿಳಿಸುವ ಚರಿತ್ರೆಗಳಾಗಿವೆ.

ವೃತ್ತಾಂತ ಪತ್ರಿಕೆಗಳನ್ನೋದುವದು ಅನುಪಯುಕ್ತವೆಂತಲೂ ಅವುಗಳನ್ನು ಓದುವದರಲ್ಲಿ ಕಳೆದ ಕಾಲವು ವ್ಯರ್ಥವೆಂತಲೂ ಕೆಲವರು ಹೇಳುವರು. ಹೀಗೆ ಹೇಳುವದು ಸರಿಯಲ್ಲ. ಪತ್ರಿಕೆಗಳಲ್ಲಿರುವ ಕೆಲವಂಶಗಳು ಕೆಲವರಿಗೆ ಮಾತ್ರ ಅನುಪಯುಕ್ತವಾಗಿರಬಹುದಾದರೂ ಈ ಕೆಲವಂಶಗಳಿಗಾಗಿ ಪತ್ರಿಕೆಗಳನ್ನೋದುವದನ್ನೇ ಸಂಪೂರ್ಣವಾಗಿ ಬಿಡುವದು ಅನುಚಿತವು. ವೃತ್ತಾಂತ ಪತ್ರಿಕೆಗಳಿಂದ ಹೊಸ ಸಮಾಚಾರಗಳೇ ಅಲ್ಲದೆ, ಇನ್ನೂ ಹಲವು ಬಗೆಯ ವಿಷಯಗಳು ತಿಳಿಯ ಬರುವವು. ಮೊದಲು ಮೊದಲು ಪ್ರಕಟಿಸುತ್ತಿದ್ದ ವೃತ್ತಾಂತ ಪತ್ರಿಕೆಗಳ ಮುಖ್ಯ ಉದ್ದೇಶವೇನೆಂದರೆ—ರಾಜ್ಯಭಾರದ ಆಡಳಿತಗಳು, ಅವುಗಳಲ್ಲಿ ನಡೆವ ವ್ಯತ್ಯಾಸಗಳು ಇವುಗಳನ್ನು ಪ್ರಜೆಗಳಿಗೆ ಬೋಧಿಸುವದೂ, ಪ್ರಜೆಗಳ ಹೇಳಿಕೆಗಳು, ಅವರ ಕ್ಷೇಮಾರ್ಥವಾಗಿ ಮಾಡಬೇಕಾದ ಏರ್ಪಾಡುಗಳು ಇವುಗಳನ್ನು ಸರ್ಕಾರದವರಿಗೆ ತಿಳಿಯ ಪಡಿಸುವದೂ ಇವುಗಳೇ.

ಈಗಿನ ಕಾಲದ ವೃತ್ತಾಂತ ಪತ್ರಿಕೆಗಳು ಈ ಕೆಲಸವನ್ನೂ ಮಾಡುವದಲ್ಲದೆ ರಾಜ್ಯತಂತ್ರ, ನೀತಿ, ವಿದ್ಯೆ, ಜಾತಿ, ಮತ ಮುಂತಾದ ಅನೇಕ ವಿಷಯಗಳಲ್ಲಿ ತಿಳಿಯಬೇಕಾದದನ್ನೂ ಬೋಧಿಸುತ್ತವೆ. ಈಗ ಶ್ರೇಷ್ಠವಾದ ವೃತ್ತಾಂತ ಪತ್ರಿಕೆಗಳನ್ನು ನಡಿಸುವವರು ಅನೇಕ ಶಾಸ್ತ್ರಗಳನ್ನು ತಿಳಿದ ಪಂಡಿತರಾಗಿರುವರು. ಅಲ್ಲದೆ ಪ್ರಪಂಚದ ನಾನಾ ಭಾಗದ ವಿದ್ಯಾ ಕೌಶಲ್ಯವಂತರಾದ ಜನಗಳ ಲೇಖನಗಳೂ ಕೂಡ ಇವುಗಳಲ್ಲಿ ಅಡಕವಾಗಿರುತ್ತವೆ. ಆದದರಿಂದ ಇವುಗಳನ್ನು ಓದುವದರಿಂದ ಪ್ರಯೋಜನವು ಹೇಳಲಸಾಧ್ಯವಾಗಿರುವದು. ಇದಲ್ಲದೆ ಭೌತಿಕ ಶಾಸ್ತ್ರ, ಜ್ಯೋತಿಷಶಾಸ್ತ್ರ, ಮುಂತಾದವುಗಳಲ್ಲಿ ವಿದ್ವಾಂಸರು ಹೊಸದಾಗಿ ಕಂಡು ಹಿಡಿದ ವಿಷಯಗಳನ್ನು ಗ್ರಹಿಸಬೇಕಾದವರೂ ಹೊಸದಾಗಿ ಪ್ರಚುರಪಡಿಸಲ್ಪಟ್ಟ ಗ್ರಂಥಗಳ ವಿಚಾರವಾಗಿ ತಿಳಿಯಬೇಕಾದವರೂ ವೃತ್ತಾಂತ ಪತ್ರಿಕೆಗಳನ್ನು ಬಿಟ್ಟರೆ ಮತ್ತಾವದೂ ಇಲ್ಲ.

ಒಂದು ಪತ್ರಿಕೆಯಲ್ಲಿ ಯಾವದೋ ಒಂದು ವಿಷಯವನ್ನು ಒಂದು ಬಗೆಯಲ್ಲಿ ಚರ್ಚಿಸಿ ಬರೆದಿರಬಹುದು. ಮತ್ತೊಂದರಲ್ಲಿ ಅದೇ ವಿಷಯವನ್ನು ಬೇರೆ ರೀತಿಯಲ್ಲಿ ಹೇಳಿರಬಹುದು. ಈ ಎರಡು ಪತ್ರಿಕೆಗಳನ್ನೂ ಓದಿ ಚರ್ಚೆಯಾದ ವಿಷಯವನ್ನು ಪರ್ಯಾಲೋಚಿಸಿ ಗ್ರಹಿಸುವದರಿಂದ ನಮ್ಮ ಬುದ್ಧಿ ಕೌಶಲ್ಯವು ಎಷ್ಟರ ಮಟ್ಟಿಗೆ ಹೆಚ್ಚುವದೆಂಬುವದನ್ನು ವಾಚಕ ಮಹಾಶಯರೇ ಊಹಿಸಬಹುದು. ಒಂದು ದೇಶದ ಪತ್ರಿಕೆಯನ್ನು ಮತ್ತೊಂದು ದೇಶದವರು ಓದುವದರಿಂದ ಎರಡು ದೇಶಗಳ ಆಡಳಿತಗಳನ್ನೂ ತಿಳಿಯಲು ಪರಸ್ಪರ ಅಭಿಲಾಷೆಹುಟ್ಟಿ ಸ್ನೇಹಕ್ಕೆ ಕಾರಣವಾಗುವುದು. ಈ ಕಾರಣಗಳಿಂದ ವೃತ್ತಾಂತ ಪತ್ರಿಕೆಗಳನ್ನು ಸರ್ವರೂ ಓದಬೇಕಾಗಿದೆ.

ವೃತ್ತಾಂತ ಪತ್ರಿಕೆಗಳು ಜನರಿಗೆ ಮಾಡುವ ಉಪಕಾರಗಳೇನೆಂಬುವದನ್ನು ತಿಳಿಯಬೇಕಾದರೆ ಯೂರೋಪ್, ಅಮೇರಿಕ ದೇಶಗಳ ಚರಿತ್ರೆಗಳನ್ನು ಓದಬೇಕು. ಸುಮಾರು ಇನ್ನೂರು ವರ್ಷಗಳ ಕೆಳಗೆ ಇಂಗ್ಲೆಂಡಿನಲ್ಲಿ ಜನರ ನಡತೆ ಬಹಳ ಕೆಟ್ಟಿತ್ತು. ಇದನ್ನು ತಿದ್ದಬೇಕೆಂದು ಅಡಿಸನ್ ಎಂಬ ಒಬ್ಬ ಮಹಾಪಂಡಿತನು "ಸ್ಪೆಕ್ಟೇಟರ್" ಎಂಬ ಪತ್ರಿಕೆಯನ್ನು ಹೊರಡಿಸಿ ಪ್ರತಿ ಪ್ರಾತಃಕಾಲ ಒಂದೊಂದು ಪ್ರಬಂಧವನ್ನು ಜನರಿಗೆ ಜ್ಞಾನೋಪಯೋಗವಾಗುವಂತೆ ಪ್ರಕಟಿಸುತ್ತಾ ಬಂದನು. ಇದರಿಂದ ಕೆಲವು ವರ್ಷಗಳಲ್ಲಿ ಜನರು ದುರ್ವ್ಯಾಪಾರಗಳನ್ನು ಬಿಟ್ಟು ಸನ್ಮಾರ್ಗಪ್ರವರ್ತನೆಯಲ್ಲಿಯೇ ನಡೆಯುತ್ತಾ ಬಂದರು. ಹಾಗೆಯೇ ನಮ್ಮ ದೇಶೀಯರೂ ಕೂಡ ವೃತ್ತಾಂತ ಪತ್ರಿಕೆಗಳನ್ನು ಓದಿ ಅವುಗಳ ಅಭಿಪ್ರಾಯವನ್ನು ಗ್ರಹಿಸುವದರಿಂದ ಸನ್ಮಾರ್ಗಪ್ರವರ್ತನೆಯಲ್ಲಿ ನಿಪುಣರಾಗುವದಕ್ಕೆ ಸಂಶಯವೇ ಇಲ್ಲವು.

ವಾಚಕಮಹಾಶಯರೇ, ನಮ್ಮ ದೇಶವನ್ನು ಅನ್ಯದೇಶೀಯರು ಆಳುತ್ತಿರುವದರಿಂದ ಪ್ರಭುಗಳ ವಿಷಯವನ್ನು ಪ್ರಜೆಗಳಿಗೂ, ಪ್ರಜೆಗಳ ವಿಷಯವನ್ನು ಪ್ರಭುಗಳಿಗೂ ತಿಳಿಸುವದಕ್ಕೆ ವೃತ್ತಾಂತ ಪತ್ರಿಕೆಗಳೇ ಮಧ್ಯಸ್ಥಗಾರರಾಗಿರುವದು ಎಂಥಾ ಮಹದುಪಕಾರವು. ನೋಡಿರಿ ಈಗ ಎಲ್ಲಾ ತಾಲ್ಲೂಕುಗಳಲ್ಲಿಯೂ ಗ್ರಾಮಾಭಿವೃದ್ಧಿ ಸಂಘಗಳಾಗಿರುವದರಿಂದ ಪ್ರತಿಯೊಂದು ಸಂಘದವರೂ ವೃತ್ತಾಂತ ಪತ್ರಿಕೆಗಳನ್ನು ತರಿಸಿಕೊಂಡು ಓದಿ ವಿಷಯಗಳನ್ನು ಅರಿಯುವದರಿಂದ ಬಹಳ ಪ್ರಯೋಜನವುಂಟು.

ಪಿ. ನಾರಾಯಣರಾವ್, ನಂದಿ.

ಆನೆಕಲ್ ತಾಲ್ಲೂಕು ಕಾನ್ಫರೆನ್ಸು

ಈ ಮಾಹೆ 10 ನೆಯ ತಾರೀಖು ಸೋಮವಾರ ಆನೆಕಲ್ ಶ್ರೀ ತಿಮ್ಮರಾಯಸ್ವಾಮಿ ದೇವಾಲಯದ ಬಳಿಯಲ್ಲಿ ಹಾಕಿದ್ದ ಚಪ್ಪರದಲ್ಲಿ ಪ್ರಾತಃಕಾಲ ತಾಲ್ಲೋಕಿನ ಪರಸ್ಪರ ಸಹಾಯಕ ಸಂಘಗಳ ಎರಡನೆಯ ಕಾನ್ಫರೆನ್ಸೂ ಸಾಯಂಕಾಲ ಗ್ರಾಮಾಭಿವೃದ್ಧಿಯ ಮೊದಲನೆಯ ಕಾನ್ಫರೆನ್ಸೂ ಸಹಾ ನಡೆಯಿಸಲ್ಪಟ್ಟವು. ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಕೆ. ಚಾಂಡಿ ಬಿ. ಎ. ಯವರು ಅಗ್ರಾಸನವನ್ನು ವಹಿಸಿದ್ದರು. ವ್ಯವಸಾಯದ ಇಲಾಖೆ ಡೆಪ್ಯುಟಿ ಡೈರೆಕ್ಟರವರೂ ಡಿಸ್ಟ್ರಿಕ್ಟಿನ ಮುಖ್ಯಾಧಿಕಾರಿಗಳೂ ಪರಸ್ಪರ ಸಹಾಯ ಸಂಘಗಳ ಮತ್ತು ಗ್ರಾಮಾಭಿವೃದ್ಧಿ ಕಮಿಟಿಗಳ ಪ್ರತಿನಿಧಿಗಳೂ ಮತ್ತು ವಿಜಿಟರುಗಳೂ ಇನ್ನೂ ಇತರ ದೊಡ್ಡ ಮನುಷ್ಯರೂ ಸೇರಿ ಸುಮಾರು ಸಾವಿರ ಮಂದಿ ಸಭೆಯಲ್ಲಿ ನೆರೆದಿದ್ದರು.

ಪ್ರಾತಃಕಾಲ ಪರಸ್ಪರ ಸಹಾಯಕ ಸಂಘಗಳ ಇನ್ಸ್‌ಪೆಕ್ಟರವರು ಓದಿದ ರಿಪೋರ್ಟಿನಿಂದ ಈ ತಾಲ್ಲೋಕಿನಲ್ಲಿ ಪರಸ್ಪರ ಸಹಾಯಕ ಸಂಘಗಳು ದಿನೇ ದಿನೇ ಹೆಚ್ಚುತ್ತಿವೆಯೆಂತಲೂ ಸಂಘಗಳ ಕಾರ್ಯಗಳು ದೇಶಾಭಿವೃದ್ಧಿಗೆ ಕಾರಣಭೂತವಾಗಿವೆಯೆಂತಲೂ ತಿಳಿಯಬಂದಿತು. ಹಿಂದಿನ ವರ್ಷ ಈ ತಾಲ್ಲೋಕಿನಲ್ಲಿ 13 ಸಂಘಗಳಿದ್ದವು. ಈ ವರ್ಷ ಹೊಸದಾಗಿ 7 ಸಂಘಗಳು ಏರ್ಪಟ್ಟವು. ಇವೆಲ್ಲವೂ ಬಹಳ ಅಭಿವೃದ್ಧಿ ಸ್ಥಿತಿಯಲ್ಲಿವೆ. ಈ ಸಂಘಗಳಲ್ಲಿ ಡಿಪಾಜಿಟ್ಟುಗಳು ಹೆಚ್ಚುತ್ತ ಬಂದಿವೆ. ಆನೆಕಲ್ ಶ್ರೀ ಲಕ್ಷ್ಮೀನಿಲಯ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್ ನಲ್ಲಿ ಸ್ಕೂಲುಗಳ ವಿದ್ಯಾರ್ಥಿಗಳೇ 400 ರೂಪಾಯಿನ ವರೆಗೂ ಡಿಪಾಜಿಟ್ಟು ಇಟ್ಟಿದ್ದಾರೆಂದು ಕೇಳಿ ಸಭೆಯವರೆಲ್ಲರೂ ಬಹಳ ಆಶ್ಚರ್ಯಪಟ್ಟರು. ಹೀಗೆ ಮಕ್ಕಳು ಹಣವನ್ನು ಸೇರಿಸುವದಕ್ಕೆ ಅವಕಾಶಕೊಟ್ಟಿರುವದು ಅವರಿಗೆ ಮಿತವ್ಯಯವನ್ನು ಕಲಿಸಿ ಕೊಡುವದಕ್ಕೆ ಮಾರ್ಗವಾಯಿತು. ಇದರಿಂದ ಮುಂದೆ ದೇಶಾಭಿವೃದ್ಧಿಯೂ ಜನಾಂಗದ ಏಳಿಗೆಯೂ ಉಂಟಾಗಬಹುದಾಗಿದೆ. ಈ ತಾಲ್ಲೋಕಿನ ಅಭಿವೃದ್ಧಿಗೋಸ್ಕರ ಅಲ್ಲಲ್ಲಿ ಧಾನ್ಯದ ಬ್ಯಾಂಕುಗಳನ್ನು ಏರ್ಪಡಿಸಬೇಕೆಂದೂ ಈಗಿರುವ ಪರಸ್ಪರ ಸಹಾಯಕ ಸಂಘಗಳಲ್ಲಿ ವಾಚನಶಾಲೆಯೊಂದನ್ನು ನಡೆಯಿಸಬೇಕೆಂದೂ ನಿರ್ಣಯವಾಯಿತು. ಬಳಿಕ ಅಗ್ರಾಸನಾಧಿಪತಿಗಳು ಪರಸ್ಪರ ಸಹಾಯಕ ಸಂಘಗಳ ತೃಪ್ತಿಕರವಾದ ಏರ್ಪಾಡುಗಳನ್ನು ನೋಡಿ ಸಂತೋಷಪಟ್ಟು, ಈ ಸಂಘಗಳು ಬರಿಯ ಲೇವಾದೇವಿಯ ಸಂಘಗಳಾಗಿರುತ್ತವೆಯೆಂದೂ, ಇನ್ನು ಮುಂದೆ ಇವುಗಳನ್ನು ವ್ಯವಸಾಯ ಮುಂತಾದ ಇತರ ಬಾಬುಗಳಿಗೂ ಅನುಕೂಲವಾಗುವಂತೆ ತಕ್ಕ ಏರ್ಪಾಡುಗಳನ್ನು ಮಾಡುವುದು ಉತ್ತಮವೆಂದೂ ಅಪ್ಪಣೆಕೊಡಿಸಿದರು.

ಆ ದಿನ ಸಾಯಂಕಾಲ ತಾಲ್ಲೋಕಿನ ಸಂಪದಭ್ಯುದಯ ಮತ್ತು ಗ್ರಾಮಾಭಿವೃದ್ಧಿಗಳ ಕಾನ್ಫರೆನ್ಸು ನಡೆಯಿಸಲ್ಪಟ್ಟಿತು. ತಾಲ್ಲೋಕು ಅಮಲ್ದಾರ್ ಮೆ|| ಎನ್. ಗೋಪಾಲಕೃಷ್ಣಯ್ಯಂಗಾರ್ಯರವರಿಂದ ಈ ವಿಚಾರವಾದ ಆ ವರುಷದ ರಿಪೋರ್ಟು ಓದಲ್ಪಟ್ಟಿತು. ಆ ರಿಪೋರ್ಟಿನಲ್ಲಿ 61,250 ರೂಪಾಯಿಗಳ ಅಂದಾಜುಳ್ಳ ಕೆಲಸಗಳು ನಡೆದಿರುವ ಹಾಗೂ, ಇದರಲ್ಲಿ ಮುಕ್ಕಾಲು ಪಾಲು ಕೆಲಸ ಪ್ರಜೆಗಳಿಂದಲೇ ನಡೆಯಿಸಲ್ಪಟ್ಟ ಹಾಗೂ ತಿಳಿಯಬರುತ್ತಿದೆ. ನಡೆದಿರುವ ಮುಖ್ಯವಾದ ಕೆಲಸಗಳು ಅವಾವೆಂದರೆ—

ಈ ತಾಲ್ಲೋಕಿನಲ್ಲಿ ಮೊದಲಿದ್ದ 47 ಪಾಠಶಾಲೆಗಳ ಜೊತೆಗೆ ಎರಡು ವರ್ಷಗಳಿಂದೀಚೆಗೆ ಒಂದು ಗೌರ್ನಮೆಂಟ್ ಗರ್ಲ್ಸ್ ಸ್ಕೂಲೂ, 19 ಗ್ರಾಂಟು ಸ್ಕೂಲುಗಳೂ, 2 ಪಂಚಮರ ಗ್ರಾಂಟು ಸ್ಕೂಲುಗಳೂ, 16 ನೈಟ್ ಸ್ಕೂಲುಗಳೂ ಇವೆ. ಅತ್ತಿಬೆಲೆ ಮ|| ಸಿದ್ದಬಸಪ್ಪನವರು ಕೊಟ್ಟ ಕಟ್ಟಡದಲ್ಲಿ ನೆಯಿಗೆ, ಕಬ್ಬಿಣ, ಮತ್ತು ಮರಗೆಲಸದ ವಿದ್ಯಾಭ್ಯಾಸವೂ ನಡೆಸಲ್ಪಡುತ್ತಾ ಇದೆ. 26,000 ರೂಪಾಯಿ ಬೆಲೆಬಾಳಬಹುದಾದ 8 ಪಾಠಶಾಲೆಗಳು ದಾತೃಗಳಿಂದಲೇ ಕಟ್ಟಲ್ಪಟ್ಟಿವೆ. ಆ ಪೈಕಿ 2 ಕಟ್ಟಡಗಳು ಒಂದೊಂದು 10,000 ರೂಪಾಯಿ ಮೇಲ್ಪಟ್ಟ ಅಂದಾಜಿನವುಗಳಾಗಿವೆ. ಈ ಎರಡು ಪಾಠಶಾಲೆಗಳನ್ನು ಕಟ್ಟಿಸಿ ಕೊಟ್ಟ ಮ|| ಸಿದ್ದಬಸಪ್ಪನವರಿಗೂ, ಮತ್ತು ಮ|| ಮುನಿಸ್ವಾಮಪ್ಪನವರಿಗೂ ಸಹಾ ಶ್ರೀಮನ್ಮಹಾರಾಜರವರು ಬಿಲ್ಲೆ ತುರಾಯಿಗಳನ್ನು ದಯಪಾಲಿಸಿರುತ್ತಾರೆ.

ವ್ಯವಸಾಯ ವಿಚಾರದಲ್ಲಿ ಈ ತಾಲ್ಲೋಕು ಹೊಸ ತರಹಾ ನೇಗಿಲುಗಳನ್ನು ಉಪಯೋಗಿಸುವದರಲ್ಲಿ ಈ ಸೀಮೆಯೊಳಗೆ ಅಗ್ರಸ್ಥಾನವನ್ನು ಪಡೆದಿರುತ್ತದೆ. ಕೋಲಾರದ ವಿಸರ್ಕ್‌ನಲ್ಲಿ ತಯಾರಾದ 331 ನೇಗಿಲುಗಳು ಈ ತಾಲ್ಲೋಕಿನಲ್ಲಿ ಕೆಲಸಮಾಡುತ್ತಿರುವವು.

ಈ ತಾಲ್ಲೋಕಿನ ರೈತರು ಆರೋಗ್ಯಕ್ಕೆ ಹೋಗಿದ್ದ ಸಣ್ಣ ಕೆರೆಗಳ ರಿಪೇರಿಗೂ ಮತ್ತು ಏತದ [illegible] ಬಾವಿಗಳಿಗೂ ಸಹಾ ಮೊಬಲಗುಗಳನ್ನು ಹೆಚ್ಚಾದ ಕೆಂಟ್ರಿಬ್ಯೂಷನ್ ಮೂಲಕ ಒದಗಿಸಿ ಕೊಟ್ಟಿರುವದು ಸ್ತೋತ್ರಾರ್ಹವಾಗಿದೆ. 36 ಏತದ [illegible] ಬಾವಿಗಳು ಹೊಸದಾಗಿ ತೆಗೆಯಲ್ಪಟ್ಟಿವೆ. 8 ಬಾವಿಗಳು ರಿಪೇರಿ ಮಾಡಲ್ಪಟ್ಟಿವೆ. ಹಳ್ಳಿಯ ರಸ್ತೆಗಳು ಮೂರು ಮಾಡಲ್ಪಟ್ಟಿವೆ. ಎರಡು ರಸ್ತೆ ರಿಪೇರಿ ಯಾಯಿತು. 12 ಗ್ರಾಮಗಳಲ್ಲಿ 15 ಪಾಠಶಾಲೆಗಳಿಗೆ ಕಟ್ಟಡವು ಕಟ್ಟಲ್ಪಟ್ಟವು. 4 ಪಾಠಶಾಲಾ ಕಟ್ಟಡಗಳು ತಯಾರಾಗುತ್ತಿವೆ. 12 ಹೊಸ ದೇವಸ್ಥಾನಗಳು ಕಟ್ಟಲ್ಪಟ್ಟು 11 ದೇವಸ್ಥಾನಗಳ ರಿಪೇರಿಯು ಮಾಡಲ್ಪಟ್ಟಿವೆ. 10 ಮಂಟಪಗಳೂ 4 ಭಜನೆಯ ಮನೆಗಳೂ ತಯಾರಾಗಿವೆ. ಈ ಪೈಕಿ ಆನೆಕಲ್‌ನಲ್ಲಿ ಒಂದು ಭಜನೆಯ ಮನೆಯಲ್ಲಿ ನೈಟ್‌ಸ್ಕೂಲ ಸ್ಥಾಪಿಸಲ್ಪಟ್ಟಿದೆ.

ಸ್ಯಾನಿಟರಿ ಮತ್ತು ಚಿಲ್ಲರೆ ಬಾಬಿನ ಕೆಲಸಗಳು 114 ಗ್ರಾಮಗಳಲ್ಲಿ ನಡೆದಿವೆ. 4 ಗ್ರಾಮಗಳಲ್ಲಿ ಕೋರ್ಟುಗಳು ಸ್ಥಾಪಿಸಲ್ಪಟ್ಟಿವೆ. ಇದಲ್ಲದೆ 24 ಗ್ರಾಮಾಭಿವೃದ್ಧಿ ಕಮಿಟಿಗಳಿವೆ. ಇವುಗಳಲ್ಲಿ 6 ಗ್ರಾಮಗಳು ಮಾದರಿ ಗ್ರಾಮಗಳಾಗಿವೆ. 51 ಕಮಿಟಿಗಳು ವರ್ತಮಾನ ಪತ್ರಿಕೆಯನ್ನು ತರಿಸುತ್ತವೆ. 6 ಮಂದಿ ರೈತರು ಹೆಬ್ಬಾಳದ ಫಾರಂಗೆ ಕಳುಹಿಸಲ್ಪಟ್ಟಿರುತ್ತಾರೆ. ಧರ್ಮ ಕೆಲಸವನ್ನು ಮಾಡಿದ 8 ಮಂದಿ ಮಹನೀಯರಿಗೆ ಯೋಗ್ಯತಾಪತ್ರಿಕೆಗಳು ಕೊಡಲ್ಪಟ್ಟವು ಎಂದು ರಿಪೋರ್ಟನ್ನು ಓದಿದ ತರುವಾಯ ಪ್ರೆಸಿಡೆಂಟರವರು ತಾಲ್ಲೋಕು ಪ್ರಜೆಗಳ ಅಹವಾಲನ್ನು ವಿಚಾರಿಸಿದರು.

ಆ ಮೇಲೆ ಮ|| ಯಜ್ಞನಾರಾಯಣರವರು ಎದ್ದು ನಿಂತು ಈ ತಾಲ್ಲೋಕು ಹೊಸ ತರಹಾ ನೇಗಿಲನ್ನು ಉಪಯೋಗಿಸುವುದರಲ್ಲಿ ಅಗ್ರಸ್ಥಾನವನ್ನು ಹೊಂದಿದೆಯೆಂತಲೂ ವ್ಯವಸಾಯ ಸಂಬಂಧವಾದ ಕೆಲಸಗಳಿಗೆ ಪರಸ್ಪರ ಸಹಾಯಕ ನಿಬಂಧನೆಗಳನ್ನು ಅನುಸರಿಸುವುದು ಉತ್ತಮವೆಂತಲೂ ಸೂಚಿಸಿದರು.

ಮ|| ಗಳಾದ ಅನಂತಸುಬ್ರಹ್ಮಣ್ಯಯ್ಯರವರೂ ಜೆ. ಎನ್. ವೆಂಕಟಪ್ಪಯ್ಯನವರೂ ಸಂಪದಭ್ಯುದಯದ ಉನ್ನತ ಸ್ಥಿತಿ ವಿದ್ಯಾಭ್ಯಾಸವು ಬಹು ಪ್ರಾಮುಖ್ಯವಾಗಿದೆಯೆಂದು ತಿಳಿಸಿದರು.

ಮ|| ಬಿ. ಕೃಷ್ಣಸ್ವಾಮಿ ಅಯ್ಯಂಗಾರ್ಯರವರು ಕೆರೆಯ ನೀರನ್ನು ಪೋಲು ಮಾಡದಂತೆ ಉಪಯೋಗಿಸಿಕೊಳ್ಳುವ ರೀತಿಯನ್ನು ರೈತರಿಗೆ ವಿಶದವಾಗಿ ತಿಳಿಯಪಡಿಸಿದರು. ಮ|| ಅಮಲ್‌ದಾರರು ಪ್ರತಿವರ್ಷದ ಸುಗ್ಗಿಯಲ್ಲಿಯೂ [illegible] ಸೇರುಗಳ ರಾಗಿಯನ್ನು ರೈತರಿಂದ ಪಡೆದು ಅವನ್ನು ಮಾರಿ ಆ ಹಣವನ್ನು ಸೇವಿಂಗ್ಸ್ ಬ್ಯಾಂಕಿನಲ್ಲಾಗಲಿ ಕೋಆಪರೇಟಿವ್ ಸೊಸೈಟಿಯಲ್ಲಾಗಲಿ ಡಿಪಾಜಿಟ್ಟಾಗಿ ಇಟ್ಟು ಗ್ರಾಂಟು ಸ್ಕೂಲು ಮಾಸ್ಟರುಗಳ ಸಂಬಳವನ್ನು ಗ್ರಾಮಸ್ಥರು ನಡೆಯಿಸಿ ಕೊಡಬೇಕೆಂತಲೂ, ಇದರ ಮ್ಯಾನೇಜ್‌ಮೆಂಟನ್ನು ಗ್ರಾಮಾಧಿಕಾರಿಗಳಾಗಲಿ ಅಥವಾ ಗ್ರಾಮಾಭಿವೃದ್ಧಿ ಕಮಿಟಿಯವರಾಗಲಿ ವಹಿಸಬೇಕೆಂತಲೂ ಸೂಚಿಸಿದರು.

ಆ ಮೇಲೆ ಅಗ್ರಾಸನಾಧಿಪತಿಗಳು ಸಭೆ ಹಾಕಿದ ಬಗ್ಗೆ ಹೆಚ್ಚು ಮಂದಿ ರೈತರನ್ನು ಹೆಬ್ಬಾಳದ ವ್ಯವಸಾಯದ ಫಾರಂಗೆ ವರ್ಷ ವರ್ಷವೂ ಕಳುಹಿಸುತ್ತಾ ಅದರ ಮೂಲಕ ಅವರು ಅಭಿವೃದ್ಧಿಗೆ ಬರುವಂತೆ ನೋಡಬೇಕೆಂಬುದಾಗಿ ಬುದ್ಧಿವಾದವನ್ನು ದಯಪಾಲಿಸಿದರು. ಶ್ರೀ ತಿಮ್ಮರಾಯಸ್ವಾಮಿ ರಥೋತ್ಸವ ಪ್ರಯುಕ್ತ ಬಹು ಜನಗಳು ಸೇರಿದ್ದುದರಿಂದ ಈ ಸಂದರ್ಭವು ತುಂಬಾ ಉಪಯೋಗವಾಗಿ ಪರಿಣಮಿಸಿತು. ಆ ಮೇಲೆ ಇಂಡಿಯಾ ಚಕ್ರವರ್ತಿಯವರಿಗೂ ಮತ್ತು ನಮ್ಮ ಶ್ರೀಮನ್ಮಹಾರಾಜರವರಿಗೂ ಶ್ರೇಯಃ ಪ್ರಾರ್ಥನೆಗಳನ್ನು ಬಯಸಿ ಕಾನ್ಫರೆನ್ಸನ್ನು ಮುಗಿಸಿದರು.

ಪ್ರತ್ಯಕ್ಷದರ್ಶಿ

ಬೇಲೂರು ಪಂಚಮ ಕಾನ್ಫರೆನ್ಸ್.

ಬೇಲೂರಿನಲ್ಲಿ ಈ ವರುಷ ನಡೆದ ಶ್ರೀಚೆನ್ನಕೇಶವಸ್ವಾಮಿಯ ರಥೋತ್ಸವ ಕಾಲದಲ್ಲಿ ಅನೇಕಾನೇಕ ಮಂದಿ ಪಂಚಮರು ನಾನಾ ಕಡೆಗಳಿಂದ ಅಲ್ಲಿಗೆ ಕೂಡಿ ಬಂದಿದ್ದರು. ಬೇಲೂರಿನ ಕೆಲವು ಮಂದಿ ದೊಡ್ಡ ಮನುಷ್ಯರುಗಳು ಈ ಅನುಕೂಲವಾದ ಸಮಯವನ್ನು ಕಂಡು ಇದೇ ತಿಂಗಳು 17 ನೇ ತಾ. ಸೋಮವಾರ ಪಂಚಮರಿಗಾಗಿ ಒಂದು ಮಹಾ ಸಭೆಯನ್ನು ನಡಿಸಿದರು. ಈಗ ಹಿಂದಕ್ಕೆ ಬಿದ್ದಿರುವ ಪಂಚಮರನ್ನು ಉತ್ತಮಸ್ಥಿತಿಗೆ ತರಬೇಕೆಂಬುವದೇ ಈ ಸಭೆಯ ಉದ್ದೇಶವಾಗಿತ್ತು. ಈ ಸಭೆಯು ದೇವಸ್ಥಾನದ ಪ್ರಾಕಾರದಲ್ಲಿ ನಡೆಯಿತು. ಶ್ರೀ ರಾಮಾನುಜಾಚಾರ್ಯರ ಅನುಗ್ರಹದಿಂದ ಪಂಚಮರಿಗೆ ಇಲ್ಲಿಯೂ ಮೇಲುಕೋಟೆಯಲ್ಲಿಯೂ ವರುಷಕ್ಕೆ ಒಂದಾವರ್ತಿ ರಥೋತ್ಸವದ ಕಾಲದಲ್ಲಿ ಮೂರು ದಿನಗಳ ವರೆಗೆ ಪವಿತ್ರವಾದ ದೇವಾಲಯದೊಳಗೆ ಪ್ರವೇಶ ಮಾಡುವ ಹಕ್ಕು ಲಭ್ಯವಾಗಿರುತ್ತದೆ.

ಸಭೆಯು ಹೊತ್ತಾರೆ 9 ಘಂಟೆಗೆ ಪ್ರಾರಂಭವಾಯಿತು. ಈ ಡಿಸ್ಟ್ರಿಕ್ಟಿನ ಬೇರೆ ಬೇರೆ ಕಡೆಗಳಿಂದ ಬಂದಿದ್ದ ಸುಮಾರು 200 ಜನ ಪಂಚಮರು ಸಭೆಯಲ್ಲಿ ಹಾಜರಾಗಿದ್ದರು. ಆರಂಭದಿಂದ ಅಲ್ಲಿಗೆ ಆ ಸಮಾಜಕ್ಕೆ ಸರಿಯಾಗಿ ದಯಮಾಡಿಸಿದ್ದ ಮೆ|| ವಿ. ಎನ್. ನರಸಿಂಹಯ್ಯಂಗಾರ್‌ರವರನ್ನು ಉಪನ್ಯಾಸವನ್ನು ಮಾಡುವಂತೆ ಕೇಳಿಕೊಳ್ಳಲಾಯಿತು. ಮೆ|| ಗಳಾದ ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರ್ ಎಂ. ಎ. ನಾರಣೈಯಂಗಾರ್ಯರವರೂ ಅಮಲ್ದಾರ್ ಎನ್. ಶ್ರೀನಿವಾಸಯ್ಯಂಗಾರ್ಯರವರೂ ರಿಟೈರ್ಡ್ ಅಮಲ್ದಾರ್ ಬಿ. ಕೃಷ್ಣಸಿಂಗ್‌ರವರೂ ಪ್ಲೀಡರುಗಳಾದ ಕೆ. ತಮ್ಮಯ್ಯ, ಕೆ. ಟಿ. ಶೇಷಯ್ಯ, ಮತ್ತು ಕೇಶವಯ್ಯಂಗಾರ್ ಇವರುಗಳೂ ಆಯುರ್ವೇದ ಪಂಡಿತರಾದ ಆರ್. ಸೀನಪ್ಪನವರೂ ಕೂಡ ಸಭೆಯಲ್ಲಿ ಹಾಜರಾಗಿದ್ದರು.

ಪ್ರಾರಂಭದಲ್ಲಿ ಚಾಮ ಎಂಬ ಒಬ್ಬ ಪಂಚಮನು ಹಿಂದಿನ ದಿನದಲ್ಲಿ ದಿವಾನ್‌ರವರಿಗೆ ಒಪ್ಪಿಸಿದ್ದ ಒಂದು ಅರ್ಜಿಯನ್ನು ಓದಲಾಯಿತು. ಈ ಅರ್ಜಿಯಲ್ಲಿ ಅವನು ಪಂಚಮರ ಈಗಿನ ಹೀನಸ್ಥಿತಿಯನ್ನು ಎತ್ತಿ ತೋರಿಸಿರುವದಲ್ಲದೆ ತಮ್ಮ ಮೇಲೆ ಅಂತಃಕರಣವನ್ನಿಟ್ಟು ತಮ್ಮನ್ನು ಊರ್ಜಿತ ಸ್ಥಿತಿಗೆ ತರುವ ಏರ್ಪಾಡುಗಳನ್ನು ಮಾಡಬೇಕೆಂದು ಶ್ರೀಮನ್ ಮಹಾರಾಜರವರಿಗೂ ಅವರ ಸರಕಾರದವರಿಗೂ ವಿದಾಯಕ ಗುಣವುಳ್ಳ ಇತರರಿಗೂ ವಿಜ್ಞಾಪನೆಯನ್ನು ಮಾಡಿಕೊಂಡಿರುತ್ತಾನೆ.

ತರುವಾಯ ಪಂಚಮ ಸ್ತ್ರೀಯರಲ್ಲಿ ಕೆಲವು ಮಂದಿ ಭಕ್ತಿರಸಯುಕ್ತವಾದ ಕೆಲವು ಸಂಗೀತಗಳನ್ನು ಇಂಪಾಗಿ ಹಾಡಿದರು. ಸಭಿಕರು ಅವುಗಳನ್ನು ಕೇಳಿ ಬಹಳವಾಗಿ ಸಂತೋಷಪಟ್ಟರು.

ಆ ಮೇಲೆ ದೇಶಾಟನ ಮಾಡಿಕೊಂಡು ಉಪನ್ಯಾಸಗಳನ್ನು ಮಾಡುವ ಮ|| ಬಿ. ಕೆ. ವೆಂಕಟಾಚಾರ್ ರವರು ಮುಂದೆ ಬಂದು ವಿದ್ಯಾಭ್ಯಾಸದಿಂದುಂಟಾಗುವ ವಾಸ್ತವವಾದ ಪ್ರಯೋಜನಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು.

ತರುವಾಯ ಜನರು ಕೈಚಪ್ಪಾಳೆ ಹೊಡೆಯುತ್ತಿರುವಲ್ಲಿ ಮ|| ವಿ. ಎನ್. ನರಸಿಂಹಯ್ಯಂಗಾರ್ಯರವರು ಎದ್ದು ಕನ್ನಡ ಭಾಷೆಯಲ್ಲಿ ಸ್ಪಷ್ಟವಾಗಿಯೂ ಮನಮುಟ್ಟುವಂತೆಯೂ ಪಂಚಮರೂ ಇತರರೂ ಶ್ರೇಯಸ್ಸಿಗೆ ಬರುವದಕ್ಕೆ ಕಾರಣವೇನೆಂಬುವದನ್ನು ಕುರಿತು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ದಕ್ಷಿಣ ಹಿಂದೂದೇಶದಲ್ಲಿ ಪೂರ್ವಕಾಲದಲ್ಲಿದ್ದ ಪ್ರಸಿದ್ಧರಾದ ಧರ್ಮೋಪದೇಶಕರು ಪಂಚಮರ ವಿಷಯದಲ್ಲಿಯೂ ಅವರಂತೆ ಹೀನಸ್ಥಿತಿಯಲ್ಲಿ ಬಿದ್ದಿರುವ ಇತರ ಹಿಂದೂಗಳ ವಿಷಯದಲ್ಲಿಯೂ ತುಂಬಾ ಅನುತಾಪವುಳ್ಳವರಾಗಿದ್ದರು; ಇವರುಗಳ ಪೈಕಿ ಈ ಕಲಿಯುಗದ ಪ್ರಾರಂಭದಲ್ಲಿದ್ದ ನಮ್ಮಾಳ್ವಾರ್‌ರವರು ಅಗ್ರಸ್ಥಾನವನ್ನು ಪಡೆದಿರುತ್ತಾರೆ ಎಂಬುವದನ್ನು ದೃಷ್ಟಾಂತ ಪಡಿಸುವದಕ್ಕಾಗಿ ಅನೇಕ ಉದಾಹರಣೆಗಳನ್ನು ಎತ್ತಿ ತೋರಿಸಿದರು. ವೇದಗಳೂ ಇತರ ಸಂಸ್ಕೃತ ಗ್ರಂಥಗಳೂ ಕೆಲವರಿಗೆ ಮಾತ್ರ ಧರ್ಮೋಪದೇಶ ಮಾಡತಕ್ಕವುಗಳಾಗಿವೆ; ಆದರೆ ದ್ರಾವಿಡ ಪ್ರಬಂಧಗಳು ಹಿಂದುಗಳೆಲ್ಲರಿಗೆ ಸರ್ವೇಶ್ವರನ [illegible] ಸುಭವಾರ್ತೆಯನ್ನು ಸಾರುವಂಥವುಗಳಾಗಿವೆ ಎಂಬುವದನ್ನು ಇವರು ಖಚಿತವಾಗಿ ಎಂದಟ್ಟು ಮಾಡಿಕೊಂಡಿರುತ್ತಾರೆ. [illegible] ಪೂರ್ವಜನ್ಮದಲ್ಲಿ ಮಾಡಿರುವ ಪಾಪಕೃತ್ಯಗಳನ್ನು ನಡೆಸಿದವರಾದ ಕಾರಣ ಈಗ ಇಂಥ ಹೀನ ಜಾತಿಯಲ್ಲಿ ಹುಟ್ಟಿರುತ್ತಾರೆಂದು ಕೆಲವರು ಭಾವಿಸುವುದುಂಟಷ್ಟೆ. ಇಂಥ ಅಭಿಪ್ರಾಯಕ್ಕೆ ಇವರು ಒಪ್ಪುವದಿಲ್ಲ. ನಮಗೆ ಸ್ವಲ್ಪವಾದರೂ ತಿಳುವಳಿಕೆ ಇಲ್ಲದೇ ಪೂರ್ವಜನ್ಮದಲ್ಲಿ ಒಬ್ಬ ಬಂದಾತನು, ಈಗ ದೈವವಶಾತ್ ಉತ್ತಮ ಕುಲದಲ್ಲಿ ಹುಟ್ಟಿರುವ ಮತ್ತೊಬ್ಬನಿಗಿಂತ ಹೆಚ್ಚಿನ ಪಾಪವನ್ನು ಮಾಡಿದನೆಂದು ಹೇಳುವದು ಕೇವಲ ತಪ್ಪಾಗಿಯೂ [illegible] ಇದೆಯೆಂದೂ ಈ ವಿಚಾರವನ್ನು ಇವರು [illegible] ಸ್ಥಿತಿಯಲ್ಲಿ ಬಿದ್ದಿರುವವರನ್ನು ಸನ್ಮಾರ್ಗದಿಂದ ಬಿಡಿಸುವದಕ್ಕೆ ಪ್ರಾಚೀನ ಕಾಲದ ರಾಜ್ಯದ ಸ್ಥಿತಿಯೇ ಬಹಳ ಮಟ್ಟಿಗೆ ಕಾರಣವಾಗಿದ್ದೂ ಇವರು ಅಭಿಪ್ರಾಯಪಟ್ಟರು. ಉತ್ತರ ಕಡೆಯಿಂದ ಬಂದ ಆರ್ಯರು ಹಿಂದೂ ದೇಶದ ಕೆಲ ಕೆಲವು ಭಾಗಗಳನ್ನು ಕ್ರಮೇಣ ಜಯಿಸಿ ತಮ್ಮ ಸ್ವಾಧೀನಪಡಿಸಿಕೊಂಡ ಮೇಲೆ ಪಟ್ಟಣಗಳನ್ನೂ ಪಟ್ಟಣಗಳನ್ನೂ ಗ್ರಾಮಗಳನ್ನೂ ಕಟ್ಟಡ ಸಾಮಾನುಗಳನ್ನೂ ಸಮಾಜದ ಕಟ್ಟಳೆಗಳನ್ನೂ ಮತಪಂಥಗಳಲ್ಲಿ [illegible] ಬಹಳಕ್ಕೆ ಬೋಧನಾ ಸಂಬಂಧಗಳನ್ನೂ ಅಲ್ಪಸಿಕೊಂಡಲೂ ಬಲಾತ್ಕರಿಸಲ್ಪಟ್ಟರು. ಈಗ ಇರುವ ಪಂಚಮರು ಮತ್ತು ಅವರಂತೆ ಹೀನಸ್ಥಿತಿಯಲ್ಲಿ ಬಿದ್ದಿರುವವರು ಪ್ರತಿನಿಧಿಗಳಾಗಿದ್ದ ಪೂರ್ವನಿವಾಸಿಗಳು ಈ ಕಾರ್ಯಗಳಿಗೆ ಕೇವಲ ಬಲಿಯಾಗಿದ್ದರು. ಮುಂದಿನ ಸಂತತಿಯವರು ಮಾಡುವ ಜೋಕೆಗಳಿಗೆ ತಾವು ತಪ್ಪಿಸಿಕೊಳ್ಳುವದಕ್ಕಾಗಿ ಪೂರ್ವಾರ್ಜಿತ ಕರ್ಮಫಲದಿಂದ ಮನುಷ್ಯರು ಬಡವರಾಗಿ ಹುಟ್ಟುತ್ತಾರೆಂಬ ಬೋಧನೆಯನ್ನು ಕಲ್ಪಿಸಲಾಯಿತು. ಈ ವಿಷಯಗಳನ್ನು ಬಹು ಮಟ್ಟಿಗೆ ಸತ್ಯವೆಂದು ಹೇಳಬಹುದು. ಇದನ್ನು ವೃತ್ತಾಂತ ಪತ್ರಿಕೆಯಲ್ಲಿ ಮ|| ನರಸಿಂಹಯ್ಯಂಗಾರ್ಯರು ಈ ಇಪ್ಪತ್ತನೆಯ ಶತಮಾನದಲ್ಲಿಯೂ ಕೂಡ ಇನ್ನೂ ಇದು ತಮ್ಮ ಜಾತಿಗೆ ಒಪ್ಪಿಸಿ ಕೊಟ್ಟಿರುವ ಕಟ್ಟಳೆಗಳನ್ನು ಅತಿಕ್ರಮಿಸಿ ನಡೆಯುವ ವಿಷಯದಲ್ಲಿ ಹಿಂದೂ ಪ್ರತಿಯಾಗಿರುವ ಅದ್ಭುತವಾದ ಕೊರತೆಗಳನ್ನು ಎತ್ತಿ ತೋರಿಸಿದರು. ಪಂಚಮರಿಗೆ ಅನುಕೂಲವಾಗಿ ಪೂರ್ವಕಾಲದ ಋಷಿಗಳು ಏರ್ಪಡಿಸಿದ್ದ ಮತದ ಕೈಂಕರ್ಯವನ್ನು ಶ್ರೀ ರಾಮಾನುಜಾಚಾರ್ಯರು ಸ್ಥಿರಪಡಿಸಿದರು. ಇವರು ಸುಮಾರು 1,000 ವರ್ಷಗಳ ಕೆಳಗೆ ಪ್ರಸಿದ್ಧರಾಗಿದ್ದು [illegible] ಹೀನಸ್ಥಿತಿಯ ಈ ವರ್ಗಕ್ಕೆ ಒಂದು ಆಶ್ರಯವನ್ನು ಮಾಡಿಕೊಳ್ಳಲು ಬಲಾತ್ಕರಿಸಲ್ಪಟ್ಟರು. ಇವರು [illegible] ಧರ್ಮಶಾಸ್ತ್ರಕರ್ತರಾಗಿಯೂ ಏಕಿಸ್ವದೈತ [illegible] ಗಿಯೂ ಇದ್ದರೆಂದು ತಿಳಿಸಿದರು.

ಕಡೆಯಲ್ಲಿ ಮ|| ನರಸಿಂಹಯ್ಯಂಗಾರ್ಯರವರು ಈ ಕೆಳಗಿನ ಮಾತುಗಳನ್ನು ಹೇಳಿ ತಮ್ಮ ಭಾಷಣವನ್ನು ಮುಕ್ತಾಯಮಾಡಿದರು. ಏನೆಂದರೆ:

ಪಂಚಮರಾದ ನನ್ನ ಸಹೋದರರೇ, ನೀವು ಪವಿತ್ರವಾದ ಈ ದೇವಸ್ಥಾನದ ಅಂಗಳದಲ್ಲಿ ಕೂಡಿಬಂದು ಅಷ್ಟು ಕಾಲದ ಹಿಂದೆ ಆ ಧರ್ಮೋಪದೇಶಕರುಗಳು ನಮಗಾಗಿ ಏನು ಮಾಡಿದರೆಂಬುವದನ್ನು ಕೇವಲ ಅಲ್ಪಸಾರ ನನ್ನಿಂದ ಕೇಳುವಂತೆ ಮಾಡಿರುವದರಿಂದ ಶ್ರೀ ರಾಮಾನುಜಾಚಾರ್ಯರ ಹೃದಯವು ಮತ್ತೊಮ್ಮೆ ನೀವು ಕಾಲಕ್ರಮೇಣ ಇಂಥ ಹೀನವಾದ ಸ್ಥಿತಿಗೆ ಬಂದಿರುವದಕ್ಕೆ ನಿಮ್ಮ ಸ್ವಂತ ದುರಭ್ಯಾಸಗಳೂ ದುಷ್ಟ ಚಿತ್ತಗಳೂ ಬಹಳ ಮಟ್ಟಿಗೆ ಕಾರಣವಾಗಿವೆ ಎಂಬುವದನ್ನು ನೀವೆಂದಿಗೂ ಮರೆಯಬೇಡಿರಿ. ನೀವು [illegible] ನಿಮ್ಮ ದುಷ್ಕೃತ್ಯಗಳೂ ನಮಗೂ ಇತರ ಹಿಂದೂಗಳಿಗೂ [illegible] ಮತ್ತಷ್ಟು ಹೆಚ್ಚಿಸಿರುತ್ತವೆ. ನಾನು ಪ್ರಾಗೋ ಹಾಗೆಯೇ ನೀವೂ ಹಿಂದೂಗಳಾಗಿಯೇ ಇರುತ್ತೀರಿ. ಕೆಲವು ವರುಷಗಳ ಹಿಂದೆ ಕೆಲವರು ನಿಮ್ಮನ್ನು ಪ್ರತ್ಯೇಕಿಸಬೇಕೆಂದು ಸಲಹೆಕೊಟ್ಟಾಗ ಇಂಡಿಯದಲ್ಲಿರುವ ಹಿಂದೂಗಳೆಲ್ಲರೂ ನಿಮ್ಮನ್ನು ಹಿಂದೂಗಳೆಂದೇ ಲೆಕ್ಕಿಸಬೇಕೆಂಬುದಾಗಿ ಇಂಡಿಯಾಸರಕಾರದವರನ್ನು ವಿಜ್ಞಾಪಿಸಿಕೊಂಡರು. ಆದಕಾರಣ ನೀವು ಕುಡಿಯುವದೇ ಮುಂತಾದ ನಿಮ್ಮ ದುರಭ್ಯಾಸಗಳನ್ನು ವಿಸರ್ಜಿಸಿಬಿಡಬೇಕಾಗಿದೆ. ಆದಕಾರಣವು ಪರಿಣಾಮಗಳನ್ನು ನಾಶಿಸಮಾಡುತ್ತದೆ. ನಿಮ್ಮ ಸ್ಥಿತಿಯನ್ನು ಉತ್ತಮವಾಗಿ ಮಾಡಿಕೊಳ್ಳುವದಕ್ಕೆ ನೀವೇ ಪ್ರಯಾಸಪಡಬೇಕು. ನೀವಾಗಿ ಪ್ರಯತ್ನ ಪಡದಿದ್ದರೆ ಹೊರಗಿನವರು ನಿಮ್ಮನ್ನು ಉತ್ತಮರನ್ನಾಗಿ ಮಾಡಲಾರರು. ನೀವು ಬಂಡಾ ಮೂಲಕವಾಗಿ ಸ್ವಲ್ಪ ಸ್ವಲ್ಪ ಹಣವನ್ನು ವಸೂಲಿಮಾಡಿ ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಒಂದು ಫಂಡನ್ನು ಏರ್ಪಡಿಸಬೇಕೆಂದು ನಾನು ಒತ್ತಿ ಹೇಳುತ್ತೇನೆ.

ನಾವು ಯಾವ ವಿಷಯವನ್ನು ಕುರಿತು ಈಗ ಪ್ರಸ್ತಾಪಮಾಡುತ್ತಿದ್ದೇವೋ ಅದಕ್ಕೆ ಸಂಬಂಧಪಟ್ಟ ಕೆಲಸವನ್ನೇ ನಾನು ರಾಜಧಾನಿಯಲ್ಲಿ ಮಾಡುತ್ತಾ ಇದ್ದೇನೆ. ಅಲ್ಲಿ ನಾನು ಅನೇಕಸಾರಿ ಹೇಳಿದ್ದನ್ನೇ ಇಲ್ಲಿ ಈಗ ತಿರಿಗಿ ಹೇಳುತ್ತೇನೆ. ಅದೇನೆಂದರೆ—ನೀವು ಸರಕಾರದ ಉದ್ಯೋಗವನ್ನು ಪಡೆಯುವದಕ್ಕಾಗಿ ವಿದ್ಯೆ

ಮ್ಮ ಕೇಳಬೇಡಿರಿ ಎಂಬುವದು. ಹೀಗೆ ಮಾಡುವದು ಒಳ್ಳೆಯದಲ್ಲ. ಸರಕಾರದ ಉದ್ಯೋಗಸ್ಥರು ಎಲ್ಲಾ ಕಡೆಗಳಲ್ಲಿಯೂ ತುಂಬಿ ತುಳುಕುತ್ತಿದ್ದಾರೆ. ಪಂಚಮರಾದ ನಮಗೆ ವಿದ್ಯೆ ಕಲಿಸುವಾಗ ನಮ್ಮನ್ನು ಉತ್ತಮರಾದ ಗಾರರನ್ನಾಗಿಯೂ ವ್ಯಾಪಾರಿಗಳನ್ನಾಗಿಯೂ ನೆಯಿಗೆಯವರನ್ನಾಗಿಯೂ ತೋಟಗಳನ್ನಾಗಿಯೂ ಆರಂಬಗಾರರನ್ನಾಗಿಯೂ ರಾಜಭಕ್ತಿಯುಳ್ಳ ಪ್ರಜೆಗಳನ್ನಾಗಿಯೂ ಮಾಡಬೇಕೆಂಬುವದೇ ನಮ್ಮ ಗುರಿಯಾಗಿರುತ್ತದೆ.

ಮೈಸೂರಿನಲ್ಲಿ ಈ ಕೆಲಸವನ್ನು ನಡಿಸುತ್ತಿರುವವರು ತಮಗೆ ಅನುಕೂಲವಾದ ನಮ್ಮ ಜನಗಳಿಗೆ ಯಾವ ಭಿನ್ನಭೇದಗಳಾದರೂ ತಕರಾರುಗಳಾದರೂ ಇಲ್ಲದೆ ಸರ್ವರಿಗೂ ಸಾಮಾನ್ಯವಾಗಿರುವಂಥ ಮತವನ್ನು ಬೋಧಿಸಿಮಾಡಬೇಕೆಂದು ಮನಸ್ಸುಮಾಡಿರುತ್ತಾರೆ. ಆದರೆ ನಮ್ಮ ಪ್ರಯತ್ನಗಳು ಯಾವಾಗ ಫಲಕ್ಕೆ ಬರುವವವೋ ಆಗ ಈ ಕಾರ್ಯವು ಸಿದ್ಧಿಗೆ ಬರುವದು. ಕಡೆಯಲ್ಲಿ ಮ|| ನರಸಿಂಹಯ್ಯಂಗಾರ್ರವರು ಕಾಲೋಚಿತವಾದ ಕೆಲವು ಬುದ್ಧಿಮಾತುಗಳನ್ನು ಹೇಳಿದರು.

ಪಂಚಮ ಕಾನ್ಫರೆನ್ಸಿನ ಒಂದು ಕಮಿಟಿಯು ಏರ್ಪಾಡಾಯಿತು. ಮೆ|| ಕೃಷ್ಣಸಿಂಗ್ ರವರನ್ನು ಅಧ್ಯಕ್ಷರನ್ನಾಗಿಯೂ ಮೆ|| ಕೇಶವದಾಸಯ್ಯಂಗಾರ್ ರವರನ್ನು ಉಪಾಧ್ಯಕ್ಷರನ್ನಾಗಿಯೂ ಮೆ|| ಆರ್ ಸೂರಪ್ಪನವರನ್ನು ಕಾರ್ಯದರ್ಶಿಗಳನ್ನಾಗಿಯೂ ಮೊಗಳಾದ ಕೆ. ಟಿ. ಶೇಷಯ್ಯ, ಎಸ್. ಎನ್. ನಾಗರಾಜಯ್ಯ, ವೆಂಕಟನಾರಣಯ್ಯ ಇವರುಗಳನ್ನು ಸದಸ್ಯರುಗಳನ್ನಾಗಿಯೂ ಚಾವಣ್ಣ, ಪುಟ್ಟಯ್ಯ, ಬಸಣ್ಣ ಇವರನ್ನು ಪಂಚಮ ಮೆಂಬರುಗಳನ್ನಾಗಿಯೂ ನೇಮಕಮಾಡಲಾಯಿತು ಈ ಕಮಿಟಿಯವರು ಸಾಧ್ಯವಾಗುವಷ್ಟು ಸಾರಿ ಕೂಡಿಬಂದು ಪಂಚಮರನ್ನು ಎಲ್ಲಾ ಭಾಗದಲ್ಲಿಯೂ ಊರ್ಜಿತ ಸ್ಥಿತಿಗೆ ತರುವದಕ್ಕೆ ರಾಜಧಾನಿಯಲ್ಲಿರುವ ಸಭೆಯವರು ಮಾಡಿರುವ ಕ್ರಮಗಳನ್ನು ಅನುಸರಿಸುತ್ತಾ ಬರಬೇಕೆಂದು ತೀರ್ಮಾನವಾಯಿತು.

ಕಡೆಯಲ್ಲಿ ನಮ್ಮ ಚಕ್ರವರ್ತಿಗಳಿಗೂ ಮಹಾರಾಜರವರಿಗೂ ಶ್ರೇಯಸ್ಸನ್ನು ಹಾರೈಸಿ ಈ ಕಾನ್ಫರೆನ್ಸ್ ಸಮಾಪ್ತವಾಯಿತು.

ಬಾತ್ಮಿದಾರರಿಗೆ ನೋಟೀಸ್.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬುದಾರರಾಗುವುದಿಲ್ಲ. ಕೆಲವು ಅಂಶವನ್ನು ಸಹ ಕೆಲವು ತಿಳಿಯತಕ್ಕದ್ದು. —ಎಡಿ.]

ಕರೆಸ್ಪಾಂಡೆನ್ಸ್.

ಮೋಸವಂತೆ.

ಅಯ್ಯಾ,—ನಾನು ಈಗ ಸುಮಾರು ಮೂರು ತಿಂಗಳ ಕೆಳಗೆ ತಮ್ಮ ಪತ್ರಿಕೆಯಲ್ಲಿ ಛಾಪಿಸಿದ ಮ್ಯಾನೇಜರ್, ವೀರಕೇಸರಿ, ನಂ. 3, ಬೊಮ್ಮಲ್ರೆಯ್ಯಲ್ ಬೀದಿ, ಮದ್ರಾಸ್ ಇವರ ಕಂಪನಿಯಿಂದ ಒಂದು ಯುದ್ಧದ ಚಿತ್ರವನ್ನು ಅವರ ಪ್ರಕಟನೆ ಪ್ರಕಾರ ತರಿಸಿಕೊಂಡೆ. ಆದರೆ ಅವರ ಪ್ರಕಟನೆ ಪ್ರಕಾರ ಇನಾಮು ಪ್ರಕಟನಾ ಪತ್ರಿಕೆಯನ್ನು ಇದುವರಿವಿಗೂ ನಿರೀಕ್ಷಿಸಿದಾಗ್ಯೂ ಕಳುಹಿಸಲಿಲ್ಲ. ವಿ. ಪಿ. ಬಂದ 15 ದಿವಸಕ್ಕೆ 1 ಕಾಗದ ಹಾಕಿದೆ. ಅದಕ್ಕೂ ಜವಾಬಿಲ್ಲ. ಮತ್ತೆ ತಾರೀಖು 19-3-16 ರಲ್ಲಿ 1 ಕಾಗದ ಹಾಕಿ, ಅದರಲ್ಲಿ 8 ದಿವಸದ ಒಳಗಾಗಿ ಕಳುಹಿಸಿಕೊಡುವಂತೆ ಬೇಡಿಕೊಂಡರೂ ಅದಕ್ಕೂ ಜವಾಬಾಗಲೀ ಪತ್ರಿಕೆಯಾಗಲಿ ಬರಲಿಲ್ಲ. ಇನ್ನು ಮುಂದೆಯಾದರೂ ನನ್ನಂತೆ ಯಾರೂ ಈ ವೀರಕೇಸರಿ ಪತ್ರಿಕೆಯ ಪ್ರಕಟನೆಯನ್ನಾಗಲಿ ಅಥವಾ ಈ ಕಂಪನಿಯವರ ಬೇರೆ ಪ್ರಕಟನೆಯನ್ನಾಗಲಿ ನಂಬಕೂಡದೆಂಬುದಾಗಿ ಈ ಮೂಲಕ ನನ್ನ ಪ್ರಿಯ ದೇಶ ಬಾಂಧವರಿಗೂ ಮತ್ತು ಪ್ರಿಯಮಿತ್ರರಿಗೂ ನನ್ನ ವಿಜ್ಞಾಪನೆಯನ್ನು ಮಾಡಿಕೊಳ್ಳುತ್ತೇನೆ.

ಕೆ. ವಿ ಹನುಮಂತರಾವ್, ಜಗಳೂರು.

ರೈಲು ಬೇಕು.

ಅಯ್ಯಾ,—ಚಿತ್ರದುರ್ಗಕ್ಕೆ ರೈಲು ಬಾರದೆ ಇರುವದರಿಂದ ನಮ್ಮ ಎತ್ತಿನ ಕಷ್ಟವು ತಪ್ಪಲಿಲ್ಲವು. ಬಹಳದಿಂದ ಸರ್ವೆ ಸಹ ಆಗಿ ಎಷ್ಟೋ ದಿನಗಳಾದಾಗ್ಯೂ ರೈಲು ಬಾರದ್ದರಿಂದ ನಮ್ಮ ಎತ್ತಿನ ಕಷ್ಟವನ್ನು ಪರಿಹಾರಮಾಡುವ ಮಹಾನುಭಾವರೇ ಇಲ್ಲವು. ದಯಾಳುಗಳಾದ ದಿವಾನ್ ಸಾಹೇಬರವರ ಚಿತ್ತಕ್ಕೂ ಬಾರದೆಹೋಯಿತು. ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು ಮುಂತಾದ ಎಲ್ಲಾ ತಾಲ್ಲೂಕುಗಳಿಂದಲೂ ಈ ಬಿಸಿಲುಕಾಲದಲ್ಲಿ ನೂರಾರು ಹತ್ತಿ ಗಾಡಿಗಳು 5-6 ಗಾವುದ ಎತ್ತುಗಳು ನಡೆಯಲಾರದೆ ಭೂಮಿ ಮುರಿದು ನಾವು ಪಡುವ ಕಷ್ಟವನ್ನು ಎಷ್ಟು ಶ್ರುತಪಡಿಸಿಕೊಂಡಾಗ್ಯೂ ಯಾರ ಚಿತ್ತಕ್ಕೂ ಬರಲಿಲ್ಲವು. ದಯಾಳುಗಳಾದ ಡೆಪ್ಯುಟಿ ಕಮಿಷನರ್ ಮ|| ಬಾಲಸುಂದರಂ ಅಯ್ಯರವರು ಅದೇ ಏರ್ಪಾಟಿನಲ್ಲಿರುವರು. ಚಿತ್ರದುರ್ಗ ತಾಲ್ಲೂಕು ಅಮಲ್ದಾರ್ ಮ|| ಕೇಶವಯ್ಯನವರು ಈ ರೈಲ್ವೆ ವಿಷಯದಲ್ಲಿ ಪ್ರತಿ ಗ್ರಾಮಗಳಲ್ಲೂ ಭಾರೀ ಭಾರೀ ಜಮೀನ್ದಾರರಿಂದ ಪ್ರತಿ ಗ್ರಾಮಕ್ಕೂ ಐದು ಆರು ಸಾವಿರ ರೂಪಾಯಿ ಚಂದಾ ಹಾಕಿಸಿದಾರೆ. ವರ್ತಕ ಮುಂಗಾಮ್ರಾವಿಗಳವರು ಹತ್ತು ಸಾವಿರದ ಒಂದು ನೂರು ರೂಪಾಯಿ ಚಂದಾ ಹಾಕಿದಾರೆ. ಒಂದು ಗ್ರಾಮದಲ್ಲಿ ಒಬ್ಬ ಭೋಗಾದರವನು ಒಂದು ಸಾವಿರ ರೂಪಾಯಿ ಹಾಕಿದಾನೆ. ರೈಲ್ವೆ ಕಾಮಗಾರಿ ಶುರುಮಾಡಿಸಿದರೆ ಕೊಟ್ಟ ಹಣವನ್ನು ಕೊಡುತ್ತೇವೆಂಬದಾಗಿ ಭಾರೀ ಜಮೀನುದಾರರು ಹೇಳುತ್ತಾರೆ. ರೈಲು ಏರ್ಪಾಟು ಆಗುವ ವರೆಗೂ ಮ|| ಅಮಲ್ದಾರ್ ಕೇಶವಯ್ಯನವರು ಇಲ್ಲೇ ಇದ್ದರೆ ಅವರ ಕೈಕೆಂದ ಚಂದಾ ವಸೂಲ್ಮಾಡುವದರು. ಜಾಗ್ರತೆ ರೈಲು ಬಂದು ನಮ್ಮ ಎತ್ತಿನ ಕಷ್ಟಗಳು ತಪ್ಪಿದರೆ ರೂಪಾಯಿ ಒಂದಕ್ಕೆ ಎರಡಾಣೆಯಂತಾದರೂ ಕೊಡ್ತೇವೆಂದು ಹೇಳುತ್ತಾರೆ. ಪೂರ್ವದಲ್ಲಿ ದಾವಣಗೆರೆ ಹೀನಸ್ಥಿತಿಯಲ್ಲಿತ್ತು. ರೈಲು ಬಂದದ್ದರಿಂದ ದೊಡ್ಡ ಪಟ್ಟಣವಾಗಿದೆ. ಚಿತ್ರದುರ್ಗವೆಂಬ ದೊಡ್ಡ ಪಟ್ಟಣವು ವ್ಯಾಪಾರಗಳಿಲ್ಲದೆ ಹೀನಸ್ಥಿತಿಯಲ್ಲಿರುವದು. ಭಾರಿ ಭಾರಿ ಮನೆಗಳನ್ನು ಕಟ್ಟಿಸಬೇಕೆಂದು ಕೋಟೆ ಕಲ್ಲುಗಳನ್ನು ಒಡಿಸಿ ಸಂತೆಪೇಟೆ ಸಾಹುಕಾರರೆಲ್ಲರೂ ರೈಲು ಎಂದಿಗೆ ಬರುವದೋ ಎಂಬದಾಗಿ ಜಾಗಗಳಿಗೆ ದರಖಾಸ್ತನ್ನು ಅಪೇಕ್ಷಿಸುತ್ತಲಿರುವರು. ಯಾವ ಮಹಾನುಭಾವರು ಇದಕ್ಕೆ ಸಹಾಯವನ್ನು ಮಾಡಿ ನಮ್ಮ ಎತ್ತುಗಳ ಕಷ್ಟವನ್ನು ಪರಿಹಾರಮಾಡುವರೋ ಅಂಥ ಮಹಾನುಭಾವರನ್ನು ಎಂದಿಗೂ ಮರೆಯಲಾರೆವು.

ಚಂದ್ರದಾರ ಚನ್ನಬಸಪ್ಪ.

ತಾಲ್ಲೋಕು ವರ್ತಮಾನಗಳು.

ಹುಣಸೂರು ತಾಲ್ಲೋಕು ಬೆಂಕಿಪುರ.—ಈ ಪ್ರಾಂತ್ಯ ಬಿಸಿಲಿನ ತಾಪ ದಿನೆ ದಿನೆ ಅಧಿಕವಾಗುತ್ತದೆ. ಇದೇ ಮಾಹೆ ತಾ. 9 ನೇ ಭಾನುವಾರ ಹಕ್ಕೆ ಮಟ್ಟಿಗೆ ಒಂದು ಹದ ಮಳೆ ಆಗಿರುತ್ತದೆ. ಆದರೂ ಕೆರೆ ಕುಂಟೆಗಳಿಗೆ ನೀರು ಬಂದಿ ... ಕರುದಲ್ಲಿ ಮಳೆ ಆಗುವ ಹಾಗೆ ಕಾಣುತ್ತದೆ, ಭಗವಂತನ ಅನುಗ್ರಹದಿಂದ ಹೆಚ್ಚಾದ ಮಳೆ ಆದರೆ ಗ್ರಾಮಾಂತರಗಳಲ್ಲಿರುವ ನೀರಿನ ಕಷ್ಟ ತಪ್ಪಬಹುದೆಂದು ಹಾರೈಸುತ್ತೇವೆ. ಈ ತಾಲ್ಲೋಕು ಪ್ರಾಂತ್ಯ ಪ್ಲೇಗಿನ ಗಲಾಟೆ ಅಷ್ಟೇನು ಇಲ್ಲ. ತಾಲ್ಲೋಕು ಅಮಲ್ದಾರ್ ಮ|| ಟಿ. ಟಿ. ರಾಮಚಂದ್ರರಾಯರು ಬೇರೆ ತಾಲೋಕಿಗೆ ವರ್ಗವೆಂದು ವರ್ತಮಾನವಾಗಿದೆ. ಸದರಿ ಟಿ. ಟಿ. ರಾಮಚಂದ್ರರಾಯರು ಜನಾನುರಾಗಿಗಳಾಗಿ ಸರಕಾರಿ ಕೆಲಸಗಳನ್ನು ಬಹಳ ಮುತುವರ್ಜಿಯಿಂದ ನಡಿಸುತ್ತಿದ್ದರು. ಇವರ ಬದಲಿಗಾಗಿ ಬರತಕ್ಕ ಅಮಲ್ದಾರರವರು ಇವರಂತೆಯೇ ಪ್ರಜೆಗಳ ಪ್ರೇಮಕ್ಕೆ ಪಾತ್ರರಾಗಿ ಸರಕಾರದ ಕೆಲಸಗಳನ್ನು ಚಟುವಟಿಕೆಯಿಂದ ನಡಿಸುವರೆಂದು ಹಾರೈಸುತ್ತೇವೆ.

ಮುಳಬಾಗಲ್ ತಾ|| ದೇವರಾಯಸಮುದ್ರ.—ಈ ಗ್ರಾಮವು ಸುಮಾರು ಮುನ್ನೂರು ಮನೆಗಳುಳ್ಳ ದೊಡ್ಡ ಜೋಡಿ ಗ್ರಾಮವಾಗಿರುತ್ತೆ. ಈ ಪೈಕಿ ಇಪ್ಪತ್ತು ಮನೆಗಳು ವಿನಹಾ ಬಾಕಿ ಮನೆಗಳೆಲ್ಲಾ ಬ್ರಾಹ್ಮಣರದಾಗಿರುತ್ತೆ. ಇಂಥಾ ದೊಡ್ಡ ಗ್ರಾಮದಲ್ಲಿ ನೀರಿಗೆ ತುಂಬಾ ಪ್ರಯಾಸವಾಗಿರುವದನ್ನು ತಾಲ್ಲೂಕು ಮುಜ್ರಾಯಿನ ಅಮಲ್ದಾರ್ ಸಾಹೇಬರವರು ಈ ಗ್ರಾಮದಲ್ಲಿ 15, 16, 17 ನೇ ತಾರೀಖುಗಳಲ್ಲಿ ಮೊಕ್ಕಾಂ ಮಾಡಿದ್ದ ವೇಳೆ ಗ್ರಾಮಸ್ಥರು ಅರಿಕೆಮಾಡಿಕೊಂಡದ್ದಕ್ಕೆ ಸರ್ಕಾರದಿಂದ ರೂಲ್ಸಿನಂತೆ ದ್ರವ್ಯಸಹಾಯ ಮಾಡುವದಕ್ಕೆ ರಿಪೋರ್ಟು ಮಾಡುವದಾಗಿ ಅಪ್ಪಣೆಕೊಟ್ಟರು. ಇವರು ರೂಟುರೂಟು ಅಪ್ಪಣೆಕೊಟ್ಟಂತೆ ಶಿವದೇವಸ್ಥಾನದ ಭಾವಿಯನ್ನೂ ಮತ್ತು ವರ್ಷಾಂತ್ರವು ತೊಂದರೆಯನ್ನು ಅನುಭವಿಸುತ್ತಿರುವ ಊರು ಮುಂದೆ ವಾಸವಾಗಿರುವ ಜನರಿಗೆ ಅನುಕೂಲವಾಗುವಂತೆ ಊರು ಮುಂದಿನ ಭಾವಿಯನ್ನೂ ಸಹಾ ರಿಪೇರಿಮಾಡಿಸಿ ಪ್ರಜೆಗಳಿಗೆ ಈಗಿರತಕ್ಕ ತೊಂದರೆಯನ್ನು ಘನ ಸರ್ಕಾರದವರು ತಪ್ಪಿಸುತ್ತಾರೆಂದು ನಂಬಲಾಗಿದೆ. ಶಿವಾಯಿ 16 ನೇ ತಾರೀಖು ಭಾನುವಾರ ಡಿಸ್ಟ್ರಿಕ್ಟು ಶಿರಸ್ತೆದಾರ್ ಮತ್ತು ಡಿ. ಪಿ. ಡಬ್ಲ್ಯು. ಸಬ್ ಡಿವಿಜನ್ ಆಫೀಸರವರು ಸಹಾ ದಯಮಾಡಿಸಿದ್ದರು. ಆ ದಿನ ರಾತ್ರಿ ರಾಮೋತ್ಸವವಾದ ನಂತರ ಅಮಲ್ದಾರ್ ಸಾಹೇಬರವರು ವಿದ್ಯಾಭ್ಯಾಸ, ಮತ ವಿಷಯ, ಗ್ರಾಮಾಭಿವೃದ್ಧಿ ಈ ವಿಷಯಗಳನ್ನು ಕುರಿತು ಉಪನ್ಯಾಸ ಕೊಟ್ಟರು. ಇದರಂತೆ ಬಾಲಕರೂ ಗ್ರಾಮಸ್ಥರೂ ಸಹಾ ನಡೆದುಕೊಳ್ಳುತ್ತಾರೆಂತ ನಿರೀಕ್ಷಿಸಲಾಗಿದೆ. ಅಲ್ಲದೆ ಈ ವಿಷ್ಣುದೇವಾಲಯವು ಕೇವಲ ಶಿಥಿಲವಾಗಿರುವದರಿಂದ ಸರ್ಕಾರದವರು ಮುಜರಾಯಿ ಫಂಡಿನಿಂದ ದ್ರವ್ಯಸಹಾಯ ಮಾಡಿಸಿದಲ್ಲಿ ಗ್ರಾಮಸ್ಥರಿಗೂ ಸಹ ಪ್ರೋತ್ಸಾಹ ಕೊಟ್ಟಂತೆ ಆಗುತ್ತೆ. ಈ ವಿಷಯದಲ್ಲಿಯೂ ಸಹ ನಮ್ಮ ಅಮಲ್ದಾರ್ ಮ|| ಮುದ್ದುಕೃಷ್ಣಪ್ಪನವರು ಗೌರ್ನಮೆಂಟಿಗೆ ಶಿಫಾರಸು ಮಾಡುತ್ತಾರೆಂತಲೂ ಸಹ ನಂಬಿದೇವೆ.

ಶಿವಮೊಗ್ಗ.—ತಾ. 13-4-1916 ನೇ ಗುರುವಾರ ಸಾಯಂಕಾಲ ಪೇಟೆ ಬಸವಣ್ಣದೇವಸ್ಥಾನದ ಮಹಡಿ ಮೇಲೆ ಅನೇಕ ದೊಡ್ಡಮನುಷ್ಯರ ಮತ್ತು ವರ್ತಕಮಂಡಲಿಯವರ ಸಭೆಯು ಸೇರಿತ್ತು. ಈ ಕೂಟದಲ್ಲಿ ಮ|| ಜಿ ಎಂ. ಕಾಡಪ್ಪನವರೂ ಎಂಜಿನಿಯರ್ ಶಿವಾಜಿರಾಯರೂ ಸೆಕ್ರಿಟರಿಗಳಾಗಿದ್ದರು. ಸಭೆಯವರ ಅನುಮತಿ ಪ್ರಕಾರ ಮ|| ಚನ್ನಗಿರಿ ರಾಮಣ್ಣನವರು ಅಗ್ರಾಸನವನ್ನು ವಹಿಸಿದ್ದರು. ಟೌನ್ ವೈಸ್ ಪ್ರೆಸಿಡೆಂಟ್ ಮ|| ವೆಂಕಟರಾಮಯ್ಯನವರು ಮನುಷ್ಯರು ಮುಖ್ಯವಾಗಿ ಆರೋಗ್ಯಭಾಗ್ಯವನ್ನು ಹೊಂದಲು ಪ್ರಯತ್ನಮಾಡಬೇಕು, ಮತ್ತು ಎಲ್ಲರೂ ಉನ್ನತ ಪದವಿಯನ್ನು ಅನುಭವಿಸಲು ಪ್ರಯತ್ನ ಮಾಡಬೇಕು ಎಂಬದಾಗಿ ತಿಳಿಸಿದರು. ಮ|| ಜಿ. ಎಂ. ಕಾಡಪ್ಪನವರೂ ಗೌರ್ನಮೆಂಟ್ ಕರ್ನಾಟಕ ವೈದ್ಯಶಾಲಾ ಪಂಡಿತರೂ ಪ್ಲೀಡರ್ ಅನಂತಯ್ಯನವರೂ ಇದೇ ಅಭಿಪ್ರಾಯದೊಡನೆ ಸಕಲರೂ ಸಾಧ್ಯವಾದ ಮಟ್ಟಿಗೆ ಪರೋಪಕಾರವನ್ನು ಮಾಡಬೇಕೆಂಬದಾಗಿ ತಿಳಿಸಿದರು. ಮೆ|| ಹೆಲ್ತ್ ಆಫೀಸರ್ ಶರ್ಮ ಸಾಹೇಬರವರು ಎದ್ದು ನಿಂತುಕೊಂಡು ಅನುಕೂಲಸ್ಥರು ಸಹಾಯಮಾಡಬಹುದು, ಬಡವರಾದ ನಾವು ಹ್ಯಾಗೆ ಮಾಡುವದು ಎಂದು ನೀವು ಯೋಚಿಸಬಹುದು. ಬಡವರು ತಮ್ಮಿಂದ ಆಗತಕ್ಕ ಸಹಾಯ ಎಂದರೆ ಪಕ್ಕದ ಮನೆಯಲ್ಲಿ ಯಾರಾದರೂ ತನಗಿಂತಲೂ ಕೇವಲ ಬಡವರು ಕಾಯಿಲೆಯಾಗಿದ್ದರೆ ಅವರಿಗೆ ಔಷಧ ತಂದುಕೊಡುವದು, ಇಲ್ಲವೆ ಔಷಧಾಲಯಕ್ಕಾದರೂ ಹೋಗಿ ತಿಳಿಸುವದು ಈ ರೀತಿಯಾದರೂ ಉಪಕಾರಮಾಡಿ ತಮಗಿಂತಲೂ ತಿಳುವಳಿಕೆ ಕಡಿಮೆಯಾದವರಿಗೆ ಗ್ರಹಿಕೆಯನ್ನು ಉಂಟುಮಾಡುವದು ಇವೇ ಮೊದಲಾದ ಬುದ್ಧಿವಾದವನ್ನು ತಿಳಿಸಿದರು. ನಂತರ ಕೊಣ್ಣೂರು ನಾಟಕ ಕಂಪನಿಯವರ ಸಂಗೀತವೂ ಗಂಧ ಪುಷ್ಪ ತಾಂಬೂಲಾದಿಗಳ ವಿನಿಯೋಗವೂ ನಡೆದು ಹಿಪ್ ಹಿಪ್ ಹುರೆ ಎಂಬ ಸಂತೋಷದಿಂದ ಸಭೆಯು ಮುಕ್ತಾಯವಾಯಿತು.

ಕಾನಗಾನಹಳ್ಳಿ ತಾಲ್ಲೂಕು ದೊಡ್ಡ ಮರಳವಾಡಿ ಗ್ರಾಮ.—ಈಗ ಇಲ್ಲಿ ಬೇಲು ಜೋರಾಗಿದೆ. ಈ ಊರಲ್ಲಿ ದನಕರುಗಳಿಗೆ ಚಪ್ಪೆ ರೋಗ ಪ್ರಾಪ್ತವಾಗಿ ದಿನ ಒಂದಕ್ಕೆ 7-8 ರಾಸುಗಳ ಪ್ರಕಾರ ಸುಮಾರು 8-10 ದಿನಗಳಿಂದ ಸಾಯುತ್ತಲಿವೆ. ಶೀನಾರಿಗೆ ಬಹಳ ಪ್ರಯಾಸವಾಗಿದೆ. ಈ ಊರಲ್ಲಿ ಜನಗಳು ಕೂಡ ಜೀವಿಸುವುದು ತುಂಬಾ ಕಷ್ಟವಾಗಿದೆ. ಯಾತಕ್ಕೆಂದರೆ ಮುಖ್ಯವಾಗಿ ಜಲವಸತಿ ಇಲ್ಲದೆ ಇರುವುದೇ ಕಾರಣವಾಗಿದೆ—ಇಲ್ಲಿ ಇರುವ ಮೆ|| ಶೇಷಗಿರಿರಾವ್ ಶೇಕದಾರ್ರವರು ಇಲ್ಲಿಗೆ ಬಂದಾರಭ್ಯದಿಂದ ಜನಗಳ ಸೌಕರ್ಯದಲ್ಲಿಯೇ ಕಣ್ಣು ಇಟ್ಟುಕೊಂಡು ಹಗಲು ಇರುಳು ಎನ್ನದೆ ಕಷ್ಟಪಡುತ್ತಾರೆ. ಇಂಥಾವರು ಈಗ ಕೋಲಾರಕ್ಕೆ ವರ್ಗವೆಂಬ ವದಂತಿ ಇದೆ. ಇದಕ್ಕಾಗಿ ಜನಗಳು ಬಹಳವಾಗಿ ವಿಷಾದಿಸುತ್ತಾರೆ. ಈಗ ಇಲ್ಲಿ ವಿ. ಇ. ಸ್ಕೂಲಿನಲ್ಲಿ ಪಾಠಗಳು ಚೆನ್ನಾಗಿ ನಡಿಯುವುದಿಲ್ಲ. ಈ ಸ್ಕೂಲನ್ನು ಕೇಳುವವರೇ ಗತಿ ಇಲ್ಲ. ಇಲ್ಲಿ ಸುಮಾರು 800-900 ಮನೆಗಳಿದ್ದಾಗ್ಯೂ ಕೂಡ ಗ್ರಾಮ ಪಾಠಶಾಲೆ ಇಲ್ಲವೇ ಇಲ್ಲ. ನಮ್ಮ ದಯಾಳು ಸರ್ಕಾರದವರು ದಯವಿಟ್ಟು ಛಾವಡಿಮಾಲಿಗಳನ್ನು ಒದಗಿಸಿದಲ್ಲಿ ತುಂಬಾ ಸಂತೋಷವಾಗಿರುತ್ತೆ. ಈಗ ಸುಮಾರು 8-9 ತಿಂಗಳಿಂದಲೂ ಇಲ್ಲಿ ಅಕ್ಕಸಾಲಿಗರ ಬೀದಿಯಲ್ಲಿರುವ ಗಣೇಶನ ಗುಡಿಯಲ್ಲಿ ಗ್ರಾಂಟು ಗರಲ್ಸ್ ಸ್ಕೂಲನ್ನು ಇಟ್ಟುಕೊಂಡಿರುವ ಎ ಕೃಷ್ಣಭಟ್ಟರು ಈಗ ರಾತ್ರಿ ಸ್ಕೂಲ್ ಇಟ್ಟು ಇರುವುದು ಸ್ತೋತ್ರಾರ್ಹವಾಗಿರುತ್ತೆ. ಈ ಊರಲ್ಲಿ ರಾತ್ರಿ ಕತ್ತಲೆ ಗಲಾಟೆ ಜೋರಾಗಿ ಎಲ್ಲೆಲ್ಲಿ ನೋಡಿದರೂ ಅದೇ ಆಗಿರುವದರಿಂದ ಸರ್ಕಾರದವರು ಅದನ್ನು ತಕ್ಕಮಟ್ಟಿಗೆ ಕಮ್ಮಿ ಮಾಡುತ್ತಾರೆಂದು ನಂಬಿದೇನೆ. ಇಲ್ಲಿಂದ ಹಾರೋಹಳ್ಳಿಗೆ ಸರಿಯಾಗಿ ರಸ್ತೆ ಇಲ್ಲವೆ ಜನಗಳು ತುಂಬಾ ತೊಂದರೆಪಡುತ್ತಾರೆ. ಇದೂ ಅಲ್ಲದೆ ಅಕ್ಕಪಕ್ಕ ಗ್ರಾಮದ ಮರಾಟಿಯವರೆಲ್ಲರೂ ಅಂದರೆ ಸುಮಾರು 80-90 ಜನಗಳು ಯುದ್ಧಕ್ಕೆ ಹೋಗಿರುತ್ತಾರೆ. ದೇವರ ದಯದಿಂದ ಅವರೆಲ್ಲಾ ವಾಪಸು ಬರಬೇಕೆಂದು ನಮ್ಮ ಕೋರಿಕೆ.

ಮೇಲುಕೋಟೆ.—ಈ ಸ್ಥಳವು ಪುರಾಣಪ್ರಸಿದ್ಧವಾಗಿಯೂ ಚರಿತ್ರಾರ್ಹವಾಗಿಯೂ ವೈಷ್ಣವ ಸೀಮೆಯಲ್ಲಿ ಮುಖ್ಯವಾದ ಯಾತ್ರಾಸ್ಥಳವಾಗಿಯೂ ಇರುತ್ತದೆ. ಇಲ್ಲಿ ವೈದಿಕ ವಿದ್ಯೆಯಲ್ಲಿ ಪರಿಶ್ರಮ ಪಟ್ಟ ಅನೇಕ ಮಹನೀಯರೂ ವರ್ತಕರೂ ಶ್ರೀಮಂತರೂ ಇರುತ್ತಾರೆ. ಆಗಾಗ್ಗೆ ಮಠಾಧಿಪತಿಗಳಿಂದಲೂ ಇತರರಿಂದಲೂ ಬಹುಮಾನವನ್ನೂ ಪಡೆಯಲು ಅರ್ಹರಾದ ಪಂಡಿತರಿಗೂ ಒಂದು ಸಂಸ್ಕೃತ ಕಾಲೇಜೂ ಸಂಸ್ಕೃತ ಭಂಡಾರವೂ ಇರುತ್ತವೆ. ಸಾಮಾನ್ಯರಿಗೆ ಪುಸ್ತಕಾಲಯವೂ ವಾಚನಾಲಯವೂ ಇರಲಿಲ್ಲ. ಈಚೆಗೆ ಪ್ರೋಗ್ರೆಸ್ ಕಮಿಟಿಯ ಪ್ರೆಸಿಡೆಂಟ್ ಮ|| ಎಂ ಶಂಕರಪ್ಪನವರ ಅವಶ್ಯವಾದ ಪ್ರೋತ್ಸಾಹದಿಂದ ಕಳೆದ 9 ನೆಯ ತಾರೀಖಿನ ದಿವಸ ಇಲ್ಲಿ ಸಾರ್ವಜನಿಕ ಪುಸ್ತಕಾಲಯವೂ ವಾಚನಾಲಯವೂ ಬಹಳ ಸಂಭ್ರಮದಿಂದ ಸ್ಥಾಪಿಸಲ್ಪಟ್ಟಿರುತ್ತದೆ. ಪುಸ್ತಕಾಲಯದ ಏರ್ಪಾಡಿಗೆ ಬೇಕಾಗುವ ಸಹಾಯ ದ್ರವ್ಯ ರೂ. 100 ಅದೇ ದಿವಸ ಜಮಾಯಿಸಲ್ಪಟ್ಟಿತು. ಸರ್ಕಾರದವರು ಸಹಾಯವನ್ನು ದಯಪಾಲಿಸುವಂತೆ ಪ್ರಾರ್ಥಿಸುತ್ತೇವೆ. ಈ ಆಲಯವನ್ನು ಅಭಿವೃದ್ಧಿಗೆ ತರಲು ರೆ. ಡೆ|| ಕ|| ಮ|| ಎಂ ಕೆ ... ಆಚಾರ್ಯರವರೂ ಪ್ರೋಗ್ರೆಸ್ ಕಮಿಟಿ ಮೆಂಬರುಗಳಲ್ಲಿ ಕೆಲವರೂ ನೇಯಿಗೆ ಸೊಸೈಟಿ ಪ್ರಮುಖರೂ ಇತರ ಮಹಾಜನಗಳೂ ಬಹಳ ಧಾರಾಳವಾಗಿ ಸಹಾಯಮಾಡುತ್ತಾರೆ. ಈ ವಾಚನಾಲಯಕ್ಕೆ ಪ್ರಕೃತ 13 ಪತ್ರಿಕೆಗಳು ತರಿಸಲ್ಪಡುತ್ತಲಿವೆ. ಸರ್ಕಾರದವರು ಪ್ರಜೆಗಳ ಏಳಿಗೆಗಾಗಿ ಅನೇಕ ಪ್ರಯತ್ನಗಳನ್ನು ಮಾಡುತ್ತಲಿರುವರು. ಅವುಗಳ ಪ್ರಯೋಜನವನ್ನು ನಾವುಗಳು ಉಪಯೋಗಿಸಿಕೊಂಡರೆ ಬಹಳ ಉತ್ತಮ. ನಮ್ಮ ವಿರಾಮಕಾಲಗಳಲ್ಲಿ ಅನುಪಯೋಗವಾಗಿ ಕಾಲ ಕಳೆಯುವದಕ್ಕಿಂತಲೂ ಎಲ್ಲರೂ ಒಂದೇ ಕಡೆ ಸೇರಿ, ತಮ್ಮ ಏಳಿಗೆಗೆ ಬೇಕಾದ ವಿಷಯಗಳನ್ನು ಕುರಿತು ಚರ್ಚಿಸಿ ಅನುಕೂಲ ಮಾಡಿಕೊಳ್ಳುವದು ಒಳ್ಳೇದು. ಈ ವಾಚನಾಲಯವನ್ನು ಸ್ಥಾಪಿಸುವ ಕಾಲದಲ್ಲಿಯೂ ಕಳೆದ ವೈರಮುಡಿ ಉತ್ಸವಕಾಲದಲ್ಲಿಯೂ ನೇಯಿಗೆ ಸೊಸೈಟಿಯವರಿಂದ ನಡಿಸಲ್ಪಟ್ಟ ಕೈಗಾರಿಕೆ ಪ್ರದರ್ಶನ, ಫೋಟಾಫೋಟು ಇತ್ಯಾದಿಗಳಿಗೆ ಬಹುಮಾನ ವಿನಿಯೋಗವು ನೆರವೇರಿತು. ನಮ್ಮ ಡೆಪ್ಯುಟಿ ಅಮಲ್ದಾರ್ ಮ|| ಎಂ. ಶಂಕರಪ್ಪನವರು ಸ್ವಲ್ಪಕಾಲ ಈ ತಾಲ್ಲೋಕಿನಲ್ಲಿದ್ದರೂ ಪ್ರಜಾರಂಜಕವಾದ ಅನೇಕ ಏರ್ಪಾಡುಗಳನ್ನು ಅಲ್ಲಲ್ಲಿ ಮಾಡಿರುತ್ತಾರೆ. ಇವರ ಪ್ರಯತ್ನವು ಸ್ತುತ್ಯವೂ, ಶ್ಲಾಘನೀಯವೂ ಆಗಿರುತ್ತೆ. ಎಂ. ಕೆ. ತಿರುಮಲಾಚಾರ್ಯರವರು ಲೈಬ್ರರಿಗೆ ಕೆಲವು ಪುಸ್ತಕಗಳನ್ನು ಉಚಿತವಾಗಿ ದಯಪಾಲಿಸಿರುತ್ತಾರೆ. ಈ ಮಹನೀಯರು ಇದಕ್ಕೆ ಪ್ರೆಸಿಡೆಂಟರಾಗಿರುವದರಿಂದ ನಮ್ಮಗಳಿಗೆ ಸಮಸ್ತ ಭಾಗದಲ್ಲೂ ಅನುಕೂಲ ಉಂಟಾಗುವದರಲ್ಲಿ ಸಂಶಯವಿಲ್ಲ.

ಸಕಲೇಶಪುರ.—ಈ ಮಾಹೆ 18 ನೇ ತಾರೀಖು ಮಂಗಳವಾರದ ದಿವಸ ಮೆಹರ್ಬಾನ್ ದಿವಾನ್ ಸಾಹೇಬರವರು ಈ ಪುರಕ್ಕೆ ದಯಮಾಡಿಸಿದ್ದರು. ಈ ಮಹನೀಯರನ್ನು ಗೌರವದಿಂದ ಬರಮಾಡಿಕೊಂಡು ತಮ್ಮ ಕೃತಜ್ಞತೆಯನ್ನು ತೋರಿಸಲೋಸುಗ ಈ ಪುರನಿವಾಸಿಗಳು ಊರನ್ನು ಸುಂದರವಾಗಿ ಅಲಂಕರಿಸಿದ್ದರು. ಈ ಮಹನೀಯರಿಗೆ ಸುಸ್ವಾಗತವನ್ನು ಬಯಸುವದಕ್ಕೋಸ್ಕರ ಅನೇಕ ದೇಶೀಯ ಕಾಫೀಪ್ಲಾಂಟರುಗಳೂ ವ್ಯಾಪಾರಸ್ಥರೂ ಅಧಿಕಾರಿಗಳೂ ಇತರ ಪುರನಿವಾಸಿಗಳೂ ಸೇತುವೆಯ ಮುಂದೆ ಹಾಕಿದ್ದ ಮಂಟಪದಲ್ಲಿ ನೆರೆದಿದ್ದು ತಮ್ಮ ವಂದನೆಗಳನ್ನು ಸಮರ್ಪಿಸಿದರು. ತರುವಾಯ ದಿವಾನ್ರವರು ಎಲ್ಲಾ ಸ್ಕೂಲುಗಳನ್ನೂ ಆಫೀಸುಗಳನ್ನೂ, ರೀಡಿಂಗ್ ರೂಮ್, ಪರಸ್ಪರ ಸಹಾಯ ಸಂಘದ ನಡುವಳಿಕೆಯನ್ನೂ ಅಜಮಾಯಿಷಿ ಮಾಡಿದರು. ಮುಖ್ಯವಾಗಿ ಈ ತಾಲ್ಲೂಕಿನ ಕೆಲಸವನ್ನು ನೋಡಿ ಬಹಳ ಸಂತೋಷಪಟ್ಟರು. ಮಧ್ಯಾನ್ಹ ಸ್ಕೂಲ್ ಕಟ್ಟಡದಲ್ಲಿ ದರ್ಬಾರ್ ನಡೆಯಿತು. ಪ್ರಜೆಗಳ ಅಹವಾಲನ್ನು ಸಾವಧಾನವಾಗಿ ಕೇಳಿದರು. ಅಹವಾಲುಗಳ ಮುಖ್ಯಾಂಶಗಳು ಯಾವವೆಂದರೆ—ಸ್ವಂತ ಮರವೊಂದನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಬೇಕಾದರೆ ಲೈಸನ್ಸ್ ಪಡೆದು ಫಾರೆಸ್ಟ್ ಇಲಾಖೆಯಿಂದ ಮಾರ್ಕು ಮಾಡಿಸಿಕೊಂಡು ನಂತರ ಸಾಗಿಸಬೇಕಾದ್ದರಿಂದ ಬಹಳ ತೊಂದರೆಯಾಗುತ್ತೆಂತ ಪ್ರಜೆಗಳು ಹೇಳಿಕೊಂಡರು. ಈ ವಿಷಯವನ್ನು ಇತ್ಯರ್ಥ ಮಾಡುವ ಹಾಗೆ ಡೆಪ್ಯುಟಿಕಮಿಷನರ್ ಸಾಹೇಬರವರಿಗೆ ತಿಳಿಸಿದ್ದಲ್ಲದೆ ದಸರಾ ಅಸೆಂಬ್ಲಿಗೆ ಚರ್ಚೆ ತರಬಹುದೆಂತಲೂ ಅಪ್ಪಣೆ ಕೊಡಿಸಿದರು. ಅಬ್ಕಾರಿ ಇಲಾಖೆ ವಿಷಯದಲ್ಲಿ ಏನಾದರೂ ತಿಳಿಸತಕ್ಕ ಕೋರಿಕೆವುಂಟೇ ಎಂದು ಪ್ರಶ್ನೆಮಾಡಲು ಪ್ರಜೆಗಳು ಟ್ರೀಟಾರ್ಪಿಂಗ್ ಸಿಸ್ಟಮ್ ಬಂದ ಮೇಲೆ ಅದರಿಂದ ಉಂಟಾದ ತೊಂದರೆಯಿಂದ ಬಗನೀ ಮರವನ್ನು ಬೆಳಸುವದು ರೈತರು ಬಿಟ್ಟಿರುತ್ತಾರೆಂತಲೂ, ಬಗನೀ ಹೆಂಡವು ಸಾಲದ್ದರಿಂದ ಆರಕ್ ಮುಂತಾದವುಗಳು ಉಪಯೋಗಕ್ಕೆ ಬಂದವೆಂತಲೂ, ಇದರಿಂದ ಜನಗಳ ಆರೋಗ್ಯವು ಮತ್ತು ಭಾಗ್ಯವೂ ಕಮ್ಮಿಯಾಯಿತೆಂತಲೂ, ಪುನಃ ತೆರಿಗೆ ಕೊಟ್ಟು ಬಗನಿಯನ್ನು ತಾವೇ ಇಳಿಸುವ ಹಾಗೆ ಅಪ್ಪಣೆಯಾದರೆ ಪ್ರಜೆಗಳು ಚೇತರಿಸಿ ಕೊಳ್ಳಬಹುದೆಂತಲೂ ಅರಿಕೆಮಾಡಿಕೊಂಡದ್ದಕ್ಕೆ ದಿವಾನ್ ಸಾಹೇಬರು ನೋಟ್ ಮಾಡಿಕೊಂಡರು. ಕುಡಿಯುವ ನೀರುಳ್ಳ ಭಾವಿಗಳು ಇಲ್ಲದ್ದರಿಂದ ಕಲ್ಮಷ ನೀರನ್ನು ಕುಡಿದು ಆರೋಗ್ಯ ತಪ್ಪಿಹೋಗಿದೆ ಯೆಂತಲೂ ಭಾವಿಗಳನ್ನು ಜಾಸ್ತಿಯಾಗಿ ಮಾಡಿಸಿಕೊಡಬೇಕೆಂದು ಕೇಳಿಕೊಂಡರು. ಹಾಸನದಿಂದ ಸಕಲೇಶಪುರದ ಮಾರ್ಗವಾಗಿ ಮಂಗಳೂರಿಗೆ ರೈಲ್ ಇಲ್ಲದಿದ್ದರೆ ಟ್ರಾಂವೆ ಹಾಕಿಸಿಕೊಡಬೇಕೆಂತಲೂ ಯಸಳೂರಿಗೆ ಉತ್ತರ ಸೀಮೆಯಲ್ಲಿ ಒಂದು ಮಾರ್ಕೆಟ್ಟನ್ನು ಏರ್ಪಡಿಸಿಕೊಡಬೇಕೆಂತಲೂ ಬಿಸಲೆ, ಶುಕ್ರವಾರ ಸಂತೆ, ಕೆಂಚಮ್ಮನ ಹೊಸಕೋಟೆ ಹೋಬಳಿಯಲ್ಲಿ ಆಸ್ಪತ್ರೆಯನ್ನು ಇಡ್ಸಿಕೊಡಬೇಕೆಂತಲೂ, ಕ್ವಿನೀನ್ ಮಾತ್ರೆಗಳನ್ನು ಈಗ ನಡಿಸಿಕೊಡುವಂತೆ ಇನಾಮಾಗಿ ಕೊಡಿಸಿ ಕೊಡಬೇಕೆಂತಲೂ ಸ್ಕೂಲ್ಗಳನ್ನು ಜಾಸ್ತಿ ಮಾಡಿಸಬೇಕೆಂತಲೂ ಸಕಲೇಶಪುರದಲ್ಲಿ ಒಂದು ಪಂಚಮಸ್ಕೂಲನ್ನು, ಮತ್ತು ಕೈಗಾರಿಕೆ ಸ್ಕೂಲನ್ನು ಇಡಿಸಿಕೊಡಬೇಕೆಂತಲೂ, ಸಕಲೇಶಪುರದ ಬಾಲಕೀಯರ ಸ್ಕೂಲಿಗೆ ಮುಖ್ಯೋಪಾಧ್ಯಾಯಿನಿ ಒಬ್ಬರನ್ನು ನೇಮಕಮಾಡಬೇಕೆಂತಲೂ ಸಕಲೇಶಪುರದಲ್ಲಿ ಒಂದು ಬ್ರಾಂಚ್ ಬ್ಯಾಂಕ್ ಬೇಕೆಂತಲೂ, ರಾಂಟಾನ ತೆಗೆಸುವ ಏರ್ಪಾಡು ಮಾಡಬೇಕೆಂತಲೂ, ಅಹವಾಲ್ ಹೇಳಿಕೊಂಡರು. ದಿವಾನ್ ಸಾಹೇಬರು ಬಹಳ ಸಾವಧಾನವಾಗಿ ಕೇಳಿದ್ದಕ್ಕೆ ಪ್ರಜೆಗಳು ಬಹಳವಾಗಿ ಸಂತೋಷ ಪಡುತ್ತಿರುವರು.

ಬೇಲೂರು.—ಕಳೆದ ವಾರದಲ್ಲಿ ಒಂದೆರಡು ಹದ ಮಳೆಯಾಗಿ ಭೂಮಿಯೆಲ್ಲವೂ ಹದಕ್ಕೆ ಬಂದುದರಿಂದ ರೈತರು ಉತ್ಸಾಹಶೀಲರಾಗಿ ವ್ಯವಸಾಯಾರಂಭ ಮಾಡಿದಾರೆ.—ಇದೇ 16 ನೇ ತಾ. ಭಾನುವಾರ ಪ್ರಾತಃಕಾಲ ನಮ್ಮ ದಿವಾನ್ ಪ್ರಭುಗಳವರು ಇಲ್ಲಿಗೆ ಬಿಜಮಾಡಿಸಿದರು. ತಾಲ್ಲೂಕ್ ಕಚೇರಿ ಮುಂಭಾಗದಲ್ಲಿ ನಿರ್ಮಿತವಾಗಿದ್ದ ಚಪ್ಪರದಲ್ಲಿ ಅಧಿಕಾರಿಗಳೂ ಪುರಪ್ರಮುಖರೂ ಕಾದಿದ್ದು ಒಪ್ಪಿಸಿದ ನಜರ್ ಮುಜರೆಗಳನ್ನು ಅಂಗೀಕರಿಸಿ ತಕ್ಷಣವೇ ಮುತ್ತಿನಾಂಕೊಡನೆ ಪಲೇಬೀದಿಗೆ ಪ್ರಯಾಣಮಾಡಿ ಅಲ್ಲಿನ ಸ್ಥಿತಿಗತಿಗಳನ್ನು ನೋಡಿಕೊಂಡು ಅದೇ ಮಧ್ಯಾಹ್ನ ಇಲ್ಲಿಗೆ ದಯಮಾಡಿಸಿ ಟವನ್ ಹಾಲಿನಲ್ಲಿ ದರ್ಬಾರ್ ನಡಿಸಿ ತಾಲ್ಲೂಕಿನ ಕ್ಷೇಮ ಸಮಾಚಾರಗಳನ್ನೂ ಪ್ರಜೆಗಳ ಆಯ ವ್ಯಯ ವಿದ್ಯಮಾನಗಳನ್ನೂ ವಿದ್ಯಾಭಿವೃದ್ಧಿ ಗ್ರಾಮಾಭಿವೃದ್ಧಿ ವಿಚಾರಗಳನ್ನೂ ಸಂಭಾಷಣೆಪೂರ್ವಕವಾಗಿ ತಾಳ್ಮೆಯಿಂದ ರೈತರು ವರ್ತಕರುಗಳ ಮೂಲಕ ತಿಳಿದುಕೊಂಡು ಅವರ ಪ್ರಶ್ನೆಗಳಿಗೆ ಸಮುತ್ತರಗಳನ್ನಿತ್ತು ಭೋಜನಾನಂತರದಲ್ಲಿ ಪುರಪ್ರವೇಶಮಾಡಿ ದೇವಸ್ಥಾನವನ್ನು ನೋಡಿ, ತೀರ್ಥಪ್ರಸಾದಗಳನ್ನು ಸ್ವೀಕರಿಸಿ ದೇವಾಲಯದ ಪುರೋಭಿವೃದ್ಧಿಗೆ ತಕ್ಕಂತೆ ತಸ್ತೀಕನ್ನು ಹೆಚ್ಚಿಸಿಕೊಡುವದಾಗಿಯೂ ವಿಮಾನವನ್ನು ಕಟ್ಟಿಸಿ ಕೊಡುವದಾಗಿಯೂ ಸದುತ್ತರವನ್ನು ದಯಪಾಲಿಸಿ ಹಾಗೆಯೇ ಹಿಂತಿರುಗಿ ಬರುತ್ತಾ ನಾರಸಿಂಹಯ್ಯನ ಮಂಟಪದಲ್ಲಿ ಹಾಸನ್ ಡಿಸ್ಟ್ರಿಕ್ಟ್ ಏಜನ್ಸರಿಂದ ಲೆಕ್ಚರರ ತಿಮ್ಮಪ್ಪನಿಂದ ಸಿದ್ಧವಾಗಿದ್ದ ಪಂಚಮ ಜನಾಂಗವನ್ನು ಕಟಾಕ್ಷಿಸಿ ಆ ಗುಂಪಿನಲ್ಲೊಬ್ಬನಾದ ಚನ್ನನೆಂಬುವನು ಓದಿದ ವಿಜ್ಞಾಪನಾ ಪತ್ರಿಕೆಯನ್ನು ಆದರದಿಂದ ಕೇಳಿ ಸಂತೋಷಪಟ್ಟು ಅವರು ಕೇಳಿಕೊಂಡಿದ್ದ ಸೌಲಭ್ಯಗಳನ್ನು ದಯಪಾಲಿಸುವದಾಗಿ ಅಭಯವನ್ನಿತ್ತು ಟವನ್ ಇನ್ಸ್‌ಪೆಕ್ಟರ್ ಮಾಡಿ ಗರಲ್ಸ್ ಸ್ಕೂಲನ್ನು ಪರಾಂಬರಿಸಿ ಟವನ್ ಹಾಲಿನಲ್ಲಿ ನಡೆಯುತ್ತಿದ್ದ ಕೋಆಪರೇಟಿವ್ ಮತ್ತು ತಾಲ್ಲೂಕ್ ಅಭಿವೃದ್ಧಿ ಸಂಘಗಳ ಕಾರ್ಯಗಳನ್ನವಲೋಕಿಸಿ ನಂತರ ತಾಲ್ಲೂಕ್ ಆಫೀಸುಗಳನ್ನು ಪರೀಕ್ಷಿಸಿ ತರುವಾಯ ಇಲ್ಲಿನ ಪುರಪ್ರಮುಖರಲ್ಲೊಬ್ಬರಾದ ಮ|| ಕೆ. ತಮ್ಮಯ್ಯನವರು ಅಲಂಕರಿಸಿದ್ದ ಮಹಡಿಯ ಮೇಲಕ್ಕೆ ದಯಮಾಡಿಸಿ ಉಪಾಹಾರಗಳನ್ನು ಸ್ವೀಕರಿಸಿ ತತ್‌ಕ್ಷಣವೇ ಸಿಂಹಾಸನಪುರೀಭಿಮುಖವಾಗಿ ಪ್ರಯಾಣಮಾಡಿದರು. ನಮ್ಮ ಈ ಸಚಿವಶಿರೋಮಣಿಗಳ ಆಗಮನದಿಂದ ಈ ಬೇಲೂರಿಗೆ ವಿದ್ಯೆ, ಆರೋಗ್ಯ, ವ್ಯವಸಾಯ, ಸ್ವಸಹಾಯ ಮುಂತಾದ ವಿಷಯಗಳಲ್ಲಿ ಬಹು ಒಳ್ಳೇ ಏರ್ಪಾಡುಗಳು ಸದ್ಯದಲ್ಲಿಯೇ ಆದಾವೆಂಬ ನಿರೀಕ್ಷೆಯುಂಟು.—ಪರಸ್ಪರಸಹಾಯಕ ಸಂಘಗಳ ಮೊದಲನೇ ಸಮ್ಮೇಳನವು ತಾ. 15, 16, 17 ಈ ಮೂರು ದಿನಗಳಲ್ಲಿ ಈ ತಾಲ್ಲೂಕಿನ 16 ಸೊಸೈಟಿಗಳ ಪ್ರತಿನಿಧಿಗಳಿಂದಲೂ ಇತರ ಬಹುಮಂದಿ ಮೆಂಬರುಗಳಿಂದಲೂ ಸಂಘವು ನಡಿಸಲ್ಪಟ್ಟಿತು. ನಮ್ಮ ಸಂಸ್ಥಾನದ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ಎಂ. ಎ. ಸಾರಣಯ್ಯಂಗಾರ್ಯರವರೂ, ಮ|| ವಿ. ಎನ್. ನರಸಿಂಹಯ್ಯಂಗಾರ್ಯರವರೂ ದಯಮಾಡಿಸಿದ್ದರು. ಇದರ ಜೊತೆಯಲ್ಲಿ ತಾಲ್ಲೂಕ್ ಪ್ರೋಗ್ರೆಸ್ ಕಮಿಟಿ ವಿಭಾಗಗಳೂ ಸೇರಿದ್ದಿತು. ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ಸಂಘಗಳ ಕಾರ್ಯಗಳು ಶಿಸ್ತಿನಿಂದ ನಡಿಸಲ್ಪಟ್ಟವು. ಶ್ರೀಚನ್ನಕೇಶವಸ್ವಾಮಿಯವರ ರಥೋತ್ಸವ ಈ ಮಾಹೆ ತಾ 7 ನೇ ಶುಕ್ರವಾರ ಪ್ರಾರಂಭವಾಗಿ ತಾ. 17 ನೇ ಸೋಮವಾರ ರಥವು ತನ್ನ ನೆಲೆಯನ್ನು ಸೇರಿತು. ಈ ವರುಷದ ರಥೋತ್ಸವ ಸಮ್ಮಂಧದ ಉತ್ಸವಗಳೂ ರಥೋತ್ಸವವೂ ಕಾಲ ಕ್ಲಿಪ್ತವಿಲ್ಲದಿದ್ದರೂ, ಸಾಂಗವಾಗಿ ನೆರವೇರಿಸಲ್ಪಟ್ಟವು. ಭಕ್ತಾದಿಗಳಿಗೆ ದೇವರ ಸೇವೆ ವಿಷಯದಲ್ಲಿ ಬಹಳ ಸೌಲಭ್ಯಗಳು ಕಲ್ಪಿಸಲ್ಪಟ್ಟಿದ್ದವು.

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಸ್ಥಳಗಳ ಬ್ಯಾಂಕುಗಳಿಗೆ ಏಪ್ರಿಲ್ ತಾ. 8 ರ ವರೆಗೆ ಜಮಾಯಿಸಿರುವ ಚಂದಾ ಹಣದ ಲೆಕ್ಕಂದಲೆ :—

ಸಿಮ್ಲಾ ಅಲೈಯನ್ಸ್ ಬ್ಯಾಂಕಿಗೆ	ರೂ. 46,85,862- 5-0
ಬಂಗಾಳ ಬ್ಯಾಂಕಿಗೆ	,, 30,38,207- 5-6
ಬೊಂಬಾಯಿ ಬ್ಯಾಂಕಿಗೆ	,, 8,37,361- 1-9
ಮದರಾಸ್ ಬ್ಯಾಂಕಿಗೆ	,, 6,73,403-12-4
ಒಟ್ಟು ರೂಪಾಯಿ	೯೨,೩೩,೮೩೪- 8-7

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕುರುವಾಕ್ಲ ಎಂಬ ಊರಿನಲ್ಲಿ ಒಬ್ಬ ಯೌವನಸ್ಥನು ಆತ್ಮಹತ್ಯಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟಂತೆ ಅವನ ಮೇಲೆ ಮೊಕದ್ದಮೆ ಬಂದಿತು. ಆ ಹುಡುಗನು ಜಡ್ಜಿಯ ಎದುರಿಗೆ ಹೇಳಿದ್ದೇ ನೆಂದರೆ—ನಾನು ಸೈನ್ಯಕ್ಕೆ ಸೇರಿಕೊಳ್ಳುವುದಕ್ಕೆ ಇಂಗ್ಲೆಂಡಿಗೆ ಹೋಗಬೇಕೆಂದು ನಮ್ಮ ತಂದೆಯನ್ನು ಪ್ರಯಾಣಕ್ಕೆ ಹಣ ಕೊಡೆಂದು ಕೇಳಿದಾಗ ಕೊಡಲಿಲ್ಲ. ಆಸ್ತಿಯಲ್ಲಿ ನನ್ನ ಪಾಲನ್ನಾದರೂ ಕೊಡೆಂದು ಕೇಳಿದರೂ ನಮ್ಮ ತಂದೆ ಕೊಡದೆ ತಿರಸ್ಕರಿಸಿದನು. ಆಗ ಆತ್ಮಹತ್ಯಮಾಡಿಕೊಳ್ಳುವಂತೆ ನಟಿಸಿ ಹೀಗಾದರೂ ಕೋರ್ಟಿನ ಮುಂದೆ ಬರಲೆಂದು ಈ ರೀತಿ ಗಾಯಮಾಡಿಕೊಂಡೆನು. ನಿಜವಾಗಿಯೂ ಆತ್ಮಹತ್ಯಮಾಡಿಕೊಳ್ಳಬೇಕೆಂಬ ಉದ್ದೇಶ ನನಗಿಲ್ಲವೆಂದು ಮನಂಕರಗಿ ಹೇಳಿಕೊಂಡನು. ಜಡ್ಜಿಯು ಇವನ್ನೆಲ್ಲಾ ಕೇಳಿ ಅವನ ವಿಷಯದಲ್ಲಿ ಕನಿಕರಪಟ್ಟು ಅವನ ತಂದೆಯನ್ನು ಕರೆದು ಅವನಿಗೆ 150 ರೂಪಾಯಿ ಕೊಡು ಎಂದು ಆಜ್ಞೆ ಮಾಡಿದ್ದಲ್ಲದೆ ಆ ಹುಡುಗನಿಗೆ ಯುದ್ಧದ ಪ್ರಯಾಣದ ಖರ್ಚಿನ ಫಂಡಿನ ಸೆಕ್ರೆಟರಿಯವರನ್ನು ಕೇಳಿಕೊಂಡರೆ ಅವರು ಸಹಾಯಮಾಡುತ್ತಾರೆಂದು ವಿವೇಕ ಹೇಳಿ ಕಳುಹಿಸಿದರು.

ಬೊಂಬಾಯಿ ಅಧಿಸ್ಥಳಕ್ಕೆ ಸೇರಿದ ಕಚ್ ಸಂಸ್ಥಾನವು ಬಹಳ ಸಣ್ಣದು; ಅಲ್ಲಿ ಸಾಲೀಯಾನಾ ಸುಮಾರು 38 ಲಕ್ಷ ರೂಪಾಯಿ ಹುಟ್ಟುವಳಿ ಇದೆ ಈ ಪೈಕಿ 23 ಲಕ್ಷ ರೂಪಾಯಿ ಮಾತ್ರ ಆ ಸಂಸ್ಥಾನದ ರಾಜಾದಾಯ. ಆದಾಗ್ಯೂ ಮಹಾರಾಜರವರು ಯುದ್ಧಕ್ಕಾಗಿ ತಾವೂ, ತಮ್ಮ ಸಂಸ್ಥಾನವೂ ಇಂಡಿಯಾ ಗವರ್ನ್‌ಮೆಂಟಿನವರ ಆಜ್ಞಾನುಸಾರ ನಡೆದುಕೊಳ್ಳುವುದಕ್ಕೆ ಸಿದ್ಧರಾಗಿದೇವೆಂದು ಅರಿಕೆಮಾಡಿದರು. ಗವರ್ನ್‌ಮೆಂಟಿನವರು ರಾಜರನ್ನು ಯುದ್ಧಭೂಮಿಗೆ ಕಳುಹಿಸಲು ಅನುಮೋದಿಸದೆ ರಾಜರು ತಂಪೇಕು ಮಾಡಿ ಒಪ್ಪಿಸಿದ ಸೈನ್ಯವನ್ನು ಉಪಯೋಗ ಪಡಿಸಿಕೊಂಡರು. ಇವಲ್ಲದೆ ಯುದ್ಧಭೂಮಿಯಲ್ಲಿರುವ ಹಿಂದು ಸ್ಥಾನದ ಒಂದು ರಿಜಿಮೆಂಟ್ ಸೈನ್ಯದ ಖರ್ಚುಗಳನ್ನೆಲ್ಲಾ ಒಂದು ವರುಷ ಕಾಲ ತಾವೇ ವಹಿಸಿಕೊಂಡು ಕೊಡತಕ್ಕದ್ದೆಂದು ರಾಜರು ಒಪ್ಪಿಕೊಂಡರು ಇದು 45,000 ರೂಪಾಯಿ ಆಗುವುದು. ಈ ಔದಾರ್ಯವನ್ನು ನೋಡಿ ಇಂಡಿಯಾ ಗವರ್ನ್‌ಮೆಂಟಿನವರು ಅವರನ್ನು ಕೊಂಡಾಡಿದ್ದಾರೆ. ಇವೇ ಮೊದಲಾದ ಖರ್ಚುಗಳಿಗಾಗಿ ಕಚ್ ರಾಜರು ಕಳೆದ ವರುಷ [illegible] ಲಕ್ಷ ರೂಪಾಯಿ ಕೊಟ್ಟಿರುವುದಲ್ಲದೆ ಆಗಾಗ ಯುದ್ಧದ ರಿಲೀಫ್ ಫಂಡುಗಳಿಗೂ ಬಹಳ ಹಣಗಳನ್ನು ಕೊಟ್ಟಿರುತ್ತಾರೆ. ಮತ್ತು ದಿಹಲೀ ನಗರದಲ್ಲಿ ಮಹಿಳೆಯರು ರಾಜಕುಮಾರಿಯರಿಗೋಸ್ಕರ ಏರ್ಪಡಿಸಿರುವ ವಿದ್ಯಾಶಾಲೆಯ ಫಂಡಿಗೂ ಕೂಡ ಈ ರಾಜರು ಒಂದು ಲಕ್ಷ ರೂಪಾಯಿ ಚಂದಾ ಕೊಟ್ಟಿರುವರು.

WANTED
A Canarese Pundit with Certificates state salary
Apply to—Manager,
B. M. High School,
Mangalore.
[104-1]

WANTED
A headmaster for the London Mission Boys' A. V. School, Anekal. Matriculate a School Final, Kanarese knowing. Should have had some teaching experience. If qualifications are good, salary 30/1/40.
Apply to—Rev. S J. Cox,
London Mission, Hosur,
Salem Dt.
[79-3]

ಮೈಸೂರು ಸರ್ಕಾರಿ ಪ್ರಕಟನೆ.

ಸನ್ 1916 ನೇ ಇಸವಿ ಏಪ್ರಿಲ್ ಗುರ್ರೆ ಲಾಗಾಯ್ತು ಬೆಂಗಳೂರಿನಲ್ಲಿರುವ ಮೈಸೂರು ಸರ್ಕಾರಿ ಸರ್ವ ವಸ್ತುಪ್ರದರ್ಶನ ಶಾಲೆಯು [ಮ್ಯೂಜಿಯಂ-ತಮಾಷಿ ಬಂಗಲೆಯು] ನೋಟಕರ ಸೌಕರ್ಯಕ್ಕೋಸ್ಕರ ಪ್ರತಿ ಭಾನುವಾರವೂ ತೆರೆಯಲ್ಪಡುತ್ತದೆ. ಇದಕ್ಕೆ ಬದಲಾಗಿ ಪ್ರತಿ ಬುಧವಾರವೂ ಮುಚ್ಚಲ್ಪಡುತ್ತದೆ.

ಬೆಂಗಳೂರು, ಎಲ್. ನಿಷ್ಠೋಜಿಪಂತ್ ಬಾದಾಮಿ,
ತಾ|| 28-3-1916. ಆಕ್ಟಿಂಗ್ ಸೂಪರಿಂಟೆಂಡೆಂಟ್,
[95-3] ಮೈಸೂರು ಗೌರ್ನಮೆಂಟ್ ಮ್ಯೂಜಿಯಂ.

ಗೃಹಕೃತ್ಯದ ನೋಟೀಸು.

ಚಾಮರಾಜನಗರ ತಾಲ್ಲೋಕು ಸರ್ವಮಾನ್ಯ ಸೋಮನಸಮುದ್ರದ ಜ್ಞಾನು ಭೋಗರು, ಪಟೇಲರು, ರೈತರುಗಳು, ಮುಂತಾದವರಿಗೆ ತಿಳಿಯಪಡಿಸುವದೇನಂದರೆ—ಈ ಮೊಲ್ಲಂಡ ಸೋಮಸಮುದ್ರದ ಗ್ರಾಮಕ್ಕೆ ಲಕ್ಷ್ಮೀಪತಿ ಪಂಡಿತರು, ಪೊನ್ನುಸ್ವಾಮಿ ಪಂಡಿತರು, ಶ್ರೀಪತಿ ಪಂಡಿತರು ಈ ಮೂರು ಜನಗಳ ಹೆಸರಿಗೆ ಟೈಟಲ್ ಡೀಡು ಹುಟ್ಟಿ ಅನುಭವದಲ್ಲಿತ್ತು. ಪೊನ್ನುರಂಗ ಪಂಡಿತರು ಗತಿಸಿಹೋದ್ದರಿಂದ ಅವರ ಮಕ್ಕಳು ಸೂರಿ ಪಂಡಿತರು, ಲಕ್ಷ್ಮೀಪತಿ ಪಂಡಿತರು, ಶ್ರೀಪತಿ ಪಂಡಿತರು ಇವರುಗಳ ಅನುಭವದಲ್ಲಿತ್ತು. ಶ್ರೀಪತಿ ಪಂಡಿತರು ಗತಿಸಿಹೋದರು. ಅನಂತರ ಇವರ ಮಕ್ಕಳು ನನ್ನ ಗಂಡನಾದ ಲಕ್ಷ್ಮೀಪತಿ ಪಂಡಿತರು ಗತಿಸಿಹೋದರು. ಸದರೀ ಶ್ರೀಪತಿ ಪಂಡಿತರ ಸೊಸೆಯಾದ ನನಗೂ ಮತ್ತು ಲಕ್ಷ್ಮೀಪತಿ ಪಂಡಿತರು ಸೂರಿ ಪಂಡಿತರು ಸಹ ಅನುಭವದಲ್ಲಿದ್ದದ್ದನ್ನು ನಾನು ಬಾಲ್ಯವಯಸ್ಸಿನವಳಾದ್ದರಿಂದ ನನ್ನ ತಂದೆಯವರಾದ ಅರಮನೆ ಪದ್ಮರಾಜ ಪಂಡಿತರು ಮೊಲ್ಲಂಡ ಸೂರಿ ಪಂಡಿತರಿಗೆ ನನ್ನ ಭಾಗವನ್ನು ನೋಡಿಕೊಳ್ಳುವಂತೆ ಒಪ್ಪಿಸಿದ್ದರು. ಅಷ್ಟರಲ್ಲೇ ಸೂರಿ ಪಂಡಿತರು ಗತಿಸಿದರು. ನಂತರ ಇವರ ಕುಟುಂಬ ಶಿವದೇವಮ್ಮನೂ ಲಕ್ಷ್ಮೀಪತಿ ಪಂಡಿತರೂ ಸಹ ನೋಡಿಕೊಳ್ಳುತ್ತಾ ಬರುತ್ತಿದ್ದಾರೆ. ಈಗ ಇವರು ಗಳು ನನ್ನ ಹಕ್ಕಿಗೆ ನ್ಯೂನತೆಯನ್ನುಂಟುಮಾಡಬೇಕೆಂಬ ಪ್ರಯತ್ನಪಟ್ಟಿರುವುದರಿಂದ ಇಲ್ಲಿಂದ ಮುಂದೆ ನನ್ನ ಭಾಗದ ಕೆಲಸವನ್ನು ನಾನೇ ನೋಡಿಕೊಳ್ಳಬೇಕೆಂತ ಪ್ರಯತ್ನಪಟ್ಟಿರುತ್ತೇನೆ. ಆದ್ದರಿಂದ ಇಲ್ಲಿಂದ ಮುಂದೆ ನೀವುಗಳು ಅವರುಗಳ ಎರಡು ಭಾಗವನ್ನು ಅವರಿಗೆ ಕೊಟ್ಟು, ನನ್ನ ಭಾಗವನ್ನು ನನಗಾಗಲೀ, ನನ್ನ ಕಡೇ ಏಜಂಟರಿಗಾಗಲಿ ಜಮಾಯಿಸಿ ರಶೀತಿ ಪಡೆಯಬೇಕೆಂತ ಈ ನೋಟೀಸು ಮೂಲಕ ಸೂಚಿಸಿದೆ. ತಾ. 21-4-1916.

[105-1] ಶ್ರೀಪತಿ ಪಂಡಿತರ ಸೊಸೆ ಮೂನ್ನದಾಸ್ ಪುಟ್ಟತಾಯಮ್ಮನ ರುಜು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರದ ಉಣ್ಣೆ ಧಾರದಿಂದ ತಯಾರಿಸಲ್ಪಡುವ ಸಾಮಾನು ... ಬೇಕಾದವರು ... ಚಂದರಿಗಳಾಗಲಿ, ದರಗಳಾಗಲಿ ಮ್ಯಾನೇಜರವರಿಗೆ ಬರೆದು ತರಿಸಿಕೊಳ್ಳಬಹುದು.

Men's socks, vests and various knitted articles.

ಮ್ಯಾನೇಜರ್, ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOOL WORKS,
[188-31] GIRLS' INDUSTRIAL SCHOOL, HASSAN.

1,000 ರೂಪಾಯಿ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ (ರಿಜಿಸ್ಟರ್) ಮುರಬ್ಬ.

ಈ ಸಾಲಾಮಿಸ್ರಿ ಮುರಬ್ಬ ರಕ್ತವನ್ನು ಹೆಚ್ಚಿಸಿ ದೇಹಶಕ್ತಿಯನ್ನು ಕೊಡುವುದರಲ್ಲಿ ಪ್ರಖ್ಯಾತಿಹೊಂದಿರುವುದು ನರಗಳ ಬಲಹೀನತೆಯನ್ನು ಹೋಗಲಾಡಿಸಿ ದೇಹಕ್ಕೆ ಶಕ್ತಿಯನ್ನು ಕೊಡುವುದರಲ್ಲಿ ಈ ಸಾಲಾಮಿಸ್ರಿ ಮುರಬ್ಬಕ್ಕೆ ಸಮಾನವಾದದ್ದು ಬೇರೊಂದಿಲ್ಲ.

ಕ್ರಯ ಡಬ್ಬ 1 ಕ್ಕೆ ರೂ. 3-0-0 ಟಪಾಲು ಖರ್ಚು 1 ಡಬ್ಬಾಕ್ಕೆ 3 ಡಬ್ಬಗಳಿಗೆ 0-6-0.

ಇತರ ಪೂರಾ ಕ್ಯಾಟಲಾಗು ಬೇಕಾದವರು ... ಕ್ಷಿಸುವವರು 6 ಕಾಸಿನ ಸ್ಟಾಂಪನ್ನು ಕಳುಹಿಸಿರಿ. [106-1]

ವಿಳಾಸ—ಡಿ. ಮನ್ನಾಲಾಲ್ ಡಿಲ್ಲಿ ವೈದ್ಯ
ರಾಂಪ್ರಸಾದ್ ಮಿಠಾಯಿ ಅಂಗಡಿ ಎದುರು
೨೧ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಡೋಂಗರೆ ರವರ ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-34]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,
ಚೌಪಾಟಿ, ಗಿರಗಾಂವ, ಮುಂಬಯಿ

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.



ಸೆಂಟಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಂಟಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಅಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಇದಕಾರಣ ಇಂತಹ ಗುಣಕಾರಿಯಾದ ಸೆಂಟಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [32-12]

45 ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1 ಕ್ಕೆ 4½ ಆಣೆ	650 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	300 ,, ,, ,, 9 ,,	80 ,, ,, ,, 4 ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪ್ರಸಿದ್ಧರಾದ ಔಷಧ ವ್ಯಾಪಾರಿಗಳು ಪ್ರತ್ಯೇಕ ಕೊಳ್ಳುವುದು ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಂಟ್ರಲ್ ಡಿಪೋ, ಕಾಲ್ಬಾದೇವಿ ರೋಡ್ ಬೊಂಬಾಯಿ, 2. ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕ್ರಯಕ್ಕೆ ಇಡಲಾಗಿದೆ. ನಮ್ಮ ದಕ್ಷಿಣ ಕನರಾ ಏಜಂಟರು—ದಿ ಉಲ್ಲನ್ ಮಾರ್ಟ್, ಮಂಗಳೂರು

ಅರೇಬಿಯನ್ ನೈಟ್ಸ್
ಎಂಬ
ಯವನ ಯಾಮಿನೀ ವಿನೋದ ಕಥೆಗಳು.
[ಕನ್ನಡದಲ್ಲಿ]

ಲೋಕಪ್ರಸಿದ್ಧವಾದ ಈ ಪುಸ್ತಕ ಮೊದಲನೇ ಮುದ್ರಣವು ಸ್ವಲ್ಪ ದಿನದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ ಇದರ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಚಿತ್ತಾಕರ್ಷಕವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆ ಮಾಡಿ ತಿದ್ದಿ ಸರಿಪಡಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ತರಿಸಿಕೊಂಡರೆ ರೂ 2-4-0. ಜಾಗ್ರತೆ ನೋಡಿ. [230-38]

ವಿಳಾಸ—ಮ್ಯಾನೇಜರ್, ವಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ಉಗಾದಿ ಬಹುಮತಿ. ಗಡಿಯಾರ ಕಾಣಿಕೆ. ಉಗಾದಿ ಬಹುಮತಿ

ಸುಂದರವಾದ ಅಮೇರಿಕನ್ ವಾಚ್.

ಕ್ರಯ ರೂಪಾಯಿ 3-0-0.

ಈ ಗಡಿಯಾರವನ್ನು ಅಮೇರಿಕಾ ದೇಶದಲ್ಲಿ ಹೊಸದಾಗಿ ತಯಾರಿಸಿ ಕಳುಹಿಸಿರುತ್ತಾರೆ. ಈ ಗಡಿಯಾರ ಕಂಪನ್ ಶೇಪ್ ಬಲಿಷ್ಠವಾದ ಗಾಜುಗಳಿಂದ

ತಯಾರಾಗಿ ಬಂದಿರುತ್ತೆ. ಅಮೇರಿಕಾ ದೇಶದ ಕೆಲಸವು ಬಹು ನಾಜೂಕಾಗಿ ಮಾಡಲ್ಪಟ್ಟಿದೆ. ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡಬಹುದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಫೌಂಟನ್ ಪೇನಾವನ್ನು ಮೊಲ್ಲಂಡ ವಾಚ್‌ಗೆ ಇನಾಮತಿ ಕಳುಹಿಸುವೆವು.

ಧೈರ್ಯಲಕ್ಷ್ಮಿ ಫೌಂಟನ್ ಪೇನಾ.
ವಾಚ್ ಫೌಂಟನ್ ಪೇನಾ ಸೇರಿ
ಕ್ರಯ ರೂ. 3 ಮಾತ್ರ.

ಜರ್ಮನಿಯವರ ಕೆಲವು ಜೆಪ್ಪಲಿನ್‌ಗಳು ಇಂಗ್ಲೆಂಡಿನ ಮೇಲೆ ಹಾರಿಬಂದವು. ಏಪ್ರಿಲ್ 24 ನೇ ತಾರೀಖಿನಲ್ಲಿ ಶತ್ರುಗಳ ಆಕಾಶವಿಮಾನಗಳು ಡೋವರ್ ಮೇಲೆ ಬಂದವು. ಆದರೆ ಅವುಗಳು ಸಿಡಿಮದ್ದಿನ ಗುಂಡುಗಳನ್ನು ಇಳಿಬಿಡಲಿಲ್ಲ. ಸುಮಾರು ಹನ್ನೆರಡು ಜೆಪ್ಪಲಿನ್‌ಗಳು ಪೂರ್ವದ ತೀರಕ್ಕೆ ಬಂದ ಎಪ್ಪತ್ತು ಸಿಡಿಮದ್ದಿನ ಗುಂಡುಗಳನ್ನು ಇಳಿಬಿಟ್ಟವು. ಇದರಿಂದ ಒಬ್ಬ ಗಂಡಸಿಗೆ ಘೋರ ಗಾಯವಾಯಿತು. ಇಷ್ಟೇ ಹೊರತು ಬೇರೆ ಯಾವ ನಷ್ಟವಾದರೂ ಆಗಲಿಲ್ಲ. ಅಷ್ಟರಲ್ಲೇ ನಮ್ಮ ಕಡೆಯ ಆಕಾಶವಿಮಾನಗಳು ಜರ್ಮನಿಯವರ ಜೆಪ್ಪಲಿನ್‌ಗಳನ್ನು ಸಮುದ್ರದ ಮೇಲೆ ಅರವತ್ತು ಮೈಲುಗಳ ದೂರ ಹಿಂದಟ್ಟಿ ಅವುಗಳ ಮೇಲೆ ಬಿದ್ದವು. ನಮ್ಮ ಕಡೆಯ ವಿಮಾನಸಂಚಾರರಲ್ಲಿ ಒಬ್ಬನಿಗೆ ಗಾಯಗಳಾದವು. ಮತ್ತೊಬ್ಬನು ಕಳೆದು ಹೋಗಿರುತ್ತಾನೆ. ಥೇಮ್ಸ್ ನದಿಯ ಮುಖದ ಬಳಿಯಲ್ಲಿಯೂ ಕೂಡ ಅನೇಕ ಸಿಡಿಮದ್ದಿನ ಗುಂಡುಗಳನ್ನು ಹಾಕಿದರು. 26 ನೇ ತಾರೀಖಿನಲ್ಲಿ ಜೆಪ್ಪಲಿನ್‌ಗಳು ತಿರಿಗಿ ಹಾರಿಬಂದವು. ಆದರೆ ಅವುಗಳನ್ನು ಕೂಡಲೆ ಒಳದೇಶಕ್ಕೆ ಪ್ರವೇಶಿಸದಂತೆ ತಡೆದು ಹಿಂದಕ್ಕೆ ಓಡಿಸಿಬಿಟ್ಟರು.

ಬ್ರಿಟಿಷರ ಯುದ್ಧದ ಹಡಗುಗಳು ಬೆಲ್ಜಿಯಮ್ ತೀರಕ್ಕೆ ಮುತ್ತಿಗೆ ಹಾಕಿ ತ್ಸೀಬ್ರುಗ್ಗೆ ಎಂಬ ಸ್ಥಳದಲ್ಲಿ ಬಹಳ ನಷ್ಟವನ್ನುಂಟುಮಾಡಿದವು. ನಮ್ಮ ಕಡೆಯವರು ಜರ್ಮನಿಯವರ ಒಂದು ಆಕಾಶವಿಮಾನವನ್ನು ನಾಶಮಾಡಿದರು. ಬ್ರಿಟಿಷರ ಆಕಾಶವಿಮಾನಗಳು ದೇಶದೊಳಗೆ ನುಗ್ಗಿಹೋಗಿ ಶತ್ರುಗಳು ಆಕಾಶ ವಿಮಾನಗಳನ್ನೂ ಸೈನ್ಯಗಳನ್ನೂ ಇಟ್ಟಿದ್ದಂಥ ಒಂದು ಸ್ಥಳದ ಮೇಲೆ ಗುಂಡುಗಳನ್ನು ಹೊಡೆದು ಬಹಳ ನಷ್ಟವನ್ನುಂಟುಮಾಡಿದವು.

ಇಂಗ್ಲೆಂಡಿನ ಪೂರ್ವತೀರದ ಸಮೀಪದಲ್ಲಿ ಜರ್ಮನಿಯವರ ಒಂದು ಸಬ್‌ಮೆರೀನ್ ಮುಳುಗಿಸಲ್ಪಟ್ಟಿತು. ಅದರಲ್ಲಿದ್ದ ಒಬ್ಬ ಆಫೀಸರನ್ನೂ ಹದಿನೇಳು ಮಂದಿ ಜನರನ್ನೂ ಸೆರೆಯಾಗಿ ಹಿಡುಕೊಂಡರು. ಉತ್ತರ ಸಮುದ್ರದಲ್ಲಿ ಬ್ರಿಟಿಷರ ಒಂದು ಸಬ್‌ಮೆರೀನ್ ಕಳೆದು ಹೋಯಿತು. ಅದರಲ್ಲಿದ್ದವರ ಪೈಕಿ ಒಬ್ಬನು ರಕ್ಷಿಸಲ್ಪಟ್ಟನು.

ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟಿಷರ ಒಂದು ಯುದ್ಧದ ಹಡಗು ಸಿಡಿಮದ್ದಿನ ಗುಂಡಿಗೆ ತಗಲಿ ಮುಳುಗಿ ಹೋಯಿತು. ಅದರಲ್ಲಿದ್ದವರ ಪೈಕಿ 24 ಆಫೀಸರುಗಳೂ 676 ಮಂದಿ ಜನರೂ ಸುರಕ್ಷಿತವಾಗಿ ಕಾಪಾಡಲ್ಪಟ್ಟರು. 124 ಮಂದಿ ಕಾಣದೆ ಹೋಗಿರುತ್ತಾರೆ. ಈ ಯುದ್ಧದ ಹಡಗು 1903 ರಲ್ಲಿ ಕಟ್ಟಲ್ಪಟ್ಟದ್ದಾಗಿಯೂ ಈಗ ಉಪಯೋಗದಲ್ಲಿದ್ದ ಬ್ರಿಟಿಷ್ ಯುದ್ಧದ ಹಡಗುಗಳ ಪೈಕಿ ಅದು ಅತ್ಯಂತ ಹಳೆಯದಾಗಿಯೂ ಇತ್ತು.

ಪಶ್ಚಿಮ ರಣರಂಗದಲ್ಲಿ.

ವೆರ್ಡೂನ್ ಸುತ್ತಲೂ ನಡೆಯುತ್ತಿರುವ ಯುದ್ಧವು ಇನ್ನೂ ನಿಂತಿಲ್ಲ. ಜರ್ಮನಿಯವರು ಅನೇಕ ಸಾರಿ ಬಿದ್ದುಪ್ರಹಾರವನ್ನು ತಾಳಿ ಫ್ರೆಂಚರ ಕಂದಕಗಳ ಮೇಲೆ ನುಗ್ಗಿಬಂದರು. ಆದರೇನು? ಅವರು ಬೆಂಕಿಯ ಪ್ರವಾಹವನ್ನು ಎದುರಿಸಿಕೊಂಡು ಮುಂದರಿದು ಬರುವದಕ್ಕೆ ಈ ವಾರದಲ್ಲಿ ಅವರಿಗೆ ಅವಕಾಶವು ಸಿಕ್ಕಿರುವದಿಲ್ಲ. ಅಕ್ಕಪಕ್ಕದಲ್ಲಿ ಫ್ರೆಂಚರು ಕೆಲವು ಸಂದರ್ಭದಲ್ಲಿ ತಾವೇ ಶತ್ರುಗಳ ಮೇಲೆ ನುಗ್ಗಿಹೋಗಿ ಜರ್ಮನಿಯವರ ಕಂದಕಗಳನ್ನು ಸ್ವಾಧೀನಪಡಿಸಿಕೊಂಡು ಕೆಲವರನ್ನು ಸೆರೆಯಾಗಿ ಹಿಡಿದಿರುತ್ತಾರೆ. ವೆರ್ಡೂನ್ ಬಳಿಯಲ್ಲಿ ನಡೆಯುತ್ತಾ ಇರುವ ಯುದ್ಧದಲ್ಲಿ ಫ್ರೆಂಚರಿಗೆ ಜಯವಾಯಿತು; ಜರ್ಮನಿಯವರು 2,5 ,000 ಸೈನ್ಯವನ್ನು ವ್ಯರ್ಥವಾಗಿ ಕಳೆದುಕೊಂಡರು ಎಂಬದಾಗಿ ಈಗ ಸಾಮಾನ್ಯವಾಗಿ ಎಲ್ಲರೂ ನಂಬುತ್ತಿದ್ದಾರೆ. ಜರ್ಮನಿಯವರು ಬಹಳ ಧೈರ್ಯವಾಗಿ ಯುದ್ಧಮಾಡಿರುತ್ತಾರೆ. ಫ್ರೆಂಚರಾದರೋ ಅವರಿಗಿಂತಲೂ ಹೆಚ್ಚಾಗಿ ತಮ್ಮ ಸಾಮರ್ಥ್ಯವನ್ನು ತೋರಿಸಿರುತ್ತಾರೆ.

ಫ್ರೆಂಚರ ಯುದ್ಧಸಾಲಿನ ಇತರ ಸ್ಥಳಗಳಲ್ಲಿಯೂ ಘೋರವಾದ ಯುದ್ಧವು ನಡೆದಿರುತ್ತದೆ. ಒಂದು ಸ್ಥಳದಲ್ಲಿ ಜರ್ಮನಿಯವರು ನುಗ್ಗಿ ಬಂದರು. ಆದರೆ ಇದರ ಫಲಿತಾಂಶವೇನಂದರೆ—ತಮ್ಮ ಕಡೆಯಲ್ಲಿ ಒಂದು ಸಾವಿರ ಜನರನ್ನು ಕಳೆದುಕೊಂಡದ್ದೇ. ಆಕಾಶವಿಮಾನಗಳ ಯುದ್ಧವು ವಿಶೇಷವಾಗಿ ನಡೆದಿರುತ್ತದೆ. ಫ್ರೆಂಚರು ತಮ್ಮ ಆಕಾಶವಿಮಾನಗಳಲ್ಲಿ ಹೋಗಿ ಜರ್ಮನಿಯವರ ಸೈನ್ಯಗಳ ಮೇಲೆಯೂ ಅವರ ಠಾಣ್ಯಗಳ ಮೇಲೆಯೂ ಸಿಡಿಮದ್ದಿನ ಗುಂಡುಗಳನ್ನು ಹಾಕಿಬಂದಿರುತ್ತಾರೆ.

ಬ್ರಿಟಿಷರು ಇರುವ ಭಾಗದಲ್ಲಿಯೂ ಕೂಡ ಘೋರವಾದ ಯುದ್ಧವು ನಡೆದಿರುತ್ತದೆ. ಒಂದು ಸ್ಥಳದಲ್ಲಿ ಬ್ರಿಟಿಷರು ಜರ್ಮನಿಯವರ ಮೇಲೆ ಬಿದ್ದು ಅವರ ಕಂದಕಗಳನ್ನು ಸ್ವಾಧೀನಪಡಿಸಿಕೊಂಡದ್ದಲ್ಲದೆ ಅವರಲ್ಲಿ ಕೆಲವರನ್ನು ಸೆರೆಯಾಗಿ ಹಿಡುಕೊಂಡರು. ಇವರ ಸಾಲಿನ ಮತ್ತೊಂದು ಕಡೆಯಲ್ಲಿ ಜರ್ಮನಿಯವರು ವಿಷಕರವಾದ ವಾಯುವನ್ನು ಪ್ರಯೋಗಿಸಿ ಏಳು ಸಾರಿ ನುಗ್ಗಿ ಬಂದರು

...ಸ್ಥಳವು ಅವರು ಹಿಂದಿರುಗಬೇಕಾಯಿತು. ಜರ್ಮನಿಯವರು ನಾಲ್ಕು ... ನಮ್ಮ ... ಕಂದಕಗಳೊಳಗೆ ನುಗ್ಗಿದರು. ಆದರೆ ಅವರು ... ಸ್ಥಳದಲ್ಲಿಯೂ ಹಿಂದಕ್ಕೆ ಓಡಿಸಲ್ಪಟ್ಟರು. ಮುಂದರಿದು ಬರು... ವರೆಗೆ ಅವಕಾಶವು ಸಿಕ್ಕಲಿಲ್ಲ. ಒಂದು ಸ್ಥಳದಲ್ಲಿ ಕ್ಷಣದಿಂದ ಬಂದಿ... ಬಹಳ ಧೈರ್ಯವಾಗಿ ನಿಂತಿದ್ದು ಹಾರಿದ್ದರಿಂದ ಉಂಟಾದ ... ಹಳ್ಳವನ್ನು ಬಿಡದೆ ಹಿಡುಕೊಂಡಿದ್ದರು. ಎರಡು ಗಂಟೆಯ ... 300 ಗುಂಡುಗಳು ಆ ಹಳ್ಳದೊಳಗೆ ಬಿದ್ದರೂ ಅವರು ಲಕ್ಷ್ಯಮಾಡ... ಜರ್ಮನಿಯವರ ಕೆಲವು ಆಕಾಶವಿಮಾನಗಳನ್ನು ಹೊಡೆದು ಭೂಮಿಗೆ ... ಅವುಗಳಲ್ಲಿ ಒಂದು 14,000 ಅಡಿಗಳ ಎತ್ತರದಿಂದ ಕೆಳಕ್ಕೆ ... ಆಕಾಶವಿಮಾನಗಳ ಯುದ್ಧವು ಬಹಳವಾಗಿ ನಡೆಯುತ್ತದೆ. ಬ್ರಿಟಿಷರು ... ಸೆರೆಯಾಗಿ ಹಿಡಿದಿರುತ್ತಾರೆ.

ಪೂರ್ವ ರಣರಂಗದಲ್ಲಿ.

ರಷ್ಯಾದವರ ಯುದ್ಧಸಾಲಿನಿಂದ ವಿಶೇಷವಾದ ಸಮಾಚಾರಗಳೇನೂ ಬಂದಿ... ರಷ್ಯಾದವರು ದಕ್ಷಿಣದಲ್ಲಿಯೂ ಜರ್ಮನಿಯವರು ಮಧ್ಯದಲ್ಲಿಯೂ ... ಶತ್ರುಗಳ ಮೇಲೆ ಬೀಳುತ್ತಾರೆ. ಆದರೆ ಯಾರಿಗೂ ಯಾವ ಪ್ರಯೋಜನ ... ಉಂಟಾಗಿರುವದಿಲ್ಲ. ರಷ್ಯಾದವರಲ್ಲಿ ಕೆಲವು ದೊಡ್ಡ ದೊಡ್ಡ ... ಇರುತ್ತವೆ. ಅವುಗಳು ಜರ್ಮನಿಯವರ ಯುದ್ಧ ಸಾಲಿನ ಮೇಲೆ ... ಗುಂಡುಗಳನ್ನು ಹಾಕಿ ಬಂದಿರುತ್ತವೆ.

ಇಟಲಿ.

...ಯವರು ಯುದ್ಧಮಾಡುತ್ತಿರುವ ಕಡೆಯಿಂದ ಬಂದಿರುವ ಸಮಾ... ಕಡಿಮೆ. ಆದರೆ ಇದರಿಂದ ಇಟಲಿಯವರು ಮುಖ್ಯವಾಗಿ ಉತ್ತರ... ಮುಂದರಿದು ಹೋಗುತ್ತಿದ್ದಾರೆಂಬುವದು ವೇದ್ಯವಾಗುತ್ತದೆ. ಇವರು ...ಯಾದವರ ಎರಡು ಪ್ರಮುಖ್ಯವಾದ ಪಟ್ಟಣಗಳ ಸಮೀಪಕ್ಕೆ ಹೋ... ಆಸ್ಟ್ರಿಯಾದವರು ಕೆಲವು ಸಾರಿ ಇಟಲಿಯವರ ಮೇಲೆ ... ಬಿದ್ದರು. ಆದರೆ ಇಟಲಿಯವರು ಅವರನ್ನು ಹಿಂದಕ್ಕೆ ಓಡಿಸಿ... ...ತ್ತಾರೆ.

ಮೆಸೊಪೊಟೇಮಿಯದಲ್ಲಿ.

ಮೆಸೊಪೊಟೇಮಿಯದಲ್ಲಿ ಬ್ರಿಟಿಷರಿಗೂ ಟರ್ಕಿಯವರಿಗೂ ಬಹಳ ಯುದ್ಧವು ... 17 ನೇ ತಾರೀಖಿನಲ್ಲಿ ಬ್ರಿಟಿಷರು ಮುಂದರಿದು ಹೋಗಿ ಟರ್ಕಿ... ಕೆಲವು ಕಂದಕಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡದ್ದಲ್ಲದೆ ಕೆಲವ... ಸೆರೆಯಾಗಿ ಹಿಡಿದುಕೊಂಡರು. ಇದಕ್ಕೆ ಪ್ರತಿಯಾಗಿ ಟರ್ಕಿಯವರು ... ಬ್ರಿಟಿಷರ ಮೇಲೆ ಬಹಳ ಧೈರ್ಯವಾಗಿ ನುಗ್ಗಿ ಬಂದರು. ಅವರು ...ಧೈರ್ಯವಾಗಿ ಯುದ್ಧಮಾಡಿದರು. ಅವರು ಬ್ರಿಟಿಷರ ಕೆಲವು ಯುದ್ಧ... ಭೇದಿಸಿಕೊಂಡು ನುಗ್ಗಿದಂತೆ ತೋರುತ್ತದೆ. ಆದರೆ ಆವಾಗಾದ ... ಅಪಾರವಾಗಿದೆ. ನಮ್ಮ ಕಡೆಯ ಒಂದು ಭಾಗದ ಸೈನಿಕರು ತಮ್ಮ ... ಎರಡು ಸಾವಿರ ಟರ್ಕಿಯವರ ಹೆಣಗಳನ್ನು ಲೆಕ್ಕಮಾಡಿದರು. ... ಒಟ್ಟಾಗಿ ಮೂರು ಸಾವಿರ ಜನರು ಕೊಲ್ಲಲ್ಪಟ್ಟರು. ಇನ್ನು ... ಗಾಯಗಳಾದವು. ನಾನೂರು ಜನರು ಸೆರೆ ಸಿಕ್ಕಿದರು. ...ಯು ಈಗ ತುಂಬಿ ಹರಿಯುತ್ತಿದೆ. ದೇಶವೆಲ್ಲಾ ಬಹಳ ಕೆಸರಾಗಿದೆ ... ಇಂಥ ಕಾಲದಲ್ಲಿ ಮುಂದರಿದು ಹೋಗುವದು ಬಹಳ ಪ್ರಯಾಸವಾ... ಸ್ವಲ್ಪ ಅನುಕೂಲವಾದ ಕೂಡಲೆ ಬ್ರಿಟಿಷರು ಕುಟೆಲ್ ಅಮಾರೆಕ್ಕೆ ...ಬ್ಬಂದಿಯಾಗಿರುವ ಜನರಲ್ ಟೌನ್‌ಸೆಂಡ್ ಯವರನ್ನು ಅವರ ಸೈನ್ಯ... ...ಬೇಕಾಗಿದೆ.

ಬೆಕ್ಕ ಆಷ್ಯ.

...ಪ್ರದಲ್ಲಿ ರಷ್ಯಾದವರು ಮುಂದರಿದು ಹೋಗುತ್ತಿದ್ದಾರೆ. ಟ್ರೆಬಿ... ಎಂಬ ಪಟ್ಟಣಕ್ಕೆ ಯುದ್ಧದ ದೆಸೆಯಿಂದ ನಷ್ಟವೇನೂ ಆಗಲಿಲ್ಲ. ಆ ... ಜನಗಳು ರಷ್ಯಾದವರಿಗೆ ಸುಸ್ವಾಗತವನ್ನು ಬಯಸಿದರು. ಕೆಲವು ... ಫಿರಂಗಿಗಳು ರಷ್ಯಾದವರ ಕೈವಶವಾದವು. ರಷ್ಯಾದವರು ಆಗಾಗ್ಗೆ ... ಸೆರೆಯವರನ್ನಾಗಿ ಹಿಡುಕೊಳ್ಳುತ್ತಿದ್ದಾರೆ. ಅವರು ಒಬ್ಬ ಜರ್ಮನ್ ...ಕೈಕೆಳಗಿದ್ದ 200 ಮಂದಿ ಟರ್ಕಿಯವರನ್ನು ಸೆರೆಯಾಗಿ ಹಿಡಿ... ಇವರು ಕಾನ್‌ಸ್ಟಾಂಟಿನೋಪಲ್‌ನಿಂದ ಬಂದಿದ್ದರು. ರಷ್ಯಾದವರು ...ಯವರನ್ನು ಹಿಂದು ಹಿಂದಕ್ಕೆ ಅಟ್ಟುತ್ತಾ ಪಶ್ಚಿಮದಿಕ್ಕಿಗೆ ಮುಂದರಿದು ... ಇದ್ದಾರೆ. ಅವರು ದಕ್ಷಿಣದಿಕ್ಕಿನಲ್ಲಿಯೂ ಟರ್ಕಿಯವರನ್ನು ...ಡಿಸುತ್ತಾ ಮುಂದಕ್ಕೆ ಹೋಗುತ್ತಿದ್ದಾರೆ.

...ಯವರ ಮುಖ್ಯ ಸೇನಾಧಿಪತಿಯಾಗಿದ್ದ ಜರ್ಮನಿಯವರಾದ ಫೀಲ್ಡ್ ...ಲ್ಟ್ಜ್ ಎಂಬವರು ಕಾಲವಾದರು. ಅವರನ್ನು ಕೊಲೆಮಾಡಿದರೆಂದು ...ಬಿಟ್ಟಿದ್ದಾರೆ.

ಈಜಿಪ್ಟಿನಲ್ಲಿ.

...ಯೆಜ್ ಕಾಲುವೆಯ ಪೂರ್ವದಿಕ್ಕಿನಲ್ಲಿ ಬಹಳ ದೂರದ ವರೆಗೂ ಸ್ವಲ್ಪ ... ಯುದ್ಧವು ನಡೆಯುತ್ತಾ ಇದೆ. ಕೆಲವು ಮಂದಿ ಸೈನಿಕರು ಇದ್ದ ಒಂದು ... ಮೇಲೆ ಟರ್ಕಿಯವರ ಮತ್ತು ಜರ್ಮನಿಯವರ ಒಂದು ...ಸೈನ್ಯವು ಬಂದು ಬಿದ್ದು ಘೋರವಾಗಿ ಯುದ್ಧಮಾಡಿದ ಮೇಲೆ ಹಿಂದಿ... ...ಬೇಕಾಯಿತು. ತಮ್ಮ ಕುದುರೆಗಳನ್ನು ಕಳೆದುಕೊಂಡಂಥ ಕೆಲವು ...ಯಗಳು ಸೆರೆಯಾಗಿ ಸಿಕ್ಕಿದರು. ಬ್ರಿಟಿಷರು ಬಂದು ಸೈನ್ಯವನ್ನೂ ... ಆಕಾಶವಿಮಾನಗಳನ್ನೂ ಕಳುಹಿಸಿ ಟರ್ಕಿಯವರ ಮೇಲೆ ಬೀಳು... ...ಮಾಡಿದರು. ಅವರು ಇವರನ್ನು ಸಂಪೂರ್ಣವಾಗಿ ಸೋಲಿಸಿ ಬಿಟ್ಟು ಇವರ ... ನಾಶಮಾಡಿದರು.

ಬಾಲ್ಕನ್ ಸಂಸ್ಥಾನಗಳಲ್ಲಿ.

ಬಾಲ್ಕನ್ ಸಂಸ್ಥಾನಗಳಲ್ಲಿ ಯುದ್ಧವು ನಡೆದ ಸಮಾಚಾರವೇನೂ ಬಂದಿರು... ...ಫ್ರೆಂಚರ ಕೆಲವು ಆಕಾಶ ವಿಮಾನಗಳು ಬಲ್ಗೇರಿಯದ ರಾಜಧಾನಿಯಾದ ... ಮೇಲೆ ಹೋಗಿ ಸಿಡಿಮದ್ದಿನ ಗುಂಡುಗಳನ್ನು ಇಳಿಬಿಟ್ಟವು. ...ಸಿಂದ ಸರಕಾರಿ ಕಾಗದಗಳನ್ನು ತೆಗೆದುಕೊಂಡು ಹೋಗುತ್ತಿದ್ದ ...ಯದ ಒಬ್ಬ ಅಧಿಕಾರಿಯನ್ನು ಆಸ್ಟ್ರಿಯಾದವರು ಅರೆಸ್ಟುಮಾಡಿದ್ದರು. ... ಅವನಿಗೆ ಬಿಡುಗಡೆಯಾಗಿದೆ. ಅವನಲ್ಲಿದ್ದ ಕಾಗದಗಳು ಪುನಃ ಅವ... ...ಲ್ಪಟ್ಟವು.

ಪೂರ್ವ ಆಫ್ರಿಕಾದಲ್ಲಿ.

...ಲ್ ಸ್ಮಟ್ಸ್‌ಯವರು ಮುಂದರಿದು ಹೋಗುತ್ತಲೇ ಇದ್ದಾರೆ. ಇವರು ...ಗ್ರಾಮಗಳನ್ನೂ ಅವುಗಳಲ್ಲಿ ಕಾವಲಾಗಿದ್ದ ಸೈನಿಕರನ್ನೂ ತಮ್ಮ ಸ್ವಾಧೀ... ...ಕೊಂಡರು. ಮೂರನೇ ಸ್ಥಳದಲ್ಲಿ ಘೋರವಾದ ಯುದ್ಧವು ನಡೆಯಿತು. ...ಯವರು ನಷ್ಟಪಟ್ಟು ರೈಲಿಗೆ ಓಡಿಹೋದರು. ಬೋಯರರು ಮ... ...ಗಳನ್ನು ಸುತ್ತಿಕೊಂಡು ಪುನಃ ಅವರ ಮೇಲೆ ಬಿದ್ದರು. ಈ ... ಯುದ್ಧಮಾಡುವದು ತುಂಬಾ ಪ್ರಯೋಜನಕರವಾದದ್ದು.

ಇತರ ವಿಷಯಗಳು.

...ಕಾದವರಿಗೂ ಜರ್ಮನಿಯವರಿಗೂ ಮನಸ್ತಾಪಗಳು ಬಹಳವಾಗಿ ... ಅಮೆರಿಕಾ ಯುದ್ಧಕ್ಕೆ ಸನ್ನದ್ಧನಾಗುತ್ತಾ ಇದೆಯೆಂದು ಹೇಳಲಾಗಿದೆ ...ಲ್ಲಿ ಎರಡು ಪಾರ್ಟಿಗಳಾಗಿರುವಂತೆ ತೋರುತ್ತದೆ. ಒಂದು ಪಾರ್ಟಿ ... ಅಮೆರಿಕದವರ ಕೋಪವನ್ನು ಶಾಂತಿಮಾಡಲು ಮನಸ್ಸುಳ್ಳವರಾಗಿರು ...ಕೊಂಡು ಕಳ್ಳತನದ ಸಬ್‌ಮೆರೀನುಗಳ ಯುದ್ಧವನ್ನು ಮುಂದೆ ...ಬೇಕೆಂಬ ಕಾಂಕ್ಷೆಯುಳ್ಳವರಾಗಿರುತ್ತಾರೆ. ಅಮೆರಿಕಾದಲ್ಲಿ ಅನೇಕ ...ಹಡಗುಗಳು ಹೊರಟಿವೆ. ಜರ್ಮನಿಯವರು ಅಲ್ಲಿ ಬಹಳ ಕೊಂದರೆಯನ್ನುಂ...ಟುಮಾಡುವದಕ್ಕೆ ಪ್ರಯತ್ನಪಟ್ಟಿದ್ದಾರೆ.

ಪೋರ್ಚುಗಲ್‌ನಲ್ಲಿದ್ದ ಎಲ್ಲಾ ಜರ್ಮನಿಯವರನ್ನು ಅಲ್ಲಿಂದ ಗಡೀಪಾರ್ ಮಾಡಿಬಿಟ್ಟಿರುತ್ತಾರೆ.

ಕಳೆದ ವಾರದಲ್ಲಿ ಬ್ರಿಟಿಷರ ಐದು ಹಡಗುಗಳು, ಇಟಲಿಯವರದು ಎರಡು, ನಾರ್ವೇಜಿಯನರದು ಎರಡು, ಡಚ್ಚರದು ಎರಡು, ಫ್ರೆಂಚರದು ಒಂದು ಹೀಗೆ ಒಟ್ಟಾಗಿ ಹನ್ನೆರಡು ಹಡಗುಗಳು ಮುಳುಗಿಸಲ್ಪಟ್ಟವು. ಅವುಗಳು ಚಿಕ್ಕ ಚಿಕ್ಕ ಹಡಗುಗಳಾಗಿದ್ದಂತೆ ತೋರುತ್ತದೆ.

ಸರ್ ರೋಜರ್ ಕ್ಯಾಸಮೆಂಟ್ ಎಂಬ ಒಬ್ಬ ಐರ್ಲಾಂಡ್ ದೇಶದವನು ಬಹಳ ಕಾಲದಿಂದಲೂ ಜರ್ಮನಿಯಲ್ಲಿದ್ದು ಬ್ರಿಟಿಷರಿಗೆ ವಿರೋಧವಾಗಿ ಒಳ ಸಂಚು ನಡೆಸುತ್ತಾ ಇದ್ದನು. ಕೆಲವು ದಿನಗಳ ಕೆಳಗೆ ಇವನು ಡಚ್ಚರದೋ ಎಂಬಂತೆ ತೋರುವ ಒಂದು ಸ್ಟೀಮರಿನಲ್ಲಿ 20,000 ಬಂದೂಕಗಳನ್ನೂ ಮದ್ದು ಗುಂಡುಗಳನ್ನೂ ಸಹ ತುಂಬಿಸಿ ಐರ್ಲೆಂಡಿಗೆ ಕಳುಹಿಸಿ ತಾನು ಮಾತ್ರ ಒಂದು ಜರ್ಮನಿಯವರ ಸಬ್‌ಮೆರೀನ್ನಲ್ಲಿ ಬಂದನು. ಈ ಸ್ಟೀಮರನ್ನು ಬ್ರಿಟಿಷರು ಹಿಡಿದು ರೇವಿಗೆ ತರುವಷ್ಟರಲ್ಲಿ ಜರ್ಮನಿಯವರು ಅದನ್ನು ಮುಳುಗಿಸಿಬಿಟ್ಟರು. ಹವ ಪ್ರತಿಕೂಲವಾಗಿದ್ದ ಕಾರಣ ಬ್ರಿಟಿಷರ ಹಡಗುಗಳು ಸಮುದ್ರದ ಮೇಲೆ ಸಂಚರಿಸುವದಕ್ಕೆ ಅವಕಾಶವಾಗಲಿಲ್ಲ. ಸರ್ ರೋಜರ್ ಎಂಬವನೂ ಇಬ್ಬರು ಜರ್ಮನಿಯ ಅಧಿಕಾರಿಗಳೂ ಒಂದು ದೋಣಿಯಲ್ಲಿ ದಡಕ್ಕೆ ಬಂದರು. ಕೂಡಲೆ ಅವನನ್ನು ಹಿಡಿದು ಪಹರೆಯಲ್ಲಿಟ್ಟಿರುತ್ತಾರೆ. ಇವನು ರಾಜದ್ರೋಹಿ ಎಂಬದಾಗಿ ವಿಚಾರಣೆಯು ನಡೆಯುವದಕ್ಕಿದೆ.

ಬ್ರಿಟನ್ ನಿನ್ನ ಮೇಲೆ ಯುದ್ಧಕ್ಕೆ ಬರಬೇಕೆಂದಿದೆ ಎಂಬದಾಗಿ ಜರ್ಮನಿಯು ಹಾಲೆಂಡಿಗೆ ದುರ್ಬೋಧನೆ ಮಾಡುವದಕ್ಕೆ ಪ್ರಯತ್ನಪಟ್ಟಿದೆ. ಈ ಮಾತಿನಲ್ಲಿ ಸತ್ಯವಿಲ್ಲ. ಆದರೆ ಹಾಲೆಂಡ್ ತನ್ನ ಸೈನ್ಯವನ್ನೆಲ್ಲಾ ಸಿದ್ಧವಾಗಿ ಇಟ್ಟುಕೊಂಡಿದೆ. ಆದರೆ ಜರ್ಮನಿಯ ಸಿಪಾಯಿಗಳು ತಪ್ಪಿಸಿಕೊಂಡು ಹಾಲೆಂಡಿಗೆ ಹೋದರೆ ಅದು ಅವರನ್ನು ಈ ಯುದ್ಧದಲ್ಲಿ ಬೆರೆಯದೆ ಇರುವ ದೇಶಗಳಿಗೆ ಕಳುಹಿಸಬೇಕಾಗಿದೆ.

ಸೈನ್ಯಕ್ಕೆ ಜನಗಳನ್ನು ಸೇರಿಸತಕ್ಕ ಅತ್ಯುತ್ತಮವಾದ ಮಾರ್ಗವು ಯಾವದು? ಎಂಬೀ ವಿಷಯದಲ್ಲಿ ಬ್ರಿಟನ್ನಲ್ಲಿ ಬಹಳ ಚರ್ಚೆಯು ನಡೆಯುತ್ತಾ ಇದೆ. ಪಾರ್ಲಿಮೆಂಟ್ ಸಭೆಯ ಒಂದು ಅಂತರಂಗವಾದ ಕೂಟವು ನಡೆಸಲ್ಪಟ್ಟಿದೆ. ಆಗ ಗವರನ್‌ಮೆಂಟಿನವರು ಎಲ್ಲಾ ವಿಷಯಗಳನ್ನು ತಿಳಿಸಿರುತ್ತಾರೆ. ಈ ವಿಷಯದಲ್ಲಿ ಇನ್ನೂ ಯಾವ ತೀರ್ಮಾನವಾದರೂ ಆಗಿಲ್ಲ.

ಆಫ್ರಿಕದ ನೈರುತ್ಯ ದಿಕ್ಕಿನಲ್ಲಿರುವ ಜರ್ಮನಿಯವರು ಕೆಲವು ಮಂದಿ ಬ್ರಿಟಿಷ್ ಖೈದಿಗಳಿಗೆ ಸಾಕಾದಷ್ಟು ಆಹಾರವನ್ನೂ ವಸ್ತ್ರಗಳನ್ನೂ ಕೊಡದೆ ಬಹಳ ಕ್ರೂರವಾಗಿ ನಡಿಸಿದರು.

ಒಳದೇಶದ ವೃತ್ತಾಂತಗಳು.

ತುಮಕೂರು ಡಿ|| ಕ|| ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳು 9 ನೇ ತಾ. ಮಂಗಳವಾರ ಕುಣಿಗಲಿನಲ್ಲಿ ಒಂದು ತಾಲ್ಲೂಕ್ ಕಾನ್‌ಫರೆನ್ಸ್ ನಡೆಯುವದಾಗಿ ತಿಳಿದು ಬರುತ್ತದೆ.

ಮದ್ರಾಸಿನ ಒಬ್ಬ ಪರಿಚಾರಕನು ಬೆಂಗಳೂರಿನಲ್ಲಿ ಸಾಕಸ್ ದೊರೆಸಾನಿಯವರ ಬಂಗಲೆಯಲ್ಲಿ ಮೇಜಿನ ಮೇಲೆ ಹಾಕುವ ಒಂದು ಬಟ್ಟೆಯನ್ನು ಕದ್ದದ್ದಕ್ಕಾಗಿ ಅವನಿಗೆ ಎರಡು ತಿಂಗಳ ಕಠಿಣ ಸಜಾಶಿಕ್ಷೆಯು ವಿಧಿಸಲ್ಪಟ್ಟಿತು.

ಶಿವಮೊಗ್ಗ ಅಡ್ವೊಕೇಟ್ ಮ|| ಗರುಡಾಚಾರ್ರವರ ಮೇಲೆ ಬಂದಿರುವ ಕೇಸಿನ ವಿಚಾರಣೆಯನ್ನು ಅವರ ಕೋರಿಕೆಯಂತೆ ಶಿವಮೊಗ್ಗ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಿಂದ ಕಡೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಮೈಸೂರು ಚೀಫ್ ಕೋರ್ಟಿನವರು ವರ್ಗಮಾಡಿರುತ್ತಾರೆ.

ಮದ್ರಾಸಿನ ವಿದ್ಯಾರ್ಥಿಗಳೆಲ್ಲರೂ ಸೇರಿ ಒಂದು ಪುಸ್ತಕ ಭಂಡಾರವನ್ನು ಸ್ಥಾಪಿಸಿರುವದಾಗಿ ತಿಳಿದುಬರುತ್ತದೆ. ಇದಕ್ಕೆ ಸಹಾಯಮಾಡತಕ್ಕ ವಿಖ್ಯಾತ ಮಾನಗಳು ಪುಸ್ತಕಗಳನ್ನೂ ಸಹಾಯವನ್ನೂ ಎಸ್. ಎನ್. ಎಸ್. ಲೈಬ್ರರಿ ಪ್ರೋಟೋ, ಮದ್ರಾಸು ಎಂಬ ವಿಳಾಸಕ್ಕೆ ದಯವಿಟ್ಟು ಕಳುಹಿಸಿಕೊಡಬೇಕೆಂದು ವಿಜ್ಞಾಪಿಸಿಕೊಳ್ಳುತ್ತಾರೆ.

ದಾವಣಗೆರೆ ತಾಲ್ಲೂಕು ಮಾಯಾಕೊಂಡ ಗ್ರಾಮದಲ್ಲಿ ಒಂದು ಗ್ರಾಮದ ಮರ್ಚೆಂಟ್ ಕೋರ್ಟನ್ನು ಸ್ಥಾಪಿಸುವಂತೆ ಸರಕಾರದವರು ಸ್ಯಾಂಕ್ಷನ್ ಮಾಡಿರುವದರಿಂದ ಪರೀಕ್ಷಾರ್ಥವಾಗಿ ಮುಂದಿನ ತಿಂಗಳ ಪ್ರಾರಂಭದಿಂದ ಒಂದು ವರುಷದ ವರೆಗೆ ಮ|| ಅಂಗಡಿ ಶಿವರುದ್ರಪ್ಪನವರನ್ನು ಗ್ರಾಮದ ಮರ್ಚೆಂಟನ್ನಾಗಿ ನೇಮಕಮಾಡಲಾಗಿದೆ.

ರಾಜಧಾನಿಯ ಮಹರಾಜಾಸ್ ಕಾಲೇಜಿನ ಪ್ರವಾಸಿಕ್ ಸೊಸೈಟಿಯವರು ತಮ್ಮ ಪ್ರಿನ್ಸಿಪಾಲರಾದ ಮೆ|| ಡೆನ್‌ಹಾಮ್‌ರವರ ಮೂಲಕವಾಗಿ ಕಳೆದ ಮಾರ್ಚಿ ತಾ. 11 ರಲ್ಲಿ ಒಂದು ನಾಟಕವನ್ನು ಆಡಿ ಟಿಕೇಟು ಮಾರಿದ್ದರಲ್ಲಿ ಬಂದ ಹಣದಲ್ಲಿ ಅರ್ಧವನ್ನು ಅಂದರೆ ರೂ. 140 ನ್ನು ಯುದ್ಧದ ಫಂಡಿಗೆ ಉಚಿತಾರ್ಥವಾಗಿ ಕೊಟ್ಟುಬಿಟ್ಟರು.

ಬೆಂಗಳೂರು ಹಿಗ್ಗಿನ್ ಬೋಥಾಮ್ ಕಂಪೆನಿಯಲ್ಲಿ ಕಂಪಾಜಿಟರ್ ಕೆಲಸ ಮಾಡುತ್ತಿದ್ದ ಮರಿಯಪ್ಪ ಎಂಬವನು ಮರಗೆಲಸಮಾಡುತ್ತಿದ್ದ ಚಿನ್ನಸ್ವಾಮಿ ನಾಯುಡು ಎಂಬವನನ್ನು ಚಾಕುವಿನಿಂದ ತಿವಿದು ಅವನ ಎಡಗಡೆಯ ಮುಂಗೈಗೆ ಗಾಯಮಾಡಿದನೆಂದು ಅವನ ಮೇಲೆ ಚಾರ್ಜುಮಾಡಿದಾರೆ. ಇವರ ವಿಚಾರಣೆಯು ಮುಂದಿನ ವಾರ ನಡೆಯುವದು.

ಮಾರಹನುಮಂತ ಎಂಬವನು ಕೋಡಳ್ಳಿ ಮುಗೌಡನ ಕೊಟ್ಟಿಗೆಯಲ್ಲಿದ್ದ ಎತ್ತುಗಳಲ್ಲಿ ಒಂದನ್ನು ಕದ್ದು ಹೊಡಕೊಂಡು ಹೋಗುತ್ತಿದ್ದನೆಂದು ಸಾಕ್ಷಿಗಳಿಂದ ರುಜುವಾತಾದ್ದರಿಂದಲೂ ಅವನು ಹಳೇ ಕಳ್ಳನೆಂದು ತಿಳಿದು ಬಂದದರಿಂದಲೂ ದೊಡ್ಡಬಳ್ಳಾಪುರದ ಮ್ಯಾಜಿಸ್ಟ್ರೇಟರು ಅವನಿಗೆ ಒಂದು ವರುಷ ಕಠಿಣ ಸಜಾಶಿಕ್ಷೆಯನ್ನು ವಿಧಿಸಿದರು.

ಬೆಂಗಳೂರಿನ ಪೋಲೀಸಿನವರಿಗೆ ಕಾನ್‌ಪುರದ ಪೋಲೀಸಿನವರು ಹತ್ತು ರೂಪಾಯಿಗಳ ಒಂದು ಕೃತ್ರಿಮ ನೋಟನ್ನು ಕಳುಹಿಸಿಕೊಟ್ಟು ಇಂಥ ನೋಟುಗಳೇನಾದರೂ ಅಲ್ಲಿ ಚಲಾವಣೆಗೆ ಬಂದಿರುತ್ತವೆಯೋ? ಎಂದು ಕೇಳಿರುತ್ತಾರೆ. ಈ ಈ ಕೃತಿಮ ನೋಟನ್ನು ಯಾರೋ ಬಹಳ ಚೆನ್ನಾಗಿ ಮಾಡಿರುತ್ತಾರೆ. ಇದು ಕಾನ್‌ಪುರದಲ್ಲೇ ತಯಾರಾಗಿರಬೇಕೆಂದು ಊಹಿಸಲಾಗಿದೆ.

ಬೆಂಗಳೂರು ಕುಂಬಾರಪೇಟೆಯಲ್ಲಿ ವಾಸವಾಗಿರುವ 40 ವರುಷ ಪ್ರಾಯದ ಪಾಲಕ್ಕನೆಂಬವಳು ಮುನಿಯಕ್ಕಯ್ಯ ಎಂಬ 7 ವರುಷದ ಹುಡುಗಿಯ ಮೈ ಮೇಲಿದ್ದ ಬೆಳ್ಳಿ ಬಳೆಗಳನ್ನೂ ಕಾಲುಂಗುರಗಳನ್ನೂ ಕದ್ದಳೆಂದು ಪೋಲೀಸಿನವರು ಅವಳನ್ನು ಅರೆಸ್ಟುಮಾಡಿ ಮೊಕದ್ದಮೆ ಪತ್ತೆಮಾಡಿರುತ್ತಾರೆ. ಇವಳಿಗೆ ಹಿಂದೆ ಎರಡಾವರ್ತಿ ಇಂಥ ಕಳುವುಮಾಡಿದ್ದಕ್ಕಾಗಿ ಶಿಕ್ಷೆಯಾಗಿತ್ತೆಂದು ಹೇಳಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲನೇ ವಾರ್ಷಿಕ ಕೂಟವೂ ಮತ್ತು ಎರಡನೇ ಕಾನ್‌ಫರೆನ್ಸೂ ಸಹ ಇದೇ ತಿಂಗಳು 6-7 ನೇ ತಾರೀಖುಗಳಲ್ಲಿ ಬೆಂಗಳೂರಿನ ಎ. ವಿ. ಸ್ಕೂಲ್ ಹಾಲಿನಲ್ಲಿ ನಡೆಯುವದು. ಮ|| ಹೆಚ್. ವಿ. ನಂಜುಂಡಯ್ಯ ಎಂ. ಎ., ಎಂ. ಎಲ್., ಸಿ. ಐ. ಇ ಯವರು ಪ್ರೆಸಿಡೆಂಟರಾಗಿರುವರು. ಬೊಂಬಾಯಿ, ಬಳ್ಳಾರಿ, ಮಂಗಳೂರು, ಮೈಸೂರು ಧಾರವಾಡ ಈ ಸ್ಥಳಗಳಿಂದ ಬರುವ ಪ್ರಸಿದ್ಧರಾದ ವಿದ್ವಾಂಸರುಗಳು ಉಪನ್ಯಾಸಗಳನ್ನು ಮಾಡುವರು. ಈ ಪರಿಷತ್ತಿಗಾಗಿ ನಮ್ಮ ಮೈಸೂರು ಸರಕಾರದವರು 1,000 ರೂಪಾಯಿ ಗ್ರಾಂಟನ್ನೂ 3 ವರುಷಗಳ ವರೆಗೆ ತಿಂಗಳು ಒಂದಕ್ಕೆ 130 ರೂಪಾಯಿ ಗ್ರಾಂಟನ್ನೂ ಸಹ ಸ್ಯಾಂಕ್ಷನ್ ಮಾಡಿರುತ್ತಾರೆ.

ಮೈಸೂರು ಲಿಂಗಾಯತ ಎಜುಕೇಷನ್ ಫಂಡ್ ಅಸೋಸಿಯೇಷನ್ ಆ|| ಸೆಕ್ರೆಟರಿಯವರು ಬರೆಯುವದು.—1916 ನೇ ಗುರುವಾರ ಬೆಂಗಳೂರು ... ದೊಡ್ಡಪೇಟೆ ಸರಾಫ್ ಅಂಗಡಿ ಸೋಬಟಿ ನಂಜುಂಡಪ್ಪನವರ ಮಕ್ಕಳು ಮ|| ನಂಜಪ್ಪ ಉರುಫ್ ಶ್ಯಾಮಣ್ಣನವರು 32,680 ರೂ. ಬೆಲೆ ಬಾಳತಕ್ಕ ತಮ್ಮ ಆಸ್ತಿಯಲ್ಲಿ 24,080 ರೂ. ಬೆಲೆ ಬಾಳತಕ್ಕ ಆಸ್ತಿಯು ಮೈಸೂರು ಲಿಂಗಾಯತ ಎಜುಕೇಷನ್ ಫಂಡ್ ಅಸೋಸಿಯೇಷನ್‌ಗೆ ಸಲ್ಲತಕ್ಕದ್ದೆಂತಲೂ ಮತ್ತು ತಮ್ಮ ಪತ್ನಿಯ ಕಾಲಾನಂತರ 6,000 ರೂ. ಬೆಲೆ ಬಾಳತಕ್ಕ ಮನೆ ಅಂಗಡಿಯು ಸಹ ಸದರಿ ಫಂಡಿನ ಅಸೋಸಿಯೇಷನ್‌ಗೆ ಸಲ್ಲತಕ್ಕದ್ದೆಂತಲೂ ಮತ್ತು ಮೇಲ್ಕಂಡಂತೆ ಫಂಡ್ ಅಸೋಸಿಯೇಷನ್‌ಗೆ ಸಲ್ಲತಕ್ಕ ಆಸ್ತಿಯ ವೃದ್ಧ್ಯಂಶದಿಂದ ಮ|| ಸರಾಫ್ ಶ್ಯಾಮಣ್ಣನವರ ಹೆಸರಿನ ಮೇಲೆ ವೀರಶೈವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ (ವಿದ್ಯಾರ್ಥಿವೇತನ) ವನ್ನು ಕೊಡಬೇಕೆಂತಲೂ ವಿಲ್ ಪತ್ರವನ್ನು ಬರಸಿ ರಿಜಿಸ್ಟರ್‌ಮಾಡಿಸಿ ಅದರ ಕಾಪಿಗಳನ್ನು ತೆಗೆದುಕೊಂಡು ಅಪ್ಲಿಕೇಷನ್ ಮೂಲಕ ನಮ್ಮ ದಿವಾನರವರಿಗೂ ಈ ಅಸೋಸಿಯೇಷನ್ ಪ್ರೆಸಿಡೆಂಟರವರಿಗೂ ಕಳುಹಿಸಿಕೊಟ್ಟಿರುವರು.

ಒಬ್ಬ ಬಾತ್ಮಿದಾರರು ಬರೆಯುವದು.—ಮೈಸೂರು ಸಂಸ್ಥಾನದಲ್ಲಿ ಶ್ರೀಮಂತರ ಆಳ್ವಿಕೆಯಲ್ಲಿ ಧರ್ಮಾಧಿಕಾರಿಗಳಾಗಿದ್ದು ಮೈಸೂರಿಗೆ ಬಂದು ಶ್ರೀ ಶ್ರೀಮನ್ಮಹಾರಾಜಾ ಮುಮ್ಮಡಿ ಶ್ರೀಕೃಷ್ಣರಾಜೇಂದ್ರ ಒಡೆಯರವರ ಆಳ್ವಿಕೆಯಲ್ಲಿ ಆಸ್ಥಾನ ಧರ್ಮಾಧಿಕಾರಿಗಳಾಗಿದ್ದ ವೇ|| ಆಶೀ ಶೇಷಶಾಸ್ತ್ರಿಗಳವರಿಗೆ 3 ನೇ ಮಕ್ಕಳಾಗಿ ಮತ್ತು ಶಾಸ್ತ್ರಗಳ ವ್ಯಾಸಂಗವನ್ನು ಮಾಡಿ ತಮ್ಮ 14-15 ನೇ ವರ್ಷಗಳಲ್ಲೇ ಅನೇಕ ಸಂದರ್ಭಗಳಲ್ಲಿ ವಿದ್ವತ್ಸಭೆಗಳಲ್ಲಿ ಶ್ರೀ ಶ್ರೀಮಹಾಪ್ರಭುಗಳಿಂದಲೂ, ಶ್ರೀ ಶೃಂಗೇರಿ ಸ್ವಾಮಿಗಳೇ ಆದಿಯಾಗಿ ಅನೇಕ ಮಠಾಧಿಪತಿಗಳಿಂದಲೂ ತೋಡಾ, ಕಂಠೀ, ಶಾಲು ಮುಂತಾದ ಮರ್ಯಾದೆಗಳನ್ನು ಪಡೆದು ಅನೇಕರನ್ನು ಅನೇಕ ಶಾಸ್ತ್ರಗಳಲ್ಲಿ ಪಂಡಿತೋತ್ತಮರನ್ನಾಗಿ ಮಾಡಿಸಿ ವೈದಿಕ ಸಾರ್ವಭೌಮರಾಗಿ ಆಸೇತು ಹಿಮಾಚಲದ ವರೆಗೂ ಪಂಡಿತೋತ್ತಮರೆಂದು ಬಹಳ ಕೊಂಡಾಡಿಸಿಕೊಂಡು ಇವರು 5-6 ವರ್ಷಗಳಿಂದ ಪರಮಾರ್ಥಕ ಉಪಾಸನಾ ಕ್ರಮಗಳನ್ನು ಬಿಟ್ಟು ಆತುರ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಈ ಚೈತ್ರಬಹುಳ ಭಾನುವಾರ ಪ್ರಾತಃಕಾಲ ಕೈವಲ್ಯವನ್ನು ಹೊಂದಿದರು. ನಂತರ ಅವರ ಮಕ್ಕಳುಗಳು ವೈದಿಕ ಶಿಖಾಮಣಿಗಳನ್ನು ಬರಮಾಡಿಕೊಂಡು ಶಾಸ್ತ್ರೋಕ್ತವಾಗಿ ಸಮಾಧಿಯನ್ನು ಮಾಡಿದರು.

ಮೈಸೂರು ಗೆಜೆಟ್ ಸಂಗ್ರಹ.

ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಟ್ರೈನಿಂಗ್ ಚಾರ್ಜಿನಲ್ಲಿರುವ ಪ್ರೊ|| ಅ|| ಕ|| ಮ|| ಟಿ. ಅಬ್ದುಲ್ ಖಾದರ್ ಬಿ.ಎ. ಯವರನ್ನು 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ನಿಯಾಮಕ ಮಾಡಲಾಗಿದೆ.

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಪ್ರೊ|| ಅ|| ಕ|| ಮ|| ಚಿನ್ನರಾಜ ಅರಸ್ ಬಿ.ಎ., ಎಲ್ ಎಲ್.ಬಿ. ಯವರನ್ನು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ನಿಯಾಮಕ ಮಾಡಲಾಗಿದೆ.

ಕಡೂರ್ ಮತ್ತು ಹಾಸನ ಡಿಸ್ಟ್ರಿಕ್ಟುಗಳ ಮಲ್ನಾಡ್ ಇಂಪ್ರೂವ್‌ಮೆಂಟ್ ಸ್ಕೀಮ್ ಸ್ಪೆಷಲ್ ರೆವೆನ್ಯು ಆಫೀಸರ್ ಮ|| ಆರ್. ನಾನಾಸ್ವಾಮಿರಾವ್ ಯವರಿಗೆ ಮಾರ್ಚಿ 13 ರಿಂದ 22 ರ ವರೆಗೆ ಹನ್ನೊಂದು ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದೆ.

ಅಸಿಸ್ಟೆಂಟ್ ಅ|| ಸರ್ಜನ್ ಮ|| ಪಿ. ಎಸ್. ರಾಮಚಂದ್ರಯ್ಯರ್ ಯವರನ್ನು ಬೆಂಗಳೂರು ವಿಕ್ಟೋರಿಯ ಆಸ್ಪತ್ರೆಯಿಂದ ಶಿವಮೊಗ್ಗ ಡಿಸ್ಟ್ರಿಕ್ಟ್ ಆಸ್ಪತ್ರೆಗೂ ಅ|| ಲೇಡಿ ಮೆಡಿಕಲ್ ಆಫೀಸರ್ ಮಿಸೆಸ್ ಮ.ಧುರಾಬಾಯಿ ಉಟ್‌ಗೋಕರ್‌ರವರನ್ನು ಬೆಂಗಳೂರು ವಾಣಿವಿಲಾಸ ಆಸ್ಪತ್ರೆಯಿಂದ ಶಿವಮೊಗ್ಗ ಹೆಂಗಸರ ಆಸ್ಪತ್ರೆಯ ಚಾರ್ಜಿಗೂ ಹಂಗಾಮಿಯಾಗಿ ವರ್ಗಮಾಡಿದೆ.

ಬಳ್ಳಾಪುರ ಫಾರೆಸ್ಟ್ ರೇಂಜ್ ಚಾರ್ಜಿನಲ್ಲಿರುವ ಪ್ರೊ|| ಫಾರೆಸ್ಟ್ ಸಬ್ ಅ|| ಕ|| ಮ|| ಸಿ. ಅಬ್ದುಲ್ ಜಬ್ಬಾರ್, ಬಿ.ಎ ಯವರನ್ನು ಬೇಗೂರು ರೇಂಜ್ ಚಾರ್ಜಿಗೆ ನಿಯಾಮಕ ಮಾಡಲಾಗಿದೆ. ಸಬ್ ಪ್ರೊಟೆಂ ಸಬ್ ಅ|| ಕ|| ಮ|| ಎಂ. ವಿ. ನರಸಿಂಹಯ್ಯ ಬಿ.ಎ. ಯವರು ರಜಾದಿಂದ ಬಂದು ಚಾರ್ಜನ್ನು ತೆಗೆದುಕೊಂಡನಂತರ ಇವರು ಈ ಕೆಲಸದ ಮೇಲೆ ಹೋಗತಕ್ಕದ್ದು.

ಜನರಲ್ ಮತ್ತು ರೆವೆನ್ಯು ಸೆಕ್ರೆಟರಿಯೇಟಿಗೆ ವರ್ಗವಾಗಿ ಹುಕುಂ ಪಡೆದಿರುವ ಪ್ರೊ|| ಅ|| ಕ|| ಮ|| ವೆಂಕಟನಾರಣಪ್ಪನವರಿಗೆ ಏಪ್ರಿಲ್ 20 ರ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾ. ಲಾಗಾಯತು 15 ದಿನಗಳ ಪ್ರಿವಿಲೆಜ್ ರಜಾ ಕೊಡಲಾಗಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುವ ಪ್ರೊ|| ಅ|| ಕ|| ಮ|| ಟಿ. ವಿ. ಎ. ಈಶ್ವರನ್ ಯವರಿಗೆ ಏಪ್ರಿಲ್ 19 ರ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಲಾಗಾಯತು ಒಂದು ತಿಂಗಳು 15 ದಿನಗಳ ಪ್ರಿವಿಲೆಜ್ ರಜಾ ಕೊಡಲಾಗಿದೆ.

ಸೀನಿಯರ್ ಅಸಿಸ್ಟೆಂಟ್ ಕೆಮಿಸ್ಟ್ ಮ|| ಎನ್. ಸಂಪತಯ್ಯಂಗಾರ್ರವರಿಗೆ ಏಪ್ರಿಲ್ 15 ರ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದೆ. ಇವರ ಗೈರ್‌ಹಾಜರಿ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರೆಗೆ ಸಬ್ ಪ್ರೊಟೆಂ ಜೂನಿಯರ್ ಅಸಿಸ್ಟೆಂಟ್ ಕೆಮಿಸ್ಟ್ ಮ|| ಶಂಕರರಾವ್ ಬಾಪಾಜಿಯವರನ್ನು ಸೀನಿಯರ್ ಅಸಿಸ್ಟೆಂಟ್ ಕೆಮಿಸ್ಟರನ್ನಾಗಿ ನಿಯಾಮಕ ಮಾಡಲಾಗಿದೆ.

ಮೈಸೂರು ಡಿವಿಜನ್‌ಗೆ ಸೇರಿದ ಅ|| ಇನ್|| ಮ|| ಎಸ್. ಆನಂದಾಳ್ವಾರ್ ಬಿ.ಎ., ಎ.ಸಿ.ಇ. ಯವರನ್ನು ಆಫಿಷಿಯೇಟಿಂಗ್ ಎಕ್ಸಿಕ್ಯುಟಿವ್ ಇಂಜನೀಯರನ್ನಾಗಿ ಚಿತ್ರದುರ್ಗದ ಡಿವಿಜನ್‌ಗೆ ವರ್ಗಮಾಡಿದೆ.

ನಂ|| 1 ಡಿವಿಜನ್ ಮೈಸೂರು ಅರಸಿಕೆರೆ ರೈಲ್ವೆ ಅ|| ಇನ್|| ಮ|| ರೊನಾಲ್ಡ್ ಎಲ್. ಸ್ಟೀರ್ ಯವರಿಗೆ ಮಾರ್ಚಿ 30 ರ ಲಾಗಾಯತು 14 ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದೆ.

ಆಲೂರು ಮತ್ತು ಸಕಲೇಶಪುರ ಮುನಿಸಿಪಾಲಿಟಿಗಳ ಸರಹದ್ದಿನಲ್ಲಿ 1916 ಜೂನ್ 1 ರ ಲಾಗಾಯತು ಮೂರು ವರುಷಗಳ ವರೆಗೆ ಬಲಾತ್ಕರಿಸಿ ದೇವಿಹಾಕಬೇಕೆಂಬದಾಗಿ ಈ ಮೂಲಕವಾಗಿ ಪ್ರಕಟಿಸಲಾಗಿದೆ.

ಕುಣಿಗಲ್ ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ 1916 ಜೂನ್ 1 ರ ಲಾಗಾಯತು ಎರಡು ವರುಷಗಳ ವರೆಗೆ ಬಲಾತ್ಕರಿಸಿ ದೇವಿಹಾಕಬೇಕೆಂಬದಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಮೈಸೂರು ಮಹಾರಾಜರ ಸಂಸ್ಕೃತ ಕಾಲೇಜಿನ ಮ್ಯಾನೇಜ್‌ಮೆಂಟ್ ಕಮಿಟಿಯ ಮೆಂಬರುಗಳಾದ ಮೆ|| ಗಳಾದ ಹಿರಿಯಣ್ಣ, ಎಂ. ಎ., ಡಿ. ವೆಂಕಟರಾಮಯ್ಯ, ಬಿ. ಎ., ಪಂಡಿತ ಕಡಿತಾಳ ವೆಂಕಟಸುಬ್ಬಶಾಸ್ತ್ರಿಗಳು, ಪಂಡಿತ ಹಾಲುವನಹಳ್ಳಿ ಶೇಷಾಚಾರ್ ಇವರುಗಳ ಉದ್ಯೋಗದ ಅವಧಿಯು ಪೂರಯಿಸಿದ್ದರಿಂದ ಶ್ರೀಮನ್ಮಹಾರಾಜರವರು ಇವರುಗಳನ್ನು ಪುನಃ ಎರಡು ವರುಷಗಳ ವರೆಗೆ ಮೆಂಬರುಗಳನ್ನಾಗಿ ನಿಯಾಮಕ ಮಾಡಿರುವದಲ್ಲದೆ ಇವರ ಜೊತೆಗೆ ಇನ್ನೂ ಮೂವರನ್ನು ಸೇರಿಸಿರುತ್ತಾರೆ.

ಹೆಬ್ಬಾಲೆಯಲ್ಲಿ ದನಗಳ ಪ್ರದರ್ಶನ.

ಅರಕಲಗೂಡು ತಾಲ್ಲೋಕು ಕಸಬಾ ಹೋಬಳಿ ಸರ್ವಾಪನ್ನ ಹೆಬ್ಬಾಲೆ ಗ್ರಾಮದಲ್ಲಿ ಶ್ರೀಚನ್ನಕೇಶವದೇವರ ರಥೋತ್ಸವವನ್ನು ಮಾಮೂಲ್ ಮೇರೆ ಈ ವರುಷವೂ ಬಹಳ ವಿಜೃಂಭಣೆಯಿಂದ ಈ ಗ್ರಾಮಸ್ಥರಾದ ಮುಖಂಡರು ಸೇರಿ ನಡಿಸಿದರು. ಅದೇ ಮಾಹೆ ತಾ. 18 ರ ಲಾಗಾಯ್ತು ಹೋದ ವರುಷದಂತೆ ಈ ವರುಷವೂ ಹುಲ್ಲಂಗಾಲದ ಶಾನುಭೋಗರು ಮ|| ವೆಂಕಟಸುಬ್ಬಯ್ಯನವರು ಆಸುಪಾಸು ಗ್ರಾಮಸ್ಥರಿಗೆಲ್ಲಾ ತಿಳುವಳಿಕೆ ಹೇಳಿ ದನಗಳನ್ನು ಸೇರಿಸಿ ಪ್ರದರ್ಶನವನ್ನು ನಡಿಸಿದರು. ತಾ. 21 ರ ವರೆಗೂ ಪ್ರದರ್ಶನ ನಡೆದು ಅದೇ ದಿವಸ ಮಧ್ಯಾಹ್ನ 3 ಗಂಟೆಯಲ್ಲಿ ಸವರಿಯವರ ಕೋರಿಕೆಯಂತೆ ತಾಲ್ಲೂಕು ಅಮಲ್ದಾರ್ ಮಿ|| ಬಿ. ಮೊಹಿದೀನ್ ಷರೀಫ್, ಬಿ.ಎ., ಬಿ.ಎಲ್. ರವರು ದಯಮಾಡಿಸಿ ಪ್ರದರ್ಶನದ ಬಳಿ ಹಾಕಿದ್ದ ಚಪ್ಪರದಲ್ಲಿ ಅಗ್ರಾಸನಾಧಿಪತ್ಯವನ್ನು ವಹಿಸಿ ಅಲ್ಲಿ ನೆರೆದಿದ್ದ ಜನಗಳಿಗೆಲ್ಲಾ ಲೆಕ್ಚರ್ ಕೊಟ್ಟಿದ್ದಲ್ಲದೆ ಮತ್ತು ವ್ಯವಸಾಯ ಸಂಬಂಧವಾದ ವಿಷಯಗಳು, ಗ್ರಾಮಾಭಿವೃದ್ಧಿ ವಿಷಯಗಳು ವಗೈರೆಗಳನ್ನೆಲ್ಲಾ ಚೆನ್ನಾಗಿ ಉಪನ್ಯಾಸಮಾಡಿ ಅಪ್ಪಣೆಕೊಡಿಸಿ ಉತ್ತಮವಾದ ಎತ್ತುಗಳು, ಹಸುಗಳು ಆಡುಗಳು ವಗೈರೆಗೆ ಸದರಿ ಶ್ಯಾನುಭೋಗ ವೆಂಕಟಸುಬ್ಬಯ್ಯನವರು ಇತರರನ್ನು ಅಪೇಕ್ಷಿಸದೆ ಬಹುಮಾನವಾಗಿ ಕೊಟ್ಟ ಮೊಬಲಗುಗಳನ್ನು ಅಮಲ್ದಾರ್ರವರು ಸ್ವಹಸ್ತದಿಂದ ಬಟವಾಡೆಮಾಡಿದರು. ನಂತರ ಅಮಲ್ದಾರ್ರವರು ಸದರಿ ಶ್ಯಾನುಭೋಗ ವೆಂಕಟಸುಬ್ಬಯ್ಯನವರು ಒಟ್ಟರೆ ವಹಿಸಿ ತಮ್ಮ ಸ್ವಂತದಿಂದ 30 ರೂಪಾಯಿ ಬಹುಮಾನವನ್ನು ಕೊಟ್ಟು ಈ ಪ್ರದರ್ಶನವನ್ನು ನಡಿಸಿದ್ದು ಬಹಳ ಸ್ತೋತ್ರಾರ್ಹವಾಗಿದೆ; ಮುಂದೆ ನೀವುಗಳೆಲ್ಲರೂ ಇವರಲ್ಲಿ ಸೇರಿ ಈ ಪ್ರದರ್ಶನವನ್ನು ಅಭಿವೃದ್ಧಿ ಪಡಿಸಬೇಕೆಂದು ವಗೈರೆ ಅಪ್ಪಣೆಕೊಡಿಸಿದರು. ನಂತರ ನೆರೆದಿದ್ದ ವರಿಗೆಲ್ಲಾ ಗಂಧಪುಷ್ಪಾದಿಗಳನ್ನು ಸಮರ್ಪಿಸಿ ಫಲಾಹಾರಾದಿಗಳೆಲ್ಲ ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟವು. ಮತ್ತು ಮಹಾರಾಜರವರಿಗೂ, ಅವರ ಪರಿವಾರಕ್ಕೂ ಶ್ರೇಯಃಪ್ರಾರ್ಥನೆಗಳು ನಡೆದು ಸಭೆ ಬರಖಾಸ್ತು ಮಾಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶಿರಾಳಕೊಪ್ಪದ ಪಬ್ಲಿಕ್ ರೀಡಿಂಗ್ ರೂಂ.

ಸನ್ 1916 ನೇ ಇಸವಿ ಏಪ್ರಿಲ್ ತಾ. 4 ರಲ್ಲು ಶಿರಾಳಕೊಪ್ಪದ ಕಸ್ತೂರಿಗಿರಿ ಬಾವಾಜಿ ಮಠದಲ್ಲಿ ಪಬ್ಲಿಕ್ ರೀಡಿಂಗ್ ರೂಮಿನ ಜನರಲ್ ಮೀಟಿಂಗ್ ನಡೆಯಿತು. ಈ ಮೀಟಿಂಗಿಗೆ ಈ ಸ್ಥಳದ ಅನೇಕ ಮಂದಿ ದೊಡ್ಡಮನುಷ್ಯರೂ ವರ್ತಕರೂ ಸುಮಾರು ಒಂದು ನೂರು ಜನಗಳ ಮೇಲ್ಪಟ್ಟು ಸೇರಿದ್ದರು. ಸಭಾ ಕಾರ್ಯದ ಪ್ರಾರಂಭದಲ್ಲಿ ಫಾರೆಸ್ಟ್ ಡಿಪೋ ಆಫೀಸಿನ ಏಜಂಟರವರಾದ ಮ|| ಬಿ. ಶೇಷಪ್ಪನಾಯಕರವರು ಈ ರೀಡಿಂಗ್ ರೂಮಿನ ಹೋದ ಮೀಟಿಂಗಿನ ಪ್ರೊಸೀಡಿಂಗ್ಸ್ ಮತ್ತು ಜಮಾ ಖರ್ಚು ಲೆಕ್ಕ ಸಹಾ ಓದಿ ಹೇಳಿದರು. ಜಮಾ ರೂ. 49-8-0, ಖರ್ಚು ರೂ. 10-11-3, ಬಾಕಿ ಶಿಲ್ಕು ರೂ. 38-12-9. ಈ ದಿವಸದ ಸಭೆಗೆ ಮ|| ಸಬ್ ಅ|| ಸರ್ಜನ್ ರವರಾದ ಕೆ. ಎನ್. ಸುಬ್ಬಯ್ಯನವರನ್ನು ಸಭಾಧ್ಯಕ್ಷರಾಗಬೇಕೆಂದು ತಮ್ಮ ಕೋರಿಕೆಯನ್ನು ತಿಳಿಸಿದರು. ಅದರಂತೆ ಸರ್ವರೂ ಸಮ್ಮತಿಸಿದರು. ಸಭಾಧ್ಯಕ್ಷರು ಮೈಸೂರ್‌ಗೆ ಅವಕಾಶ ಕೊಡದಂತೆ ಏಕಮತ್ಯದಿಂದ ಈ ರೀಡಿಂಗ್ ರೂಮನ್ನು ಇದಕ್ಕೆ ಸೇರಬಹುದಾದ ಲೈಬ್ರೆರಿಯನ್ನು ಶಾಶ್ವತವಾಗಿ ನಡಿಸಿಕೊಂಡುಹೋಗಬೇಕೆಂತಲೂ, ಸ್ಕೂಲ್ ಹೆ|| ಮಾ|| ಮ|| ಕೆ. ಚೆನ್ನಮಲ್ಲಪ್ಪನವರು ಈ ರೀಡಿಂಗ್ ರೂಮಿನ ಪ್ರಯೋಜನ ಮುಂತಾದ ವಿಷಯದಲ್ಲಿ ಉಪನ್ಯಾಸಮಾಡುತ್ತಾರೆಂತಲೂ ತಿಳಿಸಿದರು. ಅದರಂತೆ ಹೆ|| ಮಾ|| ಮ|| ಕೆ ಚೆನ್ನಮಲ್ಲಪ್ಪನವರು ಬಾಲಕ ಬಾಲಕಿಯರ ವಿದ್ಯಾಭ್ಯಾಸ, ಪರಸ್ಪರಸಹಾಯ, ಪರೋಪಕಾರ, ಗ್ರಾಮಾಭಿವೃದ್ಧಿ, ಪಾಠಶಾಲೆಗಳ ಉಪಯೋಗ, ಅರ್ಥಸಾಧಕ ಸಭೆಯವರಿಂದ ಪ್ರಕಟಿಸಲ್ಪಟ್ಟ ಪುಸ್ತಕಗಳು ಈ ಮುಂತಾದವುಗಳ ವಿಷಯದಲ್ಲಿ ಪ್ರತಿಯೊಬ್ಬರು ಗಮನಕೊಟ್ಟು ಅಭಿವೃದ್ಧಿ ಪಡಿಸಬೇಕೆಂದು ಉಪನ್ಯಾಸಮಾಡಿದರು. ಈ ರೀಡಿಂಗ್ ರೂಮಿನ ಪ್ರೆಸಿಡೆಂಟ್ ಕೆಲಸಕ್ಕೆ ಓಟ್ಸು ಹಾಕಿದ್ದರಲ್ಲಿ ಮ|| ಸುರಕೊಪ್ಪ ಹಾಲಪ್ಪನವರಿಗೆ ಹೆಚ್ಚು ಓಟ್ಸು ಬಂದದ್ದರಿಂದ ಅವರನ್ನು ಪ್ರೆಸಿಡೆಂಟರನ್ನಾಗಿಯೂ, ಮ|| ಬಿ. ಶೇಷಪ್ಪನಾಯಕರನ್ನು ಸೆಕ್ರೆಟರಿಯಾಗಿಯೂ, ಯೂನಿಯನ್ ಬೋರ್ಡ್ ಮೆಂಬರ್ ಮ|| ಕರ್ನಲ್ಲಿ ಚೆನ್ನವೀರಪ್ಪನವರನ್ನು ಖಜಾನ್‌ಚಿಯನಾಗಿಯೂ, ಮ|| ಬಿ. ಶೇಷಪ್ಪನಾಯ್ಕರು ಮತ್ತು ಸ್ಕೂಲ್ ಹೆ|| ಮಾ|| ಮ|| ಕೆ ಚೆನ್ನಮಲ್ಲಪ್ಪನವರು ಆಡಿಟರ್ ಆಗಿಯೂ, ಮ|| ಸಾಹುಕಾರ ಸಣ್ಣಗಿ ಶಿವಬಸಪ್ಪನವರು, ಮ|| ಬಸವಕಟ್ಟೆ ಮುರಿಗಯ್ಯನವರು, ಮ|| ಅಗಡಿ ಬಿಷ್ಟಪ್ಪನವರು, ಮ|| ಸದಾವರ್ತಿ ಹನುಮಂತಪ್ಪನವರು, ಮ|| ಚಿನವಾಲಗಟ್ಟಿ ಹಾಲಪ್ಪನವರು, ಮ|| ಕಂಟ್ರಾಕ್ಟುದಾರ್ ಸಂಜೀವಪ್ಪನವರು, ಇವರುಗಳೆಲ್ಲಾ ಮ್ಯಾನೇಜಿಂಗ್ ಕಮಿಟಿ ಮೆಂಬರುಗಳಾಗಿಯೂ ಇರಬೇಕೆಂದು ಸಭಿಕರು ನಿರ್ಧರಿಸಿದರು. ರೀಡಿಂಗ್ ರೂಂ ಪ್ರೆಸಿಡೆಂಟ್‌ರಾದ ಮ|| ಸುರಕೊಪ್ಪ ಹಾಲಪ್ಪನವರು ತಮ್ಮನ್ನು ಪ್ರೆಸಿಡೆಂಟರವರನ್ನಾಗಿ ಚುನಾಯಿಸಿದ್ದಕ್ಕೆ ಬಹಳ ಕೃತಜ್ಞನಾಗಿದೇನೆಂತಲೂ, ರೀಡಿಂಗ್ ರೂಮ್ ಅಭಿವೃದ್ಧಿಗೆ ಸರ್ವರು ಏಕಮತ್ಯದಿಂದ ಪ್ರಯತ್ನಪಡಬೇಕೆಂತಲೂ, ಸರ್ವರ ಅನುಕೂಲವರಿತು ಈ ರೀಡಿಂಗ್ ರೂಮಿನ ಅಧ್ಯಕ್ಷತೆಯ ಕೆಲಸವನ್ನು ತಾವು ನಡಿಸುವದಾಗಿಯೂ ಸರಳವಾಗಿ ಭಾಷಣ ಮಾಡಿದ್ದಲ್ಲದೆ ಕೋಆಪರೇಟಿವ್ ಸೊಸೈಟಿಯು ಎಲ್ಲಾ ಜನಗಳೂ ಈ ರೀಡಿಂಗ್ ರೂಮಿಗೆ ಮೆಂಬರಾಗಿ ಸೇರುವದು ಒಳ್ಳೇದೆಂತಲೂ ತಿಳಿಸಿದರು. ಅದರಂತೆ ಸದರಿ ಸಭೆಯಲ್ಲಿ ಸೇರಿದ್ದ ಜನಗಳ ಪೈಕಿ 20 ಜನಗಳು ಕೋಆಪರೇಟಿವ್ ಸೊಸೈಟಿಗೆ ಮೆಂಬರಾಗಲು ಒಪ್ಪಿ ತಮ್ಮ ತಮ್ಮ ಹೆಸರನ್ನು ಬರೆಸಿದರು. ಕಡೆಯಲ್ಲಿ ಜಾರ್ಜ್ ಚಕ್ರವರ್ತಿಗಳಿಗೂ ಮೈಸೂರು ಶ್ರೀಮನ್ ಮಹಾರಾಜರವರಿಗೂ ಮಂಗಳವಾಗಲೆಂದೂ ಶ್ರೇಯಃಪ್ರಾರ್ಥನೆಯನ್ನು ಸಂಗೀತ ವಿದ್ವಾನ್ ಮ|| ಗದ್ದಿಗೆಯ್ಯನವರು ಸಂಗೀತ ಮೂಲಕವಾಗಿ ಪ್ರಾರ್ಥಿಸಿದರು. ಸಭಾಧ್ಯಕ್ಷರವರು ಬರೀ ಮಾತುಗಳಿಂದ ತೃಪ್ತರಾಗದೆ ಕಾರ್ಯತಃ ಕೆಲಸಮಾಡುವದು ಒಳ್ಳೇದೆಂದೂ, ಸರ್ವರೂ ಸೇರಿ ಈ ರೀಡಿಂಗ್ ರೂಮನ್ನು ಅಭಿವೃದ್ಧಿಗೆ ತರುವದು ಅವಶ್ಯಕವೆಂತಲೂ ಕಿರಿದೇ ಭಾಷಣವನ್ನು ನಡೆಯಿಸಿದ ಮೇಲೆ ಗಂಧ ತಾಂಬೂಲಾದಿಗಳನ್ನು ಸರ್ವರಿಗೂ ಸಮರ್ಪಿಸಿ ಸಭೆಯು ಮುಕ್ತಾಯವಾಯಿತು.

ಬಿ. ಶೇಷಪ್ಪನಾಯಕ, ಸೆಕ್ರೆಟರಿ.

ಮೈಸೂರು ಸೀಮೆಯ ಶಾನುಭೋಗರ ಕಾನ್‌ಫರೆನ್ಸ್.

ಮೊದಲೇ ಏರ್ಪಾಡುಮಾಡಿದ್ದ ಮೇರೆಗೆ ನೂತನವಾದ ಪ್ರಥಮ ಶಾನುಭೋಗರ ಸಭೆಯು ದೇವನಹಳ್ಳಿ ತಾಲ್ಲೂಕ್ ಚನ್ನರಾಯಪಟ್ಟಣದ ಹೋಬಳಿ ಬೂದಿಗೆರೆ ಗ್ರಾಮದಲ್ಲಿ ಮ|| ಮಾನ್ಯರಾದ ರಿಟೈರ್ಡ್ ಅಸಿಸ್ಟಂಟ್ ಸೆಕ್ರೆಟರಿ ಹೆಚ್. ರಾಮಯ್ಯನವರ ಅಧ್ಯಕ್ಷತೆಯಿಂದ ತಾ. 16-4-16 ರಲ್ಲಿ ನಡೆಯಿತು ಈ ಕೆಳಗೆ ಕಂಡಂತೆ ಸಂಭಾಷಣೆಗಳು ನಡೆದು ತೀರ್ಮಾನಿಸಿದುವದೇನೆಂದರೆ—(1) ಪ್ರಥಮ ಪ್ರೇರಕರು ಮ|| ಸೋಮತ್ತನಹಳ್ಳಿ ರಾ|| ಶ್ರೀನಿವಾಸಯ್ಯನವರು, (2) ರಿಸೆಪ್‌ಷನ್ ಕಮಿಟಿ ಪ್ರೆಸಿಡೆಂಟರು ಮ|| ಬಾಲೇಪುರದ ರಾ|| ನಾರಾಯಣರಾಯರು, (3) ಸಂಭಾಷಕರು 12 ಮಂದಿ.

ಚರ್ಚೆಯ ಸಾರಾಂಶ—ಈ ಸಂಸ್ಥಾನದ ಶಾನುಭೋಗರುಗಳ ಪೂರ್ವಸ್ಥಿತಿ, ಆಗ್ಗೆ ಅವರು ಮಾಡುತ್ತಾ ಇದ್ದ ಕೆಲಸ, ಸುಖ, ಗೌರವ, ವರಮಾನ, ಈಚೆಗೆ ಬಂದ ಹೀನಸ್ಥಿತಿ, ಹೆಚ್ಚಿನ ಕೆಲಸ, ಈಗಿನ ಆದಾಯ, ಕೆಲಸದ ಜವಾಬ್ದಾರಿ ಇವುಗಳ ವಿಷಯವನ್ನು ಕುರಿತು ಮ|| ಬವಿಸನ್‌ದಾರ್ ಗುಂಡೂರಾಯರು ತಿಳಿಸಿದರು.

ಈ ಸಂಘವು ಇದೇ ವರುಷ ನವೀನವಾಗಿ ಮೈಸೂರು ದೇಶದ ಎಲ್ಲಾ ಶಾನುಭೋಗರುಗಳಿಗೂ ಅನ್ವಯಿಸುವಂತೆ ಏರ್ಪಾಡುಮಾಡಿರುವದರಿಂದ ನಮ್ಮಗಳ ಕೊರತೆಗಳನ್ನು ಶ್ರೀಮನ್ ಮಹಾರಾಜರವರ ಸರಕಾರಕ್ಕೆ ತಿಳಿಸಿಕೊಳ್ಳಲು ಸಹಕಾರಿಯಾಗಿಯುತ್ತೆಂತಲೂ ಈ ಸಂಘಕ್ಕೆ ಎಲ್ಲರೂ ಏಕಮತ್ಯವಾಗಿ ಸೇರಬೇಕೆಂತಲೂ ತಿಳಿಸಿದ್ದಲ್ಲದೆ ಪೂರ್ವದಲ್ಲಿ ಶಾನುಭೋಗರ ಹುದ್ದೆಯು ಬಹಳ ಗೌರವವಾಗಿದ್ದು ಜೀವನಮಾಡುತ್ತಾ ಇದ್ದದರಿಂದಲೇ ಅವರನ್ನು ಗ್ರಾಮದ ಎಲ್ಲಾ ಜನಗಳೂ ತಾಯಿಯಂತೆ ಭಾವಿಸಿಕೊಂಡು (ಗ್ರಾಮದ ತಾಯಿ) ಎಂತ ಕರೆಯುವ ನಾಣ್ನುಡಿಯು ಈಗಲೂ ಪ್ರಚಾರದಲ್ಲಿರುತ್ತೆ. ನಮ್ಮಗಳ ಪುರೋಭಿವೃದ್ಧಿ ವಿಷಯವಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಅನೇಕ ವರುಷಗಳಿಂದ ಕೇಳಿಕೊಂಡು ಬಂದಾಗ್ಯೂ ಶ್ರೀಮನ್ ಮಹಾರಾಜ ಸರ್ಕಾರದವರ ಘನವಾದ ಚಿತ್ತಕ್ಕೆ ಬಾರದೆ ಇರುವದರಿಂದಲೂ ಈ ಸೀಮೆಯ ಎಲ್ಲಾ ಶಾನುಭೋಗರುಗಳ ಸ್ಥಿತಿಯು ವಿಕಲೀತಿಯಾಗಿರಬಹುದೆಂತಲೂ ಯೋಚಿಸಿ ಈ ಸಭೆಯು ಏರ್ಪಾಡಾಗಿರುತ್ತೆ.

ಪೂರ್ವದಲ್ಲಿ ಶಾನುಭೋಗರುಗಳಿಗೆ ಕೊಟ್ಟು ಇದ್ದ ಇನಾಂತಿಯನ್ನು ವಜಾ ಮಾಡಿ ಅದಕ್ಕೆ ಪೂರಾ ಆಕಾರ ಹಾಕಿ ಪೋಟಿಗಿಯೆಂಬ ಅಲ್ಪವೇತನವನ್ನು ಕೊಟ್ಟು ಆ ಪೋಟಿಗಿಯನ್ನು ಇನಾಂ ಜಮೀನಿನ ಆಕಾರಕ್ಕೆ ವಜಾ ಮಾಡಿಕೊಳ್ಳುತ್ತಾರೆ. ಇನಾಂ ಜಮೀನುಗಳಾದರೋ ಎಷ್ಟೋ ಬಂಜರು ಬಿದ್ದಿರುತ್ತವೆ. ಅವನ್ನು ರಾಜೀನಾಮೆ ಕೊಡುವದಕ್ಕೂ ಇಲ್ಲ. ಒಂದು ವೇಳೆ ಇದನ್ನ ನೂರಾರು ರೂಪಾಯಿ ಲಾಗೋದು ಇಟ್ಟು ಆಬಾದು ಮಾಡಿದಲ್ಲಿ ಅದರ ಪರಿಣಾಮ ಏನಾಗುತ್ತೋ ಗೊತ್ತಿಲ್ಲ. ಹೀಗೆ ಕೆಲಸ ಮಾಡಿ ಬಂಜರು ಜಮೀನುಗಳಿಗೆ ಬದಲು ಪೋಟಿಗಿಯನ್ನ ವಜಾ ಕೊಡಬೇಕಾಗಿ ಬಂದಿದೆ. ನಮ್ಮಂತೆಯೇ ಪೂರ್ವದಲ್ಲಿ ನೌಕರಿ ಮಾಡುತ್ತಿದ್ದ ಬಾರಾಬಲುವತಿಗೆ ಸಮ್ಮಂಧಪಟ್ಟ ಕಮ್ಮಾರ, ಕುಂಬಾರ, ಕೆರೆಷೂಪ್ಪರ ಮುಂತಾದವರಿಗೆ ಕೊಟ್ಟು ಇದ್ದ ಇನಾಂತಿಗಳಿಗೆ ಮೂರನೆ ಒಂದು ಭಾಗದ ಆಕಾರ ಜೋಡಿಯಾಗಿ ಹಾಕಿ ಬಂದ ಏರ್ಪಾಟನೆಯಿಂದಾ ಕ್ರಯ ಭೋಗ್ಯ ಮಾಡಿಕೊಳ್ಳಲು ಹಕ್ಕು ಕೊಟ್ಟಿರುತ್ತಾರೆ. ಅವರುಗಳು ಸರ್ಕಾರಕ್ಕೆ ಮಾಡಿದ ಉಪಕಾರವೇನೊ ಶಾನುಭೋಗರುಗಳು ಮಾಡಿದ ಅಪಕಾರವೇನೊ ಗೊತ್ತಿಲ್ಲವೆಂತಲೂ ಅವರುಗಳಿಗೆ ಕೊಟ್ಟಿರುವಂತೆಯೆ ನಮ್ಮಗಳ ಇನಾಂತಿ ಜಮೀನುಗಳಿಗೆ ಆಕಾರ ವಜಾ ಮಾಡಿಸಿ ಇನಾಂ ಕಾಯಂ ಮಾಡಬೇಕೆಂತಲೂ, ಈಚೆಗೆ ಎಲ್ಲಾ ಇಲಾಖೆ ನೌಕರರಿಗೂ ಶ್ರೀಮನ್ ಮಹಾರಾಜಾ ಸರ್ಕಾರದವರು ವೇತನಾ ಜಾಸ್ತಿ ಮಾಡಿರುವಂತೆಯೇ ಶಾನುಭೋಗರುಗಳ ಪೋಟಿಗಿಯು ಕೇವಲ ಹತ್ತು ರೂಪಾಯಿನ ವರಿವಿಗೆ ಹೆಚ್ಚಿಸಬೇಕೆಂತಲೂ ಇಲ್ಲವಾದರೆ ಜೀವನಗಳಿಗೆ ಬಹಳ ತೊಂದರೆಯಾಗುತ್ತೆಂತಲೂ ಧಾರಣೆವಾಸಿಗಳು ದಿನೆ ದಿನೇ ಹೆಚ್ಚುತ್ತಾ ಬರುತ್ತಿದೆಯೆಂತಲೂ ಹತ್ತು ಹನ್ನೆರಡು ವರುಷಗಳ ಕಾಲ ಕೆಲಸ ಮಾಡಿ ಯೋಗ್ಯನಾಗಿರುವಂಥಾ ಶಾನುಭೋಗನಿಗೆ ರೆವಿನ್ಯೂ ಇಲಾಖೆಯಲ್ಲಿ ನೌಕರಿಕೊಟ್ಟು ಶಾನುಭಾಗಿಕೆ ಕೆಲಸವನ್ನು ಅವರ ವಾರಸುದಾರ್ರಿಗೆ ಖಾಯಂ ಮಾಡಿಸಬೇಕೆಂತಲೂ ಸರ್ಕಾರದ ನೌಕರರಿಗೆ ಮನೆ ಕಟ್ಟಿಕೊಳ್ಳುವದಕ್ಕೆ ಅಡ್ವಾನ್ಸ್ ಕೊಡುವಂತೆ ಇವರಿಗೂ 6 ವರುಷದ ಪೋಟಿಗಿ ಅಡ್ವಾನ್ಸ್ ಕೊಡಿಸಬೇಕೆಂತಲೂ ನಿರ್ಬಂಧದಿಂದ ಕೇವಲ 10 ರೂಪಾಯಿನಂತೆ ಲೈಫ್ ಇನ್ಷೂರ್ ಮಾಡಿಸಬೇಕೆಂತಲೂ ಶಾನುಭೋಗರುಗಳನ್ನು ಗೌರ್ನಮೆಂಟ್ ನೌಕರರೆಂದು ಭಾವಿಸಬೇಕೆಂತಲೂ ಈ ಸಭೆಯು ಯಾವಾಗ್ಯೂ ಶಾಶ್ವತವಾಗಿ ನಡೆದು ಬರುವಂತೆ ಶ್ರೀಮನ್ ಮಹಾರಾಜಾ ಸರ್ಕಾರದವರ ಅನುಮತಿಯನ್ನು ಪಡೆದುಕೊಳ್ಳಲು ಪ್ರಾರ್ಥನೆ ಮಾಡಿಕೊಳ್ಳಬೇಕೆಂತಲೂ ಮ|| ಬಾಲೇಪುರದ ನಾರಾಯಣರಾಯರವರು ತಿಳಿಸಿದರು.

ಒಂದು ಸ್ಥಳಗಿಂತ ಹೆಚ್ಚಾಗಿರತಕ್ಕ ಸ್ಥಳಗಳು ಒಬ್ಬ ಶಾನುಭೋಗನು ನೋಡಕೂಡದೆಂತಲೂ ಅವನು ಅದೇ ಗ್ರಾಮದಲ್ಲಿ ವಾಸವಾಗಿರಬೇಕೆಂತಲೂ ಆಫೀಸರುಗಳು ನಿರ್ಬಂಧಪಡಿಸುತ್ತಾರೆ. ಇದನ್ನು ತಪ್ಪಿಸಬೇಕೆಂತಲೂ ಇದು ವಂಶ ಪಾರಂಪರ್ಯವಾಗಿ ಬಂದ ಹಕ್ಕಿಂತಲೂ ಇದರಿಂದ ಸರ್ಕಾರಕ್ಕೆ ಯಾವ ತೊಂದರೆಯೂ ಇಲ್ಲವೆಂತಲೂ ಪಟೇಲ್, ತೋಟಿ, ತಳವಾರ, ನೀರಗಂಟಿ ಇವರುಗಳನ್ನು ಶಾನುಭೋಗರ ತಾಬೇದಾರರನ್ನಾಗಿ ಮಾಡಬೇಕೆಂತಲೂ ಮ|| ಕುಲೇನ್ ಪೇಟೆ ರಾ|| ನರಸಯ್ಯನವರು ತಿಳಿಸಿದರು.

ಕಂದಾಯದ ವಸೂಲಿ ವಿಷಯದಲ್ಲಿ ಪಟೇಲನೇ ಹಣ ಮುಟ್ಟಬೇಕೆಂತಲೂ ಶಾನುಭೋಗನು ಮುಟ್ಟಕೂಡದೆಂತಲೂ ರೂಲಿಸಿರುತ್ತೆ. ಬ್ರಿಟಿಷ್ ಸೀಮೆಯಲ್ಲಿಯೂ ಅದೇ ಪದ್ಧತಿ ಇರುತ್ತೆ. ನಮ್ಮ ಸೀಮೆ ನಡವಳಿಕೆಯಲ್ಲಿಯೂ ಪಟೇಲರು ಈ ಕೆಲಸ ಮಾಡುತ್ತಾ ಇರುವದಿಲ್ಲವೆಂತಲೂ ಈ ಕೆಲಸವೂ ಸಹಾ ಶಾನುಭೋಗರುಗಳೇ ಮಾಡುತ್ತಾ ಇರುತ್ತಾರೆಂತಲೂ ವಸೂಲಿ ವಿಷಯದಲ್ಲಿ ಶಾನುಭೋಗರಿಗೆ ಜುಲ್ಮಾನೆ ಹಾಕುವ ಪದ್ಧತಿ ಯಾವ ನ್ಯಾಯವೆಂತಲೂ ಇದನ್ನು ತಪ್ಪಿಸಬೇಕೆಂತಲೂ ಮತ್ತು ಹೆಂಗಸರುಗಳಿಗೆ ಶಾನುಭಾಗಿಕೆ ರಿಜಿಸ್ಟರು ಆಗತಕ್ಕ ಪಿಟಾರವಾಗಿ ತರೀಕೆರೆ ತಾಲ್ಲೂಕು ನೆಲ್ಲಿಕೆರೆ ರಾ|| ಮ|| ನಾಡಿಗ ಸುಬ್ಬರಾಯರವರು ತಿಳಿಸಿದರು.

ಪೂರ್ವದಲ್ಲಿ ಶಾನುಭೋಗರುಗಳಿಗೆ ಬರವಣಿಗೆ ಕೆಲಸ ಕಮ್ಮಿಯಾಗಿತ್ತೆಂತಲೂ ಈಗ ದಿನೇ ದಿನೇ ಹೆಚ್ಚುತ್ತಾ ಇವೆಯೆಂತಲೂ 360 ದಿನವೂ ಗ್ರಾಮಕ್ಕೆ ಬರತಕ್ಕ ಇಲಾಖೆ ಆಫೀಸರುಗಳ ಲಿಸ್ಟು ಪತ್ರಗಳು ಒದಗೀಸುವದರಲ್ಲಿಯೇ ಕಾಲಹರಣೆಯಾಗುತ್ತೆಂತಲೂ ಪಹಣಿ ಮತ್ತು ಖಾನೇಷುಮಾರಿ ಬರೆಯುವದೇ 3 ತಿಂಗಳ ಕಾಲ ಹಿಡಿಯುತ್ತೆಂತಲೂ ಇವರ ಇನಾಂತಿ ಜಮೀನುಗಳು ದೀರ್ಘಕಾಲ ಗುತ್ತಿಗೆ ಕೊಟ್ಟು ಜಮೀನು ಆಬಾದ್ ಮಾಡಿಸಿ ವಂಶಾನುವಂಶಿಕೆ ಮಾಡಿಕೊಳ್ಳಲು ಅವಕಾಶಕೊಡದೆ ಆಫೀಸರುಗಳು ತಡೆಮಾಡುತ್ತಾರೆಂತಲೂ ಮ|| ಬೆಂಗಳೂರು ತಾಲ್ಲೂಕು ವರ್ತೂರು ರಾ|| ಕೃಷ್ಣಮೂರ್ತಿರಾಯರವರು ತಿಳಿಸಿದರು.

ರೆವಿನ್ಯೂ ಬಾಬು ವಿನಹಾ ಲೋಕಲ್ ಸೆಸ್ ಇಂಗ್ಲೀಷ್ ಸೆಸ್ ಮೊಹತರ್ಫಾ ಹುಲ್ಲುಬನ್ನಿ ಅಮಾಯಿ ಮತ್ತು ಇತರ ಬಾಬುಗಳಿಗೆಲ್ಲಾ ಶಾನುಭೋಗರುಗಳಿಗೆ ಪೋಟಿಗಿ ಸಲ್ಲುತ್ತಾ ಇಲ್ಲವೆಂತಲೂ ಪೋಲೀಸ್ ಎಕ್ಸೈಜ್ ಶಿವಿಲ್ ಕೋರ್ಟು ಮುಂತಾದ ಇಲಾಖೆಯವರು ಗ್ರಾಮಕ್ಕೆ ಬಂದಲ್ಲಿ ಇವನು ಕುಮ್ಮಕ್ಕು ಮಾಡಬೇಕೆಂತಲೂ, ಪಟೇಲರು ಅವರ ವ್ಯವಸಾಯ ಮುಂತಾದ ಸ್ವಂತ ಕೆಲಸಗಳಲ್ಲಿ ನಿರತರಾಗಿರುತ್ತಾರೆಂತಲೂ ಶಾನುಭೋಗರ ಕೆಲಸಕ್ಕೆ ವೃತ್ತಿ ಇಲ್ಲವೆಂತಲೂ ಅವನು ಸ್ವಂತ ಜಮೀನುಗಳಿಗೆ ನಿಗಾ ಕೊಡಲು ವ್ಯವಧಾನ ಸಾಲದೆಂತಲೂ ಕುಣಿಗಲ್ ತಾಲ್ಲೂಕು ರಾ|| ಮ|| ಲಿಂಗಯ್ಯನವರು ತಿಳಿಸಿದರು.

ಶಾನುಭೋಗರ ಜುಲ್ಮಾನೆ ವಿಷಯವಾಗಿ ಇವನ ತಪ್ಪಿತ ಇಂಥಾದ್ದೆಂತ ರೆಕಾರ್ಡು ಮೂಲಕ ಇತ್ಯರ್ಥವಾಗುವವರಿಗೂ ಜುಲ್ಮಾನೆಯನ್ನು ವಿಧಿಸಕೂಡದೆಂತಲೂ ಅಂಥಾ ಜುಲ್ಮಾನೆಯನ್ನು ಬೇರೇ ವಿಧವಾಗಿ ವಸೂಲ್ ಮಾಡಿಕೊಳ್ಳಬೇಕೆಂತಲೂ ಹಾಲಿ ಅಂಥಾ ಜುಲ್ಮಾನೆಯನ್ನು ಪೋಟಿಗಿಯಲ್ಲಿ ಕಟಾಯಿಸುತ್ತಾ ಇರುವ ಪದ್ಧತಿ ತಪ್ಪಿಸಬೇಕೆಂತಲೂ ತನಗೆ ಈಗ್ಗೆ 4 ಸಾಲುಗಳ ಹಿಂದೆ ವಸೂಲಿ ವಿಚಾರವಾಗಿ ತಮ್ಮ ಗ್ರಾಮಕ್ಕೆ ಆಗಿದ್ದ ಹಜೂರ್ ಡೆ|| ಕಮಿಷನರ್ ಸಾಹೇಬರವರು 5 ರೂಪಾಯಿ ಜುಲ್ಮಾನೆ ಹಾಕಿದ್ದರೆಂತಲೂ ಅದಕ್ಕಾಗಿ ಹುಜೂರ್ ರೆವಿನ್ಯೂ ಕಮಿಷನರ್ ಸಾಹೇಬರವರಿಗೆ ಅಪೀಲ್ ಮಾಡಿಕೊಂಡಿದ್ದರೆಂತಲೂ ಈ ತಪ್ಪಿತಕ್ಕೆ ಈ ಜುಲ್ಮಾನೆ ಸಾಲದೆಂತಲೂ ಈ ವಿಷಯದಲ್ಲಿ ತಾವು ವೃಥಾ ಪಡುತ್ತೇವೆಂತಲೂ ಇಂದಿರಿಗೆ ಕೊಟ್ಟಿರುವದಾಗಿಯೂ ತರುವಾಯ ಗವರ್ನ್‌ಮೆಂಟಿಗೆ ಅಪೀಲ್ ಮಾಡಿಕೊಂಡಿರುವದಾಗಿಯೂ ಇದಕ್ಕಾಗಿ ಅರ್ಜಿ ಸ್ಟಾಂಪುಗಳಿಗೆ 8 ರೂಪಾಯಿ ಖರ್ಚಾಗಿರುವದಾಗಿಯೂ ಆ ಸಂವತ್ಸರ ಈ ತಾಲ್ಲೂಕಿನಲ್ಲಿ ಶಾನುಭೋಗರ ಜುಲ್ಮಾನೆ ಸುಮಾರು 600-690 ರೂಪಾಯಿ ವಸೂಲಾಗಿರುವದಾಗಿಯೂ ಮ|| ಸೋಮತ್ತನಹಳ್ಳಿ ರಾ|| ಶ್ರೀನಿವಾಸಯ್ಯನವರು ತಿಳಿಸಿದರು.

ಖುಷ್ಕಿ ಎಕರೆ 1 ಕ್ಕೆ 6 ಆಣೆ ಲಾಗಾಯಿತು 3 ರೂಪಾಯಿ ವರಿವಿಗೂ ಸರ್ಕಾರದ ರೇಟ್ ಇರುತ್ತೆಂತಲೂ, ಇದಕ್ಕಾಗಿ ಕೋಟಿ ತಳವಾರರಿಗೆ ಎಕರೆ ಒಂದಕ್ಕೆ 6 ಸೇರು ಮರಾಶಿ ಸಲ್ಲುತ್ತಾ ಇದೆಯೆಂತಲೂ ಈಗಿನ ಧಾರಣೆ ಮೇರೆಗೆ 6 ಆಣೆ ಆಯಿತೆಂತಲೂ ಶಾನುಭೋಗರಿಗೆ ಗ್ರಾಮದ ಜಮಾಬಂದಿ ಮೇಲೆ ರೂಪಾಯಿಗೆ 9½ ಕಾಸು ಸಲ್ಲುತ್ತಿದೆ ಎಂತಲೂ ಮೊಹತರ್ಫಾ ವಸೂಲಿ ಬಾಬಿನಲ್ಲಿ ಏನೂ ಸಲ್ಲುತ್ತಾ ಇರುವದಿಲ್ಲವೆಂತಲೂ, ಶಾನುಭೋಗರುಗಳವರ ಮಾಸಿಕ್ಕಿಂತ ತೋಟಿ ತಳವಾರರವರ ಮಾಸ ಜಾಸ್ತಿಯಾಗಿದೆಯೆಂತಲೂ ಶಾನುಭೋಗರುಗಳ ವಿಷಯ ಶೋಚನೀಯವಾಗಿರುತ್ತೆಂತಲೂ ಮ|| ಇಂದಿಗೆರೆ ರಾ|| ಅಣ್ಣಪ್ಪನವರು ತಿಳಿಸಿದರು. ಇತರ ಶಾನುಭೋಗರು ಮೇಲ್ಕಂಡ ವಿಷಯಗಳನ್ನು ಪುಷ್ಟೀಕರಿಸಿ ಹೇಳಿ ಮತ್ತು ಇತರ ವಿಷಯವಾದ ತೊಂದರೆಗಳನ್ನು ಸಹಾ ತಿಳಿಸಿದರು.

ರೆಜುಲ್ಯೂಷನ್.—ಮೇಲ್ಕಂಡ ಸಂಗತಿಗಳನ್ನೆಲ್ಲಾ ಶ್ರೀಮನ್ ಮಹಾರಾಜ ಸರ್ಕಾರದವರಲ್ಲಿ ತಿಳಿಸಿ ಸಂಪಡಿಸಿಕೊಳ್ಳಬೇಕೆಂತಲೂ ಇದಕ್ಕಾಗಿ ಮುಂದಿನ ದಫಾ ಮೈಸೂರು ದೇಶದ ಶಾನುಭೋಗರುಗಳ ಸಭೆಯು ಬೆಂಗಳೂರಿನಲ್ಲಿ ನಡೆಸಬೇಕೆಂತ ತೀರ್ಮಾನಿಸಿರುತ್ತೆ. ಮುಂದಿನ ಸಭೆಯನ್ನು ನೆರವೇರಿಸಲು ಪ್ರತಿ ಒಂದು ಡಿಸ್ಟ್ರಿಕ್ಟಿನಿಂದಲೂ ಒಪ್ಪಿಟ್ಟ ಶಾನುಭೋಗರಂತೆ ಸೇರಿ ಒಂದು ಸಬ್ ಕಮಿಟಿ ಮಾಡಿಕೊಂಡು ಮ|| ಬೂದಿಗೆರೆ ಜವಿಸನ್‌ದಾರ್ ಬಿ. ಗುಂಡೂರಾಯರವರು ಮತ್ತು ಮ|| ಬಾಲೇಪುರದ ನಾರಾಯಣರಾಯರವರು ಸಹಾ ಜಾಯಿಂಟು ಸೆಕ್ರೆಟರಿಗಳಾಗಿದ್ದುಕೊಂಡು ಹಜೂರ್ ದಿವಾನ್ ಸಾಹೇಬರವರಲ್ಲಿಯೂ ಹಜೂರ್ ರೆವಿನ್ಯೂ ಕಮಿಷನರ್ ಸಾಹೇಬರವರಲ್ಲಿಯೂ ಹೋಗಿ ಸಭೆಯು ಪರವಾಗಿ ಬೇಕಾದ ಸಲಕರಣೆಗಳನ್ನು ಒದಗಿಸಿಕೊಳ್ಳಲು ಪ್ರಾರ್ಥನೆ ಮಾಡಿಕೊಳ್ಳಬೇಕೆಂತ ತೀರ್ಮಾನಿಸಿರುತ್ತೆ. ನಂತರ ಶ್ರೀಮನ್ ಜಾರ್ಜ್ ಚಕ್ರವರ್ತಿ ಸಾರ್ವಭೌಮರವರಿಗೂ ಮತ್ತು ನಮ್ಮನ್ನಾಳುವ ಶ್ರೀಮನ್ ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರಿಗೂ ಶ್ರೀಮದ್ಯುವರಾಜರವರಿಗೂ ಮತ್ತು ರಾಜ ಮಂಡಲಿಯವರಿಗೂ ಮಂತ್ರಿವರ್ಯರಾದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಿಗೂ ಶ್ರೀ ಭಗವಂತನು ಆಯುರಾರೋಗ್ಯಭಾಗ್ಯವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸಿದ ನಂತರ ರಿಟೈರ್ಡಾದ ಮ|| ಅ|| ಸೆಕ್ರೆಟರಿ ಹೆಚ್. ರಾಮಯ್ಯನವರಿಗೂ ಸಭೆಯ ಪ್ರಾರ್ಥನಾ ಪೂರ್ವಕವಾಗಿ ದಯಮಾಡಿಸಿದ್ದ ಮ|| ಬಿ. ಸೂರ್ಯನಾರಾಯಣರಾವ್, ಬಿ.ಎ., ಎಮ್.ಆರ್.ಎ.ಯಸ್., ಎಫ್.ಆರ್.ಹೆಚ್.ಯಸ್. ರವರಿಗೂ ಶ್ರೀ ಭಗವಂತನು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ದಯಪಾಲಿಸಲೆಂದು ಪ್ರಾರ್ಥಿಸಿ ನಂತರ ಸಭೆಯನ್ನು ಬರಖಾಸ್ತು ಮಾಡಲಾಯಿತು.

ಮಾಗಡಿ ತಾಲ್ಲೂಕು ಎಕನಾಮಿಕ್ ಮತ್ತು ವಿದ್ಯಾಭ್ಯಾಸದ ಕಾನ್‌ಫರೆನ್ಸುಗಳು.

ಈ ಮಾಹೆ ತಾ 18 ನೆಯ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಾದ ಮ|| ಚಾ.ಡಿ. ಬಿ.ಎ. ಯವರ ಸಭಾಧ್ಯಕ್ಷತೆಯಲ್ಲಿ ಮೊದಲನೇ ಎಕನಾಮಿಕ್ ಕಾನ್‌ಫರೆನ್ಸು ಇಲ್ಲಿನ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಪ್ರಾರಂಭವಾಯಿತು. ಈ ಸಭೆಗೆ ಡಿ|| ಮೆಡಿಕಲ್ ಆಫೀಸರವರೂ, ಫಾರೆಸ್ಟ್ ಆಫೀಸರವರೂ, ಎಕನಾಮಿಕ್ ಸೂಪರಿಂಟೆಂಡೆಂಟ್ ಸಾಹೇಬರವರೂ, ಕೋಆಪರೇಟಿವ್ ಸಬ್ ಡಿವಿಜನ್ ಆಫೀಸರವರೂ, ಸ್ಕೂಲುಗಳ ಡಿ|| ಇನ್|| ಸಾಹೇಬರವರೂ, ಕೋಆಪರೇಟಿವ್ ರೇಂಜ್ ಅ|| ಇನ್|| ಸಾಹೇಬರವರೂ, ತಾಲ್ಲೂಕು ಮುಖ್ಯಾಧಿಕಾರಿಗಳೂ ಮೊದಲಾಗಿ 15 ಮಂದಿ ದೊಡ್ಡ ಮನುಷ್ಯರು ದಯಮಾಡಿಸಿದ್ದರಲ್ಲದೆ ಸುಮಾರು 600 ಮಂದಿಯ ವರೆಗೂ ಈ ಗ್ರಾಮಸ್ಥರೂ, ತಾಲ್ಲೂಕಾವಳಿಯಿಂದ ಬಂದಿದ್ದ ಇತರ ದೊಡ್ಡಮನುಷ್ಯರೂ, ಪ್ರೇಕ್ಷಕರೂ ಸಭೆಯನ್ನು ಅಲಂಕರಿಸಿದ್ದರು. ಪ್ರಾರಂಭದಲ್ಲಿ ಮಾಗಡಿ ಗರ್ಲ್ಸ್ ಸ್ಕೂಲ್ ಬಾಲಕಿಯರು ದೇವತಾ ಪ್ರಾರ್ಥನೆ, ಶ್ರೀಮದಿಂಡಿಯಾ ಚಕ್ರವರ್ತಿಯವರ ಮತ್ತು ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನಾ ರೂಪವಾದ ಗಾನಗಳನ್ನು ಹಾಡಿದರು. ಅನಂತರ ಈ ತಾಲ್ಲೂಕಿನ ಅಮಲ್ದಾರರಾದ ಮ|| ರಾಜಾರಾಯರವರು ಕಳೆದ ವರುಷದಲ್ಲಿ ತಾಲ್ಲೂಕಾವಳಿಯಿಂದ ನಡೆಸಲ್ಪಟ್ಟ ಗ್ರಾಮಾಭಿವೃದ್ಧಿಯ ಕಾರ್ಯಗಳನ್ನು ಕುರಿತು ಒಂದು ರಿಪೋರ್ಟನ್ನು ಓದಿದರು. ನಂತರ ಮುಂದಿನ ವರುಷದಲ್ಲಿ ನಡಿಸಬೇಕಾಗಿರುವ ಕಾರ್ಯಗಳನ್ನು ಊರಿನ ದೊಡ್ಡಮನುಷ್ಯರಲ್ಲಿ ಕೆಲವರು ಸೂಚಿಸಿದರು. ಕೂಡಲೆ ಡಿ|| ಎಕನಾಮಿಕ್ ಸೂಪರಿಂಟೆಂಡೆಂಟ್ ಸಾಹೇಬರವರು ವ್ಯವಸಾಯ, ಕೈಗಾರಿಕೆ ಮೊದಲಾದ ವಿಷಯಗಳಲ್ಲಿ ಉಪನ್ಯಾಸವನ್ನೂ, ಡಿ|| ಮೆಡಿಕಲ್ ಆಫೀಸರವರು ಆರೋಗ್ಯ ವಿಚಾರದಲ್ಲಿ ಉಪನ್ಯಾಸವನ್ನೂ, ಫಾರೆಸ್ಟ್ ಆಫೀಸರವರು ಫಾರೆಸ್ಟುಗಳನ್ನು ಅಭಿವೃದ್ಧಿಪಡಿಸುವದರಿಂದ ಉಂಟಾಗತಕ್ಕ ಪ್ರಯೋಜನಗಳನ್ನು ಕುರಿತು ಉಪನ್ಯಾಸವನ್ನೂ, ಸ್ಕೂಲುಗಳ ಡಿ|| ಇನ್|| ಸಾಹೇಬರವರು ವಿದ್ಯಾಭ್ಯಾಸದ ವಿಷಯವಾಗಿ ಉಪನ್ಯಾಸವನ್ನೂ, ಮಾಗಡಿ ಎ. ವಿ. ಸ್ಕೂಲ್ ಹೆಡ್ಮಾಸ್ಟರವರು ವಯಸ್ಕರ ವಿದ್ಯಾಭ್ಯಾಸದ ವಿಚಾರವಾಗಿ ಉಪನ್ಯಾಸವನ್ನೂ, ಮ|| ರಂಗಲಿಂಗೇಗೌಡರವರು ಪರಸ್ಪರಸಹಾಯದ ವಿಷಯದಲ್ಲಿ ಉಪನ್ಯಾಸವನ್ನೂ ಮಾಡಿದರು.

ಅನಂತರ ಸಭಾಧ್ಯಕ್ಷರು ಅಪ್ಪಣೆಕೊಡಿಸಿದುದೇನೆಂದರೆ—ಈ ತಾಲ್ಲೂಕಾವಳಿ ನಡಿಸಿರತಕ್ಕ ಕೆಲಸಗಳು ತೃಪ್ತಿಕರವಾಗಿಯೂ, ದೇಶೋನ್ನತಿಗೆ ಸಾಧಕವಾಗಿಯೂ ಇವೆ. ಇದೇ ರೀತಿಯಾಗಿ ಮುಂದೆಯೂ ಜನೋಪಕಾರವಾದ ಕಾರ್ಯಗಳನ್ನು ಮಾಡುತ್ತಾ ಬಂದಲ್ಲಿ ಕೆಲವು ವರ್ಷಗಳಲ್ಲಿಯೇ ಈ ತಾಲ್ಲೂಕಿನ ಸ್ಥಿತಿಯು ಉತ್ತಮವಾದ ನಾಗರಿಕತೆಯನ್ನೂ, ಅಭಿವೃದ್ಧಿಯನ್ನೂ ಹೊಂದುವುದಲ್ಲದೆ ಜನಸಾಮಾನ್ಯಕ್ಕೂ ವಿಶೇಷ ಪ್ರಯೋಜನವಾಗಬಹುದು. ಇದೇ ರೀತಿಯಾಗಿ ಪ್ರತಿ ವರುಷವೂ ತಾಲ್ಲೂಕಾವಳಿ ಎಲ್ಲಾ ಪ್ರಜೆಗಳನ್ನೂ ಕರೆಸಿಕೊಂಡು ಅವರ ಅನುಕೂಲ ಪ್ರತಿಕೂಲಗಳನ್ನು ವಿಚಾರಿಸಿ ತಕ್ಕ ಸಹಾಯಗಳನ್ನು ಕೊಡುತ್ತಾ ಬಂದಲ್ಲಿ ಈ ತಾಲ್ಲೂಕು ಅತ್ಯುತ್ತಮಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ ಎಂಬುದನ್ನು ವಿವರಿಸಿ ಹೇಳಿದರು. ಆ ಕೂಡಲೆ ಮ|| ಗಳಾದ ಕೃಷ್ಣಶಾಸ್ತ್ರಿಗಳವರೂ, ತಿರುಮಲೆ ವೇ|| ಶ್ರೀನಿವಾಸಾಚಾರ್ಯರೂ ತಾವುಗಳು ರಚಿಸಿದ ಗ್ರಂಥ ಶ್ಲೋಕಗಳನ್ನು ಹೇಳಿ ಸಭಾಸದರನ್ನು ಆನಂದಗೊಳಿಸಿದುದಲ್ಲದೆ ಸಂಗೀತವೂ ಮ್ಯಾಜಿಕ್ ಲ್ಯಾನ್‌ಟರ್ನ್ ಪ್ರದರ್ಶನವೂ ನಡಿಸಲ್ಪಟ್ಟು ಆ ದಿನದ ಉತ್ಸವ ಮುಕ್ತಾಯ ಮಾಡಲ್ಪಟ್ಟಿತು.

ಮಾರನೆಯ ದಿನ ಅಂದರೆ 19 ನೆಯ ತಾರೀಖು ಬುಧವಾರ ನಮ್ಮ ಡಿಸ್ಟ್ರಿಕ್ಟು ಪ್ರಭುಗಳಾದ ಚಾಂಡಿಯವರ ಅಗ್ರಾಸನಾಧಿಪತ್ಯದಲ್ಲಿ ಮಾಗಡಿ ತಾಲ್ಲೂಕು ಉಪಾಧ್ಯಾಯರ ಕಾನ್‌ಫರೆನ್ಸು ನಡೆಯಿಸಲ್ಪಟ್ಟಿತು. ಈ ಸಭೆಗೆ ಪೂರ್ವ ದಿನ ದಯಮಾಡಿಸಿದ್ದ ಡಿಸ್ಟ್ರಿಕ್ಟು ಅಧಿಕಾರಿಗಳೂ, ಪುರಪ್ರಮುಖರೂ ಪ್ರೇಕ್ಷಕರೂ ಮತ್ತು 68 ಮಂದಿ ತಾಲ್ಲೂಕಾವಳಿಯ ಉಪಾಧ್ಯಾಯರುಗಳೂ ದಯಮಾಡಿಸಿದ್ದರು. ಪ್ರಾರಂಭದಲ್ಲಿ ಈ ಉಪಾಧ್ಯಾಯರ ಸಂಘದ ಸೆಕ್ರೆಟರಿಗಳಾದ ಮ|| ಎನ್. ನಂಜುಂಡಶಾಸ್ತ್ರಿಗಳವರು ಸಂಘದ ಪರವಾದ ರಿಪೋರ್ಟನ್ನೂ, ಇಂತಹ ಸಂಘಗಳಿಂದ ಉಪಾಧ್ಯಾಯರಿಗೂ, ಜನಸಾಮಾನ್ಯಕ್ಕೂ ಉಂಟಾಗತಕ್ಕ ಪ್ರಯೋಜನಗಳನ್ನೂ ವಿವರಿಸಿದರು. ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಹೆಡ್ ಮಾಸ್ಟರ್ ಮ|| ಟಿ. ರಂಗಪ್ಪನವರು ಪಾಠಶಾಲೆಯ ಕೆಲಸದಲ್ಲಿ ಬಾಲಕರ ತಂದೆ ತಾಯಿಗಳು ಮಾಡಬೇಕಾದ ಸಹಾಯಗಳನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಸ್ತ್ರೀಯರ ಮೌಢ್ಯವನ್ನು ಹೋಗಲಾಡಿಸಲು ಅವರಿಗೆ ವಿದ್ಯಾಭ್ಯಾಸ ಮಾಡಿಸಿದ ಹೊರತು ತಿಳುವಳಿಕೆಯುಂಟಾಗದೆ ನಾಗರಿಕರಾಗುವದೇ ಇಲ್ಲವೆಂಬುದನ್ನು ಕುರಿತು ತಕ್ಕ ಉದಾಹರಣೆಗಳಿಂದ ಸ್ಥಾಪಿಸಿ ಸ್ತ್ರೀ ವಿದ್ಯಾಭ್ಯಾಸವು ಎಲ್ಲಾ ಪಟ್ಟಣ ಗ್ರಾಮಗಳಿಗೂ ಅತ್ಯಾವಶ್ಯಕವೆಂಬುದನ್ನು ಮಾಗಡಿ ಗರ್ಲ್ಸ್ ಸ್ಕೂಲ್ ಹೆಡ್ಮಾಸ್ಟರ್ ಮ|| ಮುನಿಸ್ವಾಮಯ್ಯನವರು ತಿಳಿಸಿದರು. ಎ. ವಿ. ಸ್ಕೂಲ್ ಅ|| ಮಾಸ್ಟರ್ ಮ|| ಎಂ. ಬಿ. ವಲ್ಲಭಯ್ಯಂಗಾರ್ಯರವರು ಉಪಾಧ್ಯಾಯರ ಕರ್ತವ್ಯ ಮತ್ತು ಉಪಾಧ್ಯಾಯ ಪದವಿಗೆ ಅರ್ಹರಾರು? ಎಂಬ ವಿಷಯವಾಗಿ ಹೃದಯಂಗಮವಾದ ಉಪನ್ಯಾಸವನ್ನು ಕೊಟ್ಟರು. ಕಾರ್ಯಾಂತರದಿಂದ ಈ ಗ್ರಾಮಕ್ಕೆ ದಯಮಾಡಿಸಿದ್ದ ಶಿವಮೊಗ್ಗ ನಾರ್ಮಲ್

ಹೆಡ್ ಅ|| ಮಾಸ್ಟರ್ ಮ|| ರಾಮಕೃಷ್ಣಯ್ಯನವರು ಪ್ರಾಕ್ಟಿಕಲ್ ಇನ್ಸ್ಟ್ರಕ್ಷನ್ (ಪ್ರಾಯೋಗಿಕ ವಿದ್ಯಾಭ್ಯಾಸ) ದ ವಿಷಯವಾಗಿ ಒಂದೆ ಪಾಶ್ಚಿಮಾತ್ಯ ದೇಶಗಳಲ್ಲಿ ಉಪಾಧ್ಯಾಯ ವೃತ್ತಿಯಲ್ಲಿ ಪ್ರಸಿದ್ಧರಾದ ದೊಡ್ಡ ದೊಡ್ಡ ಪಂಡಿತರ ಅಭಿಪ್ರಾಯವನ್ನು ತಮ್ಮ ಅನುಭವವನ್ನು ಸೇರಿಸಿ ಅದರಂತೆ ಅನುಷ್ಠಾನ ಮಾಡಿದರೆ ದೇಶವು ಅತ್ಯುನ್ನತಸ್ಥಿತಿಗೆ ಬರುವುದೆಂಬುದನ್ನು ತಿಳಿಯಪಡಿಸಿದರು. ಹೊಳೆನರಸೀಪುರದ ಸ್ಕೂಲ್ ಮಾಸ್ಟರ್ ಮ|| ರಾಚಾಂಬಾಧ್ಯರವರು ಉಪಾಧ್ಯಾಯರ ಸಂಘದ ವಿಷಯವಾಗಿ ಕೆಲವು ಮಾತುಗಳನ್ನು ಹೇಳಿ, ತಾವು ತಂದಿದ್ದ ಹಸ್ತಕೌಶಲ ಕಾರ್ಯಗಳ ಫಲಗಳನ್ನು ಸಭೆಯಲ್ಲಿ ಪ್ರದರ್ಶಿಸಿದರು.

ಈ ಉಪನ್ಯಾಸಗಳೆಲ್ಲವೂ ನಡೆದ ತರುವಾಯ ಅಗ್ರಾಸನಾಧಿಕಾರಿಗಳು ಉಪಸಂಹರಿಸಿದುದೇನೆಂದರೆ :—ಇದು ವರೆಗೆ ನಡೆದ ಉಪನ್ಯಾಸಗಳಲ್ಲಿ ಹೇಳಲ್ಪಟ್ಟ ಅಂಶಗಳೆಲ್ಲವನ್ನೂ ತಿಳಿದುಕೊಂಡು ಅದರಂತೆ ಆಚರಣೆಗೆ ತಂದಲ್ಲಿ ನಮ್ಮ ದೇಶವು ಈಗಿರುವುದಕ್ಕಿಂತ ಹತ್ತರಷ್ಟು ಅಭಿವೃದ್ಧಿಗೆ ಬರುತ್ತದೆಂಬಲೂ, ಇದೇ ಪ್ರಕಾರವಾಗಿ ವರುಷವರುಷಕ್ಕೂ ಂದಾವರ್ತಿ ಸಭೆಗಳು ಸೇರಿ ಎಲ್ಲರೂ ಐಕಮತ್ಯದಿಂದ ಕೆಲಸಮಾಡುತ್ತಾ ಬಂದರೆ ನಮ್ಮಗಳ ಸ್ಥಿತಿಯು ಬಹುಮಟ್ಟಿಗೆ ಮಾರ್ಪಡುವ ದೆಂದೂ, ಸ್ತ್ರೀವಿದ್ಯಾಭ್ಯಾಸ, ಉಪಾಧ್ಯಾಯರುಗಳ ಸೇರುವಿಕೆ ಇವೆಲ್ಲವೂ ದೇಶದ ಏಳಿಗೆಗೆ ಮುಖ್ಯ ಕಾರಣವೆಂದೂ, ಉಪಾಧ್ಯಾಯರ ನಡವಳಿಕೆಯು ಪ್ರಶಸ್ತವಾಗಿಲ್ಲದಿದ್ದರೆ ದೇಶಕ್ಕೆ ದೊಡ್ಡ ಹಾನಿಯೆಂದೂ, ಈಗಿನ ಬಾಲಕರೆಲ್ಲರೂ ನಮ್ಮ ಮುಂದಿನ ಪ್ರಜೆಗಳಾಗುವದರಿಂದ ಅವರನ್ನು ತಮ್ಮ ಉಪಾಧ್ಯಾಯರೂ ಕೂಡ ಸತ್ ಉತ್ತಮತರವಾದ ಗುಣಗಳಲ್ಲೆಲ್ಲಾ ಮಾದರಿಯಾಗಿರುವದಲ್ಲದೆ ಸದರಿ ಗುಣಗಳನ್ನು ಬಾಲಕರಿಗೆ ಕಲಿಸಿ ಅಭಿವೃದ್ಧಿ ಪಡಿಸಿದರೆ ದೇಶೋನ್ನತಿಗೆ ಹೆಚ್ಚಾದ ಸಹಾಯವಾಗುವದೆಂಬುದನ್ನೂ, ಪಾಠಶಾಲೆಯ ಕೇಸಕ್ಕೆ ಬಾಲಕರ ತಂದೆ ತಾಯಿಗಳ, ಪೋಷಕರ ಸಹಾಯವು ದೊರೆಯದ ಹೊರತು ಉಪಾಧ್ಯಾಯರ ಕೆಲಸವು ಸ್ವತಂತ್ರವಾಗಿ ನಡೆಯುವದಿಲ್ಲವೆಂಬುದನ್ನೂ ಮೇಲ್ಕಂಡ ಉಪನ್ಯಾಸಗಳಿಂದ ಸ್ಪಷ್ಟವಾಗಿ ತೋರಿದವು. ತರುವಾಯ ಸೊರಬದ ಎ. ವಿ. ಸ್ಕೂಲ್ ಹೆ|| ಮಾ|| ಮ|| ವಾದಿರಾಜಾಚಾರ್ಯರವರು ಸಂಘದ ಪರವಾಗಿ ರಚಿಸಿದ್ದ ಮಂಗಳಶ್ಲೋಕವನ್ನು ಹೇಳಿದ ತರುವಾಯ ಸಭಾಧ್ಯಕ್ಷರವರಿಗೂ ಸಭಿಕರಿಗೂ ಹಾರ ತುರಾಯಿ ಗಳ ಒಪ್ಪಿಸಲ್ಪಟ್ಟು ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟ ತರುವಾಯ ಸಭೆಯ ವಿಶೇಷವಾಗಿದ್ದರೂ ಅವುಗಳನ್ನು ಲಕ್ಷಿಸದೆ ನಮ್ಮಗಳ ಪ್ರಾರ್ಥನೆಯಂತೆ ಸಭಾಧ್ಯಕ್ಷತೆಯನ್ನು ವಹಿಸಿ ಕಾರ್ಯವನ್ನು ನೆರವೇರಿಸಿದ ಶ್ರೀಯುತ ಅವರುಗಳಿಗೂ ಸಭಿಕರಿಗೂ ವಂದನೆಗಳು ಸಮರ್ಪಿಸಲ್ಪಟ್ಟು ದೇವತಾ ಶ್ರೀಮನ್ ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ, ಶ್ರೀಮಾನ್ ದಿವಾನ್ ಸಾಹೇಬ್ ಬಹದೂರರವರಿಗೂ, ಇಂತಹ ಕೂಟಗಳನ್ನು ಸೇರಲು ತಕ್ಕ ಸಹಾಯಗಳನ್ನು ಕಲ್ಪಿಸಿಕೊಟ್ಟಿರುವ ಇಲಾಖಾಧ್ಯಕ್ಷರಾದ ರಾವ್ ಬಹದ್ದೂರ್ ಎಂ. ಶಾಮರಾವ್, ಎಂ.ಎ. ಯವರಿಗೂ ಭಗವಂತನ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಚಿರಕಾಲ ಕಾಪಾಡಲೆಂದು ಹೇಳಿ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪುನಃ ಈ ದಿನ ಮಧ್ಯಾಹ್ನ 3 ರ ಮ|| ಸಂಜೀವರಾವ್ ರವರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯರ ಸಂಘದ ಸಂಬಂಧವಾಗಿ ಕೆಲವು ನಿರ್ಣಯಗಳು ಮಾಡಲ್ಪಟ್ಟವು. ಮಾರನೇ ದಿನ ಅಂದರೆ ತಾ. 12-4-16 ನೆಯ ಸಾಯಂಕಾಲ ಡಿ. ಇನ್ಸ್ಪೆಕ್ಟರವರು ತಮ್ಮ ಅಸಿಸ್ಟೆಂಟರಾದ ಕನ್ಸರ್ವೇಟಿವ್ ರೀಡರ್ ಆದ ಮ. ಲಕ್ಷ್ಮೀನಾರಾಯಣರಾವ್, ಬಿ.ಎ. ಯವರೊಡನೆ ಸಭೆ ಮಂಟಪಕ್ಕೆ ಬಂದು ಬಹಳ ಸಂತೋಷದಿಂದ ಅಗ್ರಾಸನವನ್ನು ವಹಿಸಿದರು. ಪ್ರಾರಂಭದಲ್ಲಿ ಎ. ವಿ. ಸ್ಕೂಲ ಮತ್ತು ತಾಲ್ಲೂಕಿನ ಬೇರೆ ಬೇರೆ ವಿದ್ಯಾರ್ಥಿಗಳು ಸೇರಿ ನಾನಾ ವಿಧ ವಾದ ಸಭಿಕರ ಮನಸ್ಸನ್ನು ಸಂತೋಷಪಡಿಸಿದರು. ಮಾಗಡಿ ಗರ್ಲ್ಸ್ ಸ್ಕೂಲ್ ಬಾಲಕಿಯರು ಕಿಂಡರ್ ಗಾರ್ಟನ್ ಗೀತಗಳನ್ನು ಹೇಳುತ್ತಾ ಅದಕ್ಕನು ಸಾರವಾಗಿ ನಾಲ್ಕು ಆಟಗಳನ್ನು ಆಡಿದರು. ತದನಂತರ ಎಲ್ಲರೂ ಸೇರಿ ದೇವರ ಪ್ರಾರ್ಥನೆ, ಶ್ರೀಮನ್ ಮಹಾರಾಜರವರ, ಚಕ್ರವರ್ತಿಯವರ ಶ್ರೇಯಃಪ್ರಾರ್ಥನಾ ರೂಪವಾದ ಹಾಡುಗಳನ್ನು ಉತ್ತಮವಾಗಿ ಹಾಡಿ ಸಭಿಕರನ್ನು ಆನಂದಗೊಳಿಸಿದರು. ಕಡೆಗೆ ಎಲ್ಲಾ ಬಾಲಕ ಬಾಲಕಿಯರಿಗೂ ಬಹುಮಾನಗಳೂ, ಹಾಲು ಸಕ್ಕರೆ ತಿಂಡಿಸಾಮಗ್ರಿಗಳೂ ಹಂಚಲ್ಪಟ್ಟದ್ದಲ್ಲದೆ ಸಭಿಕರಿಗೆಲ್ಲಾ ಪುಷ್ಪ ತಾಂಬೂಲಾದಿಗಳ ಕೊಡಲ್ಪಟ್ಟು ಆ ದಿನದ ಕೆಲಸವು ಮುಕ್ತಾಯ ವಾಯಿತು.

ಈ ಕಾನ್ಫರೆನ್ಸು ಮಾಗಡಿಯಲ್ಲಿ ನಡೆದದ್ದು ಇದೇ ಮೊದಲು ನೆಯದ ಉಪಾಧ್ಯಾಯರುಗಳಲ್ಲಿ ಸೌಹೃದಯವೂ, ಪರಸ್ಪರಸಹಾಯ ಮನೋಗುಣವೂ, ಪರಿಪೂರ್ಣ ಅಭಿವೃದ್ಧಿ ಬಹು ಹೆಚ್ಚುವದಲ್ಲದೆ, ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳ ವಿದ್ಯೆಯ ವಿಷಯದಲ್ಲಿ ಹೆಚ್ಚು ಶ್ರದ್ಧೆ ವಹಿಸಿ ಕೆಲಸ ಮಾಡಿದರೆ ಪಾಠಶಾಲೆಗಳ ಏಳಿಗೆಯೂ ಅದರಿಂದ ದೇಶೋನ್ನತಿಗೂ, ಸರಕಾರಿಯವರ ಉದ್ದೇಶಕ್ಕೆ ಅನುಕೂಲವಾಗುವುದು.

ಈ ಕಾನ್ಫರೆನ್ಸ್ ವಿಷಯದಲ್ಲಿ ಡಿ. ಇ|| ಎಚ್. ಎನ್. ವೆಂಕಟರಮಣಯ್ಯ, ಬಿ.ಎ. ರವರೂ ಕನ್ಸರ್ವೇಟಿವ್ ರೀಡರ್ ಆದ ಮ|| ನಾರಾಯಣರಾವ್, ಬಿ.ಎ. ಯವರೂ ಇಲ್ಲಿಗೆ ಪೂರ್ವಭಾವಿಯಾಗೇ ದಯಮಾಡಿಸಿ ಆಯಾ ಮೆಂಬರುಗಳಿಗೆ ಬೇಕಾದ ಸಲಹೆಗಳನ್ನು ಕೊಟ್ಟು ಕಾನ್ಫರೆನ್ಸ್ ಕಾರ್ಯಗಳನ್ನು ಬಹಳ ವಿಜ್ಞ ಭಕ್ತಿಯಿಂದ ನಡೆಯಿಸತಕ್ಕದು ಇವರ ವಿದ್ಯಾಭಿಮಾನ ಕಾರ್ಯದಕ್ಷತೆ ಮತ್ತು ಉಪಾಧ್ಯಾಯರು ಅಭ್ಯುದಯದಲ್ಲಿರತಕ್ಕ ಆಸಕ್ತಿಯನ್ನು ವ್ಯಕ್ತಪಡಿಸುವುದು ಇದರಿಂದ ಮಾಗಡಿ ತಾಲ್ಲೂಕಿನಲ್ಲಿರತಕ್ಕ ಉಪಾಧ್ಯಾಯರ ಸಂಘದ ಮೆಂಬರುಗಳ ನಮ್ಮ ತಾತ್ಕಾಲಿಕನ ವಿದ್ಯಾಭಿವೃದ್ಧಿ ವಿಷಯದಲ್ಲಿ ಎಷ್ಟೋ ಉತ್ಸಾಹಶಾಲಿಗಳಾಗಿ ಜಯಘೋಷದೊಡನೆ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ಇಷ್ಟೆಲ್ಲಾ ಆದ ನಂತರ ಕಾನ್ಫರೆನ್ಸಿಗೆ ಸೇರಿದ್ದ ಮೆಂಬರುಗಳ ಗ್ರೂಪ್ ಫೋಟೋ ತೆಗೆಯಲ್ಪಟ್ಟಿತು. ಈ ಸಭೆಗಳು ನಡೆದ ಎರಡು ದಿನಗಳಲ್ಲಿಯೂ ಸಾಯಂಕಾಲ 6 ಗಂಟೆಯಿಂದ 9 ಗಂಟೆಯ ವರೆಗೆ ಮ|| ವೇದಾಂತಯ್ಯಂಗಾರರವರಿಂದ ಮ್ಯಾಜಿಕ್ ಲ್ಯಾಂಟರ್ನ್, ಸಿನಿಮಾಟೋಗ್ರಾಫ್ ಪ್ರದರ್ಶನವೂ, ಕೆಲವು ಸಂಗೀತಗಾರರಿಂದ ಸಂಗೀತವೂ ನಡೆಯಲ್ಪಟ್ಟು ಸಭಿಕರೆಲ್ಲರೂ ಬಹಳ ಉತ್ಸಾಹ ಪೂರ್ವಕವಾಗಿ ಜಯಘೋಷದೊಡನೆ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ಬಾತ್ಮೀದಾರರಿಗೆ ನೋಟೀಸ್.

[ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಎಂಬುದನ್ನು ಸಕಲರೂ ತಿಳಿಯತಕ್ಕದ್ದು. —ಎಡಿ.]

ಕರೆಸ್ಪಾಂಡೆನ್ಸ್.

ಸಾದಿಲ್ವಾರ್ ಖರ್ಚು.

ಅಯ್ಯಾ,—ಹೋಬಳಿ ಸ್ಕೂಲುಗಳಿಗೆ ಸಾದಿಲ್ವಾರು ಖರ್ಚು ಆಗ ಸುಮಾರು ವರ್ಷಗಳಾದವು. ಕೆಲವು ಸ್ಕೂಲುಗಳಿಗೆ ವಗೈರೆಯಾಗಿ 8 ಆಣೆಯಂತೆ ಕೊಡುತ್ತಾರೆ ಉಳಿದ ಸ್ಕೂಲುಗಳಿಗೆ ಕೊಡುವದಿಲ್ಲ. ಈ ವಿಚಾರವಾಗಿ ಸೆಂಟ್ರಲ್ ಆಫೀಸಿಗೆ ಬರೆದುಕೊಂಡರೆ ಯಾವ ವಿಧವಾದ ಜವಾಬೂ ಬಾರದು. ಸರ್ಕಾರದವರ ಗಮನಕ್ಕೆ ಈ ವಿಷಯ ಇನ್ನೂ ಬಂದಿಲ್ಲವೆಂದು ತೋರುತ್ತದೆ. ಸ್ಕೂಲುಗಳಿಗೆ ಸಾದಿಲ್ವಾರು ಖರ್ಚು ಮಾಡದಿದ್ದರೆ ಸ್ಕೂಲುಗಳಲ್ಲಿ ಕೆಲಸ ನಡೆಯುವದು ಹ್ಯಾಗೋ ತಿಳಿಯದು. ಸ್ಕೂಲುಗಳಲ್ಲಿ ಬೋರ್ಡುಗಳ ಮೇಲೆ ಬರೆಯುವದಕ್ಕೆ ಕೂಡ ಸೀಮೆಸುಣ್ಣವಿಲ್ಲ. ಒಂದು ರಿಪೋರ್ಟ್ ಬರೆಯುವದಕ್ಕೆ ಶಾಯಿ ಗಡ ಕಾಗದಕ್ಕೂ ಕೂಡ ಗತಿಯಿಲ್ಲದಂತಾಗಿದೆ. ಈ ವಿಷಯವನ್ನು ದಯವಿಟ್ಟು ಹೇಳಿಕೊಳ್ಳುವ ಸುಮಾರು ಪ್ರತಿಯೊಬ್ಬ ಮಾಸ್ಟರಿಗೆ ತನ್ನ ಕೈಯಿಂದ ಮಾಸೀಯಾನ 4 ಆಣೆಯಂತೆ ಖರ್ಚಾಗುತ್ತಿದೆ. ಘನ ಸರ್ಕಾರದವರು ಈ ನ್ಯೂನತೆಯನ್ನು ಶೀಘ್ರದಲ್ಲೇ ನಿವಾರಣೆಮಾಡಿ, ಹಳ್ಳಿ ಸ್ಕೂಲುಗಳಿಗೆ ಸಾದಿಲ್ವಾರು ಖರ್ಚು ಮಾಡಿಸಿ, ಕ್ರಮವಾಗಿ ಕೆಲಸ ನೆರವೇರುವಂತೆ ಮಾಡಬೇಕಾಗಿ ಪ್ರಾರ್ಥನೆ. ಹಳ್ಳಿ ಸ್ಕೂಲುಗಳಿಗೆ ಸಾದಿಲ್ವಾರಿಗಾಗಿ ಕೊಟ್ಟಿರತಕ್ಕ ಹಣವನ್ನೇ ಎಲ್ಲಾ ಸ್ಕೂಲುಗಳಿಗೂ ಹಂಚಿದರೆ, ಆಯಾ ಮಾಸ್ಟರುಗಳೇ ಸಾಮಾನುಗಳನ್ನು ತಂದಿಟ್ಟುಕೊಂಡು ಉತ್ಸಾಹದಿಂದ ಕೆಲಸಮಾಡಲು ಅವಕಾಶವಾಗುತ್ತೆ.

ಚಂದಾದಾರ.

ಹಳ್ಳಿ ಉಪಾಧ್ಯಾಯರ ಬಡತಿ ಸಂಬಳದ ವಿಚಾರ.

ಅಯ್ಯಾ,—ಪ್ರಮೋಷನ್ ಆದ ಮಾಸ್ಟರುಗಳ ಸಂಬಳ ತಾ. 1-10-14 ರ ಲಾಗಾಯಿತು, 1-16-15 ರವರೆಗಿನ ಅಂದರೆ 8 ತಿಂಗಳ ಪ್ರಮೋಷನ್ ಸಂಬಳ ಅದ್ಯಾಪಿ ಪಾವತಿಯಾಗಿಲ್ಲ. ಇದಕ್ಕಾಗಿ ಒಂದು ಸಪ್ಲಿಮೆಂಟ್ ಬಿಲ್ಲನ್ನು ತಯಾರ್ ಮಾಡಿ ತಾಲ್ಲೋಕಿಗೆ ರವಾನೆ ಮಾಡಿದೆವು. ಈ ಬಿಲ್ಲು ಯಾವ ಆಫೀಸಿನಲ್ಲಿ ಯಾವ ರೈಟರ ಹಸ್ತಗತವಾಗಿದೆಯೋ ಗೊತ್ತಿಲ್ಲ. ಹಜೂರ್ ಕಂಟ್ರೋಲರ್ ಸಾಹೇಬರವರಿಗೆ ರಿಪೋರ್ಟ್ ಮಾಡಿಕೊಂಡದ್ದಕ್ಕೆ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರನ್ನು ಕೇಳಿ ಎಂಬದಾಗಿ ಹುಕುಂ ಕೊಟ್ಟಿರುತ್ತಾರೆ ಡಿ|| ಟ್ರೆ|| ಆಫೀಸರಿಗೆ ರಿಪೋರ್ಟ್ ಮಾಡಿಕೊಂಡದ್ದಕ್ಕೆ ಅದ್ಯಾಪಿ ಹುಕುಂ ಬಂದಿಲ್ಲ. ರೈತನಾದವನು ಸರ್ಕಾರಕ್ಕೆ ಕೊಡತಕ್ಕ ಕಂದಾಯ ಸ್ವಲ್ಪ ಸಾವಕಾಶವಾದರೆ ತಕ್ಷಣ ನೋಟೀಸು, ಜಪ್ತಿ, ಹರಾಜು ವಗೈರೆ ಕ್ರಮಗಳನ್ನು ಜರುಗಿಸಿ, ಸುಸ್ತಿ ಬಡ್ಡಿ ಸಹ ತೆಗೆದುಕೊಳ್ಳುತ್ತಿರುವುದು ವಾಚಕರಿಗೆ ತಿಳಿದ ಅಂಶವೇ ಆಗಿದೆ ಈ ಬಡ ಮಾಸ್ಟರುಗಳಿಗೆ ಪ್ರಮೋಷನ್ ಸಂಬಳ ಕೊಡದೆ ಈ ವಿಧವಾದ ತೊಂದರೆಯಾಗಿರುವುದು ಮೇಲ್ಪಟ್ಟ ಅಧಿಕಾರಿಗಳ ಅವಲೋಕನಕ್ಕೆ ಬಂದಿಲ್ಲವೆಂದು ತಿಳಿಯುವುದು. ಘನ ಸರ್ಕಾರದವರು ದಿವ್ಯ ಚಿತ್ತದಲ್ಲಿ ಮೇಲ್ಕಂಡ ಅಂಶವನ್ನು ಈ ಪತ್ರಿಕಾ ಪಕಟನೆಯ ಮೂಲಕ ಲಾಲಿಸಿ ಸಂಬಳ ಪಾವತಿಮಾಡಿಸಿ ಆಚಂದ್ರಾರ್ಕವಾದ ಕೀರ್ತಿಪಡೆಯಲೆಂದು ಹಾರೈಸುವೆನು.

ಓರ್ವ ಉಪಾಧ್ಯಾಯ.

ಮನೆ ಕಟ್ಟಲು ಹುಕುಂ ಕೊಟ್ಟಿಲ್ಲ.

ಅಯ್ಯಾ,—ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆ ಸಂಮ್ಮತು ಯಳ್ಳೇನಹಳ್ಳಿಯ ಗ್ರಾಮಸ್ಥರು ವಿಜ್ಞಾಪಿಸಿಕೊಳ್ಳುವುದೇನೆಂದರೆ—ಈಗ ವಾಸ ಮಾಡುವ ಈ ನಮ್ಮ ಗ್ರಾಮವು ಜನ ಜಾನುವಾರುಗಳ ವಾಸವೇ ಮೊದಲಾದುವುಗಳಿಗೆಲ್ಲಾ ಬಹಳ ಇಕ್ಕಟ್ಟಾಗಿ ತೊಂದರೆಯಾದ ಪ್ರಯುಕ್ತ ಇದೇ ಗ್ರಾಮಕ್ಕೆ ಪಕ್ಕ ಉತ್ತರ ಭಾಗದಲ್ಲಿರುವ ಸರ್ಕಾರಿ ಸರ್ವೆ ನಂ|| 86 ನೇ ಜಮೀನನ್ನು ಗ್ರಾಮಸ್ಥರ ಹವಾಲೆ ಬಗ್ಗೆ ಸರ್ಕಾರದವರು ಗ್ರಾಮ ಬಡಾವಣೆಗಾಗಿ ಬಿಡಿಸಿ ಹರಾಜಿನಿಸಿ ಅವರವರ ಹಂಚಿಕೆ ಪ್ರಕಾರ ಹರಾಜು ಮೊಬಲಗನ್ನೂ ಸಹಾ ಸರ್ಕಾರಕ್ಕೆ ಪಾವತಿಮಾಡಿಕೊಂಡು ಈಗ್ಗೆ ಸುಮಾರು 7-8 ವರ್ಷಗಳಾಗುತ್ತಾ ಬಂದಾಗ್ಯೂ ಅನೇಕ ದಿವಸಗಳಿಂದ ಮನೆ ಕಟ್ಟಿಕೊಳ್ಳಲು ಹುಕುಂ ಮಂಜೂರಾಗದ ಪ್ರಯುಕ್ತ ಇದಕ್ಕಾಗಿ ಅನೇಕ ದಫ ತಾಲ್ಲೂಕು ಅಮಲ್ದಾರರವರಿಗೂ ಡಿಸ್ಟ್ರಿಕ್ಟ್ ಆಫೀಸರವರಿಗೂ ಅರ್ಜಿ ಗುಜರಾಯಿಸಿಕೊಂಡದ್ದಲ್ಲದೆ ರಿಕಬು ರಿಬು ಹವಾಲೆ ಹೇಳಿಕೊಂಡೆವು ಯಾವುದಕ್ಕೂ ಸರ್ಕಾರಕ್ಕೆ ದಯೆ ಬರಲೇ ಇಲ್ಲ. ಮತ್ತು ತಾ. 16-11-1914 ನೆ ಮಧ್ಯಾಹ್ನ ತಾಲ್ಲೂಕು ಆಫೀಸರು ಮತ್ತಿಘಟ್ಟಕ್ಕೆ ಜಮಾಬಂದಿಗಾಗಿ ಬಂದಿದ್ದಾಗ್ಯೆ ನಮ್ಮಗಳ ಅಹವಾಲಿ ಬಗ್ಗೆ ಮೇಲಿ ಫೈನಲ್ಸು ಅರ್ಜಿ ಕೊಡಬೇಕೆಂದು ಕೊಡಿಸಿದ ಅಪ್ಪಣೆ ಪ್ರಕಾರ ಸದರಿ ತಾಲ್ಲೂಕಿಗೆ ಹೋಗಿ ತಾ. 23-11-1914 ರಲ್ಲಿ ಅರ್ಜಿಗಳನ್ನು ಕೊಟ್ಟೆವು. ಅದಕ್ಕಾಗಿ ನಮ್ಮಕು ಶೇಕದಾರ್ರವರು ಬಂದು ಅವರವರ ಹಂಚಿಕೆ ಪ್ರಕಾರ ಕಲ ಹದಿಗಳನ್ನು ಗುರ್ತಿಸಿ ಹೋದರು. ಇಷ್ಟಾದಾಗ್ಯೂ ಈ ವರಿವಿಗೆ ಮನೆ ಕಟ್ಟಲು ಹುಕುಂ ಮಂಜೂರಾಗಲಿಲ್ಲ. ನಾವಾದರೋ ಅನೇಕ ಅರ್ಜಿಗಳನ್ನು ಕೊಟ್ಟು ಈ ವರಿವಿಗೆ ಬಿನ್ನಯಿಸಿಕೊಂಡೆವು. ಈ ದಿವಸ ಸತ್ಯಪ್ರಭುಗಳಾದ ಸರ್ಕಾರದವರು ಈ ಬಡ ರೈತರುಗಳ ಅಹವಾಲನ್ನು ಘನವಾದ ಚಿತ್ತಕ್ಕೆ ತಂದು ಈ ರೀತಿ ಇಕ್ಕಟ್ಟಾದ ಗ್ರಾಮದಲ್ಲಿ ಪೇಚಾಡುತ್ತಿರುವ ನಮ್ಮ ಕಷ್ಟವನ್ನು ತಪ್ಪಿಸಿ ಆರೋಗ್ಯವನ್ನೂ ಅನುಕೂಲವನ್ನೂ ಉಂಟು ಮಾಡುತ್ತಾರೆಂದು ನಂಬಿರುತ್ತೇವೆ.

ಗ್ರಾಮ ನಿವಾಸಿಗಳು.

ತಾಲ್ಲೋಕು ವರ್ತಮಾನ.

ಮದ್ದಗಿರಿ.—ಈ ಟವುನ್ನಲ್ಲಿ ಬಿಸಿಲಿನ ಝಳ ಜಾಸ್ತಿ. ಆಗಾಗ್ಗೆ ಮೋಡ ವೇನೋ ಆಡುತ್ತಾ ಇದೆ. ಮಳೆ ಮಾತ್ರ ಇಲ್ಲ. ಹಲವು ಕ್ರಿಮಿಕೀಟ ವ್ಯಾಧಿಗಳಿಗೆ ನೀರಿನ ತೊಂದರೆ ಇನ್ನೂ ತಪ್ಪಿಲ್ಲ. ಈ ನಳ ಸಂವತ್ಸರದ ಶುದ್ಧ ಪಾಡ್ಯಮಿ ಲಾಗಾಯ್ತು ಶ್ರೀಮಲ್ಲೇಶ್ವರ ದೇವಸ್ಥಾನದಲ್ಲಿ ಶ್ರೀರಾಮೋತ್ಸವವು 9 ದಿನಗಳು ಬಹಳ ವಿಜೃಂಭಣೆಯಿಂದ ನಡೆಯಿತು. ಈ ಸಂಬಂಧ ಲೋಕಲ್ ಸೆಕೆಂಡರಿ ಸ್ಕೂಲಿನ ಬರತಕ್ಕ ಜಾತಿವಾರ್ ಬಾಲಕ ಬಾಲಕಿಯರಿಗೂ ಅವರ ಹಿಂದೆ ಬಂದಿರತಕ್ಕ ಪೋಷಕರಿಗೂ ಸಹ ಇಂಥಾ ಕಾಲದಲ್ಲಿ ಬಹಳ ಆದರದಿಂದ ಮ|| ಶ್ರೀ|| ಕನಕಸಭಾಪತಿ ಅಯ್ಯರ್ರವರೂ ದಿವಾನ್ರವರುಗಳೂ ಸಹ ಸಾಹುಕಾರ್ ನಂಜುಂಡ ಶೆಟ್ಟರವರ ಛತ್ರದಲ್ಲಿ ಪಲೋಪ್ಪ ಶಾಲ ಪೂರೈಸುವ ಮನೆಗೂ ಸರಿಯಾದ ಕಾಲಕ್ಕೆ ಅನ್ನೋದಕಗಳಿಗೂ ಮಧ್ಯಾಹ್ನದ ಉಪಹಾರಕ್ಕೂ ಸರಿಯಾದ ಏರ್ಪಾಡಿನಿಂದ ನಡೆಸಿದ್ದು ತುಂಬಾ ಸಂತೃಪ್ತಿಕರವಾಗಿರುತ್ತೆ.

ಹೆಗ್ಗಡದೇವನಕೋಟೆ.—ಬೇಸಿಗೆ ಕಾವು ದಿನದಿನಕ್ಕೂ ಹೆಚ್ಚುತ್ತಾ ಬರುತ್ತಿದೆ ಜನಗಳಿಗೂ ಅಸಹನೀಯವಾಗಿರುತ್ತದೆ. ಒಂದೆರಡು ದಿನಗಳಿಂದ ಮೋಡವಾಡುತ್ತಾ ಇದೆಯೋ ಹೊರತು ಮಳೆಯ ವಾಸನೆಯೇ ಇಲ್ಲ. ಕಾಲಕ್ಕೆ ಸರಿಯಾಗಿ ಮಳೇ ಬಾರದಿರುವ ಪಕ್ಷಕ್ಕೆ ದನಕರುಗಳ ಮೇವಿಗೂ ರೈತರ ಕೆಲಸ ಕಾರ್ಯಗಳಿಗೂ ತುಂಬಾ ತೊಂದರೆಯೆನ್ನುವದಕ್ಕೆ ಸಂದೇಹವೇ ಇಲ್ಲ. ಶಿಡ್ಲಘಟ್ಟಗಳಲ್ಲಿದ್ದ ಗ್ರಾಮವಾಸಿಗಳಲ್ಲಿ ಕೆಲವರು ಅಪ್ಪರಲ್ಲೇ ಬರುವವರಾಗಿಯೂ ಕೆಲವರು ಇನ್ನೂ ಕಡ್ಡಿ ನಲ್ಲೇ ಇರತಕ್ಕವರಾಗಿಯೂ ಇರುವರು. ಇಲ್ಲಿನ ಹೊಸ ಎ. ವಿ. ಸ್ಕೂಲ್ ಕಟ್ಟಡವು ಪೂರೈಸಿರುತ್ತದೆ. ಆದರೆ ಪ್ಲೇಗಿನ ದೆಸೆಯಿಂದ ಈ ಹೊಸ ಸ್ಕೂಲನ್ನು ಪ್ರತಿಷ್ಠಿಸಲು ಸಾವಕಾಶವಾಗುತ್ತದೆ. ಕಳೆದ ತಾ. 23 ರಲ್ಲಿ ಇಲ್ಲಿಗೆ ಪೋಲೀಸ್ ಇನ್ಸ್ಪೆಕ್ಟರವರು ಬಂದಿದ್ದು ನಾಲ್ಕೈದು ದಿವಸ ಇದ್ದು ಇಲ್ಲಿನ ಆಫೀಸನ್ನೂ ಕುಕ್ಕು ಮುಕ್ತಲಿನ ಆಫೀಸುಗಳನ್ನೂ ನೋಡಿಕೊಂಡು ಹೋದರು. ಆದರೆ ಇಲ್ಲಿಗೆ ಹುಣಸೂರಿನಿಂದ ಬರತಕ್ಕ ಮೆಯಿಲ್ ಕಾಲಕ್ಕೆ ಸರಿಯಾಗಿ ಬಾರದೆಯೂ, ಒಂದೊಂದು ದಿನ ರಾತ್ರಿ 8 ಗಂಟೆಗೆ ಬರುವುದೂ ಈ ಮೊದಲಾದ ವಿಚಾರಗಳನ್ನು ಕುರಿತು ತಕ್ಕ ಏರ್ಪಾಡುಗಳನ್ನು ಕಲ್ಪಿಸಿ ಕೊಟ್ಟಿರುವರೆಂದು ತಿಳಿಯುತ್ತೇವೆ.

ತರೀಕೆರೆ.—ಮಧ್ಯಾಹ್ನದ ಬಿಸಿಲಿನ ತಾಪವೂ ಸಖೆಯೂ ಜಾಸ್ತಿ. ಈ ಊರಿಗೆಲ್ಲಾ ಉಪಯೋಗಕರವಾಗಿರುವ ಚಿಕ್ಕ ಕೆರೆಯು ಬತ್ತುತ್ತಾ ಬಂದು ನೀರು ಕೆಟ್ಟಿದೆ. ಜನರಿಗೆ ಸದರಿ ನೀರು ಬಿಟ್ಟರೆ ಬೇರೆ ಗತಿಯಿಲ್ಲ ಮುಂದಿನ ಅಕ್ಟೋಬರು ತಿಂಗಳೊಳಗೆ ನಮ್ಮ ಶ್ರೀಮನ್ ಸರ್ಕಾರದವರು ಸದರಿ ಕೆರೆಗೆ ಕಲ್ಲತ್ತಿಗಿರಿಯ ನೀರನ್ನು ತರುವ ನಾಲೆಯನ್ನು ಪೂರೈಸುವದಾಗಿ ತಿಳಿದುಬರುತ್ತೆ. ಮುಂದಿನ ಮೇ ತಿಂಗಳ 16 ಕ್ಕೆ ನಮ್ಮ ಶ್ರೀಮನ್ ಮಹಾರಾಜರವರೂ ಬರೋಡ ಗಾಯಕವಾಡಿ ಮಹಾರಾಜರವರೂ ಶೃಂಗೇರಿಗೆ ದಯಮಾಡಿಸುವ ಪ್ರಸಕ್ತಿಯಿಂದ ಇಲ್ಲಿನ ಪಿ. ಡಬ್ಲ್ಯು. ಇಲಾಖೆಯ ಸದರಿ ಸದರಿ ಕೆಲಸಗಳು ನಡೆಯುತ್ತಾ ಇವೆ ಎ|| ಇಂಜಿನಿಯರ್ ಮೆ|| ಪೊನ್ನಯ್ಯನವರೂ ಸಬ್ ಡಿ|| ಆಫೀಸರ ಮೆ|| ಭದ್ರಸಿಂಗ್ ರಾಯರೂ 6, 8 ಜನ ಸಬ್ ಓವರ್ಸೀಯರುಗಳೂ ನೂರಾರು ಜನ ಆಳುಗಳನ್ನೂ ಗಾಡಿಗಳನ್ನೂ ಜಮಾಯಿಸಿಕೊಂಡು ಇಲ್ಲಿಂದ ನರಸಿಂಹರಾಜಪುರ ಶೃಂಗೇರಿ ವರೆಗೂ ರಾಜಮಾರ್ಗವನ್ನು ಅತ್ಯಾತುರದಿಂದ ರಿಪೇರಿ ಮಾಡುತ್ತಾ ಇದ್ದಾರೆ. ಇಲ್ಲಿನ ಕೋ ಆಪರೇಟಿವ್ ಸೊಸೈಟಿಯು ಅಭಿವೃದ್ಧಿಸ್ಥಿತಿಯಲ್ಲಿರುತ್ತೆ. ಇದರಲ್ಲಿ ಲೇವಾದೇವಿ ನಡಿಸುವವರು ಬಡಬಗ್ಗರು ಮಾತ್ರವೇ ಅಲ್ಲ. ಪಾಪಿಷ್ಟರೂ ಇರುತ್ತಾರೆ. ಈ ಸೊಸೈಟಿಯ ಕಾರುಬಾರುಗಳಿಗೆ ಪ್ರತ್ಯೇಕ ಸ್ಥಳವಿರಬೇಕು ಈಗ ಈ ಸೊಸೈಟಿಯೂ, ನೇಟಿವ್ ಆಸ್ಪತ್ರೆಯೂ ಒಂದೇ ಸಣ್ಣ ಮನೆಯಲ್ಲಿ ನಡಿಯುತ್ತಾ ಇರುವದು ಸೊಸೈಟಿಯ ಲೇವಾದೇವಿ ನಡೆಸುವ ಅನೇಕರಿಗೆ ತುಂಡುಕವೂ ಸಂಕೋಚಾಸ್ಪದವೂ ಆಗಿರುವದಾಗಿ ಗೊತ್ತಾಗುತ್ತೆ. ಈ ವಿಚಾರದಲ್ಲಿ ಸೊಸೈಟಿಯ ಕರ್ಣಧಾರರು ಗಮನಕೊಡುವರೆಂದು ನಂಬಿದ್ದೇವೆ

ಚನ್ನರಾಯಪಟ್ಟಣದ ತಾಲ್ಲೂಕು ಬರಗೂರುಗ್ರಾಮ.—ಈ ಮಾಹೆ 22 ನೇ ತಾರೀಖು ಶನಿವಾರ ಮೆಜಸ್ಟಿಕ್ ದಿವಾನ್ ಸಾಹೇಬರವರ ಸವಾರಿಯು ಹಾಸನದಿಂದ ಚನ್ನರಾಯಪಟ್ಟಣಕ್ಕೆ ಚಿತ್ತೈಸಿತು. ಚನ್ನರಾಯಪಟ್ಟಣಕ್ಕೆ ಬರುವದಕ್ಕೆ ಮುಂಚೆ ಇದಕ್ಕೆ ನಾಲ್ಕು ಮೈಲು ದೂರದಲ್ಲಿರುವ ಬರಗೂರುಗ್ರಾಮಕ್ಕೆ ಸವಾರಿಯು ಚಿತ್ತೈಸುವದಾಗಿ ಮೊದಲೇ ನಿರ್ಧಾರವಾಗಿತ್ತು. ಅದೇ ರೀತಿ 22 ನೇ ತಾರೀಖು ಶನಿವಾರ ಬೆಳಿಗ್ಗೆ ಬರಗೂರುಗ್ರಾಮಕ್ಕೆ ಸಮೀಪವಾದ ಹೈರೋಡಿನಲ್ಲಿ ಬರಗೂರುಗ್ರಾಮದ ಪ್ರಮುಖರಾದ, ದಾಸೇಗೌಡ್ರು, ಜವರೇಗೌಡ್ರು, ಸುಬ್ಬಯ್ಯನವರು, ದೊಡ್ಡ ಜವರೇಗೌಡ್ರು, ಗುರುವಯ್ಯನವರು, ಪುಟ್ಟೇಗೌಡ್ರು ಮುಂತಾದವರು ಚಪ್ಪರದ ಬಳಿ ಕಾದಿದ್ದರು ದಿವಾನ್ ಸಾಹೇಬರ ಸವಾರಿಯು ಮೋಟರಿನಲ್ಲಿ ಬಂದಕೂಡಲೆ ಮಾಲಾರ್ಪಣೆಯಾಯಿತು. ಹಾರ ತುರಾಯಿಗಳನ್ನು ಒಪ್ಪಿಸಿದರು. ತರುವಾಯ ದಿವಾನರವರು ಮೋಟರ್ ಬಿಟ್ಟು ಇಳಿದು ಪಾದಚಾರಿಗಳಾಗಿಯೇ ಹಾಸನದ ಡೆ|| ಕಮಿಷನರ್ ಸಾಹೇಬರು, ಅ|| ಕಮಿಷನ್ ರವರು ಇತರ ಅಧಿಕಾರಿಗಳೊಂದಿಗೆ ವಾದ್ಯದೊಡನೆ ಗ್ರಾಮ ಪ್ರವೇಶಮಾಡಿದರು ಗ್ರಾಮವನ್ನು ತಳಿರು ತೋರಣಗಳಿಂದ ಅಲಂಕರಿಸಿದ್ದರು. ಗ್ರಾಮಸ್ಥರು ಸ್ವಂತಖರ್ಚಿನಿಂದ ಕಟ್ಟಿಸಿರುವ ಚಾವಡಿಯನ್ನೂ ರೀಡಿಂಗ್ ರೂಮನ್ನೂ ಪರಾಮರಿಸಿ ಬಹಳ ಸಂತೋಷಪಟ್ಟರು. ಕೋ ಆಪರೇಟಿವ್ ಸೊಸೈಟಿಯ ವಿಷಯವಾಗಿ ವಿಚಾರಿಸಿದರು. ಅದು ಇನ್ನೂ ಬಾಲ್ಯಾವಸ್ಥೆಯಲ್ಲಿರುವದಾಗಿ ತಿಳಿಸಲಾಯಿತು ಅನಂತರ ಗ್ರಾಮಸಂಚಾರಮಾಡಿ ಊರು ನೈರ್ಮಲ್ಯ ವಿಷಯದಲ್ಲಿಯೂ ಪುರೋಭಿವೃದ್ಧಿಯ ವಿಷಯವಾಗಿಯೂ ಈ ಗ್ರಾಮ ಉತ್ತಮ ಸ್ಥಿತಿಯಲ್ಲಿರುವದಾಗಿ ತಿಳಿಸಿ ಸಂತೋಷಪಟ್ಟುಕೊಂಡು, ಇನ್ನೂ ಉತ್ತಮವಾದ ಸ್ಥಿತಿಗೆ ಬರಬೇಕೆಂದು ಬುದ್ಧಿವಾದವನ್ನು ಅಪ್ಪಣೆಕೊಡಿಸಿ ಮೋಟರಿನಲ್ಲಿ ಕುಳಿತು ಚನ್ನರಾಯಪಟ್ಟಣಕ್ಕೆ ದಯಮಾಡಿಸಿದರು.

ಗೌರಿಬಿದನೂರು ತಾ|| ಮಂಚೇನಹಳ್ಳಿ.—ಈ ತಾಲ್ಲೂಕಿಗೆ ಹೊಸದಾಗಿ ದಯಮಾಡಿಸಿರುವ ಅಮಲ್ದಾರ್ ಮ|| ಗುಲಾಮ್ ಮಹಮದ್ ಮೊಕ್ರಿ ಸಾಹೇಬರವರು ಈ ಗ್ರಾಮದ ಅಭಿವೃದ್ಧಿಯ ವಿಷಯದಲ್ಲಿ ಬಹಳ ಶ್ರಮ ತೆಗೆದುಕೊಳ್ಳುತ್ತಿದ್ದಾರೆ. ಇವರು ದಯಮಾಡಿಸಿದ ಮೇಲೆ ಊರಿನಲ್ಲಿದ್ದ ತಿಪ್ಪೆಗಳನ್ನೆಲ್ಲಾ ತೆಗಿಸಿ ಹಾಕಿದ್ದಲ್ಲದೆ ಪುನಃ ಹಾಕದಂತೆ ಕಟ್ಟುಮಾಡುತ್ತಾರೆ ಇದರಿಂದ ಸಾಂಕ್ರಾಮಿಕ ರೋಗಗಳು ಊರಿನಲ್ಲಿ ತಲೆ ತೋರುವುದು ಬಹಳ ಮಟ್ಟಿಗೆ ಕಡಿಮೆಯಾಯಿತು. ಕೆಲವು ವರ್ಷಗಳ ಕೆಳಗೆ ಇದೇ ಗ್ರಾಮದಲ್ಲಿ ಒಂದೇ ವರ್ಷದಲ್ಲಿ 200 ಮಕ್ಕಳು ಕಾಲವಾದರೆಂದು ಹೇಳುತ್ತಾರೆ. ಈಚೆಗೂ ಮಲೇರಿಯಾ, ವಿಷಮಜ್ವರ ಮುಂತಾದ ಸಾಂಕ್ರಾಮಿಕ ಜಾಡ್ಯಗಳಿಂದ ಮಕ್ಕಳು ಬಹಳವಾಗಿಯೇ ಸಾಯುತ್ತಿದ್ದರು. ಈ ಏರ್ಪಾಡಾದ ನಂತರ ಮೇಲ್ಕಂಡ ಯಾವ ರೋಗಗಳೂ ಇಲ್ಲದೆ ಶಕ್ತ್ಯ ಮಟ್ಟಿಗೆ ಸುರಕ್ಷಿತವಾಗಿರುತ್ತಾರೆ. ಅಮಲ್ದಾರ್ರವರು ಇದೇ ರೀತಿ ಈ ಗ್ರಾಮದ ಮೇಲೆ ಅಭಿಮಾನವಿಟ್ಟುಕೊಂಡಿದ್ದಲ್ಲಿ ಇನ್ನೂ ಉತ್ತಮಸ್ಥಿತಿಗೆ ಬರುವುದರಲ್ಲಿ ಸಂಶಯ ವಿಲ್ಲ—ಈ ಗ್ರಾಮದಲ್ಲಿ ಮಳೆಯಿಲ್ಲದುದರಿಂದ ರೈತರು ಮಳೆಗಾಗಿ ಎದುರು ನೋಡುತ್ತಿರುತ್ತಾರೆ ಬೇಸಿಗೆ ತಾಪ ಹೆಚ್ಚು.—ಈ ಊರಿನಲ್ಲಿರುವ ಗ್ರ್ಯಾಂಟ್ ಇನ್ ಏಡ್ ಇಂಗ್ಲೀಷ್ ಸ್ಕೂಲಿನಿಂದ ಈ ವರ್ಷ ಎಂಟು ಜನ ಹುಡುಗರು ಲೋವರ್ ಸೆಕಂಡರಿ ಪರೀಕ್ಷೆಗೆ ಹೋಗಿರುತ್ತಾರೆ ಇಲ್ಲಿರುವ ಹೆ|| ಮಾ|| ಮ|| ವಿಠಲ ಮಹಾತ್ಮಾಚಾರ್ಯರೆಂಬುವವರು ಬಹಳ ಶ್ರದ್ಧೆಯಿಂದ ವಿದ್ಯಾದಾನ ಮಾಡುತ್ತಿರುತ್ತಾರಾಗಿ ಬೇರೆ ಬೇರೆ ಸ್ಥಳಗಳಿಂದ ಬಾಲಕರು ತಮಗೆ ಅಲ್ಲಿ ಸಾಕಾದಷ್ಟು ಅನುಕೂಲವಿದ್ದರೂ ಬಿಟ್ಟು ಈ ಸ್ಥಳಕ್ಕೆ ವಿದ್ಯಾಭ್ಯಾಸಂಗಕ್ಕಾಗಿ ಬರುತ್ತಾರೆ. ಇವರಿಗೆ ಸಂಸ್ಕೃತದಲ್ಲಿ ಬಹಳ ಅಭಿರುಚಿ ಇರುವುದರಿಂದ ಪಾಠಶಾಲೆಯೊಂದನ್ನು ನೇಮಿಸಿಕೊಂಡು ಬಹಳ ಬಾಲಕರನ್ನು ತರಪೇತು ಮಾಡುತ್ತಿರುತ್ತಾರೆ ಇಷ್ಟೇ ಅಲ್ಲದೆ ವಿದ್ಯಾರ್ಥಿಗಳಿಗೆ ನೀತಿ ಬೋಧೆಯನ್ನು ಮಾಡಿ ಬಾಲಕರನ್ನು ಸನ್ಮಾರ್ಗ ಪ್ರವರ್ತಕರನ್ನಾಗಿ ಮಾಡುವುದರಲ್ಲಿ ಇವರು ಯಾವಾಗಲೂ ನಿರತರಾಗಿರುವುದು ಸ್ತೋತ್ರಾರ್ಹವಾಗಿದೆ. ಇಲ್ಲಿನ ಗ|| ವಿ. ಇ. ಸ್ಕೂಲ್ ಬಹಳ ಉತ್ತಮ ಸ್ಥಿತಿಯಲ್ಲಿದೆ ಮತ್ತು ಲಂಡನ್ ಮಿಷನ್ ಗರ್ಲ್ಸ್ ಸ್ಕೂಲಿನಲ್ಲಿ 96 ಬಾಲಕಿಯರು ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ ಈ ಊರಿನ ಗ್ರಾಮಸ್ಥರು ಸ್ತ್ರೀ ವಿದ್ಯಾಭ್ಯಾಸದಿಂದಾಗುವ ಪ್ರಯೋಜನಗಳನ್ನರಿತು ತಮ್ಮ ಬಾಲಕಿಯರನ್ನು ಸ್ಕೂಲಿಗೆ ಕ್ರಮವಾಗಿ ಕಳುಹಿಸುತ್ತಾ ಬರುವರೆಂದು ನಂಬುತ್ತೇವೆ.

ಶಿವಮೊಗ್ಗ.—ಬಿಸಿಲಿನ ತಾಪ ಬಹಳವಾಗಿದೆ. ಬೇಸಿಗೆ ರಜವಾದ್ದರಿಂದ ಕಾಲೇಜುಗಳ ಆಫೀಸರಲ್ಲಿ ಅನೇಕರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಿದ್ದಾರೆ. ಈ ವರ್ಷ ಶಿವಮೊಗ್ಗ ನಾರ್ಮಲ್ ಸ್ಕೂಲಿನಲ್ಲಿ 23 ಜನ ಎಲ್ಲಾ ಪಾಠಗಳಲ್ಲಿಯೂ ಪ್ಯಾಸ್ ಆದರು. ಹಾಲು ಮೊಸರು ಈ ಊರಿನಲ್ಲಿ ಶಿಕ್ಕುವುದೇ ಕಷ್ಟವಾದೆ 3 ಆ 8 ಪೈಗೆ 1 ಸೇರು ಮೊಸರು ಕೊಡುತ್ತಾರೆ. ಅದು ಸಹ ಬಹಳ ನೀರಾಗಿರುತ್ತದೆ. ತೀರ್ಥಹಳ್ಳಿಗೆ ಮೋಟಾರು ಪುನಃ ಪ್ರಾರಂಭವಾಗಿದೆ. ಜನಗಳ ಪ್ರಯಾಣಕ್ಕೆ ಬಹಳ ಅನುಕೂಲವಾಗಿದೆ ಆದರೆ ರಾತ್ರಿ ಬಹಳ ಹೊತ್ತಿಗೆ ಬರುತ್ತದೆ. ಚಾರ್ಜು ಎಂದರೆ ಬಹಳ ಅನುಕೂಲ. ಕಂಪನಿಯವರು ತಕ್ಕ ಏರ್ಪಾಡು ಮಾಡಿ ಕೊಟ್ಟಾರಾಗಿ ನಂಬಿದ್ದೇವೆ. ಶಿವಮೊಗ್ಗ ತಾಲ್ಲೂಕ್ ಗಾಜನೂರ ಮಾಗಣೆ ಬದಲಿ ಶೇಕದಾರ್ ರಂಗರಾಯರೆಂಬುವರು ಸರ್ಕಾರಿ ಕೆಲಸದ ನಿಮಿತ್ತವಾಗಿ ಕುದುರೆ ಸವಾರಿಮಾಡಿಕೊಂಡು ತೀರ್ಥಹಳ್ಳಿ ರಸ್ತೆ ಕಡೆ ಹೋಗುತ್ತಿದ್ದರು ಕುದುರೆ ತುಂಟತನಮಾಡಿದ್ದರಿಂದ ಕೆಳಗೆಹಾಕಿ ಅಟೆ ಬಿದ್ದರು. ಬಹಳ ಗಾಯವಾಗಿದೆ. ಕೂಡಲೆ ಆಸ್ಪತ್ರೆಗೆ ಕರೆದುಕೊಂಡು ಹೋದರು ಜೀವಭಯವಿಲ್ಲವಂತೆ ಹೇಳುತ್ತಾರೆ ಅಂಗಡಿಗಳಲ್ಲಿ ಮುಗ್ಗಿ ಮತ್ತು ಹುಳಬಿದ್ದಿರುವ ಅಕ್ಕಿಹಿಟ್ಟನ್ನು ಕಮ್ಮಿ ಬೆಲೆಗೆ ಕೊಟ್ಟರು. ಇವರು ಈ ಹಿಟ್ಟನ್ನು ದನಗಳಿಗೂ ಕೋಳಿಗಳಿಗೂ ಹಾಕುತ್ತಾರೆಂತ ವರ್ತಮಾನ ಕೇಳುತ್ತೇವೆ ಈ ಊರಿಗೆ ಬಂದಿರುವ ಕೊಡಿಯಾಲದ ನಾಟಕದ ಕಂಪನಿಯವರು ತಮ್ಮ ಆಟಗಳನ್ನು ಪ್ರಾರಂಭಮಾಡಿದರು ಇವರು ಆಡಿದ ಮೊದಲನೇ ನಾಟಕ ಅಷ್ಟು ಸ್ವಾರಸ್ಯವಿಲ್ಲವೆಂತಲೂ ನೆನ್ನೆ ಶನಿವಾರ ಆಡಿದ ನಾಟಕ ತಕ್ಕ ಮಟ್ಟಿಗೆ ಚೆನ್ನಾಗಿತ್ತೆಂತಲೂ ಜನರು ಆಡಿಕೊಳ್ಳುತ್ತಾರೆ. ಇವರು ಚಪ್ಪರದಲ್ಲಿ ಹಚ್ಚಿದ್ದ ದೀಪದ ಬೆಳಕು ಟೌನ್ ಟೇಂಟಿಗಿಂತ ಬಹಳ ಜನಗಳು ಕಂಪ್ಲೈಂಟ್ ಮಾಡುತ್ತಾರೆ ಡಿ|| ಆಫೀಸ್ ಬಳಿ ಕಟ್ಟಿಗಾರರು ಕಟ್ಟುವ ಕಟ್ಟಡದ ಕೆಲಸ ಪೂರೈಸಿತು ಅದು ಪೂರೈಸಿದ ಒಡನೆ ಅದನ್ನು ಜನರ ಉಪಯೋಗಕ್ಕೆ ಕೊಡುತ್ತಾರೆಂತ ಕೇಳುತ್ತೇವೆ ನೆಲಕ್ಕೆಲ್ಲಾ ಕಡಪಾ ಕಲ್ಲು ಹಾಕಿ ಚನ್ನಾಗಿ ಮಾಡಿದ್ದಾರೆ. ಬೆಂಗಳೂರಿನಲ್ಲಿರುವಂತೆ ಅನೇಕ ಕಡೆಗಳಲ್ಲಿ ಟ್ರ್ಯಾಪ್ ಹೋಗುವ ಬಗ್ಗೆ ಗಡಿಯಾರವನ್ನು ಇಟ್ಟು ಜನಗಳಿಗೆ ಉಪಕಾರ ಮಾಡಬೇಕಾಗಿ ಸರ್ಕಾರದವರನ್ನು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.—ಶಿಕಾರಿಪುರ ಮತ್ತು ಮುಂತಾದ ಈ ಸ್ಥಳಗಳಲ್ಲಿ ರಥೋತ್ಸವವಾದ್ದರಿಂದ ಈ ಊರಿನ ಅನೇಕ ಜನಗಳು ಹೋಗಿರುತ್ತಾರೆ. ಒಂದು ಹದ ಮಳೆ ಬಿದ್ದದ್ದರಿಂದ ಬೇಸಾಯದ ಜನರು ತಮ್ಮ ಆರಂಭವನ್ನು ಪ್ರಾರಂಭಿಸಿ ಇದ್ದಾರೆ. ಮೇಲೆ ಮೇಲೆ ಮಳೆ ಬಂದರೆ ಇವರ ಕೆಲಸ ಚೆನ್ನಾಗಿ ನಡಿಯಲು ಅಡ್ಡಿಯಂತಿಲ್ಲ.

ದಾವಣಗೆರೆ ತಾಲ್ಲೂಕು ವಡೇಗೇನಹಳ್ಳಿ.—ಈ ಊರಿನಲ್ಲಿ ದಿನೇ ದಿನೇ ಮಳೆ ಯಿಲ್ಲ. ಮೋಡವಾಗುತ್ತಿದೆ. ಬಿಸಿಲಿನ ತಾಪ ಹೆಚ್ಚು. ಸೀರಿಗೇನೂ ತೊಂದರೆ ಇಲ್ಲ. ತಾರೀಖು 26-4-1916 ನೇ ಬುಧವಾರದ ಬೆಳಗ್ಗೆ 10 ಘಂಟೆಗೆ ಸರಿಯಾಗಿ ಮೈಸೂರು ಸೀಮೆಯ ವಿದ್ಯಾಭ್ಯಾಸದ ಅಲಿವಾ ಇನ್ಸ್‌ಪೆಕ್ಟರ್ ಅವರಲ್ಲದವರೂ, ಬೆಂಗಳೂರು ಡಿಸ್ಟ್ರಿಕ್ಟಿನ ಸರ್ಕಲ್ ಇನ್ಸ್‌ಪೆಕ್ಟರವರೂ ... [illegible]

ಮಂಡ್ಯ.—ಕಳೆದ 23 ನೇ ತಾರೀಖಿನಲ್ಲಿ ಮಂಡ್ಯದವರು ಮದ್ದೂರಿಗೆ ಹೋಗಿ ... [illegible]

ನಾಗಮಂಗಲದ ತಾಲ್ಲೂಕು ಬೆಳ್ಳೂರ ಗ್ರಾಮ.—ಈ ಗ್ರಾಮದಲ್ಲಿ 600-700 ಜನ ... [illegible]

... [illegible]

ಕೊಂಡದ್ದು ನಿಜ ಎಂದು ಒಪ್ಪಿ ತನ್ನ ಇಷ್ಟಗೆ ಬಂದಿರಬಂದಿರಕ್ಕೆ ... [illegible] ... ಕೈದಿಗಳನ್ನು ನಂಜನಗೂಡಿಗೆ ಸಾಗಿಸಿಕೊಂಡು ಹೋದರು. ಸತ್ಯವಾದಿ.

ಪ್ರಬಲರಾದ ಕಳ್ಳರು ಸಿಕ್ಕಿಬಿದ್ದದ್ದು.

ನಂಜನಗೂಡು ತಾಲ್ಲೂಕು ದೊಡ್ಡ ಕೌಲಂದೆ ಹೋಬಳಿ ದೊಡ್ಡ ಹೊಮ್ಮದ ಗ್ರಾಮಕ್ಕೆ ಸೇರಿದ ... [illegible]

ಈಗತಾನೇ ಬಂದಿರುತ್ತೆ.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ ಮುಕ್ತವಾದ 6 ಬಹುಮಾನ ಸಮೇತ

ರೂ. 3-0-0 ಮಾತ್ರ.

ಈ ನವೀನವಾದ ಹೆಸರುಳ್ಳ ರಮಣೀಯವಾದ ವಾಚ್ ಪ್ರಸಿದ್ಧಿ ಹೊಂದಿದ ಲೀವರ್ ಕೆಲಸಗಳಿಂದ ತಯಾರಾದದ್ದು. ಕಸಿಯಲ್ಲಿ ಬೀಗವುಳ್ಳದ್ದು. ಮುಳ್ಳುಗಳು ಸೇರುವದಕ್ಕೆ ಅವಕಾಶವಿಲ್ಲದಂತೆ ಒಳಗೆ ಗ್ಲಾಸ್ ಡೋಮ್ ಉಂಡರೆ ಕನ್ನಡಿ ಮುಚ್ಚಳದಿಂದ ಮುಚ್ಚಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಬಹು ಸುಂದರವಾದ ಮತ್ತು ರಮಣೀಯವಾದ ವಾಚು. ... [illegible]

ವಿಳಾಸ:— ಪಿ. ಆರ್. ವೆಂಕಟರಮಣ ಕಂಪೆನಿ,

ನಂ. 7, ಕೋಪ ಪೆಂಟ್ಲಾಂಡ್ ... ಲೇನು, ಮದರಾಸು.

[illegible] [98-4]



ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು.

ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ 32 ಸಾಮಾನು

ಸೆಟ್ಟು 1 ಕ್ಕೆ ರೂ 1-8-0

ಚಿಕ್ಕ ಸೆಟ್ಟು 1 ಕ್ಕೆ ,, 2-0-

ದೊಡ್ಡ ಸೆಟ್ಟು 1 ಕ್ಕೆ ,, 4-0-0

ಎಸ್. ಎಂ. ನಾರಾಯಣಸ್ವಾಮಿ ಕಂಪೆನಿ,

[119-12] ... ಕಾಶಿ.

ನುಸುಮಂಯು — ವಿಶೇಷ ಲಾಭ — ತರಿಸಿ ಪರೀಕ್ಷಿಸಿರಿ — ನಿಮ್ಮ ಮಿತ್ರರಲ್ಲಿ ಪ್ರಚುರಗೊಳಿಸಿರಿ

ಸರ್ವರೂ ಅತ್ಯವಶ್ಯಕವಾಗಿ ಗಮನಿಸಬೇಕಾದ ಮುಖ್ಯ ವಿಷಯ.

ಅನೇಕ ವ್ಯಾಪಾರಸ್ಥರು ಭಾರೀ ಕ್ರಯದ ನಾಲ್ಕಾರು ಬಹುಮಾನಗಳನ್ನು ಕೊಡುತ್ತೇವೆಂದು ಪ್ರಕಟನೆಗಳನ್ನು ಪ್ರಕಟಿಸಿ ಗಿರಾಕಿಗಳನ್ನು ... [illegible]

ಮಿತ್ರರೇ!—ಈ ಕೆಳಗೆ ವಿವರಿಸಿರುವ ಹಾರ್ಮೋನಿಯಂಗಳನ್ನು ಪ್ರಖ್ಯಾತರಾದ ಕಾರೀಗಾರರಿಂದ ಬಹು ನಾಜೋಕಾಗಿ ತಯಾರ್ ಮಾಡಿಸಿ ... [illegible]

ಕ್ರಯಕ್ಕೆ ತಕ್ಕ ಉತ್ತಮವಾದ ಪದಾರ್ಥಗಳನ್ನು ನಮ್ಮ ... [illegible] ... ಸಂತೋಷಪೂರ್ವಕವಾದ ಸನ್ಮಾನ ಪತ್ರಿಕೆಗಳು ಪ್ರತಿ ನಿತ್ಯವೂ ಬರುತ್ತವೆ.

ಇತರ ಕಂಪೆನಿಯವರಂತೆ ನಾಲ್ಕಾರು ಬಹುಮಾನಗಳನ್ನೇ ಆಗಲಿ ಅರ್ಧ ಕ್ರಯಕ್ಕೆ ಕೊಡುತ್ತೇವೆಂದೇ ಆಗಲಿ ನಾವು ಆಶೆಹುಟ್ಟಿಸುತ್ತಿಲ್ಲವೆಂಬುವದನ್ನು ಜ್ಞಾಪಕದಲ್ಲಿಡಿರಿ.

ಹಾರ್ಮೋನಿಯಮ್ಮಿಗೆ ಆರ್ಡರ್ ... [illegible]



ನಂ. 1 "ಬಿಡಲ್ ಫ್ಲೂಟ್" ಸಿಂಗಲ್ ರೀಡ್ಸ್ ಹಾರ್ಮೋನಿಯಂ ಕ್ರಯ 1 ಕ್ಕೆ	26-0-0	ನಂ. 7 "[illegible] ಫ್ಲೂಟ್" ಸಿಂಗಲ್ ರೀಡ್ಸ್ ಅತ್ಯುತ್ತಮವಾದ ಹಾರ್ಮೋನಿಯಂ 1 ಕ್ಕೆ	42-8-0
ನಂ. 2 "ಡೈಮಂಡ್ ಫ್ಲೂಟ್" ಸಿಂಗಲ್ ರೀಡ್ಸ್ ಹಾರ್ಮೋನಿಯಂ ಕ್ರಯ 1 ಕ್ಕೆ	27-8-0	ನಂ. 8 "ಕೊಹಿನೂರು ಫ್ಲೂಟ್" ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1 ಕ್ಕೆ	43-8-0
ನಂ. 3 "ಕೊಹಿನೂರ್ ಫ್ಲೂಟ್" ಸಿಂಗಲ್ ರೀಡ್ಸ್ ಹಾರ್ಮೋನಿಯಂ ಕ್ರಯ 1 ಕ್ಕೆ	29-8-0	ನಂ. 9 "[illegible] ಫ್ಲೂಟ್" ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1 ಕ್ಕೆ	42-0-0
ನಂ. 4 "ಮಹಾರಾಜ ಫ್ಲೂಟ್" ಸಿಂಗಲ್ ರೀಡ್ಸ್ ಹಾರ್ಮೋನಿಯಂ ಕ್ರಯ 1 ಕ್ಕೆ	32-8-0	ನಂ. 10 "ಮೋಸ್ಲಿಂ ಫ್ಲೂಟ್" ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1 ಕ್ಕೆ	47-8-0
ನಂ. 5 "ಮೋಸ್ಲಿಂ ಫ್ಲೂಟ್" ಸಿಂಗಲ್ ರೀಡ್ಸ್ ಹಾರ್ಮೋನಿಯಂ ಕ್ರಯ 1 ಕ್ಕೆ	35-0-0	ನಂ. 11 ಪ್ರಖ್ಯಾತಿಹೊಂದಿದ "ಮೋಹರ್ ಫ್ಲೂಟ್" ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1 ಕ್ಕೆ	60-8-0
ನಂ. 6 ಪ್ರಖ್ಯಾತಿಹೊಂದಿದ "ಎಂ. ಮೋಹರ್ ಫ್ಲೂಟ್" ಸಿಂಗಲ್ ರೀಡ್ಸ್ ಹಾರ್ಮೋನಿಯಂ 1 ಕ್ಕೆ	37-8-0	ನಂ. 12 "ಶಂಕರ್ ಫ್ಲೂಟ್" ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1 ಕ್ಕೆ	62-8-0

[82-7]

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರ್.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಏಪ್ರಿಲ್ 12 ನೇ ತಾ. ವರೆಗಿನ ಬ್ಯಾಂಕಿನ ಠೇವು.

(1) ಷೇರು ಬಂಡವಾಳ	ರೂ	10,01,000
(2) ರಿಜರ್ವ್ ಫಂಡು	,,	75,000
(3) ಡಿಪಾಜಿಟ್ಟುಗಳು	,,	40,24,063
(4) ಇತರ	,,	86.339
(ಅಡಿ ಒಟ್ಟು ಬಿಟ್ಟಿರುತ್ತೆ.)	ಜುಮ್ಲಾ ರೂ.	51,85,402
—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ ರೂ		4,66,175
(2) ಸಾಲ ಮತ್ತು ಇತರ ಸಾಲಗಳು	,,	35,75 044
(3) ಡಿಸ್ಕೌಂಟುಮಾಡಿದ ವಾಯಿದೆಹುಂಡಿಗಳು	,,	4,01,411
(4) ಇನ್ವೆಸ್ಟ್ಮೆಂಟುಗಳು	,,	5,95,160
(5) ಏಜೆನ್ಸಿಗಳಲ್ಲಿರುವ ಬಾಕಿಗಳು	,,	21,380
(6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	18,472
(7) ಇತರೆ	,,	17,760
(ಅಡಿ ಒಟ್ಟು ಬಿಟ್ಟಿರುತ್ತೆ.)	ಜುಮ್ಲಾ ರೂ.	51,85,402

ಪಿ. ರಾಮಸ್ವಾಮಯ್ಯ, ಆ: ಮ್ಯಾನೇಜರ್.

ಮಲೆನಾಡಿನ ಅಭಿವೃದ್ಧಿಯು ಪ್ರಜೆಗಳಿಂದಲೇ ಸಾಧ್ಯವಾಗುವದು.

ಮಲೆನಾಡು ಕ್ಷೀಣಗತಿಗೆ ಬಂದು ಇದನ್ನು ಪುನಃ ಉನ್ನತ ಸ್ಥಿತಿಗೆ ತರಬೇಕೆಂಬ ಉದ್ದೇಶದಿಂದ ಸರ್ಕಾರದವರ ಉದ್ದೇಶವನ್ನನುಸರಿಸಿ ಪ್ರತಿ [illegible] ಮಲೆನಾಡಿನ ಕ್ಷೇಮವನ್ನು ಕೋರುವ ಕರ್ತವ್ಯ ಪ್ರತಿಯೊಬ್ಬ ಪ್ರಜೆಯದು. [illegible]

[illegible] ಈ ವಿಷಯದಲ್ಲಿ ಪ್ರಜೆಗಳು ಶ್ರದ್ಧೆಯಿಂದ ಕೆಲಸಮಾಡಿದರೆ [illegible] ಮಲೆನಾಡಿನ ಅಭಿವೃದ್ಧಿಗೆ [illegible] ಸರ್ಕಾರದವರು [illegible] ಮಲೆನಾಡಿನ ಕೆಲವು ಪ್ರದೇಶಗಳಲ್ಲಿ [illegible] ಮಹನೀಯರು ಉನ್ಮುಖರಾಗಿ ಮಲೆನಾಡಿನ ಪುರೋಭಿವೃದ್ಧಿಗೆ ಕಾರಣರಾಗಲೆಂದು ಭಗವಂತನಲ್ಲಿ ಪ್ರಾರ್ಥಿಸುವ

ಸೇವಕ.

ಅರ್ಧಬೆಲೆ! ಒಂದು ತಿಂಗಳು ಮಾತ್ರ!

ಸೀನ್‌ಫೇನ್ ಸಂಘದ ಮುಖಂಡರುಗಳು ಕೆಲಕು ಆಯುಧಗಳನ್ನೂ ಮದ್ದುಗುಂಡನ್ನೂ ಶೇಖರಮಾಡಿಕೊಂಡು, ಐರ್ಲೆಂಡ್ ದ್ವೀಪವು ಪ್ರಜಾಪ್ರಭುತ್ವವಾಗಿ ಮಾಡಲ್ಪಟ್ಟಿದೆ ಎಂಬರ್ಥಕ್ಕೆ ಒಂದು ಇಸ್ತಿಹಾರುನಾಮೆಯನ್ನು ಪ್ರಕಟಮಾಡಿಬಿಟ್ಟರು. ಏಪ್ರಿಲ್ ತಾ. ೨೪ರಲ್ಲಿ ಈ ಸಂಘದವರು ದಂಗೆಯೆದ್ದು ಐರ್ಲೆಂಡಿನ ರಾಜಧಾನಿಯಾದ ಡಬ್ಲಿನ್‌ನಗರದ ಮಧ್ಯಭಾಗದಲ್ಲಿರುವ ಅನೇಕ ಕಟ್ಟಡಗಳನ್ನು ಆಕ್ರಮಿಸಿಕೊಂಡು ಪೋಸ್ಟ್ ಆಫೀಸನ್ನು ಸ್ವಾಧೀನಪಡಿಸಿಕೊಂಡು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿದರು. ಅಂಗಡಿ ಮುಂಗಟ್ಟುಗಳನ್ನು ನುಗ್ಗಿ ಕೊಳ್ಳೆಹೊಡೆದರು. ಆಯುಧಶಾಲೆಗಳನ್ನು ಕೊಳ್ಳೆಹೊಡೆದರು. ಐರ್ಲೆಂಡಿನ ಎಲ್ಲಾ ಕಡೆಗಳಲ್ಲೂ ಪ್ರಜೆಗಳನ್ನು ಬ್ರಿಟಿಷ್ ಗವರ್ನ್‌ಮೆಂಟಿನವರ ಮೇಲೆ ತಿರುಗಿಬೀಳುವಂತೆ ಚಿತಾವಣೆಮಾಡುತ್ತಾ ಬಂದರು. ಬಹುಶಾ ಡಬ್ಲಿನ್ ಪಟ್ಟಣ ಒಂದರಲ್ಲೇ ಬಲವಾಗಿರಬೇಕೆಂದು ಕಾಣುತ್ತದೆ. ದಂಗೆಕೋರರು ಆ ಪಟ್ಟಣದಲ್ಲಿರುವ ಕೋಟೆಗೆ ಮುತ್ತಿಗೆ ಹಾಕಿ ಬಹಳ ಸಾಹಸಪಟ್ಟರೂ ಅದು ಅವರ ಸ್ವಾಧೀನವಾಗಲಿಲ್ಲ. ಬ್ರಿಟಿಷ್ ಸೈನ್ಯಗಳು ತಾ. ೨೪, ೨೫, ೨೬ ರಲ್ಲಿ ಹೆಚ್ಚು ಹೆಚ್ಚಾಗಿ ಅಲ್ಲಿಗೆ ಹೋಗಿ ಸೇರಿದವು. ಇವರು ಕೆಲವು ದಿನಗಳೊಳಗಾಗಿ ಡಬ್ಲಿನ್ ನಗರದ ಬಹುಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡು, ದಂಗೆಕೋರರು ಇದ್ದ ಭಾಗದ ಸುತ್ತಲೂ ಕೋಟೆಯಂತೆ ಸಾಲುಕಟ್ಟಿ ನಿಂತುಕೊಂಡರು. ಐರ್ಲೆಂಡಿನಲ್ಲೆಲ್ಲಾ ಯುದ್ಧಕಾಲದ ಕಾನೂನು ಜಾರಿಯಲ್ಲಿ ತರಲಾಯಿತು. ಜನರಲ್ ಮ್ಯಾಕ್ಸ್‌ವೆಲ್‌ರವರು ಸರ್ವ ಸೈನ್ಯಾಧಿಪತ್ಯವನ್ನು ವಹಿಸಿಕೊಂಡರು. ತಾ ೨೯ ರಲ್ಲಿ ಅಂದರೆ ದಂಗೆ ಪ್ರಾರಂಭವಾದ ಐದುದಿನಗಳೊಳಗಾಗಿ ದಂಗೆಕೋರರು ಬಂದು ಶರಣಾಗತರಾಗುತ್ತಿದ್ದಾರೆಂದು ಜನರಲ್‌ರವರು ತಿಳಿಸುವಂತಾಯಿತು. ಆ ಮುಖಂಡರ ಪೈಕಿ ಒಬ್ಬನು ಕೊಲೆಯಾದನು; ಇನ್ನೊಬ್ಬ ರಣಗಾಯಗೊಂಡನು. ಸುಮಾರು ೭೦೦ ಮಂದಿ ದಂಗೆಕೋರರು ಕೈಸೆರೆ ಹಿಡಿಯಲ್ಪಟ್ಟರು. ಮೇ ತಾ. ೧ ಕ್ಕೆ ದಂಗೆಕೋರರ ದಾಂಧಲೆಯು ನಿಂತಿತು. ಡಬ್ಲಿನ್ ನಗರದಲ್ಲಿ ಎಲ್ಲಾ ಸುಮಾರು ೧,೦೦೦ ಕ್ಕಿಂತಲೂ ಹೆಚ್ಚಾಗಿ ದಂಗೆಕೋರರನ್ನು ಹಿಡಿದು ಹಾಕಿದರು. ಮೇಲ್ಕಂಡ ಇಸ್ತಿಹಾರುನಾಮೆಗೆ ರುಜುಮಾಡಿದ್ದ ಮೂವರು ಮುಖಂಡರನ್ನು ಹಿಡಿದು ಸೈನಿಕರ ಕೋರ್ಟಿನಲ್ಲಿ ವಿಚಾರಿಸಿ ಗುಂಡಿನಿಂದ ಹೊಡೆದು ಕೊಂದುಹಾಕಿದರು. ಇನ್ನು ಮೂರು ಮಂದಿಗೆ ತಲಾ ಮೂರು ವರುಷ ಬಂದೀಖಾನೆ ಶಿಕ್ಷೆಯಾಯಿತು. ಸೆರೆ ಹಿಡಿದ ಅನೇಕ ಅಪರಾಧಿಗಳನ್ನು ಇಂಗ್ಲೆಂಡಿಗೆ ಸಾಗ ಕಳುಹಿಸಿದರು. ಅಲ್ಲಿ ಅವರನ್ನು ಕ್ರಮವಾಗಿ ವಿಚಾರಣೆ ಮಾಡುತ್ತಾರೆ.

ಈ ದಂಗೆ ಯುದ್ಧದಲ್ಲಿ ೮ ಮಂದಿ ಬ್ರಿಟಿಷ್ ಉದ್ಯೋಗದಾರರು ಕೊಲೆಯಾದರೆಂದೂ, ೭ ಮಂದಿ ಉದ್ಯೋಗದಾರರು ಗಾಯಪಟ್ಟರೆಂದೂ, ಒಬ್ಬ ಸಿಕ್ಕಿ ಇಲ್ಲವೆಂದೂ ಪ್ರಕಟವಾಗಿದೆ. ಬೀದಿಗಳಲ್ಲೆಲ್ಲಾ ಕದನಗಳು ನಡೆದವು. ದಂಗೆಕೋರರು ಮನೆಗಳೊಳಗೆ ಸೇರಿಕೊಂಡಿದ್ದರು. ಈ ಅವಾಂತರದಿಂದ ಆಸ್ತಿಪಾಸ್ತಿಗಳು ಎಷ್ಟು ನಷ್ಟವಾದವೋ ಇನ್ನೂ ಪ್ರಕಟವಾಗಿಲ್ಲ. ಆದರೂ ಡಬ್ಲಿನ್‌ನಗರದ ರಾಜಬೀದಿಯಲ್ಲಿ ಬಹಳ ನಷ್ಟವಾಗಿರಬೇಕೆಂದು ಕಾಣುತ್ತದೆ. ಅಲ್ಲೇ ದಂಗೆಕೋರರು ಮನೆಗಳಿಗೂ, ಅಂಗಡಿ ಮುಂಗಟ್ಟುಗಳಿಗೂ ಬೆಂಕಿ ಹಾಕಿ ಸುಟ್ಟರು.

ಗ್ರಾಮಾಂತರಗಳಲ್ಲೂ ದಂಗೆಗಳು ಕಾಣಿಸಿಕೊಂಡವು. ಆದರೆ ಅವುಗಳೆಲ್ಲಾ ಬೇಗಬೇಗನೆ ಅಡಗಿಸಿಬಿಟ್ಟರು. ದಂಗೆಕೋರರು ಬಂದು ಆಯುಧಗಳನ್ನು ಒಪ್ಪಿಸಿ ಶರಣಾಗತರಾಗುತ್ತಿದ್ದಾರೆ.

ಆಸ್ಟ್ರೇಲಿಯದ ಗವರ್ನರೂ, ದಕ್ಷಿಣ ಆಫ್ರಿಕದ ಜನರಲ್ ಬೋಥಾರವರೂ ತಂತಿ ವರ್ತಮಾನಕೊಟ್ಟು ತಮ್ಮ ಸಂತಾಪವನ್ನು ತಿಳಿಸಿದ್ದಾರೆ. ಸಿನ್ ಫೇನ್ ಸಂಘದವರು ಜರ್ಮನಿಯವರನ್ನು ನಂಬಿ ಮೋಸಹೋದರೆಂದೂ, ಆ ಸಂಘದವರ ವಿಷಯದಲ್ಲಿ ಐರಿಷ್ ಪ್ರಜೆಗಳು ಅಭಿಮಾನಪೂರ್ವಕರಾಗಿಲ್ಲವೆಂದೂ ವೇದ್ಯವಾಗುತ್ತದೆ. ಅಷ್ಟು ಬೇಗ ಈ ದಂಗೆಯನ್ನು ಸೈನಿಕರು ಅಡಗಿಸಿದ್ದನ್ನು ಕುರಿತು ಚಕ್ರವರ್ತಿ ಸಾರ್ವಭೌಮರವರು ತುಂಬಾ ಸಂತೋಷಪಟ್ಟು, ಅವರಿಗೆಲ್ಲಾ ತಂತಿ ಮುಖಾಂತರ ಮಾನಕೊಟ್ಟರು. ಐರ್ಲೆಂಡಿನಲ್ಲಿ ಒಂದು ವಾರ ಗಲಭೆಯುಂಟಾಯಿತು. ಇದರಿಂದ ಜರ್ಮನಿಗೆ ಯಾವ ಪ್ರಯೋಜನವೂ ಆಗಲಿಲ್ಲ. ಎಲ್ಲಾ ಕಡೆಗಳಲ್ಲೂ ಗಲಭೆಯನ್ನೂ ನಷ್ಟವನ್ನೂ ಕಲ್ಪಿಸಬೇಕೆಂಬುವುದೊಂದೇ ಜರ್ಮನಿಯ ಮುಖ್ಯ ಉದ್ದೇಶ.

ಐರ್ಲೆಂಡಿನ ಆಳ್ವಿಕೆಯ ಭಾರವನ್ನು ವಹಿಸಿಕೊಂಡಿದ್ದ ಮಂತ್ರಿ ಮಿ|| ಬಿರ್ರೆಲ್‌ರವರು ಸಿನ್ ಫೇನ್ ಸಂಘದ ಪೂರ್ವೋತ್ತರವನ್ನೆಲ್ಲಾ ತಿಳಿದವರಾಗಿದ್ದರು. ಆದರೆ ಅವರು ಮೋಸ ಹೋದಂತೆ ಕಾಣುತ್ತದೆ. ಅವರು ತಕ್ಕಮಟ್ಟಿನ ಏರ್ಪಾಡುಗಳನ್ನು ಮೊದಲೇ ಮಾಡದೆಹೋದರು. ಆದಕಾರಣ ಅವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು. ಬ್ರಿಟಿಷ್ ಗವರ್ನ್‌ಮೆಂಟಿನವರು ಅದನ್ನು ಅಂಗೀಕರಿಸಿದ್ದೂ ಆಯಿತು. ಐರ್ಲೆಂಡಿನಲ್ಲಿ ಇನ್ನು ಕೆಲವು ಕಾಲದ ತನಕ ಯುದ್ಧಕಾಲದ ಕಾನೂನು ಜಾರಿಯಲ್ಲಿದ್ದೀತೆಂದು ಕಾಣುವುದು.

ಪಶ್ಚಿಮ ರಣರಂಗದಲ್ಲಿ.

ಪಶ್ಚಿಮ ರಣರಂಗದಲ್ಲಿ ಫ್ರೆಂಚ್ ಸೈನಿಕರಿರುವ ಭಾಗದಲ್ಲಿ ಮಾತ್ರವೇ ಅಲ್ಲ; ಬ್ರಿಟಿಷ್ ಸೈನ್ಯಗಳಿರುವ ಸಾಲಿನಲ್ಲೂ ಕಳೆದ ವಾರವೆಲ್ಲಾ ಕಠಿಣವಾದ ಕದನಗಳು ನಡೆದಿರುತ್ತವೆ. ವಿಶೇಷ ಯುದ್ಧವು ವೆರ್ಡನ್‌ನಲ್ಲಿ ಆಗಿದೆ. ಪೂರ್ವ ಮತ್ತೂ ಪಶ್ಚಿಮ ದಿಕ್ಕುಗಳಲ್ಲಿ ಜರ್ಮನಿಯವರು ನುಗ್ಗಿಬಂದು ಬಹಳ ಕಠಿಣವಾಗಿಯೂ ಪರಾಕ್ರಮದಿಂದಲೂ ಕದನಮಾಡಿದರು. ಆದರೆ ಅವರಿಗೆ ಫಲವೇನೂ ಆಗಲಿಲ್ಲ. ಮತ್ತೆ ಜರ್ಮನಿಯವರು ಅಪಾರವಾಗಿ ನಷ್ಟಪಟ್ಟರು. ಕೆಲವು ದಿವಸಗಳಲ್ಲಿ ಫ್ರೆಂಚರು ಜರ್ಮನಿಯವರ ಮೇಲೆ ನುಗ್ಗಿಹೋಗಿ ಕದನಮಾಡಿ ವಿಶೇಷ ಭೂಪ್ರದೇಶಗಳನ್ನೂ, ಅನೇಕ ಕಂದಕಗಳನ್ನೂ, ಮೆಷೀನ್ ಫಿರಂಗಿಗಳನ್ನೂ, ಸೈನಿಕರನ್ನೂ ಸ್ವಾಧೀನಪಡಿಸಿಕೊಂಡರು.

ಜರ್ಮನಿಯವರು ಬ್ರಿಟಿಷ್ ಸೈನಿಕರ ಮೇಲೆ ನುಗ್ಗಿಬಂದು ಫಿರಂಗಿಗಳ ಗುಂಡು ಸುರಿಸಿದ್ದಲ್ಲದೆ ವಿಷಗಾಳಿಯನ್ನೂ ಪ್ರಯೋಗಿಸಿದರು. ಗಾಳಿಯ ದೆಸೆಯಿಂದ ಆ ವಾಯುವು ಹಿಂದಕ್ಕೆ ಬಡಿಯಲ್ಪಟ್ಟು ಅದರಿಂದ ಜರ್ಮನೀ ಸೈನಿಕರಿಗೇ ತುಂಬಾ ಕೇಡಾಯಿತು. ಅಪಾರವಾದ ಗುಂಡುಗಳ ಹಾರಾಟ, ಸುರಂಗಗಳನ್ನು ಹಾರಿಸುವುದು, ಕಂದಕಗಳ ಮೇಲೆ ಸೈನಿಕರು ನುಗ್ಗಿ ಸಣ್ಣ ಪುಟ್ಟ ಕದನಗಳನ್ನು ನಡಿಸುವುದು, ಇವೆಲ್ಲಾ ಜರುಗಿದವು. ಬ್ರಿಟಿಷ್ ಸೈನಿಕರಾಗಲಿ, ಜರ್ಮನಿಯವರಾಗಲಿ ಬಹಳ ಹೆಚ್ಚಾಗಿ ನುಗ್ಗಿ ಕದನಗಳು ನಡೆಯಲಿಲ್ಲ. ಈಗಿನ ಬಹಳ ಕಷ್ಟಸ್ಥಿತಿಯಲ್ಲಿ ಕೆಲವು ಕದನಗಳು ನಡೆದಿರುತ್ತವೆ. ಕೆಸರು ಮಣ್ಣು ವಿಶೇಷವಾಗಿದ್ದದ್ದರಿಂದ ಬ್ರಿಟಿಷ್ ಸೈನಿಕರು ೨೦೦ ಗಜದೂರ ಹೋಗುವುದಕ್ಕೆ ಕೂಡ ಕೆಲವು ಗಂಟೆಗಳ ಕಾಲ ಹಿಡಿಯಿತು. ಒಬ್ಬ ಸೈನಿಕನು ಕೆಸರಿನಲ್ಲಿ ಏಪ್ರಿಲ್ ತಾ. ೨೧ ನೇ ರಾತ್ರಿಯಿಂದ ಏಪ್ರಿಲ್ ತಾ. ೨೫ ನೇ ಬೆಳಗಿನ ತನಕ ಸಿಕ್ಕಿಕೊಂಡು ಬಿದ್ದಿದ್ದನು. ಇನ್ನೊಬ್ಬ ಸೈನಿಕನು ಗಾಯ ಪಟ್ಟ ಸೈನಿಕನನ್ನು ೪೦೦ ಗಜದಷ್ಟು ದೂರ ಸಾಗಿಸಿಕೊಂಡು ಬರುವುದಕ್ಕೆ ೬ ಗಂಟೆಯ ಹೊತ್ತು ಹಿಡಿಯಿತು. ಒಬ್ಬ ಸೈನಿಕನಿಗೆ ಮಂಡಿಯಲ್ಲಿ ಗಾಯವಾಯಿತು. ಅವನು ೩೬ ಗಂಟೆಗಳ ತನಕ ಜರ್ಮನಿಯವರು ಗೆದ್ದುಕೊಂಡ ಕಂದಕದಲ್ಲೇ ಇದ್ದುಕೊಂಡು ಯುದ್ಧ ಮಾಡುತ್ತಿದ್ದನು. ಬಳಿಕ ಕಂದಕಗಳು ಸುರಕ್ಷಿತವಾದ ಮೇಲೆ ಆ ಸೈನಿಕನನ್ನು ಹೊತ್ತು ಸಾಗಿಸಿದರು.

ಅಂತರಿಕ್ಷದಲ್ಲಿ ವಿಮಾನಗಳ ಯುದ್ಧವು ವಿಶೇಷವಾಗಿ ನಡೆಯಿತು. ಕಳೆದ ಏಪ್ರಿಲ್ ತಿಂಗಳಲ್ಲಿ ಶತ್ರುಪಕ್ಷದ ೭೬ ವಿಮಾನಗಳನ್ನು ಹೊಡೆದು ಕೆಳಕ್ಕೆ ಕೆಡವಿದರು. ಮಿತ್ರಮಂಡಲಿಯವರ ಕಡೆ ೧೦ ವಿಮಾನ ಯಂತ್ರಗಳು ಹಾಳಾದವು.

ಇನ್ನು ಮುಂದೆ ಜರ್ಮನಿಯವರು ಏನು ಮಾಡುತ್ತಾರೆಂಬ ವಿಷಯದಲ್ಲಿ ನಾನಾ ವರ್ತಮಾನಗಳು ಹುಟ್ಟಿರುತ್ತವೆ. ಜರ್ಮನಿಯವರು ವೆರ್ಡನ್ ಪಟ್ಟಣದ ಬಳಿಗೆ ೭,೦೦,೦೦೦ ಸೈನ್ಯಗಳನ್ನು ತಂದಿದ್ದಾರೆಂದೂ, ಕೈಸರ್ ಚಕ್ರವರ್ತಿಯೂ ಈ ಸೈನ್ಯದ ಕೂಡ ಬಂದಿರುವ ಹಾಗೂ, ಅವರು ಆ ಸ್ಥಳವನ್ನು ಗೆದ್ದುಕೊಳ್ಳಲೇಬೇಕೆಂದು ಸಂಕಲ್ಪಮಾಡಿಕೊಂಡಿರುವ ಹಾಗೂ ಒಂದು ವರ್ತಮಾನವಿದೆ. ಅಕ್ಷರಶಃ ಜರ್ಮನಿಯ ಸಭ್ಯ ಪ್ರಜೆಗಳು ಮೆಟ್ಸ್ ಎಂಬ ಭಾರೀ ಕೋಟೆಯನ್ನು ಬಿಟ್ಟು ಹೊರಟುಹೋಗುತ್ತಿದ್ದಾರೆಂದು ಇನ್ನೊಂದು ವರ್ತಮಾನವಿದೆ. ಒಂದಾನೊಂದು ಫ್ರೆಂಚ್ ರಾಜ್ಯದಿಂದ ಆ ಜರ್ಮನಿಯವರ ಕೋಟೆಯು ಹತ್ತು ಮೈಲಿ ದೂರದಲ್ಲಿದೆ. ಇದಲ್ಲದೆ ಜರ್ಮನಿಯವರು ತಮ್ಮ ಫಿರಂಗಿಗಳನ್ನೂ ಸೈನ್ಯಗಳನ್ನೂ ರಷ್ಯಾದವರ ಮೇಲೆ ಯುದ್ಧಮಾಡುವುದಕ್ಕೋಸ್ಕರ ಸಾಗಿಸಿಕೊಂಡು ಹೋಗುತ್ತಿರುವಂತೆ ಇನ್ನೊಂದು ವರ್ತಮಾನವಿದೆ. ಆದರೆ ಒಂದು ವಿಷಯ ಸ್ಪಷ್ಟವಾಗಿ ಗೊತ್ತಾಗುವುದು. ಇದುವರೆಗೆ ಸಾಹಸಪಟ್ಟಾಗ್ಯೂ ಜರ್ಮನಿಯವರು ವೆರ್ಡನ್ ಪಟ್ಟಣವನ್ನು ಗೆದ್ದುಕೊಳ್ಳಲಾರದೆ, ಸಂಪೂರ್ಣವಾಗಿ ಸೋತು ಹೋಗಿದ್ದಾರೆ. ಮತ್ತು ಅವರು ಪ್ರತಿದಿನವೂ ಕೆಲಕೆಲವು ಪ್ರದೇಶಗಳನ್ನು ಕಳೆದುಕೊಳ್ಳುತ್ತಲಿದ್ದಾರೆ.

ರಷ್ಯಾಸೈನ್ಯಗಳು ಮಾರ್ಸೇಲ್ಸ್ ಎಂಬ ತೀರಪಟ್ಟಣಕ್ಕೆ ಬಂದು ಇಳಿಯುತ್ತಲಿವೆ. ರಷ್ಯಾದವರು ಇತರ ಕಡೆಗಳಿಗೆ ರವಾನೆ ಮಾಡುವಷ್ಟು ಅಪಾರ ಸೈನ್ಯಗಳನ್ನು ಪಡೆದಿರುವರು. ಈಗ ಮಿತ್ರಮಂಡಲಿಯವರು ಆ ಸೈನಿಕರಿಗೆ ಬೇಕಾಗುವಷ್ಟು ಆಯುಧ ಮದ್ದುಗುಂಡುಗಳನ್ನು ಒದಗಿಸಿಕೊಡಬಲ್ಲವರಾಗಿದ್ದಾರೆ.

ಪೂರ್ವ ರಣರಂಗದಲ್ಲಿ.

ರಷ್ಯಾದಲ್ಲಿ ವಿಶೇಷ ಕದನಗಳೇನೂ ನಡೆದಿರುವುದಿಲ್ಲ. ಕೆಲವು ರಾಜ್ಯಗಳಲ್ಲಿ ಜರ್ಮನಿಯವರು ರಷ್ಯಾದವರ ಮೇಲೆ ನುಗ್ಗಿ ಕದನಮಾಡಿದರು. ಒಂದು ರಾಜ್ಯದ ಹೊರತು ಇತರ ಕಡೆಗಳಲ್ಲಿ ಜರ್ಮನಿಯವರು ಸೋತು ಹಿಮ್ಮೆಟ್ಟಿದರು. ಆ ಒಂದು ರಾಜ್ಯದಲ್ಲೂ ಜರ್ಮನಿಯವರು ಸೋತಿದ್ದ ಕೆಲವು ಕಂದಕಗಳನ್ನು ಮತ್ತೆ ಆಕ್ರಮಿಸಿಕೊಂಡಿದ್ದಾರೆ.

ಒಂದು ರಾಜ್ಯದಲ್ಲಿ ಆಸ್ಟ್ರಿಯಾದವರಿಗೂ ರಷ್ಯಾದವರಿಗೂ ಕದನವಾಯಿತು. ರಷ್ಯಾದವರು ೨೨ ಮಂದಿ ಉದ್ಯೋಗದಾರರನ್ನೂ, ೬೦೦ ಸೈನಿಕರನ್ನೂ ಕೈಸೆರೆ ಹಿಡಿದುಕೊಂಡರು. ಕಂದಕಗಳಲ್ಲಿ ಹೆಣಗಳು ತುಂಬಿ ಬಿದ್ದಿದ್ದವು. ಕೆಲವು ರಾಜ್ಯಗಳಲ್ಲಿ ಪ್ರವಾಹಗಳು ಬಂದದ್ದರಿಂದ ಜರ್ಮನಿಯವರು ತಮ್ಮ ಸ್ಥಾನಗಳನ್ನು ತ್ಯಜಿಸಿ ಹಿಮ್ಮೆಟ್ಟಿ ಬರಬೇಕಾಯಿತು.

ಇಟಲಿ.

ಈ ರಣರಂಗದಿಂದ ಬಂದಿರುವ ವರ್ತಮಾನಗಳು ಬಹಳ ಸ್ವಲ್ಪ. ೧೦,೦೦೦ ಅಡಿ ಎತ್ತರವಾಗಿರುವಂಥಾ ಪರ್ವತಗಳ ಮೇಲೆ ಕದನಗಳು ನಡೆದವು. ಇಟಲಿಯವರು ಕೋಟೆಗಳನ್ನೂ, ಮೆಷೀನ್ ಫಿರಂಗಿಗಳನ್ನೂ ಗೆದ್ದು ಸ್ವಾಧೀನಪಡಿಸಿಕೊಂಡಿದ್ದಲ್ಲದೆ ಸೈನಿಕರನ್ನು ಸೆರೆ ಹಿಡಿದಿರುವರು. ಇಟಲಿಯವರು ಹಿಡಿದು ತಂದ ೧,೦೦೦ ಮಂದಿ ಆಸ್ಟ್ರಿಯಾ ಸೈನಿಕರ ಪೈಕಿ ೧೬-೧೮ ವಯಸ್ಸಿನವರೇ ೭೦೦ ಮಂದಿ ಇದ್ದರು. ಉಳಿದವರಿಗೆ ೩೫ ಕ್ಕಿಂತ ಹೆಚ್ಚು ವಯಸ್ಸಾಗಿತ್ತು.

ಮೆಸೊಪೊಟೇಮಿಯದಲ್ಲಿ.

ಯುದ್ಧಭೂಮಿಯಿಂದ ಬಂದಿರುವ ವರ್ತಮಾನಗಳಲ್ಲೆಲ್ಲಾ ಮೆಸೊಪೊಟೇಮಿಯದ ಸುದ್ದಿಯು ಬಹಳ ಕೆಟ್ಟದ್ದಾಗಿದೆ. ಜನರಲ್ ಟೌನ್‌ಷೆಂಡ್‌ರವರು ಬಾಗ್ದಾದಿನ ಬಳಿ ಯುದ್ಧವಾದ ಬಳಿಕ ಆ ಪಟ್ಟಣಕ್ಕೆ ಹೋದರು. ಅವರು ಶತ್ರುವಿಗೆ ಅವಕಾಶಕೊಡದೆ ಅದನ್ನು ೧೪೩ ದಿನಗಳ ಕಾಲ ಕಾಪಾಡಿಕೊಂಡು ಬಂದರು. ಆದರೆ ಅವರ ಬಳಿ ಇದ್ದ ಸೈನ್ಯಕ್ಕೆ ಆಹಾರ ಪದಾರ್ಥಗಳನ್ನು ಒದಗಿಸಲಾರದೆ ಹೋದರು. ಆದಕಾರಣ ಅವರು ಶತ್ರುವಿಗೆ ಪಟ್ಟಣವನ್ನು ಒಪ್ಪಿಸಬೇಕಾಯಿತು. ಏಪ್ರಿಲ್ ತಾ. ೨೪ ರಲ್ಲಿ ಅವರಿಗೋಸ್ಕರ ನದಿಯ ಮೇಲೆ ಒಂದು ಜಹಜಿನಲ್ಲಿ ಆಹಾರ ಪದಾರ್ಥಗಳನ್ನು ಕಳುಹಿಸಲಾಯಿತು. ಅದು ದಡಕ್ಕೆ ದೂಡಲ್ಪಟ್ಟದ್ದರಿಂದ ಆ ಸೈನಿಕರಿಗೆ ಆಹಾರವಸ್ತುಗಳನ್ನು ಒದಗಿಸಲಾಗಲಿಲ್ಲ. ಜನರಲ್ ಟೌನ್‌ಷೆಂಡ್‌ರವರು ಏಪ್ರಿಲ್ ತಾ. ೨೯ ರಲ್ಲಿ ಶತ್ರುವಿಗೆ ಕೋಟೆಯನ್ನು ಒಪ್ಪಿಸಿಬಿಟ್ಟರು. ಅವರ ಬಳಿ ೨,೯೭೦ ಮಂದಿ ಬ್ರಿಟಿಷ್ ಸೈನಿಕರೂ, ೬,೦೦೦ ಹಿಂದೂಸ್ಥಾನದ ಸೈನಿಕರೂ ಹಿಂಬಾಲಕರೂ ಇದ್ದರು. ಯೂರೋಪ್ ಖಂಡದಲ್ಲಿ ನಡೆದ ಕೆಲವು ದೊಡ್ಡ ಯುದ್ಧಗಳಲ್ಲಿ ಆದ ನಷ್ಟವನ್ನು ಬಿಟ್ಟರೆ ಬ್ರಿಟಿಷರಿಗಾದ ಈ ನಷ್ಟವು ಬಹಳ ವಿಶೇಷವಾದದ್ದೆಂದು ಹೇಳಬೇಕು. ಇವರ ಸಹಾಯಕ್ಕಾಗಿ ಹೋಗುತ್ತಿದ್ದ ಬ್ರಿಟಿಷ್ ಸೈನಿಕರಿಗೆ ಜಾರ್ಜ್ ಸಾರ್ವಭೌಮರವರು ತಂತಿ ವರ್ತಮಾನ ಕೊಟ್ಟು ಅವರು ತಮ್ಮ ಕೈಲಾದಷ್ಟು ಪ್ರಯತ್ನ ಮಾಡಿದರೆಂದು ತಿಳಿಸಿರುತ್ತಾರೆ. ಪ್ರವಾಹಗಳೂ ಕೆಟ್ಟ ಹವಾವೂ ಜಾಸ್ತಿಯಾಗಿ ಅವರು ಆ ಕೋಟೆ ಯೊಳಗಿದ್ದವರಿಗೆ ಹೋಗಿ ಸಹಾಯ ಮಾಡದಂತೆ ಅಡಚಣೆಯಾಯಿತು. ಹಿಂದೂಸ್ಥಾನಕ್ಕೆ ಸಂಭವಿಸಿದ ನಷ್ಟವನ್ನು ಕೇಳಿ ಆಸ್ಟ್ರೇಲಿಯಾದಿಂದ ಸಂತಾಪ ಸೂಚಕವಾದ ತಂತಿ ವರ್ತಮಾನಗಳು ಬಂದಿರುತ್ತವೆ. ಹಿಂದೂಸ್ಥಾನದ ನಮ್ಮ ವೈಸ್‌ರಾಯರವರು ಆಸ್ಟ್ರೇಲಿಯಾದವರನ್ನು ವಂದಿಸಿ ಈ ದುಃಖವಾರ್ತೆಯ ದೆಸೆಯಿಂದ ಬ್ರಿಟಿಷ್ ರಾಜ್ಯಾಂಗಗಳಲ್ಲಿ ಪರಸ್ಪರವಾದ ಅನುರಾಗವು ಹೆಚ್ಚುವುದೆಂದೂ, ಈ ಸೋಲುಗಳಿಗೆಲ್ಲಾ ಪ್ರತೀಕಾರವನ್ನು ಮಾಡಬೇಕೆಂಬ ಸಂಕಲ್ಪವು ಇನ್ನು ದೃಢಗೊಳ್ಳುವುದೆಂದೂ ತಿಳಿಸಿದ್ದಾರೆ.

ಕುಟೆಲ್ ಅಮಾರಾ ಸ್ವಾಧೀನವಾದ ವಿಷಯದಲ್ಲಿ ಟರ್ಕಿಯವರೂ ಜರ್ಮನಿಯವರೂ ಅಪಾರವಾದ ಆನಂದ ಪಟ್ಟರು, ಆದರೂ ಇದರಿಂದ ಯುದ್ಧದ ಸ್ಥಿತಿಯು ಅಷ್ಟೇನೂ ವ್ಯತ್ಯಾಸವಾಗುವ ಹಾಗಿಲ್ಲ. ಯುದ್ಧದ ರಭಸವೆಲ್ಲಾ ಯೂರೋಪಿನಲ್ಲಿ ನಡೆಯುವುದೇ ಹೊರತು ಏಷ್ಯಾ ಖಂಡದಲ್ಲಿ ಸಂಭವಿಸುವಂತಿಲ್ಲ.

ಪರ್ಷಿಯಾದಲ್ಲಿ.

ರಷ್ಯಾದವರು ಬಾಗ್ದಾದಿಗೆ ಬಹಳ ದೂರದಲ್ಲಿರುತ್ತಾರಾದರೂ ಅವರು ಟರ್ಕಿಯವರನ್ನು ಆ ಪಟ್ಟಣದ ಕಡೆಗೆ ಹಿಂದಕ್ಕೆ ಓಡಿಸಿಕೊಂಡು ಹೋಗುತ್ತಲಿದ್ದಾರೆ.

ಫಾರಸೀ ಕೊಲ್ಲಿಯಲ್ಲಿ ಅಂದರೆ ಬುಷೈರಿನಲ್ಲಿ ಒಂದು ಸಣ್ಣ ಕದನವಾಯಿತು. ಶತ್ರುಸೈನಿಕರು ಆ ಪಟ್ಟಣದ ಸಮೀಪಕ್ಕೆ ಬಂದಿದ್ದರು. ಬ್ರಿಟಿಷರ ಒಂದು ಸಣ್ಣ ಸೈನ್ಯ ಬುಷೈರಿನಿಂದ ಹೋಗಿ ಶತ್ರುಗಳನ್ನು ಚದರಿಸಿ ಓಡಿಸಿ ಬಂದಿದೆ. ಬ್ರಿಟಿಷರ ಕಡೆ ಒಬ್ಬ ಉದ್ಯೋಗದಾರನು ಕೊಲೆಯಾದನು; ಒಬ್ಬ ಹಿಂದೂಸ್ಥಾನದ ಸೈನಿಕನಿಗೆ ಗಾಯವಾಗಿದೆ.

ಏಷ್ಯಾ ಮೈನರ್ (ಚಿಕ್ಕ ಏಷ್ಯ).

ಟರ್ಕಿಯವರು ನುಗ್ಗಿ ಬಂದು ಮುತ್ತಿಗೆ ಹಾಕಿದರೆಂದೂ, ಅವರನ್ನು ಸೋಲಿಸಿ ಓಡಿಸಿದ್ದಾಯಿತೆಂದೂ, ಈಗ ಅವರನ್ನು ಹಿಂದಕ್ಕೆ ಓಡಿಸುತ್ತಲಿರುವುದಾಗಿಯೂ ರಷ್ಯಾದವರು ತಿಳಿಸುತ್ತಾರೆ. ರಷ್ಯಾದವರು ಹಲವು ಕಡೆಗಳಿಗೆ ನುಗ್ಗಿ ಹೋಗುತ್ತಿರೋಣದರಿಂದ ಟರ್ಕಿಯವರು ಸೈನ್ಯಗಳನ್ನು ಕೂಡಿಸಿ ತರುವುದಕ್ಕೆ ಕೆಲವು ಕಾಲ ಹಿಡಿದೀತು.

ಬ್ರಿಟಿಷರ ಒಂದು ಸಬ್‌ಮೆರೀನು ಕಾನ್‌ಸ್ಟಾಂಟಿನೋಪಲ್ ಬಳಿ ಮಾರ್ಮರಾ ಕಡಲಿನಲ್ಲಿ ಯುದ್ಧಕಾರ್ಯಗಳನ್ನು ನಡಿಸುತ್ತಲಿದೆ. ಅದು ಟರ್ಕಿಯವರ ಸೈನ್ಯಗಳನ್ನು ಸಾಗಿಸುವಂಥಾ ಒಂದು ಜಹಜನ್ನು ಮುಳುಗಿಸಿತು.

ಬಾಲ್ಕನ್ ಸಂಸ್ಥಾನಗಳಲ್ಲಿ.

ಬಾಲ್ಕನ್ ಸಂಸ್ಥಾನಗಳಲ್ಲಿ ಇನ್ನೂ ಮುಂದರಿಸಿ ನುಗ್ಗಿ ಹೋಗಿಲ್ಲ. ಈ ಪ್ರಾಂತ್ಯದಿಂದ ಬರುವ ತಂತೀವರ್ತಮಾನಗಳು ನಂಬತಕ್ಕವುಗಳಲ್ಲ. ಸರ್ಬಿಯಾ ಸೈನಿಕರು ಯುದ್ಧ ಸಾಮಗ್ರಿಗಳನ್ನು ಪಡೆದು ಮುಂದೆ ನುಗ್ಗಿ ಹೋಗುವುದಕ್ಕೆ ಸಿದ್ಧವಾಗಿದ್ದಾರೆ. ಅವರು ಗ್ರೀಸಿನ ರೈಲ್ ರಸ್ತೆಯ ಮಾರ್ಗವಾಗಿ ಹೋಗಬೇಕು. ಗ್ರೀಸಿನವರು ಇದಕ್ಕೆ ಒಪ್ಪದೆ ಇದ್ದಾರೆ. ಆದರೂ ಬಹುಶಾ ಅವರು ಸಮ್ಮತಿ ಪಟ್ಟಾರೆಂದು ಊಹಿಸಲ್ಪಟ್ಟಿದೆ.

ಒಂದು ತಂತೀವರ್ತಮಾನವು ಬಲ್ಗೇರಿಯಾದವರಿಗೂ ಆಸ್ಟ್ರಿಯಾದವರಿಗೂ ಜಗಳವಾಯಿತೆಂದೂ, ಅದರ ಮೇಲೆ ಅವರವರು ಕದನಮಾಡಿದರೆಂದೂ, ಜರ್ಮನಿಯವರು ಮಧ್ಯಸ್ಥಿಕೆ ಮಾಡಿ ಅವರವರನ್ನು ಬೇರೆ ಮಾಡಿದರೆಂದೂ ಹೇಳುತ್ತದೆ. ಇದಲ್ಲದೆ ಬಲ್ಗೇರಿಯಾದವರು ಗ್ರೀಕರ ಮೇಲೆ ತಮ್ಮ ದುಷ್ಕೃತ್ಯವನ್ನು ತೋರಿಸುತ್ತಿದ್ದಾರೆಂದೂ ಹೇಳಲಾಗಿದೆ.

ಮಿತ್ರ ಮಂಡಲಿಯವರೆಲ್ಲಾ ಸಿದ್ಧವಾಗುವ ತನಕ ಮುಂದರಿಸಿ ನುಗ್ಗಿ ಹೋಗಲಾರರು. ಜೂನ್ ತಿಂಗಳಲ್ಲಿ ಅವರ ಸೈನಿಕರು ನುಗ್ಗಿ ಹೋಗಬಹುದೆಂದು ಹೇಳಲಾಗಿದೆ.

ರೂಮೇನಿಯಾದಲ್ಲಿ ಬೆಳೆಯುವ ಗೋಧಿ ಹಿಟ್ಟನ್ನೆಲ್ಲಾ ಬ್ರಿಟಿಷರು ಕೊಂಡುಕೊಂಡರು. ಇದರಿಂದ ಅದು ಜರ್ಮನಿ ಮತ್ತು ಆಸ್ಟ್ರಿಯಾದವರಿಗೆ ಸಿಕ್ಕದಂತಾಯಿತು.

ಪೂರ್ವ ಆಫ್ರಿಕಾದಲ್ಲಿ.

ಜನರಲ್ ಸ್ಮಟ್ಸ್ ರವರು ಶತ್ರುವಿನ ಅನೇಕ ಗೋಶಾಲೆಗಳನ್ನೂ ಯುದ್ಧ ಸಾಮಗ್ರಿಗಳನ್ನೂ ಸ್ವಾಧೀನಪಡಿಸಿಕೊಂಡದ್ದಾಯಿತೆಂದೂ, ಶತ್ರುವನ್ನು ಅವರ ಸ್ಥಾನಗಳಿಂದ ಓಡಿಸಿರುವುದಾಗಿಯೂ ತಾವು ಹಿಂದಕ್ಕೆ ಬಂದು ಒಂದು ಬಲವಾದ ರಾಜ್ಯದಲ್ಲಿ ಇರುವುದಾಗಿಯೂ ತಿಳಿಸಿದ್ದಾರೆ.

ಬೆಲ್ಜಿಯನ್ ಸೈನಿಕರು ಕೊಂಗೋದಿಂದ ಹೊರಟು ಪಶ್ಚಿಮದಲ್ಲಿ ಜರ್ಮನಿಯವರ ಮೇಲೆ ಬಿದ್ದು ಕದನ ಮಾಡಿ ಅವರನ್ನು ರಾಜ್ಯಗಳಿಂದ ರಾಜ್ಯಗಳಿಗೆ ಹಿಮ್ಮೆಟ್ಟಿ ಹೋಗುವಂತೆ ಮಾಡಿದ್ದಾರೆ.

ಇತರ ವಿಷಯಗಳು.

ಮಿತ್ರಮಂಡಲಿಯವರು ಗಲ್ಲಿಪೋಲಿ ಅರ್ಧದ್ವೀಪದಲ್ಲಿ ತಮ್ಮ ಸೈನ್ಯಗಳನ್ನು ಇಳಿಸಿದ ವರ್ಷೋತ್ಸವವು ಏಪ್ರಿಲ್ ತಾ. ೨೫ ರಲ್ಲಿ ನಡೆಯಿತು. ಆ ದಿನ ನ್ಯೂಜಿಲೆಂಡಿನವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ತಂತೀ ವರ್ತಮಾನವನ್ನು ಕಳುಹಿಸಿ ಹಿಂದೂಸ್ಥಾನದ ಸೈನ್ಯಗಳು ಆ ದ್ವೀಪದಲ್ಲಿ ನಡಿಸಿದ ಪರಾಕ್ರಮ ಕಾರ್ಯಗಳನ್ನು ವಿವರಿಸಿ ಕೊಂಡಾಡಿ ತಿಳಿಸಿರುತ್ತಾರೆ. ಸ್ಟೇಟ್ ಸೆಕ್ರೆಟರಿಯವರು ಅವರಿಗೆ ಜವಾಬು ಕೊಟ್ಟು ಚಕ್ರಾಧಿಪತ್ಯದ ಸಕಲ ಭಾಗಗಳಿಂದಲೂ ಹೊರಟಿರುವ ಸೈನ್ಯಗಳು ಒಟ್ಟಾಗಿ ನಿಂತು ಶತ್ರುವಿನ ಮೇಲೆ ಯುದ್ಧ ಮಾಡಿದ್ದರಲ್ಲಿ ಚಕ್ರಾಧಿಪತ್ಯದ ಐಕ್ಯವೂ ಏಕಮತ್ಯವೂ ಬಲಪಟ್ಟಿರುತ್ತದೆ ಎಂದು ತಿಳಿಸಿದರು.

ಬ್ರಿಟನ್ನಲ್ಲಿ ೧೮ ರಿಂದ ೪೧ ವಯಸ್ಸಿನ ಗಂಡಸರನ್ನು ಸೈನ್ಯಕ್ಕೆ ಬಲಾತ್ಕಾರದಿಂದ ಸೇರಿಸಿಕೊಳ್ಳಬೇಕೆಂದು ಒಂದು ಮಸೂದೆ ಕಾನೂನು ರಚಿಸಲ್ಪಟ್ಟು ಪಾರ್ಲಿಮೆಂಟ್ ಸಭೆಯಲ್ಲಿ ಎರಡನೆಯಾವರ್ತಿ ಚರ್ಚೆಯಾದದ್ದರಲ್ಲಿ ೩೨೮ ಮೆಂಬರುಗಳು ಅನುಕೂಲವಾಗಿಯೂ, ೩೬ ಮೆಂಬರುಗಳು ಪ್ರತಿಕೂಲವಾಗಿಯೂ ಅಭಿಪ್ರಾಯಪಟ್ಟದ್ದರಿಂದ ಬಹುಮತಿಯಂತೆ ಪ್ಯಾಸ್ ಮಾಡಲ್ಪಟ್ಟಿತು. ಯುದ್ಧದಲ್ಲಿ ಜಯಪ್ರದವನ್ನು ಹೊಂದಿ ಮುಕ್ತಾಯ ಮಾಡುವದಕ್ಕೋಸ್ಕರ ಗ್ರೇಟ್ ಬ್ರಿಟನ್ನವರು ಅವಶ್ಯವಾಗುವಷ್ಟು ಸೈನ್ಯಗಳನ್ನು ಒದಗಿಸಿಕೊಳ್ಳುವ ಭಾಗದಲ್ಲಿ ದೃಢಸಂಕಲ್ಪರಾಗಿರುತ್ತಾರೆ.

ಜರ್ಮನಿಯವರ ಜೆಪ್ಪೆಲಿನ್ ಎಂಬ ವಿಮಾನ ಯಂತ್ರಗಳ ದಾಳಿಯು ಕಳೆದ ವಾರವೂ ನಡೆಯಿತು. ಅದರ ತಪಶೀಲುಗಳು ಸರಿಯಾಗಿ ಪ್ರಕಟವಾಗಿಲ್ಲ. ಆದರೂ ಶತ್ರುವು ಸಿಡಿಮದ್ದಿನ ಗುಂಡುಗಳನ್ನು ಸುರಿಸಿದ್ದರಲ್ಲಿ ಅನೇಕ ಗುಂಡುಗಳಿಂದ ವಿಶೇಷ ನಷ್ಟವೇನೂ ಸಂಭವಿಸಲಿಲ್ಲವೆಂದು ತಿಳಿಸಲ್ಪಟ್ಟಿದೆ. ಒಂದು ಸ್ಥಳದಲ್ಲಿ ಆದ ನಷ್ಟವೇನೆಂದರೆ ಗಂಡಸರು ೬ ಮಂದಿ, ಹೆಂಗಸರು ೩ ಮಂದಿ ಕೊಲೆಯಾದರು; ೧೯ ಗಂಡಸರೂ, ೧೦ ಹೆಂಗಸರೂ ಗಾಯಪಟ್ಟರು.— ಒಂದು ವಿಮಾನಯಂತ್ರವು ಹಗಲು ಹೊತ್ತಿನಲ್ಲೇ ಡೀಲ್ ಎಂಬ ಪಟ್ಟಣದ ಮೇಲೆ ಬಂದು ಗೈಶ್ಟೋನ್‌ಗೂ ಇನ್ನು ಕೆಲವು ಮನೆಗಳಿಗೂ ಸಿಡಿಮದ್ದಿನ ಗುಂಡುಗಳನ್ನು ಸುರಿಸಿತು. ಇಬ್ಬರು ಗಂಡಸರಿಗೂ ಒಬ್ಬ ಹೆಂಗಸಿಗೂ ಗಾಯಗಳಾದವು. ಜರ್ಮನಿಯವರ ಒಂದು ಜೆಪ್ಪೆಲಿನ್ ಎಂಬ ವಿಮಾನ ಯಂತ್ರವು ದಾರಿ ತಪ್ಪಿಹೋಗಿ ನೋರ್ವೆಯ ತೀರದ ಬಳಿ ಒಡೆದು ನಾಶವಾಯಿತು. ಅದರೊಳಗಿದ್ದವರನ್ನು ನೀರಿನಿಂದೆತ್ತಿ ಬದುಕಿಸಿದರು. ಒಬ್ಬ ಇಂಗ್ಲೀಷನು ಸಮುದ್ರ ವಿಮಾನದಲ್ಲಿ ಕುಳಿತು ಜೆಪ್ಪೆಲಿನ್ ವಿಮಾನಗಳನ್ನು ಓಡಿಸಿಕೊಂಡು ಹೋಗುತ್ತಿದ್ದಾಗ ಕೆಳಕ್ಕೆ ಇಳಿದು ಬೀಳಬೇಕಾಯಿತು. ಆತನು ೩೦ ಗಂಟೆ ಹೊತ್ತು ನೀರಿನಲ್ಲೇ ಇದ್ದ ಬಳಿಕ ಬದುಕಿಸಲ್ಪಟ್ಟನು.

ಕಳೆದ ವಾರ ಜರ್ಮನಿಯವರು ಮುಳುಗಿಸಿದ ಜಹಜುಗಳ್ಯಾವುವೆಂದರೆ— ಬ್ರಿಟಿಷರದು ೬, ಸ್ವೀಡನ್ನವರದು ೨; ಡೆನ್ಮಾರ್ಕ್, ನೋರ್ವೆ, ಸ್ಪೇಯಿನ್, ಬ್ರೆಜಿಲ್, ಈ ರಾಜ್ಯಗಳವರದು ಒಂದೊಂದು; ಅಂತು ೧೧ ಜಹಜುಗಳನ್ನು ನಾಶಮಾಡಿದ್ದಾರೆ. ಇದಲ್ಲದೆ ಫಿರಂಗಿಗಳನ್ನೇರಿಸಿದ್ದ ಬ್ರಿಟಿಷರ ಕ್ರೂಸರ್ ಎಂಬ ಯುದ್ಧದ ಜಹಜನ್ನೂ, ಸಮುದ್ರವನ್ನು ಶೋಧನೆಮಾಡಿ ಮೈನ್ ಎಂಬ ಸಿಡಿಮದ್ದಿನ ಗುಂಡುಗಳನ್ನು ತೆಗೆದು ಹಾಕುವಂಥ ಬ್ರಿಟಿಷರ ಒಂದು ಹಡಗನ್ನೂ ಶತ್ರುವು ಮುಳುಗಿಸಿದನು. ಅತ್ತಲಾಗಿ ತೀರ ಪಟ್ಟಣದಿಂದ ಸಮುದ್ರಕ್ಕೆ ಬಿಡುಕೊಂಡು ಬಂದಂಥಾ ಒಂದು ಜರ್ಮನೀ ಜಹಜನ್ನು ಬ್ರಿಟಿಷರು ಹಿಡಿದು ಸ್ವಾಧೀನಪಡಿಸಿಕೊಂಡರು. ಲಾರ್ಡ್ ಕರ್ಸನ್‌ರವರು ಜರ್ಮನಿಯವರು ಎಷ್ಟು ಜಹಜುಗಳನ್ನು ಮುಳುಗಿಸಿದರೋ ಅಷ್ಟು ಜಹಜುಗಳನ್ನು ಹೊಸದಾಗಿ ತಯಾರುಮಾಡಿಸುತ್ತೇವೆ ಎಂದು ತಿಳಿಸಿದ್ದಾರೆ. ಶತ್ರುವಿನ ತೀರಪಟ್ಟಣಗಳಿಗೆ ಏನೇನೋ ಕೃತ್ರಿಮಗಳನ್ನು ಮಾಡಿ ಸರಕುಗಳನ್ನು ಸಾಗಿಸಿಕೊಂಡು ಹೋಗಬೇಕೆಂದು ಶತ್ರುಪಕ್ಷದವರು ಸಾಹಸಪಡುತ್ತಾರೆ. ಆದರೆ ಅಂಥಾ ಹಡಗುಗಳಲ್ಲಿ ಕೇವಲ ೯೦ ರಷ್ಟನ್ನು ಬ್ರಿಟಿಷ್ ಜಹಜುಗಳು ಕಾವಲಿದ್ದು ಮುಂದಕ್ಕೆ ಬಿಡದೆ ಅಡ್ಡಿಮಾಡಿರುವವು.

ಜರ್ಮನಿಯ ಅನೇಕ ಪಟ್ಟಣಗಳಲ್ಲಿ ದಂಗೆಗಳೂ ಗಲಭೆಗಳೂ ನಡೆಯುತ್ತಲಿವೆ. ಹೆಂಗಸರ ಗಲಭೆಗಳೇ ಹೆಚ್ಚು. ಅವರು ತಮ್ಮ ಗಂಡಂದಿರನ್ನೂ, ಅಣ್ಣತಮ್ಮಂದಿರು ಮತ್ತು ಮಕ್ಕಳುಗಳನ್ನೂ ಯುದ್ಧಭೂಮಿಯಿಂದ ಕರೆಸಿಕೊಡಬೇಕೆಂದೂ, ತಮಗೆ ತಿನ್ನುವುದಕ್ಕೆ ಆಹಾರಪದಾರ್ಥಗಳನ್ನು ಕೊಡಿಸಬೇಕೆಂದೂ ವಿಶೇಷ ದಂಗೆಗಳನ್ನು ಮಾಡುತ್ತಿದ್ದಾರೆ. ಜರ್ಮನಿಯ ರಾಜಧಾನಿಯಾದ ಬರ್ಲಿನ್ ನಗರದಲ್ಲೇ ದಂಗೆಯನ್ನು ಅಡಗಿಸುವುದರಲ್ಲಿ ೨೫ ಮಂದಿ ಕೊಲೆಯಾದರು; ೧೦೦ ಜನಗಳು ಗಾಯಪಟ್ಟರು. ಕೊಲೋನ್ ಎಂಬ ಇನ್ನೊಂದು ಪಟ್ಟಣದೊಳಗೆ ಪ್ರಜೆಗಳಲ್ಲಿ ಪ್ರತಿ ಒಬ್ಬನಿಗೂ ವಾರಕ್ಕೆ ಒಂದೇ ಒಂದು ಪೌಂಡ್ ತೂಕದಷ್ಟು ಮಾಂಸವನ್ನು ಕೊಡುವಂತೆ ಹುಕುಂ ಆಗಿದೆ. ಜರ್ಮನಿಯವರು ಕೈಸೆರೆ ಹಿಡಿದಿಟ್ಟುಕೊಂಡಿರುವ ರಷ್ಯಾ ಸೈನಿಕರಿಗೋಸ್ಕರ ರಷ್ಯಾದವರ ಪ್ರಾರ್ಥನೆಯಂತೆ ಸ್ವೀಡನ್ನವರು ಮಾಂಸವನ್ನು ಜರ್ಮನಿಗೆ ಕಳುಹಿಸಿಕೊಡುತ್ತಿದ್ದಾರೆ.

ಫ್ರಾನ್ಸಿಗೆ ಸೇರಿದ ಒಂದು ಕಾರ್ಖಾನೆಯೊಳಗೆ ಸಿಡಿಮದ್ದು ಹಾರಿ ಯಂತ್ರಗಳು ಒಡೆದು ಅನಾಹುತವಾಯಿತು. ೧೦೦ ಜನರು ಮೃತಪಟ್ಟರೆಂದೂ, ೧೦೦ ಜನಗಳಿಗೆ ಗಾಯಗಳಾದವೆಂದೂ ತಂತೀವರ್ತಮಾನ ಬಂದಿದೆ.

ಕಳೆದ ಭಾನುವಾರ ಬೆಂಗಳೂರು ಸಿಟಿ ಅಕ್ಕಿಪೇಟೆಯ ವರ್ತಕರು ಸೇರಿ ಅಲ್ಲಿನ ಸಾವಿರಾರು ಬಡಬಗ್ಗರಿಗೆ ಸುಭೋಜನವನ್ನು ಮಾಡಿಸಿ ತೃಪ್ತಿಪಡಿಸಿದ್ದು ಸ್ತೋತ್ರಾರ್ಹವಾಗಿದೆ.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಏಪ್ರಿಲ್ 29 ನೇ ತಾ. ವರೆಗಿನ ಬ್ಯಾಂಕಿನ ಲೆಖ್ಖ.

ದೇಣಿ:—(1) ಷೇರು ಹಣಬಾಬು	....	ರೂ. 10,00,000
„ (2) ರಿಜರ್ವ ಫಂಡು	....	„ 75,000
„ (3) ಡಿಪಾಜಿಟ್ಟುಗಳು	....	„ 40,51,097
„ (4) ಇತರೆ	....	„ 1,03,695
(ಅಣೆ ಪೈಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 52,29,792
ಲೇಣಿ:—(1) ಕೈಯಲ್ಲಿ, ಬ್ಯಾಂಕುಗಳಲ್ಲಿರುವ ಹಣ		ರೂ. 5,33,762
„ (2) ಜಾಮೀನು ಮತ್ತು ಇತರ ಸಾಲಗಳು	......	„ 37,18 691
„ (3) ಡಿಸ್ಕೌಂಟುಮಾಡಿದ ವಾಯಿದೆ ಪತ್ರಗಳು		„ 4,60,511
„ (4) ಇನ್‌ವೆಸ್ಟ್‌ಮೆಂಟುಗಳು	......	„ 4,82,410
„ (5) ಬ್ರಾಂಚುಗಳಲ್ಲಿರುವ ಹಣಬಾಬು	......	„ 4,908
„ (6) ಬ್ಯಾಂಕಿನಲ್ಲಿರುವ ಸಾಮಾನುಗಳು	.....	„ 19,508
„ (7) ಇತರೆ	....	„ 20,002
(ಅಣೆ, ಪೈಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 52,29,792

ಎ. ರಾಮಸ್ವಾಮಯ್ಯ, ಆ: ಮ್ಯಾನೇಜರ್.

ಅಮ್ಮಗಳ ಮತಸ್ಥರ ಒಂದು ಮೀಟಿಂಗು.

ಕೋಲಾರ ದೇಶದ ಶಿಗ್ಗುಟ್ಟುನಾಡು ತಾಲ್ಲೋಕು ಅಮ್ಮಗಳ ಮತಸ್ಥರು ಕಳೆದ ಸಂವತ್ಸರ ಒಂದು ಮೀಟಿಂಗ್ ಸೇರಿ ತಮಗಳ ಮತದ ಅಭಿವೃದ್ಧಿಗೋಸ್ಕರ ಒಂದು ಧರ್ಮಫಂಡನ್ನು ಸ್ಥಾಪನೆ ಮಾಡಬೇಕಾಗಿಯೂ, ಇದಕ್ಕಾಗಿ ತಮ್ಮ ಮತಾಭಿಮಾನಿಗಳಲ್ಲಿ ಪ್ರತಿ ಒಬ್ಬ ಕುಟುಂಬಸ್ತನೂ ವರ್ಷ ಒಂದಕ್ಕೆ 8 ಆಣೆಯಂತೆ ಚಂದಾ ಕೊಡುವಂತೆಯೂ, ಇದಲ್ಲದೆ ಈ ಧರ್ಮಫಂಡಿಗೆ ಮತಸ್ಥರು ಯಥಾನುಶಕ್ತಿ ದ್ರವ್ಯಸಹಾಯ ಮಾಡಬಹುದಾಗಿಯೂ ನಮ್ಮ ಮತದ ಮ|| ಪಿ. ಗಣಪಯ್ಯನವರು ಅಧ್ಯಕ್ಷರಾಗಿ ಮಾಡಿದ ಉಪನ್ಯಾಸಕ್ಕೆ ಮತಾಭಿಮಾನಿಗಳೆಲ್ಲರೂ ಹರುಷಿತರಾಗಿ ಒಪ್ಪಿಕೊಂಡರು. ಅದಲ್ಲದೆ ನಮ್ಮಗಳ ಆಚಾರ ವ್ಯವಹಾರ ವಿಮರ್ಶೆಗೋಸ್ಕರವಾಗಿಯೂ, ಮೇಲ್ಕಂಡ ಧರ್ಮಫಂಡಿನ ಅಭಿವೃದ್ಧಿಗೋಸ್ಕರವಾಗಿಯೂ ಮೇಲ್ಕಂಡ ಅಧ್ಯಕ್ಷರ ಜೊತೆಗೆ ನಾಲ್ಕು ಜನ ಮೆಂಬರುಗಳು ಸಹ ಚುನಾಯಿಸಲ್ಪಟ್ಟರು. ಈ ಧರ್ಮಫಂಡಿನ ವಿಚಾರದಲ್ಲಿ ಕಳೆದ ಏಪ್ರಿಲ್ ತಾ. 8 ನೇ ಶನಿವಾರ ಮೇಲ್ಕಂಡ ತಾಲ್ಲೋಕಿನ ನಮ್ಮಗಳ ಮತಾಭಿಮಾನಿಗಳು 5 ಜನ ಮೆಂಬರುಗಳು ಸಹ ಕೋಟೂರು ಗ್ರಾಮದ ಅಂಬಲದಲ್ಲಿ ಮೀಟಿಂಗ್ ಸೇರಿದ್ದರು. ಈ ಮೀಟಿಂಗಿಗೆ ಮ|| ಪಿ. ಅಗ್ಗಣ್ಣಯ್ಯನವರು ಅಧ್ಯಕ್ಷರಾಗಿದ್ದರು. ಕಳೆದ ವರ್ಷ ನಿಶ್ಚಯಮಾಡಲ್ಪಟ್ಟಂತೆ ಮತಾಭಿಮಾನಿಗಳೆಲ್ಲರೂ ಪ್ರತಿ ಒಬ್ಬನೂ 8 ಆಣೆಯಂತೆ ಚಂದಾ ಹಣವನ್ನು ದಯಪಾಲಿಸಿದರು. ಇದಲ್ಲದೆ ನಮ್ಮ ಧರ್ಮಫಂಡಿಗೆ ಕೆಲವು ಮಹನೀಯರುಗಳು 38 ರೂಪಾಯಿ ಸಹಾಯ ಮಾಡಿರುತ್ತಾರೆ. ಮ|| ಮನ್ನಕ್ಕಮನೆ ಸುಬ್ಬಮ್ಮಯ್ಯನವರು ಆ ದಿನ ಸಭೆ ಸೇರಿದ್ದ ಮತಾಭಿಮಾನಿಗಳೆಲ್ಲರನ್ನೂ ಆಹ್ವಾದರದಿಂದ ಕರೆಸಿಕೊಂಡು ಪೂರ್ಣಭಕ್ತಿವಿಶ್ವಾಸಗಳಿಂದ ಊಟ ಉಪಚಾರಗಳನ್ನು ಮಾಡಿಸಿ ಮನಸ್ಸಂತೋಷಪಡಿಸಿದರು.

ಒಬ್ಬ ಮತಾಭಿಮಾನಿ.

ಹೊಸ ರೀತಿಯಲ್ಲಿ ಬೆಲ್ಲವನ್ನು ಮಾಡುವುದು.

ಮೈಸೂರು ವ್ಯವಸಾಯದ ಇಲಾಖೆಯವರು ಕೆಲವು ವರ್ಷಗಳಿಂದೀಚೆಗೆ ಹೊಸ ವಿಧಾನಗಳಿಂದ ಬೆಲ್ಲಮಾಡುವದನ್ನು ಜನಗಳಿಗೆ ತೋರಿಸುತ್ತಾ ಇದಾರೆ. ಇದರಿಂದ ಈಗ ರೈತಾಪಿ ಜನಗಳು ಬೆಲ್ಲ ತಯಾರು ಮಾಡುವದಕ್ಕೆ ಪಡುವ ಶ್ರಮಕ್ಕಿಂತ ಕೊಂಚ ಜಾಸ್ತಿ ಶ್ರಮವನ್ನು ತೆಗೆದುಕೊಂಡಲ್ಲಿ ಈಗ ತಯಾರು ಮಾಡುತ್ತಿರುವ ಬೆಲ್ಲಕ್ಕಿಂತಲೂ ಉತ್ಕೃಷ್ಟವಾದ ಬೆಲ್ಲವನ್ನು ತಯಾರುಮಾಡುವದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ಈ ರೀತಿಯಲ್ಲಿ ವ್ಯವಸಾಯದ ಇಲಾಖೆಯವರು ಮಾಡಿದ ಬೆಳ್ಳಗಿರುವ ಬೆಲ್ಲವು ಮಳೆಗಾಲದಲ್ಲಿ ಕೆಟ್ಟುಹೋಗುವುದಿಲ್ಲವೆಂದು ರೈತಾಪಿ ಜನಗಳು ಮತ್ತು ಇತರರೂ (ತಪ್ಪಾಗಿ ಮಲೆನಾಡು ಪ್ರಾಂತ್ಯದವರು) ಹೇಳುತ್ತಾರೆ.

ಕೆಳಗೆ ಬರೆದಿರುವ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಬಳೆಹಳ್ಳಿ ವಾಸಿ ಚನ್ನಗೌಡನಹಳ್ಳಿ ಶಿದ್ಧವೀರಪ್ಪಶೆಟ್ಟಿ ಮಕ್ಕಳು ಮರಿಯಪ್ಪಶೆಟ್ಟಿ ಯೂನಿ ಸಣ್ಣಯ್ಯಶೆಟ್ಟರು ಕೊಟ್ಟಿರುವ ಹೇಳಿಕೆಯು ಮೇಲೆ ನಮೂದಿಸಿರುವ ಅಭಿಪ್ರಾಯವು ತಪ್ಪು ಎಂಬುವದನ್ನೂ ಮತ್ತು ಸರಿಯಾದ ವಿಧಾನಗಳಲ್ಲಿ ಮಾಡಿದ ಬೆಳ್ಳಗಿರುವ ಬೆಲ್ಲವು ಕಪ್ಪಗಿರುವ ಬೆಲ್ಲದ ಹಾಗೆಯೇ ಮಳೆಗಾಲದಲ್ಲಿಯೂ ಕೂಡ ಜೋನಿಯಾಗದೆ ಘಟ್ಟಿಯಾಗಿಯೇ ಇರುತ್ತದೆ ಎಂಬುವದನ್ನೂ ವ್ಯಕ್ತಪಡಿಸುತ್ತದೆ.

1912-13 ನೆ ಸಾಲಿನಲ್ಲಿ ಅಗ್ರಿಕಲ್‌ಚರಲ್ ಇಲಾಖೆಯವರು ಜೆಬ್ಬಾಳಿನಿಂದ ಈ ತಾಲ್ಲೂಕಿಗೆ ದಯಮಾಡಿದ್ದಾಗ್ಗೆ, ನಮ್ಮ ಊರಿಗೆ ಬಂದು ಸುಧಾರಿಸಿದ ರೀತಿಯಿಂದ ಬೆಲ್ಲವನ್ನು ನನ್ನ ಸ್ವಂತ ಕಟ್ಟಿನ ಆಲೆಮನೆಯಲ್ಲಿ ತಯಾರುಮಾಡಿ ತೋರಿಸಿದರು ಆ ಬೆಲ್ಲದ ಉಂಡೆಯನ್ನು ಆ ಲಾಗಾಯಿತು 1915 ನೆ ಅಕ್ಟೋಬರ್ ವರೆಗೆ ಇಟ್ಟು ಇದ್ದೆನು. ಅದು ಆ ಲಾಗಾಯಿತು ಈ ಸಹಲ್ ವರೆಗೂ ಬೆಳ್ಳಗೆ ಮತ್ತು ಬಿರನಾಗಿತ್ತು. ಈ ಪ್ರಕಾರ ಬೆಳ್ಳಗೆ ಬೆಲ್ಲಮಾಡುವದರಿಂದ ಮಳೆಗಾಲದಲ್ಲಿ ಜೋನಿಯಾಗಿ ಕೆಟ್ಟುಹೋಗುತ್ತದೆ ಎಂದು ಕೆಲವರು ಅಭಿಪ್ರಾಯಪಡುತ್ತಾರಂತೆ. ಆದರೆ ನನ್ನ ಸ್ವಂತ ಅನುಭವದಿಂದ ಚೆನ್ನಾಗಿ ಅರುವದಾಗಿ ಹೇಳುತ್ತೇನೆ. ಸರಿಯಾಗಿ ಸುಣ್ಣ ಹಾಕಿ ಮಾಡಿದಲ್ಲಿ ಬಿಳೀಬೆಲ್ಲವು ಎಂದೆಂದಿಗೂ ಜೋನಿ ಆಗಲಾರದು ಎಂದು ನಾನು ಅಭಿಪ್ರಾಯಪಡುತ್ತೇನೆ ಎಂಬದಾಗಿ ಬರೆಸಿಕೊಟ್ಟ ಹೇಳಿಕೆ.

ಮದ್ರಪ್ಪಶೆಟ್ಟಿ, ವೀರಪ್ಪಶೆಟ್ಟಿ, ಪುಟ್ಟಸ್ವಾಮಿಗೌಡ.

ಶಂಕರ ಜಯಂತಿ ಉತ್ಸವವು.

ನೆನ್ನೆ ಅಂದರೆ ತಾ. 7 ನೇ ಭಾನುವಾರ ಸರ್ವತಂತ್ರ ಸ್ವತಂತ್ರೇತ್ಯಾದಿ ಬಿರುದಾಂಕಿತರಾದ ಶ್ರೀಮಚ್ಛಂಕರಭಗವತ್ಪಾದಾಚಾರ್ಯರ ಜಯಂತ್ಯುತ್ಸವವು ಪದ್ಧತಿ ಮೇರಿಗೆ ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಅತಿ ವಿಜೃಂಭಣೆಯಾಗಿ ನಡಿಸಲ್ಪಟ್ಟಿತು. ಪಾಠಶಾಲೆಯು ಕದಳೀ ಸ್ತಂಭಾದಿಗಳಿಂದಲೂ ವಿದ್ಯುಚ್ಛಕ್ತಿಯ ದೀಪಗಳಿಂದಲೂ ಅಲಂಕೃತವಾಗಿದ್ದಿತು. ಅನೇಕ ಜನ ವಿದ್ವನ್ಮಣಿಗಳು ಸಭೆಯನ್ನು ಅಲಂಕರಿಸಲ್ಪಟ್ಟಿದ್ದರು. ಆ ಸಮಯದಲ್ಲಿ ಆಸ್ಥಾನ ಸಂಗೀತ ವಿದ್ವಾನ್ ಮ|| ಸುಬ್ಬಣ್ಣನವರಿಂದ ವೀಣೆಯೂ ಗಾಯನವೂ ಮತ್ತು ಮ|| ಚಿಕ್ಕರಾಮರಾಯರಿಂದ ಗಾಯನವೂ ನಡಿಸಲ್ಪಟ್ಟಿತು. ಅನಂತರ ಮ|| ಡಿ. ಎಸ್. ಶಂಕರನಾರಾಯಣ ಶಾಸ್ತ್ರಿಗಳು ಉಪನ್ಯಾಸವನ್ನು ಸ್ವಾರಸ್ಯವಾಗಿ ಮಾಡಿದರು. ಇದರಲ್ಲಿ ಧರ್ಮವಿವರಣೆ, ಧರ್ಮಕ್ಕೂ ವೇದಕ್ಕೂ ಇಂತಕ್ಕ ಸಂಬಂಧ, ವೇದಕ್ಕೆ ಅಧಿಕಾರಿಯಾರು? ದ್ವಿಜತ್ವಸಿದ್ಧಿ, ಪೂರ್ವದಲ್ಲಿ ವೇದಗಳಿಗೆ ಅಪ್ರಾಮಾಣ್ಯವನ್ನು ಸಾಧಿಸುತ್ತಿದ್ದಕ್ರಮ, ಅಧರ್ಮವು ಲೋಕವನ್ನು ಆವರಿಸಿದ್ದದ್ದು, ಆಗ ಈಶ್ವರನು ಮನುಷ್ಯಾವತಾರವಂಗೈದು ತಂತ್ರ ರಚಿಂಬ ಸಾಮರ್ಥ್ಯದಿಂದ ಧರ್ಮವನ್ನು ಸಂಸ್ಥಾಪನೆ ಮಾಡಿದ ಕ್ರಮ, ಆಚಾರ್ಯರಿಂದ ಉಪದೇಶಿಸಲ್ಪಟ್ಟ ತತ್ವಗಳು, ಗಂಭೀರ ಗುಣಕಥನ, ಶಂಕರಾಚಾರ್ಯ ಎಂಬ ಶಬ್ದಾರ್ಥವಿವರಣೆ ಮುಂತಾದುವುಗಳು ಹೇಳಲ್ಪಟ್ಟು ಮಂಗಳವು ಹೇಳಲ್ಪಟ್ಟಿತು. ಅನಂತರ ಮ|| ರಾಮೇಶ್ವರಾವಧಾನಿಗಳೂ, ಮ|| ಡಿ. ಕಪಿನೀಪತಿಶಾಸ್ತ್ರಿಗಳೂ ಮತ್ತು ಮ|| ಎಸ್. ವೆಂಕಟದಾಸ ಶರ್ಮರವರೂ ತಾವು ಮಾಡಿದ ಆಚಾರ್ಯವಿಷಯಕವಾದ ಸ್ತೋತ್ರಗಳನ್ನು ಓದಿ, ಪತ್ರಿಕೆಗಳನ್ನು ಸಭೆಯವರಿಗೆಲ್ಲಾ ಹಂಚಿದರು. ಅನಂತರ ಮ|| ಡಿ. ಎಸ್. ಶಂಕರನಾರಾಯಣಶಾಸ್ತ್ರಿಗಳು ತಮ್ಮಿಂದ ಪ್ರಚಾರ ಮಾಡಲ್ಪಟ್ಟ ಆಚಾರ್ಯರ ಸುಂದರವಾದ ಫೋಟೋವನ್ನು ಸಭೆಯವರಿಗೆಲ್ಲಾ ಹಂಚಿದರು. ಅನಂತರ ಪ್ರೆಸಿಡೆಂಟ್ ಮ|| ಡಿ. ಕಪಿನೀಪತಿ ಶಾಸ್ತ್ರಿಗಳು ರಿಪೋರ್ಟನ್ನು ಓದಿದರು. ಬಳಿಕ ಮಹಾವಿದ್ವಾನ್ ವೇ|| ಹಾಸನದ ನರಸಿಂಹಶಾಸ್ತ್ರಿಗಳು ಆಚಾರ್ಯರ ಗುಣಕಥನದ ಮೂಲಕ ಸಭೆಯವರಿಗೆಲ್ಲಾ ವಿದ್ಯಾರ್ಥಿಗಳ ಪರವಾಗಿ ವಂದನೆಯು ಹೇಳಲ್ಪಟ್ಟ ಮೇಲೆ ಆಚಾರ್ಯರಿಗೆ ಮಂಗಳಾರತಿಯಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನಾ ನಂತರ ಸಭೆಯವರಿಗೆಲ್ಲಾ ಗಂಧ, ಹೂವು, ತಾಂಬೂಲ ಮತ್ತು ಚರ್ಪು ಹಂಚಲ್ಪಟ್ಟು ಬಳಿಕ ಋಗ್ವೇದ ಸಾಮವೇದಗಳಲ್ಲಿ ಸ್ವಸ್ತಿ ನಡೆಯಿತು. ಅನಂತರ ಸಭೆಯು ಮುಕ್ತಾಯವಾಯಿತು.

ಎಸ್. ಎಸ್. ಶರ್ಮ.

[ಶ್ರೀ ಶಂಕರಾಚಾರ್ಯರ ಜೀವಿತ ಚರಿತ್ರಾಗ್ರಂಥವೂ, ಅವರ ಸುಂದರವಾದ ಫೋಟೋವೂ ನಮಗೆ ತಲಪಿರುತ್ತವೆ. ಇವನ್ನು ಸಂತೋಷದಿಂದ ಸ್ವೀಕರಿಸಿ ಅವರನ್ನು ಆದರಪೂರ್ವಕವಾಗಿ ವಂದಿಸುವೆವು.—ಎಡಿ.]

ದೇಶದ ಏಳಿಗೆಗೆ ಪ್ರಜೆಗಳ ಕರ್ತವ್ಯ.

ಮೈಸೂರು ದೇಶದ ಮಲ್ನಾಡು ಪ್ರದೇಶಗಳನ್ನು ಯಾವ ವಿಧದಿಂದಲಾದರೂ ಮುಂದಕ್ಕೆ ತರಬೇಕೆಂದು ನಮ್ಮ ಸರ್ಕಾರದವರು ಪ್ರವರ್ತಿಸುವದು ಸರಿಯಷ್ಟೆ ಆದರೆ ಪ್ರಜೆಗಳು ಯಾವದೊಂದು ಕೆಲಸವಾಗಲೀ ಪ್ರಜೆಗಳ ಮನಸ್ಸಿನಲ್ಲಿ ನೆಲೆಗೊಂಡ ಹೊರತು ಫಲಕಾರಿಯಾಗುವದಿಲ್ಲ. ಇಂಡಿಯಾದೇಶದ ಇತರ ಕಡೆಗಳಲ್ಲಿ ಪ್ರಜೆಗಳು ತಾವಾಗಿಯೇ ಮುಂದರಿತು ಅನೇಕ ವಿಷಯಗಳನ್ನು ಪ್ರಾರಂಭಿಸಿ ಕೈಹಾಕಿರುತ್ತಾರೆ. ಸರ್ಕಾರದವರನ್ನೇ ಕಾದುಕೊಂಡು ಕೂತಿದ್ದರೆ ಅಲ್ಲಿ ನಡೆದಿರುವ ವಿಶೇಷ ವಿಚಾರಗಳೂ ಸಮಾಜಗಳೂ ಸಂಘಗಳೂ ವಿದ್ಯಾಶಾಲೆಗಳೂ ಆಸ್ಪತ್ರೆಗಳೂ ಇನ್ನೂ ಅನೇಕ ಬಹು ಜನ ಪ್ರಯೋಜನವಾದ ಕೆಲಸಗಳೂ ಧರ್ಮಗಳೂ ಎಂದಿಗೂ ನಡೆಯುತ್ತಿರಲಿಲ್ಲ. ನಮ್ಮ ಮೈಸೂರು ಸೀಮೆಯಲ್ಲಿ ಯಾದರೋ ಪ್ರಜೆಗಳು ತಮ್ಮಿಂದ ಆಗತಕ್ಕದ್ದೇನೂ ಇಲ್ಲವೆಂದೆಣಿಸಿ ತಟಸ್ಥರಾಗಿದ್ದಾರೆ ಇದಕ್ಕೆ ದೃಷ್ಟಾಂತವಾಗಿ ಈ ಮಲ್ನಾಡು ಅಭಿವೃದ್ಧಿಯನ್ನೇ ತೆಗೆದುಕೊಳ್ಳೋಣ. ಇಷ್ಟು ಮಟ್ಟಿಗೆ ಸರ್ಕಾರದವರಿಂದ ಉತ್ತೇಜನೆಯು ಇಂಡಿಯಾ ದೇಶದ ಇತರೆ ಭಾಗಗಳಲ್ಲಿ ಒದಗಿದ್ದರೆ ಪ್ರಜೆಗಳು ಎಷ್ಟೋ ಉತ್ಸಾಹಶಾಲಿಗಳಾಗಿ ಸಂಘಗಳನ್ನೂ ಉಪಸಂಘಗಳನ್ನೂ ಸಮಾಜಗಳನ್ನೂ ಏರ್ಪಡಿಸಿ ಪದೇ ಪದೇ ಸಂಘಗಳು ಸೇರಿ ಅನೇಕ ವಿಷಯಗಳನ್ನು ಚರ್ಚಿಸಿ ಸರ್ಕಾರದವರಲ್ಲಿ ಸೂಚಿಸುತ್ತಿದ್ದರು. ಇಲ್ಲಿಯಾದರೋ ಸರ್ಕಾರದವರು ಏರ್ಪಡಿಸಿರುವ ಸಂಘಗಳಿಗೂ ಕೂಡ ಜನಗಳು ಒದಗುವದು ದುಸ್ತರ. [ಆಹಾ! ಏನು ವಿಷಾದಕ್ಕೆ ಕಾರಣ! ಕೇವಲ ಪಶುಪ್ರಾಣಿಗಳೋಪಾದಿಯಲ್ಲಿ ನಮ್ಮ ಮೈಸೂರು ಸೀಮೆಯ ಪ್ರಜೆಗಳು ಎಷ್ಟು ಕಾಲ ಇರಬೇಕು? ಎಂದಿಗೆ ಪ್ರಜೆಗಳಿಗೆ ಧೈರ್ಯ ಉತ್ಸಾಹ ಸ್ಪರ್ಧೆ ದಕ್ಷತೆ ಇವುಗಳು ಹುಟ್ಟಿ ನಮ್ಮ ದೇಶವು ಏಳಿಗೆ ಬಂದೀತು! ಸಂಘಗಳಿಗೆ ಮೆಂಬರುಗಳಾಗಿ ಚುನಾಯಿಸಿದ ನಂತರ ಅಂಥವರು ಜನಸಾಮಾನ್ಯದ ಕೆಲಸಕ್ಕೋಸ್ಕರ ತಮ್ಮ ಕೆಲಸಕಾರ್ಯಗಳನ್ನು ಸ್ವಲ್ಪ ಮಟ್ಟಿಗೆ ತೊರೆದು ಕಷ್ಟಪಡಬೇಕು. ಹಾಗಿಲ್ಲದ ಪಕ್ಷದಲ್ಲಿ ಮೆಂಬರುತನವನ್ನು ಎಂದಿಗೂ ಒಪ್ಪಿಕೊಳ್ಳಬಾರದು. ಕೇವಲ ಗೌರವಾರ್ಥವಾಗಿ ಮೆಂಬರುತನಕ್ಕೆ ಬಯಸುವ ಮನುಷ್ಯನು ಕೇವಲ ದೇಶಕಂಟಕನೆನ್ನಿಸಿಕೊಳ್ಳುತ್ತಾನೆ. ಬಡವರಿಗಾಗಲೀ ದೇಶಕ್ಕಾಗಲೀ ಕಷ್ಟಪಡುವ ಯೋಗ್ಯತೆಯೂ, ವಿರಾಮವೂ ಇರತಕ್ಕವನೇ ಇಂಥಾ ಮೆಂಬರುತನಕ್ಕೆ ಮುಂದರಿತು ಬರಬೇಕು. ಹಾಗಾಗುವ ಪಕ್ಷ ಎಲ್ಲಾ ಸಮಾಜಗಳೂ ಸರಿಯಾಗಿ ಕೆಲಸಮಾಡಿ ಫಲಕಾರಿಗಳಾಗುವವು. ಪ್ರಕೃತ ನಮ್ಮ ಸೀಮೆಯಲ್ಲಿ ಎಲ್ಲಿ ನೋಡಿದರೂ ಸಮಾಜಗಳ ಸಭೆಗಳಿಗೆ ನಿಯಮಿತವಾದರೆ ಮೆಂಬರುಗಳೂ ಕೂಡ ಸರಿಯಾಗಿ ಬಾರದೆ ಸಮಾಜಗಳನ್ನು ನಡಿಸುವದು ಕಷ್ಟವಾಗಿದೆ. ಸರ್ಕಾರದ ಉದ್ಯೋಗಸ್ಥರು ಬಂದ ವಿನಹ ಅನೇಕ ಜನ ಮೆಂಬರುಗಳು ಸಭೆಗಳಿಗೆ ಬರುವದೇ ಇಲ್ಲ. ಆದರೆ ಸರ್ಕಾರದವರನ್ನು ಉದ್ಧಾರಮಾಡುವ ಉದ್ದೇಶದಿಂದಲೋ ಅಥವಾ ಸರ್ಕಾರದ ಹುದ್ದೇದಾರರಿಂದ ಉದ್ಧಾರವನ್ನು ಹೊಂದಬೇಕೆನ್ನುವ ಅಭಿಪ್ರಾಯದಿಂದಲೋ ಸಭೆಗಳಿಗೆ ಬರುವರು. ಬಂದರೆ ತಾನೇ ಏನು? ಸಭಾ ಭೂಷಣರಾಗಿ ಕೂತಿದ್ದು ಹೊರಟು ಹೋಗತಕ್ಕವರು ಎಷ್ಟು ಜನ ಇಲ್ಲ? ಇದೆಲ್ಲಾ ಶುದ್ಧ ತಪ್ಪು. ಹಾಗೆ ಮಾಡುತ್ತಿದ್ದರೆ ನಮ್ಮ ದೇಶವು ಎಂದಿಗೂ ಏಳಿಗೆಗೆ ಬರಲಾರದು. ಮುಖ್ಯ ಯಾವ ಉತ್ಸಾಹವು ಜನರ ಮನಸ್ಸಿನಲ್ಲಿ ಜನಿಸಿ ಪ್ರಸರಿಸಿದರೆ ಅದು ಸ್ಥಿರತರವಾಗಿ ಪ್ರಯೋಜನಕಾರಿಯಾಗುವದು? ಹಾಗಿಲ್ಲದೇ ಸರ್ಕಾರದವರಿಂದ ಆಜ್ಞಾಪಿಸಲ್ಪಡುವ ವಿಶೇಷ ಕ್ರಮಗಳು ದೇಶದ ಏಳಿಗೆಗೆ ಸಾಕೆಂದು ಪ್ರಜೆಗಳು ಕೂತ್ಕೊಂಡು ಕೂತರೆ ಕೊಂಡರೆ ಈ ಕ್ರಮಗಳು ಎಂದಿಗೂ ನಿಂತುಹೋಗುವದಲ್ಲದೇ ಬೇರೊಂದಿಲ್ಲ. ಆದುದರಿಂದ ಪ್ರಜೆಗಳು ತಾವಾಗಿಯೇ ಮುಂದರಿತು ಬಂದು ಪದೇ ಪದೇ ಸಭೆಸೇರಿ ತಮ್ಮ ನಾಡಿನ ಯೋಗಕ್ಷೇಮದ ವಿಚಾರವಾಗಿ ಚಿಂತಿಸಿ ತಮ್ಮ ಅಪೇಕ್ಷಿತವಾದ ಸಲಹೆಗಳನ್ನು ಸರ್ಕಾರದವರ ಗಮನಕ್ಕೆ ಆಗಿಂದಾಗ್ಗೆ ತಂದರೆ ಸರ್ಕಾರದವರಿಂದ ಏರ್ಪಡಿಸಿರುವ ಕ್ರಮಗಳೂ ಶೀಘ್ರದಲ್ಲಿ ಪ್ರಯೋಜನ ಭೂತಗಳಾಗುವವಲ್ಲದೆ ದೇಶವೂ ಏಳಿಗೆಗೆ ಬರುವದು. ಈ ರೀತಿಯಾಗಿ ನಡಿಸಲು ನಮ್ಮ ದೇಶದಲ್ಲಿ ಕೆಲವು ಜನ ಪ್ರಜಾಪಕ್ಷಪಾತಿಗಳಾದರೂ ಪ್ರಯತ್ನಿಸಲೆಂದು ಭಗವಂತನಲ್ಲಿ ನಿರಂತರವೂ ಮೊರೆಯಿಡುವ ಸೇವಕ.

ಖಾತ್ರಿದಾರರಿಗೆ ನೋಟೀಸ್.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿ.]

ಕರೆಸ್‌ಪಾಂಡೆನ್ಸ್.

ಮದ್ರಾಸಿನ ಕೆಲವು ವರ್ತಕರ ಮೋಸವಂತೆ.

ಅಯ್ಯಾ,—ತಮ್ಮ ಪತ್ರಿಕೆಯಲ್ಲಿ ಆಗಾಗ್ಗೆ ನಮ್ಮ ಕನ್ನಡಿಗರಾದ ಮೈಸೂರಿನವರಿಗೆ ಮದರಾಸಿನಲ್ಲಿರುವ ಕೆಲವರು ಮಾಡುವ ಮೋಸವನ್ನು ಮತ್ತು ಹಾಗೆ ವಂಚಿಸಲ್ಪಟ್ಟವರಿಂದ ಅವರ ಕುತ್ಸಿತ ವ್ಯಾಪಾರವನ್ನೂ ಆ ಕರ್ಣಾಂತರವಾಗಿ ಕೇಳಿ ಪರಿಕಿಸಿ ಇಂತು ಬರೆದಿತ್ತೇನೆ. ಮದ್ರಾಸಿನ ಕೆಲವರು ಒಂದೇ ಹೆಸರುಳ್ಳವರಾದರೂ ಬೇರೆ ಬೇರೆ ಅಡ್ರೆಸ್ಸುಗಳನ್ನೂ, ವಿಜಾತೀಯವಾದ ಕಂಪನಿ ಹೆಸರುಗಳನ್ನೂ ಇಟ್ಟುಕೊಂಡು ಅವುಗಳಿಗೆ ಸರಿಯಾದ ಕ್ರಯ ಪಟ್ಟಿಯನ್ನು ಕನ್ನಡದಲ್ಲಿ ಅಚ್ಚು ಹಾಕಿಸಿ ತಮ್ಮ ಪ್ರಕಟನೆಯನ್ನು ತಮ್ಮ ಪತ್ರಿಕೆಯಲ್ಲಿಯೂ ಆ ಕ್ರಯಪಟ್ಟಿಗಳನ್ನು ಬಿಟ್ಟಿಯಾಗಿ ನಮ್ಮ ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಊರುಗಳಲ್ಲಿ ಹಳ್ಳಿಯ ಕಡೆ ವಿಶೇಷ ದೊಡ್ಡ ಮನುಷ್ಯರ ಹೆಸರುಗಳನ್ನು ತಿಳಿದುಕೊಂಡು ಅವರಿಗೆ ಕಳುಹಿಸುತ್ತಾರೆ. ಆ ಕ್ಯಾಟಲಾಗಿನಲ್ಲಿ ತಾವು ಸಾಮಾನುಗಳನ್ನು ಸುಲಭ ಬೆಲೆಗೂ ಪ್ರೀತಿಯಿಂದು ಸಾಮಾನಿಗೂ ಬಹುಮಾನಕೊಡುವೆವೆಂದೂ ತಮ್ಮ ಸಾಮಾನು ಸರ್ವಶ್ರೇಷ್ಠವೆಂದೂ ಅವರು ಮೋಹಿಸುವ ಹಾಗೆ ಉತ್ಪ್ರೇಕ್ಷೆಯಿಂದ ಬರೆದಿರುತ್ತಾರೆ. ತಮ್ಮ ಪತ್ರಿಕೆಯಲ್ಲಿಯೂ ಹೀಗೆಯೇ ಪ್ರಕಟನೆ ಕೊಟ್ಟಿದ್ದಾರೆ. ಇವುಗಳನ್ನು ನೋಡಿ ನಮ್ಮ ವಾಚಕರು ಒಳ್ಳೇ ಕಂಪನಿ ಎಂದು ಸಾಮಾನಿಗೆ ಬರೆದು ಹಾಕುತ್ತಾರೆ. ಅದು ವಿ. ಪಿ. ಬಂದೊಡನೆ ಇವರು ಅದನ್ನು ಒಡೆದು ನೋಡಿದಲ್ಲಿ ಅದು ಅನುಪಯೋಗವೆಂದು ತಿಳಿದು ಹತಾಶಯರಾಗಿ ವಾಪಸು ಕಳುಹಿಸಿದರೆ ತೆಗೆದುಕೊಳ್ಳದೆಯೂ, ಅಥವಾ ಆ ವಿ. ಪಿ. ಯನ್ನು ಸ್ವೀಕರಿಸಿ ಅದರ ವಿಚಾರವಾಗಿ ಪತ್ರವ್ಯವಹಾರ ನಡಿಸಿದರೆ ಪ್ರತ್ಯುತ್ತರ ಕೊಡದೆಯೂ ತಮ್ಮ ಮೋಸದ ಬಲೆಗೆ ಎಂಥವರನ್ನಾದರೂ ಸಿಕ್ಕಿಸಿಕೊಳ್ಳುತ್ತಾರೆ. ಅವರು ನಮ್ಮ ದೇಶೀಯ ಹಳ್ಳಿಯವರು ಶುದ್ಧ ಮೂಢರೆಂದೂ, ತಮ್ಮ ಮೋಸಕ್ಕೆ ಸಿಕ್ಕುವರೆಂದೂ ತಿಳಿದು ಬಗೆ ಬಗೆಯ ಪ್ರಕಟನೆಯಿಂದ ಅವರನ್ನು ಮರುಳು ಮಾಡಿ ಈ ಮೂಲಕ ಜೀವನ ಮಾಡುತ್ತಾರೇಂದು ಕೇಳುತ್ತೇನೆ. ಆದುದರಿಂದ ವಾಚಕರು ಇನ್ನು ಮದ್ರಾಸಿನವರ ಪ್ರಕಟನೆಗೂ, ಕ್ರಯ ಪಟ್ಟಿಗೂ ಬೆರಗಾಗದೆ ಆ ಸಾಮಾನನ್ನು ಕೊಳ್ಳದೆ ನಮ್ಮ ಸ್ವದೇಶವಾದ ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿ ತಾವೇ ಹೋಗಿ ಅಥವಾ ಪೋಸ್ಟು ಮೂಲಕ ಸಾಮಾನುಗಳೆಲ್ಲಾ ತೆಗೆದುಕೊಳ್ಳಬಹುದು. ಮದ್ರಾಸಿನಲ್ಲಿರುವ ದೊಡ್ಡ ದೊಡ್ಡ ಅಂಗ್ಲೇಯ ಕಂಪನಿಯಲ್ಲಿ ಮಾತ್ರ ತರಿಸಬಹುದು. ಆ ಕಂಪನಿಯಲ್ಲಿ ನಂಬಿಕೆ ಇದೆ. ಆ ಕಂಪನಿಯ ಬ್ರಾಂಚಾಫೀಸುಗಳೆಲ್ಲವೂ ಬೆಂಗಳೂರು ದಂಡಿನಲ್ಲಿ ಇವೆ. ಮೇಲೆ ಕಂಡ ವಂಚನೆ ಮಾಡುವ ಕಂಪನಿಯವರೆಲ್ಲರ ಕ್ರಯ ಪಟ್ಟಿಗಳೆಲ್ಲವನ್ನೂ ಚೆನ್ನಾಗಿ ನೋಡಿದರೆ ಒಂದು ಮತ್ರಾಂದಕ್ಕೆ ಲೇಶ ಮಾತ್ರವಾದರೂ ವ್ಯತ್ಯಾಸವಿರದು ಇದು ಒಂದು ವಿಚಾರೀಯವಲ್ಲವೇ? ವಾಚಕರೆಲ್ಲರೂ ಅವರ ವಂಚನೆಗೂ ಉತ್ಪ್ರೇಕ್ಷೆಗಾದಿ ಪ್ರಕಟನೆಗೂ ನಂಬದೆ ಯಾವ ಸಾಮಾನನ್ನು ನಮ್ಮ ಸ್ವದೇಶದಲ್ಲಿ ಕೊಂಡುಕೊಂಡು ಇಲ್ಲಿಯ ವ್ಯಾಪಾರವನ್ನು ವೃದ್ಧಿಪಡಿಸಿ ದೇಶೋನ್ನತಿಗೆ ಸಾಧಕವಾಗುವಂತೆ ಮಾಡುವರೆಂದು ನಂಬುವೆನು.

ದೇಶ ಹಿತೈಷಿ.

ಮೈಸೂರು ಮ|| ಎಂ. ಎಲ್. ನಾಗಂಣನವರ ಮ್ಯಾರೇಜ್ ಅಸೋಸಿಯೇಷನ್ ಕಂಪನೀ ವಿಷಯ.

ಅಯ್ಯಾ,—ಮ|| ನಾಗಣ್ಣನವರು ಮ್ಯಾರೇಜ್ ಕಂಪೆನಿ ಎಂದು ಸ್ಥಾಪಿಸಿ ಅದಕ್ಕೆ ಗೌರ್ನಮೆಂಟ್ ಸರ್ಟಿಫಿಕೇಟು ಇದೆ ಎಂದು ಈ ಪತ್ರಿಕೆ ವಗೈರೆಗಳಲ್ಲಿ ಪ್ರಕಟಿಸಿ ಅಲ್ಲಲ್ಲಿ ಏಜಂಟುಗಳನ್ನು ಮಾಡಿ ಜನಗಳಿಗೆ ನಂಬುಗೆ ಹುಟ್ಟುವಂತೆ ಪ್ರೋತ್ಸಾಹಮಾಡಿಸಿ ಹಣಕಂತುಗಳು ನಿರ್ಣಯಿಸಿ ಆ ಪ್ರಕಾರ ವಸೂಲು ತೆಗೆದುಕೊಳ್ಳುತ್ತಾ ಬಾಂಡುಗಳು ಕೊಟ್ಟಿದ್ದರು ಹಣವಸೂಲು ತೆಗೆದುಕೊಳ್ಳುತ್ತಾ ಇದ್ದರು. ಕಳೆದ ಸಾಲಿನಲ್ಲಿ ಮೈಸೂರು ಗೌರ್ನಮೆಂಟಿನವರು ಈ ಕಂಪನಿಗೆ ತಾವು ಸರ್ಟಿಫಿಕೇಟು ಕೊಟ್ಟಿಲ್ಲ, ಇದರಲ್ಲಿ ತಮ್ಮ ಜವಾಬ್ದಾರಿ ಇಲ್ಲವೆಂಬುದು ಸಕಲರೂ ತಿಳಿಯತಕ್ಕದ್ದು ಎಂದು ಪೇಪರಿನಲ್ಲಿಯೂ ಗೆಜೆಟ್ಟಿನಲ್ಲಿಯೂ ಪ್ರಕಟಿಸಿದ್ದರೇ ವಿನಹ ಇನ್ನೇನೂ ಮಾಡಲಿಲ್ಲ. ಹಾಗಿಯೂ ನಂತರ ಮ|| ನಾಗಂಣನವರು ಗೌರ್ನಮೆಂಟಿನವರು ತಾವು ಸರ್ಟಿಫಿಕೇಟು ಆಗಲಿಲ್ಲವೆಂದು ಪ್ರಕಟಿಸಿರುವದು ಅನ್ಯಾಯ. ಈ ಆಡಳಿತವೆಲ್ಲಾ ಗೌರ್ನಮೆಂಟಿನವರ ಅಡೀಟಿನಲ್ಲಿಯೇ ಇದೆ ಎಂಬ ಅಭಿಪ್ರಾಯಗಳು ಪ್ರಕಟಿಸಿದರು. ಇದರ ನಂತರ ಪುನಹ ಗೌರ್ನಮೆಂಟಿನವರು ಏನೂ ಪ್ರಕಟಿಸಿದಂತೆ ತೋರಲಿಲ್ಲ. ಇದ್ಯಾವ ಕ್ರಮವೋ ತಿಳಿಯದು. ಅದೇನಾದರೂ ಆಗಲಿ. ಮ|| ಎಂ. ಎಲ್. ನಾಗಂಣನವರಿಗೂ ಗೌರ್ನಮೆಂಟಿಗೂ ನಡೆಯುವ ಯಾ ನಡೆಯಬಹುದಾದ ಕರಸ್ಪಾಂಡೆನ್ಸು ನಮಗೆ ಅವಶ್ಯವಿಲ್ಲವಷ್ಟೇ. ಮ|| ನಾಗಂಣನವರು ಕೊಟ್ಟ ಬಾಂಡು ಪ್ರಕಾರ ಪಾಲಿಸಿ ಹಣವೆಲ್ಲಾ ಸಂದು ಮುಕ್ತಾಯವಾದ ಬಳಿಕ ಬಾಂಡು ಸಹಿತ್ತು ಮೇರೆಗೆ ಪಾಲಿಸಿದಾರರಿಗೆ ಕಂಪನಿಯಿಂದ ಪಾವತಿಯಾಗಬೇಕಾದ ಹಣಕ್ಕೆ ಅಪ್ಲಿಕೇಷನ್ ಹಾಕಿದರೂ, ಇವರ ಅಭಿಪ್ರಾಯದ ಪ್ರಕಾರ ಮ್ಯಾರೇಜು ಆಗಿರುವದು ನಿಶ್ಚಯ ಎಂಬುದಕ್ಕೆ ಮೇಜಿಸ್ಟ್ರೇಟರವರಿಂದ ಸರಟಿಫೈ ಮಾಡಿಸಿ ಕಳುಹಿಸಿದರೂ, ಪುರೋಹಿತರು ಊರು ದೊಡ್ಡಮನುಷ್ಯರಿಂದಲೂ ಕೂಡ ಸರಟಿಫೈ ಮಾಡಿಸಿ ಕಳುಹಿಸಿದರೂ ಹಣ ಕೊಡದೆ, ಸದರಿ ಬಾಂಡು ಕಳುಹಿಸಿದರೆ ಹಣ ಕೊಡುವದಾಗಿ ಹೇಳಿದ ಪ್ರಕಾರ ಬಾಂಡುಗಳು ಕಳುಹಿಸಿಕೊಟ್ಟಿದರೂ, ಇತ್ಯಾದಿ ಕರಸ್‌ಪಾಂಡೆನ್ಸು ನಡೆದರೂ ಹಣ ಬರದೆ ಇರುವದಕ್ಕೆ ಲಾಯರರ ನೋಟೀಸ್ ಕೊಡಿಸಿದ್ದಲ್ಲಿ ಕಡೂರು ಮ|| ಮಲ್ಲಪ್ಪ ಎಂಬವರು ಕೊಡುತ್ತಾರೆ ಎಂದೂನೂ, ಮ|| ಮಲ್ಲಪ್ಪನವರಿಗೂ ಲಾಯರರ ನೋಟೀಸು ಕೊಡುವಲ್ಲಿ 3 ತಿಂಗಳಾದಾಗ್ಯೂ ಅವರ ಜವಾಬೂ ಇಲ್ಲಾ, ಹಣವೂ ಇಲ್ಲ. ಈ ರೀತಿ ನಡೆದಿರುವ ಈ ಕಂಪನಿ ಥಸಿಕೆಯಂತಹದು? ಇದು ಮೋಸದ ಕಂಪನಿಯೋ? ಗೌರ್ನಮೆಂಟ್ ಸರ್ಟಿಫಿಕೇಟು ಇದೆ ಎಂದು ವಗೈರೆ ನಂಬಿಸಿ ಜನಗಳಿಂದ ಸುಲಿಗೆಮಾಡಿರುವರೇ? ಸಲೀಸಾಗಿ ಕೊಡುವ ಹಣ ಕೊಡದೆಹೋದರೆ ಇತರೆ ಪಾಲಿಸಿದಾರರು ನಂಬುತ್ತಾರೆಯೋ? ಇದೇನು ವಿಷಯ ಎಂಬುದು ವಾಚಕ ಮಹಾಶಯರಾದರೂ ತಿಳಿಸಬೇಕೆಂಬುದೇ ಪ್ರಾರ್ಥನೆ.

ತೀರ್ಥಹಳ್ಳಿ. ಸಕಲ ಜನ ಕ್ಷೇಮಾಭಿಲಾಷಿ.

ಚಿಕ್ಕಮಗಳೂರು ವೀರಶೈವ ವಿದ್ಯಾರ್ಥಿನಿಲಯ.

ಅಯ್ಯಾ,—ಈ ಕೆಳಗಿನ ನನ್ನ ಅಭಿಪ್ರಾಯವನ್ನು ಸದಾಚಾರ ವೀರಶೈವ ಮಹಾ ಜನಗಳಿಗೂ, ಇತರ ಪುಣ್ಯಕಾರ್ಯ ನಿರತರಿಗೂ ಸಹ ಪ್ರಚಾರಪಡಿಸಲೋಸ್ಕರ ತಮ್ಮ ಪತ್ರಿಕೆಯಲ್ಲಿ ಅವಕಾಶಕೊಡಬೇಕಾಗಿ ಕೇಳಿಕೊಳ್ಳುವೆನು. ಈ ಚಿಕ್ಕಮಗಳೂರು ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಗೌರ್ನಮೆಂಟ್ ಸ್ಟೂಡೆಂಟ್ಸ್ ಹೋಂ ಕಾಂಪೌಂಡಿನಲ್ಲಿ ಸದಾಚಾರ ವೀರಶೈವ ಮಹಾ ಜನಗಳ ವಿದ್ಯಾರ್ಥಿಗಳಿಗೋಸ್ಕರ ಒಂದು ಸ್ಟೂಡೆಂಟ್ಸ್ ಹೋಂ ಕಟ್ಟಲ್ಪಟ್ಟಿರುವುದೂ, ಈ ಕಟ್ಟಡವು ಆಚಂದ್ರಾರ್ಕವಾಗಿ ನಡೆಗೊಳ್ಳುವಂತೆ ಪ್ರತಿಷ್ಠಾಶಿಲೆಯು ನಮ್ಮ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಯವರಿಂದ ಸ್ಥಾಪಿಸಲ್ಪಟ್ಟಿರುವುದೆಂಬುದೂ ಸಹ ಪ್ರಾಯಶಃ ಲೋಕವಿದಿತವಾಗಿಯೇ ಇರುವುದು. ಅಲ್ಲದೆ ಈ ಗೃಹಪ್ರವೇಶ ಮಹೋತ್ಸವವು ಇನ್ನು ಕಿಂಚಿತ್ಕಾಲದಲ್ಲೇ ನಡೆಯಬೇಕಾಗಿರುವುದು. ಹೀಗಿರುವ ಸಂದರ್ಭದಲ್ಲಿ ಈ ಕಟ್ಟಡವನ್ನು ನನ್ನ ಹೆಸರಿಗೆ ಮಾಡಿಕೊಂಡು ಮುಂದೆ ಬ್ರಾಹ್ಮಣ ವಿದ್ಯಾರ್ಥಿಗಳಿಗೋಸ್ಕರ ಉಪಯೋಗಿಸಬೇಕೆಂಬ ಯೋಚನೆಯುಳ್ಳವನಾಗಿ ವಿದ್ಯಾಭ್ಯಾಸದ ಇಲಾಖಾ ಇನ್|| ಜ|| ರವರಿಗೆ ನಾನು ಅರ್ಜಿ ಬರೆದುಕೊಂಡಿರುವೆನಂತಲೂ, ಅವರು ನನ್ನ ಹೆಸರಿಗೆ ಗ್ರಾಂಟು ಮಾಡಿರುವರೆಂತಲೂ ಇಲ್ಲಿನ ಮತ್ತು ಬೆಂಗಳೂರಿನ ಕೆಲವು ಜನರು ಪ್ರವಾದವನ್ನು ಹುಟ್ಟಿಸಿ ಧರ್ಮಕಾರ್ಯ ನಿರೋಧಪ್ರಯತ್ನದಲ್ಲಿರುವರೆಂದು ಕೇಳಿ ವಿಷಾದಿಸುವೆನು.

ಈ ಕಟ್ಟಡವನ್ನು ನನ್ನ ಹೆಸರಿಗಾಗಲಿ, ನನ್ನ ಅಳ್ವಿಕೆಗಾಗಲಿ ಪಡೆದುಕೊಳ್ಳಬೇಕೆಂಬ ಉದ್ದೇಶವು ನನಗೆ ಸ್ವಪ್ನಾವಸ್ಥೆಯಲ್ಲಿ ಇರುವುದಿಲ್ಲ. ಈ ವಿಷಯದಲ್ಲಿ ನಾನು ಇನ್|| ಜ|| ರವರಿಗೆ ಅರ್ಜಿಯನ್ನು ಬರೆದುಕೊಳ್ಳಲೂ ಕಾರಣವಿಲ್ಲ. ನಾನು ಬರೆದುಕೊಂಡೂ ಇಲ್ಲ. ಇನ್|| ಜ|| ರವರು ಈ ಮಹನೀಯರ ಊಹೆಯಂತೆ ನನ್ನ ಹೆಸರಿಗೆ ಗ್ರಾಂಟು ಮಾಡಿಯೂ ಇಲ್ಲ. ಇದೆಲ್ಲವೂ ಅಸಂಬದ್ಧ ಪ್ರಲಾಪವೇ ಆಗಿದೆ. ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಸರ್ಕಾರದ ಸ್ಟೂಡೆಂಟ್ಸ್ ಹೋಂ ಇದ್ದೇ ಇರುವುದು. ಇದಕ್ಕಾಗಿ ನನ್ನ ಪ್ರಯತ್ನವೇನೂ ಬೇಕಿಲ್ಲ. ಅಂತಹ ದುರಭಿಮಾನವೂ ನನಗಿರುವುದಿಲ್ಲ. ಇದು ಸದಾಚಾರ ವೀರಶೈವ ಮಹಾ ಜನಗಳ ವಿದ್ಯಾರ್ಥಿಗಳಿಗಾಗಿ ಕಟ್ಟಲ್ಪಟ್ಟಿರುವುದೇ ವಿನಾ ಇತರರಿಗೆ ಅಲ್ಲ. ಪ್ರಕೃತ "ಶ್ರೇಯಾಂಸಿ ಬಹು ವಿಘ್ನಾನಿ" ಎಂಬ ಸತ್ಕಾರ್ಯಸಾಧನೆಗೆ ಅಡಚಣೆಯನ್ನುಂಟುಮಾಡುವ ಸ್ವಭಾವವುಳ್ಳ ಜನಗಳ ಪ್ರವಾದದಿಂದ ಹುಟ್ಟಿದ ಸುಳ್ಳು ಮಾತೇ ಹೊರತು ಮತ್ತೇನೂ ಅಲ್ಲ. ಇದರಲ್ಲಿ ನನ್ನ ಯಾವ ವಿಧವಾದ ಸ್ವಾರ್ಥ

...ಇರುವುದಿಲ್ಲನೆಂದು ತಿಳಿದು ಆ ಮಹಾ ಜನಗಳು ಈ ಕಾರ್ಯವನ್ನು ಪೂರ್ಣವಾಗಿ ನೆರವೇರಿಸಿ ಧರ್ಮಾಭಿವೃದ್ಧಿಯಲ್ಲಿ ಹಿಂತೆಗೆಯದೆ ಕೃತಕೃತ್ಯರಾಗಿ ಎಂಬುದೇ ನನ್ನ ಕೋರಿಕೆ. ಸಂಗತಿಯಿಲ್ಲದ ಅನ್ಯಕವಾದಿಗಳ ಪ್ರವಾದಕ್ಕಾಗಿ ಮಹದಾಶ್ರಯವಾದ ವೀರಶೈವ ಸದಾಚಾರ ಮಹಾ ಜನಗಳಿಗೆ ಮೇಲ್ಕಂಡ ನನ್ನ ಈ ಸಂಕಲ್ಪವನ್ನು ಸೂಚಿಸಿ ಧೈರ್ಯಗೊಳಿಸಬೇಕಾಗಿ ಕೋರುವೆನು. ಈ ಸ್ಟುಡೆಂಟ್ಸ್ ಹೋಂ ಕುರುಬರಹಳ್ಳಿ ಮಠದ ಶ್ರೀ ಚಂದ್ರಶೇಖರಸ್ವಾಮಿಗಳು ಪ್ರಯತ್ನಮಾಡಿ ಕಟ್ಟಿಸಿದಾರೆ. ಈ ಕಟ್ಟಡದ ವಿಚಾರವಾಗಿ ಈಗಲೂ, ಇನ್ನು ಮುಂದೆಯೂ ನನಗೆ ಯಾವ ವಿಧವಾದ ಸಂಬಂಧವೂ ಇಲ್ಲವೆಂಬುದನ್ನು ತಿಳಿಯತಕ್ಕದ್ದೆಂಬುವದೇ ಸದಾಚಾರ ವೀರಶೈವ ಮಹಾ ಜನಗಳ ಸನ್ನಿಧಿಯಲ್ಲಿ ನನ್ನ ವಿಜ್ಞಾಪನೆ.

ಚಿಕ್ಕಮಗಳೂರು. ಸಿ. ಶ್ರೀನಿವಾಸರಾವ್, ಕಾಫಿ ಪ್ಲಾಂಟರ್.

ಒಂದು ಸ್ಕೂಲಿನ ಕೊರತೆಗಳು.

ಅಯ್ಯಾ,—ತೀರ್ಥಹಳ್ಳಿ ತಾಲ್ಲೂಕು ಕುರುವಳ್ಳಿ ಸ್ಕೂಲ್ ಕಟ್ಟಡವು ಗ್ರಾಮಸ್ಥರ 3 ನೇ 2 ಭಾಗ ಚಂದಾ ವಸೂಲಿನಿಂದಲೂ, ಸರ್ಕಾರದ 3 ನೇ 1 ಭಾಗ ಸಹಾಯ ದ್ರವ್ಯದಿಂದಲೂ ಕಟ್ಟಲ್ಪಟ್ಟು ಈ ಸ್ಕೂಲಿನ ಪ್ರಾರಂಭೋತ್ಸವವು ಸಂಸ್ಥಾನದ ಶ್ರೀಮನ್ ಯುವರಾಜಾ ಸಾಹೇಬ್ ಬಹದ್ದೂರವರಿಂದ ನೆರವೇರಲ್ಪಟ್ಟು ಸುಮಾರು 1½ ವರ್ಷವಾಗುತ್ತಾ ಬಂತು. ಈ ಕುರುವಳ್ಳಿಯು ಪರ್ವಸ್ಥಳವಾಗಿಯೂ, ಸುತ್ತಲೂ ಸಮೀಪ ಫಾಸಲೆಯಲ್ಲಿ ಅನೇಕ ಗ್ರಾಮಗಳು ಇದ್ದು ಆ ಗ್ರಾಮಗಳ ಬಾಲಕರೂ ಸಹ ಸ್ಕೂಲಿಗೆ ವ್ಯಾಸಂಗಕ್ಕೆ ಬರುವವರೂ ಬರುವವರಾಗಿಯೂ ಇರುತ್ತಾರೆ. ಹಾಲಿ ಈ ಸ್ಕೂಲಿಗೆ ಇಬ್ಬರು ಉಪಾಧ್ಯಾಯರೂ, 80 ಜನ ಬಾಲಕ ಬಾಲಿಕೆಯರೂ ಇರುತ್ತಾರೆ. ದಿನೇ ದಿನೇ ಬಾಲಕರ ಸಂಖ್ಯೆಯು ಹೆಚ್ಚುವದಕ್ಕೆ ಅವಕಾಶವಾಗುವಂತೆ ಗ್ರಾಮಾಂತರಗಳಿಂದ ಬರುವ ವಿದ್ಯಾರ್ಥಿಗಳ ವಸತಿಗೆ ಸ್ಟುಡೆಂಟ್ಸ್ ಹೋಂ ಸಹಾ ಏರ್ಪಡಿಸಬೇಕೆಂದು ತೋರಿಯುತ್ತಿದೆ. ಬಾಲಕರು ಇಷ್ಟು ಜಾಗ್ರತೆಯಲ್ಲಿ ಸೇರುವದಕ್ಕೆ ಹೆಡ್ ಮಾಸ್ಟರ್ ಮ|| ವೆಂಕಟೇಶರಾಯರ ಬೋಧನಾಕ್ರಮವೂ ಇವರ ಪ್ರಯತ್ನವೂ ಕಾರಣವಾಗಿರುತ್ತೆ. ಈ ಸ್ಕೂಲಿನ ಹೆಸರಿನಲ್ಲಿ 1,200 ರೂಪಾಯಿ ಫಂಡನ್ನು ಮ|| ಚಿಕ್ಕಯ್ಯನವರು ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಧರ್ಮ ಮಾಡಿರುತ್ತಾರೆ. ಗ್ರಾಮಸ್ಥರಿಂದ ಇಷ್ಟು ಅನುಕೂಲತೆಗಳು ಈ ಸ್ಕೂಲಿಗೆ ಆಗಿರುತ್ತಾ, ವಿದ್ಯಾಭ್ಯಾಸದ ಇಲಾಖೆಯವರು ಈ ಸ್ಕೂಲಿನ ಹಾಲಿ ಅಭಿವೃದ್ಧಿಸ್ಥಿತಿಗೂ, ಹಾಗೂ ಶ್ರೀಮನ್ ಯುವರಾಜರವರಿಂದ ಸ್ಥಾಪಿತವಾದ ಗೌರವಕ್ಕೂ ನಮೂನೆಕೊಟ್ಟು, ಈ ಕೆಳಗಿನ ಕೆಲಸ ಏರ್ಪಾಡುಗಳನ್ನು ಅವಶ್ಯಕವಾಗಿ ಮಾಡಬೇಕೆಂದು ಒತ್ತಿ ಹೇಳಬೇಕಾಗಿದೆ. ಗ್ರಾಮಸ್ಥರಿಂದ ಸ್ಕೂಲಿಗೆ ಬೇಕಾದ ಕೆಲವು ವಸ್ತುಗಳು, ಬುಕ್ಸ್, ಸಾಮಾನು ವಗೈರೆ ಅನೇಕ ಧರ್ಮಗಳು ಮಾಡಲ್ಪಟ್ಟಿವೆ. (1) ಬಾಲಕರೂ, ಬಾಲಿಕೆಗಳೂ ಜಾಸ್ತಿ ಇರುವದರಿಂದ ಹಾಗೂ ಬಲಾತ್ಕಾರ ವಿದ್ಯಾಭ್ಯಾಸಕ್ಕೆ ಒಳಪಟ್ಟ ಈ ಸ್ಕೂಲಿಗೆ ಸಧ್ಯಕ್ಕೆ ಆತುರವಾಗಿ ಒಬ್ಬ ಕನ್ನಡ ಟೀಚರ್, ಒಬ್ಬ ಸರ್ವಂಟ್ ಸಹಾ ಹೆಚ್ಚಿಸಬೇಕು; (2) ಈ ಸ್ಕೂಲ್ ಸ್ಥಳವು ಟವನ್ ಸ್ಥಳವಾದ್ದರಿಂದಲೂ ಇಲ್ಲಿಗೆ ಒಬ್ಬ ಇಂಗ್ಲಿಷ್ ಬೋಧಕರನ್ನು ಹೆಚ್ಚಿಸಬೇಕಾದ್ದು ತಪ್ಪಾಗಕ್ಕೆ ಅವಶ್ಯಕ; (3) ಸ್ಕೂಲ್ ಕಟ್ಟಡದ ಅಂದಕ್ಕೂ, ಗೌರವಕ್ಕೂ, ಬಾಲಕರ ಪ್ರಯೋಜನಕ್ಕೂ ಅವಶ್ಯಕವಾಗಿ ಬೆಂಚ್, ಡೆಸ್ಕ್, ಕುರ್ಚಿ, ಸ್ಕೂಲ್ ಬುಕ್ಸ್ ಗಳು ಕೊಡಬೇಕು; ಒಂದು ರೂಂ ಗಲಾಟೆ ಇನ್ನೊಂದು ರೂಂಗೆ ಕೇಳದಂತೆ ಮಾಡಿಸಿಕೊಟ್ಟು ನೆಲಕ್ಕೆ ಇಟ್ಟಿಗೆ ಹಾಕಿಸಬೇಕು. ಈ ಅಂಶಗಳು ಅಗತ್ಯವಾಗಿ ಆಗಬೇಕೆಂದು ಕೆಲವು ಸಾರಿ ಇಲಾಖಾ ಮೇಲ್ವಿಚಾರಕರಿಗೆ ವಿಸಿಟಿಂಗ್ ವಗೈರೆ ಮಾಡಿದಾಗ್ಯೂ ಕೆಲವು ಮುಖ್ಯಾಂಶಗಳಿಗೆ ಗಮನಕೊಡದೆ ಮಾಡಿಸಿಕೊಡುತ್ತೇವೆಂದು ಕಾಲಹರಣ ಮಾಡಿರುವಂತೆ ಕಾಣುತ್ತೆ. ಇದು ಗ್ರಾಮಸ್ಥರ ಏರ್ಪಾಡಿಗೆ ಉತ್ತೇಜನಕೊಟ್ಟಂತೆ ಆಗುವದಿಲ್ಲ. ಜಾಗ್ರತೆ ಸಾಧ್ಯವಾದಷ್ಟು ಮಾಡುತ್ತಾರೆಂದು ನಂಬಿರುತ್ತೆ. ಇದು ಕೇವಲ ಮಲೆನಾಡು ಪ್ರದೇಶ; ಇಲ್ಲಿ ವಿದ್ಯೆಯು ಕಡಮೆ ಎಂದು ಸರ್ಕಾರದವರೇ ಒಪ್ಪಿಕೊಂಡಿರುತ್ತಾರೆ. ಅನೇಕ ಸ್ಥಳಗಳಲ್ಲಿ ಅನೇಕ ಸಂದರ್ಭಗಳಲ್ಲಿ ವಿದ್ಯಾಭ್ಯಾಸಕ್ಕೆ ವಿಶೇಷ ದ್ರವ್ಯ ವೆಚ್ಚ ಮಾಡಲು ಸರ್ಕಾರದಿಂದ ಸಹ ಸ್ಯಾಂಕ್ಷನ್ ಆಗಿ ಆ ರೀತಿ ಖರ್ಚು ಬೀಳುತ್ತಾ ಇವೆ. ಆದ್ದರಿಂದ ಈ ಸ್ಕೂಲಿಗೆ ಮೇಲ್ಕಂಡ ಅಂಶಗಳನ್ನು ಸ್ಯಾಂಕ್ಷನ್ ಮಾಡುವದಕ್ಕೆ ಎಲ್ಲಾ ಕಾರಣದಿಂದಲೂ ಅವಕಾಶವಿರುವದರಿಂದ ಆ ರೀತಿ ಏರ್ಪಾಡು ಆತುರದಲ್ಲೇ ಮಾಡಿಸುವದಾಗಿ ನಮ್ಮ ಗ್ರಾಮಸ್ಥರು ಹಾರೈಸಿಕೊಂಡಿರುತ್ತಾರೆ.

ಕಾಳಿಂಗ್ಯನ ರಾಘವೇಂದ್ರರಾವ್.

ಮಲೆನಾಡು ಸ್ಟೇಟ್ ಫಾರೆಸ್ಟು.

ಅಯ್ಯಾ,—ಗವರ್ನಮೆಂಟಿನವರು ಮಲೆನಾಡು ಕಾಡುಗಳನ್ನೆಲ್ಲಾ ಸ್ಟೇಟ್ ಫಾರೆಸ್ಟ್ ಮಾಡಬೇಕೆಂದು ಉದ್ದೇಶ ಪಟ್ಟಿರುತ್ತಾರೆ. ನಮ್ಮ ಘನವುಳ್ಳ ದಿವಾನ್ ಸಾಹೇಬರವರು ಮಲೆನಾಡು ಸಂಚಾರ ದಯಮಾಡಿದಾಗ ರೈತರು ಈ ವಿಷಯವಾಗಿ ತಮ್ಮ ಅಹವಾಲು ಹೇಳಿಕೊಂಡದ್ದರಿಂದ ಅದನ್ನು ವ್ಯವಸ್ಥೆ ಮಾಡುವುದಕ್ಕೆ ಈಗ ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಗವರ್ನಮೆಂಟಿನವರು ಸ್ಟೇಟ್ ಫಾರೆಸ್ಟುಮಾಡಲು ಅಡ್ಡಿಯಾಗದ ರೀತಿ ರೈತರ ಅನುಕೂಲಗಳನ್ನು ಎಷ್ಟರ ಮಟ್ಟಿಗೆ ಉಳಿಸಿಕೊಡಬಹುದೆಂಬುದನ್ನು ಕಮಿಟಿಯವರು ಯೋಚಿಸಿ ಸಲಹೆ ಕೊಡಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ. ಈ ಕಮಿಟಿಯವರ ತೀರ್ಮಾನದ ಮೇಲೆ ಮಲೆನಾಡಿನ ಭಾವಿಕಲ್ಯಾಣವು ಆತುಕೊಂಡಿದೆ. ಗವರ್ನಮೆಂಟಿನವರು ರೈತರ ಅನುಕೂಲಗಳನ್ನು ಉಳಿಸಿಕೊಟ್ಟು ಗ್ರಾಮ ಮತ್ತು ಜಮೀನುಗಳ ಪಕ್ಕದಲ್ಲಿರುವ ಕಾಡು ಸಹ ಸ್ಟೇಟ್ ಫಾರೆಸ್ಟು ಮಾಡುತ್ತೇವೆಂದು ಹೇಳುವದು ಎಷ್ಟು ಮಟ್ಟಿಗೆ ಸಾಧ್ಯವೋ ತಿಳಿಯದು. ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿರುವ ನಾಟಾ ವಗೈರೆಯಿಂದಾಗುವ ಉತ್ಪತ್ತಿಯನ್ನೆಲ್ಲಾ ಸರಕಾರದವರು ತೆಗೆದುಕೊಳ್ಳುತ್ತಿರುವಲ್ಲಿ ಮಲೆನಾಡಿನಲ್ಲಿ ತನ್ನಷ್ಟಕ್ಕೆ ಅಭಿವೃದ್ಧಿಯಾಗುತ್ತಿರುವ ಕಾಡನ್ನೆಲ್ಲಾ ರಿಸರ್ವ್ ಫಾರೆಸ್ಟ್ ಮಾಡುತ್ತಿರುವರು. ಏತಕ್ಕೆ? ಹೀಗೆ ಮಾಡುವದರಿಂದ ರೈತರಿಗೆ ತೊಂದರೆ ಹೆಚ್ಚು, ಗವರ್ನಮೆಂಟಿಗೆ ಖರ್ಚು ಹೆಚ್ಚು. ಬೇರೆ ಕೆಲಬುಮಾಡಿ ದೇಶದ ಸಂಪತ್ತನ್ನು ಹೆಚ್ಚಿಸಬಹುದಾದ ಅನೇಕ ಜನರು ಫಾರೆಸ್ಟ ಇಲಾಖೆಯಲ್ಲಿ ನೌಕರಿಗೆ ಸೇರುವದರಿಂದ ದೇಶದ ಸಂಪತ್ತು ಹೆಚ್ಚುವದಕ್ಕೆ ಬದಲಾಗಿ ಬಡತನ ಹೆಚ್ಚು. ಮೊದಲು ರೈತರಿಗೆ ತೊಂದರೆ ಹೆಚ್ಚೆಂದು ಹೇಳೋಣದರಲ್ಲಿ ಮುಖ್ಯವಾಗಿ ಮಲೆನಾಡಿನ ವಿದ್ಯಮಾನವನ್ನು ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಅನೇಕ ಅಧಿಕಾರಿಗಳು ಮಲೆನಾಡಿನ ಸ್ಥಿತಿಗತಿಗಳನ್ನು ಬಲ್ಲೆವೆಂದು ಅಂದುಕೊಳ್ಳುತ್ತಾರೆ. ಆದರೆ ಈ ಅನುಭವಕ್ಕೂ ರೈತನಾಗಿ ಸದಾ ಮಲೆನಾಡಿನಲ್ಲಿ ವಾಸಿಸುವವನ ಅನುಭವಕ್ಕೂ ಬಹಳ ವ್ಯತ್ಯಾಸವುಂಟು. ಇಲ್ಲಿನ ವಿದ್ಯಮಾನವನ್ನು ವಿವರಿಸಿದರು ಸರಿಯಾದ ಸ್ಥಿತಿಯನ್ನು ಅನುಭವ ಮಾಡಿಕೊಳ್ಳುವದು ಕಷ್ಟ. ಸರಿಯಾಗಿ ವಿವರಿಸಬೇಕಾದರೆ ದೊಡ್ಡ ಪ್ರಬಂಧವನ್ನೇ ಬರೆಯಬೇಕಾಗುತ್ತದೆ. ಹಾಗೆ ಮಾಡುವದಾದರೆ ಪತ್ರಿಕೆಯಲ್ಲಿ ಸ್ಥಳ ದೊರೆಯುವದಿಲ್ಲವೆಂಬ ಭಯ. ಈ ಇಕ್ಕಟ್ಟಿನ ಕಾಲದಲ್ಲಿ ಇದ್ದ ಸಂಗತಿ ಸಂಕ್ಷೇಪವಾಗಿ ಆದರೂ ಕಮಿಟಿಯವರ ಮತ್ತು ಗವರ್ನಮೆಂಟಿನವರ ತಿಳುವಳಿಕೆಗೆ ತರದಿದ್ದರೆ ನಿರ್ವಾಹವಿಲ್ಲ. ಮಲೆನಾಡು ಜೀವನವು ಕಷ್ಟಕರವಾದದ್ದು. ರೈತರಿಗೆ ಮಳೆ ಹೆಚ್ಚಾಗಿ ಬರಬೇಕಾದದ್ದೇನೋ ಇಲ್ಲಿಗೆ ಅವಶ್ಯಕ ಆದರೆ ಹೆಚ್ಚು ಮಳೆಯಿಂದ ಈ ಕಡೆ ಉಂಟಾಗುವ ಕಷ್ಟನಷ್ಟಗಳನ್ನು ಪೂರ್ಣವಾಗಿ ವಿವರಿಸುವದು ಅಸಾಧ್ಯ. ಮತ್ತು ಈ ಮಲೆನಾಡು ಉಬ್ಬು, ತಗ್ಗು, ಕೊರಕಲುಗಳಿಂದ ಕೂಡಿದ ಸಮುದಾರಿಯಿಲ್ಲದ ಭೂಮಿಯಾಗಿರುತ್ತದೆ. ಇಲ್ಲಿನ ರೈತರು ಬೆಳೆದ ದವಸವನ್ನು ರಫ್ತು ಮಾಡುವುದಕ್ಕೆ ಸರಕಾರ ರಸ್ತೆಗೆ ಸೇರುವುದಕ್ಕೆ ಒಂದೊಂದು ಕಾಡು ಬಂದ ದಾರಿಗಳನ್ನು ಮಾತ್ರ ಮಾಡಿಕೊಂಡಿರುತ್ತಾರೆ. ಇದು ಸಹ ಬೇಸಗೆ ಕಾಲದಲ್ಲಿ ಮಾತ್ರ ಜಾರಿಯಲ್ಲಿರುತ್ತದೆ. ರೈತರು ಕಾಡಿನಿಂದ ತರಬೇಕಾದ ಎಲ್ಲಾ ವಸ್ತುಗಳನ್ನೂ ಮನೆಯಿಂದ ಹೊಲಕ್ಕೆ ಸಾಗಿಸಬೇಕಾದ ಗೊಬ್ಬರ ಮುಂತಾದ್ದನ್ನೂ ತಲೆಹೊರೆಯಿಂದಲೇ ಸಾಗಿಸಬೇಕಾಗಿದೆ. ರೈತರು ತಮಗೆ ಬೇಕಾದ ಸೊಪ್ಪು, ತರಗು, ಕಾಡುಮುಳ್ಳು, ಕಟ್ಟಿಗೆ ಮೊದಲಾದುವನ್ನು ತಮ್ಮ ಗ್ರಾಮ ಮತ್ತು ಜಮೀನುಗಳ ಸಮೀಪದ ಪ್ರದೇಶದಿಂದ ತಂದುಕೊಳ್ಳುತ್ತಾರೆ. ಈ ಅನುಕೂಲತೆಗಾಗಿಯೂ ತಮ್ಮ ರೈತರನ್ನು ಕಾಪಾಡಿಕೊಳ್ಳುವದಕ್ಕಾಗಿಯೂ ಮಲೆನಾಡಿನ ರೈತರು ತಮ್ಮ ತಮ್ಮ ಜಮೀನುಗಳ ಪಕ್ಕದಲ್ಲಿ ವಾಸಮಾಡಿಕೊಂಡಿರುತ್ತಾರೆ. ಹೀಗಿರುವಲ್ಲಿ ಸರಕಾರದವರು ರೈತನ ಮನೆ ಮತ್ತು ಜಮೀನ್ ಪಕ್ಕದ ಕಾಡನ್ನೆಲ್ಲಾ ಸ್ಟೇಟ್ ಫಾರೆಸ್ಟ್ ಮಾಡಿ ದೂರ ಪ್ರದೇಶದಲ್ಲಿ ಸ್ವಲ್ಪ ಸ್ಥಳವನ್ನು ರೈತನ ಉಪಯೋಗಕ್ಕೆ ಬಿಟ್ಟರೆ ಅನುಕೂಲವಾಗಲಾರದು. ಸೊಪ್ಪು, ತರಗು, ಕಟ್ಟಿಗೆ ಮೊದಲಾದದ್ದು ಈ ಮಲೆನಾಡಿನ ರೈತನಿಗೆ ಯಥೇಷ್ಟವಾಗಿ ಬೇಕು. ಅವುಗಳನ್ನು ಸಮೀಪದಿಂದ ತಂದುಕೊಳ್ಳುವದು ಕಷ್ಟಕರವಾಗಿರುವಲ್ಲಿ ದೂರಸ್ಥಳದಿಂದ ತಂದುಕೊಳ್ಳುವದು ಸಾಧ್ಯವೇ? ಮತ್ತು ಇಲ್ಲಿ ಪ್ರತಿಯೊಬ್ಬ ರೈತನೂ ತನ್ನ ಜಮೀನ್ ಸುತ್ತಲೂ ಬೇಲಿಹಾಕಿಕೊಳ್ಳದಿದ್ದರೆ ದನಗಳ ಮತ್ತು ಕಾಡು ಮೃಗಗಳ ಹಾವಳಿಯಿಂದ ಪೈರು ಅವನ ಕೈಗೆ ಸಿಗಲಾರದು. ಇದಕ್ಕೆ ಬೇಕಾದ ಬಿದಿರು ಮೊದಲಾದದ್ದನ್ನು ಸಮೀಪದ ಪ್ರದೇಶದಿಂದ ತಂದುಕೊಳ್ಳುವದೇ ಕಷ್ಟವಾಗಿರುವಲ್ಲಿ ದೂರದಿಂದ ತಂದುಕೊಳ್ಳುವದು ಎಷ್ಟು ಕಷ್ಟವೆಂಬುವದು ಯೋಚಿಸತಕ್ಕದಾಗಿದೆ. ಇದನ್ನೆಲ್ಲಾ ಸ್ಟೇಟ್ ಫಾರೆಸ್ಟಿನಿಂದ ಪಡೆದುಕೊಳ್ಳಬಹುದೆಂದು ರೂಲುಸು ಮಾಡಿದರು. ಲೈಸೆನ್ಸ್ ಪಡೆಯಬೇಕೆಂಬ ನಿರ್ಬಂಧಯಿಲ್ಲದೆ ಇರಲಿಕ್ಕಿಲ್ಲವೆಂದು ನಂಬುತ್ತೇನೆ. ಇದನ್ನು ಪಡೆಯುವ ಕಷ್ಟವನ್ನು ಇಷ್ಟೆಂದು ವರ್ಣಿಸಲು ಅಸಾಧ್ಯ. ಸಂಕ್ಷೇಪವಾಗಿ ಹೇಳಬೇಕಾದರೆ ಮೂರು ಕಾಸು ಕೊಟ್ಟು ಪಡೆಯಬೇಕಾದ ಲೈಸೆನ್ಸಿಗೆ ಮೂವತ್ತು ರೂಪಾಯನ್ನೇ ಖರ್ಚುಮಾಡಬೇಕಾಗುತ್ತದೆ. ಇದು ಅತಿಶಯೋಕ್ತಿಯೆಂದು ಯಾರೂ ಭಾವಿಸಲಾಗರೆಂದು ನಂಬುತ್ತೇನೆ.

ಸಾಧಾರಣವಾಗಿ ಮಲೆನಾಡು ನೋಡದವನು ಒಬ್ಬ ರೈತನು ವಾಸಿಸುವಲ್ಲಿಗೆ ಹೋದರೆ ಅದು ನಾಲ್ಕೈದು ಮನೆಗಳುಳ್ಳ ಹಳ್ಳಿಯೆಂದು ಹೇಳುವನು. ಏಕೆಂದರೆ ಮಲೆನಾಡು ರೈತನಿಗೆ ವಾಸಕ್ಕೆ ಮನೆ, ಧಾನ್ಯ ಇಡಲಿಕ್ಕೂ ಕುಟ್ಟಲಿಕ್ಕೂ ಮನೆ, ದನವಿನ ಕೊಟ್ಟಿಗೆ, ಸೌದೆಕೊಟ್ಟಿಗೆ, ಬಚ್ಚಲುಮನೆ, ಹೀಗೆ ಅನೇಕ ಕಟ್ಟಡಗಳು ಅವಶ್ಯಕವಾಗಿ ಬೇಕಾಗುತ್ತವೆ. ಈ ಕಟ್ಟಡಗಳನ್ನೆಲ್ಲಾ ಮಾಡಿಕೊಳ್ಳಬೇಕಾದರೆ ರೈತನಿಗೆ ಎಷ್ಟೋ ಖರ್ಚು ಬೀಳುತ್ತದೆ. ಇವುಗಳನ್ನು ಒಂದು ಸಾರಿ ಕಟ್ಟಿದರೆ ತೀರಿತೆಂದು ಯಾರಾದರೂ ಊಹಿಸಬಹುದು. ಆದರೆ ಇಲ್ಲಿ ಹಾಗಾಗುವುದಿಲ್ಲ. ಇಲ್ಲಿಯ ಹವ ಮತ್ತು ಗೆದ್ದಲಿನಿಂದ ಬಹು ಶೀಘ್ರ ಕಟ್ಟಡಗಳು ಶಿಥಿಲವಾಗುತ್ತವೆ. ಆಗಾಗ್ಗೆ ರಿಪೇರಿ ಕೆಲಸವು ಕೆಲವು ವರ್ಷಗಳಿಗೊಮ್ಮೆ ಸಂಪೂರ್ಣವಾಗಿ ಹೋಗದು. ಮಾಡುವ ಕೆಲಸವು ಇದ್ದೇ ಇರುತ್ತದೆ. ಮಲೆನಾಡು ರೈತನು ನಾಟಾಕ್ಕೆ ಹೆಚ್ಚು ಬೆಲೆ ಕೊಡದಿದ್ದರೂ ಕೂಲಿಗಳ ಮತ್ತು ಬೇರೆ ಅನಾನುಕೂಲಗಳ ದೆಸೆಯಿಂದ ಕಟ್ಟಡಗಳಿಗೆ ಹೆಚ್ಚು ಖರ್ಚು ಮಾಡಬೇಕಾಗಿರುತ್ತದೆಂಬುದನ್ನು ಅನೇಕರು ತಿಳಿದಿರಬಹುದೆಂದು ನಂಬುತ್ತೇನೆ. ಸಮುದಾರಿ ಇಲ್ಲದ ಈ ಮಲೆನಾಡಿನಲ್ಲಿ ರೈತನು ಸಮೀಪದ ಸ್ಥಳದಲ್ಲಿ ನಾಟ ಕತ್ತರಿಸಿ ಅಲ್ಲಿ ಕೊಯಿಸಿ ಹೆಚ್ಚಾಗಿ ತಲೆಹೊರೆಯಿಂದಲೇ ತಂದುಕೊಳ್ಳುತ್ತಾನೆ. ಈ ಅನುಕೂಲವನ್ನು ತಪ್ಪಿಸಿ ದೂರಸ್ಥಳಗಳಿಂದ ತಂದುಕೊಳ್ಳಬೇಕೆಂದು ವಿಧಿಸಿದರೆ ಬಡರೈತನಿಗೆ ಎಷ್ಟು ಹೆಚ್ಚು ಖರ್ಚಾಗುತ್ತದೆಂಬುದನ್ನು ಅಗತ್ಯವಾಗಿ ಯೋಚಿಸತಕ್ಕದ್ದಾಗಿದೆ. ಇನ್ನು ರೈತನೂ ತನ್ನ ಕಸಬಿಗೆ ಬೇಕಾದ ನಾರು, ವಾದೆ, ಬೆತ, ದಡಗಲು ಮೊದಲಾದವನ್ನು ಕಾಡಿನಿಂದ ಪಡೆಯುತ್ತಾನೆ. ಇವು ಎಲ್ಲಾ ಕಾಡಿನಲ್ಲೂ ದೊರೆಯುವುದಿಲ್ಲ. ಈ ಪದಾರ್ಥಗಳು ದೊರೆಯುವ ಸ್ಥಳವು ಸ್ಟೇಟ್ ಫಾರೆಸ್ಟಾದರೆ ಇವುಗಳನ್ನು ಪಡೆಯುವುದು ಮೇಲೆ ಕಂಡಂತೆ ಬಹು ಕಷ್ಟವಾಗುತ್ತದೆ.

ಇಲ್ಲಿ ಸ್ಟೇಟ್ ಫಾರೆಸ್ಟು ಮಾಡೋಣದರಿಂದ ರೈತನ ಕಸಬಿಗೆ ಜೀವನಕ್ಕೆ ಮುಖ್ಯಾಧಾರವಾಗಿರುವ ಜಾನುವಾರುಗಳ ಮೇವಿಗೆ ತುಂಬಾ ತೊಂದರೆಯಾಗುತ್ತದೆ. ಬೈಲುಸೀಮೆಯಂತೆ ಇಲ್ಲಿ ಒಳ್ಳೇ ಮೇವು ಬೆಳೆಯುವ ವಿಶಾಲವಾದ ಬೈಲು ಪ್ರದೇಶಗಳು ಇರುವುದಿಲ್ಲ. ಅಲ್ಲಲ್ಲಿ ಸ್ವಲ್ಪ ಬೈಲು ಪ್ರದೇಶಗಳು ಇದ್ದರೂ ಅನೇಕ ಕಡೆಗಳಲ್ಲಿ ಹುಲ್ಲು ಹುಟ್ಟುವುದಿಲ್ಲ. ಈ ಕಡೆ ಮಳೆ ಹೆಚ್ಚಾಗಿ ಸುರಿಯುವದರಿಂದ ದನಗಳು ಒಂದೇ ಕಡೆ ನಿಂತು ಮೇಯುವದಕ್ಕಾಗುವದಿಲ್ಲ. ಒಂದು ದಿನ ಮೇದ ಸ್ಥಳದಲ್ಲಿ ಮಾರನೆಯ ದಿನ ಮೇಯುವದಾಗಲಿ ಅಸಾಧ್ಯ. ಏಕೆಂದರೆ ಮಳೆಯಿಂದ ಹುಲ್ಲು ಕೊಳೆಯುವುದಲ್ಲದೆ ದನಗಳ ತುಳಿತದಿಂದ ಕೆಸರಾಗುತ್ತದೆ. ಇದರಿಂದ ಇಲ್ಲಿನ ಜಾನುವಾರುಗಳು ವಿಶಾಲವಾದ ಸ್ಥಳದಲ್ಲಿ ತಿರುಗಿ ಅಲ್ಲಷ್ಟು ಇಲ್ಲಿಷ್ಟು ಮೇವು ಹೊಂದಿಕೊಳ್ಳಬೇಕಾಗಿದೆ. ಇಲ್ಲಿನ ಪ್ರತಿಯೊಬ್ಬ ರೈತನೂ ದನಗಳನ್ನು ಸಾಕಿಯೇ ತನಗೆ ಬೇಕಾದ ಹಾಲು, ಮೊಸರು ಮೊದಲಾದ್ದನ್ನು ಹೊಂದಿಕೊಳ್ಳಬೇಕಾಗಿದೆ. ತನ್ನಲ್ಲಿ ಇಲ್ಲದೆ ಹೋದರೆ ಅವನಿಗೆ ಇಲ್ಲವೇ ಇಲ್ಲ. ಜಾನುವಾರುಗಳು ಇಲ್ಲಿ ವೃದ್ಧಿಹೊಂದುವುದಿಲ್ಲವೆಂಬುದಕ್ಕೆ ಈ ಕಡೆಯವರು ಬೈಲುಸೀಮೆಯಿಂದ ವರ್ಷೇ ವರ್ಷೇ ಕೊಂಡು ತರುವ ಜಾನುವಾರುಗಳ ಸಂಖ್ಯೆಯಿಂದ ಗೊತ್ತುಮಾಡಿಕೊಳ್ಳಬಹುದು. ಇವುಗಳಿಂದಾಗುವ ಮುಖ್ಯ ಪ್ರಯೋಜನವು ಗೊಬ್ಬರ. ಇಲ್ಲಿಯ ಜಮೀನುಗಳಿಗೆ ಗೊಬ್ಬರ ಹೆಚ್ಚಾಗಿ ಬೇಕೆಂಬುವದು ಸರಕಾರದವರ ತಿಳುವಳಿಕೆಗೆ ಬಂದಿರಬೇಕೆಂದು ನಂಬುತ್ತೇನೆ. ಗವರ್ನಮೆಂಟಿನವರು ಸ್ಟೇಟ್ ಫಾರೆಸ್ಟಿನಲ್ಲಿ ಅವರು ವಿಧಿಸುವ ಹುಲ್ಲು ಬನ್ನಿಕೊಟ್ಟು ಮೇಯಿಸಿಕೊಳ್ಳಬಹುದೆಂದು ಒಂದು ವೇಳೆ ವಿಧಾಯಕ ಮಾಡಬಹುದು. ಆದರೆ ಈ ಕಡೆಯವರು ಜಾನುವಾರುಗಳನ್ನು ಸಾಕುವದರಲ್ಲಿ ಎಷ್ಟು ಖರ್ಚುಮಾಡುತ್ತಾರೆಂಬುವದು ಸರಕಾರದವರ ತಿಳುವಳಿಕೆಗೆ ಬಂದಿದೆಯೋ ಇಲ್ಲವೋ ತಿಳಿಯಲಿಲ್ಲ. ಹೆಚ್ಚು ಬರೆದರೆ ಲೇಖನ ಲಂಬವಾಗುವದರಿಂದ ಒಂದೇ ಒಂದು ವಿಷಯವನ್ನು ಮಾತ್ರ ಇಲ್ಲಿ ತಿಳಿಸುತ್ತೇನೆ. ಏನೆಂದರೆ ಇಲ್ಲಿಯವರು ಪಡೆದುಕೊಂಡಿರುವ ಮುಷ್ಕಿ ಜಮೀನೆಲ್ಲಾ ದನಗಳ ಮೇವಿಗಾಗಿಯೇ ಹೊರತು ಅನ್ಯಥಾ ಇಲ್ಲವೆಂಬುದನ್ನು ಮರೆಯಬಾರದು. ಮುಷ್ಕಿಬೆಳೆ ಈ ಕಡೆ ಆಗುವ ಹಾಗಿದ್ದರೆ ಈ ತೊಂದರೆಗಳು ಇರುತ್ತಿಂಬಿಲ್ಲ.

ಈ ಮಲೆನಾಡಿನಲ್ಲಿ ಮೊದಲೇ ಕಾಡು ಮೃಗಗಳ ಮತ್ತು ದುಷ್ಟಮೃಗಗಳ ಬಾಧೆ ಹೆಚ್ಚು. ಇಂಥಾದ್ದರಲ್ಲಿ ಗ್ರಾಮದ ಮತ್ತು ಜಮೀನುಗಳ ಅಕ್ಕಪಕ್ಕದ ಸ್ಥಳಗಳು ಜನಸಂಚಾರವಿಲ್ಲದೆ ದಟ್ಟ ಕಾಡಾದರೆ ಇವುಗಳ ಹಾವಳಿಯನ್ನು ವರ್ಣಿಸತಕ್ಕದೇನು? ಇವುಗಳಿಂದಾಗುವ ನಷ್ಟ ರೈತನಿಗೊಬ್ಬನಿಗೆ ಗೊತ್ತು. ಜೊತೆಗೆ ಇತರ ಅನುಭವಕ್ಕೆ ಬರಲಾರದು. ಸರಕಾರದವರು ಸ್ಟೇಟ್ ಫಾರೆಸ್ಟ್ ಮಾಡಿ ರೈತನ ಜಾನುವಾರುಗಳಿಗೆ ಅಡ್ಡಿ ಮಾಡಿ, ಕಾಡುಮೃಗಗಳನ್ನು ಬಿಟ್ಟು ಮೇಯಿಸಿ ಹೆಚ್ಚಿಸಿ ಮುಷಾಲಿನ ಶಿಕಾರಿದಾರರಿಂದ ಲಾಭ ಸಂಪಾದಿಸುವದು ಯಾವ ನ್ಯಾಯ? ಗವರ್ನಮೆಂಟಿನವರು ಉದ್ದೇಶ ಪಟ್ಟಂತೆ ಸ್ಟೇಟ್ ಫಾರೆಸ್ಟ್ ಮಾಡುವದಾದರೆ ಹೆಚ್ಚು ಜಮೀನು ಸಾಗುವಳಿಗೆ ಬರುವದು ತಪ್ಪಿ ಕಾಡೇ ಹೆಚ್ಚುತ್ತದೆ. ಈ ಕಡೆ ರೈತರ ಸಂಖ್ಯೆ ಹೆಚ್ಚುವಂತೆ ಮಾಡಿ ಸಣ್ಣ ಸಣ್ಣ ಹಿಡುವಳಿ ಕಾಮಗಾರಿಗಳನ್ನು ಮಾಡಿದರೆ ಎಷ್ಟೋ ಮುಷ್ಕಿ ಮತ್ತು ಬಂಜರು ಜಮೀನುಗಳನ್ನು ತರಿ ಸಾಗುವಳಿಗೆ ತರಬಹುದು. ಜನಸಂಖ್ಯೆ ಹೆಚ್ಚಿದಷ್ಟೂ ಇಲ್ಲಿನ ನಿವಾಸಿಗಳಿಗೆ ಪ್ರೋತ್ಸಾಹವೂ ಧೈರ್ಯವೂ ಉಂಟಾಗುತ್ತದೆ.

ಈಗ ಒಂಟಿಯಾಗಿ ಜೀವಿಸುತ್ತಿರುವದರಿಂದ ಕಷ್ಟಕಾಲದಲ್ಲಿ ಸಮೀಪದಲ್ಲಿ ಸಹಾಯಕರು ಯಾರೂ ಇಲ್ಲವಲ್ಲಾ ಎಂಬ ಭಯ ಇಲ್ಲಿನ ನಿವಾಸಿಗಳಿಗೆ ಯಾವಾಗಲೂ ಇರುವದರಿಂದ ಇವರ ಅಭಿವೃದ್ಧಿಗೆ ತುಂಬಾ ಕೊರತೆಯಾಗಿದೆ. ರೈತರ ಸಂಖ್ಯೆಯು ಹೆಚ್ಚುವುದರಿಂದ ದೇಶದ ಸಂಪತ್ತು ಹೆಚ್ಚುವಷ್ಟು ಸ್ಟೇಟ್ ಫಾರೆಸ್ಟಿನಿಂದ ಉಂಟಾಗಲಾರದು. ಸಾಗುವಳಿಗೆ ಜಮೀನು ಅಪೇಕ್ಷಿಸಿದರೆ ಸ್ಟೇಟ್ ಫಾರೆಸ್ಟಿನೊಳಗಿರುವ ಜಮೀನನ್ನು ಕೊಡುತ್ತೇವೆಂದು ಗವರ್ನಮೆಂಟಿನವರು ರೂಲುಸು ಮಾಡಬಹುದು. ಆದರೆ ಜಾರಿಗೆ ಬರುತ್ತೆಂದು ನಂಬುವದು ಕಷ್ಟ. ಮತ್ತು ಹಾಗೆ ಪಡೆದುಕೊಳ್ಳುವದು ರೈತನಿಗೆ ಅಸಾಧ್ಯವಾದ ಕಾರ್ಯವೇ ಆಗಿದೆ. ಸಾಧಾರಣವಾದ ಕಾರ್ಯಗಳನ್ನು ಹತ್ತಿಪ್ಪತ್ತು ಅರ್ಜಿಗಳನ್ನು ಕೊಟ್ಟುಕೊಂಡು ವರ್ಷಾನುಗಟ್ಟಲೆ ಅಲೆದರೂ ಕೆಲಸ ನೆರವೇರುವುದಿಲ್ಲ. ಇಂಥಾದ್ದರಲ್ಲಿ ಫಾರೆಸ್ಟ್ ಇಲಾಖೆಯ ಮತ್ತು ರೆವಿನ್ಯೂ ಇಲಾಖೆಯವರ ಅನುಮತಿ ಪಡೆದು ಜಮೀನು ಸಂಪಾದಿಸಿಕೊಳ್ಳುವದು ಬಡರೈತನಿಗೆ ಸಾಧ್ಯವೇ? ಇದಕ್ಕೆ ಒಂದೇ ಒಂದು ದೃಷ್ಟಾಂತರ ಕೊಡಬಹುದು. ಮಲೆನಾಡಿನ ಹಿಡುವಳಿದಾರರು ತಮ್ಮ ಸ್ವಂತ ಜಮೀನಿನಲ್ಲಿ ರತಕ್ಕ ಕೇಂದಿಮರಗಳಿಂದ ಮಾಫಿ ಲೈಸೆನ್ಸು ಪಡೆದು ಕೇಂದಿ ಇಳಾರ ಮಾಡಿಕೊಳ್ಳಬಹುದೆಂದು ಸರಕಾರದವರು ರೂಲಸು ಮಾಡಿದರು. ರೈತರು ಕೇಳಿಕೊಂಡಾಗ ಕೆಳಗಿನ ಅಧಿಕಾರಿಗಳು ಅವರಿಗೆ ನಾನಾ ತರವಾದ ಅಡ್ಡಿಗಳನ್ನು ಕಲ್ಪಿಸಿ ಲೈಸನ್ಸ್ ಕೊಡದೆಹೋದದ್ದರಿಂದ ರೈತರು ಮೇಲೆ ಕಂಡ ರೂಲಸಿನ ಫಲವನ್ನು ಅನುಭವಿಸದೆ ಇದಾರೆ. ಹೀಗೆ ಗವರ್ನಮೆಂಟಿನವರು ಮಾಡುವ ರೂಲಸು ಓದುವವರಿಗೆ ರಿಯಾಯಿತಿಯಾಗಿ ಕಾಣುತ್ತದೆಯೇ ಹೊರತು ಮೂಢ ರೈತರು ಅದನ್ನು ಅನುಭವಿಸುವುದಕ್ಕೆ ಸಾಧ್ಯವಲ್ಲ.

ಗವರ್ನಮೆಂಟಿನವರು ಸ್ಟೇಟ್ ಫಾರೆಸ್ಟು ಮಾಡಿ ಅದಕ್ಕೋಸ್ಕರ ಅನೇಕ ಸಿಬ್ಬಂದಿಗಳನ್ನು ನೇಮಿಸಿದರೆ ಅವರು ಉತ್ಪತ್ತಿ ಹೆಚ್ಚಿಸುತ್ತಾರೆಂಬುದಕ್ಕೆ ಆಧಾರವೇನಿದೆಯೋ ಗೊತ್ತಾಗಲಿಲ್ಲ. ಈಗಿನ ಫಾರೆಸ್ಟ ಉತ್ಪತ್ತಿಯಲ್ಲಿ ರೈತರಿಂದ ವಸೂಲಾಗುವ ಹುಲ್ಲುಬನ್ನಿಯೂ, ಶಿಕಾರಿ ಲೈಸನ್ಸ್ ಉತ್ಪತ್ತಿಯೂ, ಡಿಸ್ಟ್ರಿಕ್ಟ್ ಜಂಗಲಿಂದಾಗುವ ಎಲ್ಲಾ ಉತ್ಪತ್ತಿಯೂ, ಶ್ರೀಗಂಧದಿಂದಾಗುವ ಹುಟ್ಟುವಳಿಯೂ ಸೇರಿರುವದರಿಂದ ಗಣನೆಗೆ ತರತಕ್ಕದ್ದಲ್ಲ. ಪ್ರತ್ಯೇಕ ಒಂದು ಸ್ಟೇಟ್ ಫಾರೆಸ್ಟಿನಲ್ಲಿ ಗವರ್ನಮೆಂಟಿನವರು ನಾಟನೆಟ್ಟು ಬೆಳಸಿದ್ದರ ಆದಾಯವೆಷ್ಟವನ್ನು ಪ್ರಕಟಿಸಿ ಮಾಡಿದರೆ ರೈತರಾದ ನಾವು ನೋಡಿ ಸಮಾಧಾನ ಪಟ್ಟುಕೊಳ್ಳಬಹುದು.

ಒಟ್ಟಿನಲ್ಲಿ ಹೇಳಬೇಕಾದರೆ ಮಲೆನಾಡು ರೈತರು ಬಡವರೂ, ಮೂಢರೂ ಆಗಿದಾರೆ. ಇವರ ಜೀವನವೂ ಕೂಡಾ ಕಷ್ಟಕರವಾದದ್ದು. ಇಲ್ಲಿನ ರೈತರಿಗೆ ಈಗಲೆ ಎಷ್ಟೊ ಹಿಂಸೆಯಾಗಿದೆ. ಇದರ ಮೇಲೆ ಈ ಕಡೆ ಸ್ಟೇಟ್ ಫಾರೆಸ್ಟು ಮಾಡಿದರೆ ರೈತರಿಗೆ ತೊಂದರೆ ಹೆಚ್ಚಾಗುತ್ತದೆಯೇ ಹೊರತು ಮತ್ತೇನೂ ಪ್ರಯೋಜನವಾಗಲಿಕ್ಕಿಲ್ಲ. ಆದ್ದರಿಂದ ಗವರ್ನಮೆಂಟಿನವರು ದೀರ್ಘವಾಗಿ ಯೋಚಿಸಿ ಮಲೆನಾಡಿನಲ್ಲಿ ಸ್ಟೇಟ್ ಫಾರೆಸ್ಟು ಮಾಡುವದನ್ನು ಮಾಫಿಸಿಕೆ ಮಾಡುವರೆಂದು ನಂಬುತ್ತೇನೆ.

ಮಲೆನಾಡು ಸೇವಕ.

ಬಡರೈತರ ಹಿತಚಿಂತಕ, ಸಕಲೇಶಪುರ; ನಿಷ್ಪಕ್ಷಪಾತಿ, ಕೊಟ್ಟಿಗೆಗೊಲ್ಲಹಳ್ಳಿ.—ಈ ಬಾತ್ಮಿಗಳಿಗೆ ಬರೆದವರ ಹೆಸರು ವಿಳಾಸ ಕಾಣಿಸಿಲ್ಲ. ಹೆಸರು ಸ್ಥಳ ಮಾತ್ರ ತಿಳಿಸಿದರೆ ಸಾಲದು. ಸಂಪೂರ್ಣ ವಿಳಾಸಗಳನ್ನು ತಿಳಿಸಿದರೆ ಪ್ರಕಟಿಸಬಹುದು.

ಚಂದಾದಾರ, ಚಿತ್ರದುರ್ಗ.—ಡೆಪ್ಯುಟಿ ಕಮಿಷನರನ್ನು ನೀವು ಮೊಬ್ಬಾಕೆಂದು ನಿಮ್ಮ ಇಂಗಿತವನ್ನು ತಿಳಿಸಿ ದೃಷ್ಟಾಂತಕೊಟ್ಟರೆ ಅವರು ಸಂತೋಷಪಟ್ಟು ನಿಜಸ್ಥಿತಿಯನ್ನು ಪತ್ತೆಮಾಡಿ ಪ್ರಜಾಹಿತವನ್ನು ಮಾಡಬಲ್ಲರು. ಮೊಗಂ ಆದ ಆಕ್ಷೇಪಣೆಗಳುಳ್ಳ ಬಾತ್ಮಿಗಳನ್ನು ಪ್ರಕಟಿಸೋಣದರಿಂದ ಫಲವೇನೂ ಕಾಣುವುದಿಲ್ಲ.

ವಿಚಾರಾಭಿಲಾಷಿ, ಹೆಬ್ಬಳಲು.—ವಿಷಯ ಅಲ್ಪವಾದದ್ದರಿಂದ ವಿವಾದ ಬೆಳಸುವುದು ವ್ಯರ್ಥ.

ಚಂದಾದಾರ, ಹಿರೀಸಾವೆ.—ನಿಮ್ಮ ಆಶಯ ಗೊತ್ತಾಗಲಿಲ್ಲ. ಅಲಂಕಾರಗಳುಳ್ಳ ಬಾತ್ಮಿಗಳನ್ನು ಪ್ರಕಟಿಸುವುದಕ್ಕೆ ಪತ್ರಿಕೆಯಲ್ಲಿ ಸ್ಥಳ ಸಾಲದು. ಪ್ರಕಟನೆಗಳನ್ನು ತೊರೆದು ಚಂದಾದಾರರನ್ನೇ ನಂಬಿಕೊಂಡಿರುವ ಪತ್ರಿಕೆಗಳು ಬದುಕುವುದು ಈಗಿನ ಸ್ಥಿತಿಯಲ್ಲಿ ಸಾಧ್ಯವಲ್ಲ. ಅದರಲ್ಲೂ ಈಗಿನ ಯುದ್ಧವ್ಯಾಸನೆಯ ಕಾಲದಲ್ಲಿ ಸಲಕರಣೆಗಳು ದೊರಕುವುದು ಪ್ರಯಾಸ.

ಟವನ್ ನಿವಾಸಿ, ಹುಣಸೂರು.—ನಿಮ್ಮ ಆಕ್ಷೇಪಣೆಯನ್ನು ಡೆಪ್ಯುಟಿಕಮಿಷನರಿಗೂ, ಚೀಫ್ ಕೋರ್ಟಿಗೂ ತಿಳಿಸಿ. ಪತ್ರಿಕಾ ಪ್ರಸಂಗದಿಂದ ನಿಮಗೆ ಫಲವಾದೀತೆಂದು ತೋರುವುದಿಲ್ಲ.

ಚಂದಾದಾರ, ಬೆಂಡಕೆರೆ.—ಅಂಥಾ ಘೋರವಾದ ಅಕೃತ್ಯ ನಡೆದದ್ದು ಉಂಟಾದರೆ ರುಜುವಾತು ಕೊಡುವ ಪಕ್ಷಕ್ಕೆ ಡೆಪ್ಯುಟಿ ಕಮಿಷನರಿಗೂ, ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ರವರಿಗೂ ಮೊದಲು ತಿಳಿಸಬೇಕು. ರುಜುವಾತಿದ್ದೂ ಅನ್ಯಾಯವಾಯಿತೆಂದು ತಿಳಿದೂ ಹೆದರಿ ಸುಮ್ಮನಿದ್ದರೆ ಅಕೃತ್ಯಗಳು ಹೆಚ್ಚುವವಲ್ಲದೆ ಅಡಗುವುದಿಲ್ಲ.

ಚಂದಾದಾರ್, ಚಿತ್ರದುರ್ಗ.—ಮೊಕದ್ದಮೆ ವಿಚಾರಣೆಯಲ್ಲಿರುವಾಗ ನೀವು ಬರೆದಿರುವಂಥಾ ಬಾತ್ಮಿಯನ್ನು ಪ್ರಕಟಿಸಲಾರೆವು. 2-3 ರೂಪಾಯಿನ ಪದಾರ್ಥಕ್ಕೋಸ್ಕರ 300-400 ರೂಪಾಯಿ ಖರ್ಚಾಯಿತೆಂದರೆ ಏನು ಹೇಳೋಣ! ಒಂದು ಕೋರ್ಟಿನಲ್ಲಿ ಅನ್ಯಾಯವಾದರೆ ಅದನ್ನು ಸರಿಪಡಿಸುವುದಕ್ಕೆ ಚೀಫ್ ಕೋರ್ಟಿನ ತನಕ ಹಲವು ಮೇಲ್ಪಟ್ಟ ಕೋರ್ಟುಗಳಿಲ್ಲವೇ!

ಸಂಸ್ಥಾನದಲ್ಲಿ ಹಲವು ದೇವಸ್ಥಾನಗಳಲ್ಲೂ, ಮಂದಿರಾದಿಗಳಲ್ಲೂ ಉತ್ಸವಗಳೂ, ಅವುಗಳಿಗೆ ಸಂಬಂಧಪಟ್ಟಂತೆ ಪರಿಷೆ, ಜಾತ್ರೆಗಳೂ, ಉದಾರವಾದ ಅನ್ನದಾನಗಳೂ, ಇತರ ಧರ್ಮಕಾರ್ಯಗಳೂ ನಡೆದಿರುವವೆಂದು ರಥರಥಿಯಾಗಿ ವರ್ಣಿಸಿ ಬರೆದಿರುವ ಅನೇಕ ಬಾತ್ಮಿಗಳು ನಮಗೆ ತಲುಪಿರುತ್ತವೆ. ಈ ಬಾತ್ಮಿದಾರರು ಪಟ್ಟ ಶ್ರಮಕ್ಕಾಗಿ ಅವರನ್ನು ವಂದಿಸಿ, ಸ್ಥಳಸಂಕೋಚದಿಂದ ಅವನ್ನು ಪ್ರಕಟಿಸಲಾಗಲಿಲ್ಲವೆಂದು ವಿಷಾದಿಸುತ್ತೇವೆ. —ಎಡಿ.]

ತಾಲ್ಲೂಕು ವರ್ತಮಾನಗಳು.

ಮಂಡ್ಯದ ತಾ|| ಮದ್ದೂರು.—ಈ ಊರಿನ ಮದ್ದೂರಮ್ಮನ ಜಾತ್ರೆಯನ್ನು ಪ್ರೆಂಟ್‌ರಿಂಗ್ಸ್ ಸಬ್ ಡಿವಿಜನ್ ಸಾಹೇಬರವರ ಸಹಾಯ ಚಿತ್ತೈಕಸೇರಿಯಾದ ಏರ್ಪಾಡಿನಿಂದ ವಿಜೃಂಭಣೆಯಾಗಿ ನಡಿಸಲ್ಪಟ್ಟಿತು. ಮತ್ತು ಅನೇಕವಾದ ದನಗಳು ಸೇರಿತ್ತು. ದನಗಳ ಪ್ರದರ್ಶನದಲ್ಲಿ ಅವರು ಖುದ್ದು ಪರಾಂಬರಿಸಿ ಮೇಲಾದ ದನಗಳಿಗೂ ಮತ್ತು ಹಸುಗಳಿಗೂ ಬಹುಮಾನವನ್ನು ದಯಪಾಲಿಸಿ ಮೃದುವಾದ ವಾಕ್ಯಗಳಿಂದ ಪಶುಮುಖದ ವಿಚಾರದಲ್ಲಿ ಸ್ವಾರಸ್ಯವಾದ ಉಪನ್ಯಾಸವನ್ನು ಕೊಟ್ಟರು. ನಂತರ ನಮ್ಮ ರೇಂಜ್ ಆಫೀಸರ ಶ್ರೀಕಂಠಯ್ಯನವರಿಂದ ಕೆಲವು ಉಪನ್ಯಾಸ ನಡೆದು ಸರ್ವರ ಮನಸ್ಸು ಸಂತೋಷ ಗೊಂಡಿತು. ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಮಂತ್ರಿಗಳಾದ ಮ|| ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಚಿತ್ತಕ್ಕೆ ಪ್ರೀತಿಯಾದ ವಂದನೆಯನ್ನು ಒಪ್ಪಿಸುವ ಭಕ್ತಿಗಾಗಿ ಸಂತೋಷದ ವಾರ್ತೆಯನ್ನು ತಂತಿಮೂಲಕ ಒಪ್ಪಿಸಿರುತ್ತೆ.

ಹೊಳಕೋಟೆ.—ಈ ತಿಂಗಳು 3 ನೇ ತಾ|| ಬುಧವಾರ ರಾತ್ರಿ ವಿಷೋಬ ಸುಬ್ಬರಾಯನ ಮನೆಯಲ್ಲಿ ಸುಮಾರು 500 ರೂ ಬಾಬತ್ತು ನೊತ್ತು ಕಳ್ಳತನವಾಯಿತು. 6 ದಿವಸಕ್ಕೆ ಮುಂಚೆ ಅವರ ಸಂಸಾರ ತೀರಿ ಹೋಗಿತ್ತು. ಇಂಥಾ ದುಃಖದ ಸಮಯದಲ್ಲಿ ಕಳ್ಳತನ ನಡೆದದ್ದರಿಂದ ಅವರ ದುಃಖ ಹೇಳತೀರದು. ಪೊಲೀಸಿನವರು ಬೀಟ್ ತಿರುಗುತ್ತೇವೆಂದು ಹೇಳುತ್ತಾರೆ. ಕಳ್ಳತನಗಳೇನೋ ನಡೆಯುತ್ತಲೇ ಇರುತ್ತವೆ. ಪೊಲೀಸಿನವರು ಸರಿಯಾಗಿ ಕೆಲಸ ಮಾಡುತ್ತಿದ್ದರೆ ಇಂಥಾ ಕೃತ್ಯಗಳು ನಡೆಯುವದೇ? ಕೆಲವು ಕಾಲದಿಂದ ಬೀಟ್‌ನವರು ಬರುವದು ಇಲ್ಲವೆಂದು ಹೇಳಿಕೊಳ್ಳುತ್ತಾರೆ. ಮೊದಲು ಬೀದಿಯಲ್ಲಿ ಕೂಗಿಕೊಂಡು ತಿರುಗಾಡುತ್ತಾ ಇದ್ದರು. ಕೆಲವು ಕಾಲದಿಂದ ಅವರ ಶಬ್ದವೇ ಇಲ್ಲವೆಂದು ಹೇಳುತ್ತಾರೆ. ಸುಮಾರು 6 ತಿಂಗಳಿಗೆ ಮುಂಚೆ ಗುಮಾಸ್ತೆ ವೆಂಕಟಾಚಲಯ್ಯ

ಷವರ ಮನೆಯಲ್ಲಿ 100 ರೂ. ಸೊತ್ತು ಕಳುವಾಯಿತು. ಇದುವರೆಗೂ ಅದರ ಪತ್ತೆಯೇ ಇಲ್ಲ.—4 ನೇ ತಾ. ರಾತ್ರಿ ಒಂದು ಮೇಕೆಯನ್ನು ಯಾರೋ ಕೊಯಿದು ಚರ್ಮ ಸೊಟ್ಟೆಯೋಗಿನ ಎಲ್ಲಾ ಸಾಮಾನು ಊರಾಚೆ ಬಿಸಾಡಿದ್ದರಂತೆ. ಇಂಥಾ ಸಣ್ಣ ಕೃತ್ಯಗಳೇನೋ ಆಗುತ್ತಲೇ ಇವೆ. ಮೋಟ್ಯಂಡ ಸುಬ್ಬರಾಯರ ಸೊತ್ತುಗಳ ಪತ್ತೆ ಮಾಡಿದವರಿಗೆ 25 ರೂ. ಬಹುಮಾನ ಸಿಕ್ಕುತ್ತೆ. ಪೊಲೀಸಿನವರು ಬೀಟ್ ತಿರುಗುವದಿಲ್ಲವೆಂದು ಹೇಳುವದಕ್ಕೆ ಆಗುವದಿಲ್ಲ. ಅವರು ಬೀಟ್ ತಿರುಗಬಹುದು. ಕಳ್ಳತನಗಳೇನೋ ನಡೆಯುತ್ತೇವೆ. ಪ್ರತಿಯೊಬ್ಬ ಕಾನಿಸ್ಟೇಬಲ್ ಕಳ್ಳರನ್ನು ಪತ್ತೆಮಾಡಿ ಸರ್ಕಾರದಿಂದ ಬಹುಮಾನ ಹೊಂದಿದರೆ ಎಷ್ಟು ಸಂತೋಷ. ಬೆಂಗಳೂರಿನಲ್ಲಿ ಒಬ್ಬ ಇನ್‌ಸ್ಪೆಕ್ಟರು ಅನೇಕರನ್ನು ಹಿಡಿದದ್ದರಿಂದ ಈ ವರ್ಷ 100 ರೂ. ಬಹುಮಾನ ಒಂದು ಗಡಿಯಾರ, ಒಂದು ಸರ್ಟಿಫಿಕೇಟ್ ತೆಗೆದುಕೊಂಡರೆಂದು ಕೇಳಿ ಎಲ್ಲರೂ ಸಂತೋಷಪಡುತ್ತಾರೆ.—ಹೊಸಕೋಟೆಯಿಂದ ವೈಟ್‌ಫೀಲ್ಡ್ ಸ್ಟೇಷನ್‌ಗೆ ಹೋಗಿಬರುವದಕ್ಕೆ ಜಟ್ಕಾ ಗಾಡಿಗಳುಂಟು. ಈ ಗಾಡಿಗಳಿಂದ ಪ್ರಯಾಣಿಕರಿಗೆ ತುಂಬಾ ಕಷ್ಟ. ರಾತ್ರಿ 8 ಗಂಟೆಗೆ ಬರತಕ್ಕ ಗಾಡಿಗಳಿಗೆ ಲಾಂದ್ರಗಳು ಇಲ್ಲದೆ ಇರುವೆಗೂ ಗಾಡಿಯಲ್ಲಿರತಕ್ಕವರಿಗೂ ತುಂಬಾ ಕಷ್ಟ. ಗಾಡಿಯಲ್ಲಿ 4 ಜನರಿಗಿಂತ ಹೆಚ್ಚಾಗಿ ಕೂಡಿಸಬಾರದು ಎಂತ ರೂಲ್ಸು ಇದ್ದಾಗ್ಯೂ ಪ್ರತಿಯೊಂದು ಗಾಡಿಯಲ್ಲಿಯೂ ಜನಸಿಕ್ಕಿದರೆ 6 ಜನರನ್ನು ಸಹ ಕೂಡಿಸುತ್ತಾರೆ. ಕುದುರೆಗೂ ಗಾಡಿಯಲಿದ್ದ ಜನರಿಗೂ ಕಷ್ಟ. ಮತ್ತು ಬಾಡಿಗೆಯ ವಿಷಯ ಕ್ರಮವಿಲ್ಲ. ಜಟ್ಕಾ ಗಾಡಿಯವರಿಂದ ಪ್ರಯಾಣಿಕರಿಗೆ ತುಂಬಾ ನಷ್ಟವೂ, ಕಷ್ಟವೂ ಆಗುತ್ತೆ. ಇದನ್ನು ವಿಚಾರಿಸುವವರೇ ಇಲ್ಲ. ಪ್ರತಿಯೊಂದು ಗಾಡಿಗೂ ಲಾಂದ್ರಾ ಇಟ್ಟು 4 ಜನರಿಗಿಂತ ಹೆಚ್ಚಾಗಿ ಕೂಡಿಸಬಾರದೆಂದು ಸರ್ಕಾರದವರು ಮಾಡಿರುವ ರೂಲ್ಸನ್ನು ನಮ್ಮ ಪೊಲೀಸ್ ಇನ್‌ಸ್ಪೆಕ್ಟರ್ ಸಾಹೇಬರೂ, ಅಮಲ್ದಾರ್ ಸಾಹೇಬರೂ ಜಾರಿಗೆ ತಂದು ಕೀರ್ತಿಸಂಪಾದಿಸಲಿಂದಾರೆಂದು ನಂಬುತ್ತೇನೆ—ಈ ತಿಂಗಳು 4 ನೇ ತಾ ಗುರುವಾರ ರಾತ್ರಿ ಸ್ವಲ್ಪ ಆಲಿಕಲ್ಲು ಮಳೆ ಬಂದದ್ದರಿಂದ ಜನರಿಗೆ ತುಂಬಾ ಸಂತೋಷವಾಯಿತು.

ಒಳದೇಶದ ವೃತ್ತಾಂತಗಳು.

ಬರೋಡೆಯ ದಿವಾನ್ ಮ|| ವಿ. ಪಿ. ಮಾಧವರಾಯರು ಮೂರು ತಿಂಗಳ ರಜಾ ಪಡೆದು ಕಳೆದ ಮಂಗಳವಾರ ಬೆಂಗಳೂರಿಗೆ ಬಂದಿದ್ದಾರೆ.

ಶ್ರೀಮನ್ ಮಹಾರಾಜರವರು ಕಳೆದ ಭಾನುವಾರ ನೀಲಗಿರಿಯಿಂದ ಮೋಟರಿನಲ್ಲಿ ರಾಜಧಾನಿಗೆ ಚಿತ್ತೈಸಿದರು. ಅವರು ಈ ವಾರ ಶ್ರೀ ಶೃಂಗೇರಿಗೆ ದಯಮಾಡುವರೆಂದು ಕೇಳುತ್ತೇವೆ.

ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯಾಗಿದ್ದು ಆರು ತಿಂಗಳ ರಜದ ಮೇಲೆ ಸೀಮೆಗೆ ಹೋಗಿರುವ ಮಿ|| ಆರ್. ಎಚ್. ಕ್ಯಾಂಬೆಲ್‌ರವರಿಗೆ ಅವರ ರಜವನ್ನು ಇನ್ನೂ ನಾಲ್ಕು ತಿಂಗಳು ಹೆಚ್ಚಿಸಿಕೊಟ್ಟಿದ್ದಾರೆ.

ಕಳೆದ ಸೋಮವಾರ ಸಾಯಂಕಾಲ ಬೆಂಗಳೂರು ಹೈಸ್ಕೂಲಿನಲ್ಲಿ ನಮ್ಮ ದಿವಾನ್‌ರವರು ಅಧ್ಯಕ್ಷತೆಯನ್ನು ವಹಿಸಿ ನಮ್ಮ ಸಂಸ್ಥಾನದ ಕಸಬು ಮತ್ತು ವ್ಯಾಪಾರಾಭಿವೃದ್ಧಿಗಾಗಿ ಒಂದು ವರ್ತಕಮಂಡಲಿಯನ್ನು ಪ್ರಾರಂಭಮಾಡಿದರು.

ಗುಬ್ಬಿಯಲ್ಲಿ ತಾ. 18 ನೇ ಗುರುವಾರವೂ ಶುಕ್ರವಾರವೂ ಡೆಪ್ಯುಟಿ ಕಮಿಷನರ್ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ಯವರ ಅಧ್ಯಕ್ಷತೆಯಲ್ಲಿ ತಾಲ್ಲೂಕ್ ಕಾನ್‌ಫರೆನ್ಸೂ, ವ್ಯವಸಾಯ ಮತ್ತು ಕಸಬುಗಳ ಪ್ರದರ್ಶನಗಳೂ ನಡೆಸಲ್ಪಡುವವೆಂದು ತಿಳಿಸಲ್ಪಟ್ಟಿದೆ.

ಬೆಂಗಳೂರು ಸಿಟಿಯಲ್ಲಿ ವಿದ್ಯಾವತಿಯರಾದ ದೇಶೀಯ ಸ್ತ್ರೀಯರು ಸೇರಿ ವಿಹಾರಾರ್ಥವಾದ ಸಂಘವನ್ನು ಏರ್ಪಡಿಸಿಕೊಳ್ಳುವವರಾಗಿದ್ದಾರೆಂದೂ, ಈ ಭಾಗದಲ್ಲಿ ಸೌ|| ಶ್ರೀರಂಗಮ್ಮ, ಬಿ ಎ. ಯವರು ಪ್ರಯತ್ನ ಮಾಡುತ್ತಿರುವರಾಗಿಯೂ ಕೇಳುತ್ತೇವೆ.

ಬೆಂಗಳೂರಿನಿಂದ ಆನೇಕಲ್ಲು ಬನ್ನೇರುಘಟ್ಟಗಳ ಮಾರ್ಗವಾಗಿ ಹೊಸೂರಿಗೆ ರೈಲ್ ರಸ್ತೆಮಾಡಿಸುವುದಕ್ಕೆ 12,75,000 ರೂಪಾಯಿ ಬೇಕಾದೀತೆಂದು ಅಂದಾಜು ಆಗಿದೆ. ಹಣ ಒದಗಿಸುವ ವಿಷಯದಲ್ಲಿ ಬೆಂಗಳೂರು ಮತ್ತು ಆನೇಕಲ್ ತಾಲ್ಲೂಕ್ ಬೋರ್ಡಿನವರು ಯೋಚಿಸುತ್ತಿದ್ದಾರೆ

ಬೆಂಗಳೂರಿನಲ್ಲಿ ರಾಜಾಮಹಲ್ ಸುತ್ತಲೂ ಉಪ್ಪಾರಹಳ್ಳಿ ಮತ್ತು ದಾಬಸ್‌ಪೇಟೆಗಳಲ್ಲೂ ಅಚ್ಚುಕಟ್ಟಾದ ಆರೋಗ್ಯವರ್ಧಕ ಕಾಮಗಾರಿಗಳನ್ನು ಮಾಡಿಸುವುದಕ್ಕೆ 71,000 ರೂಪಾಯಿ ಅಂದಾಜು ಆಗಿದೆ. ಈ ಪೈಕಿ ನಾಲ್ಕನೇ ಒಂದು ಹಿಸ್ಸೆಯನ್ನು ಕೊಡುತ್ತೇವೆಂದು ಸಿಟಿ ಮ್ಯುನಿಸಿಪಾಲಿಟಿಯವರು ಒಪ್ಪಿಕೊಂಡಿದ್ದಾರೆ.

ಶಿವಮೊಗ್ಗಾ ಟೌನ್ ಬಡಾವಣೆಯಲ್ಲಿ ಅಲ್ಲಿನ ಅಡ್ವೊಕೇಟರುಗಳಾದ ಮ|| ಬಾಲಕೃಷ್ಣರಾಯರೂ, ಮ|| ಸುಬ್ಬರಾಯರೂ, ಮ|| ಸೀತಾರಾಮಯ್ಯನವರೂ ಸೇರಿ ಸುಮಾರು 15,000 ರೂಪಾಯಿ ಮುಟ್ಟಸೆ ಬಡವರಿಗಾಗಿ 30 ಮನೆಗಳನ್ನು ಕಟ್ಟಿಸಿಕೊಟ್ಟು, ಮನೆ ವಹಿಸಿಕೊಳ್ಳುವವರಿಂದ ಕೇಳದಾ 5 ರಂತೆ ಬಡ್ಡಿಯನ್ನೂ ಸುಲಭ ದರದ ಕಂತುಗಳನ್ನೂ ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಂಡಿರುವಂತೆ ಪ್ರಕಟವಾಗಿದೆ.

ಚಿತ್ರದುರ್ಗದ ಅಸ್‌ಪಾಸಿನಲ್ಲಿ ಮೂರು ದರೋಡೆಗಳು ನಡೆದಿರುವಂತೆ ಪ್ರಕಟವಾಗಿದೆ. ಒಂದು ಗುಂಪಿನ ಕಳ್ಳರು ಗ್ರಾಮಕ್ಕೆ ನುಗ್ಗಿ ಕೆಲವು ಮಾಡಿ

ದರು. ಪೊಲೀಸ್ ಇನ್‌ಸ್ಪೆಕ್ಟರು ಪತ್ತೇ ಸಮೇತ ಹಳೇಗೆಟು ಹೋಗುತ್ತಿರುವಲ್ಲಿ ಕಳ್ಳರು ಬಿದ್ದು ಅವರಿಂದ 400 ರೂಪಾಯಿನ ಒಡವೆಗಳನ್ನು ಕಿತ್ತುಕೊಂಡರು. ಟವನ್ ಸರ್ವೇ ಮ|| ಲಿಂಗಪ್ಪನವರ ಮನೆಗೆ ನುಗ್ಗಿದ್ದರೆಂದೂ, ಹುಸಿ ಮದ್ದು ಹಾರಿಸಿದ್ದರಿಂದ ಓಡಿಹೋದರೆಂದೂ ಹೇಳುತ್ತಾರೆ.

ಕನ್ನಡ ಪರಿಷತ್ತಿನ ಎರಡನೇ ವಾರ್ಷಿಕ ಸಭೆಯು ಕಳೆದ ಶನಿವಾರ ಬೆಂಗಳೂರಿನಲ್ಲಿ ನಡೆಯಿತು. ಮ|| ಎಚ್. ವಿ ನಂಜುಂಡಯ್ಯನವರು ಅಧ್ಯಕ್ಷರಾಗಿದ್ದರು. ಬೊಂಬಾಯಿ, ಮದರಾಸು, ಮಂಗಳೂರು, ಧಾರವಾಡ, ಬೆಳಗಾವಿ ಮೊದಲಾದ ಕಡೆಗಳಿಂದ ಕನ್ನಡ ಭಾಷಾಭಿಮಾನಿಗಳು ಸಭೆಗೆ ಬಂದಿದ್ದರು. ನಮ್ಮ ದಿವಾನ್‌ರವರೂ ಸಭೆಯಲ್ಲಿ ಹಾಜರಾಗಿದ್ದರು. ಈ ಪರಿಷತ್ತು ಎರಡು ದಿನ ನಡೆದು ಮುಂದಿನ ವರುಷದ ಸಭೆಯು ಧಾರವಾಡದಲ್ಲಿ ಜರುಗುವಂತೆ ಗೊತ್ತುಮಾಡಲ್ಪಟ್ಟಿತು.

ಗೃಹಕೃತ್ಯದ ನೋಟೀಸು.

ಬೆಂಗಳೂರು ಸಿಟಿ ಸರಿಗೆಪೇಟೆಯಲ್ಲಿರುವ ಜಟ್ಟಿಗರ ಒಂದನೇ ಅಪ್ಪಾಜಟ್ಟಿ, ಎರಡನೇ ವೆಂಕಟ್ರಮಣಜಟ್ಟಿ, ಮೂರನೇ ಅಪ್ಪಾಜಟ್ಟಿ ಇವರುಗಳು ಸಮಸ್ತ ಜನರುಗಳುವಳಿಕೆ ಬಗ್ಗೆ ತಿಳಿಯಪಡಿಸುವದೇನೆಂದರೆ—ನಮ್ಮಗಳ ಚಿಕ್ಕಪ್ಪನ ಮಗನು ವೆಂಕಟ್ರಮಣ ಜಟ್ಟಿ ಎಂಬಾತನು ಫವತಿಪಟ್ಟು ಸುಮಾರು ಒಂದು ವರ್ಷವಾಯಿತು. ಈತನ ಸ್ವಾಧೀನದಲ್ಲಿ ಬೆಂಗಳೂರು ತಾಲ್ಲೂಕು ಕಸಬಾ ಹೋಬಳಿ ಪೈಕಿ ಕೊಡಿಗೇಹಳ್ಳಿ ಗ್ರಾಮದಲ್ಲಿ ತರೀ ಖುಷ್ಕಿ ಜಮೀನುಗಳು ಇರುತ್ತೆ. ಈ ಸ್ವತ್ತುಗಳನ್ನು ಸದರಿ ಫವತಿಪಟ್ಟ ವೆಂಕಟ್ರಮಣಜಟ್ಟಿ ಹೆಂಡತಿಯು ತಿಪ್ಪಮ್ಮ ಎಂಬವಳು ನಮ್ಮಗಳಿಗೆ ತಿಳಿಸದೆ ಪರಭಾರೆ ಆಧಾರ ಭೋಗ್ಯ ಕ್ರಯ ಮಾಡಬೇಕೆಂಬ ಸಮಾಚಾರವು ತಿಳಿದು ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ ದಾವಾ ಹಾಕಿದೆವು. ಅದಕ್ಕೆ ಜಡ್ಜಿಯವರು 1914-1915 ನೇ ಇಸ್ವಿ ಓ. ಎಸ್. 36 ನೇ ನಂಬರಿನಲ್ಲಿ ಸೀಪುಗಳು ಗೆಜೆಟ್ಟಿನಲ್ಲಿ ಆಗಲಿ, ವರ್ತಮಾನಪತ್ರಿಕೆಗಳಲ್ಲಾಗಲಿ ಪ್ರಾಯಿಸು ಮಾಡಿಸಿರಿ ಎಂಬದಾಗಿ ಅಪ್ಪಣೆ ಆದ ಮೇರೆಗೆ ಪ್ರಾಯಿಸು ಮಾಡಿಸಿರುತ್ತೆ. ಆದಕಾರಣ ಸಾಲಿ ಇರುವ ಸ್ವತ್ತುಗಳನ್ನು ಯಾರೆ ಆಗಲಿ ಆಧಾರ ಭೋಗ್ಯ ಕ್ರಯ ಮೊದಲಾದ್ದು ಮಾಡಿಕೊಂಡಿದ್ದೇ ಆದರೆ ಮುಂದೆ ಅವರಿಗೆ ತೊಂದರೆ ಅನುಭವಿಸುವದಲ್ಲದೆ ಕೊಟ್ಟ ಹಣವು ವಾಪಸು ದೊರೆಯಲಾರದು. ಸದರಿ ಸ್ವತ್ತುಗಳು ಮೇಲ್ಕಂಡ ಫವತಿ ಪಟ್ಟ ವೆಂಕಟ್ರಮಣಜಟ್ಟಿ ಹೆಂಡತಿಯಾದ ತಿಪ್ಪಮ್ಮ ಯೆಂಬವಳು ಜೀವನಾಂಶಕ್ಕಾಗಿರುವವರೆಗೂ ಅನುಭವಿಸಿಕೊಳ್ಳೊಂಡು ತದನಂತರ ನಮ್ಮಗಳಿಗೆ ಬರಬೇಕಾದುದೇ ಹೊರ್ತು ಇತರರಿಗೆ ಸಲ್ಲತಕ್ಕದ್ದಲ್ಲವೆಂಬದಾಗಿ ಈ ನೋಟೀಸಿನಿಂದ ತಿಳಿಸಿ ಎಚ್ಚರಿಸಿರುತ್ತೇವೆ. [114-1]

ಗೃಹಕೃತ್ಯದ ನೋಟೀಸು.

ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿ ಬಗೋದಿಗೆ ಗ್ರಾಮದ ಮಜ್ಕೂರು ಅಂಗಡಿ ಕಾಳಯ್ಯಗೌಡನ ಮಗಳು ಚೆನ್ನಮ್ಮ ಹೆಗ್ಗಡ್ತಿಯು ಈ ಮೂಲಕವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ನನ್ನ ಬಾಬಾ ಚಿಕ್ಕ ತಂದೆಯಾದ ಮುಗ್ಗಯ್ಯಗೌಡನಿಗೆ ಪುತ್ರಸಂತತಿಯಿಲ್ಲದೆ ಅವಿಭಕ್ತ ಕುಟುಂಬದಲ್ಲಿರುವ ನನಗೆ ಮನೆ ಅಳಿಯತನಕ್ಕೆ ಲಗ್ನಮಾಡಿ ಮನೆಯಲ್ಲಿಯೇ ಇಟ್ಟುಕೊಂಡಿದ್ದಲ್ಲದೆ ತಾಯಿ ತಂದೆ ಇಲ್ಲದೆ ಚಿಕ್ಕಂದಿನಿಂದಲೂ ಸಾಕಿದ ಸದರಿಯವರ ಬಾಬಾ ಅಕ್ಕನ ಮಗ ಬಾಲಪ್ಪ ಎಂಬ ಹುಡುಗನಿಗೆ ಸಹ ನಾವು ಎರಡು ಜನರಿಗೆ ಸದರಿಯವರ ಚರ ಸ್ಥಿರ ಆಸ್ತಿ ಮುಂತಾದ ಸರ್ವಸ್ವವನ್ನು ಕಳೆದ 1912 ನೇ ಇಸವಿ ಮೇ ತಾ. 30 ರಲ್ಲು ನಮ್ಮ ಪರ ಹೆಸರಿಗೆ ವಿಲ್ ಪತ್ರ ಬರೆಸಿ ದೇವನಹಳ್ಳಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರುಮಾಡಿಸಿ ಇಟ್ಟಿರುತ್ತಾರೆ. ಅಲ್ಲದೆ ಸದರಿಯವರ ಹೆಂಡತಿ ತಂಗಿ ಹೆಗ್ಗಡ್ತಿ ಮತ್ತು ಸದರಿಯವರ ಅತ್ತಿಗೆಯಾದ ನನ್ನ ತಾಯಿ ಸಿದ್ದಿ ಹೆಗ್ಗಡ್ತಿಗೆ ಸಹಾ ಜೀವನಾಂಶ ಸಲ್ಲುವಂತೆ ಷರತ್ ಕಾಣಿಸಿರುತ್ತಾರೆ. ಸದರಿಯವರು ಇದೇ ವರ್ಷ ಕಳೆದ ಜನವರಿ ತಿಂಗಳಲ್ಲಿ ಕಾಯಿಲೆಬಿದ್ದು ಪಂಚತ್ವ ಹೊಂದಿದ ತರುವಾಯ ನಮಗೆ ಹೊರಗಿನಿಂದ ಬರುವದು ಚರ ಸಮ್ಮಂಧ ಹೊರಗೆ ಸಲ್ಲುವದು ಸದರಿ ವಿಲ್‌ನಾಮೆಯ ಪ್ರಕಾರ ಆ ಸಮ್ಮಂಧವಾದ ರಿಕಾರ್ಡ್ ವಗೈರೆ ನಮಗೆ ವಹಿಸಿಕೊಟ್ಟು ಸ್ವರ್ಗಸ್ಥರಾಗಿರುತ್ತಾರೆ. ಆದದರಿಂದ ಸದರಿಯವರ ಬಾಬತ್ತು ವಿಲ್‌ನಲ್ಲಿ ತೋರುವ ಸರ್ವಾಧಿ ಆಸ್ತಿಗಳಿಗೆ ನಾವೇ ವಿನಹಾ ಇನ್ಯಾರೂ ಹಕ್ಕುದಾರರಿರುವದಿಲ್ಲ. ಸದರಿ ಆಸ್ತಿಗಳ ಮೇಲೆ ನಾವು ಎರಡು ಜನರ ವಿನಹ ನಮ್ಮ ಪೈಕಿ ಯಾರಿಗಾದರೂ ಮದಿಯೋಗ ಭೋಗಿಮಿಂದ ಆಧಾರ, ಕ್ರಯ, ಭೋಗ್ಯ, ಪರಿವರ್ತನೆ ಮುಂತಾದ್ದು ಮಾಡಿಸಿಕೊಂಡು ಸಾಲ ಕೊಟ್ಟಲ್ಲಿ ಅದು ಊರ್ಜಿತವಾಗಿ ಮುಂಜೂರಾಗತಕ್ಕದ್ದಲ್ಲ ಎಂದು ಈ ಮೂಲಕ ಸರ್ವರಿಗೂ ಎಚ್ಚರಿಸಿರುತ್ತೇನೆ

ತಾ. 9-4-1916. [109-1] ಅಂಗಡಿ ಚೆನ್ನಮ್ಮಹೆಗ್ಗಡ್ತಿ ರುಜು.

ಗೃಹಕೃತ್ಯದ ನೋಟೀಸು.

ಚನ್ನರಾಯಪಟ್ಟಣದ ತಾಲ್ಲೂಕು ಕಸಬಾ ಹೋಬಳಿ ಮುಲವನಗಟ್ಟದ ಸಿಂಗೇಗೌಡನ ಮಗ ನಂಜುಂಡೇಗೌಡನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ನನ್ನ ಬಾಬಾ ಚಿಕ್ಕಪ್ಪ ಕೋಡಿಗೌಡನು ಈಗ್ಗೆ ಹನ್ನೆರಡು ವರುಷದಲ್ಲಿ ಫೌತಿಯಾದನು. ಅವನ ಹಿಸ್ಸೆ ಬಾಬತ್ತು ಸ್ಥಿರಸ್ವತ್ತುಗಳನ್ನು ಅವನಿಗೆ ಇರತಕ್ಕ ಮೈನರ್ ಮಗನಾದ ಸಿಂಗಾ ಎಂಬುವನಿಗೋಸ್ಕರ ಸದರಿ ಸ್ವತ್ತನ್ನು ಸಂಪೂರ್ಣ ಹಕ್ಕಿನಿಂದ ನಾನು ನನ್ನ ಸ್ವಾಧೀನದಲ್ಲಿ ಇಟ್ಟುಕೊಂಡು ಸದರಿ ಹುಡುಗನನ್ನು ಸಹ ನಾನೇ ಪೋಷಣೆಮಾಡುತ್ತೇನೆ. ಅಂಥಾದ್ದರಲ್ಲಿ ಸದರಿ ಹುಡುಗನ ತಾಯಿ ರಂಗಿ ಎಂಬುವಳು ದುಷ್ಟಜನಗಳ ಸಹವಾಸದಿಂದ ದುರ್ವ್ಯಾಪಾರಕ್ಕೆ ಪ್ರವ

ಈ ಜನಗಳು ಇಂಥ ಆರಾಧನೆಯನ್ನು ಮಾಡುವದಕ್ಕೆ ಸಹಾಯವನ್ನು ಹೊಂದಬೇಕೆಂಬ ಅಪೇಕ್ಷೆಯೇ ಹೊರತು ಬೇರೆ ಯಾವ ಕಾರಣವೂ ಇರುವದಿಲ್ಲ. ತಾವು ಮಾಡುವ ಕಾರ್ಯವು ನ್ಯಾಯವೋ ಅನ್ಯಾಯವೋ ಎಂಬ ವಿಚಾರವು ಅವರಲ್ಲಿ ಹುಟ್ಟಲೇ ಇಲ್ಲ. ಅವರಿಗೆ ಸಹಾಯವು ಬೇಕಾಗಿತ್ತು. ಭೂತ, ಪಿಶಾಚಿಗಳು ತಮಗೆ ಸಹಾಯಮಾಡ ಶಕ್ತಿಯುಳ್ಳವುಗಳಾಗಿವೆಯೆಂದು ಅವರು ನಂಬಿದ್ದರು. ಆದಕಾರಣ ಅವರು ಅವುಗಳಿಗೆ ಪ್ರಾರ್ಥನೆಮಾಡಿ ಬಲಿಗಳನ್ನು ಅರ್ಪಿಸಿದರು. ತಮ್ಮ ಕಷ್ಟಕ್ಕೆ ತಕ್ಕ ಸಹಾಯವು ತನಗೆ ಸಿಕ್ಕಬೇಕೆಂಬುವದೊಂದೇ ಅವರ ಅಪೇಕ್ಷೆಯಾಗಿತ್ತು.

ನಮ್ಮ ಜನಗಳಲ್ಲಿ ಅನೇಕರು ದೇವಾರಾಧನೆಯನ್ನು ಮಾಡುವ ವಿಷಯದಲ್ಲಿ ಈ ತಿಳುವಳಿಕೆ ಇಲ್ಲದ ಜನಗಳಿಗೆ ಸಮಾನರಾಗಿರುವದಿಲ್ಲವೇ? ನಾವು ಪ್ರಾರ್ಥನೆಮಾಡುವಾಗಲೂ ಬಲಿಗಳನ್ನು ಅರ್ಪಿಸುವಾಗಲೂ ಸಹಾಯವನ್ನು ಹೊಂದಬೇಕೆಂಬ ಒಂದೇ ಅಪೇಕ್ಷೆಯು ನಮ್ಮಲ್ಲಿರುವದಿಲ್ಲವೇ? ಸಂಕಟ ಬಂದಾಗ ವೆಂಕಟರಮಣ ಎಂಬ ಗಾದೆಯಂತೆ ನಮಗೇನಾದರು ವಿಪತ್ತು ಬಂದಾಗ ಸಹಾಯವನ್ನು ಬೇಡುವದಕ್ಕಾಗಿ ದೇವರ ಬಳಿಗೆ ಹೋಗುತ್ತೇವೆ. ನಮಗೆ ಬಂದಿರುವ ಕಷ್ಟವು ನಮ್ಮ ಅಜ್ಞಾನ, ಅಜಾಗರೂಕತೆ ಅಥವಾ ಪಾಪಗಳ ದೆಸೆಯಿಂದ ಬಂದಿದೆಯೋ ಏನೋ ಎಂದು ನಾವು ವಿಚಾರಮಾಡಿಕೊಳ್ಳುವದಿಲ್ಲ. ನಮಗೆ ಆಪತ್ತು ಬಂದೊದಗಿರುವದರಿಂದ ನಾವು ದೇವರಿಗೆ ಪ್ರಾರ್ಥನೆಮಾಡಿ, ಬಲಿಗಳನ್ನು ಅರ್ಪಿಸಿ, ದೇವರ ಸಹಾಯವನ್ನು ನಿರೀಕ್ಷಿಸುತ್ತೇವೆ.

ಇಂಥ ದೇವಾರಾಧನೆಗೆ ಕೇವಲ ಸ್ವಾರ್ಥತೆಯೇ ಕಾರಣವಾಗಿದೆಯೆಂಬುವದನ್ನು ಬುದ್ಧಿವಂತರಲ್ಲಿ ಪ್ರತಿಯೊಬ್ಬರೂ ತಿಳಿದುಕೊಳ್ಳತಕ್ಕದ್ದು. ನಮಗೆ ಪ್ರಾಪ್ತವಾಗಿರುವ ರೋಗ ಕಷ್ಟಗಳು ನಿವಾರಣೆಯಾಗಬೇಕೆಂದು ನಾವು ಅಪೇಕ್ಷಿಸುತ್ತೇವೆ, ಆದಕಾರಣ ದೇವರು ನಮಗೆ ಸಹಾಯಮಾಡಬೇಕು. ನಮ್ಮ ಸ್ವಂತ ಅವಿವೇಕದಿಂದ ಆ ಕಷ್ಟಗಳು ನಮಗೆ ಪ್ರಾಪ್ತವಾಗಿದ್ದರೆ, ದೇವರು ನಮಗೆ ಸಹಾಯಮಾಡುವದು ಹ್ಯಾಗೆ? ದೇವರು ನಮ್ಮ ಅಂತರ್ಯದ ಗುಣನಡತೆಗಳನ್ನು ಲಕ್ಷ್ಯಮಾಡುವವನಲ್ಲ; ಆತನಿಗೆ ಸ್ತೋತ್ರವೂ ಬಲಿಯೂ ಪ್ರಿಯವಾಗಿವೆ, ನಾವು ಆತನನ್ನು ಸ್ತೋತ್ರಮಾಡಿ ಆತನಿಗೆ ಬಲಿಯನ್ನರ್ಪಿಸಿದರೆ ಅಷ್ಟೇ ಸಾಕು; ಆತನು ನಮಗೆ ಸಹಾಯಮಾಡುವನು ಎಂಬುವ ಇಂಥ ಅಭಿಪ್ರಾಯವು ದೇವರ ವಿಷಯದಲ್ಲಿ ನಮಗೆ ಇರಲೇ ಬಾರದು. ಇಂಥ ಅಭಿಪ್ರಾಯವು ದೇವರ ಘನತೆಯನ್ನು ಕಡಿಮೆಮಾಡುತ್ತದೆ. ದೇವರು ಪವಿತ್ರನಾಗಿರುತ್ತಾನೆ. ನಮ್ಮ ಸ್ವಂತ ದುಷ್ಕೃತ್ಯದಿಂದ ನಮ್ಮನ್ನು ನಾವೇ ಕಷ್ಟಕ್ಕೆ ಗುರಿಮಾಡಿಕೊಂಡು, ಈ ಕಷ್ಟವು ನಿವಾರಣೆಯಾದರೆ ಅಷ್ಟೇ ನಮಗೆ ಸಾಕೆಂಬ ಅಪೇಕ್ಷೆಯಿಂದ ನಾವು ಪ್ರಾರ್ಥನೆ ಮಾಡಿದರೆ ದೇವರು ಅಂಥ ಪ್ರಾರ್ಥನೆಗೆ ಲಕ್ಷ್ಯಕೊಡುವದು ಹ್ಯಾಗೆ?

ದೇವರು ನಮ್ಮ ಮನಸ್ಸೂ ಚಿತ್ತವೂ ಹ್ಯಾಗಿವೆಯೆಂದು ನೋಡುತ್ತಾನೆ. ಯಾವ ಪಾಪವು ನಮ್ಮನ್ನು ಕಷ್ಟಕ್ಕೆ ಗುರಿಮಾಡಿತೋ ಆ ಪಾಪವನ್ನು ಬಿಟ್ಟುಬಿಡಬೇಕೆಂಬ ಮನಸ್ಸು ನಮ್ಮಲ್ಲಿದೆಯೋ? ಆ ಪಾಪವನ್ನು ಬಿಟ್ಟುಬಿಡಬೇಕೆಂಬ ಮನಸ್ಸು ನಮ್ಮಲ್ಲಿಲ್ಲದಿದ್ದರೆ ಪವಿತ್ರನಾದ ದೇವರು ನಮ್ಮ ಅಪರಾಧವನ್ನು ಕ್ಷಮಿಸಿ ನಮಗೆ ಸಹಾಯಮಾಡುವದು ಹ್ಯಾಗೆ? ಸಂಕಟ ಬಂದಾಗ ವೆಂಕಟರಮಣಾ, ಎಂದು ದೇವರಿಗೆ ಮೊರೆಯಿಡುವದು ನಮ್ಮ ಪ್ರಥಮ ಕರ್ತವ್ಯವಲ್ಲ. ಮಾಡಿದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವು ಜಾಗ್ರತೆಯಾಗಿ ಆಗಲಿ ಅಥವಾ ನಿಧಾನವಾಗಿಯೇ ಆಗಲಿ ಬಂದೇಬರುತ್ತದೆ. ನಾನು ಪ್ರೀತಿಸುವಂಥ ಪಾಪವನ್ನು ಬಿಟ್ಟುಬಿಡಬೇಕೆಂಬ ಮನಸ್ಸು ನನ್ನಲ್ಲಿದೆಯೋ? ನನ್ನ ಮನಸ್ಸಿನಲ್ಲಿರುವ ದುರಾಲೋಚನೆಗಳನ್ನೂ ದುರಿಚ್ಛೆಗಳನ್ನೂ ದುರುದ್ದೇಶಗಳನ್ನೂ ಹೊರ ಹೊರಡಿಸಿಬಿಡುವದಕ್ಕೆ ನನಗೆ ಇಷ್ಟವಿದೆಯೋ? ಸುಳ್ಳು ಹೇಳುವದು, ಕೆಟ್ಟ ಭಾಷೆಯನ್ನು ಹಚ್ಚುವದು, ಲಂಚ ತೆಗೆದುಕೊಳ್ಳುವದು ಇವೇ ಮೊದಲಾದ ಎಲ್ಲಾ ದುಷ್ಕೃತ್ಯಗಳನ್ನೂ ವರ್ಜಮಾಡಿಬಿಡುವದಕ್ಕೆ ನನಗೆ ಅಪೇಕ್ಷೆ ಇದೆಯೋ? ಎಂದು ವಿಚಾರ ಮಾಡಿಕೊಳ್ಳುವದು ನಮ್ಮ ಪ್ರಥಮ ಕರ್ತವ್ಯವಾಗಿರಬೇಕು. ನಿಜವಾದ ದೇವಾರಾಧನೆಗೆ ಇದೇ ಮೊದಲನೆಯ ಮೆಟ್ಟಲಾಗಿದೆ. ನಾವು ಮಾಡಿದ ಪಾಪಕ್ಕಾಗಿ ಪಶ್ಚಾತ್ತಾಪಪಡದೆ, ಪಾಪವನ್ನೇ ಪ್ರೀತಿಸುತ್ತಾ, ಅದರಲ್ಲಿಯೇ ನಿರತರಾಗಿರಬೇಕೆಂದು ತೀರ್ಮಾನಮಾಡಿಕೊಂಡಿದ್ದರೆ, ಪವಿತ್ರನಾಗಿರುವ ದೇವರಿಗೆ ಪ್ರಾರ್ಥನೆಮಾಡುವದರಿಂದ ಫಲವೇನು? ದೆವ್ವಗಳಿಗೆ ನಾವು ಪ್ರಾರ್ಥನೆಮಾಡಬಹುದು. ಯಾಕಂದರೆ ಅವುಗಳಲ್ಲಿ ಪವಿತ್ರತ್ವವಿಲ್ಲ. ಕೆಟ್ಟತನದಲ್ಲಿ ಅವುಗಳು ಬಹಳ ಸಂತೋಷಪಡುತ್ತವೆ. ನಾವು ಅವುಗಳಿಗೆ ಪ್ರಾರ್ಥನೆಮಾಡುವದರಿಂದ ಅವುಗಳು ನಮ್ಮನ್ನು ಮತ್ತಷ್ಟು ಕೆಟ್ಟವರನ್ನಾಗಮಾಡುತ್ತವೆ.

ನಿಜವಾದ ದೇವಾರಾಧನೆಯಲ್ಲಿ ನಾವು ಮಾಡಬೇಕಾದ ಮೊದಲನೆಯ ಕಾರ್ಯವು ಯಾವದಂದರೆ—ನಮ್ಮ ಮನಸ್ಸನ್ನೂ ಚಿತ್ತವನ್ನೂ ಪರೀಕ್ಷಿಸಿಕೊಳ್ಳುವದೇ. ಎಲ್ಲಾ ಪಾಪಗಳನ್ನು ವಿಸರ್ಜಿಸಿಬಿಡಬೇಕೆಂಬ ಲವಲವಿಕೆಯು ನನ್ನಲ್ಲಿದೆಯೋ? ದೇವರು ಪವಿತ್ರನಾಗಿಯೂ ನೀತಿವಂತನಾಗಿಯೂ ಸತ್ಯವಂತನಾಗಿಯೂ ಇರುವ ಪ್ರಕಾರ ನಾನೂ ಪವಿತ್ರನಾಗಿಯೂ ನೀತಿವಂತನಾಗಿಯೂ ಸತ್ಯವಂತನಾಗಿಯೂ ಇರುವದಕ್ಕೆ ಅಪೇಕ್ಷಿಸುತ್ತೇನೋ? ಹೀಗಿರುವ ಪಕ್ಷಕ್ಕೆ ನಾನು ನನ್ನ ಪಾಪವನ್ನು ಸಹಜವಾಗಿ ಮುಂದಿಟ್ಟು ಮಾಡಿಕೊಂಡವನಾಗಿಯೂ ನನ್ನ ಎಲ್ಲಾ ಪಾಪಗಳಿಗಾಗಿ ನಿಜವಾಗಿ ಪಶ್ಚಾತ್ತಾಪಪಡುವವನಾಗಿಯೂ ಇರುವೆನು. ಸಹಾಯವನ್ನು ಪಡೆಯಬೇಕು, ಕಷ್ಟನಿವಾರಣೆಯನ್ನು ಹೊಂದಬೇಕು ಎಂದು ಅಪೇಕ್ಷಿಸುವದು ಪ್ರಾಮುಖ್ಯವಾದದ್ದಲ್ಲ. ನಾನು ಪವಿತ್ರನೂ ನೀತಿವಂತನೂ ಸತ್ಯವಂತನೂ ಆಗಿರುವ ದೇವರ ಸಂಗಡ ಅನ್ಯೋನ್ಯವಾಗುವಂತೆ ನನ್ನ ಪಾಪವನ್ನು ವಿಸರ್ಜಿಸಿಬಿಡಬೇಕು ಎಂದು ಅಪೇಕ್ಷಿಸುವದೇ ಪ್ರಾಮುಖ್ಯವಾದದ್ದು. ನಮ್ಮ ಯೋಚನೆಗಳೂ ಅಪೇಕ್ಷೆಗಳೂ ದೇವರ ಯೋಚನೆ ಅಪೇಕ್ಷೆಗಳಿಗೆ ಹೊಂದಿಕೆಯಾಗಿರುವಂತೆ ಪಾಪಕ್ಕಾಗಿಯೂ ಕೆಟ್ಟತನಕ್ಕಾಗಿಯೂ ಸಹಜವಾಗಿ ಪಶ್ಚಾತ್ತಾಪಪಡುವದೇ ನಿಜವಾದ ದೇವಾರಾಧನೆಯ ಮೊದಲನೆಯ ಮೆಟ್ಟಲಾಗಿದೆ.

ಯುದ್ಧದ ಸಮಾಚಾರಗಳು.

ಐರ್ಲಂಡಿನಲ್ಲಿ ನೆಮ್ಮದಿಯುಂಟಾಯಿತು.

ವೆರ್ಡೂನ್‌ನಲ್ಲಿ ಘೋರವಾದ ಕದನಗಳು.

ರಣರಂಗದ ಎಲ್ಲಾ ಭಾಗ್ಯಗಳೊಳಗೂ ವಿಶೇಷ ಚಟುವಟಿಕೆಯುಳ್ಳ ಕದನ ಕಾರ್ಯಗಳು ನಡೆಯುತ್ತಲಿವೆ. ಅವರಲ್ಲೆಲ್ಲಾ ವೆರ್ಡೂನ್ ಸುತ್ತಲೂ ನಡೆಯುವ ಕದನಗಳೇ ಅತ್ಯಂತ ಘೋರವಾಗಿರುವವು. ಇಲ್ಲಿ ಜರ್ಮನಿಯವರು ಮುಂದಕ್ಕೆ ನುಗ್ಗಿ ಬರಬೇಕೆಂಬ ಉದ್ದೇಶದಿಂದ ಅತ್ಯಂತ ಪರಾಕ್ರಮದಿಂದ ನುಗ್ಗಿ ಬಂದು ಕದನ ಮಾಡಿದರು; ಆದರೆ ಅವರ ಸಾಹಸವೆಲ್ಲಾ ವ್ಯರ್ಥವಾಯಿತು. ಐರ್ಲಂಡಿನಲ್ಲಿ ಎದ್ದಿದ್ದ ದಂಗೆಯನ್ನು ಅಡಗಿಸಿ ಆ ದ್ವೀಪದೊಳಗೆ ನೆಮ್ಮದಿಯನ್ನು ಪುನಃ ಸ್ಥಾಪನೆ ಮಾಡಿರುತ್ತಾರೆ.

ಪಶ್ಚಿಮ ರಣರಂಗದಲ್ಲಿ.

ವೆರ್ಡೂನ್ ಬಳಿಯಲ್ಲಿ ನಡೆಯುತ್ತಿರುವ ಯುದ್ಧಗಳು ಅತ್ಯಂತ ಘೋರವಾದವು. ಸೈನ್ಯಗಳು ಪ್ರಾಣದ ಮೇಲೆ ಆಸೆಯಿಡದೆ ಪರಸ್ಪರ ನುಗ್ಗಿ ಮಹಾ ಕೋಪವಾಗಿ ಕದನ ಮಾಡುತ್ತಿದ್ದಾರೆ. ಜರ್ಮನಿಯವರು ಸೈನಿಕರ ಸಾಲುಗಳನ್ನು ಒಡೆದು ನುಗ್ಗಲೇಬೇಕೆಂದು ಸಂಕಲ್ಪ ಮಾಡಿಕೊಂಡಿರುವಂತೆ ಕಾಣುತ್ತದೆ. ಇದೂ ಸೇರಿ ಅವರು ಈ ಕೋಟೆಗೆ ನಾಲ್ಕಾವರ್ತಿ ನುಗ್ಗಿ ಬಂದಂತಾಯಿತು. ನಾಲ್ಕು ಸಲದಲ್ಲಿ ಪ್ರತಿ ಸಲವೂ ಅವರು ಸೋತು ಹಿಮ್ಮೆಟ್ಟಿರುತ್ತಾರೆ. ಅಲ್ಲಿ ನಡೆಯುವ ಯುದ್ಧದ ಕ್ರಮ ಹೀಗಿರಬಹುದೆಂದು ಕಾಣುವುದು—ಜರ್ಮನಿಯವರು ತಮ್ಮ ಫಿರಂಗಿಗಳನ್ನೆಲ್ಲಾ ಒಟ್ಟಾಗಿ ಕೂಡಿಸಿಕೊಂಡು ಎಲ್ಲಾ ಜಾತಿಗಳ ಗುಂಡುಗಳನ್ನೂ ವಿರಾಮವಿಲ್ಲದಂತೆ ಫ್ರೆಂಚ್ ಸೈನಿಕರಿರುವ ಮುಂಭಾಗದ ಸಾಲುಗಳ ಕಂದಕಗಳ ಮೇಲೆ ಸುರಿಸುತ್ತಾರೆ. ಇದರಿಂದ ಆ ಕಂದಕಗಳೆಲ್ಲಾ ಒಡೆದು ನಾಶಹೊಂದುತ್ತವೆ. ಅವುಗಳೊಳಗಾದರೋ ಫ್ರೆಂಚರು ವಿಶೇಷವಾಗಿ ಸೈನಿಕರನ್ನು ಇಟ್ಟಿರುವುದೇ ಇಲ್ಲ. ಜರ್ಮನಿಯ ಫಿರಂಗೀ ಗುಂಡುಗಳ ದೆಸೆಯಿಂದ ಕಂದಕಗಳು ನಾಶವಾದ ಕೂಡಲೇ ಫ್ರೆಂಚ್ ಸೈನಿಕರು ಅಲ್ಲಿಂದ ಸ್ವಲ್ಪ ದೂರ ಹಿಂದಕ್ಕೆ ಹೋಗುವರು. ಕೂಡಲೇ ಜರ್ಮನೀ ಸೈನಿಕರು ಆ ಕಂದಕಗಳನ್ನು ಆಕ್ರಮಿಸಿಕೊಳ್ಳುವುದಕ್ಕೆಂದು ಮುಂದಕ್ಕೆ ನುಗ್ಗಿ ಬರುವರು. ಹೀಗೆ ಬರುವಾಗ್ಗೆ ಅವರ ಸೈನಿಕರಲ್ಲಿ ಅನೇಕರು ಮಡಿದು ಬೀಳುವರು; ಅನೇಕ ಮಂದಿ ಗಾಯಪಡುವರು. ಈ ಪ್ರಕಾರ ಜರ್ಮನಿಯವರು ನುಗ್ಗಿ ಬಂದು ಆ ಕಂದಕಗಳನ್ನು ಆಕ್ರಮಿಸಿಕೊಂಡಾಗ ಅವರ ಫಿರಂಗಿ ಗುಂಡುಗಳ ಮಳೆ ನಿಂತುಹೋಗುವುದು. ಬಳಿಕ ಫ್ರೆಂಚರು ನುಗ್ಗಿ ಬಂದು ಜರ್ಮನಿಯವರನ್ನು ಅಲ್ಲಿಂದ ಸೋಲಿಸಿ ಹಿಮ್ಮೆಟ್ಟಿಸಿಬಿಡುತ್ತಾರೆ. ಒಂದು ದಿನ ಜರ್ಮನಿಯವರು ಗೆದ್ದುಕೊಂಡ ಪ್ರದೇಶವನ್ನು ಮರುದಿನ ಫ್ರೆಂಚರು ಅವರಿಂದ ಕಿತ್ತು ಸ್ವಾಧೀನಪಡಿಸಿಕೊಳ್ಳುವರು. ಪರಿಣಾಮವನ್ನು ನೋಡುವಲ್ಲಿ ಜರ್ಮನಿಯವರಿಗೆ ಸ್ವಲ್ಪವಾದರೂ ಭೂಪ್ರದೇಶ ಸ್ವಾಧೀನವಾಗಿರುವುದಿಲ್ಲ.

ಕಳೆದ ವಾರ ಜರ್ಮನಿಯವರು ನುಗ್ಗಿ ಬಂದು ಮೇಲೆ ಬಿದ್ದು ಕದನವಾಡಿದ್ದು ಮಹಾಭಯಂಕರವಾಗಿತ್ತು. ಇಷ್ಟು ಘೋರತರವಾಗಿ ಹಿಂದೆ ಯುದ್ಧ ನಡೆದಿದ್ದಿಲ್ಲ. ಜರ್ಮನಿಯವರು ತಮ್ಮಲ್ಲಿರುವ ಉತ್ತಮೋತ್ತಮವಾದ ಅನೇಕ ಸೈನಿಕರನ್ನು ಕೂಡಿಸಿತಂದು ನುಗ್ಗಿಸಿ ಎಷ್ಟೋ ಪರಾಕ್ರಮದಿಂದಲೂ ರೋಷಾವೇಶದಿಂದಲೂ ಕದನ ಮಾಡಿಸಿದರು. ಆದರೆ ಅದೆಲ್ಲಾ ನಿರರ್ಥಕವಾಯಿತು. ಫ್ರೆಂಚರಿಗಿಂತ ಜರ್ಮನಿಯ ಸೈನಿಕರಲ್ಲಿ ಎಷ್ಟೋ ಅಪಾರವಾದ ಸಂಖ್ಯೆಗಳು ನಷ್ಟವಾಗಿವೆ. ಹಲವು ರೆಜಿಮೆಂಟುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಸೈನ್ಯಗಳು ಹತವಾಗಿರುತ್ತವೆ. ಅನೇಕ ವೇಳೆ ಫ್ರೆಂಚರು ಜರ್ಮನಿಯವರ ಮೇಲೆ ನುಗ್ಗಿ ಹೋದಾಗ ಜರ್ಮನಿ ಸೈನಿಕರನ್ನು ಸೆರೆ ಹಿಡಿದು ತಂದಿರುತ್ತಾರೆ. ಹೀಗೆ ಹಿಡಿಯಲ್ಪಟ್ಟ

ಪೈಕಿ ಒಬ್ಬ ಜರ್ಮನಿ ಹುದ್ದೇದಾರನು ಬರೆದಿದ್ದ ಒಂದಾನೊಂದು ಕಾಗ ದಲ್ಲಿ — ನಮ್ಮ ಸೈನಿಕರಲ್ಲಿ ಹತರಾದವರ ಶವಗಳನ್ನು ಹೂಳುವುದಕ್ಕಾಗಲಿ, ಗಾಯಪಟ್ಟು ಬಿದ್ದು ನರಳುತ್ತಿರುವವರನ್ನು ಎತ್ತುವುದಕ್ಕಾಗಲಿ ನಮ್ಮಿಂದ ಸಾಧ್ಯವಾಗಿಲ್ಲ. ಕೆಲವು ಸಾರಿ ನಮಗೆ ಆಹಾರ ಸಿಕ್ಕುತ್ತದೆ; ಕೆಲವು ಸಾರಿ ಅದು ಸಿಕ್ಕುವುದಿಲ್ಲ. ಯಾಕೆಂದರೆ ಆಹಾರ ತಂದು ಕೊಡುವವರೂ ಕೊಲೆಯಾಗುವರು. ಈ ಸ್ಥಳದಿಂದ ಜೀವಂತರಾಗಿ ಹೊರಕ್ಕೆ ಬರುತ್ತೇವೆಂಬ ಆಸೆ ನಮ್ಮವರಿಗೆ ಇಲ್ಲವೆಂದೇ ಹೇಳಬೇಕು ಎಂದು ಬರೆದಿರುತ್ತಾನೆ. ಜರ್ಮನ ಯುವರಾಜನನ್ನು ಸೈನ್ಯಾಧಿಪತ್ಯದಿಂದ ತೆಗೆದು ಹಾಕಿ ಹಿಂದಕ್ಕೆ ಕರೆಸಿಕೊಂಡುಬಿಟ್ಟರೆಂದು ವರ್ತಮಾನವಿದೆ.

ಬ್ರಿಟಿಷ್ ಸೈನಿಕರಿರುವ ಯುದ್ಧಸಾಲುಗಳಲ್ಲಿ ಫಿರಂಗೀ ಗುಂಡುಗಳ ಪ್ರಯೋಗವೂ, ಸುರಂಗಗಳನ್ನು ಮದ್ದುಹಾಕಿ ಹಾರಿಸುವುದೂ ವಿಶೇಷವಾಗಿ ನಡೆದಿವೆ. ಬ್ರಿಟಿಷ್ ಸೈನಿಕರು ಆಗಾಗ್ಗೆ ನುಗ್ಗಿಹೋಗಿ ಜರ್ಮನಿ ಸೈನಿಕರಿರುವ ಕಂದಕಗಳಲ್ಲಿ ದಾಂಧಲೆಮಾಡಿ ಅನೇಕರನ್ನು ಕೊಂದುಹಾಕಿ ಕೆಲವರನ್ನು ಸೆರೆ ಹಿಡಿದು ತಂದಿದಾರೆ. ಅಂತೆಯೇ ಜರ್ಮನಿಯವರು ಕೂಡ ಬ್ರಿಟಿಷ್ ಸೈನಿಕರ ಕಂದಕಗಳಿಗೆ ನುಗ್ಗಿಬಂದು ಕದನಮಾಡಿರುತ್ತಾರೆ. ಆದರೂ ಎರಡು ಸಾಲು ಗಳಲ್ಲಿ ಬದಲಾವಣೆಗಳೇನೂ ಆಗಿರುವುದಿಲ್ಲ. ಆಸ್ಟ್ರೇಲಿಯಾದಿಂದಲೂ, ನ್ಯೂಜೀಲೆಂಡಿನಿಂದಲೂ ಬ್ರಿಟಿಷ್ ಸೈನಿಕರ ಬೆಂಬಲಕ್ಕೆ ಹೊಸ ಸೈನ್ಯಗಳು ಬಂದು ಸೇರುತ್ತವೆ.

ಆಂತರಿಕ್ಷದಲ್ಲಿ ವಿಶೇಷವಾಗಿ ವಿಮಾನಗಳ ಯುದ್ಧಗಳು ನಡೆದು ಎರಡು ಪಕ್ಷಗಳಲ್ಲೂ ನಷ್ಟ ಸಂಭವಿಸಿದೆ. ಒಂದು ಅಕಾಲಿಕವಾದ ಗಾಳಿ ಹುಟ್ಟಿ ಫ್ರೆಂಚರ ಆಕಾಶಬುಟ್ಟಿಗಳು ಜರ್ಮನಿಯ ಸೈನಿಕರಿರುವ ಪ್ರದೇಶಕ್ಕೆ ಬಡಿದುಕೊಂಡು ಹೋದವು. ಅವುಗಳಲ್ಲಿದ್ದವರ ಪೈಕಿ ಅನೇಕರೆಲ್ಲಾ ಒಂದು ತರಹಾ ಕೊಡೆ ಯನ್ನು ಹಿಡಿದು ಭೂಮಿಗೆ ಇಳಿದುಬಿಟ್ಟರು. ಈ ದೊಡ್ಡ ಕೊಡೆಗಳು ಬಿಚ್ಚಿ ಕೊಂಡು ಮನುಷ್ಯನಿಗೆ ಇಳಿಯುವುದರಲ್ಲಿ ಸಹಾಯಮಾಡುವವು.

ಜರ್ಮನಿಯವರು ಸೆರೆ ಹಿಡಿದಿಟ್ಟುಕೊಂಡಿರುವ ರಷ್ಯಾ ಸೈನಿಕರಲ್ಲಿ ಕೆಲ ಮಂದಿಯನ್ನು ಪಶ್ಚಿಮ ರಣಾಂಗಣದಲ್ಲಿ ಕೆಲಸಮಾಡುವುದಕ್ಕೆ ಬಿಟ್ಟರು. ಅವರಲ್ಲಿ ಸುಮಾರು 103 ಮಂದಿ ರಷ್ಯಾದವರು ಅಲ್ಲಿಂದ ತಪ್ಪಿಸಿಕೊಂಡು ಮಿತ್ರಮಂಡಲಿಯ ಸೈನಿಕರ ಸಾಲುಗಳಿಗೆ ಬಂದು ಸೇರಿಬಿಟ್ಟರು.

ಜರ್ಮನಿಯವರು ಬ್ರಿಟಿಷರ ಒಂದು ಸಬ್‌ಮೆರೀನ್ ಎಂಬ ಜಲಯಂತ್ರ ವನ್ನು ಮುಳುಗಿಸಿದೆವೆಂದು ಕೊಚ್ಚಿಕೊಳ್ಳುತ್ತಾರೆ; ಆದರೆ ಅದು ಸುರಕ್ಷಿತವಾಗಿ ಸ್ವದೇಶಕ್ಕೆ ಹೋಗಿ ಸೇರಿಕೊಂಡಿದೆ.

ಜರ್ಮನಿಯವರ ಕಾರ್ಯೋದ್ದೇಶವೇನೆಂಬುವುದನ್ನು ತಿಳಿದು ಹೇಳುವುದು ಕಷ್ಟ. ಅವರು ವೆರ್ಡೂನ್ ಕೋಟೆಯನ್ನು ಗೆದ್ದುಕೊಳ್ಳಬೇಕೆಂದು ಸಾಹಸ ಪಡುವುದರಲ್ಲಿ ಹತ್ತಾರು ಸಹಸ್ರ ಸೈನ್ಯಗಳನ್ನು ಕಳೆದುಕೊಂಡರು. ಈ ರೀತಿ ಯವರು ಬಹಳ ಕಾಲ ವರ್ತಿಸುವುದು ಸಾಧ್ಯವಲ್ಲ. ಅವರು ವೆರ್ಡೂನ್ ನಗರ ವನ್ನು ಸ್ವಾಧೀನಪಡಿಸಿಕೊಂಡರೂ ಕೂಡ ಪಾರಿಸ್ ಎಂಬ ಫ್ರೆಂಚರ ರಾಜಧಾನಿಗೆ ಇನ್ನೂ ಬಹಳ ದೂರದಲ್ಲಿಯೇ ಇದ್ದಾರು. ಅಲ್ಲಿ ಯುದ್ಧಗಳೇನೋ ಇನ್ನೂ ಕೆಲವು ತಿಂಗಳ ತನಕ ನಡೆಯುತ್ತಾ ಬಂದಾಗ್ಯೂ ಜರ್ಮನಿಯವರಿಗೆ ಪಶ್ಚಿಮ ರಣಾಂಗದಲ್ಲಿ ಖಂಡಿತವಾದ ಜಯಪ್ರದವಾದೀತೆಂಬ ನಿರೀಕ್ಷೆ ಇಲ್ಲ.

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದಿಂದ ಬಂದಿರುವ ಸಮಾಚಾರಗಳು ಬಹಳ ಸ್ವಲ್ಪ. ಹಿಮ ಬೀಳುವುದು ನಿಂತಿದೆ; ಭೂಮಿಯು ಗಟ್ಟಿಯಾಗಿ ಕದನಗಳಿಗೆ ಸರಾಗವಾಗಿದೆ. ಆದರೆ ಜರ್ಮನಿಯವರು ಕೆಲವು ಠಾಣ್ಯಗಳಲ್ಲಿ ಮಾತ್ರವೇ ರಷ್ಯಾದವರ ಮೇಲೆ ನುಗ್ಗಿಬಂದು ಕದನಮಾಡುವರು. ಆದಾಗ್ಯೂ ಮಿತ್ರಮಂಡಲಿಯ ಸೈನ್ಯಗಳೆಲ್ಲಾ ಏಕವಾಗಿ ನುಗ್ಗಿಬಂದಾಗ್ಗೆ ಕದನ ಮಾಡಬೇಕೆಂದು ಜರ್ಮನಿಯವರು ನಿರೀಕ್ಷಿ ಸಿಕೊಂಡಿರುವಂತೆ ಕಾಣುವುದು. ಇದು ಜೂನ್ ತಿಂಗಳಲ್ಲಿ ಸಂಭವವಾಗುತ್ತೆಂದು ಕೇಳಬಂದಿದೆ. ಮಿತ್ರಮಂಡಲಿಯವರಾದರೋ ಎಲ್ಲಾ ಸಿದ್ಧಪಡಿಸಿಕೊಳ್ಳುವ ತನಕ ನುಗ್ಗಿಹೋಗುವವರಾಗಿಲ್ಲ.

ಬ್ಯಾಲ್ಟಿಕ್ ಕಡಲಿನ ಮೇಲೆ ಜಹಜುಗಳ ಯುದ್ಧ ಸಂಭವಿಸಬಹುದೆಂದು ತೋರುವುದು. ರಷ್ಯಾದವರು ತಮ್ಮ ಯುದ್ಧದ ಜಹಜುಗಳನ್ನು ನುಗ್ಗಿಸಿಕೊಂಡು ಹೋಗಿ ಜರ್ಮನಿಯ ತೀರಪಟ್ಟಣಗಳಿಗೆ ಫಿರಂಗಿಗಳನ್ನು ಎತ್ತಿಕಟ್ಟಿ ಗುಂಡುಗ ಳನ್ನು ಹಾರಿಸುತ್ತಲಿದಾರೆ.

ಇಟಲಿ.

ಈ ರಣರಂಗದಲ್ಲಿ ಯುದ್ಧವೇನೋ ನಡೆದಿದೆ; ಅದೆಲ್ಲಾ ಕಂದಕಗಳೊಳಗೇ ಆದದ್ದು. ಆಸ್ಟ್ರಿಯಾದವರು ಹಲವು ವೇಳೆ ಇಟಲಿಯವರ ಮೇಲೆ ನುಗ್ಗಿ ಕದನಮಾಡಿದರು, ಆದರೆ ಇಟಲಿಯವರು ಅವರನ್ನು ಸೋಲಿಸಿ ಹಿಮ್ಮೆಟ್ಟಿಸಿದಾರೆ. ಆಸ್ಟ್ರಿಯಾದವರಲ್ಲಿ ಅಪಾರ ನಷ್ಟ ಸಂಭವಿಸಿತು. ಉತ್ತರ ಪಾರ್ಶ್ವದಲ್ಲಿ ಇಟಲಿಯವರು ಮುಂದಕ್ಕೆ ನುಗ್ಗಿಹೋಗುತ್ತಿದಾರೆ. ಅವರು ಅನೇಕರನ್ನು ಸೆರೆ ಹಿಡಿದರು. ಇಟಲಿಯವರ ವಿಮಾನ ಯಂತ್ರಗಳು ಆಸ್ಟ್ರಿಯಾದವರ ಹಲವು ಕೋಟೆಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿ ತುಂಬಾ ನಷ್ಟಪಡಿಸಿರುತ್ತವೆ. ದಕ್ಷಿಣ ಪಾರ್ಶ್ವದಲ್ಲಿ ಇಟಲಿಯ ಎರಡು ವಿಮಾನ ಯಂತ್ರಗಳು ಆಸ್ಟ್ರಿಯಾ ಕ್ಯಾಂಪುಗಳಿಗೆ ಇಪ್ಪತ್ತು ಮಣಗಳ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದವು.

ಅಡ್ರಿಯಾಟಿಕ್ ಕಡಲಿನಲ್ಲಿ ಇಟಲಿಯ ನಾಲ್ಕು ಸಣ್ಣ ಯುದ್ಧದ ಹಡಗು ಗಳು ಆಸ್ಟ್ರಿಯಾದವರ ಹತ್ತು ಯುದ್ಧದ ಹಡಗುಗಳನ್ನು ಓಡಿಸಿರುತ್ತವೆ ಫ್ರೆಂಚರ ಸಬ್‌ಮೆರೀನುಗಳು ಶತ್ರುವಿನ ಒಂದು ಸಣ್ಣ ಯುದ್ಧದ ಹಡಗನ್ನು ಮುಳುಗಿಸಿಬಿಟ್ಟವು. ಇದಲ್ಲದೆ ಮದ್ದುಗುಂಡು ಮುಂತಾದ ಪದಾರ್ಥಗಳು ಭರ್ತಿಯಾಗಿ ಹೋಗುತ್ತಿದ್ದ ಒಂದು ಹಡಗನ್ನು ಕೂಡ ಅವು ಮುಳುಗಿಸಿದವು.

ಶತ್ರುವಿನ ವಿಮಾನ ಯಂತ್ರಗಳು ಇಟಲಿಗೆ ಸೇರಿದ ಬ್ರಿಂಡಿಸಿ ಎಂಬ ತೀರ ಪಟ್ಟಣಕ್ಕೆ ಗುಂಡುಗಳನ್ನು ಹೊಡೆದವು. ಆಸ್ಪತ್ರೆಯಲ್ಲೇ ಸ್ವಲ್ಪ ನಷ್ಟ ಸಂಭವಿ ಸಿತು. ನಾಲ್ವರು ರೋಗಿಗಳು ಮೃತಪಟ್ಟರು; ಐದು ಮಂದಿಗೆ ಗಾಯಗಳಾದವು. ಶತ್ರುವಿನ ವಿಮಾನ ಯಂತ್ರಗಳಲ್ಲಿ ಒಂದು ನಾಶಹೊಂದಿತು.

ನಮ್ಮ ಪ್ರಿನ್ಸ್ ಆಫ್ ವೇಲ್ಸ್ ರವರು ಇಟಲೀ ದೊರೆಯವರ ಭೇಟಿಗಾಗಿ ಇಟಲಿಗೆ ಹೋಗಿದಾರೆ. ಅಲ್ಲಿ ಅವರಿಗೆ ಅನೇಕ ಮರ್ಯಾದೆಗಳು ನಡೆದವು. ಅವರು ದೊರೆಯವರ ಕೂಡ ಯುದ್ಧಸಾಲಿಗೆ ಹೋಗಿ ಇಟಲಿ ಸೈನಿಕರ ಚಟು ವಟಿಕೆ ಪರಾಕ್ರಮಗಳನ್ನು ನೋಡಿಕೊಂಡು ಬಂದರು.

ಟರ್ಕಿಯಲ್ಲಿ.

ಕಾಕಸಸ್ ಪರ್ವತ ಪ್ರಾಂತ್ಯದಲ್ಲಿ ರಷ್ಯಾದವರು ಮುಂದುಮುಂದಕ್ಕೆ ನುಗ್ಗಿಹೋಗುತ್ತಿದಾರೆ. ಒಂದು ಕಡೆ ಟರ್ಕಿಯವರು ನಿಂತು ಅವರ ಮೇಲೆ ಯುದ್ಧಮಾಡಿದರು. ರಷ್ಯಾದವರು ಟರ್ಕಿಯವರನ್ನು ಅವರಿದ್ದ ಮೊದಲನೇ ಸಾಲಿನಿಂದ ಹಿಂದಕ್ಕೆ ಹೋಗುವಂತೆ ಮಾಡಿಬಿಟ್ಟರು. ಅಲ್ಲಿ ಟರ್ಕಿಯವರ ಕಡೆ ತುಂಬಾ ನಷ್ಟ ಸಂಭವಿಸಿತು.

ಟ್ರೆಬಿಜೋಂಡಿನಲ್ಲಿ ರಷ್ಯಾದವರು 8 ದೊಡ್ಡ ಫಿರಂಗಿಗಳನ್ನೂ, 16 ಇತರ ಫಿರಂಗಿಗಳನ್ನೂ, ಅಪಾರ ಮದ್ದುಗುಂಡು ಸಾಮಗ್ರಿಗಳನ್ನೂ ಟರ್ಕಿಯವರಿಂದ ಕಿತ್ತುಕೊಂಡರು.

ಮೆಸೊಪೊಟೇಮಿಯಾದಲ್ಲಿ ಸೆರೆ ಹಿಡಿಯಲ್ಪಟ್ಟಿರುವವರನ್ನು ಉಭಯ ಪಕ್ಷ ದವರೂ ವಾಪಸು ಕರಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿರುತ್ತಾರೆ. ಕುಟ್‌ ನಲ್ಲಿದ್ದ ರೋಗಿಗಳನ್ನೂ ಗಾಯಪಟ್ಟವರನ್ನೂ ಬ್ರಿಟಿಷರು ತಮ್ಮ ಕ್ಯಾಂಪಿಗೆ ಸಾಗಿಸಿಕೊಂಡುಬಂದು ತಾವು ಹಿಡಿದಿದ್ದ ಟರ್ಕಿ ಸೈನಿಕರನ್ನು ವಾಪಸು ಕೊಟ್ಟರು. ಕುಟ್‌ನಿಂದ ಒಟ್ಟು 1,136 ಮಂದಿ ರೋಗಿಗಳನ್ನೂ ಗಾಯಪಟ್ಟ ವರನ್ನೂ ಹೊರಕ್ಕೆ ಸಾಗಿಸಿ ತಂದಿದಾರೆ. ಈ ಪೈಕಿ ಅನೇಕರು ಆಗಲೇ ಹಿಂದು ಸ್ಥಾನಕ್ಕೆ ಬಂದಿರಬೇಕು. ಇದರಿಂದ ಟರ್ಕಿಯವರ ವಶದಲ್ಲಿರುವ ಸೈನಿಕರ ಸಂಖ್ಯೆ ಬಹಳ ಮಟ್ಟಿಗೆ ಕಡಿಮೆಯಾಗಿರುವುದು. ಅಂಥಾ ಹಿಂದುಸ್ಥಾನದ ಸೈನಿಕ ರಿಗೆ ಹಿಂದುಸ್ಥಾನದಿಂದ ಕಾಗದ ಪತ್ರಗಳು ತಲಪುವ ಭಾಗದಲ್ಲಿ ಬ್ರಿಟಿಷ್ ಸರ್ಕಾ ರದವರು ಏರ್ಪಾಟುಗಳನ್ನು ಮಾಡಿರುತ್ತಾರೆ. ಕಾಗದಗಳ ಮೇಲೆ ವಿಳಾಸ ಮುಂತಾದವುಗಳನ್ನು ಬರೆಯುವ ಕ್ರಮ ತಿಳಿಯಬೇಕಾದರೆ ಪೋಸ್ಟ್ ಆಫೀಸುಗ ಳಲ್ಲಿ ಕೇಳಬಹುದು.

ಫ್ರೆಂಚರ ಸೈನ್ಯಾಧಿಪತಿಯಾದ ಜನರಲ್ ಜೊಫ್ರೆಯವರು ಲಂಡನ್ ಪಟ್ಟ ಣದ ಯುದ್ಧದ ಆಲೋಚನೆಗೆ ಜನರಲ್ ಟೌನ್‌ಷೆಂಡ್‌ರವರು ಅಷ್ಟು ದೀರ್ಘಕಾಲ ಕುಟ್ ನಗರವನ್ನು ಶತ್ರುಗಳಿಗೆ ಒಪ್ಪಿಸದೆ ಕಾಪಾಡಿಕೊಂಡು ಬಂದದ್ದು ಸ್ತೋ ತ್ರಾರ್ಹವಾಗಿದೆ ಎಂದು ಸಂತೋಷಪಟ್ಟು ತಂತೀ ವರ್ತಮಾನಕೊಟ್ಟು ಕಳಿಸಿ ದಾರೆ. ಆ ಪಟ್ಟಣದ ಮುತ್ತಿಗೆಯ ವಿಚಾರವಾಗಿ ದೀರ್ಘವಾದ ವಿವರಗಳು ಪ್ರಕ ಟವಾಗಿವೆ. ವಿಮಾನ ಯಂತ್ರಗಳು ಅಂತರಿಕ್ಷದಲ್ಲಿ ಹೋಗಿ ಆ ಬ್ರಿಟಿಷ್ ಸೈನಿಕ ರಿಗೆ ಆಹಾರ ಪದಾರ್ಥಗಳನ್ನು ಇಳಿಯಬಿಟ್ಟವು. ಆದರೂ ಕೋಟೆಯೊಳಗಿದ್ದವ ರಿಗೆಲ್ಲಾ ಸಾಕಾಗುವಷ್ಟು ಪದಾರ್ಥಗಳನ್ನು ಈ ಉಪಾಯದಿಂದ ಒದಗಿಸಲಾಗದೆ ಹೋದರು. ಟರ್ಕಿಯವರು ಮೊದಲು ಮುತ್ತಿಗೆ ಹಾಕಿಕೊಂಡರು. ಪ್ರಾರಂಭ ದಲ್ಲೇ ಅವರ ಕಡೆ ಬಹಳ ನಷ್ಟವಾದದ್ದರಿಂದ ಅವರು ಕೋಟೆಯೊಳಗಿರತಕ್ಕವ ರಿಗೆ ಆಹಾರ ಪದಾರ್ಥಗಳು ಹೊರಗಿನಿಂದ ಹೋಗದಂತೆ ಮುತ್ತಿಗೆಯನ್ನು ಬಲಪ ಡಿಸಿದರು. ಹೀಗೆ ಮಾಡಿದ್ದು ಅವರಿಗೆ ಅನುಕೂಲವಾಯಿತು.

ಪರ್ಷಿಯಾದಲ್ಲಿ.

ರಷ್ಯಾದವರು ಫಿರಂಗಿಗಳನ್ನೂ, ಯುದ್ಧ ಸಾಮಗ್ರಿಗಳನ್ನೂ, ಆಹಾರ ಪದಾ ರ್ಥಗಳನ್ನೂ ಟರ್ಕಿಯವರಿಂದ ಕಿತ್ತು ಸ್ವಾಧೀನಪಡಿಸಿಕೊಂಡು ಅವರನ್ನು ಪರ್ಷಿ ಯಾದಿಂದ ಬಾಗ್ದಾದಿನ ಕಡೆಗೆ ಹೊರಡಿಸಿ ಓಡಿಸುತ್ತಾರೆ ಈ ಸಂದರ್ಭದಲ್ಲಿ ಟರ್ಕಿಯವರ ಕಡೆ ಬಹಳ ನಷ್ಟ ಸಂಭವಿಸಿರುತ್ತದೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಬಾಲ್ಕನ್ಸ್ ಸಂಸ್ಥಾನಗಳ ಕಡೆಯಿಂದ ವಿಶೇಷವಾದ ಸುದ್ದಿಯೇನೂ ಬಂದಿರುವುದಿಲ್ಲ. ಪ್ರಮುಖ್ಯವಾದ ಸಂಗತಿಯೇನೆಂದರೆ, ಶತ್ರುವಿನ ಕಡೆ ಒಂದು ಜೆಪ್ಪೆಲಿನ್ ಎಂಬ ವಿಮಾನ ಯಂತ್ರವು ಸಲೋನೀಕದ ಮೇಲೆ ನುಗ್ಗಿಬಂದಿತು. ಆದರೆ ಆ ಪಟ್ಟಣದ ಬತೇರಿಗಳಲ್ಲಿದ್ದ ಫಿರಂಗಿಗಳೂ, ಜಹಜುಗಳಲ್ಲಿದ್ದ ಫಿರಂಗಿ ಗಳೂ ಗುಂಡುಗಳನ್ನು ಹೊಡೆದು ಆ ಜೆಪ್ಪೆಲಿನ್ ವಿಮಾನವನ್ನು ಕೆಳಕ್ಕೆ ಕೆಡಗಿ ಬಿಟ್ಟವು. ಅದು ನಾಶಹೊಂದಿತು. ಅದರೊಳಗಿದ್ದ ಏಳು ಜನರನ್ನು ಸೆರೆ ಹಿಡಿದುಕೊಂಡರು. ಜನಗಳು ಜೆಪ್ಪೆಲಿನ್ ಕೆಳಬಿದ್ದುಕೊಂಡು ಬಿದ್ದದ್ದನ್ನು ನೋಡಿ ಬಹಳ ಸಂತೋಷಪಟ್ಟರು.

ಬಲ್ಗೇರಿಯಾ ಸೈನಿಕರು ಸೈನ್ಯವನ್ನು ತ್ಯಜಿಸಿ ಹೊರಟುಹೋಗುತ್ತಿದಾ ರೆಂದೂ, ಮತ್ತೆ ಟರ್ಕಿಯವರಿಗೂ ಬಲ್ಗೇರಿಯಾದವರಿಗೂ ಪರಸ್ಪರ ವಿರೋಧ ಗಳು ಹುಟ್ಟಿರುವುದಾಗಿಯೂ ತಿಳಿಸಲ್ಪಟ್ಟಿದೆ.

ಗ್ರೀಸಿನ ಮಾಜಿ ಮಂತ್ರಿಶ್ರೇಷ್ಠರಾದ ಎಂ. ವೆನಿಜೆಲಾಸ್‌ಯವರು ಮತ್ತೆ ರಾಜಕೀಯ ವಿಚಾರಗಳನ್ನು ಚರ್ಚಿಸುವಂಥಾ ಪದವಿಗೆ ಬಂದಿರುತ್ತಾರೆ. ಪ್ರಜೆ ಗಳು ಸಮ್ಮತಿ ಹಾಕಿ ಅವರನ್ನು ಪಾರ್ಲಿಮೆಂಟ್ ಮೆಂಬರಾಗಿ ಮಾಡಿಕೊಂಡರು.

ಸಲೋನೀಕದಲ್ಲಿ ಮಿತ್ರಮಂಡಲಿಯವರು ಹೊಸದಾಗಿ ಸೈನ್ಯಗಳನ್ನು ತೆಗೆದು ಕೊಂಡು ಹೋಗಿ ಆ ಠಾಣ್ಯವನ್ನು ಬಹಳ ಬಲಪಡಿಸಿಕೊಂಡಿದಾರೆ. ಅವರು ಮುಂದಕ್ಕೆ ನುಗ್ಗಿಹೋಗಲು ಎಲ್ಲಾ ಸಿದ್ಧಪಡಿಸಿಕೊಂಡಿರುವಂತೆ ತಿಳಿದುಬರುತ್ತದೆ.

ಪೂರ್ವ ಆಫ್ರಿಕಾದಲ್ಲಿ.

ಪಶ್ಚಿಮ ದಕ್ಕಿನಲ್ಲಿರುವ ಬೆಲ್ಜಿಯರ್ನರು ಮುಂದುಮುಂದಕ್ಕೆ ನುಗ್ಗಿಹೋ ಗುತ್ತಲೇ ಇದಾರೆಂದೂ, ಜರ್ಮನಿಯವರು ಹಲವು ಗ್ರಾಮಗಳನ್ನು ತ್ಯಜಿಸಿ ಹಿಮ್ಮೆಟ್ಟಿ ಹೋಗಿಬಿಟ್ಟಿದಾರೆಂದೂ ಸಮಾಚಾರ ಬಂದಿದೆ. ಕಳೆದ ವಾರ ಅಲ್ಲಿ ಕದನವಾಗಿ ಅದರಲ್ಲಿ ಜರ್ಮನಿಯವರಿಗೆ ಸೋಲಾಯಿತು.

ಐರ್ಲೆಂಡಿನಲ್ಲಿ.

ಐರ್ಲೆಂಡ್ ದ್ವೀಪದಲ್ಲಿ ಈಗ ನೆಮ್ಮದಿಯುಂಟಾಗಿದೆ. ಕಳೆದ ವಾರ ಅಲ್ಲಿ ಕದನಗಳು ನಡೆದ ವರ್ತಮಾನವೇನೂ ಬಂದಿಲ್ಲ. ದಂಗೆಯೆದ್ದವರನ್ನು ಹಿಡಿದು ದಯಾರ್ಥಿಯ ಮಾಡುತ್ತಿದಾರೆ ಆ ಸೀಮೆಯು ಪೂರ್ವದಂತೆ ನೆಮ್ಮದಿ ಯಾಗುತ್ತಿದೆ. ಆಯುಧಗಳನ್ನು ಹುಡುಕಿ ಕಿತ್ತುಕೊಳ್ಳುತ್ತಾರೆ ದಂಗೇಕೋರರನ್ನು ದಸ್ತಗಿರಿ ಮಾಡುತ್ತಿರುವರು. ದಂಗೆಯಾಯಿತೆಂಬುದರ ಕಳೆಯೆಲ್ಲಾ ಕಡಿಮೆಯಾ ಗುತ್ತಿದೆ.

ಈ ದಂಗೆಯನ್ನು ಅಡಗಿಸುವುದರಲ್ಲಿ ತುಂಬಾ ನಷ್ಟವಾಗಿರಬೇಕೆಂದು ಊಹಿಸಿದ್ದೆವು ಆದರೆ ಬ್ರಿಟಿಷರಿಗೆ ಅಷ್ಟೇನೂ ಹೆಚ್ಚು ನಷ್ಟವಾಗಲಿಲ್ಲ. ನಷ್ಟ ವಾದದ್ದು ಎಷ್ಟೆಂದರೆ—ಸೈನಿಕರಲ್ಲಿ ಹುದ್ದೇದಾರರು 17 ಮಂದಿ ಕೊಲೆಯಾ ದರು, 46 ಮಂದಿ ಹುದ್ದೇದಾರರಿಗೆ ಗಾಯಗಳಾಗಿವೆ; 86 ಮಂದಿ ಸಿಪಾಯಿಗಳು ಕೊಲೆಯಾದರು, 311 ಮಂದಿಗೆ ಗಾಯಗಳಾದವು, 9 ಮಂದಿ ಸಿಪಾಯಿಗಳು ಸಿಕ್ಕಿ ಇಲ್ಲ; ಪೋಲೀಸಿನವರಲ್ಲಿ 15 ಮಂದಿ ಕೊಲ್ಲಲ್ಪಟ್ಟರು, 26 ಮಂದಿಗೆ ಗಾಯಗಳಾದವು; ಇತರರಲ್ಲಿ 6 ಮಂದಿ ಕೊಲೆಯಾದರು, 5 ಜನ ಗಾಯಪಟ್ಟರು. ಒಟ್ಟು 124 ಜನರು ಕೊಲ್ಲಲ್ಪಟ್ಟರು, 388 ಜನರಿಗೆ ಗಾಯಗಳಾದವು, 9 ಜನರು ಸಿಕ್ಕಿ ಇಲ್ಲ. ದಂಗೇಕೋರರ ಕಡೆ ಆದ ನಷ್ಟವೇನೋ ತಿಳಿಸಿಲ್ಲ. ಸುಮಾರು 2,000 ಜನರನ್ನು ದಸ್ತಗಿರಿಮಾಡಿ ಇಂಗ್ಲೆಂಡಿಗೆ ರವಾನಿಸಿದರೆಂದು ಹೇಳ ಲಾಗಿದೆ. 160 ಸಭ್ಯಪ್ರಜೆಗಳ ಹೆಣಗಳನ್ನು ಹೂಣಿಟ್ಟದ್ದಾಯಿತು. ಅವರು ರಸ್ತೆ ಗಳಲ್ಲಿ ಆದ ಕದನಗಳೊಳಗೆ ಸಿಕ್ಕಿ ಹತರಾದರು.

ಕಳೆದ ವಾರ ಅನೇಕ ದಂಗೇಕೋರರನ್ನು ದರ್ಯಾಪ್ತಿಮಾಡಿದ್ದಾಯಿತು. 9 ಜನರನ್ನು ಗುಂಡಿಗೆ ಕಟ್ಟಿ ಹೊಡೆದು ಕೊಂದುಹಾಕಿದರು; ಅನೇಕ ಅಪರಾಧಿ ಗಳಿಗೆ ದೀರ್ಘಕಾಲದ ಸಜಾ ಶಿಕ್ಷೆ ವಿಧಿಸಲ್ಪಟ್ಟಿರುತ್ತದೆ. ಸರ್ ರೋಜರ್ ಕೇಸ್ಮೆಂಟ್ ಎಂಬಾತನ ದರ್ಯಾಪ್ತಿಯು ಈ ವಾರ ನಡೆಯುವುದಾಗಿದೆ. ಈತ ನೊಬ್ಬನೇ ಜರ್ಮನಿಯವರಿಗೆ ಸೇರಿಕೊಂಡು ಬ್ರಿಟಿಷರಿಗೆ ವಿರೋಧಿಯಾಗಿ ನಿಂತು ಅಲ್ಲಿಂದ ಐರ್ಲೆಂಡಿಗೆ ಬಂದನು.

ಈ ದಂಗೆಯು ಐರ್ಲೆಂಡಿನಲ್ಲಿ ನಡೆಯುವಾಗ್ಗೆ ಯುದ್ಧಭೂಮಿಯಲ್ಲಿ ಐರ್ಲೆಂಡಿನ ಸೈನಿಕರಿದ್ದ ಕಡೆ ಅವರೆದುರಿಗೆ ದೊಡ್ಡ ನೋಟೀಸುಗಳನ್ನು ಜರ್ಮನಿ ಯವರು ಬರೆದು ನೇತುಹಾಕಿದ್ದರು. ಅದರಲ್ಲಿ ಬರೆದಿದ್ದದ್ದೇನೆಂದರೆ—"ಐರ್ಲೆಂ ಡಿನಲ್ಲಿ ರಾಜ್ಯಭಾರ ಕ್ರಮಗಳು ತಲೆಕೆಳಗಾಗಿರುತ್ತವೆ. ಇಂಗ್ಲಿಷ್ ಫಿರಂಗಿಗಳು ನಿಮ್ಮ ಹೆಂಡಿರು ಮಕ್ಕಳನ್ನು ಕೊಂದುಹಾಕುತ್ತಿರುವವು. ಇಂಗ್ಲೆಂಡಿನಲ್ಲಿ ಸೈನ್ಯದ ಕಾನೂನು ನಿರಾಕರಿಸಲ್ಪಟ್ಟಿತು" ಎಂಬುದು. ಇದನ್ನು ಓದಿನೋಡಿದ ಐರ್ಲೆಂಡ್ ಸೈನಿಕರು ಸ್ವದೇಶವತ್ಸಲರ ಹಾಡುಗಳನ್ನು ಹೇಳುತ್ತಾ ಉತ್ಸಾಹಪಡುತ್ತಿದ್ದರು.

ಬ್ರಿಟಿಷ್ ಮಂತ್ರಿಶ್ರೇಷ್ಠರಾದ ಮಿ|| ಆಸ್ಕಿತ್ ರವರು ಐರ್ಲೆಂಡಿಗೆ ಹೋಗಿ ದಾರೆ. ಅಲ್ಲಿನ ದಂಗೆಯ ಪೂರ್ವೋತ್ತರವನ್ನು ತನಿಖೆಮಾಡಿ ರಿಪೋರ್ಟು ಕೊಡುವುದಕ್ಕೆ ಒಂದು ಪಂಚಾಯತಿಯು ನೇಮಕವಾಗಿದೆ. ಹಿಂದುಸ್ಥಾನದಲ್ಲಿ ವೈಸ್‌ರಾಯರಾಗಿದ್ದು ಈಗತಾನೇ ಸೀಮೆಗೆ ಹೋಗಿರುವ ಲಾರ್ಡ್ ಹಾರ್ಡಿಂಗ್ ಪ್ರಭುವನ್ನು ಈ ಪಂಚಾಯತಿಯ ಮೆಂಬರಾಗಿ ನೇಮಕಮಾಡಿರುವರು.

ಇತರ ವಿಷಯಗಳು.

ಜರ್ಮನಿಯ ಜವಾಬು ಅಮೇರಿಕಕ್ಕೆ ತಲಪಿತು. ಅದರಲ್ಲಿ ಜರ್ಮನಿಯ ವರು ಹೇಳಿರುವುದೇನೆಂದರೆ—ಮೊದಲೇ ಎಚ್ಚರಿಕೆ ಕೊಡದೆ ಜರ್ಮನಿಯವರು ವ್ಯಾಪಾರದ ಹಡಗುಗಳನ್ನು ಮುಳುಗಿಸುವುದಿಲ್ಲ; ಮತ್ತು ಅವುಗಳಲ್ಲಿರುವ ಜನ ಗಳನ್ನು ನೀರಿನಿಂದೆತ್ತಿ ಬದುಕಿಸುತ್ತೇವೆಂದು ಒಪ್ಪಿಕೊಂಡಿದಾರೆ. ಅಮೇರಿಕದ ವರು ಈ ವಾಗ್ದಾನವನ್ನು ಒಪ್ಪಿಕೊಂಡು, ಈ ವಿಚಾರವಾಗಿ ಅನ್ಯದೇಶಗಳ ಕೂಡ ಯಾವ ಕಾಗದ ಪತ್ರಗಳನ್ನೂ ನಡಿಸುವುದಿಲ್ಲವೆಂದು ಜವಾಬುಕೊಟ್ಟರು. ಈ ರೀತಿ ಮಾತುಕೊಟ್ಟ ಬಳಿಕ ಜರ್ಮನಿಯವರು ಎಚ್ಚರಿಕೆ ಕೊಡದೇನೇ ಕೆಲವು ಹಡಗುಗಳನ್ನು ಮುಳುಗಿಸಿರುವಂತೆ ಕಾಣುತ್ತದೆ. ಸಸ್ಸೆಕ್ಸ್ ಎಂಬ ಜಹಜನ್ನು ಮುಳುಗಿಸಿದ ತಮ್ಮ ಅಧಿಕಾರಿಯನ್ನು ಶಿಕ್ಷಿಸಿರುತ್ತೇವೆಂದು ಜರ್ಮನಿಯವರು ಹೇಳುತ್ತಾರೆ. ಆದರೆ ಪತ್ರಿಕೆಗಳಿಂದ ಆ ಅಧಿಕಾರಿಯನ್ನು ಬಡ್ತಿಮಾಡಿದಾರೆಂದು ಗೊತ್ತಾಗುವುದು. ಅಮೇರಿಕದವರು ಆ ಅಧಿಕಾರಿಗೆ ಯಾವ ಶಿಕ್ಷೆ ಕೊಟ್ಟಿರಿ ಎಂದು ಜರ್ಮನಿಯವರನ್ನು ಪ್ರಶ್ನೆಮಾಡಿದಾರೆ.

ಕಳೆದ ವಾರ ಜರ್ಮನಿಯವರು ಮುಳುಗಿಸಿರುವ ಹಡಗುಗಳೆಷ್ಟೆಂದರೆ— ಬ್ರಿಟಿಷರದು ಐದು, ಫ್ರೆಂಚರದು ಎರಡು, ಸ್ವೀಡನ್ನವರದು ಎರಡು, ಅಂತು ಒಂಭತ್ತು ಹಡಗುಗಳನ್ನು ಮುಳುಗಿಸಿದಾರೆ. ಬ್ರಿಟಿಷರ ಒಂದು ಜಹಜು ಬಹಳ ಭಾರಿಯಾದದ್ದು, ಅದು ಅಮೇರಿಕದಿಂದ ಬರುತ್ತಿತ್ತು. ಅದರೊಳಗೆ ಪ್ರಯಾಣಿ ಕರು ಇರಲಿಲ್ಲ, ಆದರೂ ಎಚ್ಚರಿಕೆಕೊಡದೇನೇ ಅದನ್ನು ಮುಳುಗಿಸಿಬಿಟ್ಟರು. ಅದರೊಳಗಿದ್ದ ನೌಕರಮಾನೀರನ್ನು ದೋಣಿಗಳಲ್ಲೇ ದಡದಿಂದ 158 ಮೈಲಿ ದೂರದಲ್ಲಿ ಬಿಟ್ಟುಬಿಟ್ಟರು. ಇಂಜಿನ್ನಿರೂ ಒಳಗೆ ಐದು ಮಂದಿ ಮೃತ ಪಟ್ಟರು. ಬ್ರಿಟಿಷರ ಎರಡು ಜಹಜುಗಳು ಬಿಸ್ಕೆ ಕೊಲ್ಲಿಯಲ್ಲಿ ಜರ್ಮನಿಯ ಸಬ್‌ಮೇರೀನುಗಳ ಮೇಲೆ ಯುದ್ಧಮಾಡಿ ಕಡೆಗೆ ತಪ್ಪಿಸಿಕೊಂಡು ಬಂದವು. ಕಳೆದ ವರುಷ ಜರ್ಮನಿಯವರು ಎಚ್ಚರಿಕೆ ಕೊಡದೇನೇ 59 ಹಡಗುಗಳನ್ನು ಮುಳುಗಿಸಿದರು. ಈ ಪೈಕಿ ಒಂದರಲ್ಲೂ ಫಿರಂಗಿ ಮೊದಲಾದವುಗಳನ್ನು ಇಟ್ಟಿ ರಲಿಲ್ಲ; ಅವೆಲ್ಲಾ ವ್ಯಾಪಾರದ ಹಡಗುಗಳು. 37 ಹಡಗುಗಳು ಬ್ರಿಟಿಷರಿಗೂ 22 ಇತರ ಜನಾಂಗಗಳಿಗೂ ಸೇರಿದ್ದವು.

ಬ್ರಿಟಿಷ್ ಹಡಗುಗಳು ಜರ್ಮನೀ ತೀರದಿಂದಾಚೆಗೆ ಸಮುದ್ರದ ಮೇಲೆ ಒಂದು ಜೆಪ್ಪೆಲಿನ್‌ವನ್ನು ಹಾಳುಮಾಡಿದವು. ಬ್ರಿಟಿಷ್ ಸಬ್‌ಮೆರೀನ್ ಹೋಗಿ ಅದರಲ್ಲಿ ಏಳು ಮಂದಿ ಜರ್ಮನಿಯವರನ್ನು ಬದುಕಿಸಿತು. ಯುದ್ಧ ಪ್ರಾರಂಭ ವಾದಾಗಿಂದ ಜರ್ಮನಿಯ ಸುಮಾರು 30 ಜೆಪ್ಪೆಲಿನ್ ಎಂಬ ದೊಡ್ಡ ವಿಮಾನ ಯಂತ್ರಗಳು ನಾಶವಾಡಲ್ಪಟ್ಟಿವೆ.

ಬರ್ಲಿನ್, ಬುಡಾಪೆಸ್ತ್ ಮೊದಲಾದ ಪಟ್ಟಣಗಳಲ್ಲಿ ದಂಗೆಗಳು ಉಂಟಾ ದವು. ಬರ್ಲಿನ್ ರಾಜಧಾನಿಯಲ್ಲಿ 50,000 ಹೆಂಗಸರು ಮಕ್ಕಳು ಗುಂಪಾಗಿ ಸೇರಿದ್ದು ದಂಗೆ ಮಾಡಿದರೆಂದೂ, ಪೋಲೀಸಿನವರು ಅವರನ್ನು ಹೊಡೆದು ಚದರಿಸ ಲಾರದೆ ಹೋದರೆಂದೂ ಹೇಳಲಾಗಿದೆ. ಕಡೆಗೆ ಸೈನಿಕರನ್ನು ಬಿಟ್ಟು ದೊಂಬಿ ಯನ್ನು ಅಡಗಿಸಿದರು. ದೊಂಬಿ ಸೇರಿಸಿದ್ದವರಿಗೆ ಸಹಾಯ ಮಾಡಿದನೆಂದು ಜರ್ಮನ ಪಾರ್ಲಿಮೆಂಟಿನ ಒಬ್ಬ ಮೆಂಬರನ್ನು ದಸ್ತಗಿರಿ ಮಾಡಿದಾರೆ.

ಜರ್ಮನಿಯ ಒಂದು ವಿಮಾನ ಯಂತ್ರಗಳ ಕಾರ್ಖಾನೆಯೊಳಗೆ ಬೆಂಕಿ ಹುಟ್ಟಿ 60 ವಿಮಾನ ಯಂತ್ರಗಳ ಸಹಿತ ಆ ಕಾರ್ಖಾನೆ ಸುಟ್ಟು ನಾಶಹೊಂದಿತು.

ಬ್ರಿಟಿಷ್ ಸಂರಕ್ಷಣಾರ್ಥವಾಗಿ ಇಟ್ಟಿರುವ ವಿಮಾನ ಯಂತ್ರಗಳ ಮೇಲ್ವಿ ಚಾರಣೆಯು ಲಾರ್ಡ್ ಕರ್ಸನ್‌ರವರಿಗೆ ವಹಿಸಲ್ಪಟ್ಟಿರುವಂತೆ ಹೇಳುತ್ತಾರೆ.

ರಷ್ಯಾ ರಾಜ್ಯದ ಡ್ಯೂಮಾ ಎಂಬ ಪಾರ್ಲಿಮೆಂಟ್ ಸಭೆಯ ಹಲವು ಮೆಂ ಬರುಗಳು ಲಂಡನ್ ಪಟ್ಟಣವನ್ನು ನೋಡಿಕೊಳ್ಳುವುದಕ್ಕೆ ಬಂದಿದ್ದರು. ಆ ಪಟ್ಟಣದಲ್ಲಿ ಬ್ರಿಟಿಷ್ ಪ್ರಜೆಗಳು ಅವರನ್ನು ವಿಶೇಷ ಆದರದಿಂದ ಸತ್ಕರಿಸಿದರು. ಗ್ರೇಟ್ ಬ್ರಿಟನ್‌ಗೂ ರಷ್ಯಾವಿಗೂ ಇದ್ದ ಮನಸ್ತಾಪಗಳೆಲ್ಲಾ ನಿರ್ಮೂಲವಾದವು.

ಜರ್ಮನಿಯ ಕೈಸರ್ ಚಕ್ರವರ್ತಿಯವರು ಅಮೇರಿಕದ ಪ್ರೆಸಿಡೆಂಟ್ ವಿಲ್‌ಸನ್‌ರವರಿಗೆ ಕಾಗದ ಬರೆದು ಮಿತ್ರಮಂಡಲಿಯವರು ಹಗೆ ತೀರಿಸಿಕೊಳ್ಳು ವುದಕ್ಕಾಗಿ ಯುದ್ಧವನ್ನು ನಡಿಸುತ್ತಾ ಬರುವುದು ನಿಷ್ಪ್ರಯೋಜನವಾದ ಕಾರಣ ಪ್ರೆಸಿಡೆಂಟರು ಮಧ್ಯಸ್ಥಿಕೆ ಮಾಡುವಂತೆ ತಿಳಿಸಿದಾರೆಂಬುದಾಗಿ ವರ್ತಮಾನವಿದೆ. ಟರ್ಕಿಯವರು ಕೂಡ ಕರಾರು ಮಾಡಿಕೊಳ್ಳಬೇಕೆಂದು ಆತುರಪಡುತ್ತಿರುವಂತೆ ಪ್ರಕಟವಾಗಿದೆ ಆದರೆ ಅಂಥಾ ಸುದ್ದಿಗಳಿಗೆಲ್ಲಾ ಯಾರೂ ಗಮನಕೊಡಬಾರದು.

ಮಿ|| ಬಾಲ್ಫರ್‌ಯವರು ಬ್ರಿಟಿಷ್ ಹಡಗುಗಳ ಸೈನ್ಯವನ್ನು ಬಹಳ ಮಟ್ಟಿಗೆ ಹೆಚ್ಚಿಸಿ ಬಲಪಡಿಸಿಕೊಂಡಿದೇವೆಂದೂ, ಇಂಗ್ಲೆಂಡಿನ ದಕ್ಷಿಣ ಸಮುದ್ರಕ್ಕೆ ಮೊದ ಲಿಗಿಂತಲೂ ಅನೇಕ ಜಹಜುಗಳನ್ನು ರವಾನೆ ಮಾಡಬಹುದೆಂದೂ ಹೇಳಿದಾರೆ.

ಜರ್ಮನಿಯ ಎರಡು ಜೆಪ್ಪೆಲಿನ್‌ಗಳು ಪೋರ್ಟ್ ಸೈಯಡ್ ಎಂಬ ತೀರಪ ಟ್ಟಣಕ್ಕೆ ಸಿಡಿಮದ್ದಿನ ಗುಂಡುಗಳನ್ನು ಹಾಕಿದವು. ಅವೆರಡೂ ಓಡಿಸಲ್ಪಟ್ಟವು. ಪ್ರಜೆಗಳಲ್ಲಿ ಮೂವರಿಗೆ ಗಾಯಗಳಾಗಿವೆ ವಿಶೇಷ ನಷ್ಟವೇನೂ ಆಗಲಿಲ್ಲ.

ಒಳದೇಶದ ವೃತ್ತಾಂತಗಳು.

ಕಳೆದ ಭಾನುವಾರವೂ ಸೋಮವಾರವೂ ಮಂಗಳವಾರವೂ ಸಾಯಂಕಾಲದ ಹೊತ್ತಿನಲ್ಲಿ ರಾಜಧಾನಿಯಲ್ಲಿ ಮೂರು ಸಲ ಒಳ್ಳೇ ಮಳೆ ಸುರಿಯಿತು. ಆದರೂ ಸೆಕೆ ಇನ್ನೂ ಕಡಮೆಯಾಗಲಿಲ್ಲ.

ಬೆಂಗಳೂರು ತಿಮ್ಮಯ್ಯ ರೋಡಿನಲ್ಲಿದ್ದ ಒಬ್ಬ ಕ್ರೈಸ್ತ ಯೌವನಸ್ಥನು ಕಳೆದ ಗುರುವಾರ ಮಧ್ಯಾಹ್ನ ಮರದ ಮೇಲೆ ಹತ್ತಿ ಹಣ್ಣುಕೊಯ್ಯುತ್ತಿದ್ದಾಗ ಜಾರಿ ವಿದ್ಯುಚ್ಛಕ್ತಿಯ ತಂತೀ ಮೇಲೆ ಬಿದ್ದು ಮೈಸುಟ್ಟು ಆಸ್ಪತ್ರೆಯಲ್ಲಿ ತೀರಿಹೋದನು.

ಮೈಸೂರು ವೆಸ್ಲಿಯನ್ ಮಿಷನ್ ಹೈ ಸ್ಕೂಲಿನ ಪ್ರಿನ್ಸಿಪಲ್‌ರಾದ ರೆವ್|| ಎಚ್. ಸ್ಪೆನ್ಸರ್, ಬಿ.ಎ ಯವರು ಹೈ ಸ್ಕೂಲಿನಲ್ಲಿ ಸೈನ್ಸ್ ಭಾಗವನ್ನು ಕಲಿಸುವುದಕ್ಕೆ ಕಲ್ಕತ್ತ ಯೂನಿವರ್ಸಿಟಿ ಬಿ. ಎಸ್‌ಸಿ ಎಂಬ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವ ಮ|| ಕೆ. ಕೆ. ದಾಸ್ ಎಂಬುವರನ್ನು ಉಪಾಧ್ಯಾಯರಾಗಿ ನೇಮಕಮಾಡಿಕೊಂಡಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

ನೆನ್ನೆ ಬೆಳಗ್ಗೆ ಶ್ರೀಮನ್ ಮಹಾರಾಜರವರು ರಾಜಧಾನಿಯಿಂದ ಮೋಟರಿ ನಲ್ಲಿ ಹೊರಟು ಸಾಯಂಕಾಲದ ಹೊತ್ತಿಗೆ ಶೃಂಗೇರಿಗೆ ಚಿತ್ತೈಸುವವರಾಗಿದ್ದರು. ಅವರು ಮೂರು ದಿನ ಇದ್ದು ಅಲ್ಲಿ ನಡೆಯುವ ಅಪೂರ್ವವಾದ ಕುಂಭಾಭಿಷೇಕ ವನ್ನೂ ಅದಕ್ಕೆ ಸಂಬಂಧಪಟ್ಟ ಉತ್ಸವಾದಿಗಳನ್ನೂ ಪರಾಂಬರಿಸಿಕೊಂಡು ಶನಿ ವಾರ ಸಾಯಂಕಾಲ ವಾಪಸು ರಾಜಧಾನಿಗೆ ದಯಮಾಡುವಂತೆ ಏರ್ಪಾಡಾಗಿದೆ.

ಮೈಸೂರು ಖಾಸ್ ಬಂಗಲೆಯ ಮೃಗಾಲಯಕ್ಕೆ ಮಿ|| ಷಲ್ಲರ್ ಎಂಬ ಜರ್ಮನಿ ಪ್ರಜೆಯು ಕೆಲವು ದಿನಗಳ ಹಿಂದೆ ನೋಡುವುದಕ್ಕೆ ಬಂದಿದ್ದಾಗ ಮೃಗಾಲಯದ ಅಧಿಕಾರಿಯಾದ ಮಿ|| ಹ್ಯೂಜಸ್‌ರವರು ಆತನನ್ನು ಶತ್ರುಪಕ್ಷದ ವನೆಂದು ಬಹಳವಾಗಿ ಹೀನೈಸಿ ಜರಿದರೆಂದು ಆತನು ಮೈಸೂರು ಡೆಪ್ಯುಟಿ ಕಮಿಷ ನರ್‌ರವರಲ್ಲಿ ಅರ್ಜಿ ಹಾಕಿಕೊಂಡನು. ಅವರು ಈ ಮೊಕದ್ದಮೆಯನ್ನು ದರ್ಯಾಪ್ತಿ ಮಾಡಿ ವಜಾ ಮಾಡಿಬಿಟ್ಟರೆಂದು ಕೇಳುತ್ತೇವೆ.

ಒಬ್ಬ ಬಾತ್ಮಿದಾರರಿಂದ.—ಶ್ರೀವ್ಯಾಸರಾಯ ಮಠದಿಂದ ನಡೆಯುತ್ತಿರುವ "ಶ್ರೀಮದ್ಧ್ವಶಪ್ರಮುಖ ದರ್ಶನಪ್ರಕಾಶಿನೀ ಸಭಾ" ಎಂಬ ವಿದ್ವತ್ಸಭೆಯ ತೃತೀಯ ವಾರ್ಷಿಕ ಸಭೆಯು ಭವಾನಿಯಲ್ಲಿ ಶ್ರೀಶ್ರೀಯವರ ಸಮಕ್ಷಮ ಮೇ ತಾ. 24, 25, 26 ರಲ್ಲು ನಡಿಸಲ್ಪಡುತ್ತದೆ. ದಶಪ್ರಕರಣಗಳು, ದಶೋಪನಿಷತ್ತುಗಳು, ತತ್ವಪ್ರಕಾಶಿಕಾ, ಸುಧಾ, ಪ್ರಮೇಯದೀಪಿಕಾ, ವಾಕ್ಯಾರ್ಥತ್ರಯ, ಈ ಗ್ರಂಥಗಳಲ್ಲಿ ಮಾತ್ರ ಪಾಠ ಪರೀಕ್ಷೆ ನಡೆಯುವುದು ಸಹಾಯಮಾಡಲು ಇಷ್ಟಪಡುವವರು ಬೆಂಗಳೂರಲ್ಲಿರುವ ರೈಲ್ವೆ ಅಂಡರ್ ಸೆಕ್ರೆಟರಿ ಮ|| ಟಿ. ಲಕ್ಷ್ಮೀನರಸಿಂಹರಾ ಯರಿಗಾಗಲಿ, ಅಥವಾ ಈರೋಡಿನಲ್ಲಿರುವ ವಕೀಲ್ ಮ|| ಡಿ. ಎಸ್. ನರಸಿಂಗ ರಾಯರಿಗಾಗಲಿ ಕಳುಹಿಸಬಹುದು.

ಕೊಚ್ಚಿ ಸಂಸ್ಥಾನಕ್ಕೆ ಸೇರಿದ ಎರ್ನಾಕುಲಂ ನಗರದ ಕಾಲೇಜ್ 5 ನೇ ಫಾರಂ ನಲ್ಲಿ ವಿದ್ಯಾರ್ಥಿಯಾಗಿರುವ 14 ವಯಸ್ಸಿನ ಟಿ. ಎಂ. ಮಹಾಲಿಂಗಮ್ ಎಂಬ ಹುಡುಗನು ಕಳೆದ ಭಾನುವಾರ ಸಾಯಂಕಾಲ ಬೆಂಗಳೂರು ಶ್ರೀಚಾಮರಾಜೇಂದ್ರ ಸಂಸ್ಕೃತ ವಿದ್ಯಾಶಾಲಾ ಕಟ್ಟಡದಲ್ಲಿ ಷಾಡಧಾನವನ್ನು ಮಾಡಿದನು. ನೂರಾರು ಮಂದಿ ವಿದ್ಯಾವಂತರೂ ಅಧಿಕಾರಸ್ಥರೂ ಪ್ರಜಾ ಪ್ರಮುಖರೂ ಹಾಜರಾಗಿದ್ದು ಆ ಹುಡುಗನ ಜಾಗ್ರತೆಯನ್ನೂ ಸಾಮರ್ಥ್ಯವನ್ನೂ ನೋಡಿ ಆನಂದಪಟ್ಟರು. ದಿವಾನ್ ಬಹದೂರ್ ಮ|| ಜೆ. ಎಸ್. ಚಕ್ರವರ್ತಿಯವರು ಸಭಾಸದರ ಪರ ವಾಗಿ ಆ ಹುಡುಗನ ಯೋಗ್ಯತೆಯನ್ನು ಕೊಂಡಾಡಿ ಒಂದು ಬಂಗಾರದ ಪದಕ ವನ್ನು ಬಹುಮಾನ ಮಾಡಿದರು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಮೇ 4 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ದೇಣಿ:—	(1) ಷೇರು ಮೊಬಲಗು	ರೂ.	10,00,000
,,	(2) ರಿಜರ್ವ್ ಫಂಡು	,,	75,000
,,	(3) ಡಿಪಾಜಿಟ್ಟುಗಳು	,,	40,87,626
,,	(4) ಇತರೆ	,,	1,04,489
	(ಅಣೆ ಕಾಸು ಬಿಟ್ಟಿರುತ್ತೆ.) ಒಟ್ಟು	ರೂ.	52,67,115
ಲೇಣಿ:—	(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ	ರೂ.	5,94,763
,,	(2) ಲೋನ್ ಮತ್ತು ಇತರ ಸಾಲಗಳು	,,	37,30,702
,,	(3) ಡಿಸ್ಕೌಂಟುಮಾಡಿದವಾಯಿದೆಹುಂಡಿಗಳು	,,	4,55,660
,,	(4) ಇನ್ವೆಸ್ಟ್ಮೆಂಟುಗಳು	,,	4,40,410
,,	(5) ಏಜಂಟರುಗಳಲ್ಲಿರುವ ಮೊಬಲಗು	,,	5,171
,,	(6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	19,541
,,	(7) ಇತರೆ	,,	20,868
	(ಅಣೆ, ಕಾಸು ಬಿಟ್ಟಿರುತ್ತೆ.) ಒಟ್ಟು	ರೂ.	52,67,115

ವಿ. ರಾಮಸ್ವಾಮಯ್ಯ, ಆ: ಮ್ಯಾನೇಜರ್.

ಶಾಲಾ ಪ್ರದರ್ಶನ—ಮುರುಗಮಲೆ.

ಚಿಂತಾಮಣಿ ತಾಲ್ಲೂಕಿಗೆ ಸೇರಿದ ಮುರುಗಮಲೆಯಲ್ಲಿ ಈ ಪ್ರದರ್ಶನೋತ್ಸವವು ಮೇ ತಾ. 6 ರಲ್ಲು ಗೌ|| ಕನ್ನಡ ಸ್ಕೂಲ್ ಕಟ್ಟಡದಲ್ಲಿ ನಡೆಯಿತು. ತಾಲ್ಲೂಕು ಪ್ರಭುಗಳು ಮ|| ಕೆ. ರಂಗೋಜಿರಾವ್ ಬಾವಾಜಿಯವರು ಅಗ್ರಾಸನಾಧಿಪತ್ಯವನ್ನು ವಹಿಸಿದ್ದರು. ಸ್ಕೂಲ್ ಸಹಾಯೋಪಾಧ್ಯಾಯರಾದ ಕೆ. ಶ್ರೀನಿವಾಸಾಚಾರ್ಯ ಸೆಕ್ರೆಟರಿಯಾಗಿ ನಿಂತು ನಡಸಿದ ಪ್ರದರ್ಶನಶಾಲೆಯ ರಿಪೋರ್ಟನ್ನು ಓದಿದರು. ಹೆಡ್ ಮಾಸ್ಟರ್ ಮ|| ವೆಂಕಟಾಚಲಯ್ಯನವರು ಪ್ರದರ್ಶನಶಾಲೆಗಳ ವಿಷಯಿಕವಾದ ಉಪನ್ಯಾಸವನ್ನೂ, ನೇಟಿವ್ ಡಾಕ್ಟರ್ ಮ|| ಎಸ್. ಪಿ. ರಾಮಚಂದ್ರಶಾಸ್ತ್ರಿಗಳು ಮತ ನೀತಿ ವಿಷಯಿಕವಾದ ಉಪನ್ಯಾಸವನ್ನೂ ಅತ್ಯಂತ ಗಂಭೀರವಾದ ರೀತಿಯಲ್ಲಿ ಓದಿ ಮುಗಿಸಿದರು. ತರುವಾಯ ಅಗ್ರಾಸನಾಧಿಪತಿಗಳು ನೆರೆದಿದ್ದ ಪಟೇಲ್ ಶಾನುಭೋಗರು, ಗ್ರಾಮದ ಇತರ ದೊಡ್ಡ ಮನುಷ್ಯರೇ ಆದಿಯಾದವರಿಗೆ ಅನೇಕವಾದ ಹಿತೋಪದೇಶಗಳನ್ನು ತಿಳಿಸಿ ಬುದ್ಧಿವಾದಗಳನ್ನು ಹೇಳಿ ಪ್ರದರ್ಶನ ಶಾಲೆಯನ್ನು ಆರಂಭಿಸಿದರು. ಫೀರ್ ಮರ್ಚಂಟರಿಗೆ ಹಾರ ತುರಾಯಿಗಳರ್ಪಿಸಲ್ಪಟ್ಟವು. ಇಬ್ಬರು ಬಾಲಕರು ಮನೋಹರವಾದ ರೀತಿಯಲ್ಲಿ ಶ್ರೀಮನ್ಮಹಾರಾಜರವರ ಮತ್ತು ಚಕ್ರವರ್ತಿ ಸಾರ್ವಭೌಮರವರ ಶ್ರೇಯಃ ಪ್ರಾರ್ಥನೆಗಳನ್ನು ಹಾಡಿದ ಬಳಿಕ ಸಭೆಯು ಮುಕ್ತಾಯವಾಯಿತು.

ಮರುದಿನ ಅಗ್ರಾಸನಾಧಿಪತಿಗಳಿಂದ ಬಾಲಕರಿಗೆ ತಿಂಡಿ ಕೊಡಿಸುವಂತೆ ದಯಪಾಲಿಸಲ್ಪಟ್ಟ ಹಣದ ಜೊತೆಗೆ ಉಪಾಧ್ಯಾಯರುಗಳೂ ಕೊಂಚ ಮೊಬಲಗನ್ನು ಸೇರಿಸಿ ಗ್ರಾಮದ ಪಟೇಲರೂ ಇತರ ಕೆಲವು ಮಂದಿ ದೊಡ್ಡಮನುಷ್ಯರೂ ಸೇರಿ ಬಾಲಕರಿಂದ ರಾಗಿನಾ ಪೂಜೆಯನ್ನು ಮಾಡಿಸಿ, ಬಾಲಕರೆಲ್ಲರೂ ತೃಪ್ತಿಪಡುವಂತೆ ಮಿಠಾಯಿ ಹಂಚಿ “ಶ್ರೀಮನ್ಮಹಾರಾಜರವರಿಗೆ ಮಂಗಳವಾಗಲಿ, ಶ್ರೀಮಚ್ಚಕ್ರವರ್ತಿ ಸಾರ್ವಭೌಮರಿಗೆ ಜಯವಾಗಲಿ” ಎಂಬ ಕೋಲಾಹಲ ಧ್ವನಿ ಮಾಡುತ್ತಾ ಉಪಾಧ್ಯಾಯರು ತಮ್ಮ ಉತ್ಸವವನ್ನು ಮುಕ್ತಾಯಮಾಡಿದರು.

ಕೆ. ಟಿ. ಎಸ್. ಎಸ್.

[ಸ್ಥಳ ಸಂಕೋಚದಿಂದ ಮೊದಲಿನ ರಿಪೋರ್ಟು ಪ್ರಕಟಿಸಲಾಗಲಿಲ್ಲ.—ಎಡಿ.]

ಮೈಸೂರು ಸರ್ಕಾರದ ಹುಕುಮು.

ತಾಲ್ಲೂಕು ಸ್ಥಳಗಳಲ್ಲಿ ಸರ್ಕಾರಿ ನೌಕರರಿಗೆ ಮನೆಗಳು.

ಮಫಸ್ಸಲಿನಲ್ಲಿ ಸರ್ಕಾರೀ ನೌಕರರಿಗೆ ಸರಿಯಾದ ಸ್ಥಳವಸತಿಯನ್ನು ಒದಗಿಸಿಕೊಡುವ ವಿಷಯವು ಕ್ಲೇಶದಾಯಕವಾಗಿಯೇ ಆಗುತ್ತಿದೆ.—ಕೋಲಾರ, ಮಾಗಡಿ, ನಗರ ಮತ್ತು ಕೋಲಾರದ ಚಿನ್ನದ ಗಣಿಗಳು, ಈ ಸ್ಥಳಗಳಲ್ಲಿ ಸರ್ಕಾರದ ನೌಕರರಿಗೆ ಮನೆಗಳನ್ನು ಆಗಲೇ ಸರ್ಕಾರದವರು ಕಟ್ಟಿಸಿರುತ್ತಾರೆ. ಈ ಸ್ಥಳಗಳು ಹೊರತು ಬೇರೆ ತಾಲ್ಲೂಕು ಕಸಬೆಗಳಲ್ಲಿ ಮನೆಗಳನ್ನು ಕಟ್ಟಿಸಿಕೊಡತಕ್ಕ ಆವಶ್ಯಕತೆಯು ಸರ್ಕಾರದವರ ಪರ್ಯಾಲೋಚನೆಗೆ ತರಲ್ಪಟ್ಟಿರುತ್ತದೆ.—ಯಾವ ಯಾವ ಸ್ಥಳಗಳಲ್ಲಿ ಕಟ್ಟಡಗಳು ಈ ಕೂಡಲೇ ಅವಶ್ಯವಾಗಿ ಆಗಿಯೇ ತೀರಬೇಕೆಂದಿದೆಯೋ ಆ ಸ್ಥಳಗಳನ್ನೂ, ಯಾವ ಯಾವ ಸ್ಥಳಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿದರೆ ಒಳ್ಳೇದೆಂದು ಭಾವಿಸಲಾಗಿದೆಯೋ ಆ ಸ್ಥಳಗಳನ್ನೂ ತಿಳಿಸಬೇಕೆಂದು ಡೆಪ್ಯುಟಿ ಕಮಿಷನರಿಗೆ ಕೇಳಿ ಇದೆ. ಸ್ಥಳದ ಆರೋಗ್ಯಸ್ಥಿತಿ ಮತ್ತು ಅದರಿಂದ ಉಂಟಾಗುವ ಕಷ್ಟ ಇವೇ ಮುಂತಾದ ವಿಶೇಷ ಕಾರಣಗಳ ದೆಸೆಯಿಂದ ನೌಕರರಿಗೆ ಮನೆಗಳನ್ನು ಕೂಡಲೆ ಕಟ್ಟಿಸಿಕೊಡುವುದು ಅತ್ಯವಶ್ಯಕವಾಗುವಂಥಾ ಸ್ಥಳಗಳನ್ನು ಮಾತ್ರ ಮೊದಲನೆಯ ತರಗತಿಯಲ್ಲಿ ಸೇರಿಸಬೇಕು.

ಈಗ ಅವಶ್ಯವಾಗಿರುವ ಮನೆಗಳನ್ನು ಕಟ್ಟಿಸುವುದಕ್ಕಾಗಿ ಆಯಾ ಸ್ಥಳಗಳ ಸಾಹುಕಾರರಿಗೆ ಸರಿಯಾದ ಪ್ರೋತ್ಸಾಹವನ್ನು ತೋರಿಸಬೇಕೆಂದು ಸಲಹೆಗಳು ಬಂದರೆ ಅವುಗಳನ್ನು ಪರ್ಯಾಲೋಚಿಸಲು ಸರ್ಕಾರದವರು ಸಿದ್ಧವಾಗಿದಾರೆ. ಸರ್ಕಾರದವರು ನ್ಯಾಯವಾದ ಸಹಾಯವನ್ನು ಮಾಡಿದರೆ ಅನೇಕ ಸ್ಥಳಗಳಲ್ಲಿ ಸಾಹುಕಾರರು ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಮನಸ್ಸುಳ್ಳವರಾಗಿದಾರೆಂದು ತಿಳಿಯಬರುತ್ತದೆ.—ಮೊದಲನೆಯ ತರಗತಿಗೆ ಸಂಬಂಧಪಡುವ ಸಂದರ್ಭಗಳಲ್ಲಿ ಆಯಾ ಸಂದರ್ಭಗಳಿಗನುಸಾರವಾಗಿ ಇದರಡಿ ನಮೂದಿಸಲ್ಪಟ್ಟ ರಿಯಾಯಿತಿಗಳನ್ನು ತೋರಿಸಲು ಸರ್ಕಾರದವರು ಸಿದ್ಧರಾಗಿದಾರೆ:—ಡೆಪ್ಯುಟಿ ಕಮಿಷನರು ಚುನಾಯಿಸುವಂಥಾ ಲಾಯಖಾದ ನಿವೇಶನವನ್ನು ಮುಫತ್ತಾಗಿ ಕೊಡುವುದು. ಕಟ್ಟತಕ್ಕ ಕಟ್ಟಡದ ಆಧಾರದ ಮೇಲೆ ರೇಕಡಾ ನಾಲಿಯದಾ 4 ರ ಬಡ್ಡಿಯಲ್ಲಿ ಹತ್ತು ವರ್ಷಗಳೊಳಗಾಗಿ ತೀರಿಸಬೇಕೆಂಬ ಷರತ್ತಿನ ಮೇಲೆ ಸದರಿ ಕಟ್ಟಡಕ್ಕೆ ತಗಲುವ ಅಂದಾಜಿನ ಸ್ವಕಿ ಅರ್ಧಕ್ಕೆ ಸಮನಾದ ಮೊಬಲಗನ್ನು ಸಾಲವಾಗಿ ಕೊಡುವುದು. ಸಾಲಿಯಾನಾ ಶೇಕಡಾ 6 ರ ದರದಲ್ಲಿ 5 ವರುಷಕ್ಕೆ ಕಮ್ಮಿಯಿಲ್ಲದೆ 20 ವರುಷಕ್ಕೆ ಹೆಚ್ಚಿಲ್ಲದೆ ಇರುವಷ್ಟು ಕಾಲ ಬಾಡಿಗೆ ಕೊಡುವುದಕ್ಕೆ ಜವಾಬ್ದಾರಿಯಾಗುವುದು ಆದರೆ ಕಟ್ಟಡವನ್ನು ದುರಸ್ತು ಮಾಡಿ ಆಬಾದಿನಲ್ಲಿಟ್ಟುಕೊಳ್ಳುವುದಕ್ಕೆ ಮಾಲೀಕನೇ ಜವಾಬ್ದಾರನಾಗಿರತಕ್ಕದ್ದು.

ಸಾಲವನ್ನು ಮಂಜೂರ್ಮಾಡುವುದು ಇದರಡಿ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—ಸಾಲವನ್ನು ಡೆಪ್ಯುಟಿ ಕಮಿಷನರಿಗೆ ಯುಕ್ತತೋರುವಂತೆ ಒಂದು ಅಥವಾ ಹೆಚ್ಚು ಕಂತುಗಳಲ್ಲಿ ಕೊಡತಕ್ಕದ್ದು. ಆದರೆ ಸಾಲವನ್ನು ಒಂದೇ ಗಂಟಿನಲ್ಲಿ ಕೊಡಬೇಕಾಗಿದ್ದರೆ ಕಟ್ಟತಕ್ಕ ಮನೆಯಲ್ಲದೆ ಇತರ ಸ್ಥಿರ ಸ್ವತ್ತನ್ನು ಜಾಯಿಂಟ್ ಸೆಕ್ಯೂರಿಟಿಯಾಗಿ ತೆಗೆದುಕೊಳ್ಳತಕ್ಕದ್ದು. ಪಬ್ಲಿಕ್ ವರ್ಕ್ಸ್ ಇಲಾಖೆಯವರೂ ಮತ್ತು ಸದರಿ ಕಟ್ಟಡವು ಯಾವ ಇಲಾಖೆಯವರಿಗೆ ಬೇಕೋ ಆ ಇಲಾಖೆಯವರೂ ಒಪ್ಪುವಂಥಾ ಪ್ಲಾನಿನ ಅಥವಾ ನಕ್ಷೆಯ ಪ್ರಕಾರ ಡೆಪ್ಯುಟಿ ಕಮಿಷನರು ಗೊತ್ತುಮಾಡುವ ನ್ಯಾಯವಾದ ಕಾಲದೊಳಗಾಗಿ ಕಟ್ಟಡವನ್ನು ಕಟ್ಟಿಸಿಕೊಡಬೇಕು; ಇದಕ್ಕೆ ತಪ್ಪಿದರೆ ನಿವೇಶನದ ಪೂರಾ ಬೆಲೆಯನ್ನೂ ಸಾಲದ ಮೊಬಲಗನ್ನೂ ಕಂದಾಯದ ಬಾಕಿಯೋಪಾದಿಯಲ್ಲಿ ವಸೂಲ್ಮಾಡತಕ್ಕದ್ದು.

ಮೈಸೂರಿನಿಂದ ಪರತ್ತಿಗೂ ಮತ್ತು ಪ್ಲಾನುಗಳು ಮಂಜೂರಾದ ತರುವಾಯ ಕಟ್ಟಡದ ಮಾಲೀಕನು ಡೆಪ್ಯುಟಿ ಕಮಿಷನರು ಇಬ್ಬರೂ ಒಪ್ಪಿ ಗೊತ್ತುಮಾಡಿಕೊಳ್ಳುವ ಬಾಡಿಗೆಯನ್ನು ತೆಗೆದುಕೊಂಡು ಸರ್ಕಾರೀ ನೌಕರರಿಗೆ ಮಾತ್ರವೇ ಬಾಡಿಗೆಗೆ ಕೊಡುತ್ತೇನೆಂಬ ಷರತ್ತಿಗೂ ಒಳಪಡಿಸಿ ಕಟ್ಟಡದ ಮಾಲೀಕನಿಂದ ಒಂದು ಮುಚ್ಚಳಿಕೆಯನ್ನು ತೆಗೆಯತಕ್ಕದ್ದು. ಹಾಗೆ ಗೊತ್ತುಮಾಡತಕ್ಕ ಬಾಡಿಗೆಯ ಮೊಬಲಗನ್ನು ಪ್ರತಿ ತಿಂಗಳಲ್ಲಿಯೂ ನೌಕರನ ಸಂಬಳದಿಂದ ವಜಾ ತೆಗೆದುಕೊಂಡು ಮಾಲೀಕನ ಲೆಕ್ಕಕ್ಕೆ ಜಮಾ ಕಟ್ಟಿ ಅದನ್ನು ಸರ್ಕಾರಕ್ಕೆ ಆತನಿಂದ ಬರಬೇಕಾದ ಸಾಲಕ್ಕೆ ವಜಾ ಹಾಕುವಂತೆಯೂ ಕರಾರು ಮಾಡಬೇಕು. ಪ್ರತಿಯೊಂದು ಸ್ಥಳದ ವಿಶ್ಯಮಾನಗಳಿಗೆ ಅನುಸಾರವಾಗಿ ಅವಶ್ಯವಾದ ಯಾವ ಬದಲಾವಣೆಯನ್ನಾಗಲಿ ಪರ್ಯಾಲೋಚನೆ ಮಾಡಲು ಸರ್ಕಾರದವರು ಸಿದ್ಧರಾಗಿರುವರು.

ಮನೆಗಳು ಯಾವ ಯಾವ ನೌಕರರ ಸಂಖ್ಯೆಕ್ಕೆ ತಕ್ಕಂತೆ ಮನೆಗಳಿಗೆ ಮುಟ್ಟುವ ಅಂದಾಜಿನ ಪ್ರಮಾಣವನ್ನು ತೋರಿಸುವ ಒಂದು ಪಟ್ಟಿಯನ್ನು ರೆವಿನ್ಯೂ ಕಮಿಷನರವರೊಡನೆ ಆಲೋಚಿಸಿ ತಯಾರು ಮಾಡಿ ಜಾಗ್ರತೆಯಾಗಿ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಚೀಫ್ ಇಂಜಿನಿಯರನ್ನು ಕೇಳಿ ಇದೆ.

ಮೈಸೂರು ಗೆಜೆಟ್ ಸಂಗ್ರಹ.

ಮಿ|| ಎಸ್. ಜಿ. ಅರೋಗ್ಯಸ್ವಾಮಿಯವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗ ಮಾಡಿರುವುದರಿಂದ ಸರ್ಜನ್ ಮ|| ಟಿ. ಎಸ್. ನಂಜಪ್ಪನವರು ಹಾಸನದ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾಗಿ ನೇಮಿಸಲ್ಪಟ್ಟಿದಾರೆ.

ಮೈಸೂರು ಸ್ಟಾಂಪುಗಳ ಕಂಟ್ರೋಲಿಂಗ್ ಅಸಿಸ್ಟೆಂಟ್ ಮ|| ಸಿ. ವೆಂಕಟರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರ್ ಮ|| ಬಿ. ಕೃಷ್ಣರಾಯರಿಗೆ ಕೊಟ್ಟಿರುವ ಎಂಟು ತಿಂಗಳ ರಜವನ್ನು ಇನ್ನೆರಡು ತಿಂಗಳು ಜಾಸ್ತಿ ಮಾಡಿದೆ.

ತುಮಕೂರು ಡಿ. ಖಜಾನೆ ಅ|| ಕಮಿಷನರ್ ಮ|| ಎ. ವೆಂಕಟರಮಣಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಅ|| ಕಮಿಷನರ್ ಮ|| ಬಿ. ಬಸವಾರಾಧ್ಯರವರನ್ನು ಗುಬ್ಬಿ ಸಬ್ ಡಿವಿಜನ್‌ನಿಂದ ತುಮಕೂರು ಡಿಸ್ಟ್ರಿಕ್ಟ್ ಖಜಾನೆ ಛಾರ್ಜಿಗೆ ವರ್ಗಮಾಡಿದೆ.

ಫಾರೆಸ್ಟ್ ಕನ್ಸರ್ವೇಟರವರ ಪರ್ಸನಲ್ ಅಸಿಸ್ಟೆಂಟ್ ಮ|| ಎಂ. ವೆಂಕಟನಾರಣಪ್ಪನವರಿಗೆ ಮಾರ್ಚಿ ತಾ. 30 ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಹೆಡ್ ಅಕೌಂಟೆಂಟ್ ಮ|| ಎನ್. ನರಸಿಂಹಯ್ಯಂಗಾರ್ರು ಅವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಕಾವೇರಿ ರಿಜರ್ವಾಯರ್ ವರ್ಕ್ಸ್ ಕ್ಯಾಂಪ್ ಅಕೌಂಟ್ಸ್ ಆಫೀಸರ್ ಮಿ|| ಟಿ. ಧರ್ಮರಾಜ ಚೆಟ್ಟಿಯವರಿಗೆ ಮೇ ತಾ. 5 ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು ಡಿ. ಎಕ್ಸಾಮಿನರ್ ಸಬ್ ಮ|| ಎಸ್. ಎನ್. ಶ್ರೀ ನರಸಿಂಹ ಶಾಸ್ತ್ರಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಮಿ|| ಎಂ. ಜಿ. ಮೈತ್ರೇಯರವರು ಅವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಕೆಸಬುಗಳ ಸೂಪರಿಂಟೆಂಡೆಂಟ್ ಮಿ|| ಜಿ. ಸುಬ್ಬರಾವ್ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕಾವೇರಿ ರಿಜರ್ವಾಯರ್ ವರ್ಕ್ಸಿನ ಸಬ್ ಇಂಜಿನಿಯರ್ ಮ|| ಬಿ. ಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಮ|| ಬಿ. ಬಿ. ಗರುಡಾಚಾರ್ರು ಅವರ ಚಾರ್ಜಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಸಿರಾ ಡಿವಿಜನ್ ಅ|| ಎಗ್ಸಿಕ್ಯುಟಿವ್ ಇಂಜಿನಿಯರ್ ಮ|| ಎಸ್. ಎ. ರಾಮಸ್ವಾಮಿ ಅಯ್ಯರವರಿಗೆ ಮೇ ತಾ. 2 ರಿಂದ ಹದಿನಾಲ್ಕು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಅ|| ಇಂಜಿನಿಯರ್ ಮ|| ಎನ್. ನರಸೋಜಿರಾಯರು ಅವರ ಚಾರ್ಜಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಅ|| ಇಂಜಿನಿಯರ್ ಮ|| ಎಂ. ಎ. ಶ್ರೀನಿವಾಸಾಚಾರ್ಯರಿಗೆ ಕೊಟ್ಟಿರುವ ಒಂದೂವರೆ ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ಇಪ್ಪತ್ತೈದು ದಿನ ಜಾಸ್ತಿ ಮಾಡಿದೆ.

ಬಲಾತ್ಕರಿಸಿ ದೇಣಿ ತೆಗೆಯುವ ಹಾಳುವ ಕಾನೂನನ್ನು ಆಲೂರು, ಸಕಲೇಶಪುರ ಮ್ಯುನಿಸಿಪಾಲಿಟಿಗಳಲ್ಲಿ ಮುಂದೆ ಜೂನ್ ಆಗಾಯಿತು ಮೂರು ವರುಷಗಳೂ, ಕುಣಿಗಲು ಮ್ಯುನಿಸಿಪಾಲಿಟಿಯಲ್ಲಿ ಮುಂದೆ ಜುಲೈ ಆಗಾಯಿತು ಎರಡು ವರುಷಗಳೂ ಜಾರಿಯಲ್ಲಿಡಲ್ಪಡುತ್ತದೆ.

ಶಿವಮೊಗ್ಗ ಸಬ್ ಡಿವಿಜನ್ ಅ|| ಕಮಿಷನರ್ ಮ|| ಎಂ. ಲಕ್ಷ್ಮೀನರಸಿಂಹಯ್ಯನವರನ್ನು ಜನವರಿ ತಾ. 5 ರಿಂದ 3 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮ|| ಎಸ್. ಹಿರಿಯಣ್ಣನವರನ್ನು ಮಾರ್ಚಿ ತಾ. 31 ರ ಆಗಾಯಿತು ಸಬ್ ಜಡ್ಜರಾಗಿ ನೇಮಿಸಿದೆ; ಆದರೆ ಇವರು ದಿವಾನರವರ ಪ್ರೈವೇಟ್ ಸೆಕ್ರೆಟರಿಯಾಗಿಯೇ ಕೆಲಸ ನೋಡತಕ್ಕದ್ದು.

ಮ|| ಕೆ. ಲಕ್ಷ್ಮೀನಾರಾಯಣಯ್ಯನವರು ಈಗಿನಂತೆ ಸಬ್ ಜಡ್ಜರಾಗಿ ಬದಲಿ ನೋಡತಕ್ಕದ್ದು.

ಡೆಪ್ಯುಟಿ ಕಂಟ್ರೋಲರ್ ಮ|| ಎಂ. ಎನ್. ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತನಾಲ್ಕು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಮ|| ಟಿ. ಸ್ವಾಮಿರಾಜಚೆಟ್ಟಿಯವರು ಡೆಪ್ಯುಟಿ ಕಂಟ್ರೋಲರಾಗಿಯೂ, ಮ|| ಎ. ನರಸಿಂಹಮೂರ್ತಿಯವರು ಚೀಫ್ ಸೂಪರಿಂಟೆಂಡೆಂಟರಾಗಿಯೂ ಬದಲಿ ನೋಡತಕ್ಕದ್ದು.

ಬೆಂಗಳೂರು ಡಿ. ಎಕ್ಸೈಸ್ ಆಫೀಸರ್ ಮ|| ಎಂ. ರಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಪ್ರೊ|| ಅ|| ಕಮಿಷನರ್ ಮ|| ಓ. ಗೋಪಾಲರಾವ್ ಅರಸಿನವರು ಅವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಮಂಡ್ಯ ತಾಲ್ಲೂಕು ಅಮಲ್ದಾರ್ ಮ|| ಎಚ್. ಬಸವರಾಜ ಅರಸಿನವರಿಗೆ ಏಪ್ರಿಲ್ ತಾ. 18 ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಶಿರಸ್ತೆದಾರರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಕುಣಿಗಲು ತಾಲ್ಲೋಕು 2 ನೇ ಎಕನಾಮಿಕ್ ಕಾನ್ಫರೆನ್ಸು.

ಇದೇ ಮಾರ್ಚಿ 9 ನೇ ತಾ. ಮಂಗಳವಾರ ಮಧ್ಯಾಹ್ನ 12 ಘಂಟೆಗೆ ತುಮಕೂರ್ ಡೆಪ್ಯುಟಿ ಕಮಿಷನರಾದ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ಹಾಲಿ ಈಗ ಆಯರ್ ಬಾಲಿಕಾ ಪಾಠಶಾಲೆಯನ್ನಿಟ್ಟಿರುವ ಛತ್ರದ ಮುಂಭಾಗದಲ್ಲಿ ವಿಶಾಲವಾಗಿಯೂ, ತಳಿರು ತೋರಣಗಳಿಂದ ಚೆನ್ನಾಗಿ ಅಲಂಕರಿಸಿದ್ದ ಚಪ್ಪರದಲ್ಲಿ ವಿಜೃಂಭಣೆಯಿಂದ ಈ ಕಾನ್ಫರೆನ್ಸು ಜರುಗಿಸುವ ಉದ್ದೇಶ್ಯದಿಂದ ದಯಮಾಡಿಸಿದ್ದ ಅಧಿಕಾರಿಗಳು, ಮ್ಯುನಿಸಿಪಲ್ ಮೆಂಬರುಗಳು, ವರ್ತಕರು, ಪರಸ್ಥಳಗಳಿಂದ ಈ ಸಭೆಗೆ ಬಂದಿದ್ದ ದೊಡ್ಡ ಮನುಷ್ಯರು, ಪ್ರೇಕ್ಷಕರು ಮುಂತಾದವರೆಲ್ಲಾ ಅಧ್ಯಕ್ಷರ ಆಗಮನವನ್ನು ಎದುರುನೋಡುತ್ತಿದ್ದ ಹಾಗೆಯೇ ಡೆಪ್ಯುಟಿ ಕಮಿಷನರವರು ಮಧ್ಯಾಹ್ನ 12 ಘಂಟೆಗೆ ರಥಾರೂಢರಾಗಿ ತುಂಕೂರಿಂದ ದಯಮಾಡಿಸಿ ಮಂಟಪದ್ವಾರಕ್ಕೆ ಬಂದಕೂಡಲೇ ಒಡನೆಯೇ ಸಭೆಯವರೆಲ್ಲಾ ಬಹಳ ಉತ್ಸಾಹದೊಡನೆ ಬ್ಯಾಂಡ್ ವಾದ್ಯಗಳು ಮೊಳಗುತ್ತಿರುವಲ್ಲಿ ಅವರನ್ನು ಎದುರ್ಗೊಂಡು ಕರೆದುಕೊಂಡುಬಂದು ದರ್ಬಾರ್ ಹಾಲಿನಲ್ಲಿ ಅವರಿಗಾಗಿ ನಿರ್ಮಿಸಿದ್ದ ಆಸನದ ಮೇಲೆ ಕೂರಿಸಿ ಪರಸ್ಪರ ಕುಶಲ ಪ್ರಶ್ನೆಗಳಾದೊಡನೆಯೇ ನಮ್ಮ ಅಮಲ್ದಾರ್ ಮ|| ಬಿ. ಎಂ. ವೆಂಕಟೇಶಯ್ಯ, ಬಿ.ಎ. ಯವರು ಸಭೆಯ ಉದ್ದೇಶವನ್ನು ತಿಳಿಯಪಡಿಸಿ ಗತ ಸಾಲಿನ ರಿಪೋರ್ಟನ್ನು ಓದಿದರು. ಸಭೆಗಾಗಿ ದಯಮಾಡಿಸಿದ್ದ ಅಗ್ರಿಕಲ್ಚರಲ್ ಡೈರೆಕ್ಟರವರು, ಡೆಪ್ಯುಟಿ ಡೈರೆಕ್ಟರವರು, ಸಂಪದಭ್ಯುದಯ ಸಮಾಜದ ಸೆಕ್ರೆಟರಿಯವರು, ಪೋಲೀಸ್ ಸೂಪ್ರಿಂಡೆಂಟ್‌ರವರು, ಎಜುಕೇಷನಲ್ ಸೂಪರಿಂಟೆಂಡೆಂಟರವರು, ಅಡ್ವೋಕೇಟ್ ಮ|| ಎಚ್. ವೆಂಕಟರಾಮಯ್ಯನವರು ತಾಲ್ಲೋಕಿನ ಗ್ರಾಮಾಂತರಗಳಿಂದ ಬಂದಿದ್ದ ಕೆಲವು ಜನ ದೊಡ್ಡ ಮನುಷ್ಯರು ಪ್ರೇಕ್ಷಕರು ಮುಂತಾದವರಿಗೆಲ್ಲಾ ಈ ತಾಲ್ಲೋಕಿನಲ್ಲಿ ನಡೆಯತಕ್ಕ ಗ್ರಾಮಾಭಿವೃದ್ಧಿ ಕಾರ್ಯಗಳು, ವಿದ್ಯಾಭಿವೃದ್ಧಿ, ವ್ಯವಸಾಯ, ಸಾಮಾನ್ಯವಾದ ಕೈಗಾರಿಕೆ, ಇವುಗಳಿಗೆಲ್ಲಾ ನಮ್ಮ ಜನಾನುರಾಗಿಗಳಾದ ಅಮಲ್ದಾರರವರ ಪ್ರೋತ್ಸಾಹವೇ ಮುಖ್ಯವಾದದ್ದೆಂಬ ವಿಷಯವು ಸದರಿ ರಿಪೋರ್ಟಿನಿಂದಲೂ, ಪ್ರತ್ಯಕ್ಷವಾಗಿ ನಡೆದ ಕೆಲವು ವಿಚಾರಗಳಿಂದಲೂ ವ್ಯಕ್ತವಾಯ್ತು. ಆ ಕೂಡಲೆ ಜನಗಳ ಪ್ರಮುಖರು, ರೈತಾಪಿ ಜನಗಳು, ಇನ್ನು ಕೆಲವರು ತಮಗಿರತಕ್ಕ ಕುಂದುಕೊರತೆಗಳನ್ನೆಲ್ಲಾ ನಮ್ಮ ಡಿಸ್ಟ್ರಿಕ್ಟ್ ಪ್ರಭುಗಳಲ್ಲಿ ಅರಿಕೆಮಾಡಿಕೊಂಡದ್ದಕ್ಕೆ ಅವರಿಗೆಲ್ಲಾ ಸಮಾಧಾನಕರವಾದ ಉತ್ತರಗಳು ದೊರೆತದ್ದರಿಂದ ತುಂಬಾ ಸಂತೋಷಪಟ್ಟುಕೊಂಡರು. ನಂತರ ಸಭಿಕರಿಗೆಲ್ಲಾ ಫಲಾಹಾರಗಳೂ, ಗಂಧ ಪುಷ್ಪ ತಾಂಬೂಲಗಳೂ ವಿನಿಯೋಗಿಸಲ್ಪಟ್ಟವು. ನಂತರ ವ್ಯವಸಾಯದ ಇಲಾಖೆಯ ಡೈರೆಕ್ಟರವರ ಅಭಿಪ್ರಾಯದಂತೆ ಡೆಪ್ಯುಟಿ ಡೈರೆಕ್ಟರವರು ಹಾಲಿನಿಂದ ಬೆಣ್ಣೆ ತೆಗೆಯತಕ್ಕ ವಿಷಯದಲ್ಲಿ ನಮ್ಮವರು ಅನುಸರಿಸುತ್ತಿರುವ ಪುರಾತನ ಪದ್ಧತಿ, ಪಾಶ್ಚಿಮಾತ್ಯರು ಈಚೆಗೆ ಕಂಡುಹಿಡಿದು ರೂಢಿಯಲ್ಲಿ ತಂದಿರುವ ಹೊಸ ಪದ್ಧತಿ ಮುಂತಾದವನ್ನೆಲ್ಲಾ ಚೆನ್ನಾಗಿ ಹೇಳಿ, ಯಂತ್ರ ಸಾಧನಗಳಿಂದ ಆಗತಕ್ಕ ಲಾಭವನ್ನೂ, ನಮ್ಮ ಪದ್ಧತಿಯಂತೆ ತಯಾರಿಸುವ ನಷ್ಟವನ್ನೂ ಚೆನ್ನಾಗಿ ವಿವರಿಸಿ ಹೇಳಿದರು. ಅದನ್ನು ಪ್ರತಿಯೊಬ್ಬರೂ ನೋಡಿ ತುಂಬಾ ಸಂತೋಷಪಟ್ಟರು. ಹಾಗೆಯೇ ಕೊಂಚಕಾಲ ದೇಶವಿದೇಶಗಳ ವಿಷಯವಾಗಿ ಪ್ರಸ್ತಾಪಿಸಿ ಸರ್ವರೂ ಅಧ್ಯಕ್ಷರ ಅಪ್ಪಣೆಯನ್ನು ಹೊಂದಿ ಆ ದಿವಸದ ಸಭೆಯನ್ನು ಮುಕ್ತಾಯ ಮಾಡಿದರು.

ಮಾರನೆಯ ದಿನ ಬೆಳಗ್ಗೆ 7 ಗಂಟೆಗೆ ಸಭಾಧ್ಯಕ್ಷರು ಅಧಿಕಾರಿಗಳಿಂದಲೂ, ಸ್ಥಳ ಪರಸ್ಥಳಗಳ ದೊಡ್ಡ ಮನುಷ್ಯರಿಂದಲೂ, ರೈತಪ್ರಮುಖರಿಂದಲೂ ಅವ್ವೇರಿಗೆ ಆಸ್ಪತ್ರೆಯ ಹಿಂಭಾಗದಲ್ಲಿರುವ ಹೊಲದ ಮೈದಾನಕ್ಕೆ ದಯಮಾಡಿ ವ್ಯವಸಾಯದ ಇಲಾಖೆಯವರು ತರಿಸಿದ್ದ ವ್ಯವಸಾಯದ ಮುಟ್ಟುಗಳ ಪ್ರಯೋಜನವನ್ನೂ, ಅವುಗಳನ್ನು ಉಪಯೋಗಿಸತಕ್ಕ ರೀತಿಯನ್ನೂ ತೋರಿಸಿಕೊಟ್ಟು ಕಮ್ಮಿ ಆಗುವದರಿಂದ ಮಾಡಿಕೊಳ್ಳತಕ್ಕ ಗೊಬ್ಬರ, ಒಳ್ಳೇ ಬೀಜಗಳನ್ನು ಚುನಾಯಿಸತಕ್ಕ ಸುಲಭವಾದ ರೀತಿ, ಇವುಗಳೆಲ್ಲಾ ಪ್ರತಿಯೊಬ್ಬರಿಗೂ ಗೊತ್ತಾಗುವಂತೆ ಏರ್ಪಾಡು ಮಾಡಿ ವ್ಯವಸಾಯ ಸಂಬಂಧವಾದ ಚಿಕ್ಕ ಚಿಕ್ಕ ಪುಸ್ತಕಗಳನ್ನು ಅಪೇಕ್ಷಿಸಿದವರಿಗೆಲ್ಲಾ ಉಚಿತವಾಗಿ ಕೊಡಿಸಿದರು. ಆ ದಿನ ಮಧ್ಯಾಹ್ನ 12 ಗಂಟೆಗೆ ಸಭಾ ಮಂಟಪದಲ್ಲಿ ಮೊದಲು ಸೇರಿದ್ದ ಕಾಲುಭಾಗ ಜನರು ಮಾತ್ರ ಅಧ್ಯಕ್ಷರ ಆಗಮನವನ್ನು ಎದುರು ನೋಡುತ್ತಿರುವಷ್ಟರಲ್ಲಿ ಸವಾರಿಯು ಚಿತ್ತೈಸಿತು. ವಿದ್ಯಾಭ್ಯಾಸದ ಇಲಾಖೆಯವರಿಂದ ಈ ಸಭೆಗೆ ಕಳುಹಿಸಲ್ಪಟ್ಟಿದ್ದ ಡೆಪ್ಯುಟಿ ಇನ್ಸ್‌ಪೆಕ್ಟರು ನಿಷ್ಪಾದೇ ಐಶ್ವರ್ಯದ ಗಣಿ ಎಂಬ ವಿಚಾರವಾಗಿ ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ತಮ್ಮ ತರುವಾಯ ಮ|| ರಾಮಸ್ವಾಮಯ್ಯಂಗಾರ್ರು ಜಾತ್ಯಮತದ ನಿಷ್ಪಾದನವಾಗಿಯೂ, ಅಮೋಘದ ವಿಚಾರವಾಗಿಯೂ ಕೆಲವು ಸಂಗತಿಗಳನ್ನು ಓದಿದರು.

ಕುಣಿಗಲು ಮ|| ಕೆ. ವಿ. ರಾಮಸ್ವಾಮಿ ಶೆಟ್ಟಿಯವರು ಒಂದು ಸ್ವಾರಸ್ಯವಾದ ಚಿಕ್ಕ ಉಪನ್ಯಾಸವನ್ನು ಮಾಡಿದರು. ಇದರ ಸಾರಾಂಶವೇನೆಂದರೆ—ನಮ್ಮ ಜನಗಳು ಮಾಡತಕ್ಕ ಅನೇಕ ಕಾರ್ಯಗಳಲ್ಲಿ ಬಹಳ ವಿಧವಾಗಿ ನಷ್ಟ ಹೊಂದುತ್ತಲಿದೇವೆ. ಇವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸೂಚಿಸಬಹುದು. ಉತ್ಪತ್ತಿ ಸಾಧನಗಳನ್ನು ಉಪಯೋಗಿಸದೆ ಇರುವದು ಮೊದಲನೆಯದು; ಒದಗಿದ ಅವಕಾಶಗಳನ್ನು ಕಳೆದುಕೊಳ್ಳುವದು ಎರಡನೆಯದು. ಇಂಥಾ ಕಾರಣಗಳು ಇನ್ನೂ ಅನೇಕವಾಗಿದ್ದರೂ ಇವೆರಡನ್ನು ಮೊದಲು ಸರಿಪಡಿಸಿಕೊಳ್ಳದೆ ಉಭಯ ವಿಧವಾಗಿಯೂ ನಷ್ಟ ಹೊಂದುತ್ತಲಿದೇವೆ. ಸಾಮಾನ್ಯವಾಗಿ ವ್ಯವಸಾಯಗಾರರಿಗೆ ವರುಷಕ್ಕೆ 6-7 ತಿಂಗಳು ಮಾತ್ರ ಕೆಲಸವಿದ್ದು ಉಳಿದ ವಿಶ್ರಮಕಾಲವನ್ನು ವ್ಯರ್ಥವಾಗಿ ಕಳೆಯುವದರಿಂದ ಕೆಲಸ ಮಾಡತಕ್ಕ ಶಕ್ತಿಯೇ ನಷ್ಟವಾಗಿಹೋಗುತ್ತಲಿದೆ. ಪರಸ್ಪರ ವಿಚಾರದಲ್ಲಿ ನೇಕಡ 90 ಜನಗಳು ವಿದ್ಯೆಯಿಲ್ಲದವರಾಗಿ ಬೆಳೆಯುತ್ತಿರುವುದರಿಂದ ಜ್ಞಾನೋದಯಕ್ಕೆ ಕಾರಣವಾದ ಬುದ್ಧಿಯೂ ಕೂಡ ನಷ್ಟವಾಗುತ್ತಲಿದೆ. ನಾಗರಿಕ ಜನಾಂಗದವರಲ್ಲಿ ಸಾಮಾನ್ಯವಾಗಿ ರೂಢಿಯಲ್ಲಿರತಕ್ಕ ವಿಷಯಗಳು ಕೂಡ ಏನೆಂಬುವದು ನಮಗೆ ಗೊತ್ತೇ ಇಲ್ಲ. ಆದ್ದರಿಂದ ಅವರು ಸಂಪಾದಿಸಿರುವ ಜ್ಞಾನವನ್ನೂ, ಅನುಭವವನ್ನೂ ಅವರಿಂದ ಹೊಂದಿ ಉಪಯೋಗಿಸಿಕೊಂಡು ಅವರ ಮಾರ್ಗಗಳನ್ನು ಸರಿಯಾಗಿ ತಿಳಿದುಕೊಳ್ಳುವವರೆಗೂ ನಾವು ಮಾಡತಕ್ಕ ಕಾರ್ಯಗಳಲ್ಲಿ ನಮ್ಮಗೂ ಇರಬೇಕಾದ ಲಕ್ಷ್ಯವೂ, ಅನುಸರಿಸಬೇಕಾದ ಕ್ರಮವೂ ನಮಗೆ ಗೊತ್ತಿಲ್ಲದೆ ನಷ್ಟವಾಗುತ್ತಲಿದೆ. ಜಾತಿ ಕಲಹಗಳೂ, ಗ್ರಾಮದಲ್ಲಿ ಪಾರ್ಟಿಗಳೂ ಹುಟ್ಟಿ ಹಣವನ್ನು ದುರುಪಯೋಗಪಡಿಸತಕ್ಕ ಮಾರ್ಗವಲ್ಲದೆ ಹಣವನ್ನು ಲಾಭಕರವಾದ ಕಾರ್ಯಗಳಲ್ಲಿ ಉಪಯೋಗಿಸತಕ್ಕ ಮಾರ್ಗವೇ ನಮ್ಮ ಜನಗಳಿಗೆ ಖಂಡಿತವಾಗಿ ತಿಳಿಯದು. ನಮ್ಮ ಜನಗಳು ಯಥೋಚಿತವಾಗಿ ಜೀವನಮಾಡಿಕೊಂಡು ಸರಿಹೋಗಿದ್ದರೂ ಅವರಲ್ಲಿ ದೇಹಾಭಿಮಾನವಿಲ್ಲದಿರೋಣದರಿಂದ ಆರೋಗ್ಯರಕ್ಷಣಾನುಸಾರವಾಗಿ ನಡೆಯದೆ ರೋಗಕ್ಕೂ ಅಕಾಲಿಕ ಮೃತ್ಯುಗೂ ಒಳಗಾಗಿ ವ್ಯಥೆಪಡುತ್ತಲಿದೇವೆ. ನಮಗೆ ಮೊದಲು ನಮ್ಮ ಗ್ರಾಮದ ಜನರು ದಾಯಕ್ಕಾದರೂ ವಿಶೇಷ ಲಾಭಕರವಾದ ಕಾರ್ಯಗಳಲ್ಲಿ ಒಂದಾಗಿ ಸೇರಿ ಕೆಲಸ ಮಾಡತಕ್ಕ ಶಕ್ತಿ ಇಲ್ಲ. ಐಕಮತ್ಯವಿಲ್ಲ, ಪರಸ್ಪರ ಸ್ನೇಹಭಾವವಿಲ್ಲ, ಪರೋಪಕಾರದ ಮನೋಭಾವವಿಲ್ಲ. ಈ ದೋಷಗಳೇ ಎಲ್ಲಕ್ಕಿಂತಲೂ ನಾವು ಮುಂದುವರಿಯುವಿಕೆಗೆ ಅಡ್ಡಿಯಾಗಿರುವಲ್ಲಿ ನಾವು ಮುಂದಕ್ಕೆ ಬಂದು ನಮ್ಮ ಪ್ರಭುಗಳ ಮನಸ್ಸಂತೋಷಪಡಿಸತಕ್ಕ ಕಾಲವು ಬಹುಕಾಲ ನಿರೀಕ್ಷಣೆಯಿಂದಿದ್ದೇ ವಿನಹ ಸಾಂಪ್ರತಕಾಲದಲ್ಲಿ ಅನುಭವಿಸುವ ಭಾಗ್ಯವು ನಮಗೆ ಲಭಿಸಬೇಕೆಂಬ ಕುತೂಹಲವಿರತಕ್ಕವರಾದರೂ ಮೊದಲು ನಮ್ಮಲ್ಲಿರತಕ್ಕ ಅಸಂಘಟನೆಗಳನ್ನು ಸರಿಪಡಿಸಿಕೊಂಡು ನಂತರ ನಮ್ಮ ಪ್ರಭುಗಳ ಅನುಗ್ರಹವನ್ನು ಹೊಂದುವವರೆಗೂ ಈ ನಮ್ಮ ಸಮುದ್ದೇಶವು ನೆರವೇರಲಾರದೆಂದು ಅರಿಕೆ ಮಾಡುವೆನು ಎಂದು ಹೇಳಿದರು.

ನಂತರ ಪರಸ್ಪರ ಸಹಾಯಕ ಸಂಘಗಳ ಇನ್ಸ್‌ಪೆಕ್ಟರವರು ಕೋಆಪರೇಟಿವ್ ಸೊಸೈಟಿಗಳನ್ನು ಅಭಿವೃದ್ಧಿಗೆ ತಂದುಕೊಳ್ಳುವದರಿಂದ ರೈತರು ಹೊಂದಬಹುದಾದ ಪ್ರಯೋಜನಗಳನ್ನು ಚೆನ್ನಾಗಿ ತಿಳಿಯಹೇಳಿ ನಂತರ ಸಂಪದಭ್ಯುದಯ ಸಮಾಜದ ಸೆಕ್ರೆಟರಿಯವರು ರೇಷ್ಮೇ ಕೈಗಾರಿಕೆಯು ನಮ್ಮ ದೇಶದಲ್ಲಿ ಕ್ಷೀಣವಾಗುತ್ತಿರುವುದನ್ನೂ, ಲಾಭಕರವಾದ ಈ ಬೆಳೆಯನ್ನು ಅಭಿವೃದ್ಧಿ ಪಡಿಸಲು ರೈತರು ಕೈಕೊಳ್ಳಬೇಕಾದ ಮಾರ್ಗಗಳನ್ನೂ ಬಹು ಚೆನ್ನಾಗಿ ಅಪ್ಪಣೆ ಕೊಡಿಸಿದರು. ವ್ಯವಸಾಯದ ಇಲಾಖೆ ಡೆಪ್ಯುಟಿ ಡೈರೆಕ್ಟರವರು ಲಾಭಕರವಾದ ಕಬ್ಬಿನ ಗಾಣಗಳನ್ನು ಉಪಯೋಗಿಸುವದರಿಂದ ಹೊಂದುವ ಲಾಭದ ವಿಷಯವಾಗಿ ಪ್ರಸ್ತಾಪಿಸಿದರು. ನಂತರ ನಮ್ಮ ಡಾಕ್ಟರವರು ಆರೋಗ್ಯಭಾಗ್ಯವೇ ಭಾಗ್ಯವೆಂಬುದನ್ನು ನಾಲ್ಕು ಭಾಗವಾಗಿ ವಿಸ್ತರಿಸಿದರು. ಕಡೆಯಲ್ಲಿ ಸಭಾಧ್ಯಕ್ಷರು ಪ್ರಜೆಗಳು ತಮ್ಮ

ಮೇಲಿಗಾಗಿ ವಸಾಹತುಗಳಿಗೆ ಬೇಕಾಗಿರುವಂಥಾ ಕಾನ್ಫರೆನ್ಸುಗಳಿಗೆ ಸರ್ಕಾರದವರೇ ನಿಂತು ಪ್ರತಿಸಲವೂ ವಿಶೇಷವಾಗಿ ಕಾರ್ಯೋದ್ಯುಕ್ತರಾದರೂ ಇದಕ್ಕೆ ನೀಡಿದ 10 ಜನರೂ ಕೂಡ ಶ್ರದ್ಧೆಯನ್ನು ವಹಿಸದೆ ನಮ್ಮಗಳಿಗೆ ಅನ್ನೂ ಅದಕ್ಕೆ ಮೌಢ್ಯಕ್ಕಾಗಿ ತುಂಬಾ ಪಶ್ಚಾತ್ತಾಪಪಟ್ಟುಕೊಂಡು ಹೃದಯಂಗಮವಾದ ಉಪನ್ಯಾಸಗಳನ್ನು ಮಾಡಿ ಸಭೆಯನ್ನು ಪೂರೈಸಿದರು. ನಮ್ಮ ಶ್ರೀಮನ್ ಮಹಾರಾಜರವರಿಗೂ, ಶ್ರೀಮನ್ ಯುವರಾಜರವರಿಗೂ, ನಮ್ಮ ಘನವನ್ನು ಹೊಂದಿದ ಚಕ್ರವರ್ತಿಗಳಿಗೂ ಶ್ರೇಯಃಪ್ರಾರ್ಥನೆಗಳು ನಡೆದ ಮೇಲೆ ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಗಳು ವಿನಿಯೋಗಿಸಲ್ಪಟ್ಟು ಕಾನ್ಫರೆನ್ಸು ಗ್ರೂಪ್ ಫೋಟೋ ತೆಗೆಯಲ್ಪಟ್ಟಿತು. ಕೊಂಚ ಕಾಲ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಸೇರಿ ಟೆನಿಸ್ ಎಂಬ ಚೆಂಡಾಟವನ್ನು ಆಡಿ ಆ ದಿವಸ ಸೇರಿದ ಜನಗಳನ್ನೆಲ್ಲಾ ತುಂಬಾ ಸಂತೋಷಪಡಿಸಿದರು. ಜಿ. ವಿ. ಎಸ್.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಕಡೆಗಳಲ್ಲೂ ಬರೆಯಕೂಡದು; ಅಂಥವುಗಳಿಗೆ ನಾವು ಜಾಗ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಕರೆಸ್‌ಪಾಂಡೆನ್ಸ್.

ಮಲೆನಾಡಿನಲ್ಲಿ ಒಂದು ಮುಖ್ಯ ವಿಷಯ.

ಅಯ್ಯಾ,—ಈ ಮಲೆನಾಡಿನಲ್ಲಿ ಒಂದು ವಿಧವಾದ ಮದ್ದು ಎಂತ ಕೆಲವು ಪದಾರ್ಥಗಳ ಜೊತೆ ಸುಲ್ಲಿ ಸೇರಿಸಿ ಹಾಕುತ್ತಾರೆ. ಇದು ಸುಮಾರು ಮೂರು ನಾಲ್ಕು ತಿಂಗಳು ಹಾಗೇ ನಿಂತು ತರುವಾಯ ಕೈ ಕಾಲುಗಳು ಊದುವದು, ನಡೆಯಲು ಸಾಧ್ಯವಿಲ್ಲದೆ ಇರುವದು, ಅನ್ನ ಸೇರದೆ ಇರುವದು, ಹೀಗೆ ಕೆಲವು ಕಾಲವಿದ್ದು ಆ ಮೇಲೆ ಪ್ರಾಣ ಹೋಗುವದು. ಈ ರೀತಿ ಈ ಕೊಪ್ಪ ತಾಲ್ಲೂಕು ಹರಿಹರಪುರದ ಹೋಬಳಿಗೆ ಸೇರಿದ ಜಂಬುಟಿಗೆ ಅಗ್ರಹಾರದಲ್ಲಿ ಚೆನ್ನಾಗಿ ನಡೆಯುತ್ತ. ಇದು ಹಾಕಬೇಕಾದರೆ ಸಣ್ಣ ಹುಡುಗರು ಎಂಬುದನ್ನು ನೋಡದೆ ಹಾಕಿ ಪ್ರಾಣ ತೆಗೆಯುತ್ತಾರೆ. ಈ ಕೆಲಸ ಮಾಡತಕ್ಕವರು ಹೆಂಗಸರೇ ಹೊರತು ಬೇರೆ ಇಲ್ಲ. ಇದಕ್ಕೆ ವೈದ್ಯವನ್ನು ಕೊಡಿ ಎಂತ ಕೊಡತಕ್ಕವರನ್ನು ಕೇಳಿದರೆ ಕೊಡದಬಾರದಾಗಿ ಅವರಿಗೆ ಅಡ್ಡಿ ಮಾಡುತ್ತಾರೆ. ಹೀಗೆ ಮಾಡಿದರೆ ಲೋಕೋದ್ಧಾರ ಆಗುವದು ಹೇಗೋ ತಿಳಿಯದು. ಇನ್ನು ಮುಂದೆ ಇದು ಕಳೆಯುವದು ಕಷ್ಟವಾಗಿರುತ್ತೆ. ಈ ವಿಚಾರವನ್ನು ನಾನೇ ಅನುಭವಪಟ್ಟಿರುತ್ತೇನಾದ್ದರಿಂದ ಬಾಕಿಯವರಿಗೆ ತಿಳಿಯಪಡಿಸಿರುತ್ತೇನೆ. ನಮ್ಮ ಘನವನ್ನು ಹೊಂದಿದ ಸರ್ಕಾರದವರು ಈ ವಿಚಾರವನ್ನು ಗಮನಕ್ಕೆ ತಂದುಕೊಂಡು ಪ್ರಜಾ ಪಾಲನವನ್ನು ಮಾಡುತ್ತಾರೆಂಬದಾಗಿ ಹಾರೈಸುತ್ತೇನೆ. ಪ್ರಜಾ ಹಿತೈಷಿ.

ಸರ್ಕಾರಿ ಹೊಸ ರೈಲ್ವೆ ನೌಕರರ ಮೇಲೆ ಆಕ್ಷೇಪಣೆ.

ಅಯ್ಯಾ,—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಹೊಸದಾಗಿ ಚಾರಿಯಲ್ಲಿರುವ ಡಿಸ್ಟ್ರಿಕ್ಟ್ ರೈಲ್ವೆಯಲ್ಲಿ ಅನೇಕ ಮಂದಿ ಚಿಕ್ಕವಯಸ್ಸಿನ ಅನನುಭವಸ್ಥರಾದ ಜನರನ್ನು ಟಿಕೆಟ್ ಕಲೆಕ್ಟರ್ ಮೊದಲಾದ ಕೆಲಸಗಳಿಗೆ ನೇಮಿಸಿರುತ್ತಾರೆ. ಇವರಿಗೆ ಇಲ್ಲಿನ ಜನರಲ್ಲಿ ಯಾವ ರೀತಿ ನಡೆಯಬೇಕೆಂಬುದೇ ಗೊತ್ತಿಲ್ಲ. ಮತ್ತು ಪ್ರಯಾಣಿಕರನ್ನು ಬಹು ಹೀನವಾಗಿ ಕಾಣುತ್ತಾರೆ. ಈ ಕೆಳಗಿನ ಉದಾಹರಣೆಯಿಂದ ಈ ನೌಕರರ ಯೋಗ್ಯತೆಯನ್ನು ಕಂಡು ಹಿಡಿಯಬಹುದು. ಈ ದಿನ ಚಿಂತಾಮಣಿಯಿಂದ ರೈಲ್ ಹತ್ತಿ ಶ್ರೀನಿವಾಸಪುರಕ್ಕೆ ಇಳಿದ ಜನರಲ್ಲಿ ಒಬ್ಬ ಬಡ ಹೆಂಗಸಿಗೆ 1 ವರ್ಷದ ಒಂದು ಮಗುವೂ, 3 ವರ್ಷದ ಒಬ್ಬ ಹುಡುಗಿಯೂ ಇದ್ದರು. ಈ ಎರಡು ಮಕ್ಕಳಿಗೂ ಟಿಕೆಟ್ ಕೊಡಬೇಕೆಂತ ಸದರಿ ಹೆಂಗಸನ್ನು ಬಹು ನಿರ್ಬಂಧಪಡಿಸಿ ಅನಂತರ ಆಕೆಯು ಅಳುವುದಕ್ಕೆ ಪ್ರಾರಂಭಿಸಿದ ಕೂಡಲೆ ಬಿಟ್ಟುಬಿಟ್ಟರು.

ಮತ್ತು ತಮಗೆ ಬೇಕಾದ ಕೆಲವರನ್ನು ರೈಲ್ ಬಂದ ಕಾಲದಲ್ಲಿ ಟಿಕೆಟ್ ಇಲ್ಲದೇನೇ ಬಿಡುವುದು; ಇನ್ನು ಕೆಲವರನ್ನು ಬಿಡದೆ ಇರುವುದು ಇದು ಯಾವ ನ್ಯಾಯವೋ ತಿಳಿಯದು. ಇಲ್ಲಿನ ಜನರು ರೈಲ್ ಮುಖವನ್ನೇ ಕಂಡವರಲ್ಲ. ಅಂಥವರು ರೈಲ್ ನೋಡಲು ಬಂದರೆ ರೈಲ್ವೆಯಲ್ಲಿರತಕ್ಕ ಅಲ್ಪಸಂಬಳದ ನೌಕರರು ನಿರ್ಬಂಧಪಡಿಸುವುದಲ್ಲದೆ ಕೆಲವು ಸಂದರ್ಭದಲ್ಲಿ ಅವಮಾನವೂ ಮಾಡುತ್ತಾರೆ. ಇದನ್ನೆಲ್ಲಾ ರೈಲ್ವೆ ಆಫೀಸರುಗಳು ಪರಾಂಬರಿಸಿ ನ್ಯೂನಾತಿರಿಕ್ತಗಳನ್ನು ಸರಿಪಡಿಸಬೇಕೆಂತಲೂ, ಯೋಗ್ಯರಾದವರನ್ನೇ ನೌಕರಿಗೆ ನೇಮಿಸಬೇಕೆಂತಲೂ ಈ ಮೂಲಕ ಪ್ರಾರ್ಥಿಸುತ್ತೇನೆ. ದೇಶಾಭಿಮಾನಿ

ದೇಶದ ಏಳಿಗೆಗೆ ಪ್ರಜೆಗಳ ಕರ್ತವ್ಯ.

ಅಯ್ಯಾ,—ಮೇಲ್ಕಂಡ ಹೆಸರುಳ್ಳ ಲೇಖನವನ್ನು ನೀ 11 ನೇ ತಾ. ವೃತ್ತಾಂತ ಪತ್ರಿಕೆಯಲ್ಲಿ ಓದಿನೋಡಿದೆನು. ಸಂಘಗಳಿಗೆ ಮೆಂಬರಾಗಿರುವ ಪ್ರಜೆಗಳೆಲ್ಲರೂ ಈ ಲೇಖನವನ್ನು ಓದಿರುವರು ಎಂದು ನಂಬುತ್ತೇನೆ. ಓದದಿದ್ದರೆ ಈಗಲಾದರೂ ಓದುವರೆಂದು ನಂಬಿರುತ್ತೇನೆ. ಸಂಘಗಳಿಗೆ ಮೆಂಬರಾಗಿರುವವರು ತಮ್ಮ ಕರ್ತವ್ಯವನ್ನು ಸ್ವಲ್ಪ ಕಷ್ಟಪಟ್ಟು ಮಾಡುವದಿಲ್ಲವೆಂತ ಸಾಮಾನ್ಯವಾಗಿ ಈ ಲೇಖನದಲ್ಲಿ ಕಂಡುಬರುತ್ತೆ. ಪರಸ್ಪರ ಸಹಾಯ ಸಂಘಗಳಿಗೆ ಮೆಂಬರಾಗುವವರ ನ್ಯೂನತೆಗಳನ್ನು ಈಗ ಸ್ವಲ್ಪ ವಿವರಿಸಲು ಅಪೇಕ್ಷಿಸುತ್ತೇನೆ. 1. ಅಯೋಗ್ಯನಾದವನು ಬಂದರೆ ಮೋಸಗಾರನು, ಒಳ್ಳೇ ಶೀಲವಂತನಲ್ಲದವನು, ಸೊಸೈಟಿಗೆ ಮೆಂಬರಾಗಬೇಕೆಂದು ದರಖಾಸ್ತು ಹಾಕಿದಾಗ ಈತನ ದುರ್ಗುಣವನ್ನು ತಿಳಿದಿರುವ ಕಮಿಟಿ ಮೆಂಬರು ಈ ದುರ್ಗುಣವನ್ನು ಕಮಿಟಿಯವರಿಗೆ ತಿಳಿಸುವದಿಲ್ಲ. ಇವರು ತಮ್ಮ ಕರ್ತವ್ಯವನ್ನು ಮಾಡದೆಹೋದದ್ದಕ್ಕೆ ಅಯೋಗ್ಯನು ಮೆಂಬರಾಗುತ್ತಾನೆ. ಮೆಂಬರು ಆದ ಮೇಲೆ ಸಾಲವನ್ನು ಪಡೆದು ಹಣವನ್ನು ವಾಪಸ್ ಮಾಡದೆ ಸೊಸೈಟಿಯ ಏಳಿಗೆಗೆ ಕುಂದಕ ತರುತ್ತಾನೆ. ಕಮಿಟಿಯ ಮೆಂಬರು ತಮ್ಮ ಕೆಲಸವನ್ನು ನೆರವೇರಿಸಿದ್ದರೆ ಈ ತೊಂದರೆ ಹುಟ್ಟುತ್ತಲೇ ಇರಲಿಲ್ಲ. ಮೆಂಬರು ಆಗಬೇಕೆಂದು ಅಪೇಕ್ಷಿಸುವವನ ದುರ್ಗುಣವನ್ನು ಬೊಗಳುವದು ಸರಿಯಲ್ಲವೆಂತಲೂ, ಅಯೋಗ್ಯನಿಗೆ ತನ್ನ ದುರ್ಗುಣವನ್ನು ತಿದ್ದಿಕೊಳ್ಳುವದಕ್ಕೆ ಸಮಯವನ್ನು ಕೊಡುವದು ಒಳ್ಳೆಯದಾದುದರಿಂದ ಈತನ ದುರ್ಗುಣವನ್ನು ಹೊರಗೆ ಹಾಕುವದು ಧರ್ಮವಲ್ಲವೆಂತಲೂ ಕೆಲವರ ಅಭಿಪ್ರಾಯವಿದೆ. ಮೆಂಬರಾಗಬೇಕೆಂದು ಅಪೇಕ್ಷಿಸುವವನ ದುರ್ಗುಣವನ್ನು ಕಮಿಟಿಯವರಿಗೆ ತಿಳಿಸುವದು ಸಂಘದ ಏಳಿಗೆಗೆ ಬರಬೇಕೆಂಬ ಉದ್ದೇಶದಿಂದ ದುರ್ಗುಣವನ್ನು ಹೊರಪಡಿಸುವದಾದಕಾರಣ ದೋಷಬರುವದಿಲ್ಲ. ದೇಹಾರೋಗ್ಯವನ್ನು ಉಳಿಸಿಕೊಳ್ಳುವದಕ್ಕೋಸ್ಕರ ಒಂದು ಅಂಗವನ್ನು ಕಳೆದುಕೊಳ್ಳಬಹುದೆಂದೂ, ದೇಶವನ್ನು ಉಳಿಸಿಕೊಳ್ಳುವದಕ್ಕೋಸ್ಕರ ಒಂದು ಗ್ರಾಮವನ್ನು ಕಳೆದುಕೊಳ್ಳಬಹುದೆಂದೂ ಈ ಭಾರತೀಯ ಜ್ಞಾನಿಗಳು ಹೇಳಿರುವಾಗ ಒಂದು ಗ್ರಾಮದ ಏಳಿಗೆಗಾಗಿ ಏರ್ಪಟ್ಟಿರುವ ಸೊಸೈಟಿಯ ಉಪಯೋಗಕ್ಕಾಗಿ ಒಬ್ಬ ಮನುಷ್ಯನ ದುರ್ಗುಣವನ್ನು ಹೇಳಿ ಸಂಘಕ್ಕೆ ಆತನು ಗುರಿಪಡಿಸಬಹುದಾದ ತೊಂದರೆಗಳನ್ನು ಪೂರ್ವಭಾವಿಯಾಗಿ ನಿವಾರಣೆಮಾಡಿಕೊಳ್ಳಬಾರದೇ? 2. ಸಂಘಗಳಿಂದ ಮೆಂಬರುಗಳಿಗೆ ಸಾಲಕೊಡುವಾಗ ಕಮಿಟಿ ಮೆಂಬರುಗಳ ಅಭಿಪ್ರಾಯ ಕೇಳಿಯೇ ಸಾಲವನ್ನು ಕೊಡುವದು ವಾಡಿಕೆಯಾಗಿದೆ. ಕಮಿಟಿ ಮೆಂಬರುಗಳು ಸಾಧಾರಣವಾಗಿ ತಮ್ಮ ಅಭಿಪ್ರಾಯವನ್ನು ಬರೆಯುವದಿಲ್ಲ. ಮೊದಲು ಒಬ್ಬ ಮೆಂಬರು ಕೊಡಬಹುದು, ಕೊಡಬಾರದೆಂದು ತೀರ್ಮಾನಮಾಡಿದ್ದರೆ ಅದಕ್ಕೆ ರುಜು ಹಾಕುವದು ಹೊರತು ನಿಜಾಭಿಪ್ರಾಯವನ್ನು ಬರೆಯುವದಿಲ್ಲ. ಹೀಗೆ ಅನುಸರಿಸುತ್ತಾ ಬರುವದರಿಂದ ಅನೇಕ ಪರಸ್ಪರ ಸಹಾಯ ಸಂಘಗಳ ಬ್ಯಾಲೆನ್ಸ್ ಸೀಟನ್ನು ನೋಡಿದರೆ ಬಾಕಿಯಾಗಿರುವದೇ ಜಾಸ್ತಿಯಾಗಿರುತ್ತೆ. ಸಂಘಗಳು ಏಳಿಗೆಗೆ ಬರಬೇಕಾದರೆ ಈ ಎರಡು ದೋಷಗಳನ್ನೂ ಮೆಂಬರುಗಳು ಬಿಟ್ಟುಬಿಡಬೇಕು. ದಾಕ್ಷಿಣ್ಯವನ್ನು ಬಿಟ್ಟು ನಿಜಾಭಿಪ್ರಾಯವನ್ನು ಬರೆದು ಲಿಖಿತ ಮೂಲಕವಾಗಿ ಒಂದು ಅಭಿಪ್ರಾಯವನ್ನೂ, ಬಾಯಿನಲ್ಲಿ ಬೇರೆ ಅಭಿಪ್ರಾಯವನ್ನೂ ಕೊಡುವದು ಬಿಟ್ಟು ತಮ್ಮ ಅಭಿಪ್ರಾಯವು ಉತ್ತಮವಾದದ್ದಾಗಲಿ, ಅಲ್ಲದ್ದಾಗಲಿ ಅದು ತಮ್ಮ ಮನೋಗತವಾಗಿದ್ದರೆ ತಾವು ದೇಶಸೇವೆ ಮಾಡುತ್ತಾ ಇರುತ್ತೇವೆಂದು ತಿಳಿದು, ಅಭಿಪ್ರಾಯವನ್ನು ಅಪೇಕ್ಷಿಸಿದಾಗ ಸುಮ್ಮನೆ ಇರದೆ ಹೇಳಿ ತಮ್ಮ ಕೈಲಾದಮಟ್ಟಿಗೆ ಕಳಂಕವಿಲ್ಲದೆ ನಡೆದುಕೊಳ್ಳುತ್ತಾ ಬಂದರೆ ಪರಸ್ಪರ ಸಹಾಯಸಂಘಗಳು ಏಳಿಗೆಗೆ ಬರುವದರಲ್ಲಿ ಸಂದೇಹವಿಲ್ಲ.

ಶ್ರೀಮುಷ್ಣಂ ರಾಮಾಚಾರ್ಯ.

ಪಾಠಶಾಲಾ ಪ್ರತಿಬಿಂಬಗಳು.

ಅಯ್ಯಾ,—ನಾನು ಬೇಲೂರು ತಾ|| ಚನ್ನಹಳ್ಳಿ ಗ್ರಾಮದಲ್ಲಿ ಸ್ಕೂಲ್ ಇಟ್ಟು ಇಲ್ಲಿಗೆ ಎರಡು ವರುಷವಾಯಿತು. ಎರಡು ವರುಷದಿಂದ ಏನೊಂದು ಪುರಾವೂ ಬರದಂತೆ ಕೆಲಸ ನೋಡಿಕೊಂಡು ವರ್ಷಕ್ಕೆ 60 ರೂ., ಮೂರು ಹೇರು ಭತ್ತ ಸಂಬಳ ನಿಷ್ಕರ್ಷೆ ಮಾಡಿಕೊಂಡಿರುತ್ತೇನೆ. ಮತ್ತು ನಾನು ಸ್ಕೂಲ್ ಇಟ್ಟ ಲಾಗಾಯಿತು ಹುಡುಗರನ್ನು ಒಳ್ಳೇ ಬೋಧನೆಯಿಂದ 2 ಮತ್ತು 3 ನೇ ತರಗತಿ ವರಿವಿಗೆ ಪಾಠವನ್ನು ಹೇಳಿ ಮತ್ತು ಗ್ರಾಮಸ್ಥರಿಗೂ ಉಪನ್ಯಾಸ ಹೇಳಿ ಊರನ್ನು ಚೊಕ್ಕಟವಾಗಿ ಇಡಿಸಿರುವದಲ್ಲದೆ ನನ್ನ ಸ್ಕೂಲ್ ಸುತ್ತಲೂ ಕೈತೋಟ ಮತ್ತು ಬಾಳೆ, ಸಿಲ್ವರ್‍, ಹಲಸು, ಸೀಬೆ, ಮಾವು, ತ್ಯಾವಂತಿಗೆ ಇಂಥಾ ಗಿಡಗಳನ್ನು ಹಾಕಿ ಸ್ಕೂಲಿಗೆ ಸಹ ನನ್ನ ಸ್ವಂತ ಖರ್ಚಿನಿಂದ ಸುಣ್ಣ ಮತ್ತು ಬಣ್ಣ ವಗೈರೆ ಹಾಕಿಸಿ ಕ್ಲೀನ್ ಮಾಡಿಕೊಂಡು ಇರುತ್ತೇನೆ. ಮತ್ತು ಸ್ಕೂಲು ಇರತಕ್ಕ ಸ್ಥಳ ಕೆರೆ ಸಮೀಪವಾಗಿ ಊರಿನಿಂದಾಚೆ ಇರುತ್ತೆ. ಸ್ಕೂಲ್ ಹತ್ತಿರಕ್ಕೆ ಬಂದರೆ ಚಮನ್ನಿಗೆ ಬಂದ ಹಾಗೆ ಆಗುತ್ತದೆ. ನಾನು ಈ ಊರಿಗೆ ಬಂದಲಾಗಾಯ್ತು ಈ ಊರಿನಲ್ಲಿಯಾಗಲಿ ಮತ್ತು ಆಸ್‌ಪಾಸ್ ಗ್ರಾಮಗಳಲ್ಲಿಯಾಗಲಿ ಯಾರೇ ಖಾಯಿಲೆ ಕಸಾಲೆ ಬಿದ್ದರೂ ನಾನು ಮತ್ತು ನಮ್ಮ ಆಪ್ತ ಸಹ ಹೋಗಿ ಖಾಯಿಲೆಗೆ ಔಷಧಿ ಕೊಟ್ಟು ಹುಷಾರು ಮಾಡುತ್ತಲೂ, ಮಾಡಿಯೂ ಇರುತ್ತೇವೆ. ಮತ್ತು ಖಾಯಿಲೆಯವರಿಂದ ಯಾವ ವಿಧವಾದ ಖರ್ಚನ್ನೂ ತೆಗೆದುಕೊಳ್ಳದೆ ಧರ್ಮಾರ್ಥವಾಗಿ ಔಷಧವನ್ನು ಕೊಡುತ್ತಾ ಇರುತ್ತೇವೆ. ಮತ್ತು ಈ ಗ್ರಾಮದಲ್ಲಿ ಎಲ್ಲಾ ಒಟ್ಟು ಐವತ್ತು ಮನೆಗಳಿರುತ್ತವೆ. ಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆ ಸರಾಸರಿ ಇಪ್ಪತ್ತೈದಕ್ಕೆ ಮೇಲ್ಪಟ್ಟಿರುತ್ತೆ. ಇವರಲ್ಲಿ ಆಸ್‌ಪಾಸ್ ಗ್ರಾಮದ ಹುಡುಗರು ಕೆಲವರು ಸ್ಕೂಲಿಗೆ ಬರುತ್ತಾರೆ. ಎಲ್ಲಾ ಒಟ್ಟು ಸಂಬಳ ನೂರು ರೂಪಾಯಿ ನನಗೆ ವರ್ಷಕ್ಕೆ ಸಿಕ್ಕುತ್ತೆ. ನಾನು ಲೋವರ್ ಸೆಕೆಂಡರಿ ವರಿವಿಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಮತ್ತು ನನ್ನ ತಮ್ಮ ನಾನು ಹುಡುಗರಿಗೆ ಪಾಠ ಹೇಳುತ್ತೇವೆ ಗ್ರಾಂಟಿಗೆ ನಮ್ಮ ದೆ|| ಇನ್|| ಸಾಹೇಬರವರಿಗೆ ಅರ್ಜಿ ಗುಜರಾಯಿಸಿಕೊಂಡದ್ದರ ಮೇಲೆ ದರಖಾಸ್ತು ಮಾಡಬಹುದೆಂದು ಗ್ರಾಮಸ್ಥರಿಗೂ ನನಗೂ ಹುಕುಂ ದಯಪಾಲಿಸಿರುತ್ತಾರೆ. ಮತ್ತು ಬೇಲೂರ್ ಗರ್ಲ್ಸ್ ಸ್ಕೂಲ್ ಮಾಸ್ಟರ್ ಮತ್ತು ಈ ಗ್ರಾಮದ ಏಜೆಂಟ್‌ದಾರ್ ಜ. ಬಿ. ಶೀನಾಚಾರ್ರು ಮತ್ತು ಬೇಲೂರ್ ಸಂಸ್ಕೃತ ಪಾಠಶಾಲಾ ಉಪಾಧ್ಯಾಯರಾದ ಮ|| ಭೀಮಾಚಾರ್ರು ಸಹ ಸ್ಕೂಲಿಗೆ ದಯಮಾಡಿ ಹುಡುಗರನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟು ಹುಡುಗರ ಚಟುವಟಿಕೆಯನ್ನು ನೋಡಿ ಆನಂದಪಡುತ್ತಾ ಮೂರು ವರ್ಷದ ವಿದ್ಯವನ್ನು ಹುಡುಗರಿಗೆ ಎರಡು ವರ್ಷಕ್ಕೆ ಖಾಯಿ ಮಾಡಿಸುತ್ತೀರಿ ಎಂಬದಾಗಿ ಅಪ್ಪಣೆ ಕೊಟ್ಟು, ಹುಡುಗರನ್ನು ಸರಿಯಾಗಿ ಸ್ಕೂಲಿಗೆ ಕಳುಹಿಸುವಂತೆ ಗ್ರಾಮಸ್ಥರಿಗೆ ಅಪ್ಪಣೆ ಕೊಟ್ಟು ಇದಾರೆ.

ಈ ಗ್ರಾಮ ಮಲೆನಾಡು ಪ್ರದೇಶವಾಗಿದೆ ಮತ್ತು ಹುಡುಗರ ತಂದೆ ತಾಯಿಗಳು ಒಂದು ದಿವಸ ಕಳುಹಿಸಿದರೆ ಮತ್ತೊಂದು ದಿವಸ ತಮ್ಮ ಕೆಲಸ ಕಾರ್ಯಗಳಿಗೆ ಕರೆದುಕೊಂಡು ಹೋಗುತ್ತಾರಾದರೂ ನಾನು ಸ್ಕೂಲಿಗೆ ಹುಡುಗರು ಬಾರದ ದಿವಸದ ಪಾಠವನ್ನು ಬಂದ ದಿವಸ ಕೂಡಿಹಾಕುತ್ತ ನಾನು ಶ್ರಮಪಟ್ಟು ಸರ್ಕಾರಿ ರೂಲ್ಸು ಅನುಸರಿಸಿ ಪಾಠ ಹೇಳುತ್ತಾ ಗ್ರಾಮಸ್ಥರು ಕೊಟ್ಟ ಹಾಗೆ ಸಂಬಳವನ್ನು ತೆಗೆದುಕೊಳ್ಳುತ್ತಾ ರೂಪಾಯಿನ ಮೇಲೆ ನಾನು ದೃಷ್ಟಿ ಇಡದೆ ಕೀರ್ತಿಯ ಮೇಲೆ ಜಾಗ ಇಟ್ಟು ಸರ್ಕಾರದ ಏಳಿಗೆಗೂ, ಮಲೆನಾಡಿನ ಅಭಿವೃದ್ಧಿಗೂ ಮತ್ತು ಗ್ರಾಮಸ್ಥರ ಹುಡುಗರ ಅನುಕೂಲಕ್ಕೂ ನಾನು ಕಷ್ಟಪಟ್ಟು ಅಭಿವೃದ್ಧಿ ಸ್ಥಿತಿಗೆ ತರಬೇಕೆಂಬದಾಗಿ ಪ್ರಯತ್ನ ಮಾಡುತ್ತಿರುವಾಗ ಇದೇ ಗ್ರಾಮದಲ್ಲಿರುವ ಒಬ್ಬ ಗೌಡರು ಮಕ್ಕಳ ತಂದೆ ತಾಯಿಗಳಿಗೆ ನೀವು ಸ್ಕೂಲಿಗೆ ಹುಡುಗರನ್ನು ಏತಕ್ಕೆ ಕಳುಹಿಸುತ್ತೀರಿ? ವಿದ್ಯೆಯು ಕಲಿತು ಯಾವ ಹುದ್ದೆ ಮಾಡಬೇಕು? ಭೂಮಿಯನ್ನು ಕೆರೆದರೆ ಸಾಕು ಎಂದು ಚಾಡಿ ಹೇಳಿ ಸರ್ವರ ಮನಸ್ಸನ್ನೂ ಕೆಡಿಸಿ ಸ್ಕೂಲಿಗೆ ಸರಿಯಾಗಿ ಹುಡುಗರು ಬಾರದಂತೆ ಮಾಡಿರುತ್ತಾರೆ. ಹುಡುಗರ ವಿದ್ಯೆ, ಬುದ್ಧಿ, ಧೈರ್ಯ ವಗೈರೆ ಸ್ಮರಿಸಲಾರರು. ಮತ್ತು ಇಲ್ಲಿ ಯಾವದಾದರೂ ತಕ್ಸೀರು ವಗೈರೆ ನಡೆದರೆ ಲಂಚ ವಗೈರೆ ತಿಂದು ಬಡವರನ್ನು ಹಾಳುಮಾಡುತ್ತಾರೆ. ಈ ಹುಡುಗರು ವಿದ್ಯೆ ಕಲಿತು ಬುದ್ಧಿವಂತರಾದರೆ ತಮ್ಮ ಬಾಯಿಗೆ ಮಣ್ಣು ಬೀಳುತ್ತೆ ಆಮೇಲೆ ಲಂಚ ಸಿಕ್ಕುವುದಿಲ್ಲವೆಂಬದಾಗಿ ಸರ್ವರಿಗೂ ಚಾಡಿ ಹೇಳುತ್ತಾರೆ. ಮೇಷ್ಟರನ್ನು ದುಭಾಷೆ ಆಡಿ ಓಡಿಸುತ್ತಾರೆ ಜನಗಳಿಗೆ ದುರ್ಬೋಧನೆ ಹೇಳುತ್ತಾ ಜನಗಳ ಮನಸ್ಸು ಕೆಡಿಸುತ್ತಾ ಬಹಳ ತೊಂದರೆ ಪಡಿಸುತ್ತಾ ಇರುತ್ತಾರೆ. ಪಾಪ ಪಟೇಲರೂ ಗ್ರಾಮಸ್ಥರೂ ಏನೂ ತಿಳಿಯದಂಥಾವರು. ಈ ಗೌಡ್ರ ಚಾಡಿಯಿಂದ ಸ್ಕೂಲು ನಡೆಯಲು ಯುಕ್ತವಿಲ್ಲ. ಇವರ ಚಾಡಿಯಿಂದ ಸ್ಕೂಲಿಗೆ ಕೆಲವು ಹುಡುಗರು ಬಾರದಂತೆ ಆಗಿದೆ. ಕೆಲವು ಜನಗಳು ಇವರು ಹೇಳಿದಂತೆ ಕೇಳುತ್ತಾರೆ. ಇವರ ಇರಾದೆಯನ್ನು ನೋಡಿದರೆ ಸ್ಕೂಲನ್ನೇ ಈ ಊರಿನಲ್ಲಿ ಇಲ್ಲದ ಹಾಗೆ ಮಾಡುವದಾಗಿರುತ್ತೆ. ಇಂಥಾ ಮಲೆನಾಡಿನವರ ಮೌಢ್ಯಕ್ಕೆ ಏನು ಹೇಳೋಣ? ಆದರೆ ನಮ್ಮ ಸರ್ಕಾರದವರು ಇಂಥಾ ದುರ್ಬೋಧಗಾರರನ್ನು ಅಡಗಿಸದ ಹೊರತು ಮಲೆನಾಡು ಅಭಿವೃದ್ಧಿಸ್ಥಿತಿಗೆ ಬರಲಾರದು. ಸ್ಕೂಲ್ ಟೀಚರ್

ಪುರುಷರು ಸ್ತ್ರೀಯರನ್ನು ಕೆಡಿಸುವ ದುರ್ನಡತೆ.

ಅಯ್ಯಾ,—ಸ್ನೇಹವೆಂಬ (ವಿವಾಹ) ಸಂಬಂಧ ಪ್ರಮಾಣಗಳೂ ಭಾಷೆಗಳೂ ಅನೇಕವಾಗಿರುವಲ್ಲಿ ನಮ್ಮ ಅನೇಕಾನೇಕ ಒಳ್ಳೆ ತಿಳುವಳಿಕೆಯುಳ್ಳ ಗೌರವಸ್ಥರು ತಮಗೂ ಸ್ತ್ರೀ ಸಂಗಡಕ್ಕೂ ವಿವಾಹ ವೆಂಬ ಸ್ನೇಹ ಉಂಟಾಗುವಾಗ್ಗೆ ಆಗಿರುವ ಪ್ರಮಾಣ ವಾಕ್ಯಗಳು ತಿರಸ್ಕರಿಸಿ ತನಗೆ ಜೊತೆಗಾರಳಾದ ಸ್ತ್ರೀ ವಿನಾಯಿಸಿ ಇತರ ಸ್ತ್ರೀಯರು ತಾಯಿ ಅಕ್ಕತಂಗಿಯರಂತೆ ಇರುವವರ ಮೇಲೆ ಅಂದರೆ ತನ್ನಂತೆ ಇನ್ನೊಬ್ಬ ಪುರುಷನಿಗೆ ಮೇಲ್ಕಂಡ ರೀತಿ ಪ್ರಮಾಣ ಮಾಡಿರುವ ಸ್ತ್ರೀಯ ಮೇಲೂ, ಸಣ್ಣ ವಯಸ್ಸಿನ ಹುಡುಗಿಯರ ಮೇಲೂ ಆಸೆಯಿಟ್ಟು ಬಯಸತಕ್ಕದಾಗಿರುವವರಲ್ಲದೆ ಯಾವ ಕಾರಣದಿಂದಾದರೂ ಬುದ್ಧಿ ಸ್ವಾತಂತ್ರ್ಯವಿಲ್ಲದ ಸ್ತ್ರೀಗೆ ಹಣವೆಂಬ ದಾರಿಯಿಂದ ಸರಿತಪಿಸಿ ಮೋಹವೆಂಬ ಪಾಶದಿಂದ ಉರುಲು ಹಾಕಿ ಅಂತರಂಗವಾಗಿಯೇ ತಮ್ಮ ಕಡೆ ಸೆಳೆದು ಕೆಲವು ದಿವಸ ಗುಪ್ತವಾಗಿ ವ್ಯಭಿಚಾರಗಳು ನಡೆಯುತ್ತಲೆ ಇದ್ದು ಬರಬರುತ್ತಾ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ತಮ್ಮ ಮನೆಗಳಲ್ಲಿಯೇ ಇಲ್ಲವೇ ಬೇರೆ ಮನೆ ಕಟ್ಟಿಕೊಟ್ಟು ಇಟ್ಟುಕೊಳ್ಳುತ್ತಾರೆ. ಇವರ ಮೇಲ್ ಪಂಗ್ತಿಯನ್ನು ಅನುಸರಿಸಿ ಆಗತಾನೆ ಪ್ರಾಯಕ್ಕೆ ಬರುವ ಲಗ್ನವಾಗದೆ ಇರುವ ಪುಂಡು ಹುಡುಗರು ಸಹಾ ತಮ್ಮ ತಂದೆ ತಾಯಿಗಳ ಮಾತು ಉಲ್ಲಂಘಿಸಿ ನೆರೆಹೊರೆಯವರಿಗೂ ಬಂಧುಬಳಗಕ್ಕೂ ಹೆದರಿಕೊಳ್ಳದೆ ಪೋಕರಿಗಳಾಗಿ ಸೂಳೆಯವರ ಮನೆ ಬಾಗಿಲುಗಳಲ್ಲಿ ಗುಲಾಮರಾಗಿರುತ್ತಾರೆ. ಈ ರೀತಿ ಎಲ್ಲಾ ಕಡೆಯಲ್ಲೂ ಎಲ್ಲಾ ಊರು, ಗ್ರಾಮಗಳಲ್ಲೂ ಪರಗ್ರಾಮದ ಸ್ತ್ರೀಯರನ್ನು (ಗರತಿಯರನ್ನು) ತಂದು ಸ್ವಾಧೀನದಲ್ಲಿಟ್ಟುಕೊಂಡಿರುವದು ದೃಷ್ಟಿಗೆ ಬೀಳುತ್ತಾರೆ. ಅಂಥಾವರಿಗೆ ಗ್ರಾಮಗಳಲ್ಲಿ ಮುಖ್ಯಸ್ಥರು ಗೌಡರು ಸಹ ಪ್ರೋತ್ಸಾಹಕೊಟ್ಟು ತಮ್ಮ ಮನೆಗಳ ಬಳಿಯಲ್ಲಿಯೇ ಜಾಗಕೊಟ್ಟು ಇಟ್ಟುಕೊಂಡಿರುವದು ಸಹ ಉಂಟು. ಇಂಥಾ ನೀಚವಾದ್ದಕ್ಕೆ ಆಸ್ಪದ ಕೊಡತಕ್ಕಂಥಾದ್ದು ಬಹಳ ತಿಳಿಗೇಡಿತನವಲ್ಲವೇ? ಇಂಥಾವರನ್ನು ಮಾನವ ಪಶುಗಳೆನ್ನುವದರಲ್ಲಿ ಏನೊಂದೂ ಸಂಶಯವಿಲ್ಲ.

ಪರಸ್ತ್ರೀಯನ್ನು ಸ್ವಾಧೀನಪಡಿಸಿಕೊಂಡರೆ ಸ್ವಾಧೀನಪಡಿಸಿಕೊಂಡವನಿಗೂ ಸ್ತ್ರೀ ನಿಜವಾದ ಗಂಡನಿಗೂ ದ್ವೇಷ ಉಂಟಾಗುತ್ತೆ. ಈ ಮೂಲಕ ಅನೇಕ ಉಭಯರು ಜಿದ್ದುಂಟಾಗಿ ಇವರ ಜೊತೆಗೆ ಪುಂಡು ಜನಗಳನ್ನು ಸಹಾಯಕರನ್ನಾಗಿ ಮಾಡಿಕೊಂಡು ಅಂತರಂಗವಾಗಿ ಬದ್ಧ ತುಸಲತ್ತು ಮಾಡುತ್ತಾ, ಒಬ್ಬರಿಗೊಬ್ಬರಿಗೆ ಯಾವಾಗಲೂ ವೈಮನಸ್ಸು ಇದ್ದೇ ಇದ್ದು ಸಮಯ ಕಾಯುತ್ತ ಕಲಹದಿಂದ ಮಾರಾಮಾರಿ ಹೊಡೆದಾಟ ಖೂನಿ ಸಹ ಆಗುವದುಂಟು. ಮತ್ತು ಸ್ವಾಧೀನಪಡಿಸಿಕೊಂಡ ಪರಸ್ತ್ರೀ ಮೇಲೆ ಇತರೆ ಪ್ರಾಯಸ್ಥರು ಸಹಾ ಆಸೆಪಡುವದು ಉಂಟಷ್ಟೆ. ಇದರಿಂದ ತೀರಾ ಪುಂಡಾಟ ಉಂಟಾಗಿ ಪೋಕರಿಗಳಾಗಿ ಜಿದ್ದು ಮನಸ್ಸುಳ್ಳವರಾಗಿ ಕೆಟ್ಟುಹೋಗುತ್ತಾರಲ್ಲವೇ? ಅದಲ್ಲದೆ ಗ್ರಾಮಗಳಲ್ಲಿ ಮುಖ್ಯಸ್ಥರು ಇಂಥಾ ನೀಚ ಕೆಲಸಕ್ಕೆ ಒಪ್ಪದೆ ಇರತಕ್ಕವರು ಸಹ ಇರಬಹುದು. ಅಂಥಾವರೂ ಇಂಥಾದ್ದಕ್ಕೆ ಕಂಡುಕಂಡೂ ಕಾಣದವರಂತೆ ನಾಚಿಕೆಯಿಂದಲೇ ಬಾಳಬೇಕಾಗುತ್ತೆ. ಇಂಥಾ ಸ್ತ್ರೀಯರ ಸ್ವಭಾವ ಯಾವಾಗಲೂ ತಿಂಡಿಯ ಮೇಲೂ, ಬೆಲೆಯಾದ ಸೀರೆಯ ಮೇಲೂ, ಆಭರಣದ ಮೇಲೂ ಅಪೇಕ್ಷೆ ಇರುವದರಿಂದ ಇವರ ಮರುಳಿಗೆ ಗೋಲಿಬಿದ್ದಿರುವ ಪುರುಷರು ಇವರ ಅಪೇಕ್ಷೆ ಬಾಧೆಗೆ ಒಳಪಟ್ಟು ಮನೆಯಲ್ಲಿರತಕ್ಕದ್ದನ್ನೆಲ್ಲಾ ಆ ಸ್ತ್ರೀಯರಿಗಾಗಿ ಕಡಿಯಬೇಕಾಗುತ್ತೆ. ಇನ್ನೂ ಸಾಲದೆ ಬಂದಲ್ಲಿ ಎಲ್ಲಾದರೂ ಹೊಂಚು ಹಾಕುತ್ತಾ ಇದ್ದು ಕನ್ನಾ ಹಾಕಿ ಸ್ತ್ರೀ ಇಷ್ಟವನ್ನು ಪೂರೈಸಿಕೊಡಬೇಕಾಗುತ್ತೆ. ಇಂಥಾ ಸ್ತ್ರೀಯರ ನಡವಳಿಕೆಯು ಎಷ್ಟೋ ಆರಂಭದ ಸಂಸಾರಿಗಳ ಸ್ತ್ರೀಯರಿಗೆ ಬಹಳ ಕೇಡನ್ನು ಉಂಟುಮಾಡತಕ್ಕದ್ದಾಗಿರುವದಲ್ಲದೆ ಇಂಥಾ ನಡವಳಿಕೆಯ ಸ್ತ್ರೀಯರು ಗ್ರಾಮದಲ್ಲಿದ್ದರೆ ಗ್ರಾಮದ ಏಳಿಗೆಯ ವಿಷಯಲ್ಲಿ ಕುಂದಕ ಉಂಟಾಗುತ್ತೆ ಎಂದು ವ್ಯಥೆಪಡತಕ್ಕವರಾಗಿರುತ್ತಾರೆ.

ಇಂಥಾ ವಿಷಯದಲ್ಲಿ ಸರ್ಕಾರದಲ್ಲಿ ಭಯತ್ಕಾರವಾದ ಬಂದೋಬಸ್ತಾದ ಕಾನೂನು ಇದೆ ಎಂತ ನೋಡುವಲ್ಲಿ 497, 498 ನೇ ಸೆಕ್ಷನುಗಳೇನೋ ಇರುತ್ತವೆ. ಇವುಗಳಿಂದ ಮಾನವಂತರಾದ ಅರಂಭಸ್ಥರಿಗೆ ಅನುಕೂಲವಾಗುವದಿಲ್ಲ. ಇಂಥಾ ವ್ಯಾಜ್ಯ ಕೋರ್ಟುಗಳಿಗೆ ಹೋಗಿ ರುಜುವಾತು ಕೊಟ್ಟರೆ ಸೆಕ್ಷನ್ ಫಲ ಕೊಡುತ್ತಾರೆ. ಇಂಥಾದ್ದಕ್ಕೆ ಕೋರ್ಟಿಗೆ ಹೋಗುವದಕ್ಕೆ ಅವಮಾನ ನಾಚಿಕೆಯಿಂದ ಆದದ್ದಾಯಿತು ಎಂತ ಸುಮ್ಮನೆ ಇರುತ್ತಾರೆ. ಈ ವಿಧವಾದ ವ್ಯಾಜ್ಯಗಳೂ ಬಹುಮಟ್ಟಿಗೆ ಕೋರ್ಟುಗಳಿಗೆ ಬಂದಿರುವದಿಲ್ಲ. ಇದೇ ಸೆಕ್ಷನ್ ತಪ್ಪಿತ ಅನೇಕ ಕಡೆಗಳಲ್ಲಿ ಹಾಗೆಯೇ ಡಿಸ್ಮಿಸ್ಸಾಗಿರುವದು ಎಲ್ಲರಿಗೂ ಗೊತ್ತಾದ ವಿಷಯ. ಈ ವಿಷಯದಲ್ಲಿ ಸರ್ಕಾರದಲ್ಲಿ ಪ್ರಾರ್ಥನೆ ಏನಂದರೆ ಯಾವ ಊರು, ಗ್ರಾಮದಲ್ಲಿ ಇಂಥಾ ಕೃತ್ಯಗಳು ನಡೆಯದಂತೆ ಆಯಾ ಗ್ರಾಮದ ಪಟೇಲರಿಗೂ, ಹಾಗೂ ಗ್ರಾಮ ಕಮಿಟಿಯವರಿಗೂ ತಕ್ಕ ಜಾಗ ಇಡುವಂತೆಯೂ, ಹಾಗೆ ಯಾವ ಹೊಸಬರು ಅವರ ದೃಷ್ಟಿಗೆ ಬಿದ್ದರೆ ವಿಚಾರಿಸುವ ಅಧಿಕಾರವನ್ನೂ, ಹಾಗೇನಾದರೂ ಅಂಥಾ ದುಷ್ಟ ಸ್ತ್ರೀಯನ್ನು ಯಾರಾದರೂ ಇಟ್ಟುಕೊಂಡಿದ್ದರೆ ಕೂಡಲೆ ಸ್ತ್ರೀಯ ನಿಜವಾದ ಗಂಡನ ಹೆಸರು ನಮೂದು ಮಾಡಿ ಹಾಲಿ ಇಂಥಾವನ ಸ್ವಾಧೀನದಲ್ಲಿ ರುತ್ತಾಳೆಂಬ ಬಗ್ಗೆ ರಿಪೋರ್ಟು ಮಾಡುವಂತೆಯೂ, ಈ ವಿಷಯದಲ್ಲಿ ಸರ್ಕಾರದವರು ತುಂಬಾ ಮುತುವರ್ಜಿ ವಹಿಸಿ ಜಾಗ ಕೊಡುವುದೂ, ಈ ರೀತಿ ಮೇಲ್ಕಂಡ 497-498 ನೇ ಸೆಕ್ಷನ್‌ಗಳಿಗೆ ಬಲತ್ವ ಕೊಟ್ಟರೆ ಬಹುಮಟ್ಟಿಗೆ ಇಂಥಾ ಕೃತ್ಯಗಳು ಕಮ್ಮಿ ಆಗುವದರಲ್ಲಿ ಅಡ್ಡಿಯಿಲ್ಲ. ಅಂಥಾ ತಪ್ಪಿತಗಳು ಡಿಸ್ಮಿಸ್ಸಾಗಿರಲಾರವು. ಇನ್ನೂ ಸರ್ಕಾರಕ್ಕೆ ಸೂಕ್ತ ತೋರುವಮಟ್ಟಿಗೆ ದೀರ್ಘಾಲೋಚನೆ ಮಾಡಿ ಸರಿಯಾದ ದಿಕ್ಕನ್ನು ಜಾರೀ ತರುವಂತೆ ಪ್ರಾರ್ಥಿಸುತ್ತೇನೆ. ಹಾಗೂ ಸ್ತ್ರೀಯರನ್ನು ಕಳಕೊಂಡ ಗಂಡಂದಿರು ನಾಚಿಕೆಪಟ್ಟು ಸುಮ್ಮನೆ ಇರದೆ ನ್ಯಾಯಸ್ಥಾನದಲ್ಲಿ ಫಿರ್ಯಾದು ಮಾಡುವದೂ, ಮಠಾಚಾರದಲ್ಲಿ ಫಿರ್ಯಾದು ಮಾಡುವದೂ ಹೀಗೆ ಮಾಡುತ್ತ ಬಂದಲ್ಲಿ ಕ್ರಮೇಣ ಇಂಥಾವು ನಿಲ್ಲುವದರಲ್ಲಿ ಸಂಶಯವಿಲ್ಲ. ಯಾವಾಗ ತನ್ನ ಸ್ತ್ರೀಯು ವ್ಯಭಿಚಾರ ದುರ್ಗುಣದಿಂದ ಬೇರೆ ಪುರುಷನ ವಶ ಸೇರಿದಳೋ ಆ ದಿವಸವೇ ತನಗೆ ಅವಮಾನ ಬರುತ್ತೆ. ಜನಗಳು ಸಹ ಇಂಥವನ ಸ್ತ್ರೀಯು ಹೀಗೆ ಆದಳು ಎಂಬ ಶಬ್ದ ಸಹ ಆಡುತ್ತಲೇ ಇರುತ್ತಾರೆ. ಹ್ಯಾಗಾದರೂ ಅವಮಾನ ಬಂದೇ ಬರುತ್ತೆ. ಕೋರ್ಟಿಗೆ ಹೋಗುವದಕ್ಕೆ ಅವಮಾನ ಎಂತ ಅಂಜಿಕೊಳ್ಳದೆ ಧಾರಾಳವಾಗಿ ಫಿರ್ಯಾದುಗಳು ಮಾಡಿ ತಕ್ಕ ಬಂದೋಬಸ್ತು ಮಾಡಿಸುತ್ತಾ, ಮಠದ ಗುರುಹಿರಿಯರಲ್ಲಿ ಫಿರ್ಯಾದು ಮಾಡಿ ಅಲ್ಲೂ ಬಂದೋಬಸ್ತು ಇರಿಸುತ್ತ ಬರುತ್ತಾರೆಂಬದಾಗಿ ನಂಬಿ ದೇಶಬಾಂಧವರಿಗೆ ವಿಜ್ಞಾಪನಾಪೂರ್ವಕವಾಗಿ ಅರಿಕೆ ಮಾಡುವ ಸೇವಕ ಹೊಸಕ್ಕಿರು ಸಾಬಿ.

ಚಂದಾದಾರ, ಮೈಸೂರು; ಸಜ್ಜನ ವಿಧೇಯ, ಜಗಲೂರು; ಚಂದಾದಾರ, ಚಿತ್ರದುರ್ಗ:—ಈ ಬಾತ್ಮಿಗಳನ್ನು ಪ್ರಕಟ ಮಾಡಲಾರೆವೆಂದು ವಿಷಾದಿಸುತ್ತೇವೆ.

ಪ್ರಕಟಿಸುವುದಕ್ಕೆಂದು ಕಳುಹುವ ಬಾತ್ಮಿಗಳನ್ನು "ಎಡಿಟರ್ ವೃತ್ತಾಂತ ಪತ್ರಿಕೆ, ಮೈಸೂರು" ಎಂಬ ವಿಳಾಸಕ್ಕೇ ರವಾನೆ ಮಾಡಬೇಕಲ್ಲದೆ ವಿಳಾಸದಲ್ಲಿ "ರೆವ್|| ಎಚ್. ಗಲ್ಲಿಸ್ಟೋರ್" ಎಂದು ಬರೆಯಕೂಡದು. ಇದು ತಾಮಸಕ್ಕೆ ಕಾರಣವಾಗುತ್ತದೆ. —ಎಡಿ.]

ತಾಲ್ಲೋಕು ವರ್ತಮಾನಗಳು.

ಕುಣಿಗಲ್ ತಾ|| ಹಾಗಲವಾಡಿ.—ಕಳೆದ ತಾ. 11 ನೇ ಗುರುವಾರ ರಾ|| ರಾಮಚಂದ್ರಯ್ಯನವರು ರಾಮಪಟ್ಟಾಭಿಷೇಕ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು, ಮಧ್ಯಾಹ್ನ ಎಲ್ಲಾ ಕೋಮಿನವರಿಗೆ ಸಂತರ್ಪಣೆಯನ್ನೂ, ರಾತ್ರಿ ಉತ್ಸವವನ್ನೂ ನೆರವೇರಿಸಿದರು. ತಾ. 13 ನೇ ಶನಿವಾರದಿಂದ ರಂಗನಾಥಸ್ವಾಮಿಯ ರಥೋತ್ಸವವು ಜರುಗುತ್ತದೆ.—ಈ ಊರನ್ನು ಒಂದು ಯೂನಿಯನ್ ಆಗಿ ಸರ್ಕಾರದವರು ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತೆ. ಒಂದೆರಡು ಹದ ಮಳೆ ಆದ್ದರಿಂದ ದನ ಕರುಗಳಿಗೆ ಕುಡಿಯಲು ನೀರು ಕೊಂಚ ಆಯಿತು.—ಸ್ಕೂಲ್ ಅಭಿವೃದ್ಧಿ ಸ್ಥಿತಿಯಲ್ಲಿದೆ.— ಕುಣಿಗಲಿನಲ್ಲಿ ನಡೆದ ತಾ|| ಕಾನ್ಫರೆನ್ಸಿಗೆ ಇಲ್ಲಿಂದ ಬಹಳ ಜನಗಳು ಹೋಗಿದ್ದರು. ಅಲ್ಲಿ ಅನೇಕ ವಿಷಯಗಳು ಚರ್ಚಿಸಲ್ಪಟ್ಟವೆಂದೂ, ಸಭೆಯ ಕಾರ್ಯಗಳು ಚೆನ್ನಾಗಿ ಜರುಗಿದವೆಂದೂ ತಿಳಿಯಬರುತ್ತದೆ.

ಸಕಲೇಶಪುರ.—ಈಗ ಒಂದೆರಡು ತಿಂಗಳಿಂದ ಪೋಸ್ಟ್ ಇಲಾಖೆಯಲ್ಲಿ ಈ ಪ್ರಾಂತ್ಯ ತೊಂದರೆಗಳು ಸಂಭವಿಸುತ್ತಾ ಬಂದಿವೆ ಎಂದು ಗೊತ್ತಾಗುತ್ತೆ.

ಸಕಲೇಶಪುರದಲ್ಲಿ ಸಾಹುಕಾರ್ ಸುಬ್ಬಶೆಟ್ಟರ 1,000 ರೂಪಾಯಿನ ಅರ್ಧ ನೋಟ್ ಕಳುವಾಯಿತೆಂದೂ, ಆ ಊರಿನ ಬಳಿ ಒಂದು ಮೇಲ್ ಬ್ಯಾಗ್ ಟಾಂಗಾದವನ ಅಜಾಗರೂಕತೆಯಿಂದ ಕಳೆದುಹೋಯಿತೆಂದೂ, ನೆನ್ನೆ ಬೃಹಸ್ಪತಿವಾರ ಹಾಸನದಿಂದ ಬರುತ್ತಿದ್ದ ಡೆಲಿವರಿ ಮೇಲ್ ಬ್ಯಾಗನ್ನು ಟಾಂಗಾದವನು ಬೇಹುಷಾರಿನಿಂದ ದಾರಿಯಲ್ಲಿ ಕಳೆದುಬಿಟ್ಟು ಬಂದನೆಂದೂ, ಸದರಿ ಬ್ಯಾಗನ್ನು ಮಟ್ಟಿಸಾಗರದ ಪ್ಲಾಂಟರ್ ಮ|| ಬಸವೇಗೌಡರು ಕಂಡು ಭದ್ರವಾಗಿ ತೆಗೆದಿಟ್ಟುಕೊಂಡಿದ್ದು ಪೋಸ್ಟ್ ಮಾಸ್ಟರಿಗೆ ಒಪ್ಪಿಸಿಕೊಟ್ಟರೆಂದೂ, ಕೆಂಬರ್‌ಕ್ಕೆ ಬ್ರಾಂಚ್ ಆಫೀಸಿನಿಂದ ಹಾಸನಕ್ಕೆ ರವಾನಿಸಿದ ಮೇಲ್ ಬ್ಯಾಗಿನಲ್ಲಿದ್ದ ಕ್ಯಾಷ್ ಬ್ಯಾಗನ್ನೇ ಕಳುವು ಮಾಡಿದರೆಂದೂ ಸರ್ವರಿಗೂ ತಿಳಿದ ಸಂಗತಿಯಾಗಿದೆ. ಈ ಸಂದರ್ಭಗಳಲ್ಲಿ ಕೆಂಬರಹಳ್ಳಿ ಮೇಲ್ ಕ್ಯಾಷ್ ಬ್ಯಾಗ್ ಕಳುವಿನ ಪತ್ತೆ ಹಚ್ಚಿದುದು ಯಸಳೂರು ಪೇಟೆ ಪೋ|| ಸಬ್ ಇನ್|| ಏಕಾಂಬರಮ್ ಎಂಬುವರನ್ನು ನೇಮಿಸಲಾಗಿ ಅವರು ಆಸಾಮಿಯನ್ನು ದಸ್ತಗಿರಿಮಾಡಿ ಕ್ಯಾಷ್ ಬ್ಯಾಗಿನಲ್ಲಿದ್ದ 9 ರೂಪಾಯಿ ಪೈಕಿ 6 ರೂಪಾಯನ್ನೂ, ಆಸಾಮಿಯು ಒಂದು ಕಟ್ಟೆಯಲ್ಲಿ ಬಿಸಾಟಿದ್ದ ಚರ್ಮದ ಚೀಲ ಮತ್ತು ಬೀಗದ ಸಮೇತ ಕೋರ್ಟಿಗೆ ಹಾಜರು ಮಾಡಲಾಗಿ ಕಳೆದ ಗುರುವಾರ ಮಂಜರಾಬಾದ್ ತಾಲ್ಲೂಕು ಮೇಜಸ್ಟ್ರೇಟು ಕೋರ್ಟಿನಲ್ಲಿ ಸದರಿ ಆಸಾಮಿಗೆ 6 ತಿಂಗಳ ಸಜಾ, 50 ರೂಪಾಯಿ ಜುಲ್ಮಾನೆ ಆಯಿತೆಂದೂ ತಿಳಿಯುಬರುತ್ತೆ. ಹೀಗೆಯೇ ಉಳಿದಿರುವ ಕೇಸುಗಳು ಸಹ ಪೋಲೀಸ್ ಅಧಿಕಾರಿಗಳ ಮೆಹನತ್ತಿನಿಂದ ಪತ್ತೆಯಾದಾವೆಂಬ ನಿರೀಕ್ಷೆಯುಂಟು.

ಬೆಂಗಳೂರು ತಾ|| ಯಲ್ಲೆಗೌಡನಪಾಳ್ಯ —ಕಳೆದ 7 ನೇ ತಾ. ಭಾನುವಾರ ಬೆಂಗಳೂರು ಕಂಟೋನ್ಮೆಂಟ್ ಯಲ್ಲೇಗೌಡನಪಾಳ್ಯದ ಶ್ರೀ ರಾಮಕೃಷ್ಣ ಬಾಲಸನ್ಮಾರ್ಗ ಸಭಾ ಸಹೋದರರಿಂದ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರವರ ಮತ್ತು ಶ್ರೀಮತ್ ವಿವೇಕಾನಂದ ಸ್ವಾಮಿಗಳವರ ಜಯಂತ್ಯುತ್ಸವಗಳು ಅತಿ ವಿಜೃಂಭಣೆಯಿಂದ ನಡಿಸಲ್ಪಟ್ಟವು. ಪ್ರಾತಃಕಾಲ 8 ಗಂಟೆಗೆ ಭಗವಾನ್‌ರ ಮತ್ತು ಸ್ವಾಮಿಗಳ ಭಾವಚಿತ್ರಗಳು ವಿವಿಧ ಪುಷ್ಪಗಳಿಂದ ಅಲಂಕೃತವಾದ ರಥೋತ್ಸವವು ನಗರ ಸಂಕೀರ್ತನೆಯೊಂದಿಗೆ ಅನೇಕ ಭಕ್ತ ಜನ ಜಯ ಜಯ ನಿನಾದಗಳಿಂದ ನೆರವೇರಿತು. ಮಧ್ಯಾಹ್ನ 2 ಗಂಟೆಗೆ ಶ್ರೀಮಾನ್ ಸತ್ಯಾನಂದ ಮುಕುಂದದಾಸ್ ರವರಿಂದ ಜ್ಞಾನ ಭಕ್ತಿ ವೈರಾಗ್ಯದಿಂದೊಡಗೂಡಿದ "ರಾಜ ಗೋಪಿಚಂದ್ ಚರಿತ್ರೆ" ಎಂಬ ಹರಿಕಥೆಯು ಪ್ರಾರಂಭಿಸಲ್ಪಟ್ಟು ಸಭಿಕರ ಹೃದಯವು ಹರ್ಷೋಲ್ಲಾಸಗಳಿಂದ ಮುಳುಗಿಸಲ್ಪಟ್ಟಿತು. ಸಾಯಂಕಾಲ 5 ಗಂಟೆಗೆ ಸ್ಥಳೀಯ ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಶ್ರೀ ನಿರ್ಮಲಾನಂದ ಸ್ವಾಮಿಗಳವರುಗಳ ಶಿಷ್ಯ ವರ್ಗದೊಡನೆ ಒಂದು ಸಭೆಯನ್ನಲಂಕರಿಸಿದರು. ಮೈಸೂರು ಸರ್ಕಾರದ ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರ್ ಮ ಎಂ. ಎ. ನಾರಾಯಣಅಯ್ಯಂಗಾರ್ರವರೇ ಆದಿಯಾಗಿ ಅನೇಕ ಅಧಿಕಾರ ವರ್ಗದವರೂ, ಪುರಪ್ರಮುಖರೂ, ಮತ್ತು ಶ್ರೀಮತಿ ಶ್ರೀ ರಂಗಮ್ಮ, ಬಿ.ಎ. ಮುಂತಾದ ಮಹಿಳಾ ವರ್ಗದವರೂ ಸಭಾಲಂಕೃತರಾಗಿದ್ದರು. ಅಮೇರಿಕ ದೇಶದಿಂದ ಬಂದಿದ್ದ ಶ್ರೀ ವಿವೇಕಾನಂದ ಸ್ವಾಮಿಗಳ ಶಿಷ್ಯರಲ್ಲೊಬ್ಬರಾದ ಮಿಸ್ ಜೆ. ಮೆಕಲ್ಯುಡ್ ಅಮ್ಮನವರು ಅಗ್ರಾಸನವನ್ನು ವಹಿಸಿದರು. ಬ್ರ ಶ್ರೀ ದೊಡ್ಡಬೆಲೆ ನಾರಾಯಣಶಾಸ್ತ್ರಿಯವರು ಭಗವಾನ್‌ರ ಮತ್ತು ಸ್ವಾಮಿಜಿಯವರ ಉಪದೇಶಗಳನ್ನು ಕುರಿತು ಗಂಭೀರವಾದ ಭಾಷಣದಿಂದ ಸರ್ವರ ಹೃದಯಾನಂದವನ್ನುಂಟುಮಾಡಿದ ನಂತರ ಅಗ್ರಾಸನಾಸೀನರಾದ ಮಿಸ್ ಜೆ. ಮೆಕಲ್ಯುಡ್ ಅಮ್ಮನವರು ಶ್ರೀ ವಿವೇಕಾನಂದ ಸ್ವಾಮಿಯವರ ಸ್ವಾರ್ಥತ್ಯಾಗ, ಪ್ರಪಂಚದ ಜನಾಂಗಗಳ ಮೇಲಣ ಅಪಾರವಾದ ಪ್ರೀತಿ, ಅವರ ಲೋಕೋಪಕಾರ, ಇವೇ ಮುಂತಾದ ಅವರ ಪವಿತ್ರವಾದ ಮತ್ತು ಅಮಾನುಷಿಕವಾದ ವರ್ಣನಾಂಶಗಳನ್ನು ಯುಕ್ತಿಯುಕ್ತವಾಗಿ ಹೇಳಿದರು. ಅಮ್ಮನವರ ಆಂಗ್ಲೇಯ ಭಾಷಣದ ಸಾರಾಂಶವನ್ನು ಮ. ಎಂ ಜಿ. ವರದಾಚಾರ್, ಬಿ.ಎ., ಬಿ.ಎಲ್. ರವರು ಕನ್ನಡದಲ್ಲಿ ವಿವರಿಸಿದರು. ಸಭೆಯ ಕಾರ್ಯದರ್ಶಿಗಳಾದ ಮ. ಟಿ ಎನ್. ರಾಘವೇಂದ್ರರಾಯರು ಅಗ್ರಾಸನಾಧಿಪತಿಗಳಿಗೂ, ಉಪನ್ಯಾಸಕರಿಗೂ, ಸಭಿಕರಿಗೂ ಧನ್ಯವಾದಗಳನ್ನು ಬಯಸಿದರು. ಶುಭವಾದ್ಯಗಳು ಮೊಳಗುತ್ತಿರುವಲ್ಲಿ ಮಂಗಳಾರತಿಯೊಂದಿಗೆ ಪ್ರಸಾದವು ವಿನಿಯೋಗಿಸಲ್ಪಟ್ಟು ಸಭೆಯು ಮುಕ್ತಾಯವಾಗಿಸಲ್ಪಟ್ಟಿತು.

ತೀರ್ಥಹಳ್ಳಿ — ಈ ಸಾರಿ ಮುಂಗಾರು ಮಳೆ ಒಂದೆರಡು ಸಾರಿ ಬಂದು ಹೋಟಿಗೆ ಒಂದು ತಿಂಗಳು ಆಗಿಹೋಯ್ತು, ಮಳೆ ಇಲ್ಲದೆ ಬಿಸಿಲಿನ ತಾಪ ಸಹಿಸಲು ಅಸಾಧ್ಯವಾಗಿದೆ. ಹೊಳೆ ಸಮೀಪದಲ್ಲಿರುವ ಕೆಲವು ಮನೆಯವರಿಗೆ ವಿನಹ ಮಿಕ್ಕಾದ ಜನಗಳಿಗೆ ನೀರಿನ ಅವಸ್ಥೆಯು ಬಹು ಕಠಿಣವಾಗಿದೆ. ಅಂಗಡಿ ರೋಡಿನಲ್ಲಿರುವ ಬಾಜು ಮನೆಗಳಿಗೆ ಆಗುವ ನೀರಿನ ತೊಂದರೆಯನ್ನು ಪರಿಹರಿಸಲು ಹಿಂದಿನ ಅಮಲ್ದಾರರು ಒಂದು ದೊಡ್ಡ ಭಾವಿಯನ್ನು ತೋಡಿಸಿದರು. ಆದಾಗ್ಯೂ ಅದರಲ್ಲಿ ಈ ಬೇಸಿಗೆಯಲ್ಲಿ ನೀರಿಲ್ಲದೆ ಜನರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಸರ್ಕಾರದವರು ಅದಕ್ಕೆ ಸಿಗಾ ಕೊಟ್ಟರೆ ಉತ್ತಮವಾಗಿದೆ. ಶಿವಮೊಗ್ಗಾ ರೋಡಿನಲ್ಲಿ ಸುಂಕದ ಕೋಲಕಾರ ಡಾಬ್ಯಟ ಹತ್ತಿರ ಇರುವ ಜನರಿಗೆ ನೀರಿನ ತೊಂದರೆ ಬಹಳವಾಗಿದೆ ಈಚೆಗೆ ಈ ತೊಂದರೆಯನ್ನು ನೋಡಿ ಸರ್ಕಾರದವರು 1,300 ರೂ. ವರೆಗೆ ಮುಟ್ಟಿಸಿ ಒಂದು ಭಾರೀ ಭಾವಿಯನ್ನು ತಯಾರಿಸಿ ಜಲವಸತಿಯನ್ನು ಕಲ್ಪಿಸಿ ಜನರಿಗೆ ಉಪಕಾರಮಾಡಲು ಮಾಡಿದ್ದ ಏರ್ಪಾಡು ಈಗ ಪ್ರಯೋಜನವಿಲ್ಲವಾಗಿದೆ. ರಸ್ತೆಗೆ ಬಹು ಸಮೀಪದಲ್ಲಿ ಒಂದು ದಿಣ್ಣೆಯ ಮೇಲೆ ಭಾವಿ ತೆಗೆಸುತ್ತಿದ್ದಾರೆ. ಈಗಾಗಲೇ 45 ಅಡಿ ಆಳ ತೋಡಿದ್ದಾಗ್ಯೂ ನೀರಿನ ಸೆಲೆಯೇ ಇಲ್ಲ. ಅದರೊಳಗೂ ಬಂಡೆ ಬಂದಿವೆ. ಇದೇ ಸಾಲದೆ ತಿರಿಗಿ ಸಪ್ಲಿಮೆಂಟ್ ಅಂದಾಜು ಸ್ಯಾಂಕ್ಷನ್ ಮಾಡಿಸಬೇಕೆಂದು ಏರ್ಪಾಡು ಮಾಡುವಂತಿದೆ. ಆ ರೀತಿ ಮಾಡಿಸಿದರೆ ನೀರು ಸಿಕ್ಕಲಿಕ್ಕೆ 60 ಅಡಿ ಆಳಬೇಕಾಗುವುದು. ಆದ್ದರಿಂದ ಅಮಲ್ದಾರರು ಈಗಲೇ ಆ ಸ್ಥಳವನ್ನು ಬಿಟ್ಟು ಬೇರೆ ತಗ್ಗಾದ ಕಡೆ ಜನರಿಗೆ ಸೇದುವುದಕ್ಕೂ ಹತ್ತಿ ಹೋಯುವದಕ್ಕೂ ಅನುಕೂಲವಾದ ಸ್ಥಳಗಳಲ್ಲಿ ಭಾವಿ ತೋಡಿಸಿದರೆ ನೀರು ಸುಲಭದಲ್ಲಿ ಸಿಕ್ಕುವದು; ಖರ್ಚು ಕಡಮೆಯಾಗುವುದು. ಜೆಂಗಸರಿಗೂ ಕಷ್ಟ ತಪ್ಪುವದು. ಕುಶಾವತಿಯಲ್ಲಿ ಸಹಾ ನೀರು ಬತ್ತಿರುವುದರಿಂದ ಈ ಪ್ರಾಂತ್ಯದ ಜನಗಳಿಗೆ ನೀರಿನ ತೊಂದರೆ ಬಹಳವಾಗಿದೆ. ಈಗ ಖರ್ಚುಮಾಡುವ ಹಣದಿಂದ ಒಳ್ಳೇ ನೀರು ಸಿಕ್ಕಬೇಕಾದರೆ ಭಾವಿಗೆ ಕಟ ಕಡ್ಡಿ ಬೀಳದಂತೆ ರಸ್ತೆಗೆ ಸ್ವಲ್ಪ ದೂರದಲ್ಲಿ ಸಕಲರಿಗೂ ಅನುಕೂಲವಾಗಿರಬೇಕು.—ಈ ಊರಿನಲ್ಲಿ ಸಾಹುಕಾರರು ಕಟ್ಟಿಸುತ್ತಿರುವ ಹೆಂಚಿನ ಕಾರ್ಖಾನೆಯ ಕೆಲಸವು ಬಹು ಚುರುಕಿನಿಂದ ನಡೆಯುತ್ತಾ ಇದೆ. ಕಟ್ಟಡವು ಮುಗಿಯುವದಕ್ಕೆ ಇನ್ನೂ ಕೆಲವು ದಿನ ಬೇಕಾಗಿದೆ. ಬೇಕಾಗಿರುವ ಯಂತ್ರಗಳೆಲ್ಲಾ ಬಂದಂತಾಯ್ತು. ಆಗಲೇ 30-40 ಸಾವಿರ ರೂಪಾಯಿ ವರೆಗೂ ಕೆಲಸ ನಡೆದಿದೆ. ಜನರೆಲ್ಲರೂ ಸ್ವದೇಶದ ಈ ಕಾರ್ಖಾನೆಯನ್ನು ಬಹು ಉತ್ಸಾಹದಿಂದ ನಡಿಸುವದರಲ್ಲಿದ್ದಾರೆ. ಕಂಪನಿಯವರ ಪರವಾಗಿ ಮ|| ತಮ್ಮಣ್ಣಾಚಾರ್ರು, ಮ|| ಆಗುಂಬೆರಾಯರೂ, ಮ|| ಕಿಂಗಪ್ಪನವರೂ ಮುತುವರ್ಜಿಯಿಂದ ವಿಚಾರಣೆ ಇಟ್ಟು ಕೆಲಸ ನಡಿಸುತ್ತಿದ್ದಾರೆ. ಗೌರ್ನಮೆಂಟಿನವರು ಮಿ|| ಬರೋಸ ಸಾಹೇಬರನ್ನು ಇದರ ಮೇಲ್ವಿಚಾರಣೆಗೂ ಸಹಾಯಕ್ಕೂ ಕೊಟ್ಟಿದ್ದಾರೆ. ಈ ಹೆಂಚಿನ ಕಾರ್ಖಾನೆ ಕಟ್ಟಡವು ಬಹು ಬಂದೋಬಸ್ತಾಗಿಯೂ, ಅಲಂಕಾರವಾಗಿಯೂ ಆಗುತ್ತಿದೆ. ಆಗಲೇ ಮಾದ್ರಿಗೋಸ್ಕರ ಹೆಂಚುಗಳನ್ನೂ ಟಿಪರಬಿಲ್ಲೆಗಳನ್ನೂ ತಯಾರು ಮಾಡುತ್ತಿದ್ದಾರೆ. ನೂರಾರು ಜನರು ದಿನವಹಿ ಕೆಲಸಮಾಡುತ್ತಿದ್ದಾರೆ. ಸ್ವದೇಶಿಗಳ ಈ ಕಾರ್ಖಾನೆಯು ಬೇಗನೆ ಅಭಿವೃದ್ಧಿಯಾಗುವದೆಂದು ಹಾರೈಸುತ್ತೇವೆ.—ತೀರ್ಥಹಳ್ಳಿಯ ಪೋಲೀಸ್ ನೌಕರರ ಮೆಹನತ್ತು ಎಲ್ಲಾ ವಿಷಯಗಳಲ್ಲೂ ಬಹು ಹೀನಸ್ಥಿತಿಯಲ್ಲಿದೆ. ಬೀದಿಗಳಲ್ಲಿ ಜಗಳ ದಾಂಧಳೆ ನಡೆದಾಗ್ಯೂ ವಿಚಾರಿಸಿ ಬಂದೋಬಸ್ತು ಮಾಡಲು ಯಾರೂ ಪ್ರಯತ್ನಿಸುವದಿಲ್ಲ. ಕಳೆದ ರಾಮನವಮಿಯಲ್ಲಿ ವಿಪರೀತ ಗಲಾಟೆಯಾಯ್ತು. ಕೆಲವು ಪೋಲೀಸಿನವರಿಗೂ ಸಭ್ಯ ಜನಗಳಿಗೂ ಪೂರಾ ಪೆಟ್ಟುಗಳು ಬಿದ್ದವು. ರಾತ್ರಿಯಲ್ಲಿ ಅಮಲ್ದಾರರನ್ನು ಕರೆದುಕೊಂಡಾಗ್ಯೂ ಪ್ರಯೋಜನವಿಲ್ಲದೆ ಬಹಳ ಗಲಾಟೆಯಾಯ್ತು. ಈ ತಾಲ್ಲೂಕಿನಲ್ಲಿ 3-4 ವರುಷಗಳಿಂದ ಅನೇಕ ಖೂನಿಗಳು ನಡೆದವು. ಒಂದಾದರೂ ಪೋಲೀಸಿನವರಿಂದ ರುಜುವಾತ್ ಆಗದೆ ಇರುವದು ಬಹು ಆಶ್ಚರ್ಯವಾಗಿದೆ. ಫೆಬ್ರವರಿ ತಿಂಗಳಲ್ಲಿ ಶಿವಮೊಗ್ಗಾ ಹೈ ರೋಡಿನಲ್ಲಿ ನಡೆದ ಸೀಗೆಮಳೆ ವೆಂಕಟಪ್ಪನ ಖೂನಿಯು ಪತ್ತೆ ಆಗಲಿಲ್ಲ. ಒಡ್ಡೆಬೈಲು ಕಳುವಿನ ಕೇಸು ಪೋಲೀಸಿನವರ ಮೆಹನತ್ತಿನಿಂದ ಆದದ್ದಲ್ಲ. ಕೋಣಗೆ ಪಟೇಲ್ ಮ|| ಸಿದ್ದಪ್ಪಗೌಡರು ಮತ್ತು ಅವರ ಸ್ನೇಹಿತರು ರಾತ್ರೀ ಹಗಲೂ ಮಾಡಿದ ಸಾಹಸದಿಂದ ಕಳ್ಳ ಸಿಕ್ಕಿ ಸಿಕ್ಕಿಬಿದ್ದನು. ನ್ಯಾಯವಾಗಿ ಆ ಪಟೇಲರಿಗೆ ಸರ್ಕಾರದವರು ಬಹುಮಾನ ಕೊಡುವದು ಧರ್ಮವಾಗಿದೆ.

ಸ್ವಹಕ್ಕುತ್ಯಾಗದ ನೋಟೀಸು.

ತೀರ್ಥಹಳ್ಳಿ ತಾಲ್ಲೂಕು ಆಗುಂಬೆ ಹೋಬಳಿ ಬಗೋಡಿಗೆ ಗ್ರಾಮದ ಮಜ್ರೆ ಆಂದಿಸಿ ಕಾಳಯ್ಯಗೌಡರ ಮಗಳು ಚೆನ್ನಮ್ಮ ಹೆಗ್ಗಡ್ತಿಯು ಈ ಮೂಲಕವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ನನ್ನ ಖಾಸಾ ಚಿಕ್ಕ ತಂದೆಯಾದ ದುಗ್ಗಯ್ಯಗೌಡರಿಗೆ ಪುತ್ರಸಂತತಿಯಿಲ್ಲದೆ ಅವಿಭಕ್ತ ಕುಟುಂಬದಲ್ಲಿರುವ ನನಗೆ ಮನೆ ಅಳಿಯತನಕ್ಕೆ ಲಗ್ನಮಾಡಿ ಮನೆಯಲ್ಲಿಯೇ ಇಟ್ಟುಕೊಂಡದ್ದಲ್ಲದೆ ತಾಯಿ ತಂದೆ ಇಲ್ಲದೆ ಚಿಕ್ಕಂದಿನಿಂದಲೂ ಸಾಕಿದ ಸದರಿಯವರ ಖಾಸಾ ಅಕ್ಕನ ಮಗ ಬಾಲಪ್ಪ ಎಂಬ ಹುಡುಗನಿಗೆ ಸಹ ನಾವು ಎರಡು ಜನರಿಗೆ ಸದರಿಯವರ ಚರ ಸ್ಥಿರ ಆಸ್ತಿ ಮುಂತಾದ ಸರ್ವಾಧಿಯನ್ನು ಕಳೆದ 1912 ನೇ ಇಸವಿ ಮೇ ತಾ. 29 ರಲ್ಲು ನಮ್ಮಿಬ್ಬರ ಹೆಸರಿಗೆ ವಿಲ್ ಪತ್ರ ಬರಸಿ ತೀರ್ಥಹಳ್ಳಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರುಮಾಡಿಸಿ ಇಟ್ಟಿರುತ್ತಾರೆ. ಅಲ್ಲದೆ ಸದರಿಯವರ ಹೆಂಡತಿ ತಂಗಿ ಹೆಗ್ಗಡ್ತಿ ಮತ್ತು ಸದರಿಯವರ ಅತ್ತಿಗೆಯಾದ ನನ್ನ ತಾಯಿ ಗಿಡ್ಡಿ ಹೆಗ್ಗಡ್ತಿಗೆ ಸಹಾ ಜೀವನಾಂಶ ಸಲ್ಲುವಂತೆ ಶರ್ತು ಕಾಣಿಸಿರುತ್ತಾರೆ. ಸದರಿಯವರು ಇದೇ ವರ್ಷ ಕಳೆದ ಜನವರಿ ತಿಂಗಳಲ್ಲಿ ಕಾಯಿಲೆಬಿದ್ದು ಪಂಚಾಯತರ ಮುಖಾಂತರ ನಮಗೆ ಹೊರಗಿನಿಂದ ಬರುವದು ಯಾ ನಮ್ಮಿಂದ ಹೊರಗೆ ಸಲ್ಲುವದು ಸಹಾ ವಿಲೇವಾರಿಪಡಿಸಿ ಆ ಸಮ್ಮಂಧವಾದ ರಿಕಾರ್ಡು ವಗೈರೆ ನಮಗೆ ವಹಿಸಿಕೊಟ್ಟು ಸ್ವರ್ಗಸ್ಥರಾಗಿರುತ್ತಾರೆ. ಆದ್ದರಿಂದ ಸದರಿಯವರ ಬಾಬತು ವಿಲ್‌ನಲ್ಲಿ ತೋರುವ ಸರ್ವಾಧಿ ಆಸ್ತಿಗಳಿಗೆ ನಾವೇ ವಿನಹಾ ಇನ್ಯಾರೂ ಹಕ್ಕುದಾರರಿರುವದಿಲ್ಲ. ಸದರಿ ಆಸ್ತಿಗಳ ಮೇಲೆ ನಾವು ಎರಡು ಜನರ ವಿನಹ ನಮ್ಮ ಪೈಕಿ ಯಾರಿಗಾದರೂ ಮಟೋರ್ಥಸೆಯಿಂದ ಅಡವು, ಕ್ರಯ, ಭೋಗ್ಯ, ಪರಿವರ್ತನೆ ಮುಂತಾದ್ದು ಮಾಡಿಸಿಕೊಂಡು ಸಾಲ ಕೊಟ್ಟಲ್ಲಿ ಅದು ಊರ್ಜಿತವಾಗಿ ಮುಂದೂರಾಗತಕ್ಕದ್ದಲ್ಲ ಎಂದು ಈ ಮೂಲಕ ಸರ್ವರಿಗೂ ಎಚ್ಚರಿಸಿರುತ್ತೇನೆ.

ತಾ. 9-4-1916. [109-2] ಆಂದಿಸಿ ಚೆನ್ನಮ್ಮಹೆಗ್ಗಡ್ತಿ ರುಜು.

ಹೊಸ ನಮೂನೆ
ಫೌನ್‌ಟನ್ ಪೇನಾಗಳು.
ಧೈರ್ಯಲಕ್ಷ್ಮಿ
ಫೌನ್‌ಟನ್ ಪೇನಾ.

ಈ ನಕ್ಷೆಯಲ್ಲಿ ತೋರಿಸಿರುವ ಹೊಸ ನಮೂನೆ ಫೌಂಟನ್ ಪೇನವನ್ನು ಇಂಗ್ಲಾಂಡಿನಲ್ಲಿ ಪ್ರಖ್ಯಾತಿ ಹೊಂದಿದ ಕಂಪನಿಯಿಂದ ತರಿಸಿರುತ್ತೇವೆ. ಪೆನ್ನಿ ಮೇಲೆ ನಮ್ಮ ಕಂಪನಿ ಹೆಸರು ಗಿಲೀಟು ಅಕ್ಷರಗಳಿಂದ ಹಾಕಿ ತಯಾರಿಸಿರುತ್ತೆ. ಇದಕ್ಕೆ ಒಂದು ಸಾರಿ ಇಂಕಿಯನ್ನು ಹಾಕಿದರೆ ಅನೇಕ ದಿವಸಗಳು ಬರೆಯಬಹುದು. ಈ ಪೇನಾ ನಮಗಾಗಿ ಪ್ರತ್ಯೇಕ ಸೀಮೆಯಿಂದ ತಯಾರಿಸಿ ಕಳುಹಿಸಿರುತ್ತಾರೆ. ಕ್ಯಾರಟ್ ಚಿನ್ನದ ಮುಳ್ಳು ಇರುವದು. ಇದು ನೋಡುವದಕ್ಕೆ ಮನೋಹರವಾಗಿಯೂ, ಬರೆಯುವದಕ್ಕೆ ಬಹು ಸುಲಭವಾಗಿಯೂ ಇರುತ್ತೆ. ಇದನ್ನು ಒಂದು ಸಲ ಉಪಯೋಗಿಸಿದವರು ಪುನಹ ಯಾವ ಪೇನಾವನ್ನೂ ಉಪಯೋಗಿಸರು. ಕ್ರಯ 1 ಕ್ಕೆ 0–9–0.

[63-11]

ವಿಳಾಸ.—ಧೈರ್ಯಲಕ್ಷ್ಮಿ ಅಂಡ್ ಕಂಪನಿ,
3, ಇರುಳಪ್ಪನ ಬೀದಿ, ಮದರಾಸು.

ರೋ|| ಸೆಕಂಡರಿ-ನವೀನ ಗಣಿತ.
(ಮಹಾರಾಣಿಯವರ ಕಾಲೇಜ್ ಮ್ಯಾಥಮ್ಯಾಟಿಕ್ಸ್ ಅ|| ಡಿ. ಮಹಾಬಲರಾವ್ ಬಿ. ಎ. ಯವರಿಂದ.)

ಸುಲಭವಾದ ಅನೇಕ ನೂತನ ಮಾರ್ಗಗಳು, 1900–15 ವರೆಗಿನ ಪ್ರಶ್ನಪತ್ರಿಕೆಗಳಿಗೆ ಪೂರ್ಣನ್ಯಾಸ ಸಹಿತ ಉತ್ತರಗಳೂ ಇವೆ. ಸ್ಕೂಲ್, ಪ್ರೈವೇಟ್ ವಿದ್ಯಾರ್ಥಿಗಳಿಗೆ ಅವಶ್ಯಕವೆಂದು ಪರೀಕ್ಷಕರು ಅಭಿಪ್ರಾಯಪಟ್ಟಿರುತ್ತಾರೆ. ಕ್ರಯ 0-8-0; ವಿ. ಪಿ. 0-10-0, 4 ಕ್ಕೆ ವಿ. ಪಿ. 2-5-0; 8 ಕ್ಕೆ 4-8-0.

ಮೈಸೂರಲ್ಲಿ:—(1) ಗ್ರಂಥಕರ್ತರು; (2) ಸ್ಟೂಡೆಂಟ್ಸ್ ಹಾಲ್, (3) ಮಿಷನ್ ಪುಸ್ತಕಾಲಯ; (4) ಜನರಲ್ ಏಜೆನ್ಸಿ.

ಬೆಂಗಳೂರಲ್ಲಿ:—(1) ಎನ್. ಗೋಪಾಲಚಾರ್, ಟೈಪ್ರೈಟಿಂಗ್ ಟೀಚರು; (2) ಆರ್. ಎಸ್. ಅಹೋಬಲ್ ಕಂಪನಿ, ಅವೆನ್ಯೂ ರೋಡು; (3) ವಿದ್ಯಾಸಾಗರ ಬುಕ್ ಡಿಪೋ, ಚಿಕ್ಕಪೇಟೆ; (4) ಪಿ. ಬಿ. ವಿ. ಬುಕ್ ಡಿಪೋ, ಚಾಮರಾಜಪೇಟೆ. [110-1]

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ. ಹೊಸ ನಮೂನೆ ಗಡಿಯಾರ.

"ಸ್ವೀಸ್ ಪಾಕೆಟ್ ವಾಚ್."
ಸರಪಣಿ ಸಹಿತ ಕ್ರಯ ರೂ. 3–0–0.



ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಬಿಕಾಗಿ ಇರುತ್ತವೆ. ಇದು ನೋಡುವದಕ್ಕೆ ರಮಣೀಯವಾಗಿಯೂ ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿ ಇದೆ. ಗಂಟೆ ತೋರಿಸುವದರಲ್ಲಿ 1 ನಿಮಿಷವಾದರು ಹೆಚ್ಚುಕಮ್ಮಿಯಿಲ್ಲದೆ ನಡೆಯುತ್ತದೆ. "ಸ್ವೀಸ್ ಪಾಕೆಟ್ ವಾಚ್" ಎಂಬುವದು ಗುರ್ತು ನೋಡಿ ಪಡಕೊಳ್ಳಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ವಿಳಾಸ.—ಧೈರ್ಯಲಕ್ಷ್ಮಿ ಅಂಡ್ ಕಂಪನಿ,
[63-11] 3, ಇರುಳಪ್ಪನ ಬೀದಿ, ಮದರಾಸು.

ಊದಬತ್ತಿಗಳು

ಸುವಾಸನೆ ಸುಣ್ಣ ಸೀಸೆ 1 ಕ್ಕೆ 2 ಆಣೆ.

ಈ ಸುಣ್ಣಕ್ಕೆ ಕೇಸರೀ ಪಚ್ಚಕರ್ಪೂರ ಬಾದಾಮಿ ಯಿಸೆನ್ಸ್ ಇವುಗಳನ್ನು ಹಾಕಿ ಪನ್ನೀರಿನಲ್ಲಿಯೇ ಶೋಧಿಸಿ ಯಲೆ ಅಡಿಕೆ ಹಾಕಿಕೊಳ್ಳುವದಕ್ಕೆ ಅನುಕೂಲಿಸುವಂತೆ ಇಟ್ಟಿರುತ್ತೆ.

ಕೇಶೋಲ್ಲಾಸಿನಿ ಸೀಸಾ 1 ಕ್ಕೆ 8 ಆಣೆ.

ಇದು ತಲೆ ಕೂದಲಿಗೆ ಹಚ್ಚಿ ಬಾಚುತ್ತಾ ಬಂದಲ್ಲಿ ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಕೂದಲು ಅತಿ ನುಣುಪಾಗಿಯೂ ಇರುತ್ತದೆ.

ಭೃಂಗಾಮಲಕತೈಲ ಸೀಸಾ 1 ಕ್ಕೆ 1 ರೂಪಾಯಿ.

ಇದು ಸ್ನಾನಮಾಡುವಾಗಲೂ ರಾತ್ರಿ ಮಲಗಿಕೊಳ್ಳುವಾಗಲೂ ತಲೆಗೆ ಹಚ್ಚಿಕೊಂಡದ್ದೇ ಆದರೆ ಸಮಸ್ತ ಉಷ್ಣವನ್ನೂ ಹೋಗಲಾಡಿಸಿ ಸುಖವಾಗಿ ನಿದ್ರೆಯು ಸಹಾ ಬರುತ್ತೆ.

ವಿಳಾಸ.—ಟಿ. ಎಲ್. ಉಪಾಧ್ಯಾಯ,
[54-12]
ಸುಗಂಧಕಾರಿ, ಮೈಸೂರು.

Useful in Peace and War **FIRST AID IN ACCIDENTS,** BY DR. U. RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ನಡಿಸಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೆಬ್ ಡಾಕ್ಟರ್ ಯು. ರಾಮರಾವ್ ಇವರಿಂದ ರಚಿತವಾದುದು.

DEDICATED TO H. H. THE MAHARAJA OF MYSORE.

ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ಕ್ಷಣದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪುಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ಮೊದಲು ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆಯಾ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡಿಸಿದ್ದರೆ, ನಿಸ್ಸಂದೇಹವಾಗಿ ಬದುಕಲಹುದಾಗಿದ್ದ ಪ್ರಾಣವು ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು.

ಒಬ್ಬ ಮನುಷ್ಯನಿಗೆ ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯಾಗಲಿ, ಇಲ್ಲವೇ ಯಾವುದಾದರೂ ಅಪಾಯವಾಗಲಿ ಸಂಭವಿಸಿದಾಗ, ಸಮರ್ಥರಾದ ವೈದ್ಯಕ ಸಹಾಯವು ಬಂದೊದಗುವುದರೊಳಗಾಗಿ, ತತ್ಕಾಲಕ್ಕೆ ತನ್ನ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿಯೇ ಲಭಿಸಬೇಕು.

ಇದರಲ್ಲಿ ಅತ್ಯಲ್ಪ ಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ತೀವ್ರವಾದ ವೇದನೆಯನ್ನೂ ನೀಗಿಸಬಹುದು! ಎಷ್ಟೋ ಪ್ರಾಣಗಳನ್ನು ಉಳಿಸಬಹುದು! ಬಹಳವಾಗಿ ರಕ್ತಸ್ರಾವಕ್ಕೆ ಕಾರಣವಾದ ಮಹಾ ವಿಪತ್ತುಗಳಲ್ಲಿಯೂ ಬೆಂಕಿ ತಗಲುವುದು, ಮೂಳೆ ಮುರಿಯುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ, ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಗಳೂ ಕೂಡ, ಸಮರ್ಥರಾದ ವೈದ್ಯರು ಬರುವಷ್ಟರೊಳಗಾಗಿ ಏನು ಮಾಡಬೇಕೆಂಬುದನ್ನು ತಿಳಿಯದೆ ಹೋಗುವುದರಿಂದ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸಾಕ್ರಮದಲ್ಲಿ ಅತ್ಯಲ್ಪ ಜ್ಞಾನವನ್ನು ಪಡೆದು, ಅದನ್ನುಪಯೋಗಿಸುವುದರಿಂದಲೇ ಸಾಯುವ ಸ್ಥಿತಿಯಲ್ಲಿದ್ದ ಸಾವಿರಾರು ಜೀವಗಳು ಬದುಕಿಕೊಂಡಿರುವುವು.

ಅದಕ್ಕಾಗಿ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೃತಕಾಂಗಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ, ಅಗ್ನಿಗಂಡ, ನರಗಳು ಕದಲುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಸೌಕರ್ಯಗಳನ್ನು ಕಲ್ಪಿಸಿಡುವುದು, ಇನ್ನೂ ಇದರಂತೆಯೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳೊಡನೆ ಇಷ್ಟು ವಿಷಯಗಳಿದ್ದರೂ, ಸರ್ವಸಾಮಾನ್ಯವಾಗಿ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆಮಾಡಿರುವೆವು. [92-7]

ಪುಸ್ತಕದ ಬೆಲೆ 0—8—0, ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣನ್ ಬ್ರದರ್ಸ್, 323, ತಂಬೂಚೆಟ್ಟಿ ಬೀದಿ, ಮದರಾಸು, ಪೋಸ್ಟು ಬಾಕ್ಸ್ 166.

ತಾಲ್ಲೋಕು ವರ್ತಮಾನಗಳು.

ಆನೆಕಲ್ಲು.—ಈ ಟೌನ್ ವಾಸ್ತವ್ಯರಾದ ಜವಳಿ ಅಂಗಡಿ ಮ|| ಮರಿಗಿ ಮಾಯಂಕಪ್ಪನವರು ಪ್ರತಿ ವರುಷ ನಡಿಸುತ್ತಿರುವ ಪದ್ಧತಿ ಪ್ರಕಾರ 10 ನೇ ಸೋಮವಾರ ಶ್ರೀ ತಿಮ್ಮರಾಯಸ್ವಾಮಿ ಉತ್ಸವವನ್ನು ನಡಿಸಿದರು. ಅದನ್ನು ನೋಡಲು ಅನೇಕ ದೊಡ್ಡ ಮನುಷ್ಯರೇ ಮೊದಲಾಗಿ ಬಹು ಜನರು ಸೇರಿದ್ದರು.—ಆ ದಿನ ಸರ್ಕಾರದವರು ಸೊಸೈಟಿಗಳ, ವಿದ್ಯಾಭ್ಯಾಸ, ವ್ಯವಸಾಯ, ಗ್ರಾಮಪಂಚಾಯತಿ ವಿಷಯಗಳ ತಾಲ್ಲೂಕ್ ಕಾನ್ಫರೆನ್ಸನ್ನು ನಮ್ಮ ಅಮಲ್ದಾರ್ ಮ|| ಗೋಪಾಲ ಕೃಷ್ಣಯ್ಯಂಗಾರ್ಯ ನಡಿಸಿದರು. ಈ ಸಭೆಗೆ ಬಂದವರು ಡೆಪ್ಯುಟಿ ಕಮಿಷನರ್‌ರಾದ ಮಿ|| ಟಾಂಡಿ ಸಾಹೇಬರವರು ಚೇರ್ಮನ್ನಾಗಿ ಸರ್ವರಿಗೂ ಬುದ್ಧಿವಾದ ತಿಳಿಸಿದರು. ಸರ್ಕಾರದ ಉದ್ಯೋಗಸ್ಥರನ್ನು, ಊರ ದೊಡ್ಡ ಮನುಷ್ಯರ ಮುಂತಾಗಿ ಸಮಸ್ತರನ್ನೂ ಮೇಲ್ಕಂಡ ಮರಿಗಿ ಮಾಯಂಕಪ್ಪನವರು ಗಂಧ ಪುಷ್ಪ ಟಿಫನ್ ತಾಂಬೂಲಗಳಿಂದ ಸನ್ಮಾನಿಸಿ ಸಂತೋಷಪಡಿಸಿದರು.

ನೆಲಮಂಗಲ.—ಈ ಊರಲ್ಲಿ ಚಾಲ್ತಿ ಮಾಹೆ 4 ನೇ ತಾ ರಾತ್ರಿ ಸುಮಾರು ಒಂದೂವರೆ ಹದ ಮಳೆಯಾಯ್ತು. ಜಾನುವಾರುಗಳಿಗೆ ಕುಡಿಯುವದಕ್ಕೆ ಕೆರೆ ಕುಂಟೆಗಳಿಗೆ ನೀರು ಬಂತು.—ಈಗ ಇಲ್ಲಿಗೆ 3 ಮೈಲಿ ದೂರದಲ್ಲಿರುವ ಅಕ್ಕೀನ ಹಳ್ಳಿಯಲ್ಲಿರುವ ಒಕ್ಕಲಿಗರ ಕರೇ ಬೈರಪ್ಪನೆಂಬಾತನು ಬಹಳ ಧರ್ಮದ ಕೆಲಸ ಮಾಡುತ್ತಾನೆ. ಮರದಿಂದ ಕೈಕಾಲು ಮುರಿದವರನ್ನಾಗಲಿ, ಇನ್ನ್ಯಾವ ವಿಧದಿಂದಾಗಲಿ ಶರೀರದಲ್ಲಿ ಮೂಳೆ ಮುರಿದ ಹೊಸಘಾಯದವರನ್ನು ಒಂದು ಕಾಸು ಮುಟ್ಟದೆ ಧರ್ಮಾರ್ಥವಾಗಿ ವಾಸಿಮಾಡುತ್ತಾನೆ. ಇದುವರೆಗೆ ಸಾವಿರಾರು ರೋಗಿಗಳನ್ನು ವಾಸಿಮಾಡಿದಾನೆ. ಬಹಳ ದೂರದಿಂದ ಅಂದರೆ ರಾಯಚೂರು, ಚನ್ನಪಟ್ಟಣ, ಮಧುರೆ, ದಿಂಡಿಗಲ್ಲು ಮುಂತಾದ ಸ್ಥಳಗಳಿಂದ ಬಂದು ಗುಣ ಹೊಂದಿರುತ್ತಾರೆ.—ನೆಲಮಂಗಲ ಟೌನ್‌ನಲ್ಲಿರುವ ಮಾಗಡಿ ಶಂಕರಪ್ಪನವರು ಮಕ್ಕಳಿಗೆ ಬರುವ ಎಳವು, ಮಾಂಟೆ ಮುಂತಾದ ರೋಗಗಳಿಗೆ ಉಚಿತವಾಗಿ ಔಷಧ ಕೊಡುತ್ತಿದ್ದಾರೆ.

ನಂಜನಗೂಡು.—ಈ ತಾಲ್ಲೋಕಿನ ಅಮಲ್ದಾರರಾದ ಮ|| ಭೀಮರಾಯರಿಗೆ ಚನ್ನಗಿರಿಗೆ ವರ್ಗವೆಂಬ ಸಮಾಚಾರವನ್ನು ಕೇಳಿ ಈ ತಾಲ್ಲೋಕಿನ ರೈತರೆಲ್ಲರೂ ಬಹಳ ವ್ಯಸನ ಪಡುತ್ತಿರುವರು. ಮ|| ಭೀಮರಾಯರು ಪ್ರಜೆಗಳ ಕಷ್ಟವನ್ನು ತಮ್ಮ ಕಷ್ಟವೆಂದು ತಿಳಿದು ಹಳ್ಳಿ ಹಳ್ಳಿಗೂ ಹೋಗಿ ಅವರ ಸುಖ ದುಃಖಗಳನ್ನು ವಿಚಾರಿಸಿ ತಾಲ್ಲೋಕಿನಲ್ಲಿ ಎಲ್ಲರ ವಿಶ್ವಾಸಕ್ಕೂ ಅಭಿಮಾನಕ್ಕೂ ಪಾತ್ರರಾಗಿರುವರು.—ಇದೇ ತಾಲ್ಲೋಕು ಬಸವಟ್ಟಿಗೆ ಗ್ರಾಮದಲ್ಲಿ ಕಳೆದ ಮಾರ್ಚ 7 ನೇ ತಾ. ಗಿರಿಮಲ್ಲಯ್ಯನ ಹೆಂಡತಿ ಹೊನ್ನಮ್ಮನೆನ್ನುವಳು ಇದೇ ಗ್ರಾಮದ ಪರುವತಯ್ಯನೆಂಬುವನಿಗೆ ಕೊಡಬೇಕಾಗಿದ್ದ 2 ರೂಪಾಯಿ ಸಾಲದ ಸಲುವಾಗಿ ಇವರಿಬ್ಬರಿಗೂ ಜಗಳ ಹುಟ್ಟಿ ಅವನಿಗೆ ಅವಮಾನ ಪಡಿಸಿದರೆಂದೂ ಅವಳು ಬೇಸರಿಸಿಕೊಂಡು ಹಿಂಸೆಯನ್ನು ತಡೆಯಲಾರದೆ ಭಾವಿಗೆ ಬಿದ್ದು ಆತ್ಮಹತ್ಯ ಮಾಡಿಕೊಂಡಳೆಂದೂ, ಇನ್ನೂ ಯಾವ ಕ್ರಮವೂ ನಡೆಯುವುದಿಲ್ಲವೆಂದೂ ಹೇಳುತ್ತಾರೆ. ಸರ್ಕಾರದವರು ಇದರ ವಿಷಯದಲ್ಲಿ ಜಾಗ್ರತೆಯಾಗಿ ಜನಗಳ ಭಯವನ್ನು ಪರಿಹರಿಸುವರೆಂದು ಕೋರುವೆವು.

ಶೃಂಗೇರಿ.—ಬಿಸಿಲಿನ ಬೇಗೆಯು ತಡೆಯಲು ಅಶಕ್ಯವಾಗಿದೆ. 1-2 ಮಳೆ ಬಂದರೂ ಚೆನ್ನಾಗಿ ಬರಲಿಲ್ಲ. ಶ್ರೀಶಾರದಾಂಬೆಯ ದೇವಸ್ಥಾನವೂ, ಹೊಳೆ ಆಚೆ ಇರುವ ಲೇಟ್ ಶ್ರೀಜಗದ್ಗುರು ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳವರ ದೇವಸ್ಥಾನವೂ ಕಟ್ಟಿ ಪೂರೈಸಿದೆ. ಶ್ರೀಮಠದ ಏಜಂಟರು ವೇ|| ಶ್ರೀಕಂಠಶಾಸ್ತ್ರಿಗಳು ಆಸ್ಥಾನ ಧರ್ಮಾಧಿಕಾರಿ ವೇ|| ಕೃಷ್ಣಶಾಸ್ತ್ರಿಗಳೂ, ಹಸಿವು ನಿದ್ರೆಯಿಲ್ಲದೆ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಪರಸ್ಥಳದಿಂದ ಬರುವ ಜನರಿಗೆ ಅನುಕೂಲಪಡಿಸುವುದು ಶ್ಲಾಘ್ಯವಾಗಿದೆ. ಉತ್ಸವಕ್ಕೆ ಬೇಕಾದ ಅನುಕೂಲಗಳು ಆಗುತ್ತಿವೆ. ಕಳೆದ ವಾರ ಮ|| ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರಾದ ಶ್ರೀಕಂಠೇಶ್ವರಯ್ಯರೂ, ಮ|| ಕಂಟ್ರೋಲರ್ ಅಯ್ಯಂಗಾರ್ಯರವರೂ, ಕಡೂರು ಡಿ|| ಡೆಪ್ಯುಟಿ ಕಮಿಷನರೂ ಮ|| ಸರ್ವೆ ಸೂಪರಿಂಟೆಂಡೆಂಟ್ ಸಾಹೇಬರೂ ದಯಮಾಡಿಸಿ ಏರ್ಪಾಡುಗಳನ್ನು ನೋಡಿಕೊಂಡು ಹೋದರು. ಶ್ರೀಮನ್ಮಹಾರಾಜರವರು ದಯಮಾಡಿಸುವ ಕಾರಣ ಬೀದಿಯಲ್ಲಿ ಸ್ತಂಭಗಳು ಹಾಕಲ್ಪಡುತ್ತಲಿವೆ. ಈ ಮಹೋತ್ಸವವು ಇದೇ ಮೇ ತಾರೀಖು 10 ಪ್ರಾರಂಭವಾಗಿ ತಾ. 18 ನೇ ಗುರುವಾರ ಕುಂಭಾಭಿಷೇಕವು ನಡಿಸಲ್ಪಡುವದಾಗಿ ಪ್ರಕಟವಾಗಿದೆ. ಶ್ರೀ ಆದಿಶಂಕರಾಚಾರ್ಯರ ಪರಂಪರೆಯಲ್ಲಿ ಅವತಂತ ಪ್ರಖ್ಯಾತರಾಗಿದ್ದ ಶ್ರೀ ಶಿವಾಭಿನವ ನರಸಿಂಹಭಾರತೀ ಜಗದ್ಗುರುಗಳ ಸಂದರ್ಶನವೇ ಅವರ ಶಿಷ್ಯಕೋಟಿಯ ಶ್ರೇಯಸ್ಸಿಗೆ ಕಾರಣವಾಗಿದೆ.

ಸೊರಬ ತಾ|| ಚಂದ್ರಗುತ್ತಿ.—ಬಿಸಲಿನ ತಾಪ ಹೆಚ್ಚುತ್ತಾ ಇದೆ. ಮೋಡ ಕವಿದರೂ ಮಳೆ ಬರುವುದಿಲ್ಲ.—ಇಲ್ಲಿಯ ಶ್ರೀ ರೇಣುಕಾಂಬನವರ ಜಾತ್ರೆಯು ತಾ. 23 ರಿಂದ 29 ರವರೆಗೆ ಬಹಳ ವಿಜೃಂಭಣೆಯಾಗಿ ನಡೆಯಿತು. ಅಮಲ್ದಾರ್ ಮ|| ಪೂರ್ಣಯನವರ ಪ್ರೋತ್ಸಾಹದಿಂದ ದನಗಳ ಪ್ರದರ್ಶನವೂ ನಡೆಯಿತು. ಡೆಪ್ಯುಟಿ ಕಮಿಷನರವರೂ, ಜೆಲ್ಲಾ ಆಫೀಸರೂ, ಪ್ರೊ|| ಸೂಪರಿಂಟೆಂಡೆಂಟರೂ, ಮರಾಮತ್ತು ಸೂಪರವೈಸರೂ, ಮತ್ತೆ ನಾಡು ಇಂಪ್ರೂವ್‌ಮೆಂಟ್ ಆಫೀಸರೂ ದಯಮಾಡಿಸಿ ಜಾತ್ರೆಯನ್ನು ನೋಡಿ ಆನಂದ ಹೊಂದಿ, ದನಗಳ ಪ್ರದರ್ಶನಕ್ಕೆ ತುಂಬಾ ಪ್ರೋತ್ಸಾಹಿಸಿ ವಾಪಸು ಹೋದರು. ಧರ್ಮದರ್ಶಿಗಳ ಮೆಂಬರ್ ಮ|| ಪೂರ್ಣಯ್ಯನವರ ಪ್ರೋತ್ಸಾಹದಿಂದಲೂ ಸುಮಾರು 800 ರೂಪಾಯಿ ಕಾಣಿಕೆ ಶ್ರೀ ಅಮ್ಮನವರ ಭಂಡಾರಕ್ಕೆ ಉತ್ಪತ್ತಿಯಾಯಿತು. ಪರಸ್ಥಳದವರಿಗೆ ನೀರು ಸಾಲದೆ ತುಂಬಾ ತೊಂದರೆ ಪಟ್ಟರು. ಹೊಸದಾಗಿ ಮುಂದಕ್ಕೆ ಭಾವಿ ತೋಡಿಸಿದರೆ ಸ್ವಲ್ಪ ಅನುಕೂಲವಾಗುತ್ತದೆ. ಈ ಭಾವಿ ತೋಡಿಸುವುದರಲ್ಲೂ ಮುತುವರ್ಜಿ ವಹಿಸುವರೆಂದು ನಂಬಿರುತ್ತೇನೆ. ಧರ್ಮದರ್ಶಿಗಳು ಬಹಳ ಮುತುವರ್ಜಿ ವಹಿಸಬೇಕಾಗಿರುತ್ತದೆ. ಪ್ರದರ್ಶನಕ್ಕೆ ಶೇಕ್‌ದಾರ್ ಮ|| ತಿಮ್ಮಯ್ಯನವರು ತುಂಬಾ ಮುತುವರ್ಜಿ ಮಾಡಿದರು. ಸರ್ಕಾರದವರು 200 ರೂಪಾಯಿ ಸಹಾಯ ಮಾಡಿದ್ದು ಪ್ರದರ್ಶನಕ್ಕೆ ಬಂದ ದನಗಳಿಗೆ ಇನಾಮು ಕೊಡುವುದಕ್ಕೆ ಖರ್ಚಾಯಿತು. ಅಂತು ಸಲಾಟ ಜಾತ್ರೆಯಾದರೂ ಪೂರ್ವ ಪ್ರಕಾರವೇ ಜಾತ್ರೆ ಚೆನ್ನಾಗಿ ನಡೆಯಿತು.

ದೇವನಹಳ್ಳಿ ತಾ|| ವಡಿಗೇನಹಳ್ಳಿ.—ಏಪ್ರೆಲ್ ತಾ. 26 ನೇ ಗುರುವಾರ ದಿನ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಈ ಹಳ್ಳಿಗೆ ದಯಮಾಡಿಸಿದರು. ವಾದ್ಯದೊಂದಿಗೆ ಗ|| ಎ. ಇ. ಬಾಯ್ಸ್ ಸ್ಕೂಲ್ ಬಾಗಿಲ ಮುಂದೆ ಅಲಂಕರಿಸಲ್ಪಟ್ಟಿದ್ದ ತೋರಣಗಳಿಂದಲೂ ಮತ್ತು ನಾನಾ ಚಿತ್ರಕೆಲಸದಿಂದ ಅಲಂಕರಿಸಲ್ಪಟ್ಟಿದ್ದ ಮಂಟಪದ ಒಳಭಾಗದಿಂದ ಅವರನ್ನು ಪ್ರವೇಶಿಸುವಾಗ್ಗೆ ಬಾಗಿಲಲ್ಲಿ ಬಾಲಕರಿಂದ ಹಾಡಲ್ಪಟ್ಟ ಮಂಗಳವನ್ನು ಸುಮಾರು ¼ ಘಂಟೆ ವರೆಗೂ ಕೇಳಿ ನಂತರ ಒಳಗೆ ಪ್ರವೇಶಿಸಿ ಸ್ಕೂಲ್ ಕೆಲಸಗಳನ್ನು ಪರಾಂಬರಿಸಿ, ತರುವಾಯ ಗ್ರಾಮಾಧಿಕಾರಿಗಳಿಂದಲೂ ಕಮಿಟಿ ಮೆಂಬರುಗಳಿಂದಲೂ ಮರ್ಯಾದಾರ್ಥವಾಗಿ ಒಪ್ಪಿಸಲ್ಪಟ್ಟ ಹೂವಿನ ಹಾರಾಯಿಗಳನ್ನು ಹಾಕಿ ವಿದ್ಯಾ ವಿಷಯವಾಗಿ ಒಂದು ಉಪನ್ಯಾಸವನ್ನು ತಾವಾಗಿಯೇ ಕೊಟ್ಟು ಮುಂದೆ ಈ ಸ್ಕೂಲನ್ನು ಎ. ವಿ. ಸ್ಕೂಲನ್ನಾಗಿ ಮಾಡಿಕೊಡಲು ಪೂರ್ಣವಾದ ಭರವಸೆಯನ್ನು ಕೊಟ್ಟು ನಂತರ ಗಂಧ ಪುಷ್ಪ ತಾಂಬೂಲಾದಿಗಳನ್ನು ಹಂಚಿದ ತರುವಾಯ ಮಂಗಳವನ್ನು ಹೇಳಿ ಸಭೆಯು ಮುಕ್ತಾಯವಾಯಿತು. ಅನಂತರ ಇಲ್ಲಿನ ಲಂಡನ್ ಮಿಷನ್ ಗರಲ್ಸ್‌ಸ್ಕೂಲ್ ಮುಂದೆ ಕಟ್ಟಿರುವ ವಿಚಿತ್ರವಾದ ತೋರಣಗಳನ್ನು ಪರಾಂಬರಿಸಿ ಸ್ಕೂಲಿನ ಒಳಗಡೆ ದಯಮಾಡಿ ಬಾಲಕಿಯರಿಂದ ಹಾಡಲ್ಪಟ್ಟ ಕಂದವನ್ನೂ ಸುಮಾರು ¼ ಘಂಟೆ ಹೊತ್ತು ಕೇಳಿ ನಂತರ ಸ್ಕೂಲಿನ ಆಂಶಗಳನ್ನೆಲ್ಲಾ ಒಂದನ್ನೂ ಬಿಡದೆ ಚೆನ್ನಾಗಿ ತನಿಖೆಮಾಡಿ ಸ್ಕೂಲ್ ಬಾಲಕಿಯರನ್ನೆಲ್ಲಾ ಪರಾಂಬರಿಸಿ ನಂತರ ನಡೆದ ಉಪನ್ಯಾಸವನ್ನೆಲ್ಲಾ ಕೇಳಿ, ಈ ಸ್ಕೂಲಿನ ಬಾಲಕಿಯರಿಗೆ ಬಹುಮಾನ ಕೊಡಿ ಮುಂತಾದದ್ದಕ್ಕೆ ದ್ರವ್ಯವನ್ನು ಕೊಟ್ಟಿದ್ದಲ್ಲದೆ ಕೆಲವು ಬಾಲಕಿಯರಿಗೆ ಮಾಹೆಯಾನಾ ವೇತನ ಕೊಡುವಂತೆಯೂ ಸೂಚಿಸಿದರು. ತರುವಾಯ ಮಂಗಳವು ಹೇಳಲ್ಪಟ್ಟು, ಬಾಲಕಿಯರಿಂದ ಹೂವಿನ ಮಾಲೆಯನ್ನು ಸ್ವೀಕರಿಸಿ ತೆರಳಿದರು. ಅಲ್ಲಿಯೇ ಇನ್ನು ಮುಂದಿರುವ ಬಾಯ್ಸ್ ಸ್ಕೂಲಿನ ಒಂದು ಭಾಗವಾಗಿರುವ ಎ. ಕ್ಲಾಸನ್ನು ಪರಾಂಬರಿಸಿ ಹಿಂದೂಸ್ತಾನಿ ಸ್ಕೂಲನ್ನು ನೋಡಿ ಅಲ್ಲಿಯೂ ಆ ಮಕ್ಕಳಿಗಾಗಿ ಬಹುಮಾನ ಕೊಡುವದಾಗಿ ಹೇಳಿ ನಂತರ ಕೆಲವು ದೇವಾಲಯಗಳಿಗೆ ಹೋಗಿ ಅಲ್ಲಿ ದೇವರ ದರ್ಶನವಂ ಗೈದು ಊರಿನ ಜನಗಳಿಗೆಲ್ಲಾ ಸಂತೋಷವನ್ನುಂಟುಮಾಡಿ ತೆರಳಿದರು.

ತಿರುಮಕೂಡ್ಲು ನರಸೀಪುರ.—ವ್ಯಾಸರಾಯಮಠದ ಸಂಸ್ಥಾನಾಧಿಪತಿಗಳು ತೀರ್ಥಯಾತ್ರಾರ್ಥವಾಗಿ ಹೊರಟು ಈ ಸ್ಥಳಕ್ಕೆ ದಯಮಾಡಿಸಿದರು. ಈ ಸ್ಥಳದ ಮುಖ್ಯಾಧಿಕಾರಿಗಳು, ಅಗ್ರಹಾರದ ಮಹಾಜನಗಳು ಮತ್ತು ವರ್ತಕ ಮಂಡಲಿಯವರೂ, ಪುರವಾಸಿಗಳು ದಾರಿಯಲ್ಲಿ ದೇವಸ್ಥಾನದ ಮರ್ಯಾದೆ ಸಹಿತ ಎದುರುಗೊಂಡು ತುಂಬಾ ಮರ್ಯಾದೆಯಿಂದ ಶ್ರೀ ಗುಂಜಾನರಸಿಂಹ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಸಂಪ್ರದಾಯಾನುಸಾರವಾಗಿ ಮರ್ಯಾದೆ ನಡೆದ ತರುವಾಯ ಸ್ವಾಮಿಗಳವರು ದೇವಸ್ಥಾನದ ನೌಕರರಿಗೂ ಅಗ್ರಹಾರದ ಮಹಾಜನಗಳಿಗೂ ಸಂಭಾವನಾ ಮರ್ಯಾದೆ ನಡಿಸಿ ಅಲ್ಲಿಂದ ಮಠದ ಬಿಡಾದಿಗಳ ಸಮೇತ ಯಥಾರ್ಥರೀತಿ ಪುರಜನರು ಮತ್ತು ಉದ್ಯೋಗಸ್ಥರೇ ಮೊದಲಾದ ಮಠದ ವಿದ್ವಾಂಸರಿಂದ ಕೂಡಿ ಇಳಿಯುವದಕ್ಕೆ ಏರ್ಪಡಿಸಿದ್ದ ಬಿಡಾರಕ್ಕೆ ದಯಮಾಡಿಸಿದರು. ಪುರವಾಸಿಗಳು ರಚಿಸಿದ್ದ ತೋರಣ ರಂಗವಲ್ಲಿ ಮೊದಲಾದ ಅಲಂಕಾರಗಳಿಂದ ಬೀದಿಗಳು ತುಂಬಾ ಶೋಭಾಯಮಾನವಾಗಿದ್ದವು. ಪುರವಾಸಿಗಳ ಮುಖಂಡರ ಪ್ರಾರ್ಥನೆ ಪ್ರಕಾರ ಹೀಗೆ ಅಲಂಕರಿಸಲ್ಪಟ್ಟಿದ್ದ ರಾಜಬೀದಿಗಳಲ್ಲಿ ಸವಾರಿಯು ಚಿತ್ತೈಸಿ ಸುಮಂಗಲಿಯರಿಂದ ತರಲ್ಪಟ್ಟ ಆರತಿಯನ್ನು ಸ್ವೀಕರಿಸಿ ಅವರಿಗೆ ಫಲಮಂತ್ರಾಕ್ಷತೆಯನ್ನು ಕೊಡುತ್ತಾ, ಸರ್ವಜನರಿಗೂ ಆಹ್ಲಾದವನ್ನುಂಟುಮಾಡುತ್ತಾ, ತಮ್ಮ ಬಿಡಾರವನ್ನು ಸೇರಿದರು. ಈ ದಿವಸ ಈ ಮಹನೀಯರ ಸವಾರಿಯಿಂದ ಉಂಟಾದ ವೈಭವವೂ ಸಂಭ್ರಮವೂ ಹಿಂದೆ ಎಂದೂ ನೋಡಿರಲಿಲ್ಲವೆಂದು ಪುರವಾಸಿಗಳು ಹೇಳಿಕೊಂಡು ಸಂತೋಷಪಡುತ್ತಾ ಇದ್ದರು. ನಾಲ್ಕು ದಿವಸಗಳ ವರೆಗೂ ಈ ಗ್ರಾಮದಲ್ಲಿದ್ದ ತಿಪ್ಪರೇ ಮೊದಲಾದ ಮಹಾಜನಗಳಿಂದ ನಡೆಸಲ್ಪಟ್ಟ ಸೇವೆಯನ್ನು ಸ್ವೀಕರಿಸಿ ಈ ದಿವಸ ಮುಂದೆ ಪ್ರಯಾಣಮಾಡಿದರು. ಈ ಸ್ವಾಮಿಗಳವರು ಮಹಾ ತಪಸ್ವಿಗಳು, ಧಾರ್ಮಿಕರು ಮತ್ತು ವಿದ್ಯಾಪಕ್ಷಪಾತಿಗಳು. ತಮ್ಮ ಸಂಸ್ಥಾನವನ್ನು ತುಂಬಾ ಉಚ್ಛ್ರಾಯಸ್ಥಿತಿಗೆ ತರಬೇಕೆಂದು ತುಂಬಾ ಉತ್ಸಾಹಪೂರ್ಣರಾಗಿರುತ್ತಾರೆ. ಈ ದಿವಸ ಪ್ರಾತಃಕಾಲ ಪುರವಾಸಿಗಳಿಗೆ ಫಲಮಂತ್ರಾಕ್ಷತೆಯನ್ನು ಕೊಟ್ಟು ಆಗರವೆಂಬ ಗ್ರಾಮಕ್ಕೆ ಪ್ರಯಾಣಮಾಡಿದರು. ಈ ಮಹನೀಯರು ಒಂದು ಸಂಸ್ಕೃತ ಪಾಠಶಾಲೆಯನ್ನು ಏರ್ಪಡಿಸಿ ತರ್ಕ, ವ್ಯಾಕರಣ, ವೇದ, ವೇದಾಂತವೇ ಮೊದಲಾದ ಪಾಠಗಳನ್ನು ಹೇಳಲು ವಿದ್ವಾಂಸರುಗಳನ್ನು ಏರ್ಪಡಿಸಿರುತ್ತಾರೆ. ಇವರ ಕಾಲದಲ್ಲಿ ಇವರ ಸಂಸ್ಥಾನವು ತುಂಬಾ ಪ್ರಸಿದ್ಧಿಗೆ ಬರುತ್ತೆಂದು ಕೋರಲ್ಪಟ್ಟಿರುತ್ತೆ.

ಓರಿಯಂಟಲ್ ಗ|| ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ—ಬೊಂಬಾಯಿ.

ಕಂಪನಿಯ ಫಂಡು..............ರೂ. 5,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರೆಬಿಲೊ, ಚೀಫ್ ಏಜೆಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವಿ. ವೆಂಕಟೇಶನ್, ಟ್ರಾವೆಲಿಂಗ್ ಏಜಂಟ್, ಮೈಸೂರು; ಅಥವಾ

[222-31] ಬ್ರಾಂಚ್ ಸೆಕ್ರೆಟರಿ, ಮದರಾಸ್

ಮಿತ್ರರೇ ಅವಶ್ಯವಾಗಿ ಈ ಜಾಹೀರಾತವನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕುಶಫಾ ಅಂದರೆ ಆರೋಗ್ಯ ಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳ ಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣ ಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದ ಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂತೆ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆ ಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹೃದಯರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗ, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣೊಳಗೆ ಹೂವು ಬೆಳೆಯುವದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗಿ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ವ್ಯಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇತ್ರಿ ಜಪ್ಪು, ಗುದ್ದವ್ವನ ಬೇನೆ, ಹುರಕು ಕಜ್ಜಿ, ಗಜಕರ್ಣ, ತದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ತೊಡಗೆಮ್ಮು, ಅದು ಮುಟ್ಟಿದೋಷ ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಟಾಲವು, ಡಾಕ್ಟರರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರಾಗಿ 6 ವರ್ಷಗಳಾಗದಿದ್ದರೂ 13,000 ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ನಮಕ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಪಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ, ವಿ.ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ.ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲ. ವಿ.ಪಿ. ಖರ್ಚು, ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ, ಮರಾಠಿ, ಮುಸಲ್ಮಾನ ಭಾಷೆ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಜೋಡ ನಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ. [44-6]

ಮಶೇಸ ಸಾಹೇಬ ಮೋದೀನ ಸಾಹೇಬ ಮುಲ್ಲಾ, ಅರ್ಕುಶಫಾ ಶೋಧಕ, ಹೆಡ್ ಆಫೀಸ ಮುಕ್ಕಾಮ ಶಾಹಪೂರ, ಬೆಳಗಾಂವ.

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-37]

ಕ್ರಯ ಬಾಟ್ಲಿ ೧ ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ., ಗಿರಗಾಂವ, ಮುಂಬಯಿ.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ. 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ; 12 ಕ್ಕೆ ವಿ. ಪಿ. ಛಾರ್ಜು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಸೊಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ. ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [108-4]

ಅಮೃತಾಂಜನ ಡಿಪೋ,

109, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ತಾ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಬೇಗ ಹೋಗಬೇಡಿರಿ. ಕ್ಯಾಟಲಾಗ್ ಇನಾಂ. ಲಾಭವನ್ನು ಬಿಡಬೇಡಿರಿ.

ಕಾಶೀ ಪಟ್ಟೆ ಪೀತಾಂಬರ

ಕಾಶಿಯಲ್ಲಿ ನಮ್ಮಲ್ಲಿ ಅನೇಕ ಜಲ್ಲರಿ ವ್ಯಾಪಾರಗಳು ಸಾಮಾನುಗಳನ್ನು ತೆಗೆದುಕೊಂಡು ದೊಡ್ಡದಾಗಿ ಉತ್ಕೃಷ್ಟ ವಾದಿ ಬಹಳ ಹೆಚ್ಚು ಖರೀದೀಗೆ ಮಾಡುತ್ತ ಇರುತ್ತಾರೆ. ಇನ್ನು ಮೇಲಾದರೂ ನಮ್ಮಲ್ಲಿ ತಯಾರಾಗುವ ಜರಿಗೆ ಸೀರೆ, ಶಲ, ಕಾಶ್ಮೀರ್ ಶಾಲು, ದುಪ್ಪಟ್ಟಿ, ಶಾಲು ರುಮಾಲು, ಬಟ್ಟೆ, ರುದ್ರಾಕ್ಷಿ, ರತುಂವಾರ್ ಕಲ್ಲುಗಳು ಬಹಳ ಸುಲಭ ಕ್ರಯಕ್ಕೆ ತೆಗೆದು ಲಾಭವನ್ನು ಹೊಂದಬೇಕಾಗಿ ಕೋರುತ್ತೇವೆ. ಇಂಗ್ಲಿಷಿನಲ್ಲೇ ಕಾಗದ ಬರೆಯಿರಿ.

[83-7] ನಮ್ಮ ವಿಳಾಸ—ಜಿ. ಆರ್. ಕಂಪನಿ, ಕಾಶಿ.

1,000 ರೂಪಾಯಿ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ (ರಿಜಿಸ್ಟರ್) ಮುರಬ್ಬ.

ಈ ಸಾಲಾಮಿಸ್ರಿ ಮುರಬ್ಬವು ರಕ್ತವನ್ನು ಹೆಚ್ಚಿಸಿ ದೇಹಶಕ್ತಿಯನ್ನು ಕೊಡುವುದರಲ್ಲಿ ಪ್ರಖ್ಯಾತಿಹೊಂದಿರುವುದು. ನರಗಳ ಬಲಹೀನತೆಯನ್ನು ಹೋಗಲಾಡಿಸಿ ದೇಹಕ್ಕೆ ಶಕ್ತಿಯನ್ನು ಕೊಡುವುದರಲ್ಲಿ ಈ ಸಾಲಾಮಿಸ್ರಿ ಮುರಬ್ಬಕ್ಕೆ ಸಮಾನವಾದದು ಬೇರೊಂದಿಲ್ಲ.

ಕ್ರಯ ಡಬ್ಬಿ 1 ಕ್ಕೆ ರೂ. 2-0-0 ಟಪ್ಪಾಲು ಮಶೂಲ್ 1 ಡಬ್ಬಿಯಿಂದ 3 ಡಬ್ಬಿಗಳಿಗೆ 0-6-0.

ಇವರ ಪೂರಾ ಕ್ಯಾಟಲಾಗು ಅಪೇಕ್ಷಿಸುವವರು 6 ಕಾಸಿನ ಸ್ಟಾಂಪನ್ನು ಕಳುಹಿಸಿರಿ. [106-4]

ವಿಳಾಸ—ಡಿ. ಮನ್ನಾಲಾಲ್, ಡಿಲ್ಲಿ ವೈದ್ಯ,
ರಾಂಪ್ರಸಾದ್ ಮಿಠಾಯಿ ಅಂಗಡಿ ಎದುರು,
೨೧ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತರಿಸಿ ನೋಡಿರಿ.

1 ಸುಧಾಕರ ಕಸ್ತೂರಿ ಮಾತ್ರೆಗಳು—ಜ್ವರ, ಅಗ್ನಿಮಾಂದ್ಯ, ಕೆಮ್ಮು, ನೆಗಡಿ, ಅಶಕ್ತತೆ, ದೇಶ ಕಾಲ ವ್ಯತ್ಯಾಸದಿಂದುಂಟಾಗುವ ವಿಕಾರಗಳು, ಮಕ್ಕಳ ಎಳವು, ಮಲಬದ್ಧ, ಇವುಗಳನ್ನು ಗುಣಪಡಿಸುತ್ತದೆ. ಕುಪ್ಪಿ 1 ಕ್ಕೆ 4 ಆಣೆ ಮಾತ್ರ. 6 ಸೀಸೆಗಳಿಗೆ ರೂ 1-4-0. ಟಪಾಲು ಚಾರ್ಜು ಪ್ರತ್ಯೇಕ.

2 ಕಮಲಕೇಶರ ಘೃತ—ಕಣ್ಣಿಗೆ ತಗಲುವ ಎಲ್ಲಾ ತರದ ನೋವುಗಳನ್ನು ಗುಣಪಡಿಸುವುದು ಕುಪ್ಪಿ 1 ಕ್ಕೆ 8 ಆಣೆ ಮಾತ್ರ.

3 ವಜ್ರದಂತಚೂರ್ಣ—ಇದನ್ನು ಪ್ರತಿ ದಿನವೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವುದರಿಂದ ಎಲ್ಲಾ ವಿಧವಾದ ದಂತ ರೋಗಗಳೂ ವಿಶೇಷವಾಗಿ ಹೋಗಿ ಹಲ್ಲುಗಳು ಮುತ್ತಿನಂತೆ ಥಳಥಳಿಸುವವು. ಟಿನ್ 1 ಕ್ಕೆ 2 ಆಣೆ ಮಾತ್ರ.

[71-10] ನಮ್ಮ ವಿಳಾಸ.—ಜಿ. ಎಸ್. ಕೌಶಿಕ,
240, ದಿವಾನರ ರೋಡು, ಮೈಸೂರು.

ಕರ್ಣಿಕ ಎಗ್ಯೂಮಿಕ್ಸ್ಚರ

ಎಲ್ಲಾ ಜ್ವರಗಳಿಗೂ ಹಿಂದಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಬಿನ್ನೈಸುತ್ತೇವೆ. [213-31]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ದರಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ—ಕರ್ಣಿಕ ಬ್ರದರ್ಸ್,
ಎಗ್ಯೂ ಮಿಕ್ಸ್ಚರ್ ಡಿಪೋ, ಬೊಂಬಾಯಿ. 4.
KARNIK Bros., BOMBAY, 4.
ನಮ್ಮ ಏಜಂಟರು.—ದಿ ಉರ್ಲ್ ಮಾರ್ಟ್, ಮಂಗಳೂರು.

ಒಂದು ಬುದ್ಧಿಮಾತು.

ನೀವು ಸದಾ ವಾಯುವಿನಿಂದ ಕಷ್ಟಪಟ್ಟು ಹಾಸಿಗೆಯ ಮೇಲೆಯೇ ಇದ್ದು, ವಾತರೋಗದಿಂದ ಹಿಡಿತರಾಗಿ ಔಷಧಗಳಿಂದಲೂ ಆಸ್ಪತ್ರೆಗಳ ಸೇವನೆಗಳಿಂದಲೂ ಗುಣ ಹೊಂದದೆ ಇದ್ದರೆ, ಲಿಟ್ಲ್ಸ್ ಓರಿಯಂಟಲ್ ಬಾಂ ಎಂಬುದನ್ನು ಉಪಯೋಗಿಸುವದರಿಂದ ನಿಜವಾಗಿ ಗುಣ ಹೊಂದುವಿರಿ.

ಕೆರ್ರಿ ಪಟ್ಟಣದ ರತ್ತ್ಯಾರ್ ಕಂಪನಿಯಲ್ಲಿ 16 ವರುಷದಿಂದ ಹಾಸಿಗೆಮೇಲೆ ಬಿದ್ದಿದ್ದ ಒಬ್ಬ ಅಂಗಡಿಮನೆಗೆ ವಾಸಿಯಾಯಿತು. ಯೋರ್ಕ್ ನಗರದ ಷಿಪ್ಲಿಯಲ್ಲಿ 20 ವರುಷಗಳಿಂದ ಕಷ್ಟಪಡುತ್ತಿದ್ದವನು ವಾಸಿಯಾದನು. ಬ್ರಿಕ್ಸ್ಟನ್ ಪಟ್ಟದಲ್ಲಿ 40 ವರುಷಗಳಿಂದ ಕಷ್ಟಪಟ್ಟವನೊಬ್ಬನು ಸ್ವಸ್ಥ ಹೊಂದಿದನು. ಚೆಸ್ಟರ್ ನಗರದಲ್ಲಿ 80 ವಯಸ್ಸಿನ ಎ. ಬುಕ್ ಎಂಬಾತನು ಹೇಳುವದು :—

"ವಾಯುವಿನಿಂದ ಅಂಗಹೀನನಾಗಿ ಭಯಂಕರವಾದ ಸ್ಥಿತಿಯಲ್ಲಿದ್ದೆ. ಎಲ್ಲಾ ವಿಧವಾದ ಔಷಧಗಳನ್ನೂ ವೈದ್ಯರನ್ನೂ ಪರೀಕ್ಷಿಸಿ, ಉತ್ತಮ ಆಸ್ಪತ್ರೆಗೂ ಹೋದೆನು. ಆದರೆ ಅವುಗಳಿಂದ ಏನೂ ಮೇಲಾಗಲಿಲ್ಲ. ಲಿಟಲ್ಸ್ ಓರಿಯಂಟಲ್ ಬಾಂ ಎಂಬದರಲ್ಲಿ 2 ಸೀಸೆಗಳನ್ನು ಉಪಯೋಗಿಸಿದ್ದರಿಂದ ಪೂರ್ಣ ಸ್ವಸ್ಥವಾಯಿತು. ವಾಯುನೋವಿಗೆ ಕೈಕಂಡ ಔಷಧಿಯಾದ ಲಿಟಲ್ಸ್ ಓರಿಯಂಟಲ್ ಬಾಂ ಎಂಬದನ್ನು ಉಪಯೋಗಿಸಿರಿ."

ಸೀಸೆ 1ಕ್ಕೆ 1 ರೂ. ಮೇರೆಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

[116-2]

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ ಬರ್ಮಾ, ಸಿಲೋನ್, ಮಲೆಯ ಸ್ಟೇಟ್ಸ್, ಚೀನಾ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಔಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಮ್ಮ ಮನೆಯಲ್ಲಿದ್ದರೆ ಮನೆಯವರಿಗೂ ವೈದ್ಯರ ಸಹಾಯವನ್ನು ಹುಡುಕುವುದು ಅವಶ್ಯವಾಗಿಯೂ ತಪ್ಪುವುದು.—ಶೀತ, ಶೀತವಾಯು, ಅಜೀರ್ಣ, ವಾಂತಿ, ನಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗರ್ಭಿಣಿ, ಬಾಲರೋಗ, ಸೆಳವು, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧವು ಆಶ್ಚರ್ಯಕರವಾಗುವಂತೆ ಗುಣಪಡಿಸುತ್ತದೆ. ರಿಜಿಸ್ಟರಾದ ನಮ್ಮ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೆ ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಭೋಗಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 30 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪ್ಪಾಲ್ ಖರ್ಚು ಸೇರಿ ರೂ. 1-8-0; 12 ಸೀಸೆಗಳಿಗೆ ರೂ. 2-13-0; 25 ಸೀಸೆಗಳಿಗೆ ರೂ. 5-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆರಿಡ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಲ್. ಎಂ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಲ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಜಿಬಿಷನ್ ನಂ 2, ಬೊಂಬಾಯಿ, ಇವರು ಬರೆದಿರುವದು—"ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮಕ್ರಮವಾಗಿ ಪ್ರಾಣೋಷ್ಮಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಳ್ಳೆಯಸೋಂಕು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ಇವುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮಿ|| ಪಿ. ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲ ಪಂಡಿತರವರಿಂದ ತಯಾರಿಸಲ್ಪಡುವ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೆನು. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಾರೆ."

[189-36] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ :-ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ (1) ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು, ಸುವಾಸನೆಯನ್ನು ಕೊಡುವುದು, ಕೆಮ್ಮನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು. (4) ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲ ತರಧ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಆದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [32-15]

40 ಮಾತ್ರೆಗಳ ಪೊಟ್ಟ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	550 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 ,, ,, ,, 4 ,,	300 ,, ಟಿನ್ ,, 9 ,,	80 ,, ,, ,, 4 ,,	1200 ,, ,, ,, 2 ,,

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು
ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಶಿಂತ್ರಾನ್ ಡಿಪೋ, ಕಾಲ್ಬಾದೇವಿ ರೋಡ್ ಬೊಂಬಾಯಿ, ೨.
ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ. ನಮ್ಮ ದಕ್ಷಿಣ ಕನಡಾ ಏಜಂಟರು—ದಿ ಉರ್ಲ ಮಾರ್ಟ್, ಮಂಗಳೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

28 - 4 - 1916 ರಿಂದ 5 - 5 - 1916 ರ ವರೆಗೆ

ಸ್ಥಳ		ಪ್ಲೇಗ್ ಹಿಡಿದದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಹಿಡಿದದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು		0	0	0	0
ಮೈಸೂರು	,,	10	9	0	0
ಕೋಲಾರ್	,,	0	0	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟು		0	0	0	0
ಹಾಸನ	,,	0	0	0	0
ಚಿತ್ರದುರ್ಗ	,,	0	0	0	0
ಕಡೂರ್	,,	5	2	0	0
ಶಿವಮೊಗ್ಗ	,,	4	5	0	0
	ಜುಮ್ಲಾ	19	16	0	0

ಶಾಲಿವಾಹನ ಶಕ ವರುಷಂಗಳು 1839 ನೇ ನಳ ಸಂವತ್ಸರೇ ಉತ್ತರಾಯಣೇ ವಸಂತಋತೌ ವೈಶಾಖ ಬಹುಳ ಬಿದಿಗೆ ಶುಕ್ರವಾರದಿಂದ ವೈಶಾಖ ಬಹುಳ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1916 ನೇ ಮೇ,

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ವ್ಯತ್ಯಾಸ ಮಾಸ ದಿನ
19	ಶುಕ್ರ *	ಬಿದಿಗೆ	24-6	ಜ್ಯೇಷ್ಠ	26-25	7
20	ಶನಿ †	ತದಿಗೆ	18-7	ಮೂಲ	22-24	8
21	ಭಾನು ‡	ಚೌತಿ	12-0	ಪೂರ್ವಾ	18-14	9
22	ಸೋಮ ::	ಪಂಚಮಿ	5-51	ಉತರಿ	54-2	10
23	ಮಂಗಳ §	ಸಪ್ತಮಿ	64-13	ಶ್ರವಣ	10-14	11
24	ಬುಧ ;;	ಅಷ್ಟಮಿ	48-53	ಧನಿಷ್ಠ	6-52	12
25	ಗುರು	ನವಮಿ	45-14	ಶತಭಿಷ	4-7	13

* ತಿಥಿದ್ವಯಂ. † ಸಂಕಷ್ಟಹರ ಚತುರ್ಥಿ, ಚತುರ್ಥಿ ತಿಥಿ, ಮಳೆ ನಕ್ಷತ್ರ—ಕೃತ್ತಿಕೆ 4 ನೇ ಪಾದ. ‡ ಪಂಚಮಿ ತಿಥಿ, ಮಾರಹಳ್ಳಿ ನೃಸಿಂಹಸ್ವಾಮಿ ರಥ, ಕಂಚಿ ವರದರಾಜಸ್ವಾಮಿ ರಥ. :: ಮೃತ್ಯುಯೋಗ. § ಮೇಲುಕೋಟೆಯಲ್ಲಿ ಕಲ್ಯಾಣೋತ್ಸವಾರಂಭ. ;; ಮಳೆ ನಕ್ಷತ್ರ—ರೋಹಿಣಿ 1 ನೇ ಪಾದ.

Printed and Published by the Rev. H. Gulliford Proprietor and Manager, Wesleyan Mission Press Mysore. 18/5/1916.

REGISTERED M. 90

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೯ ಮೈಸೂರು—ಸೆ ೧೯೧೭ ನೇ ಇಸವಿ ಮೇ ತಾರೀಖು ೨೪ ನೇ ಗುರುವಾರ. ಸಂಚಿಕೆ ೫೨

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವಾಯಿಂದ ಶೋಭಿತವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಅಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವ್!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಶೋಭಾ ಪ್ರದವೋ, ಹಾಗೆಯೇ ಮನಸಿನ ಚರಿತ್ರವನ್ನು ನಡಸುವ ಪುರುಷರಿಗೂ ಬುದ್ಧಿ



ಶಕ್ತಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ಹಚ್ಚಿದ ದಾಕ್ಷಣ್ಯ ತಲೇ, ಮಸ್ತಿಷ್ಕವು ಬೇಗೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ಹಚ್ಚಿಕೊಂಡಾಗಿದ ಬಳಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು ; ಅದರ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಅದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವುದು.

ಕೀರುಕವಾದ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನು ಹಳೆಯನ್ನು ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ “ಕಾಮಿನಿಯಾ ತೈಲ” ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ “ಸರ್ಟಿಫಿಕೇಟ್ ಆಫ್ ಮೆರಿಟ್” ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ನೈಸರ್ಗಿಕ ಉತ್ತಮೋತ್ತಮವಾದ ಪ್ರಮಾಣಪತ್ರಗಳೂ ದೊರಕಿವೆ.

ಅನ್ಯರಲ್ಲಿ ಒಂದನ್ನೇ ನೋಡಿರಿ: ನೇಗಿನಹಾಳಕರ ಬಂಧುಗಳು. ಬಸವನಕಲ್ಲು, ಬೆಳಗಾಂವ—ಖಾವು ಕೆಲ ತಿಂಗಳ ಹಿಂದೆ ಕಳುಹಿದ “ಕಾಮಿನಿಯಾ” ತೈಲವು ಕೂದಲುಗಳನ್ನು ಬೆಳೆಯಿಸುವಲ್ಲಿ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಅದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ಪ್ಯಾಲಿ ಮೂಲಕ ಕಳಿಸುವುದು. ಸೀಸೆಯೊಂದರ ಕ್ರಯ ರೂ. 1-0-0 ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ.—ಅನೇಕ ದುರ್ಬುದ್ಧಿಯುಳ್ಳ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಹೆಸರಿಯಿಂದ ಕಪಟ ನಕಲು ನಕಲಿಯೇ ದೊರಕುತ್ತದೆಂದು. ನೀವು “ಕಾಮಿನಿಯಾ ತೈಲ” ವನ್ನು ಕೇಳಿದರೆ, “ಇದು ಅದಕ್ಕಿಂತ ಉತ್ತಮವಾಗಿದ್ದು ಇದೆ” ಎಂದು ಅವರಿಗೆ ಬಹಳ ಲಾಭ ದೊರೆಯುವ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ “ಕಾಮಿನಿಯಾ ಓಯಿಲ್” ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳಿ ನಮ್ಮ ಮೊಹರು ಟ್ರಾಡ್ ಮಾರ್ಕ್ ನೋಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಅಸಲು ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಓಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ-ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ತಯಾರಿಸಿದ್ದು. ಇದರಲ್ಲಿ ಮದಿರೆಯು (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಎರಡು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ವಾತಾವರಣವು ಆವರಿಸಲ್ಪಡುವುದು. ಬೇರೆ ಯಾವ ಪರಿಮಳ ದ್ರವ್ಯಕ್ಕೂ ಹೀಗೆ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಒಂದು ಸೀಸೆಯನ್ನು ತರಿಸಿಕೊಳ್ಳಿರಿ. [34-16]

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ ರೂ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0. ಅಂಚೆಯ ಖರ್ಚು ಬೇರೆ ರೂ. 0-4-0. ಒಟ್ಟೊ-ದಿಲ್ ಬಹಾರ್ ಪರಿಮಳದ ಸಾಬೂನುಗಳ ಪೆಟ್ಟಿಗೆ ಒಂದಕ್ಕೆ 0-12-0.

ಹೀಗೆ ಕಂಡ ಎಲ್ಲಾ ಸುಗಂಧಗಳು ಸಿಕ್ಕುವ ಸ್ಥಳ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ನಂ. ಜುಮ್ಮ ಮಸೀದ್, ಮಾರ್ಕೆಟ್, ಬಾಂಬೆ.

ಏಜೆಂಟ್, ಪಿ ಆರ್ ಪಟೇಲ್, ಮಂಗಳೂರು.

ವ್ಯವಹಾರ ನಿರ್ಣಯ.

ಕ್ರಯ ದಾನ ಭೋಗ್ಯ ಮೊದಲಾದ ಎಲ್ಲಾ ತರದ ಲೇಖನ ಕ್ರಮಗಳನ್ನೂ, ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರಗಳ ರೀತಿಯನ್ನೂ ತಿಳಿಸುವ 615 ಪೇಜುಗಳುಳ್ಳ ದೊಡ್ಡ ಗ್ರಂಥ. ವಿ. ಪಿ. ಮೂಲಕ ಗ್ಲೇಜ್ ಪ್ರತಿಗೆ ರೂ. 2-8-0; ರಫ್ ಪ್ರತಿಗೆ ರೂ. 1-12-0. [168-49]

ವಿಳಾಸ—ಎಂ. ಎಂ. ಪಂಡಿತಾರಾಧ್ಯರು, ಮೈಸೂರು.

Look Sharp!! Look Sharp!!

MYSORE L. S. EXAMINATION, 1917.

Exhaustive notes in very simple style with numerous questions and summary on Granny's Wonderful Chair and the King of the Golden River, and also choise questions on General English by Mr. A. S. Rangasamiengar, B.A., Asst. Master, Maharani's College, Mysore. Price 6 As.

Apply to—The GENERAL AGENCY,

[113-2] MYSORE CITY.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 6,00,00,000

ಕಂಪನಿಯಿಂದ ಪಾವತಿ ಆಗಿರುವದು ,, 4,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್. ರೆಬಿಲ್ಲೋ, ಚೀಫ್ ಏಜೆಂಟ್, ಬೆಂಗಳೂರು ; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವಿ. ವೆಂಕಟೇಶರ್, ಟ್ರಾವೆಲಿಂಗ್ ಏಜಂಟ್, ಮೈಸೂರು; ಅಥವಾ

[222-32] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಅರೇಬಿಯನ್ ನೈಟ್ಸ್

ಎಂಬ

ಯವನ ಯಾಮಿನೀ ವಿನೋದ ಕಥೆಗಳು.

[ಕನ್ನಡದಲ್ಲಿ]

ಲೋಕಪ್ರಸಿದ್ಧವಾದ ಈ ಪುಸ್ತಕ ಮೊದಲನೇ ಮುದ್ರಣವು ಶೀಘ್ರದಲ್ಲಿಯೇ ಮುಗಿದುಹೋದುದರಿಂದ ಎರಡನೇ ಮುದ್ರಣವನ್ನು ತಯಾರಿಸಿರುತ್ತೇವೆ. ಇದರ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಮುಂತಾದ ಕೆಲಸಗಳು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಬಹು ಚಿತ್ತಾಕರ್ಷಕವಾಗಿ ಮಾಡಲ್ಪಟ್ಟಿರುವವು. ಈ ಎರಡನೇ ಮುದ್ರಣವನ್ನು ಘನ ಪಂಡಿತರು ಆಮೂಲಾಗ್ರವಾಗಿ ಪರಿಶೀಲನೆ ಮಾಡಿ ತಿದ್ದಿ ಸಂಪಾದಿಸಿರುತ್ತಾರೆ. ಇದರಲ್ಲಿನ ಕಥೆಗಳು ಬಹು ಮನೋರಂಜಕವಾಗಿಯೂ ಭಾಷೆಯು ಅತಿ ಲಲಿತವಾಗಿಯೂ ಇರುತ್ತವೆ. ಪುಸ್ತಕವು ನಾನೂರು ಪುಟಗಳಿಗಿಂತ ಹೆಚ್ಚಾಗಿರುತ್ತದೆ. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ತರಿಸಿಕೊಂಡರೆ ರೂ 2-4-0. ಜಾಗ್ರತ ನೋಡಿ. [239-40]

ವಿಳಾಸ—ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

1917 ನೆಯ ವರ್ಷದ

ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ನೋಟ್ಸು.

ಕ್ರಯ 8 ಆಣೆ

ಷರಾ :—ಕಾಗದದ ಬೆಲೆಯು ಬಹಳ ಹೆಚ್ಚಿರುವುದರಿಂದ ಈ ನೋಟ್ಸಿನ ಬೆಲೆಯು ಸ್ವಲ್ಪ ಹೆಚ್ಚಾಗಿದೆ.

ಏಷ್ಯಾಖಂಡದ ಭೂವಿವರಣೆ	 0-5-0
ಪ್ರಾಕೃತಿಕ ಭೂಗೋಳ ಶಾಸ್ತ್ರ	 0-6-0
2 ನೇ ತರಗತಿಯ ಭೂವಿವರಣೆ	 0-4-0
ಮಕ್ಕಳ ಭೂವಿವರಣೆ—1 ನೇ ಭಾಗ	 0-2-0
ಮೈಸೂರುದೇಶದ ಭೂಪಟ	 0-1-0

ಇಂಗ್ಲೀಷಿಯ 2 ನೆಯ ಪುಸ್ತಕದ ನೋಟ್ಸು 2½ ಆಣೆ ಮೆಕ್ಮಿಲನ್‌ರವರ 3 ನೆಯ ಪುಸ್ತಕದ ನೋಟ್ಸು 1½ ಆಣೆ. ಡಿಟೊ 4 ಪುಸ್ತಕದ ನೋಟ್ಸು 1½ ಆಣೆ. 5 ನೆಯ ಪುಸ್ತಕದ ನೋಟ್ಸು 4 ಆಣೆ. ನವಬಾಲವ್ಯಾಕರಣ (2 ನೇ ತರಗತಿ 1 ಆಣೆ. Full Notes on English L. S. Texts for 1917 by Mr. P. V. Kuppu Rao, B.A. Price 6 As.

ನಮ್ಮ ವಿಳಾಸ—ಎಚ್. ಆರ್. ವೆಂಕಟಸುಬ್ಬಾಚಾರ್ಯ,

[47-14] ಸುಬೋಧ ಗ್ರಂಥಾಲಯ, ಮೈಸೂರು.

ಶಾಲಾಪುಸ್ತಕಗಳು.

ಎಲ್ಲಾ ತರಗತಿಗಳಿಗೂ ಬೇಕಾದ ಇಂಗ್ಲೀಷು ಮತ್ತು ಕನ್ನಡ ಶಾಲಾಪುಸ್ತಕಗಳು ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುವವಲ್ಲದೆ ಸ್ಕೂಲ್ ಮಾಸ್ಟರುಗಳಿಗೂ ಮತ್ತು ವರ್ತಕರಿಗೂ ಮಾಮೂಲ್ ಮೇರೆಗೆ ಕಮಿಷನ್ ದೊರೆಯುವದು.

P. T. I. Book Depot, Bangalore City.

ಪಿ. ಟಿ. ಐ. ಬುಕ್ ಡಿಪೋ, 155, ಚಾಮರಾಜಪೇಟೆ,

[112-3] ನಾಲ್ಕನೆಯ ರಸ್ತೆ, ಬೆಂಗಳೂರು ಸಿಟಿ.

ಸಂಗೀತ ಪಾರಿಜಾತ

ಮೂರನೆಯ ಮುದ್ರಣ : ಸೀಸಪದ್ಯಗಳೂ ಕೀರ್ತನೆಗಳೂ ಮೊದಲಿಗಿಂತ ಹೆಚ್ಚಾಗಿವೆ. ಬೀಗರಹಾಡು ಆರತಿಯೆತ್ತುವ ಹಾಡು ಮುಂತಾದ ಅನೇಕ ಹಾಡುಗಳಿವೆ ಕ್ರಯ ೦-೪-೦ ನೂರು ಪ್ರತಿಗೆ ಕಡಿಮೆ ಇಲ್ಲದಂತೆ ತರಿಸಿಕೊಂಡರೆ ಧಾರಾಳವಾದ ಕಮಿಷನ್ ಕೊಡುವೆವು

ಶಬ್ದಾದರ್ಶ ನೋಟ್ಸ್.

ಲೋವರ್ ಸೆಕೆಂಡ್ರೀ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕವಾದುದು. ಕ್ರಯ ೦-೩-೦ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಸಿಗುತ್ತೆ.

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

[277-24] ಸ್ಟೂಡೆಂಟ್ಸ್ ಹಾಲ್, ಮೈಸೂರು.

ಬೇಗ ತರಿಸಿಕೊಳ್ಳಿರಿ! ದ್ವಿತೀಯ ಮುದ್ರಣ !!

೩೩೬ ಪುಟಗಳುಳ್ಳ ದೊಡ್ಡ ಪುಸ್ತಕ !!!

೧—೮—೦ ರೂ. ವೆಚ್ಚ ಮಾಡಿದರೆ ಸಾವಿರಾರು ರೂಪಾಯಿನ ಲಾಭ.

ರೋಗ, ಪೀಡೆ ಮುಂತಾದ ವಿಪತ್ಕಾಲದಲ್ಲಿ ವೈದ್ಯರು, ಮಾಂತ್ರಿಕರು ಮುಂತಾದವರಿಗಾಗಿ ಪ್ರತಿ ಕುಟುಂಬವೂ ನೂರಾರು ರೂಪಾಯಿಗಳನ್ನು ತೆತ್ತು ತೆತ್ತು, ನಿಷ್ಫಲವಾಗಿ ದುಃಖಪಡುತ್ತಿರುವಿಕೆಯನ್ನು ನಾವು ಪ್ರತ್ಯಕ್ಷವೂ ಕಾಣುತ್ತಿರುವೆವು. ಈ ಭಾಗದಲ್ಲಿ ಇದುವರೆಗೆ ನ್ಯಾಯವಾದ ಫಲಕಾರಿ ಪುಸ್ತಕಗಳ ಪ್ರಚಾರವುಂಟಾಗದೆ ಇರುವ ತ್ರುಟಿಯನ್ನು ನಿವಾರಿಸಿ ಜನರಿಗೆ ಈ ಭಾಗದಲ್ಲಿ ಉಂಟಾಗುವ ಅರ್ಥನಷ್ಟ, ಪ್ರಾಣನಷ್ಟ ಮುಂತಾದವನ್ನು ತಪ್ಪಿಸುವುದರಲ್ಲಿ ಹೇಗಿದ್ದರೂ ಒಂದ

ಹಿಂದು ಯುನಾನಿ ವೈದ್ಯ,

ಸುಗಂಧ ಬೋಧಕ

ವೆಂಬ ನಮ್ಮ ಪುಸ್ತಕದ ಮಹತ್ವವು ಈಗೀಗ ಅನೇಕರ ಅವಗಾಹನೆಗೆ ಬಂದಿದೆ. ಇದರಲ್ಲಿರುವ ಮಾತ್ರೆ, ಚೂರ್ಣ, ತೈಲ, ಭಸ್ಮ, ಸಿಂಧೂರ, ಲೇಹ್ಯ, ಯಂತ್ರ,

ಪರಬತ್ತು, ಮುರಬ್ಬಾ, ಪಿಕೀಜಿ ಮುಂತಾದ ಔಷಧಿಗಳೂ; ಅರಗದ, ಊದಬತ್ತಿ ಮುಂತಾದ ಸುಗಂಧದ್ರವ್ಯ ಕಲ್ಪನೆಯೂ ಮುಂತಾದವು ನ್ಯಾಯವಾದ ಶಾಸ್ತ್ರೀಯಗಳೂ, ಅನುಭವವೇದ್ಯಗಳೂ ಆಗಿರುವವಲ್ಲದೆ, ದ್ರವ್ಯಾಪಹಾರಕ್ಕಾಗಿ ಕಲ್ಪನೆಯಿಂದ ಬರೆದವುಗಳಲ್ಲ !!! ಇವುಗಳಿಂದ ನಮ್ಮ ದೇಶೀಯರಿಗೆ ಮಹದುಪಕಾರವಾಗುವದೆಂಬುದರಲ್ಲಿ ಅಡ್ಡಿಯುಂಟೆ? ಇದರ ಮೊದಲನೇ ಛಾಪೆಯ ಸಾವಿರಾರು ಪ್ರತಿಗಳು ಕೇವಲ ಅಲ್ಪಕಾಲದಲ್ಲಿಯೇ (ಕಲಾ ೧—೮—೦ ರೂಪಾಯಿಯಂತೆ) ಮಾರಾಟವಾಗಿ ಈ ೨ ನೇ ಛಾಪೆಗೆ ಅವಕಾಶವಿತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಈ ೨ ನೇ ಛಾಪೆಯಲ್ಲಿ ಮಹದುಪಕಾರಕಗಳಾದ ಅನೇಕ ವಿಷಯಗಳು ಮೊದಲಿಗಿಂತಲೂ ಅರ್ಧದಷ್ಟು ಹೆಚ್ಚಾಗಿ ಸೇರಿಸಿದ್ದರೂ ಮೊದಲಿನ ಕ್ರಯವಾದ ೧ ರೂ. ೮ ಆಣೆಗೆ ಮಾರಾಟ ಮಾಡುವದು ಈ ದೇಶೀಯರಲ್ಲಿರುವ ನಮ್ಮ ಹಾರ್ದಿಕ ವಿಶ್ವಾಸವನ್ನು ಪ್ರಕಟಿಗೊಳಿಸುವದು.

ಈ ಪುಸ್ತಕದ ೩ ಅಧ್ಯಾಯಗಳಲ್ಲಿ :—೧ ನೇ ಹಿಂದುವೈದ್ಯದ ಅಧ್ಯಾಯದಲ್ಲಿ—ರೋಗಗಳ ಉತ್ಪತ್ತಿ, ಲಕ್ಷಣ, ಅವುಗಳ ಪರಿಹಾರಾರ್ಥವಾಗಿ ಮಾಡತಕ್ಕ ಸಕಲ ಔಷಧಗಳ ವಿಧಾನ, ಮಾತ್ರೆಗಳು, ಚೂರ್ಣಗಳು, ಯಂತ್ರಗಳು, ಸಿಂಧೂರಗಳು, ಲೇಹಗಳು, ಘೃತಗಳು, ತೈಲಗಳು ಮುಂತಾದವುಗಳನ್ನು ಶಾಸ್ತ್ರೋಕ್ತವಾಗಿ ತಯಾರಿಸತಕ್ಕ ವಿವರಣೆ, ಅವುಗಳ ಅನುಪಾನ ಮತ್ತು ಸೇವನಾಕ್ರಮ ಮುಂತಾದವು ವಿವರಿಸಲ್ಪಟ್ಟಿವೆ. [110-3]

೨ ನೇ ಯುನಾನಿ ವೈದ್ಯದ ಅಧ್ಯಾಯದಲ್ಲಿ—ಬಾಲವೃದ್ಧ ಸ್ತ್ರೀಪುರುಷರಿಗೆ ಹಿತಕರವಾಗಿ ರುಚಿಯಾಗಿಯೂ ಗುಣವೂ ಉಳ್ಳ ಶರಬತ್, ಗುಲ್ಕನ್, ಮುರಬ್ಬಾ, ಪಿಕೀಜಿ, ಹಲ್ವಾ ಮುಂತಾದ ಯುನಾನಿ ವೈದ್ಯ ವಿಧಾನದಂತೆ ಸಕಲ ವಿಧ ಚಿಕಿತ್ಸೆಯೂ ಸಮರ್ಪಕವಾಗಿ ವಿವರಿಸಲ್ಪಟ್ಟಿರುತ್ತೆ.

೩ ನೇ ಸುಗಂಧದ ಅಧ್ಯಾಯದಲ್ಲಿ—ಜನಗಳಿಗೆ ಸುಲಭವಾಗಿ ಜೀವನಾಧಾರಗಲನುಕೂಲಿಸುವಂಥ ಊದುಬತ್ತಿ, ಅರಗಜ, ಗಂಧದಬಿಲ್ಲೆಗಳು ಮುಂತಾದ ಸುವಾಸನಾ ಪದಾರ್ಥಗಳನ್ನು ಶಾಸ್ತ್ರೋಕ್ತವಾಗಿ ಮಾಡತಕ್ಕ ವಿಧಾನವು ವಿವರಿಸಲ್ಪಟ್ಟಿದೆ. ಕ್ರಯ ಪುಸ್ತಕ ೧ ಕ್ಕೆ ೧-೮-೦.

ನಮ್ಮ ವಿಳಾಸ—ವೆಂಕಟೇಶವಿಲಾಸ ಬುಕ್ ಡಿಪೋ,

೫೮೨ ಬಳೇಪೇಟೆ, ಬೆಂಗಳೂರು ಸಿಟಿ,

ಖಾತ್ರಿಯಾದ ಗಡಿಯಾರಗಳು!

3 ವರ್ಷ ಗ್ಯಾರಂಟಿ!

1. ವಾರಕ್ಕೊಮ್ಮೆ ಕೀಲಿಗ ಕೊಡುವ ಅಂದವಾದ ಜೇಬು ಗಡಿಯಾರ. ರೂ. 8-8-0.



2. ನಿಕ್ಕಲ್ ಬೆಳ್ಳಿ ಕೈಬಳೆ ಕೇಸ್ ಜೇಬು ಗಡಿಯಾರ ರೂ.3-8-0

3. ಗಂಟೆ ಹೊಡೆಯುವ ಗೋಡೆಗೆ ತಗಲಿಸುವ 8 ದಿನದ ಅಫೀಸ್ ಗಡಿಯಾರ ರೂ. 7.

4. ಅರ್ಮೋನಿಯಾ ಬಟ್ಟಿಂಪೀಸ್ ರೂ 1-12 ಆಣೆ

5. ಅಸಲ್ ಭಂಗಾರದ ನಿಬ್ಬಿನ ಉತ್ತಮ ಫೌಂಟನ್ ಪೆನ್ನ 1-16-0.

6. ಇಂಗ್ಲೀಷ್, ಕನ್ನಡ, ತೆಲುಗು, ಅರವ ಭಾಷೆಗಳಲ್ಲಿ ಮುದ್ರಿಸುವ ರಬ್ಬರ್ ಸ್ಟಾಂಪು ಪೆಟ್ಟಿಗೆ, ಶಾಯಿ, ಪ್ಯಾಡ್ ಸಹ 1 ರೂ. 12 ಆಣೆ

ವಿಳಾಸ:—ಎ. ರಾವ್, 51, ಸ್ಟ್ರಿಂಗರ್ ಸ್ಟ್ರೀಟ್ ರೋಡ್, ಸಾಹುಕಾರ್ ಪೇಟೆ, ಮದ್ರಾಸು.

[87-2]

ಶ್ರೀಕರ ಕಸ್ತೂರಿಮಾತ್ರೆ

ಈ ಮಾತ್ರೆಗಳು 2-3 ನ್ನು ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸಿದರೆ ಬಾಯಿನಲ್ಲಿ ಸಹಜವಾದ ಕಸ್ತೂರಿ ವಾಸನೆಯೇ ಬರುತ್ತಿಯೇ ಹೊರತು ಮತ್ತಾವ ಕೃತಕ ಸುಗಂಧವೂ ಇಲ್ಲವೆಂಬುದನ್ನು ಪರೀಕ್ಷಿಸಿ ನೋಡಿರುವ ನಂತರ ಈಗ ಹೊಸದಾಗಿ ತಯಾರಾಗಿರುವ ಮಾತ್ರೆಗಳನ್ನು ಪರೀಕ್ಷಿಸಿ ತಿಳಿಯಿರಿ. ಈ ಮಾತ್ರೆಗಳು ಮಕ್ಕಳ ಜೀರ್ಣಕೋಶವನ್ನು ಸರಿಪಡಿಸಿ ಪಕ್ಕೆ ಸೆಳತ ಅಜೀರ್ಣ ವಾಯು, ಹೊಟ್ಟೆಯುಬ್ಬರ, ಮಂದಜ್ವರ, ನಿತ್ಯಜ್ವರ, ಅಜೀರ್ಣ ಭೇದಿ ಮುಂತಾದವನ್ನು ತಕ್ಷಣ ಗುಣಮಾಡುವುವು. ದೊಡ್ಡವರಿಗೆಲ್ಲಾ ಪ್ರಯಾಣಕಾಲದಲ್ಲೂ, ಸೀತಂಕು ರೋಗ ಕ್ಷಯದಲ್ಲಿ ನಾಶಿಸುವವರಿಗೂ ಅನುಕೂಲ. ಸರ್ವರಿಗೂ ನೆಗಡಿ, ಕೆಮ್ಮು, ವಿಷಮಜ್ವರ, ಶೀತವಾಯು, ನರದೌರ್ಬಲ್ಯ, ಹಲ್ಲು ನೋವು, ಮಲಬಂಧ, ಅರುಚಿ ಅಜೀರ್ಣ ಮುಂತಾದವನ್ನು ಶಾಶ್ವತ ಗುಣಮಾಡಿ ಸಾರ್ವದಾ ಆರೋಗ್ಯವನ್ನು ಚೆನ್ನಾಗಿ ಕಾಪಾಡುವುವು. ಸುಮಾರು 300 ಮಾತ್ರೆಯುಳ್ಳ ಸೀಸೆ 1 ಕ್ಕೆ 4 ಆಣೆ. ಐದಕ್ಕೆ ಒಂದು ಇನಾಮು. [278-24]

ಬಾಲಸಂಜೀವಿನಿ.

1-2 ವೇಳೆ ಮಾತ್ರ ಸುಲಭವಾಗಿ ಮಕ್ಕಳಿಗೆ ಭೇದಿ ಮಾಡಿಸಿ ಪಕ್ಕೆ ಸೆಳತ, ಮಂದಜ್ವರ, ಅಜೀರ್ಣ ವಾಯು, ಹೊಟ್ಟೆಯುಬ್ಬರಗಳನ್ನು ಬಹಳ ಗುಣಪಡಿಸುವ ಸಿದ್ಧಾಮೃತ. 60 ಮಾತ್ರೆಯ ಸೀಸೆಗೆ 4 ಆಣೆ. ಐದಕ್ಕೆ ಒಂದು ಇನಾಮು.

ಆಯುರ್ವೇದ ವಿದ್ವಾನ್ ಟಿ. ಪಿ. ಪಂಡಿತ್, ನಂಜನಗೂಡು.

ಆ ಕೆಮ್ಮಿನ ಹಿಂದೆ ಮರಣವು ಬೆನ್ನು ಕೊಂಡಿದೆ.

ಉತ್ತಮ ಔಷಧಗಳಿಂದಲೂ ಚಿಕಿತ್ಸೆಯಿಂದಲೂ ವಾಸಿಯಾಗದ ನಿಮ್ಮ ಪ್ರಾಣವನ್ನು ಸವೆಸುತ್ತಿರುವ ಕೆಮ್ಮು ನಿಮಗಿದೆಯೋ? ಹಾಗಿದ್ದರೆ ಒಂದು ವೇಳೆ ನಿರೀಕ್ಷೆ ಇಲ್ಲದವರಾಗಿದ್ದೀರಿ, ಅಂಥವರಿಗೆಲ್ಲಾ ಲಿಟಿಲ್ಸ್ ಓರಿಯೆಂಟಲ್ ಬಾಂ ಎಂಬುವನ್ನು ಉಪಯೋಗಿಸಬೇಕೆಂದು ಹೇಳುತ್ತೇವೆ.

ಉರಿಸ್ಸೆರ್ಪೆಟ್ಟಿನ ಇನ್ಸ್‌ಪೆಕ್ಟರ ಮಿ॥ ಎ. ಡಿ. ಸ್ಟ್ರೆಜೆಲ್ ಯವರು ಹೇಳುವದು:—"2 ವರುಷಗಳಿಂದ ನನಗೆ ಸದಾ ಬಿಡದಿರುವ ಒಣಕೆಮ್ಮು ಆದರೊಂದಿಗೆ ಕುತ್ತಿಗೆಯಲ್ಲಿ ಕಟ್ಟಿಕೊಂಡಿಸಿಕೊಂಡು ಇರುಟಾಗಿ ರಾತ್ರಿಯಲ್ಲಾ ನಿದ್ದೇ ಇರುತ್ತಿದ್ದಿಲ್ಲವೆ, ಮನೆಯವರೆಲ್ಲರಿಗೂ ತೊಂದರೆಯನ್ನುಂಟು ಮಾಡುತ್ತಿತ್ತು. ಕೆಮ್ಮಿನ ಔಷಧಗಳನೇಕ ಉಪಯೋಗಿಸಲು, ತತ್ಕಾಲದ ಪ್ರಯೋಜನವೇ ಹೊರತು ಬೇರೆ ಪ್ರಯೋಜನವಾಗಲಿಲ್ಲ. ಕಡೆಗೆ ಲಿಟಿಲ್ಸ್ ಓರಿಯೆಂಟಲ್ ಬಾಂ ಎಂಬುವನ್ನು ಉಪಯೋಗಿಸಲು ಮನಸ್ಸು ಮಾಡಿದೆನು. ಅರ್ಧ ಸೀಸೆ ಉಪಯೋಗಿಸುವಷ್ಟರಲ್ಲಿಯೇ ಮೊದಲನೇ ಇಡೀ ರಾತ್ರಿಯ ನಿದ್ರೆಯಾಯಿತು, ಹಾಗೆಯೇ ಪೂರ್ಣ ವಾಸಿಯೂ ಆಯಿತು."

ಸೀಸೆ 1ಕ್ಕೆ 1 ರೂ. ಬೇರೆಗೆ ಎಲ್ಲಾ ಔಷಧಗಾರರಲ್ಲಿಯೂ ಸಿಗುತ್ತೆ.

[116-3]

ದೇಶ ಹೋಗಬೇಡಿ. ಕ್ಯಾಟಲಾಗ್ ಇನಾಮ. ಲಾಭವನ್ನು ಬಿಡಬೇಡಿರಿ.

ಕಾಶೀ ಪಟ್ಟು ಪೀತಾಂಬರ

ಕಾಶಿಯಲ್ಲಿ ನಮ್ಮಲ್ಲಿ ಅನೇಕ ಚಿಲ್ಲರೆ ವ್ಯಾಪಾರಿಗಳು ಸಾಮಾನುಗಳನ್ನು ತೆಗೆದುಕೊಂಡು ದೊಡ್ಡದಾಗಿ ಉತ್ಪತ್ತಿ ಮಾಡಿ ಬಹಳ ಹೆಚ್ಚು ಬೆಲೆಗೆ ಮಾರುತ್ತಾ ಇರುತ್ತಾರೆ. ಇನ್ನು ಮೇಲಾದರೂ ನಮ್ಮಲ್ಲಿ ತಯಾರಾಗುವ ಜರಿಗೆ ಶಿರೆ, ಕಣ, ಕಾಸ್ಟ್ರೆಟ್ ಶಾಲು, ದುಪ್ಪಟ್ಟ, ಶಾಲು ರುಮಾಲು, ಬಟ್ಟಿನ, ಜರಿಗೆ ಚಿಕ್ಕ ತಾನು ಚೀಟಿಗಳು ಬಹಳ ಸುಲಭ ಕ್ರಯಕ್ಕೆ ತೆಗೆದು ಲಾಭವನ್ನು ಹೊಂದಬೇಕಾಗಿ ಕೋರುತ್ತೇವೆ. ಇಂಗ್ಲೀಷಿನಲ್ಲೇ ಕಾಗದ ಬರೆಯಿರಿ.

[83-8] ನಮ್ಮ ವಿಳಾಸ—ವಿ. ಆರ್. ಕಂಪನಿ, ಕಾಶಿ

1,000 ರೂಪಾಯಿ ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ (ರಿಜಿಸ್ಟರ್) ಮುರಬ್ಬ.

ಈ ಸಾಲಾಮಿಸ್ರಿ ಮುರಬ್ಬವು ಶಕ್ತಿಯನ್ನು ಹೆಚ್ಚಿಸಿ ದೇಹಶಕ್ತಿಯನ್ನು ಕೊಡುವುದರಲ್ಲಿ ಪ್ರಖ್ಯಾತಿಹೊಂದಿರುವದು. ನಾಗರ ಬಲಹೀನತೆಯನ್ನು ಹೋಗಲಾಡಿಸಿ ದೇಹಕ್ಕೆ ಶಕ್ತಿಯನ್ನು ಕೊಡುವುದರಲ್ಲಿ ಈ ಸಾಲಾಮಿಸ್ರಿ ಮುರಬ್ಬಕ್ಕೆ ಸಮಾನವಾದದು ಬೇರೊಂದಿಲ್ಲ.

ಕ್ರಯ ಡಬ್ಬಿ 1 ಕ್ಕೆ ರೂ. 2-0-0 ಟಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳಿಗೆ 0-6-0.

ಇದರ ಪೂರಾ ಕ್ಯಾಟಲಾಗು ಅಪೇಕ್ಷಿಸುವವರು 6 ಕಾಸಿನ ಸ್ಟಾಂಪನ್ನು ಕಳುಹಿಸಿರಿ. [106-5]

ವಿಳಾಸ— ಡಿ. ಮನ್ನಾಲಾಲ್, ಡಿಲ್ಲಿ ವೈದ್ಯ.

ರಾಂಪ್ರಸಾದ್ ಮಿಠಾಯಿ ಅಂಗಡಿ ಎದುರು,

ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತರಿಸಿ ನೋಡಿರಿ.

1 ಸುಧಾಕರ ಕಸ್ತೂರಿ ಮಾತ್ರೆಗಳು—ಜ್ವರ, ಅಗ್ನಿಮಾಂದ್ಯ, ಕೆಮ್ಮು, ನೆಗಡಿ, ಅತಿಸಾರ, ದೇಶ ಕಾಲ ವ್ಯತ್ಯಾಸಗಳಿಂದುಂಟಾಗುವ ವಿಕಾರಗಳು, ಮಕ್ಕಳ ಎಲವು, ಮಲಬದ್ಧ, ಇವುಗಳನ್ನು ಗುಣಪಡಿಸುತ್ತದೆ. ಬುಡ್ಡಿ 1 ಕ್ಕೆ 4 ಆಣೆ ಮಾತ್ರ. 6 ಸೀಸೆಗಳಿಗೆ ರೂ 1-4-0. ಟಪಾಲು ಹಾಸಲು ಪ್ರತ್ಯೇಕ.

2 ಕಮಲಕೇಶರ ಘೃತ.—ತಲೆನೋವು ಮೊದಲಾದ ಎಲ್ಲಾ ಶಿರದ ರೋಗಗಳನ್ನು ಗುಣಪಡಿಸುವುದು. ಬುಡ್ಡಿ 1 ಕ್ಕೆ 3 ಆಣೆ ಮಾತ್ರ.

3 ವಜ್ರದಂತಚೂರ್ಣ—ಇದನ್ನು ಪ್ರತಿ ದಿನವೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವುದರಿಂದ ಎಲ್ಲಾ ವಿಧವಾದ ದಂತ ರೋಗಗಳೂ ನಿಶ್ಶೇಷವಾಗಿ ಹೋಗಿ ಹಲ್ಲುಗಳು ಮುತ್ತುಗಳಂತೆ ಥಳಥಳಿಸುವುವು. ಟಿನ್ 1 ಕ್ಕೆ 2 ಆಣೆ ಮಾತ್ರ.

[71-11] ನಮ್ಮ ವಿಳಾಸ:—ಬಿ. ಎಸ್. ಕೌಶಿಕ, 240, ದಿವಾನರ ರೋಡು, ಮೈಸೂರು.

ಕರ್ಣಿಕ ಎಗ್ಯೂ ಮಿಕ್ಶ್ಚರ್

ಎಲ್ಲಾ ಜ್ವರಗಳಿಗೂ ಹಿತವಾದ ಔಷಧ.

ಮಲೇರಿಯಾ ಮೊದಲಾದ ಎಲ್ಲಾ ಜಾತಿಯ ಜ್ವರಗಳಿಗೂ ಇದಕ್ಕೆ ಸಮಾನವಾದ ಔಷಧ ಬೇರೊಂದಿಲ್ಲ. ಎರಡು ಮೂರು ಹೊತ್ತು ತೆಗೆದುಕೊಳ್ಳುವುದರಲ್ಲೇ ಜ್ವರಗಳನ್ನು ಪರಿಹರಿಸುತ್ತದೆ. ಪರೀಕ್ಷಿಸಿ ನೋಡಿ ಎಂದು ಪ್ರಾರ್ಥಿಸುತ್ತೇವೆ. [213-32]

ಕ್ರಯ 0-10-0 ; ಪೋಸ್ಟೇಜ್ 0-4-0.

ಏಜಂಟರು ಬೇಕು.—ವ್ಯಾಪಾರಿಗಳಿಗೆ ತುಂಬಾ ಸುಲಭವೂ ಲಾಭವೂ ಆದ ಷರತ್ತುಗಳು. ಬೇಗ ಬರೆದು ಕೇಳಿ.

ನಮ್ಮ ವಿಳಾಸ.—ಕರ್ಣಿಕ ಬ್ರದರ್ಸ್,

ಎಗ್ಯೂ ಮಿಕ್ಶ್ಚರ್ ಡಿಪೋ, ಬೊಂಬಾಯಿ, 4.

KARNIK Bros., BOMBAY, 4.

ನಮ್ಮ ಏಜಂಟರು.—ದಿ ಉರ್ಲ್ ಮಾರ್ಟ್, ಮಂಗಳೂರು.

ಪೊಳ್ಳಿದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮೃತ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ.—ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತವೆ.

ಹಿಂದೂದೇಶದ ಎಲ್ಲಾ ಭಾಗಗಳಲ್ಲಿಯೂ, ಬರ್ಮಾ, ಸಿಲೋನ್, ಮಲೇಯ ಸ್ಟೇಟ್, ಗೋವಾ, ಫಿಜಿ ಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಔಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾ ಭಾಗ್ಯ ಒಂದೇ ಒಂದು ಲೋಕಾಮೃತ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಬಹು ನಾನಾಗೀ ವೈದ್ಯರ ಸಹಾಯವನ್ನು ಕಾದು ನೋಡಬೇಕಾದದ್ದು ನಿಜವಾಗಿಯೂ ತಪ್ಪುವದು.—ಶೀತ, ಶೀತವಾಯು, ಅಜೀರ್ಣ, ಸಾರ್ವದಾ ಜ್ವರ, ನಂಜು, ಮಲಬದ್ಧ, ಕೆಮ್ಮು, ಗುಲ್ಮ, ಬಲಹೀನತೆ, ಹೊಟ್ಟೆ ಹುವಾ, ಮತ್ತು ಶೀತದಿಂದ ಶರೀರದಲ್ಲುಂಟಾಗುವ ವಿಕಾರ, ಮಕ್ಕಳ ಎಲವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಅದ್ಭುತವಾಗಿ ಗುಣಪಡಿಸುತ್ತದೆ. ಇದರಿಂದಾದ ನಮ್ಮ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವವನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನಪತ್ರಿಕೆ ಪ್ರತಿ ಸೀಸೆಯೊಂದಿಗೆ ಕೊಡಲ್ಪಡುವುದು. 360 ಮಾತ್ರೆಗಳುಳ್ಳ ಸೀಸೆಗೆ 4 ಆಣೆ ಮಾತ್ರ. 6 ಸೀಸೆಗಳನ್ನು ಒಂದೇ ಸಲ ತರಿಸಿದರೆ ಟಪಾಲ್ ಖರ್ಚು ಸೇರಿ ರೂ. 1-8-0, 12 ಸೀಸೆಗಳಿಗೆ ರೂ 2-12-0; 25 ಸೀಸೆಗಳಿಗೆ ರೂ. 6-0-0.

ಯೋಗ್ಯತಾ ಪತ್ರಗಳು.

(1) ಡಾಕ್ಟರ್ ಪ್ರಭಾಕರ್, ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಲ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು, ಯುನೈಟೆಡ್ ಸ್ಟೇಟ್ ಆಫ್ ಅಮೇರಿಕ ಎಲ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್, ಕನ್‌ಸಲ್ಟಿಂಗ್ ಕೆಮಿಸ್ಟ್, ಎಡಿಯಾಟರ್ ನಂ 2, ಬೊಂಬಾಯಿ, ಇವರು ಬರೆಯುವುದು—ನಾನು ಲೋಕಾಮೃತ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಕ್ರಮವಾಗಿ ವಾಸಿಯಾಗಿ ಶ್ವಾಸೋಚ್ಛ್ವಾಸದ ರೋಗಗಳು, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು, ದಿನಕಳೆಯುವ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಲವು ವಾಯುಗಳಲ್ಲಿಯೂ ಗುಣವಾಗಿರುತ್ತದೆ. ಕಮ್ಮಿಗೆ ಪ್ರತಿಕ್ಷಣವೂ ಬರುವ ರೋಗಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಕ್ರಮೇಣ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸು ಮಾಡುತ್ತೇನೆ." (2) ಮ॥ ಶ್ರೀ ಎಸ್. ಅಪ್ಪಾಜಿರಾವ್, ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್, ಇವರು ಬರೆದಿರುವುದು—"ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರಿನ್ಸಿಪಲ್‌ರವರಾದ ಪೊಳ್ಳಿದ ವೆಂಕಟಾಚಲ ಪಂಡಿತರವರಿಂದ ತಯಾರಿಸಲ್ಪಡುವ ಲೋಕಾಮೃತ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಪಡುತ್ತೇನೆ. ಈ ವೈದ್ಯಶಾಲೆಯಲ್ಲಿ ಅನೇಕ ತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧಗಳನ್ನು ತಯಾರಿಸುತ್ತಾರೆ."

[189-37] ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳಿಗೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ಚೆನ್ನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. (1) ಇದು ಶಕ್ತಿಯನ್ನು ವೃದ್ಧಿ ಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು. (2) ಊಟವಾದನಂತರ ಅಥವಾ ತಾಂಬೂಲವನ್ನು ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಉಪಯೋಗಿಸುತ್ತಾ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ ಕಾಲ ಪ್ರವೃತ್ತಿಯು ಕ್ರಮವಾಗಿ ಜರುಗುತ್ತ ಯಾವ ರೋಗಕ್ಕೂ ಅಸ್ಪದವುಂಟಾಗುವುದಿಲ್ಲವು. (3) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುವುದು. ಸುವಾಸನೆಯನ್ನು ಕೊಡುವುದು, ಕೆಮ್ಮುಗಳನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛ ಗೊಳಿಸುವುದು. (4) ತಾಪ ಶಕ್ತಿಯವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲಾ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುತ್ತವೆ. (5) ಬೇಸಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲಾ ತರದ ರೋಗವನ್ನೂ ನಿವಾರಣೆ ಮಾಡುವುದು. (6) ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು. ಇದಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ. [32-16]

45 ಮಾತ್ರೆಗಳ ಪೊಟ್ಟಣ 1 ಕ್ಕೆ 2 ಆಣೆ	200 ಮಾತ್ರೆಗಳ ಪೊಟ್ಟಣ 1 ಕ್ಕೆ 7 ಆಣೆ	100 ಮಾತ್ರೆಗಳ ಸೀಸೆ 1ಕ್ಕೆ 4½ ಆಣೆ	650 ಮಾತ್ರೆಗಳ ಪೆಟ್ಟಿಗೆ 1 ಕ್ಕೆ 1 ರೂ.
95 „ „ „ 4 „	200 „ ಟಿನ್ „ 9 „	80 „ „ „ 4 „	1200 „ „ „ 3 „

1. ರೂಪಾಯಿಗೆ ಕಡಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

ಪ್ರಖ್ಯಾತಿಪಡೆದ ವರ್ತಕರೆಲ್ಲಾ ಮಾರುತ್ತಾರೆ. ವಿಳಾಸಗಳು.—

ಸೋಲ್ ಏಜೆಂಟರು—ಸೆಶಿಂತಾನ್ ಡಿಪೋ, ಕಾಲ್ಬಾದೇವಿ ರೋಡ್ ಬೊಂಬಾಯಿ, ೨. ಬೆಂಗಳೂರು ಸಿಟಿ ಚಿಕ್ಕಪೇಟೆ ಎಸ್. ಸುಬ್ಬರಾವ್ ಬ್ರದರ್ಸ್ ಯವರ ಕಂಪನಿಯಲ್ಲಿ ವಿಕರಿಗೆ ಇಡಲಾಗಿದೆ. ನಮ್ಮ ದಕ್ಷಿಣ ಕನಡಾ ಏಜೆಂಟರು—ದಿ ಉರ್ಲ್ ಮಾರ್ಟ್, ಮಂಗಳೂರು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ ! ಕಲೆಯಿಲ್ಲ !! ಉರಿಯಿಲ್ಲ !!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಒಪ್ಪಿದಾರೆ.

ಸ್ವಲ್ಪ ಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಕ್ಷಣವೇ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ವಿವಿಧ ಸಾಬೂನುಗಳುಳ್ಳ ಪೆಟ್ಟಿಗೆ 0-11-0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1-10-0. ಟಪಾಲು ಹಾಸಲು ಬೇರೆ ಬೀಳುವದು. ವ್ಯಾಪಾರಕ್ಕಾಗಿ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ. ಬೇಗನೆ ತರಿಸಿಕೊಳ್ಳಿ.

ನಮ್ಮ ವಿಳಾಸ—ವಿ. ಎ. ಎಸ್. ಪಾಣಿ,

[63-12] 3, ಅರುಣಾಚಲಪ್ಪನ ಬೀದಿ, ಮದ್ರಾಸು.

"ಹನುಮಾರ್ಕ್" ಬೋರಾಕ್ಸ್ ಸಾಬೂನು.

ಹನುಮಾರ್ಕ್ ಬೋರಾಕ್ಸ್ ಸಾಬೂನು ಲೋಕಪ್ರಸಿದ್ಧವಾದದ್ದು. ಇದರಲ್ಲಿ ಸಂಜೀವಿನಿಗೆ ಸಮಾನವಾದ ವಸ್ತುಗಳು ಸೇರಿವೆ. ಚರ್ಮ ಸಂಬಂಧವಾದ ತುರಿಕೆ, ಹುಣ್ಣು, ತುರಿ ಮೊದಲಾದ ವ್ಯಾಧಿಗಳು ಹನುಮಾರ್ಕ್ ಸಾಬೂನನ್ನು ಪ್ರತಿ ದಿನವೂ ಉಪಯೋಗಿಸುವುದರಿಂದ ಆಶ್ಚರ್ಯಕರವಾಗಿ ವಾಸಿಯಾಗುವವು. ತಲೆಗೆ ಸುವಾಸನೆ ಮತ್ತು ಕಳೆಯನ್ನು ಕೊಡುವುದರಲ್ಲಿ ಹನುಮಾರ್ಕ್ ಸಾಬೂನಿಗೆ ಸಮಾನವಾದದ್ದು ಯಾವ ಸಾಬೂನೂ ಇಲ್ಲ.—ಪ್ರತಿ ದಿನವೂ ಹನುಮಾರ್ಕ್ ಸಾಬೂನಿನಿಂದ ಬೆಳಿಗ್ಗೆ ಸಾಯಂಕಾಲ ಮುಖಕ್ಕೆ ಹಾಕಿಕೊಳ್ಳುವುದರಿಂದ ಮುಖಕ್ಕೆ ಸೌಂದರ್ಯವನ್ನೂ ತೇಜಸ್ಸನ್ನೂ ಕೊಟ್ಟು, ಮನಸ್ಸಿಗೆ ಹರ್ಷವನ್ನುಂಟು ಮಾಡುತ್ತೆ. ಸ್ನಾನ ಮಾಡಿಸಿಕೊಳ್ಳುವಾಗ ಈ ಸಾಬೂನನ್ನು ತಲೆಗೆ ಹಾಕಿಕೊಳ್ಳುವುದರಿಂದ ತಲೆಗೆ ತಂಪನ್ನು ಕೊಡುವುದರಲ್ಲಿ ಈ ಸಾಬೂನು ವಿನಹಾ ಯಾವ ಸಾಬೂನೂ ಇಲ್ಲ.—ಹುಡುಗರು, ಹುಡುಗಿಯರು, ಯೌವನಸ್ಥರು ಮತ್ತು ವೃದ್ಧರು ಬೇಧವಿಲ್ಲದಂತೆ ಸರ್ವಕಾಲದಲ್ಲಿಯೂ ಈ ಸಾಬೂನನ್ನು ಉಪಯೋಗಿಸಬಹುದು.—ಒಂದು ಸಲ ಹನುಮಾರ್ಕ್ ಸಾಬೂನನ್ನು ಉಪಯೋಗಿಸಿದ ಮೇಲೆ ನೀವು ಬೇರೆ ಸಾಬೂನನ್ನು ಅಪೇಕ್ಷಿಸುವುದಿಲ್ಲವೆಂದು ಖಂಡಿತವಾಗಿ ನಂಬಿರಿ.—ನಮ್ಮ ದೇಶದಲ್ಲಿ ಅನೇಕ ಪಟ್ಟಣಗಳಲ್ಲಿಯೂ, ಪಹಣಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ಚಿಕ್ಕ ಊರುಗಳಲ್ಲಿಯೂ ದೊರೆಯುತ್ತೆ.—ಪ್ರತಿ ಒಂದು ಸಾಬೂನು ಬಿಲ್ಲೆಯ ಮೇಲೆ ಹನುಮಾರ್ಕ್ ಗುರುತು ಇರುವುದನ್ನು ನೋಡಿ ಜಾಗರೂಕತೆಯಿಂದ ಕೊಂಡುಕೊಳ್ಳಿ.

ಸೂಚನೆ.—ಎಲ್ಲರೂ ನಮಗೆ ಇಂಗ್ಲೀಷಿನಲ್ಲೇ ಕಾಗದ ಬರೆಯಬೇಕು.

ಬೆಂಗಳೂರು ಸಿಟಿ ಎಂ. ಎನ್. ದಾಸಪ್ಪನವರಲ್ಲೂ ಬಿಕರಿಗೆ ಇಟ್ಟಿದೇವೆ.

ನಮ್ಮ ವಿಳಾಸ.—ಎಸ್. ರಂಗನಾಥಶೆಟ್ಟಿ ಅಂಡ್ ಬ್ರದರ್ಸ್,

[211-12] ಕೂನಿಂಗ್ ಬಜಾರ್ ರೋಡ್, ಮದರಾಸು.

ದೊಡ್ಡಬಳ್ಳಾಪುರದ ಮುನ್ಸಿಫ್ ಕೋರ್ಟಿನಲ್ಲಿ.

1915-16 ನೇ ಸ್ಮಾಲ್‌ಕಾಜು ನಂಬರ್—150.

ವಾದಿ.—ಗೋರಿಬಿದನೂರು ತಾಲ್ಲೂಕು ಹೊಸೂರು ಹೋಬಳಿ ಕೆಂಕೆರೆ ಲಿರುವ ದೇವಾಂಗ ವ್ಯಾಪಾರಮಾಡುವ ಚಿಕ್ಕ ಹಳ್ಳಪ್ಪನ ಮಗ ಮಲ್ಲಪ್ಪ.

ಪ್ರತಿವಾದಿ.—ಗೋರಿಬಿದನೂರಲ್ಲಿರುವ ಹೆಡ್ ಗುಮಾಸ್ತೆ ರಾಮಸ್ವಾಮಯ್ಯಂಗಾರ್.

ಇದರಿಂದ ಪ್ರತಿವಾದಿಗೆ ತಿಳಿಯಪಡಿಸುವದೇನೆಂದರೆ—

ಈ ನೆಂಬರ ನಂಯಲ್ಲಿ ವಾದಿಯು ನಿಮ್ಮ ಮೇಲೆ ರೂ. 16-8-0 ಗಳಿಗೆ ದಾವಾ ಮಾಡಿರುತ್ತಾರೆ. ಇದು ಫೈನಲ್ ಹಿಯರಿಂಗ್ ಬಗ್ಗೆ ತಾ. 8-6-1916 ಕ್ಕೆ ಹಿಯರಿಂಗ್ ಇರುವುದು ಇದರಿಂದ ತಿಳಿಯಪಡಿಸಿರುತ್ತೆ.

ಈ ದಿನ ಕೋರ್ಟಿನ ಮೊಹರ ಸಹಿ ನಮ್ಮ ದಸ್ತಕತ್ತಿನೊಡನೆ ಕೊಟ್ಟಿರುತ್ತೆ. ತಾ. 19 ನೇ ಮೇ 1916 ನೇ ಇಸವಿ.

(By order)

127-1 V. N. SHUNMUGAM, Head Munshi.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ. ಹೊಸ ನಮೂನೆ ಗಡಿಯಾರ.

"ಸ್ವಿಸ್ ಪಾಕೆಟ್ ವಾಚ್."

ಸರಪಣಿ ಸಹಿತ ಕ್ರಯ ರೂ. 3-0-0.

ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಮಾರಾಗಿ ಇರುತ್ತವೆ. ಇದು ನೋಡುವದಕ್ಕೆ ರಮಣೀಯವಾಗಿಯೂ ಜೇಬಿನಲ್ಲಿ ಇಡುವದಕ್ಕೆ ಅಡಕವಾಗಿ ಇದೆ. ಗಂಟೆ ತೋರಿಸುವದರಲ್ಲಿ 1 ನಿಮಿಷವಾದರೂ ಹೆಚ್ಚುಕಮ್ಮಿಯಿಲ್ಲದೆ ನಡೆಯುತ್ತದೆ. "ಸ್ವಿಸ್ ಪಾಕೆಟ್ ವಾಚ್" ಎಂಬುವದು ಗುರುತು ನೋಡಿ ಪಡಕೊಳ್ಳಿರಿ. ಜಾಗ್ರತೆ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವದು.

ವಿಳಾಸ. ವೈಯಲಕ್ಷ್ಮಿ ಅಂಡ್ ಕಂಪೆನಿ,

[63-12] 3, ಅರುಣಾಚಲಪ್ಪನ ಬೀದಿ, ಮದರಾಸು.

ಹೊಸ ನಮೂನೆ

ಫೌನ್‌ಟನ್ ಪೇನಾಗಳು.

ವೈಯಲಕ್ಷ್ಮಿ

ಫೌನ್‌ಟನ್ ಪೇನಾ.

ಈ ನಕ್ಷೆಯಲ್ಲಿ ತೋರಿಸಿರುವ ಹೊಸ ನಮೂನೆ ಫೌಂಟನ್ ಪೇನವನ್ನು ಇಂಗ್ಲಾಂಡಿನಲ್ಲಿ ಪ್ರಖ್ಯಾತಿ ಹೊಂದಿದ ಕಂಪೆನಿಯಿಂದ ತರಿಸಿರುತ್ತೇವೆ. ಪೆನ್ನಿನ ಮೇಲೆ ನಮ್ಮ ಕಂಪೆನಿ ಹೆಸರು ಗಿಲೀಟು ಅಕ್ಷರಗಳಿಂದ ಹಾಕಿ ತಯಾರಿಸಿರುತ್ತೆ. ಇದಕ್ಕೆ ಒಂದು ಸಾರಿ ಇಂಕಿಯನ್ನು ಹಾಕಿದರೆ ಅನೇಕ ದಿವಸಗಳು ಬರೆಯಬಹುದು. ಈ ಪೇನಾ ನಮಗಾಗಿ ಪ್ರತ್ಯೇಕ ಸೀಮೆಯಿಂದ ತಯಾರಿಸಿ ಕಳುಹಿಸಿರುತ್ತಾರೆ. ಕ್ಯಾಪಿನ ಚಿನ್ನದ ಪಟ್ಟಿಯು ಇರುವದು. ಇದು ನೋಡುವದಕ್ಕೆ ಮನೋಹರವಾಗಿಯೂ, ಬರೆಯುವದಕ್ಕೆ ಬಹು ಸುಲಭವಾಗಿಯೂ ಇರುತ್ತೆ. ಇದನ್ನು ಒಂದು ಸಲ ಉಪಯೋಗಿಸಿದವರು ಬೇರೆ ಯಾವ ಪೇನಾವನ್ನೂ ಉಪಯೋಗಿಸರು. ಕ್ರಯ 1 ಕ್ಕೆ 0-8-0.

[63-12]

ವಿಳಾಸ. ವೈಯಲಕ್ಷ್ಮಿ ಅಂಡ್ ಕಂಪೆನಿ,

3, ಅರುಣಾಚಲಪ್ಪನ ಬೀದಿ, ಮದರಾಸು.

ಜ್ವರಾರಿ ಕಂಪೆನಿಯವರ

ಸ್ಪೀಸ್ ಸ್ಪೆಸಿಫಿಕ್ (ಜ್ವರಗಡ್ಡೆ ಔಷಧ).

ಎಷ್ಟು ಕಾಲದಿಂದಿರುವ ಯಾವ ತರಹದ ಜ್ವರಗಡ್ಡೆ ಮತ್ತು ಇತರ ಪ್ಲೀಹ ಸಂಬಂಧ ರೋಗಗಳ ಮೇಲೆ ಅತ್ಯುತ್ತಮ ಗುಣ ಕೊಡುತ್ತೆ. ಎಂಥಾ ಕಠಿಣ ರೋಗಿಗಳಾದರೂ ಸುಲಭದಲ್ಲಿ ಶಾಸ್ತ್ರತಯಿಂದ ವಾಸಿ ಮಾಡಿಕೊಳ್ಳಬಹುದು. ಶೀಸೆ 1 ಕ್ಕೆ ಕ್ರಯ 2-0-0.

ಕಾಲು ಪಡಕೆದ ಎಂಣೆ.

ದನಕರುಗಳಿಗೆ ಬರತಕ್ಕ ಕಾಲು ಬಾಯಿಜ್ವರ (ಕಾಲು ಪಡಕೆ) ಎಂಬ ಕಾಯಿಲೆ ಮೇಲೆ ಅತ್ಯುತ್ತಮ ಔಷಧ. ಇದನ್ನು ಒಮ್ಮೆ ಉಪಯೋಗಿಸಿದ ನಂತರ ಎಂದೆಂದಿಗೂ ಕಾಯಿಲೆ ಇರಲಾರದು. ಬಾತ್‌ಇನಾಮುದಾರರ ಮೈ ಮೇಲಿನ ಹುಣ್ಣುಗಳಲ್ಲಿ ಹುಳುವಾಗುವದು ಹುಳು ಇವುಗಳಿಗೆ ಚೆನ್ನಾಗಿ ಉಪಯೋಗವಾಗುತ್ತೆ. ದೊಡ್ಡ ಶೀಸೆ 1 ಕ್ಕೆ ರೂ. 1-0-0 ಸಣ್ಣ ಶೀಸೆ 1 ಕ್ಕೆ 0-12-0.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

[122-1] ಜ್ವರಾರಿ ಕಂಪೆನಿ, ತೀರ್ಥಹಳ್ಳಿ.

ಅರ್ಧಬೆಲೆ! ಒಂದು ತಿಂಗಳು ಮಾತ್ರ!

ನಮ್ಮ ಕ್ಲಾಕ್ ರೆಗ್ಯುಲೇಟರ್ ವಾಚ್ ಸರ್ಟೀಫಿಕೇಟುವಾದ ಕಾಲವನ್ನು ತೋರಿಸತಕ್ಕದ್ದು ದೊಡ್ಡ ಮನುಷ್ಯರಿಗೆ ಲಾಯಕಾಗಿದೆ. 3 ವರುಷದ ಜಾಮೀನ್ ಕೊಡುವೆವು.



ಕ್ರಯ ರೂ. 7-14-0; ರೂ. 9-14-0. ಈಗ ನಾವು ಇಟ್ಟಿರುವ ಕ್ರಯ ರೂ. 3-15-0; ರೂ. 4-15-0. ಉತ್ತಮವಾದ ಕೈಗೆ ಕಟ್ಟಿಕೊಳ್ಳುವ ಗಡಿಯಾರ ಚರ್ಮದ ಪಟ್ಟಿ ಸಮೇತ ಕ್ರಯ ರೂ. 10; ಈಗ ಇದನ್ನು ರೂ. 5 ಕ್ಕೆ ಕೊಡುವೆವು. ಲೇಡಿ 9 ಕ್ಯಾರೆಟ್ ಚಿನ್ನದ ಗಡಿಯಾರ ಕ್ರಯ ರೂ. 32 ಈಗ ರೂ. 16 ಕ್ಕೆ ಬಿಕರಿ. ಲೇಡಿ ಬೆಳ್ಳಿ ವಾಚ್ ಕ್ರಯ ರೂ. 14; ಈಗ ರೂ. 7 ಮಾತ್ರ. ಬಲವಾದ ನಂಬಿಕೆಯುಳ್ಳ 8 ದಿನದ ನಿಕ್ಕಲ್ ವಾಚ್ ರೂ. 18; ಈಗ ರೂ. 9. ಅದೇ ಬೆಳ್ಳಿಯದು ರೂ. 24; ಈಗಿನ ಕ್ರಯ ರೂ. 12. ಅದೇ ಬೆಳ್ಳಿ ಹಂಟಿಂಗ್ ವಾಚ್ 30; ಈಗಿನ ಬೆಲೆ ರೂ. 15. ಸ್ಪೆಷಲ್ ಬಹುಮಾನ ಕೈಗೆ ಕಟ್ಟುವ ತರಹಾ ಅಲ್ಲದೆ ಇತರ ತರಹಾ ಪ್ರತಿ ಒಂದು ವಾಚು ಕೊಂಡುಕೊಳ್ಳುವವರಿಗೂ ಒಂದು ಸುಂದರ ಸರಪಣಿಯೂ, 6 ವಾಚು ಕೊಳ್ಳುವವರಿಗೆ ಒಂದು ಹೆಚ್ಚು ವಾಚೂ ಇನಾಮು ಕೊಡುವೆವು.

ನಮ್ಮ ವಿಳಾಸ—The Competition Watch Co.,

[276-20] 25, Madan Mitra Lane, E. Calcutta.

ಡಾಕ್ಟರುಗಳು ಭಿನ್ನಾಭಿಪ್ರಾಯಪಟ್ಟು ರೋಗಿಯನ್ನು ಕೊಲ್ಲುತ್ತಾರೆ.

ಅದಕಾರಣ ನಿಮಗೆ ಯಾವಾಗಲಾದರೂ ದೇಹದಲ್ಲಿ ಬಲ ಬಿಳಿಕೆಯೂ ನರಗಳ ಶಿಥಿಲತೆಯೂ ಪ್ರಾಪ್ತವಾಗಿದೆ ಎಂದು ಗೊತ್ತಾದರೆ ಉಂಡ ಆಹಾರ ಜೀರ್ಣಿಸದೆ ಮಲಬದ್ಧವಾಗುತ್ತದೆ. ನಿಮ್ಮ ಸ್ಮರಣಶಕ್ತಿಯೂ ಕುಂದುವುದು. ಮನಸ್ಸಿನ ಮತ್ತು ಶರೀರದ ಶಿಥಿಲತೆಯು ಹೆಚ್ಚಿ ಅಲ್ಪಾಯುಸ್ಸಿನಲ್ಲೇ ಸಾಯುವೆನೆಂಬ ಭೀತಿಯುಂಟಾದಾಗ ತತ್‌ಕ್ಷಣವೇ

ರಾಜವೈದ್ಯರ ಶಕ್ತಿವರ್ಧಕ ಮಾತ್ರೆಗಳನ್ನು

ಸೇವಿಸುವುದಕ್ಕೆ ಪ್ರಾರಂಭಮಾಡಿ. ಅವರ ಕ್ರಯ ಬಾಟ್ಲಿ 1 ಕ್ಕೆ ರೂಪಾಯಿ 1-0-0.

ನಮ್ಮ ವಿಳಾಸ—ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

[255-26] 20, ಚೈನಾ ಬಜಾರ್ ರೋಡ್, ಮದರಾಸು.

Useful in Peace and War FIRST AID IN ACCIDENTS, BY DR. U. RAMA RAU

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ನಡೆಸಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು. ರಾಮರಾವ್ ಅವರಿಂದ ರಚಿತವಾದುದು.

DEDICATED TO H. H. THE MAHARAJA OF MYSORE.

ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ಪಕ್ಷದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪುಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ವೈದ್ಯರು ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡೆಸಿದ್ದರೆ, ನಿಸ್ಸಂದೇಹವಾಗಿ ಬದುಕಬಹುದಾಗಿದ್ದ ಪ್ರಾಣವು ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು.

ಒಬ್ಬ ಮನುಷ್ಯನಿಗೆ ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯಾಗಲಿ, ಇಲ್ಲವೇ ಯಾವುದಾದರೂ ಅಪಾಯವಾಗಲಿ ಸಂಭವಿಸಿದಾಗ, ಸಮರ್ಥರಾದ ವೈದ್ಯರು ಸಹಾಯಕ್ಕೆ ಬಂದೊದಗುವುದರೊಳಗಾಗಿ, ತತ್ಕಾಲಕ್ಕೆ ತಮ್ಮ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವು ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿಯೇ ಆಗಬೇಕು.

ಇದರಲ್ಲಿ ಅಶ್ಯಲ್ಪ ಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ಕ್ಲೇಶವಾದ ವೇದನೆಯನ್ನು ನೀಗಿಸಬಹುದು! ಎಷ್ಟೋ ಪ್ರಾಣಗಳನ್ನು ಉಳಿಸಬಹುದು! ಬಹಳವಾಗಿ ರಕ್ತಸ್ರಾವಕ್ಕೆ ಕಾರಣವಾದ ಮಹಾ ವಿಪತ್ತುಗಳಲ್ಲಿಯೂ ಬೆಂಕಿ ತಗಲುವುದು, ಮುಳುಗಿ ಮುಳುಗಿಯುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ, ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಗಳು ಕೂಡ, ಸಮರ್ಥರಾದ ವೈದ್ಯರು ಬರುವವರೊಳಗಾಗಿ ಏನು ಮಾಡಬೇಕೆಂಬುದನ್ನು ತಿಳಿಯದೆ ಹೋಗುವುದರಿಂದ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸಾಕ್ರಮದಲ್ಲಿ ಅಶ್ಯಲ್ಪ ಜ್ಞಾನವನ್ನು ಪಡೆದು, ಅದನ್ನು ಪ್ರಯೋಗಿಸುವುದರಿಂದಲೇ ಸಾಯುವ ಸ್ಥಿತಿಯಲ್ಲಿದ್ದ ಸಾವಿರಾರು ಜೀವಗಳು ಬದುಕಿಕೊಂಡಿರುವುವು.

ಇದಕ್ಕಾಗಿ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕ್ಷತಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ, ಅಗ್ನಿಗಂಡ, ನರಗಳು ಕದಲುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತಾತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಸೌಕರ್ಯಗಳನ್ನು ಕಲ್ಪಿಸುವುದು, ಇನ್ನೂ ಇದರಂತೆಯೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳೊಡನೆ ಇಷ್ಟು ವಿಷಯಗಳಿದ್ದರೂ, ಸರ್ವಸಾಮಾನ್ಯವಾಗಿ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆಮಾಡಿರುವೆವು. [92-8]

ಪುಸ್ತಕದ ಬೆಲೆ 0—8—0, ಟಪಾಲ್ ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣ ಬ್ರದರ್ಸ್, 323, ತಂಬುಚೆಟ್ಟಿ ಬೀದಿ, ಮದರಾಸು, ಪೋಸ್ಟು ಬಾಕ್ಸ್ 166.

ಊದಬತ್ತಿಗಳು

ನೀವು ಇದುವರೆಗೆ ಉಪಯೋಗಿಸಿರುವ ಊದುಬತ್ತಿಗಳಿಗಿಂತಲೂ ಅತ್ಯಂತ ಸುವಾಸನೆಯುಳ್ಳದ್ದಾಗಿದೆ.

ಬಾಲಗ್ರಹಧೂಪ ಡಬ್ಬಿ 1 ಕ್ಕೆ 8 ಆಣೆ.

ಮಕ್ಕಳಿಗೆ ಬರತಕ್ಕ ಬಾಲಗ್ರಹಕ್ಕೆ ಈ ಧೂಪವನ್ನು ಹಾಕಿದ ಕೂಡಲೇ ಬಾಲಗ್ರಹ ಚೇಷ್ಟೆಯು ಖಂಡಿತವಾಗಿಯೂ ಗುಣವಾಗುತ್ತೆ.

ಕಸ್ತೂರಿಮಾತ್ರೆ ಶೀಸೆ 1 ಕ್ಕೆ 4 ಆಣೆ.

ಈ ಮಾತ್ರೆಯನ್ನು ಬಾಯಿಗೆ ಹಾಕಿಕೊಂಡರೆ ಅವರ ಅಜೀರ್ಣವನ್ನೂ ಬಾಯಿನಾರಿಕೆಯನ್ನೂ ಸಹಾ ನಾಶನಮಾಡಿ ಬಾಯಿಯು ಅತ್ಯಂತ ಸುವಾಸನೆಯುಳ್ಳದ್ದಾಗಿಯೂ ಇರುತ್ತದೆ.

ಭೃಂಗಾಮಲಕತೈಲ ಶೀಸೆ 1 ಕ್ಕೆ 1 ರೂಪಾಯಿ.

ಇದು ಸ್ನಾನಮಾಡುವಾಗಲೂ ರಾತ್ರಿ ಮಲಗಿಕೊಳ್ಳುವಾಗಲೂ ತಲೆಗೆ ಹಚ್ಚಿಕೊಂಡರೆ ಅವರ ಸಮಸ್ತ ಉಷ್ಣವನ್ನೂ ಹೋಗಲಾಡಿಸಿ ಸುಖವಾಗಿ ನಿದ್ರೆಯು ಸಹಾ ಬರುತ್ತೆ.

ವಿಳಾಸ.—ಟಿ. ಎಲ್. ಉಪಾಧ್ಯಾಯ,

[54-13]

ಸುಗಂಧಕಾರಿ, ಮೈಸೂರು.

ನಮ್ಮ ಬೆಂಗಳೂರು ಚಂದಾದಾರರಿಗೆ.

ಪ್ರೇಮದತ್ತಯ್ಯನೆಂಬಾತನನ್ನು ನಾವು ಬೆಂಗಳೂರು ಸಿಟಿಗೆ ನಮ್ಮ ಏಜೆಂಟಾಗಿ ಗೊತ್ತು ಮಾಡಿದ್ದೆವು. ಈಗ ಆತನು ನಮ್ಮ ಏಜೆಂಟಾಗಿರುವುದಿಲ್ಲವೆಂದೂ, ನಮ್ಮ ಬೆಂಗಳೂರು ಚಂದಾದಾರರ್‍ಯಾರೂ ಆತನಿಗೆ ಇನ್ನು ಮುಂದೆ ಚಂದಾ ಮೊದಲಾದ ಹಣಗಳನ್ನು ಪಾವತಿ ಮಾಡಕೂಡದೆಂದೂ ಈ ಮೂಲಕ ಕೃತಪಡಿಸಿ ಎಚ್ಚರಿಸುತ್ತೇವೆ.

ಮ್ಯಾನೇಜರ್,
"ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೬ ನೇ ಇಸವಿ ಮೇ ತಾ. ೨೫ ನೇ ಗುರುವಾರ.

ಮೈಸೂರು ಸರ್ಕಾರದ ಕೆಲವು ರಿಪೋರ್ಟುಗಳು.

ನಮ್ಮ ಗವರ್ನ್‌ಮೆಂಟಿನ ಕೆಲವು ಇಲಾಖೆಗಳ ರಿಪೋರ್ಟುಗಳು ನಮಗೆ ತಲುಪಿರುತ್ತವೆ. ಇವುಗಳ ವಿಷಯದಲ್ಲಿ ಈ ವಾರ ಸಂಕ್ಷೇಪವಾಗಿ ಪ್ರಸ್ತಾಪಮಾಡುವೆವು.

ರೆಜಿಸ್ಟ್ರೇಷನ್ ಇಲಾಖೆಯ ರಿಪೋರ್ಟು ಮೊದಲನೆಯದು. ಈ ಇಲಾಖೆಯ ಆಫೀಸುಗಳಲ್ಲಿ ಸಂಸ್ಥಾನಾದ್ಯಂತ 1,05,723 ಪತ್ರಗಳು ರೆಜಿಸ್ಟರು ಮಾಡಲ್ಪಟ್ಟವು. ಹಿಂದಿನ ಸಾಲಿನಲ್ಲಿ 1,09,000 ದಸ್ತೈವಜುಗಳು ರೆಜಿಸ್ಟರಾಗಿದ್ದವು. ಈ ಬಾಬಿನಲ್ಲಿ ಹಿಂದಿನ ಸಾಲಿನಲ್ಲಿ ಆಗಿದ್ದ 2,08,178 ರೂಪಾಯಿ ಉತ್ಪತ್ತಿಯು ಈ ಸಾಲಿನಲ್ಲಿ 2,02,168 ರೂಪಾಯಿಗೆ ಇಳಿಯಿತು; ಖರ್ಚಾದರೋ 87,787 ರೂಪಾಯಿಯಿಂದ 90,572 ರೂಪಾಯಿಗೆ ಹೆಚ್ಚಾಗಿರುತ್ತದೆ. ಇನ್ಸ್‌ಪೆಕ್ಟರ್ ಜನರಲ್‌ರವರು ಬೆಂಗಳೂರು, ಕಡೂರು ಮತ್ತು ಹಾಸನದಲ್ಲಿರುವ ಆಫೀಸುಗಳನ್ನು ಮಾತ್ರ ತನಿಖೆಮಾಡಿದರು. ಇತರ ಡಿಸ್ಟ್ರಿಕ್ಟುಗಳಿಗೆ ಅವರ ದರ್ಶನ ದೊರಕಲಿಲ್ಲ. ಡೆಪ್ಯುಟಿ ಕಮಿಷನರುಗಳು ಕೂಡ ಕೆಲವು ಆಫೀಸುಗಳನ್ನು ಮಾತ್ರವೇ ಆಡಿಟು ತನಿಖೆಮಾಡಿದರು. ಇದು ತೃಪ್ತಿಕರವಾಗಿದೆ ಎಂದು ಎಷ್ಟು ಮಾತ್ರಕ್ಕೂ ಹೇಳಲಾಗುವುದಿಲ್ಲ. ಕಳೆದ ಸಾಲಿನಲ್ಲಿ 1,256 ಪತ್ರಗಳನ್ನು ಒಂದು ತಿಂಗಳಿಗಿಂತ ಹೆಚ್ಚಾಗಿ ರೆಜಿಸ್ಟರು ಮಾಡದೆ ಇಟ್ಟುಕೊಂಡಿದ್ದರೆಂದು ಗೊತ್ತಾಗುತ್ತದೆ. ಇದೂ ಅಲ್ಲದೆ ಕೆಲಸದ ಗಲಾಟೆ ಎಂಬುವುದೂ ಕಾರಣವಾಗಿ ಸೂಚಿಸಲ್ಪಟ್ಟಿರುವುದು. ಜನವಾರ್ತೆಯನ್ನು ನೋಡಿದರೆ ಬೇರೆ ಕಾರಣಗಳೂ ಇರಬೇಕೆಂದು ಊಹಿಸಬಹುದಾಗಿದೆ.

ಗವರ್ನ್‌ಮೆಂಟಿನ ತೋಟಗಳ ಮತ್ತೂ ಉದ್ಯಾನವನಗಳ ರಿಪೋರ್ಟಿನಲ್ಲಿ ಬೀಜಗಳು, ಹಣ್ಣುಗಳು, ತರಕಾರಿಗಳೇ ಮೊದಲಾದ ಹಲವು ಸಂಗತಿಗಳನ್ನು ಓದುವುದಕ್ಕೆ ಸ್ವಾರಸ್ಯವಾಗಿದೆ. ಅದಕ್ಕೆ ಮಿ|| ಕ್ರುಂಬಿಗಲ್‌ರವರು ರುಜುಹಾಕಿದಾರೆ. ಇವರು ಬೆಂಗಳೂರು ಲಾಲ್‌ಬಾಗ್ ತೋಟವನ್ನೂ ಇನ್ನೂ ಕೆಲವು ಉದ್ಯಾನಗಳನ್ನು ರಮ್ಯವಾಗಿಯೂ, ಮನೋಹರವಾಗಿಯೂ ಮಾಡಿಸುವುದಕ್ಕೆ ತುಂಬಾ ಶ್ರಮಪಟ್ಟಿರುವರು. ಆದರೆ ಉತ್ಪತ್ತಿಯು ನೋಡೆ ತೃಪ್ತಿಕರವಾಗಿಲ್ಲ. ಈ ತೋಟ ಮತ್ತೂ ಉದ್ಯಾನವನಗಳನ್ನು ಅವುಗಳ ಉತ್ಪತ್ತಿಯಿಂದಲೇ ನಡಿಸಿಕೊಂಡು ಬರುವುದು ಸಾಧ್ಯವಲ್ಲ. ಆದಾಗ್ಯೂ ಬೀಜಗಳನ್ನೂ ಹಣ್ಣು ಹಂಪಲು ತರಕಾರಿಗಳನ್ನೂ ಇನ್ನೂ ಹೆಚ್ಚಾಗಿ ಬೆಳೆ ಮಾಡೋಣದಿಂದ ಈಗಿಂತಲೂ ಇನ್ನೂ ವಿಶೇಷ ಉತ್ಪತ್ತಿಯನ್ನು ತೋರಿಸುವುದು ಸಾಧ್ಯವೆಂದು ಹೇಳಬಲ್ಲೆವು. ಈ ಇಲಾಖೆಯವರು ಈಚೆಗೆ ಅನ್ಯದೇಶಗಳಿಂದ ತರಕಾರಿ ಹಣ್ಣು ಹಂಪಲುಗಳ ಬೀಜಗಳನ್ನು ತರಿಸಿ ಸಂಸ್ಥಾನಾದ್ಯಂತ ರೈತರೂ ಪ್ರಜೆಗಳೂ ಬೆಳೆಯಬೇಕೆಂದು ಏರ್ಪಾಡು ಮಾಡಲಾರಂಭಿಸಿದಾರೆ. ಮತ್ತು ಈ ಇಲಾಖೆಯ ಒಬ್ಬ ನೌಕರನು ಸಂಸ್ಥಾನಾದ್ಯಂತ ಸಂಚರಿಸಿ ಯಾವಯಾವ ಫಲಾದಿಗಳನ್ನು ಎಲ್ಲೆಲ್ಲಿ ಹೇರಳವಾಗಿ ಬೆಳೆ ಮಾಡಬಹುದೆಂದು ಅಜಮಾಯಿಷಿ ಮಾಡಿಕೊಂಡು ಒಂದು ರಿಪೋರ್ಟು ಬರೆದು ಕೊಟ್ಟಿರುವಂತೆ ತಿಳಿದುಬರುವುದು. ಇವುಗಳ ಪರಿಣಾಮವೇನಾಯಿತೆಂಬುವುದು ಪ್ರಕಾಶಕ್ಕೆ ಬರಲಿಲ್ಲ. ರಾಜಧಾನಿಯಲ್ಲಿ ಫಲಪುಷ್ಪಗಳನ್ನು ಪ್ರಜೆಗಳು ಹೇರಳವಾಗಿ ಬೆಳೆಯುವಂತೆ ಮಾಡಬೇಕೆಂದು ನಮ್ಮ ಮಹಾರಾಜರವರು ಕುತೂಹಲಪಟ್ಟು ಫಲಪುಷ್ಪಗಳ ಪ್ರದರ್ಶನವನ್ನೂ ಮಾಡಿಸುತ್ತಲಿದಾರೆ. ಪ್ರಜೆಗಳು ಈ ವಿಚಾರಕ್ಕೆ ಅಷ್ಟೇನೂ ಗಮನ ಕೊಟ್ಟಿಲ್ಲವೆಂದು ನೋಡಿ ವಿಷಾದಪಡುತ್ತೇವೆ. ಪಟ್ಟಣ ಶೃಂಗಾರವನ್ನು ಕುರಿತು ಮಾತನಾಡುವಾಗ್ಗೆ ಅದರಲ್ಲಿ ಪ್ರವೀಣರಾದ ಪ್ರೊಫೆಸರ್ ಗೆಡ್ಡೀಸ್‌ರವರು ರಾಜಧಾನಿಯ ಎಲ್ಲಾ ಭಾಗಗಳನ್ನೂ ನೋಡಿ ಒಂದು ರಸ್ತೆಗಳ ಉಭಯ ಪಾರ್ಶ್ವಗಳಲ್ಲೂ ನಾನಾ ಜಾತಿಯ ಫಲವೃಕ್ಷಗಳನ್ನು ಹೇರಳವಾಗಿ ಬೆಳಸುವುದೂ, ಫಲಗಳನ್ನು ಪ್ರಜೆಗಳು ಆಹಾರವಾಗಿ ತಿನ್ನುವುದಕ್ಕೆ ಸೌಲಭ್ಯಗಳನ್ನು ಕಲ್ಪಿಸಿಕೊಡುವುದೂ ಆವಶ್ಯವೆಂದು ಹೇಳಿದರು. ಈಗ ನೋಡಿದರೆ ನೂರಾರು ವರ್ಷಗಳಿಂದ ಸ್ವೇಚ್ಛೆಯಾಗಿ ಬೆಳೆದು ಎಷ್ಟೋ ನೇತ್ರಾನಂದಕರವಾಗಿದ್ದ ಸಾವಿರಾರು ಮರಗಳನ್ನು ಕಡಿಸಿಹಾಕಿ ಬೀಳ ಬಿಡುವ ಚಿಕ್ಕ ವೃಕ್ಷ ಸಸಿಗಳನ್ನು ನೆಡಿಸಿ ಅರೈಕೆ ಮಾಡುತ್ತಿದಾರೆ. ನಂದಿಬೆಟ್ಟದ ಮೇಲಿನ ತೋಟದ ವಿಚಾರಣೆಯನ್ನು ಈ ಇಲಾಖೆಗೆ ವಹಿಸಿರುತ್ತಾರೆ. ವಿಹಾರಾರ್ಥವಾಗಿಯೂ, ವಿಶ್ರಾಂತಿಗಾಗಿಯೂ ಹೋಗಿದ್ದು ಬರುವ ಜನಗಳಿಗೆ ಅಲ್ಲಿ ನಾನಾ ಅನುಕೂಲಗಳನ್ನು ಕಲ್ಪಿಸಿಕೊಟ್ಟಿರುವರು. ಮೊದಲನೆಯ ವರುಷ 210 ಜನಗಳು ಅಲ್ಲಿಗೆ ಹೋಗಿದ್ದು ಬಂದರು. 2,438 ಚಿಲ್ಲರೆ ರೂಪಾಯಿ ಹುಟ್ಟುವಳಿ ಆಗಿದೆ. ಈ ಇಲಾಖೆಯಲ್ಲಿ ಕಳೆದ ವರುಷ ಒಟ್ಟು 95,601 ರೂಪಾಯಿ ಖರ್ಚೂ, 10,965 ರೂಪಾಯಿ ಹುಟ್ಟುವಳಿಯೂ ಆಗಿರುತ್ತದೆ.

ಬಿಸಿಲು, ಮೋಡ, ಮಳೆ, ಗಾಳಿ, ಇವುಗಳ ಸೂಚನಾದಿಗಳನ್ನು ಗೊತ್ತುಮಾಡುವುದಕ್ಕೆ ನಮ್ಮ ಸರ್ಕಾರದವರು ಮಾಡಿಟ್ಟಿರುವ ಪ್ರತ್ಯೇಕವಾದ ಖಾತೆಯ ರಿಪೋರ್ಟು ಬಹಳ ಸಂಕ್ಷೇಪವಾದದ್ದು. ನಮ್ಮ ಸಂಸ್ಥಾನದಲ್ಲಿ ಈ ವಿಚಾರಗಳನ್ನು ಗೊತ್ತುಮಾಡುವ ಠಾಣ್ಯಗಳು ನಾಲ್ಕಿರುವವು. ಇವುಗಳಿಗಾಗಿ ಒಟ್ಟು 11,961 ರೂಪಾಯಿ ಸಾಲಿಯಾನಾ ಖರ್ಚಾಗುತ್ತದೆ. ಬೆಂಗಳೂರಿನಲ್ಲಿಟ್ಟಿರುವ ಅಬ್ಸರ್ವೇಟರಿಯಲ್ಲಿ ಬಹಳ ತೃಪ್ತಿಕರವಾಗಿ ಕೆಲಸಗಳು ಜರುಗುವವು. ಅಲ್ಲಿ ಸರ್ವದಾ ನಾನಾ ಯಂತ್ರಗಳ ಚಲನೆಗಳನ್ನು ಕಾದಿದ್ದು ನೋಡುತ್ತಾ ಹವಾ ಬದಲಾವಣೆಯ ಸೂಚನೆಗಳನ್ನು ಬರೆಯುವರು. ಮೈಸೂರು, ಹಾಸನ, ಚಿತ್ರದುರ್ಗ, ಈ ಸ್ಥಳಗಳಲ್ಲೂ ಅಂಥಾ ಏರ್ಪಾಡುಗಳನ್ನು ಮಾಡಿಟ್ಟಿದಾರೆ.

ಮಿ|| ಯೇಟ್ಸ್‌ರವರು ಮೈಸೂರು ಸರ್ಕಾರಿ ಛಾಪಖಾನೆಯ ಸೂಪರಿಂಟೆಂಡೆಂಟ್ ಕೆಲಸವನ್ನು ವಹಿಸಿ ಬಂದು ಹತ್ತು ವರುಷಗಳ ಮೇಲಾಯಿತು. ಆ ಹತ್ತು ವರುಷಗಳಲ್ಲಿ ಛಾಪಖಾನೆಯೊಳಗೆ ನಡೆದಿರುವ ಕೆಲಸ ಕಾರ್ಯಗಳನ್ನು ಕ್ರೋಢೀಕರಿಸಿ ಸಂಕ್ಷೇಪವಾದ ರಿಪೋರ್ಟು ಪ್ರಕಟಮಾಡಲಾಗಿದೆ. ಬೆಂಗಳೂರು ಛಾಪಖಾನೆಯನ್ನು ಬದಲಾವಣೆಮಾಡಿ ಅಭಿವೃದ್ಧಿಗೆ ತಂದರು. ಯಂತ್ರಗಳು ವಿದ್ಯುಚ್ಛಕ್ತಿಯಿಂದ ನಡೆಯುತ್ತಲಿವೆ. ಹತ್ತು ವರುಷಗಳ ಹಿಂದೆ ನಡೆಯುತ್ತಿದ್ದ ಕೆಲಸಗಳಿಗಿಂತ ಈಗ ಮೂರರಷ್ಟು ಹೆಚ್ಚು ಕೆಲಸಗಳಾಗುವವು. ಮುದ್ರಣದ ಕೆಲಸಗಳು ಕೂಡ ಎಷ್ಟೋ ನಾಜೂಕಾಗಿ ನಡೆಯುತ್ತಲಿವೆ. ಹೀಗಿರುವಲ್ಲಿ ಈ ಇಲಾಖೆಯ ಖರ್ಚು ಕೆಲಸಕ್ಕೆ ತಕ್ಕಂತೆ ಹೆಚ್ಚುತ್ತಾ ಬಂದಿದೆ. ಹಿಂದಿನ ವರುಷ ಒಟ್ಟು ರೂ. 1,12,096-2-7 ಸ್ಟು ಖರ್ಚಾಗಿರುವುದು.

ನಮ್ಮ ಸರ್ಕಾರದ ಸಾಮಿಲ್ದಾರು ಇಲಾಖೆಯಿಂದ ಸಂಸ್ಥಾನಾದ್ಯಂತ ಎಲ್ಲಾ ಕೋರ್ಟು ಕಚೇರಿಗಳಿಗೂ ಆಫೀಸುಗಳಿಗೂ ಕಳೆದ ವರುಷ ಒಟ್ಟು 1,30,037 ರೂಪಾಯಿನ ಕಾಗದ ಕಡ್ಡಿ ಶಾಯಿ ಪೆನ್ಸಿಲು ದಾರ ಜೂಟ ಕತ್ತರಿ ಮೊದಲಾದ ಪದಾರ್ಥಗಳು ಸರಬರಾಯಿಮಾಡಲ್ಪಟ್ಟವು. ಹೀಗೆ ಸರಬರಾಯಿಮಾಡಿದ ಸಾಮಿಲ್ದಾರ್ ಸಾಮಾನುಗಳನ್ನೆಲ್ಲಾ ಆಫೀಸುಗಳಲ್ಲೂ ಕೋರ್ಟು ಕಚೇರಿಗಳಲ್ಲೂ ವಿವೇಕದಿಂದಲೂ, ಕಟ್ಟುನಿಟ್ಟಾಗಿಯೂ ಉಪಯೋಗಿಸಿದಾರೆಂದು ಹೇಳಲು ನಮಗೆ ನಂಬಿಕೆಯಾಗದು. ಅಧಿಕಾರಿಗಳು ಇನ್ನೂ ಮುತುವರ್ಜಿಯಿಂದಲೂ ಸೌಹಾರ್ದದಿಂದಲೂ ಕಲೆತು ಕೆಲಸಗಳನ್ನು ನಡಿಸುವುದಾದರೆ ಕಾಗದಪತ್ರಗಳ ಖರ್ಚನ್ನೂ ಅಲೆದಾಟವನ್ನೂ ಬಹಳ ಮಟ್ಟಿಗೆ ಕಡಮೆಮಾಡಬಹುದು.

ಮೈಸೂರು ನಗರಾಭಿವೃದ್ಧಿಯ ರಿಪೋರ್ಟನ್ನು ಓದನೋಡುವಲ್ಲಿ ರಾಜಧಾನಿಯ ನಾನಾ ಭಾಗಗಳಲ್ಲಿ ಹಲವು ಬಗೆಯ ಕೆಲಸ ಕಾರ್ಯಗಳು ನಡಿಸಲ್ಪಟ್ಟಿವೆ ಎಂದು ಗೊತ್ತಾಗುವುದು. ಕಳೆದ ಸಾಲಿನಲ್ಲಿ ಒಟ್ಟು 3,70,788 ರೂಪಾಯಿ ಖರ್ಚುಮಾಡಲಾಗಿದೆ. ಈ ಪೈಕಿ ಸಿಬ್ಬಂದಿಯ ಸಂಬಳ ಸಾರಿಗೆಗಳಿಗೆ 25,661 ರೂಪಾಯಿ ವಿನಿಯೋಗವಾಯಿತು. ಥಾಟಥಾಟವಾದ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಡಿಸಿದಾರೆ. ಬಡಾವಣೆಗಳಲ್ಲಿ ಕೂಡ ಬೇಕಿಗೂ, ನೀರಿಗೂ ತೃಪ್ತಿಕರವಾದ ಏರ್ಪಾಡಾಗಿಲ್ಲ. ಬಡಜನರು ವಾಸಮಾಡುವ ಭಾಗಗಳಲ್ಲಿ ಅವರ ಕ್ಷೇಮಾಭಿವೃದ್ಧಿಗಳಿಗೆ ಇನ್ನೂ ಹಿತಕರವಾದ ನಿತ್ಯಕೆಲಸಗಳು ಕ್ರಮವಾಗಿ ಜರುಗುವಂತಾಗಬೇಕು. ಪಟ್ಟಣದ ನಾನಾ ಭಾಗಗಳಲ್ಲೂ ಬೀದಿ ಮೋರಿಗಳಲ್ಲೂ ರೋಜ್ಯ ಕೊಳಕೂ ಕಸ ಕುಪ್ಪೆಗಳೂ ಮುತುವರ್ಜಿಯಾದ ವಿಚಾರಣೆಯಿಂದ ನಿರ್ಮೂಲವಾಗುತ್ತಾ ಬರಬೇಕು. ಈ ರೀತಿಯಾಗಿ ರಾಜಧಾನಿಯು ಆರೋಗ್ಯಜನಕವಾಗಿ ಶೋಭಿಸಲು ಇನ್ನೂ ಅನೇಕ ಕೆಲಸಗಳು ಜರುಗಬೇಕಾಗಿದೆ.

ನಿಜವಾದ ದೇವಾರಾಧನೆ.

ಅನೇಕರು ಕೇವಲ ಸ್ವಾರ್ಥತೆಯಿಂದ ದೇವರನ್ನು ಆರಾಧನೆಮಾಡುತ್ತಾರೆಂದು ನಾವು ಹಿಂದಿನ ವಾರದಲ್ಲಿ ತೋರಿಸಿಕೊಟ್ಟೆವಷ್ಟೆ. ಜನಗಳಿಗೆ ಕಷ್ಟ ದುಃಖಗಳು ಪ್ರಾಪ್ತವಾದರೆ, ಅಂಥ ಕಷ್ಟ ದುಃಖಗಳಿಂದ ತಮ್ಮನ್ನು ಬಿಡಿಸಿ ಕಾಪಾಡಬೇಕೆಂದು ದೇವರಿಗೆ ಮೊರೆಯಿಡುತ್ತಾರೆ. ಆ ಕಷ್ಟವು ತಮ್ಮ ಸ್ವಂತ ಅಜಾಗರೂಕತೆಯಿಂದ, ಅಜ್ಞಾನದಿಂದ ಅಥವಾ ಪಾಪದಿಂದ ಬಂದಿದೆಯೋ ಇಲ್ಲವೋ ಎಂಬ ವಿಚಾರವನ್ನು ಅವರು ಮಾಡಿಕೊಳ್ಳುವದೇ ಇಲ್ಲ. ದೇವರಲ್ಲಿ ನ್ಯಾಯವಾದ ಸಂಬಂಧವನ್ನು ಬೆಳಿಸುವಂಥಾದ್ದೆ? ದೇವಾರಾಧನೆಯ ಮೊದಲನೇ ಮೆಟ್ಟಿಲಾಗಿದೆಯೆಂದು ನಾವು ತೋರಿಸಿಕೊಟ್ಟೆವು. ನಾವು ನಮ್ಮ ಪಾಪಗಳನ್ನು ತಿಳಿದುಕೊಂಡು ಅವುಗಳನ್ನು ವಿಸರ್ಜಿಸಿಬಿಟ್ಟು ದೇವರು ಮೆಚ್ಚುವ ರೀತಿಯಲ್ಲಿ ನಡೆದುಕೊಳ್ಳಬೇಕು.

ದೇವರು ಮೆಚ್ಚುವ ರೀತಿಯಲ್ಲಿ ನಡೆದುಕೊಳ್ಳಬೇಕೆಂಬ ಅಪೇಕ್ಷೆಯು ವಾಸ್ತವವಾಗಿ ನಮ್ಮಲ್ಲಿದ್ದರೆ, ದೇವರು ನಮ್ಮಿಂದ ಕೋರುವಂಥಾದ್ದೇನೆಂದು ಮುಂದಟ್ಟು ಮಾಡಿಕೊಳ್ಳುವದಕ್ಕೆ ನಾವು ತವಕಪಡುವೆವು. ದೇವರನ್ನು ಕುರಿತು ಹಲವು ವಿಧವಾದ ಬೋಧನೆಗಳು ಇರುತ್ತವೆ. ಇವುಗಳಲ್ಲಿ ಸತ್ಯವಾದದ್ದು ಯಾವದು ಅಸತ್ಯವಾದದ್ದು ಯಾವದು ಎಂಬ ಅನುಮಾನವು ನಮ್ಮಲ್ಲಿ ಹುಟ್ಟಬಹುದು. ಆದರೆ ನಾವು ದೇವರ ವಿಷಯದಲ್ಲಿ ಯಥಾರ್ಥವಾದ ಅಭಿಪ್ರಾಯಗಳನ್ನು ಮಾಡಿಕೊಳ್ಳಬೇಕಾದರೆ, ಎರಡು ಮೂರು ಕಾರ್ಯಗಳನ್ನು ಮಾಡಬೇಕು. ಇವುಗಳನ್ನು ಮಾಡುವದು ಸರ್ವರಿಗೂ ಸಾಧ್ಯವಾಗಿದೆ.

ಮೊದಲನೇದು—ದೇವರು ನಮ್ಮ ಸ್ವಂತ ಮನಸ್ಸುಗಳಲ್ಲಿ ನಮ್ಮ ಸಂಗಡ ಮಾತಾಡುತ್ತಾನೆ. ಧರ್ಮವು ಯಾವದು ಅಧರ್ಮವು ಯಾವದು ಎಂದು ನಮ್ಮ ಮನಸ್ಸು ನಮಗೆ ಸ್ಪಷ್ಟವಾಗಿ ತಿಳಿಸುತ್ತದೆ. ಸುಳ್ಳು ಹೇಳುವದು, ಕಳ್ಳತನ ಮಾಡುವದು, ಮೋಸ್ಸನದು, ನಿಷ್ಕಾರಣವಾಗಿ ಕೋಪಮಾಡುವದು, ಇತರರನ್ನು ಹಿಂಸೆಪಡಿಸುವದು, ನರಹತ್ಯಮಾಡುವದು ಅಧರ್ಮವೆಂದು ಪ್ರತಿಯೊಬ್ಬನಿಗೂ ತಿಳಿದೇ ಇರುತ್ತದೆ. ಇಂಥ ಕಾರ್ಯಗಳಿಗೆ ನಮ್ಮ ಮನಸ್ಸು ಎಂದಿಗೂ ಒಪ್ಪುವದಿಲ್ಲ. ಇಂಥ ಕಾರ್ಯಗಳನ್ನು ಮಾಡುವವರು ತಮ್ಮ ಮನಸ್ಸಿಗೆ ವಿರೋಧವಾಗಿ ನಡೆದುಕೊಳ್ಳುತ್ತಾರೆ. ನಮ್ಮ ಮನಸ್ಸಿನಲ್ಲಿ ಕೆಟ್ಟ ಯೋಚನೆಗಳು ಹುಟ್ಟುವದೇನೋ ವಾಸ್ತವ. ಆದರೆ ನಾವು ಜಾಗರೂಕತೆಯಿಂದಲೂ ಯಥಾರ್ಥವಾಗಿಯೂ ವಿಚಾರಮಾಡಿದರೆ, ನಮ್ಮ ಮನಸ್ಸು ಧರ್ಮವು ಯಾವದು ಅಧರ್ಮವು ಯಾವದು ಎಂದು ಸ್ಪಷ್ಟವಾಗಿ ಹೇಳುವದು. ದೇವರು ಈ ರೀತಿಯಲ್ಲಿ ನಮ್ಮ ಸಂಗಡ ಮಾತಾಡುತ್ತಾನೆ. ದೇವರನ್ನು ಆರಾಧನೆಮಾಡಬೇಕೆಂಬ ಅಪೇಕ್ಷೆಯು ನಮಗಿದ್ದರೆ, ಆತನು ಕೋರುವ ರೀತಿಯಲ್ಲಿ ನಡೆದುಕೊಳ್ಳುವದಕ್ಕೆ ನಾವು ಸಿದ್ಧರಾಗಿರಬೇಕು. ನಾನು ಒಬ್ಬನ ಮೇಲೆ ಕ್ರೋಧವನ್ನಿಟ್ಟುಕೊಂಡು ಕಾರಣವಿಲ್ಲದೆ ಅವನಿಗೇನಾದರೂ ಒಂದು ಕೇಡನ್ನು ಮಾಡಬೇಕೆಂದು ಅಪೇಕ್ಷಿಸಿದ್ದರೆ, ಅಂಥ ಕಾರ್ಯವನ್ನು ಮಾಡಬಾರದೆಂದು ನನ್ನ ಮನಸ್ಸು ನನಗೆ ಸ್ಪಷ್ಟವಾಗಿ ಹೇಳುವದು. ಈ ಕೆಟ್ಟ ಕೆಲಸವನ್ನು ಮಾಡುವದಕ್ಕೆ ದೇವರು ನನಗೆ ಸಹಾಯಕನಾಗಬೇಕೆಂದು ನಾನು ಅಪೇಕ್ಷಿಸಿದರೆ, ಆತನು ಇಂಥ ಕಾರ್ಯದಲ್ಲಿ ನನಗೆ ಎಂದಿಗೂ ಸಹಾಯಕೊಡುವದಿಲ್ಲ; ಅಂಥ ಸಹಾಯವನ್ನು ಆತನು ನನಗೆ ಮಾಡಕೂಡದು ಎಂಬದಾಗಿ ನನ್ನ ಮನಸ್ಸು ನನಗೆ ಹೇಳುವದು. ಮತ್ತೊಬ್ಬನ ಮೇಲೆ ಕೋಪವನ್ನಿಟ್ಟುಕೊಂಡು ಅವನಿಗೇನಾದರೂ ಕೇಡುಮಾಡಬೇಕೆಂಬ ಅಪೇಕ್ಷೆಯು ನನ್ನಲ್ಲಿದ್ದರೆ, ನಾನು ಯಥಾರ್ಥವಾಗಿ ದೇವರಿಗೆ ಪ್ರಾರ್ಥನೆ ಮಾಡುವದೂ ಆತನನ್ನು ಆರಾಧಿಸುವದೂ ಅಸಾಧ್ಯ. ಇಷ್ಟೇ ಅಲ್ಲ. ನಾನು ನನ್ನ ಪಾಪದ ದೆಸೆಯಿಂದ ಒಂದು ವ್ಯಾಧಿಯನು ಸಂಪಾದಿಸಿಕೊಂಡು ಅದರಲ್ಲಿ ನರಳುತ್ತಾ ಇರುವಲ್ಲಿ ಈ ನನ್ನ ರೋಗಕ್ಕೆ ಕಾರಣವಾದ ನನ್ನ ಪಾಪವನ್ನು ಬಿಟ್ಟುಬಿಡುವದಕ್ಕೆ ನಾನು ಸಿದ್ಧನಾಗದೆ ಹೋದರೆ, ನನ್ನ ರೋಗವನ್ನು ಗುಣಮಾಡುವಂತೆ ದೇವರನ್ನು ಬೇಡಿಕೊಳ್ಳುವದು ನನಗೆ ಹ್ಯಾಗೆ ತಾನೇ ಸಾಧ್ಯವಾದೀತು? ತಾವು ತಮ್ಮ ದುರ್ಮಾರ್ಗಗಳಲ್ಲಿಯೇ ನಡೆದುಕೊಳ್ಳುತ್ತಿರಬೇಕು; ಹೀಗಿದ್ದರೂ ದೇವರ ಸಹಾಯವು ತಮಗೆ ಲಭ್ಯವಾಗುತ್ತಿರಬೇಕು ಎಂದು ಅಪೇಕ್ಷಿಸುವವರು ಅನೇಕ ಮಂದಿ ಇರುತ್ತಾರೆ. ಇದು ಅಸಾಧ್ಯ. ದೇವರು ಅಂತರ್ಯದ ಆಲೋಚನೆಗಳನ್ನೂ ಕೂಡ ತಿಳಿದವನಾಗಿರುತ್ತಾನೆ. ನಾವು ಆತನನ್ನು ಮೋಸಮಾಡುವದಕ್ಕೆ ಆಗುವದೇ ಇಲ್ಲ. ಆದಕಾರಣ ನಾವು ನಮ್ಮ ಮನಸ್ಸಾಕ್ಷಿಯು ಹೇಳುವದನ್ನು ಕೇಳಬೇಕು. ಆಗ ನಾವು ದೇವರನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳುವೆವು.

ಎರಡನೇದು—ಸತ್ಪುರುಷರಿಂದ ನಾವು ದೇವರ ವಿಷಯದಲ್ಲಿ ತಿಳಿದುಕೊಳ್ಳಬಹುದು. ತಾವು ದೇವಭಕ್ತರೆಂದು ಹೇಳಿಕೊಂಡು ದೇಶಸಂಚಾರ ಮಾಡುವಂಥ ಅನೇಕ ಜನರು ಇರುತ್ತಾರೆ. ಆದರೆ ಇವರು ಯಥಾರ್ಥವಾಗಿ ಸತ್ಪುರುಷರಾಗಿರುವದಿಲ್ಲ. ನಾವು ಸತ್ಪುರುಷರನ್ನು ಅವರ ನಡೆನುಡಿಗಳಿಂದ ತಿಳಿದುಕೊಳ್ಳುತ್ತೇವೆ. ಯಾವನು ಯಾವಾಗಲೂ ಸತ್ಯವಂತನಾಗಿಯೂ ನೀತಿವಂತನಾಗಿಯೂ ದೀನಮನಸ್ಸುಳ್ಳವನಾಗಿಯೂ ದೇವಭಕ್ತನಾಗಿಯೂ ಇರುತ್ತಾನೋ ಮತ್ತು ಯಾವನ ನಡತೆಯು ನಮ್ಮ ಮನಸ್ಸಾಕ್ಷಿಗೆ ಮೆಚ್ಚಿಕೆಯಾಗಿರುತ್ತದೆಯೋ ಅಂಥವನನ್ನು ನಾವು ತಿಳಿದು ಅವನ ಸಂಗಡ ಸಂಭಾಷಣೆಮಾಡುವದರಿಂದ ಅವನು ದೇವರ ವಿಷಯದಲ್ಲಿ ಎಂಥ ಅಭಿಪ್ರಾಯಗಳನ್ನು ಇಟ್ಟುಕೊಂಡಿದ್ದಾನೆ; ಅವನು ಹ್ಯಾಗೆ ದೇವಾರಾಧನೆ ಮಾಡುತ್ತಾನೆ ಎಂಬೀ ವಿಷಯಗಳನ್ನು ನಾವು ತಿಳಿದುಕೊಳ್ಳಬಲ್ಲೆವು. ಸತ್ಪುರುಷರ ಸಹವಾಸವು ದೇವರ ವಿಷಯವಾಗಿ ತಿಳಿದುಕೊಳ್ಳುವದಕ್ಕೆ ಸಹಕಾರಿಯಾಗಿರುವದು.

ಮೂರನೇದು—ದೇವರ ವಿಷಯದಲ್ಲಿ ನಮಗೆ ತಿಳಿಸುವಂಥ ಒಳ್ಳೇ ಪುಸ್ತಕಗಳನ್ನು ನಾವು ಓದಬಹುದು. ಅಗಣಿತವಾದ ಪುಸ್ತಕಗಳಿರುತ್ತವೆ. ಅವುಗಳಲ್ಲಿ ಕೆಲವನ್ನು ಓದಿ ಮುಂದಟ್ಟುಮಾಡಿಕೊಳ್ಳುವದು ಸುಲಭಸಾಧ್ಯವಲ್ಲ. ಕೆಲವು ಪುಸ್ತಕಗಳು ದೇವರನ್ನು ಕುರಿತೂ ನಮ್ಮ ಧರ್ಮವನ್ನು ಕುರಿತೂ ಚೆನ್ನಾಗಿ ತಿಳಿಸುವದಿಲ್ಲ. ನಮಗೆ ತಿಳಿದಿರುವ ಅತ್ಯುತ್ತಮವಾದ ಪುಸ್ತಕವು ಯಾವದೆಂದರೆ ಯೇಸು ಕ್ರಿಸ್ತನ ಜೀವಚರಿತ್ರೆಯು ಬರೆಯಲ್ಪಟ್ಟಿರುವ ಗ್ರಂಥವೇ. ಇದಕ್ಕೆ "ಸುವಾರ್ತೆ," ಅಂದರೆ ಶುಭವರ್ತಮಾನ ಎಂಬ ಹೆಸರು ಕೊಡಲ್ಪಟ್ಟಿದೆ. ಇಂಥ ಚಿಕ್ಕಚಿಕ್ಕ ಪುಸ್ತಕಗಳು ನಾಲ್ಕು ಇರುತ್ತವೆ. ಇವುಗಳನ್ನು ಸುಲಭವಾದ ಕನ್ನಡ ಭಾಷೆಗೆ ತರ್ಜುಮೆಮಾಡಿರುತ್ತಾರೆ. ಇವುಗಳನ್ನು ಯಾರಾದರೂ ತರಿಸಿಕೊಂಡು ಓದಬಹುದು. ಈ ಚಿಕ್ಕ ಪುಸ್ತಕಗಳು ದೇವರು ಎಂಥವನಾಗಿದ್ದಾನೆ, ಆತನನ್ನು ಆರಾಧಿಸುವದು ಹ್ಯಾಗೆ ಎಂಬೀ ವಿಷಯಗಳನ್ನು ನಮಗೆ ಸ್ಪಷ್ಟವಾಗಿ ತಿಳಿಸುತ್ತವೆ.

ನಾವು ದೇವರನ್ನು ನಿಜವಾಗಿ ಆರಾಧಿಸಬೇಕಾದರೆ, ಆತನನ್ನು ನಾವು ತಿಳಿಯಬೇಕು. ನಮ್ಮ ಮನಸ್ಸಾಕ್ಷಿಯು ಹೇಳುವ ಮೇರೆಗೆ ನಡೆಯುವದರಿಂದಲೂ ಸತ್ಪುರುಷರ ಸಹವಾಸವನ್ನು ಮಾಡುವದರಿಂದಲೂ ಒಳ್ಳೇ ಪುಸ್ತಕಗಳನ್ನು, ಮುಖ್ಯವಾಗಿ ಸುವಾರ್ತೆಗಳನ್ನು, ಓದುವದರಿಂದಲೂ ಆತನ ವಿಷಯದಲ್ಲಿ ತಿಳಿದುಕೊಳ್ಳುವದು ನಮಗೆ ಸಾಧ್ಯವಾಗಿದೆ.

ಯುದ್ಧದ ಸಮಾಚಾರಗಳು.

ರಷ್ಯಾದವರು ಮುಂದೆ ನುಗ್ಗಿದ್ದು.

ರಷ್ಯಾದವರು ಏಷ್ಯಾ ಮೈನರಿನಲ್ಲೂ ಮೆಸೊಪೊಟೇಮಿಯಾದಲ್ಲೂ ನುಗ್ಗಿ ಮುಂದು ಮುಂದಕ್ಕೆ ಹೋಗಿರುತ್ತಾರೆ. ಈ ವಾರದ ಮುಖ್ಯ ವರ್ತಮಾನವಾಗಿದೆ. ಜರ್ಮನಿಯವರ ಬೆಂಬಲವೂ ಸಹಾಯಸಂಪತ್ತುಗಳೂ ಇದ್ದಾಗ್ಯೂ ಟರ್ಕಿಯವರು ಎಲ್ಲಾ ಕಡೆಗಳಲ್ಲೂ ಸೋತು ಹಿಮ್ಮೆಟ್ಟುತ್ತಲಿದಾರೆ. ಇತರ ರಣರಂಗಗಳಲ್ಲಿ ನಿಲುಗಡೆ ಇಲ್ಲದಂತೆ ಕದನಗಳು ಘೋರವಾಗಿ ನಡೆಯುತ್ತಿದ್ದರೂ ಯಾವ ಕಡೆಯವರಿಗೂ ವಿಶೇಷ ಫಲವೇನೂ ಲಭ್ಯವಾಗಿರುವುದಿಲ್ಲ.

ಪಶ್ಚಿಮ ರಣರಂಗದಲ್ಲಿ.

ಫ್ರೆಂಚರು ಇರುವ ಭಾಗದಲ್ಲಿ ಕದನಗಳು ವೆರ್ಡೂನ್ ಕೋಟೆಯ ಸುತ್ತಲೇ ಬಹಳ ವಿಶೇಷವಾಗಿ ನಡೆಯುತ್ತಲಿವೆ. ಫಿರಂಗಿ ಗುಂಡುಗಳ ಮಳೆಯು ವಿಪರೀತವಾಗಿ ಸುರಿಯುತ್ತಿರುವುದು. ಜರ್ಮನಿಯವರು ಪದೇಪದೇ ಫ್ರೆಂಚ್ ಸೈನಿಕರ ಮೇಲೆ ನುಗ್ಗಿ ಬಂದು ಯುದ್ಧಮಾಡಿದರು. ಆದರೆ ಪ್ರತಿ ಸಲವೂ ಅವರು ಬಹಳವಾಗಿ ಸೋತು ಹಿಮ್ಮೆಟ್ಟಬೇಕಾಯಿತು. ಅಂಥಾದ್ದರಲ್ಲೂ ಫ್ರೆಂಚ್ ಸೈನಿಕರು ನುಗ್ಗಿಹೋಗಿ ಜರ್ಮನಿಯವರ ವಶದಲ್ಲಿದ್ದ ಹಲವು ಕಂದಕಗಳನ್ನೂ, ಕೋಟೆಗಳನ್ನೂ ಕಿತ್ತು ಸ್ವಾಧೀನಪಡಿಸಿಕೊಂಡದ್ದಲ್ಲದೆ ಅನೇಕ ಸೈನಿಕರನ್ನೂ ಕೈಸೆರೆ ಹಿಡಿದು ತಂದಿದಾರೆ. ಈಚೆಗೆ ಜರ್ಮನಿಯವರು ವೆರ್ಡೂನ್‌ನಲ್ಲಿ ಮೊದಲಿನಷ್ಟು ರಭಸದಿಂದ ನುಗ್ಗಿ ಕದನಮಾಡುತ್ತಾ ಇಲ್ಲವೆಂಬುದೂ, ಅವರು ಆ ಪಟ್ಟಣದ ಸಮೀಪಕ್ಕೆ ಬಾರದೆ ಇನ್ನೂ ದೂರದಲ್ಲೇ ಇರುತ್ತಾರೆನ್ನುವುದೂ ಗೋಚರವಾಗುತ್ತದೆ.

ಈಗೀಗ ಜರ್ಮನಿಯವರು ಫ್ರೆಂಚರಿರುವ ಇತರ ಠಾಣ್ಯಗಳ ಮೇಲೂ ನುಗ್ಗಿ ಅವರನ್ನು ಸಡಲಿಸಬೇಕೆಂದು ಪ್ರಯತ್ನಪಡುತ್ತಿದಾರೆ. ಇತರ ಭಾಗಗಳಲ್ಲೂ ಅವರು ಫಿರಂಗಿ ಗುಂಡುಗಳ ಮಳೆ ಸುರಿಸುತ್ತಿರುವಂತೆ ಈಗ ತಿಳಿದುಬಂದಿದೆ. ಅಂಥಾ ಕಡೆಗಳಲ್ಲೂ ಫ್ರೆಂಚರು ಜರ್ಮನಿಯವರ ಕಂದಕಗಳನ್ನು ಸ್ವಾಧೀನಮಾಡಿಕೊಂಡಿದಾರೆ.

ಬ್ರಿಟಿಷ್ ಸೈನ್ಯಗಳಿರುವ ಠಾಣ್ಯಗಳು ಈಗ 90 ಮೈಲಿ ತನಕ ವ್ಯಾಪಿಸಿಕೊಂಡಿವೆ. ಈ ಸೈನ್ಯ ಸಾಲುಗಳಲ್ಲಿ ಫಿರಂಗಿ ಗುಂಡುಗಳ ಮಳೆ ಸುರಿಯುತ್ತಲೇ ಇದೆ. ಜರ್ಮನಿಯವರು ಹಲವು ಠಾಣ್ಯಗಳ ಮೇಲೆ ನುಗ್ಗಿಬಂದು ಕದನಮಾಡಿ ಒಂದು ಕಡೆ ಮಾತ್ರ 500 ಗಜಗಳಷ್ಟು ಕಂದಕಗಳನ್ನು ಸ್ವಾಧೀನಪಡಿಸಿಕೊಂಡರು. ಆದರೆ ಸ್ವಲ್ಪ ಹೊತ್ತಿನೊಳಗಾಗಿ ಬ್ರಿಟಿಷರು ನುಗ್ಗಿ ಕದನಮಾಡಿ ಆ ಪೈಕಿ ಬಹು ಭಾಗವನ್ನು ಮತ್ತೆ ಗೆದ್ದುಕೊಂಡರು. ಈ ಭಾಗದಲ್ಲಿ ನಡೆಯುತ್ತಿರುವ ಯುದ್ಧದ ಕ್ರಮ ಹೇಗಿದೆ ಎಂದರೆ—ಜರ್ಮನಿಯವರ ಕಂದಕಗಳು ಬ್ರಿಟಿಷ್ ಸೈನಿಕರಿರುವ ಕಂದಕಗಳಿಂದ ಬಹಳ ದೂರದಲ್ಲಿಲ್ಲ. ಮಧ್ಯೆ ಇರುವ ಬೈಲು ಪ್ರದೇಶದಲ್ಲಿ ಸೈನಿಕರು ಪರಸ್ಪರ ನುಗ್ಗಿಹೋಗಿ ಶತ್ರುಗಳ ಕಂದಕಗಳಿಗೆ ಕೈಯಿಂದಲೇ ಸಿಡಿಮದ್ದಿನ ಗುಂಡುಗಳನ್ನು ಹೊಡೆದು, ಸೈನಿಕರನ್ನು ಕೊಲ್ಲುವರು; ಇಲ್ಲವೇ ಕೈಸೆರೆ ಹಿಡಿಯುವರು. ಬಳಿಕ ತಮ್ಮ ಕಂದಕಗಳಿಗೆ ಹೋಗಿ ಸೇರಿಕೊಳ್ಳುವರು. ಈ ಪ್ರಕಾರವಾಗಿ ಅನೇಕ ಸೈನಿಕರು ಕೊಲೆಯಾಗುತ್ತಾರೆ; ಅನೇಕರು ಗಾಯಹೊಂದುವರು. ಒಂದು ಠಾಣ್ಯದಲ್ಲಿ ಬ್ರಿಟಿಷರು ಜರ್ಮನಿಯವರನ್ನು ಹೊಡೆದೋಡಿಸಿಬಿಟ್ಟು 250 ಗಜಗಳ ದೂರ ಕಂದಕಗಳನ್ನು ಗೆದ್ದು ಆಕ್ರಮಿಸಿಕೊಂಡರು.

ಫ್ರೆಂಚರು ಮತ್ತೂ ಬ್ರಿಟಿಷರು ಇರುವ ಎರಡು ವಿಭಾಗಗಳಲ್ಲೂ ಅಂತರಿಕ್ಷದಲ್ಲಿ ಯುದ್ಧಗಳು ನಡೆದಿವೆ. ಕೆಲವು ದಿನ 30-40 ಸಲ ವಿಮಾನಗಳಲ್ಲಿ ಅಂತರಿಕ್ಷಕ್ಕೆ ಹಾರಿಹೋಗಿರುವುದೂ ಉಂಟು. ಜರ್ಮನಿಯವರ ಹಲವು ವಿಮಾನ ಯಂತ್ರಗಳು ನಾಶಮಾಡಲ್ಪಟ್ಟವು. ಮಿತ್ರ ಮಂಡಲಿಯವರ ಕಡೆಯಲ್ಲೂ ಕೆಲ

ನಷ್ಟವಾಗಿರುತ್ತವೆ. ಬ್ರಿಟಿಷರ ಅನೇಕ ವಿಮಾನ ಯಂತ್ರಗಳು ಹೋಗಿ ಶತ್ರುವಿನ ರೈಲ್ವೆ ಸ್ಟೇಷನ್‌ಗಳ ಮೇಲೂ, ಸೈನಿಕರ ಕ್ಯಾಂಪುಗಳಿಗೂ, ಸಾಮಾನು ಮದ್ದು ಗುಂಡು ಆಹಾರ ಪದಾರ್ಥಗಳಿರುವ ಠಾಣ್ಯಗಳಿಗೂ ಸಿಡಿಮದ್ದಿನ ಗುಂಡುಗಳನ್ನು ಸುರಿಸಿ ಬಹಳವಾಗಿ ನಷ್ಟಪಡಿಸಿರುವುವು.

ಈಗ ಬ್ರಿಟಿಷರಿಗೆ ಬೇಕಾಗುವಷ್ಟು ಫಿರಂಗಿ ಗುಂಡುಗಳೂ, ಸಿಡಿಮದ್ದಿನ ಗುಂಡುಗಳೂ, ಇತರ ಯುದ್ಧಸಾಮಗ್ರಿಗಳೂ ಹೇರಳವಾಗಿ ಒದಗುತ್ತಿರೋಣದರಿಂದ ಅವರು ಫಿರಂಗಿ ಗುಂಡುಗಳನ್ನು ಸಿಲುಗಡೆ ಇಲ್ಲದೆ ಶತ್ರುವಿನ ಮೇಲೆ ಸುರಿಸುತ್ತಾ ಬರ ಬಹುದಾಗಿದೆ.

ಬೆಲ್ಜಿಯಮ್ ತೀರದಿಂದ ಸ್ವಲ್ಪ ದೂರದಲ್ಲಿ ಬ್ರಿಟಿಷರ ಮತ್ತು ಜರ್ಮನಿಯವರ ಡಿಸ್ಟ್ರಾಯರೆಂಬ ಹಡಗುಗಳು ಸಂಧಿಸಿ ಸಮುದ್ರ ಯುದ್ಧವಾಯಿತು. ಸ್ವಲ್ಪ ಹೊತ್ತು ಯುದ್ಧ ನಡೆದ ಬಳಿಕ ಜರ್ಮನಿಯ ಹಡಗುಗಳು ಹಿಂದಕ್ಕೆ ಹೋಗಿ ತಮ್ಮ ತೀರಪಟ್ಟಣಗಳಲ್ಲಿ ಸೇರಿಕೊಂಡವು. ಸಿಡಿಮದ್ದಿನ ಗುಂಡುಗಳನ್ನು ಸಮುದ್ರದೊಳಗೆ ಇಟ್ಟು ಹೋಗುವಂಥಾ ಒಂದು ಜರ್ಮನೀ ಹಡಗು ಸಿಡಿಮದ್ದಿನ ಗುಂಡಿಗೆ ಬಡಿದು ಮುಳುಗಿಹೋಯಿತು.

ಪೂರ್ವ ರಣರಂಗದಲ್ಲಿ.

ಪೂರ್ವ ರಣರಂಗದಿಂದ ಬಂದಿರುವ ಸಮಾಚಾರಗಳು ಬಹಳ ಸ್ವಲ್ಪ. ಕೆಲವು ಠಾಣ್ಯಗಳಲ್ಲಿ ಫಿರಂಗಿ ಗುಂಡುಗಳ ಹಾರಾಟವೂ, ಶತ್ರುವಿನ ಮೇಲೆ ಬಿದ್ದು ಕದನ ಮಾಡುವುದೂ ನಡೆದಿವೆ. ಆದರೆ ಪ್ರಾಮುಖ್ಯವಾದ ಸಂಗತಿಗಳೇನೂ ಸಂಭವಿಸಿಲ್ಲ. ರಷ್ಯಾದವರು ಒಂದೆರಡು ಠಾಣ್ಯಗಳಲ್ಲಿ ಮುಂದಕ್ಕೆ ನುಗ್ಗಿ ಹೋಗಿದಾರೆ.

ಇಟಲಿ.

ಇಟಲಿಯ ಉತ್ತರ ಪಾರ್ಶ್ವದಲ್ಲಿ ವಿಶೇಷ ಕದನಗಳಾಗಿವೆ. ಆಸ್ಟ್ರಿಯಾ ದವರು ಹೊಸದಾಗಿ ಹೆಚ್ಚು ಫಿರಂಗಿಗಳನ್ನೂ ಸೈನ್ಯಗಳನ್ನೂ ತಂದು ಇಟಲಿಯವರ ಮೇಲೆ ನುಗ್ಗಿ ಕದನ ಮಾಡಿದರು. ಇಟಲಿಯವರು ತಮ್ಮ ಮುಂಭಾಗದಲ್ಲಿದ್ದ ಸೈನ್ಯಗಳನ್ನು ಹಿಂದಕ್ಕೆ ಸೆಳೆಸಿಕೊಂಡು ತಮ್ಮ ಸಾಲುಗಳನ್ನು ನೆಟ್ಟಗೆ ಸರಿಪಡಿಸಿಕೊಂಡರು. ಆಸ್ಟ್ರಿಯಾದವರು 3,000 ಇಟಲಿ ಸೈನ್ಯವನ್ನು ಕೈಸೆರೆ ಹಿಡಿದಿರುವಂತೆ ತಿಳಿಸುತ್ತಾರೆ. ಆಸ್ಟ್ರಿಯಾದವರು ಅಪಾರ ಸೈನ್ಯಗಳನ್ನು ಏಕಕಾಲದಲ್ಲಿ ಒಟ್ಟೊಟ್ಟಾಗಿ ನುಗ್ಗಿಸಿದ್ದರಿಂದ ಅವರ ಸೈನ್ಯದಲ್ಲಿ ಅನೇಕರನ್ನು ಕಳೆದುಕೊಂಡರು. ಆಸ್ಟ್ರಿಯಾದವರ ಹೆಣಗಳು ಅನೇಕವಾಗಿ ಹೊಳೆಯಲ್ಲಿ ಕೊಚ್ಚಿಕೊಂಡು ಹೋದವು. ಬಳಿಕ ಇಟಲಿಯವರು ನುಗ್ಗಿ ಹೋಗಿ ಆಸ್ಟ್ರಿಯಾದವರ ಮೇಲೆ ಯುದ್ಧಮಾಡಿ ನೂರಾರು ಮಂದಿಯನ್ನು ಸೈಸೆರೆ ಹಿಡಿದು ತಂದರು. ಇಟಲಿಯವರು ಈಗ ಸೋಲಾದದ್ದನ್ನು ಅಷ್ಟೇನೂ ವಿಶೇಷವಾದದ್ದೆಂದು ಎಣಿಸುವುದಿಲ್ಲ. ಅವರು ಇತರ ಠಾಣ್ಯಗಳಲ್ಲಿ ಹೊಸ ಪ್ರದೇಶಗಳನ್ನು ಗೆದ್ದಿರುತ್ತಾರೆ.

ಆಸ್ಟ್ರಿಯಾದವರು ವಿಮಾನ ಯಂತ್ರಗಳಲ್ಲಿ ಹೋಗಿ ವೆನ್ನಿಸ್ ಪಟ್ಟಣಕ್ಕೂ ಆ ಸುತ್ತಮುತ್ತಿನಲ್ಲೂ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದರು. ವಿಶೇಷ ನಷ್ಟವೇನೂ ಆಗಲಿಲ್ಲ. ಇಬ್ಬರು ಕೊಲೆಯಾದರು ; ಕೆಲವರಿಗೆ ಗಾಯಗಳಾಗಿವೆ.

ಟರ್ಕಿಯಲ್ಲಿ.

ಈ ರಣರಂಗದಿಂದ ಅನೇಕ ಶುಭವರ್ತಮಾನಗಳು ಬಂದಿರುತ್ತವೆ. ರಷ್ಯಾದವರು ಪ್ರತಿ ಒಂದು ಠಾಣ್ಯದಲ್ಲೂ ಮುಂದುಮುಂದಕ್ಕೆ ನುಗ್ಗಿ ಹೋಗಿರುತ್ತಾರೆಂದೂ, ಟರ್ಕಿಯವರನ್ನು ಸೋಲಿಸಿ ಹಿಮ್ಮೆಟ್ಟಿಸುತ್ತಿದಾರೆಂದೂ ಗೊತ್ತಾಗುವುದು. ಈಗ ಯುದ್ಧದ ಸಾಲು ಕಪ್ಪುಸಮುದ್ರದಿಂದ ಹಿಡಿದು ಮೆಸ್ಸೊಪೊಟೇಮಿಯಾ ವರೆಗೆ ವ್ಯಾಪಿಸಿಕೊಂಡಿದೆ. ಸಮುದ್ರದ ಬಳಿ ರಷ್ಯಾದವರು ಟ್ರೆಬಿಜೊಂಡಿನಿಂದ ಪಶ್ಚಿಮಕ್ಕೆ 70 ಮೈಲಿ ವರೆಗೆ ನುಗ್ಗಿ ಹೋಗಿದಾರೆ. ಅರ್ಮೇನಿಯದ ಮಧ್ಯ ಭಾಗದಲ್ಲಿ ಟರ್ಕಿಯವರು ಯುದ್ಧಕೊಡುವುದಕ್ಕೆ ತಯಾರಿ ಮಾಡಿಕೊಳ್ಳುತ್ತಿರುವರು. ಅವರ ಸಹಾಯಕ್ಕೆ ಕೆಲವು ಜರ್ಮನಿ ಸೈನಿಕರು ಹೊಸದಾಗಿ ಹೋಗಿರುವಂತೆ ಕಾಣುವುದು. ರಷ್ಯಾದವರು ನುಗ್ಗಿ ಹೋಗುತ್ತಿದ್ದಾಗ ಟರ್ಕಿಯವರು ಅವರ ಮೇಲೆ ನುಗ್ಗಿದರು. ಕದನಮಾಡಿದಾಗ್ಯೂ ಅವರು ರಷ್ಯಾದವರ ದೊಡ್ಡ ಸೈನ್ಯಗಳನ್ನು ಹಿಂದಕ್ಕೆ ತಿರುಗಿಸಲಾರದೆ ಹೋದರು. ಈ ಮುತ್ತಿಗೆಯಾದಾಗ ರಷ್ಯಾದವರು 30 ಮಂದಿ ಉದ್ಯೋಗಸ್ಥರನ್ನೂ, 365 ಮಂದಿ ಸೈನಿಕರನ್ನೂ, ಅಪಾರ ಮದ್ದು ಗುಂಡನ್ನೂ ಸ್ವಾಧೀನಪಡಿಸಿಕೊಂಡರು. ಈ ಪ್ರದೇಶದಲ್ಲಿ ಬಹುಬೇಗ ವಿಶೇಷ ಕದನಗಳಾಗಬಹುದೆಂದು ಕಾಣುತ್ತದೆ. ಅಲ್ಲಿಂದ ದಕ್ಷಿಣಕ್ಕೆ ರಷ್ಯಾದವರು ಮೊಸಲ್ ನಗರಕ್ಕೆ 80 ಮೈಲಿ ಸಮೀಪಕ್ಕೆ ಬಂದಿದಾರೆ. ಈ ನಗರವು ಟೈಗ್ರಿಸ್ ನದಿಯ ದಡದ ಮೇಲೆ ಇದೆ ; ಬಹು ಪ್ರಸಿದ್ಧವಾದ ಮುಖ್ಯಪಟ್ಟಣ ; ಮತ್ತು ಬಾಗ್ದಾದಿನಿಂದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ಹೋಗುವ ರೈಲ್‌ಮಾರ್ಗದಲ್ಲಿ ಒಂದು ದೊಡ್ಡ ರೈಲ್ವೆ ಸ್ಟೇಷನ್ ಆಗಿದೆ. ರಷ್ಯಾದವರು ಈ ನಗರವನ್ನು ತಲಪಿ ರೈಲ್ವೆಯನ್ನು ಸ್ವಾಧೀನಪಡಿಸಿಕೊಂಡಲ್ಲಿ ಬಾಗ್ದಾದಿಗೂ ಕಾನ್‌ಸ್ಟಾಂಟಿನೋಪಲ್‌ಗೂ ಮಾರ್ಗವೇ ಕಟ್ಟುಹೋಗುತ್ತದೆ. ಅಲ್ಲಿಂದ ಇನ್ನೂ ದಕ್ಷಿಣಕ್ಕೆ ರಷ್ಯಾದವರು 10 ಗಂಟೆಗಳ ಹೊತ್ತು ಯುದ್ಧಮಾಡಿ ಟರ್ಕಿಯವರನ್ನು ಪರ್ಷಿಯಾದಿಂದ ಹೊರಡಿಸಿದ್ದಾಯಿತು. ಇದರಿಂದ ರಷ್ಯಾದವರು ಇನ್ನೊಂದು ಕಡೆಯಿಂದಲೂ ಬಾಗ್ದಾದ್ ನಗರದ ಮೇಲೆ ನುಗ್ಗಿ ಹೋಗಲು ಸಲಭವಾಗಿದೆ. ಈಗ ಟರ್ಕಿಯವರು ಹೊಸ ಸೈನ್ಯಗಳನ್ನೂ ಫಿರಂಗಿಗಳನ್ನೂ ಕಳುಹಿಸಿಕೊಡದೇಹೋದಪಕ್ಷದಲ್ಲಿ ರಷ್ಯಾದವರು ನುಗ್ಗಿ ಹೋಗುತ್ತಿರುವುದನ್ನು ಅಡ್ಡಪಡಿಸುವುದು ಅವರಿಂದ ಸಾಧ್ಯವಾಗದೆಂದು ಹೇಳಬಹುದಾಗಿದೆ.

ಈ ಯುದ್ಧದಲ್ಲಿ ಇಂಗ್ಲಿಷರೂ ರಷ್ಯಾದವರೂ ಪರಿ ಪರಸ್ಪರ ಸಹಾಯ ಮಾಡುತ್ತಿದಾರೆ. ಕುಟೆಲ್ ಅಮರಾದಲ್ಲಿದ್ದ ಸೈನ್ಯವು ಶತ್ರುವಿನ ವಶವಾದಾಗ್ಯೂ, ರಷ್ಯಾ ಮತ್ತು ಬ್ರಿಟಿಷ್ ಸೈನ್ಯಗಳು ಬೇಗನೆ ಕಲೆಯುವವೆಂದೂ, ಅವರು ಒಟ್ಟಾಗಿ ಟರ್ಕಿಯವರ ಮೇಲೆ ಬಿದ್ದು ಯುದ್ಧಮಾಡುವರೆಂದೂ ತೋರುತ್ತದೆ.

ಟರ್ಕಿಯವರು ಬ್ರಿಟಿಷರ ಒಂದು ಸಣ್ಣ ಯುದ್ಧದ ಹಡಗನ್ನು ಮುಳುಗಿಸಿದಾರೆಂದು ಹೇಳಲಾಗಿದೆ. ಅದರಲ್ಲಿ ಬ್ರಿಟಿಷ್ ನಾವಿಕರಿಬ್ಬರು ಕೊಲೆಯಾದರು; ಇಬ್ಬರು ಗಾಯಪಟ್ಟರು. ಆದರೆ ಇದು ಸಂಭವಿಸಿದ ಸ್ಥಳವ್ಯಾವುದೋ ತಿಳಿಸಿಲ್ಲ.

ಟರ್ಕಿಯವರು ಕರ್ಬೇಲಾದಲ್ಲಿ ಮಹಮದೀಯ ಯಾತ್ರಾರ್ಥಿಗಳನ್ನು ಬಹಳ ಕಷ್ಟನಷ್ಟಗಳಿಗೆ ಗುರಿಮಾಡುತ್ತಿದಾರೆ. ಮಹಮದೀಯರು ಕರ್ಬೆಲಾವಿಗೆ ಹೋಗುವುದು ವಿಶೇಷ. ಹಿಂದುಸ್ತಾನದಿಂದ ಹೋಗಿರುವ ಕೆಲವು ಮಹಮದೀಯರ ಮೇಲೆ ಟರ್ಕಿಯವರು ಬಿದ್ದು ಅವರ ಬಳಿ ಇದ್ದದ್ದನ್ನೆಲ್ಲಾ ದೋಚಿಕೊಂಡು, ಹೊಟ್ಟೆಗಿಲ್ಲದೆ ಸಾಯುವಂತೆ ಮಾಡಿದರು.

ಈಜಿಪ್ಟಿನಲ್ಲಿ.

ಈಗ ಬ್ರಿಟಿಷರು ಈಜಿಪ್ಟಿನಿಂದ ಸೈನ್ಯಗಳನ್ನು ಕಳುಹಿಸಿ ಟರ್ಕಿಯವರನ್ನೂ ಅರಬ್ಬಿಯವರನ್ನೂ ಹಿಂದುಹಿಂದಕ್ಕೆ ಓಡಿಸುತ್ತಿದಾರೆ. ಅವರು ಹಲವೆಡೆಗಳಲ್ಲಿ ಕಾಡನ್ನು ದಾಟಿ ಹೋಗಿರುವರು. ಶತ್ರುವಿನ ಹಲವು ಕ್ಯಾಂಪುಗಳನ್ನು ನಾಶಮಾಡಿದರು. ಅನೇಕ ಒಂಟೆಗಳನ್ನೂ ಅಪಾರ ಮದ್ದು ಗುಂಡನ್ನೂ ಕಿತ್ತುಕೊಂಡರು. ನೀರು ದೊರಕುವಂಥಾ ಸ್ಥಳಗಳನ್ನು ಆಕ್ರಮಿಸಿಕೊಂಡಿದಾರೆ.

ಬಾಲ್ಕನ್ ಸಂಸ್ಥಾನಗಳಲ್ಲಿ.

ಬಾಲ್ಕನ್ ಸಂಸ್ಥಾನಗಳಲ್ಲಿ ಯುದ್ಧಗಳು ನಡೆದ ಸುದ್ದಿಯೇನೂ ಬಂದಿಲ್ಲ. 1,50,000 ಸರ್ಬಿಯಾ ಸೈನ್ಯಗಳು ಯುದ್ಧಭೂಮಿಗೆ ನುಗ್ಗಿ ಹೋಗಲು ತಯಾರಾಗಿವೆ. ಫ್ರೆಂಚರ ವಿಮಾನಯಂತ್ರಗಳು ಜರ್ಮನರ ಮತ್ತು ಬಲ್ಗೇರಿಯಾದವರ ಠಾಣ್ಯಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಸುರಿಸಿದವು. ಗ್ರೀಸಿನವರೂ ಮಿತ್ರಮಂಡಲಿಯವರೂ ಒಂದಾದರೆಂದೂ, ಆದರೆ ಗ್ರೀಸಿನವರು ಯುದ್ಧಮಾಡುವುದಕ್ಕೆ ಬರುವುದಿಲ್ಲವೆಂದೂ ಹೇಳಲಾಗಿದೆ. ಗ್ರೀಸ್ ರಾಜ್ಯದವರಿಗೆ ಹಣ ಸಾಲಮಾಡಬೇಕೆಂಬ ಆತುರವಿದೆ; ಸಾಲ ಕೊಡುವುದಕ್ಕೆ ಯಾರೂ ಒಪ್ಪುವುದಿಲ್ಲ.

ಪೂರ್ವ ಆಫ್ರಿಕಾದಲ್ಲಿ.

ಪೂರ್ವ ಆಫ್ರಿಕಾದಲ್ಲಿ ವಿಶೇಷ ಕದನಗಳು ನಡೆದಿವೆ. ಜರ್ಮನಿಯವರು ಹೊಸ ಸೈನ್ಯಗಳನ್ನು ಕೂಡಿಸಿ ತಂದು ತಾ 5 ರಲ್ಲೂ, ಬಳಿಕ ತಾ. 9,10,11 ರಲ್ಲೂ ಜನರಲ್ ಸ್ಮಟ್ಸ್‌ರವರ ಸೈನ್ಯದ ಮೇಲೆ ನುಗ್ಗಿಸಿ ಕದನಮಾಡಿದರು. ಪ್ರತಿಸಲವೂ ಬ್ರಿಟಿಷರು ಅವರನ್ನು ಸೋಲಿಸಿ ಹಿಮ್ಮೆಟ್ಟಿಸಿಬಿಟ್ಟರು. ಆ ಪೈಕಿ ಒಂದು ಕದನದಲ್ಲಿ ಶತ್ರುವಿನ ಕಡೆ 50 ಮಂದಿ ಕೊಲೆಯಾದರು; ಅವರಲ್ಲಿ ಜರ್ಮನಿಯವರು ಇಬ್ಬರು ತೀರಿಹೋದರು.

ಪಶ್ಚಿಮ ಪ್ರಾಂತ್ಯದಲ್ಲಿ ಬೆಲ್ಜಿಯನ್ನರು ಮುಂದು ಮುಂದಕ್ಕೆ ನುಗ್ಗಿ ಹೋಗುತ್ತಲೇ ಇದಾರೆ. ಜರ್ಮನಿಯವರನ್ನು ಹಿಂದಕ್ಕೆ ಓಡಿಸುತ್ತಿರುವರು. ಅಲ್ಲಿಂದ ದಕ್ಷಿಣಭಾಗದಲ್ಲಿ ಜರ್ಮನಿಯವರು ಪೋರ್ಚುಗೀಸರ ಸ್ವಾಸ್ಥ್ಯದ ಮೇಲೆ ನುಗ್ಗಿ ಹೋದರು; ಆದರೆ ಅಲ್ಲಿಂದ ಹಿಂದಕ್ಕೆ ಓಡಿಸಲ್ಪಟ್ಟರು.

ಐರ್ಲೆಂಡಿನಲ್ಲಿ.

ದಂಗೆಕೋರರಲ್ಲಿ 14 ಮಂದಿಯನ್ನು ಗುಂಡಿನಿಂದ ಹೊಡಿಸಿ ಕೊಲ್ಲಿಸಿದರೆಂದೂ, 79 ಜನರನ್ನು ಬಂದೀಖಾನೆಗೆ ಹಾಕಿದರೆಂದೂ, 1,706 ಮಂದಿಯನ್ನು ಐರ್ಲೆಂಡಿನಿಂದ ಗಡೀಪಾರು ಮಾಡಿದರೆಂದೂ ಇಂಗ್ಲಿಷ್ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ತಿಳಿಸಲಾಗಿದೆ. ಸಭ್ಯ ಪ್ರಜೆಗಳಲ್ಲಿ 180 ಜನರು ಕೊಲೆಯಾದರು; 614 ಜನಗಳಿಗೆ ಗಾಯಗಳಾದವು. ಇವರಲ್ಲಿ ಕೆಲವರು ದಂಗೆಕೋರರೂ ಇದ್ದರು. ದಂಗೆಕೋರರನ್ನೂ ಇತರರನ್ನೂ ಬೇರ್ಪಡಿಸುವುದು ಸಾಧ್ಯವಾಗಲಿಲ್ಲ. ದಂಗೇಕೋರರ ಇಸ್ತಿಹಾರುನಾಮೆಗೆ ರುಜು ಮಾಡಿದ್ದವರನ್ನೆಲ್ಲಾ ಹಿಡಿದು ಗುಂಡಿಗೆ ಕಟ್ಟಿ ಕೊಂದುಹಾಕಿದರು.

ಸರ್ ರೋಜರ್ ಕೇಸ್ಮೆಂಟನನ್ನೂ, ಅವನ ಕೂಡ ಜರ್ಮನಿಯಿಂದ ಬಂದಿದ್ದ ಬೇಲಿ ಎಂಬವನನ್ನೂ ಮ್ಯಾಜಿಸ್ಟ್ರೇಟರು ತನಿಖೆಮಾಡಿ, ಜಡ್ಜಿಗಳ ದರ್ಯಾಫ್ತಿಗೆ ಗುರಿಮಾಡಿದ್ದಾಯಿತು. ಸಾಕ್ಷಿಗಳ ಕೈಫಿಯತ್ತಿನಿಂದ ಸರ್ ರೋಜರನು ಜರ್ಮನಿಯಲ್ಲಿ ಕೈಸೆರೆಯಲ್ಲಿದ್ದ ಬ್ರಿಟಿಷ್ ಸೈನಿಕರನ್ನು ಹೋಗಿ ಕಂಡು, ಅವರೆಲ್ಲಾ ಜರ್ಮನಿಯವರ ಪಕ್ಷವನ್ನು ವಹಿಸುವಂತೆ ಬೋಧನೆ ಮಾಡಿದನೆಂದೂ, ಅದೇ ಪ್ರಕಾರ 60 ಮಂದಿ ಐರ್ಲೆಂಡಿನ ಸೈನಿಕರು ಜರ್ಮನಿಯವರ ಪಕ್ಷವನ್ನು ವಹಿಸಿದರೆಂದೂ, ಉಳಿದವರೆಲ್ಲಾ ಅವನನ್ನೂ ಅವನು ಹೇಳಿದ ಆಲೋಚನೆಗಳನ್ನೂ ಪರಿಹಾಸ್ಯಮಾಡಿ ನಿರಾಕರಿಸಿಬಿಟ್ಟರೆಂದೂ ಗೊತ್ತಾಗುತ್ತದೆ. ಸರ್ ರೋಜರನೂ, ಬೇಲಿಯೂ ಒಂದು ಸಬ್‌ಮೆರೀನಿನಲ್ಲಿ ಜರ್ಮನಿಯಿಂದ ಹೊರಟು ಬಂದು ಐರ್ಲೆಂಡಿಗೆ ಸ್ವಲ್ಪ ದೂರದಲ್ಲಿ ಒಂದು ದೋಣಿಗೆ ಹತ್ತಿ ದಡವನ್ನು ಸೇರಿದರು. ಆದರೆ ಅವರು ಸ್ವಲ್ಪ ದೂರ ಹೋಗುವಷ್ಟರೊಳಗೇ ದಸ್ತಗಿರಿ ಮಾಡಲ್ಪಟ್ಟರು. ಜರ್ಮನಿಯವರು 20,000 ಬಂದೂಕುಗಳನ್ನೂ, ಲಕ್ಷಾಂತರ ತೋಟಾಗಳನ್ನೂ ಒಂದು ಹಡಗಿನಲ್ಲಿ ಭರ್ತಿಮಾಡಿ ಐರ್ಲೆಂಡಿಗೆ ಕಳುಹಿಸಿದರು. ಆದರೆ ಬ್ರಿಟಿಷರು ಅದನ್ನು ಹಿಡಿದು ಸಮುದ್ರದಲ್ಲಿ ಮುಳುಗಿಸಿಬಿಟ್ಟರು.

ಹಿಂದುಸ್ತಾನದ ಮಾಜಿ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್‌ರವರು ಐರ್ಲೆಂಡಿನ ದಂಗೆ ವಿಚಾರಗಳನ್ನು ಕುರಿತು ತನಿಖೆ ಮಾಡುವ ಕಮೀಷನ್ನಿಗೆ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುತ್ತಾರೆ. ಪಂಚಾಯತಿಯವರು ತನಿಖೆಯನ್ನು ಪ್ರಾರಂಭ ಮಾಡಿಯವರು. ಈ ದಂಗೇ ವಿಚಾರದಲ್ಲಿ ಐರ್ಲೆಂಡಿನ ಪ್ರಜೆಗಳಲ್ಲೆಲ್ಲಾ 11,000 ಜನರು ಮಾತ್ರ ದುರ್ಮಾರ್ಗಪ್ರವರ್ತಕರಾಗಿದ್ದರೆಂದು ಹೇಳಲಾಗಿದೆ.

ಬ್ರಿಟಿಷ್ ಮಂತ್ರಿಶ್ರೇಷ್ಠರಾದ ಮ|| ಆಸ್ಕ್ವಿತ್‌ರವರು ಕಳೆದ ವಾರವೆಲ್ಲಾ ಐರ್ಲೆಂಡಿನಲ್ಲೇ ಇದ್ದು ಬಂದರು. ಐರ್ಲೆಂಡಿನ ಆಳ್ವಿಕೆಯ ಕ್ರಮಗಳಲ್ಲಿ ಕೆಲವು ಬದಲಾವಣೆಗಳಾಗಬಹುದು. ಈಗಿನ ಯುದ್ಧವು ಮುಗಿಯುವ ತನಕ ಅದು ಸಾವಕಾಶವಾಗುವಂತೆ ಕಾಣುವುದಿಲ್ಲ.

ಇತರ ವಿಷಯಗಳು.

ಸಸ್ಸೆಕ್ಸ್ ಎಂಬ ಜಹಜನ್ನು ಟಾರ್ಪೆಡೋ ಬಡಿಸಿ ಮುಳುಗಿಸಿದ ಸಬ್‌ಮೆರೀನಿನ ಅಧಿಪತಿಯನ್ನು ಯಾವ ರೀತಿ ಶಿಕ್ಷೆ ಮಾಡಿದೀರಿ ಎಂದು ಅಮೇರಿಕದವರು ಜರ್ಮನಿಯವರನ್ನು ವಿಚಾರಣೆಮಾಡುತ್ತಿದಾರೆ. ಆ ಜಹಜಿನಲ್ಲಿ ಸ್ಪೇಯಿನಿನ ಕೆಲವು ಪ್ರಜೆಗಳಿದ್ದರು. ಜರ್ಮನಿಯವರು ಸ್ಪೇಯಿನ್‌ನವರ ಕ್ಷಮಾಪಣೆಯನ್ನು ಬೇಡಿದರಲ್ಲದೆ ನಷ್ಟಪಟ್ಟವರಿಗಾಗಿ ಪರಿಹಾರ ದ್ರವ್ಯವನ್ನು ಕೊಡುತ್ತೇವೆಂದು ಒಪ್ಪಿಕೊಂಡರು. ಗ್ರೇಟ್ ಬ್ರಿಟನ್ನವರಿಗೂ ಅಮೇರಿಕದವರಿಗೂ ಉಂಟಾಗಿರುವ ಮನಸ್ತಾಪಗಳನ್ನು ಹಿಂದೆ ಆಗಿರುವ ಕರಾರುಗಳನ್ನನುಸರಿಸಿ ಇತ್ಯರ್ಥಮಾಡಿಕೊಳ್ಳುವವರಾಗಿದಾರೆ. ಜರ್ಮನಿಯವರಿಗೆ ಇದು ಸ್ಪಂಸದು; ಅವರು ಹೇಗಾದರೂ ಗ್ರೇಟ್ ಬ್ರಿಟನ್ನವರಿಗೂ ಅಮೇರಿಕದವರಿಗೂ ವೈಮನಸ್ಯಗಳು ಹುಟ್ಟಿ ಪ್ರಬಲವಾಗಬೇಕೆಂದು ಕುತೂಹಲಪಡುವರು.

ಜರ್ಮನಿಯೊಳಗೆ ಆಹಾರ ದಿನಸುಗಳಿಗೆ ಬಹಳ ಕೊರತೆಯುಂಟಾಗಿದೆ ಎಂದು ತಿಳಿಸಲ್ಪಟ್ಟಿದೆ. ಇದಕ್ಕಾಗಿ ಸರ್ಕಾರದವರು ಪ್ರತ್ಯೇಕವಾದ ಒಬ್ಬ ಅಧಿಕಾರಿಯನ್ನು ನೇಮಿಸುತ್ತಾರಂತೆ. ಒಂದು ಪಟ್ಟಣದಲ್ಲಿ ಮಾತ್ರ ಜನಗಳಿಗೆ ವಾರ ಕ್ಕೊಂದಾವರ್ತಿ ತಲೆಗೆ ಕಾಲು ಪೌನ್ ತೂಕದಷ್ಟೇ ಮಾಂಸವನ್ನು ಬಟವಾಡೆ ಮಾಡುತ್ತಿರುವರು. ಇದು ದಿನಗಟ್ಟಲೆಗೂ ಸಾಲದು. ಜರ್ಮನಿಯವರು ಆಕ್ರಮಿಸಿಕೊಂಡಿರುವ ಪೋಲೆಂಡಿನಲ್ಲಿ ಪ್ರಜೆಗಳು ಹೊಟ್ಟೆಗಿಲ್ಲದೆ ಸಾಯುವ ಗತಿ ಪ್ರಾಪ್ತವಾಗಿರೋಣದರಿಂದ ಅವರಿಗೆ ಅಮೇರಿಕದವರು ಆಹಾರ ದಿನಸುಗಳನ್ನು ಕಳುಹಿಸುವವರಾಗಿದಾರೆ. ಆಹಾರ ಪದಾರ್ಥಗಳ ಕ್ರಯಗಳು ವಿಯನ್ನಾ ಪಟ್ಟಣದಲ್ಲಿ ನೇಕಡಾ 110 ರಷ್ಟು, ಬರ್ಲಿನ್ ನಗರದಲ್ಲಿ 100 ರಷ್ಟು, ಲಂಡನ್ ಪಟ್ಟಣದಲ್ಲಿ 55 ರಷ್ಟು ಹೆಚ್ಚು ಇರುತ್ತವೆ.

ಕಳೆದ ವಾರ ಮುಳುಗಿಸಲ್ಪಟ್ಟ ಹಡಗುಗಳು ಬಹಳ ಸ್ವಲ್ಪ. ಜರ್ಮನಿಯವರು ಐದು ಹಡಗುಗಳನ್ನು ಮಾತ್ರ ಮುಳುಗಿಸಿದರು. ಈ ಪೈಕಿ ಮೂರು ಬ್ರಿಟಿಷರದು (ಒಂದೇನೋ ಬಹಳ ಸಣ್ಣದು), ಒಂದು ಡಚ್ಚರದು, ಇನ್ನೊಂದು ಫ್ರೆಂಚರದು. ಎಚ್ಚರಿಕೆ ಕೊಡದೇನೇ ಆ ಪೈಕಿ ಒಂದನ್ನು ಮುಳುಗಿಸಿರುತ್ತಾರೆ. ಅದರೊಳಗೆ ಮೂವರು ಅಮೇರಿಕದವರಿದ್ದರು. ಬಾಲ್ಟಿಕ್ ಕಡಲಿನೊಳಗೆ ಎಚ್ಚರಿಕೆ ಕೊಟ್ಟು ಜರ್ಮನಿಯವರ ಮೂರು ಹಡಗುಗಳನ್ನು ರಷ್ಯಾದವರು ಮುಳುಗಿಸಿದಾರೆ.

ನಾರ್ವೆಯ ತೀರದಿಂದ ಸ್ವಲ್ಪ ದೂರದಲ್ಲಿ ಬ್ರಿಟಿಷರ ಡಿಸ್ಟ್ರಾಯರೆಂಬ ಜಹಜುಗಳು ಜರ್ಮನಿಯ ಜೆಪ್ಪೆಲಿನ್ ಎಂಬ ದೊಡ್ಡ ವಿಮಾನವನ್ನು ಅಂತರಿಕ್ಷದಲ್ಲಿ ಕಂಡು ಅದಕ್ಕೆ ಗುರಿಕಟ್ಟಿ ಗುಂಡುಗಳನ್ನು ಹೊಡೆದವು. ಆಗ ಮಂಜು ಮುಸುಕಿದ್ದರಿಂದ ಆ ವಿಮಾನಯಂತ್ರಕ್ಕೆ ಗುಂಡು ತಗುಲಿದರೂ ಕಾಣಿಸದೆಹೋಯಿತು.

ಹಿಂದುಸ್ತಾನದಲ್ಲಿದ್ದ ಶತ್ರು ರಾಜ್ಯಗಳ ಪ್ರಜೆಗಳನ್ನು ಕೂಡಿಸಿ ಗೋಲ್ಕೊಂಡ ಎಂಬ ಜಹಜಿನಲ್ಲಿ ಬ್ರಿಟಿಷರು ಸಾಗಿಸಿಬಿಟ್ಟರಷ್ಟೆ. ಆ ಜಹಜು ಈಗ ಲಂಡನ್ ಪಟ್ಟಣವನ್ನು ತಲಪಿದೆ.

ಬ್ರಿಟನ್ನಿನಲ್ಲಿ ವಯಸ್ಕರಾದ ಗಂಡಸರೆಲ್ಲಾ ಸೈನ್ಯಕ್ಕೆ ಸೇರಿಕೊಳ್ಳಬೇಕೆಂಬ ಮಸೂದೆ ಕಾನೂನು ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭಾಮನೆಯಲ್ಲಿ ಪ್ಯಾಸಾಗಿರುತ್ತದೆ. ಅದಕ್ಕೆ 250 ಮಂದಿ ಮೆಂಬರುಗಳು ಸಮ್ಮತಿ ಹಾಕಿದರು; 35 ಮೆಂಬರುಗಳು ಮಾತ್ರ ಒಪ್ಪಲಿಲ್ಲ. ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟಿನ ಎರಡನೇ ಸಭಾಮನೆಯಲ್ಲಿ ಈ ಮಸೂದೆಯ ವಿಷಯದಲ್ಲಿ ಭಿನ್ನಾಭಿಪ್ರಾಯವೇನೂ ಹುಟ್ಟುವುದಿಲ್ಲವಾದಕಾರಣ ಅದು ಬೇಗನೆ ಕಾನೂನಾಗಿ ಜಾರಿಯಲ್ಲಿ ಬಂದೀತು.

ಸರ್ ಎಡ್ವರ್ಡ್ ಗ್ರೇಯವರ ಕೂಡ ಮಾತನಾಡುವಲ್ಲಿ ಅವರು ಪ್ರತ್ಯುತ್ತರವಾಗಿ—ನಾವು ಜರ್ಮನಿಯನ್ನು ನಾಶ ಮಾಡಬೇಕೆಂದು ಅಪೇಕ್ಷಿಸುವುದಿಲ್ಲ ; ಯುದ್ಧಾಪೇಕ್ಷಿಗಳು ಜರ್ಮನಿಯಲ್ಲಿ ತಮ್ಮ ಅಧಿಕಾರ ಬಲವನ್ನು ತೋರಿಸದಂತೆ ಅಡಗಿಸಲ್ಪಟ್ಟರೆ ಸಾಕು : ಮುಂದೆ ಯುದ್ಧಗಳು ಪ್ರಾಪ್ತವಾಗದಂತೆ ಮಾಡಬೇಕೆಂಬುವುದೇ ನಮ್ಮ ಮುಖ್ಯ ಉದ್ದೇಶ ಎಂಬೀ ರೀತಿ ಹೇಳಿದಾರೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಕಳೆದ ಶನಿವಾರ ರಾತ್ರಿ ಶೃಂಗೇರಿಯಿಂದ ಮೋಟಾರಿನಲ್ಲಿ ರಾಜಧಾನಿಗೆ ಚಿತ್ತೈಸಿದರು. ಮಹಾಮಾತೃಶ್ರೀ ಮಹಾರಾಣಿಯವರು ಕಳೆದ ಬುಧವಾರ ನೀಲಗಿರಿಗೆ ಪಯಣಮಾಡಿದರು.

ನಂಜನಗೂಡಿನ ಶ್ರೀಮತಿ ತಿರುಮಲಮ್ಮನವರು ಕಳೆದ ಶನಿವಾರ ಬೆಂಗಳೂರಿನ ಮಹಿಳಾ ಸೇವಾ ಸಮಾಜದಲ್ಲಿ ಕೂಡಿದ್ದ ಸುಮಾರು 61 ಮಂದಿ ಮಹಿಳೆಯರನ್ನು ಕುರಿತು ಸೇವೆ ಎಂಬ ವಿಷಯವನ್ನು ವಿವರಿಸಿ ಬಹಳ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು.

ತೀರ್ಥಹಳ್ಳಿ ಟವನ್ನಿನಲ್ಲಿ ಸರ್ಕಾರದವರು ಕನ್ನಡ ಹೈಸ್ಕೂಲು ಇಟ್ಟಿದಾರೆಂದೂ, ಲೋ ಸೆ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಜೂನ್ ತಿಂಗಳ ಮೊದಲನೇ ವಾರದೊಳಗಾಗಿ ಸ್ಕೂಲಿಗೆ ಬಂದು ದಾಖಲಾಗಬಹುದೆಂದೂ ಹೆಡ್ ಮಾಸ್ಟರು ತಿಳಿಸುತ್ತಾರೆ.

ಮುಂದಿನ ಸೋಮವಾರ ಸಕಲೇಶಪುರದಲ್ಲಿ ತಾಲ್ಲೂಕ್ ಕಾನ್‌ಫರೆನ್ಸು ನಡೆಯುತ್ತದೆ. ಪರಸ್ಥಳದ ಮೆಂಬರುಗಳಿಗೆ ಭೋಜನಾದಿ ಸೌಕರ್ಯಗಳನ್ನು ಕೋಮುವಾರು ಮ|| ಗಳಾದ ಬೆಳ್ಳೂರು ದ್ಯಾವಪ್ಪಗೌಡರೂ, ದೇವಾಲಯದ ಕೆರೆ ಪುಟ್ಟೆಗೌಡರೂ, ಸೋಮೇಗೌಡರೂ ನಡಿಸುವುದಕ್ಕೆ ಒಪ್ಪಿಕೊಂಡಿದಾರೆ.

ಮ|| ಜಿ. ಪಿ. ಧರಣಯ್ಯನವರು ಶ್ರವಣಬೆಳಗೊಳದಲ್ಲಿ ಬಹು ಉದಾರವಾಗಿ ನಾನಾ ಧರ್ಮಕಾರ್ಯಗಳನ್ನು ನಡಿಸುತ್ತಿರುವುದನ್ನು ಕಂಡು ಅಲ್ಲಿನ ಮಠದ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳವರು ಕಳೆದ ಸೋಮವಾರ ಮಧ್ಯಾಹ್ನ ಒಂದು ಸಂತೋಷ ಕೂಟವನ್ನು ನಡಿಸಿ ಮ|| ಧರಣಯ್ಯನವರಿಗೆ ಒಂದು ಬಿರುದನ್ನು ದಯಪಾಲಿಸಿದರೆಂದು ಕೇಳಿ ಸಂತೋಷಪಡುತ್ತೇವೆ.

ರಾಜಧಾನಿಯಲ್ಲಿ ಮಹಾರಾಜಾ ಕಾಲೇಜಿನ ಹೈ ಸ್ಕೂಲ್ ತರಗತಿಗಳನ್ನು ಹೊಸ ಜನರಲ್ ಆಸ್ಪತ್ರೆಯಲ್ಲಿ ಮಾಡುವಂತೆ ಮೊದಲು ತೀರ್ಮಾನವಾಗಿತ್ತು. ಕಳೆದ ವಾರ ದಿವಾನ್‌ರವರು ಅಜಮಾಯಿಷಿಯಿಂದ ಅದನ್ನು ತಪ್ಪಿಸಿ, ಜಗನ್ಮೋಹನ ಬಂಗಲೆಯ ವಿವಾಹ ಮಂಟಪದಲ್ಲಿ ಕ್ಲಾಸುಗಳನ್ನು ಇಡಬೇಕೆಂದು ಗೊತ್ತುಮಾಡಿ ಅಲ್ಲಿ ಅದಕ್ಕಾಗಿ ಬೇಕಾದ ಬದಲಾವಣೆಗಳನ್ನು ಜಾಗ್ರತೆಯಿಂದ ಮಾಡಿಸುವಂತೆ ಅಪ್ಪಣೆಕೊಟ್ಟರು.

ಬೆಂಗಳೂರಿನಲ್ಲಿ ರಿಟೈರ್ಡ್ ಸರ್ವೆ ಡೆಪ್ಯುಟಿ ಸೂಪರಿನ್‌ಟೆಂಡೆಂಟ್ ಮ|| ಯಲ್ಲೂರು ಶ್ರೀನಿವಾಸರಾಯರಿಗೆ ಕಳೆದ ವಾರ ವೃದ್ಧಾಪ್ಯದ ಬೇಸಿಗೆಯಿಂದ ಪಾರ್ಶ್ವವಾಯು ಪ್ರಾಪ್ತವಾಗಿ ಅಸ್ವಾಸ್ಥ್ಯಕ್ಕೆ ಬಂದದ್ದನ್ನು ಕಂಡು 60 ವಯಸ್ಸಿನ ಅವರ ಪತ್ನಿ ಶ್ರೀಮತಿ ಕೃಷ್ಣಾಬಾಯಮ್ಮನವರು ತಮಗೆ ವೈಧವ್ಯ ಪ್ರಾಪ್ತವಾದೀತೆಂದು ಶಂಕೆಪಟ್ಟು ಕಳೆದ ಶನಿವಾರ ಉಟ್ಟಸೀರೆಗೆ ದೀಪದ ಎಣ್ಣೆ ಸುರಿದು ದೀಪ ಹಚ್ಚಿ ಆತ್ಮಹತ್ಯ ಮಾಡಿಕೊಂಡರು. ಆಕೆಯ ಪತಿಯು ಕಾಯಿಲೆ ವಾಸಿಯಾಗದೆ ಕಳೆದ ಸೋಮವಾರ ತೀರಿಹೋದರು.

ಮ|| ಸಿ. ಕೆ. ರಾವ್, ಸೆಕ್ರಿಟರಿ ಇವರು ಬರೆಯುವುದು—ಶಿವಮೊಗ್ಗಾ ಡಿಸ್ಟ್ರಿಕ್ಟ್ ನಗರದಲ್ಲಿ ಇದೇ ಮೇ ತಾ. 28-29-30 ಮತ್ತು 31 ರಲ್ಲಿ ಸರ್ವ ವಸ್ತುಪ್ರದರ್ಶನವು ನಗರದ ಓಲ್ಡ್ ಸ್ಟೂಡೆಂಟ್ಸ್ ಸಂಘದ ಪರವಾಗಿ ನಡೆಯುವುದು. ಮತ್ತು ಪಂದ್ಯಗಳು ಸಹಾ ನಡೆಯುವವು. ಮುಖ್ಯವಾಗಿ ಗ್ರಾಮಾರೋಗ್ಯ ದೇಹಾರೋಗ್ಯದ ವಿಷಯವಾಗಿ ಜನರಿಗೆ ತಿಳಿಯುವಂತೆ ಮಾಡ್ರಿ ಮನೆ ಮುಂತಾದವುಗಳು ತೋರಿಸಲ್ಪಡುವವು. ಆ ವಿಷಯವಾಗಿ ಅಲ್ಲಿರುವವರು ವಿವರಿಸುವರು. ಎಲ್ಲರೂ ದಯವಿಟ್ಟು ಬಂದು ಪ್ರದರ್ಶನದ ಪ್ರಯೋಜನವನ್ನು ಪಡೆಯುತ್ತಾರಾಗಿ ಸಂಘದ ಮೆಂಬರುಗಳು ಕೋರುತ್ತಾರೆ.

ಮ|| ಎಸ್. ಶಿವಪ್ಪ, ಸೆಕ್ರಿಟರಿ ಇವರು ಬರೆಯುವುದು—ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಛತ್ರದಲ್ಲಿ ಎರಸ್ಥರ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಡಾಗಿದೆ. ವಿದ್ಯಾರ್ಥಿಗಳು ಮೈಸೂರು ದೇಶೀಯರಾಗಿಯೂ, ಇಂಗ್ಲೀಷ್ ಲೋ. ಸೆಕೆಂಡರಿಗೆ ಕಡಮೆ ಇಲ್ಲದ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಾಗಿಯೂ ಇರಬೇಕು. ಮತ್ತು ಪ್ರೌಢ ವಿದ್ಯಾಭ್ಯಾಸಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರೆಯುವದು. ಚೈತನ್ಯವಿಲ್ಲವೆಂಬುವದಕ್ಕೆ ಸ್ಥಳೀಯ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ ತಾವು ಹಿಂದೆ ಓದಿದ ಸ್ಕೂಲ್ ಯಾ ಕಾಲೇಜ್ ಮುಖ್ಯೋಪಾಧ್ಯಾಯರಿಂದಲೂ ಸಹ ತಮ್ಮ ಯೋಗ್ಯತಾ ವಿಚಾರವಾಗಿ ಸರ್ಟಿಫಿಕೇಟ್ ತರತಕ್ಕದ್ದು. ಗತವರ್ಷ ಛತ್ರದಲ್ಲಿದ್ದ ವಿದ್ಯಾರ್ಥಿಗಳಲ್ಲಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಮೊದಲು ಅವಕಾಶ ಕೊಟ್ಟು ಅನಂತರ ಇತರರಿಗೆ ಅವರ ಯೋಗ್ಯತಾ ಪ್ರಕಾರ ಸಾಧ್ಯವಾದಷ್ಟು ಕ್ಲುಪ್ತವಾಗಿ ಸ್ಥಳ ದೊರೆಯುತ್ತೆ. ಇಚ್ಛೆಯುಳ್ಳವರು ಜೂನ್ ತಿಂಗಳು 15 ನೇ ತಾ. ಒಳಗೆ ಅರ್ಜಿ ಹಾಕತಕ್ಕದ್ದು.

ಮೈಸೂರು ಗೆಜೆಟ್ ಸಂಗ್ರಹ.

ಮ|| ಕೆ. ಎಸ್. ಚಂದ್ರಶೇಖರಯ್ಯರವರು ಕೌನ್ಸಿಲ್ ಮೆಂಬರಾಗಿರುವಾಗ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಮೈಸೂರು ಡಿವಿಜನ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮ|| ಮೀರ್ ಹಂಜಾ ಹುಸ್ಸೇನ್‌ರವರು ಚೀಫ್ ಕೋರ್ಟಿನ ಜಡ್ಜರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮತ್ತೊಂದು ಹುಕುಂ ಕೊಡಲ್ಪಡುವತನಕ ಮುಂದೆ ಹೇಳುವ ಬದಲಾವಣೆಗಳು ಜಾರಿಯಲ್ಲಿರತಕ್ಕದ್ದು :—ಬೆಂಗಳೂರು ಸಬ್ ಜಡ್ಜ್ ಮ|| ಬಿ. ಸುಬ್ಬಣ್ಣನವರು ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿಯೂ, ಬೆಂಗಳೂರು 2 ನೇ ಮುನ್ಸಿಫ್ ಮ|| ಎಸ್. ಕೃಷ್ಣರಾಯರು ಬೆಂಗಳೂರು ಸಬ್ ಜಡ್ಜರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ.

ಮೈಸೂರು ಇನ್‌ಫೆಂಟ್ರಿ 3 ನೇ ಬಟಾಲಿಯನ್ನಿನಲ್ಲಿ ಹಾವಿಲ್ದಾರುಗಳಾದ ಮಹಮದ್ ಮುಸ್ತಫಾ, ಲಿಂಗಯ್ಯ, ಮಹದೇವರಾವ್, ಕೃಷ್ಣಲಾಲ್ ಇವರುಗಳನ್ನು 2 ನೇ ಗ್ರೇಡ್ ಜಮಾದಾರಿಗೆ ಬಡ್ತಿಮಾಡಲಾಗಿದೆ.

ಮೈಸೂರು ಇಂಪೀರಿಯಲ್ ಟ್ರಾನ್ಸ್‌ಪೋರ್ಟ್ ಕೋರ್ ಸೈನ್ಯದಲ್ಲಿ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸುಬೇದಾರ್ ಮಹಮದ್ ಅಜೀಮ್ ಖಾನ್‌ರವರು ಡಿವಿಜನ್ ಕಮ್ಯಾಂಡರಾಗಿಯೂ, ಜಮಾದಾರ್ ಹೀರಸಿಂಗ್‌ರವರು ಸುಬೇದಾರರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ.

ಸಬ್ ಜಡ್ಜರುಗಳಾದ ಮ|| ಎಸ್. ಕೃಷ್ಣರಾಯರನ್ನು ಶಿವಮೊಗ್ಗೆಗೂ, ಮ|| ಕೆ. ಲಕ್ಷ್ಮೀನಾರಾಯಣಯ್ಯನವರನ್ನು ಶಿವಮೊಗ್ಗೆಯಿಂದ ಬೆಂಗಳೂರಿಗೂ ವರ್ಗಮಾಡಿದೆ.

ಅ|| ಕಮಿಷನರ್ ಮ|| ಎ. ವಿ. ರಾಮನಾಥನ್‌ರವರನ್ನು ರೆವಿನ್ಯೂ ಕಮಿಷನರವರ ಅಸಿಸ್ಟೆಂಟರಾಗಿಯೂ, ಮ|| ಟಿ. ಆ. ಜಯರಾಮ ಅಯ್ಯರನ್ನು ಗವರ್ನ್‌ಮೆಂಟ್ ಅಂಡರ್ ಸೆಕ್ರಿಟರಿಯಾಗಿಯೂ ವರ್ಗಮಾಡಿದೆ.

ಮ|| ಎಂ. ಲಕ್ಷ್ಮಣಶಾಸ್ತ್ರಿಯವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿರೋಣದರಿಂದ ಮ|| ಸಿ. ಗೋಪಾಲಾಚಾರ್ರಿ ಶಿವಮೊಗ್ಗಾ ಸಬ್ ಡಿವಿಜನ್ ಆಫೀಸರಾಗಿಯೂ, ಶಿವಮೊಗ್ಗಾ ವೈಸ್ ಪ್ರೆಸಿಡೆಂಟ್ ಮ|| ಟಿ. ವೆಂಕಟರಾಮಯ್ಯನವರು ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜಿನಲ್ಲೂ ಇರತಕ್ಕದ್ದು.

ರೆವಿನ್ಯೂ ಸರ್ವೆ ಸಬ್ ಅ|| ಸೂ|| ಮ|| ವೈ. ನಂಜುಂಡಯ್ಯನವರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ಎಚ್. ವ್ಯಾಸರಾಯರು ಅವರ ಕೆಲಸದ ಛಾರ್ಜನ್ನು ವಹಿಸಿರತಕ್ಕದ್ದು.

ಶಿವಮೊಗ್ಗಾ ಡಿ|| ಎಕ್ಸೈಸ್ ಆಫೀಸರ್ ಮ|| ಎಂ. ಪಿ. ವಿಶ್ವನಾಥರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ತರೀಕೆರೆ ಅಮಲ್ದಾರ್ ಮ|| ಷೇಕ್ ಅಬ್ದುಲ್ಲಾಯವರು ಅವರ ಕೆಲಸವನ್ನು ಬದಲಿ ನೋಡತಕ್ಕದ್ದು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1916 ನೇ ಇಸವಿ ಮೇ 11 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ.

ದೇಣಿ:—(1) ಷೇರು ಮೊಬಲಗು	....	ರೂ. 10,00,000
,, (2) ರಿಜರ್ವ್ ಫಂಡು	....	,, 76,000
,, (3) ಡಿಪಾಜಿಟ್ಟುಗಳು	....	,, 41,19,031
,, (4) ಇತರೆ	....	,, 97,357
(ಆಣೆ ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 52,91,378

ಲೇಣಿ:—(1) ಕೈಯಲ್ಲೂ, ಬ್ಯಾಂಕುಗಳಲ್ಲಿರುವ ಹಣ		ರೂ. 6,61,890
,, (2) ಖಾತೆ ಮತ್ತು ಇತರ ಸಾಲಗಳು	......	,, 37,17,368
,, (3) ಡಿಸ್ಕೌಂಟುಮಾಡಿದ ವಾಯಿದೆ ಹುಂಡಿಗಳು		,, 4,32,020
,, (4) ಇನ್ವೆಸ್ಟ್‌ಮೆಂಟುಗಳು	....	,, 4,32,410
,, (5) ಏಜೆನ್ಸಿಗಳಲ್ಲಿರುವ ಮೊಬಲಗು	......	,, 7,052
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	......	,, 19,547
,, (7) ಇತರೆ	....	,, 21,091
(ಆಣೆ, ಕಾಸು ಬಿಟ್ಟಿರುತ್ತೆ.)	ಜುಮ್ಲಾ	ರೂ. 52,91,378

ಎ. ರಾಮಸ್ವಾಮಯ್ಯ, ಆ : ಮ್ಯಾನೇಜರ್.

ಯುದ್ಧಪ್ರಕರಣದಲ್ಲಿ 1,30,00,000 ಪ್ರಾಣ ನಷ್ಟವು.

ಅಮೇರಿಕದವರ ಅಂದಾಜು.

1916 ನೇ ತಾರೀಖು ವರೆಗೆ ಈಗಿನ ಯೂರೊಪ್ ಖಂಡದ ಯುದ್ಧಭೂಮಿಗಳಲ್ಲಿ ಸಂಭವಿಸಿರುವ ನಷ್ಟವನ್ನು ಜನರಲ್ ಎಚ್. ಎ. ಸ್ಕಾಟ್ ಎಂಬ ಅಮೇರಿಕದ ದಳಪತಿಯು ಕೂಡಿಸಿ ಅಮೇರಿಕದ ಯುದ್ಧದ ಇಲಾಖಾ ಅಧಿಕಾರಿಗಳಿಗೆ ತಿಳಿಯಪಡಿಸಿರುತ್ತಾನೆ. ಅವುಗಳ ವಿವರವೇನೆಂದರೆ—

ನಷ್ಟವಾದ ಸೈನ್ಯಗಳು.

ಫ್ರಾನ್ಸ್ (ಮೃತಪಟ್ಟವರು 8,00,000)	20,00,000
ಜರ್ಮನಿ (,, 6,80,000)	25,00,000
ಆಸ್ಟ್ರಿಯಾ ಹಂಗೆರಿ	20,00,000
ರಷ್ಯ (ಮೃತಪಟ್ಟವರು 10,00,000)	50,00,000
ಗ್ರೇಟ್ ಬ್ರಿಟನ್	6,20,000
ಇಟಲಿ	1,75,000
ಸರ್ಬಿಯಾ	2,28,000
ಬೆಲ್ಜಿಯಮ್	1,60,000
ಟರ್ಕಿ	3,50,000
ಒಟ್ಟು	1,30,33,000

ಖರ್ಚಾಗಿರುವ ಹಣಗಳು.

ಈ ಯುದ್ಧಕ್ಕಾಗಿ ಎಲ್ಲಾ ರಾಜ್ಯಗಳವರೂ ಖರ್ಚುಮಾಡಿರುವ ದ್ರವ್ಯಗಳು ಎಷ್ಟೆಂದರೆ—[ಡಾಲರ್ 1 ಕ್ಕೆ ಸುಮಾರು 3 ರೂಪಾಯಿ.]

ಇಂಗ್ಲೆಂಡ್	ಡಾಲರ್	1,400,00,00,000
ಫ್ರಾನ್ಸ್	,,	750,00,00,000
ಜರ್ಮನಿ	,,	300,00,00,000
ಆಸ್ಟ್ರಿಯಾ	,,	550,00,00,000
ಇಟಲಿ	,,	450,00,00,000
ಒಟ್ಟು		3,950,00,00,000

ಸಮುದ್ರದ ಮೇಲೆ ಜಹಜುಗಳ ನಷ್ಟ.

	ಮಿತ್ರಮಂಡಲಿಯವರದು.	ಶತ್ರುಗಳದು.
ಯುದ್ಧದ ಜಹಜುಗಳು	9	3
ಕ್ರೂಸರುಗಳು	17	29
ಗನ್ ಬೋಟುಗಳು	5	17
ಸಬ್‌ಮೆರೀನುಗಳು	13	15
ಡಿಸ್ಟ್ರಾಯರುಗಳು	٦	14
ಮೈನ್ ಲೇಯರುಗಳು	1	2
ಎಂಗಿ ಲೈನರುಗಳು	7	13
	ಒಟ್ಟು 67	ಒಟ್ಟು 103

ಕನ್ನಂಬಾಡಿ ಕಟ್ಟೆಯನ್ನು ನೋಡುವುದಕ್ಕೆ ಹೋದದ್ದು.

ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರವರು ದಯವಿಟ್ಟು 25 ರೂಪಾಯಿಯನ್ನು ಸ್ಯಾಂಕ್ಷನ್ ಮಾಡಿದ್ದರಿಂದ ಮೈಸೂರಿಗೆ ಈ ಬೇಸಿಗೆ ರಜಾದಲ್ಲಿ ಬಂದಿರುವ ಸ್ಪೆಷಲ್ ವೆಕೇಷನ್ ತರಗತಿಯ ವಿದ್ಯಾರ್ಥಿಗಳಿಗೆ 19 ನೇ ತಾ. ಶುಕ್ರವಾರದ ದಿನ ಎರಡು ಮೋಟರ್ ಓಮ್ನಿಬಸ್ ಗಾಡಿಗಳಲ್ಲಿ ಕನ್ನಂಬಾಡಿ ಕಟ್ಟೆಗೆ ಪ್ರಯಾಣಮಾಡಿ ಅಲ್ಲಿ ನೋಡಬೇಕಾದ್ದನ್ನೆಲ್ಲಾ ನೋಡಿಕೊಂಡು ವಾಪಸು ಬರಲು ಸಾಧ್ಯವಾಯಿತು. ಅವರ ಜೊತೆಯಲ್ಲಿ ಸ್ಪೆಷಲ್ ವೆಕೇಷನ್ ತರಗತಿಯ ಸೂಪರಿಂಟೆಂಡೆಂಟರು ಡಾಕ್ಟರ್ ಪಾಲ್ ಚಿನ್ನಪ್ಪನವರೂ ಇತರ ಲೆಕ್ಚರರುಗಳೂ, ರೈಟರೂ, ಜವಾನರೂ ಪ್ರಯಾಣಮಾಡಿದರು. ಸೂಪರಿಂಟೆಂಡೆಂಟರು ತಮ್ಮ ಸ್ವಂತ ಕ್ಯಾಮರವನ್ನು ಜೊತೆಯಲ್ಲಿ ತಂದು ಎರಡು ಪ್ರತ್ಯೇಕವಾದ ಫೋಟೋಗಳನ್ನು ತೆಗೆದರು. ಸೆರೆದಿದ್ದ ಒಂದೇ ಒಂದು ಕಡಿಬಿನಲ್ಲಿ ಹರಿಯುತ್ತಿದ್ದ ನೀರಿನ ಫೋಟೋ ಒಂದು ; ಕಟ್ಟೆಯ ಮೇಲಿನಿಂದ ನದಿಯೂ ಆಫೀಸು ಬಿಲ್ಡಿಂಗುಗಳೂ ಬಹು ರಮಣೀಯವಾಗಿ ಕಾಣುವಂತೆ ತೆಗೆದ ಫೋಟೋ ಒಂದು. ಇವೆರಡಲ್ಲದೆ ಮೈಸೂರು ಟ್ರೈನಿಂಗ್ ಕಾಲೇಜಿನ ಮುಂಭಾಗದಲ್ಲಿ ಕಟ್ಟೆಗೆ ಹೊರಡುವುದಕ್ಕೆ ಮುಂಚೆ ವೆಕೇಷನ್ ತರಗತಿಯ ವಿದ್ಯಾರ್ಥಿಗಳೆಲ್ಲರೂ ಒಟ್ಟು ಸೇರಿದ್ದಾಗ ಅವರ ಗ್ರೂಪ್ ಫೋಟೋ ಒಂದನ್ನು ಮುಂಚೆಯೇ ತೆಗೆದಿದ್ದರು.

ಹುಣಸೂರಿಂದ ವಾಪಸು ಬಂದಿದ್ದ ಎರಡು ಮೋಟರ್ ಗಾಡಿಗಳಲ್ಲಿ ಆ ದಿನ ಮಧ್ಯಾಹ್ನ 12 ಗಂಟೆಗೆ ಎಲ್ಲರೂ ಕುಳಿತುಕೊಂಡು ಕಾವೇರಿ ರಿಜರ್ವಾಯರ್ ಬಳಿಗೆ ಪ್ರಯಾಣಮಾಡಿದರು. ನಡುಬೇಸಿಗೆಯಾಗಿದ್ದರೂ, ಅದರಲ್ಲೂ ಮಧ್ಯಾಹ್ನವಾಗಿದ್ದರೂ ಹವಾ ಬಹಳ ಹಿತನಾಗಿತ್ತು. ಬಿಸಿಲಿನ ಬೇಗೆಯಾಗಲೀ, ಮಳೆಯ ಹೊಡೆತವಾಗಲೀ ಇಲ್ಲದೆ ತಂಗಾಳಿ ಬೀಸುತ್ತಿತ್ತು. ಎಲ್ಲರೂ ಸೇರಿ 60 ಮಂದಿಯಾದ್ದರಿಂದ ಎರಡು ಮೋಟರುಗಳಿದ್ದರೂ ಸ್ಥಳಸಾಲದ್ದರಿಂದ ಅವರ ಪೈಕಿ 8 ಮಂದಿ ಎರಡು ಜಟಕಾ ಬಂಡಿಗಳನ್ನು ಗೊತ್ತುಮಾಡಿ ಬೆಳಗ್ಗೆ 9.30 ಗಂಟೆಗೆ ಪ್ರಯಾಣಮಾಡಬೇಕಾಯಿತು. ಈ 8 ಮಂದಿಯಲ್ಲಿ ರೈಟರೂ ಸೇರಿ ಮುಂಚಿತವಾಗಿ ಕಟ್ಟೆಯ ಬಳಿ ಹೋಗಿ ಅಲ್ಲಿ ಸರ್ವರಿಗೂ ತಿಂಡಿ ತೀರ್ಥಗಳಿಗೆ ಏರ್ಪಾಡು ಮಾಡಬೇಕೆಂದು ಆಲೋಚಿಸಿ ಮುಂಚಿತವಾಗಿ ಪ್ರಯಾಣ ಮಾಡಿದ್ದಾಗ್ಯೂ, ಆಕಸ್ಮಿಕವಾಗಿ ದಾರಿಯಲ್ಲಿ ಒಂದು ಜಟಕಾ ಗಾಡಿಯ ಅಚ್ಚು ಮುರಿದುಹೋದದ್ದರಿಂದ ರೈಟರು ಮುಂತಾದವರು ಬಹಳ ಹೊತ್ತಾದ ಮೇಲೆ ಕಟ್ಟೆಯನ್ನು ಸೇರಿದರು. ಹಾಗಾದರೂ ಅಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ಟರು ಮ|| ಎಲ್. ಸುಬ್ಬರಾಯರವರು ತುಂಬಾ ಸಹಾಯ ಮಾಡಿದ್ದರಿಂದ ತಿಂಡಿ ತೀರ್ಥಗಳಿಗೆ ಏರ್ಪಾಡು ಮಾಡುವುದು ಸಾಧ್ಯವಾಯಿತು.

ಕಟ್ಟೆಯನ್ನು ತಲುಪಿದ ಕೂಡಲೆ ಸರ್ವರೂ ಅಲ್ಲಿ ಒಟ್ಟಿಗೆ ಸೇರಿ ನೋಡಬೇಕಾಗಿದ್ದ ವಿಚಿತ್ರಗಳನ್ನೆಲ್ಲಾ 4-30 ಗಂಟೆಯ ವರೆಗೆ ನೋಡಿಕೊಂಡುಬಂದು ಅನಂತರ ಅಲ್ಲಿ ಫಲಾಹಾರಾದಿಗಳನ್ನು ಸ್ವೀಕರಿಸಿ ಆನಂದಭರಿತರಾಗಿ ಅಲ್ಲಿಂದ 5-15 ಗಂಟೆಗೆ ಹೊರಟು ಮೈಸೂರಿಗೆ ಸಾಯಂಕಾಲ 6-15 ಗಂಟೆಗೆ ಸುರಕ್ಷಿತವಾಗಿ ಬಂದು ಸೇರಿದರು.

ನಮ್ಮ ವಾಚಕ.

ತರೀಕೆರೆ ತಾಲ್ಲೋಕು ಶ್ಯಾನುಭೋಗರುಗಳ ಕಾನ್‌ಫರೆನ್ಸು.

ತರೀಕೆರೆ ತಾಲ್ಲೂಕಾಮಲೆ ಶ್ಯಾನುಭೋಗರುಗಳೆಲ್ಲಾ ಸೇರಿ ಮೇ ತಾ. 14 ರಲ್ಲು ತರೀಕೆರೆ ಕಸಬಾದಲ್ಲಿರುವ ಅತ್ತಿಗನಾಳು ಶಾ|| ಮ|| ವೆಂಕಟರಾಮಯ್ಯನವರ ನೂತನವಾದ ಮನೆಯಲ್ಲಿ ನಡಿಸಿದ ಪ್ರಥಮ ಮೀಟಿಂಗು ವಿಷಯಗಳು.

(1) ಮೈಸೂರು ಸೀಮೆಯ ಶಾನುಭೋಗರುಗಳ ಕೋರಿಕೆ ನಿವಾರಣೆ ಬಗ್ಗೆ ದೇವನಹಳ್ಳಿ ತಾ|| ಚನ್ನರಾಯಪಟ್ಟದ ಹೋಬಳಿ ಬೂದಿಗೆರೆ ಗ್ರಾಮದಲ್ಲಿ ಮ|| ಬಿ ಗುಂಡೂರಾಯರು ಮತ್ತು ಮ|| ಬಾಲೆಪುರದ ನಾರಾಯಣರಾಯರು ಸೇರಿ ಕಳೆದ ಮಾಹೆ ತಾ. 16 ರಲ್ಲಿ ಶ್ಯಾನುಭೋಗರುಗಳ ಇರಾದೆ ಪ್ರಕಾರ ನಡಿಸಿದ ಶ್ಯಾನುಭೋಗರ ಕಾನ್‌ಫರೆನ್ಸು ಸ್ಥಿರಪಡಿಸುವುದಕ್ಕೋಸ್ಕರ ತರೀಕೆರೆ ತಾಲ್ಲೂಕಿನಲ್ಲಿ ಒಂದು ಸಭೆ ಕಮಿಟಿ ಕೂಡಬೇಕೆಂತಲೂ, ಇದಕ್ಕಾಗಿ ಇದೇ ದಿವಸ ಈ ತಾಲ್ಲೂಕಾಮಲೆ ಎಲ್ಲಾ ಶಾನುಭೋಗರುಗಳೂ ಇಲ್ಲಿ ಸೇರಬೇಕಾಗಿ ಈ ಮುಂಚೆಯೇ ಈ ಗ್ರಾಮದ ಮ|| ನಾಡಿಗ ಫಣಿಯಪ್ಪನವರು ಪ್ರತಿ ಹೋಬಳಿ ಶ್ಯಾನುಭೋಗರಿಗೂ ತಿಳಿಯಪಡಿಸಿ ಅವರುಗಳನ್ನು ಈ ದಿವಸ ಇಲ್ಲಿಗೆ ಬರಮಾಡಿಕೊಂಡದ್ದರಲ್ಲಿ ಅತ್ತಿಗನ್ನಾಳು ಶ್ಯಾ|| ಮ|| ವೆಂಕಟರಾಮಯ್ಯನವರ ಹೊಸಮನೆಯಲ್ಲಿ ಹಾಜರಿದ್ದ ಶ್ಯಾನುಭೋಗರ ಸಮಕ್ಷಮ ಸಭೆ ಕಮಿಟಿ ಮೀಟಿಂಗು ಪ್ರಾರಂಭಿಸಿರುತ್ತದೆ.

(2) ಈ ಸಬ್ ಕಮಿಟಿಗೆ ಛೇರ್‌ಮೆನ್ ರಾಗಿರಲು ಹಾಜರಿದ್ದ ಶ್ಯಾನುಭೋಗರುಗಳು ಒಪ್ಪಿಗೆ ಕೊಟ್ಟ ಮೇರೆಗೆ ಮ|| ಅತ್ತಿಗನ್ನಾಳು ಶ್ಯಾ. ವೆಂಕಟರಾಮಯ್ಯನವರು ಪ್ರೆಸಿಡೆಂಟರಾಗಿರಲು ಸಂತೋಷದಿಂದ ಕೋರಿಕೊಂಡು ಇರುವದನ್ನು ಸದರಿಯವರು ಅಂಗೀಕರಿಸಿರುತ್ತಾರೆ.

(3) ಈ ಸಂಘಕ್ಕೆ ಸಹಾಯಕರಾಗಿ ಕಾರ್ಯನಿರ್ವಾಹಕರೇ ವಗೈರೆ ಕೆಲಸಗಳನ್ನು ನಡಿಸತಕ್ಕ ಬಗ್ಗೆ ತರೀಕೆರೆ ಕಸಬಾದಲ್ಲಿರುವ ಮ|| ನಾಡಿಗ ಫಣಿಯಪ್ಪನವರನ್ನು ಸೆಕ್ರೆಟರಿಯವರನ್ನಾಗಿಯೂ, ಬುಕ್ಕಾಂಬುದಿಯಲ್ಲಿರುವ ಉಬ್ರಾಣಿ ಶ್ಯಾ|| ಮ|| ಅಪ್ಪಾಜ್ಯಯನವರನ್ನು ಜಾಯಿಂಟು ಸೆಕ್ರೆಟರಿಯನ್ನಾಗಿಯೂ, ಮತ್ತು ಈ ಸಂಘಕ್ಕೆ ಕಾರ್ಯ ಊರ್ಜಿತವಾಗಿ ಸ್ಥಿರಪಡಿಸುವುದಕ್ಕೆ ಪ್ರತಿ ಒಂದು ಹೋಬಳಿಗೂ ಒಬ್ಬೊಬ್ಬ ಮೆಂಬರುಗಳನ್ನು ಚುನಾವಣೆ ಮಾಡಬೇಕೆಂತಲೂ, ಮತ್ತು ಈ ಸಂಘದವರು ಮಾಡತಕ್ಕ ಕೆಲಸದ ಮೇಲೆ ತನಿಖೆ ತೆಗೆದುಕೊಳ್ಳುವುದಕ್ಕೋಸ್ಕರ ಎಲ್ಲಾ ಶ್ಯಾನುಭೋಗರುಗಳ ಪರವಾಗಿ ಹೋಬಳಿಗೆ ಒಬ್ಬೊಬ್ಬರಂತೆ ಮೆಂಬರುಗಳನ್ನು ನೇಮಿಸಿಕೊಳ್ಳಬೇಕೆಂತಲೂ ತೀರ್ಮಾನ ಮಾಡಿದೆ.

(4) ಈ ಕಮಿಟಿ ಮೀಟಿಂಗಿನಲ್ಲಿ ಮೆಂಬರುಗಳನ್ನು ಚುನಾವಣೆ ಮಾಡತಕ್ಕ ಬಗ್ಗೆ ಪ್ರೆಸಿಡೆಂಟರೂ, ಸೆಕ್ರೆಟರಿಯವರೂ, ಜಾಯಿಂಟ್ ಸೆಕ್ರೆಟರಿಯವರೂ ಸೇರಿ ಹೋಬಳಿಗಳಿಗೆ ಹೋಗಿ ಅಲ್ಲಿ ಮೆಂಬರುಗಳನ್ನು ಚುನಾವಣೆ ಮಾಡತಕ್ಕದ್ದೆಂತಲೂ, ಈ ಕಾರ್ಯನಿರ್ವಾಹ ಅವಶ್ಯಪಟ್ಟು ಉತ್ಸಾಹಕೊಟ್ಟು ಪ್ರೋತ್ಸಾಹಿಸಿ ಅವಶ್ಯವಾದ ಏರ್ಪಾಡು ಮಾಡಬೇಕೆಂದು ತೀರ್ಮಾನಿಸಲಾಯಿತು.

(5) ಈ ಸಭೆ ಕಮಿಟಿಯು ಈ ಸಮುಸ್ತ ನಾಮಲೆ ಮಾಡತಕ್ಕ ಕಾನ್‌ಫರೆನ್ಸಿನ ಸಂಘಕ್ಕೆ ಒಳಪಟ್ಟದ್ದಾಗಿಯೂ, ಈ ತಾಲ್ಲೂಕಾಮಲೆ ಅನ್ವಯಿಸತಕ್ಕದ್ದಾಗಿಯೂ ಇರುತ್ತೆ.

ಹೋಬಳಿ ಮೀಟಿಂಗು ನಡೆದ ನಂತರ ಬೇರೆ ಮೀಟಿಂಗು ನಡಿಸತಕ್ಕ ತಾರೀಖನ್ನು ತಿಳಿಸಬೇಕೆಂತಲೂ, ಶ್ಯಾನುಭೋಗರುಗಳ ಕೊರತೆ ವಗೈರೆ ವಿಚಾರದಲ್ಲಿ ಜನರಲ್ ಮೀಟಿಂಗ್ ನಡಿಸಿ ವಿಷಯಗಳನ್ನು ಸಂಗ್ರಹಿಸಿ ಕೊರತೆಗಳನ್ನು ಶ್ರೀಮನ್ ಮಹಾರಾಜರವರ ಗೌರ್ನಮೆಂಟಿನಲ್ಲಿ ವಿಜ್ಞಾಪಿಸಿಕೊಳ್ಳುವುದಕ್ಕಾಗಿ ಹೆಡ ಕಾನ್‌ಫರೆನ್ಸಿಗೆ ರವಾನೆ ಮಾಡಬೇಕೆಂತಲೂ ತೀರ್ಮಾನ ಮಾಡಿಟ್ಟು ನಂತರ ನಮ್ಮನ್ನಾಳುತ್ತಿರುವ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರಿಗೂ, ರಾಜಮಂಡಲಿಯವರಿಗೂ, ಈ ಸಂಸ್ಥೆದ ಛೇರ್‌ಮೆನ್ ರಿಗೂ, ಸೆಕ್ರೆಟರಿ ಹೆಚ್. ರಾಮಯ್ಯನವರಿಗೂ. ಈ ಸಂಘವನ್ನು ಹೆಚ್ಚು ಸಾಹಸದಿಂದ ಏರ್ಪಾಡುಮಾಡಿರುವ ಮ|| ಬಿ ಗುಂಡೂರಾಯರು ಮತ್ತು ಮ|| ಬಿ. ನಾರಾಯಣರಾಯರು ವಗೈರೆ ಕಾರ್ಯನಿರ್ವಾಹಕರಿಗೂ ಶ್ರೇಯಸ್ಸು ಬಯಸಿ ಮುಕ್ತಾಯ ಮಾಡಲಾಯಿತು.

ಪ್ರತಿಕೃದರ್ಶಿ

ಶ್ರೀ ಶೃಂಗೇರಿ ಕುಂಭಾಭಿಷೇಕ ಮಹೋತ್ಸವವು.

ಕುಂಭಾಭಿಷೇಕ ಮಹೋತ್ಸವವು ತಾ. 10 ನೇ ಬುಧವಾರ ಪ್ರಾರಂಭವಾಗಿ 10 ದಿನಗಳು ನಡೆಯಿತು. ಬುಧವಾರ ಬೆಳಿಗ್ಗೆ ನಿಯಾಮಕರಾದ ಬ್ರಾಹ್ಮಣರು ಶ್ರೀಮಠದಿಂದ ಹೊಳೆಯ ಆಚೆ ನರಸಿಂಹ ವನಕ್ಕೆ ಹೋಗಿ ಅಲ್ಲಿ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ದರ್ಶನವಂ ಮಾಡಿ ಗುರ್ವನುಜ್ಞೆಯಂ ಪಡೆದು ಶಾರದಾ ದೇವಾಲಯಕ್ಕೆ ಬಂದರು. ಅಲ್ಲಿ ಕೆಲವರು ಜಪಕ್ಕೂ, ಇನ್ನು ಕೆಲವರು ಹೋಮ ಕಾರ್ಯಕ್ಕೂ, ಮತ್ತೆ ಕೆಲವರು ಪಾರಾಯಣಗಳಿಗೂ ನೇಮಿಸಲ್ಪಟ್ಟು ವೇದಘೋಷಗಳೊಡನೆ ಮಂಗಳ ತೂರ್ಯಗಳಿಂದಲೂ ಮಂಟಪದಿಂದಲೂ ಅಲಂಕರಿಸಲ್ಪಟ್ಟ ಶ್ರೀ ಶಾರದಾ ಯಾಗಶಾಲೆಯನ್ನು ಪ್ರವೇಶಿಸಿದರು. ಯಾಗ ಮಂಟಪದ ಜಗುಲಿಯಲ್ಲಿ ಕಲಶವನ್ನು ಪ್ರತಿಷ್ಠಾಪಿಸಿದರು. ಆ ರಾತ್ರಿಯಲ್ಲಿ ತಾ. 10 ರಿಂದ 18 ರ ವರಿಗೂ ಬೆಳಗಿನಿಂದ ಮಧ್ಯಾಹ್ನದ ತನಕಲೂ, ಸಾಯಂಕಾಲ 7 ರಿಂದ 10 ಗಂಟೆಯ ವರಿಗೂ ಜಪ ಹೋಮ ಪಾರಾಯಣಗಳೂ ದೀಪಾರಾಧನೆಯೂ ನಡೆಯುತ್ತಿದ್ದವು. ಶ್ರೀ ಜಗದ್ಗುರು ಸ್ವಾಮಿಗಳವರು ಪ್ರತಿ ದಿನವೂ ಪ್ರಾತಃಕಾಲ 10-11 ಗಂಟೆಗೆ ಹೊಳೆಯ ಈಚೆ ಮಠಕ್ಕೆ ದಯಮಾಡಿ ಶಾರದಾ ಯಾಗಶಾಲೆಯ ಕಾರ್ಯವನ್ನು ಪರಾಂಬರಿಸಿ ದೇವತಾ ಸಂದರ್ಶನವಂ ಮಾಡಿಕೊಂಡು, ಬಂದಿರುವ ಪರಸ್ಥಳದವರಿಗೆ ತೀರ್ಥಪ್ರಸಾದವನ್ನು ಅನುಗ್ರಹಿಸಿ ಹೊಳೆಯ ಆಚೆಗೆ ಚಿತ್ತೈಸುತ್ತಿದ್ದರು. ಪಾರಾಯಣ ಮಾಡುವ ಬ್ರಾಹ್ಮಣರಿಗೆ ಮಠದೊಳಗೆ ಭೋಜನ ಸಂತರ್ಪಣೆ ಏರ್ಪಡಿಸಲ್ಪಟ್ಟಿತ್ತು. ಸ್ಥಳ ಪರಸ್ಥಳಗಳ ಜನರಿಗೆ ಸಮಾರಾಧನೆಯು ಇದಕ್ಕಾಗಿ ಹಾಕಿರುವ ಹೊಳೆಯ ದಡದ ಚಪ್ಪರದಲ್ಲಿ ಎರಡು ಹೊತ್ತೂ ನಡೆಯುತ್ತಿದ್ದಿತು. ಪ್ರತಿ ದಿನವೂ ಜನಗಳ ವಿನೋದಾರ್ಥವಾಗಿ ಮಧ್ಯಾಹ್ನ 3 ರಿಂದ 6 ಗಂಟೆಯ ವರಿಗೆ ಕುರ್ತುಕೋಟಿಯ ಭಾಗವತರ ಹರಿಕಥಾ ಪ್ರಸಂಗವು ಏರ್ಪಡಿಸಲ್ಪಟ್ಟಿದ್ದಿತು. ಈ ಉತ್ಸವವನ್ನು ನೋಡಲು ಧಾರವಾಡ, ಸಾಲ್ಯ, ತಿರುಚಿನಾಪಳ್ಳಿ, ಮುಂತಾದ ಹೊರದೇಶಗಳಿಂದಲೂ. ಮೈಸೂರು ಪ್ರಾಂತ್ಯದಿಂದಲೂ ದೊಡ್ಡ ಮನುಷ್ಯರುಗಳೂ ಇತರ ನೋಟಕರೂ ಬಂದಿದ್ದರು. ದೊಡ್ಡ ಮನುಷ್ಯರ ವಾಸಕ್ಕನುಕೂಲವಾಗಿ ನರಸಿಂಹ ವನದಲ್ಲಿ 30-70 ಬಿಡಾರದ ಮನೆಗಳು ಕಟ್ಟಲ್ಪಟ್ಟಿದ್ದವಲ್ಲದೆ ಇತರ ಯಾತ್ರಿಕರ ವಾಸಾನುಕೂಲವಾಗಿಯೂ ಹೊಳೆಯ ದಡದಲ್ಲಿ ಮನೆಗಳು ಕಟ್ಟಲ್ಪಟ್ಟಿದ್ದವು. ನರಸಿಂಹ ವನದ ಮನೆಗಳಲ್ಲಿ ಸರದಾರ್ ಎಂ|| ರಾಜಾಸಾಹೇಬರು, ಎಂ|| ರಿಟೈರ್ಡ್ ಚೀಫ್ ಜಡ್ಜ್ ರಾಮಚಂದ್ರಯ್ಯರವರು, ಎಂ|| ಕೌನ್ಸಿಲರ್ ಚಂದ್ರಶೇಖರಯ್ಯರವರು, ಅಡ್ವೊಕೇಟರು, ವಕೀಲರು ಮುಂತಾದವರು ವಾಸಿಸುತ್ತಿದ್ದರು. ಇವರಿಗೆಲ್ಲಾ ಖಾಸಾ ಉಪಾಹಾರವೂ ಕೊಡಲ್ಪಡುತ್ತಿದ್ದಿತು. ಸಂತರ್ಪಣೆಯ ಊಟಕ್ಕೆ ಹೋಗದಿರುವ ನೇಮಸ್ಥರಿಗೂ ಸಾಮಾನುಗಳು ಕೊಡಲ್ಪಡುತ್ತಿದ್ದವು. ಸಂತರ್ಪಣೆ ಮುಂತಾದ ಪ್ರತಿಯೊಂದು ಕಾರ್ಯವೂ ಸಮರ್ಪಕವಾಗಿ ನಡೆಯುವಂತೆ ಸಾಹುಕಾರ್ ಮ|| ಗರಾಡ ಚನ್ನಕೇಶವರಾಯರೂ, ಶಂಕರರಾಯರೂ, ಶ್ರೀನಿವಾಸರಾಯರು ಮುಂತಾದವರೂ ಅಧಿಕೃತರಾಗಿದ್ದರು. ಪ್ರತಿಯೊಬ್ಬ ನಿಯಮಿತಾಧಿಕಾರಿಗಳೂ ಎಲ್ಲಾ ಕಾರ್ಯಗಳನ್ನೂ ಮುತುವರ್ಜಿಯಿಂದ ನೆರವೇರಿಸುತ್ತಿದ್ದರು. ತಾ. 12 ನೇ ಶುಕ್ರವಾರ ಹೊಸದಾದ ಶಾರದಾ ದೇವಸ್ಥಾನದಲ್ಲಿ ಕಲಶಗಳು ಸ್ಥಾಪಿಸಲ್ಪಟ್ಟು ಅಭಿಷೇಕ ಪೂಜೆಗಳು ನಡೆದವು. ತಾ. 14 ನೇ ಭಾನುವಾರ ಮಧ್ಯಾಹ್ನ ಹೊಸ ರಾಮದೇವಸ್ಥಾನದಲ್ಲಿ ಶ್ರೀರಾಮರ ವಿಗ್ರಹವು ಪ್ರತಿಷ್ಠಿಸಲ್ಪಟ್ಟಿತು. ಆ ದಿನ ಸಾಯಂಕಾಲ 7 ಗಂಟೆಗೆ ಗಿರಿಜಾ ಕಲ್ಯಾಣ ಪ್ರಯುಕ್ತ ಕಾಶೀಯಾತ್ರೋತ್ಸವವೂ, ತದನಂತರ ಮಲ್ಲಿಕಾರ್ಜುನಸ್ವಾಮಿಯ ಗಿರಿಜಾ ಕಲ್ಯಾಣ ಮಹೋತ್ಸವವೂ ಬೆಳೆದವು. ಶ್ರೀ ಜಗದ್ಗುರುಗಳು ಸಿಂಹಾಸನದಲ್ಲಿ ಕುಳಿತಿದ್ದರು. ತಾ. 16 ನೇ ಸೋಮವಾರ ವಿದ್ಯಾರಣ್ಯರು ಮಠದ ಶಂಕಸ್ಥಾರ್ಥವಾಗಿ ಸ್ಥಾಪಿಸಿದ್ದ ಬ್ರಂಹ್ಮ ದೇವರ ಪ್ರತಿಷ್ಠೆಯು ಹೊಸ ದೇವಸ್ಥಾನದಲ್ಲಿ ನಡೆಯಿತು. ತಾ. 15, 16, 17, ಈ ಮೂರು ದಿನಗಳಲ್ಲಿ ಶ್ರೀ ಶಾರದಾ ದೇವಸ್ಥಾನದಲ್ಲಿ ಕಲ್ಯಾಣೋತ್ಸವ ಪ್ರಯುಕ್ತ “ಅರಿಸಿನ ಎಣ್ಣೆ” ಎಂಬ ವಿನೋದೋತ್ಸವವೂ, ಸಂಗೀತ ವಾದ್ಯ ಸೇವೆಯೂ ಎರಡು ಹೊತ್ತೂ ವಿಜೃಂಭಿತವಾಗುತ್ತಿದ್ದವು. ತಾ. 17 ನೇ ಬುಧವಾರ ಹೊಳೆಯಾಚೆ ನರಸಿಂಹ ವನದಲ್ಲಿ ದಿವಂಗತರಾದ ಶ್ರೀ ಜಗದ್ಗುರು ನರಸಿಂಹ ಭಾರತೀ ಮಹಾಸ್ವಾಮಿಗಳವರ ಭಾವ ಪ್ರತಿಮೆಯ ಸ್ಥಾಪನೆಯೂ, ಆ ಶಿಖರ ಪ್ರತಿಷ್ಠೆಯೂ ನಡೆದವು.

ಅದೇ ಬುಧವಾರ ಸಾಯಂಕಾಲ 7½ ಗಂಟೆಗೆ ಶ್ರೀಮನ್ ಮಹಾರಾಜಾ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರ ಸವಾರಿಯು ಶೃಂಗೇರಿಗೆ ಮೋಟರಿನಲ್ಲಿ ಚಿತ್ತೈಸಿತು. ಈ ಊರಿನ ದೊಡ್ಡ ಬೀದಿಯನ್ನು ವಿಚಿತ್ರವಾದ ಬಾವುಟಗಳಿಂದಲೂ, ಶೃಂಗಾರ ಮಂಟಪಗಳಿಂದಲೂ ಅಲಂಕರಿಸಿದ್ದರು. ಶ್ರೀಮನ್ ಮಹಾರಾಜರ ಸಮಾಗಮೋತ್ಸವವನ್ನು ಅನುಭವಿಸಲು ಶೃಂಗೇರಿ ಸುತ್ತುಮುತ್ತಣ ಗ್ರಾಮದವರೂ, ಪರಸ್ಥಳದವರೂ ಕಿಕ್ಕಿರಿದು ನೋಡುತ್ತಿದ್ದರು. ಶ್ರೀಮಠದ ಪಂಡಿತರು ಬ್ರ|| ಶ್ರೀಕಂಠಶಾಸ್ತ್ರಿಗಳೂ, ಬ್ರ|| ವೇ|| ಕೃಷ್ಣಶಾಸ್ತ್ರಿಗಳೂ ಮರ್ಯಾದೋಚಿತವಾದ ಪೂರ್ಣ ಕುಂಭವನ್ನು ತೆಗೆಸಿಕೊಂಡು ಮಹಾಜನರನ್ನು ಕರೆದುಕೊಂಡು ಊರ ಬಾಗಿಲಿಗೆ ಹೋಗಿ ಎದುರುಗೊಳ್ಳಲು ಸಿದ್ಧವಾಗಿದ್ದರು. ಶ್ರೀಮನ್ ಮಹಾರಾಜರವರ ಮೋಟರು ಬರುವಾಗ ಜಯಮಂಗಳಧ್ವನಿಯು ಮೊಳಗುತ್ತಿರಲು ಶ್ರೀ ಪ್ರಭುಗಳನ್ನು ಚಿನ್ನದ ಪಾಲಕ್ಕಿಯಲ್ಲಿ ಕೂರಿಸಿಕೊಂಡು ಬರುದು ಚಾವಡಿ ಮುಂತಾದ ಶ್ರೀಮಠದ ಮರ್ಯಾದೆಗಳೊಡನೆ ಮೆರವಣಿಗೆಯಿಂದ ಕರೆದುಕೊಂಡು ಬಂದರು. ಶ್ರೀ ಪ್ರಭುಗಳ ಸವಾರಿಯು ಸಾಯಂಕಾಲ 8 ಗಂಟೆಗೆ ಮಠದೊಳಕ್ಕೆ ಚಿತ್ತೈಸಿ ಶ್ರೀ ಶಾರದಾ ದೇವಾಲಯವನ್ನೈದಿತು. ಹೊಸದಾಗಿ ಏರ್ಪಡಿಸಲ್ಪಟ್ಟ ವಿದ್ಯುಚ್ಛಕ್ತಿಯ ದೀಪಗಳು ಮಠವನ್ನು ಬೆಳಗುತ್ತಿದ್ದವು. ಮಠವೆಲ್ಲಾ ಚಿತ್ರವಿಚಿತ್ರವಾಗಿ ಶೃಂಗರಿಸಲ್ಪಟ್ಟಿತ್ತು. ಶ್ರೀ ಜಗದ್ಗುರು ಮಹಾಸ್ವಾಮಿಗಳು ಶ್ರೀ ಶಾರದಾ ದೇವಾಲಯದೊಳಗಡೆ ಬಲಭಾಗದ ಪೀಠದಲ್ಲಿ ಕುಳಿತಿದ್ದರು. ಶ್ರೀಮನ್ ಮಹಾರಾಜರ ಸವಾರಿಯು ದೇವಾಲಯದೊಳಗೆ ಚಿತ್ತೈಸಿ ಶ್ರೀ ಶಾರದೆಗೆ ಅಭಿವಂದಿಸಿ ಶ್ರೀ ಗುರುಗಳ ಸಂದರ್ಶನವಂ ಮಾಡಿತು. ನಮ್ಮ ಮಹಾರಾಜರಿಗೂ ಈಗಿನ ಶ್ರೀ ಜಗದ್ಗುರುಗಳ ಸಂದರ್ಶನವು ಇದೇ ಮೊದಲಾಗಿದ್ದಿತು. ಶ್ರೀ ದೊರೆಗಳಿಗೆ ಗುರುಭಕ್ತಿಯು ಇಷ್ಟೆಂದು ಹೇಳಲು ಲೇಖನಿಗೆ ಸಾಧ್ಯವಿಲ್ಲ. ಆಗಿನ ಶ್ರೀ ಪ್ರಭುಗಳ ಭಕ್ತಿ ಚಿಹ್ನೆಯು ಸಾಕ್ಷಾತ್ಕಾರದಿಂದಲೇ ತಿಳಿಯಬೇಕಾಗಿದ್ದಿತು. ಆಗ ಶ್ರೀ ಜಗದ್ಗುರುಗಳು ಸಂಭಾಷಣೆಯಂ ಗೈದರು. ಶ್ರೀ ಪ್ರಭುಗಳು ಮಠಕ್ಕೆ ಕಲ್ಪಿಸಿದ್ದ ಎರಡನೇ ಇಂದ್ರಭವನದಂತಿದ್ದ ಸುಂದರವಾದ ಚಂದ್ರಮೌಳೀಶ್ವರ ದೇವಸ್ಥಾನಕ್ಕೆ ಬಿಜಯಮಾಡಿದರು.

ತಾ. 18 ನೇ ಗುರುವಾರ ಪ್ರಾತಃಕಾಲ ನರಸಿಂಹ ವನದಲ್ಲಿ ನೂತನವಾದ ಶ್ರೀಗುರುಮಂದಿರದ ಕುಂಭಾಭಿಷೇಕವು ಪ್ರಾರಂಭವಾಯಿತು. ಬ್ರಾಹ್ಮಣರು ವೇದಘೋಷವನ್ನು ಉಚ್ಚಸ್ವರದಿಂದ ಹೇಳುತ್ತಿದ್ದರು. ಜಯ ವಾದ್ಯಘೋಷಗಳು ಮೊಳಗುತ್ತಿದ್ದವು. ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಮಹಾಸ್ವಾಮಿಯವರು ಆ ದೇವಾಲಯಕ್ಕೆ ಚಿತ್ತೈಸುವ ಕಾಲಕ್ಕೆ ಸರಿಯಾಗಿ ಶ್ರೀಮನ್ ಮಹಾರಾಜರವರ ಸವಾರಿಯು ಪ್ರಾತಃಕಾಲ ಮೋಟರಿನಲ್ಲಿ ಅಲ್ಲಿಗೆ ದಯಮಾಡಿತು. ಬ್ರ|| ಶ್ರೀಕಂಠಶಾಸ್ತ್ರಿಗಳವರು ಶ್ರೀ ಪ್ರಭುಗಳವರನ್ನು ಸತ್ಕಾರಪೂರ್ವಕದಿಂದ ದೇವಾಲಯದೊಳಗೆ ಕರೆದುಕೊಂಡು ಹೋಗಿ ಶ್ರೀ ಸದ್ಗುರು ವಿಗ್ರಹ ದರ್ಶನವನ್ನು ಮಾಡಿಸಿದರು. ಒಡನೆಯೇ ಯಥಾವಿಧಿಯಾಗಿ ಶಿಖರಕ್ಕೂ ಕುಂಭಾಭಿಷೇಕವು ನಡೆಯಿತು. ಅನಂತರ ಶ್ರೀ ಜಗದ್ಗುರು ಮಹಾರಾಜರೊಡನೆ ಶಾರದಾ ದೇವಾಲಯಕ್ಕೆ ಚಿತ್ತೈಸಿದರು. ದೇವಾಲಯವು ಜನ ಸಮೂಹದಿಂದ ತುಂಬಿ ತುಳುಕುತ್ತಿತ್ತು. ಆ ದೇವಾಲಯದೊಳಗೆ ಎಳ್ಳು ಹಾಕಿದರೂ ಬೀಳದಷ್ಟು ಜನವಿತ್ತು. ಜಯಮಂಗಳಧ್ವನಿಯ ಘಂಟಾನಾದಗಳನ್ನು ಮುಸುಕುತ್ತಿತ್ತು. ಆಗ ಶ್ರೀ ಜಗನ್ಮಾತೆಯಾದ ಶಾರದೆಗೂ ಶಿಖರಕ್ಕೂ ಕುಂಭಾಭಿಷೇಕವು ಬೆಳಗ ಮೇಲೆ ಶ್ರೀ ಪ್ರಭುಗಳ ಸವಾರಿಯು ವಸತಿಗೆ ಚಿತ್ತೈಸಿತು. ಆ ಮೇಲೆ ಶ್ರೀ ಶಾರದೆಗೆ ಕಲ್ಪೋಕ್ತ ಪೂಜೆಯು ನಡೆದು ವಿಗ್ರಹಕ್ಕೆ ರತ್ನಾಭರಣಗಳಿಂದ ಅಲಂಕರಿಸಲು ಅದು ಸಾಕ್ಷಾದ್ವಾಣಿಯಂತೆಯೇ ಕಂಗೊಳಿಸುತ್ತಿದ್ದಿತು. ಶ್ರೀ ಜಗದ್ಗುರು ಮಹಾರಾಜರ ಸವಾರಿಯು ಪುನಃ ದಯಮಾಡಿ ದೀಪಾರಾಧನೋತ್ಸವವನ್ನವಲೋಕಿಸಿ ಅಪಾರವಾದ ಆನಂದಸುಖವನ್ನನುಭವಿಸಿತು. ಶ್ರೀ ಗುರುಗಳು ಶ್ರೀ ದೊರೆಗಳಿಗೆ ಪುಷ್ಪ ಪ್ರಸಾದವನ್ನು ಕರುಣಿಸಿದರು. ಆ ದಿನ ಮಧ್ಯಾಹ್ನ 11 ಗಂಟೆಯಿಂದ ರಾತ್ರಿಯ ವರಿಗೂ ಸಮಾರಾಧನೆಯು ಪಂಗ್ತಿಯ ಮೇಲೆ ಪಂಗ್ತಿಯಾಗಿ ನಡೆಯುತ್ತಲೇ ಇದ್ದಿತು. ಈ ದಿನ ಸುಮಾರು ಇಪ್ಪತ್ತು ಸಾವಿರದ ಮೇಗೂ ಜನವು ನೆರೆದಿತ್ತು. ಈ ದಿನ ಸಾಯಂಕಾಲ ಶಾರದಾ ರಥೋತ್ಸವವು ಪ್ರಾರಂಭವಾಯಿತು. ಶ್ರೀಮನ್ ಮಹಾರಾಜರವರು ಶ್ರೀಗುರುಗಳಿಂದ ಆಜ್ಞಪ್ತರಾಗಿ ಚಿನ್ನದ ಪಾಲಕ್ಕಿಯಲ್ಲಿಯೂ, ಶ್ರೀ ಜಗದ್ಗುರುಗಳು ಬೆಳ್ಳಿ ಪಾಲ್ಕಿಯಲ್ಲಿಯೂ ಶ್ರೀ ಶಾರದಾಂಬಾ ದಿವ್ಯರಥದಲ್ಲಿಯೂ ಕುಳಿತು ಉತ್ಸವವು ನಡೆಯುತ್ತಿದ್ದಿತು. ಅಹಹಾ ! ಈ ಉತ್ಸವವನ್ನು ವರ್ಣಿಸಲು ಅಲ್ಪಜ್ಞನಾದ ನನ್ನಿಂದ ಸಾಧ್ಯವಲ್ಲ. ಶ್ರೀ ಶಾರದಾ, ಜಗದ್ಗುರು, ಮಹಾಪ್ರಭುಗಳವರ ಏಕಕಾಲಿಕ ಮಹೋತ್ಸವವು ಎಂದೂ ನಡೆದುದಿಲ್ಲ ! ಆ ಕಾಲದಲ್ಲಿ ಜನಗಳ ಆನಂದಕ್ಕೆ ಪಾರವೇ ಇಲ್ಲವು. ಇಂತಹ ಉತ್ಸವವನ್ನು ನೋಡುವ ಮನುಜರ ಕಂಗಳು ಸಿಸ್ಸಂಶಯವೇ ಸರಿ ಎಂದು ತೋರುತ್ತಿದ್ದಿತು. ಮನುಷ್ಯರಿಗೆ ಹಾಗಿರಲಿ. ದೇವಗಳಿಗೂ ಸಂತೋಷವುಂಟಾಗಿದೆ ಎಂದು ಸೂಚಿಸುವಂತೆ ಅರ್ಧರಾತ್ರಿಯಲ್ಲಿ ಶುಭಸೂಚಕವಾಗಿ ಪರ್ಜನ್ಯನು ವರ್ಷಿಸಿದನು. ತಾ. 19 ನೇ ಶುಕ್ರವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರು ಶ್ರೀ ಗುರುಗಳು ವಾಸ ಮಾಡುವ ಸಚ್ಚಿದಾನಂದ ವಿಲಾಸ ಮಂದಿರಕ್ಕೆ ದಯಮಾಡಿಸಿ ಚಂದ್ರಮೌಳೀಶ್ವರ ದೀಪಾರಾಧನೆಯಂ ವರಾಂಬರಿಸಿ ಶ್ರೀ ಗುರು ಪಾದಪೂಜೆಯಂ ಗೈದರು. ಆಗ ಶ್ರೀ ಜಗದ್ಗುರುಗಳು ಹೇಳುತ್ತಿರುವ ಪ್ರತಿಯೊಂದು ಧರ್ಮವಾಕ್ಯವೂ ಶ್ರೀ ಪ್ರಭುಗಳವರ ಚಿತ್ತಕಮಲವನ್ನು ಪ್ರಫುಲ್ಲಗೊಳಿಸುತ್ತಿದ್ದಿತು. ಆ ದಿನ ಮಧ್ಯಾಹ್ನ ಸರ್ವರಿಗೂ ಭೂರಿ ದಕ್ಷಿಣೆಯು ಕೊಡಲ್ಪಟ್ಟಿತು. ರಾತ್ರಿ ಹೊಳೆಯಲ್ಲಿ ನಡೆದ ತೆಪ್ಪೋತ್ಸವದ ಸಂದರ್ಭವೋ ವರ್ಣನಾತೀತವೇ ಆಗಿದೆ. ಇಂತಹ ಅತ್ಯದ್ಭುತ ಅಪೂರ್ವವಾದ ಕುಂಭಾಭಿಷೇಕ ಮಹೋತ್ಸವವು ವಿದೇಹ ಮುಕ್ತರಾದ ಶ್ರೀ ಶಿವಾಭಿನವ ಸಚ್ಚಿದಾನಂದ ನರಸಿಂಹ ಭಾರತೀ ಮಹಾಸ್ವಾಮಿಗಳವರ ಸತ್ಯಸಂಕಲ್ಪದಂತೆಯೇ ನೆರವೇರಿತು.

ಬ್ರ|| ಶ್ರೀಕಂಠಶಾಸ್ತ್ರಿಗಳವರು ಈ ಮಹೋತ್ಸವದ ಪೂರ್ವಭಾವಿಯಾಗಿ ಏರ್ಪಡಿಸಿದ್ದ ಪ್ರತಿಯೊಂದು ಏರ್ಪಾಡಿನಸ್ಕೃತ್ಯವೂ ಶಾಶ್ವತ ಕೀರ್ತಿದಾಯಕವೂ ಆಗಿದ್ದಿತು. ಹೆಚ್ಚೇನು, ಇವರೇ ಆ ಮಹಾಮಹಿಮರ ಭಕ್ತರೆಂದು ರಾದ್ಧಾಂತವಾಯಿತು. ಈ ಮಹೋತ್ಸವ ಕಾಲದಲ್ಲಿ ಸ್ಪೆಷಲ್ಲಾಗಿ ಆಸ್ಪತ್ರೆಯು ನೇಮಕವಾಗಿದ್ದಿತು. ಸ್ಪೆಷಲ್ ಡಾಕ್ಟರುಗಳು ಚೆನ್ನಾಗಿ ಜನಗಳ ಆರೋಗ್ಯಭಾಗ್ಯವನ್ನು ನೋಡಿಕೊಳ್ಳುತ್ತಿದ್ದರು. ಕಾಯಂ ಡಾಕ್ಟರು ಗುರುರಾಯರು ಪ್ರತಿಯೊಂದು ಕ್ಯಾಂಪಿಗೂ ಹೋಗಿ ಅಲ್ಲಿಯವರ ಆರೋಗ್ಯವನ್ನು ವಿಚಾರಿಸಿಕೊಂಡು ಬರುತ್ತಿದ್ದರಲ್ಲದೆ ಆಸ್ಪತ್ರೆಗೆ ಬರುವ ರೋಗಿಗಳಿಗೂ ಮುತುವರ್ಜಿಯಿಂದ ಚಿಕಿತ್ಸೆ

ಮಾಡುತ್ತಿದ್ದರು. ಆಯುರ್ವೇದ ವೈದ್ಯಮಂಡಿರಂ ಕೆ. ಶೇಷಶಾಸ್ತ್ರಿಗಳೂ ಅನೇಕರಿಗೆ ಧರ್ಮವಾಗಿ ಆಯುರ್ವೇದ ಚಿಕಿತ್ಸೆಯನ್ನು ಕೊಡುತ್ತಿದ್ದರು. ಪೋಸ್ಟ್ ಆಫೀಸಿನಲ್ಲಿ ಪ್ರತ್ಯೇಕವಾಗಿ ನೌಕರರು ನೇಮಿಸಲ್ಪಟ್ಟಿದ್ದರು. ಪೋಸ್ಟ್ ಮಾಸ್ಟರ್ ಮ|| ಜಿ. ತಿಮ್ಮಪ್ಪಯ್ಯನವರು ಪರಸ್ಥಳಿಕರಿಗೆ ಬರುವ ಪ್ರತಿಯೊಂದೂ ಕಾಗದ ಮುಂತಾದವುಗಳನ್ನೂ ವಿಚಾರಿಸಿ ಕ್ರಮವಾಗಿ ಪಾವತಿಯಾಗುವಂತೆ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದರು. ಪೋಲೀಸ್ ಬಂದೋಬಸ್ತು ಬಹಳ ತೃಪ್ತಿಕರವಾಗಿತ್ತು. ಸ್ಪೆಷಲ್ ಅಮಲ್ದಾರರೂ, ಸ್ಯಾನಿಟರಿ ಆಫೀಸರೂ ನೇಮಿಸಲ್ಪಟ್ಟಿದ್ದರು. ಪೊ|| ಇ ಜನರಲ್ ಮ|| ಶ್ರೀಕಂಠೇಶ್ವರಯ್ಯರೂ, ಕಡೂರು ಡೆಪ್ಯುಟಿ ಕಮೀಷನರ್ ಮ|| ಕೃಷ್ಣಅಯ್ಯರೂ ಶ್ರೀ ಮಠದ ಏಜೆಂಟರ ಈ ಕಾರ್ಯಕ್ಕೆ ಸಹಾಯಕರಾಗಿದ್ದರು. ಈ ಮಹೋತ್ಸವವು ತಾ. 20 ನೇ ಶನಿವಾರಕ್ಕೆ ಪೂರೈಸಿತು.

ಎ. ಕೆ. ಎಸ್.

ತರೀಕೆರೆಯಲ್ಲಿ ಜನಗಳ ಸೌಕರ್ಯ.

ಶ್ರಿಂಗೇರಿ ಶ್ರೀಮಠದ ಕುಂಭಾಭಿಷೇಕ ಸಂಬಂಧ ಶ್ರೀಮಠಕ್ಕೆ ದಯಮಾಡಿಸತಕ್ಕವರಿಗೆ ತರೀಕೆರೆಯಲ್ಲಿ ತಕ್ಕ ಸೌಕರ್ಯವನ್ನು ಕಲ್ಪಿಸಿಕೊಟ್ಟು ಮುಂದಕ್ಕೆ ಸಾಗಕಳಿಸಲು ಶ್ರೀಮಾನ್ ಶ್ರಿಂಗೇರಿ ಶ್ರೀಮಠದ ಏಜೆಂಟರವರ ಅಪ್ಪಣೆ ಮೇರೆ ಶ್ರಿಂಗೇರಿ ನಿವಾಸಿಗಳಾದ ಮ|| ಎಸ್. ಕೃಷ್ಣಯ್ಯನವರನ್ನೂ, ಮ|| ಎಚ್. ನೀಲಕಂಠಭಟ್ಟರನ್ನೂ ನಿಯಮಿಸಿತ್ತು. ಇವರುಗಳು ಪ್ರತಿದಿವಸವೂ ರೈಲ್ವೆ ಸ್ಟೇಷನ್‌ಗೆ ಹೋಗಿ ಶ್ರಿಂಗೇರಿಗೆ ಹೋಗತಕ್ಕ ಭಕ್ತಾದಿಗಳನ್ನು ಎದುರುಗೊಂಡು ಅಲ್ಲಿಂದ ಶ್ರೀಮಠದ ಮನೆಯಲ್ಲಿಳಿಸಿ ಅವರಿಗಾಗಬೇಕಾದ ಎಲ್ಲಾ ಸೌಕರ್ಯಗಳನ್ನೂ ಆದರದಿಂದಲೂ ವಿಶ್ವಾಸದಿಂದಲೂ ಕಲ್ಪಿಸಿಕೊಡುತ್ತಿದ್ದರು. ಅದಿಗೆ ಮಾಡಿಕೊಳ್ಳತಕ್ಕವರಿಗೆ ಬೇಕಾದ ಅನುಕೂಲವನ್ನೂ, ಊಟಮಾಡತಕ್ಕವರಿಗೆ ತಕ್ಕ ಏರ್ಪಾಡನ್ನೂ ಸಹಾ ಮಾಡಿಸುತ್ತಿದ್ದರು. ಇವರು ಊಟ ಉಪಚಾರಾದಿಗಳಲ್ಲಿ ಬರತಕ್ಕ ಜನಗಳಿಗೆ ಯಾವ ತೊಂದರೆಯನ್ನೂ ಕೊಟ್ಟಂತೆ ಕಂಡುಬರಲಿಲ್ಲ. ಇವರು ಕಾರ್ಯಕ್ರಮದಿಂದ ಶ್ರೀಮಠದಲ್ಲಿ ಅಭಿಮಾನವಿಟ್ಟು ಮಾಡಿದ ಕೆಲಸಗಳಿಂದ ಇವರಿಗೆ ಶ್ರೇಯೋಭಿವೃದ್ಧಿಯಾಗಲೆಂದು ಹಾರೈಸುವೆನು. ಆದರೆ ಮೋಟಾರ್ ಸರ್ವಿಸ್ ಸರಿಯಾಗಿಲ್ಲದೆ ಜನಗಳಿಗುಂಟಾದ ತೊಂದರೆಯೂ, ಶ್ರೀಮಠದ ಪ್ರತಿನಿಧಿಗಳಿಗುಂಟಾದ ಶ್ರಮವೂ ಹೇಳಲು ಸಾಧ್ಯವಿಲ್ಲದಾಗಿತ್ತು. ಆದಾಗ್ಯೂ ಎತ್ತಿನ ಬಂಡಿಗಳಲ್ಲಿ ಜನಗಳನ್ನು ಸಾಗಕಳಿಸಲು ಮ|| ನೀಲಕಂಠಭಟ್ಟರು ಮಾಡಿದ ಸಾಹಸವು ತುಂಬಾ ಸ್ತೋತ್ರಾರ್ಹವಾದದ್ದೇ ಸರಿ. ಅವರು ಶ್ರೀಮಠದ ಶಾಬೆಯಲ್ಲಿಲ್ಲದಿದ್ದಾಗ್ಯೂ ಶಕ್ತಿಮೀರಿ ಪ್ರಯತ್ನಪಟ್ಟು ಅವರ ಕೆಲಸದಲ್ಲಿ ಜನಗಳಿಗೆ ಮೋಟಾರ್‌ಗಾಡಿ ಸಿಕ್ಕಲಿಲ್ಲವೆಂಬುದೊಂದು ಕೊರತೆಯೇ ವಿನಃ ಬಾಕಿ ವಿಚಾರಗಳೆಲ್ಲಾ ಅನುಕೂಲವಾದದ್ದಕ್ಕಾಗಿ ತುಂಬಾ ಸಂತೋಷಿಸುವೆನು.

ಪ್ರತ್ಯಕ್ಷದರ್ಶಿ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಅಪರಿಚಿತ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಧೈರ್ಯವೂ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿಹೇಳುತ್ತೇವೆ.

—ಎಡಿ.

ಕರೆಸ್ಪಾಂಡೆನ್ಸ್.

ಸಿವಿಲ್ ಕೋರ್ಟುಗಳ ಸವಲತ್ತು.

ಅಯ್ಯಾ,—ಸಿವಿಲ್ ಕೇಸುಗಳು ದೀರ್ಘಕಾಲ ಬಾಕಿಬರುತ್ತವೆಂಬ ಆಕ್ಷೇಪಣೆಗಳಿಗೆ ಸಮನ್ಸ್ ಜಾರಿಯಾಗದೇ ಕಾರಣವು. ಮಿಸ್ ಕೇಸುಗಳು ಉಂಟಾಗಲೂ ಕೇಸುಗಳು ಹೆಚ್ಚಾಗಲೂ ಅದಾಲತ್ ಅಮೀನರೇ ಕಾರಣರು ಎಂಬ ಅಂಶಗಳು ಆಯಾಯ ಕೋರ್ಟಿನ ಪಡಿಗಳ ವರದಿಗಳಿಂದ ತಿಳುಕೊಳ್ಳಬಹುದಾಗಿದ್ದಾಗ್ಯೂ, ಸಣ್ಣ ನೌಕರರು, ಅವರ ಜೀವನಕ್ಕೆ ಹಾನಿ ತರಬಾರದೆಂಬ ಔದಾರ್ಯ ಮನಸ್ಸು ಇಟ್ಟುಕೊಂಡರೇ ಅವರುಗಳ ಅವಿವೇಕತೆಗೆ ಅವಕಾಶ ಕೊಟ್ಟಿರುತ್ತೆ. ಅಲ್ಲದೆ ಸಾವಿರಾರು ಕೇಸುಗಳು ಬಾಕಿ ಬಿದ್ದವೆಂಬ ಆಕ್ಷೇಪಣೆಯನ್ನು ಕೇಳುವ ಹಾಗಿದೆ. ಇಂತಹ ನೌಕರರಲ್ಲಿ ನ್ಯಾಯವಾಗಿದ್ದ ನೌಕರ ಮತ್ತು ಅದಕ್ಕೆ ಸೇರಿದವರಿಗೆ ನಿಸ್ಪೃಹತೆಯಿಂದ ಕಾನೂನು ಪ್ರಕಾರ ಶಿಕ್ಷೆಗೆ ಗುರಿಪಡಿಸುವಲ್ಲಿ ಆ ಕ್ಲಾಸಿನ ಇತರ ನೌಕರರೂ ಭೀತಿಪಟ್ಟು ಸಾಚಾ ಕೆಲಸಮಾಡುವುದಕ್ಕೂ ಪ್ರಜೆಗಳಿಗೆ ಕ್ಷೇಮವಾಗುವುದಕ್ಕೂ ಅವಕಾಶವಾದೀತೆಂಬುದರಲ್ಲಿ ಸಂದೇಹವಿಲ್ಲ. ಮಲೆನಾಡು ಪ್ರದೇಶಗಳಲ್ಲಿ ಹಣ್ಣರು ತಮ್ಮ ದುರುದ್ದೇಶ್ಯ ನಡಿಸಲು ಈ ಸಣ್ಣ ನೌಕರರನ್ನು ವಶಮಾಡಿಕೊಂಡು ಮಾಡುವ ಅನ್ಯಾಯಗಳು ವಿವರಿಸಲು ಸಾಧ್ಯವಾಗಿದೆ. ಅವುಗಳ ವಿಷಯದಲ್ಲಿ ಪಡೀಯುವವರುಗಳು ಸಿಗೆ ಕೊಟ್ಟು ವಿಚಾರಣೆಯಿಂದ ತಕ್ಕ ಶಿಕ್ಷೆ ಕೊಡುವುದರಿಂದ ಸಮಾಧಾನವಾಗಬೇಕೇ ವಿನಹ ರಿಯಾಯಿತಿಗಳು ತೋರಿಸುವಲ್ಲಿ ಇನ್ನೂ ಅತಿಶಯವಾಗುತ್ತವೆ.

ಸಕಲಜನ ಕ್ಷೇಮಾಭಿಲಾಷಿ.

ಪ್ರಬಲಕಳ್ಳರು ಸಿಕ್ಕಿಬಿದ್ದ ವಿಚಾರ.

ಅಯ್ಯಾ,—ನಂಜನಗೂಡು ತಾ|| ದೊಡ್ಡ ಕೌಲಂದೆ ಹೋ|| ದೊಡ್ಡ ಹೊಮ್ಮ ಗ್ರಾಮಕ್ಕೆ ಸೇರಿದ ಉಪ್ಪಲಿಗರ ಗ್ರಾಮ ಕಾವಲುಗಾರನಿಗೆ ಕಳ್ಳರ ವಿಷಯ ಕಳೆದ 4 ನೇ ತಾ. ಪೇಪರಿನಲ್ಲಿ ವಿವರಿಸಿದ್ದು ಸರ್ವರಿಗೂ ತಿಳಿದ ಸಂಗತಿಯಾಗಿದೆ. ಯಳಂದೂರು ತಾ|| ಇನ್ಸ್ಪೆಕ್ಟರ್ ವೆಂಕಟರಾಮಯ್ಯಂಗಾರ್ಯ ಏಪ್ರೆಲ್ 20 ನೇ ತಾ. ರಾತ್ರಿ ನಂಜನಗೂಡು ಇನ್ಸ್ಪೆಕ್ಟರ ಕರವ ಇದ್ದರೆಂದು ಬರೆದಿತ್ತು. ಅವರು ಆ ರಾತ್ರಿ ಇರಲಿಲ್ಲ. ಬೆಳಿಗ್ಗೆ ಇನ್ಸ್ಪೆಕ್ಟರು ಯಳಂದೂರಿಗೆ ವರ್ತಮಾನ ಕೊಟ್ಟು ಕರಸಿಕೊಂಡರು. ಆ ತಾ|| ಹಾಸನೂರು ಗ್ರಾಮದಲ್ಲಿ ಮಲ್ಲಪ್ಪ ಎಂಬುವನು 100 ರೂ. ಬಾಳತಕ್ಕ ಕೆಲವು ನಗ ನಾಣ್ಯಗಳನ್ನೂ ಕೆಲವು ಭಾರಿ ಸೀರೆಗಳನ್ನೂ 15 ರೂ. ಗೂ, ಮುಳ್ಳುಗಳನ್ನು ಕೊಡ ಇವನೇ ತೆಗೆದುಕೊಂಡಿದ್ದನು. ಈತನು ಭಾರೀ ಕಂದಾಯ ಕೊಡತಕ್ಕ ದೊಡ್ಡ ರೈತ. ಬೋಳಮ್ಮನ ನಂಜಪ್ಪ ಎಂಬುವನು 100 ರೂ. ನ ದೊಡ್ಡ ಗುಂಡನ್ನು 50 ರೂ. ಗೂ, ಪಟೇಲನ ಮಗ ಶಿವಲಿಂಗಪ್ಪನು 50 ರೂ. ನ ಮೂರೆಳೆ ಪಟ್ಟಿನ ಗುಂಡನ್ನು 30 ರೂ. ಗೂ, ಶಿವತ್ತಪ್ಪ ಎಂಬುವನು 50 ರೂ. ನ ಕೆಲವು ಚಿನ್ನದ ನಗಗಳನ್ನು 10 ರೂ. ಗೂ, ಹೊಲಗೆ ವಿಷಕ್ ಕೆಲಸಮಾಡತಕ್ಕ ತಿಂಕಟಪ್ಪನು ರೇಷ್ಮೆ ಅಂಚಿನ ದೊಡ್ಡ ಸೀರೆಯನ್ನು 2½ ರೂ. ಗೂ, ದೊಡ್ಡಪ್ಪನು 20 ರೂ. ನ ಹಸುರು ಪಚ್ಚೆ ಕಲ್ಲು ಬೆಟ್ಟಿದ ಜಡೆಬಿಲ್ಲೆಯನ್ನು 4 ರೂ. ಗೂ, ಇನ್ನು ಕೆಲವರು ಬೆಳ್ಳಿ ಗಟ್ಟಿಗಳನ್ನೂ ರೇಷ್ಮೆ ಸೀರೆಗಳನ್ನೂ ತೆಗೆದುಕೊಂಡಿದ್ದರು. ಚಾಮರಾಜನಗರ ತಾ|| ಸಂತೆಮರಳ್ಳಿ ಹೋ|| ಕಸ್ತೂರು ಗ್ರಾಮಕ್ಕೆ ಸೇರಿದ ಹೊನ್ನೆಗೌಡನ ಹುಂಡಿ ಕಳ್ಳೆಗೌಡ ಎಂಬುವನು 100 ರೂ. ಗೆ ಬೆಲೆಬಾಳ್ವ ಜಡೆಬಿಲ್ಲೆ, ಗೆಜ್ಜೆಹಾಕಿದ ನಾಗರು, ಮಕ್ಕಳಿಗೆ ಹಾಕತಕ್ಕ ಕುಚ್ಚುಗಳು, ಇಷ್ಟು ನಗಗಳನ್ನೂ 30 ರೂ. ಮತ್ತು ಎರಡು ಖಂಡಗ ಜೋಳ ಕೊಟ್ಟು ತೆಗೆದುಕೊಂಡಿದ್ದನು. ಈತನೂ ಭಾರಿ ಕಂದಾಯ ಕೊಡತಕ್ಕ ದೊಡ್ಡ ರೈತ. ಉಮ್ಮತ್ತೂರು ಗ್ರಾಮದಲ್ಲಿ ಪುಟ್ಟಬಸಪ್ಪ ಎಂಬುವನು 30 ರೂ. ನ ಜಡೆಬಿಲ್ಲೆಗಳನ್ನೂ, ಸೀರೆಗಳನ್ನೂ 8 ರೂ. ಗೂ, ಇನ್ನೊಬ್ಬ ಲಿಂಗವಂತ ಅಗಸಾಲೆಯು ಕೆಲವು ಚಿನ್ನದ ನಗಗಳನ್ನು ತೆಗೆದುಕೊಂಡು ಕರಗಿಸಿ ಹೆಂಗಸರು ಕಿವಿಗೆ ಹಾಕತಕ್ಕ ಕೊಳವೆಗಳನ್ನು ಹಾಜರ್ ಮಾಡಿದನು. ಡಿಟೋ ಅಗ್ರಹಾರದಲ್ಲಿ ರಾಚಪ್ಪ ಎಂಬುವನು 30 ರೂ. ನ ಚಿನ್ನದ ಗುಂಡುಗಳು ಹಾಕಿದ್ದ ಚಂದ್ರಮುರುವನ್ನು 12 ರೂ. ಗೆ ತೆಗೆದುಕೊಂಡಿದ್ದನು. ಇವರುಗಳನ್ನೆಲ್ಲಾ ತಲಕಾಡು ಕಾನ್‌ಸ್ಟೇಬಲ್ 451 ನೇ ನಂ. ಮಾದಪ್ಪನೂ, ನಂಜನಗೂಡು ಕಾನ್‌ಸ್ಟೇಬಲ್ 459 ನೇ ನಂ. ನಾರಾಯಣಸ್ವಾಮಿಯೂ, ಇನ್ನು ಕೆಲವು ಪೋಲೀಸಿನವರೂ ಪತ್ತೆಮಾಡಿ ಹಿಡಿದು ಮಾಲುಗಳನ್ನು ಹಾಜರ್ಮಾಡಿದರು.

ನಿಮ್ಮ ವಾಚಕ.

ಕೋಲಾರ ಡಿಸ್ಟ್ರಿಕ್ಟ್ ಬೋರ್ಡ್ ರೈಲ್ವೇ ವಿಚಾರ.

ಅಯ್ಯಾ,—ಇದೇ ಮೇ 16 ನೇ ತಾ|| ಚಿಂತಾಮಣಿಯಿಂದ 9 ಗಂಟೆಗೆ ಹೊರಟ ರೈಲ್ ಮಧ್ಯಾಹ್ನ 2 ಘಂಟೆಗೆ ಜನ್ನಗಟ್ಟೆ ಜಂಕ್ಷನ್‌ಗೆ ಬಂದು ಸೇರಿತು. ಬೌರಿಂಗ್‌ಪೇಟೆಯಿಂದ ಹೊರಟ ರೈಲು 2 ಘಂಟೆಯ ವರೆಗೂ ಜನ್ನಗಟ್ಟೆದಲ್ಲಿದ್ದು ಸಾಯಂಕಾಲ 6 ಘಂಟೆಗೆ ಚಿಂತಾಮಣಿ ಸೇರಿತು. ಈ ಮಧ್ಯೆ ದಳಸನೂರಲ್ಲಿ ಎರಡು ಎಂಜನ್ ಗಾಡಿಗಳೂ ಕೆಟ್ಟು ಇಷ್ಟು ತಾಮಸಕ್ಕೆ ಕಾರಣವಾಯಿತು. ಈ ತಾಮಸದಿಂದ ಆ ದಿನ ಪ್ಯಾಸೆಂಜರುಗಳಿಗೆ ಸಂಭವಿಸಿದ ಕಷ್ಟವನ್ನು ಹೇಳತೀರದು. ದಳಸನೂರಿನ ಪ್ರಜೆಗಳು ರೈಲಿನಲ್ಲಿ ಪ್ರಯಾಣಿಕರಿಗೆ ಆ ಬಿಸಲಿನ ತಾಪದಲ್ಲಿ ಕೆಲವರಿಗೆ ಊಟ, ಹಾಲು ವಗೈರೆ ಒದಗಿಸಿದ್ದಲ್ಲದೆ ಮುಖ್ಯವಾಗಿ ನೀರಿನ ಸರಬರಾಯಿಯನ್ನು ವಿಶೇಷವಾಗಿ ಒದಗಿಸಿದ್ದರು. ಅವರ ಔದಾರ್ಯ ಗುಣವನ್ನು ಎಷ್ಟು ಹೊಗಳಿದರೂ ತೀರದು. ಆ ಕಾಲದಲ್ಲಿ ರೈಲಿನಲ್ಲಿದ್ದ ಒಬ್ಬ ಪೋಲೀಸ್ ಕಾನಸ್ಟೆಬಲ್ ಮತ್ತು ಮಹಮ್ಮದೀಯ ಗಾರ್ಡ್ ವಿಶೇಷವಾಗಿ ಜನರಿಗೆ ಸಹಾಯ ಮಾಡಿದರು.

ಪುನಃ 17 ನೇ ತಾ. ಶ್ರೀನಿವಾಸಪುರದಿಂದ ಹೊರಟ ರೈಲು ಚಿಂತಾಮಣಿಗೆ ಬರುವಾಗ 31 ನೇ ಮೈಲಿಯಲ್ಲಿ ಇದ್ದಕ್ಕಿದ್ದ ಹಾಗೆ ರೈಲ್ ಗಾಡಿಯು ಸುಮಾರು 1½ ಅಡಿಯಷ್ಟು ಮೇಲಕ್ಕೆ ಹಾರಿ ದೇವರ ದಯದಿಂದ ಕಂಬಿ ಬಿಡದೆ ಇದ್ದ ಸ್ಥಳದಲ್ಲಿಯೇ ಕೂತಿತು. ಆಗ ಪ್ರಯಾಣಿಕರಿಗೆ ಉಂಟಾಗಿದ್ದ ಗಾಬರಿಯನ್ನು ಹೇಳಲಾಗದು. ತಕ್ಷಣವೇ ಡ್ರೈವರ್ ಮುನಿಸಾಮಿ ಮತ್ತು ಗಾರ್ಡ್ ತಿರುಮಲಾಚಾರ್ ರೈಲಿನಿಂದ ಇಳಿದು ಅಪಾಯ ಸಂಭವಿಸಿದ್ದ ಸ್ಥಳದಲ್ಲಿ ನೋಡುವಾಗ ಆ ಕಾಲದಲ್ಲಿ ಕೆಲಸಮಾಡುತ್ತಿದ್ದ ಕೂಲೀ ಜನರು ಕಂಬೀ ಕೆಳಗೆ ಮಣ್ಣು ತೆಗೆದು ಸರಿಪಡಿಸುತ್ತಾ ಇದ್ದವರು ಲೈನ್ ಕ್ಲಿಯರ್ ಮಾಡುತ್ತಲೇ ರೈಲ್ ಸರಾಗನೆ ಬಂದು ಅನಾಹುತಕ್ಕೆ ಸಿಕ್ಕಿ ಭಗವಂತನ ಕೃಪೆಯಿಂದ ಪಾರಾಯಿತು.

ಈ ರೀತಿ ಆಕಸ್ಮಿಕವಾಗಿ ಸಂಭವಿಸತಕ್ಕ ಅಪಾಯಗಳಿಗೆ ಅವಕಾಶಕೊಡದೆ ಆ ಸಂಬಂಧವಾದ ನೌಕರರುಗಳು ರೋಜಿನಾ ಇನ್ಸ್ಪೆಕ್ಷನ್ ಮಾಡುತ್ತಾ ಬರಬೇಕಾಗಿ ಕೋರಲ್ಪಟ್ಟಿರುತ್ತಾರೆ. ಈ ಸಂದರ್ಭಗಳೆಲ್ಲಾ ಬಹುಶಃ ಮೇಲ್ಪಟ್ಟ ಆಫೀಸರುಗಳಿಗೆ ಗೊತ್ತಾಗಿರಬಹುದು. ಇದು ಹೊಸ ರಸ್ತೆ ಆದುದರಿಂದಲೂ, ರೈಲಿನಲ್ಲಿ ಉಪಯೋಗಿಸತಕ್ಕ ಸಾಮಾನ್ಯಗಳೆಲ್ಲಾ ಬಹುಶಃ ಸರಿಯಾದ ರೀತಿಯಲ್ಲಿಲ್ಲವಾದ್ದರಿಂದಲೂ ಈ ರೀತಿ ಕಷ್ಟಕ್ಕೆ ಸಿಕ್ಕಬೇಕಾಯಿತೆಂದು ತೋರುತ್ತೆ. ದಯಮಾಡಿ ರೈಲ್ವೆ ಇಲಾಖಾ ಮೇಲ್ಪಟ್ಟ ಆಫೀಸರುಗಳು ಈ ನ್ಯೂನಾತಿರಿಕ್ತಗಳನ್ನು ಸಂಪಡಿಸಿ ಪ್ರಜೆಗಳಿಗೆ ಸಹಾಯ ಮಾಡಬೇಕೆಂತ ಪ್ರಾರ್ಥಿಸಲ್ಪಟ್ಟಿರುತ್ತಾರೆ.

ಪ್ರತ್ಯಕ್ಷ ಕಷ್ಟಾನುಭವಿ.

ತಾಲ್ಲೋಕು ವರ್ತಮಾನಗಳು.

ಚಿಂತಾಮಣಿ.—ಬಿಸಿಲಿನ ತಾಪವು ಹೆಚ್ಚುತ್ತಾ ಇದೆ. ಮಳೆ ಇಲ್ಲ. ಧಾರಣೆ ವಾಸಿ ಮಾತ್ತಾ ಇದೆ.—ಇಲ್ಲಿನ ಸಂತೆಯು ಬಹು ಪ್ರಸಿದ್ಧವಾದದ್ದು. ಈ ಸಂತೆಯಿಂದ ಇಲ್ಲಿನ ಮ್ಯುನಿಸಿಪಾಲಿಟಿಗೆ ವಿಶೇಷ ಆದಾಯವಿದೆ. ಹೀಗಿದ್ದಾಗ್ಯೂ ಸಂತೆಗೆ ಬರತಕ್ಕ ಜನರು ಬೆಳಿಗ್ಗೆಯಿಂದ ಸಾಯಂಕಾಲದ ವರೆಗೂ ಮಳೆ ಮತ್ತು ಬಿಸಿಲಿನ ಕಾಟಕ್ಕೆ ಸಿಕ್ಕಿ ಬಹು ತೊಂದರೆಪಡಬೇಕಾಗಿದೆ. ಈ ವಿಧವಾದ ಕಷ್ಟವನ್ನು ಮ್ಯುನಿಸಿಪಾಲಿಟಿಯವರು ಜಾಗ್ರತೆಯಾಗಿ ತಪ್ಪಿಸುತ್ತಾರೆಂತ ನಿರೀಕ್ಷಿಸಲ್ಪಟ್ಟಿದೆ.—ಬೆಂಗಳೂರು ಸರ್ಕಲ್ ಇನ್ಸ್ಪೆಕ್ಟರು ಮ|| ಬಿ. ದಾಸಪ್ಪನವರು ನೆನ್ನೆ ಇಲ್ಲಿಗೆ ದಯಮಾಡಿ ಈ ದಿನ ಇಲ್ಲಿನ ಎ. ವಿ. ಸ್ಕೂಲ್ ಇನ್ಸ್ಪೆಕ್ಟ್ ಮಾಡಿಕೊಂಡು ಮುಂದಕ್ಕೆ ಶಿಡ್ಲಘಟ್ಟದ ಮಾರ್ಗವಾಗಿ ಪ್ರಯಾಣಮಾಡಿದರು.—ಆಗಲೇ ಮಾವಿನ ಸುಗ್ಗಿ ಮಾರಲು ಪ್ರಾರಂಭಿಸಿದೆ. ಕೊಳೆತ ಮತ್ತು ಹುಳಿ ಹಣ್ಣುಗಳನ್ನು ಜನಗಳು ತಿಂದು ಕಾಯಿಲೆ ತಂದುಕೊಳ್ಳದಂತೆ ಸ್ಯಾನಿಟರಿ ಇನ್ಸ್ಪೆಕ್ಟರವರು ತನಿಖೆ ತೆಗೆದುಕೊಳ್ಳುವರೆಂತ ನಿರೀಕ್ಷಿಸಲ್ಪಟ್ಟಿರುತ್ತೆ.

ಚನ್ನರಾಯಪಟ್ಟಣದ ತಾ|| ಹಿಂದಲಹಳ್ಳಿ.—ಇದೇ ಮಾಹೆ 18, 19, 20 ನೇ ತಾ. ರಾತ್ರಿ ಪ್ರತಿದಿನವೂ ವಿಶೇಷವಾದ ಮಳೆ ಸುರಿಯಿತು. ಗಾಳಿಯ ದೆಸೆಯಿಂದ ಮನೆಗಳ ಮೇಲೆ ಹೊದಿಸಿದ್ದ ಹೆಂಚುಗಳೆಲ್ಲಾ ಹಾರಿಹೋದವು. ಜನರು ಈ ರೀತಿಯಾದ ಮಳೆಯನ್ನು ಎಂದೂ ಕಂಡಿರಲಿಲ್ಲವೆಂದು ಹೇಳುತ್ತಿರುವರು. ಇದೇ ರೀತಿ ಇನ್ನೂ ಎರಡು ದಿವಸ ಮಳೆ ಬಂದಲ್ಲಿ ಅನೇಕ ಮನೆಗಳು ಬೀಳುವದರಲ್ಲಿ ಸಂಶಯವಿಲ್ಲ. ಕಳೆದ ರಾತ್ರಿ ಇಲ್ಲಿನ ಸ್ಕೂಲ್ ಮನೆಯ ಒಂದಂಕಣದ ಗೋಡೆ ಬಿದ್ದುಹೋಯಿತು. ರಾತ್ರೀ ಕಾಲವಾದ್ದರಿಂದ ಯಾರಿಗೇನೂ ಅಪಾಯವಾಗಲಿಲ್ಲ. ಕೆಲವು ಸಾಮಾನುಗಳು ನಾಶವಾದವು. ಮಾಷ್ಟರ ವಾಸದ ಮನೆಯೂ ಬೀಳುವಹಾಗಿದೆ. ಗ್ರಾಮಸ್ಥರನ್ನು ಎಷ್ಟು ಪ್ರಾರ್ಥಿಸಿದರೂ ಬೇರೆ ಮನೆ ಕೊಡಿಸಿಕೊಡದೆ ಇದ್ದಾರೆ.—ಕಳೆದ ತಿಂಗಳು 23 ನೇ ತಾ|| ಇಲ್ಲಿಗೆ ದಿವಾನ್ ಸಾಹೇಬರವರ ಸವಾರಿಯು ದಯಮಾಡಿಸಿತ್ತು. ಅವರು ಇಲ್ಲಿನ ಪಾಠಶಾಲೆ, ಸ್ಕೂಲು, ವಿದ್ಯಾಭಿವೃದ್ಧಿ, ಜನರ ಒಗ್ಗಟ್ಟು ಮೊದಲಾದವನ್ನು ಪರಾಂಬರಿಸಿ ಜನರನ್ನು ಕುರಿತು—ನೀವುಗಳು ಇದೇ ರೀತಿ ಐಕಮತ್ಯದಿಂದ ಕೆಲಸಮಾಡಿ ಗ್ರಾಮವನ್ನು ಇನ್ನೂ ರಮಣೀಯವಾಗಿ ಮಾಡಿಕೊಳ್ಳಿ ಎಂದು ಅಪ್ಪಣೆ ಕೊಡಿಸಿ ತೆರಳಿದರು.

ಹಾಸನ.—ಇಲ್ಲಿ ಈ ವಾರದಲ್ಲಿ ಹೊಸದಾಗಿ ಪ್ಲೇಗ್ ಕೇಸುಗಳಾಗಿ ಆಗಲೇ ಕೆಲವರು ತೀರಿಹೋದರು. ವರುಷದ ಈ ಕಾಲದಲ್ಲಿ ಈ ಸ್ಥಳದಲ್ಲಿ ಪ್ಲೇಗಿನ ದೆಸೆಯಿಂದ ಮರಣಗಳಾಗುತ್ತಿರುವದು ಅನೇಕರಲ್ಲಿ ಆಶ್ಚರ್ಯವನ್ನು ಹುಟ್ಟಿಸುವದಕ್ಕೆ ಕಾರಣವಾಗಿದೆ. ನಮ್ಮ ಮೈಸೂರು ಸೀಮೆಯ ಅತ್ಯಂತ ಆರೋಗ್ಯಕರವಾದ ಸ್ಥಳಗಳಲ್ಲಿ ಹಾಸನವು ಒಂದಾಗಿದೆ ಎಂಬ ಅಭಿಪ್ರಾಯವು ಸಾಮಾನ್ಯವಾಗಿ ಎಲ್ಲಾ ಜನಗಳಲ್ಲಿಯೂ ಇರುತ್ತದೆ. ಹೀಗಿದ್ದರೂ ಹಾಸನವು ಅನಾರೋಗ್ಯಕರವಾಗಿದೆ. ಇಲ್ಲಿನ ಜನಗಳು ಆಗಾಗ್ಗೆ ಪ್ಲೇಗ್ ಮಾರಿಗೆ ಬಲಿಯಾಗುತ್ತಿದ್ದಾರೆ. ಇದರ ಹಾವಳಿಯನ್ನು ತಡೆದು ನಿಲ್ಲಿಸುವದಕ್ಕಾಗಿ ನಮ್ಮ ಸರಕಾರದವರು ತಕ್ಕ ಏರ್ಪಾಡನ್ನು ಮಾಡಬೇಕಾಗಿದೆ.—ಈಚೆಗೆ ಇಲ್ಲಿ ಹುಚ್ಚು ನಾಯಿಗಳ ಕಾಟ ಜಾಸ್ತಿಯಾಗಿದೆ. ಇಂಥಾ ನಾಯಿಗಳಿಂದ ಕಚ್ಚಲ್ಪಟ್ಟ ಕೆಲವರನ್ನು ಇಲ್ಲಿನ ಮೆಡಿಕಲ್ ಆಫೀಸರವರು ಕೂಡಲೆ ಕೂನೂರಿಗೆ ರವಾನಿಸಿದರು. ಇವುಗಳ ಕಾಟವನ್ನು ನಿಲ್ಲಿಸಬೇಕಾದದ್ದು ತುಂಬಾ ಆವಶ್ಯಕ. ಇಲ್ಲಿನ ಅಧಿಕಾರಿಗಳು ಇಲ್ಲಿರುವ ಹುಚ್ಚು ನಾಯಿಗಳನ್ನೆಲ್ಲಾ ಕೊಲ್ಲಿಸುವ ಏರ್ಪಾಡನ್ನು ಮೊದಲುಮಾಡಿದರೆ ಉತ್ತಮವಾಗಿರುವದು.—ಹೆಸರಿಗೆ ಮಾತ್ರವಿದ್ದ ಇಲ್ಲಿನ ಇಂಡಸ್ಟ್ರಿಯಲ್ ಸ್ಕೂಲನ್ನು ಸರ್ಕಾರದವರು ಪುನಃ ಕ್ರಮಕ್ಕೆ ತರುತ್ತಾರೆಂಬ ವದಂತಿಯು ಇದೆ. ಕೆಲವು ತಿಂಗಳುಗಳ ಹಿಂದೆ ಈ ಸ್ಕೂಲು ಕೇವಲ ಹೀನಸ್ಥಿತಿಯಲ್ಲಿ ಬಿದ್ದಿತ್ತು. ಮುಂದೆಯಾದರೂ ಕ್ರಮವಾಗಿಯೂ ಸಾರೋದ್ಧಾರವಾಗಿಯೂ ನಡೆಯುವದಕ್ಕೆ ಬೇಕಾದ ಏರ್ಪಾಡುಗಳನ್ನೂ ಮಾಡುವರೆಂದು ನಿರೀಕ್ಷಿಸಲಾಗಿದೆ. ಹೀಗೆ ಮಾಡಿದಲ್ಲಿ ಹುಡುಗರಲ್ಲಿ ಅನೇಕರು ಮರಗೆಲಸವನ್ನು ಕಲಿತು ಒಳ್ಳೇ ಕೆಲಸಗಾರರಾಗುವುದರಲ್ಲಿ ಅನುಮಾನವಿರಲಾರದು. ಈ ಊರಿಗೆ ಕೇರಿಯನ್ನು ತರುವಂಥ ಒಂದು ಇಂಡಸ್ಟ್ರಿಯಲ್ ಸ್ಕೂಲ್ ಇಲ್ಲಿ ಇರಬೇಕಾದದ್ದು ಅವಶ್ಯಕ.—ಹಾಸನಕ್ಕೆ ರೈಲ್ ಹಾಕುವ ಕೆಲಸವು ಬಹಳ ನಿಧಾನವಾಗಿ ನಡೆಯುತ್ತಾ ಇದೆ. ಈ ಕೆಲಸವು ಪೂರಯಿಸಿ ರೈಲ್ ಗಾಡಿಯು ನಡೆಯಬೇಕಾದರೆ ಇನ್ನು ಎಷ್ಟು ತಿಂಗಳುಗಳು ಬೇಕಾಗಿದೆಯೋ ಯಾರಿಗೂ ತಿಳಿಯದು.

ದೊಡ್ಡಬಳ್ಳಾಪುರ.—ಇಲ್ಲಿ ಒಂದೆರಡು ಮಳೆಗಳಾಗಿ ಜನಗಳು ಹೊಲದ ವ್ಯವಸಾಯದ ಕೆಲಸಗಳನ್ನು ತುಂಬಾ ಆತುರದಿಂದ ಮಾಡಿಕೊಳ್ಳುತ್ತಿದ್ದಾರೆ. ಬಿಸಿಲಿನ ತಾಪ ಇನ್ನೂ ಕಡಮೆಯಾಗಲಿಲ್ಲ. ಹವಾ ಬದಲಾವಣೆಯಿಂದ ಜನಗಳಲ್ಲಿ ಅನೇಕರಿಗೆ ಕೆಮ್ಮಲು ನೆಗಡಿ ಜ್ವರ ಪ್ರಾರಂಭವಾಗಿ ಕಷ್ಟಪಡುತ್ತಿದ್ದಾರೆ.—ನಮ್ಮ ಡೆಪ್ಯುಟಿ ಕಮೀಷನರ್ ಮಿ|| ಚಾಂಡಿಸಾಹೇಬರು ಇಲ್ಲಿಗೆ [illegible] ಸುನಾರ ಸಮೀಪ ಮುಸಾಫರ್ ಬಂಗಲೆಯಲ್ಲಿ ಸುಮಾರು 7-8 ದಿನಗಳು ಇದ್ದು ಪ್ರತಿ ದಿನವೂ ಈ ತಾಲ್ಲೋಕಿನ ಬೇರೆಬೇರೆ ಕಡೆಗಳಿಗೆ ಹೋಗಿ [illegible] ಕಾರ್ಯಗಳನ್ನು ಪರಾಂಬರಿಸಿದ್ದಲ್ಲದೆ ಬಂಗಲೆಗೆ ಬಂದ ಪ್ರತಿಯೊಬ್ಬ [illegible] ಅಹವಾಲ್ ಅರ್ಜಿಗಳನ್ನು ಸ್ವತಃ ಅಂಗೀಕರಿಸಿ ಬಂದವರಿಗೆ ಸದುತ್ತರ [illegible] ದಯಪಾಲಿಸುತ್ತಾ ಇದ್ದರು. ಕಳೆದ ಗುರುವಾರ ಬೆಳಿಗ್ಗೆ ನಮ್ಮ ಜನಾನು[illegible]ದ ಅಮಲ್ದಾರ್ ಮಿ|| ಮಹಮದ್ ಷರೀಫ್ ಸಾಹೇಬರೂ, ಹೆಡ್ [illegible] ಮ|| ಕೊಂಗಾಡಿಯಪ್ಪನವರೂ ಪುರಪ್ರಮುಖರೊಂದಿಗೆ ಟೀಪಾರ್ಟಿ [illegible] ಮಾಡಿ ಅನೇಕ ಗಾಯನಗಳನ್ನು ತನಿಖೆಮಾಡಿ ತುಂಬಾ ಸಂತೋಷದೊಡನೆ [illegible] ಬೆಂಗಳೂರಿಗೆ ತೆರಳಿದರು.—ಕೆಲವು ದಿನಗಳಿಗೆ ಮುಂಚೆ ಈ ಊರು [illegible] ಬಳಿಯಲ್ಲಿ ಹರಿಯುವ ಹಳ್ಳದಲ್ಲಿ ಒಂದು ಮಗುವು ಬಿದ್ದು ಕೊಚ್ಚಿ[illegible] ಹೋಗುವುದನ್ನು ನೋಡಿದ ಒಬ್ಬ ಮನುಷ್ಯನು ತಕ್ಷಣವೇ ಆ ಮಗು[illegible] ಎತ್ತಿ ಬದುಕಿಸಿ ತಾಯಾದವರಿಗೆ ಒಪ್ಪಿಸಿದನು.—ಈ ದೊಡ್ಡ ಊರಿನಲ್ಲಿ [illegible] ಸರಿಯಾದ ರೀಡಿಂಗ್ ರೂಮು ಇಲ್ಲದೆ ಇರುವದು ತುಂಬಾ ಪರಿತಾಪಕರ[illegible] ಆಫೀಸರುಗಳು ಮುಂತಾದವರು ತಮ್ಮ ಆಫೀಸಿನ ಕೆಲಸಗಳನ್ನು ಮುಗಿಸಿ[illegible] ಬಂದ ಮೇಲೆ ವರ್ತಮಾನಪತ್ರಿಕೆ, ಸಚಿತ್ರ ಮುಂತಾದವುಗಳನ್ನು ಓದು[illegible] ಕಾಲಕ್ಷೇಪ ಮಾಡಲು ಅನುಕೂಲವಿಲ್ಲದ್ದರಿಂದ ಇಸ್ಪೀಟು ಮುಂತಾದ [illegible]ಸನಗಳಲ್ಲಿ ಕಾಲ ಕಳೆಯುವರು. ಕೆಲವು ವರ್ಷಗಳಿಗೆ ಮುಂಚೆ ರೀಡಿಂಗ್ ರೂ[illegible] ಉದ್ದೇಶ್ಯವಾಗಿ ಸುಮಾರು ಮುನ್ನೂರು ರೂಪಾಯಿ ನಗದು ಚಂದಾ [illegible] ಹಾಗೂ, ಆಸ್ಪತ್ರೆಯ ಎದುರಿಗೆ ಕೆಲವು ಕಲ್ಲುಗಳನ್ನು ಮಾತ್ರ ತಂದು [illegible] ಆ ಕೆಲಸವನ್ನು ಅಷ್ಟಕ್ಕೇ ಮುಕ್ತಾಯ ಮಾಡಿದ ಹಾಗೂ ಕೇಳುತ್ತೇನೆ.—[illegible] ಊರು ಮಾಡಿಗ್ಗೆರೆಯಲ್ಲಿ ಅಲ್ಲಿನ ಬಡಜನಗಳು ತಮ್ಮ ಬಡತನದಿಂದ ಕೆಲವು [illegible]ವನ್ನು ಕೂಡಿಸಿ ತಮ್ಮ ಗ್ರಾಮದೇವತೆಯಾದ ದುರ್ಗಮ್ಮನ ಗುಡಿಯನ್ನು [illegible]ಮಾಡಿಸಲು ಗ್ರಾಮದ ಯಜಮಾನರ ಪೈಕಿ ಒಬ್ಬನಾದ ಮುನಿಯ ಎಂಬ[illegible] ವಶಕ್ಕೆ ಆ ಹಣವನ್ನು ಕೊಟ್ಟು ಸುಮಾರು ಹತ್ತಾರು ವರ್ಷಗಳಾದರೂ ಈ[illegible]ವರೆಗೂ ಯಾವ ಕೆಲಸವೂ ನಡಿಸದೆ ಉದಾಸೀನಮಾಡುತ್ತಿರುವದು ತುಂಬಾ ವಿ[illegible]ಕರವಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ನಾಸಿಕ್ ಪಟ್ಟಣದಲ್ಲಿರುವ ಪೋಲೀಸ್ ಶಿಕ್ಷಣಾ ಸ್ಕೂಲ್ ಮನೆಯನ್ನು ಯುದ್ಧಭೂಮಿಯಿಂದ ಬರುವ ಸೈನಿಕರಿಗೆ ಆಸ್ಪತ್ರೆಯಾಗಿ ಬದಲಾವಣೆಮಾಡಿದಾರೆ.

ಬೊಂಬಾಯಿನಿಂದ ಜಹಜಿನಲ್ಲಿ ಸಿಲೋನ್ (ಲಂಕಾ) ದ್ವೀಪಕ್ಕೆ ಹೋಗತಕ್ಕವರು [illegible] ಹೊರಡಲು ಎಂಟು ದಿನಕ್ಕೆ ಮುಂಚೆಯೇ ಸರ್ಕಾರಕ್ಕೆ ಬರೆದು ಅಪ್ಪಣೆ [illegible]ಯನ್ನು ಸಂಪಾದಿಸಿಕೊಳ್ಳಬೇಕೆಂದು ಬೊಂಬಾಯಿ ಸರ್ಕಾರದವರು ಪ್ರಕಟಿ[illegible]ದೆ.

[illegible] ಕೃಷ್ಣಾ ಪಟ್ಟಣದ ಹತ್ತರ ಹುಗ್ಗಿಯಲ್ಲಿ ಗಂಗಾನದಿಗೆ ಜನರು ಸ್ನಾನಕ್ಕೆ [illegible] ಕಡೆ ಕೆಲವು ಮೊಸಳೆಗಳು ಬಂದು ಸೇರಿಕೊಂಡು ಕೆಲವು ದಿನಗಳ [illegible] ಹುಡುಗರನ್ನು ಸೆಳೆದುಕೊಂಡುಬಿಟ್ಟವು. ಈಚೆಗೆ ಸರ್ಕಾರದವರು ಇನಾ[illegible]ಕೊಟ್ಟು ಬೆಸ್ತರಿಂದ ಮೂರು ಭಾರೀ ಮೊಸಳೆಗಳನ್ನು ಹಿಡಿಸಿ ಇನ್ನೂ ಹುಡು[illegible]ದಾರೆ.

ಕಲ್ಕತ್ತಾ ಪಟ್ಟಣಕ್ಕೆ ಸೇರಿದ ಶಾಳಗಂಜ್ ಮೊಹಲ್ಲೆಯಲ್ಲಿ ಕಳ್ಳರು ಒಬ್ಬ [illegible] ದಾರನ ಮನೆಗೆ ನುಗ್ಗಿದರು. ಇದರ ಸುದ್ದಿಯು ಹೇಗೋ ತಿಳಿದು [illegible] ಕಮಾನ್ಷರವರು ಬಂದು ಆ ಮನೆಯನ್ನು ಸುತ್ತಿಕೊಂಡು ಕಳ್ಳರ[illegible] ಹಿಡಿಯುವುದಕ್ಕೆ ಸಾಹಸಪಟ್ಟರು. ಮೂರು ಮಂದಿ ಮಾತ್ರ ಸಿಕ್ಕಿಬಿದ್ದರು; [illegible] ಜನರು ತಲೆತಪ್ಪಿಸಿಕೊಂಡು ಓಡಿಹೋದರು.

[illegible] ರಂಗೂನ್ ಪಟ್ಟಣಕ್ಕೆ ಜಹಜುಗಳ ಮೇಲೆ ಹೋಗಿ ಇಳಿಯುವ ಹೆಂಗಸರನ್ನು [illegible] ಮಾಡುವುದಕ್ಕೆ ಮಿಸೆಸ್ ಕಾಸ್ವೆಲ್ ಎಂಬಾಕೆಯನ್ನು ಪೋಲೀಸ್ ಕೆಲಸಕ್ಕೆ [illegible]ಮಾಡಿದಾರೆ. ಕಳೆದ ವಾರ ಹಾಗೆ ಕಲ್ಕತ್ತೆಯಿಂದ ಬಂದಿಳಿದ ಒಬ್ಬ[illegible] ಹುಡುಗಿಯ ಬಳಿ 10 ಪೌಂಡು ತೂಕದಷ್ಟು ಅಫೀಮು ಬಚ್ಚಿಟ್ಟು[illegible]ದ್ದು ಸಿಕ್ಕಿತು.

ಹಿಂದುಸ್ಥಾನದಲ್ಲಿ ಸ್ತ್ರೀವಿದ್ಯಾಭ್ಯಾಸವನ್ನು ವಿಶೇಷವಾಗಿ ಪ್ರಚಾರಕ್ಕೆ ತರತಕ್ಕ ವಿಷಯದಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಸಂಕಲ್ಪಮಾಡಿರುವುದನ್ನು [illegible] ಸಾವಕಾಶವಾಗಿ ಸ್ತ್ರೀವಿದ್ಯಾಭಿವೃದ್ಧಿ ವಿಚಾರವನ್ನು ಕುರಿತು ಚರ್ಚೆ ಮಾಡುವುದಕ್ಕಾಗಿ ಮದರಾಸ್ ಅಧಿಪತ್ಯದ ಅಧಿಕಾರಿಗಳೂ ಪ್ರಜಾ ಪ್ರಮುಖರೂ [illegible]ದಲ್ಲಿ ಸಭೆ ಸೇರುವವರಾಗಿದಾರೆಂದು ತಿಳಿದುಬರುತ್ತದೆ.

ರೀವಾ ಸಂಸ್ಥಾನದ ಮಹಾರಾಜರೂ, ಸೋಲಾಂಕಿ ರಾಜಪುತ್ರ ರಾಜರು[illegible], ಧಾರ್ ದೊರೆಯೂ ಏತೀಭವಿಸಿ ಎರಡು ವಿಮಾನಯಂತ್ರಗಳನ್ನು ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ಒಪ್ಪಿಸುವುದಾಗಿ ವಾಗ್ದಾನ ಮಾಡಿದಾರೆ. ಈ ಮೊದಲೇ [illegible] ಮಹಾರಾಜರು ಎರಡು ವಿಮಾನಯಂತ್ರಗಳನ್ನು ಒಪ್ಪಿಸಿದ್ದರು. ಈ ನಾಲ್ಕನ್ನು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ವಂದನಾ ಪೂರ್ವಕವಾಗಿ ಅಂಗೀಕರಿಸುತ್ತಾರೆ.

ಸಿಂಧು ದೇಶಕ್ಕೆ ಸೇರಿದ ಹೈದರಾಬಾದ್ ಪಟ್ಟಣದಲ್ಲಿ ಮೂವತ್ತನಾಲ್ಕು ಮಂದಿ ಅಸಿಸ್ಟಂಟ್ ಸರ್ಜನ್ನುಗಳನ್ನು ಸಿವಿಲ್ ಸರ್ಜನ್ ಡಾ|| ಹಾಲೆಂಡ್ ರವರು ಕರಸಿ ಒಂದು ಸಭೆಯನ್ನು ಮಾಡಿ, ಯುದ್ಧಭೂಮಿಗೆ ಗಾಯಪಟ್ಟವರಿಗೆ ಚಿಕಿತ್ಸೆ ಮಾಡುವದಕ್ಕಾಗಿ ವೈದ್ಯರುಗಳು ಬೇಕಾಗಿದಾರೆಂದು ಸೂಚಿಸಿದರು. ಆ ವ್ಯಕ್ತಿ ಅನೇಕ ಮಂದಿ ವೈದ್ಯರು ನೌಕರಿ ಬಿಟ್ಟು ಅಲ್ಲಿಗೆ ಹೋಗಲು ಸಿದ್ಧರಾಗಿದೇವೆಂದು ಒಪ್ಪಿ ತಮ್ಮ ಹೆಸರುಗಳನ್ನು ಬರಸಿದರು.

ಹಿಂದುಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ಆಯಾ ಅಧಿಪತ್ಯಗಳ ಬ್ಯಾಂಕುಗಳಿಗೆ ಮೇ ತಾ. 6 ರ ವರೆಗೆ ಪಾವತಿಯಾಗಿರುವ ಚಂದಾ ಹಣ ಎಷ್ಟೆಂದರೆ :—

ಸಿಮ್ಲಾ ಅಲ್ಲಯನ್ಸ್ ಬ್ಯಾಂಕಿಗೆ	ರೂ. 46,94,981- 3- 0
ಬಂಗಾಳಾ ಬ್ಯಾಂಕಿಗೆ	,, 36,45,845-13-11
ಬೊಂಬಾಯಿ ಬ್ಯಾಂಕಿಗೆ	,, 8,39,917-12- 4
ಮದರಾಸ್ ಬ್ಯಾಂಕಿಗೆ	,, 6,77,748- 7- 7
ಜುಮ್ಲಾ ರೂಪಾಯಿ	98,58,493- 4-10

ಮದರಾಸ್ ಅಧಿಪತ್ಯದಲ್ಲಿ ಗ್ರಾಮಾಂತರಗಳಲ್ಲಿರುವ ಪ್ರಜೆಗಳಿಗೆ ಚಿತ್ರ ಮೂಲಕವೂ ಉಪನ್ಯಾಸಗಳ ಮೂಲಕವೂ ಆರೋಗ್ಯ, ಸ್ಯಾನಿಟೇಷನ್, ಸಾಂಕ್ರಾಮಿಕ ರೋಗಗಳು, ಅಂಟು ರೋಗಗಳು ಈ ಮುಂತಾದ ವಿಚಾರಗಳಲ್ಲಿ ವಿವೇಕವನ್ನು ಕಲಿಸಬೇಕೆಂದು ಪ್ರಯತ್ನ ನಡೆದಿದೆ. ಸರ್ಕಾರದವರೂ ಈಗಾಗಲೇ ಮರೇರಿಯಾ, ನೀರು, ಆಹಾರ, ಅಮಶಂಕೆ, ಕ್ಷಯ, ನಾರುಹುಣ್ಣು, ವಾಂತಿಭೇದಿ, ಪ್ಲೇಗು, ಕೊಳಕವನ್ನು ನೀಗಿಸುವುದು, ಈ ಮೊದಲಾದ ವಿಷಯಗಳನ್ನು ವಿವರಿಸಿದ ಸಣ್ಣ ಪತ್ರಿಕೆಗಳನ್ನು ರಚಿಸಿ ಕೇಳಿದವರಿಗೆಲ್ಲಾ ಬಿಟ್ಟಿ ಹಂಚಿ ಕೊಡುವಂತೆ ಸಿದ್ಧಮಾಡಿಕೊಂಡಿದಾರೆ.

ಬೆಳ್ಳಿಯನ್ನು ಕರಗಿಸಿ ಭಂಗಾರವನ್ನು ಮಾಡುವಂಥಾ ಯಕ್ಷಿಣಿ ವಿದ್ಯೆಯನ್ನು ಕಲಿತಿದೇನೆಂದು ಕರಮುಹುಸೇನನೆಂಬವನು ಕಾಶೀಪುರಕ್ಕೆ ಹೋಗಿ ಒಬ್ಬ ಗೃಹಸ್ಥನನ್ನು ಮೋಸಪಡಿಸಿ ಅವನ ಬಳಿ ಇದ್ದ ಸುಮಾರು 100 ರೂಪಾಯಿನ ಬೆಳ್ಳಿ ನಾಣ್ಯಗಳನ್ನು ಪಡೆಸಿಕೊಂಡು ಮಂತ್ರಹಾಕುತ್ತೇನೆಂದು ನಟನೆಮಾಡಿ ಅದನ್ನೆಲ್ಲಾ ತೆಗೆದುಕೊಂಡು ಓಡಿಹೋಗುತ್ತಿದ್ದನು. ಅವನನ್ನು ಹಿಡಿದು ಪೋಲೀಸಿಗೆ ಒಪ್ಪಿಸಲು, ಮುಲ್ತಾನಿನ ರಾಯಬಹದ್ದೂರ್ ಹರಿಚಂದ್ ಎಂಬ ಮ್ಯಾಜಿಸ್ಟ್ರೇಟರು ಮೋಸಗಾರನಿಗೆ ಎಂಟು ವರುಷ ಕಠಿಣಶಿಕ್ಷೆಯನ್ನೂ 100 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು.

ಮದರಾಸ್ ಪಟ್ಟಣದಲ್ಲಿ ವಸ್ಲಿ ಕಾಲೇಜಿನ ವಿದ್ಯಾರ್ಥಿಯಾದ ಸ್ವಾಮಿನಾಥನೆಂಬ ಹುಡುಗನು ಭವಾನಿ ಎಂಬ ಹುಡುಗಿಯ ಮೇಲೆ ಕಣ್ಣಿಟ್ಟಿದ್ದು ಆ ಹುಡುಗಿಯು ಒಪ್ಪದೆಹೋದದ್ದರಿಂದ ಅವನು ಅವಳ ಮೇಲೆ ಆಸಿಡ್ ದ್ರಾವಕವನ್ನು ಎರಚಿ ಮುಖವನ್ನು ವಿಕಾರ ಮಾಡಿಬಿಟ್ಟನು. ಇದು ಮೊಕದ್ದಮೆಯಾಗಿ ಅವನು ದ್ರಾವಕ ಎರಚಿದ್ದು ರುಜುವಾತಾದದ್ದರಿಂದ ಮ್ಯಾಜಿಸ್ಟ್ರೇಟರು 100 ರೂಪಾಯಿ ಜುಲ್ಮಾನೆ ವಿಧಿಸಿ, ಅದರಲ್ಲಿ 25 ರೂಪಾಯಿ ಆ ಹುಡುಗಿಗೆ ಪ್ರತಿಫಲ ಕೊಡಬೇಕೆಂದೂ, ಜುಲ್ಮಾನೆ ವಸೂಲಾಗದಿದ್ದರೆ ಒಂದು ತಿಂಗಳ ಕಠಿಣಶಿಕ್ಷೆ ಅನುಭವಿಸಬೇಕೆಂದೂ ಶಿಕ್ಷೆಯನ್ನು ವಿಧಿಸಿದರು.

ಮದರಾಸ್ ಅಧಿಪತ್ಯದ ಗ್ರಾಮ ಕೋರ್ಟುಗಳಿಗೆ ಈಗ 20 ರೂಪಾಯಿವರೆಗಿನ ಸಿವಿಲ್ ಮೊಕದ್ದಮೆಗಳನ್ನು ಹಿಡಿದು ವ್ಯವಸ್ಥೆಮಾಡುವ ಅಧಿಕಾರವಿದೆ. ಇನ್ನು ಮುಂದೆ 50 ರೂಪಾಯಿ ವರೆಗಿನ ಲೇವಾದೇವಿ ಮೊಕದ್ದಮೆಗಳನ್ನು ಹಕ್ಕುದಾರರ ಒಪ್ಪಿಗೆಯಿಂದ ಫೈಸಲ್ ಮಾಡುವಂತೆಯೂ, ವಾದಿ ಪ್ರತಿವಾದಿಗಳು ಸಮ್ಮತಿಸಿದರೆ 200 ರೂಪಾಯಿ ವರೆಗಿನ ಲೇವಾದೇವಿ ವ್ಯವಹಾರಗಳನ್ನು ಹಿಡಿದು ಇತ್ಯರ್ಥಮಾಡುವಂತೆಯೂ, ಸಣ್ಣ ಪುಟ್ಟ ನೋಕದ್ದಮೆಗಳನ್ನೂ ವಿಚಾರಣೆಮಾಡಿ 15 ರೂಪಾಯಿ ವರೆಗೆ ಜುಲ್ಮಾನೆ ವಿಧಿಸುವಂತೆಯೂ ಹೆಚ್ಚು ಅಧಿಕಾರಗಳನ್ನು ವಹಿಸಬೇಕೆಂದು ಅಭಿಪ್ರಾಯಪಟ್ಟು ಕಾನೂನ್ ಬದಲಾವಣೆಮಾಡುವವರಾಗಿದಾರೆ.

ಸ್ವದೇಶ ಕೈಗಾರಿಕೆಗಳು.

ಅನೇಕ ಸ್ಥಳಗಳಲ್ಲಿ ಕೈಗಾರಿಕೆಗಳ ಕಾರ್ಖಾನೆಗಳನ್ನು, ಎಂಜಿನಾ ಮೊದಲಾದವುಗಳಿಂದ ಗೊಬ್ಬರವನ್ನು ತಯಾರಿಸ ಬಹುದಾದ ಕಾರ್ಖಾನೆಗಳನ್ನೂ ಏರ್ಪಡಿಸುವ ಉದ್ದೇಶದಿಂದ ನನ್ನ ದೇಶಬಾಂಧವರಿಗೆ ಅರಿಕೆ ಮಾಡಿಕೊಳ್ಳುವದೇನೆಂದರೆ ನಿಮ್ಮ ಸ್ಥಳದಲ್ಲಿ ಯಾವುದಾದರೂ ಕೈಗಾರಿಕೆಯನ್ನೇ ಆಗಲಿ, ಗೊಬ್ಬರದ ಕಾರ್ಖಾನೆಯನ್ನೇ ಆಗಲಿ ಇಡಬೇಕೆಂದು ಯಾರಿಗಾದರೂ ತಾತ್ಪರ್ಯವಿದ್ದರೆ ಅಲ್ಲಿನ ಮುಖಂಡರು ಕಲೆತು ಮಾತನಾಡಿಕೊಂಡು ನನಗೆ ತಿಳಿಸಿದರೆ ನಾನು ಬಂದು ಪದಾರ್ಥಗಳನ್ನು ತಯಾರಿಸುವ ರೀತಿಯನ್ನು ತೋರಿಸಿ ಅನುಭವಪಡಿಸಿ ಕಾರ್ಖಾನೆಯನ್ನು ಏರ್ಪಡಿಸುವೆನು.

ಕೆ. ಆರ್. ಚಕ್ರವರ್ತಿ,

[60-13] ಏಜಂಟ್, ಮೈ. ಸ್ಟೀಂ ಟ್ರಾಂವೆ ಕಂಪನಿ, ಬೆಂಗಳೂರು ಸಿಟಿ.

ಲೋ॥ ಸೆಕೆಂಡರಿ ನವೀನ ಗಣಿತ.

(ಮಹಾರಾಣಿಯವರ ಕಾಲೇಜು ಮಾಜಿ ಪ್ರಧಾನ ಟೀಚರ್ ಡಿ. ಮಹಾಬಲರಾವ್ ಬಿ. ಎ. ಯವರಿಂದ.)

ಸುಲಭವಾದ ಅನೇಕ ನೂತನ ಮಾರ್ಗಗಳು, 1900—15 ವರೆಗಿನ ಪ್ರಶ್ನೆ ಪತ್ರಿಕೆಗಳಿಗೆ ಪೂರ್ಣನ್ಯಾಸ ಸಹಿತ ಉತ್ತರಗಳೂ ಇವೆ. ಸ್ಕೂಲ್, ಪ್ರೈವೇಟ್ ವಿದ್ಯಾರ್ಥಿಗಳಿಗೆ ಅವಶ್ಯಕವೆಂದು ಪರೀಕ್ಷಕರು ಅಭಿಪ್ರಾಯಪಟ್ಟಿರುತ್ತಾರೆ. ಕ್ರಯ 0-8-0; ವಿ. ಪಿ. 0-10-0, 4 ಕ್ಕೆ ವಿ. ಪಿ. 2-5-0; 8 ಕ್ಕೆ 4-3-0.

ಮೈಸೂರಲ್ಲಿ:—(1) ಗ್ರಂಥಕರ್ತರು. (2) ಸ್ಟೂಡೆಂಟ್ಸ್ ಹಾಲ್; (3) ವಿಜಯ ಪುಸ್ತಕಾಲಯ; (4) ಜನರಲ್ ಏಜೆನ್ಸಿ.

ಬೆಂಗಳೂರಲ್ಲಿ:—(1) ಎಚ್. ಗೋಪಾಲಚಾರ್, ಹೆ. ಡ್ರಾಯಿಂಗ್ ಟೀಚರು; (2) ಆರ್. ಎಸ್. ಅಹೋಬಲ್ ಕಂಪೆನಿ, ಅವೆನ್ಯೂ ರೋಡು; (3) ವಿದ್ಯಾಸಾಗರ ಬುಕ್ ಡಿಪೊ, ಚಿಕ್ಕಪೇಟೆ; (4) ಪಿ. ಕೆ. ವಿ. ಬುಕ್ ಡಿಪೊ, ಚಾಮರಾಜಪೇಟೆ. [119-2]

NOTICE

Notes together with questions and answers on the King of the Golden River and Granny's Wonderful Chair, L. S. English Texts for 1917 by Mr. S. V. Pichamuttu, B.A. can be had at Messrs. K. A. Chourappa and Sons, Bangalore City; The Students' Hall, Mysore; or, The City Book Depot, Bangalore. Price Six annas. [126-1]

MYSORE L. S. EXAMINATION, 1917.

I. *Model Notes*, with Canarese Meanings Etc., on Two English Texts. As. 6. II. *Essays and Letters*, As. 6. III. *Aids to Grammatical Analysis* As 5. IV. *Spelling Book*, As 4.

Apply to—**M. N. Sita Rama Rao,**

[124-1] **Krishnaraj Mohalla, Mysore.**

LOWER SECONDARY ENGLISH TEXTS FOR 1917.

The King of the Golden River As 3½. Granny's Wonderful Chair As 4. Notes for both by R. S. Ahobal & Co., As. 4. -Do- by M. N. Sitarama Rao As 6. Eng. Essays and Letters by- -Do- -As. 6., and Aids to Grammatical Analysis As. 5. New Manual of Eng. Grammar As. 10. Grammatical Primer As. 4. Hyde's Practical Eng. Grammar Book I and II each As. 14. Yate's Eng. Primer As. 3. Mach. New English Reader I 4 As. No. II 6 As. No III 8 As. No IV 12 As. ಕೆ. ಎಲ್. ಸಿ. ಟೆಕ್ಸ್ಟ್ 4½ ಅ. ಡಿಟೊ ಸಂಸ್ಕೃತ 3 ಅ. ನಮ್ಮಲ್ಲಿ ಎಲ್ಲಾ ಇಂಗ್ಲಿಷ್ ಕನ್ನಡ ಸ್ಕೂಲು ಪುಸ್ತಕಗಳೂ ಸುಲಭ ಬೆಲೆಗೆ ದೊರೆಯುತ್ತವೆ.

ಯಂ. ಯಸ್. ರಾವ್ ಕಂಪೆನಿ, ಅವೆನ್ಯೂರೋಡ್, ಬೆಂಗಳೂರು ಸಿಟಿ.

M. S. Rao & Co., Book Sellers,

[81-9] **Avenue Road, Bangalore City.**

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ನಮ್ಮ ಅಣ್ಣನಾದ ಪೆರ್ಷನ್ ನವಾಬ್ ಹುಸೇನ್ ಅಲ್ಲಿ ಖಾನ್ ಸಾಹೇಬರ ಮಗ ಗುಲಾಂ ಹುಸೇನ್ ಖಾನ್ ಎಂಬವರು ಕುಣಿಗಲಿನಲ್ಲಿ ವಾಸವಾಗಿದ್ದು ಹೆಂಡತಿ, ಮೂರು ಜನ ತಂಗೀರುಗಳನ್ನೂ ಇಬ್ಬರು ತಮ್ಮಂದಿರುಗಳನ್ನೂ ಬಿಟ್ಟು ಕಾಲವಾದರು. ಸದರಿಯವರ ಬಾಬ್ತು ವಿಶಿಷ್ಟ ಚರ ಸ್ಥಿರ ಆಸ್ತಿಗಳಿಗೆ ಮೇಲೆ ಹೇಳಿದ ಸಂಬಂಧಿಗಳಿಗೆ ಮಹಮ್ಮದನ್ ಲಾ ಪ್ರಕಾರ ಹಿಸ್ಸೆ ಬರಬೇಕಾಗಿದೆ. ಈ ಆಸ್ತಿಗಳು ಅವರ ಹೆಂಡತಿ ಬಿಜಾನ್ ಬಿಯವರ ಸ್ವಾಧೀನದಲ್ಲಿ ಇರುವದರಿಂದ ಆ ಬಾಬ್ತು ಆಸ್ತಿಗಳನ್ನು ಸದರಿ ಬಿಜಾನ್ ಬಿಯಾಗಲಿ, ಮತ್ತ್ಯಾರೇ ಆಗಲಿ ಮೇಲ್ಕಂಡ ಸಂಬಂಧಿಗಳಿಗೆ ತಿಳಿಯದಂತೆ ಮೋಸದಿಂದ ಕ್ರಯ, ಆಧಾರ, ಭೋಗ್ಯ, ಮೂಲಕ ಪರಭಾರೆ ಮಾಡುವ ಪಕ್ಷದಲ್ಲಿ ತೆಗೆದುಕೊಳ್ಳತಕ್ಕವರು ಮೇಲ್ಕಂಡವರ ಹಿಸ್ಸೆಗೆ ಒಳಪಟ್ಟು ತೆಗೆದುಕೊಳ್ಳಬೇಕಾಗುವುದೆಂದು ಎಚ್ಚರಿಕೆ ಕೊಟ್ಟಿದೇನೆ.

[128-1] ಖಾದರ್ ನವಾಜ್ ಖಾನ್.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ ಕುಣಿಗಲ್ ತಾ॥ ಅಮೃತೂರು ಹೋಬಳಿ ಸಮ್ಮತಿ ಬಾಯಂಗುತ್ತಾ ಕೋಡಿಹಳ್ಳಿ ಗ್ರಾಮದಲ್ಲಿರುವ ವೈಷ್ಣವ ಲಕ್ಷ್ಮೀನರಸಯ್ಯನಾದ ನನಗೆ ನರಸಿಂಹಯ್ಯನೆಂಬ ಒಬ್ಬ ಮಗನೂ, ಈತನಿಗೆ ಚಿಕ್ಕ ವಯಸ್ಸಿನ ಇಬ್ಬರು ಗಂಡು ಮಕ್ಕಳೂ ಇದಾರೆ. ಈತನು ಕೆಟ್ಟ ಜನಗಳ ದುಬೋಧನೆಗೊಳಗಾಗಿ ನನ್ನ ಕುಟುಂಬದ ಸ್ಥಿರ ಚರಾಸ್ತಿಗಳನ್ನೆಲ್ಲಾ ಕ್ರಯ ಭೋಗ್ಯ ದಾನ ಆಧಾರ ಮುಂತಾದ್ದು ಮಾಡಲು ಯತ್ನಿಸುತ್ತಿರುವದರಿಂದ ಡಿಟೋ ಸಮ್ಮತಿ ಸಾಬ ಗ್ರಾಮಕ್ಕೆ ಸೇರಿದ ಖಾತೆ 90 ನೇ ಸರ್ವೆ 103 ನೇ ನಂ. 3 ಎಕರೆ 37 ಗುಂಟೆ ಆಕಾರ 12 ರೂ ಉಳ್ಳ ಕರಿ ಜಮೀನನ್ನು ಮತ್ತು ವಾಸದ ಮನೆಯನ್ನೂ ಪಟ್ಟೇದಾರನಾದ ನನ್ನ ರುಜುವಿಲ್ಲದೆ ಯಾರಾದರೂ ಹೊಂದಿದರೆ ಅವರಿಗೆ ಸ್ಥಿರಪಡಲಾರದು. ಮತ್ತು ನಮಗೆ ಸಗಲುವ ನಷ್ಟಕ್ಕೆ ಗುರಿಯಾಗಬೇಕಾಗುತ್ತೆ. ಖಂಡಿತ ತಿಳಿಯುವುದು. [120-1]

16-5-1916. ಲಕ್ಷ್ಮೀನರಸಯ್ಯ.

ಗೃಹಕೃತ್ಯದ ನೋಟೀಸು.

ಚಾಮರಾಜನಗರದ ತಾಲ್ಲೋಕು ನ್ಯಾಸಿಗಳಲ್ಲಿರುವ ಪರಿವಾರದ ಸಿದ್ಧನಾಯಕನ ಮಗ ನಿಂಗನಾಯಕನು ಇದರಿಂದ ಸಮಸ್ತರಿಗೆ ತಿಳಿಸುವದೇನೆಂದರೆ—ನನ್ನ ಸೋದರ ಮಾವ ಸದರಿ ನ್ಯಾಸಗಳ್ಳಿಯಲ್ಲಿರುವ ನಾಯಕ ಉರುಫ್ ಕಾಳೇಸಿದ್ದ ನಾಯಕನು ತನ್ನ ಬಾಬತು ಕಿಲಗೆರೆ ಗ್ರಾಮ ಸರ್ವೆ 53-197-198-199-172-173 ನೇ ಜಮೀನುಗಳನ್ನು, ನ್ಯಾಸಗಳ್ಳಿಯ 41 ಅಂಕಣ ಮನೆಯನ್ನೂ ನನಗೆ 23-2-1912 ರ ಮುಕರ್ರಂ ರಿಜಿಸ್ಟರ್ಡ್ ಮೂಲಕ ವಿಲ್ ಮಾಡಿರುತ್ತಾನೆ. ಈಚಗೆ ಇತರರ ಚಿತಾವಣೆಯಿಂದ ಈ ಆಸ್ತಿಗಳನ್ನು ಪರಭಾರೆ ಮಾಡುವ ಏರ್ಪಾಡಿನಲ್ಲಿದ್ದಾನೆ. ಹಾಗೆ ಮಾಡಲು ಆತನಿಗೆ ಹಕ್ಕಿಲ್ಲ. ಇವನಿಂದ ಸ್ವಾಧೀನ ಹೊಂದುವವರು ನನ್ನ ಸಮಸ್ತ ನಷ್ಟಕ್ಕೂ ಗುರಿಯಾಗಬೇಕಾಗುತ್ತೆ.

[123-1] ನಿಂಗಯ್ಯನ ಗುರ್ತಿನ ರುಜು.

ಟೋಪಿಗಳು: ಟೋಪಿಗಳು.

ಉತ್ತಮವಾದ ಟೋಪಿಗಳು ಹಾಸನದಲ್ಲಿ ದೊರೆಯುತ್ತವೆ.

ವಿವಿಧ ತರಹ ಉಣ್ಣೆ ದಾರದಿಂದ ತಯಾರಿಸುವ ಸಾಮಾನುಗಳೂ, ಕಂಬಳಿಗಳೂ, ದರಗಳನ್ನು ಮ್ಯಾನೇಜರವರಿಗೆ ಬರೆದು ತಿಳಿದುಕೊಳ್ಳಬಹುದು.

Men's socks, vests and vario knitted articles.

ಮ್ಯಾನೇಜರ್, ಗರ್ಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply :—MANAGER, WOL WORKS,

[188-35] GIRLS' INDUSTRIASCHOOL, HASSAN.

ಶುದ್ಧವಾದ ಸೀಗೇಕಾಯಿ ಪುಡಿ.

ಮೈಸೂರಿನ ಸರ್ವೋತ್ಕೃಷ್ಟವಾದ ಸೀಗೆಕಾಯಿ ತಂದು ಶೋಧಿಸಿ ಒಣಗಿಸಿ ಮೋಟರ್ ಪವರ್ ಯಂತ್ರಸಹಾಯದಿಂದ ಪುಡಿಮಾಡಿದೆ. ಸಮುದಾಯ ವರೇ ಇದನ್ನು ತಲೆಗೆ ಹಚ್ಚಿ ಚಾಗರೂಕತೆಯಿಂದ ಬಹು ತೃಪ್ತಿಕರವಾಗಿ ಮಾಡಿಸುತ್ತಾರೆ. ಕ್ರಯ—½ ಪೌಂಡ್ ಪೊಟ್ಟಣಕ್ಕೆ 1½ ಆಣೆ, 1 ಪೌಂಡ್ 2½ ಆಣೆ. 36 ಪೌಂಡ್ ಪುಡಿ ಟಿನ್‌ನಲ್ಲಿ ಭರ್ತಿಮಾಡಿಯೂ ರವಾನೆ ಮಾಡುತ್ತೇವೆ. ಹೆಚ್ಚು ಕೊಳ್ಳುವವರಿಗೆ ಸ್ಪೆಷಲ್ ದರಗಳುಂಟು. ಒಟ್ಟಾಗಿ ತರಿಸಿ ಎಲ್ಲಾ ಪಟ್ಟಣ, ಊರುಗಳಲ್ಲೂ ಬಿಕರಿ ಮಾಡುವಂಥಾ ಏಜಂಟು ಬೇಕು. ಏಜಂಟರಿಗೆ ವಿಶೇಷ ರಿಯಾಯತಿಯುಂಟು. ಮಾದ್ರಿ ಮತ್ತು ದರಗಳನ್ನು ನಮಗೆ ಬರೆಯಿರಿ. [121-1]

ನಮ್ಮ ವಿಳಾಸ—ಮೈಸೂರು ಸೋಪ್‌ನಟ್ ಫ್ಯಾಕ್ಟರಿ,

ರೈಲ್ವೇ ಸ್ಟೇಷನ್ ಹತ್ತಿರ, ಮೈಸೂರು.

ಮರಗಳ ಹರಾಜು ಇಶ್ತಿಹಾರ್.

ಇದರಿಂದ ಸಮಸ್ತ ಜನಗಳಿಗೆ ತಿಳಿಸಪಡಿಸುವದೇನಂದರೆ, ಕಡೂರ್ ಡಿಸ್ಟ್ರಿಕ್ಟು ತರೀಕೆರೆ ತಾಲ್ಲೋಕು ಕಸಬಾ ಪರ್ ಹವರತ್ ಖಂದರ್ ಸಾಹೇಬರ ಮುಕರ್ ಮ್ಯಾದಾರ್‌ನಲ್ಲಿಯೂ ಪುತ್ತ ಸಾಟರ್ ಹೌಸ್ ಮ್ಯಾದಾರ್‌ನಲ್ಲಿಯೂ ಸಹ ಸಾಗುವ ಸರಕಾರಿ ಫಾರೆಸ್ಟ್ ರಾಜನಲ್ಲಿ ಮತ್ತು ಹಾದಿಕೆರೆ ಜಂಗಲಿಂದ ತರಿಸಿ ಜಮಾ ಮಾಡಿರುವ ಸಟಿ 0000 ಅಡಿ ಸಾಗುವಾನಿ ದಿಮ್ಮಿಗಳು 1916 ನೇ ಜೂನ್ ತಾ 2 ನೇ ಶುಕ್ರವಾರ ಮತ್ತು 3 ನೇ ಶನಿವಾರ ಸಹ ಲಾಟ್‌ವಾರ್ ಹರಾಜ್ ಮಾಡಲ್ಪಡುತ್ತೆ. ಇಷ್ಟಪಡುವವರು ಸದರಿ ಮೊಕಾಮಿಗೆ ದಯಮಾಡಿಸಿ ಇದರಡಿ ನಮೂದಿಸಿರುವ ಶರತ್‌ಗಳಿಗೆ ಅನುಸರಿಸಿ ಸವಾಲ್ ಕರೆಯತಕ್ಕದ್ದು.

ಹರಾಜ್ ಷರತ್ತುಗಳು—(1), ಹರಾಜ್‌ದಾರ್ರು ಯಾವ ಲಾಟ್ 3 ಸಾರಿ ಆಗುತ್ತದೆಯೋ ಆ ಕೂಡ್ಲೆ ಹರಾಜ್ ಮೊಬಲಗಿನ ಪೈಕಿ 4 ರಲ್ಲಿ 1 ನೇ ಭಾಗದ ಮೊಬಲಗು ಹಾಜರ್ಮಾಡತಕ್ಕದ್ದು. ಬಾಕಿ 3 ಭಾಗದ ಮೊಬಲಗು ಒಂದು ತಿಂಗಳಲ್ಲಿ ಪಾವತಿಯಿಂದ ರಶೀತಿ ಪಡೆದು ಸಾಮಾನು ರವಾನೆ ಪಡೆಯತಕ್ಕದ್ದು. (2) ಹೀಗೆ ಒಂದು ತಿಂಗಳಲ್ಲಿ 3 ಭಾಗದ ಹಣವು ಪಾವತಿಯಾಗದೆ ಹೋದಲ್ಲಿ ಮಾಲು ದುಸ್ರಾ ಹರಾಜ್ ಮಾಡುವಲ್ಲದೆ ಮೊದಲು ಹಾಜರ್ ಪಡಿಸಿರುವ ಒಂದನೇ ಭಾಗದ ಮೊಬಲಗು ಜಪ್ತಿಯಾಗಿ ಕಂಪನಿಗೆ ಸೇರಿಸಿಕೊಳ್ಳಲ್ಪಡುತ್ತೆ. ಅಲ್ಲದೆ ನಮಗೆ ಉಂಟಾಗುವ ನಷ್ಟಕ್ಕೆ ಮೊದಲನೇ ಹರಾಜ್‌ದಾರರು ಗುರಿಯಾಗತಕ್ಕದ್ದು. ಹಾಗೆ ಗುರಿ ಆಗದೆ ಇದ್ದಲ್ಲಿ ನಮಗೆ ಉಂಟಾಗುವ ನಷ್ಟದ ಮೊಬಲಗು ಬರಮಾಡಿಕೊಳ್ಳಲು ಸಿವಿಲ್ ಕೋರ್ಟಿನಲ್ಲಿ ದಾವಾ ಮಾಡಲ್ಪಡುತ್ತೆ. (3) ಮೊದಲಿನ ಹರಾಜಿಗಿಂತ 2 ನೇ ಹರಾಜಿನಲ್ಲಿ ನಮಗೆ ಏನಾದರೂ ಜಾಸ್ತಿ ಹುಟ್ಟುವಳಿ ಆದಲ್ಲಿ ಮೊದಲನೇ ಹರಾಜುದಾರನಿಗೆ ಅದರಲ್ಲಿ ಏನೊಂದು ಹಕ್ಕು ಇರುವದಿಲ್ಲ. [125-1]

ತಾ. 15-5-1916. ಮುಂಶಿ. ಅಲ್ಲಿ ಖಾನ್, ತರೀಕೆರೆ.



ಸುಸಮಯ!! ವಿಶೇಷ ಲಾಭ!! ತಪ್ಪಿ ಪರೀಕ್ಷಿಸಿ!!! ಬಿಡು ಉತ್ತರಕ್ಕೆ ಕಾಯಬೇಡಿ!!!

ಸರ್ವರೂ ಅತ್ಯವಶ್ಯಕವಾಗಿ ಗಮನಿಸಬೇಕಾದ ವಿಷಯ.

ಅನೇಕ ವ್ಯಾಪಾರಸ್ಥರು ಭಾರೀಕ್ರಯದ ನಾಲ್ಕಾರು ಬಹುಮಾನಗಳನ್ನೂ ಮತ್ತು ಕೆಲವರು ಗಳ ವಸ್ತುಗಳಿಗೆ ಅರ್ಧ ಕ್ರಯಕ್ಕೆ ಕೊಡುತ್ತೇವೆಂದು ಆಡಂಬರದ ಪ್ರಕಟನೆಗಳನ್ನೂ ಪ್ರಕಟಿಸಿ ಗಿರಾಕಿಗಳನ್ನು ಆಕರ್ಷಿಸಮಾಡುವುದು ಹಲವು ಕಂಪೆನಿಯವರ ವಾಡಿಕೆಯಾಗಿದೆ. ವ್ಯಾಪಾರಸ್ಥರು ಉಕ್ತಾಲ್ ವಹಿಸಿಕೊಂಡು ವ್ಯಾಪಾರ ನಡಿಸುವರೇ ಎಂಬುವುದನ್ನು ಗಿರಾಕಿಗಳು ಯೋಚಿಸದೆ ತರಿಸಿ ನಿರಾಶರಾಗುವುದನ್ನು ಪದೇಪದೇ ನಾವು ಕೇಳುತ್ತಲೇ ಇದೇವೆ.

ಮಿತ್ರರೇ! ಈ ಕೆಳಗೆ ವಿವರಿಸಿರುವ ಹಾರ್ಮೋನಿಯಂಗಳನ್ನು ಪ್ರಖ್ಯಾತರಾದ ಕಾರೀಗಾರರಿಂದ ಬಹು ನಾಜೂಕಾಗಿ ತಯಾರ್ ಮಾಡಿ ಸುಲಭ ಬೆಲೆಗೆ ಬಿಕರಿ ಮಾಡುತ್ತಲಿದ್ದೇವೆ. ಪಮ್ಮಿಂದ ಒಂದಾವರ್ತಿ ತರಿಸಿ ಪರೀಕ್ಷಿಸಿದಲ್ಲಿ ಪದಾರ್ಥದ ಸೊಗಸು, ಬಾಳ್ಕೆ, ಬಂದೋಬಸ್ತು, ಮಧುರವಾದ ಸ್ವರ, ಇವೇ ಮೊದಲಾದ ಅತ್ಯುತ್ಕೃಷ್ಟ ಗುಣಗಳು ತಾವಾಗಿ ಗೋಚರಿಸಿ ಸ್ವಾಗತ್ತಾಯಾಗಿ ನಮ್ಮ ಪದಾರ್ಥಗಳನ್ನು ನಾವೇ ಹೊಗಳಲಾರೆವು.

ಕ್ರಯಕ್ಕೆ ತಕ್ಕ ಉತ್ತಮವಾದ ಪದಾರ್ಥಗಳನ್ನು ನಮ್ಮ ಖುದ್ ಅಜಮಾಯಿಷಿಯಿಂದ ಚುನಾಯಿಸಿ ಗಿರಾಕಿಗಳ ಮನಸ್ಸಮರ್ಪಕವಾಗುವಂತೆ ರವಾನಿಸುತ್ತಲಿರುವುದರಿಂದ ನಮ್ಮಿಂದ ಹಾರ್ಮೋನಿಯಂ ತರಿಸಿಕೊಂಡ ಸದ್ಗೃಹಸ್ಥರಿಂದ ಸಂತೋಷಪೂರ್ವಕವಾದ ಸನ್ಮಾನ ಪತ್ರಿಕೆಗಳು ಪ್ರತಿನಿತ್ಯವೂ ಬರುತ್ತಲಿವೆ.

ಇತರ ಕಂಪೆನಿಯವರಂತೆ ನಾಲ್ಕಾರು ಬಹುಮಾನಗಳನ್ನೇ ಆಗಲಿ, ಅರ್ಧ ಕ್ರಯಕ್ಕೆ ಕೊಡುತ್ತೇವೆಂದೇ ಆಗಲಿ ನಾವು ಆಶೆ ಹುಟ್ಟಿಸಿ ಹಣ ಪಡೆದ ನಂತರ ನಿರಾಶರನ್ನಾಗಿ ಮಾಡುವುದಿಲ್ಲವೆಂಬುದನ್ನು ಜ್ಞಾಪಕದಲ್ಲಿಡಿರಿ.

ರಂಖವಾರ್ ಹಾರ್ಮೋನಿಯಂಗಳ ಕ್ರಯದ ತಪಶೀಲ್

"ಬಿಜಲೀ ಫ್ಲೂಟ್" ಸಿಂಗಲ್‌ರೀಡ್ ಹಾರ್ಮೋನಿಯಂ ಕ್ರಯ 1 ಕ್ಕೆ	26	0	0
"ಡೈಮಂಡ್ ಫ್ಲೂಟ್" ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ 1 ಕ್ಕೆ	27	8	0
"ಕೊಹಿನೂರ್ ಫ್ಲೂಟ್" ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ 1 ಕ್ಕೆ	29	8	0
"ಮಹಾರಾಜ ಫ್ಲೂಟ್" ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ 1 ಕ್ಕೆ	32	8	0
"ಮೋಸ್ಟಿಂಫ್ಲೂಟ್" ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ 1 ಕ್ಕೆ	35	0	0
ಪ್ರಖ್ಯಾತಿಹೊಂದಿದ "ಎಂ. ಮೋಹನ್ ಫ್ಲೂಟ್" ಸಿಂಗಲ್ ರೀಡ್ ಹಾರ್ಮೋನಿಯಂ ಕ್ರಯ 1 ಕ್ಕೆ	37	8	0
"ಸಿದ್ಧಪ್ಪಾಸ್ ಫ್ಲೂಟ್" ಸಿಂಗಲ್‌ರೀಡ್ಸ್ ಅತ್ಯುತ್ತಮವಾದ ಹಾರ್ಮೋನಿಯಂ ಕ್ರಯ 1 ಕ್ಕೆ	32	8	0
"ಕೊಹಿನೂರ್ ಫ್ಲೂಟ್" ಡಬಲ್‌ರೀಡ್ಸ್ ಹಾರ್ಮೋನಿಯಂ 1 ಕ್ಕೆ	42	8	0
"ಬಿಜಲೀಫ್ಲೂಟ್" ಡಬಲ್‌ರೀಡ್ಸ್ ಹಾರ್ಮೋನಿಯಂ 1 ಕ್ಕೆ	42	0	0
"ಮೋಸ್ಟಿಂಫ್ಲೂಟ್" ಡಬಲ್‌ರೀಡ್ಸ್ ಹಾರ್ಮೋನಿಯಂ 1 ಕ್ಕೆ	47	8	0
ಪ್ರಖ್ಯಾತಿಹೊಂದಿದ "ಮೋಹನ್ ಫ್ಲೂಟ್" ಡಬಲ್‌ರೀಡ್ಸ್ ಹಾರ್ಮೋನಿಯಂ	50	8	0
"ಶಂಕರ್‌ಫ್ಲೂಟ್" ಡಬಲ್‌ರೀಡ್ಸ್ ಹಾರ್ಮೋನಿಯಂ 1 ಕ್ಕೆ	52	8	0

ಹಾರ್ಮೋನಿಯಮ್ಮಿಗೆ ಆರ್ಡರ್ ಮಾಡತಕ್ಕವರು 5 ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಮಿಕ್ಕ ಮೊಬಲಗಿಗೆ ವಿ. ಪಿ. ಮಾಡಲಾಗುತ್ತೆ. ಅಡ್ವಾನ್ಸಿಲ್ಲದೆ ಬರತಕ್ಕ ಆರ್ಡರ್‌ಗಳಿಗೆ ಸಾಗ ಕಳುಹುವುದಿಲ್ಲ. ನಮ್ಮ ಹೆಸರು ವಿಳಾಸವನ್ನು ಸ್ಪಷ್ಟವಾಗಿ ಬರೆಯುವುದಲ್ಲದೆ ನಮ್ಮ ಊರಿಗೆ ಸಮೀಪವಿರುವ ರೈಲ್ವೇ ಸ್ಟೇಷನ್ ಸಹಾ ಬರೆಸಬೇಕು.

[82-10] ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಕರ್ನಾಟಕ ಸಾಹಿತ್ಯ ಪರಿಷತ್ತು.

ಈ ಪರಿಷತ್ತು ಬೆಂಗಳೂರಿನಲ್ಲಿ ಕೂಡಿದ್ದು ಇದು ಎರಡನೇ ಸಾರಿ. ಈ ಸಂಸ್ಥೆಯ ಪರಿಚಯವನ್ನು ನಮ್ಮ ವಾಚಕರಿಗೆ ನಾವು ಈ ಮೊದಲೇ ಮಾಡಿಕೊಟ್ಟಿದ್ದೇವೆ. ಹಳೇ ಕನ್ನಡ ಗ್ರಂಥಗಳನ್ನು ಸಂಗ್ರಹಿಸುವದೂ, ಸ್ಥಾನಭೇದದ ಮೂಲಕ ಉಂಟಾದ ಭಾಷಾಭೇದಗಳನ್ನು ತೆಗೆದುಹಾಕಲಿಕ್ಕೆ ಉಪಾಯಗಳನ್ನು ಯೋಚಿಸುವದೂ, ಅನೇಕ ಶಾಸ್ತ್ರಗಳ ಮೇಲೆ ಗ್ರಂಥಗಳನ್ನು ಬರೆಯಿಸಿ ಕನ್ನಡ ಭಾಷಾಭಿವೃದ್ಧಿಯನ್ನು ಮಾಡುವದೂ ಮುಂತಾದವುಗಳೇ ಈ ಸಭೆಯ ಮುಖ್ಯ ಉದ್ದೇಶಗಳಾಗಿರುತ್ತವೆ. ಕನ್ನಡ ಭಾಷೆಯನ್ನು ಆಡುವ ಎಲ್ಲಾ ಪ್ರಾಂತ್ಯಗಳ ವಿದ್ವಾಂಸರು ಈ ಸಭೆಗೆ ಸೇರಿ ತಮ್ಮ ಕೈಲಾದ ಮಟ್ಟಿಗೆ ಕನ್ನಡ ಭಾಷೆಯ ಏಳ್ಗೆಯನ್ನು ಮಾಡುವದು ಅವರ ಕರ್ತವ್ಯವಾಗಿದೆ. . . . . . .

. . . . . ಈ ಸಭೆಯ ಉದ್ದೇಶಗಳು ಬಹಳ ಮಹತ್ವದವಿರುತ್ತವೆ. ಅವುಗಳ ಬಗ್ಗೆ ನಾವು ಹೆಚ್ಚಾ ಒಪ್ಪುತ್ತೇವೆ. ಆದರೆ ಈ ಪರಿಷತ್ತಿನ ಕಾರ್ಯಗಳನ್ನು ನೆರವೇರಿಸುವ ರೀತಿಯಲ್ಲಿ ಹಾಗೂ ಕಾರ್ಯ ಸಾಗಿಸುವ ಪದ್ಧತಿಯಲ್ಲಿ ನಮಗೆ ಎಷ್ಟೋ ಕುಂದುಗಳಿದ್ದಂತೆ ತೋರುತ್ತವೆ. ಈ ಸಭೆಯ ಅಧಿಕಾರಿಗಳ ಮನ್ನಣೆಗಾಗಿ ಅವುಗಳನ್ನು ಸೂಚಿಸದೆ ನಾವು ಇರಲಾರೆವು. ಈ ಪರಿಷತ್ತು ಇಂಥ ದಿವಸವೇ ಕೂಡುವದೆಂದು ಸರಿಯಾಗಿ ಎಲ್ಲ ಜನರಿಗೂ ಸ್ಪಷ್ಟವಾಗಿ ತಿಳಿಯುವಂತೆ ಪ್ರಸಿದ್ಧ ಪತ್ರಿಕೆಗಳಲ್ಲಿ ಹಂಚುವದು ನಮಗೆ ಅವಶ್ಯವಾಗಿ ತೋರುತ್ತದೆ. ಕನ್ನಡ ನಾಡುಗಳಲ್ಲಿ ಮುಖ್ಯ ಮುಖ್ಯ ವಿದ್ವಾಂಸರಿಗೆ ನಿಮಂತ್ರಣ ಪತ್ರಿಕೆಗಳನ್ನು ಕಳುಹಿಸಿಕೊಡತಕ್ಕದ್ದು. ಈ ಸಭೆಯು ಇನ್ನೂ ಚಿಕ್ಕಂದಿನಲ್ಲಿದ್ದು ಜನರ ಸಹಾನುಭೂತಿಯನ್ನು ಪಡಕೊಳ್ಳಬೇಕಾಗಿದೆ. ಸಭಿಕರ ಸಂಖ್ಯೆಯು ಇನ್ನೂ ಬೆಳೆದಿಲ್ಲ. ಹೋದ ವರ್ಷಕ್ಕಿಂತಲೂ ಈ ವರ್ಷ ಉತ್ಸಾಹವು ಕಡಿಮೆ ತೋರುತ್ತದೆ. ಆದರಿಂದ ಸಭಿಕರ ಹೊರ್ತಾಗಿ ಉಳಿದ ಸಭ್ಯಗೃಹಸ್ಥರಿಗೂ ನಿಮಂತ್ರಣವಾಗಿ ಬರಮಾಡಿಕೊಳ್ಳುವದು ಹಿತಕರವಾಗಿ ತೋರುತ್ತದೆ. ಈ ವರ್ಷ ಮೈಸೂರ ಸಂಸ್ಥಾನದಲ್ಲಿ ಬೆಂಗಳೂರ ಪಟ್ಟಣದಲ್ಲಿಯೇ ಅನೇಕ ಸಭ್ಯಗೃಹಸ್ಥರಿಗೆ ನಿಮಂತ್ರಣ ಪತ್ರಿಕೆಗಳು ಹೋಗಿಲ್ಲವೆಂದು ತಿಳಿಯುತ್ತದೆ. ಇದು ಅಪ್ರಶಸ್ತವಾದದ್ದು. ಅಧಿಕಾರವಂತನ್ನರ ಹೊರ್ತು ಇತರರಿಗೆ ಆಮಂತ್ರಣಗಳೇ ಸರಿಯಾಗಿ ಮುಟ್ಟಿದಂತೆ ತೋರಲಿಲ್ಲ. ಮೈಸೂರ ಸಂಸ್ಥಾನದಲ್ಲಿಯು ಇತರ ಚಟುವಟಿಕೆಗಳಂತೆ ಕನ್ನಡ ಭಾಷಾಭಿವೃದ್ಧಿಯು ಬೆಳವಣಿಯಲ್ಲಾದರೂ ಅಲ್ಲಿಯ ಸರಕಾರದವರ ಅಂಗವು ವಿಶೇಷವಾಗಿ ತೋರುತ್ತದೆ. ಎಲ್ಲ ಅಧಿಕಾರಿಗಳು ಲೋಕಸಿಯುಕ್ತರಿಂದ ಸರಕಾರೀ ಅಮ್ಮಲದಾರರೇ ಇರುತ್ತಾರೆ. ಜನ ಸೂಚನೆಗಳಿಗೆ ಹೆಚ್ಚಿನ ಆಸ್ಪದವು ದೊರೆಯುವಂತೆ ಈ ಸಭೆಯ ಸಂಘಟನೆಯು ಇರಬೇಕೆಂದು ನಮಗೆ ತೋರುತ್ತದೆ. ಕಾಂಗ್ರೆಸ ಅಥವಾ ಇತರ ಪರಿಷತ್ತುಗಳಿಗೆ ಅಧ್ಯಕ್ಷರನ್ನು ನೇಮಿಸುವಂತೆ ಈ ಸಭೆಗಾದರೂ ಅಧ್ಯಕ್ಷರು ಆರಿಸಲ್ಪಡತಕ್ಕದ್ದು. ಊರೂರಿಗೆ ಸಭೆಗಳಿಗೆ ಸಭಾಪತಿಗಳು ಆರಿಸಲ್ಪಡಬೇಕು. ಆ ವೇಳೆ ಸಭೆಯು ನಡೆದ ಮೇಲೆ ಅವರ ಮುಂದೆ ಬರುವ ವಿಷಯಗಳ ಚರ್ಚೆಯು ಮೊದಲು ಒಂದು ವಿಷಯ ಕಮಿಟಿಯು ಮುಂದೆ ಆಗಿ ಆ ಮೇಲೆ ಧರಾವಿನ ರೂಪದಿಂದ ಸಭೆಯ ಮುಂದೆ ಅವು ಬರತಕ್ಕದ್ದು. ಈ ಪ್ರಕಾರ ಯಾವ ತರದ ಕಾರ್ಯಕ್ರಮವು ನಡೆಯದೇ ಕೆಲವು ಅಧಿಕಾರಿಗಳು ಮಾತ್ರ ಕೂಡಿಕೊಂಡು ಫಾಲ್ತೂ ಉಪನ್ಯಾಸಗಳನ್ನು ಮಾಡಿದ್ದಾದರೆ ಪರಿಷತ್ತಿನ ಉದ್ದೇಶವು ಚೆನ್ನಾಗಿ ಸಫಲವಾಗಲಾರವೆಂದು ನಮ್ಮ ದೃಢ ನಂಬಿಗೆ ಇದೆ. ಈ ವರ್ಷದಲ್ಲಿ ಸಭೆಯಲ್ಲಿ ನಡೆದ ಚರ್ಚೆಯ ಪದ್ಧತಿಯು ಸರಿಯಾಗಿರಲಿಲ್ಲೆಂದು ತಿಳಿಯುತ್ತದೆ. ಕೆಲವು ವಿದ್ವಾಂಸರನ್ನು ಸೇರಿಕೊಳ್ಳುವದು ನಡುವೆ ಅಡ್ಡಿ ಬಾಯಿಹಾಕಿ ಈ ಸಭೆಯ ಕೆಲಸಕ್ಕೆ ವ್ಯತ್ಯಯ ತಂದರಂತೆ. ಪ್ರೆಸಿಡೆಂಟರು ಮಾಡಿದ ನಿರ್ಣಯಕ್ಕೆ ಸಹ ಒಪ್ಪಲಿಲ್ಲವಂತೆ. ಇಂಥ ಪ್ರಸಂಗವು ಬಂದ ವೇಳೆ ಸಭೆಯ ಗಾಂಭೀರ್ಯಕ್ಕೆ ಕುಂದು ಬಗದೇ ಇರದು. ವಿ. ದೇಶಪಾಂಡೆ ಇವರು ಧಾರವಾಡಕ್ಕೆ ಮುಂದಿನ ವರ್ಷ ಸಭೆಯನ್ನು ಕರೆದ ವಿನಂತಿಯು ಮಾನ್ಯವಾಗದಿರಲಿಕ್ಕೆ ಯೋಗ್ಯ ಕಾರಣವು ನಮಗೆ ತೋರುವದಿಲ್ಲ. ಕರ್ನಾಟಕದ ಎಲ್ಲಾ ಭಾಗದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸಭೆಯನ್ನು ಕೂಡಿಸಿದ್ದಾದರೆ ಅದರ ಪ್ರಸಿದ್ಧಿಯೂ ಉಪಯುಕ್ತತೆಯೂ ಜನರಲ್ಲಿ ತೀವ್ರವಾಗಿ ಹಬ್ಬುವದೆಂದು ನಮಗೆ ತೋರುತ್ತದೆ. ಕಾರ್ಯದರ್ಶಿಗಳು ನಮ್ಮ ಸೂಚನೆಗಳಿಗೆ ಲಕ್ಷ್ಯ ಕೊಡುವರೆಂದು ನಾವು ಆಶಿಸುತ್ತೇವೆ. ಈ ಪರಿಷತ್ತಿಗೆ ನಮ್ಮ ಕನ್ನಡ ಭಾಷಾಭಿಮಾನಿಗಳಾದ ಮೈಸೂರ ಸಂಸ್ಥಾನದ ಒಡೆಯರ ಆಶ್ರಯವಂತೂ ಇರಲೇಬೇಕು. ಆದರೆ ಅಷ್ಟರಿಂದಲೇ ಈ ಸಂಸ್ಥೆಯು ಸೂತ್ರಗಳೆಲ್ಲ ಆ ಸಂಸ್ಥಾನದ ಅಧಿಕಾರವಂತನ್ನರಾದ ಜನರ ಕೈಯಲ್ಲಿಯೇ ಉಳಿಯಗೊಟ್ಟರೆ ಈ ಸಂಸ್ಥೆಯ ಲಾಭವು ಕನ್ನಡ ಭಾಷೆಯು ಪ್ರಚಲಿತವಿರುವ ಕರ್ನಾಟಕದ ಎಲ್ಲ ದೇಶಗಳಿಗೆ ಮುಟ್ಟಲಾರದೆಂದು ನಮ್ಮ ಅಭಿಪ್ರಾಯವದೆ. ಆದ್ದರಿಂದ ಈ ಸಂಸ್ಥೆಯ ರಚನೆಯಲ್ಲಿ ಕರ್ನಾಟಕದ ಎಲ್ಲ ಭಾಗಗಳ ಮುಂದಾಳುಗಳು ಒಳಸೇರುವಂತೆ ಅದರಲ್ಲಿಯು ಕಾರ್ಯಕರ್ತರ ಚುನಾವಣೆಯಾಗಬೇಕೆಂದು ನಮ್ಮ ಸೂಚನೆಯುಂಟು.—ಕ. ವೈ.

ಅಹಹ! ಇಂಗ್ಲೀಷ ಭಾಷೆಯ ಸಲುವಾಗಿ ರಾಜಮಂತ್ರಿ ಪ್ರವೀಣ ನಂಜುಂಡಯ್ಯನವರ ಅಭಿಮಾನವನ್ನೆಷ್ಟೆಂದು ಕೊಂಡಾಡಬೇಕು. ಕನ್ನಡ ಭಾಷೆಯ ಪರಿಷತ್ತಿನಲ್ಲಿ ಅಧ್ಯಕ್ಷರ ಭಾಷಣವು ಇಂಗ್ಲೀಷದಲ್ಲಿಯೇ ಆಗಬೇಕಾದವೇ? ಅವರು ಇಂಗ್ಲೀಷವನ್ನು ಬಹು ಸರಸವಾಗಿ ಬರೆಯುತ್ತಾರೆಂಬದು ನಿಜ. ಅವರ ಇಂಗ್ಲೀಷ ನಿಬಂಧಗಳನ್ನೋದಿದರೆ ಸ್ವತಃ ಮೊದಲೇ ಸಾಹೇಬರು ಬಿಟ್ಟು ಕಚ್ಚುವಂತಿವೆ. ಅವರ ವಿಚಾರಗಳು ಯಾವಾಗಲೂ ಉದಾತ್ತವಾಗಿರುತ್ತವೆ. ಇಂಥ ಅಪರೂಪ ವಿಚಾರಗಳನ್ನು ಈ ಕಾಲು ಕನ್ನಡ ಭಾಷೆಯಲ್ಲಿ ಕೊಟ್ಟಿಸುವ ಮಹಾ ಪಾತಕವು ಮ॥ ರಾ॥ ನಂಜುಂಡಯ್ಯನವರಂಥ ಸಾಹಿತ್ಯಪಟುಗಳಿಂದ ಹ್ಯಾಗಾದೀತು! ರಾ॥ ಬಾ॥ ನಂಜುಂಡಯ್ಯನವರ ವಕ್ತೃತ್ವವು ಅವರ ಬರಹಕ್ಕಿಂತ ಹೆಚ್ಚಿನ ಉಚ್ಚಾಸನವನ್ನು ದೊರಕಿಸಿಕೊಂಡಿದೆ. ಅವರ ಇಂಗ್ಲೀಷ ಭಾಷಣಾಮೃತವನ್ನು ಪಾನ ಮಾಡುವ ಉದ್ದೇಶದಿಂದ (ಕನ್ನಡ ಪರಿಷತ್ತಿಂಬದನ್ನು ಲೆಕ್ಕಿಸದೇ) ಎಷ್ಟೋ ಗೃಹಸ್ಥರು ಅದಕ್ಕೆ ಬಂದಿರುತ್ತಾರೆಂದು ಸ್ವತಃ ಅವರೇ ಹೇಳಿದ್ದಾರೆ. ಈ ಸನ್ಮಾನನೀಯ ಗೃಹಸ್ಥರ ಸಲುವಾಗಿ (ಅವರ ಸಂಖ್ಯೆಯು ಎಷ್ಟಿತ್ತೆಂಬುದನ್ನು ಅಧ್ಯಕ್ಷರಿಂದಲೇ ತಿಳಿದುಕೊಳ್ಳಬೇಕು) ಅಧ್ಯಕ್ಷ ದೊರೆಗಳು ಇಂಗ್ಲೀಷ ಭಾಷಣಮಾಡಿ ಅವರನ್ನು ಗೌರವಿಸಿದರು. ಆದರೆ ಈ ಅವರ ಕೃತ್ಯದಿಂದ ಕನ್ನಡ ಭಾಷೆಗೆ ಆದ ಅಗೌರವವು ಮಾತ್ರ ಎಂದೂ ತುಂಬಿ ಬರಲಿಕ್ಕಿಲ್ಲ. ಇದರಿಂದ ಕನ್ನಡ ಭಾಷೆಯಲ್ಲಿ ಉದಾತ್ತವಾದ ವಿಚಾರಗಳನ್ನೂ ಸೂಕ್ಷ್ಮವಾದ ಮನೋವಿಕಾರಗಳನ್ನೂ ವ್ಯಕ್ತಪಡಿಸಲಿಕ್ಕೆ ಅನುವೇ ಇಲ್ಲೆಂಬ ತಪ್ಪು ತಿಳುವಳಿಕೆಯು ಹೆಚ್ಚಾಗಿ ಹಬ್ಬುವದು.

ಮ॥ ರಾ॥ ನಂಜುಂಡಯ್ಯನವರಂಥ ದೊಡ್ಡ ಗೃಹಸ್ಥರ ಅನುಕರಣಮಾಡಲು ಅನೇಕರು ಕೈಕಟ್ಟಿಕೊಂಡು ನಿಂತಿದ್ದರಿಂದ ಈ ಅವರ ಇಂಗ್ಲೀಷ ಭಾಷಣದ ಕೆಟ್ಟ ಪರಿಣಾಮವು ಬಹು ಜನ ಸಮಾಜಕ್ಕೆ ತಗಲದೇ ಬಿಡದು. ಇದಲ್ಲದೇ ಇಂಗ್ಲೀಷ ಬಾರದ ಹಳೆಯರಾದ ಎಷ್ಟೋ ಕನ್ನಡಿಗರು ದೂರ ದೂರ ಪ್ರಾಂತ್ಯಗಳಿಂದ ಪರಿಷತ್ತಿಗೆ ಬಂದಿದ್ದರು. ಈ ಎಲ್ಲ ಸಂಗತಿಗಳನ್ನು ವಿಚಾರಮಾಡಿ ಅಧ್ಯಕ್ಷರು ತಮ್ಮ ಭಾಷಣವನ್ನು ಕನ್ನಡದಲ್ಲಿಯೇ ಮಾಡಿ ಕನ್ನಡ ಅರಿಯದವರ ಸಲುವಾಗಿ ಅದರ ಸಾರಾಂಶವನ್ನು ಇಂಗ್ಲೀಷ ಭಾಷೆಯಲ್ಲಿ ಹೇಳಿದ್ದರೆ ಎಷ್ಟೋ ಸರಸಾಗುತ್ತಿತ್ತು.—ವ್ಯ. ಧ.

N. Rao, 54, Sydenham Road, P. T. Madras.

1. ಮದ್ರಾಸು ಪರಿಮಳ ನಶ್ಯ:—ಖಾರವಾಗಿಯೂ, ಸುವಾಸನೆಯಾಗಿಯೂ, ಮನೋಹರವಾಗಿಯೂ, ಎಲ್ಲ ವಿಧದ ತಲೆಯ ವ್ಯಾಧಿಗೂ ಸಂಜೀವನದಂತಿದೆ. ತಿರುಪಿನ ಶೀಸೆ 1 ಕ್ಕೆ 3 ಆಣೆ ಡಜನ್ ಶೀಸೆಗಳಿಗೆ ರೂ 2.

2. ಅವ್ವಲ್ ಮದ್ರಾಸು ನಶ್ಯ:—ಹದಮಾಡಿದ ಭಾರಿ ಬೆಲೆಯ ಹೊಗೆಸೊಪ್ಪಿನಲ್ಲಿ ಖಾರವಾಗಿಯೂ, ಮನೋಹರವಾಗಿಯೂ ಇರುವಂತೆ ನಿಪುಣರಿಂದ ತಯಾರಿಸಿದೆ. ಯಾವ ಕಂಪೆನಿಯ ನಶ್ಯವೂ ಇದಕ್ಕೆ ಸಮನಲ್ಲದದು. 8 ತೊಲೆಗೆ 4 ಆಣೆ ಸೇರು 1 ಕ್ಕೆ 12 ಆಣೆ ಪಂಭೇರಿಗೆ ರೂ 18-0. ಸ್ಯಾಂಪಲ್ ನಶ್ಯ ಬೇಕಾದರೆ 1 ಆಣೆ ಸ್ಟಾಂಪು ಕಳುಹಿಸಿ.

3. ಯೂರೋಪ್ ದೇಶದ ಮಹಾ ಯುದ್ಧದ ಕನ್ನಡದ ಚರಿತ್ರೆ. ರೂ 1. ಸ್ವತಃ ಹಾರ್ಮೋನಿಯಂ ಕಲಿಯುವ ಪುಸ್ತಕ 8 ಆಣೆ.

4. ಕಾಮಿನಿಯಣಿ, ವಿಶ್ವನಾಥ; ಪುಷ್ಪಸಾರ, ತೈಲಗಳು ಬುದ್ಡಿಗೆ 18 ಆಣೆ.

ವಿಳಾಸ:—ಎನ್. ರಾವ್, 54, ಸ್ಯೆಡೆನ್‌ಹಾಂ ರೋಡ್,

[87–2] ಪಾರ್ಕ್ ಟೌನ್, ಮದ್ರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವನ್ನು ಸರಿಯಾಗಿ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ಕಳುಹಿಸುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಉದ್ಯೋಗವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ... ಬೆನ್ನಿನಲ್ಲಿ ಛಳುಕು; ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೂ ಬಣ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ... ಎಲೆ, ಎದೆ ಕಲ್ಲಿನಂತಾಗುವುದು; ತಲೆನೋವು, ಗಾಬರಿ; ಕಣ್ಣುಮೊಬ್ಬು; ... ಮೈನೋವು, ಕೀಲುನೋವು; ಮಲಬದ್ಧತೆ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರಮೇಹ, ನೀರು, ಶ್ವಾಸ, ಆನೆಕಾಲು... ಮೂತ್ರಕೋಶವೇ ... ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರಪ್ರ ... ಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವನ್ನು ಹೊರಕ್ಕೆ ಕಳುಹಿಸಿ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [175-37]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿರುವಂತೆ...



ಬೆಲೆ ೨—೦—೦; ಅಥವಾ ೬ ಬುದ್ದಿಗಳಿಗೆ ... ೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್ ... ಬಾಕ್ಸ್ ... ೨೦, ಬೊಂಬಾಯಿ ... ದೊರೆಯುವುದು.

The General Assurance Society, Ltd., Ajmer.

(A Popular Life Office.)

Before insuring or taking Agency elsewhere, it would be to your interest to know the rates of premium and terms of Agency specially prepared by the Society's Consulting Actuary, Mr. H. E. W. Lutt, F. I. A. (one of the most eminent Actuaries in England). [142-44]

First Valuation Result:—The total liablities under all Assurances issued up to 31st March 1913, are fully covered by the Society's Life Assurance Fund and Paid Capital.

Write for full particulars, Annual valuation Reports to the Manager, or Mr. K. S. Tirupathi, F. C. I., Secretary, Opposite Minto Hospital, Bangalore City. Mysore Agent—Mr. S. P. Ramanna.

ಯುಗಾದಿ ಬಹುಮಾನ. ಹೊಸ ಕಂಪೆನಿ. ಹೊಸ ಸರಕುಗಳು.

ಅಮೇರಿಕ ದೇಶದ ಎಲೆಕ್ಟ್ರಿಕ್ ಮೂಗುಬೊಟ್ಟು 3 ರೂಪಾಯಿ ಬೆಲೆ ಬಾಳತಕ್ಕದ್ದನ್ನು ರೂ. 1-8-0 ಕೊಡುತ್ತೇವೆ. ಇದನ್ನು ನಮ್ಮ ಸ್ವಂತ ಆರ್ಡರು ಮೇಲೆ ಅಮೇರಿಕ ದೇಶದಲ್ಲಿ ಕಂಡುಹಿಡಿಯಲ್ಪಟ್ಟ ಇಮಿಟೇಷನ್ ವಜ್ರಗಳಿಂದ ತಯಾರಿಸಿ ಕಳುಹಿಸುತ್ತಾರೆ. ಇದರ ಕಲ್ಲುಗಳು ಕೋಟಿಸೂರ್ಯ ಪ್ರಕಾಶಕ್ಕೆ ಥಳಥಳಿಸುವದು. ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿ ಇರುತ್ತೆ. ಇದನ್ನು ನೋಡುವವರು ವಜ್ರದ್ದೆಂದು ಹೇಳುವರು. ಅಷ್ಟು ಸೂರ್ಯ ಪ್ರಕಾಶಕ್ಕೆ ಥಳಥಳಿಸುವದು. ಬೇಗಬೇಗನೆ ದರಖಾಸ್ತು ಮಾಡುವವರಿಗೆ ಒಳ್ಳೇ ಫಾಯಿದೆ ದೊರಕುವದು.

ಇದೇ ತಿಂಗಳ ಯುಗಾದಿ ಈ ಸೀರೆ ತರಿಸಿಕೊಳ್ಳುವವರಿಗೆ ಈ ಮೇಲ್ಕಂಡ ರೂ. 1-8-0 ರೂಪಾಯಿನ ಮೂಗುಬೊಟ್ಟು ಇನಾಂ ಕಳುಹಿಸುವೆವು.

ಮಲ್ಲಿಗೆ ಹೂವಿನ ಸೀರೆ.

ಈ ಸೀರೆಗಳನ್ನು ಯುಗಾದಿ ಹಬ್ಬಕ್ಕಾಗಿ ತರಿಸಿ ಇರುತ್ತೇವೆ. ಇದರ ಕ್ರಯ ರೂ 3 ವಿ. ಪಿ. ಚಾರ್ಜು 0-8-0 ಪ್ರತ್ಯೇಕ. ಮೇಲ್ಕಂಡ ಮೂಗುಬೊಟ್ಟು ಇನಾಂ. ಎಲ್ಲರೂ ಪಿಕ್ರಯಿಸಿದ ಮಧುರ ಹವಳದ ಬಳ್ಳಿಗಳಲ್ಲ. ಭಾರೀ ಕ್ರಯದ ಸೀರೆಗಳು. ಇದು ಉಡುವದಕ್ಕೆ ಥಳುಕಾಗಿಯೂ ನೋಡುವದಕ್ಕೆ ಸೊಗಸಾಗಿಯೂ ಇದೆ. ಬಣ್ಣಕ್ಕೆ ಗ್ಯಾರಂಟಿ ಕೊಡುವೆವು. ಸೀರೆಯ ಉದ್ದ 16 ಮೊಳ. ಸೆರಗಿನ ... ಚು ಇರುತ್ತೆ. ಇದು ಎಲ್ಲರೂ ಉಡುವದಕ್ಕೆ ಲಾಯಖಾದದ್ದು. ಪ್ರತಿ ದಿನ ನೂರಾರು ಸೀರೆಗಳು ವಿಕ್ರಯಿಸುತ್ತವೆ. ದಯವಿಟ್ಟು 1 ಸೀರೆಯನ್ನು ತರಿಸಿಕೊಂಡು ಅಲಂಕಾರಭೂಷಿತರಾಗಿ ಇರುವರೆಂದು ನಂಬಿ

... ನಮ್ಮ ಕಂಪೆನಿಯಲ್ಲಿ ಅನೇಕ ತರದ ಜವಳಿ ದಿನಸುಗಳು ಸಿಕ್ಕುತ್ತೆ.

ವಿಳಾಸ.—ರತ್ನಂ ಕಂಪೆನಿ, ಕ್ಲಾತ್ ಮರ್ಚಂಟ್,

[63–12] 3, ಇರುಳಪ್ಪನ ಬೀದಿ, ಮದರಾಸು.

ಡೋಂಗರೆ ಇವರ

ಬಾಲಾಮೃತ.

ಇದು ಬಹು ಮಧುರವಾಗಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುತ್ತವೆ. [177-38]

ಕ್ರಯ ಬಾಟ್ಲಿ ೧ಕ್ಕೆ ೧೨ ಆಣೆಗಳು. ಟ. ಖ. ೪ ಆಣೆ.

ಕೆ. ಟಿ. ಡೋಂಗರೆ ಎಂಡ್ ಕೊ.,

ಗಿರಗಾಂವ, ಮುಂಬಯಿ.

ಜಾಮೀನು ಉಳ್ಳದ್ದು! ಯಥಾರ್ಥವಾದದ್ದು! ನಂಬಿರಿ!

ರತ್ನಜೋತಿ ಕೂದಲು ರಂಗು.

ಎಲ್ಲಾ ತರದ ಕೂದಲನ್ನೂ ಅಚ್ಚ ಕರ್ರಗೆ ಮಾಡುತ್ತೆ.

ಮತ್ತು

ಕೂದಲಿಗೆ ರೇಷ್ಮೆಯಂಥಾ ಹೊಳಪೂ ನುಣುಪೂ ಬರುತ್ತೆ.

ನರೆಕೂದಲನ್ನು ನಮ್ಮ ರಂಗು ಅಚ್ಚ ಕರ್ರಗೆ ಮಾಡುತ್ತದಿಲ್ಲವೆಂದು ದೃಷ್ಟಾಂತಪಡಿಸುವವರಿಗೆ

100 ರೂಪಾಯಿ ಇನಾಮು ಕೊಡುವೆವು.

ಪೆಟ್ಟಿಗೆ, ಬ್ರಷ್ ಮತ್ತು ಬಟ್ಲು ಸಹಿತ ಕ್ರಯ ರೂ. 1-0-0; ಪೋಸ್ಟೇಜ್ ಬೇರೆ.

ಹೊಸ ನಮೂನೆ ರೋಮಹಾರಿ.

ಇದು ಯಾವ ಶರೀರ ಭಾಗದಲ್ಲಾದರೂ ಬೆಳೆದಿರುವ ಕೂದಲನ್ನು ಅಚ್ಚುಕಟ್ಟಾಗಿ ತೆಗೆಯುತ್ತೆ. ನೋಯುವುದಿಲ್ಲ; ಚರ್ಮಕ್ಕೆ ಕೆಡುವುದಿಲ್ಲ. [232-34]

ಪೆಟ್ಟಿಗೆ ಒಂದಕ್ಕೆ ರೂ. 1-0-0; ಪೋಸ್ಟೇಜ್ ಬೇರೆ.

ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಏಜಂಟರು:—

ಷಾ ಭಗವಾನ್‌ದಾಸ್ ಚೊನಿಲಾಲ್ ಕಂಪೆನಿ,

177, ಚೀನಾ ಬಜಾರ ರೋಡ್, ಮದರಾಸ್.

ಶ್ರೇಷ್ಠ ಮಹೌಷಧಿಗಳು.

ಅನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ.

1. ಆರೋಗ್ಯ ಪ್ರಭಾಕರ. (ಹೆಲ್ತ್ ಪಿಲ್ಸ್)—ಪಿತ್ಥಕೋಶ, ಶ್ವಾಸಕೋಶಗಳನ್ನು ಸರಿಪಡಿಸಿ, ರಕ್ತವೃದ್ಧಿ ಮಾಡಿ, ನರಗಳಿಗೆ ಬಲಕೊಡುತ್ತೆ. ಚಾತುರ್ಥಿಕ, ಪಿತ್ಥಪಾಂಡು, ಕ್ಷಯ, ಬಾಲಂತಿಯರ ಕ್ಷಯ, ಮುಟ್ಟುಕಟ್ಟು, ಪಾರ್ಶ್ವವಾಯುಗಳನ್ನು ನಿವಾರಿಸುವದರಲ್ಲಿ ಅಸಮಾನವಾದುದು. 48 ಮಾತ್ರೆಗೆ 1 ರೂ, 6 ಶೀಷೆಗೆ 5 ರೂ.

2. ರೋಗನಾಶಿನಿ.—ಪ್ಲೇಗುಸೋಂಕು ಆಜೂಬಾಜು ಗ್ರಾಮಗಳಲ್ಲಿರುವಾಗಲೇ ಪ್ರತಿ ಒಬ್ಬರೂ ದಿನವೂ 3-4 ಸಲ 1-2 ಮಾತ್ರೆಯಂತೆ ಸೇವಿಸುವದರಿಂದ ಪ್ರಾಣವನ್ನುಳಿಸಿಕೊಳ್ಳಬಹುದು. ಜನೋಪಕಾರಕ್ಕೇನೆ ಬೆಲೆ ಸುಲಭವಿಟ್ಟದೆ. ಇದರ ಗುಣಕ್ಕೆ ನಮಗೆ ಅನೇಕ ಬಹುಮಾನಗಳು ಬಂದಿವೆ. 40 ಮಾತ್ರೆಗೆ 4 ಆ, 5 ಶೀಷೆಗೆ 1 ರೂ, 12 ಕ್ಕೆ 2½ ರೂ.

[126-36] ನಮ್ಮ ವಿಳಾಸ.—ಪಂಡಿತ್ ಎಸ್. ಗಣಪತಿ, ಮೈಸೂರು.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ 32 ಸಾಮಾನು

ಸೆಟ್ಟು 1 ಕ್ಕೆ	ರೂ 1-8-0	ರೇಷ್ಮೆ ಸಾಮಾನು ವಗೈರೆ ಕೆಟಲಾಗು ಕೇಳುವವರಿಗೆ ಇನಾಮಾಗಿ ಕೊಡಲಾದೀತು.
ಮಧ್ಯಮ ಸೆಟ್ಟು 1 ಕ್ಕೆ	,, 2-0-0	
ದೊಡ್ಡ ಸೆಟ್ಟು 1 ಕ್ಕೆ	,, 4-0-0	

ಎಸ್. ಯು. ನಾರಾಯಣಾಚಾರ್ಯ ಕಂಪನಿ,

[119-45] ಚೌಖಂಬಾ, ಕಾಶಿ.

ಆರು ಬಹುಮಾನಗಳು.

ರೂ. 100, ರೂ. 50, ರೂ. 25, ರೂ. 15, ರೂ. 10.

ನಮ್ಮ ಸ್ವಂತ ಮಗ್ಗಗಳಲ್ಲಿ ಖುದ್ದು ಮೇಲ್ವಿಚಾರಣೆಯಿಂದ ತಯಾರಾಗುವ ರೇಷ್ಮೆ ಜರಿ ಥಾನುಗಳು, ಟಿಸ್ಯೂಗಳು, ಸೀರೆಗಳು, ಜರತಾರಿ ಸೀರೆಗಳು, ರವಿಕೆಗಳು, ದುಪಟ್ಟಿಗಳು, ರುಮಾಲುಗಳು, ಅಚ್ಚ ಕಸೂತಿ, ಕಂಚಿನ ಸಾಮಾನು, ರುದ್ರಾಕ್ಷಿ, ಇತರ ಕಾಶೀ ತಯಾರಿ ಪದಾರ್ಥಗಳನ್ನು ಜೂಲೈ ತಾ. 31 ರೊಳಗೆ ನಮ್ಮಿಂದ ಕೊಂಡು ತರಿಸಿಕೊಳ್ಳುವವರು ಸಾಚಾ ಮಾಲುಗಳನ್ನು ಸರಿಯಾದ ಕ್ರಯಕ್ಕೆ ಪಡೆಯುವುದಲ್ಲದೆ ಮೇಲ್ಕಂಡ ಬಹುಮಾನಗಳಿಗೂ ಅರ್ಹರಾಗುವರು. ಇಂಥಾ ಅಪೂರ್ವ ಸಮಯವನ್ನು ಕಳಕೊಳ್ಳಬೇಡಿ ನಮ್ಮಲ್ಲಿ ವ್ಯಾಪಾರ ಮಾಡುವ ಪ್ರತಿ ಒಬ್ಬರಿಗೂ ಒಂದೊಂದು ಇನಾಮಿನ ಟಿಕೆಟ್ಟನ್ನು 1,000 ಆಗುವ ತನಕ ಸೆಪ್ಟಂಬರ್ ತಾ. 1 ರ ವರೆಗೆ ಕೊಡುತ್ತಾ ಬಂದು, ಅಷ್ಟು ಟಿಕೆಟ್ಟುಗಳೂ ಪೂರ್ತಿಯಾದ ಕೂಡಲೆ ಬಹುಮಾನ ಹಂಚಲಾರಂಭಿಸುತ್ತೇವೆ 100 ರೂ ಪಡೆಯುವ ಲಭ್ಯವಿದೆಯೋ ನೀವು ಪ್ರಯತ್ನ ಮಾಡಿ. ನಗದು ಕ್ರಯ ಅಥವಾ ವಿ ಪಿ ಯಲ್ಲಿ ತರಿಸಿಕೊಳ್ಳಬಹುದು. ನಮ್ಮ ಕ್ರಯಪಟ್ಟಿಗೆ ಈ ದಿನವೇ ಬರೆದು ಜಾಗ್ರತೆ ಮಾಲು ತರಿಸಿಕೊಳ್ಳಿ. ನಮ್ಮ ಪ್ರಸಿದ್ಧವಾದ ನಾಣ್ಯದಲ್ಲಿ ಮೋಸದ ಹೆಸರೇ ಇಲ್ಲ.

ನಮಗೆ ಇಂಗ್ಲೀಷಿನಲ್ಲಿ ಬರೆಯಬೇಕು.

Address—**KAKAMULL BENI PRASAD,**
Ranikuva, Banares City.

ನಮ್ಮ ವಿಳಾಸ—ಕಾಕಾಮುಲ್ ವೇಣಿಪ್ರಸಾದ್,

[89-7] ರಾಣೀಕುವಾ, ಬನಾರಸ್ ಸಿಟಿ.

ಬೇಸಿಗೆಕಾಲ. ಭಯವಿಲ್ಲ

ಬಿಸಿಲಿನ ಕಾಲಕ್ಕೆ ಹರಸಿರುವ ಬಹಳ ತಂಪಾದ ಕನ್ನಡಕಗಳು.

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ.

ನಮ್ಮ ಕಂಪೆನಿ ಹೆಸರು ಮರೆಯದೆ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶವಾಗಿ ಅಸಲ್ ಕ್ರಯಕ್ಕೆ ವಿಕ್ರಯಿಸುತ್ತೇವೆ.

ನಾಲ್ಕು ಬಿಲ್ಲೆಗಳ ಕನ್ನಡಕಗಳು.

ಈ ಕನ್ನಡಕಗಳು ಚಿಕ್ಕವರೂ, ದೊಡ್ಡವರೂ ಸಹ ಉಪಯೋಗಿಸಬಹುದು. ಇವು ಕಣ್ಣುಗಳಿಗೆ ಬಹಳ ತಂಪಾಗಿ ಇರುವುದೆಂಬದಾಗಿ ಲೋಕದಲ್ಲಿ ಅನೇಕರು



ಉಪಯೋಗಿಸಿಕೊಂಡಿರುವುದು ಎಲ್ಲರಿಗೂ ತಿಳಿದ ವಿಷಯವೇ. ನಾವು ಇದರ ವಿಷಯವಾಗಿ ಬರೆಯಬೇಕಾದ್ದು ಅನಾವಶ್ಯಕ. ಇದನ್ನು ಉಪಯೋಗಿಸುವುದರಿಂದ ಕಣ್ಣುಗಳಿಗೆ ಬಿಸಲಿನ ಝಳವಿಲ್ಲದ ಹಾಗೂ, ಧೂಳೂ ಮಣ್ಣೂ ಬಂದು ಸೇರಿಕೊಳ್ಳದ ಹಾಗೂ ಕಣ್ಣುಗಳು ಶುದ್ಧವಾಗಿರುವುದು ಇವರ ಕಂಚಿಗಳು ಯಾವಾಗಲೂ ಬೆಳ್ಳಿಯ ಹಾಗೆ ಬೆಳಗಿ ಇರುತ್ತೆ. ಇವಲ್ಲಿ ಹಸಿರು, ಊದ, ನೀಲಿ, ಬೂದಿ ಬಣ್ಣ, ಮೋಘವರ್ಣ ಮೊದಲಾದ ನಾನಾ ವಿಧಗಳುಂಟು. [63-12]

ನಾಲ್ಕು ಬಿಲ್ಲೆಗಳುಳ್ಳ ಕನ್ನಡಕ 1-ಡಕ್ಕೆ ...	ಕ್ರಯ 0-12-0
ಅದರಲ್ಲಿ ಹಸನಾದದ್ದು	,, 1- 8-0

ವಿಳಾಸ.—ಟಿ. ರಾಮಚಂದ್ರ ಅಂಡ್ ಕಂಪೆನಿ,

16, ತಿರುಪಳ್ಳಿ ಬೀದಿ, ಸಾಹುಕಾರ್ ಪೇಟೆ, ಮದರಾಸು.

USE I. C. O. BRAND

[107-5]



Refined Edible Cotton Seed Oil,

For Cooking and Salads.

An approved substitute for Ghee in all preparations. Price—

Re. 1-4-0 per tin of 3½ lbs
„ 0-7-0 per „ of 1 lb

Liberal Terms to Trade.

The Indian Co-Operative Store Co., Ltd.,

159, Klari Road,
Bangalore.

ಅರ್ಧಕ್ರಯ.

ಒಂದು ತಿಂಗಳು ಮಾತ್ರ

ತಬಲ ಮತ್ತು ಬಾಯ ಇನಾಂ.

ಮೂರು ವರುಷಗಳ



ಗ್ಯಾರಂಟಿ ಉಳ್ಳದ್ದು.

ನಮ್ಮ ಕೃಪ್ತಿಕರವಾದ ಫ್ಲೂಟ್ ಹಾರ್ಮೋನಿಯಂ ಬಹಳ ಉತ್ತಮವಾದದ್ದು, ತುಂಬಾ ಇಂಪಾದ ನಾದವುಳ್ಳದ್ದು. ಎಂಥಾ ಹವಾದಲ್ಲೂ ಕೆಡುವುದಿಲ್ಲ. ಎಲ್ಲಾ ಜಾತಿ ಸಂಗೀತಗಳಿಗೂ ಹಿತವಾದದ್ದು. ಒಂದು ವಾರ ನೋಡಿ ಸಮ್ಮತವಿಲ್ಲದಿದ್ದರೆ ಹಣ ವಾಪಸ್ ಕೊಡುತ್ತೆ. ಒಂದು ರೀಡಿನದಕ್ಕೆ ಕ್ರಯ ರೂ. 38, 40, 50; ಈಗಿನ ಕ್ರಯ ರೂ 19, 20, 25. ಒಂದು ಸೆಟ್ ಇನಾಮು. ಡಬ್ಬಲ್ ರೀಡಿನದಕ್ಕೆ ಕ್ರಯ ರೂ. 65, 70, 80, 90; ಈಗಿನ ಕ್ರಯ ರೂ. 32-8, 35, 40, 45. ಒಂದು ಜೊತೆ ತಬಲ ಮತ್ತು ಬಾಯ ಬಹುಮಾನ. ಅಪೇಕ್ಷಿಸುವವರು 5 ರೂ. ಅಡ್ವಾನ್ಸು ಕಳಿಸಬೇಕು.

ವಿಳಾಸ—The National Harmonium Co.,

[117-2] **SIMLA T.S.O., (E) CALCUTTA.**

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

5—5—1916 ರಿಂದ 12—5—1916 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು	ಡಿಸ್ಟ್ರಿಕ್ಟು	2	2	0	0
ಮೈಸೂರು	,,	12	8	0	0
ಕೋಲಾರ್	,,	0	0	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು	ಡಿಸ್ಟ್ರಿಕ್ಟು	0	0	0	0
ಹಾಸನ	,,	2	2	0	0
ಚಿತ್ರದುರ್ಗ	,,	0	0	0	0
ಕಡೂರ್	,,	4	0	0	0
ಶಿವಮೊಗ್ಗ	,,	4	0	0	0
	ಜುಮ್ಲಾ	24	12	0	0

ಶಾಲಿವಾಹನ ಶಕ ವರುಷಂಗಳು 1838 ನೇ ನಳ ಸಂವತ್ಸರೇ ಉತ್ತರಾಯಣೇ ವಸಂತಋತೌ ವೈಶಾಖ ಬಹುಳ ದಶಮಿ ಶುಕ್ರವಾರದಿಂದ ವೈಶಾಖ ಬಹುಳ ಪೌರ್ಣಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1916 ನೇ ಮೇ ಮತ್ತು ಜೂನ್.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ವೈಶಾಖ ಮಾಸ ಕೆಡಿ
26	ಶುಕ್ರ	ದಶಮಿ	42-12	ಪೂಭಾ	2-14	14
27	ಶನಿ †	ಏಕಾದಶಿ	40-4	ಉತ್ತ್ರಭಾ	1-19	15
28	ಭಾನು ‡	ದ್ವಾದಶಿ	39-16	ರೇವತಿ	1-30	16
29	ಸೋಮ §	ತ್ರಯೋದಶಿ	39-42	ಅಶ್ವಿನಿ	2-55	17
30	ಮಂಗಳ	ಚತುರ್ದಶಿ	41-25	ಭರಣಿ	5-38	18
31	ಬುಧ ;;	ಅಮಾವಾಸ್ಯೆ	44-25	ಕೃತ್ತಿಕೆ	9-29	19
1	ಗುರು *	ಪಾಡ್ಯಮಿ	48-20	ರೋಹಿಣಿ	14-25	20

† ಸರ್ವತ್ರ ಏಕಾದಶಿ, ಶ್ರೀಮನ್ಮಧ್ವರಾಚಾರ್ಯರ ವರ್ಧಂತಿ, ಮಳೆ ನಕ್ಷತ್ರ—ರೋಹಿಣಿ 2 ನೇ ಪಾದ ‡ ದಗ್ಧಯೋಗ. § ಸೋಮಪ್ರದೋಷ, ಮಾಸಶಿವರಾತ್ರಿ. ;; ಸರ್ವತ್ರ ಅಮಾವಾಸ್ಯೆ, ಅಗ್ನಿನಕ್ಷತ್ರ ನಿವೃತ್ತಿ, ಮಳೆ ನಕ್ಷತ್ರ—ರೋಹಿಣಿ 3 ನೇ ಪಾದ, * ಪುನ್ನಾಗಗೌರೀ ವ್ರತ.

ಸುಂದರವಾದ 1916 ಕ್ಯಾಲೆಂಡರು.

ಮುದ್ದು ಮಾತನಾಡುವ ಸೌಂದರ್ಯವೂ ಲಾವಣ್ಯವೂ ಮುಗ್ಧತೆಯೂ ಉಳ್ಳಂತೆ ಚಿತ್ರಿಸಲ್ಪಟ್ಟಿರುವ ಮೋಹನಾಂಗಿಯ ಚಿತ್ರವಿರುವುದು.

ಡಿಸೆಂಬರ್ ತಾ 31 ರೊಳಗೆ ಒಂದು ಬಾರಿಗೆ ನಾಲ್ಕು ರೂಪಾಯಿನ ನಮ್ಮ ಔಷಧವನ್ನು ತರಿಸುವವರಿಗೆ ಈ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಇತರರಿಗೆ ವಿ. ಪಿ. ಖರ್ಚು ಸೇರಿ 4 ಆಣೆ; 12 ಕ್ಕೆ ವಿ. ಪಿ. ಖರ್ಚು ಸಹಿತ ರೂ. 1-12-0.

ಅಮೃತಾಂಜನವು ನೋವಿಗೆ ಸಿದ್ಧಾಮೃತವು.

ಹೊಸಗಸಾದ ಡಬ್ಬಿ ಸಹಿತ ಕ್ರಯ 8 ಆಣೆ; 12 ಡಬ್ಬಿಗಳಿಗೆ 5-4-0.

ತಾವರೆ ತೈಲ	ಹಲ್ಲುಪುಡಿ	ಮೋಹಿನೀ ತೈಲ
ಡಬ್ಬಿ 1 ಕ್ಕೆ 4 ಆಣೆ.	ಡಬ್ಬಿ 1 ಕ್ಕೆ 2 ಆಣೆ.	ಸೀಸೆಗೆ 12 ಆಣೆ.

ಪೋಸ್ಟೇಜು ಪ್ರತ್ಯೇಕ ಅನೇಕ ಕಡೆಗಳಲ್ಲಿ ಬಿಕರಿಗೆ ಇಟ್ಟಿದೆ. [108-5]

ಅಮೃತಾಂಜನ ಡಿಪೋ,

109, ಫ್ರೇರಿ ರೋಡ್, ಬೊಂಬಾಯಿ. 6 ತಂಬುಚೆಟ್ಟಿ ಬೀದಿ, ಮದ್ರಾಸ್.

ತಾ. ಕ.—ಯುದ್ಧದ ನಿಮಿತ್ತ ಕ್ಯಾಲೆಂಡರು ಸ್ವಲ್ಪವೇ ಪ್ರಿಂಟಾಗಿವೆ; ಆಶಾಭಂಗವಾಗದಂತೆ ಬೇಗನೆ ಬರೆದು ತರಿಸಿಕೊಳ್ಳಬೇಕೆಂದು ಸೂಚಿಸಲ್ಪಟ್ಟಿದೆ.

ಸುಗಂಧ ದ್ರವ್ಯಗಳಲ್ಲಿ ನಿಮಗೆ ಅಭಿರುಚಿಯುಂಟೇ?

ಹಾಗಾದರೆ ಶ್ರೇಷ್ಠವಾದ ಘಮಘಮಿಸುವ ಪುಷ್ಪಮಯವಾದ ತೋಟವನ್ನೇ ನಿಮ್ಮ ಜೇಬಿನಲ್ಲೇ ಇಟ್ಟುಕೊಳ್ಳಬಾರದೇ?

ಆಟೋಮೋಹಿನಿಯೇ ಅದು.

ಇದಕ್ಕೆ ಹೊಗಳಿಕೆಯೇ ಅವಶ್ಯವಿಲ್ಲ. ಇದು ಅನೇಕಾನೇಕ ಮಹನೀಯರುಗಳ ಮನಸ್ಸನ್ನು, ಹಲವು ಪ್ರದರ್ಶನಗಳಲ್ಲಿ ನಾನಾ ಬೆಳ್ಳಿ ಬಂಗಾರಗಳ ಪದಕಗಳನ್ನು ಸಂಪಾದಿಸಿಕೊಂಡಿದೆ. ಆಟೋ ಮೋಹಿನಿಯೇ ಅನೇಕ ಕಾಲದಿಂದಲೂ ಚಾಲೆಂಜ್ ಕೊಡುತ್ತಿರುವುದು. 4 ದಿನಗಳಲ್ಲಿ ತನ್ನ ಸುವಾಸನೆಯನ್ನು ಕಳಕೊಂಡ ಪಕ್ಷದಲ್ಲಿ 100 ರೂಪಾಯಿ ಬಹುಮಾನ ಕೊಡುತ್ತೇನೆಂದು ಸವಾಲ್ ಹಾಕಿರುವುದು ಆಟೋ ಮೋಹಿನಿಯೇ. ಸಾವಿರಾರು ಹೊಸ ಪುಷ್ಪಗಳ ಸಮೂಲು ಆಹ್ಲಾದವೂ ಹರ್ಷವೂ ಉಳ್ಳ ಪರಿಮಳವನ್ನು ಕಾರುವಂಥಾದ್ದು ಆಟೋ ಮೋಹಿನಿಯೇ.

½ ಔನ್ಸ್ ಗಾಜಿನ ಬಿರಡೆಯುಳ್ಳ ಸೀಸೆಗೆ ರೂ	2—0—0	¼ ,, ,, —	0—8—0
1 ಡ್ರಾಮ್ ಕೊಳವೆಗೆ	,, 0—12—0	ಕಾರ್ಡು ಡಬ್ಬಿಗೆ	0—12—0

ಕೂದಲನ್ನು ಬೆಳೆಸುವುದರಲ್ಲಿ ನಿಮಗೆ ಇಷ್ಟವುಂಟೇ? ಹಾಗಾದರೆ ಅತ್ಯಂತ ಶ್ರೇಷ್ಠವೂ ನವೀನವೂ ಆದ

ಪುಷ್ಪಕರ ಕೂದಲೆಣ್ಣೆಯನ್ನೇ

ಉಪಯೋಗಿಸಿ. ಬೆಲೆಯುಳ್ಳ ವನೌಷಧಗಳಿಂದ ಮಾಡಿದ್ದು. ಮುಖ್ಯವಾಗಿ ಕೂದಲನ್ನು ಸಾಕಿ ಬೆಳೆಸುವಂಥಾದ್ದು. ಕಣ್ಣು ಮತ್ತು ಮೆದುಳಿಗೆ ತಂಪನ್ನು ಕೊಡಬಲ್ಲುದು. ಗಂಡಸರಿಗೂ, ಹೆಂಗಸರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಫಲಕಾರಿಯಾದದ್ದು. ಇದು ಇತರರು ಹೇಳುವಂಥಾ ಎಣ್ಣೆಯಲ್ಲ. ಇದರಲ್ಲಿ ಸೀಮೆಯೆಣ್ಣೆಯಾಗಲಿ, ಕೂದಲಿಗೆ ಕೇಡು ಮಾಡುವ ಇತರ ಪದಾರ್ಥಗಳಾಗಲಿ ಇಲ್ಲವೇ ಇಲ್ಲ. ಅಂಥಾದ್ದೇನಾದರೂ ಇದೆ ಎಂದು ಸಿದ್ಧಾಂತ ಮಾಡಿದವರಿಗೆ 500 ರೂಪಾಯಿ ಬಹುಮಾನ ಕೊಡುತ್ತೇವೆ. ಇನ್ಯಾವ ಕೂದಲೆಣ್ಣೆಗಾದರೂ ಇಂಥಾ ಚಾಲೆಂಜ್ ಕೊಟ್ಟಿರುವುದುಂಟೇ? ಇದೊಂದು ದೃಷ್ಟಾಂತವೇ ಸಾಕಾಗಿದೆ. [282-24]

ಕ್ರಯ 1 ಬಾಟ್ಲಿಗೆ ರೂ. 1-0-0
,, 3 ,, ,, 2-10-0.

ಸೋಲ್ ಏಜಂಟರು—ಷಾ ಭಗವಾನ್ ದಾಸ್ ಡೊಂಗರಲಾಲ್ ಕಂಪನಿ,

177, ಮೈನಾಬಜಾರ್ ರೋಡ್, ಮದರಾಸು.

Printed and Published by the Rev. H. Gulliford, Proprietor and Manager, Wesleyan Mission Press, Mysore. 25/5/1916.

REEL NO 10

END

EXPOSURES
548